" ಅಗಸ್ತ್ಯ ವಿಚಾರ. "

14

ಬೆಲೆ ೫॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗಸ್ತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ಶೀಘ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪಾ ಅರುವೆರಳನ, ಪೋಸ್ಟ್-ಬಾಗೇವಾಡಿ. ಜಿ॥ ಬೆಳಗಾಂವ.

19

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ ನೇದು ರೂ. 3-8-0 ಮಾತ್ರ!! ೩ ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪುಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ವಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕ್ಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ವಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-1-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಲಿಂಗಿಚೆಟ್ಟಿ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

56

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯೂ ಆಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ— ೪೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಸೆಪ್ಟಂಬರ್ ತಾ॥ ೧೧ ರಿಂದ ೧೯೧೧ನೇ ಸೆಪ್ಟಂಬರ್ ತಾ॥ ೧೭ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಭಾದ್ರಪದ ಬ॥ ತದಿಗೆಯಿಂದ ಭಾದ್ರಪದ ಬ॥ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ತೇದಿ
11	¹ಸೋ	ತ	36-27	ರೇ	29-56	26
12	ಮಂಗ	ಚೌ	29-52	ಶ್ವಿ	28-14	27
13	²ಬುಧ	ಪಂ	25-19	ಭ	25-35	28
14	³ಗುರು	ಷ	20- 9	ಕೃ	22-15	29
15	ಶುಕ್ರ	ಸ	14-30	ರೋ	18-29	30
16	ಶನಿ	ಅ	8 -38	ಮೃ	14-28	31
17	ಭಾನು	ನೌ	2-5	ಆರ್ದ್ರ	58-54	1

(1) ಬೃಹದ್ಗೌರೀವ್ರತಂ ಸಂಕಷ್ಟಹರಚತುರ್ಥಿ (2) ಶ್ರೀ [illegible] ಯವರ ೨ನೇ ಸಾಂವತ್ಸರಿಕ ಶ್ರಾದ್ಧಂ, (3) [illegible]ಚಂದ್ರಯೋತ್ಸವಂ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

REGISTERED NO M. 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಳಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಸೆಪ್ಟಂಬರ್ ತಾರೀಖು ೧೮ ನೇ ಸೋಮವಾರ. [ಸಂಚಿಕೆ ೩೮

೭೦ ಕಥೆಗಳು. ಸಚಿತ್ರ. ೪೧೨ ಪುಟಗಳು.

ಶುಕಸಪ್ತತಿ ಕಥೆಗಳು.

16

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಕಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

22

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೬. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ರೋಗಗಳಿಕೆಯಲ್ಲಿ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

4

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣಿಯಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ ಪಂಚಾಚಾರವಿಚಾರ, ಕರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ಶಿವಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

3

ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಜರ್ಮನ ಸಾಮ್ರಾಜ್ಯ ೦-೩-೦ ರಷ್ಯಾ ಜರ್ಮನ ಯುದ್ಧಗಳಲ್ಲಿ ಪ್ರಸಿದ್ಧವಾದ ಜರ್ಮನ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನಗಳ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೬ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚೆಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ಟರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರೂ ಮೆಚ್ಚಿದ್ದಾರೆ.

(೪) ಬೋಧನಕ್ರಮಸಂಗ್ರಹ ೦-೧-೬ ಮಾಸ್ಟರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆ ನಡೆಸಬೇಕು. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯವೆಚ್ಚ ಬೇರೆ.

ಜಿ. ಕೃಷ್ಣಶಾಸ್ತ್ರಿ, ಅ॥ ಮಾ॥ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

5

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಸೌಗಂಧಿಕಾಪರಿಣಯ.

(ಕಳೆದವಾರದಶೇಷ.)

ಕಿರಿದಾದ ಬೆನ್ನು, ತೊಡೆಗಳು, ಕಟಿಪುರೋಭಾಗವು, ಪೂರ್ವಕಾಯದೊಳ್ ಗಟ್ಟಿಯಾದ ಅಂಗಗಳು, ಮಧ್ಯಮವಾದ ಬಲವು, ಹಿಂಭಾಗದಲ್ಲಿ ವಿಶಾಲವು, ಗಟ್ಟಿಯಾದ ಕಾಲುಗಳು, ಸ್ವಲ್ಪವೇಗವುಳ್ಳುವಾಗಿ ಕ್ರಮಯುಕ್ತಂಗಳಾದ ಮಂದಸ್ವಭಾವವುಳ್ಳ ಕುದುರೆಗಳು ದಕ್ಷಿಣದೇಶದಲ್ಲಿ ಜನನವಾರಕೆಗಳೆನಿಸಿಕೊಳ್ಳುವುವು. ಕೋಪಸ್ವಭಾವವು, ಕಾಡುಹಂದಿಯಂತೆ ಧ್ವನಿಯು, ಹಿಂಭಾಗದಲ್ಲಿ ತುಂಬಿರುವ ಅಂಗಗಳು, ವಿಸ್ತಾರವಾದ ಎದೆಯು, ದಪ್ಪವಾದ ಪಕ್ಕೆಗಳು, ದೃಢವಾದ ಖುರಗಳು ಉಳ್ಳ ಕುದುರೆಗಳು ತ್ರಿಲಿಂಗದೇಶದ ಕುದುರೆಗಳೆಂದು ತಿಳಿಯಬೇಕು. ಮುಂಭಾಗದಲ್ಲಿ ಉನ್ನತಗಳಾದ ಅವಯವಗಳು, ಹಿಂಭಾಗದಲ್ಲಿ ವಿಶಾಲವು, ಉನ್ನತವಾದ ಕಿವಿಯು, ತುಟಿಗಳು ಕಟಿಪುರೋಭಾಗವು, ಹೀನವಾದ ವರ್ಣವು, ಸ್ವಲ್ಪವಾದ ಪರಾಕ್ರಮವು, ದಪ್ಪವಾದ ಹೊಟ್ಟೆಯು, ಖುರಂಗಳು, ಬಾಲಗಳು ಉಳ್ಳುವಾಗಿರುವ ಅಶ್ವಗಳು ಕೃಷ್ಣವೇಣದಲ್ಲಿ ಪುಟ್ಟಿದುವೆಂದರಿವುದು. ಮುಂಭಾಗದಲ್ಲಿ ನೋಡುವುದಕ್ಕೆ ಮನೋಹರಂಗಳಾಗಿ, ಸ್ಥೂಲವಾದ ತೊಡೆಗಳು, ಅವಯವಗಳು, ಪಾದಗಳು, ದೃಢವಾದ ರೋಮಂಗಳು, ಖುರಂಗಳುಳ್ಳುವಾಗಿ, ಸ್ಥೂಲವಾದ ಮೊಣಕಾಲುಗಳು, ಹಿಂಭಾಗದಲ್ಲಿ ವಿಕಾರವು, ಕೆಂಪುಗಳಾದ ಪಾದಗಳು ಉಳ್ಳ ಕುದುರೆಗಳು ಸುರಾಷ್ಟ್ರದೇಶದಲ್ಲಿ ಜನಿಸಿದುವೆಂದರಿವುದು. ಮಂದಸ್ವಭಾವಗಳಾಗಿ, ಸ್ಥೂಲವಾದ ಬಾಲವು, ಹೊಟ್ಟೆಯು, ಜೋಲುವ ಕಿವಿಗಳು, ಚಿಕ್ಕತುತ್ತಿ, ಕಟವಾಯಿ, ಅಂಡಗಳು, ಮೇಢ್ರವು, ಗಿಡ್ಡಾಗಿ ವಿಸ್ತಾರವಾದ ಬೆನ್ನು, ದೃಢವಾದ ತೊಡೆಗಳು, ಪಿಂಗಳವರ್ಣವಾದ ನೇತ್ರಗಳು ಉಳ್ಳ ಅಶ್ವಂಗಳು ಉಮಾವೃತ್ತದೇಶದಲ್ಲಿ ಪುಟ್ಟಿದುವೆಂದರಿವುದು. ಸ್ಥಿರಗಳಾದ ಅವಯವಗಳು, ಹ್ರಸ್ವವಾದ ಹೊಟ್ಟೆಯು, ಬಟುವಾಗಿ ವಿಸ್ತಾರವಾದ ಕಂಠವು, ದೀರ್ಘಗಳಾದ ಕಿವಿಗಳು, ವಿಸ್ತಾರವಾದ ಎದೆಯು ವಿಕಾರಯುಕ್ತವಾದ ಹಿಂಭಾಗವು, ತೀಕ್ಷ್ಣಸ್ವಭಾವವು, ಕೃಶವಾದ ಬಾಲವು, ಕೇಸರಗಳು, ಸಿಲುವಾದ ಚರ್ಮವು, ಮಧ್ಯಮವಾದ ಬುದ್ಧಿಯು ಉಳ್ಳ ಕುದುರೆಗಳು ಸಾಲ್ವದೇಶದೊಳ್ ಪುಟ್ಟಿದುವುಗಳು. ಪೂರ್ವಾರ್ಧದೊಳ್ ಬಗ್ಗಿರುವ ಅಂಗಗಳು, ಹಿಂಭಾಗದಲ್ಲಿ ಹ್ರಸ್ವವಾದ ಅಂಗಗಳು, ಸ್ವಲ್ಪವಾದ ಬುದ್ಧಿಯು ಉಳ್ಳುವಾಗಿ ಬೆನ್ನಿನಲ್ಲಿಯೂ ಹೆಗಲಿನಲ್ಲಿಯೂ ಭಾರವಂ ವಹಿಸೋಣದರಿಂದ ಅತ್ಯಂತ ಶ್ರಮವಂ ಹೊಂದುವ ಅಶ್ವಗಳು ಕುರುಕ್ಷೇತ್ರದಲ್ಲಿ ಪುಟ್ಟಿದುವುಗಳು. ದೀರ್ಘವಾದ ಮುಖವು, ದಪ್ಪವಾದ ಅಂಗಗಳು ಹೊಟ್ಟೆಯು ತಗ್ಗಾಗಿ ವಿಸ್ತಾರವಾಗಿರುವ ಬೆನ್ನು, ಮೃದುವಾದ ಶರೀರವು ಸ್ವಲ್ಪವಾದ ಪರಾಕ್ರಮವು, ದಪ್ಪಗಾಗಿ ಇರುವ ಹಿಂಗಾಲುಗಳು, ಹೆಚ್ಚು ಕಡಿಮೆಯಾಗಿ ದೃಢಗಳಲ್ಲವೇ ಇರುವ ಮುಂಗಾಲುಗಳುಳ್ಳ ಅಶ್ವಗಳು, ಪಾಂಚಾಲದೇಶದೊಳ್ ಪುಟ್ಟಿದುವೆಂದರಿವುದು. ಸ್ಥೂಲವಾದ ಸರ್ವಾವಯಂಗಳು, ದೀರ್ಘವಾದ ಪೃಷ್ಠವು, ಸೂಕ್ಷ್ಮವಾದ ಉದರವು, ಜೋಲುತಲಿರುವ ಕಟವಾಯಿ, ಕಿವಿಗಳು, ವಿಸ್ತಾರವಾದ ಮುಖವು, ಕಂಠವು, ಮಾಂಸತುಂಬಿರುವ ಶರೀರವು, ವ್ಯಕ್ತವಾಗಿ ಕಾಣುವ ಅವಯವ ರೀತಿಯು, ಅತಿ ದೃಢವಾಗಿ ಸ್ವಲ್ಪವಾದ ತೇಜಸ್ಸು ವೇಗವು ಉಳ್ಳ ಅಶ್ವಗಳು ವಾಹ್ಲಿಕದೇಶೋತ್ಪನ್ನಗಳು. ಊರ್ಧ್ವಮುಖಗಳಾದ ಕರ್ಣಗಳು, ಸೂಕ್ಷ್ಮವಾದ ಮುಖವು ಉಳ್ಳುವಾಗಿ, ವೇಗಯುಕ್ತಗಳಾಗಿ, ನಿರಂತರದಲ್ಲಿಯೂ ಉತ್ಸಾಹವಂ ಹೊಂದಿ ವಿಕಾರಯುಕ್ತಂಗಳಾದ ಆಕಾರಗಳುಳ್ಳುವಾಗಿ, ನಿಗ್ರಹಿಸಲಶಕ್ಯಂಗಳಾದ ಅಶ್ವಂಗಳು ಆಭೀರದೇಶದೊಳ್ ಉದ್ಭವಿಸಿದುವೆಂದರಿವುದು. ಇವುಗಳಲ್ಲಿ ಸುರಾಷ್ಟ್ರದೇಶದಲ್ಲಿಯೂ, ಸಾಲ್ವದೇಶದಲ್ಲಿಯೂ, ಕುರುಕ್ಷೇತ್ರದಲ್ಲಿಯೂ, ವಾಹ್ಲಿಕ ದೇಶದಲ್ಲಿಯೂ ಪುಟ್ಟಿದ ಕುದುರೆಗಳು ವೇಸರಂಗಳೆಂಬುದಾಗಿ ಪ್ರಸಿದ್ಧಿಯಂ ಪಡೆದಿರುವುವು. ಈ ರೀತಿಯಾಗಿ ದೇಶವಿಭಾಗಕ್ರಮದಿಂದ ಅಶ್ವಲಕ್ಷಣಂಗಳು ನಿರೂಪಿಸಲ್ಪಟ್ಟುವು. ಇನ್ನು ಕುದುರೆಗಳಲ್ಲಿ ಉತ್ತಮವೆಂದು ಸೂಚಿಸುವ ಮುಖ್ಯಗಳಾದ ಮುವ್ವತ್ತೆರಡು ಲಕ್ಷಣಗಳಂ ಪೇಳುವೆನು. ಅಶ್ವಗಳ ಅಂಗಗಳಲ್ಲಿ ನಾಲ್ಕು ದೀರ್ಘವಾಗಿಯೂ ನಾಲ್ಕು ಉನ್ನತವಾಗಿಯೂ, ನಾಲ್ಕು ಕೆಂಪಾಗಿಯೂ ನಾಲ್ಕು ಸೂಕ್ಷ್ಮವಾಗಿಯೂ, ನಾಲ್ಕು ಹ್ರಸ್ವವಾಗಿಯೂ, ನಾಲ್ಕು ವಕ್ರವಾಗಿಯೂ, ನಾಲ್ಕು ಸ್ಥೂಲವಾಗಿಯೂ, ನಾಲ್ಕು ಹಳ್ಳವಾಗಿಯೂ ಇರಲು ಅದು ಉತ್ತಮಾಶ್ವವೆಂದು ಹೇಳಲ್ಪಡುವುದು. ಆ ಲಕ್ಷಣಂಗಳು ಯಾವುವೆಂದರೆ— ಮುಖವು, ಮುಂಗಾಲುಗಳು, ಕೇಶಂಗಳು, ಹೆಕ್ಕತ್ತು ಕೂಡ ನಾಲ್ಕು ದೀರ್ಘಗಳಾಗಿರಬೇಕು. ತುಟಿಗಳು, ನಾಲಿಗೆಯು, ಗಂಡಸ್ಥಲಗಳು, ಮೇಢ್ರವು ಸಹ ನಾಲ್ಕು ರಕ್ತವರ್ಣಂಗಳಾಗಿರಬೇಕು. ಮುಸುಡಿಯು, ಕಂಠವು, ಮಂಡಿಯು, ಪಾರ್ಶ್ವಗಳು, ಕೂಡ ನಾಲ್ಕು ವಕ್ರಗಳಾಗಿರಬೇಕು. ಗುದಸ್ಥಾನವು, ಕಟಿಪಶ್ಚಾದ್ಭಾಗವು, ದಂತಗಳು, ನೇತ್ರದ್ವಯವು ಕೂಡ ನಾಲ್ಕು ವಿಸ್ತಾರವಾಗಿರಬೇಕು. ಕಂಕಳಂಗಳು, ಹೊಟ್ಟೆವಣುವು, ದವಡೆಯು ಕೂಡ ನಾಲ್ಕು ತಗ್ಗಾಗಿರಬೇಕು. ಚರ್ಮವು, ತುಟಿಗಳು, ಕೇಶಗಳು, ಜಂಘೆಗಳು ಕೂಡ ನಾಲ್ಕು ಸೂಕ್ಷ್ಮವಾಗಿರಬೇಕು. ಕರ್ಣಮಧ್ಯವು, ಪುಚ್ಛವು, ಕರ್ಣದ್ವಯವು, ಪೃಷ್ಠಭಾಗವು ಕೂಡ ಹ್ರಸ್ವವಾಗಿರಬೇಕು. ಈ ರೀತಿಯಿಂದ ಮುವ್ವತ್ತೆರಡು ಲಕ್ಷಣಗಳುಳ್ಳ ಅಶ್ವಗಳು ಶುಭಪ್ರದಂಗಳು. ಇಂತು ವಿಸ್ತಾರವಾಗಿ ಪೇಳಲ್ಪಟ್ಟ ಶುಭಾಶುಭ ಸೂಚಕಂಗಳಾದ ಸುಳಿಗಳಿಂದಲೂ, ಆಯಾಯ ದೇಶಂಗಳಲ್ಲಿ ಪುಟ್ಟಿದ ಕುದುರೆಗಳಲ್ಲಿರುವ ಅಂಗವಿಭಾಗಗಳಿಂದಲೂ, ಬುದ್ಧಿವಂತರಾದವರಿಂದ ಪರೀಕ್ಷೆಯಂ ಮಾಡಲ್ಪಟ್ಟು, ಉತ್ತಮ ಮಧ್ಯಮ, ಅಧಮಾಶ್ವಂಗಳು ತಿಳಿಯಲ್ಪಡತಕ್ಕುದೆಂದು ಉಪಾಧ್ಯಾಯನಾದ ವಿದ್ಯಾಸಾಗರನು ಶಿಷ್ಯನಾದ ಸುಗಂಧಮಹಾರಾಯಂಗೆ ಅಶ್ವಗಳ ಲಕ್ಷಣಗಳಂ ಜಾತಿಭೇದಂಗಳಂ, ದೇಶವಿಭಾಗಂಗಳಂ, ಶುಭಾಶುಭಂಗಳಾದ ಸುಳಿಗಳಂ, ಅವುಗಳ ಫಲಂಗಳಂ, ಗತಿಭೇದಂಗಳಂ ಕೂಡ ವಿಸ್ತಾರವಾಗಿ ನಿರೂಪಿಸಿದನೆಂಬಲ್ಲಿಗೆ ॥ ಗದ್ಯ ॥ ಕುಂಡಲಿಶಯನಪಿಂಡಪರಶು ಪುಂಡರೀಕಭವಾಖಂಡಲಪ್ರಮುಖನಿಖಿಲಸುರವರ ಪರಿಭವಪರಿಣತಪ್ರಚಂಡಬಲಚಂಡಮುಂಡಖಂಡನ ನಿಪುಣಕೋದಂಡಕಾಂಡಮಂಡಲಾಗ್ರಧರಭುಜಾದಂಡಪರಿಮಂಡಿತಚಾಮುಂಡಿಕಾಕಟಾಕ್ಷವೀಕ್ಷಣಪ್ರವರ್ಧಮಾನ ಭೂಮಂಡಲಾಧಿಪತ್ಯ ಸತ್ಯವ್ರತಾದ ಸಕಲಭಾಷಾಸಾಮ್ರಾಜ್ಯ ಶರ್ವಂಕಷಚತುರ್ವಿಧಸರಸಕವಿತಾನಿಸ್ಸಹಾಯ ನಿರ್ಮಾಣಧೌರೇಯಖುಟಿಕಾಶತಗ್ರಂಥ ದಿನದಿನಪ್ರಬಂಧನಿಬಂಧನ ಧುರಂಧರತ್ರಿಭುವನ ಪವಿತ್ರಾತ್ರೇಯಸಗೋತ್ರಾಶ್ವಲಾಯನಸೂತ್ರ ಸುಚರಿತ್ರ ಚಾಮರಾಜಮಹಾರಾಜಪುತ್ರ ನರಪತಿಬಿರುದ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜವೊಡೆಯರವರಿಂದ ರಸಿಕಜನಾನಂದಕರವಾಗಿ ವಿರಚಿತವಾದಸೌಗಂಧಿಕಾ ಪರಿಣಯವೆಂಬ ಈ ನವೀನಕೃತಿಯೊಳ್ ಅಶ್ವಲಕ್ಷಣ ವರ್ಣನಕ್ರಮವೆಂಬ ಹದಿನಾರನೆಯ ಆಶ್ವಾಸ ನಿರೂಪಣಕ್ಕೆ ಮಂಗಳಮಹಾ ॥

(ಸಶೇಷ.)

ಪ್ಲೇಗ್ ರೋಗದ ಹಾವಳಿ.

ಈ ರೋಗವನ್ನು ತಪ್ಪಿಸಿಕೊಳ್ಳತಕ್ಕ ಉಪಾಯ!
ಉದಾಸೀನದಿಂದ ಉಂಟಾಗತಕ್ಕ ಅನರ್ಥ !!

ಎಲ್ಲರೂ ಓದಿರಿ.

ಸಾವಿರದ ಒಂಭೈನೂರ ಹತ್ತು ಹನ್ನೊಂದನೆಯ ಇಸವಿಯಲ್ಲಿ ಈ ರಾಜಧಾನಿಯಲ್ಲಿ ಪ್ಲೇಗ್ ರೋಗವು ಪ್ರಬಲವಾಗಿರಲಿಲ್ಲ. ಕಳೆದ ಜೂನ್ ಮಧ್ಯಭಾಗದಲ್ಲಿ ಈ ರೋಗವು ಉಪಕ್ರಮವಾಯಿತು. ಪ್ರಥಮತಃ ಇದು ಲಷ್ಕರ್ ಮಂಡಿಯಲ್ಲಿ ಮಾತ್ರ ಇದ್ದಿತು. ಈಗ ಊರೆಲ್ಲಾ ಹರಡಿಕೊಳ್ಳುವುದಕ್ಕೆ ಉಪಕ್ರಮವಾಗಿದೆ. ಕಳೆದ ಆಗಸ್ಟ್ ೩೧ ನೆಯ ತಾರೀಖಿನ ವರೆಗೆ ೨೧೧ ಜನಗಳಿಗೆ ಈ ರೋಗವು ತಗಲಿ ೧೨೫ ಜನಗಳು ಸತ್ತರು.

ಮ್ಯುನಿಸಿಪಲ್ ಪ್ರೆಸಿಡೆಂಟ್ ಸಾಹೇಬರವರು ಇನಾಕ್ಯುಲೇಷನ್ ಮಾಡಿಸುವುದಕ್ಕೆ ಉಪಕ್ರಮಮಾಡಿಸಿದರು. ಕಳೆದ ಆಗಸ್ಟ್ ೩೧ ನೆಯ ತಾರೀಖಿನವರೆಗೆ ೮೩೬೬ ಜನಗಳಿಗೆ ಇನಾಕ್ಯುಲೇಷನ್ ಆಯಿತು.

ಮೈಸೂರು ಪ್ರಜಾಸಂಖ್ಯೆಯು ೬೦,೮೪೯. ಇವರಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡವರ ಸಂಖ್ಯೆಯು ಕಳೆದ ಆಗಸ್ಟ್ ೩೧ ನೆಯ ತಾರೀಖಿನಲ್ಲಿ ೮೩೬೬, ಮತ್ತೂ ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದವರ ಸಂಖ್ಯೆಯು ೫೨,೪೮೩. ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದವರ ಪೈಕಿ ೨೦೩ ಜನಗಳಿಗೆ ಪ್ಲೇಗುತಗಲಿ ೧೨೩ ಜನಗಳು ಸತ್ತರು.

ಇನಾಕ್ಯುಲೇಷನ್ ಆದವರ ಪೈಕಿ ೮ ಜನಗಳಿಗೆ ತಗಲಿತು. ಇಬ್ಬರು ಸತ್ತರು. ಈ ಇಬ್ಬರಿಗೂ ಇನಾಕ್ಯುಲೇಷನ್ ಆದುದಕ್ಕೂ ಪ್ಲೇಗ್ ತಗಲಿದುದಕ್ಕೂ ಮಧ್ಯೆ ಒಂದು ದಿವಸಮಾತ್ರ ವಿರಾಮವಿದ್ದಿತು. ಈ ಲೆಕ್ಕವನ್ನು ಪರಿಶೀಲಿಸಿ ನೋಡಿದರೆ, ಇನಾಕ್ಯುಲೇಷನ್ ಆದವರಲ್ಲಿ ಸಾಯುವುದೇ ಅಪೂರ್ವವೆಂಬುದಾಗಿಯೂ—ಇನಾಕ್ಯುಲೇಷನ್ ಆಗದೆ ಇರತಕ್ಕವರಲ್ಲಿ ಬಹು ಜನಗಳು ಸಾಯುತ್ತಾರೆಂಬುದಾಗಿಯೂ ಗೊತ್ತಾಗುತ್ತದೆ.

(೧) ಕರುಣಾಪುರದಲ್ಲಿ ಎಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಂಡರು. ಒಬ್ಬ ಮೂರ್ಖಳಾದ ಹೆಂಗಸು ಮಾತ್ರ ಮಾಡಿಸಿಕೊಳ್ಳದೆ ಪ್ಲೇಗ್ ತಗಲಿ ಸತ್ತಳು.

(೨) ಈರನಗೆರೆಯ ಒಂದು ಮನೆಯಲ್ಲಿ ಒಬ್ಬ ಹೆಂಗಸು ವಿನಾ ಉಳಿದವರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಂಡರು. ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದ ಹೆಂಗುಸು ಮಾತ್ರ ಪ್ಲೇಗ್ ರೋಗವನ್ನು ಹೊಂದಿ ಸತ್ತಳು.

(೩) ಮಂಡಿಮೊಹಲ್ಲಾದ ಕುಂಚಿಗರ ಕೇರಿಯ ಒಂದು ಮನೆಯಲ್ಲಿ ಆರು ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಒಬ್ಬ ಹುಡುಗಿ ತುಂಬಾ ಅತ್ತುದರಿಂದ ಅವಳಿಗೆ ಇನಾಕ್ಯುಲೇಷನ್ ಮಾಡಲಿಲ್ಲ. ಅವಳು ಮಾತ್ರ ಪ್ಲೇಗ್ ರೋಗಪೀಡಿತಳಾಗಿ ಮೃತಪಟ್ಟಳು.

ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದರಿಂದ ಪ್ಲೇಗು ರೋಗಕ್ಕೆ ಜನಗಳು ಪ್ರಾಯಕವಾಗಿ ಗುರಿಯಾಗುವುದಿಲ್ಲ. ಎಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಉತ್ತಮವೆಂದು ತೋರುತ್ತದೆ.

ತಪಶೀಲ್ ಚಿಟ್ಟಿ.

ತಪಶೀಲ್	ಜನ ಸಂಖ್ಯೆ	ರೋಗ ತಗಲಿದವರು	ರೋಗದಿಂ ಸತ್ತವರು	ರೋಗ ತಗಲಿದವರ ದರ ೧೦೦೦ಕ್ಕೆ	ಸತ್ತವರ ದರ ೧೦೦೦ಕ್ಕೆ	ತಗಲಿದವರ ಪೈಕಿ ಶೇಕಡಾ ಸತ್ತವರು
ಇನಾಕ್ಯುಲೇಷನ್ ಆದವರು	೮೩೬೬	೮	೨	೦.೯	೦.೨	೨೫
ಇನಾಕ್ಯುಲೇಷನ್ ಆಗದವರು	೫೨,೪೮೩	೨೦೩	೧೨೩	೩.೯	೨.೩	೬೦.೬

MYSORE
12th Sept. 1911

V. L. MANKER,
Health Officer, Mysore City.

ಗ್ರಂಥವಿಮರ್ಶೆ.

ಪ್ರಹ್ಲಾದ ಚರಿತ್ರೆ.

ನರಹರಿ ದೇವಕವಿಯು ಭಾಮಿನೀ ಷಟ್ಪದಿಯಲ್ಲಿ ರಚಿಸಿರುವ ಶುಕಮುನಿಯು ಪರೀಕ್ಷಿದ್ರಾಜನಿಗೆ ಹೇಳಿದ ಭಾಗವತದೊಳಗಿನ ಪ್ರಹ್ಲಾದಚರಿತ್ರೆಯನ್ನು ಮೈಸೂರ ಮಹಾರಾಜಾ ಕಾಲೇಜಿನ ಸೀನಿಯರ್ ಕರ್ಣಾಟ ಪಂಡಿತರಾದ ವೇ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಪರಿಷ್ಕರಿಸಿ, ಅವರಿಂದ ಬರೆಯಲ್ಪಟ್ಟಿರುವ ಟಿಪ್ಪಣಿಯೊಡನೆ ಮೈಸೂರ ವಾಣೀವಿಲಾಸ ಬುಕ್ ಡಿಪೋ ಪ್ರೊಪ್ರೈಟರ್ ಬಿ. ಎ. ವೆಂಕಟಾಚಲಂ ಸೆಟ್ಟರು ಪ್ರಕಟಿಸಿ ಅದರ ಪ್ರತಿಯೊಂದನ್ನು ನಮ್ಮಲ್ಲಿಗೆ ಕಳುಹಿರುತ್ತಾರೆ. ಜಯವಿಜಯರೆಂಬ ವೈಕುಂಠದ್ವಾರಪಾಲಕರು ತಮ್ಮ ಅಹಂಕಾರಕ್ಕಾಗಿ ಸನಕಾದಿಗಳಿಂದ ಶಾಪವನ್ನು ಪಡೆದು ನಾರಾಯಣನ ಆಜ್ಞಾನುಸಾರ ಭೂಲೋಕದಲ್ಲಿ ಹಿರಣ್ಯಕ ಮತ್ತೂ ಹಿರಣ್ಯಾಕ್ಷರೆಂಬ ಹೆಸರುಗಳಿಂದ ರಾಕ್ಷಸರಾಗಿ ಹುಟ್ಟಿ, ವಿಶೇಷವಾಗಿ ಹಾವಳಿಯನ್ನು ಮಾಡುತ್ತಿರುವಲ್ಲಿ ನಾರಾಯಣನು ವರಾಹಾವತಾರದಿಂದ ಹಿರಣ್ಯಕನನ್ನೂ, ನೃಸಿಂಹಾವತಾರದಿಂದ ಹಿರಣ್ಯಾಕ್ಷನನ್ನೂ ಕೊಂದು ಲೋಕವನ್ನುದ್ಧಾರಮಾಡಿದ ಸಂಗತಿಯು ಈ ಗ್ರಂಥದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಈ ಗ್ರಂಥವನ್ನೋದುವುದರಿಂದ ಆಸ್ತಿಕತ್ವ, ದೈವಭಕ್ತಿ, ಧರ್ಮಾಧರ್ಮ ವಿವೇಚನೆ, ವೈರಾಗ್ಯಾದಿಗಳು ಲಭ್ಯವಾಗುವುವು. ಈ ಗ್ರಂಥವು ಮೊದಲು ಪ್ರಕಟವಾಗಿದ್ದಾಗ್ಯೂ ಅದರೊಳಗೆ ಲೇಖಕ ಪಾಠಕರ ಅನಭಿಜ್ಞತೆಯಿಂದ ತುಂಬಿದ್ದ ಛಂದಸ್ಸು ವ್ಯಾಕರಣ ಮೊದಲಾದ ದೋಷಗಳನ್ನು ಶಾಸ್ತ್ರಿಗಳು ಬಹು ಸಾಹಸಪಟ್ಟು ತಿದ್ದಿರುವರಲ್ಲದೆ ಕೆಲವೆಡೆಯಲ್ಲಿ ಕವಿಯಾಶಯಕ್ಕೆ ವಿರೋಧವಿಲ್ಲದಂತೆ ಪದ್ಯಗಳನ್ನು ಬೇರೆಮಾಡಿ ಉತ್ತಮಗೊಳಿಸಿರುವರು. ಇದು ಸ್ಫುಟಾಕ್ಷರಗಳಿಂದ ಒಂದು ಪುಟಕ್ಕೆ ೩ ಪದ್ಯಗಳಂತೆ ಪದ್ಯಗಳು ಬೇರೆಬೇರೆಯಾಗಿ ಮುದ್ರಣಮಾಡಲ್ಪಟ್ಟಿರುವುವು. ಇದರ ಬೆಲೆ ೧೨ ಆಣೆ. ಅಪೇಕ್ಷಿತರು ಮೈಸೂರು ಶ್ರೀವಾಣೀವಿಲಾಸ ಬುಕ್ ಡಿಪೋವಿಗೆ ಬರೆದು ತರಿಸಿಕೊಳ್ಳಬಹುದು.

ವಿಕ್ರಮೋರ್ವಶೀಯ ನಾಟಕಂ.

ಕವಿಶ್ರೇಷ್ಠನಾದ ಕಾಳಿದಾಸಮಹಾಕವಿಯಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ ಈ ವಿಕ್ರಮೋರ್ವಶೀಯ ನಾಟಕವನ್ನು ಮೈಸೂರ ಶ್ರೀಮನ್ಮಹಾರಾಜರವರ ಆಸ್ಥಾನ ಮಹಾ ವಿದ್ವಾಂಸರಾದ ವೇ॥ ಸೋಸಲೆ ಅಯ್ಯಾಶಾಸ್ತ್ರಿಗಳು ಓದುವುದಕ್ಕೂ, ನಾಟಕಾಭಿನಯಕ್ಕೂ ಅನುಕೂಲಿಸುವಂತೆ ಕನ್ನಡದ ಭಾಷೆಯಲ್ಲಿ ಕಂದ, ವೃತ್ತ ಮತ್ತೂ ಹಾಡುಗಳಿಂದ ರಚಿಸಿ ೧೮೯೧ ರಲ್ಲಿ ಮುದ್ರಣಮಾಡಿಸಿದ್ದ ಪ್ರತಿಗಳೆಲ್ಲವೂ ಮುಗಿದುಹೋದುದರಿಂದ ಈಗ ಎರಡನೆಯ ಮುದ್ರಣವನ್ನು ಮಾಡಿಸಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ಈ ನಾಟಕವು ಕಾಳಿದಾಸ ಮಹಾಕವಿಯ ವಿರಚಿತವಾಗಿರುವುದರಿಂದ ಇದರ ಸ್ವಾರಸ್ಯವನ್ನು ಹೇಳಬೇಕಾದುದಿಲ್ಲವು. ಅಯ್ಯಾಶಾಸ್ತ್ರಿಗಳಾದರೂ ಅದೇ ಸ್ವಾರಸ್ಯವನ್ನು ಕನ್ನಡದಲ್ಲೂ ತಂದಿರುವರು. ಈ ಗ್ರಂಥವು ಎಫ್.ಎ., ಬಿ. ಎ. ಅಪ್ಪರ್ ಸೆಕೆಂಡರಿ ಮೊದಲಾದ ತರಗತಿಗಳಲ್ಲಿ ಕನ್ನಡ ಪರೀಕ್ಷೆಗೆ ವಿದ್ಯಾಶಾಖೆಯವರಿಂದ ಇಡಲ್ಪಟ್ಟು, ಅದರ ಕರ್ತರು ಪ್ರೋತ್ಸಾಹಿಸಲ್ಪಟ್ಟಿರುವರು. ಪುರೂರವ ಮಹಾರಾಜನು ಅಪ್ಸರಸ್ತ್ರೀಯಾದ ಊರ್ವಶಿಯನ್ನು ದೈತ್ಯನ ಸೆರೆಯಿಂದ ಬಿಡಿಸಿ ಅವಳನ್ನು ವರಿಸುವನು. ಊರ್ವಶಿಯು ಮನುಷ್ಯನನ್ನು ವರಿಸಿದುದಕ್ಕಾಗಿ ದೇವಲೋಕವಾಸವು ತಪ್ಪುವಂತೆ ಶಪಿಸಲ್ಪಟ್ಟು ಪುರೂರವನ ಕೂಡ ಬಂದು ವಾಸಮಾಡುತ್ತಿರುವಾಗ್ಗೆ, ತನ್ನ ಪ್ರಿಯನು ಋಷಿಕನ್ಯೆಯನ್ನು ದೃಷ್ಟಿಸಿ ನೋಡಿದನೆಂದು ಅತನ ಕೂಡ ಕಲಹಮಾಡಿಕೊಂಡು ವನಪ್ರವೇಶಮಾಡಿ ಒಂದು ಲತೆಯಾಗುವಳು. ಅನಂತರ ತನ್ನನ್ನು ಹುಡುಕಿಕೊಂಡು ಬಂದ ತನ್ನ ಪ್ರಿಯನ ಹಸ್ತಸ್ಪರ್ಶದಿಂದ ನಿಜರೂಪವನ್ನು ತಾಳಿ ರಾಜಧಾನಿಗೆ ಮಹಾರಾಜನ ಕೂಡ ಬಂದು ವಾಸಮಾಡುತ್ತಿರುವಲ್ಲಿ ಒಬ್ಬ ತಾಪಸಿಯು ಒಬ್ಬ ಯುವಕನನ್ನು ಆ ರಾಜ ದಂಪತಿಗಳಲ್ಲಿಗೆ ಕರೆತಂದು ವಿದ್ಯಾ ಬುದ್ಧಿ ಸಂಪನ್ನನಾದ ನಿಮ್ಮ ಕುಮಾರನನ್ನೊಪ್ಪಿಸಿಕೊಳ್ಳಬೇಕೆಂದು ಹೇಳುವಳು. ಊರ್ವಶಿಯು ತಾನು ಪುತ್ರನನ್ನು ಪಡೆದಮೇಲೆ ಇಂದ್ರನಾಜ್ಞೆಯಂತೆ ದೇವಲೋಕಕ್ಕೆ ತೆರಳಬೇಕಾಗುತ್ತದೆಂದು ಭಯಪಟ್ಟು ತಾನು ಹೆತ್ತಮಗುವನ್ನು ರಾಜನಿಗೆ ತಿಳುಹದೆ ತಾಪಸಿಯ ವಶಕ್ಕೆ ಕೊಟ್ಟಿದ್ದುದನ್ನು ಸ್ಮರಿಸಿಕೊಂಡು ರಾಜನಿಗೆ ನಿಜಸ್ಥಿತಿಯನ್ನು ತಿಳುಹಿ ದೇವಲೋಕಕ್ಕೆ ಹೊರಡಯತ್ನಿಸುವಳು. ಪುರೂರವನು ಊರ್ವಶಿಯ ವಿಯೋಗವನ್ನು ಸಹಿಸಲಾರದೆ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ವಾನಪ್ರಸ್ಥಾಶ್ರಮಕ್ಕೆ ಹೊರಡಬೇಕೆಂದು ಸಿದ್ಧನಾಗಿರುವಲ್ಲಿ ನಾರದರು ಬಂದು ಮುಂದೆ ದೇವದಾನವರಿಗೆ ಯುದ್ಧವಾಗುವುದು. ಆಗ್ಗೆ ನಿನ್ನ ಸಹಾಯವಾಗಬೇಕಾಗಿರುವುದರಿಂದ ನೀನು ರಾಜ್ಯವನ್ನು ಬಿಟ್ಟು ಹೋಗಬೇಕಾದುದಿಲ್ಲ ಮತ್ತೂ ಊರ್ವಶಿಯು ನಿನ್ನ ಮರಣಾವಧಿ ನಿನ್ನ ಬಳಿಯಲ್ಲೇ ಇರುವಳೆಂದು ಹೇಳಿ ಸಮಾಧಾನಪಡಿಸಿ ಹೋಗುವನು. ಇದೇ ನಾಟಕದ ಮುಖ್ಯಾಂಶವು. ಈ ಪುಸ್ತಕವು ನುಣುಪಾದ ಕಾಗದದಮೇಲೆ ಸ್ಫುಟಾಕ್ಷರಗಳಿಂದ ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಇದರ ಬೆಲೆ ೮ ಆಣೆ.

ಶೆಟ್ಟಿಪಣ್ಣಂ ರಂಗಾಚಾರ್ಲುಯವರ ಜೀವನಚರಿತ್ರೆ.

ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜ [ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಕಾಲಾನಂತರ ಕೈ॥ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ, ಯವರ ಬಾಲ್ಯವಯಸ್ಸಿನಲ್ಲಿ ಅರಮನೆಯ ಕಂಟ್ರೋಲರಾಗಿಯೂ, ಮಹಾಸ್ವಾಮಿಯವರು ಪ್ರಾಪ್ತವಯಸ್ಕರಾಗಿ ರಾಜ್ಯಭಾರವನ್ನು ವಹಿಸಿದಮೇಲೆ ಕೊಂಚಕಾಲ ಮಂತ್ರಿಗಳಾಗಿಯೂ ಇದ್ದು, ಇಂಗ್ಲೆಂಡಿನಲ್ಲಿರುವಂತೆ ಭರತಖಂಡಕ್ಕೆ ಅಭೂತಪೂರ್ವವಾಗಿದ್ದ ಪ್ರಜಾಪ್ರತಿನಿಧಿಸಭೆಯ ಉತ್ಪಾದಕರೂ, ಈ ಸೀಮೆಯಲ್ಲಿ ಮೊದಲು ಲೋಹಮಾರ್ಗವನ್ನೇರ್ಪಡಿಸಿದವರೂ ಆದ ಶೆಟ್ಟಿ ಪಣ್ಣಂ ರಂಗಾಚಾರ್ಲುಯವರ ಜೀವನಚರಿತ್ರೆಯನ್ನು ಮ॥ ರಾ॥ ಡಿ. ವಿ. ಜಿ. ಯವರು ಸರ್ವಗ್ರಾಹ್ಯವಾಗುವಂತೆ ಬಿಡುಗನ್ನಡದಲ್ಲಿ ಬರೆದು ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ನುಣುಪಾದ ಕಾಗದದ ಮೇಲೆ ಸ್ಫುಟಾಕ್ಷರಗಳಿಂದ ಬಹು ಅಂದವಾಗಿ ಮುದ್ರಣಮಾಡಿಸಿ ನಮ್ಮಲ್ಲಿಗೊಂದು ಪ್ರತಿಯನ್ನು ಕಳುಹಿಸಿಕೊಟ್ಟಿರುವರು. ಮ॥ ರಂಗಾಚಾರ್ಲುಯವರ ನಡೆನುಡಿಗಳನ್ನು ಚೆನ್ನಾಗಿ ಪರಿಶೀಲಿಸಿದವರಾದ ಮರಿಮಲ್ಲಪ್ಪನವರ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ॥ ಎಂ. ವೆಂಕಟಕೃಷ್ಣಯ್ಯನವರು ಮತ್ತೂ ರಾಯಬಹದ್ದೂರ್ ಮ॥ ನರಸಿಂಹಯ್ಯಂಗಾರರು ಈ ಗ್ರಂಥಕ್ಕೆ ಪೀಠಿಕೆಯನ್ನು ಬರೆದು ಹೆಚ್ಚು ಪ್ರಾಶಸ್ತ್ಯವನ್ನುಂಟುಮಾಡಿರುವರು. ಮೈಸೂರು ಸೀಮೆಗೆ "ಮಾದರಿಸಂಸ್ಥಾನ" ವೆಂಬ ಕೀರ್ತಿಪ್ರತಿಷ್ಠೆಯುಂಟಾಗಲು ಕಾರಣಭೂತರಾಗಿದ್ದ ಮತ್ತೂ ಪ್ರಜೆಗಳ ಸುಖಸಂಪತ್ತೇ ಮಹಾರಾಜರ ಸುಖಸಂಪತ್ತೆಂದು ಮನಸಾವಾಚಾ ತಿಳಿದು ಕಾರ್ಯತಃ ತೋರ್ಪಡಿಸಲು ಪ್ರಯತ್ನಿಸಿದ್ದ ಆ ಮಹಾಪುರುಷರ ಜೀವನಚರಿತ್ರೆಯನ್ನು ಈ ದೇಶೀಯರಾದ ಕನ್ನಡಿಗರು ತಿಳಿಯಲು ಮಾರ್ಗವಿಲ್ಲದಿದ್ದಿತು. ಆದರೆ ಈಗ ಮ॥ರಾ॥ ಡಿ. ವಿ. ಜಿ. ಯವರು ಈ ಗ್ರಂಥವನ್ನು ಬರೆದು ಆ ಕೊರತೆಯನ್ನು ಹೋಗಲಾಡಿಸಿದುದಕ್ಕಾಗಿ ಕನ್ನಡಿಗರೆಲ್ಲರೂ ಅವರನ್ನು ವಂದಿಸುವರು. ಈ ಚರಿತ್ರೆಯನ್ನು ಆದ್ಯಂತವಾಗಿ ನೋಡಿದುದೆಯಾದರೆ ಮ॥ ರಂಗಾಚಾರ್ಲುಯವರು ಪರದೇಶೀಯರಾದರೂ ಈ ದೇಶೀಯರ ಪುಣ್ಯವಿಶೇಷದಿಂದ ಮೈಸೂರು ಸಂಸ್ಥಾನೋದ್ಧರಣಕ್ಕಾಗಿ ಅವತರಿಸಿದ್ದರೆಂಬುದೂ, ಅವರು ತಮ್ಮನಂತರ ಮಂತ್ರಿಪದವಿಗೆ ಬಂದ ಕೈ॥ ಶೇಷಾದ್ರಯ್ಯರು ಅಧಿಕಾರಮಾಡಿದ ಅವಧಿಯಲ್ಲಿ ಮೂರನೆಯ ಒಂದುಭಾಗದವರೇನಾದರೂ ಅಧಿಕಾರವನ್ನು ಮಾಡಿದ್ದಲ್ಲಿ ಈಗ ಪ್ರಪಂಚದಲ್ಲೆಲ್ಲ ವಿದ್ಯೆ, ಕೃಷಿ, ವಾಣಿಜ್ಯಾದಿಗಳಲ್ಲಿ ಮುಂದುವರಿದಿರುವ ದೇಶಗಳಂತೆ ಈ ಮೈಸೂರು ದೇಶವನ್ನಭಿವೃದ್ಧಿಗೆ ತರತಕ್ಕ ಸಾಮರ್ಥ್ಯವು ಅವರಿಗಿದ್ದಿತೆಂಬುದೂ, ಇಂತಹ ಮಹಾಪುರುಷರನ್ನು ಕೊಂಚ ಕಾಲಾವಧಿಯಲ್ಲೇ ಕಳೆದುಕೊಂಡುದು ಈ ದೇಶದ ದೌರ್ಭಾಗ್ಯವೆಂಬುದೂ ವ್ಯಕ್ತವಾಗುವುವು. ದೇಶೋನ್ನತಿಯ ವಿಚಾರದಲ್ಲೂ, ಅಧಿಕಾರಿಗಳ ಉಚ್ಛೃಂಖಲ ಪ್ರವರ್ತನೆಯನ್ನು ಖಂಡಿಸುವುದರಲ್ಲೂ ಆ ಪ್ರಜಾಹಿತಚಿಂತಕರ ಅಭಿಪ್ರಾಯವು ಹೇಗಿದ್ದಿತೆಂಬುವುದನ್ನು ತೋರ್ಪಡಿಸುವುದಕ್ಕಾಗಿ ಅವರ ಚರಿತ್ರೆಯಲ್ಲಿ ಬರೆಯಲ್ಪಟ್ಟಿರುವ ಒಂದೆರಡಂಶಗಳನ್ನು ಇಲ್ಲಿ ಕೊಟ್ಟಿರುವೆವು. ದಿವಾನರಾದ ಮ॥ ಟಿ. ಆನಂದರಾಯರವರು ಈ ಚರಿತ್ರೆಯ ೫೦ ಪ್ರತಿಗಳನ್ನು ಕೊಂಡುಕೊಂಡಿರುವುದು ಅವರಿಗೆ ಆ ಮಹಾಪುರುಷರ ವಿಷಯಕವಾಗಿರುವ ಪ್ರೀತಿಯನ್ನೂ, ಪೂಜ್ಯಬುದ್ಧಿಯನ್ನೂ ವ್ಯಕ್ತಪಡಿಸುವುದು. ಉನ್ನತಪದವಿಗೆ ಬರಲಿಷ್ಟವುಳ್ಳ ಸರ್ಕಾರಿಯಧಿಕಾರಿಗಳೂ, ದೊಡ್ಡದೊಡ್ಡ ವಿದ್ಯಾಪ್ರಶಸ್ತಿಯನ್ನು ಪಡೆದು ಸರ್ಕಾರಿಯುದ್ಯೋಗವನ್ನು ಸಂಪಾದಿಸಿ ಅಭಿವೃದ್ಧಿಗೆ ಬರಬೇಕೆಂಬ ಕುತೂಹಲವುಳ್ಳ ವಿದ್ಯಾರ್ಥಿಗಳೂ, ಸ್ವದೇಶಾಭಿವೃದ್ಧಿಯ ಹಿತಚಿಂತಕರಾದವರೂ ಈ ಚರಿತ್ರೆಯ ಪ್ರತಿಯೊಂದನ್ನು ಅಗತ್ಯವಾಗಿ ಸಂಗ್ರಹಿಸಬೇಕಾಗಿದೆ.

“ಯಾವ ಸಮಾಜದಲ್ಲಿ ಪ್ರೌಢವಿದ್ಯಾವಂತರು ಪ್ರಬಲಿಸುವುದಿಲ್ಲವೋ ಆ ಸಮಾಜವು ಏಳಿಗೆ ಹೊಂದಲಾರದು. ಸರಕಾರದ ಬಾಲಪಾಠಶಾಲೆಗಳು, ಪ್ರಾಂತ ಪಾಠಶಾಲೆಗಳಿಲ್ಲದೆ ಹೋದರೆ, ಎಂದಿಗೂ ಸಂಪೂರ್ಣವಾಗಲಾರವು. ಈ ಪ್ರೌಢ ಪಾಠಶಾಲೆಗಳಿಗೆ ಎಲ್ಲಾ ತರಗತಿಯ ಜನರೂ ಬಂದು ಸೇರಿ, ಯಥಾಯೋಗ್ಯವಾದ ವಿದ್ಯಾರ್ಥಿವೇತನಗಳ ಮೂಲಕ ಬುದ್ಧಿಶಾಲಿಗಳಾದ ಬಡಹುಡುಗರೂ ಆ ಪಾಠಶಾಲೆಗಳನ್ನು ಪ್ರವೇಶಿಸುವಂತಾದರೆ ಆ ಮಹಾಪಾಠಶಾಲೆಗಳಿಂದ ಒಬ್ಬಿಬ್ಬರಿಗೆ ಮಾತ್ರವಲ್ಲದೆ ದೇಶಕ್ಕೆಲ್ಲಾ ಪ್ರಯೋಜನವುಂಟೆಂದು ಸರಕಾರದವರು ತಿಳಿದಿರುವರು.”

“ಸಂಸ್ಥಾನದಲ್ಲಿ ಕೃಷಿ ಕಾರ್ಖಾನೆಗಳಲ್ಲಿರುವ ಜನರು ಅಭಿವೃದ್ಧಿ ಹೊಂದಬೇಕೆಂಬ ಅಭಿಲಾಷೆಯಿಂದ ಕೂಡಿದವರಾದರೆ, ತಮ್ಮ ತಮ್ಮ ಕಸುಬುಗಳಲ್ಲಿ ತಾವುತಾವೇ ಎಷ್ಟು ಮಾಡಬಹುದೋ ಅದನ್ನು, ಸರಕಾರವಾಗಲಿ ಅಥವಾ ಹೊರಗಿನಿಂದ ಬಂದ ಕೆಲವರಾಗಲಿ ಮಾಡಬಹುದಾದ ಉಪಕಾರದೊಡನೆ ಹೋಲಿಸಿದರೆ ಅವು ಕ್ರಮವಾಗಿ ಆನೆ ಸೊಳ್ಳೆಗಳಂತೆ ಇರುವುವೆಂದು ನಾನು ಪುನಃ ಜ್ಞಾಪಕಕೊಡಿಸಬೇಕಾಗಿದೆ. ಸುತ್ತುಮುತ್ತಲೂ ಎಲ್ಲೆಲ್ಲಿಯೂ ಪ್ರಪಂಚವು ಆಶ್ಚರ್ಯಕರವಾದ ರೀತಿಯಲ್ಲಿ ಮುಂದು ಸಾಗುತ್ತಿರುವಾಗ ಈ ದೇಶದ ಇಪ್ಪತ್ತು ಲಕ್ಷ ಜನರು ಮಾತ್ರ ೨೦೦೦ ವರ್ಷಗಳ ಹಿಂದಿನ ತಮ್ಮ ಪೂರ್ವಿಕರ ನಡತೆಗಳನ್ನೇ ಅನುಸರಿಸಿಕೊಂಡು ದುಃಖಜೀವನದಿಂದ, ದುರ್ಭಿಕ್ಷ ಅಥವಾ ಮತ್ತಾವುದಾದರೊಂದು ಆಪತ್ತಿನ ಮೊದಲನೆಯ ಪೆಟ್ಟಿಗೇ ಮಲಗುವವರಾಗಿ, ತಮ್ಮ ದೀರ್ಘಕಾಲದ ನಿದ್ದೆಯಲ್ಲಿಯೇ ಇನ್ನೂ ಬಹುದಿನಗಳಿರಲಾಗದು. ಯೂರೋಪ್ ಖಂಡದಲ್ಲಿ ನೀರಿನ ಹಬೆಯ ಯಂತ್ರವನ್ನು ಕಾರ್ಖಾನೆಗಳಲ್ಲಿ ಉಪಯೋಗಕ್ಕೆ ತಂದುದು ಈ ಶತಾಬ್ದದ ಆದಿಯಲ್ಲಿಯೇ. ಆಗ ಇಂಡಿಯಾದೇಶವು ಇಂಗ್ಲೆಂಡಿಗೆ ಬಟ್ಟೆಗಳನ್ನು ರಫ್ತುಮಾಡುತಲಿತ್ತು. ಈಗ ಇಂಗ್ಲೆಂಡು ದೇಶವು ಯೂರೋಪಿನ ಇತರ ದೇಶಗಳೊಡನೆಯೂ ಅಮೇರಿಕದೊಡನೆಯೂ ಹೋರಾಡುತ್ತಿದ್ದರೂ, ಪ್ರಪಂಚದ ಬಹುಭಾಗಗಳಿಗೆ ಬಟ್ಟೆಗಳನ್ನೂ ಇತರ ಪದಾರ್ಥಗಳನ್ನೂ ಒದಗಿಸುತ್ತಲಿದೆ. ಇದಕ್ಕೆ ಕಾರಣವು ಯಾರಾದರೂ ಒಬ್ಬರಿಬ್ಬರು ಅಕಸ್ಮಾತ್ತಾಗಿ ಮಹೋಪಾಯಗಳನ್ನು (ಅಥವಾ ಮಹಾವಿಷಯಗಳನ್ನು) ನೂತನವಾಗಿ ಕಂಡುಹಿಡಿದುದಲ್ಲ. ಅನೇಕಮಂದಿ ಜನರು ಪ್ರತಿಯೊಬ್ಬನೂ ತಾನು ಮಾಡುವ ಕೆಲಸದಲ್ಲಿ ಬುದ್ಧಿಯನ್ನುಪಯೋಗಿಸಿ, ಚಿಕ್ಕಚಿಕ್ಕ ವಿಷಯಗಳನ್ನು ಕಂಡು ತಿಳಿದುಕೊಂಡು, ದಿನೇದಿನೇ ತನ್ನ ಕಸಬನ್ನು ಸ್ವಲ್ಪಸ್ವಲ್ಪವಾಗಿ ಉತ್ತಮಪಡಿಸಲು ಯತ್ನಿಸಿದುದರಿಂದ ಅದೆಲ್ಲವೂ ಒಟ್ಟುಗೂಡಿ ಇಷ್ಟು ಸಂಪತ್ತಿಗೂ ಅಭ್ಯುದಯಕ್ಕೂ ಕಾರಣವಾಯಿತು.

ಈ ದೇಶದ ಜನರೂ ಅದೇ ಪ್ರಕಾರವಾಗಿ ಅಭಿವೃದ್ಧಿಯ ಮಾರ್ಗದಲ್ಲಿ ನಡೆಯಲು ಮೊದಲುಮಾಡಿದರೆ ಏನುತಾನೇ ಅಸಾಧ್ಯ? ಇಂಡಿಯಾ ದೇಶದ ರಾಜ್ಯತಂತ್ರಜ್ಞರ ಮುಂದಿರುವ ದೊಡ್ಡ ಪ್ರಶ್ನೆಯೇನಂದರೆ :– “ಪ್ರಜೆಗಳನ್ನು ಅಧಿಕಾರಿವರ್ಗದ ಕಷ್ಟಕರವಾದ ಅಧೀನದಿಂದ ಬಿಡಿಸಿ, ಅವರು ಕೃಷಿಕಲಾವಾಣಿಜ್ಯಗಳಲ್ಲಿ ಮುಂದುವರಿದು, ಅಭಿವೃದ್ಧಿಯೊಂದುವಹಾಗೆ ಮಾಡುವುದಕ್ಕೇನುಪಾಯ?” ಎಂಬುದು. ಈ ವಿಷಯದಲ್ಲಿ ತಮ್ಮ ಕೈಯಿಂದಾಗುವುದನ್ನು ಮಾಡಲು ಮಹಾರಾಜಾ ಸರ್ಕಾರವು ಆತುರಗೊಂಡಿದೆ. ಆದರೆ ಈಗ ಪ್ರಜಾಪ್ರತಿನಿಧಿ ಸಭೆಗಳ ಮತ್ತು ಸ್ವರಾಜ್ಯದ ಕಾಲವು ಹುಟ್ಟಿ, ಜನಾಂಗದಲ್ಲಿ ಉಜ್ಜೀವನವನ್ನು ಹರಡಲು ಮೊದಲು ಮಾಡಿಗುವ ಕಾರಣ, ಪ್ರಜಾಪ್ರತಿನಿಧಿಗಳಾದ ನೀವುಗಳು ಈ (ಮೇಲೆ ಹೇಳಿರುವ) ಅಭಿಪ್ರಾಯವನ್ನು ಜನರಲ್ಲಿ ಹರಡಿ, ಅವರನ್ನು ಸ್ವಪ್ರಯೋಜನದ ಮತ್ತು ಸ್ವೋನ್ನತಿಯ ವಿಷಯಗಳಲ್ಲಿ ಎಚ್ಚರಿಸುವಿರೆಂದು ಸರ್ಕಾರವು ನಿರೀಕ್ಷಿಸುತ್ತದೆ.”

“ಮೊದಲನೆಯ ಪ್ರಜಾಪ್ರತಿನಿಧಿ ಸಭೆಯಲ್ಲಿ ದುರಹಂಕಾರಿಯಾದ ಒಬ್ಬ ಅಧಿಕಾರಿಯು ಪ್ರತಿನಿಧಿಯಾದ ಒಬ್ಬ ಗೌಡನನ್ನು ಪರಿಹಾಸಮಾಡಲು, ತತ್‌ಕ್ಷಣದಲ್ಲಿಯೇ ಮ॥ ರಂಗಾಚಾರ್ಯರವರು ಸಭೆಯವರೆಲ್ಲರೂ ಕೇಳುವ ಹಾಗೆ “ನಮ್ಮ ಅಧಿಕಾರಿಗಳಿಗೆ ಒಂದೊಂದು ಭಾಗದಲ್ಲಿ ಬುದ್ಧಿಯು ಓಡುವುದು. ಅವರಿಗೆ ಅಭ್ಯಾಸವಿರತಕ್ಕ ಕೆಲಸವನ್ನು ಅವರು ಸುಮಾರಾಗಿ ಮಾಡುವರು. ಅವರಿಗೆ ಬೇರೆ ಕೆಲಸವನ್ನು ಕೊಟ್ಟರೆ ನೀರಿನಿಂದ ಈಚೆಗೆ ತೆಗೆದುಹಾಕಲ್ಪಟ್ಟ ಮೀನಿನ ಅವಸ್ಥೆಗೆ ಇವರು ಬರುವರು. ನಮ್ಮಲ್ಲಿ ಬೇರೋಜುಗಾರರಾಗಿಯೂ, ಕೃಷಿ ವಾಣಿಜ್ಯ ಮೊದಲಾದವುಗಳನ್ನು ಮಾಡತಕ್ಕವರಾಗಿಯೂ, ಆತ್ಮಾವಲಂಬಿಗಳಾಗಿಯೂ ಇರತಕ್ಕ ರೈತರೇ ಮೊದಲಾದ ಮಹಾಜನಗಳು ಈ ಅಧಿಕಾರಿಗಳಂತೆ ಏಕಮುಖವಾದ ಪ್ರಜ್ಞೆಯುಳ್ಳವರಲ್ಲ. ಇವರ ಪ್ರಜ್ಞೆಯು ಸರ್ವತೋಮುಖವಾದದ್ದು.” ಎಂಬದಾಗಿ ಅಪ್ಪಣೆ ಕೊಡಿಸಿದರು. ಒಂದಾವರ್ತಿ ಒಬ್ಬ ದೊಡ್ಡ ಅಧಿಕಾರಿಯು “ಪ್ರಜಾಪ್ರತಿನಿಧಿಗಳನ್ನು ಹೀಗೆ ಹೆಚ್ಚಿಸಿದರೆ ಕೊನೆಗೆ ಸರ್ಕಾರದ ಉದ್ಯೋಗಸ್ಥರೆಲ್ಲಾ ಈ ಪ್ರತಿನಿಧಿಗಳಿಗೆ ಲಂಚಕೊಡುವ ಅವಸ್ಥೆಯು ಬರುವುದು.” ಎಂದು ಹೇಳಿದನು. ಅದಕ್ಕೆ ಮ॥ ರಂಗಾಚಾರ್ಯರವರು ಕೊಟ್ಟ ಉತ್ತರವು ಅವರ ಮಹಾನುಭಾವತೆಯನ್ನು ಪ್ರದರ್ಶನಮಾಡುವುದು. ಅವರು ಹೇಳಿದ್ದೇನೆಂದರೆ:—“ಪ್ರಜೆಗಳು ಅಹೋರಾತ್ರಿಗಳಲ್ಲಿಯೂ ಅನಿರ್ವಚನೀಯವಾದ ಕಷ್ಟಗಳನ್ನು ಪಟ್ಟು, ವ್ಯವಸಾಯ ಮೊದಲಾದವುಗಳ ಮೂಲಕ ಭೋಗ್ಯವಸ್ತುಗಳನ್ನು ನಿರ್ಮಾಣಮಾಡಿ ಸರ್ಕಾರಕ್ಕೆ ಕಂದಾಯವನ್ನು ಕೊಟ್ಟು ವಿಶೇಷ ಕ್ಲೇಶವಿಲ್ಲದೆ ಭಾರೀ ಸಂಬಳನ್ನು ಹೊಂದುವುದಕ್ಕೆ ಅವಕಾಶಮಾಡಿಕೊಟ್ಟಿದ್ದಾಗ್ಯೂ ದುರಾತ್ಮರಾದ ಅಧಿಕಾರಿಗಳು ಅದರಲ್ಲಿ ತೃಪ್ತರಾಗದೆ ಬಹುಕಾಲಗಳಿಂದ ಅನೇಕ ರೂಪಗಳಿಂದ ಅವರ ಹೃದಯದಲ್ಲಿರತಕ್ಕ ರಕ್ತವನ್ನೂ ಕೂಡ ಪಾನಮಾಡಿ ಇದ್ದಾರೆ. ಇಂಥಾ ಅಧಿಕಾರಿಗಳು ನಮ್ಮ ರೈತರಿಗೆ ಲಂಚ ಕೊಡುವ ಕಾಲವು ಬಂದ ಪಕ್ಷದಲ್ಲಿ ಅದಕ್ಕೆ ನಾನು ತುಂಬಾ ಸಂತೋಷಪಡುವೆನು.”

ಸೀಮೆಯಲ್ಲಿ ಹೊಲಿಯುವ ಯಂತ್ರದ ಮತ್ತೂ ಬೈಸಿಕಲ್ಲಿನ ಒಂದು ಕಾರ್ಖಾನೆಯಲ್ಲಿ ಬೆಂಕಿಯು ಬಿದ್ದು ಕಟ್ಟಡವು ಹೊತ್ತಿಕೊಂಡು ೨೦೦೦೦ ಬೈಸಿಕಲ್ಲು ಬಂಡಿಗಳೂ ೩೦೦೦೦ ಹೊಲಿಯುವ ಯಂತ್ರಗಳೂ ನಾಶವಾಗಿ ೩೦೦೦೦೦ ರೂ. ಗಳ ಜಿನಿಸು ನಷ್ಟವಾಗಿರುವುದಲ್ಲದೆ ೨೦೦೦ ಜನರಿಗೆ ಕೆಲಸವಿಲ್ಲದಂತಾಗಿದೆ.

ಮೈಸೂರ್ ಗೆಜೆಟ್ ಸಂಗ್ರಹ.

೧೯೧೧ ನೆಯ ಸೆಪ್ಟಂಬರ್ ತಾ॥ ೪ ರ ಮಧ್ಯಾಹ್ನದಲ್ಲಿ ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿ ನೇಮಿಸಲ್ಪಟ್ಟಿರುವ ಅ॥ ಕಮಿಷನರ್ ಮ॥ ಪಿ. ಎಸ್. ಬಾಲಿಂಗ್‌ರವರು ಕೋಲಾರದ ಡಿಸ್ಟ್ರಿಕ್ಟ್ ಮತ್ತೂ ಟ್ರಜರಿ ಛಾರ್ಜನ್ನು ಮ॥ ಸಿ. ಶ್ರೀಕಂಠೇಶ್ವರಯ್ಯರಿಂದ ವಹಿಸಿಕೊಂಡರು.

ಶ್ರೀಮನ್ಮಹಾರಾಜರವರು ಮ॥ ಬಾಪಾಮಿಯ ಶಾಮರಾಯರನ್ನೂ ಮತ್ತೂ ವಾಂಣಾದ ಮ॥ ಕೀರ್ತಿಸಿಂಗ್‌ಜೀಯವರನ್ನೂ ಲೋಕಲ್ ಸರ್ವಿಸ್ ರಿಜಿಮೆಂಟಿನಲ್ಲಿ ೪ ನೆಯ ತರಗತಿಯ ಜಮೇದಾರರುಗಳನ್ನಾಗಿ ನಿಯಮಿಸಿರುವರು.

ಅಸಿಸ್ಟೆಂಟ್ ಕಮಿಷನರುಗಳಾದ ಮ॥ ಸಿ. ದೇವರಾಜ ಅರಸಿನವರು ೧೯೧೦ ನೆಯ ಫೆಬ್ರವರಿ ತಾ॥ ೧೮ ರಿಂದಲೂ, ಮ॥ ನರಸಿಂಗರಾವ್ ಪೂರ್ಣಯ್ಯನವರು ೧೯೧೧ ನೆಯ ಏಪ್ರಿಲ್ ತಾ॥ ೨೨ ರಿಂದಲೂ ೨ ನೆಯ ತ॥ ಯಿಂದ ೧ ನೆಯ ತ॥ ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಅ॥ ಕಮಿಷನರ್ ಮ॥ ಎನ್. ಎ. ರಾಜಗೋಪಾಲಾಚಾರ್, ಬಿ. ಎ., ಬಿ. ಎಲ್., ರವರು ೧೯೧೦ ನೆಯ ಡಿಸೆಂಬರ್ ತಾ॥ ೩ ರ ಆರಭ್ಯ ೫ ನೆಯ ತ॥ ಯಿಂದ ೪ ನೆಯ ತ॥ ಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಡೆಪ್ಯುಟಿ ಅಮಲ್ದಾರರಾದ ಎಂ. ಅಹೋಬಲಶಾಸ್ತ್ರಿಯವರು ಗುಡಿಬಂಡೆಯಿಂದ ಕೊರಟಗೆರೆಗೂ, ಆ॥ ಡಿ॥ ಅಮಲ್ದಾರ್ ಟಿ. ರಾಮಚಂದ್ರರಾಯರು ಕೊರಟಗೆರೆಯಿಂದ ಗುಡಿಬಂಡೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಸಬ್ ಅ॥ ಸರ್ಜನ್ ಮ॥ ಬಿ. ನಂಜಪ್ಪನವರು ಚಿತ್ರಕಲ್ ದುರ್ಗ ಡಿ॥ ನಲ್ಲಿ ಇನಾಕ್ಯುಲೇಷನ್ ಕೆಲಸಕ್ಕೆ ನೇಮಿಸಲ್ಪಡುವುದಕ್ಕಾಗಿ ಸ್ಯಾನಿಟರಿ ಕಮಿಷನರ ಕೈಕೆಳಗೆ ಕೊಡಲ್ಪಟ್ಟಿರುತ್ತಾರೆ.

ಭೂಗರ್ಭಶೋಧನಶಾಖೆಯ ರಿಜಿಸ್ಟ್ರಾರರಾದ ಮ॥ ಬಿ. ಸುಬ್ಬರಾವ್, ಬಿ. ಎ., ಯವರಿಗೆ ೧೯೧೧ ನೆಯ ಆಗಸ್ಟ್ ತಾ॥ ೨೧ ರಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಜಿಯಲಾಜಿಕಲ್ ಸೆಕ್ರೆಟರಿಯಟ್ಟಿನ ಹೆಡ್ ಕ್ಲಾರ್ಕ್ ಮ॥ ಎಂ. ವರದಯ್ಯನವರು ಮ॥ ಸುಬ್ಬರಾಯರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಭೂಗರ್ಭಶೋಧನಶಾಖೆಯ ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಎಟ್ನಾ ಎಂಬ ಅಗ್ನಿಪರ್ವತದಲ್ಲಿ ಜ್ವಾಲಾಮುಖಿಯು ವಿಶೇಷವಾಗಿ ಹೊರಡಲಾರಂಭಿಸಿ ನೆರೆಯ ಕಾಡುಗಳೂ ದ್ರಾಕ್ಷಾವನಗಳೂ ಅಪಾಯಸ್ಥಿತಿಯಲ್ಲಿರುವುವು.

ಮೈಸೂರ್ ಸ್ಟಾರ್

೧೯೧೧ ನೆಯ ಇಸವಿ ಸೆಪ್ಟೆಂಬರ್ ತಾ॥ ೧೮ ನೇ ಸೋಮವಾರ.

ಮೈಸೂರ ಸರ್ಕಾರದ ಮೇಲೆ ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ಆಕ್ಷೇಪಣೆಯು.

ಭರತಖಂಡದ ಸಾರ್ವಜನಿಕ ಮಹಾಸಭೆಯಲ್ಲಾಗುವ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿಯೂ, ತತ್ಸಭಾಸಂಬಂಧವಾದ ಇತರ ಕಾರ್ಯಗಳನ್ನು ಕುರಿತು ಆಲೋಚಿಸುವುದಕ್ಕಾಗಿಯೂ ಬಂಗಾಳಾ, ಬೊಂಬಾಯಿ ಮೊದಲಾದ ಪ್ರಾಂತಗಳಲ್ಲಿ ಸಭೆಗಳಿರುವಂತೆ ಮದ್ರಾಸಿನಲ್ಲೂ ಪ್ರಾಂತಿಕ ಸಭೆ (ಕಾಂಗ್ರೆಸ್ ಕಮಿಟಿ) ಯು ಇರುತ್ತದೆ. ಈ ಮದ್ರಾಸ್ ಪ್ರಾಂತಿಕಸಭೆಯ ಸೆಕ್ರೆಟರಿಗಳಲ್ಲೊಬ್ಬರಾದ ಮತ್ತೂ ಆನರಬಲ್ ಗೋಖಲೆಯವರಿಂದ ಸ್ಥಾಪಿತವಾಗಿರುವ "ಭರತಖಂಡದ ದೇಶಸೇವಾ ಸಂಘ" ಕ್ಕೆ ಸೇರಿದವರಾದ ಮ॥ ವಿ. ಎಸ್. ಶ್ರೀನಿವಾಸ ಶಾಸ್ತ್ರಿ, ಬಿ. ಎ, ಯವರು ಈಗ್ಗೆ ಎರಡುವಾರಗಳ ಹಿಂದೆ ಬೆಂಗಳೂರಿಗೆ ಬಂದು ಕೆಲ ಉಪನ್ಯಾಸಗಳನ್ನು ಮಾಡಿ ಬೆಂಗಳೂರಲ್ಲಿ ಪಾಶ್ಚಾತ್ಯದೇಶೀಯಳಾದ ಮಿಸ್ ಟಿನೆಂಟ್ ಎಂಬಾಕೆಯಿಂದ ಸ್ಥಾಪಿತವಾಗಿರುವ ಹಿಂದೂ ವಿವಾಹ ಸುಧಾರಣಾ ಸಂಘದವರ ಪ್ರಾರ್ಥನೆಯಂತೆ ಒಂದುಪನ್ಯಾಸವನ್ನು ಹಿಂದೆ ದಿವಾನರಾಗಿದ್ದ ಮ॥ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಮಾಡಲು ಸಭೆ ಕೂಡಿರುವಾಗ್ಗೆ, ಅಗ್ರಾಸನಾಸೀನರಾಗಿದ್ದ ಮ॥ ಮಾಧವರಾಯರೆದ್ದು, "ಈ ದಿವಸ ಬೆಳಿಗ್ಗೆ ಒಬ್ಬ ದೊಡ್ಡ ಪೋಲೀಸಧಿಕಾರಿಯು ನನ್ನಲ್ಲಿಗೆ ಬಂದು ಈ ದಿವಸದುಪನ್ಯಾಸವನ್ನು ನೀವು ನಡೆಯಗೊಡಬಾರದೆಂಬುದು ಮೈಸೂರ ಸರ್ಕಾರದವರ ಅಭಿಪ್ರಾಯವಾಗಿರುತ್ತದೆ." ಎಂದು ತಿಳುಹಲು ನಾನು ಹಾಗಾಗಲೆಂದೊಪ್ಪಿ ಕಳುಹಿಸಿರುವೆನಾದಕಾರಣ, ಮ॥ ಶಾಸ್ತ್ರಿಯವರು ಈ ದಿವಸ ಮಾಡಬೇಕೆಂದಿರುವ ಉಪನ್ಯಾಸವು ನಡೆಯುವುದಿಲ್ಲವೆಂದು ಸಭಿಕರಿಗೆ ತಿಳುಹಿದರು. ಈ ಉಪನ್ಯಾಸವನ್ನು ಕೇಳಲು ಚೀಫ್ ಕೋರ್ಟ್ ಜಡ್ಜರಾದ ಮ॥ ಕೆ. ಎಸ್. ಚಂದ್ರಶೇಖರಯ್ಯರವರೇ ಮೊದಲಾದ ಅಧಿಕಾರಿಗಳೂ, ವಿದ್ವಾಂಸರೂ ಬಂದಿದ್ದರು. ರಾಜಕೀಯ ವಿಚಾರವಾಗಿರದೆ ಬರಿಯ ವಿವಾಹ ಸುಧಾರಣೆಯನ್ನು ಕುರಿತು ಮ॥ ಶಾಸ್ತ್ರಿಗಳವರು ಉಪನ್ಯಾಸವನ್ನು ಮಾಡಲು ಮೈಸೂರು ಸರ್ಕಾರದವರು ಏನೊಂದೂ ಕಾರಣವಿಲ್ಲದೆ ಹೀಗೆ ಅಕಸ್ಮಾತ್ತಾಗಿ ಅಡ್ಡಿಪಡಿಸಿದುದಕ್ಕಾಗಿ ನೆರದಿದ್ದವರೆಲ್ಲರೂ ಸಖೇದಾಶ್ಚರ್ಯಪಟ್ಟು ತೆರಳಿದರಲ್ಲದೆ, ಉಪನ್ಯಾಸಕರಾದ ಮ॥ ಶಾಸ್ತ್ರಿಗಳು ಬಹು ಖಿನ್ನಮನಸ್ಕರಾಗಿ ದಿವಾನರಲ್ಲಿಗೆ ಹೋಗಿ ಹೀಗೆ ಹಠಾತ್ತಾಗಿ ಉಪನ್ಯಾಸವನ್ನು ನಿಲ್ಲಿಸಲಪ್ಪಣೆ ಮಾಡಲು ಕಾರಣವೇನೆಂದು ಕೇಳುವಲ್ಲಿ, ದಿವಾನರು ಸಮರ್ಪಕವಾದುತ್ತರವನ್ನು ಕೊಡಲಿಲ್ಲವಂತೆ. ಅದರಮೇಲೆ ಶಾಸ್ತ್ರಿಗಳು ಬಹು ಬೇಸರಪಟ್ಟು ಕೂಡಲೆ ಮದ್ರಾಸಿಗೆ ತೆರಳಿದರು.

ನಮ್ಮ ಸರ್ಕಾರದವರು ಕಾರಣವನ್ನು ತಿಳುಹದೆ ಮ॥ ಶಾಸ್ತ್ರಿಗಳುಪನ್ಯಾಸವನ್ನು ತಡೆದುಬಿಟ್ಟ ವಿಚಾರದಲ್ಲಿ ಮೈಸೂರಿನ ಮತ್ತೂ ಹೊರಗಣ ವೃತ್ತಪತ್ರಿಕೆಗಳಲ್ಲಿ ಚರ್ಚೆಯು ನಡೆಯುತ್ತಿದೆ. ಮತ್ತೂ ಸಾರ್ವಜನಿಕ ಮಹಾಸಭೆಗೆ ಸಂಬಂಧಪಟ್ಟ ಮದ್ರಾಸ್ ಪ್ರಾಂತಿಕ ಸಭೆಯವರು ತಮ್ಮ ಸಭೆಯ ಸೆಕ್ರೆಟರಿಗಳಲ್ಲೊಬ್ಬರಾದ ಮ॥ ಶ್ರೀನಿವಾಸ ಶಾಸ್ತ್ರಿಯವರು ಬೆಂಗಳೂರಲ್ಲಿ ಉಪನ್ಯಾಸವನ್ನು ಮಾಡಲು ಮೈಸೂರು ಸರ್ಕಾರದವರು ಅಡ್ಡಿ ಪಡಿಸಿದ ಭಾಗವನ್ನು ಕುರಿತು ಆಲೋಚಿಸತಕ್ಕ ಬಗೆಗೆ ಕಳೆದ ತಾ॥ ೧೩ ರ ಸಾಯಂಕಾಲ ಮದ್ರಾಸಿನಲ್ಲಿರುವ ಮಹಾಜನಾ ಸಭಾಮಂದಿರದಲ್ಲಿ ಆನರಬಲ್ ಮ॥ ಟಿ. ವಿ. ಶೇಷಗಿರಿ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಅಗ್ಗೆ ಮ॥ ರಾ॥ ಗಳಾದ ಆನರಬಲ್ ಎಲ್. ಎ. ಗೋವಿಂದರಾಘವಯ್ಯರ್, ಟಿ. ವಿ. ಮುದ್ದುಕೃಷ್ಣಯ್ಯರ್, ವಿ. ಮಾಸಿಲಾಮಣಿಪಿಳ್ಳೆ, ಕೆ. ಎನ್. ಅಯ್ಯಾ, ಪಿ. ನಾಗಭೂಷಣಂ, ಸಿ. ಪಿ. ರಾಮಸ್ವಾಮಯ್ಯರ್ ಸಿ. ಕೆ. ಮಹದೇವಯ್ಯರ್, ಎ. ರಂಗಸ್ವಾಮಿ ಅಯ್ಯಂಗಾರ್ ಜಿ. ಕೋದಂಡರಾಮಯ್ಯರ್, ಜಿ. ಎ. ನಟೇಶನ್ ಮೊದಲಾದ ಮೆಂಬರುಗಳು ಬಂದಿದ್ದರು. ಅಲ್ಲದೆ ದಿವಾನ್ ಬಹದ್ದೂರ್ ಎಂ. ಆದಿನಾರಣಯ್ಯನವರು ಮತ್ತೂ ಗೊಂಡಲೂರು ಜಮೀನ್ದಾರ್ ಮ॥ ಸುಬ್ಬರಾಯರು ಸಭೆಗೆ ಬರಲಾಗದಿದ್ದುದಕ್ಕಾಗಿ ಮೈಸೂರು ಸರ್ಕಾರದವರ ವರ್ತನವಿಚಾರದಲ್ಲಿ ತಮಗುಂಟಾಗಿರತಕ್ಕ ಅಸಮಾಧಾನವನ್ನು ಬರೆದು ಕಳುಹಿದ್ದರು. ಸಭಿಕರೆಲ್ಲರೂ ತಮ್ಮ ಸಭೆಯ ಸೆಕ್ರೆಟರಿಗಳಲ್ಲೊಬ್ಬರಾಗಿಯೂ, ಸರ್ಕಾರದಿಂದ ಬರುತ್ತಿದ್ದ ಸ್ವಪ್ರಯೋಜನವನ್ನು ಬಿಟ್ಟು ದೇಶಸೇವಾನಿರತರಾಗಿಯೂ, ಪೂರ್ಣ ವಿದ್ವಾಂಸರಾಗಿಯೂ ಸರ್ಕಾರದವರ ಅಪ್ರೀತಿಗೆ ಗುರಿಯಾಗದಂತೆ ಬಹು ಎಚ್ಚರದಿಂದಿರುವವರಾಗಿಯೂ ಇರುವ ಮ॥ ಶ್ರೀನಿವಾಸಶಾಸ್ತ್ರಿಗಳು ಬೆಂಗಳೂರಲ್ಲಿ ವಿವಾಹಸುಧಾರಣೆಯ ಸಂಬಂಧವಾಗಿ ಮೈಸೂರ ಸಂಸ್ಥಾನದ ದಿವಾನರಾಗಿದ್ದ ಮ॥ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಮಾಡಲು ಮೈಸೂರ ಸರ್ಕಾರದವರು ನಿಷ್ಕಾರಣವಾಗಿ ಅಡ್ಡಿಪಡಿಸಿದುದು ತಪ್ಪಾಗಿದೆ, ಮತ್ತೂ ಹೀಗೆ ಅಡ್ಡಿಮಾಡಿದುದರ ಕಾರಣವನ್ನು ಉಪನ್ಯಾಸಕರಿಗೆ ಸಹ ತಿಳುಹದಿದ್ದುದು ದುಂತಾವೃತ್ತಿಯೂ, ಅನ್ಯಾಯವೂ ಆಗಿರುತ್ತದೆ. ಮೈಸೂರ ಸರ್ಕಾರದವರು ತಾವು ಮ॥ ಶಾಸ್ತ್ರಿಗಳುಪನ್ಯಾಸವನ್ನು ನಿಲ್ಲಿಸಲು ತಮಗಿದ್ದ ಪ್ರಬಲವಾದ ಕಾರಣವನ್ನು ಈಗಳಾದರೂ ಬಹಿರಂಗಪಡಿಸಿದರೆ ಸರಿ, ಇಲ್ಲವಾದಲ್ಲಿ ಇಂಡ್ಯಾ ಸರ್ಕಾರದವರು ಈ ವಿಚಾರದಲ್ಲಿ ಪ್ರವೇಶಿಸಬೇಕಾಗುತ್ತದೆ. ಉಪನ್ಯಾಸವನ್ನು ಮಾಡಲು ಜನರಿಗಿರುವ ಸ್ವಾತಂತ್ರ್ಯವನ್ನು ಮೈಸೂರ ಸರ್ಕಾರದವರು ತಪ್ಪಿಸಿಬಿಡತಕ್ಕದು ಸರ್ವಥಾ ಅನುಚಿತವಾದುದು ಎಂದು ಮೊದಲಾಗಿ ಚರ್ಚಿಸಿ, ಈ ವಿಚಾರದಲ್ಲಿ ತಮಗುಂಟಾಗಿರುವ ಅಸಮಾಧಾನವನ್ನೂ, ತಿರಸ್ಕಾರವನ್ನೂ ಇಂಡ್ಯಾ ಸರ್ಕಾರಕ್ಕೂ, ಮೈಸೂರು ಸರ್ಕಾರಕ್ಕೂ, ಆ॥ ಗೋಖಲೆಯವರಿಗೂ ತಿಳುಹತಕ್ಕದೆಂದು ನಿರ್ಧಾರವನ್ನು ಮಾಡಿದರು. ಇದೇರೀತಿ ಮದ್ರಾಸು ಮಹಾಜನಸಭೆಯವರೂ ತಾ॥ ೧೫ ರಲ್ಲಿ ಸಭೆ ಸೇರಿದ್ದು ಮೈಸೂರ ಸರ್ಕಾರದ ಅನ್ಯಾಯವೂ, ಸ್ವೇಚ್ಛೆಯೂ ಆದ ವರ್ತನವನ್ನು ಕುರಿತು ತಮ್ಮ ಅಸಮಾಧಾನವನ್ನೂ, ತಿರಸ್ಕಾರವನ್ನೂ ಪ್ರದರ್ಶಿಸಿದರು.

ಬ್ರಿಟಿಷ್ ಸರ್ಕಾರದವರಿಂದ ಗಣ್ಯವಾಗಿಣಿಸಲ್ಪಟ್ಟಿರುವ ಭರತಖಂಡದ ಸಾರ್ವಜನಿಕ ಮಹಾಸಭೆಗೆ ಸೇರಿದವರಾಗಿಯೂ, ಭಾರತೀಯರ ಏಳಿಗೆಗಾಗಿ ತಮ್ಮ ತನುಮನವನ್ನು ಧಾರೆಯೆರದು ಹಗಲಿರುಳೂ ಪಾಟುಪಡುತ್ತ ಭಾರತೀಯರ ಭಾಗದ ಪುಣ್ಯಮೂರ್ತಿಯೆಂದು ಅವರಿಂದ ಧನ್ಯವಾದಗಳನ್ನು ಮಾಡಿಸಿಕೊಳ್ಳುತ್ತಿರುವ ಮತ್ತೂ ಭರತಖಂಡದ ಕೆಲ ಭಾಗಗಳಲ್ಲಿ ಹುಟ್ಟಿರುವ ಅರಾಜಕ ಪ್ರವರ್ತನೆಯನ್ನು ಖಂಡಿಸಿ, ಬ್ರಿಟಿಷ್ ಸರ್ಕಾರದವರ ಮೆಚ್ಚುಗೆಗೆ ಪಾತ್ರರಾಗಿರುವ ಆನರಬಲ್ ಗೋಖಲೆಯವರು ಸ್ಥಾಪಿಸಿರುವ ದೇಶಸೇವಾ ಸಂಘಕ್ಕೆ ಸೇರಿದವರಾಗಿಯೂ, ಪೂರ್ಣ ವಿದ್ವಾಂಸರಾಗಿಯೂ, ಸರ್ಕಾರಿಯುದ್ಯೋಗವನ್ನು ಬಿಟ್ಟು ದೇಶಸೇವಾಕಾರ್ಯ ತತ್ಪರರಾಗಿಯೂ ಇರುವ ಮ॥ ಶಾಸ್ತ್ರಿಗಳವರು ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾಗಿ ಭಾಷಣಮಾಡುವರೆಂದು ಊಹಿಸಲೂ ಸಾಧ್ಯವಿಲ್ಲವು. ಹೀಗೆ ಸರ್ಕಾರದವರ ಅಪ್ರೀತಿಗೆ ಯಾವಾಗಲೂ ಗುರಿಯಾಗದಿರುವ ಇವರ ಉಪನ್ಯಾಸವನ್ನು ನಿಲ್ಲಿಸಲು ನಮ್ಮ ಸರ್ಕಾರದವರಿಗೆ ಮತ್ತಾವ ಕಾರಣವಿದ್ದಿತೋ ತಿಳಿಯದು. ಒಂದು ವೇಳೆ ಅಂತಹ ಪ್ರಬಲತರವಾದ ಕಾರಣವಿದ್ದು ಅದನ್ನು ಬಹಿರಂಗಪಡಿಸಲಿಷ್ಟವಿಲ್ಲದಿದ್ದ ಪಕ್ಷದಲ್ಲಿ ಮ॥ ಶಾಸ್ತ್ರಿಗಳವರಿಗಾದರೂ ಅಂತರಂಗವಾಗಿ ತಿಳುಹಿದ್ದರೆ, ಇಷ್ಟೊಂದು ಅಸಮಾಧಾನಕ್ಕೂ, ಚರ್ಚೆಗೂ ಆಸ್ಪದವಾಗುತ್ತಿರಲಿಲ್ಲ. ಆ ಉಪನ್ಯಾಸದ ದಿವಸ ಅಧ್ಯಕ್ಷತೆಯನ್ನು ವಹಿಸಿದ್ದ ಮ॥ ಮಾಧವರಾಯರಾದರೂ ಪೋಲೀಸು ಅಧಿಕಾರಿಗಳು ತಮ್ಮಲ್ಲಿಗೆ ಬಂದು ಉಪನ್ಯಾಸವನ್ನು ನಡೆಯಗೊಡಬಾರದೆಂದು ತಿಳುಹಿದಾಗಲೇ, ಕಾರಣಾಂತರದಿಂದ ಆ ದಿವಸ ಉಪನ್ಯಾಸವು ನಡೆಯುವುದಿಲ್ಲವೆಂದು ಪ್ರಕಟಪಡಿಸಲು ಯತ್ನಿಸಬಹುದಾಗಿತ್ತು, ಆದರೆ ಅವರು ಆ ರೀತಿ ಮಾಡದೆ ಜನರೆಲ್ಲರೂ ಉಪನ್ಯಾಸವನ್ನು ಕೇಳಲು ಬಂದು ಸೇರುವ ವರೆಗೂ ಮೌನವಾಗಿದ್ದು ಉಪನ್ಯಾಸಕರ ಪರಿಚಯವನ್ನು ಸಭಿಕರಿಗೆ ಮಾಡಿಸತಕ್ಕ ಸಮಯದಲ್ಲಿ ಉಪನ್ಯಾಸವು ನಡೆಯಲಿರುವ ಅಡಚಣೆಯನ್ನು ತಿಳುಹಿದುದು ಅವರ ತಪ್ಪಾಗಿರುತ್ತದೆನ್ನುವುದರಲ್ಲಭ್ಯಂತರವಿಲ್ಲವು. ಮ॥ ವಿ. ಪಿ. ಮಾಧವರಾಯರಿಗೆ ಅವರ ದಿವಾನರುದ್ಯೋಗದವಧಿಯಲ್ಲಿ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನು ತಪ್ಪಿಸಿದರೆಂಬ ಕೆಟ್ಟ ಹೆಸರು ಲಭ್ಯವಾಯಿತು. ಈಗ ಮ॥ ರಾ॥ ಆನಂದರಾಯರ ಅಧಿಕಾರದ ಕಡೆಯಲ್ಲಿ ಅವರ ಹೆಸರಿಗೆ ಇದೊಂದು ಕಳಂಕವು ಪ್ರಾಪ್ತವಾದುದಕ್ಕಾಗಿ ವಿಷಾದಿಸಬೇಕಾಗಿದೆ. ನಮ್ಮ ಸರ್ಕಾರದವರು ಆ ದಿವಸದುಪನ್ಯಾಸವನ್ನು ನಿಲ್ಲಿಸಿಬಿಟ್ಟುದರ ಕಾರಣವನ್ನು ಈಗಲಾದರೂ ತಿಳುಹಿಸಿ, ಇಲ್ಲಿಯ ಮತ್ತೂ ಹೊರಗಣ ಜನರಲ್ಲುಂಟಾಗಿರುವ ಅಸಮಾಧಾನವನ್ನು ಹೋಗಲಾಡಿಸುವರೆಂದು ನಿರೀಕ್ಷಿಸುತ್ತೇವೆ.

ಗೊತ್ತಾದ ತೂಕವು ಮತ್ತು ಅಳತೆಯು.

ಈ ನಮ್ಮ ಮೈಸೂರ ಸೀಮೆಯಲ್ಲಿ ಇಷ್ಟೇ ರೂಪಾಯಿನ ತೂಕವು ಮತ್ತೂ ಅಳತೆಯು ಉಪಯೋಗಿಸಲ್ಪಡಬೇಕೆಂದು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿಲ್ಲವಾದಪ್ರಯುಕ್ತ ಕೆಲ ದುರಾಶೆಯ ವರ್ತಕರು ಇತರರಿಂದ ಪದಾರ್ಥಗಳನ್ನು ಕೊಂಡುಕೊಳ್ಳುವಾಗ್ಗೆ ಹೆಚ್ಚಿನ ತೂಕದ ಬಟ್ಟುಗಳನ್ನೂ ಸೇರು ಪಾವುಗಳನ್ನೂ, ತಾವು ಇತರರಿಗೆ ಕೊಡುವಾಗ್ಗೆ ಮಾತ್ರ ಕಡಿಮೆಯ ತೂಕದ ಬಟ್ಟುಗಳನ್ನೂ, ಸೇರು ಪಾವುಗಳನ್ನೂ ಉಪಯೋಗಿಸಲವಕಾಶವಾಗಿರುವುದು. ಇದರಿಂದ ಜನರು ಪದಾರ್ಥಗಳನ್ನು ವರ್ತಕರಿಗೆ ಕೊಡುವಾಗಲೂ, ಅವರಿಂದ ತಾವು ತೆಗೆದುಕೊಳ್ಳುವಾಗಲೂ ಮೋಸಪಡಿಸಲ್ಪಡುತ್ತಿರುವುದು ಜಗತ್ಪ್ರಸಿದ್ಧಿಯಾಗಿದೆ. ಈರೀತಿ ಜನರಿಗೆ ಮೋಸವಾಗಲವಕಾಶವಿಲ್ಲದಂತೆ ಇಷ್ಟು ರೂಪಾಯಿನ ತೂಕವನ್ನೂ, ಅಳತೆಯನ್ನೂ ಉಪಯೋಗಿಸುವಂತೆ ಗೊತ್ತುಪಡಿಸಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಬಹುಕಾಲದಿಂದಲೂ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದುದರಮೇಲೆ ಅವರಿಗೆ ದಯೆಯುಹುಟ್ಟಿ ಮೈಸೂರ ಸಂಸ್ಥಾನದಲ್ಲುಪಯೋಗಿಸಲ್ಪಡಬೇಕಾದ ತೂಕ ಮತ್ತೂ ಅಳತೆಯ ವಿಚಾರದಲ್ಲಿ ನಿಬಂಧನೆಗಳನ್ನು ಮಾಡಿ ಕಳೆದವಾರದ ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಈ ನಿಬಂಧನೆಗಳ ಪ್ರಕಾರ ಗೊತ್ತಾದ ತೂಕವು ಮತ್ತೂ ಅಳತೆಯು ೧೯೧೨ ನೆಯ ಜುಲೈ ತಾ॥ ೧ ರಿಂದ ಮೈಸೂರ ಸೀಮೆಯ ಪ್ರತಿಯೊಂದು ಭಾಗದಲ್ಲೂ ಅನುಷ್ಠಾನಕ್ಕೆ ತರಲ್ಪಡತಕ್ಕವಾಗಿವೆ.

ತೂಕಕ್ಕೆ ಉಪಯೋಗಿಸಲ್ಪಡುವ ಸೇರಿನ ಬಟ್ಟು ಇಂಡ್ಯಾ ಸರ್ಕಾರದ ೨೪ ರೂಪಾಯಿನ ತೂಕವೂ, ಅಳತೆಯ ಸೇರು ೧೮ ತೋಲ ಅಥವಾ ರೂಪಾಯಿನ ತೂಕದ ಶೋಧಿಸಿದ ನೀರನ್ನು ಹಿಡಿಯತಕ್ಕದಾಗಿಯೂ ಇರಬೇಕು. ಈ ತೂಕದ ಬಟ್ಟು ಲೋಹದಲ್ಲೂ, ಮತ್ತೂ ಸೇರು ಕಂಚಿನಲ್ಲೂ ಮಾಡಲ್ಪಟ್ಟು ಸ್ಟೇಟ್ ಹುಜೂರು ಖಜಾನೆಯಲ್ಲಿಡಲ್ಪಡುವುವು. ಇದರಂತೆಯೇ ಮತ್ತೊಂದು ಬಟ್ಟೂ ಸೇರೂ ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರವರಲ್ಲಿಡಲ್ಪಟ್ಟು ೫ ವರ್ಷಗಳಿಗೊಂದಾವೃತ್ತಿಗೆ ಕಡಿಮೆಯಿಲ್ಲದಂತೆ ಹುಜೂರು ಟ್ರೆಜರಿಯಲ್ಲಿರುವ ಬಟ್ಟು ಮತ್ತೂ ಸೇರುಗಳಿಗೆ ಸರಿನೋಡಲ್ಪಟ್ಟು ಹೆಚ್ಚು ಕಡಿಮೆಯಿದ್ದಲ್ಲಿ ಸರಿಪಡಿಸಲ್ಪಡುವುವು. ಮತ್ತೂ ಇವುಗಳಿಗೆ ಸರಿಯಾದ ಬಟ್ಟು ಸೇರುಗಳು ತಾಲ್ಲೋಕು ಅಮಲ್ದಾರರುಗಳಲ್ಲೂ, ಪೋಲೀಸು ಠಾಣಗಳಲ್ಲೂ ಇಡಲ್ಪಡುವುವು. ತೂಕದಲ್ಲಿ— ತೊಲ ೧ ಕ್ಕೆ ೧೮೦ ಗ್ರೇನು ಅಥವಾ ೧ ರೂ; ಸೇರು ೧ ಕ್ಕೆ ೨೪ ತೊಲ; ಮಣ ೧ ಕ್ಕೆ ೪೦ ಸೇರು; ಬಂಗಾಳಿ ಸೇರು ೧ ಕ್ಕೆ ೮೦ ತೊಲ; ಬಂಗಾಳಿ ಮಣ ೧ಕ್ಕೆ ೪೦ ಬಂಗಾಳಿ ಸೇರು; ಪೌಂಡು ೧ ಕ್ಕೆ ೭೦೦೦ ಗ್ರೇನು (೪೦ ತೊಲ ಆಗುತ್ತದೆ); ಸ್ಟೋನು ಒಂದಕ್ಕೆ ೧೪ ಪೌಂಡು; ಕ್ವಾರ್ಟರು ೧ ಕ್ಕೆ ೨೮ ಪೌಂಡು; ಹಂಡ್ರೆಡ್ ವೇಟ್ ೧ ಕ್ಕೆ ೧೧೨ ಪೌಂಡು; ಟನ್ ೧ ಕ್ಕೆ ೨೨೪೦ ಪೌಂಡು ಅಥವಾ ೨೦ ಹಂಡ್ರೆಡ್‌ವೇಟ್. ಅಳತೆಯಲ್ಲಿ— ಸೇರು ೧ ಕ್ಕೆ ೧೮ ತೊಲ; ಇದರಲ್ಲಿ ಅಚ್ಚೇರು, ಪಾವು, ಅರ್ಧಾವು, ಚಟಾಕು ಉಂಟು; ಬಳ್ಳ ೧ ಕ್ಕೆ ೪ ಸೇರು; ಕೊಳಗ ೧ ಕ್ಕೆ ೮ ಸೇರು; ಪಲ್ಲ ೧ ಕ್ಕೆ ೧೦೦ ಸೇರು; ಖಂಡಿಗ ೧ ಕ್ಕೆ ೨೦ ಕೊಳಗ ಅಥವಾ ೧೬೦ ಸೇರು. ಈ ಪ್ರಕಾರದ ಉಪಯೋಗವು ಸರ್ಕಾರದವರಿಂದ ಅಂಗೀಕರಿಸಲ್ಪಟ್ಟಿದೆ.

ಬೆಂಗಳೂರ ಸೆಂಟ್ರಲ್‌ಜೈಲಿನ ಸೂಪರಿಂಟೆಂಡೆಂಟರು ಸಾಮಾನ್ಯವಾಗುಪಯೋಗದಲ್ಲಿರುವಂತಹ ತೂಕದ ಸೇರು ಅಚ್ಚೇರು ಮೊದಲಾದ ಬಟ್ಟುಗಳನ್ನೂ, ಅಳತೆಯ ಅಚ್ಚೇರು ಪಾವು ಸೇರುಗಳನ್ನೂ ಹೊಸದಾಗಿ ಮಾಡಿಸಿ ತಮ್ಮಲ್ಲಿರುವ ಗೊತ್ತಾದ ಬಟ್ಟು ಮತ್ತೂ ಸೇರುಗಳಿಗೆ ಸರಿಪಡಿಸಿ ಮಧ್ಯಭಾಗದಲ್ಲಿ ಗಂಡಭೇರುಂಡಪಕ್ಷಿಯ ಚಿತ್ರವನ್ನೂ ಅದರ ಮೇಲುಭಾಗದಲ್ಲಿ ಮೈಸೂರು ಮತ್ತೂ ಕೆಳಭಾಗದಲ್ಲಿ ಇಸವಿ ಇವುಗಳ ಅಕ್ಷರಗಳನ್ನೂ ಒಳಗೊಂಡಿರುವ ಚಕ್ರಾಕಾರವಾದ ಮುದ್ರೆಯನ್ನೊತ್ತಿ ವಿಕ್ರಯಿಸುವರು. ಸರ್ಕಾರದಲ್ಲಿ ಮಾಡಲ್ಪಟ್ಟವುಗಳಲ್ಲದೆ ಬೇರೆಯಾದ ಬಟ್ಟು ಸೇರುಗಳನ್ನುಪಯೋಗಿಸುವವರು ೧ ಆಣೆಯ ಕೋರ್ಟ್ ಫೀ ಸ್ಟಾಂಪನ್ನು ಹಚ್ಚಿ ಒಂದು ಅಪ್ಲಿಕೇಷನನ್ನು ಬೆಂಗಳೂರ ಜೈಲಿನ ಸೂಪರಿಂಟೆಂಡೆಂಟರಿಗಾಗಲಿ ಅಥವಾ ಸರ್ಕಾರದಿಂದ ಗೊತ್ತಾದ ಮತ್ತಾವ ಅಧಿಕಾರಿಗಾಗಲಿ ಕೊಟ್ಟಲ್ಲಿ ಅವರು ತಮ್ಮಲ್ಲಿರುವ ಗೊತ್ತಾದ ಬಟ್ಟು ಸೇರುಗಳಿಗೆ ಸರಿಪಡಿಸಿ ಮುದ್ರೆಯನ್ನೊತ್ತಿಕೊಡುವರು, ಆದರೆ ಇದಕ್ಕಾಗಿ ಪ್ರತಿಫಲವನ್ನು ತೆಗೆದುಕೊಳ್ಳುವುದಿಲ್ಲ. ಇವರು ಹೀಗೆ ತಮ್ಮಲ್ಲಿಗೆ ಬರುವಂತಹ ಸೇರು ಬಟ್ಟುಗಳನ್ನು ಸರಿಪಡಿಸಲಾಗದಿದ್ದಲ್ಲಿ ಅವುಗಳನ್ನು ನಾಶಪಡಿಸಲವರಿಗಧಿಕಾರವಿರುವುದು. ಮುದ್ರೆಯನ್ನೊತ್ತಲು ಸ್ಥಳ ಸಾಲದಿರುವವುಗಳ ವಿನಾ ಉಳಿದ ಪ್ರತಿಯೊಂದು ತೂಕದ ಮತ್ತೂ ಅಳತೆಯ ಪದಾರ್ಥಗಳ ಅಂದರೆ ಸೇರು ಅಚ್ಚೇರು ಮೊದಲಾದ ಬಟ್ಟು ಮತ್ತೂ ಸೇರುಗಳ ಮೇಲೆ ಸರ್ಕಾರದ ಮುದ್ರೆ ಇದ್ದೇ ತೀರಬೇಕು. ಹಾಗೆ ಮುದ್ರೆಯಿಲ್ಲದೆ ಹೆಚ್ಚು ಕಡಿಮೆಯಾಗಿರುವವುಗಳನ್ನು ಪೋಲೀಸು ಠಾಣದ ಅಧಿಕಾರಿಯು ತನ್ನ ಹದ್ದಿಗೆ ಸೇರಿದ ಯಾವ ಸ್ಥಳದಲ್ಲಾಗಲಿ ಅವನ್ನುಪಯೋಗಿಸುವವರ ಸಮೇತ ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲು ಆತನಿಗೆ ಅಧಿಕಾರವಿರುವುದು.

ಇತಃಪರ ದುಷ್ಟ ವ್ಯಾಪಾರಿಗಳಿಂದ ಜನರು ಮೋಸಹೋಗದಂತೆ ಸರ್ಕಾರದವರು ದಯಮಾಡಿ ಗೊತ್ತಾದ ತೂಕದ ಬಟ್ಟುಗಳನ್ನೂ, ಸೇರುಗಳನ್ನೂ ಉಪಯೋಗಿಸುವಂತೆ ನಿಬಂಧನೆಗಳನ್ನು ಮಾಡಿರುತ್ತಾರೆ. ಆದರೆ ಸರ್ಕಾರದ ನಿಬಂಧನೆಗಳಿಗನುಸಾರವಾದ ತೂಕದ ಮತ್ತೂ ಅಳತೆಯ ಪದಾರ್ಥಗಳು ವರ್ತಕರಿಂದ ಉಪಯೋಗಿಸಲ್ಪಡುತ್ತವೆಯೆಂಬುದನ್ನು ಪರೀಕ್ಷಿಸಲು ನೇಮಿಸಲ್ಪಡುವ ಅಧಿಕಾರಿಗಳು ಮಾತ್ರ ಲಂಚಕ್ಕೆ ಆಶೆಪಟ್ಟು ಮೋಸಕೃತ್ಯವನ್ನು ಮರೆಮಾಡದೆ, ಬಹಿರಂಗಪಡಿಸಿ ನೀಚವರ್ತಕರನ್ನು ಶಿಕ್ಷೆಗೆ ಗುರಿಮಾಡಿ ಇತರ ವರ್ತಕರಿಗೆ ಭಯೋತ್ಪಾದವನ್ನುಂಟುಮಾಡಿ ಸರ್ಕಾರದ ಸದುದ್ದೇಶವನ್ನು ಸಾರ್ಥಕಪಡಿಸುವವರಾಗಲೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತ.

ಹಾಸನದಲ್ಲಿ ಪ್ಲೇಗುರೋಗವಾರಂಭವಾಗಿರುವುದರಿಂದ ಜನರು ಊರನ್ನು ಬಿಟ್ಟು ಹೊರಗೆ ಗುಡಿಸಲುಗಳಲ್ಲಿ ವಾಸಿಸಲು ಉಪಕ್ರಮಿಸಿರುತ್ತಾರೆ, ಮತ್ತೂ ಜನರಿಗೆ ಇನಾಕ್ಯುಲೇಷನ್ ಹಾಕುವ ಕಾರ್ಯವೂ ನಡೆದಿರುತ್ತದೆ.

ಕಳೆದವಾರ ಶ್ರೀಮದ್ಯುವರಾಜರವರು ಮಿಲ್ಟರಿ ಸೆಕ್ರೆಟರಿ ಕರ್ನಲ್ ಜೋನ್ಸ್‌ರವರ ಕೂಡ ಬೆಂಗಳೂರ ಬಾಲಿಕಾಪಾಠಶಾಲೆಗೆ ದಯಮಾಡಿಸಿದ್ದು ಬಾಲಿಕೆಯರು ಓದುವುದನ್ನೂ, ಹಾಡುವುದನ್ನೂ ಪರಾಮರಿಸಿಕೊಂಡು ಬಂದರು.

ಪ್ರೊ॥ ಇ॥ ಜನರಲ್ ಮ॥ ಡಿ. ದೇವರಾಜಅರಸಿನವರು ಕಳೆದ ತಾ॥ ೧೪ ರಲ್ಲಿ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು, ಮತ್ತೂ ದಸರಾಮಹೋತ್ಸವದ ಏರ್ಪಾಡಿಗಾಗಿ ಇಷ್ಟರಲ್ಲಿ ಪುನಃ ರಾಜಧಾನಿಗೆ ಬರುವವರಾಗಿರುವರು.

ಕಳೆದ ತಾ॥ ೧೩ ನೆಯ ಬುಧವಾರದ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮೋಟಾರು ಬಂಡಿಯಲ್ಲಿ ಸೀಗೂರುಮಾರ್ಗವಾಗಿ ಉದಕಮಂಡಲಕ್ಕೆ ದಯಮಾಡಿಸಿದರು. ದಸರಾಮಹೋತ್ಸವಕ್ಕಾಗಿ ನಾಳೆ ನಾಡಿದ್ದರಲ್ಲಿ ಮಹಾಸ್ವಾಮಿಯವರ ಸ್ವಾರಿಯು ರಾಜಧಾನಿಗೆ ಚಿತ್ತೈಸುವುದಾಗಿರುತ್ತದೆ.

ಹಾಸನ ಡಿ॥ ಚನ್ನರಾಯಪಟ್ಟಣದ ಸಬ್‌ಡಿವಿಷನ್ ಆಫೀಸರಾದ ಮ॥ ಸಿ. ದೇವರಾಜ ಅರಸಿನವರು ತುಮಕೂರ ಡಿ॥ ಪೋಲೀಸ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು. ಆದರೆ ಈಗ ಅವರು ನಡೆಯಿಸುತ್ತಿರುವ ಗಂಧದ ಮರದ ಕಳ್ಳತನದ ವಿವಾದವು ಪೂರೈಸಿದ ನಂತರ ಹೊಸ ಕೆಲಸದ ಮೇಲೆ ಬರುವವರಾಗಿರುವರು.

ರಾಜಧಾನಿಯ ಮ॥ ಎಸ್. ಸುಬ್ಬರಾವ್ ಬಿ. ಎ., ಎಂ. ಬಿ., ಸಿ. ಎಂ., ಎಂ. ಆರ್., ಸಿ. ಎಸ್., ಡಿ. ಪಿ. ಎಚ್., ರವರು ಕಳೆದ ತಾ॥ ೧ ರಲ್ಲಿ ಬೊಂಬಾಯಿನಿಂದ ಬೆಂಗಳೂರಿಗೆ ಬಂದು ಡಾಕ್ಟರ್ ಶ್ರೀನಿವಾಸರಾಯರ ಆತಿಥ್ಯದಲ್ಲಿರುವರು. ಅವರು ಅಲ್ಲಿ ಇಷ್ಟರಲ್ಲೇ ಪ್ರಾಯಶ್ಚಿತ್ತ ಕರ್ಮಗಳನ್ನು ಪೂರೈಸಿಕೊಂಡು ರಾಜಧಾನಿಗೆ ಬರುವವರಾಗಿರುವರು.

ಕಳೆದ ತಾ॥ ೮ ರ ಮಧ್ಯಾಹ್ನ ನಾಗಡಿಯಲ್ಲಿ ತಾಲ್ಲೋಕಾಫೀಸು ಡೆಪ್ಯುಟಿ ಮುನಸಿಫರವರು ತಮ್ಮ ಮನೆಯ ಬಾಗಿಲನ್ನು ಹಾಕಿಕೊಂಡು ಕಚೇರಿಗೆ ಹೋಗಿರುವಾಗ್ಗೆ ಯಾರೋ ಕಳ್ಳರು ಹಿತ್ತಲ ಬಾಗಿಲನ್ನು ತೆಗೆದು ಒಳಗೆ ನುಗ್ಗಿ ೧೦೦ ರೂ. ಬೆಲೆ ಬಾಳುವ ಪದಾರ್ಥಗಳನ್ನಪಹರಿಸಿಕೊಂಡು ಹೋದರು. ಪೋಲೀಸರು ಕಳ್ಳರನ್ನು ಹುಡುಕಿಸುತ್ತಿದ್ದಾರೆ.

ಒಂದನೆಯ ಕೌನ್ಸಿಲರಾದ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು ಕೂಡಲೆ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುತ್ತಾರೆಂಬ ಒಂದು ನಿರಾಧಾರವಾದ ಸುದ್ದಿಯು ಹೇಗೋ ಹುಟ್ಟಿರುವುದು. ಒಂದುವೇಳೆ ದೊಡ್ಡ ಅಧಿಕಾರಿಗಳ ಬದಲಾವಣೆಗಳೇನಾದರೂ ಆಗತಕ್ಕದಿದ್ದಲ್ಲಿ ದಿಲ್ಲಿಯ ದರ್ಬಾರು ನಡೆದ ನಂತರ ಆಗಬಹುದೇ ಹೊರತು ಈ ಮಧ್ಯೆ ಆಗುವಂತಿಲ್ಲವು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೧೦,	೧೧,	೧೨,	೧೩,	೧೪,	೧೫,	೧೬.
ತಗಲಿದುದು	೬	೩	೫	೧೦	೪	೩	೮
ಸತ್ತುದು	೨	೪	೫	೫	೪	೧	೩
ಒಟ್ಟು ಮೆ.	೯	೯	೧೦	೯	೮	೩	೧೩

ತಾ॥ ೨೦-೬-೧೧ ರಿಂದ ತಾ॥ ೧೬-೯-೧೧ ವರೆಗೆ ೧೧೮೫ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ.

ದಿವಾನರು ರಾಜಧಾನಿಯಲ್ಲಿ ದಸರಾಮಹೋತ್ಸವಕ್ಕಾಗಿ ನಡೆಯಬೇಕಾದ ಏರ್ಪಾಟುಗಳನ್ನು ಪರಾಮರಿಸಿಕೊಂಡು ಕಳೆದ ತಾ॥ ೧೩ ರ ಬೆಳಿಗ್ಗೆ ಮೇಲುಬಂಡಿಯಲ್ಲಿ ತಮ್ಮ ಸೆಕ್ರೆಟರಿಯೊಡನೆ ಬೆಂಗಳೂರಿಗೆ ಪ್ರಯಾಣ ಮಾಡಿದರು. ಮತ್ತೂ ಇನ್ನೂ ೧—೨ ದಿನಗಳಲ್ಲಿ ತಮ್ಮ ಪರಿವಾರದೊಡನೆ ಬಂದು ದಸರಾಮಹೋತ್ಸವವೂ ಪ್ರಜಾಪ್ರತಿನಿಧಿ ಸಭಾಕಾರ್ಯವೂ ಮುಗಿಯುವವರೆಗೂ ರಾಜಧಾನಿಯಲ್ಲೇ ನಿಲ್ಲುವರು.

ಕಾವೇರೀ ನದಿಯ ಪ್ರವಾಹದಿಂದ ವಿಪನ್ನರಾದವರ ಸಹಾಯಾರ್ಥವಾಗಿ ರಾಜಧಾನಿಯಲ್ಲೇರ್ಪಡಿಸಲ್ಪಟ್ಟಿರುವ ಫಂಡಿಗೆ ಚಿತ್ರಕಲ್‌ದುರ್ಗ ಡಿ॥ ಮೊಳಕಾಲ್ಮುರು ತಾ॥ ಬೊಮ್ಮಗೊಂಡನ ಕೆರೆ ಸ್ಕೂಲಿನ ವಿದ್ಯಾರ್ಥಿಗಳ ಪರವಾಗಿ ಆ ಸ್ಕೂಲ್ ಹೆಡ್ಮಾಸ್ಟರ್ ಮ॥ ಜಿ. ತಿಪ್ಪೆರುದ್ರಯ್ಯನವರು ನಮ್ಮಲ್ಲಿಗೆ ಕಳುಹಿಕೊಟ್ಟಿರುವ ೧೦ ಆಣೆಗಳು ಫಂಡಿನ ಸೆಕ್ರೆಟರಿಯವರಲ್ಲಿಗೆ ಒಪ್ಪಿಸಲ್ಪಟ್ಟಿರುತ್ತವೆ. ಈ ಫಂಡಿಗೆ ಈವರೆಗೆ ಸರ್ಕಾರದಿಂದಲೂ, ಅರಮನೆಯಿಂದಲೂ ಚಂದಾಕೊಡಲ್ಪಟ್ಟ ರೂಪಾಯಿಗಳಲ್ಲದೆ ೩೪೯೩ ರೂ. ವರೆಗೆ ಶೇಖರವಾಗಿರುತ್ತದೆ. ಸಂಸ್ಥಾನದ ಎಲ್ಲ ಭಾಗದಲ್ಲೂ ಚಂದಾಹಣವೆತ್ತಲ್ಪಡುವ ಪ್ರಯತ್ನವು ನಡೆದಿರುತ್ತದೆ.

ನೆನ್ನೆಯ ಗುರುವಾರ ಬೆಳಿಗ್ಗೆ ರಾಜಧಾನಿಯ ಮಂಡಿಯ ಮಾರ್ಕೆಟ್ಟಿನಲ್ಲಿ ಕಟುಕರು ತೆನೆಯಾಗಿದ್ದ ಒಂದು ಕುರಿಯನ್ನು ಕತ್ತರಿಸಿದಾಗ್ಗೆ ಅದರ ಹೊಟ್ಟೆಯಲ್ಲಿ ಕಾಡುಹಂದಿಯಂತೆ ಮುಖಭಾವವುಳ್ಳ ದಪ್ಪದಾದ ಮತ್ತೂ ಸತ್ತುಹೋಗಿದ್ದ ಮರಿಯು ದೊರೆಯಿತು. ಕುರಿಗು ಹೊಟ್ಟೆಯಲ್ಲಿ ಆನೆಯ ಮರಿಯು ಹುಟ್ಟಿದೆಯೆಂದು ಯಾರೋ ಸುದ್ದಿಯನ್ನು ಹುಟ್ಟಿಸಿದುದರಿಂದ ಜನರು ತಂಡತಂಡವಾಗಿ ಹೋಗಿ ೩—೩ ಕಾಸುಗಳನ್ನು ಕೊಟ್ಟು ನೋಡಿಕೊಂಡು ಬಂದರು. ಆ ಕುರಿಯ ಗರ್ಭದಲ್ಲಿ ಎರಡು ಮರಿಗಳು ಒಟ್ಟಾಗಿ ಕೂಡಿಕೊಂಡು ಹಾಗೆ ದಪ್ಪದಾಗಿಯೂ ಮುಖವು ವಿಜಾತೀಯವಾಗಿಯೂ ಕಾಣುತ್ತಿದ್ದಿತೆಂದು ತೋರುತ್ತದೆ. ಕೊಂಚಕಾಲದ ಹಿಂದೆ ಇದೇ ರಾಜಧಾನಿಯಲ್ಲಿ ಜೀವಣ್ಣರಾಯರ ಕಟ್ಟೆಯೊಳಗಡೆ ಯಾವಳೋ ವಿಧವೆಯು ಅಗತಾನೆ ಹೆತ್ತು ತಂದು ಬಿಸಾಡಿದ್ದ ಮಗುವಿನ ಸಮೀಪದಲ್ಲಿ ಒಂದು ಹೆಣ್ಣು ಕತ್ತೆಯು ನಿಂತಿದ್ದುದನ್ನು ಯಾರೋ ಒಬ್ಬರು ಬೆಳಗಿನ ಝಾವದ ಕತ್ತಲೆಯಲ್ಲಿ ನೋಡಿ ವಿಚಾರ ಮಾಡದೆ ಒಂದು ಕತ್ತೆಯು ಒಂದು ಮಗುವನ್ನು ಹೆತ್ತಿರುವುದೆಂದು ಸುದ್ದಿಯನ್ನು ಹುಟ್ಟಿಸಿ ಬಿಡಲು, ಜನರು ತತ್ರಾಪಿ ಹೆಂಗುಸರು, ಮೃಗಗಳು ಮನುಷ್ಯರನ್ನು ಹೆರುವುದುಂಟೆ? ಎಂದು ಕೊಂಚವೂ ವಿಚಾರ ಮಾಡದೆ ಗುಂಪು ಕೂಡಿ ಹೋಗಿ ನೋಡಿ ಅದರ ನಿಜಸ್ಥಿತಿಯನ್ನು ತಿಳಿದು ಎಲ್ಲರೂ ನಾಚಿಕೊಂಡರು. ಅದರಂತೆಯೇ ಈಗಲೂ ಯಾರೋ ವಿನೋದಕ್ಕಾಗಿ ಕುರಿಯೊಂದು ಆನೆಯ ಮರಿಯನ್ನೀದಿರುವುದೆಂದು ಸುದ್ದಿಯನ್ನು ಹುಟ್ಟಿಸಿದಮಾತ್ರಕ್ಕೆ ಆಶ್ಚರ್ಯಪಟ್ಟು ಹೋಗಿ ನೋಡಿಕೊಂಡುಬಂದರಲ್ಲ!

ಕಳೆದ ತಾ॥ ೧೪ ರ ಸಾಯಂಕಾಲ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು. ಅಂದಿನಿಂದಲೂ ಪ್ರತಿದಿನದ ಸಾಯಂಕಾಲದಲ್ಲಿ ಮೋಡವು ಕವಿದುಕೊಂಡು ಗುಡುಗುತ್ತಿದ್ದು ಹಾಗೆಯೇ ಮಾಯವಾಗುತ್ತಿದೆಯೇ ವಿನಾ ಮಳೆಯು ಬರುವುದಿಲ್ಲವು. ಸಂಸ್ಥಾನದ ಕೆಲಕಡೆಯಲ್ಲಿ ಈಚೆಗೆ ಅಲ್ಪಸ್ವಲ್ಪ ಮಳೆಯಾಯಿತೆಂದು ಕೇಳುತ್ತೇವೆ. ಆದರೆ ಬಹು ಭಾಗದಲ್ಲಿ ಮಳೆಯಿಲ್ಲದೆ ನಿಂತಿರುವ ಪೈರು ಒಣಗುತ್ತಿರುವುದಲ್ಲದೆ ಕುಡಿಯುವ ನೀರಿಗೂ ಅಭಾವವಾಗಿದೆ ಆಹಾರಪದಾರ್ಥಗಳ ಬೆಲೆಯಾದರೋ ನಿತ್ಯದಲ್ಲೂ ಏರುವುದರಲ್ಲಿದೆ. ಇನ್ನು ಒಂದು ವಾರದಲ್ಲಿ ಮಳೆಯು ಬಾರದಿದ್ದಲ್ಲಿ ಅಲ್ಪ ಬೆಳೆಯಾಗುವುದರ ಭರವಸೆಯೂ ಹೋಗಿ ಕ್ಷಾಮವನ್ನು ನಿರೀಕ್ಷಿಸಬೇಕಾಗುತ್ತದೆಂದು ಜನರು ಹೇಳುತ್ತಿದ್ದಾರೆ ಈ ಕಷ್ಟದ ಜತೆಗೆ ಪ್ಲೇಗು ಎಲ್ಲ ಕಡೆಯೂ ಪ್ರಬಲಿಸುತ ಜನರಿಗೆ ಮತ್ತಷ್ಟು ವ್ಯಾಕುಲವನ್ನೂ, ಭಯವನ್ನೂ ಹೆಚ್ಚಿಸುತ್ತಿದೆ. ಈ ರೋಗದ ಹಾವಳಿಯಿಂದ ಜನರು ಪ್ರತಿವರ್ಷದಲ್ಲೂ ಮನೆಯನ್ನು ಬಿಟ್ಟು ಊರಹೊರಗೆ ಚಳಿಗಾಳಿಯಲ್ಲಿ ವಾಸಮಾಡಿ ಇತರ ರೋಗಾದಿಗಳನ್ನು ಸಂಪಾದಿಸಿಕೊಂಡು ಹಿಂತಿರುಗಿ ಮನೆಗೆ ಬಂದು ೩-೪ ತಿಂಗಳು ನೆಟ್ಟಗೆ ಊರಲ್ಲಿರದೆ ಪುನಃ ಹೊರಗೆ ಹೋಗುವುದರಿಂದ ಬೇಸತ್ತಿರುವುದು ಸರ್ವಕೃತವಾಗಿದೆಯಷ್ಟೆ. ಅಂತಹವರು ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದುತ್ತಮವು. ಈ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದರ ಗುಣಾವಗುಣವು ಈ ಪತ್ರಿಕೆಯ ಬೇರೊಂದು ಕಡೆ ಕೊಟ್ಟಿರುವ ರಾಜಧಾನಿಯ ಹೆಲ್ತಾಫೀಸರ ಪ್ರಕಟನ ಪತ್ರಿಕೆಯಿಂದ ವ್ಯಕ್ತವಾಗುತ್ತದೆ. ಅದುಕಾರಣ ಪ್ರತಿಯೊಬ್ಬರೂ ಅದನ್ನು ಗಮನಕ್ಕೆ ತರಬೇಕಾಗಿ ಅಪೇಕ್ಷಿಸುತ್ತೇವೆ. ಈದಿನ ಬೆಳಿಗ್ಗೆ ರಾಜಧಾನಿಯಲ್ಲಿ ಚೆನ್ನಾಗಿ ಒಂದುಹದ ಮಳೆಯಾಯಿತು.

ವರ್ತಮಾನ ಸಂಗ್ರಹ.

ಕಾನಪೂರದಲ್ಲಿ ಒಂದು ಬ್ಯಾಂಕಿಗೆ ಕಳ್ಳರು ಬಿದ್ದು ೯೦೦೦೦ ರೂ. ಗಳನ್ನಪಹರಿಸಿಕೊಂಡುಹೋದರು.

ಸೈಸ್ ಎಂಬಲ್ಲಿ ಒಂದು ನಾಟಕಶಾಲೆಯು ಬಿದ್ದುಹೋಗಿ ೧೧ ಜನರು ಸತ್ತರು, ಮತ್ತೂ ೧೬ ಜನರು ಪ್ರಾಣಾಪಾಯವನ್ನು ಹೊಂದಿರುವರು.

ವೈಸ್ರಾಯರ ಪ್ರೈವೇಟ್ ಸೆಕ್ರೆಟರಿಯವರ ೨॥ ವರ್ಷ ವಯಸ್ಸಿನ ಗಂಡು ಮಗುವು ನ್ಯುಮೋನಿಯಾ ಜ್ವರದಿಂದ ಸಿಮ್ಲಾದಲ್ಲಿ ಸತ್ತುಹೋಯಿತು.

ಕಳೆದ ತಾ॥ ೧೬ ರ ಬೆಳಿಗ್ಗೆ ಮದ್ರಾಸಿನಲ್ಲಿ ೨॥ ಅಂಗುಲದ ಮೇಲೆಯೇ ಮಳೆಯು ಬಂದಿತು. ಈ ವರ್ಷದಲ್ಲಿ ಈವರೆಗೆ ಇಂತಹ ದೊಡ್ಡಮಳೆಯು ಮದ್ರಾಸಿನಲ್ಲಾಗಿರಲಿಲ್ಲವು.

ಸ್ಪೇನ್‌ರಾಜ್ಯದ ಈಶಾನ್ಯದಿಗ್ಭಾಗದಲ್ಲಿ ಭೀಕರವಾದ ಸಾಂಕ್ರಾಮಿಕಜಾಡ್ಯವು ತಲೆದೋರಿರುವುದರಿಂದ, ಜನರು ಹೆದರಿ ನೂರಾರುಗಟ್ಟಲೆ ಫ್ರಾನ್ಸ್‌ದೇಶಕ್ಕೆ ಓಡಿಹೋಗುತ್ತಿದ್ದಾರೆ

ವೈಸ್‌ರಾಯರು ಬರುವ ಅಕ್ಟೋಬರ್ ತಿಂಗಳ ಆದಿಭಾಗದಲ್ಲಿ ಸಿಮ್ಲಾದಿಂದ ಹೊರಟು ದಿಲ್ಲಿಗೆ ಬಂದು ಅಲ್ಲಿ ನಡೆಯುತ್ತಿರುವ ಕಿರೀಟಧಾರಣಮಹೋತ್ಸವ ಸಂಬಂಧವಾದ ಕಾರ್ಯಕ್ರಮಗಳನ್ನೋದಿಕೊಂಡು ಅಲ್ಲಿಂದ ಹೈದರಾಬಾದಿಗೆ ಬರುವರೆಂಬ ವರ್ತಮಾನವಿದೆ.

ಹೈದರಾಬಾದಿನ ಹೊಸ ನೈಜಾಮರವರು ತಮ್ಮ ಮಂತ್ರಿಗಳಾದ ಮಹಾರಾಜಾ ಸರ್ ಕೃಷ್ಣಪ್ರಸಾದರವರಿಗೆ ೧ ಲಕ್ಷ ರೂ. ಬೆಲೆ ಬಾಳುವ ಸುಂದರವಾದ ಮುತ್ತಿನ ಕಂಠಹಾರವನ್ನೂ, ಒಂದು ವಜ್ರದ ಸರಪಳಿ ಸಹಿತವಾದ ಗಡಿಯಾರವನ್ನೂ ಬಹುಮಾನಿಸಿರುವರು.

ಮೈಮನ್‌ಸಿಂಗ್ ಡಿ॥ ಗೆ ಸೇರಿದ ಕಿಷೋರಗಂಜಿನಲ್ಲಿ ಒಂದೇ ಮನೆಯಲ್ಲಿ ವಾಸಮಾಡಿಕೊಂಡಿದ್ದ ಇಬ್ಬರು ಮಹಮ್ಮದೀಯ ಡೆಪ್ಯುಟಿ ಮ್ಯಾಜಿಸ್ಟ್ರೇಟರುಗಳು ಒಂದು ಕ್ರಿಮಿನಲ್ ವಿವಾದದ ತೀರ್ಪಿನ ವಿಚಾರವಾಗಿ ಕಲಹವನ್ನು ಮಾಡಿದುದರ ಮೇಲೆ ಸಬ್ ಡಿವಿಜನ್ ಆಫೀಸರಲ್ಲಿ ವಿಚಾರಣೆಯು ನಡೆಯುತ್ತಿದೆ.

ಭರತಖಂಡದಿಂದ ಸೀಮೆಗೆ ಕ್ರಿಕೆಟ್ ಎಂಬ ಚೆಂಡಿನಾಟವನ್ನು ಆಡಲು ಹೋಗಿದ್ದವರು ಕಳೆದ ತಾ॥ ೧೫ ರಲ್ಲಿ ಬೊಂಬಾಯಿಗೆ ಬಂದರು. ಇವರು ಇಂಗ್ಲೀಯರ ಕೂಡ ಆಡಿದ ೨೩ ಆಟಗಳಲ್ಲಿ ೧೫ ರಲ್ಲಿ ಸೋತರು, ೬ ರಲ್ಲಿ ಗೆದ್ದರು, ಮತ್ತೂ ಎರಡರಲ್ಲಿ ಸಮನಾದರು. ಇವರು ಹೋಗಿಬರುವುದಕ್ಕೂ ತಿಂದಿಗೂ ೪೫೦೦೦ ರೂಪಾಯಿ ವ್ಯಯವಾಗಿರುತ್ತದೆ.

ಬ್ರಿಟಿಷ್ ಕೊಲಂಬಿಯಾಕ್ಕೆ ಉತ್ತರಭಾಗದಲ್ಲಿ ಆರ್ಕಟಿಕ್ ಸಮುದ್ರದ ದಡವನ್ನು ಕಂಡುಹಿಡಿಯಲು ಹೋಗಿದ್ದ ಅಮೇರಿಕಾದ ಕೆಲ ಶೋಧಕರ ಮುಖಂಡನು "ಐರೋಪ್ಯರ ಲಕ್ಷಣವುಳ್ಳ ಒಂದು ಹೊಸಜಾತಿಯ ಜನರನ್ನು ಕಂಡುಹಿಡಿದಿದ್ದೇವೆ ಇವರ ನಡೆನುಡಿಯು ಎಸ್ಕಿಮೋ ಜನರಂತೆಯೂ ರೂಪು ಸ್ಕ್ಯಾಂಡಿನೇವಿಯನ್ ಜನರಂತೆಯೂ ಇರುವುವು." ಎಂದು ಬರೆದು ತಿಳಿಸಿರುತ್ತಾನೆ.

ಆಚೆವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೮೦೦೨ ಜನರಿಗೆ ಪ್ಲೇಗು ತಗಲಿ ೫೯೯೬ ಜನರು ಸತ್ತರು. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೩೯೯೩; ಮದ್ರಾಸಾಧಿಪತ್ಯದಲ್ಲಿ ೪೩೦; ಬಂಗಾಳದಲ್ಲಿ ೧೩; ಸಂಯುಕ್ತಪ್ರಾಂತಗಳಲ್ಲಿ ೩; ಬರ್ಮಾದಲ್ಲಿ ೬೩; ಮಧ್ಯಪ್ರಾಂತಗಳಲ್ಲಿ ೧೮೪; ಮಧ್ಯಹಿಂದೂಸ್ಥಾನದಲ್ಲಿ ೯೬; ಮೈಸೂರ ಸೀಮೆಯಲ್ಲಿ ೫೯೩ ಈ ಪ್ರಕಾರ ಮರಣವಾಗಿರುತ್ತದೆ.

ಹೆಂಡೆನ್ನಿನಿಂದ ವಿಂಡ್ಸರಿಗೆ ಆಕಾಶವಿಮಾನದಲ್ಲಿ ಹ್ಯೂಬರ್ಟ್ ಎಂಬುವನು ಅಂಚೆಯ ಕಾಗದಗಳನ್ನೊಯ್ಯುತ್ತಿರುವಾಗ್ಗೆ ವಿಮಾನವು ಬಗ್ಗಿ ಹೋಗಿ ೧೦೦ ಅಡಿ ಎತ್ತರದಿಂದ ಭೂಮಿಯಮೇಲೆ ಬಿದ್ದು ಮೊಣಕಾಲುಗಳನ್ನು ಮುರಿದುಕೊಂಡನು. ಮತ್ತೊಬ್ಬ ವೈಮಾನಿಕನು ಅದೇ ವಿಮಾನವನ್ನು ಗಂಟೆಯೊಂದಕ್ಕೆ ೧೦೫ ಮೈಲಿಗಳ ವೇಗದಿಂದ ನಡೆಯಿಸಿಕೊಂಡು ಹೋಗಿ ಸ್ಥಳವನ್ನು ತಲುಪಿದನು.

ಬಿಹಾರ ಪ್ರಾಂತಕ್ಕೆ ಸೇರಿದ ಬಾಲೂಯೆಂಬಲ್ಲಿಯ ಒಬ್ಬ ಐರೋಪ್ಯನು ಒಂದು ಹಾಸಿಗೆಯಮೇಲೆ ಮಡಗಿದ್ದ ಟೊಪ್ಪಿಗೆಯನ್ನು ತೆಗೆದು ತಲೆಗೆ ಧರಿಸಿಕೊಂಡು ಹೊರಗೆ ಹೋಗಿ ಚೆಂಡಾಟವನ್ನು ಆಡುತ್ತಿರುವಾಗ್ಗೆ, ಟೊಪ್ಪಿಗೆಯೊಳಗೆ ಏನೋ ಮುಲುಗುಟ್ಟಲು ಟೊಪ್ಪಿಗೆಯನ್ನು ತೆಗೆದು ನೋಡುವಲ್ಲಿ ೧೫ ಅಂಗುಲ ಉದ್ದವಿದ್ದ ಒಂದು ಸಣ್ಣ ವಿಷದ ಹಾವಿದ್ದುದು ಕಂಡುಬಂದಿತು. ಆದರೆ ಅದು ೨ ಗಂಟೆಯ ಕಾಲದವರೆಗೆ ಟೊಪ್ಪಿಗೆಯೊಳಗೆ ಸೇರಿಕೊಂಡಿದ್ದಾಗ್ಯೂ ಆತನನ್ನು ಕಚ್ಚದಿದ್ದುದು ಆಶ್ಚರ್ಯವು.

ಮದ್ರಾಸಿನ ರಾವ್‌ಬಹದ್ದೂರ್ ಗೋವಿಂದದಾಸ್ ಚತುರ್ಭುಜದಾಸ್‌ರವರು ಗ್ರೇಟ್‌ಇಂಡಿಯನ್ ಪೆನಿನ್ಸುಲಾಲೋಹಮಾರ್ಗದಲ್ಲಿರುವ ಮನ್ಮಾಡ್ ಎಂಬ ಸ್ಟೇಷನ್ ಬಳಿ ೨೫೦೦೦ ರೂ. ಗಳನ್ನು ಕೊಟ್ಟು ಒಂದು ನಿವೇಶನವನ್ನು ಕೊಂಡುಕೊಂಡು ೩೦೦೦೦ ರೂ. ಗಳನ್ನು ಮುಟ್ಟಿಸಿ ಎಲ್ಲ ಜಾತಿಯ ಪ್ರಯಾಣಿಕರ ಉಪಯೋಗಾರ್ಥವಾಗಿ ಒಂದು ಸತ್ರವನ್ನು ಕಟ್ಟಿಸಯತ್ನಿಸಿರುತ್ತಾರೆ. ಈ ಧರ್ಮಾತ್ಮರು ಮದ್ರಾಸಿನಲ್ಲಿರುವ ಗೋರಕ್ಷಣಶಾಲೆಯ ಮೊದಲಾದ ಧರ್ಮಸಂಸ್ಥೆಗಳಿಗೆ ಬಹುವಾಗಿ ದ್ರವ್ಯಸಹಾಯವನ್ನು ಮಾಡಿರುವರು.

ಬೊಂಬಾಯಿನಲ್ಲಿ ಜಿ. ಐ. ಪಿ. ರೈಲ್ವೆ ಕಂಪೆನಿಯವರು ತಮ್ಮ ಕೆಲಸಗಾರರಿಗಾಗಿಟ್ಟಿರುವ ಆಸ್ಪತ್ರೆಯ ಡಾಕ್ಟರ್ ಬೆಹರಾಂಷ ಪಾರಂಸ್ಜಿ ಕೂವರ್‌ರವರು ಜಾರ್ಜ್ ರಾಸ್ ಎಂಬ ೧೪ ವರ್ಷ ವಯಸ್ಸಿನ ಒಬ್ಬ ಹುಡುಗಿಯ ಗಂಟಲಿಗೆ ಔಷಧವನ್ನು ಹಾಕುವಾಗ್ಗೆ ಅವಳ ಸಮೀಪದಲ್ಲಿದ್ದ ಸಹೋದರಿಯರನ್ನು ಗದ್ದಲಮಾಡಬೇಡಿರೆಂದು ಹೇಳಿ ಹೊರಗೆ ಕಳುಹಿ ರಾಸಿನ ಕೆನ್ನೆಗೆ ಮುತ್ತನ್ನು ಕೊಡಲು, ಆಕೆಯು ಡಾಕ್ಟರನ್ನು ನೂಕಿಬಿಟ್ಟು ಹೊರಗೆ ಬಂದು ನಡೆದ ಸಂಗತಿಯನ್ನು ತನ್ನ ಸಹೋದರಿಯರಿಗೆ ತಿಳುಹಿದಳು. ಆಕೆಯ ತಂದೆಯು ಆ ಡಾಕ್ಟರ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನು ಹೂಡಿರುವಲ್ಲಿ ಸಾಕಷ್ಟು ಕಾರಣವಿಲ್ಲವೆಂಬುದರ ಮೇಲೆ ಡಾಕ್ಟರು ನಿರ್ದೋಷಿಯಾಗಿ ಬಿಡಲ್ಪಟ್ಟರು.

ಲಂಡನ್ ಪಟ್ಟಣದ ಪೂರ್ವದಿಗ್ಭಾಗದಲ್ಲಿ ೬ ಪಾಠಶಾಲೆಯ ಹುಡುಗರು ತಮಗೆ ಬುಧವಾರದದಿವಸ ಒಪ್ಪತ್ತಿನ ರಜವನ್ನು ಕೊಡಬೇಕೆಂದೂ, ಹೊಡೆಯುವುದನ್ನು ಕಡಿಮೆ ಮಾಡಬೇಕೆಂದೂ ಹಟವನ್ನು ಹಿಡಿದು ಪಾಠಶಾಲೆಗಳ

ಸುತ್ತಲೂ ಮುತ್ತಿಕೊಂಡು ಕಲ್ಲುಗಳನ್ನೆಸೆದು ದಾಂಧಲೆಯನ್ನು ಮಾಡುತ್ತಿರುವಲ್ಲಿ ಪೋಲೀಸರು ಬಂದು ದೊಂಬಿಯನ್ನಡಗಿಸಿದರು. ಮಾಂಚೆಸ್ಟರ್ ಮತ್ತೂ ಲಿವರ್‌ಪೂಲ್‌ಗಳಲ್ಲು ಸಹ ನೂರಾರು ವಿದ್ಯಾರ್ಥಿಗಳು ಪಾಠಶಾಲೆಗೆ ಬಾರದೆ ದಂಗೆಯನ್ನೆದ್ದಿರುವರು.

ಜರ್ಮನಿಯಲ್ಲಿ ಸೋಸಿಯಲಿಸ್ಟ್ ಎಂದರೆ ಯಾವಸ್ವತ್ತೂ ಒಬ್ಬರದಾಗಿರದೆ ಎಲ್ಲರಿಗೂ ಸೇರಿದುವಾಗಿರುವುದೆಂದು ವಾದಿಸುವವರ ಪಕ್ಷಕ್ಕೆ ಸಂಬಂಧಪಟ್ಟ ವರ್ವಾರ್ಟ್ಸ್ ಪತ್ರಿಕೆಯಿಂದ ಅದರ ಕರ್ತೃಗಳಿಗೆ ಕಳೆದ ಜೂನ್ ತಾ॥ ೩೦ಕ್ಕೆ ಕಡೆಯಾದ ಒಂದು ವರ್ಷದಲ್ಲಿ ೧೯೪೦೦೦ ರೂಪಾಯಿಗಳ ಆದಾಯವು ಬಂದಿರುತ್ತದೆ. ಆ ಪತ್ರಿಕೆಯ ಚಂದಾದಾರರ ಸಂಖ್ಯೆಯು ೧೯೧೦ ನೆಯ ಜುಲೈ ತಾ॥ ೧ ರಲ್ಲಿ ೧೨೨೦೦೦ ಇದ್ದುದು ಈಗ ೧೫೩೦೦೦ ಕ್ಕೆ ಏರಿರುತ್ತದೆ. ಇದೇ ಸೋಸಿಯಾಲಿಸ್ಟ್ ಪಕ್ಷದವರಿಂದ ಹೊರಡಿಸಲ್ಪಡುತ್ತಿರುವ ಮತ್ತೊಂದು ಹಾಸ್ಯಕರವಾದ ಪತ್ರಿಕೆಯ ಚಂದಾದಾರರ ಸಂಖ್ಯೆಯು ಕಳೆದ ವರ್ಷದಲ್ಲಿ ೨೮೩೦೦೦ ಇದ್ದುದು ಈಗ ೩೦೩೦೦೦ ಇರುತ್ತವೆ. ಈ ಪತ್ರಿಕೆಯುತ್ಪನ್ನದಿಂದ ಯುದ್ಧದ ಫಂಡಿಗೆ ೩೦೦೦೦ ರೂಪಾಯಿಗಳು ಕೊಡಲ್ಪಟ್ಟಿರುತ್ತವೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು.

ಪ. ಪ್ರ.

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಾಲಕಿಯುತ್ಸವವು.

ಶ್ರೀ ಜಗದ್ಗುರುಗಳವರು ಕಲಾದ್ಗಿಯ ವೀರಶೈವ ಭಕ್ತರ ಪ್ರಾರ್ಥನೆಯಂತೆ ಕಳೆದ ತಾ॥ ೧ ರಲ್ಲಿ ಸಕಲ ಬಿರುದಾವಳಿಗಳ ಸಮೇತ ಅಡ್ಡಪಾಲಕಿಯುತ್ಸವದಿಂದ ಕಲಾದ್ಗಿ ಪುರಪ್ರವೇಶಮಾಡಿ ಅಲ್ಲಿಯ ಭಕ್ತರು ಮಾಡಿದ ಭಿಕ್ಷೆಯನ್ನು ಸ್ವೀಕರಿಸಿಕೊಂಡು ಅಲ್ಲಿಂದ ಹೊರಟು ಕಳೆದ ತಾ॥ ೨ ರಲ್ಲಿ ಬಾಗಲಕೋಟೆಗೆ ಮಕರತೋರಣ, ಶ್ವೇತಛತ್ರ, ಹಗಲು ದೀವಟಿಗೆ, ಮೋರ್ಚಲು ಮೊದಲಾದ ಸಮಸ್ತ ಬಿರುದಾವಳಿಗಳ ಸಮೇತ ಪಂಚಕಲಶಯುಕ್ತವಾದ ಅಡ್ಡಪಾಲಕಿಯುತ್ಸವಗೊಂಡು ದಯಮಾಡಿಸಿದರು. ಬಾಗಲಕೋಟೆಯ ವೀರಶೈವ ಮತ್ತೂ ಇತರ ಪ್ರಮುಖ ಜನರು ಊರಹೊರಗೆ ಕಾದುಕೊಂಡಿದ್ದು ಮಹಾಸ್ವಾಮಿಯವರಿಗೆ ಫಲಪುಷ್ಪವನ್ನೊಪ್ಪಿಸಿ, ಅವರ ದರ್ಶನಾಶೀರ್ವಾದವನ್ನು ಪಡೆದು ಶ್ರೀ ಜಗದ್ಗುರುಗಳವರ ಸ್ವಾರಿಯು ಪುರಪ್ರವೇಶಮಾಡಿ ವೀರಶೈವ ಭಕ್ತಮಂಡಳಿಯು ಮಾಡುವ ಸೇವೆಯನ್ನು ಕೈಗೊಂಡು ತಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಬೇಡಿಕೊಂಡರು. ಊರೊಳಗೆ ಉತ್ಸವ ಬರತಕ್ಕ ಮಾರ್ಗದಲ್ಲಿ ಪ್ರತಿಯೊಂದು ಮನೆಯ ಮುಂಗಡೆ ಸಾರಣೆಕಾರಣಿಗಳಿಂದಲೂ, ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ವಿಧವಿಧವಾದ ಚಿತ್ರಪಟಗಳಿಂದಲೂ ಮನೋಹರವಾಗಲಂಕರಿಸಿ, ಮಹಾಸ್ವಾಮಿಯವರ ಸ್ವಾರಿಯು ದಯಮಾಡಿಸಿದಾಗ ಬಾಲಿಕೆಯರು ಆರತಿಯನ್ನು ಬೆಳಗಿದರು. ಈ ಮಹೋತ್ಸವವನ್ನೋಡಲು ಸ್ಥಳಸ್ಥಳದಿಂದ ೨೫,೦೦೦ ಜನರ ಮೇಲೆಯೇ ಬಂದು ಸೇರಿದ್ದರು. ಇಷ್ಟೊಂದು ಜನಸ್ತೋಮವು ಸೇರಿದ್ದರೂ ಯಾವುದೊಂದು ಗದ್ದಲವೂ ನಡೆಯದಂತೆ ಪೋಲೀಸು ಏರ್ಪಾಟು ಬಹು ಚೆನ್ನಾಗಿ ಸಾಗಿಸಲ್ಪಟ್ಟಿದ್ದಿತು. ಈ ಮಹೋತ್ಸವದ ಸಮಾರಂಭವು ಮುಂದೆ ವಿಶದವಾಗಿ ತಿಳುಹಲ್ಪಡುವುದು.

ಓರ್ವ ಭಕ್ತ.

ಬಾಗಲಕೋಟೆ ವೀರಶೈವ ಬೋರ್ಡಿಂಗು. ✓

ಚಿಕ್ಕವಯಸ್ಸಿನ ವಿದ್ಯಾರ್ಥಿಗಳನ್ನು ದೊಡ್ಡ ಊರುಗಳಿಗೆ ಅಭ್ಯಾಸಕ್ಕೆ ಕಳಿಸಿದರೆ ಅವರಿಗೆ ಆಗುವ ಅಡಚಣೆಯನ್ನು ಮತ್ತು ದೊಡ್ಡ ಊರುಗಳಲ್ಲಿರುವ ಖಾನಾವಳಿಯಲ್ಲಿ ವ್ಯಾಳೆಕ್ಕೆ ಭೋಜನ ಆಗದಿರುವ ಮೊದಲಾದ ತ್ರಾಸನ್ನು ತಪ್ಪಿಸುವದಕ್ಕಾಗಿ ಬಹಳ ದಿವಸಗಳಿಂದ ಇಲ್ಲಿಯ ಕೆಲವು ಮಹನೀಯರ ಮನಸ್ಸಿನಲ್ಲಿ ಒಂದು ಬೋರ್ಡಿಂಗನ್ನು ಸ್ಥಾಪಿಸುವ ಆಲೋಚನೆಯು ನಡೆದಿತ್ತು. ಆದರೆ ಈ ಬಗೆಗೆ ಯಾರೂ ಮುಂದರಿದು ಕೈಯಲ್ಲಿ ಕೆಲಸತಕೊಂಡಿದ್ದಿಲ್ಲಾ. ಕೊಣ್ಣೂರ ಸಂಗೀತ ನಾಟಕಮಂಡಳಿಯವರು ಬಾಗಲಕೋಟೆಯ ಮುಕ್ಕಾಮಿನಲ್ಲಿರುವಾಗ್ಗೆ ಹಾಲಗಲ್ಲ ಶ್ರೀಗಳವರ ಸ್ವಾರಿಯು ದಯಮಾಡಿಸಿತ್ತು. ಆಗ್ಗೆ ಸದರಿ ನಾಟಕ ಮಂಡಳಿಯ ಮಾಲಕರು ವೀರಶೈವ ಮತಸ್ಥರಾದ ಕಾರಣ ಭಕ್ತಿಯಿಂದ ಶಿವಯೋಗಮಂದಿರ ಫಂಡಿಗಾಗಿ ಬಸವೇಶ್ವರ ಆಖ್ಯಾನದ ಒಂದು ದಿವಸದ ಉತ್ಪನ್ನವನ್ನು ಕೊಡಲಿಕ್ಕೆ ಒಪ್ಪಿ ಶ್ರೀಗಳವರಿಗೆ ಅರಿಕೆ ಮಾಡಿಕೊಂಡರು, ಆದರೆ ಪರಮಪೂಜ್ಯರಾದ ಶ್ರೀಗಳವರು ಕೊಣ್ಣೂರ ನಾಟಕಕಂಪನಿಯು ಹೊಸದಾಗಿ ಮುಂದಕ್ಕೆ ಬಂದದ್ದರಿಂದ ಶಿವಯೋಗಮಂದಿರ ಫಂಡಿಗಾಗಿ ಬಂದ ಒಂದು ದಿವಸದ ಉತ್ಪನ್ನವನ್ನು ತಗೊಳ್ಳದೆ ಅರ್ಧರಕಮನ್ನು ಆಶೀರ್ವಾದವಾಗಿ ಕಂಪನಿಯವರಿಗೆ ಪರತ ಕೊಟ್ಟರು. ಮತ್ತು ಅರ್ಧ ರಕಮನ್ನು ಬೋರ್ಡಿಂಗ ಸ್ಥಾಪನೆಗಾಗಿ ಮೂಲಧನವನ್ನಾಗಿ ಇಟ್ಟುಕೊಳ್ಳಲಿಕ್ಕೆ ಪೂರ್ಣ ಆಶೀರ್ವಾದದಿಂದ ಕೊಟ್ಟರು. ಶ್ರೀಗಳವರ ಉದಾರವಾದ ಕೃತಿಗೆ ನಾಟಕಮಂಡಳಿಯವರು ಪೂರಾ ಸಂತೋಷಪಟ್ಟು ಬೋರ್ಡಿಂಗಸ್ಥಾಪನೆಮಾಡಿದರೆ ತಾವು ಸಂಚಾರಮಾಡಿದಲ್ಲಿ ಹೆಚ್ಚು ಲಾಭವಾದಹಾಗೆ ಬೋರ್ಡಿಂಗಕ್ಕೆ ಮದತ ಮಾಡುತ್ತೇವೆಂತಾ ವಾಗ್ದಾನಮಾಡಿದರು. ಇನ್ನೊಂದು ಮಹತ್ವದ ಸಂಗತಿಯೇನಂದರೆ ಇಲ್ಲಿಯ ಪ್ರಸಿದ್ಧ ಸಾಹುಕಾರರಾದ ಗುಗವಾಡ ರುದ್ರಪ್ಪನವರು ಶೋಧಾವಿಗಳಾದ ನಿಮ್ನವರ ಬಡಲಿಂಗಾಯತ ವಿದ್ಯಾರ್ಥಿಗಳು ಕಡೆಯವರೆಗೂ ಇಂಗ್ಲೀಷು ಅಭ್ಯಾಸಮಾಡಲು ಹತ್ತುವ ಊಟವಸ್ಸಿಕೆ ಖರ್ಚನ್ನು ತಾವೊಬ್ಬರೇ ಕೊಡಲಿಕ್ಕೆ ಸಿದ್ಧರಾಗಿ ಆಪ್ರಕಾರ ಕಳೆದ ಒಂದು ವರ್ಷದಿಂದಲೂ ಈ ಉತ್ತಮಕೆಲಸವನ್ನು ಕೈಕೊಂಡಿದ್ದರು. ಈ ಮಹನೀಯರ ಈತರದ ಉದಾರಕ್ರಿಯವೇ ಬೋರ್ಡಿಂಗಸ್ಥಾಪನೆ ಮಾಡಲಿಕ್ಕೆ ಮೂಲಕಾರಣವಾಯಿತೆನ್ನಲಿಕ್ಕೆ ಅಡ್ಡಿಯಿಲ್ಲ, ಮತ್ತು ಬೋರ್ಡಿಂಗಸ್ಥಾಪನೆಗಾಗಿ ಸ್ಥಳದ ಬಗ್ಗೆ ಕೆಲವರು ಆಲೋಚನೆ ಮಾಡುತ್ತಿರುವಷ್ಟರಲ್ಲಿ, ಟೀಕಿನಮಠದ ಶ್ರೀಗಳವರು ತಮ್ಮ ದೊಡ್ಡಮಠವನ್ನು ಮತ್ತು ಅದರ ಉತ್ಪನ್ನವನ್ನು ವೀರಶೈವ ಬೋರ್ಡಿಂಗಿಗಾಗಿ ಕೊಟ್ಟುಬಿಡುವ ನಿಶ್ಚಯವನ್ನು ಮುಂದಾಳುಗಳಿಗೆ ತಿಳಿಸಿದರು. ಮತ್ತು ಇಷ್ಟೇ ಅಲ್ಲದೆ ತಮ್ಮ ಸದ್ವಿಚಾರದ ಕೆಲಸವನ್ನು ತೀವ್ರವೇ ಅಮಲಿನಲ್ಲಿ ತರಲಿಕ್ಕೆ ಮ॥ ರಾ॥ ಬಸಪ್ಪಾ ಪಾಟೀಲ ಇವರಿಗೆ ಹೇಳಿ ತಾವೂ ಸಹ ಈ ಕಾರ್ಯದಲ್ಲಿ ಮುಂದಾಳುಗಳಾಗಿ ನಿಂತರು. ಕಳೆದ ಶ್ರಾವಣ ಶುದ್ಧ ೧ ದಿವಸ ಟೀಕಿನಮಠದಲ್ಲಿ ಶ್ರೀ ಬಸವೇಶ್ವರ ವಿದ್ಯಾವರ್ಧಕವೀರಶೈವಫಂಡಿನ ಕಮಿಟಿಚೇರಮನ್ನರಾದ ರಾ॥ ರುದ್ರಪ್ಪಾ ಅಣ್ಣಾ ಗೂಗವಾಡ ಇವರ ಅಧ್ಯಕ್ಷತೆ ಕೆಳಗೆ ಬೋರ್ಡಿಂಗನ್ನು ಸ್ಥಾಪಿಸುವ ಬಗ್ಗೆ ಸಭೆಕೂಡಿತ್ತು. ಶಾರೀರಿಕ ವ ಮಾನಸೀಕಕಲಾಕೌಶಲ್ಯಗಳಲ್ಲಿ ಹಿಂದುಳಿದ ನಮ್ಮ ವೀರಶೈವ ಧರ್ಮಸ್ಥರು ದಿನೇ ದಿನೇ ಮುಂದಕ್ಕೆ ಬಂದು ತಮ್ಮ ಉತ್ಪನ್ನದ ಕೆಲವು ಅಂಶವನ್ನು ಧರ್ಮಾರ್ಥ ಕೆಲಸಕ್ಕೆ ಉಪಯೋಗಮಾಡುವುದನ್ನು ನೋಡಿದರೆ ಯಾರು ತಾನೇ ಸಂತೋಷಪಡರು?

ಸೆಕ್ರೆಟರಿ, ವೀರಶೈವ ಬೋರ್ಡಿಂಗ, ಬಾಗಲಕೋಟೆ.

ಶ್ರೀಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಯ ಉತ್ಸವವು.

ಕುಣಿಗಲ್ ತಾ॥ ಎಡೆಯೂರೆಂಬ ಗ್ರಾಮದಲ್ಲಿ ಶ್ರೀಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಿದ್ಧಲಿಂಗೇಶ್ವರ ಮಹಾಸ್ವಾಮಿಯ ಯೋಗಸಮಾಧಿಯ ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ದೇವಾಲಯವು ಜಗತ್ಪ್ರಸಿದ್ಧವಾಗಿ ಇರುತ್ತದಷ್ಟೆ. ಈ ತೋಂಟದಾರ್ಯ ಮಹಾಸ್ವಾಮಿಗೆ ಕಳೆದ ಮಾಹೆ ತಾ॥ ೧೨ ನೆಯ ಗುರುವಾರ ದಿವಸ ಬೆಳಗಿನ ೧೧ ಗಂಟೆಯು ಲಾಗಾಯಿತು ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ವೇದಘೋಷದಿಂದ ನಡೆದುವಲ್ಲದೆ ಆ ದಿನ ಮಧ್ಯಾಹ್ನ ೩ ಗಂಟೆಗೆ ನೂರಾರು ಜನ ಶಿವಗಣಂಗಳಿಗೂ, ಇತರರಿಗೂ ಸಹ ದೇವಾಲಯದ ಹಿಂಭಾಗದಲ್ಲಿರುವ ದಾಸೋಹಮಂಟಪದಲ್ಲಿ ಸಂತರ್ಪಣೆಯು ಮಹದಾನಂದವಾಗಿ ನಡೆಸಲ್ಪಟ್ಟು ಆ ದಿನ ರಾತ್ರಿ ೯ ಗಂಟೆಯಿಂದ ಬೆಳಗಿನ ಜಾವದ ೪ ಗಂಟೆಯ ವರೆಗೂ ನವಿಲುವಾಹನ ಉತ್ಸವವು, ಹಗಲು ಬತ್ತಿ ಬಾಣ ಬಿರುಸುಗಳಿಂದಲೂ, ವಾದ್ಯಘೋಷದಿಂದಲೂ ಮಹಾ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಈ ಮಹಾ ಉತ್ಸವವನ್ನು ನೋಡುವುದಕ್ಕಾಗಿ ಹತ್ತಾರು ಮೈಲಿ ದೂರದಿಂದ ಸಾವಿರಾರು ಜನರು ಬಂದಿದ್ದು ಸ್ವಾಮಿಸೇವೆಯನ್ನು ಮಾಡಿ ನೇತ್ರಾನಂದವನ್ನು ಹೊಂದಿ ಮಾರನೆಯ ದಿವಸ ತಂತಮ್ಮ ಸ್ಥಳಗಳನ್ನು ಸೇರಿಕೊಂಡರು. ಇದೇ ಊರಿನ ಶಿವಪ್ಪನವರ ಮಕ್ಕಳು ಸಿದ್ಧಬಸವಪ್ಪನವರು ತಾವು ರಿಕ್ತದೆಶೆಯಲ್ಲಿದ್ದಾಗ್ಯೂ ಸ್ವಾಮಿಸೇವಾನಿರತರಾಗಿ ಪರಸಹಾಯದಿಂದ ಈ ಕಾರ್ಯಕ್ಕೆ ಮುಖ್ಯಸ್ಥರಾಗಿ ನಿಂತು ನೆರವೇರಿಸಿದರು. ಈ ಕಾರ್ಯವನ್ನು ಹಿಂದಿನ ಕಾಲದಲ್ಲಿ ಯಾವಾಗಲೂ ನಡೆಸುತ್ತಿದ್ದ ಶ್ರೀ ಫಲಾಹಾರಸ್ವಾಮಿಗಳು ಈಗ್ಗೆ ೪ ನೆಯ ವರ್ಷದಲ್ಲಿ ಶಿವೈಕ್ಯರಾದುದರಿಂದ ಈ ಕಾರ್ಯವು ಮಧ್ಯೆ ೨ ವರ್ಷಗಳಿಂದಲೂ ಸುತರಾಂ ನಡೆಯದೆ ನಿಂತುಹೋಗಿತ್ತು. ಈ ರೀತಿ ನಿಂತುಹೋಗಿದ್ದ ಸ್ವಾಮಿಕಾರ್ಯವನ್ನು ಇವರು ನಡೆಸಿದುದಕ್ಕೆ ತುಂಬಾ ಸಂತೋಷಪಡಬೇಕಾಗಿರುತ್ತೆ. ಅಲ್ಲದೆ ಇದೇ ರೀತಿ ವರ್ಷವರ್ಷ ಕ್ಲುಪ್ತಕಾಲದಲ್ಲಿ ನಡೆಸತಕ್ಕ ಮನಸ್ಸನ್ನು ಶ್ರೀ ಸಿದ್ಧಲಿಂಗೇಶ್ವರನು ಇವರಿಗೆ ಕೊಡಬೇಕಾಗಿ ಪ್ರಾರ್ಥಿಸುವೆನು. ಪರಂತು ಈ ಕಾರ್ಯಕ್ಕೆ ಸಹಾಯಮಾಡಿದ ಧರ್ಮಜ್ಞರಿಗೂ ಇವರಿಗೂ ಶ್ರೀಮತ್ಪರಶಿವೇಶ್ವರನು ಅರ್ಥಾಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನೀಯಲೆಂದು ನಾನು ಸರ್ವದಾ ಕೋರುತ್ತಿರುವೆನು. ಅಲ್ಲದೆ ಈ ಪ್ರಾಂತ ಮಳೆಯಿಲ್ಲದೆ ಎಲ್ಲಾ ಕಡೆ ಪೈರು ಪಚ್ಚೆಗಳೂ ಒಣಗುತ್ತಿರುವುವು. ನೆನ್ನೆ ಮೊನ್ನೆ ಮಾತ್ರ ಸಾಧಾರಣವಾಗಿ ಮಳೆಯಾಗಲು ಜನಗಳಿಗೆ ಸ್ವಲ್ಪ ಧೈರ್ಯವುಂಟಾಗಿರುತ್ತದೆ. ಸಂಪೂರ್ಣವಾದ ಮಳೆಯು ಯಾವಾಗ ಬರುವುದೋ ಎಂಬ ಆಲೋಚನೆಯಿಂದ ಶ್ರೀ ಭಗವಂತನ ಧ್ಯಾನದಲ್ಲಿಯೇ ಇರುತ್ತಾರೆ. ಮತ್ತೂ ಈ ಗ್ರಾಮದಲ್ಲಿಯೂ ಇದರ ಎಡಬಲ ಗ್ರಾಮಗಳಲ್ಲಿಯೂ ಇಲಿ ಹೆಗ್ಗಣಗಳು ಹೆಚ್ಚುಗಟ್ಟಲೆಯಾಗಿ ಸಾಯುತ್ತಾ ಇರುವುದರಿಂದ ಎಲ್ಲರೂ ಘನತರವಾದ ವ್ಯಸನಾಂಬುಧಿಯಲ್ಲಿಯೇ ಮುಳುಗಿ ಇರುವದಾಗಿದೆ ಏಕೆಂದರೆ— ಕಳೆದ ಸಾಲಿನಲ್ಲಿ ಈ ಗ್ರಾಮವನ್ನು ಪ್ಲೇಗ್ ಬಾಧೆಯಿಂದ ಬಿಟ್ಟು ೪-೬ ತಿಂಗಳ ವರೆಗೂ ಮತ್ತುಗಳಲ್ಲಿ ವಾಸಮಾಡಿ ಗ್ರಾಮಕ್ಕೆ ಬಂದು ೩-೪ ತಿಂಗಳು ತುಂಬುವುದರೊಳಗೇ ಪುನಃ ಗ್ರಾಮವನ್ನು ಬಿಡಬೇಕಾದರೆ ಪ್ರಜೆಗಳಿಗೆ ಸುಖವು ಇನ್ನೆಷ್ಟರಮಟ್ಟಿಗೆ ಇರಬಹುದೋ ವಾಚಕರೇ ಊಹಿಸಬೇಕಾಗಿದೆ. ಅಲ್ಲದೆ ದನಕರುಗಳಿಗೂ ಇದೇ ಪ್ಲೇಗ್‌ಸಂಬಂಧವಾದ ಖಾಯಿಲೆಯಿಂದ ಈ ಪ್ರಾಂತದ ಗ್ರಾಮಗಳಲ್ಲಿ ಸಾವಿರಾರು ರೂಪಾಯಿಗಳ ಜೀವರಾಸಿಗಳು ಪ್ಲೇಗ್ ಮಾರಿಗೆ ತುತ್ತಾದುವು. ಈ ಆಹಾರದಿಂದಲೂ ತೃಪ್ತಿಪಡದೆ ನರರ ಆಹಾರಕ್ಕೆ ಗಮನಮಾಡಿ ಇರುತ್ತಾಳೆ. ಈ ಮಹತ್ಕಷ್ಟವು ದೇವರಿಂದ ನಿವಾರಣೆ ಹೊಂದಬೇಕಾಗಿರುತ್ತೆಯೇ ಹೊರತು ಮತ್ತಾವ ಪ್ರಯತ್ನದಿಂದಲೂ ಅಗಲಾರದು. ಆದರೆ ಇಲ್ಲಿಗೆ ೧೫ ಮೈಲಿ ದೂರದಲ್ಲಿರುವ ಕುಣಿಗಲಿನಲ್ಲಿ ಪ್ಲೇಗ್ ಗಲಾಟೆಯು ಇರುವುದರಿಂದ ಆ ಪ್ರಾಂತದ ಜನಗಳು ಇಲ್ಲಿಗೆ ವಿಶೇಷವಾಗಿ ಬಂದು ಹೋಗುವ ವಾಡಿಕೆಯಿರುತ್ತೆ. ಇದಕ್ಕೆ ಅವಕಾಶ ಕೊಡದಂತೆ ನಮ್ಮ ಸರ್ಕಾರದವರು ನಿಗಾಕೊಟ್ಟಾರೆಂದು ನಂಬಿರುತ್ತೇನೆ.

ಹಿತಚಿಂತಕ.

ದಾವಣಗೆರೆ.

ಕಳೆದವಾರದಶೇಷ.

ಲಾರ್ಡ ಮಕಾಲೆಯವರು ಒಂದು ಕಡೆಯಲ್ಲಿ ಹೇಳಿರುವಂತೆ ಸಮಾಜದ ಪ್ರತಿಯೊಂದು ವ್ಯಕ್ತಿಯು ಸುಸ್ಥಿತಿಯಲ್ಲಿರದ ವಿನಾ ಆ ಸಮಾಜವು ಉನ್ನತಾವಸ್ಥೆಯಲ್ಲಿದೆ ಎಂದು ತಿಳಿಯಲಾಗದು. ಸಮಾಜದಲ್ಲಿ ಕೆಲವರು ಸುಶಿಕ್ಷಿತರಾಗಿದ್ದರೆ, ಆ ಸಮಾಜಕ್ಕೆ ಸುಖಾವಸ್ಥೆಯು ಎಂದಿಗೂ ಬರಲಾರದು. ನಮಗೂ, ನಮ್ಮ ಕುಟುಂಬಕ್ಕೂ ಉಂಡುಡುವುದಕ್ಕೆ ಯಾವವಿಧವಾದ ಕೊರತೆಯಿಲ್ಲವೆಂದು ಸಮಾಜದ ಕಡೆಗೆ ಗಮನಿಸದಿರುವದು ಉಚಿತವಲ್ಲ. ಮನೆಯ ಒಂದು ಭಾಗಕ್ಕೆ ಬೆಂಕಿಬಿದ್ದರೆ ಮತ್ತೊಂದು ಭಾಗವು ನನಗೆ ಯಾವವಿಧವಾದ ಸಂಕಟವೂ ಇಲ್ಲವೆಂದು ಹೇಳುವಷ್ಟೆಯೇ ತಮ್ಮ ಯೋಚನೆಯು ಯುಕ್ತವಾದದ್ದಾಗಿದೆ. ಶರೀರದ ಒಂದ ಭಾಗಕ್ಕೆ ಬಾಧೆಯಾಗಲು ಇತರ ಭಾಗಗಳು ಗಮನಿಸದಿದ್ದರೆ ಹೇಗೆ ಕೊನೆಗೆ ತಾವೂ ನಾಶವಾಗುತ್ತವೆಯೋ, ಅದರಂತೆಯೇ ಸಮಾಜವೆಂಬ ಶರೀರಕ್ಕೆ ಪ್ರಕೃತ ಬಾಧೆಯುಂಟಾಗಿರುವಾಗ ಅವಯವ ರೂಪವಾಗಿರುವ ತಾವುಗಳೆಲ್ಲ ಗಮನಿಸಿ ತನು ಮನ ಧನಗಳಿಂದ ಸೇವಾತತ್ಪರರಾಗತಕ್ಕದ್ದು ಅತ್ಯಾವಶ್ಯಕವು. ಸಮಾಜ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ವ್ಯಯ ಮಾಡಿರುವ ಮಹನೀಯರನ್ನು ನಾನು ತಮಗೆ ಪರಿಚಯಮಾಡಿಕೊಡುವುದೂ, ಸೂರ್ಯನನ್ನು ದೀಪಹಿಡಿದು ತೋರಿಸುವುದೂ ಸಮಾನವಾದವುಗಳಾಗಿವೆ. ಬಂಧುಗಳೇ? ಸಮಾಜದ ಹಿತಾಹಿತಗಳೇ ನಮ್ಮ ಹಿತಾಹಿತಗಳೆಂತಲೂ, ಸಮಾಜದ ಗೌರವವೇ ನಮ್ಮ ಗೌರವವೆಂತಲೂ, ಸಮಾಜಕ್ಕೆ ಬಂದ ಸಂಕಟವೇ ನಮ್ಮ ಪ್ರೀತಿಯ ಪುತ್ರನಿಗೆ ಬಂದ ಸಂಕಟವೆಂದು ಭಾವಿಸಿ ಅದಕ್ಕನುಗುಣವಾದ ಕಾರ್ಯದಲ್ಲಿ ತನು ಮನ ಧನಗಳನ್ನು ವ್ಯಯ ಮಾಡದಿದ್ದರೆ ಈ ಸಮಾಜವು ಖಂಡಿತವಾಗಿಯೂ ಊರ್ಜಿತ ಸ್ಥಿತಿಗೆ ಬರಲಾರದು, ಮತ್ತು ನಾವು ಮನುಷ್ಯರಾಗಿ ಬಾಳಲಾರೆವು. ಜಗತ್ತಿನ ವಿಚಾರಕ್ರಾಂತಿಯ ಕಡೆಗೆ ಗಮನಿಸಿರಿ. ಮತಮತಾಂತರಗಳ ಪ್ರಾಬಲ್ಯವನ್ನು ನೋಡಿರಿ. ಸಮಾಜಸೇವೆಯೇ ಶಿವಸೇವೆ ಯೆಂಬುದನ್ನು ನಂಬಿರಿ. ಸಮಾಜದವರು ಅನೇಕವಿಧವಾಗಿ ಬಳಲುತ್ತಿರುವಾಗ, ನಾನಾ ವಿಧವಾದ ಅವಮಾನಗಳನ್ನು ಹೊಂದುತ್ತಿರುವಾಗ, ಅವರಿಗೆ ಸಹಾಯ ಮಾಡದೆ ಬಾಗಿಲು ಹಾಕಿಕೊಂಡು ಶಿವಪೂಜೆಯನ್ನು ಮಾಡಿದರೆ ಆ ಶಿವನು ಮೆಚ್ಚುವುದಿಲ್ಲವೆಂಬುದನ್ನು ತಿಳಿದು ಸಮಾಜ ಸೇವೆಗೆ ಯಾರು ಕಂಕಣ ಬದ್ಧರಾಗಿರುತ್ತಾರೆಯೋ ಅವರಿಗಾದರೂ ತಕ್ಕಷ್ಟು ನೆರವಾಗಿರಿ. ಸ್ವಮತೀಯರು ಒಬ್ಬರಿಗೊಬ್ಬರು ಸಂಧಿಸಿದಾಗ ಹೇಗೆ ಕ್ಷೇಮಲಾಭಗಳನ್ನು ವಿಚಾರಿಸುತ್ತಾರೋ ಅದರಂತೆಯೇ ಧಾರ್ಮಿಕ ವಿಧಿಯಲ್ಲಿ ಅವರಲ್ಲಿರತಕ್ಕ ನ್ಯೂನಾತಿರೇಕಗಳನ್ನು ತಿಳಿಸಿರಿ. ಅದನ್ನು ತಿದ್ದಿಕೊಳ್ಳುವಂತೆ ಅವರಿಗೆ ನಿರ್ಭಯದಿಂದ ಹೇಳಿರಿ. ಈ ಸಮಯವು ನಮ್ಮ ಜನಗಳಲ್ಲಿ ದಲಾಲಿ ವ್ಯಾಪಾರತತ್ಪರರಿಗೆ ತುಂಬಾ ಅನುಕೂಲವಾಗುತ್ತಿದೆ. ಹೇಗೆ ಅಂದರೆ ಬರತಕ್ಕ ಅಜಾಮಿಯ ವಿಷಯಕ್ಕೆ ತಮ್ಮ ಮುದ್ದು ಮಗುವಿಗೇ ಯೇನೆಂಬುದನ್ನು ತುಂಬಾ ಅರಿತುಕೊಳ್ಳುತ್ತಾರೆಯೋ ಅದರಂತೆಯೇ ಆತನಲ್ಲಿ ನಮ್ಮ ಧರ್ಮವು ನಾಶವಾಗುತ್ತಿದೆಯೇ ಯೇನೆಂಬುದನ್ನು ಯೋಚಿಸುವುದು ದಲಾಲರ ಕರ್ತವ್ಯವಲ್ಲವೇ? ಅವರು ಎಂತಹ ಅನಾಚಾರದಿಂದಿದ್ದಾಗ್ಯೂ ಅತ್ತ ಕಡೆಗೆ ಗಮನಿಸದೆ ಕೇವಲ ನಿಮ್ಮ ಹಣಕ್ಕಾಗಿ ಅವರನ್ನು ಕಾದಿಟ್ಟುಕೊಳ್ಳುವುದು ನಿಮಗೆ ಯುಕ್ತವಾಗಿ ತೋರುತ್ತದೆಯೇ? ಈ ಪ್ರಕಾರ ಪ್ರತಿಯೊಬ್ಬರಲ್ಲಿ ಕಾರ್ಯಗಳು ತಲೆದೋರಿದರೆ ಹೇಗೆ ಉಗೀ ಬಂಡಿಯಲ್ಲಿರತಕ್ಕ ಪ್ರತಿಯೊಂದು ಪೆಟ್ಟಿಗೆಯವರು ತಮ್ಮ ತಮ್ಮ ಪೆಟ್ಟಿಗೆಯ ಬಾಗಿಲನ್ನು ಹಾಕಿಕೊಂಡರೆ ನಿರಾಯಾಸವಾಗಿ ಕಾರ್ಯವು ಆಗುತ್ತದೆಯೋ ಅದರಂತೆಯೇ ನಿರಾಯಾಸದಿಂದ ಸಮಾಜೋನ್ನತಿಯಾಗಲು ಅಭ್ಯಂತರವಿಲ್ಲ. ಮುಖ್ಯವಾಗಿ ಈ ವಿಧಿಗಳನ್ನೆಲ್ಲಾ ಕೇಳಿ ಇಲ್ಲಿಯೇ ಬಿಡದೆ ತಾವು ಆಚರಿಸಬೇಕೆಂಬುವಾಗಿ ಬೇಡಿಕೊಳ್ಳುತ್ತೇನೆ. ಈ ಪ್ರಕಾರ ಅನೇಕ ದೃಷ್ಟಾಂತರಗಳಿಂದಲೂ, ಶಾಸ್ತ್ರಾಧಾರಗಳಿಂದಲೂ ಜನಗಳಲ್ಲಿ ಬಿಂಬಿಸುವಂತೆ ಉಪನ್ಯಾಸಮಾಡಿದನಂತರ ಮ॥ ರಾ॥ ಮಾಜಿ ಹೆಡ್‌ಮಾಸ್ತರ ಗುರುಶಾಂತಪ್ಪನವರು ಇದೇ ವಿಷಯವನ್ನು ಪುಷ್ಟೀಕರಿಸಿ ಸಕಲರೂ ಆಚರಣೆಯಲ್ಲಿ ತರಬೇಕೆಂದು ಚೆನ್ನಾಗಿ ಬೋಧಿಸಿದರು. ಅನಂತರ ಮ॥ ರಾ॥ ಹರ್ಡೇಕರ್ ಮಧುಲಿಂಗಪ್ಪನವರು ಪ್ಲೇಗಿನ ಗಲಾಟೆ ಇದ್ದಾಗ್ಯೂ ಇಷ್ಟು ಜನಗಳು ಸೇರಿದ್ದಕ್ಕಾಗಿ ಸಭಿಕರಿಗೆ ವಂದಿಸಿ ಉತ್ತರೋತ್ತರ ಇಂತಹ ಕಾರ್ಯಗಳಿಗೆ ಪ್ರೋತ್ಸಾಹ ಕೊಡುತ್ತಿರಬೇಕೆಂದು ಅರಿಕೆ ಮಾಡಿಕೊಂಡರು. ಅನಂತರ ಅಧ್ಯಕ್ಷರು ನಾಲ್ಕು ಸೋಮವಾರಗಳಲ್ಲಿಯೂ ಜರುಗಿದ ವಿಷಯಗಳ ಸಾರಾಂಶವನ್ನು ಸಭಿಕರಿಗೆ ಬೋಧಿಸಿ ಇದರಂತೆ ನೀವುಗಳೆಲ್ಲ ಆಚರಿಸಬೇಕೆಂಬುದಕ್ಕಾಗಿ ಈ ನಾಲ್ಕು ಉಪನ್ಯಾಸಗಳನ್ನೂ ಮುದ್ರಿಸಿ ಪುಸ್ತಕರೂಪದಿಂದ ಪ್ರಕಟಿಸಲ್ಪಡುತ್ತೆ. ಆ ಪುಸ್ತಕಗಳನ್ನಿಟ್ಟುಕೊಂಡು ಮುಖ್ಯವಾಗಿ "ನುಡಿದಂತೆ ನಡಿ, ಇದೇ ಜನ್ನದ ಕಡಿ." ಎಂಬುದನ್ನು ಗಮನದಲ್ಲಿಟ್ಟುಕೊಂಡು ಸದಾಚಾರ ಸಂಪನ್ನರಾಗಿರೆಂದು ಅಪ್ಪಣೆ ಕೊಡಿಸಿದರು. ಆಗ ಸಭೆಯು ವಿಸರ್ಜಿಸಲ್ಪಟ್ಟು ಶ್ರೀ ಬಕ್ಕೇಶ್ವರ ದೇವಸ್ಥಾನಕ್ಕೆ ಸಭಿಕರು ಶಿವಭಜನೆಯನ್ನು ಕೇಳಲು ತೆರಳಿದರು.

ಪ್ರತ್ಯಕ್ಷದರ್ಶಿ.

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯು ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮುಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಬಚ್ಚು, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

«ಪಾಚಕ.»

(«ಪಚನಮಾಡುವ ಔಷಧವು.»)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕವುರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ಸಂ. ಭಾ॥ «ಅಂಜೀರಾರ್ಕಮಧು ಕಂಪನಿ»

ಧಾರವಾಡ [illegible] (ಇಂಡಿಯಾ)

ಮೈಸೂರ್ ಸ್ಟಾರಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೭-೦
ಕೆರಸ್ಪಾಂಡೆನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.

೨ ರಿಂದ ೪ ರವರಿಗೆ ೧-೧೦-೦.

ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಊದಬತ್ತಿಗಳು.

28

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೫-೦-೦ ೭-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೫ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಶಾಲಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

12 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

28 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೫ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾತಗಾಂವ್ಕರ, ಮರ್ಚಂಟ್.

ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,

Post Bilgi. North Kanara District

"ಅಗತ್ಯ ವಿಚಾರ."

15

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪ ಆರುಬೆರಳಿನ, ಪೋಸ್ಟ್-ಬಾಗೇವಾಡಿ, ಡಿ॥ ಬೆಳಗಾಂವ.

---

20 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ ! ! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಗೆ ಬಿಕರಿ.

1. ರಾಸ್ಕೊಪಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8 0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದಾಗಿಯೂ ಇರುತ್ತದೆ. ಇದು ಆಯುಷ್ಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಕಿಂಗ್ಸ್ಬರ್ಗ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಬಳಿ

57 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಸೆಪ್ಟಂಬರ್ ತಾ॥ ೧೮ ರಿಂದ ೧೯೧೧ ನೇ ಸೆಪ್ಟಂಬರ್ ತಾ॥ ೨೪ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಭಾದ್ರಪದ ಬ॥ ಏಕಾದಶಿಯಿಂದ ಆಶ್ವಯುಜ ಶು॥ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಡಿ
18	¹ಸೋ	ಏ	50-27	ಪು	6-5	2
19	ಮಂಗ	ದ್ವಾ	45-23	ಆ	2-19	3
20	ಬುಧ	ತ್ರ	40-35	ಮ	56-5	4
21	ಗುರು	ಚ	36-49	ಪು	54-20	5
22	²ಶುಕ್ರ	ಅ	34-5	ಉ	53-39	6
23	³ಶನಿ	ಪಾ	32-20	ಹ	54-11	7
24	ಭಾನು	ಬಿ	32-4	ಚಿ	55-59	8

(1) ಸ್ಮಾರ್ತೈಕಾದಶಿ (2) ಸರ್ವತ್ರಮಹಾಲಯ ಅಮಾವಾಸ್ಯೆ (3) ನವರಾತ್ರ್ಯಾರಂಭ ಜಯಲಕ್ಷ್ಮೀವ್ರತ.

ಮೈಸೂರ್ : ಶ್ರೀ. ವಿರೂಪಾಕ್ಷ [illegible]
[illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✷ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಮಿಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿ ಶ್ರೀಯಂ ಸದಾಪೂರಿಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸೆ ೧೯೧೧ ನೆಯ ಇಸವಿ ಸೆಪ್ಟಂಬರ್ ತಾರೀಖು ೨೫ ನೆಯ ಸೋಮವಾರ. [ಸಂಚಿಕೆ ೩೯

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

17

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಲ್ಲಿ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಇಟ್ಟ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

23



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಉತ್ತಮ ಗ್ರಂಥಗಳು.

5

ಶಿವಸ್ತವಶಿರೋಮಣಿಃ—ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

---

4 **ಎಲ್ಲರಿಗೂ ಬೇಕಾದ ಪುಸ್ತಕಗಳು.**

(೧) ಜರ್ಮನ ಸಾಮ್ರಾಜ್ಯ ೦-೬-೦ ರಷ್ಯಾ ಜರ್ಮನ ಯುದ್ಧಗಳಲ್ಲಿ ಪ್ರಸಿದ್ಧವಾದ ಜರ್ಮನ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನರ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೬ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಕ್ಕೆ ಉಪಕಾರ ಮಾಡಬೇಕೆಂಬೂ ಬಹಳ ಸಾಹಸ ಮಾಡುವಳು. ಗಂಗೆ ಚೆಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ಟರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರು ಮೆಚ್ಚಿದ್ದಾರೆ.

(೪) ಬೋಧನಕ್ರಮಸಂಗ್ರಹ ೦-೧-೬ ಮಾಸ್ಟರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆನಡೆಸಬೇಕು.. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯವೆಚ್ಚ ಬೇರೆ.

ಜಿ. ಕೃಷ್ಣಶಾಸ್ತ್ರಿ, ಅ॥ ಮಾ॥ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

6

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ. —೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಕಂಪನಿ, ಮೈಸೂರು.

ಸೌಗಂಧಿಕಾಪರಿಣಯ.

(ಕಳೆದ ವಾರದ ಶೇಷ.)

ಹದಿನೇಳನೆಯ ಆಶ್ವಾಸ ಪ್ರಾರಂಭ.

ಅನಂತರದಲ್ಲಿ ಸುಗಂಧಮಹಾರಾಜೇಂದ್ರನು ವಿದ್ಯಾಗುರುವಾದ ವಿದ್ಯಾಸಾಗರನಿಂದ ನಿರೂಪಿಸಲ್ಪಟ್ಟ ಅಶ್ವಲಕ್ಷಣಗಳಂ ಕೇಳಿ ಸಂತೋಷಪಟ್ಟು, ಎಲೈ ಗುರುವಾದ ವಿದ್ಯಾಸಾಗರನೆ! ಈಗ ನೀನು ಪೇಳಿದ ರೀತಿಯೊಳ್ ಮನುಷ್ಯಲೋಕದಲ್ಲಿ ಸಕಲ ದೇಶಂಗಳೊಳಿರುವ ಅಶ್ವಲಕ್ಷಣಗಳಂ ಎಲ್ಲವಂ ಪೇಳಿದಂತಾಯಿತು. ಈ ಶಾಸ್ತ್ರದೊಳ್ ಕಳಿಂಗರಾಜಪುತ್ರಿಯು ಪಣವಾಗಿ ಪೇಳಿದ ಕುದುರೆಯ ಲಕ್ಷಣವಿರುವಂತೆ ಕಾಣಲಿಲ್ಲ. ಅದೆಂತೆಂದಡೆ, ರೆಕ್ಕೆಗಳಿಂದ ಕೂಡಿ, ರಾವುತನ ಮನಸ್ಸೇ ಕಡಿವಾಣವಾಗಿ, ವಾಯುವೇಗ ಮನೋವೇಗವುಳ್ಳ ವಿಜಾತೀಯವಾದ ಕುದುರೆಯಂ ಕೇಳಿರುವಳು. ಅಂತಿರುವ ಅಶ್ವದ ರೀತಿಮಾತ್ರ ತಿಳಿಯಪಡಲಿಲ್ಲವೆಂದು ನುಡಿಯಲಾಗ ವಿದ್ಯಾಸಾಗರನು, ರಾಜೇಂದ್ರನಂ ಕುರಿತು ಎಲೈ ಪ್ರಭುವೆ! ನೀನು ಅಪ್ಪಣೆಯನ್ನಿತ್ತರೀತಿಯಿಂ ಕೂಡಿರುವ ಅಶ್ವವು ಮನುಷ್ಯಲೋಕದೊಳ್ ಜನಿಸಲರಿಯದು. ದೇವಲೋಕದೊಳ್ ಅಮರಾವತಿಯಲ್ಲಿ ಉಚ್ಚೈಶ್ರವಸ್ಸೆಂಬ ಅಶ್ವರತ್ನವು ನೀನು ಪೇಳಿದ ಲಕ್ಷಣದಿಂದ ಯುಕ್ತವಾಗಿರುವುದೆಂದು ಪುರಾಣಂಗಳಲ್ಲಿ ಪೇಳಿರುವರೆಂದು ನುಡಿಯಲಾ ಮಾತಿಗೆ ಸುಗಂಧರಾಜೇಂದ್ರನು ಆಲೋಚನೆಯಂ ಗೈಯುತ್ತಿರಲು, ಆ ಸಮಯದೊಳ್ ಮಂತ್ರಿಯಾದ ಸುಮತಿಯು ಎದ್ದು ಕೈಮುಗಿದು, ಎಲೈ ಸುಗಂಧಮಹಾರಾಜೇಂದ್ರನೆ! ಯಕ್ಷನಂ ಕರೆದು ವಿಚಾರಿಸಿದೊಡೆ ಪಕ್ಷಂಗಳುಳ್ಳ ಕುದುರೆಯ ಪರಿಯು ತತ್ಕ್ಷಣದಲ್ಲಿಯೇ ತಿಳಿಯುವುದರಲ್ಲಿ ಸಂದೇಹವಿಲ್ಲವೆಂದು ಬಿನ್ನೈಸಲು ಆಕ್ಷಣದಲ್ಲಿಯೇ ಸುಗಂಧಮಹಾರಾಜೇಂದ್ರನು ಆ ಮಾತಂ ಕೇಳಿ ಆನಂದಭರಿತನಾಗಿ ಯಕ್ಷಾಧಿಪತಿಯಾದ ಛಾಯಾಗುಪ್ತನಂ ನೆನೆಯಲು, ಆಕ್ಷಣದಲ್ಲಿಯೇ ಛಾಯಾಗುಪ್ತನು ಬಂದು ರಾಜೇಂದ್ರಂಗೆ ಪ್ರಣಾಮಮಂ ಮಾಡಿ, ಜೀಯ! ನನ್ನನ್ನೆನೆದ ಕಾರ್ಯವೇನು? ಶೀಘ್ರದಿಂದಪ್ಪಣೆಯಂ ಕೊಡಬೇಕೆಂದು ಬಿನ್ನವಿಸಲಾಗ ರಾಜೇಂದ್ರನು ಯಕ್ಷನನ್ನೋಡಿ, ಎಲೈ ಕಾರ್ಯಸಾಧಕನಾದ ಯಕ್ಷನೆ! ಕೇಳು— ಅತಿಶುಭ್ರವಾಗಿ, ಸರ್ವಲಕ್ಷಣಸಂಪನ್ನವಾಗಿ, ವಾಯುವೇಗ ಮನೋವೇಗವುಳ್ಳ, ರಾವುತನ ವಿರಾಟಗಳಿಗೆ ಮನೋನುಸಾರವಾಗಿ ರೆಕ್ಕೆಗಳಿಂದೊಡಗೂಡಿ ವಿಜಾತೀಯವಾಗಿರುವ ಅಶ್ವರತ್ನವು ಯಾವ ಲೋಕದಲ್ಲಿರುವುದೋ, ಅದಂ ತ್ರಿಲೋಕಗಾಮಿಯಾದ ನಿನಗೆ ತಿಳಿದು ಇದ್ದರೆ ಹೇಳೆನಲು, ಆ ಮಾತಿಗೆ ಯಕ್ಷನು ಒಂದು ನಿಮಿಷ ಧ್ಯಾನಿಸಿ, ಎಲೈ ದೇವಿಯ ಕಟಾಕ್ಷಕ್ಕೆ ಪೂರ್ಣಪಾತ್ರನಾದ ಭೂಮೀಂದ್ರನೆ! ಈಗ ಸ್ವಾಮಿಯವರು ಅಪ್ಪಣೆಯನ್ನಿತ್ತಪರಿಯಿಂದೊಪ್ಪಿದ ಅಶ್ವರತ್ನವು ಪೂರ್ವದಲ್ಲಿ ಸ್ವರ್ಗಲೋಕದೊಳ್ ಅಮರಾವತಿಯಲ್ಲಿತ್ತು. ಅದು ಸ್ವಲ್ಪಕಾಲದಿಂದ ಒಂದಾನೊಂದು ಕಾರಣದಿಂದ ಭೂಲೋಕದಲ್ಲಿ ದ್ವೀಪಾಂತರಂಗಳಲ್ಲಿರುವುದು. ಈಗ ದೇವಲೋಕದಲ್ಲಿಲ್ಲವೆಂದು ಯಕ್ಷರು ಪರಸ್ಪರ ಮಾತನಾಡಿಕೊಳ್ಳುತ್ತಿರುವುದಂ ಕೇಳಿರುವೆನೆಂದು ಬಿನ್ನವಿಸಲು, ಆಗ ಸುಗಂಧರಾಜೇಂದ್ರನು ಎಲೈ ಯಕ್ಷನೆ! ಈ ದುರ್ಘಟವಾದ ಕಾರ್ಯವು ನಿನ್ನಿಂದ ನೆರವೇರಬೇಕಲ್ಲದೆ ಮತ್ತೊಬ್ಬರಿಂ ಸಾಧ್ಯವಾಗುವುದಿಲ್ಲವಾದುದರಿಂದ ನೀನು ಸಪ್ತದ್ವೀಪಂಗಳಂ ಪೊಕ್ಕು ಈ ಅಶ್ವರತ್ನವೆಲ್ಲಿರುವುದೋ, ಅದಂ ರಕ್ಷಿಪರಾರೋ ಚೆನ್ನಾಗಿ ಪರಿಶೋಧಿಸಿ ಬರುವವನಾಗೆಂದು ಅಪ್ಪಣೆಯಂ ಕೊಟ್ಟು ಕಳುಹಿಸಿ, ತಾನು ಸರಸಕಥಾಶ್ರವಣವ, ಚತುರಂಗ ಮೊದಲಾದ ಕ್ರೀಡಾವಲೋಕನವಂ ಮಾಡುತ, ಸಾಯಂಕಾಲದೊಳ್ ಸ್ನಾನಾಹ್ನಿಕಗಳಂ ನೆರವೇರಿಸಿ, ಭೋಜನವಂ ಮಾಡಿ, ಸುಖನಿದ್ರೆಯಂ ಗೈದು ಮರುದಿನ ಪ್ರಾತಃಕಾಲದೊಳೆದ್ದು ಮಜ್ಜನಂ ಗೈದು ಆಹ್ನಿಕಗಳಂ ನೆರವೇರಿಸಿ, ಭೋಜನವಂ ಗೈದು ತಾಂಬೂಲವಂ ಸವಿಯುತ, ಸುಮತಿಯ ಕರವಂ ಪಿಡಿದು, ಬಿಡಾರದ ಹಜಾರದೊಳ್ ಶತಪಥವಂ ಗೈಯುತ್ತಿರಲಾಗ ಯಕ್ಷನು ಬಂದು ಕೈಮುಗಿಯಲು, ಸುಗಂಧರಾಜೇಂದ್ರನು ಎಲೈ ಯಕ್ಷನೆ! ನಿನಗೆ ನಿಯಮಿಸಿದ ಕಾರ್ಯವಂ ಕಂಡುಬಂದಿದ್ದಲ್ಲಿ ವಿಶದವಾಗಿ ಪೇಳೆನಲು, ಅದಂ ಕೇಳಿ ಯಕ್ಷನು, ಎಲೈ ಪ್ರಭುವೆ! ಕೇಳು— ಭೂಲೋಕದೊಳ್ ಜಂಬೂದ್ವೀಪದ ವಿಸ್ತಾರವಂ ಪೇಳುವೆನು: ಆದಿಯಲ್ಲಿ ಶ್ರೀಮನ್ನಾರಾಯಣನ ನಾಭಿಕಮಲದೊಳ್ ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನು ಅವತರಿಸಿದನು. ಇವನಿಗೆ ಸ್ವಾಯಂಭುವ ಮನುವು ಮಾನಸಪುತ್ರನಾಗಿ ಜನಿಸಿದನು. ಈ ಸ್ವಾಯಂಭುವಿಗೆ ಪ್ರಿಯವ್ರತರಾಯ, ಉತ್ತಾನಪಾದರಾಯರೆಂಬ ಈರ್ವರು ಪುತ್ರರು ಪುಟ್ಟಿದರು. ಇವರೊಳ್ ಉತ್ತಾನಪಾದರಾಯಂಗೆ ಧ್ರುವರಾಯನೆಂಬ ಪುತ್ರನು ಪುಟ್ಟಿ, ಧ್ರುವಮಂಡಲಾಧಿಪತ್ಯವಂ ಮಾಡುತ್ತಿರುವನು. ಪ್ರಿಯವ್ರತರಾಯಂಗೆ ಆಗ್ನೀಧ್ರ, ಅಗ್ನಿಬಾಹು, ವಪುಷ್ಮಂತ, ದ್ಯುತಿಮಂತ, ಭವ್ಯ, ಸವನ, ಜ್ಯೋತಿಷ್ಮಂತ, ಸತ್ಯ, ಕವಿ, ಮಹಾವೀರರೆಂಬ ಹತ್ತುಮಂದಿ ಪುತ್ರರುಂಟಾದರು. ಇವರೊಳ್ ಕವಿ, ಸತ್ಯ, ಮಹಾವೀರ ಈ ಮೂವರು ವಿರಕ್ತರಾಗಿ ತಪಸ್ಸಂ ಮಾಡಬೇಕೆಂದು ಆಶ್ರಮವನ್ನೈದಿದರು. ಉಳಿದ ಏಳುಮಂದಿ ಪುತ್ರರಿಗೆ ಆ ಪ್ರಿಯವ್ರತರಾಯರು ಸಪ್ತದ್ವೀಪಂಗಳಂ ಹಂಚಿದ ಪರಿ ಹೇಗೆಂದರೆ— ಜ್ಯೇಷ್ಠಪುತ್ರನಾದ ಆಗ್ನೀಧ್ರರಾಯನಿಗೆ ಲಕ್ಷಯೋಜನ ವಿಸ್ತಾರವಾದ ಲವಣಸಮುದ್ರದಿಂ ಪರಿವೃತವಾದ ಜಂಬೂದ್ವೀಪಾಧಿಪತ್ಯವಂ ಕೊಟ್ಟನು. ಎರಡನೆಯ ಮಗನಾದ ಅಗ್ನಿಬಾಹುವಿಗೆ ಎರಡುಲಕ್ಷ ಯೋಜನ ವಿಸ್ತಾರವಾದ ಇಕ್ಷುಸಮುದ್ರದಿಂ ಪರಿವೃತವಾದ ಇದೇ ವಿಸ್ತಾರವುಳ್ಳ ಪ್ಲಕ್ಷದ್ವೀಪವಂ ರಕ್ಷಿಸುವಂತೆ ನಿಯಮಿಸಿದನು. ಮೂರನೆಯ ಮಗನಾದ ವಪುಷ್ಮಂತನಿಗೆ ನಾಲ್ಕು ಲಕ್ಷ ಯೋಜನ ವಿಸ್ತೀರ್ಣವಾದ ಸುರಾಸಮುದ್ರದಿಂ ವೇಷ್ಟಿತವಾದ ಇದೇ ವಿಸ್ತಾರವುಳ್ಳ ಶಾಲ್ಮಲೀ ದ್ವೀಪಾಧಿಪತ್ಯವಂ ಕೊಟ್ಟನು. ನಾಲ್ಕನೆಯ ಮಗನಾದ ಜ್ಯೋತಿಷ್ಮಂತನಿಗೆ ಎಂಟುಲಕ್ಷ ಯೋಜನ ವಿಸ್ತೀರ್ಣವಾದ ಘೃತಸಾಗರದಿಂ ಸುತ್ತುವರಿದ ಇದೇ ವಿಸ್ತಾರವುಳ್ಳ ಕುಶದ್ವೀಪಾಧಿಪತ್ಯವಂ ಕೊಟ್ಟನು. ಐದನೆಯ ಪುತ್ರನಾದ ದ್ಯುತಿಮಂತನಿಗೆ ಹದಿನಾರು ಲಕ್ಷಯೋಜನ ವಿಸ್ತೀರ್ಣವಾದ ದಧಿಸಮುದ್ರದಿಂದಾವೃತವಾದ ಇದೇ ವಿಸ್ತಾರವುಳ್ಳ ಕ್ರೌಂಚದ್ವೀಪಾಧಿಪತ್ಯವನ್ನಿತ್ತನು. ಆರನೆಯ ಮಗನಾದ ಭವ್ಯರಾಯಂಗೆ ಮುವ್ವತ್ತೆರಡು ಲಕ್ಷ ಯೋಜನ ವಿಸ್ತಾರವುಳ್ಳ ಕ್ಷೀರಸಾಗರದಿಂದೊಡಗೂಡಿ ಇದೇ ಪ್ರಮಾಣವುಳ್ಳ ಶಾಕದ್ವೀಪಾಧಿಪತ್ಯವನ್ನಿತ್ತನು. ಏಳನೆಯ ಪುತ್ರನಾದ ಸವನರಾಯನಿಗೆ ಅರವತ್ತುನಾಲ್ಕು ಲಕ್ಷಯೋಜನ ವಿಸ್ತಾರವಾದ ಜಲಾವರ್ಣದಿಂದೊಪ್ಪಿ, ಇದೇ ವಿಸ್ತಾರವಾದ ಪುಷ್ಕರದ್ವೀಪಾಧಿಪತ್ಯವಂ ಕೊಟ್ಟನು. ಈ ಪರಿಯಿಂದ ಹಂಚಿರುವ ದ್ವೀಪಂಗಳೊಳ್ ಶ್ರೇಷ್ಠವಾದ ಜಂಬೂದ್ವೀಪವನ್ನಾಳುವ ಆಗ್ನೀಧ್ರರಾಯನಿಗೆ ಒಂಭತ್ತುಮಂದಿ ಮಕ್ಕಳುದಯಿಸಿದರು. ಇವರಿಗೆ ಈ ಜಂಬೂದ್ವೀಪವನ್ನೇ ಒಂಭತ್ತುಭಾಗವಂ ಮಾಡಿ ಒಂದೊಂದು ಭಾಗವಂ ಒಬ್ಬೊಬ್ಬರಿಗೆ ಆಳುವಂತೆ ನಿಯಮಿಸಿದನು. ಈ ಒಂಭತ್ತುಮಂದಿಯ ಹೆಸರುಗಳನ್ನೇ ಪಡೆದ ಭೂಖಂಡಗಳು ನಾಭಿವರ್ಷ, ಕಿಂಪುರುಷವರ್ಷ, ಹರಿವರ್ಷ, ಇಳಾವೃತವರ್ಷ, ರಮ್ಯವರ್ಷ, ಹಿರಣ್ಮಯವರ್ಷ, ಕುರುವರ್ಷ, ಭದ್ರಾಶ್ವವರ್ಷ, ಕೇತುಮಾಲವರ್ಷವೆಂಬ ಹೆಸರುಗಳಿಂದೊಪ್ಪಿರುವುವು. ಇದರೊಳ್ ಮೊದಲು ಖಂಡವನ್ನಾಳುವ ನಾಭಿರಾಯನಿಗೆ ವೃಷಭರಾಯನುದಯಿಸಿದನು. ಅವನಿಗೆ ಭರತನೆಂಬ ಕುಮಾರನುಂಟಾದನು. ಆ ಭರತನ ಆಧಿಪತ್ಯದದೆಸೆಯಿಂದ ಈ ನಾಭಿಖಂಡವೇ ಭರತಖಂಡವೆನಿಸಿತು. ಈ ಭರತಖಂಡವೇ ಕರ್ಮಭೂಮಿಯೆನಿಸುವುದು.

ಸಶೇಷ.

ಮೈಸೂರು ಗೌರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ಬೆಂಗಳೂರು ತಾ॥ ೧೬ ನೆಯ ಸೆಪ್ಟಂಬರ್ ೧೯೧೧.

ನೋಟೀಸ್.

ಕೋ ಆಪರೇಟೀವ್ ಸೊಸೈಟಿ ಯಾನೆ ಪರಸ್ಪರ ಸಹಾಯ ಸಂಘಗಳ ಪ್ರಥಮ ಸಭೆಯು ಈ ಮಾಹೆ ೨೬ ಮತ್ತು ೨೭ ನೆಯ ತಾರೀಖುಗಳಲ್ಲಿ ಮೈಸೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ನಡೆಯುತ್ತದೆ.

೨. ಸಭೆಯಲ್ಲಿ ಚರ್ಚೆಸಲ್ಪಡಬಹುದಾದ ವಿಷಯಗಳನ್ನು ಇದರ ಕೊನೆಯಲ್ಲಿ ನಮೂದಿಸಿರುತ್ತೆ.

೩. ಸಂಘದಿಂದ ಬರತಕ್ಕ ಪ್ರತಿನಿಧಿಗಳೂ ಮತ್ತು ಸಭೆಗೆ ಕರಿಸಿಕೊಳ್ಳಲ್ಪಟ್ಟ ದಯಮಾಡುವ ಇತರ ದೊಡ್ಡ ಮನುಷ್ಯರುಗಳೂ ಈ ವಿಷಯಗಳ ಪೈಕಿ ಯಾವುದನ್ನಾದರೂ ಕುರಿತು ಇಂಗ್ಲೀಷಿನಲ್ಲಾಗಲಿ ಅಥವಾ ಕನ್ನಡದಲ್ಲಾಗಲೀ ಮಾತನಾಡಬಹುದು. ಕನ್ನಡಭಾಷೆಯಲ್ಲಿ ಮಾತನಾಡುವುದು ಉತ್ತಮ.

೪. ಮಾತನಾಡಬೇಕೆಂದಿರುವ ವಿಷಯ ಅಥವಾ ಓದಬೇಕೆಂದಿರುವ ಉಪನ್ಯಾಸಗಳ ನಕಲುಗಳು ಸಭೆಯ ಸೆಕ್ರೆಟರಿಯವರಿಗೆ ಇದೇ ಮಾಹೆ ೨೪ ನೆಯ ಸಾಯಂಕಾಲದೊಳಗಾಗಿ ತಲಪುವಂತೆ ರವಾನಿಸಲ್ಪಡಬೇಕು.

೫. ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸತಕ್ಕ ವಿಷಯಗಳನ್ನು ಮೀಟಿಂಗಿನ ಕಾಲಕ್ಕೆ ಆರು ಗಂಟೆ ಮುಂಚೆ ಸೆಕ್ರೆಟರಿಯವರಿಗೆ ತಿಳಿಸತಕ್ಕದು.

ವಿಷಯಗಳು:— (೧) ಕೋ ಆಪರೇಟೀವ್ ಸೊಸೈಟಿಗಳ ಪ್ರಯೋಜನ. (೨) ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲೂ, ದೊಡ್ಡ ಗ್ರಾಮಗಳಲ್ಲೂ ಮತ್ತು ಆ ಗ್ರಾಮಗಳ ಸಮೂಹಗಳಲ್ಲೂ ಸೊಸೈಟಿಗಳನ್ನು ಏರ್ಪಾಟುಮಾಡುವುದು. (೩) ಸೆಂಟ್ರಲ್ ಬ್ಯಾಂಕು, ಡಿಸ್ಟ್ರಿಕ್ಟ್ ಬ್ಯಾಂಕುಗಳು ಮತ್ತು ಕೋ ಆಪರೇಟೀವ್ ಯೂನಿಯನ್‌ಗಳು ಇವುಗಳಿಗೆ ಪರಸ್ಪರ ಇರಬೇಕಾದ ಸಂಬಂಧ ಮತ್ತು ಪ್ರಯೋಜನ. (೪) ಇನ್ಸ್‌ಪೆಕ್ಟರುಗಳು, ಆನರೆರಿ ಆರ್ಗನೈಜರುಗಳು ಮತ್ತು ಆನರೆರಿ ಸೂಪರ್‌ವೈಜರುಗಳು ಇವರುಗಳ ಪ್ರಯೋಜನ. (೫) ಪಂಚಾಯಿತರು, ಡೈರೆಕ್ಟರುಗಳು ಮತ್ತು ಇತರ ಅಧಿಕಾರಿಗಳ ಕೆಲಸ. (೬) ಬೈಲಾಗಳ ತರಹೆಗಳು ಮತ್ತು ಅವುಗಳ ಬದಲಾವಣೆಗಳು. (೭) ಲಿಮಿಟೆಡ್ (ಮಿತವಾದ) ಮತ್ತು ಅನ್ ಲಿಮಿಟೆಡ್ (ಮಿತವಿಲ್ಲದ ಜವಾಬ್ದಾರಿ ಕ್ರಮಗಳು— (೮) ಲೆಕ್ಕಪತ್ರಗಳನ್ನು ಇಡುವ ಕ್ರಮ— (ಎ) ಈಗ ಇಟ್ಟಿರುವ ರಿಜಿಸ್ಟರುಗಳ ನಮೂನೆ ಮತ್ತು (ಬಿ) ಅವುಗಳ ತಿದ್ದುಪಾಡಿನ ಅವಶ್ಯಕತೆ. (೯) ಡಿಪಾಜಿಟ್ಟುಗಳನ್ನು ಆಕರ್ಷಿಸತಕ್ಕ ಕ್ರಮ ಮತ್ತೂ ಆ ಬಗ್ಗೆ ರೂಲ್ಸು (೧೦) ಬಂಡವಾಳವನ್ನು ಒದಗಿಸಿಕೊಳ್ಳುವ ಉಪಾಯಗಳು. (೧೧) ರಿಜರ್ವ್ ಫಂಡು—ಅದರ ಪ್ರಯೋಜನ. (೧೨) ಸಾಲಗಳನ್ನು ಕೊಡುವುದು— ಇವುಗಳ ತರಹೆ, ಪರಿಮಿತಿ, ಉದ್ದೇಶ, ವಾಯಿದೆ, ಖಾತರೆ- ಬಡ್ಡಿಯ ದರ ವಗೈರೆ. (೧೩) ನಫೆಯನ್ನು ಷೇರುಗಳಮೇಲೆ ಬಟವಾಡೆ ಮಾಡುವುದು—ಈ ವಿಷಯದಲ್ಲಿ ಪರಿಮಿತಿ ಇರಬೇಕೆ? ಬೇಡವೆ? (೧೪) ಸೊಸೈಟಿಯ ಸೆಕ್ರೆಟರಿಗಳು ಮತ್ತು ಇತರ ಕಮಿಟಿ ಅಧಿಕಾರಸ್ಥರಿಗೆ ಬಹುಮಾನವನ್ನು ಕೊಡುವ ಕ್ರಮ:- ಎಷ್ಟರಮಟ್ಟಿಗೆ ಪ್ರೋತ್ಸಾಹಕಾರ್ಯವಾದುದು. (೧೫) ಸೊಸೈಟಿಗಳ ಪರವಾದ ದಾವೆಗಳು— ಸಿವಿಲ್ ಕೋರ್ಟು ನಡವಳಿಕೆ ಉತ್ತಮವೇ ಅಥವಾ ರೆವಿನ್ಯೂ ನಡವಳಿಕೆ ಉತ್ತಮವೇ— ಅಥವಾ ರಿಜಿಸ್ಟ್ರಾರ್ ಕೋರ್ಟಿನವರೇ ಡಿಕ್ರಿ ಕೊಡುವುದಲ್ಲದೆ ಸೀದ ಅಮಲ್ ಜಾರಿಯೂ ಸಹಾ ನಡೆಯಿಸುವುದು ಉತ್ತಮವೆ? (೧೬) ಮೈಸೂರು ಸೀಮೆಯಲ್ಲಿ ವ್ಯವಸಾಯದ ಬ್ಯಾಂಕುಗಳು ಎತ್ತ ಕೈ ಕೆಟ್ಟು ಹೋದುವು? ಅವುಗಳಿಂದ ಕೋ ಆಪರೇಟೀವ್ ಸೊಸೈಟಿಗಳು ತಿಳಿದುಕೊಳ್ಳಬೇಕಾದ ವಿಷಯಗಳು. (೧೭) ಸ್ಟೋರ್ ಸೊಸೈಟಿಗಳು, ಅವುಗಳ ಸ್ಥಿತಿ, ನ್ಯೂನತೆ ವಗೈರೆ ವಿಷಯಗಳು. (೧೮) ನೇಯಿಗೆ ಸೊಸೈಟಿಗಳು— ಎಷ್ಟರಮಟ್ಟಿಗೆ ಇವುಗಳಿಂದ ಈ ಕೈಗಾರಿಕೆಗೆ ಪ್ರಯೋಜನ ಉಂಟಾಗಿರುತ್ತೆ. (೧೯) ಕಟ್ಟಡದ ಸೊಸೈಟಿಗಳ (Building Societies) ಪ್ರಯೋಜನ. (೨೦) ಕೈಗಾರಿಕೆಯನ್ನು ಅನ್ಯೋನ್ಯ ಸಹಾಯದ ಮೂಲಕ ವೃದ್ಧಿಗೊಳಿಸುವುದು. (ಎ) ಚನ್ನಪಟ್ಟದ ಬಣ್ಣದ ಸಾಮಾನಿನ ಕೈಗಾರಿಕೆ. (ಬಿ) ಸಾಲಿಗ್ರಾಮದ ನೇಯಿಗೆ ಕೈಗಾರಿಕೆ. (ಸಿ) ತಿರುಮಕೂಡ್ಲು ನರಸೀಪುರ, ಚನ್ನಪಟ್ಟಣ, ಮಳವಳ್ಳಿ— ಈ ಸ್ಥಳಗಳ ರೇಷ್ಮೆ ಕೈಗಾರಿಕೆ. (೨೧) ಡಿಸ್ಟ್ರಿಕ್ಟ್ ಕೃಷಿ ಶಿಲ್ಪಾಭಿವರ್ಧಕ ಸಮಾಜಗಳ ಮೂಲಕ ವ್ಯವಸಾಯಕ್ರಮವನ್ನು ವೃದ್ಧಿಗೊಳಿಸುವುದು. (೨೨) ಅನ್ಯೋನ್ಯಸಹಾಯದ ಮೂಲಕ ವ್ಯವಸಾಯ ನಿದರ್ಶನಾಲಯಗಳನ್ನು (Demonstration farms) ಏರ್ಪಾಡು ಮಾಡುವುದು. (೨೩) ಇತರ ವಿಷಯಗಳು.

ಎಂ. ಎ. ನಾರಾಯಣ ಅಯ್ಯಂಗಾರ್,
ಅಫೀಸಿಯೇಟಿಂಗ್ ರಿಜಿಸ್ಟ್ರಾರ್,
ಕೋಆಪರೇಟೀವ್ ಸೊಸೈಟೀಸ್
ಇನ್ ಮೈಸೂರ್.

ಗ್ರಂಥವಿಮರ್ಶೆ.

ಪ್ರಯಾಗ, ವಾರಾಣಸಿ, ಗಯಾ ತೀರ್ಥಕ್ಷೇತ್ರಮಾಹಾತ್ಮ್ಯವು.

ಈ ಗ್ರಂಥವನ್ನು ಮೈಸೂರಲ್ಲಿರುವ ಮ॥ ಕಾಶೀ ಲಕ್ಷ್ಮಣರಾಯರು ಪ್ರಸಿದ್ಧ ತೀರ್ಥಕ್ಷೇತ್ರ ಮಾಹಾತ್ಮ್ಯದಮೇಲೆ ಮಹರ್ಷಿಗಳಿಂದ ಬರೆಯಲ್ಪಟ್ಟಿರುವ ಗ್ರಂಥಗಳಲ್ಲಿಯ ಉಪಯುಕ್ತವಾದ ಭಾಗಗಳನ್ನು ಸಂಗ್ರಹಿಸಿ ಕನ್ನಡದ ತಾತ್ಪರ್ಯದೊಡನೆ ಪ್ರಕಟಿಸಿರುವರು. ಇದರಲ್ಲಿ ಕ್ಷೇತ್ರಮಾಹಾತ್ಮ್ಯವಲ್ಲದೆ ಯಾತ್ರಾರ್ಥಿಗಳು ಕ್ಷೇತ್ರಗಳಿಗೆ ಹೋಗಬೇಕಾದ ಲೋಹಮಾರ್ಗದಲ್ಲಿ ಇಳಿಯಲು ಅನುಕೂಲವಾದ ಸ್ಥಳ ರೈಲು ಛಾರ್ಜು ಮೊದಲಾದ ಉಪಯುಕ್ತವಿಷಯಗಳು ತಕ್ಕಮಟ್ಟಿಗೆ ವಿವರಿಸಲ್ಪಟ್ಟಿವೆಯಾದುದರಿಂದ, ಯಾತ್ರಾರ್ಥಿಗಳಿಗೆ ಈ ಗ್ರಂಥವು ಸಹಾಯಕವಾಗಿರುವುದು. ಇದರ ಬೆಲೆ ಪ್ರತಿಯೊಂದಕ್ಕೆ ೧ ರೂ. ಪುಸ್ತಕಾಪೇಕ್ಷಿಗಳು ಮೈಸೂರು ದೊಡ್ಡಪೇಟೆ ಗೋಳೂರು ಸುಬ್ಬಣ್ಣನವರ ಮನೆಯಲ್ಲಿರುವ ಗ್ರಂಥಕರ್ತರಿಗೆ ಬರೆದು ತರಿಸಿಕೊಳ್ಳಬಹುದು.

ಪದ್ಮಾವತಿ.

ಗ್ರೀಕ್‌ಭಾಷೆಯಲ್ಲಿರುವ ಇಲಿಯಡ್ ಎಂಬ ನಾಟಕವು ಬಂಗಾಳಾದೇಶದಲ್ಲಿ ಪ್ರಸಿದ್ಧ ಕವಿಯಾಗಿದ್ದ ಮಧುಸೂದನದತ್ತನಿಂದ ವಂಗಭಾಷೆಯಲ್ಲಿ ಬರೆಯಲ್ಪಟ್ಟಿರುವುದು. ಇದನ್ನು ಮದರಾಸ್ ಗೌರ್ನಮೆಂಟ್ ಟ್ರಾನ್ಸ್‌ಲೇಟರಾದ ಮ॥ ರಾ॥ ಬೆನಗಲ್ ರಾಮರಾವ್, ಎಂ. ಎ., ಎಲ್‌ಎಲ್.ಬಿ, ಯವರು ಕನ್ನಡದಲ್ಲಿ ಬಹು ಲಲಿತವಾಗಿಯೂ, ಸ್ವಾರಸ್ಯವಾಗಿಯೂ ರಚಿಸಿರುವರು. ಇದರ ಪ್ರತಿಯೊಂದನ್ನು ಗ್ರಂಥಕರ್ತರಿಂದ ನಾವು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುವೆವು. ಮ॥ ಬಿ. ರಾಮರಾಯರು ಮಂಗಳೂರಲ್ಲಿ ಪ್ರಕಟವಾಗುತ್ತಿದ್ದ ಸುವಾಸಿನಿ ಎಂಬ ಅತ್ಯುತ್ತಮವಾದ ಕನ್ನಡ ಮಾಸಿಕಪುಸ್ತಕದ ಸಂಪಾದಕರಲ್ಲೊಬ್ಬರಾದ್ದು ಉತ್ತಮ ಲೇಖಕರೂ, ಕನ್ನಡದ ಭಾಷಾಭಿಮಾನಿಗಳೂ ಎಂದು ಹೆಸರುಗೊಂಡಿರುವರು. ಇತೀಚೆ ವಂಗಭಾಷೆಯಲ್ಲಿ ಪ್ರಸಿದ್ಧವಾಗಿರುವಂತಹ ಕೆಲ ಕಾದಂಬರಿಗಳನ್ನು ಕನ್ನಡದಲ್ಲಿ ಪರಿವರ್ತಿಸಿ ಪ್ರಕಟಿಸಿರುವವರು ಕ್ಲಿಷ್ಟವಾದ ಸಂಸ್ಕೃತಪದಗಳನ್ನುಪಯೋಗಿಸಿ ಆ ಭಾಷೆಯಲ್ಲಿ ತಮಗಿರುವ ಪ್ರೌಢಿಮೆಯನ್ನು ತೋರಿಸಿರುವುದರಿಂದ ಸಂಸ್ಕೃತದಲ್ಲಿ ಪರಿಚಯವುಳ್ಳವರು ಮಾತ್ರ ಆ ಕಾದಂಬರಿಯ ರಸಾಸ್ವಾದವನ್ನು ಮಾಡಬೇಕಾಗಿರುವುದೇ ವಿನಾ ಸಾಮಾನ್ಯರಿಗೆ ಆ ಕೃತಿಗಳು ಉಕ್ಕಿನ ಕಡಲೆಯಂತಿವೆ. ಮ॥ ಬಿ. ರಾಮರಾಯರಾದರೋ ಆ ಪ್ರಕಾರ ಕಠಿನ ಶಬ್ದಗಳನ್ನುಪಯೋಗಿಸದೆ ಸರ್ವಸಾಮಾನ್ಯವಾಗಿರುವ ಅಚ್ಚಗನ್ನಡದ ಶಬ್ದಗಳನ್ನು ಅದಷ್ಟು ಪ್ರಯತ್ನಪಟ್ಟು ಪ್ರಯೋಗಿಸಿರುವುದು ಅವರಿಗೆ ಕರ್ನಾಟಕಭಾಷೆಯಲ್ಲಿರುವ ವಿಶೇಷಾಭಿಮಾನದ ಫಲವಾಗಿರುತ್ತದೆ.

ಇಂದ್ರ, ಕುಬೇರ ಮತ್ತೂ ಮನ್ಮಥ ಇವರುಗಳ ಪತ್ನಿಯರುಗಳಾದ ಶಚಿ, ಮುರಜಿ ಮತ್ತೂ ರತಿ ಈ ಮೂವರುಗಳಲ್ಲಿ ಸುಂದರಿಯಾದಾಕೆಗೆ ನಾರದ ಮುನಿಯು ಮಾನಸಸರೋವರದಿಂದ ತಂದಿರುವ ಸುವರ್ಣಕಮಲವು ದೊರಕುವುದೆಂಬುದರಮೇಲೆ ಸ್ಪರ್ಧೆಯು ಹುಟ್ಟಿ, ಮೂವರು ದೇವತಾಸ್ತ್ರೀಯರೂ ಇಂದ್ರನೀಲರಾಜನೆಂಬುವನ ಬಳಿಗೆ ಹೋಗಿ ತಮ್ಮಲ್ಲಿ ಪರಮಸುಂದರಿಯಾದಾಕೆಗೆ ಆ ಭಂಗಾರದ ಕಮಲವನ್ನು ಕೊಡಬೇಕೆಂದು ಕೇಳಿಕೊಳ್ಳುವರು. ಆ ರಾಜನು ಶಚಿ, ಮುರಜಿ ಮತ್ತೂ ರತಿಯರುಗಳು ಇಂದ್ರ ಕುಬೇರ ಮತ್ತೂ ಮನ್ಮಥನ ಪತ್ನಿಯರುಗಳಾದುದರಿಂದ ಅವರಲ್ಲಿ ಯಾರೊಬ್ಬರಿಗೆ ಕೊಟ್ಟರೂ ಉಳಿದವರ ಆಗ್ರಹಕ್ಕೆ ಗುರಿಯಾಗಬೇಕಾಗುತ್ತೆಂದು ಚಿಂತಿಸಿ ಕಡೆಗೆ ರತಿಗೆ ಕೊಡುವನು. ಇದರಿಂದ ಶಚಿ ಮತ್ತೂ ಮುರಜೆಯರು ಕೋಪಿಸಿಕೊಂಡು ಆ ರಾಜನಮೇಲೆ ಆಗ್ರಹವನ್ನು ಮಾಡುವರು. ರತಿಯಾದರೋ ಆತನಿಗೆ ಕಲ್ಯಾಣವನ್ನು ಮಾಡುತ್ತೇನೆಂದು ಅಭಯವನ್ನು ಕೊಡುವಳು. ಮುರಜೆಯ ಮಗಳು ಪಾರ್ವತಿಯ ಶಾಪದಿಂದ ಭೂಲೋಕದಲ್ಲಿ ಜನಿಸಿ ಲೋಕೈಕಸುಂದರಿಯಾಗಿ ಪದ್ಮಾವತಿಯೆಂಬ ಹೆಸರಿನಿಂದ ರಾಜಿಸುತ್ತಿರುವಳು. ರತಿಯು ಪದ್ಮಾವತಿಯ ಕನಸಿನಲ್ಲಿ ಆ ಇಂದ್ರನೀಲರಾಜನನ್ನೂ, ಆತನ ಕನಸಿನಲ್ಲಿ ಪದ್ಮಾವತಿಯನ್ನೂ ಬರಗೊಡಿಸಿ, ಪರಸ್ಪರ ಪ್ರೀತಿಯನ್ನು ಹುಟ್ಟಿಸಿ ಕಡೆಗೆ ಇಂದ್ರನೀಲರಾಜನಿಗೂ, ಪದ್ಮಾವತಿಗೂ ಸಂಬಂಧವನ್ನು ಬೆಳೆಸುವಳು. ಶಚಿ ಮುರಜೆಯರು ಇಂದ್ರನೀಲರಾಜನು ರತಿಯ ಪಕ್ಷವನ್ನು ವಹಿಸಿದುದಕ್ಕಾಗಿ ಕೋಪಿಸಿಕೊಂಡು ಅವನಿಗೆ ಕೇಡನ್ನು ಮಾಡಯತ್ನಿಸಿ ಕಲಿಪುರುಷನ ಸಹಾಯದಿಂದ ಪದ್ಮಾವತಿಯನ್ನು ಇಂದ್ರನೀಲರಾಜನಿಂದ ಅಗಲಿಸಿ ಉಭಯರಿಗೂ ವಿಯೋಗದುಃಖವನ್ನುಂಟುಮಾಡಿ ನಾನಾಕಷ್ಟವನ್ನು ಕೊಡುವರು. ಕಡೆಗೆ ರತಿಯ ಸಹಾಯದಿಂದ ಅಗಲಿದ್ದ ಆ ರಾಜದಂಪತಿಗಳು ಒದಗಿದ್ದ ಕಷ್ಟದಿಂದ ಪಾರಾಗಿ ಒಟ್ಟುಗೂಡಿ ಸುಖವಾಗಿ ಬಾಳುವರು. ಮುರಜೆಗೆ ಪದ್ಮಾವತಿಯು ತನ್ನ ಮಗಳೆಂದು ಕಡೆಯಲ್ಲಿ ಗೊತ್ತಾಗಿ ತಾನು ಮಾಡಿದ ಅಕೃತ್ಯಕ್ಕೋಸ್ಕರ ವ್ಯಸನಪಡುವಳು. ಈ ಪುಸ್ತಕವು ಡಿಮ್ಮಿ ಅಷ್ಟಪತ್ರದಾಕೃತಿಯಲ್ಲಿ ನುಣುಪಾದ ಕಾಗದದಮೇಲೆ ಅತಿ ಮುದ್ದಾದ ಅಕ್ಷರಗಳಿಂದ ಬಹು ಮನೋರಂಜಕವಾಗಿ ಅಚ್ಚುಮಾಡಲ್ಪಟ್ಟಿದೆ. ಇದರ ಬೆಲೆ ಪ್ರತಿಯೊಂದಕ್ಕೆ ೩ ಆಣೆ. ಈ ಪುಸ್ತಕದ ಯೋಗ್ಯತೆಗೆ ಈ ಬೆಲೆಯು ಹೆಚ್ಚಲ್ಲವು.

ಗತಿಸಿದ ಕೂಚ್‌ಬಿಹಾರ್ ಮಹಾರಾಜರವರು.

ಈ ಮಹಾರಾಜರವರು ಕೆಲಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ॥ ೧೮ ರಲ್ಲಿ ಇಂಗ್ಲೆಂಡಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ೧೮೬೨ ನೆಯ ಇಸವಿ ಅಕ್ಟೋಬರ್ ತಾ॥ ೪ ರಲ್ಲಿ ಜನಿಸಿ, ೧೮೬೩ ರಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು. ಪ್ರಥಮತಃ ಕಾಶಿ ಪಟ್ಟಣದಲ್ಲಿರುವ ಕೋರ್ಟ್ ಆಫ್ ವಾರ್ಡ್ಸ್‌ಗೆ ಸೇರಿದ ಪಾಠಶಾಲೆಯಲ್ಲೂ, ಅನಂತರ ಪಾಟಲೀಪುತ್ರದಲ್ಲಿಗುವ ಬಂಕಿಪುರದ ಪ್ರಾಂತ ವಿದ್ಯಾಲಯದಲ್ಲೂ, ವ್ಯಾಸಂಗಮಾಡಿ ಕಡೆಯಲ್ಲಿ ಅಲ್ಲಿಂದ ಇಂಗ್ಲೆಂಡಿಗೆ ಹೋಗಿ ಅಲ್ಲಿ ಸರ್ ಬೆಂಜಮಿನ್‌ಸಿಂಪ್ಸನ್ ಮತ್ತೂ ನೆಲ್ಲರ್‌ರವರ ಮೇಲ್ವಿಚಾರಣೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಪ್ರಸಿದ್ಧ ಸಮಾಜ ಸುಧಾರಕರಾದ ಕೇಶವ ಚಂದ್ರಸೇನರವರ ಜ್ಯೇಷ್ಠಕುಮಾರಿಯವರನ್ನು ೧೮೭೮ ರಲ್ಲಿ ವಿವಾಹಮಾಡಿಕೊಂಡರು. ೧೮೭೯ ರಲ್ಲಿ ಭರತಖಂಡಕ್ಕೆ ಹಿಂತಿರುಗಿ ಬಂದು ೧೮೮೩ ರಲ್ಲಿ ಪಟ್ಟಾಭಿಷಿಕ್ತರಾದರು. ಇದಾದ ೨ ವರ್ಷಗಳ ಮೇಲೆ ಬ್ರಿಟಿಷ್ ಸೇನೆಯಲ್ಲಿ ಆನರೆರಿ ಮ್ಯಾಜಿಸ್ಟ್ರೇಟರಾಗಿಯೂ, ತರುವಾಯ ಆನರೆರಿ ಕರ್ನಲ್‌ರಾಗಿಯೂ, ಚಕ್ರವರ್ತಿಯವರ ಏಡಿಕಾಂಗರಾಗಿಯೂ ನಿಯಮಿಸಲ್ಪಟ್ಟರು. ಇವರು ೧೮೮೭ ರಲ್ಲಿ ಜೂಬಿಲಿ ಮಹೋತ್ಸವವನ್ನೋಡಲು ಇಂಗ್ಲೆಂಡಿಗೆ ಹೋಗಿದ್ದಾಗ್ಗೆ ಇವರಿಗೆ ಜಿ. ಸಿ. ಐ. ಇ., ಮತ್ತೂ ಇವರ ಪತ್ನಿಯವರಿಗೆ ಸಿ. ಐ., ಎಂಬ ಪ್ರಶಸ್ತಿಗಳು ಲಭ್ಯವಾದುವು. ಇವರು ತಮ್ಮ ಮಾವಂದಿರಾದ ಕೇಶವ ಚಂದ್ರಸೇನರು ಬ್ರಹ್ಮಸಮಾಜದವರಾದುದರಿಂದ ತಮ್ಮ ದೇಶದಲ್ಲಿ ಬ್ರಹ್ಮಸಮಾಜ ಸ್ಥಾಪನೆಯನ್ನು ಮಾಡಿದರು. ಮತ್ತೂ ವಿದ್ಯಾಭಿವೃದ್ಧಿಯಲ್ಲಿ ವಿಶೇಷಾಸಕ್ತರಾಗಿದ್ದು ತಮ್ಮ ಸಂಸ್ಥಾನದಲ್ಲಿ ಒಂದು ಪ್ರೌಢ ವಿದ್ಯಾಲಯವನ್ನು ಸ್ಥಾಪಿಸಿದರು. ರಾಜ್ಯಾಡಳಿತದಲ್ಲಿ ವಿಶೇಷ ಸುಧಾರಣೆಯನ್ನು ಮಾಡಿ ಸಂಸ್ಥಾನದಲ್ಲಿ ೩೦ ವರ್ಷಕ್ಕೊಮ್ಮೆ ಸೆಟ್ಲ್‌ಮೆಂಟ್ ಆಗುವ ಏರ್ಪಾಡನ್ನು ಮಾಡಿದರು. ಇವರು ಮೃಗಯಾ ವಿಹಾರದಲ್ಲಿ ಪೂರ್ಣಾಸಕ್ತರಾಗಿದ್ದು ದೊಡ್ಡ ಬೇಟೆಯಲ್ಲಿ ೩೭ ವರ್ಷದ ಅನುಭವವೆಂಬ ಒಂದು ಗ್ರಂಥವನ್ನು ಬರೆದಿರುವರು. ಈ ಮಹಾರಾಜರು ಭರತಖಂಡದಲ್ಲೂ ಇಂಗ್ಲೆಂಡಿನಲ್ಲೂ ಅನೇಕರ ಪ್ರೀತಿಗೆ ಪಾತ್ರರಾಗಿದ್ದರು. ಇವರ ವಂಶಿಕರೇ ಕಳೆದ ೪೦೦ ವರ್ಷಗಳಿಂದಲೂ ಕೂಚ್ ಬಿಹಾರ್ ಸಂಸ್ಥಾನವನ್ನು ಆಳಿಕೊಂಡು ಬಂದಿರುವರು.

ಹೈದರಾಬಾದಿನಲ್ಲಾದ ಗೊಂದಲವು.

ಹೈದರಾಬಾದಿನಲ್ಲಿ ಪ್ಲೇಗು ಪ್ರಾರಂಭವಾಗಿರುವುದರಿಂದ ವೈದ್ಯರುಗಳೂ ಪೋಲೀಸಿನವರೂ ಪ್ಲೇಗು ತಗಲಿದ ಮನೆಯನ್ನು ಶುದ್ಧಿ ಮಾಡಿ ಆ ಮನೆಯ ಜನರನ್ನು ರೋಗಿಷ್ಠರಿಂದ ಬೇರ್ಪಡಿಸುತ್ತಿರುವರು. ಕಳೆದ ತಾ॥ ೧೩ ರಲ್ಲಿ ಕಾಮಾಟಿ ಪುರವೆಂಬ ಭಾಗದಲ್ಲಿ ಪೋಲೀಸರು ಸೋಂಕು ತಗಲಿದ ಮನೆಯಿಂದ ಜನರನ್ನು ಹೊರಡಿಸುತ್ತಿರುವಾಗ್ಗೆ ಒಬ್ಬ ವೃದ್ಧಯಜಮಾನಿಗೂ ಪ್ಲೇಗು ಶಾಖೆಯ ಕೆಲಸಗಾರರಿಗೂ ವಾಗ್ವಾದವು ನಡೆದು, ಆ ವೃದ್ಧಳು ಒಬ್ಬ ಪೋಲೀಸಿನವನ ಎದೆಯಮೇಲೆ ಗುದ್ದಿ ಅವನನ್ನು ಕೆಳಗೆ ಕೆಡಿವಿಬಿಟ್ಟು ನೈಜಾಂರವರಲ್ಲಿಗೆ ನೆಟ್ಟಗೆ ಹೋಗಿ ದೂರಿಕೊಳ್ಳುತ್ತೇನಾದುದರಿಂದ ಮನೆಯೊಂದಕ್ಕೊಬ್ಬರಂತೆ ಪ್ರತಿಯೊಂದು ಮನೆಯಿಂದಲೂ ಜನರು ತನ್ನ ಜತೆಗೆ ಬರತಕ್ಕದೆಂದು ತಮಟೆಯನ್ನು ಹೊಡೆಯುತ ಕೂಗಿ ಹೇಳಿದಳು. ಆಕೂಡಲೆ ನಂಪಲ್ಲಿ, ಚಾಕನವಾಡಿ, ದೂಳ್ಪೇಟೆ ಮತ್ತೂ ವಾಡಿ ಈ ಭಾಗಗಳಿಂದ ೨-೩ ಸಾವಿರದ ವರೆಗೆ ಜನರು ಬಂದು ಗುಂಪುಕೂಡಿಕೊಂಡು ದೊಣ್ಣೆ, ಒನಿಕೆ ಕತ್ತಿ ಕಠಾರಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಕೋಲಾಹಲಧ್ವನಿಯನ್ನು ಮಾಡುತ ಉತ್ಸವದಿಂದ ನೈಜಾಂರವರ ಅರಮನೆಯ ಹೊರಗಣದ್ವಾರದ ಬಳಿ ಬಂದು ಸೇರಿದರು. ಈ ಜನರು ಅರಮನೆಯೊಳಗೆ ನುಗ್ಗದಹಾಗೆ ಸೈನಿಕರು ಎಲ್ಲ ದ್ವಾರಗಳಲ್ಲೂ ಎಚ್ಚರದಿಂದ ಕಾವಲಿದ್ದರು. ಪೋಲೀಸರು ಈ ಗುಂಪನ್ನು ಚದರಿಸಲು ಎಷ್ಟು ಸಾಹಸಪಟ್ಟಾಗ್ಯೂ ಸಾರ್ಥಕವಾಗಲಿಲ್ಲವು. ನೈಜಾಂರವರು ಬೇಟೆಗೆ ಹೊರಗೆ ಹೋಗಿದ್ದು ಅರಮನೆಗೆ ಬರುವುದರೊಳಗಾಗಿ ಕೊಂಚ ಗೊಂದಲವು ನಡೆಯಿತು. ಒಬ್ಬ ಕೊತ್ವಾಲನು ಕುಳಿತಿದ್ದ ಮೋಟಾರು ಬಂಡಿಯು ಹೋಗಲು ಜನರು, ದಾರಿಯನ್ನು ಬಿಡಲಿಲ್ಲವಾಗಿ ಅವನು ಬಂಡಿಯಿಂದ ಕೆಳಗಿಳಿದು ಎಷ್ಟು ಸಾಹಸಪಟ್ಟಾಗ್ಯೂ ಸಾಧ್ಯವಾಗಲಿಲ್ಲ. ಈ ಕೊತ್ವಾಲನು ತನ್ನನ್ನು ಬಯ್ದ ಒಬ್ಬ ಮನುಷ್ಯನನ್ನು ಹಿಡಿದು ಪೋಲೀಸು ಠಾಣದಲ್ಲಿ ಸೆರೆಯಾಗಿಡಲು, ಜನರು ಠಾಣದೊಳಗೆ ನುಗ್ಗಿ ಅವನನ್ನು ಬಿಡಿಸಿಕೊಂಡು ಬಂದರು. ಅಷ್ಟರಲ್ಲಿ ನೈಜಾಂರವರು ಯಾರಿಗೂ ತಿಳಿಯದಂತೆ ಗುಪ್ತವಾಗಿ ಅರಮನೆಯೊಳಕ್ಕೆ ಬಂದು ಆ ಜನರಲ್ಲಿ ಒಬ್ಬೊಬ್ಬ ಮುಖಂಡರನ್ನು ಬರಮಾಡಿಕೊಂಡು ಅವರು ಹೇಳುವುದನ್ನೆಲ್ಲಾ ಲಾಲಿಸಿ ಎಲ್ಲ ವಿಷಯವನ್ನೂ ಸರಿಪಡಿಸುತ್ತೇವೆಂದು ಭರವಸವನ್ನು ಕೊಟ್ಟುಕಳುಹಿದರು. ಜನರ ಗುಂಪು ಅರಮನೆಯ ಬಳಿ ಬಂದಾಗ್ಗೆ ಅರಮನೆಯೊಳಗಿದ್ದ ನೈಜಾಂರವರ ಪೊಲಿಟಿಕಲ್ ಸೆಕ್ರೆಟರಿಯವರು ಮತ್ತೂ ಪ್ರೈವೇಟ್‌ಸೆಕ್ರೆಟರಿಯವರು ಗೊಂದಲದ ಜನರಿಗೆ ತಕ್ಕ ಸಮಾಧಾನವನ್ನು ಹೇಳದಿದ್ದಲ್ಲಿ ವಿಶೇಷ ಅನರ್ಥವಾಗುತ್ತಿದ್ದಿತು. ನಂಪಲ್ಲಿ ಡಿಸ್ಟ್ರಿಕ್ಟಿನ ಜನರು ಪ್ಲೇಗು ವಿಧಿಯ ನಿರ್ಬಂಧದಿಂದ ತಮ್ಮ ಮನೆಮಾರುಗಳೆಲ್ಲವೂ ಸುಡಲ್ಪಟ್ಟು ಆಪ್ತೇಷ್ಟಜನರು ಬೇರ್ಪಡಿಸಲ್ಪಡುವರು. ಎಂದು ಕೆಲಕಾಲದಿಂದಲೂ ದೂರುತ್ತಿದ್ದರು.

ಕಿರೀಟಧಾರಣ ಮಹೋತ್ಸವ ಸಂಬಂಧವಾಗಿ ಮೈಸೂರ ಸಂಸ್ಥಾನದಲ್ಲಿ ನಡೆಯುವ ಉತ್ಸವ ಸಮಾರಂಭಗಳು.

ಚಕ್ರವರ್ತಿಯವರು ತಾವು ಕಿರೀಟಧಾರಣ ಮಾಡಿದುದನ್ನು ತಮ್ಮ ಭಾರತಪ್ರಜೆಗಳಿಗೆ ತಿಳಿಯಪಡಿಸಲು ೧೯೧೧ ನೆಯ ಡಿಸೆಂಬರ್ ತಾ॥ ೧೨ ರಲ್ಲಿ ದಿಲ್ಲಿಯ ಪಟ್ಟಣದಲ್ಲಿ ಒಡ್ಡೋಲಗವ (ದರ್ಬಾರ)ನ್ನು ನಡೆಯಿಸಬೇಕೆಂಬ ತಮ್ಮ ಸಂಕಲ್ಪವನ್ನು ಪ್ರಕಟಗೊಳಿಸಿರುವರಷ್ಟೆ. ಈ ಅಭೂತಪೂರ್ವವೂ, ಮಂಗಲಕರವೂ ಆದ ಮಹೋತ್ಸವ ಸಮಾರಂಭವು ಮೈಸೂರು ಸಂಸ್ಥಾನದಲ್ಲೆಲ್ಲ ನಡೆಯಿಸಲ್ಪಡಬೇಕೆಂದು ಶ್ರೀಮನ್ಮಹಾರಾಜರವರು,ಅಪೇಕ್ಷಿಸುತ್ತಾರಲ್ಲದೆ, ತಮ್ಮ ಸಂಸ್ಥಾನದ ಎಲ್ಲ ಭಾಗದ ಪ್ರಜೆಗಳೂ ಈ ಉತ್ಸವದಲ್ಲಿ ವಿನೋದಪಡಲು ಮತ್ತೂ ತಮಗಿರುವ ರಾಜಭಕ್ತಿಯನ್ನು ಚಕ್ರವರ್ತಿಯವರಿಗೆ ಸಮರ್ಪಿಸಲು ಒಳ್ಳೆಯ ಸಮಯವಾಗಿರುತ್ತದೆಂದು ತಿಳಿಯುತ್ತಾರಾಗಿ ನಂದಿ ಈ ಕೆಳಗೆ ಕಂಡಪ್ರಕಾರ ಉತ್ಸವಗಳು ನಡೆಸುತಕ್ಕದೆಂದು ಅಪ್ಪಣೆಯನ್ನು ಮಾಡಿರುತ್ತಾರೆ:—

ರಜಾ ದಿವಸವು.

ರಾಜನ ಒಡ್ಡೋಲಗವು (ದರ್ಬಾರು) ನಡೆಯಲು ಗೊತ್ತಾಗಿರುವ ೧೯೧೧ ನೆಯ ಡಿಸೆಂಬರ್ ತಾ॥ ೧೨ ನೆಯ ಮಂಗಳವಾರದ ದಿವಸ ಸಂಸ್ಥಾನದ ಎಲ್ಲ ಸರ್ಕಾರಿಯ ಕಚೇರಿಗಳೂ, ಕೋರ್ಟುಗಳೂ, ಕಾಲೇಜುಗಳೂ, ಸ್ಕೂಲುಗಳೂ ಮುಚ್ಚಲ್ಪಡತಕ್ಕದು.

ಎಲ್ಲ ಡಿಸ್ಟ್ರಿಕ್ಟ್ ಆಫೀಸರುಗಳು ಈ ಶುಭಕರವಾದ ಸಮಾರಂಭವನ್ನು ಪ್ರಜೆಗಳಿಗೂ, ತಂತಮ್ಮ ಡಿಸ್ಟ್ರಿಕ್ಟುಗಳಲ್ಲಿರತಕ್ಕ ಎಲ್ಲ ಮ್ಯುನಿಸಿಪಾಲಿಟಿಗಳಿಗೂ ತಿಳಿಹಿಸಿ, ಈ ಸ್ಮರಣೀಯವಾದ ಸಮಾರಂಭಕ್ಕೆ ಉಚಿತವಾದ ರೀತಿಯಲ್ಲಿ ಜನರು ಉತ್ಸವಗಳನ್ನು ನಡೆಯಿಸಿ ವಿನೋದಪಡಲು ತಕ್ಕೇರ್ಪಾಟನ್ನಿಟ್ಟುಕೊಳ್ಳುವಂತೆ ಮಾಡುವುದು.

ಈ ಅಭೂತಪೂರ್ವವಾದ ಸಮಾರಂಭವು ಪ್ರತಿ ಡಿಸ್ಟ್ರಿಕ್ಟ್ ಮತ್ತೂ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ತಕ್ಕಮಟ್ಟಿಗೆ ವಿಶೇಷವಾಗಿ ನಡೆಯಿಸಲ್ಪಡಬೇಕೆಂಬುದು ಶ್ರೀಮನ್ಮಹಾರಾಜರವರ ಅಭಿಮತವಾಗಿರುತ್ತದೆ.

ದೇವತಾರಾಧನೆ.

ಚಕ್ರವರ್ತಿ ದಂಪತಿಗಳ ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಬಯಸಿ ೧೯೧೧ ನೆಯ ಡಿಸೆಂಬರ್ ತಾ॥ ೧೨ ರ ದಿವಸ ಸಂಸ್ಥಾನದ ಮುಜರಾಯಿ ಶಾಖೆಯ ಮೇಲ್ವಿಚಾರಣೆಗೊಳಪಟ್ಟಿರುವ ಎಲ್ಲ ದೇವಾಲಯ ಮಸೀದಿಗಳಲ್ಲಿ ಈ ಮಹೋತ್ಸವಕ್ಕೆ ತಕ್ಕಂತೆ ಹೆಚ್ಚುಗಟ್ಟಲೆಯ ಪೂಜೆಯೂ ಪ್ರಾರ್ಥನೆಯೂ ನಡೆಯಿಸಲ್ಪಡತಕ್ಕದು. ಡಿಸ್ಟ್ರಿಕ್ಟ್ ಅಧಿಕಾರಿಗಳು ಮುಜರಾಯಿ ಮೇಲ್ವಿಚಾರಣೆಗೊಳಪಡದ ಪೂಜಾಸ್ಥಾನಗಳಲ್ಲಿ ಅವುಗಳ ಮುಖಂಡರ ಸಹಾಯದಿಂದ ಮೇಲ್ಕಂಡಪ್ರಕಾರ ದೇವತಾರಾಧನೆಯೂ, ಪ್ರಾರ್ಥನೆಯೂ ನಡೆಯುವಂತೆ ಮಾಡುವುದು.

ದಾನಧರ್ಮ.

ಎಲ್ಲ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲೂ, ಮ್ಯುನಿಸಿಪಲ್ ಟವನ್ನುಗಳಲ್ಲೂ ಎಲ್ಲ ಜಾತಿಯ ಬಡಬಗ್ಗರಿಗೂ, ಧರ್ಮಶಾಲೆಗಳಲ್ಲಿರುವವರಿಗೂ ಅನ್ನ ಮತ್ತೂ ಬಟ್ಟೆಯು ಕೊಡಲ್ಪಡುವಂತೆಯೂ, ಸರ್ಕಾರಿಯ ಮತ್ತೂ ಸ್ವಂತದ ಪಾಠಶಾಲೆಗಳ ಮಕ್ಕಳುಗಳು ಆಟಪಾಟಗಳಿಂದ ವಿನೋದಪಡುವಂತೆಯೂ ತಕ್ಕೇರ್ಪಾಟುಗಳನ್ನು ಮಾಡತಕ್ಕದು.

ಪ್ರಕಟನೆ.

೧೯೧೧ ನೆಯ ಡಿಸೆಂಬರ್ ತಾ॥ ೧೨ ರ ಮಧ್ಯಾಹ್ನದಲ್ಲಿ ದಿಲ್ಲಿಯ ದರ್ಬಾರಿನಲ್ಲಿ ಓದಲ್ಪಡುವ ಚಕ್ರವರ್ತಿಯವರ ವರದಾನಪ್ರದವಾದ ಪ್ರಕಟನ ಪತ್ರಿಕೆಯು ಡಿಸ್ಟ್ರಿಕ್ಟು ಆಫೀಸರುಗಳಿಗೆ ಸಕಾಲದಲ್ಲಿ ಕಳುಹಲ್ಪಡುವುದು. ಅದು ಪ್ರತಿಯೊಂದು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರಿನಲ್ಲಿ ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಮತ್ತೂ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಕನ್ನಡದಲ್ಲೂ ಆ ಕಾಲದಲ್ಲಿ ಸ್ಥಳದಲ್ಲಿರತಕ್ಕ ಸೀನಿಯರ್ ಸಿವಿಲ್ ಅಧಿಕಾರಿಗಳಿಂದ ಓದಲ್ಪಡತಕ್ಕದು.

ದರ್ಬಾರುಗಳು.

ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಕ್ರಮವಾಗಿ ಒಂದು ದರ್ಬಾರನ್ನು ಮಾಡಿ ಅದರಲ್ಲಿ ರಾಜಪ್ರಕಟನೆಯು ಅಧಿಕಾರಿಗಳಿಂದೋದಲ್ಪಡತಕ್ಕದು. ಮತ್ತೂ ರಾಜಧಾನಿಯಲ್ಲಿ ೧೦೧ ಗುಂಡುಗಳು ಹಾರಿಸಲ್ಪಡತಕ್ಕದು.

ದೀಪೋತ್ಸವ.

ಸಾಧ್ಯವಾದ ಮಟ್ಟಿಗೂ ಎಲ್ಲ ಸರ್ಕಾರಿಯ ಕಟ್ಟಡಗಳ ಮೇಲೂ ದೀಪಗಳನ್ನು ಹೊತ್ತಿಸಿ ಮದ್ದು ಸುಡಲ್ಪಡತಕ್ಕದು.

ಹೆಚ್ಚುಗಟ್ಟಲೆಯ ವೆಚ್ಚಕ್ಕಾಗಿ ಹಣವನ್ನು ಕೊಡುವುದು (ಗ್ರ್ಯಾಂಟು.)

ಮೇಲುದಾಹರಿಸಿದ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಮ್ಯುನಿಸಿಪಲ್ ಫಂಡುಗಳಿಂದ ಕೊಡಲ್ಪಡುವುದಲ್ಲದೆ ಮುಂದೆ ಹೇಳುವ ಪ್ರಕಾರ ಸರ್ಕಾರದಿಂದ ಕೊಡಲ್ಪಡುವುದು:— ಬೆಂಗಳೂರ ಡಿಸ್ಟ್ರಿಕ್ಟಿಗೆ ೪೦೦೦ ರೂ., ಮೈಸೂರ ಡಿ॥ ಗೆ ೨೫೦ ರೂ. ಉಳಿದ ಪ್ರತಿಯೊಂದು ಡಿ॥ ಗೂ ೫೦೦ ರೂ. ಹಿಂದೆ ೧೯೦೩ ರಲ್ಲಿ ನಡೆದ ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರು ಮ್ಯುನಿಸಿಪಾಲಿಟಿಗಳಿಂದ ಕೊಡಲ್ಪಟ್ಟಿದ್ದುದು:— ಬೆಂಗಳೂರ ಪಟ್ಟಣಕ್ಕೆ ೨೦೦೦ ರೂ., ರಾಜಧಾನಿಗೆ ೧೫೦೦ ರೂ., ತುಮಕೂರು, ಹಾಸನ, ಚಿಕ್ಕಮಗಳೂರು ಮತ್ತೂ ಚಿತ್ರಕಲ್ ದುರ್ಗ ಇವು ಪ್ರತಿಯೊಂದಕ್ಕೂ ೫೦೦ ರೂ., ಕೋಲಾರ ಮತ್ತೂ ಶಿವಮೊಗ್ಗ ಇವು ಒಂದೊಂದಕ್ಕೆ ೨೦೦ ರೂ.

ಪ್ರತಿ ಸಣ್ಣ ಮ್ಯುನಿಸಿಪಾಲಿಟಿಯಿಂದ ೪೦ ರೂ. ಗೆ ಹೆಚ್ಚಿಲ್ಲದಂತೆ ಕೊಡಬಹುದು. ಮೇಲೆ ಹೇಳಿದ ಮೊಬಲಗಲ್ಲದೆ ಚಕ್ರವರ್ತಿ ದಂಪತಿಗಳ ಆಯುರಾರೋಗ್ಯವನ್ನು ಬಯಸಿ ಹೊ

ಡಲ್ಪಡುವ ದೇವತಾರ್ಚನೆಗಾಗಿ ಬೆಂಗಳೂರು ಮತ್ತೂ ಮೈಸೂರು ಡಿಸ್ಟ್ರಿಕ್ಟುಗಳಿಗೆ ೧೦೦-೧೦೦ ರೂ., ಉಳಿದ ಪ್ರತಿಯೊಂದು ಡಿ|| ಗೂ ೫೦ ರೂ. ಕೊಡಲ್ಪಡುವುದು.

ಸರಕಾರಿಯ ವರದಿಯು.

ಸರ್ಕಾರದವರ ತಿಳಿವಳಿಕೆಗಾಗಿ ಡೆ|| ಕಮಿಷನರುಗಳು ಉತ್ಸವಗಳು ನಡೆದ ಕೂಡಲೆ ಸಾಧ್ಯವಾದಷ್ಟು ಶೀಘ್ರವಾಗಿ ಮತ್ತೂ ೧೯೧೨ ನೆಯ ಜನವರಿ ತಾ|| ೩ ಕ್ಕೆ ಮೀರದಂತೆ ಈ ಮುಂದೆ ಹೇಳುವ ವಿಚಾರಗಳಲ್ಲಿ ಪೂರ್ಣವಾದ ವರದಿಯನ್ನು ಮಾಡತಕ್ಕದು :— (೧) ಪ್ರತಿಯೊಂದು ಊರಿನಲ್ಲೂ ನಡೆದ ಉತ್ಸವಗಳು, ವಿನೋದಗಳು ಮೊದಲಾದುವುಗಳ ವಿವರಣೆಯು; (೨) ಪ್ರತಿಯೊಂದು ಸ್ಥಳದಲ್ಲೇರ್ಪಟ್ಟ ಕಮಿಟಿಯ ಮೆಂಬರುಗಳ ಹೆಸರುಗಳು; (೩) ಅನ್ನಬಟ್ಟೆಯನ್ನು ಪಡೆದ ಜನರ ಸಂಖ್ಯೆ; (೪) ಹೆಡ್ ಕ್ವಾರ್ಟರುಗಳಲ್ಲಿಯ ದರ್ಬಾರುಗಳಿಗೆ ಬಂದಿದ್ದಂತಹ ಮತ್ತೂ ಇತರ ವಿನೋದೋತ್ಸವಗಳಲ್ಲಿ ಭಾಗಿಗಳಾಗಿದ್ದಂತಹ ಜನರ ಸಂಖ್ಯೆಯು; (೫) ಪಾಠಶಾಲೆಯ ಮಕ್ಕಳುಗಳಿಗಾಗೇರ್ಪಡಿಸಲ್ಪಟ್ಟ ವಿನೋದೋತ್ಸವಗಳ ವಿವರಣೆಯು ಮತ್ತೂ ನೆರೆದಿದ್ದ ಮಕ್ಕಳ ಸಂಖ್ಯೆಯು; (೬) ಪ್ರಾರ್ಥನೆಯನ್ನು ಮಾಡಿದ ದೇವಾಲಯಗಳ ಸಂಖ್ಯೆಯು; (೭) ಮತ್ತೂ ಇತರ ಸ್ವಾರಸ್ಯವಾದ ಸಂಗತಿಗಳು.

ಮೈಸೂರ್ ಸ್ಟಾರ್

೧೯೧೧ ನೆಯ ಇಸವಿ ಸೆಪ್ಟಂಬರ್ ತಾ|| ೨೫ ನೇ ಸೋಮವಾರ

ಅಬೋರರೆಂಬ ಕಾಡುಜನರಮೇಲೆ ಬ್ರಿಟಿಷರು ದಂಡಯಾತ್ರೆಯನ್ನು ಹೊರಡುವುದು.

ಟಿಬೆಟ್ಟು ಮತ್ತೂ ಅಸ್ಸಾಂ ಪ್ರಾಂತಗಳ ಎಲ್ಲೆಕಟ್ಟುಗಳ ಮಧ್ಯೆ ಪರ್ವತಪ್ರದೇಶದಲ್ಲಿ ಅಬೋರರು ಎಂಬ ಕಾಡುಜನರು ವಾಸಮಾಡಿಕೊಂಡಿರುವರು. ಇವರು ಬ್ರಿಟಿಷ್‌ದೇಶದ ಪ್ರಜೆಗಳಿಗೆ ತೊಂದರೆಯನ್ನು ಕೊಡುತ್ತಿರುವುದರಿಂದಲೂ ಆ ದೇಶದ ವಿದ್ಯಮಾನವನ್ನು ತಿಳಿಯಲು ಹೋಗಿದ್ದ ನೋಯಿಲ್ ವಿಲಿಯಂಸನ್ನರನ್ನು ಮತ್ತೂ ಅವರ ಪರಿವಾರದವರನ್ನು ಕಳೆದ ಏಪ್ರಿಲ್ ತಿಂಗಳಲ್ಲಿ ಮೋಸದಿಂದ ಕೊಂದುಹಾಕಿಬಿಟ್ಟುದುದರಿಂದಲೂ ಬ್ರಿಟಿಷ್ ಸರ್ಕಾರದವರು ಅವರನ್ನು ದಂಡಿಸುವುದಕ್ಕಾಗಿ ಮೇಜರ್ ಜನರಲ್ ಬೋವರ್‌ರವರ ಆಧಿಪತ್ಯದಲ್ಲಿ ೨೦೦೦ ಸೇನೆಯನ್ನು ಸಕಲಸನ್ನಾಹದಿಂದ ಕಳುಹಲೇರ್ಪಡಿಸಿರುವರು. ಈ ಸೇನೆಯವರು ಬರುವ ಅಕ್ಟೋಬರ್ ತಿಂಗಳಲ್ಲಿ ಪ್ರಯಾಣಮಾಡುವರು. ಈ ಅಬೋರರು ಏನನ್ನೂ ತಿಳಿಯದ ಪಶುಪ್ರಾಣಿಗಳಲ್ಲ. ಇವರಲ್ಲಿ ಬುದ್ಧಿವಂತರೂ ಸಮರ್ಥರೂ ಆದವರು ಮುಖಂಡರಾಗಿದ್ದುಕೊಂಡು ದೇಶಪರಿಪಾಲನೆಯನ್ನು ಮಾಡುವರು. ಈ ಮುಖಂಡರು ಆಗಾಗ್ಗೆ ಗ್ರಾಮದ ಚಾವಡಿಯ ಮನೆಯಲ್ಲಿ ಕೂಟಕೂಡಿ ಜನರ ತಪ್ಪುತಾಕುಗಳನ್ನು ವಿಚಾರಿಸಿ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸುವರು. ಆದರೆ ದಾಸ (ಗುಲಾಮ) ರು ಮಾತ್ರ ಸಾಮಾನ್ಯವಾದ ಅಪರಾಧವನ್ನು ಮಾಡಿದಾಗ್ಯೂ ಮರಣದಂಡನೆಯನ್ನು ವಿಧಿಸಲ್ಪಡುವರು. ಈ ಚಾವಡಿಯ ಮನೆಯಲ್ಲಿ ಹುಡುಗರೂ, ಯುವಕರೂ ರಾತ್ರಿಯ ವೇಳೆಯಲ್ಲಿ ಮಲಗಿಕೊಂಡು ಹೊರಗಣ ಜನರೂ, ಕಾಡುಮೃಗಗಳೂ ಪ್ರವೇಶಿಸದಂತೆ ಕಾಯುವರು. ಮತ್ತೂ ಇದೇ ಚಾವಡಿಯಲ್ಲಿ ವೃದ್ಧರಾದವರೂ, ಅಂಗವಿಕಲರೂ ವಾಸಮಾಡಿಕೊಂಡಿರುವರು. ಈ ಜನರಿಗೆ ಇತರರು ಅನ್ನಾಹಾರಾದಿಗಳನ್ನು ಕೊಟ್ಟು ಕಾಪಾಡುತ್ತಿರುವರು. ಅಬೋರರಿಗೆ ಪಿಶಾಚಗಳಲ್ಲಿ ಬಹು ಭಕ್ತಿಯಿರುವುದು. ಏನಾದರೊಂದು ವ್ಯಾಧಿಯಾಗಲಿ, ಮತ್ತಾವ ಕಷ್ಟವಾಗಲಿ ಪ್ರಾಪ್ತವಾದಲ್ಲಿ ಅದರ ನಿವಾರಣೆಗಾಗಿ ಪಿಶಾಚಗಳಿಗೆ ಅನ್ನಶಾಂತಿಯನ್ನು ಮಾಡಿ ಆ ಪ್ರಸಾದವನ್ನು ಚಿಕ್ಕವಯಸ್ಸಿನವರು ತಿನ್ನದೆ ವೃದ್ಧರಾದವರಿಗೂ, ಅಂಗವಿಹೀನರಿಗೂ ಕೊಡುವರು.

ಈ ಜನರು ವಾಸಿಸುವ ಮನೆಗಳು ಭೂಮಟ್ಟದಿಂದ ೪-೫ ಅಡಿ ಎತ್ತರಕ್ಕೆ ಕಂಭಗಳನ್ನು ನಿಲ್ಲಿಸಿ ಅವುಗಳ ಮೇಲೆ ಬೊಂಬು ಮತ್ತೂ ಮರಗಳಿಂದ ಕಟ್ಟಲ್ಪಟ್ಟು ಒಣಗಿದ ಹುಲ್ಲು ಅಥವಾ ದಪ್ಪನಾದ ಒಣಗಿದ ಎಲೆಗಳಿಂದ ಮೇಲೆಹೊದ್ದಿಸಲ್ಪಡುವುವು. ಪ್ರತಿಯೊಂದು ಮನೆಯು ೫೦ ಅಡಿಯುದ್ದವೂ, ೨೦ ಅಡಿಯಗಲವೂ ಇದ್ದು ಕಾಡುಮೃಗಗಳ ತಲೆಯ ಬುರುಡೆಗಳಿಂದ ಅಲಂಕರಿಸಲ್ಪಟ್ಟಿರುವುವು. ಈ ಮನೆಗಳ ಕೆಳಗಡೆ ಕುರಿ, ಕೋಳಿ ಮತ್ತೂ ಹಂದಿಗಳ ವಾಸಕ್ಕೆ ಸ್ಥಳ ಮಾಡಲ್ಪಟ್ಟಿರುವುದು. ಪ್ರತಿಯೊಂದು ಗ್ರಾಮದಲ್ಲೂ ಟೊಳ್ಳಾದ ಬೊಂಬುಗಳ ಮೂಲಕ ಒಳ್ಳೆಯ ಕುಡಿಯುವ ನೀರು ಭಾವಿಗಳಿಗೆ ತರಲ್ಪಟ್ಟಿರುವುದು. ಈ ಜನರು ಕೊಳಕು ಬಟ್ಟೆಯನ್ನು ಧರಿಸುವುದರಿಂದ ಚಳಿಯಾಗುವುದಿಲ್ಲವೆಂದು ತಿಳಿದು ಯಾವಾಗಲೂ ಬಟ್ಟೆಯನ್ನು ತೊಳೆಯುವುದೇ ಇಲ್ಲವು. ಅದುಕಾರಣ ಈ ಜನರಲ್ಲಿ ಚರ್ಮರೋಗವು ಸಾಮಾನ್ಯವಾಗಿರುವುದು.

ಇವರ ಬೇಸಾಯ ಕ್ರಮವು ಪುರಾತನ ಪದ್ಧತಿಯನ್ನನುಸರಿಸಿರುವುದು. ಅಲ್ಲಿಯ ಭೂಮಿಯು ಬಹು ಉತ್ತಮವಾಗಿರುವುದರಿಂದ ವಿಶೇಷ ಬೆಳೆಯಾಗುವುದು. ಈ ಅಬೋರ ಜನರು ತಮಗೆ ಬೇಕಾದ ಪದಾರ್ಥಗಳನ್ನು ಚಳಿಗಾಲದಲ್ಲಿ ಬೈಲುಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಮಾರಿಬಿಡುವರು. ಮೆಕ್ಕೆಜೋಳ, ಹೊಗೆಸೊಪ್ಪು, ಅಫೀಮು, ಹತ್ತಿ, ರಂಗಿನ ಬೀಜ ಮೊದಲಾದ ಪದಾರ್ಥಗಳು ಬೆಳೆಯಲ್ಪಡುವುವು. ಇವರು ತಿಬೆಟ್ಟಿನಲ್ಲಾದ ಬಟ್ಟೆಯಿಂದ ಮಾಡಲ್ಪಟ್ಟ ಒಂದು ಅಂಗಿಯನ್ನು ಧರಿಸುವರು. ಈ ಪ್ರದೇಶದ ಮಧ್ಯಭಾಗದಲ್ಲಿರುವ ಜನರು ಮಾತ್ರ ಮೈಮೇಲೆ ಬಟ್ಟೆಯನ್ನು ಧರಿಸದೆ ಹುಲ್ಲಿನ ಚಾಪೆಯನ್ನು ಬೆನ್ನಿಗೆ ಕಟ್ಟಿಕೊಂಡು ಕೊರಳಿಗೂ, ಕಿವಿಗೂ ಒಂದು ವಿಧವಾದ ಆಭರಣವನ್ನು ಧರಿಸಿಕೊಳ್ಳುವರು. ಒಂದೊಂದು ಗ್ರಾಮದವರು ಒಂದೊಂದು ವಿಧವಾದ ಉಡುಪನ್ನು ಧರಿಸುವರು. ಯುದ್ಧಭಟರು ಒಂದು ತುಂಡಂಗಿಯನ್ನು ಧರಿಸಿಕೊಂಡು ನಡುವಿಗೆ ಪಟ್ಟಿಯನ್ನು ಕಟ್ಟಿ ಅದರಲ್ಲಿ ಚೂರಿಯನ್ನಿಟ್ಟುಕೊಳ್ಳುವರು. ಮತ್ತೂ ಬೆತ್ತದಿಂದ ಮಾಡಿದ ಟೋಪಿಗೆಯನ್ನು ಹಂದಿಯ ಕೋರೆದವಡೆ ಹಲ್ಲುಗಳು, ರಂಗಿನ ಬಟ್ಟೆಯ ಚೂರುಗಳು ಕರಡಿ ಮತ್ತೂ ಚಿರತೆಗಳ ಚರ್ಮದ ತುಂಡುಗಳು ಮೊದಲಾದುವುಗಳಿಂದಲಂಕರಿಸುವರು. ಇವರು ಉದ್ದವಾದ ಕತ್ತಿಯನ್ನು ಸೊಂಟದಿಂದ ಇಳಿಬಿಟ್ಟುಕೊಳ್ಳುವುದಲ್ಲದೆ, ಬಾಣವನ್ನು ಮೈಗಡ್ಡಲಾಗಿ ಕಟ್ಟಿಕೊಂಡು ಕೈಯಲೊಂದು ಉದ್ದವಾದ ಭರ್ಜಿಯನ್ನು ಹಿಡಿದುಕೊಳ್ಳುವರು. ಗುಡ್ಡಗಳಲ್ಲಿ ವಿಶೇಷವಾಗಿ ಬೆಳೆಯುವ ವಿಷದ ಮೂಲಿಕೆಗಳಿಂದ ಬಾಣಗಳಿಗೆ ವಿಷವನ್ನು ಸವರಿ ಇಟ್ಟುಕೊಳ್ಳುವರು. ಇವರು ಬಹು ಚೆನ್ನಾಗಿ ಗುರಿಕಟ್ಟಿ ಬಾಣವನ್ನು ೧೦೦ ಗಜದ ವರೆಗೆ ಹೊಡೆಯಬಲ್ಲರು. ಇವರು ಅಶಿಕ್ಷಿತರಾದ ಕಾಕಪೋಕ ಜನರಾಗಿಲ್ಲವು. ಇವರಲ್ಲಿ ಈಗ ೩೦,೦೦೦ ವರೆಗೆ ಯುದ್ಧಭಟರಿರುತ್ತಾರೆ. ಪ್ರತಿಯೊಂದು ಗ್ರಾಮದ ಮುಖಂಡನ ಕೈಕೆಳಗೆ ಒಂದು ಸೇನೆಯ ಗುಂಪಿರುತ್ತದೆ. ಈ ಸೇನೆಗಳ ಮೇಲ್ವಿಚಾರಣೆಗಾಗಿಯೂ, ಯುದ್ಧಕಾಲದಲ್ಲಿ ತಕ್ಕೇರ್ಪಾಟನ್ನು ಮಾಡುವುದಕ್ಕಾಗಿಯೂ ಒಬ್ಬ ಮಂತ್ರಿಯಿರುತ್ತಾನೆ. ಪ್ರತಿಯೊಬ್ಬ ಅಬೋರ ಹುಡುಗನು ಸಣ್ಣವಯಸ್ಸಿನಿಂದಲೂ ಬಾಣಪ್ರಯೋಗವನ್ನೂ, ಯುದ್ಧಮಾಡುವ ಕ್ರಮವನ್ನೂ ಅಭ್ಯಾಸಮಾಡುವನು. ಅದುಕಾರಣ ಈ ಜನರು ಬೇಟೆಯಲ್ಲೂ, ಗುರಿಹಿಡಿಯುವುದರಲ್ಲೂ, ಕಾದಾಡುವುದರಲ್ಲೂ ಬಹು ಪರಿಶ್ರಮಪೂರ್ಣರಾಗಿರುತ್ತಾರೆ. ಇವರು ಎಂತಹ ಕಡಿದಾದ ಪರ್ವತಪ್ರದೇಶಗಳಲ್ಲೂ ಭಾರವಾದ ಹೊರೆಯನ್ನು ಹೆಗಲಿನಮೇಲೆ ಹೊತ್ತುಕೊಂಡು ಹತ್ತಿಳಿಯುವರು. ಮತ್ತೂ ಬಹು ದಟ್ಟವಾದ ಕಾಡುಗಳಲ್ಲಿ ಬೆಕ್ಕುಗಳ ಮತ್ತೂ ಚಿರತೆಗಳಹಾಗೆ ನುಗ್ಗುವರು. ಈ ಜನರು ತಮಗೂ, ಇತರರಿಗೂ ಯುದ್ಧಪ್ರಾಪ್ತವಾದಾಗ್ಗೆ ಶತ್ರುಗಳು ತಮ್ಮ ಪ್ರದೇಶಕ್ಕೆ ನುಗ್ಗಿ ಬಾರದಂತೆ ಮಾರ್ಗಗಳಲ್ಲಿ ಹರಿತವಾದ ಮೊನೆಯುಳ್ಳ ಬಿದಿರನ್ನು ಬಹು ಚಮತ್ಕಾರದಿಂದ ನಾಟಿರುವುದಲ್ಲದೆ ಮಾರ್ಗಗಳ ಮೇಲೆ ಬಾಗಿಬಂದಿರುವ ಗುಡ್ಡಗಳ ಮೇಲಿಂದ ಶತ್ರುಗಳ ಮೇಲೆ ಬಂಡೆಗಳನ್ನುರುಳಿಸಲು ಏರ್ಪಡಿಸಿಕೊಳ್ಳುವರು.

ಈ ಅಬೋರರು ಬ್ರಿಟಿಷ್‌ರಾಜ್ಯದ ಎಲ್ಲೆಕಟ್ಟುಗಳಲ್ಲಿ ವಾಸಮಾಡುವ ಮಿರಿಸ್ ಎಂಬ ಒಂದು ಜಾತಿಯ ಜನರನ್ನು ತಮ್ಮ ದಾಸ (ಗುಲಾಮ) ರನ್ನಾಗಿ ಭಾವಿಸಿಕೊಂಡು ಅವರಿಂದ ಕಪ್ಪವನ್ನು ತೆಗೆದುಕೊಳ್ಳುತ್ತಿರುವರು. ಈ ಮಿರಿಸ್ ಜನರು ಬ್ರಿಟಿಷರಿಗೂ ಕಪ್ಪವನ್ನು ಕೊಡುತ್ತಿರುವುದರಿಂದ ಅಬೋರರ ಅಧೀನದಿಂದ ತಮ್ಮನ್ನು ಬಿಡಿಸಿಕೊಡಬೇಕೆಂದು ಬ್ರಿಟಿಷರನ್ನು ಪ್ರಾರ್ಥಿಸಿಕೊಳ್ಳುತ್ತಿರುವರು. ಇವರು ಅಬೋರರಿಗೂ, ಬೈಲುಪ್ರದೇಶದ ಜನರಿಗೂ ಆಹಾರಪದಾರ್ಥಗಳನ್ನು ಬೆಲೆಗೆ ತಂದು ಕೊಡುತ್ತಿರುವರು. ಈ ಬೋರಜನರ ಮೂಲವನ್ನು ಕಂಡುಹಿಡಿಯುವುದು ಕಷ್ಟವಾಗಿದೆ. ಅಬೋರ ಎಂದರೆ ಸ್ವತಂತ್ರರು ಎಂದು ಅಸ್ಸಾಮಿನವರು ಕರೆಯುತ್ತಾರೆ. ಆ ಜನರೇ ಪದಂ ಎಂದರೆ ಗೋಚರವಿಲ್ಲದ ಕಾಡುಜನರು ಎಂದು ಕರೆದುಕೊಳ್ಳುವರು. ಇವರದೇ ಒಂದು ಪ್ರತ್ಯೇಕವಾದ ಭಾಷೆ ಯಿರುವುದು. ಮಿರಿಸ್ ಮತ್ತೂ ಅಬೋರರ ಬರವಣಿಗೆಯೊಂದಾಗಿದ್ದರೂ ಮಾತು ಮಾತ್ರ ಬೇರೆಯಾಗಿರುವುದು.

ಈ ಅಬೋರಜನರು ಯುದ್ಧಮಾಡಬಲ್ಲರಲ್ಲದೆ, ಶತ್ರುಗಳ ಕಣ್ಣಿಗೆ ಕಾಣಿಸಿಕೊಳ್ಳದೆ ಪೊದೆಗಳಲ್ಲಿ ಅವಿತುಕೊಂಡಿದ್ದು, ಆಕಸ್ಮಿಕವಾಗಿ ಅವರಮೇಲೆ ಬಿದ್ದು ಕೊಲ್ಲುವರು, ಅಥವಾ ಶತ್ರುಗಳು ಬಲಿಷ್ಠರಾಗಿದ್ದರೆ ಅವರ ಕೈಗೆ ಸಿಕ್ಕದಹಾಗೆ ತಪ್ಪಿಸಿಕೊಳ್ಳುವರು. ಇವರು ವಾಸಿಸುವ ಸ್ಥಳಗಳಿಗೆ ಹೋಗುವುದು ಕಷ್ಟತರವಾಗಿರುವುದು. ಈ ಕಾರಣಗಳಿಂದ ಅವರನ್ನು ನಿಗ್ರಹಿಸುವುದು ಸುಲಭಸಾಧ್ಯವಲ್ಲವಾದ ಪ್ರಯುಕ್ತ ಇಷ್ಟೊಂದು ದೊಡ್ಡ ಪ್ರಯತ್ನವನ್ನು ಮಾಡಬೇಕಾಗಿ ಬಂದಿತೆಂದು ತೋರುತ್ತದೆ. ಅಲ್ಲಿಗೆ ಹೊರಡುವ ಸೇನೆಯವರ ಸಮಾಚಾರಗಳನ್ನು ತಿಳಿದುಕೊಳ್ಳಲು ಕಾಬು ಎಂಬಲ್ಲಿ ಒಂದು ಅಂಚೆಯ ಮನೆಯು ಸಿದ್ಧಗೊಳಿಸಲ್ಪಟ್ಟಿರುವುದು. ಮತ್ತೂ ಮುಂಚೆ ಪಾಸಿಘಟ್ಟದಲ್ಲಿ ಒಂದು ಏರ್ಪಡಿಸಲ್ಪಡತಕ್ಕದಾಗಿದೆ. ಈ ಸೇನೆಯು ಹೋಗಲು ಮಾರ್ಗಗಳನ್ನು ಮಾಡುವುದಕ್ಕಾಗಿ ಜನರು ಆಗಲೇ ಹೊರಟಿರುವರು. ಅಬೋರರಿರುವ ಪರ್ವತಪ್ರದೇಶದಲ್ಲಿ ಚಳಿಯು ವಿಪರೀತವಾಗಿರುತ್ತದೆಯಲ್ಲದೆ ದಾರಿಯಲ್ಲಿ ಅತ್ಯಂತ ಕಷ್ಟಪಡಬೇಕಾಗಿರುತ್ತದೆ. ಮತ್ತೂ ಅವರು ಯಾರಿಗೂ ಕಾಣಿಸಿಕೊಳ್ಳದೆ ಪೊದೆಯಲ್ಲಿ ಅವಿತುಕೊಂಡಿದ್ದು ಶತ್ರುಗಳ ಮೇಲೆ ಬಿದ್ದು ಪ್ರಹರಿಸುವರೆಂಬ ಸುದ್ದಿಯನ್ನು ಕಲಕತ್ತಾದಲ್ಲಿರುವ ಸೈನಿಕರು ಕೇಳಿ ಹೆದರಿ ಖಂಡಿತವಾಗಿ ಹೊರಡುವುದಿಲ್ಲವೆಂದು ಮುಷ್ಕರ ಮಾಡಿದುದಲ್ಲದೆ, ಅಲ್ಲಿಗೆ ಹೋಗುವುದಕ್ಕೆ ಬದಲಾಗಿ ಆತ್ಮಹತ್ಯವನ್ನು ಮಾಡಿಕೊಳ್ಳುತ್ತೇವೆಂದು ಹೇಳಿದುದರಮೇಲೆ ಈ ತೊಂದರೆಗಳಿಗೆಲ್ಲ ಹೆದರದ ಉತ್ತರದೇಶದ ಸೈನಿಕರು ಬರಮಾಡಲ್ಪಟ್ಟಿರುವರು. ಸೈನಿಕರ ಊಟಉಪಚಾರಾದಿಗಳಿಗೆ ಅಡಿಗೆಯವರೂ, ಸೇವಕರೂ, ಆಹಾರಪದಾರ್ಥಗಳೂ ಸಿದ್ಧಗೊಳಿಸಲ್ಪಟ್ಟಿರುವುವು. ಆ ದೇಶದಲ್ಲಿ ಯಾವಯಾವ ಸಸ್ಯಾದಿಗಳು, ಮೃಗಪಕ್ಷಿಗಳು, ಖನಿಜಪದಾರ್ಥಗಳು, ನದೀನದಗಳು, ಸರೋವರಗಳು ಜಲಪ್ರಪಾತಗಳು ಮತ್ತೂ ಎಂತೆಂತಹ ಜನರು ದೊರೆಯುವರೆಂದು ಕಂಡುಹಿಡಿಯಲು ಆಯಾ ಶಾಸ್ತ್ರಜ್ಞರು ಸೇನೆಯವರ ಕೂಡ ಹೊರಡುವರು

ರಾಜಧಾನಿಯಲ್ಲಿ ದಶರಾತ್ರಿಯ ಮಹೋತ್ಸವವು.

ಕಳೆದ ತಾ|| ೨೩ ನೆಯ ಶನಿವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮಂಗಳಸ್ನಾನವನ್ನು ಮಾಡಿ ದೇವತಾರ್ಚನೆಯನ್ನು ತೀರಿಸಿಕೊಂಡು ದಿವ್ಯಾಲಂಕಾರಗಳಿಂದಲೂ, ಅಮೋಘವಾದ ನವರತ್ನಾಭರಣಗಳಿಂದಲೂ ಅಲಂಕೃತರಾಗಿ, ದಿವ್ಯವಸ್ತ್ರಾಭರಣಭೂಷಿತರಾದ ಶ್ರೀಮದ್ಯುವರಾಜಕಂಠೀರವ ನರಸರಾಜಒಡೆಯರವರನ್ನು ಹಿಂದೆಬಿಟ್ಟುಕೊಂಡು ೭|| ಗಂಟೆಗೆ ಸಜ್ಜಿಗೆ ದಯಮಾಡಿಸಿದರು. ಆಗ ಸಭೆಯಲ್ಲಿ ನೆರೆದಿದ್ದ ದಿವಾನರೇ ಮೊದಲಾದ ಸರ್ಕಾರಿಯಧಿಕಾರಿಗಳು, ರಾಜಬಂಧುಗಳು ವಕೀಲರುಗಳು ವರ್ತಕರು ಮೊದಲಾದವರು ಎದ್ದು ಮರ್ಯಾದಿಸಿದರು. ಮಹಾಸ್ವಾಮಿಯವರು ಅಲಂಕೃತವಾದ ಪೀಠದ ಮೇಲೆ ಮಂಡಿಸಿ ಸ್ವಸ್ತಿವಾಚನ ನವಗ್ರಹಮಖ ಮೊದಲಾದುವುಗಳನ್ನು ತೀರಿಸಿಕೊಂಡು ಸರ್ದಾರ್ ಗೋಪಾಲರಾಜಅರಸಿನವರ ಕರಾವಲಂಬನದಿಂದ ಸಿಂಹಾಸನದ ಬಳಿ ಚಿತ್ತೈಸಿ ಸಿಂಹಾಸನವನ್ನು ಪೂಜೆ ಮಾಡಿ ಮೂರಾವೃತ್ತಿ ಪ್ರದಕ್ಷಿಣೆ ಬಂದು ಕನ್ಯಾಲಗ್ನದಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು. ಯುವರಾಜರು ಸಿಂಹಾಸನದ ಬಲಗಡೆಯಲ್ಲೇರ್ಪಡಿಸಲ್ಪಟ್ಟಿದ್ದ ಪೀಠದ ಮೇಲೆ ಮಂಡಿಸಿದರು. ಅಷ್ಟು ಹೊತ್ತಿಗೆ ಎಂಟುಕಾಲು ಗಂಟೆಯಾಗಿದ್ದಿತು. ಸೈನಿಕರು ಕೋಲಾಹಲವನ್ನು ಮಾಡಿದರು. ವಾದ್ಯಗಳು ಭೋರ್ಗರೆದುವು. ಮತ್ತೂ ೨೧ ಗುಂಡುಗಳು ಹಾರಿಸಲ್ಪಟ್ಟುವು. ಅಲಂಕೃತವಾದ ಪಟ್ಟದ ಆನೆಕುದುರೆಗಳು ಸಕಲ ಮರ್ಯಾದೆಗಳೊಡನೆ ಆನೆಯ ಬಾಗಿಲಿಂದ ದೊಡ್ಡಕೆರೆಯ ಬಳಿಗೆ ಹೊರಟುವು. ಮಠ ದೇವಾಲಯಗಳಿಂದ ಬಂದಿದ್ದ ಫಲಮಂತ್ರಾಕ್ಷತೆಗಳು ಮಹಾರಾಜರಿಗೊಪ್ಪಿಸಲ್ಪಟ್ಟನಂತರ ಸಭಿಕರ ನಜರು ಮುಜುರೆಗಳಾದುವು. ಕಾಲ್ಬಲದವರು ಮೂರುವೇಳೆ ತುಪಾಕಿಗಳನ್ನು ಹಾರಿಸಿದ ಮೇಲೆ ಆನೆಗಳೂ, ಕುದುರೆಗಳೂ ಸೈನಿಕರೂ ಕ್ರಮಪ್ರಕಾರ ಬಂದು ಸಾಲುಸಾಲಾಗಿ ನಿಂತು ಮರ್ಯಾದೆಯನ್ನು ಮಾಡಿದರು. ಇಂಗ್ಲೀಷ್, ಮತ್ತೂ ಕರ್ನಾಟಕ ಬ್ಯಾಂಡುಗಳೂ, ತಂಜಾವೂರಿನವರ ಓಲಗವೂ, ಇಟಾಲಿಯರ್ಬ್ಯಾಗ್‌ಪೈಪ್ ಎಂಬ ಪಂಚವಾದ್ಯವೂ ಕ್ರಮಪ್ರಕಾರ ಆಗುತ್ತಿದ್ದುವು. ಅಷ್ಟು ಹೊತ್ತಿಗೆ ಕೆರೆಯಬಳಿಗೆ ಹೋಗಿದ್ದ ಪಟ್ಟದಾನೆಕುದುರೆಗಳು ಪೂಜೆಗೊಂಡು ಹಿಂತಿರುಗಿ ಬಂದುವು. ಶ್ರೀಮನ್ಮಹಾರಾಜರವರಿಗೂ, ಯುವರಾಜರಿಗೂ ಅಗ್ರಮರ್ಯಾದೆಯ ಹಾರತಾಂಬೂಲಗಳು ನಡೆದಮೇಲೆ, ದಿವಾನರಿಗೂ ಅಳಿಯಂದಿರಿಗೂ ಕೌನ್ಸಿಲರಿಗೂ ಇತರ ದೊಡ್ಡ ಅಧಿಕಾರಿಗಳಿಗೂ ಹಾರತಾಂಬೂಲಗಳು ಕೊಡಲ್ಪಟ್ಟು ಸಭಿಕರಿಗೆಲ್ಲ ಕೊಡಲ್ಪಟ್ಟುವು. ಕಡೆಯಲ್ಲಿ ಸಭಿಕರು ಮುಜರೆಯನ್ನು ಮಾಡಿ ತೆರಳಿದ ಮೇಲೆ ಮುಂಗಡೆ ತೆರೆಗಳೆಳೆಯಲ್ಪಟ್ಟುವು. ಆಗ ರಾಣಿವಾಸದವರು ಸಜ್ಜಿಗೆ ಬಂದು ಮಹಾರಾಜರಿಗೆ ಮುಜರೆಯನ್ನು ಮಾಡಿದರು. ಪುನಃ ಆ ಸಾಯಂಕಾಲ ೭|| ಗಂಟೆಗೆ ಮಹಾಸ್ವಾಮಿಯವರು ಸಿಂಹಾಸನಾರೋಹಣವನ್ನು ಮಾಡಿದರು. ಸಭಿಕರ ಮುಜರೆಯಾಯಿತು. ಅರಮನೆಯ ಮುಂಗಡೆ ಕಬ್ಬಿಣದಿಂದ ೫-೬ ಅಡಿ ಎತ್ತರದಲ್ಲಿ ನೂತನವಾಗಿ ನಿರ್ಮಿಸಿರುವ ಜಗತಿಯ ಮೇಲೆ ಕೆಮ್ಮಣ್ಣು ಹಾಸಲ್ಪಟ್ಟು, ಕುಸ್ತಿಗಳೂ ಕತ್ತಿ ಬೊಣ್ಣೆಗಳ ಪಟಾವರ್ಸೆಗಳೂ ಆದುವು. ಬೆಳಿಗ್ಗೆ ಕೆರೆಯ ಬಳಿಗೆ ಹೋಗಿದ್ದ ಆನೆಕುದುರೆಗಳು ಹಿಂತಿರುಗಿ ಅರಮನೆಯನ್ನು ಸೇರಿದುವು. ಸೈನಿಕರ ಮತ್ತು ಪೋಲೀಸಧಿಕಾರಿಗಳ ನಜರು ನಡೆಯಿತು. ಅನಂತರ ಚಿತ್ರವಿಚಿತ್ರವಾದ ಮದ್ದು ಸುಡಲ್ಪಟ್ಟುವು. ಅಲ್ಲಿಗೆ ೮|| ಗಂಟೆಯಾಗಲು ಸಭಿಕರಿಗೆ ಹಾರ ತಾಂಬೂಲಗಳು ಕೊಡಲ್ಪಟ್ಟು ಸಭಿಕರು ಮುಜರೆಯನ್ನು ಮಾಡಿ

ತೆರಳಿದರು. ಈ ಪ್ರಕಾರ ನಿನ್ನೆಯೂ ನಡೆದುದಲ್ಲದೆ ಬರುವ ಅಕ್ಟೋಬರ್ ತಾ|| ೧ ರ ವರೆಗೂ ಪ್ರತಿದಿನ ಬೆಳಿಗ್ಗೆ ೮ ಗಂಟೆಗೆ ಆನೆಕುದುರೆಗಳು ಕೆರೆಯ ಬಳಿಗೆ ಹೋಗುವುವು. ಮತ್ತೂ ರಾತ್ರಿ ದರ್ಬಾರು ನಡೆಯುವುದು. ತಾ|| ೨ ನೆಯ ಸೋಮವಾರ ಬೆಳಿಗ್ಗೆ ೯ ಗಂಟೆಗೆ ಆನೆ ಕುದುರೆ ಆಯುಧಗಳು ಕೆರೆಯ ಬಳಿಗೆ ಬಿಜಮಾಡಿಸಿ ಪೂಜೆಗೊಳ್ಳುವುವು. ಸಾಯಂಕಾಲ ೬|| ಗಂಟೆಗೆ ಇಂಗ್ಲೀಷ್ ದರ್ಬಾರಾಗುವುದು. ಕುಸ್ತಿಗಾಗೇರ್ಪಡಿಸಲ್ಪಟ್ಟಿರುವ ಜಗತಿಯು ಎರಡು ಭಾಗಗಳಾಗಿ ಮಾಡಲ್ಪಟ್ಟು ಪುನಃ ಸೇರಿಸಲ್ಪಡುವಂತಿದೆ. ಅನೆಕುದುರೆಗಳು ಕೆರೆಗೆ ಹೋಗಿ ಬರುವಾಗ್ಗೆ ಜಗತಿಯ ಎರಡು ಪಾರ್ಶ್ವದಲ್ಲೂ ಒಂದೊಂದು ಆನೆಯು ನಿಂತುಕೊಂಡು ಹಿಡಿದೆಳೆದು ಬೇರೆ ಮಾಡಿ ಮತ್ತೆ ಕೂಡಿಸುವುವು. ಈ ಜಗತಿಯ ಮೇಲ್ಗಡೆ ೩—೪ ಪಂಕ್ತಿ ವಿದ್ಯುಲ್ಲತೆಯ ದೀಪಗಳು ಹೊತ್ತಿಸಲ್ಪಡುವುದರಿಂದ ಅತಿರಮಣೀಯವಾಗಿರುವುದು. ಸಭಾಂಗಣದಲ್ಲೂ, ಹೊರಗೂ ವಿದ್ಯುಲ್ಲತೆಯ ದೀಪಗಳ ಮಯವಾಗಿವೆ. ಅರಮನೆಯಿದಿರಭಾಗದಲ್ಲಿ ನಗಾರಿ ನವಪತ್ತಾಗುವ ಸ್ಥಳದಲ್ಲಿ ಕೈ|| ಶ್ರೀ ಚಾಮರಾಜೇಂದ ಒಡೆಯರವರ ಭಾವಚಿತ್ರವೂ, ಅದರ ಬಲಪಾರ್ಶ್ವದಲ್ಲಿ ಈಗಣ ಮಹಾರಾಜರ ಮತ್ತೂ ಎಡಪಾರ್ಶ್ವದಲ್ಲಿ ಶ್ರೀಮದ್ಯುವರಾಜರ ಭಾವಚಿತ್ರಗಳೂ ಇಡಲ್ಪಟ್ಟು ಅವುಗಳ ಹಿಂಭಾಗಗಳಲ್ಲಿ ದೀಪಗಳು ಹೊತ್ತಿಸಲ್ಪಡುವುದರಿಂದ ನೋಟಕರಿಗೆ ಬಹು ರಮಣೀಯವಾಗಿ ಕಾಣುತ್ತವೆ.

ರಾಜಧಾನಿಯಲ್ಲಿ ನಡೆಯುವ ಮಹಾಸಭೆಗಳು.

ಬರುವ ಅಕ್ಟೋಬರ್ ತಾ|| ೭ ರಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲದೆ ಈ ತಾ|| ೨೬ ಮತ್ತೂ ೨೭ ರಲ್ಲಿ ಪರಸ್ಪರ ಸಹಾಯಕ ಸಂಘಗಳ ಮೊದಲನೆಯ ಮಹಾಸಭೆಯು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದು. ಇದರ ಸಂಬಂಧವಾದ ಪ್ರಕಟನ ಪತ್ರಿಕೆಯು ಮತ್ತೊಂದು ಭಾಗದಲ್ಲಿ ಕೊಡಲ್ಪಟ್ಟಿದೆ. ಈ ಸಭೆಯ ಆರಂಭೋತ್ಸವವು ಶ್ರೀಮದ್ಯುವರಾಜರವರಿಂದ ನಡೆಸಲ್ಪಡುವುದಾಗಿ ಕೇಳುತ್ತೇವೆ. ಈ ಸಭೆಗೆ ಬರಲು ಸಂಸ್ಥಾನದಲ್ಲಿರತಕ್ಕ ಸಂಘಗಳ ಪ್ರತಿನಿಧಿಗಳಿಗಲ್ಲದೆ, ಇತರ ದೊಡ್ಡ ಮನುಷ್ಯರುಗಳಿಗೂ ನಿಮಂತ್ರಣವು ಕೊಡಲ್ಪಟ್ಟಿದೆ. ಸಭೆಯಲ್ಲಿ ಚರ್ಚಿಸಿ ನಿರ್ಧಾರಗಳನ್ನು ಮಾಡಲು ಗೊತ್ತುಮಾಡಿರುವ ವಿಷಯಗಳು ಉಪಯುಕ್ತವಾಗಿ ಕಂಡುಬರುತ್ತವೆ ಆದರೆ ಸಭೆಯಲ್ಲಾಗುವ ನಿರ್ಧಾರಗಳು ಎಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ತರಲ್ಪಡುತ್ತವೆಂಬುದು ಮಾತ್ರ ನಿರೀಕ್ಷಿಸಲ್ಪಡತಕ್ಕದಾಗಿದೆ. ಬೇಸಾಯ, ಕೈಗಾರಿಕೆ ಮತ್ತೂ ವ್ಯಾಪಾರದಿಂದ ಜೀವಿಸುವ ಜನರ ಸಹಾಯಾರ್ಥವಾಗೇರ್ಪಡಿಸಲ್ಪಟ್ಟಿರುವ ಈ ಸಂಘಗಳು ಮೇಲೆ ಹೇಳಿದ ಜನರಿಗೆ ಇನ್ನೂ ಹೆಚ್ಚು ಉಪಯುಕ್ತವಾಗಿರಲು ಉಪಾಯವನ್ನು ಕಂಡುಹಿಡಿಯುವುದಕ್ಕಾಗಿ ರಿಜಿಸ್ಟ್ರಾರವರು ಈ ಮಹಾಸಭೆಯನ್ನು ಕೂಡಿಸಲು ಪ್ರಯತ್ನಿಸಿದುದು ಸ್ತುತ್ಯವಾದುದು. ಈ ಸಭೆಯುದ್ದೇಶವು ನೆರವೇರಿ ರೆಜಿಸ್ಟ್ರಾರರ ಶ್ರಮವು ಸಾರ್ಥಕವಾಗಲೆಂದು ಕೋರುವೆವು. ಇದೇ ತಾ|| ೩೦ ರಲ್ಲಿ ಈ ದೇಶದ ಸಂಪದಭಿವೃದ್ಧಿಯನ್ನು ಕೋರುವ ಮಹಾಸಭೆಯು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಕೂಡುವುದು. ಈ ಸಭೆಯಲ್ಲಿ ಅದರ ಮೆಂಬರುಗಳ ವಿನಾ ಇತರರ ಪ್ರವೇಶಕ್ಕೆ ವಕಾಶವಿಲ್ಲವು. ಮತ್ತೂ ಅಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳೂ ಬಹಿರಂಗಮಾಡಲ್ಪಟ್ಟಿಲ್ಲವು. ಈ ಸಭೆಯವರು ೧೯೧೩ ರಲ್ಲಿ ೫ ಲಕ್ಷ ರೂ. ಗಳ ವ್ಯಯದಿಂದ ಒಂದು ದೊಡ್ಡ ವಸ್ತುಪ್ರದರ್ಶನವನ್ನು ನಡೆಸಿ ಅದಕ್ಕೆ ಪ್ರಪಂಚದ ಎಲ್ಲಭಾಗದಿಂದಲೂ ಅಪೂರ್ವವಾದ ಪದಾರ್ಥಗಳು ಬರುವಂತೆ ಮಾಡುವ ಆಲೋಚನೆಯನ್ನು ನಡೆಯಿಸುವವರಾಗಿರುವರೆಂದು ಒಂದು ಪತ್ರಿಕೆಯು ತಿಳಿಸುತ್ತದೆ. ರಾಜಧಾನಿಯಲ್ಲಿ ಇಷ್ಟೊಂದು ಸಭೆಗಳು ನಡೆಯುವುದರಿಂದ ಅನೇಕ ಜನರು ಪ್ರತಿನಿಧಿಗಳಾಗಿ ಬರಬಹುದೆಂದು ತೋರುತ್ತದೆ.

ಒಳದೇಶದವೃತ್ತಾಂತ.

ಅ|| ಕಮಿಷನರ್ ಮ|| ಮೃತ್ಯುಂಜಯ ಅಯ್ಯರ್‌ರವರು ತುಮಕೂರ ಡಿ|| ಟ್ರಜರಿ ಛಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದವಾರ ತಿರುಮಕೂಡ್ಲು ನರಸೀಪುರದಿಂದ ಕೊಳ್ಳೇಗಾಲದವರೆಗೂ ಬಹು ದೊಡ್ಡಮಳೆಯಾಗಿ ಕೆರೆ ಕುಂಟೆಗಳಿಗೆ ನೀರು ಬಂದಿರುವುದಾಗಿ ಕೇಳುತ್ತೇವೆ.

ಕಳೆದ ತಾ|| ೨೧ ರಲ್ಲಿ ಬೆಂಗಳೂರಲ್ಲಿರುವ ಅಲ್ಸೂರು ಪೋಲೀಸು ಠಾಣದಲ್ಲಿಟ್ಟಿದ್ದ ಹಣದ ಪೆಟ್ಟಿಗೆಯನ್ನು ಯಾರೋ ಒಡೆದು ಅದರೊಳಗಿದ್ದ ೫೫೦ ರೂ. ಬೆಲೆಯ ಅಡ್ಡಿಕೆಯನ್ನು ಅಪಹರಿಸಿಕೊಂಡು ಹೋದರು.

ಮುನಸೀಫರುಗಳಾದ ಮ|| ಡಿ. ಕೆ. ರಾಮರಾಯರು ನಂಜನಗೂಡಿನಿಂದ ಕೋಲಾರದ ಚಿನ್ನದ ಗಣಿಗೂ, ಮ|| ಎ. ಜಿ. ಲಕ್ಷ್ಮೀನರಸಿಂಹಯ್ಯಂಗಾರರು ಗಣಿಯಿಂದ ಚಿಕ್ಕಮಗಳೂರಿಗೂ, ಮ|| ಟಿ. ಕೃಷ್ಣಯ್ಯಂಗಾರರು ಚಿಕ್ಕಮಗಳೂರಿಂದ ನಂಜನಗೂಡಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಪೂರ್ವ ನಲ್ಲಪ್ಪನ ತೋಟವಿದ್ದ ಸ್ಥಳದ ಸಮೀಪದಲ್ಲಿ ಒಬ್ಬ ವೈಶ್ಯನು ಪ್ಲೇಗಿಗಾಗಿ ಮನೆಯನ್ನು ಬಿಟ್ಟು ಹೋಗಿರಲು, ಕಳೆದವಾರ ಯಾರೋ ಕಳ್ಳರು ಮನೆಗೆ ನುಗ್ಗಿ ೨೦೦ ರೂ. ವರೆಗೆ ಬೆಲೆಬಾಳುವ ಬಟ್ಟೆಗಳನ್ನು ಅಪಹರಿಸಿಕೊಂಡು ಹೋಗಿರುವರು. ಮತ್ತೂ ಅದೇ ದಿವಸ ಇನ್ನೆರಡುಕಡೆ ಕಳ್ಳತನವು ನಡೆದಿರುವುದಂತೆ.

ಕಳೆದ ತಾ|| ೨೦ ರ ಬೆಳಿಗ್ಗೆ ಶ್ರೀಮನ್ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಿಯವರು ಕೆಬ್ಬೆಕಟ್ಟೆ ಬಂಗಲೆಯಿಂದ ಬರುತ್ತಿರುವಾಗ್ಗೆ ಮುಂದುಗಡೆ ಹೋಗುತ್ತಿದ್ದ ಅಂಗರಕ್ಷಕ ಸ್ವಾರ (ಬಾಡಿಗಾರ್ಡು) ನೊಬ್ಬನು ತಾನು ಕುಳಿತಿದ್ದ ಕುದುರೆಯಮೇಲಿಂದ ಹೇಗೋ ಕೆಳಗೆ ಬಿದ್ದು ತುಂಬಾ ಪೆಟ್ಟನ್ನು ತಿಂದು ಪ್ರಾಣಾಪಾಯಸ್ಥಿತಿಯಲ್ಲಿದ್ದನೆಂದು ಕೇಳುತ್ತೇವೆ.

ತುಮಕೂರ ಡಿ|| ಪೋಲೀಸು ಸೂಪರಿಂಟೆಂಡೆಂಟರಾದ ಮ|| ಎಸ್. ನಾರಾಯಣರಾಯರು ಶಿವಮೊಗ್ಗ ಡಿ|| ಸಾಗರ ಸಬ್ ಡಿವಿಜನ್ ಅ|| ಕಮಿಷನರಾಗಿಯೂ, ಪೋಲೀಸು ಶಾಖೆಯಲ್ಲಿ ಪ್ರಬೇಷನರಿ ಅ|| ಕಮಿಷನರಾಗಿರುವ ಮ|| ಎಸ್. ಅಬ್ದುಲ್ ವಾಜಿದ್‌ರವರು ಅನಿತ್ಯವಾಗಿ ತುಮಕೂರ ಡಿ|| ಪೋಲೀಸು ಸೂಪರಿಂಟೆಂಡೆಂಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ನಡೆಯುವ ಬೇಸಾಯ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವು ಈ ತಾ|| ೨೫ ಕ್ಕೆ ಆರಂಭವಾಗಬೇಕಾಗಿದ್ದುದು ಕಾರಣಾಂತರದಿಂದ ತಪ್ಪಿ ಈ ತಾ|| ೩೦ ಕ್ಕೆ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಡುವುದು. ಈ ವೇಳೆ ಯಂತ್ರಸಾಮಗ್ರಿಗಳೂ, ಕೈಗಾರಿಕೆಯ ಪದಾರ್ಥಗಳೂ ಬಹು ವಿಶೇಷವಾಗಿ ಬಂದಿರುತ್ತವೆ. ಇವುಗಳಲ್ಲಿ ಮೈಸೂರ ಸೀಮೆಯ ಹೊರಗಣಿಂದಬಂದುವುಗಳೇ ಹೆಚ್ಚಾಗಿರುವುವು.

ಶ್ರೀಮನ್ಮಹಾರಾಜರವರ ನಾಟಕಸಂಘದವರು ಈಗ್ಗೆ ೨ ವಾರಗಳ ಹಿಂದೆ ಒಂದು ನಾಟಕವನ್ನಾಡಿ ಅದರಿಂದ ಬಂದುತ್ಪನ್ನವನ್ನು ಕಾವೇರೀನದಿಯ ಪ್ರವಾಹದಿಂದ ವಿಪನ್ನರಾದವರ ಸಹಾಯಾರ್ಥವಾಗಿ ಏರ್ಪಟ್ಟಿರುವ ಫಂಡಿಗೆ ಕೊಟ್ಟಿರುವುದಲ್ಲದೆ, ಈ ದಶರಾಮಹೋತ್ಸವದಲ್ಲಾಡುವ ನಾಟಕಗಳಲ್ಲಿ ಒಂದು ರಾತ್ರಿಯುತ್ಪನ್ನವನ್ನು ಫಂಡಿಗೆ ಪುನಃ ಕೊಡುವವರಾಗಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಚಿತ್ರಕಲ್‌ದುರ್ಗ, ಚಿಕ್ಕಮಗಳೂರು, ಬೇಲೂರು ಈ ಪ್ರಾಂತಗಳಲ್ಲಿ ನಾಟಕಗಳನ್ನಭಿನಯಿಸಿ ಒಳ್ಳೆಯ ಹೆಸರನ್ನೂ, ಮರ್ಯಾದೆಯನ್ನೂ, ದ್ರವ್ಯವನ್ನೂ ಸಂಪಾದಿಸಿಕೊಂಡು ಬಂದು ಈಗ ಬೆಂಗಳೂರಲ್ಲಿ ನಾಟಕಗಳನ್ನಾಡುತ್ತಿರುವ ರಾಜಧಾನಿಯ ರತ್ನಾವಳಿ ನಾಟಕಸಂಘದವರು ಇಷ್ಟರಲ್ಲೇ ರಾಜಧಾನಿಗೆ ಬಂದು ಈ ದಸರಾಮಹೋತ್ಸವದಲ್ಲಿ ಕೆಲನಾಟಕಗಳನ್ನು ಅಭಿನಯಿಸಿ ಅನಂತರ ಮಂಗಳೂರ ಪ್ರಾಂತ ಹೊರಡತಕ್ಕವರಾಗಿರುವರೆಂದು ತಿಳಿಯುತ್ತೇವೆ.

ಶ್ರೀಮನ್ಮಹಾರಾಜರವರಿಗೂ ಅವರ ಪರಿವಾರಕ್ಕೂ ದಿಲ್ಲಿಯಲ್ಲೇರ್ಪಡಿಸಲ್ಪಡುತ್ತಿರುವ ಬಿಡಾರದಲ್ಲಿ ಆರೋಗ್ಯದೇರ್ಪಾಟನ್ನು ಮಾಡಲು ಮೈಸೂರ ಡಿ|| ಮೆಡಿಕಲ್‌ಆಫೀಸರಾದ ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರು ಕಳೆದ ತಾ|| ೨೩ ರಲ್ಲಿ ದಿಲ್ಲಿಗೆ ಪ್ರಯಾಣ ಮಾಡಿದರು. ಇವರು ದರ್ಬಾರೆಲ್ಲವೂ ಮುಗಿಯುವವರೆಗೂ ದಿಲ್ಲಿಯಲ್ಲೇ ಇದ್ದು ಅನಂತರ ಬರುವವರಾಗಿರುವರು. ಇವರ ಸ್ಥಾನದಲ್ಲಿ ಡಾ|| ಕುಪ್ಪಸ್ವಾಮಿ ಮೊದಲಿಯಾರರು ಡಿ|| ಮೆಡಿಕಲ್‌ಆಫೀಸರಾಗಿ ನಿಯಮಿಸಲ್ಪಡುವುದಾಗರಿಯುತ್ತೇವೆ.

ಅಮಲ್ದಾರರುಗಳಾದ ಮ|| ಬಿ. ಕೃಷ್ಣಸಿಂಗರವರು ಬೇಲೂರು ತಾ|| ಇಂದ ಚೆನ್ನಪಟ್ಟಣ ತಾ|| ಗೂ, ಮ|| ಎಂ. ಕೇಶವಯ್ಯನವರು ಗುಂಡಲಪೇಟೆಯಿಂದ ಬೇಲೂರಿಗೂ, ಮ|| ಕೆ. ಶ್ರೀನಿವಾಸರಾಯರು ಮೊಳಕಾಲ್ಮೂರುಯಿಂದ ಗುಂಡಲಪೇಟೆಗೂ, ಮ|| ಕೆ. ವೇದಾಂತಯ್ಯಂಗಾರರು ಜಗಳೂರಿಂದ ಮೊಳಕಾಲ್ಮೂರುಗೂ, ಮ|| ಎಚ್. ಶ್ರೀನಿವಾಸಯ್ಯಂಗಾರರು ಶ್ರೀರಂಗಪಟ್ಟಣದಿಂದ ಜಗಳೂರಿಗೂ, ಮಿ|| ಗುಲಾಂ ಮಹಮ್ಮದ್ ಮೆಕ್ಕಿಯವರು ಶ್ರೀರಂಗಪಟ್ಟಣಕ್ಕೂ, ಮ|| ಧರ್ಮರಾಯರು ನಂಜನಗೂಡಿನಿಂದ ಯಡತೊರೆಗೂ, ಮ|| ಎ. ಶ್ರೀನಿವಾಸರಾಯರು ಯಡತೊರೆಯಿಂದ ನಂಜನಗೂಡಿಗೂ, ಮ|| ಎಸ್. ಶ್ರೀನಿವಾಸಯ್ಯಂಗಾರರು ಹುಣಸೂರಿಂದ ಮಂಡ್ಯಕ್ಕೂ, ಮ|| ಸಿ. ಬಿ. ಲಕ್ಷ್ಮಣರಾಯರು ಮಂಡ್ಯದಿಂದ ಕೃಷ್ಣರಾಜ ಪೇಟೆಗೂ, ಮ|| ಆರ್. ಎ. ನರಸಿಂಹಯ್ಯಂಗಾರರು ಕೃಷ್ಣರಾಜಪೇಟೆಯಿಂದ ಹುಣಸೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವರ್ತಮಾನ ಸಂಗ್ರಹ.

ಬರ್ಮಾದಲ್ಲಿ ಮಳೆಯಿಲ್ಲದೆ ಆಹಾರಪದಾರ್ಥಗಳ ಬೆಲೆಯು ಏರಿದುದರಿಂದ ಜನರು ದಂಗೆ ಯೆದ್ದು ಹಾದಿಯನ್ನು ಕಾದು ತಲೆ ಬಡಿದು ಸುಲಿಗೆ ಮಾಡುತ್ತಿದ್ದಾರೆ.

ಬರ್ಮಾದಲ್ಲಿ ಬತ್ತದ ಬೆಳೆಯು ಸರ್ಕಾರದವರ ನಿರೀಕ್ಷೆಗಿಂತ ಬಹು ಕಡಿಮೆಯಾಗುವುದೆಂದು ಜನರು ಹೇಳುತ್ತಾರೆ. ಈಗ ಅಲ್ಲಿ ೧೦೦ ಬಸ್ತೆಯ ಅಕ್ಕಿಗೆ ೫೫೦ ರೂ. ಬೆಲೆಯಿರುತ್ತದೆ. ಇದಕ್ಕೆ ಮೊದಲು ೩೫೦-೩೬೦ ರೂ. ಇದ್ದಿತೇ ಹೊರತು ಇಷ್ಟು ಹೆಚ್ಚಿರಲಿಲ್ಲವಂತೆ.

ಬರುವ ಡಿಸೆಂಬರ್ ತಿಂಗಳಲ್ಲಿ ಜರಗುವ ಭರತಖಂಡದ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಲೊಪ್ಪಿದ್ದ ಪಾರ್ಲಿಮೆಂಟ್ ಮೆಂಬರಾದ ಸರ್ ರಾಮ್ಸೆ ಮೆಕ್ಡೊನಾಲ್ಡ್‌ರವರು ಅನಿವಾರ್ಯದದಸೆಯಿಂದ ಅಧ್ಯಕ್ಷತೆಯನ್ನು ವಹಿಸಲಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಕಲಕತ್ತಾದಲ್ಲಿ ಬಹು ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಕವಿರಾಜ ಮಹಾಮಹೋಪಾಧ್ಯಾಯ ವಿಜಯರತ್ನಸೇನರವರು ಕಳೆದ ತಾ|| ೨೧ ರಲ್ಲಿ ಪರಮಪದವನ್ನು ಹೊಂದಿದರು. ವೈದ್ಯರ ಶವಸಂಸ್ಕಾರ ಕಾಲದಲ್ಲಿ ಹಿಂದೆ ಹೈಕೋರ್ಟಿನ ಜಡ್ಜಿಗಳಾಗಿದ್ದವರು, ಕೌನ್ಸಿಲ ಮೆಂಬರುಗಳು, ಸರಕಾರಿಯಧಿಕಾರಿಗಳು ಮೊದಲಾದ ಐರೋಪ್ಯ ಮತ್ತೂ ಹಿಂದೂ ದೊಡ್ಡಮನುಷ್ಯರುಗಳನೇಕರು ಬಂದಿದ್ದರು.

ಕಲಕತ್ತಾದಲ್ಲಿ ಈಚೀಚೆಗೆ ಐರೋಪ್ಯರ ಮನೆಯಲ್ಲಿ ಕಳ್ಳತನವು ನಡೆಯುವುದು ಹೆಚ್ಚಿರುವುದು. ಕಳೆದವಾರ ಒಂದು ರಾತ್ರಿ ಒಬ್ಬ ಐರೋಪ್ಯನು ತನ್ನಮನೆಯಲ್ಲಿ ಮಲಗಿರುವಾಗ್ಗೆ ಏನೋ ಒಂದು ಶಬ್ದವಾದುದನ್ನು ಕೇಳಿ ದೀಪವನ್ನು ಹೊತ್ತಿಸಿಕೊಂಡು ಬಂದು ಮನೆಯಲ್ಲೆಲ್ಲ ಹುಡುಕುವಲ್ಲಿ ಒಬ್ಬ ಹಿಂದುವು ಐರೋಪ್ಯಸ್ತ್ರೀಯುಡುಪನ್ನು ಧರಿಸಿಕೊಂಡಿದ್ದುದನ್ನು ಕಂಡು ಅವನನ್ನು ಹಿಡಿದು ಪೋಲೀಸರ ವಶಮಾಡಿದನು.

ಈಚೆಗಾದ ಜನರ ಗಣನೆಯಿಂದ ಹೈದರಾಬಾದು ಸಂಸ್ಥಾನದ ಒಟ್ಟು ಜನಸಂಖ್ಯೆಯು ೧೩೩೭೪೬೭೬ ಎಂದು ಗೊತ್ತಾಗಿರುವುದು. ೧೯೦೧ ರಲ್ಲಿ ಇದ್ದುದಕ್ಕಿಂತ ಈವೇಳೆ ೧೦೦ ಕ್ಕೆ ೨೦ ರಂತೆ ಹೆಚ್ಚಿರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ೯ ನೆಯ ೮ ಭಾಗವಿರುವ ಹಿಂದೂಗಳು ೧೦೦ ಕ್ಕೆ ೧೮ ರಂತೆಯೂ, ಹತ್ತನೆಯ ಒಂದುಭಾಗವಿರುವ ಮಹಮ್ಮದೀಯರು ೧೯ ರಂತೆಯೂ ಹೆಚ್ಚಿರುತ್ತಾರೆ. ಕ್ರೈಸ್ತರ ಸಂಖ್ಯೆಯು ೧೯೦೧ ರಲ್ಲಿ ೨೩೦೦೦ ವಿದ್ದುದು ಈಗ ೫೪೦೦೦ ಕ್ಕೇರಿದೆ.

ಕಳೆದ ತಾ|| ೧೬ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೮೩೫೫ ಜನರಿಗೆ ಪ್ಲೇಗು ತಗಲಿ ೬೯೫೬ ಜನರು ಸತ್ತರು. ಇವರಲ್ಲಿ ಬೊಂಬಾಯಧಿಪತ್ಯದಲ್ಲಿ ೪೧೦೩; ಮದ್ರಾಸಾಧಿಪತ್ಯದಲ್ಲಿ ೫೭೩; ಬಂಗಾಳಾದಲ್ಲಿ ೧೩; ಸಂಯುಕ್ತಪ್ರಾಂತಗಳಲ್ಲಿ ೩೯; ಪಂಜಾಬಿನಲ್ಲಿ ೧; ಬರ್ಮಾದಲ್ಲಿ ೨೯; ಮೈಸೂರ ಸೀಮೆಯಲ್ಲಿ ೩೩೫; ಹೈದರಾಬಾದ್ ಸಂಸ್ಥಾನದಲ್ಲಿ ೧೭೭; ಮತ್ತೂ ಮಧ್ಯಹಿಂದೂಸ್ಥಾನದಲ್ಲಿ ೧೯೯ ಪ್ರಕಾರ ಮರಣವಾಗಿರುತ್ತದೆ.

ಬೀರ್ಭೂಮ್ ಡಿ|| ನಲ್ಲಿ ಈಚೆಗೆ ವಿಶೇಷಮಳೆಯಾಗಿ ಕೆರೆಕಟ್ಟೆಗಳೆಲ್ಲ ತುಂಬಿ ಒಡೆದು ಹೋಗುವಂತಿದ್ದುವು. ಆದರೆ ರಾಂಪುರಹತ್ತಿನ ಸಬ್ ಡಿವಿಜನ್ ಆಫೀಸರಾದ ಮಿ|| ಮೇಟ್ಲಾಂಡ್‌ರವರು ಪ್ರಜೆಗಳ ಸಹಾಯವಿಲ್ಲದೆ ತಾವೇ ಸ್ವಂತವಾಗಿ ನಿಂತು ಅನೇಕ ಏರಿಗಳನ್ನೊಡೆದು ಹೆಚ್ಚು ನೀರೆಲ್ಲವೂ ಹೊರಗೆಹೋಗುವಂತೆ ಮಾಡಿದುದಲ್ಲದೆ, ಬರೆಯ ಕಾಲಿನಲ್ಲಿ ಪ್ರತಿಯೊಂದು ಮನೆಗೂ ಬಂದು ಜನರಿಗೆ ಬೇಕಾದ ಸಹಾಯವನ್ನು ಮಾಡಿ ಅವರಿಗುಂಟಾಗುತ್ತಿದ್ದ ಪ್ರಾಣ ಮತ್ತೂ ಪದಾರ್ಥಗಳ ನಷ್ಟವನ್ನು ತಪ್ಪಿಸಿದರು.

ಸೀಮೆಗೆ ಹೋಗಿ ಬಂದಿರುವ ತಾಕ್ಕೂರ್ ವತುಳಾಭರಣಂ ಸೆಟ್ಟಿಯವರನ್ನು ಸ್ವಜಾತಿಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಮದ್ರಾಸಿನ ವೈಶ್ಯರಲ್ಲಿ ಎರಡು ಪಂಗಡಗಳಾಗಿ ವಾದಾನುವಾದಗಳು ನಡೆಯುತ್ತಿವೆಯಲ್ಲದೆ ಈ ವಿವಾದವು ಕೋರ್ಟಿಗೂ ಹತ್ತಬಹುದೆಂದು ತೋರುತ್ತದೆ. ಆದರೆ ಅದೇ ರೀತಿ ಸಮುದ್ರಯಾನ ಮಾಡಿ ವಿದೇಶಕ್ಕೆ ಹೋಗಿ ಬಂದವರೊಬ್ಬರನ್ನು ಕುಲಕ್ಕೆ ಸೇರಿಸಿಕೊಂಡುದಕ್ಕಾಗಿ ಬಾಬು ಗೋವಿಂದದಾಸರನ್ನು ಅವರ ಕುಲದವರು ದೂರೀಕರಿಸಿದ್ದುದರ ಮೇಲೆ ಗೋವಿಂದದಾಸರು ಮಾನನಷ್ಟಕ್ಕಾಗಿ ಕಾಶೀ ಪಟ್ಟಣದ ಸಬ್‌ಜಡ್ಜರಲ್ಲಿ ವಿವಾದವನ್ನು ಹೂಡಿದ್ದರು. ಜಡ್ಜರು ಪ್ರತಿವಾದಿಗಳು ವಾದಿಗೆ ಮಾನನಷ್ಟಕ್ಕಾಗಿ ೨೦೦ ರೂ. ಗಳನ್ನು ಕೋರ್ಟು ವೆಚ್ಚದಸಮೇತ ಕೊಡಬೇಕೆಂದು ತೀರ್ಮಾನಿಸಿರುವರು. ಮತ್ತೂ ಮದ್ರಾಸಿನಲ್ಲೇ ಗುಜರಾತಿಯ ಜನರಲ್ಲಿ ಇದೇ ವಿಧವಾದ ಮಾನನಷ್ಟಕ್ಕಾಗಿ ವಿವಾದವು ನಡೆದು ವಾದಿ ಪ್ರತಿವಾದಿಗಳಿಗೆ ಬಹು ದ್ರವ್ಯ ವ್ಯಯವಾಯಿತು. ಈ ಸಂದರ್ಭವನ್ನು ಇಲ್ಲಿಯ ವೈಶ್ಯರು ತಿಳಿದು ಈಗ ತಮ್ಮಲ್ಲಿ ಹುಟ್ಟಿರುವ ವಿವಾದವನ್ನು ತಂತಮ್ಮೊಳಗೇ ವ್ಯವಸ್ಥೆಮಾಡಿಕೊಳ್ಳುತ್ತಿದ್ದಾರೆ. ಈ ಮದ್ರಾಸು ಪಟ್ಟಣದಲ್ಲಿ ಪ್ರತಿವರ್ಷದಲ್ಲೂ ಕನ್ಯಕಾಪರಮೇಶ್ವರಿಯ ದೇವಸ್ಥಾನದಲ್ಲಿ ಅತಿವೈಭವದಿಂದ ನಡೆಯುತ್ತಿದ್ದ ನವರಾತ್ರಿಯ ಮಹೋತ್ಸವವು ಅಲ್ಲಿಯ ವೈಶ್ಯರ ಜಗಳದಿಂದ ಈ ವೇಳೆ ನಡೆಯಲವಕಾಶವಿಲ್ಲದಿದೆ.

[ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.— ಪ. ಪ್ರ.]

ಪತ್ರವ್ಯವಹಾರ.

ಶ್ರೀಮನ್ನಿರಂಜನ ಪ್ರಜ್ಞಗಳಾದರಾದ ಹಾವೇರಿ ಹುಕ್ಕೇರಿಮಠದ ಶ್ರೀಶಿವಬಸವ ಮಹಾಸ್ವಾಮಿಗಳವರು ಇಪ್ಪತ್ತು ದಿವಸ ಶಿವಯೋಗಮಂದಿರದಲ್ಲಿದ್ದವರು ಆಕಸ್ಮಿಕ ಭಕ್ತರ ಉದ್ಧಾರಕ್ಕೋಸುಗ ಹಾವೇರಿಗೆ ದಯಮಾಡಿದ್ದು, ಮಹಾಸ್ವಾಮಿ ಮಠದಲ್ಲಿ ಪಾದಪೂಜಾ ಪುರಾಣಶ್ರವಣ ದಾಸೋಹ ಮೊಂತಾದ್ದು ಶ್ರಾವಣದಲ್ಲಿ ನಡೆಯುವುದರ ಉದ್ದೇಶ್ಯ ನಿಲ್ಲದೇಕೆಂದು ಸರ್ವಭಕ್ತರು ದೈನ್ಯೋಕ್ತಿಯಿಂದ ಅರಿಕೆಮಾಡಿಕೊಂಡ ಮೇರಿಗೆ ಮಠದಲ್ಲಿಯೇ ಇರೋಣಾಯಿತು. ನಂತರ ಶ್ರಾವಣಮಾಸದಿಂದ ಮಠದಲ್ಲಿ ಪಾದಪೂಜಾ ಪುರಾಣಶ್ರವಣ ಶಿವಕೀರ್ತನ ದಾಸೋಹ ಸಹಾ ಈ ವರೆಗೂ ಒಳ್ಳೆ ವಿಜೃಂಭಣೆಯಿಂದ ನಡೆದು ಇದೇ ಭಾದ್ರಪದ ಶುದ್ಧ ೬ ಬುಧವಾರ ಇವುಗಳ ಸಮಾಪ್ತಿಸೂಚಕವಾದ ಮಹಾಗಣಾರಾಧನೆಯು ನಿಶ್ಚಯಿಸಲ್ಪಟ್ಟ ಮೇರಿಗೆ ಮುಂಚಿತವಾಗಿಯೇ ಎಲ್ಲಾ ಕಡೆಗೂ ಆಹ್ವಾನಪತ್ರಿಕೆಗಳು ಕಳುಹಿಸಲ್ಪಟ್ಟ ಪ್ರಕಾರ ತಾತ್ಕಾಲಕ್ಕೆ ಸರಿಯಾಗಿ ಷಟ್ಸ್ಥಲ ಮೂರ್ತಿಗಳು ಪಟ್ಟಾಧ್ಯಕ್ಷರು ಮೊಂತಾದ ಮಾಹೇಶ್ವರರು, ಶಾಸ್ತ್ರಿಗಳ ಮಂಡಳಿಯು ಸಮೀಪಗ್ರಾಮವಾಸಿಗಳಾದ ಸೆಟ್ಟರು ಗೌಡರು ಮೊಂತಾದ ದೈವದವರು ಇದಲ್ಲದೆ ಬಹುದೂರದಿಂದ ಬಂದಿದ್ದ ಶ್ರೀಮಂತರಾದ ಭಕ್ತನಿವಹವು ಭಕ್ತಿಯಿಂದ ಕೂಡಿ ನೇಮಿಸಿದ ಕಾಲಕ್ಕೆ ಸರಿಯಾಗಿ ಸಕಲ ಭಕ್ತರ ಪ್ರಾರ್ಥನೆಯನ್ನನುಮೋದಿಸಿ ಪೂಜಾಪೀಠವನ್ನಲಂಕರಿಸಿದ ಗಜೇಂದ್ರಗಡದ ಶ್ರೀಗಳವರ ಪಾದಪೂಜೆಯು ಸಮಾರಂಭವು ವೇದಘೋಷದಿಂದ ನಡೆದು ಮೇಲ್ಕಂಡ ಕ್ಲುಪ್ತ ದಿವಸಕ್ಕೆ ಭಕ್ತಮಾಹೇಶ್ವರರ ತೃಪ್ತಿಯು ನಡೆದು ಎರಡನೆಯ ದಿವಸ ಅಂದರೆ ಈ ಶು|| ೭ ಗುರುವಾರ ಬೆಳಗ್ಗೆ ೭ ಘಂಟೆಯಿಂದ ಶ್ರೀಹಾವನೂರು ಸಿದ್ಧಲಿಂಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಈ ಸಭೆಗೆ ಷಟ್ಸ್ಥಲಮೂರ್ತಿಗಳಾದ ಅಥಣಿ ಸಿದ್ಧಲಿಂಗ ಸ್ವಾಮಿಗಳು ಗಜೇಂದ್ರಗಡದ ಮಹಾಸ್ವಾಮಿಗಳವರು ಹಾವೇರಿ ಹೊಸಮಠದ ಪಂಚಾಕ್ಷರಿದೇವರು, ದಾವಣಗೆರೆ ಮೃತ್ಯುಂಜಯದೇವರು, ಹೊಳಲಕೇರಿ ವಿರೂಪಾಕ್ಷದೇರು ಮತ್ತು ಕೆಳದಿ ಪಟ್ಟಾಧ್ಯಕ್ಷರು, ಶಿಗ್ಗಾವಿ ಪಟ್ಟಾಧ್ಯಕ್ಷರು ಕರ್ಜಗಿ ಪಟ್ಟಾಧ್ಯಕ್ಷರು, ಹಾವೇರಿ ಪಟ್ಟಾಧ್ಯಕ್ಷರು, ಹಾನಗಲ್ಲ ಚರಪಟ್ಟಾಧ್ಯಕ್ಷರು ಇನ್ನು ಮೊಂತಾದ ಗುರುವರ್ಗದ ಮಾಹೇಶ್ವರರು, ಶಾಸ್ತ್ರಿಗಳು, ಭಕ್ತಮಾಹೇಶ್ವರರು ದಯಮಾಡಿಸಿದ್ದರು. ಹರಿಹರದ ಮಹೇಶ್ವರ ಶಾಸ್ತ್ರಿಗಳು ದೀಕ್ಷಾ ಅವಶ್ಯಕತೆಯೆಂಬುವುದನ್ನು ಪ್ರಮಾಣಗಳಿಂದ ಸೂಚಿಸಿದರು. ಇದೇ ವಿಷಯವನ್ನೇ ಹಾನಗಲ ವೀರಪ್ಪಶಾಸ್ತ್ರಿಗಳು ಬಿದರಿ ಬಸವಲಿಂಗಶಾಸ್ತ್ರಿಗಳು ಪುಷ್ಟೀಕರಿಸಿ, ಮತತತ್ವ ಮತ್ತು ಧರ್ಮ ಮತ್ತು ಆಚರಣೆ ಈ ವಿಷಯಗಳ ಮೇಲೆ ಸಪ್ರಮಾಣಗಳಿಂದ ಬಹು ಸರಸವಾಗಿ ಭಾಷಣಮಾಡಿದರು. ಅನಂತರ ಶಿವಯೋಗ ಮತ್ತು ಶಿವಯೋಗಮಂದಿರದಿಂದುಂಟಾಗುವ ಫಲ, ಈ ವಿಷಯದ ಮೇಲೆ ಶಿವಯೋಗಮಂದಿರದಲ್ಲಿ ಯೋಗಾಭ್ಯಾಸಿಗಳಾದ ಅಪ್ಪಯ್ಯ ಮರಿದೇವರು ಬಹು ಸರಸವಾಗಿ ಭಾಷಣಮಾಡುತ್ತಿರಲಿಕ್ಕೆ ಮಧ್ಯದಲ್ಲಿ ಇವರ ಭಾಷಣಾನಂದವು ಜನರ ಮನಸ್ಸನ್ನು ಆಕರ್ಷಿಸಿ ಜಯ ಜಯಕಾರದ ಕರತಾಡನವನ್ನು ಮಾಡಿಸುತ್ತಿತ್ತು.

(ಸಶೇಷ.)

ತಾ|| ೧೦-೯-೧೧ ಇಸವಿ ರವಿವಾರದ ದಿವಸ ಮುಂಜಾನೆ ೯ ಗಂಟೆಗೆ ಸರಿಯಾಗಿ ಶಹಪೂರದಲ್ಲಿ ಚಿಚಡಿಯ ಶ್ರೀಮಂತ ನಾಯಕ ಬಹದ್ದೂರ ದೇಸಾಯಿಯವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿ ಶಹಪೂರದ ಶ್ರೀ ಜತಿಯಪ್ಪ ಸ್ವಾಮಿಗಳವರ ಅನುಗ್ರಹದಿಂದ ವೀರಶೈವ ಬೋರ್ಡಿಂಗು ಸ್ಥಾಪಿಸಲ್ಪಟ್ಟಿತು. ಈ ಸಭೆಗೆ ಶಹಪೂರ ಬೆಳಗಾವಿಗಳ ಸೆಟ್ಟರು ಸಾಹುಕಾರರು ಮೊದಲಾದವರೂ, ಬೆಳಗಾವಿಯ ಹಿರೇಮಠದ ಸ್ವಾಮಿಗಳೂ, ದೇಶನೂರ ವಿರಕ್ತಸ್ವಾಮಿಗಳೂ, ಇನ್ನು ಕೆಲ ಸ್ವಾಮಿಗಳೂ, ಹೈಸ್ಕೂಲಿನ ಎಲ್ಲ ವೀರಶೈವ ವಿದ್ಯಾರ್ಥಿಗಳೂ ಮತ್ತು ರಾ|| ರಬಕವಿಯ ತಮ್ಮಣ್ಣಪ್ಪ ಚಿಕ್ಕೋಡಿಯವರೂ, ಬೈಲಹೊಂಗಲದ ಪಾಟೀಲರಾದ ಮಲ್ಲನಾಯಕರೂ, ಯಾದವಾಡದ ಚೆನ್ನಬಸಪ್ಪಣ್ಣ ಲಕ್ಷೆಟ್ಟಿಯವರೂ, ಚಿನ್ನಪ್ಪಣ್ಣಾ ಹುನಗುಂದರವರೂ, ಇನ್ನೂ ಕೆಲ ಪ್ರಮುಖ ಜನರೂ ದಯಮಾಡಿಸಿದ್ದರು. ಆರಂಭಕ್ಕೆ ಕಿತ್ತೂರ ಶಾಲೆಯ ಮಾಸ್ತರರಾದ ಬಳವಾರ್ಯರು ಸಭೆಯ ಉದ್ದೇಶವನ್ನು ಕುರಿತು ಭಾಷಣಮಾಡಿದನಂತರ ವಿ|| ತಮ್ಮಣ್ಣಪ್ಪ ಚಿಕ್ಕೋಡಿ ರಬಕವಿ ಇವರು ಶ್ರೀಮದ್ವೀರಶೈವ ಮತದ ಮುಖ್ಯತತ್ವ, ಅದರ ಯೋಗ್ಯತೆ, ಪ್ರಾಚೀನ ಸ್ಥಿತಿ, ಮೊದಲು ಬೆಳಗಾವಿಯಲ್ಲಿ ಸ್ಥಾಪಿಸಲ್ಪಟ್ಟ ದುರ್ಗದ ಸ್ವಾಮಿಗಳ ಬೋರ್ಡಿಂಗು, ಬಳ್ಳಾರಿಯ ಸಕ್ಕರೆ ಕರಡೆಪ್ಪನವರೇ ಮೊದಲಾದ ಶಿವಶರಣರಿಂದ ಮತೋದ್ಧಾರವಾದ ಸಂಗತಿ, ಈ ಮತವು ಅಭಿವೃದ್ಧಿಯಾಗಲೋಸುಗ ನಾವೆಲ್ಲರೂ ಇನ್ನು ಮುಂದೆ ಮಾಡಬೇಕಾದ ಪ್ರಯತ್ನ, ಈ ವೀರಶೈವ ಬೋರ್ಡಿಂಗು ಸ್ಥಾಪನೆಯಿಂದ ತನಗಾದ ಆನಂದ ಈ ವಿಷಯವಾಗಿ ೧ ತಾಸಿನ ವರೆಗೆ ಅಸ್ಖಲಿತವಾಣಿಯಿಂದ ಭಾಷಣಮಾಡಿ ಈ ಕೆಲಸಕ್ಕೆ ಪ್ರತಿಯೊಬ್ಬ ವೀರಶೈವನೂ ತನುಮನಧನದಿಂದ ಸಹಾಯಮಾಡಿ ಮತವನ್ನುದ್ಧರಿಸಿದ ಕೀರ್ತಿಯನ್ನು ತೆಗೆದುಕೊಳ್ಳಬೇಕೆಂದು ಒಳ್ಳೆಯ ಆವೇಶದಿಂದಲೂ, ಅಭಿಮಾನದಿಂದಲೂ ಜನರಿಗೆ ಉಪದೇಶಮಾಡಿ ತಮ್ಮ ಭಾಷಣವನ್ನು ಮುಗಿಸಿದರು. ಬಳಿಕ ಕಿತ್ತೂರಶಾಲೆಯ ಮಾಸ್ತರರಾದ ಬಳವಾರ್ಯರು ಪ್ರತಿಯೊಂದು- ರಾಷ್ಟ್ರವು ಅಥವಾ ಸಮಾಜವು ಉನ್ನತಿಯನ್ನು ಪಡೆಯಬೇಕಾದರೆ ವಿದ್ಯೆಯೇ ಮೂಲಕಾರಣವು. ನಮ್ಮ ದರ್ಬಾರೀ ಭಾಷೆಯು ಇಂಗ್ಲೀಷು ಇರುವುದರಿಂದ ನಾವು ಅದನ್ನು ಹೆಚ್ಚಿಗೆ ಇಂಗ್ಲೀಷು ಕಲಿಯಬೇಕಾದುದು ಅವಶ್ಯಕವು. ಈ ಆಂಗ್ಲ ವಿದ್ಯೆಯು ಲಿಂಗಾಯತರಿಗೆ ಸುಲಭಸಾಧ್ಯವಾಗಬೇಕೆಂದು ಕೈ|| ವಾ. ಇಲಗಂಚಿ ಗುರುಸಿದ್ಧಪ್ಪನವರೂ, ರಾ|| ಬಾ|| ಅರಟಾಳ ರುದ್ರಗೌಡರೂ ಪ್ರಚಂಡವಾದ ಘಾತುಕೊಡಿಸಿ ಇಟ್ಟರು. ಮತ್ತು ಈ ಉಭಯ ಮಹನೀಯರೂ, ರಾ|| ಸಾ|| ಬೀಳಗಿ ರುದ್ರಪ್ಪನವರೂ ರಾ|| ಸಾ|| ಡೆಪ್ಯುಟಿ ಚೆನ್ನಬಸಪ್ಪನವರೂ, ಶ್ರೀಮಂತ ಶಿರಸಂಗಿಯ ಸರ ದೇಸಾಯರೂ, ರಾ|| ಬಾ|| ಸೊಲ್ಲಾಪುರದ ಶ್ರೀಮಂತ ವಾರದ ಮಲ್ಲಪ್ಪನವರೂ ಮೊದಲಾದ ಶಿವಶರಣರು ಈ ನಮ್ಮ ಜೀರ್ಣವಾಗಿದ್ದ ಮತವನ್ನು ಸುಧಾರಣೆಯ ಸ್ಥಿತಿಗೆ ತಂದು ಕೃತಾರ್ಥರಾದರು. ಸಮಾಜೋನ್ನತಿಗೆ ವಿದ್ಯೆಯೇ ಮೂಲವಾಗಿರುವುದರಿಂದ ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಇಂತಹ ಬೋರ್ಡಿಂಗುಗಳೇ ಅನುಕೂಲವಾಗಿರುವುವು. ಇವುಗಳ ಭದ್ರತೆಗೆ ಅದರ ಅಸ್ತಿವಾರವೇ ಕಾರಣವಾದಂತೆ ಈಗ ಸ್ಥಾಪಿಸಲ್ಪಟ್ಟ ಬೋರ್ಡಿಂಗಿನ ಸ್ಥಿರತ್ವಕ್ಕೆ ಸುವ್ಯವಸ್ಥೆಯೇ ಮುಖ್ಯವಾದುದರಿಂದ ಆರಂಭದಿಂದ ಅದರ ವ್ಯವಸ್ಥೆಯನ್ನು ಬಹು ಅಚ್ಚುಗಟ್ಟಾಗಿ ಇಡತಕ್ಕದು. ಈ ಬೋರ್ಡಿಂಗು ಸ್ಥಾಪನೆಗಾಗಿ ಬೆಳಗಾವಿಯ ಕಲೆಕ್ಟರ ಕಚೇರಿಯ ಕಾರಕೂನರಾದ ವಿ|| ಶೃಂಗಾರಿ ಮತ್ತು ಬಸವಂತಪ್ಪಾ ಚಟ್ಟಿ ಇವರಿಬ್ಬರು ಬಹಳ ಶ್ರಮಪಟ್ಟುದರಿಂದ ಈ ಶ್ರೇಯಸ್ಸು ಈ ಉಭಯರಿಗೆ ಸಲ್ಲತಕ್ಕದು. ಇವರ ಪ್ರಯತ್ನಕ್ಕೆ ಪ್ರತಿಯೊಬ್ಬ ವೀರಶೈವನೂ ಸಹಾಯಮಾಡತಕ್ಕದು ಎಂಬುದಾಗಿ ಭಾಷಣಮಾಡಿದರು.

(ಸಶೇಷ.)

ತುಮಕೂರು ತಾ|| ಹೊನ್ನುಡಿಕೆ ಪೇಟೆ ಶೆಟ್ಟರು ವೀರಭದ್ರಪ್ಪನವರ ಮಗಳು ಚನ್ನಮ್ಮನೆಂಬ ಕನ್ಯೆಯನ್ನು ಹೊನ್ನುಡಿಕೆಯಲ್ಲಿರುವ ತಾಬರಪೇಟೆ ರುದ್ರಪ್ಪನಿಗೆ ಕೊಟ್ಟು ೧೯೧೧ ನೆಯ ಆಗಸ್ಟ ತಾ|| ೧೯ ನೆಯ ಶನಿವಾರ ವಿವಾಹವನ್ನು ನಡೆಯಿಸುವ ಕಾಲದಲ್ಲಿ ಆ ಗೃಹದಲ್ಲಿ ನೆರೆದಿದ್ದ ಶ್ರೀ ತಮ್ಮಡಿಹಳ್ಳಿ ಮಠದ ನಿರಾಭಾರಿ ಆಶ್ರಮದ ಬೋಳಪ್ಪಸ್ವಾಮಿಗಳವರು, ವೇ|| ಅರಕೆಲಗೂಡು ಮಠದ ಸೋಮಯ್ಯನವರು, ಹೊನ್ನುಡಿಕೆ ಪ್ಯಾಟಿ ಮಠದ ವೇ|| ಕಲಿವೀರದೇವರು ಸಿದ್ಧಪ್ಪದೇವರು, ಮ|| ರಾ|| ಅಂಗಡಿ ನಂಜಪ್ಪನವರು ತುಪ್ಪದ ವೀರಭದ್ರಪ್ಪನವರು, ಜೋಳಂಬಳ್ಳಿ ಪಾಟೀಲ ಶಿವರುದ್ರಪ್ಪನವರು ಶಿಖರಪ್ಪನವರ ಗಂಗಪ್ಪನವರೇ ಮೊದಲಾದ ವೀರಶೈವ ಬಂಧುಗಳು ಪರಮತೀಯರು ಮೊದಲಾದವರು ನೆರೆದಿದ್ದ ಸಭೆಯಲ್ಲಿ ಹೊನ್ನುಡಿಕೆ ಪ್ಯಾಟಿ ಯಜಮಾನ ಹೊನ್ನಸೆಟ್ಟಪ್ಪನವರು ಎದ್ದುನಿಂತು ಈ ಮಹಾಸಭೆಯಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿರುವ ಮಹಾಸ್ವಾಮಿಗಳವರನ್ನು ಉಳಿದ ಭಕ್ತಮಾಹೇಶ್ವರರ ಸಭೆಯನ್ನು ಕುರಿತು ಬಿನ್ನೈಸಿದುದೇನೆಂದರೆ, ಮಹನೀಯರೆ! ನಮ್ಮ ವೀರಶೈವಮತಕ್ಕಾವರಿಸಿರ್ದ ಪರಮತೀಯರ ಆಗ್ರಹವೆಂಬ ತಿಮಿರವನ್ನು ನಿವಾರಿಸಲು ದಿನಕರನಂತೆ ಆವಿರ್ಭವಿಸಿದ್ದ ಕೈ|| ವೈ. ವೀರಸಂಗಪ್ಪನವರೆಂಬ ಮಹನೀಯರು ರೇಣುಕಾದ್ಯಾಚಾರ್ಯ ವಂಶೀಯರಾಗಿ ಮತದ ಮಾಲಿನ್ಯವನ್ನು ಸಪ್ರಮಾಣಗಳಿಂದ ಘಂಟಾಘೋಷವಾಗಿ ಸದುತ್ತರಗಳಿಂದ ಅಸ್ಥಿರ ಅಪಲಾಪವೆಂಬ ಮರವೆಯನ್ನು ಜ್ಞಾನಾಂಜನದಿಂದ ದೂರೀಕರಿಸಿ, ಸ್ವಮತವೇ ತಮ್ಮ ಕುಟುಂಬವೆಂದು ತಮ್ಮ ತನುಮನಧನಗಳನ್ನು ಈ ಮತೀಯರ ಏಳಿಗೆಗಾಗಿ ಶಿವಾರ್ಪಿತವಮಾಡಿ ಮತೋದ್ಧಾರಮಾಡಿರುವರೆಂಬ ಜ್ಞಾಪಕವು ಈ ವರೆಗೆ ನಡೆದಿರುವ ಮಹಾಸಭೆಗಳಲ್ಲಿ ಪ್ರಸಿಡೆಂಟರವರು ಕೂಡ ಆಯಾಯ ಸಭೆಗಳಲ್ಲಿ ಮೈಸೂರು ಯಜಮಾನರ ಉಪಕಾರವನ್ನು ಮತೀಯರೆಲ್ಲರು ಚಿರಸ್ಮರಣೀಯವಾಗಿ ಮರೆಯದೆ ನೆನೆಪಿನಲ್ಲಿಡಬೇಕೆಂದು ಹೇಳುತ್ತಾರೆ. ಸಭಿಕರೆ! ನೆನ್ನೆಯ ಜೂನ್ ತಾ|| ೧೪ ರಲ್ಲಿ ತುಂಕೂರು ಹೊರಪ್ಯಾಟೆಯಲ್ಲಿ ಮ|| ಸರಾಫರು ವೀರಸೆಟ್ಟರ ಗೃಹದಲ್ಲಿ ಮಾಗಡಿ ಮ|| ಲಾಯರು ನಂಜುಂಡಪ್ಪನವರು ತಮ್ಮ ಮಗಳನ್ನು ತಿಪಟೂರು ಷಾಪು ಅಂಗಡಿ ಮ|| ಬಸವಣ್ಣನವರ ಕುಮಾರರು ಜಿ ಸಿದ್ಧಲಿಂಗಪ್ಪನವರಿಗೆ ಕೊಟ್ಟು ಶಿವಾರ್ಪಿತವಾಗಿ ನಡೆಸಿದ ಲಗ್ನಕಾಲದಲ್ಲಿ ಆ ಸಭೆಯಲ್ಲಿ ನೆರದಿದ್ದ ಬೆಂಗಳೂರು ಗುಬ್ಬಿ, ತಿಪಟೂರು, ಮಾಗಡಿ, ನೆಲಮಂಗಲ, ಗೂಳೂರು, ಹೊನ್ನುಡಿಕೆ, ನೊಣಬನಕೆರೆ ಮೊಂತಾದ ಪ್ಯಾಟಿ ಬಂಧುಗಳು ತುಮಕೂರು ಪ್ಯಾಟಿಯವರು ಕೂಡಿದ್ದ ಆ ಮಹಾಸಭೆಯಲ್ಲಿ ನಮ್ಮ ಬೆಂಗಳೂರು ವಿದ್ಯಾವರ್ಧಕ ಫಂಡಿಗೆ ಸಹಾಯದ್ರವ್ಯವನ್ನು ಪ್ಯಾಟಿಸೆಟ್ಟರ ವಶಕ್ಕೆ ಕಾಣಿಕೆಯಾಗಿ ಒಪ್ಪಿಸಿ, ಸಭೆಯನ್ನು ಕುರಿತು ಕೈ|| ವೈ. ವೀರಸಂಗಪ್ಪನವರು ವೇದಮೂರ್ತಿಗಳಾಗಿ ಈ ಮತಕ್ಕೆ ಮಹೋಪಕಾರಮಾಡಿದ್ದರೆಂಬ ಜ್ಞಾಪಕಾರ್ಥವಾಗಿ ಲಗ್ನಕಾಲಗಳಲ್ಲಿ ಒಂದು ಅಗ್ರತಾಂಬೂಲವನ್ನು ಅವರ ಹೆಸರಿನ ಮೇಲೆ ತೆಗೆಸಿ ಆ ಗ್ರಾಮದ ಸೆಟ್ಟರೋ, ಯಜಮಾನರೋ, ಮಠಸ್ಥರೋ ತೆಗೆದುಕೊಳ್ಳುತ್ತಾರೆ. ಅಂದರೆ ಈ ಮಹನೀಯರು ಆ ಮತದ ಏಳಿಗೆಯನ್ನೇ ಅಹರ್ನಿಶಿಯಲ್ಲೂ ಚಿಂತಿಸುವುದಕ್ಕೆ ಏರ್ಪಡಿಸಿರುವ ಸ್ಟಾರ್ ಪತ್ರಿಕೆಗೆ ಪ್ರತಿಯೊಬ್ಬ ವೀರಶೈವ ಜನಾಂಗದವರು ತಮ್ಮ ಮನೆಗಳಲ್ಲಿ ವಿವಾಹ ನಡೆಸುವಾಗ್ಗೆ ಈ ಕೈಲಾಸವಾಸಿಗಳ ಜ್ಞಾಪಕಮಾಡಿ ಕೇವಲ ಬಡವರಾದವರಿಂದ ೧ ರೂ. ಗೆ ಕಡಿಮೆಯಿಲ್ಲದಂತೆಯೂ, ಅನುಕೂಲಸ್ಥರು ಶಕ್ತ್ಯನುಸಾರವಾಗಿಯೂ ಕಾಣಿಕೆ ಕೊಡುವುದಕ್ಕೆ ಒಪ್ಪಿ ಆ ಗ್ರಾಮದ ಮುಖಂಡರ ಮುಖೇನ ಅಥವಾ ಲಗ್ನದ ಮನೆ ಯಜಮಾನರ ಮುಖೇನ ವೀರಸಂಗಪ್ಪನವರ ಫಂಡು ಎಂಬ ಹೆಸರಿನಮೇಲೆ ಸೇವಿಂಗ್ಸ್ ಮಾಡಲು ಬೆಂಗಳೂರು ಸಭಾ ಸೆಕ್ರಟರಿಗಳವರ ವಶಕ್ಕೆ ರವಾನಿಸುವುದಕ್ಕೆ ಇಲ್ಲಿ ನೆರದಿರುವ ಎಲ್ಲಾ ಪ್ಯಾಟಿಮನೆಯ ಬಂಧುಗಳು ಅನುಜ್ಞೆ ಕೊಟ್ಟರೆ ನಾವು ಹುಟ್ಟಿದ ಜಾತಿಯನ್ನು ಸಾರ್ಥಕಪಡಿಸಿದವರಾಗುತ್ತೇವೆಂದು ಶೃತಪಡಿಸಿದರು. ಆಗ್ಗೆ ಎಲ್ಲಾ ಪ್ಯಾಟಿ ಮನೆಗಳವರು ತಂತಮ್ಮ ಪ್ಯಾಟಿ ಮನೆಗಳಲ್ಲಿ ಪ್ರತಿಲಗ್ನಗಳಲ್ಲು ಕಾಣಿಕೆ ತೆಗೆಸಿ ರವಾನಿಸುವುದಾಗಿ ಒಪ್ಪಿದರು. ಈ ಫಂಡಿನ ಮೂಲಧನಕ್ಕಾಗಿ ಲಾಯರು ನಂಜುಂಡಪ್ಪನವರು ಷಾಪು ಬಸವಣ್ಣನವರು ಸಹಾ ೫೦ ರೂ. ಗಳನ್ನು ತೆಗೆದು ಸಭೆಯವರ ವಶಕ್ಕೆ ಕೊಟ್ಟರು. ಆಗ್ಗೆ ನಮ್ಮ ಪ್ಯಾಟಿ ಮನೆಯವರು ಹೋಗಿದ್ದು ಪ್ರತ್ಯಕ್ಷ ನೋಡಿದ್ದಾರೆ. ಆ ಪದ್ಧತಿಯನ್ನು ಇಲ್ಲಿ ಸೇರಿರುವ ಇತರ ಪ್ಯಾಟಿಗಳವರು ಜಾರಿಗೆ ತರಬೇಕೆಂದೂ, ಈ ಗ್ರಾಮದ ಪ್ಯಾಟಿ ಸೆಟ್ಟರ ಮನೆಯಲ್ಲಿಯೇ ಕೈಲಾಸವಾಸಿಗಳ ಜ್ಞಾಪಕದ ಫಂಡಿನ ಕಾಣಿಕೆಯನ್ನು ತೆಗೆಸಬೇಕೆಂದೂ ಯಜಮಾನ ಹೊನ್ನಸೆಟ್ಟರು ಸಭೆಯವರನ್ನು ಕುರಿತು ಬಿನ್ನೈಸಿದರು. ಸಭೆಯವರು ಒಪ್ಪಿ ಯಜಮಾನರ ಫಂಡಿಗೆ ೨ ರೂ. ಮತ್ತು ಕೈ|| ವೀರಸಂಗಪ್ಪನವರ ಫಂಡಿಗೆ ೧ ರೂ. ಗಳನ್ನು ಉಭಯಪಕ್ಷದವರಿಂದ ತೆಗೆಸಿ ಸಭಾಸೆಕ್ರೆಟರಿಗಳವರ ವಶಕ್ಕೆ ೨ ರೂ. ಗಳನ್ನೂ, ಸ್ಟಾರ್ ಆಫೀಸಿನ ಎಡಿಟರ್ ಮ|| ರಾ|| ವೈ. ವಿರೂಪಾಕ್ಷಯ್ಯನವರ ವಶಕ್ಕೆ ೧ ರೂ. ಯನ್ನೂ ಮಣಿಯಾರ್ಡರ್ ರವಾನಿಸಬೇಕೆಂತಲೂ ಈ ಸಂಗತಿಯನ್ನು ನಮ್ಮ ದೇಶೀಯರಾದ ವೀರಶೈವ ಬಂಧುಗಳೆಲ್ಲರೂ ಕೈ|| ವೀರಸಂಗಪ್ಪನವರ ಮಹೋಪಕಾರದ ಫಲಕ್ಕೆ ಸಮಭಾಗಿಗಳಾಗಿರುವ ಕಾರಣ ತಮ್ಮ ಹುಟ್ಟುವಿಕೆಯನ್ನು ಸಾರ್ಥಕಪಡಿಸಿಕೊಳ್ಳುವ ಮುಖ್ಯ ಕರ್ತವ್ಯಕ್ಕೋಸ್ಕರ ಎಲ್ಲ ಪ್ಯಾಟಿಗ್ರಾಮದ ವೀರಶೈವ ಬಂಧುಗಳು ಕೈ|| ವೇದಮೂರ್ತಿ ವೀರಸಂಗಪ್ಪನವರ ಹೆಸರಿನ ಫಂಡನ್ನು ಗುರುದೇವರ ತಾಂಬೂಲದಂತೆ ಶಾಶ್ವತಪಡಿಸಬೇಕೆಂತಲೂ, ಈ ಹಣವನ್ನು ಮೂಲಧನಕ್ಕಾಗಿ ಶೇಖರಿಸಿ ವೈ. ವಿರೂಪಾಕ್ಷಯ್ಯನವರು ಸ್ಟಾರ್ ಹೆಸರಿನ ಮೇಲೆ ಸೇವಿಂಗ್ ಮಾಡಲು ಚಿತ್ತಕೊಟ್ಟು ಪೇಪರಿನ ಮೂಲಕ ಪ್ರೋತ್ಸಾಹಿಸಬೇಕೆಂತಲೂ ಬೇಡುತ್ತೇನೆಂದು ಬಿನ್ನೈಸಿದರು. ಅನಂತರ ಸಭಿಕರಿಗೆ ಪುಷ್ಪತಾಂಬೂಲಗಳು ಹಂಚಲ್ಪಟ್ಟು ಜಯಘೋಷದೊಡನೆ ಕರತಾಡನದಮೂಲಕ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

[ಈ ಮೊಬಲಗನ್ನು ನಾವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.— ಪ. ಪ್ರ.]

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೦)

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಕ್ಕನುಸಾರವಾಗಿ ಶ್ರೀ ಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:- ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ.

ಹುಬ್ಬಳ್ಳಿಯ ಸುಪ್ರಸಿದ್ಧ ಪಂಚಾಂಗ.

ಕನ್ನಡನಾಡಿನಲ್ಲಿ ಸಕಲ ಪಂಚಾಂಗಗಳೊಳಗೆ ಅತಿ ಶ್ರೇಷ್ಠ ಪಂಚಾಂಗವು ಹುಬ್ಬಳ್ಳಿಯದೆಂಬುದು ಸರ್ವಶ್ರುತ ಸಂಗತಿಯಷ್ಟೆ. ಈಗಾಗಲೆ ಪರಿಧಾವಿ ಸಂವತ್ಸರದ ಹೊಸ ಪಂಚಾಂಗವು ಮುದ್ರಣವಾಗಿ ವಿಕರಿಗೆ ಸಿದ್ಧವಾಗಿರುವದು. ಬೆಲೆಯಾದರೂ ಸುಲಭವಾಗಿ ಪಂಚಾಂಗ ೧ ಕ್ಕೆ ೨ ಆಣೆ. ೫ ಕ್ಕೆ ೮ ಆಣೆ. ಅದರೆ ಸ್ಟಾರ್ ಪತ್ರಿಕಾ ಚಂದಾದಾರರಿಗೆ ಮಾತ್ರ ೩ ಪಂಚಾಂಗಗಳಿಗೆ ೮ ಆಣೆ ಪ್ರಕಾರ ಕಳುಹುವೆವು. ಅಪೇಕ್ಷಕರು ತ್ವರೆಮಾಡಿರಿ.

ವಿಳಾಸ— ಕೆ. ಎಸ್. ಮಲ್ಲೇಶಶಾಸ್ತ್ರಿ,
ಮುಕ್ಕಾಂ ಹುಬ್ಬಳ್ಳಿ.

ಜಗತ್ಪ್ರಸಿದ್ಧ ಪತ್ರಿಕೆ.

೨೦ ವರ್ಷಗಳ ಪಂಚಾಂಗಗಣಿತ ಪದಕಸಹಿತವಾದ
ಪರಿಧಾವಿ ಸಂವತ್ಸರದ ಸಿದ್ಧಾಂತ ಪಂಚಾಂಗರತ್ನಂ

ಈ ಪಂಚಾಂಗದಲ್ಲಿ ಚೈತ್ರಾದಿ ೧೨ ಮಾಸ ಫಲ ಸಹಿತ ಪಂಚಾಂಗದ ಯಾವತ್ತು ಫಲಗಳನ್ನು ಬರೆದಿರುತ್ತೆ. ಪ್ರತಿಯೊಬ್ಬರಿಗೂ ೧೨ ತಿಂಗಳ ಭವಿಷ್ಯತ್ಫಲವನ್ನು ೨೦ ವರ್ಷಗಳ ಪಂಚಾಂಗಗಣಿತದ ಪದಕಗಳನ್ನು ಹಾಕಿರುವೆವು. ದಿನಚರಿ ಉಂಟಾಗುವ ಶುಭಾಶುಭ ಫಲವು ತಿಳಿಯುವ ಕ್ರಮ, ಅಶ್ವಪರೀಕ್ಷಾಶಾಸ್ತ್ರಕ್ರಮ, ಸ್ತ್ರೀಯರಿಗೆ ೮ ತಿಂಗಳವರೆಗೂ ಗರ್ಭಶ್ರಾವವಾಗುತ್ತಾ ಇದ್ದರೆ ಪ್ರತಿತಿಂಗಳಲ್ಲಿ ಮಾಡುವ ಚಿಕಿತ್ಸಾಕ್ರಮ, ಹೊಲೆಕಟ್ಟು, ಶೆಟಿಬ್ಯಾನಿ, ಹಾವು ಚೇಳು ಕಚ್ಚಿದಕ್ಕೊ, ಬಹುಮೂತ್ರ ಹೀನಸಿ ತೊಡೆವಾಳ ಅನ್ನದಲ್ಲಿ ಮದ್ದುಯಿಡುವಿಕೆ, ಪಕ್ಕಶೂಲೆ, ಕಣ್ಣಿನಲ್ಲಿ ಹೂವು ಕೂತಿರೋಣ, ಸಣ್ಣಮಕ್ಕಳ ಅಕಸ್ಮಾತ್ ಸಂದುರೋಗ, ಇವುಗಳಿಗೆ ಮಾಡುವ ಚಿಕಿತ್ಸಾಕ್ರಮಗಳೂ, ಲಗ್ನಪತ್ರಿಕೆ ಜನ್ಮಪತ್ರಿಕೆ ವಿವಾಹ ಮಹೋತ್ಸವ ಪತ್ರಿಕೆ, ಪ್ರಾಂಸರಿ ನೋಟು ಭೂಮಿ ಸಾಗುವಳಿ ಪತ್ರ, ಮನೆ ಭೂಮಿ ಖರೀದಿ ಪತ್ರ, ಅಡವು ಹಾಕಿ ಬರಿಸಿಕೊಳ್ಳುವ ಪತ್ರ, ಬೋಗ್ಯಪತ್ರ, ದಾನಪತ್ರ, ದತ್ತಸ್ವೀಕಾರಪತ್ರ, ಪಾಲುಭಾರಿಕತ್ತು ವರ್ತೇಪತ್ರ ಇವೇ ಮೊದಲಾದ ಎಲ್ಲಾ ದಸ್ತಾವೇಜುಗಳನ್ನು ಬರೆಯುವ ಕ್ರಮಗಳನ್ನು ಚೆನ್ನಾಗಿ ಬರೆದಿರುತ್ತೆ. ಇನ್ನೂ ಅನೇಕ ಪಕ್ಷಿ ಮೊದಲಾದ ಅಪೂರ್ವ ವಿಷಯಗಳನ್ನು ಬರೆದಿರುತ್ತೆ. ಎಲ್ಲಾ ಪಂಚಾಂಗಗಳಿಗಿಂತಲೂ ಚೆನ್ನಾಗಿದ್ದರೆ ಇಟ್ಟುಕೊಳ್ಳಿರಿ ಇಲ್ಲದಿದ್ದರೆ ವಾಪಸು ಕಳಿಸಿರಿ, ಕ್ರಯ ಪಂಚಾಂಗ ೧ ಕ್ಕೆ ೩ ಆಣೆ

ವಿಳಾಸ— ಎಂ. ಪುಟ್ಟಯ್ಯ, ಬ್ರೂಸ್ ಪೇಟೆ,
ಹರಪನಹಳ್ಳಿ (ಜಿಲ್ಲ ಬಳ್ಳಾರಿ)

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಳಪ್ರೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮೊಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮೆಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩. ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."
("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮ್ಮಿನ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ಸೆಂ. ಪ್ರೊ|| "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಮೈಸೂರ ಸ್ಟಾರಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧-೦
ಸರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂತಿಸ್ನ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೩—೦.
೨ ರಿಂದ ೪ ರವರಿಗೆ ೦—೧೦—೦.
ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೦—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲವಿಸ್ತಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧|| ಆಣೆ. ಕಾಲುಕಾಲವಿಸ್ತಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಊದಬತ್ತಿಗಳು.

29

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಅಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಅಣೆ; ಧೂಪದ ಗಟ್ಟಿ ೧ ಕ್ಕೆ ೨ ಅಣೆ. ಬಾಲಗ್ರಹಧೂಪ ಟಿನ ೧ ಕ್ಕೆ ೮ ಅಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

13 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮೊಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

24 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು

ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಬಾಧ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮೂಡಗಾಂವ್ಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

“ ಅಗತ್ಯ ವಿಚಾರ· ”

16 ವಿ. ಪಿ. ಯಿಂದ ೭ ಆಣೆ.

ಬೆಲೆ ೬॥ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ “ಅಗತ್ಯವಿಚಾರ” ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪಾ ಆರುಬೆರಳಿನ, ಪೋಸ್ಟ್-ಬಾಗೇವಾಡಿ. ಡಿ॥ ಬೆಳಗಾಂವ.

21

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ ನೇದು ರೂ. 3-8-0 ಮಾತ್ರ!! ೩ ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕ್ಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ· 2-8 0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

MOTORREGULATOR
LEVER
SWISS MADE

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನೀರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ· 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಲಿಂಗಿಚೆಟ್ಟಿ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಪಂಡಿತ ಎಸ್. ಗರಳಪುರಿ ಐಯರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
ಮೈಸೂರು.

58

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೩—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦—೧೦—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಸೆಪ್ಟೆಂಬರ್ ತಾ॥ ೨೫ ರಿಂದ ೧೯೧೧ ನೇ ಅಕ್ಟೋಬರ್ ತಾ॥ ೧ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಶ್ವಯುಜ ಶು॥ ತದಿಗೆಯಿಂದ ಆಶ್ವಯುಜ ಶು॥ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
25	ಸೋ	ತ	32-54	ಸ್ವಾ	58-42	9
26	ಮಂಗ	ಚೌ	35-6	ವಿಶಾ	60-0	10
27	[1] ಬುಧ	ಪಂ	38-24	ವಿಶಾ	3-29	11
28	ಗುರು	ಷ	42-43	ಅನೂ	8-23	12
29	[2] ಶುಕ್ರ	ಸ	47-13	ಜ್ಯೇ	14-14	13
30	ಶನಿ	ಅ	53-7	ಮೂ	21-9	14
1	[3] ಭಾನು	ನ	53-7	ಪೂಷಾ	27-43	15

(1) ಗಜಗೌರಿವ್ರತಂ ಉಪಾಂಗಲಲಿತಾವ್ರತಂ, (2) ಮಹಿಷಾಸುರಸಂಹಾರಿಣಿ, ಸರಸ್ವತೀಪೂಜಾ (3) ಮಹಾನವಮಿಸ್ವಾಯಂಭುವಮನುಃ,

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✵ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೆಯ ಇಸವಿ ಅಕ್ಟೋಬರ್ ತಾರೀಖು ೨ ನೆಯ ಸೋಮವಾರ. [ಸಂಚಿಕೆ ೪೦

೭೦ ಕಥೆಗಳು. ಸಚಿತ್ರ. ೪೧೨ ಪುಟಗಳು.

ಶುಕಸಪ್ತತಿ ಕಥೆಗಳು·

18

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ. ಚಿತ್ರ ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಮುದ್ರಾಪಟಗಳು; ದೊರೆಯುತ್ತವೆ. (೯)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

24

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯುಳ್ಳ. ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಉತ್ತಮ ಗ್ರಂಥಗಳು.

6

ಶಿವಸ್ತವಶಿರೋಮಣಿ— ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ಶೀಲಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

5

ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಜಪಾನ್ ಸಾಮ್ರಾಜ್ಯ ೦-೬-೦ ರಷ್ಯಾ ಜಪಾನ್ ಯುದ್ಧಗಳಲ್ಲಿ ಪ್ರಸಿದ್ಧವಾದ ಜಪಾನ್ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನರ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೬ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಗಳಿಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ತರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರು ಮೆಚ್ಚಿದಾರೆ.

(೪) ಬೋಧಕಕ್ರಮಸಂಗ್ರಹ ೧-೧-೬ ಮಾಸ್ತರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆನಡೆಸಬೇಕು. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯುವೆಚ್ಚ ಬೇರೆ.

ಜಿ ಕೃಷ್ಣಶಾಸ್ತ್ರಿ ಆ॥ ಮಾ॥ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

7

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಪ್ಲೇಗು ಮತ್ತೂ ಇನಾಕ್ಯುಲೇಷನ್.

(ಲೇಖಕ ಎಂ.ಎಂ. ಹರ್ಡೀಕರ್ ದಾವಣಗೆರೆ, ತಾ॥೨೯-೯-೧೧)

ಆಂಗ್ಲೇಯರ ಶಾಂತಪ್ರಭುತ್ವದಿಂದ ಸುಖದಿಂದಿರದೇ ಕೊಂಡಿಟ್ಟಿರುವ ಈ ಭಾರತೀಯರಿಗೆ ದಾರಿದ್ರ್ಯ, ಕ್ಷಾಮ, ಪ್ಲೇಗು ಮೊದಲಾದವುಗಳು ವಿಧವಿಧದಿಂದ ಪೀಡಿಸುತ್ತಿರುವುವೆಂಬ ವಿಷಯವು ಸಕಲರಿಗೂ ವೇದ್ಯವಾಗಿಯೇ ಇದೆ. ಸರಕಾರದವರಾದರೂ ಪ್ಲೇಗೊಂದನ್ನಾದರೂ ನಿಲ್ಲಿಸಬೇಕೆಂದು ಕೋಟ್ಯಂತರ ರೂಪಾಯಿಗಳನ್ನು ವ್ಯಯಮಾಡಿ ಅನಂತ ಉಪಾಯಗಳನ್ನು ಶೋಧಿಸಿರುವರು. ಅವುಗಳಲ್ಲೆಲ್ಲ ಸ್ಥಳಾಂತರವೊಂದುವುದೇ ಅತ್ಯಂತ ಪ್ರಯೋಜನಕರವೆಂದು ತೋರಿದಾಗ್ಯೂ, ದೊಡ್ಡ ಸ್ಥಳಗಳಿಗೆ ಇದು ಸಾಧ್ಯವಿಲ್ಲದ ಪ್ರಯುಕ್ತ "ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದೇ ಉತ್ತಮವೆಂದು ಅನೇಕ ಶಾಸ್ತ್ರಜ್ಞರ ಸಹಾಯದಿಂದ ನಿರ್ಧರಿಸಲ್ಪಟ್ಟಿದೆ. ಆರಂಭದಲ್ಲಿ ಜನಗಳಿಗೆ ಇನಾಕ್ಯುಲೇಷನು ಪ್ರಯೋಜನವಾದುದೆಂದು ತೋರಲಿಲ್ಲ. ಆ ಕಾಲಕ್ಕೆ ಜನಗಳು ತಿಳಿದುಕೊಂಡಿದ್ದಂತೆ ಇದು ತಕ್ಕಷ್ಟು ಸದೋಷವಾದುದಾಗಿಯೂ ಇದ್ದಿತು. ಆದರೆ ಇತ್ತೀಚೆಗೆ ಮಾಡಿದ ಸುಧಾರಣೆಯಿಂದ ಪ್ಲೇಗ್ ಪ್ರತಿಬಂಧಕ್ಕೆ ಇನಾಕ್ಯುಲೇಷನು ತಕ್ಕ ಉಪಾಯವೆಂದು ಜನಗಳಿಗೆ ತಿಳಿಯಲಾರಂಭಿಸಿರುತ್ತದೆ. ಬೊಂಬಾಯಿ ಪ್ರಾಂತದ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್‌ರವರು ಆ ಪ್ರಾಂತದ ಸಕಲ ಪತ್ರಿಕಾಕರ್ತರನ್ನು ಬರಮಾಡಿಕೊಂಡು ಇನಾಕ್ಯುಲೇಷನ್ ಮಾಡುವುದಕ್ಕೆ ಬೇಕಾಗತಕ್ಕ ಉಪಕರಣಗಳನ್ನು ಎಷ್ಟು ಶೋಧಕ ಬುದ್ಧಿಯಿಂದಲೂ, ಎಚ್ಚರಿಕೆಯಿಂದಲೂ ಸಿದ್ಧಗೊಳಿಸುತ್ತಾರೆಂಬುದನ್ನು ತೋರ್ಪಡಿಸಿ, ಇದರಲ್ಲಿ ಯಾವ ವಿಧವಾದ ಅಪಾಯವಾಗುವ ಪದಾರ್ಥಗಳೂ ಸೇರುವುದಿಲ್ಲವೆಂದು ಪತ್ರಿಕಾ ಕರ್ತರಿಗೆ ಮನವರಿಕೆಯಾಗುವಂತೆ ಮಾಡಿದ್ದರಿಂದ ಬೊಂಬಾಯಿ ಪ್ರಾಂತದಲ್ಲಿ ಕ್ಷಿಪ್ರದಲ್ಲಿಯೇ ಇನಾಕ್ಯುಲೇಷನು ಪ್ರಯೋಜನವಾದುದೆಂದು ಜನಗಳಿಗೆ ನಂಬಿಗೆಯಾಯಿತು. ಆ ಪ್ರಾಂತದಲ್ಲಿ ಸನ್ ೧೯೦೬ ನೆಯ ಇಸವಿಯಲ್ಲಿ ಇನಾಕ್ಯುಲೇಷನ್ನಿಗೆ ಬೇಕಾಗತಕ್ಕ ರಸ (ಸೀರಂ) ೧॥ ಲಕ್ಷ ಡೋಸ್ ಸಿದ್ಧಗೊಳಿಸಲ್ಪಟ್ಟಿದ್ದಿತು. ಆದರೆ ೧೯೧೦ ನೆಯ ಇಸವಿಯಲ್ಲಿ ೩॥ ಲಕ್ಷ ಡೋಸ್ ಸಿದ್ಧಗೊಳಿಸಲ್ಪಡಬೇಕಾಯಿತು. ಇದರ ಮೇಲಿಂದ ಆ ಪ್ರಾಂತದಲ್ಲಿ ಇನಾಕ್ಯುಲೇಷನ್ನು ಎಷ್ಟು ಲೋಕಪ್ರಿಯವಾಗಿದೆಯೆಂದು ವ್ಯಕ್ತವಾಗುತ್ತದೆ.

ಪ್ರಕೃತ ದಾವಣಗೆರೆಯಲ್ಲಿ ಪ್ಲೇಗು ಉಲ್ಬಣಸ್ಥಿತಿಯಲ್ಲಿಯೇ ಇದೆ. ಇಲ್ಲಿಯ ಅಮಲ್ದಾರ್ ಮ॥ ವೆಂಕಟೇಶಯ್ಯನವರು ಇನಾಕ್ಯುಲೇಷನ್ ವಿಷಯವಾಗಿ ಜನಗಳಿಗೆ ಬೋಧಿಸುತ್ತಾ ತುಂಬಾ ಪ್ರೋತ್ಸಾಹಪಡಿಸುತ್ತಿರುವುದು ಅವರಿಗೆ ಅತ್ಯಂತಭೂಷಣವಾದುದೇ ಸರಿ. ಡಾಕ್ಟರರಾದ ಮ॥ ರಾಜಗೋಪಾಲಮೊದಲಿಯಾರ್‌ರವರಾದರೋ ಇನಾಕ್ಯುಲೇಷನ್ ವಿಷಯವಾಗಿ ಜನಗಳಿಗೆ ಮಾಡುತ್ತಿರುವ ಉಪದೇಶವೂ, ಪ್ಲೇಗ್ ರೋಗಿಗಳ ರೋಗ ನಿವಾರಣೆಗಾಗಿ ಹಗಲಿರುಳು ಮಾಡುತ್ತಿರುವ ಪ್ರಯತ್ನವೂ, ಗ್ರಾಮಾಂತರಗಳಿಗೆಲ್ಲಾ ಹೋಗಿ ಮಾಡುತ್ತಿರುವ ಶೋಧನವೂ ಅತ್ಯಂತ ಶ್ಲಾಘ್ಯವಾದುವುಗಳಾಗಿವೆ. ಸರಕಾರಿಯ ನೌಕರರು ಕೇವಲ ಧನಭಿಕ್ಷುಕರಾಗದೆ ಜನರಕ್ಷಕರಾದರೆ ಎಷ್ಟು ಹಿತವಾಗುತ್ತದೆಂಬುದನ್ನು ಮ॥ ರಾಜಗೋಪಾಲ ಮೊದಲಿಯಾರರವರು ತಮ್ಮ ದೃಷ್ಟಾಂತದಿಂದ ಮಾಡಿ ತೋರಿಸುತ್ತಿರುವ ಕ್ರಿಯೆಯೇ ನಮ್ಮನ್ನು ಈ ಲೇಖನ ಬರೆಯುವಂತೆ ಮಾಡಿತು. ಇಂತಹ ಕಷ್ಟಕಾಲದಲ್ಲಿ ಅನಾಥರಾದಿಯಾಗಿ ಸಕಲ ಪ್ಲೇಗ್ ರೋಗಿಗಳನ್ನು ತಮ್ಮ ಬಂಧುಗಳಂತೆ ಕಾಪಾಡುತ್ತಿರುವ ಮ॥ ರಾಜಗೋಪಾಲ ಮೊದಲಿಯಾರ್‌ರವರಿಗೆ ಎಲ್ಲರೂ ಕೃತಜ್ಞರಾಗಿರತಕ್ಕದ್ದು ಉಚಿತವಾಗಿದೆ. ಮ॥ ರಾಜಗೋಪಾಲ ಮೊದಲಿಯಾರರಂತೆ ತಮ್ಮ ಕರ್ತವ್ಯವನ್ನು ಮಾಡಿದರೆ ಎಷ್ಟು ಹಿತಕರವಾಗುತ್ತದೆಂಬುದು ಸರಕಾರದವರಿಗೂ, ಸರಕಾರಿಯಧಿಕಾರಿಗಳಿಗೂ ಗೊತ್ತಾಗಲೆಂದೇ ಈ ಲೇಖನದಲ್ಲಿ ಮ॥ ಮೊದಲಿಯಾರರ ಕಾರ್ಯದಕ್ಷತೆಯನ್ನು ಅರಿಕೆ ಮಾಡಬೇಕಾಯಿತು. ಇನಾಕ್ಯುಲೇಷನ್ನಿನಿಂದ ಎಷ್ಟು ಹಿತವಾಗುತ್ತದೆಂಬುದನ್ನು ಅನೇಕ ಪ್ರಾಂತಗಳಲ್ಲಿ ಬಂದ ಅನುಭವವನ್ನನುಸರಿಸಿ ಇದರಡಿಯಲ್ಲಿ ಉದಾಹರಿಸಿರುತ್ತೇವೆ. ಇದನ್ನು ಸುಜ್ಞರಾದ ವಾಚಕರು ಅರಿತುಕೊಂಡು ಪ್ಲೇಗ್ ಕಾಲದಲ್ಲಿ ತಾವು ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದಲ್ಲದೆ ಅನ್ಯರು ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ದಾವಣಗೆರೆಯಲ್ಲಿ ೯೯೬೯ ಜನಗಳು ವಾಸಿಸುತ್ತಾರೆ. ಇವರಲ್ಲಿ ೧೦೩೯ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಅವರಲ್ಲಿ ೯ ಜನರಿಗೆ ಪ್ಲೇಗ್ ತಗಲಿ ಒಬ್ಬನು ಮಾತ್ರ ಮೃತಪಟ್ಟನು. ಇನಾಕ್ಯುಲೇಷನ್ ಮಾಡಿಸಿಕೊಳ್ಳದೇ ಇರತಕ್ಕವರಲ್ಲಿ ೩೪೮ ಜನಗಳಿಗೆ ಪ್ಲೇಗ್ ತಗಲಿ ೨೩೩ ಜನಗಳು ಮೃತಪಟ್ಟರು. ಇನಾಕ್ಯುಲೇಷನ್ ಮಾಡಿಸಿಕೊಂಡವರ ಪ್ರಮಾಣದಂತೆ ನೋಡಿದರೆ ೪—೯ ಜನಗಳು ಮಾತ್ರ ಮೃತಪಡಬೇಕಾಗಿದ್ದಿತು. ಆದರೆ ೨೩೩ ಜನರು ಮೃತಪಟ್ಟಿರುವುದು ಎಷ್ಟು ಭಯಂಕರವಾದುದು! ಆದಪ್ರಯುಕ್ತ ಬಂಧುಗಳೇ! ಈ ಮೃತ್ಯುವಿನ ಬಾಯಿಯಲ್ಲಿ ಬೀಳದೆ ಇನಾಕ್ಯುಲೇಷನ್ ಮಾಡಿಸಿಕೊಂಡು ಬದುಕಬಾರದೆ?

ಮೈಸೂರಿನಲ್ಲಿ ೪೫೨ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ. ಅವರಲ್ಲಿ ೪ ಜನಗಳಿಗೆ ಪ್ಲೇಗು ತಗಲಿತು. ಒಬ್ಬನು ಮೃತಪಟ್ಟನು. ಉಳಿದ ೩೦೮೩ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡಿರುವುದಿಲ್ಲ. ಅವರಲ್ಲಿ ೨೦೩ ಜನಗಳಿಗೆ ಪ್ಲೇಗ್ ತಗಲಿತು. ೨೩ ಜನಗಳು ಮೃತಪಟ್ಟಿರುತ್ತಾರೆ. ಎಂದು ಮೈಸೂರು ಆರೋಗ್ಯಶಾಖೆಯವರು ಪ್ರಕಟಿಸಿರುವ ವಿಷಯದಿಂದ ಗೊತ್ತಾಗುತ್ತದೆ. ಆದಪ್ರಯುಕ್ತ ಇನಾಕ್ಯುಲೇಷನು ಪ್ರಯೋಜನವಾದುದಲ್ಲವೆ? ಇದರಿಂದಾಗತಕ್ಕ ಪ್ರಯೋಜನವನ್ನು ಏಕೆಹೊಂದಬಾರದು?

ಕರಾಚಿ ಮ್ಯುನಿಸಿಪಾಲಿಟಿಯವರು ತಮ್ಮ ಆರೋಗ್ಯ ಶಾಖೆಯಲ್ಲಿ ೧೧೦ ಜನಗಳಿಗೆ ಇನಾಕ್ಯುಲೇಷನ್ ಮಾಡಿದರು. ಅವರಲ್ಲಿ ೩೩ ಜನಗಳು ಕರಾಚಿಯನ್ನು ಬಿಟ್ಟು ಅನ್ಯಸ್ಥಳಕ್ಕೆ ಹೋದರು. ೩ ಜನಗಳು ಅನ್ಯರೋಗದಿಂದ ಮೃತಪಟ್ಟರು. ಉಳಿದ ೧೧೪ ಜನಗಳಲ್ಲಿ ೩ ಜನಗಳಿಗೆ ಮಾತ್ರ ಪ್ಲೇಗ್ ತಗಲಿ ಒಬ್ಬನು ಮಾತ್ರ ಮೃತಪಟ್ಟನು. ಅದೇ ಶಾಖೆಯ ೧೨೨ ಜನರು ಮಾತ್ರ ಇನಾಕ್ಯುಲೇಷನ್ ಮಾಡಿಸಿಕೊಳ್ಳಲಿಲ್ಲ. ಅವರಲ್ಲಿ ನಾಲ್ಕು ಜನಗಳಿಗೆ ಪ್ಲೇಗ್ ತಗಲಿ ನಾಲ್ವರೂ ಮೃತಪಟ್ಟರು. ಇದರಮೇಲಿಂದಲೂ ಇನಾಕ್ಯುಲೇಷನ್ನು ಪ್ರಯೋಜನವಾದುದೆಂದು ವ್ಯಕ್ತವಾಗುವುದಿಲ್ಲವೆ?

ನಾಗಪುರದಲ್ಲಿ ಪ್ಲೇಗಿನಿಂದ ಪ್ರತಿದಿನ ೨೦೦ ಜನಗಳಂತೆ ಮೃತಪಡುವ ಉಲ್ಬಣಸ್ಥಿತಿಯಿರುವಾಗ ಇನಾಕ್ಯುಲೇಷನ್ನಿನಿಂದ ಯಾವ ಪ್ರಯೋಜನವಾಯಿತೆಂಬುದನ್ನು ಮ॥ ರೆಗಿ ಎಂಬುವರು ಪರಿಶೋಧಿಸಿ ಪ್ರಕಟಿಸಿರುವರು. ಮ॥ ರೆಗಿಯವರು ಹೇಳುವುದೇನೆಂದರೆ— "ಎಂಪ್ರೆಸ್‌ಮಿಲ್" ಎಂಬ ಕಾರ್ಖಾನೆಯಲ್ಲಿ ೩೩೦೮ ಜನಗಳಿಗೆ ಇನಾಕ್ಯುಲೇಷನ್ ಮಾಡಿದುದರಿಂದ ಅವರಲ್ಲಿ ೩೮ ಜನಗಳಿಗೆ ಪ್ಲೇಗು ತಗಲಿ ೧೦ ಜನಗಳು ಮಾತ್ರ ಮೃತಪಟ್ಟರು. ಇನಾಕ್ಯುಲೇಷನ್ ಮಾಡಿಸಿಕೊಳ್ಳದ ೧೦೫೩೮೩ ಜನಗಳಲ್ಲಿ ೩೩೫೦ ಜನಗಳಿಗೆ ಪ್ಲೇಗು ತಗಲಿ ೩೨೫೩ ಜನಗಳು ಮೃತಪಟ್ಟರು. ಮೇಲ್ಕಾಣಿಸಿದ ಪ್ರಮಾಣದಂತೆ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರೆ ೭೫ ಜನಗಳು ಮಾತ್ರ ಮೃತಪಡುತ್ತಿದ್ದರು. ಇನಾಕ್ಯುಲೇಷನ್ ಮಾಡಿಸಿಕೊಳ್ಳದಿದ್ದುದರಿಂದ ೭೫ ಜನರಿಗೆ ಬದಲಾಗಿ ೩೨೫೩ ಜನರು ಮೃತಪಟ್ಟರು. ವಾಚಕರೆ! ಆ ಅಜ್ಞರಿಗಾದ ಗತಿಯನ್ನು ನೋಡಿದಿರೊ? ಆದುದರಿಂದಲೇ ಜಗದ್ವಿಖ್ಯಾತರಾದ ಬರೋಡಾ ಗಾಯಕವಾಡ ಮಹಾರಾಜರವರು "ದುಡ್ಡಿನ ಬಡತನವಾದರೂ ಲೇಸು; ಬುದ್ಧಿಯ ಬಡತನವು ಮಾತ್ರ ಬೇಡ" ಎಂದು ಹೇಳಿರುತ್ತಾರೆ. ಆದಪ್ರಯುಕ್ತ ಸುಜ್ಞರಾಗಿ ಇನಾಕ್ಯುಲೇಷನ್ನಿನಿಂದ ಪ್ಲೇಗ್ ರೋಗವನ್ನು ನಿಲ್ಲಿಸುವುದುಚಿತವಲ್ಲವೆ?

ಧಾರವಾಡದ ಪೋಲೀಸ್ ಆಳುಗಳಲ್ಲಿ ೩೩೪ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಇವರಲ್ಲಿ ಒಬ್ಬನೂ ಮೃತಪಡಲಿಲ್ಲ. ಆದರೆ ಇದೇ ಶಾಖೆಯ ೭೫ ಜನಗಳು ಮಾತ್ರ ಇನಾಕ್ಯುಲೇಷನ್ ಮಾಡಿಸಿಕೊಳ್ಳದಿದ್ದುದರಿಂದ ಒಬ್ಬನು ಮೃತಪಟ್ಟನೆಂದು ಬೊಂಬಾಯಿ ಬ್ಯಾಕ್ಟೀರಿಯಾಲಾಜಿಕಲ್ ಲೇಬೊರೇಟರಿಯ ಡೈರೆಕ್ಟರ್ ಮ॥ ಕರ್ನಲ್ ಬಾನರ್‌ಮನ್ ಎಂಬುವರು ಪ್ರಕಟಿಸಿರುತ್ತಾರೆ. ಆದಪ್ರಯುಕ್ತ ಪ್ಲೇಗ್ ಪ್ರತಿಬಂಧಕ್ಕೆ ಇನಾಕ್ಯುಲೇಷನ್ನು ಒಳ್ಳೆಯ ಮದ್ದೆಂದು ಸಿದ್ಧವಾಗುವುದಿಲ್ಲವೆ?

ಧರ್ಮಪುರಿಯಲ್ಲಿ ಪ್ಲೇಗ್ ತಗಲಿದಾಗ್ಗೆ ಆದ ಅನುಭವವನ್ನು ಕುರಿತು ಮ॥ ಬಾನರ್‌ಮನ್ ಎಂಬುವರು ಪ್ರಕಟಿಸಿರುವುದೇನೆಂದರೆ— ಧರ್ಮಪುರಿಯಲ್ಲಿ ೧೦೩೮ ಜನಗಳಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿತು. ಅವರಲ್ಲಿ ೭೮ ಜನಗಳಿಗೆ ಪ್ಲೇಗ್ ತಗಲಿ ಒಬ್ಬನುಮಾತ್ರ ಮೃತಪಟ್ಟನು. ಆದರೆ ಉಳಿದ ೭೪೦ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಳ್ಳಲಿಲ್ಲ. ಆದಪ್ರಯುಕ್ತ ಅವರಲ್ಲಿ ೭೧೯ ಜನಗಳಿಗೆ ಪ್ಲೇಗ್ ತಗಲಿ ೧೩೫ ಜನಗಳು ಮೃತಪಟ್ಟರು. ಮೇಲ್ಕಾಣಿಸಿದ ಪ್ರಮಾಣದಂತೆ ಉಳಿದಜನಗಳೂ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರೆ ೭-೮ ಜನಗಳು ಮಾತ್ರ ಮೃತಪಡುತ್ತಿದ್ದರು. ಆದರೆ ಇನಾಕ್ಯುಲೇಷನ್ ಮಾಡಿಸಿಕೊಳ್ಳದಿದ್ದುದರಿಂದ ೮ ಜನಗಳ ಬದಲಾಗಿ ೧೩೫ ಜನಗಳು ಮೃತಪಟ್ಟರು. ವಾಚಕರೆ! ಇನಾಕ್ಯುಲೇಷನ್ನಿನ ಅಭಾವದಿಂದ ಎಂತಹ ಶೋಚನೀಯ ಸ್ಥಿತಿಯು ಪ್ರಾಪ್ತವಾಗುತ್ತದೆಂದು ನೋಡಿದಿರೊ? ಆದಪ್ರಯುಕ್ತ ಇನಾಕ್ಯುಲೇಷನ್ನಿಗೆ ಪ್ರೋತ್ಸಾಹವನ್ನಿತ್ತು ನಿಮ್ಮ ದೇಶಬಾಂಧವರನ್ನು ಪ್ಲೇಗಿನ ಬಾಯಿಂದ ತಪ್ಪಿಸಿರಿ.

ಮದ್ರಾಸ್ ಪ್ರಾಂತದ ವಿಷಯವಾಗಿ ಮ॥ ಬಾನರ್‌ಮನ್‌ರವರು ಪ್ರಕಟಿಸಿರುವುದೇನೆಂದರೆ:— ಪಳನಿ ಎಂಬಲ್ಲಿ ಪ್ಲೇಗು ಬಹು ಉಲ್ಬಣಸ್ಥಿತಿಯಲ್ಲಿರುವಾಗ ೧೩೪೭ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. ಅವರಲ್ಲಿ ೬೩ ಜನಗಳು ಪ್ಲೇಗಿನಿಂದ ಮೃತಪಟ್ಟರು. ಆದರೆ ೩೦೩೮ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಳ್ಳದ್ದರಿಂದ ಅವರಲ್ಲಿ ೧೩೭ ಜನಗಳು ಮೃತಪಟ್ಟರು. ಕಾಲಿಕಲ್ ಎಂಬಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡ ಜನಗಳಲ್ಲಿ ಒಬ್ಬನೂ ಮೃತಪಡಲಿಲ್ಲ. ಪಾಲಘಾಟ್ ಎಂಬಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡ ೧೧೭೩೮ ಜನಗಳಲ್ಲಿ ಒಬ್ಬನು ಮಾತ್ರ ಮೃತಪಟ್ಟನು. ಇದರಮೇಲಿಂದ ಪ್ಲೇಗ್ ಪ್ರತಿಬಂಧಕ್ಕೆ ಇನಾಕ್ಯುಲೇಷನ್ನಿನ ವಿನಹಾ ಅನ್ಯ ಉಪಾಯವೇ ಇಲ್ಲವೆಂದು ವ್ಯಕ್ತವಾಗುವುದಿಲ್ಲವೆ? ಆದುದರಿಂದಲೇ ಮ॥ ಬಾನರ್‌ಮನ್‌ರವರ ಮೇಲ್ಕಾಣಿಸಿದ ಅತ್ಯಂತ ಪ್ರಯೋಜಕವಾದ ವಿಷಯವನ್ನು ನೋಡಿ ಮದ್ರಾಸಿನ 'ಹಿಂದು' ಪತ್ರಿಕಾಕರ್ತರು ಪ್ಲೇಗ್ ಪ್ರತಿಬಂಧಕ್ಕೆ ಇನಾಕ್ಯುಲೇಷನ್ನು ಉತ್ತಮೋತ್ತಮಸಾಧನವೆಂದು ಹೇಳಿರುತ್ತಾರೆ

ಸರ್ಕಾರದವರು ಗಮನಿಸಬೇಕಾದ ವಿಷಯವು.

ಇನಾಕ್ಯುಲೇಷನ್ ವಿಷಯದಲ್ಲಿರತಕ್ಕ ಇತರ ನ್ಯೂನತೆಗಳನ್ನು ಶಾಸ್ತ್ರಜ್ಞರ ಸಹಾಯದಿಂದ ಹೋಗಲಾಡಿಸಬೇಕು. ಅಲ್ಲದೆ ಮೈಲೀ ಸಿಡುಬು ರೋಗಕ್ಕೆ ಹೇಗೆ ಒಂದಾವರ್ತಿ ಮೈಲಿ ಹಾಕಿದರೆ ಸಾಕಾಗಿದೆಯೋ ಅದರಂತೆಯೇ ಪ್ಲೇಗಿಗೂ ಇನಾಕ್ಯುಲೇಷನ್ನನ್ನು ಒಂದಾವರ್ತಿ ಮಾಡಿಸಿಕೊಂಡನಂತರ ಪುನಃ ಆರಾರು ತಿಂಗಳಿಗೊಮ್ಮೆ ಮಾಡಿಸಿಕೊಳ್ಳುವ ಅಗತ್ಯವಿಲ್ಲದಂತೆ ಸುಧಾರಿಸುವುದು ಶಾಸ್ತ್ರಜ್ಞರಿಗೂ, ಸರಕಾರದವರಿಗೂ ಪ್ರಥಮಕರ್ತವ್ಯವಾಗಿರಬೇಕು. ಮತ್ತೂ ಪ್ರಕೃತ ಮೃತಪಡುವವರ ಸಂಖ್ಯೆಯು ಸಾವಿರಕ್ಕೆ ಏರಿರುವುದನ್ನು ಕಾಣದ ದಿನವೇ ಸುದಿನವೆಂದು ತಿಳಿಯಬೇಕು. ಅಂದಿಗೆ ಸರ್ಕಾರದವರ ಕಾರ್ಯವು ಪೂರೈಸಿದಂತಾಗುವುದು. ಪ್ರಕೃತದಲ್ಲಿ ಇನಾಕ್ಯುಲೇಷನ್ ಪ್ರಸಾರವಾಗುವುದಕ್ಕಾಗಿ ಈ ಕೆಳಗಿನ ನಿಯಮಗಳನ್ನು ಸರ್ಕಾರದವರು ಆಚರಣೆಗೆ ತರುವುದು ಅತ್ಯಾವಶ್ಯಕವು. (೧) ಇನಾಕ್ಯುಲೇಷನ್ನಿಗೆ ಭೂತದಯೆಯುಳ್ಳವರೂ, ಸಮಾಧಾನಿಗಳೂ, ಜನರಂಜಕರೂ, ತಮ್ಮ ಕರ್ತವ್ಯದ ಮಹತ್ವವನ್ನರಿತವರೂ ಆದಂತಹ ಡಾಕ್ಟರುಗಳನ್ನೇ ನಿಯಮಿಸಬೇಕು. (೨) ಪ್ಲೇಗ್ ಪ್ರಾರಂಭವಾಗುತ್ತದೆಂದು ತೋರಿದೊಡನೆ ಆ ಸ್ಥಳದ ಪ್ರಮುಖ ಜನಗಳನ್ನು ಸೇರಿಸಿ ತಾಲ್ಲೂಕಿನ ಅಥವಾ ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಗಳು ಆ ಸಭೆಗೆ ಅಧ್ಯಕ್ಷರಾಗಿ ಪ್ಲೇಗ್ ಉತ್ಪತ್ತಿಯ ವಿಷಯದಲ್ಲಿಯೂ, ಇದು ಪ್ರಸಾರವಾಗುವ ವಿಷಯದಲ್ಲಿಯೂ ಇದನ್ನು ಪ್ರತಿಬಂಧಪಡಿಸಲು ಇನಾಕ್ಯುಲೇಷನ್ ಎಷ್ಟು ಪ್ರಯೋಜನವಾದುದೆಂದು ಅನೇಕ ಕಡೆಯಲ್ಲಿ ಬಂದ ಅನುಭವವನ್ನು ಸಂಖ್ಯಾಮೂಲಕವಾಗಿಯೂ, ಇನಾಕ್ಯುಲೇಷನ್ ಹೇಗೆಮಾಡುತ್ತೇವೆ, ಇದರಲ್ಲಿ ಯಾವವಿಧವಾದ ಉಪಕರಣಗಳನ್ನು ಸೇರಿಸುತ್ತೇವೆ, ಇದನ್ನು ಹೇಗೆ ಸಿದ್ಧಗೊಳಿಸುತ್ತೇವೆ ಎಂಬ ಸಂಪೂರ್ಣ ಸಂಗತಿಯನ್ನು ಡಾಕ್ಟರರು ಉಪನ್ಯಾಸಮೂಲಕವಾಗಿಯೂ ಚೆನ್ನಾಗಿ ಬೋಧಿಸಿ, ಸ್ಥಳಾಧಿಕಾರಿಗಳು ಆ ಜನಗಳ ಸಮುಖದಲ್ಲಿಯೇ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕು. (೩) ಆಯಾ ಡಿಸ್ಟ್ರಿಕ್ಟಿನಲ್ಲಿ ಇನಾಕ್ಯುಲೇಷನ್ ವಿಷಯವಾಗಿ ಪ್ರಕಟವಾಗುವ ಸಂಗತಿಯನ್ನು ಸಂಗ್ರಹಿಸಿ ವರ್ಷಕ್ಕೊಂದಾವರ್ತಿ ಆಯಾಯ ಗೌರ್ನಮೆಂಟಿನವರು ಸಣ್ಣ ಸಣ್ಣ ಪುಸ್ತಕರೂಪವಾಗಿ ಮುದ್ರಿಸಿ ಅವುಗಳನ್ನು ಸ್ಥಳಾಧಿಕಾರಿಗಳಿಂದ ಗ್ರಾಮಾಂತರಗಳಲ್ಲಿ ಹಂಚಿಸಬೇಕು.

ಜನರು ಲಾಲಿಸಬೇಕಾದದು.

ರೋಗಾದಿಗಳು ಬಂದರೆ ದೈವದಲ್ಲಿದ್ದಂತಾಗಲಿ ಎಂದು ಔಷಧಿಯನ್ನು ತೆಗೆದುಕೊಳ್ಳದೆ ಚೌಡವ್ವ, ದುರ್ಗವ್ವ, ಬೀರಪ್ಪ ಮೊದಲಾದ ಮೂರ್ತಿಗಳಿಗೆ ನಡೆದುಕೊಳ್ಳತಕ್ಕ ಜನಗಳೇ ಅಧಿಕ. ಪ್ಲೇಗ್ ಕಾಲದಲ್ಲಂತೂ ಪ್ಲೇಗಮ್ಮನನ್ನು ಕಳಿಸುತ್ತೇವೆಂತಲೂ, ಆ ಮಹಾದೇವಿಯು ಏನುಮಾಡುತ್ತಾಳೋ ಮಾಡಲಿ ಎಂಬುದಾಗಿಯೂ ಯಾವ ವಿಧವಾದ ಪ್ರಯತ್ನವನ್ನೂ ಮಾಡದೆ ಮೃತ್ಯುವಿನ ಬಾಯಿಗೆ ತುತ್ತಾಗುತ್ತಿರುವ ಜನಗಳ ಅಜ್ಞಾನವನ್ನು ನೋಡಿದರೆ ಆನರಬಲ್ ಗೋಖಲೆಯವರ 'ಶಿಕ್ಷಣವಿಲ್ಲದ' ಮಹತ್ವವು ಜ್ಞಾಪಕವಾಗುತ್ತದೆ. ಯಾವ ದೇವರು ಈ ರೋಗಾದಿಗಳನ್ನುಂಟುಮಾಡುತ್ತಾನೆಂದು ಈ ಜನಗಳು ನಂಬುತ್ತಾರೆಯೋ ಆ ದೇವರೇ ಮನುಷ್ಯನು ರೋಗದಿಂದ ನಿವೃತ್ತನಾಗಲೆಂದು ಔಷಧಿಯನ್ನೂ ಜ್ಞಾನವನ್ನೂ ಕೊಟ್ಟಿರುವುದಿಲ್ಲವೆ? ಅವುಗಳನ್ನು ಉಪಯೋಗಿಸಿಕೊಂಡು ನಾವು ದುಃಖದಿಂದ ಪಾರಾಗದಿದ್ದರೆ ಆ ದೇವರು ಕೊಟ್ಟ ಸಲಕರಣೆಗಳ ಪ್ರಯೋಜನವೇನಾಯಿತು? ಪ್ಲೇಗು ಅಂಟುರೋಗವಲ್ಲವೆಂತಲೂ, ದೈವದಲ್ಲಿದ್ದವರಿಗೆ ಮಾತ್ರ ಆಗುತ್ತದೆಂತಲೂ ಅಸಂಖ್ಯಾತ ಜನಗಳು ಸ್ಪರ್ಶ, ಶಯನ, ಭೋಜನಾದಿಗಳಲ್ಲಿ ತುಂಬಾ ನಿರ್ಲಕ್ಷ್ಯದಿಂದ ಇರುತ್ತಾರೆ. "ಏಕಾನಿಕುರುತೇಫಲಂ ಭುಂಕ್ತೇಮಹಾಜನಃ" ಎಂಬಂತೆ ಇಂತಹ ಅಜ್ಞರ ಕಾರ್ಯದಿಂದ ಬಹುಜನಗಳಿಗೆ ದುಃಖಪ್ರಾಪ್ತವಾಗುತ್ತದೆ. ಲಂಬಾಣಿ, ಕೊರಚರೇ ಮೊದಲಾದ ಗ್ರಾಮಾಂತರದಲ್ಲಿರತಕ್ಕ ಅತ್ಯಂತ ಹೀನಾವಸ್ಥೆಯ ಜನಗಳಿಗೆ ಈ ರೋಗವು ಹೇಗೆ ಪ್ರಾಯಶಃ ಅಂಟಿರುವುದಿಲ್ಲವೋ, ಅದರಂತೆಯೇ ದುಡ್ಡಿಗಿಂತಲೂ ಪ್ರಾಣವೇ ಶ್ರೇಷ್ಠವೆಂದರಿತ ತುಂಬಾ ಶ್ರೀಮಂತರಿಗೂ ಪ್ರಾಯಶಃ ಈ ರೋಗವು ಅಂಟಿರುವುದಿಲ್ಲ. ಅಲ್ಲದೆ ದಾರಿದ್ರ್ಯದಿಂದಲೂ, ಅಶುಚಿಯಿಂದಲೂ, ಭೋಜನಾದಿಪದ್ಧತಿಯಿಂದಲೂ ಈ ಪ್ಲೇಗಿಗೆ ಮುಸಲ್ಮಾನ ಜನಗಳೇ ವಿಶೇಷವಾಗಿ ಆಹುತಿಯಾಗುತ್ತಿರುವುದು ಪ್ರತಿಯೊಬ್ಬರಿಗೂ ವೇದ್ಯವಾದ ವಿಷಯವೇ ಆಗಿದೆ. ಆದಪ್ರಯುಕ್ತ ಬಂಧುಗಳೇ! ನಿಮ್ಮ ಮೂಢ ನಂಬುಗೆಯನ್ನು ಬಿಡಿರಿ. ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಕಸಕ್ಕಿಂತ ಕಡೆಯಾಗಿ ಈ ರೀತಿ ಕಳೆದುಕೊಳ್ಳಬೇಡಿರಿ. ಇನಾಕ್ಯುಲೇಷನ್ ಮಾಡಿಸಿಕೊಂಡು ಪ್ಲೇಗಿನಿಂದ ಪಾರಾಗುವಿರೆಂದು ಕೋರುತ್ತೇವೆ.

ಮೈಸೂರ ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಮೊದಲನೆಯ ಮಹಾಸಭೆಯು.

ನಾವು ಕಳೆದವಾರ ತಿಳಿಸಿದಂತೆ ಈ ಮಹಾಸಭೆಯು ರಾಜಧಾನಿಯ ದರ್ಬಾರಿನಲ್ಲಿ ಕಳೆದ ತಾ॥ ೨೬ ರ ಮಧ್ಯಾಹ್ನ ೧ ಗಂಟೆಯಲ್ಲಿ ಆರಂಭಿಸಲ್ಪಟ್ಟು ತಾ॥ ೨೮ ರ ವರೆಗೆ ನಡೆಯಿಸಲ್ಪಟ್ಟಿತು. ದಿವಾನರು, ೧ ನೆಯ ಕೌನ್ಸಿಲರು ಹಿಂದೆ ಕೌನ್ಸಿಲರಾಗಿದ್ದ ಮ॥ ಸಿ. ಶ್ರೀನಿವಾಸಯ್ಯಂಗಾರರು, ರೆ॥ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ರಾ॥ಬ॥ ಮ॥ ಎ. ರಂಗಸ್ವಾಮಯ್ಯಂಗಾರರು, ರಾ॥ ಬ॥ ಮ॥ ಅಂಬಿಲ್ ನರಸಿಂಹಯ್ಯಂಗಾರರು, ಮ॥ ಎ ಎನ್. ನರಸಿಂಹಯ್ಯಂಗಾರರು, ಡೆ॥ ಕ॥ ಮ॥ ಎಂ. ಕಾಂತರಾಜಅರಸಿನವರು ಮತ್ತೆ ಕೆಲರು ಎತ್ತರವಾದ ಸ್ಥಳದಲ್ಲೇರ್ಪಡಿಸಿದ್ದ ಆಸನಗಳನ್ನಲಂಕರಿಸಿದ್ದರು. ಅದರ ಕೆಳಭಾಗದಲ್ಲಿ ತುಮಕೂರ ಡೆ॥ ಕ॥ ಮ॥ ಎಂ. ಶಾಮರಾಯರು, ಜ॥ ಮತ್ತೂ ರೆ॥ ಸೆಕ್ರಟರಿ ಮ॥ ಬಾಲಸುಂದರಂ ಅಯ್ಯರ್‌ರವರು, ಅಂಡರ್ ಸೆಕ್ರಟರಿಗಳಾದ ಮ॥ ಕೆ. ಮಥಾರ್‌ರವರು, ಮ॥ ಬಿ. ರಾಮಸ್ವಾಮಯ್ಯನವರು, ಅಮೃತಮಹಲಿನ ಶಾಖಾ ಸೂಪರಿಂಟೆಂಡೆಂಟರಾದ ಮ॥ಎಚ್. ನಂಜುಂಡರಾಜ ಅರಸಿನವರು, ಸಿಟಿ ಮ್ಯಾಜಿಸ್ಟ್ರೇಟರು ಮ॥ ಪಿ. ಶ್ರೀನಿವಾಸರಾಯರು, ವೈಸ್ ಪ್ರೆಸಿಡೆಂಟರಾದ ಮ॥ ಎಂ. ಜಿ. ಕೃಷ್ಣಸ್ವಾಮಿರಾಯರು ಮೊದಲಾದ ಸರ್ಕಾರಿಯಧಿಕಾರಿಗಳು, ಮ॥ ಗಳಾದ ಅಂಬಳೆ ಅಣ್ಣಯ್ಯಪಂಡಿತರು, ಎಂ. ವೆಂಕಟಕೃಷ್ಣಯ್ಯನವರು, ಪುಟ್ಟಯ್ಯಾಜಿ ಅರಸಿನವರು, ಹಿಂದೆ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಮ॥ ಮಹಮ್ಮದ್ ಜಾಫರ್ ಸಾಹೇಬರು ಮೊದಲಾದ ದೊಡ್ಡ ಮನುಷ್ಯರುಗಳೂ ಕುಳಿತಿದ್ದರು. ಶ್ರೀಮದ್ಯುವರಾಜರವರು ಪ್ರೈವೆಟ್ ಸೆಕ್ರೆಟರಿ ಮ॥ ಕ್ಯಾಂಬಲ್ ಸಾಹೇಬರ ಕೂಡ ಮೋಟಾರು ಬಂಡಿಯಲ್ಲಿ ೧ ಗಂಟೆಗೆ ಸರಿಯಾಗಿ ದಯಮಾಡಿಸಿದರು. ದಿವಾನರು, ಕೌನ್ಸಿಲರು ಮೊದಲಾದ ಅಧಿಕಾರಿಗಳೂ, ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರರವರೂ ದ್ವಾರದ ಬಳಿಗೆ ಬಂದು ಶ್ರೀಮದ್ಯುವರಾಜರನ್ನಿದಿರ್ಗೊಂಡು ಮರ್ಯಾದಿಸಿ ಒಳಗೆ ಕರೆದುಕೊಂಡು ಬಂದು ಉಚಿತಾಸನದಲ್ಲಿ ಕುಳ್ಳಿರಿಸಿದರು. ಆಗ ಸಭಿಕರೆಲ್ಲರೂ ಎದ್ದು ತಲೆವಾಗಿ ಮರ್ಯಾದಿಸಿದರು. ರೆಜಿಸ್ಟ್ರಾರರಾದ ಮ॥ ನಾರಣಯ್ಯಂಗಾರರ ಪ್ರಾರ್ಥನೆಯಂತೆ ಯುವರಾಜರು ಎದ್ದು ಮೃದುವಾಗಿಯೂ,ಗಂಭೀರವಾಗಿಯೂ ಸುರಸವಾಗಿಯೂ ಈ ಮುಂದೆ ಕೊಟ್ಟಿರುವ ಭಾಷಣವನ್ನು ಮಾಡಿ ಸಭೆಯು ಮುಂದಣ ಕಾರ್ಯವನ್ನು ನೆರವೇರಿಸಿಕೊಳ್ಳುವುದೆಂದು ಅಪ್ಪಣೆಯನ್ನಿತ್ತು ಕುಳಿತುಕೊಂಡರು. ಆಗ ಕೆಲ ಪ್ರತಿನಿಧಿಗಳು ಮಹಾಸ್ವಾಮಿಯವರಿಗೆ ಸಭಾಪರವಾಗಿ ವಂದನೆಗಳನ್ನು ಸಮರ್ಪಿಸಿದರು. ಆಮೇಲೆ ರೆಜಿಸ್ಟ್ರಾರರು ಯುವರಾಜರಿಗೂ, ಪ್ರೈವೆಟ್ ಸೆಕ್ರೆಟರಿಯವರಿಗೂ ಪುಷ್ಪಗುಚ್ಛವನ್ನೂ ಹಾರವನ್ನೂ ಒಪ್ಪಿಸಿದ ಮೇಲೆ ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿತು. ಅನಂತರ ಸಭಿಕರ ಪ್ರಾರ್ಥನೆಯಂತೆ ಮ॥ ಸಿ. ಶ್ರೀನಿವಾಸಯ್ಯಂಗಾರರು ಅಗ್ರಾಸನವನ್ನು ವಹಿಸಿ ಸಭೆಯುದ್ದೇಶವನ್ನೂ, ಮುಂದೆ ಮಾಡಬೇಕಾಗಿರುವ ಆಲೋಚನೆಯನ್ನೂ ಕುರಿತು ಸಂಕ್ಷೇಪವಾಗಿ ಹೇಳಿದಮೇಲೆ ರೆಜಿಸ್ಟ್ರಾರರಾದ ಮ॥ ನಾರಣಯ್ಯಂಗಾರರು ಸಂಸ್ಥಾನದಲ್ಲಿ ಈ ಪರಸ್ಪರ ಸಹಾಯ ಸಂಘಗಳನ್ನು ಮೊದಲು ಸ್ಥಾಪಿಸುವಾಗ್ಗೆ ಮೊದಲು ರೆಜಿಸ್ಟ್ರಾರರಾಗಿದ್ದ ಮ॥ ಎಂ. ಶಾಮರಾಯರು ದೇಹಶ್ರಮವನ್ನು ಲಕ್ಷಿಸದೆ ಊರುಗಳಿಗೂ, ಗ್ರಾಮಾಂತರಗಳಿಗೂ ಹೋಗಿ, ಅಲ್ಲಿಯ ಜನರಲ್ಲಿ ವಿಶ್ವಾಸವನ್ನು ಬೆಳೆಯಿಸಿ ಅವರುಗಳಿಗೆ ಈ ಸಂಘಗಳಿಂದಾಗತಕ್ಕ ಪ್ರಯೋಜನಾದಿಗಳನ್ನು ಚೆನ್ನಾಗಿ ತಿಳಿಯಹೇಳಿ ಈಗಿರತಕ್ಕ ಸಂಘಗಳ ಸಂಖ್ಯೆಯಲ್ಲಿ ಬಹುಭಾಗದಷ್ಟನ್ನು ಸ್ಥಾಪಿಸಲು ಕಾರಣಭೂತರಾದರೆಂದೂ, ಈಗಿರುವ ಸಂಘಗಳಭಿವೃದ್ಧಿಗಿರತಕ್ಕ ಕುಂದುಕೊರತೆಗಳು ನಿವಾರಣೆಯಾಗಿ ಸಂಘಗಳು ಸಂಸ್ಥಾನದ ಎಲ್ಲ ಕಡೆಯೂ ಸ್ಥಾಪಿತವಾಗಿ ಜನರಿಗೆ ಹೆಚ್ಚು ಉಪಯೋಗವಾಗುವಂತೆ ಮಾಡಲು ಪ್ರತಿನಿಧಿಗಳು ತಮ್ಮಗಳಿಗೆ ಈವರೆಗುಂಟಾಗಿರುವ ಅನುಭವದಿಂದ ವಿಷಯವಿನ್ಯಾಸವನ್ನು ಮಾಡಿ ತಕ್ಕ ನಿರ್ಧಾರಗಳನ್ನು ಮಾಡಬೇಕಾಗಿರುವುದೆಂದೂ ಯುಕ್ತಿಯುಕ್ತವಾಗಿ ಹೇಳಿದರು. ತರುವಾಯ ಈ ಸಭೆಗೆ ಬರಲು ಆಮಂತ್ರಣವು ಕೊಡಲ್ಪಟ್ಟಿದ್ದವರಲ್ಲಿ ದಿವಾನ್ ಬಹದ್ದೂರ್ ಅಪ್ಪಾರಯ್ಯನವರು, ನೆಲ್ಲೂರು ಡಿ॥ ಕಲೆಕ್ಟರು ದಿವಾನ್ ಬಹದ್ದೂರ್ ಆರ್. ರಾಮಚಂದ್ರರಾಯರು, ಸರ್ ವಿ. ಸಿ ದೇಶಿಕಾಚಾರ್ಯರು, ರಾ॥ಬ॥ ಕುಂಭಕೋಣದ ವಿ. ಕೆ. ರಾಮಾನುಜಾಚಾರ್ಯರು, ಸೇಲಮ್ಮಿನ ಮ॥ ಆದಿನಾರಾಯಣ ಸೆಟ್ಟರು, ರೆವರೆಂಡ್ ಗಲಿಫರ್ಡ್‌ರವರು, ಶಿವಮೊಗ್ಗೆಯ ಅಡ್ವೋಕೇಟ್ ಮ॥ ಎಸ್. ಆರ್. ಬಾಲಕೃಷ್ಣರಾಯರು ಅನಿವಾರ್ಯದ ದೆಸೆಯಿಂದ ತಾವುಗಳು ಬರಲಿಕ್ಕಾಗದೆ ಬರೆದಿದ್ದ ಕಾಗದಗಳ ತಾತ್ಪರ್ಯವು ಹೇಳಲ್ಪಟ್ಟಿತು. ಅಷ್ಟುಹೊತ್ತಿಗೆ ೩ ಗಂಟೆಯಾದುದರಿಂದ ೧ ಗಂಟೆಯ ಕಾಲ ಅಲ್ಪಾಹಾರಕ್ಕಾಗಿ ಸಭೆಯು ವಿರಮಿಸಲ್ಪಟ್ಟಿದ್ದು ಪುನಃ ಸೇರಿ ವಿಷಯವಿನ್ಯಾಸಗಳು ನಡೆದುವು. ಅದರಂತೆ ತಾ॥ ೨೭ ಮತ್ತೂ ೨೮ ರಲ್ಲೂ ಸಭೆ ಸೇರಿದ್ದು ಕೆಲ ನಿರ್ಧಾರಗಳು ಮಾಡಲ್ಪಟ್ಟುವು. ಈ ಮಹಾಸಭೆಗೆ ಪ್ರತಿನಿಧಿಗಳಾಗಿ ಬಂದಿದ್ದ ೩೦ ಜನರಿಗೂ ಅವರ ಕೂಡ ಪ್ರೇಕ್ಷಕರಾಗಿ ಬಂದಿದ್ದವರಿಗೂ ರೆಜಿಸ್ಟ್ರಾರ್‌ರವರು ಮರಿಮಲ್ಲಪ್ಪನವರ ಸತ್ರದಲ್ಲಿ ಬಿಡಾರಕ್ಕೇರ್ಪಡಿಸಿದ್ದು ಅವರೆಲ್ಲರನ್ನೂ ೨-೩ ದಿನಗಳ ವರೆಗೂ ಸುಖಭೋಜನಾದಿಗಳಿಂದ ಚೆನ್ನಾಗಿ ಸತ್ಕರಿಸಿದರು. ಅವರೆಲ್ಲರೂ ರೆಜಿಸ್ಟ್ರಾರ್‌ರವರ ವಿಶ್ವಾಸಕ್ಕೂ ಆದರಾತಿಶಯಕ್ಕೂ ಮೆಚ್ಚಿ ರೆಜಿಸ್ಟ್ರಾರರನ್ನು ಕೊಂಡಾಡಿ ತೆರಳಿದರು.

ಶ್ರೀಮದ್ಯುವರಾಜರವರ ಉಪನ್ಯಾಸ.

ಮಹನೀಯರೆ!

ನೀವುಗಳು ಇಲ್ಲಿಗೆ ದಯಮಾಡಿಸಿರುವುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿರುತ್ತೆ. ಇದು ನಮ್ಮ ದೇಶದಲ್ಲಿ ಪರಸ್ಪರ ಸಹಾಯ ಸಂಘಗಳ ಮೊದಲನೆಯ ಸಭೆಯಾಗಿರುತ್ತದೆ ಇದರ ಉದ್ದೇಶವು ನಮ್ಮ ದೇಶದ ಸಂಪತ್ತಿನ ಅಭಿವೃದ್ಧಿಗೆ ಮುಖ್ಯ ಕಾರಣಭೂತವಾದುದಾಗಿ ಇರುತ್ತೆ.

೧. ವ್ಯವಸಾಯ, ವ್ಯಾಪಾರ, ಕೈಗಾರಿಕೆ—ಇವೇ ಮೊದಲಾದ ಎಲ್ಲಾ ಪ್ರಯೋಜನಕರವಾದ ಕಸಬುಗಳಿಗೂ ದ್ರವ್ಯ ಸಹಾಯವು ಮುಖ್ಯವಾದುದು. ನಮ್ಮ ರೈತರೂ, ವರ್ತಕರೂ, ಶಿಲ್ಪಿಗಳೂ ಬಹಳ ಕಷ್ಟಪಟ್ಟು ಕೆಲಸಮಾಡುವರು. ಆದರೆ ನಮ್ಮಲ್ಲಿ ಬಡತನವು ಬಹಳ ಹೆಚ್ಚಾಗಿದೆ ಹಣವಿಲ್ಲದೆ ಯಾವ ಕೆಲಸವೂ ಸಾಗುವುದಿಲ್ಲ. ಬಡರೈತರಿಗೂ ಕಸಬುದಾರರಿಗೂ ಅವರ ಕೆಲಸಕಾರ್ಯಗಳಿಗೆ ಬೇಕಾದ ದ್ರವ್ಯ ಸಹಾಯವನ್ನು ಮಾಡಿಕೊಟ್ಟು ದೇಶದ ಅಭಿವೃದ್ಧಿಯನ್ನುಂಟುಮಾಡುವುದಕ್ಕೆ ಅನೇಕ ಉಪಾಯಗಳನ್ನು ಅಲ್ಲಲ್ಲಿ ಯತ್ನಿಸಿರುವರು. ಇದರಲ್ಲಿ ಜರ್ಮನಿ, ಡೆನ್ಮಾರ್ಕ್, ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯದೇಶದವರು ಬಹಳ ಅನುಭವವುಳ್ಳವರಾಗಿರುತ್ತಾರೆ. ಆ ಅನುಭವದಿಂದ ಕಸಬುದಾರರೆಲ್ಲರೂ ಸೇರಿ ಪರಸ್ಪರ ಸಹಾಯ ಸಂಘಗಳನ್ನು ಆಯಾ ಗ್ರಾಮಗಳಲ್ಲಿ ಏರ್ಪಡಿಸಿಕೊಳ್ಳುವುದೇ ದ್ರವ್ಯಾರ್ಜನೆಗೆ ಒಳ್ಳೆಯ ಉಪಾಯವೆಂದು ತಿಳಿದುಬಂದಿದೆ.

೨. ಪರಸ್ಪರ ಸಹಾಯ ಸಂಘಗಳಿಗೆ ಸ್ವಸಹಾಯ ಮತ್ತು ಐಕಮತ್ಯ ಈ ಎರಡು ಗುಣಗಳೂ ಅವಶ್ಯವಾಗಿಬೇಕು. ಪರೋಪಕಾರದಲ್ಲಿ ಅನೇಕ ವಿಧಗಳುಂಟು. ಅವುಗಳಲ್ಲಿ ತಮ್ಮ ತಮ್ಮ ಕೆಲಸಗಳನ್ನು ತಾವೇ ಚೆನ್ನಾಗಿ ಮಾಡಿಕೊಳ್ಳುವುದನ್ನು ಹೇಳಿಕೊಡುವುದೇ ದೊಡ್ಡ ಪರೋಪಕಾರ. ಇದೇ ಸ್ವಸಹಾಯ. "ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ" (ನಮಗೆ ನಾವೇ ಬಂಧುಗಳು ನಮಗೆ ನಾವೇ ಶತ್ರುಗಳು) ಎಂಬ ಭಗವದ್ಗೀತಾ ವಾಕ್ಯವು ನಿಮಗೆ ತಿಳಿದೇ ಇರಬಹುದು. ಇದೇ ರೀತಿಯಲ್ಲಿ "ಸಂಘೇಶಕ್ತಿಃ ಕಲೌಯುಗೇ" ಎಂದೂ ಹೇಳುವರು. ಪ್ರತಿಯೊಂದು ಗ್ರಾಮದವರೂ ಒಗ್ಗಟ್ಟಾಗಿ ನಡೆಯುವುದರಿಂದ ಅನೇಕ ಪ್ರಯೋಜನಗಳುಂಟು. ಒಗ್ಗಟ್ಟು ಉಂಟಾಗಬೇಕಾದರೆ ಪರಸ್ಪರ ನಂಬುಗೆಬೇಕು. ಹೀಗೆ ಜನರಲ್ಲಿ ನಂಬುಗೆ, ಒಗ್ಗಟ್ಟಾಗಿ ನಡೆಯುವದು ಮತ್ತು ನಮ್ಮ ಕೆಲಸಗಳನ್ನು ನಾವೇ ಚೆನ್ನಾಗಿ ಮಾಡಿಕೊಳ್ಳಬೇಕೆಂಬ ಕುತೂಹಲವು ನಮ್ಮ ಜನಾಂಗದ ಅಭಿವೃದ್ಧಿಗೆ ಆವಶ್ಯಕವಾಗಿರುತ್ತವೆ. ಈ ಗುಣಗಳನ್ನು ಅನ್ಯೋನ್ಯ ಸಹಾಯ ಸಂಘಗಳು ಅಭಿವೃದ್ಧಿಗೊಳಿಸುತ್ತವೆ. ಇದಲ್ಲದೆ ನಮ್ಮ ದ್ರವ್ಯಾರ್ಜನೆಗೂ, ನಮ್ಮ ದ್ರವ್ಯ ಶೇಖರಕ್ಕೂ ಅನುಕೂಲಗಳನ್ನು ಕಲ್ಪಿಸಿಕೊಡುತ್ತವೆ. ಇವುಗಳ ಉಪಯೋಗವನ್ನು ಪಾಮರರೂ ಕೂಡ ತಿಳಿದುಕೊಂಡು ಈ ಸಂಘಗಳನ್ನು ಸೇರಿ ಅವುಗಳಿಂದ ಅನೇಕ ಲಾಭಗಳನ್ನು ಪಡೆಯಬಹುದು.

೩. ಸ್ವಪ್ರಯೋಜನಾಪೇಕ್ಷಾರಹಿತರಾಗಿ ಈ ಸಂಘಗಳಲ್ಲಿ ಕೆಲಸಮಾಡುತ್ತಲಿರುವ ನಿಮ್ಮಗಳಿಗೆ ಇವುಗಳ ಉಪಯೋಗಗಳೂ, ಅನುಕೂಲ್ಯಗಳೂ ತಿಳಿದೇ ಇರುತ್ತವೆ. ಈ ವಿಷಯದ ಕಾನೂನು ನಮ್ಮ ದೇಶದಲ್ಲಿ ಏರ್ಪಾಟಾಗಿ ಈಗ ಆರು ವರುಷಗಳಾಗಿರುತ್ತವೆ. ಇಷ್ಟರಲ್ಲಿ ೧೭೦ ಸೊಸೈಟಿಗಳು ಸ್ಥಾಪಿಸಲ್ಪಟ್ಟಿವೆ. ಇವುಗಳಲ್ಲಿ ೧೧,೧೦೩ ಜನರು ಮೆಂಬರುಗಳಾಗಿ ಸೇರಿರುತ್ತಾರೆ. ೭೯,೦೩೬ ರೂಪಾಯಿಗಳು ಷೇರು ಧನವಾಗಿಯೂ, ೩,೪೬,೬೪೦ ರೂಪಾಯಿಗಳು ಸಂಘಗಳ ಒಟ್ಟು ಬಂಡವಾಳವಾಗಿಯೂ ಜಮಾಯಿಸಲ್ಪಟ್ಟಿರುತ್ತೆ. ಈ ಆರು ವರುಷಗಳಲ್ಲಿ ೩,೦೦,೦೦೦ ರೂಪಾಯಿಗಳವರೆಗೆ ಸುಲಭದ ಬಡ್ಡಿಯಲ್ಲಿ ಲೇವಾದೇವಿ ನಡೆದಿರುತ್ತದೆ. ೩,೦೦,೦೦೦ ರೂಪಾಯಿಗಳ ಕೈಗಾರಿಕೆ ಮತ್ತು ಆಹಾರ ಪದಾರ್ಥಗಳ ಸಾಮಾನುಗಳು ಮೆಂಬರುಗಳಿಗೆ ಮಾರಲ್ಪಟ್ಟಿರುತ್ತವೆ. ೩೯,೦೦೦ ರೂಪಾಯಿಗಳವರೆಗೂ ಷೇರುದಾರರಿಗೆ ಲಾಭ ಬಂದಿರುತ್ತದೆ. ೧೯,೯೩೦ ರೂಪಾಯಿಗಳು ಜಟೀರಿ ಫಂಡು ಸೇರಿರುತ್ತದೆ. ಈ ಸಂಘಗಳ ಪ್ರಯೋಜನದ ವಿಷಯವಾಗಿ ಈ ತಪ್ಸೀಲಿಗಿಂತ ನಾವು ಇನ್ನೇನು ಹೇಳಬೇಕಾಗಿದೆ!

೪. ಇಷ್ಟರ ಮಟ್ಟಿಗೆ ಸಂಘಗಳು ಅಭಿವೃದ್ಧಿಯಾಗಿರುವದು ಸರಿಯಷ್ಟೆ. ಈಗ ತಾವುಗಳೆಲ್ಲರೂ ಇಲ್ಲಿ ಸಭೆ ಸೇರಿ ಇದುವರೆಗೆ ಉಂಟಾಗಿರತಕ್ಕ ಅನುಭವಗಳನ್ನು ಯೋಚಿಸಿ ಯಾವ ಯಾವ ರೀತಿಯಲ್ಲಿ ಈ ಸಂಘಗಳ ನಡವಳಿಕೆಗಳನ್ನು ನಡಿಸಿದರೆ ಉತ್ತಮವೆಂದು ವಿಚಾರಮಾಡತಕ್ಕದ್ದು ಯುಕ್ತವಾಗಿದೆ. ಒಂದೇ ಕಡೆಯಲ್ಲಿ ಎಲ್ಲರ ಅನುಭವಗಳನ್ನು ತಿಳಿದುಕೊಳ್ಳುವುದಕ್ಕೂ, ಅನುಮಾನಗಳನ್ನು ಪರಿಚ್ಛೇದ ಮಾಡಿಕೊಳ್ಳುವುದಕ್ಕೂ ತಪ್ಪು ನಡವಳಿಕೆಗಳನ್ನು ತಿದ್ದಿಕೊಳ್ಳುವುದಕ್ಕೂ, ಹೊಸ ಸಂಘಗಳನ್ನು ಏರ್ಪಾಡು ಮಾಡುವುದಕ್ಕೂ, ಇರುವ ಸಂಘಗಳನ್ನು ಅಭಿವೃದ್ಧಿಗೊಳಿಸುವುದಕ್ಕೂ ಈ ಸಭೆಯು ಬಹಳ ಸಹಕಾರಿಯಾಗಿರುವುದು. ಈ ಸಭೆಯಲ್ಲಿ ಚರ್ಚಿಸಬೇಕಾದ ವಿವಿಧ ವಿಷಯಗಳನ್ನು ನಿಮ್ಮಗಳಿಗೆ ಮೊದಲೇ ತಿಳಿಸಿರುತ್ತಷ್ಟೆ. ಇವುಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಈಸಂಘಗಳ ಏಳಿಗೆಗೆ ಕುಂದಕಬಾರದಂತೆಯೂ ತಪ್ಪುಗಳಿಗೆ ಅವಕಾಶವಿಲ್ಲದಂತೆಯೂ ತಕ್ಕ ವಿಶದವಾದ ತೀರ್ಮಾನಗಳನ್ನು ಮಾಡುವಿರೆಂದು ನಂಬುತ್ತೇವೆ. ಈಗ ಹೊಸ ಸಂಘಗಳನ್ನು ಏರ್ಪಡಿಸುವದಕ್ಕೆ ಮೊದಲು ಇರುವ ಸಂಘಗಳನ್ನು ಚೆನ್ನಾಗಿ ಅಭಿವೃದ್ಧಿಗೆ ತರುವುದು ನಮ್ಮ ಮುಖ್ಯ ಕರ್ತವ್ಯವಾಗಿರುತ್ತೆ.

೫. ಬಹು ಕಾಲದವರೆಗೂ ದೃಢವಾದ ಪ್ರಯತ್ನಗಳಿಂದಲ್ಲದೆ ಯಾವ ಮಹತ್ಕಾರ್ಯವೂ ಸಾಧ್ಯವಲ್ಲವು. ಪ್ರತಿಯೊಂದು ಗ್ರಾಮದಲ್ಲೂ ನಮಗೆ ಬುದ್ಧಿವಂತರಾದ ಸಹಾಯಕರು ಬೇಕು. ಅವರು ಈ ಸಂಘಗಳ ನಿಯಮಗಳನ್ನು ತಿಳಿದುಕೊಂಡು ಲೆಕ್ಕ ಪತ್ರಗಳನ್ನಿಟ್ಟು ಸಂಘಗಳ ಕೆಲಸ ಕಾರ್ಯಗಳನ್ನು ಪ್ರತಿ ದಿನವೂ ನಡೆಸುತ್ತಾ ಬರಬೇಕು. ದೇಶಾಭಿಮಾನವು ನಮ್ಮಲ್ಲಿ ಬೇಕಾದಷ್ಟು ಇದೆ ನೆರೆ ಹೊರೆಯವರ ಕ್ಷೇಮಚಿಂತನೆಯೂ ಕಡಮೆಯಿಲ್ಲ. ಅವರ ಅಭಿವೃದ್ಧಿಯಲ್ಲಿ ಪರೋಪಕಾರಾರ್ಥವಾಗಿ ಕಷ್ಟಪಟ್ಟು ಕೆಲಸಮಾಡುವವರನ್ನು ನಾವೆಲ್ಲರೂ ಮೆಚ್ಚುವುದಿಲ್ಲವೇ? ಹೀಗಿರುವಲ್ಲಿ ಬಡತನದಲ್ಲಿಯೂ, ಮೌಢ್ಯದಲ್ಲಿಯೂ ಮುಳುಗಿರತಕ್ಕ ನಮ್ಮ ಜನರ ಅಭಿವೃದ್ಧಿಗೆ ಅನುಕೂಲವಾದ ಈ ಪರಸ್ಪರ ಸಹಾಯ ಸಂಘಗಳ ಕೆಲಸಗಳಿಗೋಸ್ಕರ ಸ್ವಲ್ಪ ಬುದ್ಧಿಯನ್ನೂ, ಕಾಲವನ್ನೂ ಮತ್ತು ಶಕ್ತಿಯನ್ನೂ ವೆಚ್ಚಮಾಡಿ, ಈ ಉಪಕಾರವನ್ನು ಏತಕ್ಕೆ ಮಾಡಬಾರದು? ನಮ್ಮ ಜನರ ಏಳಿಗೆಗೂ ನಮ್ಮ ಧನಧಾನ್ಯಾಭಿವೃದ್ಧಿಗೂ ಕ್ಷೇಮಲಾಭಕ್ಕೂ ಇದಕ್ಕಿಂತಲೂ ಶ್ರೇಷ್ಠವಾದ ಯಾವ ಕೆಲಸವೂ ಇಲ್ಲವೆಂದು ನಾವು ದೃಢವಾಗಿ ಹೇಳಬಲ್ಲೆವು. ಇದಲ್ಲದೆ ನಿಮ್ಮ ನಿಮ್ಮ ಗ್ರಾಮಗಳಲ್ಲಿ ನೀವೇ ಪಂಚಾಯಿತರಾಗಿ ಸೇರಿ ನಿಮ್ಮ ಸಂಘಗಳ ಕೆಲಸಗಳನ್ನು ತೃಪ್ತಿಕರವಾಗಿ ನಡೆಸುವ ಅಭ್ಯಾಸದಿಂದ ಕಾಲಾನುಕ್ರಮವಾಗಿ ಇತರ ವಿಷಯಗಳಲ್ಲೂ ಒಗ್ಗಟ್ಟಾಗಿ ಸೇರಿ ಎಲ್ಲಾ ಕೆಲಸಗಳನ್ನೂ ಚೆನ್ನಾಗಿ ಮಾಡತಕ್ಕ ನಿರ್ವಾಹಕಶಕ್ತಿಯೂ ಉಂಟಾಗುವುದರಲ್ಲಿ ಯಾವ ಅಭ್ಯಂತರವೂ ಕಾಣಬರುವದಿಲ್ಲ. ಈ ಸಂಘಗಳ ಅಭಿವೃದ್ಧಿಯು ನಿಮ್ಮ ಕೈವಶವಾಗಿಯೇ ಇರುತ್ತದೆ. ನೀವುಗಳೆಲ್ಲರೂ ಎಷ್ಟು ಶ್ರಮಪಟ್ಟು ಈ ಸಂಘಗಳನ್ನು ಚೆನ್ನಾಗಿ ನಡೆಸಿದರೂ ಅಷ್ಟು ಅನುಕೂಲಗಳನ್ನೂ, ಪ್ರಯೋಜನವನ್ನೂ ಪಡೆಯಬಹುದು. ಈಗ ನಾವು ಹೇಳಿರುವ ಪ್ರೋತ್ಸಾಹಕರವಾದ ವಿಷಯಗಳು ನಿಮ್ಮ ಸಭಾ ಕಾರ್ಯಕ್ಕೆ ಸಹಕಾರಿಗಳಾಗಿರುವುವೆಂದು ನಂಬುತ್ತೇವೆ.

ಪ್ಯಾರಿಸ್‌ಪಟ್ಟಣದಲ್ಲಿ ಒಬ್ಬ ದ್ರಾಕ್ಷಾಫಲದ ತೋಟಗಾರನು ಆಸ್ಪತ್ರೆಯಲ್ಲಿ ಕಳೆದ ಆರು ತಿಂಗಳಿಂದಲೂ ನಿದ್ರೆಯನ್ನು ಮಾಡುತ್ತಿದ್ದು ಕಳೆದ ತಾ॥ ೧೦ ರಲ್ಲಿ ಎಚ್ಚರವಾಗಿದ್ದನೆಂದೂ ಅವನ ಆರೋಗ್ಯವು ಬಹು ಚೆನ್ನಾಗಿರುವುದೆಂದೂ ಪ್ರಕಟವಾಗಿದೆ. ಅವನು ದೀರ್ಘನಿದ್ರೆಯಲ್ಲಿದ್ದಾಗ್ಗೆ ನಿತ್ಯದಲ್ಲೂ ೬ ಸೇರು ಹಾಲು ಕೊಡಲ್ಪಡುತ್ತಿದ್ದಿತಂತೆ. ಸ್ಯಾಂಡೋ, ರಾಮಮೂರ್ತಿ ಮೊದಲಾದವರು ತಮ್ಮ ದೇಹಶಕ್ತಿಯನ್ನು ಪ್ರದರ್ಶಿಸಿ ಕಲಿ ಭೀಮನೆಂಬ ಹೆಸರ್ಪಡೆದಿರುವರಷ್ಟೆ ಇವನಾದರೋ ಆರು ತಿಂಗಳಕಾಲ ನಿದ್ರೆಯಲ್ಲಿದ್ದಾಗ್ಗೂ ಆರೋಗ್ಯದಿಂದಿರುವನಾದುದರಿಂದ ಇವನನ್ನು ಕಲಿಕುಂಭಕರ್ಣನೆಂದು ಏಕೆ ಕರೆಯಬಾರದು?

ಒಬ್ಬ ಯುವಕಳು ತನ್ನ ತಾಯಿಯ ಕೂಡ ಕಳೆದ ತಾ॥ ೨೮ ರ ರಾತ್ರಿ ಲೂಧಿಯಾನಾ ಸ್ಟೇಷನ್ನಿನಲ್ಲಿ ಬಂದು ಇಳಿದಾಗ ತಮ್ಮಿಬ್ಬರನ್ನೂ ಪೋಲೀಸಿನವರು ಠಾಣ್ಯಕ್ಕೆ ಕರೆದುಕೊಂಡು ಹೋಗಿ ತನ್ನ ತಾಯಿಯನ್ನು ಹೊರಗಿರಿಸಿ ತನ್ನ ಮೇಲೆ ಅತ್ಯಾಚಾರವನ್ನು ನಡೆಯಿಸಿದರೆಂದು ಲೂಧಿಯಾನಾದ ಡಿ॥ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದವನ್ನು ಮಾಡಿರುತ್ತಾಳೆ.

ಮೈಸೂರ್ ಸ್ಟಾರ್

೧೯೧೧ನೆಯ ಇಸವಿ ಅಕ್ಟೋಬರ್ ತಾ॥ ೨ ನೇ ಸೋಮವಾರ

ಮೈಸೂರ ಸೀಮೆಯ ಪರಸ್ಪರ ಸಹಾಯಕ ಸಂಘಗಳ ಮಹಾಸಭೆಯು.

ಕಳೆದ ತಾ॥ ೨೩ ರಲ್ಲಿ ರಾಜಧಾನಿಯಲ್ಲಿ ಜರುಗಿದ ಈ ಮಹಾಸಭೆಯ ಆರಂಭದಲ್ಲಿ ಶ್ರೀಮದ್ಯುವರಾಜರು ಮಾಡಿದ ಭಾಷಣವೂ ಮತ್ತೂ ಅಲ್ಲಿ ನಡೆದ ಇತರ ನಡೆವಳಿಕೆಗಳೂ ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಕೊಡಲ್ಪಟ್ಟಿವೆ. ಪ್ರಾಯಿಕವಾಗಿ ದೇಶದ ಸಂಪತ್ತಿಗೆ ಕೃಷಿವಾಣಿಜ್ಯಶಿಲ್ಪವೃತ್ತಿಗಳ ಅಭಿವೃದ್ಧಿಯು ಕಾರಣವಾಗಿರುವುದು. ಆದರೆ ಈ ವೃತ್ತಿಗಳ ಅಭಿವೃದ್ಧಿಗೆ ಧನಸಹಾಯವು ಅತ್ಯಾವಶ್ಯಕವಾಗಿ ಬೇಕು. ಯಾವ ದೇಶದಲ್ಲಿ ಬೇಸಾಯ, ವ್ಯಾಪಾರ ಮತ್ತೂ ಕೈಗಾರಿಕೆಯ ಕಸಬುಗಳು ಹೇರಳವಾಗಿದ್ದು ದ್ರವ್ಯಸಹಾಯವಿರುವುದಿಲ್ಲವೋ, ಅಥವಾ ದ್ರವ್ಯಸಹಾಯವು ಸಂಪೂರ್ಣವಾಗಿದ್ದು ಕಸಬುಗಳಿರುವುದಿಲ್ಲವೋ ಆ ದೇಶವು ಎಂದಿಗೂ ಅಭಿವೃದ್ಧಿಗೆ ಬರುವುದಿಲ್ಲವು. ಹೊಲದ ಕೆಲಸ, ನೇಗೆಯ ಕೆಲಸ, ಮರಗೆಲಸ ಮೊದಲಾದ ಕೆಲಸಗಳಿಗೆ ಬೇಕಾದ ಮುಟ್ಟುಗಳನ್ನೂ, ಪದಾರ್ಥಗಳನ್ನೂ ಕೊಂಡುಕೊಳ್ಳಲು ಹಣವು ಬೇಕು. ಅದು ವಿನಾ ಅವರವರ ಕಸಬು ನಡೆಯುವುದಿಲ್ಲವಾದ ಪ್ರಯುಕ್ತ, ಕಸಬುದಾರರು ಸೋಮಾರಿಗಳಾಗಿ ಹೊಟ್ಟೆಯ ಹೊರೆಯಲು ಚೌರ್ಯ, ದ್ಯೂತ ಮೊದಲಾದ ನೀಚವೃತ್ತಿಯನ್ನವಲಂಬಿಸಿ, ತಾವೂ ಕೆಡುವುದಲ್ಲದೆ ತಮ್ಮ ದೇಶವನ್ನೂ ದಾರಿದ್ರ್ಯಲಕ್ಷ್ಮಿಯ ಆವಾಸಸ್ಥಾನವನ್ನಾಗಿ ಮಾಡುವರು. ಜರ್ಮನಿ, ಡೆನ್ಮಾರ್ಕ್, ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಕಸಬುದಾರರು ದ್ರವ್ಯಸಹಾಯಾಭಾವದಿಂದ ತಮಗುಂಟಾಗುವ ಅನರ್ಥವನ್ನೆಲ್ಲ ಚೆನ್ನಾಗಿ ತಿಳಿದವರಾಗಿ ಪರಸ್ಪರ ಸಹಾಯಕ ಸಂಘಗಳನ್ನೇರ್ಪಡಿಸಿಕೊಂಡು ತನ್ಮೂಲಕ ತಮ್ಮ ಕಸಬುಗಳನ್ನು ಅಭಿವೃದ್ಧಿಗೆ ತಂದು ತಾವೂ ಶ್ರೀಮಂತರಾಗಿರುವುದಲ್ಲದೆ ತಮ್ಮ ದೇಶವನ್ನೂ ಅಭಿವೃದ್ಧಿಗೆ ತಂದಿರುವರು.

ಮೈಸೂರ ಸೀಮೆಯ ಕಸಬುದಾರರು ವಿಶೇಷ ಬಡವರಾದುದರಿಂದ, ಈ ಸೀಮೆಯಲ್ಲೂ ಪರಸ್ಪರ ಸಹಾಯಕ ಸಂಘಗಳನ್ನೇರ್ಪಡಿಸಿ ತನ್ಮೂಲಕ ಅವರನ್ನೂ, ಈ ದೇಶವನ್ನೂ ಅಭಿವೃದ್ಧಿಗೊಳಿಸಬೇಕೆಂಬುದ್ದೇಶದಿಂದ ತತ್ಸಂಬಂಧವಾದ ವಿಧಿಗಳು ಈಗ್ಗೆ ೬ ವರ್ಷಗಳ ಕೆಳಗೆ ಮಾಡಲ್ಪಟ್ಟುವು. ತದಾರಭ್ಯದಿಂದ ಈ ವರೆಗೆ ಈ ಸೀಮೆಯಲ್ಲೆಲ್ಲ ಒಟ್ಟು ೧೮೦ ಸಂಘಗಳು ಸ್ಥಾಪಿಸಲ್ಪಟ್ಟು, ೧೧೧೦೩ ಜನರು ಮೆಂಬರುಗಳಾಗಿರುತ್ತಾರೆ. ಈ ಸಂಘಗಳಿಂದೆಲ್ಲ ಒಟ್ಟು ೩೬೬೩೪೦ ರೂಪಾಯಿಗಳು ಮೂಲಧನವಾಗಿ ಶೇಖರಿಸಲ್ಪಟ್ಟು ೩೦ ಲಕ್ಷ ರೂ. ಗಳ ವರೆಗೆ ಬಡ್ಡಿಗೆ ಕೊಟ್ಟು ತೆಗೆದುಕೊಳ್ಳಲ್ಪಟ್ಟಿದೆ. ಈ ಸಂಘಗಳ ಪುರೋವೃದ್ಧಿಗೆ ಅವುಗಳಲ್ಲಿ ಕೆಲಸಮಾಡತಕ್ಕವರಲ್ಲಿ ಪರಸ್ಪರ ಸೌಹಾರ್ದವೂ, ಏಕಮತ್ಯವೂ ಸ್ವಸಹಾಯವೂ, ಪರೋಪಕಾರ ಬುದ್ಧಿಯೂ ಸಂಪೂರ್ಣವಾಗಿರುವುದು ಅತ್ಯಾವಶ್ಯಕವು. ಮನುಷ್ಯನು ಹುಟ್ಟಿದುದಕ್ಕೆ ಪರೋಪಕಾರವನ್ನು ಮಾಡಬೇಕು. ಹೀಗೆ ಪರೋಪಕಾರ ಮಾಡುವುದರಲ್ಲಿ ಜನರು ತಂತಮ್ಮ ಕೆಲಸಗಳನ್ನು ತಾವು ತಾವೇ ನೆರವೇರಿಸಿಕೊಳ್ಳುವಂತೆ ಮಾಡುವುದು ಶ್ರೇಷ್ಠವಾದುಪಕಾರವು ಮತ್ತೂ ಈ ಉಪಕಾರವೇ ಸ್ವಸಹಾಯವು. ಇದೇ ಅರ್ಥಕ್ಕೆ ಶ್ರೀಮದ್ಯುವರಾಜರು "ಆತ್ಮೈವಹ್ಯಾತ್ಮನೋಬಂಧುಃ ಆತ್ಮೈವರಿಪುರಾತ್ಮನಃ" (ನಮಗೆ ನಾವೇ ಬಂಧುಗಳು ನಮಗೆ ನಾವೇ ಶತ್ರುಗಳು) ಎಂಬ ಗೀತಾವಾಕ್ಯವನ್ನು ಸರ್ವರ ಸ್ಮೃತಿಪಥಕ್ಕೆ ತಂದುದಲ್ಲದೆ "ಸಂಘೇಶಕ್ತಿಃ ಕಲೌಯುಗೇ" ಎಂಬಂತೆ ಪ್ರತಿಯೊಂದು ಗ್ರಾಮದವರೂ ಒಗ್ಗಟ್ಟಾಗಿ ನಡೆಯುವುದರಿಂದ ಅನೇಕ ಪ್ರಯೋಜನಗಳುಂಟು; ಈ ಒಗ್ಗಟ್ಟು ಉಂಟಾಗಬೇಕಾದಲ್ಲಿ ಪರಸ್ಪರ ಸಹಾಯ, ಪ್ರೀತಿ ಮತ್ತೂ ನಂಬುಗೆ ಇರಬೇಕು; ಈ ಗುಣಗಳಿಂದ ಸಂಘಗಳು ಅಭಿವೃದ್ಧಿಗೆ ಬರುವುದಲ್ಲದೆ ನಮ್ಮ ದ್ರವ್ಯಾರ್ಜನೆಗೂ, ದ್ರವ್ಯಶೇಖರಕ್ಕೂ ಅನುಕೂಲವುಂಟು" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಒಗ್ಗಟ್ಟಿನಿಂದ ಮೇಲೆಹೇಳಿದ ಕಾರ್ಯಗಳು ಸಿದ್ಧಿಸುವುದಲ್ಲದೆ, ಮತ್ತಾವ ಮಹಾಕಾರ್ಯವಾದರೂ ಸುಲಭಸಾಧ್ಯವಾಗುವುದೆನ್ನುವುದರಲ್ಲಿ ಸಂದೇಹವೇನು? "ದೇಶಾಭಿಮಾನವು ನಮ್ಮಲ್ಲಿ ಬೇಕಾದಷ್ಟು ಇದೆ. ನೆರೆಹೊರೆಯವರ ಕ್ಷೇಮಚಿಂತನೆಯೂ ಕಡಮೆಯಿಲ್ಲ. ಅವರಭಿವೃದ್ಧಿಯಲ್ಲಿ ಪರೋಪಕಾರಾರ್ಥವಾಗಿ ಕಷ್ಟಪಟ್ಟು ಕೆಲಸಮಾಡುವವರನ್ನು ನಾವೆಲ್ಲರೂ ಮೆಚ್ಚುವುದಿಲ್ಲವೆ? ಹೀಗಿರುವಲ್ಲಿ ಬಡತನದಲ್ಲಿಯೂ, ಮೌಢ್ಯದಲ್ಲಿಯೂ ಮುಳುಗಿರತಕ್ಕ ನಮ್ಮ ಜನರ ಅಭಿವೃದ್ಧಿಗೆ ಅನುಕೂಲವಾದ ಈ ಪರಸ್ಪರ ಸಹಾಯಕಸಂಘಗಳ ಕೆಲಸಗಳಿಗೋಸ್ಕರ ಸ್ವಲ್ಪ ಬುದ್ಧಿಯನ್ನೂ ಕಾಲವನ್ನೂ ಮತ್ತು ಶಕ್ತಿಯನ್ನೂ ವೆಚ್ಚಮಾಡಿ ಈ ಉಪಕಾರವನ್ನು ಏತಕ್ಕೆ ಮಾಡಬಾರದು? ನಮ್ಮ ಜನರ ಏಳಿಗೆಗೂ, ನಮ್ಮ ಧನಧಾನ್ಯಾಭಿವೃದ್ಧಿಗೂ, ಕ್ಷೇಮಲಾಭಕ್ಕೂ ಇದಕ್ಕಿಂತ ಶ್ರೇಷ್ಠವಾದ ಯಾವ ಕೆಲಸವೂ ಇಲ್ಲವೆಂದು ನಾವು ದೃಢವಾಗಿ ಹೇಳಬಲ್ಲೆವು......" ಎಂದು ಮೊದಲಾಗಿ ಅಪ್ಪಣೆ ಕೊಡಿಸಿರುವ ಬುದ್ಧಿವಾದವು ಅತ್ಯಂತ ಪ್ರೋತ್ಸಾಹಕರವಾಗಿರುವುದಲ್ಲದೆ ಶ್ಲಾಘ್ಯವಾದುದಾಗಿಯೂ, ಚಿರಸ್ಮರಣೀಯವಾಗಿಯೂ ಇರುವುದು. ಪರಸ್ಪರ ಸಹಾಯಕ ಸಂಘಗಳ ಕಾರ್ಯತತ್ಪರರಾದವರು ಮಹಾಸ್ವಾಮಿಯವರ ಅಪ್ಪಣೆಯಂತೆ ಜಾಗರೂಕತೆಯಿಂದ ತಮ್ಮ ಕರ್ತವ್ಯಕರ್ಮವನ್ನು ನೆರವೇರಿಸಿ ತಮಗೂ ತಮ್ಮ ದೇಶಬಾಂಧವರಿಗೂ ಹಿತವನ್ನುಂಟುಮಾಡುವವರಾಗಲೆಂದು ಅಪೇಕ್ಷಿಸುತ್ತೇವೆ.

ಶ್ರೀಮದ್ವೀರಶೈವ ಮಹಾಸಭೆಯು. ✓

ಮೊದಲನೆಯ ಸಭೆಯು ಧಾರವಾಡದಲ್ಲಿ ಕೂಡಿದ್ದುದರಿಂದೀಚೆಗೆ ಬೆಂಗಳೂರು, ಸೊಲ್ಲಾಪುರ, ಬಾಗಲಕೋಟೆ ಈ ಸ್ಥಳಗಳಲ್ಲಿ ನಡೆದು ೧೯೦೯ ರಲ್ಲಿ ೫ ನೆಯ ಸಭೆಯು ಬಳ್ಳಾರಿಯಲ್ಲಿ ಕೂಡಿದ್ದಿತಷ್ಟೆ. ಅಲ್ಲಿಂದ ೬ ನೆಯ ಸಭೆಯು ಕಳೆದ ವರ್ಷ ರಾಯಚೂರಲ್ಲಿ ಕೂಡಿಸಲ್ಪಡಬೇಕೆಂಬ ಆಲೋಚನೆಯು ನಡೆದು ಅನಿವಾರ್ಯದಡೆಯಿಂದ ಅಲ್ಲಿ ನೆರೆಯಲವಕಾಶವಿಲ್ಲವಾಯಿತು. ಉತ್ತರ ಮತ್ತೂ ದಕ್ಷಿಣ ದೇಶಗಳ ವೀರಶೈವರಲ್ಲಿ ಪರಸ್ಪರಾನುರಾಗವೂ, ಭ್ರಾತೃಭಾವವೂ ಹುಟ್ಟಲು ಕೈ॥ ವಿರಸಂಗಿ ದೇಸಾಯರು ತಮಗೆ ಪುತ್ರಸಂತಾನವಿಲ್ಲದಿದ್ದಾಗ್ಯೂ ದತ್ತಪುತ್ರನನ್ನು ಮಾಡಿಕೊಳ್ಳಯತ್ನಿಸದೆ ವೀರಶೈವ ವಿದ್ಯಾರ್ಥಿಗಳೆಲ್ಲರೂ ತಮ್ಮ ಪುತ್ರರೆಂದು ಭಾವಿಸಿ ಅವರ ವಿದ್ಯಾಭಿವೃದ್ಧಿಗಾಗಿ ವರ್ಷ ೧ ಕ್ಕೆ ೪೦ ಸಾವಿರ ರೂ. ಗಳ ಉತ್ಪನ್ನವುಳ್ಳ ಆಸ್ತಿಯನ್ನು ಧರ್ಮಾರ್ಥವಾಗಿ ಬಿಟ್ಟುಕೊಡಲು; ವಿರಕ್ತಮೂರ್ತಿಗಳು ಪಟ್ಟಾಧಿಕಾರಿಗಳು, ಮೊದಲಾದವರು ವಿದ್ಯಾವಂತರಾಗಿ ತಮ್ಮಾತ್ಮಧರ್ಮವನ್ನೂ, ಮತಸ್ವರೂಪವನ್ನೂ ತಿಳಿಯಲನುಕೂಲವಾಗಿರುವ ಶಿವಯೋಗಮಂದಿರವು ಸ್ಥಾಪಿತವಾಗಲು; ಮೈಸೂರು, ಸೊಲ್ಲಾಪುರ ಕೊಲ್ಲಾಪುರ ಮೊದಲಾದ ಕಡೆಗಳಲ್ಲಿ ವೀರಶೈವ ವಿದ್ಯಾವರ್ಧಕ ಫಂಡುಗಳೂ, ವಿದ್ಯಾರ್ಥಿನಿಲಯಗಳೂ ಏರ್ಪಡಲು ಕಾರಣಭೂತವಾದ ಮತ್ತೂ ವೀರಶೈವ ಮಂಡಲಿಗೇ ಕಲ್ಪವೃಕ್ಷದಂತಿರುವ ಈ ಮಹಾಸಭೆಯು ಕಳೆದವರ್ಷ ಯಾವ ಸ್ಥಳದಲ್ಲೂ ನಡೆಯದೆ ನಿಂತುಹೋಗಿದ್ದುದೂ, ಈ ವರ್ಷದಲ್ಲಿ ೯ ತಿಂಗಳಾದಾಗ್ಯೂ ಸಭೆಯನ್ನು ಕೂಡಿಸಲು ಯಾವುದೊಂದು ಪ್ರಯತ್ನವೂ ನಡೆಯಿಸಲ್ಪಡದೆ ಇದ್ದುದೂ ಬಹು ವ್ಯಸನಕ್ಕೆ ಕಾರಣವಾಗಿದ್ದುವು. ಅಲ್ಲದೆ ಮಹಾಸಭೆಗೆ ಅದರ ಉತ್ಪಾದಕರಾದ ಶ್ರೀಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳ ಕಣ್ಣೆದುರಿಗೇ ಇಂತಹ ದುರವಸ್ಥೆಯು ಪ್ರಾಪ್ತವಾಗಬಹುದೆ? ಎಂದು ಅನೇಕರು ಚಿಂತಿಸುತ್ತಿದ್ದರು. ಬಲವಾಗಿರುವ ವೀರಶೈವ ಮತವನ್ನುದ್ಧಾರ ಮಾಡಲು ಅವತರಿಸಿರುವ ಶ್ರೀ ಕುಮಾರಸ್ವಾಮಿಗಳಿಂದ ನೆಡಲ್ಪಟ್ಟ ಕಲ್ಪತರುವಿಗೆ ಅಳಿವುಂಟೆ? ಎಂದಿಗೂ ಇಲ್ಲ. ವೃಕ್ಷವು ಕಳೆದವರ್ಷ ರಾಯಚೂರು ಮತ್ತೂ ಕೊಲ್ಲಾಪುರ ಈ ಪ್ರಾಂತದ ವೀರಶೈವರ ಅಭಿಮಾನವೆಂಬ ಜಲಾಭಾವವುಂಟಾಗಿ ಫಲವನ್ನು ಬಿಟ್ಟಿರಲಿಲ್ಲವು. ಆದರೆ ಈ ವರ್ಷ ಬೆಳಗಾಂವಿನ ವೀರಶೈವರ ಅಭಿಮಾನದಿಂದ ಫಲವನ್ನು ಬಿಡಲು ಪ್ರಾರಂಭಿಸಿಗುವುದೆಂದು ಕೇಳಿ ಯಾರಿಗೆ ತಾನೆ ಹರ್ಷವಾಗದಿರದು? ಹಿಂದೆ ನಡೆದ ಮಹಾ ಸಭೆಗಳಲ್ಲಿ ಪ್ರೇಕ್ಷಕರ ಮನಸ್ಸನ್ನು ಕರಗಿಸುವಂತಹ ರಸವತ್ತಾದ ಭಾಷಣಗಳನ್ನುಮಾಡಿ ಖ್ಯಾತರೂ ಮತ್ತೂ ಸ್ವಮತಾಭಿವೃದ್ಧಿಯ ಕಾರ್ಯದಲ್ಲಿ ಪೂರ್ಣಾಸಕ್ತರೂ, ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರೂ ಆದ ಬೆಳಗಾಂ ಡಿ॥ ಗೋಕಾಕ್ ತಾಲ್ಲೂಕಿನ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರು ಬೆಳಗಾಂವಿಗೆ ಹೋಗಿ ಅಲ್ಲಿಯ ಮತ್ತೂ ಆ ಡಿ॥ ಗೆ ಸೇರಿದ ಇತರ ಸ್ಥಳಗಳ ವೀರಶೈವ ಪ್ರಮುಖರನ್ನು ಬರಮಾಡಿಕೊಂಡು ಚಚಡಿಯ ಸಂಸ್ಥಾನದ ದೇಸಾಯರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕೂಡಿಸಿ, ಈ ವರ್ಷ ೬ ನೆಯ ವೀರಶೈವ ಮಹಾಸಭೆಯು ಬೆಳಗಾಂವಿನಲ್ಲಿ ನಡೆಯತಕ್ಕದೆಂದು ನಿರ್ಧರಿಸಿ, ಈ ಮಹಾಕಾರ್ಯದ ವೆಚ್ಚಕ್ಕಾಗಿ ತಾವು ಸ್ವಹಸ್ತದಿಂದ ೨೦೦೦ ರೂ. ಗಳನ್ನು ಕೊಡುವುದಲ್ಲದೆ ಪರಹಸ್ತದಿಂದ ೫ ಸಾವಿರ ರೂ. ಗಳನ್ನು ಕೊಡಿಸುತ್ತೇವೆಂದು ವಾಗ್ದಾನಮಾಡಿರುವರೆಂದು ತಿಳಿಯಲು ನಮಗೆ ಪರಮಸಂತೋಷವಾಗುತ್ತದೆ. ಈ ಸಭಾ ಸಂಬಂಧವಾದ ನಡೆವಳಿಕೆಗಳೂ, ಮುಂದೆ ಮಹಾಸಭೆಯಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳೂ ಈ ಪತ್ರಿಕೆಯ ಮತ್ತೊಂದುಕಡೆ ಕೊಡಲ್ಪಟ್ಟಿರುತ್ತವೆ. ಶ್ರೀ॥ ಶಿವಮೂರ್ತಿಸ್ವಾಮಿಗಳು ಒಳ್ಳೆಯ ವಿದ್ಯಾವಂತರಾಗಿಯೂ, ಸಮಾಜಾಭಿವೃದ್ಧಿಯ ಉಪಾಯಗಳನ್ನು ತಿಳಿದವರಾಗಿಯೂ ಹಿಂದೆ ನಡೆದ ಮಹಾಸಭೆಗಳಲ್ಲಿ ಮುಂದಾಳುಗಳಾಗಿದ್ದು ಪೂರ್ಣಾನುಭವವನ್ನು ಸಂಪಾದಿಸಿದವರಾಗಿಯೂ ಇರುವುದರಿಂದ ಬಹು ಉಪಯುಕ್ತವಾದ ವಿಷಯಗಳನ್ನು ಸೂಚಿಸಿರುವರು. ೬ ನೆಯ ಮಹಾಸಭೆಯು ಈ ವರ್ಷ ಬೆಳಗಾಂವಿನಲ್ಲಿ ನಡೆಯುವಂತೆ ನಿರ್ಧರಿಸಿ ವಿನೋದಕ್ಕಾಗಿರ್ದಾಗ್ಯ ಸಭೆಯು ಅಡಗಿತೆಂಬ ಕುಹಕಿಗಳಾಡಿಕೆಗೆ ಅವಕಾಶವಾಗದಂತೆ ಮಾಡಿದುದಕ್ಕಾಗಿ ಬೆಳಗಾಂ ಡಿ॥ನ ವೀರಶೈವ ಬಂಧುಗಳಿಗೂ ಈ ಮಹಾಕಾರ್ಯವನ್ನು ಕೈಗೊಳ್ಳಲು ಅವರನ್ನು ಪ್ರೋತ್ಸಾಹಿಸಿದ ಶ್ರೀ॥ ಶಿವಮೂರ್ತಿಸ್ವಾಮಿಗಳಿಗೂ ಎಲ್ಲ ವೀರಶೈವರ ಪರವಾಗಿ ನಾವು ವಂದನೆಯನ್ನು ಅರ್ಪಿಸಿ, ಈ ವೀರಶೈವ ಬಂಧುಗಳು ಕೈಗೊಂಡಿರುವ ಮಹಾಸಭೆಯ ಕಾರ್ಯವು ನಿರಾತಂಕವಾಗಿ ನಡೆದು ಅವರಿಗೆ ಕೀರ್ತಿಪ್ರದವಾಗಲೆಂದು ಕೋರುತ್ತೇವೆ.

ವ್ಯವಸಾಯ ಮತ್ತೂ ಕೈಗಾರಿಕೆಯ ವಸ್ತುಪ್ರದರ್ಶನವು.

ಈ ಪ್ರದರ್ಶನವು ಕಳೆದ ತಾ॥ ೩೦ ರ ಸಾಯಂಕಾಲ ೪॥ ಗಂಟೆಯಲ್ಲಿ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಆ ಕಾಲದಲ್ಲಿ ದಿವಾನರು, ಕೌನ್ಸಿಲರುಗಳು ಮೊದಲಾದ ಅಧಿಕಾರಿಗಳೂ, ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ಆರಂಭಕ್ಕೆ ಮೊದಲು ಪ್ರದರ್ಶನದ ಕಮಿಟಿಯ ಅಧ್ಯಕ್ಷರು ಯುವರಾಜರ ಸುಭಾಗಮನವನ್ನು ಬಯಸಿ ಭಾಷಣವನ್ನು ಮಾಡಿದಮೇಲೆ, ಶ್ರೀಮದ್ಯುವರಾಜರು "ಈ ಪ್ರದರ್ಶನಸಂದರ್ಭದಲ್ಲಿ ಕೃಷಿ ಕೈಗಾರಿಕೆಯ ಜನರಿಗೆ ವಿಶೇಷ ಪ್ರೋತ್ಸಾಹವೂ, ಅವರ ಕೃತಿಯಲ್ಲಿ ಸ್ಪರ್ಧೆಯೂ ಉಂಟಾಗುವಂತೆ ಮಾಡಿರುವುದು ತೃಪ್ತಿಕರವಾಗಿದೆ. ಈ ಕಸಬುಗಳ ಜನರುಪಯೋಗಕ್ಕಾಗಿಯೇ ಪ್ರದರ್ಶನವು ಮುಖ್ಯವಾಗೇರ್ಪಡಿಸಲ್ಪಟ್ಟುದಾಗಿದೆ. ಮತ್ತೂ ಪ್ರೆಸಿಡೆಂಟರು ಹೇಳಿದ ಪ್ರಕಾರ ಕೆಲ ನಿಮಿಷಗಳಲ್ಲಿ ಕಣ್ಣಿನಿಂದ ನೋಡಿ ತಿಳಿದುಕೊಳ್ಳುವಷ್ಟು ಪ್ರಯೋಜನವು ಪ್ರಕಟನಪತ್ರಿಕೆಗಳನ್ನೋದುವುದರಿಂದಾಗುವುದಿಲ್ಲವೆಂಬುದು ವಾಸ್ತವವು. ಎಲ್ಲ ವಿಧದ ವಸ್ತುಗಳುತ್ಪತ್ತಿಯ ಕ್ರಮವನ್ನು ಕೃತ್ಯತಃ ತೋರಿಸಲವಕಾಶವಿರುವುದರಿಂದಲೇ ಈ ಪ್ರದರ್ಶನಗಳು ಪ್ರಯೋಜನಕರವಾಗಿರುವುವು. ಈ ಪ್ರದರ್ಶನವಸ್ತುಗಳನ್ನು ಕ್ರಮವಾಗಿ ವಿಂಗಡಿಸಿಡಲು ಇರುವ ಕಷ್ಟವು ನಮ್ಮಲ್ಲಿ ಕೆಲರಿಗೆ ಮಾತ್ರ ಗೊತ್ತಾಗಬಹುದು. ಆದರೆ ನಾವು ಪ್ರತಿಯೊಂದು ಕೊಠಡಿಯನ್ನು ಹೊಕ್ಕು ಪದಾರ್ಥಗಳ ಜೋಡಣೆಯನ್ನು ನೋಡಿದಮೇಲೆ ಅದು ತಾನಾಗಿ ಗೊತ್ತಾಗುವುದರಲ್ಲಿ ಸಂದೇಹವಿಲ್ಲವು." ಎಂದು ಅಪ್ಪಣೆಯನ್ನು ಕೊಡಿಸಿ ಪ್ರೈವೆಟ್ ಸೆಕ್ರೆಟರಿಗಳು, ಮಿಲ್ಟರಿ ಸೆಕ್ರೆಟರಿಗಳು ದಿವಾನರು ಮೊದಲಾದವರ ಕೂಡ ಪ್ರತಿಯೊಂದು ಕೊಠಡಿಗೂ ಚಿತ್ತೈಸಿ ಪದಾರ್ಥಗಳನ್ನೋಡಿ ತೃಪ್ತಿಪಟ್ಟು ದಯಮಾಡಿಸಿದರು. ಅಷ್ಟು ಹೊತ್ತಿಗೆ ೬॥ ಗಂಟೆಯಾಗಿದ್ದಿತು. ಅನಂತರ ಪ್ರೇಕ್ಷಕರನ್ನು ಬಿಡಲಾರಂಭವಾಯಿತು. ನಿನ್ನೆಯ ಬೆಳಿಗ್ಗೆ ಶ್ರೀಮನ್ಮಹಾಮಾತೃಶ್ರೀಯವರೂ, ರಾಜಕುಮಾರಿಯರೂ ಕೆಲ ಬಂಧುವರ್ಗದೊಡನೆ ಪ್ರದರ್ಶನಾಲಯಕ್ಕೆ ಚಿತ್ತೈಸಿ ವಸ್ತುಗಳನ್ನು ಪರಾಮರಿಸಿದುದಲ್ಲದೆ ಕೆಲ ಪದಾರ್ಥಗಳನ್ನು ಕ್ರಯಕ್ಕೆ ಕೊಂಡುಕೊಳ್ಳಲು ಗೊತ್ತುಮಾಡಿ ಬಂದರು. ನಾಳೆಯ ದಿನ ಶ್ರೀಮನ್ಮಹಾರಾಜರವರು ವಿಜಯಯಾತ್ರೆಯನ್ನು ಹೊರಡುವುದರಿಂದ ಪ್ರದರ್ಶನಾಲಯವು ತೆರೆಯಲ್ಪಡದೆ ತಾ॥ ೪ ರಿಂದ ತಾ॥ ೧೨ ರ ವರೆಗೆ ಪ್ರತಿದಿನ ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ ತೆರೆಯಲ್ಪಟ್ಟಿದ್ದು ಪ್ರೇಕ್ಷಕರು ಬಿಡಲ್ಪಡುವರು.

ದಶರಾತ್ರಿಯ ಮಹೋತ್ಸವ ಸಮಾಪ್ತಿಯು.

ಈ ದಿವಸ ಬೆಳಿಗ್ಗೆ ೯ ಗಂಟೆಗೆ ಆಯುಧ ಗಜಾಶ್ವಗಳು ಕೆರೆಯ ಬಳಿಗೆ ಹೋಗಿ ಪೂಜೆಗೊಂಡು ಬಂದುವು. ಮತ್ತೂ ಸಾಯಂಕಾಲ ಇಂಗ್ಲೀಯರಿಗಾಗಿ ದರ್ಬಾರಾಗುವುದು. ನಾಳೆಯದಿನ ಬೆಳಿಗ್ಗೆ ೩ ಗಂಟೆಗೆ ಆಯುಧಗಜಾಶ್ವಗಳು ಸಕಲ ರಾಜ ಮರ್ಯಾದೆಯೊಡನೆ ಬನ್ನಿಯ ಮಂಟಪಕ್ಕೆ ಹೊರಡುವುವು. ಸಾಯಂಕಾಲ ೪ ಗಂಟೆಗೆ ಶ್ರೀಮನ್ಮಹಾರಾಜರವರು ಅಮೋಘವಾದ ವಸ್ತ್ರಾಭರಣಭೂಷಿತರಾಗಿ ಅಲಂಕೃತವಾದ ಆನೆಯ ಮೇಲಣ ಚಿನ್ನದಂಬಾರಿಯಲ್ಲಿ ಕುಳಿತು ಸಕಲ ಬಿರುದಾವಳಿಗಳಿಂದಲೂ, ಚತುರಂಗ ಸೇನೆಯಿಂದಲೂ ಕೂಡಿ ಅರಮನೆಯಿಂದ ಉತ್ಸವಹೊರಟು ದಾರಿಯುದ್ದಕ್ಕೂ ಜನರೊಪ್ಪಿಸುವ ಪುಷ್ಪಹಾರಗುಚ್ಛಗಳನ್ನು ಸ್ವೀಕರಿಸಿ ಬನ್ನೀಮಂಟಪದ ಬಳಿಗೆ ಬಿಜಯಂಗೈಯುವರು. ಅಲ್ಲಿ ಶಮೀ ವೃಕ್ಷದ ಪೂಜೆಯನ್ನು ತೀರಿಸಿಕೊಂಡು ಯಥಾಪ್ರಕಾರ ಉತ್ಸವದಿಂದ ಹಿಂತಿರುಗಿ ರಾತ್ರಿ ೧೦-೧೧ ಗಂಟೆಗೆ ಅರಮನೆಯನ್ನು ಸೇರುವರು. ತಾ॥ ೪ ಮತ್ತೂ ೫ ರ ರಾತ್ರಿ ೨ ಗಂಟೆಗೆ ಅಂಬಾವಿಲಾಸದಲ್ಲಿ ದರ್ಬಾರು ನಡೆದು ನಜರುಮುಜರೆಯಾಗುವುದು. ಈ ಉತ್ಸವ ಸಮಾರಂಭವನ್ನೋಡಲು ಮದರಾಸು ಮೊದಲಾದ ಕಡೆಯಿಂದ ತಕ್ಕಷ್ಟು ಜನರು ಬರುತ್ತಿರುವುದರಿಂದ, ನಿತ್ಯದಲ್ಲೂ ೨-೩ ಹೆಚ್ಚುಗಟ್ಟಲೆಯ ರೈಲು ಬಂಡಿಗಳು ಬರುತ್ತಿರುವುವು. ಈ ಸಂವತ್ಸರದಲ್ಲಿ ಮಳೆಯು ಚೆನ್ನಾಗಾದ್ದು ಪ್ಲೇಗು ರೋಗದ ಭಯವಿಲ್ಲದಿದ್ದಲ್ಲಿ ಹೊರಗಿನಿಂದ ಲಕ್ಷಾಂತರಜನರುಬರುವ ನಿರೀಕ್ಷಣೆಯಿದ್ದಿತು

ಒಳದೇಶದ ವೃತ್ತಾಂತ.

ಕಳೆದವಾರ ಒಬ್ಬ ಹೆಂಗುಸು ದೊಡ್ಡಕೆರೆಗೆ ಬಿದ್ದು ಪ್ರಾಣವನ್ನು ಕಳೆದುಕೊಂಡಳು.

ಮೈಸೂರ ಸಂಪದಭಿವೃದ್ಧಿಯ ಆಲೋಚನಾ ಸಭೆಯವರು ದಿವಾನರ ಅಧ್ಯಕ್ಷತೆಯಲ್ಲಿ ಕಳೆದ ತಾ॥ ೩೦ ರಿಂದ ಪ್ರತಿದಿನ ಮಧ್ಯಾಹ್ನದಲ್ಲಿ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರಿ ಅನೇಕ ವಿಷಯಗಳನ್ನು ಕುರಿತು ಆಲೋಚಿಸುತ್ತಿರುವರು.

ದಸರಾ ಮಹೋತ್ಸವದುದ್ದಿಶ್ಯ ಸಂಸ್ಥಾನದ ಎಲ್ಲ ಕೋರ್ಟುಗಳಿಗೂ, ಕಚೇರಿಗಳಿಗೂ, ಪಾಠಶಾಲೆಗಳಿಗೂ ಕಳೆದ ತಾ॥ ೨೯ ರಿಂದ ಈ ತಾ॥ ೧೧ ರ ವರೆಗೆ ರಜವು ಕೊಡಲ್ಪಟ್ಟಿರುವುದು. ಈ ಕಾರಣದಿಂದಲೇ ಈ ತಾ॥ ೫ ರ ಮೈಸೂರ ಗೆಜೆಟ್ಟು ಹೊರಡುವುದಿಲ್ಲವು.

ಈ ತಾ॥ ೪ ರ ರಾತ್ರಿ ಅಂಬಾವಿಲಾಸದಲ್ಲಿ ನಡೆಯುವ ದರ್ಬಾರಿನಲ್ಲಿ ದಿವಾನರು ಮ॥ ಟಿ. ಆನಂದರಾಯರಿಗೂ, ೧ ನೆಯ ಕೌನ್ಸಿಲರು ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೂ ಶ್ರೀಮನ್ಮಹಾರಾಜರವರಿಂದ ಪ್ರಶಸ್ತಿಗಳೂ, ಬಿಲ್ಲತ್ತುಗಳೂ ಕೊಡಲ್ಪಡುವುವಾಗಿ ಅರಿಯುತ್ತೇವೆ.

ಸರ್ಕಾರದಪ್ಪಣೆ(ಲೈಸನ್ಸ್)ಯಿಲ್ಲದೆ ಹಸೀ ಈಚಲ ಮರ ಮತ್ತೂ ಗರಿಗಳನ್ನಾಗಲಿ, ಒಣಗಿದ ಈಚಲ ಮರವನ್ನಾಗಲಿ ಕತ್ತರಿಸಿದವರು ಶಿಕ್ಷೆಗೆ ಗುರಿಮಾಡಲ್ಪಡುವರೆಂದೂ, ಈ ಅಪ್ಪಣೆ (ಲೈಸೆನ್ಸ್) ಯನ್ನು ರೆವಿನ್ಯೂ ಅಧಿಕಾರಿಗಳಿಂದಲ್ಲದೆ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಿಂದಲೂ ಪಡೆಯಬಹುದೆಂದೂ ಸರ್ಕಾರಿಯಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ಕಳೆದ ಬುಧವಾರ ರಾತ್ರಿ ಸಾಮಾನ್ಯವಾಗಿಯೂ, ಶನಿವಾರರಾತ್ರಿ ಪೂರ್ತಿಯಾಗಿಯೂ ಮಳೆಯಾಯಿತು. ಇದೇ ಪ್ರಕಾರ ಎಲ್ಲ ಕಡೆಯೂ ಮಳೆಯಾಗಿದ್ದಲ್ಲಿ ಒಣಗುತ್ತಿರುವ ಪೈರು ಚೇತರಿಸಿಕೊಳ್ಳುವುದಲ್ಲದೆ ಧಾನ್ಯದ ಬೆಲೆಯು ಇಳಿಯುವುದು ಮತ್ತೂ ದನಕರುಗಳಿಗೆ ಮೇವು ನೀರಿಗೂ ಅನುಕೂಲವಾಗುವುದು.

ಕಳೆದ ತಾ॥ ೧ ರ ಸಾಯಂಕಾಲದಲ್ಲಿ ಬ್ರಿಟಿಷ್ ರೆಸಿಡೆಂಟರೂ, ಕಪೂರ್ಥಲಮಹಾರಾಜರಾದ ರಾಜಾ ಸರ್ ಜಗತ್‌ಸಿಂಗ್ ಬಹದ್ದೂರರವರು ಉದಕಮಂಡಲದಿಂದ ಸೀಗೂರಿನ ಮಾರ್ಗವಾಗಿ ರಾಜಧಾನಿಗೆ ದಯಮಾಡಿಸಿದರು. ರೆಸಿಡೆಂಟರಿಗಾಗಿ ೧೩ ಗುಂಡುಗಳೂ, ಕಪೂರ್ಥಲದ ಮಹಾರಾಜರಿಗಾಗಿ ೧೧ ಗುಂಡುಗಳೂ ಹಾರಿಸಲ್ಪಟ್ಟುವು. ಈ ಮಹಾರಾಜರ ಬಿಡಾರವು ಖಾಸಬಂಗಲೆಯಲ್ಲಿ ಮಾಡಲ್ಪಟ್ಟಿರುವುದು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸಂಸ್ಥಾನದಲ್ಲಿ ಪ್ರತಿವರ್ಷದಲ್ಲೂ ದಸರಾಮಹೋತ್ಸವವು ಅತಿ ವಿಜೃಂಭಣೆಯಿಂದ ಜರುಗುವ ಪದ್ಧತಿಯುಂಟಷ್ಟೆ. ಆದರೆ ಈ ವರ್ಷ ಮಹಾಸ್ವಾಮಿಯವರ ಸ್ವಾರಿಯು ಇರುವ ಬಾಗಲಕೋಟೆಯಲ್ಲೂ, ನೆರೆಯ ಪ್ರದೇಶದಲ್ಲೂ ಪ್ಲೇಗು ಪ್ರಾರಂಭವಾಗಿ ಜನರು ಉತ್ಸವಕ್ಕೆ ಬರಲವಕಾಶವಿಲ್ಲದಿರುವುದರಿಂದ ಮಹೋತ್ಸವವನ್ನೂ, ವಾರ್ಷಿಕ ಸಭೆಯನ್ನೂ ಸನ್ನಿಧಿಯಲ್ಲಿ ಜರುಗಿಸದೆ ದುರ್ಗದ ಮಠದಲ್ಲಿ ಸಾಮಾನ್ಯವಾಗಿ ನಡೆಯಿಸುವಂತೆ ಏರ್ಪಡಿಸಿರುವ ಪ್ರಯುಕ್ತ ಉತ್ಸವಕ್ಕಾಗಿ ಯಾರೂ ಹೊರಡಬೇಕಾದುದಿಲ್ಲವೆಂದು ಸನ್ನಿಧಿಯ ಅಪ್ಪಣೆಯಾಗಿರುತ್ತದೆ

ಶ್ರೀಮನ್ಮಹಾರಾಜರವರು ಈ ದಶರಾತ್ರಿಯ ಮಹೋತ್ಸವದಲ್ಲಿ ಪ್ರತಿನಿತ್ಯದಲ್ಲೂ ಬೆಳಿಗ್ಗೆ ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಚಾಮುಂಡೇಶ್ವರೀ ತೊಟ್ಟಿಗಾಗಲಿ ಅಥವಾ ಸಜ್ಜೆಯ ಮಗ್ಗುಲಭಾಗಕ್ಕಾಗಲಿ ದಯಮಾಡಿಸುತಲೆ ಅರಮನೆಯ ಹೊರಗಡೆ ಗೂಳಿ, ಕೋಣ, ಟಗರು, ಹುಂಜ ಮೊದಲಾದ ಪ್ರಾಣಿಗಳ ಕಾಳಗಗಳು ನಡೆಯುವುವು. ಈ ಕಾಳಗವನ್ನೋಡಲು ಜನರು ವಿಶೇಷವಾಗಿ ಬಂದು ಸೇರುವರು. ಕಳೆದ ತಾ॥ ೨೮ ರ ಬೆಳಿಗ್ಗೆ ಕಾಳಗಕ್ಕೆ ಬಿಡಲ್ಪಟ್ಟಿದ್ದ ಎರಡು ಕೊಬ್ಬಿದ ಕೋಣಗಳು ಹೋರಾಡುತ್ತಿರುವಾಗ್ಗೆ ರೋಷಗೊಂಡು ಜನರಮೇಲೆ ನುಗ್ಗಿಬಿಟ್ಟುವು. ಜನರು ದಿಗಿಲು ಬಿದ್ದು ಪ್ರಾಣಭಯದಿಂದ ಓಡಿಹೋಗುವಾಗ್ಗೆ ೩-೪ ಜನಗಳು ಬಿದ್ದು ಕೈಕಾಲುಗಳಿಗೆ ಪೂರಾ ಗಾಯವನ್ನುಂಟುಮಾಡಿಕೊಂಡರು. ಆದರೆ ದೈವಾನುಗ್ರಹದಿಂದ ಪ್ರಾಣಾಪಾಯವಾಗಲಿಲ್ಲವೆಂದು ಕೇಳಿ ಸಂತೋಷಿಸುತ್ತೇವೆ.

ಮೈಸೂರ ಪ್ರಜಾಪ್ರತಿನಿಧಿ ಸಭೆಯ ಪಕ್ಷವಾಗಿ ರಾಜಧಾನಿಯ ಅಡ್ವೋಕೇಟರಾದ ಮ॥ ಎ. ರಾಮಣ್ಣನವರೂ ಬೆಂಗಳೂರ ಅಡ್ವೋಕೇಟರಾದ ಮ॥ ಡಿ. ವೆಂಕಟರಾಮಯ್ಯನವರೂ ಮೈಸೂರ ನಿಯಮನಿರ್ಮಾಣಸಭೆಯ ಮೆಂಬರುಗಳಾಗಿ ನಿಯಮಿಸಲ್ಪಟ್ಟಿದ್ದರಷ್ಟೆ. ಅವರುಗಳ ಉದ್ಯೋಗದವಧಿಯು ಈಗ ಮುಗಿದುದರಿಂದ ಪ್ರಜಾಪ್ರತಿನಿಧಿಗಳಲ್ಲಿ ಇಬ್ಬರು ಹೊಸದಾಗಿ ಮೆಂಬರುಗಳಾಗಿ ಪ್ರಜಾಪ್ರತಿನಿಧಿಸಭೆಯು ನಡೆಯುವಾಗ್ಗೆ ಅಥವಾ ನಡೆದಮೇಲೆ ಆರಿಸಲ್ಪಡುವರೆಂದು ಗೊತ್ತಾಗಿದೆ. ಈ ಹೀಗೆ ಮೆಂಬರಾಗಲು ಮ॥ ರಾಮಣ್ಣನವರು ಅಪೇಕ್ಷಿಸುವುದಿಲ್ಲವೆಂಬುದಾಗಿಯೂ, ಮ॥ ವೆಂಕಟರಾಮಯ್ಯನವರು ಇನ್ನೂ ಅನುಮಾನಿಸುತ್ತಿರುವುದಾಗಿಯೂ ಕೇಳುತ್ತೇವೆ. ಶ್ರೀರಂಗಪಟ್ಟಣದ ಲಾಯರಾದ ಮ॥ ನರಸಿಂಗರಾಯರು ಮೆಂಬರಾಗಿ ಆರಿಸಲ್ಪಡಲು ಸರ್ವಪ್ರಯತ್ನವನ್ನು ಮಾಡುತ್ತಿರುವಂತೆ ತೋರುತ್ತದೆ.

ರಾಜಧಾನಿಯ ದೊಡ್ಡಪೇಟೆಯಲ್ಲಿ ಪಾತ್ರೆಯ ವ್ಯಾಪಾರವನ್ನು ದೊಡ್ಡದಾಗಿ ಮಾಡುತ್ತಿದ್ದು ಪುಣ್ಯವಂತರಾಗಿದ್ದ ಜೈನ ಮತಶ್ರದ್ಧರಾದ ಮ॥ ರಾ॥ ಚಂದಪ್ಪನವರು ಈಗ್ಗೆ ೧೧ ತಿಂಗಳ ಕೆಳಗೆ ಪರಮಪದವನ್ನೈದಿದರು. ಅವರು ಕಾವೇರೀನದಿಯ ಪ್ರವಾಹದಿಂದ ವಿಪನ್ನರಾದವರ ಸಹಾಯಾರ್ಥವಾಗಿ ಏರ್ಪಟ್ಟಿರುವ ಫಂಡಿಗೆ ೧೦ ರೂ. ಗಳನ್ನು ಕೊಡಬೇಕೆಂದು ಸಂಕಲ್ಪಿಸಿದ್ದುದರಿಂದ, ಅವರ ಪತ್ನಿಯವರಾದ ಮರಿದೇವಮ್ಮನವರು ಈಗ ಆ ಫಂಡಿಗಾಗಿ ೧೦ ರೂಪಾಯಿಗಳನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟು ತಮ್ಮ ಪತಿಯವರ ಸಂಕಲ್ಪವನ್ನು ನೆರವೇರಿಸಿದುದು ಅತ್ಯಂತ ಶ್ಲಾಘ್ಯವಾಗಿರುತ್ತದೆ. ಕಡೂರು ಡಿ॥ಬುಕ್ಕಾಂಬುಧಿಯ ಮ॥ ಪರಯ್ಯನವರು ಮಕ್ಕಳು ಎಚ್. ಮರುಳ ಸಿದ್ಧಯ್ಯನವರು ೮ ಆಣೆಗಳನ್ನೂ, ಉತ್ತರಕಾನಡ ಡಿ॥ ಶಿರ್ಸಿ ತಾ॥ ಇಸಳೂರಿನ ಮ॥ ಮಹಾಲಿಂಗಪ್ಪ ಚೆನ್ನಮಲ್ಲಪ್ಪ ಕಲ್ಲಾಪುರ ಇವರು ೮ ಆಣೆಯನ್ನೂ ಕಳುಹಿಸಿಕೊಟ್ಟಿರುವರು ಈ ಮೊಬಲಗನ್ನು ನಾವು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿ ರಿಲೀಫ್ ಫಂಡಿನ ಸೆಕ್ರೆಟರಿಯವರಿಗೆ ತಲುಪಿಸಿರುತ್ತೇವೆ.

ಮೈಸೂರ ಸರ್ಕಾರಿಯುದ್ಯೋಗಸ್ಥರಲ್ಲಿ ತಿಂಗಳೊಂದಕ್ಕೆ ೧೦ ರೂಪಾಯಿಗಳಿಂದ ಮೇಲ್ಪಟ್ಟಿರುವವರೆಲ್ಲರೂ ಆಪದ್ಧನದ (ಲೈಫ್ ಇನ್ಶೂರೆನ್ಸ್) ಫಂಡಿಗೆ ೧೦೦ ರಲ್ಲಿ ೧೦ ರೂ. ಗಳಂತೆ ಹಣವನ್ನು ಹಾಕಬೇಕೆಂಬ ನಿರ್ಬಂಧವು ಕಲ್ಪಿಸಲ್ಪಟ್ಟು ಹೀಗೆ ಶೇಖರವಾದ ಹಣವು ಹಾಕಿದವನ ೫೫ ನೆಯ ವರ್ಷದಲ್ಲಾಗಲಿ ಅಥವಾ ಅವನ ಮರಣಾನಂತರವಾಗಲಿ ಹಿಂದಕ್ಕೆ ಕೊಡಲ್ಪಡುವ ಪದ್ಧತಿಯಿರುವುದಷ್ಟೆ. ಇತಃಪರ ಈ ಯಾಪದ್ಧನದ ಫಂಡಿಗೆ ೧೦೦ ಕ್ಕೆ ೧೦ ರೂಪಾಯಿಗಿಂತ ಹೆಚ್ಚಾಗಿ ಅವರಿಗಿಷ್ಟವಿರುವಷ್ಟನ್ನು ಕೊಡಬಹುದೆಂದೂ ಮತ್ತೂ ಆ ಪ್ರಕಾರ ಅವರ ಪ್ರತಿತಿಂಗಳ ಸಂಬಳದಲ್ಲಿ ಹಿಡಿಯಲ್ಪಡುವುದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ. ಈವರೆಗೆ ೧೦೦ ಕ್ಕೆ ೧೦ ರೂ. ಗಿಂತ ಹೆಚ್ಚಾಗಿ ಸರ್ಕಾರದ ಆಪದ್ಧನದ ಫಂಡಿಗೆ ತೆಗೆದುಕೊಳ್ಳಲ್ಪಡದೆ ಇದ್ದುದರಿಂದ ಹೆಚ್ಚು ಮೊಬಲಗನ್ನು ಶೇಖರಿಸಬೇಕೆಂಬ ಇಷ್ಟವುಳ್ಳ ಅನೇಕ ಸರ್ಕಾರಿಯುದ್ಯೋಗಸ್ಥರು ಸ್ವಂತವಾಗೇರ್ಪಡಿಸಲ್ಪಟ್ಟಿರುವ ಓರಿಯಂಟಲ್ ಲೈಫ್ ಇನ್ಶೂರೆನ್ಸ್ ಕಂಪೆನಿ ಮೊದಲಾದುವುಗಳಲ್ಲಿ ತಮಗೆ ಸಾಧ್ಯವಿದ್ದಷ್ಟು ಹಣವನ್ನು ಶೇಖರಿಸುತ್ತಿದ್ದರು. ಆದರೆ ಅದು ಸರ್ಕಾರಿಯ ಫಂಡಿನಷ್ಟು ಅನುಕೂಲವಾಗುದಲ್ಲವೆಂದು ಹೇಳಾಡುತ್ತಿದ್ದರು. ಅಂತಹವರೆಲ್ಲರಿಗೂ ಈಗ ಸರ್ಕಾರದವರು ಮಾಡಿರುವ ಏರ್ಪಾಟಿನಿಂದ ತುಂಬಾ ಉಪಕಾರವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು.

ಶ್ರೀಮನ್ಮಹಾರಾಜರವರ ಸಮೀಪ ಬಂಧುಗಳಾದ ಮ॥ ರಾ॥ ಪುಟ್ಟಯ್ಯಾಜಿ ಅರಸಿನವರ ದ್ವಿತೀಯ ಕುಮಾರರಾದ ಇಂಪೀರಿಯಲ್ ಸರ್ವಿಸ್ ಸೇನೆಯಲ್ಲಿರುವ ಮ॥ ಕೃಷ್ಣ ಅರಸಿನವರು ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವಕ್ಕೋಸ್ಕರ ಈ ಸಂಸ್ಥಾನದ ಸೇನೆಯ ಪ್ರತಿನಿಧಿಗಳಾಗಿ ಲಂಡನ್ನಿಗೆ ಕಳುಹಲ್ಪಟ್ಟಿದ್ದರಷ್ಟೆ. ಈ ಅರಸಿನವರು ಅಲ್ಲಿಯ ಮಹೋತ್ಸವವನ್ನು ತೀರಿಸಿಕೊಂಡು ಹಿಂದಿರುಗಿ ಕಳೆದ ತಾ॥ ೨೯ ರಲ್ಲಿ ರಾಜಧಾನಿಯನ್ನು ಸುಖವಾಗಿ ತಲುಪಿದರು. ಇವರ ಊಟ ಉಪಚಾರಕ್ಕಾಗಿ ಸಂಗಡ ಹೋಗಿದ್ದ ಲಿಂಗಾಯತರ ಹುಡುಗನೂ ಸುಖವಾಗಿ ಬಂದು ಸೇರಿದನು. ಇವರ ತಂದೆಯವರೂ, ಅಣ್ಣಂದಿರಾದ ಮ॥ ಸುಬ್ರಹ್ಮಣ್ಯರಾಜ ಅರಸಿನವರೂ, ಇತರ ಬಂಧುವರ್ಗದವರೂ ಮಿತ್ರಮಂಡಲಿಯೂ ರೈಲ್ವೆಯ ಸ್ಟೇಷನ್ನಿನಲ್ಲಿ ಇದಿರ್ಗೊಂಡು ಸುಭಾಗಮನವನ್ನು ಬಯಸಿ ಕರೆದುಕೊಂಡು ಬಂದರು. ಈಗ್ಗೆರಡು ವರ್ಷಗಳ ಕೆಳಗೆ ಶ್ರೀಮದ್ಯುವರಾಜರವರು ಕೆಲ ರಾಜಬಂಧುಗಳ ಮತ್ತೂ ಪರಿವಾರದೊಡನೆ ಜರ್ಮ ದೇಶಕ್ಕೆ ದಯಮಾಡಿಸಿದ್ದು ಸಮುದ್ರಯಾನಕ್ಕೆ ಅವಕಾಶವನ್ನುಂಟುಮಾಡಿಕೊಟ್ಟಿದ್ದರು. ಇದರ ಮೇಲೆ ನಮ್ಮ ಮ॥ ಕೃಷ್ಣ ಅರಸಿನವರು ಇಂಗ್ಲೆಂಡಿಗೆ ಹೋಗಿ ಬಂದು ರಾಜಬಂಧುಗಳಾದ ಇತರರೂ ನಿರಾತಂಕವಾಗಿ ಹೋಗಿಬರಲು ಅವಕಾಶವನ್ನುಂಟುಮಾಡಿಕೊಟ್ಟುದಕ್ಕಾಗಿ ನಾವು ಸಂತೋಷಿಸುತ್ತೇವೆ. ಮತ್ತೂ ವರ್ಧಿಷ್ಣುಗಳಾದ ರಾಜಬಂಧುಗಳು ಮ॥ ಕೃಷ್ಣ ಅರಸಿನವರ ಮೇಲ್ಪಂಕ್ತಿಯನ್ನನುಸರಿಸಿ ವಿದೇಶಪ್ರಯಾಣಮಾಡಿ ಅಲ್ಲುಂಟಾಗುವ ಅನುಭವದಿಂದ ತಮಗೂ ತಮ್ಮ ಸ್ವದೇಶಕ್ಕೂ ಮೇಲ್ಮೆಯನ್ನುಂಟುಮಾಡುವವರಾಗಲೆಂದು ಇಚ್ಛಿಸುತ್ತೇವೆ.

ವರ್ತಮಾನ ಸಂಗ್ರಹ.

:o:

ಕಳೆದ ತಾ॥ ೨೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೯೩೦೦ ಜನರಿಗೆ ಪ್ಲೇಗುತಗಲಿ ೬೬೬೨ ಜನರು ಸತ್ತರು. ಇವರಲ್ಲಿ ಬೊಂಬಾಯಿ ಸಾಧಿಪತ್ಯದಲ್ಲಿ ೪೬೪೯; ಮದ್ರಾಸಾಧಿಪತ್ಯದಲ್ಲಿ ೪೮೩; ಬಂಗಾಳದಲ್ಲಿ ೧೮; ಸಂಯುಕ್ತಪ್ರಾಂತಗಳಲ್ಲಿ ೩೦; ಪಂಜಾಬಿನಲ್ಲಿ ೫; ಬರ್ಮಾದಲ್ಲಿ ೧೩; ಮಧ್ಯಪ್ರಾಂತಗಳಲ್ಲಿ ೨೭೯; ಮೈಸೂರ ಸೀಮೆಯಲ್ಲಿ ೪೮೬; ಮಧ್ಯ ಹಿಂದೂಸ್ಥಾನದಲ್ಲಿ ೧೮೯ ಈ ಪ್ರಕಾರ ಮರಣವಾಗಿರುತ್ತದೆ.

ಪ್ಯಾರಿಸ್ ಪಟ್ಟಣದಲ್ಲಿ ಒಂದು ಹೊಸಮಾದರಿಯ ಮೋಟಾರು ಬಂಡಿಯು ಕೆಲ ಜನರನ್ನು ಕುಳ್ಳಿರಿಸಿಕೊಂಡು ನದಿಯ ಸೇತುವಿನ ಮೇಲೆ ಹೋಗುತ್ತಿರುವಾಗ್ಗೆ ಸೇತುವಿಗೆ ಕಟ್ಟಿದ್ದ ಕೈಪಿಡಿಗೆ ತಾಕುಬಡಿದು ಅದನ್ನು ಕೆಡವಿಬಿಟ್ಟು ನದಿಯೊಳಗೆ ಬಿದ್ದುಬಿಟ್ಟಿತು. ಇದರಿಂದ ಬಂಡಿಯೊಳಗೆ ಕುಳಿತಿದ್ದ ಜನರಲ್ಲಿ ೧೧ ಜನರು ಸತ್ತರು, ೯ ಜನರು ತುಂಬಾ ಪೆಟ್ಟನ್ನು ತಿಂದರು. ಮತ್ತೂ ಉಳಿದವರು ಬಂಡಿಯ ಮೇಲು ಹೊದ್ದಿಕೆಯ ಮೇಲುಗಡೆ ಹತ್ತಿ ಪ್ರಾಣವನ್ನುಳಿಸಿಕೊಂಡರು. ಬಂಡಿಯೊಳಗೆ ಕುಳಿತಿದ್ದ ಒಬ್ಬ ಪಾದ್ರಿಯು ನೀರಿನೊಳಗೆ ಮುಳುಗಿ ೬ ಜನರನ್ನು ಮೇಲಕ್ಕೆ ತೆಗೆದು ಬದುಕಿಸಿದನು.

ಇಟಲಿ ಮತ್ತೂ ತುರ್ಕಿ ರಾಜ್ಯಗಳಿಗೆ ಪರಸ್ಪರ ಮನಸ್ತಾಪವು ಹುಟ್ಟಿ ಯುದ್ಧಕ್ಕಾರಂಭವಾಗಿರುತ್ತದೆ. ಇಟಲಿಯವರ ಒಂದು ಹಡಗು ತುರ್ಕಿಯವರ ಒಂದು ಹಡಗನ್ನು ನಾಶಮಾಡಿತು. ತುರ್ಕಿಯ ಸೇನೆಯ ಒಂದು ಭಾಗವು ಪ್ರಿವಾಜ್ ಎಂಬಲ್ಲಿಗೆ ಹೊರಟಿರುತ್ತದೆ ಇಟಲಿಯವರು ಟ್ರಿಪೋಲಿ ಎಂಬ ರೇವು ಪಟ್ಟಣದಲ್ಲಿ ತುರ್ಕಿಯ ಸೇನೆಯು ಬಂದಿಳಿಯದಂತೆ ತಡೆಮಾಡಿರುತ್ತಾರೆ. ಈ ಯುದ್ಧವು ಪ್ರಬಲವಾಗಿ ಅನೇಕ ಪ್ರಾಣನಷ್ಟವಾಗಬಹುದೆಂದು ತೋರುವುದಲ್ಲದೆ ತುರ್ಕಿ ಮತ್ತೂ ಇಟಲಿ ಪಕ್ಷಗಳಲ್ಲಿ ಯಾವ ಪಕ್ಷವನ್ನು ಯಾವಾವ ಪ್ರಬಲರಾಜ್ಯಗಳು ವಹಿಸುತ್ತವೆಯೋ ನಿರೀಕ್ಷಣೀಯವಾಗಿದೆ.

ಕಲಕತ್ತಾದ ಕಾಳೀ ಘಟ್ಟದಲ್ಲಿರುವ ಶ್ರೀಕಾಳಿಯ ದೇವಸ್ಥಾನದಲ್ಲಿ ಸೀಮೆಯೆಣ್ಣೆಯ ದೀಪಗಳು ಹೊತ್ತಿಸಲ್ಪಟ್ಟು ದೇವರ ದರ್ಶನಕ್ಕಾಗಿ ತತ್ರಾಪಿ ದುರ್ಗಾಷ್ಟಮಿಯ ಮಹಾಪೂಜಾಕಾಲದಲ್ಲಿ ಹೋಗುತ್ತಿದ್ದ ಭಕ್ತಾದಿಗಳಿಗೆ ಕಾಳಿಯ ದರ್ಶನವಾಗದೆ ಬಹುತೊಂದರೆಯಾಗಿದ್ದುದರ ಮೇಲೆ ವಿದ್ಯುಲ್ಲತೆಯ ದೀಪಗಳು ಇಡಿಸಲ್ಪಟ್ಟುವು. ಇದಕ್ಕೆ ವೆಚ್ಚವಾದ ಹಣವೆಲ್ಲವೂ ಇಬ್ಬರು ಹಿಂದೂಭಕ್ತರಿಂದ ಕೊಡಲ್ಪಟ್ಟಿತು. ಈ ದೀಪಗಳನ್ನು ಇಡಿಸಬೇಕೆಂದು ಮೊದಲು ಆಲೋಚಿಸಲ್ಪಟ್ಟಾಗ್ಗೆ ಅನೇಕ ಪೂರ್ವಾಚಾರನಿಷ್ಠರು ಅಡ್ಡಿಯನ್ನು ಮಾಡಿದರು ಆದರೆ ಕಡೆಗೆ ವಿದ್ಯುಚ್ಛಕ್ತಿಯ ದೀಪವನ್ನು ದೇವಾಲಯದಲ್ಲಿ ಹೊತ್ತಿಸುವುದು ಅಪರಿಶುದ್ಧವಲ್ಲವೆಂದು ವಿದ್ವಾಂಸರಿಂದ ಪರಿಷ್ಕೃತವಾಗಿ ಕಡೆಗೆ [illegible].

ಭರತಖಂಡದ ಬಹುಭಾಗದಲ್ಲಿ ಪ್ರಸರಿಸಿರುವ ಬ್ರಹ್ಮಸಮಾಜದ ಸ್ಥಾಪಕರಾದ ರಾಜಾರಾಮ ಮೋಹನರಾಯ್‌ಯವರ ೭೮ ನೆಯ ವರ್ಷದ ಆರಾಧನೆಯನ್ನು ನಡೆಯಿಸುವ ಬಗೆಗೆ ಕಳೆದ ತಾ॥ ೨೭ರ ಮಧ್ಯಾಹ್ನ ಆನರಬಲ್ ಭೂಪೇಂದ್ರನಾಥ ಬಾಸುಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿರುವಾಗ್ಗೆ, ಬಾಸುಯವರು ಈಗ ತಾವು ಸಿದ್ಧಗೊಳಿಸಿ ನಿಯಮನಿರ್ಮಾಣ ಸಭೆಯವರ ಪರ್ಯಾಲೋಚನೆಯ ಬಗೆಗಿಟ್ಟಿರುವ ಹಿಂದೂ ಸಿವಿಲ್ ಮ್ಯಾರಿಯೇಜ್ ಬಿಲ್ಲಿನ ವಿಷಯವಾಗಿ ಪ್ರಸ್ತಾಪಿಸಿದರು. ಈ ವಿವಾಹ ಪದ್ಧತಿಯಲ್ಲಿ ಸುಧಾರಣೆಯಾಗಬೇಕೆಂದು ರಾಜಾರಾಮ ಮೋಹನರಾಯ್‌ಯವರು ಮೊದಲು ಪ್ರಯತ್ನಿಸಿದರೆಂದೂ, ತಾವು ಸಿದ್ಧಗೊಳಿಸಿರುವ ಬಿಲ್ಲಿನಂತೆ ಶಾಸನವನ್ನು ಮಾಡಕೂಡದೆಂದು ಅನೇಕ ಹಿಂದೂಗಳು ಪ್ರತಿಭಟಿಸಿರುವರು, ಆದರೆ ಜಾತಿಯ ಕಟ್ಟಳೆಯನ್ನು ಮೀರಿ ತಮಗೆ ಬೇಕಾದವರನ್ನು ವರಿಸಲಿಚ್ಛಿಸುವಂತಹ ಸ್ತ್ರೀಪುರುಷರಿಗೆ ಮಾತ್ರ ಈ ಬಿಲ್ಲು ಸಿದ್ಧಗೊಳಿಸಲ್ಪಟ್ಟಿರುವುದಾಗಿದೆಯೇ ವಿನಾ ಜಾತಿಯಕಟ್ಟಳೆಯನ್ನು ಕಟ್ಟಿಕೊಂಡು ಇರುವವರಿಗಲ್ಲವೆಂದು ಹೇಳಿದರು.

ಸಕ್ಕಾರಾಮಭೀಮನೆಂಬುವನು ತನ್ನ ಹೆಂಡತಿಯಾದ ೨೫ ವರ್ಷ ವಯಸ್ಸಿನ ಕಾಶೀಬಾಯಿ ಎಂಬಾಕೆಯ ಕೂಡ ಸಂಸಾರಮಾಡಿಕೊಂಡಿರಲು ಇಷ್ಟಪಡದೆ ಆಕೆಯನ್ನು ಬಿಟ್ಟುಬಿಡಲು ಕಳೆದ ತಾ॥ ೨೩ ರಲ್ಲಿ ತನ್ನ ಮನೆಯಲ್ಲಿ ೧೦-೧೫ ಜನ ಪಂಚಾಯತರನ್ನು ಕೂಡಿಸಿದ್ದನು. ಅವರು ಆಕೆಯು ತನ್ನಾಭರಣವನ್ನೆಲ್ಲ ಗಂಡನಿಗೆ ಕೊಟ್ಟುಬಿಡುವುದಲ್ಲದೆ ತಲೆಯ ಕೂದಲನ್ನು ಕತ್ತರಿಸಿಕೊಳ್ಳಬೇಕೆಂದು ತೀರ್ಮಾನಿಸಿದುದರ ಮೇಲೆ, ಗಂಡನು ಕತ್ತರಿಯಿಂದ ಕೂದಲನ್ನು ಕತ್ತರಿಸತೊಡಗಿದನು. ಆಕೆಯು ಅದಕ್ಕೆ ಅಡ್ಡಿಮಾಡಲು ಮತ್ತೊಬ್ಬನು ಆಕೆಯ ಕೈಗಳನ್ನು ಹಿಡಿದುಕೊಳ್ಳಲು ಗಂಡನು ಕೂದಲನ್ನೆಲ್ಲ ಕತ್ತರಿಸಿಬಿಟ್ಟನು. ಆಕೆಯು ಈಯಪಮಾನವನ್ನು ಸಹಿಸಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡಳು. ಅದಕ್ಕಾಗಿ ಪೋಲೀಸರು ಅವಳ ಗಂಡನನ್ನೂ ಅವನ ಸಹಾಯಕನನ್ನೂ ಹಿಡಿದು ಪೋಲೀಸು ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಿರುವಲ್ಲಿ ಮ್ಯಾಜಿಸ್ಟ್ರೇಟರು ಅವರಿಗೆ ೮ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ, ಪಂಚಾಯತರನ್ನು ವಿಚಾರಣೆಗೆ ಗುರಿಮಾಡುವಂತೆ ಅಪ್ಪಣೆಮಾಡಿದರು.

ಪತ್ರವ್ಯವಹಾರ. ✓

ಬೆಳಗಾಂವಜಿಲ್ಲೆಯ ಪತಿಯಿಂದ ಬೆಳಗಾಂವಿಯಲ್ಲಿ ಕೂಡತಕ್ಕ ೩ ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಶ್ರೀ ರಾ॥ ರಾ॥ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಸ್ಟ್ಯಾಂಡಿಂಗ ಕಮಿಟಿಯ ಮೆಂಬರ ಗೋಕಾಕ ಫಾಲ್ಸ, ಇವರ ಸಹಿಯ ಹಸ್ತಪತ್ರಿಕೆಯು ತಾ॥ ೬-೯-೧೧ ದಿವಸದ್ದು ಬೆಳಗಾಂವಿಯಲ್ಲಿ ಈ ವರ್ಷ ಮಹಾಸಭೆಯನ್ನು ನೆರವೇರಿಸುವ ಕುರಿತು ಆಲೋಚನಾ ಸಭೆಯನ್ನು ಕೂಡಿಸಿ ತಾ॥ ೧೭-೯-೧೧ ರ ದಿವಸ ವೇ॥ ಸಿದ್ಧಲಿಂಗಸ್ವಾಮಿ ಪಟ್ಟದದೇವರು ಹಿರೇಮಠ ಬೆಳಗಾಂವ ಇಲ್ಲಿ ಗೊತ್ತುಪಡಿಸಬೇಕೆಂಬ ಸೂಚನೆಯಂತೆ ರವಿವಾರ ತಾ॥ ೧೭-೯-೧೧ ರ ದಿವಸ ಮಧ್ಯಾಹ್ನದ ೩ ಗಂಟೆಗೆ ಸರಿಯಾಗಿ ಬೆಳಗಾಂವ ಶಹಾಪೂರದ ಪ್ರಮುಖರೂ, ಆ ಜಿಲ್ಲೆಗೆ ಸೇರಿದ ಬಹುತೇಕ ಎಲ್ಲ ತಾಲ್ಲೂಕುಗಳ ಮತ್ತೂ ಶಹರಗಳ ವೀರಶೈವ ಮುಂದಾಳುಗಳೂ ಸಭೆಗೆ ಬಂದಿದ್ದರು. ಆ ದಿವಸ ಕೂಡಿದ್ದ ಜನರ ಸಂಖ್ಯೆಯು ಸುಮಾರು ೩೦೦ ಆಗಬಹುದು. ಶ್ರೀಮಂತ ಸರದೇಸಾಯಿ ಚಚಡೀಕರ ಇವರು ಸಭಾಧ್ಯಕ್ಷತೆಯನ್ನು ವಹಿಸಬೇಕೆಂಬ ಶ್ರೀ. ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರ ಸೂಚನೆಯನ್ನು ಶ್ರೀ. ಶಿವಮೂರ್ತಿಸ್ವಾಮಿ ಕುಂದಬಿ ಮಠ ಇವರು ಅನುಮೋದಿಸಲು ಸರ್ವರಿಗೂ ಸಮ್ಮತವಾಗಿ ಕರತಾಡನ ಮಾಡುತ್ತಿರುವಾಗ್ಗೆ, ಶ್ರೀಮಂತರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿ, ಸಭೆಯನ್ನು ಕೂಡಿಸಿದ ಉದ್ದೇಶವನ್ನು ಸ್ವಲ್ಪದರಲ್ಲಿಯೇ ಸಭಿಕರಿಗೆ ತಮ್ಮ ಮಂಜುಳವಾಣಿಯಿಂದ ತಿಳಿಸಿದರು. ಅನಂತರ ಶ್ರೀ. ರಾ॥ ರಾ॥ ಬಸವಾರ್ಯ ಸ್ಕೂಲ ಮಾಸ್ತರ ಶಿತ್ತೂರ ಇವರು ಧಾರವಾಡ, ಬೆಂಗಳೂರು, ಕೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ ಈ ಸ್ಥಳಗಳಲ್ಲಿ ಶ್ರೀಮದ್ವೀರಶೈವ ಮಹಾಸಭೆಗಳು ಕೂಡಿದ್ದುದನ್ನೂ, ಅವುಗಳಿಂದ ನಮ್ಮ ಸಮಾಜದ ಸುಧಾರಣೆಯು ತಕ್ಕಮಟ್ಟಿಗೆ ಆದುದನ್ನೂ ಸಭಿಕರಿಗೆ ಆನಂದವಾಗುವಂತೆ ಭಾಷಣಮಾಡಿ ಈ ವರ್ಷ ಈ ಸಭೆಯು ಇಲ್ಲಿ ನೆರವೇರಬೇಕೆಂಬದಾಗಿ ಒತ್ತಾಯದಿಂದ ಹೇಳಿದರು. ತರುವಾಯ ಇದನ್ನೇ ಪುಷ್ಟೀಕರಿಸುವಲ್ಲಿ ಮ॥ರಾ॥ ಕಲ್ಲಪ್ಪ ಅಣ್ಣಾ ಸೆಟ್ಟಿ ಸಂಪಗಾಂವ ಇವರು ಅತಿ ಉತ್ತಮರೀತಿಯಿಂದ ತಮ್ಮ ರಸಾಲವಾಣಿಯಿಂದ ವ್ಯಾಖ್ಯಾನವನ್ನು ಕೊಟ್ಟರು. ಅನಂತರ ಶ್ರೀ. ರಾ॥ರಾ॥ ಶಿವಮೂರ್ತಿಸ್ವಾಮಿಗಳು ಕಣಬರಗಿ ಮಠ ಇವರು ಗಂಭೀರ ಮುದ್ರೆಯಿಂದ ಎರಡು ತಾಸುಗಳ ವರೆಗೆ ಶ್ರೀಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳು ಈ ಸಮಾಜದ ಏಳ್ಗೆಯ ಬಗ್ಗೆ ಅವಿಶ್ರಾಂತಿಯಿಂದ ಮಾಡುತ್ತಿರುವ ಸಾಹಸವನ್ನೂ, ನಮ್ಮ ಸಮಾಜದ ಮುಖಂಡರು ಕಾಲಕಾಲಕ್ಕೆ ಅಲ್ಲಲ್ಲಿ ಸಭೆಗಳನ್ನು ನೆರೆಯಿಸಿ ಸ್ವಮತವನ್ನು ಜಾಗ್ರತೆಪಡಿಸಿ ಹಿಮಾಚಲದಿಂದ ಕನ್ಯಾಕುಮಾರಿ ಭೂಶಿರದ ವರೆಗೆ ವೀರಶೈವರನ್ನು ಎಚ್ಚರಪಡಿಸುತ್ತಿರುವುದನ್ನೂ, ನಮ್ಮ ಬೆಳಗಾಂವಿಯ ಮಹನೀಯರು ಇನ್ನುವರೆಗೆ ತಮ್ಮಲ್ಲಿ ಸಭೆಯನ್ನಾಗಲಿ ಅಥವಾ ಬೇರೆ ಇನ್ನಾವ ಸಮಾಜೋತ್ಕರ್ಷ ಕಾರ್ಯವನ್ನಾಗಲಿ ಮಾಡದೆ ಮಲಗಿದ ಸಿಂಹನಂತೆ ಮೌನಧಾರಣಮಾಡಿರುವುದನ್ನೂ, ಇದರಿಂದ ಈ ಪ್ರಾಂತಕ್ಕೆ ಬರುವ ಅಪಕೀರ್ತಿಯನ್ನೂ, ನಮ್ಮ ಜನರು ಸುಧಾರಿಸಬೇಕಾದರೆ ಅವರಲ್ಲಿ ಬೇಕಾಗಿರುವ ವಿದ್ಯೆ, ವ್ಯಾಪಾರ ಉದ್ಯೋಗ, ಹೊಸತರದಿಂದ ಹೊಲಮಾಡುವಿಕೆ ಮೊದಲಾದುವುಗಳ ಆವಶ್ಯಕತೆ, ಅವುಗಳನ್ನು ಸಂಪಾದಿಸುವ ಸಾಧನ, ಅವುಗಳನ್ನು ಬಳಸುವ ಯುಕ್ತಿ, ಪರಸ್ಪರ ಪ್ರೀತಿ, ಸಹಾನುಭೂತಿ, ಒಕ್ಕಟ್ಟು ನಮ್ಮ ಮುಖಂಡರಲ್ಲಿ ಮೇಲುಪಟ್ಟಿಯನ್ನು ಪಡೆದು ಶಿವಸಾಯುಜ್ಯವನ್ನು ಹೊಂದಿದ ರಾ॥ಬಾ॥ ಗಿಲಗಂಜಿ, ಶ್ರೀಯುತ ಲಿಂಗಪ್ಪಾ ಸರದೇಸಾಯಿ ಸಿರಸಂಗಿ, ರಾ॥ ಸಾ॥ ಚನಬಸಪ್ಪಾ ಅಣ್ಣಾ ಡಿ. ಎ. ಇನಸ್ಪೆಕ್ಟರ ಹಾಗು ಈಗ ಹಾಜರಿರುವ ರಾ॥ ಬಾ॥ ಅರಟಾಳ ಸಾ॥ ರಾ॥ ಬಾ॥ ಶಾಂತವೀರಪ್ಪಣ್ಣಾ ಮೆಣಸಿನಕಾಯಿ ಮಸ್ಕೆರೀರು ವಿದ್ಯಾಭಿವೃದ್ಧಿಗಾಗಿ ಧನವನ್ನು ಶೇಖರಿಸಿ ಅದರಿಂದ ಎಷ್ಟು ಜನ ವಿದ್ಯಾರ್ಥಿಗಳಿಗೆ ಸಹಾಯ ಮಾಡಿರುವರೆಂಬುದನ್ನೂ, ಧರ್ಮಜಾಗ್ರತೆಗಾಗಿ ಶ್ರೀಮನ್ನಿರಂಜನ ಹಾನಗಲ್ಲ ಸ್ವಾಮಿಗಳು ಶಿವಯೋಗಮಂದಿರ, ಮಹಾಸಭೆಯ ರಚನೆ ಮತ್ತೆ ಮಹತ್ವದ ವಿಷಯಗಳ ಬಗ್ಗೆ ಅವಿಚ್ಛಿನ್ನವಾಗಿ ಪ್ರಯತ್ನಿಸುವುದನ್ನು ನಾವು ಕಂಡುಕೊಂಡು ನಮ್ಮ ಜಿಲ್ಲೆಯ ಜನರು ಈ ಸಂದರ್ಭದಲ್ಲಿ ಎಷ್ಟು ಹಿಂದಾಗಿರುವರೆಂಬುದನ್ನೂ, ಇದಕ್ಕೆ ನಾವು ಮಾಡಬೇಕಾಗಿರುವ ಅವಶ್ಯಕತೆಗಳೆಲ್ಲವನ್ನೂ ಬಲು ಕಳಕಳಿಯಿಂದಲೂ ಸಭಿಕರ ಮನ ಕರಗಿ ಒಮ್ಮೆಲೇ ಸ್ಫೂರ್ತಿ ಹುಟ್ಟುವಂತೆಯೂ ಭಾಷಣಮಾಡಿ, ಬೆಳಗಾಂವಿಯಲ್ಲಿ ಈ ವರ್ಷ ಸಭೆಯನ್ನು ಕೂಡಿಸುವುದು ನಿಶ್ಚಯವಾದಲ್ಲಿ ಆ ಸಭೆಯ ವೆಚ್ಚಕ್ಕಾಗಿ ೨೦೦೦ ರೂಪಾಯಿಗಳನ್ನು ತಾವು ಧರ್ಮಾರ್ಥವಾಗಿಯೂ, ಮುಂಗಡ ಖರ್ಚಿಗಾಗಿ ೫೦೦೦ ರೂ. ಗಳ ವರೆಗೆ ಬೇರೆಯಾಗಿ ಸಹಾಯಮಾಡುವುದಕ್ಕೆ ಸಿದ್ಧರಿರುವೆವೆಂತಲೂ ವಾಗ್ದಾನಮಾಡಿ ಮುಂದಿನ ಕೆಲಸವನ್ನು ಬೆಳಗಾಂವ ಶಹಾಪೂರ ಮುಖಂಡರ ಕತೆಗೆ ಒಳಿಯತೆನ್ನಲು, ಅದಕ್ಕೆ ಕೂಡಲೆ ಪ್ರತಿಧ್ವನಿಯಾಗಿ ಅಲ್ಲಿಯ ಮುಖಂಡರು ಈ ವರ್ಷ ತಮ್ಮ ಬೆಳಗಾಂವಿಯಲ್ಲಿ ಸಭೆಯನ್ನು ನೆರವೇರಿಸುವ ಕೆಲಸವನ್ನು ಕೈಕೊಳ್ಳುವೆವೆಂದು ಅಭಿವಚನವನ್ನು ಕೊಟ್ಟನಂತರ ಸದರಿ ವ್ಯಾಖ್ಯಾನಕಾರರು ಅವರೆಲ್ಲರ ಆಭಾರವನ್ನು ಮನಃಪೂರ್ವಕ ಮನ್ನಿಸಿ ಸಭೆಯು ಸಮಾಜಕ್ಕೆ ಬೇಸರಾಗದಂತೆಯೂ,ಎಲ್ಲರಿಗೂ ಸಮನಾದ ಅನುಕೂಲತೆಯಾಗಿ ಇಷ್ಟಕಾರ್ಯವು ಕೈಗೂಡುವುದನ್ನು ಕುರಿತು ಬೆಳಗಿ ತೋರಿಸಿದ ಕೆಲವು ಉಪಯುಕ್ತ ಸೂಚನೆಗಳನ್ನು ತಂದು ಸರ್ವರಿಗೂ ಸಮ್ಮತವಾದಲ್ಲಿ ಒಪ್ಪಿಗೆಯನ್ನು ಕೊಡಬೇಕೆಂದು ವಿಜ್ಞಾಪನೆ ಮಾಡಿದರು.

೧. ವೀರಶೈವ ಸಮಾಜಕ್ಕೆ ಬೇಕಾದ ವಿದ್ಯೆ—(ಅ) ಪ್ರಾಥಮಿಕ ಶಿಕ್ಷಣ ಮತ್ತೂ ಇಂಗ್ಲೀಷ ರಾಜಭಾಷೆ. (ಬ) ಕರ್ನಾಟಕ ಪ್ರಾಂತದಲ್ಲಿ 'ಆರ್ಟ್ಸ' ಕಾಲೇಜದ ಅವಶ್ಯಕತೆ. (ಕ) ವಿದ್ಯಾರ್ಥಿಗಳ ಭೋಜನ, ವಸತಿ ಗೃಹಗಳ ಅವಶ್ಯಕತೆ (ಡ) ಸ್ತ್ರೀ ಶಿಕ್ಷಣದ ಅವಶ್ಯಕತೆ ಮತ್ತೂ ಅದರ ಸಾರಾಸಾರವಿಚಾರ.

೨. ವೀರಶೈವ ಸಮಾಜದವರ ವ್ಯಾಪಾರ ಉದ್ಯೋಗಗಳು— (ಅ) ಸಂಘಶಕ್ತಿ, ಸಾಮಾಜಿಕಭಾಂಡವಲದ ಅವಶ್ಯಕತೆ. (ಬ) ಪರದೇಶಗಳ ಕೂಡ ವ್ಯಾಪಾರ. (ಕ) ಕೋ ಆಪರೇಟೀವ್ ಕ್ರೆಡಿಟ್ ಸೊಸೈಟಿಗಳ ಸ್ಥಾಪನೆ. (ಡ) ಕೋ ಆಪರೇಟೀವ್ ಸ್ಟೋರುಗಳು. (ಈ) ವೀವರ್ಸ್ ಕೋ ಆಪರೇಟೀವ್ ಅಸೋಸಿಯೇಷನ್. (ಎಫ್) ಬ್ಯಾಂಕುಗಳು. (ಜಿ) ಯಂತ್ರಗಳಿಂದ ಮಾಡಿಸುವ ಕೆಲಸಗಳು.

೩. ವೀರಶೈವ ಸಮಾಜದವರ ಒಕ್ಕಲತನವು— (ಅ) ಅಗ್ರಿಕಲ್ಚರ್ ಅಸೋಸಿಯೇಷನ್‌ಗಳ ಅವಶ್ಯಕತೆ. (ಬ) ಹೊಸಯಂತ್ರಗಳಿಂದ ಹೊಲಗಳನ್ನು ಸುಧಾರಿಸುವುದು. (ಕ) ತರತರದ ಗೊಬ್ಬರಗಳ ಅವಶ್ಯಕತೆ. (ಡ) ಒಕ್ಕಲತನದ ಸರ್ವಮಾನ್ಯ ಮಾಹಿತಿಯು, ದನಗಳ ಸಂಗೋಪನ, ಅವುಗಳ ಸಂಬಂಧವಾದ ಮಾಸಿಕ ಪುಸ್ತಕಗಳು. (ಈ) ಮೈಸೂರ ಸ್ಟಾರ್ ಪತ್ರವು ಸಮಾಜದ ಸೇವೆಯನ್ನು ಹಲವು ಪ್ರಕಾರಗಳಿಂದ ಮಾಡುತ್ತಿರುವುದು. ಅದರ ಸುಧಾರಣೆ ಮತ್ತೂ ಅದರ ಪೋಷಣೆ. (ಎಫ್) ಸುನವನ್ನು ಹೊಂದಿದ ಬ್ರಿಟಿಷ ಸರ್ಕಾರಕ್ಕೆ ಮೇಲಿನ ವಿಷಯಗಳನ್ನು ತಿಳಿಸಿ ಅವರ ಸಹಾನುಭೂತಿಯನ್ನೂ, ಅವಶ್ಯವಿರುವ ಮಟ್ಟಿಗೆ ಸಹಾಯವನ್ನೂ, ಪಡೆಯುವ ಬಗ್ಗೆ ಡೆಪ್ಯುಟೇಷನ್‌ಗಳ ಅವಶ್ಯಕತೆ.

ಈ ಪ್ರಕಾರ ಈ ವರ್ಷದ ಮಹಾಸಭೆಯು ಮುಂದೆ ವಿಷಯಗಳನ್ನು ತಂದು ಬಹುಮತದಿಂದ ಪಾಸಾದ ವಿಷಯಗಳನ್ನು ಅಮಲಿನಲ್ಲಿ ತರುವುದು ಅವಶ್ಯವದೆ. ಇನ್ನು ನಮ್ಮ ಧರ್ಮಸಂಬಂಧವಾದ ವಿಷಯಗಳನ್ನು ಹಾಗು ಅವುಗಳ ಗ್ರಂಥಪರಿಶೀಲನೆಯನ್ನು ಪ್ರತಿವರ್ಷ ಮಹಾಶಿವರಾತ್ರಿಯ ಸುಮಾರಕ್ಕೆ ಜಿಲ್ಲಾ ವಿಜಾಪುರ ತಾಲ್ಲೂಕು ಬಾದಾಮಿಯ ಹತ್ತರಿರುವ ಶ್ರೀಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳವರ ಆಶೀರ್ವಾದದಿಂದಲೂ, ಪ್ರೇರಣೆಯಿಂದಲೂ ಸ್ಥಾಪಿಸಲ್ಪಟ್ಟ ಶ್ರೀ ಶಿವಯೋಗಮಂದಿರದಲ್ಲಿ ಕೂಡುವ ಸಭೆಯಲ್ಲಿ ಚರ್ಚಿಸಿ, ಶಾಸ್ತ್ರಿಗಳೂ, ಪಂಡಿತರೂ, ಸಿಂಹಾಸನಾಧಿಪತಿಗಳೂ, ವಿರಕ್ತಸ್ವಾಮಿಗಳೂ ಕೂಡಿ ನಿರ್ಣಯಿಸಿದ ಧರ್ಮವಿಷಯಗಳನ್ನು ಪ್ರಚಾರದಲ್ಲಿ ತರುವುದು ಹಿತವು. ಸದರಿ ಶಿವಯೋಗಮಂದಿರದಲ್ಲಿ ತಯಾರಾಗುವ ಶಿವಯೋಗಿಗಳೂ ಧನಸಂಚಯವು ಹೆಚ್ಚು ಹೆಚ್ಚಾದಂತೆ ಅದರಿಂದ ಪ್ರಾಥಮಿಕ ಶಿಕ್ಷಣ, ರಾಜಭಾಷೆ, ಕಾಲೇಜಗಳಲ್ಲಿಯ ವಿದ್ಯಾರ್ಥಿಗಳಿಗೆ ಸಹಾಯಮಾಡುವಂಥ, ಹರಿದ್ವಾರದ ಗುರುಕುಲವೃಂದದ ಅಂದರೆ ಬ್ರಹ್ಮಸಮಾಜದ ಉತ್ಪಾದಕರಂಥ ಉದಾತ್ತ ವಿಚಾರಗಳು ಶ್ರೀ ಶಿವಯೋಗಮಂದಿರದ ಕಮಿಟಿಯ ಮೆಂಬರರಾಗಿ ಇರುವುದಾಗಿ ಕಂಡುಬರುವುದು ಸಂತೋಷಕರವಾದ ಮಾತಾಗಿದೆ. ಸಾರಾಂಶ "ಹರಹುನ್ನರಕರನಾ ಪೇಟಭರನಾ" ಎಂಬ ಗಾಧೆಯ ಮಾತಿನಂತೆ ಸರ್ವಪರಿಯಿಂದಲೂ ಈ ನಮ್ಮ ಸಮಾಜದ ಏಳ್ಗೆಯು ಹೇಗೆ ಆದೀತೆಂತಲೂ ಅದಕ್ಕೆ ತಕ್ಕ ಸಹಾಯ ಮಾಡಲೇಬೇಕೆಂತಲೂ, ಪ್ರತಿಯೊಬ್ಬ ಲಿಂಗಧಾರಿಯೆಂಬ ಅಭಿಮಾನಪೂರ್ವಕನು ಹಗಲಿರುಳು ನಡುಕಟ್ಟಿ ಸಿದ್ಧನಾದ ವಿನಹ ಯಾವುದುತಾನೇ ಮುಂದಕ್ಕೆ ಬಂದೀತು? ಸಮಾಜಸುಧಾರಣೆಯ ಪ್ರತಿಯೊಂದು ಕೆಲಸವು ಒಂದೇ ಕಮಿಟಿಯಮೇಲೆ ಹಾಕಲ್ಪಡದೆ ಬೇರೆಬೇರೆ ಸಂಘಗಳನ್ನು ಮಹಾಸಭೆಯ ಪತಿಯಿಂದ ನಿರ್ಣಯಿಸಿ ಆಯಾ ಸಭೆಯವರ ಮುಖಾಂತರ ನಿದಾನ ವರ್ಷಕ್ಕೊಂದಾವರ್ತಿಯಾದರೂ, ಅವರವರ ಕಡೆಯಿಂದ ರಿಪೋರ್ಟುಗಳನ್ನು ತರಿಸಿ ಮಹಾಸಭೆಯ ಮುಖಾಂತರ ತಮ್ಮ ಅಭಿಪ್ರಾಯಸಹಿತ ಪ್ರಸಿದ್ಧಪಡಿಸಬೇಕು. ಕೇವಲ ಜಾತ್ರೆಯಂತೆ ಸಭೆಯನ್ನು ಕೂಡಿಸದೆ ಸಮಾಜದ ಅರ್ಥವನ್ನು ವ್ಯರ್ಥವಾಗಿ ಕಳೆಯದೆ ಲಾಭನಷ್ಟದ ಅಂದಾಜಿನ ಪಟ್ಟಿಯನ್ನು ಸದಾ ಕಣ್ಣಿದಿರಿಯಂತೆ ಇಟ್ಟುಕೊಂಡು ಅಂದರೆ ಸಭೆ ಕೂಡಿಸಲ್ಪಟ್ಟಿತು, ಅದರಲ್ಲಿ ಯಾವ ಯಾವ ವಿಷಯಗಳು ನಿರ್ಣಯಿಸಲ್ಪಟ್ಟವು? ಅವುಗಳನ್ನು ಯಾವ ರೀತಿಯಿಂದ ಆಚರಣೆಗೆ ತರಬೇಕು? ಅವುಗಳ ಮೇಲ್ವಿಚಾರಣೆಯು ಯಾರಯಾರ ಕತೆಗೆ ನಿಯಮಿಸಲ್ಪಡಬೇಕು? ನಿರ್ಣಯವಾಗದೆ ಉಳಿದ ವಿಷಯಗಳಾವುವು? ಮತ್ತೂ ಹಾಗುಳಿಯಲು ಕಾರಣ, ಅವು ವಾದಗ್ರಸ್ತವಿದ್ದಲ್ಲಿ ಆಯಾ ಸಭೆಗಳ ಕತೆಗೆ ಪುನಃ ಅವುಗಳನ್ನು ಕಳಿಸಿ ಬರುವ ಸಭೆಯೊಳಗಾಗಿ ಅಥವಾ ಇಂತಿಷ್ಟು ದಿವಸಗಳಲ್ಲಿ ಅವುಗಳ ಇತ್ಯರ್ಥಮಾಡಿ ಪ್ರಸಿದ್ಧಪಡಿಸಬೇಕು. ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯವರು ವರ್ಷದಲ್ಲಿ ಏನೇನು ಮಾಡಿದರು? ಮತ್ತೂ ಅದರ ಲಾಭಲುಕ್ಸಾನದ ಪಟ್ಟಿ ತೆಯಾರಿಸಿ ಪ್ರಸಿದ್ಧಪಡಿಸಬೇಕು. ಸಣ್ಣಸಣ್ಣ ಕೆಲಸಗಳು ಸಣ್ಣಸಣ್ಣ ಸಭೆಗಳ ಕತೆಗೂ, ದೊಡ್ಡವು ದೊಡ್ಡ ಸಭೆಗಳ ಕತೆಗೂ ಹಳ್ಳಿ, ಮಹಾಲ, ತಾಲ್ಕು, ಜಿಲ್ಲಾ, ಇಲಾಖಾ, ದೇಶ ಇವುಗಳಂತೆ ಸ್ಥಿರಪಡಿಸಿ ದೇಶದ ಮುಖಂಡರು ಅಂದರೆ ಮಹಾಸಭೆಯ ಮುಂದಾಳುಗಳು ಒಂದು ಕಮಿಟಿಯನ್ನು ಮಾಡಿ, ಆಯಾ ಭಾಗಗಳ ಮತ್ತೂ ವಿಷಯಗಳ ಪೂರ್ತ ಕಾರ್ಯದರ್ಶಿಗಳನ್ನು ಅಂದರೆ ಸೆಕ್ರೆಟರಿಗಳನ್ನು ನಿಯಮಿಸಿ ಅವರ ಮುಖಾಂತರ ಸರ್ವವನ್ನು ತಿಳಿದುಕೊಂಡು ಒಳಪಂಗಡಗಳನ್ನೂ, ಒಣಡಾಂಭಿಕತನವನ್ನೂ, ಕೆಲಮಟ್ಟಿಗಾದರೂ ಸ್ವಾರ್ಥವನ್ನು ಮರೆತು ಸಮಾಜವನ್ನು ಸುಧಾರಿಸಬೇಕು. ಈ ರೀತಿ ಸುಯಂತ್ರ ನಡೆಯಲಿಕ್ಕೆ ಧನಸಂಚಯವಾದರೂ ತುಸುಮಟ್ಟಿಗೆ ಬೇಕಾಗುವುದು ನಿಜವು. ಅದರ ಮಾರ್ಗವಾದರೂ ಅತಿ ಸುಲಭವಿರುವುದು. ಆಯಾಯ ಪ್ರಾಂತಗಳ ಕಾರ್ಯದರ್ಶಿಗಳು ತಮ್ಮತಮ್ಮ ಭಾಗದ ಪತಿಯಿಂದ ಒಂದೊಂದು ವರ್ಷದ ಪೂರ್ತ ಒಬ್ಬ ಕಾರಕೂನ, ಕಾಗದ ಮಶಿ, ದೀವಿಗೆ, ಟಪಾಲಖರ್ಚಿನಮಟ್ಟಿಗೆ ಹಣವನ್ನು ಕೊಡಿಸಲಾರನೆಂಬುವ ಮಾತು ಆಶ್ಚರ್ಯವೇ ಸರಿ. ಇಷ್ಟು ಸಹಾಯವನ್ನೊದಗಿಸದ ಕಾರ್ಯದರ್ಶಿಯಿಂದ ನಮ್ಮ ಸಮಾಜವು ಯಾವ ಸದ್ಗತಿಯ ಅಪೇಕ್ಷೆಯನ್ನು ಮಾಡಬೇಕೆಂಬುವುದು ಹೇಳಲಾಗದು. ಅದರಂತೆ ಈಗಿರುವ ಮೈಸೂರ ಸ್ಟಾರ ಪತ್ರಿಕೆಯ ಸ್ವರೂಪವನ್ನು ಬದಲಾಯಿಸಿ ಅದರ ಪುಟಗಳನ್ನು ಹೆಚ್ಚಿಸಿ, ಆಧುನಿಕ ಪದ್ಧತಿಯಂತೆ ಒಂದು ಫಂಡನ್ನು ಏರ್ಪಡಿಸಿ ವರ್ಗಣಿದಾರರನ್ನು ಹೆಚ್ಚಿಸಿ ಸಮಾಜದ ಸರ್ವತರಹದ ಜನರಿಗೂ ಅದು ಅನುಕೂಲವೂ, ಮನೋಹರವೂ ರುಚಿಕರವೂ ಆಗುವಂತೆ ಮಾಡಿ, ಅದರ ಚಾಲಕರಿಗೆ ಪ್ರತಿವರ್ಷವೂ ಆಗುತ್ತಿರುವ ನಷ್ಟವನ್ನು ದೂರಮಾಡಿ, ಒಂದು ರೀತಿ ಗೊತ್ತಿಗೆ ಹಚ್ಚಬೇಕು. ಈ ಪ್ರಕಾರ ಈ ವರ್ಷ ಬೆಳಗಾಂವಿಯಲ್ಲಿ ಮಹಾಸಭೆಯನ್ನು ಕೂಡಿಸಿ, ಅತಿ ಉಪಯುಕ್ತವಾದ ವಿಷಯಗಳನ್ನೇ ವಿಚಾರಮಾಡಿ, ನಿರ್ಣಯಿಸಿ ಅಮಲಿನಲ್ಲಿ ತರಬೇಕು. ಸಮಾಜಸುಧಾರಣೆಗೆ ಜಾತಿ ಒಳಜಾತಿ ಭೇದಗಳ ಕಾರಣವಿಲ್ಲದೆ 'ವೀರಶೈವ ಸಮಾಜವು' ಆ ಸಮಾಜಕ್ಕೆ 'ನಾವು' ಸೇರಿದವರು-ಅದರಲ್ಲಿ ಹುಟ್ಟಿದವರು. ಅದಕ್ಕಾಗಿ ಬಾಳುವವರು; ಅದರ ಉತ್ಕರ್ಷಕ್ಕಾಗಿ 'ಪ್ರಾಣಕೊಡುವವರು' ಈ ಪ್ರಕಾರ ತ್ರಿಕರಣಪೂರ್ವಕವಾಗಿ ಪ್ರಯತ್ನಮಾಡಿದರೆ ಹಿಂದಕ್ಕೆ ಬಿದ್ದ ನಮ್ಮ ಸಮಾಜವು ಅತಿ ತೀವ್ರವಾಗಿ ಮುಂದಕ್ಕೆ ಬರುವುದರಲ್ಲಿ ಏನು ಸಂದೇಹವದೆ? ಈ ಪ್ರಕಾರ ರಸಭರಿತವಾದ ಭಾಷಣವಾದ ಕೂಡಲೆ ಅಲ್ಲಿ ನೆರೆದಿದ್ದ ಮಹನೀಯರೆಲ್ಲರೂ, ಯೋಗ್ಯ ಯೋಗ್ಯವೆಂದು ಕರತಾಡನ ಮಾಡಿ ತಮ್ಮ ಆವೇಶವನ್ನೂ ಆನಂದವನ್ನೂ ವ್ಯಕ್ತಪಡಿಸಿ ಕೂಡಲೆ ಸಭೆ ಕೂಡಿಸುವುದು ಗೊತ್ತಾಗಿ, ಅದಕ್ಕೆ ವರ್ಗಣಿ ಕೂಡಿಸಿ, ಡೆಲಿಗೇಟರನ್ನೂ ಪ್ರೇಕ್ಷಕರನ್ನೂ ಕೂಡಿಸುವ ಕುರಿತು ಹಾಗೂ ಮುಂದಿನ ವಿಷಯಗಳನ್ನು ಕೈಕೊಂಡು ಯಾವಯಾವ ರೀತಿಯಿಂದ ಹೇಗೆ ಹೇಗೆ ಮಾಡಬೇಕೆಂಬ ವಿಷಯಗಳಿಗಾಗಿ ಮುಂದೆ ಕೊಟ್ಟಿರುವ ಪಟ್ಟಿಯು ಸಿದ್ಧಗೊಳಿಸಲ್ಪಟ್ಟಿತು. ಅನಂತರ ವ್ಯಾಖ್ಯಾತರು ಸಭೆಯ ಕೆಲಸಕ್ಕಾಗಿ ನಿಮಂತ್ರಣವನ್ನು ಮಾನಿಸಿ ಬಂದ ಯಾವತ್ತು ಮಹನೀಯರ ಆಭಾರವನ್ನೂ, ಅಧ್ಯಕ್ಷರವರ ಉಪಕಾರವನ್ನೂ ನೆನಸಿ ಅವರ ಆಯುರಾರೋಗ್ಯವನ್ನೂ ತಾವಾಗಿ ಈ ಸಭೆಯನ್ನು ಕೂಡಿಸಲಿಕ್ಕೆ ಸ್ಥಲವನ್ನನುಕೂಲಿಸಿಕೊಟ್ಟ ಹಿರೇಮಠದ ಪಟ್ಟದದೇವರಿಗೆ ಕೃತಜ್ಞತೆಯನ್ನೂ ಸೂಚಿಸಿ ನಮ್ಮನ್ನಾಳುವ ಘನಯೊಂದಿದ ಐದನೆಯ ಜಾರ್ಜ ಪ್ರಭುಗಳಿಗೂ, ಅವರ ಪ್ರಿಯ ಪತ್ನಿಯರಿಗೂ ಸದಾಸುಖವೂ, ದೀರ್ಘಾಯುಷ್ಯವೂ, ಅವರ ಪ್ರವಾಸವು ಹಿಂದೂಸ್ಥಾನದಲ್ಲಿ ಶಾಂತಿಸುಖದಾಯವೂ ಆಗಲೆಂದು ಚಿರಕಾಲ ಇವರ ಅಪ್ಪಣೆಯೇ ನಮ್ಮಮೇಲೆ ಇರಲೆಂದು ನಾವು ರಾಜನಿಷ್ಠರಾಗಿ ಅವರ ಆಡಳಿತಕ್ಕೆ ಒಳಪಟ್ಟು ಅವರಿಗೆ ಸಹಾಯಕರಾಗಬೇಕೆಂದು ಶ್ರೀ ಶಂಕರನನ್ನು ಬೇಡಿಕೊಂಡು ನಮಃಪಾರ್ವತೀಪತೇ ಹರಹರಮಹಾದೇವ ಎಂಬ ಈ ಜಯಘೋಷದಲ್ಲಿ ವ್ಯಾಖ್ಯಾನಕಾರರು ತಮ್ಮ ಆಸನವನ್ನು ಸ್ವೀಕರಿಸಿದರು. ಅನಂತರ ಪದ್ಧತಿಗನುಸರಿಸಿ ಹುವ್ವಿನ ಹಾರ ತುರಾಯಿ ಗಂಧದ್ರವ್ಯತಾಂಬೂಲಗಳಿಂದ ಅಧ್ಯಕ್ಷರೂ ಸಭಿಕರೂ ಸನ್ಮಾನಿಸಲ್ಪಟ್ಟು ಸಭೆಯ ಕೆಲಸವು ಮುಗಿಸಲ್ಪಟ್ಟಿತು

(ಸಶೇಷ.)

ಜಗತ್ಪ್ರಸಿದ್ಧ ಪತ್ರಿಕೆ.

೨೦ ವರ್ಷಗಳ ಪಂಚಾಂಗಗಣಿತ ಪಡಕೆಸಹಿತವಾದ
ಪರಿಧಾವಿ ಸಂವತ್ಸರದ ಸಿದ್ಧಾಂತ ಪಚಾಂಗರತ್ನಂ

ಈ ಪಂಚಾಂಗದಲ್ಲಿ ಚೈತ್ರಾದಿ ೧೨ ಮಾಸ ಫಲ ಸಹಿತ ಪಂಚಾಂಗದ ಯಾವತ್ತು ಫಲಗಳನ್ನು ಬರೆದಿರುತ್ತೆ. ಪ್ರತಿಯೊಬ್ಬರಿಗೂ ೧೨ ತಿಂಗಳ ಭವಿಷ್ಯತ್ಫಲವನ್ನು ೨೦ ವರ್ಷಗಳ ಪಂಚಾಂಗಗಣಿತದ ಪಡಕಗಳನ್ನು ಹಾಕಿರುವೆವು. ದಿನಚರಿ ಉಂಟಾಗುವ ಶುಭಾಶುಭ ಫಲವು ತಿಳಿಯುವ ಕ್ರಮ, ಅಶ್ವಪರೀಕ್ಷಾಶಾಸ್ತ್ರಕ್ರಮ, ಸ್ತ್ರೀಯರಿಗೆ ೮ ತಿಂಗಳವರೆಗೂ ಗರ್ಭಸ್ರಾವವಾಗುತ್ತಾ ಇದ್ದರೆ ಪ್ರತಿತಿಂಗಳಲ್ಲಿ ಮಾಡುವ ಚಿಕಿತ್ಸಾಕ್ರಮ, ಹೊಲಿಕಟ್ಟು, ಕೆಟಿಬ್ಯಾನಿ, ಹಾವು ಚೇಳು ಕಚ್ಚಿದಕ್ಕೂ, ಬಹುಮೂತ್ರ ಪೀನಸಿ ತೊಡೆವಾಳೆ ಅನ್ನದಲ್ಲಿ ಮದ್ದುಯಿಡುವಿಕೆ, ಪಕ್ಕೆಶೂಲೆ, ಕಣ್ಣಿನಲ್ಲಿ ಹೂವು ಕೂತಿರೋಣ, ಸಣ್ಣಮಕ್ಕಳ ಅಕಸ್ಮಾತ್ ಸಂದುರೋಗ, ಇವುಗಳಿಗೆ ಮಾಡುವ ಚಿಕಿತ್ಸಾಕ್ರಮಗಳೂ, ಲಗ್ನಪತ್ರಿಕೆ ಜನ್ಮಪತ್ರಿಕೆ ವಿವಾಹ ಮಹೋತ್ಸವ ಪತ್ರಿಕೆ, ಪ್ರಾಂಸರಿ ನೋಟು ಭೂಮಿ ಸಾಗುವಳಿ ಪತ್ರ, ಮನೆ ಭೂಮಿ ಖರೀದಿ ಪತ್ರ, ಅಡವು ಹಾಕಿ ಬರಿಸಿಕೊಳ್ಳುವ ಪತ್ರ, ಬೋಳುಪತ್ರ, ದಾನಪತ್ರ ದತ್ತಸ್ವೀಕಾರಪತ್ರ, ವಿಲ್ಲುಘಾರಿಕೆತ್ತು ವತ್ತೀಪತ್ರ ಇವೇ ಮೊದಲಾದ ಎಲ್ಲಾ ದಸ್ತಾವೇಜುಗಳನ್ನು ಬರೆಯುವ ಕ್ರಮಗಳನ್ನು ಚೆನ್ನಾಗಿ ಬರೆದಿರುತ್ತೆ. ಇನ್ನೂ ಅನೇಕ ಪಶ್ನೆ ಮೊದಲಾದ ಅಪೂರ್ವ ವಿಷಯಗಳನ್ನು ಬರೆದಿರುತ್ತೆ. ಎಲ್ಲಾ ಪಂಚಾಂಗಗಳಿಗಿಂತಲೂ ಚೆನ್ನಾಗಿದ್ದರೆ ಇಟ್ಟುಕೊಳ್ಳಿರಿ ಇಲ್ಲದಿದ್ದರೆ ವಾಪಸು ಕಳಿಸಿರಿ, ಕ್ರಯ ಪಂಚಾಂಗ ೧ ಕ್ಕೆ ೩ ಆಣೆ

ವಿಳಾಸ— ಎಂ. ಪುಟ್ಟಯ್ಯ, ಬ್ರೂಸ್‌ಪೇಟೆ,
ಹರಪನಹಳ್ಳಿ (ಜಿಲ್ಲ ಬಳ್ಳಾರಿ)

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೋತ್ಪತ್ತಿಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಾಮವೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮೆಗೇಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆ ಉಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮಲರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ಸೇ. ಪ್ರೊ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮೀರಜ. (ಇಂಡಿಯಾ)

ಮೈಸೂರ ಸ್ಟಾರಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೬-೧೦-೦
ಶರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.
೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಊದಬತ್ತಿಗಳು.

80

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೌಂಡ್ಡು ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

14 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ, ಜಿಲ್ಲ ಉತ್ತರಕನಡಾ.

25 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು
ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕು. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ [illegible],
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೧)

2

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀನೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ನಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಅ.

ವಿಳಾಸ:- ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ.

---

೩ ಹುಬ್ಬಳ್ಳಿಯ ಸುಪ್ರಸಿದ್ಧ ಪಂಚಾಂಗ.

ಕನ್ನಡನಾಡಿನಲ್ಲಿ ಸಕಲ ಪಂಚಾಂಗಗಳೊಳಗೆ ಅತಿ ಶ್ರೇಷ್ಠ ಪಂಚಾಂಗವು ಹುಬ್ಬಳ್ಳಿಯದೆಂಬುದು ಸರ್ವಶ್ರುತ ಸಂಗತಿಯಷ್ಟೆ. ಈಗಾಗಲೆ ಪರಿಧಾವಿ ಸಂವತ್ಸರದ ಹೊಸ ಪಂಚಾಂಗವು ಮುದ್ರಣವಾಗಿ ಏಕರಿಗೆ ಸಿದ್ಧವಾಗಿರುವುದು. ಬೆಲೆಯಾದರೂ ಸುಲಭವಾಗಿ ಪಂಚಾಂಗ ೧ ಕ್ಕೆ ೨ ಆಣೆ. ಆದರೆ ಸ್ಟಾರ್ ಪತ್ರಿಕಾ ಚಂದಾದಾರರಿಗೆ ೪ ಕ್ಕೆ ೮ ಆಣೆ. ಮಾತ್ರ ೬ ಪಂಚಾಂಗಗಳಿಗೆ ೮ ಆಣೆ ಪ್ರಕಾರ ಕಳುಹುವೆವು. ಅಪೇಕ್ಷಕರು ತ್ವರೆಮಾಡಿರಿ. ವಿಳಾಸ—

ಕೆ. ಎಸ್. ಮಲ್ಲೇಶಶಾಸ್ತ್ರಿ, ಮುಕ್ಕಾಂ ಹುಬ್ಬಳ್ಳಿ.

---

22 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟಿ ಕೊಡುವೆವು.

೧ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. ೬-೮-೦ ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಪಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8 0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

MOTORREGULATOR
LEVER
SWISS MADE

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನೀರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ಸಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ಸಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದ್ದಕ್ಕೆ ಖಂಡಿತವಾಗಿ ಕಳುಹಿಸಲ್ಪಡಲಾರವು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಸಿಂಗಣ್ಣ ವೀಧಿ, ವಾಲ್‌ಟಾಕ್ಸ್ ರೋಡು ಮದರಾಸು.

ಪಂಡಿತ ಎಸ್. ಗಣೇಶಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಬಳಿ
ಮೈಸೂರು.

59

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಅಕ್ಟೋಬರ್ ತಾ॥ ೨ ರಿಂದ ೧೯೧೧ ನೇ ಅಕ್ಟೋಬರ್ ತಾ॥ ೮ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಶ್ವಯುಜ ಶು॥ ದಶಮಿಯಿಂದ ಆಶ್ವಯುಜ ಶು॥ ಪೌರ್ಣಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
2	[1]ಸೋ	ದ	60-0	ಉ॥ಷಾ	33-54	16
3	[2]ಮಂಗ	ದ	2-52	ಶ್ರವ	39-23	17
4	[3] ಬುಧ	ಏ	6-31	ಧನಿ	43-53	18
5	[4]ಗುರು	ದ್ವಾ	8-30	ಶತ	46-57	19
6	ಶುಕ್ರ	ತ್ರ	9-58	ಪೂಭಾ	49-11	20
7	ಶನಿ	ಚ	9-56	ಉ॥ಭಾ	49-59	21
8	[5]ಭಾನು	ಪೌ	8-33	ರೇವತಿ	49-31	22

(1) ಆಯುಧಗಜಾಶ್ವಪೂಜಾ, ಹಯಗ್ರೀವಪೂಜಾ. (2) ವಿಜಯದಶಮಿ, ಶಮೀಪೂಜಾ. (3) ಸರ್ವತ್ರೈಕಾದಶಿ. (4) ಗೋದ್ವಾದಶಿ, ಪ್ರದೋಷ. (5) ಚಂದ್ರೋದಯ ಗೌರೀವ್ರತಂ, ದಾನಫಲವ್ರತಂ.

ಮೈಸೂರ್ : ಶ್ರೀ. ವಿರೂಪಾಕ್ಷಪ್ಪನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✶ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೆಯ ಇಸವಿ ಅಕ್ಟೋಬರ್ ತಾರೀಖು ೯ ನೆಯ ಸೋಮವಾರ. [ಸಂಖ್ಯೆ ೪೧

28 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟಿ ಕೊಡುವೆವು.

೧ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. -8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಪಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8 0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

MOTORREGULATOR
LEVER
SWISS MADE

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನೀರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ಸಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ಸಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದ್ದಕ್ಕೆ ಖಂಡಿತವಾಗಿ ಕಳುಹಿಸಲ್ಪಡಲಾರವು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಸಿಂಗಣ್ಣ ವೀಧಿ, ವಾಲ್‌ಟಾಕ್ಸ್ ರೋಡು ಮದರಾಸು.

6 ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಜಪಾನ್ ಸಾಮ್ರಾಜ್ಯ ೦-೬-೦ ರಷ್ಯಾ ಜಪಾನ್ ಯುದ್ಧಗಳಲ್ಲಿ ಪ್ರಸಿದ್ಧವಾದ ಜಪಾನ್ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನರ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೬ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ಟರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರೂ ಮೆಚ್ಚಿದಾರೆ.

(೪) ಬೋಧನಕ್ರಮಸಂಗ್ರಹ ೦-೧-೬ ಮಾಸ್ಟರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆನಡೆಸಬೇಕು.. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯವೆಚ್ಚ ಬೇರೆ.

ಜೆ. ಕೃಷ್ಣಶಾಸ್ತ್ರಿ, ಅ॥ ಮಾ॥ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

8

ಬಸವರಾಜವಿಜಯಂ.- ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.- ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.- ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.- ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.- ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.- ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.- ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ- ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.- ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.- ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಳಿ, ಮೈಸೂರು.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸದ ಸಾರಾಂಶ.

೩ನೆಯ ಅಕ್ಟೋಬರ್ ೧೯೧೧.

ಸಭಾಸದರೆ,

ಈ ಮತ್ತೊಂದು ಸಂವತ್ಸರದ ಪ್ರಜಾಪ್ರತಿನಿಧಿ ಸಭೆಗೆ ತಮ್ಮೆಲ್ಲರನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಕಳೆದ ಸರ್ಕಾರಿ ವರ್ಷದಲ್ಲಿ ಸಂಸ್ಥಾನದ ಎಲ್ಲಾ ಇಲಾಖೆಗಳಲ್ಲಿಯೂ ನಡಿಸಲ್ಪಟ್ಟ ಆಡಳಿತಗಳ ವಿವರವನ್ನೂ, ಚಾಲ್ತಿ ವರ್ಷದಲ್ಲಿ ನಡಿಸಬೇಕೆಂದು ಆಲೋಚಿಸಲ್ಪಟ್ಟಿರುವ ಏರ್ಪಾಟುಗಳ ವಿವರವನ್ನೂ, ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರ ಅಪ್ಪಣೆಯ ಮೇರೆಗೆ ತಮಗಳಿಗೆ ತಿಳಿಯಪಡಿಸುವುದರಲ್ಲಿ ತುಂಬ ಸಂತೋಷಪಡುವವರಾಗಿರುತ್ತೇನೆ.

೧೯೧೦-೧೧ ನೆಯ ವರ್ಷದ ಆಯವ್ಯಯಗಳು.

(ಇದು ಕಳೆದ ಸೆಪ್ಟಂಬರ್ ತಿಂಗಳ ಸ್ಟಾರ್ ಪತ್ರದಲ್ಲಿ ಕೊಡಲ್ಪಟ್ಟಿರುವುದರಿಂದ ಈಗ ಇಲ್ಲಿ ಬಿಡಲ್ಪಟ್ಟಿದೆ.)

೧೯೧೧-೧೨ನೆಯ ವರ್ಷದ ಆಯವ್ಯಯದ ಅಂದಾಜು.

ಕಾಲಸ್ಥಿತಿಯು ಸಾಮಾನ್ಯವಾಗಿ ಸುಭಿಕ್ಷವಾಗಿಯೇ ಇದ್ದು ಬೆಳೆಗಳು ತೃಪ್ತಿಕರವಾಗಿ ಆಗಬಹುದೆಂಬ ನಿರೀಕ್ಷಣೆಯ ಮೇಲೆ ೧೯೧೧-೧೨ನೆಯ ವರ್ಷದ ಆಯವ್ಯಯದ ಅಂದಾಜನ್ನು ತಯಾರ್ ಮಾಡಿರುತ್ತದೆ. ಕಳೆದ ಕೆಲವು ವಾರಗಳಲ್ಲಿ ಮಳೆಯು ನಿರೀಕ್ಷಿಸಲ್ಪಟ್ಟಿದ್ದಷ್ಟು ವಿಶೇಷವಾಗಿ ಬರಲಿಲ್ಲವಾದರೂ, ಸಂಸ್ಥಾನದ ಅನೇಕ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಅಥವಾ ಅವಿಚ್ಛಿನ್ನವಾಗಿ ಅನಾವೃಷ್ಟಿಯು ಪ್ರಾಪ್ತವಾಗಿಲ್ಲ. ಇದಲ್ಲದೆ ಹಿಂದಿನ ಎರಡುವರ್ಷಗಳಲ್ಲಿ ಉತ್ಕೃಷ್ಟವಾದ ಫಸಲು ಆಗಿರುವುದರಿಂದ ಜನರು ಸಾಮಾನ್ಯವಾಗಿ ದವಸವನ್ನು ದಾಸ್ತಾ ಇಟ್ಟಿರಬಹುದಾದಕಾರಣ ಚಾಲ್ತಿ ವರ್ಷದಲ್ಲಿ ಈ ಸಂಸ್ಥಾನಕ್ಕೆ ದುರ್ಭಿಕ್ಷವು ಪ್ರಾಪ್ತವಾಗುವುದೆಂದು ಭಯಪಡಬೇಕಾದುದಿಲ್ಲ. ಚಾಲ್ತಿ ವರ್ಷ ಸಾಮಾನ್ಯ ಬಾಬಿನಲ್ಲಿ ೨,೧೯,೩೦,೦೦೦ ರೂ., ಕಾವೇರೀ ವಿದ್ಯುಚ್ಛಕ್ತಿಯ ಬಾಬಿನಲ್ಲಿ ೧೫,೫೦,೦೦೦ ರೂ., ಈ ಮೇರೆಗೆ ಒಟ್ಟು ೨,೩೪,೮೦,೦೦೦ ರೂ. ಹುಟ್ಟುವಳಿಯಾಗಬಹುದೆಂದು ಅಂದಾಜಾಗಿದೆ. ಒಟ್ಟು ಖರ್ಚು ಸಾಮಾನ್ಯಬಾಬಿನಲ್ಲಿ ೨೨೯೨೮೦೦೦ ರೂ., ಕಾವೇರೀ ವಿದ್ಯುಚ್ಛಕ್ತಿಯ ಬಾಬಿನಲ್ಲಿ ೯೮೧೦೦೦ ರೂ., ಈ ರೀತಿ ಒಟ್ಟು ೨೩೯೦೯೦೦೦ ರೂ. ಆಗಬೇಕಾಗಿದೆ; ಎಂದರೆ ೧೯೧೧-೧೨ ನೆಯ ವರ್ಷದ ಆಯವ್ಯಯದ ಅಂದಾಜಿನಲ್ಲಿ ಖರ್ಚಿಗೆ ೩೨೯೦೦೦ ರೂ. ಸಾಲದೆ ಹೋದ ಹಾಗಾಯಿತು.

ಹಿಂದಿನ ಎರಡುವರ್ಷಗಳಲ್ಲಿಯೂ ೧೪೫೦೦೦೦೦ ರೂ. ಗಿಂತ ಜಾಸ್ತಿಯಾಗಿಯೇ ಜಮೀನ್ ಕಂದಾಯದ ಬಾಬಿನಲ್ಲಿ ಹುಟ್ಟುವಳಿಯಾಗುತ್ತಿದ್ದುದಕ್ಕೆ ಪ್ರತಿಯಾಗಿ ಪ್ರಸಕ್ತವರ್ಷದಲ್ಲಿ ೧೩೫೦೦೦೦೦ ರೂ. ಹುಟ್ಟುವಳಿಯಾಗಬಹುದೆಂದೂ, ಉಳಿದ ಬಾಬುಗಳಲ್ಲಿ ಸಾಮಾನ್ಯವಾಗಿ ಎಂದಿನಂತೆ ಆಗುವಷ್ಟೆ ಹುಟ್ಟುವಳಿಯು ಆಗುವುದೆಂದೂ ಅಂದಾಜುಮಾಡಿದೆ.

ಸಾಮಾನ್ಯ ಖರ್ಚುಬಾಬುಗಳಲ್ಲಿ ವಿದ್ಯಾಭ್ಯಾಸ ವೈದ್ಯ ಮತ್ತು ಮರಹಮ್ಮತ್ ಇಲಾಖೆಗಳಿಗೋಸ್ಕರ ಹೆಚ್ಚು ಸಹಾಯದ್ರವ್ಯಗಳನ್ನು ಕೊಡಲಾಗಿದೆ. ಈ ಪೈಕಿ ಮರಹಮ್ಮತ್ ಬಾಬಿಗೆ ೫ ಲಕ್ಷ ರೂ. ಜಾಸ್ತಿಯಾಗಿ ಎಂದರೆ ಒಟ್ಟು ೩೦ ಲಕ್ಷ ರೂ. ಮಂಜೂರ್ಮಾಡಲಾಯಿತು.

೧೯೧೧-೧೨ ನೆಯ ಇಸವಿಯ ಆಯವ್ಯಯಗಳ ಅಂದಾಜಿನಲ್ಲಿ ಖರ್ಚಿಗೆ ಒದಗಿಸಿರುವ ವಿಶೇಷಬಾಬುಗಳ ಪೈಕಿ ಅತ್ಯಂತ ಮುಖ್ಯವಾದುದು ಯಾವುದೆಂದರೆ, ಡಿಲ್ಲಿಯಲ್ಲಿ ನಡೆಯುವ ಇಂಡಿಯಾ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವದ ಸಮಾರಂಭದಲ್ಲಿ ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ತಮ್ಮ ರಾಜಪದವಿಗನುಗುಣವಾಗಿ ಭಾಗಿಗಳಾಗಿರಲೋಸ್ಕರ ಆವಶ್ಯಕವಾಗಿ ಬೇಕಾಗುವ ೩ ಲಕ್ಷ ರೂ. ಯನ್ನು ವಿನಿಯೋಗಿಸಬೇಕಾಗಿರುವುದು. ಈ ಅಂದಾಜನ್ನು ಸಾಧ್ಯವಾದಷ್ಟು ಮಿತವ್ಯಯದ ಮೇಲಣ ದೃಷ್ಟಿಯಿಂದ ಮಾಡಲಾಗಿದೆ. ಈ ಬಾಬಿನ ಖರ್ಚು ಕ್ರಮವಾಗಿ ನಡೆಯುವಹಾಗೆ ತಕ್ಕ ಹದ್ದುಬಸ್ತನ್ನು ಏರ್ಪಡಿಸಿರುವುದಲ್ಲದೆ, ಆಗಿಂದಾಗಲೇ ಖರ್ಚಿನ ತನಿಖೆಯನ್ನು ನೋಡಿಕೊಳ್ಳುವುದಕ್ಕೂ ತಕ್ಕ ಏರ್ಪಾಡನ್ನು ಮಾಡಿದೆ.

ಈ ಸಂಸ್ಥಾನದ ಸಂಪದಭ್ಯುದಯ ಸಮಾಜದ ಕಾರ್ಯಗಳಿಗಾಗಿ ಒಂದು ಲಕ್ಷ ರೂ. ಯ ಖರ್ಚನ್ನು ಮಂಜೂರ್ಮಾಡಿರುವುದು ಮತ್ತೊಂದು ವಿಶೇಷ ಖರ್ಚುಬಾಬಾಗಿದೆ. ಈ ಮೊಬಲಗು ಸಂಪದಭ್ಯುದಯಸಮಾಜದ ಕಮಿಟಿಗಳವರ ಸಿಬ್ಬಂದಿಯ ಖರ್ಚು, ಪ್ರಯಾಣದ ಭತ್ಯ, ಪುಸ್ತಕ ಮತ್ತು ಪತ್ರಿಕೆಗಳನ್ನು ಕೊಂಡುಕೊಳ್ಳುವುದು, ಪರಿಶೋಧನೆಗಳನ್ನು ನಡೆಯಿಸುವುದು, ನಿಪುಣರಾದವರಿಂದ ಅಭಿಪ್ರಾಯಗಳನ್ನು ಪಡೆಯುವ ಬಗ್ಗೆ ಅವರಿಗೆ ಕೊಡಬೇಕಾದ ರುಸುಮು— ಈ ಮೊದಲಾದ ಬಾಬುಗಳಿಗೂ, ಸದರಿ ಕಮಿಟಿಗಳವರ ಸಾಮಾನ್ಯ ಖರ್ಚುಗಳಿಗೂ ಉಪಯೋಗಿಸಲ್ಪಡತಕ್ಕದ್ದಾಗಿದೆ.

ಈ ವರ್ಷದಲ್ಲಿ ಸಾಮಾನ್ಯ ಸುಭಿಕ್ಷವುಳ್ಳ ವರ್ಷದಷ್ಟೇ ಹುಟ್ಟುವಳಿಯಾಗಿದ್ದರೂ ಸದರಿ ಹುಟ್ಟುವಳಿಯು ಖರ್ಚಿಗಿಂತಲೂ ಕಮ್ಮಿ ಆಗಿರುತ್ತದೆ. ಈರೀತಿ ಕಮ್ಮಿಯಾಗಿರುವ ಮೊಬಲಗು ಅಷ್ಟು ಭಾರಿಯಾಗಿಲ್ಲದಿದ್ದರೂ ತಕ್ಕಮಟ್ಟಿಗೆ ಗಣನೆಗೆ ಅರ್ಹವಾದುದಾಗಿಯೇ ಇರುವುದು. ಅನೇಕ ಖರ್ಚುಬಾಬುಗಳು ಏಕಕಾಲದಲ್ಲಿ ಒದಗಿದುದೇ ಇದಕ್ಕೆ ಕಾರಣವು. ಪ್ರಜಾ ಶ್ರೇಯಸ್ಸಿಗೋಸ್ಕರ ಕೆಲವು ಇಲಾಖೆಗಳ ವಿಶೇಷ ಆಬಾದಿಗಾಗಿ ಯಾ ಅವುಗಳು ಪುಷ್ಟಿಯನ್ನೈದುತ್ತ ಬಂದಹಾಗೆಲ್ಲ ಎಂದಿಗಿಂತ ಜಾಸ್ತಿಯಾದ ಖರ್ಚನ್ನು ಒದಗಿಸಬೇಕಾಗಿ ಬಂದಿತು. ಅದೇ ಕಾಲದಲ್ಲಿ ಇತರ ಕೆಲವು ವಿಶೇಷ ಖರ್ಚುಬಾಬುಗಳು ಒದಗಿದುದೇ ಈ ರೀತಿ ಆಗಲು ಮುಖ್ಯಕಾರಣವಾಗಿರುವುದು. ಮೇಲ್ಕಂಡ ಹೆಚ್ಚು ಖರ್ಚನ್ನು ಹಲವು ವರ್ಷಗಳಿಗೆ ಹಂಚಿಹಾಕಿದ್ದ ಪಕ್ಷದಲ್ಲಿ ಆಯವ್ಯಯಗಳನ್ನು ಸರಿಸಮನಾಗಿ ಮಾಡುವುದರಲ್ಲಿ ಅಥವಾ ಸ್ವಲ್ಪಮಟ್ಟಿಗೆ ಹಣವು ಉಳಿಯುವಂತೆಯೂ ಮಾಡುವುದರಲ್ಲಿ ಏನೂ ಕಷ್ಟವಿರುತ್ತಿರಲಿಲ್ಲ. ಆದರೆ ಹೆಚ್ಚಿನ ಗ್ರಾಂಟುಗಳು ಕೊಡಲ್ಪಟ್ಟ ಬಾಬುಗಳ ಪೈಕಿ ಪ್ರಾಯಶಃ ಎಲ್ಲವೂ ಜರೂರಾದುವುಗಳಾಗಿಯೂ ಮುಖ್ಯವಾದುವುಗಳಾಗಿಯೂ ಇರುವುದರಿಂದ, ಅವುಗಳ ವಿಷಯದಲ್ಲಿ ಕೆಲವು ಕಾಲಾನಂತರ ಖರ್ಚುಗಳನ್ನು ಒದಗಿಸುವುದೆಂದರೆ ವೃಥಾ ಅವಕಾಶವಾಡಿದಂತಾಗುವುದೆಂದು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರ ಸರ್ಕಾರದವರು ಭಾವಿಸುತ್ತಾರಾದಕಾರಣ, ಈ ವಿಶೇಷ ಸಂದರ್ಭಗಳನ್ನೆಲ್ಲಾ ಪರ್ಯಾಲೋಚಿಸಿ, ಪ್ರಸಕ್ತವರ್ಷದಲ್ಲಿ ಖರ್ಚಿಗೆ ಸಾಲದೆ ಹೋಗುವಹಾಗಿದ್ದರೂ ಮೇಲ್ಕಂಡ ಖರ್ಚು ಬಾಬುಗಳನ್ನು ಒದಗಿಸಿದುದು ಯುಕ್ತವೇ ಎಂದು ಎಣಿಸಿರುತ್ತಾರೆ. ಇದರಿಂದ ಯಾವ ಆತಂಕಪಡಬೇಕಾದ ಅವಶ್ಯಕತೆಯೂ ಇರುವುದಿಲ್ಲ.

ಆಯವ್ಯಯದ ಸಾಮಾನ್ಯಸ್ಥಿತಿ.

೧೯೧೧ ನೆಯ ಜುಲೈ ಮೊದಲನೆಯ ತಾರೀಖಿನಲ್ಲಿದ್ದ ಈ ಸಂಸ್ಥಾನದ ಆಯವ್ಯಯಗಳನ್ನು ತೋರಿಸುವ 'ಬಿ' ಪಟ್ಟಿಯಿಂದ ವಿಶದವಾಗುವಂತೆ ಈ ಸಾರಿಯ ಆಯವ್ಯಯದ ಸಾಮಾನ್ಯಸ್ಥಿತಿಯು ತೃಪ್ತಿಕರವಾಗಿಯೇ ಇರುವುದು.

ಅಕೌಂಟ್ ಇಲಾಖೆ.

ಕೆಲವುಕಾಲದಿಂದಲೂ ಆಲೋಚನೆಯಲ್ಲಿದ್ದ ಲೋಕಲ್ ಆಡಿಟ್ ಯಾನೇ ಸ್ಥಳೀಯ ಲೆಕ್ಕದ ತನಿಖೆಯ ಏರ್ಪಾಟನ್ನು ಮಂಜೂರ್ಮಾಡಿ ಕಂಟ್ರೋಲರವರ ಆಫೀಸಿನ ಶಾಖೆಯಾಗಿರುವಂತೆ ಒಂದು ಲೋಕಲ್ ಆಡಿಟ್ ಡಿಪಾರ್ಟ್‌ಮೆಂಟನ್ನು ಏರ್ಪಡಿಸಲಾಗಿದೆ.

ಸಂಸ್ಥಾನದ ಲೈಫ್ ಇನ್ಷ್ಯೂರೆನ್ಸ್ ಯಾನೆ ಬೀಮಾ.

ಸಂಸ್ಥಾನದ ಲೈಫ್ ಇನ್ಷ್ಯೂರೆನ್ಸ್ ಫಂಡು ಎಂದಿನಂತೆ ತೃಪ್ತಿಕರವಾದ ಸ್ಥಿತಿಯಲ್ಲಿಯೇ ಇತ್ತು. ವರ್ಷದ ಆಖೈರಿನಲ್ಲಿ ಹಣ ಪಾವತಿಯಾದ ಯಾ ಇತರ ವಿಧದಲ್ಲಿ ರದ್ದಾದ ಪಾಲಿಸಿಗಳು ಜಾತಾ ೩,೫೩೦ ಜನರ ಬಾಬತು ೧೬,೯೦೫ ಪಾಲಿಸಿಗಳು ಲೆಕ್ಕದಲ್ಲಿ ದಾಖಲಿದ್ದುವು; ಇವರಿಂದ ತಿಂಗಳುಗಟ್ಟಲೆ ಬರುವ ೨೨,೧೨೩ ರೂ. ಪ್ರೀಮಿಯಂ (ಕಂತಿನ) ಪಾವತಿಗೆ ಪ್ರತಿಯಾಗಿ ೩೩೯೬೮ ರೂ. ಗಳ ಬೋನಸ್ (ಸಹಾಯದ್ರವ್ಯವು) ಇವರಿಗೆ ಸಲ್ಲಬೇಕಾಗಿರುತ್ತದೆ. ಬೀಮಾದಾರರಲ್ಲಿ ೩೩೦ ಜನರು ತಮ್ಮ ಮರಣಾನಂತರ ಸಹಾಯದ್ರವ್ಯವನ್ನು ಪಡೆಯಬೇಕಾದವರ ಹೆಸರುಗಳನ್ನು ರಿಜಿಸ್ಟರು ಮಾಡಿಸಿದಾರೆ. ಸರ್ಕಾರಿ ಉದ್ಯೋಗಸ್ಥರು ತಮ್ಮ ಮರಣಾನಂತರ ತಮ್ಮ ಬಂಧುಗಳಿಗೆ ತಿಂಗಳುಗಟ್ಟಲೆ ಪೆನ್ಷನ್ ದೊರೆಯುವಂತೆ ಮಾಡುವುದಕ್ಕಾಗಿ ೧೯೧೧ ನೆಯ ಮಾರ್ಚಿ ತಿಂಗಳಲ್ಲಿ ಒಂದು ಏರ್ಪಾಟನ್ನು ಮಂಜೂರ್ಮಾಡಲಾಯಿತು. ಇದುವರೆಗೆ ಸರ್ಕಾರಿ ಉದ್ಯೋಗಸ್ಥರು ತಮ್ಮ ತಲಬಿನಲ್ಲಿ ಶೇಕಡಾ ೧೦ ರಂತೆಯೂ, ಮಾಹೆಯಾನಾ ೫೦ ರೂ. ಗೆ ಮೀರದಂತೆಯೂ ಪ್ರೀಮಿಯಂ ಕೊಡುತ್ತಾ ಬರುವುದರಿಂದ ದೊರೆಯುವ ಬೋನಸ್ಸನ್ನು ಮಾತ್ರ ಪಡೆಯಲು ಅವಕಾಶವಿತ್ತು. ಈಗ ಅವರು ಇಷ್ಟಪಡುವುದಾದರೆ ಮಾಹೆಯಾನಾ ೫೦ ರೂ. ಗೆ ಮೀರದಂತೆ ತಮ್ಮ ತಲಬಿನ ಪೈಕಿ ಶೇಕಡಾ ೧೦ ಕ್ಕಿಂತ ಜಾಸ್ತಿಯಾಗಿ ಎಷ್ಟು ಮೊಬಲಗನ್ನು ಬೇಕಾದರೂ ಪ್ರೀಮಿಯಂ ಪಾವತಿಮಾಡಿ ಅದಕ್ಕೆ ತಕ್ಕ ಹೆಚ್ಚು ಬೋನಸ್ಸನ್ನು ಪಡೆಯಲು ಅವಕಾಶವನ್ನುಂಟುಮಾಡಿದೆ.

ಕಾನೂನಿನ ಏರ್ಪಾಟು.

ಪ್ರಸಕ್ತವರ್ಷದಲ್ಲಿ ನ್ಯಾಯವಿಧಾಯಕಸಭೆಯವರು ಮೂರು ಮೀಟಿಂಗುಗಳನ್ನು ನಡಿಸಿದರು. ಹಿಂದಿನ ವರ್ಷದಿಂದಲೂ ಬಾಕಿ ನಿಂತಿದ್ದ ೯ ಮಸೂದಾ ಕಾನೂನುಗಳೂ ಸೇರಿ ಒಟ್ಟಿಗೆ ೨೧ ಮಸೂದೆಗಳು ಪರ್ಯಾಲೋಚಿಸಲ್ಪಟ್ಟುವು. ಸದರೀ ೯ ಮಸೂದೆಗಳೂ, ಬೇರೆ ೩ ಹೊಸ ಮಸೂದೆಗಳೂ ಕಾನೂನಾಗಿ ಮಂಜೂರ್ ಮಾಡಲ್ಪಟ್ಟುವು.

ಮೈಸೂರ ಸಂಸ್ಥಾನದಲ್ಲಿ ಯಾರಾದರೂ ಮತಾಂತರವನ್ನು ಅವಲಂಬಿಸುವುದರಿಂದ ಅಥವಾ ಜಾತಿಯಿಂದ ಬಹಿಷ್ಕೃತರಾಗುವುದರಿಂದ ಅವರಿಗೆ ಉಂಟಾಗುವ ಅನಾನುಕೂಲ್ಯಗಳನ್ನು ತಪ್ಪಿಸುವ ಬಗ್ಗೆ ೧೯೦೫ ನೆಯ ಇಸವಿಯಲ್ಲಿ ನೇಮಿಸಲ್ಪಟ್ಟ ಕಮಿಟಿಯವರು ತಯಾರ್ಮಾಡಿದ್ದ ಮಸೂದೆಯನ್ನು ಕುರಿತು ಪ್ರಸ್ತಾಪಿಸಲು ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು ನ್ಯಾಯವಿಧಾಯಕಸಭೆಯವರು ತಿರಸ್ಕರಿಸಿದರು.

ಇನಾಂದಾರರು ತಮ್ಮ ಕೈತರಿಂದ ಕಂದಾಯವನ್ನು ಖರಮಾಡಿಕೊಳ್ಳುವುದಲ್ಲದೆ ಹೆಚ್ಚು ಸೌಲಭ್ಯವನ್ನುಂಟುಮಾಡಿ ಕೊಡುವ ಉದ್ದೇಶದಿಂದ ಲ್ಯಾಂಡ್‌ರೆವಿನ್ಯೂಕೋಡಿನಲ್ಲಿ ಕೆಲ ತಿದ್ದುಪಡಿಯನ್ನು ಮಾಡಲು ಒಂದು ಮಸೂದೆಯು ಏರ್ಪಾಟಾಗಿರುತ್ತದೆ.

ರೆಗ್ಯುಲೇಷನುಗಳ ಮೇರೆಗೆ ಏರ್ಪಟ್ಟ ನಿಬಂಧನೆಗಳು.

ಅನ್ಯೋನ್ಯಸಹಾಯಕಸಂಘಗಳು, ಕೋರ್ಟುಫೀಜು, ಎಕ್ಸೈಜು, ಲೋಕಲ್ ಬೋರ್ಡುಗಳು, ಸೆನಸಸ್ಸು, ಇನ್‌ಸಾಲ್ವೆನ್ಸಿ—ಈ ಮುಂತಾದ ಬೇರೆ ಬೇರೆ ವಿಷಯಗಳನ್ನು ಕುರಿತು ಹಾಲಿ ಜಾರಿಯಲ್ಲಿರುವ ಕಾನೂನುಗಳ ಮೇರೆಗೆ ನಿಬಂಧನೆಗಳನ್ನೂ ಇಸ್ತಿಹಾರ್ನಾಮೆಗಳನ್ನೂ ಏರ್ಪಡಿಸಲಾಯಿತು.

ಸೆನಸಸ್.

೧೯೧೧ ನೆಯ ಮಾರ್ಚಿ ತಾ॥ ೧೦ ರಾತ್ರಿ ಈ ಸಂಸ್ಥಾನದಲ್ಲೆಲ್ಲ ಏಕಕಾಲದಲ್ಲಿ ತೆಗೆಯಲ್ಪಟ್ಟ ಸೆನಸಸ್ ಸಂಬಂಧವಾಗಿ ಈಚೆಗಾದ ಲೆಖ್ಖದ ಪ್ರಕಾರ ಬೆಂಗಳೂರು ಸಿವಿಲ್ ಮತ್ತೂ ಮಿಲಿಟರಿ ಸ್ಟೇಷನ್ ಸೇರಿ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯು ೫೮೦೬೧೯೩ ಎಂದು ಗೊತ್ತಾಗಿದೆ. ಇದನ್ನು ೧೯೦೧ ನೆ ಇಸವಿಯ ಜನಸಂಖ್ಯೆಯೊಡನೆ ಹೋಲಿಸಿ ನೋಡಿದಲ್ಲಿ ಶೇಕಡಾ ೪.೮೭ ರಂತೆ ಹೆಚ್ಚಿರುವುದೆಂದು ಗೊತ್ತಾಗುತ್ತದೆ. ಸಂಸ್ಥಾನದ ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಜನಸಂಖ್ಯೆಯು ಹೆಚ್ಚಾಗಿ ಮಲೆನಾಡು ಡಿ॥ ಗಳಾದ ಕಡೂರು ಶಿವಮೊಗ್ಗೆಗಳಲ್ಲಿ ಕ್ರಮವಾಗಿ ಶೇಕಡ ೫.೯೧ ಮತ್ತೂ ೭.೯೭ ರಂತೆ ಕಡಿಮೆಯಾಗಿರುವುದು ಗಮನೀಯಾಂಶವಾಗಿದೆ. ಬೆಂಗಳೂರ ಸಿಟಿಯಲ್ಲಿ ಶೇಕಡ ೭೩.೪೮ ರಷ್ಟೂ, ಕೋಲಾರದ ಚಿನ್ನದಗಣಿಗಳಲ್ಲಿ ಶೇಕಡ ೭೩.೦೮ ರಷ್ಟು ಹೆಚ್ಚಾಗಿರುತ್ತದೆ.

ಲ್ಯಾಂಡ್‌ರೆವಿನ್ಯೂ ಇಲಾಖೆ ಕಾಲಸ್ಥಿತಿ.

ಪ್ರಸಕ್ತವರ್ಷದ ಕಾಲಸ್ಥಿತಿಯು ಹಿಂದಿನ ವರ್ಷದಂತೆ ಅನುಕೂಲವಾಗಿಯೇ ಇತ್ತು. ೧೯೧೦ ನೆಯ ಮೇ ಜೂನ್ ತಿಂಗಳುಗಳಲ್ಲಿ ಮುಂಗಾರು ಮಳೆಯು ಸಾಮಾನ್ಯವಾಗಿ ಚೆನ್ನಾಗಿಯೇ ಆಯಿತು. ಆ ಅನಂತರದ (ಜೂಲೈಯಿಂದ ನವೆಂಬರ್ ವರೆಗಿನ) ತಿಂಗಳುಗಳಲ್ಲಿ ಬಂದ ಮಳೆಯೂ ಸಾಮಾನ್ಯವಾಗಿ ಕಾಲಕಾಲಕ್ಕೆ ಸರಿಯಾಗಿಯೂ, ಎಲ್ಲಾ ಕಡೆಯೂ ಒಂದೇ ಸಮನಾಗಿಯೂ ಆದುದಲ್ಲದೆ ಬೆಳೆಗಳಿಗೆ ಬೇಕಾದಷ್ಟು ಯಾ ಯಥೇಚ್ಛವಾಗಿ ಆಯಿತು. ಈ ವರ್ಷ ಸಂಸ್ಥಾನದಲ್ಲೆಲ್ಲ ಸರಾಸರಿ ೪೮.೭೯ ಅಂಗುಲ ಮಳೆ ಆಯಿತು. ಇದು ಹಿಂದಿನ ವರ್ಷಕ್ಕಿಂತ ೧೦.೧೧ ಅಂಗುಲವೂ, ೧೮೭೦ ನೆಯ ಇಸವಿಯಲಾಗಾಯಿತು ೧೯೦೯ ನೆಯ ಇಸವಿ ವರೆಗಿನ ೪೦ ವರ್ಷಗಳ ಸರಾಸರಿಗಿಂತ ೧೧.೩೪ ಅಂಗುಲವೂ ಜಾಸ್ತಿಯಾಗಿದೆ. ಈರೀತಿ ಮಳೆಯು ವಿಶೇಷವಾಗಿ ಬಂದುದರಿಂದ ಫಸಲು ಬಹಳ ಚೆನ್ನಾಗಿಯೇ ಆಯಿತು. ಮತ್ತು ಆಹಾರ ಧಾನ್ಯಗಳ ಧಾರಣವಾಸಿಯು ಸ್ವಲ್ಪಮಟ್ಟಿಗೆ ಇಳಿಯಿತು. ೧೯೦೫-೦೬ ರಲ್ಲಿ ದುಯ್ಯಂ ಅಕ್ಕಿಯೂ, ರಾಗಿಯೂ ರೂಪಾಯಿಗೆ ೯.೪೫ ಮತ್ತು ೧೬.೮೦ ಸೇರಿನಂತೆಯೂ, ಹಿಂದಿನ ವರ್ಷ ೮.೧೮ ಮತ್ತು ೧೩.೫೧ ಸೇರಿನಂತೆಯೂ ಬಿಕರಿಯಾಗುತ್ತಿತ್ತು; ಪ್ರಸಕ್ತವರ್ಷ ೯.೧೯ ಮತ್ತು ೧೭.೫೩ ಸೇರಿನಂತೆ ಬಿಕರಿಯಾಯಿತು.

ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟ್ಟು.

ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟ್ಟು ಪ್ರಾರಂಭವಾಗಿ ಈಗ ಐದನೆಯ ವರ್ಷವು ನಡೆಯುತ್ತಿದೆ. ಒಟ್ಟು ೧೧೦೦ ಪ್ರತಿಗಳು ಖರ್ಚಾಗುತ್ತಿವೆ.

ಚಿಕ್ಕ ಕೆರೆಗಳ ಅಬಾದಿನ ಏರ್ಪಾಟು.

ಪ್ರಸಕ್ತವರ್ಷದಲ್ಲಿ ೪೫೯ ಚಿಕ್ಕಕೆರೆಗಳನ್ನು ಅಬಾದ್ ಮಾಡಿಸಲಾಯಿತು. ಈ ಬಾಬಿಗೆ ಸರ್ಕಾರದವರು ಮಂಜೂರ್ಮಾಡಿದ್ದ ೧ ಲಕ್ಷ ರೂ. ಪೈಕಿ ೭೮೦೯೦ ರೂ. ಖರ್ಚಾಯಿತು. ಅಬಾದ್ ಆದ ಕೆರೆಗಳ ಡಿಸ್ಟ್ರಿಕ್ಟ್‌ವಾರ್ ತಪ್ಸೀಲನ್ನು ಈ ಕೆಳಗೆ ನಮೂದಿಸಿದೆ.

ಡಿಸ್ಟ್ರಿಕ್ಟ್		ಅಬಾದ್ ಮಾಡಲ್ಪಟ್ಟ ಕೆರೆಗಳ ಸಂಖ್ಯೆ	ಖರ್ಚಾದ ಮೊಬಲಗು.
ಬೆಂಗಳೂರು	...	೪೩	೯೦೯೩
ಕೋಲಾರ	...	೧೫೩	೧೯೫೩೩
ತುಮಕೂರು	...	೮೧	೧೫೬೩೩
ಮೈಸೂರು	...	೪೫	೩೩೫೫
ಹಾಸನ	...	೬೦	೯೮೭೯
ಶಿವಮೊಗ್ಗಾ	...	೩೩	೬೫೪೮
ಕಡೂರು	...	೨೫	೩೬೫೦
ಚಿತ್ರದುರ್ಗ	...	೧೧	೨೯೮೭
ಜುಮ್ಲಾ......		೪೫೯	೭೮೦೯೦

ಹಿಂದಿನ ವರ್ಷದಂತೆ ಈ ವರ್ಷವೂ ಕೋಲಾರ ತುಮಕೂರು ಡಿ॥ಗಳಲ್ಲಿಯೇ ಇತರ ಡಿ॥ ಗಳಿಗಿಂತ ಜಾಸ್ತಿ ಕೆಲಸವು ನಡೆದಿರುವುದು. ಪ್ರಸಕ್ತವರ್ಷವು ಆಖೈರಾಗುವುದಕ್ಕೆ ಮುಂಚೆ ೧೩೪ ಕೆರೆಗಳ ಅಬಾದ್ ಕೆಲಸವು ಪೂರೈಸಿತ್ತು. ಈ ವಿಷಯದಲ್ಲಿ ಹಿಂದಿನ ವರ್ಷದಲ್ಲಿ ನಡೆದಷ್ಟು ತೃಪ್ತಿಕರವಾಗಿ ಈ ವರ್ಷ ಕೆಲಸ ನಡೆಯಲಿಲ್ಲ. ಸರ್ಕಾರಿ ವರ್ಷವು ಆಖೈರಾಗುವ ವೇಳೆಗೆ ಅನೇಕ ಕೆರೆಗಳಿಗೆ ವಿಶೇಷವಾಗಿ ನೀರು ಬಂದು ಸೇರಿದುದರಿಂದ ಪ್ರಾರಂಭ ಮಾಡಿದ ಅಬಾದಿನ ಕೆಲಸಗಳನ್ನು ಪೂರೈಸುವುದಕ್ಕೆ ಅಡ್ಡಿಯಾಯಿತೆಂದು ತಿಳಿಯಬಂದಿರುತ್ತದೆ.

ದನಗಳ ಪ್ರದರ್ಶನಗಳು.

ಈ ವರ್ಷ ಕೋಲಾರದ ಹೊರತು ಉಳಿದ ಡಿಸ್ಟ್ರಿಕ್ಟುಗಳಲ್ಲಿ ದನಗಳ ಪ್ರದರ್ಶನಗಳು ಎಂಟು ನಡೆದುವು. ಇವುಗಳಲ್ಲೆಲ್ಲಾ ಜನರು ವಿಶೇಷವಾಗಿ ಸೇರಿದ್ದರು. ಹರಿಹರದಲ್ಲಿ ಕುದುರೆಗಳ ಪ್ರದರ್ಶನವೂ, ಚನ್ನಗಿರಿಯಲ್ಲಿ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನವೂ ದನಗಳ ಪ್ರದರ್ಶನಗಳ ಜೊತೆಯಲ್ಲಿಯೇ ನಡಿಸಲ್ಪಟ್ಟುವು. ೧೯೧೧ನೆಯ ಏಪ್ರಿಲ್ ೧೩ ರಲ್ಲಿ ಚಿತ್ರದುರ್ಗದಲ್ಲಿ ಕೈಗಾರಿಕೆಯ ಮತ್ತು ವ್ಯವಸಾಯದ ಪ್ರದರ್ಶನವೂ, ವಿದ್ಯಾಭ್ಯಾಸದ ಪ್ರದರ್ಶನವೂ ಸಹ ವಿಶೇಷ ಸಮರ್ಪಕವಾಗಿ ನಡೆಯಿತು.

ಸಿವಿಲ್ ಪಶುವೈದ್ಯದ ಇಲಾಖೆ.

ಈ ವರ್ಷ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದರಂತೆ ಎಂಟು ಪಶುರೋಗದ ಆಸ್ಪತ್ರೆಗಳೂ, ಔಷಧಶಾಲೆಗಳೂ ಇದ್ದುವು. ಇವುಗಳ ಪೈಕಿ ಪ್ರತಿಯೊಂದರಲ್ಲಿಯೂ ಒಬ್ಬೊಬ್ಬರು ಪಶುವೈದ್ಯರು ಕೆಲಸಮಾಡುತ್ತಿದ್ದರು. ದನಗಳ ಅಂಟುರೋಗಗಳು ವ್ಯಾಪಿಸಿರುವ ಸ್ಥಳಗಳಲ್ಲೆಲ್ಲಾ ಸಂಚಾರಮಾಡಿ ರೈತರಿಗೆ ತಿಳುವಳಿಕೆಯನ್ನು ಕೊಟ್ಟು ಸಹಾಯಮಾಡುವಬಗ್ಗೆ ಹಂಗಾಮಿಯಾಗಿ ಒಂದು ವರ್ಷಕಾಲ ಕೆಲಸಮಾಡಲು ಇಬ್ಬರು ಪಶುವೈದ್ಯರನ್ನು ೧೯೧೦ನೆಯ ನವೆಂಬರ್ ತಿಂಗಳಲ್ಲಿ ನೇಮಕಮಾಡಲಾಯಿತು. ಹಿಂದಿನ ವರ್ಷ ಚಿಕಿತ್ಸೆಹೊಂದಿದ ರಾಸುಗಳ ಸಂಖ್ಯೆಯು ೯,೯೦೧ ಇದ್ದುದು ಈ ವರ್ಷ ೧೩,೫೩೦ ರವರೆಗೂ ಹೆಚ್ಚಿತು. ದನಗಳ ಮಾರಿ ರೋಗದ ನಿವಾರಣೆಗೋಸ್ಕರ ಹಿಂದಿನ ವರ್ಷ ೮,೧೩೮ ರಾಸುಗಳಿಗೆ ಸಿಡುಬು ಹಾಕಲಾಯಿತು; ಈ ವರ್ಷ ೫೫೧ ರಾಸುಗಳಿಗೆ ಮಾತ್ರವೇ ಸಿಡುಬು ಹಾಕಲಾಯಿತು. ದನಗಳ ಜಾಡ್ಯವು ಪ್ರಬಲವಾಗಿದೆ ಇದ್ದುದರಿಂದಲೂ, ಇಂಪೀರಿಯಲ್ ಬ್ಯಾಕ್ಟೀರಿಯಾಲಜಿಸ್ಟ್ (ಕ್ರಿಮಿಶಾಸ್ತ್ರಜ್ಞ) ರಿಂದ ಸಿಡುಬು ಹಾಕುವ ಹಾಲು ಬಹು ಕಮ್ಮಿಯಾಗಿ ಸರಬರಾಯಿ ಆದುದರಿಂದಲೂ, ಸಿಡುಬು ಹಾಕಲ್ಪಟ್ಟ ದನಗಳ ಸಂಖ್ಯೆಯು ಕಮ್ಮಿಯಾಗಲು ಕಾರಣವಾಯಿತು. ಪಶುವೈದ್ಯರುಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ತೃಪ್ತಿಕರವಾಗಿ ಕೆಲಸ ಮಾಡಿದರು. ರಾಸುಗಳಿಗೆ ನವೀನ ಮಾರ್ಗದಲ್ಲಿ ಚಿಕಿತ್ಸೆಮಾಡುವುದು ರೈತರಲ್ಲಿ ಚೆನ್ನಾಗಿ ವಾಡಿಕೆಗೆ ಬರುತ್ತಾ ಇದೆ.

ಬಿತ್ತನೆಯ ಕಾಳು ಮತ್ತು ವ್ಯವಸಾಯದ ಮುಟ್ಟುಗಳು

ಇದಕ್ಕಾಗಿ ಮಂಜೂರ್ಮಾಡಲ್ಪಟ್ಟ ಗ್ರಾಂಟಿನಿಂದ ಕೆಲವು ತರಹೆಯ ಬಿತ್ತನೆಯಕಾಳನ್ನೂ, ವ್ಯವಸಾಯದ ಮುಟ್ಟುಗಳನ್ನೂ ಕ್ರಯಕ್ಕೆ ತೆಗೆದುಕೊಂಡು ಎಲ್ಲಾ ಸ್ಥಳಗಳಿಗೂ ಹಂಚಲಾಯಿತು. ಈ ಸಂದರ್ಭದಲ್ಲಿ ಕೆಲವು ಸ್ವಾರಸ್ಯವಾದ ಅಂಶಗಳನ್ನು ತಿಳಿಸಬಹುದಾಗಿದೆ. ಮದ್ರಾಸ್ ಅಧಿಪತ್ಯದ ಕೆಲವು ವ್ಯವಸಾಯ ಕ್ಷೇತ್ರಗಳಲ್ಲಿ "ಕೊಳಂಜಿ" ಅಥವಾ ಕಾಡು ನೀಲಿ ಗಿಡದ ಸೊಪ್ಪನ್ನು ಬತ್ತದಸಾಗುವಳಿಗೆ ಗೊಬ್ಬರವಾಗಿ ಉಪಯೋಗಿಸಿ ಅಜಮಾಯಿಷಿ ಮಾಡಿದುದರಲ್ಲಿ ಬಹಳ ಫಲಕಾರಿಯಾಗಿರುವಂತೆ ಕಂಡುಬಂತು. ಆದಕಾರಣ ಇದರ ಬೀಜವನ್ನು ಸ್ವಲ್ಪವಾಗಿ ತರಿಸಿ ಅಜಮಾಯಿಷಿ ಮಾಡಿಸುವ ಬಗ್ಗೆ ಕೋಲಾರ, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳಿಗೂ, ತಿರಮಕೂಡ್ಲು ನರಸೀಪುರ ತಾಲ್ಲೂಕಿನಲ್ಲಿರುವ ಕೃಷ್ಣರಾಜಪುರ ಸರ್ವಮಾನ್ಯ ಅಗ್ರಹಾರದ ಇನಾಂದಾರರಿಗೂ ಸರಬರಾಯಿ ಮಾಡಲಾಯಿತು. ಸಾಮಲಕೋಟ ವ್ಯವಸಾಯ ಕ್ಷೇತ್ರದಿಂದ ಬಾರ್ಬೆಡಾಸ್ ಕಬ್ಬಿನಗಿಣ್ಣುಗಳನ್ನು ಕೊಂಡುಕೊಂಡು ಮೈಸೂರು ನಾರ್ಮಲ್ ಸ್ಕೂಲಿಗೆ ಸೇರಿದ ಪರೀಕ್ಷಾಕ್ಷೇತ್ರದಲ್ಲಿ ಅಜಮಾಯಿಷಿ ಮಾಡಿನೋಡುವ ಬಗ್ಗೆ ಸದರೀ ಸ್ಕೂಲಿನ ವ್ಯವಸಾಯ ಬೋಧಕರಲ್ಲಿಗೆ ಕಳುಹಿಸಲಾಯಿತು. ಉತ್ಸಾಹಪರರಾದ ಕೆಲವು ರೈತರಿಗೆ ಕೊಡುವುದಕ್ಕೋಸ್ಕರ ವರ್ಜಿನಿಯಾ, ಸ್ಪೇನ್, ಜಪಾನ್ ಮತ್ತು ಮಾರಿಷಸ್ ದೇಶಗಳ ನೆಲಗಡಲೆ ಕಾಯಿಯನ್ನು ತರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಸರಬರಾಯಿ ಮಾಡಲಾಯಿತು. ಸಂದ್ಯಾಲದ ವ್ಯವಸಾಯಕ್ಷೇತ್ರದಿಂದ ೩೦ ಮಣ ಅರಿಸಿನದ ಬೀಜವನ್ನು ಕೊಂಡುಕೊಂಡು, ಹೊಸ ಜಾತಿಯ ಅರಿಸಿನವನ್ನು ಬೆಳೆಯಿಸಲಪೇಕ್ಷಿಸಿದ ಶಿವಮೊಗ್ಗಾ ಜಮೀನ್‌ದಾರರೊಬ್ಬರಿಗೆ ಅದನ್ನು ಕೊಡಿಸಲಾಯಿತು. ಚಿತ್ರದುರ್ಗದ ಡಿಸ್ಟ್ರಿಕ್ಟಿನ ಮುಖಂಡರಾದ ಕೆಲವರು ರೈತರಿಗೆ ಬೋರ್ಬೋ ಪ್ರದೇಶದ ಹತ್ತಿಯ ಬೀಜವನ್ನು ಹಂಚಲಾಯಿತು. ಕೊಯಿಲಪಟ್ಟಿ ವ್ಯವಸಾಯಕ್ಷೇತ್ರದ ಮ್ಯಾನೇಜರು ಸರಬರಾಯಿ ಮಾಡಿದ ಕಾಂಬೋಡಿಯಾ ಹತ್ತಿಯ ಬೀಜವು ಅಜಮಾಯಿಷಿ ಬಗ್ಗೆ ನಾರ್ಮಲ್ ಸ್ಕೂಲಿನ ವ್ಯವಸಾಯಬೋಧಕರಿಗೆ ಕಳುಹಿಸಲ್ಪಟ್ಟಿತು.

೫೦ ರೂ. ಗಳಿಗೆ ಕೊಂಡುಕೊಂಡ ಊಕಿ ಯಂತ್ರವನ್ನು ಮೈಸೂರ ಶ್ರೀ ಕೃಷ್ಣ ವೀವಿಂಗ್ ಫ್ಯಾಕ್ಟರಿ ಪ್ರೊಪ್ರೈಟರಿಗೂ ಎಡವಿಡದೆ ಜೋಡಿಯಾಗಿ ನೂಲುವುದಕ್ಕೆ ಉಪಯುಕ್ತವಾದ ಯಂತ್ರವನ್ನು ಕೊಂಡು ಅದನ್ನು ಚನ್ನಪಟ್ಟಣದ ಸರ್ಕಾರಿಯ ಕೈಗಾರಿಕೆಯ ಪಾಠಶಾಲೆಗೂ, ತೂರುವ ಯಂತ್ರವನ್ನು ಮೈಸೂರಲ್ಲಿರುವ ವ್ಯವಸಾಯ ಕ್ಷೇತ್ರಕ್ಕೂ ಪರೀಕ್ಷಿಸಿ ಅವುಗಳುಪಯೋಗವನ್ನು ಇತರರಿಗೆ ತಿಳುಹಲು ಎರವಾಗಿ ಕೊಡಲಾಯಿತು.

ವ್ಯವಸಾಯದ ಇಲಾಖೆ.

ಹೆಬ್ಬಾಳದ ಪರೀಕ್ಷಾಕ್ಷೇತ್ರದಲ್ಲಿ ನಡೆಸಿದ ಅಜಮಾಯಿಷಿಗಳಿಂದ ರೈತರುಗಳಿಗೆ ಮುಖ್ಯವಾದ ಅನೇಕ ವಿಷಯಗಳಲ್ಲಿ ಬಹುಮಟ್ಟಿನ ಉಪಯುಕ್ತಾಂಶಗಳು ಗೊತ್ತಾದುವು. ರಾಗಿಯ ವಿಷಯದಲ್ಲಿ, ಬಿತ್ತನೆಯ ಕಾಲಕ್ಕೆ ಬಹಳ ಮುಂಚೆಯೇ ನೆಲವನ್ನು ಉತ್ತರೆ ಆದರೆ ಅದರಲ್ಲಿ ವಿಶೇಷವಾದ ಫಸಲು ಆಗುವುದು. ಈರೀತಿ ಮುಂಚೆಯೇ ನೆಲವನ್ನು ಉಳಬೇಕಾದ ಪಕ್ಷದಲ್ಲಿ ಚಕ್ರಕುಂಟೆಯಿಂದ (disc-harrow) ಮೊದಲು ಉಳ್ಳೆ ಹೊಡೆಯುವುದು ಅವಶ್ಯಕವಾಗಿದೆ. ಹೀಗೆ ಮಾಡಿದಲ್ಲಿ ಮಳೆಯ ನೀರು ಸುಲಭವಾಗಿ ಭೂಮಿಯೊಳಕ್ಕೆ ಇಳಿಯುವುದರಿಂದ ಮಳೆ ೩೦ ಸೆಂಟುಗಳಷ್ಟು ಮಾತ್ರ ಬಂದರೂ ನೆಲವನ್ನು ಉಳಬಹುದು; ಅದೇ ನೆಲವನ್ನು ಕುಂಟೆ ಉಪಯೋಗಿಸದೆ ಉಳಬೇಕಾದರೆ ಸಾಧಾರಣವಾಗಿ ಇದರ ಎರಡರಷ್ಟು ಮಳೆ ಬೇಕು. ತಡಗುಣಿ (cow-pea) ಅವರೆ ಮುಂತಾದ ಸೊಪ್ಪಿನ ಗೊಬ್ಬರಗಳು ರಾಗಿಯ ಬೆಳೆಯನ್ನು ವೃದ್ಧಿಮಾಡುತ್ತವೆ ಎಂದು ಕಾಣಬರುತ್ತದೆ. ಮುಂದಿನ ನವೆಂಬರ್ ತಿಂಗಳಲ್ಲಿ ಕೊಯಿಲಿಗೆ ಬರುವ ಕಾರುರಾಗಿಯ ಪೈರು ನಿರೀಕ್ಷಣೆಗೆ ಸರಿಯಾಗಿ ಆದಲ್ಲಿ, ಈ ಗೊಬ್ಬರಗಳ ಉಪಯೋಗವನ್ನು ಜನರಿಗೆ ತೋರಿಸುವ ಏರ್ಪಾಟನ್ನು ಮಾಡಲಾಗುವುದು. ಬತ್ತದ ಸಾಗುವಳಿಯ ವಿಷಯದಲ್ಲಿ ಈಗನವರೆಗೆ ಮಾಡಿರುವ ಅಜಮಾಯಿಷಿಯ ಫಲಿತಾಂಶಗಳು ಚಿಕ್ಕಚಿಕ್ಕ ಪುಸ್ತಕಗಳ ರೂಪದಲ್ಲಿ ಪ್ರಕಟಿಸಲ್ಪಡುತ್ತಿವೆ. ಅಂಥ ಪುಸ್ತಕಗಳು ಬಹುಮಟ್ಟಿಗೆ ಸಿದ್ಧವಾಗಿವೆ. ಕಬ್ಬಿನ ಬೆಳೆಯ ವಿಷಯದಲ್ಲಿ ಆಯಾ ಕಾಲದಲ್ಲಿಯೂ ಸರದಿಯ ಮೇರೆಗೂ ಬೆಳೆ ಮಾಡುವ ಅಜಮಾಯಿಷಿಗಳನ್ನು ನಡಿಸುತ್ತಲೇ ಇದೆ. ಹೊರಗಿನಿಂದ ತರಿಸಿರುವ ಮಾರಿಷಸ್ ಮತ್ತು ಜಾವಾ ಕಬ್ಬುಗಳು ಬಹಳ ಹುಲುಸಾಗಿ ಬೆಳೆಯುತ್ತಿವೆ. ಸಕ್ಕರೆ ತಯಾರುಮಾಡುವ ವಿಷಯವಾಗಿ ಮಿ॥ ಕೃಷ್ಣಯ್ಯಂಗಾರರವರ ಉರುಗಹಳ್ಳಿ ತೋಟದಲ್ಲಿ ಈ ವರುಷ ಬಹಳವಾಗಿ ನಡಿಸಿದ ಅಜಮಾಯಿಷಿಯ ಫಲಿತಾಂಶಗಳನ್ನು ಜನಗಳ ತಿಳುವಳಿಕೆಯ ಬಗ್ಗೆ ಒಂದು ಚಿಕ್ಕ ಪುಸ್ತಕ ರೂಪವಾಗಿ ಪ್ರಕಟಿಸಲಾಗುವುದು. ೧೯೦೯ ನೆಯ ಇಸವಿಯಲ್ಲಿ ಅಮೇರಿಕೆಯಿಂದ ತರಿಸಿದ ೧೧ ತರಹೆಯ ಜೋಳಗಳು ಬಹಳ ಚೆನ್ನಾಗಿ ಬೆಳೆದಿವೆಯೆಂದು ತಿಳಿಯಬಂದಿದೆ. ಅದರಲ್ಲಿ ಅತ್ಯುತ್ತಮವಾದುವುಗಳನ್ನು ಚುನಾಯಿಸಿ ವಿಸ್ತಾರವಾದ ಜಮೀನಿನಲ್ಲಿ ಬೆಳೆಯಿಸಿ ಅದರ ಬೀಜವನ್ನು ಹಂಚುವುದಕ್ಕೋಸ್ಕರ ಏರ್ಪಾಡು ಈ ವರ್ಷವೇ ನಡೆಯುತ್ತಿದೆ. ಸಂಯುಕ್ತಸಂಸ್ಥಾನದ ವ್ಯವಸಾಯದ ಇಲಾಖೆಯವರಿಂದ ತರಿಸಲ್ಪಟ್ಟ ಮತ್ತು ಖುಷ್ಕಿ ಜಮೀನಿನಲ್ಲಾಗುವ ಮೂರು ವಿಧದ ಲೂಸರ್ನ್ ಯಾ ಮಸಾಲೆ ಸೊಪ್ಪಿನ ಬೀಜಗಳನ್ನು ೧೯೧೦ ನೆಯ ಇಸವಿಯ ಬೇಸಗೆಯಲ್ಲಿ ಬಿತ್ತಲಾಯಿತು. ಆ ಬೆಳೆಯಿಂದ ಸ್ವಲ್ಪ ಬೀಜವು ಸಿಕ್ಕಿರುತ್ತದೆ. ಇದನ್ನು ಪುನಃ ಬಿತ್ತುವುದಕ್ಕೆ ಉಪಯೋಗಿಸಲಾಗುವುದು. ಇದರಿಂದ ಖುಷ್ಕಿ ಜಮೀನುಗಳಲ್ಲಿ ಬಹಳ ಆದಾಯಕರವಾದ ದನಗಳ ಮೇವನ್ನು ಬೆಳೆಯಬಹುದಾಗಿರುತ್ತದೆ.

ಮುಟ್ಟುಗಳ ಕೋಠಿಯಲ್ಲಿ ನಡೆದ ಕೆಲಸವು ಹಿಂದಿನ ವರ್ಷಕ್ಕಿಂತ ಎರಡರಷ್ಟು ಹೆಚ್ಚಾಗಿದೆ. ೧೯೦೯-೧೦ ರಲ್ಲಿ ೫೫ ನೇಗಿಲು ಮಾತ್ರ ಬಿಕರಿಯಾದುದಕ್ಕೆ ಪ್ರತಿಯಾಗಿ ಈ ವರ್ಷ ಸುಮಾರು ಒಂದುನೂರು ನೇಗಿಲು ಬಿಕರಿಯಾದುವು. ಇವುಗಳ ಪೈಕಿ ಅನೇಕವು ಸಂಸ್ಥಾನದಲ್ಲಿ ಇದುವರೆಗೂ ನೂತನವಾದ ನೇಗಿಲುಗಳನ್ನು ಕಾಣದಿರುವ ಪ್ರದೇಶಗಳಲ್ಲಿ ಖರ್ಚಾದುವು. ಎಲ್ಲಾ ಸಂದರ್ಭಗಳಲ್ಲಿಯೂ ನೇಗಿಲನ್ನು ಕೊಂಡುಕೊಳ್ಳುವವರಿಗೆ ಅವುಗಳ ಉಪಯೋಗವನ್ನು ವಸ್ತುತಃ ತೋರಿಸಲಾಯಿತು. ಬಿಕರಿಯಾದ ಇತರ ಮುಟ್ಟುಗಳು ಯಾವುವೆಂದರೆ— ತೂರುವ ಯಂತ್ರಗಳು, ಮೇವನ್ನು ಕತ್ತರಿಸುವ ಯಂತ್ರಗಳು, ಸರಳಿನ ಪಂಪುಗಳು, ತುಳಿಯುವ ಯಂತ್ರಗಳು, ಕಬ್ಬಿನ ಗಾಣಗಳು ಮತ್ತೂ ಕೊಪ್ಪರಿಗೆಗಳು. ಈ ಕೋಠಿಯು ಯಂತ್ರಗಳನ್ನು ತಯಾರು ಮಾಡುವವರಿಗೂ ಮತ್ತು ಅವುಗಳನ್ನು ಕೊಂಡುಕೊಳ್ಳುವವರಿಗೂ ಮಧ್ಯಸ್ಥಗಾರನಂತೆ ಬಹಳ ಉಪಯೋಗಕರವಾಗಿದೆ. ಅಲ್ಲದೆ ಚೆನ್ನಾಗಿ ತಯಾರುಮಾಡದ, ಕೆಟ್ಟ ನಮೂನೆಯ ಮತ್ತು ಕೆಲಸಕ್ಕೆ ಬಾರದ ಮುಟ್ಟುಗಳನ್ನು ಅತುರದಿಂದ ತರಿಸುವುದನ್ನು ತಪ್ಪಿಸಲು ಸಾಧಕವಾಗಿರುತ್ತದೆ. ರಸಾಯನ ಶಾಸ್ತ್ರಜ್ಞರ ಕಾರ್ಯಾಲಯದಲ್ಲಿ ಹಸೀಸೊಪ್ಪಿನ ಗೊಬ್ಬರ, ಮಣ್ಣು, ಕಬ್ಬಿನ ಫಸಲುಗಳು, ದನಗಳ ಮೇವು ಇವುಗಳನ್ನು ಕುರಿತು ಪರೀಕ್ಷೆಗಳನ್ನೂ, ಪರಿಶೋಧನೆಗಳನ್ನೂ ನಡಿಸಲಾಯಿತು. ಹಸೀಸೊಪ್ಪಿನಗೊಬ್ಬರಗಳ ವಿಷಯದಲ್ಲಿ ಒಂದು ಚಿಕ್ಕ ಪುಸ್ತಕವು ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವುದು.

ಬೂಜು ವಗೈರೆ ಸಸ್ಯಾಣುಗಳನ್ನು ಕುರಿತ ಶಾಸ್ತ್ರ.

ಅಡಕೆ ಮರಗಳಿಗೆ ಬರುವ ಕೊಳೆ ರೋಗಕ್ಕೆ ಮಾಡಬೇಕಾದ ದ್ರಾವಕ ಚಿಮುಕಿಸುವ ಚಿಕಿತ್ಸೆಯನ್ನು ಬಹು ಜನರು ಅಪೇಕ್ಷಿಸಿದರು. ಈ ಚಿಕಿತ್ಸೆಯು ಹಿಂದಿನವರ್ಷ ೫೫ ತೋಟಗಳಲ್ಲಿ ಮಾತ್ರ ನಡೆದಿರುವಲ್ಲಿ ಈವರ್ಷ ೯೧ ತೋಟಗಳಲ್ಲಿ ನಡಿಸಲಾಯಿತು. ಈ ಇಲಾಖೆಯವರೆಲ್ಲರೂ ಕೊಳೆ ರೋಗದ ಚಿಕಿತ್ಸೆಯಲ್ಲಿ ಪ್ರವರ್ತಕರಾಗಿ ಇದ್ದುದರಿಂದ ಅಣಬೆರೋಗದ ಪರಿಹಾರದ ವಿಷಯದಲ್ಲಿ ಯಾವ ಹೆಚ್ಚು ಪ್ರಯತ್ನಗಳನ್ನು ನಡಿಸುವುದಕ್ಕೂ ಅವಕಾಶವಿಲ್ಲವಾಯಿತು. ಈ ವರ್ಷದಲ್ಲಿ ಉರುಳುಗಜ್ಜಿಗೆ (Ring disease) ಜೋಳಕ್ಕೆ ಬರುವ ಮಸಿ ರೋಗ (Smut) ಇವುಗಳ ವಿಷಯದಲ್ಲಿಯೂ ಸಹ ಇವರು ಗಮನಕೊಟ್ಟರು. ಆದರೆ ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗದ ವಿಷಯದಲ್ಲಿ ಯಾವ ವಿಶೇಷ ಪ್ರಯತ್ನಗಳನ್ನೂ ನಡಿಸಲಾಗಲಿಲ್ಲ. ಕ್ರಿಮಿಶಾಸ್ತ್ರ ವಿಷಯಗಳನ್ನು ಪರೀಕ್ಷಿಸುವಲ್ಲಿ ಜೋಳಕ್ಕೂ ಬತ್ತಕ್ಕೂ ಬರುವ ಚೆಟ್ಟೆ ರೋಗಗಳ ವಿಷಯದಲ್ಲಿ ನಡಿಸಿದ ಪರಿಶೋಧನೆಯ ಮೇಲೆ ಸಚಿತ್ರಗಳಾದ ಚಿಕ್ಕಪುಸ್ತಕಗಳು ಛಾಯಿಷ್ ಮಾಡಲ್ಪಟ್ಟುವು. ಕಂಬಳಿ ಹುಳುಗಳಿಂದಲೂ, ನೆಲದಲ್ಲಿರುವ ರೆಕ್ಕೆ ಹುಳುಗಳಿಂದಲೂ ಉಂಟಾಗುವ ರೋಗಗಳ ವಿಷಯದಲ್ಲಿ ವಿಶೇಷವಾದ ಪರೀಕ್ಷೆಗಳನ್ನು ನಡಿಸಲಾಯಿತು. ಅವುಗಳ ಫಲಿತಾಂಶಗಳು ಛಾಯಿಷ್‌ಮಾಡಲ್ಪಡುವ ನಿರೀಕ್ಷಣೆಯಿದೆ. ಈ ಹುಳುಗಳಿಂದುಂಟಾಗುವ ರೋಗಗಳನ್ನೂ ಇತರ ರೋಗಗಳನ್ನೂ ಸ್ವಂತ ಜಮೀನುದಾರರುಗಳಿಗೆ ಸೇರಿದ ವಿಸ್ತಾರವಾದ ಜಮೀನುಗಳಲ್ಲಿ ನಿರ್ಮೂಲ ಮಾಡುವುದಕ್ಕೆ ತಗಲುವ ಖರ್ಚನ್ನು ಸರ್ಕಾರದವರು ವಹಿಸುವುದಕ್ಕೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಅಜಮಾಯಿಷಿಗಳಿಂದಲೂ ಅನುಭವದಿಂದಲೂ ಕ್ರಿಮಿಶಾಸ್ತ್ರಜ್ಞರು ಹೇಳುವ ನಿವಾರಣೋಪಾಯಗಳನ್ನು ತಾವೇ ನಡಿಸುತ್ತಾ ಬರುವುದು ಪ್ರಜೆಗಳ ಕರ್ತವ್ಯವಾಗಿದೆ.

ಅನ್ಯೋನ್ಯ ಸಹಾಯಕ ಸಂಘಗಳು.

ಸಂಸ್ಥಾನದಲ್ಲಿ ಈ ವರ್ಷ ಅನ್ಯೋನ್ಯಸಹಾಯಕ ಸಂಘಗಳ ಏರ್ಪಾಡು ಅಭಿವೃದ್ಧಿಸ್ಥಿತಿಯಲ್ಲಿತ್ತು. ಸಂಘಗಳ ಸಂಖ್ಯೆಯು ೩೦ ರಿಂದ ೧೧೬ ಕ್ಕೆ ಹೆಚ್ಚಿತು. ಆದರೆ ೫ ಸಂಘಗಳಲ್ಲಿ ಕೆಲಸವು ಮೋಕೂಫ್ ಆಗಿ ಅವುಗಳ ರಿಜಿಸ್ಟ್ರೇಷನ್ನು ರದ್ದುಮಾಡಬೇಕಾಗಿ ಬಂದುದರಿಂದ ವರ್ಷದ ಆಖೈರಿನಲ್ಲಿ ೧೧೧ ಸಂಘಗಳು ಇದ್ದುವು. ಇವುಗಳಲ್ಲಿರುವ ಮೆಂಬರುಗಳ ಸಂಖ್ಯೆ ೮೯೦೯ ಮತ್ತು ವಸೂಲಾದ ಬಂಡವಾಳ ಎಂಟುಸಾವಿರ ರೂಪಾಯಿ. ೧೯೧೧ ನೆಯ ಇಸವಿ ಜೂನ್ ಆಖೈರಿನ ವೇಳೆಗೆ ೩,೩೦೧ ಮೆಂಬರುಗಳಿದ್ದರು. ಮತ್ತು ಷೇರಿನ ಬಂಡವಾಳವು ೧೫೮೯೮ ರೂ. ವಸೂಲಾಯಿತು.

ಕೋಲಾರ, ಶಿವಮೊಗ್ಗಾ, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು ಈ ವಿಷಯದಲ್ಲಿ ಅಷ್ಟೇನೂ ಅಭಿವೃದ್ಧಿಯನ್ನು ತೋರ್ಪಡಿಸಲಿಲ್ಲ. ಈವರ್ಷ ಹೊಸದಾಗಿ ಏರ್ಪಟ್ಟ ೮೬ ಸಂಘಗಳ ಪೈಕಿ, ೬೩ ಹಳ್ಳಿಪಳ್ಳಿಗಳ ವ್ಯವಸಾಯಗಾರರ ಉಪಯೋಗಕ್ಕೂ, ೩ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿರುವ ಉದ್ಯೋಗಸ್ತರಿಗೂ ಮತ್ತು ಇತರರಿಗೂ, ೧ ಮೈಸೂರು ಷಹರಿನಲ್ಲಿ ಚಿಕ್ಕಚಿಕ್ಕ ವ್ಯಾಪಾರಿಗಳಿಗೂ ಶಿಲ್ಪಗಾರರಿಗೂ, ೧ ಚನ್ನಪಟ್ಟಣ ಮಹಮದೀಯ ದಾಯರೆ ಪಂಗಡದವರಿಗೂ, ೧ ಹಾಸನ ತಾಲ್ಲೂಕು ಗ್ರಾಮದಲ್ಲಿರುವ ನೆಯ್ಗೆಯವರ ಉಪಯೋಗಕ್ಕೂ ಏರ್ಪಟ್ಟಿವೆ. ಈ ಸಂವತ್ಸರದಲ್ಲಿ ಮಿತಿಯಿಲ್ಲದ ಜವಾಬ್ದಾರಿಯನ್ನು ವಹಿಸಿ ಸಂಘಗಳನ್ನು ಸ್ಥಾಪಿಸುವ ಪದ್ಧತಿಯು ವಿಶೇಷವಾಗಿ ಆಚರಣೆಗೆ ಬಂದಿರುತ್ತದೆ. ಹೊಸದಾಗಿ ಏರ್ಪಾಟಾದ ೮೬ ಸಂಘಗಳ ಪೈಕಿ ೬೯ ಮೇಲೆ ನಮೂದಿಸಿದ ನೂತನ ಪದ್ಧತಿಯನ್ನನುಸರಿಸಿವೆ, ಮತ್ತು ಒಂದು ಮಿತಿಯಿರುವ ಜವಾಬ್ದಾರಿಯುಳ್ಳ ಸಂಘವು ಮಿತಿಯಿಲ್ಲದ ಜವಾಬ್ದಾರಿ ಸಂಘವಾಗಿ ಮಾರ್ಪಡಿಸಲ್ಪಟ್ಟಿತು. ಬೆಂಗಳೂರು ಸೆಂಟ್ರಲ್ ಕೊಅಪರೇಟಿವ್ ಬ್ಯಾಂಕು ಬೇಕಾದಾಗ ದ್ರವ್ಯಸಹಾಯವನ್ನು ಮಾಡಿದುದರಿಂದಲೇ ಮಿತಿಯಿಲ್ಲದ ಜವಾಬ್ದಾರಿಯ ಸಂಘಗಳ ಸಂಖೆಯು ಹೆಚ್ಚುವುದಕ್ಕೆ ಕಾರಣವಾಯಿತು. ಸಂಘಗಳ ಸಂಖ್ಯೆಯು ಹೆಚ್ಚುವುದಕ್ಕೆ ಕಾರಣವಾಯಿತು. ಸಂಘಗಳ ಸಂಖ್ಯೆ ಹೆಚ್ಚಿದುದರಿಂದ ಹಿಂದಿನ ವರ್ಷಕಿಂತ ಈವರ್ಷ ಸೆಂಟ್ರಲ್ ಬ್ಯಾಂಕಿನ ಕಾರ್ಯಗಳೂ ಹೆಚ್ಚಿ ಅಭಿವೃದ್ಧಿಗೆ ಕಾರಣವುಂಟಾಯಿತು. ಈವರ್ಷ ೧೦ ಸಂಘಗಳಿಗೆ ೨೮,೬೫೫ ರೂ. ಗಳ ವರೆಗೂ ಬ್ಯಾಂಕಿನಿಂದ ಸಾಲ ಕೊಡಲಾಯಿತು ಮತ್ತು ೯೫೦೦ ರೂಪಾಯಿ ಬ್ಯಾಂಕಿಗೆ ವಾಪಸ್ಸು ಬಂದಿತು. ೧೯೧೧ ನೆಯ

[೩ನೆಯ ಪುಟವನ್ನು ನೋಡಿರಿ.]

ಮೈಸೂರ್ ಸ್ಟಾರ್

೧೯೧೧ನೆಯ ಇಸವಿ ಅಕ್ಟೋಬರ್ ತಾ|| ೨೩ ನೇ ಸೋಮವಾರ

ಮೈಸೂರ ಪ್ರಜಾಪ್ರತಿನಿಧಿ ಸಭೆಯು.

ಈ ಸಭೆಯು ೨೯ ನೆಯ ವರ್ಷದ ಕೂಟವು ಕಳೆದ ತಾ|| ೬ ನೆಯ ಶುಕ್ರವಾರ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಸಭಾಂಗಣದಲ್ಲಿ ಸೇರಿದ್ದಿತು. ಎತ್ತರವಾದ ಜಗತಿಯ ಮೇಲೆ ಏರ್ಪಡಿಸಿದ್ದ ಆಸನಗಳಲ್ಲಿ ದಿವಾನರು, ರೆಸಿಡೆಂಟರವರು, ಅ|| ರೆಸಿಡೆಂಟರ್‌ರು, ಶ್ರೀಮನ್ಮಹಾರಾಜರ ಪ್ರೈವೇಟ್‌ಸೆಕ್ರೆಟರಿ ಮೊದಲಾದ ಐರೋಪ್ಯಾತಿಥಿಗಳೂ, ಕೌನ್ಸಿಲರುಗಳೂ, ಚೀಫ್‌ಕೋರ್ಟ್‌ಜಡ್ಜಿಗಳು, ಎಲ್ಲ ಶಾಖಾಧಿಕಾರಿಗಳೂ, ಡಿಸ್ಟ್ರಿಕ್ಟ್‌ಗಳ ಡೆಪ್ಯುಟಿಕಮಿಷನರುಗಳೂ ಉದ್ಯೋಗದಿಂದ ನಿವೃತ್ತರಾಗಿರುವ ರಾ|| ಬ|| ಮ|| ಎ. ರಂಗಸ್ವಾಮಯ್ಯಂಗಾರರು, ಮ|| ಡಿ|| ಸೀತಾರಾಮರಾಯರು ಮೊದಲಾದ ದೊಡ್ಡಮನುಷ್ಯರುಗಳು ಕುಳಿತಿದ್ದರು. ಕೆಳಗಡೆ ಬಲಪಾರ್ಶ್ವದಲ್ಲಿ ಜ|| ಮತ್ತು ರೆ|| ಸೆಕ್ರೆಟರಿ ಮೊದಲಾದ ಗೌರ್ನಮೆಂಟ್‌ಸೆಕ್ರೆಟರಿಗಳೂ, ಎಡಪಾರ್ಶ್ವದಲ್ಲಿ ವೃತ್ತಪತ್ರಿಕೆಗಳ ಪ್ರತಿನಿಧಿಗಳೂ, ಮುಂಭಾಗದಲ್ಲಿ ಪ್ರಜಾಪ್ರತಿನಿಧಿಗಳೂ, ಉದ್ಯೋಗಿಕ ಮತ್ತು ಅನುದ್ಯೋಗಿಕಪ್ರೇಕ್ಷಕರೂ ಕುಳಿತಿದ್ದರು. ಈ ವರ್ಷ ೧೨೩ ಪ್ರತಿನಿಧಿಗಳು ಬಂದಿರುವರು. ದಿವಾನರ ಪರವಾಗಿ ಜ|| ಮತ್ತು ರೆ|| ಸೆಕ್ರೆಟರಿ ಮ|| ಬಾಲಸುಂದರಮಯ್ಯರ್‌ರವರು ದಿವಾನರುಪನ್ಯಾಸವನ್ನು ೧೨ ಗಂಟೆಗೆ ಸರಿಯಾಗಿ ಓದಲುಪಕ್ರಮಿಸಿ ೧ ಗಂಟೆಯೊಳಗೆ ಮುಗಿಸಿದರು. ಅನಂತರ ಕೋಲಾರದ ಚಿನ್ನದ ಗಣಿಗಳ ಬೋರ್ಡಿನವರ, ಮೈಸೂರ ಉತ್ತರದ ತೋಟಗಾರರ ಸಂಘದ, ಮೈಸೂರ ಸೀಮೆಯ ಮಹಮ್ಮದೀಯ ಸಂಘದ ಚಿತ್ರಕಲ್ ದುರ್ಗದ ಡಿ|| ಬೋರ್ಡು ಮತ್ತು ಹರಿಹರ ಸಬ್ ತಾ|| ಮ್ಯುನಸಿಪಾಲಿಟಿಯ ಮೆಂಬರುಗಳ ಪರವಾದ ವಿಜ್ಞಾಪನಪತ್ರಿಕೆಗಳು ಆಯಾ ಸಂಘದ ಪ್ರತಿನಿಧಿಗಳಿಂದೋದಲ್ಪಟ್ಟು ಒಪ್ಪಿಸಲ್ಪಟ್ಟವೇಲೆ ಅವುಗಳುತ್ತರವನ್ನು ಸೆಕ್ರೆಟರಿಯವರು ದಿವಾನರಬದಲು ಓದಿಹೇಳಿದರು. ಅಲ್ಲಿಗೆ ೧|| ಗಂಟೆಯಾಗಲು ರೆಸಿಡೆಂಟರು ದಿವಾನರ ಹಸ್ತದಿಂದಲೂ ಇತರ ಐರೋಪ್ಯರು ಸೆಕ್ರೆಟರಿಗಳಿಂದಲೂ ಪುಷ್ಪಮಾಲಿಕೆ ಮತ್ತು ಗುಚ್ಛಗಳನ್ನು ಸ್ವೀಕರಿಸಿ ತೆರಳಿದವೇಲೆ ಸೆಕ್ರೆಟರಿ ಮ|| ಬಿ. ರಾಮಸ್ವಾಮಯ್ಯನವರು ಕನ್ನಡದ ಉಪನ್ಯಾಸವನ್ನೋದಿ ಹೇಳಿದರು. (ಇದರ ಮುಖ್ಯಭಾಗವು ಮತ್ತೊಂದುಕಡೆ ಕೊಡಲ್ಪಟ್ಟಿದೆ.) ಅಷ್ಟು ಹೊತ್ತಿಗೆ ೨|| ಗಂಟೆಯು ಸಮಯವಾಗಲು ಸಭೆಯು ವಿಸರ್ಜಿಸಲ್ಪಟ್ಟಿತು. ತಾ|| ೭ ನೆಯ ಶನಿವಾರ ಮಧ್ಯಾಹ್ನ ೧೨ ಗಂಟೆಯಿಂದ ೫ ಗಂಟೆಯವರೆಗೂ, ಭಾನುವಾರ ಬೆಳಗ್ಗೆ ೮ ರಿಂದ ೧೦ ರ ವರೆಗೂ ಸಭೆ ಸೇರಿದ್ದು ಗೊತ್ತಾಗಿರುವ ಒಟ್ಟು ೪೫೮ ಸಾಮಾನ್ಯ ವಿಷಯ (ಜನರಲ್ ಸಬ್‌ಜಕ್ಟ್) ಗಳಲ್ಲಿ ೧೦೦ ವಿಷಯಗಳವರೆಗೆ ಚರ್ಚಿಸಲ್ಪಟ್ಟುವು. ಈ ದಿವಸದಿಂದ ಯಥಾಪ್ರಕಾರ ೧೨ ರಿಂದ ೫ ರ ವರೆಗೂ ಸಭೆಯು ಸೇರಿ ವಿಷಯಗಳು ಚರ್ಚಿಸಲ್ಪಡುವುವು.

ದಿವಾನರುಪನ್ಯಾಸದಲ್ಲಿ ಹೇಳಲ್ಪಟ್ಟಿರುವ ಆಯವ್ಯಯಗಳ ವಿಷಯವೆಲ್ಲವೂ ಸಂಸ್ಥಾನದ ಅರ್ಥಶಾಖೆಯ ಸೆಕ್ರೆಟರಿಗಳಿಂದ ಈಗ್ಗೆ ೧ ತಿಂಗಳ ಹಿಂದೆ ಪ್ರಕಟಿಸಲ್ಪಟ್ಟಿರುವ ಗೆಜೆಟ್ಟಿನ ವಿಶೇಷಪತ್ರಿಕೆಯಲ್ಲಿ ವಿಶದೀಕರಿಸಲ್ಪಟ್ಟಿದೆಯಲ್ಲದೆ, ಈ ಸ್ಟಾರ್ ಪತ್ರಿಕೆಯಲ್ಲೂ ತಕ್ಕಮಟ್ಟಿಗೆ ಪ್ರಸ್ತಾಪಿಸಲ್ಪಟ್ಟಿರುವುದರಿಂದ ಇಲ್ಲಿ ಪುನಃ ವಿಸ್ತರಿಸಿ ಹೇಳಬೇಕಾದಾವಶ್ಯಕತೆಯಿಲ್ಲವು. ಈ ವರ್ಷದಲ್ಲಿ ಮಳೆಬೆಳೆಯು ಚೆನ್ನಾಗಾಗಿ ಕಾಲಸ್ಥಿತಿಯು ಸುಭಿಕ್ಷವಾಗಿರುತ್ತದೆಂಬ ನಿರೀಕ್ಷಣೆಯಿಂದ ಒಟ್ಟು ೨೩೫೮೦೦೦೦ ರೂ. ಆಯವೂ, ೨೩೯೧೯೦೦೦ ರೂ. ವ್ಯಯವೂ ಆಗಬಹುದೆಂದು ಗುಣಿಸಲ್ಪಟ್ಟಿದೆ. ಈ ವೇಳೆ ಆಯಕ್ಕಿಂತಲೂ ವ್ಯಯವು ಹೆಚ್ಚಿರುವುದಕ್ಕೆ ವೈದ್ಯ, ವಿದ್ಯೆ ಮತ್ತು ಮರಾಮತ್ತು ಶಾಖೆಗಳಿಗೆ ಜನರುಪಯೋಗಕ್ಕಾಗಿ ಹೆಚ್ಚು ದ್ರವ್ಯವನ್ನು ಸಹಾಯಮಾಡಬೇಕಾಗಿ ಬಂದುದೂ, ಭರತಖಂಡದ ಚಕ್ರವರ್ತಿ ದಂಪತಿಗಳು ತಮ್ಮ ಕಿರೀಟಧಾರಣಮಹೋತ್ಸವದ ಉತ್ಕರ್ಷೆಯನ್ನು ಭಾರತಪ್ರಜೆಗಳಿಗೆ ಪ್ರತ್ಯಕ್ಷತಃ ಪ್ರದರ್ಶಿಸಲು ದಿಲ್ಲಿಗೆ ದಯಮಾಡಿಸಿ ದರ್ಬಾರನ್ನು ನಡೆಯಿಸುವ ಕಾಲದಲ್ಲಿ ಶ್ರೀಮನ್ಮಹಾರಾಜರವರು ತಕ್ಕ ಪರಿವಾರದೊಡನೆ ದಯಮಾಡಿಸಿ ಉತ್ಸವ ಸಮಾರಂಭದಲ್ಲಿ ಭಾಗಿಗಳಾಗಿ ತಮ್ಮ ಪದವಿಗೆ ತಕ್ಕಂತೆ ವಿನಿಯೋಗಮಾಡಲು ೭ ಲಕ್ಷ ರೂಪಾಯಿಗಳನ್ನೂ, ಮೈಸೂರು ದೇಶದ ಸಂಪದಭಿವೃದ್ಧಿಗಾಗೇರ್ಪಟ್ಟಿರುವ ಸಮಾಜದವರ ಕಾರ್ಯಗಳಿಗಾಗಿ ೧ ಲಕ್ಷ ರೂ. ಗಳನ್ನೂ ಕೊಡಬೇಕಾಗಿರುವುದು ಮುಖ್ಯ ಕಾರಣವೆಂದು ಗೊತ್ತಾಗುತ್ತದೆ. ಈ ಮೂರು ವಿಷಯಗಳೂ ಅತ್ಯಾವಶ್ಯಕವಾದುದರಿಂದ ಇವುಗಳಿಗೆ ಆಗಬೇಕಾದ ವ್ಯಯದಲ್ಲಿ ಕಡಿಮೆಮಾಡಲಾಗುತ್ತಿಲ್ಲವು. ಈ ಕಳೆದ ಕೆಲವು ವಾರಗಳಲ್ಲಿ ಮಳೆಯು ನಿರೀಕ್ಷಿಸಲ್ಪಟ್ಟಿದ್ದಷ್ಟು ವಿಶೇಷವಾಗಿ ಬರಲಿಲ್ಲವಾದರೂ, ಸಂಸ್ಥಾನದ ಅನೇಕ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಅಥವಾ ಅವಿಚ್ಛಿನ್ನವಾಗಿ ಅನಾವೃಷ್ಟಿಯು ಪ್ರಾಪ್ತವಾಗಿಲ್ಲ. ಇದಲ್ಲದೆ ಹಿಂದಣ ಎರಡುವರ್ಷಗಳಲ್ಲಿ ಉತ್ಕೃಷ್ಟವಾದ ಫಸಲು ಆಗಿರುವುದರಿಂದ ಜನರು ಸಾಮಾನ್ಯವಾಗಿ ದವಸವನ್ನು ದಾಸ್ತಾ ಇಟ್ಟಿರಬಹುದಾದಕಾರಣ ಬಾಳ್ತಿ ವರ್ಷದಲ್ಲಿ ಈ ಸಂಸ್ಥಾನಕ್ಕೆ ದುರ್ಭಿಕ್ಷವು ಪ್ರಾಪ್ತವಾಗುವುದೆಂದು ಭಯಪಡಬೇಕಾದುದಿಲ್ಲ." ಎಂದು ದಿವಾನರು ತಮ್ಮುಪನ್ಯಾಸದಲ್ಲಿ ತಿಳಿಸಿರುತ್ತಾರೆ. ಈಗ್ಗೆ ೧-೨ ವಾರಗಳಿಂದೀಚೆಗೆ ಮಳೆಯು ಪ್ರಾಯಶಃ ಸಂಸ್ಥಾನದ ಎಲ್ಲ ಕಡೆಯೂ ಆಗಿರುವುದರಿಂದ ದುರ್ಭಿಕ್ಷಪ್ರಾಪ್ತಿಯ ಭಯವಿಲ್ಲವೆಂದು ಹೇಳಬಹುದಾಗಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಮಳೆಬೆಳೆಯು ಯಥೇಚ್ಛವಾಗಿ ಆಗಿ ರೈತರು ದವಸವನ್ನು ಶೇಖರಿಸಿಟ್ಟಿರುವುದರಿಂದ, ಕ್ಷಾಮವು ಪ್ರಾಪ್ತವಾಗುವ ಭಯವಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಯಾಕೆಂದರೆ ಲೋಹಮಾರ್ಗದ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಶೇಖರಿಸಲ್ಪಟ್ಟಿದ್ದ ಧಾನ್ಯವು ಒಂದು ಸೀಮೆಯಿಂದ ಮತ್ತೊಂದು ಸೀಮೆಗೆ ಸಾಗಿಹೋಗಲವಕಾಶವಿಲ್ಲದೆ ಇದ್ದೆಡೆಯಲ್ಲೇ ನಿಂತು ಧಾರಣೆಯು ಹೆಚ್ಚಲು ಮಾರ್ಗವಿಲ್ಲದಿದ್ದುದರಿಂದ ಅಂತಹ ಭಯಕ್ಕಾಸ್ಪದವಿರಲಿಲ್ಲವು. ಈಗಲಾದರೋ ಎಲ್ಲ ಕಡೆಗೂ ಲೋಹಮಾರ್ಗದಾನುಕೂಲ್ಯವುಂಟಾಗಿ ಧಾನ್ಯವು ದೊರೆಯದಿರುವ ಪ್ರಾಂತಕ್ಕೆ ಸರಾಗವಾಗಿ ಸಾಗಿಹೋಗುವುದರಿಂದ ದವಸವನ್ನು ಕೂಡಿಟ್ಟಿರುವವರು ವಿಶೇಷ ಲಾಭವನ್ನು ಹೊಂದಿ ಪುಷ್ಟಿವಂತರಾಗಲು ಮಾರ್ಗವಿರುವುದೇ ಹೊರತು, ಬರಿಯ ಶೇಖರದಿಂದ ಬೆಲೆಯು ಕಡಿಮೆಯಾಗುವುದಿಲ್ಲವು. ಎಲ್ಲಿಯವರೆಗೆ ಆಹಾರಪದಾರ್ಥಗಳ ಬೆಲೆಯು ಏರದೆ ಬಡಬಗ್ಗರು ಕೊಂಡು ತಿನ್ನಲು ಸಾಧ್ಯವಿರುವುದೋ ಅಲ್ಲಿಯವರೆಗೆ ಕ್ಷಾಮಪ್ರಾಪ್ತಿಯ ಭಯವಿಲ್ಲವೆನ್ನಬಹುದು.

ಸರ್ಕಾರಿಯುದ್ಯೋಗಸ್ಥರು ತಮ್ಮ ಸಂಬಳದಲ್ಲಿ ೧೦೦ ಕ್ಕೆ ೧೦ ರಂತೆಯೂ ಪ್ರತಿತಿಂಗಳಲ್ಲೂ ೫೦ ರೂ. ಗಳಿಗೆ ಮೀರದಂತೆಯೂ ಆಪದ್ಧನದ (ಲೈಫ್ ಇನ್ಶ್ಯೂರೆನ್ಸ್) ಫಂಡಿಗೆ ಹಣವನ್ನು ಕೊಡಬೇಕೆಂದಿದ್ದ ಪದ್ಧತಿಯನ್ನು ತಪ್ಪಿಸಿ, ಪ್ರತಿತಿಂಗಳಲ್ಲೂ ೫೦ ರೂ ಗೆಮೀರದಂತೆ ೧೦೦ ಕ್ಕೆ ೧೦ ಕ್ಕಿಂತ ಹೆಚ್ಚಾಗಿ ತಮಗಿಷ್ಟವಿದ್ದಷ್ಟನ್ನು ಕೊಟ್ಟು ಹೆಚ್ಚು ಸಹಾಯದ್ರವ್ಯವನ್ನು ಹೊಂದಲು ಅವಕಾಶವನ್ನುಂಟುಮಾಡಿಕೊಟ್ಟಿರುವುದೂ, ಇನಾಂದಾರರು ತಮ್ಮ ರೈತರಿಂದ ಕಂದಾಯವನ್ನು ಬರಮಾಡಿಸಿಕೊಳ್ಳುವಲ್ಲಿ ಈಗಗಿಂತಲೂ ಹೆಚ್ಚು ಸೌಲಭ್ಯವನ್ನುಂಟುಮಾಡಿಕೊಡುವುದಕ್ಕಾಗಿ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಕೆಲಭಾಗವನ್ನು ತಿದ್ದುಪಡಿಮಾಡಲು ಮಸೂದೆಯನ್ನು ಮಾಡಿರುವುದೂ ಆಯಾ ಜನರಿಗೆ ಉಪಕಾರವಾಗಿರುತ್ತದೆ. ಕಳೆದ ಮಾರ್ಚಿಯಲ್ಲಾದ ಜನಪರಿಗಣನೆಯಿಂದ ಒಟ್ಟು ಪ್ರಜಾಸಂಖ್ಯೆಯು ೫೮೦೬೧೯೩ ಎಂದು ತಿಳಿಯಬರುತ್ತದೆ. ಇಷ್ಟು ಜನರಲ್ಲಿ ೧೦೦೦ ಕ್ಕೆ ೧೮.೨೫ ರಂತೆ ಜನನವೂ, ೧೯.೯೨ ರಂತೆ ಮರಣವೂ ಆಗಿರುವುದೆಂದು ತಿಳಿಯಲ್ಪಟ್ಟಿದೆ. ಜನನಕ್ಕಿಂತಲೂ ಮರಣವು ಹೆಚ್ಚಾಗಿರುವುದು ಶೋಚನೀಯವಾಗಿದೆ. ಹೀಗೆ ಮರಣಸಂಖ್ಯೆಯು ಹೆಚ್ಚುವುದಾದರೆ, ಕೆಲ ವರ್ಷಗಳಲ್ಲಿ ಜನಸಂಖ್ಯೆಯು ಬಹು ಕಡಿಮೆಯಾಗುವುದರಲ್ಲಿ ಅಭ್ಯಂತರವಿಲ್ಲವು. ಈಗ ಮರಣವಾಗಿರುವುದರಲ್ಲೆಲ್ಲ ಪ್ರಾಯಶಃ ಪ್ಲೇಗಿನಂತಹ ಸಾಂಕ್ರಾಮಿಕ ರೋಗದಿಂದಲೇ ಹೆಚ್ಚಾಗಿರುವುದೆಂದು ಗೊತ್ತಾಗುತ್ತದೆ. ನಮ್ಮ ಸರಕಾರದವರು ಸಂಸ್ಥಾನದ ಸಂಪದಭಿವೃದ್ಧಿಯನ್ನು ಮಾಡಬೇಕೆಂದು ನಾನಾಪ್ರಯತ್ನಗಳನ್ನು ಮಾಡುತ್ತಿರುವರಷ್ಟೆ. ಅವರ ಅಭಿಪ್ರಾಯದಂತೆ ದೇಶದ ಸಂಪದಭಿವೃದ್ಧಿಯಾಗಬೇಕಾದಲ್ಲಿ ಮೊದಲು ಜನಾಭಿವೃದ್ಧಿಯಾಗಬೇಕಾದುದಾವಶ್ಯಕವು. ಇದಕ್ಕೆ ಕ್ಷುದ್ರರೋಗದ ಮುಖ್ಯವಾಗಿ ಪ್ಲೇಗಿನ ಬಾಧೆಯು ಅಡಚಣೆಯಾಗಿರುವುದು. ಇದರ ನಿವಾರಣಾರ್ಥವಾಗಿ ಸರಕಾರದವರು ರೋಗ ತಗಲಿದ ಕಡೆಯಲ್ಲಿ ಜನರನ್ನು ಮನೆಯಿಂದ ಹೊರಡಿಸುವುದು, ಅವರಿಗೆ ಪ್ಲೇಗು ಸಿಡುಬನ್ನು ಹಾಕಿಸುವುದು ಈ ಪ್ರಯತ್ನಗಳನ್ನು ಮಾಡುತ್ತಿರುವರಾದರೂ ರೋಗ ತಗುಲಿದವರಿಗೆ ವೈದ್ಯರಮೂಲಕ ಚಿಕಿತ್ಸೆಯನ್ನು ಮಾಡಿಸುವಂತಾದರೆ ಈಗಗಿಂತಲೂ ಹೆಚ್ಚು ಪ್ರಯೋಜನವಾಗಿ ಮರಣಸಂಖ್ಯೆಯು ತಕ್ಕಮಟ್ಟಿಗೆ ಕಡಿಮೆಯಾಗಬಹುದೆಂದು ತೋರುತ್ತದೆ. ಈ ಕಾರ್ಯಕ್ಕಾಗಿ ಇನ್ನೂ ಹೆಚ್ಚು ದ್ರವ್ಯವನ್ನು ವ್ಯಯಮಾಡಿ, ಹೆಚ್ಚು ವೈದ್ಯರನ್ನು ನಿಯಮಿಸುವುದು ಆವಶ್ಯಕವಾಗಿದೆ. ಪ್ಲೇಗು ಸಿಡುಬನ್ನು ಹಾಕಿಸಿಕೊಳ್ಳುತಕ್ಕ ಬಡಜನರಿಗೆ ಸರ್ಕಾರದವರು ದುಡ್ಡನ್ನು ಕೊಡುವ ಏರ್ಪಾಟನ್ನಿಟ್ಟಿದ್ದರೂ, ಆಯಾ ಸ್ಥಳದ ಪ್ರಮುಖರು ಈ ಕಾರ್ಯದಲ್ಲಿ ಮುಂದೆ ಬಂದು ಜನರಿಗೆ ಪ್ರೋತ್ಸಾಹವನ್ನು ಕೊಡುವುದರಿಂದಾಗುವಷ್ಟು ಪ್ರಯೋಜನವು ಸರ್ಕಾರದ ಪ್ರಯತ್ನದಿಂದಲೇ ಆಗುವುದಿಲ್ಲವು. ಆದರೆ ಹಾಗೆ ಮುಂದಾಳಾಗಿ ನಿಂತು ಬಹುಜನರು ಸಿಡುಬನ್ನು ಹಾಕಿಸಿಕೊಳ್ಳುವಂತೆ ಪ್ರಯತ್ನಿಸುವಂತಹ ಪ್ರಮುಖರಿಗೆ ಸರ್ಕಾರದಿಂದ ಯಾವುದಾದರೊಂದು ಪ್ರಶಸ್ತಿಯೋ ಅಥವಾ ಮತ್ತಾವ ವಿಧವಾದ ಮರ್ಯಾದೆಯೋ ದೊರೆತಲ್ಲಿ ಅವರು ಉತ್ಸಾಹಭರಿತರಾಗಿ ಇನ್ನೂ ಹೆಚ್ಚು ಶ್ರದ್ಧೆಯನ್ನು ವಹಿಸುವರಲ್ಲದೆ ಇತರರೂ ಅವಿಧವಾದ ಮರ್ಯಾದೆಯನ್ನು ಹೊಂದಬೇಕೆಂಬ ಅಭಿಲಾಷೆಯಿಂದ ತಾವುತಾವಾಗಿ ಸ್ಪರ್ಧಿಸಿ, ಈ ಕಾರ್ಯದಲ್ಲುದ್ಯುಕ್ತರಾಗುವರು. ಇದರಿಂದ ಸರ್ಕಾರದವರ ಉದ್ದೇಶವು ನಿರಾಯಾಸವಾಗಿ ಜರುಗುವುದಲ್ಲದೆ, ಅನೇಕ ಜನರು ಸಿಡುಬನ್ನು ಹಾಕಿಸಿಕೊಂಡು ಪ್ಲೇಗುಮೃತ್ಯುವಿನ ಬಾಯಿಗೆ ತುತ್ತಾಗದೆ ತಪ್ಪಿಸಿಕೊಳ್ಳುವರು. ಅದುಕಾರಣ ನಮ್ಮ ಸರಕಾರದವರು ಈ ವಿಚಾರದಲ್ಲಿ ಅಗತ್ಯವಾಗಿ ಪರ್ಯಾಲೋಚಿಸಬೇಕಾಗಿದೆ.

ಸರ್ಕಾರದವರು ತನಿಖಾದಾಯದ ಮೇಲೆ ದೃಷ್ಟಿಯನ್ನಿಡದೆ ಪ್ರಜೆಗಳ ದುರ್ವ್ಯಸನಕ್ಕಾಕರವಾದ ಮಾದಕಪದಾರ್ಥಗಳಲ್ಲಿ ಗಾಂಜಾದ ಮೇಲಣ ತೆರಿಗೆಯನ್ನು ೫ ರೂ. ಯಿಂದ ೭|| ರೂ. ಗೆ ಹೆಚ್ಚಿಸಿ, ಹೆಂಡವನ್ನಿಳಿಸುವ ಮರಗಳ ಸಂಖ್ಯೆಯನ್ನು ಕಡಿಮೆಮಾಡಿದುದರಿಂದ ಈ ಶಾಖೆಯುತ್ಪತ್ತಿಯು ಕಳೆದವರ್ಷಕ್ಕಿಂತ ಈ ವರ್ಷದಲ್ಲಿ ೧೩೬೦೩೧ ರೂ. ಕಡಿಮೆಯಾಗಿರುವುದು ಸಂತೋಷಪ್ರದವಾಗಿದೆ. ಮತ್ತು ಇದೇ ರೀತಿ ಈ ಶಾಖೆಯುತ್ಪತ್ತಿಯು ಕ್ರಮೇಣ ಕಡಿಮೆಯಾಗಿ ಜನರ ದುರ್ವ್ಯಸನವು ತಪ್ಪುವಂತಾಗಲೆಂದು ನಿರೀಕ್ಷಿಸುತ್ತೇವೆ. ಗಂಧದ ಮರದ ಮಾರಾಟವು ಹಿಂದಣವರ್ಷಕ್ಕಿಂತ ಪ್ರಸಕ್ತವರ್ಷದಲ್ಲಿ ಹೆಚ್ಚಾಗಿ ನಡೆದುದರಿಂದ ಕಾಡುಶಾಖೆಯುತ್ಪತ್ತಿಯು ಹೆಚ್ಚಾಗಿರುವುದು. ಕೋಲಾರದ ಚಿನ್ನದ ಗಣಿಗಳ ಗುತ್ತಿಗೆಯು ಇನ್ನೂ ೩೦ ವರ್ಷಗಳ ವರೆಗೆ ಕೊಡಲ್ಪಟ್ಟುದರಿಂದ ಹಿಂದೆ ಬರುತ್ತಿದ್ದ ೧೦೦ ಕ್ಕೆ ೫ ರಷ್ಟು ರಾಜಾದಾಯವಲ್ಲದೆ ೧೦೦ಕ್ಕೆ ೨|| ಯಷ್ಟು ಹೆಚ್ಚಾಗಿ ಸಲ್ಲುವಂತಾಗಿರುವುದು. ಬೇಸಿಗೆಯಲ್ಲಿ ಸಂಸ್ಥಾನದ ಯಾವಾವ ಭಾಗದಲ್ಲಿ ಕುಡಿಯುವ ಮತ್ತು ಇತರ ಬಳಕೆಯ ನೀರಿಗೆ ಕುಗ್ರಾಮವಾಗಿರುವುದೋ ಅಂತಹ ಭಾಗಗಳಲ್ಲಿ ನೀರು ದೊರೆಯುವ ಸ್ಥಳವನ್ನೂ, ಉಪಾಯವನ್ನೂ ಕಂಡು ಹಿಡಿಯುವ ಪ್ರಯತ್ನವನ್ನು ನಡೆಸಿರುವುದು ಬಹು ಪ್ರಯೋಜನಕರವಾಗಿದೆ. ಈ ವರ್ಷದಲ್ಲಿ ಮರಹಮತ್ತು ಶಾಖಾ ಕೆಲಸಗಳಿಗಾಗಿ ಒಟ್ಟು ವ್ಯಯವಾಗಿರುವ ೩೩ ಲಕ್ಷ ರೂ. ಗಳಲ್ಲಿ ನೀರಾವರಿಯ ಕೆಲಸಗಳಿಗಾಗಿ ೭|| ಲಕ್ಷ ರೂ, ಸಿವಿಲ್ ಮತ್ತು ಮಿಲ್ಟರಿ ಕಟ್ಟಡಗಳಿಗಾಗಿ ೨೮|| ಲಕ್ಷ ರೂ. ವ್ಯಯವಾಗಿರುತ್ತದೆಂದು ತಿಳಿಯಲ್ಪಟ್ಟಿದೆ. ನೀರಾವರಿ ಕೆಲಸಗಳಿಂದ ಬೇಸಾಯವು ಅಭಿವೃದ್ಧಿಯಾಗಿ ತನ್ಮೂಲಕ ಸಂಸ್ಥಾನದುತ್ಪತ್ತಿಯು ಹೆಚ್ಚುವುದರಿಂದ ಆ ಕೆಲಸಗಳಿಗೆ ಇನ್ನೂ ಹೆಚ್ಚು ದ್ರವ್ಯ ವ್ಯಯವನ್ನು ಮಾಡಬೇಕಾದುದಾವಶ್ಯಕವು. ಮಾರಿಕಣಿವೆಯ ಕೆರೆಗೆ ಈಗಿರುವ ಕಾಲುವೆಗಳಲ್ಲದೆ ೮|| ಲಕ್ಷ ರೂ. ವ್ಯಯದಿಂದ ಮತ್ತೊಂದು ದೊಡ್ಡ ಕಾಲುವೆಯನ್ನು ಮಾಡಬೇಕೆಂದು ಆಲೋಚಿಸಲ್ಪಟ್ಟಿರುತ್ತದೆ. ಈಗಿರುವ ನಾಲೆಗಳ ಕೆಳಗಿನ ಭೂಮಿಯೆಲ್ಲವೂ ಸಾಗುವಳಿಯಾಗುವಂತೆಯೂ, ಅಲ್ಲಿ ಪ್ರಾಪ್ತವಾಗಿರುವ ಮಲೇರಿಯಾ ಜ್ವರವು ನಿವಾರಣೆಯಾಗುವಂತೆಯೂ ಮೊದಲು ಮಾಡುವುದು ಆವಶ್ಯಕವು. ಅದನ್ನು ಬಿಟ್ಟು ಹೊಸದಾಗಿ ಕಾಲುವೆಗಳನ್ನು ಮಾಡುವುದರಿಂದ ಈವರೆಗೆ ಆ ಕೆರೆಗಾಗಿ ಮುಚ್ಚಿಸಲ್ಪಟ್ಟಿರುವ ೪೦-೫೦ ಲಕ್ಷ ರೂ. ಜತೆಗೆ ಈಗ ಹೊಸದಾಗಿ ಮುಚ್ಚಿಸುವ ದುಡ್ಡು ಸಾರ್ಥಕವಿಲ್ಲದಂತಾಗುವುದು. ಕನ್ನಂಬಾಡಿಯ ಹತ್ತಿರ ಕಾವೇರೀ ನದಿ ತೀರದಲ್ಲಿ ಒಂದು ದೊಡ್ಡ ಜಲಾಶಯವನ್ನು ಕಟ್ಟಿಸುವ ಪ್ರಯತ್ನವು ನಿಂತು ಹೋಯಿತೆಂದು ಒಂದು ವದಂತಿಯಿದ್ದಿತು. ಆದರೆ ಆ ಕೆರೆಯನ್ನು ಕಟ್ಟುವ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದೆಂದು ದಿವಾನರು ಉಪನ್ಯಾಸದಲ್ಲಿ ಹೇಳಿರುವುದರಿಂದ, ಆ ಪ್ರಯತ್ನವು ಕೈಬಿಟ್ಟಿಲ್ಲವೆಂದು ವ್ಯಕ್ತವಾಗುವುದು. ಮೈಸೂರ ದೇಶದ ಸಂಪದಭ್ಯುದಯಕ್ಕೆ ಲೋಹಮಾರ್ಗಾಭಿವೃದ್ಧಿಯಾವಶ್ಯಕವಾದುದರಿಂದ, ಸರ್ಕಾರದವರ ಪರ್ಯಾಲೋಚನೆಯಲ್ಲಿರುವ ಲೋಹಮಾರ್ಗಗಳು ಶೀಘ್ರವಾಗಿ ಹಾಕಲ್ಪಡುವಂತಾಗಬೇಕು. ವೈದ್ಯಶಾಖೆಯಲ್ಲಿ ಸರ್ಜನರುಗಳಷ್ಟೇ ಕೆಲಸಮಾಡುತ್ತಿರುವ ಆಸ್ಪಿಟಲ್ ಅಸಿಸ್ಟೆಂಟರುಗಳು ಇತಃಪರ ಸಬ್ ಅಸಿಸ್ಟೆಂಟ್ ಸರ್ಜನರಾಗಿ ಕರೆಯಲ್ಪಡತಕ್ಕದ್ದೆಂದು ಅಪ್ಪಣೆಮಾಡಿ ಅವರ ಸಂಬಳವನ್ನು ೨೫ ರೂ. ಯಿಂದ ೩೦ ಕ್ಕೆ ಹೆಚ್ಚಿಸಿರುವುದು ಯುಕ್ತವಾಗಿದೆ. ಸರ್ಕಾರಿಯ ಮುದ್ರಣಾಲಯದವರು ಪರದೇಶದಲ್ಲಾದ ಕಾಗದ ಮತ್ತು ಲೇಖನ ಸಾಮಗ್ರಿಗಳನ್ನು ೨೫೦೦೦ ರೂ. ವರೆಗೆ ಮಾತ್ರ ಉಪಯೋಗಿಸಿ, ಭರತಖಂಡದಲ್ಲಾದುವುಗಳನ್ನು ೬೫೦೦೦ ರೂ. ವರೆಗುಪಯೋಗಿಸಿರುವುದು ಸಂತೋಷವೇ ಸರಿ. ಇದರಂತೆ ಇತರ ಶಾಖೆಯವರೂ ಸ್ವದೇಶದಲ್ಲಾದ ಪದಾರ್ಥಗಳನ್ನು ಉಪಯೋಗಿಸುವಂತಾದರೆ, ಸ್ವದೇಶವಸ್ತುನಿರ್ಮಾಣಕ್ಕೆ ಪ್ರೋತ್ಸಾಹವುಂಟಾಗುವುದಲ್ಲದೆ, ಸಂಪದಭಿವೃದ್ಧಿಗಾಗೇರ್ಪಟ್ಟಿರುವ ಸಮಾಜದವರ ಉದ್ದೇಶವೂ ತಕ್ಕಮಟ್ಟಿಗೆ ನೆರವೇರಿದಂತಾಗುವುದು. ವ್ಯವಸಾಯದ ಶಾಖೆಯವರು ಬೇಸಾಯ ಮತ್ತು ಕೈಗಾರಿಕೆಯ ಕೆಲಸಗಳಿಗೆ ಉಪಯುಕ್ತವಾದ ಯಂತ್ರಗಳನ್ನೂ, ಬಿತ್ತನೆಯ ಕಾಳನ್ನೂ ತರಿಸಿ ಪರೀಕ್ಷಿಸುತ್ತಿರುವುದೂ, ಅಡಿಕೆ ಮರಗಳಿಗೋ, ಜೋಳ, ಉರುಳಿಗೆಡ್ಡೆ ಮೊದಲಾದುವುಗಳಿಗೆ ತಗಲುವ ರೋಗವನ್ನು ಪರೀಕ್ಷಿಸಿ ಅದರ ನಿವಾರಣೋಪಾಯವನ್ನು ಕಂಡುಹಿಡಿಯುವ ಪ್ರಯತ್ನಗಳಿಂದ ರೈತರಿಗೆ ತಕ್ಕಮಟ್ಟಿಗುಪಯೋಗವಾಗುವುದು. ಸಂಸ್ಥಾನದಲ್ಲಿ ಒಟ್ಟು ಸರ್ಕಾರಿಯ ಪಾಠಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿಯೇ ಇದ್ದು ಬಾಲಬಾಲಿಕೆಯರ ವಿದ್ಯಾಭ್ಯಾಸವು ತೃಪ್ತಿಕರವಾಗಿ ನಡೆದಿರುತ್ತದೆ. ದಿಲ್ಲಿಯಲ್ಲಿ ಬರುವ ಡಿಸೆಂಬರ್ ತಿಂಗಳಲ್ಲಿ ಜರಗುವ ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಈ ಸಂಸ್ಥಾನದ ಎಲ್ಲ ಭಾಗಗಳಲ್ಲಿಯೂ ಉತ್ಸವ ಪರಂಪರೆಗಳನ್ನು ನಡೆಯಿಸತಕ್ಕದೆಂದು ಅಜ್ಞಾಪಿಸಿರುವುದಲ್ಲದೆ, ಸಾರ್ವಭೌಮರವರಲ್ಲಿಯೂ, ಅವರ ಪ್ರಭುತ್ವದಲ್ಲಿಯೂ ಈ ಸಂಸ್ಥಾನದಲ್ಲಿರುವ ಸಮಸ್ತ ಪ್ರಜೆಗಳೂ ತಮ್ಮಲ್ಲಿ ನಿಸ್ಸಂದೇಹವಾಗಿ ನೆಲೆಗೊಂಡಿರುವ ರಾಜಭಕ್ತಿ ವಿಶ್ವಾಸಗಳನ್ನು ವ್ಯಕ್ತಪಡಿಸುವುದಕ್ಕೆ ಆಯಾಸ್ಥಳದ ಉತ್ಸವ ವೈಭವಗಳಲ್ಲಿ ನಿರತರಾಗುವರೆಂದು ಶ್ರೀಮನ್ಮಹಾರಾಜರವರು ದೃಢವಾಗಿ ನಂಬಿರುತ್ತಾರೆ" ಎಂದು ದಿವಾನರು ತಮ್ಮ ಉಪನ್ಯಾಸದ ಕಡೆಯಲ್ಲಿ ತಿಳಿಸಿರುವರು. ರಾಜಭಕ್ತಿ, ವಿಶ್ವಾಸಕ್ಕೆ ತವರುಮನೆಯಾಗಿರುವ ಈ ಮೈಸೂರ ದೇಶೀಯರು ಆ ಮಂಗಳಕರವೂ,ಅಭೂತಪೂರ್ವವೂ ಆದ ಉತ್ಸವಸಮಾರಂಭಗಳಲ್ಲಿ ಭಾಗಿಗಳಾಗಿ ತಮ್ಮ ಆನಂದಾತಿಶಯವನ್ನೂ, ನಿಸರ್ಗವಾದ ರಾಜಭಕ್ತಿಯನ್ನೂ ಪ್ರದರ್ಶಿಸಿ, ಶ್ರೀಮನ್ಮಹಾರಾಜರವರ ನಂಬುಗೆಯನ್ನು ಸಾರ್ಥಕಪಡಿಸುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲವು.

ವಸ್ತುಪ್ರದರ್ಶನವು.

ಈ ವರ್ಷ ಪ್ರದರ್ಶನಕ್ಕಾಗಿ ಬಂದಿರುವ ಪದಾರ್ಥಗಳಲ್ಲಿ ನೂಲಿನ ಮತ್ತು ರೇಷ್ಮೆಯ ಬಟ್ಟೆಗಳೇ ವಿಶೇಷವಾಗಿವೆ. ಬರ್ಮಾದಿಂದ ಬಂದಿರುವ ಪದಾರ್ಥಗಳಲ್ಲಿ ದಂತದ ಮೇಲೂ ತೆಂಗಿನವಾಟೆಯಮೇಲೂ ಮಾಡಿರುವ ಚಿತ್ರಕೆಲಸವು ಪ್ರೇಕ್ಷಣೀಯವಾಗಿದೆ. ಮಾರೀಕಣಿವೆಯಲ್ಲಿ ನದಿಗೆ ದೊಡ್ಡ ಅಣೆಯನ್ನು ಕಟ್ಟಿ ಕೆರೆಯನ್ನಾಗಿ ಮಾಡಿ ಕಾಲುವೆಗಳದ್ವಾರಾ ಗದ್ದೆಗಳಿಗೆ ನೀರನ್ನು ಬಿಡುವ ಕ್ರಮವನ್ನು ರಾಜಧಾನಿಯ ಇಂಜನಿಯರಿಂಗ್ ಸ್ಕೂಲಿನ ಹೆಡ್ಮಾಸ್ಟರ್ ಮ|| ಬಿ. ಸಿ. ಶ್ರೀನಿವಾಸಯ್ಯಂಗಾರರು ಮಣ್ಣಿನಿಂದ ಮಾಡಿ ತೋರಿಸಿರುವುದೂ, ಕಾಡು ಶಾಖೆಯವರು ಹೆಗ್ಗಡದೇವನಕೋಟೆ ಮೊದಲಾದ ಕಾಡುಗಳಲ್ಲಿ ಹುಲಿಯ ಬೇಂಟೆಯಾಡುವುದನ್ನೂ, ಕಾಕನಕೋಟೆಯಲ್ಲಿ ಕಾಡುಜನರು ಆನೆಗಳ ಮಂದೆಯನ್ನು ಕೊಪ್ಪಕ್ಕೆ ಕೆಡವುವುದು, ಹಳೆಯಾನೆಗಳ ಸಹಾಯದಿಂದ ಹೊಸ ಆನೆಗಳ ಕಾಲಿಗೆ ಹಗ್ಗವನ್ನು ಬಿಗಿದು ಪಳಗಿಸುವುದು, ತೇಗದ ಮರಗಳನ್ನು ಕಡಿಯುವಲ್ಲಿ ಸಾಗಿಸುವುದು ಮತ್ತು ಆನೆಗಳ ಮೂಲಕ ಎಳೆಯಿಸುವುದು ಮೊದಲಾದುವನ್ನೂ ಚೆನ್ನಾಗಿ ತೋರಿಸಿರುವರು. ಇವನ್ನೋಡುವುದರಿಂದ ಆಯಾ ಸ್ಥಳಗಳಿಗೆ ಹೋಗಿ ಪ್ರತ್ಯಕ್ಷವಾಗಿ ನೋಡಿದಷ್ಟನುಭವವಾಗುವುದರಲ್ಲಿ ಸಂದೇಹವಿಲ್ಲವು. ಸ್ತ್ರೀಯರು ರಾಜಾ ರವಿವರ್ಮರವರಿಂದ ಬರೆಯಲ್ಪಟ್ಟಿರುವ ಚಿತ್ರಪಟಗಳಲ್ಲಿಯ ಸ್ತ್ರೀ ಪುರುಷ ಚಿತ್ರಗಳಿಗೆ ಉಡುಪುಗಳನ್ನೂ, ಆಭರಣಗಳನ್ನೂ ಧರಿಸುವಲ್ಲಿ ವಿಶೇಷ ಕೌಶಲ್ಯವನ್ನು ತೋರಿಸಿರುವರು. ಆದರೆ ಅವುಗಳಲ್ಲಿ ಕೆಲ ಯೋಗ್ಯವಾದುವುಗಳಿಗೆ ಬಹುಮಾನವು ದೊರೆಯದೆ ಸಾಮಾನ್ಯವಾದುವುಗಳಿಗೂ ಸಹ ಬಹುಮಾನವು ದೊರೆದಿರುವುದನ್ನೋಡಿದರೆ, ಈ ಹಸ್ತಕೌಶಲ್ಯವನ್ನು ಪರೀಕ್ಷಿಸಿ ಬಹುಮಾನವನ್ನು ವಿನಿಯೋಗಿಸಲು ನಿಯಮಿತರಾದವರ ದೃಷ್ಟಿಗೆ ಅವು ಬೀಳಲಿಲ್ಲವೆಂದು ಹೇಳಬಹುದು. ಇದರಂತೆಯೇ ಅರ್ಹವಾದ ಇತರ ಪದಾರ್ಥಗಳಿಗೂ ಬಹುಮಾನಗಳು ಕೊಡಲ್ಪಡಲಿಲ್ಲವೆಂಬ ದೂರನ್ನೂ ಕೇಳುತ್ತೇವೆ. ಪ್ರದರ್ಶಕರು ಪದಾರ್ಥಗಳ ನಿರ್ಮಾಣದಲ್ಲಾಗಲಿ ಅಥವಾ ಶೇಖರದಲ್ಲಾಗಲಿ ತಾವು ವಹಿಸುವ ಅರ್ಥಶ್ರಮ ಮತ್ತು ದೇಹಶ್ರಮಕ್ಕೆ ತಕ್ಕಂತೆ ದ್ರವ್ಯೋತ್ಪತ್ತಿಯಾಗುತ್ತದೆಂಬ ನಿರೀಕ್ಷಣೆಯಿಂದ ಈ ಕಾರ್ಯದಲ್ಲುಜ್ಜುಗಿಸದೆ ತಮ್ಮ ಪದಾರ್ಥಗಳಿಗೆ ತಕ್ಕ ಬಹುಮಾನಗಳು ದೊರೆತಲ್ಲಿ ತಮ್ಮ ಶ್ರಮವು ಸಾರ್ಥಕವಾಗುವುದೆಂಬಭಿಲಾಷೆಯಿಂದ ಪ್ರದರ್ಶನಕ್ಕೆ ಪದಾರ್ಥಗಳನ್ನು ಕಳುಹಿಸತಕ್ಕವರಾಗಿರುವರು. ಇಂತಹದುದರಲ್ಲಿ ಪ್ರದರ್ಶಕರ ಶ್ರಮಕ್ಕೆ ತಕ್ಕ ಬಹುಮಾನವು ದೊರೆಯದೆ ಹೋದಲ್ಲಿ ಅವರು ನಿರುತ್ಸಾಹಿಗಳಾಗಿ ಮುಂದೆ ಇಂತಹ ಪ್ರಯತ್ನಗಳನ್ನು ಕೈಗೊಳ್ಳದಂತಾಗುವುದೆಂದೂ ಮತ್ತು ಸರ್ಕಾರದವರು ಯಾವ ಉದ್ದೇಶದಿಂದ ಪ್ರತಿವರ್ಷದಲ್ಲೂ ೨೫೦೦೦ ರೂ. ಗಳ ಮೇಲೆ ವ್ಯಯಮಾಡುತ್ತಾರೆಯೋ ಅಂತಹ ಉದ್ದೇಶವು ಸಾರ್ಥಕವಾಗಲಾರದೆಂದೂ ಹೇಳಬೇಕಾದುದಿಲ್ಲವು. ಅದುಕಾರಣ ಪದಾರ್ಥಗಳ ಯೋಗ್ಯತೆಯನ್ನು ವಿಮರ್ಶಿಸಿ ಬಹುಮಾನವನ್ನು ಗೊತ್ತುಮಾಡಲು ನಿಯಮಿತರಾದ ಸ್ತ್ರೀ ಪುರುಷ ದೊಡ್ಡ ಮನುಷ್ಯರು ಗುಣೈಕಪಕ್ಷಪಾತಿಗಳಾಗಿ ನಿಷ್ಪಕ್ಷಪಾತದಿಂದ ನಡೆಯದೆ ಇರಲಾರರೆಂದು ನಿರೀಕ್ಷಿಸುತ್ತೇವೆ.

ಪ್ರಶಸ್ತಿಗಳು.

ಕಳೆದ ತಾ|| ೪ ನೆಯ ಬುಧವಾರ ರಾತ್ರಿ ಅಂಬಾವಿಲಾಸದಲ್ಲಿ ನಡೆದ ದರ್ಬಾರಿನಲ್ಲಿ ಪ್ರಜಾಪ್ರತಿನಿಧಿಗಳ ಸಮಕ್ಷ [illegible] ಶ್ರೀಮನ್ಮಹಾಪ್ರಭುಗಳ [illegible]. ಮೈಸೂರು ಸೇನೆಯ ಚೀಫ್ ಕಮ್ಯಾಂಡೆಂಟರೂ ಆದ ಲೆ|| ಕರ್ನಲ್ ದೇಶರಾಜ ಅರಸಿನವರಿಗೆ ಮೈಸೂರು ಸಂಸ್ಥಾನದ ಸೇನೆಯ 'ಕರ್ನಲ್' ಎಂಬ ಪ್ರಶಸ್ತಿಯೂ, ಸಂಸ್ಥಾನದ ೧ ನೆಯ ಕೌನ್ಸಿಲರಾದ ಮ|| ಕೆ. ಪಿ. ಪುಟ್ಟಣ್ಣ ಸೆಟ್ಟರವರಿಗೆ 'ರಾಜಸಭಾ ಭೂಷಣ' ಎಂಬ ಪ್ರಶಸ್ತಿಯೂ, ಸರ್ವೆ ಸೂಪರಿಂಟೆಂಡೆಂಟರಾದ ರಾವ್ ಬಹದ್ದೂರ್ ಮ|| ದೇಶಮುಖ ಶ್ಯಾಮರಾಯರಿಗೆ 'ರಾಜಕಾರ್ಯಪ್ರಸಕ್ತ' ಎಂಬ ಪ್ರಶಸ್ತಿಯೂ, ಕೆಂಪು ವಜ್ರಗಳಿಂದ ಕೆತ್ತಲ್ಪಟ್ಟ ಕಂಠಹಾರಗಳ ಮತ್ತು ಶಾಲುಗಳ ಸಮೇತ ಕೊಡಲ್ಪಟ್ಟುವು. ಅನಂತರ ರಾಜಧಾನಿಯ ಸಂಸ್ಕೃತ ಪ್ರೌಢ ವಿದ್ಯಾಲಯದಲ್ಲಿ ನಡೆದ ವೇದಾಂತ, ಮೀಮಾಂಸ, ನ್ಯಾಯ, ತರ್ಕ, ಜ್ಯೋತಿಷ, ಅಲಂಕಾರ ಶಾಸ್ತ್ರಗಳ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಪಂಡಿತರುಗಳಿಗೆ ಶಾಲು ಮತ್ತು ರೂಪಾಯಿಗಳು ಬಹುಮಾನಿಸಲ್ಪಟ್ಟುವು

ಒಳದೇಶದವೃತ್ತಾಂತ.

ಕಳೆದ ತಾ|| ೬ ರಲ್ಲಿ ಕಪೂರ್ಥಲಾ ಮಹಾರಾಜರು ಬೆಂಗಳೂರಿಗೆ ಹೋಗಿ ಅಲ್ಲಿಂದ ಮದ್ರಾಸು ರೈಲು ಬಂಡಿಯಲ್ಲಿ ಸೈಲಾನಿಗೆ ಪ್ರಯಾಣಮಾಡಿದರು.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಡಿ. ದೇವರಾಜ ಅರಸಿನವರು ದೇಹಾಲಸ್ಯದಿಂದ ದಶರಾತ್ರಿಯ ಮಹೋತ್ಸವ ಕಾಲದಲ್ಲಿ ದಯಮಾಡಿಸಲಿಕ್ಕಾಗಲಿಲ್ಲವಾಗಿ ನೆನ್ನೆಯ ದಿವಸ ರಾಜಧಾನಿಗೆ ದಯಮಾಡಿಸಿದರು.

ತಾ|| ೬ ರ ಸಾಯಂಕಾಲ ಐರೋಪ್ಯಾತಿಥಿಗಳಿಗೆಲ್ಲ ಗೌರ್ನಮೆಂಟ್ ಹೌಸಿನಲ್ಲಿ ರಾಜೌತಣವು ನಡೆದು, ರೆಸಿಡೆಂಟರ ವಿನಾ ಉಳಿದವರೆಲ್ಲರೂ ತಾ|| ೭ ರ ಬೆಳಗ್ಗೆ ರೈಲು ಬಂಡಿಯಲ್ಲಿ ಬೆಂಗಳೂರಿಗೆ ಹೊರಟರು.

ನಿನ್ನೆಯ ದಿನ ಪ್ರಜಾಪ್ರತಿನಿಧಿಗಳಿಗೂ, ಸರ್ಕಾರಿಯಧಿಕಾರಿಗಳಿಗೂ, ಇತರ ದೊಡ್ಡಮನುಷ್ಯರುಗಳಿಗೂ ರಾಜಧಾನಿಯ ಸಂಸ್ಕೃತಕಾಲೇಜು ಮತ್ತು ಮರಿಮಲ್ಲಪ್ಪನವರ ಹೈಸ್ಕೂಲು ಕಟ್ಟಡಗಳಲ್ಲಿ ಔತಣವು ನಡೆದಿತು.

ದಿಲ್ಲಿಯಲ್ಲಿ ಶ್ರೀಮನ್ಮಹಾರಾಜರವರ ಬಿಡಾರಕ್ಕಾಗಿ ನಡೆಯುತ್ತಿರುವ ಏರ್ಪಾಟನ್ನು ಪರಾಮರಿಸಿಕೊಂಡು ಬರಲು ಹುಜೂರು ಸೆಕ್ರೆಟರಿ ಮ|| ಪಿ. ರಾಘವೇಂದ್ರರಾಯರವರು ಕಳೆದ ಶನಿವಾರ ರಾತ್ರಿ ದಿಲ್ಲಿಗೆ ಪ್ರಯಾಣಮಾಡಿದರು.

ರಾಜಧಾನಿಯಲ್ಲಿ ಪ್ಲೇಗು ತಗಲಿ ಮರಣವಾದುದು:—

ತಾರೀಖು	೧,	೨,	೩,	೪,	೫,	೬,	೭.
ತಗಲಿದುದು	೧೦	೧೦	೭	೪	೭	೧೧	೪
ಸತ್ತುದು	೫	೦	೭	೮	೩	೧೧	೧
ಒಟ್ಟು.	೭	೩	೮	೧೨	೭	೧೩	೪

ತಾ|| ೨೦-೬-೧೧ರಿಂದ ತಾ|| ೭-೯-೧೧ರವರೆಗೆ ೧೩,೯೮೫ ಜನರಿಗೆ ಇನಾಕ್ಯುಲೇಶನ್ ಮಾಡಲ್ಪಟ್ಟಿರುತ್ತದೆ.

ನಿಯಮನಿರ್ಮಾಣ ಸಭೆಗೆ ಮೆಂಬರರಾಗಿ ಆರಿಸಲ್ಪಡಲು ಅಪೇಕ್ಷಿಸಿದ್ದ ಪ್ರಜಾಪ್ರತಿನಿಧಿ ಮೆಂಬರುಗಳಾದ ಮ|| ಡಿ. ವೆಂಕಟರಾಮಯ್ಯನವರು, ಮಾಗಡಿ ಕೆ. ಕೃಷ್ಣಮೂರ್ತಿಯವರು ಶಿವಮೊಗ್ಗೆಯ ಅಡ್ವೋಕೇಟ್ ಮ|| ಬಾಲಕೃಷ್ಣರಾಯರು ಮತ್ತು ಶ್ರೀರಂಗಪಟ್ಟಣದ ಪ್ಲೀಡರ್ ಮ|| ನರಸಿಂಗರಾಯರು ಈ ನಾಲ್ವರಲ್ಲಿ ಮ|| ಡಿ. ವೆಂಕಟರಾಮಯ್ಯನವರಿಗೂ, ಮ||ನರಸಿಂಗರಾಯರಿಗೂ ಹೆಚ್ಚು ಮತ (ಓಟು) ಗಳು ದೊರೆದಿರುವುವು.

ನಿನ್ನೆಯ ಬೆಳಗ್ಗೆ ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರು ಬ್ರಿಟಿಷ್ ರೆಸಿಡೆಂಟರು, ಪ್ರೈವೆಟ್ ಸೆಕ್ರೆಟರಿಗಳು, ಮಿಲ್ಟರಿ ಸೆಕ್ರೆಟರಿ ಮೊದಲಾದವರೊಡನೆ ಕೈಗಾರಿಕೆಯ ಮತ್ತು ಬೇಸಾಯವಸ್ತುಪ್ರದರ್ಶನಶಾಲೆಗೆ ದಯಮಾಡಿಸಿದ್ದು ಪ್ರತಿಯೊಂದು ಕೊಠಡಿಯಲ್ಲಿಟ್ಟಿರುವ ಪದಾರ್ಥಗಳನ್ನೂ ಯಂತ್ರಸಾಮಗ್ರಿಗಳನ್ನೂ, ದನಗಳನ್ನೂ ಪರಾಮರಿಸಿಕೊಂಡು ಬಂದು ಪುನಃ ಸಾಯಂಕಾಲ ಮಹಾಸ್ವಾಮಿಯವರು ಮಿಲ್ಟರಿ ಸೆಕ್ರೆಟರಿಯವರ ಕೂಡ ದಯಮಾಡಿಸಿದ್ದರು.

ಕಳೆದ ತಾ|| ೨ ನೆಯ ಸೋಮವಾರ ರಾತ್ರಿ ನಡೆದ ದರ್ಬಾರಿಗೆ ರೆಸಿಡೆಂಟರು ಮೊದಲಾದ ಐರೋಪ್ಯಾತಿಥಿಗಳು ಬಂದಿದ್ದಾಗ್ಗೆ ದಿವಾನರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ಡೆ|| ಕಮಿಷನರುಗಳು, ಸೆಕ್ರೆಟರಿಗಳು ಮೊದಲಾದ ದೊಡ್ಡ ಅಧಿಕಾರಿಗಳು ಕುಳಿತುಕೊಳ್ಳಲು ಐರೋಪ್ಯರಿಗೆ ಕೊಟ್ಟಿದ್ದಂತೆ ಕುರ್ಚಿಗಳು ಕೊಡಲ್ಪಟ್ಟಿದ್ದುದು ಮತ್ತು ಶ್ರೀಮನ್ಮಹಾರಾಜರವರು ವಿಜಯಯಾತ್ರೆ ಹೊರಟಾಗ್ಗೆ ತಮ್ಮ ಸಹೋದರರಾದ ಶ್ರೀಮದ್ಯುವರಾಜರನ್ನು ಅಂಬಾರಿಯಲ್ಲಿ ತಮ್ಮ ಎಡಪಕ್ಕದಲ್ಲಿ ಕುಳ್ಳಿರಿಸಿಕೊಂಡಿದ್ದುದು ಅಭೂತಪೂರ್ವವೂ, ಸಂತೋಷಕರವೂ ಆಗಿರುತ್ತದೆ.

ನಾವು ಹಿಂದೆ ತಿಳಿಸಿದ್ದಂತೆ ಶ್ರೀಮನ್ಮಹಾರಾಜರವರ ನಾಟಕ ಸಂಘದವರು ಕಳೆದ ತಾ|| ೭ ರ ರಾತ್ರಿ ಜಗನ್ಮೋಹ[illegible]ಲಿನಲ್ಲಿ ಮಹಿಮಚರಿತ್ರೆಯನ್ನು ಅಭಿನಯಿಸಿ ಆ ರಾತ್ರಿ ಬಂದ ದ್ರವ್ಯವನ್ನು ಅಂದರೆ ಪ್ರಾಯಶಃ ೩೦೦-೩೫೦ ರೂ. ಗಳನ್ನು ಕಾವೇರೀ ನದಿಯ ಪ್ರವಾಹದಿಂದ ವಿಪನ್ನರಾದವರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ಕೊಟ್ಟರು. ಈ ಧರ್ಮದಫಂಡಿಗೆ ಸಹಾಯಮಾಡಬೇಕೆಂಬ ಉದ್ದೇಶದಿಂದ ಸರ್ಕಾರಿಯ ಅಧಿಕಾರಿಗಳೂ, ರಾಜಬಂಧುಗಳೂ, ರೆಪ್ರೆಜಂಟಿಟಿವ್ ಮೆಂಬರುಗಳೂ, ಇತರರೂ ನಾಟಕಾವಲೋಕನಕ್ಕೆ ದಯಮಾಡಿಸಿದ್ದರು.

ಕಳೆದ ತಾ|| ೫-೬ ರಲ್ಲಿ ಕುದುರೆ, ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳ ಪ್ರದರ್ಶನವು ನಡೆದು ಅವುಗಳಲ್ಲಿ ಉತ್ತಮವಾಗಿರುವವುಗಳಿಗೆ ಶ್ರೀಮನ್ಮಹಾರಾಜರವರಿಂದ ಬಹುಮಾನಗಳು ಕೊಡಲ್ಪಟ್ಟುವು ಗೌರ್ನಮೆಂಟ್ ಅಂಡರ್ ಸೆಕ್ರೆಟರಿ ಮ|| ಕುರಿರ್ಯ ಮೇಥ್ಯೂರವರಿಗೆ ಮೊದಲನೆಯ ತರಗತಿಯ ಬಹುಮಾನಗಳೆರಡು; ಕರ್ನಲ್ ದೇಶರಾಜ ಅರಸಿನವರಿಗೆ ೨; ಮ|| ಬಾಳರಾಜ ಅರಸಿನವರಿಗೆ ೪ ಬಹುಮಾನಗಳು ದೊರೆದುವು. ಪಟೇಲ, ಶಾನುಭೋಗ ಶೇಕದಾರ ಮೊದಲಾದ ಸಣ್ಣ ಉದ್ಯೋಗಸ್ಥರಿಂದ ಕುದುರೆಯ ಸ್ವಾರಿಯು ಮಾಡಿಸಲ್ಪಟ್ಟು ಗೆದ್ದವರಿಗೆ ಬಹುಮಾನಗಳು ಕೊಡಲ್ಪಟ್ಟವು. ಒಬ್ಬ ಪಟೇಲನು ಕುದುರೆಯ ಮೇಲಿಂದ ಜೀನು ಸಮೇತ ಕೆಳಗೆ ಜಾರಿಬೀಳಲು, ಅಲ್ಲಿದ್ದ ಜನರೆಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು. ಆಗ ಶ್ರೀಮನ್ಮಹಾರಾಜರವರು ಅವನನ್ನು ಹಿಡಿದು ಪುನಃ ಕುದುರೆಯ ಮೇಲೆ ಕುಳ್ಳಿರಿಸಿದರು.

ದೇಶಸೇವಾ ಸಂಘಕ್ಕೆ ಸೇರಿದ ಮದರಾಸಿನ ಮ|| ವಿ. ಶ್ರೀನಿವಾಸ ಶಾಸ್ತ್ರಿಯವರು ಕಳೆದ ತಿಂಗಳಲ್ಲಿ ಬೆಂಗಳೂರಲ್ಲಿರುವ ಶಂಕರಮಠದಲ್ಲಿ ಮ|| ವಿ. ಪಿ. ಮಾಧವರಾಯರ ಅಗ್ರಾಸನಾಧಿಪತ್ಯದಲ್ಲಿ ಹಿಂದೂ ವಿವಾಹ ಸುಧಾರಣೆಯನ್ನು ಕುರಿತು ಭಾಷಣಮಾಡಲು ಸರ್ಕಾರದವರು ಅಡ್ಡಿಪಡಿಸಿದುದರ ವಿಚಾರದಲ್ಲಿ ಮದ್ರಾಸಿನ ಮಹಾಜನ ಸಭೆಯವರೂ ಸಾರ್ವಜನಿಕ ಪ್ರಾಂತಿಕ ಸಭೆಯವರೂ ತಮ್ಮ ಅಸಮಾಧಾನವನ್ನು ನಮ್ಮ ಸರ್ಕಾರಕ್ಕೂ, ಅ|| ಗೋಖಲೆಯವರಿಗೂ ತಿಳಿಯಪಡಿಸಿದ ಅಂಶವನ್ನು ಈ ಸ್ಟಾರ್ ಪತ್ರದಲ್ಲಿ ತಿಳಿಸಿರುವೆವಷ್ಟೆ. ಈ ರೀತಿ ಮ|| ಶಾಸ್ತ್ರಿಗಳ ಉಪನ್ಯಾಸವು ನಡೆಯದಂತೆ ಅಡ್ಡಿಪಡಿಸಲು ಕಾರಣವೇನಿತ್ತೆಂದು ಅ|| ಗೋಖಲೆಯವರು ನಮ್ಮ ದಿವಾನರನ್ನು ಲಿಖಿತಮೂಲಕವಾಗಿ ಕೇಳಿರುವಲ್ಲಿ, ದಿವಾನರು "ಶಾಸ್ತ್ರಿಗಳ ಸ್ವವಿಚಾರದಲ್ಲಾಗಲಿ ಅವರು ಸೇರಿರುವ ಸಂಘದ ವಿಚಾರದಲ್ಲಾಗಲಿ ಅನುಮಾನಪಟ್ಟು ಅವರ ಉಪನ್ಯಾಸಕ್ಕೆ ಅಡ್ಡಿಪಡಿಸಿದುದಾಗಿಲ್ಲವು, ಆದರೆ ಅದಕ್ಕೆ ರಾಜನೀತಿಗೆ ಸಂಬಂಧಪಟ್ಟ ಕೆಲ ಕಾರಣಗಳುಂಟು." ಎಂದುತ್ತರವನ್ನು ಕೊಟ್ಟಿರುವರು. ಉಪನ್ಯಾಸವನ್ನು ನಿಲ್ಲಿಸುವಾಗಲೇ ತಮ್ಮ ಈ ಮನೋಗತವನ್ನು ತಿಳಿಸಿದ್ದಲ್ಲಿ ಇಷ್ಟೊಂದು ಅಸಮಾಧಾನಕ್ಕೂ, ಪತ್ರವ್ಯವಹಾರಕ್ಕೂ ಅವಕಾಶವಾಗುತ್ತಿರಲಿಲ್ಲವು

ವರ್ತಮಾನ ಸಂಗ್ರಹ.

ಜರ್ಮನಿ ಚಕ್ರವರ್ತಿಯವರಿಗೆ ಆ ರಾಜ್ಯದಲ್ಲಿರುವಷ್ಟು ಭೂಮಿಯು ಅಲ್ಲಿ ಮತ್ತಾರಿಗೂ ಇರುವುದಿಲ್ಲ. ಇವರಿಗೆ ೨೫೦೦೦೦ ಎಕರೆ ವಿಸ್ತೀರ್ಣವುಳ್ಳ ೮೩ ಭೂಸ್ಥಿತಿಗಳಿವೆ. ಮತ್ತು ೧೯೫೦೦೯೦೦ ರೂ. ಗಳು ಸರ್ಕಾರಿಯ ಖಜಾನೆಯಿಂದ ಸಲ್ಲುವುದಲ್ಲದೆ ಎಷ್ಟೋ ಲಕ್ಷಾಂತರ ರೂ. ಗಳು ಆಸ್ತಿಯಿಂದುತ್ಪನ್ನವಾಗುತ್ತವೆ.

ವಿಯಾನಾದಲ್ಲಿ ಆಹಾರ ಪದಾರ್ಥಗಳ ಬೆಲೆಯು ಬಹು ಪ್ರಿಯವಾಗಿ ಜನರ ವಾಸಕ್ಕೆ ಮನೆಯು ಸಿಕ್ಕುವುದಿಲ್ಲವಾದುದರಿಂದ ಜನರು ದಂಗೆಯೆದ್ದು ಅನೇಕ ತಿಂಡಿಯ ಮತ್ತು ಇತರ ಅಂಗಡಿಗಳಿಗೆ ಕಲ್ಲುಗಳನ್ನು ಬೀರಿ ಅನಾಹುತವನ್ನೆಸಗುತಿರುವಲ್ಲಿ ಸೇನೆಯವರು ಬಂದು ಅವರ ಕೂಡ ಕಾದಾಡಿ ಗದ್ದಲವನ್ನು ಶಾಂತಪಡಿಸಿದರು.

ಕಳೆದ ತಾ|| ೩೦ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೯೫೩೩ ಜನರಿಗೆ ಪ್ಲೇಗು ತಗಲಿ ೭೯೦೩ ಜನರು ಸತ್ತರು. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೫೮೭೯; ಮದ್ರಾಸಾಧಿಪತ್ಯದಲ್ಲಿ ೫೩೩; ಬಂಗಾಳದಲ್ಲಿ ೧೯೩; ಸಂಯುಕ್ತಪ್ರಾಂತಗಳಲ್ಲಿ ೭೩; ಪಂಜಾಬಿನಲ್ಲಿ ೩; ಬರ್ಮಾದಲ್ಲಿ ೨೩; ಮಧ್ಯಪ್ರಾಂತಗಳಲ್ಲಿ ೬೦೧; ಮಧ್ಯ ಹಿಂದೂಸ್ಥಾನದಲ್ಲಿ ೨೯೯ ಈ ಪ್ರಕಾರ ಮರಣವಾಗಿರುತ್ತದೆ.

ಬಾಬು ವಿಪಿನಚಂದ್ರಪಾಲರವರು ಬೊಂಬಾಯಿಯಲ್ಲಿ ಹಡಗನ್ನಿಳಿಯುತಲೆ ಪೋಲೀಸರು ಅವರನ್ನು ಹಿಡಿದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ, [illegible] ತಾವು [illegible] ರಾಜದ್ರೋಹಕರವಾದ ಲೇಖನಗಳನ್ನು ಬರೆದು ಪ್ರಕಟಿಸಿದ ಅಪರಾಧಗಳನ್ನು ಕ್ಷಮಿಸಬೇಕೆಂದು [illegible] ೧ ತಿಂಗಳ [illegible]

[೩ನೆಯ ಪುಟದಿಂದ ಮುಂದೆ ಹೋಗಿದುದು]

ಜರ್ಗ ಅಖೈರಿಗೆ ಬ್ಯಾಂಕಿನಲ್ಲಿ ೧೮೧೦ ರೂಪಾಯಿ ವಸೂಲಾದ ಶೇರು ಬಂಡವಾಳವೂ ಮತ್ತು ಶ್ರೀಮನ್ಮಹಾರಾಜ ಸಾಹೇಬ್ ಬಹಾದುರವರು ಈ ಬ್ಯಾಂಕಿನಲ್ಲಿ ಅಸಕ್ತಿಯನ್ನೂ ನಂಬಿಕೆಯನ್ನೂ ವ್ಯಕ್ತಪಡಿಸುವ ಉದ್ದೇಶದಿಂದ ದಯಪಾಲಿಸಿದ ೧೦೦೦೦ ರೂಪಾಯಿ ಠೇವಣಿ ಹಣವೂ ಸೇರಿ ಒಟ್ಟು ೨೦೮೦ ರೂಪಾಯಿ ಫಿಕ್ಸಿಡ್ ಡಿಪಾಜಿಟ್ಟು ಇದ್ದುವು. ಹೊಸ ಸಂಘಗಳಿಗೆ ದ್ರವ್ಯ ಸಹಾಯ ಮಾಡುವುದಕ್ಕೆ ತೆಗೆದಿಟ್ಟಿರುವ ಸ್ಟೇಟ್ ಫಂಡಿನ ೧೫೦೦೦ ರೂಪಾಯಿಯ ಪೈಕಿ ೨೫೦ ರೂಪಾಯಿಯನ್ನು ಬೆಂಗಳೂರು ತಾಲ್ಲೂಕು ಗೊಟ್ಟಿಗೆರೆಯ ಲಿಮಿಟೆಡ್ ಅನ್ಯೋನ್ಯ ಸಹಾಯಕ ಸಂಘಕ್ಕೆ ಸಾಲವಾಗಿ ಕೊಡಲಾಯಿತು. ಈ ವರ್ಷ ಮೂರು ಸಂಘಗಳಿಂದ ಒಟ್ಟು ೩೫೦ ರೂಪಾಯಿ ವಸೂಲಾಗಿದೆ. ಈಗ ಸೆಂಟ್ರಲ್ ಬ್ಯಾಂಕಿನವರು ಎಲ್ಲಾ ಸಂಘಗಳಿಗೂ ಬೇಕಾದಷ್ಟಾಗಿಲ್ಲಾ ಸುಲಭವಾದ ಷರತ್ತುಗಳಮೇಲೆ ಹಣವನ್ನು ಕೊಡುತ್ತಿರುವುದರಿಂದ ಸ್ಟೇಟ್ ಫಂಡಿನಿಂದ ಸಾಲವನ್ನು ಕೊಡಬೇಕಾದ ಅವಶ್ಯಕತೆಯು ಅಷ್ಟು ಹೆಚ್ಚಾಗಿಲ್ಲ.

ವಿಶೇಷವಾಗಿ ಹೆಚ್ಚುತ್ತಿರುವ ಸಂಘಗಳ ಸಂಖ್ಯೆಯೂ ಅವುಗಳಲ್ಲಿ ನಡೆಯುತ್ತಿರುವ ಕಾರ್ಯಗಳೂ ಇಂಥ ಏರ್ಪಾಡಿನ ವಿಷಯದಲ್ಲಿ ಜನಗಳಿಗಿರುವ ಆ ಸಕ್ತಿಯನ್ನು ತೋರ್ಪಡಿಸುತ್ತವೆ. ಸಂಪದಭ್ಯುದಯ ಸಮಾಜದ ಉತ್ತೇಜನದಿಂದ ಈ ಅನ್ಯೋನ್ಯ ಸಹಾಯಕ ಸಂಘಗಳ ಏರ್ಪಾಡು ಶೀಘ್ರದಲ್ಲಿಯೇ ಮತ್ತಷ್ಟು ಅಭಿವೃದ್ಧಿಗೆ ಬರಲು ಸಂದೇಹವಿಲ್ಲವೆಂದು ಹೇಳಬಹುದಾಗಿದೆ.

ಈ ಅನ್ಯೋನ್ಯ ಸಹಾಯಕ ಸಂಘಗಳ ಏರ್ಪಾಡಿಗೆ "ಆನರೆರಿ ಆರ್ಗನೈಜರ್" ಆಗಿ ನಿಯಮಿತರಾದ ಮೆ॥ ಬಾದಾಮಿ ಕೃಷ್ಣರಾಯರವರೂ, ಮೆ॥ ಟಿ. ವೆಂಕಟರಾಮೈಯ್ಯನವರೂ, ಮೆ॥ ಹೆಚ್. ಆರ್ ಶ್ರೀನಿವಾಸರಾಯರೂ ಉತ್ಸಾಹದಿಂದ ತಮ್ಮ ಕೆಲಸಗಳನ್ನು ನಡಿಸುತ್ತಿದಾರೆ. ಮೆ॥ ಪಿ. ಡಿ. ರಾಮಸ್ವಾಮೈಯ್ಯನವರು ರಾಜೀನಾಮೆಯನ್ನು ಕೊಟ್ಟಿದ್ದರೂ ಈ ವಿಷಯದಲ್ಲಿ ಕೇವಲ ಅಸಕ್ತಿಯನ್ನು ತೋರ್ಪಡಿಸುತ್ತಿರುವರು.

ವ್ಯವಸಾಯದ ಬ್ಯಾಂಕುಗಳು.

೧೯೦೫ನೆಯ ಇಸವಿಯ ಲಾಗಾಯತು ಆಗಿಂದಾಗ ಏರ್ಪಾಟಾದ ೧೯ ವ್ಯವಸಾಯ ಬ್ಯಾಂಕುಗಳ ಪೈಕಿ, ೧೯೧೦-೧೧ ನೆಯ ವರ್ಷದ ಆರಂಭದಲ್ಲಿ ಮೈಸೂರು, ತುಮಕೂರು, ಕೋಲಾರ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಸೇರಿ ೧೦ ಬ್ಯಾಂಕುಗಳಲ್ಲಿ ಲೇವಾದೇವಿ ನಡೆಯುತ್ತಿತ್ತು. ತುಮಕೂರು ತಾಲ್ಲೂಕು ಅರಿಯೂರು ಬ್ಯಾಂಕಿನಿಂದ ಸರ್ಕಾರಕ್ಕೆ ಬರಬೇಕಾದ ಹಣವು ಬಾಕಿ ನಿಂತುದರಿಂದ ಆ ಬ್ಯಾಂಕನ್ನು ಈ ವರ್ಷದಲ್ಲಿ ಮೌಕೂಫ್ ಮಾಡಲು ಹುಕುಂ ಮಾಡಬೇಕಾಯಿತು. ಈಚೆಗೆ ಅದರಿಂದ ಸರಕಾರಕ್ಕೆ ಬರಬೇಕಾದ ಹಣವೆಲ್ಲಾ ವಸೂಲಾಗಿ ಆ ಬ್ಯಾಂಕು ಮುಚ್ಚಲ್ಪಟ್ಟಿತು. ಚಾಮರಾಜನಗರದ ಬ್ಯಾಂಕನ್ನು ಮೌಕೂಫ್ ಮಾಡಬೇಕೆಂದು ೧೯೦೩ ನೆಯ ಜುಲೈ ತಿಂಗಳಲ್ಲಿ ಹುಕ್ಕುಂ ಮಾಡಿತ್ತು. ಸದರಿ ಬ್ಯಾಂಕಿನವರು ಪುನಃ ಲೇವಾದೇವಿ ಮಾಡುವುದರಲ್ಲಿ ಅಸಕ್ತಿಯನ್ನು ತೋರಿಸುದದರಿಂದಲೂ ಬಾಕಿ ಕೊಡಬೇಕಾದ ಕಂತುಗಳನ್ನೆಲ್ಲಾ ಕೊಟ್ಟುದರಿಂದಲೂ ಪುನಃ ಲೇವಾದೇವಿ ಮಾಡುತ್ತಿರುವಂತೆ ಸರ್ಕಾರದವರು ಅಪ್ಪಣೆ ಕೊಟ್ಟಿರುತ್ತಾರೆ. ಆದುದರಿಂದ ಹಿಂದಿನ ಸಾಲಅಖೈರಿನಲ್ಲಿ ಇದ್ದಂತೆಯೇ ಈ ಸಂವತ್ಸರದಲ್ಲಿಯೂ ಲೇವಾದೇವಿ ಮಾಡುತ್ತಿರುವ ಹತ್ತು ಬ್ಯಾಂಕುಗಳಿದ್ದವು. ಮಾಲೂರು ತಾಲ್ಲೂಕಿನ ಹೊಸಕೋಟೆಹಳ್ಳಿ, ಸಿರ್ಯದ ತಾಲ್ಲೂಕಿನ ಪಾಲುದೊಡ್ಡೇರಿ, ಮತ್ತು ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ ಈ ಸ್ಥಳಗಳಲ್ಲಿದ್ದ ಮೂರು ಬ್ಯಾಂಕುಗಳಲ್ಲಿ ಮಾತ್ರ ಅಲ್ಪಸ್ವಲ್ಪ ಪ್ರಯೋಜನಕರವಾದ ಕೆಲಸವು ನಡೆದಿದೆ ಎಂದು ಹೇಳಬಹುದು ಮಿಕ್ಕ ಬ್ಯಾಂಕುಗಳಲ್ಲಿ ವಿಶೇಷವಾಗಿ ಯಾವ ಕೆಲಸವೂ ನಡೆಯಲಿಲ್ಲ. ನಂಜನಗೂಡು ಬ್ಯಾಂಕಿನವರು ಸರ್ಕಾರಕ್ಕೆ ಕೊಡಬೇಕಾಗಿದ್ದ ಸಾಲವನ್ನೆಲ್ಲಾ ಬೇಬಾಕಿಯಾಗಿ ಚುಕಿತಿಮಾಡಿ ತಮ್ಮಲ್ಲಿ ಉಳಿದಿದ್ದ ೩೫೩೩ ರೂಪಾಯಿ ರಿಜರ್ವ್ ಫಂಡಿನ ಸಹಾಯದಿಂದ ಕೆಲವುಕಾಲ ಲೇವಾದೇವಿಯನ್ನು ನಡಿಸಿದರು. ಸದರಿ ಬ್ಯಾಂಕನ್ನು ಮೌಕೂಫ್ ಮಾಡಿ ರಿಜರ್ವ್ ಫಂಡನ್ನು ವೇದಾಭ್ಯಾಸದ ಪ್ರೋತ್ಸಾಹಕ್ಕಾಗಿ ಉಪಯೋಗಿಸಬೇಕೆಂದು ಕಳೆದ ಮೇ ತಿಂಗಳಲ್ಲಿ ಬ್ಯಾಂಕಿನ ಮೆಂಬರುಗಳೆಲ್ಲಾ ಗೊತ್ತುಮಾಡಿದರು. ರಿಜರ್ವನ್ನು ನಗದು ಮಾಡಿದ ಅನಂತರ ಅದನ್ನು ವೇದಾಭ್ಯಾಸದ ಅಭಿವೃದ್ಧಿಗೆ ಉಪಯೋಗಿಸುವ ವಿಷಯದಲ್ಲಿ ಸರ್ಕಾರದವರ ಅನುಮತಿಯನ್ನು ಕೇಳಬಹುದೆಂದು ಮೆಂಬರುಗಳಿಗೆ ತಿಳಿಸಲಾಗಿದೆ.

ವ್ಯವಸಾಯದ ಬ್ಯಾಂಕುಗಳ ಪುನರುದ್ಧಾರವಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಅವುಗಳನ್ನು ಅಲ್ಲಿಯ ಅನ್ಯೋನ್ಯ ಸಹಾಯಕ ಸಂಘಗಳ [illegible] ಕಳೆದ ಡಿಸೆಂಬರಿನಲ್ಲಿ ಇನ್ನೂ [illegible] ಮತ್ತು [illegible] ಬ್ಯಾಂಕಿನ [illegible] ಬ್ಯಾಂಕುಗಳನ್ನು ಅನ್ಯೋನ್ಯ [illegible] [illegible]

ಯಕ ಸಂಘಗಳನ್ನಾಗಿ ಮಾಡಿಕೊಳ್ಳುವುದಕ್ಕೆ ಇಷ್ಟಪಟ್ಟಿರುತ್ತಾರೆ. ಈ ಬದಲಾವಣೆಗೆ ಆ ಬ್ಯಾಂಕುಗಳು ತಕ್ಕವುಗಳಾಗಿವೆಯೇ, ಅವುಗಳಲ್ಲಿ ಚೆನ್ನಾಗಿ ಕೆಲಸ ನಡೆಯಬೇಕಾದರೆ ಯಾವಸ್ಥಿತಿಯಲ್ಲಿರಬೇಕು, ಮತ್ತು ಯಾವ ಷರತ್ತುಗಳಿಗೆ ಒಳಪಡಿಸಬೇಕು ಎಂಬೀ ಸಂಗತಿಗಳನ್ನು ಆಯಾ ಬ್ಯಾಂಕಿಗೆ ತಕ್ಕಹಾಗೆ ಚೆನ್ನಾಗಿ ಪರಿಕ್ಷೆ ಮಾಡಬೇಕಾಗಿದೆ ಈ ವಿಷಯಗಳನ್ನು ಅನ್ಯೋನ್ಯಸಹಾಯಕ ಸಂಘಗಳ ರಿಜಸ್ಟ್ರಾರವರು ವಿಮರ್ಶೆ ಮಾಡುತ್ತಿದ್ದಾರೆ

ಪ್ರಸಕ್ತ ವರ್ಷದಲ್ಲಿ ಕಾಫಿ ಬ್ಯಾಂಕುಗಳು ವಿನಾ ಉಳಿದ ಲೇವಾದೇವಿ ಮಾಡುತ್ತಿರುವ ಮತ್ತು ಮೌಕೂಫ್ ಆದ ಎಲ್ಲಾ ಬ್ಯಾಂಕುಗಳಿಂದಲೂ ಒಟ್ಟು ಅಸಲು ಬಾಬತು ೩೯೭೩ ರೂಪಾಯಿಯೂ, ಬಡ್ಡಿ ಬಾಬತು ೯೦೩೨ ರೂಪಾಯಿ ವಸೂಲಾಗಿದೆ. ಹಿಂದಿನ ವರ್ಷ ಅಸಲು ಬಾಬತು ೪೬೫೪ ರೂಪಾಯಿಯೂ, ಬಡ್ಡಿ ಬಾಬತು ೧೫೩೫೩ ರೂಪಾಯಿಯೂ ವಸೂಲಾಗಿತ್ತು. ಮಿತಿಮೀರಿದ ಸಂದರ್ಭಗಳಲ್ಲಿ ಮಾತ್ರ ಜಪ್ತಿಹರಾಜುವಗೈರೆಕ್ರಮಗಳನ್ನು ಜರುಗಿಸಲಾಯಿತು.

ಜಾಯಿಂಟ್ ಸ್ಟಾಕ್ ಕಂಪೆನಿಗಳು.

ಈ ವರ್ಷದಲ್ಲಿ ೨ ಹೊಸ ಕಂಪೆನಿಗಳು ರಿಜಸ್ಟರಾದವು ಮತ್ತು ೪ ಕಂಪೆನಿಗಳು ಮೌಕೂಫ್ ಮಾಡಲ್ಪಟ್ಟುವು. ಈ ಸಾಲ್ ಶುರುವಿನಲ್ಲಿ ಕೆಲಸನಡೆಯುತ್ತಿದ್ದ ಒಟ್ಟು ೪೦ ಕಂಪೆನಿಗಳಿಗೆ ಬದಲಾಗಿ ಸಾಲ್ಅಖೈರಿನಲ್ಲಿ ೩೮ ರಲ್ಲಿ ಕೆಲಸ ನಡೆಯುತ್ತಿತ್ತು.

ರೆವಿನ್ಯು ಸರ್ವೆ ಮತ್ತು ಸೆಟ್ಲ್‌ಮೆಂಟ್.

ಈ ಸಂವತ್ಸರದಲ್ಲಿ ೪ ಇನಾಂ ಗ್ರಾಮಗಳ ಸರ್ವೆ ಆಯಿತು ಮತ್ತು ೩ ಗ್ರಾಮಗಳು ತರಗತಿ ವಿಂಗಡಿಸಲ್ಪಟ್ಟುವು. ಕುಣಿಗಲು, ಮಾಗಡಿ, ನೆಲಮಂಗಲ, ಮದ್ದಗಿರಿ ತಾಲ್ಲೂಕುಗಳಿಗೂ ಪೂರ್ವದ ಹಾರನಹಳ್ಳಿ ಪೂರ್ವದ ಹೊನ್ನಹಳ್ಳಿ ತಾಲ್ಲೂಕುಗಳಿಗೂ ಸೇರಿದ ೫೩೫ ಗ್ರಾಮಗಳ ರಿ ಸರ್ವೆ ಪೂರೈಸಿತು. ಒಟ್ಟು ೪೩೬೩೯೭೨ ಎಕರೆಗಳ ಯಾ ೬೮೪ ಚದರಮೈಲಿಗಳ ರೀ ಸರ್ವೆ ಆಯಿತು. ಬೇಲೂರು ತಾಲ್ಲೂಕಿನ ೩೧೪ ಗ್ರಾಮಗಳಲ್ಲಿಯೂ ತರೀಕೆರೆ ತಾಲ್ಲೂಕಿನ ೧೬೪ ಗ್ರಾಮಗಳಲ್ಲಿಯೂ ಮತ್ತು ಹಳೆ ಬಾಣಾವಾರ ತಾಲ್ಲೂಕಿನ ೧೩೨ ಗ್ರಾಮಗಳಲ್ಲಿಯೂ ಆಯಾ ಜಮೀನಿನ ನೀರು ಸರಬರಾಯಿಗನುಸಾರವಾಗಿ ತರೀ ಬಾಗಾಯತು ಜಮೀನುಗಳನ್ನು ಪುನಃ ತರಗತಿ ವಿಂಗಡಿಸಲಾಯಿತು. ಒಟ್ಟಿನಲ್ಲಿ ಪುನಃ ತರಗತಿ ವಿಂಗಡಿಸಿದ ಗ್ರಾಮಗಳ ಸಂಖ್ಯೆ ೬೧೦; ಸರ್ವೆ ನಂಬರುಗಳು ೨೯೬೬೪; ವಿಸ್ತೀರ್ಣ ೯೯೧೪೯ ಎಕರೆಗಳು ಹೊನ್ನಾಳಿ ತಾಲ್ಲೂಕಿನ ರಿವಿಜನ್ ಸೆಟ್ಲ್‌ಮೆಂಟನ್ನು ಕುರಿತ ಸಲಹೆಗಳು ಸರ್ಕಾರದವರಿಂದ ಮಂಜೂರಾಗಿವೆ ಕಂದಾಯದ ದರಗಳನ್ನು ಮುಂದಿನ ಚೆಳಿಗಾಲದಲ್ಲಿ ತಿಳಿಸಲಾಗುವುದು. ಪೂರ್ವದ ಅನಂತಪುರ ಮತ್ತು ಶಿವಮೊಗ್ಗಾ ತಾಲ್ಲೂಕುಗಳ ರಿವಿಜನ್ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಈ ಮೂರು ತಾಲ್ಲೂಕುಗಳ ರಿವಿಜನ್ ಸೆಟ್ಲ್‌ಮೆಂಟು ಬಹುಶಃ ಮುಂದೆ ಬರುವ ಚಳಿಗಾಲವು ಪೂರೈಸುವುದರೊಳಗಾಗಿ ಜಾರಿಗೆ ಬರಬಹುದು.

ಇನಾಂ ಇಲಾಖೆ.

ಇನಾಂ ಇಲಾಖೆಯಲ್ಲಿ ಎಂದಿನಂತೆ ಆಖೈರು ಕ್ವಿಟ್ ರೆಂಟ್ ರಿಜಸ್ಟರುಗಳನ್ನು ತಯಾರ್ ಮಾಡುವುದು ಮತ್ತು ಟೈಟಲ್ ಡೀಡುಗಳನ್ನು ಕೊಡುವುದು ಇವೇ ಮುಖ್ಯ ಕೆಲಸಗಳಾಗಿದ್ದವು.

ರಿಜಿಸ್ಟ್ರೇಷನ್.

ಈ ವರ್ಷ ರಿಜಿಸ್ಟರಾದ ದಸ್ತಾವೇಜುಗಳ ಸಂಖ್ಯೆ ೪೬೪೩೩ ಮತ್ತು ಇದರಿಂದ ಸರಿಸುಮಾರು ಹೋದವರುಷದಷ್ಟೇ ಎಂದರೆ ೧೬೩೬೨೬ ರೂ. ಹುಟ್ಟುವಳಿಯಾಯಿತು.

ಸ್ಟಾಂಪು.

ಸ್ಟಾಂಪು ಬಾಬಿನಿಂದ ಆದ ಹುಟ್ಟುವಳಿ ಸ್ವಲ್ಪ ಹೆಚ್ಚಾಗಿದೆ. ಹೋದವರ್ಷ ೪೧೬೬೩೨ ರೂ. ಹುಟ್ಟುವಳಿಯಾಗಿರುವಲ್ಲಿ ಈ ವರ್ಷ ೪೨೯೫೦ರೂ. ಹುಟ್ಟುವಳಿಯಾಯಿತು

ಅಬ್ಕಾರಿ.

ಗಾಂಜಾ ಲೈಸೆನ್ಸುದಾರನು ಒಂದು ಗೊತ್ತಾದ ದರದ ಮೇಲೆ ಗಾಂಜಾ ಬಿಕರಿಮಾಡುವುದಕ್ಕೆ ಬದಲಾಗಿ ಕನಿಷ್ಠದರವನ್ನು ತೊಲಾ ೧ ಕ್ಕೆ ೨ ಆಣೆ ಗೊತ್ತುಮಾಡಿ ಅದರ ಮೇಲೆ ಇಷ್ಟಬಂದ ಬೆಲೆಗೆ ಬಿಕರಿಮಾಡುವ ಹಾಗೆ ಅಪ್ಪಣೆ ಕೊಟ್ಟು ಗಾಂಜಾಮೇಲಿನ ತೆರಿಗೆಯನ್ನು ಸೇರಿಗೆ ೫ ರೂ. ಯಿಂದ ೬ ರೂ. ಗೆ ಹೆಚ್ಚು ಮಾಡಲಾಗಿದೆ. ಅಫೀಂ ದುಕಾನಿನ ಲೈಸೆನ್ಸುದಾರರು ಅಫೀಮನ್ನು ಖುಷ್ ಖರೀದಿಗೆ ಮಾರುವಂತೆ ಅಪ್ಪಣೆ ಕೊಟ್ಟಿದೆ. ಅಬ್ಕಾರಿ ಬಾಬಿನಲ್ಲಿ ಹಿಂದಿನ ವರುಷ ಒಟ್ಟು ೪೪೯೨೩ ರೂ. ಹುಟ್ಟುವಳಿಯಾಗಿರುವಲ್ಲಿ ಈ ವರುಷ ೪೩೪೯೨೧ ರೂ. ಹುಟ್ಟುವಳಿಯಾಗಿದೆ, ಎಂದರೆ ೧೩೦೨೦ ರೂ. ಕಡಿಮೆಯಾದಂತಾಯಿತು. ಷರಾಬಿನ ಮತ್ತು ಗಾಂಜಾವಿನ ಖರ್ಚು, ಶೇಂದಿ ಉತಾರ್ ಬಗ್ಗೆ ಕೊಟ್ಟ ಮರಗಳ ಸಂಖ್ಯೆಯೂ ಸಹ ಕಡಿಮೆಯಾದುದರಿಂದ ಈ ರೀತಿ ಹುಟ್ಟುವಳಿಯು ಕಮ್ಮಿಯಾಗುವುದಕ್ಕೆ ಕಾರಣವಾಯಿತು. ಷರಾಬ್ ಮತ್ತು ಶೇಂದಿ ಅಂಗಡಿಗಳ ಗುತ್ತಿಗೆ [illegible] ಕಡಿಮೆಯಾದುದೂ ಸಹ ಹೀಗೆ ಕಮ್ಮಿಯಾಗುವುದಕ್ಕೆ [illegible] ಕಾರಣವಾಗಿರುತ್ತದೆ.

ಈ ವರ್ಷ ಷರಾಬ್ ದುಕಾನುಗಳ ಸಂಖ್ಯೆಯು ೬೨೪ ರಿಂದ ೩೭೧ ಕ್ಕೂ, ಶೇಂದಿ ದುಕಾನುಗಳ ಸಂಖ್ಯೆಯು ೩೩೫೫ ರಿಂದ ೩೨೭೧ ಕ್ಕೂ ಕಡಿಮೆಯಾಯಿತು. ೫ ಗಾಂಜಾ ದುಕಾನುಗಳು ಹೆಚ್ಚಿದುವು. ೨ ಅಫೀಮು ದುಕಾನುಗಳೂ, ಒಂದು ಷರಾಯಿ ಮದ್ಯದ ದುಕಾನೂ ಕಡಿಮೆಯಾದುವು.

ಫಾರೆಸ್ಟ್ ಇಲಾಖೆ.

ಫಾರೆಸ್ಟ್ ರೆಗ್ಯುಲೇಷನಿನ ೧೭ ನೆಯ ಪ್ರಕರಣದ ಮೇರೆಗೆ ೨೩ ಚದರಮೈಲಿ ವಿಸ್ತೀರ್ಣವುಳ್ಳ ೨ ತಾಕುಗಳನ್ನು ಮನ್ನಾ ಜಂಗಲಿಗಳನ್ನಾಗಿ ಹೊಸದಾಗಿ ಪ್ರಕಟಿಸಲಾಯಿತು ಸದರಿ ರೆಗ್ಯುಲೇಷನ್ನಿನ ೪ ನೆಯ ಪ್ರಕರಣದ ಮೇರೆಗೆ ಒಟ್ಟು ೧೦೦ ಚದರಮೈಲಿ ವಿಸ್ತೀರ್ಣವುಳ್ಳ ೧೨ ತಾಕುಗಳನ್ನು ರಿಜರ್ವ್ ಎಂದರೆ ಉಳಿಸಿಕೊಂಡಿರುವ ಜಮೀನುಗಳಾಗಿ ಪ್ರಸಿದ್ಧಪಡಿಸಲಾಯಿತು. ಜಂಗಲಿನಲ್ಲಿ ಆಯಾ ಪ್ರದೇಶಗಳನ್ನು ಪ್ರತ್ಯೇಕಿಸಲು ಸಾಧನಭೂತವಾಗಿ ಗಿಡಗೆಂಟಿಗಳನ್ನು ಕತ್ತರಿಸಿ ೯೧ ಮೈಲಿ ಲಾಂಬಿ ಗಡಿರಸ್ತೆಯು ಹಾಕಲ್ಪಟ್ಟಿತು. ಮತ್ತು ೨೩೦ ಮೈಲಿ ವಿಸ್ತಾರವುಳ್ಳ ಹಳೆಯ ಗಡಿರಸ್ತೆಗಳಲ್ಲಿ ಪುನಃ ಬೆಳೆದುಕೊಂಡಿದ್ದ ಗಿಡಗೆಂಟಿಯನ್ನು ಕತ್ತರಿಸಿ ಸರಿಮಾಡಿಸಿ ಕ್ಲಿಪ್ತಪ್ರಮಾಣಕ್ಕೆ ಅನುಸಾರವಾಗಿ ಅಗಲಮಾಡಲಾಯಿತು. ಒಟ್ಟಿನಲ್ಲಿ ಸುಮಾರು ೨೩೭ ಚದರ ಮೈಲಿ ವಿಸ್ತೀರ್ಣವುಳ್ಳ ಜಂಗಲಿನಲ್ಲಿ ಕಾಡುಕಿಚ್ಚನ್ನು ತಪ್ಪಿಸುವ ಏರ್ಪಾಟು ನಡಿಸಲ್ಪಟ್ಟಿತು; ಈ ಪೈಕಿ ೨೧೬ ಚದರ ಮೈಲಿಗಳಿಗೆ ಎಂದರೆ ಶೇಕಡಾ ೯೨೭ ರಷ್ಟಕ್ಕೆ ಕಾಡುಕಿಚ್ಚು ವ್ಯಾಪಿಸದಂತೆ ಏರ್ಪಾಟು ಮಾಡಲಾಯಿತು. ಸುಮಾರು ೪೦೧೦೦೦ ಘನ ಅಡಿಯಷ್ಟು ನಾನಾ ತರಹೆಯ ನಾಟಾಗಳು ಇಲಾಖಾಮುಖಾಂತರ ಜಮಾಯಿಸಲ್ಪಟ್ಟು ಬಿಕರಿಯಾದುವು. ಮತ್ತು ಸುಮಾರು ೨೮೫೦೦೦ ಘನ ಅಡಿಯಷ್ಟು ನಾಟಾಗಳನ್ನು ಕ್ರಯದಾರರೂ, ಗಿರಾಕಿದಾರರೂ ಸೀದಾ ಜಂಗಲಿಗಳಿಂದಲೇ ಕಡಿಸಿ ಸಾಗಿಸಿಕೊಂಡು ಹೋದರು. ಹಿಂದಿನವರ್ಷ ಒಟ್ಟಿನಲ್ಲಿ ೪೭೦೪೦೦ ರೂ. ವಸೂಲಾಗಿರುವಲ್ಲಿ ಈ ವರ್ಷ ೪೧೫೦೦೦ ರೂ. ವಸೂಲಾಯಿತು. ಈ ವರ್ಷ ಒಟ್ಟು ೨೩೧೫ ಟನ್ ಗಂಧದ ಮರವು ಬಿಕರಿಯಾಯಿತು. ಈ ಬಾಬಿನಲ್ಲಿ ಹಿಂದಿನವರ್ಷ ೯೨೫೩೩ ರೂ. ಹುಟ್ಟುವಳಿಯಾಗಿರುವಲ್ಲಿ ಈ ವರ್ಷ ೧೧೬೧೦೦೦ ರೂ. ಹುಟ್ಟುವಳಿಯಾಯಿತು. ಓಟು ಫಾರೆಸ್ಟ್ ಬಾಬಿನಲ್ಲಿ ಹಿಂದಿನ ವರ್ಷ ೧೩೫೯೦೦೦ ರೂ. ಹುಟ್ಟುವಳಿಯಾಗಿರುವಲ್ಲಿ ಈ ವರ್ಷ ೨೮೫೦೦೦ ರೂ. ಹುಟ್ಟುವಳಿಯಾಗಿದೆ. ಮತ್ತು ಹಿಂದಿನ ವರ್ಷ ೬೩೪೮೦೦ ರೂ. ಖರ್ಚಾಗಿರುವಲ್ಲಿ ಈ ವರ್ಷ ೬೩೪೦೦೦ ರೂ. ಖರ್ಚಾಗಿದೆ. ಹಿಂದಿನ ವರ್ಷದಲ್ಲಿ ಖರ್ಚು ಜಾತಾ ೧೦೮೭೦೦ ರೂ. ಉಳಿಯಿತು. ಈ ವರ್ಷ ೧೪೧೧೦೦೦ ರೂ. ಉಳಿದಿವೆ.

ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ದೇವರಾಯ ದುರ್ಗದ ಮನ್ನಾ ಜಂಗಲಿಯನ್ನು ಬೇಟೆಯ ಮೃಗಪಕ್ಷಿಗಳ ಸಂರಕ್ಷಣೆಗಾಗಿ ಏರ್ಪಟ್ಟಿರುವ ಸ್ಥಳಗಳ ಪಟ್ಟಿಯಲ್ಲಿ ಪರೀಕ್ಷಾರ್ಥವಾಗಿ ಸೇರಿಸಲಾಯಿತ. ಬೇಟೆಯ ಮೃಗಪಕ್ಷಿಗಳ ಸಂರಕ್ಷಣೆ ಬಾಬಿಗಾಗಿ ೯೨೦ ರೂ ಖರ್ಚಾಯಿತು.

ಭೂಗರ್ಭಶೋಧನೆ ಮತ್ತು ಗಣಿಯ ಕೆಲಸ.

ಲಂಡನ್ ಪಟ್ಟಣದ ಜಾನ್ ಟೇಲರ್ ಅಂಡ್ ಸನ್ಸ್‌ಯವರ ಆಡಳಿತದಲ್ಲಿರುವ ಕೋಲಾರದ ಚಿನ್ನದಗಣಿಯ ಪೈಕಿ ಕೆಲವು ತಾಕುಗಳಿಗೆ ಗುತ್ತಿಗೆಯನ್ನು ಹೊಸದಾಗಿ ಮಾಡುವ ವಿಷಯವು ಬಹುಕಾಲದಿಂದ ಫೈಸಲಾಗದೆ ಬಾಕಿಯಲ್ಲಿತ್ತು: ಅದು ೧೯೧೦ ನೆಯ ಮಾರ್ಚಿ ೩೧ ನೆಯ ತಾರೀಖಿನ ಲಾಗಾಯತು ಪುನಃ ೩೦ ವರ್ಷಗಳ ವರೆಗೆ ಗುತ್ತಿಗೆಗಳನ್ನು ಹೊಸದಾಗಿ ಕೊಡುವುದರ ಮೂಲಕ ಅಖೈರಾಗಿ ಫೈಸಲಾಗಿರುವುದರಿಂದ ಹೋದ ವರ್ಷವು ಈ ಸಂಸ್ಥಾನದ ಗಣಿಗಳ ಆಡಳಿತದ ವಿಷಯದಲ್ಲಿ ಬಹು ಮುಖ್ಯವಾದುದಾಗಿರುತ್ತದೆ. ಹೀಗೆ ಹೊಸ ಗುತ್ತಿಗೆಗಳನ್ನು ಮಾಡಿದುದರಿಂದ ಸರ್ಕಾರಕ್ಕೆ ಫಲವೇನಂದರೆ ಗಣಿಯಿಂದ ತೆಗೆದ ಭಂಗಾರದಲ್ಲಿ ಈವರಿಗೆ ಬರುತ್ತಿದ್ದ ಶೇಕಡಾ ೫ ರಷ್ಟು ರಾಜಾಯದ ಜೊತೆಗೆ ಹಂಚಲ್ಪಟ್ಟ ತಮಾಂ ನಫೆಯಲ್ಲಿ ಶೇಕಡಾ ೨॥ ಯಷ್ಟು ನಫೆಯು ಈಗ ಹೆಚ್ಚಾಗಿ ಸರ್ಕಾರಕ್ಕೆ ಸಲ್ಲತಕ್ಕದಾಗಿರುತ್ತದೆ.

೧೯೧೦ನೆಯ ಅಕ್ಟೋಬರ್ ೭ ನೆಯ ತಾರೀಖಿನಲ್ಲಿ ಪ್ರಚುರಪಡಿಸಿದ ಮೈಸೂರು ಸಂಸ್ಥಾನದ ಖನಿಜಾನ್ವೇಷಣೆಗೆ ಲೈಸನ್ಸ್ ಕೊಡುವುದಕ್ಕೂ ಗಣಿಗಳ ಗುತ್ತಿಗೆಕೊಡುವುದಕ್ಕೂ ಸಂಬಂಧಪಟ್ಟ ನಿಬಂಧನೆಗಳಿಂದ ಜಾರಿಗೆ ಬಂದ ಬದಲಾವಣೆಗಳೇನೆಂದರೆ—ಈ ಲೈಸನ್ಸ್‌ಗಳನ್ನೂ ಗುತ್ತಿಗೆಗಳನ್ನೂ ಸಾಮಾನ್ಯವಾಗಿ ಮೊದಲು ಎಲ್ಲಾ ಖನಿಜಗಳಿಗೂ ಕೊಡುತ್ತಿತ್ತಷ್ಟೆ: ಇನ್ನು ಮೇಲೆ ಅದಕ್ಕೆ ಬದಲಾಗಿ ಅವುಗಳನ್ನು ಕೆಲವು ಗೊತ್ತಾದ ಖನಿಜಗಳಿಗೆ ಮಾತ್ರ ಕೊಡತಕ್ಕದೆಂತಲೂ ಪ್ರತಿಯೊಂದು ಖನಿಜವನ್ನೂ ಗಣಿಯಿಂದ ತೆಗೆದ ತರುವಾಯ ಉಂಟಾಗುವ ಅನುಭವದಮೇಲೆ ಖನಿಜಗಳ ರಾಜಾಯವನ್ನು ಆಗಿಂದಾಗ ಗೆಜಿಟ್ಟನಲ್ಲಿ ಪ್ರಕಟಿಸುವುದರ ಮೂಲಕ ನಿಷ್ಕರ್ಷೆಮಾಡತಕ್ಕದೆಂತಲೂ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ರಾಜಾಯಗಳನ್ನು ಆಗಿಂದಾಗ ಬದಲಾಯಿಸಬಹುದೆಂತಲೂ ಸದರಿ ನಿಬಂಧನೆಗಳನ್ನು ತಿದ್ದುಪಾಟು ಮಾಡಿಇದೆ. (ಸಶೇಷ.)

ಪತ್ರವ್ಯವಹಾರ.

ಬೆಳಗಾಂವಜಿಲ್ಲೆಯ ವತಿಯಿಂದ ಬೆಳಗಾಂವಿಯಲ್ಲಿ ಕೂಡತಕ್ಕ ೬ ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಕೆಳಗೆ ಬರೆದ ಮಹನೀಯರು ಬೆಳಗಾಂವಿಯಲ್ಲಿ ಕೂಡತಕ್ಕದ ೬ನೆಯ ಶ್ರೀಮದ್ವೀರಶೈವಮಹಾಸಭೆಯ ವಿಷಯವಾಗಿ ತಮ್ಮಲ್ಲಿಯ ಮಹನೀಯರಿಗೆ ತಿಳಿಸಿ ಸಭೆಗೆ ಬರಮಾಡುವುದಕ್ಕಾಗಿಯೂ, ಚೆಲ್ಲಿಕೆಪಡರನ್ನು ಕಳಿಸುವುದಕ್ಕಾಗಿಯೂ, ತಂತಮ್ಮ ಶಕ್ತ್ಯನುಸಾರ ಮಹಾಸಭೆಯ ವೆಚ್ಚಕ್ಕಾಗಿ ಧನಸಹಾಯವನ್ನು ವರ್ಗಣಿ ರೂಪದಿಂದ ಮಾಡಿ ಈ ಸಭೆಯ ಖಜಾನದಾರರ ಕಡಿಗಾಗಲಿ, ಚೀಫ್ ಸೆಕ್ರೆಟರಿಗಳ ಕಡೆಗಾಗಲಿ ರವಾನಿಸುವ ಕುರಿತು ವಿನಂತಿಯು. ಸಭೆಯ ಸಿದ್ಧಾಂತ ನಡವಳಿಕೆಯನ್ನು ವನ್ನಾಬೇಜಿಂಗ ಕಮಿಟಿಯವರು ಆಗಾಗ್ಗೆ ನಮ್ಮ ಸ್ವಾರಕತ್ರದ ದ್ವಾರಾ ತಿಳಿಸುವರು. ಅದನ್ನು ನಮ್ಮ ಸಮಾಜದ ಬಂಧುಗಳು ಲಕ್ಷ್ಯಕೊಟ್ಟು ನೋಡಿಕೊಳ್ಳುವರೆಂದು ಅಪೇಕ್ಷಿಸುವೆನು. ವಿಧೇಯ

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೀಫ್ ಸೆಕ್ರೆಟರಿ
೬ ನೆಯ ಶ್ರೀಮದ್ವೀರಶೈವ ಮಹಾಸಭೆ
ಆಫೀಸ ಬೆಳಗಾಂವ

ಸನ್ ೧೯೧೧ ನೆಯ ಇಸವಿ ಡಿಸೆಂಬರ ತಿಂಗಳಲ್ಲಿ ಬೆಳಗಾಂವಿಯಲ್ಲಿ ಆಗುವ ಶ್ರೀಮದ್ವೀರಶೈವ ಮಹಾಸಭೆಯ

ಅಧ್ಯಕ್ಷರು— ಶ್ರೀ ಸರ ದೇಸಾಯಿ ಪರಗಣೆ ಚಚಡಿ.

ಸೆಕ್ರೆಟರಿಗಳು.

೧. ರಾ॥ರಾ॥ ಶಿವಪ್ಪಣ್ಣಾ ಕಂಕಣವಾಡಿ ಶಹಪೂರ, ೨. ಶ್ರೀರಾ॥ ಮಹಾಲಿಂಗಸ್ವಾಮಿ ಕಣಬರಗಿಮಠ ಗೋಕಾಕ ಫಾಲ್ಸ್, ೩. ಗದಿಗಯ್ಯಾ ಪ್ರಭುಮಯ್ಯಸ್ವಾಮಿ ಮಾವಿನಕಟ್ಟಿ ಬೆಳಗಾಂವ.

ಖಜಾನೆದಾರರು.

೧. ರಾ॥ರಾ॥ ಗುರಪ್ಪಣ್ಣಾ ಹೊನ್ನಳ್ಳಿ ಶಹಾಪೂರ ಬೆಳಗಾಂವ, ೨. ಶ್ರೀರಾ॥ ಮಹಾಲಿಂಗಸ್ವಾಮಿ ಕಣಬರಗಿ ಮಠ ಬೆಳಗಾಂವ.

ಆಡಿಟರ್ಸ್.— ರಾ॥ ರಾ॥ ಗಳಾದ ೧ ಶಿವಲಿಂಗಪ್ಪಾ ಇಟ್ಟಗಿ, ೨ ಪರಪ್ಪಾ ನಾಲಿ, ೩ ವೀರಪ್ಪಾ ಚನ್ನಪ್ಪಾ ಜಿಗಜಿನ್ನಿ ಶಹಾಪೂರ.

ಜನರಲ್ ಕಮಿಟಿಯ ಜನರ ಹೆಸರು.

ಬೆಳಗಾಂವ.— ೧. ಶ್ರೀ ಸಿದ್ಧಲಿಂಗಸ್ವಾಮಿ ಪಟ್ಟದ ದೇವರು ಬೆಳಗಾಂವ, ೨. ಕರಬಸಯ್ಯಸ್ವಾಮಿ ಕುಡಚಿಮಠ ಬೆಳಗಾಂವ, ೩. ಸೋಮಶೇಖರಯ್ಯ ರಾಚಯ್ಯ ಅಥಣಿ ಬೆಳಗಾಂವ, ೪. ಗುರುಸಿದ್ಧಯ್ಯ ಪಡದಿಮಠ ಬೆಳಗಾಂವ, ೫. ಗದಿಗಯ್ಯಸ್ವಾಮಿ ಮಾವಿನ ಕಟ್ಟಿ ಬೆಳಗಾಂವ, ೬. ಶಿವಮೂರ್ತಯ್ಯಸ್ವಾಮಿ ಕುಡಚಿಮಠ ಬೆಳಗಾಂವ, ೭. ರಾ॥ ಶಿವಲಿಂಗಪ್ಪಾ ಇಟ್ಟಗಿ, ೮. ಗುರಪ್ಪಣ್ಣಾ ಹೊನ್ನಳ್ಳಿ, ೯. ವೈಜಪ್ಪಣ್ಣಾ ಆನಿಗೋಳ, ೧೦ ಪರಪ್ಪಾ ನಾಲಿ, ೧೧. ಶಿವಲಿಂಗಪ್ಪಾ ಬಾಳಿ ಕುಂದಿ, ೧೨. ಬಸಪ್ಪಾ ಭೋಜಣ್ಣನವರ, ೧೩. ಗುರುಪಾದಪ್ಪಾ ಇಂಗಳೇಶ್ವರ, ೧೪. ವೀರಪ್ಪಾ ಕೊಚ್ಚಲಗಿ, ೧೫ ಕಾಡಪ್ಪಾ ವಿರೂಪಾಕ್ಷಿ, ೧೬. ಅಪ್ಪಯ್ಯಪ್ಪಾ ಧಮ್ಮಣಗಿ, ೧೭. ಅಪ್ಪಯ್ಯಪ್ಪಾ ಬಾಳೇಕುಂದ್ರಿ.

ಶಹಾಪೂರ:— ೧. ಚನ್ನಪ್ಪಣ್ಣಾ ಬೋಳಮಲ್ಲ, ೨. ಚೆನ್ನಮಲ್ಲಪ್ಪಣ್ಣಾ ಕಿತ್ತೂರ, ೩. ಚನ್ನಬಸಪ್ಪಣ್ಣಾ ಬೆಂಬಳಗಿ ೪ ಬಸಲಿಂಗಪ್ಪಾ ಸೆಟ್ಟರ, ೫. ಸಂಗನಬಸಪ್ಪಾ ಭೋಜದ ೬. ರಾಚಪ್ಪಾ ಅಣ್ಣಾ ಬನ್ನೂರ, ೭. ವೀರಪ್ಪಾ ಗುರುಬಸಪ್ಪಾ ಜಿಗಜಿನ್ನಿ, ೮ ತೋಟಪ್ಪಾ ಬಳ್ಳೊಳ್ಳಿ, ೯. ವೈಜಪ್ಪಾ ಕರಣಿ, ೧೦ ರೇವಣಸಿದ್ಧಪ್ಪಾ ಚನಬಸಪ್ಪಾ ಜಿಗಜಿನ್ನಿ, ೧೧ ನಿರ್ವಾಣಪ್ಪಾ ಸಮತಸೆಟ್ಟಿ, ೧೨. ಶಿವಪ್ಪಾ ಕಂಕಣವೇಲಿ ೧೩. ವೀರಪ್ಪಾ ಚನ್ನಪ್ಪಾ ಜಿಗಜಿನ್ನಿ, ೧೪ ದುಂಡಪ್ಪಾ ಉಮರಾಣಿ, ೧೫ ವೀರಸಂಗಪ್ಪಾ ಅಂಕಲಗಿ, ೧೬. ಗಂಗಾಧರಪ್ಪಾ ಆಲೂರ, ೧೭ ಸಂಗಪ್ಪಾ ಕಾಮರಾವ ಪಾಟೀಲ.

ಅಥಣಿ ತಾಲ್ಲೂಕ:— ೧. ನೂರೊಂಪ್ಪಣ್ಣಾ ಕೆಟ್ಟಿ, ೨ ರೇವಣಪ್ಪಣ್ಣಾ ಮಹಾಜನ, ೩ ರೇವಣಸಿದ್ಧಪ್ಪಾ ಹಿಪ್ಪರಗಿ ೪ ಶಿವಲಿಂಗಪ್ಪಾ ಸೆಟ್ಟಿ, ೫. ಬಸಪ್ಪಣ್ಣಾ ಮುತ್ತೂರ, ೬ ವೀರಪ್ಪಾ ಶಿವಣಗಿ. ೭. ಸಿದ್ಧನಗೌಡಾ ಪಾಟೀಲ ತೆಲಸಂಗ ೮. ರಾಮನಗೌಡ ಪಾಟೀಲ ಕಕಮರಿ, ೯. ತಮ್ಮಣ್ಣಪ್ಪಾ ಸತ್ಯಪ್ಪಾ ಚಿಕ್ಕೋಡಿ ರಬಕವಿ.

ಗೋಕಾಕ ತಾಲ್ಲೂಕ:— ೧ ಶ್ರೀ ಶಿವಮೂರ್ತಯ್ಯಸ್ವಾಮಿ ಕಣಬರಗಿ ಮಠ ಗೋಕಾಕಫಾಲ್ಸ್, ೨. ಶ್ರೀ ಲಾಗಲೋಟಯ್ಯಸ್ವಾಮಿ ವಿಭೂತಿ ಗೋಕಾಕ, ೩. ರಾ॥ರಾ॥ಗಳಾದ ಚನಬಸಪ್ಪಣ್ಣಾ ಲಕ್ಷಪ್ಪ ಯಾದವಾಡ, ೪. ಚೆನ್ನಪ್ಪಾ ಹುನಗುಂದ ಯಾದವಾಡ, ೫ ಬಸಲಿಂಗಪ್ಪಾ ಪಾಚ್ಛಾಪುರ ಗೋಕಾಕ, ೬. ಶಿ. ಶಿವಲಿಂಗಯ್ಯಾ [illegible] ೭. ವೀರಭದ್ರಪ್ಪಾ [illegible] ಗೋಕಾಕ, ೮. ಪರಮಸೆಟ್ಟಿ ಪಾಟೀಲ ಅಡಿಬಟ್ಟಿ ಗೋಕಾಕ, ೯. ಇಟ್ಟಲಿಂಗಪ್ಪಾ ಅಣ್ಣಾ ಉಣ್ಣಿ ಗೋಕಾಕ, ೧೦. ಅಲ್ಲಪ್ಪಣ್ಣಾ ಕಲ್ಯಾಣಶೆಟ್ಟಿ ಗೋಕಾಕ, ೧೧ ಚನಬಸಪ್ಪಾ ಅಂಗಡಿ ಕುಂದರಗಿ, ೧೨ ಮಹಾರುದ್ರಪ್ಪಾ ಜೊಳ್ಳಕೇರಿ ಕೌಜಲಗಿ, ೧೩. ಸಿದ್ಧಮಲ್ಲಪ್ಪಾ ನೂರಂದಪ್ಪಾ ಕಪಲಿ ಗೋಕಾಕ, ೧೪. ಪರಪಯ್ಯಾ ಶಿವಯ್ಯಾ ಮಠದ ಕೊಣ್ಣೂರ ೧೫. ಗುರುಸಿದ್ಧಸ್ವಾಮಿ ಸಾವಗಾಂವ ಕೊಣ್ಣೂರ, ೧೬ ಗುರುಲಿಂಗಪ್ಪಾ ಅಣ್ಣಾ ಶಿರೋಳ, ೧೭. ಶ್ರೀ ಮಹಾಸ್ವಾಮಿಗಳು ಅರಭಾವಿ ಮಠ.

ಬೆಳಗಾಂವ ತಾಲ್ಲೂಕ:— ೧. ಮ॥ರಾ॥ ಗಳಾದ ಹೊಳೆಬಸಪ್ಪಣ್ಣಾ ಸಂಗೊಳ್ಳಿ ಅರ್ಗಕಟ್ಟಿ, ೨. ಶಿವಪ್ಪಾ ಪಾಟೀಲ ಹಿರೇಬಾಗೇವಾಡಿ. ೩. ಬಾಬಾ ವಿರೂಪಾಕ್ಷಪ್ಪಾ ಪಾಟೀಲ ಗಜಪತಿ, ೪. ಗುರುಲಿಂಗಯ್ಯಾ ಮಗ್ಯೆನವರ ಹಿರೇ ಬಾಗೇವಾಡಿ, ೫ ವೀರಭದ್ರಯ್ಯಸ್ವಾಮಿ ಚಿಕ್ಕಬಾಗೇವಾಡಿ, ೬. ಭೀಮನಗೌಡಾ ಅಡಿವೆಪ್ಪಗೌಡಾ ಪಾಟೀಲ ಮುತನಾಳ ೭. ಮರಯ್ಯಸ್ವಾಮಿ ಸಂಬರಗಿ, ೮. ಮುಪ್ಪಯ್ಯಸ್ವಾಮಿ ಮುಚ್ಚಂಡಿ, ೯. ಚನಬಸಪ್ಪಾ ಕಾರಾವಿ ಬಾಳೇಕುಂದ್ರಿ.

ಬೈಲಹೊಂಗಲ ತಾಲ್ಲೂಕ:— ಶ್ರೀ ಕಲ್ಮಠದ ಮಹಾಸ್ವಾಮಿಗಳು ಕಿತ್ತೂರ, ೨. ರಾಮಸಾ॥ ಶಿವಲಿಂಗಪ್ಪಣ್ಣಾ ಮಹಾಂತಸೆಟ್ಟಿ ನೇಸರಗಿ, ೩. ಮ॥ರಾ॥ ಗಳಾದ ಸಾವಳಗೆಪ್ಪಣ್ಣಾ ಹಿಳ್ಳಿ ಕಿತ್ತೂರ, ೪. ಮಲ್ಲನಾಯ್ಕ ಪಾಟೀಲ ಬೈಲಹೊಂಗಲ, ೫. ಶಿವಲಿಂಗಪ್ಪಾ ಚೆನ್ನಪ್ಪಾ ಮೇಖಗೂಡ, ೬. ಚೆನ್ನಪ್ಪಾ ಭಾಯಪ್ಪಾ ಮೂಗಿ, ೭. ರೇವಪ್ಪಾ ಕರಬಸಪ್ಪಾ ಜಿಗಜನ್ನಿ, ೧೦ ಶ್ರೀರಾ॥ ಗದಿಗಯ್ಯಸ್ವಾಮಿ ಪುರಾಣಿಕ ಮಠ ೧೧. ಬಸವಾರ್ಯ ಚನ್ನಬಸವಾರ್ಯ ಶಾಳಾಮಾಸ್ತರ ಕಿತ್ತೂರ, ೧೨. ಚನ್ನಮಲ್ಲಪ್ಪಾ ಅಡಿವೆಪ್ಪಾ ಅಣ್ಣಾ ಮಳಸಂಗದ, ೧೩. ಮಹಾಬಳೇಶ್ವರ ಮುತ್ತೂರ, ೧೪. ವಿರೂಪಾಕ್ಷಪ್ಪಾ ನೀಲಗಾರ, ೧೫. ಶ್ರೀ ರಾ॥ ಸಂಗನಬಸಯ್ಯಾ ತೋರಗಲ್ಮಠ, ೧೬. ಮ॥ರಾ॥ಗಳಾದ ಚನಮಲ್ಲಪ್ಪಾ ಸಿಂದೊಳ್ಳಿ, ೧೭. ಶಿವಪುತ್ರಪ್ಪಾ ಜಂಗಮನಿ, ೧೮. ಬಸಪ್ಪ ಮಾಸ್ತರ ತೊಂಬರಕೊಪ್ಪ, ೧೯. ಧರ್ಮಪ್ಪಾ ಗುರುಸಿದ್ಧಪ್ಪಾ ಚೆಕ್ಕಣ್ಣವರ ೨೦. ಬಸವಣ್ಣೆಪ್ಪಾ ಟೋಪಣ್ಣನವರ, ೨೧. ವಿರೂಪಾಕ್ಷ ಶಿವಲಿಂಗಪ್ಪಾ ಮಾರೀಹಾಳ, ೨೨. ಚನ್ನವೀರಪ್ಪಾ ಭಾಂವಿ, ೨೩. ಶ್ರೀಮಂತ ದಾನಪ್ಪಗೌಡ ಇನಾಮದಾರ ನೇಗಿನಹಾಳ, ೨೪. ಬಸವಣ್ಣೆಪ್ಪಾ ಜವಳಿ ಬೈಲಹೊಂಗಲ, ೨೫. ವೀರಭದ್ರಪ್ಪಾ ಕಾದರೊಳ್ಳಿ ಬೈಲಹೊಂಗಲ, ೨೬ ಸಂಗನಗೌಡ ಪಾಟೀಲ ತುರಮರಿ, ೨೭. ರಾಜಶೇಖರ ಪಾಟೀಲ ಸಂಪಗಾಂವ

ಸವದತ್ತಿ ತಾಲ್ಲೂಕ:— ೧. ಶ್ರೀಮಂತ ದೇಸಾಯಿ ಸಾಹೇಬ ಚಚಡಿ, ೨. ಶ್ರೀಮಂತ ದೇಸಾಯಿ ಸಾಹೇಬ ಕಲ್ಲೂರ ೩. ಮ॥ ರಾ॥ ಗಳಾದ ಗುರುಪಾದಪ್ಪಾ ಹೊಂಗಲದ ಯಕ್ಕುಂಡಿ, ೪ ಪತ್ರೆಪ್ಪಾ ಅಡಿಕಿ ಯಕ್ಕುಂಡಿ, ೫. ಬಸಪ್ಪಾ ಬಸಪ್ಪಾ ಹವಾಲದಾರ ಹಾರೊಬೆಳವಡಿಹೊಂಗಲ, ೬ ರಾಜಶೇಖರಶಾಸ್ತ್ರಿ ಹಾರೋ ಬೀಡಿಕೊಂಗಲ, ೭. ಭೂಪಾಲಪ್ಪಾ ಸವದತ್ತಿ, ೮. ವಿರೂಪಾಕ್ಷಪ್ಪಾ ಅಂಗಳಿ ಸವದತ್ತಿ, ೯ ಗುರುಪಾದಪ್ಪಾ ಹಂಪಣ್ಣನವರ ಸವದತ್ತಿ, ೧೦. ಗುರುಲಿಂಗಪ್ಪಾ ಹಂಪಣ್ಣನವರ ಸವದತ್ತಿ, ೧೧. ಕರಿಬಸಪ್ಪಾ ಮಾಮನಿ, ಸವದತ್ತಿ, ೧೨. ರುದ್ರಪ್ಪಾ ಬೆಲ್ಲದ ಸವದತ್ತಿ, ೧೩. ಶಿವನಗೌಡ ಪಾಟೀಲ ಸವದತ್ತಿ, ೧೪ ಜಗದಪ್ಪಾ ಪಾಟೀಲ ಉಗರಗೊಳ, ೧೫. ಅಂದಾನಪ್ಪಾ ಬಾಳಿ ಮುನವಳ್ಳಿ, ೧೬. ಸೋಮಪ್ಪ ಬಾಳಿ ಮುನವಳ್ಳಿ, ೧೭. ದುಂಡಪ್ಪಾ ಬಾಳಿ ಅಕ್ಷಕನವರ ಮುನವಳ್ಳಿ, ೧೮. ಸೋಮಪ್ಪಾ ಧರೇದ ಮುನವಳ್ಳಿ, ೧೯. ವಿರೂಪಾಕ್ಷಗೌಡ ಮುಳ್ಕೀಪಾಟೀಲ ಮುನವಳ್ಳಿ, ೨೦. ವಿರೂಪಾಕ್ಷ ಗೌಡಾ ಪೊಲೀಸು ಪಾಟೀಲ ಮುನವಳ್ಳಿ, ೨೧ ಮಲ್ಲಪ್ಪಾ ಲಂಬೂ ಮುನವಳ್ಳಿ, ೨೨. ರಾಚಪ್ಪಾ ಬೆಳವಲಗಿಡದ ಮುನವಳ್ಳಿ.

ಖಾನಾಪುರ ತಾಲ್ಲೂಕ:— ೧. ರುದ್ರಪ್ಪಾ ನಾಗಪ್ಪಾ ಹೊಂಡದಕಟ್ಟಿ ಖಾನಾಪುರ, ೨. ಶಿವಪ್ಪಾ ಶಿವಲಿಂಗಪ್ಪಾ ಹೊಸಮನಿ ಖಾನಾಪುರ, ೩. ಚನಮಲ್ಲಪ್ಪಾ ಮಲ್ಲಪ್ಪಾ ಹೊಸಮನಿ ಖಾನಾಪುರ, ೪. ಗುರುಸಿದ್ಧಪ್ಪಾ ಜ್ಯೋತಿ ಖಾನಾಪುರ, ೫. ಸಂಗಪ್ಪಾ ಬಸವಣ್ಣೆಪ್ಪಾ ಸೆಟ್ಟಿ ನಂದಗಡ, ೬. ಬಸಯ್ಯಾ ಸ್ವಾಮಿ ವಸ್ತ್ರದ ನಂದಗಡ, ೭. ಕಲ್ಲಪ್ಪಣ್ಣಾ ಕಲ್ಯಾಣಿ ನಂದಗಡ ೮. ಚನ್ನಪ್ಪಾ ಬಸವಣ್ಣೆಪ್ಪಾ ಹಂಜಿ ಹಲಸಿ, ೯. ಗುರುಸಿದ್ಧಪ್ಪಾ ಸೆಟ್ಟಿ ಹಲಸಿ, ೧೦. ಬಸಪ್ಪಾ ಪಾಟೀಲ ಇಟಗಿ, ೧೧. ಬಸಲಿಂಗಪ್ಪಾ ಸಾಣಿಕೊಪ್ಪಾ ಇಟಗಿ, ೧೨. ಬಸಪ್ಪಾ ಲಂಗೋಟಿ ಇಟಗಿ, ೧೩. ಬಸಪ್ಪಾ ಪಾಟೀ [illegible] ಇಟಗಿ, ೧೪. ಬಾಪುಗೌಡಾ ಪಾಟೀಲ ತೋಲಗಿ, ೧೫. [illegible] ಸಪ್ಪಾ ಸೆಟ್ಟಿ ಬೀಡಿ.

ಹುಕ್ಕೇರಿ ವ ಚಿಕ್ಕೋಡಿ ತಾಲ್ಲೂಕ:— ೧ [illegible] ಮಲ್ಲಪ್ಪಣ್ಣಾ ಸಿಂತ್ರೆ ಕರೋಶಿ, ೨. ರಾ॥ ಗಳಾದ [illegible] ಪ್ಪಣ್ಣಾ ಕೋಟಿವಾಲೆ ನಿಪ್ಪಾಣಿ, ೩. ರಾಜಪ್ಪ [illegible] ರವಾದ ನಿಪ್ಪಾಣಿ, ೪. ಚೆನ್ನಪ್ಪಣ್ಣಾ [illegible] ಗಪ್ಪಣ್ಣಾ ಶಾವನಸೆಟ್ಟಿ ನಿಪ್ಪಾಣಿ, ೬. [illegible] ಕ ಸಂಕೇಶ್ವರ, ೭ ತಮ್ಮಣ್ಣಪ್ಪಣ್ಣಾ ನೇಸರ [illegible] ಚೆಂಬಾಬಜೆಪ್ಪಾ ಪಟ್ಟಣಸೆಟ್ಟಿ [illegible] ಕಣಗಲೆ ಸಂಕೇಶ್ವರ, ೧೦. ಪಾಲಕಪ್ಪಣ್ಣಾ ಜನ್ನ ಚಿಕ್ಕೋಡಿ, ೧೧ ಕುರಡಪೂಜೆಪ್ಪಾ ಪಿಂಟಿನೇಲ ಚಿಕ್ಕೋಡಿ, ೧೨. ಶಿವತಪ್ಪಣ್ಣಾ ಕತ್ತಿ ಬೆಲ್ಲದಬಾಗೇವಾಡಿ, ೧೩. ಗುರುಪ್ಪಣ್ಣಾ ಬಿಳ್ಳದ ಬೆಲ್ಲದಬಾಗೇವಾಡಿ, ೧೪. ಬಸವಪ್ರಭಪ್ಪಣ್ಣಾ ಹೊನ್ನಳ್ಳಿ ಬೆಲ್ಲದಬಾಗೇವಾಡಿ, ೧೫. ಸಿದ್ಧಲಿಂಗಪ್ಪಣ್ಣಾ ಕಣಗಲೆ ಬೆಲ್ಲದಬಾಗೇವಾಡಿ, ೧೬. ಶಾಂತಪ್ಪಣ್ಣಾ ತಂಬಚೆ ಹುಕ್ಕೇರಿ ೧೭. ವೀರಭದ್ರಪ್ಪಣ್ಣಾ ಹೆದ್ದೂರ ಸೆಟ್ಟಿ ಹುಕ್ಕೇರಿ, ೧೮. ಶಾಂತವೀರಯ್ಯಾ ಬಸಲಿಂಗಪ್ಪಾ ಹಿರೇಮಠ ನೇರಲಿ, ೧೯. ಶಂಕರೆಪ್ಪಣ್ಣಾ ವಾಗರಾಳಿ ದಡ್ಡಿ, ೨೦. ಮಲ್ಲಪ್ಪಣ್ಣಾ ತವಕರಿ ದಡ್ಡಿ, ೨೧. ಚನಬಸಪ್ಪಣ್ಣಾ ಮುಂಗೆನವಾಡಿ ದಡ್ಡಿ, ೨೨. ದೇವಪ್ಪಣ್ಣಾ ಹತ್ತರಕಿ ಹಲಕರ್ಣಿ, ೨೩. ರೇವಪ್ಪಣ್ಣಾ ಕಂಗೂರಿ ಹಲಕರ್ಣಿ, ೨೪. ಬಸಲಿಂಗಪ್ಪಣ್ಣಾ ಕಂಕಣವಾಡಿ ಯಮಕನ್‌ಮರ್ಡಿ, ೨೫ ಪರಪ್ಪಣ್ಣಾ ತಂಬಚೆ, ಯಮಕನಮರ್ಡಿ, ೨೬. ಶಿವಲಿಂಗಪ್ಪಣ್ಣಾ ತಂಬಚೆ ಯಮಕನಮರ್ಡಿ ೨೭. ದುಂಡಪ್ಪಣ್ಣಾ ಬಾಗಲಕೋಟೆ ಯಮಕನಮರ್ಡಿ ೨೮. ಶ್ರೀಶೈಲಪ್ಪಾ ಹಂದಿಗುಂದ ಯಮಕನಮರ್ಡಿ ೨೯. ಶಿವಪ್ಪಣ್ಣಾ ಗುಗ್ಗರಿ ಗಡಹಿಂಗ್ಲಾಜ ೩೦. ದುಂಡಪ್ಪಣ್ಣಾ ದಡ್ಡಿ ಗಡಹಿಂಗ್ಲಾಜ ೩೧. ಚನಬಸಪ್ಪಣ್ಣಾ ಕರಾಳೆ ಯಕಸಂಬಿ ೩೨. ಸಾತಪ್ಪಣ್ಣಾ ಪಾಲಪ್ಪಗೋಳ ಸವಲಗಿ ೩೩. ಮಲ್ಲಪ್ಪಾ ಅಣ್ಣಾ ಉದೋಶಿ ಪಾಛಾಪುರ ೩೪ ಈಶ್ವರಪ್ಪಾ ಶಿದಾನಪ್ಪಾ ಗುತ್ತಿಗುತ್ತಿ ಅಂಕಲಗಿ ೩೫. ಶ್ರೀ ಶ್ರೀಶೈಲ ಶಿವಮೂರ್ತಯ್ಯ ಮಠದ ಗುಡುಸ ೩೬. ಸಂಗಯ್ಯಾ ವೀರಯ್ಯಾ ಹಿರೇಮಠ ಕಾತಾಪುರ.

ಊದಬತ್ತಿಗಳು.

31

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೫-೦-೦; ೩-೦-೧; ೨-೮-೦; ೧-೪-೦ ; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಬಾದರ್‌ಸೇಲೆ ಚರಿತ್ರೆ	೦-೫-೦
ಕೆರಸ್ವಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

15 ಗುಣವಾಗದಿದ್ದರೆ ಹಣಪರತೆ.

ಮದನೋದ್ಧೀಪಕ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ [illegible] ಗುಣವಾಗಿ ಧಾತುಪುಷ್ಟಿಯು, ವೀರ್ಯವರ್ಧನೆ, [illegible] [illegible]

ಉತ್ತಮ ಗ್ರಂಥಗಳು.

7

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಮ್— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

25



ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿಡ್ಡಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಸೂಚನಾ.

4

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕೆಟಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಮಿಚ್ಚುಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಪಚಾಂಗೆಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೫ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮುಲಧೂ:— ಇದರಿಂದ ಹಳೇ ಗಜಕರ್ಣ, ಇಸಬು, ಬಿಷ್ಟ, ಚಷ್ಟ ಖಾತ್ರಿಯಿಂದ ನೆಟ್ಟಗಾಗುವವು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”
(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮರತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ಹುಬ್ಬಳ್ಳಿಯ ಸುಪ್ರಸಿದ್ಧ ಪಂಚಾಂಗ.

3

ಕನ್ನಡನಾಡಿನಲ್ಲಿ ಸಕಲ ಪಂಚಾಂಗಗಳೊಳಗೆ ಅತಿ ಶ್ರೇಷ್ಠ ಪಂಚಾಂಗವು ಹುಬ್ಬಳ್ಳಿಯದೆಂಬುದು ಸರ್ವಶ್ರುತ ಸಂಗತಿಯಷ್ಟೆ. ಈಗಾಗಲೆ ಪರಿಧಾವಿ ಸಂವತ್ಸರದ ಹೊಸ ಪಂಚಾಂಗವು ಮುದ್ರಣವಾಗಿ ಬಿಕರಿಗೆ ಸಿದ್ಧವಾಗಿರುವುದು. ಬೆಲೆಯಾದರೂ ಸುಲಭವಾಗಿ ಪಂಚಾಂಗ ೧ ಕ್ಕೆ ೨ ಆಣೆ. ೫ ಕ್ಕೆ ೮ ಆಣೆ. ಆದರೆ ಸ್ಟಾರ್ ಪತ್ರಿಕಾ ಚಂದಾದಾರರಿಗೆ ಮಾತ್ರ ೬ ಪಂಚಾಂಗಗಳಿಗೆ ೮ ಆಣೆ ಪ್ರಕಾರ ಕಳುಹುವೆವು. ಅಪೇಕ್ಷಕರು ತ್ವರೆಮಾಡಿರಿ. ವಿಳಾಸ—

ಕೆ. ಎಸ್. ಮಲ್ಲೇಶಶಾಸ್ತ್ರಿ, ಮುಕ್ಕಾಂ ಹುಬ್ಬಳ್ಳಿ.

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೦)

8

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:- ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೇ[illegible] ಶ್ರೀಕಂಠಾರಾಧ್ಯ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
ಮೈಸೂರು.

60

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೫೦ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೩೦ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೫೦ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಅಕ್ಟೋಬರ್ ತಾ|| ೯ ರಿಂದ ೧೯೧೧ನೇ ಅಕ್ಟೋಬರ್ ತಾ|| ೧೫ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಶ್ವಯುಜ ಬ|| ಪಾಡ್ಯಮಿಯಿಂದ ಆಶ್ವಯುಜ ಬ|| ಅಷ್ಟಮೀವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
9	ಸೋ	ಪಾ	6-13	ಅಶ್ವಿನಿ	48-1	23
10	¹ಮಂಗ	ಬಿ	2-41	ಭರಣಿ	56-10	24
11	²ಬುಧ	ಚೌ	53-35	ಕೃತ್ತಿಕೆ	42-20	25
12	³ಗುರು	ಪಂ	48-12	ರೋಹಿಣಿ	39-35	26
13	ಶುಕ್ರ	ಷ	41-53	ಮೃಗಶಿರ	34-29	27
14	ಶನಿ	ಸ	35-54	ಆರಿದ್ರೆ	30-18	28
15	ಭಾನು	ಅ	29-45	ಪುನರ್ವಸು	26-4	29

(1) ಚಾಮುಂಡೇಶ್ವರೀರಥೋತ್ಸವ. (2) ಸಂಕಷ್ಟಹರ ಚತುರ್ಥಿ. (3) ಕಳಶಭ[illegible].

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 126

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕವಿತಸಾದ್ಗುಣ್ಯಾಲವಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯಂ ಸದಾಪ್ರೊಕೆಗೆ ಗಾರ್ಕಸಾನುಕಂಪೋಜ್ವಲಂ ।

ಸಂಪುಟ ೨೪ } ಮೈಸೂರ್ ಸ್ಟಾರ್ ಸರ್ ೧೯೧೧ ನೇಯ ಇಸವಿ ಅಕ್ಟೋಬರ್ ತಾರೀಖು ೧೬ನೆಯ ಸೋಮವಾರ. [ಸಂಚಿಕೆ ೪೨

24 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!
ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. -8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು

ಕ್ರಯ ರೂ. 2-8 0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು ಇದು ರಾಸ್ಕೋಪು ವಾಚೆಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ ಪಿ. ಪಿ. ಛಾರ್ಜು ರೂ. 0-4-0

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮನಿಯಾರ್ಡರು ಮೂಲ್ಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣಾ ಛಟ್ಟಿ, ವಾಲ್‌ಟಾಕ್ಸ್ ರೋಡು ಮದ್ರಾಸು.

ಎಲ್ಲರಿಗೂ ಬೇಕಾದ ಪುಸ್ತಕಗಳು.

7

(೧) ಜರ್ಮ ಸಾಮ್ರಾಜ್ಯ ೦-೬-೦ ರಷ್ಯಾ ಜರ್ಮ ಯುದ್ಧಗಳಲ್ಲಿ ಪ್ರಸಿದ್ಧವಾದ ಜರ್ಮ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನರ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೬ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟರ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ಟರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರೂ ಮೆಚ್ಚಿದಾರೆ.

(೪) ಬೋಧನಕ್ರಮಸಂಗ್ರಹ ೦-೧-೬ ಮಾಸ್ಟರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆನಡೆಸಬೇಕು. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯವೆಚ್ಚ ಬೇರೆ.

ಜೆ. ಕೃಷ್ಣಶಾಸ್ತ್ರಿ ಅ|| ಮ|| ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

9

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಶತಕಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕರು, [illegible] ಮೈಸೂರು.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸದ ಮುಖ್ಯಭಾಗವು.

(ಕಳೆದ ವಾರದ ಶೇಷ.)

ಹೊಸದಾಗಿ ಕೊಡಲ್ಪಟ್ಟ ಅಥವಾ ಹೊಸದು ಮಾಡಲ್ಪಟ್ಟ ಗಣಿಗಳ ಗುತ್ತಿಗೆಗಳ ಸಂಖ್ಯೆಯೂ, ಖನಿಜಾನ್ವೇಷಣೆಗೆ ಕೊಡಲ್ಪಟ್ಟ ಲೈಸೆನ್ಸುಗಳ ಸಂಖ್ಯೆಯೂ ಹಿಂದಿನವರ್ಷ ೫೦ ಇದ್ದದ್ದು ಈ ವರ್ಷ ೫೭ ಆಯಿತು.

ಭೂಮಿಯೊಳಗಿನ ನೀರಿನ ವಸತಿ.

ಈ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಪ್ರತಿವರ್ಷವೂ ಬೇಸಗೆಯಲ್ಲಿ ಕುಡಿಯುವುದಕ್ಕೂ, ಮನೆಯ ಕೆಲಸಗಳಿಗೆ ಬಳಸುವುದಕ್ಕೂ ಸಾಕಾದಷ್ಟು ನೀರು ದೊರೆಯದೆ ಕಷ್ಟವಾಗಿದೆಯೆಂದು ಅಹವಾಲುಗಳು ಬಂದವಿಷಯದಲ್ಲಿಯೂ, ಗ್ರಾಮಗಳಲ್ಲಿ ನೀರಿನ ಸರಬರಾಯಿಯನ್ನು ಉತ್ತಮಸ್ಥಿತಿಗೆ ತರಬೇಕೆಂಬ ಕಾಮನಾಸ್ಪದವಾದ ಏರ್ಪಾಟಿನ ವಿಷಯದಲ್ಲಿಯೂ ಈ ಇಲಾಖೆಯಲ್ಲಿ ಸೇರಿಸಲ್ಪಟ್ಟ ತಿಳಿಯಬೇಕಾದ ಅಂಶಗಳನ್ನು ಸ್ಟೇಟ್ ಜಿಯಾಲಜಿಸ್ಟರಾದ ಡಾಕ್ಟರ್ ಡಬ್ಲಿಯು. ಎಫ್. ಸ್ಮಿತ್‌ರವರಿಂದ ಬರೆಯಲ್ಪಟ್ಟ ಟಿಪ್ಪಣಿಗಳ ರೂಪವಾಗಿ ಪ್ರಕಟಿಸಲಾಯಿತು. ಅಫೀಷಿಯೇಟಿಂಗ್ ಸ್ಟೇಟ್ ಜಿಯಾಲಜಿಸ್ಟರಾದ ಮಿ॥ ಇ. ಡಬ್ಲಿಯು. ಸಿದರೆಲ್‌ರವರು ತುಮಕೂರು, ಸಿರ್ಯ, ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ಗುಬ್ಬಿ ತಾಲ್ಲೂಕುಗಳಲ್ಲೆಲ್ಲ ಹಿಂದಿನ ವರ್ಷದ ಆಖೈರ್ ಭಾಗದಲ್ಲಿ ಸಂಚಾರಮಾಡಿ, ಹಾಲಿ ಇರುವ ಬಾವಿಗಳಲ್ಲಿ ಎಷ್ಟು ನೀರು ದೊರೆಯುತ್ತದೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೂ, ಗ್ರಾಮಗಳಿಗೆ ಬೇಕಾಗುವಷ್ಟು ನೀರನ್ನು ಒದಗಿಸಲು ಸಾಧ್ಯವಾದ ಉಪಾಯಗಳನ್ನು ಸೂಚಿಸುವುದಕ್ಕಾಗಿಯೂ, ಸುಮಾರು ನೂರು ಗ್ರಾಮಗಳಿಗೆ ಹೋಗಿ ಅಜಮಾಯಿಷಿ ಮಾಡಿ ನೋಡಿದರು. ಕೆಲವು ಗ್ರಾಮಗಳಲ್ಲಿ ಫಲಾನಾ ಸ್ಥಳಗಳಲ್ಲಿ ಬಾವಿಗಳನ್ನು ತೋಡಿದರೆ ಬೇಕಾದಷ್ಟು ನೀರು ಬಂದೀತೆಂದೂ ಸಹ ಅವರು ಸೂಚಿಸಿದರು.

ಮರಹಮ್ಮತ್ ಇಲಾಖೆ.

ಪ್ರಸಕ್ತವರ್ಷದಲ್ಲಿ ಲೋಕಲ್ ಫಂಡುಗಳ ದೇಖಿಲು ಎಲ್ಲಾ ಬಾಬುಗಳಿಂದಲೂ ಮರಹಮ್ಮತ್ ಕಾಮಗಾರಿಗಳಿಗಾಗಿ ಒಟ್ಟು ೫೩ ಲಕ್ಷ ರೂ. ವರೆಗೆ ಖರ್ಚಾಗಿರುತ್ತದೆ. ಈ ಮೊಬಲಗಿನ ಪೈಕಿ ೨॥। ಲಕ್ಷ ರೂ. ನೀರಾವರಿ ಕಾಮಗಾರಿಗಳಿಗಾಗಿಯೂ, ೬॥ ಲಕ್ಷ ರೂ. ಸಿವಿಲ್ ಕಾಮಗಾರಿಗಳಿಗಾಗಿಯೂ ಮಿಲಿಟರಿ ಕಟ್ಟಡಗಳಿಗಾಗಿಯೂ ಖರ್ಚಾಗಿರುತ್ತದೆ. ಈ ವರ್ಷ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮಾರೀಕಣಿವೆ ಕೆರೆಯ ಕೆಳಗೆ ಕಂದಾಯ ದಾಖಲಾಗಿರುವ ೧೧,೯೫೧ ಎಕರೆಗಳ ಅಚ್ಚುಕಟ್ಟಿನ ಪೈಕಿ ಸುಮಾರು ೫,೦೦೦ ಎಕರೆಗಳ ವಿಸ್ತೀರ್ಣಕ್ಕೆ ನೀರು ಸರಬರಾಯಿ ಆಗಿರುತ್ತದೆ. ಈ ಕೆರೆಯ ಕೆಳಗೆ ನೀರ ಸರಬರಾಯಿಯನ್ನು ಇನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ಅಜಮಾಯಿಷಿಗಳೂ ಸರ್ವೆ ಕೆಲಸಗಳೂ ನಡೆಯುತ್ತಾ ಇವೆ ಎಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಸಿರುತ್ತೇವಷ್ಟೆ. ಈ ವಿಷಯದಲ್ಲಿ ಹೀಗೆಯೇ ಮಾಡಬೇಕೆಂದು ನಿಷ್ಕೃಷ್ಟವಾದ ಸಲಹೆಗಳು ಪರಿಪಕ್ವಕ್ಕೆ ಬಂದಿರುತ್ತವೆ. ಅಬಾದಿಗಾಗಿ ತಿಳಿಸಲ್ಪಟ್ಟಿರುವ ಸಲಹೆಗಳಲ್ಲಿ, ೪॥ ಲಕ್ಷ ರೂ. ಖರ್ಚಿನಿಂದ ಎತ್ತರವಾದ ಮಟ್ಟದಲ್ಲಿ ಒಂದು ನಾಲೆಯನ್ನು ಕಟ್ಟಿಸಬೇಕೆಂಬ ಅಂಶವೂ, ಈಗ ಇರುವ ನಾಲೆಗಳ ಕೆಳಗೆ ತಾಕುವಾರಾಗಿ ನೀರು ಸರಬರಾಯಿ ಮಾಡುವ ಕ್ರಮವನ್ನು ಜಾರಿಗೆ ತರಬೇಕೆಂಬ ಅಂಶವೂ ಸಹ ಅಡಗಿರುತ್ತವೆ. ಕಬ್ಬು ಮುಂತಾದ ವಿಶೇಷ ಬೆಲೆಯಾಗುವ ಪೈರುಗಳಿಗೆ ನೀರು ಸರಬರಾಯನ್ನು ಹೆಚ್ಚಿಸುವುದೂ, ನೀರು ನಿಲ್ಲುವುದರಿಂದಲೂ ಉಪ್ಪಿನ ಚಪ್ಪು ಕಟ್ಟುವುದರಿಂದಲೂ ಜಮೀನಿಗೆ ಉಂಟಾಗುವ ಹಾನಿಯನ್ನು ತಡೆಯುವುದೂ, ಜನಗಳಲ್ಲಿ ಶೀತಜ್ವರವು ವ್ಯಾಪಿಸದಂತೆ ಮಾಡುವುದೂ ಸಹ ತಾಕುವಾರಾಗಿ ನೀರು ಸರಬರಾಯಿ ಮಾಡುವ ಕ್ರಮದ ಉದ್ದೇಶವಾಗಿರುತ್ತದೆ. ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಕ್ಕಾಗಿಯೂ, ಜಮೀನು ಸಾಗುವಳಿಗೆ ಕೊಡುವುದಕ್ಕಾಗಿಯೂ ನೀರನ್ನು ದಾಸ್ತಾನು ಮಾಡುವುದಕ್ಕೋಸ್ಕರ ಕನ್ನಂಬಾಡಿಯ ಹತ್ತಿರ ಕಾವೇರಿ ನದಿಯ ತೀರದಲ್ಲಿ ಒಂದು ದೊಡ್ಡ ಜಲಾಶಯವನ್ನು ಕಟ್ಟಿಸುವ ಬಗ್ಗೆ ತಯಾರಾದ ಅಂದಾಜು ಸರ್ಕಾರದವರ ಆಲೋಚನೆಯಲ್ಲಿರುತ್ತದೆ.

ಈ ವರ್ಷದಲ್ಲಿ ತಯಾರಾಗುತ್ತಿದ್ದ ಮುಖ್ಯವಾದ ಹೊಸ ಕಟ್ಟಡಗಳು ಯಾವುವೆಂದರೆ—ಮೈಸೂರಲ್ಲಿ ಹೊಸ ಅರಮನೆ, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟು, ಬೆಂಗಳೂರಲ್ಲಿ ಮಿಂಟೋ ಕಣ್ಣಾಸ್ಪತ್ರೆ, ಹೊಸ ಹೈಸ್ಕೂಲು ಸೆಂಟ್ರಲ್ ಕಾಲೇಜಿನ ಫಿಜಿಕ್ಸ್ ಲ್ಯಾಬೊರೇಟರಿ ಯಾ ಭೌತಿಕಶಾಸ್ತ್ರ ಶೋಧನಾಲಯ, ಶಿವಮೊಗ್ಗೆಯಲ್ಲಿ ಸಂದಲ್ ಕೋಠಿ, ತುಮಕೂರಿನಲ್ಲಿ ಹೈಸ್ಕೂಲ್ ಬಹಾಪಣೆ. ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಪೈಸ್ಕದ ೫ ನೆಯ ಡಿವಿಜನ್ನಿನ ಗಾಡಿಗಳಿಗೂ, ಕುದುರೆಗಳಿಗೂ ಸ್ಥಳವನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಬೆಂಗಳೂರಿನ ಹಳೇ ಸಿಲೇದಾರರ ಲೈನಿನಲ್ಲಿ ಗಾಡಿಖಾನೆಗಳನ್ನೂ, ಕುದುರೆ ಲಾಯಗಳನ್ನೂ ಕಟ್ಟಿಸುವುದಕ್ಕೆ ೧೯೩೬೪ ರೂ. ಮಂಜೂರ್ಮಾಡಲ್ಪಟ್ಟು ಕಾಮಗಾರಿಗೆ ಪ್ರಾರಂಭವಾಗಿದೆ.

ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಕಾಮಗಾರಿಗಳು.

ಈ ವರ್ಷ ೫೦೩೩೬ ರೂ. ಒಟ್ಟು ಖರ್ಚಾಯಿತು. ಕಾವೇರೀ ವಿದ್ಯುಚ್ಛಕ್ತಿಯು ಎಲ್ಲಾ ಬಾಬಿನಲ್ಲಿಯೂ ಒಟ್ಟು ೧೭೩೩೬೫೪ ರೂ. ಉತ್ಪತ್ತಿಯಾಯಿತು ಮತ್ತು ಕೆಲಸ ನಡೆಸುವುದಕ್ಕೆ ೩೯೧೯೦ ರೂ. ಖರ್ಚು ತಗಲಿತು. ಶೇಕಡಾ ೪ ರಂತೆ ತಗಲುವ ಬಡ್ಡಿಯು ಖರ್ಚನ್ನೂ ಕಳೆದು ಈ ವರ್ಷ ೩೯೬೭೯ ರೂ. ಎಂದರೆ ಇದುವರೆಗೆ ತಗಲಿರುವ ೭೩೯೪೩೦ ರೂ. ಯ ಒಟ್ಟು ಖರ್ಚಿನಮೇಲೆ ಶೇಕಡಾ ೭.೨೯ ರಂತೆ ನಿವ್ವಳ ಆದಾಯಬಂದಿರುತ್ತದೆ.

ಅರಸೀಕೆರೆಯಿಂದ ಮೈಸೂರಿಗೆ ಹಾಕಬೇಕೆಂದು ಯೋಚಿಸಿರುವ ರೈಲ್ವೆ ಲೈನಿಗೆ ಸೇರಿದ ಹಾಸನ ಮೈಸೂರು ಸೆಕ್ಷನ್ ಬಾಬತು ಪ್ಲಾನುಗಳೂ, ಅಂದಾಜುಪಟ್ಟಿಗಳೂ ಮದರಾಸ್ ಮತ್ತು ದಕ್ಷಿಣಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಂದ ಬಂದಿರುತ್ತವೆ. ಹಿಂದೆ ಇಂಡಿಯಾ ಸರ್ಕಾರದಲ್ಲಿ ಕನ್‌ಸಲ್ಟಿಂಗ್ ಇಂಜನಿಯರಾಗಿದ್ದ ಮಿ॥ ಜೇಮ್ಸ್ ಆರ್. ಬೆಲ್‌ರವರು ಈ ರೈಲ್ವೆ ಲೈನ್ ಕಾಮಗಾರಿಯ ವಿಷಯವನ್ನು ತನಿಖೆಮಾಡಿರುತ್ತಾರೆ. ಸದರಿ ಅಂದಾಜುಪಟ್ಟಿಗಳನ್ನೂ ಅವರ ರಿಪೋರ್ಟುಗಳನ್ನೂ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಈರೋಡಿನ ಮಾರ್ಗವಾಗಿ ದಕ್ಷಿಣ ಪ್ರಾಂತದ ಲೈನಿನ ರೀಸರ್ವೆ ಕೆಲಸವು ದಕ್ಷಿಣ ಇಂಡಿಯನ್ ರೈಲ್ವೆ ಕಂಪೆನಿಯ ಮೂಲಕ ನಡೆಯುತ್ತಿದೆ. ಲೈಟ್ ರೈಲ್ವೆಗಳನ್ನು ಹಾಕಿಸುವ ವಿಚಾರವೂ ಆಲೋಚನೆಯಲ್ಲಿದೆ. ಬಂಡವಾಳದ ಹಣ ವಸೂಲಿಯ ಕೆಲಸವು ತಕ್ಕಮಟ್ಟಿಗೆ ನಡೆದಿರುತ್ತದೆಂದು ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯವರು ರಿಪೋರ್ಟುಮಾಡಿರುತ್ತಾರೆ. ಕೋಲಾರದಿಂದ ಬವರಿಂಗ್ ಪೇಟೆಗೆ ಅಲ್ಪಫಾಸಲೆಯಾದುದರಿಂದ ಡಿಬೆಂಚರ್ ಸಾಲ ಪಡೆದು ರೈಲ್ವೆ ಹಾಕಬೇಕೆಂಬದಾಗಿ ಕೋಲಾರ ಡಿ॥ ಬೋರ್ಡಿನವರು ಯತ್ನಿಸಿದ್ದಾರೆ. ಇದಕ್ಕಾಗಿ ತಗಲುವ ಬಂಡವಾಳದ ಹಣದಮೇಲೆ ಶೇಕಡ ೪ ರಂತೆ ಬಡ್ಡಿ ಕೊಡುವುದಕ್ಕೆ ಸರ್ಕಾರದವರು ಭರವಸೆ ಕೊಟ್ಟಿರುತ್ತಾರೆ.

ಜುಡಿಷಿಯಲ್.

ಎಲ್ಲ ಡಿವಿಜನ್ನುಗಳಲ್ಲಿಯೂ ಶೇಕಡ ೨.೬ ರಂತೆ ಸಿವಿಲ್ ಮೊಕದ್ದಮೆಗಳು ಹೆಚ್ಚಿದುವು. ಕ್ರಿಮಿನಲ್ ಮೊಕದ್ದಮೆಗಳು ಸ್ವಲ್ಪಮಟ್ಟಿಗೆ ಕಮ್ಮಿಯಾದುವು ಎಂದರೆ ತಕ್ಸೀರುಗಳು ಶೇಕಡಾ ೩.೯ ರಂತೆ ಕಮ್ಮಿಯಾದುವು. ಚೀಫ್‌ಕೋರ್ಟಿನಲ್ಲಿ ಕೆಲಸ ಹೆಚ್ಚಾಗಿ ನಿಂತುದರಿಂದ ಚಾಲ್ತಿ ಸಾಲಿನ ಪ್ರಾರಂಭದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟನ್ನು ಪುನಃ ಸ್ಥಾಪಿಸಲಾಯಿತು.

ವೈದ್ಯದ ಇಲಾಖೆ.

ವೈದ್ಯದ ಇಲಾಖೆಯಲ್ಲಿಯೂ ಉಪಯುಕ್ತವಾದ ಕೆಲಸ ನಡೆಯಿತು. ಹೊಸದಾಗಿ ಇಡಲ್ಪಟ್ಟ ಒಂದು ಲೋಕಲ್ ಫಂಡ್ ಆಸ್ಪತ್ರೆಯೂ ಸೇರಿ ಸಾಲಾಖೈರಿಗೆ ಸಂಸ್ಥಾನದಲ್ಲಿ ಒಟ್ಟು ೧೯೭ ಆಸ್ಪತ್ರೆಗಳಿದ್ದುವು. ಇವುಗಳಲ್ಲಿ ೧೦೩೫೦೦೦ ಜನರು ಚಿಕಿತ್ಸೆ ಹೊಂದಿದರು. ಈ ಪೈಕಿ ೧೬೪೦ ಜನರು ಆಸ್ಪತ್ರೆಯಲ್ಲಿಯೇ ಇದ್ದುಕೊಂಡು ಚಿಕಿತ್ಸೆಗೊಳಗಾದರು. ಆಸ್ಪಿಟಲ್ ಅಸಿಸ್ಟೆಂಟರುಗಳ ಸಂಬಳವನ್ನು ಹೆಚ್ಚುಮಾಡಿ ಹುದ್ದೆಯ ಹೆಸರನ್ನು ಬದಲಾಯಿಸಿ ಅವರ ಸಂಖ್ಯೆಯನ್ನು ಹೆಚ್ಚಿಸಲು ಬಂದ ಸಲಹೆಗಳನ್ನು ಸರ್ಕಾರದವರು ಈಚೆಗೆ ಮಂಜೂರ್ಮಾಡಿರುತ್ತಾರೆ. ಈ ತರಗತಿಯ ವೈದ್ಯ ಆಫೀಸರುಗಳು ಇನ್ನುಮೇಲೆ 'ಸಬ್ ಅಸಿಸ್ಟೆಂಟ್ ಸರ್ಜನ್ಸ್' ಎಂಬದಾಗಿ ಕರೆಯಲ್ಪಡುವರು: ಮತ್ತು ಇವರ ಕನಿಷ್ಠ ತಲಬನ್ನು ೨೫ ರೂ. ಯಿಂದ ೩೦ ಕ್ಕೆ ಹೆಚ್ಚಿಸಲಾಗುವುದು. ಈಗಿರುವಂತೆಯೇ ಇವರಿಗೆ ಸಲ್ಲಬೇಕಾದ ಪರಮಾವಧಿಯ ತಲಬು ೩೦ ರೂ. ಯಾಗಿ ಮಾತ್ರ ಇರುವುದು; ಆದರೆ ಏಳು ವರ್ಷಗಳಿಗೆ ಬದಲಾಗಿ ಐದು ವರ್ಷಗಳಿಗೆ ಒಂದುಸಾರಿ ಇಜಾಫೆ ದೊರೆಯುವುದು. ಮಂಜೂರಾಗಿರುವ ಚಾರ್ಜುಗಳೆಲ್ಲಕ್ಕೂ ಒಬ್ಬೊಬ್ಬ ಆಫೀಸರು ಇರುವುದಲ್ಲದೆ, ರಿಜರ್ವ್‌ನಲ್ಲಿ ೧೧ ಜನ ಇರುವಂತೆ ಇವರ ಸಂಖ್ಯೆಯು ಹೆಚ್ಚಿಸಲ್ಪಡುವುದು.

ಜನಾರೋಗ್ಯ.

ರಿಜಿಸ್ಟರಾದ ಜನನಸಂಖ್ಯೆಯು ಈ ವರ್ಷ ಹೆಚ್ಚಿತು. ಕಳೆದವರ್ಷ ಈ ಸಂಖ್ಯೆಯು ೧೦೦೦ ಪ್ರಜೆಗೆ ೧೯.೩೩ ಇದ್ದುದು ಈ ವರ್ಷ ೧೭.೬೫ಕ್ಕೆ ಹೆಚ್ಚಿತು. ಮರಣಸಂಖ್ಯೆಯೂ ಕೂಡ ಹೆಚ್ಚಾಗಿಯೇ ಇತ್ತು. ೧೦೦೦ ಪ್ರಜೆಗೆ ೧೭.೩೦ ಇದ್ದುದು ೧೯.೯೩ ಕ್ಕೆ ಏರಿತು. ೧೯೦೯-೧೦ ನೆಯ ಸಾಲಿನಲ್ಲಿ ಮರಣಸಂಖ್ಯೆಯು ಹೆಚ್ಚುವುದಕ್ಕೆ ಸಿಡುಬು, ಕಾಲರಾ ಉಪದ್ರವಗಳ ವ್ಯಾಪನೆಯೇ ದೊಡ್ಡ ಕಾರಣವಾಗಿತ್ತು. ಈ ವರ್ಷದಲ್ಲಿ ಈ ಉಪದ್ರವಗಳಿಂದ ಅಷ್ಟು ಹೆಚ್ಚಾಗಿ ಮರಣಗಳು ಸಂಭವಿಸಲಿಲ್ಲ. ಆದರೆ ಜ್ವರಗಳಿಂದ ಅಧಿಕವಾದ ಮರಣಗಳು ಉಂಟಾಗುತ್ತಿರುವುದು ವಿಷಾದಕರವಾಗಿದೆ. ಪ್ಲೇಗ್ ರೋಗವು ಸಹಾ ಹೆಚ್ಚಾಗಿಯೇ ವ್ಯಾಪಿಸಿಕೊಂಡಿತ್ತು. ೧೯೦೯-೧೦ ನೆಯ ಸಾಲಿನಲ್ಲಿ ಈ ರೋಗವಿದ್ದ ಸ್ಥಿತಿಯನ್ನೂ, ಈ ಸಾಲಿನಲ್ಲಿರುವ ಸ್ಥಿತಿಯನ್ನೂ ಹೋಲಿಸಿ ನೋಡಿದರೆ ಸಂಸ್ಥಾನಾಮುಳೆ ಈ ವರ್ಷ ಮರಣಸಂಖ್ಯೆಯು ಹೆಚ್ಚಾಗಿತ್ತು. ಎಂದರೆ ಹೋದವರ್ಷಕ್ಕಿಂತ ಜಾಸ್ತಿಯಾಗಿ ೩೫೦೦ ಜನಕ್ಕೆ ವ್ಯಾಧಿಯು ತಗಲಿ ೫೧೧೦ ಮಂದಿ ಮೃತರಾದರು. ೧೯೧೦-೧೧ ನೆಯ ಸಾಲಿನಲ್ಲಿ ಈ ರೋಗವು ಇಷ್ಟು ಹೆಚ್ಚಿದುದಕ್ಕೆ ಕಾರಣವನ್ನು ವಿವರಿಸುವುದು ಕಷ್ಟವಾಗಿದೆ. ಈ ಸಾಂಕ್ರಾಮಿಕ ಜಾಡ್ಯವು ಪ್ರಾರಂಭವಾದಂದಿನಿಂದ ತಹಲ್‌ವರೆಗಿನ ಲೆಕ್ಕಗಳನ್ನು ವಿಮರ್ಶೆಮಾಡಿ ನೋಡಿದರೆ ಕೂಡ, ಇದು ಯಾವ ಕಾಲದಲ್ಲಿ ಹೆಚ್ಚಾಗಿರುತ್ತದೆ. ಯಾವ ಕಾಲದಲ್ಲಿ ಕಮ್ಮಿಯಾಗಿರುತ್ತದೆ ಎಂಬ ಅಂಶವನ್ನು ನಿರ್ಧರಿಸುವುದಕ್ಕೂ ಆಗುವುದಿಲ್ಲ. ವಾಡಿಕೆಯಾಗಿರುವ ನಿವಾರಣೆಯ ಪ್ರಯತ್ನಗಳನ್ನು ರೋಗವು ವ್ಯಾಪಿಸಿದ ಪ್ರದೇಶಗಳಲ್ಲೆಲ್ಲ ಅನುಸರಿಸಲಾಯಿತು; ಅದರೊಳಗೂ ತಡಮಾಡದೆ ಮನೆಗಳನ್ನು ಬಿಡಿಸುವುದೂ, ಪ್ಲೇಗು ಸಿಡುಬು ಹಾಕಿಸುವುದೂ ಇವೆರಡಕ್ಕೆ ಹೆಚ್ಚು ನಿಗೆ ಕೊಡಲಾಯಿತು. ಕೂಲಿ ಜನಗಳು ತಾವು ಸಂಪಾದಿಸಿಕೊಳ್ಳುತ್ತಲಿದ್ದ ಕೂಲಿಯು ತಪ್ಪಿಹೋಗಿ ಲುಕ್ಸಾನು ಹೊಂದಬಾರದುದಕ್ಕೋಸ್ಕರ, ಸಿಡುಬು ಹಾಕಿಸಿಕೊಂಡವರಿಗೆ ಇನಾಮು ಕೊಡುವ ಏರ್ಪಾಟೂ ಸಹ ಆಚರಣೆಯಲ್ಲಿತ್ತು. ಈವರ್ಷ ಪ್ಲೇಗ್ ರೋಗವು ವ್ಯಾಪಿಸಿರುವ ಕಾಲದಲ್ಲಿ ಸಾಮಾನ್ಯ ಜನರೆಲ್ಲಾ ಸಿಡುಬು ಹಾಕಿಸಿಕೊಳ್ಳುವಂತೆ ಪ್ರೋತ್ಸಾಹಮಾಡಿ ಜನೋಪಕಾರಬುದ್ಧಿಯಿಂದಲೂ ಪ್ರತಿಫಲಾಪೇಕ್ಷೆಯಿಲ್ಲದೆಯೂ ಅನೇಕ ದೊಡ್ಡ ಮನುಷ್ಯರುಗಳು ಸರ್ಕಾರಕ್ಕೆ ಕುಮ್ಮಕ್ ಮಾಡಿರುತ್ತಾರೆಂಬ ಅಂಶವು ತೃಪ್ತಿಕರವಾದುದಾಗಿದೆ. ಪ್ಲೇಗು ಸಿಡುಬನ್ನು ಹಾಕಿಸಿಕೊಳ್ಳುವುದರಿಂದ ವಾಸ್ತವವಾಗಿಯೂ ಪ್ರಯೋಜನವಿದೆಯೆಂಬ ವಿಷಯವನ್ನು ಇಲ್ಲಿ ತಿಳಿಸುವುದು ಅಪ್ರಕೃತವಾದುದಲ್ಲ. ಈ ಬಾಬಿನಲ್ಲಿ ಹರಿಹರದಲ್ಲಿ ಆಗಿರತಕ್ಕ ಫಲಿತಾಂಶವನ್ನು ನೋಡಿದರೆ ಉಪಯುಕ್ತವಾದ ಸಂಗತಿಗಳು ಗೊತ್ತಾಗುತ್ತವೆ. ಸಿಡುಬು ಹಾಕಿಸಿಕೊಳ್ಳದೆ ಇದ್ದ ೧೩೭೩ ಜನರ ಪೈಕಿ ೬೭೩ ಜನಕ್ಕೆ ರೋಗತಗುಲಿ ೬೦೩ ಮಂದಿ ಮೃತರಾದರು; ಇದರಿಂದ ರೋಗತಗುಲಿದವರಲ್ಲಿ ಶೇಕಡ ೨೧.೩೩ ರಂತೆಯೂ ಒಟ್ಟು ಜನ ಸಂಖ್ಯೆಯಲ್ಲಿ ಶೇಕಡ ೧೧.೩೯ ರಂತೆಯೂ ಮೃತರಾದ ಹಾಗೆ ಆಯಿತು. ಆದರೆ, ಸಿಡುಬು ಹಾಕಿಸಿಕೊಂಡ ೬೧೩೭ ಜನಗಳ ಪೈಕಿ ೯೨ ಮಂದಿಗೆ ಮಾತ್ರವೇ ತಗಲಿ ೧೭ ಜನ ಮಾತ್ರವೇ ಮೃತರಾದರು; ಎಂದರೆ ತಗುಲಿದವರಲ್ಲಿ ಸತ್ತವರ ಸಂಖ್ಯೆಯು ಶೇಕಡ ೧೯.೫೩ ರಂತೆಯೂ ಒಟ್ಟು ಜನಸಂಖ್ಯೆಯಲ್ಲಿ ಶೇಕಡ .೨೪ ರಂತೆಯೂ ಆದಹಾಗಾಯಿತು.

ಸರ್ಕಾರಿ ಛಾಪಾಖಾನೆ ಮತ್ತು ಸಾದಿಲ್‌ವಾರ್ ಇಲಾಖೆಗಳು.

ಈ ವರ್ಷದಲ್ಲಿ ಸೆನ್ಸಸ್ ಇಲಾಖೆಯ ದೆಸೆಯಿಂದ ಸೆಂಟ್ರಲ್ ಛಾಪಾಖಾನೆಯ ಎಲ್ಲಾ ಬಾಬುಗಳಲ್ಲಿಯೂ ಸಾಮಾನ್ಯವಾಗಿ ಹೆಚ್ಚಾಗಿಯೇ ಕೆಲಸ ನಡೆದಿರುತ್ತದೆ, ಇದೇ ಕಾರಣದಿಂದ ಇಲಾಖೆಯ ಖರ್ಚು ೯೩,೦೧೦ ರೂ. ಇದ್ದುದು ೧೬೩,೦೦೦ ರೂ. ಹೆಚ್ಚಿರುತ್ತದೆ. ಮುಖ್ಯವಾಗಿ ಸಾಮಾನುಗಳನ್ನು ಕೊಂಡುಕೊಂಡುದಕ್ಕೋಸ್ಕರ ವಿಶೇಷ ಖರ್ಚಾಗಿರುತ್ತದೆ. ಸಾದಿಲ್‌ವಾರು ಇಲಾಖೆಯಲ್ಲಿ, ಮಾಮೂಲು ಮೇರೆಗೆ ಇಂಗ್ಲೆಂಡಿನಲ್ಲಿ ತಯಾರಾದ ಕಾಗದವನ್ನೂ ಲೇಖನಸಾಮಗ್ರಿಗಳನ್ನೂ ೬೫,೦೦೦ ರೂ. ಗೂ, ಇಂಡಿಯಾದಲ್ಲಿ ತಯಾರಾದ ಕಾಗದ ವಗೈರೆ ಸಾಮಗ್ರಿಗಳನ್ನು ೩೫೦೦೦ ರೂ. ಗೂ ತೆಗೆದುಕೊಳ್ಳಲಾಯಿತು.

ವಿದ್ಯಾಭ್ಯಾಸದ ಇಲಾಖೆ.

ಈ ವರ್ಷದಲ್ಲಿ ನಡೆದ ವಿದ್ಯಾಭ್ಯಾಸದ ಅಭಿವೃದ್ಧಿಯು ತೃಪ್ತಿಕರವಾಗಿದೆ. ಈ ವರ್ಷದಲ್ಲಿ ಸರ್ಕಾರಿ ಸ್ಕೂಲುಗಳ ಸಂಖ್ಯೆಯು ೬೮೧೩ ರಿಂದ ೬೯೪೯ ಕ್ಕೂ, ವಿದ್ಯಾರ್ಥಿಗಳ ಸಂಖ್ಯೆಯು ೧೧೩೭೫ ರಿಂದ ೧೧೫೦೭೩ ಕ್ಕೂ ಹೆಚ್ಚಿರುತ್ತವೆ. ಆದರೆ ಖಾಸಗಿ ಸ್ಕೂಲುಗಳ ಸಂಖ್ಯೆಯು ೧೭೩೩ ರಿಂದ ೧೭೦೩ ಕ್ಕೂ ಅವುಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯು ೬೩೯೪೪ ರಿಂದ ೬೯೯೪೪ ಕ್ಕೂ ತಗ್ಗಿತು. ಈ ಖಾಸಗಿ ಸ್ಕೂಲುಗಳ ಸಂಖ್ಯೆಯು ಯಾವಾಗಲೂ ಹೆಚ್ಚುಕಮ್ಮಿಯಾಗುತ್ತಲೇ ಇರುತ್ತವೆ. ಕಳೆದ ವರ್ಷದಲ್ಲಿ ಸರ್ಕಾರಿ ಮತ್ತು ಖಾಸಗಿ ಸ್ಕೂಲುಗಳು ಎರಡೂ ಸೇರಿ ಒಟ್ಟು ೪೯೦೩ ಸ್ಕೂಲುಗಳೂ, ೧೩೨೩೯ ವಿದ್ಯಾರ್ಥಿಗಳೂ ಇದ್ದುದಕ್ಕೆ ಪ್ರತಿಯಾಗಿ ಈ ವರ್ಷ ೪೬೩ ಸ್ಕೂಲುಗಳಿದ್ದುವು. ಅವುಗಳಲ್ಲಿ ೧೩೨೯೭೩ ವಿದ್ಯಾರ್ಥಿಗಳು ಇದ್ದರು. ವಿದ್ಯೆಯನ್ನು ಕಲಿಯುತ್ತಿದ್ದವರ ಪೈಕಿ ೧೯೦೯-೧೦ನೆಯ ವರ್ಷದಲ್ಲಿ ೧೧೫೯೦೩ ಮಂದಿ ವಿದ್ಯಾರ್ಥಿಗಳಾಗಿಯೂ ೬೫೭೩ ಮಂದಿ ವಿದ್ಯಾರ್ಥಿನಿಯರಾಗಿಯೂ ಇದ್ದುದಕ್ಕೆ ಪ್ರತಿಯಾಗಿ ಈ ವರ್ಷದಲ್ಲಿ ೧೧೫೯೦೯ ಮಂದಿ ವಿದ್ಯಾರ್ಥಿಗಳಾಗಿಯೂ ೬೫೭೩ ಮಂದಿ ವಿದ್ಯಾರ್ಥಿನಿಯರಾಗಿಯೂ ಇದ್ದರು. ಹಿಂದಿನವರ್ಷ ಸ್ಕೂಲಿಗೆ ಹೋಗತಕ್ಕ ವಯಸ್ಸಿನ ಬಾಲಕರ ಪೈಕಿ ಶೇಕಡ ೬೩ ಭಾಗದವರೂ ಮತ್ತು ಬಾಲಿಯರ ಪೈಕಿ ಶೇಕಡಾ ೭ ಭಾಗದವರೂ ಸ್ಕೂಲುಗಳಲ್ಲಿ ಓದುತ್ತಾ ಇದ್ದರು. ಈ ವರ್ಷದ ಅಂಥ ಬಾಲಕರ ಸಂಖ್ಯೆಯು ಶೇಕಡಾ ೬೨.೯ ಭಾಗಕ್ಕೆ ಇಳಿಯಿತು. ಆದರೆ ಬಾಲಿಯರ ಸಂಖ್ಯೆಯು ಶೇಕಡಾ ೫.೩ ಕ್ಕೆ ಹೆಚ್ಚಿರುತ್ತದೆ. ಸ್ಕೂಲುಗಳಲ್ಲಿ ಓದುವ ವಯಸ್ಸಿನ ಒಟ್ಟು ಜನಸಂಖ್ಯೆಯ ಪೈಕಿ ವಿದ್ಯೆಯನ್ನು ಕಲಿಯುತ್ತಿರುವವರ ಸಂಖ್ಯೆಯು ಗತವರ್ಷ ಶೇಕಡಾ ೧೩.೭ ಆಗಿದ್ದುದು ಈವರ್ಷ ೧೩.೯ ಕ್ಕೆ ಹೆಚ್ಚಿರುತ್ತದೆ.

ಸ್ತ್ರೀ ವಿದ್ಯಾಭ್ಯಾಸ.

ಸ್ತ್ರೀವಿದ್ಯಾಭ್ಯಾಸವು ಈ ವರ್ಷದಲ್ಲೂ ಸಹ ಅಭಿವೃದ್ಧಿಯನ್ನು ಹೊಂದಿ ತೃಪ್ತಿಕರವಾಗಿತ್ತು. ಬಾಲಿಕಾಪಾಠಶಾಲೆಗಳ ಸಂಖ್ಯೆಯು ೬೭೩ ರಿಂದ ೬೯೪ ಕ್ಕೆ ಹೆಚ್ಚಿತು. ಈಪೈಕಿ ಒಂದು ಇಂಗ್ಲಿಷ್ ಕಾಲೇಜು, ಒಂದು ದೇಶಭಾಷೆಯ ಕಾಲೇಜು, ೬ ಹೈಸ್ಕೂಲುಗಳು, ೯ ಆಂಗ್ಲೋ ವರ್ನಾಕ್ಯುಲರ್ ಅಥವಾ ಇಂಗ್ಲಿಷ್ ಮಿಡಲ್ ಸ್ಕೂಲುಗಳು, ೩೩ ದೇಶಭಾಷಾ ಮಿಡಲ್ ಸ್ಕೂಲುಗಳು, ೬೧೧ ಪ್ರೈಮರಿ ಸ್ಕೂಲುಗಳು, ೬ ನಾರ್ಮಲ್ ಸ್ಕೂಲುಗಳು, ಒಂದು ಕೈಗಾರಿಕೆಯ ಪಾಠಶಾಲೆ, ಒಂದು ಎಲಿಮೆಂಟರಿ ದರ್ಜೆಯ ಖಾಸಗಿ ಸ್ಕೂಲು. ಈ ವರ್ಷ ಮೈಸೂರು ಮಹಾರಾಣಿ ಕಾಲೇಜಿನಿಂದ ಒಬ್ಬ ಬ್ರಾಹ್ಮಣವಿದ್ಯಾರ್ಥಿನಿಯು ಮದ್ರಾಸು ಯೂನಿವರ್ಸಿಟಿಯ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿಯೂ, ಮತ್ತೊಬ್ಬ ವಿದ್ಯಾರ್ಥಿನಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯೂ ತೇರ್ಗಡೆಯನ್ನು ಹೊಂದಿದರು. ಈ ಸಂಸ್ಥಾನದಲ್ಲಿರುವ ಎಲ್ಲಾ ಬಾಲಿಕಾಪಾಠಶಾಲೆಗಳಿಂದಲೂ ಒಟ್ಟಿಗೆ ೧೩೩ ಮಂದಿ ಬಾಲಿಯರು ಇಂಗ್ಲಿಷ್ ಮತ್ತು ಕನ್ನಡ ಲೋವರ್‌ಸೆಕೆಂಡರೀ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇದಕ್ಕೆ ಹಿಂದಿನವರ್ಷದಲ್ಲಿ ೩೩ ಮಂದಿ ತೇರ್ಗಡೆಯಾದರು. ಟೀಚರ್ ಸರ್ಟಿಫಿಕೇಟ್ ಪರೀಕ್ಷೆಗಳಲ್ಲಿ ೭ ಮಂದಿ ಬಾಲೆಯರು ಲೋವರ್‌ಸೆಕೆಂಡರಿ ಗ್ರೇಡಿನಲ್ಲಿಯೂ, ೪ ಮಂದಿ ಪ್ರೈಮರಿ ಗ್ರೇಡಿನಲ್ಲಿಯೂ ತೇರ್ಗಡೆ ಹೊಂದಿದರು. ಹೊಲಿಗೆಯ ಕೆಲಸದಲ್ಲಿ ಕೌಶಲ್ಯವನ್ನು ಗೊತ್ತುಮಾಡುವ ಪರೀಕ್ಷೆಯಲ್ಲಿ ಹಿಂದಿನ ವರ್ಷದಲ್ಲಿ ೩ ಮಂದಿ ತೇರ್ಗಡೆಯಾಗಿರುವಲ್ಲಿ ಈವರ್ಷ ೧೫ ಮಂದಿ ಬಾಲೆಯರು ತೇರ್ಗಡೆ ಹೊಂದಿದರು.

ಕಸಬುದಾರಿ ಮತ್ತು ಕೈಗಾರಿಕೆಯ ವಿದ್ಯಾಭ್ಯಾಸ

ಕೈಗಾರಿಕೆಯ ಮತ್ತು ನಿಮ್ಗಿಯ ಸ್ಕೂಲುಗಳ ಸಂಖ್ಯೆಯು ೬೧ ಇದ್ದದ್ದು ೬೨ಕ್ಕೆ ಇಳಿಯಿತು, ಆದರೆ ಇವುಗಳಲ್ಲಿ ಶಿಕ್ಷಣೆಯನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ೧,೬೩೦ರಿಂದ ೧,೬೩೩ಕ್ಕೆ ಹೆಚ್ಚಿತು. ಸರ್ಕಾರದವರ ಆಡಳಿತದಲ್ಲಿದ್ದ ಎಲ್ಲಾ ಸ್ಕೂಲುಗಳಲ್ಲಿಯೂ, ಖಾಸಗಿ ಜನಗಳ ಆಡಳಿತದಲ್ಲಿದ್ದ ಅನೇಕ ಸ್ಕೂಲುಗಳಲ್ಲಿಯೂ ಪ್ರಸಕ್ತವರ್ಷದಲ್ಲಿ ಚೆನ್ನಾಗಿಯೂ ತೃಪ್ತಿಕರವಾಗಿಯೂ ಕೆಲಸ ನಡೆಯಿತು.

ಓರಿಯಂಟಲ್ ಲೈಬ್ರರಿ ಯಾನೆ ಪ್ರಾಚ್ಯಕೋಶಾಲಯ

ಈ ವರ್ಷ ಪ್ರಾಚ್ಯಕೋಶಾಲಯಕ್ಕೆ ೫೭೩ ಕೈಬರಹದ ಪುಸ್ತಕಗಳನ್ನೂ ೬೩೩ ಅಚ್ಚು ಪುಸ್ತಕಗಳನ್ನೂ ಹೊಸದಾಗಿ ಸೇರಿಸಲಾಯಿತು. ಕೈಬರಹದ ಪುಸ್ತಕಗಳ ಪೈಕಿ ೫೫೫ ಸಂಸ್ಕೃತ ಭಾಷಾಗ್ರಂಥಗಳಾಗಿಯೂ ೬೭ ಕನ್ನಡ ಗ್ರಂಥಗಳಾಗಿಯೂ ಇರುತ್ತವೆ. ಈ ಪುಸ್ತಕಭಂಡಾರಕ್ಕೆ ಸಂಪಾದಿಸಿರುವ ಅಪೂರ್ವಗಳಾದ ಸಂಸ್ಕೃತ ಲಿಪಿಯ ಪುಸ್ತಕಗಳಪೈಕಿ ಒಂದು ಯೋಗಾನಂದೀಯ ವ್ಯಾಖ್ಯಾನಸಹಿತವಾದ ಆಯುರ್ವೇದವೆಂಬ ಬಹು ಪುರಾತನ ಗ್ರಂಥವಾಗಿರುತ್ತದೆ.

ಸಂಪದಭ್ಯುದಯ ಸಮಾಜ.

ಮೈಸೂರು ಸಂಸ್ಥಾನದ ಸಂಪದಭ್ಯುದಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಜಿಜ್ಞಾಸೆ ಮಾಡುವುದಕ್ಕಾಗಿ ಸರ್ಕಾರಿ ಉದ್ಯೋಗಸ್ಥರ ಜೊತೆಗೆ ಈ ಸಂಸ್ಥಾನದಲ್ಲಿರುವ ಇತರ ಪ್ರಾಜ್ಞರನ್ನೂ, ಮುಖಂಡರನ್ನೂ ಸೇರಿಸಬೇಕೆಂಬ ಉದ್ದೇಶದಿಂದ, ನಮ್ಮ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹಾದುರವರು ಕಳೆದ ಮೇ ತಿಂಗಳಲ್ಲಿ ಮೈಸೂರು ಸಂಪದಭ್ಯುದಯ ಸಮಾಜವನ್ನು ಸ್ಥಾಪಿಸಿರುವ ವಿಷಯವು ತಮಗೆಲ್ಲಾ ತಿಳಿದೇ ಇರುತ್ತದೆ. ಈ ಭಾಗದಲ್ಲಿ ಈ ಪ್ರಜಾಪ್ರತಿನಿಧಿಸಭೆಯಿಂದಲೇ ಸ್ವಲ್ಪ ಮಟ್ಟಿಗೆ ಕೆಲಸ ನಡೆಯುತ್ತಿದ್ದರೂ, ಈ ಸಭೆಯು ವರ್ಷಕ್ಕೆ ಒಂದು ಸಾರಿ ಮಾತ್ರ ಸೇರಿ ವಿಷಯಗಳನ್ನು ಚರ್ಚಿಸುವುದರಿಂದ, ವಿಶೇಷ ಕೆಲಸ ನಡೆಸುವುದಕ್ಕೆ ಅಸ್ಪದವಿಲ್ಲವೆಂತಲೂ, ಈ ಸಂಪದಭಿವೃದ್ಧಿಗೆ ಸಂಬಂಧಪಟ್ಟ ನಾನಾ ವಿಷಯಗಳಲ್ಲಿ ಜನರಿಗೆ ಆಸಕ್ತಿಯನ್ನು ಹುಟ್ಟಿಸಿ, ಆ ಆಸಕ್ತಿಯು ಅವಿಚ್ಛಿನ್ನವಾಗಿ ನೆಲೆಗೊಂಡಿರುವಂತೆ ಮಾಡಬೇಕಾದರೆ ಈ ವಿಷಯಗಳಲ್ಲಿ ತುಂಬ ಪರಿಶ್ರಮವುಳ್ಳವರು ಪರಸ್ಪರವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಚರ್ಚಿಸುತ್ತಿರುವಂತೆ ಮಾಡಬೇಕಾಗಿರುತ್ತದೆಂತಲೂ ಭಾವಿಸಲಾಯಿತು. ಈ ಉದ್ದೇಶದಿಂದಲೇ ಸರ್ಕಾರೀ ಮತ್ತು ಖಾಸಗಿ ಜನಗಳನ್ನು ಸೇರಿಸಿ ಒಂದು ಸಮಾಜವನ್ನು ಏರ್ಪಡಿಸಿ ಅವರುಗಳು ಪರ್ಯಾಲೋಚಿಸಬೇಕಾಗಿರುವ ಅನೇಕ ವಿಷಯಗಳನ್ನು ತಿಳಿಸಿರುತ್ತೇವೆ. ಈ ಸಮಾಜದವರು ಪರಿಶೀಲನೆಗೆ ತೆಗೆದುಕೊಳ್ಳುವ ನಾನಾ ವಿಷಯಗಳು ಕ್ರಮವಾಗಿ ಆಚರಣೆಗೆ ಬರುವವರೆಗೂ ವಿಚಾರಮಾಡಿ ತಕ್ಕ ಪ್ರಯತ್ನಗಳನ್ನು ನಡಿಸುವುದು ಅವರ ಕರ್ತವ್ಯವೆಂದು ವಿಧಿಸಿರುತ್ತದೆ. ಈ ಸಮಾಜವು ಪ್ರಥಮತಃ ಮೈಸೂರಲ್ಲಿ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿ ಮಹೋತ್ಸವಕಾಲದಲ್ಲಿ ಎಂದರೆ ೧೯೧೧ನೆಯ ಜೂನ್ ೧೦ನೆಯ ತಾರೀಖಿನಿಂದ ಮೂರು ದಿನಗಳು ಸೇರಿತ್ತು. ಆಗ ನಮ್ಮ ಶ್ರೀಮನ್ ಮಹಾರಾಜರವರ ಖಾಸ್ ಸವಾರಿ ಚಿತ್ತೈಸಿ ಈ ಸಮಾಜವನ್ನು ಪ್ರತಿಷ್ಠೆಮಾಡಿ ಅಪ್ಪಣೆಕೊಡಿಸಿದ ಭಾಷಣದಲ್ಲಿ ಪ್ರಜೆಗಳ ಸಂಪದ್ವಿಷಯಕವಾದ ನ್ಯೂನತೆಗಳನೆಲ್ಲಾ ತಿಳಿಸಿ, ಅವಕ್ಕೆ ತಕ್ಕ ಪರಿಹಾರಗಳನ್ನೂ ಸಹ ಸೂಚಿಸಿದರು. ಆ ಭಾಷಣದಪೈಕಿ, ಈ ಪ್ರತಿನಿಧಿಸಭೆಗೆ ಸಂಬಂಧಪಡುವ ಒಂದು ವಾಕ್ಯವನ್ನು ಇಲ್ಲಿ ತಿಳಿಸಲಪೇಕ್ಷಿಸುತ್ತೇವೆ. ಅದೇನೆಂದರೆ:—"ಈ ಸಮಾಜವು ದಸರಾ ಪ್ರಜಾಪ್ರತಿನಿಧಿಸಭೆಯ ಜಿಜ್ಞಾಸೆಗೆ ಬರತಕ್ಕ ವಿಷಯಗಳನ್ನೆಲ್ಲಾ ಆಕರ್ಷಿಸಿಕೊಳ್ಳುವುದಿಲ್ಲ, ಆ ಪ್ರತಿನಿಧಿಸಭೆಯ ಪುರೋಭಿವೃದ್ಧಿಯ ವಿಷಯದಲ್ಲಿ ನಾವೂ ನಮ್ಮ ಸರ್ಕಾರದವರೂ ನಿರಂತರಾಸಕ್ತಿಯುಳ್ಳವರಾಗಿರುವೆವು" ಎಂಬದಾಗಿ ಅಪ್ಪಣೆಕೊಡಿಸಿರುತ್ತಾರೆ. ಜೂನ್ ತಿಂಗಳಲ್ಲಿ ಸಭೆ ಸೇರಿದ ಈ ಸಮಾಜದವರು ೩ ಕಮಿಟಿಗಳನ್ನು ನೇಮಿಸಿರುತ್ತಾರೆ. ಅವು ಯಾವುವೆಂದರೆ: ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಗೊಳಗಾದ ಅಗ್ರಿಕಲ್ಚರಲ್ ಕಮಿಟಿ; ಮೆ॥ ಎಚ್ ವಿ. ನಂಜುಂಡಯ್ಯನವರ ಅಧ್ಯಕ್ಷತೆಗೊಳಗಾದ ಎಜುಕೇಷನ್ ಕಮಿಟಿ; ಮತ್ತು ಮೆ॥ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಗೊಳಗಾದ ಕೈಗಾರಿಕೆಯ ಮತ್ತು ವ್ಯಾಪಾರದ ಕಮಿಟಿ. ವಿಷಯಪತ್ರಿಕೆಯಲ್ಲಿ ನಮೂದಿಸಿರುವ ನಾನಾವಿಷಯಗಳನ್ನು ಪರಿಶೀಲನೆ ಮಾಡಬೇಕೆಂದು ಈ ಕಮಿಟಿಗಳಿಗೆ ಸಮಾಜದವರು ಗೊತ್ತುಮಾಡಿರುತ್ತಾರೆ. ಈ ಸಮಾಜದ ಮತ್ತು ಇದರ ಕಮಿಟಿಗಳ ಖರ್ಚುಗಳಿಗಾಗಿ ಸರ್ಕಾರದವರು ಒಂದು ಲಕ್ಷ ರೂ ಮಂಜೂರ್ಮಾಡಿರುತ್ತಾರೆಂಬ ಸಂಗತಿಯನ್ನು ಮೊದಲೇ ತಿಳಿಸಿರುತ್ತದೆ. ಸ್ವಲ್ಪ ಹೆಚ್ಚು ಕಡಮೆ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ, ಡಿಸ್ಟ್ರಿಕ್ಟು ಕಮಿಟಿಗಳನ್ನು ಏರ್ಪಡಿಸಿರುತ್ತದೆ. ಈ ಕಮಿಟಿಯವರಿಗೂ ಮತ್ತು ಇದಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಿ ಪ್ರವರ್ತಿಸಿರುವ ಪ್ರತಿ ಒಬ್ಬರಿಗೂ ಅಥವಾ ಸಂಘದವರಿಗೂ ಅವಿಚ್ಛಿನ್ನವಾದ ಸಂಬಂಧವನ್ನು ಉಂಟುಮಾಡಿಕೊಳ್ಳುವುದಕ್ಕಾಗಿ, ಈ ಸೆಂಟ್ರಲ್ ಕಮಿಟಿಯವರೂ ಡಿಸ್ಟ್ರಿಕ್ಟ್ ಕಮಿಟಿಯವರೂ ೫೦ ಜನಕ್ಕೆ ಮೀರದಂತೆ "ಅಸೋಸಿಯೇಟ್ಸ್" ಯಾನೆ ಸಹಕಾರಿಗಳನ್ನು ನೇಮಿಸಿಕೊಳ್ಳಬಹುದೆಂದು ಅವರಿಗೆ ಅಧಿಕಾರವನ್ನು ಕೊಟ್ಟು ಇರುತ್ತದೆ. ಈ ಕಮಿಟಿಯವರು ಉತ್ಸಾಹದೊಡನೆ ಕೆಲಸ ಮಾಡಲು ಉಪಕ್ರಮಿಸಿದ್ದಾರೆ. ಪ್ರಥಮತಃ ತಾವು ಮಾಡಬೇಕಾಗಿರುವ ಕಾರ್ಯಗಳನ್ನು ನಿಶ್ಚಯಿಸಿಕೊಂಡಿರುವುದಲ್ಲದೆ, ಕೆಲವು ಅಜಮಾಯಿಷಿ ಕೆಲಸಗಳನ್ನೂ ಕೂಡ ನಡಿಸಿ, ಇವುಗಳಲ್ಲಿ ಆಗಿರುವ ಅಭಿವೃದ್ಧಿಯನ್ನು ಈ ಸಮಾಜದವರು ಸೆಪ್ಟೆಂಬರ್ ೩೦ನೆಯ ತಾರೀಖಿನಲ್ಲಿ ಎರಡನೆಯ ಸಾರಿ ಮೀಟಿಂಗು ಸೇರಿದಾಗ ತಿಳಿಸಿರುತ್ತಾರೆ.

ಉಪಸಂಹಾರ.

ಬರುವ ಡಿಸೆಂಬರ್ ತಿಂಗಳಲ್ಲಿ ಡಿಲ್ಲೀನಗರದಲ್ಲಿ ನಡೆಯುವುದಾಗಿಯೂ, ಚರಿತ್ರಾರ್ಹವಾಗಿಯೂ, ಪ್ರಸ್ತುತದಲ್ಲಿ ಸರ್ವರೂ ಅತಿ ಕುತೂಹಲದಿಂದ ಪ್ರತೀಕ್ಷಿಸುತ್ತಲೂ ಇರುವ ವಿಷಯವೊಂದನ್ನು—ಎಂದರೆ ಇಂಡಿಯಾದೇಶದ ಸಾರ್ವಭೌಮರಾದ ಅತ್ಯಂತ ಘನತೆಯನ್ನೈದಿದ ಐದನೆಯ ಜಾರ್ಜ್ ಚಕ್ರವರ್ತಿಗಳವರ ಕಿರೀಟಧಾರಣಮಹೋತ್ಸವದ ಸಂಬಂಧದಲ್ಲಿ ನಡಿಸಲ್ಪಡುವ ರಾಜಕೀಯ ದರ್ಬಾರಿನ ವಿಷಯವನ್ನು ತಮಗಳಿಗೆ ತಿಳಿಯಪಡಿಸಲಪೇಕ್ಷಿಸುತ್ತೇವೆ. "ಇಂಡಿಯಾ ಸಾರ್ವಭೌಮರವರು ಸಪತ್ನೀಕರಾಗಿ ತಮ್ಮ ಕಿರೀಟಧಾರಣಮಹೋತ್ಸವದ ಉತ್ಕೃಷ್ಟತೆಯನ್ನು ತಮ್ಮ ಇಂಡಿಯಾ ದೇಶದ ಪ್ರಜೆಗಳಿಗೆ ಪ್ರಕಟಪಡಿಸುವುದಕ್ಕೋಸ್ಕರ ಪ್ರಥಮತಃ ಈ ಚಕ್ರಾಧಿಪತ್ಯಕ್ಕೆ ಪ್ರತ್ಯಕ್ಷವಾಗಿ ಬಿಜಯಂಗೈದು" ನೆರವೇರಿಸುವ ಈ ವೈಭವದಿಂದೊಡಗೂಡಿದ ದರ್ಬಾರಿನ ಅಪೂರ್ವಮಹತ್ವವನ್ನು ಇಲ್ಲಿ ವಿಸ್ತರಿಸಿ ಹೇಳಬೇಕಾದುದಿಲ್ಲ. ನಮ್ಮ ಶ್ರೀಮನ್ ಮಹಾರಾಜಾಸಾಹೇಬ್ ಬಹಾದುರವರು—ತಮ್ಮ ಮುಖ್ಯ ಸರದಾರರು, ಸಂಸ್ಥಾನದ ಅಧಿಕಾರಿಗಳು, ಮತ್ತು ಪ್ರಮುಖರಾದ ಕೆಲವರು ಇತರ ದೊಡ್ಡ ಮನುಷ್ಯರು ಮೊದಲಾದ ಪರಿವಾರಸಮೇತರಾಗಿ ಈ ಮಹೋತ್ಸವಕ್ಕೆ ದಯಮಾಡಿಸಬೇಕೆಂದು ಉದ್ದೇಶಿಸಿರುತ್ತಾರೆ ಈ ಮಂಗಳಕರವಾದ ಮಹೋತ್ಸವದ ಜ್ಞಾಪಕಾರ್ಥವಾಗಿ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಅನುಗುಣವಾದ ಉತ್ಸವಪರಂಪರೆಗಳನ್ನು ನಡೆಯಿಸತಕ್ಕದೆಂದು ಅಜ್ಞಾಪಿಸಿರುವುದಲ್ಲದೆ, ಸಾರ್ವಭೌಮರವರಲ್ಲಿಯೂ ಅವರ ಪ್ರಭುತ್ವದಲ್ಲಿಯೂ ಈ ಸಂಸ್ಥಾನದಲ್ಲಿರುವ ಸಮಸ್ತ ಪ್ರಜೆಗಳೂ ತಮ್ಮಲ್ಲಿ ನಿಸ್ಸಂದೇಹವಾಗಿ ನೆಲೆಗೊಂಡಿರುವ ರಾಜಭಕ್ತಿವಿಶ್ವಾಸಗಳನ್ನು ವ್ಯಕ್ತಪಡಿಸುವುದಕ್ಕೆ ಅದಾ [illegible] ಸ್ಥಳೀಯ ಉತ್ಸವಕ್ರಮಗಳಲ್ಲಿ ನಿರತರಾಗುವರೆಂದು ಶ್ರೀಮನ್ಮಹಾರಾಜರವರು ದೃಢವಾಗಿ ನಂಬಿರುತ್ತಾರೆ.

ಟಿ. ಆನಂದರಾವ್,
ಮೈಸೂರು ಸಂಸ್ಥಾನದ ದಿವಾನರವರು.

೧೯೧೧ ನೆಯ ಸಂವತ್ಸರದ ಮೈಸೂರ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರತಿನಿಧಿಗಳು ಮಾಡಿದ ಪ್ರಾರ್ಥನೆಗಳು ಮತ್ತು ಅವಕ್ಕೆ ದಿವಾನರು ಕೊಟ್ಟ ಉತ್ತರಗಳು:—

ಪ್ರಾರ್ಥನೆ— ನಿಯಮನಿರ್ಮಾಣಸಭೆಯವರು ರಾಜ್ಯಾಡಳಿತ ವಿಚಾರವನ್ನು ಕೇಳಿ ತಿಳಿದುಕೊಳ್ಳುವಧಿಕಾರವನ್ನು ಕೊಡಿಸಬೇಕು. ಉತ್ತರ— ಅಂತಹ ಅಧಿಕಾರವನ್ನು ಈಗಾಗಲೇ ಕೊಡಲಾಗುವುದಿಲ್ಲ. ಮುಂದೆ ನೋಡೋಣ.

ಪ್ರಾ— ನಿಯಮನಿರ್ಮಾಣ ಸಭೆಯವರು ಸಂಸ್ಥಾನದ ಆಯವ್ಯಯದ ನಿರೀಕ್ಷಿತಪಟ್ಟಿಯಲ್ಲಿ ಕಂಡಂಶವನ್ನು ಕುರಿತು ಚರ್ಚಿಸುವಧಿಕಾರವನ್ನು ಕೊಡಿಸಬೇಕು. ಉ— ಆಲೋಚಿಸುತ್ತೇವೆ.

ಪ್ರಾ— ನಿಯಮನಿರ್ಮಾಣಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಇಬ್ಬರನ್ನು ಮೆಂಬರರಾಗಿ ಆರಿಸುವುದಕ್ಕೆ ಬದಲು ಮೂವರನ್ನು ಆರಿಸುವಂತಾಗಬೇಕು. ಉ— ಮುಂದೆ ಆಲೋಚಿಸುತ್ತೇವೆ.

ಪ್ರಾ— ವೃತ್ತಪತ್ರಿಕೆಗಳ ಸ್ವಾತಂತ್ರ್ಯನಿರೋಧಕ ವಿಧಿಯು ಅನುಷ್ಠಾನಕ್ಕೆ ತರಲ್ಪಟ್ಟಿರುವ ಪ್ರಯುಕ್ತ, ಅನೇಕ ಉಪಯುಕ್ತವಾದ ಪತ್ರಿಕೆಗಳು ನಿಂತುಹೋಗಿ ಪ್ರಜೆಗಳಿಗೆ ಬಾಧಕವಾಗಿರುವ ವಿಚಾರದಲ್ಲಿ ಜನರಭಿಪ್ರಾಯವನ್ನು ತಿಳಿಯಲಿಕ್ಕಿಲ್ಲವಾಗಿದೆ. ಅದುಕಾರಣ ಈ ವಿಧಿಯನ್ನು ತಪ್ಪಿಸಿಕೊಡಬೇಕು. ಉ— ಈ ವಿಧಿಯಿಂದ ನ್ಯಾಯಬದ್ಧರಾದ ಜನರಿಗೆ ಯಾವ ಭಯವೂ ಇರುವುದಿಲ್ಲವಾದ ಪ್ರಯುಕ್ತ ಅದನ್ನು ತೆಗೆಯಬೇಕಾದ ಅವಶ್ಯಕತೆಯಿಲ್ಲವು.

ಪ್ರಾ— ಸಂಸ್ಥಾನದಲ್ಲಿ ಗ್ರಾಮಪಂಚಾಯತಿಯನ್ನು ಸ್ಥಾಪಿಸಿಕೊಡಬೇಕು. ಉ— ಇದರ ವಿಷಯಕವಾದ ವಿಧಿಯು ಮಾಡಲ್ಪಟ್ಟು ನಿಯಮನಿರ್ಮಾಣ ಸಭೆಯವರ ಪರ್ಯಾಲೋಚನೆಯಲ್ಲಿದೆ. ಕೂಡಲೆ ಅನುಷ್ಠಾನಕ್ಕೆ ಬರುವಂತೆ ಮಾಡಲ್ಪಡುವುದು.

ಪ್ರಾ— ಬೊಂಬಾಯಾಧಿಪತ್ಯದ ಮಾಮಲೆದಾರರ ಆಕ್ಟನ್ನು ನಮ್ಮ ಸೀಮೆಯಲ್ಲೂ ಆಚರಣೆಗೆ ತರಲ್ಪಡಬೇಕು. ಉ— ಅಮಲ್ದಾರರಿಗೆ ಸಿವಿಲ್ ಅಧಿಕಾರವನ್ನು ಕೊಡಲಾಗುವುದಿಲ್ಲವಾದುದರಿಂದ, ಈ ವಿಧಿಯನ್ನು ಅನುಷ್ಠಾನಕ್ಕೆ ತರಲಾಗುವುದಿಲ್ಲ.

ಪ್ರಾ— ಹಾಲನ್ನು ಕರೆಯುವ ಹಸುಗಳನ್ನು ನೇಗಲಿಗೆ ಕಟ್ಟುವುದು ಹಿಂದೂ ಧರ್ಮಶಾಸ್ತ್ರಕ್ಕೆ ವಿರುದ್ಧವಾದುದಲ್ಲದೆ, ಮುಂದೆ ಒಳ್ಳೆಯ ಜಾತಿಯ ಕರುಗಳನ್ನು ಕೊಡದಂತಾಗುವುದು. ಅದುಕಾರಣ ಹಸುಗಳನ್ನು ಉಳುಮೆಗುಪಯೋಗಿಸದಂತೆ ಒಂದು ವಿಧಿಯಾಗಬೇಕು. ಉ— ಈ ವಿಷಯದಲ್ಲಿ ಸರ್ಕಾರದವರು ಪ್ರವೇಶಿಸಿ ವಿಧಿಯನ್ನು ಮಾಡಲಾಗುವುದಿಲ್ಲ.

ಪ್ರಾ— ಪ್ರಾಥಮಿಕ ವಿದ್ಯಾಭ್ಯಾಸ ವಿಚಾರದಲ್ಲಿ ಆ॥ ಗೋಖಲೆಯವರು ಮಾಡಿರುವ ಬಿಲ್ಲು ನಮ್ಮ ಸೀಮೆಯಲ್ಲಿ ಅನುಷ್ಠಾನಕ್ಕೆ ತರಲ್ಪಡಬೇಕು. ಉ— ಈ ವಿಚಾರವು ಸಂಪದಭಿವೃದ್ಧಿಯ ಸಮಾಜಕ್ಕೆ ಸಂಬಂಧಪಟ್ಟ ವಿದ್ಯಾವಿಷಯಕವಾದ ಸಂಘದವರ ಪರ್ಯಾಲೋಚನೆಯಲ್ಲಿದೆ.

ಪ್ರಾ— ಗ್ರಾಮಾಂತರಗಳಲ್ಲಿ ವೈದ್ಯದ ಗಂಧವನ್ನೇ ಅರಿಯದ ಜನರು ವೈದ್ಯಮಾಡುವುದರಿಂದ ಬಹು ಅನರ್ಥವಾಗುತ್ತಿರುವ ಪ್ರಯುಕ್ತ, ಅರ್ಹರಾಗಿ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ ವೈದ್ಯರು ಮಾತ್ರ ಚಿಕಿತ್ಸೆಯನ್ನು ಮಾಡುವಂತೆ ವಿಧಿಯನ್ನು ಮಾಡಬೇಕು. ಉ— ಇದು ಉತ್ತರೋತ್ತರ ಆಲೋಚಿಸತಕ್ಕದಾಗಿದೆ.

ಪ್ರಾ— ಯಾವ ಭೂಮಿಯಲ್ಲಿ ಲಂಟಾನ ಗಿಡವು ಬೆಳೆದುಕೊಂಡಿರುವುದೋ ಅವರು ಕ್ಲುಪ್ತಕಾಲದಲ್ಲಿ ಅದನ್ನು ನಿರ್ಮೂಲಮಾಡದಿದ್ದಲ್ಲಿ ಶಿಕ್ಷೆಗೆ ಗುರಿಮಾಡಲ್ಪಡಲು ಒಂದು ವಿಧಿಯಾಗಬೇಕು. ಉ— ಆ ಬಗೆಗೆ ಪ್ರಜಾಪ್ರತಿನಿಧಿಗಳೆಲ್ಲರೂ ಏಕಾಭಿಪ್ರಾಯದಿಂದ ಒಂದು ವಿಜ್ಞಾಪನಪತ್ರಿಕೆಯನ್ನು ಸರ್ಕಾರಕ್ಕೊಪ್ಪಿಸುವುದಾದರೆ ವಿಧಿಯು ಆಚರಣೆಗೆ ತರಲ್ಪಡುವುದು. (ಆ ಪ್ರಕಾರವೇ ಸಭಾಸ್ತರೆಲ್ಲರೂ ಮಾರನೆಯ ದಿನ ಬರೆದೊಪ್ಪಿಸಿದರು.)

ಪ್ರಾ— ಕೆಲ ಪರದೇಶೀಯರು ಈ ಸೀಮೆಗೆ ಬಂದು ಹೆಚ್ಚು ಕೂಲಿಯನ್ನು ಕೊಡಿಸುತ್ತೇವೆಂದು ಬಡ ಜನರಿಗೆ ಆಶೋತ್ತರವನ್ನು ಹೇಳಿ ಸಿಲೋನು ಮೊದಲಾದ ಪ್ರಾಂತಗಳಿಗೆ ಕರೆದುಕೊಂಡು ಹೋಗುವರು. ಈ ಬಡಜನರು ಅಲ್ಲಿ ನಾನಾ ಕಷ್ಟಗಳಿಗೆ ಗುರಿಯಾಗಿ ಹಿಂತಿರುಗಿ ಬರುವುದೇ ದುರ್ಲಭವಾಗಿರುವುದಲ್ಲದೆ ಅವರ ಬಂಧುಜನರಿಗೆ ವಿಶೇಷ

[೬ ನೆಯ ಪುಟವನ್ನು ನೋಡಿರಿ.]

ಮೈಸೂರ್ ಸ್ಟಾರ್

೧೯೧೧ ನೆಯ ಅಕ್ಟೋಬರ್ ತಾ|| ೧೬ ನೆಯ ಸೋಮವಾರ.

ಕನ್ನಂಬಾಡಿಯ ಹತ್ತಿರ ಒಂದು ದೊಡ್ಡ ಜಲಾಶಯದ ನಿರ್ಮಾಣವು.

ಮೈಸೂರ ಸೀಮೆಯಲ್ಲಿ ಕಾವೇರೀ ನದಿಯು ಗುಡ್ಡಗಳ ಮಧ್ಯೆ ಪ್ರವಹಿಸುವ ಭಾಗದಲ್ಲಿ ಒಂದು ಅಗಾಧವಾದ ಅಣೆಯನ್ನು ಕಟ್ಟಿ, ವಿಶೇಷ ನೀರು ನಿಂತುಕೊಳ್ಳುವಂತೆ ಮಾಡಿ ಕಾಲ್ವೆಗಳ ಮೂಲಕ ಹೆಚ್ಚು ಬೇಸಾಯ ಕೆಲಸಗಳಿಗೆ ನೀರನ್ನೊದಗಿಸಬೇಕೆಂಬುವಾಗಿ ಕಳೆದ ೪೦ ವರ್ಷಗಳಿಂದಲೂ ನಮ್ಮ ಮೈಸೂರ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತು. ಈ ಬಗೆಗೆ ಶಿವನಸಮುದ್ರದ ಬಳಿ ಕಾವೇರೀ ನದಿಯ ಜಲಪ್ರಪಾತದಿಂದುತ್ಪನ್ನವಾಗುವ ವಿದ್ಯುಚ್ಛಕ್ತಿಯನ್ನು ಶೇಖರಿಸುವ ಕಾರ್ಯಕ್ಕಾಗಿ ಹೆಚ್ಚು ನೀರು ಬೇಕಾದುದರಿಂದ, ಬೇಸಾಯ ಕಾರ್ಯಗಳಿಗೆ ಕೊಡಲ್ಪಡುವ ನೀರು ಕಡಿಮೆಮಾಡಲ್ಪಟ್ಟಾಗ್ಯೂ, ಬೇಸಿಗೆಯ ಕಾಲದಲ್ಲಿ ನೀರು ಸಾಲದೆ ವಿದ್ಯುಚ್ಛಕ್ತಿಯ ಶೇಖರವು ಕಡಿಮೆಯಾಗುವುದರಿಂದಲೂ, ಕೋಲಾರದ ಚಿನ್ನದ ಗಣಿಗಳಿಗೆ ಈಗ ಕೊಡಲ್ಪಡುತ್ತಿರುವ ವಿದ್ಯುಚ್ಛಕ್ತಿಗಿಂತಲೂ ಇನ್ನೂ ಹೆಚ್ಚು ಶಕ್ತಿಯು ಬೇಕಾದುದರಿಂದಲೂ ಎಂತಹ ಬೇಸಿಗೆಯ ಕಾಲದಲ್ಲೂ ಶಿವನಸಮುದ್ರದ ಬಳಿ ನದಿಯಲ್ಲಿ ನೀರು ಕಡಿಮೆಯಾಗದಿರುವುದಕ್ಕಾಗಿ ಮತ್ತೂ ವ್ಯವಸಾಯ ಕಾರ್ಯಗಳಿಗೆ ನೀರಿನಭಾವವಾಗಿರುವುದಕ್ಕಾಗಿ ಒಂದು ದೊಡ್ಡ ಜಲಾಶಯವನ್ನು ನಿರ್ಮಿಸಬೇಕೆಂಬ ಅವಶ್ಯಕತೆಯು ಹೆಚ್ಚಾಗಲು, ಗತಿಸಿದ ಕ್ಯಾಪ್ಟನ್ ಡಾಸ್ ರವರು ಶ್ರೀರಂಗಪಟ್ಟಣಕ್ಕೆ ೮ ಮೈಲಿ ದೂರದಲ್ಲಿರುವ ಕನ್ನಂಬಾಡಿಯ ಬಳಿ ಕಾವೇರೀ ನದಿಗೆ ಒಂದು ದೊಡ್ಡ ಅಣೆಯನ್ನು ಕಟ್ಟಿ ಅಪಾರವಾದ ನೀರು ಶೇಖರವಾಗುವಂತೆ ಮಾಡಲು ೪ ಕೋಟಿಯು ೪೦ ಲಕ್ಷ ರೂ. ಗಳು ವ್ಯಯವಾಗಬೇಕಾಗುವುದೆಂದು ಗೊತ್ತುಮಾಡಿದರಲ್ಲದೆ, ಇದರಿಂದ ನದಿಯ ಉಭಯಪಾರ್ಶ್ವದಲ್ಲೂ ೩,೦೦,೦೦೦ ಎಕರೆಯ ಭೂಮಿಗಳಿಗೆ ನೀರನ್ನೊದಗಿಸಬಹುದೆಂದೂ, ಮೈಸೂರ ಸೀಮೆಯೊಳಗೂ, ಹೊರಗೂ ಕೈಗಾರಿಕೆ ಮೊದಲಾದ ಕಾರ್ಯಗಳಿಗೆ ೩೦,೦೦೦ ಕುದುರೆಗಳ ಬಲದಷ್ಟು ವಿದ್ಯುಚ್ಛಕ್ತಿಯನ್ನು ಶೇಖರಿಸಿ ಒದಗಿಸಬಹುದೆಂತಲೂ ತಿಳುಹಿದರು. ಈ ಮಹಾಕಾರ್ಯಕ್ಕೆ ವಿಶೇಷ ದ್ರವ್ಯ ವ್ಯಯವಾಗಬೇಕಾದುದಲ್ಲದೆ, ಸಂಸ್ಥಾನದ ಹೊರಗಡೆಯೂ ಇದಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡಬೇಕಾದುದರಿಂದ, ಈ ಪ್ರಯತ್ನವು ಕಾರ್ಯಮುಖವಾಗಲಿಲ್ಲವು. ಆದರೆ ಈ ಪ್ರಯತ್ನವು ಅಲ್ಲಿಗೇ ಬಿಡಲ್ಪಡದೆ ಈಚೆಗೆ ಕೆಲ ಇಂಜನೀಯರುಗಳು ಚೆನ್ನಾಗಿ ಪರಿಶೋಧಿಸಿ ೧೦೮ ಅಡಿ ಆಳದವರೆಗೆ ನೀರನ್ನು ಹಿಡಿಯುವಂತಹ ೧೨೪ ಅಡಿಯ ಎತ್ತರದಲ್ಲಿ ಒಂದು ಅಣೆಯನ್ನು ಕಟ್ಟಲು ೧ ಕೋಟಿಯು ೨೯ ಲಕ್ಷ ರೂ. ವ್ಯಯವಾಗುವುದು, (೧) ೧,೫೦,೦೦೦ ಎಕರೆ ಭೂಮಿಗಳಿಗೆ ನೀರನ್ನೊದಗಿಸಲನುಕೂಲಿಸುವಂತೆ ಕಾಲುವೆಯ ಪದ್ಧತಿಯನ್ನನುಸರಿಸಿ ಕಟ್ಟಲು ೧ ಕೋಟಿಯು ೬ ಲಕ್ಷ ರೂ. ಮುಟ್ಟುವುದು, (೨) ಈಗಿರುವ ಕಾವೇರೀ ನದಿಯ ವಿದ್ಯುತ್ಶಕ್ತಿಯನ್ನು ಇನ್ನೂ ೫೦೦೦ ಕುದುರೆಗಳ ಬಲದಷ್ಟು ಹೆಚ್ಚಿಸುವುದಕ್ಕಾಗಿ ೧೦೮ ಅಡಿ ಆಳದವರೆಗೆ ನೀರನ್ನು ಹಿಡಿಯಬಲ್ಲ ೮೦ ಅಡಿ ಎತ್ತರದ ಒಂದು ಅಣೆಯನ್ನು ಕಟ್ಟಲು ೮೧ ಲಕ್ಷ ರೂ. ವ್ಯಯವಾಗುವುದು, ಅಥವಾ ಈಗ ಕಾವೇರೀ ನದಿಯ ಪ್ರಪಾತದಿಂದುತ್ಪನ್ನವಾಗುವ ವಿದ್ಯುಚ್ಛಕ್ತಿಯನ್ನು ಶೇಖರಿಸುವ ವಿಧಾನದಿಂದಲೇ ಇನ್ನೂ ೫೦೦೦ ಕುದುರೆಯ ಬಲದಷ್ಟು ಶಕ್ತಿಯನ್ನು ಹೆಚ್ಚಿಸಲು ೮ ಲಕ್ಷ ರೂ. ಬೇಕಾಗುವುದು ಎಂದು ಸರ್ಕಾರಕ್ಕೆ ಬರೆದು ತಿಳುಹಿದರು.

ನಮ್ಮ ಸರ್ಕಾರದವರು ತಾವು ಕಾವೇರೀನದಿಗೆ ಅಣೆಯನ್ನು ಕಟ್ಟುವ ವಿಚಾರದಲ್ಲಿ ಮದ್ರಾಸು ಸರ್ಕಾರದವರ ಅನುಮತಿಯನ್ನು ಪಡೆಯಬೇಕೆಂದು ೧೮೯೨ ರಲ್ಲಿ ಒಂದು ಒಡಂಬಡಿಕೆಯು ಆಗಿರುವುದರಿಂದ, ಪ್ರಸಕ್ತ ಸಂದರ್ಭದಲ್ಲಿ ಮದ್ರಾಸ ಸರ್ಕಾರದವರ ಮತ್ತೂ ಇಂಡ್ಯಾ ಸರ್ಕಾರದವರ ಅನುಮತಿಯನ್ನು ಕೇಳಿರುವಲ್ಲಿ, ೧೧೦೩೦ ಘನ ಅಡಿ ನೀರನ್ನು ಹಿಡಿಯುವಂತಹ ಜಲಾಶಯವನ್ನು ಕಟ್ಟಿಕೊಳ್ಳಬಹುದೆಂದು ಉಭಯ ಸರ್ಕಾರದವರು ಸಮ್ಮತಿಸಿದುದರ ಮೇಲೆ ೮೯ ಲಕ್ಷ ರೂ. ವ್ಯಯದಿಂದ ಜಲಾಶಯವನ್ನು ಕಟ್ಟಲು ಅಪ್ಪಣೆ ಮಾಡಿರುತ್ತಾರೆ. ಬ್ರಿಟಿಷ್ ಮತ್ತೂ ಹೈದರಾಬಾದ್ ಸರ್ಕಾರಗಳಲ್ಲಿ ದೊಡ್ಡದೊಡ್ಡ ನೀರಾವರಿ ಕೆಲಸಗಳನ್ನು ಮಾಡಿಸಿ ನಿಪುಣರೆಂದು ಖ್ಯಾತಿಗೊಂಡಿರುವ ಚೀಫ್ ಇಂಜನೀರ್ ಮ|| ವಿಶ್ವೇಶ್ವರಯ್ಯನವರ ಮೇಲ್ವಿಚಾರಣೆಯಲ್ಲಿ ಈ ಜಲಾಶಯದ ಕಾರ್ಯವು ವಿಚಕ್ಷಣೆಯಿಂದಲೂ, ಸಮರ್ಪಕತೆಯಿಂದಲೂ ನಡೆದು, ಇದಕ್ಕಾಗಿ ವ್ಯಯವಾಗುವ ಹಣವು ಸಾರ್ಥಕವಾಗುವುದೆನ್ನುವುದರಲ್ಲಿ ಸಂದೇಹವಿಲ್ಲವು.

ಇಷ್ಟು ನೀರಿನ ಶೇಖರದಿಂದ ಕೋಲಾರದ ಚಿನ್ನದ ಗಣಿಗಳಿಗೆ ಬೇಕಾಗಿರುವ ೫೦೦೦ ಕುದುರೆಯ ಬಲದಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುವುದಲ್ಲದೆ ೫೦೦೦೦ ಎಕರೆ ಭೂಮಿಯಲ್ಲಿ ಬೇಸಾಯ ಮಾಡಲು ನೀರನ್ನು ಒದಗಿಸಲು ಮತ್ತೂ ಇತರ ಕೈಗಾರಿಕೆಯ ಕಾರ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಸಾಧ್ಯವಿರುತ್ತದೆ. ಚಿನ್ನದ ಗಣಿಯವರು ಮುಂದೆ ಹೆಚ್ಚಾಗಿ ಒದಗಿಸಲ್ಪಡುವ ವೈದ್ಯುತ ಶಕ್ತಿಗಾಗಿ ೧ ಕುದುರೆಯ ಬಲದಷ್ಟಕ್ಕೆ ೧೯೦ ರೂಪಾಯಿಗಳನ್ನು ೧೦ ವರ್ಷಗಳವರೆಗೂ ಅನಂತರ ೧೫೦ ರೂ. ವಂತೆಯೂ ಕೊಡಲೊಪ್ಪಿರುತ್ತಾರೆ. ಈ ಜಲಾಶಯದ ನಿರ್ಮಾಣದಿಂದ ಸರ್ಕಾರದುತ್ಪನ್ನವು ಹೆಚ್ಚುವುದಲ್ಲದೆ ಪಾಳು ಬಿದ್ದಿರುವ ೫೦೦೦೦ ಎಕರೆಯಷ್ಟು ಭೂಮಿಗಳು ಬೇಸಾಯಕ್ಕನುಕೂಲವಾಗಿ ತನ್ಮೂಲಕ ರೈತರು ಪುಷ್ಟಿವಂತರಾಗಲು ಮಾರ್ಗವಾಯಿತು. ಗತಿಸಿದ ಸರ್ ಶೇಷಾದ್ರಯ್ಯರ್‌ರವರು ತಮ್ಮ ಮಂತ್ರಿಪದವಿಯ ಅವಧಿಯಲ್ಲಿ ಕಾವೇರೀ ನದಿಯ ಜಲಪ್ರಪಾತದಿಂದ ವಿದ್ಯುಚ್ಛಕ್ತಿಯನ್ನು ಶೇಖರಿಸುವ ಕಾರ್ಯಾಲಯವನ್ನೂ, ಬಹು ದೊಡ್ಡದಾದ ಮಾರಿಕಣಿವೆಯ ಕೆರೆಯನ್ನು ನಿರ್ಮಿಸಿ ಸಂಸ್ಥಾನದ ಆಯವನ್ನು ಹೆಚ್ಚಿಸಿದುದಲ್ಲದೆ ಆ ಚಂದ್ರಾರ್ಕ ಕೀರ್ತಿಯನ್ನು ಪಡೆದಂತೆ ಮ|| ವಿ. ಪಿ. ಮಾಧವರಾಯರು ತಮ್ಮ ದಿವಾನಗಿರಿಯಲ್ಲಿ ಈ ಕನ್ನಂಬಾಡಿಯ ಜಲಾಶಯವನ್ನು ನಿರ್ಮಿಸಿ ಕೀರ್ತಿಯನ್ನು ಪಡೆಯಬೇಕೆಂಬಾಸೆಯಿಂದ ಪ್ರಯತ್ನಿಸಿದರು. ಆದರೆ ಯಾವ ಕಾರಣದಿಂದಲೋ ಅವರ ಪ್ರಯತ್ನವು ಸಾಗದೆ ಯಶಃಪ್ರಾಪ್ತಿಗೆ ಬದಲು ವೃತ್ತಪತ್ರಿಕೆಯ ನಿರೋಧಕವಿಧಿಯಿಂದ ಅವರಿಗೆ ನಿಂದೆಯು ಪ್ರಾಪ್ತವಾಯಿತು. ಅದುಹಾಗಿರಲಿ. ಮ|| ಮಾಧವರಾಯರು ಪ್ರಯತ್ನಿಸಿದ್ದ ಈ ಕನ್ನಂಬಾಡಿಯ ಜಲಾಶಯದ ಪ್ರಯತ್ನವು ನಮ್ಮ ಈಗಿನ ದಿವಾನರಾದ ಮ|| ಟಿ. ಆನಂದರಾಯರ ಕಾಲದಲ್ಲಿ ಕಾರ್ಯಮುಖವಾಗಿ ಅದರ ಯಶಸ್ಸು ಇವರ ಪಾಲಿಗೆ ಬಂದುದಕ್ಕಾಗಿ ನಾವು ಸಂತೋಷಿಸುತ್ತೇವೆ. ಈ ಅಗಾಧವಾದ ಜಲಾಶಯ ಪ್ರಯತ್ನದಿಂದ ಸಂಸ್ಥಾನದುತ್ಪತ್ತಿಯು ತಕ್ಕಮಟ್ಟಿಗೆ ಹೆಚ್ಚುವುದಲ್ಲದೆ, ಇದರ ನೀರು ಹರಿಯುವ ಪ್ರದೇಶದಲ್ಲಿಯ ರೈತರಿಗುಪಯುಕ್ತವಾದಾಗ್ಯೂ ಸಂಸ್ಥಾನದ ಎಲ್ಲಭಾಗದ ರೈತರಿಗೂ ಪ್ರಯೋಜನವಾಗುವಂತಿಲ್ಲ. ಅದುಕಾರಣ ಈ ಮಹಾಕಾರ್ಯ ಪ್ರಯತ್ನದ ಜತೆಗೆ ಸಂಸ್ಥಾನದಲ್ಲಿ ಜೀರ್ಣವಾಗಿರುವ ಕೆರೆಗಳನ್ನು ಸರಿಪಡಿಸಿ ನೀರು ನಿಲ್ಲುವಂತೆ ಮಾಡಿದಲ್ಲಿ ಬಹು ಜನ ರೈತರಿಗುಪಕಾರವಾಗುವುದಲ್ಲದೆ, ರಾಜಾದಾಯವೂ ವಿಶೇಷವಾಗಿ ಹೆಚ್ಚಲು ಅವಕಾಶವಾಗುವುದು. ಅದುಕಾರಣ ನಮ್ಮ ದಿವಾನರು ತಮ್ಮಧಿಕಾರದವಧಿಯಲ್ಲಿ ಅದಕ್ಕೂ ತಕ್ಕ ಅವಕಾಶವನ್ನುಂಟುಮಾಡಿ ಪ್ರಜೆಗಳ ವಂದನೆಗೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರಲ್ಲಿ ವಿದ್ಯುಚ್ಛಕ್ತಿಯಿಂದ ಟ್ರಾಂ ಬಂಡಿಗಳನ್ನು ಓಡಿಸುವುದು.

ಬೆಂಗಳೂರ ನಗರವು ಪೂರ್ವಕ್ಕಿಂತಲೂ ಈಗ ವಿಶೇಷ ಅಭಿವೃದ್ಧಿಯಾಗಿರುವುದರಿಂದ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಎಂದರೆ ಮಲ್ಲೇಶ್ವರದಿಂದ ಬಸವನಗುಡಿಗೂ, ಶಂಕರಪುರದಿಂದ ದಂಡಿಗೂ ಜನರು ಹೋಗಿ ಬರಲು ಬಹು ಕಷ್ಟವಾಗಿದೆ. ತತ್ರಾಪಿ ಈ ಮೂಲೆಗಳಲ್ಲಿ ವಾಸಮಾಡುವ ಸರ್ಕಾರಿಯ ಕೆಲಸಗಾರರೂ, ವಿದ್ಯಾರ್ಥಿಗಳೂ ಕೋರ್ಟು ಕಚೇರಿ ಮತ್ತೂ ಸ್ಕೂಲುಗಳಿಗೆ ಹೋಗಿ ಬರುವುದು ಅತ್ಯಂತ ಪ್ರಯಾಸವಾಗಿದೆ. ಈ ಜನರು ಹೋಗಿ ಬರಲು ಸಾಕಷ್ಟು ಜಟಕಾ ಬಂಡಿಗಳು ಇಡಲ್ಪಟ್ಟಿದ್ದಾಗ್ಯೂ, ಅವುಗಳಲ್ಲಿ ಕುಳಿತು ಸ್ವಾರಿ ಮಾಡುವುದು ಬಹು ಪ್ರಯಾಸವಾಗಿರುವುದಲ್ಲದೆ, ಅನೇಕವೇಳೆ ಕೋರ್ಟು ಕಚೇರಿಯ ವೇಳೆಗೆ ಸರಿಯಾಗಿ ಹೋಗದೆ ಬಲು ತೊಂದರೆಯಾಗುವುದು. ಈ ತೊಂದರೆಗಳನ್ನೆಲ್ಲ ನಿವಾರಣೆ ಮಾಡಬೇಕೆಂದು ದಂಡಿನ ಮತ್ತೂ ಪೇಟೆಯ ಕೆಲ ಶ್ರೀಮಂತರೂ, ಅಧಿಕಾರಿಗಳೂ ಸೇರಿ ಮೋಟಾರು ಬಂಡಿಗಳನ್ನು ತರಿಸಿ ಓಡಿಸಬೇಕೆಂದು ಆಲೋಚಿಸಿ ಅದಕ್ಕಾಗಿ ಹಿಸ್ಸೆಯೊಂದಕ್ಕೆ ಇಷ್ಟು ರೂಪಾಯಿಗಳನ್ನು ಕೊಟ್ಟು ಭಾಗದಾರರಾಗಬಹುದೆಂದು ಪ್ರಸಿದ್ಧಿಪತ್ರಿಕೆಗಳನ್ನು ಹಂಚಿಸಿದರು ಆದರೂ ಸಾಕಷ್ಟು ಹಣವು ಶೇಖರವಾಗಲಿಲ್ಲವಾಗಿ, ಆ ಪ್ರಯತ್ನವು ಅಷ್ಟಕ್ಕೇ ನಿಂತಿತು. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲ ಪ್ರತಿನಿಧಿಗಳು ವಿದ್ಯುಚ್ಛಕ್ತಿಯಿಂದ ನಡೆಯುವ ಟ್ರಾಂ ಬಂಡಿಗಳನ್ನು ಸರ್ಕಾರದವರಿಡಿಸಿಕೊಡಬೇಕೆಂದು ದಿವಾನರನ್ನು ಪ್ರಾರ್ಥಿಸಿಕೊಳ್ಳುವಲ್ಲಿ, ಶ್ರೀಮನ್ಮಹಾರಾಜರವರು ಬೆಂಗಳೂರಲ್ಲಿ ಮೇಲ್ಕಂಡ ಟ್ರಾಂ ಬಂಡಿಗಳನ್ನಿಡುವಂತೆ ಅಪ್ಪಣೆ ಮಾಡಿರುತ್ತಾರೆಂದು ತಿಳುಹಿದರು. ಆಗ ಸಭಿಕರೆಲ್ಲರೂ ಆನಂದತುಂದಿಲರಾಗಿ ಮಹಾಸ್ವಾಮಿಯವರನ್ನು ಕೊಂಡಾಡಿದರು. ನಮ್ಮ ಪ್ರಭುಗಳಿಗೆ ತಮ್ಮ ಪ್ರಜೆಗಳ ಇಷ್ಟಾರ್ಥವನ್ನು ಪೂರ್ತಿಮಾಡಬೇಕೆಂಬ ಮತ್ತೂ ತಮ್ಮ ದೇಶವನ್ನು ಎಲ್ಲ ಭಾಗದಲ್ಲೂ ಮದರಾಸು ಬೊಂಬಾಯಿ ಪಟ್ಟಣಗಳಿಗೆ ಸರಿಸಮನಾಗಿ ಮಾಡಬೇಕೆಂಬ ಕಾಂಕ್ಷೆಯು ಎಷ್ಟರಮಟ್ಟಿಗಿರುವುದೆಂಬುದು ಅವರ ಮೇಲ್ಕಂಡಪ್ಪಣೆಯಿಂದ ತಾನಾಗಿ ವ್ಯಕ್ತವಾಗುತ್ತದೆ.

[illegible]

ಈಗ್ಗೆ ಒಂದು ತಿಂಗಳ ಕೆಳಗೆ, ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ [illegible] ಕಲಶಯುಕ್ತವಾದ ತಿರ್ಯಗ್ಗಾಂದೋಳಿಕೋತ್ಸವವು ಮಕರತೋರಣ ಹಗಲು ದೀವಟಿಗೆ ಮೊದಲಾದ ಬಿರುದುಗಳೊಡನೆ ಬಾಗಲಕೋಟೆಯಲ್ಲಿ ವಿಜೃಂಭಣೆಯಿಂದಲೂ, ನಿರ್ವಿಘ್ನವಾಗಿಯೂ ಜರುಗಿತೆಂದು ಒಬ್ಬ ಪತ್ರವ್ಯವಹಾರಕರು ಬರೆದಿದ್ದ ಲೇಖನವು ಈ ಸ್ಟಾರ್ ಪತ್ರದಲ್ಲಿ ಪ್ರಕಟಿಸಲ್ಪಟ್ಟಿದ್ದಿತಷ್ಟೆ. ಆದರೆ ಆ ಉತ್ಸವ ಕಾಲದಲ್ಲಿ ಬ್ರಾಹ್ಮಣರಿಗೂ, ಲಿಂಗಾಯತರಿಗೂ ಬಡಿವಾಡವಾಗಿ ಬ್ರಾಹ್ಮಣರು ಮೈಮುರಿಯ ಏಟನ್ನು ತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುತ್ತಾರೆಂದೂ, ಲಿಂಗಾಯತರು ಹನುಮಂತ–ವಿಠೋಬದೇವರುಗಳ ವಿಗ್ರಹಗಳನ್ನು ನಾಶಪಡಿಸಿ ಬಹು ಅನಾಹುತವನ್ನು ನಡೆಯಿಸಿದರೆಂದೂ, ಇಷ್ಟಾದರೂ ಏನೊಂದು ಗದ್ದಲವೂ ನಡೆಯಲಿಲ್ಲವೆಂದು ಲಿಂಗಾಯತರು ನಟಿಸುತ್ತಿರುವರಲ್ಲದೆ ಸ್ಟಾರ್ ಪತ್ರಿಕೆಯು ಮೌನವಾಗಿರುತ್ತದೆಂದೂ ಮೇಲ್ಕಂಡ ವೃತ್ತಪತ್ರಿಕೆಯು ಆಕ್ಷೇಪಿಸಿರುವುದಲ್ಲದೆ ಸ್ವಾಮಿಗಳು ಭಕ್ತರಧೀನರಾಗಿ ಇಂತಹಗೊಂದಲಕ್ಕೂ, ಮನಸ್ತಾಪಕ್ಕೂ ಅವಕಾಶಕೊಟ್ಟುದು ಮತ್ತೂ ಲಿಂಗಾಯತರು ಅತ್ಯಾಚಾರವನ್ನು ನಡೆಸಿದುದು ಶುದ್ಧ ತಪ್ಪು ಎಂದು ಮೊದಲಾಗಿ ಬಹಳವಾಗಿ ನಿಂದಿಸಿರುವುದು. ವೃತ್ತಪತ್ರಿಕೆಯು ಹೇಳಿರುವಪ್ರಕಾರ ಬಾಗಲಕೋಟೆಯಲ್ಲಿ ನಡೆದಿರಬಹುದಾದ ಗದ್ದಲದ ನಿಜಾಂಶವು ನಮಗೆ ತಿಳಿದಿಲ್ಲವಾದುದರಿಂದ, ಆ ಪತ್ರಿಕೆಯ ಆಕ್ಷೇಪಣೆಯನ್ನು ಕುರಿತು ಪ್ರಸ್ತಾಪಿಸಲು ಸದ್ಯದಲ್ಲಿ ಮೌನಸಿಕ ಮಾಡಿರುತ್ತೇವೆ.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ದಯಮಾಡಿಸುವುದು.

ಯೂರೋಪಿನ ಬಹು ಭಾಗದಲ್ಲಿ ನಾನಾ ವಿಧವಾದ ಅಸಮಾಧಾನಗಳು ಪ್ರಾಪ್ತವಾಗಿರುವುದಲ್ಲದೆ ಇಟಲಿ ಮತ್ತೂ ತುರ್ಕಿರಾಜ್ಯಗಳಿಗೆ ಯುದ್ಧಕ್ಕಾರಂಭವಾಗಿರುವುದರಿಂದ, ಚಕ್ರವರ್ತಿ ದಂಪತಿಗಳು ತಮ್ಮ ಕಿರೀಟಧಾರಣಮಹೋತ್ಸವದ ಉತ್ಕರ್ಷತೆಯನ್ನು ಭಾರತ ಪ್ರಜೆಗಳಿಗೆ ಪ್ರತ್ಯಕ್ಷವಾಗಿ ಪ್ರದರ್ಶಿಸಲು ಭರತಖಂಡಕ್ಕೆ ದಯಮಾಡಿಸಲನುಕೂಲವಿಲ್ಲವೆಂದು ಮೊದಲಾಗಿ ಇಂಗ್ಲೀಷು ಪತ್ರಿಕೆಗಳು ಸಾರುತ್ತಿರುವುದರ ಮೇಲೆ, ದಿಲ್ಲಿಯ ದರ್ಬಾರು ನಡೆಯುವ ಸಂಭವವಿಲ್ಲವೆಂದು ಭಾರತೀಯರ ಮನಸ್ಸು ಖಿನ್ನವಾಗಿದ್ದಿತು ಈ ಸುದ್ದಿಯು ನಿರಾಧಾರವಾದುದೆಂದೂ, ಚಕ್ರವರ್ತಿಗಳು ತಮ್ಮ ಸಂಕಲ್ಪದಂತೆ ಭರತಖಂಡಕ್ಕೆ ದಯಮಾಡಿಸಿ ದಿಲ್ಲಿಯ ದರ್ಬಾರನ್ನು ನಡೆಸುವರೆಂದೂ ಈಚೆಗೆಬಂದಿರುವ ತಂತಿಯವಾರ್ತೆಯನ್ನು ಕೇಳಿ ಪ್ರತಿಯೊಬ್ಬ ಭಾರತೀಯನ ಹೃತ್ಕಮಲವು ವಿಕಸನವಾಗದಿರದು ಪ್ರಭು ದಂಪತಿಗಳು ಬರುವ ನವಂಬರ್ ತಾ|| ೯ಕ್ಕೆ ಬದಲಾಗಿ ತಾ|| ೧೧ರಲ್ಲಿ ಲಂಡನ್ ನಗರವನ್ನು ಬಿಟ್ಟು ಹಡಗನ್ನು ಹತ್ತಿ ಪ್ರಯಾಣ ಮಾಡುವುದಾಗಿ ನಿಶ್ಚಯಿತವಾಗಿದೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿರುವ ಜಗನ್ಮೋಹನ ಪ್ಯಾಲೇಸದಲ್ಲಿ ಒಂದು ಫೋಟೋಗ್ರಾಫಿಕ್ ಸ್ಟೂಡಿಯೋ ಅಂದರೆ ಛಾಯಾಗ್ರಹಣ ಕೊಠಡಿಯು ೪೦೦೦ ರೂ. ಗಳ ವ್ಯಯದಿಂದ ಕಟ್ಟಿಸಲ್ಪಡುವುದಾಗಿ ಕೇಳುತ್ತೇವೆ.

ದಶರಾತ್ರಿಯ ಮಹೋತ್ಸವಕ್ಕಾಗಿ ರಾಜಧಾನಿಗೆ ಬಂದಿದ್ದ ಶಾಖಾಧಿಕಾರಿಗಳೂ, ಡೆ|| ಕಮಿಷನರುಗಳೂ ಶ್ರೀಮನ್ಮಹಾರಾಜರವರ ಅಪ್ಪಣೆಯನ್ನು ಪಡೆದು ನೆನ್ನೆಯ ದಿನ ತಂತಮ್ಮ ಸ್ಥಳಗಳಿಗೆ ತೆರಳಿದರು.

ದಿವಾನರಿಗೆ ದಿಲ್ಲಿಯಲ್ಲಿ ಬಿಡಾರವನ್ನೇರ್ಪಡಿಸಿ ಬರಲು ಅವರ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಟಿ. ಗೋವಿಂದರಾಯರು ಕಳೆದವಾರ ದಿಲ್ಲಿಗೆ ಪ್ರಯಾಣಮಾಡಿದರು. ದಿವಾನರು ಬರುವ ನವೆಂಬರ್ ತಿಂಗಳ ಮಧ್ಯಭಾಗದಲ್ಲಿ ದಿಲ್ಲಿಗೆ ಪ್ರಯಾಣಮಾಡುವುದಾಗಿ ವರ್ತಮಾನವಿದೆ.

೧ ನೆಯ ಕೌನ್ಸಿಲರ್ ಮ|| ಕೆ. ಪಿ. ಪುಟ್ಟಣ್ಣಚೆಟ್ಟರು ಈ ದಿವಸ ಸಂಸಾರ ಸಮೇತ ನಂಜನಗೂಡಿಗೆ ದಯಮಾಡಿಸಿ ಶ್ರೀ ನಂಜುಂಡೇಶ್ವರ ಸ್ವಾಮಿಯ ದರ್ಶನಪೂಜಾದಿಗಳನ್ನು ಮಾಡಿಕೊಂಡು ನಾಳೆಯ ದಿನ ಇಲ್ಲಿಗೆ ಬಂದು ಬುಧವಾರ ಬೆಂಗಳೂರಿಗೆ ಪ್ರಯಾಣಮಾಡುವುದಾಗಿ ಕೇಳುತ್ತೇವೆ.

ಕಳೆದ ತಾ|| ೧೪ರ ಮಧ್ಯಾಹ್ನದಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಸಭಾಂಗಣದಲ್ಲಿ ಸಂಪದಭಿವೃದ್ಧಿಯ ಸಮಾಜಕ್ಕೆ ಸಂಬಂಧಿಸಿದ ವಿದ್ಯಾಶಾಖೆಯ ಸಂಘದವರು ೨ ನೆಯ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ವಿದ್ಯಾವಿಷಯಕವಾದ ಕೆಲ ವಿಷಯಗಳನ್ನು ಚರ್ಚಿಸಿದರು.

ಕಳೆದ ತಾ|| ೧೧ ರ ಸಾಯಂಕಾಲ ರಾಜಧಾನಿಯ ಪಶ್ಚಿಮ ಭಾಗದಲ್ಲಿ ಗುಡುಗು ಮಿಂಚು ಸಿಡಿಲು ಇವುಗಳ ಅರ್ಭಟದಿಂದ ಮಳೆಯು ಬರುತ್ತಿರುವಾಗ್ಗೆ ಕೆನ್ನೇಗೌಡನ ಕೊಪ್ಪಲಿನ ಹೊಲಕ್ಕೆ ಗಂಡ ಮತ್ತೂ ಒಂದು ಮಗು ಇವರ ಸಹ ಹೋಗುತ್ತಿದ್ದ ಒಬ್ಬ ಗರ್ಭಿಣಿ ಸ್ತ್ರೀಗೆ ಸಿಡಿಲು ಬಡಿದು ಅವಳು ಕೂಡಲೆ ಸತ್ತುಹೋದಳು.

ಕಳೆದ ತಿಂಗಳ ತಾ|| ೨೮ ರಲ್ಲಿ ನಂಜನಗೂಡಿಗೆ ಸಮೀಪದಲ್ಲಿರುವ ಕೊಂಗಳ್ಳಿ ಎಂಬಲ್ಲಿ ಯಾರೋ ಪಂಜಿನ ಕಳ್ಳರು ಒಬ್ಬ ಸಾಹುಕಾರನ ಮನೆಗೆ ನುಗ್ಗಿ ತಮ್ಮ ಕೊಡ ಹೋರಾಡಲು ಬಂದ ಮನೆಯವರನ್ನು ಕಠಾರಿಯಿಂದ ತಿವಿದು ಕೊಂದುಹಾಕಿ ಮತ್ತೆ ಕೆಲವರಿಗೆ ಗಾಯವನ್ನುಂಟುಮಾಡಿ ೧೧೦೦ ರೂ. ಬೆಲೆ ಬಾಳುವ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು.

ರಾಜಧಾನಿಯಲ್ಲಿ ಪ್ಲೇಗು ತಗಲಿ ಮರಣವಾದುದು:—

ತಾರೀಖು	೮,	೯.	೧೦,	೧೧,	೧೨,	೧೩,	೧೪.
ತಗಲಿದುದು	೩	೬	೪	೨	೫	೮	೫
ಸತ್ತದ್ದು	೪	೪	೮	೧	೩	೩	೫
ಒಟ್ಟು.	೧೧	೯	೧೨	೪	೮	೧೦	೯

ತಾ|| ೨೦-೩-೧೧ರಿಂದ ತಾ|| ೧೩-೧೦-೧೧ರವರೆಗೆ ೧೩,೪೦೮ ಜನರಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿರುತ್ತದೆ.

ಕಳೆದ ತಾ|| ೧೪ ರ ಬೆಳಿಗ್ಗೆ ೭ ಗಂಟೆಯಿಂದ ೧೦ ಗಂಟೆಯ ವರೆಗೆ ಪ್ರಜಾಪ್ರತಿನಿಧಿಸಭೆಯು ಸೇರಿದ್ದು ಉಳಿದಿದ್ದ ವಿಷಯಗಳ ಚರ್ಚೆಯೆಲ್ಲವೂ ಮುಗಿದಮೇಲೆ ಕೆಲ ಪ್ರತಿನಿಧಿಗಳು– ದಿವಾನರು ಸಾವಧಾನದಿಂದ ತಮ್ಮ ಪ್ರಾರ್ಥನೆಗಳನ್ನು ಲಾಲಿಸಿ ಕಾಲೋಚಿತವಾದುತ್ತರವನ್ನು ಕೊಟ್ಟುದಕ್ಕಾಗಿ ಅವರಿಗೆ ಸಭಾಪರವಾದ ವಂದನೆಯನ್ನು ತಿಳುಹಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ಪ್ರತಿನಿಧಿಗಳ ಛಾಯಾಚಿತ್ರವು ತೆಗೆಯಲ್ಪಟ್ಟಿತು.

ಶ್ರೀಮನ್ಮಹಾರಾಜರವರು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಾದ ಬೆಂಗಳೂರ ಅಡ್ವೋಕೇಟ್ ಮ|| ಡಿ. ವೆಂಕಟರಾಮಯ್ಯನವರನ್ನೂ, ಶ್ರೀರಂಗಪಟ್ಟಣದ ಪ್ಲೀಡರ್ ಮ|| ನರಸಿಂಗರಾಯರನ್ನೂ ದಿಲ್ಲಿಯ ದರ್ಬಾರಿಗೆ ಕರೆದುಕೊಂಡು ಹೋಗುವುದಾಗಿಯೂ, ಇಂಡ್ಯಾ ಸರ್ಕಾರದವರಿಂದ ಆಮಂತ್ರಣವನ್ನು ಪಡೆಯದೆ ಮಹಾಸ್ವಾಮಿಯವರ ಪರಿವಾರದೊಡನೆ ಕರೆದುಕೊಂಡು ಹೋಗಲ್ಪಡತಕ್ಕ ದೊಡ್ಡಮನುಷ್ಯರುಗಳಿಗೆಲ್ಲ ಸನ್ನಿಧಿಯಿಂದ ಇಷ್ಟರಲ್ಲೇ ಆಹ್ವಾನಪತ್ರಿಕೆಗಳು ಕಳುಹಲ್ಪಡುವುವಾಗಿಯೂ ಅರಿಯುತ್ತೇವೆ. ಮಹಾಪ್ರಭುಗಳು ಪ್ರಜಾಪ್ರತಿನಿಧಿ ಸಭೆಯನ್ನು ಎಷ್ಟರಮಟ್ಟಿನ ಗೌರವಾಭಿಮಾನದಿಂದ ಕಾಣುವರೆಂಬುದಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನವು ಬೇಕಾಗಿರುವುದೆ?

ಕಳೆದ ತಾ|| ೯ ರ ರಾತ್ರಿ ಬೆಂಗಳೂರ ಡಿ|| ದೇವಂಡಹಳ್ಳಿಯಲ್ಲಿ ಒಂದು ಸಣ್ಣ ಕುಟುಂಬದವರು ಒಂದು ಕಲ್ಲಿನ ಮಂಟಪದಲ್ಲಿ ಮಲಗಿಕೊಂಡು ನಿದ್ರೆಯನ್ನು ಮಾಡುತ್ತಿರುವಾಗ್ಗೆ ಒಂದು ಗೂಳಿಯು ಮಧ್ಯರಾತ್ರಿಯಲ್ಲಿ ಮಂಟಪದ ಹಿಂಭಾಗಕ್ಕೆ ಬಂದು ಗುಟುರೆಯನ್ನು ಹಾಕಿತು. ಇದರ ಶಬ್ದಕ್ಕೆ ಮಂಟಪದೊಳಗೆ ಮಲಗಿದ್ದವರಲ್ಲಿ ದೊಡ್ಡವರು ಎಚ್ಚೆತ್ತು ಆ ಗೂಳಿಯನ್ನೋಡಿಸಲು ಹೊರಗೆ ಬರುತಲೆ ಒಂದು ಕಲ್ಲಿನ ತೊಲೆಯು ಅಕಸ್ಮಾತ್ತಾಗಿ ಬಿದ್ದುಬಿಟ್ಟಿತು. ಇದರಿಂದ ಒಂದು ಮಗುವು ಜಜ್ಜಿಹೋದುದಲ್ಲದೆ ಅದರ ತಾಯಿಯ ಪಾದವು ಮುರಿದುಹೋಯಿತು. ಈ ಅಪಾಯದಿಂದ ತಪ್ಪಿಸಿಕೊಂಡವರ ಅದೃಷ್ಟವು ಚೆನ್ನಾಗಿದ್ದುದರಿಂದಲೇ ವಿಧಿಯು ಆ ಗೂಳಿಯ ರೂಪಾಗಿ ಬಂದು ಅವರು ಮಂಟಪದ ಹೊರಗೆ ಬರುವಂತೆ ಮಾಡಿತೆಂದು ತೋರುತ್ತದೆ.

ಚಿಕ್ಕಬಳ್ಳಾಪುರದ ಮುನಸೀಫ್ ಕೋರ್ಟಿನ ಡೆಪ್ಯುಟಿ ನಾಜರ್ ರಾಮಚಂದ್ರರಾವ್ ಮತ್ತೂ ೩ ಜನ ಸರ್ವೆ ಜವಾನರು ಸರ್ಕಾರಿಯ ಹಣವನ್ನು ದುರುಪಯೋಗಪಡಿಸಿದರೆಂಬ ಅಪರಾಧದಮೇಲೆ ಸೆರೆ ಹಿಡಿಯಲ್ಪಟ್ಟಿದ್ದು ಪಂಚಾಯಿತರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ, ಸಮನ್ ಜವಾನರು ಈ ಕೃತ್ಯವನ್ನು ಮಾಡಿದವರಲ್ಲವೆಂದೂ, ತಾನು ೩೯೦ ರೂ. ಗಳನ್ನು ದುರುಪಯೋಗಪಡಿಸಿದುದುಂಟೆಂದೂ ನಾಜರೊಪ್ಪಿಕೊಳ್ಳಲು ಆ ಜವಾನರು ಬಿಡಲ್ಪಟ್ಟು ನಾಜರು ೩ ಗಂಟೆಗಳ ಕಾಲ ಬಂಧನದಲ್ಲಿರಬೇಕೆಂದೂ, ೧೦೦ ರೂ. ದಂಡವನ್ನು ಕೊಡಬೇಕೆಂದೂ ವಿಧಿಸಲ್ಪಟ್ಟನು. ಇದೇ ತಾಲ್ಲೋಕು ತರಬೆಲೆಯ ಶಾನುಭೋಗ ರಾಮಯ್ಯನು ಸರ್ಕಾರಿಯ ಹಣವನ್ನು ದುರುಪಯೋಗ ಮಾಡಿದುದಕ್ಕಾಗಿ ೩ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನೂ, ೧೦೦ ರೂ. ದಂಡವನ್ನೂ ವಿಧಿಸಲ್ಪಟ್ಟನು.

ರಾಜಧಾನಿಯ ಪ್ರಾಣಿಪ್ರದರ್ಶನಾಲಯದಲ್ಲಿ ಕನ್ನಡಿಯ ಬಾಗಿಲನ್ನು ಹಾಕಿರುವ ಗೂಡಿನಲ್ಲಿಟ್ಟಿದ್ದ ಒಂದು ಜಾತಿಯ ಕಪ್ಪುಬಣ್ಣದ ದಪ್ಪನಾದ ಹಾವು ಕಳೆದ ತಾ|| ೧೩ ರಲ್ಲಿ ಬೇರೆ ಮತ್ತೊಂದು ಹಾವನ್ನು ನುಂಗಿಬಿಟ್ಟಿದ್ದಿತು. ಅದು ಅಲ್ಲಿಯ ಸೂಪರಿಂಟೆಂಡೆಂಟರಿಗೆ ತಿಳಿದು ಅವರು ಬಂದು ನೋಡುವಲ್ಲಿ ನುಂಗಲ್ಪಟ್ಟಿದ್ದ ಹಾವಿನ ಬಾಲದ ಕೊನೆಯು ಮಾತ್ರ ನುಂಗಿದ್ದುದರ ಬಾಯಿಯ ಹೊರಗಡೆ ನೇತಾಡುತಿದ್ದುದನ್ನು ಕಂಡು ಅದನ್ನು ಹಿಡಿದು ಹೊರಗೆಳೆಯಲು ಅದು ಜೀವಸಹಿತ ಇದ್ದುದರಿಂದ ಅದನ್ನು ಬೇರೆ ಕಡೆಗೆ ಬಿಟ್ಟರು. ಅದು ತಾನಿದ್ದ ಗೂಡಿನಿಂದ ಹೇಗೋ ರಂಧ್ರಮಾಡಿಕೊಂಡು ಬೇರೆ ಕರಡಿಯಿದ್ದ ಗೂಡಿನೊಳಗೆ ಬಂದು ಬಿಟ್ಟಿದ್ದು ಕರಡಿಯಿಂದ ತುಂಡುತುಂಡಾಗಿ ಕತ್ತರಿಸಿಹಾಕಲ್ಪಟ್ಟಿದ್ದಿತು.

ರಾಜಧಾನಿಯಲ್ಲಿ ಕಳೆದವಾರ ಎರಡು ರಾತ್ರಿ ತಕ್ಕಮಟ್ಟಿಗೆ ಮಳೆಯಾಗಿದ್ದು, ಶನಿವಾರರಾತ್ರಿ ದೊಡ್ಡಮಳೆಯು ಸುರಿಯಿತು. ಆಹಾರ ಪದಾರ್ಥಗಳ ಬೆಲೆಯು ಎಲ್ಲೋ ಕೊಂಚವಾಗಿಳಿದಿರುತ್ತದೆ. ಪ್ಲೇಗು ವ್ಯಾಧಿಯು ಪಟ್ಟಣದ ಎಲ್ಲ ಕಡೆಯೂ ವ್ಯಾಪಿಸಿರುವುದಲ್ಲದೆ ಉಲ್ಬಣವಾಗುವಂತಿದೆ. ಡಾ|| ಅನಂತರಾಮಯ್ಯಂಗಾರರು ಡಾ|| ಸಿದ್ದಪ್ಪನವರೂ ಪ್ರತಿಯೊಬ್ಬರ ಮನೆಯ ಬಾಗಲಿಗೂ ಬಂದು ಎಷ್ಟು ಬೋಧಿಸಿದಾಗ್ಯೂ ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳದಿರುವುದು ಬಹು ಶೋಚನೀಯವಾಗಿದೆ. ಕಳೆದ ಮಂಗಳವಾರ ಶ್ರೀ ಚಾಮುಂಡೇಶ್ವರಿಯ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ರಥವು ಹರಿದು ಸ್ಥಾನಕ್ಕೆ ಬಂದು ನಿಂತಾಗ ರಾಜಧಾನಿಯಲ್ಲಿ ೨೧ ಗುಂಡುಗಳು ಹಾರಿಸಲ್ಪಟ್ಟುವು. ಈ ವೇಳೆ ಭಕ್ತಾದಿಗಳ ಸ್ತೋಮವು ಬೆಟ್ಟದ ಮೇಲೂ, ಪಾದದ ಬಳಿಯೂ ವಿಶೇಷವಾಗಿದ್ದಿತು. ಶ್ರೀಮನ್ಮಹಾರಾಜ ಸಹೋದರರೂ, ಮಹಾ ಮಾತೃಶ್ರೀಯವರೂ, ಮಹಾರಾಣಿಯವರೂ, ರಾಜಕುಮಾರಿಯರೂ ದಯಮಾಡಿಸಿದ್ದು ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯ ದರ್ಶನ ಸೇವಾದಿಗಳನ್ನು ಪೂರೈಸಿಕೊಂಡು ದಯಮಾಡಿಸಿ ಪುನಃ ಕಳೆದ ಗುರುವಾರದ ರಾತ್ರಿ ದೇವನೆರೆಯಲ್ಲಿ ಜರುಗಿದ ತೆಪ್ಪೋತ್ಸವವನ್ನು ಪರಾಮರಿಸಿಕೊಂಡು ಚಿತ್ತೈಸಿದರು. ತೆಪ್ಪೋತ್ಸವ ಕಾಲದಲ್ಲಿ ದೀಪೋತ್ಸವವೂ ಮದ್ದಿನ ವಿನೋದವೂ ಬಹು ರಮಣೀಯವಾಗಿದ್ದುವು.

ಕಳೆದ ತಾ|| ೧೧ರ ಸಾಯಂಕಾಲದಲ್ಲಿ ಶ್ರೀಮನ್ಮಹಾರಾಜರವರು ಕುದುರೆಯಪಂದ್ಯವು ನಡೆಯತಕ್ಕಸ್ಥಳಕ್ಕೆ ದಿವಾನರು ಕೌನ್ಸಿಲರುಗಳು ಮೊದಲಾದ ಸರ್ಕಾರೀಯಧಿಕಾರಿಗಳನ್ನೂ, ಅರಸುಮಕ್ಕಳು ಮೊದಲಾದ ದೊಡ್ಡಮನುಷ್ಯರುಗಳನ್ನೂ ಬರಮಾಡಿಕೊಂಡು ಆಟಗಳಿಂದಲೂ, ಅಲ್ಪಾಹಾರದಿಂದಲೂ ಆನಂದಗೊಳಿಸಿ ವಿನೋದದಿಂದ ಕಾಲಹರಣಮಾಡಿದರು. ನಡೆಯುವುದರಲ್ಲಿ ವೈಸ್‌ಪ್ರೆಸಿಡೆಂಟ್ ಮ|| ರಾ|| ಎಂ. ಜಿ. ಕೃಷ್ಣಸ್ವಾಮಿರಾಯರೂ, ಅಂಡರ್‌ಸೆಕ್ರೆಟರಿ ಮ|| ಡಿಸೋಜಾಯವರೂ ಗೆದ್ದರು; ಕುದುರೆಗಳ ಮೇಲೆ ಕುಳಿತು ವಾದ್ಯವಾಗುತ್ತಿರುವಾಗ್ಗೆ ಚಕ್ರಾಕಾರವಾಗಿ ಸುತ್ತಿ ಎರಡು ತಟ್ಟೆಗಳ ಮಧ್ಯದಲ್ಲಿ ಮುಂದಾಗಿ ಬಂದು ಕುದುರೆಯನ್ನು ನಿಲ್ಲಿಸಿಕೊಳ್ಳುವುದರಲ್ಲಿ ಜಮಾದಾರ್ ಮ|| ಖೈದ್ ಮಹಮದ್‌ರವರೂ, ಮ|| ಟೀಪೂಸುಲ್ತಾನ್ ಅಲ್ಲೀಖಾನ್‌ರವರೂ, ಡೆಪ್ಯುಟಿಕಮಿಷನರುಗಳಾದ ಮ|| ಎಂ. ಕಾಂತರಾಜ ಅರಸಿನವರೂ, ಮ|| ಕೆ. ಚಾಂಡಿಯವರೂ ಗೆದ್ದರು; ಎರಡು ಕಡೆಯ ಬಾಯಿಗಳೂ ತೆರೆಯಲ್ಪಟ್ಟು ಅಂತರಿಕ್ಷದಲ್ಲಿ ತೂಗುಹಾಕಲ್ಪಟ್ಟಿದ್ದ ಪೀಪಾಯಿಗಳಲ್ಲಿ ತೂರಿ ಬಂದು ಮೊಳಕಾಲು ಎತ್ತರದಲ್ಲಿ ಒಂದೊಂದು ಮಳ ಅಂತರದಿಂದ ಕಟ್ಟಲ್ಪಟ್ಟಿದ್ದ ಬೊಂಬುಗಳನ್ನು ದಾಟಿ ಬಂದು ನೆಲಕ್ಕೆ ಸೋಕುವಂತೆ ಜೀನಿಗೆ ಕಟ್ಟಿದ್ದ ರಿಕಾಪಿನ ಮೇಲೆ ಕಾಲನ್ನಿಟ್ಟು ಕುದುರೆಯ ಮೇಲೆ ಹತ್ತಿ ಆಚೆ ಕಡೆಗೆ ದುಮುಕಿ ಅಲ್ಲಿಂದೋಡಿ ಬಂದು ಒಂದು ಬೊಂಬಿನ ಮೇಲೆ ಹತ್ತಿ ಕುಳಿತುಕೊಂಡು ನೇತು ಬಿಟ್ಟಿದ್ದ ಹಣ್ಣು ಹಂಪಲನ್ನು ಕೈಲಿ ಮುಟ್ಟದೆ ಬಾಯಿಯಲ್ಲಿ ಕಚ್ಚಿ ತೆಗೆದುಕೊಂಡು ಮುಂದೆ ಓಡಿಹೋಗಿ ನಡುವಿನ ಎತ್ತರದಲ್ಲಿ ಮರಳಿನೊಳಗೆ ಹೂತಿದ್ದ ನಿಂಬೆಹಣ್ಣನ್ನು ಬಾಯಿಂದಲೇ ಕಚ್ಚಿ ತೆಗೆದುಕೊಂಡು ಹೋಗುವುದರಲ್ಲಿ ಮ|| ಗಳಾದ ಎಂ ಜಿ. ಕೃಷ್ಣಸ್ವಾಮಿರಾಯರು, ಇಂಪೀರಿಯಲ್‌ಸರ್ವೀಸ್ ಲ್ಯಾನ್ಸರ್ಸಿನ ಕಮಾಂಡೆಂಟ್ ಚಾಮರಾಜ ಅರಸ್ ಬಹದ್ದೂರ್‌ರವರು, ಪೊಲೀಸು ಸೂಪರಿಂಟೆಂಡೆಂಟ್ ರಾಣೋಜಿರಾಯರು ಪರಸ್ಪರ ಸಹಾಯಕ ಸಂಘದ ರೆಜಿಸ್ಟ್ರಾರರಾದ ನಾರಣಯ್ಯಂಗಾರರು, ಅಂಡರ್ ಸೆಕ್ರೆಟರಿ ಬಿ. ರಾಮಸ್ವಾಮಯ್ಯನವರು, ಅ|| ಕಮಿಷನರ್ ಅನಂತರಾಮಯ್ಯನವರು, ಅರಮನೆಯ ಅಶ್ವಶಾಲೆಯ ಸರ್ಜನರಾದ ರಾಮರಾಯರು, ಮತ್ತೂ ಎಂ. ಪಿ. ಕೃಷ್ಣ ಅರಸಿನವರು ಗೆದ್ದರು; ಒಂದು ಪದ್ಯದಲ್ಲಿ ಬಿಡಲ್ಪಟ್ಟಿದ್ದ ಮಾತುಗಳನ್ನು ಸೇರಿಸಿ ಬರೆಯುವುದರಲ್ಲಿ ಮ|| ರಾ|| ಗಳಾದ ೨ನೆಯ ಕೌನ್ಸಿಲರ್ ಎಚ್. ವಿ. ನಂಜುಂಡಯ್ಯನವರು ಮತ್ತು ದಿವಾನರು ಗೆದ್ದರು; ಒಂದು ಬೊಂಬಿನ ಮೇಲೆ ಇಬ್ಬರು ಇದಿರುಬದಿರಾಗಿ ಕುಳಿತು ದಿಂಬುಗಳನ್ನು ಎರಡು ಕೈಗಳಲ್ಲೂ ಹಿಡಿದು ತಾವು ಕೆಳಗೆ ಬೀಳದಂತೆ ಎಚ್ಚರವಾಗಿದ್ದು ಒಬ್ಬರನ್ನೊಬ್ಬರು ಹೊಡೆಯುವುದರಲ್ಲಿ ರಾ|| ಬ|| ಮುತ್ತಣ್ಣನವರು, ಡಾ|| ಕ|| ಮ|| ಕುಮಾರಸ್ವಾಮಿನಾಯಕರು ಮತ್ತೂ ಜ|| ಮತ್ತು ರೆ|| ಸೆಕ್ರೆಟರಿ ಮ|| ಬಾಲಸುಂದರಂಅಯ್ಯರವರೂ ಗೆದ್ದರು. ಹೀಗೆ ಗೆದ್ದವರುಗಳಿಗೆಲ್ಲ ಶ್ರೀಮನ್ಮಹಾರಾಜರವರು ಬಹುಮಾನಗಳನ್ನು ದಯಪಾಲಿಸಿದರು. ಮೇಲ್ಕಂಡ ಆಟಗಳೆಲ್ಲವೂ ಅತ್ಯಂತ ವಿನೋದವಾಗಿದ್ದು ಪ್ರೇಕ್ಷಕರೆಲ್ಲರೂ ಮೊದಲಿಂದ ಕಡೆಯವರೆಗೂ ನಗಾಡುವಂತೆ ಮಾಡಿದ್ದುವು.

ವರ್ತಮಾನ ಸಂಗ್ರಹ.

ಪ್ರತಾಪಘುರಿನ ಮಹಾರಾಜ ಕುಮಾರ ಮಣಿಸಿಂಗ್ ಬಹದ್ದೂರ್‌ರವರು ತೆಹರಿ ಸಂಸ್ಥಾನದ ಮಹಾರಾಜರ ಮಗಳನ್ನು ವಿವಾಹಮಾಡಿಕೊಂಡರು.

ಕಪೂರ್ಥಲ ಮಹಾರಾಜರು ತಿರುವನಂತಪುರಕ್ಕೆ ಹೋಗಿ ಅಲ್ಲಿಯ ಮಹಾರಾಜರ ಆತಿಥ್ಯದಲ್ಲಿದ್ದು ಪ್ರೇಕ್ಷಣೀಯವಾದ ಸ್ಥಳಗಳನ್ನೋಡಿಕೊಂಡು ಮದರಾಸಿಗೆ ಬಂದು ಅಲ್ಲಿಂದ ಬೊಂಬಾಯಿಗೆ ಪ್ರಯಾಣವನ್ನು ಮಾಡಿದರು.

ದಕ್ಷಿಣ ಅಮೇರಿಕಾದಲ್ಲಿ ಬಹು ದೊಡ್ಡ ರೇವು ಪಟ್ಟಣವಾದ ರೀಜನೈರೊ ಎಂಬಲ್ಲಿ ಕಳೆದ ೧೯ನೆಯ ಶತಮಾನದ ಆದಿಭಾಗದಲ್ಲಿ ಸ್ಥಾಪಿತವಾಗಿದ್ದ ಒಂದು ಮುದ್ರಣಾಲಯವು ಬೆಂಕಿಯ ಅನಾಹುತದಿಂದ ನಾಶವಾಯಿತು. ಇದರಿಂದ ೫೦೦೦೦೦ ರೂ. ವರೆಗೆ ನಷ್ಟವಾಗಿರುವುದಲ್ಲದೆ ೨೦೦೦ ಜನರಿಗೆ ಕೆಲಸವಿಲ್ಲದಂತಾಗಿದೆ.

ಬರುವ ಡಿಸೆಂಬರ್ ತಿಂಗಳಲ್ಲಿ ಜರಗುವ ಬಕರೀದ್ ಹಬ್ಬದಲ್ಲಿ ಮಹಮ್ಮದೀಯರು ಗೋವಧೆಯನ್ನು ಮಾಡುವ ವಿಚಾರದಲ್ಲಿ ಕಲಕತ್ತಾದಲ್ಲಿ ಗೊಂದಲವೇನೂ ನಡೆಯದಿರಲು ಕಲಕತ್ತಾದ ಪೊಲೀಸಿನವರು ಕಾಬೂಲಿನವರು ಮೊದಲಾದ ಮಹಮ್ಮದೀಯರು ಈ ಲಾಗಾಯಿತು ಇನ್ನು ೫ ತಿಂಗಳವರೆಗೆ ಕೈಲಿ ದೊಣ್ಣೆಗಳನ್ನು ಹಿಡಿದು ಸಂಚರಿಸಕೂಡದೆಂದು ಬೀದಿಬೀದಿಗಳಲ್ಲಿ ಡಂಗುರವನ್ನು ಹೊಡೆಯಿಸಿ ಪ್ರಸಿದ್ಧಪಡಿಸಿರುತ್ತಾರೆ.

ಕಳೆದ ತಾ|| ೬ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೩೮೨ ಜನರಿಗೆ ಪ್ಲೇಗು ತಗಲಿ, ೭೮೯ ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯವೊಂದರಲ್ಲೇ ೫೫೩; ಮದ್ರಾಸಾಧಿಪತ್ಯದಲ್ಲಿ ೬೩; ಬಂಗಾಳದಲ್ಲಿ ೨೧; ಸಂಯುಕ್ತ ಪ್ರಾಂತಗಳಲ್ಲಿ ೧೮೩; ಪಂಜಾಬಿನಲ್ಲಿ ೧೯; ಬರ್ಮಾದಲ್ಲಿ ೧೩; ಮಧ್ಯಪ್ರಾಂತಗಳಲ್ಲಿ ೪೪೦; ಮೈಸೂರ ಸೀಮೆಯಲ್ಲಿ ೫೫೦; ಹೈದರಾಬಾದು ಸೀಮೆಯಲ್ಲಿ ೩೩೬ ಮತ್ತೂ ಮಧ್ಯಹಿಂದೂಸ್ಥಾನದಲ್ಲಿ ೧೨೪ ಈಪ್ರಕಾರ ಮರಣಗಳಾಗಿರುತ್ತವೆ.

ಕ್ವಿಲಾನಿನಲ್ಲಿರುವ ಆನಂದವಲ್ಲೀಶ್ವರ ದೇವಸ್ಥಾನದಲ್ಲಿ ಕಳೆದ ದಶರಾತ್ರಿಯ ಮಹೋತ್ಸವ ಕಾಲದಲ್ಲಿ ದೇವರಿಗೆ ಅಮೋಘವಾದ ರತ್ನಾಭರಣಗಳನ್ನು ಧರಿಸಿರುವಾಗ್ಗೆ ಒಬ್ಬ ಬ್ರಾಹ್ಮಣನು ದೇವಸ್ಥಾನದ ಅಧಿಕಾರಿಗಳು ಕಣ್ಮರೆಯಾದುದನ್ನು ನಿರೀಕ್ಷಿಸಿಕೊಂಡಿದ್ದು ೩ ಲಕ್ಷ ರೂ. ಗಳ ಬೆಲೆಬಾಳುವ ಒಂದು ನವರತ್ನಖಚಿತವಾದ ಕಂಠಾಭರಣವನ್ನು ಅಪಹರಿಸಿಕೊಂಡಿದ್ದು, ಕಡೆಗೆ ಪೊಲೀಸರ ಕೈಗೆ ಸಿಕ್ಕಿಬಿದ್ದು ವಿಚಾರಣೆಯನ್ನು ಹೊಂದುತ್ತಿರುವನು. ಈ ಆಭರಣವನ್ನು ಪೂರ್ವದ ಮಹಾರಾಜರು ದೇವರಿಗೊಪ್ಪಿಸಿದ್ದರು.

ಪಾಟಿಯಾಲ ಮಹಾರಾಜರು ಕಳೆದ ತಾ|| ೨ರಲ್ಲಿ ಮೋಟಾರುಬಂಡಿಯನ್ನು ನಡೆಯಿಸಿಕೊಂಡು ಅರಮನೆಗೆ ಬರುತ್ತಿರುವ ಮಾರ್ಗದಲ್ಲಿ ಒಂದು ಮಗುವನ್ನು ಎತ್ತಿಕೊಂಡಿದ್ದ ಒಬ್ಬ ಮನುಷ್ಯನು ಆ ಮಗುವನ್ನು ಅಕಸ್ಮಾತ್ತಾಗಿ ನೆಲದ ಮೇಲೆ ಕೆಡವಿಬಿಟ್ಟನು ಮಹಾರಾಜರವರು ಕೊಂಚ ದೂರದಲ್ಲಿ ಮಗುವು ಬಿದ್ದಿರುವುದನ್ನು ಕಂಡು ವೇಗವಾಗಿ ಹೋಗುತ್ತಿದ್ದ ತಮ್ಮ ಬಂಡಿಯನ್ನು ನಿಲ್ಲಿಸಿ ಬೇರೆಯ ಕಡೆಗೆ ತಿರುಗಿಸಲು ಬಂಡಿಯು ಒಂದು ಗುಡಿಸಿಲಿಗೆ ತಾಕಿ ಬಡಿದಿತು. ಆದರೆ ಬಂಡಿಯೊಳಗೆ ಕುಳಿತಿದ್ದವರಿಗೆ ಬಾಧೆಯಾಗಲಿಲ್ಲವು.

ಅಬೋರ ಕಾಡುಜನರ ಮೇಲೆ ದಂಡಯಾತ್ರೆ ಹೊರಟಿರುವ ಬ್ರಿಟಿಷ್‌ಸೇನೆಯು ಕೋಬೊ ಎಂಬ ಸ್ಥಳವನ್ನು ತಲಪಿರುತ್ತದೆ. ಆ ಪ್ರಾಂತದಲ್ಲಿ ಮಳೆಯು ವಿಪರೀತವಾಗಿ ಬಂದು ಕೋಬೆ ಮತ್ತೂ ಪಾಸಿಘಾಟಿನ ಮಧ್ಯೆ ಪ್ರವಾಹವು ಮಿತಿಮೀರಿ ಉಕ್ಕಿ ಜಲಪ್ರಳಯವಾಗಿದೆ. ಕೋಬೊಯಿಂದ ೬ ಮೈಲಿ ದೂರದಲ್ಲಿ ಉರಿಯಾಕಿಗೆ ಹೋಗುವ ಮಾರ್ಗದಲ್ಲಿ ನದಿಗೆ ಕಟ್ಟಿದ್ದ ಸೇತು ಪ್ರವಾಹದಲ್ಲಿ ಕೊಚ್ಚಿ ಹೋಯಿತು. ಈಗ ಪುನಃ ಹೊಸದಾಗೊಂದು ಕಟ್ಟಲ್ಪಡುತ್ತಿದೆ. ಘೋರಾರಣ್ಯದ ಮಧ್ಯೆ ಉರಿಯಾಕಿಗೆ ಹಾಕಲ್ಪಡುವ ಮಾರ್ಗವು ಶೀಮಿ ನದಿಯವರಿಗೆ ಸಿದ್ಧವಾಗಿರುತ್ತದೆ. ಸೇನೆಯು ಆರೋಗ್ಯವಾಗಿ ಚೆನ್ನಾಗಿದೆ. ಆದರೆ ತಂತಿಯ ಮತ್ತೂ [illegible] ಮತ್ತು ಕೆಲಸಗಾರರು ಅಸ್ವಸ್ಥರಾದುದರಿಂದ ಪಾಸಿಘಾಟಿನಿಂದ ೧೮೦ ಮೈಲಿ ದೂರದಲ್ಲಿರುವ ಸ್ಥಳದಿಂದ ಕೋಬೋಗೆ ತಿರುಗಿ ಬರಮಾಡಲ್ಪಟ್ಟಿದ್ದಾರೆ. ಸೀತವು ಇನ್ನೂ ಹೆಚ್ಚಾಗಿದೆ ಮತ್ತೂ ನದಿಯಲ್ಲಿ ಪ್ರವಾಹವು ೧೦ ಅಡಿಯ ಮೇಲೆ ಇದೆ. ಈ ರೀತಿ ಪ್ರವಾಹವು ಕಳೆದ ೩೦ ವರ್ಷಗಳಿಂದಲೂ ಬಂದಿರಲಿಲ್ಲವಂತೆ. ಎಂದು ಸೇನಾನಾಯಕರಾದ ಮೇಜರ್ ಜನರಲ್ ಬೋಯರು ತಂತಿಯ ವಾರ್ತೆಯನ್ನು ಕೊಟ್ಟಿರುತ್ತಾರೆ.

[೨ ನೆಯ ಪುಟದಿಂದ ಮುಂದೆಸಾಗಿದುದು.]

ವ್ಯಸನಕ್ಕೆ ಕಾರಣವಾಗಿರುವ ಪ್ರಯುಕ್ತ ಕೆಲಸಕ್ಕಾಗಿ ಇಲ್ಲಿಂದ ಪರಸ್ಥಳಕ್ಕೆ ಜನರನ್ನು ಕರೆದುಕೊಂಡು ಹೋಗತಕ್ಕವರು ಅವರಿಗೆ ತೊಂದರೆಯನ್ನುಂಟುಮಾಡದ ಹಾಗೆ ಮತ್ತು ಅವರನ್ನು ಸುರಕ್ಷಿತವಾಗಿ ಸ್ವಸ್ಥಾನಕ್ಕೆ ತಲಪಿಸುವ ಹಾಗೆ ಮ್ಯಾಜಿಸ್ಟ್ರೇಟರಲ್ಲಿ ಒಡಂಬಡಿಕೆಯನ್ನು ಮಾಡಿಕೊಳ್ಳುವಂತೆ ಒಂದು ವಿಧಿಯಾಗಬೇಕು. ಉ- ಈ ವಿಚಾರದಲ್ಲಿ ಕೆಲ ನಿಬಂಧನೆಗಳು ಮಾಡಲ್ಪಟ್ಟು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ. ಕೂಡಲೆ ಅನುಷ್ಠಾನಕ್ಕೆ ತರಲ್ಪಡುವುದು.

ಪ್ರ- ಧನವಂತರು ಏನನ್ನೂ ತಿಳಿಯದ ಹಳ್ಳಿಗಾಡು ಜನರಿಗೆ ಹಣವನ್ನು ಸಾಲವಾಗಿ ಕೊಟ್ಟು, ಅವರು ಹಣವನ್ನು ಹಿಂತಿರುಗಿ ಕೊಟ್ಟಾಗ್ಯೂ, ತಮ್ಮ ಲೆಕ್ಕದಲ್ಲಿ ಬರೆದುಕೊಳ್ಳದೆ ಆ ಮೂಢ ಜನರನ್ನು ಬಹು ನಷ್ಟಕಷ್ಟಗಳಿಗೆ ಗುರಿಮಾಡುತ್ತಾರಾದುದರಿಂದ, ಸಾಲಾ ಕೊಟ್ಟಿರುವವರು ತಮಗೆ ಹಣವು ಬಂದಕೂಡಲೆ ರಸೀತಿಯನ್ನು ಕೊಡುವಂತೆ ಒಂದು ವಿಧಿ ನಿರ್ಮಿತವಾಗಬೇಕು. ಉ- ಇದು ಸಾಧ್ಯವಲ್ಲವು.

ಪ್ರ- ಪಟೇಲಿ ಮತ್ತು ಶಾನುಭೋಗಿಕೆ ಉದ್ಯೋಗಗಳ ಹಕ್ಕಿನ ವಿಚಾರವಾಗಿ ಹುಟ್ಟುವ ವ್ಯಾಜ್ಯಗಳಲ್ಲಿ ರೆವಿನ್ಯೂ ಕಮಿಷನರ ತೀರ್ಮಾನವೇ ಕಡೆಯದಾಗಿರುತ್ತದೆ. ಇತಃಪರ ಇದನ್ನು ತಪ್ಪಿಸಿ ಈ ತೀರ್ಮಾನದ ಮೇಲೆ ಕೌನ್ಸಿಲರಿಗೂ, ಅಲ್ಲಿಂದ ಶ್ರೀಮನ್ಮಹಾರಾಜರವರಿಗೂ ಅಪೀಲನ್ನು ಮಾಡಲವಕಾಶವನ್ನುಂಟುಮಾಡಿಕೊಡಬೇಕು. ಉ- ಈ ವಿವಾದಗಳ ಸಂಬಂಧವಾದ ವಿಧಿಯಲ್ಲಿ ಹಾಗೆ ಅಪೀಲನ್ನು ಮಾಡಲವಕಾಶವಿರುತ್ತದೆ.

ಪ್ರ- ಹಳ್ಳಿಗಳಲ್ಲಿ ಭೂಮಿಯನ್ನಿಟ್ಟುಕೊಂಡು ಬೇಸಾಯವನ್ನು ಮಾಡಿಸತಕ್ಕ ಜನರಲ್ಲಿ ಜೀತಕ್ಕಾಗಿ ಸೇರಿಕೊಂಡಿರತಕ್ಕವರು ಮಧ್ಯಕಾಲದಲ್ಲಿ ಬಿಟ್ಟು ಹೋಗುವುದರಿಂದ ಬಹು ತೊಂದರೆಯಾಗಿರುತ್ತದೆ. ಅದುಕಾರಣ ಹಾಗೆ ಹೋದವರು ಶಿಕ್ಷೆಗೆ ಗುರಿಮಾಡಲ್ಪಡಲು ಒಂದು ವಿಧಿನಿರ್ಮಿತವಾಗಬೇಕು. ಉ- ಜೀತಕ್ಕಾಗಿ ಸೇರತಕ್ಕವರು ಯಾವಜ್ಜೀವವೂ ಇರುವಂತೆ ನಿರ್ಬಂಧಪಡಿಸುವುದು ಯುಕ್ತವಾಗಿಲ್ಲ.

ಪ್ರ- ಕಾರಾಗೃಹವಾಸಿಗಳಲ್ಲಿ ಯಾರಿಗಾದರೂ ಗುಣವಾಗದ ವ್ಯಾಧಿಯು ಪ್ರಾಪ್ತವಾದಲ್ಲಿ, ಅಂತಹವರನ್ನು ಬಂಧನದಿಂದ ಬಿಟ್ಟುಬಿಡುವಂತಾಗಬೇಕು. ಉ- ಆ ಬಗೆಗೆ ವಿಧಿಯಲ್ಲಿದ್ದರೂ ಬಿಡುಗಡೆಮಾಡುವ ಪದ್ಧತಿಯುಂಟು.

ಪ್ರ- ಕನ್ಯೆಗೆ ೧೦ ವರ್ಷ ವಯಸ್ಸಿನೊಳಗೂ, ವರನಿಗೆ ಹದಿನಾರು ವರ್ಷ ವಯಸ್ಸಿನೊಳಗೂ ವಿವಾಹಮಾಡದಂತೆ ಬಾಲ್ಯವಿವಾಹ ನಿರೋಧಕ ವಿಧಿಯಲ್ಲಿ ತಿದ್ದುಪಾಟಾಗಬೇಕು. ಉ- ಪ್ರಜಾಪ್ರತಿನಿಧಿಸಭೆಯಿಂದ ನಿಯಮನಿರ್ಮಾಣ ಸಭೆಗೆ ಮೆಂಬರರಾಗಿ ತೆಗೆದುಕೊಳ್ಳಲ್ಪಟ್ಟಿರುವವರು ಈ ವಿಷಯಕವಾದ ವಿಧಿಯನ್ನು ಸಿದ್ಧಗೊಳಿಸಿ ನಿಯಮನಿರ್ಮಾಣ ಸಭೆಯಲ್ಲಿ ಚರ್ಚೆಗೆ ತಂದಲ್ಲಿ ಪರ್ಯಾಲೋಚಿಸಲ್ಪಡುವುದಾಗುತ್ತದೆ.

ಪ್ರ- ಪೋಲೀಸರು ಹಳ್ಳಿಗಳಲ್ಲಿ ಮದುವೆಗಳು ನಡೆಯುವಾಗ್ಗೆ ಬಂದು ವಧೂವರರ ವಯಸ್ಸು ಕಡಿಮೆಯೆಂದು ಹೇಳಿ ಲಗ್ನವು ನಡೆಯದಂತೆ ಅಡ್ಡಿಮಾಡುವರು. ವಧೂವರರ ವಯಸ್ಸಿನ ವಿಚಾರವಾಗಿ ಡಾಕ್ಟರಿಂದ ಪಡೆದಿರುವ ಸರ್ಟಿಫಿಕೇಟನ್ನು ತೋರಿಸಿದರೂ, ಪೋಲೀಸರೊಪ್ಪದೆ ಶಿಕ್ಷೆಗೆ ಗುರಿಮಾಡಿಸುವರು. ಇದರಿಂದ ಲಗ್ನಮಾಡುವವರು ಅನೇಕ ಕಷ್ಟನಷ್ಟಗಳಿಗೂ, ಅಪಹಾಸ್ಯಕ್ಕೂ ಗುರಿಯಾಗಬೇಕಾಗುತ್ತಾದ ಪ್ರಯುಕ್ತ ಈ ವಿಧವಾದ ಪೋಲೀಸರ ನಿರ್ಬಂಧವನ್ನು ತಪ್ಪಿಸಿಕೊಡಬೇಕು ಉ- ಈ ರೀತಿಯಾಗಿ ಪೋಲೀಸರು ಮದುವೆಯ ಮನೆಗೆ ಬರಲು ಮತ್ತು ಸರ್ಟಿಫಿಕೇಟನ್ನು ಕೇಳಿ ಲಗ್ನ ನಡೆಯದ ಹಾಗೆ ತಡೆಮಾಡಲು ಕಾರಣವಿಲ್ಲವು. ಮತ್ತು ಪ್ರತಿಯೊಂದು ಮದುವೆಯಲ್ಲಿ ವಧೂವರರ ವಯಸ್ಸಿಗಾಗಿ ಸರ್ಟಿಫಿಕೇಟನ್ನು ಪಡಿಯಬೇಕೆಂಬ ನಿರ್ಬಂಧವೂ ಇಲ್ಲ. ಈ ವಿಧವಾದ ತೊಂದರೆಗಳೇನೂ ನಡೆಯದಂತೆ ಅಪ್ಪಣೆ ಮಾಡುವುದಾಗುತ್ತದೆ.

ಪ್ರ- ಒಡ್ಡರಬಂಡಿಯ ಚಕ್ರದ ಪಟ್ಟಿಯು ಬಹು ಕಿರಿದಾಗಿರುವುದರಿಂದ ಹೆಚ್ಚು ಭಾರವನ್ನು ತುಂಬಿಕೊಂಡು ಹೋಗುವಾಗ್ಗೆ ಮಾರ್ಗದ ಮಣ್ಣು ಕೊರೆದುಹೋಗಿ ಹಳ್ಳವು ಬೀಳುತ್ತಾದ ಪ್ರಯುಕ್ತ, ಮಲಬಾರು ಡಿ॥ ನಲ್ಲೂ ಮದರಾಸಾಧಿಪತ್ಯದಲ್ಲೂ, ಆಚರಣೆಯಲ್ಲಿರುವಂತೆ ಚಕ್ರದ ಪಟ್ಟಿಯಗಲವು ಇಷ್ಟಕ್ಕೆ ಕಡಿಮೆ ಇರಕೂಡದೆಂದು ವಿಧಾಯಕವಾಗಬೇಕು. ಉ- ಈ ಸಂಬಂಧವಾಗಿ ಮದ್ರಾಸಾಧಿಪತ್ಯದಲ್ಲಿರುವ ಪದ್ಧತಿಯನ್ನು ವಿಚಾರಿಸುತ್ತೇವೆ.

ಪ್ರ- ಈ ಸಂಸ್ಥಾನದಲ್ಲಿ ನ್ಯಾಯಸಂಬಂಧವಾಗಿ ಒಂದು ಮಹಾಸಭೆಯನ್ನು ಸ್ಥಾಪಿಸಿದುದಾದರೆ, ಅನೇಕ ಸಂದರ್ಭಗಳಲ್ಲಿ ಚೀಫ್ ಕೋರ್ಟಿನವರನ್ನು ಕೇಳಿ ತಿಳಿದುಕೊಳ್ಳಬೇಕಾದ ಮತ್ತು ಸಾಮಾನ್ಯ ವಿಷಯಗಳನ್ನು ಕುರಿತು ಈ ಸಭೆಯಲ್ಲಿ ಚರ್ಚಿಸಬೇಕಾದ ಅವಶ್ಯಕತೆಯು ತಪ್ಪುತ್ತದೆ. ಉ- ಇತಃಪರ ನ್ಯಾಯ ಸಂಬಂಧವಾದ ವಿಷಯಗಳು ಮೈಸೂರಲ್ಲೂ, ಬೆಂಗಳೂರಲ್ಲೂ ಇರುವ ಲಾಯರುಗಳ ಸಂಘಕ್ಕೆ ಕಳುಹಲ್ಪಟ್ಟು, ಅವರುಗಳ ಅಭಿಪ್ರಾಯವನ್ನು ತಿಳಿದು ಈ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುವುದಾಗುತ್ತದೆ.

ಪ್ರ- ಕೆಲ ಮುನ್ಸೀಫ್ ಕೋರ್ಟುಗಳಲ್ಲಿ ವಿವಾದಗಳು ಹೆಚ್ಚಾಗಿರುವುದರಿಂದ, ಅವುಗಳನ್ನು ವಿಲೆ ಮಾಡುವ ಬಗೆಗೆ ಎರಡು ಅಡಿಷಲ್ ಮುನ್ಸೀಫ್ ಕೋರ್ಟುಗಳನ್ನು ಆಯಾ ಸ್ಥಳಗಳಲ್ಲಿ ಅನಿತ್ಯವಾಗಿಡಿಸಿಕೊಡಬೇಕು. ಉ- ಇದು ಅವಶ್ಯಕವೆಂದು ತೋರುತ್ತಾದಪ್ರಯುಕ್ತ ಆಲೋಚನೆಯಿಂದ ಇತ್ಯರ್ಥಮಾಡುವುದಾಗುತ್ತದೆ.

ಪ್ರ- ಕೆಲ ಅಮಲ್ದಾರರುಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವು ತಪ್ಪಿಸಲ್ಪಟ್ಟಿರುವುದರಿಂದ, ರೈತರಲ್ಲಿ ಭೀತಿಯು ತಪ್ಪಿ ಗ್ರಾಮದ ಆರೋಗ್ಯವಿಚಾರ, ಕೆರೆ ಮತ್ತು ಬಾಂದುಗಳನ್ನು ಸರಿಪಡಿಸುವಿಕೆ, ಸಾಲುಮರಗಳ ಕಾಪಾಡುವಿಕೆ ಮೊದಲಾದ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲವಾದ ಪ್ರಯುಕ್ತ, ಅವರುಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಪುನಃ ಕೊಡಿಸಬೇಕು. ಉ- ಈ ವಿಚಾರದಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವಭಿಪ್ರಾಯವು ಸರ್ಕಾರದವರಿಗಿಲ್ಲವಾದುದರಿಂದ ಚರ್ಚಿಸಿ ಪ್ರಯೋಜನವಿಲ್ಲವು.

ಪ್ರ- ಗ್ರಾಮದ ಆರೋಗ್ಯವಿಧಿಗೆ ವಿರೋಧಿ ನಡೆಯುವವರಿಗೆ ೧—೨ ರೂ. ದಂಡವನ್ನು ವಿಧಿಸುವ ಅಧಿಕಾರವನ್ನು ಅಮಲ್ದಾರರಿಗೆ ಕೊಡಿಸಬೇಕಲ್ಲದೆ, ೨—೩ ನೆಯ ತ॥ ಮ್ಯಾಜಿಸ್ಟ್ರೇಟರುಗಳ ತೀರ್ಮಾನದ ಮೇಲೆ ಡಿ॥ ಮ್ಯಾಜಿಸ್ಟ್ರೇಟರಿಗೆ ಅಪೀಲು ಮಾಡುವುದನ್ನು ತಪ್ಪಿಸಿ, ಡಿಸ್ಟ್ರಿಕ್ಟ್ ಮತ್ತು ಸಬ್ ಜಡ್ಜರು ಅಪೀಲನ್ನು ಹಿಡಿಯುವಂತಾಗಬೇಕು. ಉ- ವಿಚಾರಣೆಯಿಲ್ಲದೆ ಅಪರಾಧವನ್ನು ವಿಧಿಸಲಾಗುವುದಿಲ್ಲ ಮತ್ತೂ ಡಿ॥ ಮ್ಯಾಜಿಸ್ಟ್ರೇಟರಿಗಿರುವ ಅಧಿಕಾರವನ್ನು ತಪ್ಪಿಸಲಾಗುವುದಿಲ್ಲ.

ಪ್ರ- ತಾಲ್ಲೋಕುಗಳಲ್ಲಿ ಗೌರವಾರ್ಥವಾಗಿ ಕೆಲಸಮಾಡತಕ್ಕವರನ್ನು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸುವುದರಿಂದ ಕ್ರಿಮಿನಲ್ ವಿವಾದಗಳು ಸುಲಲಿತವಾಗಿಯೂ, ಜಾಗ್ರತೆಯಾಗಿಯೂ ನಡೆಯುವವಲ್ಲದೆ ಅಮಲ್ದಾರರೂ, ಅ॥ ಕಮಿಷನರೂ ಇತರ ಕೆಲಸಗಳನ್ನಡೆಸಲು ಅನುಕೂಲವಾಗುತ್ತದೆ. ಉ- ಇದಾಗತಕ್ಕದಲ್ಲ.

ಪ್ರ- ಚಿನ್ನದ ಗಣಿಗಳ ಆವರ್ಣದಲ್ಲಿ ದೊರೆಯುವ ತಾಂಬ್ರದ ತಂತಿ, ಹಿತ್ತಾಳೆ ಮೊಳೆ ಮೊದಲಾದ ಯಂತ್ರಸಾಮಗ್ರಿಗಳು ಗಣಿಗಳ ಕಂಪೆನಿಯವರಿಗೆ ಸಂಬಂಧಪಟ್ಟವುಗಳೆಂದು ಗಣಿಯ ವಿಧಿಯಲ್ಲಿ ಸೇರಿಸಬೇಕು. (ಇತರ ಪ್ರತಿನಿಧಿಗಳು ಈ ರೀತಿ ಸೇರಿರುವುದರಿಂದ ಜನರಿಗೆ ಬಹು ತೊಂದರೆಯಾಗುತ್ತದೆಂದು ಚರ್ಚಿಸಿದರು.) ಉ- ಈ ವಿಷಯದಲ್ಲಿ ಪರ್ಯಾಲೋಚಿಸುತ್ತೇವೆ.

ಪ್ರ- ಅನಪಯುಕ್ತನಾದ ಮನುಷ್ಯನನ್ನು ಚಿನ್ನದ ಗಣಿಯಾವರ್ಣದಿಂದ ಹೊರಗೆ ಕಳುಹುವ ಅಧಿಕಾರವು ಗಣಿಗಳ ಸೂಪರಿಂಟೆಂಡೆಂಟರಿಗಿರುವ ಬದಲು ಪೋಲೀಸು ಸೂಪರಿಂಟೆಂಡೆಂಟರಿಗಿರುವಂತಾಗಬೇಕು. ಉ- ಪರ್ಯಾಲೋಚನೆಯಿಂದ ಅನುಕೂಲಪಡಿಸಲ್ಪಡುವುದಾಗುತ್ತದೆ.

ಪ್ರ- ಚಿನ್ನದ ಗಣಿಗಳಲ್ಲಿ ತಿಂಗಳೊಂದಕ್ಕೆ ೨೦ ರೂ. ಗಳೊಳಗೆ ಸಂಪಾದಿಸತಕ್ಕ ಕೆಲಸಗಾರರ ಸಂಬಳವನ್ನು ಸಿವಿಲ್ ಕೋರ್ಟು ಡಿಕ್ರಿಗಾಗಿ ಜಪ್ತಿಮಾಡದಂತಾಗಬೇಕು. ಉ- ಆ ಪ್ರಕಾರ ವಿಧಿಯಿರುತ್ತದೆ. ಒಂದುವೇಳೆ ಹಾಗೇನಾದರೂ ಜಪ್ತಿ ಮಾಡುವುದಾದರೆ ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿ. ಈ ಮಧ್ಯೆ ನಾವು ಈ ವಿಚಾರದಲ್ಲಿ ಚೀಫ್ ಕೋರ್ಟಿನವರನ್ನು ಕೇಳುತ್ತೇವೆ.

ಪ್ರ- ಏಕಪಕ್ಷ ಇತ್ಯರ್ಥವಾಗುವ ವಿವಾದಗಳಲ್ಲಿ ಕೋರ್ಟು ಫೀಜಿನಲ್ಲಿ ಅರ್ಧವನ್ನು ಹಿಂತಿರುಗಿ ಕೊಡುವಂತೆ ಅಪ್ಪಣೆಯಾಗಬೇಕು. ಉ- ಇದು ಸಾಧ್ಯವಲ್ಲವು.

ಪ್ರ- ಸಿವಿಲ್ ಕೋರ್ಟುಗಳಲ್ಲಿ ಜಡ್ಜಿಗಳು ಕಕ್ಷಿಗಾರರಿಂದ ಪ್ರಮಾಣವನ್ನು ಮಾಡಿಸುವುದರಲ್ಲಿ ಕಾಲವಿಳಂಬವಾಗುತ್ತಾದ ಪ್ರಯುಕ್ತ ಆ ಕೋರ್ಟಿನ ಇತರ ಅಧಿಕಾರಿಗಳು ಪ್ರಮಾಣವನ್ನು ಮಾಡಿಸುವ ಅಧಿಕಾರವು ಕೊಡಲ್ಪಡಬೇಕು. ಉ- ಈ ವಿಷಯಲ್ಲಿ ಅನುಕೂಲವಾದಪ್ಪಣೆಯು ಕೂಡಲೆ ಮಾಡಲ್ಪಡುವುದಾಗುತ್ತದೆ.

ಪ್ರ- ಸಿವಿಲ್ ಡಿಕ್ರಿಯ ಮೇಲೆ ಜಾರಿಯನ್ನಪೇಕ್ಷಿಸಿ ಕೊಡುವ ಅರ್ಜಿಗಳ ಮೇಲೆ ಅಪ್ಪಣೆಮಾಡುವಾಗ್ಗೆ ಕರಣಿಕರು ಬರೆದು ಜಡ್ಜಿಯವರು ಹಸ್ತಾಕ್ಷರವನ್ನು ಹಾಕುವುದಕ್ಕೆ ಬದಲಾಗಿ ಜಡ್ಜಿಯವರೇ ಸ್ವತಃ ಬರೆಯುವಂತಾಗಬೇಕು. ಉ- ಈ ವಿಷಯವನಾವಶ್ಯಕವು.

ಪ್ರ- ಮ್ಯಾಜಿಸ್ಟ್ರೇಟರಪ್ಪಣೆಯ ಪ್ರಕಾರ ಪೋಲೀಸಿನವರು ಜನರನ್ನು ವಾರಂಟಿನಿಂದ ಹಿಡಿದುಕೊಂಡು ಬರುವಾಗ್ಗೆ ಅವರನ್ನು ಜಾಮೀನನ್ನು ತೆಗೆದುಕೊಂಡು ಬಿಡಲವಕಾಶವಿದ್ದಾಗ್ಯೂ ತಮಗೆ ಅಂತಹ ಅಧಿಕಾರವಿಲ್ಲವೆಂದು ಬಹು ದೂರದಿಂದ ಹಿಡಿದು ತರಲ್ಪಡುವ ಜನರಿಗೆ ತುಂಬಾ ತೊಂದರೆಯಾಗಿರುತ್ತದೆ. ಅದುಕಾರಣ ಅಂತಹ ಸಂದರ್ಭದಲ್ಲಿ ಜಾಮೀನನ್ನು ತೆಗೆದುಕೊಂಡು ಬಿಡಲಧಿಕಾರವಿರುವಂತಹ ಪೋಲೀಸಿನವರನ್ನು ನಿಯಮಿಸುವಂತಾಗಬೇಕು. ಉ- ಈ ಪ್ರಾರ್ಥನೆಯು ಯುಕ್ತವಾಗಿ ಕಾಣುತ್ತದೆ. ಈ ತೊಂದರೆಯು ಕೂಡಲೆ ಪರಿಹರಿಸಲ್ಪಡುವುದು.

ಪ್ರ- ಪೋಲೀಸು ಶಾಖೆಯು ಸರಿಯಾಗಿ ಕ್ರಮಪಡಿಸಲ್ಪಟ್ಟು ಇತರ ಶಾಖೆಯಿಂದ ಅಧಿಕಾರಿಗಳು ಈ ಶಾಖೆಗೆ ತೆಗೆದುಕೊಳ್ಳಲ್ಪಡದಂತಾಗಬೇಕು. ಉ- ಆಲೋಚನೆಯ ಬಗೆಗೆ ಗುರ್ತುಮಾಡಿಕೊಂಡಿದೆ.

ಪ್ರ- ದೊಡ್ಡ ಮನುಷ್ಯರುಗಳು ಅನಿರೀಕ್ಷಿತವಾಗಿ ಪೋಲೀಸು ಠಾಣಕ್ಕೆ ಹೋಗಿ ಅಲ್ಲಿ ಸೆರೆಯಾಳುಗಳಾಗಿ ಇಡಲ್ಪಟ್ಟಿರುವವರನ್ನು ಪರೀಕ್ಷಿಸಲವಕಾಶವು ಕಲ್ಪಿಸಲ್ಪಟ್ಟಲ್ಲಿ, ಸೆರೆಯಲ್ಲಿರುವವರಿಗೆ ಪ್ರಾಪ್ತವಾಗುವ ಹಿಂಸೆಯು ಕಡಿಮೆಯಾಗುವುದು. ಉ- ಈ ವಿಧಾನದಿಂದ ಪುರುಷಾರ್ಥವೇನೂ ಆಗುವುದಿಲ್ಲವು. ಇದಕ್ಕಾಗಿ ಬೇರೊಂದು ಅನುಕೂಲವಾದ ಮಾರ್ಗವು ಕಂಡುಹಿಡಿಯಲ್ಪಡುವುದು

ಪ್ರ- ಕಳ್ಳರ ಗುಂಪಿಗೆ ಸೇರಿಸಲ್ಪಟ್ಟು ಪೋಲೀಸರ ಮೇಲ್ವಿಚಾರಣೆಗೆ ಗುರಿಮಾಡಲ್ಪಟ್ಟಿರುವ ಜನರ ಸಂಖ್ಯೆಯು ಹೆಚ್ಚುತಲಿದೆಯಾದುದರಿಂದ, ಅಂತಹ ಜನರು ವ್ಯವಸಾಯೋದ್ಯೋಗದಲ್ಲಿ ತೊಡಗುವಂತಾಗಬೇಕು. ಉ-ಅಂತಹ ಜನರು ಅಪೇಕ್ಷಿಸಿದಲ್ಲಿ ವ್ಯವಸಾಯಕ್ಕಾಗಿ ಭೂಮಿಯನ್ನು ಕೊಟ್ಟು ಸಹಾಯಮಾಡಲು ಸರ್ಕಾರದವರು ಸಿದ್ಧರಾಗಿರುತ್ತಾರೆ

ಪ್ರ- ರೈತರುಗಳು ತುಪಾಕಿಗಳನ್ನುಪಯೋಗಿಸಲು ದುಸ್ತನ್ನು ತೆಗೆದುಕೊಳ್ಳದೆ ಲೈಸೆನ್ಸನ್ನು ಕೊಡಿಸಿಕೊಡಬೇಕು. ಉ- ತಾಲ್ಲೋಕು ಮತ್ತು ಹುಜೂರು ಜಮಾಬಂದಿಯ ಕಾಲದಲ್ಲಿ ಅಂತಹ ತುಪಾಕಿಗಳನ್ನು ಪರೀಕ್ಷಿಸಿ ಲೈಸೆನ್ಸನ್ನು ಉಚಿತವಾಗಿ ಕೊಡುವಂತೆ ಅಪ್ಪಣೆಮಾಡುವುದಾಗುತ್ತದೆ.

ಪ್ರ- ಚರ್ಮದಾಸೆಯಿಂದ ದನಗಳನ್ನು ಕದ್ದು ಕೊಲ್ಲದಂತೆ ಕಠಿಣತರವಾದ ವಿಧಿಯನ್ನು ಮಾಡಬೇಕು. ಉ- ಆ ಬಗೆಗೆ ಪ್ರತಿನಿಧಿಗಳಲ್ಲಾರಾದರೂ ಒಂದು ಬಿಲ್ಲನು ಸಿದ್ಧಗೊಳಿಸಿ ಕೊಟ್ಟಲ್ಲಿ ಅದು ನಿಯಮನಿರ್ಮಾಣಸಭೆಯಲ್ಲಿ ಚರ್ಚೆಗೆ ತರಲ್ಪಟ್ಟು, ಅನುಷ್ಠಾನಕ್ಕೆ ತರಲ್ಪಡುವುದಾಗುತ್ತದೆ. (ಅಡ್ವೋಕೇಟ್ ಮ॥ ಎ ರಾಮಣ್ಣನವರು ಆ ರೀತಿ ಬಿಲ್ಲನ್ನು ಸಿದ್ಧಗೊಳಿಸಿ ನಿಯಮನಿರ್ಮಾಣ ಸಭೆಯವರ ಚರ್ಚೆಗೆ ಕಳುಹುತ್ತೇವೆಂದು ಒಪ್ಪಿಕೊಂಡರು.)

ಪ್ರ- ಶಾನುಭೋಗರು ಕಂದಾಯವನ್ನೆತ್ತಲಿರತಕ್ಕ ಸ್ಥಳದ ವಿಸ್ತೀರ್ಣವನ್ನು ಹೆಚ್ಚಿಸಿಕೊಡಬೇಕು, ಅಥವಾ ಅವರ ಪೋಟ್ಗೆಯನ್ನು ಹೆಚ್ಚಿಸಿಕೊಡಬೇಕು. ಉ- ಪರ್ಯಾಲೋಚನೆಯಿಂದ ಅನುಕೂಲಪಡಿಸಲ್ಪಡುವುದಾಗುತ್ತದೆ.

ಪ್ರ- ಪಟೇಲರುಗಳು ನಿರಕ್ಷರಸ್ಥರಾಗಿದ್ದಲ್ಲಿ ಶಾನುಭೋಗರು ಕಂದಾಯದ ಹಣವನ್ನು ತೆಗೆದುಕೊಂಡು ರಸೀತಿಯನ್ನು ಕೊಡುವರು. ಇಂತಹ ಸಂದರ್ಭಗಳಲ್ಲಿ ಶಾನುಭೋಗರಿಂದ ಹೊಣೆಯು ತೆಗೆದುಕೊಳ್ಳಲ್ಪಡುವಂತಾದಲ್ಲಿ ಸರ್ಕಾರಕ್ಕೂ, ರೈತರಿಗೂ ಪ್ರಯೋಜನವಾಗುತ್ತದೆ. ಉ- ಶಾನುಭೋಗರು ಕಂದಾಯವನ್ನು ತೆಗೆದುಕೊಳ್ಳಕೂಡದೆಂದು ಮತ್ತು ರೈತರು ಅವರಿಗೆ ಹಣವನ್ನು ಕೊಡಕೂಡದೆಂದು ವಿಧಿಯಲ್ಲಿ ಸ್ಪಷ್ಟೀಕರಿಸಲ್ಪಟ್ಟಿರುವುದರಿಂದ, ಹೊಸ ನಿಬಂಧನೆಯನ್ನು ಮಾಡಬೇಕಾದುದಿಲ್ಲವು.

ಪ್ರ- ತೋಟಿ ತಳವಾರರಿಗೆ ಸಲ್ಲಬೇಕಾದ ಮಿರಾಸಿಗಾಗಿ ಹೆಚ್ಚು ಧಾನ್ಯವನ್ನು ಕೊಡುವ ಪದ್ಧತಿಯಿಂದ ರೈತರಿಗೆ ತುಂಬಾ ನಷ್ಟವಾಗಿರುತ್ತಾದ ಪ್ರಯುಕ್ತ, ಅವರಿಗೆ ಧಾನ್ಯಕ್ಕೆ ಬದಲು ಹಣವು ಕೊಡಲ್ಪಡುವಂತೆಯೂ, ಅವರಿಗಿರುವ ಇನಾಂಭೂಮಿಗಳಿಗೆ ಕಂದಾಯವು ಹಾಕಲ್ಪಡುವಂತೆಯೂ ಆಗಬೇಕು. ಇದಕ್ಕಾಗಿ ರೈತರು ಕೊಂಚ ಹೆಚ್ಚು ಕಂದಾಯವನ್ನು ಕೊಡಲು ಸಿದ್ಧರಾಗಿರುತ್ತಾರೆ. ಉ- ಅನುಕೂಲವಾಗುವಂತೆ ಆಲೋಚಿಸಲ್ಪಡುತ್ತದೆ.

ಪ್ರ- ನೀರಾವರಿ ಕೆಲಸಗಳಿಗಾಗಿ ಈಗಿಂತಲೂ ಹೆಚ್ಚು ದ್ರವ್ಯ ವ್ಯಯವಾಗಬೇಕು. ಪಾಳುಬಿದ್ದಿರುವ ಅನೇಕ ಭೂಮಿಗಳು ಗದ್ದೆಗನುಕೂಲಿಸುವಂತೆ ಮಾಡಿಕೊಡಲ್ಪಟ್ಟಲ್ಲಿ ಸಂಸ್ಥಾನದುತ್ಪತ್ತಿಯು ಹೆಚ್ಚಲು ಮಾರ್ಗವಾಗುವುದು. ಗ್ರಾಮಗಳ ಕೆರೆಗಳನ್ನು ಸರಿಪಡಿಸಿ ಉತ್ತಮಸ್ಥಿತಿಯಲ್ಲಿಡುವುದು ಜನರ ತೃಪ್ತಿಗೂ, ಅಭಿವೃದ್ಧಿಗೂ ಅತ್ಯಂತ ಸಹಕಾರಿಯಾಗಿರುವುದು. ಹಾಗಲ್ಲದೆ ೧—೨ ಹೆಚ್ಚು ಗಟ್ಟಲೆಯು ನೀರಾವರಿ ಕೆಲಸಗಳಿಗೆ ವಿಶೇಷ ದ್ರವ್ಯ ವ್ಯಯವನ್ನು ಮಾಡುವುದರಿಂದ ಎಲ್ಲೋ ಕೆಲ ಸಮೀಪಸ್ಥರಾದವರಿಗೆ ಮಾತ್ರ ಪ್ರಯೋಜನವಾಗುವುದಾದ ಪ್ರಯುಕ್ತ ಪ್ರತಿವರ್ಷದಲ್ಲೂ ಈ ನೀರಾವರಿ ಕೆಲಸಗಳಿಗಾಗಿ ೫ ಲಕ್ಷ ರೂ. ಗೆ ಕಡಿಮೆಯಿಲ್ಲದಂತೆ ಒಟ್ಟು ಭೂಕಂದಾಯದುತ್ಪತ್ತಿಯ ೨ನೆಯ ಒಂದು ಭಾಗಕ್ಕೆ ದ್ರವ್ಯ ವ್ಯಯವನ್ನು ಮಾಡುವಂತಾಗಬೇಕು.

(ಸಶೇಷ.)

ಪತ್ರವ್ಯವಹಾರ.

ಶಹಾಪುರದ ವೀರಶೈವ ಬೋರ್ಡಿಂಗು.

(ಹಿಂದಣವಾರದ ಶೇಷ.)

ಅಮೇಲೆ ಶ್ರೀ ಜಡಿಯಾರ್ಪಸ್ವಾಮಿಗಳವರಿಂದ ಬಂದ ಆಶೀರ್ವಾದ ಪತ್ರವನ್ನು ಮಿ॥ ರಾಮಲಿಂಗಯ್ಯ ಮಾಸ್ತರರು ಓದಿದರು. ಅನಂತರ ಹೈಸ್ಕೂಲ ವಿದ್ಯಾರ್ಥಿಯಾದ ಸಾತಪ್ಪಲಂಬೆಪ್ಪ ಪಾಟಸೆಟ್ಟಿ ಮುನವಳ್ಳಿ ಇವರು ಇಂಗ್ಲೀಷಿನಲ್ಲಿ ಭಾಷಣಮಾಡಿದರು. ಬಳಿಕ ಈ ಬೋರ್ಡಿಂಗಿನ ಸ್ಥಾಪನೆಯ ಬಗ್ಗೆ ಫಂಡು ಕೂಡಿಸಲ್ಪಟ್ಟಿತು. ಕೆಲ ಉದಾರಗೃಹಸ್ಥರು ಸಭೆಯಲ್ಲಿಯೇ ರೊಖ ಹಣಕೊಟ್ಟರು. ಬಳಿಕ ಜನರಲ್ ಕಮಿಟಿಯು ಜನರು ಆರಿಸಲ್ಪಟ್ಟು, ರಾ॥ ಶಿವಲಿಂಗಯ್ಯನವರು ಸಂಬರಗಿ ಮು॥ ಬೆಳಗಾವಿ ಇವರು ವೀರಶೈವ ಬೋರ್ಡಿಂಗಿನ ಸೂಪರಿಂಟೆಂಡೆಂಟರಾಗಿಯೂ ಮತ್ತು ಸೆಕ್ರೆಟರಿಗಳಾಗಿಯೂ, ರಾ॥ ವೀರಪ್ಪ ಚೆನ್ನಪ್ಪ ಅಣ್ಣಾ ಜಿಗಜಿನ್ನಿ ಇವರು ಟ್ರಿಷರರಾಗಿಯೂ ಗೊತ್ತುಮಾಡಲ್ಪಟ್ಟಿತು. ಬಳಿಕ ಅಧ್ಯಕ್ಷರು- ಈಗ ಸ್ಥಾಪಿತವಾದ ಬೋರ್ಡಿಂಗು ವೀರಶೈವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬಹಳೇ ಸಹಾಯಕಾರಿಯಾಗುವುದೆಂದೂ, ಈ ಬೋರ್ಡಿಂಗಿನ ದರವನ್ನು ಊರೊಳಗಿನ ಹೋಟೆಲುಗಳಿಗಿಂತ ಅದಷ್ಟು ಕಡಿಮೆಯಿಡಬೇಕೆಂದೂ, ವಿದ್ಯಾರ್ಥಿಗಳ ಆರೋಗ್ಯದ ಕಡೆಗೆ ಬೋರ್ಡಿಂಗ ಸೂಪರಿಂಟೆಂಡ ಸೆಕ್ರೆಟರಿ ಮೊದಲಾಗಿ ಯಾವತ್ತು ಮುಖಂಡರು ಹೆಚ್ಚಿಗೆ ಲಕ್ಷ್ಯಕೊಡಬೇಕೆಂದೂ ಭಾಷಣಮಾಡಿದರು. ಕಡೆಗೆ ಹಾಗ ತುರಾಯಿ ಅತ್ತರುಗಳ ವಿನಿಯೋಗದಿಂದ ಸಭಾ ವಿಸರ್ಜನವಾಯಿತು. ಈ ಸಭೆಗೆ ಇಲ್ಲಿಂದ ೨೦ ಹರದಾರಿ ದೂರದಲ್ಲಿರುವ ರಬಕವಿಯಿಂದ ಮಿ॥ ತಮ್ಮಣ್ಣಪ್ಪಾ ಚಿಕ್ಕೋಡಿ ಇವರು ತಮ್ಮ ಗೃಹಕೃತ್ಯದ ಅಡಚಣೆಗಳನ್ನು ಬದಿಗಿಟ್ಟು ಸ್ವಂತ ವೆಚ್ಚದಿಂದ ಬಂದುದರಿಂದ ಅವರಲ್ಲಿ ಮತಾಭಿಮಾನದ ಸ್ಫೂರ್ತಿಯು ಎಷ್ಟು ಜಾಗ್ರತವಾಗಿರುವುದೆಂಬುದು ದ್ಧ್ವನಿತವಾಗುತ್ತದೆ. ಇವರಂತೆಯೇ ಎಲ್ಲ ಮತಾಭಿಮಾನಿಗಳೂ ಆದುದಾದರೆ ನಮ್ಮ ವೀರಶೈವಮತವು ಏಳ್ಗೆಯನ್ನು ಹೊಂದುವುದಕ್ಕೆ ಬಾಧಕವೇನು? ಪ್ರೇಕ್ಷಕ

ಚೆನ್ನಬಸವಯ್ಯ ಬೊಮ್ಮಿಗಟ್ಟಿ

ಹಾವೇರಿ ಹುಕ್ಕೇರಿ ಮಠದಲ್ಲಿ ನೇರಿದ್ದ ಸಭೆ.

(ಹಿಂದಣವಾರದ ಶೇಷ.)

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಶರಪಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಹಿನ್ನಾಂಬೆಸ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಶಿವಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರಸ್ತೋತ್ರಶತಕಂ	೦-೧-೦

ಅಂಚೆ ಹಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರೆಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

7

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಗಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಮಿಟ್ಟಾಗಿಲೆ ೧ ಡಜನ್ನು ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಅಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಅಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಪೋಸ್ಟ್ ಮೀರಜ. (ಇಂಡಿಯಾ)

ಇಲ್ಲಿನೋಡಿ ವಿಶೇಷಸೂಚನೆಗಳು !

2 ಕಾಶೀವಿಶ್ವೇಶ್ವರಪ್ರಸನ್ನ.

RASHI VISHWESHWAR S.N.U. & CO BENARES CITY

ಅಗ್ಗವಾದಮೊಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿಶ್ಚಯ ಪುಡುವಮಡಿ ಯಾವುದು ? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವುದು ? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ಆಗಿಯೂ ನೋಡುವುದಕ್ಕೆ ಮನೋರಂಜಕವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೆ ?ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ ! ಬಿಡಬೇಡಿರಿ !!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು, ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಪಟಿಕಸರ, ಬಾಣಲಿಂಗ, ಉತ್ತಮವಾದನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳೂ, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟ್ಲಾಗು ೪ ಸಾದಾಕಾರ್ಡು, ಕಾಶೀವಿಶ್ವೇಶ್ವರನ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಸುವ ವಿಳಾಸಕ್ಕೆ ಕಳುಹಿಸಲಾದೀತು. ವಿಳಾಸವನ್ನು ಚನ್ನಾಗಿ ಬರೆಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿ.ನಾರಾಯಣಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.
S. U. N. & Co,
Silk Weaving Manufacturers
Benares City. (V. P.)

ವೇದವಿಷಯ.

ಮಹನೀಯರೇ! ಋಗ್, ಯಜುಃ, ಸಾಮ, ಅಥರ್ವಣವೆಂಬ ವೇದಗ್ರಂಥಗಳನ್ನು ಆಬಾಲವೃದ್ಧರೂ ಕೇಳಿರಬಲ್ಲರು. ಕೆಲವು ಜನರು ಈ ವೇದಗಳಲ್ಲಿ ಅರ್ಥವನ್ನು ತಿಳಿಯದೆ ಯಾವುದಾದರೊಂದು ವೇದದ ಭಾಗವನ್ನು ಬಾಯಿಪಾಠಮಾಡಿ ಭಕ್ತರ ಮನೆಗೆ ಹೋಗಿ ಆ ಮನೆಯ ಯಜಮಾನನಿಗೆ 'ರುದ್ರಪಾರಾಯಣವನ್ನು ಮಾಡಿರಿ; ನಾವು ಬಹಳ ಚೆನ್ನಾಗಿ ವೇದಘೋಷವನ್ನು ಮಾಡುವೆವು; ನಿನಗೆ ಪ್ರಾಪ್ತವಾಗಿರುವ ಸಕಲವಾದ ಅರಿಷ್ಟಗಳೂ ನಿವೃತ್ತಿಯಾಗುವುವು.' ಎಂದು ಅವನಿಗೆ ಹೇಳಿ, ದ್ರವ್ಯಾರ್ಜನಾರ್ಥವಾಗಿ ವೇದಘೋಷವನ್ನು ಮಾಡುವರು. ಅಥವಾ ಭೂತಭವಿಷ್ಯದ್ವರ್ತಮಾನಪ್ರಲಾಪಿಗಳಾದ ಜ್ಯೋತಿಷಿಕರು ಕೂಡ ದುಡ್ಡನ್ನು ಸೆಳೆಯುವುದಕ್ಕೆ 'ಯಂತ್ರವನ್ನು ಬರೆಸು; ಮಂತ್ರವನ್ನು ಹಾಕಿಸು; ಹಾಗೂ ರುದ್ರಪಾರಾಯಣವನ್ನು ಮಾಡಿಸು.' ಎಂದು ಹೇಳುವರು. ತದನಂತರ ಯಾವುದನ್ನೂ ತಿಳಿಯದೀಮೂಢಭಕ್ತನು ಆಗಬಹುದು ಸ್ವಾಮಿ! ಎಂದು ಹೇಳಿ ರುದ್ರಪಾರಾಯಣಮಂತ್ರತಂತ್ರಾದಿಗಳನ್ನು ಮಾಡಿಸಲುದ್ಯುಕ್ತನಾಗುವನು. ಬೋಧಕರು ಮನಸ್ಸಿನಲ್ಲಿ ತಮ್ಮ ಸುಳಿಗೆಯ ಸಮಯವು ಪ್ರಾಪ್ತವಾಯಿತೆಂದು ತಿಳಿಯುವರು. ಅವನಿಗೆ ಅನೇಕ ಸಾಮಗ್ರಿಗಳನ್ನು ತರಲಿಕ್ಕೆ ಹೇಳಿ, ಹಾಗೂ ಯಥೇಷ್ಟ ದಕ್ಷಿಣಾಮೊದಲಾದುದನ್ನು ಒದಗಿಸಲಿಕ್ಕೆ ಹೇಳಿ, ತರಿಸಿ, ಅವುಗಳನ್ನೆಲ್ಲಾ ತೆಗೆದುಕೊಂಡು ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುತ್ತಿರುವರು. ತನಗೂ ತನ್ನ ಅನುಯಾಯಿಗಳಿಗೂ ಮೋಕ್ಷೈಕಸಾಧನಭೂತಗಳಾದೀ ಪರಮಪೂಜ್ಯವೇದಗಳನ್ನು ಪರದ್ರವ್ಯಾಪಹಾರಾರ್ಥವಾಗಿ ಉಪಯೋಗಿಸುವೀಜನರಿಗೆ ವೇದರೂಪನಾದೀಪರಮಾತ್ಮನು ಯಾವ ಶಿಕ್ಷೆಯನ್ನು ಮಾಡುವನೋ ಅವರೇ ವಿಚಾರಮಾಡಿಕೊಳ್ಳಲಿ. ಹಾಗೂ ಇವರು ಪಾರಾಯಣವೆಂಬ ದೊಡ್ಡ ಶಬ್ದವನ್ನುಪಯೋಗಿಸುವರು. ಮೊದಲು ಈ ಪಾರಾಯಣ ಶಬ್ದದ ಅರ್ಥವನ್ನು ಲಕ್ಷ್ಯದಲ್ಲಿ ತಂದು ಅದರಂತೆ ವರ್ತಿಸುವರೆಂಬದಾಗಿ ಅಪೇಕ್ಷಿಸುತ್ತೇನೆ.

'ಪಾರಾಯಣ ತುರಾಯಣ ಚಾಂದ್ರಾಯಣಂ ವರ್ತಯತಿ। (ಅ. ೫, ೧, ೭೨)' ಎಂದು ಪಾಣಿನಿ ಮಹರ್ಷಿಗಳ ಸೂತ್ರವಿರುವುದು. ಪಾರಾಯಣವೆಂಬುದರ ವ್ಯಾಖ್ಯಾನವು ಭಾಷ್ಯಾದಿ ವ್ಯಾಕರಣಗ್ರಂಥಗಳಲ್ಲಿ ಹೀಗೆ ಮಾಡಲ್ಪಟ್ಟಿರುವುದು– "ಆದಿತ ಆರಭ್ಯ ಅಂತಾದವಿಚ್ಛೇದೇನ ವೇದಾರ್ಥಾಧ್ಯಯನಂ ಪಾರಾಯಣಂ। ತಚ್ಚ ಗುರುಣಾ ಶಿಷ್ಯೇಣಚ ನಿರ್ವರ್ತ್ಯತೆ" ವೇದದಲ್ಲಿ ಮೊದಲಿನಿಂದ ಹಿಡಿದು ಅಂತ್ಯದವರೆಗೂ ವೇದಾರ್ಥವನ್ನು ತಿಳಿದುಕೊಂಡು ವೇದದ ಅಧ್ಯಯನವನ್ನು ಮಾಡುವುದೇ ಪಾರಾಯಣವೆಂದು ಹೇಳಿಸಿಕೊಳ್ಳಲ್ಪಡುವುದು. ಆದುದರಿಂದ ಸುಜ್ಞರಾದವರು ಇದನ್ನು ಮನಸ್ಸಿನಲ್ಲಿ ತಂದು ವೇದಾರ್ಥವನ್ನು ಸಾಂಗವಾಗಿ ತಿಳಿಯುವುದೇ ಅವರ ಕರ್ತವ್ಯವೆಂದು ನಿಶ್ಚೈಸಿ ಪಾರಾಯಣಾರ್ಥವನ್ನು ಸಾರ್ಥಕಮಾಡಬೇಕು. ಪ್ರಥಮತಃ ಮನುಷ್ಯನು ತನ್ನ ಅನಿಷ್ಟವನ್ನು ಕಳೆಯಲು ಹೇಗೆ ಸಮರ್ಥನಾಗುವನು? ಎಂದಿಗೂ ಸಮರ್ಥನಾಗಲಾರನು. "ನಾಭುಕ್ತಂ ಕ್ಷೀಯತೆ ಕರ್ಮ ಕಲ್ಪಕೋಟಿ ಶತೈರಪಿ" ಮಾಡಿದ ಕರ್ಮವು ಭೋಗಿಸಿದ ಹೊರತು ಎಂದೂ ನಾಶವಾಗುವುದಿಲ್ಲೆಂಬೀ ಮಹರ್ಷಿಗಳ ವಚನಕ್ಕನುಸಾರವಾಗಿ, ತಾವು ತಮ್ಮ ಕರ್ಮವನ್ನು ಭೋಗಿಸಿ, ತದನಂತರ ಅನ್ಯರ ಕರ್ಮನಾಶಕ್ಕೆ ಕೈ ಹಾಕಬೇಕಲ್ಲವೆ? ಇನ್ನು ವೇದಾರ್ಥವನ್ನು ತಿಳಿಯದೆ ಕೇವಲ ವೇದಘೋಷವನ್ನು ಮಾಡುವವರಿಗೆ ವೇದಫಲವೇನಾದರೂ ದೊರೆಯುತ್ತದೋ? ಅಥವಾ ಇಲ್ಲವೋ? ಎಂಬುದನ್ನು ನೋಡುವ.

ನಿರುಕ್ತದಲ್ಲಿ ಯಾಸ್ಕ ಮಹರ್ಷಿಗಳು ಈ ವೇದದ ಶ್ಲೋಕವನ್ನು ಬರೆದಿರುವರು—

> ಸ್ಥಾಣುರಯಂಭಾರಹಾರಃಕಿಲಾಭೂದಧೀತ್ಯ ವೇದಂ
> ನವಿಜಾನಾತಿಯೋರ್ಥಂ। ಯೋರ್ಥಜ್ಞ ಇತ್ಸಕ
> ಲಂ ಭದ್ರಮಶ್ನುತೆನಾಕಮೇತಿಜ್ಞಾನವಿಧೂತಪಾ
> ಪ್ಮಾಯದ್ಗೃಹೀತಮವಿಜ್ಞಾತಂ ನಿಗದೇನೈವಶಬ್ದ್ಯತೆ।
> ಅನಗ್ನಾವಿವಶುಷ್ಕೈಧೋ ನತಜ್ಜ್ವಲತಿಕರ್ಹಿಚಿತ್॥

ಯಾವ ಮನುಷ್ಯನು ವೇದವನ್ನು ಕಲಿತು ಅದರ ಅರ್ಥವನ್ನು ತಿಳಿಯುವುದಿಲ್ಲವೋ ಅಂತಹವನು ಪಾಷಾಣಸ್ವರೂಪನೂ, ಹಾಗೂ ಭಾರಹಾರಿಯೂ ಆಗುವನಷ್ಟೆ. ಯಾವನು ಅರ್ಥವನ್ನು ತಿಳಿಯುವನೋ ಅವನು ಸಕಲ ಮಂಗಲ (ಕಲ್ಯಾಣ) ವನ್ನು ಹೊಂದುವನು. ಹಾಗೂ ಜ್ಞಾನದಿಂದ ತೊಳೆಯಲ್ಪಟ್ಟ (ನಾಶಮಾಡಲ್ಪಟ್ಟ) ಪಾಪವುಳ್ಳವನಾಗಿ ನಾಕವನ್ನು (ನಾಕ ಎಂದರೆ– ಅಕಂ ದುಃಖಂ ತದ್ಯಸ್ಮಿನ್ನಾಸ್ತಿ ಸೋಯಂ ನಾಕಃ ಮೋಕ್ಷಃ) ಅಂತಹ ಮೋಕ್ಷವನ್ನು ಹೊಂದುವನು. ಗ್ರಹಣಮಾಡಿದ್ದು ತಿಳಿಯದೆ ಕೇವಲ ಶಬ್ದಮಾತ್ರದಿಂದಲೇ ಯಾವನಿಂದ ಉಚ್ಚರಿಸಲ್ಪಡುತ್ತದೋ ಅದು ಎಂದೂ ಪಾಪಾದಿ ಪ್ರಜ್ವಲನಕ್ಕೆ ಕಾರಣವಾಗುವುದಿಲ್ಲ. ಹೇಗೆ ಬೆಂಕಿಯಿಲ್ಲದ ಸ್ಥಳದಲ್ಲಿ ಬಿದ್ದ ಒಣಕಟ್ಟಿಗೆ ಸುಡುವುದಿಲ್ಲವೋ ಅದರಂತೆಯೇ ಕೇವಲ ವೇದಘೋಷಮಾತ್ರ ಮಾಡುವವನಿಗೆ ಏನೂ ಫಲವಾಗುವುದಿಲ್ಲ. ಆದುದರಿಂದ ಅಗ್ನಿಸ್ವರೂಪವಾದ ಅರ್ಥವನ್ನು ತಿಳಿಯಬೇಕು. ಮತ್ತು ಮಹರ್ಷಿಯಾದ ಪಾಣಿನಿಯು ತನ್ನ ಶಿಕ್ಷಾಗ್ರಂಥದಲ್ಲಿ "ಗೀತೀಶೀಘ್ರೀಶಿರಃಕಂಪೀ ತಥಾಲಿಖಿತಪಾಠಕಃ। ಅನರ್ಥಜ್ಞೋಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ॥" ಅರ್ಥವನ್ನು ತಿಳಿಯದ ಕೇವಲ ಪಾಠಮಾತ್ರಿಕನನ್ನು ಅಧಮಪಾಠಕರಲ್ಲಿ ಗಣನೆಮಾಡಿರುವನು. ಅಂದಮೇಲೆ ಮೊದಲು ವೇದದ ಅರ್ಥವನ್ನು ತಿಳಿಯಲು ಪ್ರಯತ್ನಮಾಡಬೇಕಲ್ಲವೆ? ವೇದಾರ್ಥಗಳನ್ನು ತಿಳಿಯಬೇಕಾದರೆ ಷಡಂಗಗಳ ಅಧ್ಯಯನವು ಮಾಡಬೇಕಾಗುವುದು. ಈ ಷಡಂಗಗಳು ವೇದಾರ್ಥಜ್ಞಾನಕ್ಕೆ ಅತ್ಯಂತ ಪ್ರಯೋಜನಗಳೆಂಬದಾಗಿ ಅನೇಕ ಮಹರ್ಷಿಗಳು ತಂತಮ್ಮ ಅಭಿಪ್ರಾಯವನ್ನು ತೋರಿಸಿರುವರು. ಶಿಕ್ಷಾ, ವ್ಯಾಕರಣ, ಛಂದಸ್ಸು, ಕಲ್ಪ, ನಿರುಕ್ತ, ಜ್ಯೋತಿಷ ಇವೇ ಷಡಂಗಗಳು.

'ಶಿಕ್ಷಾ ವರ್ಣಸ್ವರಾದ್ಯುಚ್ಚಾರಣಪ್ರಕಾರೋಯತ್ರೋಪದಿಶ್ಯತೇಸಾ ಶಿಕ್ಷಾ' ತೈತ್ತಿರೀಯೋಪನಿಷತ್ತಿನಾರಂಭದಲ್ಲಿ– "ವರ್ಣಃ ಸ್ವರಃ ಮಾತ್ರಾ ಬಲಂ ಸಾಮ ಸಂತಾನಃ ಇತ್ಯುಕ್ತಃ ಶಿಕ್ಷಾಧ್ಯಾಯಃ" ವರ್ಣವೆಂದರೆ ಅಕಾರಾದ್ಯಕ್ಷರಗಳು; ಸ್ವರಃ– ಉದಾತ್ತ, ಅನುದಾತ್ತ, ಸ್ವರಿತ ಎಂಬುದಾಗಿ ಮೂರು ಸ್ವರಗಳು; ಮಾತ್ರಾ– ಹ್ರಸ್ವ, ದೀರ್ಘ, ಪ್ಲುತಾದಿಗಳು; ಬಲಂ– ಸ್ಥಾನಪ್ರಯತ್ನಗಳು; ಸಾಮ– ಗ್ರಸ್ತ, ನಿರಸ್ತ, ಅವಲಂಬಿತ, ಗೀತ, ಕ್ಷ್ವೇಳಿತ, ಶಿರಃಕಂಪ ಮೊದಲಾದ ದೋಷರಹಿತವಾಗಿ ಮಾಧುರ್ಯಾಕ್ಷರಸ್ಪಷ್ಟತಾ ಸುಸ್ವರಾದಿ ಸುಗುಣಗಳಿಂದ ಉಚ್ಚಾರಣಮಾಡುವುದಕ್ಕೆ ಸಾಮವೆನ್ನುತ್ತಾರೆ; ಸಂತಾನಃ ಅಂದರೆ ಸಂಹಿತಾವರ್ಣಗಳ ಸಾಮೀಪ್ಯತ್ವಾದಿ ಸಾಮೀಪ್ಯಫಲವು ಸಂಧ್ಯಾದಿ ಕಾರ್ಯಗಳಲ್ಲಿ ಉಪಯೋಗಕ್ಕೆ ಬೀಳುವುದು. ಶಿಕ್ಷಾಪ್ರಯೋಜನವನ್ನು ಮಹಾಭಾಷ್ಯಕಾರ ಪತಂಜಲಿ ಮಹರ್ಷಿಗಳು ತೋರಿಸಿರುವರು. "ಮಂತ್ರೋ ಹೀನಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನತಮರ್ಥಮಾಹ ಸವಾಗ್ವಜ್ರೋಯಜಮಾನಂ ಹಿನಸ್ತಿಯಥೇಂದ್ರಶತ್ರುಃ ಸ್ವರತೋಪರಾಧಾತ್। ಇಂದ್ರಶತ್ರುರ್ವರ್ಧಸ್ವ" ಈ ವೇದಮಂತ್ರದಲ್ಲಿ– "ಇಂದ್ರಸ್ಯ ಶತ್ರುಃ ಶಾತಕಃ" ಹೀಗೆ ವಿವಕ್ಷಿತಾರ್ಥದಲ್ಲಿ ತತ್ಪುರುಷ ಸಮಾಸವಾಗುತ್ತದೆ. ಸಮಾಸಸ್ಯ ಎಂಬ ಪಾಣಿನೀಯ ಸೂತ್ರದಿಂದ ತತ್ಪುರುಷಕ್ಕೆ ಅಂತೋದಾತ್ತವಾಗತಕ್ಕದ್ದು. ಅದು ತಪ್ಪಿ ಆದ್ಯುದಾತ್ತವು ಪ್ರಯೋಗಿಸಲ್ಪಟ್ಟಿತು. ಆದ್ಯುದಾತ್ತ ಪ್ರಯೋಗದಿಂದ ಪೂರ್ವಪದ ಪ್ರಕೃತಿಸ್ವರವಾಗೋಣದರಿಂದ ಬಹುವ್ರೀಹಿ ಸಮಾಸವಾಗಿ ಇಂದ್ರಃ ಶತ್ರುಃ ಯಸ್ಯ ಹೀಗೆ ಅರ್ಥವಾಗಿ ಕಾರ್ಯವ್ಯತ್ಯಸ್ತವಾಗಿ ಹೋಯಿತು. ಆದುದರಿಂದ ಸ್ವರವರ್ಣಾದಿ ದೋಷಪರಿಹಾರಕ್ಕೋಸ್ಕರ ಶಿಕ್ಷಾಗ್ರಂಥವನ್ನು ಅವಶ್ಯವಾಗಿ ಅಧ್ಯಯನ ಮಾಡಬೇಕು. ಶಿಕ್ಷಾಶಾಸ್ತ್ರವನ್ನು ಕಲಿಯದ ಹೊರತು ಯಾವಯಾವ ಅಕ್ಷರಗಳು ಎಲ್ಲಿ ಹುಟ್ಟುತ್ತವೆ? ಹ್ರಸ್ವದೀರ್ಘಾದಿಗಳನ್ನು ಹೇಗೆ ಉಚ್ಚಾರಮಾಡಬೇಕು? ಇದು ಮೊದಲಾದುದು ತಿಳಿಯುವುದಿಲ್ಲವಾದುದರಿಂದ ಶಿಕ್ಷಾ ಶಾಸ್ತ್ರವು ಅತ್ಯಂತ ಪ್ರಯೋಜನವಿಗುವುದು.

ಇನ್ನು 'ಕಲ್ಪಃ' ಕಲ್ಪ ಎಂದರೆ ಆಶ್ವಲಾಯನ, ಆಪಸ್ತಂಭ ಬೋಧಾಯನಾದಿ ಸೂತ್ರಗಳು ಈ ಸೂತ್ರಗಳಿಂದ ವೇದಕ್ಕೆ ಅರ್ಥಮಾಡುವುದು ವಿಶೇಷ ಸುಲಭವಾಗಿರುತ್ತದೆ. ಬ್ರಹ್ಮಯಾಗಪ್ರಯೋಗವು ಸಮರ್ಥನಮಾಡಲ್ಪಡುತ್ತದೆ. ಆದುದರಿಂದ ಕಲ್ಪವೆಂದು ಹೆಸರನ್ನಿಟ್ಟಿರುವರು. 'ವ್ಯಾಕರಣಂ' ವ್ಯಾಕರಣ ಎಂದರೆ, ವ್ಯಾಕ್ರಿಯತೇ ಅನೇನ ಇತಿ ವ್ಯಾಕರಣಂ. ಪ್ರಕೃತಿ ಪ್ರತ್ಯಯಾದ್ಯುಪದೇಶದಿಂದ ಪದಸ್ವರೂಪ ತದರ್ಥನಿಶ್ಚಯಕ್ಕೋಸ್ಕರ ಪಾಣಿನ್ಯಾದಿ ಮಹರ್ಷಿಗಳಿಂದ ಮಾಡಲ್ಪಟ್ಟಿರುವ ಶಬ್ದಶಾಸ್ತ್ರವೇ ವ್ಯಾಕರಣವೆಂದು ಹೇಳಿಸಿಕೊಳ್ಳಲ್ಪಡುವುದು. ವೇದಾರ್ಥಕ್ಕೆ ವ್ಯಾಕರಣಪ್ರಯೋಜನವು ವ್ಯಾಕರಣಕರ್ತರಾದ ಕಾತ್ಯಾಯನ ಪತಂಜಲ್ಯಾದಿ ಮಹರ್ಷಿಗಳಿಂದ ಮಹಾಭಾಷ್ಯದಲ್ಲಿ ಅನೇಕ ರೀತಿ ಉಲ್ಲೇಖಿಸಲ್ಪಟ್ಟಿರುವುದು. ಮಹಾಭಾಷ್ಯದಲ್ಲಿ– "ರಕ್ಷೋಹಾಗಮಲಘ್ವಸಂದೇಹಾಃಪ್ರಯೋಜನಂ."

> ವಾರ್ತಿಕ ರಕ್ಷಾರ್ಥಂವೇದಾನಾಮಧ್ಯೇಯಂ ವ್ಯಾಕರಣಂ। ಲೋಪಾಗಮವರ್ಣವಿಕಾರಜ್ಞೋಹಿಸಮ್ಯಗ್ವೇದಾನ್ ಪರಿಪಾಲಯಿಷ್ಯತಿ ವೇದಾರ್ಥಂ ಬಾಧ್ಯಮಸತಿ। ಊಹಃಖಲ್ವಪಿ... ನ ಸರ್ವಲಿಂಗೈರ್ನಸರ್ವಾಭಿರ್ವಿಭಕ್ತಿಭಿರ್ವೇದೇಮಂತ್ರಾನಿಗದಿತಾಃ। ತೇಚ ಅವಶ್ಯಂಯಜ್ಞಗತೇನ ಯಥಾಯಥಂ ವಿಪರಿಣಮಯಿತವ್ಯಾಃ। ತನ್ನಾವೈಯಾಕರಣಃ ಶಕ್ನೋತಿವಿಪರಿಣಮಯಿತುಂ। ತಸ್ಮಾದಧ್ಯೇಯಂ ವ್ಯಾಕರಣಂ। ಆಗಮಃಖಲ್ವಪಿ ಬ್ರಾಹ್ಮಣೇನ ನಿಷ್ಕಾರಣೋಧರ್ಮಃ ಷಡಂಗೋ ವೇದೋ ಅಧ್ಯೇಯಃ ಜ್ಞೇಯಶ್ಚೇತಿ। ಪ್ರಧಾನಂಚ ಷಟ್ಸ್ವಂಗೇಷು ವ್ಯಾಕರಣಂ ಪ್ರಧಾನೇಚ ಕೃತೋಯತ್ನಃ ಫಲವಾನ್ಭವತಿ। ಲಘ್ವರ್ಥಂಚಾಧ್ಯೇಯಂ ವ್ಯಾಕರಣಂ। ಅಸಂದೇಹಾರ್ಥಂಚಾಧ್ಯೇಯಂ ವ್ಯಾಕರಣಂ। ಯಾಜ್ಞಿಕಾಃ ಪಠಂತಿ ಸ್ಥೂಲಪೃಷತೀಮಾಗ್ನಿವಾರುಣೀಮನಡ್ವಾಹೀಮಾಲಭೇತೇತಿ। ತಸ್ಯಾಂ ಸಂದೇಹಃ ನಜ್ಞಾಯತೆ ಕಿಂಸ್ಥೂಲಾನಿಪೃಷಂತಿಯಸ್ಯಾಸ್ಸಾ ಸ್ಥೂಲಪೃಷತೀತಿ। ಕಿಂವಾ ಸ್ಥೂಲಾಚಾಸೌಪೃಷತೀಚ ಸ್ಥೂಲಪೃಷತೀ। ತಾನ್ನಾವೈಯಾಕರಣಃ ಸ್ವರತೋಧ್ಯವಸ್ಯತಿ। ತೇ ಅಸುರಾಃ ತೇ ಅಸುರಾಃ ಹೇಲಯೋ ಹೇಲಯ ಇತಿ ಕುರ್ವಂತಃ ಪರಾಬಭೂವುಃ। ತಸ್ಮಾದ್ಬ್ರಾಹ್ಮಣೇನ ನಮ್ಲೇಚ್ಛಿತವೈ ನಾಪಭಾಷಿತವೈ। ಮ್ಲೇಚ್ಛೋಹವಾ ಏಷಯದಪಶಬ್ದಃ। ಮ್ಲೇಚ್ಛಾ ಮಾಭೂಮೇತ್ಯಧ್ಯೇಯಂ ವ್ಯಾಕರಣಂ। ದುಷ್ಟಾಂ ಶಬ್ದಾನ್ ಮಾಪ್ರಯುಂಕ್ಷ್ಮಹೀತ್ಯಧ್ಯೇಯಂವ್ಯಾಕರಣಂ। ಅವಿಜ್ಞಾತಮನರ್ಥಕಂ ಮಾಧೀಮಹೀತ್ಯಧ್ಯೇಯಂ ವ್ಯಾಕರಣಂ। ಅವಿದ್ವಾಂಸಃಪ್ರತ್ಯಭಿವಾದೆ ನಾಮ್ನೋಯೇ ನಪ್ಲುತಿಂವಿದುಃ ಕಾಮಂತೇಷುತು ವಿಪ್ರೋಷ್ಯ ಸ್ತ್ರೀಷ್ವಿವಾಯಮಹಂವದೇದಿತಿಸ್ತ್ರೀವನ್ಮಾಭೂಮೇತ್ಯಧ್ಯೇಯಂ ವ್ಯಾಕರಣಂ। ನಚಾಂತರೇಣ ವ್ಯಾಕರಣಂ ಪ್ರಾಯಗಾಜಾಃ ಸವಿಭಕ್ತಿಕಾಃ ಶಕ್ಯಾಃಕರ್ತುಂ ತಸ್ಮಾದಧ್ಯೇಯಂ ವ್ಯಾಕರಣಂ।

ಇತ್ಯಾದ್ಯನೇಕ ಪ್ರಯೋಜನಗಳು ಮಹಾಭಾಷ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವುವು.

ಪತಂಜಲಿ ಮಹರ್ಷಿಗಳು ಮ್ಲೇಚ್ಛವೆಂದರೆ ಅಪಶಬ್ದವೆಂತಲೂ, ಅಪಶಬ್ದವನ್ನು ಎಂದೂ ಉಚ್ಚಾರಮಾಡಬಾರದೆಂತಲೂ, ಅಪಶಬ್ದವನ್ನು ಉಚ್ಚಾರಮಾಡುವವನೇ ಮ್ಲೇಚ್ಛನಾಗುವನೆಂತಲೂ, ಸುಶಿಕ್ಷಿತರಿಲ್ಲದೆ ನಾವೇ ಅಪಶಬ್ದವನ್ನುಚ್ಚಾರಮಾಡಿದರೆ ನಾವೇ ಮ್ಲೇಚ್ಛರೆನಿಸಿಕೊಳ್ಳುವೆವೆಂತಲೂ ಬರೆದಿರುವುದನ್ನು ನೋಡಿದರೆ ಅವರ ಅತಿ ಗಂಭೀರ ವಿಚಾರದಲ್ಲಿ ನಿಷ್ಪಕ್ಷಪಾತಿತ್ವವೂ, ನಿರಭಿಮಾನತ್ವವೂ, ಪೂರ್ಣಜ್ಞಾನತ್ವವೂ ಕಂಡುಬರುವುದು. ಅಧುನಿಕ ನಾಮಧಾರಿ ಪಂಡಿತರು ಮ್ಲೇಚವೆಂಬುವುದೊಂದು ಜಾತಿ ಇರುವುದೆಂತಲೂ, ಮ್ಲೇಚ್ಛಭಾಷಾ ಎಂಬುವುದೊಂದು ಭಾಷೆಯಿರುವುದೆಂತಲೂ ತಿಳಿದುಕೊಂಡು ಯಾವುದಾದರೊಂದು ತಮಗೆ ಕಲಿಯಲಾಗದಿದ್ದ ಭಾಷೆಯಮೇಲೆ ನಿವಹಾಕಿ ಆರ್ಷಗ್ರಂಥಗಳ ವಿಚಾರಗಳನ್ನು ಮನಸ್ಸಿನಲ್ಲಿ ತಾರದೆ ವ್ಯರ್ಥವಾಗಿ ಅನ್ಯಭಾಷೆಗಳನ್ನು ದೂಷಣಮಾಡುತ್ತ ಕೂರುವರು. ಸುಜ್ಞರೇ! ವಿಚಾರಮಾಡಿ ನೋಡಿರಿ. ಮಹರ್ಷಿಗಳು ಸೃಷ್ಟಿಯಲ್ಲಿರುವ ಯಾವನಾದರೊಬ್ಬ ಮನುಷ್ಯನಿಗೆ ಹುಟ್ಟಿದಾರಭ್ಯ ಮರಣಪರ್ಯಂತ ಮ್ಲೇಚ್ಛನೇ ಆಗಿರುವನೆಂತಲೂ, ಮ್ಲೇಚ್ಛವೆಂಬುವುದು ಜಾತಿಯೆಂತಲೂ ಎಂದೂ ಹೇಳಲಿಲ್ಲ. ಅವನ ಕೃತಿ ರೂಪದಿಂದಲೇ ಅವನ ಧರ್ಮಾಧರ್ಮವನ್ನು ಪ್ರತಿಪಾದನಮಾಡಿದರು. ಅತಃ ಉದಾತ್ತವಿಚಾರವಂತರಾಗುವುದಕ್ಕೆ ಆರ್ಷಗ್ರಂಥಗಳ ಪ್ರಯೋಜನವಿರುವುದು.

> ನಿರುಕ್ತಂ ಅರ್ಥಾವಬೋಧೆ ನಿರಪೇಕ್ಷತಯಾಪದಜಾ
> ತಂ ಯತ್ರೋಕ್ತಂ ತನ್ನಿರುಕ್ತಂ। "ನಿರುಕ್ತಕಾರರು"
> ಅಥಾಪೀದಮಂತರೇಣ ಮಂತ್ರೇಷ್ವರ್ಥಪ್ರತ್ಯಯೋ
> ನವಿದ್ಯತೆ ಅರ್ಥಮಪ್ರತ್ಯಯತಃನಾತ್ಯಂತಂ ಸ್ವರಸಂ
> ಸ್ಕಾರೋದ್ದೇಶಸ್ತದಿದಂ ವಿದ್ಯಾಸ್ಥಾನಂ ವ್ಯಾಕರಣಸ್ಯ
> ಕಾರ್ತ್ಸ್ನ್ಯಂಸ್ವಾರ್ಥಸಾಧಕಂಚ।

ವೇದದಲ್ಲಿ ನಿರುಕ್ತ ಇಲ್ಲದಿದ್ದರೆ ಅರ್ಥಜ್ಞಾನವಾಗುವುದಿಲ್ಲ. ಅರ್ಥಜ್ಞಾನವಿಲ್ಲದಿದ್ದರೆ ಸ್ವರಸಂಸ್ಕಾರೋದ್ದೇಶಾದಿ ಜ್ಞಾನವಾಗುವುದಿಲ್ಲ. ಆದುದರಿಂದ ಅವಶ್ಯವಾಗಿ ನಿರುಕ್ತವನ್ನು ಓದಬೇಕು.

ಛಂದಃಶಾಸ್ತ್ರದುಪಯೋಗ– ಗಾಯತ್ರೀಭಿರ್ಬ್ರಾಹ್ಮಣಸ್ಯಾದಧ್ಯಾತ್ ತ್ರಿಷ್ಟುಗ್ಭೀರಾಜನ್ಯಸ್ಯ ಜಗತೀಭಿರ್ವೈಶ್ಯಸ್ಯೇತ್ಯಾದಿ— ಆಯಾಯ ಸ್ಥಳದಲ್ಲಿ ಮಗಣಯಗಣಾದಿಗಳಿಂದ ಸಾಧ್ಯವಾದ ಗಾಯತ್ರ್ಯಾದಿಗಳ ಹಾಗೂ ಸಮಸ್ತ ವೇದಮಂತ್ರಗಳ ರಚನೆಯು ಛಂದೋಗ್ರಂಥಾಧ್ಯಯನ ಇಲ್ಲದೇ ಚೆನ್ನಾಗಿ ತಿಳಿಯುವುದಿಲ್ಲವಾದುದರಿಂದ ಛಂದೋಧ್ಯಯನವಾವಶ್ಯಕವಾಗಿರುವುದು.

ಜ್ಯೋತಿಷ ಶಾಸ್ತ್ರಪ್ರಯೋಜನ– ಹೋಮಹವನಾದಿ ಕಾಲಜ್ಞಾನಕ್ಕೋಸ್ಕರವೂ, ನಕ್ಷತ್ರಾದಿ ಗಣಿತಜ್ಞಾನಕ್ಕೋಸ್ಕರವೂ ಅವಶ್ಯವಾಗಿ ಜ್ಯೋತಿಶ್ಶಾಸ್ತ್ರ ಬರಬೇಕಾಗುವುದು. ಈ ಶಾಸ್ತ್ರದ ಉಪಯೋಗವು ಅಲ್ಲಲ್ಲಿ ಕಂಡು ಬರುವುದು. "ಸಂವತ್ಸರಮೇತದ್ವ್ರತಂಚರೇತ್ ವಸಂತೇ ಬ್ರಾಹ್ಮಣೋಗ್ನಿಮಾದಧೀತ ಗ್ರೀಷ್ಮೇರಾಜನ್ಯಆದಧೀತ ಇತ್ಯಾದಿ ಮಾಸಿಮಾಸಿಪಿತೃಭ್ಯಃ ಕ್ರಿಯಂತಿ ಮಾಸಿಮಾಸ್ಯತಿಗ್ರಾಹ್ಯಾಗೃಹ್ಣಂತೆ ಇತ್ಯಾದಿಯಂಕಾಮಯೇತ ಪಸೀಯಾನ್ ಸ್ಯಾದಿತಿತಂ ಪೂರ್ವಪಕ್ಷೇಯಾಜಯೇದಿತ್ಯಾದಿ ಏಕಾಷ್ಟಕಾಯಾಂದೀಕ್ಷೇರನ್ ಫಲ್ಗುನೀಪೂರ್ಣಮಾಸೇದೀಕ್ಷೇರನ್ ಇತ್ಯಾದಿ ಪ್ರಾತರ್ಜುಹೋತಿ ಕೃತ್ತಿಕಾಸ್ವಗ್ನಿಮಾದಧೀತೇತ್ಯಾದಿ ಕಾಲವಿಶೇಷಗಳ ಉಪಯೋಗವು.

ಜಗದೀಶ್ವರನು ಪರಮಪೂಜ್ಯವೇದಗಳನ್ನು ಜಗತ್ತಿನ ಸರ್ವಮಾನವಪ್ರಾಣಿಗಳು ಅಧ್ಯಯನಮಾಡಿ ಪುನೀತರೂ ಕೃತಕೃತ್ಯರೂ (ಧನ್ಯರು) ಆಗಲೆಂದು ನಿರ್ಮಿಸಿ ತಿಳಿಸುವಾಗ [illegible] ಕೊಟ್ಟಿರುವನು. (ಶೇಷ.)

ಮೈಸೂರು ಸಂಸ್ಥಾನದಲ್ಲಿಯ ರೈಲ್‌ರಸ್ತೆಗಳು.

ಈ ವಿಷಯವನ್ನು ಕುರಿತು ಸಂಸ್ಥಾನದ ಚೀಫ್ ಇಂಜನಿಯರ್‌ರವರಾದ ಮಿ॥ ಎಂ. ವಿಶ್ವೇಶ್ವರಯ್ಯನವರು ಯೋಚಿಸಿ ಬರೆದಿರುವುದೇನೆಂದರೆ:—

ಮೈಸೂರು ಸಂಸ್ಥಾನದಲ್ಲಿ ಕಳೆದ ಹನ್ನೆರಡು ವರ್ಷಗಳ ಲಾಗಾಯಿತು ರೈಲ್‌ರಸ್ತೆಗಳ ಬದಲಾವಣೆಯ ವಿಷಯದಲ್ಲಿ ಈ ಸಂಸ್ಥಾನವು ಬ್ರಿಟಿಷ್ ಇಂಡಿಯಾಕ್ಕಿಂತ ಹಿಂದೆ ಬಿದ್ದಿರುತ್ತದೆ. ಮೈಸೂರು ಸಂಸ್ಥಾನದಲ್ಲಿ ೧೬,೫೫೫ರ ಜನಸಂಖ್ಯೆಗೆ ಒಂದೊಂದು ಮೈಲಿಯ ಮೇರೆಗೆ ರೈಲ್ ರಸ್ತೆಯು ಇರುತ್ತದೆ. ಇಂಡಿಯಾದೇಶದಲ್ಲಿಯಾದರೋ ೮೮೨೩ ಜನಸಂಖ್ಯೆಗೆ ಒಂದೊಂದು ಮೈಲಿಯಮೇರೆಗೆ ಇರುತ್ತದೆ. ಇಂಡಿಯಾ ದೇಶದ ಇತರ ಭಾಗಗಳಲ್ಲಿ ನಡೆದಿರುವಷ್ಟು ಅಭಿವೃದ್ಧಿಗೆ ಸರಿಸಮಾನಾದ ಅಭಿವೃದ್ಧಿಯನ್ನು ಇಲ್ಲಿಯೂ ತೋರ್ಪಡಿಸಬೇಕಾದರೆ ಹಾಲಿ ಈ ಸಂಸ್ಥಾನದಲ್ಲಿರುವ ರೈಲ್ ರಸ್ತೆಯಜತೆಗೆ ಕನಿಷ್ಠಪಕ್ಷ ೨೧೦ ಮೈಲಿಗಳಷ್ಟು ರಸ್ತೆಯನ್ನಾದರೂ ಕೂಡಿಸಬೇಕಾಗಿರುವುದು.

೧೯೧೦ ನೇ ಅಕ್ಟೋಬರ್ ತಿಂಗಳಲ್ಲಿ ನಾನು ಸರ್ಕಾರಕ್ಕೆ ಜಾಹೀರ್‌ಮಾಡಿದ ಲೇಖನದಲ್ಲಿ ರೈಲ್‌ರಸ್ತೆಗಳ ಬದಲಾವಣೆಯ ವಿಷಯದಲ್ಲಿ ಪುನಃ ಸ್ಥಿರಪ್ರಯತ್ನಗಳನ್ನು ನಡಿಸಬೇಕೆಂಬ ವಿಚಾರವನ್ನು ಮುಖ್ಯವಾಗಿ ಪ್ರಸ್ತಾಪ ಮಾಡಿದ್ದೆನು. ಅದರಲ್ಲಿ ಸುಮಾರು ೩೬ ಲಕ್ಷ ರೂಪಾಯಿ ಲಾಗವಡಿಸಿ ಮೇಲೆ ಮೈಸೂರಿಂದ ಅರಸೀಕೆರೆಯ ವರೆಗೆ ರೈಲ್ ರಸ್ತೆ ಹಾಕಿಸುವ ಕಾಮಗಾರಿಯನ್ನು ಪ್ರಾರಂಭಿಸಬೇಕೆಂತಲೂ, ಹಣವು ದೊರೆಯುವಹಾಗಿದ್ದರೆ ಫೀಡರ್ ರೈಲ್ವೆಗಳ ಬಗ್ಗೆ ಬೇರೆ ೫೦ ಲಕ್ಷ ರೂಪಾಯಿಯನ್ನು ಖರ್ಚುಮಾಡಿದಲ್ಲಿ ಪ್ರಯೋಜನಕರವಾಗಿರಬಹುದೆಂತಲೂ ಶಿಫಾರಸ್ ಮಾಡಿದ್ದಲ್ಲದೆ ಈ ಮೊಬಲಗುಗಳಿಗೆ ಸಂಸ್ಥಾನದ ಬಜೆಟ್ಟಿನಲ್ಲಿ ಅವಕಾಶವನ್ನುಂಟುಮಾಡಬೇಕೆಂದು ಸಲಹೆ ಕೊಟ್ಟಿದ್ದೆನು.

ಮುಂದೆ ಶೀಘ್ರದಲ್ಲಿಯೇ ಈ ವಿಚಾರವಾಗಿ ಸರ್ಕಾರದವರು ಅನುಸರಿಸಬೇಕಾದ ಕ್ರಮವನ್ನು ಆಲೋಚಿಸುವಲ್ಲಿ ಮೇಲ್ಕಂಡ ಲೇಖನವು ಬರೆಯಲ್ಪಟ್ಟಾಗಳಿಂದೀಚೆಗೆ ಸ್ವಲ್ಪಮಟ್ಟಿನ ಅಭಿವೃದ್ಧಿಯು ಕಂಡುಬಂದಿರುತ್ತದೆಂಬ ಅಂಶವನ್ನು ಗಮನಿಸಬೇಕಾದುದು ಅವಶ್ಯಕವಾಗಿರುತ್ತದೆ.

ಅರಸೀಕೆರೆ ಈರೋಡ್ ರಸ್ತೆ— ಅರಸೀಕೆರೆಯಿಂದ ಈರೋಡ್‌ವರೆಗೂ ಸೀದಾ ಒಂದು ರೈಲ್‌ರಸ್ತೆಯನ್ನು ಏರ್ಪಡಿಸುವ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಗಮನವು ಕೊಡಲ್ಪಟ್ಟಿದೆ.

ಮೈಸೂರು ಮಾರ್ಗವಾಗಿ ಸೀದಾ ಒಂದು ರೈಲ್ ರಸ್ತೆಯನ್ನು ಏರ್ಪಡಿಸುವುದರ ಮೂಲಕ ಈರೋಡ್ ಬಳಿ ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯು ದಕ್ಷಿಣ ಇಂಡಿಯಾದ ರೈಲ್ವೆಯೊಡನೆ ಸಂಧಿಸುವ ಹಾಗೆ ಮಾಡಬೇಕೆಂದು ಇಂಡಿಯಾ ಸರ್ಕಾರದವರು ಬಹುಕಾಲದಿಂದಲೂ ಉದ್ದೇಶಿಸಿರುತ್ತಾರೆ. ಈ ರಸ್ತೆಯನ್ನು ಮೂರು ಭಾಗಗಳನ್ನಾಗಿ ವಿಭಾಗಿಸಬಹುದು; ಹೇಗೆಂದರೆ:— (೧) ಅರಸೀಕೆರೆಯಿಂದ ಹಾಸನಕ್ಕೆ, ಅಲ್ಲಿಂದ ಮೈಸೂರಿಗೆ ೧೦೨; (೨) ನಂಜನಗೂಡಿನಿಂದ ಮೈಸೂರು ಸಂಸ್ಥಾನದ ಎಲ್ಲೆಗೆ ೩೩; (೩) ಮೈಸೂರು ಸಂಸ್ಥಾನದ ಎಲ್ಲೆಯಿಂದ ಈರೋಡಿಗೆ ೮೮ ಮೈಲಿಗಳು. ಈ ಪೈಕಿ ೩ ನೆಯದು ಬ್ರಿಟಿಷ್‌ರಾಜ್ಯದಲ್ಲಿರುವುದರಿಂದ ಈ ರಸ್ತೆಯನ್ನು ಇಂಡಿಯಾ ಸರ್ಕಾರದವರೇ ಹಾಕಿಸುವ ಏರ್ಪಾಡು ಮಾಡಬೇಕಾಗಿರುವುದು. ೨, ೩ ನೆಯ ರಸ್ತೆಗಳ ರಹವನ್ನು ದಕ್ಷಿಣ ಇಂಡಿಯಾ ರೈಲ್ವೆ ಕಂಪೆನಿಯವರು ಸರ್ವೆ ಮಾಡಿ ಪೂರೈಸಿರುತ್ತಾರೆ. ಬ್ರಿಟಿಷ್ ಸರಹದ್ದಿನಲ್ಲಿ ಸೇರಿರುವ ಭಾಗಗಳಲ್ಲಿ ಕೆಲಸವು ಪ್ರಾರಂಭಿಸಲ್ಪಟ್ಟಕೂಡಲೆ ನಾವೂ ಸಹ ಸೀದಾ ರಸ್ತೆಯನ್ನು ಏರ್ಪಡಿಸುವುದಕ್ಕೆ ನಮ್ಮ ಭಾಗಕ್ಕೆ ಸೇರಿದ ಕೆಲಸಗಳನ್ನು ಮಾಡಲಿಕ್ಕೆ ಅಭ್ಯಂತರವಿಲ್ಲವೆಂದು ನಮ್ಮ ಸರ್ಕಾರದವರು ಇಂಡಿಯಾಸರ್ಕಾರದವರಿಗೆ ತಿಳಿಸಿ ಹನ್ನೊಂದು ವರ್ಷಗಳಾದುವು.

ಮೇಲೆ ಸೂಚಿಸಲ್ಪಟ್ಟ ರಸ್ತೆಗಳ ಪೈಕಿ ಮೊದಲನೆಯದಾದ ಅರಸೀಕೆರೆಯಿಂದ ಹಾಸನಕ್ಕೂ ಅಲ್ಲಿಂದ ಮೈಸೂರಿಗೂ ಹಾಕಿಸಬೇಕಾದ ರಸ್ತೆಯ ವಿಷಯದಲ್ಲಿ ತಿಳಿಸಬೇಕಾದ ಅಂಶಗಳು ಯಾವುವೆಂದರೆ;—

ಅರಸೀಕೆರೆಯಿಂದ ಮಂಗಳೂರಿಗೂ ಸೀದಾ ರಸ್ತೆಯನ್ನೇರ್ಪಡಿಸುವ ವಿಷಯದಲ್ಲಿ ಅಂದಾಜನ್ನು ತಯಾರ್‌ಮಾಡಿದ ಸಂದರ್ಭದಲ್ಲಿ ಅರಸೀಕೆರೆಯಿಂದ ಹಾಸನದ ವರೆಗೆ ರಸ್ತೆಯನ್ನು ಏರ್ಪಡಿಸಬೇಕಾದರೆ ತಗಲಬಹುದಾದ ಖರ್ಚಿನ ಅಂದಾಜನ್ನು ೧೮೯೯–೧೯೦೧ ನೆಯ ಇಸವಿಗಳ ಮಧ್ಯಕಾಲದಲ್ಲಿ ಮದರಾಸ್ ಸರ್ಕಾರದವರ ಅಪ್ಪಣೆಯ ಮೇರೆಗೆ ರೈಲ್ವೆ ಚೀಫ್ ಇಂಜನಿಯರ್ ಮಿ॥ ಎಚ್. ಗ್ರೋವ್ಸ್‌ರವರು ತಯಾರುಮಾಡಿದ್ದರು. ಅರಸೀಕೆರೆಯಿಂದ ಹಾಸನದ ವರೆಗೆ ಹಾಕುವ ರೈಲ್ ರಸ್ತೆಯು ೨೮–೩೧ ಮೈಲಿಗಳು. ಇದರ ಅಂದಾಜು [illegible] ರೂಪಾಯಿಗಳು.

ಹಾಸನದಿಂದ ಮೈಸೂರಿನ ವರೆಗೆ ೭೩ ಮೈಲಿಗಳ ರಸ್ತೆಯನ್ನು ಹಾಕಿಸಬೇಕಾದರೆ ೩೬ ಮುಕ್ಕಾಲು ಲಕ್ಷ ರೂಪಾಯಿ ಹಿಡಿಯಬಹುದೆಂದು ಮದರಾಸಿನ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ಅಂದಾಜು ಮಾಡಿರುತ್ತಾರೆ. ಮೇಲೆ ಸೂಚಿಸಲ್ಪಟ್ಟ ಸೀದಾ ರಸ್ತೆಯನ್ನು ಹಾಕಿಸಿದುದೇ ಆದರೆ ದಕ್ಷಿಣ ಇಂಡಿಯಾ ಮತ್ತು ನೀಲಗಿರಿಗಳಿಗೂ, ಪೂನಾ, ಬೊಂಬಾಯಿ ಮತ್ತು ಉತ್ತರ ಹಿಂದೂಸ್ಥಾನಗಳಿಗೂ ಮುಖ್ಯವಾದ ಮತ್ತು ತುಂಬಾ ಅವಶ್ಯಕವಾದ ಸಂಬಂಧವನ್ನು ಕಲ್ಪಿಸಿದಂತೆ ಆಗುತ್ತದೆ. ಅರಸೀಕೆರೆಯಿಂದ ಈರೋಡಿಗೆ ರಸ್ತೆಯನ್ನು ಪೂರೈಸುವುದರಿಂದ ಈ ಸಂಸ್ಥಾನದ ಸಂಪದಭಿವೃದ್ಧಿಗೆ ವಿಶೇಷ ಸಹಕಾರಿಯಾಗುವುದು.

ಮಿ॥ ಬೆಲ್‌ರವರ ನೇಮಕ ಮತ್ತು ಅವರ ರಿಪೋರ್ಟುಗಳು—ಮೇಲೆ ಸೂಚಿಸಲ್ಪಟ್ಟ ಅರಸೀಕೆರೆಯಿಂದ ಹಾಸನದ ವರೆಗಿನ ಮತ್ತು ಮೈಸೂರು ವರೆಗಿನ ರಸ್ತೆಗಳ ಅಂದಾಜುಗಳನ್ನು ಕಳೆದ ಮಾರ್ಚಿ ತಿಂಗಳಲ್ಲಿ ಕಲ್ಕತ್ತೆಯ ಮಾರ್ಟಿನ್ ಕಂಪನಿಯವರ ಮುಖಾಂತರ ನೇಮಿಸಲ್ಪಟ್ಟ ರಿಟೈರಾದ ಕನ್ಸಲ್ಟಿಂಗ್ ಇಂಜನಿಯರ್ ಮಿ॥ ಬೆಲ್‌ರವರು ಪರಿಶೋಧಿಸಿರುತ್ತಾರೆ. ನಮ್ಮ ಈಗಿನ ಉದ್ದೇಶಗಳಿಗಾಗಿ ಮಿ॥ ಬೆಲ್‌ರವರ ಸಲಹೆಗಳ ಪೈಕಿ ಎರಡನ್ನು ಮಾತ್ರ ಇಲ್ಲಿ ಪರ್ಯಾಲೋಚಿಸಿದರೆ ಸಾಕಾಗಿರುತ್ತದೆ.

(೧) ಅರಸೀಕೆರೆಯಿಂದ ಹಾಸನದ ವರೆಗಿನ ರಸ್ತೆಯಲ್ಲಿ ೬೬ ಅಡಿಗಳ ದೂರಕ್ಕೆ ೧ ಅಡಿಯಂತೆಯೂ, ಮೈಸೂರಿನಿಂದ ಹಾಸನದ ವರೆಗಿನ ರಸ್ತೆಯಲ್ಲಿ ೧೦೦ ಅಡಿಗಳ ದೂರಕ್ಕೆ ೧ ಅಡಿ ಯಂತೆಯೂ ಭೂಮಟ್ಟದ ನಿಮ್ನೋನ್ನತಿ ಇರುವಂತೆ ಅಂದಾಜು ಮಾಡಿರುತ್ತದೆ. ಈ ಎರಡು ರಸ್ತೆಗಳಲ್ಲಿಯೂ ಒಂದೇ ಸಮನಾದ ನಿಮ್ನೋನ್ನತಿಯುಳ್ಳ ಮಟ್ಟವನ್ನಿಡಬೇಕಾದುದು ಆವಶ್ಯಕ; ಹೀಗೆ ಮಾಡಬೇಕಾದಾಗ್ಯೂ ಇತರ ಆವಶ್ಯಕವಾದ ಬದಲಾವಣೆಗಳನ್ನು ನಡೆಸಬೇಕಾದರೂ ಈ ರಸ್ತೆಯನ್ನು ಪುನಃ ಸರ್ವೇಮಾಡಿಸಬೇಕು. (೨) ರಸ್ತೆಯನ್ನು ಹಾಕಿಸುವ ಕೆಲಸವನ್ನು ಸರ್ಕಾರದವರೇ ಮಾಡಿಸಬಹುದು. ಮಿ॥ ಬೆಲ್‌ರವರು ಇತರ ಕೆಲವು ಚಿಲ್ಲರೆ ಸಲಹೆಗಳನ್ನು ಕೊಟ್ಟಿರುತ್ತಾರೆ. ಇವುಗಳನ್ನು ರೀ ಸರ್ವೆಯ ಕಾಲದಲ್ಲಿ ವಿವರಿಸಲಾಗುವುದು.

ಬೆಂಗಳೂರು ಹೊಸೂರು ರಸ್ತೆ— ಕ್ಷಾಮಪೀಡಿತರಾದ ಜನಗಳನ್ನು ಸಂರಕ್ಷಿಸುವ ಉದ್ದೇಶದೊಡನೆ ದಕ್ಷಿಣ ಇಂಡಿಯಾ ರೈಲ್ವೆ ಕಂಪೆನಿಯವರು ಇಂಡಿಯಾ ಸರ್ಕಾರದವರ ಮಂಜೂರಾತಿಯನ್ನು ಪಡೆದು ಧರ್ಮಪುರಿಯಿಂದ ೩೦ ಮೈಲಿಗಳ ದೂರದಲ್ಲಿರುವ ಹೊಸೂರಿಗೆ ಒಂದು ರಸ್ತೆಯನ್ನು ಆಗಲೇ ಹಾಕಿರುತ್ತಿದ್ದಾರೆ. ಈ ರಸ್ತೆಯ ಪೈಕಿ ಬ್ರಿಟಿಷ್ ರಾಜ್ಯಕ್ಕೆ ಸೇರಿದ ಭಾಗವು ಬಹುಶಃ ಒಂದೆರಡು ವರ್ಷಗಳೊಳಗಾಗಿ ಪೂರೈಸಬಹುದು. ಮೈಸೂರು ಸಂಸ್ಥಾನಕ್ಕೆ ಸೇರಿದ ಭಾಗ ಎಂದರೆ ಹೊಸೂರಿಂದ ೨೦ ಮೈಲಿಗಳ ದೂರದಲ್ಲಿರುವ ಬೆಂಗಳೂರಿಗೆ ರಸ್ತೆಯನ್ನು ಹಾಕಿಸುವುದಕ್ಕೆ ಬೇಕಾದ ೩ ಲಕ್ಷ ರೂಪಾಯಿಯ ಅಂದಾಜನ್ನು ಪೂರಾ ರಸ್ತೆಯ ಅಂದಾಜಿನಲ್ಲಿಯೇ ಸೇರಿಸಿರುತ್ತದೆ.

ಇತರ ಕೆಲವು ಸ್ಥಳಗಳಿಗೆ ರೈಲ್ ರಸ್ತೆಯನ್ನು ಹಾಕಿಸುವ ವಿಚಾರದಲ್ಲಿಯೂ, ಈಗಾಗಲೇ ರೈಲ್ ರಸ್ತೆಯು ಇರುವ ಕಡೆಯಿಂದ ಬೇರೆ ಸ್ಥಳಗಳಿಗೆ ಸಂಬಂಧಿಸುವಂತೆ ಹೊಸದಾಗಿ ರಸ್ತೆಯನ್ನು ಹಾಕಿಸುವ ವಿಚಾರದಲ್ಲಿಯೂ ಸಹ ಸ್ಥಿರಪ್ರಯತ್ನಗಳು ನಡೆಯುತ್ತಿರುವುದು ಗೋಚರವಾಗುತ್ತಿದೆ; ಈ ಪ್ರಯತ್ನಗಳು ಕ್ಷಿಪ್ರದಲ್ಲಿಯೇ ಫಲಕಾರಿಯಾಗುವುವೆಂಬ ಸೂಚನೆಗಳು ತೋರುತ್ತಿವೆ.

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ–ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯವರು ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ೨ ವರೆ ಅಡಿ ಅಗಲದ ಸಣ್ಣ ರೈಲ್ ರಸ್ತೆಯನ್ನು ಹಾಕಿಸುವ ಏರ್ಪಾಡು ಜಾರಿಗೆ ಬರುವವರೆಗಿನ ಮಟ್ಟಿಗೆ ಪ್ರಯತ್ನಮಾಡುತ್ತಾರೆ. ಇದಕ್ಕೆ ಹಣವನ್ನು ಸೇರಿಸುವುದಕ್ಕಾಗಿ ಕಳೆದ ೧೮ ತಿಂಗಳಿಂದಲೂ ವಿಶೇಷವಾದ ತರದೂದುಗಳನ್ನು ನಡೆಯಿಸಿರುತ್ತಾರೆ; ಬಾಕಿ ಸರ್ಕಾರಿಯ ವರ್ಷದಲ್ಲಿ ಕಾಮಗಾರಿಯನ್ನು ಆರಂಭಿಸುವುದಕ್ಕೆ ಬೇಕಾದಷ್ಟು ಹಣವನ್ನು ಬಹುಶಃ ಸೇರಿಸಬಹುದೆಂದು ತೋರುತ್ತದೆ. ಪ್ರಾರಂಭದ ಖರ್ಚಿಗಾಗಿ ನಾಲ್ಕು ಲಕ್ಷ ರೂಪಾಯಿಯನ್ನು ಸೇರಿಸಿದಲ್ಲಿ ಕಾಮಗಾರಿಯನ್ನು ಆರಂಭಿಸುವುದಕ್ಕೆ ಸದರಿ ಕಂಪನಿಯವರಿಗೆ ಅನುಜ್ಞೆಯನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ಸಮ್ಮತಿಸುವುದಾಗಿ ತಿಳಿಸಿರುತ್ತಾರೆ.

ಕೋಲಾರ ಬೌರಿಂಗ್‌ಪೇಟೆ ರಸ್ತೆ—ಕೋಲಾರದ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಪ್ರೆಸಿಡೆಂಟರವರಾದ ಡೆಪ್ಯುಟಿ ಕಮೀಷನರ್ ಮಿ॥ ಪಿ. ಶ್ರೀಕಂಠೇಶ್ವರ ಅಯ್ಯಂಗಾರವರ ಪ್ರೋತ್ಸಾಹದ ಮೇಲೆ ಕೋಲಾರದಿಂದ ಬೌರಿಂಗ್‌ಪೇಟೆಯ ವರೆಗೆ ರೈಲ್ ರಸ್ತೆಯನ್ನು ಹಾಕಿಸುವ ಬಗ್ಗೆ ಶೇಕಡಾ ೪ ರೂಪಾಯಿ ಬಡ್ಡಿಯ ಹಂಗಾಮಿ ಗ್ಯಾರಂಟಿಯ ಮೇಲೆ ೩ ಲಕ್ಷ ರೂಪಾಯಿಯ ಸಾಲವನ್ನು ಷೇರುಗಳ ಮೂಲಕ ವಸೂಲುಮಾಡುವ ವಿಷಯದಲ್ಲಿ ಸ್ಥಿರಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಆಗಲೇ ೧೫೦,೦೦೦ ರೂಪಾಯಿಯು ವಸೂಲಾಗಿರುತ್ತದೆ. ಈ ರಸ್ತೆಯ ಸರ್ವೆ ಮತ್ತು ಅಂದಾಜು ಕೆಲಸಗಳು ಇನ್ನು ಮೇಲೆ ನಡೆಯಬೇಕಾಗಿದೆ.

ಚಿತ್ರದುರ್ಗ ಚಿಕ್ಕಜಾಜೂರು ರೈಲ್ವೆ—ಚಿತ್ರದುರ್ಗದಿಂದ ಚಿಕ್ಕಜಾಜೂರಿಗೆ ಒಂದು ರಸ್ತೆಯನ್ನು ಹಾಕಿಸಬೇಕೆಂದು ಚಿತ್ರದುರ್ಗದ ಡೆಪ್ಯುಟಿ ಕಮೀಷನರೂ, ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರೂ ಆದ ಮಿ॥ ಕೆ. ಚಾಂದಿಯವರು ಸಲಹೆ ಕೊಟ್ಟಿರುತ್ತಾರೆ. ಇದಕ್ಕೆ ಬೇಕಾದ ಹಣವನ್ನು ಸೇರಿಸುವುದಕ್ಕೆ ಅನುಕೂಲವಾಗುವಂತೆ ಡಿಸ್ಟ್ರಿಕ್ಟ್ ಫಂಡ್ ಬಾಬಿಗೆ ಸೇರುವ ಪ್ರತಿ ಹುಟ್ಟುವಳಿಯ ಬಾಬಿನ ಮೇಲೂ ರೂಪಾಯಿಗೆ ೩ ಕಾಸಿನಂತೆ ತೆರಿಗೆಯನ್ನು ಹಾಕಲು ಬೋರ್ಡಿನವರು ಒಪ್ಪಿರುತ್ತಾರೆ. ಈ ವಿಷಯವು ಹಾಲಿ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಚಿಕ್ಕಮಗಳೂರು ಹಾಸನ ರೈಲ್ವೆ—ಹಾಸನ, ಅರಸೀಕೆರೆ ಮಾರ್ಗವಾಗಿ ಚಿಕ್ಕಮಗಳೂರಿಗೆ ಹೋಗುವ ಚಿಕ್ಕಮಗಳೂರು ಹಾಸನ ರೈಲ್ ರಸ್ತೆಯನ್ನು ಹಾಕಿಸುವುದರಿಂದ ಕಾಫಿ ಬೆಳೆಯುವ ಪ್ರದೇಶಗಳಿಗೆ ಪ್ರಯಾಣಮಾಡುವುದು ಸುಲಭವಾಗುವುದಲ್ಲದೆ ಬೇಲೂರು, ಹಳೇಬೀಡುಗಳಲ್ಲಿನ ಜಗದ್ವಿಖ್ಯಾತವಾದ ದೇವಸ್ಥಾನಗಳನ್ನು ನೋಡಲು ಅನೇಕರಿಗೆ ಸಾಧ್ಯವಾಗುವುದರಿಂದ ತುಂಬಾ ಪ್ರಯೋಜನವಾಗುವುದು. ಈ ವಿಷಯದಲ್ಲಿ ಹಾಸನ, ಕಡೂರು ಡಿಸ್ಟ್ರಿಕ್ಟ್‌ಗಳ ಡೆಪ್ಯುಟಿ ಕಮೀಷನರುಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳವರೂ ಸಹ ತಕ್ಕ ಪ್ರಯತ್ನಗಳನ್ನು ನಡೆಯಿಸುವರೆಂಬ ನಿರೀಕ್ಷಣೆಯಿದೆ. ಸರ್ಕಾರದವರು ಈ ವಿಷಯದಲ್ಲಿ ಪ್ರವರ್ತಿಸಿದರೆ ಆಯಾ ಪ್ರದೇಶದ ಪ್ರಜೆಗಳೂ ಸಹಾಯಮಾಡಲು ಮುಂದಾಳುಗಳಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ.

ಇತರ ರೈಲ್ ರಸ್ತೆಗಳು—ಇನ್ನೂ ಬೇರೆ ಕೆಲವು ರೈಲ್ ರಸ್ತೆಗಳನ್ನು ಹಾಕಿಸುವುದು ಆವಶ್ಯಕವೆಂಬುದಾಗಿ ಆಗಿಂದಾಗ ಸಲಹೆಗಳು ಬಂದಿವೆ. ಆದರೆ ಅವುಗಳು ಅಷ್ಟೇನೂ ಮುಖ್ಯವಾದುವುಗಳೂ ಅಲ್ಲ; ಸದ್ಯಕ್ಕೆ ಅವುಗಳನ್ನು ಹಾಕಿಸಬೇಕಾದ ಆವಶ್ಯಕತೆಯೂ ಇಲ್ಲ. ಬಹುಶಃ ಕೆಲವು ಕಾಲಾನಂತರ ರಾಯದುರ್ಗದಿಂದ ಚಿತ್ರದುರ್ಗ, ಹಿರಿಯೂರು, ಸೀರ್ಯ ಈ ಮಾರ್ಗವಾಗಿ ತಿಪಟೂರು ವರೆಗೆ ರೈಲ್ ರಸ್ತೆಯನ್ನು ಹಾಕಿಸುವುದು ಆವಶ್ಯಕವಾಗಬಹುದು. ಬಳಿಕ ಲೈನನ್ನು ನೇರವಾಗಿ ದಕ್ಷಿಣಕ್ಕೆ ಹುಲಿಯೂರು, ಶಿವಸಮುದ್ರ ಈ ಪ್ರದೇಶಗಳ ವರೆಗೆ ಬದಲಾಯಿಸುವುದೂ ಸಹ ಮುಂದೆ ಒಂದು ಕಾಲದಲ್ಲಿ ಆವಶ್ಯಕವಾಗಬಹುದು. ಅಲ್ಲದೆ ಈಗ ಉದ್ದೇಶಿಸಲ್ಪಟ್ಟಿರುವ ಮೈಸೂರು, ಹಾಸನ, ಅರಸೀಕೆರೆ ರಸ್ತೆಯನ್ನು ಯಲವಾಲದ ಸಮೀಪದಿಂದ ಹುಣಸೂರು ಮಾರ್ಗವಾಗಿ ಕೊಡಗಿನ ಸರಹದ್ದಿನ ವರೆಗೆ ಬದಲಾಯಿಸಿದ ಪಕ್ಷದಲ್ಲಿ ಕೊಡಗು ದೇಶದ ಆಚೆಯ ಡಿಸ್ಟ್ರಿಕ್ಟುಗಳಿಗೂ ಜಂಗಲಿ ಪ್ರದೇಶಗಳಿಗೂ ಮಾರ್ಗವು ಏರ್ಪಟ್ಟಂತಾಗುವುದು.

ಇವೇ ಮುಂತಾದ ಬದಲಾವಣೆಗಳನ್ನು ಆಗ ಸೂಚಿಸಲ್ಪಟ್ಟಿರುವ ರಸ್ತೆಗಳು ತಕ್ಕಮಟ್ಟಿಗೆ ಪೂರೈಸಿದ ಅನಂತರ ಪರ್ಯಾಲೋಚಿಸಬಹುದು.

ತುರ್ಕಿ–ಇಟಲಿಯ ಯುದ್ಧವು.

ಅಕ್ಟೋಬರ್ ತಾ॥ ೨೧– ಇಟಲಿಯವರು ಬೆಂಘಾಜಿಗೆ ಫಿರಂಗಿಯನ್ನು ಹಾಕಿ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುವರು. ಈ ಕದನದಲ್ಲಿ ತುರ್ಕಿಯವರ ಕಡೆ ೨೦೦ ಜನರು ಮಡಿದರು ಮತ್ತು ಇಟಲಿಯವರ ಕಡೆ ೧೩ ಜನರು ಸತ್ತು ೩೧ ಜನರು ಗಾಯವಡೆದರು. ಆಸ್ಟ್ರಿಯಾ ಮತ್ತು ಜರ್ಮನಿ ರಾಜ್ಯಗಳ ರಾಯಭಾರಿಗಳು ಕಾನ್ಸ್ಟಾಂಟಿನೋಪಲ್ಲಿನಲ್ಲಿ ಮುಖ್ಯಮಂತ್ರಿಯ (ಗ್ರ್ಯಾಂಡ್‌ವಜೀರನ) ಕೂಡ ಪ್ರಸಕ್ತ ಯುದ್ಧವಿಚಾರದಲ್ಲಿ ಇಟಲಿ ಮತ್ತು ತುರ್ಕಿ ರಾಜ್ಯಗಳಿಗೆ ಮಧ್ಯಸ್ಥಿಕೆ ಮಾಡುವುದನ್ನು ಕುರಿತು ಆಲೋಚಿಸಿದರು. ಟೈಂಸ್ ಆಫ್ ಇಂಡಿಯಾ ಪತ್ರಿಕೆಯ ಪತ್ರವ್ಯವಹಾರಕನು ಲಂಡನ್ ಪಟ್ಟಣದಲ್ಲಿ ಒಬ್ಬ ಮಹಮ್ಮದೀಯ ದೊಡ್ಡ ಮನುಷ್ಯನನ್ನು ಕಂಡು ಪ್ರಸಕ್ತ ಯುದ್ಧದ ವಿಚಾರವಾಗಿ ಅತನ ಅಭಿಪ್ರಾಯವನ್ನು ಕೇಳಿದಲ್ಲಿ, ಅತನು "ಭರತಖಂಡದಲ್ಲಿ ಮಾತ್ರ ಅಲ್ಲ, ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಮಹಮ್ಮದೀಯರ ಮೇಲೆ ಆಗಾಗ ನಡೆಯಿಸಲ್ಪಡುತ್ತಿರುವ ಕಾರ್ಯಭಂಗವು ಬಹು ಭಯಂಕರವಾಗಿದೆ. ಪರ್ಷ್ಯ, ಟ್ಯೂನಿಸ್ ಮತ್ತು ತ್ರಿಪೋಲಿ ಈ ಮೂರು ದೇಶಗಳೂ ಮಹಮ್ಮದೀಯರ ಸ್ವಾಧೀನದಿಂದ ತಪ್ಪಿಸಲ್ಪಡುವ ಪ್ರಯತ್ನವು ನಡೆದಿದೆ. ಇದರಿಂದ ಕ್ರೈಸ್ತರಾಜ್ಯಗಳೆಲ್ಲವೂ ಒಟ್ಟುಗೂಡಿ ಮಹಮ್ಮದೀಯರ ತಲೆಯ ಮೇಲೆ ಎತ್ತಿಗಟ್ಟಿದಾರೆಂದು ಸಾಮಾನ್ಯ ಮಹಮ್ಮದೀಯರು ಕೂಡ ತಿಳಿದುಕೊಳ್ಳುವರು. ತ್ರಿಪೋಲಿಯಲ್ಲಿ ಇಟಾಲಿಯನರು ೩೦೦ ಜನರಿಂದ [illegible] ಮತ್ತು ಇಲ್ಲಿ ಒಟ್ಟು ೧,೫೦೦ ಜನ ಇಟಾಲಿಯನರು ವಾಸವಾಗಿರುವರು. ಇಟಾಲಿಯವರು ಅಲ್ಲಿ ವ್ಯಾಪಾರಕಾರ್ಯದ ವಿಚಾರದಲ್ಲಿ ಯಾವ ಅಧಿಕಾರವೂ

ಮಾಡಲ್ಪಟ್ಟಿಲ್ಲವು. ಆದರೆ ಒಬ್ಬ ಇಟಾಲಿಯನ್ ಹುಡುಗಿಯನ್ನು ಒಬ್ಬ ತುರ್ಕಿಯವನು ಅಪಹರಿಸಿದನಾದುದರಿಂದ, ಅವನ ಶಿಕ್ಷಣಾರ್ಥವಾಗಿ ಈ ಯುದ್ಧ ಕಾರ್ಯವು ಕೈಗೊಳ್ಳಲ್ಪಟ್ಟಿತೆಂದು ಹೇಳುವುದು ಬಹು ದುರ್ಬಲ ಕಾರಣವಾಗಿದೆ. ಆ ಹುಡುಗಿಯು ಅಪಹರಿಸಲ್ಪಡಲಿಲ್ಲ, ಆದರೆ ಆಕೆಯು ಸಮ್ಮತಿಯಿಂದ ಒಬ್ಬ ತುರ್ಕಿಯವನು ವಿವಾಹಮಾಡಿಕೊಂಡಿರುವನು. ಇಷ್ಟುಮಾತ್ರಕ್ಕೆ ತ್ರಿಪೋಲಿಗೆ ಫರಂಗಿಯನ್ನು ಹೊಡೆದು ಸ್ವಾಧೀನಪಡಿಸಿಕೊಳ್ಳಬೇಕೆ? ಇದರಿಂದ ಇಸಲಾಮು ಮತಕ್ಕೆ ಅಳಿಗಾಲ ಬಂದಿದೆಯೆಂದು ಪ್ರತಿಯೊಬ್ಬ ಮಹಮ್ಮದೀಯನೂ ಭಾವಿಸಿ ಯುದ್ಧಕ್ಕೆ ಸನ್ನದ್ಧನಾಗಬೇಕಾಗಿದೆ. ಈಗ ತ್ರಿಪೋಲಿಯಲ್ಲಿ ೧೫೦೦೦ ತುರ್ಕಿಯ ಸೇನೆಯಿದ್ದಾಗ್ಗ್ಯೂ ಒಟ್ಟು ರಾಜ್ಯದಲ್ಲಿ ೮೦೦೦೦ ಸೇನೆಯು ಕಾದಾಡಲು ಸಿದ್ಧವಾಗಿರುತ್ತದೆ. ತುರ್ಕಿಯು ಸೋತುಹೋದ ಪಕ್ಷದಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಯುದ್ಧಗಳು ಮಾತ್ರ ಎಡೆಬಿಡದೆ ನಡೆಯುವವು." ಎಂದು ಹೇಳಿದನು. ಕಳೆದ ತಾ॥ ೨೩ ರಲ್ಲಿ ಕಲಕತ್ತಾದಲ್ಲಿ ಮಹಮ್ಮದೀಯರ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟು ರೆಡ್ ಕ್ರೆಸೆಂಟ್ ಎಂಬ ಸಂಘದವರಿಂದ ಒಂದು ದೊಡ್ಡ ಸಭೆಯು ಕೂಡಿಸಲ್ಪಟ್ಟಿದ್ದು, ಈಗ ಪ್ರಪಂಚದ ಮೇಲಿರುವ ಮಹಮ್ಮದೀಯರೆಲ್ಲರೂ, ತಮ್ಮ ಮತಾಭಿಮಾನದಿಂದ ಒಟ್ಟುಗೂಡಿ ತಂತಮ್ಮ ಕೈಲಾದ ಸಹಾಯವನ್ನೆಲ್ಲ ತುರ್ಕಿಯವರಿಗೆ ಮಾಡಬೇಕೆಂದೂ, ಇಟಲೀದೇಶದ ಪದಾರ್ಥಗಳಿಗೆ ಬಹಿಷ್ಕಾರವನ್ನು ಹಾಕಬೇಕೆಂದೂ ನಿರ್ಧರಿಸಿದರು.

ಅಕ್ಟೋಬರ್ ತಾ॥ ೨೨– ತಾ॥ ೨೩ ರಲ್ಲಿ ತ್ರಿಪೋಲಿಯಲ್ಲಿ ಕಾವಲಿಡಲ್ಪಟ್ಟಿರುವ ಸೇನೆಯಮೇಲೆ ಅರಬ್ಬಿಯವರು ಅನೇಕ ಗಂಟೆಗಳ ವರೆಗೆ ಗುಂಡನ್ನು ಹೊಡೆಯುತ್ತಿದ್ದರು. ಇಟಲಿಯಧಿಕಾರಿಗಳು ಆಕಾಶ ವಿಮಾನದಲ್ಲಿ ಕುಳಿತು ಶತ್ರುಗಳ ಗತಿಯನ್ನು ಕಂಡುಹಿಡಿಯುತ್ತಿರುವಾಗ್ಗೆ ಇಟಲಿಯವರು ಕಾವಲಿರುವುದರಿಂದಾಚೆ ೮ ಮೈಲಿಯ ದೂರದಲ್ಲಿ ೬ ತುರ್ಕಿಯ ಬಿಡಾರಗಳಿರುವುದು ಕಂಡು ಬಂದಿತು. ಬೆಂಘಾಜಿಗೆ ಹೊಡೆಯಲ್ಪಡುತ್ತಿರುವ ಗುಂಡಿನೇಟಿನಿಂದ ಬಹು ಭೀತಿಯು ಹುಟ್ಟಿದೆ; ಒಂದು ದೇವಾಲಯವು ಅನೇಕ ಕಡೆ ಬಿರುಕುಬಿಟ್ಟಿದೆ; ೮ ಜನರು ಸತ್ತು ೧೦ ಜನರು ಗಾಯವಡೆದರು. ಬ್ರಿಟಿಷರ ಸಹಾಯಾರ್ಥವಾಗಲ್ಲಿರುವವನ ಮನೆಯು ಬಿದ್ದು ಆತನಿಗೆ ಗಾಯವಾಗಿದೆ. ಈ ಕದನದಲ್ಲಿ ಗಾಯವಡೆದವರೂ, ಮಡಿದವರೂ ೬೦೦ ಜನರವರೆಗಾಗುತ್ತಾರೆ. ಬೆಂಘಾಜಿಯಲ್ಲಿ ಯುದ್ಧವು ಬಹು ದೊಡ್ಡದಾಗಿ ನಡೆಯುತ್ತಿದೆ. ತುರ್ಕಿಯ ೩೦೦ ಜನ ಸೈನಿಕರ ಸಹಾಯಾರ್ಥವಾಗಿ ೪೦೦೦ ಅರಬ್ಬಿಯವರು ಬಂದರು. ಇವರಲ್ಲಿ ೬೦೦ ಜನರು ಮಡಿದು ೧೫೦೦ ಜನರು ಗಾಯವಡೆದರು.

ತಾ॥ ೨೪– ಈ ಬೆಂಘಾಜಿ ಯುದ್ಧದಲ್ಲಿ ಭಾಗಿಗಳಾಗಿದ್ದ ಅನೇಕ ಅರಬ್ಬಿಯವರು ಗುಂಡೇಟನ್ನು ತಿಂದು ಸತ್ತರು. ತುಪಾಕಿಗಳನ್ನು ತೆಗೆದುಕೊಂಡು ಹೋಗುತ್ತಿದ್ದವರು ಸೆರೆ ಹಿಡಿಯಲ್ಪಟ್ಟು, ಹೀಗೆ ಮದ್ದು ಗುಂಡನ್ನು ತೆಗೆದುಕೊಂಡು ಹೋಗತಕ್ಕವರು ಮರಣದಂಡನೆಗೆ ಗುರಿಮಾಡಲ್ಪಡುವರೆಂದು ಪ್ರಕಟಪಡಿಸಲ್ಪಟ್ಟಿತು. ತುರ್ಕಿಯ ಸೇನೆಯ ಸಹಾಯಕ್ಕಾಗಿ ಬರುತ್ತಿದ್ದ ೨೦೦೦ ಅರಬ್ಬಿಯವರು ಸೆರೆಹಿಡಿಯಲ್ಪಟ್ಟು ಮದ್ದುಗುಂಡುಗಳನ್ನಿಟ್ಟಿದ್ದ ಅನೇಕ ಗುಡಿಸಲುಗಳಿಗೆ ಬೆಂಕಿಯು ಹೊತ್ತಿಸಲ್ಪಟ್ಟಿತು. ತುರ್ಕಿ ಮತ್ತು ಇಟಲಿಯವರ ಮಧ್ಯಸ್ಥತೆಗೆ ಆಸ್ಟ್ರಿಯಾ ಮತ್ತು ರಷ್ಯಾದವರು ತಾವು ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಅಕ್ಟೋಬರ್ ತಾ॥ ೨೩– ಈಜಿಪ್ಟಿನಿಂದ ಟ್ಯೂನಿಸ್ ಎಲ್ಲೆಗಳವರೆಗೂ ಮತ್ತು ಒಳಗಡೆ ಬ್ರಿಟಿಷ್ ಮತ್ತು ಫ್ರೆಂಚರ ವ್ಯಾಪ್ತಿಯಿರುವವರೆಗೂ ತಮ್ಮಧಿಕಾರವು ಸ್ಥಾಪಿಸಲ್ಪಟ್ಟಿರುತ್ತದೆಂದು ಇಟಲಿಯವರು ಎಲ್ಲ ರಾಜ್ಯದವರಿಗೂ ತಿಳುಹಿಸಿರುತ್ತಾರೆ. ಬಂದಿಗಳಾಗಿರುವ ಅರಬ್ಬಿಯ ಜನರ ವಿಚಾರಣೆಯನ್ನು ಮಾಡುವುದಕ್ಕಾಗಿ ತ್ರಿಪೋಲಿಯಲ್ಲಿ ದಂಡಿನ ನ್ಯಾಯ ಸಭೆಯು ಸ್ಥಾಪಿಸಲ್ಪಟ್ಟು ಈವರೆಗೆ ೩೦ ಜನ ಅರಬ್ಬಿಯವರು ಬಹಿರಂಗವಾಗಿ ಗುಂಡಿನಿಂದ ಸುಡಲ್ಪಟ್ಟರು. ೩೦೦೦ ಅರಬ್ಬಿಯವರು ಇಟಲಿಯವರ ಮುಂಗಡೆಯ ಸೇನಾಭಾಗವನ್ನು ಸುತ್ತಿಕೊಂಡಿದ್ದುದನ್ನು, ಮತ್ತೆ ಕೆಲ ಅರಬ್ಬಿಯವರು ಹಿಂಭಾಗದಲ್ಲಿ ಆಯುಧಶ್ರೇಣಿಗಳಾಗಿದ್ದುದನ್ನು ಆಕಾಶವಿಮಾನದಿಂದ ಕಂಡುಹಿಡಿದು, ಅವರುಗಳು ಚದರಿಹೋಗುವುದಕ್ಕಾಗಿ ಯುದ್ಧನಾವೆಗಳಿಂದ ಗುಂಡುಗಳು ಹೊಡೆಯಲ್ಪಟ್ಟವು. ತಾ॥ ೨೩ ರಲ್ಲಾದ ಯುದ್ಧವು ಬಹು ಭಯಂಕರವಾಗಿದ್ದಿತು. ತುರ್ಕಿಯವರು ಕಾದಿನ ಕಡೆಗೆ ಹಿಮ್ಮೆಟ್ಟಿದವರಂತೆ ನಟಿಸಿ ಅನಂತರ ಇಟಾಲಿಯನರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಮತ್ತು ಇಟಲಿಯವರ ಸೇನೆಯ ೨ ಪಂಗಡದವರನ್ನು ನಾಶಮಾಡಿ ಅವರ ಅಧಿಕಾರಿಗಳಲ್ಲನೇಕರನ್ನು ಸೆರೆಹಿಡಿದು ಅವರಲ್ಲಿ ಕೆಲರನ್ನು ವಧಿಸಿದರು, ಮತ್ತೆ ಕೆಲರನ್ನು ಅಂಗಹೀನರನ್ನಾಗಿ ಮಾಡಿದರು ಎಂದು ತ್ರಿಪೋಲಿಯಿಂದ ಬಂದ ಪ್ರಯಾಣಿಕರು ತಿಳಿಸಿರುತ್ತಾರೆ. ತ್ರಿಪೋಲಿಯೊಳಗೆ ನೆಲಮಾಳಿಗೆಯಲ್ಲೂ, ಭಾವಿಯಲ್ಲೂ ಬಚ್ಚಿಡಲ್ಪಟ್ಟಿರುವ ಬಂದೂಕುಗಳನ್ನು ಇಟಾಲಿಯನರು ತೆಗೆದುಕೊಳ್ಳ ಆರಂಭಿಸಿ ಈವರೆಗೆ ೧೦೦೦೦೦ ತೋಟಾಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ತಾ॥ ೨೫– ತುರ್ಕಿಯ ಮತ್ತು ಅರಬ್ಬಿಯ ಸೈನಿಕರ ಪಂಗಡವೊಂದು ತಾ॥ ೨೩ ರಲ್ಲಿ ಇಟಾಲಿಯನರ ಗುಂಡಿನ ಆಘಾತದಿಂದ ವಿಶೇಷ ನಷ್ಟಪಟ್ಟು ಹಿಂದಿರುಗಿತು. ತ್ರಿಪೋಲಿಯ ಪಟ್ಟಣದೊಳಗೆ ಪ್ರವೇಶಿಸುವ ವಿಧಾನದ ಪ್ಲಾನೆಲ್ಲವೂ ಸಿದ್ಧಗೊಳಿಸಲ್ಪಟ್ಟಿದೆ. ಕೋಟೆಗಳ ಪರಂಪರೆಯು ತ್ರಿಪೋಲಿಯಿಂದ ಘಾರ್ಯಾನವರೆಗೆ ಕಲ್ಪಿಸಲ್ಪಡತಕ್ಕದಾಗಿದೆ.

ಮೈಸೂರ್ ಸ್ಟಾರ್.

೧೯೧೧ ನೆಯ ಅಕ್ಟೋಬರ್ ತಾ॥ ೩೦ ನೆಯ ಸೋಮವಾರ

ಧಾರವಾಡದ ಕರ್ನಾಟಕ ವೃತ್ತಪತ್ರಿಕೆಯ ಅಸೂಯಾಂಧತೆಯು.

(ಭಾಗ ೧.)

ಕಳೆದ ಸೆಪ್ಟಂಬರ್ ತಿಂಗಳಲ್ಲಿ ಬಾಗಲಕೋಟೆಯಲ್ಲಾದ ಶ್ರೀಮನ್ಮಹಾನಿರಂಜನ ಜಗದ್ಗುರು ಮುರುಘರಾಜೇಂದ್ರಸ್ವಾಮಿಗಳ ಅಡ್ಡಪಾಲಕಿಯುತ್ಸವದ ಸಂಬಂಧವಾಗಿ ಬಂದಿದ್ದ ಪತ್ರವ್ಯವಹಾರವು ಈ ಸ್ಟಾರ್ ಪತ್ರಿಕೆಯ ಹಿಂದಣ ಸಂಚಿಕೆಯೊಂದರಲ್ಲಿ ಪ್ರಕಟಿಸಲ್ಪಟ್ಟಿರುವುದಷ್ಟೆ. "ಈ ಅಡ್ಡಪಲ್ಲಕ್ಕಿಯುತ್ಸವ ಕಾಲದಲ್ಲಿ ಬಾಗಲಕೋಟೆಯ ಬ್ರಾಹ್ಮಣರಿಗೂ–ಲಿಂಗಾಯತರಿಗೂ ಬಡಿದಾಟವಾಗಿ, ಲಿಂಗಾಯತರು ಕೆಲ ಬ್ರಾಹ್ಮಣರನ್ನು ಚೆನ್ನಾಗಿ ಬಡಿದರಲ್ಲದೆ, ಹನುಮಂತದೇವರ ವಿಗ್ರಹವನ್ನು ಕಿತ್ತು ಒಗೆದು ವಿಠೋಬದೇವರ ಗುಡಿಯಲ್ಲಿ ಸುಲಿಗೆಯ ದರೋಡೆಯನ್ನು ಮಾಡಿದರು. ಇಷ್ಟು ಅನಾಹುತವಾಗಿದ್ದರೂ ಉತ್ಸವಕಾಲದಲ್ಲಿ ಏನೊಂದು ಗದ್ದಲವೂ ನಡೆಯಲಿಲ್ಲವೆಂದು ಲಿಂಗಾಯತರು ಹೇಳುತ್ತಿರುವರಲ್ಲದೆ, ಸ್ಟಾರ್ ಪತ್ರವು ಬಾಗಲಕೋಟೆಯ ಸಂಗತಿಯನು ಸಂಕ್ಷೇಪದಲ್ಲಿ ಸಂಶಯಾಸ್ಪದವಾಗಿ ಬರೆದು ಲಿಂಗಾಯತರಿಗಾದ ದಿಗ್ವಿಜಯದ ಜಯಭೇರಿ ಹೊಡೆಯುವುದರ ಬದಲು "ಶಾಂತಂಪಾಪಂ" ಎಂದು ಮೂಗುಬಾಯಿ ಮುಚ್ಚಿಕೊಂಡಿದ್ದುದನ್ನು ನೋಡಿ ಯಾರಿಗೆ ತಾನೇ ಸಖೇದಾಶ್ಚರ್ಯವಾಗಲಿಕ್ಕಿಲ್ಲ?" ಎಂದು ಮೊದಲಾಗಿ ಧಾರವಾಡದ ಕರ್ನಾಟಕ ವೃತ್ತಪತ್ರಿಕೆಯು ತನ್ನ ೩–೪ ಸಂಚಿಕೆಗಳಲ್ಲಿ ಮಾರುಮಾರುದ್ದ ಅಗ್ರಲೇಖನಗಳನ್ನು ಬರೆದು, ಈ ದಂಗೆಗೆ ವೀರಶೈವರೇ ಮೂಲಕಾರಣರೆಂದು ಸ್ಥಾಪಿಸಿ, ಅವರ ನಿರ್ದುಷ್ಟವಾದ ವರ್ತನಕ್ಕೆ ಒಂದು ಕಳಂಕವನ್ನು ಹಚ್ಚಲು ಬಹು ಸಾಹಸವನ್ನು ಮಾಡುತ್ತಿರುವುದು. ವೀರಶೈವರ ಉತ್ಕರ್ಷಾಸಹನೆಯಿಂದ ಬರೆಯಲ್ಪಡುವ ಇಂತಹ ಕ್ಷುಲ್ಲಕ ಲೇಖನಗಳಿಂದ ಬಾಗಲಕೋಟೆಯಲ್ಲಿ ನಡೆದ ಗೊಂದಲದ ನಿಜಸ್ಥಿತಿಯನ್ನರಿಯದ ಜನರ ಮನಸ್ಸಿನಲ್ಲಿ, ನಿರ್ದೋಷಿಗಳಾದ ಅಲ್ಲಿಯ ವೀರಶೈವರ ವಿಚಾರವಾಗಿ ಅಸಮಾಧಾನವು ಹುಟ್ಟಬಾರದೆಂಬ ಉದ್ದೇಶದಿಂದ, ಬಾಗಲಕೋಟೆಯ ಯಥಾರ್ಥವಾದಿ ದೊಡ್ಡಮನುಷ್ಯರೊಬ್ಬರು ಶ್ರೀಗಳವರ ಉತ್ಸವ ಸಂಬಂಧವಾಗಿ ನಡೆದಿರುವ ವಿದ್ಯಮಾನದಲ್ಲಿ ಯಾವಭಾಗವನ್ನೂ ಬಿಡದೆ ಅಥವಾ ಇಲ್ಲದಿದ್ದುದಕ್ಕೆ ಬಣ್ಣವನ್ನು ಕಟ್ಟಿ ಉತ್ಪ್ರೇಕ್ಷೆಮಾಡಿ ಹೇಳದೆ ಯಥಾರ್ಥವಾಗಿ ಬರೆದಿರುವ ಲೇಖನವು ಈ ಪತ್ರಿಕೆಯ ಬೇರೊಂದು ಕಡೆ ಮುದ್ರಿಸಲ್ಪಟ್ಟಿರುವುದು. ಈ ಲೇಖನವನ್ನು ಆದ್ಯಂತವಾಗಿ ಓದಿದುದೇಯಾದರೆ, ಅಣುಮಾತ್ರ ವಿವೇಕವುಳ್ಳವರಿಗೂ, ಸ್ಟಾರ್ ಪತ್ರಿಕೆಯು ನಿಜಾಂಶವನ್ನು ಬಚ್ಚಿಟ್ಟು ಸುಳ್ಳನ್ನು ಉತ್ಪ್ರೇಕ್ಷಿಸಿ ಹೇಳಿರುವುದೋ, ಅಥವಾ ಕರ್ನಾಟಕ ವೃತ್ತ ಮತ್ತು ಕೆಲ ಮರಾಟಿ ಪತ್ರಿಕೆಗಳು ವೀರಶೈವರ ಜಗದ್ಗುರುಗಳು ಅಡ್ಡಪಾಲಕಿಯಲ್ಲಿ ಕುಳಿತು ಉತ್ಸವಗೊಳ್ಳುವುದಕ್ಕೆ ಹೇಗಾದರೂ ಪ್ರಯತ್ನಪಟ್ಟು ವಿಘ್ನವನ್ನಾಚರಿಸಬೇಕೆಂಬ ಸಂಕಲ್ಪದಿಂದ, ಅಗಣನೀಯವಾದ ವಿಷಯವನ್ನು ಬ್ರಹ್ಮಾಂಡವನ್ನಾಗಿ ಮಾಡಿ ಬಾಗಲಕೋಟೆಯಲ್ಲಿ ವೀರಶೈವರ ಗೊಂದಲದಿಂದ ಬ್ರಾಹ್ಮಣರಿಗೆ ಅಪಘಾತವಾಗಿ ರಕ್ತಪ್ರವಾಹವಾಯಿತೆಂದೂ ಮತ್ತು ಅಲ್ಲಿಯ ನೆಮ್ಮದಿಗೆ ಭಂಗವುಂಟಾಯಿತೆಂದೂ ಮೊದಲಾಗಿ ನಿಜಸ್ಥಿತಿಯು ತಲೆಯಮೇಲೆ ಬಡಿಯುವಂತೆ ಸುಳ್ಳಿಗೆ ಮತ್ತಿಷ್ಟು ಸುಳ್ಳನ್ನು ಸೇರಿಸಿ ತಮ್ಮ ಲೇಖನಿಗೆ ತಡೆಯಿಲ್ಲವೆಂದು ಹೆಮ್ಮೆಯಿಂದ ವಾಚಾಮಗೋಚರವಾಗಿ ೪, ೮, ೧೦ ಪುಟಗಳಗಟ್ಟಲೆಯಾಗಿ ಬರೆದು ಕೋಲಾಹಲವನ್ನು ಮಾಡಿರುವುದೋ ಎಂಬುದು ತಾನಾಗಿ ವ್ಯಕ್ತವಾಗುತ್ತದೆ.

ಈ ವೃತ್ತಪತ್ರಿಕೆಯು ಹೇಳುವಂತೆ ಬಾಗಲಕೋಟೆಯಲ್ಲಿ ವೀರಶೈವರೇ ಗೊಂದಲವನ್ನು ಮಾಡಿ ಅತ್ಯಾಚಾರವನ್ನು ನಡೆಯಿಸಿದರೆಂದು ಇಟ್ಟುಕೊಳ್ಳುವ. ಭರತಖಂಡದಲ್ಲಿರುವ ಎಲ್ಲ ಜನಾಂಗದವರಲ್ಲೂ ಒಳ್ಳೆಯ ವಿದ್ಯಾವಂತರು, ಮೇಧಾವಿಗಳು, ನಾಗರೀಕರು ಮತ್ತು ಇತರರಿಗೆ ಮಾರ್ಗದರ್ಶಿಗಳು ಎಂದೆನ್ನಿಸಿಕೊಂಡಿರುವ ಜನಾಂಗಕ್ಕೆ ಸೇರಿದ ಬಾಗಲಕೋಟೆಯ ಬ್ರಾಹ್ಮಣರು, ವೀರಶೈವರು ತಮ್ಮ ಗುರುವಿನ ಉತ್ಸವದ ಸಮಾರಂಭದಲ್ಲಿ ಇವರ ಮತಸ್ಥರಿಗೆ ಅಸಮಾಧಾನಕರವಾಗುವಂತಹ ಕಾರ್ಯವನ್ನು ಅವಿವೇಕದಿಂದ ಮಾಡುವುದಾಗಿದ್ದಲ್ಲಿ, ಸರಿಯಾದ ಮಾರ್ಗದಲ್ಲಿ ಹೋಗುವಂತೆ ಅವರಿಗೆ ಬುದ್ಧಿಯನ್ನು ಹೇಳಿ ಅನರ್ಥಕ್ಕೆ ಅವಕಾಶವಿಲ್ಲದಂತೆ ಮಾಡಲು, ಅಥವಾ ಅವರು ತಮ್ಮ ಬುದ್ಧಿವಾದವನ್ನು ಕೇಳದೆ ಅತ್ಯಾಚಾರವನ್ನು ನಡಿಸಲೇಬೇಕೆಂಬ ಹಟವನ್ನು ಹಿಡಿದಿದ್ದಲ್ಲಿ, ತಾವು ಆ ಕಾಲದಲ್ಲಿ ಉತ್ಸವವನ್ನು ನಿಲ್ಲಿಸಲು ಪ್ರಯತ್ನಪಡದೆ ತಟಸ್ಥರಾಗಿದ್ದು, ಅನಂತರ ತಕ್ಕ ನ್ಯಾಯಸ್ಥಾನದಲ್ಲಿ ಅವರಿಗೆ ಯೋಗ್ಯಶಾಸನವಾಗುವಂತೆ ಮಾಡಲು ಪ್ರಯತ್ನಿಸಿದ್ದಲ್ಲಿ ಬಾಗಲಕೋಟೆಯ ವೀರಶೈವರನ್ನು ಅವರ ದುರ್ವರ್ತನಕ್ಕಾಗಿ ವಿವೇಕಿಗಳಿಂದ ಸ್ವಪರಮತೀಯರು ನಿಂದಿಸುತ್ತಿದ್ದರಲ್ಲದೆ, ಅಲ್ಲಿಯ ಬ್ರಾಹ್ಮಣರ ಸಹನಗುಣಕ್ಕಾಗಿ ಅವರನ್ನು ವಂದಿಸುತ್ತಿದ್ದರು. ಆದರೆ ಬಾಗಲಕೋಟೆಯ ಬ್ರಾಹ್ಮಣರು ಈ ಯೋಗ್ಯವಾದ ಮಾರ್ಗವನ್ನು ಬಿಟ್ಟು ವೀರಶೈವರ ಗುರುಗಳು ಬೆಳಗಾಂ, ಕೊಲ್ಲಾಪುರ, ಅಥಣಿ, ಚಿತ್ತೂರು ಮೊದಲಾದ ಸ್ಥಳಗಳಲ್ಲಿ ಅಡ್ಡಪಾಲಕಿಯಲ್ಲಿ ನಿರ್ವಿಘ್ನವಾಗಿ ಉತ್ಸವಗೊಂಡರೆಂದು ಕ್ಷುಬ್ಧರಾಗಿ, ಹೇಗಾದರೂ ಪ್ರಯತ್ನಪಟ್ಟು ಬಾಗಲಕೋಟೆಯಲ್ಲಿ ಅಡ್ಡಪಾಲಕಿಯುತ್ಸವವನ್ನಾಗಗೊಡಿಸಬಾರದೆಂದು ಮನಸ್ಸಿನಲ್ಲಿ ಸಂಕಲ್ಪವನ್ನು ಮಾಡಿ, ಶ್ರೀಗಳವರ ಸ್ವಾರಿಯು ಬಾಗಲಕೋಟೆಗೆ ಚಿತ್ತೈಸುತ್ತದೆಂಬ ವರ್ತಮಾನವನ್ನು ಕೇಳುತ್ತಲೆ "ಬಾಗಲಕೋಟೆಯಲ್ಲಿ ಲಿಂಗಾಯತರ ಗುರುವು ಅಡ್ಡಪಾಲಕಿಯಲ್ಲಿ ಕುಳಿತು ಮೆರೆಯುವುದಾದರೆ, ದೊಡ್ಡ ಗೊಂದಲವೆದ್ದು ರಕ್ತಪಾತವಾಗುತ್ತದಾದ ಪ್ರಯುಕ್ತ, ಆ ವಿವಾದ ಉತ್ಸವವನ್ನು ನಡೆಯಿಸಲು ಅಪ್ಪಣೆಯನ್ನು ಕೊಡಬಾರದು" ಎಂದು ಬಿಜಾಪುರ ಡಿಸ್ಟ್ರಿಕ್ಟ್ ಕಲೆಕ್ಟರಿಗೆ ಅರ್ಜಿಯನ್ನು ಬರೆದುದಲ್ಲದೆ ಬ್ರಾಹ್ಮಣ ಮತಸ್ಥನಾದ ಪೋಲೀಸು ಇನ್ಸ್‌ಪೆಕ್ಟರ ಮೂಲಕವೂ ಬರೆಯಿಸಿದರು. ಅದರ ಮೇಲೆ ಕಲೆಕ್ಟರು ಉತ್ಸವವನ್ನು ನಡೆಯಗೊಡಬಾರದೆಂದು ತಾ। ಪೋಲೀಸು ಅಧಿಕಾರಿಗಳಾದ ಅಮಲ್ದಾರರಿಗೆ ಅಪ್ಪಣೆ ಮಾಡಿದರು. ವೀರಶೈವರು ಈ ಸಂವರ್ತಮಾನವನ್ನು ಕೇಳಿ ಕಲೆಕ್ಟರರಲ್ಲಿಗೆ ಪುನಃ ಹೋಗಿ ನಿಜಸ್ಥಿತಿಯನ್ನು ತಿಳುಹಿ, ಉತ್ಸವವನ್ನು ಜರುಗಿಸಲು ಅಪ್ಪಣೆಯನ್ನು ಪಡೆದು ಬಂದು ತಾ॥ ೧೦ ರಲ್ಲಿ ನಡೆಯಬೇಕಾದ ಉತ್ಸವಕ್ಕೆ ತಕ್ಕ ಸನ್ನಾಹಗಳನ್ನು ಮಾಡತೊಡಗಿದರು. ಬ್ರಾಹ್ಮಣರು ಇದನ್ನು ತಿಳಿದು ತಮ್ಮ ಪ್ರಯತ್ನವು ನಿಷ್ಫಲವಾಯಿತೆಂದು ಕಳವಳಪಟ್ಟು, ಆ ಕೂಡಲೆ ಕೂಡಲಿ ಶ್ರೀ ಶಂಕರಾಚಾರ್ಯರ ಹೆಸರಿನಿಂದ ಒಬ್ಬ ವಕೀಲನ ದ್ವಾರಾ ಬಾಗಲಕೋಟೆಯ ಸಬ್ ಜಡ್ಜರಲ್ಲಿ "ವಿವಾದವು ಈ ಕೋರ್ಟಿನಲ್ಲಿ ಇತ್ಯರ್ಥವಾಗುವವರೆಗೂ ಉತ್ಸವವನ್ನು ಮಾಡದಂತೆ ಅಪ್ಪಣೆಯಾಗಬೇಕು" ಎಂಬ ಬಗೆಗೆ ಅರ್ಜಿಯನು ಕೊಡಿಸಿದರು. ಈ ವಿಷಯವನ್ನು ವೀರಶೈವರು ತಿಳಿದು ಕೋರ್ಟಿಗೆ ಬಂದು ಆ ಪ್ರಕಾರದ ಅಪ್ಪಣೆಮಾಡಕೂಡದೆಂದು ತರ್ಕಮಾಡಿದರು. ಈ ಮಧ್ಯೆ ತಾ॥ ೧೦ರಲ್ಲಿ ಉತ್ಸವವು ನಡೆಯಬಾರದೆಂದು ಕಲೆಕ್ಟರರಿಂದ ತಾ॥ಅಮಲ್ದಾರರಿಗೆ ತಂತಿಯವಾರ್ತೆಯು ಬಂದಿದೆಯೆಂದು ಬ್ರಾಹ್ಮಣರು ತಿಳಿದು ಕೋರ್ಟಿನಲ್ಲಿ ಉತ್ಸವವನ್ನು ತಡೆಮಾಡಲು ಅಪ್ಪಣೆಪಡೆಯುವ ಕಾರ್ಯವನ್ನು ಅಷ್ಟಕ್ಕೇ ಬಿಟ್ಟು ಸಂತೋಷದಿಂದಿರುತ್ತಿರುವಾಗ, ಮಾರನೆಯ ಬೆಳಿಗ್ಗೆ ಶ್ರೀಗಳವರ ಅಡ್ಡಪಾಲಕಿಯುತ್ಸವವು ಅತಿ ವಿಜೃಂಭಣೆಯಿಂದ ಯಾವುದೊಂದು ಆತಂಕವೂ ಇಲ್ಲದೆ ನಡೆಯುವುದನ್ನು ಬ್ರಾಹ್ಮಣರು ಕಂಡು, ತಮ್ಮ ಮುಖಕ್ಕೆ ಮಸಿಯನ್ನು ಬಳಿದುಕೊಂಡಂತಾಯಿತೆಂದು ವ್ಯಸನಪಟ್ಟು, ಕೋರ್ಟಿಗೆ ಓಡಿಹೋಗಿ ತಡೆಯ ಅಪ್ಪಣೆಯನ್ನು ಪಡೆದು, ಅದನ್ನು ಉತ್ಸವಗೊಳ್ಳುತ್ತಿದ್ದ ಶ್ರೀಗಳವರಿಗೆ ತೋರಿಸುವುದಕ್ಕಾಗಿ ಕೋರ್ಟಿನ ಅಮೀನನ ಸಂಗಡ ಟಾಂಗಾ ಬಂಡಿಯಲ್ಲಿ ಕುಳಿತು ಜನಸಂದಣಿಯಲ್ಲಿ ಅವಸರವಸರದಿಂದ ನುಗ್ಗುತ್ತಿರುವಾಗ್ಗೆ, ಯಾರಿಂದಲೋ ಹೇಗೋ ಅವರಿಗೆ ಕೊಂಚ ಪೆಟ್ಟುಬಿದ್ದಿತಂತೆ. ಅಷ್ಟುಮಾತ್ರಕ್ಕೇ ಲಿಂಗಾಯತರು ಬ್ರಾಹ್ಮಣರನ್ನು ಮೂಳೆ ಮುರಿಯ ಹೊಡೆದು ರಕ್ತಪಾತವನ್ನು ಮಾಡಿದರೆಂಬ ಸುದ್ದಿಯನ್ನು ಹುಟ್ಟಿಸಿ, ಉತ್ಸವವನ್ನು ನಡೆಯದ ಹಾಗೆ ತಾವು ಮಾಡಿದ ಸರ್ವ ಪ್ರಯತ್ನವೂ ನಿಷ್ಫಲವಾಯಿತೆಂದು ವಿಷಣ್ಣರಾಗಿ ವೃತ್ತಪತ್ರಿಕೆಗಳ ದ್ವಾರವಾದರೂ ಬೊಬ್ಬೆಯನ್ನು ಹುಟ್ಟಿಸಿ, ಇತರಕಡೆಯ ಬ್ರಾಹ್ಮಣರೆಲ್ಲರೂ ಒಟ್ಟುಗೂಡಿ ಇತಃಪರ ವೀರಶೈವರ ಜಗದ್ಗುರುಗಳವರು ಅಡ್ಡಪಾಲಕಿಯಲ್ಲಿ ಮೆರೆಯುವುದನ್ನು ತಪ್ಪಿಸುವ ಪ್ರಯತ್ನಶೀಲರಾಗಲೆಂಬ ಸಂಕಲ್ಪದಿಂದ ಉಬ್ಬಿತಬ್ಬಿಬ್ಬಾಗಿ ಲೇಖನಗಳನ್ನು ಬರೆಯುತ್ತಿರುವರು.

ಪುಂಗನೂರು ರಾಜರು ಕೈಲಾಸವಾಸಿಗಳಾದುದು.

ಮದ್ರಾಸಾಧಿಪತ್ಯದಲ್ಲಿ ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿಗೆ ಸೇರಿದ ಪುಂಗನೂರು ಸಂಸ್ಥಾನದ ದೊರೆಗಳಾದ ರಾಜಾ ವೀರಬಸವ ಚಿಕ್ಕರಾಯಲ್ ಯಶೋವಂತ ಬಹದ್ದೂರ್ ರವರು ಸ್ವಲ್ಪ ಕಾಲದಿಂದ ಅಸ್ವಸ್ಥರಾಗಿದ್ದುದರ ಮೇಲೆ ಈ ತಿಂಗಳ ಆದಿಭಾಗದಲ್ಲಿ ತಮ್ಮ ಮಕ್ಕಳ ಸಮೇತ ಮದ್ರಾಸಿಗೆ ಹೋಗಿ ವೈದ್ಯರಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದರು.

ಅಲ್ಲಿ ಅವರು ಗುಣವನ್ನು ಹೊಂದುವುದಕ್ಕೆ ಬದಲಾಗಿ ಕ್ರಮೇಣ ಬಲಹೀನರಾಗುತ ಬಂದು, ಕಳೆದ ತಾ॥ ೧೪ನೆಯ ಶನಿವಾರ ಅಕಸ್ಮಾತ್ತಾಗಿ ಪ್ರಾಣವಾಯುವು ನಿಂತು ಹೋಗಿ ಪಂಚತ್ವವನ್ನೈದಿದರೆಂದು ತಿಳುಹಲು ಬಹು ವಿಷಾದವಾಗುತ್ತದೆ. ಮೃತರ ದೇಹವು ಮದ್ರಾಸಿನಿಂದ ಮದನಪಲ್ಲಿಯ ವರೆಗೂ ರೈಲು ಬಂಡಿಯಲ್ಲಿ ತರಲ್ಪಟ್ಟು ಅಲ್ಲಿಂದ ಸಂಸ್ಥಾನದ ಬಂಡಿಯಲ್ಲಿ ಪುಂಗನೂರಿಗೆ ಸಾಗಿಸಲ್ಪಟ್ಟಿತು. ಮದನಪಲ್ಲಿಯಲ್ಲಿ, ಮಾರ್ಗದುದ್ದಕ್ಕೂ ಜನರು ತಂಡತಂಡವಾಗಿ ಬಂದು ರಾಜರ ಶವವನ್ನು ನೋಡಿ ವ್ಯಸನಪಟ್ಟು ಹೋಗುತ್ತಿದ್ದರು. ಕಳೆದ ತಾ॥ ೧೫ರ ಸಾಯಂಕಾಲ ಬಂಡಿಯು ಪುಂಗನೂರು ರಾಜಧಾನಿಯ ಹೊರಗೆ ಎರಡು ಮೈಲಿ ದೂರದಲ್ಲಿ ಬಂದು ನಿಲ್ಲುತಲೆ, ರಾಣಿವಾಸದವರೂ, ಬಂಧುವರ್ಗದವರೂ ಬಂದು ರಾಜರ ಮೃತ ದೇಹವನ್ನು ನೋಡಿ ತಮ್ಮ ಅಪಾರವಾದ ದುಃಖವನ್ನು ಪ್ರದರ್ಶಿಸಿ. ಹಿಂತಿರುಗಿದ ಮೇಲೆ ಶವವು ಶೃಂಗರಿಸಲ್ಪಟ್ಟು ಸಕಲ ರಾಜ ಮರ್ಯಾದೆಯಿಂದಲೂ, ಅರಮನೆಯ ವಾದ್ಯ ಮೇಳದಿಂದಲೂ ಊರೊಳಗೆ ಉತ್ಸವಮಾಡಲ್ಪಟ್ಟು ರಾಜ ವಂಶೀಕರ ಸಮಾಧಿಯ ಸ್ಥಳಕ್ಕೆ ಸಾಗಿಸಲ್ಪಟ್ಟಿತು. ಪುಂಗನೂರಿನ ಜನರು ಅಲ್ಲಿ ವ್ಯಾಪ್ತವಾಗಿರುವ ಪ್ಲೇಗುಪದ್ರವದ ಭಯವನ್ನು ಸ್ವಲ್ಪ ಹೊತ್ತು ಮರೆತಿದ್ದು ಉತ್ಸವ ಬಂದ ಮಾರ್ಗದ ಇಕ್ಕೆಲದಲ್ಲೂ, ಮನೆಯ ಮಾಡಗಳ ಮೇಲೂ ಕಿಕ್ಕಿರಿದು ನಿಂತು ತಮ್ಮ ರಾಜರ ಅಕಾಲ ಮರಣದಿಂದ ತಮಗುಂಟಾದ ಅತಿಶಯ ವ್ಯಸನವನ್ನೂ, ಅವರ ವಿಯೋಗದಿಂದ ಅವರ ಪತ್ನೀಪುತ್ರಾದಿಗಳಿಗೆ ಪ್ರಾಪ್ತವಾದ ದುಃಖಕ್ಕಾಗಿ ಅನುತಾಪವನ್ನೂ ಪ್ರದರ್ಶಿಸಿದರು. ಶವಸಂಸ್ಕಾರವು ವೀರಶೈವ ವಿಧ್ಯುಕ್ತವಾಗಿ ನೆರವೇರಿ ಎಲ್ಲರೂ ತಂತಮ್ಮ ಮನೆಗಳಿಗೆ ಬಂದು ಸೇರುವ ಹೊತ್ತಿಗೆ ರಾತ್ರಿ ೧೦ ಗಂಟೆಯಾಗಿದ್ದಿತು. ರಾಜರಿಗೆ ಮರಣಕಾಲದಲ್ಲಿ ೪೫ ವರ್ಷ ವಯಸ್ಸು ಮಾತ್ರವಾಗಿದ್ದಿತು. ಇವರಿಗೆ ಇಬ್ಬರು ಗಂಡು ಮಕ್ಕಳೂ, ಕೂಡ ಹುಟ್ಟಿದ ಒಬ್ಬ ಸಹೋದರ, ಮಲತಾಯಿ ಹೊಟ್ಟೆಯಲ್ಲಿ ಹುಟ್ಟಿದ ಒಬ್ಬ ಸಹೋದರ ಹೀಗೆ ಇಬ್ಬರು ಸಹೋದರರೂ, ಸಹೋದರಿಯರೂ ಇರುವರು. ಇವರು ಬಲು ಧಾರಾಳಿಗಳಾಗಿಯೂ, ಸರಳ ಹೃದಯರಾಗಿಯೂ, ಸರಸಿಗಳಾಗಿಯೂ, ಭೂತದಯಾ ಪಶ್ಚಾತ್ತಾಪಯುಕ್ತರಾಗಿಯೂ, ಗುರುಜಂಗಮ ಭಕ್ತಿಯುತರಾಗಿಯೂ, ಆಶ್ರಿತ ಜನಪೋಷಕರಾಗಿಯೂ, ಮತಾಭಿಮಾನಶಾಲಿಗಳಾಗಿಯೂ ಇದ್ದು ತಮ್ಮ ಪ್ರಜೆಗಳಲ್ಲಿ ಎಲ್ಲ ಜಾತಿಯ ಜನರಿಗೂ ಪ್ರೀತಿ ಪಾತ್ರರಾಗಿದ್ದರು. ವೀರಶೈವ ರಾಜರುಗಳಿಂದಾಳಲ್ಪಡುತ್ತಿದ್ದ ಕೊಡಗು, ನಗರ ಮತ್ತು ಕೆಳದಿ ಸಂಸ್ಥಾನಗಳು ನಾಶವಾದ ಮೇಲೆ ಪುಂಗನೂರು, ಬೆರ್ಕಿ ಸೂಳಗೆರೆ ಇವುಗಳು ಈಗಲೂ ವೀರಶೈವ ರಾಜರುಗಳ ಅನುಭವದಲ್ಲೇ ಇರುವವು. ಇವುಗಳೆಲ್ಲಾ ಪುಂಗನೂರೇ ದೊಡ್ಡದಾಗಿ ಒಳ್ಳೆಯ ಹೆಸರನ್ನು ಪಡೆಯುವುದು. ಮುಂದೆ ಬೆಳಗಾವಿಯಲ್ಲಿ ಕೂಡುವ ೩ ನೆಯ ವೀರಶೈವ ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ಅಲಂಕರಿಸುವಂತೆ ಗತಿಸಿದ ಪುಂಗನೂರು ಮಹಾ ರಾಜರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಒಬ್ಬ ಪತ್ರವ್ಯವಹಾರಕರು ಕಳೆದ ವಾರದ ಸ್ಟಾರ್ ಪತ್ರದಲ್ಲಿ ಸೂಚಿಸಿದ್ದರು. ಈ ಮಹನೀಯರು ಅವರಿಗೆ ಜೀವಿಸಿದ್ದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರೆ, ಸಭೆಗೆ ವಿಶೇಷ ಭೂಷಣವಾಗುತ್ತಿದ್ದುದಲ್ಲದೆ ಈ ಸಮಾಜಕ್ಕೆ ವಿಶೇಷ ಪ್ರಯೋಜನವೂ ಅವರಿಂದ ಆಗುತ್ತಿದ್ದಿತು. ಇಂತಹ ಭಾಗ್ಯವನ್ನು ಕಳೆದು ಕೊಂಡುದು ವೀರಶೈವರ ದುರದೃಷ್ಟವೆಂದೇ ಹೇಳಬೇಕಾಗಿದೆ. ಗತಿಸಿದ ರಾಜರ ಜ್ಯೇಷ್ಠ ಪುತ್ರರಾದ ಶ್ರೀಮಂತ ಸಾಂಬಸದಾಶಿವ ರಾಯಲ್‌ರವರು ಇನ್ನು ಕೊಂಚ ಕಾಲದಲ್ಲಿ ಪ್ರಾಪ್ತವಯಸ್ಕರಾಗಿ ತಮ್ಮ ರಾಜ್ಯಾಧಿಕಾರವನ್ನು ವಹಿಸಿಕೊಂಡು ತಮ್ಮ ತಂದೆಯವರಿಗಿಂತಲೂ ವಿಶೇಷವಾದ ಜನಾನುರಾಗವನ್ನು ಸಂಪಾದಿಸಿ ಕೀರ್ತಿವಂತರಾಗುವರೆಂದು ನಿರೀಕ್ಷಿಸುತ್ತೇವಲ್ಲದೆ, ಗತಿಸಿದ ರಾಜರ ಆತ್ಮಕ್ಕೆ ಶಾಂತಿಯನ್ನೂ, ಅವರ ವಿಯೋಗದುಃಖಿತರಾಗಿರುವ ಪತ್ನೀಪುತ್ರಾದಿಗಳಿಗೆ ಮನಸ್ಸಮಾಧಾನವನ್ನೂ ಉಂಟುಮಾಡಲೆಂದು ಆ ಜಗದ್ರಕ್ಷಕನನ್ನು ಪ್ರಾರ್ಥಿಸುತ್ತೇವೆ.

ಕೆಲ ಪದಾರ್ಥಗಳ ಮೇಲೆ ಸುಂಕವನ್ನು ಮನ್ನಿಸುವುದು.

ಮ್ಯುನಿಸಿಪಾಲಿಟಿಗಳಿರತಕ್ಕ ಸ್ಥಳಗಳಲ್ಲಿ ಮಾರಾಟಕ್ಕಾಗಲಿ, ಮನೆಯ ಬಳಕೆಗಾಗಲಿ ತರಲ್ಪಡುವ ತೆಂಗಿನಕಾಯಿ, ಎಳನೀರು, ವೀಳ್ಯದೆಲೆ, ಸಕ್ಕರೆ, ಬೆಲ್ಲ, ತುಪ್ಪ, ಬೆಣ್ಣೆ, ಎಣ್ಣೆ, ಹೊಗೆಸೊಪ್ಪು, ಮತ್ತು ಬಟ್ಟೆ ಈ ಪದಾರ್ಥಗಳ ಮೇಲೆ ಸುಂಕವು ವಿಧಿಸಲ್ಪಟ್ಟಿರುವುದು. ಈ ಪದಾರ್ಥಗಳು ಮಾರಾಟಕ್ಕೆ ತರಲ್ಪಡುವಾಗ್ಗೆ ಸುಂಕ ವಿಧಿಸಲ್ಪಡುವುದೇನೋ ಸರಿ, ಆದರೆ ಮನೆಯ ಬಳಕೆಗೆ ತರಲ್ಪಡುವಾಗಲೂ ಸುಂಕವು ವಿಧಿಸಲ್ಪಡುವುದರಿಂದ ಬಡಬಗ್ಗರಿಗೆ ಬಹು ತೊಂದರೆಯಾಗಿರುತ್ತದೆಂಬ ಬಾಗವು ೧೯೧೦ನೆಯ ವರ್ಷದಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಮನೆಯಉಪಯೋಗಕ್ಕೋಸ್ಕರ ಅಲ್ಪಸ್ವಲ್ಪವಾಗಿ ತರಲ್ಪಡುವವೇಳೆ ಕೆಳಕಂಡ ಪದಾರ್ಥಗಳ ಮೇಲೆ ಸುಂಕವನ್ನು ಹಾಕದೆ ಬಿಟ್ಟುಕೊಡಬೇಕೆಂದು ಪ್ರಾರ್ಥಿಸಿಕೊಳ್ಳಲ್ಪಟ್ಟಿದ್ದಿತು. ಇದರ ಮೇಲೆ ಸರ್ಕಾರದವರು ಎಲ್ಲ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರುಗಳಭಿಪ್ರಾಯವನ್ನು ತೆಗೆದುಕೊಂಡು ದೀರ್ಘವಾಗಿ ಆಲೋಚಿಸಿ, ಎಳನೀರು ೩, ತೆಂಗಿನಕಾಯಿ ೩, ವೀಳ್ಯದೆಲೆ ೧೦೦, ಸಕ್ಕರೆ ೨॥ ಸೇರು, ಬೆಲ್ಲ ೪ ಸೇರು, ತುಪ್ಪ ೨॥ ಸೇರು, ಬೆಣ್ಣೆ ೪ ಸೇರು, ಸೀಮೆಯೆಣ್ಣೆಯ ಹೊರತು ಇತರ ಎಲ್ಲ ಎಣ್ಣೆಯು ೨॥– ಸೇರು, ಹೊಗೆಸು ಬತ್ತಿಯು ೧ ಸೇರು, ಬಟ್ಟೆ ೨ ಇಂತಿಷ್ಟು ಪದಾರ್ಥಗಳು ಮನೆಯ ಬಳಕೆಗಾಗಿ ಸುಂಕವಿಲ್ಲದೆ ತರಲ್ಪಡಬಹುದೆಂದು ಅಪ್ಪಣೆಮಾಡಿರುತ್ತಾರೆ. ಈ ಉದಾರವಾದ ಸರ್ಕಾರಿಯಪ್ಪಣೆಯಿಂದ ಜನರಿಗೆ ತಕ್ಕಮಟ್ಟಿಗೆ ಅನುಕೂಲವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು.

ಒಳದೇಶದ ವೃತ್ತಾಂತಗಳು.

ಮ॥ ಗಳಾದ ರಾಮಕೃಷ್ಣ ಗಣಪತಿ ಹೆಗ್ಗಡೆ ಮತ್ತು ಕಂಪನಿಯವರ ಹಾಗೂ ಹೊಳೆಕೋಟೆಯ ಭಾರತಿ ರಂಪಂಗಿರಾಮರನವರ ಪ್ರಕಟನಪತ್ರಿಕೆಗಳು ಇದರಲ್ಲಿ ಗರ್ಭಿತವಾಗಿರುತ್ತವೆ. ವಾಚಕರು ದಯಮಾಡಿ ಗಮನಿಸತಕ್ಕದ್ದು.

ಹಿಂದೆ ದಿವಾನರಾಗಿದ್ದ ಮ॥ ವಿ. ಪಿ. ಮಾಧವರಾಯರು ದಿಲ್ಲಿಯ ದರ್ಬಾರಿಗೆ ಶ್ರೀಮನ್ ಮಹಾರಾಜರವರ ಪರಿವಾರದೊಡನೆ ಹೋಗದೆ ಇಂಡ್ಯಾ ಸರ್ಕಾರದ ಅತಿಥಿಗಳಾಗಿ ಪ್ರತ್ಯೇಕವಾಗಿಯೇ ಹೋಗುವವರಾಗಿರುವರೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ತಮ್ಮ ಕುಟುಂಬದೊಡನೆ ಇಷ್ಟರಲ್ಲೇ ಪ್ರಯಾಣಮಾಡಿ ಕಲಕತ್ತಾ, ಕಾಶಿ ಪ್ರಯಾಗ ಮೊದಲಾದ ಸ್ಥಳಗಳಲ್ಲಿ ಸಂಚರಿಸಿಕೊಂಡು ಬರುವ ಡಿಸೆಂಬರ್ ತಾ॥ ೧ ರಲ್ಲಿ ದಿಲ್ಲಿಯ ಪಟ್ಟಣವನ್ನು ತಲಪುವದಾಗಿ ಕೇಳುತ್ತೇವೆ.

ಯಳಂದೂರಿನಲ್ಲಿ ಒಬ್ಬ ಮಹಮ್ಮದೀಯನು ತನ್ನ ಹೆಂಡತಿಯ ನಡತೆಯ ವಿಚಾರದಲ್ಲಿ ಅನುಮಾನಪಟ್ಟು ಆಕೆಯನ್ನು ಕೊಂದುಹಾಕಿ, ಅಮಲ್ದಾರರು ಈ ವರ್ತಮಾನವನ್ನು ತಿಳಿದು ಬರುವುದರೊಳಗಾಗಿ ಗಾಜಿನ ಪುಡಿಯನ್ನು ತಿಂದು ಆತ್ಮಹತ್ಯೆಯನ್ನು ಮಾಡಿಕೊಂಡನಂತೆ.

ಮೈಸೂರು ಸರ್ಕಾರದಲ್ಲಿ ಬಹುಕಾಲ ಸೂಪರಿಂಟೆಂಡಿಂಗ್ ಇಂಜನಿಯರಾಗಿದ್ದು ಈಗ ಕೆಲ ವರ್ಷಗಳ ಹಿಂದೆ ನಿವೃತ್ತರಾಗಿ ಬೆಂಗಳೂರ ದಂಡಿನಲ್ಲಿ ವಾಸವಾಗಿದ್ದ ಸ್ಟ್ಯಾಂಡಿಷ್ ಲೀ ಯವರು ಕಳೆದ ತಾ॥ ೨೪ ರಲ್ಲಿ ಕಾಲವಾದರು. ಇವರಿಗೆ ಅವಸಾನಕಾಲದಲ್ಲಿ ೭೩ ವರ್ಷ ವಯಸ್ಸಾಗಿದ್ದಿತು.

ಕಳೆದ ತಾ॥ ೨೭ರ ರಾತ್ರಿ ಯಡತೊರೆಯಲ್ಲಿ ಮಹಮ್ಮತ್ತು ಕಾಬ್ ಉದ್ಯೋಗಸ್ಥನಾದ ಮಲ್ಲಗಿರಿಯಪ್ಪ ಎಂಬುವನನ್ನು ಯಾರೋ ದುಷ್ಟರು ಅವನ ಮನೆಯಲ್ಲಿ ಕೊಂದುಹಾಕಿ, ಅವನ ಹೆಂಡತಿಯನ್ನು ಮನೆಯಿಂದ ಹೊರಗೆಳೆದುಕೊಂಡು ಬಂದು ಆಕೆಯ ಕಿವಿಮೂಗನ್ನು ಗಾಯಪಡಿಸಿ ಮೈಮೇಲಿದ್ದ ಆಭರಣವನ್ನು ಕಿತ್ತುಕೊಂಡರು. ಇವರ ಪರಿಚಾರಕಳು ಈ ಘೋರಕೃತ್ಯವನ್ನು ನೋಡಿ ಗಟ್ಟಿಯಾಗಿ ಕೂಗಿಕೊಂಡಳು. ನೆರೆಯವರು ಈ ಕೂಗಿನ ಶಬ್ದವನ್ನು ಕೇಳಿ ಬರುವುದರೊಳಗೆ, ಆ ಕಳ್ಳರು ಪಲಾಯನವಾಗಿದ್ದರು.

ಅಸಿಸ್ಟೆಂಟ್ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಹಾಸನದ ಮ॥ ಆರ್. ಟಿ. ಮಾಧವರಾಯರು ಇನಾಂಕ್ಯಲೇಷರ್ ಕಾರ್ಯದಲ್ಲಿ ತಾವು ಮಾಡಿದ ಸಹಾಯಕ್ಕಾಗಿ ಶ್ರೀಮನ್ಮಹಾರಾಜರವರಿಂದ ಬಿಲ್ಲತ್ತನ್ನು ಪಡೆಯಲು ರಾಜಧಾನಿಗೆ ಬಂದಿದ್ದಾಗ್ಗೆ, ಅವರ ಮಿತ್ರರಾದ ಪ್ರೊ॥ ಸೂಪರಿಂಟೆಂಡೆಂಟ್ ಮ॥ ರಾಣೋಜಿರಾಯರು, ಸಟ್ವಾಜಿರಾಯರು ಮೊದಲಾದವರು ಔತಣೋಪಚಾರದಿಂದ ಅವರನ್ನು ಸತ್ಕರಿಸಿ ಧಾರವಾಡದಲ್ಲಿ ಕಳೆದವರ್ಷ ಆರಂಭಿಸಲ್ಪಟ್ಟ ತಮ್ಮ ಭಾವಸಾರ ಕ್ಷತ್ರಿಯ ಜನರ ಸಭೆಯನ್ನು ಈ ವರ್ಷ ರಾಜಧಾನಿಯಲ್ಲಿ ನೆರೆಯಿಸುವ ವಿಚಾರದಲ್ಲಿ ಅವರಕೂಡ ಆಲೋಚಿಸಿ ನಿರ್ಧರಿಸಿದರು.

ಬೆಂಗಳೂರ ಖಜಾನೆಯ ಸೇವಕನಾದ ನಗರ್ತರ ನಂಜುಂಡಪ್ಪನೆಂಬುವನು ಮಾರ್ಕೆಟ್ಟಿನ ಬಳಿ ಒಂದು ರೊಟ್ಟಿಯಂಗಡಿಗೆ ಹೋಗಿ ಒಂದು ರೂಪಾಯಿಯನ್ನು ಕೊಟ್ಟು ನಾಲ್ಕು ರೊಟ್ಟಿಯನ್ನು ಕೊಡೆಂದು ಕೇಳಿದನು. ಆ ಅಂಗಡಿಯ ಮಹಮ್ಮದೀಯನು ಆ ರೂಪಾಯಿಯನ್ನು ಅನುಮಾನಿಸಿ ಮಗ್ಗುಲ ಅಂಗಡಿಯವನಿಗೆ ಪರೀಕ್ಷಿಸುವುದಕ್ಕಾಗಿ ಕೊಡಲು, ಅವನು ಕೃತ್ರಿಮನಾಣ್ಯವೆಂದು ಹೇಳಿದನು. ಆ ರೂಪಾಯಿಯನ್ನು ಕೊಟ್ಟಿದ್ದ ನಂಜುಂಡಪ್ಪನು ಇದನ್ನು ಕೇಳಿ ಕಾಲಿಗೆ ಬುದ್ಧಿಯನ್ನು ಹೇಳಿದನು. ಆದರೆ ಆ ಅಂಗಡಿಯವನು ಅವನ ಹಿಂದೆ ಓಡಿಹೋಗಿ ಪೋಲೀಸಿನವನ ಸಹಾಯದಿಂದ ಹಿಡಿದು ವಿಚಾರಣೆಗೆ ಗುರಿಮಾಡಿದನು.

ವರ್ತಮಾನ ಸಂಗ್ರಹವು.

ಸಿಸಲಿಯಲ್ಲಿ ಗಂಧಕದ ಗಣಿಯೊಳಗೆ ಅಗ್ನಿಯ ಅನಾಹುತವು ನಡೆದು ೪೫ ಜನರು ಸತ್ತರು.

ತುರ್ಕಿಯ ರಾಜಧಾನಿಯಾದ ಕಾನಸ್ಟಾಂಟಿನೋಪಲ್ಲಿನ ಒಂದು ಭಾಗಕ್ಕೆ ಅಗ್ನಿಯು ಪ್ರವೇಶವಾಗಿ ನೂರಾರು ಮನೆಗಳು ಸುಟ್ಟುಹೋದವು. ಇದರಿಂದ ೩೦೦೦೦೦೦ ರೂಪಾಯಿಗಳ ವರೆಗೆ ನಷ್ಟವಾಗಿರುವುದಾಗಿ ತಿಳಿಯಬರುತ್ತದೆ.

ಬರೋಡಾ ಮಹಾರಾಜದಂಪತಿಗಳು ಕಳೆದ ತಾ॥ ೧೯ರಲ್ಲಿ ಲಂಡನ್ ನಗರವನ್ನು ಬಿಟ್ಟು ಭರತ ಖಂಡಕ್ಕೆ ಪ್ರಯಾಣಮಾಡಿದರು. ಇಂಡ್ಯಾ ಆಫೀಸಿನ ಪ್ರತಿನಿಧಿಗಳು ವಿಕ್ಟೋರಿಯಾ ನಿಲ್ದಾಣಕ್ಕೆ ಬಂದಿದ್ದು ಮಹಾರಾಜ ದಂಪತಿಗಳನ್ನು ಮರ್ಯಾದೆಯಿಂದ ಬೀಳ್ಕೊಟ್ಟರು.

ಜರ್ಮನಿಗೆ ಸೇರಿದ ಹಾನೋವರ್ ಎಂಬಲ್ಲಿ ಟ್ಯಾಕ್ಸ್ ಎಂಬುವನು ವಿಮಾನದಲ್ಲಿ ಕುಳಿತು ಸಂಚರಿಸುತ್ತಿರುವಾಗ್ಗೆ ಕೆಳಗೆ ಬಿದ್ದು ಸತ್ತು ಹೋದನು. ೧೯೦೮ನೆಯ ಸಂವತ್ಸರದಿಂದ ಈ ವರೆಗೆ ಪ್ರಾಯಶಃ ೧೦೦ ವೈಮಾನಿಕರು ಆಕಾಶದಿಂದ ಕೆಳಗೆ ಬಿದ್ದು ಸತ್ತಿರುತ್ತಾರೆ.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣಮಾಡಿ ಬರುವ ಹಡಗು ಸಣ್ಣಬಣ್ಣಗಳಿಂದ ಚಿತ್ರವಿಚಿತ್ರವಾಗಿ ಅಲಂಕರಿಸಲ್ಪಡುತ್ತಿದೆ. ಇವರ ಉಪಯೋಗಾರ್ಥವಾಗಿ ೨ ಕರೆಯುವ ಹಸುಗಳು ಸೀಮೆಯಿಂದಲೇ ಕೂಡ ತರಲ್ಪಡುವುವು. ಹಿಂದೆ ಮದ್ರಾಸ್ ಗೌರ್ನರಾಗಿದ್ದ ಲಾರ್ಡ್ ಆಂಫಿಲ್‌ರವರ ಪತ್ನಿಯವರು ಚಕ್ರವರ್ತಿನಿಯವರ ಕೂಡ ಬರುವುದಾಗಿ ಮೊದಲು ಗೊತ್ತಾಗಿದ್ದಿತು. ಆದರೆ ಆಂಫಿಲ್‌ರವರನ್ನು ಕಣಜವು ಕಡಿದು ಅಸ್ವಸ್ಥರನ್ನಾಗಿ ಮಾಡಿರುವುದರಿಂದ, ಅವರ ಪತ್ನಿಯವರು ಪ್ರಯಾಣಮಾಡುವುದಿಲ್ಲವು.

ಮದನಮೋಹನ ಮಾಳವಿಯರವರು ಹಿಂದೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕಾಗಿ ಕೂಡಿಸುತ್ತಿರುವ ಫಂಡಿಗೆ ಬೊಂಬಾಯಿನಲ್ಲಿ ಪ್ರಸಿದ್ಧ ವರ್ತಕರಾದ ಧರ್ಮ್ಸೀ ಮೂರಾರ್ಜಿ ಗೋಕುಲದಾಸ್ ಮತ್ತು ನರೋತ್ತಮ ಮೂರಾರ್ಜಿ ಗೋಕುಲದಾಸರವರು ೧ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಈ ಫಂಡಿಗೆ ಈ ವರೆಗೆ ಒಟ್ಟು ೩೪ ಲಕ್ಷ ರೂಪಾಯಿಗಳು ಕೂಡಿರುತ್ತವೆ. ಅನೀಬೆಸಂಟಮ್ಮನವರು ತಾವು ಪ್ರತ್ಯೇಕವಾಗಿ ಒಂದು ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವ ಯೋಚನೆಯನ್ನು ಬಿಟ್ಟು ಮಾಳವಿಯರವರು ಕೈಗೊಂಡಿರುವ ಕಾರ್ಯದಲ್ಲೇ ತಾವೂ ನಿರತರಾಗಿ ತಮ್ಮ ಕೈಯಲ್ಲಾದ ಪ್ರಯತ್ನವನ್ನು ಮಾಡಲು ಒಪ್ಪಿರುತ್ತಾರೆ.

ಅಬೋರರಮೇಲೆ ದಂಡಯಾತ್ರೆ ಹೊರಟಿರುವ ಬ್ರಿಟಿಷ್ ಸೇನೆಯನ್ನು ಸೇರಲು ೪೦ ಜನ ಘೂರ್ಕಾ ಸೈನಿಕರು ಚಂದುಪುರ ನಿಲ್ದಾಣದಲ್ಲಿ ಬಂಡಿಯನ್ನು ಹತ್ತುವುದಕ್ಕಾಗಿ ತಮ್ಮ ಸಾಮಗ್ರಿಗಳನ್ನು ಬಂಡಿಯೊಳಗಿಡುವಾಗ್ಗೆ, ಒಂದು ಮೂಟೆಯು ಒಬ್ಬ ಐರೋಪ್ಯ ಇನ್ಸ್‌ಪೆಕ್ಟರಿಗೆ ಸೋಕಿತು. ಅವನು ತನ್ನ ಕೈಲಿದ್ದ ಬೆತ್ತದಿಂದ ತರಗೆ ಮೂಟೆಯನ್ನು ಸೋಕಿಸಿದ ಸೈನಿಕನನ್ನು ಹೊಡೆಯಲು, ಆ ಸೈನಿಕರೆಲ್ಲರೂ ಗುಂಪುಕೂಡಿ ಆ ಇನ್ಸ್‌ಪೆಕ್ಟರನ್ನು ಚೆನ್ನಾಗಿ ಒದ್ದು ಗುದ್ದಿ ಪ್ರಹರಿಸಿದರು. ಅಷ್ಟರಲ್ಲಿ ಸುಬೇದಾರನು ಬಂದು ತಡೆಯುವನ್ನಾದಲು ಎಲ್ಲರೂ ಅವನನ್ನು ಬಿಟ್ಟು ಓಡಿಬಂದರು. ಆಗ ಇನ್ಸ್‌ಪೆಕ್ಟರು ಒಳಗಡೆ ಸಾಗಿಸಲ್ಪಟ್ಟನು.

ಮಣಿಪುರದ ರಾಜರು ದಿಲ್ಲಿಯ ದರ್ಬಾರಿಗೆ ಹೋಗುವುದಕ್ಕಾಗಿ ೧೦೦ ಜನ ಪರಿವಾರದೊಡನೆ ಕಳೆದ ತಾ॥ ೧೯ ರಲ್ಲಿ ರಾಜಧಾನಿಯನ್ನು ಬಿಟ್ಟು ಪ್ರಯಾಣಮಾಡಿದರು. ಇವರು ಕಾಶಿ, ಮಥುರಾ ಮೊದಲಾದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿಕೊಂಡು ಬರುವ ನವಂಬರ್ ತಿಂಗಳ ಅಂತ್ಯದಲ್ಲಿ ದಿಲ್ಲಿಯ ಪಟ್ಟಣವನ್ನು ತಲಪುವವರಾಗಿರುವರು. ಮಣಿಪುರದಲ್ಲಿ ನರ್ತನಮಾಡುವ ಕ್ರಮವನ್ನು ದಿಲ್ಲಿಯಲ್ಲಿ ದೊಡ್ಡದೊಡ್ಡ ಅತಿಥಿಗಳಿಗೆ ತೋರಿಸಿ, ಅವರನ್ನು ವಿನೋದಪಡಿಸುವುದಕ್ಕಾಗಿ ನರ್ತನದಲ್ಲಿ ನಿಪುಣರಾಗಿರುವ ೬ ವರ್ಷದಿಂದ ೧೫ ವರ್ಷ ವಯಸ್ಸಿನ ವರೆಗಿರುವ ೧೫ ಹುಡುಗಿಯರನ್ನು ಕೂಡ ಕರೆದುಕೊಂಡು ಹೊರಟಿರುವರು. ಈ ರಾಜರು ಮಣಿಪುರವನ್ನು ಬಿಟ್ಟು ಪ್ರಯಾಣಮಾಡಿದ ದಿವಸ ಆ ಊರಿನ ಸಾವಿರಾರು ಜನ ಗಂಡುಸರೂ, ಹೆಂಗುಸರೂ ಒಳ್ಳೆಯ ಆಭರಣಗಳನ್ನು ಧರಿಸಿಕೊಂಡು ರಾಜರ ಬಂಡಿಯ ಕೂಡ ಊರ ಹೊರಗೆ ೩–೪ ಮೈಲಿ ದೂರದವರೆಗೆ ಹೋಗಿದ್ದು ರಾಜರೂ, ಅವರ ಪರಿವಾರವೂ ಸುಖವಾಗಿ ಹೋಗಿ ಬರಲೆಂದು ದೇವರ ಪ್ರಾರ್ಥನೆಯನ್ನು ಮಾಡಿ ಬಂದರು. ಇದಲ್ಲವೆ ರಾಜಭಕ್ತಿ ವಿಶ್ವಾಸವು!

ಪತ್ರವ್ಯವಹಾರ.

ಕಾವೇರೀನದಿಯ ಪ್ರವಾಹದಿಂದ ವಿಪತ್ತಿಗೀಡಾದವರ ಸಹಾಯಾರ್ಥವಾಗಿ ಈ ಗ್ರಾಮದ ಪಾಠಶಾಲಾ ವಿದ್ಯಾರ್ಥಿಗಳು ಅಂದರೆ ಜೋತಿಷ್ಯ ಪಾಠಕನಾದ ಬಸವಲಿಂಗಸ್ವಾಮಿ ಮೊದಲಾದ ವಿದ್ಯಾರ್ಥಿಗಳಿಗೆ [illegible]

ಗುವ ಪ್ರಸಿದ್ಧವಾದಂಶಗಳನ್ನು ನೀತಿಗಳಿಂದ ಬೋಧಿಸಲು ಸಣ್ಣ ಬಾಲಕರು ಬೋಧನೆಗೆ ಮನಕೊಟ್ಟು ತನ್ನ ತಮ್ಮ ಬಾಲಕರಿಂದ ಆಕ್ಷೇಪಣೆಗವಕಾಶವಿಲ್ಲದಂತೆ ಅವರವರ ಗೃಹಕರ್ತರಿಂದ ಯಥೋಚಿತವಾದ ದ್ರವ್ಯವನ್ನು ಹೊಂದಿ ಅದರಲ್ಲಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಕೊಟ್ಟ ದ್ರವ್ಯದ ಒಂದು ರೂಪಾಯಿ ಸಂಗ್ರಹವಾದುದರಿಂದ ಈ ಮೊಬಲಗನ್ನು ರಿಲೀಫ್ ಫಂಡಿನ ಸೆಕ್ರೆಟರಿಯವರಿಗೆ ತಾವು ಕಳುಹಿಸಲು ತಮ್ಮಲ್ಲಿ ಕಳುಹಿಸುತ್ತ—ಬಾಲಕರಿಗೆ ಈ ರೀತಿಯ ಪ್ರೋತ್ಸಾಹವನ್ನು ಶ್ರೀಮತ್ಪರಮೇಶ್ವರನು ಉಂಟುಮಾಡಿದುದಕ್ಕೆ ನಾವು ವಂದಿಸುವೆವಲ್ಲದೆ ಉತ್ತರೋತ್ತರವು ಈ ಬಾಲಕರಿಗೆ ಪರೋಪಕಾರ ಬುದ್ಧಿಯನ್ನು ಅಭಿವೃದ್ಧಿಗೊಳಿಸಲೆಂದು ಸಾಂಬಶ್ರೀಕಂಠನನ್ನು ಬೇಡುವೆವು.

ಬಿ. ಗುರುಸಿದ್ಧಶಾಸ್ತ್ರಿ,
ಗ್ರಾಮ ಪಾಠಶಾಲಾಧ್ಯಾಪಕ
ಹಳೇಕೋಟೆ ಹೊಳೇನರಸೀಪುರ ತಾ॥

ಸತಿಯರಿಗೆ ಪಾತಿವ್ರತ್ಯವೇ ಭೂಷಣ.

ಅಮ್ಮ ಮಹನೀಯರೆ! ನಮ್ಮ ಭರತಖಂಡದಲ್ಲಿ ಜನಿಸಿದ ಪುರಾಣಪ್ರಸಿದ್ಧರಾದ ಮಹನೀಯರ ಚರಿತ್ರೆಯು ಸಕಲರಿಗೂ ಸನ್ಮಾರ್ಗ ಪ್ರದರ್ಶಕವಾಗಿರುವುದು ಸರಿಯಷ್ಟೆ. ಆ ಕಾಲದಲ್ಲಿ [illegible] ಪುರುಷಶ್ರೇಷ್ಠರು [illegible] ದೆ ಇವರ ಸಹಧರ್ಮಿಣಿಗಳಾದ ಮಹಾಪತಿವ್ರತೆಯರು ಸಕಲ ಸ್ವಾರ್ಥತ್ಯಾಗಿಗಳಾಗಿ ಮಹತ್ಕಷ್ಟವನ್ನು ಪಡೆದಿದ್ದರು ಸತಿಯರಿಗೆ ಪಾತಿವ್ರತ್ಯವೇ ಭೂಷಣವೆಂಬುದನ್ನು ತಮ್ಮ ಜೀವಮಾನದಿಂದ ಹಿತಾಚರಣೆಯನ್ನು ಸಕಲ ನಾರೀಮಣಿಯರಿಗೆ ಮೇಲ್ಪಂಕ್ತಿ ಹಾಕಿಕೊಟ್ಟು ತೋರ್ಪಡಿಸಿದರು. ಈ ಮಹಾ ಪತಿವ್ರತೆಯರು ರಾಜ್ಯಸುಖಗಳನ್ನೆಲ್ಲಾ ತೊರೆದು ತಮ್ಮ ಪ್ರಿಯ ಪತಿಯಾದ ಶ್ರೀರಾಮನೊಡನೆ ಅರಣ್ಯಕ್ಕೆ ಹೋಗಿ ನಾನಾ ಕಷ್ಟಗಳನ್ನು ಅನುಭವಿಸಲಿಲ್ಲವೆ? ಪತಿವ್ರತಾಶಿರೋಮಣಿಯಾದ, ಎಂತಹ ಕಷ್ಟಕಾಲದಲ್ಲಿಯೂ ಪತಿಯ ಶ್ರೇಯಸ್ಸನ್ನು ಕೋರುವವಳೇ ವಿನಾ ತನ್ನ ಸುಖವನ್ನು ಬಯಸುವುದಿಲ್ಲ ಸಾವಿತ್ರಿದೇವಿಯು ಯಮನಿಗೆ ಕೂಡ ಅಂಜದೆ ತನ್ನ ಪಾತಿವ್ರತ್ಯದಿಂದ ತನ್ನ ಪತಿಯ ಪ್ರಾಣವನ್ನು ದಾನವಾಗಿ ಪಡೆಯಲಿಲ್ಲವೆ? ಇದೇ ರೀತಿ ದಮಯಂತಿ, ದ್ರೌಪದಿ ಮುಂತಾದ ಸ್ತ್ರೀರತ್ನಗಳ ಜೀವನಚರಿತ್ರೆಗಳು ನೀತಿಬೋಧಕಗಳಾಗಿವೆ. ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಯಶೋವಂತರಾದ ಸ್ತ್ರೀಯರು ಬಹಳವಾಗಿದ್ದರು. ಈ ಕಾಲದಲ್ಲಿಯೂ ಸಹ ಅಲ್ಲಲ್ಲಿ ಜನರ ದೃಷ್ಟಿಗೆ ಗೋಚರವಾಗದೆಯೇ ಪತಿವ್ರತೆಯರಾದ ಸ್ತ್ರೀಯರು ತಮ್ಮ ಗುಣವನ್ನು ತಂತಮ್ಮ ಸ್ವಗೃಹಗಳಲ್ಲಿ ಪ್ರಕಾಶಪಡಿಸುತ್ತಿದ್ದಾರೆ. ಪುರುಷರಿಗೆ ವಿದ್ಯೆಯು ಹೇಗೆ ಆವಶ್ಯಕವೋ ಹಾಗೆಯೇ ಸ್ತ್ರೀಯರಿಗೂ ಸಹ ವಿದ್ಯೆಯು ಅತ್ಯಾವಶ್ಯಕವು. ಎಲ್ಲಿ ವಿದ್ಯೆಯೂ, ಗುಣವೂ ಕೂಡಿರುವುವೊ ಅಲ್ಲಿ ಸಕಲ ಸಂಪತ್ತುಗಳೂ ತಾವಾಗಿಯೇ ಒದಗುವವು. ವಿದ್ಯೆಯಿದ್ದು ಗುಣವಿಲ್ಲದೆ ಇರುವುದಕ್ಕಿಂತ ಗುಣವಿದ್ದು ವಿದ್ಯೆಯಿಲ್ಲದೆ ಇರುವದೇ ಸರ್ವೋತ್ತಮವೆಂಬುವುದು ಅನುಭವಸಿದ್ಧವಾಗಿದೆ. ದೈವಭಕ್ತಿಯಿಲ್ಲದ ವಿದ್ಯೆಯು ವಿದ್ಯೆಯೆನ್ನಿಸಿಕೊಳ್ಳುವುದಿಲ್ಲ. ಓದುಬರಹ ಬಾರದಿದ್ದರೂ ಗುಣಾಢ್ಯರಾದ ಸ್ತ್ರೀಯರು ನಮ್ಮಲ್ಲಿ ಬಹಳವಾಗಿದ್ದಾರೆ. ಆದರೆ ಇವರು ಬೂದಿಮುಚ್ಚಿದ ಕೆಂಡದಂತೆ ಇರುತ್ತಾರೆ. ಯಾವ ಜಾತಿಯವರೇ ಆದಾಗ್ಯೂ ದೊಡ್ಡವಂಶೀಕರ ಮನೆಯಲ್ಲಿ ಜನಿಸಿದ ಮಕ್ಕಳಿಗೆ ಸಾಧಾರಣವಾಗಿ ದೊಡ್ಡಗುಣವೇ ಇರುತ್ತದೆ. ಮೊನ್ನೆ ತಾನೆ ಮೈಸೂರಿನಲ್ಲಿ ಗತಿಸಿಹೋದ ಸಾಹುಕಾರ್ ನೀಲಗಿರಿ ದೊಡ್ಡಬಾಪಣ್ಣನವರ ಎರಡನೇ ಪುತ್ರಿಯವರಾದ ಶ್ರೀ॥ ಆಲಮ್ಮನವರ ಗುಣಾತಿಶಯವು ಸ್ತೋತ್ರಾರ್ಹವಾಗಿರುತ್ತೆ. ಈ ನಾರೀಮಣಿಯು ಜನಿಸಿದ ಮನೆತನಕ್ಕೆ ತುಂಬಾ ಗೌರವವನ್ನುಂಟುಮಾಡುವಂಥಾದ್ದಾಗಿದ್ದಿತು. ಇವರ ಮರಣಕಾಲಕ್ಕೆ ೨೯ ವರ್ಷ. ಇವರನ್ನು ಲೇಟ್ ಸಾಹುಕಾರ್ ಚಿಕ್ಕಮುದ್ದಪ್ಪನವರ ಮಕ್ಕಳಾದ ಮ॥ ರಾ॥ ಎಂ. ಸಿ. ಮಲ್ಲಪ್ಪನವರು ವಿವಾಹವಾಗಿದ್ದರು. ಈ ಸ್ತ್ರೀರತ್ನವು ತನ್ನ ಪತಿಯ ವಿಷಯದಲ್ಲಿ ತೋರ್ಪಡಿಸುತ್ತಿದ್ದ ಅಸಾಧಾರಣವಾದ ಭಕ್ತಿ ವಿಶ್ವಾಸವೂ, ಸಂಸಾರವನ್ನು ಜರಗಿಸುವದರಲ್ಲಿ ತೋರ್ಪಡಿಸುತ್ತಿದ್ದ ಜಾಣ್ಮೆಯೂ ಮತ್ತು ಗೃಹಿಣೀಧರ್ಮವೂ, ಮಕ್ಕಳಿಗಾಗಿ ಪಡುತ್ತಿದ್ದ ಶ್ರಮವೂ ಮನೆಗೆ ಬಂದ ಅತಿಥಿಗಳನ್ನು ಸ್ವಲ್ಪವೂ ಬೇಸರಪಡದೇ ಸಂತೋಷದಿಂದ ಆದರಿಸುತ್ತಿದ್ದ ಔದಾರ್ಯಗುಣವೂ ಇವರ ದೇಹಾಂತರವು ಕೂಡ ಇವರನ್ನು ಮರೆಯದಂತೆ ಮಾಡಿವೆ. ಈಕೆಗೆ ವಿದ್ಯೆ ಅಷ್ಟೇನು ಬಾರದೆ ಇದ್ದರೂ ಪತಿವ್ರತೆಗೆ ಬೇಕಾದ ಗುಣಗಳೆಲ್ಲ ಇದ್ದುದರಿಂದ, ಈ ಸದ್ಗುಣಗಳೆ ಈ ಸ್ತ್ರೀರತ್ನಕ್ಕೆ ಇಹಪರಸಾಧನೆಗೆ ಕಾರಣಗಳಾದುವು. ಇಂತಹ ಧರ್ಮಪತ್ನಿಯಿಂದ ವಿಯೋಗವನ್ನು ಪಡೆದಿರುವ ಇವರ ಪತಿಗೂ ಇಂತಹ ಮಾತೆಯಿಂದ ಅಗಲಿಸಲ್ಪಟ್ಟಿರುವ ಇವರ ೩ ಮಕ್ಕಳಿಗೂ ಇವರ ವಿಯೋಗದಿಂದ ವ್ಯಸನಪಡುತ್ತಿರುವ ಇವರ ಬಂಧುವರ್ಗಕ್ಕೂ ದೇವರು ಸುಖಸಮಾಧಾನಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ಗುಣಗ್ರಾಹಿ

ಕೈ॥ ಶ್ರೀ॥ ಸಿದ್ಧಮ್ಮಯ್ಯನವರು.

ಬೀರೂರು ಶ್ರೀಮಂತ ಪತ್ರಿ. ಡಂ. ವೀರಪ್ಪನವರ ಧರ್ಮಪತ್ನಿಯವರಾದ ಶ್ರೀ॥ ಸಿದ್ಧಮ್ಮಯ್ಯನವರು ಕಳೆದ ಆಶ್ವಯುಜ ಬಹುಳ ೪ ಗುರುವಾರ ರಾತ್ರಿ ೨ ಘಂಟೆ ಸಮಯದಲ್ಲಿ ಶಿವಲಿಂಗಸಾಯುಜ್ಯವಂ ಹೊಂದಿದ ಪ್ರಯುಕ್ತ ಆ ಪತಿವ್ರತಾಶಿರೋಮಣಿಯ ಸದ್ಗುಣಗಳು ಪುನಃ ಪುನಃ ಸ್ಮೃತಿಪಥವನ್ನು [illegible]ತ್ತಿರುವುದರಿಂದ ಶ್ರೀಮಂತರಿಗೆ ಸಂಭವಿಸಿರುವ ಅಸಾಧಾರಣವಾದ ದುಃಖವು ಇಲ್ಲಿನ ಸಮಸ್ತ ವೀರಶೈವರಿಗೂ, ಇವರ ಆಪ್ತರಿಗೂ ಮಹಶ್ಶೋಕಕರವಾಗಿರುತ್ತೆ. ಮತ್ತು ನಮ್ಮ ಸಮಾಜದಲ್ಲಿಯೇ ಇವರು ದೊಡ್ಡ ಶ್ರೀಮಂತರಾಗಿಯೂ ಪರೋಪಕಾರ ನಿರತರಾಗಿಯೂ "ಯಸ್ಮಿನ್ ಜೀವತಿ ಜೀವಂತಿ ಬಹವಸ್ಸತು ಜೀವತು." ಎಂಬಂತೆ ಬಹು ಜನರ ಜೀವನಕ್ಕೆ ಆಶ್ರಯಭೂತರಾಗಿಯೂ, ಮೈಸೂರಿನಲ್ಲಿ ವೀರಶೈವ ಸಂಸ್ಕೃತ ಕಾಲೇಜಿಗೆ ೩೦ ಸಹಸ್ರ ರೂಪಾಯಿಗಳನ್ನು ಕೊಡುವದಾಗಿ ವಾಗ್ದಾನವಮಾಡಿರುವದೇ ಮೊದಲಾದ ವಿದ್ಯಾಪ್ರೋತ್ಸಾಹಿಗಳಾಗಿಯೂ ಇರುವುದರಿಂದ ಅನೇಕ ವೀರಶೈವರಿಗೂ ವಿಷಾದವನ್ನುಂಟುಮಾಡುತ್ತಲಿರಬಹುದು.

ಇವರ ನೈಸರ್ಗಿಕವಾದ ಗುಣ ವಿವರ.

ಗತಿಸಿದ ಶ್ರೀ॥ ಸಿದ್ಧಮ್ಮಯ್ಯನವರು ಸತ್ಯವರ್ತನೆಗಳಿಂದ ಖ್ಯಾತಿಯುಳ್ಳವಾದ ವೀರ ಮಾಹೇಶ್ವರ ವಂಶದಲ್ಲಿ ಸಂಜನಿಸಿ ಸಕಲ ಗುಣಗಳಿಂದಲೂ ಇತೋಽತ್ಯತಿಶಯವಾದ ಘನತೆಯಂ ಪಡೆದಿರುವ ಶ್ರೀಮತ್ಪಂಚಾಚಾರ್ಯವಂಶೋದ್ಭವರಾದ ಸತ್ಯ, ಶಮ, ದಮ, ಭೂತದಯೆ, ಗುರುಲಿಂಗ ಜಂಗಮಾರಾಧನೆ, ಅನ್ನದಾನ, ವಿದ್ಯಾದಾನ ಮೊದಲಾದ ಪರೋಪಕಾರ ನಿರತರಾಗಿಯೂ, ಏಕಪತ್ನೀವ್ರತಶ್ರದ್ಧರಾಗಿಯೂ ಪ್ರಖ್ಯಾತಿಗೊಂಡಿರುವ ಶ್ರೀಮಂತ ಪತ್ರಿ ವೀರಪ್ಪಯ್ಯನವರಿಗೆ ಸಹಧರ್ಮಿಣಿಯರಾಗಿದ್ದುದರಿಂದ ಇವರ ಸುದಾಂಪತ್ಯವಂ ನೋಡಿದವರು ಕಲಿಯುಗದಲ್ಲಿ ಪಾತಿವ್ರತ್ಯ ಧರ್ಮವನ್ನು ಏಕಪತ್ನೀವ್ರತವನ್ನು ಪ್ರಕಾಶಗೊಳಿಸುವದಕ್ಕೋಸ್ಕರ ಶ್ರೀಪರಮೇಶ್ವರನ ಪ್ರೇರಣೆಯಿಂದವತರಿಸಿದ ಶಿವಶರಣರೆಂಬದಾಗಿಯೇ ಭಾವಿಸಿದ್ದರು. "ಪರದೈವಂ ಸತಿಗೆ—[illegible] ತತ್ಪರತ್ವಂ ಎಂಬುವದೆ" ಮೊದಲಾದ ಪತಿವ್ರತಾಧರ್ಮಂಗಳಂ ತಿಳಿದವರಾದ್ದರಿಂದ ಪತಿಯೇ ಸಾಕ್ಷಾತ್ಪರದೈವವೆಂದು ನಂಬಿಕೊಂಡು, ತ್ರಿಕರಣಗಳಿಂದಲೂ ಪತಿಗೆ ಹಿತಾಚರಣ ತತ್ಪರರಾಗಿ ಮಹದೈಶ್ವರ್ಯ ಸಂಪನ್ನರಾಗಿದ್ದಾಗ್ಯೂ 'ಭಾಗ್ಯೇಷ್ವನುತ್ಸೇಕಿನೀ' ಎಂಬಂತೆ ವಸ್ತ್ರಾಭರಣಾದ್ಯಲಂಕಾರಗಳಲ್ಲಿ ವಿಶೇಷಾಸಕ್ತಿಯಂ ಬಿಟ್ಟು, ಭಸ್ಮ ರುದ್ರಾಕ್ಷಿ, ಪಾದೋದಕ ಪ್ರಸಾದ ಸೇವನೆಗಳಲ್ಲಿಯೂ, ಶಿವಕಥಾಶ್ರವಣ ಜಂಗಮಸೇವಾ ಶಿವಪೂಜಾದಿಗಳಲ್ಲಿಯೂ ಕೇವಲ ಭಕ್ತಿಯುಕ್ತರಾಗಿ ಪುರಾತನರಂತೆ ಸದಾಚಾರ ಸುಶೀಲ ಸಂಪನ್ನರಾಗಿದ್ದು ಅಸಾಧಾರಣವಾದ ತಮ್ಮ ಸದ್ಗುಣಗಳಿಂದ ಕುಲಾಂಗನೆಯರಿಗೆ ಸನ್ಮಾರ್ಗ ಪ್ರದರ್ಶಕರಾಗಿದ್ದುದರಿಂದ ತಮ್ಮ ೪೦ನೆಯ ವರ್ಷ ವಯಸ್ಸಿನ ಮಧ್ಯಕಾಲದಲ್ಲಿಯೇ ಪರಲೋಕವಂ ಸಾರ್ದುದಕ್ಕಾಗಿ ಗುಣಗ್ರಾಹಿಗಳಾದ ಯಾರು ತಾನೆ ವಿಷಾದಪಡುವದಿಲ್ಲ? ಶ್ರೀಮಂತರು ಇವರಲ್ಲಿದ್ದ ತಮ್ಮ ಪ್ರೇಮಾತಿಶಯಕ್ಕೂ, ಸದ್ಗುಣಗಳಿಗೂ ಅನುರೂಪವಾಗಿರುವಂತೆ ಅಂತ್ಯಕಾಲದಲ್ಲಿ ನಡೆಸಿದ ದಾನಧರ್ಮಕ್ರಮಗಳು ೮-೧೦ ದಿವಸ ಮುಂಚಿತವಾಗಿಯೇ ರೋಗದ ಸ್ವಭಾವವಂ ತಿಳಿದು ಮನೆಯಲ್ಲಿ ಶ್ರೀ ಷಟ್‌ಸ್ಥಲ ಬ್ರಹ್ಮಿಗಳು, ಶ್ರೀ ಪಟ್ಟಣ ಸ್ವಾಮಿಗಳು, ಶಾಸ್ತ್ರಿಗಳು ಮೊದಲಾದ ಮಾಹೇಶ್ವರ ವರ್ಗದಿಂದ ಶ್ರೀ ರುದ್ರ ನಮಕಚಮಕ ಪುರುಷಸೂಕ್ತ, ಗಣ ಸಹಸ್ರನಾಮ ಪಾರಾಯಣ ಜಂಗಮ ಪಾದಪೂಜೆ ಅನ್ನದಾನಗಳನ್ನು ಪ್ರತಿನಿತ್ಯದಲ್ಲೂ ನಡಿಸುತ್ತ, ಗೋದಾನ, ಭೂದಾನ, ಹಿರಣ್ಯದಾನ, ಮಹಿಷೀದಾನ, ಅಶ್ವದಾನ ಮೊದಲಾದ ದಶದಾನಗಳನ್ನು ಮತ್ತು ನೂತನ ವಸ್ತ್ರಾದಿಗಳಿಂದಲಂಕರಿಸಿ ಮಾಹೇಶ್ವರ ದಂಪತಿಪೂಜೆಯನ್ನು ನಡೆಸಿ, ಕೆಲವರು ಸುವಾಸಿನಿಯರಿಗೆ ಫಲತಾಂಬೂಲಾದಿಗಳು ಸಹಿತ ಮಂಗಲ ದ್ರವ್ಯಗಳನ್ನು ಸೀರೆ ಕಣಗಳನ್ನು ಸಹಾ ವಿನಿಯೋಗಮಾಡಿದರು.

ಉತ್ಕ್ರಮಣ ಕಾಲದಲ್ಲಿ ತಮಗೆ ಪ್ರೇಮಾಸ್ಪದನಾದ ದೌಹಿತ್ರಪುತ್ರನೂ, ಸಹೋದರರು ಸಮೀಪದಲ್ಲಿದ್ದಾಗ್ಯೂ ಸಾಮಾನ್ಯ ಲೌಕಿಕರಂತೆ ಅವರುಗಳ ವಿಷಯಕವಾದ ಅಭಿಮಾನವನ್ನು ತೋರಿಸದೆ ತಮ್ಮ ಪತಿಗಳನ್ನು ಕರೆದು ಬಹುಕಾಲ ನಡೆಸುವಂತೆ ಈಶ್ವರಾರ್ಪಿತವಾಗಿ ಯಾವದಾದರೂ ಧರ್ಮಕಾರ್ಯವಂ ನಡಿಸಬೇಕೆಂತಲೂ ಗೃಹಸ್ಥಾಶ್ರಮಕ್ಕೆ ಉಚಿತವಾದ್ದರಿಂದ ವಂಶೋದ್ಧಾರಾರ್ಥವಾಗಿ ಮತ್ತೊಂದು ಸುಕಳತ್ರವಂ ಪರಿಗ್ರಹಿಸಬೇಕೆಂತಲೂ ಹೇಳಿ, ಅನಂತರ ಭಕ್ತಮಾಹೇಶ್ವರರೊಡನೆ ಪುರೋಹಿತರೂ ವೀರಶೈವಾಂತ್ಯೇಷ್ಟಿವಿಧಿಪ್ರಕಾರ ವಿಭೂತಿ ವೀಳ್ಯ ಮೊದಲಾದ ಸಂಸ್ಕಾರವಂ ಮಾಡಿಸಲು, ವೀರಮಾಹೇಶ್ವರರ ಶ್ರೀ ರುದ್ರಪುರುಷಸೂಕ್ತ ಘೋಷದೊಡನೆ ಶಿವಸ್ಮರಣ ಪೂರ್ವಕವಾಗಿ ಶಂಭುಲಿಂಗದೊಳೇಕತ್ವವಂ ಪಡೆದರು. ತರುವಾಯ ನಾನಾ ವಿಧವಾದ ಪುಷ್ಪಮಾಲಿಕೆಗಳಿಂದಲೂ, ಚೀನಾಂಬರಗಳಿಂದಲೂ, ಅಲಂಕೃತವಾದ ಪುಷ್ಪವಿಮಾನದೊಳು ಆ ಲಿಂಗಶರೀರವಂ [illegible] ಸಮಯದಲ್ಲಿ ವಾದ್ಯ ಧ್ವನಿಗಳು ಘೋರ್ಗರೆಯುತ್ತಿರಲು ಸುವರ್ಣ ಪುಷ್ಪ ರಜತಪುಷ್ಪಗಳೊಡನೆ ನಾಣ್ಯಗಳಂ ದಾರಿಯಲ್ಲಿ ಸೂರೆಮಾಡುತ್ತಿದ್ದರು. ಮಾರ್ಗದಲ್ಲಿ ತಂಡತಂಡವಾಗಿ ನೆರೆದಿರುವ ಸ್ತ್ರೀ ಪುರುಷ ಜನರ ಸಮ್ಮರ್ದವು ಅತಿಶಯವೆನಿಸಿತ್ತು. ಶ್ರೀಗವೀ ಮಠದ ಸಮೀಪದಲ್ಲಿ ಸಿದ್ಧಗೊಳಿಸಿದ್ದ ಸಮಾಧಿಯ ಬಳಿಗೆ ಹೋದ ನಂತರ ವಿಧ್ಯುಕ್ತಪ್ರಕಾರವಾಗಿ ಉತ್ತರ ಕ್ರಿಯೆಗಳು ನಡೆದು ಅಲ್ಲಿ ಸೇರಿದ್ದ ವಿಶಿಷ್ಟಮಾಹೇಶ್ವರರಿಗೂ, ಬಹು ಜನರಿಗಂ ತಾರತಮ್ಯಾನುಸಾರವಾಗಿ ೧-೨ ಹೊಸ ರುಬೆಗಳೂ, ದಕ್ಷಿಣೆಗಳೂ ಸಹಾ ವಿನಿಯೋಗಿಸಲ್ಪಟ್ಟವು. ಆ ಲಿಂಗಾಂಗ [illegible] ೧೦-೧೪ ದಿವಸಗಳ ವರೆಗೂ ಶ್ರೀಮಂತರಿಗೆ ದುಃಖಶಮನಾರ್ಥವಾಗಿ ಅನೇಕ ಸ್ಥಳಗಳಿಂದ ಪತ್ರಿಕಾಮೂಲಕವಾಗಿಯೂ, ತಂತಿಮೂಲಕವಾಗಿಯೂ ಅಪರಿಮಿತವಾಗಿ ಲೇಖನಗಳು ಪ್ರತಿನಿತ್ಯದಲ್ಲೂ ಬರುವುದರಲ್ಲಿಯೇ ಇದ್ದವು.

ಈ ಬಹುಳ ೧೩ ಸ್ಥಿರವಾದ ಅವರ ಗಣಾರಾಧನೆಗೋಸ್ಕರವಾಗಿ ಬಹು ಕಡೆಯಿಂದ ಅನೇಕ ಜನ ದೊಡ್ಡ ಮನುಷ್ಯರೂ, ಭಕ್ತಮಾಹೇಶ್ವರರೂ ದಯಮಾಡಿಸಿದ್ದರು. ತಮ್ಮ ಘನತೆಗೆ ಅನುರೂಪವಾಗಿ ಆರಾಧನೆಯ ಕಾರ್ಯವಂ ನೆರವೇರಿಸಲು ಸಮಸ್ತ ಭಕ್ತಮಾಹೇಶ್ವರರಿಗೆ ಭೋಜನವಾದನಂತರ ಶ್ರೀಮಂತ ಪತ್ರಿ ವೀರಪ್ಪಯ್ಯನವರು ಗತಿಸಿದ ತಮ್ಮ ಪತ್ನಿಗೆ ಶಾಶ್ವತವಾದ ಶಿವಸಾಯುಜ್ಯ ಪದವಿಯು ಸಿದ್ಧಿಸುವದಕ್ಕೋಸ್ಕರ ಈ ಗ್ರಾಮದ ಶ್ರೀ ವೀರಭದ್ರ ದೇವಸ್ಥಾನಕ್ಕೆ ಮೂಲಮೂರ್ತಿಗೂ, ಉತ್ಸವ ಮೂರ್ತಿಗೂ, ಪ್ರತಿನಿತ್ಯವೂ ಮಹಾ ನೈವೇದ್ಯ ನಡೆಯುವದಕ್ಕಾಗಿ ಮಾಹೇವಾರಾ ಆರು ರೂಪಾಯಿ ಬಡ್ಡಿ ಬರುವಂತೆ ಮೂಲಧನವನ್ನಿಟ್ಟು ಅದರ ವ್ಯವಸ್ಥೆಯು ಪ್ರತಿತಿಂಗಳಲ್ಲೂ ದೇವಸ್ಥಾನಕ್ಕೆ ಸಲ್ಲುವಂತೆಯೂ ಮತ್ತು ಬೊಂಬಾಯಿ ಪಟ್ಟಣದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವ ಮಾಡುತ್ತಲಿರುವ ಮಹಾರಾಜ ಶ್ರೀ ಮೈಸೂರು ಯಜಮಾನ ವೀರಗಂಗಪ್ಪನವರ ಮಕ್ಕಳು ವಿಶ್ವನಾಥಯ್ಯನವರಿಗೂ, ಮೈಸೂರಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡುತ್ತಿರುವ ವಿರೂಪಾಕ್ಷಯ್ಯನವರಿಗೂ ರಹಾ ಮಾಹೇಯಾನಾ ೪ ರೂಪಾಯಿಯಂತೆ ಒಂದು ವರ್ಷದ ಸ್ಕಾಲರ್ಷಿಪ್ಪನ್ನು ಕೊಡುವದಾಗಿಯೂ ಇಲ್ಲಿನ ಸಂಸ್ಕೃತ ಪಾಠಶಾಲೆಗೆ ಮುಂದೆ ಯುಕ್ತಾಲೋಚನೆಯಿಂದ ಉದಾರಾಶ್ರಯವನ್ನು ಕೊಡುವದಾಗಿಯೂ ಸಂಕಲ್ಪಿಸಿದರು. ಈ ವಿಷಯವನ್ನು ವೇ. ಜಿ. ಕೆ. ರುದ್ರಾರಾಧ್ಯರು ಈ ದಂಪತಿಗಳ ಗುಣಕಥನ ಪೂರ್ವಕವಾಗಿ ಸರ್ವರಿಗೂ ತಿಳಿಯುವಂತೆ ಭಾಷಣ ಮಾಡಿ ಸೂಚಿಸಲು, ಸಮಸ್ತ ಭಕ್ತಮಾಹೇಶ್ವರರು ಜಯಘೋಷದೊಡನೆ ಶ್ರೀಮಂತರಿಗೆ ಕೃಪಾಳುವಾದ ಶಂಕರನು ಈಗ ಸಂಭವಿಸಿರುವ ವಿಯೋಗ ದುಃಖವಂ ಸೈರಿಸಿಕೊಳ್ಳುವಂತೆ ವಿಚಾರಪರತೆ ಧೈರ್ಯಂಗಳಂ ಕೊಟ್ಟು ಮುಂದೆ ಪುತ್ರಪೌತ್ರಾದ್ಯಭಿವೃದ್ಧಿಯನ್ನೂ ದೀರ್ಘಾಯುಷ್ಯವನ್ನೂ ಸಕಲೈಶ್ವರ್ಯ ಸಂಪತ್ತನ್ನು ಕರುಣಿಸಲೆಂದು ಭಗವತ್ಪ್ರಾರ್ಥನೆಯನ್ನು ಮಾಡಿದರು. ವೀರಮಾಹೇಶ್ವರರಿಗೆ ಬೆಳ್ಳಿಯ ಪಂಚಪಾತ್ರೆಗಳು ಉದ್ಧರಣೆಗಳು ಭಸ್ಮರುದ್ರಾಕ್ಷೆ ಗೋದಾನ ಮೊದಲಾದ ದಶದಾನಗಳನ್ನು ವಿನಿಯೋಗಮಾಡಿದರು. ಅಹಾ! ಗುಣಾಃ ಪೂಜಾಸ್ಥಾನವೆಂಬುಕ್ತಿಯಂತೆ ಶಿವಪದವಂ ಸಾರ್ದ ಶ್ರೀ॥ ಸಿದ್ಧಮ್ಮಯ್ಯನವರ ಸುಗುಣ ಪರಂಪರೆಯೂ ಇಂತಹ ಸದ್ವಿನಿಯೋಗಕ್ಕೆ ಕಾರಣವಾಯಿತಲ್ಲವೆ? ಭಕ್ತವತ್ಸಲನಾದ ಶ್ರೀಪಾರ್ವತೀವಲ್ಲಭನು ಶ್ರೀಮಂತರಿಗೆ ಇಂತಹ ಕಳತ್ರವಿಯೋಗದಿಂದುಂಟಾದ ದುಃಖವಂ ಪರಿಹರಿಸಿ ಅಪಾರವಾದ ಸುಖ ಪರಂಪರೆಗಳನ್ನು ಕರುಣಿಸಲೆಂದು ಸರ್ವರೊಡನೆ ಅನನ್ಯಭಾವದಿಂದ ಶ್ರೀ ಮಹಾದೇವನಂ ಪ್ರಾರ್ಥಿಸುವೆನು.

ಸಿದ್ಧಲಿಂಗಶಾಸ್ತ್ರಿ,
ಬೀರೂರು ಸಂಸ್ಕೃತ ಪಾಠಶಾಲಾಧ್ಯಾಪಕ

ಬಾಗಲಕೋಟೆಯಲ್ಲಾದ ಅಡ್ಡಪಲ್ಲಕ್ಕಿಯ ಉತ್ಸವವು.

ಮೈಸೂರು ಸ್ಟಾರ್ ಪತ್ರಿಕಾಕರ್ತರಿಗೆ:—

ತಮ್ಮ ಪತ್ರಿಕೆಯ ಹಿಂದಿನ ಒಂದು ಸಂಚಿಕೆಯಲ್ಲಿ ಶ್ರೀ ಚಿತ್ರಕಲ್ಲುದುರ್ಗದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಯ ಉತ್ಸವವು ಬಾಗಲಕೋಟೆಯಲ್ಲಿ ವಿಜೃಂಭಣೆಯಿಂದ ಯಾವ ತೊಂದರೆಗಳೂ ಇಲ್ಲದೆ ಜರಗಿತೆಂಬ ಬಗ್ಗೆ ಬಂದ ವೃತ್ತಾಂತವು ತಮ್ಮ ವಾಚಕರಿಗೆ ತಿಳಿದಿರಬಹುದು. ಆದರೆ ಆ ಕಾಲಕ್ಕೆ ಕೆಲವು ಸಂಗತಿಗಳು ಸಂಭವಿಸಿದ್ದು ಅವುಗಳನ್ನು ಕೆಲ ಅನ್ಯಾಯಾಪರರು ಪರಿವರ್ತಿಸಿ, ಅತಿಶಯೋಕ್ತಿಯನ್ನು ಮಾಡಿ ಕನ್ನಡ ಮತ್ತು ಮಹಾರಾಷ್ಟ್ರ ಪತ್ರಿಕೆಗಳಲ್ಲಿ ಪ್ರಸಿದ್ಧಿಸುತ್ತಿರುವರು. ಅವರು ಮೆರವಣಿಗೆಯ ಕಾಲಕ್ಕೆ ಲಿಂಗಾಯತರು ಬಹು ದಂಗೆಮಾಡಿದರೆಂತಲೂ, ರಕ್ತಪಾತವಾಯಿತೆಂತಲೂ, ಮಾಮಲೇದಾರ ರಾ॥ ರಾ॥ ರೇವಣಸಿದ್ಧಪ್ಪನವರು ಕಲೆಕ್ಟರರ ಹುಕುಮಿನ ವಿರೋಧ ನಡೆದು ಬಹು ಅನ್ಯಾಯದಿಂದ ವರ್ತಿಸಿದರೆಂತಲೂ, ಲಿಂಗಾಯತರು ದೇವಾಲಯಗಳನ್ನು ಕೆಡಿಸಿದರೆಂತಲೂ ಈ ವಿಧವಾಗಿ ಅನೇಕವಾಗಿ ಆರೋಪಗಳನ್ನು ಮಾಡುತ್ತಿರುವರು. ಆದರೆ

[illegible] ಲೇಶವಾಗಿ ಏನೂ ವರ್ತಿಸಿರುವದಿಲ್ಲ. ನಿಜಸ್ಥಿತಿಯು ಕೆಳಗೆ ಬರೆದಂತೆ ಇರುತ್ತದೆ.

ವಿಜಾಪುರ ಜಿಲ್ಲೆಯಲ್ಲಿಯ ಕಲಾದಗಿ ಗ್ರಾಮದಲ್ಲಿ ಅಡ್ಡಪಲ್ಲಕ್ಕಿಯ ಉತ್ಸವವನ್ನು ೧ನೇ ಸೆಪ್ಟೆಂಬರ್ ೯೧೧ನೇ ದಿವಸ ಶ್ರೀ ಸ್ವಾಮಿಗಳು ಜರುಗಿಸಿಕೊಂಡ ಬಳಿಕ ಅವರು ಬಾಗಲಕೋಟೆಗೆ ಸೆಪ್ಟೆಂಬರ್ ೧೦ ನೇ ತಾರೀಖಿನ ಮುಂಜಾನೆ ಪ್ರಯಾಣಮಾಡಬೇಕೆಂದು ನಿಶ್ಚಯಿಸಿದರು. ಆ ವೇಳೆಗೆ ಬಾಗಲಕೋಟೆಯ ವೀರಶೈವರು ಇದಿರ್ಗೊಳ್ಳುವ ಸಿದ್ಧತೆಯನ್ನು ಒತ್ತರದಿಂದ ನಡೆಸಿದರು. ಬೀದಿಗಳನ್ನು ತಳಿರು, ತೋರಣ, ಕಮಾನುಗಳಿಂದ ಶೃಂಗರಿಸಲು ಉದ್ಯುಕ್ತರಾದರು. ಮತ್ತು ಸ್ವಾಮಿಗಳ ಆಗಮನ ಸೂಚಕ ಆಮಂತ್ರಣ ಪತ್ರಿಕೆಗಳನ್ನು ಅಚ್ಚು ಹಾಕಿಸಿ, ಮುಖ್ಯ ಗ್ರಾಮಗಳಿಗೆ ಕಳಿಸ ಹತ್ತಿದರು. ಈ ಮೇರೆಗೆ ಸಿದ್ಧತೆಯು ೪-೧೦ ದಿನಗಳಿಂದ ಪಟ್ಟಣದಲ್ಲಿ ನಡೆದರೂ, ಈ ಅವಧಿಯಲ್ಲಿ ಬ್ರಾಹ್ಮಣರ ಯಾವ ಅರ್ಜಿಯೂ ಮೇಲಧಿಕಾರಿಗಳಿಗೆ ಕೊಡಲ್ಪಡಲಿಲ್ಲ. ಮತ್ತು ಉತ್ಸವಕ್ಕೆ ತೊಂದರೆಯು ಬರುವದೆಂದು ಯಾರೂ ಊಹಿಸಿರಲಿಲ್ಲ.

ಆದರೆ ೪ ನೆಯ ತಾರೀಖಿನ ದಿವಸ ಬಾಗಲಕೋಟೆಯಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರರೂ ಬ್ರಾಹ್ಮಣರೂ ಆದ ಪಾಗ್ನಿಸ ಎಂಬುವರು ಬಾಗಲಕೋಟೆಯ ಬ್ರಾಹ್ಮಣರು ಉತ್ಸವಕ್ಕೆ ವಿರೋಧಿಗಳಿರುವರೆಂತಲೂ, ಅದು ನಡೆದರೆ ಭಯಂಕರ ದಂಗೆಯಾಗುವದೆಂತಲೂ ಕಲೆಕ್ಟರ ಸಾಹೇಬರಿಗೆ ಒಂದು ರಿಪೋರ್ಟ ಮಾಡಿದರು. ಕಲೆಕ್ಟರ ಸಾಹೇಬರು ಈ ರಿಪೋರ್ಟನ್ನು ನೋಡಿಕೊಂಡು, ಉತ್ಸವಕ್ಕೆ ಅವಧಿಯು ಸ್ವಲ್ಪ ಉಳಿದದ್ದರಿಂದಲೂ, ಪೋಲೀಸ್ ಬಂದೋಬಸ್ತು ಇಡಲಿಕ್ಕೆ ಅನವಕಾಶವಾದ್ದರಿಂದಲೂ ಸ್ವಾಮಿಗಳ ಉತ್ಸವವನ್ನು ಬಂದು ಇಡತಕ್ಕದ್ದೆಂದು ಅಪ್ಪಣೆಮಾಡಿದರು (ಸ್ವಾಮಿಗಳು ಬೆಳಗಾವ ಜಿಲ್ಲೆಯಲ್ಲಿ ಇದ್ದಾಗ್ಗೆಯೇ ವಿಜಾಪುರ ಕಲೆಕ್ಟರರಿಗೆ ಈ ಜಿಲ್ಲೆಯಲ್ಲಿ ತಮ್ಮ ಆಗಮನವನ್ನು ಕುರಿತು ಒಂದು ಅರ್ಜಿಯನ್ನು ಕಳುಹಿಸಿದ್ದರು. ಆದರೆ ಆ ಅರ್ಜಿಯು ರಿಕಾರ್ಡಿನಲ್ಲಿ ಇಲ್ಲವಾಗಿತ್ತು!)

ಈ ಸಂಗತಿಯನ್ನು ತಿಳಿದ ಕೂಡಲೇ ಬಾಗಲಕೋಟೆಯ ವೀರಶೈವ ಪ್ರಮುಖರು ವಿಜಾಪುರಕ್ಕೆ ಬಂದು, ಕಲೆಕ್ಟರಿಗೆ ಭೇಟಿಯಾಗಿ ವರ್ತಿಸಿದ ನಿಜವಾದ ಸಂಗತಿಗಳನ್ನು ಅವರಿಗೆ ತಿಳಿಸಿದರು. ಆಗ ಕಲೆಕ್ಟರರು ದಂಗೆಯಾಗದಂತೆ ಯೋಗ್ಯ ಬಂದೋಬಸ್ತು ಇಡುವದಷ್ಟೇ ತಮ್ಮ ಮುಖ್ಯ ಉದ್ದೇಶವಿರುತ್ತದೆಂದು ಅವರಿಗೆ ತಿಳಿಸಿದರು. ಹಾಗಾದರೆ ಉತ್ಸವವನ್ನು ೨ ದಿವಸ ಮುಂದೆ ಹಾಕಲಿಕ್ಕೆ ಲಿಂಗಾಯತರು ಒಪ್ಪಲಾಗಿ, ಕಲೆಕ್ಟರ್ ಸಾಹೇಬರು ೧೨ ಸೆಪ್ಟೆಂಬರ್ ದಿವಸ ಅಡ್ಡಪಲ್ಲಕ್ಕಿ ಉತ್ಸವವನ್ನು ಮಾಡಲಿಕ್ಕೆ ಅಪ್ಪಣೆಕೊಟ್ಟರು.

ಇಷ್ಟರಲ್ಲಿಯೇ ಸುತ್ತುಮುತ್ತಲಿನ ಗ್ರಾಮಾಂತರಗಳಿಂದ ಸಾವಿರಾರು ಜನರು ೧೧ ನೆಯ ತಾರೀಖಿನ ದಿವಸ ಉತ್ಸವವು ಆಗುವುದೆಂದು ಭಾವಿಸಿ ಪಟ್ಟಣದಲ್ಲಿ ನೆರೆಯ ಹತ್ತಿದರು. ಮತ್ತು ಉತ್ಸವವು ೨ ದಿನ ಮುಂದೆ ಬಿದ್ದುದರಿಂದ, ಇನ್ನೂ ಹೆಚ್ಚಾಗಿ ಜನರು ಬರ ಹತ್ತಿದರು. ಪಟ್ಟಣ ಶೃಂಗಾರವಾದರೂ ಅಧಿಕವಾಗಿ ನಡೆದಿತ್ತು.

ಹುಕುಂ ದೊರೆತ ಮರುದಿನ, ಅಂದರೆ ೧೦ ನೇ ತಾರೀಖಿನ ದಿವಸ ವಿರೋಧವೇನೂ ವರ್ತಿಸಲಿಲ್ಲ. ಆದರೆ ೧೧ ನೇಯ ತಾರೀಖಿನ ಮಧ್ಯಾಹ್ನದಲ್ಲಿ ಕೂಡಲಿ ಶಂಕರಾಚಾರ್ಯರ ಹೆಸರಿನಿಂದ ಬ್ರಾಹ್ಮಣರು ಅಡ್ಡಪಲ್ಲಕ್ಕಿಯ ಉತ್ಸವವು ಆಗಬಾರದೆಂದು ಒಂದು ಅರ್ಜಿಯನ್ನು ಕಲೆಕ್ಟರರಿಗೆ ಕೊಟ್ಟರು. ಇದೇ ಬ್ರಾಹ್ಮಣರು ಮಾಡಿದ ಮೊದಲನೆಯ ವಿರುದ್ಧ ಅರ್ಜಿಯು. ಈ ಮೊದಲಿಗೆ ಕಲಾದಗಿ ಅಥವಾ ಬಾಗಲಕೋಟೆಯ ಬ್ರಾಹ್ಮಣರು ಯಾರೂ ಉತ್ಸವಕ್ಕೆ ತಕ್ರಾರು ತೋರಿಸಿದ್ದಿಲ್ಲ. ಆದರೆ ಕಲೆಕ್ಟರರು ಅವರಿಗೆ ೯ ನೇ ತಾರೀಖಿನ ತಮ್ಮ ಹುಕುಮನ್ನು ಬದಲಿಸುವದಿಲ್ಲೆಂದು ಅವರಿಗೆ ಸ್ಪಷ್ಟವಾಗಿ ತಿಳಿಸಿ, ಆ ಅರ್ಜಿಯನ್ನು ವಿಚಾರಿಸದೆ, ಅದನ್ನು ಫೈಲ್‌ಮಾಡಿಬಿಟ್ಟರು. ಆದರೆ ಮುಂಬಯಿಯ ಇಂದುಪ್ರಕಾಶ, ಮರಾಠಾ ಪತ್ರಿಕಾಕಾರರು ಕಲೆಕ್ಟರ್ ಸಾಹೇಬರು ಎರಡೂ ಪಕ್ಷದವರನ್ನು ವಿಚಾರಿಸಿ, ಅಡ್ಡಪಲ್ಲಕ್ಕಿಯು ನಡೆಯಬಾರದೆಂದು ಠರಾಯಿಸಿ, ಮಾಮಲೇದಾರರಿಗೆ ಆ ಪ್ರಕಾರ ತಾರುಮಾಡಿದರೆಂದು ಬರೆದಿರುವರು. ಇದು ತೀರ ಸುಳ್ಳು. ಆಗ ಕಲೆಕ್ಟರರು ಉಭಯಪಕ್ಷಕಾರರನ್ನು ಕೇಳಿಲ್ಲ ಮತ್ತು ೯ ನೇ ತಾರೀಖಿನ ತಮ್ಮ ಹುಕುಮನ್ನು ತಿರುಗಿಸಿಲ್ಲ. ಆದರೆ ನಿಜಸ್ಥಿತಿಯು ಕೆಳಗೆ ಬರೆದಂತೆ ಇದೆ.

ಈ ವೇಳೆಗೆ ಬ್ರಾಹ್ಮಣರ ಪ್ರಯತ್ನಗಳು ಕಲೆಕ್ಟರ ಸಾಹೇಬರ ಮುಂದೆ ನಿಷ್ಫಲವಾದ್ದರಿಂದ, ಅದೇ ದಿವಸ ಸಂಜೆಯ ೬ ಗಂಟೆಗೆ ಬಾಗಲಕೋಟೆಯ ಸಬ್‌ಜಡ್ಜ್ ಕೋರ್ಟಿನಲ್ಲಿ ಮಹಾಸ್ವಾಮಿಗಳ ಮೇಲೆ ಬ್ರಾಹ್ಮಣರು ಕೂಡಲಿ ಶಂಕರಾಚಾರ್ಯರ ಹೆಸರಿನಿಂದ ಒಂದು ದಾವೆಯನ್ನು ಹಚ್ಚಿ, ಮರುದಿವಸ ಮುಂಜಾನೆ ನಡೆಯತಕ್ಕ ಉತ್ಸವವನ್ನು ಬಂದು ಇಡಬೇಕೆಂದು [illegible] (temporary injunction) ಹುಕುಮನ್ನು ಕೇಳಿದ್ದರು. ಮತ್ತು ಕಲೆಕ್ಟರ್ ಸಾಹೇಬರಿಗೆ ಮರುದಿವಸ ಭಯಂಕರ ದಂಗೆಯಾಗುವದೆಂದು ಬೇರೆ ಬೇರೆ ಪಂಗಡದವರ ಹೆಸರುಗಳನ್ನು ಹಾಕಿ ೪-೩ ತಾರುಗಳನ್ನು ಮಾಡಿದರು.

ದಾವೆಯು ದಾಖಲ ಆದ ಕೂಡಲೇ, ಬ್ರಾಹ್ಮಣ ಸಬ್‌ಜಡ್ಜರು ವಿರುದ್ಧ ನಿಕಾಲೇ ಮಾಡಬಹುದೆಂದು ಲಿಂಗಾಯತರು ತಿಳಿದು, ಶಾಮೇ ಕೋರ್ಟಿನಲ್ಲಿ ಹಾಜರಾಗಿ ಅರ್ಜಿಯನ್ನು ವಿರೋಧಿಸಲು, ತಕ್ರಾರುಗಳು ರಾತ್ರಿ ೯ ಗಂಟೆಯ ವರೆಗೆ ನಡೆದು, ಕಡೆಗೆ ಸಬ್ ಜಡ್ಜಿಗಳು ಮಹಾಸ್ವಾಮಿಗಳ ಉತ್ಸವವನ್ನು ಮುಂಜಾನೆ ೩ ಗಂಟೆಗೆ ತೆಗೆಯದೆ, ೧೧ ಗಂಟೆಯ ವರೆಗೆ ತಡಕೆಯ ಇಡಬೇಕೆಂತಲೂ, ಆ ವೇಳೆ ಉಭಯ ಪಕ್ಷಕಾರರನ್ನು ಪುನಃ ಕೇಳಿ, ಮುಂದಿನ ಕಡೆಯ ಹುಕುಮನ್ನು ಮಾಡುವೆವೆಂತಲೂ ಅಪ್ಪಣೆ ಕೊಟ್ಟರು. ಮತ್ತು ಕಲೆಕ್ಟರ್ ಸಾಹೇಬರಿಗೆ ಭಯಸೂಚಕ ತಾರುಗಳು ಬರಹತ್ತಲು, ಅವರು ಮಾಮಲೇದಾರರ ಜಾಗ್ರತೆಗೋಸ್ಕರ, ಅವರಿಗೆ ದಂಗೆಯು ಏಳುವ ಸಂಭವವು ತೋರಿದರೆ ಮೆರವಣಿಗೆಯನ್ನು ಬಂದು ಇಡಲಿಕ್ಕೆ ಅಧಿಕಾರಕೊಟ್ಟಿರುವೆವೆಂದು ಒಂದು ತಾರನ್ನು ಅದೇ ದಿವಸ ಅಂದರೆ ೧೧ ನೇ ತಾರೀಖಿನ ಸಂಜೆಗೆ ಮಾಮಲೇದಾರರಿಗೆ ಮಾಡಿದರು.

ಈ ತಾರು ೧೦ ನೇ ತಾರೀಖಿನ ಬ್ರಾಹ್ಮಣರ ಅರ್ಜಿಗೆ ಉತ್ತರವೆಂದು ಬ್ರಾಹ್ಮಣ ಪತ್ರಿಕಾಕಾರರು ಭಾವಿಸಿ, ಅದಕ್ಕೆ ವಿಪರೀತ ಅರ್ಥವನ್ನು ಮಾಡಿ, ಮಾಮಲೇದಾರರು ಸರಕಾರೀ ಅಪ್ಪಣೆಯನ್ನು ವಿಚಾರಿಸರೆಂದು ಅವರ ಮೇಲೆ ದೋಷವಿಡುತ್ತಾರೆ. ಈ ತಾರು ಪಕ್ಷಕಾರರಿಗೆ ಇರದೆ, ಮಾಮಲೇದಾರರಿಗೆ ಮಾತ್ರ ಉದ್ದೇಶಿಸಿ ಇರುತ್ತದೆ. ಮಾಮಲೇದಾರರು ಸ್ಥಳಿಕ ಸ್ಥಿತಿಯನ್ನು ನೋಡಿ, ದಂಗೆಯಾಗದಂತೆ ವರ್ತಿಸತಕ್ಕದ್ದೆಂತಲೂ, ಒಂದು ವೇಳೆ ದಂಗೆಯಾಗುವ ಸಂಭವವಿದ್ದರೆ ಮಾತ್ರ ಉತ್ಸವವನ್ನು ಬಂದು ಇಡಬೇಕೆಂತಲೂ ಅವರಿಗೆ ತಿಳಿಸುವದಷ್ಟೇ ಈ ತಾರಿನ ಮುಖ್ಯ ಉದ್ದೇಶವಿರುತ್ತದೆ. ಅದರಲ್ಲಿ ಉತ್ಸವವನ್ನು ಪೂರ್ಣವಾಗಿ ಬಂದು ಇಡಬೇಕೆಂಬ ಯಾವ ಶಬ್ದಗಳೂ ಇರುವುದಿಲ್ಲ. ಹೀಗಿದ್ದರೂ ಬ್ರಾಹ್ಮಣರು ಇದಕ್ಕೆ ಇಲ್ಲದ ಅರ್ಥವನ್ನು ಕಲ್ಪಿಸಿಕೊಂಡು, ತಮಗೆ ಅನುಕೂಲ ಹುಕುಂ ಬಂದಿತೆಂದು ಭಾವಿಸಿ ಆನಂದಪಡ ಹತ್ತಿದರು. ಆದರೂ ಇದರ ನಿಜಾರ್ಥವನ್ನು ಸ್ಪಷ್ಟಮಾಡಿಕೊಳ್ಳುವ ಉದ್ದೇಶದಿಂದ, ಮಾಮಲೇದಾರರು ಪುನಃ ಕಲೆಕ್ಟರ್ ಸಾಹೇಬರಿಗೆ ಈ ಬಗ್ಗೆ ಕೇಳಿಕೊಳ್ಳಲು, ಮರುದಿನ ಮಧ್ಯಾಹ್ನದಲ್ಲಿ [illegible] ಅವರಿಗೆ ಉತ್ತರವು ಬಂದಿತು. ಈ ವೇಳೆಗೆ ಸ್ವಾಮಿಗಳ ಪರವಾಗಿಯ ಬಗ್ಗೆ ಏನೂ ಸೂಚನೆಯು ಉಳಿಯಲಿಲ್ಲಾದ್ದರಿಂದ ಉತ್ಸವವನ್ನು ಹೊರಡಿಸಲಿಕ್ಕೆ ಅವರು ಅಪ್ಪಣೆಕೊಟ್ಟರು. (ಮಾಮಲೇದಾರರಿಗೂ ಕಲೆಕ್ಟರರಿಗೂ ನಡೆದ ಈ ಸಂಗತಿಗಳು ಕೇವಲ ಖಾಸಗಿ ಅಂದರೆ ಅಫೀಷಿಯಲ್ ಇರುತ್ತವೆ. ಆದರೆ ಇವು ತಾರಿನ ಮುಖಾಂತರ ನಡೆದದ್ದರಿಂದ, ಬ್ರಾಹ್ಮಣರಿಗೆ ತಿಳಿಯಲಾಸ್ಪದವಾಗಿರಬಹುದು)

ಕೂಡಲೇ ವಾದ್ಯಗಳು ಘೋರ್ಗರೆಯ ಹತ್ತಿದವು. ೨-೩ ದಿನಗಳಿಂದ ಸಾವಿರಗಟ್ಟಲೆ ನೆರೆದ ಜನರು ಶ್ರೀ ಅಡವೀ ಸ್ವಾಮಿಗಳ ಮಠದಿಂದ (ಇಲ್ಲಿಯೇ ಮಹಾಸ್ವಾಮಿಗಳು ಬಿಡಾರಗೊಂಡಿದ್ದರು) ಜಯ ಜಯ ಕಾರದೊಡನೆ ಬೀದಿಗಳಲ್ಲಿ ಸಂದಣಿಸ ಹತ್ತಿದರು. ಮತ್ತು ಸಕಲ ಬಿರುದಾವಳಿಗಳೊಡನೆ ಮಹಾಸ್ವಾಮಿಗಳವರು ರಾಜಮಾರ್ಗದಲ್ಲಿ ಬಿಜಯಂಗೈಸ ಹತ್ತಿದರು. ಮೆರವಣಿಗೆಯು ೩ ತಾಸುಗಳ ವರೆಗೆ ಪುರವೀಧಿಗಳಲ್ಲಿ ನಡೆದಿತು. ೨೦-೨೫ ಸಾವಿರ ಜನತಿಂಥಿಣಿಯು ಬೀದಿಗುಂಟ ಒಂದು ಮೈಲು ಅಂತರ ಆಕ್ರಮಿಸಿತು. ಇಂಥ ಸಂದಣಿಯನ್ನು ಬಾಗಲಕೋಟೆಯಲ್ಲಿ ಎಂದಿಗೂ ಯಾರೂ ಕಂಡಿರಲಿಲ್ಲ. ಉತ್ಸವದಲ್ಲಿಯ ಜನರು ಈ ಮೇರೆಗೆ ಮಹೋತ್ಸವದಿಂದ ಸ್ವಾಮಿಗಳೊಡಗೂಡಿ ಊರಲ್ಲಿಯ ಮುರುಘ ಮಠಕ್ಕೆ ಮುಟ್ಟಿದರು!

ಈ ಮೇರೆಗೆ ಅಡ್ಡಪಲ್ಲಕ್ಕಿಯ ಉತ್ಸವವು ಶಾಂತವಾಗಿ ಕೊನೆಗಂಡದ್ದಕ್ಕೆ ಬಾಗಲಕೋಟೆಯ ವೀರಶೈವರು ಬೇರೆ ಬೇರೆ ಜಿಲ್ಲೆಗಳಲ್ಲಿಯ ಮುಖ್ಯ ಸ್ಥಳಗಳಿಗೆ ಉತ್ಸವವು ನಿರ್ವಿಘ್ನವಾಗಿ ಜರಗಿತೆಂದು ತಾರುಗಳನ್ನು ಮಾಡಿದರು. ಆಗ ಅವರಿಗೆ ತಮ್ಮ ಮೇಲೆ ದಂಗೆಗಾರರ ಆರೋಪವು ಎಂದಾದರೂ ಬರಬಹುದೆಂದು ಅವರ ಕನಸು ಮನಸ್ಸಿನಲ್ಲಿ ಬಂದಿರಲಿಲ್ಲ. ನಿಜವಾಗಿ ಉತ್ಸವವು ಸಾಗಿದಾಗ ಯಾವ ಸ್ಥಳದಲ್ಲಿಯಾಗಲಿ ಯಾರಾದರೂ ಪೆಟ್ಟು ತಿಂದರೆಂಬುದರ ಅರಿಕೆಯು ಸಹ ಒಬ್ಬರಿಗೂ ಇರಲಿಲ್ಲ. ಆದರೆ ಬ್ರಾಹ್ಮಣರು ತಮ್ಮ ಲೆಕ್ಕಣಿಕೆಯ ಜೋರಿನಿಂದ ತರತರದ ವಿಪರೀತ ಸಂಗತಿಗಳನ್ನು ಅರಿಯದವರಲ್ಲಿ ಈಗ ಪಸರಿಸ ಹತ್ತಿರುವರು!

ಮಹೋತ್ಸವವು ಪ್ರಾರಂಭವಾಯಿತೆಂದು ತಿಳಿದ ಕೂಡಲೇ ಬ್ರಾಹ್ಮಣರಿಗೆ ದಿಗಿಲು ಬಿದ್ದಿತು. ಅವರ ತರತರದ ತಂತ್ರಗಳೂ, ಪ್ರಯತ್ನಗಳೂ ನಿಷ್ಫಲವಾದುವು. ಮುಂಜಾನೆ [illegible] ಮುನಸೀಫ ಕೋರ್ಟಿನಲ್ಲಿ ಇಟ್ಟಿದ್ದ [illegible] ಅರ್ಜಿಯನ್ನು ಕಲೆಕ್ಟರರು ತಮಗೆ ಅನುಕೂಲ ಹುಕುಮನ್ನು ಕೊಟ್ಟಿಲ್ಲೆಂದು ಭಾವಿಸಿ, ಅದನ್ನು ಅವರು ಹಿಂದಿರುಗಿ ತೆಗೆದುಕೊಂಡಿದ್ದರು! ಮಹೋತ್ಸವವು ಪ್ರಾರಂಭವಾದ ಕೂಡಲೇ ಈ ಅರ್ಜಿಯನ್ನು ಅವರು ಪುನಃ ಕೋರ್ಟಿಗೆ ಕೊಟ್ಟರು. ಜನ ಸಂದಣಿಯಲ್ಲಿ ಈ ಅರ್ಜಿಯ ನೋಟೀಸನ್ನು ಬೇಲೀಫನು ಸ್ವಾಮಿಗಳ ಮೇಲೆ ಬಜಾಯಿಸಲಾರದೆ ಹೋದನು! ಸ್ವಾಮಿಗಳ ಉತ್ಸವವು ಪ್ರಾರಂಭಿಸಿತು. ಈ ಸಮಯದಲ್ಲಿ ದಾತಾರ ಎಂಬ ಒಬ್ಬ ಬ್ರಾಹ್ಮಣ ವಕೀಲನು ಇನ್ನಿಬ್ಬರನ್ನು ಕರೆದುಕೊಂಡು ಜನದಟ್ಟಣೆಯಲ್ಲಿ ಟಾಂಗೆಯನ್ನೇರಿ ಎದುರಿಗೆ ಬರುತ್ತಿದ್ದನಂತೆ. ಅವನು ಒಂದು ಅರ್ಜಿಯನ್ನು ತೆಗೆದುಕೊಂಡು ಸ್ವಾಮಿಗಳ ಹತ್ತಿರವಿದ್ದ ಮಾಮಲೇದಾರರ ಕಡೆಗೆ ಬರುತ್ತಿದ್ದನೆಂದು ಬ್ರಾಹ್ಮಣರು ಹೇಳುತ್ತಾರೆ! ಆದರೆ ಇವರೆಲ್ಲರೂ, ಪೆಟ್ಟು ತಿಂದರೆಂದು ಹಿಂದುಗಡೆ ತಿಳಿದು ಬಂದಿತು. ಬಹುಶಃ ಅವರು ಸ್ವಾಮಿಗಳ ಉತ್ಸವಕ್ಕೂ ಭಂಗತರುವ ವರ್ತನೆಯುಳ್ಳವರೆಂದು ತೋರಿಬಂದುದರಿಂದಲೇ, ಈ ದಶೆಗೆ ಒಳಗಾಗಿರಬಹುದು! ಆದರೆ ಇದು ಗದ್ದಲದೊಳಗೆ ಅವರಿಗೆ ಹೇಗೆ ಪೆಟ್ಟು ಬಿದ್ದವೆಂದು ತಿಳಿಯುವದು ಅಸಂಭವವು. ಒಂದು ವೇಳೆ ಬಿದ್ದಿದ್ದರೆ ಅದಕ್ಕೆ ಅವರೇ ತಪ್ಪುಗಾರರು. ಅದಕ್ಕೆ ಮೆರವಣಿಗೆಯ ಜನರಾಗಲಿ ಇಲ್ಲವೆ ವೀರಶೈವ ಅಧಿಕಾರಸ್ಥರಾಗಲಿ ಜವಾಬುದಾರರಲ್ಲ. ಅವರೂ, ಇನ್ನು ಕೆಲವರೂ ಲಿಂಗಾಯತರ ಮೇಲೆ ಫಿರ್ಯಾದುಮಾಡಿರುವರು. ಅದರ ಮೇಲಿಂದಲೂ, ಅವರಿಗೆ ದೊರೆತ ಪುರಾವೆಯ ಮೇಲಿಂದಲೂ ನಿಜಸ್ಥಿತಿಯು ತರ್ಕ ಕಟ್ಟತಕ್ಕದ್ದಾಗಿದೆ. ಪೋಲೀಸರ ತಪಾಸಣೆಯು ನಡೆದದೆ. ಪೋಲೀಸರಲ್ಲಿ ಲಿಂಗಾಯತರು ಯಾರೂ ಇಲ್ಲ. ತಪಾಸಣೆಯು ಮುಗಿದ ಬಳಿಕ ನಿಜಸ್ಥಿತಿಯು ಹೊರಬೀಳುವದು. ಆ ವೇಳೆ ತಮ್ಮ ವಾಚಕರಿಗೆ ಎಲ್ಲ ಸಂಗತಿಗಳನ್ನು ಅರುಹುವೆವು. ಹೆಚ್ಚಿನ ಗಾಯಗಳು ಯಾರಿಗೂ ಆಗಿಲ್ಲ.

ಆದರೆ ಈ ಮೇರೆಗೆ ಒದಗಿದ ಕ್ಷುಲ್ಲಕ ಸಂಗತಿಗಳಿಗೆ ಬ್ರಾಹ್ಮಣರು ಒಂದು ಭಯಂಕರ ದಂಗೆಯ ಸ್ವರೂಪವನ್ನು ಕೊಟ್ಟಿರುವರು. ಇದನ್ನೆಲ್ಲ ಲಿಂಗಾಯತರು ಬುದ್ಧಿಪೂರ್ವಕವಾಗಿ ಒಂದು ಗುಟ್ಟಿನಿಂದ ಮಾಡಿದರೆಂದು ಅನ್ನುತ್ತಿರುವರು. ಮಾಮಲೇದಾರರನ್ನು ಕಾರಣವಿಲ್ಲದೆ ದೂರುತ್ತಿರುವರು. ಆಗ ಭಯಂಕರ ದಂಗೆಯಾಯಿತೆಂದು ಜನರಿಗೆ ಭಾಸವಾಗುವ ಉದ್ದೇಶದಿಂದ ಮನೆಗಳ ಮೇಲೆ ನೂರಾರು ಕಲ್ಲುಗಳು ಬಿದ್ದವೆಂತಲೂ, ಲಿಂಗಾಯತರು ಗುಡಿಗಳನ್ನು ಕೆಡಿಸಿದರೆಂತಲೂ, ಮನೆಗಳಲ್ಲಿ ಹೊಕ್ಕು ಹೊಡೆದರೆಂತಲೂ, ೨-೩ ತಾಸು ಅನಾಯಕತನವು ನಡೆದಿತೆಂತಲೂ, ಕೇಸರಿ ಮೊದಲಾದ ಪತ್ರಗಳಲ್ಲಿ ಗೊಬ್ಬುಜವನ್ನೆಬ್ಬಿಸಿರುವರು. ಆದರೆ ಬ್ರಾಹ್ಮಣ ವಕೀಲರ ತರತರದ ಪ್ರಯತ್ನಗಳು ಹುಸಿಗೊಳ್ಳಲು ಅವರು ತಮ್ಮ ಹೊಟ್ಟೆಕಿಚ್ಚಿನಿಂದಲೂ, ಒಂದು ಮತಲಬಿಯಿಂದಲೂ ದುರುದ್ದೇಶದಿಂದಲೂ ಎಬ್ಬಿಸಿದ ಕೋಲಾಹಲವಿದು! ಮೆರವಣಿಗೆಯ ಕಾಲಕ್ಕೆ ದಂಗೆಯಾಗಿದ್ದರೆ, ಹತ್ಯಾರ ಮತ್ತು ಬೇಡಿ ಸಹಿತ ಸಜ್ಜಾಗಿದ್ದ ಪೋಲೀಸರೇನು ಸುಮ್ಮನೇ ಕೂಡ್ರುತ್ತಿದ್ದರೇ? ಲಿಂಗಾಯತರ ವಿರುದ್ಧ ಮೊದಲು ಈ [illegible]ವನ್ನು ಎಬ್ಬಿಸಿದ ಬ್ರಾಹ್ಮಣ ಪೋಲೀಸ್ ಇನ್ಸ್‌ಪೆಕ್ಟರರು ಮಿ॥ ಪಾಗ್ನಿಸ್ ಇವರು ಪೋಲೀಸ್ ಮುಖ್ಯಾಧಿಕಾರಿ ಇರಲು ಲಿಂಗಾಯತ ದಂಗೆಗಾರರನ್ನು ದಸ್ತಗಿರಿಮಾಡದೆ, ೩ ತಾಸುಗಳ ವರೆಗೆ ಸುಮ್ಮನೆ ಇರುತ್ತಿದ್ದರೇ? ದಂಗೆಯ ಮಾತು ತೀರ ಸುಳ್ಳೆಂದು ಇದರ ಮೇಲಿಂದ ಯಾರಿಗಾದರೂ ತಿಳಿಯುವಂತೆ ಇದೆ. ಆದರೆ ಬ್ರಾಹ್ಮಣ ವಕೀಲರು ತಮ್ಮ ಪ್ರಯತ್ನಗಳಲ್ಲಿ ಮುಖಭಂಗಿತರಾದ್ದರಿಂದಲೂ, ಹೇಗೋ ಏನೋ ಪೆಟ್ಟು ತಿಂದವರಾದ್ದರಿಂದಲೂ, ಮನಸ್ಸಿನ ಉಮ್ಮಳದಿಂದ ತರತರದ ದುಷ್ಟ ಆರೋಪಗಳನ್ನು ಲಿಂಗಾಯತರ ಸಮಾಜ ಮತ್ತು ಲಿಂಗಾಯತರ ಅಧಿಕಾರಿಗಳ ಮೇಲೆ ವರ್ತಮಾನ ಪತ್ರಗಳ ದ್ವಾರದಿಂದ ಹೊರಿಸ ಹತ್ತಿರುವರು. ಆದರೆ ಮೇಲಧಿಕಾರಿಗಳು ತಿಳಿದವರಿರುವರು; ನ್ಯಾಯಾನ್ಯಾಯಗಳನ್ನು ತಿಳಿಯಲು ತತ್ಪರರಿರುವರು. ಈಗ ವಿಚಾರಣೆಯು ನಡೆದಿರುವದರಿಂದ ಕೆಲ ಬ್ರಾಹ್ಮಣರಿಗೆ ಏಟುಗಳು ಬಿದ್ದವೋ ಹ್ಯಾಗೆ, ಬಿದ್ದಿದ್ದರೆ ಯಾಕೆ, ಮತ್ತು ಇದರಲ್ಲಿ ತಪ್ಪಿತಸ್ಥರು ಯಾರು ಇದನ್ನು ಈಗ್ಗೆಯೇ ಬರೆಯಲು ಆಸ್ಪದವಿಲ್ಲ. ಇವು ತಿಳಿದ ಮೇಲೆ, ಹಿಂದುಗಡೆ ಬರೆಯಲ್ಪಡುವವು.

ತಮ್ಮ ವಾಚಕರಿಗೆ ತಿಳಿಸತಕ್ಕ ಇನ್ನೊಂದು ಸಂಗತಿ ಏನೆಂದರೆ:—ಮ॥ ಕಮಿಷನರ್ ಸಾಹೇಬರೂ, ಕಲೆಕ್ಟರ ಸಾಹೇಬರೂ ಬಾಗಲಕೋಟೆಗೆ ತಾ॥ ೧೬ ಅಕ್ಟೋಬರ್ ದಿವಸ ಬಂದಿದ್ದು, ತಾ॥ ೧೭ ದಿವಸ ಮಹಾಸ್ವಾಮಿಗಳ ಸಮ್ಮುಖದಲ್ಲಿ ಅವರ [illegible] ಸಮಾರಂಭವು ನಡೆಯಿತು. ಆಗ ತಕ್ಕ ಮಾನಪಾನಗಳು ನಡೆದವು. ಅದರ ಹಿಂದಿನ ದಿವಸ, ಇಬ್ಬರೂ ಸಾಹೇಬರು ಬಾಗಲಕೋಟೆಯಲ್ಲಿ ಇದ್ದಾಗ್ಗೆ ಅಡ್ಡಪಲ್ಲಕ್ಕಿಯ ಉತ್ಸವವು ಪುನಃ ಪಟ್ಟಣದಲ್ಲಿ ನಡೆಯಿತು. ಇದರ ಮೇಲಿಂದ ಕಲೆಕ್ಟರ್ ಸಾಹೇಬರು ಸ್ವಾಮಿಗಳಿಗೆ ಅಪ್ಪಣೆ ಕೊಡಲಿಲ್ಲವೆಂದು ಬ್ರಾಹ್ಮಣರು ಸುದಿಯುತ್ತಿರುವದರಲ್ಲಿ ಹುರುಳು ಎಷ್ಟು ಇರುವದೆಂಬುದು ವಾಚಕರ ತಿಳಿವಿಗೆ ತಾನೇ ತೋರುವಂತೆ ಇದೆ.

ಒಬ್ಬ ಲಿಂಗಾಯತ.

ಉತ್ತಮ ಗ್ರಂಥಗಳು.

10

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28

ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುತ್ತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ||) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ||) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಉತ್ತಮ ಗ್ರಂಥಗಳು.

11

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

21

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:— ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
ಮೈಸೂರು.

62

ಗೋರೋಚನ ಮಾತ್ರೆ— ೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಷೆ ೦-೪-೦, ೨೫ ಮಾತ್ರೆ ಸೀಷೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೦ ಮಾತ್ರೆ ಸೀಷೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೩-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಷೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೦ ಮಾತ್ರೆಗಳನ್ನು ಸೇವಿಸುವುದರಿಂದ ೨-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೫ ಮಾತ್ರೆ ಸೀಷೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨-೦-೦.

ಕಾಲರಾ ಮಾತ್ರೆ— ೩೦ ಮಾತ್ರೆ ಸೀಷೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦-೧೦-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೨-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಅಕ್ಟೋಬರ್ ತಾ|| ೩೦ ರಿಂದ ೧೯೧೧ನೇ ನವಂಬರ್ ತಾ|| ೫ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಕಾರ್ತಿಕ ಶು|| ಅಷ್ಟಮಿಯಿಂದ ಕಾರ್ತಿಕ ಶು|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲ ತೇದಿ
30	[1]ಸೋ	ಅ	37-15	ಶ್ರವಣ	57-26	14
31	ಮಂಗ	ನ	41-27	ಧನಿಷ್ಠ	60-0	15
1	[2]ಬುಧ	ದ	44-22	ಧನಿಷ್ಠ	1-40	16
2	[3]ಗುರು	ಏ	45-18	ಶತ	5-12	17
3	[4]ಶುಕ್ರ	ದ್ವಾ	45-23	ಪೂಭಾ	7-29	18
4	ಶನಿ	ತ್ರ	44-23	ಉ|ಭಾ	8-31	19
5	[5]ಭಾನು	ಚ	41-16	ರೇವತಿ	8-23	20

(1) ಕಾರ್ತೀಕ ಸೋಮವಾರಂ. (2) ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವಃ (3) ಸರ್ವತ್ರ ಬೋಧನೈಕಾದಶಿ. (4) ಉತ್ಥಾನದ್ವಾದಶಿ, ಸ್ವಾರೋಚಿಷಮನ್ವಾದಿಃ, ಬೃಂದಾವನೋತ್ಸವಃ, ಮೇಲುಕೋಟೆಯಲ್ಲಿ ಅಷ್ಟತೀರ್ಥ ರಥಃ. (5) ವೈಕುಂಠಚತುರ್ದಶಿ, ಜಯಲಕ್ಷ್ಮಮ್ಮಣ್ಣಿಯವರ ಕೆಂಪರಾಜಅರಸಿನವರ ವರ್ಧಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪]   ಮೈಸೂರ್ ಸ್ಟಾರ್ ಸೆ|| ೧೯೧೧ ನೆಯ ಇಸವಿ ನವಂಬರ್ ತಾರೀಖು ೬ ನೆಯ ಸೋಮವಾರ.   [ಸಂಚಿಕೆ ೪೫

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೧)

7

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:— ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ.

ಊದಬತ್ತಿಗಳು.

35

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೦-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

19 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂಬಿನ್ನ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಬೋಧಕ)	೦-೨-೦
ಗುರುಶಂಕರ[illegible]ಶತಕಂ	೦-೧-೦

ಅಂಚೆ ಖರ್ಚು ಬೇರೆ.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

22

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:— ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

12

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು !
ಕಾಶೀವಿಶ್ವೇಶ್ವರಪ್ರಸನ್ನ.

3



ಅಗ್ಗವಾದಮಾಲುಗಳು— ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವೂ ಪೂಜಿಸುವುದು ಯಾವುದು ? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವುದು ? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ ಆಗಿಯೂ ನೋಡುವುದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೆ ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ ! ಬಿಡಬೇಡಿರಿ !! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೆಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ. ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೨ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು, ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳೂ, ವಸ್ತೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ. ೧ ಕ್ಯಾಟ್ಲಾಗು ೪ ಸಾದಾ ಕಾರ್ಡು, ೧ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್ ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರೆದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರೆಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ—
ಯಸ್. ಉಡುಪಿನಾರಾಯಣಚಾರ್ಯ ಅಂಡ್ ಕೊ
ಬನಾರಸ್ ಸಿಟಿ, ಶ್ರೀ ಕ್ಷೇತ್ರಕಾಶಿ
S. U. N. & Co,
Silk Weaving Manufacturers
Benares City. (V. P.)

ವೇದವಿಷಯ.

(ಕಳೆದವಾರದ ಶೇಷ.)

ಮಂತ್ರ– ಯಥೇಮಾಂವಾಚಂಕಲ್ಯಾಣೀ ಮಾವದಾನಿಜನೇಭ್ಯಃ। ಬ್ರಹ್ಮರಾಜನ್ಯಾಭ್ಯಾಂಶೂದ್ರಾಯ ಚಾರ್ಯಾಯ ಚಸ್ವಾಯ ಚಾರಣಾಯ। (ಯಜುರ್ವೇದ ೨೬|೨)

ಎಲೈ ವಿದ್ವಾಂಸರೆ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತೂ ಇತರರ ದೆಸೆಯಿಂದ ಹೇಗೆ ವೇದೋಪದೇಶವನ್ನು ಮಾಡಿದೆನೋ ಅದರಂತೆ ನೀವಾದರೂ ವೇದಜ್ಞಾನದ ಪ್ರಸಾರವಮಾಡಿರಿ. ಅದನ್ನು ಮಾಡುವುದರಲ್ಲಿ ಪಕ್ಷಪಾತಮಾಡಬೇಡಿರಿ.

ಬ್ರಹ್ಮವೈಶ್ಯೋತ್ತಮಾನಾಂ ನಿವೃತ್‌ಕ್ಷತ್ರಂಸಂಚದಶೋ ವಿಶಃ ಸಪ್ತದಶಕಾದೋರ್ವರ್ಣ ಏಕವಿಂಶ। (ಏತರೇಯಬ್ರಾಹ್ಮಣ ೮|೧)

ಬ್ರಾಹ್ಮಣನು ೯, ಕ್ಷತ್ರಿಯ ೧೫, ವೈಶ್ಯ ೧೭, ಶೂದ್ರ ೨೧ ಅಗ್ನಿಷ್ಟೋಮಮಾಡಬೇಕು.

ಏಹೀತಿಬ್ರಾಹ್ಮಣಸ್ಯಾಗಹ್ಯಾದ್ರವೇತಿ ವೈಶ್ಯಸ್ಯಚರಾಜನ್ಯಬಂಧೋಶ್ಚಾಧಾವೇತಿಶೂದ್ರಸ್ಯ। (ಶತಪಥಬ್ರಾಹ್ಮಣ ೧, ೧, ೧, ೪, ೧೯.) ಏಹಿ, ಆಗಹಿ, ಆದ್ರವ, ಆಧಾವ ಎಂದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಕ್ರಮವಾಗಿ ಅನ್ನಬೇಕು.

ಫಲಾರ್ಥತ್ವಾತ್‌ಕರ್ಮಣಃ ಶಾಸ್ತ್ರಂಸರ್ವಾಧಿಕಾರಂಸ್ಯಾತ್। (೬, ೧, ೪, ಪೂರ್ವಮೀಮಾಂಸಾ) ಕರ್ತುರ್ವಾಶ್ರುತಿಸಂಯೋಗಾ ದ್ವಿಧಿಃಕಾತ್ಸ್ನ್ಯೇನಗಮ್ಯತೆ। ೬, ೧, ೫,) ಶಾಸ್ತ್ರದಮೇಲೆ ಸರ್ವರ ಅಧಿಕಾರವದೆ, ಆದುದರಿಂದ ಎಲ್ಲರೂ ಶಾಸ್ತ್ರಾಧ್ಯಯನಮಾಡಿ ಅದರ ಉತ್ತಮ ಫಲಲಾಭಮಾಡಿಕೊಳ್ಳಬೇಕು. ವೇದಾಧ್ಯಯನ ಯಾಗಾದಿ ಕರ್ಮಮಾಡುವುದಕ್ಕೆ ಯಾವನು ಸಮರ್ಥನಿದ್ದಾನು ಅವನಿಗೆ ಶ್ರುತಿಸಂಯೋಗದಿಂದ ಹೇಳಿದ ಕರ್ಮಮಾಡುವ ಅಧಿಕಾರ ಅದೆ.

ಪಠನ್‌ದ್ವಿಜೋವಾಗೃಷಭತ್ವಮೀಯಾತ್। ಸ್ಯಾತ್‌ಕ್ಷತ್ರಿಯೋಭೂಮಿಪತಿತ್ವಮೀಯಾತ್। ವಣಿಗ್ಜನಃಪುಣ್ಯಫಲತ್ವಮೀಯಾತ್। ಜನಶ್ಚಶೂದ್ರೋಽಪಿಮಹತ್ವಮೀಯಾತ್। (ಬಾಲಕಾಂಡ ರಾಮಾಯಣದಲ್ಲಿ ಸರ್ಗ ೧.) ರಾಮಾಯಣ ಅಧ್ಯಯನಮಾಡೋಣದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವರಿಗೆ ಅತಿ ಮಹತ್ತರವಾದ ಫಲಲಾಭಾದಿಗಳು ಆಗುತ್ತವೆ. ಆದುದರಿಂದ ಸರ್ವರೂ ಅಧ್ಯಯನಮಾಡಬೇಕು.

ಶ್ರಾವಯೇಚ್ಚತುರೋವರ್ಣಾನ್ ಕೃತ್ವಾಬ್ರಾಹ್ಮಣಮಗ್ರತಃ। ವೇದಸ್ಯಾಧ್ಯಯನಂಹೀದಂ ತಚ್ಚಕಾರ್ಯಂ ಮಹತ್ಸ್ಮೃತಂ॥ (ಮಹಾಭಾರತ ಶಾಂತಿಪರ್ವ ೩೨೮ ನೆಯ ಶ್ಲೋಕ) ವೇದಜ್ಞನಿಂದ ನಾಲ್ಕುವರ್ಣದವರು ಅರ್ಥಸಹಿತವಾಗಿ ವೇದಗಳನ್ನು ಕೇಳತಕ್ಕದು. ವೇದಾಧ್ಯಯನ ಹಾಗೂ ಅದನ್ನು ಕೇಳುವುದು ಬಹಳ ಮಹತ್ವದ ಕಾರ್ಯವೆಂಬದಾಗಿ ಋಷಿಗಳಿಂದ ಹೇಳಲ್ಪಟ್ಟಿತು.

ಬ್ರಾಹ್ಮಣಃಕ್ಷತ್ರಿಯೋವೈಶ್ಯಃ ಶೂದ್ರೋವಾಚರಿತವ್ರತಃ। ಗಾಯತ್ರೀಂಮಮವಾದೇವೀಂ ಸಾವಿತ್ರೀಂವಾ ಜಪೇತ್‌ತತಃ॥ (ವೃದ್ಧಗೌತಮಸೂತ್ರ ಅ ೧೬) ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ನಾಲ್ಕುವರ್ಣದವರು ಗಾಯತ್ರೀಮಂತ್ರದ ಜಪಮಾಡಬೇಕು. “ಶೂದ್ರಾಣಾಮದುಷ್ಟಕರ್ಮಣಾಮುಪನಯನಂ। (ಪಾರಸ್ಕರ ಗೃಹ್ಯಸೂತ್ರಂ ಕಾಂ. ೨)” ದುಷ್ಟಕರ್ಮ (ಹಿಂಸಾದಿ) ರಹಿತಶೂದ್ರರಿಗೆ ಅವಶ್ಯ ಉಪನಯನ ಮಾಡಲಿಕ್ಕೆ ಬೇಕು. ಅವರಿಗೆ ಉಪನಯನ ಅಧಿಕಾರವುಂಟು. ಉಪನಯನವಾದಮೇಲೆ ವೇದಾಧ್ಯಯನ ಸ್ವತಸ್ಸಿದ್ಧ ಅದೆ. “ಶೂದ್ರಾಣಾಂಬ್ರಹ್ಮಚರ್ಯತ್ವಂಮುನಿಭಿಃಕೈಶ್ಚಿ ದಿಷ್ಯತೆ॥ (ಯಾಜ್ಞವಲ್ಕ್ಯಯೋಗ ಅ. ೨)” ಕೆಲ ಮುನಿಗಳಿಂದ ಶೂದ್ರರಿಗೆ ಬ್ರಹ್ಮಚರ್ಯವು ಇಚ್ಛಿಸಲ್ಪಡುತ್ತಿದೆ. ಬ್ರಹ್ಮಚರ್ಯವೆಂದರೆ– “ಬ್ರಹ್ಮ ವೇದಃ ತದಧ್ಯಯನಾರ್ಥಂ ಚರ್ಯಂ ಆಚರಣೀಯಂ ಭೈಕ್ಷಚರ್ಯೋರ್ಧ್ವರೇತಸ್ಕತ್ವಾದಿಕಂ ಬ್ರಹ್ಮಚಾರಿಭಿರನುಷ್ಠೀಯಮಾನಂ ಕರ್ಮ ಬ್ರಹ್ಮಚರ್ಯಂ” ಬ್ರಹ್ಮವೆಂದರೆ ವೇದ ಅಧ್ಯಯನಕ್ಕೋಸ್ಕರ ಅವಶ್ಯವಾಗಿ ಆಚರಿಸತಕ್ಕ ಇಂದ್ರಿಯನಿಗ್ರಹಾದಿ ಕರ್ಮವೇ ಬ್ರಹ್ಮಚರ್ಯವೆನಿಸುವುದು. ಇಂತಹ ಬ್ರಹ್ಮಚರ್ಯವು ಜಗತ್ತಿನ ಸರ್ವಮಾನವಪ್ರಾಣಿಗಳಿಂದಲೂ ಧರಿಸತಕ್ಕದು.

ಇದುವರೆಗೆ ನಾನು ಹೇಳಿಕೊಟ್ಟ ಮಹರ್ಷಿಗಳ ವಚನಗಳನ್ನೂ ಹಾಗೂ ಪರಮ ದಯಾಳುವಾದ ಪರಮಾತ್ಮನ ಆಜ್ಞೆಯನ್ನೂ ನೋಡದೆ ಅದನ್ನು ವಿಚಾರಮಾಡದೆ ಅಥವಾ ನೋಡಿದ್ದರೆ ಅದನ್ನು ತಿರಸ್ಕಾರಮಾಡಿ ರಾಮಾನುಜ ಮಾಧ್ವ ಶಂಕರಾಚಾರ್ಯ ಮೊದಲಾದವರು ತಮ್ಮ ಕುದೃಷ್ಟಿಯನ್ನು ಹೊರಗೆಡವಿರುವರು. ಅದರಲ್ಲಿ ಅತಿ ವಿಖ್ಯಾತಪಂಡಿತರೆನಿಸಿದ ಆದ್ಯ ಶಂಕರಾಚಾರ್ಯರು ಅದ್ವೈತಪ್ರತಿಪಾದಕವಾದ ತಮ್ಮ ಶಾಂಕರ ಭಾಷ್ಯ (ಬ್ರಹ್ಮಸೂತ್ರ) ದ ೧ ನೆಯ ಅಧ್ಯಾಯ, ೩ ನೆಯ ಪಾದ, ೩೮ ನೆಯ ಸೂತ್ರದಲ್ಲಿ ಬರೆದಿರುವುದೇನೆಂದರೆ–

ಇತಶ್ಚನಶೂದ್ರಸ್ಯಾಧಿಕಾರಃ। ಯದಸ್ಯಸ್ಮೃತೇಃ ಶ್ರವಣಾಧ್ಯಯನಾರ್ಥಪ್ರತಿಷೇಧೋಭವತಿ। ವೇದಶ್ರವಣಪ್ರತಿಷೇಧಸ್ತಾವತ್—ಅಥಾಸ್ಯವೇದಮುಪಶೃಣ್ವತಸ್ತ್ರಪುಜತುಭ್ಯಾಂ ಶ್ರೋತ್ರಪ್ರತಿಪೂರಣಂ (ಗೌ. ಧರ್ಮ ೧೨, ೪) ಇತಿ। ಪದ್ಯುಹವಾ ಏತಚ್ಛ್ಮಶಾನಂ ಯಚ್ಛೂದ್ರಸ್ತಸ್ಮಾಚ್ಛೂದ್ರ ಸಮೀಪೇನಾಧ್ಯೇತವ್ಯಂ। (ವಾ. ಧರ್ಮ ೧೮, ೧೧) ಇತಿ ಚ। ಅತ ಏವಾಧ್ಯಯನ ಪ್ರತಿಷೇಧೋಯಸ್ಯಹಿಸಮೀಪೇಪಿನಾಧ್ಯೇತವ್ಯಂಭವತಿಸಕಥಮಶ್ರುತಮಧೀಯಾತ। ಭವತಿಚ “ವೇದೋಚ್ಚಾರಣೇ ಜಿಹ್ವಾಛೇದೋಧಾರಣೇಶರೀರಭೇದಃ” (ಗೌ ಧರ್ಮ ೧೨, ೫, ೬,) ಇತಿ। ಅತ ಏವಚಾರ್ಥಾದರ್ಥಜ್ಞಾನಾನುಷ್ಠಾನಯೋಃ ಪ್ರತಿಷೇಧೋ ಭವತಿ—ನ ಶೂದ್ರಾಯಮತಿಂದದ್ಯಾತ್ (ಮನು ೪, ೮) ಇತಿ। ದ್ವಿಜಾತೀನಾಮಧ್ಯಯನಮಿಜ್ಯಾದಾನಂ। (ಗೌ. ೧, ೧) ಇತಿ ಚ। “ಶ್ರಾವಯೇಚ್ಚತುರೋವರ್ಣಾನ್” (ಮಹಾಭಾರತ) ಇತಿಚೇತಿಹಾಸಪುರಾಣಾಧಿಗಮೇಚಾತುರ್ವರ್ಣ್ಯಸ್ಯಾಧಿಕಾರಸ್ಮರಣಾತ್। ವೇದಪೂರ್ವಕಸ್ತುನಾಸ್ತ್ಯಧಿಕಾರಃ ಶೂದ್ರಾಣಾಮಿತಿಸ್ಥಿತಂ॥೩೮॥ ಶೂದ್ರನು ವೇದಶ್ರವಣಮಾಡುವುದು ಹಾಗೂ ವೇದಾಧ್ಯಯನಮಾಡುವುದು ಮತ್ತು ವೇದಾರ್ಥಜ್ಞಾನದಂತೆ ಅನುಷ್ಠಾನಮಾಡುವುದು ನಿಷೇಧವಿರುವುದೆಂತಲೂ, ಒಂದುವೇಳೆ ಯಾವನಾದರೊಬ್ಬ ಬ್ರಾಹ್ಮಣನು ವೇದಪಾಠಮಾಡುವುದನ್ನು ಕೇಳಿದರೆ ಆ ಶೂದ್ರನು ಕಿವಿಗಳನ್ನು ಕಾಸಿದ ಸೀಸಅರಗುಗಳಿಂದ ತುಂಬಬೇಕೆಂತಲೂ (ಅರ್ಥಾತ್ ಕಿವಿಯಲ್ಲಿ ಕಾಸಿದ ಸೀಸವನ್ನು ಹೊಯ್ಯಬೇಕೆಂತಲೂ) ವೇದಾಧ್ಯಯನ ಮಾಡಿದ್ದಾದರೆ ನಾಲಗೆಯನ್ನು ಛೇದಿಸಬೇಕೆಂತಲೂ ಧಾರಣ ಮಾಡಿದರೆ ಶರೀರ ಛೇದಮಾಡಬೇಕೆಂತಲೂ ಅವನ ಸಮೀಪದಲ್ಲಿ ಯಾವಬ್ರಾಹ್ಮಣನೂ ವೇದಾಧ್ಯಯನ ಮಾಡಬಾರದೆಂತಲೂ, ವೇದವಿಹಿತ ವೇದಾಧಿಕಾರ ಶೂದ್ರನಿಗೆ ಇಲ್ಲವೆಂತಲೂ ಬರೆದಿರುವರು. ಮಹನೀಯರೇ! ಜಗತ್ತಿನಲ್ಲಿರುವ ಪ್ರಾಣಿಮಾತ್ರವನ್ನು ಆತ್ಮವತ್ ತಿಳಿಯತಕ್ಕ ಅದ್ವೈತವಾದಿಗಳು ಕೆಲವು ಕಠೋರ ಪ್ರಕ್ಷಿಪ್ತ ಶ್ಲೋಕಗಳನ್ನು ಪ್ರಮಾಣೀಕರಿಸಿ ಶೂದ್ರನ ಅನಧಿಕಾರವನ್ನು ಮನಸ್ಸಿನಲ್ಲಿ ದೃಢಮಾಡಿಕೊಂಡಿರುವುದಂನೋಡಿದರೆ, ಇವರ ಸ್ವಾರ್ಥಮತ್ಸರ ಅಸೂಯಾದಿ ಗುಣಗಳು ಎಷ್ಟರಮಟ್ಟಿಗೆ ತುಂಬಿದ್ದವೆನ್ನುವುದನ್ನು ವಾಚಕರೇ ಊಹಿಸಬಹುದು. ಇವರೇ ಇದೇ ಗ್ರಂಥದ ಮತ್ತೊಂದು ಸ್ಥಳದಲ್ಲಿ ಮಹರ್ಷಿಗಳ “ಸರ್ವಭೂತೇಷುಚಾತ್ಮಾನಂ ಸರ್ವಭೂತಾನಿಚಾತ್ಮನಿ। ಸಂಪಶ್ಯನ್ನಾತ್ಮಯಾಜೀ ವೈಸ್ವಾರಾಜ್ಯಮಧಿಗಚ್ಛತಿ॥” ಎಂಬೀ ಸರ್ವಾತ್ಮಭಾವದರ್ಶನ ಶ್ಲೋಕವನ್ನು ಉಲ್ಲೇಖಿಸಿರುವರು. ಸುಜ್ಞರೆ! ಇವರ ಶಾಸ್ತ್ರವು ಒಂದು ರೀತಿಯಿಂದ ಪೂರ್ವದಲ್ಲಿ ಉಪಯೋಗಕ್ಕೆ ಬಿದ್ದಿದ್ದರೂ ಸದ್ಯಸ್ಥಿತಿಯಲ್ಲಿ ಅನುಪಯೋಗವೇ ಎಂದು ಕಂಡುಬರುವುದು. ಇಂಥಾ ಪಕ್ಷಪಾತಿಗಳು ಹೇಳುವ ಶಾಸ್ತ್ರವು ದೇಶಕ್ಕೆ ಹಿತವನ್ನಾದರೂ ಏನುಮಾಡೀತು? ಎಂದಿಗೂ ಮಾಡಲಾರದು. ಈ ಶಾಂಕರಭಾಷ್ಯದ ಟೀಕಾಕಾರ ಆನಂದಗಿರಿಯು ಕೆಳಗಿನ ವಾಕ್ಯಗಳನ್ನು ಬರೆದಿರುವನು. “ಶ್ರವಣೇತಿ। ಪದ್ಯಮಾನಂವೇದಂಸಮೀಪೇಪ್ರಮಾದಾದೇವಶೃಣ್ವತಃ ಶೂದ್ರಸ್ಯಪ್ರತ್ಯವಾಯಪ್ರಾಯಶ್ಚಿತ್ತಾಲೋಚನಾಯಾಂ ಸೀಸಲಾಕ್ಷಾಭ್ಯಾಂ ಸಂತಪ್ತಾಭ್ಯಾಂ ಅತಿದ್ರುತಾಭ್ಯಾಂ ಶ್ರೋತ್ರದ್ವಯಪೂರಣಂ ಕಾರ್ಯಮಿತ್ಯರ್ಥಃ” ಒಳ್ಳೆಯ ಕಾದಿದ್ದ ಅತಿ ತೀಕ್ಷ್ಣವಾಗಿದ್ದ ಸೀಸಲಾಕ್ಷಗಳಿಂದ ವೇದಪಠನಕೇಳುವ ಶೂದ್ರನ ಕಿವಿಗಳನ್ನು ತುಂಬಬೇಕೆಂತಲೂ ವಿಶೇಷವಾಗಿ ಬರೆದಿರುವನು. ಇನ್ನು ಈಗಿನ ಸನ್ಯಾಸಿಗಳಂತೂ ಪರಮದಯಾಳುವಾದ ಪರಮಾತ್ಮನಿಂದ ನಿರ್ಮಿತವಾದ ಜಗತ್ತಿನ ಹಿತಕ್ಕಾಗಿ ಪ್ರಚಂಡಪ್ರಕಾಶವನ್ನು ಕೊಡುವ ಸೂರ್ಯನಿದ್ದಾಗ್ಯೂ ಇತರ ಮಾನವಪ್ರಾಣಿಗಳಿಗೆ ತಿನ್ನಲಿಕ್ಕೆ ತುಪ್ಪವಿಲ್ಲದಿದ್ದರೂ ಇವರು ತಮ್ಮ ನಿಜವಾದ ವೇದಾರ್ಥಜ್ಞಾನವೆಂಬ ಪ್ರಜ್ವಲಿತ ದೀಪಿಕೆಯಿಂದ ನಿತ್ಯನಿರತಿಶಯಾನಂದಾತ್ಮಬೋಧೆ ಮಾಡುವುದನ್ನು ಹಾಗೂ ಅದಕ್ಕೋಸ್ಕರ ಸ್ವೀಕರಿಸಿದಾಶ್ರಮವನ್ನೂ ಮರೆತು ಅಷ್ಟೈಶ್ವರ್ಯಮದದಿಂಚ ತುಪ್ಪದ ಹಗಲುದೀವಟಿಗೆಯನ್ನು ಹಿಡಿಸಿಕೊಂಡು ಮೆರೆಯುತ್ತಿರುವರು. ಹಾಗೂ ಜಗತ್ತಿನಲ್ಲಿ ಸದ್ಯಕ್ಕೆ ಬ್ರಾಹ್ಮಣಶೂದ್ರರೆಂಬೀ ಎರಡೇಜಾತಿಗಳು ಉಳಿದಿರುವುವೆಂತಲೂ ಕ್ಷತ್ರಿಯ ವೈಶ್ಯಜಾತಿಗಳು ನಿರ್ಮೂಲವಾಗಿರುವುವೆಂತಲೂ, ನಾವೇ ಬ್ರಾಹ್ಮಣರು ಇತರರೆಲ್ಲಾ ಶೂದ್ರರೆಂಬೀ ಸ್ವಾರ್ಥಮತ್ಸರಾದಿಗಳಿಂದ ಬರೆದ ಕೆಲವು ಪ್ರಕ್ಷಿಪ್ತಶ್ಲೋಕಗಳನ್ನು ಪ್ರತಿಪಾದಿಸುತ್ತ ತಿರುಗುತ್ತಿರುವರು.

ದೇಶಬಾಂಧವರೇ! ಪರಮದಯಾಳುಗಳಾದ ಯಾವ ಸುವಿಚಾರಿಗಳು ಜಗತ್ತಿನ ಹಿತಕ್ಕೋಸ್ಕರವಾಗಿ ಅಹೋರಾತ್ರಿ ಚಿಂತನಮಾಡಿ, ಜಗತ್ತಿನ ಸರ್ವಮಾನವ ಪ್ರಾಣಿಗಳಿಗೆ ‘ವೇದಾಧ್ಯಯನಮಾಡಿ ಧನ್ಯರಾಗಿರಿ’ ಎಂದು ಉಪದೇಶವನ್ನು ಮಾಡಿದರೋ, ಮಾಡುತ್ತಿರುವರೋ ಅಂಥವರಿಗೋಸ್ಕರ ಅಜ್ಞಾನಿಗಳಾದ ನಾವು ದ್ವೇಷಾಸೂಯಗಳಿಂದ ದುಷ್ಟಶಬ್ದೋಚ್ಚಾರಣಮಾಡುವುದು ಹಾಗೂಜಗತ್ತಿನ ಹಿತವನ್ನರಿಯದೆ ತಮ್ಮ ನಿಜವಾದ ಧರ್ಮಶ್ರೇಣಿಗಳನ್ನು ತಿಳಿಯದೆ ಅತ್ಯಂತ ಸ್ವಾರ್ಥಿಗಳಾಗಿ ಪರರನ್ನು ಕಂಡರೆ ದ್ವೇಷಾಸೂಯಾದಿಗಳ ಮಾಡುವವರನ್ನು ತಲೆಯಮೇಲಿಟ್ಟುಕೊಂಡು ಕುಣಿಯುವುದು ಎಷ್ಟೊಂದು ಅಜ್ಞಾನಕ್ಕೆ ಕಾರಣವೆನ್ನುವುದನ್ನು ನಾವೇ ವಿಚಾರಮಾಡಿಕೊಳ್ಳಬೇಕು.

ಸುಜ್ಞರೆ! ಸ್ವಾರ್ಥ ಜನರ ಹೇಳಿಕೆಯ ಕಡೆಗೆ ಲಕ್ಷ್ಯಗೊಡದೆ ಪರಮಾತ್ಮನಿಂದ ಜಗತ್ತಿನ ಸರ್ವಮಾನವಪ್ರಾಣಿಗಳ ಹಿತಾರ್ಥವಾಗಿ ನಿರ್ಮಿತವಾದೀ ಪೂಜ್ಯವೇದಗಳನ್ನು ಅಧ್ಯಯನಮಾಡಿ ಪರಮಧನ್ಯರಾಗುವಿರೆಂದು ನಂಬುವೆನು.

ವಿರೂಪಾಕ್ಷವಡಿಯರ್, ಬ್ರಹ್ಮಚಾರಿ.

ತುರ್ಕಿ–ಇಟಲಿಯವರ ಯುದ್ಧವು.

ಅಕ್ಟೋಬರ್ ತಾ॥ ೨೬.–ಟ್ರಿಪೋಲಿ ಪಟ್ಟಣದ ಹೊರಗಡೆ ಯುದ್ಧವು ನಡೆಯುತ್ತಿರುವಾಗ್ಗೆ ಊರೊಳಗಿನ ಬೀದಿಗಳಲ್ಲಿ ೧॥ ಗಂಟೆಯ ವರೆಗೆ ಕದನವು ನಡೆದು ೧೦ ಜನ ಇಟಲಿಯವರು ಮನೆಯ ಮಾಡಗಳಿಂದ ಗುಂಡು ಹೊಡೆಯಲ್ಪಟ್ಟು ಸತ್ತು ಹೋಗಲು, ಇಟಲಿಯವರು ಎಲ್ಲ ದಿಕ್ಕಿಗೂ ಗುಂಡುಗಳನ್ನು ಹೊಡೆಯುತ ಮನೆಗಳಿಗೆನುಗ್ಗಿ ಆಯುಧಧಾರಿಯಾದ ಪ್ರತಿಯೊಬ್ಬನನ್ನೂ ಕೊಂದು, ಅನೇಕರನ್ನು ಸೆರೆ ಹಿಡಿದರು. ಇಟಲಿಯ ಆಕಾಶ ವೈಮಾನಿಕರು ಶತೃಗಳು ಅವಿತುಕೊಂಡಿರುವ ಸ್ಥಳಗಳನ್ನು ಮತ್ತೂ ಅವರ ವಿದ್ಯಮಾನವನ್ನು ಕಂಡು ಹಿಡಿದು ಇಟಲಿಯವರ ಫಿರಂಗಿಗಳೂ, ಯುದ್ಧನಾವೆಗಳೂ ಶತೃಗಳಿರತಕ್ಕ ಸ್ಥಳಗಳಿಗೆ ಹೋಗಲನುಕೂಲವನ್ನು ಮಾಡಿಕೊಡುತ್ತಿದ್ದರು. ಬೀದಿಗಳಲ್ಲಾದ ಕದನದಲ್ಲಿ ಇಟಲಿಯವರ ಕಡೆ ಸತ್ತವರು ಮತ್ತೂ ಗಾಯ ಪಡೆದವರು ೧೮೦ ಜನರವರೆಗಿರಬಹುದು. ತಾ॥ ೨೩ ರಲ್ಲಾದ ಯುದ್ಧದಲ್ಲಿ ಇಟಲಿಯವರ ಕಡೆ ಒಟ್ಟು ೩೦೦ ಜನರು ಸತ್ತು ೫೦೦ ಜನರು ಗಾಯ ಪಡೆದರೆಂದು ಲಂಡನ್ನಿನಲ್ಲಿರುವ ತುರ್ಕಿಯ ರಾಯಭಾರಿಯು ತಿಳಿಸುತ್ತಾನೆ. ತಾ॥ ೨೬ ರಲ್ಲಾದ ಕದನದಲ್ಲಿ ೧೦೦೦ ಅರಬ್ಬಿಯರು ಮತ್ತೂ ತುರ್ಕಿಯರು ಮಡಿದು ಅಷ್ಟೇಜನರು ಗಾಯವಡೆದರು. ಆದರೆ ಇಟಲಿಯವರ ಕಡೆ ಸತ್ತವರು ಮತ್ತೂ ಗಾಯವಡೆದವರು ೧೦೦ ಜನ. ಇಟಲಿಯವರು ತಮ್ಮಲ್ಲಿ ಕೆಲರನ್ನು ಶತ್ರುಗಳು ಹಿಂದುಗಡೆಯಿಂದ ಬಂದು ಮೋಸದಿಂದ ಗುಂಡನ್ನು ಹೊಡೆದು ಕೊಂದುದಕ್ಕಾಗಿ ಮರುಭೂಮಿಯಲ್ಲಿ ನೀರಿನಬಳಿಯಿರುವ ಗ್ರಾಮಗಳನ್ನೂ, ಗುಡಿಸಲುಗಳನ್ನೂ ಸುಟ್ಟು, ಅಲ್ಲಿಯ ನಿವಾಸಿಗಳನ್ನು ಪಟ್ಟಣಕ್ಕೆ ಸಾಗಿಸಿ, ಅವರಲ್ಲಿ ೧೦೦ ಜನರನ್ನು ದ್ವೀಪಗಳಲ್ಲಿಯ ವಾಸಕ್ಕೆ ಕಳುಹಿಸಿದರು. ಇಟಲಿಯವರು ಇನ್ನೂ ೧೫,೦೦೦ ಸೇನೆಯು ತಮ್ಮ ಸಹಾಯಕ್ಕೆ ಬರುವವರೆಗೂ ಮುಂದಕ್ಕೆ ಹೋಗುವುದಿಲ್ಲವಾಗಿ ಗೊತ್ತಾಗಿದೆ. ಇಟಲಿಯವರು ಮನೆಮನೆಗೆ ನುಗ್ಗಿ ಆಯುಧಗಳನ್ನು ಶೋಧಿಸಿ ತೆಗೆದುಕೊಂಡು ನಿತ್ಯದಲ್ಲೂ ೪೦–೫೦ ಅರಬ್ಬಿಯವರನ್ನು ಗುಂಡಿನಿಂದ ಸುಡುತ್ತಿರುವರು

ತಾ॥ ೨೮– ಟ್ರಿಪೋಲಿ ಪಟ್ಟಣದ ಹಿಂಭಾಗದಲ್ಲಿ ೬೦೦೦೦ ತುರ್ಕಿಯವರೂ, ಅರಬ್ಬಿಯವರೂ ಇರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಇವರೆಲ್ಲರೂ ಸಾಕಷ್ಟು ಆಯುಧಗಳನ್ನೂ, ಆಹಾರಸಾಮಗ್ರಿಗಳನ್ನೂ ಶೇಖರಿಸಿಕೊಂಡು ಬಹು ಭದ್ರವಾದ ಸ್ಥಳದಲ್ಲಿ ನಿಂತಿರುತ್ತಾರೆ. ಟ್ರಿಪೋಲಿಯ ಒಳಗಡೆಯಿಂದ ತುರ್ಕಿಯವರು ಬಂದು ಸೇರುತ್ತಿದಾರೆ. ಇನ್ವೆರ್‌ಬೆ ಎಂಬಾತನು ವೇಷಾಂತರದಿಂದ ಈಜಿಪ್ಟನ್ನು ದಾಂಟಿ ಬಂದು ಮತಸಂರಕ್ಷಣೆಗಾಗಿ ಇಟಲಿಯವರ ಕೂಡ ಯುದ್ಧಮಾಡಲು ಎಲ್ಲರೂ ಒಟ್ಟುಗೂಡಬೇಕೆಂದು ಬೋಧಿಸಿದನೆಂದು ವರ್ತಮಾನವಿದೆ.

ತಾ॥ ೨೯– ಇನ್ವೆರ್‌ಬೆ ಎಂಬುವನು ವೇಷಾಂತರದಿಂದ ಬಂದು ಜನರಿಗೆ ಬೋಧಿಸಿದುದು ಸುಳ್ಳೆಂದು ಗೊತ್ತಾಯಿತು. ತುರ್ಕಿಯವರು ನೆನ್ನೆಯದಿನ ಬ್ಯೂಮೆಲಿಯಾನವೆಲ್ಸ್ ಎಂಬಲ್ಲಿಗೆ ಎರಡುವೇಳೆ ಮುತ್ತಿಗೆ ಹಾಕಿ ಹಿಂದಕ್ಕೋಡಿಸಲ್ಪಟ್ಟರು. ವಿಕ್ಟರ್ ಎಮಾನ್ಯುಯಲ್ ದೊರೆಯು ತನ್ನ ಇಟಲಿಯ ನೌಕಾ ಮತ್ತೂ ಭೂ ಸೇನೆಯು ಟ್ರಿಪೋಲಿಯಲ್ಲಿ ಮಾಡಿದ ಸಾಹಸಕ್ಕಾಗಿ ತನ್ನ ಮೆಚ್ಚುಗೆಯನ್ನು ತಿಳಿಸಿರುತ್ತಾನೆ. ಈ ಬೆಗಾದ ಯುದ್ಧದಲ್ಲಿ ಶತ್ರುಗಳ ಕಡೆ ೨೦೦೦ ಜನರು ಸತ್ತು ೪೦೦೦ ಜನರು ಗಾಯವಡೆದರೆಂದು ಇಟಲಿಯಧಿಕಾರಿಗಳು ತಿಳಿಸಿರುತ್ತಾರೆ. ತುರ್ಕಿಯವರು ಹಾಪ್ಸ್‌ಗೆ ಮುತ್ತಿಗೆಯನ್ನು ಹಾಕಿ ವಿಶೇಷ ನಷ್ಟವನ್ನು ಹೊಂದಿ ಹಿಮ್ಮೆಟ್ಟಿದರು. ಸೀಮಾಂತ ಶಿಕ್ಷೆಗೆ ಗುರಿಮಾಡಲ್ಪಟ್ಟ ಅರಬ್ಬಿಯವರಲ್ಲಿ ೯೨೦ ಜನರು ಉಸ್ತಿಕಾದ್ವೀಪದಲ್ಲೂ, ೯೫೫ ಜನರು ಟ್ರಿಮಿಟಿ ದ್ವೀಪದಲ್ಲೂ ಬಂದಿಳಿದಿರುತ್ತಾರೆ. ಆಸ್ಪತ್ರೆಯನ್ನೊಳಗೊಂಡಿರುವ ಇಟಲಿಯವರ ಹಡಗು ಟ್ರಿಪೋಲಿಗೆ ಹೊರಟಿರುತ್ತದೆ. ಕಲಕತ್ತಾದ ಮಹಮ್ಮದೀಯರು ಕಳೆದವಾರ ಸಭೆಗೂಡಿದ್ದು ಇಟಲಿಯವರ ಪದಾರ್ಥಗಳಿಗೆ ಬಹಿಷ್ಕಾರವನ್ನು ಹಾಕಬೇಕೆಂದು ನಿರ್ಧರಿಸಿದರಷ್ಟೆ. ಆದರೆ ಯಾವ ವಿಧವಾಗಿ ಬಹಿಷ್ಕರಿಸಬೇಕೆಂಬುದು ಮಾತ್ರ ಗೊತ್ತಾಗಿಲ್ಲವು. ಕೆಲ ಧನಾಢ್ಯರಾದ ಮಹಮ್ಮದೀಯರು ಕಲಕತ್ತಾದಲ್ಲಿ ಈಗ ಇಟಲಿಯವರಿಂದ ಉಪಹಾರ ಗೃಹಗಳಿಗೆ ಬದಲು ಬೇರೆ ಉಪಹಾರಗೃಹಗಳನ್ನು ಇಡಿಸಿ, ಅವುಗಳನ್ನು ಸ್ಪರ್ಧಿಸಬೇಕೆಂದು ಆಲೋಚಿಸಿರುವರು.

ತಾ॥ ೩೦.– ಕಳೆದ ತಾ॥ ೨೬ ರಲ್ಲಿ ಯುದ್ಧಾರಂಭವಾದಾಗಳಿಂದ ಪಟ್ಟಣದೊಳಗೂ, ಮರಭೂಮಿಯಲ್ಲಿಯ ಗ್ರಾಮದೊಳಗೂ ಅರಬ್ಬಿಯವರು ಇದ್ದುಕೊಂಡು ಇಟಲಿಯವರನ್ನು ಮುತ್ತಿಗೆ ಹಾಕಿದುದರಿಂದ, ಇಟಲಿಯವರು ಕೋಪದಿಂದ ದಯೆಯನ್ನು ತೋರಿಸದೆ ೩ ದಿವಸಗಳ ವರೆಗೆ ಪ್ರತಿಯೊಂದು ಮನೆಯನ್ನೂ ಹುಡುಕಿ ಅನುಮಾನಗ್ರಸ್ತರಾದ ಅಪರಾಧಿ ಮತ್ತೂ ನಿರಪರಾಧಿಗಳೂ, ದೊಡ್ಡವರೂ, ಚಿಕ್ಕವರೂ ಎಂಬ ತಾರತಮ್ಯವಿಲ್ಲದೆ ಅವರನ್ನೆಲ್ಲಾ ಗುಂಡಿನಿಂದ ಸುಟ್ಟದಲ್ಲದೆ, ಅನೇಕ ಹೆಂಗುಸರನ್ನೂ ಕೊಂದುಹಾಕಿದರು.

ತಾ॥ ೩೧.– ತಾ॥ ೨೩ ರಿಂದ ತಾ॥ ೨೬ ರ ವರೆಗೆ ಇಟಲಿಯವರ ಕಡೆ ೧೩ ಅಧಿಕಾರಿಗಳೂ, ೩೬೭ ಜನರೂ ಕೊಲ್ಲಲ್ಪಟ್ಟು, ೧೬ ಅಧಿಕಾರಿಗಳೂ, ೧೫೫ ಜನರೂ ಗಾಯವಡೆದಿರುವರೆಂದೂ, ಶತ್ರುಗಳ ಪಕ್ಷದಲ್ಲಿ ೪೦೦೦ ಜನ ಅರಬ್ಬಿಯವರು ಕೊಲ್ಲಲ್ಪಟ್ಟರೆಂದೂ ಗೊತ್ತಾಗಿದೆ.

ಇಟಲಿಯವರು ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಳ್ಳಲು ಜನರ ಅಭಿಮತವನ್ನು ಸಂಪಾದಿಸುವ ವಿಚಾರದಲ್ಲಿ ಸರ್ಕಾರದವರಿಗೆ ಸಹಾಯಮಾಡಿದ ವಾರ್ತಾಪತ್ರಿಕೆಗಳಿಗೆ, ಅನ್ಯದೇಶದ ವೃತ್ತ ಪತ್ರಿಕೆಗಳಿಂದ ತಿಳಿದು ಬರುವ ವರ್ತಮಾನವನ್ನು ಇಟಲಿಯವರು ತಿಳುಹದೆ ಬಚ್ಚಿಟ್ಟುದಕ್ಕಾಗಿ ಅವು ಕೋಪಗೊಂಡು ನಿಂದಿಸ ಹತ್ತಿವೆ. ಅತ್ತಲಾಗಿ ತುರ್ಕಿಯವರಿಗೆ ವಿಶೇಷ ಜಯವಾಯಿತೆಂದು ಕಾನಸ್ಟಾಂಟಿನೋಪಲ್ಲಿನ ಪತ್ರಿಕೆಗಳು ಪ್ರಕಟಿಸಿ ಕೋಲಾಹಲವನ್ನು ಮಾಡುತ್ತಿರುವವು. ಇಟಲಿಯವರಿಗಪಜಯವಾದುದು ಸುಳ್ಳೆಂದು ಇಟಲಿಯ ಸರ್ಕಾರದವರು ತಿಳಿಸಿರುತ್ತಾರೆ.

ನವಂಬರ್ ತಾ॥ ೧.– ಯುದ್ಧದಲ್ಲಿಮಡಿದ ಮತ್ತೂ ಗಾಯವಡೆದ ಇಟಲಿಯವರ ಕುಟುಂಬದವರ ಸಹಾಯಾರ್ಥವಾಗಿಯೂ ರೆಡ್‌ಕ್ರಾಸ್ ಸಂಘಕ್ಕಾಗಿಯೂ ಇಟಲಿಯ ದೊರೆಯು ೧೨೦೦೦೦ ರೂ, ಗಳನ್ನು ಕೊಟ್ಟಿರುವನು. ಈಚೆಗೆ ಇನ್ನೂ ೮೦೦ ಅರಬ್ಬಿಯವರು ಸೀಮಾಂತ ಶಿಕ್ಷೆಗೆ ಗುರಿಮಾಡಲ್ಪಟ್ಟು ಟ್ರಿಮಿಟಿ ದ್ವೀಪಕ್ಕೆ ಕಳುಹಲ್ಪಟ್ಟರು. ಜರ್ಮನಿಯ ಚಕ್ರವರ್ತಿಯು ತಾ॥ ೩೧ರಲ್ಲಿ ಪೂರ್ವ ಆಫ್ರಿಕಾದಲ್ಲಿ ಜರ್ಮನಿಗೆ ಸೇರಿದ ಸ್ವಾಸ್ಥ್ಯಗಳ ಪಾದ್ರಿಗಳನ್ನು ಬರಮಾಡಿಕೊಂಡು, ಸ್ವಾಸ್ಥ್ಯದಭಿವೃದ್ಧಿಯ ವಿಚಾರವನ್ನು ಕೇಳಿ ಆ ಸ್ಥಳೀಯರು ಒಂದು ಮತಾವಲಂಬಿಗಳಾಗಿದ್ದು ಅದಕ್ಕಾಗಿ ಪಾಡುಪಡಬೇಕೆಂದು ಹೇಳಿದುದಲ್ಲದೆ, ಸ್ವಾಸ್ಥ್ಯಗಳಿಗೆ ಅಪಾಯಕರವಾಗಿರುವ ಇಸಲಾಮಾ ಮತವನ್ನು ಅಡಗಿಸಲು ಬಹು ಸಾಹಸಪಡಬೇಕೆಂದು ಎಚ್ಚರಿಸಿದನು. ಜರ್ಮನಿಯ ಚಕ್ರವರ್ತಿಯು ಈ ಯುದ್ಧಸಂದರ್ಭದಲ್ಲಿ ಇಂತಹ ಅಭಿಪ್ರಾಯವನ್ನು ಸೂಚಿಸಿದುದು ತುರ್ಕಿಯ ಮಿತ್ರರಲ್ಲಿ ವಿರೋಧವನ್ನು ಹುಟ್ಟಿಸತಕ್ಕದಾಗಿದೆಯೆಂದು ಕೆಲ ಪತ್ರಿಕೆಗಳು ತರ್ಕಿಸುತ್ತಿವೆ. ಇಟಲಿಯವರು ಟ್ರಿಪೋಲಿಯಲ್ಲಿ ತಮಗಾದ ನಷ್ಟವನ್ನು ಹೇಳಿಕೊಳ್ಳುವದಕ್ಕಿಂತ ಅತಿಶಯವಾಗಿ ನಷ್ಟವಾಗಿರುತ್ತದೆ. ಮತ್ತೂ ಅವರು ನಿರೀಕ್ಷಿಸಿದ್ದದಕ್ಕಿಂತ ಹೆಚ್ಚು ಸಾಹಸಕಾರ್ಯವನ್ನು ಮಾಡಬೇಕಾಗಿ ಬಂದಿತು. ಇಟಲಿಯವರು ತಮಗಾದ ನಷ್ಟಕ್ಕೆ ಪ್ರತೀಕಾರವನ್ನು ಮಾಡುವಲ್ಲಿ ತೋರಿಸಿದ ಕ್ರೌರ್ಯಕ್ಕಾಗಿ ಅವರನ್ನು ಎಲ್ಲರೂ ದೂಷಿಸುತ್ತಿರುವರು. ತುರ್ಕಿಯವರು ಅಧೀನರಾಗುವಂತೆ ಅಥವಾ ಹೆಚ್ಚು ನಷ್ಟವನ್ನನುಭವಿಸುವಂತೆ ಮಾಡುವುದಕ್ಕಾಗಿ ಇಟಲಿಯವರು ಅವರಿಗೆ ಒಂದೇಕಡೆ ಸೇರಿರುವ ಚಿಕ್ಕ ಚಿಕ್ಕ ದ್ವೀಪಗಳು ಇರುವ ಸ್ಥಳಕ್ಕೆ ತಮ್ಮ ಯುದ್ಧನಾವೆಯನ್ನು ತಂದು ಗುಂಡನ್ನು ಹೊಡೆಯುತ್ತಿಸಿದ್ದಾರೆ. ಇಟಲಿಯ ವೈಮಾನಿಕನು ಟ್ರಿಪೋಲಿಯ ಹತ್ತಿರ ಬೀಡುಬಿಟ್ಟಿದ್ದ ಶತ್ರುಸೇನೆಯ ಮೇಲೆ ೪ ಸಿಡಿಮದ್ದನ್ನು ಹಾಕಿ ಅವರಿಗೆ ಅತ್ಯಂತ ಭಯೋತ್ಪಾತವನ್ನುಂಟುಮಾಡಿದನಲ್ಲದೆ ಇನ್ನೂ ಸಿಡಿಮದ್ದುಗಳನ್ನು ಹಾಕುವುದರಲ್ಲಿದಾನೆ. ಮಾಲ್ಟಾ ದ್ವೀಪದಲ್ಲಿ ವಾಂತಿಭೇದಿರೋಗವು ಪ್ರಾರ್ತವಾಗಿರುತ್ತದೆ.

ತಾ॥ ೨.– ತುರ್ಕಿಯವರು ತಾ॥ ೩೧ ಮತ್ತೂ ೧ ರಲ್ಲಿ ಪಟ್ಟಣಕ್ಕೆ ಕೆಲ ಗರ್ಭಸಾಟಿಯನ್ನು ಹೊಡೆದರು, ಆದರೆ ಅಪಾಯವೇನನ್ನೂ ಮಾಡಲಿಲ್ಲವು. ಇಟಲಿಯವರ ಗರ್ಭಸಾಟಿಯೊಂದು ಒಡೆದುಹೋಗಿ ೩ ಜನ ಸೈನಿಕರು ಪೆಟ್ಟನುತಿಂದರು. ಇಟಲಿಯವರಿಗೆ ವಿರೋಧವಾಗಿ ಬರೆಯಕೂಡದೆಂದು ಆಸ್ಟ್ರಿಯಾದ ಮಂತ್ರಿಯು ಪ್ರಸಿದ್ಧಮಾಡಿದ್ದಾಗ್ಯೂ ಆಸ್ಟ್ರಿಯಾದ ವೃತ್ತಪತ್ರಿಕೆಗಳು ಇಟಲಿಯವರಿಗೆ ವಿರೋಧವಾಗಿ ತುರ್ಕಿ ಸರ್ಕಾರದ ಹೇಳಿಕೆಯನ್ನೇ ಪ್ರಕಟಿಸುತ್ತ ಇಟಲಿಯವರ ಕೋಪವನ್ನು ಉದ್ರೇಕಿಸುತ್ತಿರುವುವು. ಇದರಮೇಲೆ ಆಸ್ಟ್ರಿಯಾದ ರಾಜಧಾನಿಯಾದ ವಿಯನ್ನಾದಲ್ಲಿರುವ ಇಟಲಿಯ ವೃತ್ತಪತ್ರಿಕೆಗಳ ಪ್ರತಿನಿಧಿಗಳು “ಆಸ್ಟ್ರಿಯಾದ ವೃತ್ತಪತ್ರಿಕೆಗಳು ತಮ್ಮ ಸಂಘದ ನಿಬಂಧನೆಗೆ ವ್ಯತಿರಿಕ್ತವಾಗಿ ನಡೆದು ಅವಮಾನವನ್ನುಂಟುಮಾಡುತ್ತಿವೆ” ಎಂದು ಪತ್ರಿಕಾ ಸಂಘಕ್ಕೆ ದೂರಿಕೊಂಡಿರುತ್ತಾರೆ. ಗ್ರೇಟ್ ಬ್ರಿಟನ್ನಿನವರು ಉಭಯ ರಾಜ್ಯಗಳಿಗೂ ಸಮಾಧಾನವನ್ನು ಮಾಡಲುಯತ್ನಿಸಬೇಕೆಂದು ಕೆಲ ಪತ್ರಿಕೆಗಳು ಸೂಚಿಸುತ್ತಿರುವುವು. ಮತ್ತು ರೈಟ್ ಆನರಬಲ್ ಸಯದ್ ಅಮೀರಲಿಯವರು, ಇಟಲಿಯವರು ತೋರಿಸುತ್ತಿರುವ ಕ್ರೂರಕೃತ್ಯವನ್ನು ಇಂಗ್ಲೆಂಡಿನ ಕ್ರೈಸ್ತರು ಅಣಗಿಸಲು ಪ್ರಯತ್ನಿಸಬೇಕೆಂದು ಟೈಂಸ್ ಪತ್ರಿಕೆಯ ಮೂಲಕ ಕೇಳಿಕೊಂಡಿರುವರು. “ಇಟಲಿಯವರ ವರ್ತನವು ನಿಗ್ರಹಿಸಲ್ಪಡದಿದ್ದರೆ ಇನ್ನು ಯೂರೋಪು ಮಾತಡಕ್ಕುದೆ ನಿದೆ? ಮುತ್ತಿಗೆ ಹಾಕುವವರ ಇಚ್ಛಾನುಸಾರ ಯುದ್ಧಮಾಡಬಲ್ಲವರನ್ನೂ, ಮಾಡಲಾರದವರನ್ನೂ ಬೇರ್ಪಡಿಸತಕ್ಕದಾಗಿದೆಯೆ? ಎಂದು ಪ್ರೊಫೆಸರ್ ಹಾಬ್ ಹೌಸ್‌ಯವರು ಕೇಳಿರುವರಲ್ಲದೆ, ಈ ಕ್ರೂರಕೃತ್ಯದ ಮೇಲಣ ಇಂಗ್ಲೀಯರಭಿಪ್ರಾಯದ ಪರಿಣಾಮವು ಏನಾಗುತ್ತದೆಂಬುದನ್ನು ಯೋಚಿಸಬೇಕಾಗಿ ಸರ್ ಜಾರ್ಜ್ ಟ್ರಿವೆಲಿಯರ್ನರವರು ಇಟಲಿಯವರನ್ನೆಚ್ಚರಿಸಿರುತ್ತಾರೆ. ಕಲಕತ್ತಾದಲ್ಲಿರುವ ಇಂಡಿಯನ್ ರೆಡ್ ಕ್ರೆಸೆಂಟ್ ಸೊಸೈಟಿಯೆಂಬ ಮಹಮ್ಮದೀಯ ಸಂಘದವರು ಹೆಚ್ಚುಗಟ್ಟಲೆಯಾಗಿ ಸಭೆ ಸೇರಿದ್ದು “ಮಹಮ್ಮದೀಯರ ಮನಸ್ಸಿಗುಂಟಾಗಿರುವ ನೋವನ್ನು ಪ್ರಕಾಶಗೊಳಿಸುವ ಇಂಡಿಯನ್ ರೆಡ್ ಕ್ರೆಸೆಂಟ್ ಸೊಸೈಟಿಯವರು, ತಮ್ಮ ಮಹಮ್ಮದೀಯ ಸಹೋದರರಮೇಲೆ ಇಟಲಿಯವರು ನಡೆಯಿಸುತ್ತಿರುವ ಅತ್ಯಾಚಾರವನ್ನು ವಿಶೇಷವಾಗಿ ಖಂಡಿಸುತ್ತಾರೆ. ಮತ್ತು ರಾಜಚಕ್ರವರ್ತಿಯವರೂ, ಬ್ರಿಟಿಷ್ ಜನರೂ ಕರುಣೆಯಿಂದಲೂ, ಪಾಶ್ಚಾತ್ಯನಾಗರಿಕತೆಯಿಂದಲೂ ದೃಷ್ಟಿಯನ್ನಿಟ್ಟು ಹೆಂಗುಸರು ಮತ್ತು ಮಕ್ಕಳು ಎಂಬ ತಾರತಮ್ಯವಿಲ್ಲದೆ ಸಂಹಾರವಮಾಡಲ್ಪಡುವುದನ್ನು ತಪ್ಪಿಸಬೇಕಾಗಿ ವಿಧೇಯತೆಯಿಂದ ಬೇಡಿಕೊಳ್ಳುತ್ತಾರೆ.” ಎಂದು ರಾಜಚಕ್ರವರ್ತಿಯವರಿಗೂ, ಬ್ರಿಟಿಷ್ ಪಾರ್ಲಿಮೆಂಟಿಗೂ, ಬ್ರಿಟಿಷ್ ವೃತ್ತಪತ್ರಿಕೆಗಳಿಗೂ ತಂತಿಯನ್ನು ಕೊಡತಕ್ಕದೆಂದು ನಿರ್ಧರಿಸಿದರು. ಈ ಸಂಘಕ್ಕೆ ೫೦,೦೦೦ ರೂ.ಗಳನ್ನು ಕೊಡಲು ವಾಗ್ದಾನವು ಮಾಡಲ್ಪಟ್ಟಿತು. ತುರ್ಕಿಯವರ ಸಹಾಯಾರ್ಥವಾಗಿ ಕೆಲಸಮಾಡಲು ಟ್ರಿಪೋಲಿಗೆ ಹೊರಡಬಿಚ್ಛಿಸುವಂತಹವರು ತಮ್ಮಲ್ಲಿಗೆ ಬರೆದುಕೊಳ್ಳಬೇಕೆಂದು ಪ್ರಕಟಿಸಿರುತ್ತಾರೆ. ಇಟಲಿಯವರು ಸೆರೆಹಿಡಿದ ಅರಬ್ಬಿಯವರನ್ನು ತಾರತಮ್ಯಜ್ಞಾನವಿಲ್ಲದೆ ಸಂಹರಿಸಿದರೆಂಬ ವದಂತಿಯು ಸುಳ್ಳೆಂದು ಇಟಲಿಯ ಮಂತ್ರಿಯು ಪ್ರಕಟಿಸಿರುತ್ತಾನಲ್ಲದೆ, ಅರಬ್ಬಿಯವರು ಹಿಂದುಗಡೆಯಿಂದ ಬಂದು ಇಟಲಿಯ ಸೇನೆಗೆ ಮುತ್ತಿಗೆ ಹಾಕಿದಾಗ ೨೦೦೦ ಅರಬ್ಬಿಯವರು ಸೆರೆ ಹಿಡಿಯಲ್ಪಟ್ಟು ಇಟಲಿಗೆ ಸೇರಿದ ದ್ವೀಪಗಳಿಗೆ ಕಳುಹಲ್ಪಟ್ಟರು. ಆದರೆ ತುರ್ಕಿಯವರು ಗಾಯವಡೆದವರನ್ನು ಕೊಂದುಬಿಟ್ಟರು ಎಂದು ಹೇಳುತ್ತಾನೆ. ಇಂಗ್ಲೆಂಡಿನ ಕಾಮನ್ಸ್ ಸಭೆಯಲ್ಲಿ ತುರ್ಕಿ–ಇಟಲಿಗಳ ಯುದ್ಧದವಿಚಾರವಾಗಿ ಚರ್ಚೆ ನಡೆಯುತ್ತಿರುವಾಗ್ಗೆ, ಸರ್ ಎಡ್ವರ್ಡ್ ಗ್ರೇಯವರು “ಇಟಲಿಯವರ ಸೇನೆಗೆ ಸಂಬಂಧಪಟ್ಟ ವಿಚಾರದಲ್ಲಿ ಗ್ರೇಟ್ ಬ್ರಿಟನ್ನಿನವರು ಪ್ರವೇಶಿಸಲಾಗುವುದಿಲ್ಲ, ಮತ್ತೂ ಹಾಗೆ ಪ್ರವೇಶಿಸುವುದು ಗ್ರೇಟ ಬ್ರಿಟನ್ನು ವಹಿಸಿರುವ ತಾಟಸ್ಥ್ಯಭಾವಕ್ಕೆ ವಿರೋಧವಾಗಿರುತ್ತದೆ” ಎಂದು ಹೇಳಿದರು. ಲಂಡನ್ನಿನಲ್ಲಿರುವ ಮಹಮ್ಮದೀಯ ಸಂಘದವರು ಇಟಲಿಯವರು ತಮ್ಮ ಸೆರೆಗೆ ಸಿಕ್ಕಿದ ಅರಬ್ಬಿಯವರನ್ನೂ, ತುರ್ಕಿಯವರನ್ನೂ ನಿರ್ದಯೆಯಿಂದ ಹಿಂಸಿಸಿ ಕೊಂದುದಕ್ಕಾಗಿ ತಮ್ಮ ವ್ಯಥೆಯನ್ನೂ, ಪ್ರಾಣದಿಂದುಳಿದುಕೊಂಡಿರುವವರಿಗೆ ತಮ್ಮ ಸಾನುಭೂತಿಯನ್ನೂ ತಂತಿಯಮೂಲಕ ತಿಳುಹಬೇಕೆಂದೂ, ಇತಃಪರ ಇಂತಹ ಅಮಾನುಷ ಕೃತ್ಯವು ನಡೆಯದಂತೆ ಪ್ರಯತ್ನಿಸಲು ಬ್ರಿಟಿಷ್ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ ನಿರ್ಧರಿಸಿದರು. ಆಲ್ ಇಂಡ್ಯಾ ಮುಸಲ್ಮಿಂ ಲೀಗಿನವರು ಸಭೆ ಸೇರಿದ್ದು ಟ್ರಿಪೋಲಿಯಲ್ಲಿ ಇಟಲಿಯವರು ಅನಾಗರೀಕ ಕಾಲದಲ್ಲಿ ನಡೆಯುತ್ತಿದ್ದ ಅಮಾನುಷ ಕಾರ್ಯವನ್ನು ನಡೆಯಿಸಿ, ನಿರಪರಾಧಿಗಳಾದ ಹೆಂಗುಸರು ಮಕ್ಕಳನ್ನು ನಿರ್ದಯೆಯಿಂದ ಕೊಂದು ಹಾಕಿದ ಕೃತ್ಯವನ್ನು ಖಂಡಿಸಿ ಈ ವಿಧವಾದ ಅತ್ಯಾಚಾರವನ್ನೂ, ಅನುಜನರಂತೆ ಯುದ್ಧಮಾಡುವುದನ್ನೂ ನಿಲ್ಲಿಸಲು ಪ್ರಯತ್ನಿಸಬೇಕೆಂದು ಇಂಡ್ಯಾ ಸರಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಿದರು. ಕಲಕತ್ತಾದ ರೆಡ್ ಕ್ರೆಸೆಂಟ್ ಸಂಘದವರು ಏರ್ಪಡಿಸಿರುವ ಫಂಡಿಗೆ ಆಗಾಖಾನರವರು ೬೦೦೦ ರೂ.ಗಳನ್ನು ಕೊಟ್ಟಿರುತ್ತಾರೆ.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ದಯಮಾಡಿಸಿದ ವೇಳೆಯಲ್ಲಿ ಪ್ರಯಾಣಮಾಡುವ ರೈಲುಬಂಡಿಗಳು.

ಚಕ್ರವರ್ತಿದಂಪತಿಗಳು ಪರಿವಾರಸಮೇತ ಪ್ರಯಾಣಮಾಡಲು ಈಸ್ಟ್ ಇಂಡಿಯಾ ರೈಲ್ವೆಯವರು ಲಿಲೋವ ಎಂಬಲ್ಲಿರುವ ತಮ್ಮ ಕಾರ್ಯಾಲಯದಲ್ಲಿ ಅತ್ಯಂತ ಅನುಕೂಲವೂ ಸುಂದರವೂ ಆದ ೧೦ ಬಂಡಿಗಳನ್ನು ಮಾಡಿಸಿರುತ್ತಾರೆ. ಇವು ೬೯ ಅಡಿ ೧೦ ಅಂಗುಲ ಉದ್ದವಿದ್ದು ೪೦೩ ಟನ್ ತೂಕವಿರುತ್ತವೆ. ಇವುಗಳಲ್ಲಿ ಚಕ್ರವರ್ತಿ ದಂಪತಿಗಳಿಗಾಗಿ ೨ ಪರಿವಾರದವರಿಗಾಗಿ ೩, ಊಟದ ಬಂಡಿ ೧, ಅಡುಗೆಯ ಬಂಡಿ ೧, ಐರೋಪ್ಯಸೇವಕರು ಊಟಮಾಡಲು ಮತ್ತೂ ಮಲಗಲು ೧, ಬ್ರೇಕ್ ಬಂಡಿಗಳು ೨ ಈ ಪ್ರಕಾರ ಒಟ್ಟು ೧೦ ಬಂಡಿಗಳಿರುತ್ತವೆ. ಪ್ರತಿಯೊಂದು ಬಂಡಿಯೂ ೩೧ ಅಡಿ ೮ ಅಂಗುಲ ಉದ್ದವೂ, ೪೫ ಟನ್ ತೂಕವೂ ಇದ್ದು ೬ ಚಕ್ರಗಳಮೇಲೆ ಕೂಡಿಸಲ್ಪಟ್ಟಿರುತ್ತದೆ. ಪ್ರತಿಯೊಂದು ಬಂಡಿಗೂ ಬಹು ಸುಂದರವಾದ ಕಬ್ಬಿನದ ಬಾಗಲಿಡಲ್ಪಟ್ಟು, ಅದರ ಮುಂಗಡೆ ಕೈಸಾಲೆಯಂತೆ ಏರ್ಪಡಿಸಲ್ಪಟ್ಟಿದೆ. ಮತ್ತೂ ಪ್ರಯಾಣಮಾಡುವಾಗ ಒಂದು ಬಂಡಿಯಿಂದ ಮತ್ತೊಂದು ಬಂಡಿಗೆ ತಿರುಗಾಡುವಂತೆ ಅನುಕೂಲಪಡಿಸಲ್ಪಟ್ಟಿದೆ. ವಿದ್ಯುಚ್ಛಕ್ತಿಯ ದೀಪ ಮತ್ತೂ ಬೀಸಣಿಗೆಗಳು ಹಾಕಲ್ಪಟ್ಟಿವೆ. ಬಿಸಿಲಿಗೆ ಬಂಡಿಯು ಕಾದು ಪ್ರಯಾಣಿಕರಿಗೆ ಸ್ವಲ್ಪವೂ ಸೆಕೆಯನ್ನುಂಟುಮಾಡದೆ ತಂಪಾಗಿರುವಂತಹ ಮರದಿಂದ ಬಂಡಿಯು ಕಟ್ಟಲ್ಪಟ್ಟಿರುತ್ತವೆ. ಬಂಡಿಗಳ ಹೊರಗಡೆ ಬಿಳಿಯ ಬಣ್ಣವು ಹಾಕಲ್ಪಟ್ಟು, ಚಿನ್ನದ ಗೆರೆಗಳಿಂದಲಂಕರಿಸಲ್ಪಟ್ಟಿರುತ್ತದೆ.

ಚಕ್ರವರ್ತಿ ದಂಪತಿಗಳ ಬಂಡಿಗಳು.

ಎರಡು ಬಂಡಿಗಳಒಳಗಡೆ ಒಂದೇ ತೆರನಾಗಿದ್ದು ಹಗಲಿನ ಉಪಯೋಗಕ್ಕಾಗಿ ೧೮ ಅಡಿ ಉದ್ದ ೮॥ ಅಡಿ ಅಗಲದ ಒಂದು ಕೊಠಡಿಯೂ, ರಾತ್ರಿಯುಪಯೋಗಕ್ಕಾಗಿ ೧೩ ಅಡಿ ಉದ್ದ ೮॥ ಅಡಿ ಅಗಲದ ಒಂದು ಕೊಠಡಿಯೂ, ೯॥ ಅಡಿ ಉದ್ದ ೬॥ ಅಗಲದ ಒಂದು ಸ್ನಾನದ ಕೊಠಡಿಯೂ ಏರ್ಪಡಿಸಲ್ಪಟ್ಟು ಮನೋಹರವಾಗಲಂಕರಿಸಲ್ಪಟ್ಟಿದೆ, ಮತ್ತೂ ಅನ್ಯಾತಸರದಲ್ಲಿ ಶ್ಲಾಘ್ಯವಾಗಿ ಮಾಡಲ್ಪಟ್ಟಿರುವ ಜಮಖಾನಗಳು ಹಾಸಲ್ಪಟ್ಟಿವೆ. ಚಕ್ರವರ್ತಿಯವರ ಬಂಡಿಯಲ್ಲಿ ಕುರ್ಚೆ ಸೋಫಾಗಳು ಕೆಂಚ ಕಪ್ಪುಮಿಶ್ರವಾದ ಹಸುರು ಬಣ್ಣದ ಆಡಿನ ತೊಗಲಿಂದಲೂ, ಚಕ್ರವರ್ತಿನಿಯವರ ಬಂಡಿಯಲ್ಲಿ ಹಸುರು ರೇಷ್ಮೆಯ ಬಟ್ಟೆಗಳಿಂದಲೂ ಅಲಂಕರಿಸಲ್ಪಟ್ಟಿವೆ. ಮಲಗುಕೊಳ್ಳುವ ಕೊಠಡಿಯಲ್ಲಿಯ ಸಾಮಗ್ರಿಗಳೂ ಮೇಲಿನಂತೆಯೇ ಅಲಂಕರಿಸಲ್ಪಟ್ಟಿವೆ. ಸ್ನಾನದ ಕೊಠಡಿಯಲ್ಲಿ ನೆಲಕ್ಕೆ ಬಿಳಿಯಬಣ್ಣದ ಹಂಚುಗಳೂ, ಪಕ್ಕದಲ್ಲಿ ಕಿಟಕಿಯ ಎತ್ತರಕ್ಕೆ ಹಸುರು ಬಣ್ಣದ ನುಣುಪಾದ ಹಂಚುಗಳೂ ಹಾಸಲ್ಪಟ್ಟಿವೆ. ನಿಂತು ಸ್ನಾನಮಾಡಲನುಕೂಲಿಸಲ್ಪಟ್ಟಿರುವುದಲ್ಲದೆ ತಣ್ಣೀರನ್ನೂ, ಬಿಸುನೀರನ್ನೂ ತುಂಬಲು ಅನೃತಶಿಲೆಯ ತೊಟ್ಟಿಗಳು ಇಡಲ್ಪಟ್ಟಿರುತ್ತವೆ. ಪರಿವಾರದವರು ಪ್ರಯಾಣಮಾಡುವ ಬಂಡಿಗಳೂ ಚೆನ್ನಾಗಿಯೇ ಮಾಡಲ್ಪಟ್ಟಿರುತ್ತವೆ. ಈ ಬಂಡಿಗಳು ಎಷ್ಟು ವೇಗದಿಂದ ಹೋಗುವಾಗಲೂ ಕೊಂಚವೂ ಶಬ್ದವನ್ನು ಮಾಡುವುದಿಲ್ಲ. ಪ್ರಯಾಣಕಾಲದಲ್ಲಿ ಆಕಸ್ಮಿಕವಾಗಿ ಬಂಡಿಯು ಅಗ್ನಿಯಿಂದ ಹೊತ್ತಿಕೊಂಡಲ್ಲಿ ಅದನ್ನು ಕೂಡಲೆ ಆರಿಸುವುದಕ್ಕೆ ಉಪಾಯವು ಕಲ್ಪಿಸಲ್ಪಟ್ಟಿರುವುದು. ಈ ಬಂಡಿಗಳನ್ನು ಮಾಡುವುದರಲ್ಲಿ ಐರೋಪ್ಯರೂ, ಬಂಗಾಳಿ, ಬೊಂಬಾಯಿ, ಮದ್ರಾಸು, ಬನಾರ್ಸ ಮತ್ತೂ ಪಂಜಾಬು– ಈ ದೇಶಗಳ ಜನರೂ ನಿಯೋಜಿಸಲ್ಪಟ್ಟಿದ್ದರು. ಚಕ್ರವರ್ತಿ ದಂಪತಿಗಳು ಬೊಂಬಾಯಿನಿಂದ ಎಲ್ಲಿಗೂ ಅಲ್ಲಿಂದ ಇತರ ಕಡೆಗೂ ಪ್ರಯಾಣ ಮಾಡುವಾಗ್ಗೆ ಈ ಬಂಡಿಗಳೇ ಉಪಯೋಗಿಸಲ್ಪಡುವುವು.

ಮೈಸೂರ ಗೆಜೆಟ ಸಂಗ್ರಹವು.

ಮಾಲೂರು ತಾ॥ ಅಮಲ್ದಾರ್ ಮೆ॥ ಬಿ. ಕೇಸರಿಸಿಂಗ್ ರವರಿಗೆ ೧೯೧೧ನೆಯ ಇಸವಿ ಅಕ್ಟೋಬರ್ ತಾ॥ ೧ರಿಂದ ವೈದ್ಯರ ಅನುಮತಿ ಪತ್ರಿಕೆಯ ಮೇಲೆ ೧ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ, ಈ ರಜದ ಕಾಲದಲ್ಲಿ ತಾ॥ ಶಿರಸ್ತೆದಾರರಾದ ಎಂ, ಲಕ್ಷ್ಮೀನಾರಣಪ್ಪನವರು ತಾಲ್ಲೂಕು ಛಾರ್ಜಲ್ಲಿರತಕ್ಕದು.

ಮೆ॥ ಕೆ. ಎಸ್. ದೊರಸ್ವಾಮಯ್ಯರ್ ರವರು ಮೆ॥ ಎಚ್. ಎಚ್. ಸ್ಪಾರ್ಕ್ಸ್‌ರವರಿಗೆ ಎಕ್ಸೈಜ್ ಕಮೀಷನರ, ರೆಜಿಸ್ಟ್ರೇರ್ಷ ಇ॥ ಜನರಲ್‌ರವರ, ಸ್ಟಾಂಪುಗಳ ಕಮೀಷನರ, ಮತ್ತು ಜಾಯಿಂಟ್ ಸ್ಟಾಕ್ ಕಂಪೆನಿಗಳ ರೆಜಿಸ್ಟ್ರಾರ ಉದ್ಯೋಗಗಳನ್ನು ವಹಿಸಿಕೊಟ್ಟ ತಾರೀಖಿನಿಂದ ಕ್ರಿಸ್ತಮಸ್ ಮತ್ತೂ ಹೊಸ ವರ್ಷದ ರಜಾ ದಿವಸಗಳ ಕಡೆಯವರೆಗೂ ಪ್ರಿವಿಲೆಜ್ ರಜವನ್ನು ಪಡೆದಿರುತ್ತಾರೆ.

ಮೈಸೂರು ಸರ್ಕಾರದ ಕಂಟ್ರೋಲರ್ ಮತ್ತೂ ಫೈನಾನ್ಸಿಯಲ್ ಸೆಕ್ರಿಟರಿಯವರಾದ ಮೆ॥ ಜಿ. ಎಸ್. ಚಕ್ರವರ್ತಿ, ಎಂ. ಎ., ಎಫ್. ಆರ್. ಎ. ಎಸ್., ಇತ್ಯಾದಿಯವರಿಗೆ ಕ್ರಿಸ್ತಮಸ್ ಮತ್ತೂ ಹೊಸವರ್ಷದ ರಜದೊಡನೆ ೧೯೧೨ ನೆಯ ಜನವರಿ ತಾ॥ ೨ ರಿಂದ ೨ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅ॥ ಕಂಟ್ರೋಲರಾದ ಮೆ॥ ಎನ್, ಕೃಷ್ಣರಾವ್, ಬಿ. ಎ., ಯವರು ಮೆ॥ ಚಕ್ರವರ್ತಿಯವರು ಬರುವವರೆಗೆ ಅಥವಾ ಬೇರೊಂದಷ್ಟಣೆಯಾಗುವವರೆಗೆ ಆಕ್ಟಿಂಗ್ ಕಂಟ್ರೋಲರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಹಾಸನ ಡಿ॥ ಪೋಲೀಸು ಸೂಪರಿಂಟೆಂಡೆಂಟ್ ಮೆ॥ ಎಂ. ಪಿ. ವಿಶ್ವನಾಥರಾಯರಿಗೆ ೧೯೧೧ನೆಯ ನವೆಂಬರ್ ತಾ॥ ೧೫ ರಿಂದ ಅಥವಾ ಅವರುಹೋಗಿಸಿಗೊಳ್ಳುವದಿನದಿಂದ ೨ ತಿಂಗೆ

ಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವುದರಿಂದ, ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮೂಡಿಗೆರೆ ತಾ॥ ಅಮಲ್ದಾರ್ ಮ॥ ಎಸ್. ರೂರ್ಬ, ಬಿ. ಎ. ಯವರು ೧ನೆಯ ತ॥ ಆಕ್ಟಿಂಗ್ ಪೊ॥ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ನಿಯಮಿಸಲ್ಪಟ್ಟು ಹಾಸನ ಡಿಸ್ಟ್ರಿಕ್ಟಿಗೆ ಹಾಕಲ್ಪಟ್ಟಿರುತ್ತಾರೆ.

ಮೈಸೂರ ಸಿಟಿ ಇಂಪ್ರೂವ್ ಮೆಂಟ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮ॥ ಜೆ. ಇ. ಎ. ಡಿಕ್ರೂಜ್‌ರವರಿಗೆ ೧೯೧೧ ನೆಯ ನವಂಬರ್ ತಾ॥ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೭ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವಪ್ರಯುಕ್ತ, ಇದೇ ಇಂಪ್ರೂವ್ ಮೆಂಟ್ ಬೋರ್ಡಿನ ಸ॥ ಡಿ॥ ಆಫೀಸರ್ ಮ॥ ಎಚ್. ಎಫ್. ಮಾರ್ಕರ್‌ರವರು ಮ॥ ಡಿಕ್ರೂಜ್‌ರವರು ಬರುವವರೆಗೆ ಅಥವಾ ಇನ್ನೊಂದಪ್ಪಣೆಯಾಗುವ ವರೆಗೆ ತಮ್ಮ ಕೆಲಸ ಜೊಡನೆ ಡಿವಿಜನ್ ಆಫೀಸ್ ಛಾರ್ಜಿನಲ್ಲಿರತಕ್ಕದು.

ಸರ್ವೆ ಶಾಖೆಯ ಅ॥ ಕಮಿಷನರ್ ಮ॥ ಡಿ. ಕೆ. ತಾರಾಪು, ಬಿ. ಎ, ಯವರು ಉದ್ಯೋಗದಿಂದ ನಿವೃತ್ತರಾದ ಮ॥ ಕೆ. ರಾಮಸ್ವಾಮಯ್ಯಂಗಾರರ ಬದಲು ೧೯೧೧ ನೆಯ ಜುಲೈ ತಾ॥ ೧ ರಿಂದ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟಿನ ಡೆಪ್ಯುಟಿ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟು ಛಾರ್ಜಿನಲ್ಲಿರುವ ಆಕ್ಟಿಂಗ್ ಸೀನಿಯರ್ ಅ॥ ಕಮಿಷನರ್ ಮ॥ ಎಲ್. ಕೃಷ್ಣರಾಯರು ಮ॥ ಸಿ. ರಂಗನಾಥರಾವ್ ಸಾಹೇಬರಿಂದ ಬಿಡುಗಡೆಯನ್ನು ಹೊಂದಿದ ಮೇಲೆ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಛಾರ್ಜಿನಲ್ಲಿರಲು ಮೈಸೂರ ಡಿ॥ ಗೂ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮ॥ ನಗರ ಸುಬ್ಬರಾಯರು ಉದ್ಯೋಗದಿಂದ ನಿವೃತ್ತರಾಗಲಪ್ಪಣೆಮಾಡಲ್ಪಟ್ಟಿರುವ ಮ॥ ಟಿ. ಕೆ. ಸುಂದರ ರಾಮಯ್ಯಂಗಾರರ ಬದಲು ನಂಜನಗೂಡಿನ ಸಬ್ ಡಿವಿಜನ ಛಾರ್ಜಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಚಿತ್ರದುರ್ಗದ ಡಿ॥ ಮೆಡಿಕಲ್ ಮತ್ತೂ ಸ್ಯಾನಿಟರಿ ಆಫೀಸರ್ ಮತ್ತೂ, ಸಿವಿಲ್ ಸರ್ಜನ್ ಮ॥ ಸಿ. ಜ. ಹನುಮಾನ್ ಸಿಂಗ್‌ರವರು ಅರಮನೆಯಲ್ಲಿ ಕೆಲಸಮಾಡಲು ಅನಿತ್ಯವಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೧ ನೆಯ ನವಂಬರ್ ತಾ॥ ೬ ನೆಯ ಸೋಮವಾರ

ಧಾರ್ವಾಡದ ಕರ್ನಾಟಕವೃತ್ತಪತ್ರಿಕೆಯು ಅನ್ಯಾಯಾಂಧತೆಯು.

(ಭಂಗ ೨)

ಕಳೆದ ಸೆಪ್ಟಂಬರ್ ತಾ॥ ೧೭ ರಲ್ಲಿ ಬಾಗಲಕೋಟೆಯಲ್ಲಿ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರಮಹಾಸ್ವಾಮಿಗಳ ಅಡ್ಡಪಾಲಕಿಯುತ್ಸವವನ್ನು ಅಲ್ಲಿಯ ವೀರಶೈವರು, ಕರ್ನಾಟಕವೃತ್ತ ಮತ್ತು ಕೆಲ ಮರಾಠಿ ಪತ್ರಿಕೆಗಳು ಹೇಳುವಂತೆ ಸರ್ಕಾರದಪ್ಪಣೆಯನ್ನು ಉಲ್ಲಂಘಿಸಿ ನಡೆಯಿಸಿದ್ದುದೇಯಾಗಿದ್ದಲ್ಲಿ, ಶಿಕ್ಷೆಗೆ ಗುರಿಮಾಡಲ್ಪಡದೆ ಬಿಡುತ್ತಿದ್ದರೆ? ಮತ್ತೂ ತಾ॥ ೧೭ ರಲ್ಲಿ ಡಿಸ್ಟ್ರಿಕ್ಟ ಕಲೆಕ್ಟರೂ, ಅಸಿಸ್ಟೆಂಟ್ ಕಮಿಷನರೂ ಅದೇ ಬಾಗಲಕೋಟೆಯಲ್ಲಿರುವಾಗ್ಗೆ, ಅವರ ಪ್ರತ್ಯಕ್ಷತಃ ಉತ್ಸವವು ಜರುಗಲು ಸಾಧ್ಯವಾಗುತ್ತಿದ್ದಿತೆ? ಸರ್ಕಾರದವರ ಅಪ್ಪಣೆಯು ಕ್ರಮವಾಗಿ ಪಡೆಯಲ್ಪಟ್ಟು ತಾ॥ ೧೭, ೧೮ ಮತ್ತು ೧೯ರಲ್ಲಿ ಅಡ್ಡಪಾಲಕಿಯ ಉತ್ಸವವು ಬಾಗಲಕೋಟೆಯಲ್ಲೂ, ಮುರನಾಳು ಎಂಬ ಗ್ರಾಮದಲ್ಲೂ ನಿರ್ವಿಘ್ನವಾಗಿ ವಿಜೃಂಭಣೆಯಿಂದ ಜರುಗಿದುವೆಂಬುದು ಈ ಪತ್ರಿಕೆಯ ಮತ್ತೊಂದು ಕಡೆ ಪ್ರಕಟಿಸಲ್ಪಟ್ಟಿರುವ ಪತ್ರವ್ಯವಹಾರದಿಂದ ವ್ಯಕ್ತವಾಗುತ್ತದೆ. ಆ ಪತ್ರಿಕೆಗಳು ಹೇಳುವಂತೆ ಬಾಗಲಕೋಟೆಯಲ್ಲಾದ ಗದ್ದಲಕ್ಕೆ ವೀರಶೈವರೇ ಕಾರಣರಾಗಿದ್ದಲ್ಲಿ, ಮುರನಾಳು ಗ್ರಾಮದಲ್ಲಿ ಶ್ರೀಗಳವರ ಅಡ್ಡಪಾಲಕಿಯುತ್ಸವವನ್ನು ನಡೆಯಿಸುವಾಗ್ಗೆ ವೀರಶೈವರು ಆ ಗ್ರಾಮದ ಬ್ರಾಹ್ಮಣರ ಕೂಡ ಕಲಹವನ್ನು ಮಾಡಿ, ಅವರನ್ನು ಏಕೆ ಪ್ರಹರಿಸಬಾರದಾಗಿದ್ದಿತು? ಇದೊಂದು ಸಂದರ್ಭದಿಂದಲೇ ಬಾಗಲಕೋಟೆಯಲ್ಲಾದ ಗದ್ದಲಕ್ಕೆ ಅಲ್ಲಿಯ ಬ್ರಾಹ್ಮಣರು ಉತ್ತರವಾದಿಗಳಾಗಿರುವರಲ್ಲದೆ, ವೀರಶೈವರು ಎಷ್ಟುಮಾತ್ರಕ್ಕೂ ಕಾರಣರಲ್ಲೆಂಬುದು ಸಿದ್ಧಾಂತವಾಗುತ್ತದೆ. ಮುರನಾಳು ಗ್ರಾಮದ ಬ್ರಾಹ್ಮಣರು ತಮ್ಮ ಗ್ರಾಮದಲ್ಲಿ ವೀರಶೈವರ ಜಗದ್ಗುರುಗಳ ಅಡ್ಡಪಾಲಕಿಯುತ್ಸವವು ಜರುಗುವುದರಿಂದ ತಮ್ಮ ಮತಕ್ಕಾಗಲಿ, ಅಥವಾ ತಮ್ಮ ಗುರುಗಳಿಗಾಗಲಿ ಯಾವ ವಿಧವಾದ ಕೊರತೆಯೂ, ಅವಮಾನವೂ ಇಲ್ಲವೆಂದು ತಿಳಿದು, ತಮ್ಮ ಗ್ರಾಮದ ವೀರಶೈವರ ಕೂಡ ಮಿಳಿತರಾಗಿ, ಉತ್ಸವವು ನಿರಂಕುಶವಾಗಿ ನಡೆಯಲು ಸಹಾಯವನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದುದಲ್ಲದೆ, ವೀರಶೈವರ ಉತ್ಕರ್ಷಾಸಹನೆಯುಳ್ಳವರಿಗೆಲ್ಲ ಸನ್ಮಾರ್ಗಪ್ರದರ್ಶಕರಾದುದು ಸ್ತೋತ್ರಾರ್ಹವಾಗಿದೆ. ಹಳ್ಳಿಯೆನಿಸಿಕೊಂಡ ಮುರನಾಳಿನ ಬ್ರಾಹ್ಮಣರಿಗಿರುವ ಅಕುಟಿಲವಾದ ಭ್ರಾತೃಭಾವವೂ, ದೀರ್ಘದರ್ಶಿತ್ವವೂ, ಉದಾರಗುಣವೂ ದೊಡ್ಡಪಟ್ಟಣವೆನ್ನಿಸಿಕೊಂಡಿರುವ ಬಾಗಲಕೋಟೆಯ ಬ್ರಾಹ್ಮಣರಿಗಿಲ್ಲವಾದುದಕ್ಕಾಗಿ ಎಷ್ಟು ಚಿಂತಿಸಿದರೂ ತೀರದು. ಬಾಗಲಕೋಟೆಯಲ್ಲಿ ನಡೆದ ಗದ್ದಲದ ಸಂಬಂಧವಾಗಿ ಸರ್ಕಾರಿಯ ವಿಚಾರಣೆಯು ನಡೆಯುತ್ತದೆಂದು ಕೇಳುತ್ತೇವಾದುದರಿಂದ, ಅದರ ಫಲಿತಾಂಶವು ಗೊತ್ತಾಗುವವರೆಗೂ ಹೆಚ್ಚಾಗಿ ಪ್ರಸ್ತಾಪಿಸಲಿಕ್ಕಿಲ್ಲವಾಗಿದೆ.

ಪ್ರಕೃತದಲ್ಲಿ ಲಿಂಗಾಯತರ ಮತ್ತು ಬ್ರಾಹ್ಮಣರ ಮಧ್ಯೆ ಹುಟ್ಟಿರುವ ಮನಸ್ತಾಪಕ್ಕೆ ಅಡ್ಡಪಾಲಕಿ, ಶಿರಸಂಗಿಯ ನ್ಯಾಯ ಮತ್ತೂ ವ್ಯಾಸನತೋಳು ಈ ಮೂರು ವಿಚಾರಗಳು ಕಾರಣವಾಗಿವೆ. ಇವುಗಳಲ್ಲಿ ಒಂದನೆಯದಾದ ಅಡ್ಡಪಾಲಕಿಯ ವಿಷಯವು ಅದ್ವಿತೀಯವಾದ ಅಡ್ಡಪಾಲಕಿಯ ಬಿರುದನ್ನು ಸಾವಿರಾರು ವರ್ಷಗಳಿಂದ ನಿರಾತಂಕವಾಗಿ ಅನುಭವಿಸುತ್ತಿರುವ ಶ್ರೀ ಶೃಂಗೇರಿಸ್ವಾಮಿಗಳಿಗೂ, ಮೈಸೂರ ಶ್ರೀ ಕೃಷ್ಣರಾಜಒಡೆಯರವರ ಕಾಲದಿಂದ ಈ ಬಿರುದು ತಮಗೂ ಉಂಟೆಂದು ವಾದಮಾಡುತ್ತಿರುವ ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳಿಗೂ ಸಂಬಂಧಿಸಿದುದಾಗಿದೆ. ಎರಡನೆಯದಾದ ಶಿರಸಂಗಿಯ ನ್ಯಾಯ ವಿಷಯವು ಸಾರ್ವಜನಿಕವಾಗಿರದೆ ವ್ಯಕ್ತಿಸಂಬಂಧವಾಗಿದೆ. ಮೂರನೆಯದಾದ ವ್ಯಾಸನತೋಳಿನ ವಿಷಯವು ನಿಜವಾಗಿ ಬ್ರಾಹ್ಮಣರಿಗೆ ಅಪಮಾನವಾಗುವಂತಹದು. ಎಂದು ಕರ್ನಾಟಕ ವೃತ್ತಪತ್ರಿಕೆಯು ಹೇಳಿರುವುದಲ್ಲದೆ, ಅಡ್ಡಪಲ್ಲಕ್ಕಿಯ ಬಿರುದನ್ನು ಕೊಡುವುದು ಅಥವಾ ಕಸುಕೊಳ್ಳುವುದು ಕರ್ನಾಟಕದಲ್ಲಿ ಆರ್ಯಧರ್ಮರಕ್ಷಕರಾದ ಮೈಸೂರ ಸರ್ಕಾರದ ಅಧೀನವಾಗಿರುತ್ತದೆ. ಆದುದರಿಂದ ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳು ತಾವು ಮೈಸೂರ ಸೀಮೆಯಲ್ಲಿ ಕಳೆದುಕೊಂಡಿರುವ ಬಿರುದಿನ ಹಕ್ಕನ್ನು ಮೈಸೂರ ಸರ್ಕಾರದವರಿಂದಲೇ ಪಡೆದುಕೊಳ್ಳುವುದು ಉಚಿತವಾಗಿರುತ್ತದೆ. ಎಂದು ಮೊದಲಾಗಿ ಹಿತೋಪದೇಶವನ್ನು ಮಾಡಿರುತ್ತದೆ. ಆದರೆ ಪಂಚಕಲಶಯುಕ್ತವಾದ ಅಡ್ಡಪಾಲಕಿ ಮೊದಲಾದ ಬಿರುದಾವಳಿಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಅನೂಚಾನವಾಗಿ ನಡೆದುಬಂದುವಲ್ಲದೆ, ಈಚೆಗೆ ಕೈ॥ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಕಾಲದಲ್ಲಿ ಸಂಪಾದಿಸಲ್ಪಟ್ಟುದಲ್ಲವೆಂಬುದನ್ನು ಮೈಸೂರ ಸರ್ಕಾರದಿಂದ ಹುಟ್ಟಿರುವ ಅನೇಕ ನಿರೂಪ, ರಹದಾರಿ ಮೊದಲಾದ ಕಾಗದಪತ್ರಗಳ ಆಧಾರದಿಂದ ಹಿಂದೆ ಸ್ಟಾರ್ ಪತ್ರಿಕೆಯಲ್ಲಿ ಪ್ರತಿಪಾದಿಸಲ್ಪಟ್ಟಿದ್ದಾಗ್ಯೂ ಅದನ್ನು ಈ ಕರ್ನಾಟಕ ವೃತ್ತಪತ್ರಿಕೆಯು ವೀರಶೈವರ ಮೇಲಣ ಅಸೂಯೆಯಿಂದ ಮರೆಮಾಚಿ ತನ್ನ ವಕ್ರಬುದ್ಧಿಗೆ ತೋರಿದರೀತಿಯಲ್ಲಿ ಪದೇ ಪದೇ ಆಡುತ್ತಿರುವುದರಿಂದ, ಕೈ॥ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರಿಂದ ಕೊಡಲ್ಪಟ್ಟಿರುವ ನಿರೂಪಗಳಲ್ಲೊಂದನ್ನು ಅದರ ಜ್ಞಾನೋದಯಕ್ಕಾಗಿ ಇಲ್ಲಿ ಕೊಟ್ಟಿರುತ್ತೇವೆ:-

ಈಬಳಿ ಕಾಯಿ ಮೊಹರಿನಲ್ಲಿ { ಶ್ರೀಚಾಮರಾಜಒಡೆಯರ
ತನುಜ
ಶ್ರೀಕೃಷ್ಣರಾಜಒಡೆಯರು } ಎಂದು ದೇವನಾಗರಿಯಲ್ಲಿದೆ
ಕೃಷ್ಣರಾಜಒಡೆಯರವರು.

ಯುವಸಂವತ್ಸರದ ಪುಷ್ಯ ಶು॥ ೧೩ ಸ್ಥಿರವಾರದಲ್ಲು ಶ್ರೀಮತು ॥ ॥ ಅರಮನೆ ಸೀಮೆ ಗಡಿಗಳ ಆಮಿಲ್ ಕಿಲ್ಲೇದಾರರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ— ಚೆನ್ನಮ್ಮಲಾದ್ರಿ ಪ್ರಭುಶೂನ್ಯಸಿಂಹಾಸನ ಮಠದ ಮುರಿಗಾರಾಜೇಂದ್ರಸ್ವಾಮಿಗಳು ತಮ್ಮ ಸಕಲ ವಿನಿಯೋಗಸಹಿತವಾಗಿ ಮಾಮೂಲ್ ಪ್ರಕಾರ ತಮ್ಮ ಶಿಷ್ಯರಲ್ಲಿ ಹೋಗುವಲ್ಲಿ ಬರುವಲ್ಲಿ ಶೃಂಗೇರಿ ಮಠಕ್ಕೆ ಸಲ್ಲತಕ್ಕ ಮಾಮೂಲ್ ಸಕಲ ವಿನಿಯೋಗ ಯಾವುದು ಇದೆಯೋ ಅದೇ ಮೇರೆಗೆ ಇವರಿಗೂ ಇದೆಯಷ್ಟೆ. ಅದಕ್ಕೆ ಕೆಲವರು ತುಂಟರು ಹರಕತ್ತುಮಾಡುವಂತವರ ಮಾತು ಕೇಳಿಕೊಂಡು ಶಿಫಾರಸಿನಿಂದ ತಂಟೆಮಾಡದೆ ಮಾಮೂಲ್ ಮೇರೆ ಸಂಚಾರಮಾಡುವಲ್ಲಿ ಹರಕತ್ತು ಮಾಡದಂತೆ ತಾಕೀತಿ ಮಾಡುವುದು. ತಾ॥ ೧೩ ನೆಯ ಮಾಹೆ ಜನವರಿ ಸನ್ ೧೮೧೬ ನೆಯ ಇಸವಿ ಖತ್ತು, ಪ್ರಸನ್ನಯ್ಯ ಮುನಸಿ ಹುಜೂರ್.

ಶ್ರೀಕೃಷ್ಣ ಯಂತ ಕನ್ನಡದಲ್ಲಿ ಯಿದೆ.

ಕರ್ನಾಟಕ ವೃತ್ತಪತ್ರಿಕೆಯು ಹೇಳುವಂತೆ ಶ್ರೀ ಮುರುಘರಾಜೇಂದ್ರ ಸ್ವಾಮಿಗಳಿಗೆ ಶ್ರೀ ಶೃಂಗೇರಿ ಸ್ವಾಮಿಗಳಿಗಿರತಕ್ಕ ಬಿರುದುಗಳು ಕೈ॥ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಹೊಸದಾಗಿ ಕೊಡಲ್ಪಟ್ಟಿದ್ದಲ್ಲಿ, 'ಮಾಮೂಲು' ಎಂಬ ಶಬ್ದವು ಆ ನಿರೂಪದಲ್ಲುಪಯೋಗಿಸಲ್ಪಡುತ್ತಿದ್ದಿತೆ? ಮತ್ತೂ ಈ ಮಾಮೂಲು ಶಬ್ದಕ್ಕೆ ಅನೂಚಾನವಾಗಿ ನಡೆದುಬಂದುದಲ್ಲವೆಂದು ಸಕಲಕಲಾಕೋವಿದರಾದ ಈ ವೃತ್ತಪತ್ರಿಕಾಕರ್ತರು ಅರ್ಥಮಾಡುವುದಾದರೆ, ತಮ್ಮ ಶೃಂಗೇರಿ ಗುರುಗಳಿಗೂ ಈ ಬಿರುದಿನ ಮರ್ಯಾದೆಯು ಹೊಸದಾಗಿ ಲಭ್ಯವಾದುದೆಂದು ಹೇಳಬೇಕಾಗುತ್ತದಲ್ಲವೆ? ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳಿಗೆ ಅನೂಚಾನವಾಗಿ ನಡೆದುಬಂದ ಪಂಚಕಲಶ ಯುಕ್ತವಾದ ಅಡ್ಡಪಾಲಕಿಯ ಬಿರುದಿನ ಮರ್ಯಾದೆಯನ್ನು ಕೈ॥ಶ್ರೀಕೃಷ್ಣರಾಜಒಡೆಯರ ಕಾಲದಲ್ಲಿ ನಿರ್ವಿಘ್ನವಾಗಿ ನಡೆಯಿಸಿಕೊಟ್ಟು ಈಚೆಗೆ ತಪ್ಪಿಸಿದುದರ ನ್ಯಾಯಾನ್ಯಾಯ ಭಾಗವನ್ನು ಕುರಿತು ಈ ಸ್ಟಾರ್‌ಪತ್ರಿಕೆಯ ಹಿಂದಣ ಸಂಚಿಕೆಗಳಲ್ಲಿ ಬೇಕಾದಷ್ಟು ಪ್ರಸ್ತಾಪಿಸಿರುವುದು ಈ ಪತ್ರಿಕಾವಾಚಕರ ಸ್ಮೃತಿಪಥದಲ್ಲಿರುವುದರಿಂದ, ಪುನಃಪುನಃ ಪ್ರಸ್ತಾಪಿಸಲ್ಪಡಬೇಕಾದಾವಶ್ಯಕತೆಯು ಕಂಡುಬರಲಿಲ್ಲವು.

ಅಡ್ಡಪಾಲಕಿಯ ಬಿರುದನ್ನು ಕೊಡುವುದು ಅಥವಾ ಕಸುಕೊಳ್ಳುವುದು ಮೈಸೂರ ಸರ್ಕಾರದ ಅಧೀನವಾಗಿರುವುದರಿಂದ ಈ ಹಕ್ಕನ್ನು ಅವರಿಂದ ಪಡೆದು ಸಕಲ ಕಡೆಗೂ ನಿರ್ವಿಘ್ನವಾಗಿ ಸಂಚರಿಸಬಹುದೆಂದು ವೃತ್ತಪತ್ರಿಕೆಯು ಹೇಳುವುದರಮೇಲಿಂದ, ಈ ಬಿರುದಿನ ಮರ್ಯಾದೆಯನ್ನು ಕೊಡುವ ಹಕ್ಕು ಇತರರಿಗಿಲ್ಲವೆಂದು ಹೇಳಿದಂತಾಯಿತು. ಹಾಗಿರುವ ಪಕ್ಷದಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳು ರಾಜಧಾನಿಗೆ ದಯಮಾಡಿಸಿದಾಗಲೂ, ಅಲ್ಲಿಂದ ಹೊರಡುವಾಗಲೂ ೨೧ ಗುಂಡುಗಳು ಹಾರಿಸಲ್ಪಡುವ ರಾಜಮರ್ಯಾದೆಯನ್ನು ಮೈಸೂರ ಸರ್ಕಾರದವರಿಂದ ಪಡೆದುಕೊಂಡಿದ್ದಾಗ್ಯೂ, ಬ್ರಿಟಿಷ್ ಸರ್ಕಾರದವರು ಏಕೆ ನಡೆಯಿಸಿಕೊಡುವುದಿಲ್ಲವು? ಮತ್ತೂ ಮೈಸೂರ ಮಹಾರಾಜರವರ ಕುಲಗುರುಗಳಾದ ಶ್ರೀಪರಕಾಲಸ್ವಾಮಿಗಳಿಗೆ ಪಂಚಕಲಶಯುಕ್ತವಾದ ಪಾಲಕಿ,ಶ್ವೇತಛತ್ರ ಮೊದಲಾದ ಸಕಲ ರಾಜ ಬಿರುದುಗಳ ಮತ್ತೂ ೨೧ ಗುಂಡುಗಳ ಮರ್ಯಾದೆಯು ಮೈಸೂರ ಸೀಮೆಯಲ್ಲಿ ನಡೆಯಿಸಲ್ಪಡುತ್ತಿದ್ದಾಗ್ಯೂ, ಈಸೀಮೆಯ ಹೊರಗೆ ಏಕೆ ನಡೆಸಲ್ಪಡುವುದಿಲ್ಲವು? ಪ್ರಾಯಶಃ ಈ ಸ್ವಾಮಿಗಳಿಗೆ ಮೈಸೂರ ಸೀಮೆಯಲ್ಲಿ ನಡೆಯುವ ಮರ್ಯಾದೆಯು ವೃತ್ತಪತ್ರಿಕೆಯ ಮಾತಿನ ಪ್ರಕಾರ ಬ್ರಿಟಿಷ್ ಸೀಮೆಯಲ್ಲೂ ನಿರಾತಂಕವಾಗಿ ನಡೆಯಿಸಲ್ಪಡುತ್ತದೆಂಬ ಭಾಗವನ್ನು ತಿಳಿಯದೆ ಇರಬಹುದು. ಆದುದರಿಂದ ನಮ್ಮ ಈ ವೃತ್ತಪತ್ರಿಕಾಕರ್ತರಾದರೂ ಈ ರಹಸ್ಯವನ್ನು ಸ್ವಾಮಿಗಳಿಗೆ ತಿಳುಹಿ ಕೊಟ್ಟು ಅವರುಗಳಿಗಿರುವ ಕೊರತೆಯ ಭಾಗವನ್ನು ಪರಿಹರಿಸಿಕೊಡಬಹುದಲ್ಲವೆ? ವೃತ್ತಪತ್ರಿಕಾಕರ್ತರು ಹಾಗೆ ಈ ಕಾರ್ಯವನ್ನು ಸಾಧಿಸಿ ಕೊಡುವುದಾದರೆ, ಶ್ರೀ ಚಿತ್ರಕಲ್‌ದುರ್ಗದ ಸ್ವಾಮಿಗಳೂ ತಮ್ಮ ಅಡ್ಡಪಾಲಕಿಯ ಬಿರುದಿನ ಹಕ್ಕನ್ನು ಮೈಸೂರ ಸರ್ಕಾರದವರಿಂದ ಪಡೆದುಕೊಂಡ ಹೊರತು ಬ್ರಿಟಿಷ್ ಸೀಮೆಯಲ್ಲೂ ಅಡ್ಡಪಾಲಕಿಯಲ್ಲಿ ಕುಳಿತು ಮೆರೆಯುವ ಪ್ರಯತ್ನವನ್ನು ಮಾಡಬಾರದೆಂದು ನಾವಾದರೂ ಹೇಳಬಹುದು. ವ್ಯಾಸನತೋಳಿನ ನ್ಯಾಯವು ಸರ್ಕಾರದಿಂದ ಕೊನೆಗಂಡಂತೆ, ಶಿರಸಂಗಿಯ ವ್ಯಾಜ್ಯವೂ ಹೈಕೋರ್ಟು ಅಥವಾ ಪ್ರೀವಿಕೌನ್ಸಿಲಿನಿಂದ ಮುಗಿಯುವುದು. ಇದೇ ಪ್ರಕಾರ ಅಡ್ಡಪಾಲಕಿಯ ನಿರ್ಣಯವನ್ನೂ ಒಂದಾವೃತ್ತಿ ಮಾಡಿಕೊಳ್ಳುವುದು ಪ್ರಶಸ್ತವಾಗಿರುತ್ತದೆ. ಎಂದು ವೃತ್ತಪತ್ರಿಕೆಯು ಸೂಚಿಸಿರುತ್ತದೆ. ಆದರೆ ಹುಬ್ಬಳ್ಳಿಯಲ್ಲಿರುವ ಮೂರುಸಾವಿರ ಮಠಕ್ಕೆ ಹೊಸಬರನ್ನು ಅಧಿಕಾರಿಗಳನ್ನಾಗಿ ಮಾಡತಕ್ಕ ಕಾಲದಲ್ಲಿ ಅವರನ್ನು ಅಡ್ಡಪಾಲಕಿಯಲ್ಲಿ ಕುಳ್ಳಿರಿಸಿ ಉತ್ಸವಮಾಡುವ ಪದ್ಧತಿಯು ಅನೂಚಾನವಾಗಿ ನಡೆದುಕೊಂಡು ಬಂದಿರುವ ಪ್ರಕಾರ, ಈಗಣ ಶ್ರೀಗಳವರ ಹಿಂದಿದ್ದವರಿಗೆ ಅಧಿಕಾರವಾಗತಕ್ಕ ಕಾಲದಲ್ಲಿ ಅಡ್ಡಪಾಲಕಿಯುತ್ಸವವನ್ನು ನಡೆಯಿಸಿದುದರಮೇಲೆ, ಶ್ರೀ ಕೂಡಲಿ ಶೃಂಗೇರಿ ಸ್ವಾಮಿಗಳು ತಮ್ಮ ವಿನಾ ಮತ್ತಾರಿಗೂ ಅಡ್ಡಪಾಲಕಿಯಲ್ಲಿ ಕುಳಿತು ಮೆರೆಯುವ ಅಧಿಕಾರವಿರುವುದಿಲ್ಲವೆಂದು ಬೊಂಬಾಯಿಯ ಹೈಕೋರ್ಟು ಮತ್ತೂ ಸೀಮೆಯಾಚೆರುವ ಪ್ರಿವಿ ಕೌನ್ಸಿಲ್‌ಗಳವರೆಗೂ ವಿವಾದವನ್ನು ಮಾಡಿದರಾದರೂ ಜಯಶೀಲರಾಗಲಿಲ್ಲ. ಮತ್ತೂ ಈಗಿರುವ ಶ್ರೀ ಗುರುಸಿದ್ಧಸ್ವಾಮಿಗಳಿಗೆ ಅಧಿಕಾರವಾಗತಕ್ಕ ಕಾಲದಲ್ಲಿ ಅಡ್ಡಪಾಲಕಿಯುತ್ಸವಕ್ಕೆ ಧಾರವಾಡದ ಕಲೆಕ್ಟರ ಅಪ್ಪಣೆಯನ್ನು ಕೇಳಿದಾಗಲೂ ಇದೇ ಕೂಡಲಿಯ ಸ್ವಾಮಿಗಳು ಅಪ್ಪಣೆಯನ್ನು ಕೊಡಕೂಡದೆಂದು ಬಹು ಸಾಹಸಪಟ್ಟಾಗ್ಯೂ ನಿಷ್ಫಲವಾಯಿತು. ಹೀಗೆ ಕೋರ್ಟಿನ ಮೂಲಕ ಸಾಧಿಸತಕ್ಕ ಪ್ರಯತ್ನವೆಲ್ಲವೂ ವಿರುದ್ಧವಾಗಿ ಪರಿಣಮಿಸಿದ್ದರೂ, ಕೋರ್ಟಿನ ಹಂಬಲವು ಈ ವೃತ್ತಪತ್ರಿಕಾಕರ್ತರಿಗಿನ್ನೂ ಬಿಡದಿರುವುದಕ್ಕಾಗಿ ಆಶ್ಚರ್ಯಪಡಬೇಕಾಗಿದೆ.

ಭರತಖಂಡದ ಸಾರ್ವಜನಿಕ ಮಹಾಸಭಾಧ್ಯಕ್ಷತೆಯು.

ಬರುವ ಡಿಸೆಂಬರ್ ತಿಂಗಳಲ್ಲಿ ಕಲಕತ್ತಾದಲ್ಲಿ ಜರಗುವ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ಸೀಮೆಯಲ್ಲಿರುವ ಪಾರ್ಲಿಮೆಂಟ್ ಸಭಾಸ್ತರರಾದ ಮಿ॥ ರಾಮ್ಸೇಮೆಕ್‌ಡೊನಾಲ್ಡ್ ಯವರನ್ನು ಪ್ರಾರ್ಥಿಸಿರುವಲ್ಲಿ, ಅವರು ಯಾವುದೋ ಅನಿವಾರ್ಯಕಾರಣದಿಂದ ವಹಿಸಲಾಗುವುದಿಲ್ಲವೆಂದುತ್ತರವನ್ನು ಕೊಟ್ಟುದರ ಮೇಲೆ, ಮುಂದೊಬ್ಬ ಅಧ್ಯಕ್ಷರನ್ನು ಆರಿಸುವ ವಿಚಾರದಲ್ಲಿ ಮ್ಯಾ

ಗೆಲು ಸಭೆಯ ಕಡೆಗೆ ಭರತಖಂಡದ ಎಲ್ಲಾ ಕಾಂಗ್ರೆಸ್ ಕಮಿಟಿಯವರು ಕಳೆದ ತಾ॥ ೨೯ ರಲ್ಲಿ ಪ್ರಯಾಗದಲ್ಲಿ ಸಭೆ ಸೇರಿದ್ದು, ಬ್ಯಾರಿಸ್ಟರ್ ಮಿ॥ ಪಂಡಿತ ವಿಶ್ವನಾರಾಯಣ ದಾರರವರನ್ನು ಅಧ್ಯಕ್ಷರನ್ನಾಗಾರಿಸಿದರು. ಈ ಪಂಡಿತರು ಸಂಯುಕ್ತ ಪ್ರಾಂತ್ಯಗಳಲ್ಲಿ ಸಾರ್ವಜನಿಕ ಮಹಾಸಭೆಯ ಮುಂದಾಳುಗಳಾಗಿ ಒಳ್ಳೆಯ ಲೇಖಕರೂ, ವಾಚಾಳಿಗಳೂ, ಸಮಾಜ ಸುಧಾರಕರೂ ಎಂದು ಖ್ಯಾತಿಗೊಂಡಿರುವರು. ಇವರು ಈಗ್ಗೆ ೭ ವರ್ಷಗಳ ಕೆಳಗೆ ಕಾಶೀಪಟ್ಟಣದಲ್ಲಿ ಕೂಡಿದ್ದ ಪ್ರಾಂತಿಕಸಭೆಯ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದು, ಬಹು ಉಪಯುಕ್ತವಾದ ಭಾಷಣವನ್ನು ಮಾಡಿದರು. ಆದರೆ ಈಚೆಗೆ ದೇಹಾಲಸ್ಯದಿಂದ ತಮ್ಮ ವಕೀಲತನದಲ್ಲಾಗಲಿ ರಾಜಕೀಯ ವಿಚಾರದಲ್ಲಾಗಲಿ ವಿಶೇಷ ಶ್ರದ್ಧೆಯನ್ನು ವಹಿಸುತ್ತಿಲ್ಲವು. ಇವರಿಗೆ ಈಗ ೫೫ ವರ್ಷ ವಯಸ್ಸಾಗಿರಬಹುದು. ಇವರು ಬಹು ಶಾಂತಸ್ವಭಾವದ ಪ್ರಮುಖರೆಂದು ಉತ್ತರ ಹಿಂದೂ ಸ್ಥಾನದಲ್ಲೆಲ್ಲ ಹೆಸರುಗೊಂಡಿರುವುದರಿಂದ, ಇವರನ್ನು ಅಧ್ಯಕ್ಷರನ್ನಾಗಾರಿಸಿರುವುದು ಸರ್ವ ಜನ ಸಮ್ಮತವಾಗಿರುತ್ತದೆ.

ಪ್ರಸಿದ್ಧಗಾಯಕಿಯಾದ ಶಾಲ್ಯದ ಗೋದಾವರಿಯ ಮರಣಶಾಸನವು.

ಮದ್ರಾಸಾಧಿಪತ್ಯದಲ್ಲಿರುವ ಗಾಯಕಿಯರಲ್ಲಿ ಧನಕೋಟಿ ಸಹೋದರಿಯರು, ಗೋದಾವರಿ, ತಾಯಿ, ನಾಗು, ಮತ್ತೆ ಕೆಲವೇಶ್ಯಾಸ್ತ್ರೀಯರು ವಿಶೇಷ ಪಾಂಡಿತ್ಯವನ್ನು ಸಂಪಾದಿಸಿ ಬಹು ಪ್ರಸಿದ್ಧರಾಗಿರುವರು. ಇವರಲ್ಲಿ ಗೋದಾವರಿಯು ಕಳೆದ ಅಕ್ಟೋಬರ್ ತಾ॥ ೨೦ ರಲ್ಲಿ ಮದ್ರಾಸು ಜಾರ್ಜ್ ಟವನ್ನಿಗೆ ಸೇರಿದ ತಂಬೂಸೆಟ್ಟಿ ಬೀದಿಯಲ್ಲಿರುವ ತನ್ನ ಸ್ವಂತ ಗೃಹದಲ್ಲಿ ಇಹಲೋಕ ವ್ಯಾಪಾರವನ್ನು ಬಿಟ್ಟು ಪರಲೋಕ ಯಾತ್ರೆಯನ್ನು ಮಾಡಿದಳು. ಈಕೆಯು ತನ್ನಾಸ್ತಿಯಲ್ಲಿ ಮದ್ರಾಸಿನಲ್ಲಿರುವ ಶಿಶುರಕ್ಷಣಾಲಯಕ್ಕೆ ೫೦೦೦ ರೂ., ಪಚ್ಚೆಯಪ್ಪನವರ ಪ್ರೌಢ ವಿದ್ಯಾಲಯಕ್ಕೆ (ಕಾಲೇಜಿಗೆ) ೪೦೦೦ ರೂ., ಅನ್ನದಾನಸಮಾಜಕ್ಕೆ ೧೦೦೦ ರೂ., ಶಾಲ್ಯದಲ್ಲಿರುವ ಪ್ರೌಢ ವಿದ್ಯಾಲಯಕ್ಕೆ ೧೦೦೦ ರೂ., ಶಾಲ್ಯದಲ್ಲಿರುವ ದಿವ್ಯಜ್ಞಾನ ಸಮಾಜಕ್ಕೆ ಸೇರಿದ ವೇದಪಾಠಶಾಲೆಗೆ ೧೦೦೦ ರೂ., ಶಾಲ್ಯದಲ್ಲಿರುವ ಶಿವಾಲಯದ ರಥಕ್ಕಾಗಿ ೪೦೦೦ ರೂ., ಮತ್ತು ಆ ದೇವಾಲಯದ ಅರ್ಚಕರ ವಾಸಕ್ಕಾಗಿ ಒಂದು ದೊಡ್ಡ ಮನೆ ಮತ್ತು ೬೦೦ ರೂ., ಈ ಪ್ರಕಾರ ವಿನಿಯೋಗವಾಗತಕ್ಕದೆಂದು ಮರಣ ಶಾಸನದಲ್ಲಿ ಬರೆದಿರುವಳು. ಪಣ್ಯಾಂಗನೆಯಾದ ಈಕೆಯು ತನ್ನ ಪಾಂಡಿತ್ಯದಿಂದಲೋ, ಅಥವಾ ದೇಹವಿಕ್ರಯದಿಂದಲೋ ತಾನು ಸಂಪಾದಿಸಿದ್ದ ದ್ರವ್ಯವು ಈ ರೀತಿಯಾಗಿ ಧರ್ಮಕಾರ್ಯಕ್ಕೆ ವಿನಿಯೋಗವಾಗುವಂತೆ ಮಾಡಿ ತನ್ನ ದೇಹ ಸಾರ್ಥಕ್ಯವನ್ನು ಮಾಡಿಕೊಂಡುದು ಬಹು ಪ್ರಶಂಸನೀಯವಾಗಿರುತ್ತದೆ. ಮತ್ತೂ ಗಳಿಸಿದ ಹಣವನ್ನು ಸದ್ವಿನಿಯೋಗ ಮಾಡದೆ ಅನ್ಯರ ಪಾಲುಮಾಡಿ ಹೋಗುವಂತಹ ಸಜಾತಿಯರಿಗೂ, ಇತರರಿಗೂ ಮಾರ್ಗದರ್ಶಕವಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ರಜದಮೇಲೆ ಸೀಮೆಗೆ ಹೋಗಿದ್ದ ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರು ಪತ್ನೀ ಸಮೇತರಾಗಿ ಕಳೆದ ಬುಧವಾರ ಬೆಂಗಳೂರಿಗೆ ಬಂದರು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯೊಳಗೆ ಕೆಲಸ ಮಾಡಿಕೊಂಡಿರುವವರ ೧೧ ತಿಂಗಳ ಮಗುವು ಕಳೆದ ಸೋಮವಾರ ಆಡಿಕೊಂಡಿರುವಾಗ್ಗೆ ಚೇಳಿನಿಂದ ಕಡಿಯಲ್ಪಟ್ಟು ಕೆಲ ಗಂಟೆಯಲ್ಲಿ ಸತ್ತು ಹೋಯಿತು.

ರಾಜಧಾನಿಯಬೆಳ್ಳಿಕಟ್ಟೆಯ ಮಾಸಲಿನಲ್ಲಿ ಒಬ್ಬ ಒಕ್ಕಲಿಗರ ೩೦-೩೫ ವರ್ಷ ವಯಸ್ಸಿನ ಹೆಂಗುಸು ಕೆಲ ವರ್ಷಗಳಿಂದಲೂ ಹೊಟ್ಟೆಯ ಶೂಲೆಯಿಂದ ನರಳುತ್ತಿದ್ದು, ಅದನ್ನು ಸಹಿಸಲಾರದೆ ಕಳೆದ ತಾ॥ ೨ ರಲ್ಲಿ ಭಾವಿಗೆ ಬಿದ್ದು ಆತ್ಮಹತ್ಯವನ್ನು ಮಾಡಿಕೊಂಡಳು.

ಸರ್ಕಾರದವರು ಪಟ್ಟಣಗಳಲ್ಲಿರುವ ಇಲಿಗಳನ್ನು ನಿರ್ಮೂಲಮಾಡಬೇಕೆಂಬುದ್ದೇಶದಿಂದ ಇಲಿಗಳನ್ನು ಸಾಯಿಸಿ ತಂದು ತೋರಿಸಿದವರಿಗೆ ದುಡ್ಡನ್ನು ಕೊಡುತ್ತಿದ್ದರು. ಈಗ ಈ ಪ್ರಯತ್ನವು ಸಾರ್ಥಕವಾಗುವಂತಿಲ್ಲವೆಂಬುದರ ಮೇಲೆ ಇಲಿಗಳನ್ನು ಕೊಂದವರಿಗೆ ದುಡ್ಡನ್ನು ಕೊಡುವ ಪದ್ಧತಿಯನ್ನು ತಪ್ಪಿಸಿಬಿಟ್ಟಿರುವುದಾಗಪ್ಪಣೆಮಾಡಿರುತ್ತಾರೆ.

ಕಳೆದ ತಾ॥ ೨೩ ರಲ್ಲಿ ಯಡತೊರೆಯಲ್ಲಿ ಮರಹಮ್ಮತ್ ಶಾಖೆಯ ಕೆಲಸಗಾರನಾದ ಮಲ್ಲಾರಿರಾಯನನ್ನು ಯಾರೋ ದುಷ್ಟರು ಕೊಂದುಹಾಕಿ ಅವನ ಹೆಂಡತಿಯ ಮೈಮೇಲಣ ಆಭರಣವನ್ನು ಅಪಹರಿಸಿಕೊಂಡು ಹೋದರಷ್ಟೆ. ಆ ಕಳ್ಳರು ಆಕೆಯ ಆಭರಣವನ್ನು ಕಿತ್ತುಕೊಳ್ಳುವಾಗ ಆಕೆಯ ಕಾಲಿಗೆ ಪೂರಾ ಪೆಟ್ಟನ್ನು ಹಾಕಿ ಪ್ರಾಣಾಪಾಯವನ್ನುಂಟುಮಾಡಿದ್ದುದರ ಮೇಲೆ ಆಕೆಯು ರಾಜಧಾನಿಯ ಜನರಲ್ ಆಸ್ಪತ್ರೆಗೆ ಕಳುಹಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವಳು.

ಈಗ್ಗೆ ಕೆಲ ತಿಂಗಳುಗಳ ಹಿಂದೆ ಒಂದು ಧೂಮಕೇತು ಕಾಣಿಸಿಕೊಂಡಿದ್ದಿತಷ್ಟೆ. ಅದು ಖಗೋಳ ಶಾಸ್ತ್ರಜ್ಞನಾದ ಹಾಲೆ ಎಂಬಾತನಿಂದ ಕಂಡು ಹಿಡಿಯಲ್ಪಟ್ಟುದೆಂದು ಹೇಳುತ್ತಿದ್ದರು. ಈಗ ೧೫-೨೦ ದಿನಗಳಿಂದಲೂ ಬೆಳಗಿನ ಝಾವದಲ್ಲಿ ೪ ಗಂಟೆಯಿಂದ ೫-೫॥ ಗಂಟೆಯ ವರೆಗೂ ಶುಕ್ರ ನಕ್ಷತ್ರದ ಕೆಳಭಾಗದಲ್ಲಿ ಒಂದು ಧೂಮಕೇತು ಕಾಣಿಸಿಕೊಳ್ಳುತ್ತಿರುವುದು. ಇದು ಬ್ರೂಕ್ ಎಂಬಾತನಿಂದ ಕಂಡು ಹಿಡಿಯಲ್ಪಟ್ಟುದೆಂದು ಹೇಳುತ್ತಾರೆ. ಇವರ ಬಾಲವು ಹಿಂದೆ ಕಾಣಿಸಿಕೊಂಡಿದ್ದ ಹಾಲಿಯ ಧೂಮಕೇತುವಿನ ಬಾಲದಷ್ಟು ಉದ್ದವಾಗಿರದೆ, ೫-೬ ಅಡಿಯುದ್ದ ಮಾತ್ರ ವಿದ್ದು ನಿತ್ಯದಲೂ ಇಳಿದು ಹೋಗುತ್ತಿರುವುದು.

ಬರೆಯಲುಪಯೋಗಿಸಲ್ಪಡದಿರುವ, ಅಥವಾ ಬರೆದು ಕೆಡಿಸಲ್ಪಟ್ಟಿರುವ ಛಾಪಾ ಕಾಗದವನ್ನು ಹಿಂದಕ್ಕೆ ತೆಗೆದುಕೊಂಡು ಅದರ ಮೊಬಲಗನ್ನು ಕೊಡಿಸಿ ಕೊಡುವಂತೆ ಡೆಪ್ಯುಟಿ ಕಮಿಷನರುಗಳಿಗೆ ಅರ್ಜಿಯನ್ನು ಬರೆದುಕೊಳ್ಳಬೇಕಾಗಿರುವುದಷ್ಟೆ. ಇದಕ್ಕಾಗಿ ಬಹು ದೂರದವರೂ ಡಿಸ್ಟ್ರಿಕ್ಟ ಹೆಡ್ ಕ್ವಾರ್ಟರ್‌ಗೆ ಬರಬೇಕಾಗಿರುವುದು ತೊಂದರೆಯಾಗಿರುವುದರಿಂದ, ತಾಲ್ಲೋಕು ಅಮಲ್ದಾರರುಗಳೇ ಡೆ॥ ಕ॥ ರವರ ಹೆಸರಿಗೆ ಬರೆಯಲ್ಪಟ್ಟಿರುವ ಅರ್ಜಿಗಳನ್ನು ತೆಗೆದುಕೊಂಡು ಅವನ್ನು ಡೆ॥ ಕ॥ ರವರ ಅಪ್ಪಣೆಗಾಗಿ ಅವರಲ್ಲಿಗೆ ಕಳುಹಿ, ಅರ್ಜಿದಾರರ ಪ್ರಾರ್ಥನೆಯನ್ನು ಕೂಡಲೆ ನೆರವೇರಿಸಲು ಯತ್ನಿಸತಕ್ಕದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ದಿನಸಿ ಮಂಡಿಯನ್ನಿಟ್ಟುಕೊಂಡಿರುವ ಕೊಂಚೆಟಿಗರ ಮ॥ ಬನುಮಯ್ಯನವರು ಡಿಲ್ಲಿಯ ದರ್ಬಾರಿಗೆ ಬರಲು ಶ್ರೀಮನ್ ಮಹಾರಾಜರವರಿಂದ ಆಹ್ವಾನ ಪತ್ರಿಕೆಯು ಕೊಡಲ್ಪಟ್ಟಿರುವುದಾಗಿ ಕೇಳುತ್ತೇವೆ. ಈ ಸೀಮೆಯಲ್ಲಿ ಧರ್ಮ ಕಾರ್ಯವನ್ನು ಮಾಡಿ ಪ್ರಸಿದ್ಧಿಯನ್ನು ಹೊಂದಿರುವವರಲ್ಲಿ ಕೈ॥ ರಾ॥ ಬ॥ ತೋಟದಪ್ಪನವರಿಗೆ ಎರಡನೆಯವರೆಂದು ಹೆಸರುಗೊಂಡು ಶ್ರೀಮನ್ ಮಹಾರಾಜರವರಿಂದ ಧರ್ಮನಿರತ ಎಂಬ ಪ್ರಶಸ್ತಿಯನ್ನು ಪಡೆದು ಪ್ರಜಾನುರಾಗಿಗಳಾಗಿರುವ ಬೆಂಗಳೂರ ನಾ॥ ದೊಡ್ಡಣ್ಣಸೆಟ್ಟರು ಡಿಲ್ಲಿಯ ದರ್ಬಾರಿಗೆ ಹೊರಡಲು ನಮ್ಮ ಪ್ರಭುಗಳಿಂದ ಆಹ್ವಾನ ಪತ್ರಿಕೆಯನ್ನು ಪಡೆಯಲು ಹೆಚ್ಚು ಅರ್ಹತೆಯನ್ನುಳ್ಳವರಾಗಿರುವುದರಿಂದ, ಅವರಿಗೂ ಆಮಂತ್ರಣವು ಕೊಡಲ್ಪಟ್ಟಿರುವುದೆಂದು ನೆನಸುತ್ತೇವೆ.

ಕೆಲ್ಲಹಳ್ಳಿಯ ಕಾಲುವೆ ಕೆಳಗೆ ಭೂಮಿಯುಳ್ಳವರಿಗೆ ಎಕರೆ ೧ಕ್ಕೆ ೮ ಆಣೆಯಂತೆ ಕಂದಾಯವ (ಸೆಸ್ಸ) ನ್ನು ವಿಧಿಸಿ, ಮರಹಮ್ಮತ್ತು ಶಾಖೆಯವರು ವರ್ಷಾವಧಿ ಆ ಕಾಲುವೆಯನ್ನು ಸರಿಪಡಿಸುವ ಕಾರ್ಯವನ್ನು ತಾವೇ ಮಾಡಿಕೊಂಡು ಹೋಗತಕ್ಕದು, ಮತ್ತು ಕಿರಂಗೂರು ಹಾಗೂ ಎರಮನೆಯ ಕಾಲುವೆಗಳ ಕೆಳಗೆ ಭೂಮಿಯುಳ್ಳ ರೈತರು ಕಂದಾಯವನ್ನು ಕೊಡಲೊಪ್ಪಿ ಬರೆದುಕೊಟ್ಟಲ್ಲಿ, ಆ ಕಾಲುವೆಗಳ ಕೆಲಸವನ್ನೂ ಮರಹಮ್ಮತ್ತು ಶಾಖೆಯವರೇ ಮಾಡುವಂತೆ ಏರ್ಪಡಿಸಲಾಗುವುದು ಎಂದು ಸರ್ಕಾರದಪ್ಪಣೆಯಾಗಿರುತ್ತದಲ್ಲದೆ, ಇತರ ಕಾಲುವೆಯ ಕೆಳಗಣ ಭೂಮಿಯನ್ನುಳ್ಳ ರೈತರೆಲ್ಲರೂ ನಿಬಂಧನೆಗಳಂತೆ ನಡೆದುಕೊಳ್ಳಲು ಏಕವಾಕ್ಯತೆಯಿಂದೊಪ್ಪಿಕೊಳ್ಳುವಾಗ್ಗೆ, ಡೆ॥ ಕಮಿಷನರು ಆವಶ್ಯಕವಾದ ಸೂಚನೆಗಳನ್ನು ರೆ॥ ಕಮಿಷನರ ಮೂಲಕ ಸರ್ಕಾರದ ಪರ್ಯಾಲೋಚನೆಗಾಗಿ ಕಳುಹತಕ್ಕದೆಂದು ತಿಳಿಸಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿರುವ ಪ್ರಾಣಿಪ್ರದರ್ಶನಾಲಯದಲ್ಲಿ ಪ್ರತಿ ಬುಧವಾರ ಸಾಯಂಕಾಲದಲ್ಲಿ ಪ್ರೇಕ್ಷಕರ ವಿನೋದಾರ್ಥವಾಗಿ ಅರಮನೆಯ ಕನ್ನಡ ಬ್ಯಾಂಡು ವಾದ್ಯವಾಗುವಂತೆ ಈಚೆಗೆ ಕೆಲ ಕಾಲದಿಂದ ಏರ್ಪಡಿಸಲ್ಪಟ್ಟಿರುವುದರಿಂದ, ಪ್ರತಿ ಬುಧವಾರ ಸಾಯಂಕಾಲ ಅನೇಕ ಜನ ಗಂಡುಸರೂ, ಹೆಂಗುಸರೂ, ಮಕ್ಕಳೂ ಒಳ್ಳೆಯ ವಸ್ತ್ರಾಭರಣಗಳನ್ನು ಧರಿಸಿಕೊಂಡು ಬಂದು ೧ ಆಣೆಯನ್ನು ಕೊಟ್ಟು ಒಳಗೆ ಪ್ರವೇಶಿಸಿ ಪಕ್ಷಿ ಮೃಗಾದಿಗಳನ್ನು ನೋಡುತ ಇಂಪಾದ ಗಾನವನ್ನು ಕೇಳಿ ಆನಂದದಿಂದ ಸಾಯಂಕಾಲದ ವರೆಗೂ ವಿಹರಿಸಿಕೊಂಡಿದ್ದು ಬರುತ್ತಿರುವರು. ಕಳೆದ ತಾ॥ ೧ ನೆಯ ಬುಧವಾರ ಸಾಯಂಕಾಲ ಪ್ರೇಕ್ಷಕರ ವಿನೋದಾರ್ಥವಾಗಿ ಇಂಗ್ಲೀಷು ಬ್ಯಾಂಡ್ ವಾದ್ಯವು, ಮತ್ತೂ ಹೈದರಾಬಾದಿನಿಂದ ಬಂದಿರುವ ಮಹಮ್ಮದೀಯ ಸಂಗೀತಗಾರನ ಹಾಡುಗಾರಿಕೆಯೂ, ಆನೆ ಮತ್ತೂ ಬಂಡಿಗಳ ಮೇಲೆ ಇಷ್ಟಪಟ್ಟವರು ಕುಳಿತು ಸಂಚರಿಸುವಂತೆಯೂ ಏರ್ಪಡಿಸಲ್ಪಟ್ಟಿದ್ದುದರಿಂದ, ಪ್ರೇಕ್ಷಕರ ಸಂಖ್ಯೆಯು ಎಂದಿಗಿಂತಲೂ ವಿಶೇಷವಾಗಿದ್ದು ಮಹಮ್ಮದೀಯನ ಸಂಗೀತಶ್ರವಣದಿಂದ ಅನೇಕರು ಆನಂದಪಟ್ಟು ಬಂದರು. ಶ್ರೀಮನ್ ಮಹಾರಾಜರ ಸ್ವಾರಿಯೂ ದಯಮಾಡಿಸಿ ಅರ್ಧ ಗಂಟೆಯ ಕಾಲದವರೆಗಿದ್ದು ಹಿಂದಿರುಗಿ ದಯಮಾಡಿಸಿತು.

ಕಳೆದ ತಾ॥ ೨೯ ರಲ್ಲಿ ಚೆನ್ನಪಟ್ಟಣದ ಬಳಿ ಹೋಗುವ ಬಂಡಿಯ ಚಕ್ರಕ್ಕೆ ಒಬ್ಬ ಹಳ್ಳಿಯವನು ಸಿಕ್ಕಿ ಸತ್ತು ಹೋದನೆಂದೂ, ಅವನ ಶರೀರವು ಬಹು ಪ್ರಯಾಸದಿಂದ ಹೊರಕ್ಕೆ ತೆಗೆಯಲ್ಪಟ್ಟ ಮೇಲೆ ಬಂಡಿಯು ಮುಂದಕ್ಕೆ ಹೊರಟಿತೆಂದೂ ಮೊದಲು ಪ್ರಕಟವಾಗಿದ್ದಿತು. ಆದರೆ ಕಳೆದ ತಾ॥ ೨೯ ರಲ್ಲಿ ಬಂಡಿಯು ಚೆನ್ನಪಟ್ಟಣದ ಸ್ಟೇಷನ್ನಿಗೆ ಬರುತ್ತಿರುವಾಗ್ಗೆ ಕೈ ಕಂಭದ ಹತ್ತಿರ ಕಂಬಿಗಳ ಮಧ್ಯೆ ಒಬ್ಬ ಹೆಂಗುಸು ಹುಲ್ಲನ್ನು ಕುಯ್ಯುತ್ತಿರುವುದನ್ನು ಕಂಡು ಬಂಡಿಯನ್ನು ನಡಿಸುವವನು ಬಂಡಿಯನ್ನು ಎಷ್ಟು ಕೂಗಿಸಿದಾಗ್ಯೂ ಆ ಹೆಂಗುಸು ಕದಲಲಿಲ್ಲವಾಗಿ, ಕೂಡಲೆ ಬಂಡಿಯನ್ನು ನಿಲ್ಲಿಸಿ ತಾನು ನಡೆದು ಬಂದು ಆಕೆಯ ರಟ್ಟೆಯನ್ನು ಹಿಡಿದು ಮೇಲಕ್ಕೆತ್ತಿ ಕರೆದುಕೊಂಡು ಬಂದು ಪೋಲೀಸರ ವಶಮಾಡಿ ಮುಂದಕ್ಕೆ ಬಂಡಿಯನ್ನು ನಡೆಯಿಸಿಕೊಂಡು ಬಂದನು. ಆಕೆಯು ಮೂಕಳಾಗಿರುವುದರಿಂದ, ಪೋಲೀಸರು ಅವಳನ್ನು ವಿಚಾರಣೆಗೆ ಗುರಿಮಾಡಲು ಅನುಮಾನಿಸುತ್ತಿರುವುದಾಗಿ ಮದ್ರಾಸು ಮೇಲ್ ಪತ್ರಿಕೆಗೆ ಒಬ್ಬರು ತಂತಿಯಿಂದ ತಿಳಿಸಿರುತ್ತಾರೆ. ಕಿವುಡ ಹೆಂಗುಸನ್ನು ಶಿಕ್ಷೆಗೆ ಗುರಿಮಾಡುವುದಕ್ಕಿಂತ ಬಂಡಿಯು ಬರುವ ಸಮಯದಲ್ಲಿ ಆಕೆಯು ಮಾರ್ಗದಲ್ಲಿದ್ದುದನ್ನು ಕಾಣದೆ ಹೋದ ಪೋರ್ಟರನ್ನು ಮತ್ತು ಸ್ಟೇಷನ್ ಅಧಿಕಾರಿಗಳನ್ನು ಅವರ ಅಜಾಗರೂಕತೆಗಾಗಿ ದಂಡಿಸುವುದುತ್ತಮವು.

ವರ್ತಮಾನ ಸಂಗ್ರಹವು.

ವಸುಮತಿ ಎಂಬ ದೇಶಭಾಷಾ ಪತ್ರಿಕೆಯು ತಮ್ಮನ್ನು ದೂಷಿಸಿರುವುದಕ್ಕಾಗಿ ೧ ಲಕ್ಷ ರೂ. ಗಳ ಪರಿಹಾರ ದ್ರವ್ಯವನ್ನು ಕೊಡಬೇಕೆಂದು ಕಲಕತ್ತಾ ಹೈಕೋರ್ಟಿನ ಜಡ್ಜರುಗಳಲ್ಲೊಬ್ಬರು ಆ ಪತ್ರಿಕೆಯ ಮೇಲೆ ವಿವಾದವನ್ನು ಮಾಡತಕ್ಕವರಾಗಿರುವರು.

ಚಕ್ರವರ್ತಿದಂಪತಿಗಳು ಭರತಖಂಡಕ್ಕೆ ದಯಮಾಡಿಸಿದ ವೇಳೆಯಲ್ಲಿ ಬೊಂಬಾಯಿ, ಡಿಲ್ಲಿ, ಕಾನ್ಪೂರು, ಕಲಕತ್ತ ರಂಗೂನು ಈ ಪಟ್ಟಣಗಳಲ್ಲಿ ಮದ್ದಿನ ವಿನೋದಗಳನ್ನು ನಡಿಸುವುದಕ್ಕಾಗಿ ಸೀಮೆಯಲ್ಲಿರುವ ಪೇಯಿನ್ ಕಂಪೆನಿಯವರಿಗೆ ೪॥ ಲಕ್ಷ ರೂ. ಗಳ ಗುತ್ತಿಗೆ ಕೊಡಲ್ಪಟ್ಟಿದೆ.

ಮೀರತ್ತಿನಲ್ಲಿ ಕಳೆದ ತಾ॥ ೨೯ ರಲ್ಲಿ ನಡೆದ ಕುದುರೆಗಳ ಪಂದ್ಯದಲ್ಲಿ ಒಬ್ಬ ಯುವ್ವನಸ್ಥನಾದ ಸ್ವಾರನು ಕುದುರೆಯ ಮೇಲೆ ಕುಳಿತು ಒಂದು ಕಡೆ ವಾಲಿಕೊಂಡು ಕುದುರೆಯನ್ನು ಓಡಿಸುತ್ತಿರುವ ರಭಸದಲ್ಲಿ ಒಂದು ಕಂಭಕ್ಕೆ ತಾಕಿ ಬಡಿದು ಕುದುರೆಯಿಂದ ಕೆಳಗೆ ಬಿದ್ದು ಸತ್ತುಹೋದನು.

ಗುಜರಾತಿನಲ್ಲಿ ಕ್ಷಾಮವು ಪ್ರಾಪ್ತವಾಗಿ ಜನರು ಬಹು ಕಷ್ಟಪಡುತ್ತಿರುವುದರಿಂದ, ಸರ್ಕಾರದವರು ಕ್ಷಾಮನಿವಾರಣಾಕಾರ್ಯವನ್ನಾರಂಭಿಸಿರುವರಲ್ಲದೆ, ಬೊಂಬಾಯಿನ ಶ್ರೀಮಂತರನೇಕರು ಆ ಜನರ ಸಹಾಯಾರ್ಥವಾಗಿ ಲಕ್ಷಾಂತರ ರೂಪಾಯಿನ ಫಂಡನ್ನು ಕೂಡಿಸುತ್ತಿರುವರು. ಪೂರ್ವ ಬಂಗಾಳದಲ್ಲೂ ಕೆಲ ಕಡೆ ಬೆಳೆಯು ಕೆಟ್ಟು ಹೋಗಿ ಮತ್ತೆ ಕೆಲ ಕಡೆ ನಿಂತಿರುವ ಬೆಳೆಯನ್ನು ಚಿಟ್ಟೆಗಳು ನಾಶಪಡಿಸುತ್ತಿರುವುದರಿಂದ ಕ್ಷಾಮಪ್ರಾಪ್ತಿಯ ಭಯವು ಹುಟ್ಟಿದೆ.

ಕಳೆದ ತಾ॥ ೨೯ ರಲ್ಲಿ ಕಲಕತ್ತಾದಲ್ಲಿ ಒಂದು ಹಡಗಿನೊಳಗೆ ಹೇಗೋ ಬಂದು ಸೇರಿಕೊಂಡಿದ್ದ ಒಂದು ಬೆಕ್ಕು ಕೊಂದುಹಾಕಲ್ಪಟ್ಟಿತು. ಅದರ ಮಾರನೆಯ ಬೆಳಗ್ಗೆ ಇಬ್ಬರು ಐರೋಪ್ಯ ನಾವಿಕರು ಸೆರೆಹಿಡಿಯಲ್ಪಟ್ಟರು. ತಾ॥ ೧ರಲ್ಲಿ ಒಂದು ಸೀಮೆಯೆಣ್ಣೆಯ ದೀಪವು ಹೊತ್ತಿಕೊಂಡು ಹಳೆಯ ಹಗ್ಗದ ಮೂಟೆಯ ಮೇಲೆ ಬಿದ್ದು ಅದು ಹೊತ್ತಿಕೊಂಡುರಿಯುವಷ್ಟರಲ್ಲಿ ಆರಿಸಲ್ಪಟ್ಟಿತು. ತಾ॥ ೨ರ ಬೆಳಗ್ಗೆ ಒಂದು ಕಂಭವು ಬಿದ್ದುಹೋಯಿತು. ಇಬ್ಬರು ಅದರ ಕೆಳಗೆ ಸಿಕ್ಕಿ ಪೂರಾ ಪೆಟ್ಟನ್ನು ತಿಂದು ಕಂಠಗತಪ್ರಾಣರಾಗಿದ್ದಾರೆ. ಈಗ ಆ ಹಡಗಿನಲ್ಲಿರುವವರೆಲ್ಲರೂ ಬೆಕ್ಕನ್ನು ಕೊಂದು ದುರ ದಶೆಯಿಂದ ಈ ಅನಾಹುತವು ನಡೆದಿತೆಂದು ಬಹು ಭಯಗ್ರಸ್ತರಾಗಿರುತ್ತಾರೆ. ಇದರಿಂದ ಕೊತ್ತಿಯನ್ನು ಹೊಡೆದ ಪಾಪವು ತಿತ್ತಿಯನ್ನು ಹೊಕ್ಕಿದರೂ ಬಿಡುವುದಿಲ್ಲವೆಂಬ ಗಾದೆಯು ನಿಜವಾಯಿತಲ್ಲವೆ!

ಆನರಬಲ್ ಮ॥ ಕೃಷ್ಣಸ್ವಾಮಯ್ಯಂಗಾರರು ಕುಂಭಕೋಣದಿಂದ ಮದ್ರಾಸಿಗೆ ಬರುವುದಕ್ಕಾಗಿ ಹೊಗೆಯ ಬಂಡಿಯ ಒಂದನೆಯ ತರಗತಿಯಲ್ಲಿ ಒಂದು ಪಕ್ಕವನ್ನು ತಮಗಾಗಿ ಕಾದಿರುವಂತೆ ಮೊದಲೇ ಗೊತ್ತುಮಾಡಿದ್ದು ಬಂಡಿಯನ್ನು ಹತ್ತಯತ್ನಿಸಿದಾಗ ಒಳಗಿದ್ದ ಒಬ್ಬ ಐರೋಪ್ಯನು ಅವರನ್ನು ಒಳಗೆ ಬರಗೊಡದೆ ತಡೆದು ನಿಲ್ಲಿಸಿ, ಸ್ಟೇಷನ್‌ಮಾಸ್ಟರೂ, ಗಾರ್ಡೂ ಬಂದು ಎಷ್ಟುವಿಧವಾಗಿ ಹೇಳಿದರೂ ದಾರಿಯನ್ನು ಬಿಡದೆ ಬಹು ತೊಂದರೆಯನ್ನು ಪಡಿಸಲು, ಆಗ ಆ ಯ್ಯಂಗಾರರು ಗೌರ್ನರ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರೆಂತಲೂ, ಅವರಿಗಾಗಿ ಒಂದು ಪಕ್ಕವು ಕಾದಿಡಲ್ಪಟ್ಟಿರುವುದೆಂತಲೂ ಹೇಳಿದುದರಮೇಲೆ, ಆ ಐರೋಪ್ಯನು ಉಸಿರನ್ನೆತ್ತದೆ ನಮ್ರನಾಗಿ ದಾರಿಯನ್ನು ಬಿಟ್ಟುಕೊಟ್ಟನು. ಆ ಐರೋಪ್ಯನು ಗೋದಾವರಿ ಡಿ॥ ಮರಹಮ್ಮತ್ತು ಶಾಖೆಯಲ್ಲಿ ಅ॥ ಇಂಜನಿಯರಾಗಿರುವನೆಂದು ಕಡೆಯಲ್ಲಿ ಗೊತ್ತಾಯಿತು.

[ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.— ಪ. ಪ್ರ.]

ಪತ್ರವ್ಯವಹಾರ.

ಮೊಳಕಾಲ್ಮುರು ತಾ॥ ಬೊಮ್ಮಗೊಂಡನ ಕೆರೆ.

ಇದೇ ಊರಲ್ಲಿ ಆಶ್ವೀಜಶು॥ ೧ ಲಾಗಾಯ್ತು ಈ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಶ್ರೀ ರೇವಣಾರಾಧ್ಯ ಚರಿತ್ರೆಯು ಪ್ರತಿ ದಿನ ಸಾಯಂಕಾಲದಲ್ಲಿ ಈ ಗ್ರಾಮದ ಮಠದ ಶ್ರೀ॥ ವೀರಪ್ಪಯ್ಯನವರಿಂದ ಪುರಾಣವು ನಡಿಸಲ್ಪಟ್ಟು ಇಲ್ಲಿನ ವೀರಶೈವ ಪ್ರಮುಖರಿಂದ ಪ್ರತಿನಿತ್ಯದಲ್ಲೂ ಮಂಗಳವು ನಡೆದು ಸರಿಯಾದ ಫಲಾಹಾರಗಳಿಂದಲೂ, ದಕ್ಷಿಣ ತಾಂಬೂಲಾದಿಗಳಿಂದಲೂ ಸೇರಿದ ಜನಮಂಡಲಿಯನ್ನು ಸತ್ಕರಿಸುತ್ತಾ ಇದೇ ಶು॥ ೧೦ ದಿವಸವಾದ ಸೋಮವಾರ ಮಧ್ಯಾಹ್ನ ೧೦ ಘಂಟೆಗೆ ಶ್ರೀ ಪುರಾಣವು ಮುಗಿಸಲ್ಪಟ್ಟು, ದಿವ್ಯಾಲಂಕೃತವಾದ ಆಂದೋಳನದಲ್ಲಿ ಊರೊಳಗೆ ಉತ್ಸವವು ಹೊರಡುವ ಕಾಲಕ್ಕೆ ಸರಿಯಾಗಿ ಹಿಂದಿನ ಯುಗಾಂತರಗಳಲ್ಲಿ ಪುಷ್ಪವೃಷ್ಟಿಯು ಸುರಿಯುತ್ತಿದ್ದಂತೆ ಅತಿ ಮನೋಹರವಾಗಿ ವೃಷ್ಟಿಯಾದ್ದನ್ನು ನೋಡಿ ನೆರದಿದ್ದ ಜನಮಂಡಲಿಯೆಲ್ಲಾ, ಆಶ್ಚರ್ಯವೂ, ಆನಂದವೂ ಪಟ್ಟವರಾಗಿ ಅದುವರೆಗೆ ಒಂದು ತಿಂಗಳ ಲಾಗಾಯ್ತು ಮಾಡುತ್ತಿದ್ದ ಶಿವಭಜನೆಯನ್ನು ಪೂರೈಸಲೋಸುಗ ಸೇರಿದ್ದ ಭಜನೆಯವರೂ ಎರಡು ನಂದಿಧ್ವಜಗಳಿಂದಲೂ, ಪುರವಂತರ ವಣಿಗೆಯು ಪೂರೈಸಲ್ಪಟ್ಟು ಆ ಕಾಲಕ್ಕೆ ಸರಿಯಾಗಿ ಮಹಾ ಗಣ ಸಂತರ್ಪಣೆಯೂ ನಡಿಸಲ್ಪಟ್ಟ ಅದೇ ಸಾಯಂಕಾಲಕ್ಕೆ ಶಮೀ ಪೂಜೆಯೂ ಸಹ ಬಹು ವಿಜೃಂಭಣೆಯಿಂದ ನಡೆಯಿತು. ಈ ರೀತಿ ಈ ದೇವತಾ ಕಾರ್ಯವನ್ನು ಏಕಚಿತ್ತದಿಂದ ಪೂರೈಸಿದ ವೀರಶೈವ ಮುಖಂಡರಿಗೆಲ್ಲಾ ಶ್ರೀ ಪರಮೇಶ್ವರನು ಉತ್ತರೋತ್ತರ ದೈವಭಕ್ತಿಯನ್ನೂ, ಆಯುರಾರೋಗ್ಯೈಶ್ವರ್ಯವನ್ನೂ ಕೊಡಲೆಂದು ಸದಾ ಪಾರ್ವತೀಪತಿಯನ್ನು ಬೇಡುವ.

ಜಿ. ತಿಪ್ಪೇ ರುದ್ರಪ್ಪ
ಸ್ಕೂಲ್ ಮಾಸ್ಟರ್, ಬೊಮ್ಮಗೊಂಡನ ಕೆರೆ.

ಸಂತೆಬೆನ್ನೂರು ನಿವಾಸಿಗಳಾದ ವೀರಶೈವರಾದಿಯಾಗಿ ಸರ್ವ ಜನರು ಕಳೆದ ಭಾದ್ರಪದ ಮಾಸದ ಕಡೆಯವರೆಗೂ ಮಳೆಯು ಬಾರದೆ, ಬಿಸಿಲಿನ ಝಳದಿಂದ ನಿಂತಿದ್ದ ಪೈರುಗಳೊಣಗುತ್ತ ದಿನಸಿಯ ಧಾರಣೆಯು ಏರುತ್ತಿದ್ದುದರಿಂದ ಆಶ್ವಯುಜ ಶು॥ ೨ ಭಾನುವಾರದ ದಿವಸ ಮನೋಹರವಾಗಲಂಕರಿಸಲ್ಪಟ್ಟ ಶ್ರೀ ವೃಷಭೇಶ್ವರ ದೇವಸ್ಥಾನದಲ್ಲಿ ಶ್ರೀ ಹಿರಿಯೂರ ಮಠದ ಪಟ್ಟಾಧ್ಯಕ್ಷರಿಂದ ಭೀಮದ ಕಲಿಯುರ ಕಾವ್ಯದಲ್ಲಿ ಪುರಾತನರ ಚರಿತ್ರ ಓದಲ್ಪಟ್ಟಿತು. ಮಾರಣೆಯ ಬೆಳಿಗ್ಗೆ ಶ್ರೀ ನಂದೀಶ್ವರನಿಗೆ ಏಕನ್ಯಸ್ತವಾಗಿ ಏಕೋನಶತಕುಂಭಾಭಿಷೇಕವೂ ನೂರಾರು ಜನ ಭಕ್ತ ಮಾಹೇಶ್ವರರಿಗೆ ಸಂತರ್ಪಣೆಯು ನಡಿಸಲ್ಪಟ್ಟವು. ಅನಂತರ ಶ್ರೀ ಗಳವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿದ್ದು ಸ್ಕೂಲ್ಮಾಸ್ಟರ್ ಎಂ. ಶಿವಲಿಂಗಯ್ಯನವರು ಈ ದಿವಸ ಈ ಸ್ಥಳೀಯರು ಭಕ್ತಿಯಿಂದ ಪುರಾಣ ಶ್ರವಣ ಮಾಡಿ ಈಶ್ವರ ಸೇವೆಯನ್ನು ಮಾಡಿದುದಕ್ಕೆ ತಕ್ಕ ಫಲವು ಶೀಘ್ರದಲ್ಲೇ ಲಭಿಸುವುದೆಂಬುದಕ್ಕೆ ಕೆಲ ದೃಷ್ಟಾಂತಗಳನ್ನು ಕೊಟ್ಟು ಏಕಮತ್ಯ, ವಿದ್ಯೆ ಮತ್ತು ಭಕ್ತಿಗಳೆಂಬ ವಿಷಯತ್ರಯಗಳ ಆವಶ್ಯಕತೆ, ಅವಲಂಬನ, ಪ್ರಯೋಜನಾದಿಗಳನ್ನು ಕುರಿತು ಭಾಷಣ ಮಾಡಿದರು. ಇದೇ ವಿಷಯಗಳನ್ನು ಅಧ್ಯಕ್ಷರು ಪುಷ್ಟೀಕರಿಸಿ ಹೇಳಿದರು. ಮ॥ ರಾ॥ ಗಳಾದ ನೀತಿಗೆರೆ ಗುರುವಣ್ಣನವರು, ಪರದೇಶಪ್ಪನವರ ಮಹಾದೇವಣ್ಣನವರು, ಸಜ್ಜನರ ಬಸವಲಿಂಗಪ್ಪನವರು ಮೊದಲಾದ ಪುರಪ್ರಮುಖರು ಶ್ರದ್ಧೆಯನ್ನು ವಹಿಸಿ ಈ ಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಯಿಸಿದುದು ಅವರಿಗೆ ಶ್ರೇಯಸ್ಕರವಾಗಿದೆ ಎಂದು ಹೇಳಲ್ಪಟ್ಟ ಮೇಲೆ ಸಜ್ಜನರ ಮಹಾದೇವಪ್ಪನವರು ದುಮ್ಮಿ ಸಿದ್ಧಲಿಂಗಪ್ಪನವರು ಮೊದಲಾದವರಿಂದ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ಪುರಾಣವು ನಡೆದ ೩ನೆಯ ದಿನ ಆಕಾಶದಲ್ಲಿ ಮೋಡವು ಕಟ್ಟಿ ಗುಡುಗು ಮಿಂಚು ಆರ್ಭಟಿಸಿಕೊಂಡು ಬಂದು ಮಳೆಯು ವಿಪರೀತವಾಗಿ ಸುರಿದು ಕೆರೆ ಕಟ್ಟೆಗಳೆಲ್ಲ ತುಂಬಿ ತುಳುಕುವಂತಾದುದನ್ನು ಜನರು ನೋಡಿ ಈಶ್ವರನು ತಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿದುದಕ್ಕಾಗಿ ಅವನ ಮಹಿಮೆಯನ್ನು ಕೊಂಡಾಡಿದರು. ಬೆಳೆಯು ಚೆನ್ನಾಗಿದೆ, ದಿನಸಿಧಾರಣೆಯು ಇಳಿದಿದೆ.

ಪ್ರತ್ಯಕ್ಷದರ್ಶಿ.

ಜ್ಞಾನಮಂದಿರ.

ಈಗ್ಗೆ ೧೨ ವರ್ಷಗಳ ಹಿಂದೆ ಸೋಲಾಪುರದಲ್ಲಿ ಸರಸ್ವತಿ ಮಂದಿರವೆಂಬುದೊಂದು ಯಾವತ್ತು ಜಾತಿಯ ಸ್ತ್ರೀಯರ ಉಪಯೋಗಕ್ಕಾಗಿ ಸ್ಥಾಪನವಾಗಿ ಒಳ್ಳೇ ಉತ್ತಮ ರೀತಿಯಿಂದ ನಡೆದಿರುವದು. ಈ ಸಂಸ್ಥೆಯಲ್ಲಿ ನಮ್ಮ ವೀರಶೈವ ಸ್ತ್ರೀ ಸಮೂಹವು ಹೋಗಿ ಏನಾದರೂ ಜ್ಞಾನವನ್ನು ಸಂಪಾದಿಸಬೇಕೆಂಬುದ್ದೇಶದಿಂದ ಕೈ॥ ರಾವ್ ಬಹಾದ್ದೂರ ವಾರದ ಅವರ ಪತ್ನಿಯಾದ ಬಸವ್ವಾಬಾಯಿಯವರು ಒಳ್ಳೇ ಪ್ರಯತ್ನಮಾಡುತ್ತಿದ್ದರು. ಆದರೆ ನಮ್ಮ ಸ್ತ್ರೀ ಸಮೂಹವು ಅಜ್ಞಾನ ವಶದಿಂದ ಆ ಮಂದಿರಕ್ಕೆ ಹೋಗುವದಕ್ಕೆ ಹಿಂದು ಮುಂದು ನೋಡುತ್ತಿದ್ದರು. ಈ ಸಂಗತಿಯನ್ನು ಕೈ॥ ರಾವಬಾಹಾದ್ದೂರ ಇವರು ತಿಳಿದು ಸ್ವತಃ ಒಂದು ಕಲ್ಪನೆಯನ್ನು ಮಾಡಿ ತಮ್ಮ ಮನೆಯಲ್ಲೇ ತಮ್ಮ ಸ್ವಂತ ವೆಚ್ಚದಿಂದ ಜ್ಞಾನಮಂದಿರವೆಂಬ ಸಂಸ್ಥೆಯನ್ನು ತೆಗೆದರು. ಆದರೆ ಈ ಸಂಸ್ಥೆಯು ಅವರು ಇರುವ ಪರಿಯಂತರ ಒಳ್ಳೇ ಸಂಭ್ರಮದಿಂದ ನಡೆದು, ನಮ್ಮ ದುರ್ದೈವಯೋಗದಿಂದ ಅವರು ನಮ್ಮನ್ನು ಮಧ್ಯದಲ್ಲಿಯೇ ಬಿಟ್ಟು ಹೋದ ಮೇಲೆ ಅದು ಸ್ವಲ್ಪ ತೊಂದರೆಗೆ ಸಿಕ್ಕುವಂತಿತ್ತು. ಆದರೆ ರಾವಬಾಹಾದ್ದೂರ ಇವರ ೨ನೇ ಪತ್ನಿಯಾದ ಗೌರವ್ವಾಬಾಯಿಯವರು ಸ್ತ್ರೀಸಮೂಹಕ್ಕೆ ಒಳ್ಳೇ ಸಹಾಯವನ್ನು ಮಾಡಬೇಕೆಂಬ ಸಂಕಲ್ಪದಿಂದ ಈ ಸಂಸ್ಥೆಗೆ ಏನಾದರೂ ತೊಂದರೆ ಬಾರದ ಹಾಗೆ ಮೊದಲಿನ ವ್ಯವಸ್ಥೆಯು ಪ್ರಕಾರಾ ನಡಿಸಿರುತ್ತಾರೆ. ಎಷ್ಟೋ ಸ್ತ್ರೀ ಸಮೂಹವು ಸಂಸ್ಥೆಗೆ ಹೋಗಿ ಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳುತ್ತಿದೆ ಅದೇ ಪ್ರಕಾರ ಎಲ್ಲಾ ಕಡೆಯಲ್ಲಿಯೂ ಪ್ರಿಯ ಭಗಿನಿಯರು ಯಾವದಾದರೊಂದು ಜ್ಞಾನೋಪಯೋಗಮಾಡಿಕೊಳ್ಳಬೇಕೆಂದು ಇಚ್ಛೆಸುತ್ತೇನೆ. ಮತ್ತೊಂದು ಪ್ರಶ್ನೆ ಏನಂದರೆ ತಮ್ಮ ಸ್ಟಾರಿನಲ್ಲಿ ಬೆಳಗಾವ ಮಹಾ ಸಭೆಯ ಹಕ್ಕಿಕತ ಬರೆದಿದ್ದುದರಲ್ಲಿ ಸ್ತ್ರೀ ಸಭೆಯನ್ನು ಕೂಡಿಸಬೇಕೆಂಬ ಅಭಿಪ್ರಾಯವು ಕಂಡುಬರಲಿಲ್ಲ. ಪೂರ್ವದಲ್ಲಿ ಸೋಲಾಪೂರ ವ ಬಳ್ಳಾರಿಯಲ್ಲಿ ಸ್ತ್ರೀ ಸಭೆಯನ್ನು ಕೂಡಿಸಿದ್ದರು. ಅದೇ ಪ್ರಕಾರವಾಗಿ ಬೆಳಗಾವಿಯಲ್ಲಿಯೂ ಸ್ತ್ರೀ ಸಭೆಯನ್ನು ಕೂಡಿಸಬೇಕೆಂದು ನನ್ನ ಪ್ರಾರ್ಥನಾ ಇರುತ್ತದೆ. ಇದರಿಂದ ನಮ್ಮ ಸ್ತ್ರೀ ಸಮೂಹವು ಸುಧಾರಿಸುತ್ತಾದುದರಿಂದ ಮಹಾ ಸಭೆಯ ಪ್ರಮುಖರು ಈ ಸ್ತ್ರೀ ಸಭೆಯನ್ನು ಕೂಡಿಸಬೇಕೆಂದು ನನ್ನ ವಿನಂತಿ ಇರುತ್ತದೆ.

ಸೌ॥ ಭಾಗೀರಥಿಬಾಯಿ ಪಾಟೀಲ
ಸೋಲಾಪೂರ.

ಸಿಂದೀಕೇರುಬೆಟ್ಟ.

ಗೋಕಾಕ ತಾ॥ ಪೈಕಿ ಸಿಂದಿಕೇರುಬೆಟ್ಟದಲ್ಲಿ ಶಾವಕಾರ ಶ್ರೀಶೈಲಪ್ಪಣ್ಣಾ ಬಡವಾಳಿ ಇವರು ಪದ್ಧತಿಯಮೇರೆಗೆ ಶ್ರೀ ಮಹಾಲಕ್ಷ್ಮಿ ಮತ್ತೂ ಶ್ರೀ ಸರಸ್ವತಿ ಪೂಜೆಯನ್ನು ದೊಡ್ಡ ಸಮಾರಂಭದಿಂದಲೂ, ಬಹು ವಿಜೃಂಭಣೆಯಿಂದಲೂ ತಮ್ಮ ಅಂಗಡಿಯಲ್ಲಿ ಆಶ್ವೀಜ ಬ॥ ೩೦ ದಿವಸ ನೆರವೇರಿಸಿದರು. ಮ॥ರಾ॥ ಚನ್ನವೀರಪ್ಪಾ ಅಣ್ಣಾ ಆಸಂಗೀ, ಮ॥ರಾ॥ ಗುರುಶಾಂತಪ್ಪಾ ಅಣ್ಣಾ ದಂಡಗಿ ಈ ಉಭಯತರು ಕಾರ್ತೀಕ ಶು॥ ೧ ದಿವಸ ಸಭೆಯನ್ನು ಸೇರಿಸಬೇಕೆಂದು ಸೂಚಿಸಿದ ಪ್ರಕಾರ ಮ॥ ದುಂಡಪ್ಪಾ ಅಣ್ಣಾ ದಂಡಗಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತ್ತು. ಈ ಸಭೆಗೆ ಗುರುಸ್ಥಳದ ಮಠಮಾನ್ಯರೂ ಸೆಟ್ಟಿ ಸಾಹುಕಾರ ಸಮಸ್ತ ದೈವದವರೂ, ಇತರ ಯಾವತ್ತರೂ ಬಂದಿದ್ದರು. ಅಲ್ಲಿ ಶಿವಮೂರ್ತಿ ಗುರುಸಿದ್ಧಯ್ಯಾ ಪರಮಯ್ಯಾ ಸ್ವಾಮಿ ಹಿರೇಮಠ ಇವರು ಧರ್ಮವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಒಂದು ತಾಸ ವರೆಗೆ ಉಪನ್ಯಾಸಮಾಡಿದಮೇಲೆ ಸಭೆಯು ವಿಸರ್ಜನವಾಯಿತು. ತರುವಾಯ ವೇ॥ ಶಂಕರಶಾಸ್ತ್ರೀ ಐಕ್ಯಮಠಾಧ್ಯಕ್ಷ ಮರೆಗುದ್ದಿ ಇವರು ಅನಾಯಾಸವಾಗಿ ಬಂದು ಕಾರ್ತೀಕ ಶು॥ ೪ ದಿವಸ ಗುರುಸ್ಥಳ ಚರಮೂರ್ತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿದ್ದರು. ಸಭೆಗೆ ವೀರಮಾಹೇಶ್ವರರೂ, ಗೌಡ ಪಾಟೀಲರೂ ಮತ್ತು ಸಿದ್ರಾಮಪ್ಪ ಅಣ್ಣಾ ಗಾಡ್ವಿ, ಬಸಪ್ಪಾ ಅಣ್ಣಾ ಸೆಟ್ಟಿ, ಬಾಬಣ್ಣಾ ಯೂಸೆಟ್ಟಿ, ದಾನಪ್ಪಾ ಅಣ್ಣಾ ಕುಲಧಾಳಿ, ವೀರಭದ್ರಪ್ಪಾ ಅಣ್ಣಾ ಬೆಳಗಲಿ, ಬಸಲಿಂಗಪ್ಪಾ ಅಣ್ಣಾ ಆಸಂಗಿ, ಮಹಾರುದ್ರಪ್ಪಾ ಅಣ್ಣಾ ಕೋರಿ, ಸಿದ್ರಾಮಪ್ಪಾ ಅಣ್ಣಾ ಕೋರಿ ಈ ಯಾವತ್ತು ಮಹನೀಯರು ಕೂಡಿ ೨೦೦-೩೦೦ ಗಳವರೆಗೆ ಜನರು ನೆರೆದ್ದರು. ವೇ॥ ಶಂಕರಶಾಸ್ತ್ರಿಯವರು ಧರ್ಮ, ಅಷ್ಟಾವರಣ, ವಿದ್ಯಾಭಿವೃದ್ಧಿ ಈ ವಿಷಯಗಳ ಮೇಲೆ ಸರ್ವರಿಗೂ ಮನದಟ್ಟಾಗುವಂತೆ ಸುಲಲಿತವಾಗಿ ೪ ತಾಸುಗಳ ವರೆಗೆ ಅಂದರೆ ರಾತ್ರಿ ೧ ಗಂಟೆಯವರೆಗೆ ಭಾಷಣಮಾಡಿದರು. ಅನಂತರ ಗುರುಸಿದ್ಧಯ್ಯಾ ಸ್ವಾಮಿ ಹಿರೇಮಠ ಇವರು ಪ್ರೌಢವಾಗಿ ತಮ್ಮ ಮಂಜುಳವಾಣಿಯಿಂದ ಉದ್ಯೋಗ ವಿಷಯವಾಗಿ ಉಪನ್ಯಾಸಮಾಡಿದರು. ಭಾಷಣಗಳು ಮುಗಿದಮೇಲೆ ವೀಳ್ಯವು ಸರ್ವರಿಗೂ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ಪ್ರಕಾರ ಸಭೆಯು ಇಲ್ಲಿ ಎಂದೂ ಜರಿಗಿದ್ದಿಲ್ಲಾ. ಇದರಂತೆಯೇ ಇನ್ನುಮುಂದೆ ಇಲ್ಲಿಯೂ ಬೇರೆ ಸ್ಥಳಗಳಲ್ಲಿಯೂ ಜರುಗಿ ಸಮಾಜವನ್ನು ಸುಧಾರಿಸುತ್ತಿರಬೇಕೆಂದು ಪ್ರಾರ್ಥಿಸುವೆ, ಒಬ್ಬ ಕೆಂಡಾದಾರನು.

ಬಾಗಲಕೋಟಿ.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಸಂಸ್ಥಾನ ಚಿತ್ರದುರ್ಗ ಇವರ ಸ್ವಾರಿಯು ಇಲ್ಲೇ ಇದ್ದು ಕಳೆದ ತಿಂಗಳ ತಾ॥ ೧೨-೯-೧೧ ಇಸ್ವಿ ಮಂಗಳವಾರ ದಿವಸ ಪಂಚಕಲಶಯುಕ್ತವಾದ ಅಡ್ಡಪಾಲಕಿ ವಗೈರೆ ಸಮಸ್ತ ಬಿರುದಾವಳಿಗಳೊಡನೆ ಉತ್ಸವ ಜರುಗಿದ್ದು ಸರ್ವಶ್ರುತವಾದ ಸಂಗತಿಯಾಗಿದೆ. ಇಲ್ಲಿಯ ಪ್ಯಾಟಿಯ ಭಕ್ತರು ಬಿನ್ನಹಮಾಡಿಕೊಂಡ ಪ್ರಕಾರ ಕಳೆದ ತಾ॥ ೧೬-೧೦-೧೧ ಇಸ್ವಿ ಸೋಮವಾರ ಪ್ರಾತಃಕಾಲ ೧೦ ಘಂಟೆಗೆ ಅಡ್ಡಪಾಲಕಿ ಪಂಚಕಲಶ ಮೋರ್ಚಾಲು ವಗೈರೆ ಸಮಸ್ತಬಿರುದಾವಳಿಗಳೊಡನೆ ಒಳ್ಳೆ ಸಂಭ್ರಮದಿಂದ ಹಳೇಪ್ಯಾಟಿ ವಿರಕ್ತಮಠದಿಂದ ಹೊರಟು ಟೇಶಿನ ಮಠದ ಮುಂಭಾಗದಿಂದ ಹೊಸಪ್ಯಾಟಿಯ ಮಾರ್ಗವಾಗಿ ವೆಂಕಟಪ್ಯಾಟಿಯಲ್ಲ ಹಾದು ಹಳೆಪ್ಯಾಟಿಯಲ್ಲಿ ತಳಿರುತೋರಣ ಕದಳಿಸ್ತಂಭಗಳಿಂದ ಅಲಂಕರಿಸಲ್ಪಟ್ಟ ಗೃಹಕ್ಕೆ ಮಹಾಸನ್ನಿಧಿಯು ೧೨ ಘಂಟೆಯ ಸುಮಾರಕ್ಕೆ ಬಿಜಯಂಗೈಸಿತು. ಮೆ॥ ಶಫರ್ಡಸಾಹೆಬ ಬಹದ್ದೂರ ಕಮೀಶನರ ದಕ್ಷಿಣಭಾಗ ಇವರ ಸ್ವಾರಿಯು ತಾ॥ ೧೬ರಿಂದ ತಾ॥ ೧೮ರ ವರೇಗೆ ಮತ್ತು ಈ ಜಿಲ್ಲೆಯ ಮೆ॥ ಬ್ರಾವುನ ಕಲೆಕ್ಟರಸಾಹೇಬ ಬಹದ್ದೂರ ಇವರ ಸ್ವಾರಿ ತಾ॥ ೧೬ರಿಂದ ತಾ॥ ೧೭ರ ವರೇಗೆ ಇಲ್ಲಿ ಇದ್ದವು. ಉಭಯ ದೊರೆಗಳವರಿಗೆ ತಾ॥ ೧೭ನೆಯ ಮಂಗಳವಾರ ಸಾಯಂಕಾಲ ೪ ಘಂಟೆಗೆ ಶ್ರೀ ಜಗದ್ಗುರುಗಳವರ ವಿರಕ್ತಮಠದಲ್ಲಿ ಪಾನಸುಪಾರಿ ಪಾರ್ಟಿ ನಡೆಯುವದು ಗೊತ್ತಾದ ಮೇರಿಗೆ ಉಭಯ ಸಾಹೆಬ ಬಹದ್ದೂರವರು ನೇಮಿತ ವ್ಯಾಳ್ಯಕ್ಕೆ ದಯಮಾಡಿಸಲು, ಸಂಸ್ಥಾನದ ಕಾರಬಾರಿಯು ಮತ್ತು ಊರಪ್ರಮುಖರು ವಾದ್ಯ ವೈಭವದಿಂದ ಇದಿರ್ಗೊಂಡು ಸದರಿ ಮಠದಲ್ಲಿ ಕರಕೊಂಡುಬಂದು ಉಚಿತಾಸನದ ಮೇಲೆ ಕೂಡ್ರಿಸಿದರು. ಆಮೇಲೆ ಗಾಯನ ಗ್ರಾಮೊಫೋನ ಚಂದ್ರ ಸೂರ್ಯವಾದ್ಯ ಆನೆಗಳಸಲಾಮಿ ವಗೈರೆ ಆನಂದ ವೈಭವಗಳು ಜರುಗಿದನಂತರ, ಮಹಾಸ್ವಾಮಿಗಳವರ ಆಶೀರ್ವಾದ ವ್ಯಾಖ್ಯಾನವಾಯಿತು. ಉಭಯದೊರೆಗಳವರು ಅತ್ಯಾನಂದಪಟ್ಟು ಶ್ರೀ ಜಗದ್ಗುರುಗಳವರ ಆಭಾರವನ್ನಿಸಿದನಂತರ ಗಂಧ ಪುಷ್ಪಾದಿಗಳು ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜನವಾಯಿತು. ಈ ತಾ॥ ಪೈಕಿ ಮುರನಾಳಗ್ರಾಮದ ಭಕ್ತರು ತಮ್ಮ ಗ್ರಾಮಕ್ಕೆ ಶ್ರೀ ಜಗದ್ಗುರುಸ್ವಾರಿ ತಮ್ಮೂರಿಗೆ ಆಗಮಿಸಬೇಕೆಂದು ಬಿನ್ನಹಮಾಡಿಕೊಂಡದಕ್ಕೆ ದಯಮಾಡಿಸಲಿಕ್ಕೆ ಸನ್ನಿಧಿಯಿಂದ ಒಪ್ಪಿಗೆಯಾಯಿತು. ಈ ಮೊದಲು ಅಲ್ಲಿಯ ಕೆಲಸಮಾಡುವ ಕುಲಕರ್ಣಿ (ಶಾನುಭೋಗ) ವ ಇತರ ಬ್ರಾಹ್ಮಣರು ಜೈನ ಮುಸಲ್ಮಾನ ವಗೈರೆ ಜನರು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಪಂಚಕಲಶಯುಕ್ತವಾದ ಅಡ್ಡಪಾಲಕಿ ವಗೈರೆ ಸಮಸ್ತ ಬಿರುದಾವಳಿ ಸಮೇತ ನಮ್ಮ ಗ್ರಾಮದಲ್ಲಿ ಉತ್ಸವವಾದರೆ ತಮಗೆ ಸಂತೋಷವದೆ ಎಂದು ಸರ್ಕಾರಕ್ಕೆ ವಿನಂತಿ ಅರ್ಜಿ ಬರೆದುಕೊಂಡಿದ್ದರು. ಇಷ್ಟೇಅಲ್ಲ. ತಾ॥ ೧೮ ರ ಬುಧವಾರದ ದಿವಸ ಸದರಿ ಗ್ರಾಮಕ್ಕೆ ದಯಮಾಡಿಸಿದ್ದಾಗ್ಗೆ ಅಲ್ಲಿಯ ಬ್ರಾಹ್ಮಣ ಜೈನ ಮುಸಲ್ಮಾನ ವಗೈರೆ ಮಂಡಳಿಯವರು ವೀರಶೈವರಿಗೆ ಸಹಾಯಕರಾಗಿ ಪಂಚಕಲಶಯುಕ್ತವಾದ ಅಡ್ಡಪಾಲಕಿ ಯಾವತ್ತು ಬಿರುದಾವಳಿ ಸಹಿತ ಉತ್ಸವವನ್ನು ಒಳ್ಳೆಯ ವೈಭವದಿಂದ ಭಕ್ತಿಪೂರ್ವಕ ನೆರವೇರಿಸಿದರು. ಸಾಯಂಕಾಲ ೪ ಗಂಟೆಗೆ ಭಕ್ತಮಾಹೇಶ್ವರ ಕಾಣಿಕೆಯನ್ನೂ, ಶಾನುಭೋಗ ಮತ್ತು ಕೆಲ ಬ್ರಾಹ್ಮಣರ ಜೈನ ಮುಸಲ್ಮಾನ ವಗೈರೆ ಜನರ ಫಲಪುಷ್ಪವನ್ನೂ ಒಪ್ಪಿಸಿಕೊಂಡುಶ್ರೀಗಳವರ ಸ್ವಾರಿಯು ಸಂಜೆಯ ೬ ಗಂಟೆಗೆ ಬಾಗಲಕೋಟೆಯ ಸ್ವಮಠಕ್ಕೆ ದಯಮಾಡಿಸಿತು. ಇಂತಹ ಪರಂಪರೆಯಿಂದ ನಡೆದುಬಂದ ಅಡ್ಡಪಾಲಕಿ ಪಂಚಕಲಶ ವಗೈರೆ ಸಮಸ್ತ ಬಿರುದಾವಳಿಗಳ ಉತ್ಸವಕ್ಕೆ ಆತಂಕತರುವ ಕುರಿತು ಕಳೆದ ತಿಂಗಳ ತಾ॥ ೧೨ ರ ಮಂಗಳವಾರ ಜರುಗಿದ ಅಡ್ಡಪಾಲಕಿ ಪಂಚಕಲಶ ವಗೈರೆ ಉತ್ಸವದಲ್ಲಿ ಬಾಗಲಕೋಟಿಯ ಕೆಲವು ದೇಶೀ ಚಳವಳಿಯ ಬ್ರಾಹ್ಮಣರು ಇಲ್ಲಿ ಉತ್ಸವಜರುಗುವುದಕ್ಕಿಂತ ಮೊದಲು ಸುಳ್ಳು ಮಜಕೂರಿನ ಭಲತೆಸಲತೆ ಸುದ್ದಿಯನ್ನು ತಾರಿನಿಂದಲೂ ಅರ್ಜಿಯಿಂದಲೂ ಸರ್ಕಾರಕ್ಕೆ ಮಾಡಿದರು. ಅದರಲ್ಲಿ ಅವರು ಎಷ್ಟು ಸುಳ್ಳು ಖಟಪಟ ಮಾಡಿದಾಗ್ಯೂ, ಅವರಿಗೆ ಜಯಸಿಗಲಿಲ್ಲಾ. ಆದುದರಿಂದ ಉತ್ಸವ ಸುರಕ್ಷಿತ ಜರುಗಿದಾಗ್ಯೂ ತಾವು ಮೊದಲು ಸರಕಾರಕ್ಕೆ ಬರೆದುಕೊಂಡ ಖೋಟ ಅರ್ಜಿ ಮತ್ತೂ ತಾರುಗಳಿಗೆ ಮಾನಕೊಡುವುದಕ್ಕಾಗಿ ಸದರಿ ತಾರೀಖಗೆ ಜರುಗಿದ ಉತ್ಸವದಲ್ಲಿ ಭಯಂಕರ ದಂಗೆಯಾಯಿತ್ತು, ದರೋಡೆಮಾಡಿದರು ವಗೈರೆ ಅಂತ ಗುನ್ಹೆದ ಸ್ವರೂಪತೋರಿಸಿ ಸುಳ್ಳುಬಾತ್ಮೆಯಿಂದ ರಾಜನಿಷ್ಠರಾದ ಲಿಂಗಾಯತರ ವಿರುದ್ಧ ವರ್ತಮಾನಪತ್ರಗಳಲ್ಲಿ ಹೋಟಲೇಖನದಿಂದ ಸರಕಾರದವರ ಮನಸ್ಸಿನಲ್ಲಿ ಲಿಂಗಾಯತರ ಬಗ್ಗೆ ಏನಾದರೂ ಸಂಶಯಬರುವಂತೆ ಪ್ರಸಿದ್ಧಪಡಿಸಿರುವರು. ಇಂಥ ದುಷ್ಟಜನರಿಗೆ ಯಾವ ಉಪಮಾನ ಕೊಡತಕ್ಕದು? ಇದನ್ನು ವಾಚಕರೇ ಊಹಿಸಲಿ.

ಇದೆ ತಾ॥ ೧೮-೧೦-೧೧ ಇಸ್ವಿ ಬುಧವಾರ ಜರಗಿದ ಮುರನಾಳ ಗ್ರಾಮದ ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಅಲ್ಲಿಯ ಬ್ರಾಹ್ಮಣ ವಗೈರೇರು ಮನಸಿಟ್ಟು ಮಾಡಿದ ಸಹಾಯವನ್ನು ಕೇಳಿ ನೋಡಿದವರೆಲ್ಲರೂ ಸಂತೋಷಪಡದೆ ಇರಲಾರರು. ಸದರಿ ಮುರನಾಳ ಗ್ರಾಮದ ಬ್ರಾಹ್ಮಣರು ಲಿಂಗಾಯತರ ಕೂಡ ಸಮ್ಮಿಳಿತರಾಗಿ ನೆರವೇರಿಸಿದ ಉತ್ಸವದ ಮೇಲ್ಪಂಕ್ತಿ (ಕಿತ್ತಿ) ಯನ್ನು ಇತರ ಗ್ರಾಮದ ಬ್ರಾಹ್ಮಣರು ತೆಗೆದುಕೊಂಡರೆ, ಲಿಂಗಾಯತ ಮತ್ತು ಬ್ರಾಹ್ಮಣರ ನಡುವೆ ಯಾವ ತರದತೊಂದರೆಗಳು ಬರಲಿಕ್ಕಿಲ್ಲೆಂಬುದನ್ನು ಕೈಯತ್ತಿ ಸಾರಿಹೇಳಬಹುದು.

ಒಬ್ಬ ತಿಹಾರ್ಯಿತ

ಶ್ರೀಮದ್ವೀರಶೈವ ಶಿವಯೋಗ ಮಂದಿರದ ✓
ಪ್ರಕಟನ ಪತ್ರಿಕೆಯು

ಶ್ರೀಮದ್ವೀರಶೈವ ಶಿವಯೋಗ ಮಂದಿರದ ಸಂಸ್ಥೆಯಿಂದ:—

ಸಮಸ್ತ ವೀರಶೈವ ಮಹಾ ಜನರಿಗೆ ಸೂಚಿಸುವದೇನೆಂದರೆ:—ಇದೇ ಸಂವತ್ಸರದ ಮಾಘ ಬಹುಳ ೧೪ ಮಹಾಶಿವರಾತ್ರಿಯ ದಿವಸ ಮಲಾಪಹಾರೀ ತೀರ ಮಹಾಕೂಟ (ದಕ್ಷಿಣ ಕಾಶೀ) ಕ್ಷೇತ್ರೋಪಾಂತ್ಯ (ಪಂಚಕ್ರೋಶದೊಳಗೆ) ಸ್ಥಾಪಿತ ಶಿವಯೋಗ ಮಂದಿರದಲ್ಲಿ ಅನೇಕ ವೀರಶೈವರು ಕೂಡತಕ್ಕವರಿರುವರು. ಈ ಸುಸಮಯದಲ್ಲಿ ಶಿವಯೋಗ ಮಂದಿರ ಮತ್ತು ಸ್ವಮತ ಈ ವಿಷಯಗಳನ್ನು ಕುರಿತು ಆಲೋಚಿಸತಕ್ಕ ಅವಶ್ಯವಿದೆ. ಆದ್ದರಿಂದ ತಾವು ದಯವಿಟ್ಟು ಸ್ವಮತಾಭಿಮಾನಿಗಳೊಡನೆ ಆಗಮಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುವೆವು.

ಇಲ್ಲಿ ನಡೆಯತಕ್ಕ ವಿಷಯಗಳು.

೧. ಭಾಷಣಾದಿಗಳು—ಶಿವಯೋಗಮಂದಿರ ಮತ್ತು ಸ್ವಮತ ಇವುಗಳ ಸುಧಾರಣೆಯ ಬಗ್ಗೆ ವಕ್ತೃತ್ವಕಲೆಯುಳ್ಳ ವಿದ್ವಾಂಸರ ಉಪನ್ಯಾಸಗಳು ಜರುಗುವವಲ್ಲದೆ, ಶಿವಾದ್ವೈತ ಮತ್ತು ಅದ್ವೈತ ಮತ ಗ್ರಂಥಗಳ ಪರೀಕ್ಷೆ, ಶಿವಕೀರ್ತನೆ, ಶಿವಭಜನೆ ಮುಂತಾದ ಮುಮುಕ್ಷುಗಳ ಮತಿಗೆ ಮಂಗಲವನ್ನೀಯುವ ಮಹಾ ಕಾರ್ಯಗಳು ಮಾಘ ಬಹುಳ ೧೪ ಶನಿವಾರ ೩೦ ರವಿವಾರ ಮತ್ತು ಫಾಲ್ಗುಣ ಶುದ್ಧ ೧ ಸೋಮವಾರ ಈ ಮೂರು ದಿವಸಗಳಲ್ಲಿ ಅಂದರೆ ಫೇಬ್ರುವರಿ ೧೭, ೧೮, ೧೯ ತಾರೀಖು ಸನ್ನ ೧೯೧೨ ಈ ಮೂರು ದಿವಸಗಳಲ್ಲಿ ಜರಗುವವು.

ಪರೀಕ್ಷಾ ಗ್ರಂಥಗಳು. (೧) ನಿಜಲಿಂಗಶತಕ, (೨) ಸೋಮೇಶ್ವರಶತಕ, (೩) ಶಿವಾದ್ವೈತಮಂಜರಿ, (೪) ನೊಗ್ಗಿಯ ಮಾಯಿದೇವಕೃತಶತಕತ್ರಯದಲ್ಲಿ ಒಂದು ಶತಕ, (೫) ಕೈವಲ್ಯಪದ್ಧತಿ, (೬) ವಿವೇಕಚಿಂತಾಮಣಿ ೧ ನೇ ಭಾಗ ಸಂಪೂರ್ಣ, ೨ನೇ ಭಾಗ ವೀರಶೈವ ಲಕ್ಷಣದಿಂದ ಚರ್ಯಾಪಾದ ಸಂಪೂರ್ಣ, (೭) ಪಂಚದಶಿ, (೮) ವಿಚಾರಸಾಗರ, (೯) ಲಿಂಗಧಾರಣ ಚಂದ್ರಿಕೆ ಪೂರ್ವಾರ್ಧ, (೧೦) ಕರಣ ಹಸುಗೆ (ವ್ಯಾಖ್ಯಾರಹಿತ), (೧೧) ಬಸವೇಶ್ವರ ವಚನ ಭಕ್ತಸ್ಥಲ ಪೂರ್ಣ (ವ್ಯಾಖ್ಯಾನಸಹಿತ,) (೧೨) ಕ್ರಿಯಾಸಾರ (ವಾರದವರಲ್ಲಿ ಅಚ್ಚುಹಾಕಿದ್ದು) ಇದರಲ್ಲಿ ೧-೨ ಆಶ್ವಾಸ ವ್ಯಾಖ್ಯಾನ ಸಹಿತ, (೧೩) ಸಿದ್ಧಾಂತ ಶಿಖಾಮಣಿ ಪೂರ್ವಭಾಗ, (೧೪) ಶಿವಪಂಚಸ್ತವ ಒಂದು ಶತಕ, (೧೫) ಬಸವಪುರಾಣ ೧ ನೇ ಸಂಧಿ ೫೧ ರಿಂದ ೬೬ವರೆಗೆ, ಪದ್ಯಗಳು, ೨ನೇ ಸಂಧಿ ಪೂರ್ಣ, ೩ ನೇ ಸಂಧಿ ಪೂರ್ಣ, ೪ನೇ ಸಂಧಿ ೧ರಿಂದ ೧೪ ಪದ್ಯ ಮತ್ತು ೬೨ರಿಂದ ೭೩ ರ ವರೆಗೆ ಪದ್ಯಗಳು.

ಈ ಮೇಲ್ಕಂಡ ಗ್ರಂಥಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಯೋಗ್ಯತಾನುಸಾರವಾಗಿ ಸಂಭಾವನೆಗಳು ಕೊಡಲ್ಪಡುವವಲ್ಲದೆ ಸಂಸ್ಥೆಯಿಂದ ಅಭಿನಂದನ ಪತ್ರಿಕೆಗಳೂ ಕೊಡಲ್ಪಡುವವು. ಈ ಗ್ರಂಥಗಳಲ್ಲಿ ಪರೀಕ್ಷೆಯನ್ನು ಕೊಡತಕ್ಕವರು ತಾವು ತೆಗೆದುಕೊಂಡ ಗ್ರಂಥದ ಹೆಸರು ಮತ್ತು ತಮ್ಮ ಹೆಸರು ಇವುಗಳನ್ನು ಶಿವಯೋಗಮಂದಿರದ ಕಾರಕೂನರಾದ ರಾ. ರಾ. ಶಿವಬಸಪ್ಪ ಮಾಗಿ ಇವರ ಕಡೆಗೆ ಮಾರ್ಗಶೀರ್ಷ ಮಾಸದೊಳಗಾಗಿ ತಿಳಿಸಬೇಕು.

ರೇಲ್ವೆಯ ಮಾರ್ಗಗಳು. ಸೊಲ್ಲಾಪೂರ ಮಾರ್ಗವಾಗಿ ಬರತಕ್ಕವರು ಬಾದಾಮಿ ಸ್ಟೇಶನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗ ಮಂದಿರವು ೯ ಮೈಲು ಆಗುವದು. ಗದಗಮಾರ್ಗವಾಗಿ ಬರತಕ್ಕವರು, ಆಲೂರ ಸ್ಟೇಶನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗಮಂದಿರವು ೪ ಮೈಲು ಆಗುವದು. ಇಲ್ಲಿಗೆ ಬರುವರಿಗೆ ಮಹಾ ಕ್ಷೇತ್ರ ಪುಣ್ಯವು ಲಭಿಸುವದಲ್ಲದೆ ಮಹನೀಯರ ದರ್ಶನಲಾಭವಾದರೂ ಆಗುವದರಿಂದ, ಉಳಿವಿ ಮೊದಲಾದ ಕ್ಷೇತ್ರಗಳಿಗೆ ಸಕಲ ಸನ್ನಾಹದೊಡನೆ ಕುಟುಂಬ ಸಹಿತವಾಗಿ ಹೋಗುವಂತೆ, ಇಲ್ಲಿಗೆ ಬಂದು, ಸೇವೆಮಾಡಿ, ತಪ್ಪಲ ಭಾಗಿಗಳಾಗಿ ಸ್ವಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂಬೀ ವಿಷಯವನ್ನು ಸಮಸ್ತರಿಗೂ ಪ್ರಸಿದ್ಧಪಡಿಸುವೆಂಬ ವಿನಯದ ಪ್ರಾರ್ಥನೆಯುಂಟು.

ಶಿವಯೋಗಮಂದಿರದ ವ್ಯವಸ್ಥಾಪಕ.

ಹಾವೇರಿ ಹುಕ್ಕೇರಿ ಮಠದಲ್ಲಿ ಕೂಡಿದ್ದ ಸಭೆಯಲ್ಲಿ ಶ್ರೀ ಶಿವಯೋಗಮಂದಿರಕ್ಕೆ ದರವರ್ಷ ಕೊಡಲಿಕ್ಕೆ ಒಪ್ಪಿದ ವರ್ಗಣಿದಾರರ ವಿವರ— ✓

(ಹಿಂದಣವಾರದ ಶೇಷ.)

ಚೆಂನಪ್ಪಾ ಚನಿವೀರಪ್ಪಾ ಹಂಚಿನಾಳ ಸಾ॥ ಹಾವೇರಿ ೫ ರೂ. ಕಲ್ಲಪ್ಪಾ ಬಿಂನ ಶಿವಲಿಂಗಪ್ಪಾ ಬಟ್ಟೆ ಸಾ॥ ಹಾವೇರಿ ೫ ರೂ. ಗದಿಗಯ್ಯಾ ಚೆಂನಯ್ಯಾ ಹಿರೆಮಠ ಸಾ॥ ಮಹಾರಾಜಪೇಟೆ ತಾ॥ ಹಾನಗಲ್ಲ ೫ ರೂ. ಗುರುಶಾಂತಪ್ಪಾ ಉರ್ಫ ದೇವೇಂದ್ರಪ್ಪಾ ಬಿಂನ ವೀರಬಸಪ್ಪಾ ಕುರ್ಬಗೊಂಡದ ಸಾ॥ ಹಾವೇರಿ ಹಾಲಿವಸ್ತಿ ಅಗಡಿ ತಾ॥ ಕರ್ಜಗಿ ೫ ರೂ. ಮಹೇಶ್ವರಶಾಸ್ತ್ರಿ ಬಿಂನ ಚಿದಾನಂದಶಾಸ್ತ್ರಿ ಸಾ॥ ಹರಿಹಾರ ೫ ರೂ. ಗುರುಶಾಂತಪ್ಪಾ ಬಿಂನ ತಿಪ್ಪಂಣಾ ಮುದ್ಲಿಂಗಂಣನವರ ಸಾ॥ ಹಾವೇರಿ ೫ ರೂ. ರುದ್ರಪ್ಪಾ ರಾಚಪ್ಪಾ ವಾಲಿ ಸಾ॥ ಶಿದ್ದೆದೇವಪುರ ತಾ॥ ಕರ್ಜಗಿ ೫ ರೂ. ಶಿವಗಂಗಪ್ಪಾ ಬಸಪ್ಪಾ ಕೊಗ್ಗಪ್ಪನವರ ಸಾ॥ ಹಾವೇರಿ ೫ ರೂ. ಗುರಶಾಂತಪ್ಪಾ ಬಿಂನ ಮುರಿಗೆಪ್ಪಾ ಹರಿವಾಳ ಸಾ॥ ಹಾವೇರಿ ೫ ರೂ. ಶಿವಪ್ಪಾ ನಾಗಪ್ಪಾ ಹರಿದ್ರಾಳ ಸಾ॥ ಹಾವೇರಿ ೫ ರೂ. ನಿಜಗುಣಪ್ಪಾ ಬಿಂನ ರುದ್ರಪ್ಪಾ ಹುರ್ಳಿಕುಪ್ಪಿ ಸಾ॥ ಹಾವೇರಿ ೫ ರೂ. ಬಸಪ್ಪಾ ಬಿಂನ ಶಿವಬಸಪ್ಪಾ ಕಬ್ಬೂರ ಸಾ॥ ದೇವಿಹೊಸೂರು ತಾ॥ ಕರ್ಜಗಿ ೫ ರೂ. ಶಿವರುದ್ರಪ್ಪಾ ಬಿಂನ ಶಾಂತವೀರಪ್ಪಾ ಜವಳಿ ಸಾ॥ ದೇವಿಹೊಸೂರು ತಾ॥ ಕರ್ಜಗಿ ೫ ರೂ. ಗದಿಗಯ್ಯಾ ಬಿಂನ ಅಂಕಲಿಯ್ಯಾ ಕೋರಾಣಮಠದ ಸಾ॥ ದೇವಿಹೊಸೂರು ತಾ॥ ಗದಗ ೫ ರೂ. ಸಿವಲಿಂಗಪ್ಪಾ ರಾಚಪ್ಪಾ ಮಹಾಲಿಂಗಶೆಟ್ಟಿ ಸಾ॥ ಹಾವೇರಿ ೫ ರೂ. ರಾಮಪ್ಪಾ ಬಿಂನ ತಿಪ್ಪಂಣಾ ಸಾಳೇರ ಸಾ॥ ಕದರಮಂಡಲಗಿ ತಾ॥ ರಾಣೆಬಿನ್ನೂರು ೫ ರೂ. ಪುಟ್ಟಪ್ಪಾ ಬಿಂನ ವುಳಿವೆಪ್ಪಾ ಶಟಗಲ್ಲ ಸಾ॥ ಹಾವೇರಿ ೫ ರೂ. ಚನಬಸಪ್ಪಾ ಚನ್ನಿವೀರಪ್ಪಾ ಹರಪನಹಳ್ಳಿ ಸಾ॥ ಹಾವೇರಿ ೩ ರೂ. ವೀರಯ್ಯಾ ಚೆಂನಯ್ಯಾ ಗವನೂರ ಸಾ॥ ಹಾವೇರಿ ೩ ರೂ. ಪುಟ್ಟಪ್ಪಾ ಶಟ್ಟಪ್ಪಾ ಅಕ್ಕೂರ ಸಾ॥ ಹಾವೇರಿ ೩ ರೂ. ಚೆಂಬಸಪ್ಪಾ ಬಿಂನ ವೀರಬಸಪ್ಪಾ ಮುದ್ಲಿಂಗಂಣನವರ ಸಾ॥ ಹಾವೇರಿ ೩ ರೂ. ರುದ್ರಪ್ಪಾ ಗಂಗಪ್ಪಾ ಗಾಣಿಗರ ಸಾ॥ ಹಾವೇರಿ ೨ ರೂ. ಜಂಬಣ್ಣಾ ಬಿನ್ನ ಅಡಿವೆಪ್ಪಾ ಮಾಸೂರ ಸಾ॥ ನಿಶೀಮ ಆಲದಕಟ್ಟಿ ಸಾ॥ ಹಾನಗಲ್ಲ ೨ ರೂ. ಮರಿತಮ್ಮಪ್ಪಾ ಬಿನ್ನ ನಾಗಪ್ಪಾ ನವಲಿ ಸಾ॥ ಯಿಜಾರಿ ಲಕಮಾಪುರ ತಾ॥ ಹಾವೇರಿ ೨ ರೂ. ನೀಲಪ್ಪಾ ಕೊಂ ಕೊಟ್ರಪ್ಪಾ ಚಿಕಶೆಟ್ಟಿ ಸಾ॥ ಹಾವೇರಿ ೨ ರೂ. ಈ ಪ್ರಕಾರ ೬೩ ಜನಗಳು ಜನ್ಮಾಂತ್ಯದವರಿಗೆ ಕೊಡಲಿಕ್ಕೆ ಒಪ್ಪಿದರು.

ಮತ್ತು ಸದರಿ ಸಭೆಯಲ್ಲಿ ಎರಡನೆ ವರ್ಗಣಿ ಕೊಟ್ಟವರು— ರಾಚಪ್ಪಾ ವ. ಚನ್ನಪ್ಪಾಹಿಂಟಿಗೇರಿ ಸಾ॥ ಹಾವೇರಿ ೫ ರೂ. ನಂತೆ ೧೦ ವರ್ಷವೂ, ರುದ್ರಯ್ಯಾ ವೀರಯ್ಯಾ ಹನಗೋದಿಮಠದ ಸಾ॥ ಬ್ಯಾಡಿಗಿ ೫ ರೂ. ನಂತೆ ೧೦ ವರ್ಷವೂ, ಚೆಂನಬಸಪ್ಪಾ ಸೂಗೀರಪ್ಪಾಶಟ್ರ ಸಾ॥ ಬ್ಯಾಡಿಗಿ ೫ ರೂ, ನಂತೆ ೫ ವರ್ಷವೂ, ಸಂಗನಬಸಪ್ಪಾ ಚೆಂನಬಸಪ್ಪಾ ಪುಮರಿ ಸಾ॥ ಹಾವೇರಿ ೫ ರೂ. ನಂತೆ ೫ ವರ್ಷವೂ, ಗದಿಗೆಯ್ಯಾ ಚೆಂನಯ್ಯಾ ಹಿರೆಮಠ ಸಾ॥ ಮಹರಾಜಪೇಟೆ ತಾ॥ ಹಾನಗಲ್ಲ ೫ ರೂ. ನಂತೆ ೫ ವರ್ಷವೂ ಕೊಡಲಿಕ್ಕೆ ಒಪ್ಪಿದರು.

ಸಿಂಗಿರಾಜಪುರಾಣವಿಜಯಂ

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುಮೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ದಿವಟಿಗೆಬೀದಿ
ಮೈಸೂರು.

1 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು
ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. **ಮಿಂಚಿನ ಉಂಗುರವೂ.**

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District.

ಉತ್ತಮ ಗ್ರಂಥಗಳು.

11

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

29

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ರೋಗಗಳ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೬. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹಿಂದೆ ಮೈಸೂರು.

68

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಬಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೦—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರೆಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕಾಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

8

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು)

ಅಂಜೀರಾರ್ಕಪೌಷಧಿ:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಳಪೆಯಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಮಿಶ್ರಗಳಿಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."
("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಅಪಚನದ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ ಖ. ಬೇರೆ.

ನಂ. ೫೫ "ಅಂಜೀರಾರ್ಕಪೌಷಧಿ ಕಂಪನಿ"
ಧಾರವಾಡ ಮತ್ತು ಮೀರಜ. (ಇಂಡಿಯಾ)

೧೯೧೧ನೆಯ ಇಸವಿ ನವಂಬರ್ ತಾ॥ ೬ ರಿಂದ ೧೯೧೧ ನೆಯ ನವಂಬರ್ ತಾ॥ ೧೨ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಶು॥ ಪೌರ್ಣಮಿಯಿಂದ ಕಾರ್ತಿಕ ಬ॥ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲ ಹೇಡಿ
6	1 ಸೋ	ಪೌ	37-8	ಅಶ್ವಿನಿ	7-8	21
7	ಮಂಗ	ಪಾ	34-2	ಭರಣಿ	4-58	22
8	2 ಬುಧ	ಬಿ	28-37	ಕೃತ್ತಿಕ	1-58	23
9	3 ಗುರು	ತ	23-0	ಮೃಗಶಿರ	54-38	24
10	4 ಶುಕ್ರ	ಚ	17-0	ಆರಿದ್ರ	50-17	25
11	ಶನಿ	ಪಂ	11-19	ಪುನರ್ವಸು	8-31	26
12	ಭಾನು	ಷ	5-8	ಉಬರಿ	8-23	27

(1) ಕಾರ್ತೀಕ ಸೋಮವಾರಂ, ರುದ್ರಸಾವರ್ಣಿಮನು, ವ್ಯಾಸಪೂರ್ಣಿಮಾ, ಕಾರ್ತೀಕ ಗೌರೀವ್ರತಂ, ಸ್ತ್ರೀಯೋಗಃ. (2) ಶ್ರೀರಂಗಪಟ್ಟಣದಲ್ಲಿ ತೋಟೋತ್ಸವಾರಂಭ. (3) ಸಂಕಟಹರ ಚತುರ್ಥಿ. (4) ಕರಕಚತುರ್ಥಿ, ಪಂಚಮೀ ತಿಥಿ.

ಮೈಸೂರ್: ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 104

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾನತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ನವಂಬರ್ ತಾರೀಖು ೧೩ ನೆಯ ಸೋಮವಾರ. [ಸಂಚಿಕೆ ೪೬

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೧)

8

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:— ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ.

ಊದಬತ್ತಿಗಳು.

36

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೨—೦—೦ ೫—೦—೦; ೩—೦—೧; ೨—೮—೦; ೧—೪—೦ ; ಕಸ್ತೂರಿ ಜಲಿ ತೊಲಾ ೧ ಕ್ಕೆ ೧—೦—೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

20

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ. ಜಿಲ್ಲ ಉತ್ತರಕನಡಾ

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಚಾರುಶೀಲೆ ಚರಿತ್ರೆ	೦—೫—೦
ಕರಸ್ಥಾಂಬೆನ್ನು	೦—೪—೦
ಸಟೀಕಕರ್ನಾಟಕಶಬ್ದಮಂಜರಿ	೦—೪—೦
ಸಟೀಕನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೩—೦
ವ್ರತಪಂಚಕ	೦—೨—೦
ವಿವೇಕಮಂಜರಿ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦
ಗುರುಕಂಠೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

23

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿಪಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಲಿಸ್ಟ್)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:— ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

13

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು !
ಕಾಶೀವಿಶ್ವೇಶ್ವರಪ್ರಸನ್ನ.

4

KASHI VISHWESHWAR
S.N.U. & Co
BENARES CITY

ಅಗ್ಗವಾದಮೊಲುಗಳು— ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವೂ ಉಡುವಮಡಿ ಯಾವುದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವುದು? ಕಾಶೀಪಟ್ಟು.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ಆಗಿಯೂ ನೋಡುವುದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೆ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ ! ಬಿಡಬೇಡಿರಿ !! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಕಟ್ಟೆಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು, ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟಿ, ಸ್ಪಟಿಕಸರ, ಬಾಣಲಿಂಗ, ಉತ್ತಮವಾದನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳೂ, ಪಸ್ತು ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಖರ್ಚು ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ. ೧ ಕ್ಯಾಟಲಾಗು ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪನಿ ಅಡ್ರಸ್ ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯುವ ವಿಳಾಸಕ್ಕೆ ಕಳಿಸಲಾಗುತ್ತೆ. ವಿಳಾಸವನ್ನು ಚೆನ್ನಾಗಿ ಬರೆಯದೇಹೋದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ—
ಯಸ್. ಉಡುಪ್ಪಿನಾರಾಯಣಚಾರ್ಯ ಅಂಡ್ ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ
S. U. N. & Co,
Silk Weaving Manufacturers
Benares City. (V. P.)

ವ್ಯವಸಾಯಕ ವಿಷಯಗಳು.

ಹತ್ತಿಯ ದಂಟನ್ನು ಕೊರೆಯುವ ಹುಳುಗಳು.

ಹತ್ತಿಯ ಗಿಡಗಳಲ್ಲಿ ಹೂ ಬಿಡಲು ಆರಂಭವಾದಾಗಿನಿಂದ ಹತ್ತಿಯನ್ನು ಬಿಡಿಸಿ ಕೊಳ್ಳುವವರೆಗೂ ಜಮೀನಿನ ಸೈರುಗಳಲ್ಲಿ ಅಲ್ಲಲ್ಲಿ ಒಂದೊಂದು ಗಿಡವು ಬಾಡಿ ಕ್ರಮೇಣ ಸತ್ತು ಹೋಗುವದನ್ನು ಅನೇಕರು ನೋಡಿರಬಹುದು. ನಿಷ್ಕಾರಣವಾಗಿ ಹೀಗಾಯಿತೆಂದು ಅವರು ಆಶ್ಚರ್ಯಪಡಬಹುದು. ಆದರೆ ಈ ರೀತಿ ಬಾಡಿ ಸತ್ತುಹೋದ ಗಿಡವನ್ನು ಕಿತ್ತು ಬೇರಿನ ಬಳಿಯಲ್ಲಿ ದಂಟನ್ನು ಕತ್ತರಿಸಿ ನೋಡಿದರೆ ದಂಟಿನ ಉದ್ದಕ್ಕೂ ಮಧ್ಯಭಾಗದಲ್ಲಿ ಕೊರೆಯಲ್ಪಟ್ಟಿರುವದನ್ನು ಅವರು ನೋಡಬಹುದು. ಈ ತೂತಿನಲ್ಲಿ ಹುಳುಗಳು ಸಿಕ್ಕುವವು. ಗಿಡವನ್ನು ನಾಶಮಾಡಿದವು ಈ ಹುಳುಗಳೇ.

ಈ ಹುಳುಗಳು ಗಿಡದ ದಂಟಿನ ತುದಿಯಲ್ಲಿ ಚಿಟ್ಟೆ ಹುಳುಗಳಿಂದ ಇಡಲ್ಪಟ್ಟ ಮೊಟ್ಟೆಗಳನ್ನು ಒಡೆದುಕೊಂಡು ಅಲ್ಲಿಂದ ದಂಟಿನೊಳಕ್ಕೆ ಪ್ರವೇಶಿಸುವವು. ಅನಂತರದಲ್ಲಿ ದಂಟಿನ ಒಳಭಾಗದಲ್ಲಿರುವ ತಿರುಳನ್ನು ತಿನ್ನುತ್ತಾ ದಂಟಿನ ಮಧ್ಯಭಾಗದಲ್ಲಿ ಉದ್ದಕ್ಕೂ ಗುಂಡಾದ ಒಂದು ತೂತನ್ನು ಮಾಡುವವು. ಆಗ್ಗೆ ಗಿಡವು ಮೊದಲು ಬಾಡುವುದಕ್ಕೆ ಪ್ರಾರಂಭವಾಗಿ ಕೊನೆಗೆ ಸತ್ತು ಹೋಗುವುದು. ಹುಳುವು ಬೆಳ್ಳಗೂ ಮತ್ತು ಸುಮಾರು ಒಂದು ಅಂಗುಲ ಉದ್ದವಾಗಿಯೂ ಇರುವುದು. ಇದರ ಶರೀರವು ಬೆಳ್ಳಗೂ ತಲೆಯು ಮಾತ್ರ ಸ್ವಲ್ಪ ದಪ್ಪನಾಗಿಯೂ ಮತ್ತು ಚಪ್ಪಟೆಯಾಗಿಯೂ ಇರುವುದು. ಹುಳುವು ಪೂರ್ತಿಯಾಗಿ ಬೆಳೆದನಂತರ ತೊಗಟೆಗೆ ಅಪಾಯವನ್ನುಂಟುಮಾಡದಂತೆ ದಂಟನ್ನು ಕೊರೆದುಕೊಂಡು ಹೊರಕ್ಕೆ ಬಂದು ಸ್ವಲ್ಪ ಕಾಲದಲ್ಲಿ ೬ ಕಾಲುಗಳೂ, ೪ ರೆಕ್ಕೆಗಳೂ ಮತ್ತು ೨ ಮೀಸೆಕೊಂಬುಗಳೂ ಉಳ್ಳ ಚಿಟ್ಟೆಯಾಗುವುದು. ಹೆಣ್ಣು ಚಿಟ್ಟೆಯು ಮೊಟ್ಟೆಗಳನ್ನಿಟ್ಟು ಸತ್ತು ಹೋಗುವುದು.

ನಿವಾರಣೆ:– ಬಾಡಿ ಹೋದ ಗಿಡಗಳನ್ನೆಲ್ಲಾ ಕ್ರಮವಾಗಿ ತಪ್ಪದೆ ಕಿತ್ತು ಹಾಕಿದರೆ, ರೋಗವು ಸಂಪೂರ್ಣವಾಗಿ ನಿಂತು ಹೋಗುವುದು. ಹುಳುವು ಗಿಡದಿಂದ ಹೊರಗೆ ಬರುವದಕ್ಕೆ ಮೊದಲೇ ಬಾಡಿದ ಗಿಡಗಳನ್ನೆಲ್ಲಾ ಬೇರು ಸಹಿತ ಕಿತ್ತು ಸುಟ್ಟುಬಿಡುವುದು ಬಹಳ ಸುಲಭ. ಹತ್ತಿಯ ಸಾಗುವಳಿದಾರರೆಲ್ಲರೂ ರೋಗವು ತಲೆಹಾಕಿದ ತರುಣದಲ್ಲಿಯೇ ತಪ್ಪದೆ ಮೇಲ್ಕಂಡಂತೆ ಮಾಡಿದುದೇ ಆದರೆ, ರೋಗದ ಹುಟ್ಟೇ ಇಲ್ಲದಂತಾಗುವುದು.

ಅಲಸಂದೆ.

ಈ ಧಾನ್ಯವನ್ನು ಅಮೇರಿಕಾ ದೇಶಸ್ಥರು ಬಹಳ ಹೇರಳವಾಗಿ ಬೆಳೆಯುವರು. ಇದು ಬಹಳ ಕೀಳು ಜಮೀನುಗಳಲ್ಲೂ ಸೊಂಪಾಗಿ ಬೆಳೆಯುವುದು ಮತ್ತು ಬಹಳ ಮಟ್ಟಿಗೆ ಅನಾವೃಷ್ಟಿಯನ್ನು ತಡೆಯುವುದು. ಇದು ಎಳೆಯದಾಗಿದ್ದಾಗ್ಗೆ ಜನರು ಇದನ್ನು ವಿಶೇಷವಾಗಿ ತಿನ್ನುವರು. ಇದು ಜಮೀನನ್ನು ಬಹಳ ಫಲವತ್ತಾಗಿ ಮಾಡುವದೆಂಬ ಅಂಶವನ್ನು ನಮ್ಮ ರೈತರು ಸ್ವಲ್ಪವಾದರೂ ತಿಳಿದುಕೊಂಡಿರುವಂತೆ ತೋರುವದಿಲ್ಲ. ಇದರ ಸೊಪ್ಪು ಬಹಳ ಉತ್ಕೃಷ್ಟವಾದ ಹಸುರು ಗೊಬ್ಬರವಾಗಿರುವುದು. ಅಮೇರಿಕಾ ದೇಶಸ್ಥರು ಮೇಲ್ಕಂಡ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವದರಿಂದ ಕಳೆದ ಸುಮಾರು ೧೫೦ ವರುಷಗಳಿಂದಲೂ ಈ ಧಾನ್ಯವನ್ನು ಬಹಳವಾಗಿ ಬೆಳೆಯುತ್ತಿದಾರೆ.

ಇದನ್ನು ವ್ಯವಸಾಯ ಮಾಡುವದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಿದೆ:—

(೧) ಅಲಸಂದೆಯು ಯವಕ್ಷಾರ (Nitrogen)ವನ್ನು ಕೊಡುತ್ತದೆ. (೨) ಬೇಸಿಗೆಯಲ್ಲಿ ಅಲಸಂದೆಯು ಪೈರು ಜಮೀನಿಗೆ ನೆರಳು ಮಾಡುವದರಿಂದ ಯವಕ್ಷಾರವು ಮಣ್ಣಿನೊಳಗೆ ಬಹು ಜಾಗ್ರತೆಯಾಗಿ ಸೇರಲು ಯೋಗ್ಯವಾದ ಸ್ಥಿತಿಯಲ್ಲಿರುವದು, ಮತ್ತು ಮುಂದಣ ಬೆಳೆಗೆ ಅನುಕೂಲವಾಗುವಂತೆ ಮಣ್ಣನ್ನು ಸದಳಿಸುವುದು. (೩) ಬಹಳ ಉದ್ದವಾದ ಇದರ ಬೇರುಗಳು ಭೂಮಿಯಲ್ಲಿ ಬಲು ಆಳವಾಗಿಯೂ ಮತ್ತು ಸುತ್ತ ಮುತ್ತಲೂ ಹಬ್ಬಿ, ಅಲ್ಲಿರತಕ್ಕ ಸಸ್ಯಾಹಾರಗಳನ್ನೂ ಮತ್ತು ನೀರನ್ನೂ ಮೇಲಕ್ಕೆ ತೆಗೆದುಕೊಂಡು ಬರುವುವು. (೪) ಇದು ಜಿಗಟಾದ ಮತ್ತು ಮರಳು ಪ್ರದೇಶಗಳಲ್ಲೂ, ಫಲವತ್ತಾದ ಗೋಡು ಭೂಮಿಯಲ್ಲೂ, ಕಲ್ಲು ಭೂಮಿಯಲ್ಲೂ ಸೊಂಪಾಗಿ ಬೆಳೆಯುವುದು. (೫) ತೀಕ್ಷ್ಣವಾದ ಬೇಸಿಗೆಯ ಬಿಸಿಲು ಮತ್ತು ಸೆಕೆಗಳನ್ನು ಇದು ತಡೆದು ಕೊಳ್ಳುತ್ತದೆ. (೬) ಇದು ಜಾಗ್ರತೆಯಾಗಿ ಬೆಳೆಯುವದರಿಂದ ಒಂದೇ ಜಮೀನಿನಲ್ಲಿ ವರುಷಕ್ಕೆ ಎರಡು ಬೆಳೆಯನ್ನು ತೆಗೆಯಬಹುದು. (೭) ಬಹಳ ಒತ್ತಾಗಿ ಬಿತ್ತನೆ ಮಾಡಿದರೆ ಪೈರು ಜಮೀನನ್ನು ಪೂರ್ತಿಯಾಗಿ ಮುಚ್ಚುವದಲ್ಲದೆ ಕಳೆಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವುದು. (೮) ಜಮೀನುಗಳಲ್ಲಿ ಇತರ ಬೆಳೆಗಳನ್ನು ಇಡುವದಕ್ಕೆ ಮೊದಲು ಅಲಸಂದೆಯನ್ನು ಬೆಳೆಯುವದರಿಂದ ಎರಡನೆಯ ಬೆಳೆಗೆ ಅನುಕೂಲವುಂಟು. (೯) ಮನುಷ್ಯರಿಗೂ ಮತ್ತು ಜಾನುವಾರುಗಳಿಗೂ ಇದು ಯಥೇಚ್ಛವಾಗಿ ಆಹಾರವನ್ನು ಒದಗಿಸಿ ಕೊಡುವುದು.

ಮೇಲ್ಕಂಡ ವಿಷಯಗಳನ್ನೆಲ್ಲಾ ವಿಚಾರ ಮಾಡಿ ನೋಡಿದರೆ, ಅಲಸಂದೆಗಿಂತಲೂ ಉತ್ತಮವಾದ ಬೆಳೆಯು ಮತ್ತಾವುದೂ ಇರುವಂತೆ ತೋರುವುದಿಲ್ಲ. ಆದರಿಂದ ನಮ್ಮ ದೇಶದ ರೈತರುಗಳು ಇದನ್ನು ತಮ್ಮ ಜಮೀನುಗಳಲ್ಲಿ ಯಥೇಚ್ಛವಾಗಿ ವ್ಯವಸಾಯ ಮಾಡುವದು ಬಹಳ ಲಾಭಕರವಾಗಿರುವುದೆಂದು ಧಾರಾಳವಾಗಿ ಹೇಳಬಹುದು.

ಆಲೂಗಡ್ಡೆಯ ವ್ಯವಸಾಯವು

ಸಂಪೂರ್ಣವಾಗಿ ಕತ್ತಲಾದ ನೆಲಮಾಳಿಗೆಗಳಲ್ಲಿ ಮರದ ಮೆಟ್ಟುಗಳ ಮೇಲೆ ಚೆನ್ನಾಗಿ ಒಣಗಿದ ಮಣ್ಣನ್ನು ತೆಳುವಾಗಿ ಹರವಿ ಅಲ್ಲಿ ಸ್ವಲ್ಪವೂ ಶ್ರಮವಿಲ್ಲದೆ ಆಲೂಗಡ್ಡೆಯನ್ನು ಬೆಳೆಯುವತಕ್ಕ ಒಂದು ಹೊಸ ಕ್ರಮವು ಕೆಲವು ದಿವಸಗಳಿಂದೀಚೆಗೆ ಬಹಳ ರೂಢಿಯಲ್ಲಿದೆ. ಈ ರೀತಿ ವ್ಯವಸಾಯ ಮಾಡುವದಕ್ಕೆ ಬೆಳಕು ಸ್ವಲ್ಪವೂ ತಗಲಕೂಡದು; ಮತ್ತು ಹಾಗೆ ಬೆಳಕು ಬಿದ್ದರೆ ಹೊಸಗಡ್ಡೆಗಳು ಹೊರಡುವದಕ್ಕೆ ಬದಲಾಗಿ ನೆಟ್ಟಗಿರತಕ್ಕ ಗಡ್ಡೆಗಳಿಂದ ಮೊಳಕೆಗಳು ಹೊರಡುವವು. ಇದರಿಂದ ಬಹಳ ನಷ್ಟವಾಗುವದು. ಈ ಕ್ರಮಕ್ಕನುಸಾರವಾಗಿ ಆಲೂಗಡ್ಡೆಯನ್ನು ಬೆಳೆಯಬೇಕಾದರೆ ವ್ಯವಸಾಯಗಾರರು ಹಳ್ಳಿ ಗಾಡುಗಳನ್ನೇ ಹುಡುಕಿಕೊಂಡು ಹೋಗಬೇಕಾದ್ದಿಲ್ಲ; ದೊಡ್ಡ ದೊಡ್ಡ ಪಟ್ಟಣಗಳಲ್ಲೇ ನೆಲಮಾಳಿಗೆಗಳಲ್ಲಿ ಪ್ರತಿಂಗಳಲ್ಲಿಯೂ ಮಾರಾಟಕ್ಕೆ ಒದಗುವಂತೆ ಆಲೂಗಡ್ಡೆಗಳನ್ನು ಬೆಳೆಯಬಹುದು. ಈ ಕ್ರಮಕ್ಕನುಸಾರವಾಗಿ ಬೆಳೆದ ಗಡ್ಡೆಗಳು ಜಮೀನುಗಳಲ್ಲಿ ಬೆಳೆಯಲ್ಪಟ್ಟ ಆಲೂಗಡ್ಡೆಗಳಿಗಿಂತ ಹೆಚ್ಚು ಗಟ್ಟಿಯಾಗಿಯೂ, ರುಚಿಯಾಗಿಯೂ ಇರುವವು. ಅಲ್ಲದೆ ಇವುಗಳ ಸಿಪ್ಪೆಗಳು ಬಹಳ ತೆಳುವಾಗಿರುವದರಿಂದ ಒಂದಾವೃತ್ತಿ ನೀರಿನಿಂದ ತೊಳೆದು ಬಿಟ್ಟರೆ ಸಿಪ್ಪೆಯು ಸುಲಿದು ಬರುವದು.

ಎಲ್ಲಾ ಜಾತಿಯ ಆಲೂಗಡ್ಡೆಗಳನ್ನೂ ಮೇಲ್ಕಂಡ ರೀತಿಯಲ್ಲಿ ಬೆಳೆಯಬಹುದು. ದಪ್ಪನಾದ ಮತ್ತು ಒಂದು ವರುಷಕ್ಕೆ ಮುಂಚೆ ತೆಗೆದಿಡಲ್ಪಟ್ಟ ಆಲೂಗಡ್ಡೆಗಳನ್ನು ಬಿತ್ತನೆಗೆ ಆರಿಸಿಟ್ಟುಕೊಳ್ಳಬೇಕು. ಪೂರ್ಣವಾಗಿ ಕತ್ತಲಾಗಿರುವ ನೆಲಮಾಳಿಗೆಗಳಲ್ಲಿ ಮರದ ಮೇಜಾಗಳನ್ನು ಹಾಕಿ ಅವುಗಳ ಮೇಲೆ ಎರಡು ಮೂರು ಅಂಗುಲಗಳ ಮಂದವಾಗಿ ಚೆನ್ನಾಗಿ ಶೋಧಿಸಲ್ಪಟ್ಟ ಹಸನಾದ ಒಣಗಿದ ಮಣ್ಣನ್ನು ಹರವಬೇಕು. ಸುಮಾರಾಗಿ ನೆನೆಸಲ್ಪಟ್ಟ ಸ್ಪಂಜಿನಿಂದ ಆಲೂಗಡ್ಡೆಗಳನ್ನೆಲ್ಲಾ ಚೆನ್ನಾಗಿ ಒರಸಬೇಕು. ಯಾವದಾದರೊಂದು ಆಲೂಗಡ್ಡೆಯಲ್ಲಿ ಮೊಳಕೆಗಳು ಹೊರಟಿದ್ದರೆ ಆ ಮೊಳಕೆಗಳನ್ನೆಲ್ಲಾ ಗಡ್ಡೆಗೆ ಸ್ವಲ್ಪವೂ ಘಾಸಿಯಾಗದಂತೆ ಕತ್ತರಿಸಬೇಕು. ಅನಂತರದಲ್ಲಿ ಗಡ್ಡೆಗಳನ್ನು ಒಂದೊಂದಾಗಿ ಮಣ್ಣಿನಲ್ಲಿ ಸುಮಾರು ನಾಲ್ಕು ಅಂಗುಲಗಳ ದೂರವಾಗಿ ಸಾಲು ಸಾಲಾಗಿ ಅರ್ಧಮಟ್ಟಿಗೆ ಮಣ್ಣಿನಲ್ಲಿ ಹೂಳಬೇಕು.

ಮೇಲ್ಕಂಡಷ್ಟು ಕೆಲಸವನ್ನು ಮಾಡಿದರೆ, ಇದರ ವ್ಯವಸಾಯವು ಮುಕ್ಕಾಲು ಮೂರು ವೀಸದಷ್ಟು ಮುಗಿದಂತಾಗುವುದು. ಕುಂಟೆ ಹೊಡೆಯಬೇಕಾದ್ದಿಲ್ಲ; ಹುಳುಗಳ ಬಾಧೆಯಿಲ್ಲ. ಮುಖ್ಯವಾಗಿ ಜಮೀನುಗಳಲ್ಲಿ ಆಲೂಗಡ್ಡೆಗಳನ್ನು ಬೆಳೆಯಲು ಪಡಬೇಕಾದ ಹಾಗೆ ಶ್ರಮವೂ ಪಡಬೇಕಾದ್ದಿಲ್ಲ ಆಗಿಂದಾಗ್ಗೆ ಗಡ್ಡೆಗಳನ್ನು ತೆಗೆದು ಅದಮಾಯಿಸಿ ಮಾಡುತ್ತಿರಬೇಕು. ಎರಡು ಮೂರು ವಾರಗಳ ತರುವಾಯ, ನೆಡಲ್ಪಟ್ಟ ಗಡ್ಡೆಗಳ ಮೇಲೆ ಅನೇಕ ಬಿಳುಪಾದ ಚುಕ್ಕೆಗಳು ಕಂಡು ಬರುವವು. ಇದಾದ ಕೆಲವು ದಿವಸಗಳಲ್ಲಿ ಈ ಚುಕ್ಕೆಗಳು ದಪ್ಪನಾಗಿ ಬಹಳ ಜಾಗ್ರತೆಯಾಗಿ ಗಡ್ಡೆಗಳಾಗುವವು. ಈ ರೀತಿಯಾಗಿ ಅನೇಕವಾದ ಗಡ್ಡೆಗಳು ಸಾಕಾದಷ್ಟು ದಪ್ಪನಾದಾಗ ಅವುಗಳನ್ನೆಲ್ಲಾ ಕತ್ತರಿಸಿಕೊಂಡು ಮೊದಲು ನೆಟ್ಟಿದ್ದ ಗಡ್ಡೆಗಳನ್ನು ಪುನಃ ಅಲ್ಲಿಯೇ ನೆಟ್ಟುಬಿಟ್ಟರೆ ಅವುಗಳಿಂದ ಇನ್ನೂ ಹೊಸ ಗಡ್ಡೆಗಳು ಹುಟ್ಟುತ್ತಲೇ ಇರುವವು. ಈ ರೀತಿಯಲ್ಲಿ ಒಂದಾವರ್ತಿ ಬಿತ್ತನೆಮಾಡಿದರೆ ಎರಡು ಅಥವಾ ಮೂರು ಬೆಳೆಗಳನ್ನು ತೆಗೆಯಬಹುದು. ಬಿತ್ತನೆಯ ಗಡ್ಡೆಗಳ ತಿರುಳೆಲ್ಲವೂ ಹೋಗಿ ಬರಿಯ ಸಿಪ್ಪೆ ಮಾತ್ರ ನಿಲ್ಲುವವರೆಗೂ ಹೊಸ ಗಡ್ಡೆಗಳು ಹುಟ್ಟುತ್ತಲೇ ಇರುವವು. ಆಗಿಂದಾಗ್ಗೆ ಗಡ್ಡೆಗಳ ಮೇಲೆ ಮೊಳಕೆಗಳು ಹೊರಡುವದುಂಟು. ಇಂಥಾ ಮೊಳಕೆಗಳನ್ನು ಕತ್ತರಿಯಿಂದ ಕತ್ತರಿಸಿ ಹಾಕಬೇಕು. ಈ ಕೆಲಸಕ್ಕಾಗಿ ನೆಲಮಾಳಿಗೆಯೊಳಕ್ಕೆ ಹೋಗಿ ಬರುವಾಗ ಸೂರ್ಯನ ಬೆಳಕು ಒಳಕ್ಕೆ ಸ್ವಲ್ಪವಾದರೂ ಪ್ರವೇಶಿಸದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.–ವ್ಯ. ಗೆ.

ತುರ್ಕಿ–ಇಟಲಿಗಳ ಯುದ್ಧವು.

ನವಂಬರ್ ತಾ॥ ೩.–ಮೆಸಿಡೋನಿಯ, ಸಿರಿಯ ಅಥವಾ ತುರ್ಕಿಯವರ ಅರ್ಕಿಪಿಲಗೊ ಇವುಗಳ ಮೇಲೆ ಯುದ್ಧ ಕಾರ್ಯಭಾಗವನ್ನು ನಡೆಸಲು ಇಟಲಿಯವರು ಟಾಬ್ರುಕ್ ಎಂಬಲ್ಲಿ ಸಿದ್ಧವಾಗಿಟ್ಟಿರುವ ನಾವೆಗಳಿಗೆ ೧ ತಿಂಗಳಿಗೆ ಬೇಕಾಗುವಷ್ಟು ಕಲ್ಲಿದ್ದಲನ್ನು ಶೇಖರಿಸಿಟ್ಟಿರುವುದರಿಂದ ಹಡಗುಗಳು ಈ ಕಲ್ಲಿದ್ದಲು ತೀರಿದ ಹಾಗೆಲ್ಲ ಇಟಲಿ ಹೋಗಿ ತುಂಬಿಕೊಂಡು ಬರಬೇಕಾದಾವಶ್ಯಕತೆಯು ತಪ್ಪಿತು.

ತಾ॥ ೪–ಇಟಲಿಯು ಈಜಿಯನ್ ಸಮುದ್ರದಲ್ಲಿರುವ ದ್ವೀಪಗಳನ್ನು ಸ್ವಾಧೀನಪಡಿಸಿಕೊಳ್ಳುವ ಯೋಚನೆಯನ್ನು ಬಿಟ್ಟು ಸಿರಿನಾದ ದಡದಲ್ಲಿ ನಾವೆಯ ಪ್ರಯೋಗವನ್ನು ಮಾಡುವುದರಲ್ಲಿದೆ. ಕಾದಿಡಲ್ಪಟ್ಟಿರುವ ಸೇನೆಯ ಸಹಾಯವು ಅಪೇಕ್ಷಿಸಲ್ಪಟ್ಟಿರುತ್ತದೆ. ಮತ್ತೊಂದು ಸೇನೆಯ ತಂಗಡವು ದಳಪತಿಯೊಡನೆ ಟ್ರಿಪೋಲಿಗೆ ಹೊರಡಲಪ್ಪಣೆ ಮಾಡಲ್ಪಟ್ಟಿರುತ್ತದೆ. ಈ ಟ್ರಿಪೋಲಿಗೆ ಬಲವಾದ ಸೇನೆಯ ಗುಂಪುಗಳು ಬಂದು ಸೇರುವುದರಲ್ಲಿವೆ. ಇಲ್ಲಿರುವ ಅರಬ್ಬಿಯವರು ತಾವು ಕದನದ ಹೊಡೆತವನ್ನು ಸಹಿಸಿಕೊಂಡಿರಬೇಕೆಂದು ತುರ್ಕಿಯವರು ತಮ್ಮನ್ನು ಬಲವಂತಪಡಿಸುತ್ತಾರೆಂದು ದೂರುತ್ತಾರೆ. ತುರ್ಕಿಯವರಿಗೆ ಸಾಲವನ್ನು ಕೊಟ್ಟಿರುವ ಇಟಲಿಯವರ ಪ್ರತಿನಿಧಿಯಾದ ಥಿಯಡೋರಿ ಎಂಬಾತನು ತುರ್ಕಿಯನ್ನು ಬಿಟ್ಟು ಹೋಗುವಂತೆ ಅಪ್ಪಣೆ ಮಾಡಲ್ಪಟ್ಟಿರುತ್ತಾನೆ. ಟ್ರಿಪೋಲಿಯಲ್ಲಿ ಇಟಲಿಯವರು ಅರಬ್ಬಿಯವರನ್ನು ನಿರ್ದಾಕ್ಷಿಣ್ಯದಿಂದ ಪ್ರಾಣಾಂತಶಿಕ್ಷೆಗೆ ಗುರಿಮಾಡುವುದು ೧೯೦೭ ರಲ್ಲಿ ಹೇಗ್ ಎಂಬಲ್ಲಿ ಎಲ್ಲ ರಾಜ್ಯದವರಿಗೂ ನಡೆದಿರುವ ಒಡಂಬಡಿಕೆಗೆ ವಿರುದ್ಧವಾಗಿರುತ್ತದೆಂದು ತುರ್ಕಿಯವರು ಎಲ್ಲ ರಾಜ್ಯಗಳಿಗೂ ದೂರಿಕೊಂಡಿರುತ್ತಾರೆ. ತುರ್ಕಿ-ಇಟಲಿಯುದ್ಧ ವಿಚಾರದಲ್ಲಿ ಬ್ರಿಟಿಷ್ ಪ್ರಜೆಗಳು ಖಂಡಿತವಾಗಿ ತಾಟಸ್ಥ್ಯವನ್ನು ವಹಿಸಬೇಕೆಂದು ಕಳೆದ ಅಕ್ಟೋಬರು ತಾ॥ ೨೯ ರ ಇಂಡಿಯಾ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ.

ತಾ॥ ೫.–ಕಳೆದ ತಾ॥ ೨೩ ರಿಂದ ೨೮ ರ ವರೆಗೆ ನಡೆದ ಯುದ್ಧದಲ್ಲಿ ಇಟಲಿಯವರು ಹೇಳುವಂತೆ ತುರ್ಕಿಯವರು ಮತ್ತೂ ಅರಬ್ಬಿಯವರು ಹೆಚ್ಚಾಗಿರದೆ ೨೦೦೦ ಜನರ ವರೆಗೆ ಮಾತ್ರ ಇದ್ದು ಅತ್ಯಾಶ್ಚರ್ಯವಾಗಿ ಇಟಲಿಯವರ ಮೇಲೆ ಬಿದ್ದು ೧೦೦೦ ವರೆಗೆ ಇಟಲಿಯವರನ್ನು ಕೊಂದು ಗಾಯಪಡಿಸಿದರು, ಮತ್ತೂ ಮರುಭೂಮಿಯಲ್ಲಿ ನೀರಿನ ಬಳಿ ಇರುವ ಗ್ರಾಮಗಳನ್ನು ಬಿಟ್ಟೋಡಿಸಿದರು. ಇಟಲಿಯವರು ತಾ॥ ೨೩ ರಲ್ಲಿ ೧೫೦೦೦ ಗಜದ ವರೆಗೆ ಮುಂದಿದ್ದವರು ಈಗ ೩೦೦೦ ಗಜದ ವರೆಗೆ ಹಿಂಜರಿದಿರುತ್ತಾರೆ. ತುರ್ಕಿಯವರು ತಮ್ಮ ಫಿರಂಗಿಗಳನ್ನು ಮುಂದು ಮುಂದಕ್ಕೆ ತೆಗೆದುಕೊಂಡು ಬಂದು ಇಟಲಿಯವರ ಮೇಲೆ ಗುಂಡನ್ನು ಹೊಡೆಯುತ್ತಿದಾರೆ ಎಂದು ಪ್ರಪಂಚಕ್ಕೆಲ್ಲ ತಂತಿಯ ಮೂಲಕ ವರ್ತಮಾನವನ್ನು ಕೊಡುವ ರೂಟರಿನ ಕಡೆಯ ಸುದ್ದಿಗಾರನು ತಿಳಿಸುತ್ತಾನೆ. ಇಟಲಿಯವರು ಬಹು ಹಿಂದಕೋಡಿಸಲ್ಪಟ್ಟಿರುವುದರಿಂದ ಸಮುದ್ರದ ಮೇಲಣಿಂದ ವಿನಾ ಮುಂದಕ್ಕೆ ಹೋಗಲು ಯತ್ನವಿಲ್ಲವಾಗಿದೆ, ಮತ್ತೂ ಮರುಭೂಮಿಯೊಳಗೆ ಪ್ರವೇಶಿಸುವ ಯೋಚನೆಯನ್ನು ಸದ್ಯದಲ್ಲಿ ಬಿಟ್ಟಿರುತ್ತಾರೆ ಟ್ರಿಪೋಲಿಯಲ್ಲಿರುವ ಸೇನಾ ಜನರಲ್ಲೂ, ಇತರರಲ್ಲೂ ವಾಂತಿಭೇದಿಯ ರೋಗವು ಕಾಣಿಸಿಕೊಂಡಿದೆ.

ತಾ॥ ೬.–ಕಳೆದ ಮಂಗಳವಾರ ಮತ್ತೂ ಬುಧವಾರದಲ್ಲಿ ೮೦೦೦ ತುರ್ಕಿಯವರೂ, ೧೬೦೦೦ ಅರಬ್ಬಿಯವರೂ ಇಟಲಿಯವರ ಕೂಡ ಯುದ್ಧಮಾಡಿದುದರಲ್ಲಿ ಇಟಲಿಯವರ ಕಡೆ ೫೦೦೦–೬೦೦೦ ಸತ್ತು, ಗಾಯಪಡೆದರು ಮತ್ತೂ ತುರ್ಕಿಯವರು ೨ ಕೋಟೆಗಳನ್ನೂ, ಅನೇಕ ಮದ್ದುಗುಂಡುಗಳನ್ನೂ ಸ್ವಾಧೀನಪಡಿಸಿಕೊಂಡರು. ಎಂದು ಲಂಡನ್ನಿಗೆ ಬಂದ ತಂತಿಯ ವಾರ್ತೆಯಿಂದ ಗೊತ್ತಾಗುತ್ತದೆ. ಇಟಲಿಯ ಸೇನೆಯ ಜನರಲ್ ಕೆನಾವಾ ಎಂಬುವನು ಆಯುಧಪಾಣಿಗಳೆಂದು ಕಂಡು ಬರುವ ಅರಬ್ಬಿಯವರನ್ನೆಲ್ಲ ಗುಂಡಿನಿಂದ ಹೊಡೆದು ಸುಟ್ಟುಬಿಡಬೇಕೆಂದು ತನ್ನ ಸೇನೆಯವರಿಗಾಜ್ಞೆಯನ್ನು ಮಾಡಲು, ಅವರು ೪ ದಿವಸಗಳವರೆಗೆ ಮರುಭೂಮಿಯಲ್ಲಿ ನೀರಿನ ಬಳಿಯಲ್ಲಿರುವ ಗ್ರಾಮಗಳಿಗೆ ನುಗ್ಗಿ ಹೆಂಗುಸರು, ಗಂಡುಸರು, ಮತ್ತೂ ಮಕ್ಕಳೂ ಎಂಬ ವಿವೇಚನೆಯಿಲ್ಲದೆ ಅರಬ್ಬಿಯವರನ್ನು ಸುಟ್ಟು ಬಹು ಅನಾಹುತವನ್ನು ನಡೆಸಿದರು. ಈ ಅತ್ಯಾಚಾರಕ್ಕೆ ಜನರಲ್ ಕೆನೇವನು ಉತ್ತರವಾದಿಯಾಗಿರುತ್ತಾನೆ. ಎಂದು ರೂಟರಿನ ಸುದ್ದಿಗಾರನು ತಿಳಿಸಿರುತ್ತಾನೆ.

ತಾ॥ ೬.–ಜನರಲ್ ಕೆನೇವನು ಟ್ರಿಪೋಲಿ ಪಟ್ಟಣದ ಗೌರ್ನರೂ, ಜನರಲ್ ಫ್ರುಗೋನಿಯು ಟ್ರಿಪೋಲಿಯಲ್ಲಿರುವ ಸೇನೆಯ ದಳಪತಿಯೂ ಆಗುವನೆಂದು ಗೊತ್ತಾಗಿದೆ ೨೦೦೦೦ ಸೇನೆಯು ಫಿರಂಗಿಗಳ ಮತ್ತೂ ಆಕಾಶ ವಿಮಾನಗಳ ಸಮೇತ ಟ್ರಿಪೋಲಿಗೆ ಹೊರಡುವುದಕ್ಕಾಗಿ ನೇಪಲ್ಸಿನಲ್ಲಿ ಸೇರುವುದು. ಟ್ರಿಪೋಲಿ ಮತ್ತೂ ಸಿರನೇಯಿಕ ಇವೆರಡೂ ಸಂಪೂರ್ಣವಾಗಿ ಇಟಲಿಗೆ ಸೇರಿಸಿಕೊಳ್ಳಲ್ಪಟ್ಟಿವೆ ಎಂದು ಇಟಲಿಯವರು ಇತರ ರಾಜ್ಯಗಳಿಗೆ ತಿಳಿಸಿರುವರಲ್ಲದೆ ತುರ್ಕಿಯವರು ಕಾಲವಿಳಂಬವನ್ನು ಮಾಡದೆ, ಇವು ಇಟಲಿಯವರ ವಶವಾದುದನ್ನೊಪ್ಪಿಕೊಂಡು ಮುಂದೆ ವಿಚಾರವಿಲ್ಲದೆ ನಡೆಯುವ ರಕ್ತಪಾತವನ್ನು ತಪ್ಪಿಸುವಂತೆ ಅವರಿಗೆಲ್ಲ ಒಡಂಬಡಿಸಬೇಕೆಂದು ಸೂಚಿಸಿರುತ್ತಾರೆ. ಯೂರೋಪಿನ ತುರ್ಕಿ ರಾಜ್ಯದ ನೆಮ್ಮದಿಯ ವಿಚಾರದಲ್ಲಿ ರಷ್ಯಾ ರಾಜ್ಯವು ಭರವಸೆಯನ್ನು ಕೊಡುವುದಾದರೆ, ಅನ್ಯತರ ಯುದ್ಧನಾವೆಗಳು ಡಾರ್ಡನೆಲ್ಸ್‌ದ್ವಾರ ಸಂಚರಿಸುವ ಹಕ್ಕನ್ನು ಕೊಡಲು ತುರ್ಕಿಯವರು ಸಿದ್ಧರಾಗಿರುವರೆಂದು ಒಂದು ಪತ್ರಿಕೆಯು ತಿಳಿಸುತ್ತದೆ. ಇಂಗ್ಲೆಂಡೂ ಪರ್ಷ್ಯಾಕೊಲ್ಲಿಯಲ್ಲಿ ಕೆಲ ಅನುಕೂಲ್ಯವನ್ನು ಪಡೆಯುವುದರ ಮೇಲೆ ಈ ಒಡಂಬಡಿಕೆಯನ್ನು ಅಂಗೀಕರಿಸಿರುತ್ತದಲ್ಲದೆ, ಇಟಲಿಯು ತಾನು ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಅಡ್ಡಿಮಾಡುವುದಿಲ್ಲವೆಂದು ರಷ್ಯಾ ದೇಶವು ಒಪ್ಪಿಕೊಂಡುದರಿಂದ ಬಹು ದಿವಸಗಳ ಪೂರ್ವವೇ ಈ ಒಡಂಬಡಿಕೆಗೆ ಸಮ್ಮತಿಯನ್ನು ಕೊಟ್ಟಿರುತ್ತದೆ. ಟ್ರಿಪೋಲಿಯಲ್ಲಿ ಆರೋಗ್ಯ ಸ್ಥಿತಿಯು ಕೆಟ್ಟುಹೋಗುತ್ತಿರುವುದು. ವಾಂತಿಭೇದಿ ರೋಗದಿಂದಲೂ, ಕ್ಷುದ್ಬಾಧೆಯಿಂದಲೂ ಸತ್ತು ಹೋಗಿದ್ದ ೫೦ ಜನರು ಮಾರ್ಗಗಳಲ್ಲಿ ತಂದು ಹಾಕಲ್ಪಟ್ಟಿದ್ದರು. ಅತ್ತಲಾಗಿ ಮರುಭೂಮಿಯಲ್ಲಿ ನೀರಿನಬಳಿ ಇರುವ ಗ್ರಾಮಗಳು ಮಾರಿಹೋದದ್ದರಿಂದ ರಕ್ತ ಜನರ ಶವಮಯವಾಗಿವೆ. ಇಟಲಿಯ ಸೇನೆಯಲ್ಲಿ ನಿತ್ಯದಲ್ಲೂ ೪೦ ಜನರು ವಾಂತಿಭೇದಿ ರೋಗದಿಂದ ಸಾಯುತ್ತಿರುವರು. ಅವರೆ ಮಾಲ್ಟಾದಲ್ಲಿ ಈ ರೋಗವು ಅಣಗಿಸಲ್ಪಟ್ಟಿದೆ, ಮತ್ತೂ ಅಲ್ಲಿ ಈವರೆಗೆ ೨೬ ಜನರಿಗೆ ತಗುಲಿ ೨೯ ಜನರು ಸತ್ತಿರುವರು.

ತಾ॥ ೭.–ಜನರಲ್ ಫ್ರುಗೋನಿಯು ಸೇನೆಯ ಒಂದು ಭಾಗಕ್ಕೆ ದಳಪತಿಯಾಗಿರುವನೆಂದೂ, ಜನರಲ್ ಕೆನೇವನು ಮೊದಲಿನಂತೆ ಒಟ್ಟು ಸೇನಾನಾಯಕನಾಗಿಯೇ ಇರುವನೆಂದೂ ಪ್ರಕಟವಾಗಿದೆ. ಭಾನುವಾರ ಬೆಳಿಗ್ಗೆ ತುರ್ಕಿಯವರ ಫಿರಂಗಿಗಳನ್ನು ಇಟಲಿಯವರಿದ್ದೆಡೆಗೆ ಹೊಡೆಯಲಾರಂಭವಾಗಿ, ಆ ದಿವಸವೆಲ್ಲಾ ಫಿರಂಗಿಗಳ ಹೊಡೆದಾಟವೇ ನಡೆದಿತು. ಇಟಲಿಯ ಆಕಾಶ ವೈಮಾನಿಕರು ತುರ್ಕಿಯವರ ಪಾಳೆಯಗಳಿಗೆ ಸಿಡಿಮದ್ದುಗಳನ್ನು ಹಾಕಿ ತುರ್ಕಿಯವರನ್ನು ಹಿಮ್ಮೆಟ್ಟಿಸಿದರು. ಡೆರ್ನಾ ಎಂಬುದು ತುರ್ಕಿಯವರ ವಶವಾಗಿ ಆ ಕದನದಲ್ಲಿ ಇಟಲಿಯವರ ಕಡೆ ೫೦೦ ಜನರು ಸತ್ತು ೧೮ ಫಿರಂಗಿಗಳು ಶತ್ರುಗಳ ವಶವಾದುವೆಂದು ಕಾನಸ್ಟಾಂಟಿನೋಪಲ್ಲಿನಲ್ಲಿ ವರ್ತಮಾನವಿದೆ, ಆದರೆ ಡೆರ್ನಾ ಎಂಬಲ್ಲಿ ಇಟಲಿಯವರ ಸ್ಥಿತಿಯು ವ್ಯತ್ಯಸ್ತವಾಗಿಲ್ಲವೆಂದು ಇಟಲಿಯವರ ತಂತಿಯ ವಾರ್ತೆಯಿಂದ ತಿಳಿಯಬರುತ್ತದೆ. ಸಾಕಷ್ಟು ಪದಾರ್ಥಗಳು ಒದಗಿಸಲ್ಪಡುತ್ತಿಲ್ಲವೆಂದು ಟ್ರಿಪೋಲಿಯಲ್ಲಿರುವ ತುರ್ಕಿಯವರಿಗೂ, ಅರಬ್ಬಿಯವರಿಗೂ ವಿಶೇಷ ಜಗಳವುಂಟಾಗಿರುವುದಲ್ಲದೆ, ತುರ್ಕಿಯವರು ಯುದ್ಧದಲ್ಲಿ ತಮ್ಮನ್ನೇ ಮುಂದೆ ಚಾಚುತ್ತಾರೆಂದು ಅರಬ್ಬಿಯವರು ತುರ್ಕಿಯವರ ಮೇಲೆ ಸಿಟ್ಟುಗೊಂಡಿದಾರೆಂದು ಇಟಲಿಯವರಿಂದ ಬಂದ ವರ್ತಮಾನದಿಂದ ಗೊತ್ತಾಗುತ್ತದೆ. ಇಟಲಿಯ ವೈಮಾನಿಕನು ಶತ್ರುಗಳ ಪಾಳೆಯಕ್ಕೆ ೨ ಸಿಡಿಮದ್ದನ್ನು ಹಾಕಿ ಅವರಲ್ಲಿ ವಿಶೇಷ ಭಯವನ್ನು ಹುಟ್ಟಿಸಿರುತ್ತಾನೆ. ಅರೇಬಿಯಾದಲ್ಲಿ ಕೆಂಪುಕಡಲಿಗೆ ಆಗ್ನೇಯದಿಕ್ಕಿನಲ್ಲಿರುವ ಅಕಾಬಾಕ್ಕೆ ಇಟಲಿಯ ಹಡಗು ಫಿರಂಗಿಯನ್ನು ಹೊಡೆದು ತುರ್ಕಿಯವರ ಫಿರಂಗಿಯಿದ್ದ ದೋಣಿಯನ್ನು ಮುಳುಗಿಸಿ ಒಬ್ಬ ಅಧಿಕಾರಿಯನ್ನು ಕೊಂದಿತು.

ತಾ॥ ೮.– ಸಹಾಯಕ್ಕಾಗಿ ಬಂದ ೧೫೦೦೦ ಸೇನೆಯೊಡನೆ ಜನರಲ್ ಫ್ರುಗೋನಿಯು ಬಂದಿಳಿಯುತ್ತಲೆ ಬಹು ವೇಗದಿಂದಲೂ, ಚಟುವಟಿಕೆಯಿಂದಲೂ ಮುಂದೆನಡೆಯಲಪ್ಪಣೆಯನ್ನು ಕೊಟ್ಟುದು ಶತ್ರುಗಳಲ್ಲಿ ವಿಸ್ಮಯವನ್ನುಂಟುಮಾಡಿದುದಲ್ಲದೆ ಹಮಿದಿಯ ಕೋಟೆಯು ಸ್ವಾಧೀನವಾಯಿತು. ಶತ್ರುಪಕ್ಷದಲ್ಲಿ ಬಹು ನಷ್ಟವಾಯಿತೆಂದು ಇಟಲಿಯವರು ಹೇಳುತ್ತಾರೆ. ಡೆರ್ನಾವನ್ನು ತುರ್ಕಿಯವರು ಸ್ವಾಧೀನಮಾಡಿಕೊಂಡುದು ಸುಳ್ಳೆಂದು ಯುದ್ಧದ ಆಫೀಸಿನವರು ತಿಳಿಸುತ್ತಾರೆ. ಟ್ರಿಪೋಲಿಯನ್ನು ಇಟಲಿಯವರಿಗೆ ಬಿಟ್ಟುಕೊಡುವುದಿಲ್ಲವೆಂದು ತುರ್ಕಿಯವರು ಇತರ ರಾಜ್ಯಗಳಿಗೆ ತಿಳಿಸಿರುತ್ತಾರೆ. ಟ್ಯೂನಿಸ್ಸಿನಲ್ಲಿ ನಿನ್ನೆಯ ದಿನ ಅರಬ್ಬಿಯವರಿಗೂ ಇಟಲಿಯವರಿಗೂ ದೊಡ್ಡ ಕದನವು ನಡೆದು ಅನೇಕರು ಮಡಿದರು ಮತ್ತು ಗಾಯಪಡೆದರು. ಪೋಲೀಸಿನವರೂ ಮತ್ತೂ ಸೈನಿಕರೂ ಗೊಂದಲವನ್ನು ಅಡಗಿಸಿ ಶಾಂತತೆಯನ್ನುಂಟುಮಾಡಿದರು. ಈ ಸಂದರ್ಭದಲ್ಲಿ ಒಬ್ಬ ಪೋಲೀಸು ಸಾರ್ಜೆಂಟು ಸಾಯುವಂತಹ ಗಾಯಪಡೆದನು. ಅರಬ್ಬಿಯವರ ರುದ್ರಭೂಮಿಯು ಮ್ಯುನಿಸಿಪಾಲಿಟಿಯವರಿಗೆ ಸೇರಿದುದೆಂಬುದರ ವಿಚಾರದಲ್ಲಿ ಮೇಲ್ಕಂಡ ಗದ್ದಲವುಂಟಾಗಿ ಅನೇಕ ಸಾವಿರಾರು ಅರಬ್ಬಿಯವರು ಸರ್ವೆಯರನ್ನು ಮುತ್ತಿಕೊಳ್ಳಲು ಸೈನಿಕರು ಗುಂಡನ್ನು ಹಾರಿಸಿ ೧೦ ಜನರನ್ನು ಕೊಂದು ೨೦ ಜನರಿಗೆ ಗಾಯವನ್ನುಂಟುಮಾಡಿದರು. ಆಗ ಜನರು ರೇಗಿ ಗೊಂದಲವೆದ್ದು ಇಟಲಿಯವರನ್ನು ಸಂಹರಿಸ ಯತ್ನಿಸಿ ಅವರಲ್ಲಿ ೫೦ ಜನರನ್ನು ಕೊಂದರು. ಈ ತುರ್ಕಿ–ಇಟಲಿಗಳಯುದ್ಧ ವಿಚಾರದಲ್ಲಿ ಅಫ್ಘಾನಿಸ್ಥಾನದ ಅಮೀರನು ಆಸಕ್ತನಾಗಿ ಇತರ ಭಾಷೆಯ ವೃತ್ತಪತ್ರಿಕೆಗಳಲ್ಲಿ ಈ ಯುದ್ಧ ವಿಚಾರದಲ್ಲಿ ಬರುವ ವರ್ತಮಾನವನ್ನು ಪಾರ್ಷಿಯ ಭಾಷೆಗೆ ಪರಿವರ್ತನವನ್ನು ಮಾಡಿ ಹೇಳಲು ಜನರನ್ನು ನೇಮಿಸಿ ಪ್ರತಿದಿನ ಸಾಯಂಕಾಲದಲ್ಲಿ ಓದಿಸಿ ಕೇಳುತ್ತಿರುವನು. ಬೊಂಬಾಯಿನಲ್ಲಿರುವ ಅಮೀರನ ಏಜಂಟ್ ಕರ್ನಲ್ ರಸೂಲ್‌ಖಾನನು ಪಿಷಾವರಿಗೆ ಬಂದು ಅಫ್ಘಾನಿಸ್ಥಾನದಲ್ಲೆಲ್ಲ ಒಟ್ಟಿಗೆ ಇಟಲಿಯ ಪದಾರ್ಥಗಳಿಗೆ ಬಹಿಷ್ಕಾರವನ್ನು ಹಾಕಬೇಕೆಂದು ಹೇಳಿದನು.

ತುರ್ಕಿಯವರು ಡೆರ್ನಾ ಎಂಬುದನ್ನು ಸ್ವಾಧೀನಪಡಿಸಿಕೊಂಡುದು ಸುಳ್ಳೆಂದು ಗೊತ್ತಾಗಿದೆ. ಇಟಲಿಯವರ ಸೇನೆಯ ಒಂದು ತಂಗಡವು ಫಿರಂಗಿಗಳ ಮತ್ತೂ ನೌಕಾಸೇನೆಯ ಸಹಾಯದಿಂದ ಹಮಿದಿಯಕೋಟೆಯಿಂದ ಹೊರಗೆ ಪ್ರಯಾಣಮಾಡಿಬಂದು ಶತ್ರುಗಳನ್ನು ಹಿಂದಕ್ಕೋಡಿಸಿ ಅವರಲ್ಲಿ ೬೦ ಜನರನ್ನು ಕೊಂದಿತು. ಆದರೆ ತಮ್ಮ ಕಡೆಯವರಲ್ಲಿ ೧೫ ಜನರು ಗಾಯಪಡೆದರು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ಯುದ್ಧದ ವಿಚಾರವಾಗಿ ಚರ್ಚೆಯು ನಡೆಯುವಾಗ್ಗೆ, ಮಧ್ಯಸ್ಥತೆಗೆ ಹೋಗಬಾರದೆಂದು ಮಾಡಿಕೊಂಡಿರುವ ನಿಬಂಧನೆಯಿಂದ ಬ್ರಿಟಿಷ್ ಸರ್ಕಾರದವರು ದೂರವಾಗಿಲ್ಲವು ಮತ್ತೂ ಇಟಲಿಯವರ ಹಾಗೂ ತುರ್ಕಿಯವರ ಪ್ರಕೃತ ಮನೋಭಿಪ್ರಾಯದಿಂದ ಸದ್ಯದಲ್ಲಿ ಮಧ್ಯಸ್ಥತೆಯನ್ನು ಬಯಸುವ ಸ್ಥಿತಿಯಿಲ್ಲವೆಂದು ತೋರುತ್ತದೆ. ಎಂದು ಎಫ್. ಡಿ. ಅಕ್ಲಾಂಡ್‌ರವರು ಹೇಳಿದರು.

ತಾ॥ ೯.–ತುರ್ಕಿಯ ರಾಜಧಾನಿಯಾದ ಕಾನಸ್ಟಾಂಟಿನೋಪಲಿನಲ್ಲಿರುವ ರೆತ್ ಕ್ರೆಸೆಂಟ್ ಸಂಘಕ್ಕೆ ನೇಟಾಲಿನ ಮಹಮ್ಮದೀಯರು ೨೪೦೦೦ ರೂ. ಗಳನ್ನು ಕೊಟ್ಟಿರುವರು. ನಿನ್ನೆಯ ದಿನ ಟ್ಯೂನಿಸಿನಲ್ಲಾದ ಗೊಂದಲದಲ್ಲಿ ೩ ಜನ ಇಟಲಿಯವರು ಕೊಲ್ಲಲ್ಪಟ್ಟರು. ಆಯುಧಪಾಣಿಗಳಾದ ಅನೇಕ ಸ್ಥಳೀಯರು ಸೆರೆಹಿಡಿಯಲ್ಪಟ್ಟರು. ಕಲಕತ್ತಾದಲ್ಲಿ ರೆತ್ ಕ್ರೆಸೆಂಟ್ ಸಂಘಕ್ಕೂ, ತುರ್ಕಿಯ ಸುಲ್ತಾನನಿಗೂ ದ್ರವ್ಯಸಹಾಯವನ್ನು ಮಾಡಬೇಕಾಗಿದೆಯೆಂದು, ನಿರಕ್ಷರಸ್ಥರಾದ ಮಹಮ್ಮದೀಯರಿಗೆ ಹೇಳಿ ಬಲವಂತದಿಂದ ಹಣವನ್ನು ಸೆಳೆಯುತ್ತಿರುವರು. ಒಬ್ಬ ಮಹಮ್ಮದೀಯನು ಫಕೀರನ ವೇಷವನ್ನು ಧರಿಸಿ ಮಾರ್ಗದ ಪಕ್ಕದಲ್ಲಿ ಒಂದು ಗುಡಿರವನ್ನು ಹಾಕಿಕೊಂಡು ದಾರಿಯಲ್ಲಿ ತಿರುಗುವ ಜನರಿಗೆಲ್ಲ ಸುಲ್ತಾನನಿಗೆ ಹಣವನ್ನು ಕಳುಹುವುದಕ್ಕಾಗಿಂದು ಚಂದಾ ಹಣವನ್ನೆತ್ತುತ್ತ ಕಳೆದ ತಾ॥ ೪ ರಲ್ಲಿ ಜೋಡನ್ನು ತುಂಬಿಕೊಂಡು ಹೋಗುತ್ತಿದ್ದ ಒಬ್ಬ ಮಹಮ್ಮದೀಯನನ್ನು ಆ ಜೋಡಿನ ಬೆಲೆಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಕೊಡಬೇಕೆಂದು ಕೇಳಿ ಅವನು ಕೊಡದೆ ಹೋಗಲು, ಆ ರೈತನನ್ನು ಹೊಡೆದು ಅವನಿಂದ ಜೋಡನ್ನೂ, ೨೦ ರೂ ಗಳನ್ನೂ ಕಸುಕೊಂಡನು. ಈ ಸಂದರ್ಭವನ್ನು ಪೋಲೀಸರು ತಿಳಿದು ಆ ವೇಷಧಾರಿ ಫಕೀರನನ್ನು ಹಿಡಿದು, ಅವನ ಗಡಿರಲನ್ನು ಶೋಧಿಸುವಲ್ಲಿ ಕೆಲ ಪತಾಕೆಗಳೂ, ಒಂದು ಕಬ್ಬಿಣದ ಪೆಟ್ಟಿಗೆಯೂ ಚರ್ಜಿಗಳೂ ಸಿಕ್ಕಿದುವು. ಲಾಹೋರಿನ ಮಹಮ್ಮದೀಯರು ತುರ್ಕಿ–ಇಟಲಿಗಳ ಯುದ್ಧದಲ್ಲಿ ವಿಪನ್ನರಾದ ಮಹಮ್ಮದೀಯರ ಸಹಾಯಾರ್ಥವಾಗಿ ಹಣವನ್ನೆತ್ತುವ ಉದ್ದೇಶದಿಂದ ಕಳೆದ ತಾ॥ ೫ ರಲ್ಲಿ ಒಂದು ಸಭೆ ಸೇರಿದ್ದರು ಆಗ ಕೆಲರು ಹೃದಯಂಗಮವಾಗುವಂತೆ ಭಾಷಣವನ್ನು ಮಾಡಲು ಆ ಸ್ಥಳದಲ್ಲೇ ೫೦೦ ರೂ. ಚಂದಾ ಕೊಡಿತು ಕ್ರೈಸ್ತ ಕಾಲೇಜಿನ ಮಹಮ್ಮದೀಯ ವಿದ್ಯಾರ್ಥಿಗಳು ಮನೆಮನೆಗೂ ಚಂದಾಹಣವನ್ನೆತ್ತಲು ಹೊರಟಿರುವರು.

ಇಂಗನ್ನು ನೀರಿನಲ್ಲಿ ಕದಡಿ ಗಿಡಗಳ ಸುತ್ತಲೂ ಚೆಲ್ಲಿದರೆ ಗೆಜ್ಜಲು ಹುಳುಗಳು ಗಿಡಗಳ ಸಮೀಪಕ್ಕೆ ಬಾರದೆ ದೂರವಾಗಿರುವುವು. ಮನೆಗಳಲ್ಲಿ ಗೆಜ್ಜಲು ಹುಳುಗಳು ಮರ ಮುಟ್ಟುಗಳನ್ನೂ ಮತ್ತು ಬಟ್ಟೆಬರೆಗಳನ್ನೂ ಮುತ್ತಿದರೆ ಈ ರೀತಿ ಇಂಗಿನ ನೀರನ್ನು ಚೆಲ್ಲಿದರೆ ಗೆಜ್ಜಲು ಹುಳುಗಳು ಓಡಿಹೋಗುವದೇನೋ ಖಂಡಿತ. ಆದರೆ ಇಂಗಿನ ವಾಸನೆಯನ್ನು ಸಹಿಸಲಸಾಧ್ಯವಾಗುವುದು. ಇಂತಹ ಸಂದರ್ಭಗಳಲ್ಲಿ ಇಂಗಿಗೆ ಬದಲಾಗಿ ಉಗನಿಹಂಬಿನ ಬೇರನ್ನು ಚೆನ್ನಾಗಿ ಪುಡಿಮಾಡಿ ಗೆಜ್ಜಲು ಮುತ್ತತಕ್ಕ ಸ್ಥಳಗಳಲ್ಲಿ ಎರಚಿದರೆ ಗೆಜ್ಜಲು ಹುಳುಗಳೆಲ್ಲ ಓಡಿಹೋಗುವುವು. ಅಲ್ಲದೆ ಈ ಬೇರಿನ ಪುಡಿಯ ಬಹಳ ಗಟ್ಟಿಯಾದ ಕಷಾಯವನ್ನು ಹುಳುಗಳ ಮೇಲೆ ಚೆಲ್ಲಿದರೆ ಅವುಗಳು ತತ್‌ಕ್ಷಣವೇ ಸತ್ತು ಹೋಗುವುವು.

ಸರ್ಪದಷ್ಟಕ್ಕೌಷಧವು.

ಹಾವುಗಳಲ್ಲಿ ನಾಗರಹಾವು ಅತಿ ಘೋರವಾದುದೆಂಬುದೂ, ಇತರ ಹಾವುಗಳ ಹಾಗಲ್ಲದೆ ಅದು ಕಚ್ಚಿದ ಒಂದೆರಡು ಗಂಟೆಗಳ ಕಾಲದಲ್ಲೇ ವಿಷವು ಸರ್ವಾಂಗಕ್ಕೂ ವ್ಯಾಪಿಸಿ ಮೃತಿಯನ್ನುಂಟುಮಾಡುತ್ತಿರುವುದೂ ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಇಂತಹ ಹಾವು ಕಚ್ಚಿದುದಕ್ಕೆ ಅನೇಕರಿಗೆ ಸರಿಯಾದ ಔಷಧವು ತಿಳಿಯದೆಯೂ, ಅಥವಾ ತಿಳಿದವರು ಅದನ್ನು ಗೋಪ್ಯಪಡಿಸುವುದರಿಂದಲೂ ದೂರದಲ್ಲಿರತಕ್ಕವರು ಅಂತಹವರನ್ನು ಆಶ್ರಯಿಸಿ ಅವರಿಂದ ಔಷಧವನ್ನು ತೆಗೆದುಕೊಂಡು ಹೋಗಿ ಕೊಡುವುದರೊಳಗೆ ಕಾಲಾತೀತವಾಗಿ ಮೃತ್ಯುವಿನ ಪಾಲಾಗುತ್ತಿರುವುದು ಅನೇಕರಿಗೆ ಗೊತ್ತಿದೆ.

ಇಂತಹ ಕ್ರೂರ ಜಂತುವಿನ ವಿಷಪರಿಹಾರವನ್ನು ಒಂದು ಕಾಸಿನ ವೆಚ್ಚವೂ ಇಲ್ಲದೆ ಮಾಡಿಕೊಳ್ಳಬಹುದಾಗಿದೆ. ಹಿಂದೊಂದು ಸಮಯದಲ್ಲಿ ಒಂದು ದೊಡ್ಡ ನಾಗರ ಹಾವಿಗೂ, ಒಂದು ಮುಂಗಸಿಗೂ ಕದಿದಾಟವಾದ ವೇಳೆಯಲ್ಲಿ ನಾಗರಹಾವಿನಿಂದ ಏರಿದ ವಿಷಪರಿಹಾರಕ್ಕೆ ಮುಂಗಸಿಯು ತಿಂದಂತಹ ಮೂಲಿಕೆಯು ಇದುವರೆಗೆ ೫೦-೬೦ ಜನರಿಗೆ ಉಪಯೋಗಿಸಲ್ಪಟ್ಟುದರಲ್ಲಿ ವಾಸ್ತವ್ಯವಾಗಿ ಗುಣವು ಕಂಡುಬಂದಿದೆ. ಇದನ್ನು ತಿನ್ನಿಸುವುದರಿಂದ ವಾಂತಿ ಮೊದಲಾದುದು ಆಗುವುದಿಲ್ಲ. ಇಂತಹ ವಿಶೇಷಗುಣವುಳ್ಳ ವಸ್ತುವು "ಕಾರೆಗಿಡ" ಎಂಬುದೇ. ಇದು ಎಲ್ಲೆಲ್ಲೂ ಸಿಕ್ಕತಕ್ಕ ಪದಾರ್ಥವಾಗಿದೆ. ಇದು ಮುಳ್ಳಿನಗಿಡ; ಹಣ್ಣು ಬಿಡುತ್ತದೆ. ಇದನ್ನು ತಿನ್ನಬಹುದು. ಇದರ ಬೇರು, ತೊಗಟೆ, ಎಲೆ, ಇವುಗಳಲ್ಲಿ ಯಾವುದನ್ನು ಬೇಕಾದರೂ ಉಪಯೋಗಿಸಬಹುದು. ಎಲೆ ಮೊದಲಾದುದು ಆ ಕ್ಷಣದಲ್ಲಿ ಸಿಕ್ಕುವುದು ಪ್ರಯಾಸವಾದುದರಿಂದ, ಇದರ ಬೇರನ್ನು ತಂದಿಟ್ಟುಕೊಂಡಿದ್ದರೆ ಬಹಳ ಉತ್ತಮವು. ಬೇರನ್ನು ನೀರಿನಲ್ಲಿ ತೇದು ಗಂಧ ತೆಗೆದು ಒಂದು ಪಾವಲಿ ಅಥವಾ ಅದಕ್ಕೆ ಸ್ವಲ್ಪ ಹೆಚ್ಚಾದ ತೂಕದಷ್ಟು ತಿನ್ನಿಸಬೇಕಲ್ಲದೆ ಕಡಿದ ಸ್ಥಳಕ್ಕೆ ಕೊಂಚ ಲೇಪವನ್ನೂ ಮಾಡಬೇಕು. ಇದು ತುಚ್ಛವಾದುದೆಂದೆಣಿಸದೆ ತಮ್ಮ ವಾಚಕರು ಉಪಯೋಗಿಸಿ ಇದರ ಗುಣವನ್ನು ತಿಳಿದುಕೊಳ್ಳಬೇಕಾಗಿದೆ. ಮೇಲೆ ಕಂಡ ಗಂಧವನ್ನು ಕೊಂಚ ಹೆಚ್ಚಾಗಿ ತಿನ್ನಿಸುವುದರಿಂದ ಗುಣವೇ ಹೊರತು ಶರೀರಕ್ಕೆ ಯಾವ ಅಪಾಯವೂ ಸಂಭವಿಸಲಾರದು. ಇದನ್ನು ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಪ್ರಚುರಪಡಿಸುವುದರ ಮೂಲಕ ಸರ್ವರಿಗೂ ತಿಳಿದು ತಮ್ಮಿಂದ ಲೋಕೋಪಕಾರವಾಗುವುದೆಂದು ನಂಬಿರುತ್ತೇನೆ.

ಬೆಳಗರಹಳ್ಳಿ ನರಸಿಂಗರಾವ್, ಚೆನ್ನಪಟ್ಟಣ.

ಮೈಸೂರ್ ಗೆಜೆಟ್ ಸಂಗ್ರಹವು.

ರೆವಿನ್ಯೂಕಮಿಷನರಾಫೀಸಿಗೆ ಸೇರಿದ ಅ॥ ಕಮಿಷನರ್ ಮೆ॥ ಕೆ. ವಿ. ಅನಂತರಾಮ್ಯ, ಬಿ. ಎ, ಯವರಿಗೆ ಕ್ರಿಸ್ತಮಸ್ ರಜದೊಡನೆ ೧೫ ದಿವಸಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ಚಿತ್ರಕಲ್ ದುರ್ಗದ ಡಿ॥ ಟ್ರಜರಿ ಅ॥ ಕಮಿಷನರ್ ಮೆ॥ ಆರ್. ನಾರಾಯಣಸ್ವಾಮಿರಾಯರಿಗೆ ಕ್ರಿಸ್ತಮಸ್ ಮತ್ತೂ ಹೊಸವರ್ಷದ ರಜದೊಡನೆ ೧೯೧೧ ನೆಯ ನವಂಬರ್ ತಾ॥ ೨೪ ರಿಂದ ೧ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವ ಪ್ರಯುಕ್ತ, ಈ ರಜಾಕಾಲದಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೆ ಚಿತ್ರಕಲ್‌ದುರ್ಗ ಡಿ॥ ಪ್ರ॥ ಅ॥ ಕಮಿಷನರ್ ಮೆ॥ ಟಿ. ಜಿ. ರಾಮಯ್ಯಂಗಾರ್‌ರವರು ಡಿ॥ ಟ್ರಜರಿ ಛಾರ್ಜಿನಲ್ಲಿರತಕ್ಕದು.

ಮೈಸೂರ ಸಿಟಿ ಮ್ಯುನಿಸಿಪಾಲಿಟಿ ಹೆಲ್ತಾಫೀಸರ್ ಮೆ॥ ವಿ. ಎಲ್. ಮಾಂಕರ್‌ರವರಿಗೆ ೧೯೧೧ ನೆಯ ನವಂಬರ್ ತಾ॥ ೯ ರಿಂದ ಅಥವಾ ಅನಂತರ ವಿನಿಯೋಗಿಸಿಕೊಳ್ಳುವ ತಾ॥ ನಿಂದ ೧ ತಿಂಗಳು ಮತ್ತೂ ೨೦ ದಿವಸಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವ ಪ್ರಯುಕ್ತ, ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮೈಸೂರ ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಮೆ॥ ಜಿ. ವಿ. ಕರ್ವಿ, ಎಂ. ಬಿ. ಸಿ. ಎಂ., ರವರು ಹೆಲ್ತಾಫೀಸರರಾಗಿ ಬದಲು ನೋಡತಕ್ಕದು.

ಮೆ॥ ಎಸ್. ರೂಬೇರವರು ಆಕ್ಟಿಂಗ್ ಪೋಲೀಸು ಸೂಪರಿಂಟೆಂಡೆಂಟರಾಗಿರುವವರೆಗೆ ಕಡೂರ ಡಿ॥ ಡೆ॥ ಕಮಿಷನರಾಫೀಸು ಡಿ॥ ಶಿರಸ್ತೇದಾರ್ ಮೆ॥ ಬಿ. ಎಂ. ವೆಂಕಟೇಶಯ್ಯನವರು ಮೂಡಗೆರೆ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ ೨ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಅಮಲ್ದಾರ್ ಮೆ॥ ಬಿ. ಟಿ. ಸೀತಾರಾಮಯ್ಯನವರು ಹೊಳೇ ನರಸೀಪುರದಿಂದ ಅರಸೀಕೆರೆ ತಾ॥ ಗೂ, ಅ॥ ಅಮಲ್ದಾರ್ ಮೆ॥ ಆರ್. ತಿರುನಾರಣಯ್ಯಂಗಾರರು ಅರಸೀಕೆರೆಯಿಂದ ಹೊಳೇ ನರಸೀಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಹಾಸನ ಡಿ॥ ರೆವಿನ್ಯೂ ಶಾಖೆಯ ಅ॥ ಕಮಿಷನರ್ ಮೆ॥ ಸಿ. ದೇವರಾಜ ಅರಸಿನವರು ಪೋಲೀಸು ಶಾಖೆಗೆ ವರ್ಗಾಯಿಸಲ್ಪಟ್ಟು ತುಮಕೂರ ಡಿ॥ ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

೧೯೧೧ ನೆಯ ಅಕ್ಟೋಬರ್ ತಾ॥ ೨೧ ರ ಪೂರ್ವಾಹ್ಣದಲ್ಲಿ ಮೆ॥ ಸಿ. ಶ್ರೀಕಂಠೇಶ್ವರಯ್ಯರ್ ರವರು ಮೆ॥ ಪಿ. ಎಸ್. ಬೌರಿಂಗ್‌ರವರಿಂದ ಕೋಲಾರದ ಡಿ॥ ಡೆ॥ ಕಮಿಷನರ ಅಧಿಕಾರವನ್ನು ವಹಿಸಿಕೊಂಡರು.

ವ್ಯವಸಾಯಕ ವಿಷಯಗಳು.

ಹತ್ತಿಯ ದಂಟನ್ನು ಕೊರೆಯುವ ಹುಳುಗಳು.

ಹತ್ತಿಯ ಗಿಡಗಳಲ್ಲಿ ಹೂ ಬಿಡಲು ಆರಂಭವಾದಾಗಿನಿಂದ ಹತ್ತಿಯನ್ನು ಬಿಡಿಸಿ ಕೊಳ್ಳುವವರೆಗೂ ಜಮೀನಿನ ಸೈರುಗಳಲ್ಲಿ ಅಲ್ಲಲ್ಲಿ ಒಂದೊಂದು ಗಿಡವು ಬಾಡಿ ಕ್ರಮೇಣ ಸತ್ತು ಹೋಗುವದನ್ನು ಅನೇಕರು ನೋಡಿರಬಹುದು. ನಿಷ್ಕಾರಣವಾಗಿ ಹೀಗಾಯಿತೆಂದು ಅವರು ಆಶ್ಚರ್ಯಪಡಬಹುದು. ಆದರೆ ಈ ರೀತಿ ಬಾಡಿ ಸತ್ತುಹೋದ ಗಿಡವನ್ನು ಕಿತ್ತು ಕೀಲಿನ ಬಳಿಯಲ್ಲಿ ದಂಟನ್ನು ಕತ್ತರಿಸಿ ನೋಡಿದರೆ ದಂಟಿನ ಉದ್ದಕ್ಕೂ ಮಧ್ಯಭಾಗದಲ್ಲಿ ಕೊರೆಯಲ್ಪಟ್ಟಿರುವದನ್ನು ಅವರು ನೋಡಬಹುದು. ಈ ತೂತಿನಲ್ಲಿ ಹುಳಗಳು ಸಿಕ್ಕುವವು. ಗಿಡವನ್ನು ನಾಶಮಾಡಿದವು ಈ ಹುಳುಗಳೇ.

ಈ ಹುಳುಗಳು ಗಿಡದ ದಂಟಿನ ತುದಿಯಲ್ಲಿ ಚಿಟ್ಟೆ ಹುಳುಗಳಿಂದ ಇಡಲ್ಪಟ್ಟ ಮೊಟ್ಟೆಗಳನ್ನು ಒಡೆದುಕೊಂಡು ಅಲ್ಲಿಂದ ದಂಟಿನೊಳಕ್ಕೆ ಪ್ರವೇಶಿಸುವವು. ಅನಂತರದಲ್ಲಿ ದಂಟಿನ ಒಳಭಾಗದಲ್ಲಿರುವ ತಿರುಳನ್ನು ತಿನ್ನುತ್ತಾ ದಂಟಿನ ಮಧ್ಯಭಾಗದಲ್ಲಿ ಉದ್ದಕ್ಕೂ ಗುಂಡಾದ ಒಂದು ತೂತನ್ನು ಮಾಡುವವು. ಆಗ್ಗೆ ಗಿಡವು ಮೊದಲು ಬಾಡುವುದಕ್ಕೆ ಪ್ರಾರಂಭವಾಗಿ ಕೊನೆಗೆ ಸತ್ತು ಹೋಗುವದು. ಹುಳುವು ಬೆಳ್ಳಗೂ ಮೆತ್ತಗೂ ಸುಮಾರು ಒಂದು ಅಂಗುಲ ಉದ್ದವಾಗಿಯೂ ಇರುವುದು. ಇದರ ಶರೀರವು ತೆಳ್ಳಗೂ ತಲೆಯು ಮಾತ್ರ ಸ್ವಲ್ಪ ದಪ್ಪನಾಗಿಯೂ ಮತ್ತು ತಟ್ಟೆಯಾಗಿಯೂ ಇರುವುದು. ಹುಳುವು ಪೂರ್ತಿಯಾಗಿ ಬೆಳೆದನಂತರ ತೊಗಟೆಗೆ ಅಪಾಯವನ್ನುಂಟು ಮಾಡದಂತೆ ದಂಟನ್ನು ಕೊರೆದುಕೊಂಡು ಹೊರಕ್ಕೆ ಬಂದು ಸ್ವಲ್ಪ ಕಾಲದಲ್ಲಿ ೬ ಕಾಲುಗಳೂ, ೪ ರೆಕ್ಕೆಗಳೂ ಮತ್ತು ೨ ಮೀಸೆಕೊಂಬುಗಳೂ ಉಳ್ಳ ಚಿಟ್ಟೆಯಾಗುವದು. ಹೆಣ್ಣು ಚಿಟ್ಟೆಯು ಮೊಟ್ಟೆಗಳನ್ನಿಟ್ಟು ಸತ್ತು ಹೋಗುವುದು.

ನಿವಾರಣೆ:— ಬಾಡಿ ಹೋದ ಗಿಡಗಳನ್ನೆಲ್ಲಾ ಕ್ರಮವಾಗಿ ತಪ್ಪದೆ ಕಿತ್ತು ಹಾಕಿದರೆ, ರೋಗವು ಸಂಪೂರ್ಣವಾಗಿ ನಿಂತು ಹೋಗುವುದು. ಹುಳುವು ಗಿಡದಿಂದ ಹೊರಗೆ ಬರುವದಕ್ಕೆ ಮೊದಲೇ ಬಾಡಿದ ಗಿಡಗಳನ್ನೆಲ್ಲಾ ಬೇರು ಸಹಿತ ಕಿತ್ತು ಸುಟ್ಟು ಬಿಡುವುದು ಬಹಳ ಸುಲಭ. ಹತ್ತಿಯ ಸಾಗುವಳಿದಾರರೆಲ್ಲರೂ ರೋಗವು ತಲೆಹಾಕಿದ ತರುಣದಲ್ಲಿಯೇ ತಪ್ಪದೆ ಮೇಲ್ಕಂಡಂತೆ ಮಾಡಿದುದೇ ಆದರೆ, ರೋಗದ ಹುಟ್ಟೇ ಇಲ್ಲದಂತಾಗುವುದು.

ಅಲಸಂದೆ.

ಈ ಧಾನ್ಯವನ್ನು ಅಮೇರಿಕಾ ದೇಶಸ್ಥರು ಬಹಳ ಹೇರಳವಾಗಿ ಬೆಳೆಯುವರು. ಇದು ಬಹಳ ಕೀಳು ಜಮೀನುಗಳಲ್ಲೂ ಸೊಂಪಾಗಿ ಬೆಳೆಯುವುದು ಮತ್ತು ಬಹಳ ಮಟ್ಟಿಗೆ ಅನಾವೃಷ್ಟಿಯನ್ನು ತಡೆಯುವುದು. ಇದು ಎಳೆಯದಾಗಿದ್ದಾಗ್ಗೆ ಜನರು ಇದನ್ನು ವಿಶೇಷವಾಗಿ ತಿನ್ನುವರು. ಇದು ಜಮೀನನ್ನು ಬಹಳ ಫಲವತ್ತಾಗಿ ಮಾಡುವದೆಂಬ ಅಂಶವನ್ನು ನಮ್ಮ ರೈತರು ಸ್ವಲ್ಪವಾದರೂ ತಿಳಿದುಕೊಂಡಿರುವಂತೆ ತೋರುವದಿಲ್ಲ. ಇದರ ಸೊಪ್ಪು ಬಹಳ ಉತ್ಕೃಷ್ಟವಾದ ಹಸುರು ಗೊಬ್ಬರವಾಗಿರುವುದು. ಅಮೇರಿಕಾ ದೇಶಸ್ಥರು ಮೇಲ್ಕಂಡವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವದರಿಂದ ಕಳೆದ ಸುಮಾರು ೧೫೦ ವರುಷಗಳಿಂದಲೂ ಈ ಧಾನ್ಯವನ್ನು ಬಹಳವಾಗಿ ಬೆಳೆಯುತ್ತಿದಾರೆ.

ಇದನ್ನು ವ್ಯವಸಾಯ ಮಾಡುವದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಿದೆ:—

(೧) ಅಲಸಂದೆಯು ಯವಕ್ಷಾರ (Nitrogen)ವನ್ನು ಕೊಡುತ್ತದೆ. (೨) ಬೇಸಿಗೆಯಲ್ಲಿ ಅಲಸಂದೆಯ ಪೈರು ಜಮೀನಿಗೆ ನೆರಳು ಮಾಡುವದರಿಂದ ಯವಕ್ಷಾರವು ಮಣ್ಣಿನೊಳಗೆ ಬಹು ಜಾಗ್ರತೆಯಾಗಿ ಸೇರಲು ಯೋಗ್ಯವಾದ ಸ್ಥಿತಿಯಲ್ಲಿರುವದು, ಮತ್ತು ಮುಂದಣ ಬೆಳೆಗೆ ಅನುಕೂಲವಾಗುವಂತೆ ಮಣ್ಣನ್ನು ಸಡಿಲಿಸುವುದು. (೩) ಬಹಳ ಉದ್ದವಾದ ಇದರ ಬೇರುಗಳು ಭೂಮಿಯಲ್ಲಿ ಬಲು ಆಳವಾಗಿಯೂ ಮತ್ತು ಸುತ್ತ ಮುತ್ತಲೂ ಹಬ್ಬಿ, ಅಲ್ಲಿರತಕ್ಕ ಸಸ್ಯಾಹಾರಗಳನ್ನೂ ಮತ್ತು ನೀರನ್ನೂ ಮೇಲಕ್ಕೆ ತೆಗೆದುಕೊಂಡು ಬರುವವು. (೪) ಇದು ಜಿಗಟಾದ ಮತ್ತು ಮರಳು ಪ್ರದೇಶಗಳಲ್ಲೂ, ಫಲವತ್ತಾದ ಗೋಡು ಭೂಮಿಯಲ್ಲೂ, ಕಲ್ಲು ಭೂಮಿಯಲ್ಲೂ ಸೊಂಪಾಗಿ ಬೆಳೆಯುವುದು. (೫) ತೀಕ್ಷ್ಣವಾದ ಬೇಸಿಗೆಯ ಬಿಸಿಲು ಮತ್ತು ಸೆಕೆಗಳನ್ನು ಇದು ತಡೆದು ಕೊಳ್ಳುತ್ತದೆ. (೬) ಇದು ಜಾಗ್ರತೆಯಾಗಿ ಬೆಳೆಯುವದರಿಂದ ಒಂದೇ ಜಮೀನಿನಲ್ಲಿ ವರುಷಕ್ಕೆ ಎರಡು ಬೆಳೆಯನ್ನು ತೆಗೆಯಬಹುದು. (೭) ಬಹಳ ಒತ್ತಾಗಿ ಬಿತ್ತನೆ ಮಾಡಿದರೆ ಪೈರು ಜಮೀನನ್ನು ಪೂರ್ತಿಯಾಗಿ ಮುಚ್ಚುವದಲ್ಲದೆ ಕಳೆಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವುದು. (೮) ಜಮೀನುಗಳಲ್ಲಿ ಇತರ ಬೆಳೆಗಳನ್ನು ಇಡುವದಕ್ಕೆ ಮೊದಲು ಅಲಸಂದೆಯನ್ನು ಬೆಳೆಯುವದರಿಂದ ಎರಡನೆಯ ಬೆಳೆಗೆ ಅನುಕೂಲವುಂಟು. (೯) ಮನುಷ್ಯರಿಗೂ ಮತ್ತು ಜಾನುವಾರುಗಳಿಗೂ ಇದು ಯಥೇಚ್ಛವಾಗಿ ಆಹಾರವನ್ನು ಒದಗಿಸಿ ಕೊಡುವುದು.

ಮೇಲ್ಕಂಡ ವಿಷಯಗಳನ್ನೆಲ್ಲಾ ವಿಚಾರ ಮಾಡಿ ನೋಡಿದರೆ, ಅಲಸಂದೆಗಿಂತಲೂ ಉತ್ತಮವಾದ ಬೆಳೆಯು ಮತ್ತಾವುದೂ ಇರುವಂತೆ ತೋರುವುದಿಲ್ಲ. ಆದರಿಂದ ನಮ್ಮ ದೇಶದ ರೈತರುಗಳು ಇದನ್ನು ತಮ್ಮ ಜಮೀನುಗಳಲ್ಲಿ ಯಥೇಚ್ಛವಾಗಿ ವ್ಯವಸಾಯ ಮಾಡುವದು ಬಹಳ ಲಾಭಕರವಾಗಿರುವುದೆಂದು ಧಾರಾಳವಾಗಿ ಹೇಳಬಹುದು.

ಆಲೂಗೆಡ್ಡೆಯ ವ್ಯವಸಾಯವು

ಸಂಪೂರ್ಣವಾಗಿ ಕತ್ತಲಾದ ನೆಲಮಾಳಿಗೆಗಳಲ್ಲಿ ಮರದ ಮೇಜುಗಳ ಮೇಲೆ ಚೆನ್ನಾಗಿ ಒಣಗಿದ ಮಣ್ಣನ್ನು ತೆಳುವಾಗಿ ಹರವಿ ಅಲ್ಲಿ ಸ್ವಲ್ಪವೂ ಶ್ರಮವಿಲ್ಲದೆ ಆಲೂಗೆಡ್ಡೆಯನ್ನು ಬೆಳೆಯತಕ್ಕ ಒಂದು ಹೊಸ ಕ್ರಮವು ಕೆಲವು ದಿನಗಳಿಂದೀಚೆಗೆ ಬಳಕೆಯಲ್ಲಿದೆ. ಈ ರೀತಿ ವ್ಯವಸಾಯ ಮಾಡುವದಕ್ಕೆ ಬೆಳಕು ಸ್ವಲ್ಪವೂ ತಗಲಕೂಡದು; ಮತ್ತು ಹಾಗೆ ಬೆಳಕು ಬಿದ್ದರೆ ಹೊಸಗೆಡ್ಡೆಗಳು ಹೊರಡುವದಕ್ಕೆ ಬದಲಾಗಿ ನೆಟ್ಟಿರತಕ್ಕ ಗೆಡ್ಡೆಗಳಿಂದ ಮೊಳಕೆಗಳು ಹೊರಡುವವು. ಇದರಿಂದ ಬಹಳ ನಷ್ಟವಾಗುವದು. ಈ ಕ್ರಮಕ್ಕನುಸಾರವಾಗಿ ಆಲೂಗೆಡ್ಡೆಯನ್ನು ಬೆಳೆಯಬೇಕಾದರೆ ವ್ಯವಸಾಯಗಾರರು ಹಳ್ಳಿ ಗಾಡುಗಳನ್ನೇ ಹುಡುಕಿಕೊಂಡು ಹೋಗಬೇಕಾದ್ದಿಲ್ಲ; ದೊಡ್ಡ ದೊಡ್ಡ ಪಟ್ಟಣಗಳಲ್ಲೇ ನೆಲಮಾಳಿಗೆಗಳಲ್ಲಿ ಪ್ರತಿಬಂಗಲೆಗಳಲ್ಲಿಯೂ ವ್ಯಾಪಾರಕ್ಕೆ ಒದಗುವಂತೆ ಆಲೂಗೆಡ್ಡೆಗಳನ್ನು ಬೆಳೆಯಬಹುದು. ಈ ಕ್ರಮಕ್ಕನುಸಾರವಾಗಿ ಬೆಳೆದ ಗೆಡ್ಡೆಗಳು ಜಮೀನುಗಳಲ್ಲಿ ಬೆಳೆಯಲ್ಪಟ್ಟ ಆಲೂಗೆಡ್ಡೆಗಳಿಗಿಂತ ಹೆಚ್ಚು ಗಟ್ಟಿಯಾಗಿಯೂ, ರುಚಿಯಾಗಿಯೂ ಇರುವವು. ಅಲ್ಲದೆ ಇವುಗಳ ಸಿಪ್ಪೆಗಳು ಬಹಳ ತೆಳುವಾಗಿರುವದರಿಂದ ಒಂದಾವೃತ್ತಿ ನೀರಿನಿಂದ ತೊಳೆದು ಬಿಟ್ಟರೆ ಸಿಪ್ಪೆಯು ಸುಲಿದು ಬರುವದು.

ಎಲ್ಲಾ ಜಾತಿಯ ಆಲೂಗೆಡ್ಡೆಗಳನ್ನೂ ಮೇಲ್ಕಂಡ ರೀತಿಯಲ್ಲಿ ಬೆಳೆಯಬಹುದು. ದಪ್ಪನಾದ ಮತ್ತು ಒಂದು ವರುಷಕ್ಕೆ ಮುಂಚೆ ತೆಗೆದಿಡಲ್ಪಟ್ಟ ಆಲೂಗೆಡ್ಡೆಗಳನ್ನು ಬಿತ್ತನೆಗೆ ಆರಿಸಿಟ್ಟುಕೊಳ್ಳಬೇಕು. ಪೂರ್ಣವಾಗಿ ಕತ್ತಲಾಗಿರುವ ನೆಲಮಾಳಿಗೆಗಳಲ್ಲಿ ಮರದ ಮೇಜುಗಳನ್ನು ಹಾಕಿ ಅವುಗಳ ಮೇಲೆ ಎರಡು ಮೂರು ಅಂಗುಲಗಳ ಮಂದವಾಗಿ ಚೆನ್ನಾಗಿ ಶೋಧಿಸಲ್ಪಟ್ಟ ಹಸನಾದ ಒಣಗಿದ ಮಣ್ಣನ್ನು ಹರವಬೇಕು. ಸುಮಾರಾಗಿ ನೆನೆಸಲ್ಪಟ್ಟ ಸ್ಪಂಜಿನಿಂದ ಆಲೂಗೆಡ್ಡೆಗಳನ್ನೆಲ್ಲಾ ಚೆನ್ನಾಗಿ ಒರಸಬೇಕು. ಯಾವದಾದರೊಂದು ಆಲೂಗೆಡ್ಡೆಯಲ್ಲಿ ಮೊಳಕೆಗಳು ಹೊರಟಿದ್ದರೆ ಆ ಮೊಳಕೆಗಳನ್ನೆಲ್ಲಾ ಗೆಡ್ಡೆಗೆ ಸ್ವಲ್ಪವೂ ಘಾಸಿಯಾಗದಂತೆ ಕತ್ತರಿಸಬೇಕು. ಅನಂತರದಲ್ಲಿ ಗೆಡ್ಡೆಗಳನ್ನು ಒಂದೊಂದಾಗಿ ಮಣ್ಣಿನಲ್ಲಿ ಸುಮಾರು ನಾಲ್ಕು ಅಂಗುಲಗಳ ದೂರವಾಗಿ ಸಾಲು ಸಾಲಾಗಿ ಅರ್ಧಮಟ್ಟಿಗೆ ಮಣ್ಣಿನಲ್ಲಿ ಹೂಳಬೇಕು.

ಇಷ್ಟು ಕೆಲಸವನ್ನು ಮಾಡಿದರೆ, ಇದರ ವ್ಯವ[illegible] ಮುಕ್ಕಾಲು ಮೂರು ವೀಸಪಾಲು ಮುಗಿದಂತಾಗುವದು. ಕುಂಟೆ ಹೊಡೆಯಬೇಕಾದ್ದಿಲ್ಲ; ಹುಳಗಳ ಬಾಧೆಯಿಲ್ಲ. ಮುಖ್ಯವಾಗಿ ಜಮೀನುಗಳಲ್ಲಿ ಆಲೂಗೆಡ್ಡೆಗಳನ್ನು ಬೆಳೆಯಲು ಪಡಬೇಕಾದ ಹಾಗೆ ಶ್ರಮವೂ ಪಡಬೇಕಾದ್ದಿಲ್ಲ. ಆಗಿಂದಾಗ್ಗೆ ಗೆಡ್ಡೆಗಳನ್ನು ತೆಗೆದು ಅಜಮಾಯಿಷಿ ಮಾಡುತ್ತಿರಬೇಕು. ಎರಡು ಮೂರು ವಾರಗಳ ತರುವಾಯ, ನೆಡಲ್ಪಟ್ಟ ಗೆಡ್ಡೆಗಳ ಮೇಲೆ ಅನೇಕ ಬಿಳುಪಾದ ಚುಕ್ಕೆಗಳು ಕಂಡು ಬರುವವು. ಇದಾದ ಕೆಲವು ದಿವಸಗಳಲ್ಲಿ ಈ ಚುಕ್ಕೆಗಳು ದಪ್ಪನಾಗಿ ಬಹಳ ಜಾಗ್ರತೆಯಾಗಿ ಗೆಡ್ಡೆಗಳಾಗುವವು. ಈ ರೀತಿಯಾಗಿ ಅನೇಕವಾದ ಗೆಡ್ಡೆಗಳು ಸಾಕಾದಷ್ಟು ದಪ್ಪನಾದಾಗ ಅವುಗಳನ್ನೆಲ್ಲಾ ಕತ್ತರಿಸಿಕೊಂಡು ಮೊದಲು ನೆಟ್ಟಿದ್ದ ಗೆಡ್ಡೆಗಳನ್ನು ಪುನಃ ಅಲ್ಲಿಯೇ ನೆಟ್ಟುಬಿಟ್ಟರೆ ಅವುಗಳಿಂದ ಇನ್ನೂ ಹೊಸ ಗೆಡ್ಡೆಗಳು ಹುಟ್ಟುತ್ತಲೇ ಇರುವವು. ಈ ರೀತಿಯಲ್ಲಿ ಒಂದಾವರ್ತಿ ಬಿತ್ತನೆಮಾಡಿದರೆ ಎರಡು ಅಥವಾ ಮೂರು ಬೆಳೆಗಳನ್ನು ತೆಗೆಯಬಹುದು. ಬಿತ್ತನೆಯ ಗೆಡ್ಡೆಗಳ ತಿರುಳೆಲ್ಲವೂ ಹೋಗಿ ಬರಿಯ ಸಿಪ್ಪೆ ಮಾತ್ರ ನಿಲ್ಲುವವರೆಗೂ ಹೊಸ ಗೆಡ್ಡೆಗಳು ಹುಟ್ಟುತ್ತಲೇ ಇರುವವು. ಆಗಿಂದಾಗ್ಗೆ ಗೆಡ್ಡೆಗಳ ಮೇಲೆ ಮೊಳಕೆಗಳು ಹೊರಡುವದುಂಟು. ಇಂಥಾ ಮೊಳಕೆಗಳನ್ನು ಕತ್ತರಿಯಿಂದ ಕತ್ತರಿಸಿ ಹಾಕಬೇಕು. ಈ ಕೆಲಸಕ್ಕಾಗಿ ನೆಲಮಾಳಿಗೆಯೊಳಕ್ಕೆ ಹೋಗಿ ಬರುವಾಗ ಸೂರ್ಯನ ಬೆಳಕು ಒಳಕ್ಕೆ ಸ್ವಲ್ಪವಾದರೂ ಪ್ರವೇಶಿಸದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.—ವ್ಯ. ಗೆ.

ತುರ್ಕಿ—ಇಟಲಿಗಳ ಯುದ್ಧವು.

ನವಂಬರ್ ತಾ॥ ೩.—ಮೆಸಿಡೋನಿಯ, ಸಿರಿಯ ಅಥವಾ ತುರ್ಕಿಯವರ ಅರ್ಕಿಪೆಲಗೊ ಇವುಗಳ ಮೇಲೆ ಯುದ್ಧ ಕಾರ್ಯಭಾಗವನ್ನು ನಡೆಸಲು ಇಟಲಿಯವರು ಟೆಂಬ್ರುಕ್ ಎಂಬಲ್ಲಿ ಸಿದ್ಧವಾಗಿಟ್ಟಿರುವ ನಾವೆಗಳಿಗೆ ೧ ತಿಂಗಳಿಗೆ ಬೇಕಾಗುವಷ್ಟು ಕಲ್ಲಿದ್ದಲನ್ನು ಶೇಖರಿಸಿಟ್ಟಿರುವುದರಿಂದ ಹಡಗುಗಳು ಈ ಕಲ್ಲಿದ್ದಲು ತೀರಿದ ಹಾಗೆಲ್ಲ ಇಟಲಿ ಹೋಗಿ ತುಂಬಿಕೊಂಡು ಬರಬೇಕಾದಾವಶ್ಯಕತೆಯು ತಪ್ಪಿತು

ತಾ॥ ೪—ಇಟಲಿಯು ಈಜಿಯನ್ ಸಮುದ್ರದಲ್ಲಿರು ದ್ವೀಪಗಳನ್ನು ಸ್ವಾಧೀನಪಡಿಸಿಕೊಳ್ಳುವ ಯೋಚನೆಯನ್ನು ಬಿಟ್ಟು ಸಿರಿಯಾದ ದಡದಲ್ಲಿ ನಾವೆಯ ಪ್ರಯೋಗವನ್ನು ಮಾಡುವುದರಲ್ಲಿದೆ. ಕಾದಿಡಲ್ಪಟ್ಟಿರುವ ಸೇನೆಯ ಸಹಾಯವು ಅಪೇಕ್ಷಿಸಲ್ಪಟ್ಟಿರುತ್ತದೆ. ಮತ್ತೊಂದು ಸೇನೆಯ ಪಂಗಡವು ದಳಪತಿಯೊಡನೆ ಟ್ರಿಪೋಲಿಗೆ ಹೊರಡಲಪ್ಪಣೆ ಮಾಡಲ್ಪಟ್ಟಿರುತ್ತದೆ. ಈ ಟ್ರಿಪೋಲಿಗೆ ಬಲವಾದ ಸೇನೆಯ ಗುಂಪುಗಳು ಬಂದು ಸೇರುವುದರಲ್ಲಿವೆ. ಇಲ್ಲಿರುವ ಅರಬ್ಬಿಯವರು ತಾವು ಕದನದ ಹೊಡೆತವನ್ನು ಸಹಿಸಿಕೊಂಡಿರಬೇಕೆಂದು ತುರ್ಕಿಯವರು ತಮ್ಮನ್ನು ಬಲವಂತಪಡಿಸುತ್ತಾರೆಂದು ದೂರುತ್ತಾರೆ. ತುರ್ಕಿಯವರಿಗೆ ಸಾಲವನ್ನು ಕೊಟ್ಟಿರುವ ಇಟಲಿಯವರ ಪ್ರತಿನಿಧಿಯಾದ ಥಿಯಡೋಲಿ ಎಂಬಾತನು ತುರ್ಕಿಯನ್ನು ಬಿಟ್ಟು ಹೋಗುವಂತೆ ಅಪ್ಪಣೆ ಮಾಡಲ್ಪಟ್ಟಿರುತ್ತಾನೆ. ಟ್ರಿಪೋಲಿಯಲ್ಲಿ ಇಟಲಿಯವರು ಅರಬ್ಬಿಯವರನ್ನು ನಿರ್ದಾಕ್ಷಿಣ್ಯದಿಂದ ಪ್ರಾಣಾಂತಶಿಕ್ಷೆಗೆ ಗುರಿಮಾಡುವುದು ೧೯೦೭ ರಲ್ಲಿ ಹೇಗ್ ಎಂಬಲ್ಲಿ ಎಲ್ಲ ರಾಜ್ಯದವರಿಗೂ ನಡೆದಿರುವ ಒಡಂಬಡಿಕೆಗೆ ವಿರುದ್ಧವಾಗಿರುತ್ತದೆಂದು ತುರ್ಕಿಯವರು ಎಲ್ಲ ರಾಜ್ಯಗಳಿಗೂ ದೂರಿಕೊಂಡಿರುತ್ತಾರೆ. ತುರ್ಕಿ-ಇಟಲಿಯುದ್ಧ ವಿಚಾರದಲ್ಲಿ ಬ್ರಿಟಿಷ್ ಪ್ರಜೆಗಳು ಖಂಡಿತವಾಗಿ ತಾಟಸ್ಥ್ಯವನ್ನು ವಹಿಸಬೇಕೆಂದು ಕಳೆದ ಅಕ್ಟೋಬರು ತಾ॥ ೩೧ ರ ಇಂಡಿಯಾ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ

ತಾ॥ ೫.—ಕಳೆದ ತಾ॥ ೨೬ ರಿಂದ ೨೮ ರ ವರೆಗೆ ನಡೆದ ಯುದ್ಧದಲ್ಲಿ ಇಟಲಿಯವರು ಹೇಳುವಂತೆ ತುರ್ಕಿಯವರು ಮತ್ತೂ ಅರಬ್ಬಿಯವರು ಹೆಚ್ಚಾಗಿರದೆ ೨೦೦೦ ಜನರ ವರೆಗೆ ಮಾತ್ರ ಎದ್ದು ಅತ್ಯಾಶ್ಚರ್ಯವಾಗಿ ಇಟಲಿಯವರ ಮೇಲೆ ಬಿದ್ದು ೧೦೦೦ ವರೆಗೆ ಇಟಲಿಯವರನ್ನು ಕೊಂದು ಗಾಯಪಡಿಸಿದರು, ಮತ್ತೂ ಮರುಭೂಮಿಯಲ್ಲಿ ನೀರಿನ ಬಳಿ ಇರುವ ಗ್ರಾಮಗಳನ್ನು ಬಿಟ್ಟೋಡಿಸಿದರು. ಇಟಲಿಯವರು ತಾ॥ ೨೩ ರಲ್ಲಿ ೧೫೦೦೦ ಗಜದ ವರೆಗೆ ಮುಂದಿದ್ದವರು ಈಗ ೩೦೦೦ ಗಜದ ವರೆಗೆ ಹಿಂಜರಿದಿರುತ್ತಾರೆ. ತುರ್ಕಿಯವರು ತಮ್ಮ ಫಿರಂಗಿಗಳನ್ನು ಮುಂದು ಮುಂದಕ್ಕೆ ತೆಗೆದುಕೊಂಡು ಬಂದು ಇಟಲಿಯವರ ಮೇಲೆ ಗುಂಡನ್ನು ಹೊಡೆಯುತ್ತಿದಾರೆ ಎಂದು ಪ್ರಪಂಚಕ್ಕೆಲ್ಲ ತಂತಿಯ ಮೂಲಕ ವರ್ತಮಾನವನ್ನು ಕೊಡುವ ರೂಟರಿನ ಕಡೆಯ ಸುದ್ದಿಗಾರನು ತಿಳಿಸುತ್ತಾನೆ. ಇಟಲಿಯವರು ಬಹು ಹಿಂದಕ್ಕೋಡಿಸಲ್ಪಟ್ಟಿರುವುದರಿಂದ ಸಮುದ್ರದ ಮೇಲಣದ ವಿನಾ ಮುಂದಕ್ಕೆ ಹೋಗಲು ಯತ್ನವಿಲ್ಲವಾಗಿದೆ, ಮತ್ತೂ ಮರುಭೂಮಿಯೊಳಗೆ ಪ್ರವೇಶಿಸುವ ಯೋಚನೆಯನ್ನು ಸದ್ಯದಲ್ಲಿ ಬಿಟ್ಟಿರುತ್ತಾರೆ. ಟ್ರಿಪೋಲಿಯಲ್ಲಿರುವ ಸೇನಾ ಜನರಲ್ಲೂ, ಇತರರಲ್ಲೂ ವಾಂತಿಭೇದಿಯ ರೋಗವು ಕಾಣಿಸಿಕೊಂಡಿದೆ.

ತಾ॥ ೬.—ಕಳೆದ ಮಂಗಳವಾರ ಮತ್ತೂ ಬುಧವಾರದಲ್ಲಿ ೮೦೦೦ ತುರ್ಕಿಯವರೂ, ೧೬೦೦೦ ಅರಬ್ಬಿಯವರೂ ಇಟಲಿಯವರ ಕೂಡ ಯುದ್ಧಮಾಡಿದುದರಲ್ಲಿ ಇಟಲಿಯವರ ಕಡೆ ೫೦೦೦-೬೦೦೦ ಸತ್ತು, ಗಾಯವಡೆದರು ಮತ್ತೂ ತುರ್ಕಿಯವರು ೨ ಕೋಟೆಗಳನ್ನೂ, ಅನೇಕ ಮದ್ದುಗುಂಡುಗಳನ್ನೂ ಸ್ವಾಧೀನಪಡಿಸಿಕೊಂಡರು. ಎಂದು ಲಂಡನ್ನಿಗೆ ಬಂದ ತಂತಿಯ ವಾರ್ತೆಯಿಂದ ಗೊತ್ತಾಗುತ್ತದೆ. ಇಟಲಿಯ ಸೇನೆಯ ಜನರಲ್ ಕೆನಾವಾ ಎಂಬುವನು ಆಯುಧಪಾಣಿಗಳೆಂದು ಕಂಡು ಬರುವ ಅರಬ್ಬಿಯವರನ್ನೆಲ್ಲ ಗುಂಡಿನಿಂದ ಹೊಡೆದು ಸುಟ್ಟುಬಿಡಬೇಕೆಂದು ತನ್ನ ಸೇನೆಯವರಿಗಾಜ್ಞೆಯನ್ನು ಮಾಡಲು, ಅವರು ೪ ದಿನಗಳವರೆಗೆ ಮರುಭೂಮಿಯಲ್ಲಿ ನೀರಿನ ಬಳಿಯಲ್ಲಿರುವ ಗ್ರಾಮಗಳಿಗೆ ನುಗ್ಗಿ ಹೆಂಗುಸರು, ಗಂಡುಸರು, ಮತ್ತೂ ಮಕ್ಕಳೂ ಎಂಬ ವಿವೇಚನೆಯಿಲ್ಲದೆ ಅರಬ್ಬಿಯವರನ್ನು ಸುಟ್ಟು ಬಹು ಅನಾಹುತವನ್ನು ನಡೆಸಿದರು. ಈ ಅತ್ಯಾಹಿತಕ್ಕೆ ಜನರಲ್ ಕೆನೇವನು ಉತ್ತರವಾದಿಯಾಗುತ್ತಾನೆ. ಎಂದು ರೂಟರಿನ ಸುದ್ದಿಗಾರನು ತಿಳಿಸಿರುತ್ತಾನೆ.

ತಾ॥ ೬.—ಜನರಲ್ ಕೆನೇವನು ಟ್ರಿಪೋಲಿ ಪಟ್ಟಣದ ಗೌರ್ನರೂ, ಜನರಲ್ ಫ್ರುಗೋನಿಯು ಟ್ರಿಪೋಲಿಯಲ್ಲಿರುವ ಸೇನೆಯ ದಳಪತಿಯೂ ಆಗುವನೆಂದು ಗೊತ್ತಾಗಿದೆ. ೨೦೦೦೦ ಸೇನೆಯು ಫಿರಂಗಿಗಳ ಮತ್ತೂ ಆಕಾಶ ವಿಮಾನಗಳ ಸಮೇತ ಟ್ರಿಪೋಲಿಗೆ ಹೊರಡುವುದಕ್ಕಾಗಿ ನೇಪಲ್ಸಿನಲ್ಲಿ ಸೇರುವುದು. ಟ್ರಿಪೋಲಿ ಮತ್ತೂ ಸಿರನೇಯಿಕ ಇವೆರಡೂ ಸಂಪೂರ್ಣವಾಗಿ ಇಟಲಿಗೆ ಸೇರಿಸಿಕೊಳ್ಳಲ್ಪಟ್ಟಿವೆ ಎಂದು ಇಟಲಿಯವರು ಇತರ ರಾಜ್ಯಗಳಿಗೆ ತಿಳಿಸಿರುವರಲ್ಲದೆ ತುರ್ಕಿಯವರು ಕಾಲವಿಳಂಬವನ್ನು ಮಾಡದೆ, ಇವು ಇಟಲಿಯವರ ವಶವಾದುದನ್ನೊಪ್ಪಿಕೊಂಡು ಮುಂದೆ ವಿಚಾರವಿಲ್ಲದೆ ನಡೆಯುವ ರಕ್ತಪಾತವನ್ನು ತಪ್ಪಿಸುವಂತೆ ಅವರಿಗೆಲ್ಲ ಒಡಂಬಡಿಸಬೇಕೆಂದು ಸೂಚಿಸಿರುತ್ತಾರೆ. ಯೂರೋಪಿನ ತುರ್ಕಿ ರಾಜ್ಯದ ನೆಮ್ಮದಿಯ ವಿಚಾರದಲ್ಲಿ ರಷ್ಯಾ ರಾಜ್ಯವು

ಭರವಸೆಯನ್ನು ಕೊಡುವುದಾದರೆ, ರಷ್ಯನರ ಯುದ್ಧನಾವೆಗಳು ಡಾರ್ಡನೆಲ್ಸ್‌ದ್ವಾರ ಸಂಚರಿಸುವ ಹಕ್ಕನ್ನು ಕೊಡಲು ತುರ್ಕಿಯವರು ಸಿದ್ಧರಾಗಿರುವರೆಂದು ಒಂದು ಪತ್ರಿಕೆಯು ತಿಳಿಸುತ್ತದೆ. ಇಂಗ್ಲೆಂಡೂ [illegible] ಕೆಲ ಅನುಕೂಲ್ಯವನ್ನು ಪಡೆಯುವುದರ ಮೇಲೆ ಈ ಒಡಂಬಡಿಕೆಯನ್ನು ಅಂಗೀಕರಿಸಿರುತ್ತದಲ್ಲದೆ, ಇಟಲಿಯು ತಾನು ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಅಡ್ಡಿಮಾಡುವುದಿಲ್ಲವೆಂದು ರಷ್ಯಾ ದೇಶವು ಒಪ್ಪಿಕೊಂಡುದರಿಂದ ಬಹುದಿನಗಳ ಪೂರ್ವವೇ ಈ ಒಡಂಬಡಿಕೆಗೆ ಸಮ್ಮತಿಯನ್ನು ಕೊಟ್ಟಿರುತ್ತದೆ. ಟ್ರಿಪೋಲಿಯಲ್ಲಿ ಆರೋಗ್ಯಸ್ಥಿತಿಯು ಕೆಟ್ಟುಹೋಗುತ್ತಿರುವುದು. ವಾಂತಿಭೇದಿ ರೋಗದಿಂದಲೂ, ಕ್ಷುದ್ಬಾಧೆಯಿಂದಲೂ ಸತ್ತುಹೋಗಿದ್ದ ೫೦ ಜನರು ಮಾರ್ಗಗಳಲ್ಲಿ ತಂದು ಹಾಕಲ್ಪಟ್ಟಿದ್ದರು. ಅತ್ತಲಾಗಿ ಮರುಭೂಮಿಯಲ್ಲಿ ನೀರಿನಬಳಿ ಇರುವ ಗ್ರಾಮಗಳು ಮಾರಿಗೋಪದ್ರವದಿಂದ ಸತ್ತ ಜನರ ಶವಮಯವಾಗಿವೆ. ಇಟಲಿಯ ಸೇನೆಯಲ್ಲಿ ನಿತ್ಯವಲ್ಲೂ ೪೦ ಜನರು ವಾಂತಿಭೇದಿ ರೋಗದಿಂದ ಸಾಯುತ್ತಿರುವರು. ಆದರೆ ಮಾಲ್ಟಾದಲ್ಲಿ ಈ ರೋಗವು ಅಡಗಿಸಲ್ಪಟ್ಟಿದೆ, ಮತ್ತೂ ಅಲ್ಲಿ ಈವರೆಗೆ ೨೬ ಜನರಿಗೆ ತಗುಲಿ ೨೯ ಜನರು ಸತ್ತಿರುವರು.

ತಾ॥ ೭.—ಜನರಲ್ ಫ್ರುಗೋನಿಯು ಸೇನೆಯ ಒಂದು ಭಾಗಕ್ಕೆ ದಳಪತಿಯಾಗಿರುವನೆಂದೂ, ಜನರಲ್ ಕೆನೇವನು ಮೊದಲಿನಂತೆ ಒಟ್ಟು ಸೇನಾನಾಯಕನಾಗಿಯೇ ಇರುವನೆಂದೂ ಪ್ರಕಟವಾಗಿದೆ. ಭಾನುವಾರ ಬೆಳಿಗ್ಗೆ ತುರ್ಕಿಯವರ ಫಿರಂಗಿಗಳನ್ನು ಇಟಲಿಯವರಿದ್ದೆಡೆಗೆ ಹೊಡೆಯಲಾರಂಭವಾಗಿ, ಆ ದಿನವೆಲ್ಲಾ ಫಿರಂಗಿಗಳ ಹೊಡೆದಾಟವೇ ನಡೆದಿತು. ಇಟಲಿಯ ಆಕಾಶ ವೈಮಾನಿಕರು ತುರ್ಕಿಯವರ ಪಾಳೆಯಗಳಿಗೆ ಸಿಡಿಮದ್ದುಗಳನ್ನು ಹಾಕಿ ತುರ್ಕಿಯವರನ್ನು ಹಿಮ್ಮೆಟ್ಟಿಸಿದರು. ಹೆನ್ನಿ ಎಂಬುದು ತುರ್ಕಿಯವರ ವಶವಾಗಿ ಆ ಕದನದಲ್ಲಿ ಇಟಲಿಯವರ ಕಡೆ ೫೦೦ ಜನರು ಸತ್ತು ೧೮ ಫಿರಂಗಿಗಳು ಶತ್ರುಗಳ ವಶವಾದುವೆಂದು ಕಾನಸ್ಟಾಂಟಿನೋಪಲ್ಲಿನಲ್ಲಿ ವರ್ತಮಾನವಿದೆ, ಆದರೆ ಹೆನ್ನಿ ಎಂಬಲ್ಲಿ ಇಟಲಿಯವರ ಸ್ಥಿತಿಯು ವ್ಯತ್ಯಸ್ತವಾಗಿಲ್ಲವೆಂದು ಇಟಲಿಯವರ ತಂತಿಯ ವಾರ್ತೆಯಿಂದ ತಿಳಿಯಬರುತ್ತದೆ. ಸಾಕಷ್ಟು ಪದಾರ್ಥಗಳು ಒದಗಿಸಲ್ಪಡುತ್ತಿಲ್ಲವೆಂದು ಟ್ರಿಪೋಲಿಯಲ್ಲಿರುವ ತುರ್ಕಿಯವರಿಗೂ, ಅರಬ್ಬಿಯವರಿಗೂ ವಿಶೇಷ ಜಗಳವುಂಟಾಗಿರುವುದಲ್ಲದೆ, ತುರ್ಕಿಯವರು ಯುದ್ಧದಲ್ಲಿ ತಮ್ಮನ್ನೇ ಮುಂದೆ ಬಾಚುತ್ತಾರೆಂದು ಅರಬ್ಬಿಯವರು ತುರ್ಕಿಯವರ ಮೇಲೆ ಸಿಟ್ಟುಗೊಂಡಿದಾರೆಂದು ಇಟಲಿಯವರಿಂದ ಬಂದ ವರ್ತಮಾನದಿಂದ ಗೊತ್ತಾಗುತ್ತದೆ. ಇಟಲಿಯ ವೈಮಾನಿಕನು ಶತ್ರುಗಳಪಾಳೆಯಕ್ಕೆ ೨ ಸಿಡಿಮದ್ದನ್ನು ಹಾಕಿ ಅವರಲ್ಲಿ ವಿಶೇಷ ಭಯವನ್ನು ಹುಟ್ಟಿಸಿರುತ್ತಾನೆ. ಅರೇಬಿಯಾದಲ್ಲಿ ಕೆಂಪುಕಡಲಿಗೆ ಆಗ್ನೇಯದಿಕ್ಕಿನಲ್ಲಿರುವ ಅಕಾಬಾಕ್ಕೆ ಇಟಲಿಯ ಹಡಗು ಫಿರಂಗಿಯನ್ನು ಹೊಡೆದು ತುರ್ಕಿಯವರ ಫಿರಂಗಿಯಿದ್ದ ದೋಣಿಯನ್ನು ಮುಳುಗಿಸಿ ಒಬ್ಬ ಅಧಿಕಾರಿಯನ್ನು ಕೊಂದಿತು.

ತಾ॥ ೮.—ಸಹಾಯಕ್ಕಾಗಿ ಬಂದ ೧೫೦೦೦ ಸೇನೆಯೊಡನೆ ಜನರಲ್ ಫ್ರುಗೋನಿಯು ಬಂದಿಳಿಯುತ್ತಲೆ ಬಹು ವೇಗದಿಂದಲೂ, ಚಟುವಟಿಕೆಯಿಂದಲೂ ಮುಂದೆನಡೆಯಲಪ್ಪಣೆಯನ್ನು ಕೊಟ್ಟುದು ಶತ್ರುಗಳಲ್ಲಿ ವಿಸ್ಮಯವನ್ನುಂಟುಮಾಡಿದುದಲ್ಲದೆ ಹಮಿಡಿಯ ಕೋಟೆಯು ಸ್ವಾಧೀನವಾಯಿತು. ಶತ್ರುಪಕ್ಷದಲ್ಲಿ ಬಹು ನಷ್ಟವಾಯಿತೆಂದು ಇಟಲಿಯವರು ಹೇಳುತ್ತಾರೆ. ಹೆನ್ನಿಯನ್ನು ತುರ್ಕಿಯವರು ಸ್ವಾಧೀನಮಾಡಿಕೊಂಡುದು ಸುಳ್ಳೆಂದು ಯುದ್ಧದ ಆಫೀಸಿನವರು ತಿಳಿಸುತ್ತಾರೆ. ಟ್ರಿಪೋಲಿಯನ್ನು ಇಟಲಿಯವರಿಗೆ ಬಿಟ್ಟುಕೊಡುವುದಿಲ್ಲವೆಂದು ತುರ್ಕಿಯವರು ಇತರ ರಾಜ್ಯಗಳಿಗೆ ತಿಳಿಸಿರುತ್ತಾರೆ. ಟ್ಯೂನಿಸ್ಸಿನಲ್ಲಿ ನಿನ್ನೆಯ ದಿನ ಅರಬ್ಬಿಯವರಿಗೂ ಇಟಲಿಯವರಿಗೂ ದೊಡ್ಡ ಕದನವು ನಡೆದು ಅನೇಕರು ಮಡಿದರು ಮತ್ತು ಗಾಯವಡೆದರು. ಪೋಲೀಸಿನವರೂ ಮತ್ತೂ ಸೈನಿಕರೂ ಗೊಂದಲವನ್ನು ಅಡಗಿಸಿ ಶಾಂತತೆಯನ್ನುಂಟುಮಾಡಿದರು. ಈ ಸಂದರ್ಭದಲ್ಲಿ ಒಬ್ಬ ಪೋಲೀಸು ಸಾರ್ಜೆಂಟು ಸಾಯುವಂತಹ ಗಾಯವಡೆದನು. ಅರಬ್ಬಿಯವರ ರುದ್ರಭೂಮಿಯು ಮ್ಯುನಿಸಿಪಾಲಿಟಿಯವರಿಗೆ ಸೇರಿದುದೆಂಬುದರ ವಿಚಾರದಲ್ಲಿ ಮೇಲ್ಕಂಡ ಗದ್ದಲವುಂಟಾಗಿ ಅನೇಕ ಸಾವಿರಾರು ಅರಬ್ಬಿಯವರು ಸರ್ವೆಯರನ್ನು ಮುತ್ತಿಕೊಳ್ಳಲು ಸೈನಿಕರು ಗುಂಡನ್ನು ಹಾರಿಸಿ ೧೦ ಜನರನ್ನು ಕೊಂದು ೨೦ ಜನರಿಗೆ ಗಾಯವನ್ನುಂಟುಮಾಡಿದರು. ಆಗ ಜನರು ಬೇಗ ಗೊಂದಲವೆದ್ದು ಇಟಲಿಯವರನ್ನು ಸಂಹರಿಸಯತ್ನಿಸಿ ಅವರಲ್ಲಿ ೫೦ ಜನರನ್ನು ಕೊಂದರು. ಈ ತುರ್ಕಿ—ಇಟಲಿಗಳಯುದ್ಧ ವಿಚಾರದಲ್ಲಿ ಅಫ್ಘಾನಿಸ್ಥಾನದ ಅಮೀರನು ಆಸಕ್ತನಾಗಿ ಇತರ ಭಾಷೆಯ ವೃತ್ತಪತ್ರಿಕೆಗಳಲ್ಲಿ ಈ ಯುದ್ಧ ವಿಚಾರದಲ್ಲಿ ಬರುವ ವರ್ತಮಾನವನ್ನು ಪಾರ್ಷಿಯ ಭಾಷೆಗೆ ಪರಿವರ್ತನವನ್ನು ಮಾಡಿ ಹೇಳಲು ಜನರನ್ನು ನೇಮಿಸಿ ಪ್ರತಿದಿನ ಸಾಯಂಕಾಲದಲ್ಲಿ ಓದಿಸಿ ಕೇಳುತ್ತಿರುವನು. ಬೊಂಬಾಯಿನಲ್ಲಿರುವ ಅಮೀರನ ಏಜಂಟ್ ಕರ್ನಲ್ ರಸೂಲ್‌ಖಾನನು ಪಿಷಾವರಿಗೆ ಬಂದು ಅಫ್ಘಾನಿಸ್ಥಾನದಲ್ಲೆಲ್ಲ ಒಟ್ಟಿಗೆ ಇಟಲಿಯ ಪದಾರ್ಥಗಳಿಗೆ ಬಹಿಷ್ಕಾರವನ್ನು ಹಾಕಬೇಕೆಂದು ಹೇಳಿದನು.

ತುರ್ಕಿಯವರು ಹೆನ್ನಿ ಎಂಬುದನ್ನು ಸ್ವಾಧೀನಪಡಿಸಿಕೊಂಡುದು ಸುಳ್ಳೆಂದು ಗೊತ್ತಾಗಿದೆ. ಇಟಲಿಯವರ ಸೇನೆಯ ಒಂದು ಪಂಗಡವು ಫಿರಂಗಿಗಳ ಮತ್ತೂ ನೌಕಾಸೇನೆಯ ಸಹಾಯದಿಂದ ಹಮಿಡಿಯ ಕೋಟೆಯಿಂದ ಹೊರಗೆ ಪ್ರಯಾಣಮಾಡಿಬಂದು ಶತ್ರುಗಳನ್ನು ಹಿಂದಕ್ಕೋಡಿಸಿ ಅವರಲ್ಲಿ ೬೦ ಜನರನ್ನು ಕೊಂದಿತು. ಆದರೆ ತಮ್ಮ ಕಡೆಯವರಲ್ಲಿ ೧೪ ಜನರು ಗಾಯವಡೆದರು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ಯುದ್ಧದ ವಿಚಾರವಾಗಿ ಚರ್ಚೆಯು ನಡೆಯುವಾಗ್ಗೆ, ಮಧ್ಯಸ್ಥತೆಗೆ ಹೋಗಬಾರದೆಂದು ಮಾಡಿಕೊಂಡಿರುವ ನಿಬಂಧನೆಯಿಂದ ಬ್ರಿಟಿಷ್ ಸರ್ಕಾರದವರು ದೂರವಾಗಿಲ್ಲವು ಮತ್ತೂ ಇಟಲಿಯವರ ಹಾಗೂ ತುರ್ಕಿಯವರ ಪ್ರಸ್ತುತ ಮನೋಭಿಪ್ರಾಯದಿಂದ ಸದ್ಯದಲ್ಲಿ ಮಧ್ಯಸ್ಥತೆಯನ್ನು ಬಯಸುವ ಸ್ಥಿತಿಯಿಲ್ಲವೆಂದು ತೋರುತ್ತದೆ. ಎಂದು ಎಫ್. ಡಿ. ಅಕ್ಲಾಂಡ್‌ರವರು ಹೇಳಿದರು.

ತಾ॥ ೯.—ತುರ್ಕಿಯ ರಾಜಧಾನಿಯಾದ ಕಾನಸ್ಟಾಂಟಿನೋಪಲಿನಲ್ಲಿರುವ ರೆಡ್ ಕ್ರೆಸೆಂಟ್ ಸಂಘಕ್ಕೆ ನೈಟಾಲಿನ ಮಹಮ್ಮದೀಯರು ೨೦೦೦೦ ರೂ. ಗಳನ್ನು ಕೊಟ್ಟಿರುವರು. ನಿನ್ನೆಯ ದಿನ ಟ್ಯೂನಿಸಿನಲ್ಲಾದ ಗೊಂದಲದಲ್ಲಿ ೬ ಜನ ಇಟಲಿಯವರು ಕೊಲ್ಲಲ್ಪಟ್ಟರು. ಆಯುಧಪಾಣಿಗಳಾದ ಅನೇಕ ಸ್ಥಳೀಯರು ಸೆರೆಹಿಡಿಯಲ್ಪಟ್ಟರು. ಕಲಕತ್ತಾದಲ್ಲಿ ರೆಡ್ ಕ್ರೆಸೆಂಟ್ ಸಂಘಕ್ಕೂ, ತುರ್ಕಿಯ ಸುಲ್ತಾನನಿಗೂ ದ್ರವ್ಯಸಹಾಯವನ್ನು ಮಾಡಬೇಕಾಗಿದೆಯೆಂದು, ನಿರಕ್ಷರಸ್ಥರಾದ ಮಹಮ್ಮದೀಯರಿಗೆ ಹೇಳಿ ಬಲವಂತದಿಂದ ಹಣವನ್ನು ಸೆಳೆಯುತ್ತಿರುವರು. ಒಬ್ಬ ಮಹಮ್ಮದೀಯನು ಫಕೀರನ ವೇಷವನ್ನು ಧರಿಸಿ ಮಾರ್ಗದ ಪಕ್ಕದಲ್ಲಿ ಒಂದು ಗುಡಿಸಲನ್ನು ಹಾಕಿಕೊಂಡು ದಾರಿಯಲ್ಲಿ ತಿರುಗುವ ಜನರಿಗೆಲ್ಲ ಸುಲ್ತಾನನಿಗೆ ಹಣವನ್ನು ಕಳುಹುವುದಕ್ಕಾಗೆಂದು ಚಂದಾ ಹಣವನ್ನೆತ್ತುತ್ತ ಕಳೆದ ತಾ॥ ೪ ರಲ್ಲಿ ಜೋಳವನ್ನು ತುಂಬಿಕೊಂಡು ಹೋಗುತ್ತಿದ್ದ ಒಬ್ಬ ಮಹಮ್ಮದೀಯನನ್ನು ಆ ಜೋಳದ ಬೆಲೆಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಕೊಡಬೇಕೆಂದು ಕೇಳಿ ಅವನು ಕೊಡದೆ ಹೋಗಲು, ಆ ರೈತನನ್ನು ಹೊಡೆದು ಅವನಿಂದ ಜೋಳವನ್ನೂ, ೨೦ ರೂ ಗಳನ್ನೂ ಕಸುಕೊಂಡನು. ಈ ಸಂದರ್ಭವನ್ನು ಪೋಲೀಸರು ತಿಳಿದು ಆ ವೇಷಧಾರಿ ಫಕೀರನನ್ನು ಹಿಡಿದು, ಅವನ ಗುಡಿಸಲನ್ನು ಶೋಧಿಸುವಲ್ಲಿ ಕೆಲ ಪತಾಕೆಗಳೂ, ಒಂದು ಕಬ್ಬಿಣದ ಪೆಟ್ಟಿಗೆಯೂ ಭರ್ಜಿಗಳೂ ಸಿಕ್ಕಿದುವು. ಲಾಹೋರಿನ ಮಹಮ್ಮದೀಯರು ತುರ್ಕಿ—ಇಟಲಿಗಳ ಯುದ್ಧದಲ್ಲಿ ವಿಪನ್ನರಾದ ಮಹಮ್ಮದೀಯರ ಸಹಾಯಾರ್ಥವಾಗಿ ಹಣವನ್ನೆತ್ತುವ ಉದ್ದೇಶದಿಂದ ಕಳೆದ ತಾ॥ ೫ ರಲ್ಲಿ ಒಂದು ಸಭೆ ಸೇರಿದ್ದರು. ಆಗ ಕೆಲರು ಹೃದಯಂಗಮವಾಗುವಂತೆ ಭಾಷಣವನ್ನು ಮಾಡಲು ಆ ಸ್ಥಳದಲ್ಲೇ ೫೦೦ ರೂ. ಚಂದಾ ಕೊಡಿತು. ಕ್ರೈಸ್ತ ಕಾಲೇಜಿನ ಮಹಮ್ಮದೀಯ ವಿದ್ಯಾರ್ಥಿಗಳು ಮನೆಮನೆಗೂ ಚಂದಾಹಣವನ್ನೆತ್ತಲು ಹೊರಟಿರುವರು.

ಇಂಗನ್ನು ನೀರಿನಲ್ಲಿ ಕದಡಿ ಗಿಡಗಳ ಸುತ್ತಲೂ ಚೆಲ್ಲಿದರೆ ಗೆಜ್ಜಲು ಹುಳುಗಳು ಗಿಡಗಳ ಸಮೀಪಕ್ಕೆ ಬಾರದೆ ದೂರವಾಗಿರುವುವು. ಮನೆಗಳಲ್ಲಿ ಗೆಜ್ಜಲು ಹುಳುಗಳು ಮರಮುಟ್ಟುಗಳನ್ನೂ ಮತ್ತು ಬಟ್ಟೆಬರೆಗಳನ್ನೂ ಮುತ್ತಿದರೆ ಈ ರೀತಿ ಇಂಗಿನ ನೀರನ್ನು ಚೆಲ್ಲಿದರೆ ಗೆಜ್ಜಲು ಹುಳುಗಳು ಓಡಿಹೋಗುವದೇನೋ ಖಂಡಿತ. ಆದರೆ ಇಂಗಿನ ವಾಸನೆಯನ್ನು ಸಹಿಸಲಸಾಧ್ಯವಾಗುವುದು. ಇಂತಹ ಸಂದರ್ಭಗಳಲ್ಲಿ ಇಂಗಿಗೆ ಬದಲಾಗಿ ಉಗನಿಹಂಬಿನ ಬೇರನ್ನು ಚೆನ್ನಾಗಿ ಪುಡಿಮಾಡಿ ಗೆಜ್ಜಲು ಮುತ್ತತಕ್ಕ ಸ್ಥಳಗಳಲ್ಲಿ ಎರಚಿದರೆ ಗೆಜ್ಜಲು ಹುಳುಗಳೆಲ್ಲ ಓಡಿಹೋಗುವುವು. ಅಲ್ಲದೆ ಈ ಬೇರಿನ ಪುಡಿಯ ಬಹಳ ಗಟ್ಟಿಯಾದ ಕಷಾಯವನ್ನು ಹುಳುಗಳ ಮೇಲೆ ಚೆಲ್ಲಿದರೆ ಅವುಗಳು ತತ್‌ಕ್ಷಣವೇ ಸತ್ತು ಹೋಗುವುವು.

ಸರ್ಪದಷ್ಟಕ್ಕೌಷಧವು.

ಹಾವುಗಳಲ್ಲಿ ನಾಗರಹಾವು ಅತಿ ಕ್ರೂರವಾದುದೆಂಬುದೂ, ಇತರ ಹಾವುಗಳ ಹಾಗಲ್ಲದೆ ಅದು ಕಚ್ಚಿದ ಒಂದೆರಡು ಗಂಟೆಗಳ ಕಾಲದಲ್ಲೇ ವಿಷವು ಸರ್ವಾಂಗಕ್ಕೂ ವ್ಯಾಪಿಸಿ ಮೃತಿಯನ್ನುಂಟುಮಾಡುತ್ತಿರುವುದೂ ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಇಂತಹ ಹಾವು ಕಚ್ಚಿದುದಕ್ಕೆ ಅನೇಕರಿಗೆ ಸರಿಯಾದ ಔಷಧವು ತಿಳಿಯದೆಯೂ, ಅಥವಾ ತಿಳಿದವರು ಅದನ್ನು ಗೋಪ್ಯಪಡಿಸುವುದರಿಂದಲೂ ದೂರದಲ್ಲಿರತಕ್ಕವರು ಅಂತಹವರನ್ನು ಆಶ್ರಯಿಸಿ ಅವರಿಂದ ಔಷಧವನ್ನು ತೆಗೆದುಕೊಂಡು ಹೋಗಿ ಕೊಡುವುದರೊಳಗೆ ಕಾಲಾತೀತವಾಗಿ ಮೃತ್ಯುವಿನ ಪಾಲಾಗುತ್ತಿರುವುದು ಅನೇಕರಿಗೆ ಗೊತ್ತಿದೆ.

ಇಂತಹ ಕ್ರೂರ ಜಂತುವಿನ ವಿಷಪರಿಹಾರವನ್ನು ಒಂದು ಕಾಸಿನ ವೆಚ್ಚವೂ ಇಲ್ಲದೆ ಮಾಡಿಕೊಳ್ಳಬಹುದಾಗಿದೆ. ಹಿಂದೊಂದು ಸಮಯದಲ್ಲಿ ಒಂದು ದೊಡ್ಡ ನಾಗರಹಾವಿಗೂ, ಒಂದು ಮುಂಗಸಿಗೂ ಕದಿದಾಟವಾದ ವೇಳೆಯಲ್ಲಿ ನಾಗರಹಾವಿನಿಂದ ಪಡೆದ ವಿಷಪರಿಹಾರಕ್ಕೆ ಮುಂಗಸಿಯು ತಿಂದಂತಹ ಮೂಲಿಕೆಯು ಇದುವರೆಗೆ ೫೦೦-೬೦೦ ಜನರಿಗೆ ಉಪಯೋಗಿಸಲ್ಪಟ್ಟುದರಲ್ಲಿ ವಾಸ್ತವ್ಯವಾಗಿ ಗುಣವು ಕಂಡುಬಂದಿದೆ. ಇದನ್ನು ತಿನ್ನಿಸುವುದರಿಂದ ವಾಂತಿ ಮೊದಲಾದುದು ಆಗುವುದಿಲ್ಲ. ಇಂತಹ ವಿಶೇಷಗುಣವುಳ್ಳ ವಸ್ತುವು "ಕಾರೆಗಿಡ" ಎಂಬುದೇ. ಇದು ಎಲ್ಲೆಲ್ಲೂ ಸಿಕ್ಕತಕ್ಕ ಪದಾರ್ಥವಾಗಿದೆ. ಇದು ಮುಳ್ಳಿನಗಿಡ; ಹಣ್ಣು ಬಿಡುತ್ತದೆ. ಇದನ್ನು ತಿನ್ನಬಹುದು. ಇದರ ಬೇರು, ತೊಗಟೆ, ಎಲೆ, ಇವುಗಳಲ್ಲಿ ಯಾವುದನ್ನು ಬೇಕಾದರೂ ಉಪಯೋಗಿಸಬಹುದು. ಎಲೆ ಮೊದಲಾದುದು ಆ ಕ್ಷಣದಲ್ಲಿ ಸಿಕ್ಕುವುದು ಪ್ರಯಾಸವಾದುದರಿಂದ, ಇದರ ಬೇರನ್ನು ತಂದಿಟ್ಟುಕೊಂಡಿದ್ದರೆ ಬಹಳ ಉತ್ತಮವು. ಬೇರನ್ನು ನೀರಿನಲ್ಲಿ ತೇದು ಗಂಧ ತೆಗೆದು ಒಂದು ಪಾವಲಿ ಅಥವಾ ಅದಕ್ಕೆ ಸ್ವಲ್ಪ ಹೆಚ್ಚಾದ ತೂಕದಷ್ಟು ತಿನ್ನಿಸಬೇಕಲ್ಲದೆ ಕಡಿದ ಸ್ಥಳಕ್ಕೆ ಕೊಂಚ ಲೇಪವನ್ನೂ ಮಾಡಬೇಕು. ಇದು ತುಚ್ಛವಾದುದೆಂದೆಣಿಸದೆ ತಮ್ಮ ವಾಚಕರು ಉಪಯೋಗಿಸಿ ಇದರ ಗುಣವನ್ನು ತಿಳಿದುಕೊಳ್ಳಬೇಕಾಗಿದೆ. ಮೇಲೆ ಕಂಡ ಗಂಧವನ್ನು ಕೊಂಚ ಹೆಚ್ಚಾಗಿ ತಿನ್ನಿಸುವುದರಿಂದ ಗುಣವೇ ಹೊರತು ಶರೀರಕ್ಕೆ ಯಾವ ಅಪಾಯವೂ ಸಂಭವಿಸಲಾರದು. ಇದನ್ನು ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಪ್ರಚುರಪಡಿಸುವುದರ ಮೂಲಕ ಸರ್ವರಿಗೂ ತಿಳಿದು ತಮ್ಮಿಂದ ಲೋಕೋಪಕಾರವಾಗುವುದೆಂದು ನಂಬಿರುತ್ತೇನೆ.

ಬೆಳಗರಹಳ್ಳಿ ನರಸಿಂಗರಾವ್, ಚೆನ್ನಪಟ್ಟಣ.

ಮೈಸೂರ್ ಗೆಜೆಟಿ ಸಂಗ್ರಹವು.

ರೆವಿನ್ಯೂಕಮಿಷನರಾಫೀಸಿಗೆ ಸೇರಿದ ಅ॥ ಕಮಿಷನರ್ ಮ॥ ಕೆ. ವಿ. ಅನಂತರಾಮರ್, ಬಿ. ಎ, ಯವರಿಗೆ ಕ್ರಿಸ್ತಮಸ್ ರಜದೊಡನೆ ೧೪ ದಿವಸಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ಚಿತ್ರಕಲ್ ದುರ್ಗದ ಡಿ॥ ಟ್ರಿಜರಿ ಅ॥ ಕಮಿಷನರ್ ಮ॥ ಆರ್. ನಾರಾಯಣಸ್ವಾಮಿರಾಯರಿಗೆ ಕ್ರಿಸ್ತಮಸ್ ಮತ್ತೂ ಹೊಸವರ್ಷದ ರಜವೊಡನೆ ೧೯೧೧ ನೆಯ ನವೆಂಬರ್ ತಾ॥ ೨೭ ರಿಂದ ೧ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವ ಪ್ರಯುಕ್ತ, ಈ ರಜಾಕಾಲದಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೆ ಚಿತ್ರಕಲ್‌ದುರ್ಗ ಡಿ॥ ಪ್ರ॥ ಅ॥ ಕಮಿಷನರ್ ಮ॥ ಟಿ. ಜಿ. ರಾಮಯ್ಯಂಗಾರ್‌ರವರು ಡಿ॥ ಟ್ರಿಜರಿ ಛಾರ್ಜಿನಲ್ಲಿರತಕ್ಕದು.

ಮೈಸೂರ ಸಿಟಿ ಮ್ಯುನಿಸಿಪಾಲಿಟಿ ಹೆಲ್ತಾಫೀಸರ್ ಮ॥ ವಿ. ಎಲ್. ಮಾಂಕರ್‌ರವರಿಗೆ ೧೯೧೧ ನೆಯ ನವೆಂಬರ್ ತಾ॥ ೯ ರಿಂದ ಅಥವಾ ಅನಂತರ ಉಪಯೋಗಿಸಿಕೊಳ್ಳುವ ತಾ॥ ನಿಂದ ೧ ತಿಂಗಳು ಮತ್ತೂ ೨೦ ದಿನಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವ ಪ್ರಯುಕ್ತ, ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮೈಸೂರ ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಮ॥ ಜೆ. ವಿ. ಕರ್ವಿ, ಎಂ. ಬಿ. ಸಿ. ಎಂ., ರವರು ಹೆಲ್ತಾಫೀಸರರಾಗಿ ಬದಲು ನೋಡತಕ್ಕದು.

ಮ॥ ಎಚ್. ರೂಬೆರರವರು ಆಕ್ಟಿಂಗ್ ಪೋಲೀಸು ಸೂಪರಿಂಟೆಂಡೆಂಟರಾಗಿರುವವರೆಗೆ ಕಡೂರ ಡಿ॥ ಡೆ॥ ಕಮಿಷನರಾಫೀಸು ಡಿ॥ ಶಿರಸ್ತೇದಾರ್ ಮ॥ ಬಿ. ಎಂ. ವೆಂಕಟೇಶಯ್ಯನವರು ಮೂಡಗೆರೆ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ ೨ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಅಮಲ್ದಾರ್ ಮ॥ ಬಿ. ಟಿ. ಸೀತಾರಾಮಯ್ಯನವರು ಹೊಳೇನರಸೀಪುರದಿಂದ ಅರಸೀಕೆರೆ ತಾ॥ ಗೂ, ಅ॥ ಅಮಲ್ದಾರ್ ಮ॥ ಆರ್. ತಿರುನಾರಣಯ್ಯಂಗಾರರು ಅರಸೀಕೆರೆಯಿಂದ ಹೊಳೇನರಸೀಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಹಾಸನ ಡಿ॥ ರೆವಿನ್ಯೂ ಶಾಖೆಯ ಅ॥ ಕಮಿಷನರ್ ಮ॥ ಸಿ. ದೇವರಾಜ ಅರಸಿನವರು ಪೋಲೀಸು ಶಾಖೆಗೆ ವರ್ಗಾಯಿಸಲ್ಪಟ್ಟು ತುಮಕೂರ ಡಿ॥ ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

೧೯೧೧ ನೆಯ ಅಕ್ಟೋಬರ್ ತಾ॥ ೨೦ ರ ಪೂರ್ವಾಹ್ನದಲ್ಲಿ ಮ॥ ಸಿ. ಶ್ರೀಕಂಠೇಶ್ವರಯ್ಯರ್‌ರವರು ಮ॥ ಪಿ. ಎಚ್. ಬೌರಿಂಗ್‌ರವರಿಂದ ಕೋಲಾರದ ಡಿ॥ ಡೆ॥ ಕಮಿಷನರ ಅಧಿಕಾರವನ್ನು ವಹಿಸಿಕೊಂಡರು.

ಮೈಸೂರ್ ಸ್ಟಾರ್

೧೯೧೧ ನೆಯ ನವಂಬರ್ ತಾ॥ ೧೩ನೆಯ ಸೋಮವಾರ

ಧಾರವಾಡದ ಕರ್ನಾಟಕ ವೃತ್ತಪತ್ರಿಕೆಯ ಅಸೂಯಾಂಧತೆಯು.

(ಭಾಗ ೨.)

ಬಾಗಲಕೋಟೆಯಲ್ಲಿ ವೀರಶೈವರ ಗುರುಗಳ ಅಡ್ಡಪಾಲಕಿಯುತ್ಸವದ ಸಂಬಂಧವಾಗಿ ನಡೆದ ಗೊಂದಲವು ಧಾರವಾಡದ ಕರ್ನಾಟಕ ವೃ॥, ಪೂನಾದ ಕೇಸರಿ ಮೊದಲಾದ ಪತ್ರಿಕೆಗಳಲ್ಲಿ ಉತ್ಪ್ರೇಕ್ಷಿಸಿ ಹೇಳಲ್ಪಟ್ಟಿರುವಂತೆ ಭೀಕರವಾಗಿರದೆ ಬಹು ಸಾಮಾನ್ಯವಾಗಿದ್ದಿತೆಂತಲೂ, ಈ ಸಾಮಾನ್ಯವಾದ ಗೊಂದಲವು ಸಹ ವೀರಶೈವರ ಗುರುಗಳು ಅಡ್ಡಪಾಲಕಿಯಲ್ಲಿ ಕುಳಿತು ಉತ್ಸವಗೊಳ್ಳುವುದನ್ನು ಸಹಿಸದೆ ಯಾವ ಪ್ರಕಾರದಿಂದಲಾದರೂ ಅದಕ್ಕೆ ವಿಘ್ನವನ್ನಾಚರಿಸಬೇಕೆಂದು ಬದ್ಧಕಂಕಣರಾಗಿರುವ ಕೆಲಬ್ರಾಹ್ಮಣರಿಂದಲೇ ನಡೆಯಿಸಲ್ಪಟ್ಟು, "ಅನೇಕ ಬ್ರಾಹ್ಮಣರನ್ನು ಪ್ರಹರಿಸಿ, ಅವರ ಮನೆಮಾಡಗಳಮೇಲೆ ಕಲ್ಲುಗಳನ್ನೆಸೆದು ಕೆಲ ವಿಗ್ರಹಗಳನ್ನು ನಾಶಮಾಡಿಸಿದರು" ಎಂಬಪವಾದವನ್ನು ರಾಜಭಕ್ತಿನಿಷ್ಠರಾದ ವೀರಶೈವರ ಮೇಲೆ ಹೊರಿಸಿ ಭರತಖಂಡದ ಸಮಸ್ತ ಪ್ರಜೆಗಳನ್ನೂ ಜಾತಿತಾರತಮ್ಯವಿಲ್ಲದೆ ಪುತ್ರನಿರ್ವಿಶೇಷವಾಗಿ ಪಾಲಿಸುತ್ತಿರುವ ಬ್ರಿಟಿಷ್ ಸರ್ಕಾರದ ಕೋಪಕ್ಕೆ ವೀರಶೈವರು ಪಾತ್ರರಾಗುವಂತೆ ಮಾಡಿದ ಕುಟಿಲಪ್ರಯತ್ನವೇ ಹೊರತು, ಬಾಗಲಕೋಟೆಯ ವೀರಶೈವರು ನ್ಯಾಯಮಾರ್ಗವನ್ನು ಬಿಟ್ಟು ಎಷ್ಟುಮಾತ್ರಕ್ಕೂ ನಡೆದವರಲ್ಲವೆಂತಲೂ ಕಳೆದ ಎಂಟುವಾರದ ಈ ಪತ್ರಿಕೆಯಲ್ಲಿ ಸಕಾರಣವಾಗಿ ಪ್ರತಿಪಾದಿಸಲ್ಪಟ್ಟಿರುವುದಷ್ಟೆ. ಈಗ ಈ ಗೊಂದಲದ ವಿಚಾರದಲ್ಲಿ ಬೊಂಬಾಯಿ ಸರ್ಕಾರದವರು ಪ್ರಕಟಮಾಡಿರುವ ಅಭಿಪ್ರಾಯವನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಇಲ್ಲಿ ಕೊಟ್ಟಿರುತ್ತೇವೆ:—

AN EXAGGERATED REPORT.

BOMBAY, *8th Nov.*—In connection with the slight disturbance which occurred at Bagalkot, in the Bijapur District, on the 12th September last, a Press note issued by the Government says:—

The Governor in Council regrets it has been gravely exaggerated in some of the vernacular newspapers. It has been asserted that the Lingayats paraded Vyasantol, defiled the Vithobas temple, carried, in spite of the District Magistrate's express prohibition, their Swami's palanquin cross-wise through Bagalkot and committed on Brahmin residents numerous and unprovoked assaults. From the reports of the local authorities, the Governor in Council is satisfied that Vyasantol was not paraded and the temple not defiled. The Brahmin Swami is always carried through Bagalkot in a cross-wise palanquin, and there is no reason why this privilege should be reserved for one community. The few individuals who did receive injuries seemed to have provoked them by wantonly meddling with the lawful procession. Complaints have been lodged and will in due course be dealt with by the authorities.

ಇದರಭಿಪ್ರಾಯವು.

ಬಾಗಲಕೋಟೆಯಲ್ಲಿ ಲಿಂಗಾಯತರು ಸರ್ಕಾರಿಯ ಕಟ್ಟಪ್ಪಣೆಯನ್ನುಲ್ಲಂಘಿಸಿ, ತಮ್ಮ ಗುರುಗಳ ಅಡ್ಡಪಾಲಕಿಯುತ್ಸವವನ್ನೂ, ವ್ಯಾಸನ ತೋಳನ್ನೂ ಬಾಗಲಕೋಟೆಯಲ್ಲಿ ಮೆರೆಯಿಸಿ, ಬ್ರಾಹ್ಮಣ ನಿವಾಸಿಗಳಮೇಲೆ ಅನೇಕ ಅತ್ಯಾಚಾರವನ್ನು ನಡೆಯಿಸಿದುದಲ್ಲದೆ, ವಿಠೋಬನ ದೇವಸ್ಥಾನವನ್ನು ಅಪವಿತ್ರವನ್ನಾಗಿ ಮಾಡಿದರೆಂದು ಕೆಲ ದೇಶೀಯ ವೃತ್ತಪತ್ರಿಕೆಗಳು ವಿಪರೀತವಾಗಿ ಉತ್ಪ್ರೇಕ್ಷಿಸಿ ಬರೆದಿರುವುದಕ್ಕಾಗಿ ಗವರ್ನರವರು ಮತ್ತು ಕೌನ್ಸಿಲರುಗಳು ವಿಷಾದಿಸುತ್ತಾರೆ. ಆದರೆ ವ್ಯಾಸನತೋಳು ಮೆರೆಯಿಸಲ್ಪಡಲಿಲ್ಲವೆಂದೂ ದೇವಸ್ಥಾನವು ಅಪರಿಶುದ್ಧಮಾಡಲ್ಪಡಲಿಲ್ಲವೆಂದೂ ಸ್ಥಳೀಯಾಧಿಕಾರಿಗಳ ವರದಿಯಿಂದ ತಿಳಿದು ಅವರ ಮನಸ್ಸಿಗೆ ಸಮಾಧಾನವಾಗಿರುತ್ತದೆ. ಬ್ರಾಹ್ಮಣ ಗುರುಗಳು ಬಾಗಲಕೋಟೆಯಲ್ಲಿ ಯಾವಾಗಲೂ ಅಡ್ಡಪಾಲಕಿಯಲ್ಲಿ ಮೆರೆಯಿಸಲ್ಪಡುವರು. ಆದರೆ ಈ ರೀತಿಯಾಗಿ ಮೆರೆಯುವ ಹಕ್ಕು ಒಂದು ಜಾತಿಯವರಿಗೆಮಾತ್ರ ಇರಬೇಕೆನ್ನುವುದಕ್ಕೆ ಕಾರಣವಿಲ್ಲವು. ಪೆಟ್ಟನ್ನು ತಿಂದ ಕೆಲರು, ನ್ಯಾಯಬದ್ಧರಾದ ಉತ್ಸವವನ್ನು ನಡೆಯಿಸುತ್ತಿದ್ದ ಜನರನ್ನು ಉದ್ದೇಶಪೂರ್ವಕದಿಂದ ಕೆಣಕಿರುವುದಾಗಿ ಗೊತ್ತಾಗುತ್ತದೆ. ಈ ವಿಚಾರದಲ್ಲಿ ಬಂದಿರುವ ದೂರುಗಳು ಸರ್ಕಾರದವರಿಂದ ಸಕಾಲದಲ್ಲಿ ಬಗೆಹರಿಸಲ್ಪಡುವುವು.

ವೀರಶೈವರ ಮೇಲಣ ಅಸೂಯೆಯೆಂಬ ಸನ್ನಿಪಾತರೋಗದಿಂದ ಗ್ರಸ್ತವಾಗಿ ಅಂಧತೆಯನ್ನೂ, ಬುದ್ಧಿಭ್ರಾಂತಿಯನ್ನೂ ಹೊಂದಿ ಅಪ್ರಾಮಾಣಿಕ ಜನರ ಲೇಖನದ ಆಧಾರದಮೇಲೆ ಬಾಗಲಕೋಟೆಯ ವೀರಶೈವರನ್ನು ವಾಚಾಮಗೋಚರವಾಗಿ ದೂಷಿಸಿ, ಅವರ ನಿರ್ದುಷ್ಟ ವರ್ತನಕ್ಕೆ ಕಳಂಕವನ್ನು ತರಲು ಭಗೀರಥ ಪ್ರಯತ್ನವನ್ನು ಮಾಡುತ್ತಿರುವ ಕರ್ನಾಟಕ ವೃತ್ತಪತ್ರಿಕೆಯು, ಬಾಗಲಕೋಟೆಯ ಗೊಂದಲದ ನಿಜಸ್ಥಿತಿಯ ವಿಚಾರವಾಗಿ ಸರ್ಕಾರದವರು ಪ್ರಕಟಿಸಿರುವುದನ್ನು ನೋಡಿದಮೇಲಾದರೂ, ಸ್ಟಾರ್ ಪತ್ರಿಕೆಯು ಸುಳ್ಳು ಸುದ್ದಿಯನ್ನು ಬರೆಯಲು ಕೈಹಾಕಿ ಸಂಕ್ಷೇಪದಲ್ಲಿ ಮುಗಿಸಿ ಮೂಗು ಬಾಯನ್ನು ಮುಚ್ಚಿಕೊಂಡು ಕುಳಿತಿರುವುದೆಂದು ತಾನು ಮೊದಲು ವಿವೇಕಶೂನ್ಯವಾಗಿ ಬರೆದಿರುವುದನ್ನೇ ಸಾಧಿಸುವುದೋ, ಅಥವಾ ತನ್ನ ಜನ್ಮಸಿದ್ಧವಾಗಿ ಪ್ರಾಪ್ತವಾಗಿರುವ ವಿಕಾರಬುದ್ಧಿಯಿಂದ ತಾನು ಹಿಂದೆ ಬರೆದ ವಿಚಾರಕ್ಕೆ ವ್ಯತಿರಿಕ್ತವಾದ ಲೇಖನಗಳಿಗಾಗಿ ತಾನೇ ಮೂಗುಬಾಯನ್ನು ಮುಚ್ಚಿಕೊಂಡು "ನನ್ನನ್ನೇಕೆಹುಟ್ಟಿಸಿದೆಯೋ ಬೊಮ್ಮನ್ನಪ್ಪ?" ಎಂದು ಕುಳಿತುಕೊಳ್ಳುವ ಸ್ಥಿತಿಯು ಪ್ರಾಪ್ತವಾದುದಕ್ಕೋಸ್ಕರ ಚಿಂತಿಸುವುದೋ ನೋಡಬೇಕಾಗಿದೆ. ಈ ವೃತ್ತಪತ್ರಿಕೆಯು ಈ ಗೊಂದಲದ ವಿಚಾರವನ್ನು ಕುರಿತು ಪ್ರಸ್ತಾಪಿಸುವಾಗ್ಗೆ ವೀರಶೈವ ಮಹಾಸಭೆಗಳಿಗೆ ಬ್ರಾಹ್ಮಣರನ್ನು ಪ್ರವೇಶಿಸಗೊಡಿಸದಿರುವುದೂ, ಲಿಂಗವಿಲ್ಲದವನನ್ನು ಮುಟ್ಟಿಸಿಕೊಳ್ಳಕೂಡದೆಂತಲೂ, ಅಂತಹವನಿಂದ ಸಿದ್ಧವಾದ ಒಡವೆಗಳನ್ನು ಮುಟ್ಟಕೂಡದೆಂತಲೂ ಇವೇ ಮೊದಲಾಗಿ ಮಹಾಸಭೆಗಳ ಅಧ್ಯಕ್ಷರಾದವರು ವ್ಯಾಖ್ಯಾನಗಳನ್ನು ಕೊಡುವುದು ತುಂಬಾ ಅಯೋಗ್ಯವೆಂದೂ ಹೇಳಿರುತ್ತದೆ. ಮಹಾಸಭೆಯ ಅಧ್ಯಕ್ಷರ ಭಾಷಣವಾಗುವಾಗ್ಗೆ ಪರಮತೀಯರು ಬರಮಾಡಲ್ಪಟ್ಟು ಮಾರನೆಯ ದಿವದಿಂದ ಮತಧರ್ಮಸಿದ್ಧಾಂತ ವಿಚಾರವಾದ ಚರ್ಚೆಗಳು ನಡೆಯುವುದರಿಂದ ಪರಮತೀಯರು ಬರಮಾಡಲ್ಪಡುವುದಿಲ್ಲವು. ಹಾಗೆ ಅದು ನಮ್ಮ ಬಂಧುವು ಹೇಳುವ ಪ್ರಕಾರ ತಪ್ಪಾಗುವ ಪಕ್ಷದಲ್ಲಿ, ಬ್ರಾಹ್ಮಣರು ತಮ್ಮ ಮತ ವಿಚಾರವಾಗಿ ಸಭೆ ಸೇರಿರುವಾಗ್ಗೆ, ಇತರ ಮತೀಯರನ್ನು ಬರಮಾಡದಿರುವುದೂ ತಪ್ಪಾಗಬೇಕಾಯಿತಲ್ಲವೆ? ನಮ್ಮ ವೃತ್ತಪತ್ರಿಕಾಕರ್ತರು ತಮ್ಮಲ್ಲಿ ತಪ್ಪನ್ನು ಇಟ್ಟುಕೊಂಡು ಇತರರನ್ನು ದೂಷಿಸುವುದು, ಗುಲಗಂಜಿಯು ತನ್ನಲ್ಲಿರುವ ಕಪ್ಪನ್ನು ಕಾಣದೆ ಇತರರನ್ನು ಮೂದಲಿಸುವಂತಿರುವುದು. ಮೈಸೂರ ಸರ್ಕಾರದವರು ತಮ್ಮ ದೇಶದ ಸಂಪದಭಿವೃದ್ಧಿಯನ್ನು ಕುರಿತು ಆಲೋಚಿಸಲು ಏರ್ಪಡಿಸಿರುವ ಸಭೆಗೇ ಅದರ ಸಭಾಸದರ ವಿನಾ ವೃತ್ತಪತ್ರಿಕೆಗಳ ಪ್ರತಿನಿಧಿಗಳಾದಿಯಾಗಿ ಇತರರಾರೂ ಬರಗೊಡಲ್ಪಡದಿರುವಾಗ್ಗೆ ಇನ್ನು ವೀರಶೈವರು ತಮ್ಮ ಮತಸಂಬಂಧವಾಗಿ ಆಲೋಚಿಸುವ ಸಭೆಗೆ ಪರಮತೀಯರನ್ನು ಬರಮಾಡದಿರುವುದು ಆಕ್ಷೇಪಕರವೆಂದು ಹೇಳುವುದು, "ವೀರಶೈವರಲ್ಲಿ ಏನಾದರೊಂದು ದೋಷವನ್ನು ಕಲ್ಪಿಸಿ ಅವರನ್ನು ದೂಷಿಸುವುದಕ್ಕೊಂದು ನೆಪವಾಗಿರುವುದೆಂಬರ್ಥವು" ಸ್ಪಷ್ಟವಾಗುತ್ತದೆ. ಲಿಂಗವಿಲ್ಲದವರನ್ನೂ, ಅವರಿಂದಾದ ಪದಾರ್ಥಗಳನ್ನೂ ಲಿಂಗಾಯತರು ಮುಟ್ಟಕೂಡದೆಂದು ಸಭಾಧ್ಯಕ್ಷರು ಭಾಷಣಮಾಡುವರೆಂದು ಹೇಳುವ ಮಾತು ಬರಿ ಸುಳ್ಳು. ಸಭಾಧ್ಯಕ್ಷರು ಈವರೆಗೆ ಆ ರೀತಿ ಹೇಳಿಲ್ಲವು. ಒಂದು ವೇಳೆ ಹಾಗೆ ಹೇಳಿದರೂ ಅದು ಅಯೋಗ್ಯವಾಗುವುದಿಲ್ಲವು. ಏಕೆಂದರೆ— ಆಚಾರನಿಷ್ಠನಾದ ವೀರಶೈವನು ಲಿಂಗವಿಲ್ಲದ ಭವಿಯ ದರ್ಶನ ಸ್ಪರ್ಶನವನ್ನು ಮಾಡಕೂಡದೆಂದೂ, ಅವನಿಂದ ಮಾಡಲ್ಪಟ್ಟ ಪದಾರ್ಥಗಳನ್ನು ಸ್ವೀಕರಿಸಕೂಡದೆಂದೂ ವೀರಶೈವ ಮತದ ಧರ್ಮಗ್ರಂಥಗಳಲ್ಲಿ ಪ್ರತಿಪಾದಿತವಾಗಿರುತ್ತದೆ. ಹೀಗೆ ಒಂದು ಮತಧರ್ಮಸ್ವರೂಪವನ್ನು ತಿಳಿಯದೆ, ಆ ಮತದ ನಡವಳಿಕೆಯು ಅಯೋಗ್ಯವೆಂದು ಹೇಳುವುದಾದರೆ, ಕೆಲ ನಿಷ್ಠರಾದಬ್ರಾಹ್ಮಣರು ಅಂಗಡಿಯಲ್ಲಿ ಮಾರುವ ದಾರವನ್ನು ತಂದು ತಮ್ಮ ಯಜ್ಞೋಪವೀತಕ್ಕೆ ಹಾಕಿಕೊಳ್ಳದೆ, ತಾವೇ ಸ್ವತಃ ಹತ್ತಿಯನ್ನು ತಂದು ಅರಳೆಯನ್ನು ಮಾಡಿ ಅದನ್ನು ಹೊಸೆದು ಯಜ್ಞೋಪವೀತಕ್ಕುಪಯೋಗಿಸಿಕೊಳ್ಳುವುದೂ ಅಯೋಗ್ಯವಾಗಬೇಕಾಯಿತು. ವೀರಶೈವಮತದಲ್ಲಿ ಎಲ್ಲವೃತ್ತಿಯ ಜನರೂ ಇರುವುದರಿಂದ ಅವರುಗಳವೃತ್ತಿಗೆ ಉತ್ತೇಜನವನ್ನು ಕೊಡುವುದಕ್ಕಾಗಿಯೂ, ಪರಸ್ಪರ ಸಹಾಯ ಸಹಾನುಭೂತಿಯನ್ನುಂಟುಮಾಡುವುದಕ್ಕಾಗಿಯೂ ಅವರಲ್ಲರೂ ಅಲಿಂಗಿಗಳಿಂದ ಮಾಡಿದ ಪದಾರ್ಥಗಳನ್ನು ಸ್ವೀಕರಿಸಕೂಡದೆಂದು ಕಟ್ಟುಮಾಡಲ್ಪಟ್ಟದಾಗಿದೆ. ಬಂಗಾಳ ವಿಭಜನದಿಂದ ಜನರು ಕ್ಷುಬ್ಧರಾಗಿ ಅನ್ಯದೇಶ ಪದಾರ್ಥಗಳನ್ನು ಬಹಿಷ್ಕರಿಸಿ ಸ್ವದೇಶ ಪದಾರ್ಥಗಳನ್ನು ಸ್ವೀಕರಿಸಬೇಕೆಂದು ಕಟ್ಟು ಮಾಡಿಕೊಂಡರು. ಇದರಿಂದ ಸ್ವದೇಶದ ಕೈಗಾರಿಕೆಯ ಜನರ ಜೀವನೋಪಾಯಕ್ಕೆ ಸಹಾಯವಾಗಿರುವುದು. ಇಂತಹ ಕಟ್ಟನ್ನು ವೀರಶೈವ ಮತೋದ್ಧಾರಕರು ಯಾರಪ್ರೇರಣೆಯೂ ಇಲ್ಲದೆ ತಮ್ಮ ಮತವು ಊರ್ಜಿತಮೂಲವಾಗಿರಬೇಕೆಂಬ ದೂರಾಲೋಚನೆಯಿಂದ ಸಾವಿರಾರು ವರ್ಷಗಳ ಹಿಂದೆಯೇ ಮಾಡಿರುವರು. ಇದಕ್ಕಾಗಿ ಅವರನ್ನು ವಂದಿಸದೆ ವೃತ್ತಪತ್ರಿಕೆಯಂತೆ ಆಕ್ಷೇಪಿಸುವುದಾದರೆ, ಸ್ವದೇಶವಸ್ತುನಿರ್ಮಾಣ ಪ್ರೋತ್ಸಾಹ ಪ್ರಯತ್ನವನ್ನೂ ಆಕ್ಷೇಪಿಸಿದಂತಾಗುವುದೆಂಬುದನ್ನು ವೃತ್ತಪತ್ರಿಕಾಕರ್ತರು ತಿಳಿಯದೇಹೋದುದಕ್ಕಾಗಿ ಸಖೇದಾಶ್ಚರ್ಯಪಡಬೇಕಾಗಿದೆ.

ಈ ವೃತ್ತಪತ್ರಿಕೆಯು ವೀರಶೈವರ ಗುರುಗಳಿಗೆ ನಿರ್ವಿಘ್ನವಾಗಿ ನಡೆದುಕೊಂಡು ಬರುತ್ತಿರುವ ಅಡ್ಡಪಾಲಕಿಯ ಬಿರುದಿನ ಮರ್ಯಾದೆಯನ್ನು ನೋಡಿ ಸಹಿಸದೆ ವೀರಶೈವರನ್ನೂ, ಅವರ ಜಗದ್ಗುರುಗಳನ್ನೂ ಮನಸ್ವೀ ದೂಷಿಸಿ ಅದೂ ಸಾಲದೆ, "ಬಾಗಲಕೋಟೆಯಲ್ಲಿ ಮಾಮಲೆದಾರರಾಗಿರುವ ಮ॥ ರೇವಣಸಿದ್ಧಪ್ಪ ಕಿತ್ತೂರ ಇವರು, ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳ ಅಡ್ಡಪಾಲಕಿಯುತ್ಸವವು ಬಾಗಲಕೋಟೆಯಲ್ಲಿ ನಡೆಯಕೂಡದೆಂದು ಕಲೆಕ್ಟರಪ್ಪಣೆಯಾಗಿದ್ದಾಗ್ಯೂ ಸ್ವಮತಾಭಿಮಾನದಿಂದ ಉತ್ಸವವು ನಡೆಯುವಂತೆ ಮಾಡಿ ಅಷ್ಟೊಂದು ಗೊಂದಲಕ್ಕಾಸ್ಪದವನ್ನುಂಟುಮಾಡಿದರು" ಎಂದು ಮೊದಲಾಗಿ ದೂಷಿಸಿರುತ್ತದೆ. ಮ॥ ರೇವಣಸಿದ್ಧಪ್ಪನವರು ಅತ್ಯಂತ ಸಾಧುಸ್ವಭಾವದವರೂ ಪಾಪಭೀತರೂ, ಆಚಾರನಿಷ್ಠರೂ, ನಿಸ್ಪೃಹರೂ ನಿಷ್ಪಕ್ಷಪಾತಿಗಳೂ ಎಂದು ಹೆಸರುಗೊಂಡು ಎಲ್ಲ ಜಾತಿಯ ಜನರ ಅನುರಾಗಕ್ಕೂ ಪಾತ್ರರಾಗಿರುವರು. ಇಂತಹ ಸುಶೀಲರ ಕೀರ್ತಿಗೆ ಕಳಂಕವನ್ನು ತರಬೇಕೆಂದು ಮತದ್ವೇಷದ ಮೇಲಿಂದ ಪ್ರಯತ್ನಪಟ್ಟವರ ಮುಖಕ್ಕೆ ಬೊಂಬಾಯಿಸರ್ಕಾರದವರು ಈಗ ಪ್ರಕಟಪಡಿಸಿರುವ ಪತ್ರಿಕೆಯಿಂದ ಮಸಿಬಳಿದಂತಾಗಿರುವುದಲ್ಲದೆ, ಸೂರ್ಯನಮೇಲೆ ಉಗುಳಿದ ಜಾಣನಿಗಾದ ಫಲಪ್ರಾಪ್ತಿಯಾಗಿರುವುದು. ವೃತ್ತಪತ್ರಿಕೆಯು ಆಡಿರುವ ಪ್ರತಿಯೊಂದುಮಾತನ್ನೂ ಸಕಾರಣದಿಂದ ಖಂಡಿಸಿ ಬೇಕಾದಷ್ಟು ಲೇಖನವನ್ನು ಬರೆಯಬಹುದಾದರೂ, ಈ ಪತ್ರಿಕಾವಾಚಕರ ಮನಸ್ಸಿಗೆ ಬೇಸರವಾಗುತ್ತದೆಂಬ ಶಂಕೆಯಿಂದ, ನಮ್ಮ ಲೇಖನಿಗೆ ವಿರಾಮವನ್ನು ಕೊಡಬೇಕಾಗಿರುವುದು. "ಬ್ರಾಹ್ಮಣರಿಗೂ, ಲಿಂಗಾಯತರಿಗೂ ಮನಸ್ತಾಪವು ಹೆಚ್ಚಿ ಅವರ ಐಕಮತ್ಯಕ್ಕೆ ಭಂಗಬರಬಾರದೆಂಬುದ್ದೇಶದಿಂದ, ಬಾಗಲಕೋಟೆಯಲ್ಲಾದ ಗೊಂದಲದ ವಿಚಾರವಾಗಿ ಲೇಖನಗಳನ್ನು ಬೆಳೆಸಬೇಕಾಗಿ ಬಂದಿತು. ಈಗಲಾದರೂ ಸ್ಟ್ಯಾಂಡಿಂಗ್ ಕಮಿಟಿಯ ಸೆಕ್ರಿಟರಿಯವರಾದ ರಾ॥ ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ ಇವರು ಬಾಗಲಕೋಟೆಗೆ ಬರುವುದಾದರೆ, ನಾವೂ ಬಂದು ಲಿಂಗಾಯತ ಮತ್ತೂ ಬ್ರಾಹ್ಮಣರ ಮಧ್ಯೇ ಹುಟ್ಟಿರುವ ಮನಸ್ತಾಪವನ್ನು ಹೋಗಲಾಡಿಸ ಪ್ರಯತ್ನಿಸುವೆವು" ಎಂದು ವೃತ್ತಪತ್ರಿಕಾಕರ್ತರು ಧರ್ಮಸ್ವರೂಪವೇ ತಾವೆಂದು ಭಾವಿಸಿ, ಬಹು ಅಟ್ಟಹಾಸದಿಂದ ಬರೆದುಕೊಂಡಿರುವರು. ಬಾಗಲಕೋಟೆಯ ಗೊಂದಲಕ್ಕೆ ವೀರಶೈವರೇ ಕಾರಣರೆಂದು ಅವರನ್ನು ದೂಷಿಸಿದಂತೆ ಮುರನಾಳನಲ್ಲಿ ವೀರಶೈವರಿಗೆ ಸಹಾಯಕರಾಗಿದ್ದು ಅವರ ಗುರುಗಳ ಅಡ್ಡಪಾಲಕಿಯುತ್ಸವವನ್ನು ನಿರ್ವಿಘ್ನದಿಂದ ನಡೆಯಿಸಿದ ಬ್ರಾಹ್ಮಣರ ವರ್ತನವನ್ನು ಮೆಚ್ಚಿ ಅವರಿಗೆ ಧನ್ಯವಾದವನ್ನು ಮಾಡಿ, ಇತರ ಕಡೆಯ ಬ್ರಾಹ್ಮಣರು ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ನಡೆಯುವಂತೆ ಈ ಪತ್ರಿಕಾಕರ್ತರು ಬರೆದಿದ್ದಲ್ಲಿ, ಅವರು ನ್ಯಾಯಪಕ್ಷಪಾತಿಗಳೂ, ಸಮಾಜ ಸುಧಾರಕರೂ ಎಂದು ತಿಳಿದು ಅದಕ್ಕಾಗಿ ಅವರನ್ನು ವಂದಿಸುತ್ತಿದ್ದೆವು. ಅವರು ಹಾಗೆ ಮಾಡದೆ ವೀರಶೈವರ ಮೇಲೆ ಬ್ರಿಟಿಷ್ ಸರ್ಕಾರದವರಿಗೆ ಆಗ್ರಹವುಂಟಾಗಬೇಕೆಂಬ ಸಂಕಲ್ಪದಿಂದ ನಿಜಸ್ಥಿತಿಯನ್ನು ಮರೆಮಾಜಿ ಸುಳ್ಳನ್ನೇ ಉತ್ಪ್ರೇಕ್ಷಿಸಿ ಹೇಳಿರುವುದರಿಂದ, ಈ ಕರ್ನಾಟಕ ವೃತ್ತಪತ್ರಿಕೆಯು ವೀರಶೈವರಿಗೆ ಕೇಡನ್ನು ಆಚರಿಸುವುದಕ್ಕಾಗಿಯೇ ಅವತರಿಸಿರುವುದೆಂದು ತಾನಾಗಿ ವ್ಯಕ್ತವಾಗುತ್ತದೆ. ಇಂತಹ ಗೋಮುಖವ್ಯಾಘ್ರಸ್ವರೂಪಿಗಳನ್ನು ವೀರಶೈವರು ತಮ್ಮ ನ್ಯಾಯಮೂರ್ತಿಗಳನ್ನಾಗಿ ಮಾಡಿಕೊಂಡಲ್ಲಿ, ಅವರ ಪರಿಣಾಮವೇನಾಗಬಹುದೆಂಬುದನ್ನು ನಿಷ್ಪಕ್ಷಪಾತಿಗಳಾದ ವಾಚಕರೇ ಊಹಿಸಬಹುದಾಗಿದೆ. ಈ ಸ್ಟಾರ್ ಪತ್ರಿಕೆಯು ನಿಷ್ಪಕ್ಷಪಾತವಾಗಿಯೂ, ಯುಕ್ತಿಯುಕ್ತವಾಗಿಯೂ ಪ್ರತಿಪಾದಿಸಿರುವ ವಿಷಯವಿವೇಚನೆಯೆಂಬ ದಿವ್ಯಾಂಜನಪ್ರಯೋಗದಿಂದ ಕರ್ನಾಟಕ ವೃತ್ತಪತ್ರಿಕೆಯು ವೀರಶೈವರಮೇಲಣ ದ್ವೇಷದಿಂದ ಮುಚ್ಚಿರುವ ತನ್ನ ಕಣ್ಣನ್ನು ತೆರೆದು ವೀರಶೈವರು ತಮ್ಮ ಜಗದ್ಗುರುವನ್ನು ಅಡ್ಡಪಾಲಕಿಯಲ್ಲಿ ಕುಳ್ಳಿರಿಸಿ ಮೆರೆಯಿಸುವುದು ನಿರಾಕ್ಷೇಪವಾಗಿರುವುದರಿಂದ, ಇತರರು ಅವರ ಮರ್ಯಾದೆಗೆ ಭಂಗವನ್ನುಂಟುಮಾಡುವುದು ಯೋಗ್ಯವಾದುದಲ್ಲವೆಂದು ಬೋಧಿಸತೊಡಗಿ, ತಾನು ವೀರಶೈವರ ಹಿತಚಿಂತಕನೆಂದು ಕಪಟದಿಂದ ಹೇಳಿಕೊಂಡಿರುವ ಮಾತು ಯಥಾರ್ಥವಾಗುವಂತೆ ಮಾಡಿಕೊಳ್ಳಲೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ತಾ॥ ೧೧ ರಲ್ಲಿ ರಾಜಧಾನಿಯ ಕಮಿಷನರ್ ಸಿಪಾಯಿಗಳ ಮಹಮ್ಮದೀಯ ಸುಬೇದಾರನ ೨ ವರ್ಷದ ಒಂದು ಮಗುವು ಆಡಿಕೊಂಡಿರುವಾಗ್ಗೆ ನೀರನ್ನು ತುಂಬಿದ್ದ ಒಂದು ಬಾನೆಯೊಳಕ್ಕೆ ತನ್ನ ತಲೆಯನ್ನು ಮುಳುಗಿಸಿದ್ದರಿಂದ ನೀರನ್ನು ಕುಡಿದು ಸತ್ತುಹೋಯಿತು.

ಶ್ರೀಮದ್ಯುವರಾಜರು ರಾಣೀವಾಸದವರು, ಸೆಕ್ರೆಟರಿಗಳು ಮೊದಲಾದವರೊಡನೆ ಶ್ರೀಮನ್ಮಹಾರಾಜರವರು, ಈ ತಾ॥ ೨೩ ರಲ್ಲಿ ದಿಲ್ಲಿಗೆ ದಯಮಾಡಿಸುವುದಾಗಿಯೂ, ಮ॥ ಕಾರಭಾರಿಗಳು ಮೊದಲಾದವರು ತಾ॥ ೧೩ ರಲ್ಲಿ ಮುಂದಾಗಿ ಹೊರಡುವುದಾಗಿಯೂ ಕೇಳುತ್ತೇವೆ.

ಕಳೆದ ತಾ॥ ೧೦ರ ಸಾಯಂಕಾಲ ೬ ಗಂಟೆಯಲ್ಲಿ ರಾಜಧಾನಿಯ ವೆಸ್ಲೀಯನ್ ಮಿಷನ್ ಸ್ಕೂಲಿನ ವಿದ್ಯಾರ್ಥಿಗಳಿಗೆ ಶ್ರೀಮದ್ಯುವರಾಜರ ಹಸ್ತದಿಂದ ಪಾರಿತೋಷಕವು ದಯಪಾಲಿಸಲ್ಪಟ್ಟಿತು. ಆ ಕಾಲದಲ್ಲಿ ಯುವರಾಜರು ಮೃದುಮಧುರಯುಕ್ತವಾದ ನಾಲ್ಕು ಮಾತುಗಳನ್ನು ಆಡಿ ಸಭಿಕರಿಗಾನಂದವನ್ನುಂಟುಮಾಡಿದರು.

೧ನೆಯ ಕೌನ್ಸಿಲರ್ ಮ॥ ಕೆ. ಪಿ ಪುಟ್ಟಣ್ಣಶೆಟ್ಟರು ಈ ತಾ॥ ೧೬ರ ರಾತ್ರಿ ಪೂನಾ ಮೇಲು ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣವನ್ನು ಮಾಡಿ ಮಧ್ಯಮಾರ್ಗದಲ್ಲಿ ಪೂನಾದಲ್ಲಿಳಿದು ವ್ಯವಸಾಯ ಶಾಸ್ತ್ರ ವಿದ್ಯಾಲಯವನ್ನೂ, ಡೆಕ್ಕನ್ನಿನ ಕಾಗದದ ಕಾರ್ಖಾನೆಯನ್ನು ಪರಿಶೀಲಿಸಿಕೊಂಡು ಮುಂದಕ್ಕೆ ಹೊರಡುವವರಾಗಿರುವರೆಂದು ಕೇಳುತ್ತೇವೆ.

ಹಿಂದೆ ಈ ಸಂಸ್ಥಾನದ ದಿವಾನರಾಗಿದ್ದ ಮ॥ ವಿ ಪಿ ಮಾಧವರಾಯರು ತಮ್ಮ ಮಕ್ಕಳಾದ ಹಾಸನ ಡಿ॥ ಪೊಲೀಸು ಸೂಪರಿಂಟೆಂಡೆಂಟ್ ಮ॥ ಎ. ಬಿ. ವಿಶ್ವನಾಥರಾಯರು ಮತ್ತೂ ತಮ್ಮ ಸೋದರ ಅಳಿಯಂದಿರಾದ ಚಿತ್ರಕಲ್ ದುರ್ಗದ ಡಿ॥ ಡಿಪುಟಿ ಅಸಿಸ್ಟೆಂಟ್ ಕಮಿಷನರ್ ಮ॥ ಆರ್. ನಾರಾಯಣರಾಯರು ಇವರುಗಳ ಕೂಡ ಈ ತಾ॥ ೨೩ ರಲ್ಲಿ ದಿಲ್ಲಿಗೆ ಪ್ರಯಾಣಮಾಡಿ ಅಲ್ಲಿ ಮದ್ರಾಸ್ ಸರ್ಕಾರದ ಅತಿಥಿಗಳಾಗಿರುವರೆಂದು ತಿಳಿಯಬರುತ್ತದೆ.

ತಿರುಮಕೂಡ್ಲು ನರಸೀಪುರ ತಾ॥ ತಲಕಾಡಿನಲ್ಲಿ ಈ ಕಾರ್ತಿಕ ಬ॥ ಅಮಾವಾಸ್ಯೆಗೆ ಸರಿಹೋಗುವ ತಾ॥ ೨೦ನೆಯ ಸೋಮವಾರ ಶ್ರೀ ಪಂಚಲಿಂಗಗಳ ದರ್ಶನೋತ್ಸವವು ಜರುಗುವುದರಿಂದ ಶ್ರೀಮನ್ಮಹಾರಾಜರವರು ಪರಿವಾರ ಸಮೇತ ತಾ॥ ೨೦ರ ಬೆಳಿಗ್ಗೆ ಮೋಟಾರು ಬಂಡಿಗಳಲ್ಲಿ ತಲಕಾಡಿಗೆ ದಯಮಾಡಿಸಿ ಪಂಚಲಿಂಗಗಳ ದರ್ಶನವನ್ನು ಮಾಡಿಕೊಂಡು ಅದೇ ಸಾಯಂಕಾಲ ಹಿಂದಿರುಗುವುದಾಗಿಯೂ, ಇದೇ ಸಮಯದಲ್ಲಿ ಬೊಪ್ಪೇಗೌಡನಪುರಕ್ಕೆ ಚಿತ್ತೈಸಿ ಅಲ್ಲಿ ಮ॥ ಬಿ. ರಾಜ ಅರಸಿನವರ ಆತಿಥ್ಯವನ್ನು ಕೈಗೊಂಡು ಬರುವುದಾಗಿಯೂ ಕೇಳುತ್ತೇವೆ.

ಮಂಡ್ಯ ತಾ॥ ಮಾದನಾಯಕನ ಹಳ್ಳಿಯ ವಾರಸ್ತರಾದ ಕೃಷ್ಣಮೂರ್ತಿರಾಯರೆಂಬುವರು ಕೆಲ ದಿವಸಗಳಿಂದ ಅಸ್ವಸ್ಥರಾಗಿ ಹಾಸಿಗೆಯನ್ನು ಬಿಟ್ಟೇಳದೆ ಇರುವುದರ ಮೇಲೆ ಅವರ ಇಬ್ಬರ ಹೆಂಡರಲ್ಲಿ ಮೊದಲನೆಯವಳು ತನ್ನ ಗಂಡನ ಆಸ್ತಿಯನ್ನು ಹೇಗಾದರೂ ವಶಮಾಡಿಕೊಳ್ಳಬೇಕೆಂದು ಕುತೂಹಲಪಡುತ್ತಿದ್ದಳು. ಎರಡನೆಯ ಹೆಂಡತಿಯು ತನ್ನ ೭ ವರ್ಷ ವಯಸ್ಸಿನ ಹೆಣ್ಣುಮಗುವಿನ ಕೂಡ ಮದ್ರಾಸಿಗೆ ಹೋಗಿರುವಳು. ಆಸ್ತಿಯು ಅನ್ಯಾಕ್ರಾಂತವಾಗಿ ತನಗೆ ತಿನ್ನುವುದಕ್ಕೆ ಮಾರ್ಗವಿಲ್ಲದಂತಾಗುವುದೆಂದು ಮಕ್ಕಳಾದ ತಾಯಿಯು ಭಯಪಟ್ಟು ತನ್ನ ಮನೆಯ ಪ್ರಕೃತಸ್ಥಿತಿಯನ್ನು ಬಂಧುಗಳಿಗೆ ತಿಳುಹಿದಳು. ಅದರ ಮೇಲೆ ಆ ಕೃಷ್ಣಮೂರ್ತಿರಾಯರ ಸಮೀಪಬಂಧುಗಳು ಪದಾರ್ಥಗಳು ಪಲಾಯನವಾಗುವ ಸಂದರ್ಭವನ್ನು ತಿಳಿದುದರ ಮೇಲೆ ಪೊಲೀಸರು ಅನುಮಾನದಿಂದ ಅದೇ ಹಳ್ಳಿಯಲ್ಲಿರುವ ಗಾಣಿಗರ ನರಸನ ಮನೆಯನ್ನು ಶೋಧಿಸುವಾಗ್ಗೆ ಅವನ ಹಿತ್ತಲಿನಲ್ಲಿ ಹೂಳಲ್ಪಟ್ಟಿದ್ದ ೨೦೦೦ ರೂ. ಬೆಲೆಬಾಳುವ ಆಭರಣಗಳು ದೊರೆದುವು, ಮತ್ತೂ ಕೆಲ ನೋಟುಗಳು ಮದ್ದೂರಿನ ಸಬ್ ಪೋಸ್ಟ್‌ಮಾಸ್ಟರ ವಶದಲ್ಲಿರುವುದು ಗೊತ್ತಾಯಿತು. ಮೊದಲನೆಯ ಹೆಂಡತಿಯ ತಮ್ಮನಾದ ಹಳ್ಳಿಗಳಿಗೆ ಕಾಗದವನ್ನು ಕೊಡುವ ಕೆಲಸದಲ್ಲಿರುವ ಗೋವಿಂದರಾಯನೆಂಬವನನ್ನು ಪೊಲೀಸರು ಸೆರೆಯಲ್ಲಿಟ್ಟು ಉಳಿದ ಪದಾರ್ಥಗಳನ್ನು ತಡಕುತ್ತಿರುವರು.

ರಾಜಧಾನಿಯ ಸಂತೇಪೇಟೆಯಲ್ಲಿರುವ ಮ॥ ಗಳಾದ ಶ್ರೀಮಂತ ನೀಲಗಿರಿ ಮುದ್ದಣ್ಣನವರು, ಜಿ. ಕೆ. ನರಸಿಂಹಯ್ಯನವರು, ಜೋಡಿ ಮಲ್ಲಣ್ಣನವರು ಮೊದಲಾದ ವರ್ತಕ ಮಹಾಶಯರು ಬೊಮ್ಮಯ್ಯನವರ ಸತ್ರದಲ್ಲಿ ಕಳೆದ ೪-೬ ತಿಂಗಳಿಂದಲೂ ಮ॥ ಗಳಾದ ದೇವನ ನರಸಿಂಹಶಾಸ್ತ್ರಿಗಳು ಮತ್ತೂ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳು ಇವರಿಂದ ಪುರಾಣಶ್ರವಣವನ್ನು ಮಾಡಿಸುತ್ತಿರುವರು. ಕಳೆದ ತಾ॥ ೯ ರ ಸಾಯಂಕಾಲದಲ್ಲಿ ಸರದಾರರುಗಳಾದ ಕಾಂತರಾಜ ಅರಸಿನವರು, ಗೋಪಾಲರಾಜ ಅರಸಿನವರು ದರ್ಬಾರ್ ಬಕ್ಷಿ ಮ॥ ಎಚ್. ಲಿಂಗರಾಜ ಅರಸಿನವರು ಮ॥ ಎಚ್. ನಂಜುಂಡರಾಜ ಅರಸಿನವರು, ಮ॥ ಪುಟ್ಟಯ್ಯಾಜೀ ಅರಸಿನವರು ಮೊದಲಾದ ಅರಸುಕುಮಾರರೂ, ಸರ್ಕಾರಿಯ ಅಧಿಕಾರಿಗಳೂ, ದೊಡ್ಡ ಮನುಷ್ಯರುಗಳೂ ಬರಮಾಡಲ್ಪಟ್ಟು ಪುರಾಣ ಶ್ರವಣಾನಂತರ ಗಂಧಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟರು. ಪೌರಾಣಿಕರುಗಳಿಗೆ ಶ್ರೀಮಾನ್ ಕಾಂತರಾಜ ಅರಸಿನವರ ಹಸ್ತದಿಂದ ಅಗ್ರಹಾರದ ಶ್ರೀ ಕೃಷ್ಣನವರು ಭಂಗಾರದ ಪದಕಗಳನ್ನು ಮರ್ಯಾದಿಸಿದರು. ಆ ದಿವಸದ ಏರ್ಪಾಟಿನ್ನೂ ಕಾರ್ಯದರ್ಶಿಗಳಾದ ದೊಡ್ಡಮಲ್ಲಯ್ಯನವರೇ ಮೊದಲಾದ ಕೆಲವರಿಂದ ಬಹು ವಿಸ್ತರಣೆಯಾಗಿ ನಡೆಯಿಸಲ್ಪಟ್ಟಿತು. ಈರೀತಿ ಪುರಾಣಶ್ರವಣದಲ್ಲಿ ಶ್ರೀಮಂತರುಗಳೂ, ವರ್ತಕರೂ ಶ್ರದ್ಧೆಯನ್ನು ವಹಿಸುತ್ತಿರುವುದೂ ಅಧಿಕಾರಿಗಳನ್ನು ಬರಮಾಡಿಕೊಂಡು ಸತ್ಕರಿಸುವುದೂ ಸಂತೋಷಕರವೇ ಸರಿ.

ಕಳೆದ ತಾ॥ ೭ ರಲ್ಲಿ ಗುಂಡಲಪೇಟೆಯಲ್ಲಿ ೨೭ ವರ್ಷ ವಯಸ್ಸಿನ ದಾದಾಹೀರ್ ಎಂಬ ಒಬ್ಬ ಮಹಮ್ಮದೀಯನು ಏನುಕಾರಣದಿಂದಲೋ ತನ್ನ ತಾಯಿಗೆ ಅಪಾಯಕರವಾದ ಗಾಯವನ್ನು ಮಾಡಿ ಅಸ್ವಸ್ಥಳಾಗಿದ್ದ ತನ್ನ ತಂಗಿಗೂ ಪೂರಾ ಪೆಟ್ಟನ್ನು ಹಾಕಿ ರಕ್ತಮಯವಾದ ಮತ್ತೂ ಹರಿತವಾದ ಕತ್ತಿಯನ್ನು ಬಲಗೈಯಲ್ಲೂ, ಒಂದು ದೊಣ್ಣೆಯನ್ನು ಎಡಗೈಯಲ್ಲೂ ಹಿಡಿದುಕೊಂಡು ಮನೆಯಿಂದ ಹೊರಗೆ ಬಂದು ತಾನು ಹೈದರಲ್ಲಿಯ ಮಗನೆಂದು ಗಟ್ಟಿಯಾಗಿ ಅರಚಿಕೊಂಡು ಬೀದಿಯಲ್ಲೆಲ್ಲ ತನ್ನ ದಾರಿಗೆ ಬಂದವರನ್ನೆಲ್ಲ ಹೊಡೆಯುತ್ತೇನೆಂದು ಹೆದರಿಸಿ ಪಾಠಶಾಲೆಯೊಳಗೆ ನುಗ್ಗಿ ಅಲ್ಲಿದ್ದ ಬೃಂದಾವನದ ಮುಂದೆ ಬಾಯಿಗೆ ಬಂದಂತೆ ದುರ್ಭಾಷೆಗಳನ್ನಾಡಿಕೊಂಡು ಕುಣಿದು, ಅಲ್ಲಿಂದ ಒಳಗೆ ಹೋಗಿ ಗಣಪತಿಯ ವಿಗ್ರಹವನ್ನು ನಾಶಮಾಡಿದನು. ಒಳಗಿದ್ದ ವಿದ್ಯಾರ್ಥಿಗಳು ಪ್ರಾಣಭಯದಿಂದ ಹೊರಗೋಡಿದರು. ಅವರಲ್ಲಿಬ್ಬರು ಹುಡುಗರು ದಿಗಿಲಿನಿಂದ ಹೊರಗೆ ಹೋಗಲಾಗದಿಲ್ಲವಾಗಿ ಉಪಾಧ್ಯಾಯನು ಅವರನ್ನು ಹೊರಗೆ ಕಳುಹಿಸುವಾಗ್ಗೆ, ಆ ಬುದ್ಧಿಭ್ರಾಂತನು ತನ್ನ ದೊಣ್ಣೆಯಿಂದ ಆ ಹುಡುಗರಿಗೇಟನ್ನು ಹಾಕಿದನು. ಒಬ್ಬ ಹುಡುಗನ ಬಾಯಿಯ ಮೇಲೆ ಏಟುಬಿದ್ದು ಕೆಳಗಣ ಕೆಲ ಹಲ್ಲುಗಳುಮುರಿದುಹೋದುವು. ಆಗ ಉಪಾಧ್ಯಾಯನು ಅತ್ಯಂತ ಧೈರ್ಯದಿಂದ ಆ ಹುಚ್ಚನನ್ನು ಪ್ರತಿಭಟಿಸಿ ಅವನ ಕೈಲಿದ್ದ ದೊಣ್ಣೆಯನ್ನು ಕಿತ್ತುಕೊಂಡು ಇಬ್ಬರು ಹುಡುಗರ ಸಮೇತ ಹೊರಗೆ ಬಂದುಬಿಟ್ಟನು. ಅನಂತರ ಆ ಕ್ರೂರನು ಕಟ್ಟಡದ ಮೇಲುಹೊದ್ದಿಗೆಯ ಮೇಲೆ ಹತ್ತಿದನು. ಆಗ ಪೊಲೀಸು ದಫೇದಾರನು ಮತ್ತೊಬ್ಬ ಪೊಲೀಸು ಆಳಿನ ಕೂಡ ಮೇಲೆ ಹತ್ತಿ ಕತ್ತಿಯನ್ನು ಕೊಡುವಂತೆ ಎಷ್ಟು ಉಪಾಯಮಾಡಿದಾಗ್ಯೂ ಅವನು ಕೊಡದೆ ದಫೇದಾರನಿಗೂ ಒಂದೇಟನ್ನು ಹಾಕಿದನು. ಅದು ದಫೇದಾರನ ಕೈಗೆ ತಗಲಿ ೨ ಅಂಗುಲದ ವರೆಗೆ ಗಾಯವಾಯಿತು. ಬಹಳ ಹೊತ್ತಿನ ವರೆಗೂ ಆ ಹೀರನು ಸ್ವಾಧೀನವಾಗದೆಹೋದುದರ ಮೇಲೆ, ಇಬ್ಬರು ಪೊಲೀಸಿನವರು ಬಂದೂಕವನ್ನು ಹಿಡಿದುಕೊಂಡು ಹಿಂಭಾಗದಿಂದ ಹತ್ತಿಬಂದು ಗುಂಡನ್ನು ಹಾರಿಸಿದರು. ಆಗ ಆ ನೀಚನು ಕೆಳಗೆ ದುಮಿಕಿ ಓಡಿಹೋಗ ಯತ್ನಿಸಿದಾಗ ಜನರು ಗುಂಪುಕೂಡಿ ಅವನ ಕತ್ತಿಯನ್ನು ಕಿತ್ತುಕೊಂಡರು. ಆ ಸಮಯದಲ್ಲಿ ಅವನ ಕತ್ತಿಯ ಏಟಿಗೆ ಸಿಕ್ಕಿ ಪೂರಾ ಅಪಾಯವನ್ನು ಹೊಂದಿದವರು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು. ಆ ಆವೇಶಯುಕ್ತನಾದ ಹೀರನು ಪೊಲೀಸರ ಸೆರೆಯಾಳಾಗಿರುವನು.

ಬೆಂಗಳೂರ ತಾ॥ ಮಡಿವಾಳದ ಸಮೀಪದಲ್ಲಿರುವ ವೆಂಕಟಾಪುರದಲ್ಲಿ ಕಳೆದ ತಾ॥ ೪ ರಲ್ಲಿ ನಂಜುಂಡಪ್ಪ ಎಂಬುವನು ಜಾತಿಯ ಸಂಬಂಧವಾದ ದ್ವೇಷದಿಂದ ರಾಮಪ್ಪನನ್ನು ಬಂದೂಕದಿಂದ ಹೊಡೆದು ಕೊಂದುಹಾಕಿ ಒಂದು ಕೈಲಿ ಬಂದೂಕವನ್ನೂ ಮತ್ತೊಂದರಲ್ಲಿ ಭರ್ಜಿಯನ್ನೂ ಹಿಡಿದು ಸತ್ತುಹೋದ ರಾಮಪ್ಪನ ಮನೆಯ ಮುಂದೆ ನಿಂತು ತನ್ನ ಹತ್ತಿರ ಬಂದವರನ್ನು ಕೊಂದುಹಾಕುತ್ತೇನೆಂದು ಹೆದರಿಸುತ್ತಿದ್ದುದರ ಮೇಲೆ, ಹಳ್ಳಿಯವರೆಲ್ಲರೂ ಭಯಪಟ್ಟು ಗ್ರಾಮವನ್ನು ಬಿಟ್ಟು ಹೊರಗೆ ಹೋದರು. ಈ ಸಮಾಚಾರವನ್ನು ಬೆಂಗಳೂರ ತಾ॥ ಪೊಲೀಸು ಇನ್ಸ್‌ಪೆಕ್ಟರು ತಿಳಿದು ತಾ॥ ೬ ರ ಬೆಳಿಗ್ಗೆ ಆ ಗ್ರಾಮಕ್ಕೆ ಹೋಗಿ ನೋಡುವಲ್ಲಿ ಕೊಲೆಪಾತಕನಾದ ನಂಜುಂಡಪ್ಪನು ತನ್ನ ಮನೆಯ ಹೊರಬಾಗಿಲನ್ನು ಭದ್ರಪಡಿಸಿಕೊಂಡು ಒಳಗಿದ್ದುದು ಕಂಡುಬಂದಿತು. ಆ ಘಾತುಕನು ಬಾಗಿಲಿನಲ್ಲಿ ಎರಡು ರಂಧ್ರಗಳನ್ನು ಮಾಡಿ ಅದರೊಳಗೆ ಬಂದೂಕವನ್ನು ನುಗ್ಗಿಸಿ ಹತ್ತಿರಬಂದವರನ್ನು ಹೊಡೆಯುತ್ತೇನೆಂದು ಹೆದರಿಸುತ್ತಿದ್ದನು. ಇನ್ಸ್‌ಪೆಕ್ಟರು ಧೈರ್ಯದಿಂದ ಬಾಗಿಲ ಹತ್ತಿರಹೋಗಿ ಹೊರಗಣಿಂದ ಚಿಲಕವನ್ನು ಭದ್ರಪಡಿಸಿ ಮನೆಯ ಸುತ್ತಲೂ ಪೊಲೀಸರ ಕಾವಲನ್ನಿಟ್ಟರು. ಅಷ್ಟರಲ್ಲಿ ತಾ॥ ಅಮಲ್ದಾರರೂ ಪೊ॥ ಸೂಪರಿಂಟೆಂಡೆಂಟರವರೂ ಬಂದು ಆ ಕೊಲೆಪಾತಕನಿಗೆ ಏನೊಂದು ಅಪಾಯವನ್ನೂ ಮಾಡದೆ ಅವನನ್ನು ಸೆರೆಹಿಡಿಯಬೇಕೆಂದು ಇನ್ಸ್‌ಪೆಕ್ಟರಿಗೆ ತಿಳುಹಿದರು. ಸಾಯಂಕಾಲದ ಹೊತ್ತಿಗೆ ಮತ್ತೆ ಕೆಲ ಪೊಲೀಸಿನವರು ಬೆಂಗಳೂರಿಂದ ಬಂದರು. ಪೊ॥ ಇ॥ ಜನರಲ್‌ರವರ ಅಪ್ಪಣೆಯಂತೆ ಬೆಳಕಂಜಿನ ದ್ವಾರಾ [illegible] ದಿಸಲ್ಪಡುತ್ತಿದ್ದವು. ಅವನನ್ನು ಹಿಡಿಯಲು ಯಾವ ಪ್ರಯತ್ನವೂ ಸಾಗದೆಹೋಗಲು, ಇ॥ ಜನರಲ್‌ರವರು ನೀರನ್ನೆತ್ತುವ ಯಂತ್ರವನ್ನು ಕಳುಹಿಸಿ ಅದರಿಂದ ಅವನ ಮನೆಗೆ ನೀರನ್ನು ಹೊಡೆಯತಕ್ಕದೆಂದು ಅಪ್ಪಣೆಮಾಡಿ ಕಳುಹಿಸಿದರು. ಅದೇ ಪ್ರಕಾರ ಒಂದು ಗೋಡೆಯಲ್ಲಿ ರಂಧ್ರದ ದ್ವಾರಾ ನೀರನ್ನು ಹೊಡೆಯುವಲ್ಲಿ ಒಳಗಿದ್ದ ನಂಜುಂಡಪ್ಪನು ಆ ನೀರಿನೇಟಿಗೆ ಸಿಕ್ಕದಹಾಗೆ ಒಂದು ಮೂಲೆಗೆ ಹೋಗಿ ಸೇರಿಕೊಂಡನು. ಹೀಗೆ ನೀರಿನಿಂದ ಹೊಡೆಯಲ್ಪಡುತ್ತಿರುವಾಗ ಒಬ್ಬ ಪೊಲೀಸಿನವನು ಧೈರ್ಯದಿಂದ ಒಳಗೆ ನುಗ್ಗಿ ಆ ನಂಜುಂಡಪ್ಪನನ್ನು ಭದ್ರವಾಗಿ ತಬ್ಬಿ ಹಿಡಿದುಕೊಂಡು ಅವನ ಕೈಯಿಂದ ಬಂದೂಕವನ್ನೂ, ಭರ್ಜಿಯನ್ನೂ ಕಿತ್ತುಕೊಂಡ ಬಳಿಕ ಅವನನ್ನು ಅದೇ ಸಾಯಂಕಾಲ ಬೆಂಗಳೂರಿಗೆ ಕರೆದುಕೊಂಡು ಬಂದು ಸೆರೆಯಲ್ಲಿಟ್ಟರು.

ವರ್ತಮಾನ ಸಂಗ್ರಹವು.

ಕಲಕತ್ತಾದಲ್ಲಿರುವ ರೆಡ್ ಕ್ರೆಸೆಂಟ್ ಸೊಸೈಟಿ ಎಂಬ ಮಹಮ್ಮದೀಯ ಸಂಘದವರು ತುರ್ಕಿಯ ಯುದ್ಧದಲ್ಲಿ ಮಡಿದವರ ಕುಟುಂಬದ ಮತ್ತು ಗಾಯಪಟ್ಟವರ ಸಹಾಯಾರ್ಥವಾಗಿ ಕೂಡಿಸುತ್ತಿರುವ ಫಂಡಿಗೆ ೩,೧೯೪ ರೂ. ಗಳು ಶೇಖರವಾಗಿರುತ್ತವೆ.

ಬಲ್ಗೇರಿಯಾದಲ್ಲಿ ೩೭೯೬; ರೊಮೇನಿಯಾದಲ್ಲಿ ೧೦೮೪; ಸರ್ವಿಯಾದಲ್ಲಿ ೫೭೩; ಸ್ಪೇನಿನಲ್ಲಿ ೪೧; ಫ್ರಾನ್ಸಿನಲ್ಲಿ ೨೧೩; ಇಟಲಿಯಲ್ಲಿ ೧೯೭; ಆಸ್ಟ್ರಿಯಾ ಹಂಗೇರಿಯಾದಲ್ಲಿ ೧೧೩; ಇಂಗ್ಲೆಂಡಿನಲ್ಲಿ ೯೨; ರಷ್ಯಾದಲ್ಲಿ ೮೯; ಜರ್ಮನಿಯಲ್ಲಿ ೭೯; ನಾರ್ವೆಯಲ್ಲಿ ೨೩; ಸ್ವೀಡನ್ನಿನಲ್ಲಿ ೧೦; ಬೆಲಜಿಯಂನಲ್ಲಿ ೪; ಡೆನ್ಮಾರ್ಕಿನಲ್ಲಿ ೨ ಈ ಪ್ರಕಾರ ೧೦೦ ವರ್ಷಕ್ಕೆ ಮೇಲ್ಪಟ್ಟಿರುವ ವಯಸ್ಸಿನವರಿಗೆ ಇರುತ್ತಾರೆ.

ಆಶ್ವಯುಜ ಮತ್ತೂ ಕಾರ್ತಿಕಮಾಸಗಳಲ್ಲಿ ಧೂಮಕೇತು ಕಾಣಿಸಿಕೊಂಡರೆ ಪ್ಲೇಗು, ಮಲೇರಿಯಾ ಮೊದಲಾದ ಕ್ಷುದ್ರರೋಗಗಳು ಪ್ರಬಲಿಸುತ್ತವೆಂದೂ, ಕಳ್ಳರಿಗೂ ಮತ್ತೂ ಹೀನಜಾತಿಯ ಜನರಿಗೂ ಸುಖಸಂಪತ್ತೂ, ಬ್ರಾಹ್ಮಣರಿಗೂ ಮತ್ತೂ ಕ್ಷತ್ರಿಯರಿಗೂ ಬಹು ಕಷ್ಟನಷ್ಟಗಳು ಪ್ರಾಪ್ತವಾಗುತ್ತವೆಂದೂ ಹಿಂದೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದರಿಂದ ಈಗ ಉದಯಿಸಿರುವ ಧೂಮಕೇತುವಿನಿಂದ ಮೇಲೆ ಹೇಳಿದ ಅರಿಷ್ಟವು ಪ್ರಾಪ್ತವಾಗಬಹುದೆಂದು ಕೆಲರು ಭಾವಿಸಿರುತ್ತಾರೆ.

ಕಳೆದ ತಾ॥ ೧೬ ರಲ್ಲಿ ಪಾಟಿಯಾಲಾದಲ್ಲಿ ಕೆಲ ಜನರು ಒಂದು ಕಾಡು ಹಂದಿಯನ್ನು ಹಿಡಿಯಲು ಅಟ್ಟಿಕೊಂಡು ಬರುತ್ತಿರುವಾಗ್ಗೆ, ಅದು ಒಂದು ಮಸೀತಿಯೊಳಗೆ ನುಗ್ಗಿ ಎಷ್ಟು ಪ್ರಯತ್ನಪಟ್ಟರೂ ಹೊರಗೆ ಬಾರದೆ ಹೋಯಿತು. ಆಗ ಮಹಾರಾಜರು ಈ ವರ್ತಮಾನವನ್ನು ಪೊಲೀಸ್ ಇನ್ಸ್‌ಪೆಕ್ಟರ್ ಮೂಲಕ ತಿಳಿದು ಬಂದೂಕವನ್ನು ತೆಗೆದುಕೊಂಡು ತಾವೇ ಮಸೀದಿಗೆ ಬಂದು ಆ ಹಂದಿಗೆ ಎರಡು ಗುಂಡನ್ನು ಹಾರಿಸಿ ಕೊಂದುಹಾಕಿದುದಲ್ಲದೆ, ಹಂದಿಯ ಪ್ರವೇಶದಿಂದ ಅಪರಿಶುದ್ಧವಾದ ಮಸೀತಿಯ ಶುದ್ಧತೆಗಾಗಿ ೫೦೦ ರೂಪಾಯಿಗಳನ್ನು ಕೊಟ್ಟರು.

ನಾಗರಚೌತಿಯ ದಿವಸ ವಿಶಾಖ ಪಟ್ಟಣದಲ್ಲಿರುವ ಬತ್ರಾವನದ ರಾಣಿಯವರ ಬಂಗಲೆಯ ಹೊರ ಆವರಣದಲ್ಲಿ ಒಬ್ಬ ಹೆಂಗಸು ಒಂದು ಹುತ್ತವನ್ನು ಪೂಜೆಮಾಡಿ ರಂಧ್ರಕ್ಕೆ ಹಾಲನ್ನೆರೆದು ದುಡ್ಡನ್ನು ಹಾಕಿದಳು. ಇದನ್ನು ನೋಡಿಕೊಂಡಿದ್ದ ಒಬ್ಬ ಬ್ರಾಹ್ಮಣರ ಹುಡುಗನು ಆ ದುಡ್ಡನ್ನು ತೆಗೆದುಕೊಳ್ಳಬೇಕೆಂಬ ಆಸೆಯಿಂದ ಆಕೆಯು ಹೊರಟುಹೋದಮೇಲೆ ಹುತ್ತದ ರಂಧ್ರದೊಳಗೆ ಕೈಯನ್ನು ಹಾಕಲು ಒಳಗಣಿಂದ ಒಂದು ಸರ್ಪವು ಬಂದು ಆ ಹುಡುಗನ ಕೈಯನ್ನು ಕಚ್ಚಿ ಪುನಃ ರಂಧ್ರದೊಳಗೆ ಹೋಗಿ ಸೇರಿಕೊಂಡಿತು. ಈ ಸಂದರ್ಭವನ್ನು ಆ ಬಂಗಲೆಯವರು ತಿಳಿದು ಆ ಹುತ್ತವನ್ನು ಅಗೆದು ಸರ್ಪವನ್ನು ಹೊರಕ್ಕೆ ತೆಗೆದು ಕೊಂದುಹಾಕಿ ಗಂಧದ ಚಕ್ಕೆಯಿಂದ ಬೆಂಕಿಯನ್ನು ಹೊತ್ತಿಸಿ ಆ ಸರ್ಪದ ಶವವನ್ನು ಸುಟ್ಟುಬಿಟ್ಟರು.

ಮದ್ರಾಸಿನಲ್ಲಿ ಒಬ್ಬ ಬ್ರಾಹ್ಮಣ ವಿತಂತುವು ಪತ್ನೀಸಮೇತನಾದ ಬ್ರಾಹ್ಮಣನಕೂಡ ತಾನು ಇದ್ದು ಸಂಸಾರಸುಖವನ್ನನುಭವಿಸಬೇಕೆಂಬ ಇಚ್ಛೆಯಿಂದ ಒಬ್ಬ ಬ್ರಾಹ್ಮಣನಲ್ಲಿಗೆ ಹೋಗಿ ತನ್ನ ಮನೋಗತವನ್ನು ತಿಳುಹಿದಳು. ಅವನು ಪುನರ್ವಿವಾಹಮಾಡಿಕೊಳ್ಳುವುದುತ್ತಮವಲ್ಲವೆ? ಎಂದು ಆಕೆಯನ್ನು ಕೇಳಲು, ಆ ವಿತಂತುವು ತಾನು ಪುನರ್ವಿವಾಹವಾದಲ್ಲಿ ತನ್ನ ತಂದೆತಾಯಿಗಳೂ, ಬಂಧುಮಿತ್ರರೂ, ಕುಲದವರೂ ಆಕ್ಷೇಪಿಸಿ ತನ್ನನ್ನು ಬಹು ಹೀನವಾಗಿ ಕಾಣುತ್ತಾರೆ. ಆದರೆ ಈ ರೀತಿಯಾಗಿ ಪತ್ನೀಸಮೇತನಾದವನ ಕೂಡ ಬಾಳ್ವೆಮಾಡಿಕೊಂಡಿದ್ದರೆ, ತನ್ನ ಮಾತಾಪಿತೃಗಳಾದಿಯಾಗಿ ಸಮಸ್ತರೂ ತನ್ನನ್ನು ಗೌರವದಿಂದ ಕಾಣುವರೆಂದು ಉತ್ತರವನ್ನು ಕೊಟ್ಟಳಂತೆ. ಪುನರ್ವಿವಾಹವನ್ನು ಖಂಡಿಸತಕ್ಕ ಮಹಾಪ್ರಭುಗಳೆಲ್ಲರೂ ಇದನ್ನು ಗಮನಿಸಬೇಕು.

ಪತ್ರವ್ಯವಹಾರ.

ಶಿರೂರಲ್ಲಿ ನಡೆದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಾಲಕಿಯ ಮಹೋತ್ಸವವು.

ಬಾಗಲಕೋಟಿ ತಾ|| ಶಿರೂರು ಗ್ರಾಮದ ಸೆಟ್ಟರು ಗೌಡರು ವಗೈರೆ ಪ್ರಮುಖರ ಪ್ರಾರ್ಥನೆಯನ್ನಂಗೀಕರಿಸಿ ಪ್ರೋಗ್ರಾಂ ಪ್ರಕಾರ ತಾ|| ೨-೧೧-೯೧೧ ನೆಯ ಗುರುವಾರ ಮಧ್ಯಾಹ್ನದ ಬಾಗಲಕೋಟಿ ಮೊಕ್ಕಾಮಿನಿಂದ ಶಿರೂರು ಗ್ರಾಮಕ್ಕೆ ಸಕಲ ಅಮಾಮು ಸಮೇತ ಶ್ರೀಗಳವರ ಸ್ವಾರಿಯು ಚಿತ್ತೈಸಿ, ಸಾಯಂಕಾಲ ಈ ಊರಬಳಿ ಸಿದ್ಧೇಶ್ವರ ದೇವಸ್ಥಾನದಲ್ಲಿ ಬಿಡಾರುಗೈದರು. ತಾ|| ೩ ನೆಯ ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ಪಂಚಕಲಶ, ಮಕರತೋರಣ, ಶ್ವೇತಛತ್ರ, ಮೋರ್ಛಾಲು ಮುಂತಾದ ಸಮಸ್ತ ಬಿರುದುಗಳಿಂದ ಅಡ್ಡಪಾಲಕಿಯುತ್ಸವವು ಪ್ರಾರಂಭಿಸಲ್ಪಟ್ಟಿತು. ಈ ಗ್ರಾಮದ ಆರು ಪಂಗಡವರ ಮಜಲಿನ ಘೋಷವು ದಿಕ್ಕುಗಳನ್ನು ವ್ಯಾಪಿಸಿತ್ತು. ವೈದಿಕರ ವೇದಘೋಷವು ಬಹು ಇಂಪಾಗಿತ್ತು. ಉತ್ಸವ ಬರುವ ಕಡೆ ಪ್ರತಿಮನೆಗಳೂ ತೋರಣಗಳಿಂದಲಂಕರಿಸಲ್ಪಟ್ಟಿದ್ದವು. ಬೀದಿಗಳೆಲ್ಲವೂ ತೋರಣಕಮಾನುಗಳಿಂದ ಶೋಭಿಸುತ್ತಿದ್ದವು. ತಳಿರುತೋರಣಗಳೂ, ರಂಭಾಸ್ತಂಭಗಳೂ ಮನೋಹರವಾಗಿದ್ದು, ಆನೆ, ಈಶ್ವರ, ಬಸವ ಮುಂತಾದ ಚಿತ್ರ ಕೆಲಸಗಳಿಂದ ೨-೩ ಅಂತಸ್ತುಗಳಾಗಿ ಅಲ್ಲಲ್ಲಿ ೮-೧೦ ಚಪ್ಪರಗಳು ರಚಿಸಲ್ಪಟ್ಟಿದ್ದವು. ಜಾಮೂರುಗಳವು ಮುಂತಾದುದರಿಂದ ಅಂದವಾಗಿದ್ದಿತು. ಬಾಗಲಕೋಟಿ, ಗುಳೇದಗುಡ್ಡ, ಆಲೂರು, ಬಾಗೇವಾಡಿ, ಕಮತಗಿ, ಅಮೀನಗಡ, ಸೂಳೆಬಾವಿ ಮೊದಲಾದ ದೊಡ್ಡಪೂರುಗಳಿಂದಲ್ಲದೆ, ಹಳ್ಳಿಗಳಿಂದಲೂ ಪ್ರಮುಖರೇಮುಂತಾಗಿ ಅನಂತರು ದರ್ಶನಾರ್ಥಿಗಳಾಗಿ ಬಂದಿದ್ದರು. ಈ ಶಿರೂರು ಗ್ರಾಮದ ಕುಲಕರ್ಣಿ ವಗೈರೆ ಬ್ರಾಹ್ಮಣ ಮಂಡಳಿ, ಇತರ ಕೋಮುವಾರು ಜನಗಳು ಉತ್ಸವಕ್ಕೆ ಬಂದಿದ್ದು, ಫಲಪುಷ್ಪಾದಿಗಳನ್ನರ್ಪಿಸಿದರು. ಬಾಗಲಕೋಟಿ ತಾ|| ನಿಂದ ಉಸ್ತುವಾರಿ ಬಗೆಗೆ ಪೋಲೀಸು ಸಿಬ್ಬಂದಿಯು ಸಮರ್ಪಕವಾಗಿ ಏರ್ಪಡಿಸಿತ್ತು. ೩ ಗಂಟೆಗಳ ಕಾಲದವರೆಗೂ ಉತ್ಸವವು ಬಹಳ ವಿಜೃಂಭಣೆಯಿಂದ ಸಾಂಗವಾಗಿ ಜರುಗಿತು. ಹಿರೇಮಠದಲ್ಲಿ ಅತ್ಯಂತ ವಿಚಿತ್ರಗಳಿಂದ ಸಿದ್ಧಪಡಿಸಿದ್ದ ಸಿಂಹಾಸನದಲ್ಲಿ ಭಕ್ತರ ಕರತಾಡನ ಜಯಘೋಷದಿಂದ ಶ್ರೀ ಜಗದ್ಗುರುಗಳವರು ಮುಹೂರ್ತಗೊಂಡರು. ಮಂಗಳ ಪುಷ್ಪಾಂಜಲಿಯಾದ ಮೇಲೆ ಭಕ್ತರ ಮನಸ್ಸಿನಲ್ಲಿ ಬಿಂಬಿಸುವಂತೆ ಶ್ರೀ ಜಗದ್ಗುರುಗಳವರು ಸರಳಭಾಷಣದಮೂಲಕ ಅಪ್ಪಣೆಕೊಡಿಸಿದರು. ಬಳಿಕ ಜಯರವದೊಡನೆ ಸಭೆಯು ಬರಕಾಸ್ತಾಯಿತು. ಉತ್ಸವಕಾಲಕ್ಕೆ ಸರಿಯಾಗಿ ನಮ್ಮ ಸಮಾಜಕ್ಕೆ ಕೇವಲ ಹಿತೈಷಿಗಳಾದ ಬೀಳೂರ ಶ್ರೀಗಳವರೂ ದಯಮಾಡಿಸಿದ್ದರು. ಇವರಿಂದ ಬಾಗಲಕೋಟಿಯ ಪ್ರಮುಖರನ್ನು ಪಂಚರನ್ನಾಗಿ ನಿಯಮಿಸಿಕೊಂಡ ಈ ಶಿರೂರು ಗ್ರಾಮದ ವೀರಶೈವರಲ್ಲಿ ಬಹುದಿವಸಗಳಿಂದಲೂ ಇದ್ದ ವೈಮನಸ್ಯವು ಹೋಗಲಾಡಿಸಲ್ಪಟ್ಟಿತು. ಐಕಮತ್ಯದೊಡನೆ ಜಗದ್ಗುರುಗಳವರ ಸೇವಾಸತ್ಕಾರವು ನಡೆಯುವಂತೆ ಏರ್ಪಡಿಸಿದ್ದುದು ಸ್ತೋತ್ರಾರ್ಹವಾದ ವಿಷಯವಾಗಿದೆ. ಈ ಊರು ಸೆಟ್ಟರು ಅಂದಾನಪ್ಪನವರು ಶ್ರೀಗಳವರ ಅಪ್ಪಣೆಯೇ ಮುಖ್ಯವೆಂದು ಶಿರಸಾ ಮಾನ್ಯಮಾಡಿ ಸಮಾಜ ಹಿತಕ್ಕೋಸ್ಕರ ಬಹುಕಾಲದಿಂದಿದ್ದ ವೈಷಮ್ಯವನ್ನು ಬಿಟ್ಟಿದ್ದೂ ಸಹ ಸ್ತುತ್ಯವಾಗಿರುವುದಲ್ಲದೆ, ಸಮಾಜ ಹಿತೈಷಿಗಳಿಗೆ ಇದು ಮೇಲ್ಪಂಕ್ತಿಯಾಗಿರುತ್ತದೆ. ಈ ಬೀಳೂರು ಶ್ರೀಗಳವರು ಪ್ರಕೃತದಲ್ಲಿ ಮಾತಲೀ ಏರ್ಪಡಿಸಿರುವ ಮಹಾತ್ಕಾರ್ಯದ ಸಂಗತಿಯನ್ನು ಇನ್ನೊಂದು ಸಾರೆ ಶ್ರುತಪಡಿಸುತ್ತೇನೆ. ಈ ಶಿರೂರು ದೈವದ ಭಕ್ತಾದಿಗಳು ಕೇವಲ ವಿಶ್ವಾಸನಿಷ್ಠರಾಗಿ ಶ್ರದ್ಧೆವಹಿಸಿ ಶ್ರೀ ಜಗದ್ಗುರುಗಳವರ ಸೇವಾಸತ್ಕಾರವಂ ಗೈಯುತ್ತಿರುವರು. ಒಬ್ಬ ತಿಮ್ಮಪ್ಪ ಬಾಗಲವತ್ತಿ ಎಂಬ ಬತಭಕ್ತನು ತನಗಿದ್ದ ೬೦೦ ರೂ. ಇಸ್ಟೇಟಿನಲ್ಲಿ ಅರ್ಧಭಾಗ ೩೦೦ ರೂ. ಖರ್ಚಿನಿಂದ ಭಿಕ್ಷಾಪಾದಪೂಜಾ ವಿನಿಯೋಗವಮಾಡಿದನು, ಇದು ಗುರುಭಕ್ತಿಯ ಪ್ರಾಶಸ್ತ್ಯವನ್ನು ಸಕಲರಿಗೂ ಬೋಧಿಸುವದಾಗಿದೆ. ಇವರಿಗೆ ಶ್ರೀ ಮುರಹರನು ಸ್ಥಿರತರಾಯುರಾರೋಗ್ಯ ಸಂಪತ್ಸಮೃದ್ಧಿಯನ್ನಿತ್ತು ಕಾಪಾಡಲೆಂದು ಜಗದೀಶನನ್ನು ಕುರಿತು ಪ್ರಾರ್ಥಿಸುವ

ಚಂದಾದಾರ.

ಶಾರದಾಪೂಜೆಯು.

ಸೋಲಾಪುರದ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಪ್ರತಿವರ್ಷವೂ ಆಗುವಂತೆ ಈವರ್ಷ ಆಶ್ವಯುಜದಲ್ಲಿ ಶಾರದಾಪೂಜೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು. ಶು|| ೩ ಶುಕ್ರವಾರದ ದಿವಸ ಮಧ್ಯಾಹ್ನ ೪ ಗಂಟೆಗೆ ಬ್ಯಾಂಡು, ನೌಬತ್ತುಗಳ ಮಂಗಲಧ್ವನಿಯು ಮೊಳಗುತ್ತಿರಲು ವೇದಪಾಠಕರ ವೇದಘೋಷವು ಪ್ರಾಜ್ಞರ ಕಿವಿಗಳಿಗಾನಂದವನ್ನು ಕೊಡುತ್ತಿರಲು ಒಳ್ಳೆಯ ಸಂಭ್ರಮದಿಂದ ದೊಡ್ಡ ಬಜಾರವನ್ನು ಹಾಯಿಸುತ್ತ ಪಾಠಶಾಲೆಗೆ ತಂದು ಯಥಾವಿಧಿ ಪೂಜೆಯ ಆಹ್ವಾನವನ್ನು ಮಾಡಿದರು. ಶಾರದೆಯ ಮಂಟಪವು ತಳಿರು ತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಸಾಲು ಸಾಲಾಗಿ ಕಟ್ಟಿರುವ ಭಾವಚಿತ್ರಗಳಿಂದಲೂ, ಕಾಜಿನಗಡಿಗೆಗಳಿಂದಲೂ ಶೋಭೆಯುಳ್ಳದಾಗಿ ನೋಡುವವರ ಕಣ್ಮನಗಳನ್ನು ಸೆಳೆಯುತ್ತಿದ್ದಿತು. ಮಾರನೆಯ ದಿನ ಸಾಯಂಕಾಲ ೪ ಘಂಟೆಯಿಂದ ೮ ಗಂಟೆಯ ವರೆಗೂ ಶಾರದೆಯ ಸಮ್ಮುಖದಲ್ಲಿ ಸಭೆಯು ನೆರೆಯಲ್ಪಟ್ಟಿತು. ವೀರಶೈವ ಪ್ರಮುಖರಲ್ಲದೆ ಉಳಿದ ಕೆಲ ಪ್ರಮುಖರು ಸೇರಿದ್ದರು. ಶ್ರೀಮಂತ ಬಂಡೆಪ್ಪಣ್ಣಾ ಕಾತಾಪೆ ಇವರ ಒಪ್ಪಿಗೆಯ ಮೇರೆಗೆ ನಿರಾಭಾರಿಗಳಾದ ಶ್ರೀ ಪಂಚಾಕ್ಷರಸ್ವಾಮಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿದರು. ವಿದ್ಯಾವಿಷಯಕ್ಕೆ ಮ|| ಬಂಡೆಪ್ಪ ಜಾಂಜೆ ವಕೀಲರು ಮ|| ಜಯದೇವಪ್ಪ ದೇಶಮುಖ ಪಾಟೀಲರು ಸಂಸ್ಕೃತವಿದ್ಯೆಯ ಮಹತ್ವ, ಅದರಿಂದಾಗುವ ಫಲ ಮತ್ತು ನಮ್ಮ ಸಮಾಜದಲ್ಲಿ ವಿದ್ಯೆಯ ಸ್ಥಿತಿಯು ಹೇಗಿರುತ್ತದೆ ಈ ವಿಷಯದಲ್ಲಿ ಕೇಳುವವರ ಮನೋಮುಕುರದಲ್ಲಿ ಪ್ರತಿಬಿಂಬಿಸುವಂತೆ ಮಾತನಾಡಿದರು. ಮ|| ಮಡಿವಾಳಪ್ಪ ದೇವಮಾಲಿ, ಮ|| ನಜಮೊದಿನ ಸಾಹೇಬ ಸಾತಾರ, ಈ ಉಭಯರು ಪಾಠಶಾಲೆಯು ಚಿರಸ್ಥಾಯಿಯಾಗಿ ನಡೆಯಬೇಕಾದರೆ, ಅಂತಹದೊಂದು ಸಂಸ್ಥೆಯು ಅವಶ್ಯವೇಕೆಂತಲೂ, ಬಹುಶಃ ಈ ಕಾಲದಲ್ಲಿ ಸಂಘಶಕ್ತಿಯಿಲ್ಲದೆ ಯಾವ ಕಾರ್ಯವೂ ಪೂರೈಸಲ್ಪಡದಾಗದೆಂತಲೂ, ವೈದಿಕ ಮತಗಳ ಧರ್ಮವು ಸಂಸ್ಕೃತಭಾಷೆಯಲ್ಲಿರುವುದರಿಂದ ಅದನ್ನು ವೃದ್ಧಿಪಡಿಸಲು ಆದಷ್ಟು ಮಟ್ಟಿಗೆ ಆ ಮತೀಯರು ಪ್ರಯತ್ನಿಸಬೇಕೆಂತಲೂ ಸರಸವಾಗಿ ಭಾಷಣವನ್ನು ಮಾಡಿದರು. ಇದೇವಿಷಯವನ್ನು ಮ|| ಶಂಕರಪ್ಪ ಜೇರಿಗೆ, ಭಾತಕರ ಇವರು ಪುಷ್ಟೀಕರಿಸಿ ಹೇಳಿದರು. ಬಸವಲಿಂಗಯ್ಯನೆಂಬ ಈ ಪಾಠಶಾಲೆಯ ವಿದ್ಯಾರ್ಥಿಯು ಕೇವಲ ವಿದ್ಯೆಯನ್ನು ಕಲಿತು ಹೊಟ್ಟೆ ಹೊರೆಕೊಳ್ಳುವದಕ್ಕಿಂತಲೂ "ವಿದ್ಯಾದದಾತಿವಿನಯಂ ವಿನಯಾದ್ಯಾತಿಪಾತ್ರತಾಂ" ಎಂಬುಕ್ತಿಯಂತೆ ವಿನಯಾದಿಗುಣಗಳ ಯೋಗ್ಯತೆಯನ್ನು ಸಂಪಾದಿಸುವುದು ವಿದ್ವಾಂಸನಿಗೆ ಮುಖ್ಯಕರ್ಮವೆಂದು ಸಂಸ್ಕೃತ ಭಾಷೆಯಲ್ಲಿ ಹೇಳಿದನು. ವೇ|| ಪ್ರಭುಮಯ್ಯನವರು ಧರ್ಮದ ವಿಷಯದಲ್ಲಿ, ಮಾತಾಡಿದಮೇಲೆ ವೇ|| ನಾಲ್ವಾರದ ಜಗದೀಶ ಶಾಸ್ತ್ರಿಗಳು ವಿದ್ಯೆಯೆಂದರೆ ಮುಖ್ಯವಾಗಿ ವೇದಾಂತವಿದ್ಯೆಯೇ ವಿದ್ಯೆಯು ಎಲ್ಲಾ ವಿದ್ಯೆಗಳನ್ನು ಸಂಪಾದಿಸಿದ್ದರೂ ಸ್ವಸ್ವರೂಪವನ್ನು ತಿಳಿಸುವ ವಿದ್ಯೆಯು ಬಾರದಿದ್ದರೆ ಎಲ್ಲ ಅವಯವಗಳಿದ್ದು ನೇತ್ರೇಂದ್ರಿಯವಿಲ್ಲದಿರುವ ಪುರುಷನಂತೆ ಗತಿಗಾಣದವನಾಗುವನೆಂಬುದೆ ಮೊದಲಾದುದನ್ನು ಹೇಳಿದರು. ಆ ಮೇಲೆ ಶ್ರೀಮಂತ ಬಂಡೆಪ್ಪಣ್ಣಾ ಕಾತಾಪೆ ಇವರು, ಸಂಘಶಕ್ತಿಯ ವಿಷಯದಲ್ಲಿ ಸರಸಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷರಭಾಷಣವು ನಡೆದು, ತಾಂಬೂಲಗಂಧಾದಿಗಳಿಂದ ಸಭಿಕರನ್ನೂ ಅಧ್ಯಕ್ಷರನ್ನೂ ಮರ್ಯಾದಿಸಿದರು. ಅಷ್ಟರಲ್ಲಿ ೯ ಗಂಟೆರಾತ್ರಿಯಾಗಿದ್ದುದರಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿವಸ ಸಾಯಂಕಾಲ ೩ ಗಂಟೆಯಾರಭ್ಯ ೧೧ ಗಂಟೆಯವರೆಗೂ ಆಮಂತ್ರಣಪುರಸ್ಸರವಾಗಿ ಶಾರದೆಯ ದರ್ಶನಾರ್ಥ ಬಂದಿರುವವರಿಗೆ ತಾಂಬೂಲ ಗಂಧಾದಿಗಳ ಮರ್ಯಾದೆಯು ನಡೆಯಿತು. ಈ ಸಭೆಯ ನಾಲ್ಕಾರು ದಿವಸದ ಪೂರ್ವದಲ್ಲಿ ಸೋಲಾಪುರಕ್ಕೆ ಬಂದಿದ್ದ ನಾಮದಾರ ದಾದಾಸಾಹೇಬ ಕಂಡೀಕರ ಇವರಿಗೆ ಕಾಯದೆ ಕೌನ್ಸಿಲದಲ್ಲಿ ನಿಯಮಿಸಿದ ಸಂತೋಷಕ್ಕಾಗಿ ಪಾಠಶಾಲೆಯಲ್ಲಿ ಸಭೆಕೂಡಿಸಿ ಅವರಿಗೆ ಸತ್ಕಾರವು ಮಾಡಲ್ಪಟ್ಟಿತ್ತು. ಅವರಿಂದ ವಿದ್ಯಾರ್ಥಿಗಳ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ನಾಮದಾರ ಸಾಹೇಬರು ಉತ್ತೇಜನದುದ್ದಿಶ್ಯ ವಿದ್ಯಾರ್ಥಿಗಳಿಗೆ ೧೦ ರೂ.ಗಳ ಪಾರಿತೋಷಕವನ್ನು ಕೊಟ್ಟರು. ಈ ಸರ್ವಸಮಾರಂಭದ ಶ್ರೇಯಸ್ಸು ಇಲ್ಲಿ ವಿದ್ಯಾರ್ಥಿಗಳಾಗಿರುವ ಶ್ರೀ ಹುಕ್ಕೇರಿ ಶಿವಲಿಂಗದೇವರ ಭಾಗಕ್ಕೆ ಸೇರಿರುತ್ತದೆ.

ಓರ್ವ ಪ್ರತ್ಯಕ್ಷದರ್ಶಿ

ಬೆಳಗಾವಿಯಲ್ಲಿ ಕೂಡತಕ್ಕ ೬ ನೆಯ ಶ್ರೀ ವೀರಶೈವ ಮಹಾಸಭೆಯು.

ಸಕಲ ವೀರಶೈವ ವೃಂದದ ಸಿಂಹಾಸನಾಧಿಪತಿಗಳಿಗೂ, ವಿರಕ್ತಸ್ವಾಮಿಗಳಿಗೂ, ಪಟ್ಟಾಧ್ಯಕ್ಷರಿಗೂ, ಸಂಸ್ಥಾನಿಕರಿಗೂ, ಸ್ಟ್ಯಾಂಡಿಂಗ ಕಮಿಟಿಯ ಯಾವತ್ತು ಮೆಂಬರರಿಗೂ, ಸಮಾಜದ ಉನ್ನತಿಯನ್ನು ಕಾಯಾಮನಸಾವಾಚಾ ಬಯಸುವ ಮುಂದಾಳುಗಳಿಗೂ ವಿನಯಪೂರ್ವಕವಾಗಿ ಬಿನ್ನವಿಸುವುದೇನೆಂದರೆ:—ಸನ ೧೯೦೪ ನೆಯ ಇಸ್ವಿಯಲ್ಲಿ ಕೂಡಿದ ೧ ನೆಯ ಶ್ರೀಮದ್ವೀರಶೈವ ಮಹಾಸಭೆ ಮೊದಲುಗೊಂಡು ಈ ಹೊತ್ತಿನವರೆಗೆ ಆದ ಧಾರವಾಡ, ಬೆಂಗಳೂರ, ಸೋಲಾಪುರ, ಬಾಗಲಕೋಟಿ, ಬಳ್ಳಾರಿಯಲ್ಲಿ ಮಹಾಸಭೆಯು ಪತಿಯಿಂದ ನಿರ್ಧರವಾದ ವಿಷಯಗಳೆಲ್ಲ ಆಚರಣೆಗೆ ಎಷ್ಟು ಬಂದವು. ಎಷ್ಟು ಉಳಿದವು, ಯಾಕೆ ಉಳಿದವು, ಅವುಗಳನ್ನು ರೂಢಿಯಲ್ಲಿ ಹೇಗೆ ತರುವುದು, ಆಚರಣೆಯಲ್ಲಿ ತಂದ ವಿಷಯಗಳು ಹೇಗೆ ನಡೆದವು, ಅವುಗಳಲ್ಲಿ ಏನಾದರೂ ನ್ಯೂನತೆ ಇರವುದೋ ಹೇಗೆ? ಅವು ಹೆಚ್ಚು ಸುಲಭತವಾಗಿ ನಡೆಯುವುದಕ್ಕೆ ತಕ್ಕ ಉಪಾಯ ಮತ್ತು ಶ್ರೇಯಸ್ಕರ ಮುಂತಾದ ಮಹತ್ವದ ವಿಷಯಗಳ ವಿವೇಚನವು ಈ ಸಭೆಯಲ್ಲಿ ಮೊದಲನೆಯ ದಿವಸವೇ ಆಗಿ ಮುಂದಿನ ಕೆಲಸಗಳು ಪ್ರಾರಂಭವಾಗತಕ್ಕವು ಅವೆ. ಅದುದರಿಂದ ನಮ್ಮ ಶ್ರೀಮನ್ ನಿರಂಜನ ಹಾನಗಲ್ ಕುಮಾರಸ್ವಾಮಿಗಳು ಶ್ರೀ ಬಿಳ್ಳೂರ ಸ್ವಾಮಿಗಳು ಮತ್ತು ನಮ್ಮ ಸಮಾಜದ ಪ್ರಮುಖರು ಮಹಾ ಪ್ರಯಾಸಮಾಡಿ ಸ್ಥಾಪಿಸಿದ ಈ ಸಭೆಯ ಪತಿಯಿಂದ ಪ್ರಚಾರದಲ್ಲಿ ಬಂದ ವಿಷಯಗಳನ್ನೂ, ಅವರಿಂದ ನಮ್ಮ ಸಮಾಜಕ್ಕೆ ಆದ ಹಾಗು ಆಗುತ್ತಿರುವ ಅನಂತ ಮಹತ್ಕಾರ್ಯಗಳನ್ನೂ, ಸಮಾಜದ ಘಟನೆಯನ್ನೂ ಅದರ ಸುಧಾರಣೆಯನ್ನೂ ಅರಿಯದ ನಮ್ಮಲ್ಲಿಯ ಕೆಲವರು "ಸರಿಯೂ ದ್ರಾಕ್ಷೆಹಣ್ಣು" ಈ ನ್ಯಾಯದಂತೆ ಮುಖಂಡರ ಮತ್ತು ಉತ್ಪಾದಕರ ಅವಿಶ್ರಾಂತ ಶ್ರಮದ ಕಡೆಗೆ ಲಕ್ಷಗೊಡದೆ, ಮಹಾಸಭೆಯಿಂದ ಏನೂ ಪ್ರಯೋಜನವಾಗಲಿಲ್ಲ," "ಸುಮ್ಮನೆ ಸಮಾಜದ ಹಣವು ಹಾಳಾಗುವುದು" ಮೊದಲಾದ ದೋಷಗಳನ್ನು ಕೊಟ್ಟು ತಮ್ಮತಮ್ಮ ತಮ್ಮ ಕರ್ತವ್ಯವನ್ನೂ ಮರೆತು ದೂಷಿಸುವರಾಗಿದ್ದಾರೆ ಇದು ಕೆಲಮಟ್ಟಿಗಾದರೂ ಸಮಂಜಸವಾಗಿ ತನ್ನ ಕರ್ತವ್ಯವನ್ನು ಬಲ್ಲ ಪ್ರತಿ ಒಬ್ಬ ವೀರಶೈವನಿಗೆ ತೋರಲಾರದು. ಸಮಾಜ ಸುಧಾರಣೆಗೆ ಕೇವಲ ಮಹಾಸಭೆಗಳಲ್ಲಿ ವ್ಯಾಖ್ಯಾನಮಾಡುವವರೇ ಸಾಕಾಗದು. ಒಂದೇ ಶರೀರ ರಚನೆಯನ್ನು ಸ್ವಲ್ಪ ಮೇಲೆ ವಿಚಾರಮಾಡಿ ನೋಡಿರಿ. ರಕ್ತವೂ, ಮಾಂಸವೂ, ನರಗಳೂ, ಎಲುಬೂ, ಚರ್ಮವೂ, ಕೂದಲುಗಳೂ, ಕೈಕಾಲು, ಕಣ್ಣು ಮೂಗು, ನಾಲಿಗೆ ಹಲ್ಲು, ತಲೆ, ಹೊಟ್ಟೆ ಈ ಎಲ್ಲವೂ ಅವಶ್ಯವು. ಅವು ತಂತಮ್ಮ ಕೆಲಸಗಳನ್ನು ಹಗಲಿರುಳೂ ಅಬಾಧಿತವಾಗಿ ಸಾಗಿಸುವುದರಿಂದಲೇ ಬುದ್ಧಿ ಎಂಬ ರಾಜನು ವಿವೇಕನೆಂಬ ಪ್ರಧಾನಿಯಿಂದಲೂ ನೀತಿ, ಭಕ್ತಿ, ಧರ್ಮಎಂಬ ಸಹಾಯಗಾರರಿಂದಲೂ ತನ್ನ ರಾಜ್ಯವನ್ನು ಸುಮಂತ್ರಿಕವಾಗಿ ಜರುಗಿಸಿ ಅಲೌಕಿಕವಾದ ಕೀರ್ತಿಯನ್ನು ಪಡಗಿಸುವನು. ಇವುಗಳಲ್ಲಿ ಯಾವುವಾದರೊಂದು ತನ್ನ ಕರ್ತವ್ಯವನ್ನು ಮಾಡದಿದ್ದರೆ ಎಷ್ಟು ತೊಂದರೆಯಾಗುವುದು? ಬುದ್ಧಿಯು ಆಯಾಕಾಲಕ್ಕೆ ವಿವೇಕನಿಂದ ವಿಚಾರಿಸಿಕೊಟ್ಟ ಅಪ್ಪಣೆಗಳನ್ನು ಇಂದ್ರಿಯಗಳು ಎಷ್ಟು ತೀವ್ರ ಆಚರಣೆಯಲ್ಲಿ ತರುವವು ನೋಡಿರಿ. ಕಾಲಿಗೆ ಒಂದು ಸಣ್ಣ ಮುಳ್ಳು ಚುಚ್ಚಿದರೆ ಸಾಕು, ಇಡೀ ಶರೀರಕ್ಕೆಲ್ಲಾ ತತ್‌ಕ್ಷಣವೇ ಬಾಧೆಯುಂಟಾಗಿ ಕೈ ಬೆರಳಿಗೆ ಆ ಕ್ಷಣವೇ ಅಪ್ಪಣೆ ಮಾಡಿ ಆ ಮುಳ್ಳನ್ನು ಕೀಳಿಸಿ ಸುಖವನ್ನುಂಟುಮಾಡುವುದು. ಒಂದು ವೇಳೆ ಕೈಯು ತನ್ನ ಕರ್ತವ್ಯವನ್ನು ಮಾಡದೆ ಬಿಟ್ಟರೆ, ಅದರ ಪರಿಣಾಮವು ಎಲ್ಲ ಶರೀರದ ಮೇಲೆ ಆಗುವುದು. ತದ್ವತು ಈ ಮಹಾ ಸಭೆಗಳಲ್ಲಿ ಮಹಾ ಮಹಾ ಕುಲಗುರುಗಳೂ, ಅನುಭವವೃದ್ಧರೂ, ಪಂಡಿತರೂ, ಶಾಸ್ತ್ರಿಗಳೂ ಅನುಭವಸಿದ್ಧ ಹಾಗು ಸಮಾಜಸುಧಾರಣೆಯ ಸುಲಭೋಪಾಯಗಳನ್ನು ಮಹಾಸಭೆಗಳ ಪತಿಯಿಂದ ವ್ಯಾಖ್ಯಾನ ರೂಪವಾಗಿ ಕೊಟ್ಟಿರುವರು, ಕೊಡುತ್ತಿರುವರು ಮತ್ತು ಕೊಡುವರು. ಆಯಾಕಾಲಕ್ಕೆ ಪ್ರೇಕ್ಷಕವೃಂದವು ಬೇರೆ ವಿಷಯಗಳಲ್ಲಿ ತೊಡಗಿ ಯಾರು ಏನು ಮಾತಾಡಿದರೂ ಅದರ ಉಪಯುಕ್ತತೆಯನ್ನೂ ತನ್ನ ವಿಚಾರ ಶಕ್ತಿಯನ್ನೂ ಅದರಲ್ಲಿ ಹಾಕಿ ಸಾಧಕ ಬಾಧಕ ಚರ್ಚೆ ಮಾಡದೆ ರೋಮಟಕ್ಕಣವು ಒಂದೇ ದಿವಸದಲ್ಲಿ ಕಟ್ಟಿ ಮುಗಿಯಬೇಕು; ಅಕ್ರೋಡದ ಗಿಡವು ೩ ತಿಂಗಳಲ್ಲಿಯೇ ಫಲವನ್ನು ಈಯಬೇಕು; ಹೀಗೆಯೇ ಹನ್ನೆರಡು ವರುಷ ಶಿವಕಥೆಯನ್ನು ಕೇಳಿ ಕಡೆಗೆ ಶಿವನು ಪಾರ್ವತಿಗೆ ಏನಾಗಬೇಕೆಂದು ಕೇಳುವ ಮಹನೀಯರಿಗೆ ಬುದ್ಧಿ ಹೇಳುವದೂ, ಉಸುಬಿನಿಂದ ಎಣ್ಣೆಯನ್ನು ತೆಗೆಯುವದೂ ಒಂದೇ ಎಂದರೆ ಅತಿಶಯೋಕ್ತಿಯಾಗದು. ಯಾವ ಸಮಾಜದ ಧರ್ಮಜಾಗ್ರತೆ, ವ್ಯಾವಹಾರಿಕ ಸುಧಾರಣೆ, ಶಿಕ್ಷಣ ಇವುಗಳ ಪ್ರಸಾರವು ಮುಖಂಡರ ಉತ್ಪಾದಕರ ಮೇಲೆ ವಿಶೇಷವಾಗಿರದೆ, ಆಯಾ ಸಮಾಜಕ್ಕೆ ಸೇರಿದ ಪ್ರತಿಯೊಬ್ಬನಿಗೂ ಉಂಟು. ಈ ರೀತಿ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಸಮಾಜದ ಏಳ್ಗೆಯ ಬಗ್ಗೆ ಸಾರಾಸಾರ ವಿಚಾರದಿಂದ ಮಾಡಿದರೆ, ನಾವು ಹೆಚ್ಚು ಧರ್ಮನಿಷ್ಠರೂ, ಆಚಾರ ಉತ್ಕಟರೂ, ರಾಜನಿಷ್ಠರೂ, ಕಪಟಿಗಳ ಮತ್ತು ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ಅನ್ಯರನ್ನು ಉಬ್ಬಿಸಿ ಸಂಶಯಕ್ಕೆ ಗುರಿಮಾಡುವವರಿಂದ ದೂರವಾಗಿರುವವರೂ, ನಮ್ಮನ್ನಾಳುವ ಸಾರ್ವಭೌಮರ ರಾಜ್ಯದಾಳಿತದಲ್ಲಿ ಸಹಾನುಭೂತಿಯುಳ್ಳವರೂ, ಸಹಾಯಕರೂ ಆಗಿ ನಿಜವಾದ ನಾಗರಿಕರಾಗುವೆವು ಎಂಬುದರಲ್ಲಿ ಸಂದೇಹವೇ ಉಳಿಯಲಾರದು. ಆದುದರಿಂದ ಈ ವರ್ಷ ಕೂಡತಕ್ಕ ಸಭೆಯಲ್ಲಿ ಮಹಾ ಸಭೆಯು ಪ್ರಾರಂಭವಾದಂದಿನಿಂದ ಸುಧಾರಣೆಯು ಎಲ್ಲಿಯವರೆಗೆ ಬಂದಿರುವುದೆಂಬುದನ್ನು ಮಹಾಸಭೆಯ ಅಧ್ಯಕ್ಷರ ಮುಂದೆ ಇಡುವುದೇ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಕಾರಣ ಯಾವತ್ತು ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿಯ ಮೆಂಬರರು ತಂತಮ್ಮ ಭಾಗಗಳಲ್ಲಿ ಏನೇನು ಸುಧಾರಣೆಯನ್ನು ಮಾಡಿರುವರೋ ಅದರ ವಿವರ ಅಥವಾ ವಾರ್ಷಿಕ ರಿಪೋರ್ಟಗಳನ್ನು ಬರೆದು ಡಿಸೆಂಬರ್ ತಿಂಗಳ ೧ ನೆಯ ತಾರೀಖಿನೊಳಗಾಗಿ ೬ ನೆಯ ವೀರಶೈವ ಮಹಾಸಭೆಯ ಚೀಫ್ ಸೆಕ್ರೆಟರಿಯವರ ಬೆಳಗಾಂವಿ ಆಫೀಸಿಗೆ ಕಳುಹಿಸುವ ಕೃಪೆಯಾಗಬೇಕು. ಈ ಪ್ರಕಾರದ ರಿಪೋರ್ಟನ್ನು ಅಧಿಕಾರದಿಂದ ಕೇಳುವ ಹಕ್ಕು ಅವರಿಗಿಲ್ಲವಾದಾಗ್ಗ್ಯೂ ಪ್ರೀತಿಯಿಂದಲೂ, ಸಮಾಜದ ಹಿತಕ್ಕಾಗಿಯೂ ವೀರಶೈವ ಬಂಧುತನದಿಂದ ಆ ಹಕ್ಕು ನಿಮ್ಮೆಲ್ಲರ ಮೇಲಿನ ಅಂತಃಕರಣದಿಂದ ಬಂದಿರುವುದು. ಈ ಆಶೆಯನ್ನು ತಾವು ದಯವಿಟ್ಟು ಪೂರೈಸಿ ಸಮಾಜವೃದ್ಧಿಗಾಗಿಟ್ಟುಕೊಂಡಿರುವ ಮಹಾಸಭೆಯ ಕಾರ್ಯಕ್ಕೆ ನೆರವಾಗಿರಿ.

೧. ಅದರಂತೆ ಶ್ರೀ ಶಿವಯೋಗಮಂದಿರದ ಮ್ಯಾನೇಜಿಂಗ್ ಕಮಿಟಿಯವರು ತಮ್ಮ ವಾರ್ಷಿಕ ಅಥಾವೆ ಪಟ್ಟಿಯನ್ನು ಗೋಷವಾರೆ ಅಥವಾ ಜನರಲ್ ರಿಪೋರ್ಟನ್ನು ೨. ವೀರಶೈವರಿಂದ ಸ್ಥಾಪಿಸಲ್ಪಟ್ಟ ಬೋರ್ಡಿಂಗದವರು ೩. ಸಂಸ್ಕೃತ ಶಾಲೆಗಳ ವ್ಯವಸ್ಥಾಪಕರೂ ೪ ನಮ್ಮ ಸಮಾಜದಲ್ಲಿ ಹೊರಡತಕ್ಕ ಸ್ಟಾರ್ ಪತ್ರಕಾರರೂ, ೫. ಮಾಸಿಕ ಪುಸ್ತಕಕಾರರೂ, ೬. ಜಿಲ್ಲಾ, ತಾಲ್ಲೂಕು ಗ್ರಾಮ ಕಮಿಟಿಗಳನ್ನು ಸ್ಥಾಪನೆಮಾಡಿ ಅವುಗಳ ಮುಖೇನ ಮತ ಸುಧಾರಕರಾಗಿರುವರೂ, ೭. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವಂತದ ವೀರಶೈವ ವಿದ್ಯಾರ್ಥಿಗಳಿಗಾಗಿ ಕೊಡುವ ಕುರಿತು ಪ್ರೋತ್ಸಾಹವನ್ನು ಕೊಟ್ಟವರೂ, ಫಂಡುಕೂಡಿಸಿದವರೂ, ೮. ಕೊ ಆಪರೇಟಿವ್ ಕ್ರೆಡಿಟ ಸೊಸೈಟಿ, ಸ್ಟೋರ್ಸ್, ಬ್ಯಾಂಕ್ಸ್, ಜಿನ್ಸ, ಸಂಘ ನಿರ್ಮಾಣ, ೯. ಅಗ್ರಿಕಲಚರ ಅಸೋಸಿಏಷನ್ಸ್, ೧೦. ಧರ್ಮ ಸಂಬಂಧದ ವ್ಯಾಜ್ಯಗಳನ್ನು ಪಂಚರ ಮುಖಾಂತರ ತೀರಿಸಿದ್ದು, ೧೧. ಬೇರೆ ರೀತಿಯಿಂದ ಸಮಾಜದ ಉನ್ನತಿಗಾಗಿ ಏರ್ಪಡಿಸಲ್ಪಟ್ಟ ಸಂಸ್ಥೆಗಳ ವ್ಯವಸ್ಥಾಪಕರು, ೧೨. ಮಹಾಸಭೆಯ ಜನರಲ್ ಸೆಕ್ರೆಟರಿಯವರು ಹಿಂದಕ್ಕೆ ಆಗಿರುವ ಮಹಾಸಭೆಗಳ ಆದಾಯವ್ಯಯದಲ್ಲಿ ಪ್ರತಿಸಭೆಯಿಂದ ನೇಮಕ್ಕನುಸಾರವಾಗಿ ಮಹಾಸಭೆಗಾಗಿ ಬಂದ ರಕಮು ಅದರ ಖರ್ಚು ಇವರದೊಂದು ರಿಪೋರ್ಟನ್ನು ತಿಳಿಸುವ ಕೃಪೆಯಾಗಬೇಕು. ಮಹಾ ಸಭೆಯು ಆದಾಯದ ಗೋಷವಾರೆನ ರಿಪೋರ್ಟು ಈ ಪ್ರಕಾರಾ ಮಹಾಸಭೆಯನ್ನು ಕೂಡಿಸಲಾರಂಭಿಸಿದಂದಿನಿಂದ ಈ ವರೆಗೆ ಸಮಾಜೋನ್ನತಿಯಪರವಾಗಿ ಮುಖಂಡರು, ಧನವಂತರು, ಬಡವರು, ಸೆಕ್ರೆಟರಿಗಳು, ಶೆಟ್ಟರು, ವ್ಯಾಪಾರಧುರೀಣರು, ಸ್ವಾಮಿಗಳು, ವಿರಕ್ತರು, ಸಿಂಹಾಸನಾಧಿಪತಿಗಳು, ಸಂಸ್ಥಾನಿಕರು ತಂತಮ್ಮ ಮನೆ, ಊರು ಹಳ್ಳಿ, ತಾಲ್ಕು, ಜಿಲ್ಲಾ, ಪ್ರಾಂತ್ಯಗಳಲ್ಲಿ ಮಾಡಿದ ಏರ್ಪಾಡಿನ ರಿಪೋರ್ಟನ್ನು ಸಮಾಜದ ಹಿತಕ್ಕಾಗಿ ಸ್ವಲ್ಪ ತ್ರಾಸದಾಗ್ಯೂ ಲಕ್ಷಕ್ಕೆ ತಾರದೆ, ಕಳಿಸಿಕೊಡುವ ಕೃಪೆಮಾಡಬೇಕು. ಯಾಕೆಂದರೆ, ಈ ಯಾವತ್ತು ರಿಪೋರ್ಟನ್ನು ಹುಡುಕಿಸಿ ಅವುಗಳ ಸಾರವನ್ನು ತೆಗೆದು ಮಹಾಸಭೆಯ ಕಾಲಕ್ಕೆ ರಿಪೋರ್ಟನ್ನು ಸಿದ್ಧಮಾಡುವುದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿರುವೆವು. ಅದನ್ನು ಪೂರೈಸಿಕೊಡುವ ಭಾರವು ತಮ್ಮೆಲ್ಲರನ್ನೂ ಕೂಡಿರುವುದು. ೧೩ ಅದರಂತೆ ಧರ್ಮೋಪದೇಶಕರು, ಶಿವಕೀರ್ತನಕಾರರು ಯಾವ ಯಾವ ಗ್ರಾಮಗಳಿಗೆ ಹೋಗಿ ಏನೇನು ಸುಧಾರಣೆಮಾಡಿದರು? ಇದರ ರಿಪೋರ್ಟನ್ನು ಕಳಿಸುವ ಕೃಪೆಮಾಡಬೇಕು. ಈ ಸಾರಿ ಬೆಳಗಾವಿಯಲ್ಲಿ ಈ ಎಲ್ಲ ವಿಷಯಗಳ ವಿವೇಚನೆಯು ಸಾಧ್ಯವಾದಮಟ್ಟಿಗೆ ಮಾಡಿ ಸಬ್‌ಜೆಕ್ಟ್ ಕಮಿಟಿಯವರ ಮುಂದೆ ಇಟ್ಟು ಅವರ ಮುಖಾಂತರ ಸಮಾಜದ ಬಗ್ಗೆ ಮನಮುಟ್ಟಿ ಕೆಲಸಮಾಡುವವರ ಉಪಕಾರವನ್ನು ಸ್ಮರಿಸುವುದರಲ್ಲಿ ಬರುವುದಲ್ಲದೆ, ಪಾಸಾದ ವಿಷಯಗಳು ಅಮಲಿನಲ್ಲಿ ಯಾವ ಕಾರಣದಿಂದ ಬಾರದೇ ನಿಂತವುಗಳ ಬಗ್ಗೆ ಯೋಗ್ಯವ್ಯವಸ್ಥೆ ಮಾಡುವುದರಲ್ಲಿ ಬರುವುದು. ಅದರಿಂದ ಯಾವತ್ತು ಸ್ಟ್ಯಾಂಡಿಗ್ ಕಮಿಟಿಯ ಮೆಂಬರರು ತಮ್ಮ ತಮ್ಮ ಭಾಗದ ಕೆಲಸಗಳನ್ನು ತೀವ್ರತಯಾರಿಸಿ ರಿಪೋರ್ಟನ್ನು ತಿಳಿಸಿ ವಿಶೇಷವಾಗಿ ಡೇಲಿಗೇಟರರನ್ನೂ, ಪ್ರೇಕ್ಷಕರನ್ನೂ ಸಭೆಗೆ ಬರಮಾಡಬೇಕು. ಹಾಗು ಈ ಸಾರಿ ಮಹಾಸಭೆಯ ಪತಿಯಿಂದ ಅನೇಕ ಸಬ್ ಕಮಿಟಿಗಳನ್ನು ಆಯಾಯ ಕೆಲಸಗಳನ್ನು ಬಗೆಹರಿಸುವುದಕ್ಕಾಗಿ ನೇಮಿಸಬೇಕಾಗಿದೆ. ನಾವೇ ನಮ್ಮ ಸಮಾಜವನ್ನು ಸುಧಾರಿಸಬೇಕೇ ಹೊರತು ಅನ್ಯರು ಮಾಡಲಾರರು "God will help to those who will help themselves" ಎಂಬ ಗಾದೆಯಂತೆ ಪರಮತಸ್ಥರು ಈ ಭರತಖಂಡದಲ್ಲಿ ಎಷ್ಟು ಮುಂದಕ್ಕೆ ಬಂದಿರುವರೋ ಇದನ್ನು ಇನ್ನುಮೇಲಾದರೂ ನಾವು ಕಣ್ದೆರೆದು ನೋಡಿ ನಾವು ಎಷ್ಟು ವಿಷಯಗಳಲ್ಲಿ ಎಷ್ಟು ಹಿಂದುಳಿದಿರುವೆವು ಎಂಬದನ್ನು ನೋಡಿ ಅವರಂತೆ ನಾವೂ ನಮ್ಮನ್ನು ಸುಸಂಸ್ಕೃತರನ್ನಾಗಿ ಮಾಡಿಕೊಳ್ಳುವ ವೇಳೆಯು ಆಂಗ್ಲಪ್ರಭುಗಳ ಛತ್ರದ ಕೆಳಗೇ ಇರುವುದನ್ನು ಬೇರೆಯಾಗಿ ಹೇಳುವ ಪ್ರಯೋಜನವಿಲ್ಲಾ. ನಮ್ಮ ಪರಮ ಪೂಜ್ಯ ಶ್ರೀಮನ್ ಮಹಾರಾಜ ನಿರಂಜನ ಚಿನ್ಮೂಲಾದ್ರಿಶೂನ್ಯ ಸಿಂಹಾಸನಾಧಿಪತಿಗಳಾದ ಜಯದೇವಮುರುಘರಾಜೇಂದ್ರ ಮಹಾಸ್ವಾಮಿ ಜಗದ್ಗುರು ಚಿತ್ರಕಲ್‌ದುರ್ಗ ಇವರು ಕೊಲ್ಲಾಪುರ ಶ್ರೀಮನ್ ಮಹಾರಾಜರವರಿಂದ ಮನ್ನಣೆಯನ್ನು ಪಡೆದು ೯೦೦೦ ರೂಪಾಯಿ ವೆಚ್ಚವಾಗುವ ಒಂದು ಮಠವನ್ನು ಕೊಲ್ಲಾಪುರದಲ್ಲಿ ಶ್ರೀಮನ್ ಮಹಾರಾಜ ಛತ್ರಪತಿಗಳಿಂದ ಕೊಡಲ್ಪಟ್ಟ ಜಾಗದಲ್ಲಿ ಕಟ್ಟಿಸಲು ಪ್ರಾರಂಭಮಾಡಿರುವುದು ತಮ್ಮೆಲ್ಲರಿಗೆ ಗೊತ್ತಿರಬಹುದು. ಅದು ಮುಗಿದ ನಂತರ ಅದರ ಉಪಯುಕ್ತತೆಯು ನಮ್ಮ ಸಮಾಜಕ್ಕೆ ಎಷ್ಟಾಗುವದೆಂಬುದನ್ನು ಈಗಲೇ ನಾವು ಹೇಳಿದಾಗ್ಯೂ ಕೈಯೊಳಗಿನ ಕಂಕಣ ನೋಡಲಿಕ್ಕೆ ಕನ್ನಡಿಯು ಬೇಕಿಲ್ಲಾ. ಮಹಾಸಭೆಯಲ್ಲಿಯ ವಿಷಯಗಳೂ ಆಮಂತ್ರಣ ಪತ್ರಗಳೂ ತೀವ್ರವಾಗಿಯೇ ಕಳುಹಲ್ಪಡುವವು. ಈ ಸಭೆಗೆ ಪುಂಗನೂರು ದೊರೆಗಳನ್ನ ಅಧ್ಯಕ್ಷರನ್ನಾಗಿ ಮಾಡುವುದಕ್ಕಾಗಿ ಸ್ಟ್ಯಾಂಡಿಂಗ್ ಕಮಿಟಿಯ ಚೇರ್‌ಮನ್ನರವರ ಮುಖಾಂತರ ಪತ್ರವನ್ನು ಕಳಿಸಿದ ದಿವಸವೇ ನಮ್ಮ ಸಮಾಜದ ದುರ್ದೈವದಿಂದ ಅದೇ ದಿವಸ ಅವರು ಶಿವಾಧೀನರಾದ ತಂತಿಯ ವರ್ತಮಾನವು ಬಂದುದಕ್ಕೆ ನಾವು ತುಂಬಾ ವಿಷಾದಪಡುವೆವಲ್ಲದೆ ಆ ದೊರೆಗಳ ಹಿಂದುಳಿದ ಅವರ ಕುಟುಂಬದವರಿಗೆ ಈ ಭಯಂಕರ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಟ್ಟು ಅವರ ಆಯುಷ್ಯವು ವೃದ್ಧಿಗೊಳ್ಳಲೆಂದೂ ಗತಿಸಿದ ದೊರೆಗಳಿಗೆ ಜೀವನ್ಮುಕ್ತಿ ಆಗಲೆಂದೂ ಪರಶಿವನನ್ನು ಅನನ್ಯಭಾವದಿಂದ ಬೇಡಿಕೊಳ್ಳುವೆವು.

ಇನ್ನು ಈ ಸಭೆಗೆ ಅಧ್ಯಕ್ಷರನ್ನು ಆರಿಸುವ ಕುರಿತು ವಿಚಾರ ನಡೆದಿದ್ದು ತೀವ್ರದಲ್ಲಿಯೇ ಸಬ್‌ಜೆಕ್ಟ ಕಮಿಟಿಯವರ ಪರವಾಗಿ ಸ್ಟ್ಯಾಂಡಿಂಗ್ ಕಮಿಟಿಯ ಚೇರ್‌ಮನರು ವೀರಶೈವ ವೃಂದಕ್ಕೆ ಕ್ಷಿಪ್ರದಲ್ಲಿಯೇ ತಿಳಿಸುವರು.

ಇನ್ನು ಮಹಾಸಭೆಯ ಮಂಟಪ, ಸ್ಥಲ, ಲೊಜಿಂಗ್, ಬೋರ್ಡಿಂಗ್ ವಗೈರೆ ಏರ್ಪಾಟಿನ ಕೆಲಸಗಳನ್ನು ತೀವ್ರದಲ್ಲಿಯೇ ನಮ್ಮ ಪ್ರಿಯ ಸ್ಟಾರ್ ಪತ್ರದ ದ್ವಾರಾ ಪ್ರಸಿದ್ಧಪಡಿಸುವೆವು.

ಸದರ್ನ ಮರಾಟಾ ರೈಲ್ವೆಯ ಜನರಲ್ ಟ್ರಾಫಿಕ್ ಮ್ಯಾನೇಜರ ಸಾಹೇಬ್ ಬಹದ್ದೂರರವರ ಕಡೆಗೆ ೩ ನೆಯ ವರ್ಗದ ಪ್ಯಾಸೆಂಜರಗಳಿಗೆ ಸೌಲಭ್ಯ ಸಿಗಬೇಕೆಂತಲೂ ಮಂಟಪದ ಸಮೀಪದಲ್ಲೇ ಹಂಗಾಮಿ ಸ್ಟೇಶನವಾಗಬೇಕೆಂತಲೂ ಅರ್ಜಿಮಾಡಿರುತ್ತದೆ. ಅದರ ಉತ್ತರ ಏನುಬರುವುದೋ ನೋಡಿ ಪ್ರಸಿದ್ಧಪಡಿಸುವೆವು. ಅದರಂತೆ ಪುಣೆ ಅಗ್ರಿಕಲಚರ ಕಾಲೇಜದ ಪ್ರಿನ್ಸಿಪಾಲ ಡಾಕ್ಟರ ಹೆರಲ್ಡ್‌ಮ್ಯಾನ ಸಾಹೇಬ್ ಬಹದ್ದೂರ್‌ರವರಿಗೂ ಕೋ ಆಪರೇಟಿವ್ ಕ್ರೆಡಿಟ ಸೊಸೈಟಿಯ ರಜಿಸ್ಟ್ರಾರ್ ಮ|| ಸಿ. ಎಸ್. ಕ್ಯಾಂಬೆಲ್ ಸಾಹೇಬ್ ಬಹದ್ದೂರ್‌ರವರಿಗೂ ಈ ಸಭೆಗೆ ತಾವೂ ಬರುವುದಲ್ಲದೆ ಪ್ರಸಿದ್ಧವ್ಯಾಖ್ಯಾತರನ್ನ ಆಯಾ ವಿಷಯಗಳ ಬಗ್ಗೆ ತಿಳಿಸಲಿಕ್ಕೆ ವಿನಂತಿಯನ್ನು ಮಾಡಿಕೊಂಡಿರುತ್ತೇವೆ.

ಈ ಎಲ್ಲ ವ್ಯವಸ್ಥೆಗಳ ಮೇಲಿಂದ ೬ ನೆಯ ಮಹಾಸಭೆಯ ಕೆಲಸವು ಯಾವ ರೀತಿಯಾಗಿ ಜರುಗಿರುವುದೆಂಬುದನ್ನು ಅಭಿಮಾನಿಗಳೂ, ಕರ್ತವ್ಯದಕ್ಷರೂ ಆದ ವೀರಶೈವ ಮಹನೀಯರೆಲ್ಲರೂ ಯೋಚಿಸತಕ್ಕದ್ದಾಗಿದೆ.

ಶಿವಮೂರ್ತಿಸ್ವಾಮಿ ಕಣಬರಗಿ ಮಠ.
ಚೀಫ್ ಸೆಕ್ರೆಟರಿ ೬ ನೆಯ ವೀರಶೈವ
ಮಹಾಸಭೆ ಬೆಳಗಾಂ.

ಸಿಂಗಿರಾಜಪುರಾಣವಿಜಯಂ

2

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೇ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೯೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ,
ಹಳೆಅಗ್ರಹಾರ, ದಿವಟಿಗೆಬೀದಿ
ಮೈಸೂರು.

2 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವನ್ನು
ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೋಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮೂಡಗಾಂವ್ಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

ಉತ್ತಮ ಗ್ರಂಥಗಳು.

13

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣಿಯಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಕಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

60

ಲೋಕಾಮೃತಸುಂದರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಕೈ ಕಾಲು ಜೋಡಿತ (ಬಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಿಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಏಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರೆಗೆ ೧-೧೦-೦.

ಇವರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

9

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೇರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಣಪೆಟ್ಟಿನಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. [illegible] ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪರ್ಪಟರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯು ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ಸಂ. ೫೫ "ಅಂಜೇರಾರ್ಕಮಧು ಕಂಪನಿ"
ಧಾರವಾಡ ಪೋಸ್ಟು. ಡಿಸ್ಟ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗರಡಿಯಾರದ ಚೌಕ
ಮೈಸೂರು.

64

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾತ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೆಯ ಇಸವಿ ನವಂಬರ್ ತಾ|| ೧೩ ರಿಂದ ೧೯೧೧ ನೆಯ ನವಂಬರ್ ತಾ|| ೧೯ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಬ|| ಸಪ್ತಮಿಯಿಂದ ಕಾರ್ತಿಕ ಬ|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲ ತೇದಿ
13	[1]ಸೋಮ	ಸ	53-50	ಆಶ್ಲೇಷೆ	38-38	28
14	ಮಂಗ	ನ	49-49	ಮಖೆ	37-2	29
15	[2]ಬುಧ	ದ	45-58	ಪುಬ್ಬೆ	33-40	30
16	[3]ಗುರು	ಏ	43-18	ಉತ್ತರೆ	32-20	1
17	ಶುಕ್ರ	ದ್ವಾ	41-58	ಹಸ್ತೆ	32-22	2
18	ಶನಿ	ತ್ರ	41-39	ಚಿತ್ತೆ	31-24	3
19	ಭಾನು	ಚ	43-3	ಸ್ವಾತಿ	35-50	4

(1) ಕಾರ್ತೀಕ ಸೋಮವಾರಂ. (2) ಶ್ರೀರಂಗಪಟ್ಟಣದಲ್ಲಿ ಅಮೃತತೀರ್ಥೋತ್ಸವ. (3) ಸರ್ವತ್ರ್ಯೇಕಾದಶಿ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 184

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸೆ ೧೯೧೧ ನೆಯ ಇಸವಿ ನವಂಬರ್ ತಾರೀಖು ೨೦ ನೆಯ ಸೋಮವಾರ. [ಸಂಚಿಕೆ ೪೭

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೦)

9

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:- ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ.

ಊದಬತ್ತಿಗಳು.

37

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೦-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

21 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಚಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಚರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂಬೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಜಿಕೆ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಸಂಕೇತಶ್ಲೋಕಶತಕಂ	೦-೧-೦

ಅಂಚೆ ವೆಚ್ಚ ಬೇರೆ.

೨೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

24

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವಸೂಚಕ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

14

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ಲಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೬೦ ಪುಟಗಳು ಬರುವುವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
[illegible] ಮೈಸೂರು

ಇಲ್ಲಿನೋಡಿ ವಿಶೇಷ ಸೂಚನೆಗಳು !

5

ಕಾಶೀವಿಶ್ವೇಶ್ವರಪ್ರಸನ್ನ.

KASHI VISHWESHWAR
S.U.N. & CO
BENARES CITY

ಅಗ್ಗವಾದಮೊಲಂಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವೂ ಉಡುವಮಡಿ ಯಾವುದು ? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಿಹೊಂದಿರುವ ಮಡಿಯಾವುದು ? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ಆಗಿಯೂ ನೋಡುವುದಕ್ಕೆ ಮನೋರಂಜಕವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೆ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ ! ಬಿಡಬೇಡಿರಿ !! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು, ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳೂ, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟ್ಯಾಂಪು ಕಳುಹಿಸಿದಲ್ಲಿ. ೧ ಕ್ಯಾಟ್ಲಾಗು ೪ ಸಾದಾಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳುಹಿಸಲಾಗುವುದು. ವಿಳಾಸವನ್ನು ಚನ್ನಾಗಿ ಬರೆಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಚಾರ್ಯ ಅಂಡ್ ಕೋ
ಬನಾರಸ್ ಸಿಟಿ, ಶ್ರೀ ಕ್ಷೇತ್ರಕಾಶಿ.
S. U. N. & Co,
Silk Weaving Manufacturers
Benares City. (V. P.)

ಸೌಗಂಧಿಕಾಪರಿಣಯ.

(ಸೆಪ್ಟೆಂಬರ್ ತಾ॥ ೨೫ರ ಸಂಚಿಕೆಯಿಂದ)

(ಮುಂದುವರಿದುದು)

ಇದರಲ್ಲಿಯೇ ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರ ಮೊದಲಾದವರು ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಂ ಸಾಧಿಸುವವರಾಗಿರುವರು. ಮಿಕ್ಕಾದಖಂಡಗಳು ಇಲ್ಲಿ ಮಾಡಿದ ಪುಣ್ಯಕ್ಕೆ ಫಲರೂಪವಾದ ಭೋಗವಂ ಅನುಭವಿಸುವುದಕ್ಕೆ ಯೋಗ್ಯವಾದ ಸ್ಥಲಂಗಳು. ಈ ಭರತಖಂಡದಲ್ಲಿ ಮಹೇಂದ್ರ, ಮಲಯ, ಶುಕ್ತಿಮಂತ, ಋಕ್ಷ, ಸಹ್ಯ, ವಿಂಧ್ಯ, ಪಾರಿಯಾತ್ರಗಳೆಂಬ ಸಪ್ತಕುಲಾಚಲಂಗಳಿರುವವು. ಇಂತಲ್ಲದೇ ಗಂಗಾ, ಯಮುನಾ, ಸರಸ್ವತೀ, ನರ್ಮದಾ, ಸುರಸಾ, ಋಷಿಕುಲ್ಯಾ, ಗೋದಾವರಿ, ಕೃಷ್ಣವೇಣೀ, ತುಂಗಭದ್ರಾ ಕಾವೇರಿ ಭೀಮರಥೀ ಫಾಲ್ಗುನೀ ಗಂಡಕೀ ಗೋಮತೀ ಕಪಿಲಾ ನೇತ್ರಾವತೀ ಮಲಾಪಹಾರಿಣೀ ವೇಣಾ ಕೃತಮಾಲಾ ತಾಮ್ರಪರ್ಣೀ ವಾರುಣೀ ವ್ಯಾಪಿನೀ ತಾಪಿನೀ ಸ್ವರ್ಣವತೀ ವತ್ರಿಕಾ ಪೂರ್ಣಿಮಾ ವೇಗವತಿ ವಿಶೋಕಾ ಕೌಶಿಕೀ ಚಿತ್ರಾವತೀ ಕಾಕ್ಷಿಣೀ ಕರತೋಯಾ ಪುಣ್ಯದಾ ಕಾಮದಾ ಪಾವನೀ ಪಿನಾಕಿನೀ ಮೊದಲಾದ ಐನೂರು ನದಿಗಳು ಪರಮಪಾವನಂಗಳಾಗಿ ಪ್ರವಹಿಸುತ್ತಿರುವವು. ಇಂತು ಮಹಾಪವಿತ್ರವಾದ ಭರತಖಂಡಕ್ಕೆ ನರನಾರಾಯಣ ದೇವರ್ಷಿವರರೂ ಅಭಿಮಾನದೇವತೆಗಳಾಗಿರುವರು. ಈ ನವಖಂಡಗಳುಳ್ಳ ಜಂಬೂದ್ವೀಪವು ಲಕ್ಷಯೋಜನ ಪೂರ್ವ, ಪಶ್ಚಿಮ, ಲಕ್ಷಯೋಜನ ದಕ್ಷಿಣೋತ್ತರವಾಗಿರುವದು. ಇದರೊಳ್ ಭರತಖಂಡವು ಒಂಭತ್ತುಸಾವಿರ ಯೋಜನ ವಿಸ್ತಾರವಾಗಿರುವದು. ಇದರಲ್ಲಿ ಹಿಮವಂತವೆಂಬ ಮರ್ಯಾದಾ ಪರ್ವತವು ಯರಡು ಸಾವಿರ ಯೋಜನ ವಿಸ್ತಾರವುಳ್ಳದ್ದಾಗಿರುವದು. ಮಿಕ್ಕಾದ ಖಂಡಗಳು ಇದೇ ವಿಸ್ತಾರದಿಂದ ಇರುವವು. ಭರತಖಂಡದೊಳ್ ಹಿಮವಂತಪರ್ವತವಿರುವಂತೆ ಕಿಂಪುರುಷಖಂಡದಲ್ಲಿ ಹೇಮಕೂಟಪರ್ವತವು, ಹರಿಖಂಡದಲ್ಲಿ ನಿಷಧಪರ್ವತವು, ರಮಣಖಂಡದಲ್ಲಿ ನೀಲಪರ್ವತವು, ಹಿರಣ್ಮಯಖಂಡದಲ್ಲಿ ಶ್ವೇತಪರ್ವತವು, ಭದ್ರಾಶ್ವಖಂಡದಲ್ಲಿ ಗಂಧಮಾದನಪರ್ವತವು ಕೇತುಮಾಲಖಂಡದಲ್ಲಿ ಮಾಲ್ಯವಂತಪರ್ವತವು ಮರ್ಯಾದಾಪರ್ವತಂಗಳಾಗಿರುವವು. ಈ ಖಂಡಗಳ ಮಧ್ಯದೊಳ್ ಅಷ್ಟದಳಪದ್ಮದಲ್ಲಿ ಕರ್ಣಿಕೆ ವಿರಾಜಿಸಿದಂತೆ, ಇಳಾವೃತಖಂಡವು ಮೇರುಪರ್ವತವನ್ನೊಳಕೊಂಡು ಮೂವತ್ತನಾಲ್ಕು ಯೋಜನಗಳಿಂದ ವಿಸ್ತೀರ್ಣವಾಗಿರುವದು. ಅದರೊಳ್ ಬ್ರಹ್ಮಾಂಡಕಟಾಹವಂ ಭೇದಿಸಿಕೊಂಡು ಬರುವ ದೇವಗಂಗೆಯು ಮೇರುಪರ್ವತದ ಶಿಖರದೊಳ್ ಬಿದ್ದು ನಾಲ್ಕು ಭಾಗವಾಗಿ ನಾಲ್ಕು ಹೆಸರುಗಳಂ ಧರಿಸಿರುವಳು. ಅದರೊಳ್ ಸೀತಾ ಎಂಬ ನದಿಯು ಒಂದುಪಾರ್ಶ್ವದಲ್ಲಿರುವ ಕುರಂಗ ಕುರರ ವೈಕಂಕ ಕುಸುಂಭ ತ್ರಿಕೂಟಗಳೆಂಬ ಕೇಸರಪರ್ವತಗಳಂ ದಾಂಟಿ ಭದ್ರಾಶ್ವಖಂಡದಿಂದ ಸಮುದ್ರಗಾಮಿನಿಯಾಗುವದು. ಅಳಕನಂದಾ ಎಂಬ ನದಿಯು ಮತ್ತೊಂದು ಕಡೆಯೊಳಿರುವ ಪತಂಗ ಶಿಖರ ಉತ್ಸಂಗ ನಿಷಧ ಶಿತಿವಾಸಕವೆಂಬ ಕೇಸರಪರ್ವತಂಗಳಂ ದಾಂಟಿ ಭರತಖಂಡವನ್ನೈದಿ ಬಂಗಾಳ ದೇಶದೊಳ್ ಸಮುದ್ರಗಾಮಿನಿಯಾಗುವದು. ಚಕ್ಷುವೆಂಬ ಹೆಸರುಳ್ಳ ನದಿಯು ಕಪಿಲ ಶಂಖ ವೈಡೂರ್ಯ ಚಾರುಧಿ ಹಂಸವೆಂಬ ಕೇಸರಪರ್ವತಂಗಳಂ ದಾಂಟಿ ಕೇತುಮಾಲ ಖಂಡದಿಂದ ಸಾಗರವಂ ಹೊಂದುವದು. ಭದ್ರಾ ಎಂಬ ನದಿಯು ಶ್ವಪನಿರ ನಾಗ ಕಾಲಂಜರ ನಾರದವೆಂಬ ಕೇಸರಪರ್ವತಂಗಳಂ ದಾಂಟಿ ಕುರುವರ್ಷದಿಂದ ಸಮುದ್ರಗಾಮಿನಿಯಾಗುವದು. ಇಂತು ನಾಲ್ಕು ಕಡೆಯೊಳ್ ಗಂಗಾಪ್ರವಾಹಂಗಳಿಂದ ರಮಣೀಯವಾದ ಇಳಾವೃತಖಂಡದೊಳಿರುವ ಮೇರುವು ಹದಿನಾರು ಸಾವಿರ ಯೋಜನಭೂಮಿಯೊಳಗೂ, ಎಂಭತ್ತುನಾಲ್ಕು ಸಾವಿರ ಯೋಜನಭೂಮಿಯ ಮೇಲೂ ಕಾಣಿಸುತ ಅಂತೂ ಲಕ್ಷ ಯೋಜನ ಔನ್ನತ್ಯವಂ ತಾಳಿರುವದು. ಈ ಪರ್ವತದ ಉಪರಿಭಾಗವು ಮೂವತ್ತೆರಡು ಸಾವಿರ ಯೋಜನವಿಸ್ತೀರ್ಣವಾಗಿರುವದು. ಇಂತಿರುವ ಪರ್ವತಕ್ಕೆ ಉಪಷ್ಟಂಭಕ ಪರ್ವತಂಗಳಾದ ನಾಲ್ಕು ಪರ್ವತಂಗಳು ಹತ್ತು ಸಾವಿರಯೋಜನದ ಔನ್ನತ್ಯದಿಂ ಮತ್ತು ಹತ್ತುಸಾವಿರಯೋಜನದ ಅಗಲದಿಂ ಒಪ್ಪಿರುವವು. ಅದರೊಳ್ ಮಂದರಪರ್ವತದ ಮೇಲೆ ರಸಾಲವೃಕ್ಷವು ಪಯೋಹ್ರದವೆಂಬ ಮಡುವು ನಂದನವೆಂಬ ವನವೂ ಕೂಡಾ ಇರುವವು. ಮೇರುಮಂದರವೆಂಬ ಪರ್ವತದಮೇಲೆ ಜಂಬೂವೃಕ್ಷ ಮಧುಹ್ರದ ಚೈತ್ರರಥವೆಂಬ ವನ ಸಹ ಇರುವದು. ಈ ಜಂಬೂವೃಕ್ಷದ ಫಲಂಗಳ ರಸವೆ ಪ್ರವಾಹವಾಗಿ ಜಂಬೂನದಿಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುವದು. ಈ ನದಿಯ ಸುತ್ತಲೂ, ವಳಗೂ ಇರುವ ಮರಳೆಲ್ಲವೂ ಸಾವಿರ ಬಣ್ಣದಸುವರ್ಣವಾಗಿರುವವು. ಈ ಜಂಬೂವೃಕ್ಷದ ಹೆಸರಿಯಿಂದಲೇ ಈ ದ್ವೀಪವು ಜಂಬೂದ್ವೀಪವೆನಿಸಿತು. ಮತ್ತೊಂದು ಕಡೆಯೊಳಿರುವ ಸುಪಾರ್ಶ್ವವೆಂಬ ಪರ್ವತದ ಮೇಲೆ ಕದಂಬವೆಂಬ ವೃಕ್ಷವೂ ಇಕ್ಷುಸರಸ್ಸೆಂಬ ಮಡುವೂ, ವೈಭ್ರಾಜವೆಂಬ ವನವೂ ಇರುವವು. ಮತ್ತೊಂದುಕಡೆಯೊಳಿರುವ ಕುಮುದವೆಂಬ ಪರ್ವತದ ಮೇಲೆ ಆಲದಮರವೂ, ಅಮೃತದಮಡುವೂ, ಸರ್ವತೋಭದ್ರವೆಂಬ ವನವೂ ಸಹಾ ಇರುವವು. ಇವುಹೊರ್ತ ಮೇರುಪರ್ವತಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಸುತ್ತುವರಿದು ಎರಡೆರಡು ಪರ್ವತಗಳಿರುವವು ಅವು ಯಾವವೆಂದರೆ— ಒಂದು ಕಡೆಯಲ್ಲಿ ಜಠರ ದೇವಕೂಟವೆಂಬ ಪರ್ವತಗಳು, ಮತ್ತೊಂದು ಕಡೆಯೊಳ್ ಪವನಪಾರಿಯಾತ್ರವೆಂಬ ಪರ್ವತಗಳು, ಬೇರೊಂದು ಪಾರ್ಶ್ವದಲ್ಲಿ ಕೈಲಾಸಕರವೀರವೆಂಬ ಪರ್ವತಗಳು, ಇನ್ನೊಂದು ಭಾಗದೊಳ್ ಶೃಂಗವಂತ ಮಕರವಂತವೆಂಬ ಪರ್ವತಗಳು ಸಹಾ ಇರುವವು. ಇಂತು ಮಣಿಸುವರ್ಣಪರ್ವತಗಳಿಂದಲೂ, ಮಹಾನದಿಗಳಿಂದಲೂ, ಮಧುರರಸಗಳುಳ್ಳ ಮಡುಗಳಿಂದಲೂ, ಸರ್ವಕಾಲಗಳಲ್ಲಿಯೂ ಬೇಕಾದ ಪುಷ್ಪಗಳಿಂದಲೂ, ಫಲಂಗಳಿಂದಲೂ ತುಂಬಿದ ಉದ್ಯಾನಗಳಿಂದಲೂ ಸರ್ವದೇವತೆಗಳಿಗೂ ವಿಹಾರಸ್ಥಾನವಾದ ಇಳಾವೃತಖಂಡದೊಳ್ (ಶೇಷ.)

ಉಪಯುಕ್ತ ವಿಷಯಗಳು.

ಬೇವಿನ ಎಲೆಗಳನ್ನು ಬೇಸಿಗೆಯಲ್ಲಿ ಚೆನ್ನಾಗಿ ಒಣಗಿಸಿ, ಬಟ್ಟೆಗಳಮಧ್ಯದಲ್ಲಿ ಹರಡಿದರೆ ಬಟ್ಟೆಗಳಿಗೆ ನುಸಿ ಮೊದಲಾದ ಹುಳುಗಳು ಸ್ವಲ್ಪವಾದರೂ ಮುತ್ತುವುದಿಲ್ಲ. ಬೇವಿನ ಸೊಪ್ಪನ್ನು ಇಟ್ಟಿರುವ ಸ್ಥಳಕ್ಕೆ ಸೊಳ್ಳೆಗಳು ಬರುವದಿಲ್ಲವಂತೆ. ಒಣಗಿದ ಎಲೆಯನ್ನು ಪುಡಿಮಾಡಿ ಅದನ್ನು ಬೆಂಕಿಯಮೇಲೆ ಹಾಕಿದರೆ ಅದರಿಂದ ಹೊರಡತಕ್ಕ ವಾಸನೆಯು ಹುಳುಗಳನ್ನು ನಿರ್ಮೂಲ ಮಾಡಿಬಿಡುವುದು.

ಇಂಡಿಯಾ ದೇಶದಲ್ಲಿ ಸೋರೆಕಾಯನ್ನು ತರಕಾರಿಯಾಗಿಯೂ ಮತ್ತು ಅದರ ಬುರುಡೆಗಳನ್ನು ವೀಣೆ ಮೊದಲಾದ ವಾದ್ಯಗಳಿಗೂ, ಎಣ್ಣೆಯನ್ನು ತುಂಬಿಡುವದಕ್ಕೂ ಉಪಯೋಗಿಸುವರು. ಆದರೆ ಈಚೆಗೆ ಸೋರೆಕಾಯಿನಿಂದ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಸೇದುವ ಚುಂಗಾಣಿಗಳನ್ನು ಯೂರೋಪ್ ಮತ್ತು ಅಮೇರಿಕಾ ದೇಶಸ್ಥರು ಬಹಳವಾಗಿ ಉಪಯೋಗಿಸುತ್ತಿರುವರು. ಆದ್ದರಿಂದ ಇನ್ನು ಮುಂದೆ ಸೋರೆಕಾಯಿಗಳನ್ನು ಹೇರಳವಾಗಿ ಬೆಳೆದು ಚುಂಗಾಣಿಗಳನ್ನು ತಯಾರುಮಾಡಿ ಹೊರದೇಶಗಳಿಗೆ ಕಳುಹಿಸುವ ಒಂದು ಹೊಸ ಕೈಗಾರಿಕೆಯನ್ನು ಸ್ಥಾಪಿಸಬಹುದು.

ಇಂಗನ್ನು ನೀರಿನಲ್ಲಿ ಕದಡಿ ಗಿಡಗಳ ಸುತ್ತಲೂ ಚೆಲ್ಲಿದರೆ ಗೆಜ್ಜಲು ಹುಳುಗಳು ಗಿಡಗಳ ಸಮೀಪಕ್ಕೆ ಬಾರದೆ ದೂರವಾಗಿರುವವು. ಮನೆಗಳಲ್ಲಿ ಗೆಜ್ಜಲು ಹುಳುಗಳು ಮಂಗಮುಟ್ಟಗಳನ್ನು ಮತ್ತು ಬಟ್ಟೆಬರೆಗಳನ್ನು ಮುತ್ತಿದರೆ ಈ ರೀತಿ ಇಂಗಿನ ನೀರನ್ನು ಚೆಲ್ಲಿದರೆ ಗೆಜ್ಜಲು ಹುಳುಗಳು ಓಡಿಹೋಗುವದೇನೋಖಂಡಿತ. ಆದರೆ ಇಂಗಿನ ವಾಸನೆಯನ್ನು ಸಹಿಸಲಸಾಧ್ಯವಾಗುವುದು. ಇಂತಹ ಸಂದರ್ಭಗಳಲ್ಲಿ ಇಂಗಿಗೆಬದಲಾಗಿ ಉಗನೀಹಂಬಿನ ಬೇರನ್ನು ಚೆನ್ನಾಗಿ ಪುಡಿಮಾಡಿ ಗೆಜ್ಜಲು ಮುತ್ತತಕ್ಕ ಸ್ಥಳಗಳಲ್ಲಿ ಎರಚಿದರೆ ಗೆಜ್ಜಲು ಹುಳುಗಳೆಲ್ಲ ಓಡಿಹೋಗುವವು. ಅಲ್ಲದೆ ಈ ಬೇರಿನ ಪುಡಿಯ ಬಹಳ ಗಟ್ಟಿಯಾದ ಕಷಾಯವನ್ನು ಹುಳುಗಳ ಮೇಲೆ ಚೆಲ್ಲಿದರೆ ಅವುಗಳು ತಕ್ಷಣವೇ ಸತ್ತುಹೋಗುವುವು.

ಸೀಮೆಯ ಬಟಾಣಿಯನ್ನು ಜನರು ತಿನ್ನುವರೆಂದೂ, ಅದರ ಎಣ್ಣೆಯು ದೀಪಕ್ಕೂ, ಹಿಂಡಿಯು ದನಗಳ ಮೇವಿಗಾಗಿಯೂ ಉಪಯೋಗಿಸಲ್ಪಡುತ್ತಿರುವವಷ್ಟೆ. ಆದರೆ ಸೀಮೆಯ ಬಟಾಣಿಯು ಇತರ ಕೆಲಸಗಳಿಗೂ ಉಪಯೋಗವಾಗುವುದೆಂದು ಈಚೆಗೆ ತಿಳಿದುಬಂದಿದೆ. ಛತ್ರಿಗಳಿಗೆ ಉಪಯೋಗಿಸುವ ಬಟ್ಟೆಗಳೊಳಕ್ಕೆ ನೀರು ಇಳಿಯದಂತೆ ಮಾಡಲು ಈ ಬಟಾಣಿಯ ಎಣ್ಣೆಯನ್ನು ಉಪಯೋಗಿಸುವರು. ವಾರ್ನಿಷ್‌ಗಳನ್ನು ಮತ್ತು ಅಚ್ಚುಹಾಕಲು ಬೇಕಾಗುವ ಶಾಯಿಯನ್ನೂ ಇದರಿಂದ ತಯಾರಿಸಬಹುದು. ಜರ್ಮನಿಯವರು ಈ ಬಟಾಣಿಯ ಹಿಟ್ಟಿನಿಂದ ರೊಟ್ಟಿಯನ್ನು ಮಾಡುವರು. ಇಂಗ್ಲೀಷರು ಇದರಿಂದ ಬಹಳ ಶ್ರೇಷ್ಠವಾದ ಬಿಸ್ಕತ್ತುಗಳನ್ನು ಮಾಡುವರು. ಇದರ ಎಣ್ಣೆಯು ಸಾಬೂನುಗಳನ್ನೂ, ಮೇಣದಬತ್ತಿಗಳನ್ನೂ ತಯಾರುಮಾಡಲು ಉಪಯೋಗಿಸಲ್ಪಡುವುದು. ಅಲ್ಲದೆ ಫ್ರೆಂಚ್ ಜನರು ಕಾಫಿಬೀಜಕ್ಕೆ ಬದಲಾಗಿ ಸೀಮೆಯ ಬಟಾಣಿಯನ್ನೇ ಉಪಯೋಗಿಸುವರೆಂದು ತಿಳಿಯಬರುತ್ತದೆ.

ಲಂಡನ್ನಿನಲ್ಲಿ ಜರುಗಿದ ದಶರಾ ಮಹೋತ್ಸವವು.

ಲಂಡನ್ನಿನಲ್ಲಿ ವಿದ್ಯಾಭ್ಯಾಸಂಗವನ್ನು ಮಾಡುತ್ತಿರುವ ಭಾರತೀಯರು ಅಲ್ಲಿ ಈಗ್ಗೆ ೪ ವರ್ಷಗಳ ಕೆಳಗೆ ದಶರಾ ಉತ್ಸವವನ್ನು ಆರಂಭಿಸಿ, ಪ್ರತಿ ವರ್ಷದಲ್ಲೂ ವಿಜೃಂಭಣೆಯಿಂದ ನಡೆಯಿಸಿಕೊಂಡು ಬರುತ್ತಿರುವರು. ಈ ವರ್ಷದಲ್ಲಿ ಭಾರತೀಯರಾದ ಮಹಮ್ಮದೀಯರು, ಪಾರ್ಸಿಗಳು, ಬಂಗಾಳಿಗಳು, ಪಂಜಾಬಿಗಳು, ಸಿಖ್ಖರು, ಮಹಾರಾಷ್ಟ್ರದವರು [illegible] ಒಟ್ಟುಗೂಡಿ ಆಮಂತ್ರಣವನ್ನು ಕೊಟ್ಟು ಐರೋಪ್ಯರು ಮೊದಲಾದವರನ್ನು ಬರಮಾಡಿಕೊಂಡು ಉತ್ಸವವನ್ನು ವಿಶೇಷವಾಗಿ ನಡೆಸಿದರು. ಆಮಂತ್ರಣ ಪತ್ರಿಕೆಗಳಲ್ಲಿ ವಂದೇಮಾತರಂ ಎಂಬ ಶಿರೋಲೇಖನವಿದ್ದುದರಿಂದ, ಕೆಲ ಐರೋಪ್ಯರು ಅಸಮಾಧಾನಪಟ್ಟು ಬರಲಿಲ್ಲವು. ಈ ಮಹೋತ್ಸವ ಸಂಬಂಧವಾಗಿ ಅಮೇರಿಕದ ನ್ಯೂಯಾರ್ಕಿನಲ್ಲಿರುವ ಶ್ರೀ ರಾಮಕೃಷ್ಣ ಮಿಷನ್ನಿಗೆ ಸೇರಿದ ಬಾಬಾ ಪ್ರೇಮಾನಂದ ಭಾರತಿಯವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿಸಲ್ಪಟ್ಟಿದ್ದುದಲ್ಲದೆ, ಶಾಕುಂತಲ ನಾಟಕವು ಅಭಿನಯಿಸಲ್ಪಟ್ಟಿತು. ಈ ಪ್ರಯೋಗದಲ್ಲಿ ಮಹಮ್ಮದೀಯರು ಬಹು ಶ್ರದ್ಧೆಯನ್ನು ಪ್ರದರ್ಶಿಸಿದರಲ್ಲದೆ, ಒಬ್ಬ ಮಹಮ್ಮದೀಯನು ದುಷ್ಯಂತನ ಪಾತ್ರವನ್ನೂ, ಮತ್ತೆ ನಾಲ್ವರು ಮಹಮ್ಮದೀಯರು ಬೇರೆ ನಾಲ್ಕು ಪಾತ್ರಗಳನ್ನೂ ವಹಿಸಿದ್ದರು. ಈ ರೀತಿ ಮಹಮ್ಮದೀಯರೂ, ಹಿಂದೂಗಳೂ ತಂತಮ್ಮ ಮತವೈಶಮ್ಯವನ್ನು ಬಿಟ್ಟು ಸೋದರ ಭಾವದಿಂದ ವರ್ತಿಸುವುದು ತಮ್ಮ ಮಾತೃಸ್ಥಾನವಾದ ಭರತಖಂಡದ ಅಭ್ಯುದಯಕ್ಕೆ ಶುಭಸೂಚಕವಾಗಿದೆ.

ರಾಜಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣಮಾಡಿರುವುದು.

ನವೆಂಬರ್ ತಾ॥ ೧೧.—ಪ್ರಿನ್ಸ್‌ಆಫ್‌ವೇಲ್ಸರು ಮತ್ತು ಪ್ರಿನ್ಸೆಸ್ ಮೇರಿಯವರು ಇವರುಗಳೊಡನೆ ಚಕ್ರವರ್ತಿ ದಂಪತಿಗಳು ಕುದುರೆಯ ಬಂಡಿಯಲ್ಲಿ ಕುಳಿತು ಬಕಿಂಗ್ಹ್ಯಾಂ ಅರಮನೆಯಿಂದ ವಿಕ್ಟೋರಿಯಾ ರೈಲ್ವೆಯ ಸ್ಟೇಷನ್ನಿಗೆ ದಯಮಾಡಿಸಿದರು. ಮಾರ್ಗದ ಇಕ್ಕೆಲದಲ್ಲೂ ಜನರು ಸಾಲುಸಾಲಾಗಿ ನಿಂತುಕೊಂಡು ಜಯಘೋಷವನ್ನು ಮಾಡಿದರು. ಸ್ಟೇಷನ್ನಿನಲ್ಲಿ ರಾಜಕುಟುಂಬದವರು, ಮಂತ್ರಿದಂಪತಿಗಳು, ಮಂತ್ರಿಗಳ ಸಭಾಸದರು, ಕ್ಯಾಂಟರಬರಿಯ ಆರ್ಚಬಿಷಪ್‌ರವರು, ಬೇರೆ ಬೇರೆ ಸ್ವಾಸ್ಥ್ಯಗಳ ಪ್ರತಿನಿಧಿಗಳು ಮತ್ತು ಇಂಡಿಯಾ ಆಫೀಸಿನ ಅಧಿಕಾರಿಗಳು ನೆರೆದಿದ್ದರು. ಚಕ್ರವರ್ತಿದಂಪತಿಗಳು ಕುದುರೆಯ ಬಂಡಿಯನ್ನು ಇಳಿದು ಸ್ಟೇಷನ್ನಿನೊಳಗೆ ದಯಮಾಡುತಲೆ ಸೇನೆಯ ಮರ್ಯಾದೆಯೂ, ವಾದ್ಯಘೋಷವೂ ನಡೆದುವು. ಅನಂತರ ದಂಪತಿಗಳು ಕಾಲು ಗಂಟೆಯ ವರೆಗೆ ಮಂತ್ರಿ ಮೊದಲಾದವರೊಡನೆ ಸಲ್ಲಾಪಮಾಡಿ ಸಮೀಪಬಂಧುಗಳ ಸಮೇತ ಬಂಡಿಯಲ್ಲಿ ಕುಳಿತು ನೆರೆದಿದ್ದ ಜನರಿಂದೆಲ್ಲ ಬೀಳ್ಕೊಟ್ಟು ದಯಮಾಡಿಸಿದರು. ಜನರು ರಾಜದಂಪತಿಗಳಿಗೆ ಆರೋಗ್ಯವನ್ನೂ, ಸುಖಪ್ರಯಾಣವನ್ನೂ ದೇವರು ದಯಪಾಲಿಸಲೆಂದು ಪ್ರಾರ್ಥಿಸಿದರು. ಡ್ಯೂಕ್ ಆಫ್ ಕನಾಟ್‌ರವರೂ ರಾಜದಂಪತಿಗಳ ಕೂಡ ರೇವುಪಟ್ಟಣವಾದ ಪೋರ್ಟ್ಸ್‌ಮತ್ ವರೆಗೆ ಪ್ರಯಾಣಮಾಡಿ ಬಂದರು. ಪೋರ್ಟ್ಸ್‌ಮತ್ತಿನಲ್ಲಿ ರಾಜದಂಪತಿಗಳು ರೈಲು ಬಂಡಿಯನ್ನಿಳಿಯುತಲೆ ಸೇನೆಯವರು ಸುಭಾಗಮನವನ್ನು ಬಯಸಿ ವಾದ್ಯವನ್ನು ಭೋರ್ಗರಿಸಿದರು. ದಂಪತಿಗಳು ಅಲ್ಲಿಂದ ಮೆಡಿನಾ ಹಡಗನ್ನು ಹತ್ತುತಲೆ ರಾಜಧ್ವಜವು ಏರಿಸಲ್ಪಟ್ಟು ಗುಂಡುಗಳು ಹಾರಿಸಲ್ಪಟ್ಟುವು. ರಾಜಮಾತೆಯಾದ ಅಲೆಕ್ಸಾಂಡ್ರಾ ರಾಣಿಯವರು, ರಾಜಕುಮಾರಿಯರುಗಳು, ಪ್ರಿನ್ಸ್‌ಆಫ್‌ವೇಲ್ಸರು ಮೊದಲಾದ ರಾಜಬಂಧುಗಳೊಡನೆ ಚಕ್ರವರ್ತಿ ದಂಪತಿಗಳು ಹಡಗಿನಲ್ಲಿ ಊಟವನ್ನು ಮಾಡಿ, ರಾಜಕುಟುಂಬದವರು ಮೊದಲಾದವರಿಂದ ಬೀಳ್ಕೊಟ್ಟ ಮೇಲೆ ಮೆಡಿನಾ ಹಡಗು ಹೊರಟಿತು. ರಾಜಬಂಧುಗಳು ಒಂದು ಸಣ್ಣ ಹಡಗಿನ ಮೇಲೆ ನಿಂತು, ಮೆಡಿನಾ ಹಡಗು ಕಣ್ಣಿಗೆ ಕಾಣಿಸುವವರೆಗೂ ನೋಡುತ್ತಿದ್ದು ಕೈವಸ್ತ್ರಗಳನ್ನು ಬೀಸುತ್ತಿದ್ದರು. ಮೆಡಿನಾ ಹಡಗು ದಡವನ್ನು ಬಿಟ್ಟು ಹೊರಟಕೂಡಲೆ ಸಾಮಗ್ರಿಗಳನ್ನು ಸಾಗಿಸುವ ಒಂದು ಸಣ್ಣ ಹಡಗು ಸರಪಳಿಯನ್ನು ಬಿಚ್ಚಿಕೊಂಡು ಮೆಡಿನಾ ಹಡಗಿಗೆ ತಾಕಿಬಿಡಿತು. ಆದರೆ ಮೆಡಿನಾ ಹಡಗು ಅತಿ ಚಮತ್ಕೃತಿಯಿಂದ ನಡೆಸಲ್ಪಡುತಿದ್ದುದರಿಂದ, ಅದಕ್ಕೆ ಯಾವಬಾಧೆಯೂ ಆಗಲಿಲ್ಲವು. ಇಂಗ್ಲೀಷ ವೃತ್ತಪತ್ರಿಕೆಗಳೆಲ್ಲವೂ ಚಕ್ರವರ್ತಿ ದಂಪತಿಗಳ ಅಭೂತಪೂರ್ವವಾದ ಭರತಖಂಡದ ಪ್ರಯಾಣವು ಸುಖಪ್ರದವಾಗಿರಲೆಂದು ಪ್ರಾರ್ಥಿಸಿರುವುವು. ತುರ್ಕಿಯ ರಾಜ್ಯದವರಿಗೂ, ಇಟಲಿಯವರಿಗೂ ಯುದ್ಧವು ನಡೆಯುತ್ತಿರುವುದರಿಂದ, ಕೆಂಪುಕಡಲಿನಲ್ಲಿ ಅರಿಸಿರುವ ತಮ್ಮ ಕಡೆಯ ಹಡಗಳನ್ನು ಚಕ್ರವರ್ತಿ ದಂಪತಿಗಳ ಪ್ರಯಾಣಕಾಲದಲ್ಲಿ ಹೊತ್ತಿಸುವಂತೇರ್ಪಡಿಸಿರುವರು.

ತಾ॥ ೧೩.—ಬಿಸ್ಕೆಕೊಲ್ಲಿಯಲ್ಲಿ ಕಳೆದ ೨ ದಿವಸಗಳಿಂದಲೂ ಬಿರುಗಾಳಿಯು ಎದ್ದಿದ್ದುದರಿಂದ, ಪ್ರಭುದಂಪತಿ ಮೊದಲಾದ ಪ್ರಯಾಣಿಕರು ಅದನ್ನನುಭವಿಸಬೇಕಾಗಿ ಬಂದಿತು.

ತಾ॥ ೧೪.—ಪ್ರಭುಗಳಿಗೆ ಲಂಡನ್ನಿನಿಂದ ತಂತಿಯ ಸಹಾಯವಿಲ್ಲದೆ ವಾಯುಮಂಡಲದಲ್ಲಿ ಕಳುಹಲ್ಪಡುವ ವರ್ತಮಾನವು ಪದೇ ಪದೇ ಬರುತ್ತಿರುವುದು. ಮತ್ತು ಹೊಸ ವರ್ತಮಾನಗಳನ್ನು ತಿಳಿಸುವುದಕ್ಕಾಗಿ ಒಂದು ಸಣ್ಣ ಕೃತಿಯ ವೃತ್ತಪತ್ರಿಕೆಯು ಮೆಡಿನಾ ಹಡಗಿನೊಳಗೆ ಮುದ್ರಿಸಲ್ಪಟ್ಟು ಹಂಚಲ್ಪಡುತ್ತಿರುವುದು. [illegible] ಪ್ರೆಸಿಡೆಂಟನು ಫ್ರೆಂಚ್ ಜನರ ಪರವಾಗಿ ಚಕ್ರವರ್ತಿ ದಂಪತಿಗಳ ಭರತಖಂಡದ ಪ್ರಯಾಣವು ಸುಖದಾಯಕವಾಗಿರಲೆಂದು ಕೋರಿ ಮೆಡಿನಾ ಹಡಗಿಗೆ ವಾಯುಮಂಡಲದಲ್ಲಿ ವರ್ತಮಾನವನ್ನು ಕಳುಹಿಸಿದನು. ಚಕ್ರವರ್ತಿಯವರು ಅದಕ್ಕೆ ವಂದನಾಪೂರ್ವಕವಾದ ಉತ್ತರವನ್ನು ಕೊಟ್ಟರು.

ತಾ॥ ೧೫.—ರಾಜಚಕ್ರವರ್ತಿ ದಂಪತಿಗಳು ನೆನ್ನೆಯ ಸಾಯಂಕಾಲದಲ್ಲಿ ಜಿಬ್ರಾಲ್ಟರ್ ರೇವುಪಟ್ಟಣವನ್ನು ತಲುಪಿದರು. ಮಳೆಯು ಸುರಿಯುತ್ತಿದ್ದುದರಿಂದ, ಆಗಮನಸೂಚಕವಾಗಿ ಗುಂಡು ಹಾರಿಸಲ್ಪಡುವುದೂ, ದೀಪೋತ್ಸವವೂ ನಿಲ್ಲಿಸಲ್ಪಟ್ಟುವು. ಮೆಡಿನಾ ಹಡಗು ಈ ದಿವಸ ಮುಂದಕ್ಕೆ ಹೊರಟಿತು. ನೆರೆದಿದ್ದ ಪ್ರೇಕ್ಷಕ ಜನರು ಕೋಲಾಹಲವನ್ನು ಮಾಡಿ ಪ್ರಭುದಂಪತಿಗಳ ಪರವಾದ ಕೀರ್ತನೆಯನ್ನು ಹಾಡಿದರು, ಮತ್ತು ಗುಂಡುಗಳು ಹಾರಿಸಲ್ಪಟ್ಟುವು. ತುರ್ಕಿಯ ಸುಲ್ತಾನನು ತನ್ನ ಪರವಾದ ವಂದನೆಗಳನ್ನು ರಾಜಚಕ್ರವರ್ತಿ ದಂಪತಿಗಳಿಗೆ ತಿಳಿಸುವುದಕ್ಕಾಗಿ ತನ್ನ ಜ್ಯೇಷ್ಠಪುತ್ರನಾದ ಜಿಯೋದ್ದಿನ್ನನ ಮುಖಾಂತರದಿಂದ ಕೆಲ ಪ್ರತಿನಿಧಿಗಳನ್ನು ಪೋರ್ಟ್‌ಸೈಡಿಗೆ ಕಳುಹಿಸತಕ್ಕವನಾಗಿರುವನು.

ದಿಲ್ಲಿಯ ದರ್ಬಾರಿನ ಉತ್ಸವಸಮಾರಂಭ.

ಚಕ್ರವರ್ತಿದಂಪತಿಗಳು, ದೇಶೀಯ ರಾಜರುಗಳು, ಸರ್ಕಾರಿ ಅಧಿಕಾರಿಗಳು, ಅತಿಥಿಗಳು ಮೊದಲಾದವರ ಬಿಡಾರಗಳೂ, ದರ್ಬಾರು ನಡೆಯುವ ಮಂಟಪವೂ ಈಗ್ಗೆ ೯ ವರ್ಷಗಳ ಕೆಳಗೆ ಏರ್ಪಡಿಸಲ್ಪಟ್ಟಿದ್ದ ಸ್ಥಳದಲ್ಲೇ ಈಗಲೂ ಏರ್ಪಡಿಸಲ್ಪಟ್ಟಿವೆ. ಈ ಸ್ಥಳವು ೨೫ ಚದರ ಮೈಲಿ ವಿಸ್ತೀರ್ಣವಿರುತ್ತದೆ. ಬಂಡಿಗಳು ತಿರುಗುವ ಮಾರ್ಗಗಳೂ, ಲೋಹಮಾರ್ಗಗಳೂ ಹಾಕಲ್ಪಟ್ಟು ವಿದ್ಯುಲ್ಲತೆಯ ದೀಪಗಳು ಹೊತ್ತಿಸಲ್ಪಟ್ಟಿರುತ್ತವೆ. ಮತ್ತು ೫೦೦೦೦ ರೂ. ಗಳ ವ್ಯಯದಿಂದ ಶುಚಿಯಾದ ಕುಡಿಯುವ ನೀರು ಕೊಳಾಯಿಗಳ ಮೂಲಕ ಒದಗುವಂತೇರ್ಪಡಿಸಲ್ಪಟ್ಟಿರುವುದು. ಈ ಬಿಡಾರಗಳ ಮಧ್ಯೆ ಚಕ್ರವರ್ತಿಯವರ ಬಿಡಾರವು ಅತ್ಯಂತರಮ್ಯವಾಗಿ ಕಂಗೊಳಿಸುತ್ತಿದೆ. ಇದಕ್ಕೆ ಸೇರಿದಹಾಗೆ ಸರ್ಕ್ಯೂಟ್ ಹೌಸು ಇರುತ್ತದೆ. ಇದರಲ್ಲೇ ಲಾರ್ಡ್ ಕರ್ಜನ್‌ರವರು ೧೯೦೨-೩ರಲ್ಲಿ ನಡೆದ ದರ್ಬಾರಿನ ಕಾಲದಲ್ಲಿದ್ದುಕೊಂಡಿದ್ದರು. ಒಂದು ವೇಳೆ ಛಳಿಯು ಹೆಚ್ಚಾದ ಪಕ್ಷದಲ್ಲಿ ಚಕ್ರವರ್ತಿ ದಂಪತಿಗಳು ವಾಸಿಸುವುದಕ್ಕಾಗಿ ಈ ಸರ್ಕ್ಯೂಟು ಮನೆಯು ಸಿದ್ಧಗೊಳಿಸಲ್ಪಟ್ಟಿರುವುದು. ಇದಲ್ಲದೆ ಪ್ರಭುದಂಪತಿಗಳುಪಯೋಗಕ್ಕಾಗಿ ಪ್ರತ್ಯೇಕವಾದ ಬಿಡಾರಗಳು ಏರ್ಪಡಿಸಲ್ಪಟ್ಟಿವೆ. ಅಲ್ಲಿಗೆ ಇತರರ ಪ್ರವೇಶವಿಲ್ಲವು. ದೊಡ್ಡ ದೊಡ್ಡ ಬಿಡಾರಗಳ, ಮುಖ್ಯವಾಗಿ ಪ್ರಭುಗಳ ಬಿಡಾರದ ಸುತ್ತಲೂ ಏರ್ಪಡಿಸಲ್ಪಟ್ಟಿರುವ ಸ್ಥಲಗಳೂ, ಉದ್ಯಾನಗಳೂ ಅತ್ಯಂತ ಮನೋರಂಜಕವಾಗಿವೆ. ಮತ್ತೂ ಚಕ್ರವರ್ತಿಯವರ ಬಿಡಾರದ ಬಳಿ ಮಣ್ಣಿನ[illegible](ಕುಂಡ) ಗಳಲ್ಲಿಟ್ಟಿರುವ ಗುಲಾಬಿಹೂ ಗಿಡಗಳಿಗಾಗಿ ೧೫೦೦೦ ರೂ. ವರೆಗೆ ವ್ಯಯವಾಗಿರುತ್ತದೆ. ಚಕ್ರವರ್ತಿಯವರ ಬಿಡಾರದ ಮುಂಗಡೆ ಅನೇಕ ಮೈಲಿ ವಿಸ್ತೀರ್ಣದಲ್ಲಿ ಇತರ ಬಿಡಾರಗಳು ಏರ್ಪಡಿಸಲ್ಪಟ್ಟು ದರ್ಬಾರು ಪಟ್ಟಣವಾಗಿ ಶೋಭಿಸುತ್ತಿವೆ. ದರ್ಬಾರಿಗೆ ಬರತಕ್ಕ ಒಟ್ಟು ೧೬೫ ದೇಶೀಯ ರಾಜರುಗಳ ಬಿಡಾರಗಳು ಚಕ್ರವರ್ತಿಯವರ ಬಿಡಾರಕ್ಕೆ ಸಮೀಪವಾಗಿ ಚಕ್ರವರ್ತಿಯವರು ತಿರುಗಾಡುವ ಮತ್ತೂ ದರ್ಬಾರಿಗೆ ಹೋಗುವ ಮಾರ್ಗಗಳ ಉದ್ದಕ್ಕೂ, ಅವರವರ ಪದವಿಗೂ ಅನುಕೂಲ್ಯಕ್ಕೂ ತಕ್ಕಹಾಗೆ ಸ್ವಂತ ವೆಚ್ಚದಿಂದ ಏರ್ಪಡಿಸಲ್ಪಡುತ್ತಿವೆ. ಈ ಬಿಡಾರಗಳ ಮುಂಗಡೆ ಚಕ್ರವರ್ತಿಯವರು ದರ್ಬಾರಿಗೆ ದಯಮಾಡಿಸುತ್ತಾರಾದುದರಿಂದ, ಅವುಗಳ ಮುಂದೆ ಅನೇಕವಾದ ಕಮಾನುಗಳು ನಿರ್ಮಿಸಲ್ಪಟ್ಟು ಅಲಂಕರಿಸಲ್ಪಡುತ್ತಿವೆ.

ಲಾರ್ಡ್ ಲಿಟ್ಟನರವರ ಕಾಲದಲ್ಲೂ, ಲಾರ್ಡ್ ಕರ್ಜನರವರ ಕಾಲದಲ್ಲೂ ದರ್ಬಾರುಗಳು ನಡೆದ ಸ್ಥಳದಲ್ಲೇ ಈಗಲೂ ದರ್ಬಾರಿನ ಮಂಟಪವು ೫೦೦೦೦ ದಿಂದ ೮೦೦೦೦ ಪ್ರೇಕ್ಷಕ ಜನರನ್ನು ಹಿಡಿಯುವಷ್ಟು ವಿಶಾಲವಾಗಿ ರಚಿಸಲ್ಪಟ್ಟಿರುವುದು. ಚಕ್ರವರ್ತಿ ದಂಪತಿಗಳು ದಿವ್ಯವಸ್ತ್ರಾಭರಣಭೂಷಿತರಾಗಿ ತಮ್ಮ ಬಿಡಾರದಿಂದ ೩ ಮೈಲಿ ದೂರದಲ್ಲಿರುವ ಈ ದರ್ಬಾರು ಮಂಟಪಕ್ಕೆ ಉತ್ಸವದಿಂದ ಹೊರಟು ಮಂಟಪದ ಅರ್ಧಭಾಗದಿಂದ ಹಾದು ಮಧ್ಯದಲ್ಲಿ ರಚಿಸಲ್ಪಟ್ಟಿರುವ ಚಿಕ್ಕ ರಂಗಸ್ಥಳಕ್ಕೆ ದಯಮಾಡಿಸುವರು. ಅಲ್ಲಿ ದೇಶೀಯ ರಾಜರುಗಳು, ಗೌರ್ನರುಗಳು, ಲೆ॥ ಗೌರ್ನರುಗಳು, ವೈಸ್‌ರಾಯರ ಮತ್ತೂ ಗೌರ್ನರುಗಳ ಕೌನ್ಸಿಲ್ ಮೆಂಬರುಗಳು, ಮುಖ್ಯಾಧಿಕಾರಿಗಳು, ಭಾರತೀಯ ಪ್ರಸಿದ್ಧ ಪುರುಷರು ಮತ್ತೂ ದೊಡ್ಡ ಮನುಷ್ಯರುಗಳು ಸೇರಿ ಒಟ್ಟು ೧೨೦೦೦ ಜನರು ಮಾತ್ರ ಕುಳಿತುಕೊಳ್ಳಲವಕಾಶವು ಕಲ್ಪಿಸಲ್ಪಟ್ಟಿರುತ್ತದೆ. ಚಕ್ರವರ್ತಿ ದಂಪತಿಗಳು ಎತ್ತರವಾದ ಜಗತಿಯ ಮೇಲೆ ಧಂಪ್ರ ಬಣ್ಣದ ಛತ್ರದ ಕೆಳಗೆ ಉಚಿತಾಸನಗಳಲ್ಲಿ ಕುಳಿತು ದೇಶೀಯ ರಾಜರ ಮುಜರೆಯನ್ನು ಕೈಗೊಂಡು, ಅಲ್ಲಿಂದ ೧೦೦ ಗಜಗಳ ದೂರದಲ್ಲಿರುವ ಅತ್ಯಂತಶೋಭಾಯಮಾನವಾದ ಅಮೃತಶಿಲೆಯ ಜಗತಿಯ ಮೇಲೆ ಬಂಗಾರದಛತ್ರಿಯ ಕೆಳಗಣ ಉಚಿತಾಸನಗಳಲ್ಲಿ ಮಂಡಿಸುವರು. ಸಭೆಯ ಮುಂಗಡೆ ಜಗತಿಯ ಸುತ್ತಲೂ ೨೦೦೦೦ ಸೈನಿಕರೂ, ೨೦೦೦ ವಾದ್ಯಗಾರರೂ ನಿಂತುಕೊಳ್ಳುವರು. ಚಕ್ರವರ್ತಿ ದಂಪತಿಗಳು ದರ್ಬಾರು ಮುಗಿದ ಮೇಲೆ ಮಂಟಪದ ಮತ್ತೊಂದು ಪಾರ್ಶ್ವದಲ್ಲಿ ಹೊರಟು ದೇಶೀಯ ರಾಜರುಗಳ ಉಳಿದ ಬಿಡಾರಗಳ ಮುಂಗಡೆಯ ಮಾರ್ಗವಾಗಿ ತಮ್ಮ ಬಿಡಾರಕ್ಕೆ ಚಿತ್ತೈಸುವರು.

ಚಕ್ರವರ್ತಿ ದಂಪತಿಗಳು ದಿಲ್ಲಿಯ ಕೋಟೆಯ ಹೊರಭಾಗದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟಿರುವ ನಿಲ್ದಾಣದಲ್ಲಿ ಇಳಿದು ಚಕ್ರವರ್ತಿಯವರು ಕುದುರೆಯ ಮೇಲೂ, ಚಕ್ರವರ್ತಿನಿಯವರು ಕುದುರೆಯ ಬಂಡಿಯಲ್ಲೂ ಕುಳಿತು ದೊರೆಯು ತಿರುಗಾಡುವ ಬಾಗಿಲಿ (ಇದಕ್ಕೆ ಕಿಂಗ್‌ಗೇಟೆಂದು ಹೆಸರು. ಪ್ರೋಫೆಟ್ ಅಗಮನೆಯಿಂದ ಈ ಗೇಟಿನದ್ವಾರ ಮಸೀದಿಯವರೆಗೂ ನೆಲದಮೇಲೆ ಬನಾತು ಹಾಸಲ್ಪಟ್ಟ ದೊರೆಯು ಅದರ ಮೇಲೆ ನಡೆದುಕೊಂಡು ಜುಮ್ಮಾಮಸೀದಿಗೆ ಹೋಗಿಬರುತ್ತಿದ್ದದರವಿನಃ ದೊರೆಯ ಮಕ್ಕಳು ಸಹ ಈ ಗೇಟಿನಲ್ಲಿ ತಿರುಗಾಡಲಪ್ಪಣೆಯಿರಲಿಲ್ಲವು ಈ ಗೇಟು ೧೮೫೭ ರಲ್ಲಿ ದಿಲ್ಲಿಯ ದೊರೆಯು ರಂಜಾನ್ ಇದ್‌ಹಬ್ಬದಲ್ಲಿ ದೇವರ ಪ್ರಾರ್ಥನೆಗಾಗಿ ಕೋಟೆಯಿಂದ ಹೊರಗೆ ಬಂದಿದಾಗ್ಯೆ ಮಾತ್ರ ತೆರೆಯಲ್ಪಟ್ಟದ್ದು ಈವರೆಗೂ ಮುಚ್ಚಲ್ಪಟ್ಟಿದ್ದಿತಂತೆ) ನಿಂದ ಹೊರಟು ಜುಮ್ಮಾಮಸೀದಿಯನ್ನು ಬಳಸಿಕೊಂಡು ಚಾಂದನಿಚೌಕದ ಮಾರ್ಗವಾಗಿ ಬಂದು, ಅಲ್ಲಿ ನಿಂತಿರುವ ೮ ಲಕ್ಷಾಂತರ ಪ್ರೇಕ್ಷಕ ಜನರಿಗೆ ದರ್ಶನಾನಂದವನ್ನುಂಟುಮಾಡಿ, ಅಲ್ಲಿಂದ ಡಫರಿನ್ ಸೇತುವೆಯಿಂದ ಕೋರಿಗೇಟಿನೊಳಗೆ ನುಗ್ಗಿ ರಾಜಪುರರೋಡಿಗೆ ಬಂದು, ಅಲ್ಲಿ ವೈಸ್‌ರಾಯರ ನಿಯಾಮನಿರ್ಮಾಣ ಸಭೆಯ ಉಪಾಧ್ಯಕ್ಷರಾದ ಆ॥ ಮಿ॥ ಜೆಂಕಿನ್ಸರವರೋದುವ ಅಡ್ರಸ್ಸಿನುತ್ತರವನ್ನು ಕೊಟ್ಟು ಭಾರತೀಯರ ಪ್ರತಿನಿಧಿಗಳಿಂದ ಸುಭಾಗಮನವನ್ನು ಬಯಸಲ್ಪಟ್ಟು ಬಿಡಾರಕ್ಕೆ ತೆರಳುವರು. ದೇಶೀಯ ರಾಜರು ತಂತಮ್ಮ ಪ್ರಾಂತ್ಯಾನುಸಾರ ಅಶ್ವಾರೂಢರಾಗಿ ಅಥವಾ ವಾಹನಾರೂಢರಾಗಿ ತಂತಮ್ಮ ಸರದಾರರುಗಳನ್ನು ಹಿಂದಿಟ್ಟುಕೊಂಡು ಸಕಲ ಬಿರುದಾವಳಿಗಳೊಡನೆ ಚಕ್ರವರ್ತಿ ದಂಪತಿಗಳ ಉತ್ಸವದ ಹಿಂಗಡೆ ಉತ್ಸವದಿಂದ ಹೊರಡುವರು. ಬಿಡಾರಗಳ ಸುತ್ತಲೂ, ಮಾರ್ಗಗಳಲ್ಲೂ ೨೦೦೦೦ ವಿದ್ಯುಲ್ಲತೆಯ ದೀಪಸ್ತಂಭಗಳು ನಿಲ್ಲಿಸಲ್ಪಟ್ಟಿವೆ. ರಾತ್ರಿ ವೇಳೆಯಲ್ಲಿ ಈ ದೀಪಗಳು ಹೊತ್ತಿಸಲ್ಪಟ್ಟಾಗ ನೋಡಲೆರಡು ಕಣ್ಣುಗಳೂ ಸಾಲುವುದಿಲ್ಲವು. ಈ ದರ್ಬಾರು ವೇಳೆಯಲ್ಲಿ ಸ್ಟೇಟ್‌ಬಾಲು ನಡೆಯುವುದಿಲ್ಲವು, ಆದರೆ ಮಧ್ಯಾಹ್ನದ ವೇಳೆಯಲ್ಲಿ ಕೋಟೆಯೊಳಗೆ ವನವಿಹಾರೋತ್ಸವವು ನಡೆಯುವುದು. ಇದಕ್ಕಾಗಿ ಮನೋಹರವಾದ ಉದ್ಯಾನವೂ, ಅದರ ಮಧ್ಯದಲ್ಲಿರುವ ಷಹಜಹಾನನ ಅರಮನೆಯಾಗಿದ್ದ ದಿವಾನ್—ಇ—ಆಮ್ ಎಂಬ ಕಟ್ಟಡವೂ, ದಿವಾನ್—ಇ—ಖಾಸ್ ಎಂಬ ದೊಡ್ಡ ಸಭಾಭವನವೂ ಸರಿಪಡಿಸಲ್ಪಟ್ಟು ಶೃಂಗರಿಸಲ್ಪಡುತ್ತಿವೆ. ಈ ಸಭಾಮಂಟಪದಲ್ಲಿ ಗೋಡೆಗಳಿಗೂ ಕಂಭಗಳಿಗೂ ಉಪಯೋಗಿಸಲ್ಪಟ್ಟಿರುವ ಅಮೃತಶಿಲೆಗಳ ಮಧ್ಯೆ ಹಾಕಿರುವ ಬಂಗಾರದ ತಗಡುಗಳು ಅತ್ಯಂತ ಪ್ರೇಕ್ಷಣೀಯವಾಗಿವೆ. ಮತ್ತೂ ರಾತ್ರಿ ವೇಳೆಯಲ್ಲಿ ದೀಪದ ಬೆಳಕಿಗೆ ಅದರ ಕಾಂತಿಯು ಸೊಬಗಿನಿಂದ ದೇವೇಂದ್ರನ ಪಟ್ಟಣವನ್ನೂ ಮೀರಿಸುವಂತೆ ಕಾಣಿಸಿಕೊಳ್ಳುತ್ತದೆ. ಡಿಸೆಂಬರ್ ತಾ॥ ೧೩ರ ಮಧ್ಯಾಹ್ನದಲ್ಲಿ ಚಕ್ರವರ್ತಿ ದಂಪತಿಗಳು ಹಳೆಯ ಅರಮನೆಯ ಮಾಡದ ಮೇಲೆ ನಿಂತಿರುವಾಗ್ಗೆ ಕೆಳಗಡೆ ವಿಹಾರಕಾಲದಲ್ಲಿ ಉತ್ಸವ ಹೊರಡುವಂತೆ ಸಾವಿರಾರು ಜನರು ಉತ್ಸವ ಹೊರಡಲೇರ್ಪಡಿಸಲ್ಪಟ್ಟಿರುವುದು. ಬಿಡಾರಗಳಲ್ಲಿ ೩೦೦ ಡೇರಾಗಳಿರುವವಲ್ಲದೆ, ಬೈಲಿನಲ್ಲಿ ೧೫೦೦೦ ಡೇರಾಗಳು ಇರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ದರ್ಬಾರು ಸಮಯದಲ್ಲಿ ಈ ಡೇರಾಗಳಲ್ಲೆಲ್ಲ ೩॥ ಲಕ್ಷ ಜನರಿಗಿಂತಲೂ ಹೆಚ್ಚಾಗಿ ವಾಸಿಸುವರೆಂದೂಹಿಸಲ್ಪಟ್ಟಿರುತ್ತದೆ. ಪೋಲೋ, ಫುಟ್‌ಬಾಲ್, ಹಾಕಿ ಮೊದಲಾದ ಆಟಗಳ ಪಂದ್ಯಗಳು ನಡೆಯಲೇರ್ಪಾಟಾಗಿರುವುದು. ಈ ಆಟಗಳು ನಡೆಯುವ ಸ್ಥಳದ ಉಭಯಪಾರ್ಶ್ವದಲ್ಲೂ ಮಣ್ಣಿನರಾಶಿಯು ಎತ್ತರವಾಗಿ ಹಾಕಲ್ಪಟ್ಟು, ಅದರ ಮೇಲೆ ೩೦೦೦ ಜನ ಪ್ರೇಕ್ಷಕರು ಕುಳಿತುಕೊಳ್ಳಲನುಕೂಲಪಡಿಸಲ್ಪಟ್ಟಿದೆ. ಪೂರ್ವಕಾಲದ ವಸ್ತುಪ್ರದರ್ಶವು ನಡೆಸಲ್ಪಡುವುದು. ಮಾರ್ಗಗಳಲ್ಲಿ ಜನರೂ, ಮೋಟಾರು ಮೊದಲಾದ ಬಂಡಿಗಳೂ ತಿರುಗಾಡಲು ತಕ್ಕ ವ್ಯವಸ್ಥೆಯು ಮಾಡಲ್ಪಟ್ಟಿರುವುದಲ್ಲದೆ, ಈ ದರ್ಬಾರು ಮಂಟಪ ಮತ್ತೂ ಬಿಡಾರಗಳ ಆವರಣಗಳಲ್ಲಿ ಡಿಸೆಂಬರ್ ತಾ॥ ೧ ರಿಂದ ೧೯ ರ ವರೆಗೆ ಎಲ್ಲ ವಿಧವಾದ ಕೋವಿಮುಂತಾದವುಗಳುಪಯೋಗಿಸಲ್ಪಡಕೂಡದು, ಮಾರ್ಗಗಳಲ್ಲಿ ಆಕಾಶಪಟಗಳು ಹಾರಿಸಲ್ಪಡಕೂಡದು ಮತ್ತೂ ಬೆಂಕಿಯ ಸಂಬಂಧವಾದ ಆಕಾಶಬುಟ್ಟಿಗಳು ಬಿಡಲ್ಪಡಕೂಡದು ಎಂದು ಕಠಿಣತರವಾದ ಅಪ್ಪಣೆಯು ಮಾಡಲ್ಪಟ್ಟಿದೆ. ಅಂಚೆಯ ಮೇಲ್ವಿಚಾರಣೆಗೆ ಒಬ್ಬ ಚೀಫ್ ಸೂಪರಿಂಟೆಂಡೆಂಟ್, ಒಬ್ಬ ಮುಖ್ಯ ಪೋಸ್ಟ್‌ಮಾಸ್ಟರು, ೩ ಸೂಪರಿಂಟೆಂಡೆಂಟರುಗಳು, ೭ ಆ॥ ಸೂಪರಿಂಟೆಂಡೆಂಟರು ನೇಮಿಸಲ್ಪಟ್ಟಿರುವರಲ್ಲದೆ, ಬರವಣಿಗೆಗೆ ೨೦೦ಜನ, ಕಾಗದಗಳನ್ನು ಕೊಡಲು ೧೫೦ಜನ, ಕಾಗದಗಳಿಗೆ ಮುದ್ರೆಯನ್ನೊತ್ತಲು ಮತ್ತೂ ಪೆಟ್ಟಿಗೆಗಳಿಂದ ಕಾಗದವನ್ನು ತೆಗೆಯಲು ೧೦೦ ಜನ ಈ ಪ್ರಕಾರ ನೇಮಿಸಲ್ಪಟ್ಟಿರುತ್ತಾರೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಾಗದಗಳ ಮೂಟೆಗಳನ್ನೊಯ್ಯಲು ೨ ಕುದುರೆಯಬಂಡಿಯೂ ಭಾರವು ಹೆಚ್ಚಾಗಿದ್ದಲ್ಲಿ ಮೋಟಾರು ಬಂಡಿಯೂ ಉಪಯೋಗಿಸಲ್ಪಡುವುವು. ಒಂದು ದೊಡ್ಡ ತಂತೀಯಾಫೀಸು ಏರ್ಪಡಿಸಲ್ಪಟ್ಟಿರುತ್ತದೆ. ಬೊಂಬಾಯಿನಿಂದ ದರ್ಬಾರಾಫೀಸಿಗೆ ಆಗುವ ೯೫೦ ಮೈಲಿ ವಿಸ್ತೀರ್ಣದಲ್ಲಿ ಪ್ರತ್ಯೇಕವಾದ ತಂತಿಗಳು ಹಾಕಲ್ಪಟ್ಟಿವೆ. ಮತ್ತೂ ೧ ಘಂಟೆಯಲ್ಲಿ ೨೦೦೦ ಮಾತುಗಳನ್ನು ಕಳುಹಿಸುವ ಯಂತ್ರಗಳುಪಯೋಗಿಸಲ್ಪಟ್ಟಿವೆ. ತಂತಿಯ ಮಾತನ್ನು ಹೊತೆಯುವುದಕ್ಕೆ ೨೦೦ ಜನರೂ, ಮೇಲ್ವಿಚಾರಣೆಗೆ ೩೦ ಜನರು ಮತ್ತೂ ವರ್ತಮಾನದ ಕಾಗದವನ್ನು ಜನರಿಗೆ ತಲುಪಿಸಲು ೨೦೦ ಜನರು ಈ ಪ್ರಕಾರ ನೇಮಿಸಲ್ಪಟ್ಟಿರುತ್ತಾರೆ. ಮುಖ್ಯ ಆಫೀಸಲ್ಲದೆ ೯ ಶಾಖಾಆಫೀಸುಗಳಿರುತ್ತವೆ. ತಂತಿಯಮೂಲಕ ಮಾತನಾಡುವ ಟೆಲಿಫೋನ್ ತಂತಿಗಳು ೧೮ ಮೈಲಿದೂರ ಭೂಮಿಯೊಳಗೂ, ೩೫ ಮೈಲಿದೂರ ತಲೆಯಮೇಲ್ಭಾಗದಲ್ಲೂ ಹಾಕಲ್ಪಟ್ಟು ೨೦೦ ಜನ ಕೆಲಸಗಾರರು ನೇಮಿಸಲ್ಪಟ್ಟಿರುತ್ತಾರೆ.

ತುರ್ಕಿ-ಇಟಲಿಗಳ ಯುದ್ಧವು.

ತಾ॥ ೧೦.— ಅರಬ್ಬಿಯವರು ನೆನ್ನೆಯ ದಿನ ಟ್ರಿಪೋಲಿಯ ಹತ್ತಿರ ಇಟಲಿಯವರನ್ನು ಮುತ್ತಿಕೊಂಡು ಗುಂಡನ್ನು ಹೊಡೆದರು. ಆದರೆ ಇಟಲಿಯವರು ಜಗ್ಗದೆ ಅವರನ್ನು ಹಿಂದಕ್ಕಟ್ಟಿದರು.

ತಾ॥ ೧೧.— ಹಿಂದಿನ ದಿವಸ ಟ್ರಿಪೋಲಿಯಲ್ಲಿ ೭ ಗಂಟೆಯಕಾಲ ಅವಿಚ್ಛಿನ್ನವಾಗಿ ಯುದ್ಧವು ನಡೆದು, ತುರ್ಕಿಯವರು ಹಮಿದಿಯಾ ಕೋಟೆಯನ್ನು ಹಿಂತಿರುಗಿ ತಮ್ಮ ವಶವನ್ನು ಮಾಡಿಕೊಳ್ಳಲು ಎಷ್ಟು ಸಾಹಸಪಟ್ಟಾಗ್ಯೂ ಸಾಧ್ಯವಾಗದೆ ವಿಮುಖರಾದರು.

ತಾ॥ ೧೨.—ಶುಕ್ರವಾರ ಅತಿಭಯಂಕರವಾದ ಯುದ್ಧವು ನಡೆದು, ಅರಬ್ಬಿಯವರು ಮೈಮೇಲೆ ಸ್ಮರಣೆಯಿಲ್ಲದೆ ಇಟಲಿಯವರ ಮೇಲೆ ನುಗ್ಗಿ ಮುಷ್ಟಾಮುಷ್ಟಿ ಯುದ್ಧವನ್ನು ಸಹ ಮಾಡಿದರು. ಇದರಿಂದ ಉಭಯಪಕ್ಷದಲ್ಲೂ ವಿಶೇಷ ಮರಣವಾಯಿತು. ಎಂದು ಟ್ರಿಪೋಲಿಯಿಂದ ಬಂದ ಆಸ್ಟ್ರಿಯಾದ ಹಡಗು ತಿಳಿಸುತ್ತದೆ.

ತಾ॥ ೧೩.—ಇಟಲಿಯವರು ಟ್ರಿಪೋಲಿಯಲ್ಲಿ ಅರಬ್ಬಿಯವರನ್ನು ನಿರ್ದಾಕ್ಷಿಣ್ಯದಿಂದ ಸಂಹರಿಸುವ ವಿಚಾರದಲ್ಲಿ ತಾವು ಪ್ರವೇಶಿಸುವುದು ಹಾಗ್ಗಿನಲ್ಲಿ ಎಲ್ಲ ರಾಜ್ಯದವರೂ ಸೇರಿ ಮಾಡಿಕೊಂಡಿರುವ ಒಡಂಬಡಿಕೆಗೆ ವಿರೋಧವಾಗಿರುತ್ತದೆ. ಆದರೆ ಈ ದೂರಿನ ವಿಚಾರದಲ್ಲಿ ಗಮನವನ್ನು ಕೊಡಬೇಕೆಂದು ಇಟಲಿಯವರಿಗೆ ತಿಳಿಸಬಹುದು. ಎಂದು ಎಲ್ಲ ರಾಜ್ಯದವರೂ ತಿಳಿಸಿರುತ್ತಾರೆ. ತುರ್ಕಿಯವರು ಮತ್ತೂ ಅರಬ್ಬಿಯವರು ತಾ॥ ೧೨ ರಲ್ಲಿ ಟ್ರಿಪೋಲಿಯ ಹತ್ತಿರ ಇಟಲಿಯವರ ಮೇಲೆ ಎರಡುವೇಳೆ ಮುತ್ತಿಗೆಯನ್ನು ಹಾಕಿ ಹಿಂದಕ್ಕೋಡಿಸಲ್ಪಟ್ಟರು.

ತಾ॥ ೧೩.—ಕಾಶೀ ಪಟ್ಟಣದ ಟೌನ್‌ಹಾಲಿನಲ್ಲಿ ತಾ॥ ೧೨ರಲ್ಲಿ ಹಿಂದೂ ಮಹಮ್ಮದೀಯರು ಮಹಾಮಹೋಪಾಧ್ಯಾಯ ರಾಖಲದಾಸ್ ನ್ಯಾಯರತ್ನರವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು, ತುರ್ಕಿ-ಇಟಲಿಗಳ ಯುದ್ಧದಲ್ಲಿ ವಿಪನ್ನರಾದವರಿಗೆ ಸಹಾಯಮಾಡುವ ವಿಚಾರದಲ್ಲಿ ರೆಡ್ ಕ್ರೆಸೆಂಟ್ ಸೊಸೈಟಿಯವರಿಗೆ ತಾವೆಲ್ಲರೂ ನೆರವಾಗಬೇಕೆಂದೂ, ಗಾಯವಡೆದು ತೊಂದರೆಪಡುತ್ತಿರುವವರನ್ನು ಉಪಚರಿಸುವುದಕ್ಕಾಗಿ ಯೋಗ್ಯರಾದ ಭಾರತೀಯರನ್ನು ಟ್ರಿಪೋಲಿಗೆ ಕಳುಹಲಪ್ಪಣೆಯಾಗಬೇಕೆಂದು ಇಂಡಿಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳತಕ್ಕದೆಂದೂ, ಭರತಖಂಡದಲ್ಲಿ ಆಗಾಗ್ಗೆ ಹಿಂದೂ ಮಹಮ್ಮದೀಯರಲ್ಲಿ ಮತಸಂಬಂಧವಾಗಿ ಪ್ರಾಪ್ತವಾಗುವ ಮನಸ್ತಾಪಗಳನ್ನು ಅವುಗಳಿಂದ ಕೇಡುಸಂಭವಿಸುವದಕ್ಕೆ ಮೊದಲೇ ಬಗೆಹರಿಸಲು ಹಿಂದೂ, ಮಹಮ್ಮದೀಯ, ಕ್ರೈಸ್ತ ಮೊದಲಾದ ಮತಸ್ಥರು ಒಂದು ಸಭೆಯನ್ನೇರ್ಪಡಿಸಿಕೊಂಡು ಅದಕ್ಕೆ ಕ್ರಮಪ್ರಕಾರ ಪ್ರತಿಯೊಂದು ಮತಸ್ಥರಲ್ಲೂ ಒಬ್ಬೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದೂ ನಿರ್ಧಾರಗಳನ್ನು ಮಾಡಿದರು.

ತಾ॥ ೧೪.—ತುರ್ಕಿಯವರು ಇಟಲಿಯವರ ಮೇಲೆ ಒಂದೇ ಸಮನಾಗಿ ಮುತ್ತಿಗೆಯನ್ನು ಹಾಕುತ್ತಿರುವರೆಂದೂ ಇಟಲಿಯವರು ಫಿರಂಗಿಗಳನ್ನೂ, ಪದಾತಿಗಳನ್ನೂ ಸಿಡಿಮಿಶ್ರಿಯಲ್ಲಿರುವ ತಮ್ಮ ಸೇನೆಯ ಸಹಾಯಕ್ಕೋಸ್ಕರ ಹೊಸದಾಗಿ ಕಳುಹಿಸಿ ಶತ್ರುಗಳನ್ನು ಪುನಃ ನೆನ್ನೆಯ ಮಧ್ಯಾಹ್ನ ಮುತ್ತಿಗೆಯನ್ನು ಹಾಕಿದರೆಂದೂ, ಟ್ರಿಪೋಲಿಯಿಂದ ಬಂದ ಸರ್ಕಾರಿಯ ತಂತಿಯ ವಾರ್ತೆಯಿಂದ ಗೊತ್ತಾಗುತ್ತದೆ. ಟ್ರಿಪೋಲಿಯಲ್ಲಿ ಮಳೆಯು ವಿಪರೀತವಾಗಿ ಸುರಿಯುತ್ತಿದೆ.

ಎಚ್ಚರಿಕೆ.

ನಮ್ಮ ರಾಜಪೋಷಕರಾದ ಶ್ರೀ॥ ವೀರಸಂಗಪ್ಪನವರ ಕಾಲದಲ್ಲೂ, ಈಚೆಗೂ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿರುವ ಸಟೀಕ ನೃಪಭೇಂದ್ರವಿಜಯ, ಶಿವಪೂಜಾವಿಧಿ, ಸಟೀಕ ವಿವಾಹವಿಧಿ, ದೀಕ್ಷಾವಿಧಿ, ಸಟೀಕ ಕನಂದಿವ್ರತ, ವೀರಮಾಹೇಶ್ವರ ಪ್ರಶಂಸೆ, ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ ವೀರಶೈವೋತ್ಕರ್ಷ ಸಂಗ್ರಹ, ಸಟೀಕ ಕರ್ಣಾಟಕ ಶಬ್ದಮಂಜರಿ, ಶತಕತ್ರಯ ಮುಂತಾದ ಗ್ರಂಥಗಳನ್ನು ಯಾರೋ ಕೆಲರು ಮುದ್ರಣಮಾಡುವ ಪ್ರಯತ್ನದಲ್ಲಿದ್ದಾರೆಂದು ಕೇಳುತ್ತೇನೆ. ಈ ಗ್ರಂಥಗಳ ಸ್ವಾಮ್ಯವೆಲ್ಲವೂ ನನಗೊಳಪಟ್ಟಿರುವುದರಿಂದ ಅವುಗಳನ್ನು ನನ್ನ ಅನುಮತಿಯಿಲ್ಲದೆ ಮುದ್ರಣಮಾಡಿ ಪ್ರಕಟಿಸುವಂತಹವರು ಅದರಿಂದ ನನಗುಂಟಾಗತಕ್ಕ ವಿಶಿಷ್ಟ ನಷ್ಟಕ್ಕೆ ಗುರಿಯಾಗಬೇಕಾಗುತ್ತದಲ್ಲದೆ, ತೊಂದರೆಯನ್ನೂ ಅನುಭವಿಸಬೇಕಾಗುತ್ತದೆಂದು ಈ ಪ್ರಕಟನೆಯಿಂದ ಎಚ್ಚರಿಸಿರುತ್ತೇನೆ.

ವೈ. ವಿರೂಪಾಕ್ಷಪ್ಪ,
ಪ್ರೊಪ್ರೈಟರ್, ಮೈಸೂರ್ ಸ್ಟಾರ್.

ಮೈಸೂರ್ ಸ್ಟಾರ್

೧೯೧೧ ನೇ ನವಂಬರ್ ತಾ॥ ೨೦ನೆಯ ಸೋಮವಾರ.

ಮದ್ರಾಸ್ ಗೌರ್ನರ ಭಾಷಣವು.

ಮದ್ರಾಸಿನ ಗೌರ್ನರಾದ ಸರ್ ಥಾಮಸ್ ಗಿಬ್ಸನ್ ಕಾರ್ಮೈಕೇಲ್‍ರವರು ತಮ್ಮ ಸುಬಾಗಮನವನ್ನು ಬಯಸಿ ಮದ್ರಾಸಿನ ಮುಹಮ್ಮದೀಯ ಸಂಘದವರು, ಮದ್ರಾಸಿನ ಮಹಾಜನ ಸಭೆಯವರು ಮತ್ತೂ ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕಳೆದ ತಾ॥ ೧೧ರಲ್ಲಿ ಗಿಲ್ಡ್‍ಹಾಲಿನಲ್ಲಿ ಒಪ್ಪಿಸಿದ ವಿಜ್ಞಾಪನ ಪತ್ರಿಕೆಗಳನ್ನು ವಿಶ್ವಾಸದಿಂದ ಸ್ವೀಕರಿಸಿ, ಅವುಗಳಿಗೆ ಉತ್ತರವನ್ನು ಕೊಡುವಾಗ್ಗೆ ಮಾಡಿದ ಭಾಷಣವು ಶ್ಲಾಘ್ಯವಾಗಿಯೂ, ಸರ್ವಜನಾಹ್ಲಾದಕರವಾಗಿಯೂ ಇರುವುದರಿಂದ, ಅದರ ಮುಖ್ಯಾಭಿಪ್ರಾಯವನ್ನು ನಮ್ಮ ವಾಚಕರ ಅವಗಾಹನೆಗಾಗಿ ಇಲ್ಲಿ ಕೊಟ್ಟಿರುತ್ತೇವೆ:—

ನಮ್ಮ ಘನವನ್ನು ಹೊಂದಿದ ಸಾರ್ವಭೌಮರಲ್ಲಿ ನಿಮ್ಮೆಲ್ಲರಿಗೂ ಇರತಕ್ಕ ಅಪಾರವಾದ ರಾಜಭಕ್ತಿಯ ವಿಷಯವಾಗಿ ನೀವು ಹೇಳಿರುವ ಭರವಸೆಯ ಮಾತುಗಳನ್ನು ಕೇಳಿ ನನಗೆ ತುಂಬಾ ಆನಂದವಾಗಿರುತ್ತದೆ. ನೀವು ಕೊಟ್ಟಿರುವ ವಿಜ್ಞಾಪನಾಪತ್ರಿಕೆಗಳೊಂದರಲ್ಲಿ, ಬ್ರಿಟಿಷ್ ರಾಜ್ಯಭಾರವು ನ್ಯಾಯಬದ್ಧವೂ, ಪ್ರಜಾಸುಖಕರವೂ ಆಗಿರುವುದೆಂದೂ ಮತ್ತೊಂದರಲ್ಲಿ ಚಕ್ರವರ್ತಿಯವರು ಭರತಖಂಡಕ್ಕೆ ಪ್ರತ್ಯಕ್ಷತಃ ದಯಮಾಡಿಸುವುದು, ಆ ಮಹನೀಯರಿಗೆ ತಮ್ಮ ಭಾರತ ಪ್ರಜೆಗಳಲ್ಲಿರತಕ್ಕ ಅನುರಾಗವನ್ನೂ, ಸಹಾನುಭೂತಿಯನ್ನೂ ವ್ಯಕ್ತಗೊಳಿಸುತ್ತದಾದುದರಿಂದ, ಈ ದೇಶದ ಪ್ರಜೆಗಳೆಲ್ಲರೂ ಪರಮಾನಂದ ಭರಿತರಾಗಿರುವರೆಂದೂ ತಿಳಿಸಲ್ಪಟ್ಟಿದೆ. ಈ ಕಾರಣದಿಂದಲೇ ಗ್ರೇಟ್ ಬ್ರಿಟನ್ನಿನಲ್ಲಿ ಮಾತ್ರವಲ್ಲದೆ, ಪ್ರಪಂಚದ ಇತರ ಭಾಗಗಳಲ್ಲಿರತಕ್ಕ ಬ್ರಿಟಿಷ್ ರಾಜ್ಯಗಳಲ್ಲೂ ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿರುವ ವಿಚಾರದಲ್ಲಿ ಅತ್ಯಂತ ಸಂತೋಷವನ್ನುಂಟುಮಾಡಿದೆ. ಭಾರತೀಯರಾದ ನೀವುಗಳೂ, ಗ್ರೇಟ್ ಬ್ರಿಟನ್ನಿನವರಾದ ನಾವುಗಳೂ ದೃಢತರವಾಗಿ ಏಕೀಭವಿಸಿರುತ್ತೇವೆಂದು ನೆನಸುತ್ತೇನೆ. ಮುಂದೆ ಬರತಕ್ಕದನ್ನು ಈಗ ಹೇಳುವುದು ಕಷ್ಟವಾಗಿದ್ದಾಗ್ಯೂ, ನಮ್ಮುಭಯರಾಜ್ಯಗಳ ಚರಿತ್ರೆಗಳು ಅನೇಕ ವರ್ಷಗಳವರೆಗೆ ಒಂದಾಗಿರುವುವೆನ್ನುವುದರಲ್ಲಿ ಸಂದೇಹವಿಲ್ಲವು. ನಮ್ಮಗಳ ಪರಸ್ಪರಾಭಿವೃದ್ಧಿಗೆ ನಾವಿಬ್ಬರೂ ಏಕೀಭವಿಸಿ ಕೆಲಸವನ್ನು ಮಾಡಬೇಕು. ಹಾಗೆ ನಾವಿಬ್ಬರೂ ಕೆಲಸ ಮಾಡುವುದಾದರೆ, ನಮ್ಮಲ್ಲಿ ಪರಸ್ಪರ ಗೌರವವೂ, ಸಹಾನುಭೂತಿಯೂ ಇದ್ದೇ ತೀರಬೇಕು. ಸುಧಾರಣೆಯು ಯೂರೋಪಿನಲ್ಲಿ ಆಗುವಷ್ಟು ತೀವ್ರವಾಗಿ ಈ ದೇಶದಲ್ಲಿ ಆಗದೆ ಇರಬಹುದು. ಆದರೆ ಅಂತಹ ಸುಧಾರಣೆಯೆಲ್ಲವೂ ಪೂರ್ವದನುಭವವನ್ನನುಸರಿಸಿ ಆಗಬೇಕಾಗಿರುತ್ತದೆ. ಸುಧಾರಣೆಗಾಗಿ ಮಾಡಬೇಕಾದ ಪ್ರಯತ್ನಗಳಲ್ಲಿ ನಮಗೂ ನಿಮಗೂ ಭೇದವಿದ್ದಾಗ್ಯೂ ನಮ್ಮಿಬ್ಬರ ಫಲಾಪೇಕ್ಷೆಯು ಮಾತ್ರ ಒಂದೇ ಆಗಿರುವುದು.

ಸಾರ್ವಭೌಮರಿಗೆ ತಮ್ಮ ಭಾರತ ಪ್ರಜೆಗಳಲ್ಲಿರತಕ್ಕ ಪ್ರೀತಿ ಮತ್ತೂ ಸಹಾನುಭೂತಿಯ ವಿಚಾರವಾಗಿ ಈ ದೇಶದಲ್ಲಾಗಲಿ, ಗ್ರೇಟ್ ಬ್ರಿಟನ್ನಿನಲ್ಲಾಗಲಿ ಲೇಶವೂ ಸಂಶಯಪಡತಕ್ಕವರಿಲ್ಲ. ಈ ದೇಶೀಯರ ರಾಜಭಕ್ತಿಯ ವಿಚಾರದಲ್ಲಂತೂ ಹೇಳಬೇಕಾದುದೇ ಇಲ್ಲವು. ಭಾರತೀಯರ ರಾಜಭಕ್ತಿಯು ದೃಢವಾದುದೆಂದೂ, ಅತಿಶಯವಾದುದೆಂದೂ ಲಾರ್ಡ್ ಮಿಂಟೋಯವರು ಹೇಳಿರುವುದನ್ನು ಗ್ರೇಟ್ ಬ್ರಿಟನ್ನಿನ ಪ್ರಜೆಗಳೂ ನಂಬಿರುತ್ತಾರೆ. ನಾನು ಮೊದಲು ಹೇಳಿದಂತೆ ಏಕಫಲಾಪೇಕ್ಷೆಯಿಂದ ಉಭಯರೂ ಏಕೀಭವಿಸಿ ಕೆಲಸಮಾಡಬೇಕಾದಲ್ಲಿ ಪರಸ್ಪರ ಗೌರವವೂ, ಪ್ರೀತಿಯೂ, ಮತ್ತೂ ಸಹಾನುಭೂತಿಯೂ ಅವಶ್ಯಕವಾಗಿರಬೇಕು. ಈ ಅಧಿಪತ್ಯದ ರಾಜ್ಯಾಡಳಿತದಲ್ಲೂ, ಅಭಿವೃದ್ಧಿಯಲ್ಲೂ ಆಸಕ್ತರಾದ ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಸೂಚಿಸಿರತಕ್ಕ ವಿಷಯಗಳನ್ನು ಕುರಿತು ನನ್ನಭಿಪ್ರಾಯವನ್ನು ಸದ್ಯದಲ್ಲಿ ಅವರು ನಿರೀಕ್ಷಿಸುವುದೂ ಇಲ್ಲ, ನಾನೂ ಆ ಪ್ರಶ್ನೆಗಳನ್ನು ಮಾಡುವುದಕ್ಕೂ ಇಲ್ಲ. ಆದರೆ ನಿಮ್ಮಾಶೋತ್ತರದ ವಿಚಾರದಲ್ಲಿ ನನಗೆ ಪೂರ್ಣವಾದ ಸಹಾನುಭೂತಿಯಿರುವುದೆಂದೂ, ಅವುಗಳನ್ನು ಕುರಿತು ನಾನು ಮುಂದೆ ಚೆನ್ನಾಗಿ ಪರ್ಯಾಲೋಚಿಸುವೆನೆಂದೂ ದೃಢವಾಗಿ ಹೇಳುತ್ತೇನೆ. ಈಗ ಆರಂಭವಾಗಿರುವ ನಮ್ಮ ಪರಸ್ಪರ ಸ್ನೇಹಾನುರಾಗವು ಕ್ರಮೇಣ ಅಭಿವೃದ್ಧಿಯನ್ನು ಹೊಂದಿ ನನ್ನ ಅಧಿಕಾರದವಧಿಯ ಕಡೆಯಲ್ಲಿ ಇದೇ ರೀತಿಯಾಗಿ ನಿಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರನಾಗಿರುವೆನೆಂದು ನಂಬಿದೇನೆ.

ಮದ್ರಾಸ್ ಗೌರ್ನರ ಈ ಘನವಾದ ಅಭಿಪ್ರಾಯದಂತೆ ಸರ್ಕಾರದ ಎಲ್ಲ ಶಾಖೆಯಲ್ಲಿರುವ ಮಧ್ಯಮ ತರಗತಿಯಿಂದ ಉನ್ನತ ತರಗತಿಯವರೆಗಿನ ಅಧಿಕಾರಿಗಳು ಭಾರತೀಯರ ಕೂಡ ಮಿಳಿತರಾಗಿ ದೇಶಾಭಿವೃದ್ಧಿಯ ಕಾರ್ಯಗಳಲ್ಲಿ ಪಾಟುಪಡುವುದಾದರೆ, ಉಭಯ ದೇಶೀಯರ ಉದ್ದಿಷ್ಟ ಫಲಪ್ರಾಪ್ತಿಯು ಶೀಘ್ರವಾಗಿ ಆಗುವುದರಲ್ಲಿ ಸಂದೇಹವಿಲ್ಲವು. ಅದುಕಾರಣ ಪ್ರತಿಯೊಬ್ಬಧಿಕಾರಿಯೂ ಈ ಗೌರ್ನರ ಉಪದೇಶವನ್ನು ನೆನಪಿನಲ್ಲಿಡತಕ್ಕದಾಗಿದೆ.

ದಿಲ್ಲಿಯ ದರ್ಬಾರಿಗೆ ಹೊರಡಲು ಮೈಸೂರು ಸಂಸ್ಥಾನದಿಂದ ಆಮಂತ್ರಣವನ್ನು ಕೊಡಲ್ಪಟ್ಟಿರುವವರು:—

ಸರದಾರರುಗಳು.

ಎಂ. ಕಾಂತರಾಜ ಅರಸಿನವರು, ಕರ್ನಲ್ ದೇಶರಾಜ ಅರಸಿನವರು. ಎಂ. ಲಕ್ಷ್ಮೀಕಾಂತರಾಜ ಅರಸಿನವರು, ಎಂ. ಗೋಪಾಲರಾಜ ಅರಸಿನವರು, ಎಂ. ಗೋಪಾಲಕೃಷ್ಣ ಅರಸಿನವರು, ರಾಣಾ ವಿನಯ ಸಿಂಹರವರು, ದಳವಾಯಿ ದೇವರಾಜ ಅರಸಿನವರು, ಎಂ. ಎನ್. ಬಾಳರಾಜ ಅರಸಿನವರು ಮತ್ತೂ ತುರುವೇಕೆರೆ ಬಸವರಾಜ ಅರಸಿನವರು.

ಸರ್ಕಾರಿಯಧಿಕಾರಿಗಳು.

ದಿವಾನರು, ಚೀಫ್ ಜಡ್ಜರು, ಉಭಯ ಕೌನ್ಸಿಲರುಗಳು, ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯವರು, ರೆವಿನ್ಯೂ ಕಮಿಷನರು, ಪೋಲೀಸ್ ಇನ್‍ಸ್ಪೆಕ್ಟರ್ ಜನರಲ್‍ರವರು, ಸರ್ವೆ ಸೂಪರಿಂಟೆಂಡೆಂಟರು, ಗೌರ್ನಮೆಂಟ್ ಕಂಟ್ರೋಲರು, ಚೀಫ್ ಇಂಜನಿಯರು, ಫಾರೆಸ್ಟುಗಳ ಕನ್ಸರ್ವೇಟರು, ಎಕ್ಸೈಸ್ ಕಮಿಷನರು, ಸೀನಿಯರ್ ಸರ್ಜನರು, ವಿದ್ಯಾಭ್ಯಾಸದ ಇನ್‍ಸ್ಪೆಕ್ಟರ್ ಜನರಲ್‍ರವರು, ಭೂಗರ್ಭ ಶೋಧಕ ಶಾಸ್ತ್ರಜ್ಞರು, ಚೀಫ್ ಕಮ್ಯಾಂಡೆಂಟರು, ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರು, ಮಿಲ್ಟರಿ ಸೆಕ್ರೆಟರಿಯವರು, ಹುಜೂರು ಸೆಕ್ರೆಟರಿಯವರು ಮತ್ತೂ ಅಸಿಸ್ಟೆಂಟ್ ಸೆಕ್ರೆಟರಿಯವರು ದಿವಾನರ ಪ್ರೈವೇಟ್ ಸೆಕ್ರೆಟರಿಯವರು, ಅಂಡರ್ ಸೆಕ್ರೆಟರಿಯವರು ಮತ್ತೂ ವೈದ್ಯರು, ಶ್ರೀಮನ್ ಮಹಾರಾಣಿಯವರ ವೈದ್ಯರು.

ಅತಿಥಿಗಳು.

ಮೆಸರ್ಸ್. ವಿ. ಪಿ. ಮಾಧವರಾಯರು, ಸಿ. ಶ್ರೀನಿವಾಸಯ್ಯಂಗಾರರು, ರಾ॥ ಬ॥ ಎ. ರಂಗಸ್ವಾಮಯ್ಯಂಗಾರರು, ಧರ್ಮಪ್ರ ಎಂ. ಗೋಕುಲದಾಸರು ಮತ್ತೂ ಅವರ ೬ ಜನ ಮಕ್ಕಳು, ನರೋತ್ತಮ ಗೋಕುಲದಾಸರು ಮತ್ತೂ ಅವರ ಮಗ, ಎನ್. ವಿ ಮಾಂಡಲಿಕ್‍ರವರು, ಎಫ್. ಎ. ಲಾರ್ವರ್‍ರವರು, ಎ. ಚಾಮಪ್ಪಾಜಿ ಅರಸಿನವರು, ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು, ಎಚ್. ನಂಜುಂಡರಾಜ ಅರಸಿನವರು, ಎಚ್. ಲಿಂಗರಾಜ ಅರಸಿನವರು, ಎಚ್. ಸಿ. ಲಿಂಗರಾಜ ಅರಸಿನವರು, ಬಿ. ಪುಟ್ಟಯ್ಯಾಜಿ ಅರಸಿನವರು, ಎಚ್. ಚಿಕ್ಕೇಅರಸಿನವರು, ಡಾಕ್ಟರ್ ಬುಲೆರ್ ದಂಪತಿಗಳು ಪಿಲ್ಕಿಂಗ್‍ಟನ್ ದಂಪತಿಗಳು, ಸ್ಕಾಟ್‍ಸ್ಕಿರ್ವಿಂಗ್ ದಂಪತಿಗಳು, ಶಿವಗಿರಿ ಜಮೀನದಾರರು, ಮಾಯಾಮಿಯಾದ ಆರ್. ಎನ್. ಅಯ್ಯರವರು, ಡಿ. ವೆಂಕಟರಾಮಯ್ಯನವರು, ಬಿ. ನರಸಿಂಗರಾಯರು, ಸಯ್ಯದ್ ಹನೀಫ್‍ರವರು, ಇಜ್‍ಮ್, ಸ್ಮಿತ್ ಮತ್ತೂ ಸ್ಪಾರ್ಕ್ಸ್ ಇವರುಗಳ ಪತ್ನಿಯರುಗಳು, ಕ್ಯಾಂಬಲ್‍ರವರ ಪತ್ನಿಯವರು ಮತ್ತೂ ಮಗಳು, ಪಾಳೆಯಗಾರರ ಪ್ರತಿನಿಧಿಗಳಾದ ಬಿ. ಜಿ. ಕುಮಾರಸ್ವಾಮಿ ನಾಯಕರು, ಜಿ. ಎಚ್. ಕ್ರಬಿಂಗೆಲ್ ದಂಪತಿಗಳು, ಮಹಾರಾಜರವರ ಬಾಡಿಗಾರ್ಡ್ಸ್ ಕಮ್ಯಾಂಡೆಂಟ್ ಎಸ್. ಗೋಪಾಲರಾಯರು, ಬಾಸ್ಸಮುಖದ ಪ್ರೊಫೆಸರ್ ಎಂ. ಪುದ್ದರಾಜ ಅರಸಿನವರು, ಹುಜೂರ್‍ಕಾಂಡಾರ್ ಎಂ. ಪಿ. ಸುಬ್ರಹ್ಮಣ್ಯರಾಜ ಅರಸಿನವರು, ಶ್ರೀ॥ ಶೇಷಾದ್ರಿ ಅಯ್ಯರವರ ಮಕ್ಕಳು ಕೆ. ಎಸ್. ದೊರಸ್ವಾಮಿ ಅಯ್ಯರ್‍ರವರು ಮತ್ತೂ ಮೈಸೂರು— ಹೈದರಾಬಾದಿನ ಇಂಪೀರಿಯಲ್ ಸರ್ವಿಸ್ ಕ್ಯಾವೆಲರಿಯ ಇನ್‍ಸ್ಪೆಕ್ಟಿಂಗಾಫೀಸರ್ ಕ್ಯಾಂಪ್ಟನ್‍ರವರು.

ಸರದಾರರುಗಳಲ್ಲಿ ಮ॥ ಎಂ. ಕಾಂತರಾಜಅರಸಿನವರೂ, ಮ॥ ಟಿ. ಬಸವರಾಜಅರಸಿನವರೂ ಅನಿವಾರ್ಯತೆಯಿಂದ ಹೊರಡುವುದಿಲ್ಲವು. ಅಧಿಕಾರಿಗಳಲ್ಲಿ ವಿದ್ಯಾಭ್ಯಾಸದ ಶಾಖೆಯ ಇ॥ ಜನರಲ್‍ರವರ ಮತ್ತೂ ಚೀ॥ ಕಮಿಷನರ ಸ್ಥಾನಗಳಲ್ಲಿ ಯಾರೂ ನೇಮಿಸಲ್ಪಟ್ಟಿಲ್ಲವು. ಪೋಲೀಸು ಇ॥ ಜನರಲ್ ಮ॥ ಡಿ. ದೇವರಾಜಅರಸಿನವರೂ, ಚೀಫ್ ಕಮ್ಯಾಂಡೆಂಟ್ ಕರ್ನಲ್ ದೇಶರಾಜಅರಸಿನವರೂ ಸರದಾರರುಗಳಾಗಿ ದಯಮಾಡಿಸುತ್ತಾರೆ. ಅತಿಥಿಗಳಲ್ಲಿ ಮ॥ ವಿ. ಪಿ. ಮಾಧವರಾಯರು ಮದ್ರಾಸ್ ಸರ್ಕಾರದ ಅತಿಥಿಗಳಾಗಿ ಹೊರಡುವರು, ಮತ್ತೂ ಮ॥ ಎ. ರಂಗಸ್ವಾಮಯ್ಯಂಗಾರರೂ, ಮ॥ ಸಿ. ಶ್ರೀನಿವಾಸಯ್ಯಂಗಾರರೂ ತೊಂದರೆಯಿಂದ ಹೊರಡುವುದಿಲ್ಲವು.

ಇವರುಗಳಲ್ಲಿ ಪ್ರಜಾಪ್ರತಿನಿಧಿ ಮೆಂಬರುಗಳಾದ ಬೆಂಗಳೂರ ಅಡ್ವೊಕೇಟ್ ಮ॥ ಡಿ. ವೆಂಕಟರಾಮಯ್ಯನವರೂ, ಶ್ರೀರಂಗಪಟ್ಟಣದ ಮ॥ ಬಿ. ನರಸಿಂಗರಾಯರೂ ತಾ॥ ೧೮ರಲ್ಲೂ; ಜ॥ ಮತ್ತೂ ರೆ॥ ಸೆಕ್ರೆಟರಿ ಮ॥ ಬಾಲಸುಂದರಂ ಅಯ್ಯರ್‍ರವರು, ಪ್ರೈವೇಟ್ ಸೆಕ್ರೆಟರಿ ಮ॥ ಟಿ. ಗೋವಿಂದರಾಯರು ಡಾಕ್ಟರ್ ರಾಘವೇಂದ್ರರಾಯರು ಇವರುಗಳೊಡನೆ ದಿವಾನರು ಮ॥ ಟಿ. ಆನಂದರಾಯರು ಮತ್ತೂ ಚೀಫ್ ಇಂಜಿನೀರು ಮ॥ ವಿಶ್ವೇಶ್ವರಯ್ಯನವರು ತಾ॥ ೨೫ರಲ್ಲೂ; ಪರ್ಸನಲ್ ಅಸಿಸ್ಟೆಂಟರೊಡನೆ ಒಂದನೆಯ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು, ಸೀನಿಯರ್ ಸರ್ಜನ್ ಡಾಕ್ಟರ್ ಅಚ್ಯುತರಾಯರು, ಪಾಳೆಯಗಾರರ ಪ್ರತಿನಿಧಿಗಳಾದ ಬೆಂಗಳೂರ ತಿ॥ ಕ॥ ಮ॥ ಬಿ. ಜಿ. ಕುಮಾರಸ್ವಾಮಿನಾಯಕರು ತಾ॥ ೧೬ರಲ್ಲೂ ಪ್ರಯಾಣಮಾಡಿದರು. ಮತ್ತೂ ಸರದಾರ್ ಡಿ. ದೇವರಾಜಅರಸಿನವರು, ಫಾರೆಸ್ಟುಗಳ ಕನ್ಸರ್ವೇಟರ್ ರಾ॥ ಬ॥ ಮುತ್ತಣ್ಣನವರು ಮತ್ತೂ ಅ॥ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಹಾಸನದ ಮೆ॥ ಸಯ್ಯದ್‍ಅಮೀರ್‍ಹಸೇನ್‍ರವರು ಈ ದಿನ ರಾತ್ರಿ ಪ್ರಯಾಣಮಾಡುವರು.

ಶ್ರೀಮನ್ ಮಹಾರಾಜ ಸಹೋದರರ, ಮಹಾರಾಣಿಯವರುಗಳ ಮತ್ತೂ ರಾಜಕುಮಾರಿಯರುಗಳ ಉಪಯೋಗಕ್ಕಾಗಿ ೯೮ ಕುದುರೆಗಳೂ, ೪೦ ಬಂಡಿಗಳೂ, ೨೫ ಮೋಟಾರುಗಳೂ, ಆಹಾರ ಸಾಮಗ್ರಿಗಳೂ, ಪಾತ್ರೆ ಪದಾರ್ಥಗಳೂ ಸ್ತ್ರೀ ಪುರುಷ ಸೇವಕರೂ ೬ ಹೆಚ್ಚುಗಟ್ಟಲೆಯ ರೈಲುಬಂಡಿಗಳಲ್ಲಿ ಮುಂದಾಗಿ ಕಳುಹಲ್ಪಟ್ಟಿರುವರು. ಕಳೆದ ಶುಕ್ರವಾರ ಶ್ರೀಮದ್ಯುವರಾಜರಲ್ಲಿ ಸ್ಪೆಷಲ್ ಆಫೀಸರಾಗಿರುವ ಮ॥ ಸಿಂಗಳಾಚಾರರು, ಅರಮನೆಯ ಶಾಖೆಗೆ ಸೇರಿದ ಮೆ॥ ಹಾರಿಕರವರು, ಮ॥ ಗಳಾದ ವೆಂಕಟಸ್ವಾಮಿಅಯ್ಯರ್‍ರವರು, ಕೃಷ್ಣಸ್ವಾಮಿಯವರು, ಖಂಡೇರಾಯರು, ಮುದ್ದುಕೃಷ್ಣಪ್ಪನವರು ಹೊರಟರು. ತಾ॥ ೨೨ರ ಬೆಳಿಗ್ಗೆ ಶ್ರೀಮನ್ ಮಹಾರಾಜರವರೂ, ಯುವರಾಜರೂ ಸೆಕ್ರೆಟರಿಗಳೊಡನೆ ಮೋಟಾರು ಬಂಡಿಯಲ್ಲೂ, ಅದೇ ದಿವಸ ರಾತ್ರಿ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ಯುವರಾಣಿಯವರೂ, ರಾಜಕುಮಾರಿಯರುಗಳೂ ಮಿತಪರಿವಾರದೊಡನೆ ರೈಲುಬಂಡಿಯಲ್ಲೂ ಬೆಂಗಳೂರಿಗೆ ಪ್ರಯಾಣಮಾಡಿ ಅಲ್ಲಿಂದ ತಾ॥ ೨೮ರಲ್ಲಿ ಎಲ್ಲರೂ ಒಟ್ಟಿಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡುವವರಾಗಿರುವರು.

ಒಳದೇಶದ ವೃತ್ತಾಂತಗಳು.

ಪೋ॥ ಇ॥ ಜನರಲ್ ಮ॥ ಡಿ. ದೇವರಾಜಅರಸಿನವರು ಕಳೆದ ಗುರುವಾರ ರಾಜಧಾನಿಗೆ ಬಂದಿದ್ದು ನೆನ್ನೆಯ ದಿನ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಕಳೆದ ತಾ॥ ೯ರಲ್ಲಿ ತರೀಕೆರೆಯಲ್ಲಿ ಬೆಂಕಿಯನಾಹುತಿಯಿಂದ ೬ ಹೆಂಚಿನಮನೆಗಳು ಸುಟ್ಟುಹೋಗಿ ೬೦೦೦ ರೂ. ವರೆಗೂ ನಷ್ಟವಾಯಿತು. ಈ ಬೆಂಕಿಯನ್ನಾರಿಸಲು ಬಂದ ೧೦ ಜನರಲ್ಲಿ ಇಬ್ಬರಿಗೆ ಘೋರ ಗಾಯವಾಗಿರುವುದು.

ಹಿಂದೆ ಮದರಾಸ್ ಗೌರ್ನರಾಗಿದ್ದ ಸರ್ ಆರ್ಥರ್ ಲಾಲೆಯವರು ಕಳೆದ ತಾ॥ ೧೮ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ಗೌರ್ನಮೆಂಟ್ ಹೌಸಿನಲ್ಲಿಳಿದುಕೊಂಡಿರುವರು. ಇವರು ಇಲ್ಲಿಂದಲೇ ದಿಲ್ಲಿಗೆ ಪ್ರಯಾಣವನ್ನು ಮಾಡುವವರಾಗಿರುವರು.

ರಾಜಧಾನಿಯ ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರು ದಿಲ್ಲಿಯ ದರ್ಬಾರ್ ಮಹೋತ್ಸವವನ್ನು ನೋಡಿಕೊಂಡು ಬರುವುದಕ್ಕಾಗಿ ನೆನ್ನೆಯ ದಿನ ದಿಲ್ಲಿಗೆ ಪ್ರಯಾಣಮಾಡಿದರು. ಬೆಂಗಳೂರಿಂದ ಮ॥ ಗೌಡರ ಬಾಪಣ್ಣನವರು ಮೊದಲಾದ ವರ್ತಕಮಹಾಶಯರು ಚಕ್ರವರ್ತಿ ದಂಪತಿಗಳ ದರ್ಶನಕ್ಕಾಗಿ ಬೊಂಬಾಯಿಗೆ ಹೋಗಿರುವರು.

ಮ॥ ವಿ. ಪಿ. ಮಾಧವರಾಯರು ಬರುವ ಡಿಸೆಂಬರ್ ತಾ॥ ೪ರಲ್ಲಿ ಮ॥ ಪಂಡಿತ ಮದನಮೋಹನಮಾಳವಿಯರವರು ತಮ್ಮ ಹಿಂದೂ ಸರ್ವಕಲಾಶಾಲೆಯ ಸ್ಥಾಪನೆಯ

ವಿಚಾರವಾಗಿ, ವೈಸ್‍ರಾಯರ ಮಂತ್ರಾಲೋಚನಾಸಭಾಸದರಾದ ಮೆ॥ ಇ. ಎಚ್. ಬಟ್ಲರವರನ್ನು ಕಂಡು ಮಾತನಾಡುವುದಕ್ಕಾಗಿ ಹೋಗುವ ಪ್ರತಿನಿಧಿಗಳ ಕೂಡ ಸೇರಲು ಒಪ್ಪಿಕೊಂಡಿರುತ್ತಾರೆ.

ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಮಂಡ್ಯ ತಾ॥ ಮಾದನಾಯಕನಹಳ್ಳಿ ಕೃಷ್ಣಮೂರ್ತಿರಾಯರ ಮನೆಯಲ್ಲಿ ನಡೆದ ಕಳುವಿನ ಸಂಬಂಧವಾದ ವರ್ತಮಾನದಲ್ಲಿ "ನೋಟುಗಳು ಮದ್ದೂರಿನ ಸಬ್ ಪೋಸ್ಟ್‍ಮಾಸ್ಟರ್ ಸುಬ್ಬರಾಯರಲ್ಲಿರುವುದಾಗಿ ತಿಳಿಯಬರುತ್ತದೆ" ಎಂದಿರುವುದಕ್ಕೆ ಬದಲಾಗಿ "ಕೆಲ ನೋಟುಗಳು ಮದ್ದೂರಿನ ಸಬ್ ಪೋಸ್ಟ್ ಮಾಸ್ಟರ ವಶದಲ್ಲಿರುವುದು ಗೊತ್ತಾಯಿತು." ಎಂದು ಹಸ್ತದೋಷದಿಂದ ಬಿದ್ದಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ.

ಕಳೆದ ಮಂಗಳವಾರ ರಾತ್ರಿ ಮ॥ ವಿ. ಪಿ. ಮಾಧವರಾಯರು ತಮ್ಮ ಪರ್ಣಭವನಕ್ಕೆ ಸರ್ಕಾರಿಯಧಿಕಾರಿಗಳು ಮೊದಲಾದ ಮಿತ್ರಮಂಡಲಿಯವರನ್ನು ಬರಮಾಡಿಕೊಂಡು ಹರಿಕಥೆಯನ್ನು ಮಾಡುವ ಮದ್ರಾಸಿನ ೧೦ ವರ್ಷ ವಯಸ್ಸಿನ ಪದ್ಮಾಕ್ಷಿಬಾಯಿ ಎಂಬಾಕೆಯಿಂದ ಉಷಾಪರಿಣಯ ಕಥಾ ಕಾಲಕ್ಷೇಪವನ್ನು ಮಾಡಿಸಿದರು. ಆಕೆಯ ಗಾನದ ಮಾಧುರ್ಯಕ್ಕಾಗಿಯೂ, ಶ್ರೋತೃಜನರ ಮನಸ್ಸಿನಲ್ಲಿ ಭಕ್ತಿಯನ್ನು ಹುಟ್ಟಿಸುವ ಸಾಮರ್ಥ್ಯಕ್ಕಾಗಿಯೂ ಸಭಿಕರೆಲ್ಲರೂ ಆಕೆಯನ್ನು ಮೆಚ್ಚಿ ಶ್ಲಾಘಿಸಿದರು.

ಈ ದಿವಸ ಟಿ॥ ನರಸೀಪುರ ತಾ॥ ತಲಕಾಡಿನಲ್ಲಿ ನಡೆಯುವ ಪಂಚಲಿಂಗಗಳ ದರ್ಶನದ ಯಾತ್ರೆಗಾಗಿ ರಾಜಧಾನಿಯಿಂದ ೭-೮ ಸಾವಿರ ಜನರು ಸಾವಿರಾರು ಬಂಡಿಯಲ್ಲಿ ಕಳೆದ ೩-೪ ದಿನಗಳಿಂದಲೂ ಪ್ರಯಾಣಮಾಡಿದರು. ಬೆಂಗಳೂರು ಮೊದಲಾದ ಕಡೆಯಿಂದ ಬಹುಜನರು ಮದ್ದೂರ ಮಾರ್ಗವಾಗಿಯೂ, ಮದ್ದೂರಿಂದೀಚೆಯವರು ಮೈಸೂರಮಾರ್ಗವಾಗಿಯೂ ಹೋಗಿರುವುದಾಗಿ ಕೇಳುತ್ತೇವೆ. ಈ ದರ್ಶನವು ಇನ್ನು ಮುಂದೆ ಬಹು ವರ್ಷಗಳವರೆಗೂ ಬರುವುದಿಲ್ಲವೆಂಬುದು ಮೇಲೆ ಈ ವೇಳೆ ಎಲ್ಲ ಕಡೆಯಿಂದಲೂ ವಿಶೇಷಜನರು ಹೊರಟಿರುತ್ತಾರೆ. ಶ್ರೀಮನ್ ಮಹಾರಾಜಾ ಸ್ವಾಮಿಯು ಈ ಬೆಳಿಗ್ಗೆ ಮೋಟಾರುಬಂಡಿಯಲ್ಲಿ ಚಿತ್ತೈಸಿ ದರ್ಶನಮಾಡಿಕೊಂಡು ಇದೇ ಸಾಯಂಕಾಲ ಹಿಂತಿರುಗುವುದಾಗಿ ಕೇಳುತ್ತೇವೆ.

ದಿವಾನರು, ಕೌನ್ಸಿಲರುಗಳು ಮತ್ತೂ ಸೆಕ್ರೆಟರಿಯವರು ದಿಲ್ಲಿಯ ದರ್ಬಾರಿಗೆ ಪ್ರಯಾಣಮಾಡಿರುವುದರಿಂದ ಸರ್ಕಾರದ ಅಂಡರ್ ಸೆಕ್ರೆಟರಿಯವರಾದ ಮ॥ ಬಿ. ರಾಮಸ್ವಾಮಯ್ಯನವರು ನಿತ್ಯಗಟ್ಟಲೆಯ ಸಾಧಾರಣ ಕೆಲಸಗಳನ್ನು ನೋಡಿಕೊಂಡು, ಸೆಕ್ರೆಟರಿಯವರ ಹೆಸರಿಗೆ ಬರತಕ್ಕ ಕಾಗದಗಳನ್ನು ಸ್ವೀಕರಿಸಿ ಅವುಗಳಲ್ಲಿ ದಿವಾನರಿಂದ ಕೂಡಲೇ ವಿಲೆಮಾಡಲ್ಪಡಬೇಕಾಗಿರತಕ್ಕವುಗಳನ್ನು ತಾವು ಗೊತ್ತುಮಾಡಿ ದಿಲ್ಲಿಯ ಆಲಿಪುರ ರೋಡಿನಲ್ಲಿರುವ ಮೇಡನ್ಸ್ ಹೋಟಲಿಗೆ ಕಳುಹತಕ್ಕದಲ್ಲದೆ, ಮಿಕ್ಕ ಸಾಧಾರಣ ಕಾಗದಗಳನ್ನು ದಿವಾನರು ಹಿಂತಿರುಗಿ ಬರುವವರೆಗೂ ತಮ್ಮಲ್ಲೇ ಇಟ್ಟುಕೊಳ್ಳುವುದು. ಮತ್ತೂ ಸರ್ಕಾರಿಯಧಿಕಾರಿಗಳು ಅಥವಾ ಅವರ ಸಮೀಪಬಂಧುಗಳು ಅಸ್ವಸ್ಥರಾಗಿರುವ ಸಂದರ್ಭದಲ್ಲಿ ಮಾತ್ರ ಅವರಿಗೆ ರಜವನ್ನು ಕೊಡುವುದು. ಡೆಪ್ಯುಟಿಕಮಿಷನರುಗಳು ಅಮಲ್ದಾರರುಗಳಿಗೇನೋ ಕಾಷ್ಯುಲ್ ರಜವನ್ನು ಕೊಡಬಹುದು. ದಿಲ್ಲಿಗೆ ಹೊರಡತಕ್ಕ ಶಾಖಾಧಿಕಾರಿಗಳು ತಮ್ಮ ಶಾಖೆಗಳಲ್ಲಿ ಕೆಲಸಗಳು ಕ್ರಮವಾಗಿ ನಡೆಯುವಂತೇರ್ಪಡಿಸತಕ್ಕದು. ಎಂದು ಸರ್ಕಾರದಪ್ಪಣೆಯಾಗಿರುತ್ತದೆ.

ದಿಲ್ಲಿಯಲ್ಲಿ ನಡೆಯುವ ಚಕ್ರವರ್ತಿ ದಂಪತಿಗಳ ಕಿರೀಟಧಾರಣಮಹೋತ್ಸವದ ಜ್ಞಾಪಕಾರ್ಥವಾಗಿ, ಚಿಕ್ಕಮಗಳೂರ ನಿವಾಸಿಗಳು ಅಲ್ಲಿ ಒಂದು ಪುಸ್ತಕಭಂಡಾರವನ್ನು ಸ್ಥಾಪಿಸಬೇಕೆಂದೂ, ಬೀರೂರಿನ ಮತ್ತೂ ಮೂಡಗೆರೆಯ ನಿವಾಸಿಗಳು ತಮ್ಮ ಸ್ಥಳಗಳಲ್ಲಿ ಧರ್ಮಶಾಲೆಗಳನ್ನೂ, ಯಡೇಹಳ್ಳಿಯ ಮ॥ ಇಂಗಳಗೊಂದಿ ಶಾಂತಪ್ಪಸೆಟ್ಟರು ಅಲ್ಲಿ ಒಂದು ಧರ್ಮಸತ್ರವನ್ನೂ ಕಟ್ಟಿಸಲು ಯೋಚಿಸಿರುವುದಾಗಿ ಕೇಳುತ್ತೇವೆ. ಇದೇ ರೀತಿಯಾಗಿ ಈ ಸಂಸ್ಥಾನದ ಇತರಕಡೆಯ ನಿವಾಸಿಗಳು ಏನಾದರು ಸ್ಮಾರಕಕಾರ್ಯಗಳನ್ನು ಪ್ರಜೋಪಯೋಗವಾಗಿರುವಂತೆಮಾಡಿ, ಈ ದೇಶೀಯರಿಗೆ ಸಾರ್ವಭೌಮರಲ್ಲಿರತಕ್ಕ ಅತಿಶಯವಾದ ರಾಜಭಕ್ತಿಯನ್ನು ಪ್ರದರ್ಶಿಸುವವರಾಗುವರೆಂದು ನಿರೀಕ್ಷಿಸುತ್ತೇವೆ. ಬೀರೂರಿನಲ್ಲಿ ಪೂರ್ಣ ಶ್ರೀಮಂತರಾಗಿರುವ ಮ॥ ಪತ್ರೆ ವೀರಪ್ಪನವರು ವೀರಶೈವರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ೬೦೦೦೦ ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿರುವರಷ್ಟೆ. ಈ ಧರ್ಮಿಷ್ಠರು ಚಕ್ರವರ್ತಿ ದಂಪತಿಗಳ ಕಿರೀಟಧಾರಣಮಹೋತ್ಸವದ ಜ್ಞಾಪಕಾರ್ಥವಾಗಿ ಮೇಲ್ಕಂಡ ಕಾಲೇಜನ್ನು ಸ್ಥಾಪಿಸಿ, ತಮ್ಮ ವಾಗ್ದಾನವನ್ನು ಸಾರ್ಥಕಪಡಿಸಿಕೊಳ್ಳುವುದಲ್ಲದೆ, ತಮಗಿರುವ ರಾಜಭಕ್ತಿಯ ವಿಶೇಷವನ್ನು ತೋರ್ಪಡಿಸಿ ದಿಗಂತವ್ಯಾಪ್ತಖ್ಯಾತಿಯನ್ನು ಪಡೆಯುವವರಾಗಲೆಂದು ನಿರೀಕ್ಷಿಸುತ್ತೇವೆ.

ವರ್ತಮಾನ ಸಂಗ್ರಹವು.

ಚಕ್ರವರ್ತಿಯವರ ಬೇಟೆಗಾಗಿ ನೇಪಾಳದ ಕಾಡುಗಳಲ್ಲಿ ಹುಲಿಗಳೂ, ಘೇಂಡಾಮೃಗಗಳೂ ಕೂಡಿಹಾಕಲ್ಪಟ್ಟಿರುತ್ತವೆ.

ದಿಲ್ಲಿಯಲ್ಲಿ ಈಗ ಹಗಲೂ ರಾತ್ರಿ ಎಡೆಬಿಡದೆ ಮಳೆಯು ಸುರಿಯುತ್ತಿದೆ. ಆದರೆ ಇದರಿಂದ ಅಲ್ಲಿ ನಡೆಯುತ್ತಿರುವ ಉತ್ಸವಸಮಾರಂಭದೇರ್ಪಾಟಿಗೆ ಯಾವ ತೊಂದರೆಯೂ ಸಂಭವಿಸಿರುವುದಿಲ್ಲ.

ಬೊಂಬಾಯಿಯಾಧಿಪತ್ಯಕ್ಕೊಳಪಟ್ಟ ಸೊಲ್ಲಾಪುರ, ನಾಸಿಕ ಮತ್ತೂ ಸತಾರಾ ಡಿಸ್ಟ್ರಿಕ್ಟುಗಳಲ್ಲಿರತಕ್ಕ ರೈಲ್ವೆಯ ಸ್ಟೇಷನ್ನುಗಳಿಗೆ ದನಗಳ ಮೇವಿನ ಪದಾರ್ಥಗಳನ್ನು ೧೯೧೧ನೆಯ ನವಂಬರ್ ತಾ॥ ೨೦ರಿಂದ ಮತ್ತೊಂದು ಅಪ್ಪಣೆಯನ್ನು ಮಾಡುವವರೆಗೂ ಕಡಿಮೆಯ ದರದಿಂದ ಕಳುಹತಕ್ಕದೆಂದು ಇಂಡ್ಯಾ ಸರ್ಕಾರದಪ್ಪಣೆಯಾಗಿರುತ್ತದೆ.

ಬೆಲ್ಜಿಯಂ ದೊರೆಯು ೬೦೦೦೦೦೦ ರೂ. ಬೆಲೆಬಾಳುವ ತನ್ನಾಸ್ತಿಯು ತನ್ನ ಹೆಣ್ಣುಮಕ್ಕಳಿಗೆ ದೊರೆಯಬಾರದೆಂದು ಅದನ್ನು ಒಂದು ಫಂಡಿಗೆ ಕೊಟ್ಟುಬಿಟ್ಟಿದ್ದುದರಿಂದ, ಆ ದೊರೆಯ ಮಗಳು ತನ್ನ ತಂದೆಯಾಸ್ತಿಯು ತನಗೆ ಬರಬೇಕೆಂದು ಮಾಡಿದ್ದ ವಿವಾದವು ಕೆಟ್ಟುಹೋಯಿತು. ಆದರೆ ದೊರೆಯು ತನ್ನ ಮರಣಕ್ಕೆ ೨ ದಿನಗಳ ಮುಂದೆ ಕೊಟ್ಟಿದ್ದ ೯೦೦೦೦೦ ರೂ. ಮಾತ್ರ ಆಕೆಗೆ ದೊರೆಯಿತು.

ಭರತಖಂಡದ ವಾಯುವ್ಯ ಮೂಲೆಯ ಎಲ್ಲೆಯ ಪ್ರಾಂತದಲ್ಲಿ ೧೯೧೧ನೆಯ ಏಪ್ರಿಲ್ ತಾ॥ ೧ರಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿಸತಕ್ಕದು. ಈ ಪಾಠಶಾಲೆಗಳ ಸಂಖ್ಯೆಯು ಹೆಚ್ಚಿಸಲ್ಪಡುವ ಆಲೋಚನೆಯು ನಡೆದಿರುತ್ತಿದೆ. ಮತ್ತೂ ಉಪಾಧ್ಯಾಯರುಗಳ ಕನಿಷ್ಟ ಸಂಬಳವು ೬ ರೂ. ಇಂದ ೧೫ ರೂ. ಗೆ ಹೆಚ್ಚಿಸಲ್ಪಡುತ್ತಿದೆ. ಎಂದು ಆ ಪ್ರಾಂತದ ಚೀಫ್ ಕಮಿಷನರು ಪ್ರಸಿದ್ಧಪಡಿಸಿರುತ್ತಾರೆ.

ಜಾಂನಗರ ಸಂಸ್ಥಾನದವರು ತಮ್ಮ ಸಂಸ್ಥಾನದಲ್ಲಿ ಕ್ಷಾಮಪ್ರಾಪ್ತವಾದ ವರ್ಷದಲ್ಲಿ ಸಿವಿಲ್ ಕೋರ್ಟಿನ ಡಿಕ್ರಿಯನ್ನು ಆಚರಣೆಗೆ ತರಕೂಡದೆಂದು ಅಪ್ಪಣೆಮಾಡಿರುವುದಾಗಿಯೂ, ಮೌರ್ವಿ ಸಂಸ್ಥಾನದಲ್ಲೂ ಇದೇ ರೀತಿಯಾಗಿ ಅಪ್ಪಣೆಮಾಡಲ್ಪಟ್ಟಿರುವುದಲ್ಲದೆ, ಭಾವಿಗಳನ್ನೂ, ಕೊಳಗಳನ್ನೂ ತೋಡಿಸುವುದು, ಇರುವ ಮಾರ್ಗಗಳನ್ನು ಅಭಿವೃದ್ಧಿಗೊಳಿಸುವುದು ಮೊದಲಾದ ಕ್ಷಾಮನಿವಾರಣಾ ಕಾರ್ಯಗಳು ಪಕ್ರಮಿಸಲ್ಪಟ್ಟಿರುತ್ತವೆ.

ಕಳೆದ ತಾ॥ ೧೧ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೦೨೦೬ ಜನರಿಗೆ ಪ್ಲೇಗು ತಗಲಿ ೮೫೯೯ ಜನರು ಸತ್ತರು. ಇವರಲ್ಲಿ ಬೊಂಬಾಯಿನಲ್ಲಿ ೪೦೧೬; ಮದ್ರಾಸಿನಲ್ಲಿ ೬೪೬; ಬಂಗಾಳಾದಲ್ಲಿ ೧೧೪; ಸಂಯುಕ್ತ ಪ್ರಾಂತಗಳಲ್ಲಿ ೪೦೮; ಪಂಜಾಬಿನಲ್ಲಿ ೬೯; ಬರ್ಮಾದಲ್ಲಿ ೧೮; ಮಧ್ಯಪ್ರಾಂತಗಳಲ್ಲಿ ೪೦೬; ಮೈಸೂರ ಸೀಮೆಯಲ್ಲಿ ೪೬೧; ಹೈದರಾಬಾದು ಸೀಮೆಯಲ್ಲಿ ೬೮೬ ಮತ್ತೂ ಮಧ್ಯ ಹಿಂದೂಸ್ಥಾನದಲ್ಲಿ ೪೯೪ ಈ ಪ್ರಕಾರ ಮರಣವಾಗಿರುತ್ತದೆ.

ಬಂಗಾಳಾಕ್ಕೆ ಸೇರಿದ ಒಂದು ಹಳ್ಳಿಯಲ್ಲಿ ಕೆಲವು ನಿತ್ಯಾಲಾಲಕಮಲ ಎಂಬುವನ ಹೊಲದಲ್ಲಿ ಬೆಳೆಯನ್ನು ಕುಯ್ಯಲೆತ್ನಿಸುತ್ತಿದ್ದಾಗ್ಗೆ, ನಿತ್ಯಾಲಾಲನು ಬಂದು ತಡೆಯನ್ನು ಮಾಡಲು, ಅವರು ಅವನನ್ನು ಹಿಡಿದು ಹೊಟ್ಟೆಯನ್ನು ಬಗೆದು ಕೊಂದುಹಾಕಿದರು. ಈ ಸತ್ತುಹೋದ ನಿತ್ಯಾಲಾಲನ ಚಿಕ್ಕ ವಯಸ್ಸಿನ ಹೆಂಡತಿಯು ತನ್ನ ಗಂಡನ ಮರಣವಾರ್ತೆಯನ್ನು ಕೇಳಿ, ತನ್ನ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಮನೆಯ ಬಾಗಿಲನ್ನು ಒಳಗಿನಿಂದ ಭದ್ರಪಡಿಸಿಕೊಂಡು ಮನೆಗೆ ಬೆಂಕಿಯನ್ನು ಹೊತ್ತಿಸಿದಳು. ನೆರೆಯವರು ಮನೆಯು ಹೊತ್ತಿಕೊಂಡುರಿಯುವುದನ್ನು ಕಂಡು ಬಾಗಿಲನ್ನು ಮುರಿದು ಒಳಗೆ ನುಗ್ಗಿ ಆ ಹೆಂಗುಸನ್ನು ಹೊರಗೆ ಕರೆದುಕೊಂಡುಬಂದರು. ಆಕೆಗೆ ಕೊಂಚ ಅಪಾಯವಾಗಿದೆ. ಆದರೆ ಮನೆಯು ಸುಟ್ಟು ಭಸ್ಮವಾಯಿತು.

ಮಲಯಾಳದಲ್ಲಿ ಒಬ್ಬ ನಂಬೂದ್ರಿಯು ರೈಲು ಬಂಡಿಯನ್ನಿಳಿಯುತಲೆ, ಅವನ ಬಳಿಗೆ ಒಬ್ಬ ಸೇವಕನು ಬಂದು "ನೀನು ಹೊಗೆಯ ಸೊಪ್ಪನ್ನಿಟ್ಟುಕೊಂಡಿರುವೆಯಾದುದರಿಂದ ನನಗೆ ಎರಡು ರೂಪಾಯನ್ನು ಕೊಟ್ಟರೆ ಬಿಟ್ಟುಬಿಡುತ್ತೇನೆ, ಇಲ್ಲವಾದರೆ ನಿನ್ನನ್ನು ಹಿಡಿದು ಶಿಕ್ಷೆಗೆ ಗುರಿಮಾಡುತ್ತೇನೆ." ಎಂದು ಅವನನ್ನು ಹೆದರಿಸಿ ಅವನಿಂದ ೨ ರೂ. ಗಳನ್ನು ಕಿತ್ತುಕೊಂಡನು. ಆ ನಂಬೂದ್ರಿಯು ಹಣವನ್ನು ಕೊಡುವಾಗ್ಗೆ ಬಹು ಕೋಪಗೊಂಡು, ನೀನು ಮಾಡಿದ ಕಾರ್ಯಕ್ಕೆ ತಕ್ಕಫಲವನ್ನು ಇನ್ನು ೧೦ ದಿವಸಗಳಲ್ಲಿ ಅನುಭವಿಸುತ್ತೀಯೆ ಎಂದು ಶಪಿಸಿದನು. ಆ ಸೇವಕನು ಕೆಲ ದಿನಗಳ ಮೇಲೆ ರಾಜವೀಧಿಯಲ್ಲಿ ಹೋಗುತ್ತಿರುವಾಗ್ಗೆ ಮುಗ್ಗರಿಸಿ ಬಿದ್ದು ಸತ್ತುಹೋದನು. ಹಾಗಾದರೆ ಆ ನಂಬೂದ್ರಿಯ ಶಾಪವು ಸಾರ್ಥಕವಾಯಿತಲ್ಲವೆ!

ಕಳೆದ ತಾ॥ ೯ರಲ್ಲಿ ಕಲಕತ್ತಾದಲ್ಲಿ ೪ ಅಂತಸ್ತಿನ ಒಂದು ಮನೆಯ ಕೆಳಭಾಗದಲ್ಲಿ ಕರ್ಪೂರ, ಗುಗ್ಗುಳ, ಕಿತ್ತುಪ್ಪ ಮೊದಲಾದ ಪದಾರ್ಥಗಳು ತುಂಬಲ್ಪಟ್ಟಿದ್ದ ಕೊಠಡಿಗೆ ಹೇಗೋ ಬೆಂಕಿಯು ಬಿದ್ದು ಪದಾರ್ಥಗಳೆಲ್ಲ ಸುಟ್ಟುಹೋದುವಲ್ಲದೆ, ಕೆಳಗಿನ ಅಂತಸ್ತು ಸುಟ್ಟುಹೋಗಿ ಮೇಲಿನ ಅಂತಸ್ತಿಗೆ ಹತ್ತುವ ಮರದ ಮೆಟ್ಟಲುಗಳೂ ಸುಟ್ಟುಹೋದುದರಿಂದ, ಮೇಲೆ ವಾಸಮಾಡುತ್ತಿದ್ದ ಜನರು ಹೊರಗೆ ತಪ್ಪಿಸಿಕೊಂಡು ಬರಲಾಗಲಿಲ್ಲವು. ಅಷ್ಟರಲ್ಲಿ ಬೆಂಕಿಯನ್ನಾರಿಸುವ ಜನರು ಯಂತ್ರವನ್ನು ತೆಗೆದುಕೊಂಡು ಬಂದು ನೀರನ್ನು ಹುಯಿದು ಜ್ವಾಲೆಯನ್ನು ಕಡಿಮೆಮಾಡಿ ಮೇಲಿನ ಅಂತಸ್ತಿಗೆ ಹತ್ತಿ ಅಲ್ಲಿದ್ದ ಮಾರ್ವಾಡಿಯ ಹೆಂಗುಸರು, ಮಕ್ಕಳು ಮೊದಲಾದವರನ್ನು ಬಸಿಲಿನ ಮಾಡದಿಂದ ಏಣಿಯದ್ವಾರ ಹೊರಗಿಳಿಸಿಕೊಂಡರು. ಬೆಂಕಿಯು ಆರಿಸಲ್ಪಟ್ಟು ನೋಡುವಲ್ಲಿ, ಒಂದು ಕೊಠಡಿಯೊಳಗೆ ಒಬ್ಬ ಹೆಂಗುಸೂ, ೪ ಮಕ್ಕಳೂ ಸುಟ್ಟು ಇದ್ದಲಾಗಿ ಬಿದ್ದಿದ್ದುದು ಕಂಡುಬಂದಿತು.

ಮಲೇರಿಯಾ ಜ್ವರೋತ್ಪತ್ತಿ ಮತ್ತೂ ಅದರ ನಿವಾರಣೋಪಾಯ ಮೊದಲಾದುವನ್ನು ಕಂಡುಹಿಡಿಯಲು ಈಗ ಬೊಂಬಾಯಿನಲ್ಲಿ ಸೇರಿರುವ ದೊಡ್ಡ ದೊಡ್ಡ ವೈದ್ಯರುಗಳ ಸಭೆಗೆ, ಬಂಗಾಳಾ ಸರ್ಕಾರದ ಪ್ರತಿನಿಧಿಯಾಗಿ ಬಂದಿರುವ ಡಾಕ್ಟರ್ ಕೈಲಾಸಚಂದ್ರರವರು ಬೈಕಲಾದಲ್ಲಿ ತಾವು ಇಳಿದುಕೊಂಡಿರುವ ಪ್ರೇಮಚಂದ್ ರಾಯ ಚಂದ್‍ರವರ ಬಂಗಲೆಯಲ್ಲಿ ಕಳೆದ ತಾ॥ ೧೬ರ ರಾತ್ರಿ ಕೊಠಡಿಯ ಬಾಗಿಲುಗಳನ್ನೂ, ಕಿಟಕಿಗಳನ್ನೂ ತೆಗೆದುಬಿಟ್ಟು ಮಲಗಿಕೊಂಡಿದ್ದು ರಾತ್ರಿ ೩ ಗಂಟೆಯ ಸಮಯದಲ್ಲಿ ಎಚ್ಚೆತ್ತು ಹಾಸಿಗೆಯ ಕೆಳಗಿಟ್ಟಿದ್ದ ಒಂದು ಸಣ್ಣ ಪೆಟ್ಟಿಗೆಯು ಇಲ್ಲದಿರುವುದನ್ನು ಕಂಡು ದಿಗಿಲುಬಿದ್ದು, ೪೦೦೦ ರೂ. ಬೆಲೆಯ ೨ ವಜ್ರದುಂಗುರಗಳು ೨೫೦೦ ರೂ. ಬೆಲೆಯ ೪ ರತ್ನಗಳ ಉಂಗುರಗಳು, ಬಂಗಾರದ ಗಡಿಯಾರದ ಸರಪಳಿ, ಕಾಶ್ಮೀರದ ಷಾಹಲು, ನೋಟುಗಳು, ನಗದು ರೂಪಾಯಿಗಳು ಒಟ್ಟು ೯೩೦೦ ರೂ. ಬೆಲೆಬಾಳುವ ಪದಾರ್ಥಗಳನ್ನಿಟ್ಟಿದ್ದ ಪೆಟ್ಟಿಗೆಯನ್ನು ಹುಡುಕುವಲ್ಲಿ ಅದೂ ಮಾಯವಾಗಿದ್ದಿತು. ಕಳುವಾದವುಗಳಲ್ಲಿ ೧೫೦೦ ರೂ. ಬೆಲೆ ಬಾಳುವ ಷಾಹಲು ಮತ್ತೆ ಕೆಲ ಪದಾರ್ಥಗಳು ಅಡಿಗೆಯ ಮನೆಯ ಬಳಿ ಬಿದ್ದಿದ್ದುದು ಗೊತ್ತಾಯಿತು.

ಉತ್ತರ ಮಲಬಾರಿನಲ್ಲಿ ಒಬ್ಬ ದೇಶೀಯ ವೈದ್ಯನು ಕೆಲ ಬೇಟೆಯ ಜನರೊಡನೆ ಮೃಗಯಾ ವಿಹಾರಾರ್ಥವಾಗಿ ಒಂದು ದಿವಸ ಕಾಡಿಗೆ ಹೋಗಿರುವಾಗ್ಗೆ, ಅಲ್ಲಿ ಒಂದು ಮರದ ಕೆಳಗೆ ಹಸರಿನಮೇಲೆ ಸ್ವೇಚ್ಛೆಯಾಗಿ ಕುಳಿತಿದ್ದ ಒಂದು ದೊಡ್ಡ ಹುಲಿಯನ್ನು ಕಂಡು ಅದಕ್ಕೆ ಗುರಿಕಟ್ಟಿ ಗುಂಡನ್ನು ಹೊಡೆಯಲು, ಆ ಹುಲಿಯು ಗುಂಡಿನೇಟನ್ನು ತಪ್ಪಿಸಿಕೊಂಡು ಬೇಗ ಆತನ ಮೇಲೆ ಬಿದ್ದು, ಅವನ ಒಂದು ತೋಳನ್ನು ಬಗೆದುಬಿಟ್ಟಿತು. ಆತನು ಚೇತರಿಸಿಕೊಂಡು ರಕ್ತವು ಸುರಿಯುತ್ತಿದ್ದ ಕೈಯಿಂದಲೆ ಕೆಳಗೆ ಬಿದ್ದುಹೋಗಿದ್ದ ಕೋವಿಯನ್ನು ತೆಗೆದುಕೊಂಡು ಪುನಃ ಗುರಿಕಟ್ಟಿ ಹೊಡೆದನು. ಆ ಏಟು ಹುಲಿಗೆ ತಗಲಿ ಅದು ಸತ್ತು ಕೆಳಗೆಬಿದ್ದಿತು. ಆತನು ಈಗ ಆಸ್ಪತ್ರೆಯಲ್ಲಿ ಹುಲಿಯು ಬಗೆದಿದ್ದ ಕೈ ಕತ್ತರಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು. ಆ ಹುಲಿಯು ಆ ಪ್ರಾಂತದಲ್ಲಿ ಅನೇಕ ದನ ಕರುಗಳನ್ನೂ, ಮಕ್ಕಳು ಮರಿಯನ್ನೂ ಎತ್ತಿಕೊಂಡು ಹೋಗಿ ಸಂಹರಿಸುತ್ತಿದ್ದಿತು, ಮತ್ತೂ ಒಂದು ವೇಳೆ ಒಂದು ಮಗುವನ್ನೆತ್ತಿಕೊಂಡು ಹೋಗುತ್ತಿರುವುದನ್ನು ಆ ಮಗುವಿನ ತಂದೆಯು ಕಂಡು ಗಟ್ಟಿಯಾಗಿ ಕೂಗಿಕೊಂಡು ಗದ್ದಲವನ್ನು ಮಾಡಲು ಅದು ಮಗುವನ್ನು ಬಿಟ್ಟು ಓಡಿತಂತೆ.

ಕೊಚ್ಚಿ ಸಂಸ್ಥಾನದ ಮಹಾರಾಜರಾದ ಶ್ರೀರಾಮವರ್ಮ, ಜಿ. ಸಿ. ಎಸ್. ಐ., ರವರು ತಮ್ಮ ಮಂತ್ರಿಯಾದ ಮ॥ ಎ. ಆರ್. ಬಾನರ್ಜಿಯವರು ಮೊದಲಾದ ಅಧಿಕಾರಿಗಳೊಡನೆ ಪೂನಾದಿಂದ ಕಳೆದ ತಾ॥ ೧೫ರಲ್ಲಿ ಬರೋಡೆಗೆ ಬಂದರು. ಅಲ್ಲಿಯ ಮಹಾರಾಜರಾದ ಗಾಯಕವಾಡರವರು, ಬ್ರಿಟಿಷ್ ರೆಸಿಡೆಂಟರು, ಬರೋಡಾ ಸಂಸ್ಥಾನದ ಸೇನಾನಾಯಕರು, ದಿವಾನರಾದ ಮೆ॥ ಸೆತಾಲರವರು ಮೊದಲಾದ ಅಧಿಕಾರಿಗಳು ರೈಲ್ವೆಯ ನಿಲ್ದಾಣದಲ್ಲಿ ಇದಿರುಗೊಂಡು ಮರ್ಯಾದಿಸಿದರು. ಅನಂತರ ಸೇನೆಯ ಮರ್ಯಾದೆಯಾಯಿತು. ಮತ್ತೂ ೧೯ ಗುಂಡುಗಳು ಹಾರಿಸಲ್ಪಟ್ಟುವು. ಉಭಯರಾಜರುಗಳೊಂದು ಬಂಡಿಯಲ್ಲೂ, ಉಭಯ ದಿವಾನರುಗಳು ಮತ್ತೊಂದು ಬಂಡಿಯಲ್ಲೂ ಕುಳಿತು ಮೆರವಣಿಗೆಯೊಡನೆ ನಾಜರಬಾಗ್ ಅರಮನೆಗೆ ದಯಮಾಡಿಸಿದರು. ಅಲ್ಲಿ ಒಂದು ಸಣ್ಣ ದರ್ಬಾರು ನಡೆದು ಕೊಚ್ಚಿಯ ದಿವಾನರು ತಮ್ಮ ಸಂಸ್ಥಾನದ ಅಧಿಕಾರಿಗಳ ಪರಿಚಯವನ್ನು ಬರೋಡಾ ಮಹಾರಾಜರಿಗೆ ಮಾಡಿಸಿದರು. ತರುವಾಯ ಗಾಯಕವಾಡರು ತಮ್ಮ ಅರಮನೆಗೆ ದಯಮಾಡಿಸಿದರು. ಆ ದಿವಸ ಪುರವೆಲ್ಲವೂ ತಳಿರು ತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ ಶೃಂಗಾರಿಸಲ್ಪಟ್ಟಿತು

ಶೃಂಗರಿಸಲ್ಪಟ್ಟಿದ್ದಿತು. ಮತ್ತು ಆ ಸಾಯಂಕಾಲ ಉಭಯರಾಜರ ದರ್ಶನ ಪ್ರತಿದರ್ಶನಗಳು ನಡೆದವು. ಊರಲ್ಲೆಲ್ಲ ದೀಪೋತ್ಸವವು ಆಗಿದ್ದಿತು. ಜನರು ದಾರಿಯುದ್ದಕ್ಕೂ ನಿಂತು ಮಹಾರಾಜರುಗಳ ದರ್ಶನವನ್ನು ಮಾಡಿ ಆನಂದಪರವಶರಾಗಿ ತಮ್ಮ ರಾಜಭಕ್ತಿಯನ್ನು ಜಯಘೋಷದಿಂದ ಪ್ರದರ್ಶಿಸಿದರು.

ಪತ್ರವ್ಯವಹಾರ.

ಶ್ರೀ ಉರುಕೊಂಡೆ ಸಂಸ್ಥಾನ ಗದೀಮಠಾಧ್ಯಕ್ಷ ಶ್ರೀ ಚೆನ್ನವೃಷಭ ಮಹಾಸ್ವಾಮಿಗಳವರು ನಿಂಬಕಲ್ಲು ವಿರಕ್ತಮಠದಲ್ಲಿ ನಡೆಯತಕ್ಕ ಸಂಸ್ಕೃತ ಧರ್ಮ ಪಾಠಶಾಲೆಗಾಗಿ ಪ್ರತಿವರ್ಷವೂ ತಪ್ಪದಂತೆ ೧೦೦ರೂಪಾಯಿಗಳ ಚಂದಾ ಕೊಡುವದಕ್ಕೆ ವಾಗ್ದಾನಮಾಡಿ ಲಿಖಿತ ಮೂಲಕವಾಗಿ ತಿಳಿಸಿರುತ್ತಾರೆ ಮತ್ತು ನಿರವಟ್ಟಿ ಮಠದ ಚೆನ್ನಮಲ್ಲಪ್ಪನವರ ಪುತ್ರನಾದ ಸದಾಶಿವಯ್ಯನವರು ವರ್ಷ ೧ಕ್ಕೆ ೧೨ ರೂಪಾಯಿಗಳನ್ನು ಪಾಠಶಾಲಾ ಇರುವ ವರೆಗೂ ತಪ್ಪದಂತೆ ಸಲಿಸುತ್ತೇವೆಂದು ವಾಗ್ದಾನಮಾಡಿರುತ್ತಾರೆ. ಇದರಂತೆ ಇನ್ನುಳಿದ ವೀರಶೈವ ಶ್ರೀಮಂತರು ಇಂತಹ ಮಹಾಕಾರ್ಯಗಳಿಗೆ ಮನಸ್ಸನ್ನು ಕೊಟ್ಟು ಸರ್ವಾ ಪುಣ್ಯಕೀರ್ತಿಗಳಿಗೆ ಭಾಜನರಾಗಲೆಂದು ಶಂಕರನನ್ನು ಯಾವಾಗಲು ಧ್ಯಾನಿಸುತ್ತೇವೆ.

ಆದವಾನಿ.

ಗುಬ್ಬಿ ಚೆನ್ನಬಸವೇಶ್ವರ ನಾಟಕ ಕಂಪೆನಿಯವರು ಈ ಗ್ರಾಮದಲ್ಲಿ ಬೀಡಾರಮಾಡಿಕೊಂಡು ಸುಮಾರು ಮೂರು ತಿಂಗಳ ಮೇಲಾಗಾಯಿತು ನಾಟಕಗಳನ್ನು ಆಡುತ್ತಿದ್ದರು. ಕಳೆದ ೯-೧೧-೧೧ ತೇದಿ ಗುರುವಾರ ರಾತ್ರಿ ಸುಮಾರು ೧೧-೧ ಗಂಟೆಗೆ ಸ್ಟೇಜು ಇರುವ ಭಾಗಕ್ಕೆ ಬೆಂಕಿ ಬಿದ್ದು ಡೇರೇ, ಪರದೆಗಳು, ಸೀನರಿಗಳು, ಡ್ರೆಸ್ಸುಗಳು, ಮೊದಲಾದ ನಾಟಕದ ಸಾಮಾನುಗಳು ಯಾವತ್ತು ಸುಟ್ಟುಹೋದವು. ಈ ಅನಾಹುತದಿಂದ ಸದರಿ ಕಂಪೆನಿಯವರಿಗೆ ಸುಮಾರು ೧೦೦೦-೧೫೦೦ ರುಪಾಯಿಗಳು ನಷ್ಟವಾಗಿರಬಹುದು. ದೈವಾನುಗ್ರಹದಿಂದ ಪ್ರಾಣಾಪಾಯಗಳೇನೂ ಸಂಭವಿಸಲಿಲ್ಲ. ಈಗ ಸದರಿ ಕಂಪೆನಿಯವರು ನೂತನವಾಗಿ ಸರ್ವಸಾಮಾನುಗಳನ್ನೂ ಸಿದ್ಧಮಾಡಿಕೊಳ್ಳಬೇಕಾಗಿರುತ್ತದೆ. ಅದುವರೆಗೆ ಇವರು ನಾಟಕಗಳನ್ನು ಆಡಲು ಮಾರ್ಗವಿಲ್ಲ.

ಬಿ. ಸಾವಳೆಪ್ಪ.

ನರಗುಂದ ಪಂಚಗೃಹಗುತ್ತದ ಹಿರೇಮಠದ ಪಟ್ಟದ ಶ್ರೀ ಚೆನ್ನವೀರದೇವರು ಅಂದರೆ ಪಟ್ಟಗುರುಗಳಾದ ಮಹಾಸ್ವಾಮಿಯವರು ಶಕ ೧೮೩೩ ಆಶ್ವಯುಜ ಬಹುಳ ೧೧ ಮಂಗಳವಾರ ಪ್ರಾತಃದವದಿಂದ ಲಿಂಗೈಕ್ಯರಾಗಲು, ವೀರಶೈವರೆಲ್ಲರೂ ಒಂದಾಗಿ, ಮುಂಚಿನದಿವಸ ದಾಸೋಹ ನಡೆಸಿದರು. ಪುರಾಣ, ವಾದ್ಯ, ನೌಬತ್ತು, ನಾಶು, ಗಾಯನ, ಭಜನೆ ಇವುಗಳ ಸಮ್ಮೇಳದಿಂದ ರಥದಲ್ಲಿ ಸ್ವಾಮಿಗಳನ್ನು ಮೆರಿಸಿ ಮುಖ್ಯ ಮಠದಲ್ಲಿಯೇ ಸಮಾಧಿ ಕಾರ್ಯವನ್ನು ಸಾಂಗಗೊಳಿಸಿದರು. ಪ್ರಿಯಶಿಷ್ಯ ಸರನಾಯಕರು ಹಾಜರಿದ್ದು ಬಹಳ ರೀತಿಯಿಂದ ಸೇವೆಮಾಡಿದರು. ರಾ॥ ಸಾ॥ ಮಹಾಲ್ಕಾರಿ ಸಾಹೇಬರು (ಬೆಟಿಗೇರಿ) ತೀವ್ರವೇ ಹುಕುಂದಯಪಾಲಿಸಿದರು. ವೈಶ್ಯ ಕುಲಸಂಪನ್ನರೂ, ಲೋಕೋಪಕಾರಿಗಳೂ ಆದ ರಾ. ರಾ. ಯಲ್ಲಪ್ಪ ಕುಮಾರಪ್ಪ ಆನಿಗುಂದಿ ಇವರು ತಮ್ಮ ಪೂರ್ವಜರ ಕೀರ್ತಿಯನ್ನು ಸ್ಮರಿಸಿ, ತಾವಾದರೂ ಕೀರ್ತಿಸಿಕೊಂಡರು. ಸರ್ವ ಮತಾಭಿಮಾನಿಗಳೂ ತಮ್ಮ ತಮ್ಮ ಕಾರ್ಯಂಗಳಲ್ಲಿ ಅತ್ಯಾಂತಶ್ರಮ ತಕ್ಕೊಂಡರು. ಸ್ವಾಮಿಯವರ ದೇಹಾವಸಾನಕಾರ್ಯವು ನಿರ್ವಹಾದ, ನಿರ್ವಿಘ್ನದಿಂದ ನಡೆದದ್ದರಿಂದ ಎಲ್ಲರಿಗೂ ಬಹು ಸಂತೋಷವೇಸರಿ. ಪತ್ರಕರ್ತರೇ ಲೋಭವಿರಲಿ. ವಿನಂತಿ "ವೀರಶೈವ ಮತಾಭಿಮಾನಿಗಳಾದ" (ಸಹಿ) ರಾಚಪ್ಪಾಹುಂಡೇಕಾರ, ಚನ್ನಪ್ಪಾಶೀಲವಂತ, ಮಲ್ಲೇಶಪ್ಪಾಬಾಳೀಕಾಯಿ.

ಬೆಳಗಾವ ಜಿಲ್ಲೆಗೆ ಸೇರಿದ ದೇಶಗತಿ ಕಿತ್ತೂರು ಕಲ್ಮಠದ ಪಲ್ಲಕ್ಕಿಯು, ಪುರಾತನಕಾಲದಿಂದಲೂ ಪ್ರತಿ ವರ್ಷ ಬಂತೇನವಮಿಯ ದಿವಸ ವ್ಯಾಸನತೋಳು ಸಹಿತ ಸಕಲ ಬಿರುದಾವಳಿ ಸಮೇತವಾದ ಸಂಭ್ರಮದಿಂದ ಊರ ಹೊರಗಿರುವ ಚೌಕೀಮಠದವರೆಗೆ ಹೋಗಿ ಬಂದು ಪೂಜೆಯಾದನಂತರ ಊರಲ್ಲಿ ಮೆರವಣಿಗೆ ಹೊರಡುವ ಪದ್ಧತಿಯು ಮಾಮೂಲಾಗಿ ನಡೆದು ಬಂದಿದೆ. ಅಧಣಿಯ ವ್ಯಾಸನತೋಳಿನ ಪ್ರಕರಣವನ್ನು ಕಂಡು ಇಲ್ಲಿಯ ಬ್ರಾಹ್ಮಣರು, ಹೋದವರ್ಷ ಕಲ್ಮಠದ ಪಲ್ಲಕ್ಕಿಯು ಹೊರಟಾಗ್ಗೆ ವ್ಯಾಸನತೋಳಿನ ಬಗ್ಗೆ ತಕರಾರ ಮಾಡಿದರು. ಇವರ ತಕರಾರು ಮಾರ್ಗದಲ್ಲಿ ನಡೆದಿರಲು ಪಲ್ಲಕ್ಕಿಯು ಯಥಾಪ್ರಕಾರ ಮಠಕ್ಕೆ ಸಾಗುವದಾಯಿತು. ಬಳಿಕ ಬ್ರಾಹ್ಮಣರು ವ್ಯಾಸನತೋಳು ಕಟ್ಟಿದರೆ ದಂಗೆಯಾಗುವ ಸಂಭವವಿದೆ. ಕಾರಣ ಅದಕ್ಕೆ ಮನಾಯಿ ಹುಕುಂ ಕೊಡಬೇಕೆಂದು ಮೆ॥ ಕಲೆಕ್ಟರ ಸಾ॥ ಬಿ॥ ಬೆಳಗಾವ ಇವರಕಡೆಗೆ ತಾರಿಂದ ಪ್ರಾರ್ಥಿಸಿಕೊಂಡಿದ್ದಕ್ಕೆ "ತಮ್ಮ ಮಠದ ಕಂಪೌಂಡಿನಲ್ಲಿ ವ್ಯಾಸನತೋಳು ಮೆರಿಸಲಿಕ್ಕೆ ಅಡ್ಡಿಯಿಲ್ಲ. ಸಾರ್ವಜನಿಕರಸ್ತೆಯಲ್ಲಿ ಮೆರಿಸಕೂಡದು." ಎಂಬ ಹುಕುಂ ತಾರಿನ ಮೂಲಕವಾಗಿ ಬಂತು. ಅಷ್ಟರೊಳಗೆ ಉತ್ಸವವು ತೀರಿಹೋಗಿತ್ತು.

ಪ್ರತಿ ವರ್ಷದ ಮಾಮೂಲಂತೆ ಈ ವರ್ಷವೂ ಬಂತೇನವಮಿಯ ದಿವಸ ಪಲ್ಲಕ್ಕಿಯು ಹೊರಡಲು ಬ್ರಾಹ್ಮಣರು ಈ ಮೊದಲೇ ತಾರಿನಿಂದ ಅರ್ಜಿಮಾಡಿ ಹೋದವರ್ಷದಂತೆ ಹುಕುಂ ಪಡೆದುಕೊಂಡಿದ್ದ ಪ್ರಕಾರ ಪೋಲೀಸರು ವ್ಯಾಸನತೋಳು ಕಟ್ಟುವುದಕ್ಕೆ ಪ್ರತಿಬಂಧಿಸಿದರು. ಕಾರಣ ಪಲ್ಲಕ್ಕಿಯು ಸಂಜೆಯವರೆಗೆ ಹೊರಡಲೇ ಇಲ್ಲ. ಬಳಿಕ ಇಲ್ಲಿಯ ಮತಾಭಿಮಾನಿಗಳಾದ ಶ್ರೀಯುತ ಮದನಭಾವಿ ನೀಲಕಂಠಗೌಡರು ಮೊದಲಾದವರು "ಸದರ ಮಾಮೂಲಪ್ರಕಾರ ಹೊರಟ ಪಲ್ಲಕ್ಕಿಗೆ ಪೋಲೀಸರು ಪ್ರತಿಬಂಧ ಮಾಡಿದ್ದರಿಂದ ಪೂಜಾ ಕಾರ್ಯವು ತಡೆದುನಿಂತಿದೆ. ಕಾರಣ ವ್ಯಾಸನತೋಳು ಸಹಿತ ಸರ್ವ ಬಿರುದಾವಳಿಗಳೊಂದಿಗೆ ಪಲ್ಲಕ್ಕಿಯು ಚೌಕೀಮಠದವರೆಗೆ ಹೋಗಿ ಬರಲಿಕ್ಕೂ ಅನಂತರ ಮೆರವಣಿಗೆಗೂ ಪರವಾನಿಗೆ ಕೊಡುವದಾಗಬೇಕು." ಎಂಬದಾಗಿ ಮೆ॥ ಕಲೆಕ್ಟರ ಸಾ॥ ಬಿ॥ ಬಿ॥ ಬೆಳಗಾವ ಇವರ ಕಡೆಗೆ ತಾರಿನಿಂದ ಕೇಳಿಕೊಂಡರು. ಇದನ್ನು ತಿಳಿದು ವ್ಯಾಸನತೋಳು ಕಟ್ಟುವದಕ್ಕೆ ಪರವಾನಗಿ ಕೊಟ್ಟಲ್ಲಿ ನಮ್ಮ ಅವಮಾನವಾಗುವದು ಕಾರಣ ಪರವಾನಗಿ ಕೊಡಬಾರದು, ಎಂದು ಬ್ರಾಹ್ಮಣರು ಪುನಃ ತಾರುಮಾಡಿದರು. ಮೆ॥ ರವರು ಇವೆರಡು ತಾರುಗಳನ್ನು ಪರಾಮರ್ಶಿಸಿ "ಪಲ್ಲಕ್ಕಿಯನ್ನು ಕಲ್ಮಠದಿಂದ ಮಾಮೂಲು ಪ್ರಕಾರ ಚೌಕೀಮಠಕ್ಕೆ ಒಯ್ಯಗೊಡಬೇಕು. ಆದರೆ ವ್ಯಾಸನತೋಳನ್ನು ಪಬ್ಲಿಕ್ ರೀತಿಯಿಂದ ಕಟ್ಟದೆ ಪಲ್ಲಕ್ಕಿಯು ಕೂಡ ಒಯ್ಯಲಿಕ್ಕೆ ಅಡ್ಡಿಯಿಲ." ಎಂದು ವಿಜಯದಶಮಿಯ ದಿವಸ ಮುಂಜಾನೆ ತಾರಿನಿಂದ ಹುಕುಂ ಕೊಟ್ಟರು. ಆದದರಿಂದ ನವಮಿ ದಿವಸ ಆಗತಕ್ಕ ಪಲ್ಲಕ್ಕಿಯ ಉತ್ಸವವು ವ್ಯಾಸನತೋಳು ಸಹಿತವಾಗಿ ವಿಜಯದಶಮಿಯ ದಿವಸ ಸಾಂಗವಾಯಿತು. ವ್ಯಾಸನತೋಳು ನಂದೀಧ್ವಜಕ್ಕೆ ಕಟ್ಟದೆ ಮೆ॥ ರವರ ಹುಕುಂ ಪ್ರಕಾರ ಪಲ್ಲಕ್ಕಿಗೆ ಕಟ್ಟಲ್ಪಟ್ಟಿತ್ತು. ಪೋಲೀಸರ ಬಂದೋಬಸ್ತು ಇದ್ದದರಿಂದ ಉತ್ಸವವು ಪ್ರತಿವರ್ಷದಂತೆ ನಿರ್ವಿಘ್ನದಿಂದ ಜರುಗಿತು.

ಮತಾಭಿಮಾನಿ:—

ನೀಲಕಂಠಗೌಡ ಪಾಟೀಲ.

ಪ್ರಯಾಣಿಕರಾದ ವೀರಶೈವರಿಗೊಂದು ವಿಜ್ಞಾಪನೆ.

ವಾಚಕ ಮಹಾಶಯರೆ! ಈ ಹಿಂದುಳಿದ ವೀರಶೈವ ಸಮಾಜೋನ್ನತಿಗಾಗಿ ಜನ್ಮವೆತ್ತಿದ್ದ ಶಿವೈಕ್ಯರಾಗಿರುವ ರಾವಬಹದ್ದೂರ್ ವಾರದ ಮಲ್ಲಪ್ಪಣ್ಣನವರು ಮತಾಭಿವೃದ್ಧಿಗಾಗಿ ಅನೇಕ ಕಾರ್ಯಗಳನ್ನು ಪ್ರಾರಂಭಿಸಿದ್ದುದು ತಮ್ಮಗಳಿಗೆಲ್ಲ ವೇದ್ಯವಾದ ವಿಷಯವೇ ಆಗಿದೆ. ಆ ಅನೇಕ ಕಾರ್ಯಗಳಲ್ಲೊಂದಾದ ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟ "ವೀರಶೈವಾಶ್ರಮದ" ವಿಷಯವಾಗಿ ಕೆಲವು ಸಂಗತಿಗಳನ್ನು ತಮ್ಮಗಳ ಅವಗಾಹನೆಗೆ ತರುವುದುತ್ತಮವೆಂದು ತೋರಿದುದರಿಂದ, ಆ ವಿಷಯವನ್ನು ಕುರಿತು ಇದರಡಿಯಲ್ಲಿ ಉದಹರಿಸುತ್ತೇನೆ.

ಮುಂಬಯಿಪಟ್ಟಣವು ಈ ದೇಶದಲ್ಲಿ ಕೇಂದ್ರ ಸ್ಥಳವಾಗಿದೆಯಷ್ಟೆ? ಇಂತಹ ಪ್ರಸಿದ್ಧ ಸ್ಥಳಕ್ಕೆ ವ್ಯಾಪಾರಕ್ಕಾಗಿಯೂ, ನೋಡುವುದಕ್ಕಾಗಿಯೂ ವೀರಶೈವರಲ್ಲಿ ಅನಂತ ಜನಗಳು ಹೋಗುತ್ತಿರುವರು. ಆದರೆ ಆ ಸ್ಥಳದಲ್ಲಿ ವೀರಶೈವರಿಗೆ ಮಾತ್ರ ತಮ್ಮ ಧರ್ಮಾಚರಣೆಗಳು ನಿರಾತಂಕವಾಗಿ ಜರುಗುವುದಕ್ಕೂ, ಇತರ ಸೌಲಭ್ಯಗಳಿಗೂ ತುಂಬಾ ಕೊರತೆ ಇದ್ದಿತು. ಈ ವಿಷಯವು ನಮ್ಮ ವಾಚಕರಲ್ಲಿ ಅನೇಕರ ಅನುಭವಕ್ಕೆ ಸಹ ಬಂದಿರಬಹುದು. ಇಂತಹ ಕೊರತೆಯನ್ನು ಹೋಗಲಾಡಿಸಬೇಕೆಂದು ಕೈ. ವಾರದ ಮಲ್ಲಪ್ಪನವರು ಈ ಕಾರ್ಯಕ್ಕೆ ಕಂಕಣಬದ್ಧರಾಗಿ ಮುಂಬಯಿಪಟ್ಟಣದಲ್ಲಿ ಒಂದು ವೀರಶೈವರ ಭೋಜನಾಲಯವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಇಂತಹ ಶ್ರೇಷ್ಠವಾದ ಕಾರ್ಯಕ್ಕೆ ನಮ್ಮ ಸಮಾಜದ ಕೆಲ ದಾನಶೂರರು ನೆರವಾದುದರಿಂದ ಮುಂಬಯಿಯ ಕಾಳಬಾದೇವಿ ಮಾರ್ಗದಲ್ಲಿ ಒಂದು "ವೀರಶೈವಾಶ್ರಮ" ವನ್ನು ಸ್ಥಾಪಿಸಿ ಸಾಧಾರಣ ಮೂರು ವರ್ಷಗಳಾಗುತ್ತ ಬಂದಿತು. ಆದರೆ ಇಂತಹ ಸದುದ್ದೇಶಕಾರ್ಯವು ಅಭಿವೃದ್ಧಿಸ್ಥಿತಿಯಲ್ಲಿರದೆ ಕುಂಠಿತವಾಗುತ್ತ ನಡೆದದೆಂದು ನಾನು ಕಳೆದ ತಿಂಗಳಲ್ಲಿ ಹೋದಾಗ್ಗೆ ತಿಳಿದುದರಿಂದ, ದುಃಖಕರನಾದ ಈ ಲೇಖನವನ್ನು ಬರೆಯುವುದಕ್ಕೆ ಪ್ರಾರಂಭಿಸಬೇಕಾಯಿತು. ಆ ಪಟ್ಟಣದಲ್ಲಿರತಕ್ಕ ಇತರ ಮತೀಯರ ಭೋಜನಾಲಯಗಳು ಅನೇಕವಾಗಿದ್ದಾಗ್ಯೂ ಅವುಗಳೆಲ್ಲ ಲಾಭಕರವಾಗಿಯೇ ಇವೆ. ಆದರೆ ಅತ್ಯಂತ ದೊಡ್ಡ ಪಟ್ಟಣದಲ್ಲಿ ವೀರಶೈವರ ಭೋಜನಾಲಯವು ಒಳ್ಳೆಯ ಸ್ಥಿತಿಯೊಳಗೆ ಒಂದೇ ಒಂದು ಇದ್ದಾಗ್ಯೂ ಅದರಿಂದ ಲಾಭವಾಗುವುದಕ್ಕೆ ಬದಲಾಗಿ ಈವರಿವಿಗೆ ಎರಡು ಸಹಸ್ರ ರೂಪಾಯಿಗಳು ಸಂಘಕ್ಕೆ ನಷ್ಟವಾಗಿದೆಯೆಂಬುದು ಎಷ್ಟು ಶೋಚನೀಯವಾದುದು! ಆ ಪಟ್ಟಣದಲ್ಲಿರತಕ್ಕ ಇನ್ನಿತರ ಒಂದೆರಡು ವೀರಶೈವರ ಊಟದ ಮನೆಗಳನ್ನು ನೋಡಿದ್ದರಿಂದ ಪ್ರಯಾಣಿಕರಲ್ಲಿ ಬಹು ಜನಗಳು ಊಟದ ವಿಷಯಕ್ಕೆ ಮಾತ್ರ ಲೋಭಿಗಳಾಗುವುದೇ "ವೀರಶೈವಾಶ್ರಮದ" ಶೋಚನೀಯ ಸ್ಥಿತಿಗೆ ಕಾರಣವೆಂದು ವ್ಯಕ್ತವಾಯಿತು. ಒಂದು ದಿನಕ್ಕೆ ನಾಲ್ಕಾಣೆ ಕಡಿಮೆಯಾಗುತ್ತದೆಂದು ಅನಂತ ಜನಗಳು ಸಕಲ ವಿಧದಲ್ಲಿಯೂ ಹೀನಸ್ಥಿತಿಯಲ್ಲಿರತಕ್ಕ ಆ ಊಟದ ಮನೆಗಳಿಗೆ ಹೋಗುತ್ತಾರೆಯೇ ವಿನಹ ಧರ್ಮಾಚಾರಕ್ಕೂ, ಆರೋಗ್ಯಕ್ಕೂ, ಇತರ ಸೌಲಭ್ಯಗಳಿಗೂ ಅನುಕೂಲವಾದ ಈ ಭೋಜನಾಲಯಕ್ಕೆ ಹೋಗುವುದಿಲ್ಲ. ಆ ಪಟ್ಟಣದ ವೀರಶೈವರ ಭೋಜನಾಲಯಗಳಲ್ಲೆಲ್ಲ ಸಕಲ ವಿಧದಲ್ಲಿಯೂ "ವೀರಶೈವಾಶ್ರಮವೇ" ಸುಸ್ಥಿಯಲ್ಲಿದೆ ಎಂಬುದಕ್ಕೆ ವೇ॥ ಬ್ರಹ್ಮಚಾರಿ ವಿರೂಪಾಕ್ಷಪಡೆಯರವರೇ ಮೊದಲಾದ ವೈದಿಕರು, ಬ್ಯಾರಿಸ್ಟರ್ ಜಿ. ರುದ್ರಪ್ಪನವರೇ ಮೊದಲಾದ ಶ್ರೇಷ್ಠಪದವೀಧರರೂ, ಈ ಆಶ್ರಮದಲ್ಲಿ ನಿರಂತರವಾಗಿರುವುದೇ ದೃಷ್ಟಾಂತವಾಗಿದೆ. ಆದಪ್ರಯುಕ್ತ ಮತಾಚಾರಕ್ಕೆ ಭಂಗಬರುವಂತಹ ಅನಾರೋಗ್ಯಸ್ಥಳಗಳಿದ್ದು ಕೊನೆಗೆ ವ್ಯರ್ಥ ಬಾಗಿಲುಕಾಯುವುದಕ್ಕಿಂತ ಆರಂಭದಲ್ಲಿಯೇ ಶುಚಿರ್ಭೂತವಾದ ಸ್ಥಳದಲ್ಲಿರುವುದು ಹಿತವಲ್ಲವೆ? ಕೃಪಣ ಪ್ರಯಾಣಿಕರೆ! ನೀವಾದರೋ, ಅಲ್ಲಿ ನಿರಂತರವಿರಬೇಕಾಗಿದೆಯೋ? ಒಂದು ಅಥವಾ ಎರಡುವಾರರತಾನೆ? ೨-೩ ರೂಪಾಯಿಗಾಗಿ ನೀವೂ ಕಷ್ಟಪಟ್ಟು ನಿಮ್ಮಗಳ ಹಿತಕ್ಕಾಗಿ ಸ್ಥಾಪಿಸಲ್ಪಟ್ಟ ಕಾರ್ಯವನ್ನು ಸಹ ನಿಲ್ಲಿಸುವುದು ಯೋಗ್ಯವೇ? ಈ ೨-೩ ರೂಪಾಯಿಗಳನ್ನು ನೀವು ಅನ್ಯವಿಧವಾಗಿ ದುರ್ವ್ಯಯಮಾಡುವುದಿಲ್ಲವೆ? ನೀವು ಸ್ವಂತ ಹಣವನ್ನು ಕೊಟ್ಟು ಇಂತಹ ಸುಕಾರ್ಯಗಳನ್ನು ಮಾಡದಿದ್ದಾಗ್ಯೂ, ಊಟದಿಂದಾದರೂ ಆ ಕಾರ್ಯಕ್ಕೆ ಪ್ರೋತ್ಸಾಹಕೊಡುವುದು ನಿಮ್ಮ ಕರ್ತವ್ಯವಲ್ಲವೇ? ಆದುದರಿಂದ ವೀರಶೈವಾಶ್ರಮವನ್ನು ಸೇರಿಸಿ ಆನಂದ ಸುಖವನ್ನು ಹೊಂದಿರಿ.

ಮುಂಬೈಪಟ್ಟಣಕ್ಕೆ ಜಾರ್ಜ್ ಪ್ರಭುಗಳು ದಯಮಾಡಿಸುವುದರಿಂದ ಆ ಕಾಲಕ್ಕೆ ಅನೇಕ ಜನಗಳು ಹೋಗಬಹುದು. ಆದುದರಿಂದ ಕೈ. ವಾರದಮಲ್ಲಪ್ಪಣ್ಣನವರ ಕಾರ್ಯದಲ್ಲಿ ಪೂಜ್ಯಬುದ್ಧಿ ಇರುವುದೇ ನಿಜವಾಗಿದ್ದರೆ, ಮತ್ತು ವೀರಶೈವರ ಉನ್ನತಿಯ ಕಾರ್ಯದಲ್ಲಿ ಸಹಾಯಮಾಡಬೇಕೆಂಬ ಬುದ್ಧಿಯು ತಿಲಾಂಶವಾದರೂ ಇದ್ದರೆ, ಮುಂಬಯಿಗೆ ಹೋಗತಕ್ಕ ಪ್ರತಿಯೊಬ್ಬ ವೀರಶೈವರು ಕಾಳಬಾದೇವಿ ಮಾರ್ಗದ ತಂತೀ ಆಫೀಸಿನ ಹತ್ತಿರವಿರತಕ್ಕ ವೀರಶೈವಾಶ್ರಮಕ್ಕೆ ಹೋಗಿ ತಾವು ಸುಖಪಡುವುದಲ್ಲದೆ ಸಮಾಜದ ಹಿತಕ್ಕಾಗಿ ಜನ್ಮವೆತ್ತಿದ ಒಂದು ಕಾರ್ಯವನ್ನು ಅಭಿವೃದ್ಧಿಪಡಿಸಿದ ಶ್ರೇಯಸ್ಸನ್ನು ಹೊಂದಬೇಕೆಂದು ವಿಜ್ಞಾಪಿಸಿಕೊಂಡು ಈ ಲೇಖನವನ್ನು ಪೂರೈಸುತ್ತೇನೆ.

ಯಂ. ಮಂಜಪ್ಪ ಹರ್ಡೇಕರ್ ದಾವಣಗೆರೆ.

ದಾವಾಣಗೆರೆ.

ಶ್ರೀಮದ್ ನಿರಂಜನ ಪ್ರಣವಸ್ವರೂಪಿಗಳಾದ ಅಥಣಿಯ ಗಚ್ಚಿನ ಮಠದ ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಕಳೆದ ತಿಂಗಳು ೧೯ನೇ ತೇದಿಯದಿವಸ ಈಗ್ರಾಮಕ್ಕೆ ದಯಮಾಡಿಸಿದರು. ಅಂದಿನಿಂದ ಇಂದಿನವರಿವಿಗೂ ಇಲ್ಲಿನ ವೀರಶೈವರು ತಾವು ಗ್ರಾಮವನ್ನು ಬಿಟ್ಟು ಕ್ಯಾಂಪುಗಳಲ್ಲಿದ್ದಾಗ್ಯೂ, ತಮ್ಮ ಗುರುಭಕ್ತಿಯನ್ನು ಪಾದಪೂಜೆಯ ಮೂಲಕವಾಗಿ ವ್ಯಕ್ತಪಡಿಸಿ ಗುರುಕಾರುಣ್ಯಕ್ಕೆ ಪಾತ್ರರಾದುದು ಆನಂದಕರವಾದುದೇ ಸರಿ. ಶ್ರೀ ಕೋಗುಂಡಿ ನಂಜುಂಡಯ್ಯನವರು ತಮ್ಮ ಗೃಹವನ್ನು ಶ್ರೀಗಳವರ ವಾಸಕ್ಕಾಗಿ ಒಪ್ಪಿಸಿ ತಮ್ಮ ಅತಿಶಯವಾದ ಭಕ್ತಿಯನ್ನು ತೋರ್ಪಡಿಸಿದರು. ವೇ॥ ಇಲ್ಲಿನ ಹಿರೇಮಠದ ರುದ್ರಪ್ಪ ಶಾಸ್ತ್ರಿಗಳವರು ಶಾಸ್ತ್ರಪಾಂಡಿತ್ಯದಿಂದ ಶ್ರೀಗಳವರ ಸನ್ನಿಧಿಯಲ್ಲಿ "ವೀರಶೈವಾಮೃತ" ಪುರಾಣವನ್ನು ಹೇಳಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಮತ್ತು ಹರಿಹರದಲ್ಲಿರತಕ್ಕ ಪರಮನಾಗಂದ ವೇ॥ ರಾ॥ ಮುರಿಗೆಪ್ಪನವರು ತಮ್ಮ ಗಾಯನಮಾಧುರ್ಯದಿಂದಲೂ, ಪದಲಾಲಿತ್ಯದಿಂದಲೂ ಶಿವಕಥೆಯನ್ನು ಮಾಡಿ ಗುರುಕಟಾಕ್ಷಕ್ಕೆ ಪಾತ್ರರಾದರು. ಅಲ್ಲದೆ ಇಲ್ಲಿನ ಭಜನೆಯ ಸಂಘದವರು ಪ್ರತಿನಿತ್ಯ ಸನ್ನಿಧಿಯ ಬಳಿಯಲ್ಲಿ ಭಜನೆಯನ್ನು ಮಾಡಿ ತಮ್ಮ ಭಕ್ತಿಯನ್ನೊಪ್ಪಿಸಿದರು. ಮುಖ್ಯವಾಗಿ ಈ ಗ್ರಾಮದ ವೀರಶೈವರೆಲ್ಲ ತಂತಮ್ಮಗಳಿಗೆ ಅನುಗುಣವಾದ ನಾನಾವಿಧ ಸೇವೆಗಳಿಂದ ಸಾಧಾರಣ ಒಂದು ತಿಂಗಳ ವರೆವಿಗೂ ಶ್ರೀಗಳವರಿಗೆ ಚಿತ್ತಾನಂದವನ್ನುಂಟುಮಾಡಿದುದು ತುಂಬಾ ಶ್ಲಾಘ್ಯವಾದುದೇ ಸರಿ. ಕಳೆದ ೩ನೆಯ ತೇದಿಯ ದಿವಸ ಪುರಾಣವನ್ನು ಸಮಾಪ್ತಿಮಾಡುವಾಗ್ಗೆ ಮೆ॥ ರಾ॥ ಹರ್ಡೇಕರ್ ಮಂಜಪ್ಪನವರು ಒಂದು ಉಪನ್ಯಾಸವನ್ನು ಮಾಡಿದರು. "ಜನಗಳಲ್ಲಿ ಭಕ್ತಿಯುಂಟಾಗುವಂತೆ ಮಾಡಬೇಕೆಂಬುವೇ ಪುರಾಣಗಳ ಮುಖ್ಯೋದ್ದೇಶವಾಗಿದೆ. ದೇವರವಿಷಯವಾಗಿರತಕ್ಕ ಪ್ರೀತಿಯೇ ಭಕ್ತಿಯು. ಅಚಲವಾದ ಅವಸ್ಥೆಯೊಂದಿದ ಆ ಭಕ್ತಿಯ ವಿನಹ ನಿಜಸುಖವು ದೊರೆಯುವುದಿಲ್ಲ. ದೇಶಕಾಲಾನುಗುಣ್ಯವಾಗಿ ಜನಗಳಲ್ಲಿ ವಿಚಾರಭಿನ್ನತ್ವವುಂಟಾಗುವುದು ಸ್ವಾಭಾವಿಕವಾಗಿದೆ. ಅವನ ಪ್ರಯುಕ್ತ ಪ್ರಕೃತ ವಿಚಾರಯುಕ್ತವಾದ ಭಕ್ತಿಯು ಸುಖವನ್ನುಂಟುಮಾಡುವುದೇ ವಿನಹ ಮೂಢಭಕ್ತಿಯಿಂದಾಗುವುದಿಲ್ಲ. ಪ್ಲೇಗ್ ಮೊದಲಾದ ರೋಗಗಳಲ್ಲಿ ಆ ಮೂಢಭಕ್ತಿಯಿಂದಾಗತಕ್ಕ ಅಪಾಯವು ಸರ್ವಶ್ರುತವಾದುವಾಗಿವೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಿಗಳಲ್ಲಿರತಕ್ಕ ತಾರತಮ್ಯವನ್ನು ತೋರಿಸಿ, ಭಕ್ತಿಯ ನಿಷ್ಪತ್ತಿಯನ್ನು ವ್ಯಕ್ತಗೊಳಿಸಿದರು" ಅನಂತರ ವೇ॥ ಹೋಳೆಬಸಪ್ಪ ಶಾಸ್ತ್ರಿಗಳು "ಬ್ರಹ್ಮ" ಎಂಬ ವಿಷಯಕ್ಕೆ ಉಪನ್ಯಾಸವನ್ನು ಮಾಡಿ ಈ ವಿಷಯಕ್ಕೆ ಮತಾಂತರಗಳಲ್ಲಿರತಕ್ಕ ಭಿನ್ನಾಭಿಪ್ರಾಯಗಳನ್ನು ವಿವರಿಸಿದರು. ಶ್ರೀ ಗಳವರು ಇಲ್ಲಿಗೆ ದಯಮಾಡಿಸಿದ್ದರಿಂದ ಮೂರು ಮುಖ್ಯ ಆಚಾರಗಳು ಅನುಷ್ಠಾನದಲ್ಲಿ ಬರುವಂತೆ ತೋರುತ್ತವೆ (೧) ಚಿಕ್ಕಮಕ್ಕಳು ಲಿಂಗವನ್ನು ಧರಿಸದೆ ಬರಿಗೊರಳಲ್ಲಿರತಕ್ಕ ದುಷ್ಟಪದ್ಧತಿಯನ್ನು ಹೋಗಲಾಡಿಸಿ ಮಕ್ಕಳು ಒಂದು ವರ್ಷದವರಾದಂದಿನಿಂದ ಎಡನೆಯ ದೀಕ್ಷಾಸಂಸ್ಕಾರವಾಗುವವರಿವಿಗೂ, ಸಜ್ಜಿಕೆಯಲ್ಲಾದರೂ ಲಿಂಗವನ್ನು ಮಕ್ಕಳಿಗೆ ಧರಿಸಬೇಕು. (೨) ೮-೧೦ ವರ್ಷದವರಾದ ನಂತರ ಭಕ್ತಮಾಹೇಶ್ವರರ ಬಾಲಕ, ಬಾಲಕಿಯರು, ಆಯಾಯ ದೀಕ್ಷಾಸಂಸ್ಕಾರವನ್ನು ವಿಧಿವತ್ತಾಗಿ ಹೊಂದಬೇಕು. (೩) ವೀರಶೈವರಾದವರು ತಮ್ಮಿಷ್ಟಲಿಂಗದ ವಿನಹ ಇತರ ವಿಗ್ರಹಗಳಿಗೆ ಪೂಜಿಸಬಾರದು. ಶ್ರೀ ಗಳವರು ಅಜ್ಞಾಪಿಸಿದ ಈ ಮೂರು ವಿಷಯಗಳನ್ನು ವೇ॥ ಇಲ್ಲಿನ ಹಿರೇಮಠದ ರುದ್ರಪ್ಪಶಾಸ್ತ್ರಿಗಳವರು, ಇಲ್ಲಿನ ಪೋಸ್ಟ್ ಹೆಡ್ ಮಾಸ್ಟರ್ ಮ॥ ರಾ॥ ಗುರುಶಾಂತಪ್ಪನವರು, ಮ॥ ರಾ॥ ಮಾಗಾನಹಳ್ಳಿ ಸಂಗಪ್ಪನವರು, ಮ॥ ರಾ॥ ಹರ್ಡೇಕರ್ ಮಂಜಪ್ಪನವರು, ಅನೇಕಸಾರಿ ಉಪನ್ಯಾಸಮೂಲಕ ಶಾಸ್ತ್ರಾಧಾರಗಳಿಂದ ಜನಗಳಿಗೆ ಬೋಧಿಸಿದರು. ಇಂದಿನ ವರಿವಿಗೆ ಈ ನಾನಾವಿಧಗಳಿಂದ ಸಂಭ್ರಮಗಳು ಜರುಗಿ ಶ್ರೀ ಗಳವರು ಇದೇ ದಿನ ಸಾಯಂಕಾಲದ ಮೇಲ್ ಬಂಡಿಯಲ್ಲಿ ಚಿತ್ರದುರ್ಗಕ್ಕೆ ದಯಮಾಡಿಸಿದರು

ಪ್ರತ್ಯಕ್ಷದರ್ಶಿ.

ನಿಜಾಂ ಇಲಾಖಾ ಬೆತಗುಪ್ಪಾ ತಾ॥ ಪೈಕಿ ನಿಣ್ಣಿ ಗ್ರಾಮದ ಶ್ರೀಗುತ್ತಿ ಬಸವೇಶ್ವರ ಮಹೋತ್ಸವವು

ಇಲ್ಲಿಯ ಸಮಸ್ತ ವೀರಶೈವಭಕ್ತಮಾಹೇಶ್ವರರು ಕಾ॥ ಶು॥ ೧೦ ಯಲ್ಲಿ ಶ್ರೀಬಸವೇಶ್ವರ ದೇವಸ್ಥಾನಕ್ಕೆ ತೆರಳಿ ವೇದಾಧ್ಯಯನ ರುದ್ರಾಭಿಷೇಕ ಜಾಗರಣಾರ್ಚನ ಮುಂತಾದವುಗಳನ್ನು ಒಳ್ಳೆಯ ವಿಜೃಂಭಣೆಯಿಂದ ನೆರವೇರಿಸಿ ೧ ಸಹಸ್ರಗುರುಮಾಹೇಶ್ವರರನ್ನು ತೃಪ್ತಿಪಡಿಸಿ, ಗಣತಿಂಥಿಣಿಗೆ ದಕ್ಷಿಣೆಯನ್ನಿತ್ತು ಮಗ್ರರಾತ್ರಿಯಲ್ಲಿ ಶಿವಭಜನೆ ಸತ್ಕಥಾಶ್ರವಣ ಮುಂತಾದವುಗಳಿಂದ ಕಾಲಯಾಪನೆಯುಂಗೈದು ಎರಡನೇದಿನ ಅಂದರೆ ಕಾ॥ ಶು॥ ೧೨ ೩ ಘಂಟೆಯಲ್ಲಿ ಸಭೆಯು ಕೂಡಿಸುವದರಲ್ಲಿ ಬಂತು. ಪರಸ್ಥಳಗಳಿಂದ ನೂರಾರು ಜನರು ಬಂದಿದ್ದರು. ಒಟ್ಟು ಜನಸಂಖ್ಯೆಯು ೨ ಸಹಸ್ರವರಿಗೂ ಇತ್ತು. ಆವ್ಯಾಳ್ಯದಲ್ಲಿ ಚರಪಟ್ಟಾಧಿಕಾರಿಗಳು ದೇಶಿಕೇಂದ್ರವರ್ಯರು ಶಾಸ್ತ್ರಿಗಳು ವಿದ್ಯಾರ್ಥಿಗಳು ಗ್ರಾಮಪ್ರಮುಖರಾದ ಮಡಿವಾಳೆಪ್ಪ ಮಾ॥ ಗೌ॥ ಬಸವಣ್ಣಪ್ಪ ಗೌ॥ ಸಿದ್ಧಮಲ್ಲಪ್ಪ ಜನ್ಮರಾಚಪ್ಪ ದೇವಶೆಟ್ಟಿ ಚನ್ನಬಸವಪ್ಪ ಬುಳ್ಳ ವೀರಭದ್ರಪ್ಪ ಬೇಲೂರ ಕರಿಯಪ್ಪ ಉಗರಪ್ಪನವರ ಮುಂತಾದವರು ಪ್ರವೇಶಿಸಿದಬಳಿಕ ದೇವಶೆಟ್ಟಿರಾಚಪ್ಪನವರು ಪರಮಪೂಜ್ಯರಾದ ಮಾಲಗತ್ತಿಮಠದ ವೇ॥ ವೀರಭದ್ರದೇವರಿಗೆ ಅಧ್ಯಕ್ಷಸ್ಥಾನವನ್ನು ಕೊಡಬೇಕೆಂಬದಾಗಿ ಸೂಚಿಸಲು ಸಭೆಯವರನುಮತಿಯಿಂದ ವೀರಭದ್ರಪ್ಪ ಬೆಂಬಳಿ ಇವರು ಅನುಮೋದಿಸಲು ಸದರಿ ಮಹಾಸ್ವಾಮಿಗಳು ಸಂತೋಷಭರಿತರಾಗಿ ಜನರ ಕರತಾಡನ ಕೋಲಾಹಲಧ್ವನಿಯೊಡನೆ ಅಧ್ಯಕ್ಷಸ್ಥಾನವನ್ನು ವಹಿಸಿದಬಳಿಕ ಸಂಸ್ಕೃತ ಪಾಠಶಾಲಾಧ್ಯಾಪಕ ಶಿ॥ ಮ॥ ನಾಯಕಲ್ಲ ಬಸವರಾಜ ಶಾಸ್ತ್ರಿಗಳು ಸಭಾನಿರ್ವಿಘ್ನಾರ್ಥವಾಗಿ ಈಶ್ವರನನ್ನು ಸ್ತುತಿಸಿ ಈ ವೀರಶೈವ ಮತವು ಅನಾದಿಯೆಂಬದಾಗಿ ಶ್ರುತ್ಯಾಗಮಪ್ರಮಾಣಂಗಳೊಡನೆ ಪಂಡಿತಪಾಮರರಿಗೆ ಒಪ್ಪುವಂತೆ ಹೇಳಿ ಸ್ವಮತಸ್ಥರ ಮೌಢ್ಯದಿಂದಲೂ, ಮತಾಂತರದವರ ಅಪಲಾಪದಿಂದಲೂ ಹೀನಸ್ಥಿತಿಗೆ ಬಂದಿರುವ ಈ ಮತವು ಉಚ್ಚಸ್ಥಿತಿಗೆ ಬರಬೇಕಾದರೆ ಪ್ರಥಮತಃ ಗುರುವರ್ಗದವರಿಗೂ ಹಾಗು ಭಕ್ತಮಾಹೇಶ್ವರರಿಗೂ ಅವಶ್ಯವಾಗಿ ಶಿಕ್ಷಣಗೊಡಿಸಬೇಕೆಂಬದಾಗಿ ಸಮಗ್ರ ಒಂದು ಘಂಟೆವರೆಗೂ ಗಂಭೀರವಾದ ಸ್ವರದೊಡನೆ ಜನಗಳಿಗೆ ಅಹ್ಲಾದಕವಾಗುವಂತೆ ಮಾತನಾಡಿ ತಮ್ಮ ಮತಸ್ವರೂಪವನ್ನು ತೋರಿಸುವದಕ್ಕೆ ಕೈಪಿಡಿಸ್ವರೂಪವಾದ ಸ್ಟಾರ್ ಪತ್ರಿಕೆಯನ್ನು [illegible]ರಿಂದುಂಟಾಗುವ ಲಾಭವನ್ನೂ, ಹಾಗು ಅದಕ್ಕುಂಟಾದ ಕೊರತೆಯನ್ನೂ ಪ್ರತಿಯೊಬ್ಬ ವೀರಶೈವನೂ ಹೇಳಿ ಪತ್ರಿಕೆಯನ್ನು ತರಿಸಬೇಕೆಂಬದಾಗಿ ಸೂಚಿಸಲು, ಅಧ್ಯಕ್ಷರಾದ ಮಹಾಸ್ವಾಮಿಗಳು ಈ ಪತ್ರಿಕೆಯು ಚಿರಕಾಲಬಾಳುವಂತೆ ಜಗದೀಶನು ಅನುಗ್ರಹಿಸಲೆಂಬ ದಾಗಿಯೂ ಮತ್ತು ಶ್ರೀಬಸವೇಶ್ವರ ಮಹೋತ್ಸವ ಜ್ಞಾಪಕಾರ್ಥವಾಗಿ ಕೈ॥ ವಾ॥ ಮೈಸೂರ್ ಯಜಮಾನ ವೀರಸಂಗಪ್ಪನವರ ಸ್ಮಾರಕ ಫಂಡಿಗೆ ನಮ್ಮ ಶಕ್ತ್ಯನುಸಾರವಾಗಿ ಹಣವನ್ನು ಕಳಿಸಬೇಕೆಂಬದಾಗಿಯೂ ಸೂಚಿಸಲು ಸಭೆಯವರು ಕರತಾಡನ ಮೂಲಕ ಅನುಮೋದನ ಕೊಟ್ಟಬಳಿಕ ಮುಂದೆ ಬೆಳಗಾಂವದಲ್ಲಿ ನಡೆಯುತಕ್ಕ ಆರನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಈ ಪತ್ರಿಕೆಗೆ ಸಹಾಯಮಾಡುತ್ತೇವೆಂಬದಾಗಿ ವಾಗ್ದಾನ ಮಾಡಿದಬಳಿಕ ಶ್ರೀ॥ ಮಗ್ದಾಳಮಠದ ಅಯ್ಯಪ್ಪನವರು ಮ॥ ರಾ॥ ಹಲ್ಕರಟೆ ವೀರಭದ್ರಪ್ಪನವರು ಸ್ಟಾರಪತ್ರಿಕಾ ತರಿಸುವದಕ್ಕೆ ವಾಗ್ದಾನ ಮಾಡಿದುದಲ್ಲದೆ ಹಣವನ್ನು ಕೂಡ ಶಾಸ್ತ್ರಿಗಳಿಗೆ ಒಪ್ಪಿಸಿದರು. ಆ ವೇಳೆ ಶಾಸ್ತ್ರಿಗಳು ಆಚಾರವಿಷಯವಾಗಿ ಸ್ವಲ್ಪ ಮಾತನಾಡಿ ತಮ್ಮ ಸ್ಥಾನಕ್ಕೆ ತೆರಳಿದನಂತರ ಮಡಿವಾಳೆಪ್ಪ ಮಾ॥ ಗೌ॥ ವಿದ್ಯಾವಿಷಯವಾಗಿಯೂ ಇವರ ಸುಪುತ್ರರಾದ ಚನ್ನಪ್ಪನವರು ಆಚಾರವಿಷಯವಾಗಿಯೂ, ಭೀಮರಾಕವ್ ಚ॥ ಕ॥ ಸತ್ಸಂಗವಿಷಯವಾಗಿಯೂ ಉಭಯ ವಿದ್ಯಾರ್ಥಿಗಳು ದಾನಮಹತ್ವವನ್ನು ಶ್ರೋತೃಜನರ ಕರ್ಣಾನಂದ ವಾಗುವಂತೆ ಬಹು ಸೊಗಸಾಗಿ ಭಾಷಣಮಾಡಿದ ಬಳಿಕ ಅಧ್ಯಕ್ಷ ಮಹಾಶಯರು ಈ ವರೆಗೂ ಹೇಳಿದವಿಷಯಗಳನ್ನು ಸರ್ವರೂ ಅಮಲಿನಲ್ಲಿ ತರಬೇಕೆಂಬದಾಗಿ ಸೂಚಿಸಲು ಸರ್ವರೂ ಕರತಾಡನದ ಮೂಲಕ ಅನುಮೋದನಕೊಟ್ಟರು. ಬಳಿಕ ಉಭಯ ವಿದ್ಯಾರ್ಥಿಗಳು ಸದರಿಶಾಸ್ತ್ರಿಗಳಿಂದ ಶ್ರೀಬಸವೇಶ್ವರ ಪರವಾಗಿ ರಚಿಸಿದ ಕೆಲವು ಗೀತೆಗಳನ್ನು ಪಿಟೀಲು ಮೃದಂಗ ಮುಂತಾದ ವಾದ್ಯಗಳೊಡನೆ ಕೇಳುವ ಜನರಿಗೆ ಇಂಪಾಗುವಂತೆ ಪಾಡಿದನಂತರ ಅಧ್ಯಕ್ಷಮಹಾಶಯರಿಗೆ ನೀರಾಜನವಂಮಾಡಿ ಶಿವನಾಮಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟನಂತರ ಕಲಶದಿಂಕೂಡಿದ ಪಲ್ಲಕ್ಕಿಯಲ್ಲಿ ಶ್ರೀಬಸವೇಶ್ವರ ಮೂರ್ತಿಯನ್ನು ಕುಳ್ಳಿರಿಸಿ ಜನಸ್ತೋಮದೊಡನೆ ಸಾರಣೆಕಾರಣೆಗಳಿಂದಲೂ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ರಂಭಾಸ್ತಂಭಗಳಿಂದಲೂ ದೀಪೋತ್ಸವಗಳಿಂದಲೂ ಶೃಂಗರಿಸಲ್ಪಟ್ಟ ಪುರವೀಧಿಯಲ್ಲಿ ಶಿವಭಜನೆಯನ್ನು ಮಾಡುತ್ತ ನರ್ತನ ಮಂಗೈಸುತ್ತ ನಾನಾವಿಧವಾದ ಮದ್ದುಬಾಣಗಳನ್ನು ಹಾರಿಸುತ್ತ ನೂರಾರು ಬಾಲಕಿಯರು ಆರತಿಯ ಮಾಡಿ ಮಂಗಲತರವಾದ ಹಾಡುಗಳನ್ನು ಹಾಡುತ್ತ ಅನೇಕ ವಿಧವಾದ ಮಂಗಲವಾದ್ಯಗಳನ್ನು ಭೋರ್ಗರಿಸುತ್ತ ಬೀದಿಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಿ ಪುನಃ ದೇವಸ್ಥಾನಕ್ಕೆ ತೆರಳಿ ಶ್ರೀ ಬಸವೇಶ್ವರನಿಗೂ ಅಧ್ಯಕ್ಷ ಮಹಾಸ್ವಾಮಿಗಳಿಗೂ ನೀರಾಜನವಂ ಮಾಡಿ ಆಶೀರ್ವಾದವಂ ಪಡಕೊಂಡು ತಮ್ಮ ತಮ್ಮ ಗೃಹಕ್ಕೆ ತೆರಳಿದರು.

ತಮ್ಮ ವಿಧೇಯರಾದ ನಿಣ್ಣಿ ಸಂಸ್ಕೃತಪಾಠಶಾಲಾ ವ್ಯವಸ್ಥಾಪಕರು.

ಸಿಂಗಿರಾಜಪುರಾಣವಿಜಯಂ

೩

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ರೂಪರೀತಿಯಾಗಿ ಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿಆಚರಿಸಿದರೋ ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು, ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೯ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ಬಿವಿಟಿಗೆಬೀದಿ
ಮೈಸೂರು.

೮ ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಉಂಗುರವೂ.

ಮಿಂಚಿನ ಪದಕವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು— ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ— ಪದಕವು ಎದೆಯಮೇಲೆ ಜೋಲಾಡುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ— ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಕ್ಷ್ಣಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕು. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಹಗಾಂವಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi North Kanara District

ಉತ್ತಮ ಗ್ರಂಥಗಳು.

13

ಶಿವಸ್ತವಶಿರೋಮಣಿ—ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣಿಯಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

31

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಸೆಳೆತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬಿತ್ತಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೩. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆತ್ತೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

10

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೋತ್ಸೇಯು ಹೆಚ್ಚಾಗಿ ಸಂತತಿ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. ಶರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೨—೦ ರೂ. ೩. ಬಾ, ೩—೧೪—೦ ರೂ. ಮಿಶ್ರಗಲೇ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪುರ್ಜರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. [illegible] ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ. ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ [illegible] (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ [illegible]
ಮೈಸೂರು.

65

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಸೆ ೦—೩—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೦ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೦—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೆಯ ಇಸವಿ ನವಂಬರ್ ತಾ॥ ೨೦ ರಿಂದ ೧೯೧೧ ನೆಯ ನವಂಬರ್ ತಾ॥ ೨೬ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಬ॥ ಅಮಾವಾಸೆಯಿಂದ ಮಾರ್ಗಶಿರ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ತೇದಿ
20	[1]ಸೋ	ಅ	45-15	ವಿ	39-30	5
21	ಮಂಗ	ಪಾ	48-58	ಅನೂ	44-18	6
22	[2]ಬುಧ	ಬಿ	53-2	ಜ್ಯೇ	49-36	7
23	ಗುರು	ತ	57-58	ಮೂ	55-40	8
24	[3]ಶುಕ್ರ	ಚ	60-0	ಪೂಷಾ	60-0	9
25	ಶನಿ	ಚ	4-6	ಪೂಷಾ	2-50	10
26	[4]ಭಾನು	ಪಂ	9-10	ಉತ್ತಾ	9-2	11

(1) ಸರ್ವತ್ರಅಮಾವಾಸ್ಯಾ, ಪದ್ಮಕಯೋಗಃ, ಕಾರ್ತೀಕಸೋಮವಾರಂ, ಅಮಾಸೋಮವ್ರತಂ, ಗಜಾರಣ್ಯಕ್ಷೇತ್ರೇ ಪಂಚಲಿಂಗದರ್ಶನಂ, ಸುಬ್ರಹ್ಮಣ್ಯದಲ್ಲಿ, ಲಕ್ಷದೀಪೋತ್ಸವ. (2) ತಿಂತ್ರಿಣೀಗೌರೀವ್ರತಂ. (3) ದೂರ್ವಾಗಣಪತಿವ್ರತಂ (4) ಬದರೀಗೌರೀವ್ರತಂ, ಕೋಟರಪಂಚಮೀ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 184

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಳಲಿತಸಾಧ್ವಾಕ್ಯಾಲವಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ನವಂಬರ್ ತಾರೀಖು ೨೦ ನೆಯ ಸೋಮವಾರ. [ಸಂಚಿಕೆ ೪೭.

38

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨—೦—೦ ೫—೦—೦; ೩—೦—೧; ೨—೮—೦; ೧—೪—೦; ಕಲಿಸ್ತೂರಿ ಬಿಕೊಲಾ ೧ ಕ್ಕೆ ೧—೦—೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗಪೊಟ್ಟ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ

ಲಿಂಗರಾಜಪುರಾಣವಿಜಯಂ

4

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರ ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ,
ಹಳೆಅಗ್ರಹಾರ, ದಿವಿಟಗೆಬೀದಿ
ಮೈಸೂರು.

4

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತವೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೦—೪—೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೬ ವರ್ಷದ ಒಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಹಗಾಂವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೦)

10

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಕೂಲವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:- ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳದಬೀದಿಯಲ್ಲಿರುವ ಶ್ರೀಕಂಠಾರಾಧ್ಯ

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಚಾರುಶೀಲೆ ಚರಿತ್ರೆ	೦—೫—೦
ಕರಸ್ಪಾಂಡೆನ್ಸ	೦—೪—೦
ಸಟೀಕಕರ್ನಾಟಕಶಬ್ದಮಂಜರಿ	೦—೪—೦
ಸಟೀಕನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವ್ರತಪಂಚಕ	೦—೨—೦
ವಿವೇಕಮಂಜರಿ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

15

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧—೪—೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧—೮—೧. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧—೩—೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧—೩—೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧—೩—೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨—೮—೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಳಿ, ಮೈಸೂರು.

ಜಂಗೀ ಕುಸ್ತಿಗಳು! ಜಂಗೀ ಕುಸ್ತಿಗಳು!!

ನವಲಗುಂದದಲ್ಲಿ ಜರಗುವ ಕಾರೋನೇಶನ್ ದರ್ಬಾರ ಜಾಹೀರಾತು.

ಇದರ ಮೇಲಿಂದ ಯಾವತ್ತು ಜನರಿಗೆ ತಿಳಿಸುವದೇನೆಂದರೆ:—

ನಮ್ಮನ್ನು ಆಳುವ ಹಿಂದುಸ್ಥಾನದ ಚಕ್ರವರ್ತಿಗಳಾದ ಪರಮಪೂಜ್ಯ ವ ದಯಾಳು ೫ ನೆಯ ಜಾರ್ಜ ನೃಪ ಸಾರ್ವಭೌಮ ಮತ್ತು ಚಕ್ರವರ್ತಿನಿಯಾದ ಮೇರಿ ಮಹಾರಾಣಿ ಸಾಹೇಬರ ರಾಜ್ಯಾರೋಹಣದ ದರ್ಬಾರದ ಉತ್ಸವದ ದೆಸೆಯಿಂದ ನವಲಗುಂದದಲ್ಲಿ ತಾ॥ ೭ನೆಯ ಡಿಸೆಂಬರ ೧೯೧೧ನೆಯ ಇಸ್ವಿ ಬುಧವಾರದಿಂದಾ ತಾ॥ ೧೧ ಡಿಸೆಂಬರ ೧೯೧೧ನೆಯ ಇಸ್ವಿ ಸೋಮವಾರದವರೆಗೆ ಜಂಗೀ ಕುಸ್ತಿಗಳನ್ನು ಆಡಿಸಿ, ಭಂಗಾರ, ಬೆಳ್ಳಿಯ ಖತೆಗಳು, ಶಾಲು, ಛಟಕಾವಗೈರೆ ವಸ್ತ್ರಗಳು ಕುಸ್ತಿ ಆಡುವವರ ಯೋಗ್ಯತೆಯ ಮೇಲಿಂದಾ ಇನಾಂ ಕೊಡುವದರಲ್ಲಿ ಬರುವದು. ಮತ್ತು ಸದರ ತಾ॥ ೭ ರಿಂದ ೧೨ ಡಿಸೆಂಬರ ವರೆಗೆ ಬಾಲಬಾಲಕಿಯರ ಆಟನೋಟಗಳು, ಗಾಯನ, ನರ್ತನ, ಮದ್ದು ಹಾರಿಸುವದು, ದೀಪೋತ್ಸವ ಬಡಜನರಿಗೆ ಅನ್ನವಸ್ತ್ರ ಕೊಡುವದು ಮುಂತಾದ ಸಮಾರಂಭಗಳು ಜರಗುವವು. ಆದ್ದರಿಂದ ಕುಸ್ತಿ ಆಡತಕ್ಕವರೂ, ನೋಡತಕ್ಕವರೂ ಈ ಮಹೋತ್ಸವದ ಸಂಧಿಯನ್ನು ಕಳಕೊಳ್ಳದೆ ಅಗತ್ಯವಾಗಿ ಬಂದು ಮನಸ್ಸಿಗೆ ವ ನೇತ್ರಗಳಿಗೆ ಆನಂದವನ್ನು ಉಂಟುಮಾಡಿಕೊಳ್ಳಬೇಕೆಂದು ನಮ್ಮ ಸವಿನಯ ಸೂಚನೆಯುಂಟು. ನವಲಗುಂದದಲ್ಲಿ ಈಗ ಪ್ಲೇಗು ಶಾಂತವಾಗಿದೆ, ಮತ್ತು ನೀರಿನ ಸಮೃದ್ಧಿಯುಂಟು. ತಾ॥ ೨೦-೧೧-೧೯೧೧.

ಕಮಿಟಿಯ ಮೆಂಬರುಗಳು.

ರಾವಸಾಹೇಬ ರಾಮರಾವ ಶೇಷೋ ಕಟಗೇರಿ ಮಾಮಲೇದಾರ.
ಮಿ॥ ಕೊಟ್ರಬಸಪ್ಪಾ ಗುರುಪಾದಪ್ಪಾ ಭಾವಿಕಟ್ಟಿ ಸ್ಪೆಷಲ್ ಜೆ ಕಾ॥
,, ದತ್ತಾತ್ರಯ ಶಿವರಾಮ ಶಿರಾಳೆ ಹೆಡ್ಡ ಕಾರಕೂನ.
,, ಬಾಪುರಾವ ಚಿಟಗುಬ್ಬಿ ಪೋಲೀಸ ಸಬ್ ಇನ್ಸ್ಪೆಕ್ಟರ್.
,, ನಾನಾಸಾಹೇಬ ಗಾಯ್ಕವಾಡ ಯಕ್ಸಾಯಿಜ ಇ॥
,, ಕೃಷ್ಣರಾವ ಯಾತಗಿರಿ ಸಬ್ಬ ರಿಜಿಷ್ಟ್ರರ.
,, ಲಕ್ಷ್ಮಣರಾವ ಕಿತ್ತೂರಕರ ಸಬ್ಬ ಅಸಿಸ್ಟಂಟ ಸರ್ಜನ.

ಮ್ಯುನಿಸಿಪಲ್ ಮೆಂಬರರು.

೧ ಮಿ॥ ಕೃಷ್ಣಪ್ಪಾ ಹೆಬಸೂರ.
೨ ,, ಸಂಗಪ್ಪಾ ಶಿವಪ್ಪಾ ಮಸೆಟ್ಟಿ.
೩ ,, ಬಸಪ್ಪಾ ಶಿವಪ್ಪಾ ಮಸೆಟ್ಟಿ.
೪ ,, ಅಡಿವೆಪ್ಪಾ ಅಮರಸೆಟ್ಟಿ.
೫ ,, ಶಿದ್ದಪ್ಪಾ ಸುಬೇದಾರ.
೬ ,, ಬಸನಗೌಡಾ ಪಾಟೀಲ.
೭ ,, ಮಾರುಸಾಬ ಕಾಜಿ.

ಲೋಕಲ್ ಬೋರ್ಡ ಮೆಂಬರರು.

೮ ಮಿ॥ ಹನುಮಂತಗೌಡಾ ಪಾಟೀಲ.
೯ ,, ಮಹಮ್ಮದ ಗವಸುಸಾಬ ಖುದಾನಂದ.
೧೦ ,, ಕಲ್ಲಪ್ಪಾ ಕುಬಸದ.
೧೧ ,, ರಾಮಚಂದ್ರ ಕೃಷ್ಣ ಬಮ್ಮಿಗಟ್ಟಿ.

ಊರೊಳಗಿನ ಪ್ರಮುಖ ಜನರು.

೧೨ ಮಿ॥ ಗುಸ್ತಾಜಿ ಬಾರಿಯಾ ಅಬಕಾರಿ ಕೆಂಟ್ರಾಕ್ಟದಾರ.
೧೩ ,, ಕೃಷ್ಟಪ್ಪಾ ಧಾರವಾಡ.
೧೪ ,, ಪಡದಾಜಿ ಮಾರವಾಡಿ.
೧೫ ,, ಗಂಗಾರಾಮ ಮಾರವಾಡಿ.
೧೬ ,, ಮಾರ್ತಾಂಡಪ್ಪಾ ಅನಿಗುಂದಿ.

ಸಾರ್ವಭೌಮರು ದಿಲ್ಲಿಯ ಪಟ್ಟಣವನ್ನು ಪ್ರವೇಶಿಸುವಾಗ್ಗೆ ಆನೆಯಮೇಲೆ ಅಂಬಾರಿಯಲ್ಲಿ ಉತ್ಸವಗೊಳ್ಳದಿರಲು ಕಾರಣ:—

ರಾಜಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಿ ದಿಲ್ಲಿಯಪಟ್ಟಣವನ್ನು ಪ್ರವೇಶಿಸುವಾಗ್ಗೆ ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಉತ್ಸವಗೊಳ್ಳದಿರುವ ವಿಚಾರದಲ್ಲಿ ಭಾರತಪ್ರಜೆಗಳು ಅಸಮಾಧಾನವಾಗಿರುತ್ತಾರೆ. ಆದರೆ ನಶ್ವರವಾದ ಮಾನವದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡದಿದ್ದ ಕಾಲದಲ್ಲಿ ಆನೆಯಮೇಲೆ ಕುಳಿತುಉತ್ಸವಗೊಳ್ಳುವ ಅಭಿಲಾಷೆಯು ಜನರಿಗೆ ವಿಶೇಷವಾಗಿದ್ದಿತು. ಆಕಾಲದಲ್ಲಿ ಹಿಂದೂರಾಜರು ಬ್ರಾಹ್ಮಣರನ್ನು ತಮ್ಮ ಮಾವಟಿಗರನ್ನಾಗಿ ಮಾಡಿಕೊಳ್ಳುತ್ತಿದ್ದರು. ಹಿಂದೂಗಳಲ್ಲಿ ಶ್ರೇಷ್ಠರೆಂದು ಭಾವಿಸಲ್ಪಟ್ಟಿದ್ದ ಬ್ರಾಹ್ಮಣರು ಮತ್ತು ಮಹಮ್ಮದೀಯರಲ್ಲಿ ಶ್ರೇಷ್ಠರೆಂದು ಭಾವಿಸಲ್ಪಟ್ಟಿದ್ದ ಸಯ್ಯದ್ದುಗಳು ಮಾತ್ರ ಹೀಗೆ ರಾಜರುಗಳ ಮತ್ತು ಚಕ್ರವರ್ತಿಗಳ ಮುಖದಕಡೆಗೆ ತಮ್ಮ ಬೆನ್ನನ್ನು ತಿರುಗಿಸಿ ಕುಳಿತುಕೊಳ್ಳಲು ಅರ್ಹರಾಗಿದ್ದರು. ಈ ಬಗೆ ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಉತ್ಸವಗೊಳ್ಳುವ ಪದ್ಧತಿಯು ಭರತಖಂಡದಲ್ಲಿ ಬಹುವಾಗಿ ಕಡಿಮೆಯಾಗಿರುವುದು. ಯೂರೋಪಿನಲ್ಲಾದರೂ ಯಾವ ಕಾಲದಲ್ಲೂ ಆನೆಯಮೇಲೆ ಕುಳಿತು ಉತ್ಸವಗೊಳ್ಳುವ ಪದ್ಧತಿಯು ಇಲ್ಲವೇ ಇಲ್ಲವಾದುದರಿಂದ, ಪೂರ್ವಾತ್ಯರ ಶಿಷ್ಟಾಚಾರರೀತ್ಯಾ ಚಕ್ರವರ್ತಿಯವರ ಮುಖದಕಡೆಗೆ ಬೆನ್ನನ್ನು ತಿರುಗಿಸಿಕೊಂಡು ಕುಳಿತುಕೊಳ್ಳಲರ್ಹರಾದ ಬಿಶಪ್ಪುಗಳುಗಳಲ್ಲಿ ಆನೆಯ ಮೇಲೆ ಕುಳಿತುಕೊಂಡು ಅದನ್ನು ಸಮರ್ಥತೆಯಿಂದ ನಡೆಸಬಲ್ಲ ಬಿಶಪ್ಪನು ಜಾರ್ಜ ಚಕ್ರವರ್ತಿಯವರಿಗೆ ದೊರೆಯುವುದು ಕಷ್ಟತರವಾಗಿದೆ. ಆನೆಯು ಸಾಧುವಾಗಿರುವುದೆಂದು ಅದನ್ನು ನಂಬಿಕೊಂಡಿರಲಾಗುವುದಿಲ್ಲವು. ಅದು ಜನರಗುಂಪು ವಿಶೇಷವಾಗಿ ಸೇರಿರುವಾಗ್ಗೆ, ಗುಂಡುಗಳು ಹಾರುವಾಗ್ಗೆ ಇದ್ದಕ್ಕಿದ್ದಹಾಗೆ ರೇಗಿ ಜನರಮೇಲೆ ನುಗ್ಗಿ ಅನೇಕ ಪ್ರಾಣಹಾನಿಯನ್ನುಂಟುಮಾಡುವ ಸ್ವಭಾವದ ಪ್ರಾಣಿಯಾಗಿರುತ್ತದೆ. ಈ ಎರಡು ಕಾರಣಗಳಿಂದ ನಮ್ಮ ದಯಾಪರರಾದ ರಾಜಚಕ್ರವರ್ತಿಯವರು ಅಪರಿಮಿತವಾದ ಜನಸಂದಣಿಯಲ್ಲಿ ಕ್ರೂರಪ್ರಾಣಿಯಾದ ಆನೆಯಮೇಲೆ ಕುಳಿತು ಉತ್ಸವಗೊಳ್ಳುವುದನ್ನು ತಪ್ಪಿಸಿಬಿಟ್ಟಿರುವುದರಿಂದ, ತಮ್ಮ ವಿಶ್ವಾಸಕ್ಕೆ ಪಾತ್ರರಾದ ಪ್ರಜೆಗಳ ಪ್ರಾಣರಕ್ಷಣೆಯ ವಿಚಾರದಲ್ಲಿ ಚಕ್ರವರ್ತಿಯವರು ಎಷ್ಟೊಂದು ದಯೆಯನ್ನು ತೋರಿಸಿರುವರೆಂಬುದು ವ್ಯಕ್ತವಾಗುತದೆ. ಪೂರ್ವಕಾಲದಲ್ಲಿ ಹಿಂದೂ ದೇವತೆಗಳೂ, ರಾಜರುಗಳೂ ಆಕಾಶವಿಮಾನದಲ್ಲಿ ಕುಳಿತು ಸಂಚರಿತ್ತಿದ್ದರೆಂದು ಹೇಳುತ್ತಾರೆ. ನಮ್ಮ ಜಾರ್ಜ ಚಕ್ರವರ್ತಿಯವರು ಆ ಪ್ರಕಾರ ಆಕಾಶದಲ್ಲಿ ಸಂಚರಿಸಬೇಕೆಂದು ಇಷ್ಟಪಟ್ಟದಲ್ಲಿ, ಅತ್ಯುತ್ತಮವಾದ ಆಕಾಶವಿಮಾನವು ನಿರ್ಮಿಸಲ್ಪಡುತ್ತಿದ್ದಿತು. ಆದರೆ ತಮ್ಮ ಪ್ರಜೆಗಳು ತಮ್ಮ ದರ್ಶನವನ್ನು ಮಾಡಿ ಆನಂದಪಡುವುದಕ್ಕಿಲ್ಲವಾಗುತ್ತದೆಂಬುದರ ಮೇಲೆ, ಚಕ್ರವರ್ತಿಯವರು ಆ ಪ್ರಯತ್ನವನ್ನು ಮಾಡಲಿಲ್ಲವಾಗಿ ಸ್ಪಷ್ಟವಾಗುತ್ತದೆ. ಎಂದು ಮುನ್ಷಿ ಸಯದ್ ಅಹಮದ್ ಎಂಬಾತನು ಒಂದು ಉರ್ದು ಪತ್ರಿಕೆಯಲ್ಲಿ ಬರೆದಿರುತ್ತಾನೆ.

ರಾಜಚಕ್ರವರ್ತಿದಂಪತಿಗಳು ದಯಮಾಡಿಸಿದ ವೇಳೆಯಲ್ಲಿ ನಡೆಯುವ ಉತ್ಸವಗಳ ಕಾಲನಿರ್ಣಯವು:—

ಚಕ್ರವರ್ತಿದಂಪತಿಗಳು ಪ್ರಯಾಣಮಾಡುತ್ತಿರುವ ಮೆದಿನಾ ಹಡಗು ಬೊಂಬಾಯನ್ನು ಸೇರುತಲೆ ಗೌರ್ನರ್ ಜನರಲ್‌ರವರು ಭರತಖಂಡದ ಸರ್ವ ಸೇನಾಧಿಪತಿಗಳ (ಕಮ್ಯಾಂಡರ್ ಇನ್‌ಛೀಫರ) ಕೂಡ ಅಪಾಲೋಬಂದರದಿಂದ ನಾವೆಯಲ್ಲಿ ಕುಳಿತು ಮೆದಿನಾ ಹಡಗಿಗೆ ಹೋಗುವರು. ಅದೇ ಮಧ್ಯಾಹ್ನ ೩॥ ಘಂಟೆಗೆ ಲೇಡಿಹಾರ್ಡಿಂಜ್‌ರವರು, ಹೈಕೋರ್ಟಿನ ಪ್ರಧಾನಜಡ್ಜಿಗಳು, ಲಾರ್ಡಬಿಶಪ್ಪರವರು, ಗೌರ್ನರ ಕೌನ್ಸಿಲ್ ಮೆಂಬರುಗಳು, ಗೌರ್ನಮೆಂಟ್ ಛೀಫ್ ಸೆಕ್ರೆಟರಿಯವರು ಇವರುಗಳ ಕೂಡ ಬೊಂಬಾಯಗೌರ್ನರ್ ಸರ್ ಜಾರ್ಜ್ ಕ್ಲಾರ್ಕರವರು ಅಪಾಲೊಬಂದರದಿಂದ ಮೆದಿನಾ ಹಡಗಿಗೆ ಹೊರಡುವರು. ಸಾಯಂಕಾಲ ೪ ಘಂಟೆಗೆ ಶ್ರೀಗಳವರು ಹಡಗಿನಿಂದಿಳಿಯುವರು. ಡಿಸೆಂಬರ್ ತಾ॥ ೩ರಲ್ಲಿ ಗೌರ್ನರ್ ಜನರಲ್‌ರವರು ಬೊಂಬಾಯಿನಿಂದ ಪ್ರಯಾಣಮಾಡುವರು. ಬೊಂಬಾಯಿನಲ್ಲಿ ಪ್ರದರ್ಶನ ನಡೆಯತಕ್ಕ ಬೈಲಿನಲ್ಲಿ ಜನರವಿನೋದವು ಜರಗುವುದು. ಚಕ್ರವರ್ತಿದಂಪತಿಗಳು ಬೆಳಗ್ಗೆ ೯॥ ಘಂಟೆಯಲ್ಲಿ ಅಪಾಲೊಬಂದರಿಗೆ ದಯಮಾಡಿಸಿ ಅಲ್ಲಿಂದ ನಾನಾ ವಿಧವಾಗಿ ಶೃಂಗರಿಸಲ್ಪಟ್ಟಿರುವ ಅಪಾಲೊಬಂದರಿಗೆ ಹೋಗುವ ಮಾರ್ಗ, ಹೇಯೋಮಾರ್ಗ, ಎಸ್ಪ್ಲನೇಡ್‌ಮಾರ್ಗಗಳಲ್ಲಿ ಹೊರಟು ಪ್ರದರ್ಶನಶಾಲೆಗೆ ಚಿತ್ತೈಸುವರು. ಅಲ್ಲಿ ಚಕ್ರವರ್ತಿದಂಪತಿಗಳಿಗಾಗಿ ನಿರ್ಮಿಸಲ್ಪಟ್ಟಿರುವ ಉನ್ನತಾಸನಗಳಿದಿರಿಗೆ ಅರ್ಧಚಂದ್ರಾಕೃತಿಯಲ್ಲಿ ೨೬೦೦೦ ವಿದ್ಯಾರ್ಥಿಗಳು ನಿಲ್ಲಿಸಲ್ಪಟ್ಟಿರುವರು. ಈ ವಿದ್ಯಾರ್ಥಿಗಳೆಲ್ಲರೂ ಒಟ್ಟುಗೂಡಿ ಪ್ರಭುದಂಪತಿಗಳ ಸುಖಾಗಮನವನ್ನು ಬಯಸಿ ಜಯಘೋಷವನ್ನು ಮಾಡಿದಮೇಲೆ, ಐರೋಪ್ಯ ಮಹಮ್ಮದೀಯ, ಪಾರ್ಸಿ, ಗುಜರಾತಿ, ಮರಾಟಿ ಮೊದಲಾದ ವಿದ್ಯಾರ್ಥಿಗಳಲ್ಲಿ ಕ್ರಮವಾಗಿ ಇಬ್ಬಿಬ್ಬರು ಮಂಗಳಪದ್ಯವನ್ನು ಹಾಡುವರು. ಅನಂತರ ೫೦ ಗುಜರಾತಿಯ ಬಾಲಿಕೆಯರು ನರ್ತನವನ್ನು ಮಾಡುವರು. ಚಕ್ರವರ್ತಿದಂಪತಿಗಳು ಪ್ರದರ್ಶನವನ್ನು ಮುಗಿಸಿಕೊಂಡು ಉಡ್ಬಿಮಾರ್ಗದಿಂದ ಶ್ರೀ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯ ಬಳಿಗೆ ಬಂದು ಅಲ್ಲಿಂದ ಮೊದಲು ಬಂದ ಮಾರ್ಗಗಳಲ್ಲೇ ಅಪಾಲೊಬಂದರಿಗೆ ದಯಮಾಡಿಸುವರು. ಮದ್ದಿನವಿನೋದವು ನಡೆದಮೇಲೆ ಬಾಲಕಬಾಲಿಕೆಯರುಗಳಿಗೆ ಮಿಠಾಯಿಯೂ, ಬಹುಮಾನಗಳೂ ಹಂಚಲ್ಪಡುವುವು.

ದಿಲ್ಲಿಯಲ್ಲಿ ಜರಗುವ ಉತ್ಸವದ ಕಾಲನಿರ್ಣಯವು:—

ಡಿಸೆಂಬರ್ ತಾ॥ ೭ನೆಯ ಗುರುವಾರ ಪ್ರಾತಃಕಾಲ ೧೦ ಗಂಟೆಗೆ ದಿಲ್ಲಿಯಪಟ್ಟಣದ ಪ್ರವೇಶೋತ್ಸವವು ನಡೆಯುವುದು. ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆಯವರೆಗೆ ದೇಶೀಯ ಸಂಸ್ಥಾನಾಧೀಶ್ವರರು ಮತ್ತು ಪ್ರಮುಖ ಜನರು ಚಕ್ರವರ್ತಿಯವರದರ್ಶನವನ್ನು ತೆಗೆದುಕೊಳ್ಳುವರು. ತಾ॥ ೮ನೆಯ ಶುಕ್ರವಾರಬೆಳಗ್ಗೆ ೧೧॥ ಇಂದ ೧॥ ಗಂಟೆಯವರೆಗೆ ಪ್ರಮುಖ ಜನರು ಪುನಃ ದರ್ಶನವನ್ನು ತೆಗೆದುಕೊಳ್ಳುವರು; ಅದೇ ಮಧ್ಯಾಹ್ನ ೩-೩೦ ಗಂಟೆಗೆ ಶ್ರೀ ಎಡ್ವರ್ಡ್ ಚಕ್ರವರ್ತಿಯವರ ಸ್ಮಾರಕ ಕಾರ್ಯಾರಂಭೋತ್ಸವವು ಜರಗುವುದು; ರಾತ್ರಿ ೮ ಗಂಟೆಗೆ ರಾಜಭೌತಣವು ನಡೆಯುವುದು. ತಾ॥ ೯ ನೆಯ ಶನಿವಾರದ ಬೆಳಗ್ಗೆ ೧೧॥ ಗಂಟೆಯಿಂದ ೧॥ ಗಂಟೆಯವರೆಗೆ ಪ್ರಮುಖ ಮನುಷ್ಯರು ಪುನಃ ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಳ್ಳುವರು; ಮಧ್ಯಾಹ್ನ ೩॥ ಗಂಟೆಗೆ ಪೊಲೋ ಆಟದ ಪಂದ್ಯವು ನಡೆಯುವುದು. ತಾ॥ ೧೦ ನೆಯ ಭಾನುವಾರ ಬೆಳಗ್ಗೆ ೧೦॥ ಗಂಟೆಗೆ ಮಿಲಟರಿಕ್ಯಾಂಪಿನಲ್ಲಿ ದೇವರ ಪ್ರಾರ್ಥನೆಯು ನಡೆಯುವುದು. ತಾ॥ ೧೧ ನೆಯ ಸೋಮವಾರ ಬೆಳಗ್ಗೆ ೧೧ ಗಂಟೆಗೆ ಸೈನಿಕರ ನಜರಾಗುವುದು; ಮಧ್ಯಾಹ್ನ ೩॥ ಗಂಟೆಗೆ ಪೋಲೋ ಆಟದ ಪಂದ್ಯವು ನಡೆಯುವುದು, ತಾ॥ ೧೨ ನೆಯ ಮಂಗಳವಾರ ಬೆಳಗಿನ ೧೨ ಗಂಟೆಗೆ ದರ್ಬಾರಾಗುವುದು; ರಾತ್ರಿ ೮ ಗಂಟೆಗೆ ರಾಜಭೌತಣವೂ ಅನಂತರ ಅಥಿಗಳ ಸ್ವಾಗತವೂ ಜರಗುವುವು ತಾ॥ ೧೩ ನೆಯ ಬುಧವಾರ ಬೆಳಗಿನ ೧೦-೪೫ ಗಂಟೆಗೆ ವಾಲಂಟಿಯರುಗಳು ಮತ್ತು ಇಂಡಿಯಾ ಸರ್ಕಾರಿಯಧಿಕಾರಿಗಳು ದರ್ಶನವನ್ನು ತೆಗೆದುಕೊಳ್ಳುವರು; ಮಧ್ಯಾಹ್ನ ೩॥ ಗಂಟೆಗೆ ವನವಿಹಾರೋತ್ಸವವೂ, ಜನರು ಗುಂಪುಗುಂಪಾಗಿ ಉತ್ಸವದಿಂದ ಹೊರಡುವುದೂ, ಆ ರಾತ್ರಿ ೮ ಗಂಟೆಗೆ ಚಕ್ರವರ್ತಿ ದಂಪತಿಗಳ ಔತಣವೂ ಜರಗುವವು. ತಾ॥ ೧೪ ನೆಯ ಗುರುವಾರ ಬೆಳಗಿನ ೧೦॥ ಗಂಟೆಗೆ ಸೈನಿಕರ ಪರಾಂಬರಿಕೆಯೂ, ಮಧ್ಯಾಹ್ನ ೩॥ ಗಂಟೆಗೆ ಹಾಕಿ ಆಟದ ಕಡೇ ಪಂದ್ಯವೂ, ರಾತ್ರಿ ೯॥ ಗಂಟೆಗೆ ಪ್ರಶಸ್ತಿಯನ್ನು ದಯಪಾಲಿಸುವುದೂ ಜರಗುವುವು. ತಾ॥ ೧೫ ನೆಯ ಶುಕ್ರವಾರದ ಬೆಳಗಿನ ೧೧ ಗಂಟೆಗೆ ಪೋಲೀಸರಪರಾಂಬರಿಕೆಯೂ, ಮಧ್ಯಾಹ್ನ ೩ ಗಂಟೆಗೆ ಸೈನಿಕರ ಪಂದ್ಯವೂ, ರಾತ್ರಿ ೯ ಗಂಟೆಗೆ ಮಷ್ಟಾಮುಷ್ಟಿಯ ಕಾಳಗದ ಪಂದ್ಯವೂ ನಡೆಯುವುವು. ತಾ॥ ೧೬ ನೆಯ ಶನಿವಾರದ ಮಧ್ಯಾಹ್ನ ೧ ಗಂಟೆಗೆ ರಾಜಚಕ್ರವರ್ತಿ ದಂಪತಿಗಳು ದಿಲ್ಲಿಯನ್ನು ಬಿಟ್ಟು ಪ್ರಯಾಣಮಾಡುವರು.

ಬೊಂಬಾಯಿ ಪಟ್ಟಣದ ಶೃಂಗಾರ.

ಚಕ್ರವರ್ತಿ ದಂಪತಿಗಳ ಉತ್ಸವವು ಬರುವ ಮಾರ್ಗಗಳಲ್ಲಿಯ ನಿವಾಸಿಗಳು ತಂತಮ್ಮ ಅಂಗಡಿಮನೆಗಳನ್ನು ಸುಣ್ಣಬಣ್ಣಗಳಿಂದಲೂ, ಧ್ವಜಪತಾಕೆಗಳಿಂದಲೂ, ವಿಧವಿಧವಾದ ಚಿತ್ರಪಟಗಳಿಂದಲೂ, ಕಾಗದದಿಂದ ಮಾಡಿದ ಪುಷ್ಪಮಾಲಿಕೆ ತೋರಣ ಮೊದಲಾದವುಗಳಿಂದಲೂ ತಂತಮಗೆ ಅನುಕೂಲವೂ, ಅಭಿರುಚಿಯೂ ಇದ್ದ ರೀತಿಯಲ್ಲಿ ಬಹು ಸಡಗರದಿಂದ ಶೃಂಗರಿಸುತ್ತಿರುವರು ಮಾರ್ಗಗಳಲ್ಲಿ ಕಮಾನುಗಳೂ, ಮಂಟಪಗಳೂ ಮನೋರಂಜಕವಾಗಿ ಕಟ್ಟಲ್ಪಡುತ್ತಿರುವುವು. ಬೊಂಬಾಯಲ್ಲಿ ಜರಗುವ ಈ ಮಹೋತ್ಸವದಲ್ಲಿ ಜೀವನವನ್ನು ಸಂಪಾದಿಸಿಕೊಳ್ಳಬಹುದೆಂಬ ನಿರೀಕ್ಷಣೆಯಿಂದ ಹೊರಊರುಗಳಿಂದ ತತ್ರಾಪಿ ಕ್ಷಾಮ ಪ್ರಾಪ್ತವಾಗಿರುವ ಗುಜರಾತು ಮೊದಲಾದ ದೇಶಗಳಿಂದ ಪ್ರಾಯಶಃ ೨ಲಕ್ಷ ಜನರು ಬಂದಿರುವುದರಿಂದ ಆ ಪಟ್ಟಣದ ಯಾವ ಭಾಗದಲ್ಲಿ ನೋಡಿದರೂ ಈ ಕೆಲಸಗಾರರ ಓಡಾಟವೇ ಹೆಚ್ಚಾಗಿರುವುದು. ಈ ಕೆಲಸಗಾರರಲ್ಲದೆ ಈ ಉತ್ಸವಸಮಾರಂಭವನ್ನು ನೋಡಲು ಸಾವಿರಾರು ಜನರು ನಿತ್ಯದಲ್ಲೂ ರೈಲು ಬಂಡಿಗಳಲ್ಲಿ ಬರುತ್ತಿರುವರು. ಈಗ ಅಲ್ಲಿಯ ಪ್ರಜಾಸಂಖ್ಯೆಯಲ್ಲದೆ ಹೊರಗಿನಿಂದ ಬಂದಿರುವವರು ಪ್ರಾಯಶಃ ೪ ಲಕ್ಷದ ಮೇಲಾಗಬಹುದೆಂದೂಹಿಸಲ್ಪಟ್ಟಿರುವುದಲ್ಲದೆ, ಡಿಸೆಂಬರ್ ತಾ॥ ೨-೩ ರೊಳಗೆ ಹೊರಗಿನ ಜನರ ಸಂಖ್ಯೆಯು ೬-೭ಲಕ್ಷದ ವರೆಗಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಇ ಪಟ್ಟಣದಲ್ಲಿ ಶೃಂಗಾರವು ಈ ರೀತಿಯಾಗಿ ನಡೆಯುತ್ತಿರುವುದನ್ನು ನೋಡಿ ಮೇಘರಾಜನು ಅಸೂಯೆಪಟ್ಟು ಶೃಂಗಾರವನ್ನೆಲ್ಲ ನಾಶಪಡಿಸಬೇಕೆಂಬ ಆಗ್ರಹದಿಂದ ತನ್ನ ದೂತನಾದ ಮಳೆಯನ್ನು ಕಳುಹಿಸಿರಬಹುದೆಂಬುವ ಹಾಗೆ ಕಳೆದ ತಾ॥ ೨೨ರಬೆಳಗ್ಗೆ ವಿಪರೀತ ಮಳೆಯು ಸುರಿದು ಕಾಗದ, ಬೇಗಡೆ ಮೊದಲಾದ ಪದಾರ್ಥಗಳಿಂದ ಮಾಡಿದ್ದ ಶೃಂಗಾರಗಳೆಲ್ಲವೂ ನಾಶವಾದುವು. ಮತ್ತು ಪುರಾತನ ಬೊಂಬಾಯಿ ಪಟ್ಟಣವನ್ನು ಪ್ರದರ್ಶಿಸಲು ಕಿತ್ತಾನಾರಬಟ್ಟೆಗಳಿಂದ ಮಾಡಲ್ಪಟ್ಟಿದ್ದ ಕಟ್ಟಡಗಳು ಮಳೆಯಲ್ಲಿ ನೆನೆದು ಒಳಗಡೆ ಬಾವಿಯಂತೆ ನೀರು ನಿಂತಿದ್ದಿತು. ಭರತಖಂಡಕ್ಕೆ ಈವರೆಗೆ ಅಪೂರ್ವವಾಗಿರುವ ಮತ್ತು ಅತ್ಯಂತ ಸುಂದರವಾದ ರಬ್ಬರಿನಿಂದ ಮಾಡಲ್ಪಟ್ಟ ದೀಪಗಳು ಸೀಮೆಯಿಂದ ಈಗತಾನೆ ತರಿಸಲ್ಪಟ್ಟು ವಸ್ತು ಪ್ರದರ್ಶನಾಲಯಲ್ಲಿ ಹಾಕಲ್ಪಟ್ಟಿದ್ದುವು. ಅವುಗಳಲ್ಲಿ ನೂರಾರು ಈ ಮಳೆಯ ಹೊಡತದಿಂದ ನಾಶವಾದುವು. ಈಗ ಅಲ್ಲಿ ಆಕಾಶವು ನಿರ್ಮಲವಾಗಿ ಬಿಸಿಲು ಚೆನ್ನಾಗಿ ಕಾಯಲಾರಂಭವಾಗಿರುವುದಲ್ಲದೆ ಸರ್ಕಾರದವರೂ, ಪ್ರಜೆಗಳೂ ಮಾಡುತ್ತಿರುವ ಶೃಂಗಾರಗಳಲ್ಲಿ ದೋಷವನ್ನು ಸರಿಪಡಿಸಿ ಮರಳಿ ಯತ್ನಿಸಿರುವರು. ಸೈನಿಕರೂ, ಪೋಲೀಸರೂ ಉತ್ಸವಕಾಲದಲ್ಲಿ ತಾವು ಮಾಡಬೇಕಾದ ಕೆಲಸಗಳನ್ನು ಈಗಲಿಂದಲೂ ಮಾಡಿನೋಡಿಕೊಳ್ಳುತ್ತಿರುವರು. ಬೊಂಬಾಯಿನಲ್ಲಿ ಸ್ಥಳವು ಸಾಲದುದರಿಂದ, ಜೆಪ್ಪ ಸೇನೆಯು ಈ ವಾರದಲ್ಲಿ ಬಲು ಗೊತ್ತುಮಾಡಲ್ಪಟ್ಟಿದೆ.

ಚಕ್ರವರ್ತಿ ದಂಪತಿಗಳುಪಯೋಗಿಸುವ ಮೊಟಾರು ಬಂಡಿಗಳು.

ಚಕ್ರವರ್ತಿಯವರು, ಚಕ್ರವರ್ತಿನಿಯವರು, ಬೊಂಬಾಯಿ ಗೌರ್ನರು ಮತ್ತು ಚಕ್ರವರ್ತಿ ದಂಪತಿಗಳ ಪರಿವಾರದವರು ಕುಳಿತು ಸಂಚರಿಸಲು ಮೊಟಾರು ಬಂಡಿಗಳು ಸೀಮೆಯಿಂದ ತರಿಸಲ್ಪಟ್ಟು ಈಗತಾನೆ ಬೊಂಬಾಯಿನ ಮೊಟಾರು ಮತ್ತು ಸೈಕಲ್ ಏಜನ್ಸಿ ಕಂಪನಿಯವರ ಅಂಗಡಿಯಲ್ಲಿ ಪ್ರದರ್ಶನಕ್ಕಾಗಿಡಲ್ಪಟ್ಟಿವೆ. ಇವುಗಳಲ್ಲಿ ಚಕ್ರವರ್ತಿಯವರುಪಯೋಗಿಸುವ ಬಂಡಿಯು ೨೦ ಕುದುರೆಗಳ ಶಕ್ತಿಯುಳ್ಳುದಾಗಿದೆ. ಈ ಬಂಡಿಗೆ ನೀಲಿಬಣ್ಣವು ಹಾಕಲ್ಪಟ್ಟು ಕೆಂಪುಬಣ್ಣದ ಸಣ್ಣ ಗೆರೆಗಳು ಎಳೆಯಲ್ಪಟ್ಟಿವೆ. ಮತ್ತು ಬಾಗಲುಗಳ ಹಲಿಗೆಯ ಮೇಲೆ ಕಿರೀಟದ ಚಿತ್ರವು ಬರೆಯಲ್ಪಟ್ಟಿದೆ. ಬಂಡಿಯೊಳಗಡೆ ಬೂದಿಬಣ್ಣದ ಬಟ್ಟೆಯು ಹಾಕಲ್ಪಟ್ಟು ಅದರ ಅಂಚಿನ ಸುತ್ತಲೂ ರೇಷ್ಮೆಯ ಧಾರದಿಂದ ಶೃಂಗರಿಸಲ್ಪಟ್ಟಿದೆ. ಮತ್ತು ಮೊಳೆ ಕೈಪಿಡಿ ಮೊದಲಾದ ಪದಾರ್ಥಗಳು ದಂತದಿಂದಲೂ, ಬೆಳ್ಳಿಯಿಂದಲೂ ಬಹುಶ್ಲಾಘ್ಯವಾಗಿ ಮಾಡಲ್ಪಟ್ಟಿವೆ. ಬಂಡಿಯ ಮುಂಭಾಗದಲ್ಲೂ, ಒಳಗಡೆಯೂ ವಿದ್ಯುಚ್ಛಕ್ತಿಯ ದೀಪಗಳು ಇಡಲ್ಪಟ್ಟಿವೆ. ಬಂಡಿಯ ಚಕ್ರಗಳು ಉಕ್ಕಿನಿಂದ ಮಾಡಲ್ಪಟ್ಟಿವೆ. ಬಂಡಿಗಳನ್ನು ನಡೆಸುವವರಿಗೆ ಕಿರೀಟದ ಚಿತ್ರವನ್ನುಳ್ಳ ಕಪ್ಪು ಗುಂಡಿಗಳಿಂದ ಕೂಡಿದ ಕೊಂಚಕಪ್ಪಿನಮೇಲಿರುವ ನೀಲಿಬಣ್ಣದ ಕೋಟುಗಳೂ, ಸೈನಿಕರುಪಯೋಗಿಸುವಂತಹ ಶರಾಯಿಗಳೂ, ಅವುಗಳ ಮೇಲೆ ಮೊಣಕಾಲಿನವರೆಗೂ ಕಟ್ಟಲು ಕಪ್ಪುಬಣ್ಣದ ಪಟ್ಟಿಗಳೂ ಕೊಡಲ್ಪಟ್ಟಿವೆ.

ಚಕ್ರವರ್ತಿ ದಂಪತಿಗಳು ಮಂಡಿಸುವ ಸಿಂಹಾಸನಗಳು.

ಚಕ್ರವರ್ತಿ ದಂಪತಿಗಳು ಭರತಖಂಡದಲ್ಲುಪಯೋಗಿಸುವುದಕ್ಕಾಗಿ ಬಹುಶ್ಲಾಘ್ಯವಾದ ಎರಡು ಸಿಂಹಾಸನಗಳು ಈ ದೇಶದವುಗಳ ಮಾದ್ರಿಯಂತೆ ಬೊಂಬಾಯಿನಲ್ಲಿರುವ ಇ. ಎಂಬ್ರಿಡ್ಜ ಮತ್ತು ಕಂಪನಿಯವರಿಂದ ಮಾಡಲ್ಪಟ್ಟಿರುತ್ತವೆ. ಈ ಸಿಂಹಾಸನಗಳು ೯ ಅಡಿ ಎತ್ತರವಿದ್ದು ಆನೆಗಳ ಮೇಲೆ ಮಡಗಲ್ಪಟ್ಟಿವೆ. ಇವಕ್ಕೆ ಅತ್ಯುತ್ತಮವಾದ ತೇಗದ ಮರವು ಉಪಯೋಗಿಸಲ್ಪಟ್ಟಿರುವುದಲ್ಲದೆ ಪೂರ್ತಿಯಾಗಿ ಚಿನ್ನದ ಗಿಲಿಟುಮಾಡಲ್ಪಟ್ಟಿದೆ. ಸೂರತನಲ್ಲಿ ಈ ಕಾರ್ಯಕ್ಕಾಗಿಯೇ ನೇಯಲ್ಪಟ್ಟಿರುವ ಭಂಗಾರದ ಕಲಾಪತ್ತಿನ ಬಟ್ಟೆಯು ಸಿಂಹಾಸನಗಳ ಒಳಗೂ, ಹೊರಗೂ ಹಾಕಲ್ಪಟ್ಟು ಬೆನ್ನಿನ ಮೇಲು ಭಾಗಗಳಲ್ಲಿ ರಾಜ ಚಿನ್ಹೆಗಳು ಕೊರೆಯಲ್ಪಟ್ಟಿರುವುದಲ್ಲದೆ, ಅವುಗಳ ಮೇಲ್ಭಾಗದಲ್ಲಿ ಇಂಗ್ಲೆಂಡಿನ ಕಿರೀಟಗಳು ಮಡಗಲ್ಪಟ್ಟಿವೆ. ಚಿನ್ನದ ಸರಿಗೆಯಿಂದ ಕೂಡಿದ ರೇಷ್ಮೆಯಿಂದ ಕಸೂತಿಮಾಡಲ್ಪಟ್ಟಿರುವ ಊದಾ ಬಣ್ಣದ ಮಕಮಲ್ಲನ್ನು ಹಾಸಿರುವ ಎತ್ತರವಾದ ಜಗತಿಯ ಮೇಲೆ ಈ ಸಿಂಹಾಸನಗಳು ಇಡಲ್ಪಡುವುವು. ಈ ಸಿಂಹಾಸನಗಳು ಮಹೋತ್ಸವವಾದ ಮೇಲೆ ಬೊಂಬಾಯಿನಲ್ಲಿ ಕಟ್ಟಲ್ಪಡುತ್ತಿರುವ ಹೊಸ ಪ್ರದರ್ಶನಶಾಲೆಯಲ್ಲಿ ಭರತಖಂಡಕ್ಕೇನೆ ಅಭೂತಪೂರ್ವವಾಗಿರುವ ಮಹೋತ್ಸವದ ಜ್ಞಾಪಕಾರ್ಥವಾಗಿಡಲ್ಪಡುವುವು.

ರಾಜಚಕ್ರವರ್ತಿದಂಪತಿಗಳು ಭರತಖಂಡಕ್ಕೆ ಪ್ರಯಾಣ ಮಾಡಿರುವುದು.

ನವೆಂಬರ್ ತಾ॥ ೨೦.— ರಾಜಚಕ್ರವರ್ತಿದಂಪತಿಗಳು ಪರಿವಾರಸಮೇತ ಪ್ರಯಾಣಮಾಡುತ್ತಿರುವ ಮೆಡೀನಾಹಡಗು ಪೋರ್ಟಸೇಡಿಗೆ ತಾ॥ ೨೩ರ ಬೆಳಗ್ಗೆ ಬರುತಲೆ ಮರ್ಯಾದಾರ್ಥವಾದ ಗುಂಡುಗಳು ಹಾರಿಸಲ್ಪಟ್ಟುವು. ಲಾರ್ಡ ಕಿಚನರ್‌ರವರು, ಸರ್ ಫ್ರಾನ್ಸಿಸ್ ವಿಂಗೇಟ್‌ರವರು ಮತ್ತು ಜನರಲ್ ಮ್ಯಾಕ್ಸವೆಲ್‌ರವರು ಮೆಡಿನಾಹಡಗಿಗೆ ಹೋಗಿ ಚಕ್ರವರ್ತಿದಂಪತಿಗಳ ದರ್ಶನವನ್ನು ತೆಗೆದುಕೊಂಡು ಯೋಗಕ್ಷೇಮವನ್ನು ವಿಚಾರಿಸಿದನಂತರ, ಈಜಿಪ್ಟಿನ ದೊರೆಯಾದ ಕೇದಿವ್ವನೂ, ತುರ್ಕಿಯಸುಲ್ತಾನನ ಜೇಷ್ಠಪುತ್ರನಾದ ಜೀ-ಇದ್ದೀನನೂ ಮೆಡಿನಾಹಡಗಿಗೆ ಹೋಗಿ ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಂಡು ಪರಸ್ಪರ ಕುಶಲಪ್ರಶ್ನೆಯನ್ನು ಮಾಡಿದಮೇಲೆ, ಜೀ-ಇದ್ದೀನನು ತನ್ನ ತಂದೆಯು ಕಳುಹಿಸಿಕೊಟ್ಟಿದ್ದ ಕುಶಲಪತ್ರವನ್ನು ಚಕ್ರವರ್ತಿಯವರಿಗೊಪ್ಪಿಸಿದನು. ಅದರಲ್ಲಿ ಚಕ್ರವರ್ತಿದಂಪತಿಗಳಿಗೆ ಭರತಖಂಡದ ಪ್ರಯಾಣವು ಸುಖಪ್ರದವಾಗಿರಲೆಂದೂ, ತನ್ನ ರಾಜ್ಯಕ್ಕೂ, ಇಂಗ್ಲೆಂಡಿಗೂ ಇರತಕ್ಕ ಮೈತ್ರೀಭಾವವು ಅಭಿವೃದ್ಧವಾಗಲೆಂದೂ, ಚಕ್ರವರ್ತಿದಂಪತಿಗಳಲ್ಲಿ ತನಗಿರುವ ಪೂರ್ಣವಾದಭಕ್ತಿಯನ್ನೂ ಅಂಗೀಕರಿಸಬೇಕೆಂದೂ ಕೋರಲ್ಪಟ್ಟಿದ್ದಿತು. ಚಕ್ರವರ್ತಿಯವರು ಈ ಪತ್ರವನ್ನು ವಿಶ್ವಾಸದಿಂದ ಸ್ವೀಕರಿಸಿ ತುರ್ಕಿಯಸುಲ್ತಾನರು ತಮ್ಮ ಆಯುರಾರೋಗ್ಯವನ್ನು ಬಯಸಿರುವುದಕ್ಕಾಗಿ ತಾವು ಅವರನ್ನು ವಂದಿಸುತ್ತೇವೆಂದೂ, ತಮ್ಮುಭಯ ರಾಷ್ಟ್ರಗಳ ಮಿತ್ರತ್ವವುಹಾರಾದ್ಧೋರವಾಗಿ ನಡೆದುಕೊಂಡು ಬರುವದಾಗಿ ತಾವು ನಂಬುತ್ತೇವೆಂದೂ ಉತ್ತರವನ್ನು ಬರೆದುಕೊಟ್ಟರು. ಅನಂತರ ಲಾರ್ಡ ಕಿಚನರ್‌ರವರು ಕೈಮಿಲ್‌ಪಾಷ, ಸಯದ್‌ಬೆ, ರಚಿದಪಾಷ ಇವರುಗಳ, ಮತ್ತು ಈಜಿಪ್ಟಿನಲ್ಲಿರುವ ಇಂಗ್ಲೀಯ ಮತ್ತು ಇತರ ಅಧಿಕಾರಿಗಳ ಪರಿಚಯವನ್ನು ಮಾಡಿಸಿದರು. ಕೇದಿವ್, ಜೀ-ಇದ್ದೀನ್, ಮಹಮ್ಮದ್‌ಅಲಿ ಲಾರ್ಡ ಕಿಚೆನರ್, ಸರ್‌ಫ್ರಾನ್ಸಿಸ್‌ವಿಂಗೇಟ್, ಜನರಲ್ ಮ್ಯಾಕ್ಸ್‌ಲ್, ಕೈಮಲ್‌ಪಾಷ, ಸಯದ್‌ಪಾಷ ಮೊದಲಾದ ಪ್ರಮುಖ ಅತಿಥಿಗಳು ಚಕ್ರವರ್ತಿಯವರಕೂಡ ಅಲ್ಪಾಹಾರವನ್ನು ಮಾಡಿದರು. ಮತ್ತು ಲಾರ್ಡಕಿಚನರ್ ಸರ್‌ಫ್ರಾನ್ಸಿಸವಿಂಗೇಟ್ ಮತ್ತು ಮ್ಯಾಕ್ಸವೆಲ್‌ರವರು, ಮೆಡಿನಾಹಡಗಿನಲ್ಲಿ ಚಕ್ರವರ್ತಿಯವರಸಂಗಡ ಭೋಜನವನ್ನು ಮಾಡಿದರು. ತಾ॥ ೨೪ರ ಬೆಳಗ್ಗೆ ಮೆಡಿನಾಹಡಗು ಪೋರ್ಟಸೇಡನ್ನು ಬಿಟ್ಟು ಹೊರಟು ತಾ॥ ೨೩ ರಲ್ಲಿ ಸೂಯಜಿನಿಂದ ಮುಂದಕ್ಕೆ ಪ್ರಯಾಣಮಾಡಿತು. ತುರ್ಕಿ ಸುಲ್ತಾನನ ಮಗನಾದ ಜೀ-ಇದ್ದೀನನಿಗೆ ಜಿ. ಸಿ. ವಿ. ಒ., ಎಂದರೆ ನೈಟ್‌ಗ್ರಾಂಡ್‌ಕ್ರಾಸ್ ಆಫ್ ದಿ ರಾಯಲ್ ವಿಕ್ಟೋರಿಯನ್ ಆರ್ಡರ್ ಎಂಬ ಪ್ರಶಸ್ತಿಯನ್ನು ಜಾರ್ಜ ಪ್ರಭುಗಳು ದಯಪಾಲಿಸಿದ್ದುದನ್ನು ಲಾರ್ಡ ಕಿಚನರ್‌ರವರು ತಾ॥ ೨೩ ರಲ್ಲಿ ಕೂಬೆಕ್ ಅರಮನೆಯಲ್ಲಿ ಕೇದಿವ್ ದೊರೆಯ ಇದಿರಿಗೆ ಜೀ-ಇದ್ದೀನನಿಗೆ ವಹಿಸಿಕೊಟ್ಟರು.

ತುರ್ಕಿ-ಇಟಲಿಗಳ ಯುದ್ಧವು.

ತಾ॥ ೧೮.—ಮಳೆಯಾಧಿಕ್ಯದಿಂದ ಟ್ರಿಪೋಲಿಯ ಸುತ್ತಲೂ ವಿಪರೀತ ಪ್ರವಾಹವು ಬಂದು ತುರ್ಕಿಯವರು ಮತ್ತು ಇಟಲಿಯವರು ತಂತಮ್ಮ ಪಾಳೆಯಗಳಿಗೆ ಶತ್ರುಗಳು ಪ್ರವೇಶಿಸದಂತೆ ಆತ್ಮರಕ್ಷಣಾರ್ಥವಾಗಿ ಕಂದಕಗಳನ್ನು ಮಾಡಿಕೊಂಡಿರುವ ಸ್ಥಳಗಳಲ್ಲಿ ನೀರು ತುಂಬಿಕೊಂಡು ಉಭಯ ಸೈನಿಕರನ್ನೂ ಕೊಚ್ಚಿಕೊಂಡುಹೋಯಿತು. ಇಟಲಿಯವರ ಯುದ್ಧದ ಹಡಗುಗಳು ಬಿರುಗಾಳಿ ಸಮೇತವಾದ ಮಳೆಯ ದೆಸೆಯಿಂದ ಟ್ರಿಪೋಲಿಯನ್ನು ಬಿಟ್ಟು ಬಹುದೂರ ಹೋಗಿ ನಿಲ್ಲಬೇಕಾಯಿತು.

ತಾ॥ ೧೯.—ರಷ್ಯಾ ಚಕ್ರವರ್ತಿಯು ತನ್ನ ರಾಜ್ಯದ ಕೂಡ ಮೈತ್ರೀಭಾವದಿಂದಿರುವ ತುರ್ಕಿರಾಜ್ಯದ ನೆರೆಯಲ್ಲಿರುವ ಮತ್ತು ವಸಂತಕಾಲದಲ್ಲಿ ತನ್ನ ವಿಹಾರ ಸ್ಥಳವಾಗಿರುವ ಲಿವಿಡಿಯಾಕ್ಕೆ ಬಂದಿರುವುದರಿಂದ, ಸುಲ್ತಾನನ ಅಭಿನಂದನವನ್ನು ತಿಳಿಸುವುದಕ್ಕಾಗಿ ಕೆಲ ರಾಯಭಾರಿಗಳು ಲಿವಿಡಾಯಕ್ಕೆ ಹೊರಟ್ಟಿರುವರು,

ತಾ॥ ೨೦.—ಬಂಗಾಳದ ಕಾರ್ಖಾಲಯಗಳಲ್ಲಿ ಕೆಲಸಮಾಡುವ ಮಹಮ್ಮದೀಯರು ಕಂಕಿನಾರಾದಲ್ಲಿ ತಾ॥ ೧೯ರಲ್ಲಿ ಒಂದು ದೊಡ್ಡ ಸಭೆಸೇರಿದ್ದರು. ಅಲ್ಲಿಗೆ ೫೦೦೦ ಜನ ಕೆಲಸಗಾರರು ರೆಡ್‌ಕ್ರೆಸೆಂಟ್ ಸಂಘದವರು ಏರ್ಪಡಿಸಿರುವ ಫಂಡಿಗೆ ಒಂದು ವಾರದ ತಮ್ಮ ಸಂಪಾದನೆಯನ್ನು ಕೊಟ್ಟರಲ್ಲದೆ, ಕಾರ್ಖಾಲಯದ ಮ್ಯಾನೇಜರಾದ ಒಬ್ಬ ಐರೋಪ್ಯನು ಸಹ ಚಂದಾಹಣವನ್ನು ಕೊಟ್ಟನು. ಟ್ರಿಪೋಲಿಯ ಯುದ್ಧದಲ್ಲಿ ಗಾಯವಡೆದವರ ಮತ್ತು ಅನಾಥರಾದವರ ಉಪಚಾರಾರ್ಥವಾಗಿ ಟ್ರಿಪೋಲಿಗೆ ಹೊರಡಲಿಷ್ಟಪಟ್ಟು ಸಿಲೋನಿನಿಂದಲೂ, ಮಲಯ ಪೆನನ್ಸುಲಾದಿಂದಲೂ ರೆಡ್‌ಕ್ರೆಸೆಂಟ್ ಸಂಘದವರಿಗೆ ಬರೆದುಕೊಂಡಿರುತ್ತಾರೆ.

ಮೈಸೂರ್ ಗೆಜೆಟ ಸಂಗ್ರಹವು.

ಕಾನಕನಹಳ್ಳಿ ತಾ॥ ಅಮಲ್ದಾರ್ ಮಿ॥ ಎಂ. ರಂಗನಾಥರಾಯರಿಗೆ ೧೯೧೧ ನೆಯ ನವೆಂಬರ್ ತಾ॥ ೨೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೩ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ದಾವಣಗೆರೆ ಸಬ್ ಡಿವಿಜನ್ನಿನ ಸೀನಿಯರ್ ಅ॥ ಕಮಿಷನರ್ ಮಿ॥ ಕೆ. ಕೃಷ್ಣಯ್ಯರ್‌ರವರಿಗೆ ೧೯೧೧ನೆಯ ಡಿಸೆಂಬರ್ ತಾ॥ ೧ ರಿಂದ ೨೩ ದಿನಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಚಳ್ಳಕೆರೆ ತಾ॥ ಅಮಲ್ದಾರ್ ಮಿ॥ ಎಂ. ಎಸ್. ರಾಮಚಂದ್ರರಾಯರು ಬಿ. ಷೆಡ್ಯೂಲು ೫ ನೆಯ ತ॥ ಆಕ್ಟಿಂಗ್ ಅ॥ ಕಮಿಷನರಾಗಿ ನಿಯಮಿಸಲ್ಪಟ್ಟು ದಾವಣಗೆರೆಯ ಸಬ್ ಡಿವಿಜನ್ನಿನ ಛಾರ್ಜಿಗೆ ಹಾಕಲ್ಪಟ್ಟಿರುತ್ತಾರೆ.

ಚಳ್ಳಕೆರೆ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮಿ॥ ಟಿ. ರಾಯಲು ನೆಟ್ಟರಿಗೆ ೧೯೧೨ ನೆಯ ಜನವರಿ ತಾ॥ ೩ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೨ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ, ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಚಳ್ಳಕೆರೆ ತಾ॥ ಅಮಲ್ದಾರ್ ಮಿ॥ ಎಂ. ಎಸ್. ರಾಮಚಂದ್ರರಾಯರು ಬಿ. ಷೆಡ್ಯೂಲು ೫ ನೆಯ ತ॥ ಆಕ್ಟಿಂಗ್ ಅ॥ ಕಮಿಷನರಾಗಿ ನೇಮಿಸಲ್ಪಟ್ಟು ಚಳ್ಳಕೆರೆ ಸಬ್ ಡಿವಿಜನ್ ಛಾರ್ಜಿಗೆ ಹಾಕಲ್ಪಟ್ಟಿರುತ್ತಾರೆ.

ಸಿರಾ ತಾ॥ ಅಮಲ್ದಾರ್ ಮಿ॥ ಟಿ. ಅಬ್ದುಲ್‌ಖಾದರ್‌ರವರಿಗೆ ೧೯೧೧ ನೆಯ ಡಿಸೆಂಬರ್ ತಾ॥ ೪ ರಿಂದ ೩ ತಿಂಗಳ ವರೆಗೆ ಇದರಲ್ಲಿ ಮೊದಲು ಒಂದು ತಿಂಗಳು ೯ ದಿವಸಗಳು ಪ್ರಿವಿಲೆಜ್ ರಜವಾಗಿಯೂ, ಉಳಿದ ದಿವಸಗಳಿಗೆ ಸಂಬಳವಿಲ್ಲದೆಯೂ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಮತ್ತೊಂದು ಅಪ್ಪಣೆಯಾಗುವವರೆಗೆ ಮೈಸೂರ ಡಿ॥ ನಲ್ಲಿ ರೆವಿನ್ಯೂ ಪ್ರಬೇಷನರಾಗಿರುವ ಬಿ. ಮೊಹದೀನ್ ಷರೀಫ್‌ರವರು ಸಿರಾ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ನಗರ ತಾ॥ ಆಕ್ಟಿಂಗ್ ಅಮಲ್ದಾರ್ ಮಿ॥ ಎಂ. ರಾಮಚಂದ್ರರಾಯರಿಗೆ ವೈದ್ಯರ ಅನುಮತಿಯಮೇಲೆ ಅವರುಪಯೋಗಿಸಿಕೊಳ್ಳುವಾರಭ್ಯ ೩ ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೆ ಕುಂಸಿ ಸಬ್ ತಾ॥ ದಿ ಅಮಲ್ದಾರ್ ಮಿ॥ ಬಿ. ಮೋರ್ದಿಷರೀಫ್‌ರವರು ನಗರ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ, ಶಿವಮೊಗ್ಗ ಡಿ॥ ತೆ॥ ಕಮಿಷನರಾಫೀಸ್ ಹೆಡ್‌ಕ್ಲಾರ್ಕ ಸಿ. ಬಿ. ಶಾಮರಾಯರು ಕುಂಸಿ ಸಬ್ ತಾ॥ ಡಿ॥ ಅಮಲ್ದಾರರಾಗಿಯೂ, ೩ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಆನೆಕಲ್ ತಾ॥ ಛಾರ್ಜಿನಲ್ಲಿರುವ ದೇವನಹಳ್ಳಿ ತಾ॥ ಶಿರಸ್ತೆದಾರ್ ಜಿ. ಎಂ. ನರಸಿಂಹನಾಯಕರವರು ಆನೆಕಲ್ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ಮಿ॥ ಪಿ. ಸುಬ್ರಾಯಲುನಾಯಡುರವರು ಪ್ರಿವಿಲೇಜ್ ರಜದಮೇಲಿರುವವರೆಗೆ ಅಥವಾ ಇನ್ನೊಂದಪ್ಪಣೆಯಾಗುವವರೆಗೆ ನಿಯಮಿಸಲ್ಪಟ್ಟಿರುತ್ತಾರೆ.

ಅ॥ ಕಮಿಷನರ್ ಮತ್ತು ೧ ನೆಯ ತ॥ ಮ್ಯಾಜಿಸ್ಟ್ರೇಟ್ ಮಿ॥ ಜಿ. ಅರವಮುದಯ್ಯಂಗಾರ್, ಬಿ. ಎ., ಬಿ. ಎಲ್., ರವರು ೧೯೧೨ ನೆಯ ಜನವರಿ ತಾ॥ ೩ರ ವರೆಗೆ ಬೆಂಗಳೂರ ಡಿ॥ ನ ಅಡಿಷನಲ್ ಡಿ॥ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಡು ಮೇಲ್ಕಂಡ ಅವಧಿಯಲ್ಲಿ ಡಿ॥ ಮ್ಯಾಜಿಸ್ಟ್ರೇಟರಿಗಿರತಕ್ಕ ಅಧಿಕಾರವನ್ನೆಲ್ಲ ಉಪಯೋಗಿಸಬಹುದೆಂದು ಅಪ್ಪಣೆ ಮಾಡಲ್ಪಟ್ಟಿರುತ್ತಾರೆ.

ಅಮಲ್ದಾರ್ ಮಿ॥ ಎಸ್. ಗೋಪಾಲಕೃಷ್ಣಯ್ಯಂಗಾರರು ಮಾಗಡಿ ತಾ॥ ಇಂದ ಚೆನ್ನರಾಯಪಟ್ಟಣ ತಾ॥ ಗೂ, ಆ॥ ಅಮಲ್ದಾರ್ ಮಿ॥ ಸಿ. ಶ್ರೀನಿವಾಸರಾಯರು ಚೆನ್ನರಾಯಪಟ್ಟಣದಿಂದ ಕಾನಕಾನಹಳ್ಳಿ ತಾ॥ ಗೂ, ಅಮಲ್ದಾರ್ ಮಿ॥ ಎಂ. ರಂಗನಾಥರಾಯರು ರಜವನ್ನು ಪೂರೈಸಿಕೊಂಡು ಬಂದಮೇಲೆ ಕಾನಕಾನಹಳ್ಳಿಯಿಂದ ಮಾಗಡಿ ತಾ॥ ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಅ॥ಸರ್ಜನ ಮಿ॥ ಬಿ. ನಂಜಪ್ಪನವರು ಬೆಂಗಳೂರ ಡಿ॥ ನಲ್ಲಿ ಇನಾಕ್ಯುಲೇಷನ್ ಕೆಲಸವನ್ನು ಮಾಡಲು ನಿಯಮಿಸಲ್ಪಟ್ಟಿರುತ್ತಾರೆ.

ಪ್ರ॥ ಅ॥ ಕಮಿಷನರ್ ಮಿ॥ ಎಸ್. ವೆಂಕಟರಂಗಂ ಬಿ. ಎ., ಬಿ., ಎಲ್; ರವರು ೧೯೧೧ ನೆಯ ಜುಲೈ ತಾ॥ ೬ರಿಂದ ಬಿ. ಷೆಡ್ಯೂಲು ೫ ನೆಯ ತ॥ ಅ॥ ಕಮಿಷನರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ದಿಲ್ಲಿಯ ದರ್ಬಾರ ಮಹೋತ್ಸವದ ಸಂಬಂಧವಾಗಿ ರಾಜಧಾನಿಯಲ್ಲಿ ನಡೆಯತಕ್ಕ ವಿನೋದೋತ್ಸವಗಳು.

ಮೈಸೂರ ಸಂಸ್ಥಾನದಲ್ಲಿ ಉತ್ಸವಾದಿಗಳನ್ನು ನಡೆಯಿಸತಕ್ಕ ಬಗೆಗೆ ಸರ್ಕಾರಿಯಪ್ಪಣೆಯಾಗಿರುವ ಪ್ರಕಾರ ರಾಜಧಾನಿಯಲ್ಲಿ ಉತ್ಸವಕ್ಕಾಗೇರ್ಪಟ್ಟಿರುವ ಕಮಿಟಿಯ ಮೆಂಬರುಗಳಲ್ಲಿ ಮಿ॥ ಗಳಾದ ಮು॥ ವೈಸ್‌ಪ್ರೆಸಿಡೆಂಟರು ಎಂ. ಜಿ ಕೃಷ್ಣಸ್ವಾಮಿರಾಯರು, ಎಂ. ಸಿ. ರಂಗಯ್ಯಂಗಾರರು, ಮಹಮ್ಮದ್ ಜಾಫರ್‌ಸಾಹೇಬರು, ಅಂಬಲೆ ಅಣ್ಣಯ್ಯ ಪಂಡಿತರು, ಕೆ. ಶ್ರೀಕಂಠಯ್ಯನವರು, ಮತ್ತು ರೆವರೆಂಡ್ ಗಲಿಫರ್ಡ ಸಾಹೇಬರು ಕಳೆದ ತಾ॥ ೧೩ ರಲ್ಲಿ ಸಭೆಸೇರಿದ್ದು ರಾಜಧಾನಿಯಲ್ಲಿ ಉತ್ಸವಗಳನ್ನೆಸಗಲು ಸರ್ಕಾರದಿಂದ ಕೊಡಲ್ಪಟ್ಟಿರುವ ೧೫೦೦ ರೂ; ಮತ್ತು ಮ್ಯುನಿಸಿಪಾಲಿಟಿಯಿಂದ ಕೊಡಲ್ಪಟ್ಟಿರುವ ೨೦೦೦ರೂ, ಒಟ್ಟು ೩೫೦೦ರೂಗಳಲ್ಲಿ (೧) ಟೌನಹಾಲಿನಲ್ಲಿ ದರ್ಬಾರನ್ನು ನಡೆಯಿಸಲು ಮತ್ತು ನಾಟಕವನ್ನಾಡಿಸಲು ೩೦೦ರೂ. ಗಳನ್ನೂ; (೨) ಎಲ್ಲ ಪಾಠಶಾಲೆಗಳ ಮಕ್ಕಳುಗಳ ತಿಂಡಿ ಮತ್ತು ಆಟಪಾಟಗಳಿಗಾಗಿ ೧೦೦೦ರೂ. ಗಳನ್ನೂ; (೩) ಎಲ್ಲ ಜಾತಿಯ ಬಡವರಿಗೂ, ಅಂಗವಿಕಲರಿಗೂ ಅಕ್ಕಿಯನ್ನೂ, ದುಡ್ಡನ್ನೂ ಕೊಡುವುದಾಕ್ಕಾಗಿ ೧೦೦೦ರೂ; ಗಳನ್ನೂ; (೪) ಬಡವರಿಗೆ ಬಟ್ಟೆಯನ್ನು ಕೊಡುವುದಕ್ಕಾಗಿ ೨೦೦ರೂ. ಗಳನ್ನೂ; (೫) ದೀಪೋತ್ಸವಕ್ಕಾಗಿ ಮತ್ತು ಮದ್ದನ್ನು ಸುಡುವುದಕ್ಕಾಗಿ ೧೦೦೦ರೂ, ಗಳನ್ನೂ ವಿನಿಯೋಗಿಸತಕ್ಕದೆಂದು ನಿರ್ಧರಿಸಿದರು.

ವೆ॥ ಗಳಾದ ನರಸಿಂಹಸ್ವಾಮಿಯವರು, ಅಣ್ಣಯ್ಯಪಂಡಿತರು, ಜಹಗೀರ್ದಾರ್ ಮಾದಪ್ಪನವರು, ಎಂ. ಅನಂತರಾಜಯ್ಯನವರು, ಜವಳಿಯಂಗಡಿ ಮಾದಪ್ಪನವರು, ಮತ್ತೂ ಮಹಮದ್ ಜಾಫರ್ ಸಾಹೇಬರು ಡಿಸೆಂಬರ್ ತಾ॥ ೭ ನೇಯ ಗುರುವಾರ ಬೆಳಿಗ್ಗೆ ಹಸುವನ್ನು ಕರೆಯುವ ಹಟ್ಟಿಯಲ್ಲಿ ಮತ್ತೂ ಬಾಡಿಗಾರ್ಡ್ಸ್ ಲೈನ್ ಕಟ್ಟಡದಲ್ಲಿ ಪ್ರತಿಯೊಬ್ಬ ದೊಡ್ಡವರಿಗೆ ಅರ್ಧಸೇರು ಅಕ್ಕಿ ಮತ್ತೂ ಒಂದಾಣೆಯಂತೆಯೂ, ಪ್ರತಿಯೊಬ್ಬ ಚಿಕ್ಕವರಿಗೆ ಒಂದುಪಾವಕ್ಕಿ ಮತ್ತೂ ಅರ್ಧಾಣೆಯಂತೆಯೂ ಬಡವರಿಗೂ, ಅಂಗವಿಕಲರಿಗೂ ಅಕ್ಕಿಯನ್ನೂ ದುಡ್ಡನ್ನೂ, ಮ॥ ಎನ್. ಶ್ರೀಕಂಠಯ್ಯನವರು ಪಾಠಶಾಲೆಗಳ ಮಕ್ಕಳಿಗೆ ಮಿಠಾಯಿಯನ್ನೂ, ವೆ॥ ಗಳಾದ ಎಂ. ವೆಂಕಟಕೃಷ್ಣಯ್ಯನವರು, ರಂಗಯ್ಯಂಗಾರರು ಮತ್ತೂ ರೆ॥ ಗಲಿಫರ್ಡರವರು ಎಲ್ಲ ಪಾಠಶಾಲೆಗಳ ಮೇಲ್ವಿಚಾರಕರುಗಳನ್ನೂ, ಆಟಪಾಟಗಳಲ್ಲಿ ಆಸಕ್ತರಾದ ದೊಡ್ಡಮನುಷ್ಯರುಗಳನ್ನೂ ಸೇರಿಸಿಕೊಂಡು ಎಲ್ಲ ಪಾಠಶಾಲೆಗಳ ಹುಡುಗರುಗಳಿಂದ ಓಡುವುದು, ಕುಪ್ಪಳಿಸುವುದು, ಹಾರುವುದು, ಹಗ್ಗ ಎಳೆಯುವುದು ಮೊದಲಾದ ಆಟಗಳನ್ನಾಡಿಸಿ ಅವರಲ್ಲಿ ಗೆದ್ದವರಿಗೆ ಬಹುಮಾನಗಳನ್ನೂ ಹಂಚತಕ್ಕದೆಂದು ಗೊತ್ತುಮಾಡಲ್ಪಟ್ಟಿತು.

ಡಿಸೆಂಬರ್ ತಾ॥ ೮ ನೇಯ ಶುಕ್ರವಾರ ಪ್ರಾತಃಕಾಲದಲ್ಲಿ ವೆ॥ ಗಳಾದ ಅಣ್ಣಯ್ಯಪಂಡಿತರು, ಶ್ರೀಕಂಠಯ್ಯನವರು, ಮತ್ತೂ ಜ॥ ಮಾದಪ್ಪನವರು ಹಸುವನ್ನು ಕರೆಯುವ ಹಟ್ಟಿಯಲ್ಲೂ, ವೆ॥ ಗಳಾದ ಮಹಮದ್ ಜಾಫರ್ ಸಾಹೇಬರು, ತಿರುವೆಂಗಡಂ ಮೊದಲಿಯಾರರು, ಅನಂತರಾಜಯ್ಯನವರು ಮತ್ತೂ ವೈಸ್‌ಪ್ರೆಸಿಡೆಂಟರು ಬಾಡಿಗಾರ್ಡ್‌ಲೈನ್‌ಕಟ್ಟಡದಲ್ಲೂ, ಅಂಗವಿಕಲರಾದವರಿಗು, ಮತ್ತೂ ಬಡವರಾದವರಿಗು ಬಟ್ಟೆಗಳನ್ನು ಕೊಡತಕ್ಕದೆಂದೂ,

ಡಿಸೆಂಬರ್ ತಾ॥ ೧೨ ನೇಯ ಮಂಗಳವಾರ ರಾತ್ರಿ ವೆ॥ ಗಳಾದ ಎ. ಸುಬ್ಬಣ್ಣನವರೂ, ರಹಮತುಲ್ಲಅಹಮದ್ ಸೇಟರೂ, ವೈಸ್‌ಪ್ರೆಸಿಡೆಂಟರೂ ರಾಜಧಾನಿಯ ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ದೀಪಗಳನ್ನು ಹೊತ್ತಿಸುವ ಏರ್ಪಾಟನ್ನೂ, ವೆ॥ ಗಳಾದ ಮಹಮದ್ ಜಾಫರ್ ಸಾಹೇಬರು, ಪಾಪಾರಾಂವರು ಮತ್ತೂ ವೈಸ್‌ಪ್ರೆಸಿಡೆಂಟರು ಮದ್ದನ್ನು ಸುಡುವ ಏರ್ಪಾಟನ್ನೂ ಮಾಡತಕ್ಕದೆಂದೂ ನಿರ್ಧರವಾಯಿತು.

ಮೈಸೂರ್ ಸ್ಟಾರ್

೧೯೧೧ ನೇ ನವೆಂಬರ್ ತಾ॥ ೨೭ನೇಯ ಸೋಮವಾರ.

ಹಿಂದೂ ವಿಶ್ವವಿದ್ಯಾಲಯವು ಮತ್ತೂ ಜಸ್ಟಿಸ್ ಶಂಕರನ್ನಾಯರ್‌ರವರು.

ಈಗ ಮದರಾಸು, ಬೊಂಬಾಯಿ, ಪಂಜಾಬು, ಅಲಹಾಬಾದು ಮತ್ತೂ ಕಲಕತ್ತ ಈ ಸ್ಥಳಗಳಲ್ಲಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯಗಳಿಂದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಲೌಕಿಕ ವಿದ್ಯಾಸಂಪಾದನೆಯಾಗುತ್ತಲ್ಲದೆ, ಆಯಾ ಮತಧರ್ಮಾಚರಣೆಯನ್ನು ತಿಳಿಯಲವಕಾಶವಿಲ್ಲವು. ವಿದ್ಯಾರ್ಥಿಗಳು ಮತಧರ್ಮಸ್ವರೂಪವನ್ನು ತಿಳಿದ ಹೊರ್ತು, ಅವರಲ್ಲಿ ಗುರು-ದೈವ-ರಾಜಭಕ್ತಿಯು ಹುಟ್ಟುವುದು ಕಷ್ಟವಾಗಿರುವುದೆಂಬುದರ ಮೇಲೆ, ಮಹಮ್ಮದೀಯರು ತಮ್ಮ ಮತಧರ್ಮಬೋಧೆಗವಕಾಶವಿರುವಂತೆ ಅಲಿಘರದಲ್ಲಿ ಒಂದು ಮಹಮ್ಮದೀಯ ವಿಶ್ವವಿದ್ಯಾಲಯವನ್ನೂ, ಹಿಂದೂಗಳು ತಮ್ಮ ವರ್ಣಾಶ್ರಮ ಧರ್ಮವನ್ನು ಬೋಧಿಸಲನುಕೂಲಿಸುವಂತೆ ಕಾಶೀಪಟ್ಟಣದಲ್ಲಿ ಒಂದು ಹಿಂದೂ ವಿಶ್ವವಿದ್ಯಾಲಯವನ್ನೂ ಸ್ಥಾಪಿಸಲು ಸಂಕಲ್ಪಿಸಿ, ಈ ಕಾರ್ಯಗಳಿಗಾಗಿ ದೊಡ್ಡ ಧನರಾಶಿಗಳನ್ನು ಕೂಡಿಸ ಪ್ರಯತ್ನಿಸುವರು. ಮಹಮ್ಮದೀಯರ ಮುಂದಾಳುಗಳಾದ ವೆ॥ ಆಗಾಖಾನರವರು ಮಹಮ್ಮದೀಯರ ವಿಶ್ವವಿದ್ಯಾಲಯದ ಸ್ಥಾಪನೆಯ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿಕೊಂಡು ಬೊಂಬಾಯಿ, ಲಾಹೋರು ಕಲಕತ್ತಾ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗಿ ಜನರಿಗೆ ಬೋಧಿಸಿ, ಅವರಿಂದ ಮಹಮ್ಮದೀಯ ವಿಶ್ವವಿದ್ಯಾಲಯದ ಫಂಡಿಗೆ ಲಕ್ಷಾಂತರ ರೂಪಾಯಿಗಳನ್ನು ಕೂಡಿಸಿರುವರು. ಇತ್ತಲಾಗಿ ಅನಿಬೆಸಾಂಟಮ್ಮನವರೂ, ಲಾಹೋರಿನ ಪಂಡಿತ ಮದನಮೋಹನ ಮಾಳವೀಯರವರೂ ಹಿಂದೂ ವಿಶ್ವವಿದ್ಯಾಲಯದ ಫಂಡಿಗೆ ದರ್ಭಾಂಗಾ ಮಹಾರಾಜರವರ ಪೂರ್ಣವಾದ ಸಹಾನುಭೂತಿಯನ್ನು ಸಂಪಾದಿಸಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಶೇಖರಿಸುತ್ತಿರುವರು. ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯ ವಿಚಾರದಲ್ಲಿ ಅನಿಬೆಸೆಂಟಮ್ಮನವರಿಗೂ, ಮಾಳವಿಯರವರಿಗೂ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ನಿವೃತ್ತಿಯಾಗಿ, ಮಾಳವಿಯರವರ ಅಭಿಪ್ರಾಯ [illegible] ಅನಿಬೆಸೆಂಟಮ್ಮನವರೊಪ್ಪಿ ಅವರ ಕೂಡ ಬಾ[illegible]ತ್ತಿರುವರು. ಈ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯ ವಿಚಾರದಲ್ಲಿ ಇಂಡ್ಯಾ ಸರ್ಕಾರದ ಅನುಮತಿಯನ್ನೂ ಸಹಾಯವನ್ನೂ ಪಡೆಯುವುದಕ್ಕಾಗಿ ದರ್ಭಾಂಗಾ ಮಹಾರಾಜರವರ ಮುಖಂಡತೆಯಿಂದ ಕೆಲ ಪ್ರಮುಖರ ಪ್ರತಿನಿಧಿಗಳು ವೈಸ್‌ರಾಯರ ಕೌನ್ಸಿಲಿನಲ್ಲಿ ವಿದ್ಯಾಶಾಖೆಯಸಂಬಂಧವಾಗಿ ಮೆಂಬರರಾಗಿರುವ ಆ॥ ಬಟ್ಲರವರನ್ನು ಬರುವ ಡಿಸೆಂಬರ್ ತಾ ೬ ರಲ್ಲಿ, ದಿಲ್ಲಿಯಪಟ್ಟಣದಲ್ಲಿ ಕಾಣಲು ಗೊತ್ತುಪಡಿಸಿಕೊಂಡಿರುವರು. ಮೈಸೂರ ಸಂಸ್ಥಾನದಲ್ಲಿ ಹಿಂದೆ ದಿವಾನರಾಗಿದ್ದ ಮ॥ ವಿ. ಪಿ. ಮಾಧವರಾಯರೂ ಇದಕ್ಕೆ ಒಬ್ಬ ಪ್ರತಿನಿಧಿಗಳಾಗಿರುತ್ತಾರೆ. ಮದ್ರಾಸಿನ ಪ್ರಮುಖಜನರ ಸಭೆಯೊಂದನ್ನು ಕೂಡಿಸಿ, ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದ ಪ್ರಣೆಯಾಗಬೇಕೆಂದು ಅವರಿಂದ ಒಂದು ಪ್ರಾರ್ಥನೆಯನ್ನು ಮಾಡಿಸಬೇಕೆಂದು ಮದ್ರಾಸು ಹೈಕೋರ್ಟಿನ ಜಡ್ಜರಾದ ಜಸ್ಟಿಸ್ ಶಂಕರನ್ನಾಯರ್‌ರವರಿಗೆ ಅನಿಬೆಸೆಂಟಮ್ಮನವರು ಒಂದು ಪತ್ರವನ್ನು ಬರೆದಿದ್ದುದಕ್ಕೆ, ವೆ॥ ನಾಯರ್‌ರವರು ಕೊಟ್ಟಿರುವ ಉತ್ತರದ ಮುಖ್ಯಾಂಶವೇನೆಂದರೆ:—

ಹಿಂದೂ ಅಥವಾ ಮಹಮ್ಮದೀಯ ವಿಶ್ವವಿದ್ಯಾಲಯವನ್ನು ಪ್ರತ್ಯೇಕವಾಗಿ ಸ್ಥಾಪಿಸತಕ್ಕ ಅವಶ್ಯಕತೆಯಿರುವುದಿಲ್ಲವು. ಯಾಕೆಂದರೆ ಇವುಗಳಿಂದ ನಿರೀಕ್ಷಿಸಲ್ಪಟ್ಟಿರುವ ಪ್ರಯೋಜನವನ್ನು ಈಗಿರತಕ್ಕ ವಿಶ್ವವಿದ್ಯಾಲಯಗಳಿಂದಲೇ ಹೊಂದಬಹುದಾಗಿದೆ. ಭರತಖಂಡದಲ್ಲಿ ಮತಸಂಬಂಧವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದರಿಂದ, ಆಯಾಮತಗಳ ಒಳಪಂಗಡಗಳಲ್ಲೂ, ಕ್ರೈಸ್ತ ಮೊದಲಾದ ಇತರ ಮತಸ್ಥರಲ್ಲೂ ಪರಸ್ಪರ ಉಂಟಾಗಿರುವ ದ್ವೇಷಾಸೂಯೆಗಳು ಇನ್ನೂ ಹೆಚ್ಚುವುದರಲ್ಲಿ ಸಂದೇಹವಿಲ್ಲವು. ಆದುಕಾರಣ ಈ ಪ್ರಯತ್ನಕ್ಕೆ ಪ್ರೋತ್ಸಾಹವನ್ನು ಕೊಡತಕ್ಕವರು, ಭಾರತೀಯರ ದುರ್ದೈವದಿಂದ ಇದಕ್ಕೆ ಮೊದಲೇ ಉಂಟಾಗಿರುವ ಜಾತಿಮಾತ್ಸರ್ಯವನ್ನು ಬಲಪಡಿಸುವಂತಹವರ ವಶವರ್ತಿಗಳಾಗಬೇಕಾಗುತ್ತದೆ. ವರ್ಣಾಶ್ರಮಧರ್ಮವನ್ನು ಬೋಧಿಸುವ ಹಿಂದೂ ವಿಶ್ವವಿದ್ಯಾಲಯವು ಹಿಂದೂಗಳಲ್ಲಿ ಜಾತಿಭೇದವನ್ನನುಸರಿಸಿರುವವರಿಗು ಮತ್ತೂ ಜಾತಿಭೇಧವನ್ನು ಬಿಟ್ಟಿರುವವರಿಗು ಇರುವ ಸೌರಸ್ಯವನ್ನು ಹೋಗಲಾಡಿಸಿ, ಅವರುಗಳಲ್ಲಿರಬಹುದಾದ ಅಲ್ಪಸ್ವಲ್ಪ ವೈಮನಸ್ಯವನ್ನು ಹೆಚ್ಚಿಸುವುದು. ಅಲ್ಲದೆ ಜಾತಿಭೇದವನ್ನು ಬಿಟ್ಟಿರತಕ್ಕ ಹಿಂದೂಗಳು ಇದರಿಂದ ಕಾಲಕ್ರಮೇಣ ಇಲ್ಲದಂತಾಗಬಹುದು. ಯಾಕೆಂದರೆ ಹಿಂದೂಗಳಲ್ಲಿ ಮುಖ್ಯವಾದ ಒಂದು ಪಂಗಡದವರು ಜಾತಿಭೇದದಿಂದ ದೂರರಾಗಿರತಕ್ಕ ಹಿಂದೂಗಳ ಹೆಸರನ್ನು ಅಡಗಿಸಲು ಪ್ರಯತ್ನಿಸಿರುವರು. ಅಂತಹವರಿಗೆ ಈ ಹಿಂದೂ ವಿಶ್ವವಿದ್ಯಾಲಯ ಸ್ಥಾಪನೆಯಾವಶ್ಯಕತೆಯು ಹೆಚ್ಚಾಗಿರುವುದೆನ್ನುವುದರಲ್ಲಿ ಸಂದೇಹವಿಲವು.

ಮನುಷ್ಯನು ಅಭಿವೃದ್ಧಿಗೆ ಬರಲು ತನ್ನ ಸ್ವಬುದ್ಧಿಯನ್ನುಪಯೋಗಿಸಿ ಒಂದು ಕಾರ್ಯವನ್ನು ಮಾಡುವ ಸ್ವಾತಂತ್ರ್ಯವು ಅವನಿಗೆ ಅತ್ಯವಶ್ಯಕವಾಗಿರಬೇಕು. ಆದರೆ ಹಿಂದೂಮತವು ಅಂತಹ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿರುವುದು. ಇಂತಹ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡಲು ಸರ್ಕಾರದವರು ಈ ವರೆಗೆ ಮಾಡಿದ ಪ್ರಯತ್ನಗಳಿಗೆಲ್ಲ ಗುರುವರ್ಗದವರ ಪ್ರತಿಬಂಧವು ಹೆಚ್ಚಾಗಿರುವುದು. ಭರತಖಂಡದ ಪರಿಸ್ಥಿತಿಯು ಹೀಗಿರುವುದರಿಂದ, ವೈದಿಕರ ನಿರ್ಬಂಧವು ತಪ್ಪಿದ ಹೊರತು ಭರತಖಂಡದ ಅಭಿವೃದ್ಧಿಯಾಗುವುದಿಲ್ಲವು. ದೇವತಾರಾಧನೆಯ ಸಂಬಂಧವಾದ ಕಾರ್ಯಗಳೆಲ್ಲವೂ ಗುರುವರ್ಗದವರ ಅಧಿಕಾರಕ್ಕೊಳಪಟ್ಟವೆಂದೂ, ನ್ಯಾಯವಿಮರ್ಶೆಗೆ ಆವರ್ಗದವರ ಅಭಿಪ್ರಾಯವೇ ಮುಖ್ಯಾಧಾರವಾದುದೆಂದೂ ನಂಬಿಕೊಂಡಿರುವಷ್ಟು ಹೀನಸ್ಥಿತಿಯಲ್ಲಿ ಹಿಂದೂಗಳ ನಾಗರಿಕತೆಯಿರುವುದು. ಈ ವರ್ಗವು ಯಾವ ದೇಶದಲ್ಲಿ ದೊರೆಯು ತನ್ನಧೀನನಾಗಿ ತನ್ನಭಿಪ್ರಾಯದಂತೆ ರಾಜ್ಯಭಾರವು ನಡೆಸಲ್ಪಡುವುದೋ ಆ ದೇಶದಲ್ಲಿ ರಾಜಭಕ್ತಿಯನ್ನು ಬೋಧಿಸುವುದು. ನಮ್ಮ ಲೌಕಿಕ, ಸಾಮಾಜಿಕ, ಧಾರ್ಮಿಕ ಮತ್ತೂ ನೈತಿಕಸುಧಾರಣೆಗಳೆಲ್ಲವೂ ಪಾಶ್ಚಾತ್ಯನಾಗರಿಕತೆಯಿಂದ ಆಗಬೇಕಲ್ಲದೆ ಬೇರೆ ವಿಧದಿಂದ ಸಾಧ್ಯವಿಲ್ಲವು. ಆದರೆ ಅಂತಹ ನಾಗರಿಕತೆಯಭಿವೃದ್ಧಿಗೆ ಹಿಂದೂ ಮತಪದ್ಧತಿಯು ಅಡ್ಡಿಯಾಗಿರುವುದರಿಂದ, ಮತಸಂಬಂಧವಾದ ವಿಶ್ವವಿದ್ಯಾಲಯವು ಪಾಶ್ಚಾತ್ಯ ನಾಗರಿಕತೆಯ ವಿಚಾರದಲ್ಲೂ, ಬ್ರಿಟಿಷ್ ಜನಾಂಗದವರ ಮತ್ತೂ ಬ್ರಿಟಿಷ್ ಸರ್ಕಾರದ ವಿಷಯದಲ್ಲೂ ವಿರುದ್ಧಭಾವವನ್ನು ಹುಟ್ಟಿಸುವುದಲ್ಲದೆ ಅಸಮಾಧಾನವನ್ನೂ, ರಾಜದ್ರೋಹವನ್ನೂ ಉಂಟುಮಾಡುವುದು. ಈ ಕಾರಣಗಳಿಂದ ತಾವು ಕೈಗೊಂಡಿರುವ ಈ ವಿಶ್ವವಿದ್ಯಾಲಯಸ್ಥಾಪನೆಯ ವಿಚಾರದಲ್ಲಿ ನಾನು ನೆರವಾಗತಕ್ಕವನಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ.

ಈ ರೀತಿಯಾಗಿ ಜ॥ ಶಂಕರನ್ನಾಯರವರು ತಮ್ಮುತ್ತರವನ್ನು ವೃತ್ತಪತ್ರಿಕಾದ್ವಾರ ಕೊಟ್ಟುದಕ್ಕಾಗಿ ಬಂಗಾಳಿ, ಅಮೃತಬಜಾರ್ ಮೊದಲಾದ ಹಿಂದೂ ವೃತ್ತಪತ್ರಿಕೆಗಳು ವೆ॥ ನಾಯರ್‌ರವರು ಬ್ರಾಹ್ಮಣರಮೇಲಿನ ದ್ವೇಷದಿಂದ ಈ ರೀತಿಯಾಗಿ ದುರಭಿಪ್ರಾಯಪಟ್ಟಿರುವುದು ಅವರ ಯೋಗ್ಯತೆಗೆ ತಕ್ಕುದಲ್ಲವೆಂದೂ, ಅವರು ಹಿಂದೂಮತಸ್ಥರೇ ಅಲ್ಲವೆಂಬುದಾಗಿ ಹೇಳಬೇಕಾಗುತ್ತದೆಂದೂ, ಹಾಗೆ ಈ ಪ್ರಯತ್ನದಲ್ಲಿ ತಾವು ಭಾಗಿಗಳಾಗಲಿಷ್ಟವಿಲ್ಲದಿದ್ದಲ್ಲಿ ಅನಿಬೆಸೆಂಟಮ್ಮನವರಿಗೆ ಕಾಗದದ ಮುಖೇನ ಗುಪ್ತವಾಗಿ ತಿಳಿಸಬಹುದಾಗಿದ್ದಿತಲ್ಲದೆ, ಈ ರೀತಿಯಾಗಿ ವೃತ್ತಪತ್ರಿಕೆಯಲ್ಲಿ ಬಹಿರಂಗಪಡಿಸಿದುದು ಯುಕ್ತವಾದುದಲ್ಲವೆಂದೂ ನಿಂದಿಸಿರುತ್ತವೆ. ಭರತಖಂಡವು ಪಾಶ್ಚಾತ್ಯರಾಷ್ಟ್ರಗಳಂತೆ ನಾಗರಿಕತೆಯನ್ನು ಹೊಂದಿ ಅಭಿವೃದ್ಧಿಯಾಗಬೇಕಾದರೆ, ಉತ್ತಮ ವರ್ಣದವರಿಂದ ತಿರಸ್ಕರಿಸಲ್ಪಟ್ಟಿರುವ ಕೀಳು ವರ್ಣದವರೆಲ್ಲರೂ ಯಾವ ತಾರತಮ್ಯವೂ ಇಲ್ಲದೆ ವಿದ್ಯಾವಂತರಾಗಿಯೂ, ವಿವೇಕಿಗಳಾಗಿಯೂ, ನಾಗರಿಕರಾಗಿಯೂ ಆಗಬೇಕು. ಆದರೆ ಈಗಿನ ಸ್ಥಿತಿಯಲ್ಲಿ ಅದಕ್ಕವಕಾಶವಿಲ್ಲವು. ಆದುದರಿಂದ ಈಗ ಸಂಕಲ್ಪಿಸಲ್ಪಟ್ಟಿರುವ ಹಿಂದೂ ವಿಶ್ವವಿದ್ಯಾಲಯ ಸ್ಥಾಪನೆಯಿಂದಾದರೂ ಮೇಲ್ಕಂಡ ಕೊರತೆಯು ನಿವಾರಣೆಯಾಗುವಂತೆ ಮಾಡಬೇಕೆಂದು ಜ॥ ನಾಯರ್‌ರವರು ಸೂಚಿಸಿದ್ದರೆ ಚೆನ್ನಾಗಿರುತ್ತಿದ್ದಿತಲ್ಲದೆ, ಆಕ್ಷೇಪಗಳಿಗೂ ಅವಕಾಶವಾಗುತ್ತಿರಲಿಲ್ಲವು.

ಒಳದೇಶದ ವೃತ್ತಾಂತಗಳು.

ಬೆಂಗಳೂರಲ್ಲಿ ಕಳೆದ ಬುಧವಾರ ರಾತ್ರಿ ೧ ಅಂಗುಲ ೯ ಸೆಂಟು ಮಳೆಯಾಯಿತು.

ಬೆಂಗಳೂರ ಸಿಟಿ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮ॥ ನಾಡಿಗ ಸುಬ್ಬರಾಯರ ಉದ್ಯೋಗದವಧಿಯು ೧೯೧೨ ನೇಯ ಜೂನ್ ತಿಂಗಳ ಕಡೆಯ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರ್ ಟಿ. ವಿ. ಆರ್ಮುಗಂ ಮೊದಲಿಯಾರರು ಕಳೆದ ಬುಧವಾರ ರಾಜಧಾನಿಗೆ ಬಂದು ಕರ್ನಲ್ ದೇಶರಾಜ ಅರಸಿನವರ ದ್ವಿತೀಯ ಕುಮಾರಿಯವರ ದೇಹಾರೋಗ್ಯಸ್ಥಿತಿಯನ್ನು ನೋಡಿಕೊಂಡು ತಾ॥ ೨೩ ರ ಬೆಳಿಗ್ಗೆ ಹಿಂತಿರುಗಿ ಬೆಂಗಳೂರಿಗೆ ಹೋದರು.

ಅರಮನೆಯ ಕರ್ನಾಟಕ ಬ್ಯಾಂಡಿನವರು ಬೊಂಬಾಯಿ ಪ್ರದರ್ಶನಾಲಯದಲ್ಲಿ ವಾದ್ಯವನ್ನು ಮಾಡುವುದಕ್ಕಾಗಿ ಕಳೆದ ತಾ॥ ೨೩ ರಲ್ಲಿ ಬೊಂಬಾಯಿಗೆ ಕಳುಹಲ್ಪಟ್ಟರು ಇದಕ್ಕಾಗಿಯೇ ಇವರು ಕೆಲಕಾಲದಿಂದಲೂ ಉತ್ತಮವಾದ ರಾಗಗಳನ್ನು ಅಭ್ಯಾಸಮಾಡಿರುವರು

ರಾಜಧಾನಿಯ ಮ॥ ಪುರುಷೋತ್ತಮಾನಂದಗಿರಿ ಗೋಸಾಯಿಯವರು ಲೈಸೆನ್ಸು ಇಲ್ಲದೆ ಬಂದೂಕನ್ನು ಇಟ್ಟುಕೊಂಡಿದ್ದರೆಂಬುದರಮೇಲೆ, ಪೋಲೀಸರು ಅವರನ್ನು ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರೆಂದೂ ಈಗ ಅವರು ೫೦೦ ರೂ. ಗಳ ಹೊಣೆಯಮೇಲೆ ಬಿಡಲ್ಪಟ್ಟಿರುವರೆಂದೂ ಕೇಳುತ್ತೇವೆ. ಮ॥ ಗೋಸಾಯಿಯವರು ಒಳ್ಳೇ ವಿದ್ಯಾವಂತರಾಗಿಯೂ, ನ್ಯಾಯವನ್ನು ತಿಳಿದವರಾಗಿಯೂ ಇದ್ದು ಈ ರೀತಿ ಸರ್ಕಾರದಪ್ಪಣೆಯನ್ನು ಸಕಾಲದಲ್ಲಿ ಪಡೆಯಲು ಆಲಸ್ಯಮಾಡಿದುದಕ್ಕಾಗಿ ಚಿಂತಿಸುತ್ತೇವೆ.

ಕೃಷ್ಣರಾಜಪೇಟೆ ತಾ॥ ಅಮಲ್ದಾರರಾದ ಮ॥ ಧರ್ಮರಾಯರು ಕೆಲ ದಿನಗಳ ಕೆಳಗೆ ಗ್ರಾಮಗಳ ಮೇಲೆ ಸಂಚಾರಹೊರಟಿದ್ದಾಗ್ಗೆ, ಯಾರೋ ಕಳ್ಳರು ಅವರ ಮನೆಗೆನುಗ್ಗಿ ೨೦೦೦ ರೂ. ಬೆಲೆಬಾಳುವ ಆಭರಣ ವಸ್ತ್ರಾದಿಗಳನ್ನು ಅಪಹರಿಸಿಕೊಂಡು ಹೋಗಿದ್ದರು. ಈಗ ಆ ಕಳ್ಳರಲ್ಲಿ ಕೆಲರು ಕೆಲ ಪದಾರ್ಥಗಳ ಸಮೇತ ಹಿಡಿಯಲ್ಪಟ್ಟಿರುವುದಾಗಿ ತಿಳಿಯಬರುತ್ತದೆ. ಮ॥ ಧರ್ಮರಾಯರು ಶ್ರೀಮದ್ಯುವರಾಜರ ವಿವಾಹ ಕಾಲದಲ್ಲಿ ರಾಜಧಾನಿಗೆ ಬಂದು ಶ್ರದ್ಧೆಯಿಂದ ಕೆಲಸವನ್ನು ನಿರ್ವಹಿಸಿದುದರ ಜ್ಞಾಪಕಾರ್ಥವಾಗಿ ಶ್ರೀಮನ್ಮಹಾರಾಜರವರಿಂದ ಬಹುಮಾನಿಸಲ್ಪಟ್ಟಿದ್ದ ಗಡಿಯಾರದ ಭಂಗಾರದ ಸರಪಳಿಯು ಸಹ ಅಪಹರಿಸಲ್ಪಟ್ಟಿರುವುದು.

ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ದಿಲ್ಲಿಯ ದರ್ಬಾರಿಗೆ ಹೊರಡಲು ಆಮಂತ್ರಣವನ್ನು ಕೊಡಲ್ಪಟ್ಟಿರುವವರಲ್ಲಿ ಸಿರದಾರ್ ಎಂ. ಕಾಂತರಾಜ ಅರಸಿನವರು, ಮ॥ ಟಿ ಬಸವರಾಜ ಅರಸಿನವರು, ಮ ಸಿ. ಶ್ರೀನಿವಾಸಯ್ಯಂಗಾರರು ಮತ್ತೂ ರಾ॥ ಬ॥ ಎ. ರಂಗಸ್ವಾಮಯ್ಯಂಗಾರರು ಅನಿವಾರ್ಯದೆಸೆಯಿಂದ ಹೊರಡುವವರಾಗಲ್ಲವೆಂದು ಹಿಂದೆ ತಿಳಿಸಿದ್ದೇವಷ್ಟೆ. ಈಗ ಮ॥ ಚಿಕ್ಕೇ ಅರಸಿನವರೂ ಅನನುಕೂಲದೆಸೆಯಿಂದ ಹೊರಡುವುದಿಲ್ಲವಾಗಿ ಕೇಳುತ್ತೇವೆ. ಲೆ॥ ಕೌನ್ಸಿಲ್ ಮೆಂಬರರಾದ ಅಡ್ವೋಕೇಟ್ ಮ॥ ಎಂ. ಸಿ. ರಂಗಯ್ಯಂಗಾರರು ದಿಲ್ಲಿಯ ದರ್ಬಾರಿಗೆ ಬರಲು ಶ್ರೀಮನ್ಮಹಾರಾಜರವರಿಂದ ಆಮಂತ್ರಣವನ್ನು ಕೊಡಲ್ಪಟ್ಟಿರುವುದಾಗಿ ಅರಿಯುತ್ತೇವೆ.

ಶ್ರೀಮದ್ಯುವರಾಜರು, ಸೆಕ್ರೆಟರಿಯವರು ಇವರೊಡನೆ ಶ್ರೀಮನ್ಮಹಾರಾಜರವರು ನೆನ್ನೆಯ ದಿನ ಬೆಳಿಗ್ಗೆ ೭॥ ಘಂಟೆಯ ಸಮಯದಲ್ಲಿ ಮೋಟಾರುಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿದರು. ಮರ್ಯಾದಾರ್ಥವಾಗಿ ೨೧ ಗುಂಡುಗಳು ಹಾರಿಸಲ್ಪಟ್ಟುವು. ಅದೇ ರಾತ್ರಿ ಮಹಾರಾಜಾ [illegible]ಯವರೂ, ಮಹಾರಾಣಿಯವರೂ, ರಾಜಕು[illegible]ರುಗಳೂ ಹೆಚ್ಚುಗಟ್ಟಲೆಯ ಮೇಲ್‌ಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ಮಾತೃಶ್ರೀಯವರ ಮರ್ಯಾದಾರ್ಥವಾಗಿ ಈ ಬೆಳಿಗ್ಗೆ ೧೯ ಗುಂಡು ಹಾರಿಸಲ್ಪಟ್ಟುವು. ಈ ದಿವಸ ಬೆಂಗಳೂರಲಿದ್ದು ನಾಳೆಯ ದಿನ ಎಲ್ಲರೂ ಒಟ್ಟಿಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡುವರು.

ರಾಜಧಾನಿಯಲ್ಲಿ ಕಳೆದ ಸೋಮವಾರದಿಂದ ಗುರುವಾರದ ಸಾಯಂಕಾಲದವರೆಗೂ ಒಂದೇ ಸಮವಾಗಿ ಮೋಡವು ಕವಿತುಕೊಂಡು ಸೋನೆಯಾಡುತ್ತಿದ್ದು, ಗುರುವಾರ ರಾತ್ರಿ ೨ ಅಂಗುಲ ೧೨ ಸೆಂಟು ಮಳೆಯಾಯಿತ್ತಲ್ಲದೆ, ಶುಕ್ರವಾರರಾತ್ರಿಯೂ ಕೊಂಚಮಳೆಯು ಬಂದಿತು. ಈ ಮಳೆಯು ಸಂಸ್ಥಾನದೆಲ್ಲಕಡೆಯೂ ಆಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಇಷ್ಟಾದರೂ ಬತ್ತದ ಬೆಲೆಯು ಮಾತ್ರ ಇಳಿಯದೆ ಪಲ್ಲಕ್ಕೆ ೧೦ ರೂ. ಇಂದ ೧೨ ರೂ. ವರೆಗಿರುತ್ತದೆ. ಬತ್ತವು ರೈಲುಬಂಡಿಗಳಲ್ಲಿ ಹೊರಗಡೆಗೆ ಸಾಗಿಹೋಗುತ್ತಿರುವುದರಿಂದ, ಈ ರೀತಿ ಬೆಲೆಯು ಹೆಚ್ಚಿರುವುದಾಗೂಹಿಸಬೇಕಾಗಿದೆ. ಪ್ಲೇಗುರೋಗವು ಇನ್ನೂ ಶಾಂತವಾಗಿಲ್ಲ. ಕೆಲ ಕಡೆ ಈಗೀಗ ಇಲಿಗಳು ಸಾಯಲಿಕ್ಕಾರಂಭವಾಗಿ, ರೋಗತಗಲಿದವರು ೨೪ ಗಂಟೆಯೊಳಗೆ ಸಾಯುತ್ತಿರುವರೆಂದು ಕೇಳುತ್ತೇವೆ. ಒಂದು ಮನೆಯಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದ ಇಬ್ಬರು ಹುಡುಗರಿಗೆ ಮಾತ್ರ ರೋಗವು ತಗಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳದಿದ್ದವರೆಲ್ಲರೂ ಸುರಕ್ಷಿತರಾಗಿರುವರೆಂದು ಕೇಳಿ ಆಶ್ಚರ್ಯಪಡುತ್ತೇವೆ. ಇದರ ಕಾರಣವನ್ನು ಆರೋಗ್ಯಶಾಖೆಯವರೇ ತಿಳಿಸಬೇಕಾಗಿದೆ. ಇತರ ರೋಗಾದಿಗಳೇನೂ ಇಲ್ಲ.

ಶ್ರೀಮನ್ಮಹಾರಾಜರವರು, ಮತ್ತೂ ಯುವರಾಜರವರು ಕಳೆದ ಸೋಮವಾರ ಬೆಳಿಗ್ಗೆ ೮॥.೯ ಘಂಟೆಯ ಸಮಯದಲ್ಲಿ, ಮೋಟಾರುಬಂಡಿಯಲ್ಲಿ ತಲಕಾಡಿಗೆ ದಯಮಾಡಿಸಿ ಅಲ್ಲಿ ನದಿಯಲ್ಲಿ ಸ್ನಾನವನ್ನು ಮಾಡಿ ಪಾದಚಾರಿಗಳಾಗಿಯೆ ಹೊರಟು ವೈದ್ಯೇಶ್ವರ ಮೊದಲಾದ ದೇವಾಲಯಗಳ ದರ್ಶನವನ್ನು ಮಾಡಿಕೊಂಡು ಮುಡುಕತೊರೆಗೆ ಬಂದು, ಅಲ್ಲಿ ಮಲ್ಲಿಕಾರ್ಜುನೇಶ್ವರನ ದರ್ಶನಾನಂತರ ಊಟ ಉಪಚಾರಾದಿಗಳನ್ನು ಪೂರೈಸಿಕೊಂಡು ಸಾಯಂಕಾಲ ೪ ಘಂಟೆಯ ಮೇಲೆ ಮೋಟಾರುಬಂಡಿಯಲ್ಲಿ ಹೊರಟು ರಾತ್ರೆ ೯ ಘಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು. ಈ ವೇಳೆ ರಾಜಧಾನಿ ಮೊದಲಾದ ಕಡೆಗಳಿಂದ ಬಂದಿದ್ದ ಜನರ ಸಂಖ್ಯೆಯು ೩೦೦೦೦ರದ ಮೇಲೆಯೇ ಆಗಬಹುದೆಂದು ತೋರುತ್ತದೆ. ತಲಕಾಡು ಬಹಳ ಚಿಕ್ಕ ಗ್ರಾಮವಾದುದರಿಂದ, ಮುಕ್ಕಾಲು ಮೂರುವೀಸಪಾಲು ಜನರು ತಂತಮ್ಮ ಬಂಡಿಗಳ ಕೆಳಗೂ, ಮಳಲಿನಮೇಲೂ ಇಳಿದುಕೊಂಡಿದ್ದರು. ಚೀ॥ ಕ॥ ಮ॥ ಕಾಂತರಾಜಅರಸಿನವರು, ಅ॥ ಕ॥ ಮ॥ ರಾಮನಾಥರವರು ಅ॥ ಕ॥ ಮ॥ ಎನ್. ಸುಬ್ಬರಾಯರು ಪೊ॥ ಸೂಪರಿಂಟೆಂಡೆಂಟ್ ಮ॥ ರಾಜೋಜಿರಾಯರು ಟಿ॥ ನರಸೀಪುರ ತಾ॥ ಅಮಲ್ದಾರ್ ಮ॥ ವೆಂಕಟರಮಣಶಾಸ್ತ್ರಿಯವರು ಬಂದಿದ್ದ ಜನರ ಗದ್ದಲಕ್ಕಾಸ್ಪದವಿಲ್ಲದಂತೆ ತಕ್ಕೇರ್ಪಾಟನ್ನು ಮಾಡಿದ್ದರು. ಮ॥ ರಾಮನಾಥರವರ ಒಳ್ಳೆಯ ಕುದುರೆಯು ಅಕಸ್ಮಾತಾಗಿ ಸತ್ತುಹೋಯಿತೆಂದು ಕೇಳುತ್ತೇವೆ.

ವರ್ತಮಾನ ಸಂಗ್ರಹವು.

ಅಲಿಘರದಲ್ಲಿ ಮಹಮ್ಮದೀಯರ ಸರ್ವ ಕಲಾಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಏರ್ಪಟ್ಟಿರುವ ಫಂಡಿಗೆ ಹೈದರಾಬಾದಿನ ನೈಜಾಂರವರು ೪ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರಂತೆ.

ದಿವಾನರು, ಚೀಫ್ ಸೆಕ್ರೆಟರಿ ಮತ್ತೂ ದೊಡ್ಡ ಪರಿವಾರದೊಡನೆ ಟ್ರಾವನಕೂರಿನ ಮಹಾರಾಜರವರು ಕಳೆದ ತಾ॥ ೨೪ ರ ರಾತ್ರಿ ಮದ್ರಾಸಿನಿಂದ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡಿದರು.

ದಿಲ್ಲಿಯಲ್ಲೇರ್ಪಡಿಸಲ್ಪಟ್ಟಿರುವ ಪಾಲನಪುರ ಮಹಾರಾಜರ ಬಿಡಾರದಲ್ಲಿ ಊಟಮಾಡುವ ಡೇರಾಕ್ಕೂ, ಹೈದರಾಬಾದಿನ ರೆಸಿಡೆಂಟರವರ ಬಿಡಾರದಲ್ಲಿ ಒಂದು ಸಣ್ಣ ಡೇರಾಕ್ಕೂ ಬೆಂಕಿಯು ಬಿದ್ದು ಅವು ಸುಟ್ಟುಹೋದುವು. ನೀರನ್ನು ಹುಯಿದು ಬೆಂಕಿಯನ್ನು ಆರಿಸುವ ೪ ಉಗಿಯಂತ್ರಗಳನ್ನು ದರ್ಬಾರಕಮಿಟಿಯವರು ಹೋಲ್ಕರ ಮಹಾರಾಜರಿಂದ ತರಿಸಿಕೊಂಡಿರುವರು.

ಸಯ್ಯಾಮಿನಲ್ಲಿ ಗುಡ್ಡದವಾಸಿಗಳಾದ ೫೦ ಜನ ದುಷ್ಟರು ಒಬ್ಬ ಮ್ಯಾಜಿಸ್ಟ್ರೇಟನನ್ನು ಕೊಂದುಹಾಕಿ ಒಂದು ಹಳ್ಳಿಗೆ ಬೆಂಕಿಯನ್ನು ಹೊತ್ತಿಸಿ ಅನೇಕ ಮನೆಗಳನ್ನು ಸುಟ್ಟುಬಿಟ್ಟು ಪುನಃ ಗುಡ್ಡಗಳಿಗೆ ಹೋಗಿ ಸೇರಿಕೊಂಡಿದ್ದರು. ಪೊಲೀಸರು ಪ್ರಯತ್ನಪಟ್ಟು ಅವರಲ್ಲಿ ೩೦ ಜನರನ್ನು ಹಿಡಿದಿರುತ್ತಾರೆ. ಮತ್ತೂ ಆ ಜನರು ಬ್ರಿಟಿಷರಿಗೆ ಸೇರಿದ ಸ್ಥಳಗಳಿಗೆ ನುಗ್ಗಿ ದಾಂಧಲೆಯನ್ನು ಮಾಡದಹಾಗೆ ಸೈನಿಕರು ಎಚ್ಚರದಿಂದ ಕಾಯುತ್ತಿದ್ದಾರೆ.

ಕಳೆದ ತಾ॥ ೧೮ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲಿ ಒಟ್ಟು [illegible] ಜನರಿಗೆ ಪ್ಲೇಗುರೋಗವು ತಗಲಿ [illegible] ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ೩೩೦; ಮದ್ರಾಸಾಧಿಪತ್ಯದಲ್ಲಿ ೬೯; ಬಂಗಾಳಾದಲ್ಲಿ ೧೩೦; ಸಂಯುಕ್ತ ಪ್ರಾಂತಗಳಲ್ಲಿ ೩೩೩; ಪಂಜಾಬಿನಲ್ಲಿ ೧೦೦; ಬರ್ಮಾದಲ್ಲಿ ೩; ಮಧ್ಯಪ್ರಾಂತಗಳಲ್ಲಿ ೮೪೩; ಹೈದರಾಬಾದು ಸೀಮೆಯಲ್ಲಿ ೧೯೯; ಮೈಸೂರ್ ಸೀಮೆಯಲ್ಲಿ ೮೯; ಮಧ್ಯಹಿಂದುಸ್ಥಾನದಲ್ಲಿ ೮೯ ರಜಪುಟಾಣದಲ್ಲಿ ೩೭; ಈಪ್ರಕಾರ ಸತ್ತಿರುತ್ತಾರೆ.

ಕಳೆದ ಬುಧವಾರ ಮದ್ರಾಸಿನ ಗವರ್ನರು ಅಲ್ಲಿಯ ಕಾರಾಗೃಹಕ್ಕೆ ದಯಮಾಡಿಸಿ ಬಂದಿಗಳನ್ನು ಪರಾಮರಿಸಿಕೊಂಡು ಬರುವಾಗ್ಗೆ ಕಾರಾಗೃಹಕ್ಕೆ ಹೊಸದಾಗಿ ಸೇರಿಸಲ್ಪಟ್ಟಿರುವ ಬಂದಿಗಳ ದೇಹಧಾರಾಢ್ಯಸ್ಥಿತಿಯು ಮೊದಲಿಂದಲೂ ಇರುವ ಬಂದಿಗಳ ದೇಹಧಾರಾಢ್ಯಸ್ಥಿತಿಗಿಂತ ಬಹು ಕಡಿಮೆಯಾಗಿರುವುದನ್ನೋಡಿದರೆ, ಕಾರಾಗೃಹದ ಆಡಳಿತವು ಎಷ್ಟು ಸಮರ್ಪಕವಾಗ ನಡೆಯುತ್ತಿದೆಂಬುದು ವ್ಯಕ್ತವಾಗುತ್ತದೆ. ಇಂತಹ ವ್ಯತ್ಯಾಸವನ್ನು ನಾನು ಯೂರೋಪಿನಲ್ಲಾಗಲಿ, ಅಥವಾ ಆಸ್ಟ್ರೇಲಿಯಾದಲ್ಲಾಗಲಿ ನೋಡಿರಲಿಲ್ಲವು; ಎಂದು ಅಲ್ಲಿಯ ವಿಜಿಟರ್ಸ್ ಪುಸ್ತಕದಲ್ಲಿ ಬರೆದಿರುತ್ತಾರೆ.

ದಿಲ್ಲಿಯಪಟ್ಟಣದಿಂದ ಹೊರಟ ರೈಲುಬಂಡಿಯ ೧ನೆಯ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಯೂರೋಪ್ಯನು ತಾನು ತೊಟ್ಟಿದ್ದ ಕೋಟನ್ನು ತೆಗೆದು ಗೂಟಕ್ಕೆ ನೇತುಹಾಕಿ ಮಲಗಿಕೊಂಡಿದ್ದು ಬೆಳಿಗ್ಗೆ ಎಚ್ಚೆತ್ತು ಕೋಟಿನಲ್ಲಿದ್ದ ಭಂಗಾರದ ಗಡಿಯಾರವೂ, ಸರಪಳಿಯೂ ಮಾಯವಾಗಿರುವುದನ್ನು ಕಂಡು ದಿಗಿಲುಬಿದ್ದು, ಕೆಳಗಡೆ ಇಟ್ಟಿದ್ದ ಪೆಟ್ಟಿಗೆಯನ್ನು ತೆಗೆದು ಹುಡುಕುವಲ್ಲಿ, ಕೆಲ ಚೆಕ್ಕುಗಳು ಸಹ ಇಲ್ಲದಿರುವುದು ಗೊತ್ತಾಯಿತು. ಆ ಬಂಡಿಯಲ್ಲಿ ಆತನ ವಿನಹ ಮತ್ತಾವಪ್ರಯಾಣಿಕನೂ ಇರಲಿಲ್ಲವಾದುದರಿಂದ ಕಳುವನ್ನು ಮಾಡಿದವನಾರೆಂಬುದು ಗೊತ್ತುಹತ್ತಲಿಲ್ಲವು.

ಕಳೆದ ತಾ॥ ೨೪ ರಲ್ಲಿ ಬೊಂಬಾಯಿನಲ್ಲಿ ಒಬ್ಬ ಮಹಮ್ಮದೀಯನು ಬಾಡಿಗೆಬಂಡಿಯವನನ್ನು ಹೊಡೆದುದಕ್ಕಾಗಿ ಪೋಲೀಸು ಇನ್ಸ್‌ಪೆಕ್ಟರಿಂದ ಹಿಡಿಯಲ್ಪಟ್ಟು ಪೊಲೀಸುಠಾಣಕ್ಕೆ ಕರತರಲ್ಪಡುತ್ತಿರುವಾಗ್ಗೆ, ತನ್ನ ಜೇಬಿನಿಂದ ೧೦ ರೂಪಾಯಿನ ನೋಟನ್ನು ತೆಗೆದು ಇನ್ಸ್‌ಪೆಕ್ಟರ ಕೋಟಿನ ಜೇಬಿಗೆ ಹಾಕಲು ಪ್ರಯತ್ನಪಟ್ಟ, ಆ ಕೋಟಿಗೆ ಜೇಬು ಇರಲಿಲ್ಲವಾಗಿ ಇನ್ಸ್‌ಪೆಕ್ಟರ ಕೋಟಿನ ನೆರಿಗೆಯಲ್ಲಿ ಮಡಗಿದನು. ಇನ್ಸ್‌ಪೆಕ್ಟರು ಠಾಣಕ್ಕೆ ಬಂದಮೇಲೆ ನಡೆದ ಸಂದರ್ಭವನ್ನು ಪೊ॥ ಸೂಪರಿಂಟೆಂಡೆಂಟರಿಗೆ ತಿಳುಹಿ ಅವನನ್ನು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿರುವಲ್ಲಿ ಅವನಿಗೆ ೫೦೦ ರೂ. ದಂಡವು ವಿಧಿಸಲ್ಪಟ್ಟಿತು.

ಸತಾರಾ ಮತ್ತೂ ಪೂನಾ ಡಿಸ್ಟ್ರಿಕ್ಟುಗಳಲ್ಲಿ ಸೇರಿಕೊಂಡು ಬರತಖಂಡದ ಅನೇಕ ಕಡೆಯ ರೈಲ್ವೆಯ ಬಂಡಿಗಳಲ್ಲಿ ವಿಶೇಷವಾಗಿ ಕಳವುಮಾಡುತ್ತಿದ್ದ ೨೨ ಜನರ ಒಂದು ಗುಂಪನ್ನು ಪೊಲೀಸರು ಬಹು ಸಾಹಸದಿಂದ ಹಿಡಿದು ಸೆಶನ್ಸ್ ಜಡ್ಜರ ವಿಚಾರಣೆಗೆ ಗುರಿಮಾಡಿದ್ದರು. ಜಡ್ಜರು ಅವರುಗಳಲ್ಲಿ ೧೩ ಜನರಿಗೆ ಯಾವಜ್ಜೀವಕಾರಾಗೃಹವಾಸಶಿಕ್ಷೆಯನ್ನು ವಿಧಿಸಿ, ಅವರ ಆಸ್ತಿಯೆಲ್ಲವನ್ನೂ ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕದೆಂದು ಅಪ್ಪಣೆಮಾಡಿ ಉಳಿದ ಐವರಲ್ಲಿ ಒಬ್ಬನನ್ನು ದೋಷಮುಕ್ತನನ್ನಾಗಿಮಾಡಿ, ಇಬ್ಬರಿಗೆ ೭ ವರ್ಷ ಮತ್ತಿಬ್ಬರಿಗೆ ೨ ವರ್ಷ ಕಾರಾಗೃಹವಾಸ ಶಿಕ್ಷೆಯನ್ನೂ ೧೫೦ ರಿಂದ ೪೦೦ ರೂ. ವರೆಗೆ ದಂಡವನ್ನೂ ವಿಧಿಸಿದರು.

ಕಳೆದ ತಾ॥ ೨೦ ರಲ್ಲಿ ಪೊನ್ನಾಮಲಿಯ ವಾಸಸ್ಥಾನದ ಒಬ್ಬ ಸೆಟ್ಟಿಯು ಎತ್ತಿನ ಬಂಡಿಯನ್ನು ತೆಗಿಸಿಕೊಂಡು ಆವಡಿ ಸ್ಟೇಷನ್ನಿಗೆ ಹೋಗಿ, ಅಲ್ಲಿಗೆ ಮದ್ರಾಸಿನಿಂದ ಮೇಲು ಬಂಡಿಯಲ್ಲಿ ಪ್ರಯಾಣಮಾಡಿ ಬಂದಿದ್ದ ತನ್ನ ಹೆಂಡತಿ ಮಕ್ಕಳನ್ನು ಎತ್ತಿನ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಬರುತ್ತಿರುವಾಗ್ಗೆ ಪಾರ್ಥಪೇಟೆ ಎಂಬ ಗ್ರಾಮದ ಹತ್ತಿರ ಕೆಲ ಕಳ್ಳರು ಅವರ ಬಂಡಿಯನ್ನು ಹಿಡಿದುನಿಲ್ಲಿಸಿ ಒಳಗಿದ್ದ ಸೆಟ್ಟಿಗೆ ಪೂರಾ ಪೆಟ್ಟನ್ನು ಹಾಕಿ ಪ್ರಾಣಾಪಾಯವನ್ನುಂಟುಮಾಡಿ, ಇಬ್ಬರು ಹೆಂಗುಸರನ್ನು ಒಂದು ಕಟ್ಟೆಯ ಬಳಿಗೆಳೆದುಕೊಂಡುಹೋಗಿ ಅವರ ಮೈಮೇಲಿದ್ದ ಪ್ರಾಯಶಃ ೧೦೦೦ ರೂ. ಬೆಲೆಬಾಳುವ ಅಭರಣಗಳನ್ನು ಅಪಹರಿಸಿಕೊಂಡು ಹೋದರು.

ಪದಭ್ರಷ್ಟನಾದ ತುರ್ಕಿಯಸುಲ್ತಾನ್ ಅಬ್ದುಲ್ ಹಾಮಿದನಿಗೆ ಸೇರಿದ್ದ ಅಭರಣಗಳೆಲ್ಲವೂ ತುರ್ಕಿಯ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿರುವುದಷ್ಟೆ. ಈಗ ಆ ಅಭರಣಗಳೆಲ್ಲವೂ ಪ್ಯಾರಿಸ್ ಪಟ್ಟಣದಲ್ಲಿ ಈ ವಾರದಲ್ಲಿ ಹರಾಜುಮಾಡಲ್ಪಟ್ಟು, ಅದರಿಂದುತ್ಪನ್ನವಾಗುವಹಣವು ಯುದ್ಧನಾವೆಗಳನ್ನು ಮತ್ತೂ ಯುದ್ಧಸಾಮಗ್ರಿಗಳನ್ನೂ ಕೊಂಡುಕೊಳ್ಳಲುಪಯೋಗಿಸಲ್ಪಡುವುದು. ಫ್ರಾನ್ಸಿನಲ್ಲಿ ಪ್ರಸಿದ್ಧಕವಿಯಾದ ಜೀರಲೆರ್ವಿ ಎಂಬಾತನು ತುರ್ಕಿಯರಾಜಧಾನಿಯಾದಕಾನಸ್ಟಾಂಟಿನೋಪಲಿಗೆ [illegible] ಹಿಂದೆ ತಾನು ಬಂದಿದ್ದಾಗ್ಗೆ, ಅಬ್ದುಲ್ ಹಾಮಿದನಿಂದ [illegible] ನಗಗಳ ಬರೀದಿ ಪುಸ್ತಕಕ್ಕೆ ಪೀಠಿಕೆಯನ್ನು ಬರೆದುಕೊಡಬೇಕೆಂದು ಹೇಳಿ ಸರ್ಕಾರಿಯ [illegible] ಬ್ಯಾಂಕಿನ ಒನೆಮಾಳಿಗೆಯಲ್ಲಿ ಭದ್ರವಾಗಿಡಲ್ಪಟ್ಟಿದ್ದ ನಗಗಳನ್ನು ಮುಂದೆ ನೆಲದಮೇಲೆ ಹರಡಿದರು. ಆ ಅಭರಣಗಳ ಬೆಲೆಯು ೩೦ ಲಕ್ಷ ರೂಪಾಯಿಗಳಿ[illegible].

ಹೈದರಾಬಾದು ಸಂಸ್ಥಾನದ ನೈಜಾಂರವರು ಕಳೆದ ತಾ॥ ೨೩ ರ ಸಾಯಂಕಾಲ ಕೋಠಿ ಅರಮನೆಯಿಂದ ರಥಾರೂಢರಾಗಿ ಸಕಲ ಮರ್ಯಾದೆಯೊಡನೆ ಧ್ವಜ ಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ಅಲಂಕೃತವಾಗಿದ್ದ ಮತ್ತೂ ಪೋಲೀಸರೂ, ಸೈನಿಕರೂ ಕಾವಲಿದ್ದ ಮಾರ್ಗದಿಂದ ರೈಲ್ವೆಸ್ಟೇಷನ್ನಿಗೆ ಬಂದು ಮಂತ್ರಿಗಳಾದ ಮಹಾರಾಜ ಸರ್ ಕೃಷ್ಣಪ್ರಸಾದರವರು, ಎಡಿಕಾಂಗರಾದ ಸರ್ ಅಫ್ಸರ್ ಉಲ್-ಮುಲ್ಕ್‌ರವರು, ಪ್ರೈವೆಟ್ ಸೆಕ್ರೆಟರಿ ಮೌಲ್ವಿ ಅಹಮ್ಮದ್‌ಹುಸೇನ್‌ರವರು, ಎಡಿಕಾಂಗ್‌ನವಾಬ್ ಸಿದ್ದಿಕ್‌ಜಂಗ್‌ರವರು ಮೊದಲಾದವರೊಡನೆ ಹೆಚ್ಚುಗಟ್ಟಲೆಯಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡಿದರು. ಸ್ಟೇಷನ್ನಿನಲ್ಲಿ ಆ॥ ರೆಸಿಡೆಂಟರು ಆಕ್ಟಿಂಗ್‌ಮಂತ್ರಿಗಳು ಮೊದಲಾದ ಅಧಿಕಾರಿಗಳು ನೈಜಾಂರವರನ್ನು ಇದಿರ್ಗೊಂಡು ಮರ್ಯಾದಿಸಿದರು. ಸೇನೆಯು ಮರ್ಯಾದೆಯನಿತ್ತಿತು. ಬಂಡಿಯು ಹೊರಟಾಗ ೨೧ ಗುಂಡುಗಳು ಹಾರಿಸಲ್ಪಟ್ಟುವು.

ಫ್ರಾನ್ಸಿನಲ್ಲಿ ಪೂರ್ಣಪ್ರವಾಹದಿಂದ ಕೂಡಿದ ಒಂದು ನದಿಯ ಸೇತುವೆಯಮೇಲೆ ಹೊಗೆಯಬಂಡಿಯು ಬರುತ್ತಿರುವಾಗ್ಗೆ, ಸೇತುವೆಯು ಕೊಚ್ಚಿಹೋಗಿ ೩ ಬಂಡಿಗಳ ವಿನಹ ಉಳಿದ ಬಂಡಿಗಳೆಲ್ಲವೂ ನೀರಿನಲ್ಲಿ ಮುಳುಗಿದುವು. ಒಳಗಿದ್ದ ಪ್ರಯಾಣಿಕರಲ್ಲಿ ಕೆಲವರು ಒಂದು ಮರದರಂಬೆಗೆ ನೇತುಹಾಕಿಕೊಂಡರು ಮತ್ತೆ ಕೆಲರು ಈಜಿಕೊಂಡು ಹೋಗಯತ್ನಿಸಿದರು. ಹೊಳೆಯುದಡದಲ್ಲಿದ್ದ ದೋಣಿಗಳೆಲ್ಲವೂ ಕೊಚ್ಚಿಹೋಗಿದ್ದುದರಿಂದ, ನೀರಿನಲ್ಲಿ ಮುಳುಗಿಹೋಗುತ್ತಿದ್ದ ಜನರನ್ನು ರಕ್ಷಿಸಲಾಗಲಿಲ್ಲವು. ಈ ಅನಾಹುತದಿಂದ ೨೦ ಜನರು ನೀರಿನಲ್ಲಿಮುಳುಗಿ ಸತ್ತಿರುವುದಾಗಿ ತಿಳಿಯಬಂದಿದೆ. ಒಬ್ಬ ಮನುಷ್ಯನು ೨ ಘಂಟೆಯಕಾಲ ಮರದರಂಬೆಗೆ ನೇತುಹಾಕಿಕೊಂಡಿದ್ದನು. ಮತ್ತೂ ೧೦ ಜನರು ಮರದ ಮೇಲುಭಾಗದಲ್ಲಿ ಕುಳಿತಿದ್ದರು. ಒಂದು ಬಂಡಿಯು ಪ್ರವಾಹದಲ್ಲಿ ಸಿಕ್ಕಿ ಸುತ್ತಿಕೊಂಡು ಹೋಗುತ್ತಿರುವಾಗ್ಗೆ, ಅದರೊಳಗಿದ್ದ ಜನರನ್ನು ರಕ್ಷಿಸುವ ಪ್ರಯತ್ನದಲ್ಲಿ ಒಬ್ಬನು ಮುಳುಗಿ ಸತ್ತುಹೋದನು.

ಯಂತ್ರಗಳಿಗೆ ನೀರನ್ನೂ, ಸೌದೆಯನ್ನೂ, ಮೋಟಾರುಬಂಡಿಗಳಿಗೆ ಸೀಮೆಯೆಣ್ಣೆಯನ್ನೂ ಹಾಕಿ ಆವಿಯನ್ನುಂಟುಮಾಡಬೇಕಾಗಿರುವುದಷ್ಟೆ. ಆದರೆ ಈಗ ಬಿಸಲಿನಮೂಲದಿಂದಲೇ ಆವಿಯುಂಟಾಗುವಂತೆ ಒಂದುಸಾಧನವು ಅಮೇರಿಕಾದಲ್ಲಿ ಕಂಡು ಹಿಡಿಯಲ್ಪಟ್ಟಿರುತ್ತದೆ. ಅದು ಹೇಗೆಂದರೆ— ೪ ಮೊಳೆಯುದ್ದ ೧೨ ಅಥವಾ ಇನ್ನೂ ಹೆಚ್ಚಾದ ಕಬ್ಬಿಣದ ಪೆಟ್ಟಿಗೆಗಳೊಳಗಡೆ ಜೇನುಹುಳುವಿನ ಗೂಡಿನಂತೆಮಾಡಿ ನೀರನ್ನು ತುಂಬಿ ಮೇಲ್ಗಡೆ ಗಾಜುಗಳಿಂದ ಮುಚ್ಚಲ್ಪಟ್ಟಿದೆ. ಬಿಸಲಿನಝಳವು ಆ ಗಾಜುಗಳಮೂಲಕ ಒಳಗಡೆ ಪ್ರವೇಶಿಸಿ ನೀರಿಗೆತಗಲುವುದು. ಇದರಿಂದ ನೀರು ಕಾದು ಆವಿಯುಂಟಾಗುವುದು. ಹಾಗುಂಟಾದಆವಿಯು ಒಂದು ಕೊಳಾಯಿನ ಮೂಲಕ ಹೊರಗೆಬರುವುದು. ಅದರ ಸಹಾಯದಿಂದ ಹೊಲಗಳಲ್ಲಿ ಅಥವಾ ಗದ್ದೆಗಳಲ್ಲಿ ನೀರನ್ನೆತ್ತುವ ಮೊದಲಾದ ಕಾರ್ಯಗಳಿಗುಪಯೋಗಿಸಲ್ಪಡುವ ಯಂತ್ರಗಳು ನಡೆಯುವಂತೆ ಮಾಡಲ್ಪಡಬಹುದು. ಈ ಉಪಾಯದಿಂದ ಸೌದೆ ಅಥವಾ ಎಣ್ಣೆಗೆ ಮುಟ್ಟುವ ವೆಚ್ಚವನ್ನು ಮಿಗಿಸಿಕೊಳ್ಳಬಹುದಾಗಿದೆಯಾದುದರಿಂದ, ಈ ನೂತನಯಂತ್ರವು ಎಂತಹ ಬಡರೈತನಿಗೂ ಸುಲಭಸಾಧ್ಯವಾಗಿರುವುದೆಂದು ತೋರುತ್ತದೆ.

ಲಿವರ್‌ಪೂಲಿನಲ್ಲಿ ಒಂದು ಎಣ್ಣೆಯ ಕಾರ್ಯಾಲಯದಲ್ಲಿ ಹಿಂಡಿಯನ್ನು ಅದಮುವ ಯಂತ್ರವು ಬೆಂಕಿಯಿಂದ ಹೊತ್ತಿಕೊಂಡು ಒಡೆದುಹೋಗಿ ಕಟ್ಟಡದ ಮೇಲುಹೊದ್ದಿಕೆಯನ್ನು ಹಾರಿಸಿಕೊಂಡು ಹೋಯಿತು. ಇದರ ರಭಸಕ್ಕೆ ಕಟ್ಟಡವೆಲ್ಲವೂ ಜಜ್ಜರಿಸಿತಲ್ಲದೆ, ಅಲ್ಲಿ ಕೆಲಸಮಾಡುತ್ತಿದ್ದ ೫೦೦ ಜನರು ಭಯದಿಂದ ಭ್ರಾಂತರಾಗಿ ದಿಕ್ಕಾಪಾಲಾಗೋಡಿದರು. ಕಟ್ಟಡಕ್ಕುಪಯೋಗಿಸಿದ್ದ ಕಲ್ಲುಗಳೂ, ಇಟಿಗೆಗಳೂ ಒಡೆದು ನುಚ್ಚುನೂರಾಗಿ ಕೆಲ ಶವಗಳಸಮೇತ ಮೇಲಕ್ಕೆಹಾರಿ ನೆರೆಯ ಪ್ರದೇಶದಲ್ಲಿ ಬಿದ್ದಿದ್ದುವು. ಕಟ್ಟಡದ ಗೋಡೆಗಳುರುಳಿ ಅವುಗಳೊಳಗೆ ಕೆಲಜನರು ಸಿಕ್ಕಿ ಸತ್ತುಹೋದರು. ಅಷ್ಟರಲ್ಲಿ ಬೆಂಕಿಯನ್ನಾರಿಸುವ ಸೈನಿಕರು ಯಂತ್ರವನ್ನು ತೆಗೆದುಕೊಂಡುಬಂದು ಜ್ವಾಲೆಯಮಧ್ಯೆ ಸಿಕ್ಕಿದ್ದ ಜನರನ್ನು ಬಹು ಸಾಹಸದಿಂದ ಹೊರಗೆಸಾಗಿಸಿ, ನೀರನ್ನುಹುಯಿದು ಬೆಂಕಿಯನ್ನು ಆರಿಸಿದರು. ಈ ಅನಾಹುತಕ್ಕೆ ಸಿಕ್ಕಿ ಪೆಟ್ಟನ್ನು ತಿಂದುಕೊಂಡಿರುವವರು ಆಸ್ಪತ್ರೆಗೆ ಸಾಗಿಸಲ್ಪಡುತ್ತಿದ್ದುದು ಯಾವುದೋ ಒಂದು ಉತ್ಸವಹೊರಟಂತೆ ತೋರುತ್ತಿದ್ದಿತು. ಸತ್ತುಹೋದವರನ್ನು ಸ್ಮಶಾನಕ್ಕೆ ಸಾಗಿಸಿದಾಗ ಅಲ್ಲಿ ಅವರ ಬಂಧುಗಳು ಗುರ್ತಿಸಿ ಶವ ಸಂಸ್ಕಾರವನ್ನು ಮಾಡಿದರು. ಪಿಶಾಚವೆಂಬ ನಾಮಕರಣಮಾಡಲ್ಪಟ್ಟಿದ್ದ ಆ ಯಂತ್ರವು ಒಡೆದುಹೋದ ಶಬ್ದವು ಫಿರಂಗಿಯಶಬ್ದಕ್ಕಿಂತ ಅಧಿಕವಾಗಿದ್ದಿತು. ಇದರ ರಭಸಕ್ಕೆ ನೆರೆಯಮನೆಗಳೆಲ್ಲವೂ ನಡುಗಿದುವು. ಈ ಅನಾಹುತದಿಂದ ೩೩ ಜನರು ಸತ್ತು ೮೪ ಜನರು ಪೂರಾ ಪೆಟ್ಟನ್ನು ತಿಂದಿರುವುದಾಗಿ ಗೊತ್ತಾಗಿರುತ್ತದೆ.

೬ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಸಕಲ ವೀರಶೈವ ಮಹಾನೀಯರಿಗೆ ಶ್ರುತಪಡಿಸುವುದೇನಂದರೆ:—

ಈ ವರ್ಷ ಬೆಳಗಾವಿಯಲ್ಲಿ ೬ನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು ಬರುವ ಡಿಸೆಂಬರ್ ತಾ॥ ೨೭, ೨೮, ೨೯ನೆಯ ಬುಧವಾರ, ಗುರುವಾರ, ಶುಕ್ರವಾರಗಳಲ್ಲಿ ಕೂಡಿಸಲು ಗೊತ್ತಾಗಿದೆ.

ಈ ಸಭೆಯ ಅಧ್ಯಕ್ಷ ಮಹಾಶಯರ ಹೆಸರು ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪಟ್ಟಿ ಕಾರ್ಯಕ್ರಮ ಮೊದಲಾದವುಗಳು ಮುಂದಿನ ಸ್ಟಾರ್ ಪತ್ರದಲ್ಲಿ ಪ್ರಸಿದ್ಧಪಡಿಸಲ್ಪಡುವವು.

ಎಸ್. ಬಿ. ವೆಣಸಿನಕಾಯಿ,
ಮಹಾಸಭಾ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್.

ಅಕ್ಕಿಪುರದಲ್ಲಿ ಈಗ ೨ ತಿಂಗಳಲಾಗಯಿತು ಪ್ಲೇಗು ಪ್ರಾರಂಭವಾಗಿ ಪ್ರಜೆಗಳೆಲ್ಲರೂ ಗುಡಿಸಲುಗಳಲ್ಲಿ ವಾಸಮಾಡುತ್ತಾ ಇದ್ದಾರೆ. ಆದರೂ ಕೂಡ ೪-೧೦ ದಿವಸಗಳಲ್ಲಿ ಒಬ್ಬೊಬ್ಬರಿಗೆ ರೋಗ ತಗಲಿ ಮರಣವಾಗುತ್ತಿದೆ. ಈ ಡಿಸ್ಟ್ರಿಕ್ಟಿನ ಶ್ಯಾನಿಟರಿ ಆಫೀಸರರವರಾದ ಮೆ॥ ಸುಬ್ಬರಾಯರವರು ಈ ಊರಿನ ನೆರೆಗ್ರಾಮಗಳಲ್ಲಿ ಇನಾಕ್ಯುಲೇಷನ್ ಮಾಡುತ್ತಲಿದ್ದಾರೆ. ಈ ಊರಿನ ಆಸ್ಪತ್ರೆಯ ಅಸಿಸ್ಟಂಟರವರಾದ ಮೆ॥ ಬಿ. ಸುಬ್ಬರಾಯರವರು ತುಂಬಾ ಶ್ರದ್ಧೆಯನ್ನು ವಹಿಸಿ ಸರ್ವರಿಗೂ ಬುದ್ಧಿವಾದವನ್ನು ಹೇಳಿ ಗುಡಿಸಲುಗಳಿಗೆ ಕಳುಹಿಸುತ್ತಲಿದ್ದಾರೆ. ಇವರ ಉಪಕಾರವು ಚಿರಸ್ಮರಣೀಯವಾಗಿರುತ್ತೆ. ಈ ಊರಲ್ಲಿ ಈಗ ಸುಮಾರು ೬ ತಿಂಗಳಲಾಗಾಯತು ಪೋಸ್ಟ್ ಮಾಸ್ಟರಾಗಿದ್ದ ಮೆ॥ ಎಸ್. ಆರ್. ದೇವಯ್ಯನವರು ಬೇರೆ ಕಡೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರು ದೊಡ್ಡವರು ಸಣ್ಣವರು ಎಂಬ ಭೇದವನ್ನು ಎಣಿಸದೆ ರಜಾ ವಗೈರೆ ದಿವಸಗಳನ್ನು ಗಣನೆ ಮಾಡದೆ ಜನಗಳ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಾ ಇದ್ದರು. ಇಂತಹವರನ್ನು ಅಗಲಿರಲು ನಾವೆಲ್ಲರೂ ಬಹಳ ವ್ಯಸನಾಕ್ರಾಂತರಾಗಿರುತ್ತೇವೆ. ಇವರಿಗಾಗಿ ಈ ದಿನ ಒಂದು ಅಲ್ಪಾಹಾರಕೂಟವು ನೆರಿಸಲ್ಪಟ್ಟಿತ್ತು. ದೇವರು ಇವರಿಗೂ ಇವರ ಕುಟುಂಬಕ್ಕೂ ಆಯುರಾರೋಗ್ಯವನ್ನು ಈಯಲೆಂದು ಹಾರೈಸುತ್ತೇವೆ. ಮಾರಣ್ಣ

ಶ್ರೀ ರೇಣುಕಾಚಾರ್ಯವರ್ಯ ಪ್ರಸೀದ.

ಬೀರೂರು ಶ್ರೀಮಂತ ಪತ್ರಿ ಚೆಂ. ವೀರಪ್ಪಯ್ಯನವರು ಇಲ್ಲಿಗೆ ೨ ತಿಂಗಳ ಮುಂದೆ ತಮ್ಮ ಧರ್ಮಪತ್ನಿಯವರು ಶಿವಸಾಯುಜ್ಯವಂ ಹೊಂದಿದಪ್ರಯುಕ್ತ, ಅವರ ಮಾಸಿಕಗಣಾರಾಧನೆಯ ದಿವಸವಾದ ಕಳೆದ ಕಾರ್ತೀಕ ಬಹುಳ ೮ ಶುಕ್ರವಾರ ಜ್ಞಾಪಕಾರ್ಥವಾಗಿಯೂ, ಮತ್ತು ಅವರಿಗೆ ಬಾಲಕಿಯರಲ್ಲಿದ್ದ ಪ್ರೇಮಾತಿಶಯ ಸೂಚನಾರ್ಥವಾಗಿಯೂ ಇಲ್ಲಿನ ಗೌರ್ನಮೆಂಟುಸ್ಕೂಲಿನಲ್ಲಿ ಸಮಸ್ತ ಬಾಲಕ ಬಾಲಕಿಯರಿಗೆ ಸಕ್ಕರೆ ಮಿಠಾಯಿ ಮೊದಲಾದ ಫಲಾಹಾರಗಳನ್ನು ವಿನಿಯೋಗ ಮಾಡುವುದಲ್ಲದೆ ಆ ದಿನ ಸಾಯಂಕಾಲ ೫ ಘಂಟೆ ಸಮಯದಲ್ಲಿ ಒಂದು ಸಭೆಯನ್ನೇರ್ಪಡಿಸಿದರು. ಆ ಸಭೆಗೆ ದಯಮಾಡಿಸಿದ್ದ ಮ॥ ರಾ॥ ಗಳಾದ ಬೀರೂರು ತಾಲ್ಲೂಕ್ ನಂಜುಂಡಯ್ಯನವರು, ಸ್ಯಾನಟೇರಿ ಇನಿಸ್ಪೆಕ್ಟರು, ಪೋಲೀಸ್ ಜಮೇದಾರರು, ಮಹಮ್ಮದ್ ಪೀರ್ ದರೋಗರು, ಸ್ಕೂಲ್ ಹೆಡ್ಮಾಸ್ಟರು ಮೊದಲಾದ ಸರ್ಕಾರದ ಅಧಿಕಾರಿಗಳು ಮತ್ತು ಉದ್ಯೋಗಸ್ಥರು ಮ॥ ರಾ॥ ಗಳಾದ ಸಂ ಚೆಂ. ಪರ್ವತಪ್ಪನವರು, ತಂ॥ ಶಾಮಣ್ಣನವರು, ಪಟ್ಟಿಗೆರೆ ರಂಗಣ್ಣನವರು, ಬಿ. ಗೋವಿಂದಪ್ಪನವರು, ಶ್ರೀರಂಗಪಟ್ಟಣದ ಸಿದ್ಧಲಿಂಗದೇವರು, ಬೊ. ವೀರಣ್ಣನವರು, ಸಂ. ಶಿವಲಿಂಗಪ್ಪನವರು, ತೊ. ಮಲ್ಲಪ್ಪನವರು, ಬೊ. ಮರಿಯಣ್ಣನವರು, ದೆ. ಸಣ್ಣ ನಂಜಪ್ಪನವರು, ರುದ್ರಪ್ಪನವರು ಮೊದಲಾದ ಬಹಜನ ದೊಡ್ಡ ಮನುಷ್ಯರು ಸಭೆಯನ್ನಲಂಕರಿಸಿದ್ದರು. ಇಲ್ಲಿನ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಸಂಪಿಗೆ ಹಿರೇಮಠದ ಮೆ॥ ಸಿದ್ಧಲಿಂಗ ಶಾಸ್ತ್ರಿಗಳು. ಸರ್ವಾನುಮತಿಯಿಂದ ಸಭಾಧ್ಯಕ್ಷತೆಯನ್ನು ಅಂಗೀಕರಿಸಿದರು. ತರುವಾಯ ಸ್ಕೂಲ್ ಅಸಿಸ್ಟಂಟು ಮಾಸ್ಟರುಗಳಾದ. ಮ॥ ರಾ॥ ಎ. ವಿ. ಸ್ಕೂಲ್ ಅ॥ ಮಾ॥ ಶೇಷಾದ್ರಯ್ಯಂಗಾರ್ರು, ಮ॥ ರಾ॥ ಆನಂದರಾವ್ ರವರು ಮೆ॥ ಶಾಮಶಾಸ್ತ್ರಿಗಳು ಸಹಾ ಮ॥ ರಾ॥ ಶ್ರೀಮಂತ ಪತ್ರಿ ಚೆಂ. ವೀರಪ್ಪಯ್ಯನವರಿಗೆ ಅಕಾಲದಲ್ಲಿ ಪತ್ನಿವಿಯೋಗದಿಂದುಂಟಾದ ದುಃಖವನ್ನು ಪ್ರದರ್ಶನಗೊಳಿಸಿ ತನ್ನಿವಾರಣಾರ್ಥವಾಗಿ ಯೇನವಿನಾತೃಣಮಪಿನಚಲತಿ ಯೆಂಬಂತೆ ಸಕಲ ಜಗದ್ವ್ಯಾಪಾರವೂ ದೈವಾಧೀನವಾಗಿರುವುದರಿಂದ ಕಾಲಾನುಗುಣವಾಗಿ ಪ್ರಾಪ್ತವಾಗುವ ಸುಖದುಃಖಾನುಭವದಲ್ಲಿ ವಿಕಾರವಂ ಹೊಂದದೆ ಸಹಜಭಾವದಿಂದಿರುವುದು ಉತ್ತಮಪುರುಷರ ಲಕ್ಷಣವಾಗಿರುವುದರಿಂದ ವಿಚಾರಪರರಾದ ನಮ್ಮ ಶ್ರೀಮಂತರು ಇಂತಹ ವ್ಯಸನಕ್ಕೆ ಗಮನಕೊಡಬಾರದೆಂಬುದೇ ಮೊದಲಾದ ನೀತಿವಾಕ್ಯಗಳಿಂದು ಸಸ್ಸಮಾಧಾನತೆಯುಂಟಾಗುವಂತೆ ಭಾಷಣಮಾಡಿದರು.

ಅನಂತರ ಮ॥ ರಾ॥ ಗರ್ಲ್‌ಸ್ಕೂಲ್ ಮಾಸ್ಟರ್ ಚನ್ನಬಸವಯ್ಯನವರು, ಇಲ್ಲಿನ ಗರ್ಲ್‌ಸ್ಕೂಲ್ ಬಾಲಕಿಯರಿಗೆ ವಿದ್ಯಾಭ್ಯಾಸಕ್ಕೆ ಪ್ರಕೃತದಲ್ಲಿ ಗೌರ್ನಮೆಂಟು ಕಟ್ಟಡವು ದಿಷ್ಟರುವುದರಿಂದ ಸರ್ಕಾರದವರು ಮಾಹೇಯಾನ ೫೦ರೂ. ಪ್ರಕಾರ ಬಾಡಿಗೆಯನ್ನು ಗೊತ್ತುಮಾಡಿ ಸ್ಕೂಲ್‌ಮಂದಿರವನ್ನು ಕೊಡಿಸಿಕೊಟ್ಟಿರುತ್ತಾರೆ. ಆದಾಗ್ಯೂ ಸ್ಥಳ ಸಾಲದೆ ಇರುವುದರಿಂದ ತುಂಬಾ ತೊಂದರೆಯುಂಟಾಗಿರುತ್ತೆ. ಆದಪ್ರಯುಕ್ತ ಗತಿಸಿದ ಸೌ॥ ಸಿದ್ಧಮ್ಮಯ್ಯನವರ ಜ್ಞಾಪಕಾರ್ಥವಾಗಿ ಬಾಲಕಿಯರ ವಿದ್ಯಾಭ್ಯಾಸಕ್ಕನುಕೂಲವಾಗುವಂತೆ ಒಂದು ಸ್ಕೂಲ್ ಕಟ್ಟಡವನ್ನು ಮಾಡಿಸಿಕೊಡಬೇಕೆಂಬದಾಗಿ ಕೃತಪಡಿಸಿದರು.

ತರುವಾಯ ಅಧ್ಯಕ್ಷರು ಆ ದಿವಸ ನಡೆದ ಸಭೆಯ ಉದ್ದೇಶವನ್ನು ಸರ್ವರಿಗೂ ವಿಶದವಾಗುವಂತೆ ಸೂಚಿಸಿ ಸಭಾಸದರಿಗೂ, ವಿದ್ಯಾರ್ಥಿಯರಿಗೂ, ವಿದ್ಯಾರ್ಥಿನಿಯರಿಗೂ ಬೋಧೆಯಾಗುವಂತೆ ಪುರಾತನಪೃಥ್ವೀಪತಿಗಳಾದ ಪಾಂಡವರು ಹರಿಶ್ಚಂದ್ರ ಮೊದಲಾದವರ ಸತ್ಯಸಂಧತೆ ಪರೋಪಕಾರ, ಭೂತದಯೆ, ಧರ್ಮಮಾರ್ಗ ಪ್ರವರ್ತನೆಗಳನ್ನು ಸರ್ವಮಂಗಳಾ, ಅನಸೂಯೆ, ದ್ರೌಪದಿ, ಮೊದಲಾದವರ ಪಾತಿವ್ರತ್ಯ ಧರ್ಮವನ್ನು ಮತ್ತು ಗತಿಸಿದ ಸೌ. ಸಿದ್ಧಮ್ಮಯ್ಯನವರ ಪತಿಪರಾಯಣತೆ ಸೌಶೀಲ್ಯ ಮೊದಲಾದ ಸುಗುಣಗಳನ್ನು ವ್ಯಕ್ತಗೊಳಿಸಿ, ಇ ತಹ ನೀತಿಮಾರ್ಗ ಪ್ರವರ್ತಕರಾದ ಮಹಾಪುರುಷರು ಆಚರಿಸಿದ ನಡೆನುಡಿಗಳು ಮಹಾಜನೋಯೇನಗತಸ್ಸಪಂಥಾ ಯೆಂಬಂತೆ ಅಸ್ಮದಾದಿಗಳಿಗೆ ಮಾರ್ಗದರ್ಶಕಗಳಾಗಿರುವುದರಿಂದ, ಅವರುಗಳಂತೆ ಸದ್ವರ್ತನಶೀಲರಾಗಬೇಕೆಂಬದಾಗಿ ಭಾಷಣಮಾಡಿದರು. ಮತ್ತು ಶ್ರೀಮಂತರಿಗೆ ಗರ್ಲ್ ಸ್ಕೂಲ್ ಕಟ್ಟಡದ ವಿಷಯವಾಗಿ ಸ್ತ್ರೀವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವನ್ನು ಕೃತಪಡಿಸಿದ್ದಕ್ಕೆ ಅವರು ಸಂತೋಷಚಿತ್ತರಾಗಿ ನಮ್ಮ ಜ್ಯೇಷ್ಠಭ್ರಾತೃಗಳಾದ ಶ್ರೀಮನ್ ರುದ್ರಪ್ಪನವರ ಕಾಲದಲ್ಲಿ ಇಲ್ಲಿನ ಇಂಗ್ಲೀಷ್ ಸ್ಕೂಲ್ ಕಟ್ಟಡವನ್ನು ಧರ್ಮಾರ್ಥವಾಗಿ ಮಾಡಿಸಿಕೊಟ್ಟಿದ್ದರು. ಅದರಂತೆ ಈಗಲೂ ಈ ಗರ್ಲ್‌ಸ್ಕೂಲ್ ಮಂದಿರವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುತ್ತೇವೆಂಬದಾಗಿ ವಾಗ್ದಾನಮಾಡಿದರು.

ವಾಚಕ ಮಹಾಶಯರೇ ನರಃಪತಿತ ಕಾಯೋಪಿಯಶಃ ಕಾಯೇನಜೀವತಿ ಯೆಂಬಂತೆ ಸೌ. ಸಿದ್ಧಮ್ಮಯ್ಯನವರು ಪರಲೋಕಂಗತರಾದಾಗ್ಯೂ ಲೋಕೋತ್ತರವಾದ ಅಂತಹ ಸದ್ಗುಣಗಳಿಗೆ ಸ್ಥಾನಭೂತರಾಗಿದ್ದುದರಿಂದಲೇ ಅವರ ಹೆಸರು ಸ್ಥಿರವಾಗಿ ನಿಲ್ಲುವದಕ್ಕೆ ಕಾರಣವಾಯಿತಲ್ಲವೆ ?

ಅನಂತರ ಅಧ್ಯಕ್ಷರೂ, ಸಭಾಸದರೆಲ್ಲರೂ, ಯಸ್ಮಿನ್ ಜೀವತಿ ಜೀವಂತಿ ಬಹವಸ್ಸತುಜೀವತು ಯೆಂಬಂತೆ ಬಹು ಜನರ ಜೀವನಕ್ಕೆ ಆಶ್ರಯಭೂತರಾಗಿಯೂ, ವಿದ್ಯಾಪ್ರೋತ್ಸಾಹಿಗಳಾಗಿಯೂ ಅನ್ನದಾನ ಮೊದಲಾದ ಧರ್ಮಕಾರ್ಯ ನಿರತರಾಗಿಯೂ ಪ್ರಖ್ಯಾತಿಗೊಂಡಿರುವ ಶ್ರೀಮಂತಪತ್ರಿ ವೀರಪ್ಪಯ್ಯನವರಿಗೆ ಅಕಾಲದಲ್ಲಿ ಪ್ರಾಪ್ತವಾದ ಭಾರ್ಯಾವಿಯೋಗದುಃಖವನ್ನು ಸೈರಣೆಗೆ ತಂದುಕೊಳ್ಳುವಂತೆ ಧೀರತೆ, ವಿಚಕ್ಷಣತೆ ಮೊದಲಾದವುಗಳನ್ನು ಕೃಪಾಕರನಾದ ಶ್ರೀ ಪರಮೇಶ್ವರನು ಕರುಣಿಸಿ, ಮುಂದೆ ಇತ್ತೋಪ್ಯತಿಶಯವಾದ ಸುಕಳತ್ರಸುಖವನ್ನು ಪುತ್ರಪೌತ್ರಾದ್ಯಭಿವೃದ್ಧಿಯನ್ನು ಮಹದೈಶ್ವರ್ಯವನ್ನು ದಯಪಾಲಿಸಲೆಂದು ಭಗವತ್ಪ್ರಾರ್ಥನೆಯಂ ಮಾಡಿದರು. ಕರ್ಣಾನಂದಕರವಾದ ಫೋನಿಗ್ರಾಫು ಸಂಗೀತವು ನಡೆಯುತ್ತಿರಲು ವಿದ್ಯಾರ್ಥಿನಿಯರಾದ ಬಾಲಕಿಯರು ಜಯಸೂಚಕವಾದ ಗಾನವಂ ಮಾಡಿದರು. ಅನಂತರ ಸರ್ವರಿಗೂ ಸಕ್ಕರೆ, ಮಿಠಾಯಿ, ಗಂಧ, ಫಲತಾಂಬೂಲ, ಪುಷ್ಪಹಾರಾದಿಗಳನ್ನು ವಿನಿಯೋಗಮಾಡಿದರು. ಸಭೆಯು ವಿಸರ್ಜನೆಯಾಯಿತು.

ದೊಡ್ಡಗುಣಿಮಠದ ಪಟ್ಟದ್ದೇವರು,
ಬೀರೂರು ಸಂಸ್ಕೃತಪಾಠಶಾಲಾ ವಿದ್ಯಾರ್ಥಿ.

ಲಿಂಗಾಯತ ಜಗದ್ಗುರುಗಳ ಅಡ್ಡಪಾಲಕಿ ಮತ್ತು ಬಾಗಲಕೋಟೆಯ ಬ್ರಾಹ್ಮಣರು, ಹಾಗು ಬ್ರಾಹ್ಮಣ ವರ್ತಮಾನಪತ್ರಕಾರರು.

ಘಂಟಿಚೋರ, ಹರಣಸಿಕಾರಿ ವಗೈರೆ ಜನರಲ್ಲಿ ಯಾರಾದರೂ ಅಪರಾಧ (ಕಳವು) ಮಾಡಿ ತೊಂದರೆಗೆ ಒಳಗಾಗುವದು ಸಹಜ. ಆದರೆ ಅವರಲ್ಲಿ ಒಬ್ಬನಿಗೆ ತೊಂದರೆಯಾದ ಕೂಡಲೆ ಆ ವರ್ಗದ ಯಾವತ್ತು ಜನರು ಬೊಬ್ಬೆ ಇಡುವದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿರುತ್ತದೆ. ಅದರಂತೆ ಈ ಬಾಗಲಕೋಟೆಯ ಬ್ರಾಹ್ಮಣ ಜನರ ಪಾಡಾಗಿದೆ. ಯಾಕೆಂದರೆ, ಲಿಂಗಾಯತ ಜಗದ್ಗುರುಗಳನ್ನು ಅಡ್ಡಪಾಲಕಿಯಲ್ಲಿ ಮೆರೆಯಿಸಗೊಡಬಾರದೆಂದು ಹಲವು ಕಾಯದೇಶೀರ ಪ್ರಯತ್ನಗಳನ್ನು ಮೊದಲುಮಾಡಿ ಮನೋರಥವು ಕೈಗೂಡದೆ ಹೋದದ್ದರಿಂದ, ಕಟ್ಟಕಡೆಗೆ ಗೈರಕಾಯದೇಶೀರ ರೀತಿಯಿಂದ ತಾವು ವಜನದಾರರು, ವಿದ್ಯಾವಂತರು, ತಾವು ಏನನ್ನು ಮಾಡಿದರೂ ಅದು ದಕ್ಕಿಹೋಗುತ್ತದೆ ಎಂಬ ಹೆಮ್ಮೆಯಿಂದ ಕಾಯದೇಶೀರ ಕೆಲಸಕ್ಕೆ ಅಡ್ಡಿಮಾಡಲಿಕ್ಕೆ ಹೋಗಿ ಹ್ಯಾಗೋ ಯಾರಕಡೆಯಿಂದಲೋ ಪೆಟ್ಟನ್ನುತಿಂದ ಮೂರು, ನಾಲ್ಕು ಜನರ ಪಕ್ಷವಹಿಸಿ, ಬಾಗಲಕೋಟೆಯ ಯಾವತ್ತು ಬ್ರಾಹ್ಮಣರು ಗದ್ದಲವನ್ನೆಬ್ಬಿಸಿ, ತಮ್ಮ ಜಾತಿಯ ವರ್ತಮಾನಪತ್ರಕಾರರನ್ನು ಚಿತಾಯಿಸಿ ಅವರಿಗೆ ನಾನಾತರದ ಸುಳ್ಳುಲೇಖಗಳನ್ನು ಬರದಿದ್ದುದು ಎಲ್ಲರಿಗೂ ವಿದಿತವಿದ್ದಷ್ಟೆ. ಒಬ್ಬ ಪತ್ರಕಾರರು ಎರಡು ತಾಸಿನವರೆಗೆ ಬಿಜನಶಾಹಿ ಆಗಿ ಒಂದೇಸವನೆ ಬ್ರಾಹ್ಮಣ ಜನರ ಮನೆಯಮೇಲೆ ಕಲ್ಲುಗಳು ಬಿದ್ದವೆಂತಲೂ, ಮತ್ತೊಬ್ಬ ಪತ್ರಕಾರರು ಕಲ್ಲು ಒಗೆದರು ಎನ್ನುವದಕ್ಕೆ "ಕವಣಿಗಳಿಂದ" ಎಂಬ ಶಬ್ದ ಪ್ರಯೋಗದಿಂದಲೂ, ಇನ್ನೊಬ್ಬರು ವಿಠೋಬನ ಗುಡಿಯಲ್ಲಿ ಹೊಕ್ಕು ಗುಡಿಕೆಡಿಸಿ ಕಳವುಮಾಡಿಕೊಂಡು ಹೋದರೆಂತಲೂ, ಬೇರೊಬ್ಬರು ಬ್ರಾಹ್ಮಣರ ಮನೆಹೊಕ್ಕು ಹೆಂಗಸರಿಗೆ ವ ಹುಡುಗರಿಗೆ (ಮಾರದಾಣ) ಮಾಡಿದರೆಂತಲೂ ಬರೆದಿರುತ್ತಾರೆ. ಆದರೆ (ಮಾರದಾಣ) ಅಂದರೆ ಹೆಂಗಸರನ್ನು ಬಡಿದರು ಅನ್ನುವ ಇಷ್ಟೇ ಅರ್ಥ ಆಗಬೇಕಂತಾ ಅವರ ಅಪೇಕ್ಷೆ ಇತ್ತೋ ಅಥವಾ ಅದಕ್ಕೂ ಹೆಚ್ಚಿನ ಅರ್ಥವಾಗಬೇಕೆಂಬ ಅಪೇಕ್ಷೆ ಇತ್ತೊ ತಿಳಿಯಲ್ಲಿಲ್ಲ.

ಇಂದೂ ಪ್ರಕಾಶಕಾರರು ತಾವು ಮುಂಬಯಿಯೊಳಗೆ ಬಹು ದೊಡ್ಡ ಪಂಡಿತರು ಮತ್ತು ವಜನದಾರರೆಂದು ತಿಳಕೊಂಡು ಅಧಿಕಾರಸ್ಥರು ಲೈಕೆಳಗಿನ ಜನರಿಗೆ ಹುಕುಮುಮಾಡುವ ಪ್ರಕಾರ, ಎಲ್ಲಾ ಲಿಂಗಾಯತ ಕಾಮದಾರರನ್ನು ಬಾಗಲಕೋಟೆಯಿಂದ ಸರಕಾರದವರು ವರ್ಗಮಾಡತಕ್ಕದ್ದೆಂತ ಬಹು ಗರ್ವದಿಂದ ಉದ್ಗಾರತೆಗೆದಿದ್ದರು. ಪರಂತು ಪರಿಣಾಮವು ಹೀಗಾಗಿರುತ್ತದಲ್ಲಾ—ಒಟ್ಟಿಗೆ ಬಾಗಲಕೋಟೆಯಲ್ಲಿ ಅಧಿಕಾರಸ್ಥರು ಇರತಕ್ಕವರು (೭) ಜನರು. ಇವರಲ್ಲಿ ಇಬ್ಬರು ಪೋಲೀಸ್ ಸಬ್ ಇನ್ಸ್ಪೆಕ್ಟರು, ಒಬ್ಬರು ಪೋಲೀಸ್ ಇನ್ಸ್ಪೆಕ್ಟರರು, ಇಬ್ಬರು ಸಬ್ ಜಡ್ಜರು, ಒಬ್ಬರು ಮಾಮಲೇದಾರರು (೧ನೇ ವರ್ಗ ಮ್ಯಾಜಿಸ್ಟ್ರೇಟರು.) ಒಬ್ಬರು ಅವಲಕಾರಕೂನ (ಮೂರನೇ ವರ್ಗ ಮ್ಯಾಜಿಸ್ಟ್ರೇಟರು) ಈ ಪ್ರಕಾರ ಇದ್ದು ಉತ್ಸವದಕಾಲಕ್ಕೆ ಇಬ್ಬರು ಸಾರಸ್ವತರು, ಇಬ್ಬರು ಬ್ರಾಹ್ಮಣರು, ಒಬ್ಬ ಲಿಂಗಾಯತರು, ಇಬ್ಬರು ಇತರ ಮತಸ್ಥರು ಇದ್ದರು. ಆದರೆ ಬ್ರಾಹ್ಮಣರಾದ ಇಬ್ಬರೂ ಸಹ ಇಲ್ಲಿಂದ ವರ್ಗಾಯಿಸಲ್ಪಟ್ಟಿರುತ್ತಾರೆ.

ದರ ಒಬ್ಬ ಬ್ರಾಹ್ಮಣ ವರ್ತಮಾನಪತ್ರಕಾರರೂ ಮೈಸೂರ ಸರ್ಕಾರದಲ್ಲಿ ಚಿತ್ರಕಲ್‌ದುರ್ಗದ ಸ್ವಾಮಿಗಳವರಿಗೆ ಅಡ್ಡಪಾಲಕಿಯ ಪರವಾನಿಗಿ ಇಲ್ಲಾ ಅನ್ನುವ ಮಾತನ್ನು ಮಹತ್ವಸಂಗತಿಯನ್ನಾಗಿ ಬರದಿದ್ದರು. ಆದರೆ ಮೈಸೂರ ಸಂಸ್ಥಾನದಷ್ಟೇ ಮಹತ್ವವುಳ್ಳ ಕೊಲ್ಲಾಪುರ ಸಂಸ್ಥಾನದಲ್ಲಿ ಇದೇ ಸ್ವಾಮಿಗಳವರು ಅಡ್ಡಪಾಲಕಿ ಇಷ್ಟೇ ಅಲ್ಲಾ ವ್ಯಾಸನತೋಳ ಸಹಿತವಾಗಿ ಎರಡು ಮೂರು ಸ್ಥಳಗಳಲ್ಲಿ ಮೆರದದ್ದನ್ನು ಮರೆತುಬಿಟ್ಟಿರುವರೇ, ಅಥವಾ ಆ ಸಂಗತಿಯನ್ನು ಬರೆಯಲಿಕ್ಕೆ ನಾಚುವರೇ? ಇದು ವಿಚಾರಮಾಡತಕ್ಕ ಸಂಗತಿಯಾಗಿದೆ. ಇಷ್ಟೇ ಅಲ್ಲದೆ ಬ್ರಾಹ್ಮಣ ಸಂಸ್ಥಾನಗಳಾದ ಸಾಂಗಲಿ ಮುಂತಾದವುಗಳಲ್ಲಿ ಸಹ ಅಡ್ಡಪಾಲಕಿ ಉತ್ಸವಮಾಡಲಿಕ್ಕೆ ಅಲ್ಲಿಯ ಯಜಮಾನರು ಲೇಖೀ ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಹಾಗು ಬ್ರಾಹ್ಮಣರ ಜಗದ್ಗುರುಗಳು ಇರುವ ಸಂಕೇಶ್ವರದಲ್ಲಿ ಸಹ ಈ ಲಿಂಗಾಯತ ಜಗದ್ಗುರುಗಳು ಅಡ್ಡಪಾಲಕಿಯಲ್ಲಿ ಮೆರೆಯಲಿಕ್ಕೆ ತಮ್ಮ ಸಮ್ಮತಿಯುಂಟೆಂದು ಶ್ರೀ ಶಂಕರಾಚಾರ್ಯರು ಲೇಖೀಜವಾಬನ್ನು ಕೊಟ್ಟಿರುವರು. ಇದಲ್ಲದೆ ಸೊಲ್ಲಾಪುರ ಜಿಲ್ಲೆ ಮತ್ತು ಇತರ ಪ್ರಾಂತಗಳಲ್ಲಿ ಸಹ ಈ ಸ್ವಾಮಿಗಳವರಿಗೆ ಅಡ್ಡಪಾಲಕಿಯ ಮರ್ಯಾದೆಯುಂಟು. ಹೀಗೆ ನಿಜಸ್ಥಿತಿಯು ಇದ್ದು ಬ್ರಾಹ್ಮಣರು ಮತ್ತು ಬ್ರಾಹ್ಮಣ ವರ್ತಮಾನಪತ್ರಕಾರರು ಅನುಚಿತವಾಗಿ ವರ್ತಿಸಿದ್ದು ಅಸೂಯಾಂಧತೆಯೇ ಹೊರ್ತು ಬೇರೆ ಏನೂ ಇಲ್ಲಾ.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್ ಸಾಹೇಬರವರ ಹುಕುಂ ಇಲ್ಲದೇಲೇ ಲಿಂಗಾಯತ ಮಾಮಲೇದಾರರು ಅಡ್ಡಪಾಲಕಿಯ ಉತ್ಸವಕ್ಕೆ ಅಪ್ಪಣೆಮಾಡಿದರು. ಮತ್ತು ಅವರಿಗೆ ಮೇಲಿನ ಅಧಿಕಾರಸ್ಥರಿಂದ ಬಂದ ತಾರಿನ ಅರ್ಥ ತಿಳಿಯದೆ ಮೇಲಿನ ಅಧಿಕಾರಸ್ಥರ ಆಜ್ಞೆಯನ್ನು ಉಲ್ಲಂಘಿಸಿದರು. ಇವರಿಗೆ ಕೆಲಸಮಾಡುವ ಯೋಗ್ಯತೆ ಇಲ್ಲ ಎಂದು ಮೊದಲಾಗಿ ಲೇಖನಗಳನ್ನು ಈ ವರ್ತಮಾನಪತ್ರಕಾರರು ನಿರ್ಲಜ್ಜೆಯಿಂದ ಬರೆದಿರುವರು. ಕಾಮಣಿಯೆಂಬ ರೋಗದಿಂದ ಪೀಡಿತನಾದ ಮನುಷ್ಯನಿಗೆ ನೋಡಿದ್ದೆಲ್ಲ ಹಚ್ಚಗೆ ಕಾಣುವಂತೆ ಈ ಜನರಿಗೆ ವೀರಶೈವರ ಮೇಲಿನ ಅಸೂಯೆ ಎಂಬ ಕಾಮಣಿ ರೋಗವುಂಟಾಗಿ ಯಾವತ್ತು ವಿರುದ್ಧ ತೋರಲಿಕ್ಕೆ ಹತ್ತಿರುತ್ತದೆ. ಯಾಕೆಂದರೆ ಲಿಂಗಾಯತರು ಮತ್ತು ಮಾಮಲೇದಾರರು ಕಾಯದೇಶೀರವರ್ತಿಸಿದ್ದು ಗೈರ ಕಾಯದೇಶೀರವೆ ತೋರಿಸಿದಂತೆ ಕಾಣಿಸಿತು. ಮೆ॥ ಡಿ॥ ಮ್ಯಾ॥ ಸಾ॥ ರವರ ಹುಕುಂ ಇದ್ದದ್ದು ಮನಾಯಿ ಹುಕುಮಿನಂತೆ ಕಾಣಿಸಿತು, ಮಾಮಲೇದಾರರು ಕಾಂಪಿಟಂಟ ಮತ್ತು ಸಬಾರ್ಡಿನೇಟ ಅಧಿಕಾರಸ್ಥರಿರುವದು ಪ್ರಸಿದ್ಧವಿದ್ದು ಇನ್‌ಕಾಂಪಿಟಂಟ ಮತ್ತು ಇನ್‌ಸಬಾರ್ಡಿನೇಟ ಅಂತೆ ಕಾಣಿಸಿತು. ಇಷ್ಟೇ ಅಲ್ಲದೆ ಈ ರೋಗವು ಹೆಚ್ಚಾಗಿ [illegible] ಬುದ್ಧಿಭ್ರಮೆಯಾಗಿಯೋ ಏನೋ ಅಷ್ಟಕ್ಕೆ ಸಮಾಧಾನವಾಗದೆ ಅವರನ್ನು ಬಯಿದು ಬಾಯಿಚಟಿಯನ್ನು ಕಳಕೊಂಡಿರುತ್ತಾರೆ. ಯಾವ ಲಿಂಗಾಯತ ಅಧಿಕಾರಸ್ಥರ ಯೋಗ್ಯತೆಯು

ಯುಕ್ತಾಕಾಲಕ್ಕೆ ಸಹ ಶಂಕೆಯ ತೆಗೆದುಕೊಳ್ಳದಂತೆ ಈ ಮೊದಲೇ ಚೆನ್ನಾಗಿ ಪ್ರತಿಷ್ಠಿತವಾಗಿದೆಯೋ ಅಂಥವರ ಬಗ್ಗೆ ಈ ಪ್ರಕಾರ ವರ್ತಮಾನಪತ್ರ ಮುಖಾಂತರ ಉದ್ಗಾರಗಳನ್ನು ತೆಗೆದದ್ದಕ್ಕೆ ಅವರಿಗೆ ಏನನ್ನತಕ್ಕದೆಂಬದನ್ನು ವಾಚಕರೇ ವಿಚಾರಮಾಡಬೇಕು. ತಾವು ದೊಡ್ಡ ಪಂಡಿತರು ವ ವಜನದಾರರು ಎಂಬ ಗರ್ವದಿಂದ ತಾರಿನ ಅರ್ಥವನ್ನು ಸಹ ಚೆನ್ನಾಗಿ ಮಾಡದೆ ವಿಪರೀತ ಅರ್ಥವನ್ನು ಮಾಡಿ ಸಿಕ್ಕಿಬಿದ್ದು ಈಗ ಪದ್ದಾಡಲಿಕ್ಕೆ ಹತ್ತಿರುತ್ತಾರೆ. ಬ್ರಾಹ್ಮಣರಲ್ಲಿ ದೊಡ್ಡ ದೊಡ್ಡ ಅಧಿಕಾರಸ್ಥರಿರುವದರಿಂದ ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳಲಿಕ್ಕೆ ಅನುಕೂಲವವೆಂಬ ಮಾತು ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಅಡ್ಡಪಾಲಕಿ ಹಕ್ಕಿನ ಪ್ರಶ್ನೆಯ ಬಗ್ಗೆ ದಿವಾಣಿಕೋರ್ಟಿನಲ್ಲಿ ದಾವಾಹಿಡಿಯಬಾರದೆಂಬ ಮಾತು ಪ್ರಸಿದ್ಧವಿದೆ. ಒಳಗಡೆಗೆ ಹುಬ್ಬಳ್ಳಿಯಲ್ಲಿ ಲಿಂಗಾಯತಸ್ವಾಮಿಗಳ ಅಡ್ಡಪಾಲಕಿಉತ್ಸವದ ಬಗ್ಗೆ ಶ್ರೀ ಶಂಕರಾಚಾರ್ಯರು ಅವರ ಮೇಲೆ ದಾವ ತಂದು ಪ್ರಿವ್ಹಿಕೌನ್ಸಿಲವರೆಗೆ ಪ್ರಶ್ನೆಯು ಹೋಗಿ ಶಂಕರಾಚಾರ್ಯರ ದಾವೆ ರದ್ದಾಗಿದ್ದಲ್ಲದೆ, ಅವರು ಸಾವಿರ ಗಟ್ಲೆ ರೂಪಾಯಿ ಲುಕ್ಸಾನಿಯನ್ನು ಲಿಂಗಾಯತ ಸ್ವಾಮಿಗಳಿಗೆ ಕೊಡಬೇಕಾಯಿತು. ಬಾಗಲಕೋಟೆಗೆ ಸ್ವಾಮಿಗಳವರು ಬರುವದು ಒಂದು ತಿಂಗಳ ಮೊದಲೇ ತಿಳಿದಿದ್ದರೂ ಒಬ್ಬ ಬ್ರಾಹ್ಮಣನಾದರೂ ಮುಂದರಿಯದೆ ಸುಮ್ಮನೆ ಇದ್ದು ಆಯತಾವೇಳೆಯಲ್ಲಿ ಏನಾದರೂ ಗೊಂದಲವೆಬ್ಬಿಸುವ ಹೇತುವಿನಿಂದ ಮರುದಿವಸ ಮುಂಜಾನೆ ಉತ್ಸವವು ಹೊರಡುವದನ್ನು ತಿಳಿದು ಹಿಂದಿನ ದಿನ ಸಾಯಂಕಾಲ ೫-೬॥ ಘಂಟೆಗೆ ಲಿಂಗಾಯತಸ್ವಾಮಿಗಳ ಮೇಲೆ ಖೊಟ್ಟಿರಚನೆಯ ದಾವೆಯನ್ನು ಬ್ರಾಹ್ಮಣ ಮುನಸೂಫರ ಕಡೆಗೆ ದಾಖಲಮಾಡಿದರು. ಬ್ರಾಹ್ಮಣ ಮುನಸೂಫರು ತಮ್ಮ ಜವಾಬದಾರಿಯ ಮೇಲೆ ದಾವೆಯನ್ನು ಹಿಡಿದರು ಲಿಂಗಾಯತರಕಡೆ ವಕೀಲರಿಲ್ಲಾ ಮತ್ತೂ ಲಿಂಗಾಯತರಕಡಿಂದಾ ಏನೂ ಕಾರಣ ತೋರಿಸಲಿಕ್ಕೆ ಆಗುವದಿಲ್ಲವಾದ್ದರಿಂದ ಇದರ ಫಾಯದೇ ತಗೋಬೇಕೆನ್ನುವದು ಎಲ್ಲ ಬ್ರಾಹ್ಮಣರಮನಸ್ಸಿನಲ್ಲಿ ಗುಪ್ತವಾಗಿ ನೆಲೆಗೊಂಡಿತ್ತು. ಆದರೆ ಲಿಂಗಾಯತರಿಗೆ ಯೋಗ್ಯವ್ಯಾಳ್ಯಕ್ಕೆ ವಕೀಲರು ದೊರೆತು ಮುನಸೂಫರು ದಾವೆಹಿಡಿಯಲಿಕ್ಕೆ ಬರುವದಿಲ್ಲಾ ಮತ್ತು ಅವಸರದಲ್ಲಿ ಅಡ್ಡಿಯಪ್ಪಣೆಯನ್ನು ಮಾಡಬಾರದೆಂತ ಕಾರಣಗಳನ್ನು ತೋರಿಸಿದರು. ಆದರೆ ಮುನಸೂಫರು ರಾತ್ರಿ ೮॥ ಘಂಟೆಯವರೆಗೆ ಕಚೇರಿಮಾಡಿ ಮನಾಯಿತಾಕೀದಿ ಕೊಡುತ್ತೇವೆಂತ ಆಗ್ರಹ ಹಿಡಿದು ಹೆಚ್ಚು ಧೈರ್ಯವಾಗದೆ ಮರುದಿವಸ ಮುಂಜಾನೆ ೮॥ ಘಂಟೆಯವರೆಗೆ ಉತ್ಸವಮಾಡಕೊಡದಂತಾ ಮನಾಯಿ ತಾಕೀದಿ ಹುಕುಂ ಮಾಡಿದರು. ಆದರೆ ಬಾಗಲಕೋಟೆಯೂರಲ್ಲಿ ಮಹಾಸ್ವಾಮಿಗಳವರ ಉತ್ಸವನೋಡಲಿಕ್ಕೆ ಸಾವಿರಗಟ್ಲೆ ಜನರು ಕೂಡಿದ್ದರು. ಮರುದಿವಸ ಪ್ರಾತಃಕಾಲಕ್ಕೆ ಉತ್ಸವಹೊರಡುತ್ತದೆಂದು ಜನರು ತಮ್ಮ ತಮ್ಮ ಭಾಗಗಳನ್ನು ಶೃಂಗರಿಸಿದ್ದರು ಆದರೆ ಉತ್ಸವವನ್ನು ೯॥ ಘಂಟೆಯವರೆಗೆ ತಡೆಮಾಡಿದ್ದನ್ನು ಕೇಳಿ ಬ್ರಾಹ್ಮಣಜನರೆಲ್ಲರೂ ಲಿಂಗಾಯತರ ಫಜೀತಿಮಾಡಿದೆವೆಂತ ಪೌರುಷದ ಮಾತುಗಳನ್ನು ಅಲ್ಲಲ್ಲಿ ಆಡುತ್ತ ನಡೆದದ್ದಲ್ಲದೆ, ಬ್ರಾಹ್ಮಣವಕೀಲರು ಅಲ್ಲಲ್ಲಿ ವತ್ತಟ್ಟಿಗೆ ಕೂಡಿ ನಗಾಡಿದರು. ಆದರೆ "ಸತ್ಯಮೇವಜಯತೆ" ಎಂಬ ಮಾತಿಗನುಸಾರವಾಗಿ ಕಾಯದೇ ಆಧಾರಗಳೂ ಏನೂ ಸಿಗದೆ ಇದ್ದದ್ದರಿಂದ ಬ್ರಾಹ್ಮಣರು ಸದರ ದಾವೆಯನ್ನು ಪರತ ತೆಗೆದುಕೊಳ್ಳಬೇಕಾಯಿತು. ಬ್ರಾಹ್ಮಣರಿಗೆ ಅಸಮಾಧಾನವಾಗಿ ಏನಾದರೂ ಮಾಡಬೇಕೆಂತ ವಿಶೇಷವಾಗಿ ಬ್ರಾಹ್ಮಣವಕೀಲಜನರೂ ಮತ್ತು ಪೆನಶನದಾರಜನರೂ ಅಲ್ಲಲ್ಲಿ ಕೂಡಿ ಆಲೋಚನೆಮಾಡಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರ ಕಡೆಗೆ ಸುಳ್ಳು ಮಜಕೂರಿನ ತಾರುಗಳನ್ನು ಮುಂಜಾನೆನಸಿಕ್ಕಿ ಲೆತಾರ ಅಖೇರ ಸುರುವು ಆಗುವದಕ್ಕಿಂತ ಮೊದಲು ಬಂದು ತಾರುಗಳನ್ನು ಮಾಡಿಸಿದರು. ಬ್ರಾಹ್ಮಣರಲ್ಲದೆ ಇತರ ಜಾತಿಯವರ ಹೆಸರಿನಿಂದಲೂ ಕೆಲವು ತಮ್ಮ ಖರ್ಚಿನಿಂದಲೇ ಬ್ರಾಹ್ಮಣರು ತಾರು ಮಾಡಿದರು ಆದರೆ ಇದರಿಂದಲೂ ತಮ್ಮ ಮನಸ್ಸಿನಂತೆ ಆಗದಿದ್ದದ್ದರಿಂದ ಉತ್ಸವ ಹೊರಟಾಗ್ಗೆ ಏನಾದರೂ ತೊಂದರೆತೆಗೆಯಬೇಕೆಂತ ಕೆಲವು ತಲೆತಿರುಗಿದ ಬ್ರಾಹ್ಮಣರು ಇಪ್ಪತ್ತು ಮೂವತ್ತು ಸಾವಿರ ಜನರು ಕೂಡಿ ಮಾಡುವ ಕಾಯದೇಶೀರ ಕೆಲಸಕ್ಕೆ ಹರಕತ್ತುಮಾಡಲಿಕ್ಕೆ ಹೋಗಿ ಉದ್ಧಂಡತನದಿಂದ ವರ್ತಿಸಿ ಪೆಟ್ಟನ್ನು ತಿಂದರು. ಸಂತೆಗೆಹೋದ್ದು ಮನೆಗೆ ಬಂತೆಂಬ ಗಾದೆಯಂತೆ ಈಗ ಅವರ ಹಾಡಾಗಿರುವದು. ಇತರ ಸ್ಥಳಗಳಲ್ಲಿರುವ ಬ್ರಾಹ್ಮಣಜನರು ಬಾಗಲಕೋಟೆಯವರಂತೆ ಮೂರ್ಖತನವನ್ನು ತೋರಿಸದೆ ಕೇವಲಸಹಾನುಭೂತಿಯನ್ನು ತೋರಿಸಿರುತ್ತಾರೆ. ಆದರೆ ಬಾಗಲಕೋಟೆಯಲ್ಲಿ ಬಹಳ ದಿವಸದಿಂದ ಬ್ರಾಹ್ಮಣಜನರ ಪ್ರಾಬಲ್ಯವು ಬಹಳ ಇದ್ದು ತಮ್ಮ ಗರ್ವದ ಪ್ರದರ್ಶನವನ್ನು ಹೊರಡಿಸಿ ಬಿಡಬಾರದೆಂತ ಅವರು ಈ ಸಂಧಿಯಲ್ಲಿ ಮಾಡಿದ ಉದ್ಯೋಗದ ಫಲವು ಯಾವರೀತಿಯಾಗಿರುವದೆಂಬದನ್ನು ಲಕ್ಷ್ಯಕ್ಕೆ ತಂದು ಇನ್ನುಮುಂದಾದರೂ ಜಾಗರಾಗತಕ್ಕದ್ದು.

ಮೆ॥ ಹಿರೇಮಠ ಸಾಹೇಬಬಹದ್ದೂರರವರು ಬಾಗಲಕೋಟೆ ಸ್ಟೇಷನ್ನಿಗೆ ಒಂದು ರಾತ್ರಿ ಬಂದು ಹಾಗೆ ಹಿಂದಿರುಗಿಹೋದರು. ಅಂತ ವರ್ತಮಾನಪತ್ರದಲ್ಲಿ ಬರದಿರುವರು. ಇದಂತೂ ಬಹಳ ನಾಚಿಕೆಗೇಡಾದ ಸುಳ್ಳು ಕಲ್ಪನೆ ಇರುವದು. ತಾವು ವಿದ್ಯಾವಂತರೂ, ಮಾರ್ಗದರ್ಶಕರೂ ಅಂತಾ ಢೊಂಗಮಾಡಿ ಈಗ ಸುಳ್ಳನ್ನತಕ್ಕವರು ತಾವೇ ಆಗಿರುವೆವೆಂಬದನ್ನು ಸಹಜವಾಗಿ ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟರು.

ಅಮರಾವತಿಯಲ್ಲಿ ಹೊರಡುವ ವೀರಶೈವಸಂಜೀವಿನಿ ಯೆಂಬ ಮರಾಠಿ ಪತ್ರಿಕೆಯ ಎಡಿಟರವರು ಲಿಂಗಾಯತರಿದ್ದು ಅವರಕಡೆಗೆ ತಮಗೆ ಅನುಕೂಲವಾಗುವಂತೆ ಸುಳ್ಳುಮಜಕೂರಿನ ಲೇಖನವನ್ನು ಬ್ರಾಹ್ಮಣರಲ್ಲಿ ಒಬ್ಬರು ಬಹಳ ತೀವ್ರವಾಗಿ ಬರೆದು ಕಳಿಸಿಕೊಟ್ಟರು. ಸದರಿ ಎಡಿಟರರು ಬಹಳ ದೂರ ಇದ್ದು ಖರೇಹಕೀಕತ್ತು ತಿಳಿಯದೆ ಅದನ್ನು ಛಾಪಿಸಿದರು. ಲಿಂಗಾಯತರು ದಂಗೆ ಆಗ್ಲಿ ಅಂತಾರೆ. ಆದರೆ ಲಿಂಗಾಯತರ ಪತ್ರದಲ್ಲಿ ದಂಗೆಯಾಗಿದೆ ಅಂತ ಪ್ರಸಿದ್ಧ ಆಗಿದೆ ನೋಡಿರಿ ಅಂತ ಕೇಸರಿ ವಗೈರೆ ಪತ್ರಗಳಲ್ಲಿ ಮೊದಲೇ ತಮ್ಮಲ್ಲಿ ಹಂಚಿಕೆಮಾಡಿಕೊಂಡು ಈ ಪ್ರಕಾರ ಲೇಖನಗಳನ್ನು ಬರೆದರು. ಇದೆಂಥಕೌಯುಕ್ತಿಯು! ಈಗ ಬಾಗಲಕೋಟೆಯಲ್ಲಿರುವ ಮುಳಗುಂದ ಮಾಮಲೇದಾರರ ಮೇಲೆ ಹಿಂದೆ ಲಂಚದಖಟ್ಲೆ ನಡಿದಾಗ್ಗೆ ಪ್ರಸಿದ್ಧ ಸರ್ಕಾರಿ ಅಧಿಕಾರಸ್ಥರಾದ ರಾ॥ ಬಾ॥ ಅರಟಾಳ ಸಾಹೇಬರಮೇಲೆ ಅನೇಕ ಬ್ರಾಹ್ಮಣ ವರ್ತಮಾನಪತ್ರಗಳಲ್ಲಿ ಯಾರೋ ಇದೇಪ್ರಕಾರದ ಅತಿಶಯೋಕ್ತಿಯಿಂದ ಸುಳ್ಳುಲೇಖನಗಳನ್ನು ಬರೆದು ಬಹಳ ಗೊಂದಲ ಎಬ್ಬಿಸಿದ್ದರು. ಆದರೆ ಸದರಿ ಮುಳಗುಂದ ಇವರಿಗೆ ಹಾಯಕೋರ್ಟಿನಿಂದ ಶಿಕ್ಷಾ ಕಾಯಮ ಆದಮೇಲೆ ಧನಂಜಯ ಪತ್ರಕಾರರೇ ಮೊದಲಾದವರು "ಶಾಂತಂಪಾಪಂ" ಅಂತ ಬಾಯಿಮುಚ್ಚಿಕೊಂಡು ಕೂಡ್ರಬೇಕಾಯಿತು. ವರ್ತಮಾನಪತ್ರಕಾರರು ಬ್ರಾಹ್ಮಣರಿರುವದರಿಂದ ಅವರ ಮುಖಾಂತರ ಲೇಖನಗಳನ್ನು ಬರಿಸಿ ಮತ್ತು ದೂರ ಇರುವ ಅಧಿಕಾರಸ್ಥರಿಗೆ ಭಯಂಕರಸ್ವರೂಪದ ತಾರುಗಳನ್ನು ಮಾಡಿ ಸರ್ಕಾರದವರ ಮನಸ್ಸನ್ನು ಕಲುಷಿತಮಾಡುವದು ಉತ್ತಮ ಸಾಧನವೆಂದು ಬ್ರಾಹ್ಮಣ ವರ್ಗದವರೆಲ್ಲರೂ ನಂಬಿರುವರು. ಮತ್ತು ಆಯತಾವೇಳೆಯಲ್ಲಿ ಅಂದರೆ ಲಿಂಗಾಯತರಿಗೆ ಖರೇಸಗತಿಯನ್ನು ತಿಳಿಸಲಿಕ್ಕೆ ವ್ಯಾಳೆ ಉಳಿಯದಂತೆ ಸಂಧಿಸಾಧಿಸಿ ಅವರಿಗೆ ತೊಂದರೆತರುವ ಪ್ರಯತ್ನಮಾಡುವರು. ಆದರೆ ಅವು ಈಗಿನ ಸ್ಥಿತಿಯಲ್ಲಿ ಸಾಧಿಸುವದಿಲ್ಲವೆಂತಲೂ ಮತ್ತು ಅವುಗಳ ಪರಿಣಾಮವು ಕೆಡಕಾಗುವದೆಂತಲೂ ಅವರು ಚೆನ್ನಾಗಿ ಲಕ್ಷದಲ್ಲಿಡಬೇಕು. ಮತ್ತು ಸರ್ಕಾರದವರು ಈ ಪ್ರಕಾರದ ಅವರಸಾಧನೆಗಳಿಗೆ ಅವಕಾಶ ಸಿಗದಂತೆ ತಪಶೀಲ ಮಾಡಿದರೆ, ಇಂತಹ ಅನರ್ಥಗಳು ಸಂಭವಿಸಲಿಕ್ಕಿಲ್ಲ

ಎಂ॥ ಗದಿಗಯ್ಯ ವಕೀಲ ಧಾರವಾಡ ಇವರು ಈ ಸಮ್ಮಂಧವಾದ ಒಂದು ಲೇಖನವನ್ನು ಕೊಟ್ಟಿದ್ದದಕ್ಕೆ ಧನಂಜಯ ಪತ್ರಕಾರರು ಅದಕ್ಕೆ ಉತ್ತರವಾಗಿ ಲೇಖನವನ್ನು ಬರೆದದ್ದರಲ್ಲಿ, ಎಂ॥ ಗದಿಗಯ್ಯನವರಕ್ಕಿಂತಲು ಎಂ॥ ಕಿತ್ತೂರ ಮಾಮಲೇದಾರ ಸಾ॥ ಬಗ್ಗೆ ತನಗೆ ಹೆಚ್ಚು ಪೂಜ್ಯಬುದ್ಧಿಯದೆ, ಆದರೆ ಉತ್ಸವಹೊರಡುವ ಮೊದಲು ಲಿಂಗಾಯತರನ್ನು ಕರಿಸಿ ಬ್ರಾಹ್ಮಣರ ಒಂದು ಕೂದಲ ಹೊರತು ಆದರೆ ಉತ್ಸವ ಬಂದುಮಾಡುತ್ತೇವೆ ಅಂತ ಹೇಳಿದ್ದರೆ, ಏನೂ ದಾಂಧಲ ಆಗುತ್ತಿದ್ದಿಲ್ಲ. ಅಂತ ಬರದಿರುತ್ತಾರೆ. ಇದರಲ್ಲಿ ಇವರ ವಿಚಾರಶೂನ್ಯತ್ವವು ಉಘಡಕಂಡುಬರುತ್ತದೆ ಯಾಕೆಂದರೆ ಮೊದಲು ದಂಗೆಯಾಯಿತು ಅಂತ ನಿರಾಧಾರವಾಗಿ ಗೃಹಿತಮಾಡಿಕೊಂಡಿದ್ದುದು ಅವರ ಮೊದಲನೇ ತಪ್ಪು; ಈಗಾದ ಕಿಂಚಿತ್ತು ಗಡಬಡಿ ಸಹ ಆಗಲಿಕ್ಕೆ ಬ್ರಾಹ್ಮಣರೇ ಕಾರಣರಿದ್ದು, ಲಿಂಗಾಯತರಿಗೆ ಮಾಮಲೇದಾರ ಸಾಹೇಬರು ಉಪದೇಶಮಾಡುವ ಅವಶ್ಯಕತೆ ಏನಿತ್ತೆಂಬದನ್ನು ವಿಚಾರಮಾಡದೆ ಇರುವದು ಎರಡನೇ ತಪ್ಪು. ಹಾಗು ಪೋಲೀಸರು ಮತ್ತು ಮಾಮಲೇದಾರ ಸಾ॥ ರವರು ಪ್ರಸಂಗಕ್ಕೆ ಬೇಕಾದ ಯೋಗ್ಯಬಂದೋಬಸ್ತನ್ನು ಇಟ್ಟಿದ್ದರೂ ಸಹ ಅಸೂಯಭಾವದಿಂದ ಮನಸ್ಸಿಗೆ ಬಂದಂತೆ ಬರದದ್ದು ಮೂರನೆಯ ತಪ್ಪು ಇರುತ್ತದೆ. ಈ ಹೊತ್ತಿನವರೆಗೆ ತಮ್ಮಲ್ಲಿ ಕೇಸರಿ ಮರಾಠಾ ಇಂದು ಪ್ರಕಾಶ ಮೊದಲಾದ ವಜನದಾರ ವರ್ತಮಾನಪತ್ರಗಳು ಅವೆ ಮತ್ತು ಅವುಗಳ ಮುಖಾಂತರ ಏನಾದರೂ ಗೊಂದಲವೆಬ್ಬಿಸಲಿಕ್ಕೆ ದೊಡ್ಡ ಸಾಧನೆಯದೆ ಅಂತ ಹೆಮ್ಮೆಮಾಡುತ್ತಿರುವ ಬ್ರಾಹ್ಮಣ ವರ್ಗದವರು ಹಿಂದೆ ಸ್ಟಾರ್ ಪತ್ರದಲ್ಲಿ ಪ್ರಕಟವಾಗಿರುವ ಮುಂಬಯಿ ಸರ್ಕಾರದಪ್ರೆಸ್ ನೋಟಿನ ಮೇಲಿಂದ ಇವರ ಲೇಖಗಳು ಇನ್ನು ಮುಂದೆ ಸರ್ಕಾರದ ಗಮನಕ್ಕೆ ಒಂದು ಕವಡಿಕಿಮ್ಮತ್ತಾದರೂ ಬಾಳುವವೆ ಹ್ಯಾಗೆ ಎಂಬದನ್ನು ವಾಚಕರು, ಮುಖ್ಯವಾಗಿ ಸದರಪತ್ರಕಾರರು ಯೋಜಿಸತಕ್ಕದ್ದು.

ಈ ಉತ್ಸವ ಸಮ್ಮಂಧದಿಂದ ವಿಜಾಪುರದ ಒಬ್ಬ ಪ್ರಸಿದ್ಧ B. A., L L B. ವಕೀಲರು ತಾರುಮಾಡಿದ್ದಕ್ಕಾಗಿಯೂ ಬಾಗಲಕೋಟೆಯ ಒಬ್ಬ [illegible] ಮಾಮಲೇದಾರ [illegible] ೨ನೇ ವರ್ಗ ಮ್ಯಾಜಿಸ್ಟ್ರೇಟರು ಸುಳ್ಳುಬಾತಮಿಕೊಟ್ಟದ್ದಕ್ಕಾಗಿಯೂ, ಹಾಗು ಗೈರಸಿಸ್ತ ರೀತಿಯಿಂದ ಲಿಂಗಾಯತ ಸ್ವಾಮಿಗಳ ವಿರುದ್ಧ ಮುನಸೂಫರು ದಾವೆದಾಖಲಮಾಡಿಕೊಂಡದ್ದಕ್ಕಾಗಿಯೂ ಸರಕಾರದವರು ಈ ಮೂವರ ಜವಾಬ ಕೇಳಿದ್ದು ಕೆಲಸ ನಡೆದದೆಯಂತೆ ತಿಳಿಯುತ್ತದೆ. ಈಗ ಪೇಶ್ವೆರಾಜ್ಯವಿಲ್ಲ ಅಥವಾ ಈಗಿನ ನ್ಯಾಯಪ್ರಿಯರಾದ ಬ್ರಿಟಿಷ್ ಸರ್ಕಾರದವರು ಮೊದಲಿನ ಏನಿಳೆರಾಜರಂತೆ ಛಲ್ತೆಕತ್ತಿಬಾಹದ್ದೂರರಿರದೆ ಲೇಖಣೀಬಹಾದ್ದೂರರೂ ಸಹ ಇದ್ದಾರೆ. ಅದ್ದರಿಂದ ಈಗಿನ ಕಾಲಕ್ಕೆ ಬ್ರಾಹ್ಮಣರ ಕುಜೋಟ್ಯಗಳು ಎಂದೂ ನಡೆಯಲಾರವೆಂಬದನ್ನು ಅವರು ಪೂರ್ಣಲಕ್ಷ್ಯದಲ್ಲಿಡತಕ್ಕದ್ದು. ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು.

ತಮ್ಮ ನ್ಯಾಯಾಭಿಲಾಷಿ,
ಬಾಗಲಕೋಟೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೪—೦.
೨ ರಿಂದ ೪ ರವರಿಗೆ ೧—೧೦—೦.
ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

11

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕವು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಸೆರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೦—೦ ರೂ. ೩. ಬಾ, ೩—೧೨—೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನೆದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವವು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಅಜೀರ್ಣರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನೇ. ಆ॥ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ವಿಜಾಪುರ (ಇಂಡಿಯಾ)

೩೦ ಕಥೆಗಳು. ಸಚಿತ್ರ. ೩೧೨ ಪುಟಗಳು.

ಶುಕಸಪ್ತತಿ ಕಥೆಗಳು.

25

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿ ವಂದಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಪ್ಪೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

22 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಪ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ

ಉತ್ತಮ ಗ್ರಂಥಗಳು.

14

ಶಿವಸ್ತವಶಿರೋಮಣಿಃ—ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

32

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯು ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುತ್ತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೩. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯುಳ್ಳ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೬ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ ಸೀತಾರಾಮಾಂಜನೇಯವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

66

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೫೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ದೇಹಜಾಡ್ಯಗಳಲ್ಲಿ ಬಹುಳ ಖ್ಯಾತಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೨೪ ಮಾತ್ರೆ ಸೀಸೆ ೦-೬-೦

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೬೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇಯ ಇಸವಿ ನವಂಬರ್ ತಾ॥ ೨೭ ರಿಂದ ೧೯೧೧ ನೇಯ ಡಿಸೆಂಬರ್ ತಾ॥ ೩ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಮಾರ್ಗಶಿರ ಶು॥ ಷಷ್ಠಿಯಿಂದ ಮಾರ್ಗಶಿರ ಶು॥ ದ್ವಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ತೇದಿ
27	[1] ಸೋ	ಷ	18-50	ಶ್ರವ	14-48	12
28	[2] ಮಂಗ	ಸ	17-28	ಧನಿ	19-43	13
29	[3] ಬುಧ	ಅ	19-38	ಶತ	23-33	14
30	ಗುರು	ನ	20-18	ಪೂಭಾ	26-3	15
1	ಶುಕ್ರ	ದ	22-4	ಉ॥ಭಾ	27-28	16
2	[4] ಶನಿ	ಏ	19-58	ರೇ	27-58	17
3	[5] ಭಾನು	ದ್ವಾ	17-20	ಅಶ್ವಿ	26-39	18

(1) ಚಂಪಾಷಷ್ಠಿವ್ರತಂ, ಸುಬ್ರಹ್ಮಣ್ಯದಲ್ಲಿ ರಥೋತ್ಸವ, ಅಮೃತ ಸಿದ್ಧಿಯೋಗಃ. (2) ನಂದಸಪ್ತಮೀ. (3) ವಿದ್ಯಾವಲಭತೀರ್ಥರ ಪುಣ್ಯದಿನ, ; ಮಾರ್ಗಶಿರ ಲಕ್ಷ್ಮೀವ್ರತಂ. (4) ಸರ್ವತ್ರ ಏಕಾದಶಿ. (5) ದಗ್ಧಯೋಗಃ, ಶ್ರೀನಿವಾಸದೇಶಿಕೇಂದ್ರ ಬ್ರಹ್ಮತಂತ್ರಪರಕಾಲಸ್ವಾಮಿಗಳ ತಿರುನಕ್ಷತ್ರಂ

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಕ್ಷ್ಯೆಷ್ಟನ ಕೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಕ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಸೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸೆ ೧೯೧೧ ನೆಯ ಇಸವಿ ಡಿಸೆಂಬರ್ ತಾರೀಖು ೪ ನೆಯ ಸೋಮವಾರ. [ಸಂಚಿಕೆ ೪೯

ಊದಬತ್ತಿಗಳು.

39

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೬-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಪಲ್ಲಿಕೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸಿಂಗಿರಾಜಪುರಾಣವಿಜಯಂ

5

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳವುದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರ ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ದಿವಟಿಗೆಬೀದಿ
ಮೈಸೂರು.

5 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು

ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೩-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಷ್ಟ್ಯಾಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯ. ೩ ವರ್ಷದ ಒಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಧವಪ್ರಭುಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೮೦)

11

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಸೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೮ ಆ.

ವಿಳಾಸ:– ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊಳಬೀದಿಯಲ್ಲಿರುವ ಶ್ರೀಕಂಠಾರಾಧ್ಯ

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೬-೦
ಕರಸ್ಥಾಪಂಚೆನ್ನ	೦-೪-೦
ಸಟೀಕಕರ್ಣಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

16

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧-೩-೦. ವೀರಶೈವ ಮತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.– ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೆಯಿಂದಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.– ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.–೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ ತಿಂಗಳೂ ೫೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ. ಮೈಸೂರು.

ಜಂಗೀ ಕುಸ್ತಿಗಳು ! ಜಂಗೀ ಕುಸ್ತಿಗಳು !!

ನವಲಗುಂದದಲ್ಲಿ ಜರಗುವ ಕಾರೋನೇಶನ್ ದರ್ಬಾರ ಜಾಹೀರಾತು.

ಇದರ ಮೇಲಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ:—

ನಮ್ಮನ್ನು ಆಳುವ ಹಿಂದುಸ್ಥಾನದ ಚಕ್ರವರ್ತಿಗಳಾದ ಪರಮಪೂಜ್ಯ ವ ದಯಾಳು ೫ ನೆಯ ಜಾರ್ಜ ನೃಪ ಸಾರ್ವಭೌಮ ಮತ್ತೂ ಚಕ್ರವರ್ತಿನಿಯರಾದ ಮೇರಿ ಮಹಾರಾಣಿ ಸಾಹೇಬರ ರಾಜ್ಯಾರೋಹಣದ ದರ್ಬಾರದ ಉತ್ಸವದ ದೆಸೆಯಿಂದ ನವಲಗುಂದದಲ್ಲಿ ತಾ|| ೬ನೆಯ ಡಿಸೆಂಬರ ೧೯೧೧ನೆ ಯಾಇಸ್ವಿ ಬುಧವಾರದಿಂದಾ ತಾ|| ೧೧ ಡಿಸೆಂಬರ ೧೯೧೧ನೆಯ ಇಸ್ವಿ ಸೋಮವಾರದವರೆಗೆ ಜಂಗೀ ಕುಸ್ತಿಗಳನ್ನು ಆಡಿಸಿ, ಭಂಗಾರ, ಬೆಳ್ಳಿಯ ಖಡೆಗಳು, ಶಾಲು, ಘಟಕಾವಸ್ಗೆರೆ ವಸ್ತ್ರಗಳು ಕುಸ್ತಿ ಆಡುವವರ ಯೋಗ್ಯತೆಯ ಮೇಲಿಂದಾ ಇನಾಂ ಕೊಡುವದರಲ್ಲಿ ಬರುವದು. ಮತ್ತೂ ಸದರ ತಾ|| ೬ ರಿಂದ ೧೨ ಡಿಸೆಂಬರ ವರೆಗೆ ಬಾಲಬಾಲಕಿಯರ ಆಟನೋಟಗಳು, ಗಾಯನ, ನರ್ತನ, ಮದ್ದುಹಾರಿಸುವದು, ದೀಪೋತ್ಸವ ಬಡಜನರಿಗೆ ಅನ್ನವಸ್ತ್ರ ಕೊಡುವದು ಮುಂತಾದ ಸಮಾರಂಭಗಳು ಜರಗುವವು. ಆದ್ದರಿಂದ ಕುಸ್ತಿ ಆಡತಕ್ಕವರೂ, ನೋಡತಕ್ಕವರೂ ಈ ಮಹೋತ್ಸವದ ಸಂಧಿಯನ್ನು ಕಳಕೊಳ್ಳದೆ ಅಗತ್ಯವಾಗಿ ಬಂದು ಮನಸ್ಸಿಗೆ ವ ನೇತ್ರಗಳಿಗೆ ಆನಂದವನ್ನು ಉಂಟುಮಾಡಿಕೊಳ್ಳಬೇಕೆಂದು ನಮ್ಮ ಸವಿನಯ ಸೂಚನೆಯುಂಟು. ನವಲಗುಂದದಲ್ಲಿ ಈಗ ಪ್ಲೇಗು ಶಾಂತವಾಗಿದೆ, ಮತ್ತು ನೀರಿನ ಸಮೃದ್ಧಿಯುಂಟು. ತಾ|| ೨೦-೧೧-೧೯೧೧.

ಕಮಿಟಿಯ ಮೆಂಬರರುಗಳು.

ರಾವಸಾಹೇಬ ರಾಮರಾವಶೇಷೋ ಕಟಗೇರಿ ಮಾಮಲೇದಾರ.

ಮಿ|| ಕೊಟ್ರಬಸಪ್ಪಾ ಗುರುಪಾದಪ್ಪಾ ಭಾವಿಕಟ್ಟಿ ಸ್ಪೆಷಲ್ ಜೆ|| ಕಾ||

„ ದತ್ತಾತ್ರಯಶಿವರಾಮಶಿರಾಳೆ ಹೆಡ್ಡ ಕಾರಕೂನ.

„ ಬಾಪುರಾವ ಬೆಟಗುಬ್ಬಿ ಪೋಲೀಸ ಸಬ್ ಇನಸ್ಪೆಕ್ಟರ್.

„ ನಾನಾಸಾಹೇಬಗಾಯ್ಕವಾಡ ಯಕ್ಸಾಯಿಜ ಇ||

„ ಕೃಷ್ಟರಾವ ಯಾತಿಗಿರಿ ಸಬ್ಬ ರಿಜಿಸ್ಟ್ರರ.

„ ಲಕ್ಷ್ಮಣರಾವ ಕಿತ್ತೂರಕರ ಸಬ್ಬ ಅಸಿಸ್ಟೆಂಟ ಸರ್ಜನ.

ಮ್ಯುನ್ಸಿಪಲ್ ಮೆಂಬರರು.

೧ ಮಿ|| ಕೃಷ್ಣಪ್ಪಾ ಹೆಬಸೂರ.
೨ „ ಸಂಗಪ್ಪಾ ಶಿದ್ರಾಮಸೆಟ್ಟಿ.
೩ „ ಬಸಪ್ಪಾಶಿದ್ರಾಮಸೆಟ್ಟಿ.
೪ „ ಅಡಿವೆಪ್ಪಾ ಅಮರಸೆಟ್ಟಿ.
೫ „ ಶಿದ್ದಪ್ಪಾ ಸುಬೇದಾರ.
೬ „ ಬಸನಗೌಡಾಪಾಟೀಲ.
೭ „ ಮಾರುಸಾಬಕಾಜಿ.

ಲೋಕಲ್ ಬೋರ್ಡ ಮೆಂಬರರು.

೮ ಮಿ|| ಹನುಮಂತಗೌಡಾ ಪಾಟೀಲ.
೯ „ ಮಹಮ್ಮದ ಗವಸುಸಾಬಖುದಾವಂದ.
೧೦ „ ಕಲ್ಲಪ್ಪಾ ಕುಬಸದ.
೧೧ „ ರಾಮಚಂದ್ರ ಕೃಷ್ಣ ಬಮ್ಮಿಗಟ್ಟಿ.

ಊರೊಳಗಿನ ಪ್ರಮುಖ ಜನರು.

೧೨ ಮಿ|| ಗುಸ್ತಾಜಿಬಾರಿಯಾ ಆಬಕಾರಿ ಕಂಟ್ರ್ಯಾಕ್ಟದಾರ.
೧೩ „ ಕೃಷ್ಟಪ್ಪಾ ಧಾರವಾಡ.
೧೪ „ ಶಡದಾಜಿ ಮಾರವಾಡಿ.
೧೫ „ ಗಂಗಾರಾಮ ಮಾರವಾಡಿ.
೧೬ „ ಮಾರ್ತಾಂಡಪ್ಪಾ ಅನಿಗುಂದಿ.

ದಿಲ್ಲಿಯ ದರ್ಬಾರು.

ಬಾದಷಾಯಿ ಮೇಳ.

ಈ ಅಸದೃಶವಾದ ಮೇಳವು ದಿಲ್ಲಿಯ ಕೋಟೆಯ ಕೆಳಗಡೆ ಹರಿಯುತ್ತಿರುವ ಯಮುನಾ ನದಿಯ ದಡದಮೇಲೆ ಯುಧಿಷ್ಠಿರ (ಧರ್ಮರಾಯ) ನು ಅಶ್ವಮೇಧಯಾಗವನ್ನು ಮಾಡಿದಂತಹ ಮತ್ತೂ ಮೊಗಲ ಚಕ್ರವರ್ತಿಗಳು ವಿನೋದೋತ್ಸವಗಳನ್ನು ನಡೆಯಿಸಿದಂತಹ ವಿಶಾಲವಾದ ಬೈಲಿನಲ್ಲಿ ಈ ತಾ|| ೧ ರಿಂದ ಉಪಕ್ರಮಿಸಲ್ಪಟ್ಟಿರುವುದು. ದರ್ಬಾರು ನಡೆಯುವ ಮತ್ತೂ ಅತಿಥಿಗಳಿಳಿದುಕೊಂಡಿರುವ ಸ್ಥಳಗಳಿಂದ ಹ್ಯಾಮಿಲ್ಟನ್ ರೋಡು ಸ್ಟೇಷನ್ನಿಗೂ, ಇಲ್ಲಿಂದಲ್ಲಿಗೂ ರೈಲುಬಂಡಿಯು ಪದೇಪದೇ ಓಡಾಡುತ್ತಿರುವುದು. ಈ ಮೇಳದಲ್ಲಿ ಬಹು ಮುಖ್ಯವಾದ ಮತ್ತೂ ಪ್ರೇಕ್ಷಣೀಯವಾದ ಭಾಗಗಳು ತಾ|| ೧೦ ರಲ್ಲಿ ಆರಂಭವಾಗಿ ೧೮ ರ ವರೆಗೂ ನಡೆಯುವುವು. ಏತನ್ಮಧ್ಯೆ ಸ್ಪರ್ಧೆಯಿಂದ ನಡಿಯತಕ್ಕ ಕುಸ್ತಿಗರಿನ ಕಾಳಗ, ಕತ್ತಿಯ ಸಾಧನೆ, ಹಗ್ಗವನ್ನೆಳೆಯುವುದು ಮೊದಲಾದ ಆಟಗಳು ಪ್ರತಿನಿತ್ಯದಲ್ಲೂ ನಡೆಯುವುವಲ್ಲದೆ, ದೊಡ್ಡ ಜಾತ್ರೆಯ ಕಾಲದಲ್ಲಿ ಆಗುವಂತೆ ನಾಟಕ, ಬಯಾಸ್ಕೋಪು, ಸರ್ಕಸ್ಸು, ವಿಚಿತ್ರವಾದ ಪ್ರಾಣಿಗಳ ಪ್ರದರ್ಶನ ಮೊದಲಾದ ನೋಟಗಳು ನಿತ್ಯದಲ್ಲೂ ಆಗುವುವು. ಈ ವೊತ್ತ ಮೊದಲು ವಿನೋದಗಳನ್ನು ನೋಡಲು ಪರಸ್ಥಳದಿಂದ ಜನರು ಬಿಡಲ್ಪಡುವುದಿಲ್ಲ. ಆದರೆ ದರ್ಬಾರು ಕಾಳೆಯದಲ್ಲೂ ಊರಿನೊಳಗೂ ವಾಸಿಸತಕ್ಕ ಜನರುಮಾತ್ರ ನೋಡಲವಕಾಶವಿರುವುದು. ತಾ|| ೧೩ ರಲ್ಲಿ ಮೇಳದ ಮುಖ್ಯವಾದ ಭಾಗಗಳು ಜರುಗುವುವು. ಈ ದಿವಸ ಬೆಳಗ್ಗೆ ಹಿಂದೂ, ಸಿಕ್, ಮಹಮ್ಮದೀಯ, ಜೈನ, ಆರ್ಯಸಮಾಜ ಈ ಮತಗಳ ಪ್ರತಿನಿಧಿಗಳು ತಂತಮ್ಮ ದೇವತಾರಾಧನೆಯನ್ನು ತೀರಿಸಿಕೊಂಡು ಎಲ್ಲರೂ ಒಟ್ಟುಗೂಡಿ ವಾದ್ಯವಿಶೇಷದೊಡನೆ, ಮೇಳವು ನಡೆಯತಕ್ಕ ಬೈಲಿನಲ್ಲಿ ಉತ್ಸವಗೊಂಡು ಬರುವರು. ಈ ಭಾಗವು ಅತ್ಯಂತ ಆಹ್ಲಾದಕರವೂ, ಪ್ರೇಕ್ಷಣೀಯವೂ ಆಗಿರುವುದು. ಮಧ್ಯಾಹ್ನದಲ್ಲಿ ರಾಜ ಚಕ್ರವರ್ತಿದಂಪತಿಗಳು ಹಿಂದೆ ಮಹಮ್ಮದೀಯ ಚಕ್ರವರ್ತಿಗಳು ಪ್ರಜೆಗಳಿಗೆ ದರ್ಶನವನ್ನು ಕೊಡಲು ಬಂದು ಕುಳಿತುಕೊಳ್ಳುತ್ತಿದ್ದ ಝುರೋಖಾ ಎಂಬ ವಿಶಾಲವಾದ ಕಿಟಕಿಯಲ್ಲಿ ಮಂಡಿಸುವರು. ಆಗ ಪಂಜಾಬು ಡಿಸ್ಟ್ರಿಕ್ಟುಗಳ ಮತ್ತೂ ಸಂಯುಕ್ತಪ್ರಾಂತಗಳ ಹಾಗೂ ನೆರೆಯ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ಅನಂತಾನಂತ ಜನರನ್ನು ಹಿಂಬಿಟ್ಟುಕೊಂಡು ಉತ್ಸವವೈಭವದಿಂದ ಪ್ರಭುದಂಪತಿಗಳ ಮುಂಗಡೆ ಹೊರಡುವರು. ಸಾಧ್ಯವಾದ ಮಟ್ಟಿಗೆ ಪ್ರೇಕ್ಷಕ ಜನರೆಲ್ಲರಿಗೂ ಚಕ್ರವರ್ತಿದಂಪತಿಗಳ ದರ್ಶನಾನಂದವು ಉಂಟಾಗಲೆಂಬುದರಮೇಲೆ ಈ ರೀತಿ ಏರ್ಪಡಿಸಲ್ಪಟ್ಟಿರುವುದಾಗಿದೆ. ದುಡ್ಡನ್ನು ಕೊಡತಕ್ಕ ಪ್ರೇಕ್ಷಕರಿಗೆ ಈ ಮೇಳದಲ್ಲಿ ಕುಳಿತುಕೊಳ್ಳಲು ಆಸನಗಳು ದೊರಕುವುವು. ಪಾಟಿಯಾಲಾ ಮತ್ತೂ ರಾಂಪುರ ಸಂಸ್ಥಾನಗಳ ರಾಜರುಗಳು ತಮ್ಮ ದೇಶದ ಸರ್ಕಸ್ಸುಗಳೂ, ವಾದ್ಯಗಳೂ ಪ್ರತಿದಿನ ಮಧ್ಯಾಹ್ನದಲ್ಲಿ ನಡೆಯುವಂತೇರ್ಪಡಿಸಿರುವರು. ಸಾಯಂಕಾಲ ೫ ಗಂಟೆಯಿಂದ ೬ ಗಂಟೆಯ ವರೆಗೂ ಮದ್ದಿನ ವಿನೋದವು ನಡೆಯುವುದು. ತಾ|| ೧೩ ರಲ್ಲಿ ನಡೆಯುವ ವನವಿಹಾರೋತ್ಸವದಲ್ಲಿ ಎಲ್ಲ ದೇಶೀಯರಾಜರುಗಳ ಬ್ಯಾಂಡುವಾದ್ಯಗಳು ಆಗುವುವು. ಈದಿವಸಮಾತ್ರ ಆಟಗಳ ಸ್ಪರ್ಧೆಯು ನಡೆಯುವುದಿಲ್ಲವು. ಅದರೆ ಇತರ ದಿವಸಗಳಲ್ಲಿ ಪಂಜಾಬು ಮತ್ತೂ ಸಂಯುಕ್ತಪ್ರಾಂತಗಳಿಂದ ಬಂದಿರತಕ್ಕ ಅತ್ಯಂತ ಪ್ರಸಿದ್ಧರಾದ ಪೈಲ್ವಾನರುಗಳ ಕುಸ್ತಿಗಳು, ಕವಡಿ, ಸಾಮಂಚೆಪಕ್ಕಿ, ಪಿರ್ಕಾತ್, ಘೋಡ, ಗಟ್ಕ ಪರ್ರಿ, ದಂಡ ಟಗರುಕಾಳಗ, ಪಟಗಳನ್ನು ಹಾರಿಸುವುದು, ಗುದ್ದುವಾಸಿಗಳ ಕುಣಿತ, ಹಗ್ಗವನ್ನೆಳೆಯುವುದು, ಸಂಗೀತ, ನರ್ತನ, ದೊಂಬರಾಟ, ಹಾವಾಡಿಗರ ಯಕ್ಷಣಿ, ಕತ್ತಿ–ದೊಣ್ಣೆ ಮೊದಲಾದುವುಗಳ ಪಟಾವರ್ಸೆ, ಪಾರಿವಾಳ ಹಕ್ಕಿಗಳನ್ನು ಹಾರಿಸುವುದು ಮುಂತಾದ ವಿನೋದಗಳು ನಡೆಯುವುವು. ಕುಸ್ತಿಗಳನ್ನು ನೋಡಲು ದುಡ್ಡನ್ನು ಕೊಡಬೇಕಾಗಿದೆಯೇ ಹೊರತು ಇತರ ವಿನೋದಗಳನ್ನೋಡಲು ಏನನ್ನೂ ಕೊಡಬೇಕಾದುದಿಲ್ಲವು. ಇದೇ ಸಂದರ್ಭದಲ್ಲಿ ಅನೇಕ ನಾಟಕಗಳು, ಬಯಾಸ್ಕೋಪುಗಳು, ಮೆರಿಗೊರೌಂಡು ಎಂಬ ಆಟವು, ಮಾಯಾಗನ್ನಡಿಯನ್ನು ತೋರಿಸುವುದು ಮೊದಲಾದ ವಿನೋದಗಳು ನಡೆಯುವುವು. ಪಾಟಿಯಾಲಾ ಮತ್ತೂ ರಾಂಪುರ ಸಂಸ್ಥಾನಗಳ ಸರ್ಕಸ್ಸಿನವರು ತೋರಿಸುವ ಅದ್ಭುತವಾದ ಅಂಗಸಾಧನೆಯ ಚಮತ್ಕಾರಗಳು ಅತ್ಯಂತ ಪ್ರೇಕ್ಷಣೀಯವಾಗಿರುವುವು. ತಾ|| ೪ ಮತ್ತೂ ೫ ರಲ್ಲಿ ಸಿಂಧಿಯಾ ಮಹಾರಾಜರು ನಾಹನ ಸಂಸ್ಥಾನದ ಲೆ|| ಕರ್ನಲ್ ರಾಜಕುಮಾರ ವೀರ ವಿಕ್ರಮಸಿಂಗ್‌ರವರ ಸಹಾಯದಿಂದ ಕೋಟೆಗೆ ಮುತ್ತಿಗೆ ಹಾಕುವುದನ್ನು ತೋರಿಸುವರು. ಈ ಮೇಳಾ ನಡೆಯತಕ್ಕ ಸ್ಥಳದಲ್ಲಿ ಆಸನಗಳು ಸಿದ್ಧವಾಗಿರುವುವು. ದುಡ್ಡನ್ನು ಕೊಟ್ಟು ಇವುಗಳ ಮೇಲೆ ಕುಳಿತುಕೊಂಡು ಆ ಬೈಲಿನಲ್ಲೆಲ್ಲ ಸುತ್ತಿ ವಿನೋದಗಳನ್ನೋಡಬಹುದು. ಇದಲ್ಲದೆ ನೋಟಕರ ಸೌಲಭ್ಯಕ್ಕಾಗಿ ಟ್ರಾಂ ಬಂಡಿಗಳು ಆ ಬೈಲಿನಲ್ಲಿ ವಿನೋದೋತ್ಸವಗಳು ನಡೆಯತಕ್ಕ ಸ್ಥಳಗಳಲ್ಲೆಲ್ಲ ಚಕ್ರಾಕಾರವಾಗಿ ಓಡಾಡುತ್ತಿರುವುವು. ಇಲ್ಲಿ ಜನರ ಕಣ್ಮನಗಳನ್ನು ಸೆಳೆಯುವ ವಿಚಿತ್ರವಾದ ಪದಾರ್ಥಗಳ ದೊಡ್ಡ ದೊಡ್ಡ ಅಂಗಡಿಗಳು ಇಡಲ್ಪಟ್ಟಿವೆ.

ತಾ|| ೧೦ ರಿಂದ ಪರಸ್ಥಳೀಕರು ಈ ಮೇಳ ನಡೆಯತಕ್ಕ ಸ್ಥಳದ ಸಮೀಪದಲ್ಲಿ ತಂತಮ್ಮ ಬಂಡಿಗಳ ಸಮೇತ ಇಳಿದುಕೊಳ್ಳಲು ಸ್ಥಳವು ಬಿಟ್ಟಿಯಾಗಿ ಕೊಡಲ್ಪಡುವುದು. ಮತ್ತೂ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಚಾಪೆ, ಗಳ, ಹುರಿ ಮೊದಲಾದ ಪದಾರ್ಥಗಳು ಅಲ್ಲೇ ಮಾರಾಟಕ್ಕಿಡಲ್ಪಟ್ಟಿರುವುವು. ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ಈ ಮೇಳ ನಡೆಯತಕ್ಕ ಸ್ಥಳದಲ್ಲಿ ದೀಪಗಳನ್ನು ಹೊತ್ತಿಸಲು, ಜಂದ್ ಸಂಸ್ಥಾನದ ರಾಜರು ಜನರಿಗೆ ಬಿಟ್ಟಿಭೋಜನವನ್ನು ಮಾಡಲು ಮತ್ತೂ ಸರದಾರ್ ನಾರಾಯಣ ಸಿಂಗ್‌ರವರು ಕುಡಿಯುವ ನೀರನ್ನೊದಗಿಸಲು ತಮ್ಮ ಸ್ವಂತ ವೆಚ್ಚದಿಂದ ತಕ್ಕೇರ್ಪಾಟುಗಳನ್ನಿಟ್ಟಿರುವರು. ಪಂಜಾಬಿನ ಸಿವಿಲ್ ಆಸ್ಪತ್ರೆಯ ಇ|| ಜನರಲ್‌ರವರು ಜನರ ಆರೋಗ್ಯಕ್ಕಾಗಿ ಬಹು ಉತ್ಕೃಷ್ಟವಾದ ಏರ್ಪಾಟನ್ನು ಮಾಡಿರುವರು. ಬಡಜನರಿಗೆ ಅನ್ನವನ್ನು ಹಾಕಲು ಬಹು ಅಗಾಧವಾದ ಏರ್ಪಾಟು ಇಡಲ್ಪಟ್ಟಿರುವುದು. ಇದಕ್ಕಾಗಿ ಚಕ್ರವರ್ತಿಯವರು ವಿಶೇಷ ಹಣವನ್ನು ದಯಪಾಲಿಸಿರುವರಲ್ಲದೆ ಅನೇಕ ಅನ್ನದಾತರುಗಳು ಬೇರೆ ಬೇರೆ ಜಾತಿಯ ಜನರಿಗೆ ಭೋಜನವನ್ನು ಮಾಡಿಸಲುದ್ಯುಕ್ತರಾಗಿರುವರು. ಜಯಪುರದ ಮಹಾರಾಜರವರು ದಿಲ್ಲಿಯ ಪಟ್ಟಣದ ಬಾಗಿಲಿನ ಹೊರಗಿರುವ ಕೋಟ್ಲಾ ಫೆರೂಜ್‌ಷಾ ಎಂಬಲ್ಲಿ ತಮ್ಮ ಆನೆಗಳಿಂದ ಅನೇಕ ವಿಧವಾದ ಚಮತ್ಕಾರಗಳನ್ನು ಮಾಡಿಸುವವರಾಗಿರುವರು. ತಾ|| ೧೨ ರಲ್ಲಿ ಚಕ್ರವರ್ತಿ ದಂಪತಿಗಳು ದರ್ಬಾರು ಮಂಟಪಕ್ಕೆ ದಯಮಾಡಿಸುವಾಗಲೂ, ಅಲ್ಲಿಂದ ಬಿಡಾರಕ್ಕೆ ಹಿಂತಿರುಗುವಾಗಲೂ ನಡೆಯತಕ್ಕ ಉತ್ಸವಗಳನ್ನೋಡಲು ಪ್ರತಿನಿಧಿಗಳಿಗೆ ಪ್ರತ್ಯೇಕವಾದ ಸ್ಥಳಗಳು ಕಾದಿಡಲ್ಪಟ್ಟಿರುವುವಲ್ಲದೆ, ೧೦೦೦೦ ಜನರು ನಿಂತುಕೊಳ್ಳಲು ಒಂದು ಸ್ಥಳವು ಗೊತ್ತುಮಾಡಲ್ಪಟ್ಟಿದೆ. ಮತ್ತೂ ಇತರರೂ ಉತ್ಸವ ಬರತಕ್ಕ ಮಾರ್ಗದ ಇಕ್ಕೆಲದಲ್ಲೂ ನಿಂತುಕೊಳ್ಳಲು ಅವಕಾಶವು ಕಲ್ಪಿಸಲ್ಪಟ್ಟಿರುತ್ತದೆ.

ಚಕ್ರವರ್ತಿದಂಪತಿಗಳು ಮಂಡಿಸುವ ಸಿಂಹಾಸನಗಳು.

ದಿಲ್ಲಿಯ ದರ್ಬಾರು ಮಹೋತ್ಸವದಲ್ಲಿ ಚಕ್ರವರ್ತಿದಂಪತಿಗಳು ಮಂಡಿಸುವುದಕ್ಕಾಗಿ ೪ ಸಿಂಹಾಸನಗಳು ಸಿದ್ಧಗೊಳಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಎರಡು ಸಿಂಹಾಸನಗಳು ಮಾತ್ರ ದರ್ಬಾರಿನಲ್ಲುಪಯೋಗಿಸಲ್ಪಡುವುವಾದುದರಿಂದ ೮೦೦೦೦ ರೂಪಾಯಿಗಳು ಕರಗಿಸಲ್ಪಟ್ಟು ಮಾಡಲ್ಪಟ್ಟಿರುತ್ತವೆ. ಉಳಿದೆರಡು ಸಿಂಹಾಸನಗಳಿಗೆ ಬೆಳ್ಳಿಯ ಗಿಲೀಟು ಮಾಡಲ್ಪಟ್ಟಿರುತ್ತವೆ. ಈ ಸಿಂಹಾಸನಗಳ ಒಳಗಡೆ ಅಮೋಘವಾದ ಮಕಮಲ್ಲು ಬಟ್ಟೆಗಳು ಹಾಕಲ್ಪಟ್ಟು ಅವುಗಳಿಗೆ ಕಲಾಪತ್ತಿನ ಸರಿಗೆಯಿಂದ ಅತ್ಯಂತ ಶ್ಲಾಘ್ಯವಾದ ಕಸೂತಿಯ ಕೆಲಸವು ಮಾಡಲ್ಪಟ್ಟಿರುತ್ತದೆ.

ಈಗ ದಿಲ್ಲಿಯ ಪಟ್ಟಣಕ್ಕೆ ಪ್ರತಿನಿತ್ಯದಲ್ಲೂ ೪೦ ವೇಳೆಗಿಂತಲೂ ಹೆಚ್ಚಾಗಿ ರೈಲು ಬಂಡಿಗಳು ಬರುತ್ತಿವೆ. ಕಳೆದ ತಾ|| ೨೩ ರಲ್ಲಿ ಆಗ್ರಾದಿಂದ ಬಂದ ಹೆಚ್ಚುಗಟ್ಟಲೆಯ ಬಂಡಿಯಲ್ಲಿ ಯೂರೋಪು ಮತ್ತೂ ಅಮೇರಿಕಾ ದೇಶಗಳ ಪ್ರಸಿದ್ಧ ಬೊಕ್ಕಸಗಾರರು, ಶ್ರೀಮಂತರು, ಪ್ರಖ್ಯಾತರಾದ ಬೇಟೆಗಾರರು ಮೊದಲಾದ ೧೮ ಜನ ದೇಶಸಂಚಾರಕರು ಬಂದರು. ಇವರೆಲ್ಲರೂ ಚಕ್ರವರ್ತಿದಂಪತಿಗಳ ಸ್ವಾಗತಕ್ಕಾಗಿ ಮಾಡಲ್ಪಡುತ್ತಿರುವ ಅದ್ಭುತ ಸವರಣೆಯನ್ನೂ, ಡೇರಾಗಳಿಂದಲೇ ಒಂದು ಪಟ್ಟಣವು ನಿರ್ಮಾಣವಾಗಿರುವುದನ್ನು ನೋಡಿ ಪರಮಾಶ್ಚರ್ಯಭರಿತರಾದರು. ಮತ್ತೂ ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸುವುದರಿಂದ ಇಂಗ್ಲಂಡಿನ ರಾಜಮನೆತನದವರಿಗೆ ತಮ್ಮ ಭಾರತ ಪ್ರಜೆಗಳಮೇಲೆ ಎಷ್ಟೊಂದು ಪ್ರೇಮಾತಿಶಯವಿರುವುದೆಂಬುದನ್ನು ಪ್ರದರ್ಶಿಸುವುದು. ಚಕ್ರವರ್ತಿಗಳನ್ನು ಬರಮಾಡಿಕೊಳ್ಳುವ ಸಂಭ್ರಮಕಾರ್ಯಗಳಿಗಾಗಿ ದೇಶೀಯ ರಾಜರುಗಳಿಗೂ, ಭಾರತ ಪ್ರಜೆಗಳಿಗೂ ವಿಶೇಷ ದ್ರವ್ಯವ್ಯಯವಾಗಿರುತ್ತೆನ್ನುವುದರಲ್ಲಿ ಸಂದೇಹವಿಲ್ಲವು. ಆದರೆ ನಮ್ಮಗಳ ಪ್ರಕೃತ ಏರ್ಪಾಟಿನ ಪ್ರಕಾರ ತಾ|| ೧೨ ರ ವರೆಗೂ ಇದ್ದು ದರ್ಬಾರ ವೈಭವವನ್ನು ನೋಡಲಿಕ್ಕಿಲ್ಲದೆ ಲಕ್ನೊ ಮೊದಲಾದಕಡೆ ಸಂಚಾರ ಹೊರಡಬೇಕಾಗಿರುವುದಕ್ಕಾಗಿ ಚಿಂತಿಸುತ್ತೇವೆ. ಎಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳುಹಿದರು.

ವೈಸ್ರಾಯರು ಕಳೆದ ವಾರವೆಲ್ಲ ದಿಲ್ಲಿಯಲ್ಲಿ ನಡೆಯತಕ್ಕ ಪ್ರತಿಯೊಂದೇರ್ಪಾಟನ್ನೂ ಪ್ರತ್ಯಕ್ಷವಾಗಿ ಪರಾಮರಿಸುವುದರಲುದ್ಯುಕ್ತರಾಗಿದ್ದು ತಾ|| ೩೦ ರಲ್ಲಿ ಬೊಂಬಾಯಿಗೆ ಪ್ರಯಾಣಮಾಡಿದರು. ಅಲ್ಲಿ ಚಕ್ರವರ್ತಿ ದಂಪತಿಗಳ ಸ್ವಾಗತವನ್ನು ಮಾಡಿ ತಾ|| ೫ ರಲ್ಲಿ ದಿಲ್ಲಿಗೆ ಹಿಂತಿರುಗಿ ಬರುವರು. ಉತ್ತರಹಿಂದೂಸ್ಥಾನದಲ್ಲಿ ಮಳೆಯೂ, ಹಿಮಾಲಯದಲ್ಲಿ ಹಿಮವೂ ಬೀಳುವುದು ನಿಂತುಹೋಗಿರುವುದರಿಂದ, ದಿಲ್ಲಿಯ ಪಟ್ಟಣದಲ್ಲೂ ನೇಯ ಡಿ|| ಗಳಲ್ಲೂ ಹಗಲೆಲ್ಲ ಚೆನ್ನಾಗಿ ಬಿಸಲುಕಾಯುತ ರಾತ್ರಿಯಲ್ಲಿ ಚಳಿಯಾಗುವುದು. ಜನಾರೋಗ್ಯವು ಚೆನ್ನಾಗಿದೆ. ಮತ್ತೂ ಸಿಡುಬು, ವಾಂತಿಭೇದಿ ಮೊದಲಾದ ಸಾಂಕ್ರಾಮಿಕ ರೋಗಗಳು ಪ್ರಾಪ್ತವಾಗದಿರಲು ಕಠಿನತರವಾದ ಏರ್ಪಾಟು ಇಡಲ್ಪಟ್ಟಿರುತ್ತದೆ. ದರ್ಬಾರಾವರಣದ ಅಂಚೆಯ ಮನೆಯಲ್ಲಿ ಕೆಲಸವು ವಿಪರೀತವಾಗಿ ಹೆಚ್ಚುತ್ತಿದೆ. ಈಗ ನಿತ್ಯದಲ್ಲೂ ೩೦,೦೦೦ ದಿಂದ ೪೦,೦೦೦ ವರೆಗೂ ಕಾಗದ ಮೊದಲಾದ ಪದಾರ್ಥಗಳು ವಿಲೆಮಾಡಲ್ಪಡುತ್ತಿವೆ. ಚಕ್ರವರ್ತಿ ದಂಪತಿಗಳು ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ಅಂದರೆ ಜನವರಿ ತಾ|| ೩ ರಲ್ಲಿ ಬೈಲು ಪ್ರದೇಶದಲ್ಲಿ ದೀಪೋತ್ಸವವೂ ಮದ್ದಿನ ವಿನೋದವೂ ತಾ|| ೬ ರಲ್ಲಿ ಊರಿನಲ್ಲೆಲ್ಲ ದೀಪೋತ್ಸವವೂ ನಡೆಯುವುವು. ಜನರು ತಂತಮ್ಮ ಮನೆಗಳ ಮೇಲೆ ದೀಪೋತ್ಸವವನ್ನು ಮಾಡುವುದಲ್ಲದೆ, ಸರ್ಕಾರಿಯ ಕಟ್ಟಡಗಳ ಮೇಲೆ ೨೦೦೦೦೦ ದೀಪಗಳು ಹೊತ್ತಿಸಲ್ಪಡುವುವು. ರೇಸ್ಕೋರ್ಸು, ತಂತಿಯಾಫೀಸು ಅಂಚೆಯ ದೇವಾಲಯಗಳು ಇವುಗಳೆಲ್ಲವುಗಳು ವಿದ್ಯುಚ್ಛಕ್ತಿಯ ದೀಪಗಳಿಂದಲಂಕರಿಸಲ್ಪಡುವುವು. ಈ ಪಟ್ಟಣದಲ್ಲಿ ನಡೆಯತಕ್ಕ ದೀಪೋತ್ಸವವೂ, ಮದ್ದಿನ ವಿನೋದವೂ ಅಭೂತಪೂರ್ವವಾಗಿರುವುವು. ಕಲಕತ್ತಾ, ದಿಲ್ಲಿ, ಬರ್ಮಾ ಮೊದಲಾದ ಸ್ಥಳಗಳಲ್ಲಿ ಹೊತ್ತಿಸಲ್ಪಡುವುದಕ್ಕಾಗಿ ೪೦ ಟನ್ ಮದ್ದಿನ ಪದಾರ್ಥಗಳು, ದೀಪಗಳು, ದರ್ಬಾರು ಕಾಲದಲ್ಲಿ ಚಕ್ರವರ್ತಿದಂಪತಿಗಳು ಕುಳಿತುಕೊಳ್ಳುವ ರಥದ ಕುದುರೆಗಳ ಜಡಿವಾಣ ಮೊದಲಾದ ಸಾಮಗ್ರಿಗಳು, ಸಿವಿಲ್ ಮತ್ತೂ ಮಿಲ್ಟರಿ ಅಧಿಕಾರಿಗಳು ದರ್ಬಾರಿನ ಕಾಲದಲ್ಲಿ ಧರಿಸಿಕೊಳ್ಳಬೇಕಾಗಿರುವ ಉಡುಪುಗಳು ಮೊದಲಾದ ಸಾಮಗ್ರಿಗಳನ್ನು ತುಂಬಿಕೊಂಡು ಸೀಮೆಯಿಂದ ಬರುತ್ತಿದ್ದ ಡೀಜೆ ಎಂಬ ಹಡಗು ಕೊಲಂಬೊ ಆಚೆ ೫೦೦ ಮೈಲಿ ದೂರದಲ್ಲಿ ಒಂದು ಬಂಡೆಗೆ ತಗಲಿತೆಂಬ ವರ್ತಮಾನ ವಿರುವುದರಿಂದ, ಆ ಹಡಗು ದರ್ಬಾರಿನ ಕಾಲಕ್ಕೆ ಭರತಖಂಡವನ್ನು ತಲಪುವಂತಿಲ್ಲವೆಂದು ವರ್ತಮಾನವಿದೆ. ಹಾಗೆ ಅದು ಬಾರದೆಹೋದಲ್ಲಿ ಮದ್ದಿನ ವಿನೋದವು ನಡೆಯಲು ಅವಕಾಶವಿಲ್ಲದಂತಾಗುವುದು.

ದಿಲ್ಲಿಯ ಪಟ್ಟಣಪ್ರವೇಶವು.

ಈ ತಾ|| ೭ ನೆಯ ಗುರುವಾರ ಬೆಳಿಗ್ಗೆ ೧೧ ಗಂಟೆಯಲ್ಲಿ ಚಕ್ರವರ್ತಿ ದಂಪತಿಗಳು ದಿಲ್ಲಿಯ ಕೋಟೆಯ ಸಮೀಪದಲ್ಲಿರುವ ಸ್ಟೇಷನ್ನಿನಲ್ಲಿ ಬಂಡಿಯನ್ನಿಳಿಯುತಲೆ, ಅವರುಗಳನ್ನು ಗೌರ್ನರ್ ಜನರಲ್ ದಂಪತಿಗಳು ಇದಿರ್ಗೊಂಡು ಸುಖಾಗಮನವನ್ನು ಬಯಸಿ ಮರ್ಯಾದಿಸುವರು; ಸೈನಿಕರ ಮರ್ಯಾದೆಯೂ, ವಾದ್ಯವೂ ಆಗುವುವು. ಮತ್ತೂ ೧೦೧ ಗುಂಡುಗಳು ಹಾರಿಸಲ್ಪಡುವುವು. ಕೋಟೆಯಿಂದ ಬಿಡಾರದ ವರೆಗೂ ಮಾರ್ಗದ ಇಕ್ಕೆಲದಲ್ಲೂ ನಿಂತಿರುವ ಸೈನಿಕರು ೩೩ ಗುಂಡುಗಳಾದಮೇಲೊಂದಾವೃತ್ತಿ, ೩೩ ಗುಂಡುಗಳಾದಮೇಲೆ ಮತ್ತೊಂದಾವೃತ್ತಿ, ೩೪ ಗುಂಡುಗಳಾದಮೇಲೆ ಮಗದೊಂದಾವೃತ್ತಿ ಈ ಪ್ರಕಾರವಾಗಿ ಕೋವಿಗಳನ್ನು ಹಾರಿಸುವರು. ಇಂಡಿಯನ್ ಸ್ಟ್ಯಾಫ್ ಮೆಂಬರುಗಳು, ಬೊಂಬಾಯಿ ಮತ್ತೂ ಮದ್ರಾಸು ಅಧಿಪತ್ಯಗಳ ಗೌರ್ನರುಗಳು ಪಂಜಾಬಿನ ಲೆ|| ಗೌರ್ನರು, ಕಮ್ಯಾಂಡರ್ ಇನ್ ಚೀಫ್‌ರವರು, ಬಂಗಾಳಾ, ಬರ್ಮಾ, ಪೂರ್ವಬಂಗಾಳಾ ಮತ್ತೂ ಅಸ್ಸಾಂ ಮತ್ತೂ ಸಂಯುಕ್ತಪ್ರಾಂತಗಳು ಇವುಗಳ ಲೆ|| ಗೌರ್ನರುಗಳು, ಬಂಗಾಳದ ಚೀಫ್ ಜಡ್ಜಿಯವರು, ಗೌರ್ನರ್ ಜನರಲ್‌ರವರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳು, ನೌಕಾಸೇನೆಯ ಕಮ್ಯಾಂಡರ್ ಇನ್ ಚೀಫ್‌ರವರು, ದಕ್ಷಿಣದ ಸೇನೆಯ ಕಮ್ಯಾಂಡಿಂಗ್ ಜನರಲ್ ಆಫೀಸರು, ಜನರಲ್ ಸ್ಟ್ಯಾಫಿನ ಚೀಫ್‌ರವರು, ಉತ್ತರದ ಸೇನೆಯ ಕಮ್ಯಾಂಡಿಂಗ್ ಆಫೀಸರು, ಮೈಸೂರು ಮತ್ತೂ ಹೈದರಾಬಾದು ಸಂಸ್ಥಾನಗಳ ರೆಸಿಡೆಂಟರು ಮೊದಲಾದ ಇಂಡ್ಯಾಸರ್ಕಾರದ ಅಧಿಕಾರಿಗಳ ಪರಿಚಯವನ್ನು ಗೌರ್ನರ್ ಜನರಲ್‌ರವರು ಚಕ್ರವರ್ತಿದಂಪತಿಗಳಿಗೆ ಮಾಡಿಸುವರು. ಅನಂತರ ಚಕ್ರವರ್ತಿದಂಪತಿಗಳು ಸೇನೆಯವರ ಮರ್ಯಾದೆಯನ್ನು ಕೈಗೊಂಡು ಗೌರ್ನರ್ ಜನರಲ್ ಮತ್ತೂ ಕಮ್ಯಾಂಡರ್ ಇನ್ ಚೀಫರುಗಳೊಡನೆ ಪಾದಚಾರಿಗಳಾಗಿ ಕೋಟೆಯೊಳಗೆ ಹಾಕಲ್ಪಟ್ಟಿರುವ ಡೇರಾಕ್ಕೆ ದಯಮಾಡಿಸುವರು. ಅಲ್ಲಿ ಇವರುಗಳ ಆಗಮನವನ್ನು ನಿರೀಕ್ಷಿಸಿಕೊಂಡಿರುವ ದೇಶೀಯ ಸಂಸ್ಥಾನಾಧೀಶ್ವರರುಗಳು ಚಕ್ರವರ್ತಿಯವರಿಗೆ ಪರಿಚಯಮಾಡಿಸಲ್ಪಡುವರು. ಅನಂತರ ಚಕ್ರವರ್ತಿಗಳು ಅಶ್ವಾರೂಢರಾಗಿ ಸಮಸ್ತ ಮರ್ಯಾದೆಗಳೊಡನೆ ಸೈನಿಕರೂ, ಪೋಲೀಸರೂ, ಸಾಲುಸಾಲಾಗಿ ನಿಂತಿರುವ, ಜನರು ಇಕ್ಕೆಲದಲ್ಲೂ ಕಿಕ್ಕಿರಿದು ನಿಂತಿರುವ ಮತ್ತೂ ಧ್ವಜಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ವಿಶೇಷವಾಗಿಶೃಂಗರಿಸಲ್ಪಟ್ಟಿರುವ ಮಾರ್ಗಗಳಲ್ಲಿ ಅಂದರೆ ದಿಲ್ಲಿಯ ಗೇಟಿನಿಂದ ಹೊರಟು ಜುಮ್ಮಾಮಸೀದಿಯನ್ನು ಬಳಸಿಕೊಂಡು ಎಸ್ಪನೇಡು ರೋಡು, ಚಾಂದನಿಚೌಕ, ಫತ್ತೆಪೂರ್‌ಪೇಟೆ, ಕ್ವೀನ್ಸ್‌ರೋಡು, ಡಫರಿನ್ ಬ್ರಿಡ್ಜ್, ಮೋರಿಗೇಟು, ಬೌಲ್ವಾರ್ಡ್‌ರೋಡು, ರಾಜಾಪುರ ರೋಡು, ಚೌರಿಬುರ್ಜಿ ರೋಡು ಈ ಮಾರ್ಗಗಳಲ್ಲಿ ಬಂದು ಬಿಡಾರವನ್ನು ಸೇರುವರು. ಉತ್ಸವದಲ್ಲಿ ಚಕ್ರವರ್ತಿಗಳ ಮುಂಗಡೆ, ಮಧ್ಯಪ್ರಾಂತಗಳ ಚೀಫ್ ಕಮೀಷನರು, ಪಂಜಾಬಿನ ಲೆ|| ಗೌರ್ನರು ಮದರಾಸು ಮತ್ತು ಬೊಂಬಾಯಿಗಳ ಗೌರ್ನರುಗಳು ಅಶ್ವಾರೂಢರಾಗಿ ಹೊರಡುವರು. ಹಿಂದುಗಡೆ ಅಶ್ವಾರೂಢರಾದ ಗೌರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್‌ರವರೂ, ಸ್ಟೇಟ್ ಸೆಕ್ರೆಟರಿ ಲಾರ್ಡ್ ಕ್ರೂಯವರೂ, ಅವರ ಹಿಂದುಗಡೆ ಚಕ್ರವರ್ತಿನಿಯವರು ರಥಾರೂಢರಾಗಿಯೂ, ಈ ರಥದ ಎರಡು ಪಕ್ಕದಲ್ಲೂ ಅಂಗರಕ್ಷಕರ ಕಮಾಂಡೆಂಟರು ಮತ್ತೂ ಇಂಪೀರಿಯಲ್ ಸೇನೆಯ ಅನರರಿ ಕಮಾಂಡೆಂಟರೂ, ಈ ರಥದ ಹಿಂದೆ ಸೇನೆಯೂ, ಇದರ ಹಿಂದೆ ೨ ನೆಯ ರಥದಲ್ಲಿ ಗೌರ್ನರ್ ಜನರಲ್‌ರವರ ಪತ್ನಿಯವರು, ಇದರ ಹಿಂದುಗಡೆ ೩-೪ ಮತ್ತೂ ೫ ನೆಯ ರಥಗಳಲ್ಲಿ ಚಕ್ರವರ್ತಿದಂಪತಿಗಳ ಕೂಡ ಬಂದಿರುವವರು, ಇವರ ಹಿಂದುಗಡೆ ಸೈನ್ಯವೂ ಇದರ ಹಿಂದುಗಡೆ ಬೆಂಗಾವಲಿನ ಸೈನಿಕರು ಮತ್ತೂ ಪೋಲಿಟಿಕಲ್ ಆಫೀಸರುಗಳು ಇವರುಗಳೊಡನೆ ಹೈದರಾಬಾದಿನ ನೈಜಾಂರವರು, ಬರೋಡಾದ ಗಾಯಕವಾಡ ಮಹಾರಾಜರವರು, ಮೈಸೂರ ಮಹಾರಾಜರವರು, ಕಾಶ್ಮೀರ ಮಹಾರಾಜರು, ಮತ್ತೂ ರಜಪುಟಾನ, ಮಧ್ಯಹಿಂದೂಸ್ಥಾನ, ಮದ್ರಾಸು ಮತ್ತೂ ಬೊಂಬಾಯಿಯಾಧಿಪತ್ಯಗಳ ರಾಜರುಗಳೂ ಇವರ ಹಿಂದುಗಡೆ ಸೈನಿಕರೂ ಈ ಪ್ರಕಾರ ಹೊರಡುವರು. ಈ ಉತ್ಸವವು ರಿಡ್ಜಿನ ಬಳಿ ಬರುತಲೆ ಗೌರ್ನರು ಮೊದಲಾದವರು ಬ್ರಿಟಿಷ್ ಇಂಡ್ಯಾದ ಪ್ರತಿನಿಧಿಗಳೊಡನೆ ತಂತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದು ಚಕ್ರವರ್ತಿದಂಪತಿಗಳ ಸ್ವಾರಿಯು ರಿಡ್ಜಿನ ಹತ್ತಿರಕ್ಕೆ ದಯಮಾಡಿಸಿದಾಗ ಎಲ್ಲರೊಡನೆ ಎದ್ದು ನಿಂತುಕೊಳ್ಳುವರು. ಚಕ್ರವರ್ತಿನಿಯವರ ರಥವು ಚಕ್ರವರ್ತಿಯವರ ವಾಮಪಾರ್ಶ್ವದಲ್ಲಿ ಬಂದು ನಿಂತುಕೊಳ್ಳುವುದು. ಆಗ ವೈಸ್‌ರಾಯರ ಲೆಜಿಸ್ಲೇಟಿವ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರು ಚಕ್ರವರ್ತಿದಂಪತಿಗಳ ಸುಖಾಗಮನವನ್ನು ಬಯಸಿರುವ ವಿಜ್ಞಾಪನಪತ್ರಿಕೆಯನ್ನೋದೊಪ್ಪಿಸುವರು. ಚಕ್ರವರ್ತಿಯವರು ವಂದನಾಪುರಸ್ಸರವಾಗಿ ಅದನ್ನು ಅಂಗೀಕರಿಸಿ ತಮ್ಮ ಬಿಡಾರಕ್ಕೆ ಚಿತ್ತೈಸುವರು ಅನಂತರ ದೇಶೀಯ ಸಂಸ್ಥಾನಾಧೀಶ್ವರರುಗಳು ಉತ್ಸವದೊಡನೆ ತಂತಮ್ಮ ಬಿಡಾರಕ್ಕೆ ತೆರಳುವರು.

ದರ್ಬಾರು ನಡೆಯುವ ಕ್ರಮವು.

ಈ ತಾ|| ೧೨ನೆಯ ಮಂಗಳವಾರ ಬೆಳಿಗ್ಗೆ ೧೧|| ಗಂಟೆಯಲ್ಲಿ ಚಕ್ರವರ್ತಿದಂಪತಿಗಳು ನಾಲ್ಕು ಕುದುರೆಗಳನ್ನೂಡಿದ ರಥಾರೂಢರಾಗಿ ಸಕಲ ಸೇನೆಯೊಡನೆ ಅಲಂಕೃತವಾದ ಮಾರ್ಗದಲ್ಲಿ ಉತ್ಸವಹೊರಟು ದರ್ಬಾರುಮಂಟಪದ ಬಳಿಗೆ ದಯಮಾಡಿಸುತಲೆ, ಸಾವಿರಾರು ವಾದ್ಯಗಾರರು ಸಾರ್ವಭೌಮ ದಂಪತಿಗಳ ಶ್ರೇಯಃಪ್ರಾರ್ಥನೆಯ ಕೀರ್ತನೆಯನ್ನು ಮಾಡಲಾರಂಭಿಸಿ, ಚಕ್ರವರ್ತಿದಂಪತಿಗಳು ಮಂಟಪದೊಳಗೆ ಪ್ರವೇಶಿಸಿ ಆಸನಾಸೀನರಾದಮೇಲೆ ನಿಲ್ಲಿಸುವರು. ಆಗ ಸೈನಿಕರು ತಂತಮ್ಮ ಸ್ಥಾನಗಳಲ್ಲಿ ಕ್ರಮವರಿತು ನಿಂತುಕೊಳ್ಳುವರು. ದರ್ಬಾರಿನ ಕಾರ್ಯನಿರ್ವಾಹಕನು ದರ್ಬಾರನ್ನು ಪ್ರಕ್ರಮಿಸಲು ಚಕ್ರವರ್ತಿಯವರಪ್ಪಣೆಯನ್ನು ಪಡೆದು ಕೊಂಡಮೇಲೆ ದರ್ಬಾರು ಆರಂಭವಾದುದು ತಮಟೆಗಳ ಮತ್ತು ತುತೂರಿಗಳ ಧ್ವನಿಗಳಿಂದ ಸೂಚಿಸಲ್ಪಡುವುದು. ತರುವಾಯ ಸರ್ಕಾರಿಯ ದೊಡ್ಡ ದೊಡ್ಡ ಅಧಿಕಾರಿಗಳೂ, ದೇಶೀಯ ಸಂಸ್ಥಾನಧೀಶ್ವರರುಗಳೂ ಮುಂದೆ ಬಂದು ಚಕ್ರವರ್ತಿದಂಪತಿಗಳಿಗೆ ಶರಣುಮಾಡುತ್ತಿರುವಾಗ್ಗೆ ಬ್ಯಾಂಡಿನವರು ಉತ್ತಮವಾದ ರಾಗಗಳನ್ನು ನುಡಿಸುತ್ತಿರುವರು ಇದಾದಮೇಲೆ ಸೈನಿಕರು ತಂತಮ್ಮ ಆಯುಧಗಳನ್ನು ಬಗ್ಗಿಸಿ ಹಿಡಿದುಕೊಳ್ಳುವಂತೆ ಅಪ್ಪಣೆಮಾಡಲ್ಪಡುವರು. ಚಕ್ರವರ್ತಿದಂಪತಿಗಳು ಮೊದಲು ಮಂಡಿಸಿದ್ದ ಸ್ಥಳವನ್ನು ಬಿಟ್ಟು ಉತ್ಸವದೊಡನೆ ಸಿಂಹಾಸನದ ಬಳಿಗೆ ಚಿತ್ತೈಸಿ ಸಿಂಹಾಸನಗಳ ಆರೋಹಣವನ್ನು ಮಾಡುವರು. ಆವರೆಗೆ ವಾದ್ಯಗಳು ಮೊಳಗುತ್ತಿರುವುವು. ರಾಜದೂತನು ಮಂಟಪದ ಹೊರಗಡೆ ತುತ್ತೂರಿಯನ್ನೂದುವವರ ಮತ್ತು ತಮಟೆಗಳನ್ನು ಬಡಿಯುವವರ ಕೂಡ ಧ್ವನಿಯನ್ನು ಮಾಡಿ ಮಂಟಪದ ಮುಂಭಾಗಕ್ಕೆ ಬಂದು ಅಲ್ಲಿ ಮತ್ತೊಂದುವೇಳೆ ತುತ್ತೂರಿ ಮತ್ತೂ ತಮಟೆಗಳ ಧ್ವನಿಯನ್ನು ಮಾಡಿ, ಅಲ್ಲಿಂದ ಮಂಟಪದೊಳಗಡೆಗೆ ಬಂದು ಅಲ್ಲಿ ಮಗದೊಂದುವೇಳೆ ಧ್ವನಿಯನ್ನು ಮಾಡಿ, ದನಂತರ ಚಕ್ರವರ್ತಿದಂಪತಿಗಳು ಕಿರೀಟಧಾರಣಮಾಡಿದ ಪ್ರಕಟನಪತ್ರಿಕೆಯನ್ನೋದುವನು. ಓದುವುದು ಮುಗಿದಮೇಲೆ ತುತ್ತೂರಿಗಳ ಮತ್ತು ತಮಟೆಗಳ ಧ್ವನಿಯು ದಿಗ್ಮಂಡಲವನ್ನು ವ್ಯಾಪಿಸುವಂತೆ ಮಾಡಲ್ಪಡುವುದು. ಕಡೆಯಲ್ಲಿ ವಾದ್ಯಗಾರರೆಲ್ಲರೂ ಮಂಗಳವನ್ನು ನುಡಿಸುವರು. ಸೈನಿಕರು ಜಯಘೋಷವನ್ನು ಮಾಡುವರು. ಮತ್ತೂ ೧೦೧ ಗುಂಡುಗಳು ಹಾರಿಸಲ್ಪಡುವುವಲ್ಲದೆ, ಸೈನಿಕರು ಕೋವಿಗಳನ್ನು ಹಾರಿಸುವರು. ಗೌರ್ನರ್ ಜನರಲ್‌ರವರು ಚಕ್ರವರ್ತಿಯವರ ಅಪ್ಪಣೆಯಪ್ರಕಾರ ಸಭಾವಿಸರ್ಜನೆಗಾಗಿ ಸೂಚನೆಯನ್ನು ಕೊಡಲು ತುತ್ತೂರಿಯವರೂ, ತಮಟೆಯವರೂ ಧ್ವನಿಯನ್ನು ಮಾಡುವರು. ಮತ್ತೂ ರಾಜದೂತನು ತನ್ನ ಟಪ್ಪಿಗೆಯನ್ನು ತೆಗೆದು ನೆರದಿದ್ದ ಸಭಿಕರ ಮತ್ತೂ ಪ್ರೇಕ್ಷಕರಕೂಡ ಚಕ್ರವರ್ತಿಯವರ ಹೆಸರಿನಿಂದ ಮೂರಾವೃತ್ತಿ ಜಯಘೋಷವನ್ನು ಮಾಡಿದನಂತರ ಚಕ್ರವರ್ತಿನಿಯವರ ಹೆಸರಿನಿಂದ ಮೂರಾವೃತ್ತಿ ಜಯಘೋಷವನ್ನು ಮಾಡುವನು. ತರುವಾಯ ಚಕ್ರವರ್ತಿದಂಪತಿಗಳು ಯಥಾಪ್ರಕಾರ ಸಕಲ ಮರ್ಯಾದೆಯೊಡನೆ ಉತ್ಸವಹೊರಟು ತಮ್ಮ ಬಿಡಾರವನ್ನು ಸೇರುವರು.

ದಿಲ್ಲಿಗೆ ಬಂದಿರತಕ್ಕ ಸಂಸ್ಥಾನಾಧೀಶ್ವರರುಗಳು

ಜಂದ್ ಸಂಸ್ಥಾನಾಧೀಶ್ವರರು, ಡಿವಾಸ ರಾಜರು, ಕಿಲಾತ್ತಿನ ಖಾನರವರು, ಕೋಟಿ ಮಹಾರಾಜರು, ಧಾತಿಯಾ ಮಹಾರಾಜರು, ನಾಭಾರಾಜರು, ಸಿರಗೊಂಜಿನ ಮಹಾರಾಜರು, ಸುಕೆತ್ತಿನರಾಜರು, ಪಾನಾದ ಮಹಾರಾಜರು, ಫರಿದಕೋಟೆಯ ರಾಜರು, ಜೋಧಪೂರಿನ ಮಹಾರಾಜರು, ಬಹಾವಲ್ಪೂರದ ನವಾಬರು, ದಕ್ಷಿಣ ಸಂಸ್ಥಾನಾಧೀಶ್ವರರುಗಳು, ಬೈರ್‌ಪುರದ ಮೀರ್‌ರವರು, ಧಾರ್ಪೂರದ ಮಹಾರಾಜರು, ಕೊಲ್ಹಾಪುರದ ಮಹಾರಾಜರು, ಜಾಲ್ವಾರದ ಮಹಾರಾಜರು, ಖಾಟಿಯವಾಡದ ಮಹಾರಾಜರು, ರೀವಾ ಮಹಾರಾಜರು, ಇಂದೂರಿನ ಹೋಲ್ಕರ್ ಮಹಾರಾಜರು, ಜೋಧ್ಪೂರಿನ ಮಹಾರಾಜರು, ವಿಲಾಸಪುರದ ರಾಜರು, ಭೂಪಾಲ್ನಿನ ನವಾಬರು, ಹಿಲ್‌ತಿಪ್ರಾದ ಮಹಾರಾಜರು, ತಿಹರಿಯ ಮಹಾರಾಜರು, ಮಾಲಾರಕೋಟ್ಲದ ನವಾಬರು, ಭೂಪಾಲಿನ ಬೇಗಂರವರು, ಕಾಶ್ಮೀರ ಮಹಾರಾಜರು, ಟ್ರಾವಂಕೂರಿನ ಮಹಾರಾಜರು, ಮಣಿಪುರದ ಮಹಾರಾಜರು, ಮಂಡಿಯ ರಾಜರು, ಸಿಂಧ್ಯಾ ಮಹಾರಾಜರು, ಕಾಶಿಯ ಮಹಾರಾಜರು, ರಾಜಪಿಪ್ಲದರಾಜರು, ಚಂಬಾರಾಜರು, ಜಂದಿನ ಮಹಾರಾಜರು, ಪುದುಕೋಟೆಯರಾಜರು, ಸಿರ್ಮೂರದ ರಾಜರು, ಆಲ್ವಾರ್ ಮಹಾರಾಜರು ಮತ್ತೂ ಭರತಪುರದ ಮಹಾರಾಜರು ತಂತಮ್ಮ ಪರಿವಾರದೊಡನೆ ದಿಲ್ಲಿಯ ಪಟ್ಟಣಕ್ಕೆ ಬಂದಿರುವರು. ಇವರಲ್ಲಿ ದೊಡ್ಡ ಸಂಸ್ಥಾನಗಳ ಮಹಾರಾಜರುಗಳು ಹೆಚ್ಚುಗಟ್ಟಲೆಯ ಬಂಡಿಯಲ್ಲಿ ತಂತಮ್ಮ ದೇಶದ ಅತಿಥಿಗಳನ್ನು ಕರೆದುಕೊಂಡು ಬಂದಿರುವರು.

ಕಳೆದ ತಾ|| ೨೩ ರಲ್ಲಿ ಶ್ರೀಮಂತ ಸಂಪತರಾವ್ ಗಾಯಕವಾಡರವರು, ದಿವಾನ್ ಮಿ|| ಟೀಕಚಂದ್‌ರವರು, ಡಾ|| ಮೆಂಚರ್‌ರವರು, ಕ್ಯಾಪ್ಟನ್ ನಿಂಬಾಲ್ಕರ್‌ರವರು, ಮಹಾರಾಣಿಯವರು, ರಾಜಕುಮರಿ ಇಂದಿರಾರಾಜಾಬಾಯಿಯವರು, ಕೆಲ ಪರಿಚಾರಕ ಮತ್ತೂ ಪರಿಚಾರಿಕೆಯರೊಡನೆ ಬರೋಡಾ ಮಹಾರಾಜರವರು ಹೆಚ್ಚುಗಟ್ಟಲೆಯ ಬಂಡಿಯಲ್ಲಿ ದಯಮಾಡಿಸಿದರು. ಇವರ ಬಿಡಾರದ ಮೇಲ್ವಿಚಾರಣೆಗೆ ಕರ್ನಲ್ ಎಫ್. ಎಚ್. ನಿರ್ಸ್ನರವರು ನಿಯಮಿಸಲ್ಪಟ್ಟಿರುತ್ತಾರೆ. ತಾ|| ೨೩ರಲ್ಲಿ ದಿವಾನರು, ಪಡಿಕಾಂಗ್‌ರವರು ಸೆಕ್ರೆಟರಿಯವರು ಮೊದಲಾದವರೊಡನೆ ಹೈದರಾಬಾದಿನ ನೈಜಾಂರವರು ಹೆಚ್ಚುಗಟ್ಟಲೆಯ ಬಂಡಿಯಲ್ಲಿ ಬಂದರು. ತಾ|| ೨೪ರಲ್ಲಿ ದಿವಾನ್ ಮಿ|| ಎ. ಆರ್. ಬಾನರ್ಜಿಯವರು, ಚೀಫ್ ಇಂಜನೀರು, ಚೀಫ್ ಮೆಡಿಕಲ್ ಆಫೀಸರು, ಎಕ್ಸೈಜ್ ರೆವಿನ್ಯೂ ಸೂಪರಿಂಟೆಂಡೆಂಟರು ಮೊದಲಾದವರೊಡನೆ ಕೊಚೀ ಸಂಸ್ಥಾನದ ಮಹಾರಾಜರು ಹೆಚ್ಚುಗಟ್ಟಲೆಯ ಬಂಡಿಯಲ್ಲಿ ಬಂದರು.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣಮಾಡಿರುವುದು.

ಚಕ್ರವರ್ತಿ ದಂಪತಿಗಳು ಪ್ರಯಾಣಮಾಡುತ್ತಿರುವ ಮೆಡೀನಾ ಹಡಗು ಕಳೆದ ನವೆಂಬರ್ ತಾ|| ೨೯ ರ ಬೆಳಿಗ್ಗೆ ಏಡನ್ ರೇವುಪಟ್ಟಣವನ್ನು ಸುರಕ್ಷಿತವಾಗಿ ತಲುಪಿತು. ಗೌರವಾರ್ಥವಾಗಿ ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಏಡನ್ನಿನ ರೆಸಿಡೆಂಟರವರು ಮೆಡೀನಾ ಹಡಗಿಗೆ ಹೋಗಿ ಚಕ್ರವರ್ತಿ ದಂಪತಿಗಳ ದರ್ಶನಭಾಷಣಗಳನ್ನು ಮಾಡಿಕೊಂಡು ಬಂದರು. ಮಧ್ಯಾಹ್ನದಲ್ಲಿ ಚಕ್ರವರ್ತಿ ದಂಪತಿಗಳು ಹಡಗನ್ನಿಳಿದು ದಡದ ಮೇಲೆ ಮನೋಹರವಾಗಲಂಕರಿಸಿದ್ದ ಮಂಟಪಕ್ಕೆ ದಯಮಾಡಿಸಿ, ಅಲ್ಲಿ ರೆಸಿಡೆಂಟರವರಿಂದ ಸ್ವಾಗತಮಾಡಲ್ಪಟ್ಟು, ನಂತರ ದಿವ್ಯವಾದ ರಥದಲ್ಲಿ ಕುಳಿತು ತಕ್ಕ ಮರ್ಯಾದೆಯೊಡನೆ ಧ್ವಜಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ, ಸಾರಣೆಕಾರಣೆಗಳಿಂದಲೂ ಅಲಂಕೃತವಾಗಿದ್ದ ಬೀದಿಗಳಲ್ಲಿ ಉತ್ಸವಹೊರಟು ಕ್ರೆಸೆಂಟ್ ಎಂಬ ಮಂದಿರಕ್ಕೆ ದಯಮಾಡಿಸಿದರು. ಈ ಮಂದಿರದ ಸಮೀಪದಲ್ಲಿ ನಿರ್ಮಿಸಿದ್ದ ಕಮಾನಿನ ಬಳಿ ಗುಜರಾತಿ ಪಾಠಶಾಲೆಯ ವಿದ್ಯಾರ್ಥಿಗಳು ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನಾಪದ್ಯವನ್ನು ಗುಜರಾತಿಯಲ್ಲಿ ಹೇಳಿದರು. ಜನರು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತು ಪ್ರಭುದಂಪತಿಗಳ ದರ್ಶನವನ್ನು ಮಾಡಿ ಆನಂದಪರವಶರಾದರು. ಚಕ್ರವರ್ತಿಯವರು ಕ್ರೆಸೆಂಟ್ ಮಂದಿರದಲ್ಲಿ ಪುರಪ್ರಮುಖರೊಪ್ಪಿಸಿದ ವಿಜ್ಞಾಪನ ಪತ್ರಿಕೆಯನ್ನು ವಿಶ್ವಾಸದಿಂದ ಸ್ವೀಕರಿಸಿ, ತಕ್ಕ ಉತ್ತರವನ್ನು ದಯಪಾಲಿಸಿದಮೇಲೆ ರೆಸಿಡೆನ್ಸಿಗೆ ದಯಮಾಡಿಸಿ ಅಲ್ಲಿ ಟೀಪಾನವನ್ನು ಮಾಡಿ ಸಾಯಂಕಾಲ ೫ ಗಂಟೆಯಲ್ಲಿ ಮೆಡೀನಾ ಹಡಗಿಗೆ ದಯಮಾಡಿಸಿದರು. ಸಾಯಂಕಾಲ ೬ ಗಂಟೆಗೆ ಮೆಡೀನಾ ಹಡಗು ಭರತಖಂಡವನ್ನು ಕುರಿತು ಹೊರಟಿತು.

“ಚಕ್ರವರ್ತಿದಂಪತಿಗಳು ಸುಕ್ಷೇಮದಿಂದ ಬೊಂಬಾಯಿ ರಾಜಧಾನಿಗೆ ಬಿಜಯಂಗೆಯಬೇಕೆಂದು ಬೊಂಬಾಯಿ ಸರ್ಕಾರದವರೂ, ಪ್ರಜೆಗಳೂ ಅತ್ಯಂತ ಭಯಭಕ್ತಿಯಿಂದ ಬೇಡಿಕೊಳ್ಳುವುದನ್ನು ಅವರ ಪರವಾಗಿ ನಾನು ಬಿನ್ನೈಸಿಕೊಳ್ಳುತ್ತೇನೆ.” ಎಂದು ಬೊಂಬಾಯಿ ಗೌರ್ನರ್ ಸರ್ ಜಾರ್ಜ್ ಕ್ಲಾರ್ಕ್‌ರವರು ಏಡನ್ನಿಗೆ ತಂತಿಯನ್ನು ಕೊಟ್ಟಿದ್ದುದಕ್ಕೆ ಚಕ್ರವರ್ತಿಯವರು ಏಡನ್ನಿನಿಂದ “ಪ್ರೀತಿಪೂರ್ವಕವಾಗಿ ನಮ್ಮ ಸ್ವಾಗತವನ್ನು ಮಾಡಲುದ್ದೇಶಿಸಿದುದಕ್ಕಾಗಿ ನಾವು ವಂದಿಸುತ್ತಿರುವರು ತಿಳಿಸಿ ನಿಮ್ಮನ್ನೂ, ಬೊಂಬಾಯಿ ರಾಜಧಾನಿಯ ನಿವಾಸಿಗಳನ್ನೂ ಮನಃಪೂರ್ವಕವಾಗಿ ವಂದಿಸುತ್ತೇವೆ.” ಎಂದು ತಂತಿಯ ಮೂಲಕ ಉತ್ತರವನ್ನು ದಯಪಾಲಿಸಿರುವರು. ಮತ್ತೂ

೨ನೇಯ ತೇದೀದ ಭರತಖಂಡದ ಸಾರ್ವಜನಿಕ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷರು, "ಕಲಕತ್ತಾದ ಸಾರ್ವಜನಿಕ ಮಹಾಸಭೆಯ ಸ್ವಾಗತಸಂಘದವರು ಭರತಖಂಡಕ್ಕೆ ಶ್ರೀ ರಾಜಚಕ್ರವರ್ತಿದಂಪತಿಗಳ ಸ್ವಾಗತವನ್ನು ಅತಿ ನಮ್ರತೆಯಿಂದಮಾಡಿ, ಚಕ್ರವರ್ತಿದಂಪತಿಗಳಲ್ಲೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲೂ ನಮಗಿರತಕ್ಕ ಅಪಾರವಾದ ರಾಜಭಕ್ತಿ, ವಿಶ್ವಾಸವನ್ನು ಪ್ರದರ್ಶಿಸುವದಲ್ಲದೆ, ಭರತಖಂಡ ಆಗಮನದಿಂದ ಚಕ್ರವರ್ತಿದಂಪತಿಗಳ ಮನಸ್ಸಿಗಾನಂದವೂ, ಭಾರತ ಪ್ರಜೆಗಳಿಗೆ ಶಾಶ್ವತವಾದ ಕಲ್ಯಾಣವೂ ಉಂಟಾಗುವುದೆಂದು ಪ್ರಾರ್ಥಿಸುತ್ತೇವೆ." ಎಂದು ಏಡನ್ನಿಗೆ ತಂತಿಯ ಮೂಲಕ ಬಿನ್ನೈಸಿಕೊಂಡಿರಲು "ಭರತಖಂಡದ ಸಾರ್ವಜನಿಕ ಮಹಾಸಭೆಯ ಸ್ವಾಗತ ಸಂಘದವರು ತಮಗೆ ಚಕ್ರವರ್ತಿದಂಪತಿಗಳಲ್ಲೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲೂ ಇರುವ ರಾಜಭಕ್ತಿಯನ್ನು ತಂತಿಯಮೂಲಕ ತಿಳಿಸಿರುವುದಕ್ಕಾಗಿ ಅವರುಗಳನ್ನು ಚಕ್ರವರ್ತಿದಂಪತಿಗಳು ವಂದಿಸುತ್ತಾರಲ್ಲದೆ, ತಮ್ಮ ಆಗಮನದಿಂದ ಭಾರತ ಪ್ರಜೆಗಳಿಗೆ ನಿರಂತರವಾದ ಪ್ರಮೋದವುಂಟಾಗುವುದೆಂದು ಮನಃಪೂರ್ವಕವಾಗಿ ನಂಬುತ್ತಾರೆ." ಎಂಬುದಾಗಿ ಪ್ರೈವೆಟ್ ಸೆಕ್ರೆಟರಿಯವರು ಸ್ವಾಗತ ಸಂಘಾಧ್ಯಕ್ಷರಿಗೆ ಉತ್ತರವನ್ನು ಕೊಟ್ಟಿರುವರು.

ಚಕ್ರವರ್ತಿದಂಪತಿಗಳ ಸುಖಾಗಮನವು.

ಶ್ರೀ ರಾಜಚಕ್ರವರ್ತಿಯವರಾದ ೫ ನೇಯ ಜಾರ್ಜ್ ಪ್ರಭುಗಳೂ, ಚಕ್ರವರ್ತಿನಿಯವರಾದ ಮೇರಿ ರಾಣಿಯವರೂ ಕಳೆದ ನವೆಂಬರ್ ತಾ|| ೧೧ ರಲ್ಲಿ ಮಾತೃಶ್ರೀ ಅಲೆಕ್ಸಾಂಡ್ರಾ ರಾಣಿಯವರು ಮೊದಲಾದ ರಾಜಬಂಧುಗಳಿಂದಲೂ, ಮಂತ್ರಿಗಳಿಂದಲೂ ಬೀಳ್ಕೊಟ್ಟ ಸಕಲ ಪರಿವಾರದೊಡನೆ ಲಂಡನ್ ನಗರದಿಂದ ಪೋರ್ಟ್ಸ್‌ಮತ್ತಿನವರೆಗೆ ರೈಲು ಬಂಡಿಯಲ್ಲಿ ಬಂದು ಅಲ್ಲಿಂದ ಮೆಡೀನಾ ಎಂಬ ಹಡಗಿನಲ್ಲಿ ಪ್ರಯಾಣಮಾಡಿ, ಮಧ್ಯಮಾರ್ಗದಲ್ಲಿ ಜಿಬ್ರಾಲ್ಟರ್, ಪೋರ್ಟ್‌ಸೇಡು, ಮತ್ತೂ ಏಡನ್ ಈ ರೇವುಪಟ್ಟಣಗಳಲ್ಲಿ ಜನರು ಮಾಡಿದ ಸತ್ಕಾರವನ್ನು ಕೈಕೊಂಡು ಈ ತಾ|| ೨ ನೇಯ ಶನಿವಾರ ಬೆಳಿಗ್ಗೆ ೧೦ ಗಂಟೆಗೆ ಬೊಂಬಾಯಿಯನ್ನು ಸುರಕ್ಷಿತವಾಗಿ ತಲುಪಿದರು. ಇವರ ಆಗಮನಸೂಚಕವಾದ ೧೦೧ ಗುಂಡುಗಳು ಹಡಗಿನಿಂದ ಹಾರಿಸಲ್ಪಟ್ಟವು. ಗೌರ್ನರ್ ಜನರಲ್‌ರವರು ತಮ್ಮ ಪ್ರೈವೇಟ್ ಸೆಕ್ರೆಟರಿ, ಏಡಿಕಾಂಗ್ ಮೊದಲಾದ ಅಧಿಕಾರಿಗಳೊಡನೆ ಅಪೊಲೋ ಬಂದರದಿಂದ ನಾವೆಯಲ್ಲಿ ಕುಳಿತು ಮೆಡೀನಾ ಹಡಗಿಗೆ ಹೋದರು. ಅನಂತರ ಕಮ್ಯಾಂಡರ್ ಇನ್‌ಚೀಫರು ತಮ್ಮ ಪರಿವಾರದೊಡನೆಯೂ, ಬೊಂಬಾಯಿ ಗೌರ್ನರು ತಮ್ಮ ಸೆಕ್ರೆಟರಿ, ಏಡಿಕಾಂಗರು, ಚೀಫ್ ಜಸ್ಟಿಸ್‌ರವರು, ಲಾರ್ಡ್ ಬಿಶಪ್ಪರು ಮೊದಲಾದವರೊಡನೆಯೂ ಮೆಡೀನಾ ಹಡಗಿಗೆ ಹೋಗಿ ಗೌರ್ನರ್ ಜನರಲ್‌ರವರಿಂದ ಚಕ್ರವರ್ತಿದಂಪತಿಗಳಿಗೆ ಪರಿಚಯಮಾಡಿಸಲ್ಪಟ್ಟು ಕುಶಲಪ್ರಶ್ನೆಯಾದನಂತರ ಹಿಂತಿರುಗಿದರು. ಗೌರ್ನರ್ ಜನರಲ್‌ರವರು ಚಕ್ರವರ್ತಿದಂಪತಿಗಳ ಕೂಡ ಭೋಜನವನ್ನು ಮಾಡಿ ಅಪೊಲೋಬಂದರಿಗೆ ಹಿಂತಿರುಗಿದರು. ಚಕ್ರವರ್ತಿದಂಪತಿಗಳು ಮಾರ್ಕ್ವಿಸ್‌ಕ್ರು ಮತ್ತೂ ಪರಿವಾರದೊಡನೆ ಮೆಡೀನಾ ಹಡಗನ್ನು ಬಿಟ್ಟು ಸಾಯಂಕಾಲ ಅಪೊಲೋ ಬಂದರಿಗೆ ದಯಮಾಡಿಸಿದರು. ಆಗ ೧೦೧ ಗುಂಡುಗಳು ಹಾರಿಸಲ್ಪಟ್ಟವು. ಚಕ್ರವರ್ತಿ ದಂಪತಿಗಳನ್ನು ಗೌ|| ಜನರಲ್‌ರವರು, ಬೊಂಬಾಯಿ ಗೌರ್ನರ್‌ದಂಪತಿಗಳು ಮತ್ತೂ ಕಮ್ಯಾಂಡರ್ ಇನ್ ಚೀಫರು ಇದಿರ್ಗೊಂಡು ಬಂದರ ಮೇಲ್ಗಡೆ ಅತ್ಯಂತ ಸುಂದರವಾಗಿ ಹಾಕಲ್ಪಟ್ಟಿದ್ದ ಮಂಟಪಕ್ಕೆ ಕರೆದುಕೊಂಡು ಹೋದರು. ಅಲ್ಲಿ ಬೊಂಬಾಯಿ ಮ್ಯುನಸಿಪಾಲಿಟಿಯ ವಿಜ್ಞಾಪನಪತ್ರಿಕೆಯನ್ನು ಸರ್. ಪಿ. ಎಂ. ಮೆಹತಾರವರು ಓದಿ ಬೆಳ್ಳಿ ಭಂಗಾರಗಳಿಂಲಿ ನವರತ್ನಗಳಿಂದ ಕೆತ್ತಲ್ಪಟ್ಟು ಅತ್ಯಂತ ಶ್ಲಾಘ್ಯವಾಗಿ ಮಾಡಲ್ಪಟ್ಟಿದ್ದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಅನಂತರ ಪಾರ್ಶಿ ಜನಾಂಗದವ ವಿಜ್ಞಾಪನಪತ್ರಿಕೆಯನ್ನು ಸರ್ ಜೇಂಸೆಟ್‌ಜಿ ಜೀಜಿಭಾಯಿಯವರೋದಿ ಒಪ್ಪಿಸಿದರು. ಚಕ್ರವರ್ತಿ ದಂಪತಿಗಳು ಅಲ್ಲಿಂದ ಹೊರಟು ರಥಾರೂಢರಾಗಿ ಬೊಂಬಾಯಿ ಪಟ್ಟಣದೊಳಗೆ ಅಪೊಲೋಬಂದರ್ ರೋಡು, ಎಸ್ಪ್ಲನೇಡ್ ರೋಡು ಮೊದಲಾದ ಮಾರ್ಗಗಳಲ್ಲಿ ಸಂಚರಿಸಿಕೊಂಡು ಅಪೊಲೋಬಂದರಿಗೆ ಹಿಂತಿರುಗಿ ಬಂದು ಅಲ್ಲಿಂದ ಮೆಡೀನಾಹಡಗಿಗೆ ದಯಮಾಡಿಸಿದರು. ಆಗ ೧೦೧ ಗುಂಡುಗಳು ಹಾರಿಸಲ್ಪಟ್ಟವು. ಜನರು ತಂಡತಂಡವಾಗಿ ಬೆಳಗಿನ ೭ ಗಂಟೆಯಿಂದಲೂ ಅಪೊಲೋಬಂದರ ಬಳಿಗೆ ಬಂದು ಸೇರಿಕೊಂಡು ಜನರ ನೂಕಾಟವನ್ನೂ, ಬಿಸಿಲಿನ ಝಳವನ್ನೂ ಲಕ್ಷಿಸದೆ ಚಕ್ರವರ್ತಿದಂಪತಿಗಳ ಆಗಮನವನ್ನೇ ಪ್ರತಿಕ್ಷಣದಲ್ಲೂ ಇದಿರುನೋಡುತ್ತಿದ್ದು, ಮೆಡಿನಾ ಹಡಗು ಬಂದ ಚಿಹ್ನೆಯನ್ನು ತಿಳಿದು ಕೋಲಾಹಲವನ್ನು ಮಾಡತೊಡಗಿ ಸಾಯಂಕಾಲದ ವರೆಗೂ ಅಲ್ಲೇ ಇದ್ದು, ಚಕ್ರವರ್ತಿದಂಪತಿಗಳು ಬಂದರಿಗೆ ಬಂದಮೇಲೆ ಅವರ ದರ್ಶನವನ್ನು ಮಾಡಿ ಪರಮಾನಂದಭರಿತರಾಗಿ ಕೋಲಾಹಲಧ್ವನಿಯನ್ನು ಮಾಡಿದರು. ಇತ್ತಲಾಗಿ ಚಕ್ರವರ್ತಿದಂಪತಿಗಳ ಸ್ವಾರಿಯು ಪಟ್ಟಣದೊಳಗೆ ಚಿತ್ತೈಸಿದ ವೇಳೆಯಲ್ಲಿ ಜನರು ಮಾರ್ಗಗಳೆರಡುಕ್ಕೂ ಕಿಕ್ಕಿರಿದು ನಿಂತು ದರ್ಶನವನ್ನು ಮಾಡಿ ಆನಂದಪರವಶರಾದರು. ಚಕ್ರವರ್ತಿದಂಪತಿಗಳು ತಾ|| ೩ ರಲ್ಲಿ ಹೊರಗೆ ದಯಮಾಡಿಸದೆ ದೇವತಾರಾಧನೆಯಲ್ಲೇ ಇದ್ದರು. ಮತ್ತೂ ತಾ|| ೪-೫ ರಲ್ಲಿ ಬೊಂಬಾಯಿನಲ್ಲಿ ನಡೆಯುವ ಉತ್ಸವಗಳನ್ನು ಪೂರಾಯಿಸಿಕೊಂಡು ದಿಲ್ಲಿಗೆ ಪ್ರಯಾಣಮಾಡುವರು.

ತುರ್ಕಿ-ಇಟಲಿಗಳ ಯುದ್ಧವು.

ನವೆಂಬರ್ ತಾ|| ೨೮-ಡಾರ್ಡನೆಲ್ಸಿನ ಹತ್ತಿರ ಸಮುದ್ರಮಾರ್ಗವು ಬಹು ಕಿರಿದಾಗಿರುವುದರಿಂದ, ಅಲ್ಲಿ ತಡೆಯನ್ನು ಕಟ್ಟಿದರೆ, ತುರ್ಕಿಯ ನಾವೆಗಳು ತಿರುಗಾಡಲಿಕ್ಕಿಲ್ಲವಾಗಿ ತುರ್ಕಿಯವರು ಒಡಂಬಡಿಕೆಯನ್ನು ಮಾಡಿಕೊಳ್ಳಲೊಪ್ಪುವರೆಂದು ಇಟಲಿಯವರು ಯೋಚಿಸಿದರು. ಆದರೆ ಇಟಲಿಯವರ ಇಂತಹ ಪ್ರಯತ್ನದಿಂದ ತುರ್ಕಿಯವರಿಗೆ ಯಾವ ತೊಂದರೆಯಾಗುವಂತಿಲ್ಲವು ಮತ್ತು ಅವರು ಒಡಂಬಡಿಕೆಗೆ ಬರುವದಿಲ್ಲವು. ಇಟಲಿಯವರಿಗೆ ಅವರ ಈ ವಿಧವಾದ ಪ್ರಯತ್ನವು ೧೮೭೧ರಲ್ಲಿ ನಡೆದಿರುವ ಒಡಂಬಡಿಕೆಗೆ ವಿರುದ್ಧವಾಗಿದೆಯೆಂದು ರಷ್ಯಾದವರು ತಿಳುಹಿ ಅವರನ್ನು ಆಕ್ಷೇಪಿಸಲು, ಅದಕ್ಕೆ ಇಟಲಿಯವರು ರಷ್ಯನರ ಸರಕುಗಳ ಹಡಗುಗಳು ಡಾರ್ಡನೆಲ್ಸ್ ಮಾರ್ಗವಾಗಿ ತಿರುಗಾಡಲೊಪ್ಪಿಕೊಂಡರು. ಆದರೆ ಡಾರ್ಡನೆಲ್ಸ್ ಮಾರ್ಗದಲ್ಲಿ ಹಡಗುಗಳು ತಿರುಗದಂತೆ ಇಟಲಿಯವರು ಅಡಚಣೆಯನ್ನು ಮಾಡುವದಾದರೆ ಗ್ರೇಟ್‌ಬ್ರಿಟನ್ನು ತಾನು ವಹಿಸಿರುವ ತಾಟಸ್ಥ್ಯವನ್ನು ಬಿಡಬೇಕಾಗುತ್ತದೆ. ಎಂದು ಬ್ರಿಟಿಷರರಾಯಭಾರಿಯು ಇಟಲಿಯವರಿಗೆ ತಿಳಿಸಿದನು. ತಾ|| ೨೪ರಲ್ಲಿ ಟ್ರಿಪೋಲಿಯಲ್ಲೂ, ಡೆರ್ನಾದಲ್ಲೂ ಘೋರಯುದ್ಧವಾಯಿತು. ಡೆರ್ನಾದಲ್ಲಾದ ಕದನದಲ್ಲಿ ಇಟಲಿಯವರಕಡೆ ೫೦ ಜನರು ಗಾಯವಡೆದು ೧೭ ಜನರು ಮಡಿದರು. ತಾ|| ೨೬ ರಲ್ಲಿ ಇಟಲಿಯವರು ಮುಂದುವರಿದು ಬಂದು ಟ್ರಿಪೋಲಿಯ ಹತ್ತಿರವಿರುವ ಎರಡು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡರು. ಟ್ರಿಪೋಲಿ ಮತ್ತೂ ಡೆರ್ನಾಗಳಲ್ಲಿ ದಿನವೆಲ್ಲಾ ಯುದ್ಧವು ನಡೆದು ಇಟಲಿಯವರಕಡೆ ಟ್ರಿಪೋಲಿಯಹತ್ತಿರ ೧೦೪ ಜನರು ಗಾಯವಡೆದರಲ್ಲದೆ ೧೬ ಜನರು ಸತ್ತರು ಮತ್ತೂ ಡೆರ್ನಾ ಹತ್ತಿರ ಸತ್ತವರು ಮತ್ತೂ ಗಾಯವಡೆದವರು ಸಹ ೪೦ ಜನರಾಗುವರು. ತಾ|| ೨೯.-ಬೆಂಗಾಜಿಯಲ್ಲಿದ್ದ ಇಟಲಿಯವರ ಒಂದು ಪಂಗಡದವರು ಕೆಲ ಅರಬ್ಬಿಯವರಮೇಲೆ ಬಿದ್ದು ಅವರ ಕೂಡ ಘೋರವಾಗಿ ಕಾದಾಡಿದರು. ಇದರಿಂದ ಅರಬ್ಬಿಯವರೆಲ್ಲರೂ ನಾಶವಾದರು ಮತ್ತು ಇಟಲಿಯವರಕಡೆ ೩೦ ಜನರಿಗೆ ಗಾಯವಾಗಿ ೧೨ ಜನರು ಸತ್ತರು. ತಾ|| ೨೦.-ಹನ್ನಿಹತ್ತಿರ ಒಂದು ಮಸೀದಿಯಲ್ಲಿ ಬರ್ಸಗ್ಲೇರಿಯಾದ ೧೨ ಜನರಲ್ಲಿ ಕೆಲರು ಬಹು ಕ್ರೂರವಾಗಿ ಕತ್ತರಿಸಿಹಾಕಲ್ಪಟ್ಟು ಉಳಿದವರು ಜೀವಸಹಿತ ಸುಟ್ಟುಹಾಕಲ್ಪಟ್ಟಿದ್ದುದು ಗೊತ್ತಾಗಿ ಜನರಲ್ಲಿ ಅತ್ಯಂತ ಕೋಪೋದ್ರೇಕವನ್ನುಂಟುಮಾಡಿರುತ್ತದೆ. ಇಟಲಿಯವರ ಯುದ್ಧನಾವೆಗಳು ಷೇಕ್‌ಸೇದ್ ಎಂಬಲ್ಲಿ ಮೋಚಾಕೋಟೆಗೆ ಫಿರಂಗಿಗಳನ್ನು ಹೊಡೆಯುತ್ತಿವೆ. ಟ್ರಿಪೋಲಿಯ ಕದನದಲ್ಲಿ ಗಾಯವಡೆದು ಅಸ್ವಸ್ಥರಾಗಿರುವ ತುರ್ಕಿಯ ಸೈನಿಕರ ಸಹಾಯಾರ್ಥವಾಗಿ ಚಂದಾ ಹಣವನ್ನು ಕೊಡಿಸಬೇಕೆಂದು ಆಫ್‌ಘಾನಿಸ್ಥಾನದ ಅಮೀರರು ಅಪ್ಪಣೆ ಮಾಡಿರುವುದಾಗಿಯೂ, ಆಫ್‌ಘಾನಿಸ್ಥಾನದ ಒಬ್ಬ ಸೈನ್ಯಾಧಿಕಾರಿಯೂ ಚಂದಾದ್ರವ್ಯವನ್ನು ಸಹಾಯಮಾಡಬೇಕೆಂದು ಕಾಬೂಲಿನಲ್ಲಿರುವ ಸಿವಿಲ್ ಮತ್ತೂ ಮಿಲ್ಟರಿ ಅಧಿಕಾರಿಗಳನ್ನೂ, ಧನಾಢ್ಯರನ್ನೂ ಪ್ರಾರ್ಥಿಸಿರುವುದಾಗಿಯೂ ವೃತ್ತಪತ್ರಿಕೆಯ ಒಬ್ಬ ಸುದ್ದಿನಾಯಕನು ಬರೆದಿರುತ್ತಾನೆ.

ಮೈಸೂರ್ ಸ್ಟಾರ್

೧೯೧೧ ನೇಯ ಡಿಸೆಂಬರ್ ತಾ|| ೪ ನೇಯ ಸೋಮವಾರ.

ಮೈಸೂರ ಸಂಸ್ಥಾನದಲ್ಲಿ ಲೋಹಮಾರ್ಗಾಭಿವೃದ್ಧಿಯು.

ಶ್ರೀಮನ್ಮಹಾರಾಜರವರು ತಮ್ಮ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕೆಂಬ ಸತ್ಸಂಕಲ್ಪದಿಂದ, ಅಭಿವೃದ್ಧಿಯ ಮಾರ್ಗಗಳನ್ನು ಕಂಡುಹಿಡಿಯುವುದಕ್ಕಾಗಿ ಸರಕಾರಿಯಉದ್ಯೋಗಿಕರನ್ನೂ, ಕೃಷಿ, ವಾಣಿಜ್ಯ ಮತ್ತೂ ಕೈಗಾರಿಕೆಗಳಲ್ಲಿ ಪರಿಶ್ರಮವುಳ್ಳ ಅನುದ್ಯೋಗಿಕ ದೊಡ್ಡ ಮನುಷ್ಯರುಗಳನ್ನೂ ಸೇರಿಸಿ ಒಂದು ಸಭೆಯನ್ನೇರ್ಪಡಿಸಿರುವುದನ್ನು ಮತ್ತೂ ಈ ಸಭೆಯವರು ತತ್ಸಂಬಂಧವಾಗಿ ಈವರೆಗೆ ಮಾಡಿರುವ ಕಾರ್ಯಕ್ರಮಗಳನ್ನು ಕುರಿತು ನಾವು ಈ ಪತ್ರಿಕೆಯಲ್ಲಿ ಆಗಾಗ್ಗೆ ಪ್ರಸ್ತಾಪಿಸಿರುತ್ತೇವಲ್ಲದೆ, ಈ ದೇಶದ ಮುಖ್ಯಸ್ಥಳಗಳನ್ನು ಲೋಹಮಾರ್ಗಗಳಿಂದ ಸಂಬಂಧಿಸಿ, ಆ ಸ್ಥಳಗಳಲ್ಲಾಗತಕ್ಕ ಪದಾರ್ಥಗಳು ಇತರಕಡೆಗೂ, ಇತರಕಡೆಯ ಪದಾರ್ಥಗಳು ಆ ಸ್ಥಳಗಳಿಗೂ ಸರಾಗವಾಗಿ ಹೋಗಿ ಬರುವಂತೆ ಮಾಡತಕ್ಕದು ದೇಶದ ಸಂಪದಭಿವೃದ್ಧಿಗೆ ಅತ್ಯಂತ ಸಾಧಕವಾದುದೆಂದು ಈ ಮೊದಲೇ ಅಭಿಪ್ರಾಯಪಟ್ಟಿರುತ್ತೇವೆ. ಕೈಗಾರಿಕೆ ಮತ್ತೂ ವಾಣಿಜ್ಯ ಸಂಬಂಧವಾಗೇರ್ಪಟ್ಟಿರುವ ಸಂಘದ ಅಧ್ಯಕ್ಷರಾದ ಚೀಫ್ ಇಂಜನೀರ್ ಮ|| ಎಂ. ವಿಶ್ವೇಶ್ವರಯ್ಯನವರೂ ನಮ್ಮಂತೆಯೇ ದೇಶದ ಸಂಪದಭಿವೃದ್ಧಿಗೆ ಲೋಹಮಾರ್ಗಾಭಿವೃದ್ಧಿಯು ಮುಖ್ಯವಾದುದೆಂಬಭಿಪ್ರಾಯವುಳ್ಳವರಾಗಿ, ಈ ಮೈಸೂರಸಂಸ್ಥಾನದ ಲೋಹಮಾರ್ಗವನ್ನಭಿವೃದ್ಧಿಗೊಳಿಸುವ ಕಾರ್ಯಕ್ರಮವನ್ನೂ, ಅದಕ್ಕಾಗಿ ತಗಲುವ ವೆಚ್ಚವನ್ನೂ, ಈಗ ಸದ್ಯದಲ್ಲಿ ಯಾವ್ಯಾವ ಸ್ಥಳಗಳಿಗೆ ಮಾರ್ಗಗಳನ್ನು ಹಾಕಬೇಕಾಗಿರುವುದೆಂಬುದನ್ನೂ ಬರೆದು ಸಿದ್ಧಗೊಳಿಸಿ ಸರ್ಕಾರದವರ ಪರ್ಯಾಲೋಚನೆಯ ಬಗೆಗೆ ಕಳುಹಿಸಿಕೊಟ್ಟಿದ್ದುದನ್ನು ಈ ಸ್ಟಾರ್ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಯಥಾವತ್ತಾಗಿ ಕೊಟ್ಟಿರುತ್ತೇವೆ.

ನಮ್ಮ ಸರ್ಕಾರದವರು ಮ|| ವಿಶ್ವೇಶ್ವರಯ್ಯನವರ ಸೂಚನೆಯನ್ನು ಚೆನ್ನಾಗಿ ಪರ್ಯಾಲೋಚಿಸಿ, ಈ ದೇಶದ ಲೋಹಮಾರ್ಗಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಸಂಕಲ್ಪಮಾಡಿ, ಅರಸೀಕೆರೆಯಿಂದ ಹಾಸನದಮೇಲೆ ಮೈಸೂರಿಗೂ, ನಂಜನಗೂಡಿನಿಂದ ಚಾಮರಾಜನಗರಕ್ಕೂ ಸರಕಾರದ ಮೂಲಕವಾಗಿಯೂ, ಮತ್ತೂ ಬೌರಿಂಗ್‌ಪೇಟೆಯಿಂದ ಕೋಲಾರಕ್ಕೂ, ಚಿಕ್ಕಜಾಜೂರಿಂದ ಚಿತ್ರಕಲ್ ದುರ್ಗಕ್ಕೂ ಕಡೂರಿಂದ ಚಿಕ್ಕಮಗಳೂರಿಗೂ ಮತ್ತೂ ಬೆಂಗಳೂರಿಂದ ಹೊಸೂರಿಗೂ ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕವಾಗಿಯೂ ಲೋಹಮಾರ್ಗಗಳನ್ನು ಹಾಕಿಸತಕ್ಕದೆಂದು ಗೊತ್ತುಮಾಡಿರುತ್ತಾರಲ್ಲದೆ, ಇದಕ್ಕಾಗಿ ೧೫ ಲಕ್ಷ ರೂ. ಗಳನ್ನು ೭ ವರ್ಷಗಳಲ್ಲಿ ಕೊಡುವುದಾಗಿ ಒಪ್ಪಿರುತ್ತಾರೆ. ಈ ಮೊಬಲಗಿನಲ್ಲಿ ೧೫ ಲಕ್ಷ ರೂ. ಗಳು ಡಿಸ್ಟ್ರಿಕ್ಟ್‌ಬೋರ್ಡಿನವರ ಸಹಾಯಕ್ಕಾಗಿ ಕೊಡಲ್ಪಡುವುದು. ಸರ್ಕಾರದವರು ಈ ಕಾರ್ಯಾರಂಭಕ್ಕಾಗಿ ಒಂದು ಸ್ಟೇಟ್ ರೈಲ್ವೆಯ ಶಾಖೆಯು ಏರ್ಪಡಿಸಲ್ಪಟ್ಟು ಅದರ ಮೇಲ್ವಿಚಾರಣೆಗೆ ಒಬ್ಬ ಸೂಪರಿಂಟೆಂಡಿಂಗ್ ಇಂಜನೀರು ನಿಯಮಿಸಲ್ಪಡತಕ್ಕದೆಂದು ಅಪ್ಪಣೆ ಮಾಡಿರುವರಲ್ಲದೆ, ಬೌರಿಂಗ್‌ಪೇಟೆ, ಚಿತ್ರಕಲ್‌ದುರ್ಗ ಮತ್ತೂ ಕಡೂರುಗಳಿಂದ ಹಾಕಲ್ಪಡುವ ಮಾರ್ಗಗಳ ಸರ್ವೆಯ ಕೆಲಸವನ್ನು ಕೂಡಲೆ ಆರಂಭಿಸಿ, ಈ ಮಾರ್ಗಗಳನ್ನು ಹಾಕಲು ಬೇಕಾದ ದ್ರವ್ಯವನ್ನೊದಗಿಸುವ ವಿಚಾರವಾಗಿ ತಮ್ಮ ಸೂಚನೆಗಳನ್ನು ಕಳುಹಿಸತಕ್ಕದೆಂದು ಡಿ|| ಬೋರ್ಡುಗಳ ಪ್ರೆಸಿಡೆಂಟರುಗಳಿಗೆ ತಿಳಿಸಿರುತ್ತಾರೆ.

ಕಳೆದ ೧೦ ವರ್ಷಗಳಿಂದಲೂ, ಮೈಸೂರ ಸಂಸ್ಥಾನದಲ್ಲಿ ಪ್ರತಿ ೧೫೫೪೮ ಜನರಿಗೆ ಒಂದು ಮೈಲಿಯ ಪ್ರಕಾರ ಲೋಹಮಾರ್ಗವಿರುತ್ತದೆ, ಆದರೆ ಬ್ರಿಟಿಷ್ ಇಂಡಿಯಾದೇಶದಲ್ಲಿ ಮಾತ್ರ ಪ್ರತಿ ೮೮೩೩ ಜನರಿಗೆ ಒಂದು ಮೈಲಿಯ ಪ್ರಕಾರವಿರುತ್ತದೆ. ಹೀಗೆ ಮೈಸೂರ ಸೀಮೆಯು ಲೋಹಮಾರ್ಗಾಭಿವೃದ್ಧಿಯಲ್ಲಿ ಹಿಂದೆ ಬಿದ್ದುದರಿಂದ, ೧೯೧೦ ರಲ್ಲಿ ಮೈಸೂರಿಂದ ಅರಸೀಕೆರೆಗೆ ಆಗುವ ೧೩೩ ಮೈಲಿಯವರೆಗೂ, ನಂಜನಗೂಡಿನಿಂದ ಈರೋಡಿಗೆ ಸಂಬಂಧಿಸಲು ಮೈಸೂರ ಸೀಮೆಯೆಲ್ಲಿಯವರೆಗೂ ಲೋಹಮಾರ್ಗಗಳನ್ನು ಇಂಡಿಯಾ ಸರಕಾರದವರು ಸಮ್ಮತಿಸಿದಲ್ಲಿ ಹಾಕಬೇಕೆಂಬ ಯೋಚನೆಯು ಹುಟ್ಟಿ ಈಗ ಕಾರ್ಯಮುಖವಾದುದಕ್ಕಾಗಿ ಸಂತೋಷಪಡಬೇಕಾಗಿದೆ. ಸ್ವದೇಶಾಭಿಮಾನವನ್ನೇ ಮೂಲಮಂತ್ರವನ್ನಾಗಿಟ್ಟುಕೊಂಡಿದ್ದರೆಂದು ಹೇಳಿಸಿಕೊಳ್ಳುತ್ತಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಯವರ ದಿವಾನಗಿರಿಯಲ್ಲಿ ಸಹ ಒಂದು ಚೋಟುದ್ದ ಲೋಹಮಾರ್ಗಾಭಿವೃದ್ಧಿಯಾಗಲಿಲ್ಲವು. ಅವರನಂತರ ಬಂದ ಮ|| ವಿ. ಪಿ. ಮಾಧವರಾಯರ ದಿವಾನಗಿರಿಯಲ್ಲಾದರೂ ಲೋಹಮಾರ್ಗಾಭಿವೃದ್ಧಿಯಾಗುತ್ತದೆಂಬ ಭರವಸೆಯು ಹೆಚ್ಚಾಗಿದ್ದಿತಾದರೂ, ಏನುಕಾರಣದಿಂದಲೋ ಅವರ ಕಾಲದಲ್ಲೂ ಅದಕ್ಕವಕಾಶವಾಗಲಿಲ್ಲವು. ಆದರೆ ಈಗಿನ ದಿವಾನರಾದ ಮ|| ಟಿ. ಆನಂದರಾಯರ ಕಾಲದಲ್ಲಿ ಮೈಸೂರ ದೇಶದ ಸಂಪದಭಿವೃದ್ಧಿಗೆ ಅತ್ಯಾವಶ್ಯಕವಾದ ಲೋಹಮಾರ್ಗಾಭಿವೃದ್ಧಿಯಾಗಲು ಅವಕಾಶವಾದುದಕ್ಕಾಗಿಯೂ, ಇದರಂತೆಯೇ ಸಂಪದಭಿವೃದ್ಧಿಗೆ ಕಾರಣವಾದ ನೂತನ ಜಲಾಶಯ ನಿರ್ಮಾಣಕಾರ್ಯವು ಆರಂಭಿಸಲ್ಪಟ್ಟಿರುವುದಕ್ಕಾಗಿಯೂ ಮೈಸೂರ ದೇಶೀಯರೆಲ್ಲರೂ ಮ|| ಆನಂದರಾಯರಿಗೆ ಕೃತಜ್ಞರಾಗಿರುತ್ತಾರೆ. ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ಮಾರಿಕಣಿವೆಯ ಕೆರೆಯನ್ನೂ, ಕಾವೇರೀ ನದಿಯ ಜಲಪಾತದಿಂದ ಹುಟ್ಟುವ ವಿದ್ಯುಚ್ಛಕ್ತಿಯ ಶೇಖರಕಾರ್ಯವನ್ನೂ ನಿರ್ಮಿಸಿ ದಿಗಂತ ವಿಖ್ಯಾತರಾದಂತೆ ಮ|| ಆನಂದರಾಯರೂ ಮೇಲ್ಕಂಡ ಕಾರ್ಯಗಳಿಂದ ಶಾಶ್ವತವಾದ ಕೀರ್ತಿಗೆ ಭಾಜನರಾದರೆನ್ನುವುದರಲ್ಲಿ ಸಂದೇಹವಿಲ್ಲವು ಕನ್ನಂಬಾಡಿಯ ಹತ್ತಿರ ಆರಂಭಿಸಲ್ಪಟ್ಟಿರುವ ನೂತನ ಜಲಾಶಯ ನಿರ್ಮಾಣಕ್ಕೂ ಪ್ರಕೃತದ ಲೋಹಮಾರ್ಗಾಭಿವೃದ್ಧಿಗೂ ತಕ್ಕ ಸೂಚನೆಯನ್ನೂ, ಅವುಗಳ ಸಾಧನೆಯ ವಿಚಾರದಲ್ಲಿ ಭರವಸೆಯನ್ನೂ ಕೊಟ್ಟಿರುವ ಚೀಫ್ ಇಂಜನೀರ್ ಮ|| ವಿಶ್ವೇಶ್ವರಯ್ಯನವರು ತಮ್ಮ ದೇಶೀಯರ ವಂದನೆಗೂ, ಪ್ರೀತಿಗೂ ಪಾತ್ರರಾಗಿರುವರೆಂದು ಈ ಸಂದರ್ಭದಲ್ಲಿ ತಿಳುಹತಕ್ಕದು ನಮ್ಮ ಕರ್ತವ್ಯವಾಗಿದೆ. ಮ|| ವಿಶ್ವೇಶ್ವರಯ್ಯನವರಂತೆ ಸ್ವದೇಶಕ್ಕೆ ಶಾಶ್ವತವಾದ ಪ್ರಯೋಜನವನ್ನುಂಟುಮಾಡಿದವರು ಈಚಿನ ಸ್ವದೇಶೀಯರಾದ ಅಧಿಕಾರಿಗಳಲ್ಲಿ ಮತ್ತಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಇನ್ನುಮೇಲಾದರೂ ಸ್ವದೇಶದವರಾದ ಅಧಿಕಾರಿಗಳು ಇವರ ಮೇಲು ಪಙ್ಕ್ತಿಯನ್ನನುಸರಿಸುವವರಾಗಲೆಂದು ಇಚ್ಛಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಜಾರ್ಜ್ ಪ್ರಭುಗಳ ಮಾತೃಶ್ರೀಯವರಾದ ಅಲೆಕ್ಸಾಂಡ್ರಾ ಮಹಾರಾಣಿಯವರ ಜನ್ಮದಿನೋತ್ಸವದುದ್ದಿಶ್ಯ ಕಳೆದ ತಾ|| ೧ ರ ಬೆಳಿಗ್ಗೆ ರಾಜಧಾನಿಯಲ್ಲಿ ೩೧ ಗುಂಡುಗಳು ಹಾರಿಸಲ್ಪಟ್ಟವು.

ರಾಜಧಾನಿಯಲ್ಲಿ ಪ್ರತಿವರ್ಷವೂ ತ್ರಿಮತಸ್ಥ ಬ್ರಾಹ್ಮಣರಿಗೆ ಅರಮನೆಯಿಂದ ನಡಿಸಲ್ಪಡುವ ಧಾತ್ರೀಹವನವು ಈ ತಾ|| ೧೧ ರಲ್ಲಿ ಮಧುವನದಲ್ಲಿ ನಡಿಸಲ್ಪಡುವುದಾಗಿ ಗೊತ್ತಾಗಿರುವುದು.

ಶ್ರೀಮನ್ಮಹಾರಾಜರವರು ದಿಲ್ಲಿಯ ದರ್ಬಾರು ಮಹೋತ್ಸವದಲ್ಲಿ ತಮ್ಮ ಸ್ವಂತ ಇಂಪೀರಿಯಲ್ ಸರ್ವಿಸ್ ಸೇನೆಯನಾಯಕತ್ವವನ್ನು ವಹಿಸಿಕೊಳ್ಳುವಾಗ್ಗೆ ಧರಿಸಲು ಕರ್ನಲ್ ಉಡುಪನ್ನು ಮಾಡಿಸಿರುವರು.

ವೈಟ್‌ಫೀಲ್ಡ್ ಸಮೀಪದಲ್ಲಿರುವ ತರಹೊಣ್ಸೆ ಎಂಬ ಗ್ರಾಮದಲ್ಲಿ ಮುನಿಸ್ವಾಮಿ ಎಂಬ ರೈತನು ಹೊಲದಲ್ಲಿ ಹುಲ್ಲನ್ನು ಕುಯ್ಯುತ್ತಿರುವಾಗ್ಗೆ ನಾಗರಹಾವಿನಿಂದ ಕಡಿಯಲ್ಪಟ್ಟು, ಔಷಧೋಪಚಾರವು ಮಾಡಲ್ಪಟ್ಟಾಗ್ಯೂ ಬದುಕದೆ ಸತ್ತುಹೋದನು.

ಕಾವೇರೀ ಕಪಿಲಾ ನದಿಗಳ ಪ್ರವಾಹದಿಂದ ಮಳವಳ್ಳಿ ಮತ್ತೂ ಟಿ. ನರಸೀಪುರ ತಾಲ್ಲೋಕುಗಳಲ್ಲಿ ವಿಪನ್ನರಾದ ಜನರ ಸಹಾಯಾರ್ಥವಾಗಿ ರಾಜಧಾನಿಯಲ್ಲೇರ್ಪಡಿಸಿರುವ ಫಂಡಿಗೆ ಕಳೆದ ನವೆಂಬರ್ ತಾ|| ೨೯ ರ ವರೆಗೆ ೧೦೧೧೪-೩-೮ ಶೇಖರವಾಗಿರುತ್ತದೆ.

ಶ್ರೀಮನ್ಮಹಾರಾಜರವರ ಮೋಟಾರುಬಂಡಿಗಳು ರೈಲುಮಾರ್ಗವಾಗಿ ದಿಲ್ಲಿಗೆ ಸಾಗಿಸಲ್ಪಡುವಾಗ್ಗೆ ರಾಯಿಚೂರು ಬಳಿ ೧೩೦೦೦ ರೂ ಬೆಲೆಯ ಒಂದು ದೊಡ್ಡ ಮೋಟಾರು ಬಂಡಿಯು ಹೇಗೋ ಬೆಂಕಿಯಿಂದ ಹೊತ್ತಿಕೊಂಡು ಸುಟ್ಟುಹೋಯಿತೆಂದು ತಿಳಿಯಬರುತ್ತದೆ.

ಡಾಕ್ಟರ್ ಎಂ. ಶ್ರೀನಿವಾಸರಾವ್, ಎಂ. ಎ., ಎಂ. ಡಿ., ಡಿ. ಎಸ್. ಸಿ., ಯವರು ಮೈಸೂರ ಆರೋಗ್ಯಶಾಖೆಯ ಸೂಪರಿಂಟೆಂಡೆಂಟರಾಗಿಯೂ, ರಸಾಯನ ಪದಾರ್ಥಶೋಧಕ (ಕೆಮಿಕಲ್ ಎಕ್ಸಾಮಿನರ) ರಾಗಿಯೂ ತಿಂಗಳೊಂದಕ್ಕೆ ೧೦೦೦ ರೂ. ಸಂಬಳದಮೇಲೆ ಸರ್ಕಾರದವರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಕೋಲಾರದಲ್ಲಿ ಕಳುವನ್ನು ಮಾಡಿದ ಅಪರಾಧಕ್ಕಾಗಿ ಕಳೆದ ಫೆಬ್ರುವರಿಯಿಂದಲೂ ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ಕಾರಾಗೃಹವಾಸ ಶಿಕ್ಷೆಯನ್ನನುಭವಿಸುತ್ತಿದ್ದ ವೆಂಕಟರಾಮ ಎಂಬುವನು ಕಳೆದ ತಾ|| ೨೬ ರ ಬೆಳಿಗ್ಗೆ ತಾನಿದ್ದ ಗುಮ್ಮಿಯ ಜಂತಿಗೆ ಹಗ್ಗವನ್ನು ಕಟ್ಟಿ ಅದನ್ನು ತನ್ನ ಕುತ್ತಿಗೆಗೆ ಬಿಗಿದು ನೇತುಹಾಕಿಕೊಂಡು ಸತ್ತುಹೋದನು.

ಶ್ರೀರಂಗಪಟ್ಟಣದಲ್ಲಿ ಪ್ರಕಟವಾಗುತ್ತಿರುವ ವಿವೇಕೋದಯವೆಂಬ ಮಾಸಿಕ ಪುಸ್ತಕವು ಚಕ್ರವರ್ತಿದಂಪತಿಗಳ ಕಿರೀಟಧಾರಣ ಮಹೋತ್ಸವ ದಿನದಿಂದ ಅಂದರೆ ಈ ತಾ|| ೧೨ ರಿಂದ ಸಾಪ್ತಾಹಿಕ ಪತ್ರಿಕೆಯಾಗಿ ಮಾರ್ಪಡಿಸಲ್ಪಡುವುದಾಗಿಯೂ, ರಾಜಧಾನಿಯಲ್ಲಿರುವ ಆರ್ಯಬಾಲಕಸಮಾಜದವರು ಕಿರೀಟಧಾರಣ ಮಹೋತ್ಸವದ ಜ್ಞಾಪನಾರ್ಥವಾಗಿ ಒಂದು ಮಾಸಿಕ ಪುಸ್ತಕವನ್ನು ಹೊರಡಿಸುವುದಾಗಿಯೂ ಕೇಳುತ್ತೇವೆ.

ಬೆಂಗಳೂರ ತಾ|| ವರ್ತೂರ ಸಮೀಪದಲ್ಲಿರುವ ಚೆನ್ನಪ್ಪನ ಹಳ್ಳಿಯಲ್ಲಿ ಒಬ್ಬ ರೈತನೂ, ಅವನ ಹೆಂಡತಿಯೂ ತಮ್ಮ ೫ ವರ್ಷದ ಗಂಡು ಹುಡುಗನನ್ನು ಮಟ್ಟೆಯ ಮನೆಯಲ್ಲಿ ಬಿಟ್ಟು ಹೊಲದ ಕೆಲಸಕ್ಕಾಗಿ ಹೋಗಿದ್ದರು. ಆ ಹುಡುಗನು ಗುಡಿಸಲಿನೊಳಗೆ ಕಾಳನ್ನು ಹುರಿಯುತ್ತಿರುವಾಗ್ಗೆ ಹೇಗೋ ಮಟ್ಟೆಗೆ ಬೆಂಕಿಯು ಬಿದ್ದು ಗುಡಿಸಲು ಹೊತ್ತಿಕೊಂಡು ನಾಶವಾಯಿತು. ಒಳಗಿದ್ದ ಹುಡುಗನೂ ಸುಟ್ಟುಹೋದನು. ತಂದೆತಾಯಿಗಳು ಹೊಲದಿಂದ ಹಿಂತಿರುಗಿ ಬಂದಾಗ ತಮ್ಮ ಗುಡಿಸಲು ಸುಟ್ಟು ಭಸ್ಮವಾಗಿರುವುದನ್ನೂ, ಮಗನ ದೇಹವು ಸುಟ್ಟು ಇದ್ದಿಲಾಗಿರುವುದನ್ನೂ ನೋಡಿ ಅತ್ಯಂತವಾಗಿ ವ್ಯಸನಪಟ್ಟರು.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವರ್ತಕ ಸಂಘದವರು ಕಳೆದ ತಾ|| ೨೩ರಲ್ಲಿ ಬೆಂಗಳೂರ ಹೊಸ ತರಗಿನಪೇಟೆಯಲ್ಲಿರುವ ಮ|| ಪರಿಯಣ್ಣನವರ ಮಂದಿಯಲ್ಲಿ ಸಭೆಸೇರಿದ್ದು ಈ ಸಂಘಕ್ಕೆ ಮ|| ಪರಿಯಣ್ಣನವರು ಪ್ರೆಸಿಡೆಂಟರಾಗಿಯೂ, ಮ|| ತಿರುವೆಂಗಡಾಚಾರ್, ಎಂ. ಎ., ಯವರು ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಕೆ. ಎಸ್. ಕೃಷ್ಣಯ್ಯರ್‌ರವರು ಸೆಕ್ರೆಟರಿಗಳಾಗಿಯೂ, ಮ|| ರಾಮಚಂದ್ರರಾವ್ ಸಿಂಧೆಯವರು ಟ್ರಜರರಾಗಿಯೂ, ಮ|| ಗಳಾದ ಚೆನ್ನಸ್ವಾಮಿಶೆಟ್ಟರು, ಸಂಜೀವರಾಯರು, ಡಿ. ಅದಪ್ಪದವರು, ಮತ್ತೂ ಮಹಮದ್ ಅಬ್ಬಾಸ್‌ಖಾನರವರು ಎಕ್ಸಿಕ್ಯೂಟಿವ್ ಕಮಿಟಿಯ ಹೆಚ್ಚು ಮೆಂಬರರಾಗಿಯೂ ನೇಮಿಸಲ್ಪಟ್ಟರು. ಈ ಸಂಘಕ್ಕೆ ಈವರೆಗೆ ೩೫ ಜನರು ಮೆಂಬರುಗಳಾಗಿ ಸೇರಿರುವರು.

ಶ್ರೀಮದ್ಯುವರಾಜರು, ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಾನ, ಸಿ. ಐ., ಯವರು, ಮಹಾರಾಣಿಯವರು, ಪ್ರೈವೆಟ್ ಸೆಕ್ರೆಟರಿ ಮ|| ಕ್ಯಾಂಬಲ್‌ರವರು, ಕರ್ನಲ್ ದೇಶರಾಜ ಅರಸಿನವರು, ಮ|| ರಾಣಾಸಾಹೇಬರು, ಮ|| ಗಳಾದ ಗೋಪಾಲರಾಜ ಅರಸಿನವರು, ಚಾಮಯ್ಯಾಜಿ ಅರಸಿನವರು, ಬಿ. ಪುಟ್ಟಯ್ಯಾಜಿ ಅರಸಿನವರು, ಎಚ್. ನಂಜುಂಡರಾಜ ಅರಸಿನವರು, ಎಚ್. ಲಿಂಗರಾಜ ಅರಸಿನವರು, ಲಕ್ಷ್ಮೀಕಾಂತರಾಜ ಅರಸಿನವರು, ಗೋಪಾಲಕೃಷ್ಣ ಅರಸಿನವರು, ಸುಬ್ರಹ್ಮಣ್ಯರಾಜ ಅರಸಿನವರು, ಮುದ್ದರಾಜ ಅರಸಿನವರು, ಹುಜೂರು ಸೆಕ್ರೆಟರಿ ಪಿ. ರಾಘವೇಂದ್ರರಾಯರು, ಅ|| ಸೆಕ್ರೆಟರಿ ಮಿ|| ಮಿರ್ಜಾ ಇಸ್ಮಾಯಿಲ್‌ರವರು, ಡಾ|| ಎನ್. ರಂಗಾಚಾರ್ಯರು ಇವರುಗಳೊಡನೆ ಶ್ರೀಮನ್ಮಹಾರಾಜರವರು ಕಳೆದ ತಾ|| ೨೮ ನೇಯ ಮಂಗಳವಾರ ರಾತ್ರಿ ಹೆಚ್ಚುಗಟ್ಟಲೆಯ ರೈಲು ಬಂಡಿಯಲ್ಲಿ ಪ್ರಯಾಣಮಾಡಿ ಕಳೆದ ತಾ|| ೧ ರಲ್ಲಿ ದಿಲ್ಲಿಯ ಪಟ್ಟಣವನ್ನು ಸುರಕ್ಷಿತವಾಗಿ ಸೇರಿದರು

ರಾಜಧಾನಿಯಲ್ಲಿರುವ ಶ್ರೀಮಂತ ನೀಲಗಿರಿ ದೊಡ್ಡಪಾಪಣ್ಣನವರ ಕುಮಾರರು ಮದ್ದಣ್ಣ (ಮೊಗಣ್ಣ) ನವರನ್ನು ದಿಲ್ಲಿಯ ದರ್ಬಾರಿಗೆ ಅತಿಥಿಗಳನ್ನಾಗಿ ಕಳುಹತಕ್ಕದೆಂದು ಮೈಸೂರ ಡೆಪ್ಯುಟಿಕಮಿಷನರಿಗೆ ಶ್ರೀಮದ್ ಮಹಾರಾಜರವರಿಂದ ತಂತಿಯು ಕೊಡಲ್ಪಟ್ಟಿದ್ದುದರಿಂದ, ಮ|| ಮದ್ದಣ್ಣನವರು ತಮ್ಮ ಭಾವಮೈದುನ ಮ|| ಮಲ್ಲಯ್ಯ ಮತ್ತು ಇಬ್ಬರು ಸೇವಕರೊಡನೆ ಕಳೆದ ತಾ|| ೩೦ರಲ್ಲಿ ದಿಲ್ಲಿಗೆ ಪ್ರಯಾಣಮಾಡಿದರು. ಈ ಶ್ರೀಮಂತರು ಕಳೆದ ೩ನೆಯ ವರ್ಷದಲ್ಲಿ ರಾಜಧಾನಿಯಲ್ಲಿ ಪ್ಲೇಗು ಬಹು ಉಲ್ಬಣವಾಗಿರುವಾಗ್ಗೆ ಸಾವಿರಾರು ಜನರಿಗೆ ಬಟ್ಟೆ, ದುಡ್ಡು, ಅಕ್ಕಿ ಮತ್ತೂ ಮಿಠಾಯಿಗಳನ್ನು ಕೊಟ್ಟು ಇನಾಕ್ಯುಲೇಷನ್ನು ಮಾಡಿಸುವುದರಲ್ಲಿ ೮-೧೦ ಸಾವಿರ ರೂಪಾಯಿಗಳನ್ನು ಉದಾರಮನಸ್ಸಿನಿಂದ ವ್ಯಯಮಾಡಿದ ಸಂಗತಿಯು ಸರ್ವಶ್ರುತವಾಗಿದೆ. ಇಂತಹ ಪ್ರಜೋಪಕಾರಿಗಳಿಗೆ ಶ್ರೀಮದ್ ಮಹಾರಾಜರವರಿಂದ ಯಾವುದೊಂದು ಸನ್ಮಾನವೂ ದೊರೆಯಲಿಲ್ಲವೆಂದು ಜನರಿಗೆ ಅಸಮಾಧಾನವುಂಟಾಗಿದ್ದಿತು. ಆದರೆ ಪ್ರಭುಗಳು ಶ್ರೀಮಂತರನ್ನು ತಮ್ಮ ಅತಿಥಿಗಳನ್ನಾಗಿ ದಿಲ್ಲಿಯ ದರ್ಬಾರಿಗೆ ಬರಮಾಡಿಕೊಂಡಿರುವುದು ಅವರಿಗೆ ವಿಶೇಷವಾದ ಮರ್ಯಾದೆಯನ್ನು ಕೊಟ್ಟಂತಾಗಿರುವುದಲ್ಲದೆ, ರಾಜಧಾನಿಯ ನಿವಾಸಿಗಳೆಲ್ಲರಿಗೂ ಪರಮಸಂತೋಷವಾಗಿದೆ. ಜನೋಪಕಾರವಾದ ಕಾರ್ಯಗಳನ್ನು ಮಾಡತಕ್ಕವರಿಗೆ ಶ್ರೀಮದ್ ಮಹಾರಾಜರವರಿಂದ ಸನ್ಮಾನವು ದೊರೆಯದೆ ಇರುವುದಿಲ್ಲವೆಂಬುದಕ್ಕೆ ಪ್ರಕೃತ ಸಂದರ್ಭವೂ ಪ್ರಬಲದೃಷ್ಟಾಂತವಾಗಿದೆ.

ವರ್ತಮಾನ ಸಂಗ್ರಹವು.

:o:

ಸ್ಟ್ರೇಟ್ ಸೆಟ್ಲಮೆಂಟಿನಲ್ಲಿ ಒಬ್ಬನು ಮೋಟಾರು ಬೈಸಿಕಲ್ಲಿನಮೇಲೆ ಸ್ವಾರಿಮಾಡಿಕೊಂಡು ಹೋಗುತ್ತಿರುವಾಗ ಮಾರ್ಗದಲ್ಲಿ ಇದಿರಾಗಿ ಬರುತ್ತಿದ್ದ ಒಂದು ಆನೆಗೆ ತಾಕಿಬಡಿದು ಬೈಸಿಕಲ್ಲು ಸಮೇತ ಬಹುದೂರ ಹೋಗಿ ಬಿದ್ದನು. ಇದರಿಂದ ಸೈಕಲ್ಲು ಮುರಿದುಹೋಯಿತು. ಆದರೆ ಸ್ವಾರನಿಗೆ ಮಾತ್ರ ಅಪಾಯವೇನೂ ಆಗಲಿಲ್ಲವು.

ಲಂಡನ್ ಪಟ್ಟಣದಲ್ಲಿರುವ ಬರೋಡಾ ಸಂಸ್ಥಾನದ ಯುವರಾಜರು ಒಂದು ಆಟದ ಪಂದ್ಯವನ್ನೋಡುವ ಉದ್ದೇಶದಿಂದ ಮೋಟಾರು ಬಂಡಿಯಲ್ಲಿ ಹೊರಟು ಗೊತ್ತಾದ ಸ್ಥಳದಲ್ಲಿ ಬಂಡಿಯಿಂದ ಕೆಳಗಿಳಿಯುವಾಗ್ಗೆ ಕಾಲುಜಾರಿ ಕೆಳಗೆ ಬಿದ್ದರು. ಅದರಿಂದ ಅವರಿಗೆ ಕೊಂಚಕಾಲ ಸ್ಮೃತಿಯು ತಪ್ಪಿದ್ದಿತೇ ಹೊರತು ಅಪಾಯವೇನೂ ಆಗಲಿಲ್ಲವು.

ಚಕ್ರವರ್ತಿಯವರ ಕೂಡ ಭರತಖಂಡಕ್ಕೆ ಬಂದಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್‌ಕ್ರೂ ಯವರು ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ಸಾರ್ವಜನಿಕ ಮಹಾಸಭೆಗೆ ದಯಮಾಡಿಸಬೇಕೆಂದು ಮಹಾಸಭೆಯ ಸ್ವಾಗತಸಂಘಾಧ್ಯಕ್ಷರು ಲಾರ್ಡ್‌ರವರಿಗೆ ಆಮಂತ್ರಣವನ್ನು ತಂತಿಯ ಮೂಲಕ ಕೊಟ್ಟಿದ್ದುದಕ್ಕಾಗಿ ಅವರು ತಮ್ಮ ವಂದನೆಯನ್ನು ತಿಳಿಸಿರುತ್ತಾರೆ.

ಕಳೆದ ತಾ|| ೨೯ರ ರಾತ್ರಿ ಅಲಹಾಬಾದಿನಲ್ಲಿ ಒಬ್ಬ ಬನಿಯಾವರ್ತಕನು ತನ್ನ ಅಳಿನಸಂಗಡ ಅಂಗಡಿಯಲ್ಲಿ ಮಲಗಿದ್ದವನು ಬೆಳಿಗ್ಗೆಹೊತ್ತಾದರೂ ಏಳದೆಹೋದುದರಮೇಲೆ, ಆ ವರ್ತಕನ ಸೇವಕರು ಅಂಗಡಿಯೊಳಗೆ ಹೋಗಿ ಮಲಗಿರುವ ಇಬ್ಬರನ್ನೂ ಎಬ್ಬಿಸಿ ಕೂಗಿದರೂ ಅವರು ಏಳದಿರಲು ಅಳಿಯು ದಿಗಿಲುಬಿದ್ದು ಅವರ ಮೈಮೇಲಿದ್ದ ಬಟ್ಟೆಗಳನ್ನು ತೆಗೆದುನೋಡುವಲ್ಲಿ, ಅವರಿಬ್ಬರೂ ಸತ್ತುಬಿದ್ದಿರುವುದು ಗೊತ್ತಾಯಿತು. ಅವರ ಮುಖದಮೇಲೆ ಗುದ್ದಲಿಯ ಕೊನೆಯಿಂದ ಹೊಡೆಯಲ್ಪಟ್ಟ ಗಾಯಗಳಿದ್ದವು. ಕಬ್ಬಿಣದ ಪೆಟ್ಟಿಗೆಯ ಬಾಗಿಲು ಒಡೆದುಹಾಕಲ್ಪಟ್ಟು ೧೦೦೦ ರೂ. ವರೆಗೆ ಅಪಹರಿಸಲ್ಪಟ್ಟಿದ್ದಿತು. ಕಳ್ಳರು ಇನ್ನೂ ಸಿಕ್ಕಿಲ್ಲವು.

ಹಿಂದೂ ವಿಶ್ವವಿದ್ಯಾಲಯ ಸಂಬಂಧವಾಗಿ ಆಲೋಚಿಸಲು ಕಳೆದ ತಾ|| ೨೮ ರಲ್ಲಿ ಅಲಹಾಬಾದಿನಲ್ಲಿ ದರ್ಭಾಂಗೆ ಮಹಾರಾಜರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಈ ಸಭೆಗೆ ಅನಿಬೆಸೆಂಟಮ್ಮನವರು, ಮ|| ವಿ. ಪಿ. ಮಾಧವರಾಯರು ಮೊದಲಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ದರ್ಭಾಂಗೆ ಮಹಾರಾಜರ ಮುಖಂಡತೆಯಿಂದ ಅನಿಬೆಸೆಂಟಮ್ಮನವರು, ಆನರಬಲ್ ಪಂಡಿತ ಸುಂದರಲಾಲ್‌ಯವರು ಡಾಕ್ಟರ್ ರಸವಿಹಾರಿ ಘೋಷ್‌ರವರು, ಕಾಸಿಂ ಬಜಾರಿನ ಮಹಾರಾಜರವರು, ಮ|| ಎ. ಚೌಧರಿಯವರು, ಆನರಬಲ್ ಕುಮಾರ ಕ್ಷೇತ್ರ್ಯಾನಂದಸಿಂಗ್‌ರವರು, ಬಾಬು ವಿಜಯಾನಂದ ಕೃಷ್ಣರಾಯ್ ಚೌಧರಿಯವರು, ಧಿಗಪತಿಯ ಮಹಾರಾಜರು, ಮ|| ವಿ. ಪಿ. ಮಾಧವರಾಯರು, ಆನರಬಲ್ ಮ|| ಎನ್. ಸುಬ್ಬರಾಯರು, ಬೊಬ್ಬಿಲಿಯ ಮಹಾರಾಜರು, ಆನರಬಲ್ ಮ|| ಶೇಷಗಿರಿ ಅಯ್ಯರ್‌ರವರು, ಆನರಬಲ್ ಹರಿಚಂದರಾಯ್ ವಿಷ್ಣುದಾಸರವರು, ಲಾಲಚಂದ್ ರಾಯ್ ಬಹದ್ದೂರ್‌ರವರು, ಲಾಲ ಹರಿಕೃಷ್ಣಲಾಲರವರು, ಆನರಬಲ್ ಲಾಲ ಹರಿಚಂದ್‌ರವರು, ಆನರಬಲ್ ಲಾಲ ಸುಲ್ತಾನ್ ಸಿಂಗ್‌ರವರು, ಬಾಬಾ ಗುರುಭಕ್ಷ್ ಸಿಂಗ್‌ರವರು, ವೇದಿ ಸರದಾರ್ ಜೋಗೇಂದ್ರಸಿಂಗ್‌ರವರು, ಆನರಬಲ್ ಮ|| ಆರ್. ಎನ್. ಮುಧೋಳ್ಕರ್‌ರವರು, ಮ|| ವಿ. ಎನ್. ಪಂಡಿತರವರು, ಆನರಬಲ್ ಬಲರಾಂಪುರದ ಮಹಾರಾಜರವರು, ಬಿಜುರಗಾನಿನ ರಾಣಾ ಶಿವರಾಜ ಸಿಂಗ್‌ರವರು, ಆನರಬಲ್ ರಾಜಾ ಮಹಲಿಸಿಂಗ್‌ರವರು, ಆನರಬಲ್ ಬಾಬು ಗಂಗಾಪ್ರಸಾದವರ್ಮರವರು, ಆನರಬಲ್ ರಾಯ್ ಶ್ರೀರಾಮ ಬಹದ್ದೂರ್‌ರವರು, ಆನರಬಲ್ ಲಾಲ ಸುಖಬೀರಸಿಂಗ್‌ರವರು, ಬಾಬು ಮೋತಿ ಚಂದರವರು, ಮಹಾಮಹೋಪಾಧ್ಯಾಯ ಶಿವಕುಮಾರ ಶಾಸ್ತ್ರಿಯವರು, ಪಂಡಿತ ಗೋಕರ್ಣನಾಥ ಮಿಶ್ರರವರು, ರಾಯ್ ಬಹದ್ದೂರ್ ಚಜರಾರ್ಜ ಆರ್ಯರವರು, ಶಿವಪುರರಾಯ್ ರಾಮಸಾರಂದಾಸ ಬಹದ್ದೂರ್‌ರವರು, ಆನರಬಲ್ ರಾಜಪ್ರತಾಪ ಬಹದ್ದೂರ್‌ಸಿಂಗ್‌ರವರು, ಬಾಬು ಲಿಂಗತ ಸಿಂಗ್‌ರವರು. ತಾರಕೇಶ್ವರದ ಮಹಂತರವರು ಮತ್ತೂ ರಾಯ್ ಬಹದ್ದೂರ್ ಬದ್ರಿದಾಸರವರು ಇಂತಿಷ್ಟು ದೊಡ್ಡಮನುಷ್ಯರುಗಳು ವೈಸ್ರಾಯರ ಕಾರ್ಯನಿರ್ವಾಹಕ ಸಂಘದಲ್ಲಿ ವಿದ್ಯಾಶಾಖಾ ಸಂಬಂಧವಾಗಿ ಸಭಾಸತ್ತರರಾಗಿರುವ ಆನರಬಲ್ ಮಿ|| ಬಟ್ಲರ್‌ರವರನ್ನು ಈ ದಿವಸ ದಿಲ್ಲಿಪಟ್ಟಣದಲ್ಲಿ ಕಂಡು ಹಿಂದೂ ವಿಶ್ವವಿದ್ಯಾಲಯಸ್ಥಾಪನೆಗೆ ಸರ್ಕಾರದನುಮತಿಯನ್ನೂ, ಸಹಾಯವನ್ನೂ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕಾಗಿ ಗೊತ್ತುಮಾಡಲ್ಪಟ್ಟಿತು.

ಬೆಳಗಾವ.

'ಊರು ಇದ್ದಲ್ಲಿ ಹೊಲಗೇರಿ ಇರುತ್ತದೆ,' ಎಂಬ ನಾಣ್ಣುಡಿಗನುಸಾರವಾಗಿ ಈ ಬೆಳಗಾವಿನಂತಹ ಸೊಬಗುಳ್ಳ ಪಟ್ಟಣದಲ್ಲಾದರೂ ಧರ್ಮದ್ರೋಹಿಗಳೂ, ಸಮಾಜಘಾತಕರೂ ಆದ ಕೆಲ ಮಹನೀಯರು ಇರುವರೆಂದು ಗೊತ್ತಾಗುತ್ತದೆ. ಏನಂದರೆ- ಇಲ್ಲಿ ೬ ನೆಯ ಶ್ರೀಮದ್ವೀರಶೈವಮಹಾಸಭೆಯ ಕಾರ್ಯ ಸನ್ನಾಹವು ಸದ್ಯಕ್ಕೆ ಒಳ್ಳೆಯ ಸಂಭ್ರಮದಿಂದ ನಡೆಯುತ್ತಿದ್ದಾಗ್ಯೂ, ಬೆಳಗಾವ್ ಶಹಪುರ ಶಹರಗಳು ಪ್ಲೇಗಿಲ್ಲದೆ ಶಾಂತಸ್ಥಿತಿಯಲ್ಲಿದ್ದಾಗ್ಯೂ ಯಾರೋ ಪುಣ್ಯಾತ್ಮರು 'ಪ್ಲೇಗಿನಮೂಲಕ ಮಹಾಸಭೆಯಾಗುವುದು ಬಂದಾಯಿತು.' ಎಂದು ದೂರ ಸ್ಥಳಗಳಿಗೆ ಪತ್ರದ್ವಾರಾ ಸುಳ್ಳು ಸುದ್ದಿಗಳನ್ನು ಬೀರಿ ತಮ್ಮ ಅಂತರಂಗವನ್ನು ತೃಪ್ತಿಪಡಿಸಿಕೊಂಡಿರುವರು. ಗುಪ್ತವಾಗಿದ್ದ ಈಶ್ವರೀ ಅಂತಃಕರಣದ ಮುಂದೆ ವಿಘ್ನಸಂತೋಷಿಗಳ ಯಾವ ತಂತ್ರಗಳೂ ನಿಲ್ಲಲಾರವು. ಈ ಸಮಾಜಘಾತಕರು ಇಂತಹ ದುಷ್ಕೃತವನ್ನು ವ್ಯಕ್ತಪಡಿಸಿ ಯಾವ ಪುರುಷಾರ್ಥವನ್ನು ಪಡೆಯುವರೋ ದೇವರೇ ಬಲ್ಲ!

ಸಮಾಜ ಬಾಂಧವರೇ ! ನಿಯಮಿತ ಮುದ್ದತಿಗೆ ಸರಿಯಾಗಿ ಮಹಾಸಭೆಯು ನಿಶ್ಚಯವಾಗಿ ಜರುಗುವದು. ಹಿಂದಿನ ಮಹಂತಾದ ಯಾವತ್ತು ಕಾರ್ಯಸಿದ್ಧತೆಯು ಶ್ರದ್ಧೆಯಿಂದ ನಡೆದಿರುವದು. ಸದ್ಯಕ್ಕೆ ಇಲ್ಲಿ ಪ್ಲೇಗು ಇಲ್ಲ. ಒಂದು ವೇಳೆ ಪ್ಲೇಗಿನ ಗದಿಬಿದಿಯಾದರೂಕೂಡ ಅದಕ್ಕೆ ವ್ಯತ್ಯಯಬಾರದಂತೆ ಸಭಾಮಂಟಪ, ಭೋಜನಶಾಲೆ, ವಸತಿಗೃಹ ಮೊದಲಾದವುಗಳೆಲ್ಲ ಊರಹೊರಗೆ ಆರೋಗ್ಯಕರಸ್ಥಳದಲ್ಲಿ ಬಹುಭಾರಿ ಒತ್ತಟ್ಟಿಗೆ ರಚಿಸಲ್ಪಟ್ಟಿರುವುದು. ಅದುಕಾರಣ ಯಾರು ಎಷ್ಟುಮಾತ್ರವೂ ಅನುಮಾನಿಸದೆ ಅಭಿಮಾನವಿಟ್ಟು ಯಥಾಪ್ರಕಾರ ಮಹಾಸಭೆಗೆ ದಯಮಾಡಿಸಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇನೆ.

ನೀಲಕಂಠಗೌಡ ಪಾಟೀಲ,
[illegible]

ಪತ್ರವ್ಯವಹಾರ.

ಧಾರವಾಡ

ವೀರಶೈವ ಕೊಣ್ಣೂರ ಕರ್ನಾಟಕ ಸಂಗೀತ ನಾಟಕ ಮಂಡಳಿಯವರು ಧಾರವಾಡಕ್ಕೆ ಬಂದು ಇಲ್ಲಿ ಕೆಲವು ದಿವಸಗಳ ವರೆಗೆ ತಮ್ಮ ಆಟಗಳನ್ನು ಬಹು ಶ್ಲಾಘ್ಯವಾಗಿ ಆಡಿ ಇಲ್ಲಿಯ ಜನರಿಗೆ ಬಹು ಸಂತೋಷವನ್ನುಂಟುಮಾಡಿದರು. ಈ ನಾಟಕಮಂಡಳಿಯ ಸಂಪಾದಕರಾದ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರು ಕಟ್ಟಕಡೆಗೆ 'ಧಾರವಾಡ ವೀರಶೈವ ಲಾಯಬ್ರರಿಗೆ' ತಮ್ಮ ಸುಪ್ರಸಿದ್ಧವಾದ 'ಬಸವೇಶ್ವರ' ಆಖ್ಯಾನವೆಂಬ ಒಂದು ಆಟವನ್ನು ತಮ್ಮ ಮಂಡಳಿಯವರ ಕಡೆಯಿಂದ ತಾ॥ ೧೮-೧೧-೯೧೧ ರ ದಿವಸ ಆಡಿಸಿ ಅದರಿಂದ ಬಂದ ಉತ್ಪನ್ನವನ್ನು ಧರ್ಮಾರ್ಥವಾಗಿ ಅಗದೀ ಉದಾರಮನಸ್ಸಿನಿಂದ ಕೊಟ್ಟರು. ಧಾರವಾಡದ ವೀರಶೈವ ನಿವಾಸಿಗಳು ಸದರಿ ನಾಟಕ ಮಂಡಳಿಯವರಿಗೆ ಬಹು ಪ್ರೇಮದಿಂದ ಸನ್ಮಾನಮಾಡಿದರು. ಆ ಹೊತ್ತಿನ ಆಟಕ್ಕಾಗಿ ೫೩೦ ರೂ. ಗಳ ಟಿಕೀಟುಗಳನ್ನು ಧಾರವಾಡ ವೀರಶೈವ ಮತಾಭಿಮಾನಿಗಳು ತಮ್ಮಿಂದಾದಷ್ಟು ತಂತಮ್ಮ ಮಿತ್ರರಲ್ಲಿ ಖರ್ಚುಮಾಡಿಸಿದ್ದಾರೆ. ಈ ಹಣವು ಬಂದಬಂದ ಹಾಗೆ ಧಾರವಾಡದ ಸೇವಿಂಗ್ಸ್ ಬ್ಯಾಂಕಿನಲ್ಲಿ ಸದರಿ ಲಾಯಬ್ರರಿಯ ಟ್ರಜರರಾದ ಮಿ॥ ಕರವೀರಪ್ಪಾ ಕುಲಕರ್ಣಿ ವಕೀಲ ಧಾರವಾಡ ಇವರು ಇಡಬೇಕೆಂದು ಗೊತ್ತಾಗಿದೆ.

ಎಲ್. ವಿ. ಮೆಣಸಿನಕಾಯಿ,
ಎಲ್. ಇ. ಎಫ್. ಕಮಿಟಿ ಸೆಕ್ರೆಟರಿ.

ವಿಜ್ಞಾಪನಪತ್ರಿಕಾ.

ಈ ಕೆಳಗೆ ರುಜು ಮಾಡಿರುವ ಬಳ್ಳಾರಿ ಜಿಲ್ಲಾ ಕಸಬಾ ಹರಪನಹಳ್ಳಿಯಲ್ಲಿರುವ ಮಾರ್ವಾಡಿಗಳಾದ ನಾವುಗಳು ಅತ್ಯಂತ ವಿನಯಪೂರ್ವಕವಾಗಿ ಕೃತಪಡಿಸುವದೇನಂದರೆ—

ನಾವು ನಮ್ಮ ಸ್ವದೇಶವನ್ನು ಬಿಟ್ಟು ವ್ಯಾಪಾರಾರ್ಥವಾಗಿ ಈ ಗ್ರಾಮಕ್ಕೆ ಬಂದು ಸುಮಾರು ೨೫ ವರುಷಗಳಾಗುತ್ತಾ ಬಂದು ಈವರಿಗೂ ಯಾವ ತೊಂದರೆಯಿಲ್ಲದೆ ದೇವರ ಅನುಗ್ರಹದಿಂದ ಸುಖವಾಗಿ, ಜೀವಿಸುತ್ತಾ ಬಂದೆವು. ಪ್ರಕೃತದಲ್ಲಿ ಇಲ್ಲಿ ಪ್ಲೇಗು ಪ್ರಾರಂಭವಾಗಿ ನಮ್ಮ ಜನರ ಪೈಕಿ ಪಬ್ಬಬ್ಬರಿಗೆ ತಗಲಿದ್ದರಿಂದ ನಾವು ತುಂಬಾ ವ್ಯಸನವುಳ್ಳವರಾಗಿ ಇಲ್ಲಿ ಕ್ಯಾಂಪುಗಳನ್ನು ಹಾಕಿಕೊಂಡು ಇರಬೇಕೆಂದರೆ ನಾವು ದೂರದೇಶವಾಸಿಗಳಾದ್ದರಿಂದ ಇರುವದಕ್ಕೆ ದಾರಿಗೂ ಮನಸ್ಸಾಗಲಿಲ್ಲಾ. ಮತ್ತು ನಮ್ಮ ದೇಶಕ್ಕೆ ಹೋಗಬೇಕೆಂದರೆ ನಮ್ಮ ಅಂಗಡಿಗಳಲ್ಲಿರುವ ಯಾವತ್ತು ಮಾಲನ್ನು ರೈಲ್ವೆ ಮೂಲಕ ಸಾಗಿಸಿಕೊಂಡು ಹೋಗಬೇಕೆಂದರೆ ಯಾರಿಗೂ ಸಾಧ್ಯವಲ್ಲದೆ ಹೋಯಿತು. ಇದು ಅಲ್ಲದೆ ಇಲ್ಲಿ ಯಾವತ್ತು ಮಾಲನ್ನು ಇಟ್ಟು ಹೋಗಬೇಕೆಂದರೆ ಅಂಥಾ ನಂಬಿಗೆ ಆಗದೆ ತುಂಬಾ ವ್ಯಸನವುಳ್ಳವರಾಗಿರುವ ಕಾಲದಲ್ಲಿ ಇದೇ ಗ್ರಾಮದಲ್ಲಿ ಸತ್ಪುರುಷಾಗ್ರಗಣ್ಯರಾಗಿಯೂ, ಪರೋಪಕಾರ ನಿರತರಾಗಿಯೂ ಏಕಪತ್ನಿವ್ರತಸ್ಥರಾಗಿಯೂ, ಸತ್ಕೀರ್ತಿವಂತರಾಗಿಯೂ ಇರುವ ಶ್ರೀಮಂತ್ ನೆಲ್ಕುದ್ರಿ ಬೋರಣ್ಣನವರ ಕೊಟ್ಟೂರು ಬಸಪ್ಪನವರು ಅನಾಥರಾದ ನಮ್ಮನ್ನು ಇಂಥಾ ವಿಪತ್ಕಾಲದಲ್ಲಿ ತಮ್ಮ ಸ್ವಪುತ್ರರಂತೆ ಭಾವಿಸಿ, ಕಾಪಾಡಿಕೊಂಡು ಬಂದುದಕ್ಕಾಗಿ ದೇವರು ಸದರಿ ಮಹನೀಯರಿಗೂ ಅವರ ಕಳತ್ರಪುತ್ರಮಿತ್ರಾದಿಗಳಿಗೂ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇವೆ.

ರುಜು ಮಾರ್ವಾಡಿ—ಬಾನಾಜಿ-ಶೇಷಾಜಿ, ಈರಾಜಿ-ಲಕ್ಷ್ಮೀರಾಂಜಿ, ಭೂತಾಜಿ-ಪನ್ನಾಜಿ, ಖಿಂಗಾರ್ಜಿ-ರಜ್ಜಾಜಿ.

ಬೆಳಗಾಂವಿಯಲ್ಲಿ ಕೂಡುವ ೬ ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಕಳೆದ ತಾ॥ ೧೩ ರ ನಮ್ಮ ಈ ಪ್ರಿಯ ಸ್ಟಾರ ಪತ್ರದಲ್ಲಿ ಈ ಮಹಾಸಭೆಯವರು ಅಪೇಕ್ಷಿಸುವ ಸ್ಟ್ಯಾಂಡಿಂಗ ಕಮಿಟಿಯ ಮೆಂಬರರ, ಸಮಾಜಹಿತ ಚಿಂತಕರ, ಜಿಲ್ಲಾ, ತಾಲ್ಲೂಕ, ಗ್ರಾಮ, ಕಮಿಟಿ ಸ್ಥಾಪಕರ, ಮತ್ತು ಬೇರೆಯವರ ರಿಪೋರ್ಟಗಳನ್ನು ಕಳಿಸಬೇಕೆಂದು ವಿನಂತಿ ಮಾಡಿಕೊಂಡದ್ದು ನಮ್ಮ ಸಮಾಜ ವೃಂದದ ಮುಂದಾಳುಗಳು ಮರೆತಿರಲಿಕ್ಕಿಲ್ಲವಷ್ಟೆ. ಆದಾಗ್ಯೂ ಆ ಸ್ಟಾರ ಪತ್ರದ್ವಾರ ತಿಳಕೊಂಡು ಅದಕ್ಕೆ ಉತ್ತರ ಬರೆದಿರುವ ಶ್ರೀಮನ್ ನಿರಂಜನಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳವರ ಪತ್ರದ ತಾತ್ಪರ್ಯವನ್ನು ಇದರಡಿಯಲ್ಲಿ ಕೊಟ್ಟು ಇನ್ನೊಂದಾವರ್ತಿ ನಮ್ಮ ಸಮಾಜ ಸುಧಾರಕರೆಂದೆನಿಸಿಕೊಳ್ಳುವ ಮಹಾಸ್ವಾಮಿಗಳಿಗೂ, ಸಂಸ್ಥಾನಿಕರಿಗೂ, ಸ್ಟ್ಯಾಂಡಿಂಗ ಕಮಿಟಿಯ ಮೆಂಬರರಿಗೂ, ಇತರ ಮಹನೀಯರಿಗೂ ತಂತಮ್ಮ ಮುಖಾಂತರ ಆಗಿರುವ ಏರ್ಪಾಟಿನ ವಾರ್ಷಿಕ ರಿಪೋರ್ಟನ್ನು ಕಳಿಸುವ ಕೃಪೆ ಆಗಬೇಕೆಂದು ಪ್ರೇಮದಿಂದ ವಿಜ್ಞಾಪನೆ ಮಾಡಿಕೊಳ್ಳುವೆವಲ್ಲದೆ, ಮೇಲ್ಕಂಡ ರಿಪೋರ್ಟನ್ನು ಕಳುಹಿಸಬೇಕೆಂದು ಪ್ರಾರ್ಥಿಸುವುದರ ಮೂಲಕ ತಮ್ಮ ಅಮೂಲ್ಯವಾದ ವೇಳೆಯಲ್ಲಿ ಕೊಂಚ ತ್ರಾಸವನ್ನು ಕೊಟ್ಟುದಕ್ಕಾಗಿ ತಮ್ಮೆಲ್ಲರ ಕ್ಷಮಾಪಣೆಯನ್ನು ಸಹಾ ಬೇಡಿಕೊಳ್ಳುವೆವು.

No 1077.

ಶ್ರೀಮತ್ ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರ—

ರಾಜಮಾನ್ಯ ರಾಜಶ್ರೀ ವೀರಶೈವ ಮಹಾಸಭೆಯ ಚೀಫ್ ಸೆಕ್ರೆಟರಿ ಶಿವಮೂರ್ತಯ್ಯಸ್ವಾಮಿ ಕಣಬರಗಿಮಠ ಇವರಿಗೆ—"ಚಿತ್ರದುರ್ಗದ॥ ॥ ಏಜಂಟರಿಂದ—ನೀವು ಸ್ಟಾರಿನಲ್ಲಿ ಪ್ರಸಿದ್ಧಿಸಿದ ವಿಷಯ ಮಹಾಸಂಸ್ಥಾನದ ಗಮನಕ್ಕೆ ಬಂದಿದೆ. ನಮ್ಮ ಮಹಾಸ್ವಾಮಿಗಳವರಿಗೆ ಅಧಿಕಾರವಾದ ಎಂಟು ವರ್ಷಗಳಲ್ಲಿ ನಡೆದಿರುವ ವಿದ್ಯಾಭಿವೃದ್ಧಿ, ಶ್ರೀ ಮಠಕ್ಕೆ ಅವಶ್ಯಮಾಡಬೇಕಾದ ಕಟ್ಟಡ ಮೊದಲಾದ ಪ್ರತಿಯೊಂದು ಕಾರ್ಯದ ಆದಾಯವ್ಯಯದ ಲೆಖ್ಖವನ್ನು ಆಯಾ ಕಾರ್ಯದ ಮಹತ್ವದ ವಿಷಯದಲ್ಲಿ ವಿವರವಾಗಿ ತಿಳಿಸುವದು ಅವಶ್ಯ ತೋರುವುದರಿಂದ, ಇದಕ್ಕಾಗಿ ನಿದಾನ ಒಂದು ತಿಂಗಳ ಕಾಲವಾದರೂ ಬೇಕಾಗುತ್ತದೆ. ಪ್ರಯುಕ್ತ ಡಿಸೆಂಬರ್ ತಾ॥ ೨೦ ರ ವರೆಗೆ ನಿರೀಕ್ಷಿಸಬೇಕಾಗಿ ವಿಜ್ಞಾಪಿಸುವದಲ್ಲದೆ ಸಾಧ್ಯವಾದಷ್ಟು ತೀವ್ರ ಕಳುಹಿಸಿಕೊಡುವೆವು."

ಮುಕ್ಕಾಮ ಬೀಳೂರು
ತಾಲ್ಲುಕ ಬಾಗಲಕೋಟಿ
ತಾ॥ ೧೮-೧೧-೧೧. } (ಸಹಿ) Lingapa Agent.

ಮೇಲ್ಕಂಡ ಪತ್ರವನ್ನು ನೋಡಿ ಇಂತಹ ಜಗದ್ಗುರುಗಳಿಗೆ ಸಾವಿರಾರು ಕೆಲಸಗಳಿದ್ದರೂ ಈ ವಿಷಯದ ಕಡೆಗೆ ತತ್ಕಾಲಕ್ಕೆ ಗಮನಕೊಟ್ಟು ಉತ್ತರರೂಪದಿಂದ ಆಶೀರ್ವದಿಸಿದುದು, ನಾವು ಕೈಕೊಂಡು ಶ್ರಮಕ್ಕೆ ತಕ್ಕ ಫಲವು ದೊರಕದೆ ಇರಲಾರದೆಂಬ ಭರವಸೆಯನ್ನುಂಟುಮಾಡಿದೆ. ಅವರ ಏಜಂಟರು ಕೇಳಿದ ತಾ॥ ೨೦-೧೨-೧೧ ಮುದ್ದತು ಬಹಳವಾಗಿದಾಗ್ಯೂ ಸ್ಪೆಶಲ ಕೇಸೆಂದು ತಿಳಿದು ಒಪ್ಪಲಿಕ್ಕೆ ನಮಗೆ ತುಂಬಾ ಹರ್ಷವಾಗಿದೆ. ಇದರಂತೆಮಾತ್ರ ಉಳಿದವರು ದಯಮಾಡಿ ಮುದ್ದತ ವಾಢಾಯಿಸದೆ ೨ ನೆಯ ಡಿಸೆಂಬರದೊಳಗಾಗಿ ತಂತಮ್ಮ ಭಾಗದ ವಾರ್ಷಿಕ ರಿಪೋರ್ಟುಗಳನ್ನು ಕಳಿಸಬೇಕು. ಇದನ್ನು ಸರ್ವ ಮಠಾಧಿಕಾರಿಗಳು ಸಹ ಗಮನಿಸಿತಕ್ಕದ್ದು. ಈ ಸಭೆಗೆ ಸ್ಟ್ಯಾಂಡಿಂಗ ಕಮಿಟಿಯ ಮೆಂಬರರು ಮುಖ್ಯವಾಗಿ ಬರುವ ಕೃಪೆಮಾಡಬೇಕು.

ಯಾವತ್ತು ಡೆಲಿಗೇಟ್ಸ-ಪ್ರತಿನಿಧಿಗಳಿಗೆ ಒಂದೇ ಸ್ಥಳದಲ್ಲಿ ಇರಲಿಕ್ಕೆ ಬರುವಂತೆ ಏರ್ಪಾಟುಮಾಡಿರುತ್ತದೆ. ಅದರಿಂದ ಅವರ ಅಮೌಲ್ಯ ವೇಳೆಯು ಬರುವ ಹೋಗುವದರಲ್ಲಿ ವ್ಯರ್ಥಹೋಗದಂತೆ ಸಭಾಮಂಟಪಕ್ಕೂ, ಇಳಕೊಳ್ಳುವ ಸ್ಥಳಕ್ಕೂ, ಭೋಜನಾಲಯಕ್ಕೂ ೫೦ ಗಜಗಳ ಅಂತರ ಇಟ್ಟಿರುತ್ತದೆ. ಅದರಿಂದ ಸಮಾಜದ ಕೆಲಸವು ಬಹು ಚನ್ನಾಗಿ ಆಗುವ ಸಂಭವವದೆ. ಮಹಾಸಭೆಯಲ್ಲಿ ವ್ಯಾಖ್ಯಾನಕೊಟ್ಟು ಹೆಚ್ಚು ವೇಳೆಯನ್ನು ಕಳಿಯದೆ ಹಿಂದೆ ಪಾಸಾದ ವಿಷಯಗಳನ್ನು ಅಮಲಿನಲ್ಲಿ ತರುವದೂ, ತಂದದ್ದು ಹ್ಯಾಗೆ ನಡೆದಿರುವವು? ಅವನ್ನು ನೋಡುವದೂ, ಅದರಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡುವದೂ ಇದರಲ್ಲಿ ಹೆಚ್ಚು ವೇಳೆ ಕಳಿಯುವದು ಅವಶ್ಯವಿದ್ದು, ಯಾವತ್ತು ಸ್ಟ್ಯಾಂಡಿಂಗ ಕಮಿಟಿಯ ಮೆಂಬರರೂ, ಸಂಸ್ಥಾನಿಕರೂ, ಸಿಂಹಾಸನಾಧಿಪತಿಗಳೂ, ಸಮಾಜಸುಧಾರಕರೂ ಅಗತ್ಯಬರಬೇಕು. ಧರ್ಮದ ವಿಷಯಗಳು ನಡೆಯುವದಿಲ್ಲಂತಾ ಕೆಲವರು ವಿಷಾದಪಟ್ಟು ಪತ್ರಗಳನ್ನು ಬರೆದಿರುವರು. ಅದು ಹಾಗಲ್ಲ. ಹಿಂದೆ ಮಹಾಸಭೆಗಳಲ್ಲಿ ಪಾಸಾದ ವಿಷಯಗಳಲ್ಲಿ ಈ ವಿಷಯವು ಬಂದೇ ಬರುವದು. ಮೇಲಾಗಿ ವೀರಶೈವ ಧರ್ಮದ ಮೂಲತತ್ವಗಳು, ಅದರ ಉದಾತ್ತ ವಿಚಾರಗಳು ಈ ವಿಷಯವು ಮಹಾಸಭೆಯಲ್ಲಿ ನಡೆಯುವದು. ಹೆಚ್ಚಿನ ಧರ್ಮದ ವಿಷಯಗಳನ್ನು ಶ್ರೀ ಶಿವಯೋಗಮಂದಿರದಲ್ಲಿ ಪ್ರತಿ ವರ್ಷ ಕೂಡತಕ್ಕ ಸಭೆಯಲ್ಲಿ ನಡಿಸುವದು ಹೆಚ್ಚು ಶ್ರೇಯಸ್ಕರವಾಗಿದೆ. ಆಮಂತ್ರಣಪತ್ರಿಕೆಯು ಮತ್ತೊಂದುಕಡೆ ಕೊಡಲ್ಪಟ್ಟಿರುವುದು. ಅದನ್ನು ಸಮಾಜ ಪ್ರಿಯರಾದ ನಮ್ಮ ವೀರಶೈವ ಬಂಧುಗಳು ನೋಡಿಕೊಂಡು ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ಕೋರುವೆವು. ಪ್ರೇಕ್ಷಕರಾಗಿ ಬರುವ ಬಂಧುಗಳು ತಮಗೆ ವಾಸಸ್ಥಳದ ಅನಾನುಕೂಲತೆ ಆಗುವಂತೆ ಕಂಡುಬಂದಲ್ಲಿ ನಮಗೆ ಮುಂದಾಗಿ ಪತ್ರಬರೆದಲ್ಲಿ ಅವರ ಯೋಗ್ಯ ವ್ಯವಸ್ಥೆಯನ್ನು ಆನಂದದಿಂದ ಮಾಡುವೆವು. ಅವರು ಪತ್ರವನ್ನು ಮುಂಚಿತವಾಗಿ ಬರೆಯದೆ ಇದ್ದ ಪಕ್ಷದಲ್ಲಿ ಮಾತ್ರ ನಮ್ಮ ಎತ್ನವಿಲ್ಲವು.

ಶ್ರೀ ಬೀಳೂರ ಸ್ವಾಮಿಗಳು ಈ ವಾರದಲ್ಲಿಯೇ ಬೆಳಗಾಂವಿಗೆ ಬರುವೆವೆಂಬದಾಗಿ ವಚನಕೊಟ್ಟಿರುವರು. ಅವರು ಅದರಂತೆ ಬಂದು ಸಭೆಯ ಕೆಲಸವು ಪೂರ್ಣವಾಗುವವರೆಗೆ ನಿಲ್ಲುವರು. ಶ್ರೀಮತ್ ನಿರಂಜನ ಹಾನಗಲ್ ಕುಮಾರಸ್ವಾಮಿಗಳು ಕೆಲವು ಅನಿವಾರ್ಯ ಕೆಲಸಗಳಿಗೋಸ್ಕರ ತೀವ್ರ ಬೆಳಗಾಂವಿಗೆ ಬರಲಾಗದುದ್ದಕ್ಕೆ ವಿಷಾದವನ್ನು ಪ್ರದರ್ಶಿಸಿ ಸಭೆಕೂಡುವ ಮುಂಚೆ ಒಂದು ವಾರದೊಳಗಾಗಿ ಬರುವೆವೆಂದು ಸಂತೋಷದಿಂದ ವಚನಕೊಟ್ಟಿರುವರು. ಸಭಾಮಂಟಪದ ಕೆಲಸವು ಭರದಿಂದ ನಡೆದಿದೆ. ಅದು ಬೆಳಗಾಂವಿಯ ಅಗ್ನೇಯ ದಿಕ್ಕಿಗೆ ಸ್ಟೇಷನದಿಂದ ಅಜಮಾಸು ಒಂದುವರೆ ಮೈಲಿ ದೂರವಾಗಿಯೂ, ಶಾಹಾಪೂರ, ಹೊಸೂರ ಗ್ರಾಮಗಳ ಪೂರ್ವಕ್ಕೂ ಇರುವ ಉತ್ತಮ ಬೈಲಿನಲ್ಲಿ ಗೊತ್ತಾಗಿದೆ. ಅದರ ಸಮೀಪದಲ್ಲಿಯೇ ಉತ್ತಮ ಆಮ್ರ ವೃಕ್ಷಗಳಿಂದ ಕಣ್ಣಿಗೆ ಇಂಪಾಗಿ ತೋರುವ ಉದ್ಯಾನದಲ್ಲಿಯೇ ಕೇವಲ ವನಭೋಜನಕ್ಕೆ ಬಂದಂತೆ ಶೋಭಿಸುವ ಭೋಜನಾಲಯವನ್ನೂ, ಅದಕ್ಕೆ ಸಮೀಪಿಸಿ ಪ್ರತಿನಿಧಿಗಳಿಗಾಗಿ ವಸತಿ ಗೃಹಗಳನ್ನೂ ಏರ್ಪಡಿಸಲಾರಂಭಿಸಿರುವೆವು. ಅಲ್ಲಿಯ ತಂಗಾಳಿಯೂ, ಹವೆಯ ನಿರಮಲತ್ವವೂ, ಸೀ ನೀರಿನ ಆಗರವೂ ಬರೆದು ತಿಳಿಸುವುದಕ್ಕಿಂತ ಬಂದು ನೋಡುವದೇ ಉತ್ತಮ ಪಕ್ಷವೆಂದು ಬರೆಯುವದನ್ನು ಬಿಟ್ಟಿರುವೆವು.

ಕಾರಣ ಮೇಲಿನ ವಿನಂತಿಯನ್ನು ಸರ್ವರೂ ಸ್ವೀಕರಿಸಿ ತಂತಮ್ಮ ಕರ್ತವ್ಯವನ್ನು ತಪ್ಪದೇ ಮಾಡಿ ಕೀರ್ತಿಗೆ ಭಾಜನರಾಗುವಿರೆಂದು ಕೋರುವ ನಿಮ್ಮ ಪ್ರೀತ್ಯಾಸ್ಪದನಾದ

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೀಫ್ ಸೆಕ್ರೆಟರಿ ೬ ನೆಯ ವೀರಶೈವ
ಮಹಾಸಭೆ ಬೆಳಗಾಂ.

೬ ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಬೆಳಗಾಂವ.

ಸಕಲ ವೀರಶೈವ ಮಹನೀಯರಿಗೆ ಪ್ರೇಮಪೂರ್ವಕ ಆಮಂತ್ರಣವು.

ಈ ವರ್ಷ ಬೆಳಗಾಂವಿಯಲ್ಲಿ ೬ ನೇ ಶ್ರೀಮದ್ವೀರಶೈವ ಮಹಾ ಸಭೆಯನ್ನು ಇದೇ ವರ್ಷ ಡಿಸೆಂಬರ ತಿಂಗಳ ೨೭-೨೮-೨೯ ಬುಧವಾರ, ಗುರುವಾರ, ಶುಕ್ರವಾರ ಮಾಡಿಸುವದನ್ನು ಗೊತ್ತುಮಾಡಿದ್ದು ತಮ್ಮೆಲ್ಲರಿಗೆ ನಮ್ಮ ಪ್ರಿಯ ಮೈಸೂರ ಸ್ಟಾರಪತ್ರದ ಮುಖಾಂತರ ಗೊತ್ತಿರುವದಷ್ಟೇ. ಧಾರವಾಡ, ಬೆಂಗಳೂರ, ಸೊಲ್ಲಾಪೂರ, ಬಾಗಲಕೋಟಿ, ಬಳ್ಳಾರಿ ಪಟ್ಟಣಗಳಲ್ಲಿ ಈ ಮಹಾ ಸಭೆಗಳು ಆಗಿ ತಾವೆಲ್ಲರೂ ತಮ್ಮ ಮಹತ್ವದ ಕೆಲಸಗಳ ಕಡೆಗೂ, ತ್ರಾಸಿನ ಕಡೆಗೂ, ಹಣದ ಕಡೆಗೂ ಲಕ್ಷಕೊಡದೆ ಕೇವಲ ನಮ್ಮ ಸಮಾಜವು ಹಿಂದಕ್ಕೆ ಸರ್ವವಿಷಯಗಳಲ್ಲಿ ಪ್ರವೀಣತೆಯನ್ನು ಹೊಂದಿದ್ದು, ಇಲಿಕಡೆಗೆ ಧರ್ಮಗ್ಲಾನೀ, ವಿದ್ಯೆಯ ಉಪೇಕ್ಷೆ, ಕೈಗಾರಿಕೆಯಲ್ಲಿ ಹಿಂದಾಗಿ, ವ್ಯಾಪಾರದಲ್ಲಿ ಔದಾಸೀನತೆಯುಳ್ಳದ್ದಾಗಿ, ಒಕ್ಕಲತನದಲ್ಲಿ ಆಲಸ್ಯವುಳ್ಳದ್ದಾಗಿ ಇಷ್ಟು ನಿಕೃಷ್ಟಾವಸ್ಥೆಗೆ ಬಂದುದನ್ನು ನೋಡಿ ನಮ್ಮ ಸಮಾಜದ ಮುಖಂಡರು ಕಳವಳಗೊಂಡು ಅದರ ಜೀರ್ಣೋದ್ಧಾರ ಮಾಡುವ ಕುರಿತು ಬಗೆಬಗೆಯ ಶೋಧಗಳನ್ನು ಮಾಡಿದ್ದರಲ್ಲಿ, ಈ ಪ್ರಕಾರದ ಸಭೆಗಳನ್ನು ಕೂಡಿಸಿ ನಮ್ಮ ಸಮಾಜದ ಜಾಗ್ರತೆಯನ್ನು ಪಡಿಸಿದ್ದು ಮಹತ್ವದ್ದಾಗಿದೆ ಎಂಬದರಲ್ಲಿ ಹಿಂದಾದ ಸಭೆಗಳಮೇಲಿಂದ ಸಂದೇಹವಿಲ್ಲದ್ದಾಗಿದೆ. ಈ ಸಭೆಗಳಿಂದ ಅನೇಕ ಪ್ರಕಾರದ ಲಾಭಗಳಾದಾಗ್ಯೂ, ಆಗುತ್ತಿದ್ದಾಗ್ಯೂ, ಪ್ರತಿವರ್ಷ ಕೆಲವು ಪ್ರಮಾಣಗಳ ಮೇಲೆ ಸಭೆಯನ್ನು ಕೂಡಿಸುವದು ಅವಶ್ಯವೆಂದು ಸಭೆಯ ಮುಖಂಡರಿಗೂ, ಸಮಾಜದ ಉದ್ಧಾರಕರಿಗೂ, ಹಿತಚಿಂತಕರಿಗೂ ಕಂಡುಬಂದದರಿಂದ. ಈ ವರ್ಷ ಬೆಳಗಾಂವಿಯಲ್ಲಿ ಕೂಡತಕ್ಕ ಈ ಆರನೇ ಸಭೆಯಲ್ಲಿ ಅನೇಕ ಮಹತ್ವದ ವಿಷಯಗಳ ನಿರ್ಣಯವಾಗಿ ಈ ಸಭೆಗೆ ಒಂದು ಪರಂಪರೆಯಾಗಿ ನಡಿಯುವಂಥ ಮಾರ್ಗವನ್ನು ತೋರಿಸಿ ಈ ಮಹಾಸಭೆಗಳ ಪರವಾಗಿ ಹಿಂದೆ ಪಾಸಾದ ವಿಷಯಗಳು ಅಮಲಿನಲ್ಲಿ ಬರುವ ಕುರಿತು ತಕ್ಕ ಏರ್ಪಾಟುಗಳನ್ನು ತಮ್ಮೆಲ್ಲರ ಅಮೌಲ್ಯ ವಿಚಾರಗಳಿಂದಲೂ, ಸೂಚನೆಗಳಿಂದಲೂ ಗೊತ್ತು ಮಾಡತಕ್ಕದ್ದದೆ. ಕಾರಣ ವಿದ್ವಾಂಸರೂ, ಸಮಾಜ ಸುಧಾರಕರೂ, ಪಂಡಿತರೂ, ಅಭಿಮಾನಿಗಳೂ ಆದ ನೀವೆಲ್ಲ ಮಹನೀಯರೂ ಈ ಸಭೆಗೆ ತಪ್ಪದೆ ಬರುವಿರೆಂದು ಅಪೇಕ್ಷಿಸುವೆವು.

೨. ಈ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪೈಕಿ ಅಗ್ರಿಕಲಚರ ಅಸೋಸಿಏಶನ್, ಭೂಮಿಗಳನ್ನು ಉತ್ತಮ ರೀತಿ ಸಾಗುಮಾಡುವದು, ಗೊಬ್ಬರದ ಮಾಹಿತಿ, ದನಗಳ ಸಂಗೋಪನೆ, ಬೀಜಗಳ ಉಪಯುಕ್ತತೆ ಇವುಗಳ ಮಾಹಿತಿಯನ್ನು ಕೊಡುವದಕ್ಕಾಗಿ ನಮ್ಮ ೩೫ ಲಕ್ಷ ವೀರಶೈವರ ಸಮಾಜದ ಮೇಲೆ ಕನಿಕರಬಟ್ಟು ಪುಣೆಯ ಅಗ್ರಿಕಲಚರಲ್ ಕಾಲೇಜದ ಪ್ರಿನ್ಸಿಪಾಲರಾದ (ಪಂಡಿತ) ಮೇಹರ್ಬಾನ ಡಾಕ್ಟರ ಹೇರಲ್ಡ ಮ್ಯಾನ್ ಸಾಹೇಬ ಬಹದ್ದೂರರವರೂ, ಸ್ವತಃ ಮತ್ತು ಕೋಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಗಳ ಪರವಾಗಿ ಮೇಹರ್ಬಾನ ಸಿ. ಎಸ್. ಕ್ಯಾಂಪಬೆಲ. ಸಾ. ಬಾ. ಐ. ಸಿ. ಎಸ್., ರವರ ಪರವಾಗಿ ಕೆಲವು ಪ್ರವೀಣ ವ್ಯಾಖ್ಯಾನಕಾರರೂ ಬರಲು ಪ್ರೇಮದಿಂದ ಒಪ್ಪಿಕೊಂಡಿರುವರು.

೩. ಈ ಮಹಾಸಭೆಯು ಇದೇ ಡಿಸೆಂಬರ ತಿಂಗಳ ೨೭, ೨೮, ೨೯ ದಿವಸ ಕೂಡತಕ್ಕದ್ದಿರುವದರಿಂದ, ತಾವು ಸುತ್ತು ಕಡೆಗೆಲ್ಲ ಈ ಸಭೆಯ ಸೂಚನೆಗಳನ್ನು ತಿಳಿಸಿ ಸಭೆಗಳನ್ನು ಕೂಡಿಸಿ ಪ್ರತಿನಿಧಿಗಳನ್ನು ಆರಿಸಿ ತಾ. ೧೦ ನೇ ಡಿಸೆಂಬರ ೧೯೧೧ ರೊಳಗಾಗಿ ಆಗತಕ್ಕ ಸಭೆಗಳಲ್ಲಿ ಪ್ರತಿನಿಧಿಗಳ ಹೆಸರನ್ನು ಬರೆದು ಅಧ್ಯಕ್ಷರ ಸಹಿಯಿಂದ ಚೀಫಸೆಕ್ರೆಟರಿಗಳ ಕಡೆಗೆ ಕಳಿಸುವ ಕೃಪೆಯಾಗಬೇಕು. ಪ್ರತಿನಿಧಿಗಳಾಗಿ ಬಾರದವರು ಪ್ರೇಕ್ಷಕರಾಗಿಯಾದರೂ ತಪ್ಪದೆ ಬರುವಂತೆ ಅನುಗ್ರಹಿಸಬೇಕು.

೪. ಈ ಸಭೆಯಲ್ಲಿ ಯಾವ ಕೆಲಸಕ್ಕೋಸ್ಕರವಾಗಿಯೂ ವರ್ಗಣಿರೂಪದಿಂದ ಹಣವನ್ನು ಎತ್ತುವಂತಿಲ್ಲಾ. ಇದನ್ನು ಮಾತ್ರ ತಾವು ದಯವಿಟ್ಟು ಮರೆಯಬಾರದು.

೫. ಯಾವದೇ ಪ್ರಕಾರದ ರಾಜಕೀ ವಿಷಯಗಳ ಚರ್ಚೆಯನ್ನು ಈ ಸಭೆಯಲ್ಲಿ ಮಾತಲಿಕ್ಕೆ ಅಪ್ಪಣೆಯು ಸರ್ವಥಾ ದೊರೆಯಲಾರದು.

೬. ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಹಾಗು ಉಪನ್ಯಾಸ ಮಾಡತಕ್ಕ ಪಂಡಿತರು ಇವರುಗಳಿಗಾಗಿ ನೇಮಗಳನ್ನು ಇದರಡಿಯಲ್ಲಿಯೇ ಕೊಟ್ಟಗುತ್ತದೆ. ಅದನ್ನು ತಾವೆಲ್ಲರೂ ದಯವಿಟ್ಟು ಅವಲೋಕಿಸಬೇಕು.

೭. ಮೈಸೂರು ಸ್ಟಾರಿನಲ್ಲಿ ತಾ. ೧೩-೧೧-೧೯೧೧ ದರ ಸಂಚಿಕೆ ೪೩ ಯಲ್ಲಿ ಈ ಸಭೆಯ ಪರವಾಗಿ ನಮ್ಮ ಸಮಾಜದ ಅಭಿಮಾನಿಗಳಿಗೆ ಮಾಡಿದ ವಿನಂತಿಯನ್ನು ಮರೆಯದೆ ಅನುಗ್ರಹಿಸುವಿರೆಂದು ಆಶಿಸುವೆವು.

೮. ಈ ಆರನೇ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವದಕ್ಕೆ ಶ್ರೀಮಂತ ಸರದಾರ ಬುಳ್ಳಪ್ಪಾ ಬಸವಂತರಾವ ದೇಸಾಯಿ ಸಂಸ್ಥಾನ ಹಂದಿಗನೂರ ತಾಲೂಕ ಹಾವೇರಿ ಜಿಲ್ಲಾ ಧಾರವಾಡ ಇವರು ಪ್ರೇಮದಿಂದ ಒಪ್ಪಿಗೆಯನ್ನು ಕೊಟ್ಟಿರುವರೆಂದು ತಿಳಿಸಲು ನಮಗೆ ತುಂಬಾ ಆನಂದವಾಗುತ್ತದೆ.

೯. ಸಭೆಯು ತಮ್ಮದು. ತಾವು ಸಮಾಜಸುಧಾರಕರೂ ಶಾಸ್ತ್ರಕೋವಿದರೂ ಇರುವದರಿಂದ ಸಮಾಜಹಿತಕ್ಕಾಗಿ ಈ ಮಹಾಸಭೆಗೆ ತಾವು ತಪ್ಪದೆ ಬಂದು, ಸಭೆಯ ಕಾರ್ಯವನ್ನು ನೆರವೇರಿಸಿ ಇಹಪರದ ಕೀರ್ತಿಗೆ ಭಾಜನರಾಗುವಿರೆಂದು ಅಪೇಕ್ಷಿಸುವ ತಮ್ಮ ಪ್ರೀತ್ಯಾಸ್ಪದರಾದ,

ಚೆಯರಮನ್.—(೧) ವೇ. ಶಿದಲಿಂಗಸ್ವಾಮಿ ಪಟ್ಟದ್ದೇವರು ಹಿರೇಮಠ. ವೆವಸ್ಥಾಪಕರು.—(೨) ವೀರಭದ್ರ ಗುಣಪ್ಪಾ ಸರನಾಯಿಕಬಹದ್ದೂರ ದೇಸಾಯಿ ಚಾಚಡೀಕರ. (೩)ಚೆನಬಸಪ್ಪಾ ಗುರುಸಿದ್ದಪ್ಪಾ ಬೋಳಮಲ್ಲ. (೪)ಚೆನಮಲ್ಲಪ್ಪಾ ಶಿವಲಿಂಗಪ್ಪಾ ಕಿತ್ತೂರ (೫)ಶಿವಮೂರ್ತಿಯ್ಯಾ ಗದಿಗೆಯ್ಯಾ ಕೆಂಡಚೀಮಠ. (೬) ಗುರಪ್ಪಾ ವೀರುಪಾಕ್ಷಪ್ಪಾ ಹೊನ್ನೋಳಿ. (೭) ಶಿವಲಿಂಗಪ್ಪಾ ಮಲ್ಲಪ್ಪಾ ಇಟಗಿ. (೮) ಪರಮಶೆಟ್ಟಿ ಕಾಡಪ್ಪಾ ಪಾಟೀಲ (೯) ವೀರಭದ್ರ ನಿರವಾಣೆಪ್ಪಾ ಘೋಡಗೇರಿ. (೧೦) ಚನಬಸಪ್ಪಾ ಬಸೆಟ್ಟೆಪ್ಪಾ ಲಕ್ಕಶೆಟ್ಟಿ. ಎಕ್ಸ ಅಫಿಸಿಯೋ:—(೧) ವ. ಹಾಲಿಂಗಸ್ವಾಮಿ ಕಣಬರಗಿಮಠ. ಟ್ರಿಝರರ ಜಾಯಿಂಟ ಸೆಕ್ರೆಟರಿ ಚೀಫ ಸೆಕ್ರೆಟರಿ:—(೧)ಶಿವಮೂರ್ತಿಸ್ವಾಮಿ ಕಣಬರಗಿಮಠ.

೬ ನೇ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ನಡಿಯತಕ್ಕ ವಿಷಯಗಳು.

೧. ಹಿಂದಿನ ೫ ಸಭೆಗಳಲ್ಲಿ ಪಾಸಾದ ವಿಷಯಗಳ ಅವಲೋಕನೆಮಾಡಿ, ಅಮಲಿನಲ್ಲಿ ಎಷ್ಟು ಬಂದಿರತವೆ, ಅವು ಹ್ಯಾಗೆ ನಡದವೆ, ಅವುಗಳಲ್ಲಿ ಏನಾದರೂ ಮಹಾಸಭೆಯ ಪತಿಯಿಂದ ಹೆಚ್ಚು ಕಡಿಮೆ ಮಾಡುವದಿರುವದೋ ಹ್ಯಾಗೆ? (೨) ಅಮಲಿನಲ್ಲಿ ಬಾರದೆ ನಿಂತ ವಿಷಯಗಳ ಅವಲೋಕನೆ ಮಾಡಿ, ಅವು ಎಷ್ಟು, ಯಾಕೆ ನಿಂತವು? ಅವುಗಳ ಯೋಗ್ಯ ನಿರ್ಣಯಮಾಡುವದು.

೨. ವೀರಶೈವ ಮತದ ಮೂಲತತ್ವಗಳು ಅದರ ಉದಾತ್ ವಿಚಾರಗಳು.

೩. ವೀರಶೈವ ಸಮಾಜಕ್ಕೆ ಬೇಕಾದ ವಿದ್ಯೆ—(ಅ) ಪ್ರಾಥಮಿಕ ಶಿಕ್ಷಣ, ಇಂಗ್ಲೀಷ ರಾಜಭಾಷೆ. (ಬ) ಕರ್ನಾಟಕ ಪ್ರಾಂತದಲ್ಲಿ ಆರ್ಟ್ಸ ಕಾಲೇಜದ ಅವಶ್ಯಕತೆ. (ಕ) ವಿದ್ಯಾರ್ಥಿಗಳ ಭೋಜನ, ವಸತಿಗೃಹಗಳ ಅವಶ್ಯಕತೆ. (ಡ) ಸ್ತ್ರೀ ಶಿಕ್ಷಣದ ಅವಶ್ಯಕತೆ. (ಈ) ದಾನಪದ್ಧತಿ, ಅದರ ಉಪಯುಕ್ತತೆ ಮತ್ತು ಪರಿಣಾಮ.

೪. ವೀರಶೈವ ಸಮಾಜದವರ ವ್ಯಾಪಾರ.—(ಅ) ಸಂಘಶಕ್ತಿ-ಸಮಾಯಿಕ ಭಾಂಡವಲದಿಂದ ಮಾಡುವ ವ್ಯಾಪಾರ. (ಬ) ಪರದೇಶಗಳ ಕೂಡ ಮಾಡುವ ವ್ಯಾಪಾರ ಪದ್ಧತಿ. (ಕ) ಕೋಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಗಳ ಸ್ಥಾಪನೆ. (ಡ) ಕೋಆಪರೇಟಿವ್ಹ ಸ್ಟೋರುಗಳು, ಅವುಗಳ ವಿವರ. (ಈ) ಇನ್ಸೂರ್ಸ, ಕೋಆಪರೇಟಿವ್ಹ ಅಸೋಸಿಏಶನ್. (ಎಫ್) ಬ್ಯಾಂಕುಗಳು ಅಥವಾ ದ್ರವ್ಯನಿಧಿಗಳ ಆಲಯ. (ಜಿ) ಯಂತ್ರಗಳಿಂದ ಮಾಡಿಸುವ ಕೆಲಸಗಳು.

೫. ವೀರಶೈವ ಸಮಾಜದವರ ಒಕ್ಕಲತನ.—(ಅ) ಅಗ್ರಿಕಲ್ಚರ ಅಸೋಸಿಏಶನಗಳ ಅವಶ್ಯಕತೆ. (ಬ) ಹೊಸ ಯಂತ್ರಗಳಿಂದ ಹೊಲಗಳನ್ನು ಸುಧಾರಿಸುವದು. (ಕ) ತರತರದ ಗೊಬ್ಬರಗಳ ಅವಶ್ಯಕತೆ. (ಡ) ಒಕ್ಕಲತನದ ಸರ್ವ ಶಾಸ್ತ್ರ ಮಾಹಿತಿಯು, ದನಗಳ ಸಂಗೋಪನ ಅವುಗಳ ಸಂಬಂಧವಾದ ಮಾಸಿಕ ಪುಸ್ತಕಗಳು.

೬. ವೀರಶೈವರ ಪಕ್ಷದಿಂದ ಹೊರಡುತ್ತಿರುವ ಮೈಸೂರ ಸ್ಟಾರಪತ್ರಿಕೆ.—(ಅ) ಈ ಪತ್ರದ ಮಾಲಕರಿಗೆ ಪ್ರತಿವರ್ಷ ಆಗುತ್ತಿರುವ ಹಾನಿ, ಚಂದಾದಾರರ ಉದಾಸೀನತೆ, ಪತ್ರದಲ್ಲಿ ಅವಶ್ಯವಿರುವ ಮಟ್ಟಿಗೆ ಸುಧಾರಣೆ ಮತ್ತು ಪೋಷಣೆಯ ವಿಚಾರವು. (ಬ) ಮೇಲಿನ ೩, ೪, ೫ ವಿಷಯಗಳನ್ನು ಘನಹೊಂದಿದ ಬ್ರಿಟಿಷ ಸರಕಾರಕ್ಕೆ ತಿಳಿಸಿ ಅವರ ಸಹಾನುಭೂತಿಯನ್ನೂ, ಅವಶ್ಯವಿರುವ ಮಟ್ಟಿಗೆ ಸಹಾಯವನ್ನೂ ಪಡೆಯುವ ಏರ್ಪಾಟು ಮಾಡುವದು.

ಮಹಾಸಭೆಯ ಕಾರ್ಯಕ್ರಮ.

೧. ಸ್ಟ್ಯಾಂಡಿಂಗ ಕಮಿಟಿಯ ಮೆಂಬರರೇ ವಿಷಯನಿಯಾಮಕ ಕಮಿಟಿಯವರಾಗಿ ಒಂದು ದಿವಸ ಮುಂಚಿತವಾಗಿ ಕೂಡಿ, ಹಿಂದಿನ ಸಭೆಗಳಲ್ಲಿ ಪಾಸಾದ ವಿಷಯಗಳ ಚರ್ಚೆ, ಅಮಲು, ನಿಕಾಲಿಮಾಡಿ ರಿಪೋರ್ಟ ತಯಾರಿಸುವದೂ ಈ ಸಭೆಯಲ್ಲಿ ಅವುಗಳನ್ನು ತರುವದೂ, ಭಾಷಣ ಮಾಡುವವರನ್ನು ಗೊತ್ತುಮಾಡುವದು ಅವಶ್ಯವಿರುವದರಿಂದ ಸ್ಟ್ಯಾಂಡಿಂಗ ಕಮಿಟಿಯ ಅಧ್ಯಕ್ಷರೂ, ಮೆಂಬರರೂ, ಭಾಷಣಮಾಡತಕ್ಕವರೂ, ಸಭೆಯ ಪರವಾಗಿ ಇತರ ಉಪಯುಕ್ತ ಸೂಚನೆಗಳನ್ನು ಕೊಡುವಂಥ ಮಹನೀಯರು ಮುಂಚಿತವಾಗಿ ಮೇಲೆ ನಮೂದಿಸಿದಂತೆ ದಯಮಾಡಿ ಬರಬೇಕು.

೨. ಭಾಷಣಮಾಡತಕ್ಕವರು ತಮ್ಮ ಭಾಷಣಗಳನ್ನು ಸ್ವಚ್ಛವಾಗಿ ಬಿಳೇ ಕಾಗದದ ಮೇಲೆ ಮಾರ್ಜಿನ ಬಿಟ್ಟು ಒಂದೇ ಮಗ್ಗಲಿಗೆ ಬರೆದು ತಾ. ೧೦ ನೇ ಡಿಸೆಂಬರದೊಳಗಾಗಿ ಸಭೆಯ ಚೀಫ್ ಸೆಕ್ರೆಟರಿಗಳ ಕಡಿಗೆ ಕಳಿಸಬೇಕು. ವ್ಯಾಖ್ಯಾತಕಾರರು ನಿರರ್ಥಕ ವಿಷಯಗಳನ್ನು ಬರೆದು ಬೆಳಿಸದೆ ಅಚ್ಚುಕಟ್ಟಾಗಿಯೂ, ವಿಷಯಾಂತರವಾಗದಂತೆಯೂ ತಾವು ಕೈಕೊಂಡ ವಿಷಯವು ಪೂರ್ಣವಾಗಿರಬೇಕು. ಇದನ್ನು ದಯಮಾಡಿ ಮರೆಯಕೂಡದು.

೩. ವಿಷಯ ನಿಯಾಮಕ ಕಮಿಟಿಯವರ ಅಪ್ಪಣೆಯ ಹೊರ್ತು ಯಾರಿಗೂ ಭಾಷಣಮಾಡಲಿಕ್ಕೆ ಅಥವಾ ನಿಬಂಧಗಳನ್ನು ಓದಲಿಕ್ಕೆ ಅಧಿಕಾರವಿಲ್ಲಾ.

೪ ಮಹಾಸಭೆಯ ಕೆಲಸವು ತಾ. ೨೭ ಡಿಸೆಂಬರ ದಿವಸ ಮಧ್ಯಾಹ್ನದ ೨ ಗಂಟೆಗೆ ಪ್ರಾರಂಭವಾಗಿ, ಸ್ವಾಗತಕಮಿಟಿಯ ಚೆಯರಮನರ ಭಾಷಣವಾಗಿ, ಮಹಾಸಭೆಗಾಗಿ ಅಧ್ಯಕ್ಷರ ಆರಿಸುವಿಕೆಯಾಗಿ, ಅವರ ಭಾಷಣವು ನಡೆದು ಮುಂದೆ ವೇಳೆ ಉಳಿದಲ್ಲಿ ವಿಷಯನಿಯಾಮಕ ಕಮಿಟಿಯವರು ನಿಶ್ಚಯಿಸಿದ ಪ್ರಕಾರಾ ಕೆಲಸಗಳು ನಡಿಯುವವು. ಹಾಗು ಮುಂದಿನದಿವಸಗಳ ಸಭೆಯ ಕಾಲವನ್ನು ಅವರೇ ಗೊತ್ತುಪಡಿಸುವರು.

ಅಗತ್ಯದ ಸೂಚನೆ.

ವೇಳೆಯ ಮಹತ್ವವನ್ನು ತಿಳಕೊಂಡು ನಿಯಮಿಸಿದ ವೇಳೆಗೆ ಮಾತ್ರ ಸಭೆಗೆ ಅಗತ್ಯ ಬರುವ ಕೃಪೆಯಾಗಬೇಕು.

ಪ್ರತಿನಿಧಿಗಳಿಗಾಗಿ ನೇಮಗಳು.

೧ ಬೇರೆ ಬೇರೆ ಗ್ರಾಮದವರು ತಮ್ಮಲ್ಲಿ ಸಭೆಗೂಡಿಸಿ ಪ್ರತಿನಿಧಿಗಳನ್ನು ನೇಮಿಸಿ ಅವರ ಹೆಸರುಗಳನ್ನು ೧೦ ನೇ ಡಿಸೆಂಬರದೊಳಗಾಗಿ ಚೀಫ್ಹ ಸೆಕ್ರೆಟರಿಯವರ ಕಡಿಗೆ ಬರೆದು ತಿಳಿಸಬೇಕು.

೨. ಪ್ರತಿನಿಧಿಗಳು ೫ ರೂಪಾಯಿ ಮತ್ತು ಪ್ರೇಕ್ಷಕರು ೨ ರೂಪಾಯಿ ಪ್ರವೇಶ ಫೀ ಕೊಟ್ಟು ಟಿಕೀಟುಗಳನ್ನು ಸಂಪಾದಿಸತಕ್ಕದ್ದು. ಟಿಕೀಟುಗಳು ಇಲ್ಲದವಿನಃ ಸಭಾ ಪ್ರವೇಶ ಮಾಡಲಿಕ್ಕೆ ಯಾರಿಗೂ ಸಿಗಲಾರದು.

೩. ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿಯ ಅಧ್ಯಕ್ಷರ ಕಡಿಗೆ ವರ್ಗಣಿಯನ್ನು ಕೊಟ್ಟವರು ಅವರ ಸರಟಿಫಿಕಿಟನ್ನು ಹಾಜರಮಾಡಬೇಕು.

೪ ಪ್ರತಿನಿಧಿಗಳಿಗಾಗಿ ಕಾಡಿಟ್ಟ ಸ್ಥಳಗಳಲ್ಲಿಯೇ ಅವರು ಕೊಡ್ರತಕ್ಕದ್ದು. ಅಲ್ಲಿ ಪ್ರೇಕ್ಷಕರ ಪ್ರವೇಶವಾಗಕೊಡದು. ಪ್ರೇಕ್ಷಕರಿಗಾಗಿ ಗೊತ್ತುಮಾಡಿದ ಸ್ಥಳವನ್ನು ಅವರು (ಪ್ರೇಕ್ಷಕರೇ) ಆಕ್ರಮಿಸತಕ್ಕದ್ದು.

೫. ಮಹಾಸಭೆಗಾಗಿ ಬರತಕ್ಕ ಎಲ್ಲ ಪ್ರತಿನಿಧಿಗಳು ತಮಗೆ ಅವಶ್ಯವಿರುವ ಹಾಸಿಗೆ ಹೊದಿಕೆ ತಂಬಿಗೆ ಮುಂತಾದ ಪಾತ್ರೆಗಳನ್ನು ತಮ್ಮ ಸಂಗಡ ತರತಕ್ಕದ್ದು. ಇವರಿಗೆ ಭೋಜನವೂ, ಇಳಕೊಳ್ಳುವ ಸ್ಥಳವೂ, ಮಹಾಸಭೆಯ ವ್ಯವಸ್ಥಾಪಕರಿಂದ ಫೀ ಇಲ್ಲದೆ ಪೂರೈಸಲ್ಪಡುವುವು.

೬. ಸ್ವಯಂಸೇವಕರಾಗಲಿಕ್ಕೆ ಅಪೇಕ್ಷಿಸುವ ಗೃಹಸ್ಥರು ತಾ॥ ೧೨-೧೨-೧೧ ರೊಳಗಾಗಿ ಚೀಫ್ ಸೆಕ್ರೆಟರಿಗಳ ಕಡೆಗೆ ತಮ್ಮ ಅರ್ಜಿಯನ್ನು ಕಳಿಸಬೇಕು. ಪಸಂತ ಮಾಡಿದ ಜನರಿಗೆ ಉತ್ತರ ಮತ್ತು ಸರಟೀಫಿಕೇಟ ಕಳಿಸಲ್ಪಡುವದು ಅವರೇ ತಾರೀಖು ೨೬ ನೇ ದಿವಸ ಹಾಜರಾಗತಕ್ಕದ್ದು. ಮತ್ತು ಕಮಿಟಿಯವರು ನೇಮಿಸಿದ ಕೆಲಸಗಳನ್ನು ಮಹಾಸಭೆಯು ಮುಗಿಯುವ ವರೆಗೂ ಮಾಡತಕ್ಕದ್ದು.

೭. ಸಭೆಯ ಕೆಲಸಗಳು ಸಭಾಮಂಟಪದಲ್ಲಿ ನಡೆದ ಕಾಲಕ್ಕೆ ಎಲ್ಲರೂ ಶಾಂತಚಿತ್ತವುಳ್ಳವರಾಗಿ ಸಹ್ಯವರ್ತನೆ ಮಾಡಿ ಸಾಧ್ಯವಾದಮಟ್ಟಿಗೆ ಏಕಮತ್ಯ, ಪ್ರೀತಿ, ಸಹಾನುಭೂತಿಯನ್ನು ತೋರಿಸಿ, ಹಿಡಿದ ಕಾರ್ಯವನ್ನು ಕೊನೆಗಾಣಿಸುವಿರೆಂದು ಕೋರುವೆವು.

೮. ಸಿಂಹಾಸನಾಧಿಪತಿಗಳಿಗೂ, ವಿರಕ್ತ ಮಹಾಸ್ವಾಮಿಗಳಿಗೂ ಅವರವರ ಮರ್ಯಾದೆಗನುಸರಿಸಿ ಸ್ನಾನ, ಲಿಂಗಾರ್ಚನೆ, ಭೋಜನ, ವಾಸಸ್ಥಳದ ಬಗ್ಗೆ ಬೇರೆಯಾಗಿ ವ್ಯವಸ್ಥೆ ಮಾಡಿರುತ್ತದೆ.

೬ ನೇ ಶ್ರೀಮದ್ವೀರಶೈವ ಮಹಾಸಭೆಯ ವ್ಯವಸ್ಥಾಪಕ ಕಮಿಟಿಯವರ ಅಪ್ಪಣೆಯ ಮೇಲಿಂದ—

ಶಿವಮೂರ್ತಿಸ್ವಾಮಿ ಕಣಬರಗಿಮಠ,
ತಾ॥ ೨೫-೧೧-೧೧. ಚೀಫ್ ಸೆಕ್ರೆಟರಿ,
ಬೆಳಗಾಂವ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

12 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕೆ ಯೋಗ್ಯವಾದ ಧಾತುವಾಗುತ್ತದೆ. ಗನೊರ್ಹಿಯದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೨—೦ ರೂ. ೩. ಬಾ, ೩—೧೪—೦ ರೂ. ಒಮ್ಮಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಪಿತ್ತದ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಸಿರಸಿ. (ಇಂಡಿಯಾ)

೨೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

26

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿಧೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

23 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

15

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿಧೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

33

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿಧೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರ್ರಿಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಪ್ಪಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.
(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. |ನಮ್ಮ ವಿಳಾಸ:—ಶ್ರೀ ಸೀತಾರಾಮವೈದ್ಯಶಾಲಾ,
ಮೈಸೂರು

ಪಂಡಿತ ಎಸ್. ಗರಳಪುರಿ ಇವರ
ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹಾಳ
67 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೩—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೆಯ ಇಸವಿ ಡಿಸೆಂಬರ್ ತಾ|| ೪ ರಿಂದ ೧೯೧೧ ನೆಯ ಡಿಸೆಂಬರ್ ತಾ|| ೧೦ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಮಾರ್ಗಶಿರ ಶು|| ತ್ರಯೋದಶಿಯಿಂದ ಮಾರ್ಗಶಿರ ಬ|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಕದಿ
4	[1] ಸೋ	ತ್ರ	13-29	ಭರ	24-28	19
5	[2] ಮಂಗ	ಚ	9-38	ಕೃ	20-36	20
6	ಬುಧ	ಪೌ	4-40	ಉಪರಿ	55-4	21
7	[3] ಗುರು	ಬ	53-58	ಮೃ	14-24	22
8	[4] ಶುಕ್ರ	ತ	47-24	ಆರಿ	10-14	23
9	[5] ಶನಿ	ಚೌ	41-28	ಪುನ	6-2	24
10	ಭಾನು	ಪಂ	36-2	ಪುಷ್ಯ	2-4	25

(1) ಹನುಮಂತ ಜಯಂತಿ, ಕೃತ್ತಿಕಾದೀಪೋತ್ಸವಃ, ಶಿವದೀಪಃ, ಚಾಮರಾಜೇಶ್ವರ ರಥಃ. (2) ಪಾಷಾಣಭಕ್ಷಣ ಗೌರೀವ್ರತಂ, ದತ್ತಾತ್ರೇಯ ಜಯಂತಿ. (3) ಮೃತ್ಯುಯೋಗಃ, ಮಾರ್ಗಶಿರಲಕ್ಷ್ಮೀವ್ರತಂ. (4) ಪರಶುರಾಮಜಯಂತಿ (5) ಸಂಕಷ್ಟಚತುರ್ಥಿ, ಸ್ತ್ರೀಪುಂಯೋಗಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 1

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಸಜ್ಜನ ಹೃತ್ತೋಷಕರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸೌಖ್ಯಾಲವಾಲಂ ವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ಡಿಸೆಂಬರ್ ತಾರೀಖು ೧೮ ನೆಯ ಸೋಮವಾರ. [ಸಂಚಿಕೆ ೫೧

41

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಗಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸಿಂಗಿರಾಜಪುರಾಣವಿಜಯಂ

7

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ದೀವಿಟಿಗೆಬೀದಿ
ಮೈಸೂರು.

7 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೦—೪—೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೬ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಹಾಗಾಂವಕರ, ಮುರ್ಗುಂಡಿ.
ಪೋಸ್ಟ್ ಬಿಳ್ಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

ನೋಟೀಸ್.

ದಿ ಕಮರ್ಷಿಯಲ್ ಗೈಡ್ ಅಂಡ್ ಇಂಡಿಯನ್ ಮರ್ಚೆಂಟ್ಸ್

ಎಂಬ ಪುಸ್ತಕವು ವ್ಯಾಪಾರೀಕರಿಗೆ ದೇಶದ ಮತ್ತು ದ್ವೀಪಾಂತರಗಳ ಅನೇಕ ವಿಷಯಗಳನ್ನು ಅತಿ ಸುಲಭರೀತಿಯಿಂದ ತಿಳಿಯುವಂತೆ ಪ್ರಿಂಟ್ ಮಾಡಿಸಲ್ಪಡುತ್ತೆ. ಈ ತರಹಾ ಪುಸ್ತಕ ಈಗ್ಯೆ ಯಾವದೂ ಪ್ರಿಂಟಾಗಿಲ್ಲ. ಅನೇಕ ಸ್ಥಳಗಳಲ್ಲಿನ ದೊಡ್ಡ ದೊಡ್ಡ ವ್ಯಾಪಾರೀಕರ ಹೆಸರನ್ನು, ಆ ಸ್ಥಳಗಳ ಉತ್ಪತ್ತಿ, ರಫ್ತು, ಆಮದರವು, ಅಳತೆ ತೂಕ, ಮೊದಲಾದ ಅನೇಕ ವಿಷಯಗಳನ್ನು ಗರ್ಭೀಕರಿಸಿರುತ್ತೆ. ಈಗ ಸಧ್ಯಕ್ಕೆ ಇಂಗ್ಲಿಷಿನಲ್ಲಿಯೇ ರಚಿಸಲ್ಪಡುತ್ತೆ. ಈ ಪುಸ್ತಕದಲ್ಲಿ ಈಗ್ಗೆ ೪-೫ ಸಹಸ್ರ ವರ್ತಕರ ಹೆಸರುಗಳು ಸಂಗ್ರಹವಾಗಿರುತ್ತವೆ ಈ ಪುಸ್ತಕದಲ್ಲಿ ತಮ್ಮ ತಮ್ಮ ಹೆಸರನ್ನು ನಮೂದಿಸಬೇಕೆಂಬ ಅಭಿಲಾಷೆಯುಳ್ಳ ವರ್ತಕರು, ತಮ್ಮ ತಮ್ಮ ಸ್ಥಳದಲ್ಲಿನ ಉತ್ಪತ್ತಿ, ರಫ್ತು, ಆಮದರವು, ಅಳತೆ ತೂಕ ವಿಷಯಗಳನ್ನು ನಮೂದಿಸಿ ತೀವ್ರವಾಗಿ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳುಹಿಸುವದು. ಮತ್ತು ಪ್ರತಿಯೊಂದು ಪುಸ್ತಕದ ಮೊದಲನೇ ಪೇಜಿನಲ್ಲಿ ಒಂದೊಂದು ಕೂಪನ್ನು ನಂಬರು ಎನಿಸಿ ಇಡಲ್ಪಡುತ್ತೆ. ೧೦೦೦ ಪ್ರತಿಗಳು ಖರ್ಚಾದ ಕೂಡ್ಲೆ ಲಾಟರಿಹಾಕಿ, ೧, ೨, ೩ ನೇ ಯವರಿಗೆ ೫೦, ೨೫, ೧೦ ರಂತೆ ವಿನಿಯೋಗಿಸುತ್ತೆ. ಅಭಿಮಾನಶಾಲಿಗಳು ಪ್ರೋತ್ಸಾಹ ಕೊಡಬೇಕಾಗಿ ಕೋರುವ

ಜಿ. ಕೆ. ರುದ್ರಾರ್ಯ,
೨೮, ಕುಬೇರಸವಾಜಿ ಬೀದಿ
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

18

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವಿರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಡಿಲ್ಲಿಯಲ್ಲಿ ಎಡ್ವರ್ಡ್ ಸಾರ್ವಭೌಮರವರ ಸ್ಮಾರಕಕಾರ್ಯಕ್ಕೆ ಅಸ್ತಿವಾರವನ್ನು ಹಾಕುವ ಸಮಯದಲ್ಲಿ ವೈಸ್ರಾಯರು ಮಾಡಿದ ಭಾಷಣದ ಸಾರಾಂಶವು.

ತಮ್ಮ ಪಿತೃಗಳಾದ ಗತಿಸಿದ ೭ ನೇಯ ಎಡ್ವರ್ಡ್ ಸಾರ್ವಭೌಮರ ಸ್ಮಾರಕಕಾರ್ಯ ನಿರ್ವಾಹಕ ಸಂಘದವರ ಪರವಾಗಿ ಆ ಮಹಾಶಯರ ಜ್ಞಾಪನಾರ್ಥವಾಗಿ ಇಡಲ್ಪಡುವ ಪ್ರತಿಮೆಯ ಶಂಕುಸ್ಥಾಪನೆಯನ್ನು ಮಾಡಬೇಕೆಂದು ತಮ್ಮನ್ನು ಪ್ರಾರ್ಥಿಸುವ ಮರ್ಯಾದೆಯು ನನಗೆ ಲಭಿಸಿರುತ್ತದೆ. ರಾಜಭಕ್ತಿ ವಿಶ್ವಾಸಪೂರಿತರಾದ ತಮ್ಮ ಭಾರತ ಪ್ರಜೆಗಳಲ್ಲಿ ಐಶ್ವರ್ಯವಂತರು ಮತ್ತು ರಿಕ್ತರು ಸಹ ಸೇರಿ ಸಾವಿರಾರು ಪ್ರಜೆಗಳು ಈ ಸ್ಮಾರಕ ಕಾರ್ಯಕ್ಕೆ ದ್ರವ್ಯಸಹಾಯಮಾಡಿ ಆ ಮಹಾಪ್ರಭುಗಳ ವಿಷಯದಲ್ಲಿ ತಮಗಿರುವ ಭಕ್ತಿ ವಿಶ್ವಾಸಗಳನ್ನು ಪ್ರಕಾಶಗೊಳಿಸಿದ್ದಾರೆ. ಈ ಪೀಠವನ್ನಲಂಕರಿಸುವ ಪ್ರತಿಮೆಯು ಗತಿಸಿದ ಸಾರ್ವಭೌಮರ ಅತ್ಯಲ್ಪಕಾಲದ ರಾಜ್ಯಾಡಳಿತದಲ್ಲಿ ಭರತಖಂಡದಲ್ಲುಂಟಾದ ಶಾಂತಿ, ಧರ್ಮಾಚರಣೆ ಮತ್ತು ಸಂಪದಭಿವೃದ್ಧಿಗಳಿಂದ ಕೋಟ್ಯಂತರ ಭಾರತೀಯರಲ್ಲಿ ನೆಲೆಗೊಂಡಿರುವ ಸ್ಥಿರವಾದ ಕೃತಜ್ಞತೆಗೆ ಸಾಕ್ಷಿಭೂತವಾಗಿದೆ. ಚರಿತ್ರ ಪ್ರಸಿದ್ಧವಾದ ಮತ್ತೂ ಪೌರುಷ ಕಾರ್ಯಗಳನ್ನು ಸ್ಮರಣೆತರುವ ಈ ಪುರಾತನ ಪಟ್ಟಣದಲ್ಲಿಡಲ್ಪಡುವ ನಮ್ಮ ಘನವನ್ನು ಹೊಂದಿದ ಸಾರ್ವಭೌಮರ ಪ್ರತಿಮೆಯು ಪ್ರಾಚೀನಕಾಲದ ಪ್ರಸಿದ್ಧ ರಾಜವಂಶಗಳ ಮತ್ತೂ ಭರತಖಂಡದಲ್ಲಿ ನಮ್ಮ ಪ್ರಸಿದ್ಧ ಚಕ್ರಾಧಿಪತ್ಯಕ್ಕೊಳಪಟ್ಟ ಅಸಂಖ್ಯಾಕ ಜನಾಂಗಗಳು ಮತ್ತೂ ಪ್ರಜೆಗಳು ತಮ್ಮ ರಾಜಮನೆತನದ ವಿಷಯದಲ್ಲಿ ಹೊಂದಿರುವ ರಾಜಭಕ್ತಿ ವಿಶ್ವಾಸಗಳ ಚರಿತ್ರೆಯ ಭಾಂಡಾಗಾರದ ರಕ್ಷಣೆಗಾಗೋಸ್ಕರ ಇಟ್ಟ ಅತ್ಯುತ್ಕೃಷ್ಟ ದ್ವಾರಪಾಲಕನಂತಿರುವುದಲ್ಲದೆ ಇಂಗ್ಲೆಂಡಿಗೂ, ಅದರ ಪ್ರಭುಗಳಿಗೂ ಭರತಖಂಡದ ವಿಷಯದಲ್ಲಿರುವ ಪ್ರೇಮಾತಿಶಯವನ್ನು ಸೂಚಿಸತಕ್ಕದಾಗಿದೆ.

ಚಕ್ರವರ್ತಿಯವರ ಉತ್ತರದ ಸಾರಾಂಶವು

ಈಗ ನೀವು ಓದಿದ ವಿಜ್ಞಾಪನಾಪತ್ರಿಕೆಯು ನಮ್ಮ ಹೃದಯಂಗಮವಾಗಿರುವುದಲ್ಲದೆ, ನಮ್ಮ ಪ್ರಿಯ ಜನಕರಾದ ಗತಿಸಿದ ಸಾರ್ವಭೌಮರವರಿಗೆ ನಾವೆಲ್ಲರೂ (ಅಂದರೆ ಮುಖ್ಯವಾಗಿ ನಾವು) ಎಷ್ಟರಮಟ್ಟಿಗೆ ಕೃತಜ್ಞರಾಗಿರಬೇಕೆಂಬುದನ್ನು ಸ್ಮೃತಿಪಥಕ್ಕೆ ತಂದಿದೆ. ನಮ್ಮ ಮನೆತನದವರಲ್ಲಿ ಭರತಖಂಡಕ್ಕೆ ದಯಮಾಡಿಸಿದವರಲ್ಲಿ ಅವರೇ ಮೊದಲನೆಯವರು. ಮತ್ತೂ ಈ ಅತಿಶಯವಾದ ಭೂಭಾಗಕ್ಕೆ ಆಗ್ಗೆ ೬ ವರುಷಗಳ ಹಿಂದೆ ನಾವು ಬಂದಿದ್ದುದೂ ಅವರ ಆಜ್ಞಾನುಸಾರವಾಗಿಯೇ. ಇಷ್ಟು ಸ್ವಲ್ಪ ಕಾಲದಲ್ಲಿಯೇ ಅವರನ್ನು ಕಳೆದುಕೊಳ್ಳುವೆವೆಂದು ಆಗ ನಾವು ಸ್ವಲ್ಪವೂ ಯೋಚಿಸಿರಲಿಲ್ಲವಲ್ಲಾ! ನಮ್ಮ ತಂದೆಯವರ ದರ್ಶನವನ್ನು ಮಾಡಿದ್ದ ಕೆಲವರಲ್ಲದೆ ಅವರ ಮತ್ತೂ ನಮ್ಮ ಸಾವಿರಾರು ಭಾರತಪ್ರಜೆಗಳು ದ್ರವ್ಯಸಹಾಯವನ್ನು ಮಾಡಿರುವುದಾಗಿ ನೀವು ಹೇಳಿದುದನ್ನು ಕೇಳಿ ಸಂತೋಷಿಸುತ್ತೇವೆ. ನಮ್ಮ ತಂದೆಯವರಿಗೆ ಭರತಖಂಡದ ವಿಷಯದಲ್ಲಿದ್ದ ಅತಿಶಯವಾದ ಪ್ರೀತಿ ವಿಶ್ವಾಸಗಳು ಭಾರತಮಾತೆಯ ಮಕ್ಕಳ ಹೃದಯದಲ್ಲಿ ನಾಟಿ ಈಗ ಈ ರೀತಿ ಪ್ರತಿಫಲಿಸಿದುದಕ್ಕಾಗಿ ನಾವು ಹರ್ಷಿಸುತ್ತೇವೆ. ರಮ್ಯವಾದ ಮತ್ತೂ ಚರಿತ್ರ ಪ್ರಸಿದ್ಧವಾದ ಈ ಸ್ಥಳದಲ್ಲಿಡಲ್ಪಡುವ ಪ್ರತಿಮೆಯು ಮುಂದಣ ಭಾರತ ಸಂತತಿಯವರಿಗೆ ನಿಮ್ಮ ರಾಜಭಕ್ತಿ ವಿಶ್ವಾಸಗಳನ್ನೂ ಮತ್ತೂ ನಿಮ್ಮ ವಿಷಯದಲ್ಲಿ ನಮ್ಮ ಪಿತೃಗಳಿಗಿದ್ದ ಅನುರಾಗವನ್ನೂ ಸ್ಮೃತಿಪಥಕ್ಕೆ ತರಲು ಕಾರಣಭೂತವಾಗುವುದೆಂದು ನಾವು ಆನಂದಿಸುತ್ತೇವೆ. ದೇವರು ಮೆಚ್ಚುವಂತಹ ಈ ವಿಧವಾದ ಮನೋಭಾವಗಳು ನಮ್ಮ ರಾಜಕುಟುಂಬದವರಿಗೂ, ನಮ್ಮ ಪ್ರಜೆಗಳಾದ ಭಾರತೀಯರಿಗೂ ಪಿತ್ರಾರ್ಜಿತವಾಗಿರುವುವೆಂದು ನಂಬಿದ್ದೇವೆ.

ಕಳೆದ ತಾ॥ ೧೦ ನೇಯ ಭಾನುವಾರ ಬೆಳಿಗ್ಗೆ ೧೧॥ ಗಂಟೆಯಲ್ಲಿ ಚಕ್ರವರ್ತಿದಂಪತಿಗಳು ದಿಲ್ಲಿಯ ಗ್ಯಾರಿಸನ್ ಸೇನೆಯ ಬಿಡಾರದ ಇದಿರಿಗಿರುವ ಜಗತಪುರ [illegible] ದಯಮಾಡಿಸಿ ಸೇನೆಯ ಅಂಗಸಾಧನೆಯು (ಪರೇಡ) ನ್ನು ಪರಾಮರ್ಶಿಸಿದವೇಳೆ ಸೈನಿಕರ ಬಿಡಾರದಲ್ಲೇ ದೇವತಾರಾಧನೆಯನ್ನು ತೀರಿಸಿಕೊಂಡು ತಮ್ಮ ಬಿಡಾರಕ್ಕೆ ದಯಮಾಡಿಸಿದರು. ತಾ॥ ೧೧ರ ಬೆಳಿಗ್ಗೆ ಚಕ್ರವರ್ತಿಯವರು ಮುಖ್ಯ ದಳಪತಿಯ ಉಡುಪನ್ನು ಧರಿಸಿಕೊಂಡು ಅಶ್ವಾರೂಢರಾಗಿ ಮರ್ಯಾದೆಯೊಡನೆ ಪೋಲೋ ಪಂದ್ಯವು ನಡೆಯುತಕ್ಕ ಬೈಲಿಗೆ ದಯಮಾಡಿಸಿ ಅಲ್ಲಿ ನೆರದಿದ್ದ ಬ್ರಿಟಿಷ್ ರಿಜಿಮೆಂಟ್ ಸೇನಾಭಾಗಕ್ಕೆ ನೂತನ ಧ್ವಜಗಳನ್ನು ದಯಪಾಲಿಸಿ ಅಲ್ಲಿಂದ ಅದೇ ಬೈಲಿನ ಪೂರ್ವದಿಗ್ಭಾಗದಲ್ಲಿದ್ದ ಭರತಖಂಡದ ರೆಜಿಮೆಂಟ್ ಸೇನಾಭಾಗಕ್ಕೆ ಹೊಸ ಧ್ವಜಗಳನ್ನು ಕೊಟ್ಟು ಸೈನಿಕರ ಮರ್ಯಾದೆಯನ್ನು ಕೈಕೊಂಡು ಬಿಡಾರಕ್ಕೆ ಚಿತ್ತೈಸಿದರು. ಈ ಸಂದರ್ಭದಲ್ಲಿ ಚಕ್ರವರ್ತಿನಿಯವರೂ ಚಕ್ರವರ್ತಿಯವರ ಸಮೀಪದಲ್ಲಿದ್ದರು. ತಾ॥ ೯ ನೇಯ ಶನಿವಾರ ಬೆಳಿಗ್ಗೆ ಚಕ್ರವರ್ತಿನಿಯವರು ದೇಶೀಯಮಹಾರಾಣಿಯವರುಗಳನ್ನೂ ಪ್ರಖ್ಯಾತರಾದ ಭಾರತ ಮಹಿಳೆಯರನ್ನೂ ತಮ್ಮ ಬಿಡಾರಕ್ಕೆ ಬರಮಾಡಿಕೊಂಡು ಅವರುಗಳ ಕೂಡ ಪ್ರಸ್ತಾಪಿಸಿ, ಗೌರ್ನರ್‌ಜನರಲ್‌ರವರ ಪತ್ನಿಯವರಾದ ಲೇಡಿ ಹಾರ್ಡಿಂಜ್‌ರವರು ಭಾರತ ಮಹಿಳೆಯರ ಪರವಾಗಿ ಒಪ್ಪಿಸಿದ ಚಕ್ರವರ್ತಿದಂಪತಿ ಶುಭಾಗಮನಪ್ರಶಂಸಕವಾಗಿರುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ, ಅದಕ್ಕೆ ಉತ್ತರವನ್ನು ದಯಪಾಲಿಸಿದರು. ಆ ಉತ್ತರದ ಮುಖ್ಯಾಂಶವೇನೆಂದರೆ:—

“ನೀವುಗಳು ನಮ್ಮ ಸ್ವಾಗತವನ್ನು ಬಯಸಿ ಆಡಿರುವ ಮಾತುಗಳು ನಮ್ಮ ಮನಸ್ಸಿಗೆ ಚೆನ್ನಾಗಿ ಹಿಡಿದಿರುತ್ತವೆ. ಭಾರತ ಮಹಿಳೆಯರು ಗಾಂಭೀರ್ಯಯುಕ್ತವಾಗಿಯೂ, ಸ್ನೇಹಪೂರ್ವಕವಾಗಿಯೂ ಮಾಡಿರುವ ಸ್ವಾಗತಕ್ಕಾಗಿ ನಮ್ಮ ವಂದನೆಯನ್ನು ನೀವು ಅಂಗೀಕರಿಸಿ, ನಿಮ್ಮ ಸೋದರಿಯರಿಗೂ ತಿಳಿಸುವಿರೆಂದು ನಂಬುತ್ತೇವೆ. ಮನೆಯನ್ನು ಬಿಟ್ಟು ಹೊರಗೆ ಬಾರದಿರುವಂತಹ ಸ್ತ್ರೀಯರ ಕ್ಷೇಮಚಿಂತನೆಯು ನಮ್ಮಲ್ಲಿ ಸರ್ವದಾ ಅಭಿವೃದ್ಧಿಯಾಗುತ್ತಿರುವುದೆಂದು ನಾವು ನಿಮಗಳಿಗೆ ಖಚಿತವಾಗಿ ಹೇಳಬಿಚ್ಛಿಸುತ್ತೇವೆ. ಭಾರತ ಮಹಿಳೆಯರ ಉತ್ಕೃಷ್ಟವಾದ ವ್ಯಾಪ್ತಿಯಿಂದ ಅವರ ಮಕ್ಕಳು ಮರಿಗಳ ಕಲ್ಯಾಣಕ್ಕೆ ಅವಕಾಶವಿರುವುದೆಂಬುದು ಚರಿತ್ರೆಯಿಂದ ವ್ಯಕ್ತವಾಗುತ್ತದೆ. ಮತ್ತೂ ಮಾತೆಯರು ತಮ್ಮ ಮಕ್ಕಳಿಗೆ ಕೊಟ್ಟ ಸದ್ಬೋಧನಾಶಕ್ತಿಯಿಂದ ರಾಜಭಕ್ತಿ ತತ್ಪರತೆಯೂ, ಉತ್ಕೃಷ್ಟವಾದ ಸೇವಾಸಕ್ತಿಯೂ ಉಂಟಾಗಿರುವುದರ ಮೂಲಕ ಭಾರತ ಜನಾಂಗದ ಚರಿತ್ರೆಗೆ ಶೋಭೆಯುಂಟಾಗಿರುತ್ತದೆ. ಗೌರವಣೆಯ (ಘೋಷಾ) ಸ್ತ್ರೀಯರಲ್ಲಿ ಸುಧಾರಣೆಯು ಸ್ವಲ್ಪಸ್ವಲ್ಪವಾಗಿಯಾದರೂ ಖಂಡಿತವಾಗಿ ಆಗುತ್ತಿರುವುದೆಂದು ಕೇಳಿ ನಮ್ಮ ಮನಸ್ಸಿಗೆ ವಿಶೇಷ ತೃಪ್ತಿಯುಂಟಾಗಿರುವುದಲ್ಲದೆ ನಿಮ್ಮ ಹೆಣ್ಣು ಮಕ್ಕಳನ್ನು ದೊಡ್ಡವರಾದಮೇಲೆ ಪತಿಗಳಿಗೆ ಉಪಯುಕ್ತರೂ ವಿವೇಕಿಗಳಾದ ಸಹವಾಸಿಗಳೂ ಆಗುವುದಕ್ಕೆ ಯೋಗ್ಯರಾಗಿರುವಂತೆ ಮಾಡುವುದಕ್ಕಾಗಿ ನೀವು ಅವರುಗಳಿಗೆ ವಿದ್ಯೆಯನ್ನು ಕಲಿಸಲಿಚ್ಛೆಯುಳ್ಳವರಾಗಿರುವಿರೆಂದು ನಮ್ಮ ಮನಸ್ಸಿಗೆ ನಿದರ್ಶನವಾಗಿರುತ್ತದೆ. ನೀವುಗಳು ನಮಗೊಪ್ಪಿಸಿರುವ ಆಭರಣವು ನಮ್ಮ ದೃಷ್ಟಿಯಲ್ಲಿ ಯಾವಾಗಲೂ ಅಮೂಲ್ಯವಾಗಿರುವುದಲ್ಲದೆ, ನಾವು ಅದನ್ನು ಧರಿಸಿದ ವೇಳೆಯಲ್ಲೆಲ್ಲ ಸಾವಿರಾರು ಮೈಲಿ ವಿಸ್ತೀರ್ಣದ ಭೂಮಿಯೂ, ಸಮುದ್ರವೂ ನಮ್ಮುಭಯರನ್ನು ಅಗಲಿಸಿದಾಗ್ಗೂ, ನಮ್ಮ ಮನಸ್ಸು ಮಾತ್ರ ಭರತಖಂಡದಕಡೆಗೋಡಿ, ಈ ದಿವಸದ ನಮ್ಮಗಳ ಸಮ್ಮೇಳನದಲ್ಲಿ ನೀವುಗಳು ತೋರಿಸಿರುವ ನಿಮ್ಮ ಪ್ರೀತಿವಿಶ್ವಾಸಗಳನ್ನು ನಮ್ಮ ಸ್ಮೃತಿಪಥಕ್ಕೆ ತರುವುದು. ನವಿನ್ಯಾ ಆಭರಣವು ನಮ್ಮ ಮುಂದಣ ಸಂತತಿಯವರಿಗೆ ಕುಲಧನವಾಗಿ ನಡೆದುಕೊಂಡು ಬರುವುದಲ್ಲದೆ, ಇಂಗ್ಲೀಯ ಚಕ್ರವರ್ತಿನಿಯವರಿಗೂ, ಭಾರತ ಮಹಿಳೆಯರಿಗೂ ಆದ ಪ್ರಥಮಸಂದರ್ಶನದ ಜ್ಞಾಪನಾರ್ಥವಾಗಿರುವುದು. ನೀವು ಚಕ್ರವರ್ತಿಯವರನ್ನೂ ನಮ್ಮನ್ನೂ ಅಭಿನಂದಿಸಿ ನಮ್ಮಗಳ ಶ್ರೇಯಃ ಪ್ರಾರ್ಥನೆಯನ್ನು ಮಾಡಿರುವುದಕ್ಕಾಗಿ ನಿಮ್ಮನ್ನು ವಂದಿಸಿ, ಚಕ್ರಾಧಿಪತ್ಯದ ಪುಷ್ಟಿ, ಐಕ್ಯ ಮತ್ತೂ ಶ್ರೇಯಸ್ಸು ಇವುಗಳಭಿವೃದ್ಧಿಯನ್ನು ಕುರಿತು ನಿಮ್ಮಂತೆಯೇ ನಾವೂ ಪ್ರಾರ್ಥಿಸುತ್ತೇವೆ. ತಾ॥ ೯ರ ಮಧ್ಯಾಹ್ನದಲ್ಲಿ ಚಕ್ರವರ್ತಿದಂಪತಿಗಳು ಪೋಲೋ ಮತ್ತೂ ಫುಟ್‌ಬಾಲ್ ಪಂದ್ಯಗಳು ನಡೆಯುವ ಸ್ಥಳಗಳಿಗೆ ದಯಮಾಡಿಸಿ ಗೌರ್ನರ್‌ಜನರಲ್‌ರವರು ಮತ್ತೂ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಇವರುಗಳೊಡನೆ ಎರಡು ಪಂದ್ಯಗಳನ್ನೂ ಪರಾಮರಿಸಿಕೊಂಡು ಬಿಡಾರಕ್ಕೆ ಚಿತ್ತೈಸಿದರು. ತಾ॥ ೧೧ ರಾತ್ರಿ ೯॥ ಗಂಟೆಗೆ ಪೋಲೋಪಂದ್ಯವು ನಡೆಯುತಕ್ಕ ಬೈಲಿಗೆ ಚಕ್ರವರ್ತಿದಂಪತಿಗಳು ದಯಮಾಡಿಸಿ ಅಲ್ಲಿ ಸೈನಿಕರು ದೀಪದಬೆಳಕಿನ ಸಹಾಯದಿಂದ ತೋರಿಸಿದ ಚಮತ್ಕೃತಿಯನ್ನು ಪರಾಮರಿಸಿಕೊಂಡು ರಾತ್ರಿ ೧೧॥ ಗಂಟೆಗೆ ಬಿಡಾರಕ್ಕೆ ಹಿಂತಿರುಗಿದರು.

ಮಹಾಸಾಮ್ರಾಜ್ಯದ ಕಾರ್ಯವು.

೫ ನೇಯ ಜಾರ್ಜ್ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವದ ಉತ್ಕರ್ಷವು ಅಸದೃಶವಾದ ವೈಭವದಿಂದ ಚಕ್ರವರ್ತಿದಂಪತಿಗಳ ಪ್ರತ್ಯಕ್ಷತಃ ಈ ದಿವಸದ ದರ್ಬಾರಿನಲ್ಲಿ ಪ್ರಕಟಿಸಲ್ಪಟ್ಟಿರುವುದು. ಈ ಮಹಾಸಾಮ್ರಾಜ್ಯದ ಕಾರ್ಯವು ಚರಿತ್ರೆಯ ವರ್ಣನೆಗೂ, ಸಂಪ್ರದಾಯಕ್ಕೂ ಮತ್ತೂ ಭರತಖಂಡದ ಚಕ್ರಾಧಿಪತ್ಯದ ಪ್ರಾಶಸ್ತ್ಯಕ್ಕೂ ತಕ್ಕಂತೆ ಮನುಷ್ಯ ಪ್ರಯತ್ನದಲ್ಲಿ ಸಾಧ್ಯವಾಗಿರುವ ಅಸಮಾನವಾದ ವೈಭವವಿಶೇಷಕಾರ್ಯಗಳೆಲ್ಲವನ್ನೂ ಸಿದ್ಧಿಗೊಳಿಸಿದುದಲ್ಲದೆ, ಮಹೋತ್ಸವವು ತಕ್ಕ ವಿಜೃಂಭಣೆಯಿಂದ ನಡೆಸಲ್ಪಡುತ್ತಿರುವುದು. ಒಬ್ಬ ಪ್ರಭುವನ್ನು ಓಲೈಸಲು ಭಾರತೀಯರೆಲ್ಲರನ್ನೂ ಒಟ್ಟುಗೂಡಿಸುವ ಮಹಾಪ್ರಯತ್ನವು ಉಚಿತವಾಗಿಯೂ, ಅನುಕೂಲವಾಗಿಯೂ ಕೈಗೂಡಿರುವುದಲ್ಲದೆ ಚಿತ್ರಲೇಖನ ಸಹಾಯದಿಂದ ಚಿರಸ್ಮರಣೀಯವಾಗಿ ನಿಲ್ಲುವುದು.

ಜನಸಂದಣಿಯ ಉತ್ಸಾಹವು.

ಬಿಡಾರಗಳಲ್ಲಿಯ ಜನರೆಲ್ಲರೂ ಈ ದಿವಸ ಉದಯರಾಗಕ್ಕೆ ಮೊದಲೇ ಎಚ್ಚೆತ್ತರು. ಸೈನಿಕರು ಥಳಥಳಿಸುವ ಆಯುಧಗಳನ್ನು ಹಿಡಿದು ಭೋರ್ಗರೆವ ವಾದ್ಯಗಳೊಡನೆ ದರ್ಬಾರುಮಂಟಪದ ಸುತ್ತಲೂ, ಚಕ್ರವರ್ತಿದಂಪತಿಗಳುತ್ಸವವು ಬರುವ ಮಾರ್ಗಗಳಲ್ಲೂ ಕಾವಲುನಿಂತುಕೊಳ್ಳಲು ಹೊರಟರು. ಸೂರ್ಯೋದಯವಾಗುವಷ್ಟರಲ್ಲಿ ರೈಲು ಬಂಡಿಗಳು ಮೋಟಾರು, ಟಾಂಗಾಗಳು ಎಕ್ಕಾಗಳು ಪ್ರೇಕ್ಷಕರನ್ನು ತುಂಬಿಸಿಕೊಂಡು ದರ್ಬಾರುಮಂಟಪದಕಡೆಗೋಡಾಡಹತ್ತಿದುವು. ಮತ್ತೂ ಪಾದಚಾರಿಗಳಾದ ಜನರು ಉತ್ಸವಬರತಕ್ಕ ಮಾರ್ಗಗಳಲ್ಲಿ ತಮಗನುಕೂಲವಾದ ಸ್ಥಳಗಳನ್ನು ಹುಡುಕಿಕೊಂಡು ಕೂತುಕೊಳ್ಳಲಾರಂಭಿಸಿದರು. ೯॥ ಗಂಟೆಗೆ ಬಿಡಾರಗಳಿಂದ ಮಹಾರಾಜರುಗಳು, ರಾಜರುಗಳು, ನವಾಬರುಗಳು, ಅಧಿಕಾರಿಗಳು, ಪ್ರಜಾಪ್ರಮುಖರು ಎಲ್ಲಾ ಪ್ರಾಂತಗಳ ಪ್ರತಿನಿಧಿಗಳು ಮೊದಲಾದವರು ಮೋಟಾರು ಮೊದಲಾದ ರಥಗಳಲ್ಲಿ ಬಂದು ದರ್ಬಾರುಮಂಟಪದಲ್ಲಿ ತಂತಮ್ಮಾಸನಗಳಲ್ಲಿ ಕುಳಿತುಕೊಂಡರು. ೧೦ ಗಂಟೆಯ ಹೊತ್ತಿಗೆ ದರ್ಬಾರಿನ ಮಂಟಪವು ಜನರಸಂದಣಿಯಿಂದ ತುಂಬಿತುಳುಕುತ್ತಿದ್ದಿತು. ದೇಶೀಯ ಮಹಾರಾಜರುಗಳೂ, ರಾಜರುಗಳೂ, ನವಾಬರುಗಳೂ ದೇದೀಪ್ಯಮಾನವಾದ ನವರತ್ನಾಭರಣಗಳನ್ನೂ, ಮನೋಹರವಾದ ಜರತಾರಿಯ ಉಡುಪುಗಳನ್ನೂ ಯುದ್ಧಶೂರರು ಯುದ್ಧಕಾಲದ ಉಡುಪುಗಳನ್ನೂ ಅಧಿಕಾರಿಗಳೂ, ಜಡ್ಜಿಗಳೂ ತಂತಮಗೆ ಸೂಕ್ತವಾದ ಉಡುಪುಗಳನ್ನೂ, ಧರಿಸಿಕೊಂಡಿದ್ದುದು ಪ್ರೇಕ್ಷಕರ ದೃಷ್ಟಿಯನ್ನು ಆಕರ್ಷಿಸುತ್ತಿದ್ದಿತು. ೨೦೦೦೦ ಸೈನಿಕರು ದರ್ಬಾರುಮಂಟಪದ ಮುಂದುಗಡೆಯೂ, ಒಳಗೂ, ಹೊರಗೂ ನಿಲ್ಲಿಸಲ್ಪಟ್ಟಿದ್ದರು. ಗೌರ್ನರ್‌ಜನರಲ್‌ರವರಾದ ಲಾರ್ಡ್ ಹಾರ್ಡಿಂಜ್‌ದಂಪತಿಗಳು ಸೇನೆಯ ಬೆಂಗಾವಲಿನಿಂದ ೧೧ ಗಂಟೆಗೆ ದರ್ಬಾರುಮಂಟಪಕ್ಕೆ ದಯಮಾಡಿಸಿದರು. ಅವರು ರಥದಿಂದಿಳಿದಕೂಡಲೆ ಸೈನಿಕರು ಮರ್ಯಾದೆಯನ್ನು ಮಾಡಿದರು ಮತ್ತೂ ಜನರು ಕೋಲಾಹಲಧ್ವನಿಯನ್ನು ಮಾಡಿದರು.

ಚಕ್ರವರ್ತಿದಂಪತಿಗಳು

ದರ್ಬಾರುಮಂಟಪದೊಳಗೆ ನೆರೆದಿದ್ದ ಜನರ ೮೦೦೦೦ ನೇತ್ರದ್ವಯಗಳು ಚಕ್ರವರ್ತಿದಂಪತಿಗಳ ಆಗಮನವನ್ನೇ ಎವೆ ಇಕ್ಕದೆ ಇದಿರುನೋಡುತ್ತಿದ್ದುವು. ಗುಂಡುಗಳ ಶಬ್ದವೂ, ಜನರ ಕೋಲಾಹಲ ಧ್ವನಿಯೂ ಮಾರ್ಗಗಳುದ್ದಕ್ಕೂ ವ್ಯಾಪಿಸಿ ಚಕ್ರವರ್ತಿದಂಪತಿಗಳ ಸ್ವಾರಿಯು ಬಿಡಾರವನ್ನು ಬಿಟ್ಟು ಹೊರಟಿರುವುದೆಂದು ಸೂಚಿಸುತ್ತಿದ್ದುವು. ಉತ್ಸವದ ಮುಂಭಾಗದಲ್ಲಿದ್ದ ಸೈನಿಕರ ಕುದುರೆಗಳು ಮುಂದು ಮುಂದು ಬಂದಹಾಗೆಲ್ಲ ಜನರ ಕೋಲಾಹಲವು ಹೆಚ್ಚಾಗುತ್ತಿದ್ದಿತು. ಚಕ್ರವರ್ತಿದಂಪತಿಗಳ ರಥವು ಮಂಟಪದ ಮುಂಭಾಗಕ್ಕೆ ಬರುತಲೆ ಜನರ ಕೋಲಾಹಲಧ್ವನಿಯೂ ಕರಾಸ್ಫಾಲನವೂ ದಿಙ್ಮಂಡಲವನ್ನು ವ್ಯಾಪಿಸಿತು. ಒಳಗಿದ್ದ ಸಭಿಕರೆಲ್ಲರೂ ಸಡಗರದಿಂದೆದ್ದು ನಿಂತುಕೊಂಡರು. ಸೈನಿಕರು ಆಯುಧಗಳನ್ನು ಬಗ್ಗಿಸಿದರು; ೨೦೦೦ ವಾದ್ಯಗಾರರು ಪ್ರಭುದಂಪತಿಗಳ ಶ್ರೇಯಃಪ್ರಾರ್ಥನಾಗೀತವನ್ನು ನುಡಿಸಿದರು. ಅನಂತರ ಗೌರ್ನರ್‌ಜನರಲ್‌ರವರು ಚಕ್ರವರ್ತಿ ದಂಪತಿಗಳಿಗೆ ಕರಾವಲಂಬನವನ್ನಿತ್ತು ಅವರುಗಳನ್ನು ರಥದಿಂದಿಳಿಸಿಕೊಂಡು ಮಂಟಪದೊಳಗಡೆಗೆ ನಡೆಸಿಕೊಂಡು ಬಂದರು. ಚಕ್ರವರ್ತಿಯವರು ಧರಿಸಿದ್ದ ನಿಲುವಂಗಿಯು ನೆಲದಮೇಲೆಳೆಯದಂತೆ ಅದರ ಕೊನೆಯನ್ನು ಅಚ್ಚಾರ ಸಂಸ್ಥಾನದ ವೀರಸಿಂಗ್‌ರವರೂ, ಭರತಪುರ ಸಂಸ್ಥಾನದ ಕೃಷ್ಣಸಿಂಗ್‌ರವರೂ ಹಿಂದುಮ್ಮಿನ ಜಾಫರ್‌ಖಾನರವರೂ, ಭೂಪಾಲಿನ ಬೇಗಂರ ಮೊಮ್ಮಗನೂ, ಇದಾರಿನ ವಿಶ್ವೇಶ್ವರಸಿಂಗ್‌ರವರೂ, ಬಿಕನೀರ್ ಸಂಸ್ಥಾನದ ಮಹಾರಾಜ ಕುಮಾರರವರೂ ; ಚಕ್ರವರ್ತಿನಿಯವರ ಉಡುಪಿನ ಕೊನೆಯನ್ನು ಫರಿದಕೋಟೆಯ ಮಹಾರಾಜ ಕುಮಾರರವರೂ, ರೀವಾ ಸಂಸ್ಥಾನದ ಮಹಾರಾಜಕುಮಾರರೂ; ಗೌರ್ನರ ಜನರಲ್‌ರವರ ಉಡುಪನ್ನೂ, ಆಚಾರ್ದಕುಮಾರಸಿಂಗ್‌ರವರೂ, ಪಾಲಿಟಾನಾದ ಬಹದ್ದೂರ್‌ಸಿಂಗ್ ಥಾಕೂರ್ ಸಾಹೆಬ್‌ರವರೂ ; ಗೌರ್ನರ್‌ಜನರಲ್‌ರವರ ಪತ್ನಿಯವರ ಉಡುಪಿನ ಕೊನೆಯನ್ನೂ ಭೂಪಾಲಿನ ಬೇಗಂರವರ ಮತ್ತೊಬ್ಬ ಮೊಮ್ಮಗನೂ ಹಿಡಿದುಕೊಂಡು ಪಾವಟಿಗೆಗಳಮೇಲೆ ನಿಂತಿದ್ದರು. ಚಕ್ರವರ್ತಿದಂಪತಿಗಳು ಬಹು ಗಂಭೀರವಾಗಿ ಪಾವಟಿಗೆಗಳನ್ನು ಹತ್ತಿ ಅತ್ಯಂತ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಸಿಂಹಾಸನಗಳ ಮೇಲೆ ಮಂಡಿಸಿದರು.

ಚಕ್ರವರ್ತಿಯವರು ಧರಿಸಿದ್ದ ಕಿರೀಟವು ಮತ್ತೂ ಉಡುಪು.

ಈ ಕಿರೀಟದಲ್ಲಿ ೧॥। ಅಂಗುಲ ಅಗಲವಿರುವ ವಜ್ರಾವಳಿಯು ೪ ದೊಡ್ಡ ಪಚ್ಚೆಗಳು ಮತ್ತೂ ದೊಡ್ಡ ಇಂದ್ರನೀಲ ಮಣಿಗಳು ಇವುಗಳ ಜತೆಗೆ ಖಚಿತಮಾಡಲ್ಪಟ್ಟಿರುವುದು. ಈ ವಜ್ರದ ಪಟ್ಟಿಯ ಮೇಲ್ಗಡೆ ೪ ವಜ್ರಗಳ ಸಾಲುಗಳು ಅಡ್ಡಡ್ಡಲಾಗಿ ಬಂದು ಅವುಗಳ ಮಧ್ಯಭಾಗದಲ್ಲಿ ಪಚ್ಚೆಗಳಿಡಲ್ಪಟ್ಟಿರುವುವು. ಈ ಸಾಲುಗಳನ್ನನುಸರಿಸಿ ೮ ವಜ್ರಗಳ ಕಮಾನುಗಳು ಇರುವುವು. ಇವುಗಳ ಮೇಲ್ಭಾಗದಲ್ಲಿ ವಜ್ರಗಳ ಅರ್ಧಸಾಲೂ, ಮಧ್ಯಭಾಗದಲ್ಲಿ ಚಚ್ಚೌಕವಾಗಿ ವಜ್ರಗಳೂ ಬಿಗಿಯಲ್ಪಟ್ಟಿರುವುವು. ಧೂಮ್ರವರ್ಣದ ಮಖಮಲ್ಲಿನ ಟೊಪ್ಪಿಗೆಯೂ, ಧೂಮ್ರವರ್ಣದ ನಿಲುವಂಗಿಯೂ, ಧೂಮ್ರವರ್ಣದ ಚಿಕ್ಕ ಮೇಲಂಗಿಯೂ, ಮಂಡಿಯವರೆಗೂ ಬರುವ ಬಿಳೀ ಸ್ಯಾಟಿನ್ನಿನ ಶರಾಯಿಯೂ, ಸ್ಟಾರ್ ಆಫ್ ಇಂಡಿಯಾ ಪ್ರಶಸ್ತಿಯ ಸೂಚಕವಾದ ಚಿನ್ಹೆಯೂ ಚಕ್ರವರ್ತಿಯವರಿಂದ ಧರಿಸಲ್ಪಟ್ಟಿದ್ದುವು. ಚಕ್ರವರ್ತಿನಿಯವರು ಧರಿಸಿದ್ದ ಬಿಳೀ ಸಾಟಿನ ಉಡುಪಿನಮೇಲೆ ಗುಲಾಬಿ ಹೂಗಳು ಚಿನ್ನದ ಸರಿಗೆಯಿಂದ ಕಸೂತಿಮಾಡಲ್ಪಟ್ಟಿದ್ದುವಲ್ಲದೆ, ಅದರಲ್ಲಿ ಕಮಲ ಪುಷ್ಪಗಳು ಕಸೂತಿಮಾಡಲ್ಪಟ್ಟಿದ್ದುವು. ಉಡುಪಿನ ಮುಂಭಾಗದಲ್ಲಿ ಸ್ಟಾರ್ ಆಫ್ ಇಂಡ್ಯಾ ಪ್ರಶಸ್ತಿಯ ಚಿನ್ಹೆಯು ಚಿನ್ನದ ಸರಿಗೆಯಿಂದ ಕಸೂತಿಮಾಡಲ್ಪಟ್ಟಿದ್ದಿತು. ಅಂಚಿನಲ್ಲಿ ಚಿನ್ನದ ಸರಿಗೆಯಿಂದ ಮಾಡಲ್ಪಟ್ಟಿದ್ದ ಊದಿಬಣ್ಣದ ನಿಲುವಂಗಿಯನ್ನೂ ಧರಿಸಿದ್ದರಲ್ಲದೆ, ಆರ್ಡರ್ ಆಫ್ ಗಾರ್ಟರ್ ಮತ್ತೂ ಆರ್ಡರ್ ಆಫ್ ದಿ ಕ್ರೌನ್ ಆಫ್ ಇಂಡ್ಯಾ ಎಂಬ ಪ್ರಶಸ್ತಿಗಳ ಚಿನ್ಹೆಗಳನ್ನೂ, ವಜ್ರ ಮತ್ತೂ ಪಚ್ಚೆಗಳಿಂದ ಕೂಡಿದ ಅಮೋಘವಾದ ಆಭರಣಗಳನ್ನೂ, ಬರೀ ವಜ್ರಗಳಿಂದ ಮಾಡಲ್ಪಟ್ಟಿರುವ ಕಿರೀಟವನ್ನೂ, ಪಚ್ಚೆಗಳ ಕಂಠಹಾರ ಮತ್ತೂ ಪಚ್ಚೆಯ ಕೊಂಡಿಗಳನ್ನೂ ಧರಿಸಿದ್ದರು.

ಚಕ್ರವರ್ತಿದಂಪತಿಗಳು ಸಿಂಹಾಸನಗಳನ್ನು ಆರೋಹಿಸಿದುದರ ಬಗೆಗಾಗಿ ಆರಿಸಲ್ಪಡುತ್ತಿದ್ದ ಗುಂಡಿನ ಶಬ್ದವು ನಿಂತಕೂಡಲೆ, ದರ್ಬಾರಿನ ಕಾರ್ಯ ನಿರ್ವಾಹಕರಾದ ಕರ್ನಲ್ ಸರ್ ಹೆನ್ರಿ ಮಕ್‌ಮಹೋನರವರು ಚಕ್ರವರ್ತಿದಂಪತಿಗಳಿಗೆ ನಮಸ್ಕಾರವನ್ನು ಮಾಡಿ ದರ್ಬಾರನ್ನು ಪ್ರಾರಂಭಿಸಲು ಚಕ್ರವರ್ತಿಯವರ ಅನುಜ್ಞೆಯನ್ನು ಪಡೆದು ಸೂಚನೆಯನ್ನು ಕೊಡುತಲೆ ತುತೂರಿಗಳ ಮತ್ತೂ ತಮಟೆಗಳ ಧ್ವನಿಯು ಮಾಡಲ್ಪಟ್ಟಿತು. ಅನಂತರ ಚಕ್ರವರ್ತಿಯವರೆದ್ದು ಮಹಾಸಭೆಯನ್ನು ಕುರಿತು ಈ ಕೆಳಗೆ ಕಂಡ ಭಾಷಣವನ್ನು ಮಾಡಿದರು.

ಚಕ್ರವರ್ತಿಗಳ ಭಾಷಣವು.

ನಾವು ಕೃತಜ್ಞತಾಪೂರ್ವಕವಾದ ಮತ್ತೂ ತೃಪ್ತಿಕರವಾದ ಭಾವನಗಳಿಂದ ಕೂಡಿದವರಾಗಿ ಈ ದಿವಸ ನಿಮಗಳ ಮಧ್ಯದಲ್ಲಿ ನಿಂತಿರುವೆವು. ಚಕ್ರವರ್ತಿನಿಯವರಿಗೂ, ನಮಗೂ ಈ ಸಂವತ್ಸರವು ವಿಶೇಷ ಉತ್ಸವಗಳಿಂದೊಡಗೂಡಿ ಆಹ್ಲಾದಕರವಾದುದಾಗಿದ್ದರೂ, ಅಸಾಧಾರಣವಾದ ಕಾರ್ಯಭಾರವನ್ನು ನಮ್ಮಮೇಲೆ ಹೊರಿಸಿದುದಾಗಿ ಪರಿಣಮಿಸಿದೆ. ನಾವು ಹಿಂದೆ ಭರತಖಂಡಕ್ಕೆ ಆಗಮಿಸಿದ್ದುದರ ಕೃತಜ್ಞತಾಪೂರ್ವಕವಾದ ಸ್ಮರಣೆಯೂ ದೂರವಾಗಿಯೂ, ಅನೇಕ ದಿನಗಳು ಪ್ರಯಾಣಮಾಡಬೇಕಾಗಿಯೂ ಇರುವ ಮತ್ತೂ ಆಗ ತನ್ನನ್ನು ನಾವು ಮೊದಲು ಪ್ರೀತಿಸುವಂತೆ ಮಾಡಿಕೊಂಡ ದೇಶಕ್ಕೆ ಪುನಃ ನಮ್ಮನ್ನು ಬರಮಾಡಿದೆ. ನಮ್ಮನ್ನು ಸ್ವಗೃಹದಲ್ಲಿ ಕಾಣುವಷ್ಟು ವಿಶ್ವಾಸದಿಂದ ಇದಕ್ಕೆ ಮೊದಲೇ ಕಂಡ ದೇಶಕ್ಕೆ ಪುನರಾಗಮಿಸಲು ವಿಶೇಷ ಉತ್ಸಾಹದಿಂದ ಈ ದೂರಪ್ರಯಾಣಕ್ಕುಜ್ಜುಗಿಸಿದೆವು. ಕಳೆದ ಜೂನ್ ೨೨ ನೇಯ ತಾರೀಖಿನ ದಿವಸ ವೆಸ್ಟ್‌ಮಿನಿಸ್ಟರ್ ದೇವಾಲಯದಲ್ಲಿ, ದೈವಾನುಗ್ರಹದಿಂದ ಪುರಾತನ ಪದ್ಧತಿಯನ್ನನುಸರಿಸಿ ಶಾಸ್ತ್ರಸಮ್ಮತವಾಗಿ ನಡೆದ ನಮ್ಮ ಕಿರೀಟಧಾರಣಮಹೋತ್ಸವ ಸಮಾರಂಭದ ಉತ್ಕರ್ಷವನ್ನು ನಾವೇ ಪ್ರತ್ಯಕ್ಷವಾಗಿ ನಿಮ್ಮೆಲ್ಲರಿಗೂ ಪ್ರಕಟಿಸಬೇಕೆಂದು ಕಳೆದ ಜುಲೈ ತಿಂಗಳಲ್ಲಿ ಪ್ರಸಿದ್ಧಪಡಿಸಿದ ಮೇರೆಗೆ, ಚಕ್ರವರ್ತಿನಿಯವರೊಡಗೂಡಿಬಂದು ನಮ್ಮ ಆಶಯವನ್ನು ನೆರವೇರಿಸಿರುವೆವು. ಭರತಖಂಡದ ರಾಜಭಕ್ತಿಯುತರಾದ ಮಹಾರಾಜರುಗಳ ಮತ್ತೂ ನಮ್ಮ ನಂಬುಗೆಗೆ ಪಾತ್ರರಾದ ಪ್ರಜೆಗಳ ವಿಷಯದಲ್ಲಿ ನಮಗಿರುವ ಅನುರಾಗವನ್ನೂ, ಭಾರತ ಚಕ್ರಾಧಿಪತ್ಯದ ಕ್ಷೇಮಾಭಿವೃದ್ಧಿಯು ನಮಗೆಷ್ಟು ಪ್ರಿಯತಮವಾಗಿರುವುದೆಂಬುದನ್ನೂ ವ್ಯಕ್ತಗೊಳಿಸಲು ಕುತೂಹಲಪಡುತ್ತೇವೆ ಅಲ್ಲದೆ, ಲಂಡನ್ನಿನಲ್ಲಾದ ಕಿರೀಟಧಾರಣ ಮಹೋತ್ಸವಕ್ಕೆ ಬಾರದಿದ್ದವರು ದಿಲ್ಲಿಯ ಪಟ್ಟಣದಲ್ಲಿ ತತ್ಸಂಬಂಧವಾಗಿ ನಡೆಯುವ ಉತ್ಸವದ ವೈಭವದಲ್ಲಿ ಭಾಗಿಗಳಾಗಬೇಕೆಂಬುದು ನಮ್ಮುದ್ದೇಶವಾಗಿರುವುದು. ಈ ಮಹಾಸಭೆಯನ್ನೂ ಇದರಲ್ಲಿ ನೆರದಿರುವ ಮಹಾರಾಜರುಗಳನ್ನೂ, ಪ್ರಜಾಪ್ರತಿನಿಧಿಗಳನ್ನೂ, ಸೈನ್ಯದ ಪ್ರತಿನಿಧಿಗಳನ್ನೂ, ನಮ್ಮ ಗವರ್ನರುಗಳನ್ನೂ, ನಮ್ಮ ನಂಬುಗೆಗೆ ಪಾತ್ರರಾದ ಅಧಿಕಾರಿಗಳನ್ನೂ ಅವಲೋಕಿಸಿರುವುದರಿಂದ ಚಕ್ರವರ್ತಿನಿಯವರಿಗೂ, ನಮಗೂ ನಿಜವಾದ ಆನಂದವೂ, ಇಚ್ಛಾಪೂರ್ತಿಯೂ ಉಂಟಾಗಿವೆ. ಇವರುಗಳು ರಾಜಭಕ್ತಿಪುರಸ್ಸರವಾಗಿ ನಮ್ಮ ಸಮಕ್ಷದಲ್ಲಿ ಮಾಡಲಿಚ್ಛಿಸುವ ಮುಜರೆಗಳನ್ನು ನಾವು ವಿಶ್ವಾಸದಿಂದ ಅಂಗೀಕರಿಸುತ್ತೇವೆ. ಪರಸ್ಪರ ಸಹಾನುಭೂತಿಯೂ, ಅನುರಾಗವೂ ಚರಿತ್ರಾರ್ಹವಾದ ಈ ಸಮಯದಲ್ಲಿ ರಾಜರುಗಳನ್ನೂ, ಪ್ರಜೆಗಳನ್ನೂ ನಮ್ಮಗಳೊಡನೆ ಬೆರೆಯುವಂತೆ ಮಾಡಿರುವುದೆಂಬುದು ನಮಗೆ ವಿಶೇಷವಾಗಿ ಮನದಟ್ಟಿದೆ. ಈ ಕಿರೀಟಧಾರಣ ಮಹೋತ್ಸವದ ಜ್ಞಾಪನಾರ್ಥವಾಗಿ ನಾವು ಕೆಲ ವರದಾನಗಳನ್ನು ಮಾಡಬೇಕೆಂದು ನಿಶ್ಚಯಿಸಿರುವೆವು. ಅವುಗಳನ್ನು ನಮ್ಮ ಗವರ್ನರ್‌ಜನರಲ್‌ರವರು ಈ ಮಹಾಸಭೆಯಲ್ಲಿ ಈ ದಿವಸ ಪ್ರಸಿದ್ಧಪಡಿಸುವರು. ನಿಮ್ಮ ಹಕ್ಕು, ಸ್ವಾತಂತ್ರ್ಯಗಳನ್ನು ಕಾಪಾಡಿಕೊಂಡು ಬರುವ ವಿಚಾರದಲ್ಲಿ ನಮ್ಮ ಪೂರ್ವಿಕರಾದ ಹಿಂದಣ ಪ್ರಭುಗಳು ನಿಮಗಳಿಗೆ ಭರವಸೆಯನ್ನು ಕೊಟ್ಟಿದ್ದಂತೆ, ಈಗ ನಾವು ನಿಮ್ಮ ಹಕ್ಕು ಸ್ವಾತಂತ್ರ್ಯಗಳನ್ನು ನಡೆಯಿಸಿಕೊಂಡು ಬರುತ್ತೇವೆಂದೂ, ನಿಮ್ಮ ಸುಖ ತೃಪ್ತಿ ಸಮಾಧಾನಗಳಲ್ಲಿ ನಿಜವಾದ ಚಿಂತಾಸಕ್ತಿಯುಳ್ಳವರಾಗಿರುವೆವೆಂದೂ ನಾವು ನಿಮಗಳಿಗೆ ಭರವಸೆಯನ್ನು ಕೊಡುತ್ತೇವೆ. ಸರ್ವಶಕ್ತನಾದ ಭಗವಂತನು ಕೃಪೆಯಿಂದ ನಮ್ಮ ಪ್ರಜೆಗಳನ್ನು ಸಂರಕ್ಷಿಸಿ, ಅವರುಗಳ ಸುಖಸಂಪತ್ತುಗಳನ್ನು ಅಭಿವೃದ್ಧಿಗೊಳಿಸುವ ಪ್ರಯತ್ನ ವಿಶೇಷದಲ್ಲಿ ನಮಗೆ ನೆರವಾಗಲೆಂದು ಪ್ರಾರ್ಥಿಸುತ್ತೇವೆ. ಇಲ್ಲಿ ನೆರೆದಿರುವ ಮಹಾರಾಜರುಗಳಿಗೂ, ಪ್ರಜೆಗಳಿಗೂ ನಮ್ಮ ವಿಶ್ವಾಸಪೂರ್ವಕವಾದ ವಂದನೆಗಳನ್ನರ್ಪಿಸುವೆವು.

ಚಕ್ರವರ್ತಿಯವರು ಸಭಿಕರೆಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಮೇಲ್ಕಂಡ ಭಾಷಣವನ್ನು ಮಾಡಿ, ಸಭಿಕರ ಜಯಘೋಷದ ಮಧ್ಯದಲ್ಲಿ ಸಿಂಹಾಸನಾಸೀನರಾದರು.

ಚಕ್ರವರ್ತಿಯವರಿಗೆ ಮುಜರೆಯನ್ನು ಮಾಡುವುದು.

ಅನಂತರ ಗೌರ್ನರ್ ಜನರಲ್‌ರವರು ಚಕ್ರವರ್ತಿಯವರ ಮುಂದೆ ಬಂದು ಶಿರವನ್ನು ಬಾಗಿಸಿ ಮುಜರೆಯನ್ನು ಮಾಡಿ ಒಂದು ಪಾರ್ಶ್ವದಲ್ಲೇ ಒಂದು ಸಿಂಹಾಸನದ ಪಕ್ಕದಲ್ಲಿ ನಿಂತುಕೊಂಡರು. ಆಮೇಲೆ ಸರ್ವಸೇನಾಧಿಪತಿಯು (ಕಮ್ಯಾಂಡರ್ ಇನ್ ಚೀಫರು) ಅವರನಂತರ ವೈಸ್ರಾಯರ ಮಂತ್ರಾಲೋಚನಾ ಸಭೆಯು ಮುಜರೆಯನ್ನು ಮಾಡಿ ಹಿಂದಕ್ಕೆ ಸರಿದು ತಂತಮ್ಮ ಸ್ಥಳಗಳಿಗೆ ಬಂದರು. ಆ ಕಾಲದಲ್ಲಿ ಗೌರ್ನರ್ ಜನರಲ್‌ರವರು ಅವರುಗಳ ಹೆಸರುಗಳನ್ನು ಚಕ್ರವರ್ತಿಯವರ ಸನ್ನಿಧಾನದಲ್ಲಿ ಅರಿಕೆ ಮಾಡಿದರು. ತರುವಾಯ ಹೈದರಾಬಾದಿನ ನೈಜಾಮರವರು, ಬರೋಡಾ ಗಾಯಕವಾಡ ಮಹಾರಾಜರವರು, ಮೈಸೂರ ಮಹಾರಾಜರವರ, ರಜಪುಟಾನ, ಮಧ್ಯಹಿಂದೂಸ್ಥಾನ, ಬಲೂಚಿಸ್ಥಾನ, ಸಿಕ್ಕಿಂ ಮತ್ತೂ ಭೂತಾನ ಮಹಾರಾಜರುಗಳು ತಂತಮ್ಮ ಸ್ಥಾನದ ಕ್ರಮಪ್ರಕಾರ ಒಬ್ಬೊಬ್ಬರಾಗಿ ಬಂದು ಮುಜರೆಯನ್ನು ಮಾಡಿದಮೇಲೆ ಬಂಗಾಳಿ ಹೈಕೋರ್ಟಿನ ಜಡ್ಜಿಗಳು, ವೈಸ್ರಾಯರ ನಿಯಮನಿರ್ಮಾಣ (ಲೆಜಿಸ್ಲೇಟಿವ್ ಕೌನ್ಸಿಲ್) ಸಭಾಸದರುಗಳು, ಗೌರ್ನರುಗಳು, ಪ್ರಾಂತಗಳ ಮುಖ್ಯಾಧಿಕಾರಿಗಳು, ಅವರುಗಳ ಕಾರ್ಯನಿರ್ವಾಹಕ ಸಭಾಸದರುಗಳು, ರಾಜರುಗಳು, ಮತ್ತೂ ಪ್ರತಿನಿಧಿಗಳು ಕ್ರಮಪ್ರಕಾರವಾಗಿ ಹೋಗಿ ಮುಜರೆಯನ್ನು ಮಾಡಿಬಂದರು. ಮುಜರೆಯೆಲ್ಲವೂ ಮುಗಿಯುವಹೊತ್ತಿಗೆ ಮಧ್ಯಾಹ್ನ ೧ ಗಂಟೆಯಾಗಿದ್ದಿತು. ಚಕ್ರವರ್ತಿದಂಪತಿಗಳು ಧರಿಸಿದ್ದ ನವರತ್ನಖಚಿತವಾದ ಕಿರೀಟಗಳ ಕಾಂತಿವಿಶೇಷದೊಂದಿಗೆ ಮುಜರೆಯನ್ನು ಮಾಡಲು ಸಿಂಹಾಸನದ ಬಳಿಗೆ ಬಂದ ಮಹಾರಾಜರುಗಳು ಧರಿಸಿದ್ದ ಅಮೋಘವಾದ ನವರತ್ನಾಭರಣ ಮತ್ತೂ ಜರತಾರಿ ಉಡುಪುಗಳ ಕಾಂತಿಯೂ ಕೂಡಿಕೊಂಡು ಕೋಟಿಸೂರ್ಯಪ್ರಭೆಯೇ ಆ ಸಭಾಮಂಟಪದಲ್ಲುಂಟಾಗಿ ಅಲ್ಲಿ ನೆರೆದಿದ್ದ ಸಭಿಕರ ಕಣ್ಣುಗಳನ್ನು ಮುಚ್ಚಿಸಿಬಿಟ್ಟಿದ್ದಿತೊ! ಎನ್ನುವಹಾಗೆ ಥಳಥಳಿಸುತ್ತಿದ್ದಿತು. ಮುಜರೆಯನ್ನು ಮುಗಿಸಿಕೊಂಡು ಚಕ್ರವರ್ತಿದಂಪತಿಗಳು ಸಿಂಹಾಸನಗಳನ್ನು ಬಿಟ್ಟು ಎದ್ದು, ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ಉತ್ಸವದೊಡನೆ ಹೊರಟು ದರ್ಬಾರುಮಂಟಪದಿಂದ ರಾಜಮಂಟಪಕ್ಕೆ ನಡೆತಂದರು. ಗೌರ್ನರ್ ಜನರಲ್ ದಂಪತಿಗಳು, ಸ್ಟೇಟ್ ಸೆಕ್ರೆಟರಿಯವರು, ಡ್ಯೂಕ್ ಆಫ್ ಟೆಕ್‌ರವರು ಪ್ರಭುಗಳ ಸ್ವಾರಿಯ ಹಿಂದುಗಡೆ ಹೊರಟರು. ರಾಜಕುಮಾರರುಗಳು ಚಕ್ರವರ್ತಿದಂಪತಿಗಳ ಉಡುಪುಗಳ ಕೊನೆಗಳನ್ನೂ, ಕಟಿಗೆಯವರು ಭಂಗಾರದ ಛತ್ರಗಳನ್ನೂ ಹಿಡಿದುಕೊಂಡಿದ್ದರು. ಈ ಪ್ರಕಾರವಾಗಿ ಹೊರಟ ಉತ್ಸವವು ಸಭಾಮಂಟಪದಲ್ಲಿದ್ದವರೆಲ್ಲರಿಗೂ ಚೆನ್ನಾಗಿ ಕಂಡು ಬಂದಿತಲ್ಲದೆ, ಅವರ ಕಣ್ಮನಗಳನ್ನು ಅಪಹರಿಸಿಬಿಟ್ಟಿದ್ದಿತು. ಚಕ್ರವರ್ತಿ ದಂಪತಿಗಳು ರಾಜಮಂಟಪದಲ್ಲಿ ಜಗತಿಯಮೇಲೇರ್ಪಡಿಸಿದ್ದ ಸಿಂಹಾಸನಗಳ ಮೇಲೆ ಮಂಡಿಸಿದನಂತರ, ಗೌರ್ನರ್‌ಜನರಲ್ ದಂಪತಿಗಳು ಸಿಂಹಾಸನಗಳ ಬಲಪಾರ್ಶ್ವದಲ್ಲೂ, ಲಾರ್ಡ್ ಕ್ರ್ಯೂ, ಡ್ಯೂಕ್ ಆಫ್ ಟೆಕ್, ಡಚೆಸ್ ಆಫ್ ಡೆವನ್‌ಷೈರ್, ಕೌಂಟೆಸ್ ಆಫ್ ಷಾಫ್ಟ್ಸ್‌ಬರಿ, ಮತ್ತೂ ವೆನಿಷಿಯಾ ಬೇರಿಂಗ್ ಇವರುಗಳು ಸಿಂಹಾಸನಗಳ ಎಡಪಾರ್ಶ್ವಗಳಲ್ಲೂ, ರಾಜಸೇವೆಯಲ್ಲಿ ನಿರತರಾಗಿದ್ದ ರಾಜಕುಮಾರರುಗಳು ಸಿಂಹಾಸನಗಳ ಹಿಂಭಾಗದಲ್ಲಿ ಅರ್ಧ ಚಂದ್ರಾಕೃತಿಯಲ್ಲೂ, ಮಂತ್ರಿಗಳು, ಜಡ್ಜಿಗಳು ಮೊದಲಾದ ಅಧಿಕಾರಿಗಳು ಪೀಠದ ಕೆಳಭಾಗದಲ್ಲೂ ನಿಂತುಕೊಂಡರು. ವಾದ್ಯಗಾರರು ಸಂಜ್ಞಾಸೂಚಕವಾದ ವಾದ್ಯವನ್ನು ಮಾಡುತಲೆ, ಅಶ್ವಾರೂಢರಾಗಿ ಆಶ್ಚರ್ಯಕರವಾದ ಉಡುಪುಗಳನ್ನು ಧರಿಸಿದ್ದ ಹೆರಾಲ್ಡ್ ಎಂಬ ರಾಜದೂತರು ಮಂಟಪದ ಹೊರಭಾಗದಲ್ಲಿ ತುತೂರಿಗಳನ್ನೂದಿದರು. ತರುವಾಯ ಬಿಳಿಯ ಕುದುರೆಗಳಮೇಲೆ ಕುಳಿತಿದ್ದ ಹೆರಾಲ್ಡುಗಳು ಒಟ್ಟುಗೂಡಿ ಧ್ವನಿಯನ್ನು ಮಾಡಿ ಅಲ್ಲಿಂದ ಸಾಲುಗಟ್ಟಿಕೊಂಡು ಮಂಟಪದ ಮುಂಭಾಗಕ್ಕೆ ಬಂದು ೩ ನೆಯಾವೃತ್ತಿ ತುತೂರಿಗಳನ್ನೂದಿದರು. ತರುವಾಯ ಈ ಹೆರಾಲ್ಡುಗಳ ಮುಖ್ಯಾಧಿಕಾರಿಯಾದ ಮೇಜರ್ ಜನರಲ್ ಪೀಕ್ ಎಂಬುವವರು ಈ ಕೆಳಗೆ ಕಂಡ ರಾಜಾಜ್ಞಾಪತ್ರಿಕೆಯನ್ನು ಆ ಮಹಾಸಭೆಯಲ್ಲಿ ನೆರೆದಿರುವವರಿಗೆಲ್ಲ ಕೇಳುವಂತೆ ಬಹು ದೊಡ್ಡ ಧ್ವನಿಯಿಂದ ಓದಿದಮೇಲೆ, ಅವರ ಸಹಾಯಕನಾದ ಮಲಿಕ್ ಉಮರ್ ಹಯಾತ್‌ಖಾನ್ ಎಂಬುವನು ಉರ್ದುಭಾಷೆಯಲ್ಲಿ ಓದಿದನು. ತುತೂರಿಗಳ ಧ್ವನಿಯು ಮಾಡಲ್ಪಟ್ಟಿತು; ವಾದ್ಯಗಾರರ ಮಹಾಸಮೂಹವು ಶ್ರೇಯಃಪ್ರಾರ್ಥನಾಮಂಗಳವನ್ನು ನುಡಿಸಿತು; ಸಭಿಕರೆಲ್ಲರೂ ಎದ್ದು ನಿಂತುಕೊಂಡರು; ಸೈನಿಕ ಸಮೂಹವೆಲ್ಲವೂ ಆಯುಧಗಳನ್ನು ಮುಂದಕ್ಕೆ ಹಿಡಿದು ಮರ್ಯಾದೆಯನ್ನು ಮಾಡಿತು; ೧೦೧ ಗುಂಡುಗಳು ಹಾರಿಸಲ್ಪಟ್ಟುವು; ಹೊರಗೆ ಮಂಟಪದ ದ್ವಾರದಿಂದ ಚಕ್ರವರ್ತಿಯವರ ಬಿಡಾರದ ವರೆಗೂ ಮಾರ್ಗಗಳಲ್ಲಿ ನಿಂತಿದ್ದ ಸೈನಿಕರು ಕೋವಿಗಳಿಗೆ ಮದ್ದನ್ನು ತುಂಬಿ ಹಾರಿಸಿದರು.

ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರಿಂದ—

ಮಹೋನ್ನತರಾದ ಚಕ್ರವರ್ತಿಯವರ ಪಟ್ಟಾಭಿಷೇಕ ಮಹೋತ್ಸವದ ವೈಭವವನ್ನು ಚಕ್ರಾಧಿಪತ್ಯಕ್ಕೆ ಸೇರಿದ ಸಕಲ ರಾಜ್ಯಗಳಲ್ಲಿಯೂ ತಿಳಿಯಪಡಿಸುವುದಕ್ಕೋಸ್ಕರ ಕೊಡಲ್ಪಟ್ಟ ರಾಜಾಜ್ಞಾಪತ್ರಿಕೆ :—

ಚಕ್ರವರ್ತಿಗಳಾದ ಜಾರ್ಜ್ ಭೂಪತಿಯವರು.

ನಮ್ಮ ಪ್ರಭುತ್ವದ ಪ್ರಥಮ ಸಂವತ್ಸರವಾದ ಕ್ರಿಸ್ತಶಕ ಸಾವಿರದ ಒಂಬೈನೂರ ಹತ್ತನೆಯ ವರ್ಷದ ಜೂಲೈ ಹತ್ತೊಂಬತ್ತನೆಯ ಮತ್ತು ನವೆಂಬರ್ ಏಳನೆಯ ತಾರಿಖುಗಳಲ್ಲಿ ಕೊಡಲ್ಪಟ್ಟ ನಮ್ಮ ಆಜ್ಞಾಪತ್ರಿಕೆಗಳ ಮೂಲಕವಾಗಿ ಸರ್ವಶಕ್ತನಾದ ಭಗವಂತನ ಅನುಗ್ರಹದಿಂದ ನಮ್ಮ ಕಿರೀಟಧಾರಣ ಮಹೋತ್ಸವದ ವೈಭವವನ್ನು ಸಾವಿರದ ಒಂಬೈನೂರ ಹನ್ನೊಂದನೆಯ ಜೂನ್ ಇಪ್ಪತ್ತೆರಡನೆಯ ತಾರೀಖಿನಲ್ಲಿ ನಡಿಸಬೇಕೆಂಬ ನಮ್ಮ ಉದ್ದೇಶವನ್ನು ಪ್ರಕಟಗೊಳಿಸಿದ್ದಪ್ರಕಾರ,

ಸರ್ವಶಕ್ತನಾದ ಭಗವಂತನ ಅನುಗ್ರಹದಿಂದ ಕಳೆದ ಜೂನ್ ಇಪ್ಪತ್ತೆರಡನೆಯ ತಾರೀಖು ಗುರುವಾರದ ದಿವಸ ಪೂರ್ವೋಕ್ತವಾದ ಮಹೋತ್ಸವವನ್ನು ನೆರವೇರಿಸಿದ ತರುವಾಯ,

ನಮ್ಮ ಪ್ರಭುತ್ವದ ಪ್ರಥಮ ಸಂವತ್ಸರವಾದ ಕ್ರಿಸ್ತಶಕ ಸಾವಿರದ ಒಂಬೈನೂರ ಹನ್ನೊಂದನೆಯ ವರ್ಷದ ಮಾರ್ಚಿ ಇಪ್ಪತ್ತೆರಡನೆಯ ತಾರೀಖಿನಲ್ಲಿ ಕೊಡಲ್ಪಟ್ಟ ನಮ್ಮ ಆಜ್ಞಾಪತ್ರಿಕೆಯ ಮೂಲಕ ಪೂರ್ವೋಕ್ತ ಮಹೋತ್ಸವವು ಸಾಂಗವಾಗಿ ನೆರವೇರಿದ ಸಂಗತಿಯನ್ನು ರಾಜಭಕ್ತಿ ನಿರತರಾದ ನಮ್ಮ ಇಂಡಿಯಾ ರಾಜ್ಯಗಳ ಸಕಲ ಪ್ರಜೆಗಳಿಗೂ ನಾವೇ ಸ್ವತಃ ತಿಳಿಯಪಡಿಸಬೇಕೆಂದೂ, ಗವರ್ನರುಗಳು ಲೆಫ್ಟಿನೆಂಟ್-ಗವರ್ನರುಗಳು ಮೊದಲಾದ ನಮ್ಮ ಅಧಿಕಾರಿಗಳನ್ನೂ, ನಮ್ಮ ಸಂರಕ್ಷಣೆಗೊಳಪಟ್ಟಿರುವ ದೇಶೀಯ ಸಂಸ್ಥಾನಗಳ ಮಹಾರಾಜರುಗಳನ್ನೂ, ಅಧಿಪತಿಗಳನ್ನೂ, ಶ್ರೀಮಂತರುಗಳನ್ನೂ, ನಮ್ಮ ಇಂಡಿಯಾ ಚಕ್ರಾಧಿಪತ್ಯಕ್ಕೆ ಸೇರಿದ ಸಕಲ ಸಂಸ್ಥಾನ ಪ್ರಜೆಗಳ ಪ್ರತಿನಿಧಿಗಳನ್ನೂ, ನಮ್ಮ ಸನ್ನಿಧಾನಕ್ಕೆ ಸಮಕ್ಷವಾಗಿ ಬರಮಾಡಿಕೊಳ್ಳಬೇಕೆಂದೂ ನಮಗೆ ಇಚ್ಛೆಯಾದ ಅಭಿಲಾಷೆಯನ್ನು ತಿಳಿಯಪಡಿಸಿರುವುದಕ್ಕನುಸಾರವಾಗಿ,

ಪ್ರಸ್ತುತ ಸಂದರ್ಭದಲ್ಲಿ ಈ ಆಜ್ಞಾಪತ್ರಿಕಾಮೂಲಕವಾಗಿ ಮೇಲ್ಕಂಡ ವೃತ್ತಾಂತವನ್ನು ಪ್ರಕಾಶಗೊಳಿಸಿ, ಈಗ ದಿಲ್ಲಿಯನಗರದಲ್ಲಿ ಸೇರಿರುವ ನಮ್ಮ ಸಕಲ ಅಧಿಕಾರಿಗಳಿಗೂ, ನಮ್ಮ ರಾಷ್ಟ್ರೀಯ ಮಹಾರಾಜರುಗಳಿಗೂ, ಅಧಿಪತಿಗಳಿಗೂ, ಸಮಸ್ತ ಮಹಾಜನಂಗಳಿಗೂ, ಚಕ್ರವರ್ತೀ ಸಾರ್ವಭೌಮರಾದ ನಮ್ಮ ಅಭಿವಂದನಗಳನ್ನು ತಿಳಿಸುವುದಲ್ಲದೆ ನಮ್ಮ ಭರತಖಂಡದ ರಾಜ್ಯಗಳು ನಮ್ಮ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವುವೆಂದೂ, ಅವುಗಳ ಸತ್ಸಂಪದವೂ, ಶ್ರೇಯೋಭಿವೃದ್ಧಿಯೂ ಸರ್ವದಾ ನಮ್ಮ ಆಸಕ್ತಿಗೆ ವಿಷಯವಾಗಿರುವುವೆಂದೂ ಭರವಸೆಯನ್ನು ಕೊಡುವವರಾಗಿದ್ದೇವೆ.

ನಮ್ಮ ಪ್ರಭುತ್ವದ ದ್ವಿತೀಯ ಸಂವತ್ಸರವಾದ ಸಾವಿರದ ಒಂಬೈನೂರ ಹನ್ನೊಂದನೆಯ ಡಿಸೆಂಬರ್ ಹನ್ನೆರಡನೆಯ ತಾರೀಖಿನ ದಿವಸ ದಿಲ್ಲಿಯನಗರದಲ್ಲಿ ಸೇರಿದ ನಮ್ಮ ರಾಜಕೀಯ ಸಭೆಯಲ್ಲಿ ಈ ಆಜ್ಞಾಪತ್ರಿಕೆಯು ದಯಪಾಲಿಸಲ್ಪಟ್ಟಿರುವುದು.

ಸಾರ್ವಭೌಮರವರಿಗೆ ಸರ್ವಶಕ್ತನಾದ ಭಗವಂತನು ದೀರ್ಘಾಯುವನ್ನು ಕೊಟ್ಟು ರಕ್ಷಿಸಲಿ

ವರದಾನಗಳು.

ಅನಂತರ ಈ ಕಿರೀಟಧಾರಣಮಹೋತ್ಸವದ ಸ್ಮರಣಾರ್ಥವಾಗಿ ಸಾರ್ವಭೌಮರವರು ದಯಪಾಲಿಸಿದ ವರದಾನಗಳನ್ನು ಗೌರ್ನರ್ ಜನರಲ್‌ರವರು ಚಕ್ರವರ್ತಿಯವರ ಆಜ್ಞೆಯ ಪ್ರಕಾರ ಸಭೆಯಲ್ಲೋದಿ ಹೇಳಿದರು:—ಭರತಖಂಡದಲ್ಲಿ ವಿದ್ಯಾಭ್ಯಾಸವು ಪ್ರತಿಯೊಬ್ಬರಿಗೂ ಲಭ್ಯವಾಗುವಂತೆ

ಜನಪ್ರಿಯವಾದ ವಿದ್ಯೆಗೆ ಸರ್ವತ್ರ ಪ್ರಚಾರವಾಗುವುದಕ್ಕಾಗಿ ೫೦ ಲಕ್ಷ ರೂ. ಗಳು ವಿನಿಯೋಗಿಸಲ್ಪಡುವುವು; ಮತ್ತೂ ಈಗ ಅಪ್ಪಣೆಮಾಡಲ್ಪಟ್ಟಿರುವ ೫೦ ಲಕ್ಷ ರೂ ಜತೆಗೆ ಮುಂದೆ ಇನ್ನೂ ಹೆಚ್ಚು ಹಣವನ್ನು ವಿನಿಯೋಗಿಸಬೇಕೆಂಬುದು ಸರ್ಕಾರದವರ ಅಭಿಪ್ರಾಯವಾಗಿರುತ್ತದೆ. ಭರತಖಂಡದಲ್ಲಿರುವ ಬ್ರಿಟಿಷ್ ಸೇನೆಯಲ್ಲೂ, ಇಂಡಿಯನ್ ಸೇನೆಯಲ್ಲೂ ಇರುವ ನಾನ್-ಕಮಿಷನ್ಡ್ ಆಫೀಸರುಗಳಲ್ಲೂ, ರಿಜರ್ವಿಸ್ಟುಗಳಲ್ಲೂ, ಈ ಅಧಿಕಾರಿಗಳಿಗೆ ಸರಿಸಮಾನರಾದ ರಾಯಲ್ ಇಂಡಿಯನ್ ಮ್ಯಾರಿನ್ ಅಧಿಕಾರಿಗಳಲ್ಲೂ, ಮಿಲಿಟರಿ ಶಾಖೆಯಿಂದ ಸಂಬಳವು ಕೊಡಲ್ಪಡುವ ಶಾಖೆಯಲ್ಲಿರುವ ನಾನ್-ಕಾಂಬಟೆಂಟ್ ಕೆಲಸಗಾರರಲ್ಲಿ ಸ್ಥಿರಸಂಬಳವನ್ನು ಪಡೆವರಲ್ಲೂ ತಿಂಗಳೊಂದಕ್ಕೆ ೫೦ ರೂ. ಸಂಬಳದೊಳಗಿರುವವರಿಗೆ ಅರ್ಧತಿಂಗಳ ಸಂಬಳವು ಉಚಿತವಾಗಿ ಕೊಡಲ್ಪಡುವುದು; ಬ್ರಿಟಿಷ್ ಸೈನಿಕರಂತೆ ಇಂಡಿಯನ್ ಸೈನಿಕರಲ್ಲಿ ಯೋಗ್ಯರಾದವರಿಗೆ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿಯು ಕೊಡಲ್ಪಡುವುದು; ಸಿವಿಲ್ ಶಾಖೆಯ ಕೆಲಸಗಾರರಲ್ಲಿ ತಿಂಗಳೊಂದಕ್ಕೆ ೫೦ ರೂಪಾಯಿನೊಳಗೆ ಸಂಬಳವನ್ನು ಪಡೆವರಿಗೆ ಅರ್ಧತಿಂಗಳ ಸಂಬಳವು ಉಚಿತವಾಗಿ ಕೊಡಲ್ಪಡುವುದು; ದಿವಾನ್ ಬಹದ್ದೂರ್, ಸರದಾರ್ ಬಹದ್ದೂರ್, ಖಾನ್ ಬಹದ್ದೂರ್, ರಾವ್ ಬಹದ್ದೂರ್, ಖಾನ್ ಸಾಹೇಬ್, ರಾವ್ ಸಾಹೇಬ್ ಈ ಪ್ರಶಸ್ತಿಗಳನ್ನು ಹೊಂದಿದವರಿಗೆ ಆಯಾ ಪ್ರಶಸ್ತಿಸೂಚಕವಾದ ಪದಕಗಳೂ, ಮಹಾಮಹೋಪಾಧ್ಯಾಯ ಮತ್ತೂ ಷಾಂಸಲ್-ಉಲ್-ಮ್ಯಾ ಎಂಬ ಬಹು ದೊಡ್ಡ ವಿದ್ಯಾಪ್ರಶಸ್ತಿಗಳನ್ನು ಹೊಂದಿದವರಿಗೆ ಅವರು ಭರತಖಂಡದ ಪ್ರಾಚೀನ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಮಾಡುವ ಸಹಾಯಕ್ಕಾಗಿ ವರ್ಷಾಶನವೂ ಕೊಡಲ್ಪಡುವುವು; ಸರ್ಕಾರಿ ಉದ್ಯೋಗವನ್ನು ಮಾಡಿ ಪ್ರಖ್ಯಾತಿಯನ್ನು ಪಡೆದವರಿಗೆ ಅವರ ಜೀವಾವಧಿಯವರೆಗೂ ಅಥವಾ ಅವರ ಮುಂದಣ ಒಂದು ತಲೆಯಮಾತ್ರದವರೆಗೂ ಸ್ಥಳೀಯ ಸರ್ಕಾರದವರಿಗೆ ಸೂಕ್ತತೋರಿದ ರೀತಿಯಲ್ಲಿ ಪಶ್ಚಿಮೋತ್ತರದ ಎಲ್ಲೆಯ ಪ್ರಾಂತದಲ್ಲೂ, ಬಲೂಚಿಸ್ಥಾನದಲ್ಲೂ ಕಂದಾಯವಿಲ್ಲದೆ ಭೂಮಿಯು ಕೊಡಲ್ಪಡುವುದು; ಭರತಖಂಡದ ದೇಶೀಯ ಮಹಾರಾಜರುಗಳು ತಮ್ಮ ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವಾಗ್ಗೆ ಬ್ರಿಟಿಷ್ ಸಾರ್ವಭೌಮರವರಿಗೆ ಕೊಡಬೇಕಾಗಿರುವ ನಜರನ್ನು ಇನ್ನುಮೇಲೆ ಕೊಡಬೇಕಾದುದಿಲ್ಲವು; ಕಥೆವಾಡ, ಗುಜರಾತು ಮತ್ತೂ ಮೇವಾರ ಸಂಸ್ಥಾನಗಳ ಮುಖಂಡರಿಂದ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಬೇಕಾಗಿರುವ ಅಲ್ಪಸ್ವಲ್ಪವೂ ಮನ್ನಿಸಲ್ಪಟ್ಟಿರುತ್ತದೆ; ಕಾರಾಗೃಹಗಳಲ್ಲಿ ದುರ್ನಡತೆ ಮುಂತಾದ ಅಪರಾಧಗಳಿಗಾಗಿ ಶಿಕ್ಷೆಯನ್ನನುಭವಿಸುತ್ತಿರುವವರಲ್ಲಿ ಕೆಲರು ಬಿಡಲ್ಪಡುವರು; ಮತ್ತೂ ಸಾಲಕ್ಕಾಗಿ ಕಾರಾಗೃಹಗಳಲ್ಲಿ ಬಂಧಗಳಾಗಿರುವವರಲ್ಲಿ, ಸ್ವಲ್ಪ ಸಾಲವನ್ನುಳ್ಳವರಾಗಿ ಅದನ್ನು ತೀರಿಸಲು ಶಕ್ತ್ಯವಿಲ್ಲದವರು ನಿಜವಾಗಿ ದರಿದ್ರರಾಗಿರುವವರು ಬಂಧನದಿಂದ ಬಿಡಲ್ಪಟ್ಟು ಅವರ ಸಾಲಕ್ಕಾಗಿ ಕೊಡಬೇಕಾಗಿರುವ ಹಣವು ಸರ್ಕಾರದಿಂದ ಕೊಡಲ್ಪಡುವುದು; ಈಗ ಬ್ರಿಟಿಷ್ ಸಾಮ್ರಾಜ್ಯಕ್ಕೆ ಕಲಕತ್ತಾ ಪಟ್ಟಣವು ರಾಜಧಾನಿಯಾಗಿರುವುದನ್ನು ತಪ್ಪಿಸಿ, ಪೂರ್ವದಲ್ಲಿ ರಾಜಧಾನಿಯಾಗಿದ್ದ ದಿಲ್ಲಿಯ ಪಟ್ಟಣವು ಇನ್ನುಮೇಲೆ ರಾಜಧಾನಿಯಾಗಿರಬೇಕೆಂದು ನಿರ್ಧರಿಸಲ್ಪಟ್ಟಿರುವುದಲ್ಲದೆ, ಬಂಗಾಳಿ ವಿಭಜನವು ತಪ್ಪಿಸಲ್ಪಟ್ಟು ಬಂಗಾಳಾಧಿಕಾರತ್ವಕ್ಕೆ ಒಬ್ಬ ಗೌರ್ನರನೂ, ಬಿಹಾರ್, ಚೋಟಾ ನಾಗಪುರ ಮತ್ತೂ ಒರಿಸ ಇವುಗಳಿಗೆ ಒಬ್ಬ ಲೆ॥ ಗೌರ್ನರನೂ, ಒಂದು ಕೌನ್ಸಿಲ್ ಸಭೆಯೂ, ಅಸ್ಸಾಮಿಗೆ ಒಬ್ಬ ಚೀಫ್ ಕಮಿಷನರೂ ಗೊತ್ತುಮಾಡಲ್ಪಡುವರು. ಈ ಬದಲಾವಣೆಗಳಿಂದ ಭರತಖಂಡದ ರಾಜ್ಯಾಡಳಿತವು ಇನ್ನೂ ಉತ್ತಮವಾಗಿ ನಡೆಯುವುದೆಂದೂ, ನಮ್ಮ ಪ್ರೀತಿಗೆ ಪಾತ್ರರಾದ ಪ್ರಜೆಗಳ ಸುಖಸಂಪತ್ತುಗಳು ಇನ್ನೂ ಹೆಚ್ಚಾಗಿ ಅಭಿವೃದ್ಧಿಯಾಗುವುವೆಂದೂ ಕೋರುತ್ತೇವೆ.

ಗೌ॥ ಜನರಲ್‌ರವರು ಮೇಲ್ಕಂಡ ವರದಾನಗಳನ್ನು ಸಭಿಕರಿಗೆ ತಿಳುಹಿದಮೇಲೆ ತುತ್ತೂರಿಯವರು ಮತ್ತೊಂದು ವೇಳೆ ಧ್ವನಿಯನ್ನು ಮಾಡಿದರು, ಮೇಜರ್ ಜನರಲ್ ಪೀಕರ್‌ರವರು ತಮ್ಮ ಕುದುರೆಯಮೇಲೆ ನಿಂತು ಟೊಪ್ಪಿಗೆಯನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಸಭಿಕರ ಕೂಡ ಚಕ್ರವರ್ತಿಯವರ ಹೆಸರಿನಮೇಲೆ ಮೂರಾವೃತ್ತಿ ಜಯಘೋಷವನ್ನು ಮಾಡಿದರು. ಅನಂತರ ಚಕ್ರವರ್ತಿನಿಯವರ ಹೆಸರಿನಿಂದ ಮೂರಾವೃತ್ತಿ ಜಯಘೋಷವು ಮಾಡಲ್ಪಟ್ಟಿತು. ಈ ಜಯಧ್ವನಿಯಿಂದ ವಾಯುಮಂಡಲವೆಲ್ಲವೂ ನಡುಗಿತು. ಅನಂತರ ಚಕ್ರವರ್ತಿ ದಂಪತಿಗಳು ಸಿಂಹಾಸನಗಳನ್ನು ಬಿಟ್ಟು ಉತ್ಸವದಿಂದ ದರ್ಬಾರು ಮಂಟಪಕ್ಕೆ ಚಿತ್ತೈಸಿದಮೇಲೆ ಮತ್ತೊಂದುವೇಳೆ ತುತ್ತೂರಿಗಳೂದಲ್ಪಟ್ಟುವು. ದರ್ಬಾರಿನ ಕಾರ್ಯನಿರ್ವಾಹಕನಾದ ಮರ್ಕೋಗವರು ದರ್ಬಾರು ಮುಗಿದಿತೆಂದು ಸಭಿಕರಿಗೆ ತಿಳುಹಿದರು. ವಾದ್ಯಗಾರರು ಚಕ್ರವರ್ತಿದಂಪತಿಗಳ ಶ್ರೇಯಃಪ್ರಾರ್ಥನಾ ಮಂಗಳವನ್ನು ನುಡಿಸಿದರು. ಮತ್ತೂ ನೆರದಿದ್ದ ಸಭಿಕರೆಲ್ಲರೂ ಶ್ರೇಯಃಪ್ರಾರ್ಥನೆಯನ್ನು ಮಾಡಿದರು.

ತಾ॥ ೧೨ ರ ರಾತ್ರಿ ದರ್ಬಾರ್ ಡೇರಾದಲ್ಲಿ ರಾಜಭೋಜನವಾಯಿತು. ಇದಕ್ಕೆ ಗೌರ್ನರ್ ಜನರಲ್ ದಂಪತಿಗಳೂ ಪ್ರಶಸ್ತಿಯನ್ನು ಪಡೆದ ದೊಡ್ಡಮನುಷ್ಯರುಗಳೂ ಸೇರಿ ೨೫೦೦ ಜನರ ವರೆಗೆ ಬಂದಿದ್ದರು. ಚಕ್ರವರ್ತಿದಂಪತಿಗಳ ಆರೋಗ್ಯವನ್ನು ಬಯಸಿ ಪಾನಮಾಡಬೇಕೆಂದು ಹೇಳುವಾಗ್ಗೆ ಗೌರ್ನರ್ ಜನರಲ್‌ರವರು—"ಹಿಂದಣ ಶತಮಾನಗಳಲ್ಲಿ ಭರತಖಂಡವನ್ನು ಜಯಿಸಿದಂತಹವರಲ್ಲಿ ಕೆಲರು ದೇಶವನ್ನು ನಾಶಮಾಡಿ ಹೋದರು; ಮತ್ತೆ ಕೆಲರು ಪ್ರಖ್ಯಾತವಾದ ರಾಜವಂಶಗಳನ್ನು ಸ್ಥಾಪಿಸಿದರು. ಈಗಲೂ ಇರುವ ಆ ಕಾಲದ ಸ್ಮಾರಕ ಕಾರ್ಯಗಳಿಂದ ಅವರ ಪ್ರಾಬಲ್ಯವು ವ್ಯಕ್ತವಾಗುವುದು. ಆದರೂ ಈ ದಿವಸ ಚಕ್ರವರ್ತಿದಂಪತಿಗಳಿಗೆ ಪ್ರಬಲರಾದ ಮಹಾರಾಜರುಗಳೂ, ಎಲ್ಲಾ ಜಾತಿಮತಗಳ ಪ್ರತಿನಿಧಿಗಳೂ, ಬಹಿರಂಗವಾಗಿ ಮುಜರೆಯನ್ನು ಮಾಡಿದಂತೆ ಹಿಂದೆ ಮಾಡಿದುದನ್ನು ಯಾರೂ ಅರಿಯರು ಇಂತಹ ದೊಡ್ಡದೂ, ಪ್ರಖ್ಯಾತವೂ ಆದ ಸಭೆಯು ಹಿಂದೆ ಯಾವಾಗಲೂ ಕೂಡಿರಲಿಲ್ಲವು. ಮತ್ತೂ ಚಕ್ರವರ್ತಿಯವರು ಈ ದಿವಸದ ಸಭೆಯಲ್ಲಿ ರಾಜಭಕ್ತಿಪರಾಯಣರಾದ ಸಮಸ್ತ ತರಗತಿಯ ಜನರ ಹೃದಯದಲ್ಲಿ ಸಂಪೂರ್ಣವಾಗಿ ನಾಟುವಹಾಗೆ ಅಪ್ಪಣೆಕೊಡಿಸಿದಂತೆ ಹಿಂದೆ ಯಾರೂ ಹೇಳಿರಲಿಲ್ಲವು. ತನ್ನ ನಿಜವಾದ ವಿಶ್ವಾಸವನ್ನು ಕಳೆದುಕೊಂಡು ಚರಿತ್ರೆಯಲ್ಲಿ ಉಲ್ಲೇಖವಾಗಿರುವ ವಿಷಯಗಳನ್ನೇ ವಿಶ್ವಾಸವನ್ನಾಗುಳ್ಳ ದಿಲ್ಲಿಯ ಪಟ್ಟಣವು ಈಗ ಪುನಃ ಭರತಖಂಡದ ಚಕ್ರಾಧಿಪತ್ಯದ ರಾಜಧಾನಿಯಾಗಿರುವುದು. ಈ ರಾಜಧಾನಿಯ ಬದಲಾವಣೆಯ ವಿಚಾರವು ಚಕ್ರವರ್ತಿಯವರ ಮುಖದಿಂದಲ್ಲದೆ ಮತ್ತಾರ ಮುಖದಿಂದಲಾದರೂ ಬಂದಿದ್ದಲ್ಲಿ ಭಾರತಪ್ರಜೆಗಳ ಮನಸ್ಸಿಗೆ ಹಿಡಿಯುತ್ತಿರಲಿಲ್ಲವು. ಈ ಬದಲಾವಣೆಯಿಂದ ಸರಕಾರಿಯಾಡಳಿತವು ಉತ್ತಮವಾಗುವುದೆಂದೂ, ಬ್ರಿಟಿಷ್ ಚಕ್ರಾಧಿಪತ್ಯದ ಶ್ರೇಯೋಭಿವೃದ್ಧಿಯಾಗುತ್ತದೆಂದೂ ಇಂಡ್ಯಾ ಸರಕಾರದವರು ನಂಬಿರುತ್ತಾರೆ." ಎಂದು ಭಾಷಣಮಾಡಿದರು.

ತಾ॥ ೧೩ ರ ಬೆಳಿಗ್ಗೆ ಮದ್ರಾಸಾಧಿಪತ್ಯದವರೂ, ದಿಲ್ಲಿಯ ಮ್ಯುನಿಸಿಪಾಲಿಟಿಯವರೂ ವಿಜ್ಞಾಪನಾಪತ್ರಿಕೆಗಳನ್ನೋದಿ ಒಪ್ಪಿಸಿದರು. ಮತ್ತೂ ಸೇನೆಯ ವಾಲಂಟಿಯರ್ ಅಧಿಕಾರಿಗಳೂ, ಇಂಡಿಯನ್ ಅಧಿಕಾರಿಗಳೂ ಚಕ್ರವರ್ತಿಯವರಿಗೆ ಪರಿಚಯಮಾಡಿಸಲ್ಪಟ್ಟರು. ಈ ಸಮಯದಲ್ಲಿ ಚಕ್ರವರ್ತಿನಿಯವರು ದೇಶೀಯ ಸಂಸ್ಥಾನಗಳ ಮಹಾರಾಣಿಯರು ಮತ್ತೂ ಅವರ ಪುತ್ರಿಯರುಗಳು ಸೇರಿ ೧೦೦ ಮಹಿಳೆಯರಿಗೆ ದರ್ಶನವನ್ನಿತ್ತು ವಿಜಯನಗರದ ಮಹಾರಾಣಿಯವರ ವಿಜ್ಞಾಪನೆಯನ್ನು ಕೇಳಿ ಮರ್ಯಾದಿಸಿ ಕಳುಹಿಸಿಕೊಟ್ಟರು. ಈ ಪ್ರಾತಃಕಾಲ ಬೆಳಿಗ್ಗೆ ೧೧ ಗಂಟೆಯಲ್ಲಿ ಹಿಂದೂ, ಸಿಕ್ ಮತ್ತು ಮಹಮ್ಮದೀಯರುಗಳ ಮತಸಂಬಂಧವಾದ ಉತ್ಸವಗಳು ಹೊರಟು ಸರ್ಕಾರಿ ಕೋಟೆಗೆ ಬಂದುವು. ಇವುಗಳಲ್ಲಿ ದರ್ಭಂಗಾ ಮಹಾರಾಜರವರ ಮುಖಂಡತೆಯಿಂದ ಹೊರಟ ಹಿಂದೂಗಳ ಉತ್ಸವವೇ ಬಹುದೊಡ್ಡದಾಗಿದ್ದಿತು. ಇದರಲ್ಲಿ ಮತಾಚಾರ್ಯರುಗಳಾದ ಶ್ರೀಶಂಕರಾಚಾರ್ಯರು, ರೀವಾದ ಸ್ವಾಮಿರಾಮಪ್ರಪನ್ನಾಚಾರ್ಯರು, ಆಚಾರಿ ವೈಷ್ಣವರ ಗುರುಗಳು, ಬಾಬಾನಾಥ ಅಯೋಧ್ಯದ ಮಹಂತ ರಾಮಮನೋಹರದಾಸ್‌ರವರು, ಮಹಾಮಹೋಪಾಧ್ಯಾಯರುಗಳು ಮೊದಲಾಗಿ ಪ್ರಮುಖ ಪಂಡಿತರುಗಳು; ಜಯಪುರ, ಭರತಪುರ, ನವಸಗರ ಮತ್ತೂ ಅಲ್ವಾರ ಈ ಸಂಸ್ಥಾನಗಳ ರಾಜರುಗಳು ಮೊದಲಾಗಿ ಪ್ರಮುಖರು ಭಾಗಿಗಳಾಗಿದ್ದರು. ಇವರಲ್ಲದೆ ೧೧ ಭಜನೆಯವರ ಗುಂಪುಗಳೂ, ಆನೆಗಳೂ, ವಾದ್ಯಗಾರರೂ, ಕುದುರೆಯ ಸ್ವಾರರೂ, ಸೈನಿಕರೂ ಇದ್ದರು. ಒಂದು ರಥದಲ್ಲಿ ವೀರರೂ, ಮತ್ತೊಂದು ರಥದಲ್ಲಿ ಹರಿದ್ವಾರದ ಋಷಿಕುಲದಿಂದ ಬಂದಿದ್ದ ಬ್ರಹ್ಮಚಾರಿಗಳೂ ಕುಳಿತಿದ್ದರು. ಈ ಹಿಂದೂಗಳ ಉತ್ಸವವು ಒಂದು ಮೈಲಿ ದೂರದವರೆಗಿದ್ದಿತು. ಇವರು ಚಕ್ರವರ್ತಿದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಯಮುನಾನದಿಯ ದಡದಮೇಲೆ ಜಪಹೋಮಾದಿಗಳನ್ನು ಮಾಡಿಕೊಂಡು ಉತ್ಸವದಿಂದ ಬಂದು ಸರ್ಕಾರಿ ಕೋಟೆಯ ಕಡೆಗೆ ಹೊರಟರು. ಅಲ್ಲಿ ಸರ್ ಲೂಯಿಸ್ ಡ್ಯಾನೆ ಮೊದಲಾಗಿ ಐರೋಪ್ಯಸ್ತ್ರೀಪುರುಷರಿದ್ದರು. ಮತ್ತೂ ಕಾಶಿಯ ಮಹಾರಾಜರು ಮೊದಲಾಗಿ ಕೆಲ ಮಹಾರಾಜರುಗಳೂ ಉತ್ಸವದಲ್ಲಿ ಸೇರಿದರು. ಗುಂಡುಗಳು ಹಾರಿಸಲ್ಪಟ್ಟಾಗ ಸಿಕ್ ಹಿಂದೂ ಮತ್ತೂ ಮಹಮ್ಮದೀಯರುಗಳು ತಂತಮ್ಮ ಗುರುಗಳ ಮುಖಂಡತೆಯಿಂದ ತಂತಮ್ಮ ಮತಪದ್ಧತಿಯಂತೆ ದೇವರ ಪ್ರಾರ್ಥನೆಯನ್ನು ಮಾಡಿದರು. ಮಧ್ಯಾಹ್ನದಲ್ಲಿ ಜನರ ವಿನೋದಕಾರ್ಯಗಳು ನಡೆಯುತ್ತಿರುವಾಗ್ಗೆ ಎಲ್ಲಾ ಜಾತಿಯ ಗುರುಗಳು ಶಮಂಭುರ್ಜಿನ ಕೆಳಗೆ ಕುಳಿತಿದ್ದರು. ಚಕ್ರವರ್ತಿದಂಪತಿಗಳು ಕೋಟೆಯ ಮೇಲಿನಿಂದ ಎಲ್ಲವನ್ನೂ ಪರಾಮರ್ಶಿಸುತ್ತಿದ್ದರು. ತಾ॥ ೧೪ ರ ಬೆಳಿಗ್ಗೆ ೧೦ ಗಂಟೆಯಲ್ಲಿ ಬದಲಿಕೆಸರಾಯಿ ಎಂಬ ರಣರಂಗದ ಬೈಲಿನಲ್ಲಿ ಕೂಡಿದ್ದ ೫೦,೦೦೦ ಸೈನಿಕರನ್ನು ಚಕ್ರವರ್ತಿಯವರು ಪರಾಮರ್ಶಿಸಿಕೊಂಡು ಬಂದರು. ಈ ದಿವಸ ರಾತ್ರಿ ವಿಶಾಲವಾದ ದರ್ಬಾರು ಡೇರಾದಲ್ಲಿ ಚಕ್ರವರ್ತಿಯವರು ಪ್ರಶಸ್ತಿಯನ್ನು ಪಡೆದಿರುವವರ ಅಂಗಿಗಳಿಗೆ ಪ್ರಶಸ್ತಿಯ ಸೂಚಕವಾದ ಪದಕಗಳನ್ನು ತಗಲಿಸುವಾಗ್ಗೆ, ಪ್ರತಿಯೊಬ್ಬರೂ ಚಕ್ರವರ್ತಿಯವರ ಹಸ್ತಚುಂಬನವನ್ನು ಮಾಡಿದರು. ಈ ಸಮಾರಂಭವು ನಡೆಯುತ್ತಿರುವಾಗ್ಗೆ ಚಕ್ರವರ್ತಿಯವರ ಪರಿವಾರಕ್ಕೆ ಸೇರಿದ ಲೂಕಾಸ್ ಎಂಬುವರ ಡೇರಾಕ್ಕೆ ಬೆಂಕಿಯು ಬಿದ್ದು ಅದು ಹೊತ್ತಿಕೊಂಡಿತು. ಅದರ ಪಕ್ಕದಲ್ಲಿಯೇ ಇದ್ದ ಪ್ರೈವೇಟ್‌ಸೆಕ್ರೆಟರಿಯವರ ಬಿಡಾರದಲ್ಲೂ ಕೊಂಚ ಭಾಗವು ಹೊತ್ತಿಕೊಂಡು ಕೆಲ ಕಾಗದಪತ್ರಗಳು ನಾಶವಾದುವು. ಅಷ್ಟರಲ್ಲಿ ಬೆಂಕಿಯು ಆರಿಸಲ್ಪಟ್ಟಿತು. ಕಲಕತ್ತಾ ಪಟ್ಟಣವು ಬ್ರಿಟಿಷ್ ಸಾಮ್ರಾಜ್ಯದ ರಾಜಧಾನಿಯಾಗಿರುವುದನ್ನು ತಪ್ಪಿಸಿ ಇನ್ನುಮುಂದೆ ದಿಲ್ಲಿಯ ಪಟ್ಟಣವು ರಾಜಧಾನಿಯಾಗಿರಬೇಕೆಂದು ಚಕ್ರವರ್ತಿಯವರ ಅಪ್ಪಣೆಯಾಗಿರುವುದರಿಂದ ಈಗ ದಿಲ್ಲಿಯ ದರ್ಬಾರುಮಂಟಪವೂ ಬಿಡಾರಗಳು ನಿರ್ಮಿಸಲ್ಪಟ್ಟಿರುವ ಸ್ಥಳದಲ್ಲೇ ಅಂದರೇ ೨೫ ಚದರಮೈಲಿ ವಿಸ್ತೀರ್ಣದಲ್ಲಿ ಸರ್ಕಾರಿಯ ಆಫೀಸು ಕಟ್ಟಡಗಳೂ, ಪ್ರಾಸಾದಗಳೂ ಕಟ್ಟಲ್ಪಟ್ಟು ೧೯೧೫ ನೆಯ ಡಿಸೆಂಬರ್ ತಿಂಗಳಲ್ಲಿ ರಾಜಧಾನಿಯು ಸ್ಥಾಪಿಸಲ್ಪಡಬೇಕೆಂದೂ ಅಪ್ಪಣೆಯಾಗಿರುತ್ತದೆ. ತಾ॥ ೧೫ ರ ಬೆಳಿಗ್ಗೆ ಈ ರಾಜಧಾನಿಯ ನಿರ್ಮಾಣಕ್ಕಾಗಿ ಚಕ್ರವರ್ತಿಯವರು ಅಸ್ತಿವಾರದ ಮೊದಲನೆಯ ಕಲ್ಲನ್ನಿರಿಸಿದರು; ಅನಂತರ ಚಕ್ರವರ್ತಿನಿಯವರು ೨ನೆಯ ಕಲ್ಲನ್ನು ಇರಿಸಿದರು. ಈ ಮಹೋತ್ಸವಕಾಲದಲ್ಲಿ ಗೌರ್ನರ್‌ಜನರಲ್‌ರವರು ಮಾಡಿದ ಭಾಷಣಕ್ಕೆ ಚಕ್ರವರ್ತಿಯವರು ತಕ್ಕುತ್ತರವನ್ನಿತ್ತು ರಾಜಧಾನಿಯ ಗೌರವಕ್ಕೆ ತಕ್ಕಂತೆ ಮಾರ್ಗಗಳೂ, ಸೌಧಗಳೂ ನಿರ್ಮಿಸಲ್ಪಡಬೇಕೆಂದ ಸ್ಪೃಹೆಯನ್ನು ಕೊಡಿಸಿದರು. ಚಕ್ರವರ್ತಿದಂಪತಿಗಳು ದಿಲ್ಲಿಯ ಪಟ್ಟಣಕ್ಕೆ ಆಗಮಿಸಿದ್ದುದರ ಮತ್ತೂ ಈ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿದುದರ ಸ್ಮರಣಾರ್ಥವಾಗಿ ಚಕ್ರವರ್ತಿಯವರ ಪ್ರತಿಮೆಯನ್ನು ಸ್ಥಾಪಿಸುತ್ತೇವೆಂದು ಗ್ವಾಲಿಯರ ಸಿಂಧ್ಯಾ ಮಹಾರಾಜರು ವಾಗ್ದಾನಮಾಡಿದರು. ರಾಜದೂತರು ಶಂಕುಸ್ಥಾಪನೆಯ ಮಹೋತ್ಸವವು ಚಕ್ರವರ್ತಿದಂಪತಿಗಳ ಸ್ವಹಸ್ತದಿಂದ ನಡೆಯಿಸಲ್ಪಟ್ಟಿತೆಂದು ಇಂಗ್ಲೀಷು ಮತ್ತೂ ಉರದು ಭಾಷೆಗಳಲ್ಲಿ ಕೂಗಿ ಹೇಳಿದರು. ತರುವಾಯ ಚಕ್ರವರ್ತಿದಂಪತಿಗಳು ಪೋಲೊ ಆಟದ ಬೈಲಿಗೆ ದಯಮಾಡಿಸಿ ೬೫೦೦ ಪೋಲೀಸರ ಸಮೂಹವನ್ನು ಪರಾಮರ್ಶಿಸಿಕೊಂಡು ಚಿತ್ತೈಸಿದರು. ತಾ॥ ೧೫ ರಲ್ಲಿ ಹೈದರಾಬಾದಿನ ಮಂತ್ರಿಗಳ ಡೇರಾಕ್ಕೆ ಬೆಂಕಿಯು ಬಿದ್ದು ಅದು ಸುಟ್ಟುಹೋಯಿತು. ಆದರೆ ಸಾಹಸದಿಂದ ಸರ್ಕಾರಿಯ ಕಾಗದಗಳು ಸಂರಕ್ಷಿಸಲ್ಪಟ್ಟುವು. ಕಳೆದ ತಾ॥ ೧೬ ರಲ್ಲಿ ಚಕ್ರವರ್ತಿಯವರು ಕೆಲ ಪರಿವಾರದೊಡನೆ ನೇಪಾಳಕ್ಕೆ ದಯಮಾಡಿಸಿದರು. ಮತ್ತೂ ಚಕ್ರವರ್ತಿನಿಯವರು ತಮ್ಮ ಪರಿವಾರದೊಡನೆ ಆಗ್ರಾಕ್ಕೆ ಚಿತ್ತೈಸಿದರು. ಗೌರ್ನರ್‌ಜನರಲ್‌ರವರೇ ಮೊದಲಾದ ಅಧಿಕಾರಿಗಳು ಸ್ಟೇಷನ್ನಿನಲ್ಲಿ ಚಕ್ರವರ್ತಿದಂಪತಿಗಳನ್ನು ಮರ್ಯಾದೆಯಿಂದ ಸಾಗಕಳುಹಿಸಿಕೊಟ್ಟರು.

ಚಕ್ರವರ್ತಿದಂಪತಿಗಳು ದರ್ಬಾರುಮಂಟಪವನ್ನು ಬಿಟ್ಟು ಹೊರಟಕೂಡಲೆ ಹೊರಗಡೆ ನಿಂತಿದ್ದ ಬಂಗಾಳಿಯವರ ಒಂದು ದೊಡ್ಡ ಗುಂಪು ಕಟಕಟಿಯನ್ನೆಲ್ಲ ಕಿತ್ತುಹಾಕಿ ಮಂಟಪದೊಳಗೆ ನುಗ್ಗಿಬಂದು ಚಕ್ರವರ್ತಿದಂಪತಿಗಳು ಮಂಡಿಸಿದ್ದ ಸಿಂಹಾಸನಗಳಿಗೆ ಎಲ್ಲರೂ ಒಟ್ಟುಗೂಡಿ ನಮಸ್ಕಾರವನ್ನು ಮಾಡಿದರು.

ಮೈಸೂರ್ ಸ್ಟಾರ್

೧೯೧೧ ನೆಯ ಡಿಸೆಂಬರ್ ತಾ॥ ೧೮ ನೆಯ ಸೋಮವಾರ.

ಚಕ್ರವರ್ತಿಯವರ ವರದಾನವು.

ಸಾರ್ವಭೌಮರವರು ಕಳೆದ ತಾ॥ ೧೨ ರಲ್ಲಿ ಪುರಾಣಪ್ರಸಿದ್ಧವಾದ ದಿಲ್ಲಿಯ ನಗರದಲ್ಲಿ ತಮ್ಮ ಕಿರೀಟಧಾರಣಮಹೋತ್ಸವದ ಉತ್ಕರ್ಷವನ್ನು ತಮ್ಮ ಚಕ್ರಾಧಿಪತ್ಯದ ಸಂರಕ್ಷಣೆಯಲ್ಲಿರುವ ಮಹಾರಾಜರುಗಳಿಂದಲೂ, ಪ್ರಜಾಪ್ರಮುಖರಿಂದಲೂ ಎಲ್ಲಾ ಪ್ರಾಂತಗಳ ಪ್ರತಿನಿಧಿಗಳಿಂದಲೂ ಕೂಡಿದ್ದ ಮಹಾಸಭೆಯಲ್ಲಿ ಪ್ರದರ್ಶಿಸಿ, ಆ ಕಾಲದಲ್ಲಿ ಮೃದುಮಧುರವಾಣಿಯಿಂದ ಅಪ್ಪಣೆಕೊಡಿಸಿದ ಭಾಷಣವೂ, ಮಹಾರಾಜರುಗಳು ಮೊದಲಾದವರು ಮಾಡಿದ ಮುಜರೆಯೂ ರಾಜದೂತರಿಂದ ಓದಲ್ಪಟ್ಟ ರಾಜಾಪ್ರಕಟಣ ಪತ್ರಿಕೆಯೂ ಈ ಅಭೂತಪೂರ್ವವೂ, ಅದ್ವಿತೀಯವೂ, ಚಿರಸ್ಮರಣೀಯವೂ ಆದ ಮಹೋತ್ಸವದ ಜ್ಞಾಪನಾರ್ಥವಾಗಿ ದಯಪಾಲಿಸಿದ ವರದಾನಗಳೂ ಈ ಪತ್ರಿಕೆಯ ಮತ್ತೊಂದು ಕಡೆ ಕೊಡಲ್ಪಟ್ಟಿವೆ. ಈ ದಾನಗಳೆಲ್ಲ ಭಾರತೀಯರ ಅಭಿವೃದ್ಧಿಗೆ ಮುಖ್ಯ ಸಾಧಕವಾದ ವಿದ್ಯೆಯ ಅಭಿವೃದ್ಧಿಗಾಗಿ ೫೦ ಲಕ್ಷ ರೂ. ಗಳನ್ನು ದಯಪಾಲಿಸಿರುವುದು ಬಹು ಶ್ಲಾಘನೀಯವಾಗಿರುವುದಲ್ಲದೆ, ಭಾರತಪ್ರಜೆಗಳೆಲ್ಲರೂ ವಿದ್ಯಾಸಂಪನ್ನರಾಗಿ ಅಭಿವೃದ್ಧಿಯನ್ನು ಹೊಂದಲೆಂಬ ಕಾಂಕ್ಷೆಯು ಚಕ್ರವರ್ತಿಯವರಲ್ಲಿ ಪೂರ್ಣವಾಗಿರುವುದೆಂಬುದನ್ನು ವ್ಯಕ್ತಗೊಳಿಸುತ್ತದೆ. ಉಳಿದ ವರದಾನಗಳು ಸಾಧಾರಣವಾದವುಗಳಾದರೂ ಚಕ್ರವರ್ತಿಯವರ ಉದಾರಭಾವವನ್ನು ಪ್ರದರ್ಶಿಸುತ್ತವೆ. ಇವುಗಳೆಲ್ಲ ದಿಲ್ಲಿಯ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡುವುದೂ, ಬಂಗವಿಭಜನವನ್ನು ತಪ್ಪಿಸಿದುದೂ ಭಾರತಪ್ರಜೆಗಳೆಲ್ಲರಿಗೂ ಪರಮಾನಂದಕರವಾಗಿವೆ. ಯಾಕೆಂದರೆ, ಸಾವಿರಾರು ವರ್ಷಗಳ ಹಿಂದೆ ಚಂದ್ರವಂಶದ ಚಕ್ರವರ್ತಿಗಳಿಗೂ, ನೂರಾರು ವರ್ಷಗಳ ಕೆಳಗೆ ಮೊಗಲ ಚಕ್ರವರ್ತಿಗಳಿಗೂ, ರಾಜಧಾನಿಯಾಗಿದ್ದು ಬಹು ಪ್ರಖ್ಯಾತವನ್ನು ಪಡೆದಿದ್ದ ದಿಲ್ಲಿಯ ಪಟ್ಟಣವು, ಬ್ರಿಟಿಷರ ಪ್ರಭುತ್ವವು ಭರತಖಂಡದಲ್ಲಿ ಸ್ಥಾಪಿತವಾದಮೇಲೆ, ಕಲಕತ್ತಾ ಪಟ್ಟಣವು ರಾಜಧಾನಿಯಾಗಿ ಪ್ರಾಶಸ್ತ್ಯವನ್ನು ಪಡೆದುದರಿಂದ ಮೂಲೆಗೆ ಬಿದ್ದದ್ದುದು ಈಗ ಚಕ್ರವರ್ತಿಯವರ ಪೂರ್ಣಕಟಾಕ್ಷದಿಂದ ತನ್ನ ಪೂರ್ವದ ಪ್ರಾಶಸ್ತ್ಯಕ್ಕಿಂತಲೂ ಸಾವಿರಪಾಲು ಹೆಚ್ಚಾದ ಪ್ರಾಶಸ್ತ್ಯವನ್ನು ಹೊಂದುವಂತಾಯಿತು. ಮತ್ತೂ ಲಾರ್ಡ್ ಕರ್ಜನರವರು ತಮ್ಮ ಪ್ರಭುತ್ವದಲ್ಲಿ ಬಂಗಾಳಿ ದೇಶವನ್ನು ಅಲ್ಲಿಯ ನಿವಾಸಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ವಿಭಾಗಮಾಡಿ ಬೇರೆಯನ್ನು ಪಡೆದುದರಿಂದ, ಆ ದೇಶೀಯರು ಕ್ಷುಬ್ಧರಾಗಿ ಅದನ್ನು ನಿರೋಧಿಸತೊಡಗಿದರು. ಅವರ ಈ ಪ್ರಯತ್ನದಲ್ಲಿ ಕೆಲ ತುಂಟರು ಅತ್ಯಾಚಾರಗಳನ್ನು ನಡೆಯಿಸಿ ಅರಾಜಕ ಪ್ರವರ್ತಕರೆಂಬ ಕಳಂಕವನ್ನು ತಂದುಕೊಂಡು ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾದರು. ದೂರದರ್ಶಿಗಳಾದ ಮತ್ತೂ ಸಮಸ್ತಪ್ರಜೆಗಳ ಸುಖಸಂತೋಷವೇ ತಮ್ಮ ಸುಖಸಂತೋಷವೆಂದು ತಿಳಿದುಕೊಂಡಿರುವ ಸಾರ್ವಭೌಮರವರು ಲಕ್ಷಾಂತರ ಪ್ರಜೆಗಳ ಮನಃಕ್ಲೇಶಕ್ಕೆ ಕಾರಣವಾದ ವಂಗವಿಭಜನವನ್ನು ತಪ್ಪಿಸಿದುದರಿಂದ, ಬಂಗಾಳಿದೇಶೀಯರೆಲ್ಲರೂ ಪರಮಸಂತುಷ್ಟರಾಗಿ ಚಕ್ರವರ್ತಿಯವರನ್ನು ಹಾಡಿಹರಸುತ್ತಿರುವರು. ಕಲಕತ್ತಾ ಪಟ್ಟಣವನ್ನು ತಪ್ಪಿಸಿ ದಿಲ್ಲಿಯ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡುವುದರಿಂದ ಕಲಕತ್ತಾ ಪಟ್ಟಣದ ವ್ಯಾಪಾರವೂ, ಪ್ರಾಶಸ್ತ್ಯವೂ ಕಡಿಮೆಯಾಗುತ್ತವೆಂದು ಕೆಲರು ಆಕ್ಷೇಪಿಸುತ್ತಾರೆ. ಆದರೆ ಬಂಗಾಳಿಗಳ ಪ್ರಮುಖರಾದ ಡಾಕ್ಟರ್ ರಾಸಬಿಹಾರಿಘೋಸ್‌ರವರು, ಬಾಬು ಸುರೇಂದ್ರನಾಥ ಬಾನರ್ಜಿಯವರು, ಎ. ಚೌಧುರಿಯವರು, ಬಿ. ಚಕ್ರವರ್ತಿಯವರು ಕೆ. ಬಿ. ದತ್ತರವರು, ಎ ರಸುಲ್‌ರವರು ಮೊದಲಾದವರು "ಈ ಬದಲಾವಣೆಯಿಂದ ಕಲಕತ್ತಾದ ವ್ಯಾಪಾರಕ್ಕೂ ಪ್ರಾಶಸ್ತ್ಯಕ್ಕೂ ಕೊರತೆಯುಂಟಾಗುವುದಿಲ್ಲವು. ಮತ್ತೂ ಪುರಾಣಪ್ರಸಿದ್ಧವಾದ ದಿಲ್ಲಿಯ ಪಟ್ಟಣವು ರಾಜಧಾನಿಯಾಗಿ ಮಾಡಲ್ಪಡುವುದು ಸರ್ವಸಮ್ಮತವಾಗಿದೆ." ಎಂದು ಅಭಿಪ್ರಾಯಪಟ್ಟಿರುವರಲ್ಲದೆ, ಕಳೆದ ತಾ॥ ೧೨ರಲ್ಲಿ ಕಲಕತ್ತಾದಲ್ಲಿ ಸಮಸ್ತಜನರೂ ತಂತಮ್ಮ ಗೃಹಗಳನ್ನು ಶೃಂಗರಿಸಿ ದೇವತಾರಾಧನೆಯನ್ನೂ, ಸಂಕೀರ್ತನವನ್ನೂ ಮಾಡಿ ಸಾಯಂಕಾಲದಲ್ಲಿ ದೀಪೋತ್ಸವಗಳನ್ನೂ ನಡೆಯಿಸಿ ತಮಗಳಿಗುಂಟಾಗಿರುವ ಅಪರಿಮಿತವಾದ ಸಂತೋಷವನ್ನು ಪ್ರದರ್ಶಿಸಬೇಕೆಂದು ಪ್ರಸಿದ್ಧಪಡಿಸಿರುತ್ತಾರೆ. ಕೆಲ ಜನರು ಭಾವಿಸುವಂತೆ ಈ ಬದಲಾವಣೆಯಿಂದ ಕಲಕತ್ತಾಪಟ್ಟಣದ ಸ್ಥಿತಿಯು ಕೊಂಚಕಾಲ ನಷ್ಟಕರವಾಗಿ ತೋರಿದರೂ, ಮುಂದೆ ಸರಿಹೋಗುವುದೆನ್ನುವುದರಲ್ಲಿ ಸಂದೇಹವಿಲ್ಲವು. ಆದರೆ ಇದರಿಂದ ದಿಲ್ಲಿಯ ಪಟ್ಟಣವು ಮಾತ್ರ ಬಹು ಪ್ರಾಶಸ್ತ್ಯಕ್ಕೆ ಬರುವುದಲ್ಲದೆ ಅದು ವ್ಯಾಪಾರವೂ, ಐಶ್ವರ್ಯವೂ ಅಭಿವೃದ್ಧಿಯನ್ನು ಹೊಂದುವುವೆಂದು ಖಂಡಿತವಾಗಿ ಹೇಳಬಹುದು.

ಗತಿಸಿದ ಸರ್ ಕೃಷ್ಣಮೂರ್ತಿಯವರು.

ಯಳಂದೂರ ಜಹಗೀರ್ದಾರರಾದ ಶ್ರೀಮಂತ ಸರ್. ಪಿ ಎನ್. ಕೃಷ್ಣಮೂರ್ತಿಯವರು ಕಡೆಗೂ ಗುಣವನ್ನು ಹೊಂದದೆ ಕಳೆದ ತಾ॥ ೧೧ರಲ್ಲಿ ಪರಮಪದವಿಯನ್ನು ಹೊಂದಿದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ ೫೦ ವರ್ಷಗಳ ವಯಸ್ಸಾಗಿದ್ದಿತು. ಇವರು ದಿವಾನ್ ಪೂರ್ಣಯ್ಯನವರ ಮೊಮ್ಮಕ್ಕಳು. ಇವರು ಚೀಫ್‌ಕಮಿಷನರಾಗಿದ್ದ ಬೌರಿಂಗರವರ ಮೇಲ್ವಿಚಾರಣೆಯಲ್ಲಿ ವಿದ್ಯಾಭ್ಯಾಸವನ್ನುಮಾಡಿ ಬಿ.ಎಲ್. ಪ್ರಶಸ್ತಿಯನ್ನು ಪಡೆದು ೧೮೮೦ರಲ್ಲಿ ಅ॥ ಸೂಪರಿಂಟೆಂಡೆಂಟರಾಗಿ ಮೊದಲು ಮೈಸೂರ ಸರ್ಕಾರದ ಉದ್ಯೋಗಕ್ಕೆ ಸೇರಿ ಅಲ್ಲಿಂದ ಅಭಿವೃದ್ಧಿಯನ್ನು ಹೊಂದಿ ೧೯೦೧ ರಲ್ಲಿ ದಿವಾನಪದವಿಗೆ ಬಂದು ೫ ವರ್ಷಗಳಕಾಲ ಉದ್ಯೋಗವನ್ನು ಮಾಡಿ ೧೯೦೬ ರಲ್ಲಿ ನಿವೃತ್ತಿಯನ್ನು ಹೊಂದಿದರು. ಇವರ ಮರಣದಿಂದುಂಟಾದ ದುಃಖಪ್ರದರ್ಶನಾರ್ಥವಾಗಿ ಚೀಫ್‌ಕೋರ್ಟು ಕಳೆದ ಬುಧವಾರ ಮುಚ್ಚಲ್ಪಟ್ಟಿದ್ದಲ್ಲದೆ ನಾಳೆಯ ದಿನ ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳೂ, ಪಾಠಶಾಲೆಗಳೂ ಮುಚ್ಚಲ್ಪಡುವುದಾಗಿ ಕೇಳುತ್ತೇವೆ. ದೇವರು ಶ್ರೀಮಂತರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖಶಮಾಧಾನವನ್ನೂ ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಪ್ರಶಸ್ತಿಯು.

ನಮ್ಮ ಶ್ರೀಮದ್ಯುವರಾಜ ಕಂಠೀರವ ನರಸರಾಜ ಒಡೆಯರವರಿಗೂ, ಮೈಸೂರ ರೆಸಿಡೆಂಟರಾದ ಲೆ॥ ಕರ್ನಲ್ ಡಗ್ಲಾಸ್‌ಡೊನಾಲ್ಡವರಿಗೂ ಸಿ. ಎಸ್ ಐ. ಇ. ಪ್ರಶಸ್ತಿಯೂ; ಚೀಫ್ ಕಮಿಷನರಾದ ಕರ್ನಲ್ ಡೆಸರಾಜ ಅರಸಿನವರಿಗೂ ಚೀಫ್ ಇಂಜಿನಿಯರ್ ಮ॥ ವಿಶ್ವೇಶ್ವರಯ್ಯನವರಿಗೂ ಹುಜೂರು ಮಿಲ್ಟರಿ ಸೆಕ್ರೆಟರಿ ಲೆ॥ ಕರ್ನಲ್ ಜೋನ್ಸ್‌ರವರಿಗೂ ಸಿ. ಐ. ಇ., ಪ್ರಶಸ್ತಿಯೂ; ೧ನೆಯ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣ ಶೆಟ್ಟರಿಗೆ ದಿವಾನ್‌ಬಹದ್ದೂರ್ ಪ್ರಶಸ್ತಿಯೂ, ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರ್ ಅಮೃತಂ ಮೊದಲಿಯಾರರಿಗೆ ರಾವ್‌ಬಹದ್ದೂರ್ ಪ್ರಶಸ್ತಿಯೂ, ಕೋಲಾರದ ಗಣಿಗಳ ಆಸ್ಪತ್ರೆಯ ಡಾ॥ ಟಿ. ಜೆ. ಒಡಾಲ್‌ರವರಿಗೆ ಕೈಸರಿಹಿಂದ್ ಎಂಬ ಬೆಳ್ಳಿಯ ಪದಕವೂ ಚಕ್ರವರ್ತಿನಿಯವರಿಂದ ಲಭ್ಯವಾಗಿರುತ್ತವೆಂದು ತಿಳುಹಲು ಪರಮಾನಂದವಾಗುತ್ತದೆ. ರಾಜಧಾನಿಯ ನಿವಾಸಿಗಳು ಕಳೆದ ಶನಿವಾರ ಸಭೆಸೇರಿದ್ದು ಯುವರಾಜರಿಗೆ ಪ್ರಶಸ್ತಿಯು ಲಭ್ಯವಾದುದಕ್ಕಾಗಿ ತಮ್ಮಗಳ ಅಭಿನಂದನವನ್ನು ಯುವರಾಜರಿಗೆ ತಂತಿಯಮೂಲಕ ತಿಳುಹಿಸಿದರು

ಕಿರೀಟಧಾರಣ ಮಹೋತ್ಸವ ಸಂಬಂಧವಾಗಿ ಮೈಸೂರ ಸೀಮೆಯ ಪ್ರತಿಯೊಂದು ಭಾಗದಲ್ಲೂ, ಇತರ ಕಡೆಗಳೂ ನಡೆದಿರುವ ಉತ್ಸವಗಳನ್ನು ಕುರಿತು ನಮ್ಮಲ್ಲಿಗೆ ಬಂದಿರುವ ಲೇಖನಗಳಲ್ಲಿ ಸ್ಥಳಸಂಕೋಚದಿಂದ ಈಗ ಪ್ರಕಟವಾಗದೆ ಉಳಿದಿರುವವುಗಳೆಲ್ಲವೂ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುವು.

ನೋಟೀಸ್.

ದನಗಳ ಪ್ರದರ್ಶನ.

೧೯೧೨ ನೆಯ ಇಸವಿ ಜನವರಿ ೪ ಮತ್ತು ೫ ನೆಯ ತಾರೀಖು ಗುರುವಾರ ಮತ್ತು ಶುಕ್ರವಾರಗಳಲ್ಲಿ ಹಾಸನದ ಜನರಲ್ಲಿ ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಬಾಜೂ ಮೈದಾನದಲ್ಲಿ ದನಗಳ ಪ್ರದರ್ಶನ ನಡೆಯುತ್ತೆ. ಆ ಪ್ರದರ್ಶನದಲ್ಲಿ ದನ, ಎಮ್ಮೆ, ಕೋಣ, ಆಡು, ಕುರಿ, ಕುದುರೆ ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹೆ ಜಾನುವಾರುಗಳಿಗೂ ಇನಾಂ ಕೊಡಲ್ಪಡುತ್ತೆ. ಬರುವ ಜನವರಿ ೩ನೆಯ ತಾರೀಖಿಗೆ ಮುಂಚೆಯೆ ಪ್ರದರ್ಶಿಸತಕ್ಕ ಜಾನುವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು. ಹೆಚ್ಚು ಸಂಗತಿಯನ್ನು ಹಾಸನದ ದನಗಳ ಪ್ರದರ್ಶನದ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು. ಎಂ. ಶ್ರೀನಿವಾಸಮೂರ್ತಿ

ಆನರರಿ ಸೆಕ್ರೆಟರಿ,
ಹಾಸನದ ದನಗಳ ಪ್ರದರ್ಶನದ ಕಮಿಟಿ

ಪತ್ರವ್ಯವಹಾರ.

ಕಿರೀಟಧಾರಣಮಹೋತ್ಸವಸಂಬಂಧವಾಗಿ ನಡೆದ ಮಹೋತ್ಸವಗಳು.

ಸಕಲೇಶಪುರ.

ಇದೇ ಡಿಸೆಂಬರ್ ತಿಂಗಳು ತಾ॥ ೧೨ರಲ್ಲಿ ದೆಹಲಿಪಟ್ಟಣದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರಾದ ೫ನೆಯ ಜಾರ್ಜ್ ಪ್ರಭುಗಳಿಗೂ, ಶ್ರೀಮತಿ ಮೇರಿ ಮಹಾರಾಜ್ಞಿಯವರಿಗೂ ನಡೆದ ಕಿರೀಟಧಾರಣ ಮಹೋತ್ಸವಾಂಗವಾಗಿ ಮಂಜರಾಬಾದು ತಾಲ್ಲೋಕು ನಿವಾಸಿಗಳು ತಾಲ್ಲೋಕು ಹೆಡ್‌ಕ್ವಾರ್ಟರಾದ ಸಕಲೇಶಪುರದಲ್ಲಿ ಸೇರಿ ತಮ್ಮ ರಾಜಭಕ್ತಿವಿಶ್ವಾಸಗಳನ್ನು ತೋರ್ಪಡಿಸಿದ ವಿಷಯವು ಸ್ತೋತ್ರಾರ್ಹವಾಗಿದೆ. ಮೇಲ್ಕಂಡ ಸಭೆಯು ಸರ್ವಾಲಂಕಾರಗಳಿಂದ ಶೋಭಾಯಮಾನವಾದ ಚಪ್ಪರದಿಂದ ಕೂಡಿದಟ್ರಾವಲರ್ಸ್ ಬಂಗ್ಲೆಯಲ್ಲಿ ಸೇರಿದ್ದಿತು. ಮೆ॥ ಗ್ರಹಾಂ ಅಂಡರ್‌ಸನ್, ಸಿ. ಐ. ಇ.. ಯವರೇ ಆದಿಯಾಗಿ ಅನೇಕ ಜನ ಯೂರೋಪಿಯನ್ ಕಾಫಿಪ್ಲಾಂಟರುಗಳೂ, ಮತ್ತು ದೊರೆಸಾನಿಯವರೂ, ಮೊಖ್ತೇಸರ್ ಪಟೇಲರೇ ಆದಿಯಾಗಿ ಅನೇಕ ಜನ ದೊಡ್ಡ ದೊಡ್ಡ ಗೌಡರುಗಳೂ ಮತ್ತು ನೇಟಿವ್ ಪ್ಲಾಂಟರುಗಳೂ, ಸಾಹುಕಾರರೂ, ತಾಲ್ಲೋಕಿನ ಆಫೀಸರುಗಳೂ, ಮತ್ತು ನೌಕರಮಾನಿರುಗಳೂ ಸೇರಿ ಸುಮಾರು ೫೦೦ ಜನಗಳವರೆಗೆ ಸಭೆಯನ್ನಲಂಕರಿಸಿದ್ದರು. ದರ್ಬಾರುಕಾಲಕ್ಕೆ ಸರಿಯಾಗಿ ಅಂದರೆ ಮಧ್ಯಾಹ್ನ ೧೨ ಗಂಟೆಯ ಹೊತ್ತಿಗೆ ಇಲ್ಲಿನ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಮ॥ ರಾ॥ ಯನ್. ವೆಂಕಟಾಚಾರ್ಯರು ಸ್ಕೂಲಿನ ಬಾಲಕ ಬಾಲಕಿಯರಿಂದ ಚಕ್ರವರ್ತಿ ಮತ್ತು ಚಕ್ರವರ್ತಿನಿಯರ ಭಾವಚಿತ್ರವನ್ನು ಮೆರವಣಿಗೆಮಾಡಿಕೊಂಡು ಸಭಾಮಂಟಪಕ್ಕೆ ಬಂದಕೂಡಲೆ ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನಾ ಸೂಚಕವಾದ ಗಾನವು ನಡೆಸಲ್ಪಟ್ಟಿತು. ಅನಂತರ ಅಗ್ರಾಸನಾಧಿಪತಿಗಳಾದ ಇಲ್ಲಿನ ಸಬ್‌ಡಿವಿಜನ್ ಆಫೀಸರ್ ಮೆ॥ ಸಿ. ನಾರಾಯಣರಾವ್, ಬಿ. ಎ, ಬಿ. ಎಲ್, ಯವರಿಂದ ಚಕ್ರವರ್ತಿ ಸಾರ್ವಭೌಮರ ಆಜ್ಞಾಪತ್ರಿಕೆಯು ಮೃದುಮಧುರವಾದ ಸ್ವರದಿಂದ ಸರ್ವರಿಗೂ ತಿಳಿಯುವಂತೆ ಓದಲ್ಪಟ್ಟಕೂಡಲೆ ಬಾಲಕ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನೆಯು ಪುನಃ ನಡೆಸಲ್ಪಟ್ಟಿತು ಮತ್ತು ಸಂತೋಷಸೂಚಕವಾದ ವಾದ್ಯಗಳು ಮೊಳಗಿದವು. ಇದಾದ ಕೂಡಲೆ ಗೌರವಾರ್ಥವಾದ ಸೂಲೋಂಟು ಗುಂಡುಗಳು ಹಾರಿಸಲ್ಪಟ್ಟವು. ನಮ್ಮ ಚಕ್ರವರ್ತಿ ಸಾರ್ವಭೌಮರು ಪಟ್ಟಾಭಿಷಿಕ್ತರಾದಕೂಡಲೆ ಅಪಾರವಾದ ತಮ್ಮ ಇತರ ದೇಶಗಳನ್ನೆಲ್ಲಾ ಬಿಟ್ಟು ಇಂಡಿಯಾ ದೇಶಕ್ಕೆ ಮಾತ್ರ ತಮ್ಮ ಭೇಟಿಯನ್ನು ದಯಪಾಲಿಸಿದುದರಿಂದ ಅವರಿಗೆ ನಮ್ಮ ದೇಶದಮೇಲೂ ಇಲ್ಲಿನ ಪ್ರಜೆಗಳಮೇಲೂ ಇರುವ ಅಭಿಮಾನವು ಎಷ್ಟೆಂಬುದನ್ನು ತೋರ್ಪಡಿಸುವಂತೆ ಮೆ॥ ಗ್ರಹಾಂ ಅಂಡರ್‌ಸನ್, ಸಿ. ಐ. ಇ. ಯವರು ಕೊಟ್ಟ ಇಂಗ್ಲಿಷ್ ಭಾಷಣವನ್ನು ತಾ॥ ಅಮಲ್ದಾರರಾದ ಮೆ॥ ಯಂ. ನರಸಿಂಹಯ್ಯನವರು ಕನ್ನಡಕ್ಕೆ ಭಾಷಾಂತರಮಾಡಿ ಗಂಭೀರವಾದ ಸ್ವರದಿಂದಲೂ ಸರ್ವಜನಾಹ್ಲಾದಕರವಾಗಿರುವಂತೆಯೂ ವಿವರಿಸಿದರು. ಇದಾದ ಕೂಡಲೆ ಅಗ್ರಾಸನಾಧಿಪತಿಗಳಿಂದ ಇಲ್ಲಿನ ಸ್ಕೂಲುಗಳ ಬಾಲಕರಿಗೆ ಮೆಡಿಲ್‌ಗಳೂ ಬಾಲಕಿಯರಿಗೆ ಕರವಸ್ತ್ರಗಳೂ ಮತ್ತು ಬಿಸ್ಕತ್ತುಗಳೂ ಕೊಡಲ್ಪಟ್ಟನಂತರ ಅಲ್ಲಿ ಸೇರಿದ್ದ ಸುಮಾರು ೫೦೦ ಜನ ಬಡಬಗ್ಗರಿಗೆ ಅನ್ನವಸ್ತ್ರಗಳು ದಾನಮಾಡಲ್ಪಟ್ಟವು. ಎ. ವಿ. ಸ್ಕೂಲ್ ಹೆಡ್ಮಾಸ್ಟರವರಿಂದ ಮೊದಲೇ ಏರ್ಪಡಿಸಲ್ಪಟ್ಟಿದ್ದಂತೆ ಹುಡುಗರಿಗೆಲ್ಲಾ ವಿನೋದಕರವಾದ ಆಟಪಂದ್ಯಗಳು ನೆರವೇರಿದಮೇಲೆ ಸುಮಾರು ೪॥ ಗಂಟೆಯಿಂದ ಬಾಲಕ ಬಾಲಕಿಯರಿಗೂ ಸಭೆಯನ್ನಲಂಕರಿಸಿದ್ದ ಮಹನೀಯರುಗಳಿಗೂ ಅಲ್ಲದೆ ಬೇಕಾದವರೆಲ್ಲರಿಗೂ ಯಥೇಚ್ಛವಾಗಿ ಫಲಾಹಾರಸಾಮಗ್ರಿಗಳು ವಿನಿಯೋಗಿಸಲ್ಪಟ್ಟವು. ಇದಕ್ಕಾಗಿ ಪ್ರತಿಮತದವರಿಗೂ ಬೇರೆ ಬೇರೆ ಮಾಡಲ್ಪಟ್ಟಿದ್ದ ಏರ್ಪಾಡುಗಳೂ, ಅವು ಅತ್ಯಂತ ವಿಜೃಂಭಣೆಯಿಂದ ನಡೆದ ವಿಷಯವೂ ಎಷ್ಟು ವರ್ಣಿಸಿದರೂ ಸ್ವಲ್ಪವೇ ಆಗಿವೆ. ಈ ಉತ್ಸವದ ಜ್ಞಾಪನಾರ್ಥವಾಗಿ ಇಲ್ಲಿನ ಮೊಖ್ತೇಸರ್ ಪಟೇಲ್ ಮ॥ ರಾ॥ ಮಲ್ಲೇಗೌಡರೂ ಮತ್ತು ಬೆಕ್ಕೂರು ಮಂಡೇಪಟೇಲ್ ಮ॥ ರಾ॥ ದ್ಯಾವಪ್ಪಗೌಡರೂ ಒಂದು ರೀಡಿಂಗ್ ರೂಮನ್ನು ಕಟ್ಟಿಸಿಕೊಡುವುದಾಗಿ ಹೇಳಿಕೊಂಡಿದ್ದ ಮೇರೆಗೆ ಸಭೆಯವರೆಲ್ಲರೂ ಇದಕ್ಕಾಗಿ ಗೊತ್ತುಮಾಡಲ್ಪಟ್ಟಿದ್ದ ಮುನಿಸಿಫರ್‌ಖಾನೆಯ ಹತ್ತಿರಕ್ಕೆ ದಯಮಾಡಿಸಿದರು. ಈ ಸ್ಥಳದಲ್ಲಿ ಮುಖ್ಯರಾಗಿಯೂ, ವಯೋವೃದ್ಧರಾಗಿಯೂ, ಜ್ಞಾನವೃದ್ಧರಾಗಿಯೂ ಇರುವ ಮ॥ ರಾ॥ ಮಳಲಿ ಕಾಳಪ್ಪನವರು ಇದಕ್ಕೆ ಅಸ್ತಿವಾರವನ್ನು ಹಾಕಬೇಕೆಂದು ಮೇಲ್ಕಂಡ ಮಹನೀಯರುಗಳಿಂದ ಪ್ರಾರ್ಥಿತರಾಗಿ ರೀಡಿಂಗ್‌ರೂಮಿನ ಪ್ರಯೋಜನಗಳನ್ನೂ ಇಂತಹ ಸರ್ವಜನೋಪಯೋಗವಾದ ಕೆಲಸದಲ್ಲಿ ಪ್ರವೃತ್ತರಾಗಿರುವ ಮ॥ ರಾ॥ ಗಳಾದ ಮಲ್ಲೇಗೌಡರ ಮತ್ತು ದ್ಯಾವಪ್ಪಗೌಡರ ಔದಾರ್ಯವನ್ನೂ ಕುರಿತು ಅಲ್ಲಿ ಸೇರಿದ್ದವರೆಲ್ಲರಿಗೂ ಅತ್ಯಾನಂದವುಂಟಾಗುವಂತೆ ಸಂಭಾಷಿಸಿ ಅಸ್ತಿಭಾರವನ್ನು ಹಾಕಿದರು. ಕೂಡಲೆ ಅಲ್ಲಿಗೆ ಬಂದಿದ್ದ ಸರ್ವರಿಗೂ ತಾಂಬೂಲಾದಿಗಳು ಕೊಡಲ್ಪಟ್ಟವು. ಇಲ್ಲಿರುವ ಇನ್ನೂ ಅನೇಕಜನ ಶ್ರೀಮಂತರೂ ಸಹ ಇಂತಹ ಲೋಕೋಪಕಾರವಾದ ಕಾರ್ಯಗಳಲ್ಲಿ ಪ್ರವೃತ್ತರಾಗಿ ಕೀರ್ತಿಪುಣ್ಯಗಳನ್ನು ಹೊಂದುವುದಕ್ಕೆ ತಕ್ಕ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಉದಾರಿಗಳಾದ ಮ॥ ರಾ॥ ಮಲ್ಲೇಗೌಡರ ಮತ್ತೂ ಮ॥ ರಾ॥ ದ್ಯಾವಪ್ಪಗೌಡರ ಈ ಧರ್ಮ ಕೆಲಸಗಳು ಚಿರಸ್ಮರಣೀಯವೂ, ಶ್ರೀಮಂತರಿಗೆ ತಕ್ಕ ಲಕ್ಷಣವೂ ಅಲ್ಲವೆ? ಈ ಕೆಲಸಗಳು ಪೂರೈಸಿದಕೂಡಲೆ ಸರ್ವರೂ ವಾಪಸು ಬಂಗಲೆಗೆ ದಯಮಾಡಿಸಿ ಅಲ್ಲಿ ನಡೆದ ಸುಗ್ಗಿಕುಣಿತವೇ ಮೊದಲಾದ ವಿನೋದಗಳನ್ನು ಪರಾಂಬರಿಸಿದನಂತರ ಆಟಗಳಲ್ಲಿ ಗೆದ್ದ ಬಾಲಕರಿಗೆ ಅಗ್ರಾಸನಾಧಿಪತಿಗಳಿಂದ ಬಹುಮಾನಗಳು ಕೊಡಲ್ಪಟ್ಟಕೂಡಲೆ ಬಾಣಬಿರುಸುಗಳ ವಿನೋದವು ಸುಮಾರು ೯॥ ಗಂಟೆಯವರೆಗೂ ಜರುಗಿತು. ಅನಂತರ ಪಟ್ಟಣದ ಬೀದಿಗಳ ಎರಡು ಕಡೆಗಳಲ್ಲೂ ಹೊತ್ತಿಸಲ್ಪಟ್ಟಿದ್ದ ದೀಪಾವಳಿಗಳನ್ನು ಪರಾಂಬರಿಸುತ್ತಾ ಸಭಾಧ್ಯಕ್ಷರೂ ಅಮಲ್ದಾರರೂ ಡಾಕ್ಟರ್‌ಸಾಹೇಬರೂ ಮತ್ತು ಸ್ಥಳೀಯ ಇತರ ದೊಡ್ಡ ಮನುಷ್ಯರೂ ಸಹ ಬರುತ್ತಾ ದಾರಿಯಲ್ಲಿ ಇಲ್ಲಿನ ಎರಡು ಮಸೀದಿಗಳಿಗೂ ದಯಮಾಡಿಸಿ ಅವರಿಂದ ಓದಲ್ಪಟ್ಟ ಶ್ರೇಯಃಪ್ರಾರ್ಥನೆಗಳನ್ನು ಕೇಳಿಕೊಂಡು ಸನ್ಮಾನಿತರಾಗಿ ಹೊರಟು ದೇವಸ್ಥಾನಕ್ಕೆ ಹೋಗಿ ದೇವರುಗಳ ಉತ್ಸವಗಳನ್ನು ಅತಿ ವಿಜೃಂಭಣೆಯಿಂದ ಆಗಮಾಡಿಸಿ ಸುಮಾರು ೧೦ ಗಂಟೆಗೆ ಮನೆಗೆ ದಯಮಾಡಿಸಿದರು.

ಕಡೂರು ತಾ॥ ಹೊಗರೇಹಳ್ಳಿ.

ಈ ಊರಲ್ಲಿ ಇದೇ ಡಿಸೆಂಬರ್ ತಾ॥ ೧೨ ನೆಯ ಮಂಗಳವಾರದ ದಿವಸ ಇಂಡಿಯಾ ಚಕ್ರವರ್ತಿ ಸಾರ್ವಭೌಮರಾದ ಶ್ರೀ ಜಾರ್ಜ್ ಮಹಾಪ್ರಭುಗಳವರ ಮತ್ತೂ ಮೇರಿ ಮಹಾರಾಜ್ಞಿಯವರ ಕಿರೀಟಧಾರಣ ಮಹೋತ್ಸವವನ್ನು ಈ ಗ್ರಾಮದಲ್ಲಿ ಜರುಗಿಸಲು ಪಟೇಲ್ ಮಲ್ಲೇಗೌಡರು, ಪಿರುಮತ್ತಿಗೌಡರು ಮುಂತಾದ ಪ್ರಮುಖರು ಸೇರಿ ಗ್ರಾಮಸ್ಥರ ಚಂದಾದ್ರವ್ಯಸಹಾಯದಿಂದ ಈ ಊರಿನ ಸ್ಕೂಲಿನಲ್ಲಿ ಕ್ರಮವಾದ ದರ್ಬಾರನ್ನು ನಡೆಯಿಸಿದರು ಅಗ ಚಕ್ರವರ್ತಿಗಳವರ ಪಟವನ್ನು ಉನ್ನತಾಸನದಲ್ಲಿ ಪುಷ್ಪಮಾಲಿಕೆಗಳಿಂದ ಶೃಂಗರಿಸಿ, ಇಂಗ್ಲೀಷ್ ರಾಜ್ಯಭಾರದಿಂದ ನಮ್ಮ ಭರತಖಂಡಕ್ಕೆ ಉಂಟಾಗಿರುವ ಪ್ರಯೋಜನಗಳನ್ನು ಸವಿಸ್ತಾರವಾಗಿ ಉಪನ್ಯಾಸಮೂಲಕ ಸಭಿಕರಿಗೆ ಸ್ಕೂಲ್ಮಾಸ್ಟರ್ ಹೆಚ್.

ಬಳವಸ್ವಾಗವರಿಂದ ತಿಳಿಸಲ್ಪಟ್ಟಿತು. ಮತ್ತೂ, ಸಾಯಂಕಾಲ ೪ ಗಂಟೆಗೆ ಸ್ಕೂಲ್ ವಿದ್ಯಾರ್ಥಿಗಳಿಂದ ಆಟಗಳನ್ನಾಡಿಸಿ ಅವರುಗಳಿಗೆ ತಿಂಡಿಯನ್ನು ಕೊಡುವುದು ಮೊದಲಾದ ವಿನೋದಗಳು ಜರುಗಿದುವು ಸಾಯಂಕಾಲದಲ್ಲಿ ದೇವರುಗಳ ಉತ್ಸವಗಳೂ, ದೀಪಾರಾಧನೆಯೂ ಆನಂದಕರವಾಗಿ ನಡೆಸಲ್ಪಟ್ಟುವು ಮತ್ತೂ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯೂ ಮಾಡಲ್ಪಟ್ಟಿತು. ಈ ಗ್ರಾಮದ ಪ್ರಜೆಗಳು ರಾಜಭಕ್ತಿನಿಷ್ಠರಾಗಿ ಸದರಿ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಯಿಸಿರುತ್ತಾರೆ.

ವಿ. ರಂಗಣ್ಣ.

ಕ್ಯಾತನಹಳ್ಳಿ.

ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಗೌರ್ನಮೆಂಟು ಸ್ಕೂಲಿನಲ್ಲಿ ತಾ|| ೧೨ ರಲ್ಲಿ ಘನವನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ದಿಲ್ಲಿಯ ದರ್ಬಾರು ಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆ ಕಾಲದಲ್ಲಿ ಸ್ಕೂಲ್ ಕಮಿಟಿ ಮೆಂಬರುಗಳಾದ ಮ|| ಶ್ರೀಕಂಠಯ್ಯನವರು ವೆಂಕಟರಮಣಯ್ಯನವರು ಶಾ|| ವೆಂಕಟನಾರಣಪ್ಪನವರು ಮಲ್ಲಣ್ಣನವರು ನಂಜುಂಡೇಗೌಡರು, ಪಟೇಲ್ ಜಟ್ಟೇಗೌಡರು ಮತ್ತು ಯೂನಿಯನ್ ಮೆಂಬರುಗಳಾದ ನಾಡಿಗಗೌಡ ಚಿಕ್ಕದ್ಯಾವೇಗೌಡರೇ ಮೊದಲಾದ ಅನೇಕ ಮಹನೀಯರುಗಳು ಸಭಾಮಂಟಪವನ್ನು ಅಲಂಕರಿಸಿದ್ದರು. ಸ್ಕೂಲು ವಿದ್ಯಾರ್ಥಿಗಳು ಸುಮಾರು ೧೨೦ ರ ವರೆಗೆ ಹಾಜರಾಗಿದ್ದರು. ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಭಾವಚಿತ್ರವನ್ನು ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ಭಾವ ಚಿತ್ರಗಳನ್ನು ಪುಷ್ಪಗಳ ಮಂಟಪದಲ್ಲಿ ಶ್ರೇಷ್ಠವಾದ ಪೀಠದ ಮೇಲೆ ಪ್ರತಿಷ್ಠಿಸಲ್ಪಟ್ಟು, ಮೊದಲು ದೇವರ ಪ್ರಾರ್ಥನೆಯನ್ನು ಬಾಲಕರಿಂದ ಹೇಳಿಸಿ ನಂತರ ಚಕ್ರವರ್ತಿಯವರ ಗುಣಕಥನಗಳನ್ನು ಸ್ಕೂಲ್ ಹೆಡ್ಮಾಸ್ಟರ್ ತಾತೈಯಂಗಾರ್ರು ಸಭಾಸದರಿಗೆ ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅನಂತರ ಮಂಗಳಗಳನ್ನು ಬಾಲಕರಿಂದ ಹಾಡಿಸಿ ಸಮಸ್ತರೂ ಜಯಘೋಷದೊಡನೆ ಶ್ರೀಮದಿಂಡಿಯಾ ಚಕ್ರವರ್ತಿಯವರಿಗೂ, ಚಕ್ರವರ್ತಿನಿಯವರಿಗೂ, ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ ಭಗವಂತನು ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಿ ಕಾಪಾಡಬೇಕಾಗಿ ಪ್ರಾರ್ಥಿಸಿ ಸಭೆಯಲ್ಲಿ ನೆರೆದಿದ್ದವರಿಗೆಲ್ಲಾ ಗಂಧ ಪುಷ್ಪತಾಂಬೂಲಗಳನ್ನು ವಿದ್ಯಾರ್ಥಿಗಳಿಗೆ ಸಕ್ಕರೆ ಹಣ್ಣುಗಳನ್ನು ಹಂಚಿ ಸಭೆಯನ್ನು ಮುಕ್ತಾಯಮಾಡಿದರು. ರಾತ್ರಿ ಸ್ಕೂಲ್ ಕಟ್ಟಡದಲ್ಲಿ ದೀಪೋತ್ಸವವು ನೆರವೇರಿಸಲ್ಪಟ್ಟವು ಮತ್ತು ಈ ಗ್ರಾಮದಲ್ಲಿರುವ ಪಂಚಮರ ಸ್ಕೂಲ್ ಬಾಲಕರಿಗೂ ಸಕ್ಕರೆ ಮುಂತಾದವುಗಳನ್ನು ಹಂಚಿದರು. ಮಲ್ಲಣ್ಣ.

ಬೆಂಗಳೂರ ತೋಟದಪ್ಪನವರ ಸತ್ರ.

ಬೆಂಗಳೂರ ವೀರಶೈವ ಮಹಾಜನಂಗಳು ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ೧೨ ನೆಯ ತಾರೀಖಿನ ದಿನ ಸಭೆಗೂಡಿ ಶ್ರೀಮದಿಂಡಿಯಾ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವದ ಸಂತೋಷ ಪ್ರದರ್ಶನಾರ್ಥವಾಗಿ ದೊಡ್ಡಬಳ್ಳಾಪುರದ ವೇ|| ಶಿವದೇವಶಾಸ್ತ್ರಿಗಳವರಿಂದ ಕಿರಾತಾರ್ಜುನೀಯ ವೆಂಬ ಶಿವಕಥಾ ಕಾಲಕ್ಷೇಪವನ್ನು ಮಾಡಿಸಿದರು ಆಗ ಬಹಳ ಮಂದಿ ವೀರಶೈವರು ಮತ್ತು ಇತರರೂ ಕೂಡ ನೆರೆದಿದ್ದರು ಬ್ರಿಟಿಷ್ ಪ್ರಭುಗಳ ಆಳ್ವಿಕೆಯಲ್ಲಿ ರಾಜ್ಯದಲ್ಲೆಲ್ಲಾ ಅಪರಿಮಿತವಾದ ಶಾಂತತೆಯುಂಟಾಗಿ ಎಲ್ಲಾ ಜಾತಿಯ ಪ್ರಜೆಗಳಲ್ಲಿಯೂ ವಿದ್ಯಾಭಿವೃದ್ಧಿಯಾಗಿ ಸಕಲರೂ ಸೌಖ್ಯವನ್ನು ಅನುಭವಿಸುತ್ತಿದ್ದರೆಂಬುದಕ್ಕೆ ಪ್ರಸಕ್ತವಿಷಯವೇ ದೃಷ್ಟಾಂತವಾಗಿದೆ ಮೇಲೆಕಂಡ ವೇ|| ಶಿವದೇವ ಶಾಸ್ತ್ರಿಗಳವರಿಗೆ ಅವರ ವಿದ್ವತ್ತಿಗೋಸ್ಕರ ಪ್ರೋತ್ಸಾಹ ರೂಪವಾಗಿ ವೀರಶೈವರೆಲ್ಲರೂ ಒಂದು "ಮೆಡಲ್" ಬಂಗಾರದ ಪದಕವನ್ನು ಸಮರ್ಪಿಸಿದರು. ಈ ಪದಕವನ್ನು ಆ ದಿವಸ ನೆರೆದಿದ್ದ ಮಾಹೇಶ್ವರರಲ್ಲೊಬ್ಬರಾದ ಗುರುಪಣ್ಣದೇವರ ಮಠದ ಶ್ರೀ ಶಾ|| ನಂಜುಂಡ ಸ್ವಾಮಿಗಳವರಿಂದ ಆಶೀರ್ವಾದ ಪೂರ್ವಕವಾಗಿ ಮೇಲೆಹೇಳಿದ ವೇ|| ಶಿವದೇವಶಾಸ್ತ್ರಿಗಳ ಕೊರಳಿಗೆ ಹಾಕಿಸಿದರು. ತದನಂತರ ಚಕ್ರವರ್ತಿಗಳ ಕಿರೀಟಧಾರಣ ವಿಷಯದಲ್ಲಿ ಉಪನ್ಯಾಸಗಳು ನಡೆಸಲ್ಪಟ್ಟವು. ಆ ವೇಳೆ ಚಕ್ರವರ್ತಿಗಳವರಿಂದ ೧ನೆ ಕೌನ್ಸಿಲರವರಾದ ಮ|| ಶ್ರೀ ಪಿ. ಪುಟ್ಟಣ್ಣಶೆಟ್ಟರವರಿಗೆ "ದಿವಾನ್ ಬಹದ್ದೂರ್" ಎಂಬ ಉತ್ಕೃಷ್ಟವಾದ ಪ್ರಶಸ್ತಿಯು ಕೊಡಲ್ಪಟ್ಟ ಸಂಗತಿಯು ಹೇಳಲ್ಪಟ್ಟಿತು. ಇದನ್ನು ಕೇಳಿ ನೆರೆದಿದ್ದ ಮಹಾಜನಂಗಳೆಲ್ಲರೂ ಪರಮಾನಂದವನ್ನು ಹೊಂದಿ ಕರತಾಡನಪೂರ್ವಕವಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಈ ರೀತಿಯಾದ ತಮ್ಮ ಸಂತೋಷವನ್ನು ತಂತೀ ಮೂಲಕ ಮ|| ಶ್ರೀ ಪಿ. ಪುಟ್ಟಣ್ಣಶೆಟ್ಟರಿಗೆ ತಿಳಿಸಬೇಕೆಂದು ನಿರ್ಧರಿಸಿ ಸಮಸ್ತರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯಮಾಡಲ್ಪಟ್ಟಿತು. ಸತ್ರದ ದ್ವಾರದಲ್ಲಿ ತಳಿರುತೋರಣಗಳು "ಚಕ್ರವರ್ತಿದಂಪತಿಗಳನ್ನು ಪರಮೇಶ್ವರನು ರಕ್ಷಿಸಲಿ" ಎಂಬ ವಸ್ತ್ರಣೆಯುಳ್ಳ ಪಟವೂ ಕಟ್ಟಲ್ಪಟ್ಟಿದ್ದುವು. ಮತ್ತು ಕಟ್ಟಡದಮೇಲೆಲ್ಲಾ ಅಪರಿಮಿತವಾದ ಕಂದೀಲುಗಳು ಹೊತ್ತಿಸಲ್ಪಟ್ಟು ನೋಡುವರ ಕಣ್ಮನಂಗಳಿಗೆ ಬಹಳ ಆನಂದವನ್ನುಂಟುಮಾಡುತ್ತಿದ್ದುವು. 'ಜೇ.'

ಮೈಸೂರು ತಾ|| ವರುಣ.

ಶ್ರೀಮತ್ ಚಕ್ರವರ್ತಿ ಸಾರ್ವಭೌಮರವರಾದ ಐದನೆಯ ಜಾರ್ಜ್ ಭೂಪತಿಯವರು ತಮ್ಮ ಪಟ್ಟಾಭಿಷೇಕಮಹೋತ್ಸವದ ವೈಭವವನ್ನು ತಮ್ಮ ಚಕ್ರಾಧಿಪತ್ಯಕ್ಕೆ ಸೇರಿದ ಸಕಲ ರಾಜ್ಯಗಳಲ್ಲಿಯೂ ಪ್ರಕಾಶಗೊಳಿಸುವದಕ್ಕಾಗಿ ತಮ್ಮ ಪ್ರಭುತ್ವದ ದ್ವಿತೀಯ ಸಂವತ್ಸರವಾದ ಕ್ರಿಸ್ತ ಶಕ ೧೯೧೧ ನೆ ಇಸವಿ ಡಿಸೆಂಬರ್ ತಾ|| ೧೨ ನೆಯ ಮಂಗಳವಾರ ಈ ಶುಭದಿವಸ ಇಂಡಿಯಾರಾಷ್ಟ್ರನಿವಹಕ್ಕೆ ಆಶ್ಚರ್ಯದಿಂದಲೂ ಶಿರೋರತ್ನಪ್ರಾಯವಾದ ದಿಲ್ಲಿನಗರದಲ್ಲಿ ಮಹರಾಜಮಂಡಲಿಯನ್ನೇ ಒಳಗೊಂಡಿದ್ದ ರಾಜಕೀಯ ಮಹಾಸಭೆಯನ್ನು ನಡೆಸಿದ್ದು ಸರಿಯಷ್ಟೆ. ಈ ಶುಭದಿವಸ ಮೈಸೂರು ತಾ|| ಕಸಬ ವರುಣಗ್ರಾಮನಿವಾಸಿಗಳು ಸಭೆಸೇರಿ ತಮ್ಮ ಗ್ರಾಮದಲ್ಲಿರುವ ಇಷ್ಟದೇವರಾದ ಶ್ರೀ ಮಹಾದೇಶ್ವರಸ್ವಾಮಿಯವರಿಗೆ ಅಭಿಷೇಕೋತ್ಸವವನ್ನು ಆಗಮಾಡಿಸಿ ಚಕ್ರವರ್ತಿಸಾರ್ವಭೌಮದಂಪತಿಗಳಿಗೆ ಸರ್ವಶಕ್ತನಾದ ಭಗವಂತನು ದೀರ್ಘಾಯುಷ್ಯವನ್ನು ಕೊಟ್ಟು ರಕ್ಷಿಸಲೆಂದು ಬದ್ಧಾಂಜಲಿಯರಾಗಿ ಪುನಃ ಪುನಃ ಪ್ರಾರ್ಥಿಸಿರುತ್ತಾರೆ. ಸಾರ್ವಭೌಮರಿಂದ ಕೊಡಲ್ಪಟ್ಟ ರಾಜಾಜ್ಞಾಪತ್ರಿಕೆಯು ಓದಲ್ಪಟ್ಟನಂತರ ಸಾರ್ವಭೌಮನ ನಾಮಾಂಕಿತದಿಂದ ಸ್ಕೂಲ್ ಬಾಲಕರಿಗೆ ಪಿ. ನಂಜರಾಜೇಅರಸಿನವರು ಪುಸ್ತಕಗಳನ್ನು ಬಹುಮಾನಿಸಿದುದಲ್ಲದೆ ಬಾಳೆಹಣ್ಣು ಸಕ್ಕರೆಯನ್ನು ಸಹ ಹಂಚಿರುತ್ತಾರೆ. ಶ್ರೀಮನ್ ಜಾರ್ಜ್ ಸಾರ್ವಭೌಮರವರ ಪಟ್ಟಾಭಿಷೇಕಮಹೋತ್ಸವ ದಿವಸದ ಜ್ಞಾಪನಾರ್ಥವಾಗಿ ಸದರಿ ವರುಣ ಗ್ರಾಮದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೊಸದಾಗಿ ಒಂದು ಸ್ಕೂಲ್ ಕಟ್ಟಡವನ್ನು ಕಟ್ಟಲು ಮುಹೂರ್ತ ಕಂಭಸ್ಥಾಪನೆಯೂ ಮಾಡಲ್ಪಟ್ಟಿತು. ಈ ಸ್ಕೂಲ್ ಕಟ್ಟಡದ ಮತ್ತೂ ಸ್ಕೂಲಿನ ಶ್ರೇಯೋಭಿವೃದ್ಧಿಯು ಈ ಗ್ರಾಮದ ನಿವಾಸಿಗಳಲ್ಲಿ ಪ್ರಮುಖರಾದ ಮ|| ಚಂದ್ರಶೇಖರದೀಕ್ಷಿತರಿಗೂ, ಮ|| ಸೇಕದಾರ್ ಪಿ. ನಂಜರಾಜೇಅರಸಿನವರಿಗೂ, ಮ|| ನರಸಿಂಹಮೂರ್ತಿಗಳಿಗೂ, ಮ|| ಕೃಷ್ಣಾಚಾರ್ಯರವರಿಗೂ, ಮ|| ಪಟೇಲ್ ಗುರುದೇವರಿಗೂ, ಮತ್ತೂ ಸ್ಕೂಲ್ ಮಾಸ್ಟರ್ ಮ|| ಕೃಷ್ಣಶಾಸ್ತ್ರಿಗಳವರಿಗೂ, ಮ|| ರಾಮಯ್ಯನವರಿಗೂ ಸೇರಿದ್ದೆಂದು ನಂಬಿರುತ್ತೇನೆ.

ಕೃಷ್ಣಪ್ಪ ಪಾರುಪತ್ತೇಗಾರ್

ಹುಣಸೂರು ತಾ|| ಬೆಟ್ಟದಪುರ.

ಈ ಊರಿನಲ್ಲಿ ತಾ|| ೧೨ ರ ಬೆಳಿಗ್ಗೆ ೮ ಗಂಟೆಯಿಂದ ೧೧|| ಗಂಟೆಯವರೆಗೆ ಬೆಟ್ಟದಮೇಲಿರುವ ಶ್ರೀ ಶಿಡ್ಲು ಮಲ್ಲಿಕಾರ್ಜುನಸ್ವಾಮಿಯವರಿಗೂ, ಊರೊಳಗಿರುವ ಶ್ರೀಯವರ ಉತ್ಸವ ದೇವರಿಗೂ, ಗ್ರಾಮಮಧ್ಯೆ ಇರುವ ಶ್ರೀ ಕೋದಂಡರಾಮದೇವರಿಗೂ ಸಹ ಸ್ತವನ ಪಂಚಾಮೃತಾಭಿಷೇಕ ಸಹಸ್ರನಾಮಾರ್ಚನೆ ಮಹಾನೈವೇದ್ಯ ಮುಂತಾದ ಸೇವೆಯೂ, ಮಧ್ಯಾಹ್ನ ಸ್ಕೂಲ್ ಬಾಲಕ ಬಾಲಿಕೆಯರುಗಳಿಂದಲೂ ಇತರ ಜನರಿಂದಲೂ ಓಡುವುದು, ಹಾರುವುದು ಹಗ್ಗವನ್ನೆಳೆಯುವುದು ಮೊದಲಾದ ಆಟಗಳನ್ನು ಆಡಿಸಿ, ಬಾಲಕ ಬಾಲಿಕೆಯರುಗಳಿಂದ ಶ್ರೀಮತು ಇಂಡಿಯಾ ಚಕ್ರವರ್ತಿ ಸಾರ್ವಭೌಮರಾದ ೫ ನೆಯ ಜಾರ್ಜ್ ಪ್ರಭುಗಳಿಗೂ, ಕ್ವೀನ್ ಮೇರಿಯವರಿಗೂ, ಆಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರಿಗೂ ಶ್ರೀಮನ್ ಯುವರಾಜರವರಿಗೂ, ರಾಜಬಂಧುಗಳಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿದ ನಂತರ ಬಾಲಕ ಬಾಲಿಕೆಯರುಗಳಿಗೆ ರವೆ ಉಂಡೆಗಳನ್ನು ಹಂಚಿ ಅತಿ ಸಂಭ್ರಮದಿಂದ ಕಾಲವನ್ನು ಕಳೆದೆವು. ಸಾಯಂಕಾಲ ೫|| ಗಂಟೆಗೆ ಶ್ರೀ ಶಿಡ್ಲು ಮಲ್ಲಿಕಾರ್ಜುನ ಸ್ವಾಮಿಯವರ ಮತ್ತು ಶ್ರೀ ಕೋದಂಡರಾಮದೇವರ ಉತ್ಸವವು, ಮಾಮೂಲ್ ಮೇರೆ ಗ್ರಾಮಪ್ರದಕ್ಷಿಣೆಯಿಂದ ಬಂದು ತಾವರೆ ಕೆರೆಯಲ್ಲಿ ತೆಪ್ಪೋತ್ಸವವನ್ನು ನಡೆಸಿ ಕೆರೆಬಳಿ ಚಿತ್ರಾನ್ನ ದಧ್ಯಾನಗಳನ್ನು ಸರ್ವರಿಗೂ ವಿನಿಯೋಗಮಾಡಿಸಿ ಅರ್ಧ ಗಂಟೆಯಕಾಲ ವಿದ್ವಾನ್ ಬಿ. ನಾರಾಯಣಸ್ವಾಮಿಯವರಿಂದ ಸಂಗೀತಗಾನವನ್ನು ಮಾಡಿಸಿ ಆಮೇಲೆ ಊರೊಳಗೆ ಮಾಮೂಲು ಬೀದಿಗಳಲ್ಲಿ ಉತ್ಸವದೊಡನೆ ಸರ್ವರೂ ದೇವಸ್ಥಾನಕ್ಕೆ ಬಂದು ಉಭಯ ದೇವಸ್ಥಾನಗಳಲ್ಲೂ ದೀಪಾರಾಧನೆ ಮಂಗಳಾರ್ತಿಗಳನ್ನು ಮಾಡಿಸಿ ರಾಜಪ್ರಕಟಣ ಪತ್ರಿಕೆಯನ್ನು ಓದಿಸಿ ಮತ್ತೂ ಇಂಡಿಯಾ ಚಕ್ರವರ್ತಿಯವರಾದ ೫ ನೆಯ ಜಾರ್ಜ್‌ರವರಿಗೂ, ಕ್ವೀನ್ ಮೇರಿಯವರಿಗೂ ಶ್ರೇಯಃಪ್ರಾರ್ಥನೆಮಾಡಿ ಆಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರಿಗೂ ಅವರ ಕುಟುಂಬದವರಿಗೂ ಅಲ್ಲಿ ಸೇರಿದ್ದ ವೈದಿಕ ಮಹಾಜನಂಗಳಿಂದ ಆಶೀರ್ವಾದಮಾಡಿಸಿ ಸರ್ವರ ಶ್ರೇಯಃಪ್ರಾರ್ಥನೆಯನ್ನು ಮಾಡಿಕೊಂಡು ಆ ದಿನವನ್ನು ಬಹಳ ಸಂತೋಷದಿಂದ ಕಳೆದೆವು.

ಶಟ್ಟರ ಚನ್ನಬಸಪ್ಪ.

ದಾವಣಗೆರೆ.

ಶ್ರೀಮನ್ ನಿರಂಜನ ಪ್ರಣವಸ್ವರೂಪಿಗಳಾದ ಅಥಣಿಗಚ್ಚಿನಮಠದ ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಚಿತ್ರದುರ್ಗದಿಂದ ಕಳೆದ ತಿಂಗಳು ೨೫ ನೇ ತಾರೀಖಿನ ದಿವಸ ಇಲ್ಲಿಗೆ ದಯಮಾಡಿಸಿ, ಇದೇ ತಿಂಗಳು ಎರಡನೆಯ ತಾರೀಖಿನ ದಿವಸ ಶ್ರೀ ವಿರಕ್ತಮಠದಲ್ಲಿ ಇಲ್ಲಿನ ಹಿರೇಮಠದ ವೇ|| ರುದ್ರಪ್ಪಯ್ಯಶಾಸ್ತ್ರಿಗಳವರಿಂದಲೂ, ವೇ|| ಚನ್ನಬಸವಪ್ಪಯ್ಯಶಾಸ್ತ್ರಿಗಳವರಿಂದಲೂ, ನಡೆಸಲ್ಪಟ್ಟ ದೀಕ್ಷಾಸಂಸ್ಕಾರವನ್ನು ಪರಾಂಬರಿಸಿ ೫ ನೇ ತಾರೀಖಿನ ದಿವಸ ಹಳಿಗಲವಾಡವೆಂಬ ಗ್ರಾಮಕ್ಕೆ ಇಲ್ಲಿನ ಭಜನಾಸಮೇತ ಸವಾರಿಯು ಚಿತ್ತೈಸೋಣವಾಯಿತು. ಶ್ರೀ ಜಗದ್ಗುರು ಮುರುಘರಾಜೇಂದ್ರಮಹಾಸ್ವಾಮಿಗಳವರು ಇದೇ ತಿಂಗಳು ೧೨ ನೆಯ ತಾರೀಖಿನ ದಿವಸ ಜರಗುವ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ೫ ನೆಯ ಜಾರ್ಜ್ ಪ್ರಭುಗಳ ಕಿರೀಟಧಾರಣ ಮಹೋತ್ಸವ ಕಾಲಕ್ಕೆ ಮಠಗಳಲ್ಲಿ ಬಡವರಿಗೆ ಅನ್ನೋದಕಗಳನ್ನೂ, ಅಂಗವಿಹೀನರಿಗೆ ಬಟ್ಟೆಗಳನ್ನೂ, ಕೊಡುವುದಲ್ಲದೆ ಸಾಯಂಕಾಲಕ್ಕೆ ದೀಪೋತ್ಸವವನ್ನು ಮಾಡಬೇಕೆಂದು ತಮ್ಮಾಶ್ರಯದ ಸಕಲ ಭಾಗದ ಮಠಾಧಿಪತಿಗಳಿಗೂ, ಆಜ್ಞಾಪಿಸಿದಂತೆ ಇಲ್ಲಿನ ಮಠಾಧಿಪತಿಗಳಿಗೂ ತಿಳಿಸಿದ್ದರಿಂದ ಆ ಕಾಲಕ್ಕೆ ಸರಿಯಾಗಿ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಸಾಧಾರಣ ಎರಡು ಸಹಸ್ರ ಜನಗಳಿಗೆ ಅನ್ನೋದಕಗಳನ್ನೂ, ಅಂಗವಿಹೀನರಿಗೆ ಬಟ್ಟೆಗಳನ್ನೂ ಕೊಟ್ಟು, ತಮ್ಮಲ್ಲಿದ್ದ ರಾಜನಿಷ್ಠೆಯನ್ನೂ, ತಮಗಾದ ಆನಂದವನ್ನೂ ಇಲ್ಲಿನ ಡೆಪ್ಯುಟಿಕಮಿಷನರ್‌ಗವರಿಗೂ, ಮದ್ರಾಸ್ ಗೌರ್ನರ್ ಸಾಹೇಬರವರಿಗೂ, ನಾಮದಾರ್ ವೈಸ್‌ರಾಯ ಸಾಹೇಬರವರಿಗೂ ತಂತೀ ಮೂಲಕ ತಿಳಿಸಿ, ಸಾಯಂಕಾಲಕ್ಕೆ ಅತಿ ವಿಜೃಂಭಣೆಯಿಂದ ದೀಪೋತ್ಸವವನ್ನು ಮಾಡಿ ವೀರಶೈವ ಸಮಾಜದ ರಾಜನಿಷ್ಠೆಯನ್ನು ಪ್ರಕಾಶಗೊಳಿಸಿದರು. ಇದೇ ಶುಭಮುಹೂರ್ತದಲ್ಲಿ ಇಲ್ಲಿನ ಶ್ರೀ ವಿರಕ್ತಮಠದ ಶ್ರೀಮನ್ ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಆರನೆಯ ಶ್ರೀಮದ್ ವೀರಶೈವ ಮಹಾಸಭೆಗೆ ಹೋಗುವುದಕ್ಕೆ ಪ್ರತಿನಿಧಿಗಳನ್ನು ಆರಿಸುವ ಶುಭಕಾರ್ಯವೂ ಸಂಕಲಿತವಾಗಿ ಜರುಗಿದುದು ಅತ್ಯಾನಂದವನ್ನುಂಟುಮಾಡತಕ್ಕದಾಗಿದೆ. ಇಲ್ಲಿನ ಪ್ರಜೆಗಳೂ, ಸ್ಥಳಾಧಿಕಾರಿಗಳೂ, ತಾರೀಖು ೧೨ ನೇ ದಿವಸ ಪ್ರಾತಃಕಾಲದಲ್ಲಿಯೇ ದೇವಾಲಯಗಳಲ್ಲಿ ಪೂಜೆಯೂ, ದೇವತಾಭಜನೆಯೂ ಜರುಗುವಂತೆ ಮಾಡಿ ಸ್ಕೂಲುಗಳಲ್ಲಿ ಮಕ್ಕಳಿಗೆ ಆಟವನ್ನು ಕಲ್ಪಿಸಿ ಇನಾಮುಗಳನ್ನೂ ಮಿಠಾಯಿಯನ್ನೂ, ಹಂಚಿ ಸಕಾಲಕ್ಕೆ ಟೌನ್‌ಹಾಲಿನಲ್ಲಿ ದರ್ಬಾರ್ ಸೇರಿಸಿ, "ರಾಜಾಜ್ಞಾಪತ್ರಿಕೆ"ಯನ್ನು ಓದಿ ಬಡವರಿಗೆ ಅನ್ನೋದಕಗಳನ್ನು ಕೊಟ್ಟು, ಅಂಗವಿಹೀನರಿಗೂ, ನಿರ್ಗತಿಕರಿಗೂ, ಬಟ್ಟೆಗಳನ್ನು ಕೊಟ್ಟು ಸಾಯಂಕಾಲಕ್ಕೆ ಅತಿವಿಜೃಂಭಣೆಯಿಂದ ದೀಪೋತ್ಸವಗಳನ್ನು ಮಾಡಿ ತಮ್ಮಲ್ಲಿದ್ದ ರಾಜನಿಷ್ಠೆಯನ್ನು ವ್ಯಕ್ತಗೊಳಿಸಿದರು. ಇಂತಹ ಶುಭಮುಹೂರ್ತದಲ್ಲಿಯೇ ಇಲ್ಲಿನ ಸ್ತ್ರೀಶಿಕ್ಷಣ ಪ್ರೋತ್ಸಾಹಕರಾದ ಮಹನೀಯರು "ಕಾರೋನೇಷನ್ ಗರ್ಲ್ಸ್ ಸ್ಕೂಲ್" ಎಂಬ ಹೆಸರಿನಿಂದ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿ ಮಹಾರಾಣಿಯವರಾದ ಮೇರಿಯವರ ವಿಷಯದಲ್ಲಿ ತಮಗಿರುವ ಅಕೃತ್ರಿಮವಾದ ನಿಷ್ಠೆಯನ್ನು ಈ ಮೂಲಕ ವ್ಯಕ್ತಗೊಳಿಸಿರುವುದು ಯಾರಿಗೆತಾನೆ ಆನಂದವನ್ನುಂಟುಮಾಡಲಾರದು? ಈ ಪಾಠಶಾಲೆಯ ಶ್ರೇಯೋಭಿವೃದ್ಧಿಯೇ ನಮ್ಮ ರಾಜನಿಷ್ಠೆಯ ಹೆಚ್ಚಳವಲ್ಲವೇ?

ಪ್ರತ್ಯಕ್ಷದರ್ಶಿ.

ಬೆಳಗಾಂ.

ಈ ವರ್ಷ ೬ ನೆಯ ಶ್ರೀಮದ್ವೀರಶೈವ ಮಹಾಸಭೆಯು ಬೆಳಗಾವಿಯಲ್ಲಿ ಕೂಡುವ ಸಂಗತಿಯು ಸರ್ವಶ್ರುತವಾಗಿರುವದಷ್ಟೇ. ಅದರಂತೆ ಮಹಾಸಭೆಯು ಸಿದ್ಧತೆಯು ಶೀಘ್ರದಿಂದ ನಡೆದಿರುವದು. ಕೆಲವು ಮಹತ್ವದ ಸಂಗತಿಗಳ ಮೂಲಕ ಈ ವರ್ಷದ ಮಹಾಸಭೆಯು ಒಳ್ಳೆಯ ಮಹತ್ವವುಳ್ಳದ್ದಾಗುವ ಲಕ್ಷಣವಿದೆ. ದೂರ ದೂರಿನ ಪ್ರಾಂತಗಳಿಂದ ಕೇಳಿಕೆಯ ಪತ್ರಿಕೆಗಳು ತುಂಬಿ ಬರುತ್ತಿರುವವು. ಸುತ್ತಲಿನ ಎಲ್ಲ ನಾಡುಗಳಿಂದ ಬಹುಜನ ಕೂಡುವಂತೆ ತೋರುತ್ತಿದೆ. ಮತಾಭಿಮಾನಿಗಳಾದ ಜನರೆಲ್ಲರೂ ಸಮಾಜ ಸೇವೆಗಾಗಿ ಮಹಾಸಭೆಗೆ ದಯಮಾಡಿಸಿ ಸಮಾಜೋದ್ಧಾರಮೂಲದ ಶ್ರೇಯಸ್ಸನ್ನು ತಂದುಕೊಳ್ಳಬೇಕಾಗಿ ಪ್ರಾರ್ಥನೆಯಿದೆ. ಈ ಮಹಾಸಭೆಗೆ ಬರುವ ವೀರಶೈವ ಜನಾಂಗಕ್ಕೆ ಮಹಾಮಹಾ ಸ್ವಾಮಿಗಳವರ ಹಾಗೂ ಮಹಾಪುರುಷರ ದರ್ಶನ ಲಾಭವಾಗುವದಲ್ಲದೆ, ಬಹು ಸೊಬಗುಳ್ಳ ಬೆಳಗಾವಿ ಶಹಾಪುರ ಕೆಂಪರ ಬೆಳಗಾವಿನ ಭವ್ಯವಾದ ಕೋಟೆ ಆಸಬೋರ್ನ ಕರ್ಗಾ, ದಂಡಿನ ಛಾವಣಿ, ನಾಗೇರುರಿ, ಸಿವಿಲ್ ಹಾಸ್ಪಿಟಲ್ ಮೊದಲಾದ ಮಹತ್ವದ ಸ್ಥಳಗಳು ಅನಾಯಾಸವಾಗಿ ನೋಡಲಿಕ್ಕೆ ಸಿಗುತ್ತವೆ. ಮತ್ತು ಇಲ್ಲಿಯ ಪ್ರಸಿದ್ಧವಾದ ಜೀವದ ಪೆಟ್ಟಿಗೆಗಳ ಕಾರ್ಯಾಲಯವನ್ನೂ ನೋಡಲು ಸುಕೂಲವಾಗುತ್ತದೆ. ಬಗೆಬಗೆಯ ಪುಷ್ಪವಾಟಿಕೆಗಳಿಂದಲೂ, ಗದ್ದೆಯ ಪೈರುಗಳಿಂದಲೂ, ಶಾಕಾಫಲಗಳ ತೋಟಗಳಿಂದಲೂ, ಪುರೋದ್ಯಾನಗಳಿಂದಲೂ ಮಾಮರಗಳ ಗುಂಪುಗಳಿಂದಲೂ, ನಿರ್ಮಲೋದಕದಿಂದ ಪರಿಪೂರ್ಣವಾದ ಭಾವೀ ಕೂಪತಟಾಕಗಳಿಂದಲೂ ರಮಣೀಯವಾದ ಬೆಳಗಾವಿಯ ಬಾಹ್ಯಪ್ರದೇಶದಲ್ಲಿ ರಚಿಸಿದ ವಿಸ್ತಾರವಾದ ಸಭಾಮಂಟಪವೂ, ಅದಕ್ಕೆ ಸಮೀಪದಲ್ಲಿ ಪ್ರತಿನಿಧಿಗಳ ವಿಶ್ರಾಂತಿಗೋಸ್ಕರ ಸ್ಥಾಪಿಸಿದ ಸುಂದರವಾದ ಅಂಬುಗಳೂ, ಇವಕ್ಕೆ ಹೊಂದಿದಂತೆ ಆಮ್ರವೃಕ್ಷಗಳ ಮಧ್ಯದಲ್ಲಿ ಸಿದ್ಧಪಡಿಸಿದ ಪ್ರಶಸ್ತವಾದ ಭೋಜನಶಾಲೆಯೂ, ಅಲ್ಲಿ ಸುಳಿಯುತ್ತಿರುವ ಮಂದ ಸುಗಂಧ ಶೀತಲ ವಾಯುವೂ ಮನಸ್ಸಿಗೆ ಬಹು ಸೊಂಪನ್ನುಂಟುಮಾಡುತ್ತವೆ. ಇವಲ್ಲದೆ ಈ ಸಭಾಕಾಲಕ್ಕೆ ಸುಪ್ರಸಿದ್ಧ ಕೊಣ್ಣೂರ ನಾಟಕ ಕಂಪನಿಯೂ, ಪ್ರೊಫೆಸರ ಪರಶುರಾಮರಾವ ತಾಸಗಾಂವಕಾರ ಎಂಬ ಅಪ್ರತಿಮರಾದ ವೀರಶೈವ ಸರ್ಕಸೂ, ಬರುವದರಿಂದ ರಸಿಕರು ಇಂಥ ಸುಸಂಧಿಯನ್ನು ಕಳೆದುಕೊಳ್ಳಲಾಗದು. ಕೊಣ್ಣೂರ ನಾಟಕದ ಬಸವೇಶ್ವರಾಖ್ಯಾನವೂ, ವೀರಶೈವ ಸರ್ಕಸಿನಲ್ಲಿ, ಸಿಂಹ, ಹುಲಿ, ಆನೆ ಮುಂತಾದ ಮೃಗಗಳ ಕಾರ್ಯವೂ ಪ್ರೇಕ್ಷಣೀಯವಾಗಿರುತ್ತವೆ. ಮತ್ತು ಬೆಳಗಾವಿಗೆ ಸಮೀಪವಾಗಿ ಪ್ರಸಿದ್ಧವಾದ ವೈಜನಾಥನ ಕ್ಷೇತ್ರವೂ, ಕಾಡಸಿದ್ಧೇಶ್ವರನ ದೇವಾಲಯವೂ, ಇಲ್ಲಿಂದ ೨-೩ ಸ್ಟೇಷನುಗಳಾಚೆ ಶ್ರೀ ಅಂಕಲಗಿ ಸ್ವಾಮಿಗಳ ಮಠ, ಅರಭಾವೀಮಠ ಮುಂತಾದ ಪುಣ್ಯಸ್ಥಳಗಳೂ, ಗೋಕಾವಿಯ ತಡಸಲವೂ, ಅಧಃಪತನದಿಂದ ನಡೆಯುತ್ತಿರುವ ಕರ್ನಾಟಕಕ್ಕೆ ಪ್ರಸಿದ್ಧವಾದ ನೂಲಿನ ಗಿರಣಿಯೂ, ಘಟಪ್ರಭೆಯ ಕಾಲುವೆಯೂ ಇರುವದರಿಂದ ಮಹಾಸಭೆಗೆ ಬಂದ ಜನರು ಈ ಸ್ಥಳಗಳನ್ನೆಲ್ಲ ಸುಲಭವಾಗಿ ನೋಡಿಕೊಳ್ಳಬಹುದಾಗಿದೆ. ಕಾರಣ ಎಲ್ಲ ಮಹಾಸಭೆಗಳಿಗೆ ಬಂದಂತೆ ಈ ಮಹಾಸಭೆಗೂ ಮತಾಭಿಮಾನಿಗಳೆಲ್ಲ ದಯಮಾಡಿಸಿ ಆನಂದಿಸುವರೆಂದು ನಂಬುತ್ತೇನೆ. ಇಲ್ಲಿ ಪ್ಲೇಗು ಇಲ್ಲ. ಹವೆಯೂ, ನೀರೂ ಆರೋಗ್ಯಕರವಾಗಿವೆ.

ನೀಲಕಂಠಗೌಡ ಪಾಟೀಲ,
ಮದನಭಾವಿ.

ಸಿದ್ಧರ ಬೆಟ್ಟದಲ್ಲಿ ನಡೆದ ಮಹೋತ್ಸವವು.

ಚರಿತಾನಿ ವಿಚಿತ್ರಾಣಿ ಗುಹ್ಯಾನಿ ಗಹನಾನಿಚ| ಬ್ರಹ್ಮಾದೀನಾಂಚ ಸರ್ವೇಷಾಂ ದುರ್ವಿಜ್ಞೇಯೋಹಿಶಂಕರ || ಅತರ್ಕ್ಯ—ಸವಿಲಾಸ ವೈಚಿತ್ರ್ಯಚಮತ್ಕಾರ ಪ್ರವೀಣನಾಗಿಯೂ, ಸ್ವಾಭಿಮತ ವಿವಿಧ ವೇಷವಿಗ್ರಹ ಪರಿಗ್ರಹ ಸಮರ್ಥನಾಗಿಯೂ, ಸರ್ವಶಕ್ತಿ ಸಮನ್ವಿತನಾಗಿಯೂ, ಸರ್ವೋತ್ಕರ್ಷದಿಂದಿರುವ ಶ್ರೀಮದ್ಭಗವನ್ಮಹಾಶಂಕರನು—ಕಲಿಕಲುಷಿತರಾದ ಮನುಷ್ಯರನ್ನ ಧರ್ಮೋಪದೇಶದ್ವಾರಾ ಸ್ವಪಾದಭಕ್ತಿ ನಿಷ್ಠಾವರಿಷ್ಠರನ್ನಾಗಿ ಮಾಡಬೇಕೆಂಬ ಅಪೇಕ್ಷೆಯಿಂದ ಪ್ರಕಾಶಗೊಳಿಸಿದ ನಿಜಸ್ವರೂಪವೋ ಎಂದು ತರ್ಕಿಸುವ ವಿದ್ವಜ್ಜನರಿಗೆ—ನಿಜಸ್ವರೂಪವೇ ಎಂಬ ನಿಶ್ಚಯಜ್ಞಾನಕ್ಕೆ ವಿಷಯರಾಗಿದ್ದ ಶ್ರೀಮತ್ಪೂಜ್ಯರಾದ ಚನ್ನಬಸವ ಶಿವಾಚಾರ್ಯನಾಮಕ ಶಿವಯೋಗಿಗಳವರು—ತತ್ತದ್ವರ್ಣಾಶ್ರಮ ಧರ್ಮರಕ್ಷಣ ವಿಚಕ್ಷಣರೆಂದೆನಿಸಿದ ನಮ್ಮನ್ನಾಳುವ ಮಹೀಶೂರ ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜವಡೆಯರು ಜಿ.ಸಿ.ಎಸ್.ಐ, ಪ್ರಭುಗಳಿಂದ ಪರಿಪಾಲಿಸಲ್ಪಡುತ್ತಿರುವ ಕರ್ನಾಟಕ ದೇಶಾಂತಃಪಾತಿಯಾದ ಅರಸೀಕೆರೆ ತಾಲ್ಲೂಕು ತುಂಬಾಪುರ ವೆಂಬ ಗ್ರಾಮದಲ್ಲಿ ಅವತರಿಸಿದರು. ಈ ಶಿವಯೋಗಿಗಳವರು ಕಾಮಧೇನು ಕಲ್ಪತರು ಚಿಂತಾಮಣಿಗಳಿಗಿಂತಲೂ, ಎಷ್ಟೋ ಭಾಗದಲ್ಲಿ ಅತ್ಯುತ್ಕೃಷ್ಟವೆನಿಸಿದ ಭಕ್ತಿ, ಜ್ಞಾನ, ವೈರಾಗ್ಯ ಪದಾರ್ಥಗಳಿಂ ಪರಿಷ್ಕೃತ ಹೃದಯರಾಗಿ ಅನನ್ಯಸಾಧಾರಣೇಷ್ಟಲಿಂಗ ಪೂಜಾನಿಷ್ಠಾಗರಿಷ್ಠರಾಗಿ ಒಪ್ಪುತ್ತಿದ್ದರಾದಕಾರಣವೆ- ನಿಜಚರಣಾವನತ ಭಕ್ತಜನಕ್ಕೆ ಶಿವಭಕ್ತಿ, ಗುರುಭಕ್ತಿ, ರಾಜಭಕ್ತಿ ಮುಂತಾದ ಸದ್ಧರ್ಮವನ್ನು ಬೋಧಿಸುತ್ತ ಜಗಜ್ಜೀವಮಾನಸಚ್ಚರಿತ್ರೆಯೊಡನೆ ಸ್ವಪಾದಸರಸೀರುಹ ವಿನ್ಯಾಸಂಗಳಿಂ ಭೂಮಿಯನ್ನು ಪವಿತ್ರತೆಗೊಳಿಸುತ್ತಲಿದ್ದರು. ಅತಃ ಈ ಮಹಾನುಭಾವರ ಧರ್ಮೋಪದೇಶದಿಂದನೇಕರು ಧರ್ಮತತ್ಪರರಾಗಿ ಇತರರಿಗೆ ಸನ್ಮಾರ್ಗ ಪ್ರದರ್ಶಕರಾಗಿರುತ್ತಾರೆ. ಇದು ಯುಕ್ತವೇ ಸರಿ. "ಪ್ರತಿಭೈವ ಶ್ರುತಾಭ್ಯಾಸಸಹಿತಾ ಕವಿತಾಂಪ್ರತಿ| ಹೇತುರ್ಮೃಜ್ಜಲಸಂಬದ್ಧಾ ಬೀಜಸಂತತಿರ್ಲತಾಮಿವ" ಎಂಬ ಗಾರ್ಗ್ಯಭಟ್ಟೋಕ್ತಿಯಂತೆ ಕವಿತ್ವವಂ ಕುರಿತು ಶ್ರವಣ ಮನನಾಭ್ಯಾಸಸಹಿತವಾದ ಬುದ್ಧಿ ವಿಶೇಷವು ಮತ್ತು ಲತಾಂಕುರವನ್ನು ಕುರಿತು ಮೃಜ್ಜಲ ವಿಶಿಷ್ಟವಾದ ಬೀಜಸಂತತಿಯು ಹ್ಯಾಗೆ ಕಾರಣವಾಗಿ ತೋರುತ್ತವೋ, ಹಾಗೆ ಈ ಶಿವಯೋಗಿಗಳವರ ಧರ್ಮೋಪದೇಶವೇ ಇವರ ಸದ್ಧರ್ಮ ಪ್ರವೃತ್ತಿಗೆ ಮುಖ್ಯ ಕಾರಣವಾಗಿದೆ. ಅದ್ದರಿಂದ ಲೋಕದಲ್ಲಿ ಸರ್ವೋತ್ಕೃಷ್ಟವಾದ ಮನುಷ್ಯಜನ್ಮವನ್ನು ಹೊಂದಿ ಧರ್ಮೋಪದೇಶದಿಂದಲೂ, ಧರ್ಮಬುದ್ಧಿಯಿಂದಲೂ ವಿರಹಿತನಾದರೆ, ತನಗೆ ತಾನೇ ವಂಚಕನಾದಂತೆಯಾಗುತ್ತೆಂದು ಶ್ರೀ ವ್ಯಾಸಮಹರ್ಷಿಗಳು ಹೀಗೆ ಅಭಿಮತಿಸಿರುತ್ತಾರೆ. "ಸುದುರ್ಲಭಮಿದಂಪ್ರಾಪ್ಯ ಮಾನುಷ್ಯಮಿಹಯೋನರಃ| ಧರ್ಮಮಮಂತಾಕಾಮಾತ್ಮಾ ಸಭವೇತ್ಖಲುವಂಚಕಃ|| ಪರಲೋಕ ಸಹಾಯಾರ್ಥವಾಗಿ ಧರ್ಮವನ್ನು ಅವಶ್ಯಕವಾಗಿ ಸಂಪಾದಿಸಬೇಕು. ಧರ್ಮವೊಂದೇ ಸ್ವಪಕ್ಕ ಕಾಪುಕುತ್ತಲ್ಲದೆ, ಮಾತಾಪಿತೃಗಳೆಲ್ಲಾಗಲಿ, ಕಳತ್ರಪುತ್ರರಲ್ಲಾಗಲಿ, ಬಂಧುವರ್ಗದವರಲ್ಲಾಗಲಿ, ಒಬ್ಬರಾದರೂ ಪರಲೋಕಕ್ಕೆ ಸಹಾಯಕರಾಗಿ ಬರುವದಿಲ್ಲ ಮತ್ತು ಜನರು ಕಡ್ಡಿ ಕಸ ಮಣ್ಣು ಮುಂತಾದ್ದನ್ನು ತಿಪ್ಪೆಗೆ ಚೆಲ್ಲುವಂತೆ ತನ್ನ ಬಂಧುಜನರೂ ಮೃತಶರೀರವನ್ನು ತೀವ್ರವಾಗಿ ಸ್ಮಶಾನಕ್ಕೆ ಹಾಕಿ ತಿರುಗಿನೋಡದಂತೆ ಮನೆಗೆ ಬರುತ್ತಾರೆಂಬುವದು ಸರ್ವಾನುಭವಸಿದ್ಧವಾಗಿದೆ. ಅದ್ದರಿಂದ ಮೃತಪುರುಷನ ಆತ್ಮಕ್ಕೆ ಧರ್ಮವೊಂದೇ ಸಹಾಯಕವಲ್ಲದೆ ಮತ್ತೆ ಯಾವದೂ ಇಲ್ಲವಾಗಿದೆ. ತದುದ್ದೇಶದಿಂದ ನಿತ್ಯದಲ್ಲಿಯೂ ಧರ್ಮವನ್ನು ಸಂಪಾದಿಸಬೇಕು. ಈ ಧರ್ಮವು ಪ್ರಾಣಿವರ್ಗಕ್ಕೆ ಪ್ರತಿಕೂಲವಾದ ಮಾರ್ಗವನ್ನು ದಾಟಿಸುತ್ತದೆಂಬ ವಿಷಯದಲ್ಲಿ ಅಭಿಯುಕ್ತೋಕ್ತಿಯೇನಂದರೆ—"ನಾಮುತ್ರಹಿ ಸಹಾಯಾರ್ಥಂಪಿತಾಮಾತಾಚತಿಷ್ಠತಃ| ನಪುತ್ರದಾರಂನಜ್ಞಾತಿರ್ಧರ್ಮಸ್ತಿಷ್ಠತಿಕೇವಲಃ|| ಮೃತಂಶರೀರ ಮುತ್ಸೃಜ್ಯಕಾಷ್ಠಲೋಷ್ಠಸಮಂಕ್ಷಿತೌ ವಿಮುಖಾಬಾಂಧವಾಯಾಂತಿ ಧರ್ಮಸ್ತಮನುಗಚ್ಛತಿ || ತಸ್ಮಾದ್ಧರ್ಮಂಸಹಾಯಾರ್ಥಂ ನಿತ್ಯಂಸಂಚಿನುಯಾಚ್ಛನೈಃ || ಧರ್ಮೇಣಹಿಸಹಾಯೇನ ತಮಸ್ತರತಿದುಸ್ತರಂ" ಇತ್ಯಾದಿ ಗ್ರಂಥಪ್ರತಿಪಾದಕವಾದ ಧರ್ಮಮಹಾತ್ಮ್ಯವನ್ನು ಅಲ್ಲಲ್ಲಿ ಬೋಧಿಸುತ್ತ ನಿಜಭಕ್ತರನ್ನು ಧರ್ಮಾಯತ್ತರನ್ನಾಗಿ ಮಾಡುತ್ತಿದ್ದ ಶ್ರೀಪೂಜ್ಯರಾದ ತುಂಬಾಪುರದ ಚನ್ನಬಸವ ಶಿವಾಚಾರ್ಯಶಿವಯೋಗಿಗಳವರು ಅರಸೀಕೆರೆ ತಾ|| ನಲ್ಲಿ ಸುಪ್ರಸಿದ್ಧವಾದ ಅನೇಕ ವನಸ್ಪತ್ಯೌಷಧಿಗಳಿಂದಲೂ, ಮಂಜುಳವಾದ ಲತೆಗಳಿಂದಲೂ, ಫಲಪುಷ್ಪಪಲ್ಲವ ತಲ್ಲಜಗಳಿಂ ಪರಿಶೋಭಿಸುವ ವೃಕ್ಷಶಾಖಾಗ್ರಗಳಲ್ಲಿರುವ ನಾನಾವಿಧ ಪಕ್ಷಿಗಳ ಮನೋಹರವಾದ ಕಲಕಲ ಧ್ವನಿಗಳಿಂದಲೂ ಶೈತ್ಯಸೌರಭ್ಯಮಾಂದ್ಯವಿಶಿಷ್ಟವಾದ ವಾಯುವಿನ ಸಂಚಾರದಿಂದಲೂ, ಅತ್ಯಂತ ಮುದಾಸ್ಪದವಾದ ಸ್ಥಳವಿಶೇಷಗಳಿಂದಲೂ, ವಿಲಸಿತವಾಗಿ ಪ್ರೇಕ್ಷಕರ ದೃಙ್ಮನಸ್ಸುಗಳನ್ನು ಆಕರ್ಷಿಸುತ್ತಲೂ, ಭಕ್ತಜನರಿಗಿಷ್ಟಾರ್ಥವನ್ನುಂಟುಮಾಡುತ್ತಲೂ, ಅತ್ಯಂತ ರಮಣೀಯಕವಾಗಿರುವ ಶ್ರೀಸಿದ್ಧರಬೆಟ್ಟವೆಂಬ ಪರ್ವತಾಗ್ರಭಾಗದಲ್ಲಿ ಶಿವಕೀರ್ತನಾನಂದದಲ್ಲಿದ್ದು ನಿಜಭಕ್ತಜನಕ್ಕೆ ಭಾವಿಫಲವನ್ನು ಸೂಚಿಸಿ, ಬ್ರಹ್ಮೇಂದ್ರಾದಿಮರುದ್ಗಣಸ್ತುತಿಮುಖರಿತನಾಗಿಯೂ ಅಸಂಖ್ಯಾಕ ಪ್ರಮಥಗಣ ಪರಿವೃತನಾಗಿಯೂ, ಶಾಂತಿಸುಖಭೂಯಿಷ್ಠನಾಗಿಯೂ ಇರುವ ಶ್ರೀಸಾಂಬಶಿವಲೋಕವನ್ನು ಕುರಿತು ಗತಿಸಿದ ಶಾರ್ವರಿ ನಾಮ ಸಂವತ್ಸರದ ಅಶ್ವಯುಜ ಶು|| ೪ ಮಿತಿಯಲ್ಲಿ ದಯಮಾಡಿಸಿದರು. ಈ ಪೂಜ್ಯರು ದಯಮಾಡಿರುವ ಪೂರ್ವದಿವಸದ ರಾತ್ರಿಯಲ್ಲಿ ಪರ್ವತದ ಪ್ರದೇಶದಲ್ಲಿ ಎಲ್ಲೆಲ್ಲಿ ನೋಡಿದರೂ ಸಾವಿರಾರು ಪಂಜುಗಳ ಬೆಳಕಿನಂತೆ ತೋರಿತು. ಮತ್ತೂ ಒಬ್ಬ ಭಕ್ತನ ಸ್ವಪ್ನದಲ್ಲಿ ದಿವ್ಯವಿಮಾನದಲ್ಲಿ ಮಂಡಿಸಿ ಅತಿವೈಭವದಿಂದ ದಯಮಾಡಿಸಿದಂತೆ ತೋರಿತು. ಮತ್ತೂ ಈಗ ೩-೪ ವರ್ಷಗಳಲ್ಲಿ ಈ ಮಹಾತ್ಮರ ಗದ್ದುಗೆಯಮೇಲೆ ಭಾಗೀರಥಿಯು ಪ್ರವಹಿಸಿದ್ದನ್ನು ಸರ್ವರೂ ಬಲ್ಲರು. ಇನ್ನೂ ಎಷ್ಟೋ ಮಹತ್ವವು ಜನಗಳಿಗನುಭವಕ್ಕೆ ಬಂದಿರುತ್ತದಲ್ಲದೆ ಈ ಸಿದ್ಧಪುರುಷರು ಯಾವಾಗ್ಗೂ ತಮ್ಮ ಸನ್ನಿಧಿಯಲ್ಲಿ ನೂರಾರು ಜನ ಭಕ್ತಮಾಹೇಶ್ವರರಿಗೆ ಮೃಷ್ಟಾನ್ನದಿಂದ ತೃಪ್ತಿಗೊಳಿಸುತ್ತಾ ಯಾವಾಗ್ಗೂ ಅನ್ನದಾನದಲ್ಲಿ ಪ್ರೀತಿಬಾಹುಲ್ಯವುಳ್ಳವರಾಗಿದ್ದ ಕಾರಣ ಈ ಪರಮಪುರುಷರಿಗಭಿಮತವಾಗುವಂತೆ ಪ್ರಮಥರ ಅನುಗ್ರಹಪ್ರಾಪ್ತಿಗೋಸ್ಕರ ಈ ಪ್ರದೇಶದ ಭಕ್ತಮಾಹೇಶ್ವರರೆಲ್ಲರೂ ಮಿಳಿತರಾಗಿ ಕಳೆದ ಶಾರ್ವರಿ ನಾಮ ಸಂ|| ರ ಕಾರ್ತೀಕ ಶು|| ೧೫ ಮಿತಿ ಮೊದಲುಗೊಂಡು ಪ್ರತಿ ಸಂ|| ದ ಕಾರ್ತೀಕ ಶು|| ೧೫ ದಿವಸ ಈ ಪರ್ವತದಗ್ರಭಾಗದಲ್ಲಿರುವ ಶ್ರೀ ಸಿದ್ಧರ ಗವಿಯಲ್ಲಿಯೂ, ಶ್ರೀ ಚೆನ್ನಬಸವ ಶಿವಯೋಗಿಗಳ ಗದ್ದುಗೆಯಲ್ಲಿಯೂ, ಶ್ರೀ ರಾಮೇಶ್ವರ ಶಿವಾಲಯದಲ್ಲಿಯೂ, ಶ್ರೀ ರುದ್ರಾಭಿಷೇಕಪೂರ್ವಕ ಸಹಸ್ರನಾಮಾರ್ಚನಾದಿಗಳನ್ನು, ಗಣಾರಾಧನೆಯನ್ನು ಹಾಗೂ ದೀಪೋತ್ಸವವನ್ನು ನಡೆಯಿಸಿ, ಈ ದೇಶವನ್ನಾಳುವ ಪ್ರಭುಗಳಿಗೂ, ಪ್ರಜೆಗಳಿಗೂ ಸುಖಸಮಾಧಾನ ಸುಭಿಕ್ಷಸಮೃದ್ಧಿಯುಂಟಾಗುವಂತೆ ಪ್ರಾರ್ಥಿಸಿಕೊಂಡು ಬರುವೀಪದ್ಧತಿಯಂತೆ ಈ ಸಂವತ್ಸರದಲ್ಲಿಯೂ ಇದೆ ಕಾರ್ತೀಕ ಶು|| ೧೫ ದಿವಸ ಮೊದಲುಗೊಂಡು ೩ ದಿವಸಗಳವರೆಗೂ ಅತ್ಯಂತ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. (ಸೇಶು)

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶಕಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂಬಿನಸ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

14 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೋತ್ತೇಜನೆಯು ಹೆಚ್ಚಾಗಿ ಸಂತತಿ ಧಾರಣೆಕೆ ಯೋಗ್ಯವಾದ ಧಾತುವಾಗುತ್ತದೆ. ಹಸ್ತಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."
("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕರುಳ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ವಿಜಾ. ([illegible])

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

28

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿಧೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

25 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ವ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ.
ಜಿಲ್ಲ ಉತ್ತರಕನಡಾ.

ಪಂಡಿತ ಎಸ್. ಗಣೇಶಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ ಮೈಸೂರು.

69

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೫ ಮಾತ್ರೆ ಸೀಸೆ ೦—೩—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪—೦—೦. ೧೫ ದಿನಗಳ ಔಷಧಿ ೭—೦—೧.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦—೩—೧.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ಉತ್ತಮ ಗ್ರಂಥಗಳು.

17

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿಧೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

35

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.



೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

೧೯೧೧ನೆಯ ಇಸವಿ ಡಿಸೆಂಬರ್ ತಾ॥ ೧೮ ರಿಂದ ೧೯೧೧ ನೆಯ ಡಿಸೆಂಬರ್ ತಾ॥ ೨೪ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಮಾರ್ಗಶಿರ ಬ॥ ತ್ರಯೋದಶಿಯಿಂದ ಪುಷ್ಯ ಶು॥ ಚೌತಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುತೇದಿ
18	ಸೋ	ತ್ರ	23-20	ಅನೂರಾ	60-0	3
19	ಮಂಗ	ಚ	26-56	ಅನೂರಾ	2-24	4
20	[1]ಬುಧ	ಅ	31-38	ಜ್ಯೇಷ್ಠ	7-28	5
21	[2]ಗುರು	ಪಾ	36-56	ಮೂಲ	13-42	6
22	ಶುಕ್ರ	ಬಿ	42-22	ಪೂ.ಷಾ	21-12	7
23	[3]ಶನಿ	ತ	47-46	ಉ.ಷಾ	26-50	8
24	[4]ಭಾನು	ಚೌ	52-34	ಶ್ರವಣ	32-44	9

(1) ಸರ್ವತ್ರ ಅಮಾವಾಸ್ಯಾ. (2) ಶೂನ್ಯಮಾಸಾರಂಭಃ ಮಾರ್ಗಶಿರ ಲಕ್ಷ್ಮೀವ್ರತಂ. (3) ಮೊಹರಂ ಚಂದು ಗ್ರ ತುರುಷ್ಕದೇವೋತ್ಸವಾರಂಭಃ. (4) ಕ್ಷಿಪ್ರಗಣಪತಿವ್ರತಂ, ಮಕರಾಯನಂ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಜಯತ್ವಸೌ ಪತ್ರಿಕೋಡುರಾಜೀಯಾಣ್ !
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಷ್ಟದಶೀಲ ನಾಕಳಿತಪಾಶ್ಚ್ಯಾತ್ಯಾಲವಾಲಂಬಲಂ !
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮೋಂಚಿತ್ತ್ಯೇಯಂ ಸದಾಪೂರೇಗೆ ಗೌರೀಶಾನುಕಂಪೋಜ್ವಲಂ !

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ದಿಸೆಂಬರ್ ತಾರೀಖು ೨೫ ನೆಯ ಸೋಮವಾರ. ಸಂಚಿಕೆ ೫೨

ಊದಬತ್ತಿಗಳು.

42

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ದಶಾಂಗಪೊಟ್ಟಣ ೧ಕ್ಕೆ ೪ ಆಣೆ; ಧೂವದ ಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸಿಂಗಿರಾಜಪುರಾಣವಿಜಯಂ

8

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ದೀವಟಿಗೆಬೀದಿ
ಮೈಸೂರು.

---

8 **ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.**

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೬-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೬ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಡ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi. North Kanara District

ನೋಟೀಸ್.

3

ದಿ ಕಮರ್ಷಿಯಲ್ ಗೈಡ್ ಅಂಡ್ ಇಂಡಿಯನ್ ಮರ್ಚೆಂಟ್ಸ್

ಎಂಬ ಪುಸ್ತಕವು ವ್ಯಾಪಾರೀಕರಿಗೆ ದೇಶದ ಮತ್ತು ದ್ವೀಪಾಂತರಗಳ ಅನೇಕ ವಿಷಯಗಳನ್ನು ಅತಿ ಸುಲಭರೀತಿಯಿಂದ ತಿಳಿಯುವಂತೆ ಪ್ರಿಂಟ್ ಮಾಡಿಸಲ್ಪಡುತ್ತೆ. ಈ ತರಹಾ ಪುಸ್ತಕ ಈವರೆಗೆ ಯಾವದೂ ಪ್ರಿಂಟಾಗಿಲ್ಲ. ಅನೇಕ ಸ್ಥಳಗಳಲ್ಲಿನ ದೊಡ್ಡ ದೊಡ್ಡ ವ್ಯಾಪಾರೀಕರ ಹೆಸರನ್ನು, ಆ ಸ್ಥಳಗಳ ಉತ್ಪತ್ತಿ, ರಪ್ತು, ಆಮದರಪ್ತು, ಅಳತೆ ತೂಕ, ಮೊದಲಾದ ಅನೇಕ ವಿಷಯಗಳನ್ನು ಗರ್ಭೀಕರಿಸಿರುತ್ತೆ. ಈಗ ಸದ್ಯಕ್ಕೆ ಇಂಗ್ಲಿಷಿನಲ್ಲಿಯೇ ರಚಿಸಲ್ಪಡುತ್ತೆ. ಈ ಪುಸ್ತಕದಲ್ಲಿ ಈವರೆಗೆ ೪-೫ ಸಹಸ್ರ ವರ್ತಕರ ಹೆಸರುಗಳು ಸಂಗ್ರಹವಾಗಿರುತ್ತವೆ ಈ ಪುಸ್ತಕದಲ್ಲಿ ತಮ್ಮ ತಮ್ಮ ಹೆಸರನ್ನು ನಮೂದಿಸಬೇಕೆಂಬ ಅಭಿಲಾಷೆಯುಳ್ಳ ವರ್ತಕರು ತಮ್ಮ ತಮ್ಮ ಸ್ಥಳದಲ್ಲಿನ ಉತ್ಪತ್ತಿ, ರಪ್ತು, ಆಮದರಪ್ತು, ಅಳತೆ, ತೂಕ ವಿಷಯಗಳನ್ನು ನಮೂದಿಸಿ ತೀವ್ರವಾಗಿ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳುಹಿಸುವದು ಮತ್ತು ಪ್ರತಿಯೊಂದು ಪುಸ್ತಕದ ಮೊದಲನೇ ಪೇಜಿನಲ್ಲಿ ಒಂದೊಂದು ಕೂಪನ್ನು ನಂಬರು ಎನಿಸಿ ಇಡಲ್ಪಡುತ್ತೆ. ೧೦೦೦ ಪ್ರತಿಗಳು ವಿಕ್ರಯದ ಕೂಡಲೆ ಲಾಟರಿಹಾಕಿ, ೧, ೨, ೩ ನೇ ಯವರಿಗೆ ೨೫, ೧೫, ೧೦ ರಂತೆ ವಿನಿಯೋಗಿಸುತ್ತೆ. ಅಭಿಮಾನಶಾಲಿಗಳು ಪ್ರೋತ್ಸಾಹ ಕೊಡಬೇಕಾಗಿ ಕೋರುವ

ಜಿ. ಕೆ. ರುದ್ರಾರ್ಯ,
೨೮. ಕುಂಬೇರಸವಾಜಿ ಬೀದಿ
ಬೆಂಗಳೂರು ಸಿಟಿ

ಉತ್ತಮ ಗ್ರಂಥಗಳು.

19

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ. —೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ
ಗ್ರಂಥಪ್ರಕಾಶಕ ಮಂಡಲಿ, ಮೈಸೂರು

ಪತ್ರವ್ಯವಹಾರ.

ಕಿರೀಟಧಾರಣಮಹೋತ್ಸವಸಂಬಂಧವಾಗಿ ನಾನಾ ಕಡೆಯಲ್ಲಿ ನಡೆದ ಉತ್ಸವಸಮಾರಂಭಗಳು.

ಆವಿನಹಳ್ಳಿ ಮೂಗಣಿ ಕೆರೆಮಠ.

ಶಿವಮೊಗ್ಗ ಡಿ॥ ಸಾಗರ ತಾ॥ ಆವಿನಹಳ್ಳಿ ಮೂಗಣಿ ಶ್ರೀಮನ್ಮಹಾಗುರು ಸಂಸ್ಥಾನ ಕೆರೆಮಠದ ಪಟ್ಟಾಧ್ಯಕ್ಷ ಮಹಾಂತಸ್ವಾಮಿಗಳು ಕಳೆದ ತಾ॥ ೧೨ ನೆಯ ಮಂಗಳವಾರ ದಿವಸ ತಮ್ಮ ಮಠದಲ್ಲಿಯೂ, ಮಠದ ಇದಿರಿಗಿರುವ ಈಶ್ವರಾಲಯದಲ್ಲಿಯೂ ಸಹ ಶ್ರೀಮನ್ ಜಾರ್ಜ್ ಚಕ್ರವರ್ತಿ ದಂಪತಿಗಳ, ಮತ್ತೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಕುರಿತು ಪೂಜೋಪಚಾರಗಳನ್ನೂ, ದೀಪೋತ್ಸವವನ್ನೂ ಜರುಗಿಸಿ, ಬಡಬಗ್ಗರಿಗೆ ಅನ್ನದಾನ ವಗ್ಯೆರೆ ನಡಿಸಿ, ಶ್ರೀ ಚಕ್ರವರ್ತಿಯವರ ಹೆಸರಿನಿಂದ ಒಂದು ದೇವಾಲಯವನ್ನು ಕಟ್ಟಿಸಿ ಶ್ರೀ ಗಣಪತಿಮೂರ್ತಿಸ್ಥಾಪನೆಮಾಡುತ್ತೇವೆಂದು ವಾಗ್ದಾನಮಾಡಿರುತ್ತಾರೆ. ಈ ಪಟ್ಟದ ಸ್ವಾಮಿಗಳಲ್ಲಿರತಕ್ಕ ಔದಾರ್ಯಾದಿ ಸದ್ಗುಣಗಳಿಗಾಗಿ ಅವರನ್ನು ಜನರು ಕೊಂಡಾಡಿದರಲ್ಲದೆ, ಕೇವಲ ರಾಜನಿಷ್ಠರೆಂದೂ ಹೇಳಿ ತಂತಮ್ಮ ಮನೆಗಳಿಗೆ ತೆರಳಿದರು. ಪ್ರತ್ಯಕ್ಷದರ್ಶಿ.

ಚಿಕ್ಕಮಗಳೂರು ತಾ॥ ಮುಗುಳುವಳ್ಳಿ.

ನಮ್ಮ ಗ್ರಾಮದ ಸ್ಕೂಲ್ಮಾಸ್ಟರ್ ಮ॥ ಎಸ್. ವೆಂಕಟಸುಬ್ಬಯ್ಯನವರು ಶ್ರೀಮದಿಂಡಿಯಾ ಚಕ್ರವರ್ತಿಸಾರ್ವಭೌಮರವರ ಕಿರೀಟಧಾರಣಮಹೋತ್ಸವಸಂಬಂಧವಾಗಿ ಸ್ಕೂಲ್ ಮುಂಭಾಗದಲ್ಲಿ ಬಾವುಟಗಳಿಂದಲೂ, ಬಟ್ಟೆಗಳಿಂದಲೂ, ಹುವ್ವಿನಿಂದಲೂ ಅಲಂಕರಿಸಿದ್ದ ದೊಡ್ಡ ಚಪ್ಪರದಲ್ಲಿ ಚಕ್ರವರ್ತಿಗಳವರ ಭಾವಚಿತ್ರಪಟವನ್ನಿರಿಸಿ ಈ ಮಾಹೆ ತಾ॥ ೧೨ ರ ಮಧ್ಯಾಹ್ನ ೨ ಗಂಟೆಗೆ ನಮ್ಮ ಗ್ರಾಮದ ಪಟೇಲ್ ಶ್ಯಾನುಭೋಗರೇ ಮೊದಲಾದ ನೂರಾರು ಜನಗಳನ್ನ ಸಭೆಸೇರಿಸಿ ವಿದ್ಯಾರ್ಥಿಗಳಿಂದ ಆಟಪಾಟಗಳನ್ನುಮಾಡಿಸಿ ಹಾಡುಗಳನ್ನು ಹೇಳಿಸಿ ಡ್ರೈಲ್ ಮತ್ತು ಇಂಗ್ಲೀಷ್‌ರಾಜ್ಯಭಾರದಿಂದ ನಮಗುಂಟಾಗಿರುವ ಮಹದುಪಕಾರಗಳನ್ನು ವಿದ್ಯಾರ್ಥಿಗಳಿಂದಲೇ ಉಪನ್ಯಾಸಮಾಡಿಸಿದುದಲ್ಲದೆ, ಚಕ್ರವರ್ತಿಸಾರ್ವಭೌಮರವರ ಮತ್ತೂ ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಂಗಳವಾದ್ಯ ಮೊದಲಾದುವುಗಳಿಂದ ಸಭಿಕರನ್ನ ಆನಂದಪಡಿಸಿದನಂತರ, ವಿದ್ಯಾರ್ಥಿಗಳೇ ಮೊದಲಾದವರೆಲ್ಲರಿಗೂ ಸಕ್ಕರೆ ಪೆಪರ್‌ಮೆಂಟ್‌ಗಳನ್ನು ಹಂಚಿ ಗಂಧಪುಷ್ಪತಾಂಬೂಲಾದಿಗಳಿಂದ ಸಂತೋಷಪಡಿಸಿದಮೇಲೆ ರಾತ್ರಿ ೮ ಗಂಟೆಗೆ ಸಭೆಯು ಬರಖಾಸ್ತಾಯಿತು. ವೀರಪ್ಪಗೌಡ, ಪಟೇಲ್.

ಅರಸೀಕೆರೆ ತಾ॥ ದೊಡ್ಡಮೇಟಿಕುರ್ಕೆ.

ಶ್ರೀಮದಿಂಡಿಯಾದೇಶದ ಸಾರ್ವಭೌಮರಾದ ೫ ನೆಯ ಜಾರ್ಜ್ ಪ್ರಭುಗಳ ಮತ್ತೂ ಶ್ರೀಮತಿ ಮೇರಿ ಮಹಾರಾಜ್ಞಿಯವರ ಪಟ್ಟಾಭಿಷೇಕ ಮಹೋತ್ಸವದ ಗೌರವಾರ್ಥವಾಗಿ ಇದೇ ಡಿಸೆಂಬರು ೧೨ ನೆಯ ತಾ॥ ಮಂಗಳವಾರದ ದಿವಸ ಈ ಗ್ರಾಮದ ಶ್ಯಾನುಭೋಗ ಮ॥ ಹರಿಯಪ್ಪನವರು ಬಹಳ ಮುತುವರ್ಜಿವಹಿಸಿ ಆಂಜನೇಯ ಸ್ವಾಮಿಯವರ ಉತ್ಸವವನ್ನು ಮಾಡಿಸಿದನಂತರ ಸ್ಕೂಲ್ ಹಾಲಿನಲ್ಲಿ ದೊಡ್ಡ ಸಭೆಯನ್ನು ಸೇರಿಸಿ ಶ್ರೀಮನ್ ಚಕ್ರವರ್ತಿಯವರ ಮತ್ತೂ ಶ್ರೀಮತಿ ಚಕ್ರವರ್ತಿನಿಯವರ ಅಂದವಾದ ತಸ್ವೀರನ್ನು ಇಟ್ಟು, ಚಕ್ರವರ್ತಿಗಳ ಪರವಾದ ವಿಜ್ಞಾಪನಾಪತ್ರಿಕೆಯನ್ನು ಓದಿ ಸಭೆಯನ್ನು ಮಂಗಳವಾದ್ಯಗಳಿಂದ ಮುಕ್ತಾಯಮಾಡಿದರು. ತರುವಾಯ ಬಾಲಕರುಗಳಿಗೆ ಸಕ್ಕರೆ ಮಿಠಾಯಿ ಹಂಚಲ್ಪಟ್ಟಿತು. ಈ ಸಭೆಯಲ್ಲಿ ನೆರೆದಿದ್ದ ಪ್ರಮುಖ ಮನುಷ್ಯರಾದ ನಾ॥ ಮಲ್ಲಪ್ಪನವರು ಸರ್ಕಾರಿ ಗುಂಡುತೋಪಿನಲ್ಲಿ ಫಲವೃಕ್ಷಗಳನ್ನು ಶ್ರೀ ಚಕ್ರವರ್ತಿಯವರ ಹೆಸರಿನಲ್ಲಿ ಅಭಿವೃದ್ಧಿಗೆ ತರುತ್ತೇವಾಗಿ ಒಪ್ಪಿಕೊಂಡರು. ಶ್ಯಾ॥ ಮ॥ ಹರಿಯಪ್ಪನವರು ಶೇಖರಿಸಿದ್ದ ಧಾನ್ಯವನ್ನು ಬಡರೈತರಿಗೆ ಹಂಚಿಸಿದರು. ರಾತ್ರಿ ಪ್ರತಿದೇವಸ್ಥಾನಗಳಲ್ಲಿ ಮಂಗಳಾರತಿ ನಡಿದು ಆ ದಿವಸವನ್ನೆಲ್ಲಾ ಸಂತೋಷದಿಂದ ಕಳೆದರು. ಪ್ರಜಾಭಿಮಾನಿ

ಧಾರವಾಡ ಡಿ॥ ಕೋಡ ತಾ॥ ಕಚವಿ.

ತಾ॥ ೧೨-೧೨-೧೯೧೧ ನೇ ಇಸವಿಯ ದಿವಸ ನಮ್ಮ ಊರಲ್ಲಿ ನಮ್ಮ ಸಾರ್ವಭೌಮರಾದ ೫ ನೆಯ ಜಾರ್ಜ್ ಬಾದಶಹರವರ ಪಟ್ಟಾಭಿಷೇಕ ಮಹೋತ್ಸವವು ಕೆಳಗೆ ಬರೆದಪ್ರಕಾರ ಬಹು ವಿಜೃಂಭಣೆಯಿಂದ ಸಾಂಗವಾಯಿತು. ಪಟ್ಟಣವೆಲ್ಲ ಮಂಟಪ ತೋರಣಗಳಿಂದ ಶೃಂಗರಿಸಲ್ಪಟ್ಟು ದೇವಾಲಯಗಳಿಗೆ ಹಾಗೂ ಸರಕಾರಿ ಇಮಾರತುಗಳಿಗೆ ಕದಳಿಕಂಬಗಳಿಂದಲೂ, ಕಬ್ಬಿನ ಜಲ್ಲಿಗಳಿಂದಲೂ ಶೃಂಗಾರ ಮಾಡಿತ್ತು. ಪ ಸರಕಾರಿ ಕನ್ನಡ ಶಾಲೆಯೊಳಗೆ ಮಹಾರಾಜರ ಸಿಂಹಾಸನಮಾಡಿ ಸದರಿ ಸಿಂಹಾಸನದ ಮೇಲೆ ಮಹಾರಾಜ ೫ ನೆಯ ಜಾರ್ಜ್ ಬಾದಶಹರ ಹಾಗೂ ಮಹಾರಾಜ್ಞಿ ಧೊರೆಸಾನಿಯವರ ಫೋಟೊ ಕೂಡ್ರಿಸಿ ಪುಷ್ಪಾಲಂಕಾರದಿಂದ ಶೃಂಗಾರಮಾಡಿ ಮಹಾಜನರ ಸಭೆಗೂಡಿಸಿತ್ತು. ಸಭಿಕರಲ್ಲಿ ಮಿಸ್ಟರ್ ಶ್ರೀನಿವಾಸರಾವ್ ಕುಲಕರ್ಣಿ ಇವರು ಬಾದಶಹರ ಚರಿತ್ರೆಯ ವಿಷಯವಾಗಿ ವ್ಯಾಖ್ಯಾನಕೊಟ್ಟರು. ಮತ್ತು ಬಾದಶಹರ ಪಟ್ಟಾಭಿಷೇಕ ಕಾಲಕ್ಕೆ ಜಾಹೀರನಾಮೆಯಾದಂತೆ ಜಾಹೀರನಾಮೆಯನ್ನು ಓದಿ ಹೇಳಿದರು. ಮಾಸ್ತರರು ವಿದ್ಯಾರ್ಥಿಗಳಿಂದ ಮಹಾರಾಜರ ವಿಷಯದ ರಾಷ್ಟ್ರಗೀತವನ್ನು ಹಾಡಿಸಿದರು. ಮ॥ ಶಿವರುದ್ರಪ್ಪಾಕೊಪ್ಪದ ಇವರು ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದರು. ರಾತ್ರಿ ೭ ಗಂಟೆಗೆ ದೀಪೋತ್ಸವ ಕೆಲಸವು ಅಂದವಾಗಿ ಪೂರ್ಣವಾಯಿತು.

ಗವಿಗೆಪ್ಪಾ ಗುರುಶಾಂತಪ್ಪಾ ಶಿವಪೂರ,
ಇರಿಗೇಷನ್ ಕ್ಲಾರ್ಕ್ ಸಾ॥ ಕಚವಿ.

ಸಕಲೇಶಪುರ.

(ಕಳೆದವಾರದ ಶೇಷ.)

ಈ ಕೆಲಸಗಳೆಲ್ಲಾ ಉದ್ದೇಶಿಸಿದಂತೆ ನೆರವೇರಿಸಬೇಕೆಂದು ಸಬ್ ಡಿವಿಜನ್ ಸಾಹೇಬರವರ ಸಲಹೆಗಳಿಗನುಸಾರವಾಗಿ ಬಹಳ ಶ್ರಮವನ್ನು ವಹಿಸಿ ಕೆಲಸಗಳನ್ನು ಶ್ಲಾಘ್ಯತರವಾ ನೆರವೇರಿಸಿದ ಮ॥ ಗಳಾದ ಸುಳಿ ವೆಂಕಟರಾಮಯ್ಯನವರು ದೋಣಿಗಾಲ್ ನಂಜೇಗೌಡರು ಮತ್ತೂ ಹೊಸಕೆರೆ ಮಲ್ಲೇಗೌಡರರೇ ಮೊದಲಾದ ಸ್ಥಳೀಯ ದೊಡ್ಡಮನುಷ್ಯರುಗಳ ಸಹಾಯವು ಶ್ಲಾಘನೀಯವಾಗಿದೆ. ಇಲ್ಲಿ ಹಿಂದೆ ನಡೆದ ಉತ್ಸವಗಳಲ್ಲೆಲ್ಲಾ ಇದು ಅತ್ಯುತ್ತಮವಾದದ್ದೆಂಬುವುದೇ ಇವರು ಪಟ್ಟ ಶ್ರಮಕ್ಕೆ ಸಾಕ್ಷಿಯಾಗಿರುವಲ್ಲಿ ಹೆಚ್ಚಿಗೆ ಹೇಳಬೇಕಾದ್ದೇನಿದೆ? ಈ ಸಂದರ್ಭದಲ್ಲೇ ಇಲ್ಲಿನ ವೀರಶೈವ ಮಹಾಜನಗಳೆಲ್ಲರೂ ಸೇರಿ ಇಲ್ಲಿನ ಲಿಂಗಾಯಿತ ವಿದ್ಯಾರ್ಥಿಗಳಿಗೆ ಒಂದು ಸ್ಟೂಡೆಂಟ್ಸ್‌ಹೋಮನ್ನು ಸ್ಥಾಪಿಸಿ ಅನುಕೂಲಗಳನ್ನು ಕಲ್ಪಿಸಬೇಕೆಂದು ಏರ್ಪಾಡುಗಳು ನಡೆಯುತ್ತಿವೆಯೆಂಬ ಒಂದು ಸಂತೋಷಕರವಾದ ವದಂತಿ ಇದೆ. ಇಂತಹ ಕೆಲಸದಲ್ಲಿ ಪ್ರವೃತ್ತರಾಗಿರುವ ಮಹನೀಯರುಗಳೆಲ್ಲರೂ ಏಕೀಭವಿಸಿ ಉದ್ದೇಶಿಸಿದಂತೆ ಕಾರ್ಯವನ್ನು ಕೊನೆಗಾಣಿಸಿದಲ್ಲಿ ಮಲೆನಾಡಾದ ಈ ತಾಲ್ಲೋಕಿನ ಕುಗ್ರಾಮಗಳಲ್ಲಿ ಸೇರಿಕೊಂಡು ವಿದ್ಯಾಭ್ಯಾಸದ ಹೆಸರನ್ನೇ ತಿಳಿಯದ ಅನೇಕರಿಗೆ ವಿದ್ಯಾದಾನ ಮಾಡಿದ ಪುಣ್ಯಕ್ಕೆ ಪಾತ್ರರಾಗುವುದಲ್ಲದೆ ಇಂತಹ ಕೆಲಸಗಳು ದೇಶೋನ್ನತಿಗೆ ಅತ್ಯವಶ್ಯಕವಾದವುಗಳಾಗಿರುವುದರಿಂದ ಇವರುಗಳಿಗೆ ದೇಶಬಾಂಧವರೆಂಬ ಬಿರುದೂ, ಶಾಶ್ವತವಾದ ಕೀರ್ತಿಯೂ ಉಂಟಾಗುವುದರಲ್ಲಿ ಸಂದೇಹವೇ ಇಲ್ಲ.

ಹೆಗ್ಗಡದೇವನಕೋಟೆ ತಾ॥ ಜೋಡಿನೇರಳೆಗ್ರಾಮ.

ಈ ಗ್ರಾಮದಲ್ಲಿರುವ ಗೌರ್ನಮೆಂಟ್ ಎಲಿಮೆಂಟರಿ ಪಾಠಶಾಲೆಯು ಹಾಲು ಘನವನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ೫ ನೆಯ ಜಾರ್ಜ್ ಪ್ರಭುಗಳವರ ಕಿರೀಟಧಾರಣಮಹೋತ್ಸವದ ಸಂತೋಷವನ್ನು ಸೂಚಿಸುವುದಕ್ಕಾಗಿ ಇದೇ ತಾ॥ ೧೨ ನೆಯ ಮಂಗಳವಾರ ಚಪ್ಪರ ಪೀಲುಕಪ್ಪಗಳಿಂದಲೂ, ತೋರಣಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿದ್ದುದಲ್ಲದೆ ಸರ್ಕಾರದವರಿಂದ ದಯಪಾಲಿಸಿದ ಸಾರ್ವಭೌಮರವರ ಭಾವಚಿತ್ರಪಟವು ಮತ್ತೂ ಇಂಡಿಯಾ ದೇಶದ ಮುಖ್ಯರಾಜರುಗಳ ಭಾವಚಿತ್ರಪಟಗಳುಪುಷ್ಪಮಾಲಿಕೆಗಳಿಂದಲಂಕರಿಸಲ್ಪಟ್ಟಿದ್ದುವು. ಈ ಸ್ಕೂಲಿನ ಉಪಾಧ್ಯಾಯರುಗಳೂ ಕಮಿಟಿಯ ಮೆಂಬರುಗಳೂ, ಗ್ರಾಮದ ಮುಖಂಡ ರೈತರುಗಳೂ, ನೆರೆಗ್ರಾಮಗಳ ಮುಖಂಡರುಗಳೂ ಸುಮಾರು ೧೦೦ ಜನಗಳ ಮೇಲೆಯೇ ಮಧ್ಯಾಹ್ನ ೧೧ ಗಂಟೆಗೆ ಬಂದು ಸಭೆಯನ್ನು ಅಲಂಕರಿಸಿದರು. ಸಹಾಯೋಪಾಧ್ಯಾಯರಾದ ಮ॥ ಎಚ್. ಕೆ. ದೇವರಾಜ ಅರಸಿನವರು ನಡೆಯುವ ಮಹೋತ್ಸವದ ವಿಚಾರದಲ್ಲಿ ಕೆಲವುಹೊತ್ತು ಉಪನ್ಯಾಸಮಾಡಿದಮೇಲೆ, ಬಾಲಕಬಾಲಿಕೆಯರುಗಳು ಸಾರ್ವಭೌಮರವರ ಶ್ರೇಯಃಪ್ರಾರ್ಥನೆಗಳನ್ನು ಗಾನರೂಪವಾಗಿ ಹೇಳಿದರು. ಇದೇಗ್ರಾಮದ ರಾಮಪ್ಪಾಚಾರ್ ಎಂಬುವರು ಹಾರ್ಮೋನಿಯಂನಿಂದಲೂ, ಪಿಟೀಲಿನಿಂದಲೂ ಸಭಿಕರಿಗೆ ಆನಂದವನ್ನುಂಟುಮಾಡಿದ ತರುವಾಯ ಸಭಿಕರಿಗೆ ಗಂಧಪುಷ್ಪತಾಂಬೂಲಗಳು ಹಂಚಲ್ಪಟ್ಟವು. ಮತ್ತೂ ಸ್ಕೂಲ್ ಮೆಂಬರ್ ಮ॥ ಪಂಡಿತರು ವೆಂಕಟಕೃಷ್ಣಯ್ಯನವರು ಬಾಲಕಬಾಲಿಕೆಯರುಗಳಿಗೆ ಪಾರಿತೋಷಿಕವಾಗಿ ಮಿಠಾಯಿಯನ್ನು ಹಂಚಿದರು. ಆಮೇಲೆ ಸಭೆಯುವಿಸರ್ಜಿಸಲ್ಪಟ್ಟಿತು

ಪಟೇಲ್ ಪುಟ್ಟಸ್ವಾಮಿ.

ಮೊಳಕಾಲ್ಮುರು ತಾ॥ ಬೊಮ್ಮಗೊಂಡನಕೆರೆ.

ಕಳೆದ ತಾ॥ ೧೨ ರಲ್ಲಿ ತಳಿರುತೋರಣಾದಿಗಳಿಂದಲೂ, ಚಿತ್ರಪಟಗಳಿಂದಲೂ ಅಲಂಕೃತವಾಗಿದ್ದ ಈ ಗ್ರಾಮದ ಸ್ಕೂಲ್ ಕಟ್ಟಡದಲ್ಲಿ ಚಕ್ರವರ್ತಿದಂಪತಿಗಳ ಭಾವಚಿತ್ರಪಟವೂ, ಅದರ ಬಲಭಾಗದಲ್ಲಿ ನಮ್ಮ ಶ್ರೀಮನ್ ಮಹಾರಾಜರವರ ಭಾವಚಿತ್ರಪಟವೂ ಅಲಂಕರಿಸಲ್ಪಟ್ಟಿದ್ದುವು. ಫಾರೆಸ್ಟರ್ ರವರೂ, ಪೊಲೀಸು ದಫೇದಾರರೂ ಪೊಲೀಸರ ಕೂಡ ತಮ್ಮ ಫುಲ್ ಡ್ರೆಸ್ಸುಗಳನ್ನು ಧರಿಸಿಕೊಂಡು ಬಂದೂಕುಗಳ ಸಮೇತ ಬಂದಿದ್ದರು. ಗ್ರಾಮದ ಶಾನುಭೋಗರು, ಕೊತ್ವಾಲರು ಸ್ಕೂಲ್ ಕಮಿಟಿಯ ಮೆಂಬರುಗಳು, ವರ್ತಕರು ಮೊದಲಾದವರು ದಯಮಾಡಿಸಿದ್ದರು. ಸ್ಕೂಲಿನ ಹೊರಗಡೆ ವಾದ್ಯ ಘೋಷವಾಗುತ್ತಿದ್ದಿತು. ಒಳಗಡೆ ಬಾಲಕ ಬಾಲಿಕೆಯರು ಗ್ರಾಮದ ನಾಟಕಮಂಡಳಿಯವರೊಡನೆ ಶ್ರೇಯಃಪ್ರಾರ್ಥನಾಗಾನವನ್ನು ಮಾಡುತ್ತಿದ್ದರು. ೧ ಗಂಟೆಗೆ ಸರಿಯಾಗಿ ಪೊಲೀಸರು ಗುಂಡುಗಳನ್ನು ಹಾರಿಸಿದರು. ಧ್ವಜಪಟವು ಏರಿಸಲ್ಪಟ್ಟಿತು. ಪೂರ್ವಕಾಲದ ರಾಜ್ಯಭಾರಕ್ಕೂ ಈಗಿನ ಬ್ರಿಟಿಷ್ ಪ್ರಭುಗಳ ರಾಜ್ಯಭಾರಕ್ಕೂ ಇರುವ ತಾರತಮ್ಯವೂ ಈಗುಂಟಾಗಿರುವ ಪ್ರಜೆಗಳ ಸುಖಸಂಪತ್ತೆಲ್ಲಕ್ಕೂ ಆಂಗ್ಲ ಚಕ್ರಾಧಿಪತ್ಯದ ನಿಷ್ಪಕ್ಷಪಾತವಾದ ಮತ್ತೂ ನ್ಯಾಯಸಮ್ಮತವಾದ ಆಳುವಿಕೆಯೇ ಕಾರಣವೂ ಎಂಬ ಬಗ್ಗೆ ಉಪನ್ಯಾಸಗಳು ಮಾಡಲ್ಪಟ್ಟಮೇಲೆ ಚಕ್ರವರ್ತಿಯವರಿಗೂ ರಾಣಿಯವರಿಗೂ ದೀರ್ಘಾಯುರಾರೋಗ್ಯವು ಬಯಸಲ್ಪಟ್ಟಿತು ಅಲ್ಲಿಗೆ ೫ ಗಂಟೆಯಾಗಿದ್ದಿತು. ಅನಂತರ ಸಭಿಕರೆಲ್ಲರೂ ಹೊರಗೆ ಬಂದಮೇಲೆ ಆಟಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳು ಹಂಚಲ್ಪಟ್ಟವು. ಮ॥ ಭಾರಿ ಬಸಪ್ಪನವರು ಕೆಲವರಿಗೆ ಪುಸ್ತಕಗಳನ್ನೂ, ಪೆನ್ಸಿಲ್ಲು ಬಳಪಗಳನ್ನೂ ಫಾರೆಸ್ಟರ ಹಸ್ತದಿಂದ ಕೊಡಿಸಿದರು. ಚಂದಾದಾರ.

ಚಳ್ಳಕೆರೆ ತಾ॥ ಹಿರೇಹಳ್ಳಿ.

ತಾ॥ ೧೨ ರಬೆಳಿಗ್ಗೆ ೮ ಗಂಟೆಯಲ್ಲಿ ಎಲ್ಲಾ ಪಾಠಶಾಲೆಗಳ ಬಾಲಕ ಬಾಲಕಿಯರುಗಳು ಸ್ನಾನಮಾಡಿಯಿಂದ ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ಶ್ರೀ ಚಿಂತಾಮಣೀಶ್ವರ ದೇವಸ್ಥಾನಕ್ಕೆ ಬಂದು ಬಹು ಭಕ್ತಿಯಿಂದ ದೇವರ ಮಂಗಳಾರತಿಯನ್ನು ಮಾಡಿಸಿ ೫ ನೇ ಜಾರ್ಜ್‌ಪ್ರಭುಗಳ, ಮೇರಿರಾಣಿಯವರ ನಮ್ಮ ಶ್ರೀಮನ್ ಮಹಾರಾಜರವರ ಮತ್ತು ಯುವರಾಜರನ ಶ್ರೇಯಃಪ್ರಾರ್ಥನೆಯನ್ನು ಮಾಡಿ ದೇವರ ಪ್ರಸಾದವನ್ನು ತೆಗೆದುಕೊಂಡುಬಂದರು. ಧ್ವಜಪತಾಕೆಗಳಿಂದಲೂ ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ಸ್ಕೂಲ್ ಕಟ್ಟಡದಲ್ಲಿ ಎತ್ತರವಾದ ಪೀಠದಮೇಲೆ ಚಕ್ರವರ್ತಿದಂಪತಿಗಳ ಭಾವಚಿತ್ರವೂ ಅದರ ಪಕ್ಕದಲ್ಲಿ ಶ್ರೀಮನ್ ಮಹಾರಾಜರವರ ಮತ್ತೂ ಯುವರಾಜರ ಚಿತ್ರಪಟಗಳೂ ಇಡಲ್ಪಟ್ಟು ಪೂಮಾಲೆಗಳಿಂದಲಂಕರಿಸಲ್ಪಟ್ಟಿದ್ದವು. ಗ್ರಾಮದ ಮುಖಂಡಜನರು ಉಪಾಧ್ಯಾಯರುಗಳು, ಸರ್ಕಾರಿ ಉದ್ಯೋಗಸ್ಥರು ಮೊದಲಾದವರೂ ನೂತನ ವಸ್ತ್ರಾಭರಣಾಲಂಕೃತರಾದ ಬಾಲಕ ಬಾಲಕಿಯರುಗಳೂ ಮಧ್ಯಾಹ್ನದಲ್ಲಿ ಸಭಾಮಂಟಪವನ್ನಲಂಕರಿಸಿದರು. ರಾಜಾಜ್ಞಾಪತ್ರಿಕೆಯು ಓದಲ್ಪಟ್ಟಮೇಲೆ ಬಾಲಕ ಬಾಲಕಿಯರುಗಳಿಂದ ದೇವತಾಸ್ತೋತ್ರಗಳೂ ಚಕ್ರವರ್ತಿದಂಪತಿಗಳ ಮತ್ತೂ ಮಹಾರಾಜ ಸಹೋದರರ ಶ್ರೇಯಃಪ್ರಾರ್ಥನಾಸೂಚಿತವಾದ ಹಾಡುಗಳೂ ಹೇಳಲ್ಪಟ್ಟಮೇಲೆ ನೆರೆದಿದ್ದ ಸಭಿಕರಿಗೆಲ್ಲ ಗಂಧಪುಷ್ಪತಾಂಬೂಲಗಳು ಕೊಡಲ್ಪಟ್ಟು ಸಭೆಯು ವಿಸರ್ಜನಲ್ಪಟ್ಟಿತು. ಮಧ್ಯಾನ್ಹ ೪ ಗಂಟೆಯಮೇಲೆ ಬಾಲಕರುಗಳಿಂದ ಓಡುವುದು, ಹಾರುವುದು, ಹಗ್ಗವೆಳೆಯುವುದು ಮೊದಲಾದ ಆಟಗಳು ಆಡಿಸಲ್ಪಟ್ಟು ಗೆದ್ದವರಿಗೆ ಬಹುಮಾನಗಳು ಕೊಡಲ್ಪಟ್ಟವು. ಎಚ್. ಸಿ. ಕಪನಯ್ಯ, ಸ್ಕೂಲ್‌ಮಾಸ್ಟರ್.

ದಾವಣಗೆರೆ ತಾ॥ ಆನಗೋಡು.

ಕಳೆದ ತಾ॥ ೧೨ ರಲ್ಲಿ ನಮ್ಮನ್ನಾಳುವ ಹಿಂದೂಸ್ಥಾನ ಚಕ್ರವರ್ತಿಗಳಾದ ೫ ನೆಯ ಜಾರ್ಜ್ ಸಾರ್ವಭೌಮರ ಮತ್ತೂ ಚಕ್ರವರ್ತಿನಿಯವರಾದ ಮೇರಿ ಮಹಾರಾಣಿಯವರ ರಾಜ್ಯಾರೋಹಣದ ದರ್ಬಾರು ಉತ್ಸವದ ಪ್ರಯುಕ್ತ ಈ ಊರಲ್ಲಿ ಮ॥ ಕೇ. ಎಂ. ವೆಂಕಟರಾಮಯ್ಯನವರು, ಸ್ಕೂಲ್ ಮಾ. ಎಂ. ಶಾಮಣ್ಣನವರು, ಇ॥ ದಫೇದಾರ್ ಬಿ. ಕೃಷ್ಣಪ್ಪನವರು, ಗೌಡರು ಶ್ಯಾನುಭೋಗರು ಮೊದಲಾದ ಮುಖ್ಯಸ್ಥರು ಸೇರಿ ಚಂದಾಹಣವನ್ನು ಹಾಕಿ ಉತ್ಸವಾದಿಗಳನ್ನು ಮಾಡಿದರು. ಮಧ್ಯಾಹ್ನ ೨ ಗಂಟೆಯಿಂದ ಮ॥ ಕೇ. ಎಂ ವೆಂಕಟರಾಮಯ್ಯನವರು ಸಿದ್ಧೇಶ್ವರನ ದೊಡ್ಡ ದೇವಸ್ಥಾನದಲ್ಲಿ ಈ ಊರ ಜನರನ್ನೂ, ನೆರೆಹಳ್ಳಿಗಳ ಮುಖಂಡರನ್ನೂ ಒಟ್ಟುಗೂಡಿಸಿ ಒಂದು ದೊಡ್ಡ ಸಭೆಮಾಡಿದ್ದರು. ಆಗ ಸ್ಕೂಲ್ ಮಾ. ಎಂ. ಶಾಮಣ್ಣನವರು ಸರಿಯಾದ ದೃಷ್ಟಿನಿಂದ ಕೂಡಿದ ಹುಡುಗರಿಂದ ಓಡುವುದು, ನೆಗೆಯುವುದು, ಹಾರುವುದು ಮೊದಲಾದ ಆಟಗಳನ್ನು ಆಡಿಸಿ, ತಬಲಪಿಟೀಲುನೊಂದಿಗೆ ದೇವತಾ ಸ್ತೋತ್ರಗಳನ್ನೂ, ನಮ್ಮ ಮಹಾರಾಜ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಗಳನ್ನೂ ಹಾಡಿಸಿದನಂತರ ಚಕ್ರವರ್ತಿಗಳಿಗೆ ನಮ್ಮ ಮೇಲಿರುವ ಪ್ರಜಾನುರಾಗವನ್ನೂ, ಅವರುಈಗ ನಮ್ಮ ದೇಶಕ್ಕೇಬಂದು ಚಕ್ರವರ್ತಿಪಟ್ಟವನ್ನು ವಹಿಸಿ ನಮಗಳಿಗೆಲ್ಲಾ ನೇತ್ರಾನಂದವನ್ನೂ ಕರ್ಣಾನಂದವನ್ನೂ ಉಂಟುಮಾಡಿದ ಸಂಗತಿಯನ್ನೂ ಕುರಿತು ಉಪನ್ಯಾಸಪೂರ್ವಕ ಸಭೆಯವರಿಗೆಲ್ಲಾ ತಿಳಿಸಿದರು. ಆಮೇಲೆ ಮ॥ ಕೇ. ಎಂ. ವೆಂಕಟರಾಮಯ್ಯನವರು ಚಕ್ರವರ್ತಿಗಳವರಿಗೆ ಚಿರಕಾಲ ಸುಖವನ್ನಿತ್ತು ರಕ್ಷಿಸಲೆಂದು ದೇವರಿಗೆ ಪ್ರಾರ್ಥನೆಮಾಡಿದನಂತರ ತಂದಿದ್ದ ಮಿಠಾಯಿ ವಗ್ಯೆರೆ ತಿಂಡಿ ಸಾಮಗ್ರಿಯನ್ನು ಸ್ಕೂಲ್ ಹುಡುಗರಿಗೂ ಇತರರಿಗೂ ಹಂಚಿದರು. ಸಾಯಂಕಾಲ ೬ ಗಂಟೆಯಿಂದ ೧೦ ಗಂಟೆಯವರೆಗೂ ಈ ಊರು ಸಿದ್ಧೇಶ್ವರದೇವರಿಗೆ ಮದ್ದು, ಬಾಣ, ಹಗಲುಬತ್ತಿಯೊಂದಿಗೆ ಉತ್ಸವ ಮೆರವಣಿಗೆ ಮುಂತಾದುವುಗಳು ಮಾಡಲ್ಪಟ್ಟವು. ಈ ದಿವಸವೆಲ್ಲಾ ನೆರೆದಿದ್ದ ಜನರಿಗೆ ಬಹಳ ಸಂತೋಷಕರವಾಗಿದ್ದಿತು.

ಕೆ ವೀರಬಸಪ್ಪ, ಆನಗೋಡು.

ಕೊಪ್ಪ ತಾ। ಭಂಡಿಗಡಿ.

ಕಳೆದ ತಾ। ೧೨ ನೇ ಮಂಗಳವಾರವು ಈ ಭರತಖಂಡಕ್ಕೆ ಸುದಿನವಷ್ಟೆ. ಈ ದಿವಸ ಇಲ್ಲಿನ ಸ್ಕೂಲಿನಲ್ಲಿ ಈ ಗ್ರಾಮದ ಮುಖಂಡರು ಮುಂತಾದ ಮಹನೀಯರು ಸಭೆಸೇರಿ ಶ್ರೀ ಚಕ್ರವರ್ತಿಯವರ ಭಾವಚಿತ್ರವನ್ನು ಅತ್ಯಂತ ವಿಜೃಂಭಣೆಯಿಂದ ಉತ್ಸವವೆಸಗಿದರು. ಅಲ್ಲದೆ ಇಲ್ಲಿಯ ಸ್ಕೂಲ್‌ಮಾಸ್ಟರವರು ಅತಿ ಸರಳತರವಾಗಿ ಸ್ಕೂಲ್ ರಿಪೋರ್ಟನ್ನು ಓದಿ ಚಕ್ರವರ್ತಿ ಸಾರ್ವಭೌಮರವರ ಗುಣಕಥನವನ್ನು ಮಾಡಿದರು ಬಾಲಕರ ಸುಶ್ರಾವ್ಯವಾದ ಗಾನವು ಜರಗಿದನಂತರ ಗೌರವಾರ್ಥವಾದ ತೋಪು ಹಾರಿಸಲ್ಪಟ್ಟು ಸಕಲರಿಗೂ ಗಂಧಪುಷ್ಪ ಮಿಠಾಯಿ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು. ಸ್ಕೂಲ್ ಮಾಸ್ಟರವರು ಈ ವಿಷಯದಲ್ಲಿ ತುಂಬಾ ಮುತವರ್ಜಿವಹಿಸಿಮಾಡಿಸಿದ್ದ ಏರ್ಪಾಡು ತುಂಬಾ ಕೊಂಡಾಡತಕ್ಕದ್ದಾಗಿರುತ್ತೆ. ಇವರಿಗೆ ಗ್ರಾಮಾಧಿಕಾರಿಗಳೂ ಸಹಾಯಮಾಡಿದ್ದಲ್ಲಿ ಇತೋಪ್ಯತಿಶಯವಾದ ಉತ್ಸವನಡೆಯುತ್ತಿತ್ತು.

ಒಬ್ಬ ಪ್ರೇಕ್ಷಕ.

ಅರಸೀಕೆರೆ ತಾ॥ ಬಾಣಾವಾರ.

ಈ ಗ್ರಾಮದಲ್ಲಿರುವ ಉರುವುಕೊಂಡೆ ಸಾಹುಕಾರ್ ಚೆನ್ನಬಸಪ್ಪ ಶಿವಪ್ಪ ಇವರ ಪ್ರತಿನಿಧಿಯಾದ ಮುರಿಗೆಪ್ಪನವರು ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಲು ಈ ಸುದಿವಸವಾದ ತಾ॥ ೧೨ ನೆಯ ಮಂಗಳವಾರ ತಮ್ಮ ಮಂಡಿಯನ್ನು ರಾಜಗೌರವಕ್ಕೋಸ್ಕರ ಕದಳೀ ಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ, ಬಾವುಟಗಳಿಂದಲೂ ಚಿತ್ರವಿಚಿತ್ರವಾಗಿ ಅಲಂಕರಿಸಿ ತಮ್ಮ ಸ್ವಗೃಹದಲ್ಲಿ ಮತಾಂತರವಿಲ್ಲದೆ ಎಲ್ಲಾ ಕೋಮಿನ ಜನಗಳು ಮತ್ತೂ ಅನೇಕ ಬಡಜನಗಳು ಅನಾಥರೇ ಮೊದಲಾದವರವನ್ನು ಅತಿ ಆದರದೊಡನೆ ಬರಮಾಡಿಕೊಂಡು ಭೂತದಯಾ ಪಶ್ಚಾತ್ತಾಪವಿಟ್ಟು ಸುಮಾರು ಒಂದು ಸಾವಿರ ಜನಗಳ ಮಟ್ಟಿಗೆ ಮಧ್ಯಾಹ್ನ ೧೨ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ ಸುಖಭೋಜನ ಮಾಡಿಸಿ, ಪೌರ್ಣಸುಪಾರಿಯನ್ನು ಕೊಟ್ಟು ತಮ್ಮ ಬಡಭಕ್ತಿ ಪ್ರಕಾಶಪಡಿಸಿದ್ದಾರೆ. ಈ ಬಗೆಗೆ ಇವರು ಮಾಡಿದ ಏರ್ಪಾಡುಗಳು ಬಹಳ ಶ್ಲಾಘನೀಯವಾಗಿರುತ್ತದೆ. ಮಾರನೆಯ ತಾ॥ ೧೩ ರ ಸಾಯಂಕಾಲ ಈ ಗ್ರಾಮದ ಕನ್ನಡ ಸ್ಕೂಲಿನಲ್ಲಿ ಈ ಮಹೋತ್ಸವ ಸಂಬಂಧವಾಗಿ ಸಭೆಯು ಸೇರಿದ್ದ ಕಾಲದಲ್ಲಿ ಅಗ್ರಾಸನಾಧಿಪತಿಗಳಾಗಿದ್ದ ಮ॥ ಅರಸೀಕೆರೆ ತಾ॥ ಅಮಲ್ದಾರ್‌ರವರು ಈ ಮುರಿಗೆಪ್ಪನವರನ್ನು ಕರೆಸಿಕೊಂಡು ಅವರು ಮಾಡಿದ್ದ ಏರ್ಪಾಡುಗಳನ್ನು ಸ್ಥಳೀಯ ಅಧಿಕಾರಿಗಳಿಂದಲೂ, ಗ್ರಾಮದ ಮುಖಂಡರಿಂದಲೂ ಕೇಳಿ ಬಹಳ ಸಂತೋಷಪಟ್ಟರು. ಇಂತಹ ಧರ್ಮಕಾರ್ಯವನ್ನು ಅಪಾರಮನಸ್ಸಿನಿಂದ ಮಾಡಿದ ಮ॥ ಮುರಿಗೆಪ್ಪನವರ ಉದಾರಗುಣವನ್ನು ಎಷ್ಟು ಹೇಳಿದರೂ ಸಾಲದು.

ಬಿ. ಕೃಷ್ಣಪ್ಪ.

ಶಿವಮೊಗ್ಗ ತಾ॥ ಮುಗುಳಿಹಳ್ಳಿ.

ಈ ಗ್ರಾಮದ ಮುಖಂಡರಾದ ಮ॥ ರಾ॥ ಪಟೇಲ್ ಪರ್ವತಪ್ಪನವರು, ಚಿನ್ನಪ್ಪನವರು, ಚೆನ್ನವೀರಪ್ಪನವರು, ರಂಗಪ್ಪನವರು, ವಲ್ಲಪ್ಪನವರು ಮುಂತಾದವರು ಶಕ್ತ್ಯನುಸಾರ ಚಂದಾಹಣ ವಸೂಲ್ಮಾಡಿ ಘನವನ್ನು ಹೊಂದಿದ ಚಕ್ರವರ್ತಿಗಳವರ ಕಿರೀಟಧಾರಣ ಮಹೋತ್ಸವದಿಂದುಂಟಾದ ಸಂತೋಷವನ್ನು ಪ್ರದರ್ಶಿಸಲು ನಮ್ಮ ದಯಾಳು ಮೈಸೂರ ಸರ್ಕಾರದವರು ಈಗ್ರಾಮದವರ ಪ್ರಾರ್ಥನೆಯಂತೆ ಹೊಸದಾಗಿ ಕಟ್ಟಿರುವ ಪಾಠಶಾಲೆಯ ಕಟ್ಟಡವನ್ನು ೧೨ ನೇ ಮಂಗಳವಾರ ತಳಿರುತೋರಣಗಳಿಂದಲೂ, ಚಿತ್ರವಿಚಿತ್ರಗಳಾದ ಭಾವಚಿತ್ರಗಳಿಂದಲೂ ಅಲಂಕರಿಸಿ ದೇವಸ್ಥಾನಗಳಲ್ಲಿ ದೀಪೋತ್ಸವವು ಮತ್ತು ಮಂಗಳಾರತಿಯು ನಡೆಯಿಸಲ್ಪಟ್ಟಿತು. ಸ್ಕೂಲಿನಲ್ಲಿ ಸಭೆಸೇರಿದ ಕಾಲದಲ್ಲಿ ಹೊಸ ಉಪಾಧ್ಯಾಯರಾದ ಯಸ್. ಪ್ರಭುಪಯ್ಯನವರು ವಿದ್ಯಾಭ್ಯಾಸದ ವಿಷಯದಲ್ಲಿಯೂ, ಮಕ್ಕಳನ್ನು ಸ್ಕೂಲಿಗೆ ಕ್ರಮವಾಗಿ ಕಳುಹಿಸಿ ವಿದ್ಯಾಭಿವೃದ್ಧಿ ಪಡಿಸಿ ಕೊಳ್ಳುವ ವಿಷಯದಲ್ಲಿಯೂ ಉಪನ್ಯಾಸ ಮಾಡಿದುದಲ್ಲದೆ ಚಕ್ರವರ್ತಿಸಾರ್ವಭೌಮರವರ ಚರಿತ್ರೆಯನ್ನು ವಿವರಿಸಿದರು. ಇದನ್ನು ಅನುಮೋದಿಸಿ ಗ್ರಾಮಸ್ಥರು ತಮ್ಮ ತಮ್ಮ ಮಕ್ಕಳನ್ನು ಸ್ಕೂಲಿಗೆ ತಪ್ಪದೆ ಕಳುಹಿಸಿಕೊಡುತ್ತೇವೆಂತಲೂ, ಕಾರಣವಿಲ್ಲದೆ ಮಕ್ಕಳನ್ನು ನಿಲ್ಲಿಸಿಕೊಂಡಲ್ಲಿ ಅಂಥಾಬಾಲಕನ ಪೋಷಕರು ಸರ್ಕಾರಕ್ಕೆ ಹತ್ತುರೂಪಾಯಿ ಕೊಡಬೇಕಾಗಿಯೂ ಮುಚ್ಚಳಿಕೆ ಸಹ ಬರೆಯಲ್ಪಟ್ಟಿತು. ಅನಂತರದಲ್ಲಿ ಚಕ್ರವರ್ತಿಗಳ ಶ್ರೇಯಃಪ್ರಾರ್ಥನೆಯೂ, ದೇವರ ಸ್ತೋತ್ರವೂ, ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ ಕರ್ಣಾನಂದಕರವಾಗಿ ನಡೆಸಲ್ಪಟ್ಟಮೇಲೆ ಗಂಧ, ಪುಷ್ಪ, ತಾಂಬೂಲ, ಫಲಹಾರ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಯಸ್. ಪಿ.

ಬಿಜಾಪುರ ಡಿ॥ ಅಲಮೇಲ.

ಕಳೆದ ತಾ। ೧೧ ರಲ್ಲಿ ವಿದ್ಯಾರ್ಥಿಗಳಿಂದ ಕ್ರಿಕೆಟ್, ಕುಸ್ತಿ ಹಗ್ಗಜಗ್ಗುವುದು ಮೊದಲಾದ ಆಟಗಳು ಆಡಿಸಲ್ಪಟ್ಟವು. ತಾ॥ ೧೨ ರಲ್ಲಿ ಸರಕಾರಿ ಚಾವಡಿ ಮತ್ತೂ ಶಾಲೆಗಳು ಮಾವಿನ ತಳಿರುಗಳಿಂದಲೂ, ತರತರದ ಬಣ್ಣದ ಕಾಗದಗಳ ಹೂಮಾಲೆಗಳಿಂದಲೂ ಅಲಂಕರಿಸಲ್ಪಟ್ಟಿದ್ದುವು. ಶೃಂಗರಿಸಲ್ಪಟ್ಟ ಚಾವಡಿಯಲ್ಲಿ ದಿವ್ಯವಾದ ಮಂಟಪವು ರಚಿಸಲ್ಪಟ್ಟು ಅದರಲ್ಲಿ ಚಕ್ರವರ್ತಿಯವರ ಮತ್ತೂ ಚಕ್ರವರ್ತಿನಿಯವರ ತಸಬೀರು ಇಡಲ್ಪಟ್ಟಿತ್ತು. ಕನ್ನಡ ಹಾಗೂ ಹಿಂದುಸ್ಥಾನಿ ಶಾಲೆಗಳ ವಿದ್ಯಾರ್ಥಿಗಳು ತರತರದ ಹಬ್ಬದ ಪೋಷಾಕನ್ನು ಹಾಕಿಕೊಂಡು ಚಾವಡಿಯಮುಂದೆ ಡ್ರಿಲ್‌ಮಾಡುತ್ತಿದ್ದರು. ಊರ ಜನರೆಲ್ಲರೂ ನೆರೆದಮೇಲೆ ಚಕ್ರವರ್ತಿಯವರ ತಸಬೀರು ಪಲ್ಲಕ್ಕಿಯೊಳಗಿರಿಸಲ್ಪಟ್ಟು ಹಾಡುವವರ ಹಾಗೂ ವಾದ್ಯಗಳ ಸಮೇತ ಊರಲ್ಲೆಲ್ಲ ಉತ್ಸವಮಾಡಿಕೊಂಡು ಬಂದು ೧೨ ಗಂಟೆಯಲ್ಲಿ ಚಾವಡಿಯೊಳಗಿರುವ ಮಂಟಪದಲ್ಲಿರಿಸಲ್ಪಟ್ಟಮೇಲೆ ರಾವಸಾಹೇಬ ದೇಶಮುಖ ಆಲಮೇಲ ಇವರು ಇಂಗ್ಲೀಷರ ಆಳಿಕೆಯಿಂದುಂಟಾಗಿರುವ ಮಹಾ ಪ್ರಯೋಜನವನ್ನು ಸಭಿಕರೆಲ್ಲರಿಗೂ ತಿಳಿಯಹೇಳಿದಮೇಲೆ ಪೊಲೀಸು ಪಾಟೀಲರು ಜಾಹೀರನಾಮೆಯನ್ನು ಓದಿದರು. ಸಭಿಕರೆಲ್ಲರೂ ಬಹು ವಿಶ್ವಾಸದಿಂದ ಕೇಳಿ ಜಯಘೋಷವನ್ನು ಮಾಡಿದ ತರುವಾಯ ಹಿಂದಣ ದಿವಸ ಆಟದಲ್ಲಿ ಗೆದ್ದವರಿಗೆ ಇನಾಮುಗಳೂ, ಶಾಲೆಯ ಹುಡುಗರಿಗೆ ಪುಸ್ತಕಗಳೂ ಬಾದಶಹರ ರಾಜ್ಯಾರೋಹಣದ ಪದಕಗಳೂ ಕೊಡಲ್ಪಟ್ಟು ಊರಿನ ಬಡಬಗ್ಗರಿಗೆ ಧೋತ್ರಗಳೂ, ಸೀರೆ ಕುಪ್ಪಸಗಳೂ, ಕೊಡಲ್ಪಟ್ಟವು. ಮತ್ತೂ ೬೦೦-೭೦೦ ಬಡಜನರಿಗೆ ಅನ್ನವು ಹಾಕಲ್ಪಟ್ಟಿತು. ರಾ। ಸಾ। ದೇಶಮುಖರ ವಾಡೆಯಲ್ಲಿ ಸೇರಿದ್ದ ೩೦೦-೪೦೦ ಸ್ತ್ರೀಯರಿಗೆ ದೇಶಮುಖರ ಪತ್ನಿಯವರು ಇಂಗ್ಲೀಷ್ ಪ್ರಭುಗಳಿಂದಾಗಿರುವ ಉಪಕಾರಗಳನ್ನು ಕುರಿತು ಭಾಷಣಮಾಡಿದರು. ರಾತ್ರಿ ಊರಿನ ಎಲ್ಲಾ ದೇವಸ್ಥಾನಗಳಲ್ಲೂ, ಚಾವಡಿಯಮುಂದೆಯೂ ದೀಪೋತ್ಸವವು ನಡೆದು ಮದ್ದು ಸುಡಲ್ಪಟ್ಟಿತು ಪ್ರೇಕ್ಷಕ.

ಅರಕಲಗೂಡು ತಾ॥ ಬಸವಾಪಟ್ಟಣ.

ಕಳೆದ ತಾ॥ ೧೨ ರ ಬೆಳಿಗ್ಗೆ ಈ ಊರ ಎಲ್ಲಾ ಬೀದಿಗಳೂ, ಸಾರಣೆಕಾರಣೆಗಳಿಂದಲೂ, ತಳಿರುತೋರಣಗಳಿಂದಲೂ, ಬಾಳೆಯ ಕಂಭಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಮತ್ತೂ ದೇವಸ್ಥಾನಗಳಲ್ಲಿ ಅಭಿಷೇಕಾರ್ಚನೆಯು ನಡೆದಿತು. ಚಕ್ರವರ್ತಿದಂಪತಿಗಳ ಚಿತ್ರಪಟವು ಇಡಲ್ಪಟ್ಟಿದ್ದ ಮಂಟಪವು ಅತಿ ವಿಜೃಂಭಣೆಯಿಂದ ಊರಿನೊಳಗೆಲ್ಲ ಮೆರೆಯಿಸಲ್ಪಟ್ಟು ಶೃಂಗರಿಸಲ್ಪಟ್ಟಿದ್ದ ಚಪ್ಪರದಲ್ಲಿರಿಸಲ್ಪಟ್ಟಿತು. ಈ ಮಹೋತ್ಸವದ ಜ್ಞಾಪನಾರ್ಥವಾಗಿ ಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಒಂದು ಕಲ್ಪವೃಕ್ಷವು ಹೆಡ್‌ಮಾಸ್ಟರಿಂದ ನೆಡಲ್ಪಟ್ಟಿತು. ಉತ್ಸವವು ಬೀದಿಗಳಲ್ಲಿ ಬರುವಾಗ್ಗೆ ಜನರು ಬಾಲಕಬಾಲಿಕೆಯರುಗಳಿಗೆ ಸಕ್ಕರೆಯನ್ನು ಹಂಚಿದರು. ಸಾಯಂಕಾಲ ೪ ಗಂಟೆಯಲ್ಲಿ ವಿದ್ಯಾರ್ಥಿಗಳಿಂದ ಸ್ಕೂಲ್ ಮುಂಭಾಗದಲ್ಲಿ ಆಟವನ್ನಾಡಿಸಿ ಗೆದ್ದವರಿಗೆ ಮ॥ ವೀರಸೆಟ್ಟರು ಮತ್ತೂ ಪ॥ ವಿಷಕಂಠಗೌಡರು ಬಹುಮಾನಗಳನ್ನು ಕೊಟ್ಟರು. ಅನಂತರ ೫ ಗಂಟೆಯಲ್ಲಿ ಹೆ॥ ಮಾಸ್ಟರವರ ಅಧ್ಯಕ್ಷತೆಯಲ್ಲಿ ವೈದಿಕರು, ಲೌಕಿಕರು ಮೊದಲಾದವರ ಸಭೆಯು ಸೇರಿದ್ದಿತು. ಆಗ ಅ। ಮಾ। ನಾಗಪ್ಪನವರು ಬ್ರಿಟಿಷ್ ರಾಜ್ಯಭಾರದಿಂದ ಭರತಖಂಡಕ್ಕುಂಟಾಗಿರುವ ಉಪಕಾರವನ್ನು ಕುರಿತು ಭಾಷಣಮಾಡಿದಮೇಲೆ ಅಧ್ಯಕ್ಷರು ದೈವಭಕ್ತಿ ರಾಜಭಕ್ತಿ ಮತ್ತೂ ಪ್ರಜಾನುರಾಗ ಈ ವಿಷಯಗಳಮೇಲೆ ಸರಸವಾಗಿ ಉಪನ್ಯಾಸವನ್ನು ಮಾಡಿದರು. ತರುವಾಯ ಬಾಲಕಬಾಲಿಕೆಯರುಗಳು ಚಕ್ರವರ್ತಿದಂಪತಿಗಳ ಮತ್ತೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನವನ್ನು ಕುರಿತು ಮಂಗಳಗಳನ್ನು ಹೇಳಿದರು. ಅಧ್ಯಕ್ಷರು ಆಟಗಳಲ್ಲಿ ಗೆದ್ದವರಿಗೂ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ್ದವರಿಗೂ ಬಹುಮಾನಗಳನ್ನು ಕೊಟ್ಟಮೇಲೆ ಗಂಧಪುಷ್ಪತಾಂಬೂಲ ವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ರಾತ್ರಿ ಊರಲ್ಲೆಲ್ಲಾ ದೀಪೋತ್ಸವವು ನಡೆದು ದೇವರುಗಳ ಉತ್ಸವವಾಯಿತು. ಈ ಉತ್ಸವವೈಭವವನ್ನು ನೋಡಲು ನೆರೆಗ್ರಾಮಗಳಿಂದ ನೂರಾರು ಜನರು ಬಂದಿದ್ದರು. ಈ ವಿಜೃಂಭಣೆಯೆಲ್ಲವೂ ಶೇಖದಾರ್ ಮ॥ ಲಿಂಗಪ್ಪನವರ ಪ್ರಯತ್ನವಿಶೇಷದಿಂದ ನಡೆದಿರುತ್ತದೆ. ಚಂದಾದಾರ.

ಧಾರವಾಡ ಡಿ॥ ನರಗುಂದ.

ಇಲ್ಲಿಯ ಮ್ಯುನಿಸಿಪಾಲಿಟಿ ಕೌನ್ಸಿಲ್‌ದಾರರಾದ ರಾ॥ ರಾ। ಎಲ್ಲಪ್ಪ ಕುಮಾರಪ್ಪ ಅಣ್ಣ ಅನೆಗುಂದಿ ಮತ್ತೂ ವೀರಪ್ಪ ನಾಗಪ್ಪ ಅಣ್ಣ ಕುಡುಕಿಮೂತಿ ಮೊದಲಾದ ಪ್ರಮುಖರು ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವವನ್ನು ಅತಿ ವೈಭವದಿಂದ ನಡಿಸಬೇಕೆಂದು ಕಳೆದ ತಾ॥ ೭ ರಿಂದ ತಾ॥ ೧೨ ರ ವರೆಗೆ ಊರನ್ನು ನಾನಾವಿಧವಾಗಿ ಶೃಂಗರಿಸಿದ್ದರಲ್ಲದೆ, ವರ್ತಕರು ಸುಂದರವಾದ ೭ ಕಮಾನುಗಳನ್ನು ರಚಿಸಿದ್ದರು. ಈ ಊರ ಪೇಟೆಯ ಕಚೇರಿ ಮಗ್ಗುಲಲ್ಲಿರುವ ವಿಶಾಲವಾದ ಬೈಲಿನಲ್ಲಿ ರಚಿಸಲ್ಪಟ್ಟಿದ್ದ ಮನೋಹರವಾದ ಸಭಾಮಂಟಪದಲ್ಲಿ ಪ್ರಭುಗಳ ಭಾವಚಿತ್ರವು ಇಡಲ್ಪಟ್ಟಿತು. ತಾ। ೧೨ ರ ದಿವಸ ಮಂಟಪದಲ್ಲಿ ಈ ಊರ ರಾ। ಮಹಲ್ಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಈ ಸಭೆಗೆ ಪ್ರಮುಖಜನರು, ಶ್ರೀಮಂತರು ವರ್ತಕರು ಮೊದಲಾದವರು ಒಳ್ಳೆಯ ಬಟ್ಟೆಬರಿಗಳನ್ನು ಧರಿಸಿಕೊಂಡು ಬಂದಿದ್ದರು. ರಾ। ವೆಂಕಟರಾವ್ ಅಣ್ಣ ಇವರು ಸಭೆಯ ಉದ್ದೇಶವನ್ನು ಕುರಿತು ಭಾಷಣಮಾಡಿದಮೇಲೆ ಪ್ರಭುಗಳ ಜಾಹಿರಾತು ಕನ್ನಡ, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ಸಭಿಕರಿಗೆ ತಿಳಿಯುವಂತೆ ಅಧ್ಯಕ್ಷರು ಸರಸವಾಗಿ ಓದಿ ಹೇಳಿದರು. ಅನಂತರ ಎಲ್ಲಾ ಶಾಲೆಯ ಬಾಲಕಬಾಲಿಕೆಯರುಗಳು ರಾಷ್ಟ್ರಗೀತವನ್ನು ಹೇಳಿದಮೇಲೆ ಅವರುಗಳಿಗೆ ಅಧ್ಯಕ್ಷರ ಹಸ್ತದಿಂದ ಮಿಠಾಯಿಯೂ, ಪದಕಗಳೂ ಹಂಚಲ್ಪಟ್ಟವು. ಈ ಗ್ರಾಮದ ಜೋಯಿಸರು ಚಿದಾನಂದ ದೀಕ್ಷಿತರು ಪ್ರಭುದಂಪತಿಗಳಿಗೆ ಕಲ್ಯಾಣವಾಗಲೆಂಬ ಬಗ್ಗೆ ಸಂಸ್ಕೃತದಲ್ಲಿ ಭಾಷಣಮಾಡಿದಮೇಲೆ ರಾ।ರಾ। ಸಣ್ಣವೀರಪ್ಪ ಚವಡಿ ಇವರು ಚಕ್ರವರ್ತಿಯವರು ಮತ್ತೂ ಚಕ್ರವರ್ತಿನಿಯವರು ಇಂಡ್ಯಾಕ್ಕೆ ದಯಮಾಡಿಸಿರುವುದು ಭಾರತಪ್ರಜೆಗಳ ಭಾಗ್ಯೋದಯಕ್ಕಾಗೆಂದೂ, ಪ್ರಜೆಗಳ ಸುಖಸಂಪತ್ತಿಗೂ ವಿದ್ಯಾಭಿವೃದ್ಧಿಗೂ, ನೆಮ್ಮದಿಗೂ ಕಾರಣವಾದ ಬ್ರಿಟಿಷರ ಆಳುವಿಕೆಯು ನಮ್ಮಮೇಲೆ ಚಿರಕಾಲವಿರಲೆಂದೂ ಭಾಷಣಮಾಡಿದಮೇಲೆ ಸಭಿಕರಿಗೆ ಅತ್ತರು ಪಾನುಸುಪಾರಿಯು ಹಂಚಲ್ಪಟ್ಟು ಸಭೆಯು ಮುಕ್ತಾಯಮಾಡಲ್ಪಟ್ಟಿತು.

ಶಿವಮಲ್ಲಪ್ಪ ಮುನವಳ್ಳಿ.

ನೆಲಮಂಗಲದ ತಾ॥ ಡಾಬಸಪೇಟೆ.

ಈ ದಿನ ಪ್ರಾತಃಕಾಲ ಇಲ್ಲಿನ ಗ॥ ಸ್ಕೂಲ್ ಮತ್ತು ಟ್ರಾವೆಲರ್ಸ್ ಬಂಗ್ಲೆಯ ಕಟ್ಟಡಗಳು ಕದಳೀಸ್ತಂಭಗಳಿಂದಲೂ, ತೋರಣಗಳಿಂದಲೂ, ಅಲಂಕರಿಸಲ್ಪಟ್ಟಿದ್ದವು. ಸ್ಕೂಲ್ ಕಟ್ಟಡವು ಕಿಷ್ಕಿಂಧವಾಗಿದ್ದುದರಿಂದ ವಿದ್ಯಾರ್ಥಿಗಳ ಆಟಪಾಟಗಳಿಗಾಗಿ ಟ್ರಾವೆಲರ್ಸ್ ಬಂಗ್ಲೆಯ ಬಳಿ ಸ್ಥಳವನ್ನು ಸಿದ್ಧಪಡಿಸಿದ್ದಾಯಿತು. ಇಂಗ್ಲಿಷ್ ರಾಜ್ಯಭಾರ ಸೂಚಕವಾದ ಪತಾಕೆಯು ಕಟ್ಟಡದ ಮುಂಭಾಗದಲ್ಲಿ ನಿಲ್ಲಿಸಲ್ಪಟ್ಟಿತು. ಶ್ರೀ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಗಾಗಿ ದೇವಾಲಯಗಳಲ್ಲಿ ಸೇವೆಗಳು ನಡೆಯಿಸಲ್ಪಟ್ಟವು. ತರುವಾಯ ಶ್ರೀ ಸಾರ್ವಭೌಮರವರ ಫೋಟೋವನ್ನು ಮಂಗಳವಾದ್ಯಗಳಿಂದಲೂ, ಜಯಘೋಷಗಳಿಂದಲೂ ರಾಜಬೀದಿಗಳಲ್ಲೆಲ್ಲಾ ಮೆರವಣಿಗೆಮಾಡಿಕೊಂಡು ಬಂದು ಇಂಗ್ಲೀಷ್ ರಾಜ್ಯಭಾರ ಸೂಚಕವಾದ ಪತಾಕೆಯ ಬಳಿ ಸರ್ವರೂ ವಂದಿಸಿದರು. ಮಧ್ಯಾಹ್ನ ೨ ಗಂಟೆಗೆ ಸಭೆಯು ಸೇರಿಸಲ್ಪಟ್ಟಿತು. ಗ್ರಾಮ ಮುಖಂಡರೂ, ಸ್ಕೂಲ್ ವಿದ್ಯಾರ್ಥಿಗಳೂ ಸಹ ನೆರದಿದ್ದರು. ಸಭಿಕರ ಅನುಮತಿಯಪ್ರಕಾರ ಇಲ್ಲಿನ ಸ್ಕೂಲ್ ಹೆ॥ ಮ॥ ಅಶ್ವತ್ಥಶಾಸ್ತ್ರಿಗಳವರು ಅಗ್ರಾಸನವನ್ನು ವಹಿಸಿದ್ದರು. ಅ॥ ಮ॥ ಎ. ರಾಮರಾಯರು ಇಂಗ್ಲೀಷರ ಆಳಿಕೆಯಿಂದ ಪ್ರಜೆಗಳಿಗುಂಟಾಗಿರುವ ಅನುಕೂಲಗಳಲ್ಲಿ ಮುಖ್ಯವಾದ ವಿದ್ಯಾವಿಷಯವನ್ನು ಕುರಿತು ತಿಳಿಸಿದರು. ತರುವಾಯ ಅಗ್ರಾಸನಾಧಿಪತಿಗಳಾದ ಹೆ॥ ಮ॥ ಅಶ್ವತ್ಥಶಾಸ್ತ್ರಿಗಳವರು ಇಂಗ್ಲೀಷರ ರಾಜ್ಯಭಾರದಿಂದ ಈ ದೇಶೀಯರಿಗುಂಟಾಗಿರುವ ಅನುಕೂಲ್ಯಗಳನ್ನು ಕುರಿತು ಉಪನ್ಯಾಸಮಾಡಿದರು. ತರುವಾಯ ಬಾಲಕ ಬಾಲಕಿಯರ ಮಂಗಳಗಾನವು ಮಾಡಲ್ಪಟ್ಟಿತು. ನಂತರ ವಿದ್ಯಾರ್ಥಿಗಳ ಆಟಪಾಟಗಳು ನಡೆಯಿಸಲ್ಪಟ್ಟವು. ಆ ವೇಳೆ ಅಗ್ರಾಸನಾಧಿಪತಿಗಳಿಗೂ, ಸಭಿಕರಿಗೂ, ಗಂಧಪುಷ್ಪ ತಾಂಬೂಲಗಳೂ, ಆಟಪಾಟಗಳಲ್ಲಿ ಪ್ರಾಬಲ್ಯವನ್ನು ತೋರಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳೂ, ಕೆಲವು ಬಡಜನರಿಗೆ ಬಟ್ಟೆಗಳೂ, ಎಲ್ಲಾ ಬಾಲಕ ಬಾಲಕಿಯರಿಗೆ ಮಿಠಾಯಿ ಮೊದಲಾದ ತಿಂಡಿ ಸಾಮಾನುಗಳೂ ಕೊಡಲ್ಪಟ್ಟವು. ತರುವಾಯದಲ್ಲಿ ಸಭಿಕರು ಏಕಕಂಠದಿಂದ ಶ್ರೀ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಇಲ್ಲಿನ ಜನರೆಲ್ಲರೂ ಈ ದಿವಸವನ್ನು ಅತ್ಯಾನಂದದಿಂದ ಕಳೆದರು. ಈ ಕಾಲದಲ್ಲಿ ಕೊತ್ವಾಲ್

ಮುನಿಸ್ವಾಮಯ್ಯನವರೂ, ದಫೇದಾರ್ ಸುಬ್ಬರಾವ್‌ಯವರೂ, ಮತ್ತು ಪಟೇಲ್ ತಿಮ್ಮೇಗೌಡರೂ ಸಹ ತಮ್ಮ ರಾಜಭಕ್ತಿಯನ್ನು ಪ್ರಕಟಿಸಿದರು.

ತುಮಕೂರು ತಾ|| ಹೊನ್ನವಳ್ಳಿ.

ತಾ|| ೧೨ ರಲ್ಲಿ ಈ ಗ್ರಾಮದ ವೀರಶೈವ ವೈದಿಕ ಮತ್ತು ಲೌಕಿಕಜನರು ಸ್ನಾನಮಡಿಯಿಂದ ತಮ್ಮಿಷ್ಟದೇವರಾದ ಶ್ರೀ ಗುಬ್ಬಿಯಪ್ಪಸ್ವಾಮಿಯ ದೇವಸ್ಥಾನಕ್ಕೆ ಯೋಗಿ ಪಂಚಾಮೃತದಿಂದಲೂ, ಶಿವಸಹಸ್ರ, ಗಣಸಹಸ್ರ, ದೇವೀಸಹಸ್ರ ನಾಮಗಳಿಂದಲೂ ಅಭಿಷೇಕವನ್ನೂ, ಷೋಡಶೋಪಚಾರಗಳನ್ನೂ ಮಾಡಿಸಿ ಗುಬ್ಬಿಯಪ್ಪಸ್ವಾಮಿಯವರನ್ನು ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಸಾಲಂಕೆ ಕಾರಣಿಗಳಿಂದಲೂ, ತಳಿರುತೋರಣಗಳಿಂದಲೂ, ಕದಳಿಸ್ತಂಭಗಳಿಂದಲೂ ಅಲಂಕೃತವಾದ ಬೀದಿಗಳಲ್ಲಿ ನಂದೀಧ್ವಜ ಮೊದಲಾದ ಬಿರುದುಗಳಿಂದ ದೇವಸ್ಥಾನಕ್ಕೆ ಬಂದು ನೆರೆದಿದ್ದ ಜನರಿಗೆಲ್ಲ ಪ್ರಸಾದವನ್ನು ವಿನಿಯೋಗ ಮಾಡಿದಮೇಲೆ ಶ್ರೀ ಜಾರ್ಜ್ ಸಾರ್ವಭೌಮರವರ ಮತ್ತು ಮೇರಿ ಮಹಾರಾಜ್ಞಿಯವರ ಹಾಗೂ ನಮ್ಮನ್ನಾಳುವ ಶ್ರೀಮತ್ ಮಹಾರಾಜದಂಪತಿಗಳ ಶ್ರೀಮತ್ ಯುವರಾಜದಂಪತಿಗಳ ಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರ ಮತ್ತು ರಾಜಬಂಧುಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದರಲ್ಲದೆ ರಾತ್ರಿ ದೀಪೋತ್ಸವವನ್ನೂ, ಮದ್ದಿನ ವಿನೋದವನ್ನೂ ಅತಿ ವೈಭವದಿಂದ ನಡೆಯಿಸಿ ಚಕ್ರವರ್ತಿಸಾರ್ವಭೌಮರವರಲ್ಲೂ, ಶ್ರೀಮತ್ ಮಹಾರಾಜರವರಲ್ಲೂ ತಮಗಿರುವ ಅತಿಶಯವಾದ ರಾಜಭಕ್ತಿಯನ್ನು ಪ್ರದರ್ಶಿಸಿದರು. ಈ ಉತ್ಸವ ಸಮಾರಂಭದಲ್ಲಿ ಈ ಗ್ರಾಮದ ಎಲ್ಲಾ ಜಾತಿಯ ಜನರೂ ಭಾಗಿಗಳಾಗಿದ್ದು ತಮ್ಮ ದೈವ ಮತ್ತು ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಪ್ರತ್ಯಕ್ಷದರ್ಶಿ.

ಧಾರವಾಡ ಡಿ|| ಅಣ್ಣಿಗೇರಿ.

ಕಳೆದ ತಾ|| ೧೨ ರಲ್ಲಿ ಊರೆಲ್ಲಾ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದುದಲ್ಲದೆ, ಸರ್ಕಾರಿಯ ಚಾವಡಿಯ ಮತ್ತೂ ಶಾಲೆಗಳ ಮುಂದೆ ಭವ್ಯವಾದ ಕಮಾನುಗಳು ಅತ್ಯಂತ ಶೋಭಾಯಮಾನವಾಗಿ ಕಟ್ಟಲ್ಪಟ್ಟಿದ್ದುವು. ಮಧ್ಯಾಹ್ನ ೧೨ ಗಂಟೆಗೆ ಮನೋಹರವಾಗಲಂಕರಿಸಲ್ಪಟ್ಟಿದ್ದ ಸ್ಕೂಲ್ ಕಟ್ಟಡದಲ್ಲಿ ಪರಮಪ್ರಿಯರೂ ಪೂಜ್ಯರೂ ಆದ ಚಕ್ರವರ್ತಿಸಾರ್ವಭೌಮರ ಮತ್ತೂ ಮೇರಿ ರಾಣಿಯವರ ಭಾವಚಿತ್ರಪಟಗಳು ಇರಿಸಲ್ಪಟ್ಟು, ಊರ ಪ್ರಮುಖಜನರ ಸರ್ಕಾರಿ ಯುದ್ಯೋಗಸ್ಥರ ಸಭೆಯು ಸೇರಿದ್ದು ಬಾದಶಹರ ಜಾಹೀರನಾಮೆಯೋದಲ್ಪಟ್ಟಿತು. ಸಾಯಂಕಾಲದಲ್ಲಿ ಚಕ್ರವರ್ತಿ ದಂಪತಿಗಳ ಚಿತ್ರಪಟವು ಪಲ್ಲಕ್ಕಿಯಲ್ಲಿಡಲ್ಪಟ್ಟು ಛತ್ರಚಾಮರ ಮೊದಲಾದ ಬಿರುದುಗಳಿಂದಲೂ, ವಾದ್ಯವೈಭವದಿಂದಲೂ ಮದ್ದಿನ ವಿನೋದದಿಂದಲೂ ಅತಿ ವಿಜೃಂಭಣೆಯಿಂದ ಸ್ಕೂಲು ಕಟ್ಟಡದಿಂದ ಚಾವಡಿಗೆ ಒಯ್ಯಲ್ಪಟ್ಟಿತು. ಈ ಉತ್ಸವದ ದಿವಸ ಮ|| ಗಳಾದ ಶಂಕರಪ್ಪ ದೇಸಾಯಿ ಇವರು ಬಡಬಗ್ಗರಿಗೆ ವಸ್ತ್ರಗಳನ್ನೂ, ಭೀಮಪ್ಪಯ್ಯ ದೇಶಪಾಂಡೆ ಇವರು ಸ್ತ್ರೀಯರಿಗೆ ಕಣಗಳನ್ನೂ, ಶೇಷಗಿರಿರಾವ ಮುತಾಲಿಕ ದೇಶಾಯಿ ಇವರು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನೂ, ರಾಘವೇಂದ್ರರಾವ ಇನಾಮತಿ ಇವರು ವಿದ್ಯಾರ್ಥಿ ಮತ್ತೂ ವಿದ್ಯಾರ್ಥಿನಿಯರಿಗೂ ಆ ಕಾಲಕ್ಕೆ ಬಂದ ಇತರರಿಗೂ ಮಿಠಾಯಿಯನ್ನೂ, ಫಕೀರಪ್ಪ ಬಳ್ಳೊಳ್ಳಿ ಇವರು ಕನ್ನಡ ಶಾಲೆಗೆ ಒಂದು ಹಾರ್ಮೋನಿಯಮ್ಮನ್ನೂ, ವೀರಭದ್ರಪ್ಪ ನವಲಗುಂದ ಇವರು ಬಡಬಗ್ಗರಿಗೆ ಅನ್ನವನ್ನೂ, ರುದ್ರಪ್ಪ ಸೂಟಕನಾಳ ಇವರು ವಿದ್ಯಾರ್ಥಿನಿಯರಿಗೆ ಕಣಗಳನ್ನೂ ತಮ್ಮ ಸ್ವಂತ ವೆಚ್ಚದಿಂದ ಉಚಿತವಾಗಿ ಕೊಟ್ಟರು. ಈ ಮಹೋತ್ಸವದ ಶ್ರೇಯಸ್ಸು ವ್ಯವಸ್ಥಾಪಕ ಕಮಿಟಿಯ ಅಧ್ಯಕ್ಷರಾದ ಮ|| ಶೇಷಗಿರಿರಾವ ಮುತಾಲಿಕರು, ಚೇರ್ಮನ್ನರಾದ ಮ|| ರಾಘವೇಂದ್ರರಾವ ಇನಾಮತಿ ಇವರುಗಳಿಗೆ ಪೂರ್ಣವಾಗಿ ಸಲ್ಲತಕ್ಕದಾಗಿದೆ.

ಆರ್. ವಿ.

ಶಿವಮೊಗ್ಗ ಡಿ|| ಸೊರಬ.

ತಾ|| ೧೨ರ ಪ್ರಾತಃಕಾಲ ಶ್ರೀಮತ್ ಇಂಡಿಯಾ ಚಕ್ರವರ್ತಿಯವರ ಕಿರೀಟಧಾರಣೆಯ ಮಹೋತ್ಸವದ ಬಗ್ಗೆ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಬೆಳಿಗ್ಗೆ ೯ ಗಂಟೆಗೆ ಸ್ಕೂಲ್ ಬಾಲಕಬಾಲಿಕೆಯರು, ಸಮಸ್ತ ಅಧಿಕಾರಿಗಳು, ಮೆಂಬರುಗಳು, ಸಾಹುಕಾರರು ಮುಂತಾಗಿ ಸಮಸ್ತಪ್ರಜೆಗಳೂ ಸೇರಿದ್ದರು. ಆಗ ಶ್ರೀಮತ್ ಸಾರ್ವಭೌಮ ದಂಪತಿಗಳವರ ಭಾವಚಿತ್ರಪಟವನ್ನೂ, ಪಕ್ಕದಲ್ಲಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರರವರ ಚಿತ್ರಪಟವನ್ನೂ ಮೊದಲೇ ಸಿದ್ಧಪಡಿಸಿದ್ದ ಸಿಂಹಾಸನಗಳಲ್ಲಿ ಕೂರಿಸಿದನಂತರ ಶ್ರೀಮತ್ ವಿಕ್ಟೋರಿಯಾ ಚಕ್ರವರ್ತಿನಿಯವರ ಮೊದಲುಗೊಂಡು ಶ್ರೀ ಜಾರ್ಜ್ ಚಕ್ರವರ್ತಿಯವರು ಸಿಂಹಾಸನಕ್ಕೆ ಬರುವವರೆಗೆ ಬ್ರಿಟೀಷ್ ಪ್ರಭುತ್ವದಿಂದ ಇಂಡಿಯಾದೇಶಕ್ಕೆ ಆದ ಪ್ರಯೋಜನಗಳನ್ನು ಅಸಿಸ್ಟೆಂಟ್ ಮಾಸ್ಟರ್ ಮುರಳೀಧರಭಟ್ಟರು ಓದಿ ಹೇಳಿದರು. ಅನಂತರ ಸ್ಕೂಲ್‌ಬಾಲಕ ಬಾಲಕಿಯರು ಶ್ರೀಮತ್ ಜಾರ್ಜ್ ಚಕ್ರವರ್ತಿಯವರ ಮತ್ತು ಶ್ರೀಮತ್ ಮೈಸೂರು ಮಹಾರಾಜರವರ ಶ್ರೇಯೋಭಿವೃದ್ಧಿ ವಿಷಯಕವಾದ ಸಂಭಾಷಣಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಹೇಳಿದ್ದಲ್ಲದೆ ಕೆಲವು ಪದಗಳನ್ನೂ ಹಾಡಿದರು. ಸಭಿಕರಿಗೆ ಗಂಧ ತಾಂಬೂಲ ಹಾರತುರಾಯಿಗಳು ಕೊಡಲ್ಪಟ್ಟವು, ಮೆ|| ಅಮಲ್ದಾರ್ ಸಾಹೇಬರವರು, ಬಾಲಕ ಬಾಲಕಿಯರುಗಳಿಗೆ ಮಿಠಾಯಿ ಮುಂತಾದವುಗಳನ್ನು ಹಂಚಿಸಿದಮೇಲೆ ಸಭಿಕರೆಲ್ಲರೂ ಪಲ್ಲಕ್ಕಿಯಲ್ಲಿ ಶ್ರೀಮತ್ ಚಕ್ರವರ್ತಿದಂಪತಿಗಳವರ ಮತ್ತು ಶ್ರೀಮತ್ ಮಹಾರಾಜರವರ ಭಾವಚಿತ್ರಪಟಗಳನ್ನು ಅತಿವೈಭವದಿಂದ, ಊರಿನಲ್ಲೆಲ್ಲಾ ಉತ್ಸವಮಾಡಿಕೊಂಡು ಬಂದು ತಾ|| ಕಛೇರಿಯಲ್ಲಿ ೧೧ ಗಂಟೆಗೆ ಸರಿಯಾಗಿ ಸಿಂಹಾಸನದಮೇಲೆ ಜಯಘೋಷದೊಡನೆ ಕೂರಿಸಿದರು. ಕಛೇರಿಯ ಮುಂದುಗಡೆ ಬಂದು ಸೇರಿದ್ದ ಬಡಬಗ್ಗರಿಗೆ ವಸ್ತ್ರದಾನವೂ ನಡೆಸಲ್ಪಟ್ಟುದಲ್ಲದೆ ಇವರಿಗಾಗಿ ಏರ್ಪಡಿಸಿದ್ದ ಸ್ಥಳಗಳಲ್ಲಿ ಊಟವೂ ಸಹ ನಡೆಯುವಂತೆ ಮೆ|| ಅಮಲ್ದಾರ್‌ಸಾಹೇಬರವರು ಏರ್ಪಾಡುಮಾಡಿಸಿದ್ದರು. ಪುನಃ ೧೨ಘಂಟೆಗೆ ದರ್ಬಾರು ಪ್ರಾರಂಭವಾಗಲು ಗೌರವಾರ್ಥವಾದ ೧೦೧ಗುಂಡುಗಳು ಹಾರಿಸಲ್ಪಟ್ಟನಂತರ ಚಕ್ರವರ್ತಿಯವರ ಆಜ್ಞಾಪತ್ರವನ್ನು ಮೆ|| ಅಮಲ್ದಾರ್ ಸಾಹೇಬರವರು ಓದಿಹೇಳಿದರು. ಆ ವೇಳೆ ಕಛೇರಿಯ ಮುಂಭಾಗದಲ್ಲಿ ಪೋಲೀಸ್ ಮತ್ತು ಬಾಗ್ ಇಲಾಖೆಯವರ ಸೆಲ್ಯೂಟುಗಳು ನಡೆದ ನಂತರ, ತೊಂಬರ ಆಟವೂ, ಲಂಬಾಣಿಜನರ ಗಂಡಸರು ಹೆಂಗಸರ ಕುಣಿತಗಳೂ ದೊಣ್ಣೆಗಾರರ ದೊಣ್ಣೆಯಾಡಿಸುವಿಕೆಯೂ ಸ್ವಲ್ಪಸ್ವಲ್ಪ ಕಾಲ ನಡೆದು, ಸ್ಕೂಲ್‌ಬಾಲಕರ ಬಗೆಬಗೆಯ ಆಟಗಳೂ ಪೋಲೀಸಿನವರ ಆಟಗಳೂ ನಡೆಸಲ್ಪಟ್ಟವು. ಈ ಆಟಗಳಲ್ಲಿ ಗೆದ್ದಂಥಾ ಸ್ಕೂಲ್ ಬಾಲಕರುಗಳಿಗೆ ಮೆ|| ಅಮಲ್ದಾರ್ ಸಾಹೇಬರವರಾದ ಜಿ. ಮುರುಡಯ್ಯನವರ ಹಸ್ತದಿಂದಲೇ ಬಹುಮಾನಗಳು ಕೊಡಲ್ಪಟ್ಟು ಮಂಗಳವಾದ್ಯಗಳೊಡನೆ ಕಛೇರಿಯ ಪಕ್ಕದ ಉದ್ಯಾನದಲ್ಲಿ ಫಲವೃಕ್ಷಗಳು ಸ್ಥಾಪಿಸಲ್ಪಟ್ಟವು. ರಾತ್ರಿ ಶ್ರೀಮತ್ ಜಾರ್ಜ್‌ಚಕ್ರವರ್ತಿದಂಪತಿಗಳ ಮತ್ತು ಶ್ರೀಮತ್ ಮೈಸೂರು ಮಹಾರಾಜರವರ ಭಾವಚಿತ್ರಪಟಗಳೂ ಪಲ್ಲಕ್ಕಿಯಲ್ಲಿಡಲ್ಪಟ್ಟು ಅದು ದೇವರುಗಳ ಸಮೇತ ಉತ್ಸವವು ಹೊರಟು ದೀಪೋತ್ಸವವು ಮಾಡಲ್ಪಟ್ಟಿದ್ದ ಪ್ರತಿಬೀದಿಗಳಲ್ಲೂ ಸುತ್ತಿಕೊಂಡು ಕಛೇರಿಯನ್ನು ಬಂದು ಸೇರಿತು. ಇಷ್ಟರಲ್ಲಿಯೇ ವೀರಶೈವ ಜನಾಂಗದವರು ಶ್ರೀಬಸವೇಶ್ವರದೇವರನ್ನು ಪಲ್ಲಕ್ಕಿಯಲ್ಲಿ ಮಂಗಳವಾದ್ಯಗಳೊಡನೆ ಮೆರವಣಿಗೆ ಹೊರಡಿಸಿದರು.

ಸಿ. ಮುರುಘಯ್ಯ ಎ. ವಿ. ಸ್ಕೂಲ್ ಅ|| ಮಾಸ್ಟರ್.

[೬ ನೇಯ ಪುಟವನ್ನು ನೋಡಿರಿ.]

ಮೈಸೂರ್ ಸ್ಟಾರ್

೧೯೧೧ ನೇಯ ಡಿಸೆಂಬರ್ ತಾ|| ೨೫ ನೇಯ ಸೋಮವಾರ.

ಮೈಸೂರ ಮತ್ತೂ ಬರೋಡಾ ಮಹಾರಾಜರುಗಳಲ್ಲಿ ಯಾರಿಗೆ ಮೊದಲು ಮರ್ಯಾದೆಯಾಗತಕ್ಕದು?

ಭರತಖಂಡದಲ್ಲಿರುವ ದೇಶೀಯ ಸಂಸ್ಥಾನಗಳಲ್ಲೆಲ್ಲ ಭೂವಿಸ್ತೀರ್ಣದಲ್ಲೂ, ಪ್ರಜಾಸಂಖ್ಯೆಯಲ್ಲೂ, ಉತ್ಪನ್ನದಲ್ಲೂ ಹೈದರಾಬಾದು ಮೊದಲನೆಯದಾಗಿಯೂ, ಮೈಸೂರು ಎರಡನೆಯದಾಗಿಯೂ, ಬರೋಡಾ ಮೂರನೆಯದಾಗಿಯೂ ಇರುವುವೆಂದು ಅವುಗಳ ಪ್ರಕೃತಸ್ಥಿತಿಯಿಂದ ಗೊತ್ತಾಗುವುದು. ಹೀಗೆ ಹೈದರಾಬಾದು ಸಂಸ್ಥಾನಕ್ಕೆ ಎರಡನೆಯದಾದ ಮೈಸೂರ ಸಂಸ್ಥಾನವು ೨೯೪೩೩ ಚದರಮೈಲಿ ವಿಸ್ತೀರ್ಣವಿದ್ದು ೫೮ ಲಕ್ಷ ಪ್ರಜಾಸಂಖ್ಯೆಯನ್ನೂ, ೨,೩೬,೦೦,೦೦೦ ರೂ. ಗಳುತ್ಪತ್ತಿಯನ್ನೂ ಉಳ್ಳುದಾಗಿರುವುದರಿಂದ ೮,೦೯೯ ಚದರಮೈಲಿ ವಿಸ್ತೀರ್ಣವನ್ನೂ, ೨೦ ಲಕ್ಷ ಪ್ರಜಾಸಂಖ್ಯೆಯನ್ನೂ, ೧,೭೫,೦೦,೦೦೦ ರೂ. ಗಳುತ್ಪತ್ತಿಯನ್ನೂ ಉಳ್ಳ ಬರೋಡಾ ಸಂಸ್ಥಾನಕ್ಕಿಂತ ಮೊದಲು ಮರ್ಯಾದೆಯನ್ನು ಹೊಂದಬೇಕಾದುದು ಯುಕ್ತವಾಗಿರುವುದಷ್ಟೆ. ಆದರೆ ಕಳೆದ ತಾ|| ೧೨ ರಲ್ಲಿ ದಿಲ್ಲಿಯಲ್ಲಿ ಜರುಗಿದ ದರ್ಬಾರಿನಲ್ಲಿ ದೇಶೀಯ ಮಹಾರಾಜರುಗಳ ಮುಜರೆಯು ನಡೆಯುವಾಗ್ಗೆ ಪ್ರಥಮ ಸಂಸ್ಥಾನೀಕರಾದ ಹೈದರಾಬಾದಿನ ನೈಜಾಂರವರು ಮುಜರೆಯನ್ನು ಮಾಡಿದ ಮೇಲೆ ಬರೋಡಾ ಗಾಯಕವಾಡರವರ ಮುಜರೆಯು ನಡೆದು ಅನಂತರ ನಮ್ಮ ಮೈಸೂರ ಮಹಾರಾಜರವರ ಮುಜರೆಯು ನಡೆದುದಕ್ಕಾಗಿ ಮೈಸೂರ ದೇಶೀಯರೆಲ್ಲರಿಗೂ ಬಹು ಅಸಮಾಧಾನವುಂಟಾಗಿದೆ. "ಮೈಸೂರ ಸಂಸ್ಥಾನದ ವಿನಾ ಇತರ ದೇಶೀಯ ಸಂಸ್ಥಾನಗಳೆಲ್ಲವೂ ಇಂಗ್ಲೀಷರ ವಶವಾದಮೇಲೆ, ಅವರ ಕೂಡ ಮಾಡಿಕೊಳ್ಳಲ್ಪಟ್ಟಿರುವ ಸಂಧಿಯನ್ನನುಸರಿಸಿ ಅನುಭವಿಸಲ್ಪಡುತ್ತಿವೆ. ಆದರೆ ಮೈಸೂರ ಸಂಸ್ಥಾನವು ಮಾತ್ರ ಇಂಗ್ಲೀಷರಿಂದ ಈಗಿನ ಮಹಾರಾಜರ ವಂಶೀಕರಿಗೆ ಉಚಿತವಾಗಿ ಒಪ್ಪಂದದ ಮೇಲೆ ಕೊಡಲ್ಪಟ್ಟಿರುವುದು. ಈ ಕಾರಣದಿ ಬರೋಡಾ ಸಂಸ್ಥಾನಕ್ಕೆ ಮೈಸೂರ ಸಂಸ್ಥಾನಕ್ಕಿಂತ ಮೊದಲೇ ಮರ್ಯಾದೆಯು ನಡೆಯತಕ್ಕದಾಗಿದೆ." ಎಂದು ಲ ಪತ್ರಿಕೆಗಳು ಮೇಲ್ಕಂಡ ತಾರತಮ್ಯಕ್ಕೆ ಕಾರಣವ ಕೊಟ್ಟಿರುತ್ತವೆ. ಹಾಗೆ ಸಂಧಿಗೊಳಪಟ್ಟಿರುವುದರಿಂದಲೇ ದೋಡಾ ಸಂಸ್ಥಾನವು ಮೈಸೂರ ಸಂಸ್ಥಾನಕ್ಕಿಂತ ಹೆಚ ಪ್ರಾಶಸ್ತ್ಯವನ್ನು ಹೊಂದಿರುವುದೆನ್ನುವುದಾದರೆ, ಬರೋಡ ಸಂಸ್ಥಾನದಂತೆ ಸಂಧಿಗೊಳಪಟ್ಟಿರುವ ಉದಯಪುರ, ದಿವಸ್ ಮೊದಲಾದ ಸಂಸ್ಥಾನಗಳು ಅದೇಕೆ ಈ ಸೀಮೆಗಿಂ ಕಡಿಮೆಯಾಗಿ ಭಾವಿಸಲ್ಪಡುತ್ತಿರುವುವು? ದೇಶೀಯ ಸಂಸ್ಥಾನಗಳ ಸಂಬಂಧವಾಗಿ ೧೯೧೧ ರಲ್ಲಿ ಇಂಡಿಯಾ ಗೌರ್ನಮೆಂಟಿನವರು ಮಾಡಿರುವ ನಿಯಮದಲ್ಲಿ ಒಂದು ಸಂಸ್ಥಾನವು ಹೆಚ್ಚು ಮತ್ತೊಂದು ಕಡಿಮೆಯೆಂದು ನಿರ್ಧರಿಸಲ್ಪಟ್ಟಿವು. ಆದರೆ ಹಾಗೆ ನಿರ್ಧರಿಸತಕ್ಕದು ವೈಸ್ರಾಯರ ಅಕಾರಕ್ಕೊಳಪಟ್ಟಿದೆ. ಇದಕ್ಕೆ ಪೂರ್ವ ೧೯೦೩ ರಲ್ಲಿ ಜೋಧಪುರ ಮತ್ತೂ ಮಾರ್ವಾರ ಸಂಸ್ಥಾನಗಳಿಗೆ ಇದೇ ಶ್ರೇಷ್ಠತ್ವದ ವಿಚಾರದಲ್ಲಿ ವಿವಾದವು ಹುಟ್ಟಿದ್ದಾಗ್ಗೆ ವೈಸ್ರಾಯರ ತೀರ್ಮಾನವೇ ಕಡೆಯಾಗಿದ್ದಿತು. ಈಚೆಗೆ ನಮ್ಮ ಸಂಸ್ಥಾನದ ಚೇಫ್ ಕೋರ್ಟಿನಲ್ಲಿ ಮೂರನೆಯ ಜಡ್ಜರಾಗಿದ್ದು ಈಗ ನಿವೃತ್ತಿಯನ್ನು ಹೊಂದಿ ಮದ್ರಾಸಿನಲ್ಲಿ ವಕೀಲಿಯನ್ನು ನಡೆಯಿಸಿಕೊಂಡಿರುವ ಮ|| ಎಸ್. ಎಸ್. ಸೆಟ್ಲೂರವರು ಈ ವಿಚಾರದಲ್ಲಿ ಮದ್ರಾಸ್ ಮೇಲ್ ಪತ್ರಿಕೆಗೆ ಬರೆದಿರುವುದರ ಮುಖ್ಯಾಂಶವೇನೆಂದರೆ:—

ಮೈಸೂರ ಸಂಸ್ಥಾನವು ವಿಸ್ತೀರ್ಣದಲ್ಲೂ, ಜನಸಂಖ್ಯೆಯಲ್ಲೂ, ಉತ್ಪನ್ನದಲ್ಲೂ ಬರೋಡಾ ಸಂಸ್ಥಾನಕ್ಕಿಂತ ಎಷ್ಟೋ ದೊಡ್ಡದಾಗಿದ್ದಾಗ್ಯೂ, ಕಳೆದ ತಾ|| ೧೨ ರಲ್ಲಿ ನಡೆದ ದರ್ಬಾರಿನಲ್ಲಿ ಚಕ್ರವರ್ತಿಯವರಿಗೆ ಮುಜರೆಯನ್ನು ಮಾಡುವಾಗಲೂ, ಚಕ್ರವರ್ತಿಯವರಿಗೆ ಮಹಾರಾಜರುಗಳ ಪರಿಚಯಮಾಡಿಸಲ್ಪಡುವಾಗಲೂ, ಬರೋಡಾಕ್ಕೆ ದ್ವಿತೀಯಸ್ಥಾನವು ದೊರೆತು, ಮೈಸೂರಿಗೆ ತೃತೀಯಸ್ಥಾನವು ಕೊಡಲ್ಪಡಲು ಕಾರಣವೇನೋ ಗೊತ್ತಾಗಲಿಲ್ಲವು. ಈ ತಾರತಮ್ಯದಿಂದ ಶ್ರೀಮನ್ಮಹಾರಾಜರವರ ಮನಸ್ಸಿಗೆ ಅಷ್ಟೇನೂ ಅಸಮಾಧಾನವು ತೋರದಿದ್ದರೂ, ಮೈಸೂರ ದೇಶದ ಪ್ರಜೆಗಳೆಲ್ಲರಿಗೂ ವಿಶೇಷ ಅಸಮಾಧಾನವೂ, ಖೇದವೂ ಉಂಟಾಗಿವೆ. ಗತಿಸಿದ ಏಳನೆಯ ಎಡ್ವರ್ಡ್ ಸಾರ್ವಭೌಮರು ಹಿಂದೆ ೧೮೭೫ ರಲ್ಲಿ ಪ್ರಿನ್ಸ್ ಆಫ್ ವೇಲ್ಸರಾಗಿ ಭರತಖಂಡಕ್ಕೆ ದಯಮಾಡಿಸಿದ್ದ ವೇಳೆಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ದೇಶೀಯ ರಾಜರುಗಳ ಪರಿಚಯವು ಚಕ್ರವರ್ತಿಯವರಿಗೆ ಮಾಡಿಸಲ್ಪಡುವಾಗ್ಗೆ, ನೈಜಾಂರವರನಂತರ ಆಗ್ಗೆ ಬಾಲ್ಯವಯಸ್ಕರಾಗಿದ್ದ ಗತಿಸಿದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರೂ, ಅವರ ತರುವಾಯ ಬರೋಡಾದ ಗಾಯಕವಾಡರವರೂ ಅನುಕ್ರಮಣವಾಗಿ ಪರಿಚಯಮಾಡಿಸಲ್ಪಟ್ಟರೆಂಬುದು ಬೊಂಬಾಯಿನ ಕೋಟೆಯಲ್ಲಿ ಎಸ್ಪ್ಲನೇಡ್ ಹೋಟೆಲಿನ ಇದಿರಿಗೆ ನಿಲ್ಲಿಸಲ್ಪಟ್ಟಿರುವ ಗತಿಸಿದ ಚಕ್ರವರ್ತಿಯವರ ಪ್ರತಿಮೆಯ ಪೀಠದಮೇಲೆ ಬರೆಯಲ್ಪಟ್ಟಿರುವುದರಿಂದ ಸ್ಪಷ್ಟವಾಗುತ್ತದೆ. ವೈಸ್‌ರಾಯರಾಗಿದ್ದ ಲಾರ್ಡ್ ಕರ್ಜನರವರು ಗತಿಸಿದ ಎಡ್ವರ್ಡ್ ಚಕ್ರವರ್ತಿಯವರ ಕಿರೀಟಧಾರಣಮಹೋತ್ಸವ ಸಂಬಂಧವಾಗಿ ದಿಲ್ಲಿಯಲ್ಲಿ ನಡೆಯಿಸಿದ ದರ್ಬಾರಿನಲ್ಲಿ ನಮ್ಮ ಪ್ರಸಕ್ತ ಮಹಾರಾಜರವರಿಗೆ ಯಾವ ಸ್ಥಾನವು ಕೊಡಲ್ಪಟ್ಟಿದ್ದಿತೆಂಬುದು ನನ್ನ ನೆನಪಿನಲ್ಲಿಲ್ಲವು. ೧೮೭೭ ರಲ್ಲಿ ಲಾರ್ಡ್ ಲಿಟನ್ ವೈಸ್ರಾಯರು ದಿಲ್ಲಿಯಲ್ಲಿ ನಡೆಯಿಸಿದ ದರ್ಬಾರಿನಲ್ಲಿ ನಮ್ಮ ಕೈ|| ಶ್ರೀಚಾಮರಾಜೇಂದ್ರ ಪ್ರಭುಗಳಿಗೆ ದ್ವಿತೀಯಸ್ಥಾನವು ಕೊಡಲ್ಪಟ್ಟಿದ್ದಿತು. ಹಿಂದಣ ಸಂದರ್ಭವು ಹೀಗಿದ್ದಾಗ್ಯೂ, ಪ್ರಸಕ್ತ ಸಂದರ್ಭದಲ್ಲಿ ನಮ್ಮ ಮಹಾರಾಜರವರಿಗೆ ತೃತೀಯಸ್ಥಾನವು ಕೊಡಲ್ಪಟ್ಟಿದ್ದುದು ಈ ದೇಶದ ಪ್ರತಿಯೊಬ್ಬನಿಗೂ ಸಂತಾಪಕರವಾಗಿದೆ. ತೊಂದರೆಯ ಕಾಲದಲ್ಲಿ ಹಿಂದಣ ಈಸ್ಟ್ ಇಂಡ್ಯಾ ಕಂಪೆನಿಯವರಿಗೆ ಬರೋಡಾ ಸಂಸ್ಥಾನವು ಸಹಾಯಮಾಡಿದ್ದುದರಿಂದ, ಮೈಸೂರಿಗಿಂತಲೂ ಹೆಚ್ಚು ಮರ್ಯಾದೆಯನ್ನು ತೋರಿಸಲ್ಪಡುತ್ತಿರುವುದೆನ್ನುವುದಾದರೆ, ಬರೋಡಾ ಸಂಸ್ಥಾನದಂತೆಯೇ ಆ ಕಾಲದಲ್ಲಿ ಸಹಾಯಮಾಡಿದ ತಿರುವನಂತಪುರ (ಟ್ರಾವನ್ಕೂರ್) ಮೊದಲಾದ ಸಂಸ್ಥಾನಗಳಿಗೆ ಮೈಸೂರಿಗಿಂತಲೂ ಹೆಚ್ಚು ಮರ್ಯಾದಾಸ್ಥಾನವು ಕೊಡಲ್ಪಡಬೇಕಾಗಿದ್ದಿತಲ್ಲವೆ? ನಮ್ಮ ಶ್ರೀಮನ್ಮಹಾರಾಜರವರಿಗೆ ಈ ರೀತಿಯಾಗಿ ೩ ನೆಯ ಸ್ಥಾನವು ಕೊಡಲ್ಪಟ್ಟಿರುವ ವಿಷಯವನ್ನು ರಾಜಭಕ್ತಿಪರಾಯಣರಾದ ಪ್ರಜೆಗಳು ಹಾಗೆಯೇ ಬಿಟ್ಟುಕೊಡಬಾರದೆಂಬುದು ನನ್ನಭಿಪ್ರಾಯವಾಗಿದೆ. ಈ ರೀತಿ ಅಭಿಪ್ರಾಯಪಡತಕ್ಕವರು ದೊಡ್ಡ ಅಧಿಕಾರಿಗಳಲ್ಲಲ್ಲದಿದ್ದರೂ ಪ್ರಜೆಗಳಲ್ಲನೇಕರಿರುವರೆಂದು ತಿಳಿಯುತ್ತೇನೆ. ಹಾಗಾದರೆ ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡತಕ್ಕದು ನಮ್ಮ ಆದ್ಯ ಕರ್ತವ್ಯವಾಗಿದೆ. ಅದುಕಾರಣ ಪ್ರತಿಯೊಂದು ಡಿ|| ನ ಹೆಡ್‌ಕ್ವಾರ್ಟರು ಸ್ಥಳಗಳಲ್ಲಿ ಪ್ರಮುಖ ಜನರು ಸಭೆಸೇರಿ ನಮ್ಮ ಮೈಸೂರ ಶ್ರೀಮನ್ಮಹಾರಾಜರವರಿಗೆ ನೈಜಾಮರ ನಂತರ ದ್ವಿತೀಯ ಸ್ಥಾನವನ್ನು ಕೊಡಿಸಬೇಕೆಂದು ಎರಡು ವಿಜ್ಞಾಪನಾ ಪತ್ರಿಕೆಗಳನ್ನು ಬರೆದು ಒಂದನ್ನು ಚಕ್ರವರ್ತಿಯವರಿಗೂ, ಮತ್ತೊಂದನ್ನು ವೈಸ್ರಾಯರಿಗೂ ಕಳುಹಿಸಿಕೊಡತಕ್ಕದು. ಶ್ರೀಮತ್ ಚಕ್ರವರ್ತಿಯವರು ನೇಪಾಲದಿಂದ ಹಿಂತಿರುಗುವುದರೊಳಗಾಗಿ ಈ ಪ್ರಯತ್ನವನ್ನು ಮಾಡಬೇಕಾಗಿದೆ. ಈ ವಿಚಾರವು ಶ್ರೀಮತ್ ಮಹಾರಾಜರವರಿಗೆ ಸಂಬಂಧಪಟ್ಟುದಾದುದರಿಂದ, ಅವರು ಈ ಪ್ರಯತ್ನದಲ್ಲಿ ಆಸಕ್ತಿಯನ್ನು ತೋರಿಸುವುದಿಲ್ಲ ಮತ್ತೂ ಅವರಿಗಿದು ಬೇಕಾಗೂ ಇಲ್ಲವೆಂದು ತೋರುತ್ತದೆ. ಆದರೂ ಶ್ರೀಮನ್ ಮಹಾರಾಜರವರು ನಮ್ಮ ಮೈಸೂರ ಸಂಸ್ಥಾನಾಧೀಶ್ವರರಾಗಿ ದರ್ಬಾರಿಗೆ ದಯಮಾಡಿಸಿದ್ದರಾದುದರಿಂದ, ಅಲ್ಲಿನ ಮರ್ಯಾದೆಯ ವಿಷಯವು ನಮ್ಮನ್ನು ಸೇರಿದುದಾಗಿದೆ. ಅದುಕಾರಣ ಮೈಸೂರ ದೇಶದ ಪ್ರಜೆಗಳಾದ ನಾವುಗಳು ಅಧಿಕಾರಿಗಳ ಪ್ರೇರಣೆಯನ್ನು ನಿರೀಕ್ಷಿಸದೆ ಸ್ವತಃ ಪ್ರಯತ್ನಿಸಬೇಕಾಗಿದೆ. ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಿರುವುದು ಅಭೂತಪೂರ್ವವಾದುದು. ಇಂತಹ ವೇಳೆಯಲ್ಲಿ ನಡೆದ ಸಂದರ್ಭವನ್ನು ಹಾಗೆಯೇ ಬಿಟ್ಟರೆ ಮುಂದೆ ಅದು ಪದ್ಧತಿಯಾಗಿ ನಿಲ್ಲುವುದಾದುದರಿಂದ, ನಾವು ಲೇಶವೂ ಕಾಲಹರಣಮಾಡದೆ ಚಕ್ರವರ್ತಿಯವರಲ್ಲೂ, ವೈಸ್ರಾಯರಲ್ಲೂ ಬಿನ್ನೈಸಿಕೊಂಡು ನಮ್ಮ ಮನೋವ್ಯಥೆಯನ್ನು ಪರಿಹರಿಸಿಕೊಳ್ಳಬೇಕಾಗಿದೆ.

ಬರೋಡಾ ಸಂಸ್ಥಾನಕ್ಕೆ ಮೊದಲು ಮರ್ಯಾದೆಯು ನಡೆದು ಅನಂತರ ನಮ್ಮ ಸಂಸ್ಥಾನಕ್ಕೆ ನಡೆಯಬೇಕೆಂಬ ನಿರ್ಬಂಧವಿಲ್ಲವೆಂಬುದು ೧೯೧೧ ರಲ್ಲಿ ಆಗಿರುವ ನಿಯಮದಿಂದಲೂ, ೧೮೭೫ ರಲ್ಲಿ ಪ್ರಿನ್ಸ್ ಆಫ್ ವೇಲ್ಸರು ಬೊಂಬಾಯಿಗೆ ದಯಮಾಡಿಸಿದ್ದ ವೇಳೆಯಲ್ಲೂ, ೧೮೭೭ರಲ್ಲಿ ನಡೆದ ದರ್ಬಾರಿನಲ್ಲೂ ಕೈ|| ಶ್ರೀ ಚಾಮರಾಜೇಂದ್ರ ಒಡೆಯರವರಿಗೆ ದೇಶೀಯ ಮಹಾರಾಜರುಗಳ ಪಙ್ಕ್ತಿಯಲ್ಲಿ ದ್ವಿತೀಯ ಸ್ಥಾನವು ಕೊಡಲ್ಪಟ್ಟಿದ್ದಿತೆಂದು ಮ|| ಸೆಟ್ಲೂರರವರ ಬರವಣಿಗೆಯಿಂದಲೂ ವ್ಯಕ್ತವಾಗುತ್ತದೆ. ಆದರೆ ಈ ವೇಳೆ ಮಾತ್ರ ನಮ್ಮ ಮಹಾರಾಜರವರಿಗೆ ತೃತೀಯಸ್ಥಾನವು ಲಭ್ಯವಾದುದಕ್ಕೆ ಕಾರಣವೇನೋ ತಿಳಿಯದು. ಸರ್ವದಾ ಪ್ರಜಾಕ್ಷೇಮಚಿಂತನೆಯಲ್ಲಿ ನಿರತರಾಗಿರುವ ನಮ್ಮ ಮಹಾಪ್ರಭುಗಳು ಈ ವಿಧವಾದ ಬಾಹ್ಯಪ್ರತಿಷ್ಠೆಗಳ ಕಡೆ ಮನಸ್ಸನ್ನು ಕೊಡತಕ್ಕವರಲ್ಲವು. ಮತ್ತೂ ಈ ದೇಶದ ಮಾನಾಪಮಾನಗಳಿಗೆ ಹೆಚ್ಚಾಗಿ ಗುರಿಯಾದವರು ಪ್ರಜೆಗಳಲ್ಲದೆ ಪ್ರಭುಗಳಲ್ಲವು. ಅದುಕಾರಣ ಮ|| ಸೆಟ್ಲೂರರವರು ಸೂಚಿಸಿರುವಂತೆ ಈ ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನ ಮುಖ್ಯಸ್ಥಳಗಳಲ್ಲಿ ಪ್ರಮುಖಜನರು ಅಗತ್ಯವಾಗಿ ಸಭೆಸೇರಿ ಚಕ್ರವರ್ತಿಯವರಿಗೂ, ವೈಸ್ರಾಯರಿಗೂ ಬಹು ಭಯಭಕ್ತಿ ವಿಶ್ವಾಸಗಳಿಂದ ಬಿನ್ನೈಸಿಕೊಂಡು ಯಾವಕಾರಣದಿಂದಲೋ ಕಳೆದುಹೋಗಿರುವ ಮರ್ಯಾದೆಯು ಪುನಃ ಲಭ್ಯವಾಗುವಂತೆ ಮಾಡಿಕೊಳ್ಳುವವರಾಗಲೆಂದು ಇಚ್ಛಿಸುತ್ತೇವೆ.

ಕಳೆದ ತಾ|| ೨೩ರಲ್ಲಿ ರಾಜಧಾನಿಯ ವೀರಶೈವರು ಪಟ್ಟಣಶೆಟ್ಟಿ ಬಸಪ್ಪನವರ ಮನೆಯಲ್ಲಿ ಮ|| ಯಜಮಾನ್ ವಿರೂಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಶ್ರೀಮದ್ಯುವರಾಜರವರಿಗೆ ಕೆ. ಸಿ. ಐ ಇ, ಪ್ರಶಸ್ತಿಯೂ, ಮ|| ಕೆ. ಪಿ. ಪುಟ್ಟಣ್ಣ ಸೆಟ್ಟರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿಯೂ, ಬೆಳಗಾಂ ಡಿ|| ಕಲೆಕ್ಟರ್ ರಾ|| ಬ|| ರುದ್ರಗೌಡರಿಗೆ ಸಿ. ಐ. ಎಸ್. ಓ., ಎಂಬ ಪ್ರಶಸ್ತಿಯೂ ಚಕ್ರವರ್ತಿಯವರಿಂದ ಲಭ್ಯವಾದುದಕ್ಕಾಗಿ ತಮಗುಂಟಾಗಿರುವ ಸಂತೋಷವನ್ನೂ, ಅಭಿನಂದನವನ್ನೂ ಅವರುಗಳಿಗೆ ತಂತಿಯಮೂಲಕ ತಿಳಿಸಿದರು.

ಮೈಸೂರ ಸಂಸ್ಥಾನದ ಬಹುಕಡೆಯಿಂದಲೂ ಹೊಂಗಡೆಯಿಂದಲೂ ಬಂದಿರುವ ಕಿರೀಟಧಾರಣೋತ್ಸವ ಸಂಬಂಧವಾದ ಲೇಖನಗಳನ್ನು ಪ್ರಕಟಿಸದೆ ಬಿಟ್ಟರೆ, ಅಷ್ಟೊಂದು ಜನರ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿದಂತಾಗುತ್ತದೆಂಬುದರಮೇಲೆ ಈ ಪತ್ರಿಕೆಯಲ್ಲಿ ಅವನ್ನೇ ವಿಶೇಷವಾಗಿ ಪ್ರಕಟಿಸಿರುವುದರಿಂದ, ವರ್ತಮಾನಗಳನ್ನು ಬರೆಯಲವಕಾಶವಿಲ್ಲದಾಯಿತು. ಇದಕ್ಕಾಗಿ ನಮ್ಮ ವಾಚಕಮಹಾಶಯರ ಕ್ಷಮೆಯನ್ನು ಬೇಡುವೆವು. ಸ್ಥಳಸಂಕೋಚದಿಂದ ಉಳಿದಿರುವ ಉತ್ಸವ ಸಂಬಂಧವಾದ ಲೇಖನಗಳು ಕ್ರಮೇಣ ಪ್ರಕಟಿಸಲ್ಪಡುವುವಾದುದರಿಂದ, ಲೇಖಕರು ಆಗ್ರಹಮಾಡಲಾಗದು.

ಬರೋಡಾಮಹಾರಾಜರು ಕ್ಷಮಾಪಣೆಯನ್ನು ಕೇಳಿರುವುದು.

ಕಳೆದ ತಾ|| ೧೨ ರಲ್ಲಿ ದಿಲ್ಲಿಯ ದರ್ಬಾರು ಮಹೋತ್ಸವದಲ್ಲಿ ಬರೋಡಾ ಮಹಾರಾಜರವರು ಚಕ್ರವರ್ತಿಯವರಿಗೆ ಮುಜರೆಯನ್ನು ಮಾಡುವಾಗ್ಗೆ ಕೈಯಲ್ಲಿ ಬೆತ್ತವನ್ನು ಹಿಡಿದಿದ್ದರು. ಮತ್ತೂ ಮುಜರೆಯನ್ನು ಮಾಡಿದಮೇಲೆ ತಮ್ಮ ಸ್ಥಾನಕ್ಕೆ ನೆಟ್ಟಗೆ ಬಾರದೆ ಸಿಂಹಾ ತ್ತಿದ್ದರಲ್ಲದೆ ನನ್ನ ಸ್ಥಳಕ್ಕೆಹೋಗುವ ಕಡೆಗೆ ಹೋಗು ಎಂದು ಕೇಳುತ್ತ ಸಿಂಹಾಸನದ ಕಡೆಗೆ ತಮ್ಮನ್ನಾವುದು? ಗುಗಿಸಿಕೊಂಡು ಬಂದರು. ಮುಜರೆಮಾಡುವುದು ತಿ ದೇಶದ ಮರ್ಯಾದೆಯು. ಗಾಯಕವಾಡರವರು ಇಂತಹ ಮರ್ಯಾದೆಯನ್ನು ಚೆನ್ನಾಗಿ ಬಲ್ಲವರಾಗಿದ್ದರೂ, ಈ ರೀತಿ ಮಾಡಿದುದು ಶುದ್ಧತಪ್ಪು. ಅಲ್ಲದೆ ದರ್ಬಾರಿಗೆ ೩—೪ ದಿವಸಗಳ ಮುಂದೆ ಚಕ್ರವರ್ತಿಯವರ ಬಿಡಾರದಲ್ಲಿ ಅವರ ದರ್ಶನಭಾಷಣಗಳನ್ನು ತೆಗೆದುಕೊಳ್ಳತಕ್ಕ ಸಮಯವನ್ನು ತಿಳುಹಬೇಕೆಂದು ಚಕ್ರವರ್ತಿಯವರಿಗೇ ನೇರವಾಗಿ ಕಾಗದವನ್ನು ಬರೆದಿದ್ದುದು ಅಸಂಗತವು. ಎಂಬುದು ಮೊದಲಾಗಿ ಇಂಗ್ಲೀಷ ವೃತ್ತಪತ್ರಿಕೆಗಳು ವ್ಯಾಖ್ಯಾನಮಾಡಿದ್ದುದರ ಮೇಲೆ ಗಾಯಕವಾಡರವರು ಇದರ ಸಮಾಧಾನಾರ್ಥವಾಗಿ ವೈಸ್ರಾಯರವರಿಗೆ ಬರೆದಿರುವುದರ ತಾತ್ಪರ್ಯವೇನೆಂದರೆ:— ಚಕ್ರವರ್ತಿಯವರಿಗೆ ಅಸಮಾಧಾನವುಂಟಾಗುವಂತೆ, ಅಥವಾ ಚಕ್ರವರ್ತಿಯವರಲ್ಲೂ, ಅವರ ಸಿಂಹಾಸನದಲ್ಲೂ ನನಗಿರುವ ರಾಜಭಕ್ತಿವಿಶ್ವಾಸ ವಿಚಾರದಲ್ಲಿ ಚಕ್ರವರ್ತಿಯವರಾಗಲಿ ಮತ್ತೊಬ್ಬರಾಗಲಿ ಅನುಮಾನಪಡುವಂತೆ ವರ್ತಿಸಲಿಲ್ಲವು, ಮತ್ತೂ ಮುಂದೆ ಯಾವಾಗಲೂ ವರ್ತಿಸತಕ್ಕವನಲ್ಲವು. ಬರೋಡಾ ಸಂಸ್ಥಾನದ ಯಾವತ್ತುಶ್ರೇಯೋಭಿವೃದ್ಧಿಗೂ ಬ್ರಿಟಿಷ್ ಸರ್ಕಾರವೇ ಕಾರಣವಾಗಿರುವುದರಿಂದ, ಆ ಸರ್ಕಾರಕ್ಕೆ ನಾನೂ, ನನ್ನ ಸಂಸ್ಥಾನವೂ ಸರ್ವದಾ ಕೃತಜ್ಞತೆಯಿಂದಲೂ, ಸ್ವಾಮಿಭಕ್ತಿಯಿಂದಲೂ ನಡೆದುಕೊಳ್ಳುತ್ತಿರುವೆವು. ಮುಜರೆಯ ಕಾಲದಲ್ಲಿ ಸಿಂಹಾಸನದ ಬಳಿ ಹೋಗಿ ಬರುವಾಗ್ಗೆ ಮೊದಲೇ ಗೊತ್ತಾಗಿದ್ದ ಪ್ರಕಾರ ನಾನು ಮರ್ಯಾದೆಯಿಂದ ನಡೆದುಕೊಳ್ಳಲಿಲ್ಲವೆಂದು ಹೇಳುತ್ತಾರೆ. ಹಾಗೆ ನಡೆದಿದ್ದ ಪಕ್ಷದಲ್ಲಿ, ಅಂತಹ ಮಹಾಸಭೆಯನ್ನೂ, ಸಾರ್ವಭೌಮ ದಂಪತಿಗಳನ್ನೂ ನೋಡಿದುದರಿಂದುಂಟಾದ ಕಂಪನದಿಂದಲೂ, ಘಾಬರಿಯಿಂದಲೂ ವರ್ತಿಸಿದುದಾಗಿದೆಯೇ ವಿನಾ ಅನ್ಯಥಾ ಇಲ್ಲವು. ನನಗೆ ಮೊದಲು ನೈಜಾಮರೊಬ್ಬರು ಮಾತ್ರ ಮುಜರೆಯನ್ನು ಮಾಡಿದ್ದರು. ಆದರೆ ಆಗ ನನಗುಂಟಾಗಿದ್ದ ಘಾಬರಿಯಿಂದ ಅವರು ಯಾವರೀತಿಯಾಗಿ ಮಾಡಿದರೆಂಬುದನ್ನು ನೋಡಿ ತಿಳಿದುಕೊಳ್ಳಲವಕಾಶವಿಲ್ಲವಾಯಿತು. ಶಿರಬಾಗಿ ನಮಸ್ಕಾರವನ್ನು ಮಾಡಿದಮೇಲೆ, ಕೆಲಹೆಜ್ಜೆಗಳ ಹಿಂದಕ್ಕೆ ಸರಿದು ನಾನು ಯಾವ ದಾರಿಯಲ್ಲಿ ಹೋಗಬೇಕೆಂದು ಕೇಳಲು ಸುತ್ತಲೂ ತಿರುಗಿದೆನು. ನಾನೇನೋ ಕ್ರಮವಾದ ದಾರಿಯಲ್ಲಿ ಇಳಿದುಬಂದೆನೆಂದು ತಿಳಿದುಕೊಂಡಿದ್ದೆನು. ಆದರೆ ಹಾಗೆ ಬಗಲಿಲ್ಲವಂತೆ. ಹಿಂತಿರುಗತಕ್ಕ ಮಾರ್ಗವನ್ನು ತಿಳಿಯುವುದಕ್ಕಾಗಿ ಸುತ್ತಲೂ ತಿರುಗುವಾಗ್ಗೆ ಮತ್ತಿಷ್ಟು ಭ್ರಾಂತನಾಗಿ ಮುಂದಕ್ಕೆ ಹೊರಟೆನು. ಈ ನನ್ನ ಅಪರಾಧಕ್ಕಾಗಿ ನಾನು ಬಹು ಚಿಂತಾಕ್ರಾಂತನಾಗಿದ್ದೇನೆ. ನಾನು ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಳ್ಳಲು ಅನುಕೂಲವಾದ ಕಾಲವನ್ನು ತಿಳುಹಬೇಕೆಂದು ತಾ|| ೭ ರಲ್ಲಿ ಚಕ್ರವರ್ತಿಯವರಿಗೆ ಬರೆದುಕೊಂಡಿದ್ದ ಕಾಗದವು ಚಕ್ರವರ್ತಿಯವರ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿತೆಂದು ತಿಳಿಯುತ್ತೇನೆ. ಅವರ ಮನಸ್ಸಿಗೆ ಬೇಸರವನ್ನುಂಟುಮಾಡಬೇಕೆಂಬಭಿಲಾಷೆಯಿಂದ ನಾನು ಖಂಡಿತವಾಗಿ ಬರೆದವನಲ್ಲ. ಚಕ್ರವರ್ತಿಯವರ ಭರತಖಂಡದ ಆಗಮನವನ್ನು ವಿಶೇಷ ಪ್ರಕಾರಮಾಡುವಲ್ಲಿ ನನ್ನ ಕೈಲಾದ ಮಟ್ಟಿಗೆ ಪ್ರಯತ್ನಿಸಬೇಕೆಂಬಭಿಲಾಷೆಯಿಂದ ಮೈತ್ರೀಭಾವದಮೇಲೆ ಬರೆದುದಾಗಿರುತ್ತದೆ. ಚಕ್ರವರ್ತಿಯವರು ನನಗೆ ತೋರಿಸಿರುವ ಪ್ರೀತಿವಿಶ್ವಾಸವು ನನ್ನ ಮನಸ್ಸಿನಲ್ಲಿ ನಾಟಿಹೋಗಿರುವುದು. ಅದುಕಾರಣ ತಾವು ಈ ಕಾಗದದಭಿಪ್ರಾಯವನ್ನು ಚಕ್ರವರ್ತಿಯವರಲ್ಲಿ ಬಿನ್ನೈಸಿ, ನಾನು ನಿಜವಾದ ರಾಜಭಕ್ತಿವಿಶ್ವಾಸದಿಂದ ನಡೆದುಕೊಳ್ಳತಕ್ಕವನೆಂಬ ಬಗೆಗೆ ಅವರಿಗೆ ಭರವಸೆಯು ಹುಟ್ಟುವಂತೆ ಹೇಳಬೇಕೆಂದು ತಮ್ಮನ್ನು ಬೇಡುತ್ತೇನೆ.

ಈ ಕಾಗದವನ್ನು ಬರೆದಮೇಲೆ ಲಂಡನ್ನಿನಲ್ಲಿ ಪ್ರಕಟವಾಗುವ ಟೈಂಸ್ ಎಂಬ ಪತ್ರಿಕೆಯು, ಕಳೆದ ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ಜರುಗಿದ ಕಿರೀಟಧಾರಣ ಮಹೋತ್ಸವಕ್ಕೆ ಬರೋಡಾ ಗಾಯಕವಾಡರವರು ಬಂದಿದ್ದಾಗಲೂ ಹಿಂದೂ ಪದ್ಧತಿಯಂತೆ ಮರ್ಯಾದೆಯನ್ನು ಮಾಡಲಿಲ್ಲವೆಂದೂ, ಅರಾಜಕಪ್ರವರ್ತನಾಸಕ್ತರಾದ ಕೃಷ್ಣವರ್ಮರವರನ್ನು ಕಂಡು ಮಾತನಾಡಿದರೆಂದೂ, ತಮ್ಮ ಸಂಸ್ಥಾನದಲ್ಲಿ ರಾಜದ್ರೋಹಕಾರಕವಾದ ಪುಸ್ತಕವನ್ನು ಮುದ್ರಣಮಾಡುತ್ತಿದ್ದ ಮುದ್ರಣಾಲಯವನ್ನು ಪೋಲೀಸರು ಶೋಧಿಸುವಾಗ್ಗೆ ಅವರಿಗೆ ತಕ್ಕ ಸಹಾಯವನ್ನು ಕೊಡಲಿಲ್ಲವೆಂದೂ, ಅರಾಜಕಪ್ರವರ್ತಕರಿಗೆ ತಮ್ಮ ಸಂಸ್ಥಾನದಲ್ಲಿ ಇಂಬುಗೊಟ್ಟಿದ್ದರೆಂದೂ ದೂಷಿಸಿ ಬರೆದಿದ್ದುದಕ್ಕೆ, ಗಾಯಕವಾಡರವರ ಪ್ರೈವೆಟ್‌ಸೆಕ್ರೆಟರಿಯವರು "ಲಂಡನ್ನಿನಲ್ಲಿ ನಡೆದ ಕಿರೀಟಧಾರಣ ಮಹೋತ್ಸವದಲ್ಲಿ ಗಾಯಕವಾಡರವರು ಹಿಂದೂಪದ್ಧತಿಗೆ ವಿರುದ್ಧವಾಗಿ ಮುಜರೆಮಾಡಿದರೆಂಬುದು ಸುಳ್ಳು ಮತ್ತೂ ಅವರು ಒಬ್ಬ ಪ್ರೇಕ್ಷಕರಾಗಿ ಹೋಗಿದ್ದುದರಿಂದ, ಆ ರೀತಿ ಮುಜರೆಮಾಡಲು ಅವಕಾಶವೇ ಇರಲಿಲ್ಲವು. ಕೃಷ್ಣವರ್ಮರನ್ನು ಅವರು ಬಹುಕಾಲದಿಂದಲೂ ನೋಡಿಲ್ಲವು. ಮತ್ತೂ ಅವರಿಗೆ ಇಂತಹ ಆಕ್ಷೇಪವೆಲ್ಲಿಯೂ ಹುಟ್ಟಿರಲಿಲ್ಲ. ಅವರ ಸಂಸ್ಥಾನದಲ್ಲಿ ರಾಜದ್ರೋಹಕಾರಕ ಪುಸ್ತಕವನ್ನು ಮುದ್ರಣ ಮಾಡುವ ಅಚ್ಚುಕೂಟವನ್ನು ಶೋಧಿಸುವಾಗ್ಗೆ ಪೋಲೀಸರಿಗೆ ಬೇಕಾದ ಸಹಾಯ ಕೊಟ್ಟರಲ್ಲದೆ, ಆ ವಿವಾದವು ಕೋರ್ಟಿನಲ್ಲಿ ಕೊನೆ ಹೋ ಆ ಮುದ್ರಣಾಲಯವನ್ನು ಸರ್ಕಾರಕ್ಕೆ ಸೇರಿಸಿಕೆ ಆ ಗ್ರಂಥಕರ್ತನನ್ನು ಕೂಡಲೆ ತಮ್ಮ ಸೀಮೆಯಿಂದ ಹೊರಗೆ ಹಿಸಿಬಿಟ್ಟರು. ತಮ್ಮ ರಾಜ್ಯದಲ್ಲಿ ಅರಾಜಕ ಪ್ರವರ್ತಕರಿಗೆ ಶ್ರಯವನ್ನು ಕೊಟ್ಟು ಇಟ್ಟುಕೊಂಡಿರುವರೆಂಬುದು ಶುದ್ಧ ಷು" ಎಂದು ಉತ್ತರವನ್ನು ಕೊಟ್ಟಿರುತ್ತಾರೆ.

ಗಾಯಕವಾಡ ಮಹಾರಾಜರವರು ಪೂರ್ಣವಿದ್ಯಾವಂತರೂ, ದೂರದರ್ಶಿಗಳೂ, ಅತುಳ ಮೇಧಾವಿಗಳೂ ಮತ್ತೂ ಪ್ರಪಂಚದ ಬಹುಭಾಗವನ್ನೆಲ್ಲ ಸಂಚರಿಸಿ ನಾನಾ ವಿಧಾಂಗದ ನಡೆನುಡಿಯನ್ನು ಚೆನ್ನಾಗಿ ಬಲ್ಲವರೂ ಆಗಿರುವುದರಿಂದ ಚಕ್ರವರ್ತಿಯವರಿಗೆ ಅಪಮಾನವನ್ನುಂಟುಮಾಡಬೇಕೆಂದಾಗಲಿ, ಅಥವಾ ಅವರನ್ನು ಲಕ್ಷಿಸದೆಯಾಗಲಿ ದರ್ಬಾರಿನ ಕಾಲದಲ್ಲಿ ಆ ರೀತಿ ನಡೆದರೆಂದು ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲ. ಅವರು ಹೇಳುವಂತೆ ಪ್ರಾಯಶಃ ಆ ಮಹಾಸಭೆಯನ್ನೂ, ಚಕ್ರವರ್ತಿ ದಂಪತಿಗಳನ್ನೂ ನೋಡಿ ಘಾಬರಿಯಾಗಿ ಆ ರೀತಿ ವರ್ತಿಸಿರಬಹುದೆಂತಲೇ ಹೇಳಬಹುದಾಗಿದೆ. ಆ ಕಾಲದಲ್ಲಿ ಎಂತಹ ಧೈರ್ಯಶಾಲಿಗಳಿಗೂ ಹಾಗೆ ಘಾಬರಿಯಾಗುವುದು ಸಹಜವೆಂದು ಚಕ್ರವರ್ತಿಯವರು ತಿಳಿದು ತಟಸ್ಥರಾಗಿದ್ದರೂ, "ಅಪಿಬೋತೆತೋಬಿ ಅಪನ ಕೆಂಬಲ್ ಚೋತ್ತೋನ್ನೈ" ಎಂಬ ಲೋಕೋಕ್ತಿಯಂತೆ ಗಾಯಕವಾಡರವರ ಧೈರ್ಯವನ್ನೂ, ಸ್ವದೇಶಾಭಿಮಾನವನ್ನೂ ಸಹಿಸದ ಕೆಲ ಜನರು ಸಾಮಾನ್ಯವಿಷಯವನ್ನೂ ಬ್ರಹ್ಮಾಂಡವನ್ನಾಗಿ ಮಾಡಿ ಪ್ರಭುಗಳ ಮನಸ್ಸು ಕೆಡುವಂತೆ ಬರೆಯತೊಡಗಿರುವರು. ಭಾರತೀಯರ ಮುಂದಾಳುಗಳಾದ ಬರೋಡಾ ಮಹಾರಾಜರವರಿಗೆ ಈ ರೀತಿಯಲ್ಲಿ ವೃಥಾ ಅಪವಾದವುಂಟಾದುದಕ್ಕಾಗಿ ನಾವು ತುಂಬಾ ವಿಷಾದಿಸುತ್ತೇವೆ.

ಶ್ರೀಮತ್ ಮಹಾರಾಜರವರು ಉತ್ತರದೇಶದಲ್ಲಿ ಸಂಚಾರಮಾಡುವ ಕ್ರಮವು:—

ಈ ಡಿಸೆಂಬರ್ ತಾ|| ೨೦ ರಲ್ಲಿ ದಿಲ್ಲಿಯನ್ನು ಬಿಟ್ಟು ತಾ|| ೨೨ ರಲ್ಲಿ ಲಾಹೋರ್‌ಪಟ್ಟಣವನ್ನು ಸೇರಿದರು. ಅಲ್ಲಿ ತಾ|| ೨೪, ೨೫ ಮತ್ತೂ ೨೬ ರ ವರೆಗಿದ್ದು ಮಧ್ಯದಲ್ಲಿ ಕಪುರ್ಥಲಕ್ಕೆ ಹೋಗಿ ಬರುವರು. ತಾ|| ೨೭ರ ಬೆಳಿಗ್ಗೆ ೮|| ಘಂಟೆಯಲ್ಲಿ ಲಾಹೋರನ್ನು ಬಿಟ್ಟು ಅಮೃತಸರವನ್ನು ತಲುಪಿ ಅಲ್ಲಿ ಸಾಯಂಕಾಲದವರೆಗಿದ್ದು ಅದೇ ರಾತ್ರಿ ೧೧ ಘಂಟೆಯಲ್ಲಿ ಹೊರಟು ತಾ|| ೨೮ರ ಬೆಳಗಿನ ೮ ಘಂಟೆಗೆ ಹರಿದ್ವಾರಕ್ಕೆ ಬಂದು ಅಲ್ಲಿ ಊಟ ಉಪಚಾರಾದಿಗಳನ್ನು ತೀರಿಸಿಕೊಂಡು ಅದೇ ರಾತ್ರಿ ೯ ಘಂಟೆಗೆ ಪ್ರಯಾಣಮಾಡಿ ತಾ|| ೨೯ರ ಬೆಳಗಿನ ೮ ಘಂಟೆಗೆ ಲಕ್ನೋಪಟ್ಟಣವನ್ನು ತಲುಪುವರು. ಅಲ್ಲಿಂದ ತಾ|| ೩೧ ರ ರಾತ್ರಿ ೩|| ಗಂಟೆಗೆ ಪ್ರಯಾಣಮಾಡಿ ೧೯೧೨ ನೇಯ ಜನವರಿ ತಾ|| ೧ ರ ಬೆಳಗಿನ ೩|| ಗಂಟೆಗೆ ಅಯೋಧ್ಯಾಪಟ್ಟಣವನ್ನು ಸೇರುವರು. ಅಲ್ಲಿಂದ ತಾ|| ೧ರ ರಾತ್ರಿ ೨|| ಗಂಟೆಗೆ ಪ್ರಯಾಣಮಾಡಿ ತಾ|| ೨ರ ಬೆಳಗಿನ ೩|| ಗಂಟೆಗೆ ಅಲಹಾಬಾದ (ಪ್ರಯಾಗವ)ನ್ನು ತಲುಪುವರು. ಪ್ರಯಾಗದಿಂದ ತಾ|| ೪ರ ರಾತ್ರಿ ೩|| ಗಂಟೆಗೆ ಹೊರಟು ತಾ|| ೫ರ ಬೆಳಗಿನ ೩|| ಗಂಟೆಗೆ ಕಾಶಿಯನ್ನು ಸೇರುವರು. ತಾ|| ೭ರ ರಾತ್ರಿ ೧|| ಗಂಟೆಗೆ ಕಾಶಿಯನ್ನು ಬಿಟ್ಟು ತಾ|| ೮ರ ಬೆಳಗಿನ ೩|| ಗಂಟೆಗೆ ಗಯಾವನ್ನು ತಲುಪುವರು. ಅಲ್ಲಿಂದ ತಾ|| ೯ರ ರಾತ್ರಿ ೯ ಗಂಟೆಗೆ ಪ್ರಯಾಣಮಾಡಿ ತಾ|| ೧೦ರ ಬೆಳಗಿನ ೮ ಗಂಟೆಗೆ ಕಲಕತ್ತಾಪಟ್ಟಣವನ್ನು ಸೇರುವರು ಈಗೆ ಸದ್ಯದಲ್ಲಿ ಇಷ್ಟರಮಟ್ಟಿಗೆ ಗೊತ್ತಾಗಿರುವುದು.

ನೋಟಿಸ್.

ದನಗಳ ಪ್ರದರ್ಶನ.

೧೯೧೨ ನೇಯ ಇಸವಿ ಜನವರಿ ೪ ಮತ್ತು ೫ ನೇಯ ತಾರೀಖು ಗುರುವಾರ ಮತ್ತು ಶುಕ್ರವಾರಗಳಲ್ಲಿ ಹಾಸನದ ಟವ್ನನಲ್ಲಿ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸ್ ಬಾಜೂ ಮೈದಾನದಲ್ಲಿ ದನಗಳ ಪ್ರದರ್ಶನ ನಡೆಯುತ್ತೆ. ಆ ಪ್ರದರ್ಶನದಲ್ಲಿ ದನ, ಎಮ್ಮೆ, ಕೋಣ, ಆಡು, ಕುರಿ, ಕುದುರೆ ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹೆಯ ಜಾನ್ವಾರುಗಳಿಗೂ ಇನಾಂ ಕೊಡಲ್ಪಡುತ್ತೆ. ಬರುವ ಜನವರಿ ೩ನೆಯ ತಾರೀಖಿನ ಮುಂಚೆಯ ಪ್ರದರ್ಶಿಸತಕ್ಕ ಜಾನ್ವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು. ಹೆಚ್ಚು ಸಂಗತಿಯನ್ನು ಹಾಸನದ ದನಗಳ ಪ್ರದರ್ಶನದ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

ಎಂ. ಶ್ರೀನಿವಾಸಮೂರ್ತಿ
ಆನರರಿ ಸೆಕ್ರೆಟರಿ,
ಹಾಸನದ ದನಗಳ ಪ್ರದರ್ಶನದ ಕಮಿಟಿ.

ಮುಂಡುಕುತೊರೆ.

ಸರ್ವಸನ್ಮಾನನೀಯರೂ, ಸಕಲ ಪ್ರಜಾರಂಜಕರೂ, ಕೃಪಾಮಯರೂ ಆದ ಶ್ರೀಮದಿಂಡಿಯಾ ಚಕ್ರವರ್ತಿ ೫ನೆಯ ಜಾರ್ಜ್ ಪ್ರಭುವರ್ಯರು, ತಮ್ಮ ಧರ್ಮಪತ್ನಿಯವರ ಸಮೇತರಾಗಿ ಈ ನಮ್ಮ ಭರತಖಂಡಕ್ಕೆ ದಯಮಾಡಿಸಿ ಅತ್ಯಂತಪೂರ್ವವಾದ ವೈಭವದಿಂದ ಇದೇ ಡಿಸೆಂಬರ್ ತಾ|| ೧೨ರಲ್ಲಿ ಈ ದೇಶದ ಚಕ್ರವರ್ತಿತ್ವನಂ ಕಿರೀಟಧಾರಣ ಮಾಡಿಸಿದುದರಿಂ ವಪೂರ್ವಕವಾಗಿ ಈ ದೇಶೀಯರ ಪ್ರತ್ಯಕ್ಷತೆಗೆ ಸುಖತರದ ಆ ಆಂಗ್ಲ ಚಕ್ರಾಧಿಪತ್ಯದ ಆಶ್ರಯ[illegible] ಈ ದೇಶೀಯರೆಲ್ಲರೂ [illegible]ವಾದ ಬಾಷ್ಪಿಕೆಯನ್ನು ಪಡೆ[illegible] ಈ ಸಮಯ ಅಸಾಧಾರಣ ಸಂತೋಷೋತ್ಸವವನ್ನು ಹೊಂದಿ, ಈ ಸಮಯದಲ್ಲಿ ತಮ್ಮ ರಾಜಭಕ್ತಿ, ವಿಶ್ವಾಸಾದಿಗಳನ್ನು ಕುಲಪುತ್ರರನಾಗಿ ಪ್ರಕಾಶಪಡಿಸುತ್ತಿರುವಲ್ಲಿ, ಶ್ರೀ ವೀರಶೈವ ಮತಸಂವರ್ಧಿನೀ ಮಹಾಸಭೆಯವರು ಸಹ ಆಂಗ್ಲ ಸಾರ್ವಭೌಮಾಧಿಪತ್ಯವು ಈ ದೇಶದಲ್ಲಿ ಆಚಂದ್ರಾರ್ಕವಾಗಿರಲೆಂದು, ಪ್ರಕೃತದ ಚಕ್ರವರ್ತಿಗಳಾದ ಶ್ರೀಮದ್ ಜಾರ್ಜ್ ಸಾರ್ವಭೌಮರು ಅವರ ಸಹ ಧರ್ಮಿಣಿಯಾದ ಚಕ್ರವರ್ತಿನಿ ಮೇರಿರಾಜ್ಞಿಯವರು ಸಹ ಚಿರಕಾಲ ಸದ್ಧರ್ಮದಿಂದ ರಾಜ್ಯವನ್ನಾಳುವಂತೆ ಅನುಗ್ರಹಿಸಬೇಕೆಂದೂ, ಈ ಭರತಖಂಡದ ಪ್ರಜಾನವು ಆ ಪ್ರಭುದಂಪತಿಗಳಿಗೆ ಸುಕ್ಷೇಮ ಸುಖದಾಯಕವಾಗಿರುವಂತೆ ಮಾಡಲೆಂದೂ, ಪ್ರಾರ್ಥಿಸಬೇಕೆಂದು ಗೊತ್ತಾಗಿದ್ದ ಪ್ರಕಾರ ಇದೇ ಮುಂಡುಕುತೊರೆಯ ಶ್ರೀಮದ್ಭ್ರಮರಾಂಬಾಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೆ ಮಹಾರುದ್ರಾಭಿಷೇಕಪೂರ್ವಕವಾದ ಸಮರ್ಪಣೆಯೂ, ರಾತ್ರಿ ದೀಪಾರಾಧನೆಯೂ ನಡೆಯುವಂತೆ ಏರ್ಪಡಿಸಲ್ಪಟ್ಟಿದುದಲ್ಲದೆ ಇದೇ ತಾರೀಕು ೧೨ರಲ್ಲಿ ತತ್ಪ್ರಯುಕ್ತವಾದ ಮಹಾಗಣಾರಾಧನೆಯೂ ನಡೆಯಿಸಲ್ಪಟ್ಟಿತು. ಮಧ್ಯಾಹ್ನಾತ್ಪರ ಮುಡುಕುತೊರೆಯಲ್ಲಿರುವ ಮಧುವನಹಳ್ಳಿ ಮಣಿಗಾರ್ ಮ|| ಗುರುನಂಜಪ್ಪನವರ ಮಂಟಪದಲ್ಲಿ ಎಂ. ಗುರುನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದಿತು. ಮ|| ರಾ|| ಬಿ. ಮಾದಪ್ಪನವರು ಶ್ರೀಮದಾಂಗ್ಲ ಪ್ರಭುತ್ವದಿಂದ ಉಂಟಾಗಿರುವ ಸುಖಭಾಗ್ಯಸಂಮೃದ್ಧಿಯನ್ನೂ, ಈಗಿನ ಜಾರ್ಜ್ ಪ್ರಭುದಂಪತಿಗಳ ಸೌದ್ಗುಣ್ಯಾತಿಶಯವನ್ನೂ, ಈಗ ನಡೆಯುತ್ತಿರುವ ಅವರ ಕಿರೀಟಧಾರಣ ಮಹೋತ್ಸವದ ವೈಭವಾತಿಶಯವನ್ನೂ ಕುರಿತು ಉಪನ್ಯಾಸಮಾತಲಾಗಿ ನೆರೆದಿದ್ದ ಸಭಿಕರಿಗೆಲ್ಲಾ ಆನಂದವುಂಟಾಗಿ ಶ್ರೀಮಚ್ಚಕ್ರವರ್ತಿದಂಪತಿಗಳಿಗೆ ದೀರ್ಘಾಯುರಾರೋಗ್ಯ ಭಾಗ್ಯಗಳನ್ನು ಶ್ರೀಮದ್ಭ್ರಮರಾಂಬಾಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯು ಅನುಗ್ರಹಿಸಲೆಂದೂ, ಅದರಂತೆಯೇ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರಿಗೂ ಅವರ ಅನುಜಾತರಾದ ಶ್ರೀಮದ್ಯುವರಾಜರವರಿಗೂ ಪ್ರಭುಗಳ ಅಶೇಷ ಕುಟುಂಬದವರಿಗೂ ಸಹ ಜಗದೀಶನು ಸರ್ವಮಂಗಲನ್ನುಂಟುಮಾಡಲೆಂದೂ ಕೋರಿ ಮೂರು ಮೂರಾವರ್ತಿ ಜಯಘೋಷವನ್ನು ಮಾಡಿ ಕರತಾಡನವನ್ನು ಮಾಡಿದರು. ಬಳಿಕ ಅಲಂಕೃತವಾಗಿದ್ದ ಚಕ್ರವರ್ತಿದಂಪತಿಗಳ ಭಾವಚಿತ್ರವನ್ನು ಪುಷ್ಪಹಾರಗಳಿಂದ ಅಲಂಕರಿಸಿ ಸರ್ವರಿಗೂ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟವು. ರಾತ್ರಿಗೆ ದೀಪೋತ್ಸವವು ಮಾಡಲ್ಪಟ್ಟಿದ್ದಿತು.

ಬೆಳಗಾಂ ಡಿ|| ಚಚಡೀ ಸಂಸ್ಥಾನ.

ನಮ್ಮ ಇಂಡಿಯಾ ಸಾರ್ವಭೌಮರಾದ ೫ನೆಯ ಜಾರ್ಜ್ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವವು ಈ ತಾ|| ೧೨ರಲ್ಲಿ ಸಂಸ್ಥಾನ ಚಚಡಿಯಲ್ಲಿ ಮಹಾವಿಜೃಂಭಣೆಯಿಂದ ಜರುಗಿತು. ಸಂಸ್ಥಾನ ಗ್ರಾಮದ ಬೀದಿಗಳು ಮತ್ತು ದೇವಾಲಯಗಳು ತಳಿರ್ತೋರಣಗಳಿಂದಲೂ, ದೀಪಾವಳಿಗಳಿಂದಲೂ ಅಲಂಕರಿಸಲ್ಪಟ್ಟಿದ್ದುವು. ಪಟ್ಟಾಭಿಷೇಕ ನಡಿಯುವ ಮುಖ್ಯಸ್ಥಳವಾದ ಶ್ರೀಮಂತರ ವಾಡೆಯಲ್ಲಿ ತಳಿರ್ತೋರಣಗಳಿಂದಲೂ, ನಾನಾವಿಧ ಕನ್ನಡಿಗಳಿಂದಲೂ, ಸಂಪಿಗೆ, ಶೇವಂತಿಗೆ, ಮಲ್ಲಿಗೆ ಮುಂತಾದ ಪೂಮಾಲೆಗಳಿಂದಲೂ, ಹಂಡೆ ಗ್ಲಾಸುಗಳ ದೀಪಜ್ಯೋತಿಗಳಿಂದಲೂ ಸಭಾಮಂಟಪವನ್ನು ವಿರಾಜಮಾನಗೊಳಿಸಿ ಶಸ್ತ್ರಗಳನ್ನು ಓರಣಕ್ಕನುಗುಣವಾಗಿ ಇಟ್ಟು, ಜಾರ್ಜ್‍ಮಹಾರಾಜರವರ ಸಾರ್ವಭೌಮಪೀಠವನ್ನು ಅಮೌಲ್ಯವಾದ ವಸ್ತ್ರಗಳಿಂದಲೂ, ಶೃಂಗರಿಸಿದ್ದರು. ಸಭಾಮಂಟಪದ ಮುಂದಿನ ಪಟಾಂಗಣದಲ್ಲಿ ಸಾರ್ವಭೌಮಸೂಚಕವಾದ ಧ್ವಜವನ್ನು ಊರಿ, ಅದರ ಹಿಂಬದಿಯಲ್ಲಿ ಶ್ರೀಮಂತರ ಶೃಂಗರಿಸಿದ ಶುಭ್ರವಾದ ಪಟ್ಟದೇಜಿಯನ್ನು ಹಿಡಿದಿದ್ದರು. ಅದರ ಹಿಂದೆ ದೇಶಗತಿಯಪರಿವಾರದ ನೌಕರರೂ, ಪೋಲೀಸ ಕಾನಸ್ಟೇಬಲರೂ ತಂತಮ್ಮ ಡ್ರೆಸ್ಸುಗಳನ್ನು ಹಾಕಿಕೊಂಡು ವ್ಯವಸ್ಥೆಯಿಂದ ಸಾಲಾಗಿ ನಿಂತಿದ್ದರು. ಶಾಲೆಯ ಹುಡುಗರೂ, ಊರೊಳಗಿನ ಪಂಚಜನರೂ, ಶಾಲಾ ಗುರುಗಳೂ ಮಂಟಪದ ಬದಿಯಲ್ಲಿ ನಿಂತು ಜಾರ್ಜ್ ಮಹಾರಾಜರ ಜಯಜಯಕಾರ ಧ್ವನಿಯನ್ನು ತುಬಾಕಿ ಬಾರಿನ ಸಲಾಮುಗಳೊಡನೆ ಮೂರು[illegible]ಕ್ಕೆ ಅವ್ತಾಗಿರಿ ವಾದ್ಯವಿಭವಗಳಿಂದ ಸಾರೆಮಾಡಿದನಂತ್ಯ ಬೀದಿಯಿಂದ ಹೊರಟು ಪೋಲೀಸ ತಾಲೂ ಗಾರ್ಡ್‍ಗೆ ಅಲ್ಲಿ ಶೃಂಗರಿಸಲ್ಪಟ್ಟಿದ್ದ ಮಹಾರಾಜರ ಚಿತ್ರಪಟವನ್ನು ಸರ್ವಜನರೂ ಅಭಿನಂದಿಸಿ ಪಲ್ಲಕ್ಕಿಯಲ್ಲಿಟ್ಟು ಊರ ಬೀದಿಯಿಂದ ಪುನಃ ಶ್ರೀಮಂತರ ವಾಡೆಯಲ್ಲಿ ಶೃಂಗರಿಸಿದ್ದ ಸಭಾಮಂಟಪಕ್ಕೆ ಬಂದನಂತರ ಸಭೆಯು ಅಲಂಕೃತವಾಯಿತು. ಇಲ್ಲಿಯ ಹೆಡ್ಮಾಸ್ಟರ ಚಿರಂತೀಮಠ ಇವರು ಸಭೆಯ ಮಹತ್ವವನ್ನೂ, ಮಹಾರಾಜರ ದಿಗಂತರವಾದ ಕೀರ್ತಿಯನ್ನೂ, ಪ್ರಜಾಪ್ರೇಮವನ್ನೂ ಕುರಿತು ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಉಪನ್ಯಾಸಹೇಳಿದನಂತರ ಮೊದಲನೇ ಮಾಸ್ತರ ಚನ್ನಪ್ಪ ಪಾಟೀಲ ಇವರು ಬ್ರಿಟಿಷ ಸಾಮ್ರಾಜ್ಯದಿಂದಾದ ಲಾಭಗಳನ್ನು, ವಿಶದವಾಗಿ ವ್ಯಾಖ್ಯಾನಕೊಟ್ಟರು. ಮತ್ತೂ ಪೋಲೀಸ ಪಾಟೀಲ ಬಸವಣ್ಣೆಪ್ಪ ಇವರು ಜಾಹೀರನಾಮೆಯನ್ನು ಎಲ್ಲರಿಗೂ ತಿಳಿಯುವಂತೆ ಓದಿಹೇಳಿ ತಮ್ಮ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ತರುವಾಯ ೬ ನೆಯ ವ ೭ ನೆಯ ಇಯತ್ತೆಯ ಹುಡುಗರು ನಿಬಂಧಗಳನ್ನು ಓದಿದರು. ಬಾಲಕರು ಬಾದಶಹರವರ ಗೀತಗಳನ್ನು ಸಂಗೀತ ಸಾಹಿತ್ಯಗಳೊಡನೆ ಹಾಡಿದರು. ಅನಂತರ ಸಭಿಕರ ಆಭಾರಮನ್ನಿಸಿ ಹುಡುಗರಿಗೆ ಪುಸ್ತಕಗಳನ್ನೂ, ಇನಾಮುಗಳನ್ನೂ ಮಹಾರಾಜರವರ ಪುತ್ಥಳಿಗಳನ್ನು ಮಿಠಾಯಿಯನ್ನೂ ಹಂಚಿದರು. ಅನಂತರ ಅತ್ತರ ಗುಲಾಬ ಮುಂತಾದ ಪರಿಮಳದ್ರವ್ಯಗಳೊಡನೆ ತಾಂಬೂಲಕೊಟ್ಟು ಸಭಿಕರನ್ನು ಆದರಿಸಿದನಂತರ ಸರ್ವಜನರಿಂದ ಬಾದಶಹರ ಬಗ್ಗೆ ಜಯಜಯಕಾರಧ್ವನಿಯನ್ನು ಮೂರುಸಾರ ಮಾಡಿದಮೇಲೆ ಸಭೆಯು ವಿಸರ್ಜನೆಯಾಯಿತು. ಮಹತ್ವವೇನಂದರೆ:— ಈ ಪಟ್ಟಾಭಿಷೇಕ ಉತ್ಸವದದಿವಸ ಇಲ್ಲಿಯ ಶ್ರೀಮಂತ “ ವೀರಭದ್ರಪ್ಪಾ ಉರ್ಫ ಅಣ್ಣಾಸಾಹೇಬ ಗುಣಪ್ಪ ದೇಸಾಯಿ ನಾಯಕ ಬಹಾದ್ದೂರ ” ಇವರು ಸುಮಾರು (೫೦೦) ಐದುನೂರು ಬಡಜನರಿಗೆ ಪಕ್ವಾನ್ನ ಭೋಜನಮಾಡಿಸಿದರು. ಮತ್ತು ಹೆಂಗಸರಿಗೂ, ಗಂಡಸರಿಗೂ, ಸೀರೆಖಣಗಳನ್ನೂ, ಧೋತ್ರ ರುಮಾಲುಗಳನ್ನೂ ಕೊಟ್ಟು ತಮ್ಮ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಹಾಗೂ ಅವರ ಅಪ್ಪಣೆಯಂತೆ ಊರೊಳಗಿನ ಎಲ್ಲ ಜನರು ಹಬ್ಬದ ದಿವಸದಂತೆ ತಂತಮ್ಮ ಉದ್ಯೋಗಗಳನ್ನು ಬಿಟ್ಟು ಉತ್ಸವ ನೋಡಲಿಕ್ಕೆ ನಿಂತಿದ್ದರು. ಐದನೇಜಾರ್ಜ್ ಮಹಾರಾಜರವರ ರಾಜ್ಯಾರೋಹಣ ಮಹೋತ್ಸವವನನ್ನೂ ಅನ್ನದಾನ ವಸ್ತ್ರದಾನಗಳಿಂದಲೂ, ಮಹಾವಿಜೃಂಭಣೆಯಿಂದಲೂ ಜರುಗಿಸಿದ್ದರಿಂದ ಬಡವರೂ, ಶ್ರೀಮಂತರೂ ಅತ್ಯಾನಂದಪಟ್ಟು ತಮ್ಮ ಇಂತಹ ಸ್ತುತ್ಯವಾದ ರಾಜಭಕ್ತಿಯನ್ನು ಈ ಸಣ್ಣ ಸಂಸ್ಥಾನದಲ್ಲಿ ವ್ಯಕ್ತಪಡಿಸಿದ್ದು ಅಪೂರ್ವವೇ ಸರಿ.

ಗುರುಸಿದ್ದಪ್ಪ ಸಿದ್ರಾಮಪ್ಪಾ ತೋರಗಲ್ಲ.

ಬಂಕಾಪುರ ತಾ|| ಹುಲಗೂರು.

ತಾ|| ೧೧ರಲ್ಲಿ ಊರೆಲ್ಲ ಧ್ವಜಪತಾಕೆಗಳಿಂದಲೂ, ತಳಿರು ತೋರಣಗಳಿಂದಲೂ ಮುಖ್ಯ ಮುಖ್ಯ ಸ್ಥಳಗಳಲ್ಲಿ ಕಟ್ಟಿದ ಅಗಸಿಗಳಿಂದಲೂ, ಒಳ್ಳೇ ಅಂದವಾಗಿ ಒಪ್ಪುತ್ತಿತ್ತು ಕನ್ನಡ ಹಾಗೂ ಉರ್ದುಶಾಲೆಗಳು ಮತ್ತೆ ಸರಕಾರಿಚಾವಡಿಯು ಚಿತ್ರ ವಿಚಿತ್ರವಾದ ಮೇಲ್ಕಟ್ಟನಿಂದಲೂ ಕಮಾನುಗಳಿಂದಲೂ ಶೋಭಿಸುತ್ತಿದ್ದವು. ಉತ್ಸವದದೆಸೆಯಿಂದ ಪರಊರುಗಳಿಂದ ಬೇಂಡ ಬಾಜಾ ೨-೩ ಮಜಲುಗಳು ತರಿಸಲ್ಪಟ್ಟಿದ್ದವು. ಈ ದಿವಸ ಮಧ್ಯಾಹ್ನ ೩ ಘಂಟೆಯಿಂದ ಶ್ರೀರ್ವಜ ಮಹಾರಾಜರವರ ಭಾವಪಟವು ಪಲ್ಲಕ್ಕಿಯಲ್ಲಿಡಲ್ಪಟ್ಟು ಒಳ್ಳೇಸಂಭ್ರಮದಿಂದ ಊರೊಳಗೆಲ್ಲ ರಾತ್ರಿ ೧೦ ಗಂಟೆಯವರೆಗೆ ಮೆರೆವಣಿಯು ಮಾಡಲ್ಪಟ್ಟು ಶಾಲೆಗಳಲ್ಲೂ, ಚಾವಡಿಯಲ್ಲೂ ಭಾವಪಟಗಳು ಸ್ಥಾಪಿಸಲ್ಪಟ್ಟವು. ತಾ|| ೧೨ರ ಪ್ರಾತಃಕಾಲಕ್ಕೆ ಎಲ್ಲಾ ಶಾಲೆಯ ವಿದ್ಯಾರ್ಥಿಗಳ ತರತರದ ಆಟಗಳ ಪ್ರಯೋಗಗಳು ಮಾಡಲ್ಪಟ್ಟವು. ಆವೇಳೆ ಸಾಯಂಕಾಲ ೩ ಘಂಟೆಗೆ ಗಂಡುಹುಡುಗರ ಶಾಲೆಯಲ್ಲಿ ಮ|| ರಾ|| ರಾಮಚಂದ್ರಕೃಷ್ಣ ಬಾಗಲಕೋಟಿ ಸರಕಲ್ ಇನಸ್ಪೇಕ್ಟರ ತಾ|| ಶಿಗ್ಗಾವ ಇವರ ಅಧ್ಯಕ್ಷತೆಯಲ್ಲಿ ಸಭೆಕೂಡಿತ್ತು ಚಕ್ರವರ್ತಿಯವರ ಭಾವಪಟಕ್ಕೆ ಪೂಮಾಲೆಯು ಅಧ್ಯಕ್ಷರಿಂದ ಹಾಕಲ್ಪಟ್ಟು ಕನ್ನಡಶಾಲಾ ಹೆಡ್‍ಮಾಸ್ತರ್ ರಾ|| ರಾ|| ಬಸಯ್ಯಾ ಕುಲಕರಣಿ ಇವರಿಂದ ರಚಿತವಾದ ಶ್ರೀರ್ವಜ ಮಹಾರಾಜರವರ ಸ್ತೋತ್ರಪದ್ಯಗಳು ವಿದ್ಯಾರ್ಥಿಗಳಿಂದ ಅನ್ನಿಸಲ್ಪಟ್ಟವೇಳೆ ಮ|| ರಾ|| ಶೀತಾರಾಮಗುರುನಾಥ ದೇಪಗಿರಿ ಇವರು ಫೋನೋಗ್ರಾಫದ ಪ್ರಯೋಗದಿಂದ ಜನರನ್ನಾನಂದಪಡಿಸಿದರು. ಆವೇಳೆ ಕನ್ನಡಶಾಲೆಯ ಹೆಡ್‍ಮಾಸ್ತರ್ ರಾ|| ರಾ|| ಬಸಯ್ಯಾ ಕುಲಕರ್ಣಿಯವರು ಕನ್ನಡದಿಂದಲೂ, ಉರ್ದು ಶಾಲೆಯ ಹೆ|| ಮಾಸ್ತರರು ಮುಸಲ್ಮಾನಿಯಿಂದಲೂ ಬ್ರಿಟಿಷರಆಳಿಕೆಯಿಂದಾದ ಲಾಭಗಳನ್ನು ಕುರಿತು ಭಾಷಣ ಮಾಡಿದರು. ೧ನೇ ಅ|| ಮಾಸ್ತರ ಮ|| ರಾ|| ರಾ|| ಗುರುಸಿದ್ದಯ್ಯಾ ಅದಿವೆಯ್ಯಾ ಹಿರೇಮಠ ಇವರು ಬಾದಶಹರವರ ಜಾಹೀರ ನಾಮೆಯನ್ನು ಓದಿ ಬಾದಶಹರವರು ಜನರಮೇಲೆ ಎಷ್ಟು ಪ್ರೀತಿಯುಳ್ಳವರಿದ್ದಾರೆಂಬದನ್ನು ಸ್ಪಷ್ಟಮಾಡಿ ತೋರಿಸಿದರು. ೨ನೇ ಅ|| ಮಾಸ್ತರ ರಾ|| ರಾ|| ಶೀತಾರಾಮ ವೇದವ್ಯಾಸಾಚಾರ್ಯ ಬ್ಯಾತನಾಳ ಇವರು ೫ನೇ ಜಾರ್ಜಮಹಾರಾಜರವರ ಜನ್ಮಚರಿತ್ರೆಯನ್ನು ಓದಿಹೇಳಿದರು. ರಾ|| ರಾ|| ರಾಮಭಟ್ಟ ಶಾಡಂಬಿ ಇವರು ಇಂಗ್ಲೀಷರಾಳಿಕೆಯಲ್ಲಿ ಆದ ಲಾಭಗಳನ್ನೂ, ನಾರಾಯಣದೇವಗಿರಿ ಎಂಬ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಯು ರಾಜನಿಷ್ಠೆಯನ್ನೂ ಕುರಿತು ಭಾಷಣಮಾಡಿದವೇಳೆ ಎಲ್ಲ ವಿದ್ಯಾರ್ಥಿಗಳಿಗೆ ಪದಕ ಪುಸ್ತಕಗಳು ಹೆಣ್ಣು ಮಕ್ಕಳಿಗೆ ಕಣಗಳು ಹೊಲಿಯ ಹುಡುಗರಿಗೆ ಪೂರ್ಣಚೋಗ್ರಸುಗಳು ಅಧ್ಯಕ್ಷರಿಂದ ಕೊಡಲ್ಪಟ್ಟು ತಾಂಬೂಲ ಅತ್ತರ ಹಾರತುರಾಯಿಗಳು ಮಿಠಾಯಿಗಳನ್ನು ಹಂಚಿದ ವೇಳೆ ಸಭೆಯು ವಿಸರ್ಜನೆಯಾಯಿತು. ತಾ|| ೧೩ನೇ ಬುಧವಾರ ಪ್ರಾತಃಕಾಲಕ್ಕೆ ಚಾವಡಿಯಮುಂದೆ ಮಜಲುಗಳಾಗಿ ಸಾಯಂಕಾಲಕ್ಕೆ ಪುನಃ ಸಭೆಯು ಆರಂಭವಾಯಿತು. ಅಧ್ಯಕ್ಷಸ್ಥಾನವನ್ನು ಸಾಲೆಯಲ್ಲಿ ಅಲಂಕರಿಸಿದವರೇ ಸ್ವೀಕರಿಸಿದನಂತರ ಮ|| ರಾ|| ರಾ|| ಜೀವಾಜಿರಾಮಚಂದ್ರ ಕುಲಕರ್ಣಿ ಇವರು ತಾಲೂಕಕಚೇರಿಯಿಂದ ಬಂದ ಜಾಹೀರನಾಮೆಯನ್ನು ಓದಿ ಸರಕಾರದವಿಷಯಕ್ಕೆ ಜನರಲ್ಲಿ ಪೂಜ್ಯ ಬುದ್ಧಿಯನ್ನು ಹುಟ್ಟಿಸಿದರು ವಿಠಲಬಾಬಾಜಿ ಇವರು ಸರಕಾರದವರು ಪ್ರಜೆಗಳ ವಿಷಯಕ್ಕೆ ಅಂತಃಕರಣಿಗಳು ಆಗಿದ್ದರೆಂಬದನ್ನು ಸಿದ್ಧಮಾಡಿ ತೋರಿಸಿದರು. ಇನ್ನೂ ಎಷ್ಟೋ ಜನರ ಭಾಷಣಗಳಾಗಿ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು ಸಾಯಂಕಾಲಕ್ಕೆ ಎಲ್ಲ ದೇವಸ್ಥಾನ ಮಸೀದೆಗಳಲ್ಲಿ ದೀಪೋತ್ಸವವು ಅತಿ ವಿಜೃಂಭಣೆಯೊಡನೆ ಸಾಗಿತು. ಈ ಎಲ್ಲಾ ಕೆಲಸಗಳಲ್ಲಿ ಸಿದ್ಧನಗೌಡ ಪೋಲೀಸ ಪಾಟೀಲ, ಎಲ್ಲಪ್ಪಗೌಡ ಮುಲ್ಕಿ ಪಾಟೀಲ, ಜೀವಾಜಿ ರಾಮಚಂದ್ರ ಕುಲಕರ್ಣಿ, ಶ್ರೀಮಂತ ಫಕ್ಕೀರಪ್ಪಾ ಅಣ್ಣಾ ಅತ್ತಿಗೇರಿ ವಿಲೇಜ ಮುನಸೂಫ ಯಾವತ್ತು ಶಾಳಾ ಮಾಸ್ತರರು, ಗದಿಗೆಪ್ಪಾ ಕಲ್ಬುರ್ಗಿ ಮುರಿಗೆಪ್ಪಾ ಪಂಚಪ್ಪನವರ, ಸಂಗಪ್ಪಾ ಮುರಾಳಿ, ದಾನಪ್ಪಾ ಕಮಡೊಳ್ಳಿ, ಸ್ವಾಮಿರಾವ ಕುಲಕರ್ಣಿ ಇವರುಗಳು ಬಹಳ ಶ್ರಮವನ್ನು ವಹಿಸಿ ಉತ್ಸವವು ಈ ತಾಲ್ಲೋಕಿನಲ್ಲಿ ಮೇಲಾಗುವಂತೆ ಮಾಡಿ, ತಮ್ಮ ರಾಜನಿಷ್ಠೆಯನ್ನು ಪ್ರಕಟಮಾಡಿ ತೋರಿಸಿದರು.

ವೀರಭದ್ರಪ್ಪಾ ರುದ್ರಪ್ಪಾ ಅತ್ತಿಗೇರಿ.

---

೬ ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಕ್ಷರ ಸ|| ಕೈ. ಕೈ. ವೀರಸಂಗಪ್ಪನವರ ಸ್ಮಾರಕ ಫಂಡು.

ಸಮಾಜಸುಧಾರಣೆಯಲ್ಲಿ ಬದ್ಧಕಂಕಣರಾಗಿದ್ದ ಕೈ. ವೀರಸಂಗಪ್ಪನವರು ಮತದ ಏಳಿಗೆಗೆ ವರ್ತಮಾನಪತ್ರಿಕೆಯು ಅತ್ಯಾವಶ್ಯಕವಾದುದೆಂಬ ದೂರಾಲೋಚನೆಯಿಂದ ಸ್ಟಾರ್ ಪತ್ರವನ್ನು ಹೊರಡಿಸಿ, ವೀರಶೈವ ಸಮೂಹಕ್ಕೆ ಮಹೋಪಕಾರವನ್ನು ಮಾಡಿ ದಿವಂಗತರಾಗಿರುವುದು ಸರ್ವಶೃತವಾದ ಸಂಗತಿಯಾಗಿದೆ. ಈ ಸ್ಟಾರ್ ಪತ್ರಿಕೆಗೆ ಸದ್ಯದಲ್ಲಿ ಒದಗಿರುವ ವಿಪತ್ಪರಂಪರೆಗಳು ವರ್ಣನಾತೀತವಾಗಿರುವುವು. ಆದರೆ ಈ ವಿಷಯವು ಮಹಾಸಭೆಯ ಪರ್ಯಾಲೋಚನೆಗೆ ಬಂದಿರುವುದರಿಂದ, ಈ ಕೆಳಗೆಕಂಡ ಒಂದು ವಿಷಯವನ್ನು ವಿಜ್ಞಾಪಿಸಿಕೊಂಡಿರುತ್ತೇನೆ.

ಕಡೂರ್ ತಾ|| ಪಿಳ್ಳೇನಹಳ್ಳಿಯಲ್ಲಿ ತಾ|| ೨೮-೫-೧೧ ರಲ್ಲಿ ನಡೆದ ಹೊಗರೇ ಹಳ್ಳಿ ಸ್ಕೂಲ್ಮಾಸ್ಟರ್ ಮ|| ರಾ|| ಹೆಚ್. ಬಸವಯ್ಯನವರ ಲಗ್ನದಲ್ಲಿ ಒಂದು ಸಭೆಯು ನೆರೆಯಿಸಲ್ಪಟ್ಟು ಸ್ಟಾರ್ ಪತ್ರದ ಚಿರಜೀವಿತೆಗೆ ಸ್ಟಾರ್‍ಫಂಡೊಂದನ್ನು ಏರ್ಪಡಿಸುವಂತೆ ನಿಶ್ಚಯಿಸಿ, ಆ ಸಭೆಯಲ್ಲಿಯೇ ೫೫ ರೂ. ಗಳು ವಸೂಲಾಗಿ ಇದಕ್ಕೆ— ಸ್ಟಾರ್ ಪತ್ರದ ಕರ್ತೃಗಳಾದ ಕೈ. ವೀರಸಂಗಪ್ಪವರ ಸ್ಮಾರಕ ಫಂಡೆಂಬುದಾಗಿ ಹೆಸರಿಟ್ಟು ಅದಕ್ಕೆ ಚೆನ್ನಾಪುರದ ಪ. ರಾ. ಗಿರೇಗೌಡರು ಪ್ರೆಸಿಡೆಂಟರಾಗಿಯೂ, ಪಿಳ್ಳೇನ ಹಳ್ಳಿ ಸ್ಕೂಲ್ಮಾಸ್ಟರು ಸೆಕ್ರಿಟರಿಗಳಾಗಿಯೂ, ಹೆಚ್. ಬಸವಯ್ಯನವರು ಜಾಯಿಂಟ್ ಸೆಕ್ರಿಟರಿಗಳಾಗಿಯೂ, ಚಿಕ್ಕಪಟ್ಟಣಗೆರೆಯ ಸಣ್ಣ ಕಲ್ಲಪ್ಪಗೌಡರು ಟ್ರಿಜರರಾಗಿಯೂ, ನಿಯಮಿಸಲ್ಪಟ್ಟರು. ಇವರು ಈಚೆಗೆ ಫಂಡನ್ನು ವೃದ್ಧಿಪಡಿಸದಿದ್ದರೂ, ಫಂಡಿಗೆ ನೂರಾರು ರೂ. ಗಳು ಶೇಖರವಾಗುವ ಹಾಗೆ ಜನಗಳನ್ನು ಪ್ರೋತ್ಸಾಹಿಸಿ, ಫಂಡನ್ನಭಿವೃದ್ಧಿಪಡಿಸಲು ತಕ್ಕ ಏರ್ಪಾಟನ್ನು ಮಾಡಿಕೊಂಡಿರುವರಾದರೂ, ಸ್ವತಃ ಫಂಡಿನ ಕಾರ್ಯಕ್ರಮಗಳನ್ನು ಮುಂದುವರಿಸಲು ಶಕ್ತಿ ಸಾಲದವರಾಗಿ ಇದನ್ನು ಮಹಾಸಭೆಗೆ ವಹಿಸಿಬಿಡಲು ತೀರ್ಮಾನಿಸಿರುತ್ತಾರೆ. ಮತ್ತೂ ಶೇಖರವಾಗುವ ಫಂಡಿನ ಹಣವು ಬೇಕಾದಾಗ ಒಪ್ಪಿಸಿಬಿಡಲು ಕ್ರಮವಾಗಿ ಡಿಪಾಜಿಟ್ ಮಾಡಲ್ಪಟ್ಟಿರುತ್ತದೆ. ಪ್ರಯುಕ್ತ ಇದನ್ನು ಮಹಾಸಭೆಯ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾಗಿ ಬೇಡುತ್ತೇನೆ. ಇದರ ಹಿಂದಣ ನಡವಳಿಕೆಗಳು ತಾ|| ೧-೭-೧೧ರ ಸ್ಟಾರ್ ಪತ್ರದಲ್ಲಿ ಕ್ರಮವಾಗಿ ಪ್ರಕಟವಾಗಿದೆ.

ಚನ್ನಬಸಪ್ಪ ಸೆಕ್ರಿಟರಿ, ಪಿಳ್ಳೇನಹಳ್ಳಿ.

೬ ನೆಯ ವೀರಶೈವ ಮಹಾಸಭೆಯು.

ಬೆಳಗಾವಿನೊಳಗೆ ಇದೇ ತಿಂಗಳಲ್ಲಿ ನೆರೆಯತಕ್ಕದ್ದಾಗುವ ಶ್ರೀಮದ್ವೀರಶೈವ ಮಹಾಸಭೆಯ ಬಗ್ಗೆ ಈ ಸಭೆಯ ಜೇಂಟ್ ಸೆಕ್ರೆಟರಿಗಳು ನಡಿಸಿರುವ ಘನವಾದ ಪ್ರಯತ್ನವು ಸ್ಟಾರ್ ಪತ್ರದ ವಾಚಕರಿಗೆ ತಿಳಿದಿರುತ್ತದಷ್ಟೇ. ಆದರೆ ಪ್ರತಿವರ್ಷ ಮಹಾಸಭೆಯಲ್ಲಿ ನಡೆಯುವ ವಿಷಯಗಳನ್ನು ಯಾವತ್ತು ಪ್ರತಿನಿಧಿಗಳು ಚನ್ನಾಗಿ ಲಕ್ಷದಲ್ಲಿಟ್ಟು ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರತಕ್ಕ ಆವಶ್ಯಕತೆಯನ್ನು ಕುರಿತು ನಾನು ಈವತ್ತಿನ ದಿವಸ ಕೆಲವು ವಿಷಯಗಳನ್ನು ಬರೆಯಬೇಕೆಂದು ಅಪೇಕ್ಷಿಸಿದ್ದೇನೆ. ಯಾಕಂದರೆ, ಕುರುಡನು ಹಗ್ಗಹೊಸೆದಂತೆ ನಾವು ಪ್ರತಿವರ್ಷ ಮಹಾಸಭೆಯನ್ನು ನೆರಿಸಿ ಅದರಿಂದಾಗುವ ಲಾಭಗಳನ್ನು ಪಡೆದುಕೊಳ್ಳಲಿಕ್ಕೆ ತಪ್ಪಿದರೆ, ನಮ್ಮ ಸಮಾಜ ಸುಧಾರಣೆಯು ಆಗಲರಿಯದೆಂಬುದು ಬಾರಿ ಬಾರಿಗೆ ನನ್ನ ದೃಷ್ಟಿಪಥದ ಮುಂದೆ ಬಂದು ನಿಲ್ಲುತ್ತದೆ ಪ್ರತಿಯೊಬ್ಬರೂ ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರತಕ್ಕದ್ದೆಂದು ಒಪ್ಪುತ್ತಾರೆ, ಆದರೆ ಕೃತಿಯು ಮಾತ್ರ ಬಹಳ ಕ್ವಚಿತವಾಗಿ ದೃಷ್ಟಿಗೆ ಬೀಳುತ್ತದೆ. ಇದಕ್ಕಾಗಿ ಸಮಾಜ ನಿಬಂಧನೆಗಳು ಯಾವ ಪ್ರಕಾರದವು ಇರಬೇಕು ಮತ್ತು ಮಹಾಸಭೆಯ ನಿರ್ಣಯಗಳನ್ನು ಉಲ್ಲಂಘಿಸುವವರಿಗೆ ಯಾವ ತರದ ಶಿಕ್ಷೆಯನ್ನು ಮಾಡುವದು ಶಕ್ಯವದೆ? ಎಂಬಿವೇ ಮೊದಲಾದ ಸಂಗತಿಗಳನ್ನು ಮಹಾಸಭೆಯವರು ಅವಶ್ಯವಾಗಿ ವಿಚಾರಮಾಡತಕ್ಕದ್ದು. ಮಹಾಸಭೆಯ ಪ್ರತಿನಿಧಿಗಳು ಮುಖ್ಯವಾಗಿ ಮಹಾಸಭೆಯ ಮುಖಂಡರು ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರಬೇಕೆಂದು ತಾವಾಗಿ ಮನಃಪೂರ್ವಕ ಪ್ರಯತ್ನಮಾಡದಿದ್ದರೆ, ಅವರ ವ್ಯಾಖ್ಯಾನರೂಪದ ಉಪದೇಶವು ಡಬ್ಬುಗೊಡದಮೇಲೆ ನೀರು ಸುರಿದಂತೆ ಆಗುವುದು (Example is better than precept) ಅಂದರೆ ಬಾಯಿಂದ ಉಪದೇಶಹೇಳುವದಕ್ಕಿಂತ ಸ್ವಾಂತವರ್ತನದಿಂದ ಉದಾಹರಣೆ ತೋರಿಸುವುದು ಒಳ್ಳೇದು ಎಂದು ಇಂಗ್ಲೀಷ್‍ಭಾಷೆಯಲ್ಲಿ ಒಂದು ಗಾದೆಯ ಮಾತುಂಟು. ಆದ್ದರಿಂದ ಹತ್ತೆಂಟುಸಾರಿ ವ್ಯಾಖ್ಯಾನಕೊಟ್ಟು ಹೇಳುವದಕ್ಕಿಂತ, ನಮ್ಮ ಸಮಾಜದ ಮುಖಂಡರು ಮತ್ತು ಯಾವತ್ತು ಸುಶಿಕ್ಷಿತರು ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರುವದು ಅವಶ್ಯವದೆ ನಾವು ಬರೇ ಸ್ಟ್ಯಾಂಡಿಂಗ್‍ಕಮಿಟಿ, ತಾಲ್ಲೂಕಕಮಿಟಿ, ಗ್ರಾಮಕಮಿಟಿಯೆಂಬ ಕಮಿಟಿಗಳನ್ನು ಮಾಡಿ ಅವುಗಳ ಪ್ರೊಸೀಡಿಂಗಗಳನ್ನು ಕಾಗದದಮೇಲೆ ಬರೆದು ಕೊಡುವದಕ್ಕಿಂತ ಮಹಾಸಭೆಯ ನಿರ್ಣಯಗಳನ್ನು ನಮ್ಮ ಹೃತ್ಪಟಲದ ಮೇಲಿರಿಸಿ ಅವುಗಳಂತೆ ನಡೆಯುವದರಿಂದ ನಮ್ಮ ಸಮಾಜಕ್ಕೆ ಹೆಚ್ಚಿಗೆ ಹಿತವಾಗುವ ಸಂಭವವಿರುತ್ತದೆ. ಉದಾಹರಣೆಯಗೋಸ್ಕರ ನಾನು ಇಲ್ಲಿ ಬಹಳ ಸುಲಭವಾದ ಸಂಗತಿಗಳನ್ನು ವಿವರಿಸುತ್ತೇನೆ. ಅವು ಯಾವವೆಂದರೆ:—ಬಾಲವಿವಾಹ ಮಾಡಬಾರದು; ಲಗ್ನದಲ್ಲಿ ದುಂದುಗಾರಿಕೆಯಿಂದ ಹಣವನ್ನು ಹಾಳುಮಾಡಬಾರದು; ತೆರವು ಮತ್ತು ವರದಕ್ಷಿಣೆಗಳನ್ನು ತೆಗೆದುಕೊಳ್ಳಬಾರದು; ಗಂಡುಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸಮಾಡಿಸಬೇಕು; ಸಮಾಜದಲ್ಲಿಯ ಯಾವತ್ತರು ಐಕ್ಯಮತ್ಯಸ್ನೇಹಾದಿಗಳಿಂದ ನಡಿಯತಕ್ಕದ್ದು ಇತ್ಯಾದಿ ಇತ್ಯಾದಿ ನಿರ್ಣಯಗಳು ಮಹಾಸಭೆಯಿಂದ ಈ ಮೊದಲೇ ಮಾಡಲ್ಪಟ್ಟಿರುತ್ತವೆ. ಹೀಗಿದ್ದು ಈ ನಿರ್ಣಯಗಳಿಗೆ ವಿರುದ್ಧವಾಗಿ ಮಹಾಸಭೆಯ ಪ್ರತಿನಿಧಿಗಳು ಅಥವಾ ಮಹಾಸಭೆಯ ಮುಖಂಡರು ತಮ್ಮ ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳ ಮದುವೆಮಾಡಿದರೆ ಅಥವಾ ಮದುವೆಕಾಲಕ್ಕೆ ಮದ್ದು, ನಾಚು, ರಂಗು, ಮೆರಣಿಗೆ, ದೀಪೋತ್ಸವ ಮುಂತಾದವುಗಳಲ್ಲಿ ದುಡ್ಡು ಹಾಳುಮಾಡಿದರೆ, ಅಥವಾ ಹೆಣ್ಣು ಮಕ್ಕಳನ್ನು ತೆರವು ತೆಗೆದುಕೊಂಡು ಲಗ್ನಮಾಡಿಕೊಟ್ಟರೆ, ಅಥವಾ ತಮ್ಮ ಗಂಡುಮಕ್ಕಳ ಲಗ್ನದಲ್ಲಿ ವರದಕ್ಷಿಣೆಯರೂಪದಿಂದ ರೂಪಾಯಿ ಭಂಗಾರ, [illegible] ಮೊದಲಾದವುಗಳನ್ನು ಹೆಣ್ಣುಮಕ್ಕಳ ತಂದೆತಾಯಿಗಳ ಕುತ್ತಿಗೆಯನ್ನು ಒತ್ತಿ ತೆಗೆದುಕೊಂಡರೆ, ಅಥವಾ ತಮ್ಮ ಹೆಂಡಿರು ಮಕ್ಕಳು ಸೊಸೆಯರು ಮೊದಲಾದವರಿಗೆ ವಿದ್ಯಾಭ್ಯಾಸಮಾಡಿಸದೆ ಮತ್ತು ಅವರಿಗೆ ತಕ್ಕಷ್ಟು ಮರ್ಯಾದೆಯನ್ನೂ, ಸ್ವತಂತ್ರತೆಯನ್ನೂ ಕೊಡದೆ ಅವರನ್ನು ಗುಲಾಮರಂತೆ ನಡಿಸಿಕೊಳ್ಳಹತ್ತಿದರೆ, ಅಥವಾ ಸಮಾಜದ ಮುಖಂಡರು ತಮ್ಮತಮ್ಮೊಳಗೆ ದ್ವೇಷದಿಂದ ಅಥವಾ ಅಸೂಯೆಯಿಂದ ಜಗಳಾಡಿ ಸಮಾಜದಲ್ಲಿ ಒಡಕುಹುಟ್ಟಿಸಿದರೆ, ಮಹಾಸಭೆಯ ಉದ್ದೇಶವು ನೆರವೇರುವ ಬದಲಾಗಿ ವ್ಯರ್ಥವಾಗುವ ಅಂಜಿಕೆಯುಂಟು. ಇದನ್ನು ಸರ್ವರೂ ದಯಮಾಡಿ ವಿಚಾರಮಾಡಿ ನಾನು ಮೇಲೆಹೇಳಿದ ಸುಲಭವಾದ ಮತ್ತು ಸ್ವಹಿತಕರ ವಿಷಯಗಳನ್ನು ಲಕ್ಷದಲ್ಲಿಟ್ಟು ವರ್ತಿಸಲಿಕ್ಕೆ ಹತ್ತಿದರೆ ಮಹಾಸಭೆಯ ಯಾವತ್ತು ನಿರ್ಣಯಗಳು ಒಂದರಹಿಂದೊಂದು ಪ್ರಚಾರದಲ್ಲಿ ಬರುವವು.

ಗ. ಹು. ಹೊನ್ನಾಪುರಮಠ,
ವಕೀಲ, ಧಾರವಾಡ.

ಅಡ್ವೋಕೇಟರ ಆಕ್ಷೇಪಣೆ.

ಕಳೆದವಾರದ ಸ್ಟಾರ್ ಪತ್ರದಲ್ಲಿ ಮ|| ರಾ|| ರಾ|| ಎಚ್. ಕೆ. ವೀರಬಸವಯ್ಯಾ ಅಡ್ವೋಕೇಟ್ ಬೆಂಗಳೂರ ಇವರು ಮಹಾಸಭೆಯನ್ನು ಕುರಿತು ಒಂದು ಬರಹವನ್ನು ಪ್ರಸಿದ್ಧಮಾಡಿರುತ್ತಾರೆ ಅದರಲ್ಲಿ ಕೆಲವು ಮಹತ್ವದ ತಪ್ಪುಗಳು ಇರುತ್ತಿದ್ದು ಅವುಗಳನ್ನು ತಿದ್ದದೆಬಿಟ್ಟರೆ ಸ್ಟಾರ್‍ಪತ್ರದ ವಾಚಕರ ತಪ್ಪು ತಿಳುವಳಿಕೆಯಾಗುವ ಮತ್ತು ನಮ್ಮ ಸಮಾಜದ ಹಾನಿಯಾಗುವ ಸಂಭವವುಂಟು. ಅವು ಯಾವವೆಂದರೆ:—

೧. ಹಿಂದೆ ನಡೆದ ಪ್ರತಿಯೊಂದು ಮಹಾಸಭೆಯಲ್ಲಿ ಪ್ರೇಕ್ಷಕರಿಂದಲೂ, ಪ್ರತಿನಿಧಿಗಳಿಂದಲೂ ಪ್ರವೇಶಧನರೂಪದಿಂದ ಸಾವಿರಾರು ರೂಪಾಯಿ ಪ್ರಾಪ್ತಿ ಆಗಿರುತ್ತಿದ್ದು, ಇದೊಂದು ವ್ಯಾಪಾರದಂತೆ ಆಗಿರುತ್ತದೆಂತಲೂ, ಇದರ ಉತ್ಪನ್ನವನ್ನು ಸ್ಟ್ಯಾಂಡಿಂಗ್‍ಕಮಿಟಿಯವರು ತೆಗೆದುಕೊಳ್ಳದೆ ಆಲಸ್ಯದಿಂದ ಬಿಟ್ಟಿರುತ್ತಾರೆಂತಲೂ ಮ|| ರಾ|| ರಾ|| ವೀರಬಸವಯ್ಯನವರು ಬರೆಯುತ್ತಾರೆ. ಮಹಾಸಭೆಯ ನೇಮಗಳೂ, ಸ್ಟ್ಯಾಂಡಿಂಗ್‍ಕಮಿಟಿಯ ನೇಮಗಳೂ ಬಾಗಲಕೋಟಿಯ ೪ ನೆಯ ಮಹಾಸಭೆಯಲ್ಲಿ ಪ್ರಥಮತಃ ಮಾಡಲ್ಪಟ್ಟವು. ಆದ್ದರಿಂದ ಧಾರವಾಡ, ಬೆಂಗಳೂರ, ಸೊಲ್ಲಾಪುರ, ಮತ್ತು ಬಾಗಲಕೋಟಿಯ ಮಹಾಸಭೆಗಳ ಪ್ರವೇಶಧನವನ್ನು ಬೇಡಲಿಕ್ಕೆ ಸ್ಟ್ಯಾಂಡಿಂಗ ಕಮಿಟಿಗೆ ಯಾವ ತರದ ಅಧಿಕಾರವೂ ಇರಲಿಲ್ಲವು. ಆದರೆ ಬಳ್ಳಾರಿ ಮಹಾಸಭೆಯಿಂದ ಬಂದ ಉತ್ಪನ್ನದ ಭಾಗವು ಸ್ಟ್ಯಾಂಡಿಂಗ ಕಮಿಟಿಗೆ ಬರತಕ್ಕದ್ದಿದ್ದಿತು. ಅದನ್ನು ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರು ತೆಗೆದುಕೊಳ್ಳುವ ಉದ್ದೇಶದಿಂದ ಬಳ್ಳಾರಿಯವರಿಗೆ ಲೆಕ್ಕವನ್ನು ಒಪ್ಪಿಸಬೇಕೆಂದು ಹಲವುಸಾರೆ ಪತ್ರಬರೆದರು. ಅದಕ್ಕೆ ಬಳ್ಳಾರಿಯವರು ಕೆಲವು ದಿವಸ ತಟಸ್ಥರಾಗಿ ಉಳಿದು, ಹಿಂದಕ್ಕೆ ತಮಗೆ ಉತ್ಪನ್ನವೇನೂ ಉಳಿಯಲಿಲ್ಲವೆಂತಲೂ, ತಾವು ವೆಚ್ಚಮಾಡಿದ ಹಣವನ್ನು ಆದಾಯದಿಂದ ತೆಗೆದುಕೊಂಡೆವೆಂತಲೂ ಉತ್ತರವನ್ನು ಹೇಳಿದರು. ಇದರಲ್ಲಿ ಸ್ಟ್ಯಾಂಡಿಂಗ್‍ಕಮಿಟಿಯವರ ಕಡೆಗೆ ಏನೂ ದೋಷವಿಲ್ಲ. ೨. ಸ್ಟ್ಯಾಂಡಿಂಗ್‍ಕಮಿಟಿಯವರು ಮಹಾಸಭೆಯು ಆಗುವ ಹಲವು ದಿವಸಗಳ ಮುಂಚಿತವಾಗಿ ಹೋಗಿ ಮಹಾಸಭೆಯಾಗುವ ಸ್ಥಳದಲ್ಲಿ ಟಿಕಿಟ್ ಆಫೀಸನ್ನು ತೆರೆದುಕೊಂಡು ಕೊಡಬೇಕೆಂದು ಮ|| ರಾ|| ರಾ|| ವೀರಬಸವಯ್ಯನವರು ಸೂಚಿಸುತ್ತಾರೆ. ಈ ಸೂಚನೆಯು ಅಶಕ್ಯವಾದದ್ದೂ, ಸಮಾಜಕ್ಕೆ ಘಾತುಕವಾದದ್ದೂ ಇರುತ್ತದೆ. ಇವರ ಸೂಚನೆಯ ಪ್ರಕಾರ ಹಿಂದಿನವರೆಗೆ ಯಾವ ಸಂಸ್ಥೆಯಲ್ಲಿಯೂ ಮಾಡಿಲ್ಲ. ನಂಬಿಗೆಯ ತತ್ವದ ಮೇಲಿಂದ ಯಾವತ್ತು ಸುಧಾರಿಸಿದ ದೇಶಗಳಲ್ಲಿ ಲಕ್ಷಗಟ್ಟಳೆ ಮತ್ತು ಕೋಟಿಗಟ್ಟಳೆ ರೂಪಾಯಿಗಳ ವ್ಯವಹಾರವು ನಡೆಯುತ್ತದೆ. ಅಂದಮೇಲೆ ನಾವು ವೀರಶೈವರು ನಮ್ಮ ನಮ್ಮ ಸಮಾಜದ ಮುಖಂಡರಮೇಲೆ ಸಾವಿರಾರು ರೂಪಾಯಿಗಳ ಮಟ್ಟಿಗೆ ವಿಶ್ವಾಸವಿಡದೆಹೋದರೆ ನಮ್ಮ ಸಮಾಜವು ಎಂದೂ ಮುಂದಕ್ಕೆ ಬರಲಾರದು. ಮತ್ತು ನಾವು ಮಹಾಸಭೆಯನ್ನು ನೆರೆಯಿಸುವದಾದರೂ ವ್ಯರ್ಥವಾದೀತು. ೩. ಸ್ಟ್ಯಾಂಡಿಂಗ್ ಕಮಿಟಿಯವರು ತಮ್ಮ ಕೆಲಸದಲ್ಲಿ ಹೆಚ್ಚು ದಕ್ಷತೆಯನ್ನು ತೆಗೆದುಕೊಳ್ಳದೆ ಇದ್ದದ್ದರಿಂದ, ಹಿಂದಿನ ಮೂರು ಮಹಾಸಭೆಗಳ ರಿಪೋರ್ಟುಗಳು ಪ್ರಸಿದ್ಧವಾಗಲಿಲ್ಲವೆಂತಲೂ, ೧೯೦೭ ಮತ್ತು ೧೯೧೦ ರಲ್ಲಿ ಮಹಾಸಭೆಯು ಕೂಡಲಿಲ್ಲವೆಂತಲೂ ಮ|| ರಾ|| ರಾ|| ವೀರಬಸವಯ್ಯನವರು ಅನ್ನುತ್ತಾರೆ. ಬಹುಶಃ ಮ|| ರಾ|| ರಾ|| ವೀರಬಸವಯ್ಯನವರು ಧಾರವಾಡ ಮಹಾಸಭೆಯ ಹೊರತಾಗಿ ಬಾಗಲಕೋಟಿ ಮತ್ತು ಬಳ್ಳಾರಿ ಮಹಾಸಭೆಗಳ ರಿಪೋರ್ಟುಗಳು ಪ್ರಸಿದ್ಧವಾಗಿರುವದನ್ನು ಓದಿಲ್ಲವೆಂದು ಕಾಣುತ್ತದೆ! ಇದಲ್ಲದೆ ೧೯೦೭ ರಲ್ಲಿ ಸೊಲ್ಲಾಪುರದೊಳಗೆ ಪ್ಲೇಗಿನ ಹಾವಳಿಯಾದ್ದರಿಂದಲೂ, ೧೯೧೦ ರಲ್ಲಿ ರಾಯಚೂರಿನವರಿಗೆ ನಿಜಾಮಸರ್ಕಾರದವರು ಮಹಾಸಭೆಯನ್ನು ಕೂಡಿಸಲಿಕ್ಕೆ ಅಪ್ಪಣೆಯನ್ನು ಕೊಡದೆ ಇದ್ದದ್ದರಿಂದಲೂ ಆ ಎರಡು ವರ್ಷ ಮಹಾಸಭೆಯು ಕೂಡಲಿಲ್ಲವೆಂಬ ಸಂಗತಿಯು ವೀರಶೈವ ಸಮಾಜದ ಯಾವತ್ತು ಆಬಾಲವೃದ್ಧರಿಗೆ ಗೊತ್ತಿದ್ದು ನಮ್ಮ ಮಿತ್ರರಾದ ಅಡ್ವೋಕೇಟ್ ಮಹಾಶಯರಿಗೆ ಹ್ಯಾಗೆ ಗೊತ್ತಾಗಲಿಲ್ಲವೋ ತಿಳಿಯದು! ಈ ಅಡ್ವೋಕೇಟ್ ಮಹಾಶಯರು ತಮ್ಮ ಸ್ವಂತ ಅಜ್ಞಾನದ ದೋಷವನ್ನು ಸ್ಟ್ಯಾಂಡಿಂಗ್‍ಕಮಿಟಿಯವರಮೇಲೆ ಹಾಕಿರುವದನ್ನು ನೋಡಿದರೆ ನಗೆಯು ಬಾರದಿರದು. ಇದಲ್ಲದೆ ಇವರು ಬೆಂಗಳೂರಿನ ಪ್ರಾವಿನ್ಶಿಯಲ್ ಕಮಿಟಿಯ ಸೆಕ್ರಿಟರಿಯವರಿದ್ದು ಇವರಿಗೆ ಇಂಥ ಮಹತ್ವದ ಸಂಗತಿಗಳು ಗೊತ್ತಿರದೆ ಇರುವದು ಬಹಳ ದುಃಖದ ಸಂಗತಿಯು. ೪. ಸ್ಟ್ಯಾಂಡಿಂಗ್‍ಕಮಿಟಿಯ ಕೆಲವು ಕಾರ್ಯಕರ್ತೃಗಳು ಬೇರೇ ದೊಡ್ಡಮನುಷ್ಯರನ್ನು ಲಕ್ಷಿಸದೆ ಮತ್ತು ಅವರನ್ನು ವಿಚಾರಿಸದೆ ಅಂತರಂಗದಲ್ಲಿ ಈ ಕೆಲಸಗಳನ್ನು ಮಾಡುತ್ತಾರೆಂತಲೂ, ಇದರಿಂದ ಹಿಂದಕ್ಕೊಮ್ಮೆ ಮಹಾಸಭೆಯು ಭಿನ್ನವಾಗುವ ವಿಪತ್ತನ್ನು ತಂದೊಡ್ಡಿದ್ದರೆಂತಲೂ ಮ|| ರಾ|| ರಾ|| ವೀರಬಸವಯ್ಯನವರು ಬರೆಯುತ್ತಾರೆ. ಮಹಾಸಭೆಯ ಎಲ್ಲಾ ಕೆಲಸಗಳು ಬಹಿರಂಗವಾಗಿ ಮೊದಲು ಸಬ್‍ಜೆಕ್ಟ್ ಕಮಿಟಿಯಲ್ಲಿ ನಿರ್ಣಯವಾದ ಪ್ರಕಾರ ನಡೆಯುತ್ತವೆ. ಈ ಸಬ್‍ಜೆಕ್ಟ್‍ಕಮಿಟಿಗೆ ಸುಶಿಕ್ಷಿತರಾದಂಥ ಯಾವತ್ತು ಜಿಲ್ಲಾಪಟ್ಟಿಕೆಯ ಮತ್ತು ಸಮಾಜದ ಅಭಿಮಾನವುಳ್ಳಂಥ ಜನರು ಮೆಂಬರರಾಗಿರುತ್ತಾರೆ ಮಹಾಸಭೆಯ ಕೆಲಸವು ಒಬ್ಬರ ಮನೆಯ ಕೆಲಸವಲ್ಲ. ಎಲ್ಲರೂ ತಾವಾಗಿಬಂದು ಮನಸ್ಸಿಟ್ಟು ಮಾಡಿ ನಿರಪೇಕ್ಷಬುದ್ಧಿಯಿಂದ ಕೆಲಸಮಾಡತಕ್ಕದ್ದು. ಜೊಳ್ಳು ಮರ್ಯಾದೆಯನ್ನು ಹುಡುಕುತ್ತಾ ಹಿಂದಕ್ಕೆ ಕೊಡಲಿಕ್ಕೊಂಡು ಎರಡನೆಯವರಿಗೆ ಬೊಟ್ಟುಮಾಡುವವರಿಗೆ ಯಾವ ಔಷಧವನ್ನು ಕೊಡಬೇಕೋ ತಿಳಿಯದು! ಇದಲ್ಲದೆ ಹಿಂದಕ್ಕೆ ಬಳ್ಳಾರಿಯಲ್ಲಿ ಬಂದ ವಿಪತ್ತು ಸ್ಟ್ಯಾಂಡಿಂಗ್‍ಕಮಿಟಿಯ ಕಾರ್ಯಕರ್ತೃಗಳ ನಡತೆಯಿಂದ ಆದದ್ದು ಅಲ್ಲವೆಂಬುವದು ಅಧ್ಯಕ್ಷರ ಮತ್ತು ಕೆಲವು ದೊಡ್ಡಮನುಷ್ಯರ ತಿಳುವಳಿಕೆಯ ಭೇದದಿಂದ ಉಂಟಾಗಿತ್ತೆಂತಲೂ, ಆ ಕಾಲದಲ್ಲಿ ಶ್ರೀಗಳವರೊಡನೆ ಸ್ಟ್ಯಾಂಡಿಂಗ್‍ಕಮಿಟಿಯ ಕಾರ್ಯಕರ್ತೃಗಳು ಅನ್ನನೀರುಗಳ ಅರಿವು ಇಲ್ಲದೆ ಪರಿಶ್ರಮಮಾಡಿದರೆಂತಲೂ ಯಾವತ್ತು ನಿಷ್ಪಕ್ಷಪಾತ ಮತ್ತು ನ್ಯಾಯವಂತ ಜನರಿಗೆ ಸಂಪೂರ್ಣವಾಗಿ ಮನವರಿಕೆಯಾಗಿದ್ದು ಅಡ್ವೋಕೇಟರು ವಿನಾಕಾರಣವಾಗಿ ಈ ಪ್ರಕಾರ ದೋಷಕೊಡುವದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಸಮಾಜದ ಕಲ್ಯಾಣಕ್ಕೆ ತಮ್ಮ ತನು, ಮನ, ಧನಗಳನ್ನು ಅರ್ಪಣಮಾಡಿದಂಥ ಮಹನೀಯರಿಗೆ ಮ|| ರಾ|| ರಾ|| ವೀರಬಸವಯ್ಯನವರು ದೋಷಕೊಟ್ಟಿರುವದು ಬಹಳ ಕೃತಘ್ನತೆಯು ಮತ್ತೂ ಅನ್ಯಾಯವು. ಒಬ್ಬ ಸ್ಟ್ಯಾಂಡಿಂಗ್‍ಕಮಿಟಿಯ ಮೆಂಬರನು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಗರವಾರಿಗಜಾಂಕುಶಶತಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸಪ್ಪಂಕನ್ನ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

---

15 ಸೂಚನಾ!

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ವೈಯೋಗದ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಅವ್ಯವಸ್ಥೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಗರ್ಭದೋಷದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”
(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಫದ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ [illegible] (ಇಂಡಿಯಾ)

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶು[illegible]ಪ್ತತಿ ಕಥೆಗಳು.

29

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಿಕೆಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ನೀತಿಶಾಸ್ತ್ರಸಮ್ಮತವಾದ ಸಕಲಕರ್ತವ್ಯಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ!

26

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ವ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ.
ಜಿಲ್ಲ ಉತ್ತರಕನಡಾ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಬಳಿ
ಮೈಸೂರು.

70

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದ ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತ ಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾ ರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತ ೨೪ ಮಾತ್ರೆ ಸೀಸೆ ೦—೩—

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತಿ ದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋ ಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨—೦—
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲ ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳ ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಹಿಡಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸ ಬರೆಯಿರಿ.

ಉತ್ತಮ ಗ್ರಂಥಗಳು.

18

ಶಿವಸ್ತವಶಿರೋಮಣಿಃ—ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ
ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾ
ರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.
ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ
ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡು
ತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.
ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ
ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.
ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.
ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮವರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ವಾಳ್ಯದ ವಂಕಟಾಚಲ ಪಂಡಿತರ ಸಿದ್ಧೌಷಧಗಳು.

36

ಲೋಕಾಮಯಪರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲಿ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ಕ್ಕೆ ರೂ. ೧ ಗೆದ್ದೆ ಮೊದಲಾದವಕೆ ಸವರುವ ಡಬ್ಬಿ ೧ಕ್ಕೆ ಆ. ೮. ಎರಡರಿಂದ ಟಪಾಲ್. ಖರ್ಚು ೫ ಆಣೆ ಮಾತ್ರ

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ°) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ°) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು [illegible]ಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮವೈದ್ಯಶಾಲಾ,
ಮೈಸೂರು.

೧೯೧೧ನೆಯ ಇಸವಿ ಡಿಸೆಂಬರ್ ತಾ॥ ೨೫ ರಿಂದ ನೆಯ ಡಿಸೆಂಬರ್ ತಾ॥ ೩೧ ರವರೆಗೆ ಸಲ್ಲುವ ಶಾಲಿ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಪು ಶು॥ ಪಂಚಮಿಯಿಂದ ಪುಷ್ಯ ಶು॥ ಏಕಾದಶಿವರೆಗಿನ ಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿ
25	[1]ಸೋ	ಪಂ	55 2	ಧನಿ	38 2
26	[2]ಮಂಗ	ಷ	58-38	ಶತ	42 6
27	ಬುಧ	ಸ	59-50	ಪೂಭಾ	44-30
28	ಗುರು	ಅ	59-47	ಉಭಾ	46-38
29	ಶುಕ್ರ	ನ	58-36	ರೇವತಿ	47-2
30	ಶನಿ	ದ	54-56	ಅಶ್ವಿನಿ	46-2
31	[3]ಭಾನು	ಏ	52-2	ಭರಣಿ	44-26

(1) ಕ್ರಿಸ್ತಮಸ್‌ಹಬ್ಬ. (2) ತುಳಸಿ[illegible] ತ್ಸಯೋಗಃ. (3) ಮುಕ್ಕೋಟಿ ಏಕಾದಶಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಕ್ರಿಸೆಂಟ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.





PADMASHREE DR. SHIVAMURTHY SHASTRY
LIBRARY
Basava Samithi. Basava Bhavana,
Sri Basaveshwara Road,
Bangalore-560 001

BANGALORE.

REGISTERED NO. M.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋ ಕರಾಜ್ಯತಾತ್॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಾಲ್ಯಾಲವಾಲಂವಲಂ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಪತ್ರಿಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

ಸಂಪುಟ ೨೧] ಮೈಸೂರ್ ಸ್ಟಾರ್ ಸರ್ಕ ೧೯೧೨ ನೇಯ ಇಸವಿ ಜನವರಿ ತಾರೀಖು ೧ ನೇಯ ಸೋಮವಾರ. [ಸಂಚಿಕೆ ೧

43

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೩-೦-೦ ೪-೦-೦; ೨-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೩ ಆಣೆ; ದಶಾಂಗ ಪೌಂಡ್ ೧ಕ್ಕೆ ೪ ಆಣೆ; ಧೂಪದ ಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸಿಂಗಿರಾಜಪುರಾಣವಿಜಯಂ

9

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ? ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೯ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ,
ಹಳೆಅಗ್ರಹಾರ, ಜೀವಿಟಿಗೆಬೀದಿ
ಮೈಸೂರು.

9 ## ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವನ್ನು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಪುಕ್ಕಟೆ ಕಳುಹಿಸುವೆವು. ಒಮ್ಮೇಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ದೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ.
Post Bilgi. North Kanara District

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತೆ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಉತ್ತಮ ಗ್ರಂಥಗಳು.

20

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೩ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

೬ ನೆಯ ಶ್ರೀಮದ್ವೀರಶೈವ ಮಹಾಸಭೆ ಬೆಳಗಾವ್.

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀಮಂತ ವೀರಭದ್ರಪ್ಪ ಉರ್ಫ ಅಣ್ಣಾಸಾಹೇಬ ನಾಯಕ ಬಹದ್ದೂರ ದೇಸಾಯಿಯವರು ಚಚಡಿ ಇವರ ಭಾಷಣವು.

ಈ ಸಭಾಮಂಟಪವನ್ನಲಂಕರಿಸಿದ ಸಮಸ್ತ ವಿರಕ್ತ ಮಹಾಸ್ವಾಮಿಗಳಿಗೂ, ಸಿಂಹಾಸನಾಧಿಪತಿಗಳಿಗೂ ಪಟ್ಟಚರಮೂರ್ತಿಗಳಿಗೂ, ದೇಶಿಕೋತ್ತಮರಿಗೂ, ಪಂಡಿತಮಂಡಳಿಗೂ, ಶಾಸ್ತ್ರಜ್ಞರಿಗೂ, ಸಂಸ್ಥಾನಿಕರಿಗೂ, ಶ್ರೀಮಂತರಿಗೂ, ಪದವೀಧರರಿಗೂ, ಸರಕಾರಿ ಅಧಿಕಾರಿಗಳಿಗೂ, ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ, ಬೆಳಗಾವಜಿಲ್ಲೆಯ ಹಾಗು ಸಾಂಗಲೀಸಂಸ್ಥಾನದ ಪೈಕಿ ಶಹಾಪುರ ತಾಲೂಕಿನ ಸಮಸ್ತ ವೀರಶೈವರ ಪಕ್ಷದಿಂದಲೂ ನನ್ನ ಪಕ್ಷದಿಂದಲೂ ನಾನು ಪ್ರೇಮಪೂರ್ವಕವಾದ ಸ್ವಾಗತವನ್ನು ಮಾಡುತ್ತೇನೆ.

ಪೂಜ್ಯರಾದ ಮಹಾ ಸ್ವಾಮಿಗಳೇ, ಸಭ್ಯಗೃಹಸ್ಥರೇ, ತಾವೆಲ್ಲರೂ ಸ್ವಧರ್ಮೋನ್ನತಿಯ ಕಡೆಗೆ ಲಕ್ಷ್ಯವಿಟ್ಟು, ಸ್ವಜನಹಿತಕ್ಕಾಗಿ ಅನುರಾಗಪಟ್ಟು. ನಮ್ಮ ಆಮಂತ್ರಣವನ್ನು ಮನ್ನಿಸಿ, ಸ್ವಂತ ಉದ್ಯೋಗ ವ್ಯವಸಾಯಗಳನ್ನು ತ್ಯಜಿಸಿ, ಪಥಶ್ರಮವನ್ನೂ ಧನ ವ್ಯಯವನ್ನೂ ಲೆಕ್ಕಿಸದೆ ತಮ್ಮ ಅಮೂಲ್ಯ ವೇಳೆಯನ್ನು ವೆಚ್ಚಮಾಡಿ, ಧಾರ್ಮಿಕ ಸಾಮಾಜಿಕೋತ್ಕರ್ಷತೆಯ ರೂಪವಾದ ಮಹಾಸಭೆಗೆ ಭರತಖಂಡದ ದೂರದ ಪ್ರಾಂತಗಳಿಂದ ದಯಮಾಡಿಸಿರುವುದನ್ನು ನೋಡಿ ನನಗೆ ಪರಮಾನಂದವಾಗುತ್ತದೆ. ಇದಲ್ಲದೆ ಗುರುಕುಲಕ್ಕೆಲ್ಲ ಗೌರವವನ್ನುಂಟುಮಾಡುವ, ಸಕಲ ಭಕ್ತ ಸಮುದಾಯಕ್ಕೆ ಜ್ಞಾನಪಥವನ್ನು ತೋರಿಸುವ ಮಹಾಮಹಾಸ್ವಾಮಿಗಳವರು ಪಾದಸಂದರ್ಶನಾನಂದವನ್ನು ಕೊಟ್ಟುದರಿಂದ ನಮ್ಮ ಆನಂದಕ್ಕೆ ಮೇರೆಯೇ ಇಲ್ಲವಾಗಿದೆ. ಏಕೆಂದರೆ— ಧಾರವಾಡ, ಬೆಂಗಳೂರು, ಸೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ ಈ ಐದು ಪಟ್ಟಣಗಳೊ ಪ್ರತಿಯೊಂದು ವಿಷಯದಲ್ಲಿಯೂ ಮುಂದುವರಿದು ಊರ್ಜಿತಸ್ಥಿತಿಗೆ ಬರಲುಪಕ್ರಮಿಸಿರುವುದಲ್ಲದೆ, ವೀರಶೈವರ ಜನಸಂಖ್ಯೆಯು ವಿಶೇಷವಾಗಿ ಇದ್ದುದರಿಂದ ಅಲ್ಲಿ ನೆರೆದ ಮಹಾಸಭೆಗೆ ವಿಶೇಷ ಜನರು ಕೂಡಿದುದು ಆಶ್ಚರ್ಯವಲ್ಲ. ಆದರೆ, ಧಾರ್ಮಿಕ ಸುಧಾರಣೆಗಳು ಯತ್ಕಿಂಚಿತ್ತಾದರೂ ಆಗಲು ಅವಕಾಶವಿಲ್ಲದೆ, ಸ್ವಾರ್ಥತ್ಯಾಗ ಬುದ್ಧಿಯಿಂದ ಧಾರ್ಮಿಕಕಾರ್ಯ ಮಾಡುವ ಮಹನೀಯರ [illegible]ಕಿಲ್ಲದೆ, ಸಮಾಜೋನ್ನತಿಯ ಕಾರ್ಯಗಳಿಗೆ ಸ್ವಲ್ಪವೂ ಮನವನ್ನೀಯದ ಸ್ವಾರ್ಥಪರರಿಂದ ನಿಬಿಡವಾಗಿ ಇತರ ಪ್ರಾಂತದವರ ಮಾರ್ಗದರ್ಶಕತ್ವದಿಂದ ಕಣ್ದೆರೆದು ಮಹಾಸಭೆಯಿಂದಾಗುವ ಲಾಭಗಳನ್ನು ಮನಸಾಲೋಚಿಸಿ ಈಗೀಗ ಮತಸುಧಾರಣಾಕಾರ್ಯಗಳಿಗೆ ಕೈಹಾಕಿರುವ ಈ ಬೆಳಗಾಂವ ಪಟ್ಟಣಕ್ಕೆ ಇಷ್ಟು ಜನರು ಆಗಮಿಸಿದುದು ಆಶ್ಚರ್ಯವಾಗಿದೆ. ಇಂತಿಷ್ಟು ವೀರಶೈವ ಸಮೂಹವನ್ನು ಕಂಡು ಮಹಾಸಭೆಯ ಉತ್ಪಾದಕರಿಗೂ, ಚಾಲಕರಿಗೂ ಮತ್ತೂ ಸಕಲ ವೀರಶೈವ ಧರ್ಮಾಭಿಮಾನಿಗಳಿಗೂ ಅತ್ಯಾನಂದವಾಗುವುದಕ್ಕೆ ಸಂದೇಹವಿಲ್ಲ.

ಮಹಾಶಯರೇ! ಇಲ್ಲಿ ಈ ಬೆಳಗಾಂವ ಪ್ರಾಂತದ ಪ್ರಭಾವಾತಿಶಯವನ್ನು ಹೇಳುವುದು ಅಪ್ರಾಸಂಗಿಕವೆಂದು ಕಂಡು ಬಂದರೂ ಈ ಶಹರದ ಸಮಾಚಾರವನ್ನು ಸ್ವಲ್ಪಮಟ್ಟಿಗಾದರೂ ತಿಳಿಸುವುದು ಅತ್ಯಂತಾವಶ್ಯಕವಾಗಿದೆ.

ಮುಂಬಯಿಯ ಕರ್ನಾಟಕದಲ್ಲಿ ಪ್ರಸಿದ್ಧ ಜಿಲ್ಲಾಸ್ಥಳವಾದ ಈ ಬೆಳಗಾವ ಶಹರವು ಮೊದಲು ವೇಣುಪುರ ಅಥವಾ ವೇಣುಗ್ರಾಮ (ಬಿದಿರುಹಳ್ಳಿ) ಎಂಬ ಹೆಸರಿನ ಒಂದು ಸಣ್ಣ ಹಳ್ಳಿಯಾಗಿದ್ದಿತು. ಆ ಕಾಲಕ್ಕೆ ಈ ಹಳ್ಳಿಯು ವೇಣುಗಳಿಂದ ವೇಷ್ಟನವಾದುದರಿಂದ ಇದಕ್ಕೆ ವೇಣುಪುರವೆಂಬ ಹೆಸರು ಬಿದ್ದಂತೆ ತಿಳಿಯುತ್ತದೆ. ಬಿದಿರು ಹಳ್ಳಿಯೇ ಬೆಳಗಾವ ಎಂಬ ಹೆಸರನ್ನು ಧರಿಸಿ ಎಷ್ಟೋ ಕಾಲು ಬಳೆದೂ ಬೆಳೆಯುತ್ತಲೂ ಇದೆ. ಆ ಹಳ್ಳಿಯ ಮೂಲಸ್ಥಾನವು ಈ ಮಂಟಪಕ್ಕೆ ಸಮೀಪದಲ್ಲಿಯೇ ಇದ್ದು ಹಳೇ ಬೆಳಗಾವಿಯೆಂದು ಈಗಲೂ ಕರೆಯಲ್ಪಡುತ್ತಿದೆ. ಮುಸಲ್ಮಾನರ ಆಳಿಕೆಯಲ್ಲಿ ಈ ಬೆಳಗಾವಿಯು ಬಿಜಾಪುರಪ್ರಾಂತದ ಒಂದು ಸುಬೆಯಾಗಿದ್ದಿತು. ಈ ಭಾಗಕ್ಕೆ ಅಧಿಪತಿಯಾಗಿ ನಿಯಮಿಸಲ್ಪಟ್ಟ ಅಸದಖಾನನೆಂಬ ಸೇನಾಪತಿಯು ಇಲ್ಲಿ ವಾಸಿಸಹತ್ತಿದಂದಿನಿಂದ ಈ ಶಹರವು ಒಳ್ಳೆಯ ಘನತೆಗೇರಹತ್ತಿತು. ಈ ಅಸದಖಾನನೇ ಬೆಳಗಾವ ಕೋಟೆಯನ್ನು ಕಟ್ಟಿಸಿದನೆಂದು ಇತಿಹಾಸಪ್ರಸಿದ್ಧವು. ಅಸದಖಾನದರ್ಗಾಯೆಂಬ ಹೆಸರಿನ ಪುರಾತನ ಕಟ್ಟಡವು ಈಗಲೂ ಇಲ್ಲಿ ಅಚ್ಚಳಿಯದೆ ಇರುತ್ತದೆ. ಮುಸಲ್ಮಾನರ ಕಾಲಕ್ಕೆ ಬೆಳಗಾವಿಗೆ ಆಜ್ಞಂ ನಗರ ಪರಗಣೆಯೆಂದೆನ್ನುತ್ತಿದ್ದರು. ಪೇಶ್ವೆಯ ರಾಜ್ಯವು ಇಂಗ್ಲೀಷ ಸಾರ್ವಭೌಮರಾಳಿಕೆಗೆ ಒಳಪಟ್ಟಕೂಡಲೆ ಸನ್ನ ೧೮೧೮ ನೆಯ ಇಸವಿಯಲ್ಲಿ ಸರ್ ಥಾಮಸ್ ಮನ್ರೋ ಎಂಬ ಇಂಗ್ಲೀಷ ಸರದಾರನು ಆ ಯವನರನ್ನು ಗೆದ್ದು ಈ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡನು. ಅಂದಿನಿಂದ ಆಂಗ್ಲಸಾರ್ವಭೌಮಛತ್ರದ ಕೆಳಗೆ ಇಲ್ಲಿ ಶಾಂತತೆಯುಂಟಾಗಿ ಈ ಶಹರು ವರ್ಷೇವರ್ಷೇ ಊರ್ಜಿತವನ್ನು ಹೊಂದುತ್ತ ಬಂದಿದೆ. ಬೆಳಗಾವಿಯು ಹವೆಯು ತಂಪುಳ್ಳುದೂ, ಆರೋಗ್ಯಕರವಾದುದೂ ಇರುವುದರಿಂದ ಇಲ್ಲಿ ಯೂರೋಪಿಯನ್ ಜನರ ವಸತಿಯು ವಿಶೇಷವಾಗಿರುವುದು ಮತ್ತೂ ಶಹರವು ವ್ಯಾಪಾರೋದ್ಯೋಗಗಳಿಂದ ಘನತೆಯಲ್ಲಿದ್ದು ಬಡವರಿಗೂ, ಭಾಗ್ಯವಂತರಿಗೂ, ಎಲ್ಲರೀತಿಯಿಂದ ಪ್ರಪಂಚಕ್ಕೆ ಅನುಕೂಲವಿರುತ್ತದೆ ಇಂತಹ ಸೊಬಗುಳ್ಳ ಈ ಪಟ್ಟಣದಲ್ಲಿ ಈ ಒಳಗಾಗಿ ಮಹಾಸಭೆಯು ನೆರವೇರಬೇಕಾಗಿದ್ದಿತು. ಆದರೆ ಕೆಲ ಅಪರಿಹಾರ್ಯದ ಅಡಚಣೆಗಳ ಮೂಲಕ ಅದು ಇಲ್ಲಿ ಸಂಭವಿಸದೆ ಈ ವರ್ಷ ಆ ಸುಯೋಗವು ಒದಗಿ ಬಂತೆಂದು ಹೇಳಬೇಕಾಗಿದೆ

ಸಭ್ಯರೆ! ಧಾರವಾಡ ಮಹಾಸಭೆಯ ಅನಂತರ ಶಿರಸಂಗಿಯ ಶ್ರೀಮಂತ ಸರದೇಸಾಯಿಯವರು ೨ ನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು ಇಲ್ಲಿ ಕೂಡಿಸಬೇಕೆಂದು ಭಾವಿಸಿದ್ದರು. ಆದರೆ ಮೈಸೂರಪ್ರಾಂತದವರ ಆಗ್ರಹದ ಮೂಲಕ ಅದು ಆ ವರ್ಷ ಬೆಂಗಳೂರಿಗೆ ಹೋಯಿತು. ಅದರಿಂದ ಶ್ರೀಮಂತರು ೩ ನೆಯ ಮಹಾಸಭೆಯನ್ನಾದರೂ ಇಲ್ಲಿ ಕೂಡಿಸಬೇಕೆಂದು ನಿಶ್ಚಿತಮನಸುಳ್ಳವರಾಗಿದ್ದರು. ಆದರೆ ವಿಧಿಯು ವೀರಶೈವ ಸಮಾಜವನ್ನು ದುಃಖಾಂಬುಧಿಯಲ್ಲಿ ತಳ್ಳಿ, ಆ ದಿವ್ಯಮೂರ್ತಿಯನ್ನೇ ಎತ್ತಿಕೊಂಡು ಹೋದುದರಿಂದ ಆ ಕಾಲಕ್ಕೆ ಬೆಳಗಾವಿಯಲ್ಲಿ ಮಹಾಸಭೆಯೆಂಬ ಹೆಸರನ್ನೇ ತೆಗೆಯಲಿಕ್ಕೆ ಅವಕಾಶವಿಲ್ಲದಂತಾಯಿತು. ಆದರೆ, ಆ ಶ್ರೀಮಂತರ ಸಂಕಲ್ಪವು ನೆರವೇರುವ ಸಂಕೇತವಿದ್ದುದರಿಂದಲೋ— ಬೆಳಗಾವ ಜಿಲ್ಲೆಯ ವೀರಶೈವರು ಧರ್ಮಜಾಗರೂಕರಾಗುವ ಸುಯೋಗವಿದ್ದುದರಿಂದಲೋ ಕೆಲಮತಾಭಿಮಾನಿಗಳ ದೀರ್ಘಪ್ರಯತ್ನದಿಂದ ಈ ವರ್ಷದ ಮಹಾಸಭೆಯು ಇಲ್ಲಿ ನೆರವೇರುವುದಾಯಿತು. ಆ ಮತಾಭಿಮಾನಿಗಳಲ್ಲಿ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕ ಫಾಲ್ಸ ಇವರೇ ಅಗ್ರಗಣ್ಯರಾಗಿರುವರೆಂಬುದಕ್ಕೇನೂ ಸಂದೇಹವಿಲ್ಲ. ಅಕ್ಟೋಬರ ತಿಂಗಳು ಅರ್ಧ ಕಳೆದುಹೋದರೂ ೬ ನೆಯ ಮಹಾಸಭೆಯ ವಿಷಯವಾಗಿ ಎಲ್ಲಿಯೂ ಪ್ರಸ್ತಾಪ ಹೊರಡಲಿಲ್ಲ ಅದನ್ನು ಕಂಡು, ಶಿವಮೂರ್ತಿಸ್ವಾಮಿಗಳು ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಶಾಯಿ ಶಿರಸಂಗಿ ಇವರ ನಿಶ್ಚಿತವನ್ನೇ ಅಂತರಂಗದಲ್ಲಿಟ್ಟುಕೊಂಡು, ಇಲ್ಲಿ ಮಹಾಸಭೆಯನ್ನು ನೆರವೇರಿಸುವ ಯೋಚನೆಯನ್ನು ಮಾಡಿ, ರಾವಬಹದ್ದೂರ ಅರಟಾಳ ರುದ್ರಗೌಡ ಸಾಹೇಬ, ಸಿ. ಐ. ಎಸ್. ಒ, ರವರನ್ನೂ ಸ್ಟ್ಯಾಂಡಿಂಗ ಕಮಿಟಿಯವರನ್ನೂ ವಿಚಾರಿಸಿ ಇಲ್ಲಿಯ ಹಿರೇಮಠದಲ್ಲಿ ಒಂದೆರಡು ಆಲೋಚನಾ ಸಭೆಗಳನ್ನು ಕೂಡಿಸಿ, ಇಲ್ಲಿಯ ಜನರಲ್ಲಿ ಧರ್ಮಾಭಿಮಾನದ ಸ್ಫೂರ್ತಿಯನ್ನುಂಟುಮಾಡಿ, ಅವರನ್ನು ಹುರಿದುಂಬಿಸಿ ಮಹಾಸಭೆಯನ್ನು ಇಲ್ಲಿಯೇ ಕೂಡಿಸುವುದಕ್ಕಾಗಿ ನಿರ್ಧರಿಸಿ ಆಕ್ಷಣವೇ ಈ ವಾರ್ತೆಯನ್ನು ಸ್ಟಾರ್ ಪತ್ರದ್ವಾರಾ ಸಮಸ್ತರಿಗೂ ಪ್ರಕಟಪಡಿಸಿದರು, ಕೂಡಲೆ ಕೆಲ ಸ್ಥಾನಿಕ ಜನರೂ, ಶ್ರೀಯುತ ವೀರಭದ್ರಪ್ಪ ನಿರ್ವಾಣೆಪ್ಪ ಘೋಡಗೇರಿ ಗೋಕಾಕ ಮತ್ತೂ ಪರಮಶೆಟ್ಟಿ ಕಾಡಪ್ಪ ಪಾಟೀಲ ಗೋಕಾಕ, ಚೆನ್ನಬಸಪ್ಪ ಬರಪ್ಪ ಲಕ್ಷೆಟ್ಟಿ ಯಾದವಾಡ, ನೀಲಕಂಠಗೌಡಪ್ಪ ಪಾಟೀಲ ಮದನಭಾವಿ ಮುಂತಾದ ಪರಸ್ಥಳದ ಅಭಿಮಾನಿಗಳೂ ಬಹಳ ಶ್ರಮಪಟ್ಟು ಮಹಾಸಭೆಯ ಮಂಟಪ ಮೊದಲಾದ ಎಲ್ಲಕಾರ್ಯಗಳನ್ನು ಬಹು ಉತ್ಸುಕತೆಯಿಂದ ಮಾಡತೊಡಗಿದುದರಿಂದಲೂ, ಕಾಲಾವಧಿಯಿಲ್ಲದುದರಿಂದ ಮಹಾಸಭೆಗಾಗಿ ಚಂದಾ ಹಣವನ್ನು ಕೂಡಿಸುವುದಾಗದೆ ಸಭಾಕಾರ್ಯಕ್ಕೆ ತಗಲುವ ವಿಶಿಷ್ಟ ಧನವನ್ನು ಎಂದರೆ ಸುಮಾರು ೮–೧೦ ಸಾವಿರ ರೂಪಾಯಿಗಳ ಬಹು ದೊಡ್ಡ ರಕಮನ್ನು ಆರಂಭಕ್ಕೆ ಶಿವಮೂರ್ತಿಸ್ವಾಮಿಗಳೊಬ್ಬರೇ ಕೊಟ್ಟು, ತಮ್ಮ ಉದ್ಯೋಗದ ನೂರಾರು ಅಡಚಣಿಗಳನ್ನು ಹತ್ತೊತ್ತಿಟ್ಟು, ಆಗಾಗ್ಗೆ ಬೆಳಗಾವಿಗೆ ಯಾತಾಯಾತವನ್ನು ಮಾಡಿ, ಮಹಾಸಭೆಯ ಕಾರ್ಯಕ್ಕೆ ನಡುಗಟ್ಟಿ ನಿಂತುದಲ್ಲದೆ, ತಮ್ಮ ತಮ್ಮಂದಿರಾದ ಶಿ. ಮಹಾಲಿಂಗಸ್ವಾಮಿಗಳನ್ನು ಸರ್ವ ವ್ಯವಸ್ಥೆಯನ್ನು ನೋಡಿಕೊಳ್ಳಲೋಸುಗ ಬೆಳಗಾವಿಯಲ್ಲಿಯೇ ನಿಲ್ಲಿಸಿಬಿಟ್ಟುದರಿಂದಲೂ ನಾವೆಲ್ಲರೂ ಈ ಹೊತ್ತಿನ ಮಹಾಸಭೆಯ ಸುದಿನವನ್ನು ಕಂಡು ನಲಿಯುವುದಾಯಿತು.

ಈ ಮಹಾಸಭೆಯ ವಿಷಯಕ್ಕೆ ವ್ಯಕ್ತಿಮಾತ್ರವಾಗಿ ಶಿವಮೂರ್ತಿಸ್ವಾಮಿಗಳಷ್ಟು ಕಾರ್ಯಭಾರವನ್ನು ವಹಿಸಿಕೊಂಡು ಈ ವರೆಗೆ ಅವರಷ್ಟು ಪ್ರಯತ್ನವನ್ನು ತನುಮನಧನದಿಂದ ಯಾರೂ ಮಾಡಿರಲಿಕ್ಕಿಲ್ಲೆಂದರೆ ಅತಿಶಯೋಕ್ತಿಯಾಗದು. ಸಮಾಜಸೇವೆಗಾಗಿ ಇವರು ವ್ಯಕ್ತಪಡಿಸಿದ ಅಭಿಮಾನಕ್ಕೂ, ವಹಿಸಿಕೊಂಡ ಪ್ರಯತ್ನಕ್ಕೂ, ಕರ್ತವ್ಯಜಾಗರೂಕತೆಗೂ ಪಾರಾವಾರವೇ ಇಲ್ಲವೆನ್ನಬಹುದು. “ ಅಡಬಾರದು ಅಡಿದಮೇಲೆ ಬಿಡಬಾರದು ” ಎಂಬ ಸಾಮತಿಗನುಸಾರವಾಗಿ ಇವರು ತಮ್ಮ ಮನೋದಾರ್ಢ್ಯವನ್ನು ಪ್ರತ್ಯಕ್ಷ ನಿದರ್ಶನಮಾಡಿಯೇ ಕೊಟ್ಟರು. ಮನೆಯ ಯಜಮಾನನು ತಮ್ಮ ಮನೆತನದ ಲಗ್ನಮುಂತಾದ ಯಾವುದೊಂದು ಮಹಾಕಾರ್ಯಕ್ಕೆ ಯಾವ ಪ್ರಕಾರ ದಕ್ಷನಾಗಿ ನಿಂತಿರುವನೋ ಅದರಂತೆಯೇ ಶಿವಮೂರ್ತಿಸ್ವಾಮಿಗಳು ಈ ಮಹಾಸಭಾಕಾರ್ಯವು ತಮ್ಮ ಮನೆತನದ ಸಂಬಂಧವಾದುದೇ ಎಂದು ಭಾವಿಸಿ ಅದಕ್ಕೆ ಕಂಕಣಬದ್ಧರಾಗಿ ನಿಂತಿರುವರೆಂಬುದಕ್ಕೆ ಏನೂ ಅಡ್ಡಿಯಿಲ್ಲ. ಎಲ್ಲರೂ ಇಂತಹ ಉತ್ತಮಾಭಿಮಾನಿಗಳೇ ಆದುದಾದರೆ “ ಆರಂಭಶೂರಾಃ ಖಲುದಾಕ್ಷಿಣಾತ್ಯಾಃ ” ಎಂದು ರೂಢವಾಗಿದ್ದ ದಾಕ್ಷಿಣಾತ್ಯರ ಅಪವಾದವು ಅಳಿದು ಹೋಗುವುದರಲ್ಲಿ ಆಶ್ಚರ್ಯವೇನು? ಸತತೋದ್ಯೋಗದಿಂದಲೂ, ಸ್ಥಿರಪ್ರಯತ್ನದಿಂದಲೂ ಎಂತಹ ಘನಕಾರ್ಯಗಳೂ ಕೂಡ ಕೈಗೂಡುತ್ತವೆಂಬ ಮಾತೂ, ಉಪದೇಶಕ್ಕಿಂತ ಉದಾಹರಣೆಯೇ ಮೇಲುಂಟೆಂಬ ಮಾತೂ ಶಿವಮೂರ್ತಯ್ಯನವರ ಉದಾಹರಣೆಯಿಂದ ನಮ್ಮೆಲ್ಲರಿಗೆ ಸ್ಪಷ್ಟವಾದಂತಾಯಿತು. ನಮ್ಮನಮ್ಮ ಪ್ರಾಂತಗಳಲ್ಲಿ ಮಹಾಸಭೆಯಾಗಬೇಕೆಂಬ ಕಾಂಕ್ಷೆಯಿದ್ದ ಮತಾಭಿಮಾನಿಗಳು, ಈ ಶಿವಮೂರ್ತಯ್ಯನವರ ಘನಾಭಿಮಾನವನ್ನೂ ವಿಶ್ವಪ್ರಯತ್ನವನ್ನೂ ತಂತಮ್ಮ ಹೃದ್ದರ್ಪಣಗಳಲ್ಲಿ ಚಿತ್ರಿಸುವಂತಿದೆ. ಇದಲ್ಲದೆ ಇದೇ ತಿಂಗಳ ೨೦ ನೆಯ ತಾರೀಖಿಗೆ ನಿಶ್ಚಿತವಾಗಿದ್ದ ಇವರ ಸ್ವಂತ ಲಗ್ನವನ್ನು ಮಹಾಸಭೆಯ ಸಲುವಾಗಿ ಸದ್ಯಃ ನಿಲ್ಲಿಸಿ, ಆ ಲಗ್ನಮುಹೂರ್ತವನ್ನು ಮುಂದೆ ಹಾಕಿದರು. ಮಹಾಸಭೆಗಾಗಿ ವ್ಯಕ್ತಪಡಿಸಿದ ಇವರ ಪ್ರಯತ್ನವನ್ನೂ, ಧೈರ್ಯವನ್ನೂ ಎಷ್ಟು ಶ್ಲಾಘಿಸಿದರೂ ಅದು ಅಲ್ಪವೇ ಸರಿ. ಆರಂಭದಿಂದ ಕಡೆಯತನಕ ಎಲ್ಲ ಕಾರ್ಯಗಳಲ್ಲಿ ತಾವೇ ಸ್ವತಃ ಪ್ರವರ್ತಕರಾಗಿ, ಎಲ್ಲ ಹಣವನ್ನೂ ತಾವೇ ವಹಿಸಿ, ಹಿಡಿದ ಕೆಲಸವನ್ನು ಹಠಾತ್ತಾಗಿ ನೆರವೇರಿಸಿಯೇ ಬಿಡುವೆವೆಂದು ನಿರ್ಧರಿಸಿ, ತಮ್ಮ ಕೃತನಿಶ್ಚಯವನ್ನು ಪೂರೈಸಿಯೇ ಬಿಟ್ಟ ಶಿವಮೂರ್ತಿಸ್ವಾಮಿಯವರ ಧನ್ಯವಾದವನ್ನು ಎಷ್ಟು ಮಾಡಿದರೂ ತೀರದು. ಇವರ ಪ್ರಯತ್ನವೇ ನಿಜವಾದ ಪ್ರಯತ್ನವು! ಆ ಪ್ರಯತ್ನದ ಫಲವೇ ಈ ಮಹಾಸಭೆಯು!! ಈ ಮಹಾಸಭೆಯಿಂದ ಸಮಾಜಕ್ಕೆ ವಿಶೇಷಲಾಭವಾಗಬಹುದೆಂದೂಹಿಸಿ, ಮಹಾಸಭೆಯ ಲಾಭಗಳನ್ನು ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಬೋಧಿಸಿ, ಸುಧಾರಣಾಕಾರ್ಯಗಳ ಕಡೆಗೆ ಲಕ್ಷ್ಯಪೂರೈಸುವಂತೆಯೂ, ಮಹಾಸಭೆಯನ್ನು ಕೈಗೊಳ್ಳುವಂತೆಯೂ ಮಾಡಿ, ಮಾನಸಿಕ, ಶಾರೀರಕ, ಸಾಂಪತ್ತಿಕ ಸಹಾಯಗಳನ್ನು ಸ್ವತಃ ಒದಗಿಸಿಕೊಟ್ಟು, ಈ ದಿನ ತಮ್ಮೆಲ್ಲರನ್ನೂ ಈ ಮಹಾಸಭಾ ಮಂಟಪದಲ್ಲಿ ಸಂದರ್ಶಿಸುವ ಸುಸಂಧಿಯನ್ನುಂಟುಮಾಡಿದುದಕ್ಕಾಗಿ ಈ ಸ್ವಮತಾಭಿಮಾನಿಗಳ ಕರ್ತವ್ಯದಕ್ಷತೆಯನ್ನು ಸರ್ವರೂ ಅಭಿನಂದಿಸಬೇಕಾಗಿದೆ.

ಮಹನೀಯರೇ! ಇನ್ನು ಮೇಲೆ ನಮ್ಮ ಜಿಲ್ಲೆಯಲ್ಲುಂಟಾದ ಸಮಾಜೋನ್ನತಿಯ ಸಂಗತಿಗಳನ್ನೂ ಸಂಕ್ಷಿಪ್ತವಾಗಿ ವಿವರಿಸುವುದು ನನ್ನ ಕರ್ತವ್ಯವಾಗಿದೆ. ನಮ್ಮ ವೀರಶೈವ ಸಮಾಜದ ಉನ್ನತಿಯು ಶ್ರೀ ಬಸವೇಶ್ವರನ ಕಾಲದಲ್ಲಿ ಒಮ್ಮೆ ಮನೋಹರವಾಗಿ ಮಿಂಚಿ ಮಾಯವಾದನಂತರ, ಇತ್ತಿತ್ತಲಾಗಿ ನಮ್ಮರಾಜ್ಯವು ಅನೇಕ ದೇಶೀಯರಾಜರ ಅಧಿಕಾರಕ್ಕೊಳಪಟ್ಟು, ಕಡೆಗೆ ನಮ್ಮ ಸುದೈವದಿಂದ ಆಂಗ್ಲಸಾರ್ವಭೌಮರ ಆಡಳಿತಕ್ಕೊಳಪಟ್ಟಿತು. ಈ ಸಾರ್ವಭೌಮರು ಸ್ವತಂತ್ರಪ್ರಿಯರೂ, ಉದಾರರೂ, ನಿಷ್ಪಕ್ಷಪಾತಿಗಳೂ ಆಗಿರುವುದರಿಂದ ಇವರ ಆಡಳಿತದಲ್ಲಿ ಎಲ್ಲ ಮತಸ್ಥರಿಗೆ ಶಿಕ್ಷಣವೂ ನ್ಯಾಯವೂ ಸಮವಾಗಿ ಹಂಚಲು ಪ್ರಾರಂಭವಾಯಿತು ಇವರವಿದ್ಯಾದಾನದ ಫಲದಿಂದ ವೀರಶೈವರಲ್ಲಿ ಮುಂದಾಳುಗಳು ಒಬ್ಬೊಬ್ಬರೇ ಬರಲಾರಂಭಿಸಿದರು. ಭರತಖಂಡದಲ್ಲಿ ರಾಬರ್ಟ ಕ್ಲೈವನು ಆಂಗ್ಲಸಾಮ್ರಾಜ್ಯವೃಕ್ಷದ ಬೀಜಾರೋಪಣಮಾಡಿದಂತೆ ಆರಂಭಕ್ಕೆ ಕೈ ವಾ. ರಾವಬಹದ್ದೂರ ವೀರಭದ್ರಮಡಿವಾಳೇಶ್ವರ ಪಂಡಿತ ಪ್ರಿನ್ಸಿಪಾಲ ಸದರ ಅಮೀನ (ಎಂದರೆ ಫರ್ಸ್ಟ ಕ್ಲಾಸ್ ಸಬ್ಬಜಡ್ಜ) ಮತ್ತು ಕೈ ವಾ. ರಾ. ಸಾ. ಚನ್ನಬಸಪ್ಪಾ ಬಸಲಿಂಗಪ್ಪಾ ಅಣ್ಣಾ ಧಾರವಾಡ ಡೆ. ಎ. ಇನ್‌ಸ್ಪೆಕ್ಟರ ಈ ಉಭಯ ಮಹಾನುಭಾವರು ಈ ಬೆಳಗಾವ ಜಿಲ್ಲೆಯಲ್ಲಿಯೇ ಕೆಲಸ ನೋಡುತ್ತಿದ್ದ ವೀರಶೈವ ಸಮಾಜದಲ್ಲಿ ವಿದ್ಯಾಂಕುರವನ್ನು ಊರಿದರು. ಈ ಸಮಯದಲ್ಲಿ ಬೆಳಗಾವಿಯ ನಾರ್ಮಲ್‌ಸ್ಕೂಲಿನ ಕನ್ನಡ ಪಂಡಿತರಾಗಿದ್ದ ಕೈ. ವಾ. ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಶಾಂತವೀರ ರಾಚದೇವ ಕಿತ್ತೂರ ಎಂಬ ಉಭಯ ಮಹಾನುಭಾವರೂ ವೀರಶೈವಸಮಾಜದಲ್ಲಿ ವಿದ್ಯಾಭಿರುಚಿಯನ್ನು ಹುಟ್ಟಿಸಿದರು. ಇವರು ಆ ಕಾಲಕ್ಕೆ ಗಾಢನಿದ್ರೆಯಲ್ಲಿದ್ದ ವೀರಶೈವ ಸಮಾಜವನ್ನು ಬಡಿದೆಬ್ಬಿಸಿ ವಿದ್ಯಾರ್ಜನೆಯ ಹೊರತು ಸ್ವೋನ್ನತಿಯುಂಟಾಗಲಾರದೆಂಬ ಮಂತ್ರವನ್ನುಪದೇಶಿಸಿ ವಿದ್ಯಾರ್ಜನೆಯವಿಷಯವಾಗಿ ಬಹಳ ಪ್ರಯತ್ನಪಟ್ಟರು. ಇವರೆಲ್ಲರ ಪ್ರೇರಣೆಯಿಂದಲೇ ಇಲ್ಲಿ ಶ್ರೀಮನ್ನಿರಂಜನ ಜಗದ್ಗುರು ಚಿತ್ರಕಲ್‌ದುರ್ಗದ ಮುರುಘರಾಜೇಂದ್ರಸ್ವಾಮಿಗಳ ಹೆಸರಿನ ಬೋರ್ಡಿಂಗು ಸ್ಥಾಪಿತವಾಗಿ, ವೀರಶೈವ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಎಷ್ಟೋ ಸಹಾಯಕಾರಿಯಾಯಿತು. ಆದರೆ ಮಹಾಸ್ವಾಮಿಗಳೂ, ಈ ನಾಲ್ವರು ಮಹಾನುಭಾವರೂ ಸ್ವಲ್ಪ ದಿವಸಗಳಲ್ಲಿಯೇ ಒಬ್ಬರ ಹಿಂದೊಬ್ಬರು ನಮ್ಮ ಕೈಬಿಟ್ಟು ಹೋದುದರಿಂದ ಆ ಬೋರ್ಡಿಂಗು ಅಷ್ಟಕ್ಕೇನಿಂತುಹೋಗಿ ಸಮಾಜಕ್ಕೆ ಬಹಳ ಹಾನಿಯಾಯಿತು. ಆದರೂ ನಮಗೆ ಆಂಗ್ಲೇಯ ಸಾರ್ವಭೌಮರಿಂದ ಪಾಶ್ಚಾತ್ಯ ಶಿಕ್ಷಣವು ಅವಿಚ್ಛಿನ್ನವಾಗಿ ದೊರೆಯುತ್ತ ಹೋಗಲು ಅಲ್ಪಕಾಲದೊಳಗೆ ಅಂತಹ ಮುಂದಾಳುಗಳು ನಮ್ಮ ಸುದೈವದಿಂದ ಪುನಃ ಪ್ರಾಪ್ತರಾದರು. ಅವರಲ್ಲಿ ಕೈ ವಾ. ರಾವಬಹದ್ದೂರ ಗುರುಸಿದ್ಧಪ್ಪಣ್ಣ ಗಿಲಗಿಂಚಿಯವರೂ ಮತ್ತು ಸದ್ಯಕ್ಕೆ ಈ ಸಭೆಯನ್ನಲಂಕರಿಸಿದ ರಾವಬಹದ್ದೂರ ಅರಟಾಳ ರುದ್ರಗೌಡಸಾಹೇಬರೂ ಅಗ್ರಗಣ್ಯರಾಗಿರುತ್ತಾರೆ. ಈ ಉಭಯಮಹನೀಯರು, ವೀರಶೈವ ಜನಾಂಗಕ್ಕೆ ಮೇಲ್ತರದ ಶಿಕ್ಷಣವು ದೊರೆವ ಹೊರತು ಅದು ಮುಂದಕ್ಕೆ ಬರಲಾರದೆಂದು ಯೋಚಿಸಿ ಅವಿಶ್ರಾಂತ ಶ್ರಮಪಟ್ಟು “ ಲಿಂಗಾಯಿತ ಎಜ್ಯುಕೇಶನಲ್ ಫಂಡು ” ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸುಮಾರು ೩|| ಲಕ್ಷ ರೂಪಾಯಿ ಫಂಡು ಕೂಡಿಸಿದುದರಿಂದ ಬಹುತರ ಈ ಸಭೆಯನ್ನಲಂಕರಿಸಿದ ಎಲ್ಲ ಗ್ರಾಜ್ಯುಯೇಟರೂ ಆ ಫಂಡಿನ ಸಹಾಯದಿಂದಲೇ ಪದವೀಧರರಾಗಿರುವರೆಂದು ಹೇಳಲಿಕ್ಕೂ, ಈ ಮಹಾಸಭೆಯ ಉತ್ಪತ್ತಿಗೆ ಈ ಪ್ರಚಂಡವಾದ ಫಂಡೇ ಮೂಲವೆಂದು ತಿಳಿಸಲಿಕ್ಕೂ ಅಡ್ಡಿಯಿಲ್ಲ ಇದೇ ಫಂಡಿಗೆ ವಂಟಮುರಿಯ ಶ್ರೀಮಂತ ಆನರೆಬಲ್ ಲಖಮಗೌಡ ಬಸವಪ್ರಭು ಸರದೇಸಾಯಿಯವರು ೪೦ ಸಾವಿರ ರೂಪಾಯಿಗಳ ಉದಾರಾಶ್ರಯವನ್ನೂ, ತಾಲೂಕ ಚಿಕ್ಕೋಡಿ ಪೈಕಿ ಸಾ|| ಕುಗಲೀ ಗ್ರಾಮದ ಕೈ ವಾ. ರಾ.ರಾ. ಅಪ್ಪಯ್ಯಪ್ಪಣ್ಣಾ ಸಿಂತ್ರೆಯವರು ೧೦ ಸಾವಿರ ರೂಪಾಯಿಗಳನ್ನೂ ಕೊಟ್ಟು ಹೆಸರುವಾಸಿಯಾದ ಸಂಗತಿಯು ಸರ್ವಶ್ರುತವಿರುವದು. ಇದೇ ಸಂಸ್ಥೆಗೆ ವರ್ಷ ಒಂದಕ್ಕೆ ೧೦೦೦ ರೂಪಾಯಿಗಳ ಆದಾಯವುಳ್ಳ ಅಮ್ಮಣಗಿ ಎಂಬ ಇನಾಮಗ್ರಾಮವನ್ನು ಮೊದಲು ಕೊಟ್ಟು ಕಡೆಗೆ ತಮ್ಮ ಸಂಸ್ಥಾನದ ಸರ್ವಸ್ವವನ್ನೇ ಈ ಸಂಸ್ಥೆಗೆ ಸಮರ್ಪಿಸಿ ಶಿವಸಾನ್ನಿಧ್ಯವನ್ನು ಪಡೆದ ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಯವರ ಪುಣ್ಯ ಚರಿತ್ರೆಯನ್ನು ಎಷ್ಟು ಕೊಂಡಾಡಿದರೂ ಸಾಲದು. (ಸಶೇಷ.)

ಅಧ್ಯಕ್ಷರ ಭಾಷಣದ ಮುಖ್ಯಾಂಶವು.

ವಿಶ್ವನಾಟಕಸೂತ್ರಧಾರನಾದ ಯಾವ ಪರಶಿವನ ಇಚ್ಛಾನುರೋಧದಿಂದ ಘನವಾದ ನಮ್ಮ ಬ್ರಿಟಿಶಸಾಮ್ರಾಜ್ಯ ಕೃಪಾಛತ್ರಛಾಯದಲ್ಲಿದ್ದುಕೊಂಡು ಶಾಂತಚಿತ್ತದಿಂದ ನಮ್ಮ ವೀರಶೈವ ಸಮಾಜೋನ್ನತಿಯ ಮಹತ್ತಮವಾದ ಮಂಗಲಕಾರ್ಯದ ಆಲೋಚನೆಯ ಆರನೆಯ ಮಹಾಸಭೆಗಾಗಿ ಸದ್ಯಕ್ಕೆ ಇಲ್ಲಿ ನಾವೆಲ್ಲರೂ ಸಮ್ಮಿಳಿತರಾಗಿರುವೆವೋ, ಆ ಪರಶಿವನಿಗೂ ಆತನ ಅಂಶವೆನಿಸುವ ಈ ಸಭಾಮಂಡಲಕ್ಕೂ ಅಭಿವಂದಿಸಿ, ತನ್ನದೇ ಆಗಿರುವ ಈ ಹೊತ್ತಿನ ಮಹಾಸಭೆಯನ್ನು ಎಗ್ಗಿಲ್ಲದೆ ನಡೆಗೊಳಿಸಿ ಕೊನೆಗೆ ಇದರ ಇಷ್ಟಾರ್ಥವನ್ನು ತಪ್ಪದೇ ನೆರವೇರಿಸುವನು ಎಂಬ ನಂಬುಗೆಯ ಆನಂದದೊಡನೆ ಆತನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ಈ ಸಭಾಕಾರ್ಯವನ್ನು ಪ್ರಾರಂಭಿಸುವ.

ಪರಮ ಪೂಜ್ಯಗುರುಗಳೇ! ಸಭ್ಯಸಭಾಸದರೇ!! ಪ್ರಿಯಪ್ರೇಕ್ಷಕರೇ!!! ವಜ್ರವು ಬಿಳುಪಿನಿಂದ, ವೈಡೂರ್ಯವು ಹಳದಿಯಿಂದ, ವಿದ್ರುಮವು ಕೆಂಪಿನಿಂದ, ಈ ಪ್ರಕಾರ ಒಂದೊಂದು ರತ್ನವು ಒಂದೊಂದು ಕಾಂತಿಯಿಂದ ಪ್ರಕಾಶಿಸುತ್ತಿರುವಂತೆ ನಮ್ಮ ಈ ಮಹಾಸಭಾಸಾಗರದಲ್ಲಿ ತಪೋಜ್ಯೋತಿಯಿಂದಲೂ ಜ್ಞಾನತೇಜಸ್ಸಿನಿಂದಲೂ, ವಿದ್ವತ್ ಪ್ರಭೆಯಿಂದಲೂ, ಶಿವಭಕ್ತಿಪ್ರಕಾಶದಿಂದಲೂ, ಹೊಳೆಯುತ್ತಲಿರುವ ಯೋಗಿರತ್ನ ಪುರುಷರತ್ನಶ್ರೇಷ್ಠರಾದ ಅನೇಕ ಮಹಾನುಭಾವರು ಸಂಕಲಿತರಾಗಿರುವರು. ಇಂತಹರೆಲ್ಲರ ದರ್ಶನವೆಂದರೆ ಒಂದು ದೊಡ್ಡ ಭಾಗ್ಯವೇ! ಇಂತಹ ಸಭಾಸ್ಥಾನದ ಅಧ್ಯಕ್ಷತೆಯನ್ನು ವಹಿಸಿ, ಅದನ್ನು ಸುಸೂತ್ರನಾಗಿಸಿಕೊಂಡು ಯೋಗ್ಯ ಸಮಾಪ್ತಿಸುವುದು ಸಾಧಾರಣ ಮಾತಲ್ಲ; ಅಂತೆಯೇ ಇದರ ಅಧ್ಯಕ್ಷತೆಯನ್ನು ಸ್ವೀಕರಿಸಲು ಸ್ವಾಗತಸಭಾಮಂಡಲವು ನನ್ನನ್ನು ಮೊನ್ನೆ ಮೊನ್ನೆ ಅಕಸ್ಮಾತ್ ಕೇಳಿದ ಕೂಡಲೆ ನನ್ನ ಮನಸ್ಸು ಈ ಕಾರ್ಯವಿಷಯವಾಗಿ ಗೊಂದಲದಲ್ಲಿ ಬಿದ್ದು ಬಿಟ್ಟಿತು! ಆದರೆ ಈ ಕೇಳುವಿಕೆಯು ನಮ್ಮ ಸಮಾಜದ ಆಜ್ಞೆಯೆಂದೂ, ಸಮಾಜದ ಆಜ್ಞೆಯೇ ಶಿವನ ಅಪ್ಪಣೆಯೆಂದೂ ಶಿವಸಂದೇಶವು ಯಾವ ಬಗೆಯಿಂದಲಾದರೂ ಮೀರತಕ್ಕದ್ದಲ್ಲವೆಂದೂ, ಇವರ ಅಭಿಮಾನವೆಲ್ಲ ಆ ಶಿವನದೇ ಅರ್ಥಾತ್ ಸಮಾಜದ್ದೇ ಎಂದೂ ತಿಳಿದು ಇದೇ ವಿಶ್ವಾಸದ ಬಲದಿಂದ ಇದಕ್ಕೆ ಒಪ್ಪಿದೆನು. ಪ್ರತ್ಯೇಕ ವಿಷಯದಲ್ಲಿ ನನಗಿಂತ ಮಿಗಿಲಾದ ಅನೇಕ ಆರ್ಯಮಹಾಶಯರು ನಮ್ಮ ಸಮಾಜದಲ್ಲಿ ಇರುತ್ತಿರಲು ತಾವೆಲ್ಲರೂ ನನಗೇ ಈ ಮಾನದ ಸ್ಥಾನವನ್ನು ದಯಪಾಲಿಸಿರುವುದು ನನ್ನ ಮೇಲಣ ತಮ್ಮೆಲ್ಲರ ಅಪಾರವಾದ ಅಂತಃಕರಣವನ್ನೂ ಪ್ರೇಮವನ್ನೂ ಸೂಚಿಸುವುದು. ಇದಕ್ಕಾಗಿ ನಮ್ಮ ಸಮಾಜಕ್ಕೆ ಅತ್ಯಂತ ಕೃತಜ್ಞನಿದ್ದೇನೆ. ತಾವು ಆಜ್ಞಾಪಿಸಿರುವ ಸಭಾಕಾರ್ಯವನ್ನು ನನ್ನ ಯಥಾಶಕ್ತಿ ಮಾಡಲು ಯತ್ನಿಸುವೆನು. ನನ್ನ ಪ್ರಯತ್ನದಲ್ಲಿ ಏನಾದರೂ ದೋಷಗಳಿದ್ದಲ್ಲಿ “ ಪರಗುಣಪರಮಾಣೂನ್ ಪರ್ವತೀಕೃತ್ಯ ನಿತ್ಯಂ। ನಿಜಹೃದಿ ವಿಕಸಂತಃ ಸಂತಿ ಸಂತಃ ” ಎಂಬ ಸತ್ಪುರುಷಸ್ವಭಾವಕ್ಕೆ ಸರಿಯಾಗಿ ನನ್ನ ಆ ದೋಷಗಳ ಕಡೆಗೆ ಲಕ್ಷ್ಯಗೊಡದೆ ಗುಣಾಂಶವನ್ನೇ ಗ್ರಹಿಸುವಿರೆಂದು ಸವಿನಯ ಪ್ರಾರ್ಥನೆ:—

ಈ ಸಭಾಕಾರ್ಯವನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಐದನೆಯ ಮಹಾಸಭೆಯಿಂದ ಇತ್ತಲಾಗಿ ವರ್ತಿಸಿದ ಮತ್ತು ನನಗೆ ಮಹತ್ವದುವೆಂದು ತೋರಿ ಬಂದಿರುವ ಕೆಳಗಣ ನಾಲ್ಕು ಸಂಗತಿಗಳ ಬಗ್ಗೆ ತುಸು ಮಾತನಾಡದೆ ಮುಂದಕ್ಕೆ ಸಾಗಲಾರೆನು. ಆ ಸಂಗತಿಗಳು:—

ಮೊದಲನೆಯ ಸಂಗತಿಯೇನೆಂದರೆ— ನಮ್ಮ ವೈಭವಶಾಲಿ ಸಾರ್ವಭೌಮ ೫ ನೆಯ ಜಾರ್ಜ ಚಕ್ರವರ್ತಿದಂಪತಿಗಳ ಬಗ್ಗೆ ಈ ನಮ್ಮ ಭಾಗ್ಯವಂತ ಚಕ್ರವರ್ತಿದಂಪತಿಗಳ ಸಾರ್ವಭೌಮಪಟ್ಟಾಭಿಷೇಕ ಸಮಾರಂಭವು ದಿಲ್ಲೀ ನಗರದಲ್ಲಿ ಇದೇ ತಿಂಗಳ ಎಂದರೆ ತಾ|| ೧೨ ನೆಯ ಡಿಸೆಂಬರ ೧೯೧೧ ಇಸವಿಯ ಮಂಗಳವಾರದಲ್ಲಿ ಅಖಂಡ ಸಂತೋಷ ಸಂಭ್ರಮದೊಡನೆ ಪರಿಸಮಾಪ್ತವಾದುದಕ್ಕೂ ಈ ನಮ್ಮ ದಯಾಳು ಸಾರ್ವಭೌಮದಂಪತಿಗಳ ಹಿಂದುಸ್ಥಾನದ ಈ ಮಂಗಲ ಪ್ರಯಾಣವು ಕಡೆತನಕ ಮಂಗಳಕರವಾಗುವದಕ್ಕೂ ಪರಮೇಶ್ವರನನ್ನು ಪ್ರಾರ್ಥಿಸುವೆನು. ಸಪರಿವಾರ ನಮ್ಮ ಸಾರ್ವಭೌಮ ದಂಪತಿಗಳನ್ನು ಭಾಗ್ಯಮಯವಾದ ಆಂಗ್ಲಭೂಮಿಗೆ ಈಶ್ವರನು ಸುಖರೂಪದಿಂದ ಮುಟ್ಟಿಸಲಿ!

ಇನ್ನು ಎರಡನೆಯ ಸಂಗತಿಯೆಂದರೆ ರಾವಬಹಾದ್ದೂರ ಕೈಲಾಸವಾಸಿ ಮಲ್ಲಪ್ಪಾ ಅಣ್ಣಾವಾರದ ಈ ಮಹನೀಯರ ನಿಧನವು ನಮ್ಮ ಸಮಾಜೋನ್ನತಿಮಂದಿರದ ಮುಖ್ಯ ಆಧಾರಸ್ತಂಭಗಳೊಳಗಣ ಒಂದು ಸ್ತಂಭದಂತಿದ್ದ ಈ ಸತ್ಪುರುಷರ ಮರಣದಿಂದ ಇಬ್ಬಗೆಯ ದುಃಖವಾಗಿರುವುದು. ನಮ್ಮೆಲ್ಲರ ದುರ್ದೈವದಿಂದ ಒಳ್ಳೆಯ ಹೊತ್ತಿಗೆ ಮುಖ್ಯ ಸ್ತಂಭವು ಮುರಿದುಹೋದುದು ಮೊದಲನೆಯ ದುಃಖ. ಹಾಗು ಅದರ ಸ್ಥಳದಲ್ಲಿ ಅಂತಹುದೇ ಮತ್ತೊಂದು ಗಟ್ಟಿಮುಟ್ಟ ಕಂಬವು ಅವಶ್ಯವಾಗಬೇಕಾಗಿಟ್ಟು, ಅದು ಸದ್ಯಕ್ಕೆ ಕಾಣದಿರುವುದು ಎರಡನೆಯ ದುಃಖ!! ಇದರಂತೆಯೇ ಶ್ರೀಮಂತ ವೀರಬಸವರಾಜ ಪುಂಗನೂರು (ಮದ್ರಾಸ) ಹಾಗೂ ಧರ್ಮಪ್ರವರ್ತಕ ರಾ|| ಬ|| ಗಬ್ಬಿ ತೋಟದಪ್ಪನವರು ಮೈಸೂರ ಮತ್ತೂ ಮ||ರಾ||ರಾ|| ಅಪ್ಪಯ್ಯಪ್ಪ ಅಣ್ಣಾ ಸಿಂತ್ರೆ ಕುರ್ಲಿ (ಕೊಲ್ಲಾಪುರ) ಈ ಆರ್ಯರ ವಿಯೋಗದ ವಿಷಯವಾಗಿಯೂ, ಖೇದವೆನಿಸಿರುವುದು. ಸದ್ಯದ ನಮ್ಮ ವೀರಶೈವರಾಜರ ಮನೆತನಗಳಲ್ಲಿ ಪುಂಗನೂರು ಸಂಸ್ಥಾನವು ದೊಡ್ಡದಿದ್ದು ಇದರ ಉತ್ಪನ್ನ ಸುಮಾರು ಮೂರು ಲಕ್ಷವಿರುವುದು. ಇದರ ಒಡೆಯರಾದ ಕೈಲಾಸವಾಸಿ ಶ್ರೀಮಂತ ವೀರಬಸವರಾಜರವರು ಒಳ್ಳೆಯ ಉದಾರ ಮನಸ್ಸಿನವರೂ, ಧರ್ಮಾಭಿಮಾನಿಗಳೂ ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಆದುದರಿಂದ ಈ ೬ ನೆಯ ಮಹಾಸಭೆಯ ಅಧ್ಯಕ್ಷತೆಯನ್ನು ಪ್ರಥಮತಃ ಈ ದೊರೆಗಳವರಿಗೆ ಕೊಡುವುದು ಗೊತ್ತಾಗಿದ್ದಿತು; ಮತ್ತು ಅವರ ಉದಾರಾಶ್ರಯದಿಂದ ಇನ್ನು ಮುಂದೆ ನಮ್ಮ ಸಮಾಜದ ಅನೇಕ ಮಹಾಕಾರ್ಯಗಳು ಆಗತಕ್ಕುವಿದ್ದುವು. ರಾ. ಬ. ಗುಬ್ಬಿ ತೋಟದಪ್ಪನವರು ತಮ್ಮ ಔದಾರ್ಯದಿಂದ “ ಧರ್ಮಪ್ರವರ್ತಕ ” ಎಂಬ ಬಹುಮಾನದ ಪದವಿಯನ್ನು ಮೈಸೂರ ಮಹಾರಾಜರಿಂದಲೂ, “ ರಾವಬಹದ್ದೂರ ” ಪದವಿಯನ್ನು ನಮ್ಮ ಸಾರ್ವಭೌಮ ಸರಕಾರದಿಂದಲೂ ಪಡೆದುಕೊಂಡಿದ್ದರು. ಈ ಪುಣ್ಯಪುರುಷರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಧರ್ಮಸತ್ರವನ್ನು ಸ್ಥಾಪಿಸಿ, ಮೈಸೂರಪ್ರಾಂತದ ನಮ್ಮ ವೀರಶೈವರ ಶಿಕ್ಷಣೋತ್ಕರ್ಷಕ್ಕಾಗಿ ಅಸಾಧಾರಣವಾದ ಸಾಹಸಮಾಡಿರುವರು. ಮ|| ರಾ|| ಅಪ್ಪಯ್ಯಪ್ಪ ಅಣ್ಣಾ ಸಿಂತ್ರೆ ಕುರ್ಲಿ ಈ ಮಹನೀಯರು ನಮ್ಮ ಲಿಂಗಾಯತ ಫಂಡಿಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವರು. ಇಂತಹ ಮಹನೀಯರ ಮರಣವೆಂದರೆ ನಮ್ಮ ಸಮಾಜದ ದುರ್ದೈವವೇ ಸರಿ. ಆದರೆ ಏನುಮಾಡಬೇಕು? ಜಗಚ್ಚಕ್ರಕ್ರಮಕ್ಕೆ ಯಾವ ಪ್ರಯತ್ನವೂ ಇಲ್ಲ. ಪರಶಿವನು ಈ ಶಿವಾಭಿಮಾನಿಗಳಿಗೆಲ್ಲ ಸಾಯುಜ್ಯಪದವಿಯನ್ನೀಯಲೆಂದೂ ಸಮಾಜದಲ್ಲಿ ತೆರವಾಗಿರುವ ಘನವಾದ ಇವರ ಸ್ಥಳಗಳನ್ನು ತೀವ್ರ ತುಂಬಿಸಲೆಂದೂ ಆತನನ್ನು ಪ್ರಾರ್ಥಿಸುವೆನು.

ಮೂರನೆಯದು— ಮದ್ರಾಸ ಇಲಾಖೆಯೊಳಗಣ ತಿನ್ನವೆಲ್ಲಿ ಜಿಲ್ಲೆಯ ಕಲೆಕ್ಟರರಾದ ಮಿಸ್ಟರ್ ಏಶ್ ಇವರನ್ನು ತಲೆತಿರುಗಿದ ಯಾವನೋ ಒಬ್ಬ ದುರಾತ್ಮನು ಕೊಲೆಮಾಡಿದುದನ್ನು ಕೇಳಿ ಬಹಳ ದುಃಖವೂ ಸಂತಾಪವೂ ಆಗಿರುವುದು. ಘಟಕನಾದ ಆ ಕೊಲೆಗಡಕನ ಈ ಅತ್ಯಂತ ನೀಚಕಾರ್ಯವು ತೀರ ಹೊಲ್ಲದ್ದು! ತೀರಹೊಲ್ಲದ್ದು!! ತೀರಹೊಲ್ಲದ್ದು!!! ಎಂದು ಅದನ್ನು ಮೂರು ಬಾರಿಗೂ ನಿಷೇಧಿಸುವೆನು. ಆ ಕೊಲೆಗಡಕನಂತೂ ತನ್ನ ದುಷ್ಕೃತಿಯ ಪ್ರತಿಫಲವೆಂದು ಸಕಲರಿಗೂ ನಿದರ್ಶನ ಮಾಡಿಕೊಡಲು ಆಗಿಂದಾಗಲೆ ತನ್ನನ್ನು ತಾನೇ ಗುಂಡಿನಿಂದ ಶಾಸನಮಾಡಿ ಕೊಂಡುದಲ್ಲದೆ ಹೆಚ್ಚಿನ ಶಾಸನದ ಬಗ್ಗೆ ಯಮಲೋಕಕ್ಕೆ ಹೊರಟು ಹೋದನು. ಎಂದ ಬಳಿಕ ಆ ನೀಚನ ಬಗ್ಗೆ ಹೆಚ್ಚಿಗೆ ಮಾತನಾಡುವ ಕಾರಣವೇ ಇಲ್ಲ. ಇನ್ನು ಅವನ ಈ ನೀಚಕಾರ್ಯಕ್ಕೆ ಅಂಗಭೂತವಾಗಿರುವ ಇನ್ನುಳಿದ ಅಧಮರ ಬಗ್ಗೆ ಮದ್ರಾಸ ಹಾಯಕೋರ್ಟಿನ ಮುಂದೆ ಸದ್ಯಕ್ಕೆ ವಿಚಾರವು ನಡೆದಿರುವುದು. ಈ ದುಷ್ಕಾರ್ಯದಲ್ಲಿ ನಿಜವಾಗಿ ಸೇರಿದ ಅಧಮರೆಲ್ಲರೂ ಸಿಕ್ಕಲಿ! ಮತ್ತು ಅವರಿಗೆಲ್ಲ ತಕ್ಕ ಶಾಸನವಾಗಿ ಅದು ನಮ್ಮ ರಾಷ್ಟ್ರಶಾಂತತೆಗೆ ಮತ್ತಷ್ಟು ಕಾರಣವಾಗಲಿ!! ಎಂದು ಅಪೇಕ್ಷಿಸುವೆನಲ್ಲದೆ, ಸ್ವಾಮಿಕಾರ್ಯಕ್ಕೆ ಮಡಿದ ಮಿಸ್ಟರ ಏಶ್ ಇವರ ಆತ್ಮಕ್ಕೆ ಪರಮಾತ್ಮನು ತಪ್ಪದೆ ಶಾಂತಿಯನ್ನು ಕೊಡಲಿ! ಎಂದೂ ಬಯಸುವೆನು.

ನಾಲ್ಕನೆಯ ಸಂಗತಿಯೇನೆಂದರೆ— ಶ್ರೀಶಿವಾಂಶಸಂಭವರಾದ ಶ್ರೀಛತ್ರಪತಿ ಶಾಹುಮಹಾರಾಜ ಸರಕಾರ ಕರವೀರ (ಕೊಲ್ಲಾಪುರ) ಈ ಪುಣ್ಯ ಪ್ರಭುಗಳ ಬಗ್ಗೆ ನಮ್ಮ ದಯಾಳು ಸಾರ್ವಭೌಮ ಸರಕಾರದಂತೆ ಈ ಸರಕಾರವಾದರೂ ವೀರಶೈವ ಸಾಮಾಜಿಕ ಮತ್ತು ಧಾರ್ಮಿಕ ಉನ್ನತಿಗಳ ಬಗ್ಗೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸುತ್ತಿರುವುದಕ್ಕಾಗಿ ನಮ್ಮ ಸಮಾಜವು ಶ್ರೀಕರವೀರ ಸರಕಾರಕ್ಕೆ ಈ ಮೊದಲೇ ಕೃತಜ್ಞತೆಯುಳ್ಳುದಾಗಿರುವುದಷ್ಟೆ? ಅದರೊಳಗೂ ಈ ವರ್ಷ ಶ್ರೀಛತ್ರಪತಿ ಶಾಹುಮಹಾರಾಜರವರು ನಮ್ಮ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳವರನ್ನು ಸಂಪೂರ್ಣ ಮರ್ಯಾದಾಪೂರ್ವಕ ಭಕ್ತಿಯಿಂದ ಸಂಸ್ಥಾನಕ್ಕೆ ಬರಮಾಡಿಕೊಂಡು, ಶ್ರೀಗಳವರಿಗೆ ತಮ್ಮ ರಾಜಧಾನಿಯಲ್ಲಿ ಹೊಸದಾಗಿ ಭವ್ಯವಾದ ಮಠವನ್ನು ಸ್ಥಾಪಿಸಿಕೊಟ್ಟು, ಅದರ ವಿನಿಯೋಗಾದಿ ಸತ್ಕಾರ್ಯಗಳು ಅಬಾಧಿತವಾಗಿ ನಡೆಯುವಂತೆ ವ್ಯವಸ್ಥೆಮಾಡಿಸಿ, ತನ್ಮುಖದಿಂದ ನಮ್ಮ ವೀರಶೈವ ಧರ್ಮರಕ್ಷಣೆಯ ವಿಷಯದಲ್ಲಿ ತಮಗಿರುವ ಅತುಲವಾದ ಶ್ರದ್ಧೆಯನ್ನು ಪ್ರಕಟೀಕರಿಸಿ, ನಮ್ಮ ಸಮಾಜವನ್ನೆಲ್ಲ ಆನಂದಸಾಗರದಲ್ಲಿ ಮುಳುಗಿಸಿ, ಅದು ಆಚಂದ್ರಾರ್ಕ ಶ್ರೀಕರವೀರಸಂಸ್ಥಾನದ ಬಗ್ಗೆ ಅತ್ಯಂತ ಕೃತಜ್ಞತಾಭಾವದಲ್ಲಿರುವಂತೆ ಮಾಡಬಿಟ್ಟಿರುವರು! ಎಂದು ತಮ್ಮೆಲ್ಲರ ಮುಂದೆ ಅರಿಕೆಮಾಡಿಕೊಳ್ಳಲಿಕ್ಕೂ, ಮಹಾರಾಜರವರಲ್ಲಿರುವ ಇಂತಹ ಅಮೂಲ್ಯವಾದ ಗುಣಗಳಮೂಲಕ ಅವರಿಗೆ ನಮ್ಮ ಸಾರ್ವಭೌಮ ಸರಕಾರದಿಂದ ಜಿ. ಸಿ. ಎಸ್. ಐ, ಎಂಬ ಅತ್ಯಂತ ಬಹುಮಾನದ ಪದವಿಯು ಮೊನ್ನಿನ ದಿಲ್ಲೀ ಸಮಾರಂಭದಲ್ಲಿ ದೊರೆದುದೆಂಬುದನ್ನು ತಿಳಿಸಲಿಕ್ಕೂ ನನಗೆ ಆನಂದ! ಆನಂದ!! ಅತ್ಯಾನಂದವಾಗುತ್ತದೆ!!! ಧರ್ಮಪಕ್ಷಪಾತಿಗಳಾದ ನಮ್ಮ ಶ್ರೀಛತ್ರಪತಿ ಶಾಹುಮಹಾರಾಜರ ಶ್ರೇಯೋಭಿವೃದ್ಧಿಯನ್ನು ಪರಶಿವನು ಸರ್ವತ್ರ ಮಾಡಲಿ.

ಮಹಾಸಭೆಯ ಕಡೆಯಿಂದ ಈ ನಾಲ್ಕು ಸಂಗತಿಗಳೊಳಗಣ ಮೊದಲನೆಯ ಸಂಬಂಧದ ನಮ್ಮ ಆಶಯವನ್ನು ಮುಂಬಯಿ ಹಾಗೂ ಹಿಂದುಸ್ಥಾನ ಸರಕಾರಗಳಿಗೂ ಮೂರನೆಯ ಸಂಗತಿಯ ಸಂಬಂಧದ ನಮ್ಮ ಅಭಿಪ್ರಾಯವನ್ನು ಮದ್ರಾಸ ಹಾಗು ಹಿಂದುಸ್ಥಾನ ಸರಕಾರಗಳಿಗೂ ನಾಲ್ಕನೆಯ ಸಂಗತಿಯ ಅಭಿಪ್ರಾಯವನ್ನು ಕರವೀರಸರಕಾರಕ್ಕೂ ತಂತಿಯ ಮುಖದಿಂದ, ಎರಡನೆಯ ಸಂಗತಿಯ ಸಂಬಂಧದ ಆಶಯವನ್ನು ಅವರವರ ಮನೆತನಕ್ಕೆ ಪತ್ರಮುಖದಿಂದ ತಿಳಿಸುವುದು ಉಚಿತವಾಗಿ ತೋರುವುದು. ಇನ್ನು ಹಿಂದಣ ಐದು ಮಹಾಸಭೆಗಳಲ್ಲಿ ನಿರ್ಣಯವಾದ ವಿಷಯಗಳ ಸಿಂಹಾವಲೋಕವನ್ನು ಕುರಿತು ಪ್ರಸ್ತಾಪಿಸುವುದರ ಪ್ರಾರಂಭದಲ್ಲಿ ಮಹಾಸಭೆಗಳಿಂದ ಸಮಾಜದ ಮೇಲೆ ಸರ್ವಸಾಧಾರಣದಿಂದ ಒಟ್ಟಿಗೆ ಆಗಿರುವ ಪರಿಣಾಮದ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದು ಅಪ್ರಸ್ತುತವೆನಿಸಲಾರದು. “ ಮಹಾಸಭೆಗಳು ಸಮಾಜದ ಸಾವಿರಗಟ್ಟಲೆ ರೂಪಾಯಿಗಳನ್ನು ತಿಂದುತಿಂದು ಏನು ಮಹಾಕಾರ್ಯ ಮಾಡಿದುವು? ” ಎಂಬ ಉದ್ಗಾರವು ಕೆಲಕೆಲವು ನಮ್ಮ ಸಮಾಜದ ಬಂಧುಗಳಿಂದ ಹೊರಡುತ್ತಿರುವುದೆಂದು ಕೇಳಿಕೆಯಲ್ಲುಂಟು. ನಿಜವಿದ್ದಲ್ಲಿ ಇದು ದುಃಖದ ಸಂಗತಿಯು! ಈ ವಿಷಯವಾಗಿ ಈ ನಮ್ಮ ಬಂಧುಗಳು ಕೆಳಗಣ ಸಂಗತಿಗಳನ್ನು ಮನಸ್ಸಿನಲ್ಲಿ ತರಬೇಕೆಂದು ನನ್ನ ಸವಿನಯ ವಿಜ್ಞಾಪ್ತಿಯು. ಬರಿಯ ಪರ್ವತಗಳೆಂದಾಕ್ಷಣಕ್ಕೆ ಅವುಗಳಿಂದ ಆಗಿರುವ ಮತ್ತು ಆಗುತ್ತಿರುವ ಪ್ರಯೋಜನಾಂಶಗಳು ತಟ್ಟನೆ ನಮ್ಮ ಮನದಲ್ಲಿ ಬರುವುದಿಲ್ಲ. ಅದೇ ದೂರ ತಿಳಿದು ನೋಡಿದರೆ ಮಳೆಗರೆಯಲಿಕ್ಕೂ, ಹೊಳೆಹುಟ್ಟಲಿಕ್ಕೂ, ಪರ್ವತಗಳ ಕೆಳಗಡೆ ಇದ್ದ ಪ್ರದೇಶಗಳಲ್ಲಿ ಉತ್ತಮಬೆಳೆ ಬರಲಿಕ್ಕೂ ಇವೇ ಮುಂತಾದ ಇನ್ನೂ ಅನೇಕ ಲಾಭಗಳಿಗೆ ಕೆಲವು ಅಂಶದಲ್ಲಿ ಪರ್ವತಗಳೇ ಕಾರಣವೆಂದು ಕಂಡುಬರುತ್ತದೆ. ನಮ್ಮ ಮಹಾಸಭೆಗಳಿಂದಾದ ಪ್ರಯೋಜನಗಳಾದರೂ ಇದರಂತೆಯೇ ಇರುವುವು. ಬರಿಯ ಮಹಾಸಭೆಗಳ ಸಂಖ್ಯೆ, ಅವು ನೆರೆದ ಸ್ಥಳ ಅಲ್ಲಿ ಕೂಡಿದ ಜನ, ಆಡಿದ ಭಾಷಣ, ವೆಚ್ಚವಾದಹಣ, ಇವಿಷ್ಟನ್ನೇ ಮನದಲ್ಲಿ ತಂದರೆ ಮಹಾಸಭೆಗಳಿಂದಾದ ಪ್ರಯೋಜನವು ಎಂದೂ ತಿಳಿಯುವುದಿಲ್ಲ. ಮತ್ತು ತಿಳಿಯಲೂ ಆಗದು. ಆದರೆ ಮಹಾಸಭೆಗಳಿಗಿಂತ ಪೂರ್ವದಲ್ಲಿದ್ದ ನಮ್ಮ ಸಮಾಜದ ಸ್ಥಿತಿ, ಹಾಗೂ ಮಹಾಸಭೆಗಳಾಗಹತ್ತಿದ ಮೇಲೆ ನಮ್ಮ ಸಮಾಜದ ಸ್ಥಿತಿ, ಇವುಗಳನ್ನು ಸೊ

[೬ ನೆಯ ಪುಟವನ್ನು ನೋಡಿರಿ.]

ಮೈಸೂರ್ ಸ್ಟಾರ್

೧೯೧೨ ನೆಯ ಜನವರಿ ತಾ॥ ೧ ನೆಯ ಸೋಮವಾರ.

ವೀರಶೈವ ಮಹಾಸಭೆಯು.

೬ ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಕ್ಷರಾದ ಶ್ರೀಮಂತ ಬುಳ್ಳಪ್ಪ ಬಸವಂತರಾವ ಮಾಮಲೇ ದೇಸಾಯಿ ಸಂಸ್ಥಾನ ಹಂದಿಗನೂರ ಇವರು ಮಾಡಿದ ಭಾಷಣದ ಮುಖ್ಯಾಂಶವು ಮತ್ತೊಂದು ಕಡೆ ಕೊಡಲ್ಪಟ್ಟಿರುತ್ತದೆ. ಈ ಭಾಷಣದಲ್ಲಿ ವೀರಶೈವ ಧರ್ಮದ ಮೂಲತತ್ವ ಮತ್ತೂ ಉದಾತ್ತವಿಚಾರಗಳು ವಿಸ್ತರಿಸಲ್ಪಟ್ಟಿವೆ. ಈ ವಿಚಾರಗಳು ಹಿಂದಣಸಭೆಗಳಲ್ಲಿ ಅನೇಕ ವಿದ್ವಾಂಸರಿಂದ ಶಾಸ್ತ್ರಾಧಾರಸಹಿತವಾಗಿ ಪ್ರತಿಪಾದಿಸಲ್ಪಟ್ಟಿರುವುದರಿಂದಲೂ, ಅಲ್ಪಸ್ವಲ್ಪ ಕಾಲದಲ್ಲಿ ಸಾಮಾನ್ಯರಿಂದ ಗ್ರಹಿಸಲ್ಪಡತಕ್ಕವುಗಳಲ್ಲವಾದುದರಿಂದಲೂ ಪ್ರತಿಯೊಂದು ಸಭಾಕಾಲದಲ್ಲೂ ಪ್ರಸ್ತಾಪಿಸಬೇಕಾದ ಆವಶ್ಯಕತೆಯು ಕಂಡುಬರುವುದಿಲ್ಲ. ಶ್ರೀ ರಾಜಚಕ್ರವರ್ತಿ ದಂಪತಿಗಳ ಪಟ್ಟಾಭಿಷೇಕ ಮಹೋತ್ಸವವು ದಿಗಂತವಿಖ್ಯಾತವಾಗಿ ಪರಿಸಮಾಪ್ತಿಗೊಂಡುದಕ್ಕಾಗಿಯೂ, ಅವರ ಭರತಖಂಡದ ಪ್ರವಾಸವು ಮಂಗಳಕರವಾಗಿದ್ದು ಅವರು ಸುಖದಿಂದ ತಮ್ಮ ಸ್ವದೇಶವನ್ನು ತಲುಪುವವರಾಗಲೆಂದು ಈಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸಿರುವರು. ವೀರಶೈವ ಮತೋದ್ಧರಣ ಕಾರ್ಯದಲ್ಲಿ ಕಂಕಣಬದ್ಧರಾಗಿದ್ದ ಸೊಲ್ಲಾಪುರದ ರಾ॥ ಬ॥ ಮಲ್ಲಪ್ಪಣ್ಣ ವಾರದ ಇವರೂ, ಬೆಂಗಳೂರಲ್ಲಿ ಅದ್ವಿತೀಯವಾದ ಧರ್ಮಕಾರ್ಯವನ್ನು ಮಾಡಿರುವ ರಾ॥ಬ॥ ಗುಬ್ಬಿ ತೋಟದಪ್ಪನವರೂ, ವೀರಶೈವರ ಸಂಸ್ಥಾನಿಕರಲ್ಲೆಲ್ಲಮೊದಲನೆಯವರಾದ ಪುಂಗನೂರ ಶ್ರೀಮಂತವೀರಬಸವರಾಜರವರೂ, ವಿದ್ಯಾಭಿಮಾನಿಗಳಾದ ಕೊಲ್ಲಾಪುರದ ಅಪ್ಪಯ್ಯಪ್ಪ ಅಣ್ಣಾ ಸಿಂತ್ರೆ ಕರ್ವಿಯವರೂ ಕೈಲಾಸವಾಸಿಗಳಾದುದಕ್ಕಾಗಿ ದುಃಖವನ್ನೂ ಪ್ರದರ್ಶಿಸಿರುವರಲ್ಲದೆ, ತಿನ್ನವೆಲ್ಲಿಯ ಕಲೆಕ್ಟರಾಗಿದ್ದ ಮಿ॥ ಆಷ್‌ರವರನ್ನು ಕೊಲೆಮಾಡಿದ ನರಾಧಮನ ಅಮಾನುಷಕೃತ್ಯಕ್ಕಾಗಿ ಧಿಕ್ಕಾರವನ್ನೂ ಪ್ರದರ್ಶಿಸಿರುವರು. ಮತ್ತೂ ದಯಾಳು ಬ್ರಿಟಿಷ್ ಸರ್ಕಾರದವರಂತೆ ಕೊಲ್ಲಾಪುರ ಸರ್ಕಾರದವರು ವೀರಶೈವರ ನೈತಿಕ, ಸಾಮಾಜಿಕ ಮತ್ತೂ ಧಾರ್ಮಿಕ ಅಭಿವೃದ್ಧಿಯ ವಿಚಾರದಲ್ಲಿ ಪೂರ್ಣ ಸಹಾನುಭೂತಿಯನ್ನು ತೋರಿಸುತ್ತಿರುವ ಮತ್ತೂ ವೀರಶೈವರ ಜಗದ್ಗುರುಗಳಾದ ಶ್ರೀಮನ್ ಮುರುಘರಾಜೇಂದ್ರ ಸ್ವಾಮಿಗಳನ್ನು ವಿಶೇಷ ರಾಜಮರ್ಯಾದೆಯೊಡನೆ ತಮ್ಮ ಸಂಸ್ಥಾನಕ್ಕೆ ಬರಮಾಡಿಕೊಂಡು ಅಲ್ಲಿ ಒಂದು ಮಠವನ್ನು ಹೊಸದಾಗಿ ಸ್ಥಾಪಿಸಲು ಅನುಕೂಲವನ್ನುಂಟುಮಾಡಿಕೊಟ್ಟು, ತನ್ಮೂಲಕ ಈ ಮತಕ್ಕೆ ಗೌರವಪ್ರತಿಷ್ಠೆಯನ್ನುಂಟುಮಾಡಿಕೊಟ್ಟಿರುವ ಕೊಲ್ಲಾಪುರದ ಮಹಾರಾಜರವರಿಗೆ ಸಾರ್ವಭೌಮರಿಂದ ಜಿ. ಸಿ. ಎಸ್. ಐ., ಪ್ರಶಸ್ತಿಯು ಲಭ್ಯವಾದುದಕ್ಕಾಗಿ ಅತ್ಯಾನಂದದಿಂದ ಅಭಿನಂದಿಸಿರುವರು. "ಈ ಮಹಾಸಭೆಯುತ್ಪನ್ನವಾದಮೇಲೆ ಕನ್ನಡ ಮತ್ತೂ ಮರಾಠಿ ಭಾಷೆಗಳಲ್ಲಿ ಚಿಕ್ಕಚಿಕ್ಕ ಮತಗ್ರಂಥಗಳು ಪ್ರಕಟವಾಗಲೂ, ವೀರಶೈವರು ಲಗ್ನ ದೀಕ್ಷಾ ಮುಂತಾದ ಕಾರ್ಯಗಳನ್ನು ತಮ್ಮ ಮತಸ್ಥರಿಂದಲೇ ಮಾಡಿಸಿಕೊಳ್ಳುವಂತೆಯೂ, ಬೊಂಬಾಯಿಯ ಸರ್ಕಾರದ ಕಾರಾಗೃಹಗಳಲ್ಲಿಯ ಬಂದಿಗಳು ತಮ್ಮಿಷ್ಟಲಿಂಗವನ್ನು ಅಂಗದಮೇಲೆ ಧರಿಸಿಕೊಂಡಿರುವಂತೆಯೂ, ಮೈಸೂರ ವಿದ್ಯಾಭಿವೃದ್ಧಿಯಫಂಡು ಸ್ಥಾಪಿತವಾಗಲೂ ಜಿಲ್ಲಾ ತಾಲೂಕು ಕಮಿಟಿಗಳು ಏರ್ಪಾಟಾಗಲೂ, ಪಟ್ಟಚರಮೂರ್ತಿ ವಿರಕ್ತಸ್ಥಾನಗಳಿಗೆ ವಿದ್ಯಾವಂತರೂ, ಸತ್ಕುಲೋತ್ಪನ್ನರೂ ಆದವರು ಉತ್ತರಾಧಿಕಾರಿಗಳಾಗುವಂತೆಯೂ ಆಗಿರುವುದು. ಇವಲ್ಲದೆ, ವೀರಶೈವ ಮತಧರ್ಮಗ್ರಂಥಗಳಲ್ಲುಕ್ತವಾಗಿರುವ ವಿಷಯಗಳ ಸಾರವು ಮಹಾಸಭಾ ರಿಪೋರ್ಟುಗಳಲ್ಲಿ ಗರ್ಭಿತವಾಗಿ ಅದನ್ನು ಸಾಮಾನ್ಯಜನರೂ ತಿಳಿದುಕೊಳ್ಳುವಂತಾಗಿರುವಪ್ರಯುಕ್ತ ಈ ಸಭೆಯಿಂದ ಧರ್ಮಪ್ರಸಾರಣೆಯಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು ದಯಾಳು ಬ್ರಿಟಿಷ್ ಸರ್ಕಾರದವರ ಕರುಣೆಯಿಂದ ವೀರಶೈವ ಮತೀಯರಿಗೆ ದೊರೆದಿರುವ ವಿದ್ಯಾಶಿಕ್ಷಣದಿಂದ ವೀರಶೈವರಲ್ಲಿ ಕೆಲರು ಇಂಗ್ಲಿಷಿನಲ್ಲಿ ಪ್ರೌಢಪರೀಕ್ಷೆಗಳನ್ನು ಕೊಟ್ಟು ಪ್ರಶಸ್ತಿಯನ್ನು ಪಡೆದಿರುವರಾದರೂ, ಈ ಜನಸಂಖ್ಯಾನುಗುಣವಾಗಿ ನೋಡಿದರೆ ವಿದ್ಯಾಪ್ರಸಾರಣೆಯೇ ನಡೆದಿಲ್ಲವೆಂದು ಹೇಳಬಹುದಾಗಿದೆ. ಸಕಲ ವಿಧವಾದ ಸಂಪತ್ತಿಗೂ ವಿದ್ಯೆಯೇ ಸಾಧನವಾದುದರಿಂದ ವೀರಶೈವರಿಗೆ ಪ್ರಾಥಮಿಕ ಶಿಕ್ಷಣವು ಅತ್ಯಾವಶ್ಯಕವಾದುದು. ಮತ್ತೂ ರಾಜಭಾಷೆಯಾದ ಆಂಗ್ಲ ವಿದ್ಯೆಯನ್ನು ಪ್ರತಿಯೊಬ್ಬನೂ ಕಲಿಯಬೇಕು. ಇದರಿಂದ ಪರದೇಶೀಯರ ಕೂಡ ವ್ಯಾಪಾರಮಾಡಲೂ, ಸುಧಾರಿಸಿದ ರೀತಿಯಲ್ಲಿ ಬೇಸಾಯಾಭಿವೃದ್ಧಿಯನ್ನು ಮಾಡಲೂ ಶಕ್ಯವಾಗುವುದು. ವೀರಶೈವರಲ್ಲಿ ಉಚ್ಚಶಿಕ್ಷಣವನ್ನು ಹೊಂದಿದವರ ಸಂಖ್ಯೆಯು ಹೆಚ್ಚಾದ ಹೊರತು ಮತದೇಳಿಗೆಯಾಗುವುದಿಲ್ಲವಾದುದರಿಂದ ಕರ್ನಾಟಕ ಪ್ರಾಂತದಲ್ಲಿ ಒಂದು ಪ್ರೌಢವಿದ್ಯಾಲಯವನ್ನು ಸ್ಥಾಪಿಸತಕ್ಕದು ಅವಶ್ಯಕವು. ಆದರೆ ಇದನ್ನು ಒಂದೇ ಜನಾಂಗದವರು ಸಾಧಿಸಶಕ್ಯವಿಲ್ಲವಾದುದರಿಂದ ಇತರರ ಕೂಡ ಆಲೋಚಿಸಿ ಮಾಡುವುದು ಉಚಿತವಾಗಿದೆ. ಇದರಂತೆಯೇ ವೀರಶೈವವಿದ್ಯಾರ್ಥಿಗಳ ಭೋಜನಶಾಲೆಯೇರ್ಪಾಟಾಗಬೇಕು. ಮಕ್ಕಳುಗಳು ವಿದ್ಯಾವಂತರೂ, ನೀತಿವಂತರೂ ಆಗಬೇಕಾದಲ್ಲಿ ಪ್ರಥಮತಃ ತಾಯಿಯೂ ವಿದ್ಯಾವತಿಯಾಗಬೇಕಾದುದಾವಶ್ಯಕವು. ಅದುಕಾರಣ ಹೆಣ್ಣುಮಕ್ಕಳಿಗೆ ೧೨ ವರುಷಗಳವರೆಗೆ ವಿದ್ಯೆಯನ್ನು ಕಲಿಸಿ ಅನಂತರ ವಿದ್ಯಾವಂತರಾದವರಿಗೆ ಕೊಟ್ಟುವಿವಾಹವನ್ನು ಮಾಡಬೇಕು. ವೀರಶೈವರು ಅಪಾತ್ರರಿಗೂ ದಾನಮಾಡಿ ತನ್ಮೂಲಕ ಅವರನ್ನು ಸೋಮಾರಿಗಳನ್ನಾಗಿ ಮಾಡುವುದಲ್ಲದೆ, ತಾವೂ ಅವರ ಅಕೃತ್ಯದಲ್ಲಿ ಭಾಗಿಗಳಾಗುವರು. ಅದುಕಾರಣ ವೀರಶೈವ ಜನರ ಶಿಕ್ಷಣೋತ್ಕರ್ಷಕ್ಕೆ ಅನುಕೂಲಿಸುವಂತೆ ದಾನಮಾಡುವ ಪದ್ಧತಿಯನ್ನು ಆಚರಣೆಗೆತರಬೇಕು. ಬಹುಮಂದಿ ವೀರಶೈವರು ಕೃಷಿವಾಣಿಜ್ಯಕಾರ್ಯಗಳಿಗಾಗಿ ಐಶ್ವರ್ಯವಂತರಲ್ಲಿ ಸಾಲವನ್ನು ಮಾಡಿ ಹೆಚ್ಚುಬಡ್ಡಿಯನ್ನು ತೆತ್ತು ಕಡೆಗೆ ಸಾಲವನ್ನು ತೀರಿಸಲು ಚೈತನ್ಯವಿಲ್ಲದೆ, ತಮ್ಮ ಮನೆ ಹೊಲಗಳನ್ನೆಲ್ಲ ಸಾಲಗಾರರ ವಶಮಾಡಿ ಹಾಳಾಗುತ್ತಿರುವರು. ಆದುದರಿಂದ ವೀರಶೈವರು ಪರಸ್ಪರ ಸಹಾಯಕಸಂಘಗಳನ್ನೇರ್ಪಡಿಸಿಕೊಂಡು ತಮ್ಮ ವ್ಯಾಪಾರ ಮತ್ತು ಕೃಷಿಗಳನ್ನು ಸುಖವಾಗಿ ಮಾಡಿಕೊಳ್ಳುವುದಲ್ಲದೆ ಧಾನ್ಯಗಳ ಕೋಠಿಗಳನ್ನು ಸ್ಥಾಪಿಸಿಕೊಂಡು ಬಡರೈತರಿಗೆ ಸಹಾಯವನ್ನು ಮಾಡತಕ್ಕದು ಅವಶ್ಯಕವು. ಮತ್ತೂ ಕೃಷಿಯ ಸಂಘಗಳನ್ನೇರ್ಪಡಿಸಿಕೊಂಡು ಕೃಷಿಕರ್ಮವನ್ನು ಸುಧಾರಿಸಿದರೀತಿಯಾಗಿ ಮಾಡಿಕೊಂಡು ಹೋಗತಕ್ಕದಾವಶ್ಯಕವು. ವೀರಶೈವ ಸಮಾಜಸುಧಾರಣೆಗಾಗಿ ಪರದೇಶಗಳಿಗೆ ಹೋಗಿ ವಿದ್ಯಾಭ್ಯಾಸಂಗವನ್ನು ಮಾಡಿ ಬರತಕ್ಕವರಕೂಡ ಸವ್ಯವಹಾರವನ್ನು ಸಮಾಜಬಾಂಧವರೆಲ್ಲರೂ ಧಾರಾಳವಾಗಿ ಮಾಡುವಂತಾದ ಹೊರತು ಈ ಮತದ ಸುಧಾರಣೆಯಾಗುವಂತಿಲ್ಲವು. ೩೫ ಲಕ್ಷ ವೀರಶೈವರ ಸುಖದುಃಖಗಳನ್ನು ವ್ಯಕ್ತಪಡಿಸುವ ಒಂದೇ ಒಂದು "ಮೈಸೂರ ಸ್ಟಾರ" ಪತ್ರವಿರುವುದು. ಈ ಪತ್ರವು ಸಾಕಷ್ಟು ಆಶ್ರಯವಿಲ್ಲದುದರಿಂದ ಸೊರಗುತ್ತ ನಡೆದಿರುವುದುಚಿತವಾದುದಲ್ಲ. ಇದರ ಅಭಿವೃದ್ಧಿಯ ಬಗೆಗೆ ಮಹಾಸಭೆಯ ವ್ಯವಸ್ಥಾಪಕ ಸಂಘದವರು ಏನಾದರೊಂದು ಯೋಗ್ಯವಾದ ಉಪಾಯವನ್ನು ಕಂಡು ಹಿಡಿಯಬೇಕಾಗಿರುವುದಲ್ಲದೆ, ರಾಜಭಾಷೆಯಲ್ಲಿ ಒಂದು ಪತ್ರವನ್ನು ಹೊರಡಿಸುವುದಾವಶ್ಯಕವಾಗಿರುವುದು." ಎಂದು ಅಧ್ಯಕ್ಷರು ಅಭಿಪ್ರಾಯಪಟ್ಟಿರುತ್ತಾರೆ.

ಸಾರ್ವಜನಿಕ ಮಹಾಸಭೆಯು.

೨೬ ನೆಯ ಸಾರ್ವಜನಿಕ ಮಹಾಸಭೆಯು ಕಳೆದ ತಾ॥ ೨೬ ರಲ್ಲಿ ಕಲಕತ್ತಾದಲ್ಲಿ ಬಹು ವಿಶಾಲವಾದ ಮಂಟಪದಲ್ಲಿ ಲಖ್ನೋ ಪಟ್ಟಣದ ಪ್ರಸಿದ್ಧ ಬ್ಯಾರಿಸ್ಟರಾದ ಶ್ರೀಯುತ ಪಂಡಿತ ವಿಷ್ಣುನಾರಾಯಣಧರರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ತಾ॥ ೨೭ ಮತ್ತೂ ೨೮ ರಲ್ಲಿ ನಡೆದಿತು. ಈ ವೇಳೆ ಪ್ರತಿನಿಧಿಗಳೂ, ಪ್ರೇಕ್ಷಕರೂ ಸೇರಿ ೩೦೦೦ ವರೆಗಿದ್ದರು. ಇವರಲ್ಲಿ ಬೊಂಬಾಯಿನ ಸರ್ ದೋರಾಬ್ ತಾತಾ ದಂಪತಿಗಳು, ಆ॥ ಗೋಖಲೆಯವರು, ಮೆಸರ್ಸ್. ಡಿ. ಇ. ವಾಚಾರವರು, ಡಿ. ಎ ಖಾರೆಯವರು, ಆ॥ ನವಾಬ್ ಸಯದ್ ಮಹಮ್ಮದ್‌ರವರು, ಆ॥ ಮಿ॥ ಸಿ ವಿಜಯರಾಘವಾಚಾರ್ಯರವರು, ಆ॥ ಮಿ॥ ಎಸ್. ಸುಬ್ಬಾರಾವ್‌ಪಂತುಲುಯವರು, ಡಾ॥ ಟಿ ಎಮ್. ನಾಯರ್‌ರವರು, ಆ॥ ದಿ ಬಹದ್ದೂರ್ ಎಲ್. ಎ. ಗೋವಿಂದರಾಘವಯ್ಯರು, ಜಸ್ಟಿಸ್ ಮಡ್ಜರ್ಜಿ, ಮಿ॥ ಎಸ್. ಪಿ. ಸಿಂಹ, ಮಿ॥ ಪೋಲಾಕ್, ಮ॥ ರಾಮಭುಜದತ್ತರವರು, ಮತ್ತೂ ಡೇಲಿ ಗ್ರಾಫಿಕ್ ಪತ್ರಿಕೆಯ ಮಿ॥ ಕಾಕ್ಸ್‌ರವರು ದಯಮಾಡಿಸಿದ್ದರಲ್ಲದೆ, ಬಾಬು ಅಂಬಿಕಾಚರಣ ಮಜುಂದಾರ್‌ರವರು, ಪಂಡಿತ ಮದನಮೋಹನ ಮಾಳವಿಯರವರು, ಬಾಬು ಸುರೇಂದ್ರನಾಥ ಬಾನರ್ಜಿಯವರು, ಜಿ ಗೋಷಾಲ್, ಆರ್. ಎನ್. ಮುಧೋಳ್ಕರ್‌ರವರು, ಎ. ಚೌಧುರಿಯವರು ಮೊದಲಾದ ಸ್ಥಳೀಯ ಪ್ರಮುಖರು ನೆರೆದಿದ್ದರು. ಸತ್ಕಾರಕ ಸಂಘಾಧ್ಯಕ್ಷರಾದ ಆ॥ ಮ॥ ಭೂಪೇಂದ್ರನಾಥ ಬಾಸುಯವರ ಭಾಷಣವಾದಮೇಲೆ ಅಧ್ಯಕ್ಷರ ಭಾಷಣವಾಯಿತು. ಈ ಎರಡು ಭಾಷಣಗಳಲ್ಲೂ ಶ್ರೀ ರಾಜಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ದಯಮಾಡಿಸಿ ತಮ್ಮ ಕಿರೀಟಧಾರಣ ಮಹೋತ್ಸವದ ಉತ್ಕರ್ಷೆಯನ್ನು ಪ್ರದರ್ಶಿಸಿ ಭಾರತಪ್ರಜೆಗಳಿಗೆ ಪರಮಾನಂದವನ್ನುಂಟುಮಾಡಿದುದಕ್ಕಾಗಿಯೂ, ಭಾರತೀಯರ ತತ್ರಾಪಿ ಬಂಗಾಳಿ ನಿವಾಸಿಗಳ ಮನಃಕ್ಲೇಶಕ್ಕೆ ಕಾರಣವಾಗಿದ್ದ ವಂಗವಿಭಜನವನ್ನು ತಪ್ಪಿಸಿದುದಕ್ಕಾಗಿಯೂ ಭಾರತಪ್ರಜೆಗಳ ಪರವಾಗಿ ಚಕ್ರವರ್ತಿಯವರಿಗೆ ಪೂರ್ಣವಾದ ವಂದನೆಯು ಸಮರ್ಪಿಸಲ್ಪಟ್ಟಿರುವುದಲ್ಲದೆ, ನಿಯಮನಿರ್ಮಾಣ ಸಭೆಗಳಲ್ಲಿ ಪ್ರತಿನಿಧಿ ಸಭಾಸ್ತರರಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕೊಡಬೇಕು; ಸರ್ಕಾರಿಯಧಿಕಾರಿಗಳು ಭಾರತಪ್ರಜೆಗಳನ್ನು ತಮ್ಮಾಪ್ತತ್ವಕ್ಕೆ ತೆಗೆದುಕೊಂಡು ವಿಶ್ವಾಸದಿಂದಲೂ, ಸಮದೃಷ್ಟಿಯಿಂದಲೂ ಕಾಣಬೇಕು; ಸಿವಿಲ್ ಸರ್ವಿಸ್ ಪರೀಕ್ಷೆಯು ಇಂಗ್ಲೆಂಡಿನಲ್ಲೂ ಭರತಖಂಡದಲ್ಲೂ ಏಕಕಾಲದಲ್ಲಿ ನಡೆಯಿಸಲ್ಪಡಬೇಕು ಎಂದು ಮೊದಲಾಗಿ ಭರತಖಂಡದ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳು ಚೆನ್ನಾಗಿ ಪ್ರತಿಪಾದಿಸಲ್ಪಟ್ಟಿವೆ. ಬಂಗಾಳಿ ವಿಭಜನವು ತಪ್ಪಿಸಲ್ಪಡಬೇಕೆಂಬ ಬಗೆಗೆ ಸಾರ್ವಜನಿಕ ಮಹಾಸಭೆಯವರು ಮಾಡಿದ ಪ್ರಯತ್ನವು ಈಗ ಸಾರ್ಥಕವಾಯಿತು. ಮತ್ತೂ ಈ ವರ್ಷದ ಸಭೆಗೆ ಮಹಮ್ಮದೀಯ ಪ್ರತಿನಿಧಿಗಳು ಹಿಂದಣ ವರ್ಷಗಳಿಗಿಂತ ಅಧಿಕವಾಗಿ ಬಂದಿದ್ದರಲ್ಲದೆ, ಭರತಖಂಡದ ಎಲ್ಲಾ ಮಹಮ್ಮದೀಯರ ಸಭೆಯ ಉಪಾಧ್ಯಕ್ಷರಾದ ಬ್ಯಾರಿಸ್ಟರ್ ಮಿ॥ ಅಬ್ದುಲ್ ಅಜೀಜ್‌ರವರು ಬಂದಿದ್ದುದರಿಂದಲೂ, ಕಳೆದ ತಾ॥ ೨೪ ರಲ್ಲಿ ಕಲಕತ್ತಾದಲ್ಲಿ ನವಾಬ್ ಸಯ್ಯದ್ ಅಹಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಕೂಡಿದ್ದ ಮಹಮ್ಮದೀಯರ ಸಭೆಯಲ್ಲಿ ಇತಃಪರ ಸಾರ್ವಜನಿಕ ಸಂಬಂಧವಾದ ಕಾರ್ಯಗಳಲ್ಲಿ ಮಹಮ್ಮದೀಯರು ಹಿಂದೂ ಜನರಕೂಡ ವರ್ತಿಸಲು ತಕ್ಕ ಪ್ರಯತ್ನವನ್ನು ಮಾಡಬೇಕೆಂದು ಆಲೋಚಿಸಿದ್ದುದರಿಂದಲೂ, ಭಾರತಜನಾಂಗದವರೆಲ್ಲರೂ ತಂತಮ್ಮೊಳಗೆ ಪರಸ್ಪರ ಪ್ರೀತಿವಿಶ್ವಾಸದಿಂದ ನಡೆದುಕೊಳ್ಳುವುದಲ್ಲದೆ ಸರ್ಕಾರಿಯಧಿಕಾರಿಗಳ ಕೂಡವೂ ವಿಶ್ವಾಸ ಮತ್ತೂ ಸಹಾನುಭೂತಿಗಳಿಂದ ನಡೆದುಕೊಳ್ಳುವಂತೆ ಗೌರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್‌ರವರೂ ಸ್ಟೇಟ್ ಸೆಕ್ರೆಟರಿ ಲಾರ್ಡ್ ಕ್ರ್ಯೂಯವರೂ ಮಾಡಿದ ಸಾಹಸಪ್ರಯತ್ನಗಳು ಸಫಲವಾಯಿತೆಂದೂ ತೋರುತ್ತದೆ.

ತಾ॥ ೨೯ ರಲ್ಲಿ ಕೈಗಾರಿಕೆಯ ಮಹಾಸಭೆಯು ಆನರಬಲ್ ದಾದಾಭಾಯಿಯವರ ಅಧ್ಯಕ್ಷತೆಯಲ್ಲೂ, ಸಮಾಜಸುಧಾರಣಸಭೆಯು ರಾಯ್ ದೇವೇಂದ್ರಚಂದ್ರ ಘೋಷ್‌ರವರ ಅಧ್ಯಕ್ಷತೆಯಲ್ಲೂ ಕಲಕತ್ತಾ ಪಟ್ಟಣದಲ್ಲಿ ಜರುಗಿದುವು.

೬ ನೆಯ ಶ್ರೀಮದ್ವೀರಶೈವ ಮಹಾಸಭೆಯು.

ಈ ಮಹಾಸಭೆಯು ಮೊದಲೇ ನಿರ್ಧರವಾಗಿದ್ದ ಪ್ರಕಾರ ಕಳೆದ ಡಿಸೆಂಬರ್ ತಾ॥ ೨೭, ೨೮ ಮತ್ತೂ ೨೯ ರಲ್ಲಿ ಬೆಳಗಾಮಿನಲ್ಲಿ ಕೂಡಿದ್ದಿತು. ಸಭಾಧ್ಯಕ್ಷರಾದ ಹಂದಿಗನೂರ ಸಂಸ್ಥಾನದ ಮಾಮಲೆ ದೇಸಾಯಿ ಶ್ರೀಮಂತ ಬುಳ್ಳಪ್ಪಾ ಬಸವಂತರಾವ ಇವರು ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ನರಾದ ಮ॥ ಶಾಂತವೀರಪ್ಪಾ ಮೆಣಸಿನಕಾಯಿರವರ ಕೂಡ ತಾ॥ ೨೬ ರ ಬೆಳಗಿನ ರೈಲುಬಂಡಿಯಲ್ಲಿ ಬಂದರು. ಬೆಳಗಾಮಿನ ಡಿ॥ ಕಲೆಕ್ಟರ್ ರಾ॥ ಬ॥ ರುದ್ರಗೌಡ ಅರಟಾಳ ಸಿ. ಐ. ಎಸ್. ಒ., ಯವರು ಸತ್ಕಾರಕ ಸಂಘಾಧ್ಯಕ್ಷರಾದ ಶ್ರೀಮಂತ ವೀರಭದ್ರಪ್ಪಾ ಉರ್ಫ ಅಣ್ಣಾ ಸಾಹೇಬ್ ನಾಯಕಬಹದ್ದೂರ್ ದೇಸಾಯಿ ಚಚಡಿಕರರವರು, ಜನರಲ್ ಸೆಕ್ರೆಟರಿ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು ಮತ್ತೂ ಇತರ ಮೆಂಬರುಗಳು ರೈಲ್ವೆಯ ನಿಲ್ದಾಣದಲ್ಲಿ ಅಧ್ಯಕ್ಷರನ್ನಿದಿರ್ಗೊಂಡು ಪುಷ್ಪಹಾರಗುಚ್ಛಗಳನ್ನು ಒಪ್ಪಿಸಿ ಮರ್ಯಾದಿಸಿ, ದಿವ್ಯವಾದ ಎರಡು ಕುದುರೆಗಳ ರಥದಲ್ಲಿ ಕುಳ್ಳಿರಿಸಿ ವಾದ್ಯವಿಶೇಷದೊಡನೆ ಊರಿನ ಮುಖ್ಯವೀಧಿಗಳಲ್ಲಿ ಉತ್ಸವಪೂರ್ವಕವಾಗಿ ಕರೆದುಕೊಂಡು ಬಂದು ಊರಿಂದ ಹೊರಗೆ ೩ ಮೈಲಿಯ ದೂರದಲ್ಲಿ ರಚಿಸಲ್ಪಟ್ಟಿದ್ದ ಸಭಾಮಂಟಪದ ಸಮೀಪದಲ್ಲಿ ಏರ್ಪಡಿಸಲ್ಪಟ್ಟಿದ್ದ ಡೇರಾದಲ್ಲಿಳಿಸಿದರು. ಈ ಮಹಾಸಭೆಯ ಉತ್ಪಾದಕರಾದ ಶ್ರೀಮನ್ ಮಹಾನಿರಂಜನ ಗುರುವರ್ಯ ಹಾನಗಲ್ ಕುಮಾರಸ್ವಾಮಿಯವರು, ಸಭಾಪೋಷಕರಾದ ಶ್ರೀ ಬೀಳೂರ ಮಹಾಸ್ವಾಮಿಗಳು ಮೊದಲಾದ ನಿರಾಭಾರಿಗಳೂ, ಚರಪಟ್ಟಾಧ್ಯಕ್ಷರುಗಳೂ ಇದಕ್ಕೆ ಮೊದಲೇ ದಯಮಾಡಿಸಿದ್ದರು. ರೈಲ್ವೆಯ ನಿಲ್ದಾಣದಲ್ಲಿ ಪ್ರತಿನಿಧಿಗಳನ್ನಿದಿರ್ಗೊಂಡು ಮರ್ಯಾದಿಸಲು ಸಮರ್ಪಕವಾದ ಏರ್ಪಾಟುಮಾಡಲ್ಪಟ್ಟಿದ್ದಿತು. ಅಲ್ಲದೆ ಅಲಮೇಲ ಸಂಸ್ಥಾನದ ದೇಶಾಯರಾದ ಶ್ರೀಮಂತ ಶಿವಲಿಂಗರಾವ್ ದೇಶಮುಖರವರು, ಹಲಗಲಿ ಸಂಸ್ಥಾನದ ದೇಶಾಯರಾದ ಶ್ರೀಮಂತ ಶಿವಸಿದ್ಧಪ್ಪನವರು, ರಕ್ಕಸಗಿ ಸಂಸ್ಥಾನದ ದೇಸಾಯರಾದ ಶ್ರೀಮಂತ ಸಂಗಪ್ಪನವರು, ಕೊಲ್ಹಾರ ಸಂಸ್ಥಾನದ ಶ್ರೀಮಂತ ಗುರುಸಿದ್ದಪ್ಪ ದೇಸಾಯರು ಅಣ್ಣಿಗೇರಿ ಸಂಸ್ಥಾನದ ಶ್ರೀಮಂತ ಶಂಕರಪ್ಪ ದೇಸಾಯರು ಕಲ್ಲೂರು ಸಂಸ್ಥಾನದ ಶ್ರೀಮಂತ ಚಂದ್ರಪ್ಪ ದೇಸಾಯರು ಮತ್ತೆ ಕೆಲ ದೇಸಾಯರುಗಳೂ, ಬಿಜಾಪುರದ ಮಾಮಲೆದಾರ ಮ॥ ಸತ್ಯಪ್ಪ ಘೂಳಿ, ಬಿ. ಎ, ಯವರು, ಬಾಗಲಕೋಟೆ ತಾ॥ ಮಾಮಲೆದಾರರಾದ ಮ॥ ರೇವಣಸಿದ್ದಪ್ಪ, ಎಲ್.ಸಿ.ಇ. ಯವರು, ಶಿರ್ಶಿಯ ಸಬ್‌ಜಡ್ಜರಾದ ಮ॥ ವೀರಭದ್ರಪ್ಪ ಹಾಲ್ಭಾವಿ. ಬಿ. ಎ, ಎಲ್‌ಎಲ್. ಬಿ., ಯವರು, ಕೊಲ್ಲಾಪುರದ ಸಬ್‌ಜಡ್ಜರಾದ ಮ॥ ಚೌಗುಲೆ, ಬಿ ಎ., ಎಲ್‌ಎಲ್. ಬಿ., ಯವರು ಮೊದಲಾದ ಸರ್ಕಾರಿಯುದ್ಯೋಗಸ್ಥರೂ, ಈಗ ಬೊಂಬಾಯಿನಲ್ಲಿ ವಕೀಲಿತನವನ್ನು ನಡೆಯಿಸಿಕೊಂಡಿರುವ ಬೆಂಗಳೂರಿನ ಬ್ಯಾರಿಸ್ಟರ್ ಮ॥ ಜಿ. ರುದ್ರಪ್ಪನವರು, ಧಾರವಾಡದ ಪ್ಲೀಡರ್ ಶ್ರೀ ಗದಿಗಯ್ಯಾ ಹೊನ್ನಾಪುರ ಮಠ ಇವರು, ಬಿಜಾಪುರದ ವಕೀಲ್ ಮ॥ ಹಳಕಟ್ಟಿಯವರು, ಬೆಂಗಳೂರಿನ ಅಡ್ವೋಕೇಟ್ ಮ॥ ಎಚ್. ಕೆ. ವೀರಬಸವಯ್ಯನವರು ಮುಂತಾದ ವಕೀಲರುಗಳೂ, ಗದಗಿನ ಶ್ರೀಮಂತ ರಾ॥ ಸಾ॥ ಮಾನ್ವಿ ಮಲ್ಲೇಶಪ್ಪನವರು, ಧಾರವಾಡದ ಮೂಗಪ್ಪಾ ಸಿಪಡಶೆಟ್ಟಿಯವರು, ದಾವಣಗೆರೆಯ ತಿರುಕಪ್ಪನವರ ಮಗನಾದ ಶ್ರೀ ಷಡಕ್ಷರಪ್ಪನವರು, ಮೈಸೂರ ಪ್ರೊಫೆಸರ್ ಮ॥ ಬಸವಲಿಂಗಪ್ಪನವರು ಮೊದಲಾದ ದೊಡ್ಡ ಮನುಷ್ಯರುಗಳೂ, ಬೀಳಿ ಸಣ್ಣತಮ್ಮಪ್ಪ ಶಾಸ್ತ್ರಿಗಳು, ಚಿಕ್ಕೋಡಿ ತಮ್ಮಣ್ಣಪ್ಪನವರು ಮೊದಲಾದ ವಿದ್ಯಾವಂತರುಗಳೂ, ಮಹಾರಾಷ್ಟ್ರ ಮತ್ತೂ ಕರ್ನಾಟಕ ಪ್ರಾಂತಗಳಿಂದ ದಯಮಾಡಿಸಿದ್ದರು.

ಸಭಾಮಂಟಪವು.

ಬಿಜಾಪುರದ ಊರಿನೊಳಗೆ ಪ್ಲೇಗು ತಲೆದೋರಬಹುದೆಂಬ ಶಂಕೆಯಿಂದ ಊರಹೊರಗೆ ೩ ಮೈಲಿಯ ದೂರದಲ್ಲಿರುವ ಹೊಸಪೇಟೆಯ ಸಮೀಪದಲ್ಲಿ ಬಹು ವಿಸ್ತಾರವಾದ ಬೈಲಿನಪ್ರದೇಶದಲ್ಲಿ ೩-೪ ಸಾವಿರ ಜನರನ್ನು ಹಿಡಿಯುವಷ್ಟು ವಿಶಾಲವಾದ ಮಂಟಪವು ರಚಿಸಲ್ಪಟ್ಟು ಶೃಂಗರಿಸಲ್ಪಟ್ಟಿದ್ದಿತು. ಬೆಳಗಾಮಿನಲ್ಲಿ ಪ್ಲೇಗುಪದ್ರವವಿರುವುದೆಂದು ಯಾರೋ ವಿಘ್ನಸಂತೋಷಿಗಳು ಊರೂರಿಗೆ ಪ್ರಸಿದ್ಧಪಡಿಸಿದ್ದುದರಿಂದಲೂ, ಅನೇಕ ಊರುಗಳಲ್ಲಿ ಪ್ಲೇಗು ರೋಗವು ವ್ಯಾಪ್ತವಾಗಿ ಜನರು ಊರನ್ನು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡಿಕೊಂಡಿರುವುದರಿಂದಲೂ ಹಿಂದಣ ಮಹಾಸಭೆಗೆ ತತ್ರಾಪಿ ಬಾಗಲಕೋಟೆ ಮತ್ತೂ ಬಳ್ಳಾರಿಗೆ ಬಂದಿದ್ದಷ್ಟು ಪ್ರತಿನಿಧಿಗಳೂ, ಪ್ರೇಕ್ಷಕರೂ ಬರಲನುಕೂಲವಾಗಲಿಲ್ಲ. ಈ ವೇಳೆ ಒಟ್ಟು ೧,೨೦೦ ಪ್ರತಿನಿಧಿಗಳೂ, ೨೦೦೦ ಪ್ರೇಕ್ಷಕರೂ ಬಂದಿದ್ದರು. ಈ ಸಭಾಮಂಟಪದಿಂದ ಕೊಂಚದೂರದಲ್ಲಿ ಅಧ್ಯಕ್ಷರೂ, ಪ್ರತಿನಿಧಿಗಳೂ, ಪ್ರೇಕ್ಷಕರೂ ಇಳಿದುಕೊಳ್ಳಲು ಡೇರೆಗಳು ಹಾಕಲ್ಪಟ್ಟಿದ್ದುವಲ್ಲದೆ, ಶಹಪುರದಲ್ಲಿ ಕೆಲ ಬಂಗಲೆಗಳೂ ಸಹ ಸಿದ್ಧಪಡಿಸಲ್ಪಟ್ಟಿದ್ದುವು. ಇವುಗಳ ಸಮೀಪದಲ್ಲೇ ಎನ್‌ಕ್ವೈರಿ ಆಫೀಸ್ ಎಂದರೆ, ಜನರು ಬೇಕಾದ ವಿಷಯವನ್ನು ತಿಳಿದುಕೊಳ್ಳುವ ಸ್ಥಳವೇರ್ಪಡಿಸಲ್ಪಟ್ಟಿದ್ದು ಇದು ನಿರ್ವಾಹಕತೆಗೆ ಬಾಗಲಕೋಟೆಯಲ್ಲಿ ಸಭೆಯು ನೆರವಿದ್ದಾಗ್ಗೆ ಸೆಕ್ರೆಟರಿಗಳಾಗಿದ್ದು ಬಹು ಚಟುವಟಿಕೆಯಿಂದಲೂ, ಜಾಣತನದಿಂದಲೂ ಕೆಲಸವನ್ನು ನಿರ್ವಹಿಸಿದ್ದ ಶ್ರೀ ಮುರುಗಯ್ಯಜಂಗಿನ ಇವರು ನೇಮಿಸಲ್ಪಟ್ಟಿದ್ದರು. ಈ ಗುಡಾರಗಳಿಂದ ೧೦-೧೫ ಮಾರು ದೂರದಲ್ಲಿ ಬಹು ದೊಡ್ಡದಾದ ಭೋಜನಶಾಲೆಯು ನಿರ್ಮಿಸಲ್ಪಟ್ಟಿದ್ದಿತು. ಸಭೆಗೆ ಬಂದಿದ್ದ ಪ್ರತಿನಿಧಿಗಳು, ಪ್ರೇಕ್ಷಕರು ಮೊದಲಾದವರೆಲ್ಲರೂ ಒಂದೇಕಡೆ ಸ್ನಾನಶಿವಾರ್ಚನೆ ಮತ್ತೂ ಭೋಜನವನ್ನು ಮಾಡಲನುಕೂಲಿಸುವಂತೆ ಏರ್ಪಡಿಸಲ್ಪಟ್ಟಿದ್ದಿತು. ಕಬ್ಬಿನಹಾಲನ್ನು ಕಾಯಿಸುವ ದೊಡ್ಡ ಕೊಪ್ಪರಿಕೆಗಳಿಡಲ್ಪಟ್ಟು, ಅವುಗಳಲ್ಲಿ ಬಿಸಿನೀರು ಕಾಯಿಸಲ್ಪಡುತ್ತಿದ್ದಿತು ಅದರ ಸಮೀಪದಲ್ಲಿ ಪಾಕಶಾಲೆಯೂ, ಉಗ್ರಾಣವೂ ಅವುಗಳಿಂದಿತ್ತಲಾಗಿ ಶಿವಪೂಜೆಯ ಮನೆಯೂ, ಅದರ ಮುಂದೆ ವಿಶಾಲವಾದ ಭೋಜನಶಾಲೆಯೂ ರಚಿಸಲ್ಪಟ್ಟು ಆರೋಗ್ಯಶಾಸ್ತ್ರಕ್ಕನುಗುಣವಾಗಿ ಪ್ರತಿಯೊಂದು ಭಾಗವೂ ಅತ್ಯಂತ ನಿರ್ಮಲವಾಗಿ ಇಡಲ್ಪಟ್ಟಿದ್ದುವಲ್ಲದೆ, ಮೈಲಿಗೆಯೊಳಗೆ ಯಾರೊಬ್ಬರೂ ಭೋಜನಶಾಲೆಗೆ ಪ್ರವೇಶಿಸಕೂಡದೆಂದು ಕಟ್ಟಪ್ಪಣೆಯು ಮಾಡಲ್ಪಟ್ಟಿದ್ದಿತು. ಈ ಭೋಜನಶಾಲೆಯ ಹಿಂಭಾಗದಲ್ಲಿ ಒಂದು ವರ್ತುಳಾಕಾರವಾದ ಸಿಹಿನೀರುಭಾವಿಯಿಂದ ನೀರನ್ನು ಸೇದಿ ಸ್ನಾನ ಅಡಿಗೆ ಊಟಕ್ಕೊದಗಿಸಲು ೮೦-೧೦೦ ಆಳುಗಳೂ, ಅಡಿಗೆಯನ್ನು ಮಾಡಲು ೩೦-೪೦ ಜನರೂ, ಶಿವಾರ್ಚನೆಗೆ ನೀರು, ಪುಷ್ಪ, ಧೂಪಗಳನ್ನು ಅಣಿಮಾಡಿಕೊಡಲು ೮-೧೦ ಜನರೂ, ಊಟಕ್ಕೆ ಬಡಿಸಲು ೮೦-೧೦೦ ಜನರಿಗಿಂತ ಹೆಚ್ಚಾಗಿಯೂ ನಿಯಮಿಸಲ್ಪಟ್ಟಿದ್ದರು. ಭೋಜನಶಾಲೆಯು ಪ್ರತಿಯೊಂದು ಭಾಗದಲ್ಲೂ, ಬಿಡಾರಗಳ ಬಳಿಯಲ್ಲೂ ರಾತ್ರಿಯ ವೇಳೆ ವಾಷಿಂಗ್‌ಟನ್ ದೀಪಗಳೂ ಹೊತ್ತಿಸಲ್ಪಡುತ್ತಿದ್ದುವು ಹಿಂದೆ ಸಭೆಗಳು ನಡೆದ ಸ್ಥಳಗಳಲ್ಲೆಲ್ಲ ಬೇರೆಬೇರೆ ಬಿಡಾರಗಳಲ್ಲಿ ಪ್ರತ್ಯೇಕ ಭೋಜನದೇರ್ಪಾಟು ಇಡಲ್ಪಟ್ಟಿದ್ದುದರಿಂದ ಹಣವೇನೋ ಮಿಗಿಲಾಗಿ ವೆಚ್ಚವಾದರೂ ಸಮರ್ಪಕವಾಗಿ ನಡೆಯುತ್ತಿರಲಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದರು. ಈ ವೇಳೆ ಅಂತಹ ದೂರಿಗಾಸ್ಪದವಿಲ್ಲದೆ, ಪ್ರತಿಯೊಬ್ಬರ ಆಚಾರಕ್ಕೂ ಯಾವುದೊಂದು ಕೊರತೆಯೂ ಇಲ್ಲದಂತೆ ಡಿಸೆಂಬರ್ ತಾ॥ ೨೫ ರಿಂದ ತಾ॥ ೩೧ ರ ವರೆಗೂ ಭೋಜನಾದ್ಯುಪಚಾರವು ನಡೆಯಿಸಲ್ಪಟ್ಟಿದ್ದಿತು. ಭೋಜನದೇರ್ಪಾಟಿನ ಮೇಲ್ವಿಚಾರಣೆಗೆ ನಿಯಮಿಸಲ್ಪಟ್ಟಿದ್ದ ತೆಲಸಂಗದ ಹಿರೇಮಠದ ಪಟ್ಟದದೇವರು ಶ್ರೀ ರಾಚೋಟಿಸ್ವಾಮಿ ಗುರುಚೆನ್ನಬಸವಸ್ವಾಮಿಯವರು ಮೊದಲಾದ ಮತಾಭಿಮಾನಶಾಲಿಗಳು ಪರಿಚಾರಕರ ಕೂಡ ತಮ್ಮ ನಿದ್ರಾಹಾರಗಳನ್ನು ಸಹ ಲಕ್ಷಿಸದೆ ಹಗಲುರಾತ್ರಿ ಅತಿಥಿಗಳನ್ನು ಸತ್ಕರಿಸಿ ಸಂತೋಷಪಡಿಸಿದರು. ಮತಸೇವಾಧುರಂಧರರೂ, ದೂರದರ್ಶಿಗಳೂ, ನೈತಿಕ ಮತ್ತೂ ಸಾಮಾಜಿಕವಿಚಾರಗಳಲ್ಲಿ ಬಹು ಸುಧಾರಿತರೂ, ನಾಗರಿಕರೂ ಆದ ಶ್ರೀಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು ಜನರಲ್ ಸೆಕ್ರೆಟರಿಯುದ್ಯೋಗವನ್ನು ವಹಿಸಿಕೊಂಡುಬಂದಂತಹ ವಿಘ್ನಗಳನ್ನೆಲ್ಲ ಲಕ್ಷಿಸದೆ ಹಗಲೂ ರಾತ್ರಿಯೆನ್ನದೆ ಪಾಟುಪಟ್ಟುದುದರಿಂದ, ಈವರ್ಷದ ಮಹಾಸಭೆಯು ಪ್ರತಿಯೊಂದು ಏರ್ಪಾಟೂ ಭರತಖಂಡದ ಸಾರ್ವಜನಿಕ ಮಹಾಸಭೆಯು ಕಾಲದಲ್ಲಿ ನಡೆಯುವಂತೆ ಕ್ರಮವಾಗಿಯೂ, ಯಾವುದೊಂದು ದೂರಿಗೂ ಆಸ್ಪದವಿಲ್ಲದೆಯೂ, ಮುಂದೆ ಸಭೆಯನ್ನು ಕೂಡಿಸತಕ್ಕವರೆಲ್ಲರೂ ಅನುಕರಿಸುವಂತೆಯೂ ನಡೆಯಲು, ಅವಕಾಶವಾಯಿತು. ಸತ್ಕಾರಕಸಂಘದ ಅಧ್ಯಕ್ಷರಾದ ರಾ॥ ಬ॥ ರುದ್ರಗೌಡ ಅರಟಾಳರ ಅಳಿಯಂದಿರಾದ ಚಚಡಿ ದೇಸಾಯರೂ ಈ ಮಹಾಸಭೆಯನ್ನು ನಿರ್ವಿಘ್ನವಾಗಿ ಕೊನೆಗಾಣಿಸಲು ಅವಿಶ್ರಾಂತಶ್ರಮವನ್ನು ವಹಿಸಿರುತ್ತಾರೆ. ಮುಖ್ಯವಾಗಿ ಈ ಮಹಾಸಭೆಯ ಚಾಲನಕಾರ್ಯದಲ್ಲಿ ನಿರತರಾಗಿದ್ದ ಪ್ರತಿಯೊಬ್ಬರೂ ತಂತಮ್ಮಕಾರ್ಯಗಳನ್ನು ಸಮರ್ಪಕವಾಗಿ ಮಾಡಿರುತ್ತಾರೆ

ಅಧ್ಯಕ್ಷರ ಭಾಷಣವು.

ಕಳೆದ ಡಿಸೆಂಬರ್ ತಾ॥ ೨೭ ನೆಯ ಬುಧವಾರ ಮಧ್ಯಾಹ್ನ ೨ ಗಂಟೆಗೆ ಶ್ರೀಮಂತ ಬುಳ್ಳಪ್ಪಾ ಬಸವಂತರಾವ ಮಾಮಲೆ ದೇಸಾಯರು ೨ ಕುದುರೆಗಳನ್ನು ಹೂಡಿದ್ದ ರಥದಲ್ಲಿ ಕುಳಿತು ತಮ್ಮಬಿಡಾರದಿಂದ ಸಭಾಮಂಟಪದ ಬಹಿರ್ದ್ವಾರದ ಬಳಿಗೆ ದಯಮಾಡಿಸುತಲೆ ಬ್ಯಾಂಡ್ ವಾದ್ಯವಾಯಿತು. ಮತ್ತೂ ಶ್ರೀಮಂತ ಒಂಟಮೂರಿ ದೇಸಾಯರು, ರಾ॥ಬ॥ ರುದ್ರಗೌಡ ಅರಟಾಳ ಸಿ. ಐ ಎಸ್. ಒ, ಯವರು, ಸತ್ಕಾರಕ ಸಂಘಾಧ್ಯಕ್ಷರಾದ ಶ್ರೀಮಂತ ಚಚಡಿ ದೇಸಾಯರು ಮತ್ತೂ ಜನರಲ್ ಸೆಕ್ರೆಟರಿ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇಂತಿಷ್ಟು ದೊಡ್ಡಮನುಷ್ಯರುಗಳು ದ್ವಾರದ ಬಳಿ ಅಧ್ಯಕ್ಷರನ್ನು ಇದಿರ್ಗೊಂಡು ತಳಿರುತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ, ಧ್ವಜಪತಾಕೆಗಳಿಂದಲೂ ಬಹು ಸುಂದರವಾಗಲಂಕರಿಸಲ್ಪಟ್ಟಿದ್ದ ಮಂಟಪದೊಳಗೆ ಕರೆದುಕೊಂಡು ಬಂದು, ಎತ್ತರವಾದ ಜಗತಿಯಮೇಲೆ ಉಚ್ಚಾಸನದಲ್ಲಿ ಕುಳ್ಳಿರಿಸಿದರು. ಸಭಿಕರೆಲ್ಲರೂ ಜಯಘೋಷವನ್ನು ಮಾಡಿದರು. ಅಧ್ಯಕ್ಷರ ಆಸನದ ಬಲಗಡೆ ಶ್ರೀ ಒಂಟಮೂರಿ ದೇಸಾಯರೂ, ಎಡಗಡೆ ರಾ॥ ಬ॥ ಅರಟಾಳರವರೂ ಹಿಂಭಾಗದಲ್ಲಿ ಎತ್ತರವಾದ ಪಾವಟಿಗೆಗಳ ಮೇಲೆ ಏರ್ಪಡಿಸಲ್ಪಟ್ಟಿದ್ದ ಆಸನಗಳಲ್ಲಿ ಮಹಾಸಭೆಯುತ್ಪಾದಕರಾದ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳು, ಪೋಷಕರಾದ ಬೀಳೂರ ಸ್ವಾಮಿಗಳು ಮುಂತಾದ ಯತಿಕುಲವೃಂದವೂ, ಎಡಬಲಪಾರ್ಶ್ವಗಳಲ್ಲಿ ದೇಸಾಯರು, ದೇಶಪಾಂಡೆಗಳೂ, ಸರ್ಕಾರಿಯಧಿಕಾರಿಗಳೂ, ಮಹಾಸಭಾಭಿಮಾನಿಗಳೂ ಗುರುಸ್ಥಲದವರೂ ಮಂಡಿಸಿದ್ದರು. ಜಗತಿಯ ಕೆಳಗಡೆ ವಿಶಾಲವಾದ ಪ್ರದೇಶದಲ್ಲಿ ನಾನಾಭಾಗದಿಂದ ಬಂದಿದ್ದ ಪ್ರತಿನಿಧಿಗಳೂ, ಪ್ರೇಕ್ಷಕರೂ ತಂತಮ್ಮ ಆಸನಗಳಲ್ಲಿ ಕುಳಿತಿದ್ದರು. ವೃತ್ತಪತ್ರಿಕೆಗಳ ಪ್ರತಿನಿಧಿಗಳಿಗೆ ತಕ್ಕ ಸ್ಥಳಗಳೇರ್ಪಡಿಸಲ್ಪಟ್ಟಿದ್ದುವು. ಜಗತಿಯಮೇಲೆ ಅಧ್ಯಕ್ಷರ ಎಡಪಾರ್ಶ್ವದಲ್ಲಿ ೩-೪ ಗಜಗಳ ಅಂತರಬಿಟ್ಟು ಸ್ತ್ರೀಮಂಡಲಿಗೆ ಪ್ರತ್ಯೇಕವಾದ ಸ್ಥಳವೇರ್ಪಡಿಸಲ್ಪಟ್ಟಿದ್ದು, ಸುತ್ತಲೂ ಗೌರಣಿಗೆ ಬಿಡಲ್ಪಟ್ಟಿದ್ದಿತು. ೨ ಗಂಟೆಗೆ ಸರಿಯಾಗಿ ಸತ್ಕಾರಕ ಸಂಘಾಧ್ಯಕ್ಷರು ತಮ್ಮ ಭಾಷಣವನ್ನು ಅಸ್ಖಲಿತವಾಣಿಯಿಂದೋದಿದಮೇಲೆ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ನರಾದ ಮ॥ ಶಾಂತವೀರಪ್ಪಾ ಮೆಣಸಿನಕಾಯಿಯವರೆದ್ದು ಶ್ರೀಮಂತ ಹಂದಿಗನೂರ ದೇಸಾಯರ ಗುಣಕಥನವನ್ನು ಮಾಡಿ, ಸಭಿಕರೆಲ್ಲರಿಗೂ ಅವರ ಪರಿಚಯವನ್ನು ಮಾಡಿಸಿದಮೇಲೆ ಅಧ್ಯಕ್ಷತೆಯನ್ನು ವಹಿಸಬೇಕೆಂದು ಸೂಚಿಸಿದರು. ಅದನ್ನು ರಾ॥ಬ॥ ಅರಟಾಳರವರು ಪುಷ್ಟೀಕರಿಸಿದಮೇಲೆ ಸಭಿಕರ ಕರತಾಡನದ ಮೂಲಕ ಅನುಮೋದಿತವಾಯಿತು. ಅನಂತರ ಶ್ರೀಮಂತರು ಎದ್ದು ಸಭೆಯವರೆಲ್ಲರನ್ನೂ ವಂದಿಸಿ ಅಧ್ಯಕ್ಷಾಸನವನ್ನಲಂಕರಿಸಿ, ತಮಗೆ ಕೊಂಚ ದೇಹಾಲಸ್ಯವಾಗಿರುವ ಪ್ರಯುಕ್ತ ದಾವಣಗೆರೆಯ ಮ॥ರಾ॥ ಮಾಗಾನಹಳ್ಳಿ ದೊಡ್ಡಬಸಪ್ಪನವರು ತಮ್ಮ ಭಾಷಣವನ್ನೋದುತ್ತಾರೆಂದು ತಿಳುಹಿ ಕುಳಿತುಕೊಂಡರು. ತರುವಾಯ ಮ॥ ದೊಡ್ಡಬಸಪ್ಪನವರು ಸಭಿಕರೆಲ್ಲರಿಗೂ ಕೇಳುವಂತೆ ದೊಡ್ಡಧ್ವನಿಯಿಂದಲೂ, ಗಂಭೀರವಾಗಿಯೂ ಭಾಷಣವನ್ನೋದಿದರು. ಅನಂತರ ಶ್ರೀ ಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ಬಂದಿದ್ದ ಆಶೀರ್ವಾದಪತ್ರಿಕೆಯೋದಲ್ಪಟ್ಟಿತು. ಆ ವೇಳೆ ಶ್ರೀ ರಾಜ ಚಕ್ರವರ್ತಿದಂಪತಿಗಳು ಭರತಖಂಡಕ್ಕೆ ದಯಮಾಡಿಸಿ ತಮ್ಮ ಕಿರೀಟಧಾರಣಮಹೋತ್ಸವದ ಉತ್ಕರ್ಷೆಯನ್ನು ದಿಲ್ಲಿಯಲ್ಲಿ ಪ್ರಕಟಪಡಿಸಿ ಭಾರತಪ್ರಜೆಗಳೆಲ್ಲರಿಗೂ ಪರಮಾನಂದವನ್ನುಂಟುಮಾಡಿದುದಕ್ಕಾಗಿ ವೀರಶೈವಮಂಡಲಿಯವರ ಪರವಾಗಿ ಅಭಿನಂದನವನ್ನೂ, ವೀರಶೈವ ಮತಸ್ಥರಾದ ಮೈಸೂರ ಸಂಸ್ಥಾನದ ೧ ನೆಯ ಕೌನ್ಸಿಲರ್ ರಾಜಸಭಾಭೂಷಣ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿಯನ್ನೂ, ಬೆಳಗಾಮಿನ ಡಿ॥ ಕಲೆಕ್ಟರ್ ರಾ॥ ಬ॥ ರುದ್ರಗೌಡ ಅರಟಾಳರವರಿಗೆ ಸಿ. ಐ. ಎಸ್. ಒ, ಪ್ರಶಸ್ತಿಯನ್ನೂ ದಯಪಾಲಿಸಿದುದಕ್ಕಾಗಿ ಕೃತಜ್ಞತೆಯನ್ನೂ ತಂತಿಯಮೂಲಕ ಚಕ್ರವರ್ತಿಯವರಿಗೆ ಬಿನ್ನೈಸಿಕೊಂಡಮೇಲೆ, ಸೊಲ್ಲಾಪುರದ ಮಹಾಜನ ಸಭೆಯ ಡಾ॥ ದಾದಾನಾಥಜಿಯವರು, ಕೌನ್ಸಿಲರ್ ಮ॥ ಕೆ. ಪಿ ಪುಟ್ಟಣ್ಣಸೆಟ್ಟರು, ಮುನಸೀಫ್ ಮ॥ ಪಿ. ಮಹಾದೇವಯ್ಯ, ಬಿ.ಎ., ಬಿ. ಎಲ್., ರವರು, ಬೀದರಿನ ಶ್ರೀಮಂತ ಪತ್ರಿ ವೀರಪ್ಪನವರು ಮುಂತಾದ ಮಹನೀಯರು ಸಭೆಗೆ ದಯಮಾಡಿಸಲುಂಟಾದ ಅನಿವಾರ್ಯವನ್ನು ಕುರಿತು ಕೊಟ್ಟಿದ್ದ ತಂತ್ರಿಯ ವಾರ್ತೆಗಳೂ, ಬರೆದಿದ್ದ ಕಾಗದಗಳೂ ಮ॥ ಹಳಕಟ್ಟಿಯವರಿಂದ ಓದಲ್ಪಟ್ಟುವು. ಅಷ್ಟುಹೊತ್ತಿಗೆ ಸಾಯಂಕಾಲ ೪ ಗಂಟೆಯಾಗಲು ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ವಿಷಯನಿಯಾಮಕ ಸಭೆಯವರು ಅದೇ ಮಂಟಪದಲ್ಲಿ ಸೇರಿ ತಾ॥ ೨೮ ರಲ್ಲಿ ನಡೆಯಬೇಕಾದ ಭಾಷಣಗಳನ್ನು ಗೊತ್ತುಮಾಡಿದರು. ತಾ॥ ೨೮ ನೆಯ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಸಭೆಯು ಕೂಡಿತು. ಹಿಂದಣ ದಿನದಷ್ಟೇ ಜನಸಂದಣಿಯಿದ್ದಿತು. ವೀರಶೈವಮತದ ಸನಾತನತ್ವ ಮತ್ತೂ ಉದಾತ್ತವಿಚಾರ, ಪ್ರಾಥಮಿಕ ಶಿಕ್ಷಣ, ಸ್ತ್ರೀವಿದ್ಯಾಭ್ಯಾಸ, ವೀರಶೈವರಿಗಾಗಿ ಪ್ರತ್ಯೇಕವಾದ ಒಂದು ಹೈಸ್ಕೂಲನ್ನು ಸ್ಥಾಪಿಸತಕ್ಕದು, ಹಿಂದಣ ಸಭೆಗಳಲ್ಲಾದ ನಿರ್ಧಾರಗಳನ್ನು ಆಚರಣೆಗೆತರತಕ್ಕ ಉಪಾಯ, ಮೊದಲಾದ ವಿಷಯಗಳ ಮೇಲೆ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು, ಮ॥ ಚಿಕ್ಕೋಡಿ ತಮ್ಮಣ್ಣಪ್ಪನವರು, ಅಮರಾವತಿಯಲ್ಲಿ ಮರಾಠಿಭಾಷೆಯಲ್ಲಿ ಹೊರಡುವ ವೀರಶೈವ ಸಂಜೀವಿನಿಯ ಪ್ರಕಾಶಕರಾದ ಮ॥ ಮಹಾಗಾಂಕರವರು, ಮ॥ ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ. ಎಲ್., ರವರು ಮೊದಲಾದ ವಿದ್ಯಾವಂತರು ಪ್ರೌಢವಾದ ಭಾಷಣಗಳನ್ನು ಮಾಡಿದರು. ಆ ದಿವಸ ಸಾಯಂಕಾಲ ೪ ಗಂಟೆಗೆ ಸಭೆಯು ವಿಸರ್ಜಿಸಲ್ಪಟ್ಟಮೇಲೆ ವಿಷಯನಿಯಾಮಕ ಸಭೆಯವರು ಕೂಡಿ ಮಾರನೆಯ ದಿನ ನಡೆಯಬೇಕಾದ ವಿಷಯಗಳನ್ನು ಗೊತ್ತುಮಾಡಿದರು. ತಾ॥ ೨೯ ನೆಯ ಶುಕ್ರವಾರ ೧೧॥ ಗಂಟೆಗೆ ಯಥಾಪ್ರಕಾರ ಸಭೆಯು ಸೇರಿ, ಮಧ್ಯಾಹ್ನ ೨॥ ಗಂಟೆಯ ವರೆಗೂ ಭಾಷಣಗಳು ನಡೆದುವು, ೨॥ ಗಂಟೆಗೆ ಸರಿಯಾಗಿ ಪೂನಾದ ಅಗ್ರಿಕಲ್ಚರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಮ್ಯಾನ್ ಸಾಹೇಬರವರು ಮತ್ತೊಬ್ಬ ಸ್ನೇಹಿತರು, ಬೆಳಗಾಂ ಡಿವಿಜನ್ ಕಮಿಷನರ್ ದಂಪತಿಗಳು ದಯಮಾಡಿಸಿದರು. ಡಾಕ್ಟರವರೂ, ಕಮಿಷನರೂ ದಯಮಾಡಿಸಿದ ವೇಳೆಯಲ್ಲಿ ಅಧ್ಯಕ್ಷರು ಇದಿರ್ಗೊಂಡು ಕರೆದುಕೊಂಡು ಬಂದರಲ್ಲದೆ ಸಭಿಕರೆಲ್ಲರೂ ಪ್ರತ್ಯುತ್ಥಾನವನ್ನು ಮಾಡಿದರು; ವಾದ್ಯವು ಭೋರ್ಗರೆಯಿತು. ಬೆಳಗಾಮಿನ ದೊಡ್ಡ ಅಧಿಕಾರಿಗಳೂ, ವಕೀಲರುಗಳೂ, ಇತರ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಬೊಂಬಾಯಿಯ ಶಾಖೆಯ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರರವರ ಪರವಾಗಿ ಬೆಳಗಾಮಿನ ಪರಸ್ಪರ ಸಹಾಯಕ ಸಂಘಗಳ ಇನ್ಸ್‌ಪೆಕ್ಟರ್‌ರವರು ದಯಮಾಡಿಸಿ ಬಹು ಉತ್ತಮವಾದ ಭಾಷಣವನ್ನು ಆಂಗ್ಲಭಾಷೆಯಲ್ಲಿ ಮಾಡಿದರು. ತರುವಾಯ ಡಾ॥ ಮ್ಯಾನರವರು ವ್ಯವಸಾಯ ವಿಷಯದಲ್ಲಿ ಶ್ಲಾಘ್ಯತಮವಾದ ಮತ್ತೂ ಅತ್ಯಂತ ಉಪಯುಕ್ತವಾದ ಭಾಷಣವನ್ನು ಮಾಡುವಾಗ್ಗೆ "ಬೊಂಬಾಯಾಧಿಪತ್ಯಕ್ಕೆ ಸೇರಿದ ಕರ್ನಾಟಕದೇಶದ ಬೇಸಾಯಗಾರರಲ್ಲಿ ಬಹುಭಾಗದ ಜನರು ವೀರಶೈವರಾಗಿರುತ್ತಾರೆ. ಇವರ ವಿಚಾರದಲ್ಲಿ ನನಗೆ ಪೂರ್ಣಾಭಿಮಾನವಿರುತ್ತದೆ" ಎಂದು ಮೊದಲಾಗಿ ಹೇಳಿದರು. ಅನಂತರ ಅವರ ಗಳಿಗೆ ಪುಷ್ಪಹಾರಗುಚ್ಛಗಳು ಕೊಡಲ್ಪಟ್ಟು ಮಹಾಸಭೆಯು ಆಮಂತ್ರಣವನ್ನು ಅಂಗೀಕರಿಸಿ ಸಭೆಗೆ ದಯಮಾಡಿಸಿದುದಕ್ಕಾಗಿ ಮಹಾಸಭೆಯ ವಂದನೆಗಳನ್ನು ತಿಳುಹಿ, ಯಥಾಮರ್ಯಾದೆಯಿಂದ ಕಳುಹಲ್ಪಟ್ಟಮೇಲೆ ಪುನಃ ಭಾಷಣಗಳಿಗಾರಂಭವಾಯಿತು. ಶ್ರೀಮಂತ ಅಲಮೇಲ ದೇಸಾಯರು ದಾನಪದ್ಧತಿಯ ಮೇಲೂ, ಬೆಂಗಳೂರ ಗಂಧಿಗೆ ಅಂಗಡಿ ಶ್ರೀಮಂತ ಪಾಪಣ್ಣನವರ ಮಕ್ಕಳು ಸ್ತ್ರೀವಿದ್ಯಾಭ್ಯಾಸದ ಮೇಲೂ, ಮತ್ತೆ ಕೆಲರು ಬೇರೆ ಕೆಲ ವಿಷಯಗಳ ಮೇಲೂ ಭಾಷಣಗಳನ್ನು ಮಾಡಿದರು. ತರುವಾಯ ಪ್ರತಿನಿಧಿಗಳೂ, ಪ್ರೇಕ್ಷಕರೂ ಸತ್ಕಾರಕಸಂಘದವರ ಆಮಂತ್ರಣವನ್ನು ಸನ್ಮಾನಿಸಿ ತಮ್ಮ ಕೆಲಸಗಳನ್ನು ಬಿಟ್ಟು ಬಹು ದೂರದಿಂದ ದಯಮಾಡಿಸಿ ತಮ್ಮಗಳಿಗೆ ಸಂತೋಷವನ್ನುಂಟುಮಾಡಿದುದಕ್ಕಾಗಿ ಸತ್ಕಾರಕ ಸಂಘಾಧ್ಯಕ್ಷರು ಅವರೆಲ್ಲರನ್ನೂ ವಂದಿಸಿ, ಮಹಾಸಭಾಧ್ಯಕ್ಷರು ಬಹು ಶಾಂತತೆಯಿಂದಲೂ, ದಕ್ಷತೆಯಿಂದಲೂ ಮಹಾಸಭಾಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸಿದುದಕ್ಕಾಗಿ ಅವರನ್ನು ವಂದಿಸಿ, ಅಧ್ಯಕ್ಷರಾದಿಯಾಗಿ ಸರ್ವರಿಗೂ ಪುಷ್ಪಹಾರ ಗುಚ್ಛಗಳನ್ನು ಕೊಟ್ಟು, ಶ್ರೀ ಪರಮೇಶ್ವರನಾಮಸ್ಮರಣೆಯಿಂದ ಮಹಾಸಭಾಕಾರ್ಯವನ್ನು ಮುಕ್ತಾಯಗೊಳಿಸಿದರು. ಮಹಾಸಭೆಯಲ್ಲಿ ಶ್ಲಾಘ್ಯವಾದುಪನ್ಯಾಸವನ್ನು ಮಾಡಿದವರಿಗೆ ಬಹುಮಾನಿಸಲು ಮದರಾಸಿನ ಮ॥ ಗುರುಬಸವ ಕಂಪೆನಿಯವರು ಕಳುಹಿಸಿದ್ದ ಬೆಳ್ಳಿಯ ಪದಕವು ನೆರೆದಿದ್ದ ಸಭಿಕರ ಮನಸ್ಸು ಕರಗುವಂತೆ ಭಾಷಣವನ್ನು ಮಾಡಿದ ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರಿಗೆ ಅಧ್ಯಕ್ಷರಿಂದ ಬಹುಮಾನಿಸಲ್ಪಟ್ಟಿತು. ರಾ॥ ಬ॥ ರುದ್ರಗೌಡ ಅರಟಾಳರವರು ಮಹಾಸಭಾಕಾರ್ಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಿದ್ದರಲ್ಲದೆ, ಉಪನ್ಯಾಸಗಳಾಗುವ ಕಾಲದಲ್ಲಿ ತಮ್ಮ ಸ್ವಭಾವಸಿದ್ಧವಾದ ಹಾಸ್ಯವಚನಗಳಿಂದ ಸಭಿಕರೆಲ್ಲರನ್ನೂ ಆನಂದಗೊಳಿಸುತ್ತಿದ್ದರು. ಸಭೆಯಲ್ಲಾದ ನಿರ್ಧಾರಗಳನ್ನೂ, ತಾ॥ ೩೦ ರಲ್ಲಿ ಕೂಡಿದ್ದ ಮಹಿಳಾಪರಿಷತ್ತಿನ ವಿದ್ಯಮಾನವನ್ನೂ ಮುಂದಣವಾರ ಕೊಡುತ್ತೇವೆ. ಈ ಸಂವತ್ಸರ ಮಹಾಸಭಾಕಾರ್ಯವು ಅತ್ಯಂತ ಸಮರ್ಪಕವಾಗಿಯೂ, ಮುಂದೆ ನಡೆಯಿಸತಕ್ಕವರಿಗೆ ಒಳ್ಳೆಯ ಮಾರ್ಗದರ್ಶಕವಾಗಿಯೂ ನಡೆದಿತೆಂದು ತಿಳುಹಲು ನಮಗೆ ಪರಮಾನಂದವಾಗುತ್ತಿದೆ. ಮುಂದಣ ಮಹಾಸಭೆಯು ಕೊಲ್ಲಾಪುರದಲ್ಲಿ ನೆರೆಯಲು ಗೊತ್ತಾಗಿರುವುದು.

[೩ ನೆಯ ಪುಟದಿಂದ ಮುಂದೆಸಾಗಿದುದು.]

ತ್ಮಕವಾಗಿ ವಿಚಾರಿಸಿದರೆ, ಮಹಾಸಭೆಯು ತನ್ನ ಹೆಸರಿಗೆ ಸರಿಯಾಗಿ ಒಳಗಿಂದೊಳಗೆ ತನ್ನ ಕಾರ್ಯವನ್ನು ಮಾಡುತ್ತಾ ನಡೆದಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಅದು ಹೇಗೆಂಬ ಬಗ್ಗೆ ನೋಡುವ.

ಮಹಾ ಸಭೆಯು ನಮ್ಮ ಸಮಾಜವನ್ನೆಲ್ಲ ಒತ್ತಟ್ಟಿಗೆ ಕೂಡಿಸಿ ಎಲ್ಲ ಬಗೆಯಿಂದ ಅದರ ಉನ್ನತಿಯ ಬಗ್ಗೆ ವಿಚಾರ ಮಾಡಹತ್ತಿರುವುದು ಸಾಮಾನ್ಯವಾತಲ್ಲ. ತಾನು ದಡ್ಡನೆಂಬ ತಿಳುವಳಿಕೆಯುಂಟಾದರೆ ಸಾಕು. ಅರ್ಧ ಜಾಣನಾದಂತಾಯಿತೆನ್ನಬಹುದು. ಹೇಗೆಂದರೆ ದಡ್ಡನೆಂದು ತಿಳಿದುಕೊಂಡುದೇ ಒಂದು ಜಾಣತನವು ಅದರಿಂದ ನಿಜವಾದ ಜಾಣನಾಗಲಿಕ್ಕೆ ಯತ್ನಿಸಬೇಕಾಗುತ್ತದೆ. ಮತ್ತು ಆ ಯತ್ನದಲ್ಲಿ ಇಷ್ಟಫಲವು ಅಡಕವಾಗಿರುತ್ತದೆ. ಶಾಲೆ ಎಂದರೇನು? ಇದು ಗೊತ್ತಿಲ್ಲದ ಬಾಲಕನು ಸುಮ್ಮನೆ ಶಾಲೆಗೆಹೋಗಿ ಕುಳಿತು ಬಂದರೆ ಸಾಕು. ಅರ್ಧ ಕೆಲಸವಾದಂತಾಯಿತು. ಎನ್ನಲು ಅಡ್ಡಿಯಿಲ್ಲ. ಇದರಂತೆಯೇ "ನಾವು ಸದ್ಯಕ್ಕೆ ಅವನತ ಸ್ಥಿತಿಯಲ್ಲಿರುವೆವು, ಇದನ್ನು ಪರಿಸ್ಥಿತಿಗೆ ಸರಿಯಾಗಿ ಸುಧಾರಿಸಿಕೊಳ್ಳದಿದ್ದರೆ ಮತ್ತಿಷ್ಟು ಅವನತ ಸ್ಥಿತಿಗೆ ಹೋಗುವೆವು." ಎಂಬುದು ಮಹಾಸಭೆಗಳಿಂದ ಗೊತ್ತಾಗಿ ನಮ್ಮ ಉನ್ನತಿಯ ಮಾರ್ಗಗಳ ಬಗ್ಗೆ ಯೋಚಿಸಿ ಯತ್ನ ಮಾಡಹತ್ತಿರುವೆವು. ಇದು ಸಾಮಾನ್ಯವೆ? ಮಹಾಸಭೆಗಳು ನಮ್ಮ ಸಮಾಜದ ವಿಸ್ತಾರದ ಮೇರೆಯನ್ನು ನಮಗೆ ಗೊತ್ತುಮಾಡಿ ಕೊಟ್ಟುವು. ಎಂದರೆ ಮಹಾಸಭೆಯಿಂದ ನಮ್ಮ ಸಮಾಜವು ದೊಡ್ಡದಿರುವುದು (೩೫ ಲಕ್ಷ) ಎಂಬುದು ಗೊತ್ತಾಯಿತು. ಹಾಗೂ ನಮ್ಮ ಸಮಾಜದಲ್ಲಿ ಎಂತೆಂತಹ ಮಹನೀಯರು ಎಲ್ಲೆಲ್ಲಿ ಇರುವರು ಎಂಬುದು ತಿಳಿಯಿತು. ಇದರಿಂದ ಸಮಾಜಸುಧಾರಣಾಕಾರ್ಯಕ್ಕೆ ಕೆಲವು ಮಟ್ಟಿಗೆ ಅನುಕೂಲವಾಗಿರುವುದು. ತೋಟದ ಸುಧಾರಣೆಯು ಕೆಲವಂಶದಲ್ಲಿ ನೀರಿನ ವಿಪುಲತೆಯನ್ನು ಅವಲಂಬಿಸಿರುವಂತೆ ನಮ್ಮ ಸುಧಾರಣೆಯಾದರೂ ಕೆಲವಂಶದಲ್ಲಿ ಸಮಾಜದ ವಿಸ್ತಾರವನ್ನೂ ಅದರೊಳಗಣ ಉದಾರ ಮನಸ್ಸಿನ ಧನವಂತರನ್ನೂ ಅವಲಂಬಿಸಿರುತ್ತದೆ. ಎಂದರೆ ಪ್ರಸಂಗೋಪಾತ್ತವಾಗಿ ಸಮಾಜದ ಸಂಖ್ಯೆಯನ್ನು ನೋಡಿಕೊಂಡು ಏನಾದರೊಂದು ಕಾರ್ಯಮಾಡಬೇಕಾಗುತ್ತದೆ.

ಮಹಾಸಭೆಗಳು ಮುಂಬಯಿ ಮದ್ರಾಸ ಮೈಸೂರ ಹೈದರಾಬಾದ ಈ ನಾಲ್ಕು ಸರಕಾರಗಳ ಅಧೀನದಲ್ಲಿದ್ದ ನಮ್ಮ ಸಮಾಜ ಬಾಂಧವರನ್ನೆಲ್ಲ ಒತ್ತಟ್ಟಿಗೆ ಕೂಡಿಸಿ, ಪರಸ್ಪರರಲ್ಲಿ ಸಹಾನುಭೂತಿಯನ್ನೂ, ಐಕ್ಯಮತ್ಯವನ್ನೂ ಹೆಚ್ಚಿಸಿ ಹತ್ತಿರುವುವು. ಮತ್ತು ಅಲ್ಲಲ್ಲಿಗೆ ಕೆಲಕೆಲವು ವೀರಶೈವ ಪ್ರಾಂತಿಕ ಸಭೆಗಳನ್ನುಂಟುಮಾಡಿರುವುವು. ಮಹಾಸಭೆಗಳು ಗುಪ್ತವಾಗಿ ನಡೆಯಿಸಿರುವ ಮಹಾಕಾರ್ಯ ಒಂದುಂಟು. ಅದು ಯಾವುದೆಂದರೆ ನಮ್ಮ ಧರ್ಮಗ್ರಂಥಸುಧಾರಣೆ ಮತ್ತು ಅವುಗಳ ಪ್ರಸಾರಣೆ. ಹೇಗೆಂದಕೂಡಲೆ ಧರ್ಮಗ್ರಂಥಗಳು ಎಲ್ಲಿ ಸುಧಾರಣೆಯಾಗಿವೆ? ಅವುಗಳ ಪ್ರಸಾರಣೆ ಎಲ್ಲಿ ಆಗಿದೆ? ಎಂದು ಯಾರಾದರೂ ಶಂಕಿಸಬಹುದು. ಆದರೆ ಧರ್ಮವೆಂದರೇನು? ಧರ್ಮಗ್ರಂಥಗಳೆಂದರೇನು? ಇವುಗಳ ಬಗ್ಗೆ ಸಂಪೂರ್ಣವಾಗಿ ವಿಚಾರಿಸಿದರೆ ಶಂಕಿಸುವ ಕಾರಣವು ಉಳಿಲಿಕ್ಕಿಲ್ಲ "ಧಾರ್ಯತೇ ಇತಿ ಧರ್ಮಃ" ಎಂದರೆ ಐಹಿಕ ಮತ್ತು ಪಾರಮಾರ್ಥಿಕ ಇವೆರಡು ಸುಖಗಳೂ ಯಾವ ಮಾರ್ಗ ಹಿಡಿದು ಹೋದರೆ ನಮಗೆ ದೊರೆಯುವವೋ, ಆ ಮಾರ್ಗ ಹಿಡಿಯೋಣವೇ ಧರ್ಮವು. ಆ ಮಾರ್ಗವನ್ನು ಹಿಡಿಯುವುದರ ಕ್ರಮಗಳನ್ನೆಲ್ಲ ಬರೆದ ಗ್ರಂಥವೇ ಧರ್ಮಗ್ರಂಥವು. ಎಂದಬಳಿಕ ನಮ್ಮ ಮಹಾಸಭೆಗಳು ಇಹಪರಸುಖಸಾಧನ ಕ್ರಮಗಳನ್ನೆಲ್ಲ ಸಂಘದಿಂದ ಒತ್ತಟ್ಟಿಗೆ ಕೂಡಿಸಿ ಬರೆಯಿಸಿ, ಸಮಾಜದಲ್ಲಿ ಪ್ರಸಿದ್ಧಿಸಿರುವ ಮಹಾಸಭಾ ರಿಪೋರ್ಟ ಎಂಬ ಗ್ರಂಥಗಳಿಗೆ ಯಾವಗ್ರಂಥಗಳೆನ್ನಬೇಕಾಗುವುದು? ಇನ್ನು ಮೇಲೆ ತಾವೇ ವಿಚಾರಿಸಬೇಕು. ಹಿಂದಕ್ಕೆ ಒಂದುಕಾಲದಲ್ಲಿ ನಮ್ಮ ಇಡೀ ಭರತಭೂಮಿಯಲ್ಲಿ ಧರ್ಮಸಾಮ್ರಾಜ್ಯವನ್ನು ಆಳಿ, ಪರದೇಶಗಳಲ್ಲಿ ಕೂಡಾ ತನ್ನ ಪ್ರಭುತ್ವವನ್ನು ಕೂಡಿಸಿದಂತಹ ಬೌದ್ಧಧರ್ಮದ ಧರ್ಮಗ್ರಂಥಗಳೆಂದರೇನು? ತದ್ಧರ್ಮಸ್ಥಾಪಕನಾದ ಗೌತಮಮಹಾಬುದ್ಧನ ನಿರ್ವಾಣಾನಂತರ ಕೂಡಿದ ಧರ್ಮಸಭೆಗಳಲ್ಲಾದ ನಿರ್ಣಯಗಳ ಸಂಕಲನವಲ್ಲವೆ? ಆದರೆ ಈ ವಿಷಯದಲ್ಲಿ ಕೆಲವರು "ಹಾಗಾದರೆ ಈಗ ಪ್ರಚಾರದಲ್ಲಿರುವ ನಮ್ಮ ಶಿವಾಗಮ, ಸಿದ್ಧಾಂತಶಿಖಾಮಣಿ, ವೀರಶೈವ ಕೌಸ್ತುಭಾದಿ ಗ್ರಂಥಗಳು ನಮ್ಮ ಧರ್ಮಗ್ರಂಥಗಳಲ್ಲವೇನು?" ಎಂದೆನ್ನಬಹುದು. ಅಲ್ಲವೆನ್ನಲಾರೆನು. ಅಹುದು. ಅವೂ ನಮ್ಮ ಧರ್ಮಗ್ರಂಥಗಳೇಹುದು. ಅವುಗಳಲ್ಲಿಯೂ ನೀತಿ ವಿದ್ಯಾ ಮೊದಲಾದ ಐಹಿಕಸುಖಸಾಧನಗಳ ಬಗ್ಗೆಯೂ, ಪಾರಮಾರ್ಥಿಕದ ಬಗ್ಗೆಯೂ ಮಾರ್ಗಗಳು ತೋರಿಸಲ್ಪಟ್ಟವೆ. ಪರಂತು ಅವು ಸದ್ಯದ ಸ್ಥಿತಿಗೆ ಸರಿಯಾಗಿ ಸಾಧಾರಣರಿಗೂ ತಿಳಿಯುವಂತೆ ಸುಲಭವಾಗಿ ಬರೆಯಲ್ಪಟ್ಟಿಲ್ಲ. ಮಹಾಸಭೆಯ ರಿಪೋರ್ಟಗಳಲ್ಲಿ ಅವೇ ತತ್ವಗಳು ಸಾಧಾರಣರಿಗೂ ತಿಳಿಯುವಂತೆ ವಿರಳವಾಗಿ ಬರೆಯಲಿಕ್ಕೆ ಯತ್ನ ಮಾಡಲ್ಪಟ್ಟಿದೆ. ಅಂತೆಯೇ ಆ ರಿಪೋರ್ಟಗಳ ಬಗ್ಗೆ "ಧರ್ಮಗ್ರಂಥಗಳ ಸುಧಾರಣಾ" ಎಂಬ ಶಬ್ದವು ಪ್ರಯೋಗಿಸಲ್ಪಟ್ಟಿದೆ ಹೊಸದಾಗಿ 'ಧರ್ಮಗ್ರಂಥ' ವೆಂದು ಎಂದಿಲ್ಲ. ಇದಿರಲಿ ಅಜವಾನವೇನೋ ಸಾಧಾರಣ ಸಣ್ಣ ವಸ್ತುವಾಗಿ ಕಂಡುಬಂದರೂ ಅದು ಅಜೀರ್ಣಾದಿ ಮಹತ್ತಮವಾದ ದೋಷಗಳನ್ನು ಹೊಡೆದೋಡಿಸುವುದನ್ನು ನೋಡಲು ಮಹತ್ವವಾಗಿ ತೋರುವಂತೆ, ಧರ್ಮಗ್ರಂಥಗಳ ಪ್ರಸಾರ ಸಂಬಂಧವಾಗಿ ಸಣ್ಣದಾದರೂ ಅತ್ಯಂತ ಮಹತ್ವವಾಗಿ ತೋರಿಬಂದಿರುವ ಪ್ರತ್ಯಕ್ಷ ಉದಾಹರಣೆಯೊಂದನ್ನು ಇಲ್ಲಿಹೇಳಿ ಈ ವಿಷಯವನ್ನು ಮುಗಿಸುತ್ತೇನೆ. ಅದಾವುದೆಂದರೆ:—

ನಾನು ಒಂದು ದಿವಸ ನಮ್ಮಲ್ಲಿಂದ ಧಾರವಾಡಕ್ಕೆ ಹೋಗುತ್ತಿದ್ದೆನು. ಆಗ್ಗೆ ಹತ್ತುಹನ್ನೆರಡು ವರ್ಷದ ಒಬ್ಬ ಬಾಲಕನು ಬಗಲಲ್ಲಿ ಪುಸ್ತಕದ ಗಂಟನ್ನೂ ಕೈಯಲ್ಲಿ ಮೂರುನಾಲ್ಕು ಚಿಕ್ಕ ಚಿಕ್ಕ ಪುಸ್ತಕಗಳನ್ನೂ ಹಿಡಿದುಕೊಂಡು ಹುಬ್ಬಳ್ಳಿ ಸ್ಟೇಶನ್ನಿನಲ್ಲಿ ಬಂದು "ಪುಸ್ತಕ, ಪುಸ್ತಕ, ಪುಸ್ತಕ," ಎಂದು ಪಾದ್ರಿಗಳಂತೆ ತನ್ನ ಕೈಯಲ್ಲಿದ್ದ ಪುಸ್ತಕಗಳನ್ನು ಉಗಿಬಂಡಿಯಲ್ಲಿದ್ದವರಿಗೆ ತೋರಿಸಹತ್ತಿದನು ಅದನ್ನು ನೋಡಿ ನಾನು ಮನದಲ್ಲಿ ಪಾದ್ರಿಗಳು "ತಮ್ಮ ಧರ್ಮಗ್ರಂಥಗಳನ್ನು ಅರ್ಥಾತ್ ಧರ್ಮವನ್ನು ಹಬ್ಬಿಸುವುದರಲ್ಲಿ ಎಷ್ಟು ಸಾಹಸಿಗಳು" ಎಂದೆನ್ನ ಹತ್ತಿದೆನು. ಮತ್ತು ಆತನಲ್ಲಿದ್ದ ಪುಸ್ತಗಗಳಲ್ಲಿ ವಿಚಾರವೇನೇನೋ ನೋಡೋಣವೆಂದು ಆ ಪುಸ್ತಕಗಳನ್ನು ತೆಗೆದುಕೊಂಡು ನೋಡುತ್ತೇನೆ! ಅವೆಲ್ಲ ಪುಸ್ತಕಗಳು ನಮ್ಮ ವೀರಶೈವ ಧರ್ಮತತ್ವದವೇ! ಅವು ಯಾವುವೆಂದರೆ ವಾಗದ್ವೈತಖಂಡನ, ಸ್ತ್ರೀಗೀತ, ಬೀಗಿತೀಹಾಡು. ಇವುಗಳನ್ನು ನೋಡಿ ಇದೆಲ್ಲ ಪ್ರೇರಣೆಯು ನಮ್ಮ ಮಹಾಸಭೆಗಳದಲ್ಲದೇ ಮತ್ತೊಂದರದಲ್ಲವೆನ್ನುತ್ತ ಆನಂದಭರಿತನಾದೆನು. ಇವೆಲ್ಲ ಸಂಗತಿಗಳನ್ನು ನೋಡಲು ಮಹಾಸಭೆಗಳಿಂದ ನಮ್ಮ ಸಮಾಜದಲ್ಲಿ ಒಟ್ಟಿನಮೇಲೆ ಖಂಡಿತವಾಗಿ ಒಂದು ತರದ ಜಾಗರೂಕತೆಯು ಹುಟ್ಟಿರುವುದೆಂದು ಖಂಡಿತವಾಗಿ ತಮ್ಮೆಲ್ಲರಿಗೆ ಅರಿಕೆಮಾಡಿಕೊಳ್ಳುತ್ತೇನೆ. ಇವುಗಳಲ್ಲದೆ ಇನ್ನೂ ಎಷ್ಟೋ ಆನುಷಂಗಿಕ ಪ್ರಯೋಜನಗಳು ಮಹಾಸಭೆಗಳಿಂದ ಆಗಿರುವುವು. ಅವುಗಳನ್ನೆಲ್ಲ ವಿಸ್ತಾರಭಯದಿಂದ ಇಲ್ಲಿ ಹೇಳುವುದಿಲ್ಲ. ಸಾರಾಂಶ, ಮೂರ್ಛೆಯಿಂದ ಮೈಮರೆದು ನಿಶ್ಚೇಷ್ಟಿತನಾಗಿ ಬಿದ್ದವನು ತುಸವಾದರೂ ಮಿಸುಕಹತ್ತಿ ಕಣ್ದೆರೆದರೆ ಅದನ್ನು ಅಷ್ಟರಮಟ್ಟಿಗೆ ಲಾಭದಲ್ಲಿ ಹಿಡಿಯದೆ ಮತ್ತಾವುದರಲ್ಲಿ ಹಿಡಿಯಬೇಕು? ಬತ್ತುತ್ತಿದ್ದ ಗಿಡವು ಚಿಗುರಹತ್ತಿದರೆ ಆನಂದವಲ್ಲವೆ? ಬಹುದಿವಸ ಮೂಲೆಗೆಬಿದ್ದು ಜಂಗೇರಿದ ಖಡ್ಗವು ಒಂದೆರಡುತಿಕ್ಕುವಿಕೆಯಿಂದ ಚೆನ್ನಾಗಿ ಹೊಳೆವು ಹರಿತುಗಳುಳ್ಳುದಾಗಿ ತತ್ಕಾಲ ತೋರದಿದ್ದರೂ, ಅಷ್ಟರಮಟ್ಟಿಗೆ ಅದರಲ್ಲಿ ಕಂಡುಬರುತ್ತಿರುವ ಸಣ್ಣಸಣ್ಣ ಕೆಲವು ಬಿಳಿಯ ಚುಕ್ಕಿಗಳಿಂದಲೇ ಅದು ಮುಂದೆ ಹೊಳೆವು ಹರಿತುಳ್ಳುದಾಗುವ ಮಾರ್ಗದಲ್ಲಿರುವುದೆನ್ನಲಿಕ್ಕೆ ಸಂಶಯವೇನಾದರೂ ಬರುವುದೋ? ಇಲ್ಲ. ಮಹಾಸಭಾಫಲದ ಬಗ್ಗೆ ಆತುರಮನಸ್ಕರಾದ ನಮ್ಮ ಬಾಂಧವರಿಗೆ ಕಟ್ಟಕಡೆಗೆ ಸ್ವಲ್ಪದರಲ್ಲಿ ಶೃತಗೊಳಿಸುವುದೇನೆಂದರೆ— ಇನ್ನೂ ಬಿತ್ತುವ ಕೆಲಸವು ನಡೆದಿರುವಾಗಲೇ 'ಬೆಳಸಿ, ಬೆಳಸಿ, ಬೆಳಸಿ,' ಎಂದು ಬಡಬಡಿಸಬಾರದು. ಆಗ್ರಾದ ತಾಜಮಹಲಿನಂತಹ ಭವ್ಯಮಂದಿರದ ತಳಹದಿಯ ಕೆಲಸ ನಡೆದಿರುವಾಗಲೇ ಅದರ ನೆಳಲ ಸುಖವನ್ನು ಬಯಸಬಾರದು. ನಮ್ಮ ಮಹಾಸಭೆಯ ಉದ್ದೇಶವು ಸಂಪೂರ್ಣ ನೆರವೇರಲಿಕ್ಕೆ ಇನ್ನೂ ಎಷ್ಟೋ ಮಹಾಸಭೆಗಳು ಆಸ್ಥಾಪೂರ್ವಕವಾಗಿ ನಡೆಯುವುದು ಅವಶ್ಯವಾಗಿ ಬೇಕೆಂಬದೇ ಮೇಲಣ ದೃಷ್ಟಾಂತಗಳ ತಾತ್ಪರ್ಯವಿರುವುದು. 'ರೋಮಪಟ್ಟಣವು ಒಂದೇ ದಿವಸದಲ್ಲಿ ಕಟ್ಟಲ್ಪಡಲಿಲ್ಲ.' ಈ ಇಂಗ್ಲಿಷ ಗಾದೆಯ ತತ್ವವಾದರೂ ಇದೇ ಇರುವುದು. ಇನ್ನು ಮಹಾಸಭೆಗಳ ನಿರ್ಣಯಗಳಂತೆ ಮೆಲ್ಲನೆ ಬಳಕೆಯಲ್ಲಿ ಬರಹತ್ತಿರುವ ಸಂಗತಿಗಳನ್ನು ನೋಡಿದರೆ:— (೧) ಮರಾಠಿ ಮತ್ತು ಕನ್ನಡ ಚಿಕ್ಕಚಿಕ್ಕ ಮತಗ್ರಂಥಗಳ ಉದಯವಾಗಹತ್ತಿರುವುದು. (೨) ಲಗ್ನ ಮುಂತಾದ ಧರ್ಮಕಾರ್ಯಗಳನ್ನು ಗುರುಸ್ಥಲದ ಮಠಾಧಿಕಾರಿಗಳಿಂದಲೇ ಮಾಡಿಸುವ ಯೋಚನೆಯು ಹುಟ್ಟಿ ಅದರಂತೆ ಕಾರ್ಯವು ನಡೆಯ ಹತ್ತಿರುವುದು. (೩) ವೀರಶೈವ ಖೈದಿಗಳನ್ನು ಇಷ್ಟಲಿಂಗಸಹಿತ ಕಾರಾಗೃಹದಲ್ಲಿ ಇರಿಸುವುದನ್ನು ನಮ್ಮ ಮುಂಬಯಿ ಸರ್ಕಾರದವರು ಗೊತ್ತುಪಡಿಸಿರುವರು. (೪) ಮೈಸೂರ ಲಿಂಗಾಯತ ಎಜ್ಯುಕೇಶನಲ್ ಫಂಡು ಸ್ಥಾಪಿತವಾಗಿರುವುದು ಇಷ್ಟೇ ಅಲ್ಲ; ಅಲ್ಲಿ ಬೀರೂರ ಸುಪ್ರಸಿದ್ಧ ಸಾವಕಾರರಾದ ಶ್ರೀಮಂತ ಪತ್ರಿ ವೀರಪ್ಪನವರು ೩೦,೦೦೦ ರೂ. ಗಳನ್ನು ಕೊಟ್ಟು ನಮ್ಮ ವೀರಶೈವ ವಿದ್ಯಾರ್ಥಿಗಳಿಗೆ ಸಂಸ್ಕೃತವಿದ್ಯಾವರ್ಧನಕ್ಕೆ ಸಹಾಯಮಾಡಿರುವರು. ಇದಕ್ಕಾಗಿ ಈ ಮಹನೀಯರು ನಮ್ಮೆಲ್ಲರ ಸ್ತುತಿಗೆ ಪಾತ್ರರಾಗಿದ್ದಾರೆ. (೫) ಶಿವಯೋಗಮಂದಿರದ ಸ್ಥಾಪನೆ. (೬) ಜಿಲ್ಲಾ, ತಾಲ್ಲೂಕ, ಗ್ರಾಮಕಮಿಟಿಗಳು ಕೆಲಕೆಲವು ಕಡೆಗೆ ತಲೆದೋರಹತ್ತಿವೆ. ಈ ವಿಷಯದಲ್ಲಿ ನಮ್ಮ ವಿಜಾಪೂರ ಬಾಂಧವರು ಎಲ್ಲರಿಗಿಂತ ಮುಂದೆ ಇದ್ದು ನಮ್ಮೆಲ್ಲರ ಸ್ತುತಿಗೆ ಹೆಚ್ಚು ಪಾತ್ರರಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸತಕ್ಕದು. (೭) ಪಟ್ಟಚರಮೂರ್ತಿ ವಿರಕ್ತಾದಿ ಪೂಜ್ಯಸ್ಥಾನಗಳಿಗೆ ಯೋಗ್ಯ ಅಧಿಕಾರಿಗಳನ್ನು ನೇಮಿಸುವುದು ಯೋಗ್ಯವು ಎಂಬುದು ಜನರಿಗೆ ತಿಳಿಯ ಹತ್ತಿ ಅದರಂತೆ ಯತ್ನವೂ ನಡೆದಿರುವುದು. ಕಳೆದು ಹೋದ ಶ್ರಾವಣ ಮಾಸದಲ್ಲಿ ನಮ್ಮ ಬ್ಯಾಡಗಿ ಬಾಂಧವರು ತಮ್ಮಲ್ಲಿಯ ಶ್ರೀ ಮುಪ್ಪಿನ ಸ್ವಾಮಿಗಳವರ ವಿರಕ್ತಮಠಕ್ಕೆ ಬಹು ವಿಚಾರಪೂರ್ವಕವಾಗಿ ಅಧಿಕಾರಿಗಳನ್ನು ಆರಿಸಿ ನಿಯಮಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಇಷ್ಟರಹೊರತು ಶಿಕ್ಷಣ, ವ್ಯಾಪಾರ, ಒಕ್ಕಲತನ, ಕೈಗಾರಿಕೆ, ಈ ಮುಂತಾದುವುಗಳ ಬಗ್ಗೆ ಸಭಾನಿರ್ಣಯಗಳಂತೆ ಸಮಾಧಾನಕರವಾಗಿ ವ್ಯವಸ್ಥೆ ನಡೆದಿರುವುದು ಕಂಡು ಬರುವುದಿಲ್ಲ ಇದಕ್ಕೆ ನಾವು ನಮ್ಮ ಧರ್ಮದ ಮುಖ್ಯ ತತ್ವವನ್ನು ಮರೆತಿರುವ ತಪ್ಪೇ ಕಾರಣವು ಎನ್ನಲಿಕ್ಕೆ ಸಂದೇಹವಿಲ್ಲ. ಈ ವಿಷಯದಲ್ಲಿ ನಾವು ಮರೆತಿರುವ ನಮ್ಮ ಧರ್ಮತತ್ವವು ಯಾವುದೆಂದರೆ ಕ್ರಿಯಾಶಕ್ತಿ ತತ್ವವು. ಮಹಾ ಸಭೆಗಳ ಬಗ್ಗೆ ಶಂಕಿಸುವವರು ಮೊದಲು ಅವುಗಳ ನಿರ್ಣಯಗಳನ್ನು ಪ್ರಚಾರದಲ್ಲಿ ತರಲಿಕ್ಕೆ ಕ್ರಿಯಾಶಕ್ತಿಯನ್ನು ಎಂದರೆ ಯತ್ನವನ್ನು ತೋರಿಸಿದ ಪ್ರತ್ಯೇಕ ವೀರಶೈವ ಗೃಹಸ್ಥನು ಮತ್ತು ವೈದಿಕನು, ನಮ್ಮ ಸಭಾ ನಿರ್ಣಯಗಳು ಬಳಕೆಯಲ್ಲಿ ಬಾರದಿರುವುದರ ತಪ್ಪಿಗೆ ಪಾಲುಗಾರನಾಗುವನೆಂದು ಭಾವಿಸುವೆನು. ಕೂಡಲು ಮೊದಲುಮಾಡಿ ಪ್ರತ್ಯೇಕ ಅಂಗವು ಶರೀರ ರಕ್ಷಣೆಯ ವಿಷಯದಲ್ಲಿ ಹೇಗೆ ನಿರತವಾಗಿರುವುದೋ ಹಾಗೆ ನಮ್ಮ ಸಭಾಕಾರ್ಯದಲ್ಲಿ ಚಿಕ್ಕವರು ಮೊದಲುಮಾಡಿ ಸಕಲರೂ ಯಥಾಶಕ್ತಿ ಯತ್ನಶೀಲರಾಗತಕ್ಕದು ಅತ್ಯಾವಶ್ಯವು. ಸಣ್ಣವರೂ ದೊಡ್ಡವರೂ ಕೂಡ ನಡುಗಟ್ಟಿನಿಂತು ತೇರನ್ನು ಒಮ್ಮನದಿಂದ ಎಳೆಯಹತ್ತಿದರೆ ಅದು ಸುಖರೂಪವಾಗಿ ಅದರ ಇಷ್ಟೋದ್ದೇಶವು ನೆರವೇರುವುದು. ತೇರುಸಾಗುವ ಕಾರ್ಯವೇನೋ ಮಹತ್ವವಾದುದು! ಪುಣ್ಯಫಲದಾಯಕವಾದುದು! ತತ್ಫಲಾಪೇಕ್ಷೆ ಸರ್ವರಿಗೂ ಇರುವುದು! ಪರಂತು ರಥವನ್ನು ಎಳೆಯಲಿಕ್ಕೆ ಯತ್ನಿಸುವವರು ಬಹು ಸ್ವಲ್ಪಮಂದಿ ದೂರ ನಿಂತು ಟೊಂಕದಮೇಲೆ ಕೈ ಇಟ್ಟುಕೊಂಡು "ತೇರು ಸಾಗಲೊಲ್ಲದು" "ತೇರುಸಾಗಲೊಲ್ಲದು" ಎಂದು ಎನ್ನುವವರು ಹಿಂಡಿಗೆಹಿಂಡು! ಆದರೆ ಆ ತೇರು ಸಾಗುವುದೂ ಅದರಿಂದ ಇಷ್ಟಫಲಪ್ರಾಪ್ತವಾಗುವುದು ಹೇಗೆ? ಈ ರೀತಿಯಿಂದ ತೇರು ಗೊತ್ತುಮಾಡಿದಸ್ಥಳಕ್ಕೆ ಹೋಗಿ ಮುಟ್ಟುವುದು ಒತ್ತಟ್ಟಿಗುಳಿದು, ಮೊದಲು ತೇರನ್ನು ಎಳೆಯಲು ಪ್ರಯತ್ನಮಾಡುತ್ತಿದ್ದ ಅಲ್ಪಸ್ವಲ್ಪ ಮಂದಿಕೂಡ ಹಗ್ಗವನ್ನು ಜಗ್ಗಿಜಗ್ಗಿನೋಡಿ ಬೇಸತ್ತು ಕಟ್ಟಕಡೆಗೆ ಅವರೂ ಕೈ ಬಿಟ್ಟು ನಡುವಿಗೆಸುತ್ತಿದ್ದ ಧೋತರವನ್ನು ಬಿಚ್ಚುತ್ತ ಖಿನ್ನವದನರಾಗಿ ಮನೆಯಹಾದಿಯನ್ನು ಹಿಡಿದು ಇತರರ ಹಾಸ್ಯಕ್ಕೆ ಗುರಿಯಾಗಬೇಕಾಗುವುದು. ಸಾರಾಂಶ ಈ ವಿಷಯವಾಗಿ 'ಸ್ವೇಸ್ವೇ ಕರ್ಮಣ್ಯಭಿರತಃ' ಎಂಬ ಗೀತಾ ತತ್ವಾರ್ಥವನ್ನು ಎಂದರೆ ನಮ್ಮ ವೀರಶೈವ ಧರ್ಮದ ಮುಖ್ಯ ತತ್ವಗಳಲ್ಲಿ ಒಂದಾದ ಕ್ರಿಯಾಶಕ್ತಿ ತತ್ವವನ್ನು ನಾವು ಮರೆಯಬಾರದು. ಇದಕ್ಕಾಗಿ ಜಿಲ್ಲಾ ಕಮಿಟಿ, ತಾಲೂಕ ಕಮಿಟಿ, ಗ್ರಾಮ ಕಮಿಟಿಗಳು ಸರ್ವತ್ರ ಸ್ಥಾಪಿತವಾಗಿ ಒಳ್ಳೆಯ ಉತ್ಸಾಹಪೂರ್ವಕವಾಗಿ ಭರದಿಂದ ಅವುಗಳಲ್ಲಿ ಕಾರ್ಯವು ಸಾಗಬೇಕು. ಎಂದು ಬಿನ್ನವಿಸಿ, ಸಭೆಯು ಎರಡನೆಯದಾದ ವೀರಶೈವ ಮತದ ಮೂಲತತ್ವಗಳೂ ಅದರ ಉದಾತ್ತ ವಿಚಾರಗಳೂ ಈ ವಿಷಯದ ಕಡೆಗೆ ಹೊರಳಿ, ಮೊದಲು ನಮ್ಮ ಧರ್ಮಕ್ಕೆ ಬಿದ್ದಿರುವ ಹೆಸರುಗಳ ಮೇಲಿಂದ ಅದರ ತತ್ವಾರ್ಥವೇನಿರುವುದೆಂಬುದನ್ನು ನೋಡುವ.

ವೀರಶೈವ ಧರ್ಮದ ಮೂಲತತ್ವಗಳು.

ನಮ್ಮ ಮತಕ್ಕೆ ವೀರಶೈವ ಮತವೆಂದೂ ಶಕ್ತಿವಿಶಿಷ್ಟಾದ್ವೈತಮತವೆಂದೂ ರೂಢಿಯುಂಟು. ವ್ಯವಹಾರದೊಳಗಣ ಯಾವ ಕೋಟಿಯೊಳಗಣ ಯಾವ ವಸ್ತುವಿಗೇ ಆಗಲಿ ಏನಾದರೊಂದು ತತ್ವವಿಲ್ಲದೆ ಸುಮ್ಮಸುಮ್ಮನೆ ಹೆಸರು ಬಿದ್ದಿರುವುದಿಲ್ಲ. ಮತ್ತು ಬೀಳುವುದೂ ಇಲ್ಲ. ಅದರ ಗುಣಕ್ರಿಯಾದಿಗಳಿಂದಲೇ ಅದಕ್ಕೆ ಹೆಸರು ಬಿದ್ದುದು ಕಂಡು ಬರುವುದು. ಇದರಮೇಲಿಂದ ಯಾವದೊಂದು ಧರ್ಮಕ್ಕೆ ಆಗಲಿ, ವಸ್ತುವಿಗೆ ಆಗಲಿ ಬಿದ್ದಿರುವ ಹೆಸರುಗಳು, ಅವುಗಳ ಗುಣಕ್ರಿಯಾದಿಗಳ ತತ್ವಗಳು ಏನು? ಎಂಬುದನ್ನು, ಒಟ್ಟಿನ ಮೇಲೆ ತಿಳಿದುಕೊಳ್ಳುವ ಕೆಲಸದಲ್ಲಿ ನಮಗೆ ಸಹಾಯಕಾರಿಯಾಗಿರುವುವು. ಮೃತ್ಯುಂಜಯನೆಂಬ ಹೆಸರಿನಿಂದ ಮೃತ್ಯುವನ್ನು ಗೆದ್ದಾತನೆಂದೂ, ಶಿವನೆಂಬ ಹೆಸರಿನಿಂದ ಸರ್ವತ್ರ ಮಂಗಳಮಯನೆಂದೂ ಹೀಗೆ ನಮ್ಮ ಶಿವನಿಗೆ ಬಿದ್ದಿರುವ ಅನಂತ ಅನ್ವರ್ಥಕನಾಮಗಳಿಂದ ಆತನ ಸ್ವರೂಪವು ತಿಳಿಯುವುದು. ರತ್ನಾಕರವೆಂಬ ಹೆಸರಿನಿಂದ ಸಮುದ್ರದಲ್ಲಿ ರತ್ನಗಳಿರುವುವೆಂಬದು ಗೊತ್ತಾಗುವುದು. ಇದರಂತೆಯೇ ನಮ್ಮ ಮತಾಭಿಧಾನದ ವ್ಯುತ್ಪತ್ತಿಯನ್ನು ನೋಡಲು ನಮ್ಮ ಧರ್ಮತತ್ವವೇನೆಂಬುದು ಸಹಜವಾಗಿ ತಿಳಿಯುವಂತಿದೆ. (ಸಶೇಷ.)

ಪತ್ರವ್ಯವಹಾರವು.

ಮ|| ರಾ|| ರಾ|| ರಾವಬಹದ್ದೂರ ರುದ್ರಗೌಡ ಚೆನ್ನವೀರಗೌಡ ಅರಟಾಳ, ಸಿ. ಐ ಎಲ್. ಓ, ಡಿ. ಡಿ. ಕಲೇಕ್ಟರ, ಜಿಲ್ಲಾ ಬೆಳಗಾವ, ಮಹಾಶಯರ ಸನ್ನಿಧಿಗೆ—. ಜಮಖಂಡಿ ಸಂಸ್ಥಾನಕ್ಕೆ ಒಳಪಟ್ಟ ಬನಹಟ್ಟಿಗ್ರಾಮದ ವೀರಶೈವಜನಾಂಗದ ಸಾರ್ವಜನಿಕಸಭೆಯ ಅಧ್ಯಕ್ಷನು ಸವಿನಯರಾಗಿ ತಮಗೆ ಬಿನ್ನವಿಸುವದೇನೆಂದರೆ— ಗ್ರೇಟಬ್ರಿಟನ್ ಮತ್ತು ಐರ್ಲಂಡಗಳ ಅರಸರೂ ಮತ್ತು ನಮ್ಮ ಹಿಂದುದೇಶದ ಸಾರ್ವಭೌಮ ಪ್ರಭುಗಳೂ ಆದ ಶ್ರೀಮತ್ ಪಂಚಮ ಜಾರ್ಜ ಮಹಾರಾಜರು, ಸನ್ ೧೯೧೧ ಇಸವಿ ದಿಸೆಂಬರ ತಿಂಗಳ ೧೨ ನೆಯ ತಾರೀಖಿನದಿವಸ, ದಿಲ್ಲೀರಾಜಧಾನಿಯಲ್ಲಿ ರಾಜ್ಯಾರೋಹಣದ ಸಮಾರಂಭದ ಕಾಲಕ್ಕೆ, ತಮಗೆ ಸಿ ಐ. ಎಲ್. ಓ. ಎಂಬ ಪದವಿಯನ್ನು ದಯಪಾಲಿಸಿದ ಸಂಗತಿಯನ್ನು ಕೇಳಿ, ಈ ಗ್ರಾಮದ ಸಕಲವೀರಶೈವರಿಗೆ ಅತ್ಯಾನಂದವಾಗಿ, ತಾ|| ೧೭ ದಿಸೆಂಬರ ೧೯೧೧ ರವಿವಾರದಿವಸ ದೊಡ್ಡ ಸಭೆಯನ್ನು ನೆರೆಯಿಸಿ. ಸರ್ವಜನರಿಗಾದ ಮಹದಾನಂದವನ್ನು ಕೆಳಗೆ ಬರೆದ ರೀತಿಯಿಂದ ತಮಗೆ ಅರಿಕೆಮಾಡಬೇಕೆಂದು, ಎಲ್ಲ ಜನರೂ ನನಗೆ ಆಜ್ಞಾಪಿಸಿದ ಮೂಲಕವಾಗಿ ಈ ಮಾನದ ಪ್ರರೂಪೀ ಲೇಖವನ್ನು ತಮ್ಮ ಕಡೆಗೆ ಕಳುಹಿಸಿದ್ದೇನೆ. ದಯಮಾಡಿ ಇದನ್ನು ಅಂಗೀಕರಿಸುವಿರೆಂದು ನಂಬುತ್ತೇನೆ, ತಾವು ವಿದ್ಯಾವಂತರಾಗಿ ಸರಕಾರೀ ಕೆಲಸದಲ್ಲಿ ಸೇರಿದಂದಿನಿಂದ ಇಂದಿನವರೆಗೆ ರಾಜಸೇವೆಯನ್ನು ಬಹು ವಿಶ್ವಾಸದಿಂದಲೂ, ದಕ್ಷತೆಯಿಂದಲೂ, ರಾಜನಿಷ್ಠೆಯಿಂದಲೂ, ಪ್ರಜೆಗಳಿಗೆ ಸುಖವಾಗುವಂತೆಯೂ, ನಿಷ್ಪಕ್ಷಪಾತವಾಗಿಯೂ, ಮಾಡಿ ದುಷ್ಟರ ಶಾಸನವನ್ನೂ ಶಿಷ್ಟರ ಪರಿಪಾಲನವನ್ನೂ ಚೆನ್ನಾಗಿ ಮಾಡಿದುದರಿಂದ ಸಾರ್ವಭೌಮಪ್ರಭುಗಳು ಸಂತುಷ್ಟರಾಗಿ ತಮಗೆ ಸಿ. ಐ. ಎಲ್. ಓ. ಎಂಬ ಪದವಿಯನ್ನು ರಾಜ್ಯಾರೋಹಣಸಮಾರಂಭದ ಶುಭಸಮಯದಲ್ಲಿ ಕೊಟ್ಟ ಮೂಲಕವಾಗಿ ನಮ್ಮೆಲ್ಲರಿಗೆ ಅಪಾರಾನಂದವಾಗಿರುವುದಲ್ಲದೆ "ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ" ಎಂಬ ಸುಭಾಷಿತೋಕ್ತಿಯಲ್ಲಿ ಹೇಳಲ್ಪಟ್ಟಂತೆ ದುರ್ಲಭವಾದುದಾದರೂ ರಾಜಪ್ರಜೆಗಳಿಬ್ಬರಿಂದಲೂ ಸುಲಭವಾಗಿ ತಾವು ಅಹುದೆನ್ನಿಸಿಕೊಂಡು ವೀರಶೈವರು ವಿಶ್ವಾಸಕ್ಕೆ ಪಾತ್ರರೂ, ಕಾರ್ಯದಕ್ಷರೂ, ರಾಜನಿಷ್ಠರೂ, ಎಂಬುದನ್ನು ಸರಕಾರದವರಿಗೆ ಮನಗಾಣಿಸಿಕೊಟ್ಟು ವೀರಶೈವರ ನಿಜವಾದ ಯೋಗ್ಯತೆಯನ್ನು ಜಗತ್ತಿನಲ್ಲಿ ಪ್ರಕಾಶಗೊಳಿಸಿದುದಕ್ಕಾಗಿ ನಾವೆಲ್ಲರೂ ತಮ್ಮನ್ನು ಕುರಿತು ಕೃತಜ್ಞತಾಬುದ್ಧಿಯುಳ್ಳವರಾಗಿರುವೆವು. ಮತ್ತು ಸರಕಾರದವರು ತಮ್ಮ ಬುದ್ಧಿ, ಗುಣ, ಕರ್ತೃತ್ವಶಕ್ತಿಗಳನ್ನು ಚೆನ್ನಾಗಿ ಪರೀಕ್ಷಿಸಿ ಗುಣಗ್ರಾಹಕತೆಯಿಂದ ತಮಗೆ ದಕ್ಷಿಣಭಾಗದಲ್ಲಿ ಅಪೂರ್ವವಾದ ಮೇಲಿಕಂಡ ಪದವಿಯನ್ನು ಕೊಟ್ಟ ಕಾರಣದಿಂದ ಸರಕಾರದವರು ತಮ್ಮನ್ನಷ್ಟೇ ಗೌರವಿಸದೆ, ನಮ್ಮ ವೀರಶೈವ ಸಮಾಜವನ್ನೇ ಗೌರವಿಸಿದರೆಂದು ನಾವು ಮನಃಪೂರ್ವಕವಾಗಿ ನಂಬಿ, ಈ ಉಪಕಾರದ ದೆಸೆಯಿಂದ ನಾವು ಸಾರ್ವಭೌಮಪ್ರಭುಗಳನ್ನು ಬಹಳವಾಗಿ ಅಭಿನಂದಿಸುತ್ತೇವೆ. ಮತ್ತು ಇದರಂತೆಯೇ ಸಾರ್ವಭೌಮಸರಕಾರದ ಲಕ್ಷ್ಯವು ನಮ್ಮ ವೀರಶೈವಸಮಾಜದ ಕಡೆಗೆ ಇರಲೆಂದು ಬೇಡಿಕೊಳ್ಳುತ್ತೇವೆ ಮೇಲೆ ಬರದಂತೆ ತಾವು ರಾಜಪ್ರಜೆಗಳ ಸೇವೆಯನ್ನು ಅಪ್ರತಿಮವಾಗಿ ಮಾಡಿ ಕೃತಕೃತ್ಯರಾಗಿರುವುದರ ಹೊರತು, ತಮ್ಮ ವೀರಶೈವ ಬಂಧುಗಳ ನಿಜವಾದ ಏಳಿಗೆಯನ್ನು ಮಾಡುವ ಸಲುವಾಗಿ, ಸಜ್ಞಾನರಾದಂದಿನಿಂದ ಇಂದಿನವರೆಗೆ ಹಗಲಿರುಳು ಅಶ್ರಾಂತವಾಗಿ ಪರಿಶ್ರಮಗಳನ್ನು ಮಾಡುತ್ತಿರುವ ಸಂಗತಿಯು ಎಲ್ಲರಿಗೂ ವಿದಿತವಾಗಿರುವುದು. ಕೆಲವು ಶತಮಾನಗಳಿಂದ ನಮ್ಮ ವೀರಶೈವಸಮಾಜವು ವಿದ್ಯೆಗೆ ಪರಾಙ್ಮುಖವಾಗಿ, ಎಲ್ಲ ಬಗೆಯಿಂದ ಹೀನಸ್ಥಿತಿಗೆ ಬಂದಿರುವುದನ್ನು ನೋಡಿ, ಇದರಿಂದ ಮುಕ್ತವಾಗಲಿಕ್ಕೆ ವಿದ್ಯಾರ್ಜನವೇ ಮುಖ್ಯ ಸಾಧನವೆಂದು ತಿಳಿದು, ಕೈಲಾಸವಾಸಿ ರಾವಬಹದ್ದೂರ ಗುರುಸಿದ್ಧಪ್ಪ ಅಂಕಾಲಗಂಬಿ, ಗತ ಡಿ|| ಡೆಪ್ಯುಟಿಕಲೇಕ್ಟರ, ಜಿಲ್ಲಾ ಬೆಳಗಾವ, ಇವರ ಜೊತೆಯಲ್ಲಿಯೂ, ಆ ಮಹನೀಯರು ಅಂತ್ಯರಾದ ಮೇಲೆ ಇಂದಿನತನಕವೂ "ಲಿಂಗಾಯಿತ ಎಜ್ಯುಕೇಶನ ಫಂಡು" ನಾಮಕ ಧನನಿಧಿಯನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ತಾವು ಮಾಡಿದ ಸಾಹಸಕ್ಕೂ ಶ್ರಮಕ್ಕೂ ಎಣೆಯೇ ಇಲ್ಲವು. ಈ ಧನನಿಧಿಯನ್ನು ತಾವು ಉಭಯರು ನಿರ್ಮಾಣ ಮಾಡಿದುದರಿಂದಲೇ ಸಾಂಪ್ರತದಲ್ಲಿ ಸ್ವಲ್ಪ ಜನರಾದರೂ ಸುಶಿಕ್ಷಿತರು ನಮ್ಮಲ್ಲಿ ಕಾಣುತ್ತಿರುವರು. ಈ ಧನನಿಧಿಯು ಉತ್ಪನ್ನವಾಗದಿದ್ದರೆ, ನಮ್ಮ ಸಮಾಜದಲ್ಲಿ ಉಚ್ಚಪ್ರತಿಯ ಶಿಕ್ಷಣದ ಗಾಳಿಯು ಸಹ ಸುಳಿಯುತ್ತಿದ್ದಿಲ್ಲ; ಮತ್ತು ನಾವು ಭವಿಷ್ಯತ್ಕಾಲದಲ್ಲಿ ಕೂಡ ವಿದ್ಯಾವಿಹೀನರಾಗಿ, ಅಪ್ರಸಿದ್ಧರೀತಿಯಿಂದ ಬಾಳಿ, ದುಸ್ಥಿತಿಯಲ್ಲಿಯೇ ಹೊರಳುತ್ತ ಬೀಳುತ್ತಿದ್ದೆವು. ಈ ಭಾವಿ ಗಂಡಾಂತರವು ತಮ್ಮ ಶ್ರಮದಿಂದ ನಿವಾರಿಸಲ್ಪಟ್ಟು ಮೇಲ್ಕಂಡ ಧನನಿಧಿಯ ಯೋಗದಿಂದ ಅದು ಉಂಟಾಗುವ ಸಂಭವವೇ ಉಳಿದಿರುವುದಿಲ್ಲ. ಇದರಿಂದ ತಮ್ಮ ದೊಡ್ಡ ಉಪಕಾರವು ನಮ್ಮ ಸಮಾಜದ ಮೇಲೆ ಆಗಿರುವುದು. ತಮ್ಮಿರ್ವರ ಉಪಕಾರಗಳನ್ನು ಯಾವವಿಧದಿಂದಲೂ ತೀರಿಸಲಿಕ್ಕೆ ನಾವು ಅಸಮರ್ಥರಿದ್ದೇವೆ. ಮತ್ತು ಈ ಧನನಿಧಿಯ ಯೋಗದಿಂದ ನಮ್ಮ ಸಮಾಜದಲ್ಲಿ ನಿಶ್ಚಯವಾಗಿ ವಿದ್ಯಾಭಿವೃದ್ಧಿಯುಂಟಾಗಿ, ಮನುಷ್ಯ ಸಾಧ್ಯವಾದ ಎಲ್ಲ ಮಹತ್ವದ ಕೆಲಸಗಳನ್ನು ಮಾಡುವ ಯೋಗ್ಯತೆಯ ನಾಗರಿಕರು ಹೇರಳವಾಗಿ ಹುಟ್ಟುವ ಸಂಭವವಿರುವುದರಿಂದ ಎಂತಹ ಮಹತ್ತ್ವವಾದ ರಾಷ್ಟ್ರಕಾರ್ಯವನ್ನು ತಾವು ಮಾಡಿರುವಿರೆಂದು ತಿಳಿದು ಬಣ್ಣಿಸಲಿಕ್ಕೆ ಅಸಾಧ್ಯವೇಸರಿ. ಈ ಪ್ರಕಾರವಾಗಿ ತಾವು ರಾಜಪ್ರಜೆಗಳ, ಧರ್ಮದ, ಸಮಾಜದ, ಮತ್ತು ರಾಷ್ಟ್ರದ ಅಮೂಲ್ಯಸೇವೆಯನ್ನು ಮಾಡುತ್ತಿರುವ ವಿಷಯವಾಗಿ ತಮ್ಮ ಉಪಕಾರಗಳನ್ನು ನಾವು ಬಹಳವಾಗಿ ತಿಳಿದು, ತಮಗೆ ದೀರ್ಘಾಯುರಾರೋಗ್ಯಸಂತತಿ ಸಂಪದಧಿಕಾರಾದಿಗಳು ಯಥೇಷ್ಟವಾಗಿ ಪ್ರಾಪ್ತವಾಗಲೆಂದೂ ಮತ್ತು ತಮ್ಮ ಕೈಯಿಂದ ಇನ್ನೂ ಅನೇಕ ಸತ್ಕಾರ್ಯಗಳು ಜರಗಲೆಂದೂ ಶ್ರೀಮತ್ಪರಮೇಶ್ವರನನ್ನು ಕುರಿತು ಪ್ರಾರ್ಥಿಸಿ ಪ್ರಕೃತಲೇಖವನ್ನು ಮುಗಿಸುತ್ತೇನೆ

ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ ಸಭೆಯ ಅಧ್ಯಕ್ಷ.

ಜಾಹೀರ ನೋಟೀಸು.

ಕೆಳಗೆ ಸಹಿಮಾಡುವರಕಡೆಂದಾ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ. ತಾಳಿಕೋಟಿಯಲ್ಲಿ ಲಿಂಗಪ್ಪಾ ಮೊಟಗಿ ಅಂತಾ ಹೆಸರತಿ ಅಂಗಡಿ ನಡಿತಿತ್ತು. ಸದರಿ ಅಂಗಡಿ ನಾವು ಆಶ್ವಿನ ವ|| ೩೦ ಶಕೆ ೧೮೩೩ ದಿವಸ ಬಂದು ಮಾಡಿರುತ್ತೇವೆ. ಸದರಿ ಅಂಗಡಿ ವಹಿವಾಟದಾರ ಪರಸುರಾಮ ಸೋಮನಾಥ ಹಂಚಾಟಿ ಇವನು ವಹಿವಾಟಮಾಡುತ್ತಿದ್ದನು. ಆದರೆ ಇನ್ನು ಮುಂದೆ ಸದರಿ ಇಸಮಿನದು ಈ ಅಂಗಡಿಗೆ ಯೇನು ಸಂಬಂಧವುಳಿದಿರುವದಿಲ್ಲಾ. ಅವನು ಮಾಡಿದ ವೆವಹಾರಕ್ಕೆ ನಮ್ಮ ಜಬಾಬದಾರಿ ಯಾವತರೆದು ಯಿರೋದಿಲ್ಲಾ ಸದರಿ ಅಂಗಡಿಗೆ ಬರತಕ್ಕದ್ದು ಕೊಡತಕ್ಕದಕ್ಕೆ ನಾವೇ ಮಾಲಕರು ವ|| ನಮ್ಮ ಜಬಾಬದಾರಿಯಿರುತ್ತದೆ. ಈ ಅಂಗಡಿಕೆಳಗೆ ಸರಾಫಿವೆವಹಾರಿ ಇಟ್ಟಿದ್ದು ಅದಕ್ಕೆ ದೇವೇಂದ್ರಪ್ಪಾ ಅಗಸಾಲರ ಇವನು ವಹಿವಾಟಮಾಡುತ್ತಿದ್ದಾ ಅವನು ಅದದು ಹಾಕಿರುತ್ತೇವೆ. ಇನ್ನ ಮುಂದೆ ಆ ವುಭಯತ್ತರ ಕೂಡ ವೆವಹಾರ ಮಾಡಿದರೆ ಆ ವೆವಹಾರಕ್ಕೆ ನಮ್ಮದು ಜಬಾಬದಾರಿ ಯೇನು ಇರೋದಿಲ್ಲಾ ತಿಳಿಯಬೇಕು.

ತಾ|| ೧೨-೧೨-೧೧

ಸಹಿ ಘಟಬಸಪ್ಪಾ ಲಿಂಗಪ್ಪಾ ಮೊಟಗಿ ದ|| ಕು.

ನೋಟೀಸ.

4

ಇಂಡಿಯಾದೇಶದ ವ್ಯಾಪಾರದರ್ಪಣ.

ಎಂಬ ಪುಸ್ತಕವು ವ್ಯಾಪಾರಿಕರಿಗೆ ಇಂಡಿಯಾದೇಶದ ಮತ್ತು ದ್ವೀಪಾಂತರಗಳ ಅನೇಕ ವಿಷಯಗಳನ್ನು ಅತಿ ಸುಲಭರೀತಿಯಿಂದ ತಿಳಿಯುವಂತೆ ಪ್ರಿಂಟ್ಮಾಡಿಸಲ್ಪಡುತ್ತೆ. ಈ ತರಹಾ ಪುಸ್ತಕ ಈಗ್ಗೆ ಯಾವದೂ ಪ್ರಿಂಟಾಗಿಲ್ಲ. ಸದ್ಯಕ್ಕೆ ಅನೇಕ ಸ್ಥಳಗಳಲ್ಲಿನ ೫ ಸಹಸ್ರ ಮೇಲ್ಪಟ್ಟ ದೊಡ್ಡವ್ಯಾಪಾರೀಕರ ಹೆಸರುಗಳು, ಆಸ್ಥಳಗಳ ಉತ್ಪತ್ತಿ, ರಪ್ತು, ಆಮದರಪ್ತು, ಅಳತೆ, ತೂಕ ಮೊದಲಾದ ಅನೇಕ ವಿಷಯಗಳು ಸಂಗ್ರಹವಾಗಿರುತ್ತದೆ. ಕನ್ನಡದಲ್ಲಿ ಮೊದಲು ಪ್ರಚುರ ಪಡಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟದ್ದರಿಂದ ಕನ್ನಡದಲ್ಲಿ ಪ್ರಿಂಟ್ಮಾಡ್ಸಿನಂತರ ಇಂಗ್ಲೀಷಿನಲ್ಲಿಯೂ ರಚಿಸಲ್ಪಡುತ್ತೆ. ಈ ಪುಸ್ತಕದಲ್ಲಿ ೧ ಪೇಜು, ಅರ್ಧ ಪೇಜು, ಕಾಲ್ಪೇಜಿನಲ್ಲಿ ಈ ರೀತಿ ತಂತಮ್ಮ ಹೆಸರನ್ನು ವ್ಯಾಪಾರವಿಷಯವನ್ನು ವಿಶಾಲವಾಗಿ ನಮೂದಿಸಬೇಕೆಂಬುವವರು ಅದರ ಚಾರ್ಜಿನ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಪ್ರತಿಯೊಂದು ಪುಸ್ತಕದ ೧ ನೇ ಪೇಜಿನಲ್ಲಿ ಒಂದೊಂದು ಕೂಪನ್ ನಂಬರುಯನಿಸಿ ಯಿಡಲ್ಪಡತ್ತೆ. ೧೦೦೦ ಪ್ರತಿ ಖರ್ಚಾದಕೂಡಲೆ ೫೦ ರೂ. ನ್ನ ಲಾಟರಿಹಾಕಿ ೧, ೨, ೩ ನೆಯವರಿಗೆ ರೂ. ೨೫, ೧೫, ೧೦ ರಂತೆ ವಿನಿಯೋಗಿಸುತ್ತೆ, ಪುಸ್ತಕ ಕ್ರಯ ಅಡ್ವಾನ್ಸಾಗಿ ೧೯೧೨ ನೇ ಫೆಬ್ರುವರಿ ತಾ|| ೧೫ ರ ವಳಗೆ ಕಳುಹಿಸುವವರಿಗೆ ರೂ. ೨-೦-೦ ಪ್ರಿಂಟಾದನಂತರ ರೂ. ೩-೦-೦ ವರ್ತಕರಾದವರು ತಮ್ಮ ಸ್ಥಳದಲ್ಲಿನ ಉತ್ಪತ್ತಿ ರಪ್ತು ಆಮದರಪ್ತು ಅಳತೆ ತೂಕ ಮೊದಲಾದ ವಿಷಯಗಳನ್ನು ತಮ್ಮ ಹೆಸರನ್ನು ಪುಸ್ತಕದಲ್ಲಿ ನಮೂದಿಸಬೇಕೆಂಬುವ ಸಂಗತಿಯನ್ನೂ ತೀವ್ರವಾಗಿ ದಯವಿಟ್ಟು ಕಳುಹಿಸುವದು. ವ್ಯಾಪಾರಭಾಗದಲ್ಲಿ ಹೆಚ್ಚಿನ ಮಾಹಿತಿಯನ್ನು ನೂತನ ವಿಷಯಗಳನ್ನೂ ತಿಳಿಸುವವರಿಗೆ ಪೂರ್ಣ ಕೃತಜ್ಞನಾಗಿರುವೆ.

ಜಿ. ಕೆ. ರಪ್ಪಾರ್ಯ

೫. ಕುಂಬಾರಪೇಟೆ,

ಬೆಂಗಳೂರು.

☞ ಪ್ರಸಿದ್ಧವಾದ ಮೈಸೂರುಸ್ಟಾರ್ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ.

ಲೇಡೀಸ್ ಸಿಲ್ವರ್‌ವಾಚ್.

ಇದರ ಅನುಕೂಲನತ್ತೆ ಯಾವಕ್ಕೊ ಇಲ್ಲ.

ನಿಮ್ಮ ಇಚ್ಛೆ ಬಂದಂತೆ, ಕೈಯಲ್ಲಿಯೂ ಕಟ್ಟಿಕೊಳ್ಳಬಹುದು; ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಬೆಳ್ಳಿ ಮುಚ್ಚಳವುಳ್ಳದ್ದು. ಇದರ ಹಿಂಭಾಗದ ಮುಚ್ಚಳದ ಮೇಲೆ ಸುಂದರವಾದ ಹುವ್ವಿನ ಕೆಲಸದಿಂದ ತಯಾರಿಸಿರುತ್ತೆ. ಬಹುಸುಂದರವಾದದ್ದು. ಅನೇಕವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಖಾತ್ರಿಯಾದದ್ದು. 5 ವರುಷಗಳ ಗ್ಯಾರೆಂಟಿ ಈಗಿನ ಕ್ರಯ. ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಅವಶ್ಯ ಬೇಕಾಗುವ ಚರ್ಮದಪಟ್ಟಿ, ಎಂದಿಗೂ ಕೆಡ್ಪಾಗದ ವಾಚ್‌ಸರಪಣಿ, ಮತ್ತು ವಾಚ್ ಪೆಟ್ಟಿಗೆ ಸಮೇತ 4—15—0 ಮಾತ್ರ

ಇಮಿಟೇಷನ್ ನಗಗಳು!

ಬಹು ಸುಲಭಕ್ರಯ!

ಈ ನಗಗಳು ವಜ್ರದ ನಗಗಳಂತೆ ಥಳಥಳಿಸುತ್ತೆ. ನೋಡುವವರು ಆಶ್ಚರ್ಯಪಡುವರು. ಬೆಂಡೋಲೆ ಜೊತೆಗೆ 1—8—0. ಮೂಗಬಟ್ಟು 1 ಕ್ಕೆ 6 ಆಣೆ. ಬುಲಾಕು 1 ಕ್ಕೆ 12 ಆಣೆ. ಪಾಟ್ಲಾಕು ಕಡುಕು ಜೊತೆಗೆ 1—4—0, ಸರ್ಣಕಾರದ ಉಂಗುರ 12 ಆಣೆ, ಪ್ರಿಜಂಟೇಷನ್ ವಾಚ್ 2—4—0. ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ;—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ,
ಮದರಾಸು.

16 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ದಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮಿಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಅಜೀರ್ಣ ರೋಗಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೪ "ಅಂಜೀರಾರ್ಕಮಧು ಕಂಪನಿ"
ಕಾಳಬಾದೇವಿ [illegible] (ಮುಂಬಯಿ)

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

30

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

27 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

19

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ—ಬೆಲೆ ವಿ.ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

37

ಲೋಕಾಮಂಜರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟಲ್ಲಿ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೨೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗರಡಿಯಾರದ ಬಳಿ ಮೈಸೂರು.

71

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸಹಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ನೆಯ ಇಸವಿ ಜನವರಿ ತಾ|| ೧ ರಿಂದ ೧೯೧೨ನೆಯ ಜನವರಿ ತಾ|| ೭ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೩ನೆಯ ವಿರೋಧಿಕೃತು ಸಂವತ್ಸರದ ಪುಷ್ಯ ಶು|| ದ್ವಾದಶಿಯಿಂದ ಪುಷ್ಯ ಬ|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
1	¹ಸೋ	ದ್ವಾ	47-50	ಕೃತ್ತಿ	41-40	17
2	²ಮಂಗ	ತ್ರ	42-48	ರೋ	38-26	18
3	³ ಬುಧ	ಚ	37-10	ಮೃ	34-24	19
4	⁴ಗುರು	ಪೌ	32 28	ಆರಿ	30-24	20
5	ಶುಕ್ರ	ಪಾ	25-30	ಪುನ	26-16	21
6	⁵ ಶನಿ	ಬಿ	19-42	ಪುಷ್ಯ	22-10	22
7	⁶ಭಾನು	ತ	14-10	ಆಶ್ಲೇ	18-50	23

(1) ವೈಷ್ಣವಾನಾಂ ಮುಕ್ಕೋಟೀಕಾದಶಿ. (2) ಪ್ರದೋಷಃ, ಮೂಗೂರು ಹೊಡೆ. (3) ಪಾತಾಭಾಷಿಃ; ಅಂಧಕಾಸುರಸಂಹಾರ, ಶಾಕಂಬರೀವ್ರತಂ. (4) ಆರಿದ್ರಾದರ್ಶನೋತ್ಸವಃ, ಬನಶಂಕರೀವ್ರತಂ, ಮೂಗೂರು ಭಂಡಿಪುತ್ಸವ ಸ್ತ್ರೀ ಸ್ತ್ರೀಯೋಗಃ, ಕೊಠಾರೋತ್ಸವ ಪ್ರಾರಂಭಃ. (5) ಸಾವಿತ್ರಿಗೌರೀವ್ರತಂ, ಮೂಗೂರು ತ್ರಿಪುರಸುಂದರೀ ರಥ

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜ್ಯೋತಿಃ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವೆಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಕಾನುಕಂಪೋಜ್ವಲಂ ॥

ಕಣ್ಣಾ ಮುಂದೆ ಇಟ್ಟುಕೊಂಡು
ತಾಂಬರದೊಳಗೆಣ ಒಂದೊಂ
ದರೆ ಏನೂ ಬೆಲೆಗಾಣುವುದಿಲ್ಲ.
ಸಾರೂ ಮಾತನಾಡಿಸುವುದಿಲ್ಲ.
ಡಿಸಲ್ಪಟ್ಟು ಒಂದೇ ಪೀಠಾಂ
ಲ್ಲಿ ಮಹತ್ವ ಬಂದು ಸೂರಾ
ದನ್ನು ನಾವು ಪ್ರತಿದಿನವೂ
ರದ ಬೆಲೆ, ಅದರೊಳಗೆ
ಇರುವಷ್ಟೇ ಹೆಚ್ಚು
ಒಡಕೆಂಗಳಲ್ಲಿ
ಉದಾತ್ತ
ಧರ್ಮ
ಸತೆ

ಸಂಪುಟ ೨೪] ಮೈಸೂರ್ ಸ್ಟಾರ್ ಸೆ|| ೧೯೧೨ ನೆಯ ಇಸವಿ ಜನವರಿ ತಾರೀಖು ೮ ನೆಯ ಸೋಮವಾರ. [ಸಂಚಿಕೆ ೨

44 ಊದಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರುಂಕ್ಕೆ ೧೨-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೭-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

28 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

---

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

31

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

21

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧-೩-೦. ವೀರಶೈವಮತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.– ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿಃ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ

ಸ್ತುತಿ ಮುಕ್ತಾವಳಿ.– ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ. –೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ. ಮೈಸೂರು.

17

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕೆಟ್ಟಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಿಮಗೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೨—೦ ರೂ. ೩. ಬಾ, ೩—೧೪—೦ ರೂ. ಒಮ್ಮೆಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನೆದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ದಾನವಾಡ ಮತ್ತು ನಿಪಾಣಿ. (ಇಂಡಿಯಾ)

ನೋಟೀಸ್.

5

ಇಂಡಿಯಾದೇಶದ ವ್ಯಾಪಾರದರ್ಪಣ.

ಎಂಬ ಪುಸ್ತಕವು ವ್ಯಾಪಾರಿಕರಿಗೆ ಇಂಡಿಯಾದೇಶದ ಮತ್ತು ದ್ವೀಪಾಂತರಗಳ ಅನೇಕ ವಿಷಯಗಳನ್ನು ಅತಿ ಸುಲಭರೀತಿಯಿಂದ ತಿಳಿಯುವಂತೆ ಪ್ರಿಂಟ್‌ಮಾಡಿಸಲ್ಪಡುತ್ತೆ. ಈ ತರಹಾ ಪುಸ್ತಕ ಈಗ್ಗೆ ಯಾವದೂ ಪ್ರಿಂಟಾಗಿಲ್ಲ. ಸದ್ಯಕ್ಕೆ ಅನೇಕ ಸ್ಥಳಗಳಲ್ಲಿನ ೫ ಸಹಸ್ರ ಮೇಲ್ಪಟ್ಟ ದೊಡ್ಡವ್ಯಾಪಾರೀಕರ ಹೆಸರುಗಳು, ಆಸ್ಥಳಗಳ ಉತ್ಪತ್ತಿ, ರಫ್ತು, ಆಮದರಫ್ತು, ಅಳತೆ, ತೂಕ ಮೊದಲಾದ ಅನೇಕ ವಿಷಯಗಳು ಸಂಗ್ರಹವಾಗಿರುತ್ತದೆ. ಕನ್ನಡದಲ್ಲಿ ಮೊದಲು ಪ್ರಚುರ ಪಡಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟದ್ದರಿಂದ ಕನ್ನಡದಲ್ಲಿ ಪ್ರಿಂಟ್‌ಮಾಡ್ಸಿನಂತರ ಇಂಗ್ಲೀಷಿನಲ್ಲಿಯೂ ರಚಿಸಲ್ಪಡುತ್ತೆ. ಈ ಪುಸ್ತಕದಲ್ಲಿ ೧ ಪೇಜು, ಅರ್ಧ ಪೇಜು, ಕಾಲ್‌ಪೇಜಿನಲ್ಲಿ ಈ ರೀತಿ ತಂತಮ್ಮ ಹೆಸರನ್ನು ವ್ಯಾಪಾರವಿಷಯವನ್ನು ವಿಶಾಲವಾಗಿ ನಮೂದಿಸಬೇಕೆಂಬುವವರು ಅದರ ಚಾರ್ಜಿನ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಪ್ರತಿಯೊಂದು ಪುಸ್ತಕದ ೧ ನೇ ಪೇಜಿನಲ್ಲಿ ಒಂದೊಂದು ಕೊಪೆ ನಂಬರುಯನಿಸಿ ಯಿಡಲ್ಪಡುತ್ತೆ. ೧೦೦೦ ಪ್ರತಿ ಖರ್ಚು ದಕೊರಲೆ ೫೦ ರೂ. ನ್ನು ಲಾಟರಿಪಾಕಿ ೧, ೨, ೩ ನೆಯ ವರಿಗೆ ರೂ. ೨೫, ೧೫, ೧೦ ರಂತೆ ವಿನಿಯೋಗಿಸುತ್ತೆ. ಪುಸ್ತಕ ಕ್ರಯ ಅಡ್ವಾನ್ಸಾಗಿ ೧೯೧೨ ನೇ ಫೆಬ್ರುವರಿ ತಾ|| ೧೫ ರ ವಳಗೆ ಕಳುಹಿಸುವವರಿಗೆ ರೂ. ೨-೦-೦ ಪ್ರಿಂಟಾದನಂತರ ರೂ. ೩-೦-೦ ವರ್ತಕರಾದವರು ತಮ್ಮ ಸ್ಥಳಗಳ ಉತ್ಪತ್ತಿ ರಫ್ತು ಅಮದರಫ್ತು ಅಳತೆ ತೂಕ ಮೊದಲಾದ ವಿಷಯಗಳನ್ನು ತಮ್ಮ ಹೆಸರನ್ನು ಪುಸ್ತಕದಲ್ಲಿ [illegible] ಬೇಕೆಂಬುವ ಸಂಗತಿಯನ್ನೂ ತೀವ್ರವಾಗಿ ದಯವಿಟ್ಟು [illegible] ಸುವದು. ವ್ಯಾಪಾರಭಾಗದಲ್ಲಿ ಹೆಚ್ಚಿನ ಪ್ರಾಪಕತ್ತಿಯನ್ನು ನೂತನ ವಿಷಯಗಳನ್ನೂ ತಿಳಿಸುವವರಿಗೆ ಪೂರ್ಣ ಕೃತಜ್ಞನಾಗಿರುವೆ.

ಜಿ. ಕೆ. [illegible]
[illegible]
ಬೆಂಗಳೂರು.

೩೦ ಕಳೆಗಳು. ಸಚಿತ್ರಂ
ಶುಕಸಪ್ತತಿ
೩೦
ಧರ್ಮ, ಕರ್ಮ, ಸಕ್ತಿ
ಶೋಭನೆ ಮುಂತಾದ ಲ್
ಜ್ಞಾನ, ಧ್ಯಾನ, ಯೋ
ಕೆನ್ನ ; (೩)
ಲೋಕಾನು
ರಿಂದ ಸವ
ಅವಕ್ಕೆ

ಮಹಾಸಭೆ ಬೆಳಗಾಮ್.

[illegible] ನ ಶ್ರೀಮಂತ ವೀರಬಸಪ್ಪ ನಾಯಕ ಇಜರ್ದಾರ ಇವರ ಭಾಷಣವು.

([illegible] ದ ಶೇಷ.)

[illegible] ಚಕ್ರವರ್ತಿ, ಶಿವಚಕ್ರವರ್ತಿ, ಮೊ [illegible] ಪುರಾಣಗಳಿಂದ ತಿಳಿಯ ಬರುತ್ತದೆ. ಅದು [illegible] ಲ್ಲಿ ಈ ಶ್ರೀಮಂತರು ಅವರಿಗಿಂತಲೂ ಮಿಗಿಲಾ [illegible] ಮಾಡಿ ಆ ದಾನಶಾಲಾ [illegible] ಮುಂದಿಳಿಯುವಲ್ಲಿ ಅಗ್ರಗಣ್ಯ [illegible] ದು ಪ್ರತ್ಯಕ್ಷ [illegible] ವು. ಇವರ ಅಭೂತಪೂರ್ವವಾದ ದಾನಮಾರ್ಗವನ್ನು ಕಂಡು ಜಗತ್ತೇ ಆಶ್ಚರ್ಯ ಪಡುವಂತಿದೆ. ಸ್ವಜಾತಿಯ ಉನ್ನತಿಗಾಗಿ ಸಂಸ್ಥಾನಕ್ಕೆ ಸಂಸ್ಥಾನವನ್ನೇ ಸಮರ್ಪಿಸಿ ೧೨ ನೆಯ ಶತಮಾನದ ಶಿವಶರಣರಂತೆ ಶಿವಲೋಕಕ್ಕೆ ತೆರಳಿದ ಶಿವಸಂಗಯ್ಯ ಶ್ರೀಮಂತರು, [illegible] ಎಂಬುದನ್ನು ನಾವು ಹೇಳಲಾರೆವು. ಈ ಶ್ರೀಮಂತರ ಅಭಾವದಿಂದ ನಮ್ಮ ವೀರಶೈವರ ರಾಷ್ಟ್ರದ ಮನೋರಥ [illegible] ಬಿದ್ದಂತಾಯಿತು. ಕರ್ನಾಟಕದಲ್ಲಿ ಈ ಶ್ರೀಮಂತ ಮಹನೀಯರು ಸಮಾಜೋನ್ನತಿಯ ಕಾರ್ಯಕ್ಕಾಗಿ ಕಂಕಣ ಬದ್ಧರಾಗಿದ್ದಂತೆ ಅತ್ಯಂತ [illegible] ಮಹಾಪುರುಷರಲ್ಲಿ ಸೊಲ್ಲಾಪುರದ ರಾ|| ಬ|| ವಾರದ ಮಲ್ಲಪ್ಪನವರು ತ್ರಿಕರಣಪೂರ್ವಕವಾಗಿ ಮತಾಭ್ಯುದಯ ಕಾರ್ಯದಲ್ಲಿ ಮಗ್ನರಾಗಿರಲು ಅವರೂ ಈ ವರ್ಷ ನಮ್ಮ ಸಮಾಜದ ದುರ್ದೈವದಿಂದ ಕೈಲಾಸವಾಸಿಯಾದರು. ಇದಲ್ಲದೆ ವೀರಶೈವರಾಷ್ಟ್ರವೆಂಬ [illegible] ಸ್ತಂಭಾಯಮಾನರಾಗಿದ್ದ ಪುಂಗನೂರು ಮಹಾರಾಜರು ಗತಿಸಿದುದರಿಂದಲೂ ಕೆಂಬಲಿಯ ಶ್ರೀಮಂತ ಅಪ್ಪಯ್ಯಾಸ್ವಾಮಿ ಸಿಂತ್ರೆಯವರೂ, ಹುಬ್ಬಳ್ಳಿಯ ಪ್ರಸಿದ್ಧ ಲೇವಕಾರರಾದ ನೀಲಿಯ ರಾಚಪ್ಪಣ್ಣನವರೂ ಮೃತರಾದುದರಿಂದಲೂ, ಸವದತ್ತಿಯ ಕಲ್ಮಠಾಧೀಶ್ವರರಾದ ಶ್ರೀ ಬಿದರಿಯ ಸ್ವಾಮಿಗಳವರು ಲಿಂಗೈಕ್ಯರಾದುದರಿಂದಲೂ ವೀರಶೈವ ಸಮಾಜಕ್ಕೆ ಬಹಳ ಹಾನಿಯುಂಟಾಯಿತು. ಇಂತಹ ಮುಖ್ಯಮುಖ್ಯ ವಿಭೂತಿಗಳನ್ನು ಕಳೆದುಕೊಂಡು ಅನರ್ಥ ಪರಂಪರೆಗಳನ್ನು ಅನುಭೋಗಿಸಿದರೂ ಕೂಡ ಅಧೈರ್ಯಪಡದೆ ಸ್ವಧರ್ಮೋನ್ನತಿಯ ಕಡೆಗೆ ಲಕ್ಷ್ಯವಿಟ್ಟು ವರ್ತಿಸುವುದೇ ಪ್ರಸ್ತುತ ಕಾಲದಲ್ಲಿ ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದು.

ಧಾರವಾಡ, ಬೆಂಗಳೂರ, ಸೊಲ್ಲಾಪುರ, ಬಳ್ಳಾರಿ ಮುಂತಾದ ಪಟ್ಟಣಗಳ ಜತೆಯಲ್ಲಿ ಬೆಳಗಾವಿ ಶಹರವು ಸಮಾವೇಶವಾಗುತ್ತಿದ್ದರೂ, ಆ ಸ್ಥಳಗಳಲ್ಲಿರುವಂತೆ ಇಲ್ಲಿ ವೀರಶೈವರ ಯಾವ ಸಂಸ್ಥೆಯೂ ಇಲ್ಲದಿರುವದಕ್ಕೆ ವಿಷಾದಿಸಬೇಕಾಗಿದೆ. ಇದಕ್ಕೆ ಇತರ ಪಟ್ಟಣಗಳಂತಹ ಧರ್ಮ ಜಾಗರೂಕತೆಯು ನಮ್ಮಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ. ಆದರೆ ಮೊನ್ನೆ ಮೊನ್ನೆ ಬೆಳಗಾವ, ಶಹಾಪೂರ, ಚಚಡಿ, ಗೋಕಾಕ, ಯಾದವಾಡ, ಅಥಣಿ, ರಬಕವಿ, ಬೈಲಹೊಂಗಲ, ಸಂಪಗಾವ, ಅರಳೀಕಟ್ಟಿ, ನೇಸರಗಿ ಮುಂತಾದ ಗ್ರಾಮಗಳ ವೀರಶೈವರ ಉದಾರಾಶ್ರಯದಿಂದ ಶಹಾಪುರದಲ್ಲಿ ವೀರಶೈವರ ಒಂದು ಬೋರ್ಡಿಂಗು ಸ್ಥಾಪನೆಯಾದ ಸಂಗತಿಯನ್ನು ತಿಳಿಸಲಿಕ್ಕೆ ಬಹು ಆನಂದವಾಗುತ್ತದೆ. ಈ ಬೋರ್ಡಿಂಗಿಗೆ ಶಹಾಪುರದ ಚನ್ನಬಸಪ್ಪಾ ಕೋಂ ವೀರಪ್ಪಾ ಬನ್ನೂರ ಎಂಬ ಒಬ್ಬ ಬಡ ಹೆಣ್ಣುಮಗಳೂ, ಶ್ರೀಮತಿ ಭಾಗೀರಥೀಬಾಯಿ [illegible] ಪಕೀರಪ್ಪ ಹಳಕಟ್ಟಿ ಮುಕ್ಕಾಮ ವಿಜಾಪುರ ಎಂಬ ಸ್ತ್ರೀಮಣಿಯೂ ಪ್ರತ್ಯೇಕವಾಗಿ ೫೦೦ ರೂಪಾಯಿಗಳ ಸಹಾಯ ಮಾಡಿರುತ್ತಾರೆ. ಇದು ಎಲ್ಲರಿಗೂ ಆಶ್ಚರ್ಯಕರವಾದ ಸಂತೋಷದ ಸಂಗತಿಯೇ ಸರಿ. ಈ ಹೆಣ್ಣುಮಕ್ಕಳ ಅಭಿಮಾನವನ್ನು ಪ್ರತಿಯೊಬ್ಬರೂ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದಾಗಿದೆ. ಮತ್ತು ಈ ಬೋರ್ಡಿಂಗಿಗೆ [illegible] ವೀರಶೈವ ಸರ್ಕಾರ್ [illegible] ಇವರು ಮೊನ್ನೆ ಮೊನ್ನೆ ಒಂದು ಸರ್ಕಾರದ ಹಣವನ್ನು ಕೊಟ್ಟುದಕ್ಕಾಗಿ ನಾವೆಲ್ಲರೂ ಅವರ ಉಪಕಾರವನ್ನು ಸ್ಮರಿಸತಕ್ಕದ್ದಾಗಿದೆ. ಇಲ್ಲಿ ಇಂಗ್ಲೀಷ ವಿದ್ಯಾಭ್ಯಾಸವನ್ನು ಮಾಡಲೋಸುಗ ಬಂದ ಪರಸ್ಥಳದ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ತ್ರಾಸವನ್ನು ಕೆಲವು ಮಟ್ಟಿಗಾದರೂ ಕಡಿಮೆ ಮಾಡಬೇಕೆಂಬ ಇಚ್ಛೆಯಿಂದಲೂ, ಅವರ ಅಭ್ಯಾಸವು ನಿರಾತಂಕವಾಗಿ ನಡೆದು ಅವರು ಮುಂಬರಿಯಬೇಕೆಂಬ ಉದ್ದೇಶದಿಂದಲೂ ಇಲ್ಲಿಯ ಕಲೆಕ್ಟರ ಕಚೇರಿಯ ಕಾರಕೂನರಾದ ಮಿ|| [illegible] ಸಂಗಪ್ಪಾ ಚಟ್ಟಿ ಮತ್ತು [illegible] ಶಿವರುದ್ರಪ್ಪ ಶೃಂಗಾರಿ ಈ ಉಭಯರ ಪ್ರಯತ್ನದಿಂದ ಈ ಬೋರ್ಡಿಂಗ ಸ್ಥಾಪಿತವಾಯಿತೆಂದು ಹೇಳಬಹುದು. ಸಮಾಜದಭಿವೃದ್ಧಿಗೆ ರಾಜಭಾಷೆಯೇ ಮೂಲವಾದುದರಿಂದ, ಆ ರಾಜಭಾಷಾಭ್ಯಾಸಿಗಳಿಗೆ ಇಂತಹ ಬೋರ್ಡಿಂಗುಗಳು ಅಲ್ಲಲ್ಲಿ ಸ್ಥಾಪಿತವಾದರೆ ನಮ್ಮ ಸಮಾಜವು ಕ್ಷಿಪ್ರದಲ್ಲಿಯೇ ಮುಂಬರಿವುದೆಂಬುದಕ್ಕೆ ಸಂದೇಹವಿಲ್ಲ. ಅದುಕಾರಣ ಈಗ [illegible] ಜನನವಾದ ಈ ಬೆಳಗಾವಿಯ ಬೋರ್ಡಿಂಗೆಂಬ ಹಂಬಲವನ್ನು ಸಮಾಜ ಬಾಂಧವರು ಎತ್ತಿಕೊಳ್ಳಬೇಕಾಗಿದೆ. ಈ ಮಹಾಸಭೆಯ ಪ್ರಭಾವದಿಂದ ಇಲ್ಲಿ ವಿದ್ಯೆಯ ಅನೇಕ ಸಂಸ್ಥೆಗಳು ಇನ್ನು ಮುಂದೆ ಆವಿರ್ಭವಿಸಬಹುದೆಂದು ತೋರುತ್ತದೆ.

ನಮ್ಮ ಪ್ರಾಂತದಲ್ಲಿ ನಿರಂಜನ ಸ್ವಾಮಿಗಳು, ಶ್ರೀಮಂತರು ಹಲಕೆಲವರು ಇದ್ದರೂ ವಿದ್ಯಾವಿಷಯವಾಗಿ ಪಕ್ಕಾ ಪ್ರೋತ್ಸಾಹಕರಿಲ್ಲದುದರಿಂದ, ಈ ಪ್ರಾಂತದ ಜನಾಂಗವು ಧರ್ಮ ಮೊದಲಾದ ವಿಷಯಗಳಲ್ಲಿ ನಾಗರಿಕತೆಯನ್ನು ಹೊಂದಿ ವರ್ತಿಸಲಿಕ್ಕಾಗುವದಿಲ್ಲದಂತಾಯಿತು. ಆದರೆ ಈಗ ಲಿಗೆ ಆದ ೫ ಮಹಾಸಭೆಗಳಿಂದ ಆಯಾ ಪ್ರಾಂತಗಳಲ್ಲಿರುವ ಜನರು ಭಾವೋನ್ನತಿಯ ಕಡೆಗೆ ಲಕ್ಷ್ಯಕೊಟ್ಟಂತೆ ನಮ್ಮ ಪ್ರಾಂತದವರು ಸಹ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮುಂತಾದ ವಿಷಯಗಳಲ್ಲಿ ಉತ್ಕೃಷ್ಟತೆಗೆ ಬರುವಂತೆ ಪ್ರೋತ್ಸಾಹಿಸುವದಕ್ಕೋಸ್ಕರ ತಾವೆಲ್ಲರೂ ದಯವಿಟ್ಟು ಆಗಮಿಸಿದುದರಿಂದ ಅತ್ಯಾನಂದವಾಗುತ್ತದೆ. ಶ್ರೀಮನ್ನಿರಂಜನ ಅಲ್ಲಮಪ್ರಭುಸ್ವಾಮಿಗಳವರು ಶ್ರೀ ಹಾನಗಲ್ ಕುಮಾರ ಮಹಾಸ್ವಾಮಿಗಳವರು ಮಹಾಸಭೆಯ ಉತ್ಪಾದಕರಾಗಿ ಶ್ರೀ ಶಿವಯೋಗಮಂದಿರವೆಂಬ ಗುರುಕುಲವಾಸವನ್ನು ನಿರ್ಮಿಸಿ ವಿದ್ಯಾವರ್ಧನಕ್ಕಾಗಿ ಅಲ್ಲಲ್ಲಿ ಅನೇಕ ಚಿಕ್ಕಚಿಕ್ಕ ಸಂಸ್ಥೆಗಳನ್ನೇರ್ಪಡಿಸಿ, ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನುಂಟುಮಾಡಿ, ಸಮಾಜಕ್ಕೆ ಅತ್ಯಂತ ಲಾಭಪ್ರದವಾದ ಸತ್ಕಾರ್ಯಗಳನ್ನು ಮಾಡಿರುವುದಕ್ಕಾಗಿಯೂ, ಸರ್ವ ಪಟ್ಟಸ್ಥಲ [illegible] ಸ್ಪರ್ಧಾಸ್ಪದಾಚರಣೆಗೆ ಮೂಲಭೂತರಾಗಿ ಇತರರು ಅನುಕರಣ ಮಾಡುವಂತೆ ಅವಿಶ್ರಾಂತ ಯತ್ನಗಳನ್ನು ಶ್ರದ್ಧೆಯಿಂದ ಮಾಡುತ್ತಿರುವುದಕ್ಕಾಗಿಯೂ ನಾವೆಲ್ಲರೂ ತ್ರಿಕರಣಪೂರ್ವಕವಾಗಿ ಆ ಮಹಾತ್ಮರ ಪಾದಧ್ಯಾನವನ್ನು ಮಾಡತಕ್ಕದ್ದಾಗಿದೆ. ಈ ಶ್ರೀಗಳು ಆಲೋಚಿಸಿದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಶಾರೀರಿಕ ಶ್ರಮವನ್ನು ಯತ್ಕಿಂಚಿತ್ತಾದರೂ ಲೆಕ್ಕಿಸದೆ ಅಹೋರಾತ್ರವೂ ಶ್ರಮಪಡುತ್ತಿರುವ ಶ್ರೀ ಬೀಳೂರ ಮಹಾಸ್ವಾಮಿಗಳವರನ್ನೂ ನಾವೆಲ್ಲರೂ ಪೂಜ್ಯಭಾವದಿಂದ ವಂದಿಸಬೇಕಾಗಿದೆ.

ಪ್ರಿಯ ಬಾಂಧವರೇ! ಧಾರ್ಮಿಕ ವಿಷಯಗಳು ಬಹುಗಹನವಾದುದರಿಂದಲೂ, ಮಹಾಸಭೆ ನಡೆಯುವ ೩ ದಿವಸಗಳ ಅಲ್ಪಾವಧಿಯಲ್ಲಿ ಈ ವಿಷಯಗಳ ವಿವೇಚನೆಯು ಆಗತಕ್ಕದ್ದು ಚೆನ್ನಾಗಿ ಆಗಲವಕಾಶವಿಲ್ಲೆಂದು ಕಂಡುಬಂದುದರಿಂದಲೂ ಮಹತ್ವದ ವಿಷಯಗಳನ್ನೆಲ್ಲಾ ಶ್ರೀಶಿವಯೋಗಮಂದಿರದಲ್ಲಿ ಪ್ರತಿವರ್ಷ ಕೂಡುವ ಸಭೆಯಲ್ಲಿ ವಿಮರ್ಶಿಸಲು ಬಿಟ್ಟು ಈ ಸಭೆಯಲ್ಲಿ ಬರಿಯ ವೀರಶೈವಮತದ ಮೂಲತತ್ವಗಳು ಅದರ ಉದಾತ್ತ ವಿಚಾರಗಳು ಮತ್ತು ವಿದ್ಯಾವರ್ಧಕ, ಔದ್ಯೋಗಿಕ, ವ್ಯವಸಾಯಿಕ ಮುಂತಾದ ವಿಷಯಗಳೇ ಚರ್ಚಿಸಲ್ಪಡುವಂತೆ ಗೊತ್ತುಪಡಿಸಿದುದರಿಂದ, ಈ ವರ್ಷದ ಸಭಾಕಾರ್ಯವು ವಿಶೇಷ ಲಾಭಪ್ರದವಾಗಬಹುದೆಂದು ನನ್ನ ನಂಬುಗೆಯದೆ. ಈ ವಿಷಯಗಳ ವಿವೇಚನೆಯಲ್ಲದೆ ಹಿಂದಣ ೫ ಮಹಾಸಭೆಗಳ ನಿರ್ಣಯಗಳನ್ನು ಆದಷ್ಟು ಪ್ರಸಾರದಲ್ಲಿ ತರುವುದೂ ಈ ಮಹಾಸಭೆಯ ಮುಖ್ಯೋದ್ದೇಶವಾಗಿದೆ. ಮತ್ತು ಈ ಮಹಾಸಭೆಗೆ ಈ ವರ್ಷ ಪುಣೆಯ ಅಗ್ರಿಕಲ್ಚರಲ್ ಕಾಲೇಜದ ಪ್ರಿನ್ಸಿಪಾಲರಾದ ಡಾ|| ಮ್ಯಾನಸಾಹೇಬ ಬಹಾದ್ದೂರವರೂ, ಮುಂಬಯಿ ಇಲಾಖೆಯ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಯ ರೆಜಿಸ್ಟ್ರಾರರಾದ ಮಿ|| ಕ್ಯಾಂಬೆಲ್ ಸಾಹೇಬ ಬಹಾದ್ದೂರವರ ಪರವಾಗಿ ಪ್ರವೀಣ ವ್ಯಾಖ್ಯಾತಕಾರರೂ ಆಗಮಿಸಿದುದರಿಂದ, ವ್ಯಾಪಾರೋದ್ಯೋಗದ ಮತ್ತು ಒಕ್ಕಲತನದ ವಿಷಯವಾಗಿ ನಮ್ಮ ಸಮಾಜಕ್ಕೆ ವಿಶೇಷ ಉಪಯೋಗವಾದೀತೆಂದು ಕೋರುತ್ತೇನೆ.

ಕಾಲಾವಧಿಯ ಅಭಾವದ ಮೂಲಕ ಎಷ್ಟು ಅಡಚಣೆಗಳು ಬರಲಿದ್ದರೂ ಕೂಡ ಅವುಗಳನ್ನು ಲಕ್ಷಿಸದೆ ನಮ್ಮ ಸಮಾಜ ಭಗಿನಿಯರ ಮೇಲೆ ಕನಿಕರವಿಟ್ಟು ಬಳ್ಳಾರಿಯಂತೆ ಈ ಮಹಾಸಭೆಗೂ ಸ್ತ್ರೀ ಪರಿಷತ್ತು ಜೋಡಿಸಲ್ಪಟ್ಟಿದೆ. ಈ ಪರಿಷತ್ತಿನ ಕಾರ್ಯವಾದರೂ ಸಮಾಧಾನಕರವಾಗಿ ಜರುಗುವದೆಂದು ನಂಬಿರುವೆನು. ಸ್ತ್ರೀಪರಿಷತ್ತನ್ನು ಬಳ್ಳಾರಿಯಂತೆ ಬೆಳಗಾವಿಯ ಮಹಾಸಭೆಗೂ ಜೋಡಿಸುವದಾಗಬೇಕೆಂದು [illegible] ಪತ್ರದ್ವಾರ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿದ ಸೊಲ್ಲಾಪುರದ ಶ್ರೀಮತಿ ಭಾಗೀರಥೀಬಾಯಿ ಪಾಟೀಲ ಈ ಮಹಿಳಾಮಣಿಯವರ ಮತಾಭಿಮಾನವನ್ನು ನಾವೆಲ್ಲರೂ ಪ್ರೇಮಪೂರ್ವಕವಾಗಿ ಅಭಿನಂದಿಸಬೇಕಾಗಿದೆ.

ನಮ್ಮ ಈ ಮಹಾಸಭೆಯನ್ನು ಇಲ್ಲಿ ನೆರವೇರಿಸಲು ಪ್ರಾರ್ಥಿಸಿಕೊಂಡುದಕ್ಕೆ ಜಿಲ್ಲಾ ಕಲೆಕ್ಟರರಾದ ಮಿ|| ಬ್ರ್ಯಾಂಡರ್ ಸಾಹೇಬ ಬಹಾದ್ದೂರವರು ಸಹಾನುಭೂತಿಯಿಂದ ಪರವಾನಗಿ ಹುಕುಮು ದಯಪಾಲಿಸಿದುದಕ್ಕಾಗಿಯೂ, ಮಹಾಸಭೆಯ ಮೇಲಣ ತಮ್ಮ ಪ್ರೇಮವನ್ನು ವ್ಯಕ್ತಪಡಿಸಿ ಅನೇಕ ಅನುಕೂಲ ಸಂಗತಿಗಳನ್ನು ಸೂಚಿಸಿ ಪ್ರತಿಯೊಂದು ಮಹಾಕಾರ್ಯದಲ್ಲಿ ನಮಗೆ ಸಹಾಯವನ್ನುಂಟುಮಾಡಿದುದಕ್ಕಾಗಿಯೂ ನಾವೆಲ್ಲರೂ ಮೆಹರ್ಬಾನರವರ ಉಪಕಾರವನ್ನು ಸ್ಮರಿಸತಕ್ಕದ್ದಾಗಿದೆ. ಮತ್ತು ಈ ಸಭಾಮಂಟಪಕ್ಕೋಸ್ಕರ ಜನಕಾಲಿ, ಪಾಠಸ್ಥಳ ಮೊದಲಾದವುಗಳ ಬಗ್ಗೆ ಸ್ಥಳವನ್ನಿತ್ತಲ್ಲದೆ ಮಹಾಸಭೆಯು ಎಷ್ಟೋ ವಿಷಯಗಳಲ್ಲಿ ಪ್ರೇಮಪೂರ್ವಕವಾಗಿ ಅನೇಕ ಸಹಾಯಗಳನ್ನು ಒದಗಿಸಿಕೊಟ್ಟುದಕ್ಕಾಗಿಯೂ ಮಿ|| ಚನ್ನಮಲ್ಲಪ್ಪಾ ಕಿತ್ತೂರ ಮೊದಲಾದ ಮಹನೀಯರ ಉಪಕಾರವನ್ನಾದರೂ ಭಾವಿಸತಕ್ಕದು.

ಈಗ ನಾವು ಕೂಡಿಸಿರುವ ಪರಿಷತ್ತು ಉದಾರರೂ, ನಿಸ್ಪೃಹರಾತಿಗಳೂ, ನ್ಯಾಯಪ್ರಿಯರೂ ಆದ ನಮ್ಮ ಸಾರ್ವಭೌಮ ಇಂಗ್ಲೀಷ ಚಕ್ರವರ್ತಿಗಳು ನಮಗೆ ದಯಪಾಲಿಸಿರುವ ಉದಾತ್ತ ಶಿಕ್ಷಣದ ಫಲಿತಾಂಶವಾಗಿದೆ. ಮತ್ತು ಇವರು ನಮ್ಮ ಸಮಾಜೋನ್ನತಿಗೆ ಅವಶ್ಯವಾದ ಎಷ್ಟೋ ಸಹಾಯಗಳನ್ನು ಕೊಟ್ಟೂ, ಕೊಡುತ್ತಲೂ ಇರುವರು ಆದುದರಿಂದ ನಾವು ರಾಜಭಕ್ತಿಯುಕ್ತರಾಗಿ ನಿಸ್ಸೀಮ ಪ್ರಜಾಧರ್ಮದಿಂದ ವರ್ತಿಸಿ, ಅವರ ರಾಜ್ಯಪರಿಪಾಲನೆಯು ನಮ್ಮ ಮೇಲೆ ಚಿರಕಾಲವಿರುವಂತೆ ಕರುಣಿಸೆಂದು ನಾವೆಲ್ಲರೂ ಶ್ರೀ ಜಗದೀಶನನ್ನು ಪ್ರಾರ್ಥಿಸತಕ್ಕದು.

ಇನ್ನೊಂದು ಅತ್ಯಾನಂದದ ಸಂಗತಿ ಏನೆಂದರೆ,—ನಮ್ಮ ಸಾರ್ವಭೌಮರಾದ ೫ ನೆಯ ಜಾರ್ಜ ಬಾದಶಹರವರೂ, ಮಹಾರಾಜ್ಞೀ ಮೇರೀ ಧೊರೆಸಾನಿಯವರೂ ಸಿಂಹಾಸನಾರೋಹಣಕ್ಕಾಗಿ ಇದೇ ತಿಂಗಳಲ್ಲಿ ನಮ್ಮ ಭರತಖಂಡಕ್ಕೆ ಸುರಕ್ಷಿತವಾಗಿ ದಯಮಾಡಿಸಿ, ಅಪ್ರತಿಮ ಸಮಾರಂಭದಿಂದ ರಾಜ್ಯಾರೋಹಣಂಗೈದು, ದಿಲ್ಲಿಯ ದರ್ಬಾರವನ್ನು ನೆರವೇರಿಸಿ ನಮ್ಮದೇಶದ ವಿಷಯವಾಗಿ ಸಹಾನುಭೂತಿಯನ್ನು ತೋರ್ಪಡಿಸಿದುದು ನಾವೆಲ್ಲರೂ ಅತ್ಯಂತ ಸಂತೋಷಪಡುವ ಸಂಗತಿಯಾಗಿದೆ. ಇಂಗ್ಲೀಷ ಸಾರ್ವಭೌಮರ ಆಜ್ಞೆಯು ಇಲ್ಲಿ ನೆಲೆಗೊಂಡಮೇಲೆ ನಮ್ಮ ಭರತಖಂಡದ ರಾಜ್ಯಾರೋಹಣಕ್ಕೆ ದಯಮಾಡಿಸಿದ ಬಾದಶಹರವರಲ್ಲಿ ಇವರೇ ಮೊದಲಿನವರಾದುದರಿಂದಲೂ, ನಮ್ಮ ಭರತಖಂಡದ ಮೇಲಿರುವ ತಮ್ಮ ಪೂರ್ಣಪ್ರೇಮವನ್ನು ವ್ಯಕ್ತಪಡಿಸುವ ಸಲುವಾಗಿ ಈ ರಾಜದಂಪತಿಗಳು ರಾಜ್ಯಾರೋಹಣಕ್ಕಾಗಿ ಸ್ವತಃ ಈ ದೇಶಕ್ಕೆ ದಯಮಾಡಿಸಿ ಭಾರತೀಯರಿಗೆ ದರ್ಶನಲಾಭವನಿತ್ತಿರುವುದರಿಂದಲೂ ಈ ಅಪೂರ್ವಸಂಗತಿಯನ್ನು ರಾಜನಿಷ್ಠರಾದ ನಾವೆಲ್ಲರೂ ನಮ್ಮ ಸ್ಮರಣಪಥದಲ್ಲಿ ಸುವರ್ಣಾಕ್ಷರಂಗಳಿಂದ ಬರೆದಿಡುವಂತಹುದಾಗಿದೆ. ಈ ರಾಜದಂಪತಿಗಳು ರಾಜ್ಯಾರೋಹಣ ಸಮಾರಂಭವನ್ನು ಸಾಂಗ ಮಾಡಿ ತಮ್ಮ ಸ್ವಸ್ಥಾನಕ್ಕೆ ಅಭಿಮುಖರಾಗಿರುವರು. ಇವರ ಪ್ರಯಾಣದಲ್ಲಿ ಶ್ರೀ ಪರಮೇಶ್ವರನು ಸುಖಶಾಂತಿಯನ್ನು ಕೊಡಲೆಂದು ನಾವೆಲ್ಲರೂ ಹಗಲಿರುಳೂ ಆತನ ಧ್ಯಾನಮಾಡತಕ್ಕದು. ಯಾವ ಸಾರ್ವಭೌಮರ ಅಡಳಿತದಲ್ಲಿ ನಮ್ಮ ವೀರಶೈವ ಮತವು ಉನ್ನತಿಯನ್ನು ಪಡೆದಿರುವುದೋ, ಯಾವ ಚಕ್ರವರ್ತಿಗಳ ಕೃಪಾಶಿಕ್ಷಣದ ಫಲಿತಾಂಶದಿಂದ ನಮ್ಮ ಮಹಾಸಭೆಯು ಈ ಸಮಾರಂಭವನ್ನು ಹೊಂದಿರುವುದೋ ಆ ಸಾರ್ವಭೌಮ ರಾಜರೇ ಸದ್ಯಕ್ಕೆ ನಮ್ಮ ಭರತಭೂಮಿಗೆ ದಯಮಾಡಿಸಿರುವುದರಿಂದ, ಅವರು ನಮ್ಮ ದೇಶದಲ್ಲಿರುವಾಗಲೇ ಅವರಿಗೆ ನಮ್ಮ ವೀರಶೈವರ ಜಯಜಯಕಾರವನ್ನು ಮಹಾಸಭೆಯವರು ತಂತಿಯ ಮೂಲಕವಾಗಿ ತಿಳಿಸುವುದು ಅತ್ಯಂತ ಆವಶ್ಯಕವಾದ ಸಂಗತಿಯೆಂದು ನಾನು ಅಭಿಪ್ರಾಯಪಡುತ್ತೇನೆ.

ಸಮಾಜಬಾಂಧವರೇ! ಈ ಸಭಾಕಾರ್ಯವು ನೆರವೇರಿದ ಕೂಡಲೆ ಸಭೆಯಲ್ಲಿ ನಿಶ್ಚಯಿಸಿದ ನಿಯಮಗಳನ್ನು ಆಚರಣೆಯಲ್ಲಿ ತರುವಂತೆ ಮಾಡಲಿಕ್ಕೆ ಜಿಲ್ಲಾ, ತಾಲ್ಲೂಕ, ಗ್ರಾಮ ಕಮಿಟಿಗಳನ್ನು ಸ್ಥಾಪಿಸಿ ಸೂಕ್ತವಾದ ನಿಯಮಗಳನ್ನು ಮಾಡಿ ಅವು ನಿರಾತಂಕವಾಗಿ ನಡೆಯುವಂತೆ ಅವಿಶ್ರಾಂತ ಸಾಹಸ ಪಡಬೇಕೆಂದು ನಾನು ತುಂಬಾ [illegible]. ಮಹಾಸಭೆಯ ಘನವಾದ ಕಾರ್ಯವನ್ನು ಕೊನೆಗಾಣಿಸುವುದು ಅತ್ಯಂತ ದುಸ್ತರವೆಂಬ ವಿಷಯವು ಎಲ್ಲರ ಮನಸ್ಸಿಗೂ ಗೋಚರವಾಗಬಹುದು. ಆದರೂ ತಮ್ಮಂತಹ ಮಹನೀಯರ ದಯದಿಂದ ನಿರ್ವಿಘ್ನವಾಗಿ ಪೂರೈಸುವುದೆಂದು ನಂಬಿದ್ದೇನೆ. ಆದರೆ ಈ ಮಹಾಸಭಾ ಕಾರ್ಯವನ್ನು ನಾವು ಕೈಕೊಂಡಾಗ ಅಲ್ಪಾವಧಿ ಇದ್ದುದರಿಂದ ತಾವೆಲ್ಲರೂ ನಮ್ಮ ವ್ಯವಸ್ಥೆಗಳಲ್ಲಿ ಕಂಡುಬರುವ ಕುಂದು ಕೊರತೆಗಳನ್ನು ಲಕ್ಷಿಸದೆ ನಮ್ಮ ಅಲ್ಪಶಕ್ತಿಗನುಗುಣವಾಗಿ ಮಾಡುವ ಆದರೋಪಚಾರವನ್ನು ಸ್ವೀಕರಿಸಿ ಈ ಮಹಾ ಕಾರ್ಯಕ್ಕೆ ತಮ್ಮೆಲ್ಲರ ಹಸ್ತಾವಲಂಬನೆಗೊಟ್ಟು ಒಂದೇಮನಸ್ಸಿನಿಂದ ಈ ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿ ಭಾಜನರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಾಜ್ಞರೇ! ನನ್ನ ಭಾಷಣವನ್ನು ಸಾವಧಾನಚಿತ್ತದಿಂದ ಇಷ್ಟು ವೇಳೆಯವರೆಗೆ ಆಲಿಸಿದುದಕ್ಕಾಗಿಯೂ, ಈ ಮಹಾಸಭೆಗೆ ದಯವಿಟ್ಟು ಆಗಮಿಸಿದುದಕ್ಕಾಗಿಯೂ ತಮ್ಮೆಲ್ಲರ ಉಪಕಾರವನ್ನು ಪುನಃಪುನಃ ಸ್ಮರಿಸುತ್ತೇನೆ ಇನ್ನು ಮೇಲೆ ಮಹಾಸಭೆಯ ಅಧ್ಯಕ್ಷರನ್ನು ಆರಿಸಿಕೊಂಡು ಮುಂದಣ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ತಮ್ಮೆಲ್ಲರನ್ನೂ ಬೇಡಿಕೊಂಡು ಮತ್ತು ನಮ್ಮ ಕಾರ್ಯದಲ್ಲಿ ಯಶಸ್ಸುಕೊಡಲೆಂದು ಶ್ರೀಮಜ್ಜಗತ್ಪಾಲಕನಾದ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ತಮ್ಮೆಲ್ಲರ ಅಪ್ಪಣೆಯನ್ನು ಬೇಡಿಕೊಳ್ಳುತ್ತೇನೆ.

೬ ನೆಯ ಶ್ರೀವೀರಶೈವ ಮಹಾಸಭೆ, ಬೆಳಗಾವಿ. } ವಿ. ಜಿ. ದೇಸಾಯಿ ಜಹಗೀರದಾರ, ಸ್ವಾಗತ ಕಮಿಟಿಯ ಅಧ್ಯಕ್ಷ.

ಅಧ್ಯಕ್ಷರ ಭಾಷಣದ ಮುಖ್ಯಾಂಶವು.

[ಕಳೆದ ವಾರದ ಶೇಷ.]

“ ಷಟ್ ” ಎಂದರೆ ಶಿವಜೀವೈಕ್ಯ ಬೋಧನೆಯ ವಿಜ್ಞಾನ “ ಸ್ಥಲ ” ಎಂದರೆ ರಮಿಸುವವರು:— “ ವೀರಶೈವ ” ರೆಂದರೆ ಶಿವಜೀವೈಕ್ಯ ವಿಜ್ಞಾನದಲ್ಲಿ ರಮಿಸುವ ಶೈವರು; ಎಂದರೆ ಅಖಂಡ ಸುಖಾಪೇಕ್ಷೆಗಾಗಿ ಸೃಷ್ಟಿನಿಯಂತನಾದ ಪರಶಿವನನ್ನು ಆಶ್ರಯಿಸಿ ಕಡೆಗೆ ಅತನಲ್ಲಿಯೇ ಲೀನವಾಗುವವರು. ಎಂಬರ್ಥವಾಗುವುದು. ಪಂಡಿತರಿಗೆ ಮಾತ್ರ ತಿಳಿಯುತಕ್ಕ ಈ ಏಕಾಕ್ಷರೀ ನಿಘಂಟನ್ನು ತುಸು ಹಿಂದಕ್ಕೆ ಸರಿಸಿ ಸಕಲರಿಗೂ ತಿಳಿಯತಕ್ಕ ಅನೇಕಾಕ್ಷರೀ ನಿಘಂಟನ್ನು ಮುಂದೆ ಇಟ್ಟುಕೊಂಡು ವಿಚಾರಿಸಿದರೂ ಇದೇ ವ್ಯುತ್ಪತ್ತಿಯು ನಿಷ್ಪನ್ನವಾಗುವುದು. ಹೇಗೆಂದರೆ “ ವೀರಶೈವರು ” ಅಂದರೆ ಶೂರರಾದ ಶೈವರು. ಶೂರರು ಯಾವದರಲ್ಲಿ? ಜ್ಞಾನಮಾರ್ಗದಲ್ಲಿ; ಯಾವ ಜ್ಞಾನಮಾರ್ಗದಲ್ಲಿ? ಹಾಗೆಂದರೇನು? ಹೊಳೆಗಳು ಭೂಮಿಯಲ್ಲಿ ಹುಟ್ಟಿ ಹರಿಯುತ್ತ, ಕಡೆಗೆ ಸಮುದ್ರಕ್ಕೆ ಕೂಡಿ ಸಮುದ್ರತ್ವವನ್ನು ಹೊಂದುವಂತೆ ಇಹಲೋಕದ ಸುಖಸಾರವನ್ನು ಸುಲಭವಾಗಿ ಪಡೆದು, ಕಡೆಗೆ ಶಿವನಲ್ಲಿ ಕೂಡಿ ಬೆರೆದು ಶಿವತ್ವವನ್ನು ಹೊಂದುವುದು.

ಇನ್ನು ಶಕ್ತಿ ವಿಶಿಷ್ಟಾದ್ವೈತ ಎಂಬ ವಾಕ್ಯಾರ್ಥವನ್ನು ಪರಿಭಾವಿಸಿದರೂ ಇದೇ ತತ್ವವು ವ್ಯಕ್ತವಾಗುವುದು. ಅದು ಹೇಗೆಂದರೆ—ದ್ವೈತವಾದಿಗಳು ಅವಿಶಿಷ್ಟನಾದ ಪರಮಾತ್ಮನೊರ್ವನೆ ಜಗತ್ತಿನ ಸ್ಥಿತ್ಯಾದಿಗಳಿಗೆ ಕಾರಣನಾಗಿರುತ್ತಾನೆಂದು ಹೇಳುತ್ತಾರೆ; ನಾವು ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನಾದ ಶಿವನು ಒಬ್ಬನೇ ಇದ್ದರೂ ಅನಾದಿ ಶಕ್ತಿಯಿಂದ ಅವಿನಾಭಾವರೂಪ ಸಂಬಂಧವುಳ್ಳವನಾಗಿ ಅದ್ವಿತೀಯನಾಗಿರುತ್ತಾನೆಂದು ತಿಳಿದು, ಅದಕ್ಕೆ ಅನುಕೂಲವಾಗಿ ವರ್ತಿಸುವುದರಿಂದ ನಮ್ಮ ಮತವು ಶಕ್ತಿ ವಿಶಿಷ್ಟಾದ್ವೈತವೆಂದು ವ್ಯಕ್ತವಾಗುವುದು. ಆ ಶಕ್ತಿಯು ಪ್ರಾಮುಖ್ಯವಾಗಿ ಇಚ್ಛಾ, ಜ್ಞಾನ, ಕ್ರಿಯೆಗಳೆಂದು ಮೂರು ಪ್ರಕಾರವಾಗಿರುವುದು. ನಮಗೆ ಇಹಪರ ಸುಖಗಳೆರಡೂ ಲಭ್ಯವಾಗುವುದು. ಇವುಗಳ ಬಲದಿಂದಲೇ! ಸಂಪದುತ್ಪಾದನಕ್ಕೆ ಆಧಾರಭೂತಗಳಾದ ಭೂಮಿ (ಬಂಡವಾಳ) ಶ್ರಮ, ಈ ಮೂರರಲ್ಲಿ ಯಾವದಾದರೊಂದು ಕೊರತೆಯಾದರೆ ಕೆಲಸವು ಹೇಗೆ ಸಾಗಲಾರದೋ ಹಾಗೆ ಶಿವನ ಮುಕ್ಕಣ್ಣುಗಳಂತಿದ್ದ ಈ ಶಕ್ತಿ ಪ್ರಯತ್ನಗಳಲ್ಲಿ ಯಾವುದಾದರೊಂದು ಕಡಿಮೆಯಾದಲ್ಲಿ ಯಾವ ಸುಖವೂ ನಮಗೆ ದೊರಕಲಾರದು. ಈ ಶಕ್ತಿಗಳನ್ನು ಅಚಲವಾಗಿರಿಸುವ ಉದ್ದೇಶದಿಂದಲೇ ತತ್ ಸಮರ್ಥವಾದಂಥ ಅಷ್ಟಾವರಣಗಳೆಂಬ ಮಹತ್ತಮವಾದ ತತ್ವಗಳನ್ನು ದೂರದರ್ಶಿಗಳಾದ ನಮ್ಮ ಪೂರ್ವದ ಪೂಜ್ಯಮತ ಸ್ಥಾಪಕ ಮಹಾನುಭಾವರು ಮುಖ್ಯವಾಗಿ ಇಟ್ಟುಕೊಂಡಿರುವರು. ಈ ಅಷ್ಟಾವರಣಗಳು ನಮ್ಮ ಇಹಪರ ಸುಖಗಳೆರಡಕ್ಕೂ ಹೇಗೆ ಸಂಬಂಧವಾಗಿರುವುವೆಂಬುದನ್ನು ಶ್ರೀ ಶಿವಯೋಗ ಮಂದಿರವು ಇದೇ ತಿಂಗಳಿಂದ ಪ್ರಕಟಿಸ ಹತ್ತಿರುವ “ ವೀರಶೈವ ಧರ್ಮತರಂಗಿಣೀ ” ಎಂಬ ಮಾಸಪತ್ರಿಕೆಯು ಸವಿಸ್ತಾರವಾಗಿ ಬೋಧಿಸುವ ಕಾರ್ಯವನ್ನು ಕೈಕೊಂಡು ಪ್ರಥಮಾಂಕದಲ್ಲಿ ಲಿಂಗಧಾರಣ ಮಾಹಾತ್ಮ್ಯೆಯನ್ನು ವೇದಾಗಮಾದಿ ಪ್ರಮಾಣಗಳಿಂದ ಸಿದ್ಧಪಡಿಸಲು ಉಪಕ್ರಮಿಸಿರುವುದು. ವಿಸ್ತಾರಭಯದಿಂದ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಆದರೂ ಸ್ವಲ್ಪದರಲ್ಲಿಯೇ ಒಂದೆರಡರ ಬಗ್ಗೆ ಹೇಳುವುದೇನೆಂದರೆ— ಗುರುವು ಸನ್ಮಾರ್ಗ ದರ್ಶಕನಾಗಿ ಅಜ್ಞಾನವನ್ನು ಹೋಗಲಾಡಿಸುವವನು. ವ್ಯವಹಾರದಲ್ಲಿ ಕ್ಷಣಕ್ಷಣಕ್ಕೆ ಜ್ಞಾನದ ಮಹಾತ್ಮ್ಯೆಯು ಎಷ್ಟಿರುವುದೆಂಬುದು ಪ್ರತಿಯೊಬ್ಬರಿಗೆ ಗೊತ್ತೇ ಇದೆ! ಸತ್ಕ್ರಿಯಾದಿಗಳಿಂದ ಮನಸ್ಸಿನ ಸ್ಥಿರತ್ವವನ್ನು ಉಂಟುಮಾಡುವುದಕ್ಕಾಗಿ ಪರಶಿವನ ಚಿಹ್ನರೂಪವಾದ ಲಿಂಗವು ಅವಶ್ಯವಾದುದು. ವ್ಯವಹಾರದಲ್ಲಿ ಜಡವೆನಿಸಿದ ಶ್ರೀಶೈಲ, ಗೋಕರ್ಣ, ಕಾಶಿ ಮೊದಲಾದುವೇ ಲಿಂಗಧಾರಣದಿಂದ ಪವಿತ್ರತೆಯನ್ನು ಹೊಂದಿ ಪೂಜ್ಯವಾಗುತ್ತಿರುವಲ್ಲಿ, ಕೇವಲ ಚೇತನಾರೂಪನಾದ ಮಾನವನು ತನ್ನ ಶರೀರದಲ್ಲಿ ದೀಕ್ಷಾತ್ರಯಗಳಿಂದ ಪರಿಶುದ್ಧವಾದ ಲಿಂಗವನ್ನು ಧಾರಣಮಾಡೋಣವೆಂದರೆ ಆ ಮಾನವ ದೇಹದ ಪವಿತ್ರತೆಯನ್ನೂ, ಧನ್ಯತೆಯನ್ನೂ, ಜನ್ಮಸಾಫಲ್ಯವನ್ನೂ ಎಷ್ಟು ಬಣ್ಣಿಸಿದರೂ ಸ್ವಲ್ಪವೇ. ಈ ರೀತಿಯನ್ನು ವಿಚಾರಿಸಲು “ ಶೆಟ್ಟಿ ಇಳಿದುದೇ ಪಟ್ಟಣವೆ ” ನ್ನಿಸುವಂತೆ ಲಿಂಗಧಾರಿಯಾದ ಪ್ರತ್ಯೇಕ ವೀರಶೈವನಿದ್ದುದೇ ಒಂದೊಂದು ಕ್ಷೇತ್ರವೆಂದು ಹೇಳಲಿಕ್ಕೆ ಸಂದೇಹವೇನಾದರೂ ಬರುವಂತಿರುವುದೋ? ಇನ್ನು ಪ್ರಸಾದ ವಿಷಯವನ್ನು ಕುರಿತು ವಿಚಾರಿಸಿದರೆ ಐಕ್ಯವೆಂಬ ಅಮೋಘವಾದ ತತ್ವವು ವ್ಯಕ್ತವಾಗುವುದು. ವ್ಯವಹಾರದಲ್ಲಿ ಭಿನ್ನಭಿನ್ನ ಆಚಾರ ವಿಚಾರಗಳ ಜನಸಮೂಹವು ಕೇವಲ ಪ್ರೀತಿಯಿಂದಲೇ ಕಟ್ಟಲ್ಪಟ್ಟು ಇಷ್ಟಿತಕಾರ್ಯಗಳನ್ನು ಸಾಧಿಸಿಕೊಂಡು ಸುಖಿಸುತ್ತಿರುವಲ್ಲಿ, ಒಂದೇ ಗುರುವಿನ ಶಿಷ್ಯರೆನಿಸಿ ಅಷ್ಟಾವರಣ ನಿಷ್ಠರಾಗಿದ್ದ ನಮ್ಮೆಲ್ಲರ ಅಂತಃಕರಣಗಳು ಗುರುಪ್ರಸಾದದಿಂದ ಏಕೀಭವಿಸುತ್ತಿರಲು ನಮಗೆ ಐಹಿಕವಲ್ಲಾತ [illegible]

ಆದರೆ ನಮ್ಮ ಸಮಾಜಬಂಧುಗಳಲ್ಲಿ ಕೆಲಕೆಲವು ಪ್ರಮುಖರೇ ಇವರೇ ಸರ್ವೋತ್ತಮವಾದ ಈ ನಮ್ಮ ಮತ ತತ್ವಗಳನ್ನು ಮರೆತು ನಡೆಯುವುದನ್ನು ನೋಡಿ ಒಂದು ತೆರದ ವಿಷಾದವಾಗುತ್ತದೆ. ಇವರು ಪೂರ್ವ ಸುಕೃತದಿಂದ ದೇವರು ತಮಗೆ ದಯಪಾಲಿಸಿದ ಬುದ್ಧಿ ಬಲ ದ್ರವ್ಯಬಲ ಮುಂತಾದ ಬಲಗಳನ್ನು ಐಕ್ಯ, ಶಿಕ್ಷಣ, ವ್ಯಾಪಾರ, ಒಕ್ಕಲತನ, ಕೈಗಾರಿಕೆ ಮುಂತಾದ ಸಮಾಜ ಸೌಖ್ಯಾಭಿವೃದ್ಧಿಯ ಪುಣ್ಯಕಾರ್ಯಗಳಿಗಾಗಿ ವೆಚ್ಚಮಾಡುತ್ತ ಇಡೀ ಸಮಾಜೋನ್ನತಿಯನ್ನೂ ಅದರಿಂದ ಸ್ವೋನ್ನತಿಯನ್ನೂ ಸಾಧಿಸಿಕೊಳ್ಳುವಲ್ಲಿ ಪೌರುಷವನ್ನು ತೋರಿಸಿ, ನಿಜವಾದ ವೀರಶೈವರೆನ್ನಿಸುತ್ತ ಧನ್ಯರಾಗುವುದರ ಬದಲು, ಮುಂದಣ ಪರಿಣಾಮವೇನಾದೀತೆಂಬುದರ ಕಡೆಗೆ ನೋಡದೆ ಸಮಾಜೋನ್ನತಿಯ ಮುಖ್ಯಕಾರಣಗಳಲ್ಲೊಂದಾದ ಐಕ್ಯಕ್ಕೆ ಭಂಗ ಬರುವಂತೆ ಆಚರಿಸುತ್ತಾ ಅಹಮಿಕೆಯಿಂದಲೋ, ಅಜ್ಞಾನದಿಂದಲೋ, ಸ್ವಾರ್ಥಪರಾಯಣತೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಏನೋ ತಿಳಿಯದು. ಸಮಾಜದಲ್ಲಿ ಅನೇಕತರದ ಒಳಜಗಳಗಳನ್ನೂ ಬಣಗಳನ್ನೂ ಹುಟ್ಟಿಸಿ, ಹಗಲಿರುಳು ಬಡಿದಾಡುವುದರಲ್ಲಿ ತಮ್ಮ ತನುಮನಧನಗಳನ್ನೂ, ಅಮೂಲ್ಯವಾದ ವೇಳೆಯನ್ನೂ ವ್ಯರ್ಥವಾಗಿ ಸೂರೆಮಾಡುತ್ತ, ತನ್ಮೂಲಕ ಮತಗೌರವವನ್ನು ಕುಂದಿಸುತ್ತ, ಕಟ್ಟಕಡೆಗೆ ಮತಸ್ಥಾಪನಾಚಾರ್ಯರ ಆಜ್ಞೆಗಳನ್ನು ಎಂದರೆ ಅವರ ಮತೋದ್ದೇಶಗಳನ್ನು ಅಲಕ್ಷ್ಯಮಾಡಿ ನಡೆದುದರಿಂದುಂಟಾಗುವ ದುಷ್ಪರಿಣಾಮದ ಫಲಕ್ಕೆ ಕಾರಣವಾಗುವದನ್ನು ಮನದಲ್ಲಿ ತಂದರೆ ಯಾವ ವಿಚಾರವಂತ ಪುರುಷನಿಗೆ ದುಃಖವೆನಿಸಲಿಕ್ಕಿಲ್ಲ! ವಿಷಬೀಜದ ಪರಿಣಾಮವು ವಿಷವೇ ಆಗುವುದು. ಎಂದರೆ ಕೆಟ್ಟ ಕೆಲಸದ ಪರಿಣಾಮವು ಕಡೆಗೆ ಕೆಟ್ಟದೇ ಆಗುವುದು. ಎಂಬ ಸೃಷ್ಟಿಯ ಸ್ವಾಭಾವಿಕ ಧರ್ಮಕ್ಕನುಸರಿಸಿ ನಮ್ಮ ಸಮಾಜ ಬಾಂಧವರ ಇಂತಹ ಕೃತ್ಯಗಳಿಂದ ಇವರಿಷ್ಟೋದ್ದೇಶವು ನೆರವೇರುವದೊತ್ತಟ್ಟಿಗುಳಿದು, ಒಂದೇ ಹರಗೋಲಿನಲ್ಲಿದ್ದ ತವಿಗೆ ಆಗದವರನ್ನು ಮುಳುಗಿಸಲು ಹರಗೋಲಿಗೆ ತೂತು ಕೆಡವುವ ಕುಬುದ್ಧಿಯ ಸ್ಥಿತಿಯಂತೆ ಕಟ್ಟಕಡೆಗೆ “ ಸಮುದಾಯಸ್ವಸ್ವಾಂತು ! ” ಎಂಬಂತೆ ದುಸ್ಥಿತಿಯು ನಮ್ಮೆಲ್ಲರ ಪಾಲಿನ ಎಕ್ಕಿಯಾಗಿ ಕುಳಿತರೆ ಅದರಲ್ಲಿ ಆಶ್ಚರ್ಯವೇನು? ನಮ್ಮ ಒಳಜಗಳದ ಪರಿಣಾಮವು ಇಬ್ಬರ ನ್ಯಾಯ ಮೂರನೆಯವನಿಗೆ ಆದಾಯವೆಂಬಂತಾಗುತ್ತ ನಡೆದಿದ್ದು ಅದು ಮೆಲ್ಲಮೆಲ್ಲನೆ ಸುತ್ತುಕಡೆಯಿಂದ ನಮ್ಮ ಸಮಾಜದ ಜೀವನವೆನ್ನಿಸಿರುವ ಶಿಕ್ಷಣಪ್ರಗತಿಗೆ ಸಹ ಅಡ್ಡ ಬರುತ್ತಿರುವುದೆಂದು ಹೇಳಲಿಕ್ಕೆ ಬಹಳ ವ್ಯಸನವಾಗುತ್ತದೆ! ವ್ಯಸನವಾಗುತ್ತದೆ!! ಈ ಪ್ರಸಕ್ತಿಯಲ್ಲಿ ಸಣ್ಣದಾದರೂ ಅತ್ಯಂತ ಮಹತ್ವವಾದುದಾಗಿರುವ ಒಂದು ಪೌರಾಣಿಕ ಸಂಗತಿಯನ್ನು ನಾವೆಲ್ಲರೂ ಪರಿಶೀಲಿಸಬೇಕು.

ಹಿಂದಕ್ಕೆ ದುಷ್ಯಂತರಾಜನು ಅರಣ್ಯದಲ್ಲಿ ಧನುಸ್ಸಿಗೆ ಬಾಣವನ್ನು ಹೂಡಿ, ಜಿಗರೆಯಮೇಲೆ ಪ್ರಯೋಗಮಾಡುವ ಸಮಯಕ್ಕೆ ವೈಖಾನಸಮುನಿಯು ಅಡ್ಡಬಂದು ಎಲೈ ರಾಜನೆ ತಡೆತಡೆ! ಬಾಣವನ್ನು ಬಿಡಬೇಡ! ದೇವರು ನಿನಗೆ ಅರಸೊತ್ತಿಗೆಯನ್ನೂ, ಶರೀರಬಲವನ್ನೂ, ಬಿಲ್ಲುಬಾಣಗಳನ್ನೂ ಅನುಗ್ರಹಿಸಿರುವುದು ದೀನಪ್ರಾಣಿಗಳನ್ನು ಸಂಹರಿಸಲಿಕ್ಕೋ? ಇಲ್ಲವೆ ಸಂರಕ್ಷಿಸುವುದಕ್ಕೋ! ಬಲ್ಲವರಿಗೆ ಹೊಲ್ಲದ ಇಂತಹ ಕಲ್ಲೆದೆಯ ಕೆಲಸಕ್ಕೆ ದೊಡ್ಡವೆನ್ನಿಸಿರುವ ನಿನ್ನ ಕೈಗಳಾದರೂ ಹೇಗೆ ಎದ್ದುವು, ಮನಸಾದರೂ ಹೇಗೆ ಒಪ್ಪಿತು? ಗುಣಗಳಿಂದ ದೊಡ್ಡವರೆನ್ನಿಸಿಕೊಳ್ಳುವವರೇ ನಿಜವಾದ ದೊಡ್ಡವರೆಂಬುದು ನಿನಗೆ ಗೊತ್ತಿಲ್ಲವೇ? ಇದನ್ನು ತಿಳಿದು ಇನ್ನು ಮೇಲೆ ಬೇಕಾದರೆ ಈ ಬಡ ಎರಳೆಯ ಮೇಲೆ ಬಾಣವನ್ನು ಬಿಡು! ಇಲ್ಲದಿದ್ದರೆ ಅದನ್ನು ತಿರುಗಿ ಬತ್ತಳಿಕೆಯಲ್ಲಿ ಇಡು.” ಎಂದನು. ಅದನ್ನು ಕೇಳಿದ ಕೂಡಲೆ ಅರಸನು “ ನಾನು ರಾಜನು ನನಗೆ ಉಪದೇಶಿಸಲಿಕ್ಕೆ ಈತನು ಯಾರು? ಎಂಬ ಅಹಂಕಾರಕ್ಕೊಳಗಾಗದೆ, ಆ ಕೂಡಲೆ ತನ್ನ ಬಾಣವನ್ನು ಕೆಳಗಿಳಿಸಿದನು. ಪ್ರಿಯಬಾಂಧವರೇ! ಈ ಸಮಯದ ಮುನಿಯ ವಚನಗಳೂ, ರಾಜನ ವರ್ತನವೂ ಸುಖಾಪೇಕ್ಷಿಗಳಾದ ನಾವೆಲ್ಲರೂ ನೆನಪಿಟ್ಟುಕೊಂಡು ನಡೆಯುವಂತಹವಿರುವುವು. ಶಿವನು ಕೊಟ್ಟ ನಮ್ಮ ತನುಮನಧನ ಶಕ್ತಿಗಳನ್ನು ನಮ್ಮ ಶಕ್ತ್ಯನುಸಾರ ಸಮಾಜೋನ್ನತಿಯ ಕಾರ್ಯಕ್ಕೆ ವೆಚ್ಚಮಾಡುತ್ತ ಅವುಗಳನ್ನು ಕೊಟ್ಟ ಶಿವನ ಅನುಗ್ರಹಕ್ಕೆ ಹೆಚ್ಚು ಪಾತ್ರರಾಗಬೇಕಲ್ಲದೆ ಅವುಗಳ ದುರುಪಯೋಗ ಮಾಡಿಕೊಂಡು, ನಮ್ಮ ಕಾಲಮೇಲೆ ನಾವೇ ಕಲ್ಲುಹಾಕಿಕೊಳ್ಳುವಂತೆ ಮಾಡಿಕೊಳ್ಳಬಾರದು. ಆದುದರಿಂದ ಈ ಬಗ್ಗೆ ನಾವೆಲ್ಲರೂ ಏಕೀಭವಿಸಿ ನಮ್ಮೆಲ್ಲರ ಐಕ್ಯಕ್ಕೆ ಭಂಗಬಾರದಂತೆ ವಿಚಾರಪೂರ್ವಕ ವ್ಯವಸ್ಥೆಯನ್ನು ತಪ್ಪದೇ ಮಾಡಿ, ಅದರಿಂದ ಸಮಾಜೋನ್ನತಿಯನ್ನು ಮಾಡುವುದರ ಶ್ರೇಯಸ್ಸಿಗೂ, ಮತಾಚಾರ್ಯರ ಉದ್ದೇಶವನ್ನು ಸ್ಮರಿಸಿ ನಡೆಯುವುದರ ಪುಣ್ಯಫಲಕ್ಕೂ, ಉದಾತ್ತವಿಚಾರ ಪರಿಪ್ಲುತವಾದ ನಮ್ಮ ಧರ್ಮಗ್ಲಾನಿಯನ್ನು ಹೋಗಲಾಡಿಸುವುದರ ಕೀರ್ತಿಗೂ ಭಾಜನರಾಗತಕ್ಕದು. ಒಕ್ಕಟ್ಟಿನ ಪ್ರಯೋಜನಾಂಶ ವಿಷಯದಲ್ಲಿ ಪೀತಾಂಬರದ ದೃಷ್ಟಾಂತವು ನಾವು ಸರ್ವದಾ ಕಣ್ಣುಮುಂದೆ ಇಟ್ಟುಕೊಂಡು ಆಚರಿಸತಕ್ಕದ್ದಾಗಿದೆ. ಪೀತಾಂಬರದೊಳಗಣ ಒಂದೊಂದೇ ಎಳೆಗಳನ್ನು ಮಾರಹತ್ತಿದರೆ ಏನೂ ಬೆಲೆಗಾಣವುದಿಲ್ಲ ಮತ್ತು ಅದನ್ನು ಬಹುತರ ಯಾರೂ [illegible]. ಅದೇ ಅವು ಜಾಣತನದಿಂದ ಹೆಣೆಯಲ್ಪಟ್ಟು ಒಂದೇ ಪೀತಾಂಬರವಾದಲ್ಲಿ ಅದಕ್ಕೆ ವ್ಯವಹಾರದಲ್ಲಿ ಮಹತ್ವ ಬಂದು ನೂರಾರು ರೂಪಾಯಿಗಳ ಬೆಲೆಗಾಣುವುದನ್ನು ನಾವು ಪ್ರತಿದಿನವು ನೋಡುತ್ತೇವೆ. ಒಟ್ಟು ಪೀತಾಂಬರದ ಬೆಲೆ, ಅದರೊಳಗಣ ಒಂದೊಂದೇ ಎಳೆಗಳ ಬೆಲೆ, ಇವುಗಳಲ್ಲಿ ಇರುವಷ್ಟೇ ಹೆಚ್ಚುಕಡಿಮೆಯು ನಮ್ಮೊಳಗಿನ ಒಕ್ಕಟ್ಟು ಮತ್ತು ಒಡಕುಗಳಲ್ಲಿ ರುವುದೆಂದು ಸ್ಪಷ್ಟದಲ್ಲಿ ಹೇಳುವೆನು. ಒಟ್ಟಿಗೆ ಉದಾತ್ತ ವಿಚಾರವೆಂಬ ತಳಹದಿಯಮೇಲೆ ಕಟ್ಟಿರುವ ನಮ್ಮ ಧರ್ಮ ಮಂದಿರಕ್ಕೆ ತೊಂದರೆ ಬಾರದಂತೆ ನಾವೆಲ್ಲರೂ ಯತ್ನಿಸತಕ್ಕದು.

ವೀರಶೈವ ಧರ್ಮದ ಉದಾತ್ತ ವಿಚಾರಗಳು.

ನಮ್ಮ ಹಿಂದುಸ್ಥಾನವು ಹೇಗೆ ಭೂಲೋಕದ ಸಾರವೆಂದು ಎನ್ನಿಸಿಕೊಂಡಿರುವುದೋ ಹಾಗೆ ನಮ್ಮ ಧರ್ಮವಾದರೂ ಭೂಲೋಕದೊಳಗಣ ಎಲ್ಲ ತಾತ್ವಿಕ ಧರ್ಮಗಳ ಸಾರವಾಗಿರುವುದು. ಅತಿವಿಸ್ತಾರವಾದ ಕ್ರಿಸ್ತ ಧರ್ಮದೊಳಗಣ “ ನಿನ್ನಂತೆ ನಿನ್ನ ನೆರೆಯವನನ್ನು ನೋಡು ” ಎಂಬ ಪ್ರಧಾನ ತತ್ವವನ್ನು ನಮ್ಮ ಧರ್ಮದೊಳಗಣ “ ಅದ್ವೈತ ” ಶಬ್ದವು ವ್ಯಕ್ತಪಡಿಸುವುದು. ಸುಮಾರು ಅರ್ಧ ಭೂಮಂಡಲವನ್ನೇ ವ್ಯಾಪಿಸಿದಂತಿರುವ ಬೌದ್ಧ ಧರ್ಮದೊಳಗಣ “ ಅಹಿಂಸಾ ಪರಮೋ ಧರ್ಮಃ ” ಎಂಬ ತತ್ವವನ್ನು ನಾವು ಅಕ್ಷರಶಃ ಪಾಲಿಸುತ್ತೇವೆ. ಜೈನ ಮತದೊಳಗಣ ರತ್ನತ್ರಯವೆನ್ನಿಸುವ “ ಸಮ್ಯಗ್ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ” ಈ ತತ್ವಗಳನ್ನು ನಮ್ಮ ಸಮ್ಯಗಿಚ್ಛಾಶಕ್ತಿ, ಸಮ್ಯಕ್ ಜ್ಞಾನಶಕ್ತಿ, ಸಮ್ಯಕ್ ಕ್ರಿಯಾಶಕ್ತಿಗಳು ಪ್ರಕಟೀಕರಿಸುವುವು. ಪ್ರಾಟೆಸ್ಟಂಟ, ಮಹಮ್ಮದೀಯ ಧರ್ಮಗಳೊಳಗಣ ನಿರ್ಗುಣೋಪಾಸನೆಯು ನಮ್ಮ ಧರ್ಮಕ್ಕೆ ಗ್ರಾಹ್ಯವಾಗಿರುವುದು. ಸಾರಾಂಶ—ತಾತ್ವಿಕ ಧರ್ಮಗಳಲ್ಲಿ ಮುಖ್ಯವಾಗಿರತಕ್ಕ ಆಸ್ತಿಕ್ಯಭಾವ, ಸುನೀತಿ, ಸದಾಚಾರಗಳು ನಮ್ಮ ಧರ್ಮದಲ್ಲಿ ಪರಿಪೂರ್ಣವಾಗಿದ್ದು, ಅವು ನಮ್ಮ ಇಹಪರ ಸುಖಗಳೆರಡಕ್ಕೂ ಕಾರಣವಾಗಿರುತ್ತವೆ. ಒಳದಾರಿಯಂತೆ ಅಥವಾ ಸೂಸ್ನಿಯಂತೆ ಅಲ್ಪಶ್ರಮದಿಂದ ಬಹುಲಾಭಮಾಡಿಕೊಳ್ಳಬೇಕೆಂಬುದೇ ನಮ್ಮ ಧರ್ಮದ ಉದಾತ್ತ ವಿಚಾರವಾಗಿರುವುದು. ಅಂತೆಯೇ “ ಷಟ್‌ಸ್ಥಲ ಜ್ಞಾನವಾನ್ ಪುಮಾನ್ ಸ ಏವ ವಂದ್ಯಃ ಸ ಏವ ಪೂಜ್ಯಃ ಸಂಸಾರವಿಜಯೀ ಮುಖಿಃ ” ಎಂಬ ಉಕ್ತಿಯಿಂದ ವ್ಯಾಸಕೃತ ಸ್ಕಂದಪುರಾಣವು ನಮ್ಮ ಧರ್ಮದ ಸರ್ವೋತ್ಕೃಷ್ಟತೆಯನ್ನು ವ್ಯಕ್ತಗೊಳಿಸುತ್ತದೆ. ಸ್ತ್ರೀಯು ಜನ್ಮ ಧರಿಸಿದ ಮೇಲೆ ಸಾಧಾರಣವಾಗಿ ಯಾವನಾದರೊಬ್ಬನನ್ನು ಲಗ್ನವಾಗಿರಬೇಕಾಗುವಂತೆ, ಮನುಷ್ಯ ಜನ್ಮವನ್ನು ತಾಳಿದಮೇಲೆ ಯಾವುದಾದರೊಂದು ಧರ್ಮದಲ್ಲಿ ಇರಲೇಬೇಕಾಗುವುದು. ಅದರೊಳಗೂ ತಾತ್ವಿಕವಾದ ಧರ್ಮದಲ್ಲಿ ಹುಟ್ಟುವುದು ಪುಣ್ಯವು. ಪುಣ್ಯಕರವಾದ ತಾತ್ವಿಕ ಧರ್ಮಗಳ ಸಾರವಾಗಿರುವ ವೀರಶೈವಧರ್ಮದಲ್ಲಿ ನಮ್ಮನ್ನು ಹುಟ್ಟುಮಾಡಿದುದಕ್ಕೆ ಪರಶಿವನನ್ನು ಎಷ್ಟು ಪ್ರಾರ್ಥಿಸಿದರೂ ತೀರದು. ಆದುದರಿಂದ ನಾವೆಲ್ಲರೂ ಧರ್ಮ ನಿರತರಾಗಿರತಕ್ಕದು. ಏಕೆಂದರೆ ಧರ್ಮವು ಮಾನವೀಯ ಸುಖದ ಮೂಲವಾಗಿರುವುದು. ಧರ್ಮ ಮಾಹಾತ್ಮ್ಯೆಯ ಬಗ್ಗೆ ನಮ್ಮ ವೀರಶೈವ ಧರ್ಮ ಗ್ರಂಥಗಳು ಹೇಳುವಂತೆಯೇ ವೈದ್ಯವಿದ್ಯಾ ವಿಶಾರದನಾದ ವಾಗ್ಭಟನು ತನ್ನ ಅಷ್ಟಾಂಗ ಹೃದಯವೆಂಬ ಸರ್ವಮಾನ್ಯ ಗ್ರಂಥದಲ್ಲಿ ಪ್ರತಿಪಾದಿಸುವುದೇನೆಂದರೆ “ ಸುಖಾರ್ಥಾಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ ॥ ಸುಖಂ ಚ ನ ವಿನಾ ಧರ್ಮಾತ್ ತಸ್ಮಾದ್ಧರ್ಮ ಪರೋಭವೇತ್ ॥ ೧ ॥ ” ಎಂದರೆ ಸಕಲರೂ ಸುಖಕ್ಕೋಸ್ಕರ ಯತ್ನಿಸುವರು. ಆ ಸುಖವು ಧರ್ಮದ ಹೊರತು ದೊರೆಯಲಾರದು. ಆದುದರಿಂದ ಪ್ರತಿಯೊಬ್ಬರೂ ಧರ್ಮ ನಿರತರಾಗಿರತಕ್ಕದು. ಎಂಬುದು ಇದರ ಭಾವವು.

ಸದ್ಯದ ಶಿಕ್ಷಣ ಸ್ಥಿತಿ.

ದಯಾಳು ಇಂಗ್ಲೀಷ ಸರ್ಕಾರದ ಕೃಪಾಬಲದಿಂದ ದೊರೆತಿರುವ ಶಿಕ್ಷಣದ ಸೌಲಭ್ಯದಿಂದಲೇ ನಮ್ಮಲ್ಲಿ ವಿಶೇಷವಾಗಿಲ್ಲದಿದ್ದರೂ ಕೆಲ ಪದವೀಧರರನ್ನು ಕಾಣತಕ್ಕದಾಗಿದೆ. ದಕ್ಷಿಣ ಮಹರಾಷ್ಟ್ರದಲ್ಲಿ ಎಂದರೆ ಧಾರವಾಡ, ವಿಜಾಪುರ, ಬೆಳಗಾಂ ಮತ್ತು ಕಾರ್ವಾರ ಈ ೪ ಜಿಲ್ಲೆಗಳಲ್ಲಿಯೂ ಒಟ್ಟು ೩೧|| ಲಕ್ಷ ಪ್ರಜೆಗಳಲ್ಲಿ ನಮ್ಮ ವೀರಶೈವರು ೯|| ಲಕ್ಷವಿರುವರು. ಇವರ ವಿದ್ಯಾಭಿವೃದ್ಧಿಗಾಗಿ ಕೈ|| ರಾ|| ಬ|| ಗುರುಸಿದ್ದಪ್ಪ [illegible] ಮತ್ತು ರಾ|| ಬ|| ರುದ್ರಗೌಡ ಅಣ್ಣಾ ಅರಟಾಳ ಸಿ. ಐ. ಎಸ್. ಒ., ಈ ಮಹಾನುಭಾವರುಗಳು ೧೮೮೩ ರಲ್ಲಿ ಸ್ಥಾಪಿಸಿದ ವಿದ್ಯಾಭಿವೃದ್ಧಿ ಫಂಡಿನ ಸಹಾಯದಿಂದ ಈವರೆಗೆ ಎಂದರೆ ಕಳೆದ ೨೮ ವರ್ಷಗಳಲ್ಲಿ ೩೦ ಜನರು ವಿದ್ಯಾ ಪ್ರಶಸ್ತಿಯನ್ನು ಪಡೆದಿರುವರು. ಇಷ್ಟು ಪ್ರಜಾಸಂಖ್ಯೆಗೆ ೨೮ ವರ್ಷಗಳಲ್ಲಿ ೩೦ ಜನರು ಮಾತ್ರ [illegible]

[೬ ನೆಯ ಪುಟವನ್ನು ನೋಡಿರಿ.]

೩ ಕಳೆಗಳು. ಸಚಿತ್ರಂ

ಶುಕಸಪ್ತತಿ

30

ಧರ್ಮ, ಕರ್ಮ, ಸತ್
ಶೋಚನೆ ಮುಂತಾದ ಲ್
ಜ್ಞಾನ, ಧ್ಯಾನ, ಯೋ
ಳನ್ನು; (೨)
ಲೋಕಾನು
ರಿಂದ ಸವ
ಅವಕ್ಕೆ
ಜ

ಮಹಾಸಭೆ ಬೆಳಗಾಮ್.

ನ ಶ್ರೀಮಂತ ವೀರಬಸಪ್ಪ ನಾಯಕ ಬಹದ್ದೂರ ಇವರ ಭಾಷಣವು.

(ಕಳೆದ ವಾರದ ಶೇಷ)

ಚಕ್ರವರ್ತಿ, ಶಿವಚಕ್ರವರ್ತಿ, ಮೊ ರಾಜರು ಆಚರಣೆಗೆ ತಂದು ಮಾಡಿ ಕೀರ್ತಿ ಪ್ರದೇಶವೆಂದು ಕರೆಸಿಕೊಳ್ಳುತ್ತದೆ. ಅದು ಲ್ಲಿ ಈ ಶ್ರೀಮಂತರು ಅನಾದಿಕಾಲದಿಂದಲೂ ಮಿಗಿಲಾ ಮಾಡಿ ಆ ದಾನಶೌರ್ಯ ಮುಂತಾದವುಗಳಲ್ಲಿ ಅಗ್ರಗಣ್ಯರೆಂದು ಪ್ರಸಿದ್ಧಿಯಾಗಿರುವುದು. ಇವರ ಅಭೂತಪೂರ್ವವಾದ ದಾನಮಾರ್ಗವನ್ನು ಕಂಡು ಜಗತ್ತೇ ಆಶ್ಚರ್ಯಪಡುತ್ತಿದೆ. ಸ್ವಾಮಿಭಕ್ತಿಯಿಂದ ಸಂಸ್ಥಾನಕ್ಕೆ ಸರ್ವಸ್ವವನ್ನೂ ಸಮರ್ಪಿಸಿ [illegible] ಶಿವಶರಣರಂತೆ ಶಿವಲೋಕಕ್ಕೆ ತೆರಳಿದ ಶಿವಲಿಂಗ ರುದ್ರೇಶರು, ಧನ್ಯರು, ಧನ್ಯರು! ಎನ್ನುವದು ನಾವು ಹೇಳಲಾರೆವು. ಈ ಶ್ರೀಮಂತರ [illegible] ಕರ್ನಾಟಕದಲ್ಲಿ ಈ ವಿಶಾಲವಾದ ಸಮಾಜೋನ್ನತಿಯ ಕಾರ್ಯಕ್ಕಾಗಿ ಕಂಕಣ ಬದ್ಧರಾಗಿದ್ದಂತೆ ಅತ್ತ ಮಹಾರಾಷ್ಟ್ರದಲ್ಲಿ ಸೊಲ್ಲಾಪುರದ ರಾ॥ ವಾರದ ಮಲ್ಲಪ್ಪನವರು ತ್ರಿಕರಣಪೂರ್ವಕವಾಗಿ ಮಹದಭ್ಯುದಯ ಕಾರ್ಯದಲ್ಲಿ ಮಗ್ನರಾಗಿರಲು ಅವರೂ ಈ ವರ್ಷ ನಮ್ಮ ಸಮಾಜದ ದುರ್ದೈವದಿಂದ ಕೈಲಾಸವಾಸಿಯಾದರು. ಇಷ್ಟಲ್ಲದೆ ವೀರಶೈವರಾಷ್ಟ್ರವೆಂಬ ಭವನಕ್ಕೆ ಸ್ತಂಭಭೂತರಾದ ಗಿದ್ದ ಪುಂಗನೂರು ಮಹಾರಾಜರು ಗತಿಸಿದುದರಿಂದಲೂ ಕಂಬಳಿಯ ಶ್ರೀಯುತ ಅಪ್ಪಯ್ಯಾಸ್ವಾಮಿ ಸಿಂತ್ರೆಯವರೂ, ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾದ ನೀಲಿಯ ಲಿಂಗಪ್ಪಣ್ಣನವರೂ ಮೃತರಾದುದರಿಂದಲೂ, ಸವದತ್ತಿಯ ಕಲ್ಮಠಾಧೀಶ್ವರರಾದ ಶ್ರೀ ಬಿದರಿಯ ಸ್ವಾಮಿಗಳವರು ಲಿಂಗೈಕ್ಯರಾದುದರಿಂದಲೂ ವೀರಶೈವ ಸಮಾಜಕ್ಕೆ ಬಹಳ ಹಾನಿಯುಂಟಾಯಿತು. ಇಂಥ ಮುಖ್ಯಮುಖ್ಯ ವಿಭೂತಿಗಳನ್ನು ಕಳೆದುಕೊಂಡು ಅನರ್ಥ ಪರಂಪರೆಗಳನ್ನು ಅನುಭೋಗಿಸಿದರೂ ಕೂಡ ಅಧೈರ್ಯಪಡದೆ ಸ್ವಧರ್ಮೋನ್ನತಿಯ ಕಡೆಗೆ ಲಕ್ಷ್ಯವಿಟ್ಟು ಏತತ್ಕಾರ್ಯ ಪ್ರವರ್ತಕನಾಗಿರುವುದೇ ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದು.

ಧಾರವಾಡ, ಬೆಂಗಳೂರ, ಸೊಲ್ಲಾಪುರ, ಬಳ್ಳಾರಿ ಮುಂತಾದ ಪಟ್ಟಣಗಳ ಜತೆಯಲ್ಲಿ ಬೆಳಗಾವ ಶಹರವು ಸಮಾವೇಶವಾಗುತ್ತಿದ್ದರೂ, ಆ ಸ್ಥಳಗಳಲ್ಲಿರುವಂತೆ ಇಲ್ಲಿ ವೀರಶೈವರ ಯಾವ ಸಂಸ್ಥೆಯೂ ಇಲ್ಲದುದಕ್ಕೆ ವಿಷಾದಿಸಬೇಕಾಗಿದೆ. ಇದಕ್ಕೆ ಇತರ ಪಟ್ಟಣಗಳಂತಹ ಧರ್ಮ ಜಾಗರೂಕತೆಯು ನಮ್ಮಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ. ಆದರೆ ಮೊನ್ನೆಮೊನ್ನೆ ಬೆಳಗಾವ, ಶಹಾಪೂರ, ವಡಗಾವಿ, ಗೋಕಾಕ, ಯಾದವಾಡ ಅಥಣಿ, ರಬಕವಿ, ಬೈಲಹೊಂಗಲ, ಸಂಪಗಾವ, ಅರಕೇರಿ, ನೇಸರಗಿ ಮುಂತಾದ ಗ್ರಾಮಗಳ ವೀರಶೈವರ ಉದಾರಾಶ್ರಯದಿಂದ ಶಹಾಪುರದಲ್ಲಿ ವೀರಶೈವರ ಒಂದು ಬೋರ್ಡಿಂಗು ಸ್ಥಾಪನೆಯಾದ ಸಂಗತಿಯನ್ನು ತಿಳಿಸಲಿಕ್ಕೆ ಬಹಳ ಆನಂದವಾಗುತ್ತದೆ. ಈ ಬೋರ್ಡಿಂಗಿಗೆ ಶಹಾಪುರದ ಚನ್ನಬಸಪ್ಪ ಕೋರ್ವೀರಪ್ಪ ಬನ್ನೂರ ಎಂಬ ಒಬ್ಬ ಬಡ ಹೆಣ್ಣುಮಗಳೂ, ಶ್ರೀಮತಿ ಭಾಗೀರಥೀಬಾಯಿ ಪ್ರತಿಗ ಪಕೀರಪ್ಪ ಹಳಕಟ್ಟಿ ಮುಕ್ಕಾಮ ವಿಜಾಪುರ ಎಂಬ ಸ್ತ್ರೀಮಣಿಯೂ ಪ್ರತ್ಯೇಕವಾಗಿ ೫॥ ರೂಪಾಯಿಗಳ ಸಹಾಯ ಮಾಡಿರುತ್ತಾರೆ. ಇದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕ ಸಂಗತಿಯೇ ಸರಿ. ಈ ಹೆಣ್ಣುಮಕ್ಕಳ ಅಭಿಮಾನವನ್ನು ಪ್ರತಿಯೊಬ್ಬರೂ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದಾಗಿದೆ ಮತ್ತು ಈ ಬೋರ್ಡಿಂಗಿಗೆ [illegible] ವೀರಶೈವ ಸರ್ದಾರ [illegible] ಇವರು ಮೊನ್ನೆಮೊನ್ನೆ ಒಂದು ಸರ್ಕಸಿನ ಹಣವನ್ನು ಕೊಟ್ಟದ್ದಕ್ಕಾಗಿ ನಾವೆಲ್ಲರೂ ಅವರ ಉಪಕಾರವನ್ನು ಸ್ಮರಿಸತಕ್ಕದ್ದಾಗಿದೆ. ಇಲ್ಲಿ ಇಂಗ್ಲೀಷ ವಿದ್ಯಾಭ್ಯಾಸವನ್ನು ಮಾಡಲೋಸುಗ ಬಂದ ಪರಸ್ಥಳದ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ತ್ರಾಸವನ್ನು ಕೆಲವು ಮಟ್ಟಿಗಾದರೂ ಕಡಿಮೆ ಮಾಡಬೇಕೆಂಬ ಕಾಂಕ್ಷೆಯಿಂದಲೂ, ಅವರ ಅಭ್ಯಾಸವು ನಿರಾತಂಕವಾಗಿ ನಡೆದು ಅವರು ಮುಂಬರಿಯಬೇಕೆಂಬ ಉದ್ದೇಶದಿಂದಲೂ ಇಲ್ಲಿಯ ಕಲೆಕ್ಟರ ಕಚೇರಿಯ ಕಾರಕೂನರಾದ ಮಿ॥ ಬಸೆಟ್ಟೆಪ್ಪ ಸಂಗಪ್ಪ ಚಟ್ಟಿ ಮತ್ತು ವಿರೂಪಾಕ್ಷಪ್ಪ ಶಿವರುದ್ರಪ್ಪ ಶ್ರೀಂಗಾರಿ ಈ ಉಭಯರ ಪ್ರಯತ್ನದಿಂದ ಈ ಬೋರ್ಡಿಂಗ ಸ್ಥಾಪಿತವಾಯಿತೆಂದು ಹೇಳಬಹುದು. ಸಮಾಜಾಭಿವೃದ್ಧಿಗೆ ರಾಜಭಾಷೆಯೇ ಮೂಲವಾದುದರಿಂದ, ಆ ರಾಜಭಾಷಾಭ್ಯಾಸಿಗಳಿಗೆ ಇಂತಹ ಬೋರ್ಡಿಂಗುಗಳು ಅಲ್ಲಲ್ಲಿ ಸ್ಥಾಪಿತವಾದರೆ ನಮ್ಮ ಸಮಾಜವು ಕ್ಷಿಪ್ರದಲ್ಲಿಯೇ ಮುಂಬರಿವುದೆಂಬುದಕ್ಕೆ ಸಂದೇಹವಿಲ್ಲ. ಅದುಕಾರಣ ಈಗ ಹೊಸತಾಗಿ ಜನನವಾದ ಈ ಬೆಳಗಾವಿಯ ಬೋರ್ಡಿಂಗೆಂಬ ಶಿಶುಗೂಸನ್ನು ಸಮಾಜ ಬಾಂಧವರು ಎತ್ತಿಕೊಳ್ಳಬೇಕಾಗಿದೆ. ಈ ಮಹಾಸಭೆಯ ಪ್ರಭಾವದಿಂದ ಇಲ್ಲಿ ವೀರಶೈವರ ಅನೇಕ ಸಂಸ್ಥೆಗಳು ಇನ್ನು ಮುಂದೆ ಆವಿರ್ಭವಿಸಬಹುದೆಂದು ತೋರುತ್ತದೆ.

ನಮ್ಮ ಪ್ರಾಂತದಲ್ಲಿ ನಿರಂಜನ ಸ್ವಾಮಿಗಳು, ಶ್ರೀಮಂತರು ಹಲಕೆಲವರು ಇದ್ದರೂ ವಿದ್ಯಾವಿಷಯವಾಗಿ ಪಕ್ಕಪ್ರೋತ್ಸಾಹಕರಿಲ್ಲದುದರಿಂದ, ಈ ಪ್ರಾಂತದ ಜನಾಂಗವು ಧಾರ್ಮಿಕ ಮೊದಲಾದ ವಿಷಯಗಳಲ್ಲಿ ನಾಗರಿಕತೆಯನ್ನು ಹೊಂದಿ ವರ್ತಿಸಲಿಕ್ಕೆ ಅವಕಾಶವಿಲ್ಲದಂತಾಯಿತು. ಆದರೆ ಈಗ ಲಿಗೆ ಆದಷ್ಟು ಮಹಾಸಭೆಗಳಿಂದ ಆ ಮಹಾಪ್ರಾಂತಗಳಲ್ಲಿರುವ ಜನರು ಲೋಕೋನ್ನತಿಯ ಕಡೆಗೆ ಲಕ್ಷ್ಯಕೊಟ್ಟಂತೆ ನಮ್ಮ ಪ್ರಾಂತದವರು ಸಹ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮುಂತಾದ ವಿಷಯಗಳಲ್ಲಿ ಉತ್ಕೃಷ್ಟಸ್ಥಿತಿಗೆ ಬರುವಂತೆ ಪ್ರೋತ್ಸಾಹಿಸುವುದಕ್ಕೋಸ್ಕರ ತಾವೆಲ್ಲರೂ ದಯಮಾಡಿಸಿ ಆಗಮಿಸಿದುದರಿಂದ ಅತ್ಯಾನಂದವಾಗುತ್ತದೆ. ಶ್ರೀಮನ್ನಿರಂಜನ ಅಲ್ಲಮಪ್ರಭುಸ್ವಾಮಿಗಳವರು ಶ್ರೀ ಹಾನಗಲ್ ಕುಮಾರ ಮಹಾಸ್ವಾಮಿಗಳವರು ಮಹಾಸಭೆಯ ಉತ್ಪಾದಕರಾಗಿ ಶ್ರೀ ಶಿವಯೋಗಮಂದಿರವೆಂಬ ಗುರುಕುಲವಾಸವನ್ನು ನಿರ್ಮಿಸಿ ವಿದ್ಯಾವರ್ಧನಕ್ಕಾಗಿ ಅಲ್ಲಲ್ಲಿ ಅನೇಕ ಚಿಕ್ಕಚಿಕ್ಕ ಸಂಸ್ಥೆಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನುಂಟುಮಾಡಿ, ಸಮಾಜಕ್ಕೆ ಅತ್ಯಂತ ಲಾಭಪ್ರದವಾದ ಸತ್ಕಾರ್ಯಗಳನ್ನು ಮಾಡಿರುವುದಕ್ಕಾಗಿಯೂ, ಸರ್ವ ಮಠಸ್ಥ ಬ್ರಹ್ಮಗಳ ಸ್ವಭಾವದಾಹರಣೆಗೆ ಮೂಲಭೂತರಾಗಿ ಇತರರು ಅನುಸರಣ ಮಾಡುವಂತೆ ಅವಿಶ್ರಾಂತ ಯತ್ನಗಳನ್ನು ಶ್ರದ್ಧೆಯಿಂದ ಮಾಡುತ್ತಿರುವುದಕ್ಕಾಗಿಯೂ ನಾವೆಲ್ಲರೂ ತ್ರಿಕರಣಪೂರ್ವಕವಾಗಿ ಆ ಮಹಾತ್ಮರ ಪಾದಧ್ಯಾನವನ್ನು ಮಾಡತಕ್ಕದ್ದಾಗಿದೆ. ಈ ಶ್ರೀಗಳು ಆಲೋಚಿಸಿದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಶಾರೀರಕ ಶ್ರಮವನ್ನು ಯಃಕಿಂಚಿತ್ತಾದರೂ ಲೆಕ್ಕಿಸದೆ ಅಹೋರಾತ್ರವೂ ಶ್ರಮಪಡುತ್ತಿರುವ ಶ್ರೀ ಬೀಳೂರ ಮಹಾಸ್ವಾಮಿಗಳವರನ್ನೂ ನಾವೆಲ್ಲರೂ ಪೂಜ್ಯಭಾವದಿಂದ ವಂದಿಸಬೇಕಾಗಿದೆ.

ಪ್ರಿಯ ಬಾಂಧವರೇ! ಧಾರ್ಮಿಕ ವಿಷಯಗಳು ಬಹುಗಹನವಾದುದರಿಂದಲೂ, ಮಹಾಸಭೆ ನಡೆಯುವ ೩ ದಿವಸಗಳ ಅಲ್ಪಾವಧಿಯಲ್ಲಿ ಈ ವಿಷಯಗಳ ವಿವೇಚನೆಯು ಆಗತಕ್ಕಷ್ಟು ಚೆನ್ನಾಗಿ ಆಗಲವಕಾಶವಿಲ್ಲೆಂದು ಕಂಡುಬಂದುದರಿಂದಲೂ ಮಹತ್ವದ ವಿಷಯಗಳನ್ನೆಲ್ಲಾ ಶ್ರೀಶಿವಯೋಗಮಂದಿರದಲ್ಲಿ ಪ್ರತಿವರ್ಷ ಕೂಡುವ ಸಭೆಯಲ್ಲಿ ವಿಮರ್ಶಿಸಲು ಬಿಟ್ಟು ಈ ಸಭೆಯಲ್ಲಿ ಬರಿಯ ವೀರಶೈವಮತದ ಮೂಲತತ್ವಗಳು ಅದರ ಉದಾತ್ತ ವಿಚಾರಗಳು ಮತ್ತು ವಿದ್ಯಾವರ್ಧಕ, ಔದ್ಯೋಗಿಕ, ವ್ಯವಸಾಯಿಕ ಮುಂತಾದ ವಿಷಯಗಳೇ ಚರ್ಚಿಸಲ್ಪಡುವಂತೆ ನಿರ್ಧರಿಸಿದುದರಿಂದ, ಈ ವರ್ಷದ ಸಭಾಕಾರ್ಯವು ವಿಶೇಷ ಲಾಭಪ್ರದವಾಗಬಹುದೆಂದು ನನ್ನ ನಂಬಿಗೆಯಿದೆ. ಈ ವಿಷಯಗಳ ವಿವೇಚನೆಯಲ್ಲದೆ ಹಿಂದಣ ೫ ಮಹಾಸಭೆಗಳ ನಿರ್ಣಯಗಳನ್ನು ಆದಷ್ಟು ಪ್ರಸಾರದಲ್ಲಿ ತರುವುದೂ ಈ ಮಹಾಸಭೆಯ ಮುಖ್ಯೋದ್ದೇಶವಾಗಿದೆ. ಮತ್ತು ಈ ಮಹಾಸಭೆಗೆ ಈ ವರ್ಷ ಪುಣೆಯ ಅಗ್ರಿಕಲ್ಚರಲ್ ಕಾಲೇಜದ ಪ್ರಿನ್ಸಿಪಾಲರಾದ ಡಾ॥ ಮ್ಯಾನಸಾಹೇಬ ಬಹಾದ್ದೂರರವರೂ, ಮುಂಬಯಿ ಇಲಾಖೆಯ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಯ ರೆಜಿಸ್ಟ್ರಾರರಾದ ಮಿ॥ ಕ್ಯಾಂಬೆಲ್ ಸಾಹೇಬ ಬಹಾದ್ದೂರರವರ ಪರವಾಗಿ ಪ್ರವೀಣ ವ್ಯಾಖ್ಯಾತಕಾರರೂ ಆಗಮಿಸಿದುದರಿಂದ, ವ್ಯಾಪಾರೋದ್ಯೋಗದ ಮತ್ತು ಒಕ್ಕಲತನದ ವಿಷಯವಾಗಿ ನಮ್ಮ ಸಮಾಜಕ್ಕೆ ವಿಶೇಷ ಉಪಯೋಗವಾದೀತೆಂದು ಕೋರುತ್ತೇನೆ.

ಕಾಲಾವಧಿಯ ಅಭಾವದ ಮೂಲಕ ಎಷ್ಟು ಅಡಚಣಿಗಳು ಬಂದಿದ್ದರೂ ಕೂಡ ಅವುಗಳನ್ನು ಲಕ್ಷಿಸದೆ ನಮ್ಮ ಸಮಾಜ ಭಗಿನಿಯರ ಮೇಲೆ ಕನಿಕರವಿಟ್ಟು, ಬಳ್ಳಾರಿಯಂತೆ ಈ ಮಹಾಸಭೆಗೂ ಸ್ತ್ರೀ ಪರಿಷತ್ತು ಜೋಡಿಸಲ್ಪಟ್ಟಿದೆ. ಈ ಪರಿಷತ್ತಿನ ಕಾರ್ಯವಾದರೂ ಸಮಾಧಾನಕರವಾಗಿ ಜರುಗುವದೆಂದು ನಂಬಿರುವೆನು. ಸ್ತ್ರೀಪರಿಷತ್ತನ್ನು ಬಳ್ಳಾರಿಯಂತೆ ಬೆಳಗಾವಿಯ ಮಹಾಸಭೆಗೂ ಜೋಡಿಸುವದಾಗಬೇಕೆಂದು ಸ್ಟಾರ ಪತ್ರದ್ವಾರ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿದ ಸೊಲ್ಲಾಪುರದ ಶ್ರೀಮತಿ ಭಾಗೀರಥಿಬಾಯಿ ಪಾಟೀಲ ಈ ಮಹಿಳಾಮಣಿಯವರ ಮತಾಭಿಮಾನವನ್ನು ನಾವೆಲ್ಲರೂ ಪ್ರೇಮಪೂರ್ವಕವಾಗಿ ಅಭಿನಂದಿಸಬೇಕಾಗಿದೆ

ನಮ್ಮ ಈ ಮಹಾಸಭೆಯನ್ನು ಇಲ್ಲಿ ನೆರವೇರಿಸಲು ಪ್ರಾರ್ಥಿಸಿಕೊಂಡುದಕ್ಕೆ ಜಿಲ್ಲಾ ಕಲೆಕ್ಟರರಾದ ಮಿ॥ ಬ್ರ್ಯಾಂಡರ ಸಾಹೇಬ ಬಹಾದ್ದೂರರವರು ಸಹಾನುಭೂತಿಯಿಂದ ಪರವಾನಗಿ ಕೊಡಲು ದಯಪಾಲಿಸಿದುದಕ್ಕಾಗಿಯೂ, ಮಹಾಸಭೆಯ ಮೇಲಣ ತಮ್ಮ ಪ್ರೇಮವನ್ನು ವ್ಯಕ್ತಪಡಿಸಿ ಅನೇಕ ಅನುಕೂಲ ಸಂಗತಿಗಳನ್ನು ಸೂಚಿಸಿ ಪ್ರತಿಯೊಂದು ಮಹಾಕಾರ್ಯದಲ್ಲಿ ನಮಗೆ ಸಹಾಯವನ್ನುಂಟುಮಾಡಿದುದಕ್ಕಾಗಿಯೂ ನಾವೆಲ್ಲರೂ ಮೆಕರ್ಬರ್ನಿರವರ ಉಪಕಾರವನ್ನು ಸ್ಮರಿಸತಕ್ಕದ್ದಾಗಿದೆ. ಮತ್ತು ಈ ಸಭಾಮಂಟಪಕ್ಕೋಸ್ಕರ ಜನಕಾಲಿ, ಪಾಸನ್ಕಳ ಮೊದಲಾದವುಗಳ ಬಗ್ಗೆ [illegible] ತ್ತುದಲ್ಲದೆ ಮಹಾಸಭೆಯ ಎಷ್ಟೋ ವಿಷಯಗಳಲ್ಲಿ ಪ್ರೇಮಪೂರ್ವಕವಾಗಿ ಅನೇಕ ಸಹಾಯಗಳನ್ನು ಒದಗಿಸಿಕೊಟ್ಟುದಕ್ಕಾಗಿಯೂ ಮಿ॥ ಚನ್ನಮಲ್ಲಪ್ಪ ಕಿತ್ತೂರ ಮೊದಲಾದ ಮಹನೀಯರ ಉಪಕಾರವನ್ನಾದರೂ ಭಾವಿಸತಕ್ಕದ್ದು.

ಈಗ ನಾವು ಕೂಡಿಸಿರುವ ಪರಿಷತ್ತು ಉದಾರರೂ, ನಿಷ್ಪಕ್ಷಪಾತಿಗಳೂ, ನ್ಯಾಯಪ್ರಿಯರೂ ಆದ ನಮ್ಮ ಸಾರ್ವಭೌಮ ಇಂಗ್ಲೀಷ ಚಕ್ರವರ್ತಿಗಳು ನಮಗೆ ದಯಪಾಲಿಸಿರುವ ಉದಾತ್ತ ಶಿಕ್ಷಣದ ಫಲಿತಾಂಶವಾಗಿದೆ. ಮತ್ತು ಇವರು ನಮ್ಮ ಸಮಾಜೋನ್ನತಿಗೆ ಅವಶ್ಯವಾದ ಎಷ್ಟೋ ಸಹಾಯಗಳನ್ನು ಕೊಟ್ಟು, ಕೊಡುತ್ತಲೂ ಇರುವರು ಆದುದರಿಂದ ನಾವು ರಾಜಭಕ್ತಿಯುಕ್ತರಾಗಿ ನಿಸ್ಸೀಮ ಪ್ರಜಾಧರ್ಮದಿಂದ ವರ್ತಿಸಿ, ಅವರ ರಾಜ್ಯಪರಿಪಾಲನೆಯು ನಮ್ಮ ಮೇಲೆ ಚಿರಕಾಲವಿರುವಂತೆ ಕರುಣಿಸೆಂದು ನಾವೆಲ್ಲರೂ ಶ್ರೀ ಜಗದೀಶನನ್ನು ಪ್ರಾರ್ಥಿಸತಕ್ಕದ್ದು.

ಇನ್ನೊಂದು ಅತ್ಯಾನಂದಕರ ಸಂಗತಿ ಏನೆಂದರೆ,—ನಮ್ಮ ಸಾರ್ವಭೌಮರಾದ ೫ ನೆಯ ಜಾರ್ಜ ಬಾದಶಹರವರೂ, ಮಹಾರಾಜ್ಞೀ ಮೇರೀ ಥೊರೆಸಾನಿಯವರೂ ಸಿಂಹಾಸನಾರೋಹಣಕ್ಕಾಗಿ ಇದೇ ತಿಂಗಳಲ್ಲಿ ನಮ್ಮ ಭರತಖಂಡಕ್ಕೆ ಸುರಕ್ಷಿತವಾಗಿ ದಯಮಾಡಿಸಿ, ಅದ್ವಿತೀಯ ಸಮಾರಂಭದಿಂದ ರಾಜ್ಯಾರೋಹಣಂಗೈದು, ದಿಲ್ಲಿಯ ದರ್ಬಾರನ್ನು ನೆರವೇರಿಸಿ ನಮ್ಮದೇಶದ ವಿಷಯವಾಗಿ ಸಹಾನುಭೂತಿಯನ್ನು ತೋರ್ಪಡಿಸಿದುದು ನಾವೆಲ್ಲರೂ ಅತ್ಯಂತ ಸಂತೋಷಪಡುವ ಸಂಗತಿಯಾಗಿದೆ. ಇಂಗ್ಲೀಷ ಸಾರ್ವಭೌಮರ ಆಳಿಕೆಯು ಇಲ್ಲಿ ನೆಲೆಗೊಂಡಮೇಲೆ ನಮ್ಮ ಭರತಖಂಡದ ರಾಜ್ಯಾರೋಹಣಕ್ಕೆ ದಯಮಾಡಿಸಿದ ಬಾದಶಹರವರಲ್ಲಿ ಇವರೇ ಮೊದಲಿನವರಾದುದರಿಂದಲೂ, ನಮ್ಮ ಭರತಖಂಡದ ಮೇಲಿರುವ ತಮ್ಮ ಪೂರ್ಣಪ್ರೇಮವನ್ನು ವ್ಯಕ್ತಪಡಿಸುವ ಸಲುವಾಗಿ ಈ ರಾಜದಂಪತಿಗಳು ರಾಜ್ಯಾರೋಹಣಕ್ಕಾಗಿ ಸ್ವತಃ ಈ ದೇಶಕ್ಕೆ ದಯಮಾಡಿಸಿ ಭಾರತೀಯರಿಗೆ ದರ್ಶನಲಾಭವನಿತ್ತಿರುವುದರಿಂದಲೂ ಈ ಅಪೂರ್ವಸಂಗತಿಯನ್ನು ರಾಜನಿಷ್ಠರಾದ ನಾವೆಲ್ಲರೂ ನಮ್ಮ ಸ್ಮರಣಪಥದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದಾಗಿದೆ. ಈ ರಾಜದಂಪತಿಗಳು ರಾಜ್ಯಾರೋಹಣ ಸಮಾರಂಭವನ್ನು ಸಾಂಗ ಮಾಡಿ ತಮ್ಮ ಸ್ವಸ್ಥಾನಕ್ಕೆ ಅಭಿಮುಖರಾಗಿರುವರು. ಇವರ ಪ್ರಯಾಣದಲ್ಲಿ ಶ್ರೀ ಪರಮೇಶ್ವರನು ಸುಖಶಾಂತಿಯನ್ನು ಕೊಡಲೆಂದು ನಾವೆಲ್ಲರೂ ಹಗಲಿರುಳೂ ಆತನ ಧ್ಯಾನಮಾಡತಕ್ಕದ್ದು. ಯಾವ ಸಾರ್ವಭೌಮರ ಆಡಳಿತದಲ್ಲಿ ನಮ್ಮ ವೀರಶೈವ ಮತವು ಉನ್ನತಿಯನ್ನು ಪಡೆದಿರುವುದೋ, ಯಾವ ಚಕ್ರವರ್ತಿಗಳ ಕೃಪಾಶಿಕ್ಷಣದ ಫಲಿತಾಂಶದಿಂದ ನಮ್ಮ ಮಹಾಸಭೆಯು ಈ ಸಮಾರಂಭವನ್ನು ಹೊಂದಿರುವುದೋ ಆ ಸಾರ್ವಭೌಮ ರಾಜರೇ ಸದ್ಯಕ್ಕೆ ನಮ್ಮ ಭರತಭೂಮಿಗೆ ದಯಮಾಡಿಸಿರುವುದರಿಂದ, ಅವರು ನಮ್ಮ ದೇಶದಲ್ಲಿರುವಾಗಲೇ ಅವರಿಗೆ ನಮ್ಮ ವೀರಶೈವರ ಜಯಜಯಕಾರವನ್ನು ಮಹಾಸಭೆಯವರು ತಂತಿಯ ಮೂಲಕವಾಗಿ ತಿಳಿಸುವುದು ಅತ್ಯಂತ ಅವಶ್ಯಕವಾದ ಸಂಗತಿಯೆಂದು ನಾನು ಅಭಿಪ್ರಾಯಪಡುತ್ತೇನೆ.

ಸಮಾಜಬಾಂಧವರೇ! ಈ ಸಭಾಕಾರ್ಯವು ನೆರವೇರಿದ ಕೂಡಲೆ ಸಭೆಯಲ್ಲಿ ನಿಷ್ಕರ್ಷೆಯಾದ ನಿಯಮಗಳನ್ನು ಆಚರಣೆಯಲ್ಲಿ ತರುವಂತೆ ಮಾಡಲಿಕ್ಕೆ ಜಿಲ್ಲಾ, ತಾಲ್ಲೂಕ, ಗ್ರಾಮ ಕಮಿಟಿಗಳನ್ನು ಸ್ಥಾಪಿಸಿ ಸೂಕ್ತವಾದ ನಿಯಮಗಳನ್ನು ಮಾಡಿ ಅವು ನಿರಾತಂಕವಾಗಿ ನಡೆಯುವಂತೆ ಅವಿಶ್ರಾಂತ ಸಾಹಸ ಪಡುವಿರೆಂದು ನಾನು ತುಂಬಾ ನಂಬಿರುವೆನು. ಮಹಾಸಭೆಯ ಘನವಾದ ಕಾರ್ಯವನ್ನು ಕೊನೆಗಾಣಿಸುವುದು ಅತ್ಯಂತ ದುಸ್ತರವೆಂಬ ವಿಷಯವು ಎಲ್ಲರ ಮನಸ್ಸಿಗೂ ಗೋಚರವಾಗಬಹುದು. ಆದರೂ ತಮ್ಮಂತಹ ಮಹನೀಯರ ದಯದಿಂದ ನಿರ್ವಿಘ್ನವಾಗಿ ಪೂರೈಸುವುದೆಂದು ನಂಬಿದ್ದೇನೆ. ಆದರೆ ಈ ಮಹಾಸಭಾ ಕಾರ್ಯವನ್ನು ನಾವು ಕೈಕೊಂಡಾಗ ಅಲ್ಪಾವಧಿ ಇದ್ದುದರಿಂದ ತಾವೆಲ್ಲರೂ ನಮ್ಮ ವ್ಯವಸ್ಥೆಗಳಲ್ಲಿ ಕಂಡುಬರುವ ಕುಂದು ಕೊರತೆಗಳನ್ನು ಲಕ್ಷಿಸದೆ ನಮ್ಮ ಅಲ್ಪಶಕ್ತಿಗನುಗುಣವಾಗಿ ಮಾಡುವ ಆದರೋಪಚಾರವನ್ನು ಸ್ವೀಕರಿಸಿ ಈ ಮಹಾ ಕಾರ್ಯಕ್ಕೆ ತಮ್ಮೆಲ್ಲರ ಹಸ್ತಾವಲಂಬನೆಗೊಟ್ಟು ಒಂದೇ ಮನಸ್ಸಿನಿಂದ ಈ ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿ ಭಾಜನರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಾಜ್ಞರೆ! ನನ್ನ ಭಾಷಣವನ್ನು ಸಾವಧಾನಚಿತ್ತದಿಂದ ಇಷ್ಟು ವೇಳೆಯವರೆಗೆ ಆಲಿಸಿದುದಕ್ಕಾಗಿಯೂ, ಈ ಮಹಾಸಭೆಗೆ ದಯವಿಟ್ಟು ಆಗಮಿಸಿದುದಕ್ಕಾಗಿಯೂ ತಮ್ಮೆಲ್ಲರ ಉಪಕಾರವನ್ನು ಪುನಃಪುನಃ ಸ್ಮರಿಸುತ್ತೇನೆ ಇನ್ನು ವೇಳೆ ಮಹಾಸಭೆಯ ಅಧ್ಯಕ್ಷರನ್ನು ಆರಿಸಿಕೊಂಡು ಮುಂದಣ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ತಮ್ಮೆಲ್ಲರನ್ನೂ ಬೇಡಿಕೊಂಡು ಮತ್ತು ನಮ್ಮ ಕಾರ್ಯದಲ್ಲಿ ಯಶಸ್ಸುಕೊಡಲೆಂದು ಶ್ರೀಮಜ್ಜಗತ್ಪಾಲಕನಾದ ಪರಮೇಶ್ವರನನ್ನು ಅನನ್ಯ ಭಾವದಿಂದ ಪ್ರಾರ್ಥಿಸಿ ತಮ್ಮೆಲ್ಲರ ಅಪ್ಪಣೆಯನ್ನು ಕೇಳಿಕೊಳ್ಳುತ್ತೇನೆ.

೬ ನೆಯ ಶ್ರೀಮದ್ವೀರಶೈವ } ವಿ. ಪಿ. ದೇಸಾಯಿ ಜಹಗೀರದಾರ,
ಮಹಾಸಭೆ, ಬೆಳಗಾವ. } ಸ್ವಾಗತ ಕಮೀಟಿಯ ಅಧ್ಯಕ್ಷ

ಅಧ್ಯಕ್ಷರ ಭಾಷಣದ ಮುಖ್ಯಾಂಶವು.

[ಕಳೆದ ವಾರದ ಶೇಷ]

“ವೀ” ಎಂದರೆ ಶಿವಜೀವೈಕ್ಯ ಬೋಧನೆಯ ವಿದ್ಯೆಯು “ರ” ಎಂದರೆ ರಮಿಸುವವರು:— “ವೀರಶೈವ” ರೆಂದರೆ ಶಿವಜೀವೈಕ್ಯ ವಿದ್ಯೆಯಲ್ಲಿ ರಮಿಸುವ ಶೈವರು; ಎಂದರೆ ಅಖಿಲ ಸುಖಾಪೇಕ್ಷೆಗಾಗಿ ಸೃಷ್ಟಿನಿಯಂತನಾದ ಪರಶಿವನನ್ನು ಆಶ್ರಯಿಸಿ ಕಡೆಗೆ ಅತನಲ್ಲಿಯೆ ಲೀನವಾಗುವರು. ಎಂಬರ್ಥವಾಗುವುದು. ಪಂಡಿತರಿಗೆ ಮಾತ್ರ ತಿಳಿಯತಕ್ಕ ಈ ಏಕಾಕ್ಷರೀ ನಿಘಂಟವನ್ನು ತುಸು ಹಿಂದಕ್ಕೆ ಸರಿಸಿ ಸಕಲರಿಗೂ ತಿಳಿಯತಕ್ಕ ಅನೇಕಾಕ್ಷರೀ ನಿಘಂಟವನ್ನು ಮುಂದೆ ಇಟ್ಟುಕೊಂಡು ವಿಚಾರಿಸಿದರೂ ಇದೇ ವ್ಯುತ್ಪತ್ತಿಯು ನಿಷ್ಪನ್ನವಾಗುವುದು. ಹೇಗೆಂದರೆ “ವೀರಶೈವರು” ಅಂದರೆ ಶೂರರಾದ ಶೈವರು. ಶೂರರು ಏತರಲ್ಲಿ? ಜ್ಞಾನಮಾರ್ಗದಲ್ಲಿ; ಯಾವ ಜ್ಞಾನಮಾರ್ಗದಲ್ಲಿ? ಹಾಗೆಂದರೇನು? ಹೊಳೆಗಳು ಭೂಮಿಯಲ್ಲಿ ಹುಟ್ಟಿ ಹರಿಯುತ್ತ, ಕಡೆಗೆ ಸಮುದ್ರಕ್ಕೆ ಕೂಡಿ ಸಮುದ್ರತ್ವವನ್ನು ಹೊಂದುವಂತೆ ಇಹಲೋಕದ ಸುಖಗಳನ್ನು ಸುಲಭವಾಗಿ ಪಡೆದು, ಕಡೆಗೆ ಶಿವನಲ್ಲಿ ಕೂಡಿ ಬೆರೆದು ಶಿವತ್ವವನ್ನು ಹೊಂದುವುದು.

ಇನ್ನು ಶಕ್ತಿ ವಿಶಿಷ್ಟಾದ್ವೈತ ಎಂಬ ವಾಕ್ಯಾರ್ಥವನ್ನು ಪರಿಭಾವಿಸಿದರೂ ಇದೇ ತತ್ವವು ವ್ಯಕ್ತವಾಗುವುದು ಅದು ಹೇಗೆಂದರೆ—ದ್ವೈತವಾದಿಗಳು ಅವಿಚ್ಛಿನ್ನವಾದ ಪರಮಾತ್ಮನೊರ್ವನೆ ಜಗತ್ತಿನ ಸ್ಥಿತ್ಯಾದಿಗಳಿಗೆ ಕಾರಣನಾಗಿರುತ್ತಾನೆಂದು ಹೇಳುತ್ತಾರೆ; ನಾವು ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನಾದ ಶಿವನು ಒಬ್ಬನೇ ಇದ್ದರೂ ಅನಾದಿ ಶಕ್ತಿಯಿಂದ ಅವಿನಾಭಾವರೂಪ ಸಂಬಂಧವುಳ್ಳವನಾಗಿ ಅದ್ವಿತೀಯನಾಗಿರುತ್ತಾನೆಂದು ತಿಳಿದು, ಅದಕ್ಕೆ ಅನುಕೂಲವಾಗಿ ವರ್ತಿಸುವುದರಿಂದ ನಮ್ಮ ಮತವು ಶಕ್ತಿ ವಿಶಿಷ್ಟಾದ್ವೈತವೆಂದು ವ್ಯಕ್ತವಾಗುವುದು ಆ ಶಕ್ತಿಯು ಪ್ರಾಮುಖ್ಯವಾಗಿ ಇಚ್ಛಾ, ಜ್ಞಾನ, ಕ್ರಿಯೆಗಳೆಂದು ಮೂರು ಪ್ರಕಾರವಾಗಿರುವುದು. ನಮಗೆ ಇಹಪರ ಸುಖಗಳೆರಡೂ ಸಾಧ್ಯವಾಗುವುದು. ಇವುಗಳ ಬಲದಿಂದಲೇ! ಸಂಪದುತ್ಪಾದನಕ್ಕೆ ಆಧಾರಭೂತಗಳಾದ ಭೂಮಿ (ಬಂಡವಾಳ) ಶ್ರಮ, ಈ ಮೂರರಲ್ಲಿ ಯಾವದಾದರೊಂದು ಕೊರತೆಯಾದರೆ ಕೆಲಸವು ಹೇಗೆ ಸಾಗಲಾರದೋ ಹಾಗೆ ಶಿವನ ಮುಕ್ಕಣ್ಣುಗಳಂತಿದ್ದ ಈ ಶಕ್ತಿ ಪ್ರಯತ್ನಗಳಲ್ಲಿ ಯಾವುದಾದರೊಂದು ಕಡಿಮೆಯಾದಲ್ಲಿ ಯಾವ ಸುಖವೂ ನಮಗೆ ದೊರಕಲಾರದು. ಈ ಶಕ್ತಿಗಳನ್ನು ಅಚಲವಾಗಿರಿಸುವ ಉದ್ದೇಶದಿಂದಲೇ ತತ್ ಸಮರ್ಥವಾದಂಥ ಅಷ್ಟಾವರಣಗಳೆಂಬ ಮಹತ್ತಮವಾದ ತತ್ವಗಳನ್ನು ದೂರದರ್ಶಿಗಳಾದ ನಮ್ಮ ಪೂರ್ವದ ಧೀಜ್ಞಾನಯುತ ಸ್ಥಾಪಕ ಮಹಾನುಭಾವರು ಮುಖ್ಯವಾಗಿ ಇಟ್ಟುಕೊಂಡಿರುವರು. ಈ ಅಷ್ಟಾವರಣಗಳು ನಮ್ಮ ಇಹಪರ ಸುಖಗಳೆರಡಕ್ಕೂ ಹೇಗೆ ಸಂಬಂಧವಾಗಿರುವುವೆಂಬುದನ್ನು ಶ್ರೀ ಶಿವಯೋಗ ಮಂದಿರವು ಇದೇ ತಿಂಗಳಿಂದ ಪ್ರಕಟಿಸ ಹತ್ತಿರುವ “ವೀರಶೈವ ಧರ್ಮ ತರಂಗಿಣೀ” ಎಂಬ ಮಾಸಪತ್ರಿಕೆಯು ಸವಿಸ್ತಾರವಾಗಿ ಬೋಧಿಸುವ ಕಾರ್ಯವನ್ನು ಕೈಕೊಂಡು ಪ್ರಥಮಾಂಕದಲ್ಲಿ ಲಿಂಗಧಾರಣ ಮಾಹಾತ್ಮ್ಯವನ್ನು ವೇದಾಗಮಾದಿ ಪ್ರಮಾಣಗಳಿಂದ ಸಿದ್ಧಪಡಿಸಲು ಉಪಕ್ರಮಿಸಿರುವುದು. ವಿಸ್ತಾರಭಯದಿಂದ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಆದರೂ ಸ್ವಲ್ಪದರಲ್ಲಿಯೇ ಒಂದೆರಡರ ಬಗ್ಗೆ ಹೇಳುವುದೇನೆಂದರೆ— ಗುರುವು ಸನ್ಮಾರ್ಗ ದರ್ಶಕನಾಗಿ ಅಜ್ಞಾನವನ್ನು ಹೋಗಲಾಡಿಸುವವನು. ವ್ಯವಹಾರದಲ್ಲಿ ಕ್ಷಣಕ್ಷಣಕ್ಕೆ ಜ್ಞಾನದ ಮಾಹಾತ್ಮ್ಯೆಯು ಎಷ್ಟಿರುವುದೆಂಬುದು ಪ್ರತಿಯೊಬ್ಬರಿಗೆ ಗೊತ್ತೇ ಇದೆ! ಸತ್ಕ್ರಿಯಾದಿಗಳಿಂದ ಮನಸ್ಸಿನ ಸ್ಥಿರತ್ವವನ್ನು ಉಂಟುಮಾಡುವುದಕ್ಕಾಗಿ ಪರಶಿವನ ಚಿಹ್ನರೂಪವಾದ ಲಿಂಗವು ಅವಶ್ಯವಾದುದು. ವ್ಯವಹಾರದಲ್ಲಿ ಜಡವೆನಿಸಿದ ಶ್ರೀಶೈಲ, ಗೋಕರ್ಣ, ಕಾಶಿ ಮೊದಲಾದುವೇ ಲಿಂಗಧಾರಣದಿಂದ ಪವಿತ್ರತೆಯನ್ನು ಹೊಂದಿ ಪೂಜ್ಯವಾಗುತ್ತಿರುವಲ್ಲಿ, ಕೇವಲ ಚೇತನಾರೂಪನಾದ ಮಾನವನು ತನ್ನ ಶರೀರದಲ್ಲಿ ದೀಕ್ಷಾತ್ರಯಗಳಿಂದ ಪರಿಶುದ್ಧವಾದ ಲಿಂಗವನ್ನು ಧಾರಣಮಾಡೋಣವೆಂದರೆ ಆ ಮಾನವ ದೇಹದ ಪವಿತ್ರತೆಯನ್ನೂ, ಧನ್ಯತೆಯನ್ನೂ, ಜನ್ಮಸಾಫಲ್ಯವನ್ನೂ ಎಷ್ಟು ಬಣ್ಣಿಸಿದರೂ ಸ್ವಲ್ಪವೇ. ಈ ರೀತಿಯನ್ನು ವಿಚಾರಿಸಲು “ಶೆಟ್ಟಿ ಇಳಿದುದೇ ಪಟ್ಟಣವೆ” ನ್ನಿಸುವಂತೆ ಲಿಂಗಧಾರಿಯಾದ ಪ್ರತ್ಯೇಕ ವೀರಶೈವನಿದ್ದುದೇ ಒಂದೊಂದು ಕ್ಷೇತ್ರವೆಂದು ಹೇಳಲಿಕ್ಕೆ ಸಂದೇಹವೇನಾದರೂ ಬರುವಂತಿರುವುದೋ? ಇನ್ನು ಪ್ರಸಾದ ವಿಷಯವನ್ನು ಕುರಿತು ವಿಚಾರಿಸಿದರೆ ಐಕ್ಯವೆಂಬ ಅಮೋಘವಾದ ತತ್ವವು ವ್ಯಕ್ತವಾಗುವುದು. ವ್ಯವಹಾರದಲ್ಲಿ ಭಿನ್ನಭಿನ್ನ ಆಚಾರ ವಿಚಾರಗಳ ಜನಸಮೂಹವು ಕೇವಲ ಪ್ರೀತಿಯಿಂದಲೇ ಕಟ್ಟಲ್ಪಟ್ಟು ಇಷ್ಟಾರ್ಥಗಳನ್ನು ಸಾಧಿಸಿಕೊಂಡು ಸುಖಿಸುತ್ತಿರುವಲ್ಲಿ, ಒಂದೇ ಗುರುವಿನ ಶಿಷ್ಯರೆನಿಸಿ ಅಷ್ಟಾವರಣ ನಿಷ್ಠರಾಗಿದ್ದ ನಮ್ಮೆಲ್ಲರ ಅಂತಃಕರಣಗಳು ಗುರುಪ್ರಸಾದದಿಂದ ಏಕೀಭವಿಸುತ್ತಿರಲು ನಮಗೆ ಏಹಿಕದಲ್ಲಾದರೂ ಪಾರತ್ರಿಕದಲ್ಲಾದರೂ ಯಾವುದು [illegible]

ಆದರೆ ನಮ್ಮ ಸಮಾಜಬಂಧುಗಳಲ್ಲಿ ಕೆಲಕೆಲವು ಪ್ರಮುಖರೆಂಬವರೇ ಸರ್ವೋತ್ತಮವಾದ ಈ ನಮ್ಮ ಮತ ತತ್ವಗಳನ್ನು ಮರೆತು ನಡೆಯುವುದನ್ನು ನೋಡಿ ಒಂದು ತೆರದ ವಿಷಾದವಾಗುತ್ತದೆ. ಇವರು ಪೂರ್ವ ಸುಕೃತದಿಂದ ದೇವರು ತಮಗೆ ದಯಪಾಲಿಸಿದ ಬುದ್ಧಿಬಲ ದ್ರವ್ಯಬಲ ಮುಂತಾದ ಬಲಗಳನ್ನು ಐಕ್ಯ, ಶಿಕ್ಷಣ, ವ್ಯಾಪಾರ, ಒಕ್ಕಲತನ, ಕೈಗಾರಿಕೆ ಮುಂತಾದ ಸಮಾಜ ಸೌಖ್ಯಾಭಿವೃದ್ಧಿಯ ಪುಣ್ಯಕಾರ್ಯಗಳಿಗಾಗಿ ವೆಚ್ಚಮಾಡುತ್ತ ಇದೇ ಸಮಾಜೋನ್ನತಿಯನ್ನೂ ಅದರಿಂದ ಸ್ವೋನ್ನತಿಯನ್ನೂ ಸಾಧಿಸಿಕೊಳ್ಳುವಲ್ಲಿ ಪೌರುಷವನ್ನು ತೋರಿಸಿ, ನಿಜವಾದ ವೀರಶೈವರೆನ್ನಿಸುತ್ತ ಧನ್ಯರಾಗುವುದರ ಬದಲು, ಮುಂದಣ ಪರಿಣಾಮವೇನಾದೀತೆಂಬುದರ ಕಡೆಗೆ ನೋಡದೆ ಸಮಾಜೋನ್ನತಿಯ ಮುಖ್ಯಕಾರಣಗಳಲ್ಲೊಂದಾದ ಐಕ್ಯಕ್ಕೆ ಭಂಗ ಬರುವಂತೆ ಆಚರಿಸುತ್ತಾ ಅಹಮಿಕೆಯಿಂದಲೋ, ಅಜ್ಞಾನದಿಂದಲೋ, ಸ್ವಾರ್ಥಪರಾಯಣತೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಏನೋ ತಿಳಿಯದು. ಸಮಾಜದಲ್ಲಿ ಅನೇಕತರದ ಒಳಜಗಳಗಳನ್ನೂ ಬಣಗಳನ್ನೂ ಹುಟ್ಟಿಸಿ, ಹಗಲಿರುಳು ಬಡಿದಾಡುವುದರಲ್ಲಿ ತಮ್ಮ ತನುಮನಧನಗಳನ್ನೂ, ಅಮೂಲ್ಯವಾದ ವೇಳೆಯನ್ನೂ ವ್ಯರ್ಥವಾಗಿ ಸೂರೆಮಾಡುತ್ತ, ತಮ್ಮ ಕುಲಕ್ಕೆ ಮತಗೌರವವನ್ನು ಕುಂದಿಸುತ್ತ, ಕಟ್ಟಕಡೆಗೆ ಮತಸ್ಥಾಪನಾಚಾರ್ಯರ ಆಜ್ಞೆಗಳನ್ನು ಎಂದರೆ ಅವರ ಮತೋದ್ದೇಶಗಳನ್ನು ಅಲಕ್ಷ್ಯಮಾಡಿ ನಡೆದುದರಿಂದುಂಟಾಗುವ ದುಷ್ಪರಿಣಾಮದ ಫಲಕ್ಕೆ ಕಾರಣವಾಗುವದನ್ನು ಮನದಲ್ಲಿ ತಂದರೆ ಯಾವ ವಿಚಾರವಂತ ಪುರುಷನಿಗೆ ದುಃಖವೆನಿಸಲಿಕ್ಕಿಲ್ಲ! ವಿಷಪಾನದ ಪರಿಣಾಮವು ವಿಷವೇ ಆಗುವುದು. ಎಂದರೆ ಕೆಟ್ಟ ಕೆಲಸದ ಪರಿಣಾಮವು ಕಡೆಗೆ ಕೆಟ್ಟದೇ ಆಗುವುದು. ಎಂಬ ಸೃಷ್ಟಿಯ ಸ್ವಾಭಾವಿಕ ಧರ್ಮಕ್ಕನುಸರಿಸಿ ನಮ್ಮ ಸಮಾಜ ಬಾಂಧವರ ಇಂತಹ ಕೃತ್ಯಗಳಿಂದ ಇವರಿಷ್ಟೋದ್ದೇಶವು ನೆರವೇರುವದೊತ್ತಟ್ಟಿಗುಳಿದು, ಒಂದೇ ಹರಗೋಲಿನಲ್ಲಿದ್ದ ತನಗೆ ಆಗದವರನ್ನು ಮುಳುಗಿಸಲು ಹರಗೋಲಿಗೆ ತೂತು ಕೊರೆವ ಮೂರ್ಖನ ಸ್ಥಿತಿಯಂತೆ ಕಟ್ಟಕಡೆಗೆ “ಸಮುದಾಯಸ್ಯ [illegible] ಸ್ಯಂತು!” ಎಂಬಂತೆ ದುಸ್ಥಿತಿಯು ನಮ್ಮೆಲ್ಲರ ಪಾಲಿನ ಏಕೆಯಾಗಿ ಕುಳಿತರೆ ಅದರಲ್ಲಿ ಆಶ್ಚರ್ಯವೇನು? ನಮ್ಮ ಒಳಜಗಳದ ಪರಿಣಾಮವು ಇಬ್ಬರ ನ್ಯಾಯ ಮೂರನೆಯವನಿಗೆ ಆದಾಯವೆಂಬಂತಾಗುತ್ತ ನಡೆದಿದ್ದು ಅದು ಮೆಲ್ಲಮೆಲ್ಲನೆ ಸುತ್ತುಕಡೆಯಿಂದ ನಮ್ಮ ಸಮಾಜದ ಜೀವನವೆನ್ನಿಸಿರುವ ಶಿಕ್ಷಣಪ್ರಗತಿಗೆ ಸಹ ಅಡ್ಡ ಬರುತ್ತಿರುವುದೆಂದು ಹೇಳಲಿಕ್ಕೆ ಬಹಳ ವ್ಯಸನವಾಗುತ್ತದೆ! ವ್ಯಸನವಾಗುತ್ತದೆ!! ಈ ಪ್ರಸಕ್ತಿಯಲ್ಲಿ ಸಣ್ಣದಾದರೂ ಅತ್ಯಂತ ಮಹತ್ವವಾದುದಾಗಿರುವ ಒಂದು ಪೌರಾಣಿಕ ಸಂಗತಿಯನ್ನು ನಾವೆಲ್ಲರೂ ಪರಿಶೀಲಿಸಬೇಕು.

ಹಿಂದಕ್ಕೆ ದುಷ್ಯಂತರಾಜನು ಅರಣ್ಯದಲ್ಲಿ ಧನುಸ್ಸಿಗೆ ಬಾಣವನ್ನು ಹೂಡಿ, ಜಿಗರೆಯಮೇಲೆ ಪ್ರಯೋಗಮಾಡುವ ಸಮಯಕ್ಕೆ ವೈಖಾನಸಮುನಿಯು ಅಡ್ಡಬಂದು ಎಲೈ ರಾಜನೆ ತಡೆ ತಡೆ! ಬಾಣವನ್ನು ಬಿಡಬೇಡ! ದೇವರು ನಿನಗೆ ಅರಸೊತ್ತಿಗೆಯನ್ನೂ, ಶರೀರಬಲವನ್ನೂ, ಬಿಲ್ಲುಬಾಣಗಳನ್ನೂ ಅನುಗ್ರಹಿಸಿರುವುದು ದೀನಪ್ರಾಣಿಗಳನ್ನು ಸಂಹರಿಸಲಿಕ್ಕೋ? ಇಲ್ಲವೆ ಸಂರಕ್ಷಿಸುವುದಕ್ಕೋ! ಬಲ್ಲವರಿಗೆ ಹೊಲ್ಲದ ಇಂತಹ ಕಲ್ಲೆದೆಯ ಕೆಲಸಕ್ಕೆ ದೊಡ್ಡವೆನ್ನಿಸಿರುವ ನಿನ್ನ ಕೈಗಳಾದರೂ ಹೇಗೆ ಎದ್ದುವ, ಮನಸಾದರೂ ಹೇಗೆ ಒಪ್ಪಿತು? ಗುಣಗಳಿಂದ ದೊಡ್ಡವರೆನ್ನಿಸಿಕೊಳ್ಳುವವರೇ ನಿಜವಾದ ದೊಡ್ಡವರೆಂಬುದು ನಿನಗೆ ಗೊತ್ತಿಲ್ಲವೇ? ಇದನ್ನು ತಿಳಿದು ಇನ್ನು ಮೇಲೆ ಬೇಕಾದರೆ ಈ ಬಡ ಎರಳೆಯ ಮೇಲೆ ಬಾಣವನ್ನು ಬಿಡು! ಇಲ್ಲದಿದ್ದರೆ ಅದನ್ನು ತಿರುಗಿ ಬತ್ತಳಿಕೆಯಲ್ಲಿ ಇಡು.” ಎಂದನು. ಅದನ್ನು ಕೇಳಿದ ಕೂಡಲೆ ಅರಸನು “ನಾನು ರಾಜನು ನನಗೆ ಉಪದೇಶಿಸಲಿಕ್ಕೆ ಈತನು ಯಾರು? ಎಂಬ ಅಹಂಕಾರಕ್ಕೊಳಗಾಗದೆ, ಆ ಕೂಡಲೆ ತನ್ನ ಬಾಣವನ್ನು ಕೆಳಗಿಳಿಸಿದನು. ಪ್ರಿಯಬಾಂಧವರೇ! ಈ ಸಮಯದ ಮುನಿಯ ವಚನಗಳೂ, ರಾಜನ ವರ್ತನವೂ ಸುಖಾಪೇಕ್ಷಿಗಳಾದ ನಾವೆಲ್ಲರೂ ನೆನಪಿಟ್ಟುಕೊಂಡು ನಡೆಯುವಂತಹವಿರುವುವು. ಶಿವನು ಕೊಟ್ಟ ನಮ್ಮ ತನುಮನಧನ ಶಕ್ತಿಗಳನ್ನು ನಮ್ಮ ಶಕ್ತ್ಯನುಸಾರ ಸಮಾಜೋನ್ನತಿಯ ಕಾರ್ಯಕ್ಕೆ ವೆಚ್ಚಮಾಡುತ್ತ ಅವುಗಳನ್ನು ಕೊಟ್ಟ ಶಿವನ ಅನುಗ್ರಹಕ್ಕೆ ಹೆಚ್ಚು ಪಾತ್ರರಾಗಬೇಕಲ್ಲದೆ ಅವುಗಳ ದುರುಪಯೋಗ ಮಾಡಿಕೊಂಡು, ನಮ್ಮ ಕಾಲಮೇಲೆ ನಾವೇ ಕಲ್ಲುಹಾಕಿಕೊಳ್ಳುವಂತೆ ಮಾಡಿಕೊಳ್ಳಬಾರದು. ಆದುದರಿಂದ ಈ ಬಗ್ಗೆ ನಾವೆಲ್ಲರೂ ಏಕೀಭವಿಸಿ ನಮ್ಮೆಲ್ಲರ ಐಕ್ಯಕ್ಕೆ ಭಂಗಬಾರದಂತೆ ವಿಚಾರಪೂರ್ವಕ ವ್ಯವಸ್ಥೆಯನ್ನು ತಪ್ಪದೇ ಮಾಡಿ, ಅದರಿಂದ ಸಮಾಜೋನ್ನತಿಯನ್ನು ಮಾಡುವುದರ ಶ್ರೇಯಸ್ಸಿಗೂ, ಮತಾಚಾರ್ಯರ ಉದ್ದೇಶವನ್ನು ಸ್ಮರಿಸಿ ನಡೆಯುವುದರ ಪುಣ್ಯಫಲಕ್ಕೂ, ಉದಾತ್ತವಿಚಾರ ಪರಿಪ್ಲುತವಾದ ನಮ್ಮ ಧರ್ಮಗ್ಲಾನಿಯನ್ನು ಹೋಗಲಾಡಿಸುವುದರ ಕೀರ್ತಿಗೂ ಭಾಜನರಾಗತಕ್ಕದ್ದು. ಐಕ್ಯತ್ವದ ಪ್ರಯೋಜನಾಂಶ ವಿಷಯದಲ್ಲಿ ಪೀತಾಂಬರದ ದೃಷ್ಟಾಂತವು ನಾವು ಸರ್ವದಾ ಕಣ್ಣುಮುಂದೆ ಇಟ್ಟುಕೊಂಡು ಆಚರಿಸತಕ್ಕದ್ದಾಗಿದೆ. ಪೀತಾಂಬರದೊಳಗಿನ ಒಂದೊಂದೇ ಎಳೆಗಳನ್ನು ಮಾರಹತ್ತಿದರೆ ಏನೂ ಬೆಲೆಗಾಣವುದಿಲ್ಲ. ಮತ್ತು ಅದನ್ನು ಬಹುತರ ಯಾರೂ ಮಾರನಾದಿಸುವುದಿಲ್ಲ. ಅದೇ ಅವು ಜಾಣತನದಿಂದ ಹೆಣೆಯಲ್ಪಟ್ಟು ಒಂದೇ ಪೀತಾಂಬರವಾದಲ್ಲಿ ಅದಕ್ಕೆ ವ್ಯವಹಾರದಲ್ಲಿ ಮಹತ್ವ ಬಂದು ನೂರಾರು ರೂಪಾಯಿಗಳ ಬೆಲೆಗಾಣುವುದನ್ನು ನಾವು ಪ್ರತಿದಿನವೂ ನೋಡುತ್ತೇವೆ. ಒಟ್ಟು ಪೀತಾಂಬರದ ಬೆಲೆ, ಅದರೊಳಗಣ ಒಂದೊಂದೇ ಎಳೆಗಳ ಬೆಲೆ, ಇವುಗಳಲ್ಲಿ ಇರುವಷ್ಟೇ ಹೆಚ್ಚು ಕಡಿಮೆಯು ನಮ್ಮೊಳಗಿನ ಒಕ್ಕಟ್ಟು ಮತ್ತು ಒಡಕುಗಳಲ್ಲಿರುವುದೆಂದು ಸ್ವಲ್ಪದರಲ್ಲಿ ಹೇಳುವೆನು. ಒಟ್ಟಿಗೆ ಉದಾತ್ತ ವಿಚಾರವೆಂಬ ತಳಹದಿಯಮೇಲೆ ಕಟ್ಟಿರುವ ನಮ್ಮ ಧರ್ಮ ಮಂದಿರಕ್ಕೆ ತೊಂದರೆ ಬಾರದಂತೆ ನಾವೆಲ್ಲರೂ ಯತ್ನಿಸತಕ್ಕದು

ವೀರಶೈವ ಧರ್ಮದ ಉದಾತ್ತ ವಿಚಾರಗಳು.

ನಮ್ಮ ಹಿಂದುಸ್ಥಾನವು ಹೇಗೆ ಭೂಲೋಕದ ಸಾರವೆಂದು ಎನ್ನಿಸಿಕೊಂಡಿರುವುದೋ ಹಾಗೆ ನಮ್ಮ ಧರ್ಮವಾದರೂ ಭೂಲೋಕದೊಳಗಣ ಎಲ್ಲ ತಾತ್ವಿಕ ಧರ್ಮಗಳ ಸಾರವಾಗಿರುವುದು. ಅತಿವಿಸ್ತಾರವಾದ ಕ್ರಿಸ್ತ ಧರ್ಮದೊಳಗಣ “ನಿನ್ನಂತೆ ನಿನ್ನ ನೆರೆಯವನನ್ನು ನೋಡು” ಎಂಬ ಪ್ರಧಾನ ತತ್ವವನ್ನು ನಮ್ಮ ಧರ್ಮದೊಳಗಣ “ಅದ್ವೈತ” ಶಬ್ದವು ವ್ಯಕ್ತಪಡಿಸುವುದು. ಸುಮಾರು ಅರ್ಧ ಭೂಮಂಡಲವನ್ನೇ ವ್ಯಾಪಿಸಿದಂತಿರುವ ಬೌದ್ಧ ಧರ್ಮದೊಳಗಣ “ಅಹಿಂಸಾ ಪರಮೋ ಧರ್ಮಃ” ಎಂಬ ತತ್ವವನ್ನು ನಾವು ಅಕ್ಷರಶಃ ಪಾಲಿಸುತ್ತೇವೆ. ಜೈನ ಮತದೊಳಗಣ ರತ್ನತ್ರಯವೆನ್ನಿಸುವ “ಸಮ್ಯಗ್ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ” ಈ ತತ್ವಗಳನ್ನು ನಮ್ಮ ಸಮ್ಯಗಿಚ್ಛಾಶಕ್ತಿ, ಸಮ್ಯಕ್ ಜ್ಞಾನಶಕ್ತಿ, ಸಮ್ಯಕ್ ಕ್ರಿಯಾಶಕ್ತಿಗಳು ಪ್ರಕಟೀಕರಿಸುವುವು. ಪ್ರಾಟೆಸ್ಟಂಟ, ಮಹಮ್ಮದೀಯ ಧರ್ಮಗಳೊಳಗಣ ನಿರ್ಗುಣೋಪಾಸನೆಯು ನಮ್ಮ ಧರ್ಮಕ್ಕೆ ಗ್ರಾಹ್ಯವಾಗಿರುವುದು. ಸಾರಾಂಶ—ತಾತ್ವಿಕ ಧರ್ಮಗಳಲ್ಲಿ ಮುಖ್ಯವಾಗಿರತಕ್ಕ ಆಸ್ತಿಕ್ಯಭಾವ, ಸುನೀತಿ, ಸದಾಚಾರಗಳು ನಮ್ಮ ಧರ್ಮದಲ್ಲಿ ಪರಿಪೂರ್ಣವಾಗಿದ್ದು, ಅವು ನಮ್ಮ ಇಹಪರ ಸುಖಗಳೆರಡಕ್ಕೂ ಕಾರಣವಾಗಿರುತ್ತವೆ. ಒಳದಾರಿಯಂತೆ ಅಥವಾ ಸೊನ್ನೆಯಂತೆ ಅಲ್ಪಶ್ರಮದಿಂದ ಬಹುಲಾಭಮಾಡಿಕೊಳ್ಳಬೇಕೆಂಬುವೇ ನಮ್ಮ ಧರ್ಮದ ಉದಾತ್ತ ವಿಚಾರವಾಗಿರುವುದು. ಅಂತೆಯೇ “ಷಟ್‌ಸ್ಥಲ ಜ್ಞಾನವಾನ್ ಪುಮಾನ್ ಸ ಏವ ವಂದ್ಯಃ ಸ ಏವ ಪೂಜ್ಯಃ ಸಂಸಾರವಿಮೋಚಕಃ” ಎಂಬ ಉಕ್ತಿಯಿಂದ ವ್ಯಾಸಕೃತ ಸ್ಕಂದಪುರಾಣವು ನಮ್ಮ ಧರ್ಮದ ಸರ್ವೋತ್ಕೃಷ್ಟತೆಯನ್ನು ವ್ಯಕ್ತಗೊಳಿಸುತ್ತದೆ. ಸ್ತ್ರೀಯು ಜನ್ಮ ಧರಿಸಿದ ಮೇಲೆ ಸಾಧಾರಣವಾಗಿ ಯಾವನಾದರೊಬ್ಬನನ್ನು ಲಗ್ನವಾಗಿರಬೇಕಾಗುವಂತೆ, ಮನುಷ್ಯ ಜನ್ಮವನ್ನು ತಾಳಿದಮೇಲೆ ಯಾವುದಾದರೊಂದು ಧರ್ಮದಲ್ಲಿ ಇರಲೇಬೇಕಾಗುವುದು. ಅದರೊಳಗೂ ತಾತ್ವಿಕವಾದ ಧರ್ಮದಲ್ಲಿ ಹುಟ್ಟುವುದು ಪುಣ್ಯವು. ಪುಣ್ಯಕರವಾದ ತಾತ್ವಿಕ ಧರ್ಮಗಳ ಸಾರವಾಗಿರುವ ವೀರಶೈವಧರ್ಮದಲ್ಲಿ ನಮ್ಮನ್ನುತ್ಪನ್ನಮಾಡಿದುದಕ್ಕೆ ಪರಶಿವನನ್ನು ಎಷ್ಟು ಪ್ರಾರ್ಥಿಸಿದರೂ ತೀರದು. ಆದುದರಿಂದ ನಾವೆಲ್ಲರೂ ಧರ್ಮ ನಿರತರಾಗಿರತಕ್ಕದು. ಏಕೆಂದರೆ ಧರ್ಮವು ಮಾನವೀಯ ಸುಖಕ್ಕೆ ಮೂಲವಾಗಿರುವುದು. ಧರ್ಮ ಮಾಹಾತ್ಮ್ಯೆಯ ಬಗ್ಗೆ ನಮ್ಮ ವೀರಶೈವ ಧರ್ಮ ಗ್ರಂಥಗಳು ಹೇಳುವಂತೆಯೇ ವೈದ್ಯವಿದ್ಯಾ ವಿಶಾರದನಾದ ವಾಗ್ಭಟನು ತನ್ನ ಅಷ್ಟಾಂಗ ಹೃದಯವೆಂಬ ಸರ್ವಮಾನ್ಯ ಗ್ರಂಥದಲ್ಲಿ ಪ್ರತಿಪಾದಿಸಿರುವುದೇನೆಂದರೆ “ಸುಖಾರ್ಥಾಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ ॥ ಸುಖಂ ಚ ನ ವಿನಾ ಧರ್ಮಾತ್ ತಸ್ಮಾದ್ಧರ್ಮ ಪರೋಭವೇತ್ ॥ ೧ ॥” ಎಂದರೆ ಸಕಲರೂ ಸುಖಕ್ಕೋಸ್ಕರ ಯತ್ನಿಸುವರು. ಆ ಸುಖವು ಧರ್ಮದ ಹೊರತು ದೊರೆಯಲಾರದು. ಆದುದರಿಂದ ಪ್ರತಿಯೊಬ್ಬರೂ ಧರ್ಮ ನಿರತರಾಗಿರತಕ್ಕದು. ಎಂಬುದು ಇದರ ಭಾವವು.

ಸದ್ಯದ ಶಿಕ್ಷಣ ಸ್ಥಿತಿ.

ದಯಾಳು ಇಂಗ್ಲೀಷ ಸರ್ಕಾರದ ಕೃಪಾಬಲದಿಂದ ದೊರೆತಿರುವ ಶಿಕ್ಷಣದ ಸೌಲಭ್ಯದಿಂದಲೇ ನಮ್ಮಲ್ಲಿ ವಿಶೇಷವಾಗಿಲ್ಲದಿದ್ದರೂ ಕೆಲ ಪದವೀಧರರನ್ನು ಕಾಣತಕ್ಕದ್ದಾಗಿದೆ. ದಕ್ಷಿಣ ಮಹಾರಾಷ್ಟ್ರದಲ್ಲಿ ಎಂದರೆ ಧಾರವಾಡ, ವಿಜಾಪುರ, ಬೆಳಗಾಂ ಮತ್ತು ಕಾರವಾರ ಈ ೪ ಜಿಲ್ಲೆಗಳಲ್ಲಿಯೂ ಒಟ್ಟು ೩೧ ಲಕ್ಷ ಪ್ರಜೆಗಳಲ್ಲಿ ನಮ್ಮ ವೀರಶೈವರು ೯॥ ಲಕ್ಷವಿರುವರು. ಇವರ ವಿದ್ಯಾಭಿವೃದ್ಧಿಗಾಗಿ ಕೈ॥ ರಾ॥ ಬ॥ ಗುರುಶಿದ್ಧಪ್ಪ ಅಣ್ಣ ಗಿಲಗಂಚಿ ಮತ್ತು ರಾ॥ ಬ॥ ರುದ್ರಗೌಡ ಅಣ್ಣ ಅರಟಾಳ ಸಿ. ಐ. ಎಸ್. ಒ., ಈ ಮಹಾನುಭಾವರುಗಳು ೧೮೮೩ ರಲ್ಲಿ ಸ್ಥಾಪಿಸಿದ ವಿದ್ಯಾಭಿವೃದ್ಧಿ ಫಂಡಿನ ಸಹಾಯದಿಂದ ಈವರೆಗೆ ಎಂದರೆ ಕಳೆದ ೨೮ ವರ್ಷಗಳಲ್ಲಿ ೩೦ ಜನರು ವಿದ್ಯಾಪ್ರಶಸ್ತಿಯನ್ನು ಪಡೆದಿರುವರು. ಇಷ್ಟು ಪ್ರಜಾಸಂಖ್ಯೆಗೆ ೨೮ ವರ್ಷಗಳಲ್ಲಿ ೩೦ ಜನರು ಮಾತ್ರ [illegible]

[೬ ನೆಯ ಪುಟವನ್ನು ನೋಡಿರಿ]

ಮೈಸೂರ್ ಸ್ಟಾರ್

೧೯೧೨ ನೆಯ ಜನವರಿ ತಾ॥ ೮ ನೆಯ ಸೋಮವಾರ

ಸ್ವವಿಷಯವು.

ಈ ಸ್ಟಾರ್ ಪತ್ರಿಕೆಯು ವಾರ ಪತ್ರಿಕೆಯಾಗಿ ಹೊರಡಲಾರಂಭಿಸಿ ಇಲ್ಲಿಗೆ ೯ ವರ್ಷಗಳು ಕಳೆದು ೧೦ ನೆಯ ವರ್ಷವು ನಡೆಯುತ್ತಿದೆ. ಜನಗಳ ನೈತಿಕ, ಧಾರ್ಮಿಕ ಸಾಮಾಜಿಕ, ಔದ್ಯೋಗಿಕ ಮತ್ತು ರಾಜಕೀಯ ಸುಧಾರಣಾ ವಿಚಾರಗಳಲ್ಲಿ ಈ ಪತ್ರಿಕೆಯು ವಿಶೇಷ ಶ್ರದ್ಧೆಯನ್ನು ವಹಿಸಿ ಅತ್ಯಗತ್ಯವಾದ ಲೇಖನಗಳನ್ನು ಬರೆದು ಸಾಲೋಚಿತವಾದ ಸೂಚನೆಗಳನ್ನು ಕೊಡುತ್ತ ವಾಚಕಮಹಾಶಯರಿಗೆ ವಿಶೇಷ ರಂಜಕವಾಗಿರುವುದೆಂದು ಎಲ್ಲರೂ ಬಲ್ಲರಾದುದರಿಂದ, ಪುನಃಪುನಃ ಬರೆಯ ಬೇಕಾದುದಿಲ್ಲವು. ಇದಕ್ಕೆಲ್ಲ ಗ್ರಾಹಕರ ಮತ್ತು [illegible] ಪ್ರೋತ್ಸಾಹವೇ ಕಾರಣವಾಗಿರುತ್ತದೆ. ಈವರೆಗೆ ಉದಾರಾಶಯವನ್ನು ತೋರುತ್ತ ಬಂದಿರುವ ಈ ಪತ್ರಿಕಾ ಚಂದಾದಾರರಿಗೂ ಮತ್ತು ಪ್ರೋತ್ಸಾಹಕರಿಗೂ ಹಾಗೂ ಸಕಾಲದಲ್ಲಿ ಅನೇಕ ಉಪಯುಕ್ತ ಲೇಖನಗಳನ್ನು [illegible] ಉಪಕಾರಕರಿಗೂ ನಾವು [illegible] ಇತರರು [illegible] ಪ್ರಾರ್ಥಿಸುತ್ತೇವೆ. [illegible] ಮುಂದಕ್ಕೆ ತಾವು ಚಂದಾ ಹಣವನ್ನು [illegible] ಮಹಾಶಯರು ಹೊಸ ವರ್ಷದ [illegible] ಸಮಯದಲ್ಲಾದರೂ ಉದಾರಚಿತ್ತದಿಂದ ತಮ್ಮ ಮೇಲಿರುವ ಪತ್ರಿಕಾ ಋಣಭಾಗವನ್ನು ತೀರಿಸಿ, ನಮ್ಮ ಕೃತಜ್ಞತೆಗೆ ಭಾಜನರಾಗದೇ ಇರಲಾರರೆಂದು ನಿರೀಕ್ಷಿಸುತ್ತೇವೆ.

ಗತವರ್ಷದ ಸಮಾಲೋಕನವು.

ಹೋದ ವರ್ಷದಲ್ಲಿ ಮುಂಗಾರು ಮಳೆಯು ತಕ್ಕಮಟ್ಟಿಗೆ ನಡೆದುದರಿಂದ ಕೆಲಕಡೆ ತಕ್ಕಮಟ್ಟಿಗೆ ಬೆಳೆಯೂ, ದನಕರುಗಳಿಗೆ ನೀರೂ, ಮೇವೂ ದೊರಕುವಂತಾಗಿದ್ದರೂ, ಹಿಂಗಾರು ಮಳೆಯು ಆದಿಭಾಗದಲ್ಲಿ ಅನೇಕ ಕಡೆ ಆಗದೇ ಹೋದುದರಿಂದ, ಸುತರಾಂ ಬೆಳೆಯಾಗದೆ ದನಕರುಗಳಿಗೆ ನೀರೂ ಮೇವೂ ಸಹಾ ದೊರಕದಂತಾದುದಲ್ಲದೆ, ಕೆಲಕಡೆ ಕ್ಷಾಮವೂ ತಲೆದೋರಿ ಅದರ ನಿವಾರಣಾಕಾರ್ಯಗಳು ಪ್ರಕ್ರಮಿಸಲ್ಪಟ್ಟಿದ್ದುವು. ಆದರೆ ದೈವಾನುಗ್ರಹದಿಂದ ಹಿಂಗಾರುಮಳೆಯು ಅಂತ್ಯಭಾಗದಲ್ಲಿ ತಕ್ಕಮಟ್ಟಿಗೆ ನಡೆಯಿಸಿ ಕ್ಷಾಮಭೀತಿಯನ್ನು ತಪ್ಪಿಸಿದುದು ಸಂತೋಷಕರವೇ ಸರಿ. ಆದರೂ ಸರ್ವತ್ರ ಮಳೆಬೆಳೆಯನುಕೂಲವಾಗಿ ಆಗದೇ ಹೋದುದರಿಂದ, ಅಕ್ಕಿಯು ಪಲ್ಲಾ ೧ಕ್ಕೆ ೧೩-೧೪ ರೂ. ನಂತೆಯೂ, ರಾಗಿಯು ೬ ರೂ ನಂತೆಯೂ, ತುಪ್ಪ ಸೇರು ೧ ಕ್ಕೆ ೫-೬ ಆಣೆಯಂತೆಯೂ ಮಾರಲ್ಪಡುತ್ತಿವೆ. ಅದುಕಾರಣ ಬಡವರು ಅವನ್ನು ಕೊಂಡು ತಿನ್ನುವುದು ಕಷ್ಟವಾಗಿರುವುದು. ಈ ವರ್ಷವಲ್ಲಾದರೂ ಮುಂಗಾರುಮಳೆಯು ಸಮರ್ಪಕವಾಗಿ ನಡೆದು ಜನರ ಮತ್ತು ಪಶುಗಳ ನೀರಿಗೂ, ಆಹಾರಕ್ಕೂ ಅನುಕೂಲವಾಗಿ ರಾಜ್ಯವು ಸುಭಿಕ್ಷವಾಗಿರುವಂತೆ ದೀನರಕ್ಷಕನಾದ ಭಗವಂತನು ಕೃಪೆಗೈಯಲೆಂದು ಅನನ್ಯಭಾವದಿಂದ ಬೇಡುತ್ತೇವೆ.

ಕಳೆದ ೧೯೧೧ ನೆಯ ವರ್ಷಾಂತ್ಯದಲ್ಲಿ ಶ್ರೀ ಜಾರ್ಜ್ ಸಾರ್ವಭೌಮ ದಂಪತಿಗಳು ತಮ್ಮ ಹಿಂದಣ ಚಕ್ರವರ್ತಿ ಮತ್ತು ಚಕ್ರವರ್ತಿನಿಯರುಗಳು ಪಾದಸ್ಪರ್ಶಮಾಡದೇ ಇದ್ದಂತಹ ಭಾರತಭೂಮಿಗೆ ದಯಮಾಡಿಸಿ, ಪುರಾಣಪ್ರಸಿದ್ಧರಾದ ಚಂದ್ರವಂಶದ ಯುಧಿಷ್ಠಿರಾದಿಯಾಗಿ ಅನೇಕ ಹಿಂದೂ ರಾಜರುಗಳಿಗೂ, ಚರಿತ್ರಪ್ರಸಿದ್ಧರಾದ ಅಕಬರ್ ಮೊದಲಾದ ಮೊಗಲ್ ಚಕ್ರವರ್ತಿಗಳಿಗೂ ರಾಜಧಾನಿಯಾಗಿದ್ದು ಬಹು ಪ್ರಖ್ಯಾತವಾಗಿದ್ದ ದಿಲ್ಲಿಯ ನಗರದಲ್ಲಿ ಅಭೂತಪೂರ್ವವೂ ಅದ್ವಿತೀಯವೂ, ಚಿರಸ್ಮರಣೀಯವೂ ಆದ ತಮ್ಮ ಕಿರೀಟಧಾರಣ ಮಹೋತ್ಸವದ ಉತ್ಕರ್ಷವನ್ನು ಅತ್ಯಂತ ವೈಭವದಿಂದ ಪ್ರದರ್ಶಿಸಿ, ತಮ್ಮ ಭಾರತ ಪ್ರಜಾಕೋಟಿಯಲ್ಲಿ ತಮಗಿರತಕ್ಕ ನಿಸರ್ಗವಾದ ಅಭಿಮಾನಾತಿಶಯವನ್ನು ತೋರ್ಪಡಿಸಿದುದಲ್ಲದೆ ಭಾರತೀಯರ ಏಳಿಗೆಗೆ ಮೂಲವಾದ ಪ್ರಾಥಮಿಕ ಶಿಕ್ಷಣೆಗೆ ಸೌಲಭ್ಯವನ್ನು ಕಲ್ಪಿಸಿ, ಪ್ರಮುಖ ಜನರಿಗೆ ಪ್ರಶಸ್ತಿಯನ್ನು ಕೊಟ್ಟು ಅನೇಕ ಅನರ್ಥಕಾರಕವಾಗಿಯೂ 'ಭಾರತೀಯರು ರಾಜಭಕ್ತಿಧುರಂಧರರು' ಎಂಬ ಕೀರ್ತಿಗೆ ಕಳಂಕವನ್ನುಂಟುಮಾಡುವಂತಹುದಾಗಿಯೂ ಇದ್ದ ವಂಗಭಂಗವನ್ನು ತಪ್ಪಿಸಿ ಮತ್ತು ಇಂದ್ರಪ್ರಸ್ಥವೆಂದು ಪುರಾಣ ಪ್ರಸಿದ್ಧವಾಗಿದ್ದು ಕಾಲಚಕ್ರವಿಶೇಷದಿಂದ ಅನಾಮಧೇಯವಾಗಿದ್ದ ದಿಲ್ಲಿಯ ಪಟ್ಟಣವನ್ನು ಪುನಃ ಭರತಖಂಡದ ರಾಜಧಾನಿಯನ್ನಾಗಿ ಮಾಡಿ ಭಾರತೀಯರ ಸ್ವಭಾವಸಿದ್ಧವಾದ ರಾಜಭಕ್ತಿ ವಿಶ್ವಾಸವು ರೂಢಮೂಲವಾಗುವಂತೆ ಮಾಡಿದರು. ಭಾರತಪ್ರಜೆಗಳಾದರೋ ತಮ್ಮ ಸಾರ್ವಭೌಮರವರು ತೋರಿಸಿದ ಪ್ರೇಮಾತಿಶಯದಿಂದಲೂ ಮಾಡಿದ ವರದಾನದಿಂದಲೂ ಆನಂದಾಬ್ಧಿಯಲ್ಲಿ ತೇಲುತ್ತ ತಮ್ಮ ಭಾಗದ ಪುಣ್ಯಮೂರ್ತಿಯೇ ಅವತರಿಸಿರುವರೆಂದು ಧನ್ಯವಾದವನ್ನು ಮಾಡುತ್ತಿರುವರು. ಈ ಕಾರಣದಿಂದ ಕಳೆದ ವರ್ಷವು ಹಿಂದಣ ಎಲ್ಲಾ ವರ್ಷಗಳನ್ನು ಮೀರಿಸಿ ಭರತಖಂಡದ ಚರಿತ್ರೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿ ಚಿರಸ್ಮರಣೀಯವಾಗಿರುವುದು.

ಕಳೆದ ವರ್ಷದಲ್ಲಿ ಮೇಲೆಕಂಡಪ್ರಕಾರ ಭರತಖಂಡಕ್ಕೆ ಶುಭವಾಗಿರುವಾಗ್ಗೆ ಅತ್ತಲಾಗಿ ಪರದೇಶದಲ್ಲಿ, ತುರ್ಕಿ ಇಟಲಿ ರಾಜ್ಯಗಳಿಗೆ ಯುದ್ಧವುಂಟಾಗಿ ಅನೇಕ ಅನರ್ಥಪ್ರಾಣಹಾನಿಗಳಾಗುತ್ತಿರುವುವು; ಪರ್ಷ್ಯಾ ರಾಜ್ಯಾಡಳಿತದವಿಚಾರದಲ್ಲಿ ಅಕ್ರಮವುಂಟಾಗಿ ಅದಕ್ಕೂ, ರಷ್ಯಾ ರಾಜ್ಯಕ್ಕೂ ಮನಸ್ತಾಪ ಹುಟ್ಟಿರುವುದರಿಂದ, ರಷ್ಯಾ ರಾಜ್ಯವು ಪರ್ಷ್ಯಾದಕೂಡ ಯುದ್ಧಮಾಡಲು ಸೇನೆಯನ್ನು ಕಳುಹಿಸಿರುವುದು. ಆದರೆ ಇಂಗ್ಲಿಷ್ ಸರ್ಕಾರದ ಮಧ್ಯಸ್ಥತೆಯಿಂದ ಆ ಉಭಯರಾಜ್ಯಗಳಿಗೆ ಸಮಾಧಾನವು ಮಾಡಲ್ಪಡುವಂತಿದೆ; ಚೈನಾ ರಾಜ್ಯಾಡಳಿತದ ವಿಚಾರದಲ್ಲಿ ಅಲ್ಲಿಯ ಪ್ರಜೆಗಳು ಪೇಶರಗಳಿಂದ ಮಂಚೂವಂಶಸ್ಥರಾದ ಪ್ರಭುವನ್ನು ಪದಭ್ರಷ್ಟನನ್ನಾಗಿ ಮಾಡಿ ಆ ರಾಜ್ಯವನ್ನು ಪ್ರಜಾಸತ್ತಾತ್ಮಕವನ್ನಾಗಿ ಮಾಡಬಯಸುತ್ತಿರುವರು. ಹೀಗೆ ಕಳೆದ ವರ್ಷವು ಆ ಪರರಾಜ್ಯಗಳಿಗೆ ಅನಿಷ್ಟ ಕಾರಕವಾಗಿ ಪರಿಣಮಿಸಿದ್ದಿತು ಅಂಥಕಾರಣ ಮೇಲೆಕಂಡ ರಾಜ್ಯಗಳಿಗೆ ಪ್ರಾಪ್ತವಾಗಿರುವ ವೈಮನಸ್ಯವೂ, ಕಲಹವೂ ಈ ನೂತನ ವರ್ಷದಲ್ಲಿ ನಿವಾರಣೆಯಾಗಿ ಸಮಾಪ್ತಿಯಾಗಲೆಂದು ಹಾರೈಸುತ್ತೇವೆ.

ಕೀರ್ತಿಶೇಷರಾದ ಆ॥ ಮ॥ ವಿ. ಕೃಷ್ಣಸ್ವಾಮಯ್ಯರ್ ಸಿ. ಎಸ್. ಐ. ರವರು.

ಮೈಸೂರ್ ಗೌರ್ನರು ಎಕ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿದ್ದ ಮ॥ ಕೃಷ್ಣಸ್ವಾಮಯ್ಯರ್‌ರವರು ಕಳೆದ ತಾ॥ ೮ರಲ್ಲಿ ಪರಮಪದವಿಯನ್ನು ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರ ಆರೋಗ್ಯ ಸ್ಥಿತಿಯು ಕೆಲಕಾಲದಿಂದ ಕ್ಷೀಣಾತಿಯಲ್ಲಿದ್ದಿತು. ಇವರು ತಂಜಾವೂರಿನಲ್ಲಿ ೧೮೬೩ ರಲ್ಲಿ ಜನಿಸಿ ಅಲ್ಲಿ ವಿದ್ಯಾ ವ್ಯಾಸಂಗವನ್ನು ಮಾಡಿ ಮದ್ರಾಸಿಗೆ ಬಂದು ೧೯ ನೆಯ ವರ್ಷವಯಸ್ಸಿನಲ್ಲಿ ಬಿ. ಎ., ಪ್ರಶಸ್ತಿಯನ್ನೂ, ೨ ವರ್ಷಗಳತರುವಾಯ ಬಿ ಎಲ್., ಪ್ರಶಸ್ತಿಯನ್ನೂ ಪಡೆದು, ಸರ್ ಸುಬ್ರಹ್ಮಣ್ಯಯ್ಯರ್ ಕೂಡ ವಕೀಲಿತನವನ್ನು ನಡೆಯಿಸಿ ಪ್ರಖ್ಯಾತಿಗೆ ಬಂದರು. ಸರ್ಕಾರದವರು ಇವರ ವಿದ್ಯಾಬುದ್ಧಿಯನ್ನು ಮೆಚ್ಚಿ ಇವರನ್ನು ೨ ವರ್ಷಗಳ ಹಿಂದೆ ಹೈಕೋರ್ಟಿನಲ್ಲಿ ಒಬ್ಬ ಜಡ್ಜರನ್ನಾಗಿ ನೇಮಿಸಿದರು. ಮತ್ತೂ ಕಳೆದವರ್ಷದ ಆದಿಭಾಗದಲ್ಲಿ ಬೊಬ್ಬಿಲಿಯ ಮಹಾರಾಜರು ಗೌರ್ನರ ಎಕ್ಸಿಕ್ಯುಟಿವ್ ಕೌನ್ಸಿಲ್ ಸ್ಥಾನದಿಂದ ನಿವೃತ್ತರಾಗಲು ಅವರ ಬದಲು ಮ॥ ಅಯ್ಯರ್‌ರವರು ನೇಮಿಸಲ್ಪಟ್ಟಿದ್ದರು. ಇವರಿಗೆ ಆಂಗ್ಲಭಾಷೆಯಲ್ಲಿ ಪೂರ್ಣ ಪಾಂಡಿತ್ಯವಿದ್ದಂತೆಯೇ ಸಂಸ್ಕೃತದಲ್ಲೂ ಇದ್ದಿತು. ಆರ್ಯಭಾಷೆಯನ್ನೂ, ಆರ್ಯಮತವನ್ನೂ ಉದ್ಧರಿಸಲು ಪಾಟುಪಡುತ್ತಿದ್ದರು. ಇವರು ತಮ್ಮ ತಂದೆಯವರ ಹೆಸರಿನಲ್ಲಿ ಮೈಲಾಪುರದಲ್ಲಿ ೧೫೦೦೦ರೂ. ವ್ಯಯದಿಂದ ಒಂದು ವೈದ್ಯಶಾಲೆಯನ್ನೂ ಅದಕ್ಕೆ ಸೇರಿದಹಾಗೆ ಒಂದು ವೈದ್ಯವಿದ್ಯಾಲಯವನ್ನೂ ಸ್ಥಾಪಿಸಿ ಅವುಗಳ ಪೋಷಣೆಗಾಗಿ ೨೫೦೦೦ ರೂ. ಗಳನ್ನು ಕೊಟ್ಟುದಲ್ಲದೆ, ಮೈಲಾಪುರದಲ್ಲಿ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಿ ಅದರ ಪೋಷಣೆಗಾಗಿ ೫೦೦೦೦ ರೂ. ಗಳನ್ನು ಕೊಟ್ಟರು. ಇವರು ಸಂಪಾದಿಸಿದ ೩ ಲಕ್ಷ ರೂ. ಗಳಲ್ಲಿ ಮೇಲೆ ಹೇಳಿದ ಧರ್ಮಕಾರ್ಯಗಳಲ್ಲದೆ ಇನ್ನೂ ಅನೇಕ ಧರ್ಮಕಾರ್ಯಗಳಿಗೆ ದ್ರವ್ಯಸಹಾಯವನ್ನು ಮಾಡಿರುವರು. ಇವರು ಸಾರ್ವಜನಿಕ ಮಹಾಸಭೆಯ ಕಾರ್ಯದಲ್ಲಿ ವಿಶೇಷ ಆಸಕ್ತರಾಗಿದ್ದರು. ಇವರ ಕೀರ್ತಿಯು ಮದ್ರಾಸಾಧಿಪತ್ಯದಲ್ಲಲ್ಲದೆ ಇತರ ಕಡೆಯೂ ವ್ಯಾಪಿಸಿದ್ದಿತು. ಗೌರ್ನರು ಅಯ್ಯರ್‌ರವರ ಮರಣಕ್ಕಾಗಿ ವಿಶೇಷ ದುಃಖಪ್ರದರ್ಶನವನ್ನು ಮಾಡಿ ಅವರ ಸ್ಮರಣಾರ್ಥವಾಗಿ ಆ ದಿವಸ ಸಾಯಂಕಾಲದವರೆಗೂ ರಾಜಧ್ವಜಪಟವನ್ನು ಅರ್ಧವಾಗಿಳಿಸಿರಬೇಕೆಂದೂ, ೧ ನಿಮಿಷಕ್ಕೆ ೧ ಗುಂಡಿನಂತೆ ಸೂರ್ಯಾಸ್ತಮಯದ ವರೆಗೂ ೫೫ ಗುಂಡುಗಳನ್ನು ಹಾರಿಸಬೇಕೆಂದೂ, ಈ ತಾ॥ ೩೦ ವರೆಗೆ ದುಃಖಪ್ರದರ್ಶನವನ್ನು ಮಾಡಬೇಕೆಂದೂ ಅಪ್ಪಣೆ ಮಾಡಿದರು. ಈ ಮರ್ಯಾದೆಯು ಈವರೆಗೆ ಈ ಅಧಿಪತ್ಯದಲ್ಲಿ ಯಾವ ಹಿಂದುಗಳಿಗೂ ಲಭ್ಯವಾಗಿರಲಿಲ್ಲವು. ಇಂತಹ ಮಹನೀಯರನ್ನು ಕಳೆದುಕೊಂಡುದು ಮದ್ರಾಸಾಧಿಪತ್ಯಕ್ಕೆ ಒಂದು ದೊಡ್ಡ ನಷ್ಟವೆಂತಲೇ ಹೇಳಬೇಕಾಗಿದೆ. ಇವರಿಗೆ ಇಬ್ಬರು ಗಂಡುಮಕ್ಕಳೂ, ನಾಲ್ವರು ಹೆಣ್ಣುಮಕ್ಕಳೂ ಇರುವರು. ಮೃತರ ದೇಹಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥಿಸುತ್ತೇವೆ.

ಶ್ರೀ ರಾಜಚಕ್ರವರ್ತಿ ದಂಪತಿಗಳು ಈ ದಿವಸ ಕಲಕತ್ತಾ ಪಟ್ಟಣದಿಂದ ಬೊಂಬಾಯಿಗೆ ಪ್ರಯಾಣಮಾಡಿದರು. ತಾ॥ ೧೦ ರಲ್ಲಿ ಬೊಂಬಾಯನ್ನು ತಲುಪಿ ಅದೇ ದಿವಸ ಮೆಡೀನಾ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರು. ಇವರು ಸುಖದಿಂದ ಪ್ರಯಾಣಮಾಡಿ ತಮ್ಮ ದೇಶವನ್ನು ಸುರಕ್ಷಿತವಾಗಿ ತಲುಪುವವರಾಗಲೆಂದು ನಾವು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಿಂದ ೬—೭ ಮೈಲಿಗಳ ದೂರದಲ್ಲಿ ಚಿಟ್ಟನಹಳ್ಳಿಗೆ ಹೋಗುವ ಮಾರ್ಗದಲ್ಲಿ ಒಂದು ಹುಲಿಯು ಸೇರಿಕೊಂಡು ಪಶುಗಳಿಗೂ, ಜನರಿಗೂ ಬಹು ತೊಂದರೆಯನ್ನು ಕೊಡುತ್ತಿದ್ದಿತು. ನಮ್ಮ ಡೆ॥ ಕಮಿಷನರ್ ಮ॥ ಕಾಂತರಾಜ ಅರಸಿನವರು ಕಳೆದವಾರ ಅಲ್ಲಿಗೆ ದಯಮಾಡಿಸಿ ಅದನ್ನು ಗುಂಡಿನಿಂದ ಸುಟ್ಟು ಕೊಂದುಬಿಟ್ಟರು.

ಅರಮನೆಯ ಎಡಭಾಗದಲ್ಲಿರುವ ಜಿಲ್ಲೋ ಕಛೇರಿ ಮತ್ತು ಖಜಾನೆ ಇದ್ದ ಕಟ್ಟಡವು ಒಡೆದುಹಾಕಲ್ಪಡುವುದರಿಂದ ಅರಮನೆಯು ಖಜಾನೆಯು ಜಗನ್ಮೋಹನ ಪ್ರಾಸಾದಕ್ಕೆ ಸಾಗಿಸಲ್ಪಟ್ಟು ಈ ದಿವಸದಿಂದ ಇಂಛಾರ್ಜ್ ಆಫೀಸರ ಆಫೀಸು ಪ್ರಾಸಾದದಲ್ಲಿ ನಡೆಯಿಸಲ್ಪಡುವುದು. ಮತ್ತೂ ಕೋಟೆಯಲ್ಲಿದ್ದ ಆಸ್ಪತ್ರೆಯು ಲಕ್ಷ್ಮೀ ವಿಲಾಸ ಮಾರ್ಗದಲ್ಲಿ ಮೊದಲು ಜಿ ಟಿ. ಎ. ಮುದ್ರಾಕ್ಷರಶಾಲೆಯಿದ್ದ ಕಟ್ಟಡಕ್ಕೂ ಪೋಲೀಸು ಠಾಣವು ಲ್ಯಾನ್ಸ್‌ಡೌನ್ ಕಟ್ಟಡಕ್ಕೂ ವರ್ಗಾಯಿಸಲ್ಪಡುವುವು.

ಪೋಲೀಸು ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತರಾಗಿ ರಾಜಧಾನಿಯಲ್ಲಿ ಟ್ರಸ್ಟ್ ಬೋರ್ಡ್ ಮೆಂಬರರೂ ಬೆಂಚ್ ಮ್ಯಾಜಿಸ್ಟ್ರೇಟರೂ ಆಗಿರುವ ಲೋಕಪ್ರಿಯರಾದ ಮೆ॥ ಮಹಮ್ಮದ್ ಜಾಫರ್ ಸಾಹೇಬರವರ ಪತ್ನಿಯವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ತಾ॥ ೫ ರಲ್ಲಿ ಪರಮಪದವಿಯನ್ನು ಹೊಂದಿದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ. ಇವರಿಗೆ ಪ್ರಾಯಶಃ ೬೫ ವರ್ಷ ವಯಸ್ಸಾಗಿದ್ದಿತು. ಮೆ॥ ಮಹಮ್ಮದ್ ಜಾಫರ್ ಸಾಹೇಬರಿಗೆ ವೃದ್ಧಾಪ್ಯದಲ್ಲಿ ಪತ್ನೀವಿಯೋಗ ದುಃಖವು ಪ್ರಾಪ್ತವಾದುದಕ್ಕಾಗಿ ಅವರಿಗೆ ನಾವು ನಮ್ಮ ಅನುತಾಪವನ್ನು ತಿಳುಹಿ ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಪತಿಯವರಿಗೆ ದುಃಖಸಮಾಧಾನವನ್ನೂ ಉಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ರಾಜಧಾನಿಯ ದೊಡ್ಡ ಬೀದಿಯಲ್ಲಿ ಜವಳಿಯ ವ್ಯಾಪಾರವನ್ನು ಬಹು ದೊಡ್ಡದಾಗಿ ನಡೆಯಿಸುತ್ತಿರುವ ಅಬ್ಬಾ ಶುಕುರ್ ಸೇಟರ ಅಂಗಡಿಯ ಮುತ್ಸದ್ದಿಯು ೧೦೦೦—೫೦೦೦ ರೂ. ಗಳ ನೋಟುಗಳನ್ನಿಟ್ಟಿದ್ದ ಕವರುಗಳನ್ನು ಪೋಸ್ಟಾಫೀಸಿನಲ್ಲಿ ರಿಜಿಸ್ಟರ್ ಮಾಡಿಸುತ್ತಿರುವಾಗ್ಗೆ ೧೫೦೦ ರೂ. ಗಳನ್ನಿಟ್ಟಿದ್ದ ಕವರು ಎಲ್ಲಿಯೋ ಮಾಯವಾದುದರಮೇಲೆ ಪೋಲೀಸಿಗೆ ತಿಳುಹಲ್ಪಟ್ಟಿದ್ದಿತು. ಪೋಲೀಸರು ಒಬ್ಬ ಬೀದಿಗುಡಿಸುವವನನ್ನು ಅನುಮಾನದಮೇಲೆ ಹಿಡಿದು ವಿಚಾರಿಸುತ್ತಿರುವರು. ರಜದಮೇಲೆ ಹೋಗಿರುವ ಚೀಫ್ ಇನ್ಸ್‌ಪೆಕ್ಟರ ಛಾರ್ಜಿನಲ್ಲಿರುವ ಡಿ॥ ಇನ್ಸ್‌ಪೆಕ್ಟರ್ ಮೆ॥ ಕೊಯಿಲೋಯವರು ಕಳುವಾಗಿರುವ ನೋಟುಗಳನ್ನು ಗೊತ್ತುಮಾಡಲು ಮದ್ರಾಸಿಗೆ ಹೋಗಿರುವುದಾಗಿ ಕೇಳುತ್ತೇವೆ.

ಚಿತ್ರಕಲ್ ದುರ್ಗದ ಆರ್ಫನ್ ಸ್ಟುಡೆಂಟ್ಸ್ ಹೋಮಿನ ಮ್ಯಾನೇಜರಾದ ಮ॥ ಎಲ್. ವಿ ಹನುಮಂತರಾಯರವರು ಕಿರೀಟಧಾರಣ ಮಹೋತ್ಸವಸಮಾರಂಭಕಾಲದಲ್ಲಿ ತಮಗೆ ಜನಿಸಿದ ಹೆಣ್ಣುಮಗುವಿಗೆ ಈ ಹೋಮಿನ ಧರ್ಮದರ್ಶಿಗಳಾದ ಮ॥ ಕೃಷ್ಣರಾಯರ ಸೂಚನೆಯಂತೆ ಮಹಾರಾಜ್ಞಿಯವರ ನಾಮಸ್ಮರಣಾರ್ಥವಾಗಿ 'ಮೇರಿದೇವಿ' ಎಂಬ ನಾಮಕರಣವನ್ನು ವಿಧ್ಯುಕ್ತವಾಗಿ ಮಾಡಿ, ೪೦-೫೦ ಜನ ಅಪ್ರೆಂಟೀಸ್‌ರಿಗೂ, ಪಂಚಮಸ್ಕೂಲಿನ ೫೦-೬೦ ಜನ ವಿದ್ಯಾರ್ಥಿಗಳಿಗೂ ಸುಖಭೋಜನವನ್ನು ಮಾಡಿಸಿದರು. ಈ ನಾಮಕರಣ ಮಹೋತ್ಸವಕ್ಕೆ ವಿದ್ವಾನ್ ವೇ॥ ಶೇಷಾಚಾರ್ಯರು, ಘನ ರೆವರೆಂಡ್ ವಿಲಿಯಂ ಫರಸ್ಟರ್‌ರವರು ಮೊದಲಾದ ದೊಡ್ಡಮನುಷ್ಯರು ಬಂದಿದ್ದು ಆ ಕೂಸಿಗೆ ಆಶೀರ್ವದಿಸಿದರು.

೩ ನೆಯ ಒಕ್ಕಲಿಗರ ಮಹಾಸಭೆಯು ಕಳೆದ ತಾ॥ ೩ ರಲ್ಲಿ ಹಾಸನದಲ್ಲಿ ಡೆ॥ ಕ॥ ಮೆ॥ ವೆದರಾಲ್‌ರವರಿಂದ ಆರಂಭಿಸಲ್ಪಟ್ಟು ತಾ॥ ೬ ರವರೆಗೆ ನಡೆದಿತು. ಮೈಸೂರು ದೇಶದ ಎಲ್ಲಾ ಭಾಗದಿಂದಲೂ ಹೊರಗಣಿಂದಲೂ ಪ್ರಾಯಶಃ ೩,೦೦೦ ಒಕ್ಕಲಿಗ ಜನರು ಬಂದಿದ್ದರು. ಆರಂಭ ಕಾಲದಲ್ಲಿ ಮೆ॥ ವೆದರಾಲ್‌ರವರು ರಸವತ್ತಾದ ಭಾಷಣವನ್ನು ಮಾಡಿದಮೇಲೆ ಒಕ್ಕಲಿಗರ ಸಂಘದ ಸೆಕ್ರೆಟರಿ ಮ॥ ಕೆ. ಎಚ್. ರಾಮಯ್ಯನವರು ವಾರ್ಷಿಕ ವರದಿಯನ್ನು ಓದಿದರಲ್ಲದೆ ತಮ್ಮ ಸಂಘಕ್ಕೆ ದ್ರವ್ಯ ಸಹಾಯಮಾಡಬೇಕೆಂಬ ಬಗೆಗೆ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಆ ಕೂಡಲೆ ಸಭಾಧ್ಯಕ್ಷರು ೫೦೦೦ ರೂ. ಗಳನ್ನೂ ಇತರರು ೫೦೦೦ ರೂ. ಗಳನ್ನೂ ಕೊಡಲು ವಾಗ್ದಾನಮಾಡಿದರು. ಈ ಸಭೆಗೆ ಸಂಬಂಧಿಸಿದಂತೆ ಮಹಿಳೆಯರ ಸಭೆಯು ಮೆ॥ ವೆದರಾಲ್‌ರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಮ॥ ಬಾಲಗಂಗಾಧರ ತಿಲಕರವರು ಬರ್ಮಾ ಕಾರಾಗೃಹದಿಂದ ಅಹಮದ್ ನಗರಕ್ಕೆ ಕರತರಲ್ಪಟ್ಟಿರುವರೆಂದೂ, ಚಕ್ರವರ್ತಿ ದಂಪತಿಗಳು ಪ್ರಯಾಣಮಾಡಿದಮೇಲೆ ಎಂದರೆ ತಾ॥ ೧೦ ರಲ್ಲಿ ಬಿಡಲ್ಪಡುವರೆಂದೂ [illegible] ಎಂಬ ಪತ್ರಿಕೆಯು ತಿಳಿಸುತ್ತದೆ.

ಶ್ರೀ ರಾಜಚಕ್ರವರ್ತಿ ದಂಪತಿಗಳ ಪ್ರವಾಸವು.

ಡಿಸೆಂಬರ್ ತಾ॥ ೧೬ ರಲ್ಲಿ ಶ್ರೀ ರಾಜಚಕ್ರವರ್ತಿಯವರು ನೇಪಾಳಕ್ಕೂ, ಚಕ್ರವರ್ತಿನಿಯವರು ಆಗ್ರಾಪಟ್ಟಣಕ್ಕೂ ಪರಿವಾರ ಸಮೇತ ಪ್ರಯಾಣಮಾಡಿದರು. ಚಕ್ರವರ್ತಿನಿಯವರು ಅದೇ ದಿವಸ ಆಗ್ರಾಪಟ್ಟಣವನ್ನು ಸೇರಿ ಸಾಯಂಕಾಲದಲ್ಲಿ ಜಗದ್ವಿಖ್ಯಾತವಾದ ರಾಜಮಹಲ್ ಕಟ್ಟಡವನ್ನು ಪರಾಮರ್ಶಿಸಿ ಮಾರನೆಯ ಬೆಳಿಗ್ಗೆ ದೇವಾಲಯಕ್ಕೆ ಚಿತ್ತೈಸಿ ದೇವರ ಪ್ರಾರ್ಥನೆಯನ್ನು ಮಾಡಿ, ಮಧ್ಯಾಹ್ನದಲ್ಲಿ ಅಕ್ಬರು, ಜಹಂಗೀರು, ಷಹಜಹಾನ್ ಚಕ್ರವರ್ತಿಗಳ ಸಮಾಧಿಗಳನ್ನು ನೋಡಿಕೊಂಡು ಬಂದು ರಾತ್ರಿ ಪ್ರಮುಖರನ್ನೆಲ್ಲ ತಮ್ಮ ಬಿಡಾರಕ್ಕೆ ಬರಮಾಡಿಕೊಂಡು ಔತಣವನ್ನು ಮಾಡಿಸಿದರು. ಅತ್ತಲಾಗಿ ಚಕ್ರವರ್ತಿಯವರು ತಾ॥ ೧೮ ರಲ್ಲಿ ನೇಪಾಳವನ್ನು ತಲುಪಿ ಮಹಾರಾಜಾ ಸರ್ ಷಂಷೇರ್ ಜಂಗ್ ಬಹದ್ದೂರ್‌ರವರಿಂದ ಸತ್ಕರಿಸಲ್ಪಟ್ಟು ಅಲ್ಲಿಂದ ಮೃಗಯಾವಿಹಾರಕ್ಕಾಗಿ ಜಂಗ್ ಬಹದ್ದೂರ್‌ರವರ ಕೂಡ ಮೋಟಾರು ಬಂಡಿಯಲ್ಲಿ ಕಾಡಿಗೆ ಹೋಗಿ ಮೊದಲನೆಯ ದಿವಸ ೩ ಹುಲಿಗಳನ್ನೂ ೩ ಗೇಂಡಾಮೃಗಗಳನ್ನೂ ಕೊಂದರು. ಚಕ್ರವರ್ತಿಯವರ ಸ್ವಾರಿಯು ಕಲಕತ್ತಾ ಪಟ್ಟಣಕ್ಕೆ ಚಿತ್ತೈಸಿದ ವೇಳೆಯಲ್ಲಿ ಅವರು ಕುಳಿತುಕೊಳ್ಳುವ ರಥವನ್ನು ಕುಲೀನ ಜನರು ಎಳೆದುಕೊಂಡು ಹೋಗಲು ಅಪ್ಪಣೆಯಾಗಬೇಕೆಂದು ವೈಸರಾಯರನ್ನು ಬಾಬು ಉಪೇಂದ್ರನಾಥ ಪಠಯವರು ಪ್ರಾರ್ಥಿಸಿಕೊಂಡಿದ್ದರು ಆಗಲಿಲ್ಲ, ಆ ರೀತಿ ಮಾಡಿಸಿಕೊಳ್ಳುವುದು ರಾಜಮರ್ಯಾದೆಗೆ ತಕ್ಕದಲ್ಲವೆಂದು ವೈಸರಾಯರು ಅಪ್ಪಣೆಯನ್ನು ಕೊಟ್ಟರು. ಆಗ್ರಾದಿಂದ ಚಕ್ರವರ್ತಿನಿಯವರು ತಾ॥ ೧೯ ರಲ್ಲಿ ಹೊರಟು ಅದೇ ಸಾಯಂಕಾಲ ೫ ಗಂಟೆಗೆ ಜಯಪುರವನ್ನು ತಲುಪಿ ಅಲ್ಲಿಯ ಮಹಾರಾಜರಿಂದ ಇದಿರ್ಗೊಳ್ಳಲ್ಪಟ್ಟು ಅತಿಶಯವಾಗಿ ಸತ್ಕರಿಸಲ್ಪಟ್ಟರು. ಚಕ್ರವರ್ತಿನಿಯವರು ಆ ರಾತ್ರಿ ಒಂದು ಔತಣವನ್ನು ಮಾಡಿಸಿ, ತಾ॥ ೨೦ ರ ಬೆಳಿಗ್ಗೆ ತೃಣಗ್ರಾಹಿ ಎಂಬ ನಗರವನ್ನು ನೋಡಿಕೊಂಡು ಬಂದು ಸಾಯಂಕಾಲದಲ್ಲಿ ಮಹಾರಾಜರವರ ಕೂಡ ಜೋತ್ವಾರ ಉದ್ಯಾನಕ್ಕೆ ದಯಮಾಡಿಸಿ ಪರಾಮರ್ಶಿಸಿಕೊಂಡು ಬಂದು ರಾತ್ರಿ ಊಟವಾದನಂತರ ಜರುಗಿದ ನಾಗಾಜನರ ನರ್ತನವನ್ನು ನೋಡಿ ಆಶ್ಚರ್ಯಪಟ್ಟರು. ಮಹಾರಾಣಿಯವರು ಅಲ್ಲಿಂದ ತಾ॥ ೨೧ರಲ್ಲಿ ಜಯಪುರದಿಂದ ಅಜಮೀರಕ್ಕೆ ಪ್ರಯಾಣಮಾಡಿದರು. ತಾ॥ ೨೨ ರಲ್ಲಿ ಶ್ರೀಯವರು ಮೋಟಾರು ಬಂಡಿಯಲ್ಲಿ ಕುಳಿತು ಪುರಪ್ರದಕ್ಷಿಣೆಯನ್ನು ಮಾಡಿ ಮುಖ್ಯ ಸ್ಥಳಗಳನ್ನೂ, ರಾಜಕುಮಾರರ ಪಾಠಶಾಲೆಯನ್ನೂ, ಪುಷ್ಕರ ಸರೋವರವನ್ನೂ, ಪುರಾತನ ಪಟ್ಟಣವನ್ನೂ ಪರಾಮರ್ಶಿಸಿಕೊಂಡು ಬಂದರು. ಅಜಮೀರದ ಮಹಾರಾಜರವರು ಶ್ರೀ ಚಕ್ರವರ್ತಿನಿಯವರ ಸತ್ಕಾರಕ್ಕಾಗಿ ೧ ಲಕ್ಷಾಂತರ ರೂ. ವ್ಯಯಮಾಡಿ ವಿಶೇಷವಾದ ಏರ್ಪಾಟವನ್ನು ಮಾಡಿದ್ದರು. ತಾ॥ ೨೩ ರಲ್ಲಿ ಶ್ರೀಯವರು ಮೋಟಾರು ಬಂಡಿಯಲ್ಲಿ ಹೊರಟು ದಿಯೋಲಿ ಪಟ್ಟಣಕ್ಕೆ ಬಂದು ಅಲ್ಲಿ ರೆಸಿಡೆಂಟರ ಆತಿಥ್ಯವನ್ನು ಕೈಕೊಂಡು, ಅಲ್ಲಿಂದ ಬಂಡಿಯ ಸಂಸ್ಥಾನಕ್ಕೆ ಪ್ರಯಾಣಮಾಡಿದರು. ಬಂಡಿಯ ರಾಜರಾದ ಮಹಾರಾವ ರವರು ಸಕಲಮರ್ಯಾದೆಯೊಡನೆ ಊರಹೊರಗೆ ೬ ಮೈಲಿ ದೂರದಲ್ಲಿರುವ ಸಾತೂರು ದ್ವಾರದ ಬಳಿ ಚಕ್ರವರ್ತಿನಿಯವರನ್ನಿದಿರ್ಗೊಂಡು ಮರ್ಯಾದಿಸಿ ಊರಿಗೆ ಕರೆದುಕೊಂಡು ಬಂದು ಬಿಡಾರದಲ್ಲಿಳಿಸಿ ಸತ್ಕರಿಸಿದರು. ಅಲ್ಲಿ ಶ್ರೀಯವರು ಮೋಟಾರು ಬಂಡಿಯಲ್ಲಿ ಕುಳಿತು, ಸುರಾಬಂಗ್, ಷಿಕಾರ್ ಬುರಜ್ ಫುಲ್ ಸಾಗರ್ ಮೊದಲಾದ ಮುಖ್ಯಸ್ಥಳಗಳನ್ನು ನೋಡಿಕೊಂಡು ಬಿಡಾರಕ್ಕೆ ಚಿತ್ತೈಸಿದರು. ಭೋಜನಾನಂತರ ಮಧ್ಯಾಹ್ನದಲ್ಲಿ ಮಹಾರಾವ್‌ರವರು ಚಕ್ರವರ್ತಿನಿಯವರ ದರ್ಶನವನ್ನು ತೆಗೆದುಕೊಂಡು ಬಂದರು. ತಾ॥ ೨೪ ರಲ್ಲಿ ಮೋಟಾರು ಬಂಡಿಯಲ್ಲಿ ಕೋಟಾಕ್ಕೆ ಪ್ರಯಾಣಮಾಡಿದರು. ಅಲ್ಲಿ ಕೋಟಾ ಮಹಾರಾವ್‌ರವರೂ, ಪೊಲಿಟಿಕಲ್ ಏಜಂಟರೂ, ಸೇನೆಯ ಮರ್ಯಾದೆಯೊಡನೆ ಇದಿರ್ಗೊಂಡು ಸತ್ಕರಿಸಿದರು, ಶ್ರೀಯವರು ಆ ಸಾಯಂಕಾಲ ಬಿಡಾರದಲ್ಲಿ ದೇವರ ಪ್ರಾರ್ಥನೆಯನ್ನು ಮಾಡಿದರು. ಕೋಟಾ ಮಹಾರಾವ್‌ರವರು ಸಮರ್ಪಿಸಿದ ಶ್ರೇಷ್ಠವಾದ ಕುದುರೆ ಮತ್ತೂ ಒಂಟೆಗಳನ್ನೂ ಅಮೋಘವಾದ ವಸ್ತ್ರಾಭರಣಗಳನ್ನೂ ಚಕ್ರವರ್ತಿನಿಯವರು ಸಂತೋಷದಿಂದ ಅಂಗೀಕರಿಸಿ ಅನಂತರ ಹಿಂತಿರುಗಿಸಿದಿಟ್ಟರು.

ಪಾಟ್ನಾದಲ್ಲಿ ಪ್ರಾಚೀನ ಗ್ರಂಥಾಲಯ ಸ್ಥಾಪಕರಾದ ಗತಿಸಿದ ಖಾನ್ ಬಹದ್ದೂರ್ ಖುದಾಬಕ್ಷ್‌ರವರ ಮಕ್ಕಳು ಪೋಲೀಸು ಡಿ॥ ಸೂ॥ ಷಹಬುದ್ದೀನ್ ಖುದಾಬಕ್ಷ್ ರವರು ದಿಲ್ಲಿಯ ದರ್ಬಾರು ಕಾಲದಲ್ಲಿ ಉದ್ಯೋಗದಮೇಲಿರುವಾಗ್ಗೆ ಚಕ್ರವರ್ತಿಯವರ ದರ್ಶನಕ್ಕೆ ಪಾತ್ರರಾದ ವೇಳೆಯಲ್ಲಿ ಷಹಜಹಾನ್ ನಮಾ, ಎಂದರೆ ಷಹಜಹಾನಿನ ಪ್ರಭುತ್ವದ ಚರಿತ್ರೆಯು, ತುರಾಕ್ವೀಲ್ ಮುಲಕ್, ಎಂದರೆ ಹಿಂದೂ ದೇಶದ ಚರಿತ್ರೆಯು, [illegible], ಎಂದರೆ ದಿವಾಚರಿತ್ರೆಯು, ಈ ಮೂರು ಗ್ರಂಥಗಳನ್ನು ಚಕ್ರವರ್ತಿಯವರಿಗೆ ಸಮರ್ಪಿಸಿದರು. ಈ ಗ್ರಂಥದಲ್ಲಿ ಪುರಾತನಕಾಲದ ದಿಲ್ಲಿಯ ಪಟ್ಟಣದ ಚಿತ್ರಗಳು ಕೊಡಲ್ಪಟ್ಟಿದ್ದುವು. ಈ ಚಿತ್ರಗಳನ್ನು ಶ್ರೀ [illegible] ನೋಡಿ ಬಹು ಸಂತೋಷವನ್ನು [illegible]

ಸ್ತದಿಂದ ಬರೆದರು. ದಿವಾಚರಿತ್ರೆಯಲ್ಲಿ ಜಹಂಗೀರನ್ನೂ ಮತ್ತೂ ಷಹಜಹಾನ್ ಚಕ್ರವರ್ತಿಗಳ ಸ್ವಹಸ್ತಾಕ್ಷರಗಳಿದ್ದುವು.

ಚಕ್ರವರ್ತಿಯವರು ನೇಪಾಳದ ಕಾಡಿನಲ್ಲಿ ಒಟ್ಟು ೩೯ ಹುಲಿಗಳು, ೧೭ ಗೇಂಡಾಮೃಗಗಳು, ಅನೇಕ ಕರಡಿ, ಜಿಂಕೆ, ಕಾಡುಹಂದಿ ಮೊದಲಾದ ಮೃಗಗಳನ್ನು ಬೇಟೆಯಾಡಿಕೊಂಡರು. ಚಕ್ರವರ್ತಿಯವರು ಕ್ರಿಸ್ಮಸ್ ಹಬ್ಬದ ದಿವಸ ದೇವತಾಪ್ರಾರ್ಥನೆಯನ್ನು ತಮ್ಮ ಬಿಡಾರದಲ್ಲಿಯೇ ನೆರವೇರಿಸಿದರು. ಚಕ್ರವರ್ತಿಯವರು ನೇಪಾಳದಿಂದ ತಾ॥ ೨೮ ರಲ್ಲಿ ಗೋಲ್‌ಜಾಘುಕ್ಕೆ ಬಂದು ಅಲ್ಲಿ ಬನಾರಿಸ್ ಎಂಬ ಹಡಗನ್ನು ಹತ್ತಿ ಗಂಗಾನದಿಯಮೇಲೆ ಪ್ರಯಾಣಮಾಡಿ ಬೆಂಕಿಪುರಕ್ಕೆ ಬಂದಿಳಿದರು. ಮಹಾರಾಜ್ಞಿಯವರು ಕೋಟಾ ಸಂಸ್ಥಾನವನ್ನು ಬಿಟ್ಟು ಬೆಂಕಿಪುರಕ್ಕೆ ದಯಮಾಡಿಸಿದ್ದರು. ಅಲ್ಲಿಂದ ಚಕ್ರವರ್ತಿ ದಂಪತಿಗಳಿಬ್ಬರೂ ಒಡಗೂಡಿ ರೈಲುಬಂಡಿಯಲ್ಲಿ ಪ್ರಯಾಣಮಾಡಿ ತಾ॥ ೩೦ ರಲ್ಲಿ ಕಲಕತ್ತಾ ಪಟ್ಟಣವನ್ನು ಸೇರಿದರು, ಇವರಾಗಮನಾರ್ಥವಾಗಿ ಕಲಕತ್ತಾ ಪಟ್ಟಣವು ನಾನಾಬಣ್ಣದ ಧ್ವಜಪತಾಕೆಗಳಿಂದಲೂ, ಕಮಾನುಗಳಿಂದಲೂ, ಚಕ್ರವರ್ತಿ ದಂಪತಿಗಳ ಭಾವಚಿತ್ರ ಪಟಗಳಿಂದಲೂ, ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದಿತು. ಹೌರಾ ನಿಲ್ದಾಣವು ಚಿತ್ರವಿಚಿತ್ರ ಅಲಂಕಾರದಿಂದ ಶೋಭಾಯಮಾನವಾಗಿದ್ದಿತು. ವೈಸ್‌ರಾಯಿ ದಂಪತಿಗಳು ಚಕ್ರವರ್ತಿ ದಂಪತಿಗಳನ್ನು ಹೌರಾ ನಿಲ್ದಾಣದಲ್ಲಿ ಇದಿರ್ಗೊಂಡು ಮರ್ಯಾದಿಸಿ ಸ್ಥಳೀಯಾಧಿಕಾರಿಗಳ ಮತ್ತೂ ಹೌರಾ ಡಿಸ್ಟ್ರಿಕ್ಟ್ ಅಧಿಕಾರಿಗಳ ಪರಿಚಯವನ್ನು ಮಾಡಿಸಿದರು. ಚಕ್ರವರ್ತಿ ದಂಪತಿಗಳು ವಾದ್ಯಘೋಷವಾಗುತ್ತಿರುವಾಗ್ಗೆ ಹೊರಗಡೆ ನಿಂತಿದ್ದ ಸೈನಿಕರು ಮಾಡಿದ ಮರ್ಯಾದೆಯನ್ನು ಅಂಗೀಕರಿಸಿ ಪ್ರೇಕ್ಷಕ ಜನರಿಗೆಲ್ಲಾ ದರ್ಶನವನ್ನಿತ್ತು, ಹೌರಾ ಎಂಬ ಹಡಗನ್ನು ಹತ್ತಿ ಹುಗ್ಲಿನದಿಯಮೇಲೆ ಪ್ರಯಾಣಮಾಡುವಾಗ್ಗೆ ದಡದ ಉದ್ದಕ್ಕೂ ಸಾಲಾಗಿ ನಿಂತಿದ್ದ ಸಾವಿರಾರು ಜನರ ಜಯಘೋಷವನ್ನು ಲಾಲಿಸಿ ಸಂತಸಪಟ್ಟು ಪ್ರಿನ್ಸೆಸ್ ಘಟ್ಟದಲ್ಲಿ ಹಡಗನ್ನಿಳಿದು ದಡದಮೇಲಕ್ಕೆ ಚಿತ್ತೈಸುತಲೆ ಸೇನೆಯ ಮರ್ಯಾದೆಯಾಯಿತು. ಅನಂತರ ಪರರಾಜ್ಯಗಳ ರಾಯಭಾರಿಗಳೂ ಕಲಕತ್ತಾಪಟ್ಟಣದ ಪ್ರಮುಖರೂ ಎದ್ದುನಿಂತು ಮರ್ಯಾದೆಯನ್ನು ಮಾಡಿದರು. ದಡದಮೇಲೆ ಸುಂದರವಾದ ಮಂಟಪವು ರಚಿಸಲ್ಪಟ್ಟು ಅದರೊಳಗೆ ಎರಡು ದಿವ್ಯವಾದ ಸಿಂಹಾಸನಗಳು ಅಲಂಕರಿಸಲ್ಪಟ್ಟಿದ್ದುವು. ಸಾರ್ವಭೌಮದಂಪತಿಗಳು ಸೇನೆಯವರುಮಾಡಿದ ಮರ್ಯಾದೆಯನ್ನು ಕೈಕೊಂಡು ಮಂಟಪಕ್ಕೆ ಚಿತ್ತೈಸಿ ಸಿಂಹಾಸನಗಳ ಮೇಲೆ ಮಂಡಿಸಿದರು. ಮೊದಲು ಬಂಗಾಳ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳು, ಕೂಚ್‌ಬಿಹಾರ್ ಮಹಾರಾಜರವರು, ಮೋಹದಬಂಜಿನ ಮಹಾರಾಜರು, ಒರಿಸ್ಸಾ ಮತ್ತು ಚೋಟಾನಾಗಪುರ ರಾಜರುಗಳು ಇವರುಗಳು ಚಕ್ರವರ್ತಿಯವರಿಗೆ ಬಹುವಿಧೇಯತೆಯಿಂದ ವಂದಿಸಿದ ಮೇಲೆ ಮುರುಷಿದಾಬಾದಿನ ನವಾಬರೂ, ಬಂಗಾಳ ಸೇನೆಯ ದೊಡ್ಡಧಿಕಾರಿಗಳೂ, ಬಂಗಾಳ ನ್ಯಾಷನಲ್ ಚೇಂಬರ್ಸ್ ಆಫ್ ಕಾಮರ್ಸ್‌ರವರೂ; ಬಂಗಾಳ ಬಿಹಾರುಗಳ ಭೂಸ್ವಾಮಿಗಳೂ, ಮ್ಯುನಿಸಿಪಲ್ ಮೆಂಬರುಗಳೂ ವಂದಿಸಿದರು. ಅನಂತರ ಕಲಕತ್ತಾ ಮ್ಯುನಿಸಿಪಲ್ ಚೇರ್ಮನ್‌ರವರು ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು. ಇದಕ್ಕೆ ಚಕ್ರವರ್ತಿಯವರು ದಯಪಾಲಿಸಿದುತ್ತರದ ಸಾರಾಂಶವು:—

ನೀವು ಶ್ರದ್ಧಾಭಕ್ತಿ ವಿಶ್ವಾಸ ಪುರಸ್ಸರವಾಗಿ ನಮ್ಮ ಶುಭಾಗಮನ ಸೂಚಿತವಾದ ವಿಜ್ಞಾಪನಾ ಪತ್ರಿಕೆಯನ್ನೊಪ್ಪಿಸಿದುದಕ್ಕಾಗಿ ನಾವುದಂಪತಿಗಳು ಪರಮಾನಂದದಿಂದ ನಿಮ್ಮನ್ನು ವಂದಿಸುತ್ತೇವೆ. ಈ ಪಟ್ಟಣಕ್ಕೆ ನಮ್ಮ ಪ್ರಿಯ ಜನಕರು ದಯಮಾಡಿಸಿದ್ದ ಸಂದರ್ಭವನ್ನೂ, ಈಗ್ಗೆ ೬ ವರ್ಷಗಳಹಿಂದೆ ನಾವುಗಳು ಬಂದಿದ್ದ ವಿಷಯವನ್ನೂ ವಿಜ್ಞಾಪನ ಪತ್ರಿಕೆಯಲ್ಲಿ ಪ್ರಸ್ತಾಪಿಸಿರುವುದು ನಮ್ಮ ಮನಸ್ಸಿಗೆ ಚೆನ್ನಾಗಿ ನಾಟಿರುತ್ತದೆ. ಆಗ ನೀವು ವಿಶ್ವಾಸಪೂರ್ವಕವಾಗಿ ನಮಗೆ ಮಾಡಿದ ಸ್ವಾಗತವನ್ನೂ, ಸತ್ಕಾರವನ್ನೂ ನಾವು ಮರೆಯುವಂತಿಲ್ಲವು. ನಿಮ್ಮ ಮಹಾಪಟ್ಟಣವನ್ನು ನಾವು ಮೊತ್ತ ಮೊದಲು ಪರಾಮರ್ಶಿಸಿದಾಗ್ಗೆ ನಮ್ಮ ಭರತಖಂಡದ ಮೇಲೆ ನಮಗೆ ಹುಟ್ಟಿದ ಅಭಿಮಾನವು ಎಷ್ಟುಮಾತ್ರಕ್ಕೂ ಕಡಿಮೆಯಾಗುವುದಿಲ್ಲವು. ಕಲಕತ್ತಾ ಪಟ್ಟಣವನ್ನು ಪುನಃ ದರ್ಶನಮಾಡಿ ನಿಮ್ಮಗಳ ಅಭ್ಯುದಯವನ್ನು ನೋಡುವಂತಾದುದಕ್ಕಾಗಿ ನಾವು ಬಹುವಾಗಿ ಸಂತೋಷಿಸುತ್ತೇವೆ. ದಿಲ್ಲಿಯ ದರ್ಬಾರು ಕಾಲದಲ್ಲಿ ನಾವು ಪ್ರಕಟಿಸಿದ ಭರತಖಂಡದ ರಾಜ್ಯಾಡಳಿತದಲ್ಲಿಯ ಕೆಲ ಬದಲಾವಣೆಗಳಿಂದ ಕಲಕತ್ತಾನಗರಕ್ಕೆ ಕೊಂಚಮಟ್ಟಿಗೆ ಅನನುಕೂಲವಾಗಿರಬಹುದು. ಆದರೆ ನಿಮ್ಮ ಈ ನಗರವು ಯಾವಾಗಲೂ ಭರತಖಂಡದಲ್ಲೆಲ್ಲಾ ಪ್ರಧಾನ ನಗರವಾಗಿಯೇ ಇರುವುದು. ಜನಸಂಖ್ಯೆಯಲ್ಲೂ ವರ್ತಕ [illegible] ವ್ಯಾಪಾರದಲ್ಲಿ ಕೇಂದ್ರಸ್ಥಾನವನ್ನು ಹೊಂದಿರುವುದರಿಂದಲೂ, ದಿವ್ಯವಾದ ಚರಿತ್ರಸಂಪನ್ನತೆಯಿಂದಲೂ ಕಲಕತ್ತಾ ಪಟ್ಟಣಕ್ಕುಂಟಾಗಿರುವ ಅಗ್ರಸ್ಥಾನವು [illegible] ಎಂದೆಂದಿಗೂ ನಡೆಯುತ್ತಾ ಬರುವುದು. [illegible] ಈ ಪಟ್ಟಣವನ್ನು ಒಂದು ಅಧಿಪತ್ಯವನ್ನಾಗಿ ಮಾಡಿ, ಇದಕ್ಕೆ ಈ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿರುವುದರಿಂದ ಇದರ ಪ್ರಾಶಸ್ತ್ಯವು ಇನ್ನೂ ಹೆಚ್ಚುತ್ತದೆ. ಈ ನೂತನರಾಜಧಾನಿಯು ಕೌನ್ಸಿಲ್ ಸಮೇತರಾದ ಗೌರ್ನರ ಸಮರ್ಪಕವಾದ ಪರಿಪಾಲನೆಯಿಂದ ಅತಿಶಯವಾಗಿ ಅಭಿವೃದ್ಧಿಗೆ ಬರುತ್ತದೆಂದು ದೃಢವಾಗಿ ನಂಬಿರುತ್ತೇವೆ. ಭರತಖಂಡವು ಕ್ಷಿಪ್ರದಲ್ಲಿಯೇ ವಸ್ತುನಿರ್ಮಾಣದಲ್ಲೂ, ವ್ಯವಸಾಯಾಭಿವೃದ್ಧಿಯಲ್ಲೂ ಉಚ್ಛ್ರಾಯಸ್ಥಿತಿಗೆ ಬರುತ್ತದೆಂದು ನೀವು ತಿಳಿದುಕೊಂಡಿರುವುದನ್ನು ನಾವು ಬಲ್ಲೆವು. ನಿಮ್ಮ ವ್ಯಾಪಾರಾದಿವೃತ್ತಿಗಳು ಅಭಿವೃದ್ಧಿಯಾಗುತ್ತಿರುವುದನ್ನು ನಾವು ಪ್ರೀತಿಯಿಂದ ನೋಡುತ್ತಿದ್ದೇವೆ. ಮತ್ತೂ ವ್ಯಾಪಾರದಲ್ಲಿ ನಿಮಗಿರುವ ಆಸಕ್ತಿಯಿಂದುಂಟಾಗಿರುವ ಸತ್ಫಲವನ್ನು ಈ ದೇಶದ ಯುವಕರು ತಿಳಿದು ಎಲ್ಲಾವೃತ್ತಿಗಳಲ್ಲೂ ಗೌರವವಾದ ಈ ವೃತ್ತಿಯನ್ನವಲಂಬಿಸಿ ಪ್ರಖ್ಯಾತರಾಗುವರೆಂದೂ ನಿರೀಕ್ಷಿಸುತ್ತೇವೆ. ನೀವು ನಮ್ಮ ಕ್ಷೇಮವನ್ನು ಕೋರಿರುವುದಕ್ಕಾಗಿ ನಿಮ್ಮನ್ನು ನಾವು ವಂದಿಸುತ್ತೇವೆ. ನಮ್ಮ ಭರತಖಂಡದ ಅಭ್ಯುದಯಾಂಶವನ್ನು ಕುರಿತು ನಾವು ಸರ್ವದಾ ಚಿಂತಿಸಿ ಪ್ರಯತ್ನಿಸುತ್ತಿರುವೆವು. ನಮ್ಮ ರಾಜಮನೆತನಕ್ಕೂ, ನಮ್ಮ ಭಾರತಪ್ರಜೆಗಳಿಗೂ ಇರತಕ್ಕ ಪ್ರೀತಿವಿಶ್ವಾಸವು ಯಾವಾಗಲೂ ದೃಢತರವಾಗಿರುವುದೆಂದು ನಾವು ನಂಬಿರುವೆವು." ಈ ಪ್ರಕಾರ ಉತ್ತರವನ್ನು ದಯಪಾಲಿಸಿ ದಿವ್ಯಾಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ಸಕಲ ಸೇನಾಮರ್ಯಾದೆಯೊಡನೆ ಉತ್ಸವ ಹೊರಟು, ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿರುವ ಪ್ರಜೆಗಳು ಮಾಡಿದ ವಂದನೆಗಳನ್ನು ಆನಂದದಿಂದ ಅಂಗೀಕರಿಸಿ ೨೦,೦೦೦ ಬಾಲಕಬಾಲಿಕೆಯರುಗಳು ಗೀತಗಳನ್ನು ಹೇಳಿದುದನ್ನು ಲಾಲಿಸಿ ಸಂತುಷ್ಟರಾಗಿ ಗೌರ್ನಮೆಂಟ್ ಹೌಸಿಗೆ ದಯಮಾಡಿಸಿದರು. ಅಲ್ಲಿ ಸರ್ ಒಮೂರ್ ಕ್ರೀಗ್, ಅಡ್ಮಿರಲ್ ಸರ್ ಎಫ್ ಮಂತ್ ಕ್ರೆಯಿಗ್, ಮೊದಲಾದವರ ಸಮೇತ ವೈಸ್‌ರಾಯರು ಚಕ್ರವರ್ತಿ ದಂಪತಿಗಳನ್ನು ಇದಿರ್ಗೊಂಡು ಮರ್ಯಾದಿಸಿ, ಅವರೆಲ್ಲರ ಪರಿಚಯವನ್ನೂ ಚಕ್ರವರ್ತಿಯವರಿಗೆ ಮಾಡಿಸಿದರು. ರಾಜಧ್ವಜಪಟವೇರಿಸಲ್ಪಟ್ಟು ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಪುರಪ್ರವೇಶಕಾಲದಲ್ಲಿ ಚಕ್ರವರ್ತಿಯವರು ಫೀಲ್ಡ್‌ಮಾರ್ಷಲ್ ಉಡುಪನ್ನೂ, ಗ್ರ್ಯಾಂಡ್ ಮಾಸ್ಟರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಬಿರುದನ್ನೂ ಧರಿಸಿದ್ದರು, ಮತ್ತೂ ಮಹಾರಾಜ್ಞಿಯವರು ಗ್ರ್ಯಾಂಡ್ ಕ್ರಾಸ್ ಆಫ್ ದಿ ಸ್ಟಾರ್ ಆಫ್ ಇಂಡ್ಯಾ ಚಿಹ್ನೆಯನ್ನೂ ಅಮೋಘವಾದ ಮುತ್ತಿನ ಕಂಠೀಸರಗಳನ್ನೂ ನವರತ್ನ ಖಚಿತವಾದ ಆಭರಣಗಳನ್ನೂ ಧರಿಸಿದ್ದರು. ತಾ॥ ೩೧ರಲ್ಲಿ ಚಕ್ರವರ್ತಿದಂಪತಿಗಳು ವೈಸ್‌ರಾಯಿ ದಂಪತಿಗಳ ಕೂಡ ಪ್ರಾಣಿ ಪ್ರದರ್ಶನ ಶಾಲೆಗೆ ದಯಮಾಡಿಸಿ ಸಿಂಹಗಳೂ, ಹುಲಿಗಳೂ, ಸರ್ಪಗಳೂ ಮೊದಲಾದ ಪ್ರಾಣಿಗಳನ್ನು ಪರಾಮರ್ಶಿಸಿಕೊಂಡು ಬಂದರು. ತಾ॥ ೩೧ ರಲ್ಲಿ ಚಕ್ರವರ್ತಿನಿಯವರು ವೈಸ್‌ರಾಯರ ಪತ್ನಿಯವರ ಕೂಡ ಉದ್ಯಾನಕ್ಕೆ ದಯಮಾಡಿಸಿ ೧॥ ಗಂಟೆಯಕಾಲ ವಿಹರಿಸಿಕೊಂಡಿದ್ದು ಪ್ರಸಿದ್ಧವಾದ ದೊಡ್ಡ ವಟವೃಕ್ಷವನ್ನು ಪರಾಮರ್ಶಿಸಿಕೊಂಡು ಬಂದರು. ಭಾನುವಾರ ದಿವಸ ಚಕ್ರವರ್ತಿ ದಂಪತಿಗಳು ರಾಜಶಕಟದಲ್ಲಿ ಕುಳಿತು ದೇವಸ್ಥಾನಕ್ಕೆ ದಯಮಾಡಿಸಿ ದೇವರಪ್ರಾರ್ಥನೆಯನ್ನು ಮಾಡಿಕೊಂಡು ಬಂದರು. ಪಂಡಿತ ರಾಧಾಗೋವಿಂದಗೋಸ್ವಾಮಿಯವರು ಆ ದಿವಸ ಹಿಂದೂ ದೇವಾಲಯಗಳಲ್ಲಿ ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಕೋರಿ ಸಂಕೀರ್ತನ ಭಜನೆಯನ್ನು ನಡೆಯಿಸಿದುದಲ್ಲದೆ ಸಾಯಂಕಾಲದಲ್ಲಿ ಶ್ರೀಗೌರಂಗ ವಿಗ್ರಹವನ್ನು ಬೀದಿಬಾಕದಲ್ಲಿ ಪ್ರತಿಷ್ಠಾಪಿಸಿ ನೃತ್ಯಗೀತವಾದ್ಯಗಳೊಡನೆ ಸಂಕೀರ್ತನೆಯನ್ನು ಮಾಡಿಸಿದರು. ತರುವಾಯ ಈಶ್ವರಭಕ್ತಿ ವಿಚಾರವಾಗುಪನ್ಯಾಸಗಳು ನಡೆದುವು. ಕಳೆದ ೧೦ ವರ್ಷಗಳಿಂದಲೂ ಬಂಗಾಳಕ್ಕೆ ಪ್ರಾಪ್ತವಾಗಿದ್ದ ಪ್ಲೇಗ್ ಮಾರಿಕೋಪದ್ರವ ಮೊದಲಾದ ಅರಿಷ್ಟವು ನಿವಾರಣೆಯಾಗಿ ಶ್ರೀಗೌರಂಗಸ್ವಾಮಿಯ ದೇಶದಲ್ಲಿ ನೆಮ್ಮದಿಯೂ, ಅಭ್ಯುದಯವೂ ನೆಲಸಿರುವ ಹಾಗೆ ಸಾರ್ವಭೌಮರು ಕಟಾಕ್ಷವಿಟ್ಟಿರುತ್ತಾರೆ. ಇಂತಹ ಉಪಕಾರಗಳು ಚಕ್ರವರ್ತಿದಂಪತಿಗಳಕೂಡ ಭರತಖಂಡಕ್ಕೆ ತರಲ್ಪಟ್ಟುವುಗಳಾಗಿವೆ ಇವರಿಗೆ ಭಾರತೀಯರು ಮರ್ಯಾದಾಪುರಸ್ಸರವಾಗಿ ಕೃತಜ್ಞತೆಯನ್ನರ್ಪಿಸುತ್ತಾರೆಂದು ಪಂಡಿತ ರಸಿಕಮೋಹನ ಚಕ್ರವರ್ತಿಯವರು ಹೇಳಿದರು. ತಾ॥ ೧ ರಲ್ಲಿ ಚಕ್ರವರ್ತಿಯವರು ಅಶ್ವಾರೂಢರಾಗಿ ಅನೇಕ ಘನವಂತರ ಕೂಡ, ಗೌರ್ನಮೆಂಟ್ ಹೌಸಿನಿಂದ ಕುದುರೆಯ ಪಂದ್ಯದಾಗತಕ್ಕ ಸ್ಥಳಕ್ಕೆ ದಯಮಾಡಿಸಿ ನೋಡಿಕೊಂಡು ಬಂದರು. ಆ ರಾತ್ರಿ ನಡೆದ ರಾಜೋತ್ಸವಕ್ಕೆ ಪ್ರಮುಖ ಐರೋಪ್ಯ ಸ್ತ್ರೀಪುರುಷರೂ, ಭರತಖಂಡದ ರಾಜರುಗಳೂ ಮೊದಲಾದವರು ಬಂದಿದ್ದರು. ತಾ॥ ೨ ರಲ್ಲಿ ಗೌರ್ನರ್ [illegible] ಲ್‌ರವರು ಏರ್ಪಡಿಸಿದ್ದ ವನವಿಹಾರೋತ್ಸವಕ್ಕೆ ಚಕ್ರವರ್ತಿ ದಂಪತಿಗಳು ದಯಮಾಡಿಸಿ ಅತಿಥ್ಯವನ್ನು [illegible] ಸಂಭಾಷಣೆಯನ್ನು ಮಾಡಿದರು. ಈ [illegible] ಗ್ವಾಲಿಯರ್, ಬಿಕಾನೀರ್, [illegible] [illegible]

ಮೈಸೂರ್ ಸ್ಟಾರ್

೧೯೦೩ ನೇ ಜನವರಿ ತಾ॥ ೪ ನೇ ಸೋಮವಾರ

ಸ್ವವಿಷಯ.

ಈ ಸ್ಟಾರ್ ಪತ್ರಿಕೆಯು [illegible]

[illegible]

ಒಳದೇಶದ ವೃತ್ತಾಂತಗಳು.

ರಾಜಧಾನಿಯಿಂದ ೬—೭ ಮೈಲಿಗಳ ದೂರದಲ್ಲಿ ಚಿಕ್ಕನಹಳ್ಳಿಗೆ ಹೋಗುವ ಮಾರ್ಗದಲ್ಲಿ ಒಂದು ಹೆಬ್ಬುಲಿಯು ಸೇರಿಕೊಂಡು ದನಗಳಿಗೂ, ಜನರಿಗೂ ಬಹು ತೊಂದರೆಯನ್ನು ಕೊಡುತ್ತಿದ್ದಿತು. ನಮ್ಮ ಶ್ರೀ [illegible] ಅದನ್ನು ಗುಂಡಿನಿಂದ ಸುಟ್ಟು ಕೊಂದುಬಿಟ್ಟರು.

[illegible]

ಶ್ರೀ ರಾಜಚಕ್ರವರ್ತಿ ದಂಪತಿಗಳ ಪ್ರವಾಸವು.

ದಿಸೆಂಬರ್ ತಾ॥ ೧೭ ರಲ್ಲಿ ಶ್ರೀ ರಾಜಚಕ್ರವರ್ತಿಯವರು ನೇಪಾಳಕ್ಕೂ, ಚಕ್ರವರ್ತಿನಿಯವರು ಆಗ್ರಾಪಟ್ಟಣಕ್ಕೂ ಪರಿವಾರ ಸಮೇತ ಪ್ರಯಾಣಮಾಡಿದರು. ಚಕ್ರವರ್ತಿನಿಯವರು ಅದೇ ದಿವಸ ಆಗ್ರಾಪಟ್ಟಣವನ್ನು ಸೇರಿ ಸಾಯಂಕಾಲದಲ್ಲಿ ಜಗತ್ಪ್ರಖ್ಯಾತವಾದ ತಾಜಮಹಲ್ ಕಟ್ಟಡವನ್ನು ಪರಾಮರ್ಶಿಸಿ ಮಾರನೆಯ ಬೆಳಿಗ್ಗೆ ದೇವಾಲಯಕ್ಕೆ ಚಿತ್ತೈಸಿ ದೇವರ ಪ್ರಾರ್ಥನೆಯನ್ನು ಮಾಡಿ, ಮಧ್ಯಾಹ್ನದಲ್ಲಿ ಅಕ್ಬರು, ಜಹಾಂಗೀರು, ಮುಂತಾದ ಚಕ್ರವರ್ತಿಗಳ ಸಮಾಧಿಗಳನ್ನು ನೋಡಿಕೊಂಡು ಬಂದು ರಾತ್ರಿ ಪ್ರಯಾಣದಲ್ಲಿ ತಮ್ಮ [illegible]

[illegible]

[೩ ನೇಯ ಪುಟದಿಂದ ಮುಂದೆಸಾಗಿದುದು.]

ರಾಗಿರುವರೆಂದರೆ ಸಟೇದಾಶ್ಚರ್ಯವಾಗುತ್ತದೆ. ಇದರಿಂದ ನಮ್ಮಲ್ಲಿ ವಿದ್ಯಾ ಶಿಕ್ಷಣವು ಸಾಕಷ್ಟಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಪರೀಕ್ಷಧರರಲ್ಲಿ ಎಂ. ಎ, ಪ್ರಶಸ್ತಿಯನ್ನು ಪಡೆದಿರುವವರು ಒಬ್ಬರಾದರೂ ಇಲ್ಲದಿರುವುದು ಅತ್ಯಂತ ವ್ಯಸನವಾಗುತ್ತದೆ. ದಯಾಳು ಸರ್ಕಾರದವರ ಸಹಾನುಭೂತಿಯೂ, ಫಂಡಿನ ಸಾಹ್ಯವೂ ಇರತಕ್ಕ ಈ ಜಿಲ್ಲೆಗಳಲ್ಲಿ ಶಿಕ್ಷಣ ಸ್ಥಿತಿಯು ಹೀಗಿರುವಾಗ ಇನ್ನು ಫಂಡಿನ ಸಹಾಯವಿಲ್ಲದಿರುವ ಪ್ರಾಂತಗಳ ಸ್ಥಿತಿಯನ್ನು ಹೇಳತೀರದು. ಈ ನಮ್ಮ ಶಿಕ್ಷಣಾಂಕುರವನ್ನು ಮಹಾವೃಕ್ಷವನ್ನಾಗಿ ಮಾಡಿ ಅದರ ಮಧುರವಾದ ಫಲವನ್ನು ಸೇವಿಸಿ ಆನಂದಿಸಲಿಕ್ಕೆ ನಾವೆಲ್ಲರೂ ಮನಃಪೂರ್ವಕ ಒಮ್ಮನದಿಂದ ಯತ್ನ ಮಾಡುವುದು ಎಲ್ಲಕ್ಕೂ ಮಹತ್ವದ ಮತ್ತು ಆದ್ಯ ಕರ್ತವ್ಯವಾಗಿರುತ್ತದೆ. ಶಿಕ್ಷಣೋನ್ನತಿಯಬಗ್ಗೆ ನಾವುಯತ್ನ ಮಾಡತಕ್ಕದ್ದೇನೆಂದರೆ–

ಪ್ರಾಥಮಿಕ ಶಿಕ್ಷಣವು.

ಎಲ್ಲಾ ವಿಧವಾದ ವಿದ್ಯಾ ಶಿಕ್ಷಣಕ್ಕೂ ಪ್ರಾಥಮಿಕ ಶಿಕ್ಷಣವು ಮೂಲವಾದುದರಿಂದ ವಿದ್ಯಾರ್ಥಿಗಳು ಇದನ್ನು ಚೆನ್ನಾಗಿ ಪಡೆದ ಹೊರತು ಉಚ್ಚ ಶಿಕ್ಷಣಕ್ಕೆ ಅವಕಾಶವಿಲ್ಲವು. ಇದನ್ನು ದಯಾಳು ಸರ್ಕಾರದವರರಿತು ಅದರ ಪ್ರಸಾರಣೆಯ ಬಗೆಗೆ ಹೆಚ್ಚು ವ್ಯವಸ್ಥೆಯನ್ನು ಮಾಡಹತ್ತಿರುವರು. ಮತ್ತು ಪರಮಪ್ರಖ್ಯಾತರಾದ ಜಾರ್ಜ ಸಾರ್ವಭೌಮರು ತಮ್ಮ ಪಟ್ಟಾಭಿಷೇಕ ಸಮಾರಂಭದ ಜ್ಞಾಪನಾರ್ಥವಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ೫೦ ಲಕ್ಷ ರೂ. ಗಳನ್ನು ತಮ್ಮ ಪ್ರಜೆಗಳಾದ ನಮ್ಮೆಲ್ಲರಿಗೂ ವರದಾನಮಾಡಿರುವುದಲ್ಲದೆ ಕ್ರಮೇಣ ಇನ್ನೂ ಹೆಚ್ಚು ಸಹಾಯವನ್ನು ಮಾಡುವದಾಗಿ ವಾಗ್ದಾನವನ್ನುಮಾಡಿ ಭಾರತೀಯರ ವಂದನೆಗೆ ಪಾತ್ರರಾಗಿರುವರು. ನಾವು ಈ ದಾನದ ಫಲವನ್ನು ಈಗ ಮಾಡಿಕೊಳ್ಳದೆ ಇನ್ನಾವಾಗ ಮಾಡಿಕೊಳ್ಳುವುದು? ಗಾಳಿ ಬರುವಾಗ ತೂರಿಕೊಳ್ಳಬೇಕು. ನಮ್ಮ ಸಮಾಜದ ಚುರುಕು ಬುದ್ಧಿಯ ಎಷ್ಟು ಹುಡುಗರು ಬಡತನ ಮುಂತಾದ ಕಾರಣಗಳಿಂದ ಹಳ್ಳಿಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಲಾಭವನ್ನು ಕಾಣದಿರುವರು. ಅಂತಹವರನ್ನು ಗೊತ್ತುಮಾಡಿ ಪ್ರಾಥಮಿಕ ಶಿಕ್ಷಣೆಗೆ ಗುರಿಮಾಡುವುದು ಅತ್ಯಾವಶ್ಯಕವು. ಈ ಶಿಕ್ಷಣವಿಲ್ಲದ ಜನರು ನಮ್ಮಲ್ಲಿ ವಿಶೇಷವಾಗಿರುವುದರಿಂದಲೇ, ನಮ್ಮ ಸಮಾಜವು ಹೀನಸ್ಥಿತಿಯಲ್ಲಿರುವುದು. ಮನುಷ್ಯನನ್ನು ತಿದ್ದುವ ಕಷ್ಟ ಕೆಲಸಕ್ಕಿಂತ ಭಾರಿ ಸಮಾಜವನ್ನು ತಿದ್ದುವ ಸುಲಭಕಾರ್ಯವನ್ನು ಕೈಗೊಳ್ಳುವುದು ಹೆಚ್ಚು ಅವಶ್ಯಕವು. ನಮ್ಮ ಶಿಕ್ಷಣೋತ್ಕರ್ಷ ವಿಷಯದಲ್ಲಿ ಎರಡನೆಯ ಯತ್ನವಾವುದೆಂದರೆ– ನಮ್ಮವರು ಸರ್ವತ್ರ ಇಂಗ್ಲೀಷು ರಾಜಭಾಷೆಯನ್ನು ಕಲಿಯುವುದು. ಎಷ್ಟು ಯೋಗ್ಯತೆಯುಳ್ಳ ಪುರುಷನಿದ್ದರೂ ಈ ರಾಜಭಾಷೆಯೊಂದಿಲ್ಲದಿದ್ದರೆ ಹಿಂದುಳಿದು ಕೆಲಸಮಾಡಬೇಕಾಗುವದು ಮತ್ತೊಬ್ಬರ ಮಧ್ಯಸ್ಥತೆಯಿಲ್ಲದೆ ಇದರಿಂದೇನೂ ಆಗುವಹಾಗಿಲ್ಲ. ಎರಡನೆಯವರ ಬೊಗಸೆಯಿಂದ ನೀರು ಕುಡಿಯುವುದೂ, ಮತ್ತೊಬ್ಬರ ಮಧ್ಯಸ್ಥತೆಯಿಂದ ಕೆಲಸಮಾಡಿಕೊಳ್ಳುವುದೂ ಸಮವಾಗಿರುವುವು. ಇದನ್ನು ತಾವು ಮನದಲ್ಲಿ ತರಬೇಕು. ಕೇವಲ ಸರ್ಕಾರದ ಕೆಲಸಮಾಡಬೇಕೆಂಬುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಇದನ್ನು ಕಲಿಯಬಾರದು. ಇಂಗ್ರೇಜಿ ಸಾಮ್ರಾಜ್ಯವು ಹಬ್ಬಿದಂತೆ ಭೂಮಂಡಲದ ತುಂಬ ಇಂಗ್ಲೀಷು ಭಾಷೆಯೂ ಹಬ್ಬಿರುವುದು. ಆದುದರಿಂದ ಅದನ್ನು ನಾವು ಅಭ್ಯಾಸಿಸಿದರೆ ನಮ್ಮ ವ್ಯಾಪಾರ, ಒಕ್ಕಲತನ, ಕೈಗಾರಿಕೆ ಇನ್ನು ಮುಂತಾದ ಅನೇಕ ಸುಧಾರಣೆಗಳಿಗೆ ಅನುಕೂಲವಾಗುವುದು. ಹೆಚ್ಚಾಗಿ ಉಚ್ಚ ಶಿಕ್ಷಣವನ್ನು ಸಾಧಿಸುವುದೇ ನಮ್ಮ ಮುಖ್ಯ ಉದ್ದೇಶವು. ಉಚ್ಚ ಪದವೀಧರರು ನಮ್ಮಲ್ಲಿ ಆದಹೊರತು ನಮ್ಮ ಯಾವ ಬಗೆಯ ಉನ್ನತಿಗೂ ಗತ್ಯಂತರವೇ ಇಲ್ಲ. ಇದಕ್ಕಾಗಿ ವಿಶ್ವವಿದ್ಯಾಲಯವೊಂದು ನಮ್ಮ ಕರ್ನಾಟಕ ಪ್ರಾಂತದಲ್ಲಿಯೇ ಇರುವುದು ಅತ್ಯಾವಶ್ಯಕವು. ಆದರೆ ಇದನ್ನು ಯಾವುದಾದರೂ ಒಂದೇ ಸಮಾಜವು ಮುಂದುವರಿದು ಸ್ಥಾಪಿಸುವ ಯತ್ನಮಾಡುವುದು ತುಸು ಬಿಗಿಯಾದುದು. ನಮ್ಮ ಕರ್ನಾಟಕ ಬಾಂಧವರೆಲ್ಲರೂ ಒಂದಾಗಿ ಯೋಚಿಸಿ ತಂತಮ್ಮ ಪ್ರಮಾಣ ಮತ್ತು ಸ್ಥಿತಿ ಇವುಗಳಿಗೆ ಅನುಗುಣವಾಗಿ ಸಹಾಯಮಾಡಿದಲ್ಲಿ ಆಗುವ ಕೆಲಸವಾಗಿದೆ. ಪ್ರತಿಯೊಬ್ಬನು ನ್ಯಾಯದಿಂದಲೂ, ನೀತಿಯಿಂದಲೂ ನಡೆಯಬೇಕು. ಇಷ್ಟೇ ಅಲ್ಲ; ಅನ್ಯಾಯ ಅನೀತಿಗಳ ಬಗ್ಗೆ ಆತನ ಮನದಲ್ಲಿ ಸ್ವಾಭಾವಿಕವಾಗಿಯೇ ತಿರಸ್ಕಾರವು ಹುಟ್ಟಲಿಕ್ಕೇ ಬೇಕು. ತಾನು ಸ್ವತಃ ವಿದ್ಯಾಂಸನಾಗಿರುವುದಲ್ಲದೆ ಇತರರ ವಿದ್ವತ್ತಿಯ ಬಗ್ಗೆ ಆದರವುಳ್ಳವನಾಗಿರಬೇಕು. ಸ್ವತಃ ಶುದ್ಧಾಚರಣೆಯುಳ್ಳವನಾಗಿರುವುದಲ್ಲದೆ, ಪರಿಶುದ್ಧಾಚರಣೆಗೆ ಸಹಾಯಮಾಡಬೇಕು. ಸ್ವತಃ ನ್ಯಾಯದಿಂದ ನಡೆಯುವುದಲ್ಲದೆ, ಯಾವಾಗಲೂ ನ್ಯಾಯಪಕ್ಷವನ್ನೇ ಕೈಗೊಳ್ಳಬೇಕು. ಈ ಪ್ರಕಾರ ಮನಸ್ಸು ಸುಸಂಸ್ಕೃತವಾಗಿ ನಿಜವಾದ ಮನುಷ್ಯತ್ವವನ್ನು ಹೊಂದಬೇಕಾದರೆ ಉಚ್ಚ ಪ್ರತಿಯ ಶಿಕ್ಷಣಾಲಯದ ಪ್ರಾ[illegible] ಕೂಡಿ ಇರಲಿಕ್ಕೆ [illegible] ಹಾಗೆ ವ್ಯವಸ್ಥೆಯನ್ನು ಮಾಡಿ ಕೊಡುವುದು ಒಂದು ಮೇಲಾದ ಉಪಾಯವು. ಈ ಸತ್ಕಾರ್ಯಕ್ಕೆ ಪ್ರಥಮತಃ ಅನುಕೂಲಮಾಡಿಕೊಟ್ಟಿರುವ ನಮ್ಮ ಶ್ರೀ ಕರವೀರ ಸಂಸ್ಥಾನದ ಉಪಕಾರಕ್ಕಾಗಿ ನಾವು ಕೃತಜ್ಞರಿದ್ದೇವೆ.

ಸ್ತ್ರೀಶಿಕ್ಷಣದ ಆವಶ್ಯಕತೆ.

ಉಚ್ಚ ಪ್ರತಿಯ ಶಿಕ್ಷಣವು ಪ್ರಾಥಮಿಕ ಶಿಕ್ಷಣವನ್ನು ಹೇಗೆ ಅವಲಂಬಿಸಿರುವುದೋ, ಹಾಗೆ ಪ್ರಾಥಮಿಕ ಶಿಕ್ಷಣವು ಬಾಲ್ಯದಲ್ಲಿ ತಾಯಿಯಿಂದ ದೊರೆಯುವ ಶಿಕ್ಷಣವನ್ನು ಅವಲಂಬಿಸಿರುವುದು. ಇದಕ್ಕಾಗಿ ತಾಯಿಯು ಚೆನ್ನಾಗಿ ಕಲಿತವಳಿರುವುದು ಅವಶ್ಯವು. ಮನುಷ್ಯಜನ್ಮವು ಸಫಲವಾಗಲಿಕ್ಕೂ, ವಿಫಲವಾಗಲಿಕ್ಕೂ ತಂದೆಗಿಂತ ತಾಯಿಂದಿರೇ ಹೆಚ್ಚು ಕಾರಣರಾಗಿರುವರು. ಆದುದರಿಂದ ನಾವು ಉಚ್ಚ ಶಿಕ್ಷಣವನ್ನು ಪಡೆಯುವುದು ಎಷ್ಟು ಮಹತ್ವವುಳ್ಳದ್ದಾಗಿರುವುದೋ ಅದಕ್ಕಿಂತಲೂ, ಉತ್ತಮ ತಾಯಿಂದಿರನ್ನು ಸಿದ್ಧಪಡಿಸುವುದು ಹೆಚ್ಚು ಮಹತ್ವವಾಗಿರುವುದು. ಇದಕ್ಕಾಗಿಯೇ ಪ್ರಖ್ಯಾತ ಫ್ರೆಂಚ ಚಕ್ರವರ್ತಿಯಾದ ನೆಪೋಲಿಯನ್ನ ಬೋನಾಪಾರ್ಟನು ‘ನೂರುಮಂದಿ ಶಿಕ್ಷಕರ ಯೋಗ್ಯತೆಗಿಂತ, ಒಬ್ಬ ಮೇಲಾದ ಮಾತೆಯ ಯೋಗ್ಯತೆಯು ಹೆಚ್ಚಿನದು.’ ಎಂದು ಒಂದು ಪ್ರಸಂಗದಲ್ಲಿ ಆಡಿಕೊಂಡಿರುವನು. ‘ತೊಟ್ಟಿಲನ್ನು ತೂಗಬಲ್ಲವಳು ಜಗತ್ತನ್ನೇ ತೂಗಿಸಬಲ್ಲಳು.’ ಎಂದಿರುವ ಒಬ್ಬ ಪಾಶ್ಚಿಮಾತ್ಯ ಪಂಡಿತನ ಅಭಿಪ್ರಾಯವಾದರೂ ಇದನ್ನೇ ಸೂಚಿಸುವುದು. ಇಂಗ್ಲೆಂಡು, ಜರ್ಮನಿ, ಅಮೇರಿಕಾ ಜಪಾನ ಮುಂತಾದ ಸುಧಾರಿಸಿದ ರಾಷ್ಟ್ರಗಳು ಬೆಳವಣಿಗೆಗೆ ಬರಲಿಕ್ಕೆ ಸ್ತ್ರೀ ಶಿಕ್ಷಣವೂ ಒಂದು ಮುಖ್ಯಕಾರಣವಾಗಿರುವುದು. ಸಮಾಜವೆಂದರೆ ಸ್ತ್ರೀಪುರುಷರಿಬ್ಬರೂ ಕೂಡಿ ಆಗಿರುವುದು. ಎಂದಬಳಿಕ ಸಮಾಜಸುಧಾರಣೆಯೆಂದರೆ, ಸ್ತ್ರೀಪುರುಷರಿಬ್ಬರದೂ ಸುಧಾರಣೆಯು ಎಂದು ತಿಳಿಯಬೇಕು. ಇಲ್ಲದಿದ್ದರೆ ಅರ್ಧಾಂಗವಾಯುವಿನಿಂದ ಇಡೀ ಶರೀರವು ನಿರುಪಯೋಗಿಯಾಗುವಂತೆ ಸ್ತ್ರೀ ಶಿಕ್ಷಣವಿಲ್ಲದಿದ್ದರೆ ನಮ್ಮ ಸಮಾಜದ ಸ್ಥಿತಿ ಆಗುವುದು. ಆದುದರಿಂದ ನಮ್ಮ ಸಮಾಜಪದ್ಧತಿಗೆ ಅನುಸರಿಸಿ ಮೇಲಾದ ಮಾತೆಯರೂ, ಉತ್ತಮಗೃಹಿಣಿಯರೂ ಆಗುವವಷ್ಟಿಗೆ ನಮ್ಮ ಬಾಲಿಕೆಯರಿಗೆ ಸುಮಾರು ೧೨ ವರ್ಷದ ವರೆಗೆ ಶಿಕ್ಷಣವನ್ನು ಕೊಡಬೇಕು. ಅನಂತರ ಅವರನ್ನು ವಿದ್ಯಾವಂತರಿಗೆ ಕೊಟ್ಟು ಮದುವೆಯನ್ನು ಮಾಡಬೇಕು. ಎಂದರೆ ಸ್ತ್ರೀಶಿಕ್ಷಣವು ಸಫಲವಾಗುವುದಲ್ಲದೆ ಪ್ರೌಢವಿವಾಹದ ಲಾಭವೂ ನಮಗೆ ದೊರಕುವುದು. ಇಲ್ಲದಿದ್ದರೆ ‘ಭಾವಿ ತೋರಿಸುವಾಗ್ಗೆ ಬೇತಾಳ ಹೊರಟಿತು.’ ಎಂಬಂತೆ ಸ್ತ್ರೀ ಶಿಕ್ಷಣದ ಪರಿಣಾಮವಾಗುವ ಸಂಭವವಿದೆ. ಇದು ಇನ್ನು ಇಲ್ಲಿಗೆ ಸಾಕು. ಸ್ತ್ರೀ ಶಿಕ್ಷಣದ ಆವಶ್ಯಕತೆ ನಮಗೆ ಎಷ್ಟಿರುವುದೆಂಬ ಬಗೆಗೆ ಪಾಶ್ಚಾತ್ಯ ತತ್ವಜ್ಞಾನಿಗಳಂತೆಯೇ ನಮ್ಮವನಾದ ಸರ್ವಜ್ಞ ಮಹಾಕವಿಯು ಹೇಳಿರುವ ತತ್ವವು ಬಹಳ ಮನೋವೇಧಕವಾಗಿರುವುದರಿಂದ, ಅದನ್ನೊಂದಷ್ಟು ಇಲ್ಲಿ ಹೇಳಿ ಈ ವಿಷಯವನ್ನು ಮುಗಿಸುತ್ತೇನೆ. “ನಾರಿ ಸ್ವರ್ಗಕೆ ದಾರಿ ನಾರಿ ಇಹಕುಪಕಾರಿ। ನಾರಿ ಪುರುಷರಿಗೆ ಸಹಕಾರಿ ಕೆಟ್ಟರೆ। ನಾರಿ ಹೆಮ್ಮಾರಿ ಸರ್ವಜ್ಞ ॥೧॥

ಸಂಸಾರಸುಖಾಪೇಕ್ಷಿಯಾದ ಪ್ರತಿಯೊಬ್ಬನೂ ಬಂಗಾರದಂತಹ ಈ ವಚನವನ್ನು ಬಂಗಾರದ ಅಕ್ಷರಗಳಿಂದ ಬರೆದಿಟ್ಟುಕೊಳ್ಳುವಂತಿದೆ.

ದಾನಪದ್ಧತಿ.

ಈಗಣ ಮನ್ವಂತರದಲ್ಲಿ ಧರ್ಮದ ನೆವದಿಂದ ಅಪಾತ್ರದಾನವು ನಮ್ಮಲ್ಲಿ ಬಹಳಮಟ್ಟಿಗೆ ಆಗುವದು ಕಂಡುಬರುವುದು. ಇದರಿಂದ ದಾನದ ಉದ್ದೇಶವು ಒತ್ತಟ್ಟಿಗೆ ಉಳಿದು, ಸಮಾಜಕ್ಕೆ ಹಾನಿಯಾಗುವ ಸಂಭವವು ಬಹಳವಿದೆ. ಕೆಲಮಟ್ಟಿಗೆ ಈ ಅಪಾತ್ರದಾನಪದ್ಧತಿಯಿಂದ ಹಾನಿಯಾಗುತ್ತ ನಡೆದಿದೆ ಎಂದರೂ ಅಡ್ಡಿಯಿಲ್ಲ. ಆದುದರಿಂದ ನಮ್ಮ ಈ ರೂಢಿಯ ದಾನಪದ್ಧತಿಯಲ್ಲಿ ರೂಪಾಂತರಮಾಡಿ ಅದನ್ನು ನಮ್ಮ ಶಿಕ್ಷಣೋತ್ಕರ್ಷ ಕೆಲಸದ ಕಡೆಗೆ ತಿರುಗಿಸಿಕೊಳ್ಳುವುದು ಈ ಕಾಲಕ್ಕೆ ಬಹು ಸ್ತುತ್ಯವಾದ ದಾನಪದ್ಧತಿಯೆಂದು ತೋರುತ್ತದೆ. ಈ ಬಗ್ಗೆ ಅತ್ಯಂತ ಅನುಕರಣೀಯವಾದ ಒಂದು ಸಂಗತಿಯನ್ನು ಉದಾಹರಿಸುವೆನು.

ನಮ್ಮ ಸಾಂಗಲಿ ಸಂಸ್ಥಾನದಲ್ಲಿ ಶ್ರೀ ಗಣಪತಿದೇವರ ಸಮಾರಾಧನೆಗಾಗಿ ಬಹು ದೊಡ್ಡ ವರ್ಷಾಶನವು ಮೊದಲಿನಿಂದ ನಡೆಯುತ್ತ ಬಂದಿದ್ದಿತು. ಈಗಣ ಶ್ರೀಮಂತರು ಈ ಕಾಲಕ್ಕನುಸರಿಸಿ “ಗಣಪತಿಯು ವಿದ್ಯಾಧಿದೇವತೆಯಾಗಿರುವನು. ಆದುದರಿಂದ ಸಂಸ್ಥಾನದ ವಿದ್ಯಾಭಿವೃದ್ಧಿಗಾಗಿ ಆತನ ವರ್ಷಾಶನದ ಕೆಲವು ಭಾಗವನ್ನು ವೆಚ್ಚಮಾಡುವುದೇ ಅವನ ತೃಪ್ತಿಯ ಫಲವು.” ಎಂದು ಈ ವರ್ಷದಿಂದ ಆ ಹಣವನ್ನು ಶಿಕ್ಷಣ ಸಂಸ್ಥೆಗೆ ಕೊಡಹತ್ತಿರುವರು. ಇದಕ್ಕಿಂತಲೂ ಹೆಚ್ಚಿಗೆ ಅನುಕರಣೀಯವಾದ ದಾನ ಪದ್ಧತಿಯನ್ನು ನಮ್ಮ ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಶ್ರೀ ಶ್ರೀಗಳವರು ಮೊದಲುಮಾಡಿ ಅಲ್ಲಿಯ ನಮ್ಮ ಬಂಧವರು ಸುಮಾರು ೫೦೦೦೦ ರೂಪಾಯಿ ಬಂಡವಲದಿಂದ ಒಂದು ಅರಳೆಯ ಪ್ರೆಸ್ಸನ್ನು ಸಾಗಿಸಿ, ಅದರ ಬರುವ ಉತ್ಪನ್ನದಲ್ಲಿ ಕಾಲುಭಾಗವನ್ನು ಶಿಕ್ಷಣಕ್ಕೆ ಕೊಡುವುದಾಗಿನಿಶ್ಚಯಿಸಿರುವರೆಂಬುದನ್ನು ಕೇಳಿ ಅತ್ಯಾನಂದವಾಗುತ್ತದೆ. ಇದರಂತೆ ಇನ್ನೂ [illegible] ಕಡೆಗೆ ಆಗಿರುವುದೆಂದು ಕೇಳುತ್ತೇನೆ. ನಿಜವಿದ್ದಲ್ಲಿ ಬಹು ಸಂತೋಷವು! ನಮ್ಮ ಗುರುವರ್ಗವೂ, ಶ್ರೀಮಂತವರ್ಗವೂ, ವ್ಯಾಪಾರಿವರ್ಗವೂ ಪ್ರತ್ಯೇಕ ವ್ಯಕ್ತಿಯೂ ತಂತಮ್ಮ ಶಕ್ತ್ಯನುಸಾರ ಈ ಮೊದಲಾದ ದಾನ ಪದ್ಧತಿಯನ್ನು ಅನುಸರಿಸಿ ನಡೆದರೆ ಇದರಿಂದ ಇಹಪರವೆರಡೂ ಸಾಧಿಸಿದಂತಾಗುವುದು.

ನಮ್ಮ ಸಮಾಜದಲ್ಲಿ ನೂರಕ್ಕೆ ೮೦ ರಂತಿರುವ ವ್ಯವಸಾಯಕಾರರಿಗೆ ವಿದ್ಯೆಯೂ, ಧನವೂ ಇಲ್ಲದಿರುವುದರಿಂದ ಅವರು ಎಷ್ಟು ಕಷ್ಟಪಟ್ಟಾಗ್ಯೂ ಹೊಟ್ಟೆಯನ್ನು ಹೊರೆಯುವುದು ಬಹು ಕಷ್ಟವಾಗಿರುವುದಲ್ಲದೆ, ಬರಗಾಲದಲ್ಲಿ ಇವರಿಗೆ ಪ್ರಾಪ್ತವಾಗುವ ಕಷ್ಟವನ್ನು ವರ್ಣಿಸಲಾಗದು. ಇವರು ಅಭಿವೃದ್ಧಿಯಾದ ಹೊರತು ಸಮಾಜವು ಅಭಿವೃದ್ಧಿಯಾಗುವಂತಿಲ್ಲವು. ಅದುಕಾರಣ ಸಮಾಜದ ಹಿತಾಭಿಲಾಷಿಗಳಾದವರು ಪ್ರತಿಯೊಂದು ಗ್ರಾಮದಲ್ಲೂ ಪರಸ್ಪರ ಸಹಾಯಕ ಸಂಘಗಳನ್ನೇರ್ಪಡಿಸಿ ಬಡ ಕಸಬುದಾರರು ವಿದ್ಯೆಯನ್ನು ಕಲಿತು ತಮ್ಮ ಕಸಬನ್ನು ಸುಧಾರಿಸಿಕೊಂಡು ಪುಷ್ಟಿವಂತರಾಗುವಂತೆ ಮಾಡತಕ್ಕದ್ದಾಗಿದೆ. ಕಸಬುದಾರರ ದ್ರವ್ಯಾರ್ಜನೆಗೆ ಇದು ಒಳ್ಳೆಯ ಸಾಧಕವಾಗಿರುವುದು. ಸರ್ಕಾರಿಯ ಸೇವಿಂಗ್ಸ್ ಬ್ಯಾಂಕಿನಲ್ಲಿ ೩ ರೂ. ಬಡ್ಡಿಯಿಂದ ಹಣವನ್ನಿಡತಕ್ಕವರು ಈ ಪರಸ್ಪರಸಹಾಯಕಸಂಘಗಳಿಗೆ ಹಣವನ್ನು ಕೊಡುವುದರಿಂದ ತಮಗೂ ಬಡ್ಡಿಯು ಬರುವುದಲ್ಲದೆ ಬಡ ಕಸಬುದಾರರ ಅಭಿವೃದ್ಧಿಗೆ ಸಹಾಯಮಾಡಿದಂತಾಗುವುದು. ಇಂತಹ ಸಂಘಗಳ ಮೇಲ್ವಿಚಾರಣೆಗೆ ವಿದ್ಯಾವಂತರೂ ನಿಸ್ಪೃಹರೂ, ಅಭಿಮಾನಶಾಲಿಗಳೂ ಆದವರೇ ನಿಯಮಿಸಲ್ಪಡಬೇಕಲ್ಲದೆ, ಕಸಬುದಾರರ ಸಾಮಗ್ರಿಗಳನ್ನು ಕೊಂಡುಕೊಳ್ಳಲು, ಕಂದಾಯವನ್ನು ಕಟ್ಟಲು ಅವರಿಗೆ ಸಾಲಕೊಡಲ್ಪಡಬೇಕೇ ವಿನಾ ಲಗ್ನಮುಂತಾದ ಕಾರ್ಯಗಳಿಗೆ ಕೊಡಲ್ಪಡತಕ್ಕದ್ದಲ್ಲ. ಈ ಸಂಘಗಳ ಹಿತಾರ್ಥವಾಗಿ ಕೆಲವು ಕಟ್ಟಳೆಗಳನ್ನು ಸಹ ಮಾಡಿರುತ್ತಾರೆ. ಸರ್ಕಾರೀ ಕಂದಾಯ ವಸೂಲಿಯಾದನಂತರ ಬ್ಯಾಂಕಿಗೆ ಬರಬೇಕಾದ ಸಾಲವನ್ನು ಮೊದಲು ವಸೂಲ ಮಾಡಬಹುದು ಇಂತಹ ಸಂಘಗಳಲ್ಲಿರುವ ಲೆಕ್ಕಪತ್ರಗಳು ಕೋರ್ಟು ಕಛೇರಿಗಳಲ್ಲಿ ಸಾಕ್ಷಿಯಾಗಿ ತೆಗೆದುಕೊಳ್ಳಲ್ಪಡುವುವು. ಈ ತೆರದ ಸಂಘಗಳನ್ನು ಸ್ಥಾಪಿಸಿ ನಮ್ಮ ವೀರಶೈವ ಸಮಾಜದ ದಾರಿದ್ರ್ಯಸ್ಥಿತಿಯನ್ನು ದೂರಮಾಡುವುದಕ್ಕೆ ಎಲ್ಲರೂ ಯತ್ನಿಸತಕ್ಕದು.

ಈ ಸಂಘಗಳಿಗಿಂತಲೂ ಮುಖ್ಯವಾಗಿ ಒಕ್ಕಲಿಗರಿಗೆ ಅಗ್ರಿಕಲ್ಚರಲ್ ಅಸೋಸಿಯೇಷನ (ವ್ಯವಸಾಯಕಸಂಘ) ಗಳು ಹೆಚ್ಚು ಪ್ರಯೋಜನ ಹಾಗೂ ಅವಶ್ಯಕರವಾಗಿರುವುವು. ಈ ಸಂಘಗಳು ಜಿಲ್ಲೆಗಳಲ್ಲಿ ದೊಡ್ಡವು ಇದ್ದು ಅವುಗಳ ಕೆಳಗೆ ತಾಲ್ಲೂಕ ಗ್ರಾಮಗಳಲ್ಲಿ ಸಣ್ಣಸಣ್ಣ ಅನೇಕ ಸಂಸ್ಥೆಗಳ ಅವಶ್ಯಕತೆ ಹೆಚ್ಚಾಗಿರುವುದು. ದೊಡ್ಡ ಸಂಸ್ಥೆಗಳ ಉದ್ದೇಶ:—(೧) ಇಡೀ ಜಿಲ್ಲೆಯ ವ್ಯವಸಾಯ ಸ್ಥಿತಿಯನ್ನು ಕುರಿತು ಪರಿಶೋಧನೆ ಹಾಗೂ ಅದರ ಸುಧಾರಣೆಯ ಬಗ್ಗೆ ವಿಮರ್ಶನೆ. (೨) ಸರಕಾರದಿಂದ ಶೇತಕಿ ಖಾತೆಯವರು ಆಗಿಂದಾಗ ಗೊತ್ತುಹಚ್ಚುವ ಸುಧಾರಣೆಗಳನ್ನು ಅರಿತು ಕೆಳಗಣ ಸಂಸ್ಥೆಗಳಿಂದ ಅವುಗಳನ್ನು ಪ್ರಯೋಗಮಾಡಿಸುವುದು. (೩) ಈ ವ್ಯವಸಾಯ ಸಂಬಂಧ ಸಂಚಾರದಿಂದಲೂ, ವಾಚನದಿಂದಲೂ ಹೊಸಹೊಸ ಮಾಹಿತಿಯನ್ನು ದೊರಕಿಸುವುದೂ ಮತ್ತು ಉಪನ್ಯಾಸದಿಂದಲೂ, ಮಾಸಿಕ ಪುಸ್ತಕಗಳಿಂದಲೂ ಅದನ್ನು ಜನರಲ್ಲಿ ಹಬ್ಬಿಸುವುದು (೪) ತಾಲ್ಲೂಕ ಗ್ರಾಮ ಸಂಘಗಳ ಮೇಲ್ವಿಚಾರಣೆ ಮತ್ತೂ ಅವಶ್ಯವಿದ್ದ ಸಹಾಯಮಾಡುವುದು. (೫) ಹೆಚ್ಚು ವ್ಯವಸಾಯ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹಕೊಡುವುದು. (೬) ರೈತರಿಗೆ ವಿಶೇಷವಾಗಿ ಉಪಯೋಗಬೀಳುವ ಕಬ್ಬಿಣರೆಂಟೆ ಮುಂತಾದ ಯಂತ್ರಗಳನ್ನೂ, ಗೊಬ್ಬರಗಳನ್ನೂ ತಾಲ್ಲೂಕ ಗ್ರಾಮಗಳ ಸಂಸ್ಥೆಗಳಿಗೆ ದೊರಕಿಸಿಕೊಡುವುದು.

ಇನ್ನು ಗ್ರಾಮ ಸಂಸ್ಥೆಗಳ ಉದ್ದೇಶ:—(೧) ಒಳ್ಳೆಯ ಬೀಜ ಮತ್ತು ಗೊಬ್ಬರಗಳನ್ನು ಕಾದಿಟ್ಟು ರೈತರಿಗೆ ಒದಗಿಸಿಕೊಡುವುದು (೨) ಬಡರೈತರಿಂದ ಒಬ್ಬೊಬ್ಬರೇ ಕೊಂಡುಕೊಳ್ಳಲಸಾಧ್ಯವಾದ ಕಬ್ಬಿಣರೆಂಟೆ ಮುಂತಾದ ಉಪಯುಕ್ತವಾದ ಯಂತ್ರಗಳನ್ನು ಬಾಡಿಗೆಯಿಂದ ಕೊಟ್ಟು ಸಹಾಯಮಾಡುವುದು. (೩) ಸಂಘಗಳಿಗೆ ಸಂಬಂಧಿಸಿದ ಹೊಲಗಳಲ್ಲಿ ಉಪಯುಕ್ತವಾದ ಪ್ರಯೋಗಗಳ ಪ್ರದರ್ಶನ ಮಾಡುವುದು. (೪) ಆಯಾ ಬೆಳೆಗಳ ರೋಗಗಳನ್ನು ಮೇಲಣ ಸಂಸ್ಥೆಯ ಅನುಮತಿಯ ಮೇರೆಗೆ ಕಡಿಮೆ ಮಾಡಲಿಕ್ಕೆ ಪ್ರಯತ್ನಮಾಡುವುದು (೫) ವ್ಯವಸಾಯದ ಸುಧಾರಣೆಗಾಗಿ ಜನರಿಗೆ ಆಗಾಗ್ಗೆ ಉಪನ್ಯಾಸಮಾಡುವುದು ಮತ್ತು ಅವರ ಮೂಢ ತಿಳುವಳಿಕೆಗಳನ್ನು ತೆಗೆದು ಹಾಕುವುದು. (೬) ಆಯಾ ಗ್ರಾಮಗಳಿಗನುಸಾರವಾಗಿ ಯಾವುದೊಂದು ಗೃಹಕೃತ್ಯವನ್ನು ಶೋಧಿಸಿ ಕೊಟ್ಟು ಅವರನ್ನು ನಿರಂತರ ಉದ್ಯೋಗಿಗಳನ್ನಾಗಿ ಮಾಡುವುದು. (೭) ಸಂಘದಿಂದ ಕೆಲವು ಗೋಳಿಗಳನ್ನು ಕಟ್ಟಿ ಅವುಗಳ ಉಪಯೋಗವನ್ನು ಜನರಿಗೆ ಮಾಡಿಕೊಟ್ಟು ಗ್ರಾಮದಲ್ಲಿದ್ದ ದನಗಳ ಸುಧಾರಣೆಮಾಡುವುದು ಮತ್ತು ಆ ದನಗಳಿಗೆ ೧ ವರ್ಷದ ಜೀವವಿಮೆ ಪಾಲಿಸಿಯನ್ನು ಮಾಡಿಟ್ಟುಕೊಳ್ಳಲಿಕ್ಕೆ ಜನರಿಗೆ ಬೋಧಿಸುವುದು.

(ಸಶೇಷ.)

ಧಾರಣಮಹೋತ್ಸವಸಂಬಂಧವಾಗಿ ನಾನಾ ಡೆಯಲ್ಲಿ ನಡೆದ ಉತ್ಸವಸಮಾರಂಭಗಳು.

ಚೆನ್ನಗಿರಿ ತಾ॥ ಸಂತೆಬೆನ್ನೂರು.

ಳೆದ ಡಿಸೆಂಬರ್ ತಾ॥ ೧೨ ರಲ್ಲಿ ಸಾರ್ವಭೌಮರ ಕಿ ರಣಮಹೋತ್ಸವದ ಬಗೆಗೆ ಈ ಊರ ಹುಡುಗರ ನಲ್ಲಿ ಪುರನಿವಾಸಿಗಳೂ, ಉಪಾಧ್ಯಾಯರುಗಳೂ, ವಿ ಗಳೂ ಮ॥ ದೇಶಪಾಂಡೆ ಲಕ್ಷ್ಮಣರಾಯರ ಅಧ್ಯಕ್ಷ ಸಭೆ ಸೇರಿದ್ದರು ಆ ಕಾಲದಲ್ಲಿ ಉಪಾಧ್ಯಾಯರುಗ ದೇವತಾಸ್ತೋತ್ರ ಮತ್ತೂ ಉಪನ್ಯಾಸಗಳು ನಡೆಯಿ ಟ್ಟವು.

ಹೆಗ್ಗಡದೇವನಕೋಟೆ ತಾ॥ ಚಿನ್ನಹಳ್ಳಿ.

ಗ್ರಾಮಸ್ಥರು ಮ॥ ಆರ್. ಕುಮಾರಾರಾಧ್ಯರ ಅಧ್ಯ ಂದ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸ ಡಿಸೆಂಬರ್ ತಾ॥ ೧೨ ರಲ್ಲಿ ನಡೆಯಿಸಿದರು. ಮಹಾ ಸ್ವಾಮಿಯವರಿಗೆ ರುದ್ರಾಭಿಷೇಕಾದಿ ಅರ್ಚನೆಯು ಆ ರಾತ್ರಿ ದೀಪೋತ್ಸವವು ಮಾಡಲ್ಪಟ್ಟಿತು. ಈ ಗ್ರಾ ಸೇರಿದ ಹುಂಡಿ ಗ್ರಾಮದಲ್ಲೂ ಉತ್ಸವವು ವಿಜೃಂಭಣೆ ನಡೆಯಿಸಲ್ಪಟ್ಟಿತು.

ಹಿರಿಯೂರು ತಾ॥ ವೇಣಿಕೆಲ್ಲು ಗುತ್ತ.

ಗ್ರಾಮದಲ್ಲಿ ತಾ॥ ಅಮಲ್ದಾರರ ಅಪ್ಪಣೆಯ ಮೇರೆ ದ ಡಿಸೆಂಬರ್ ತಾ॥ ೧೨ ರಲ್ಲಿ ಚಕ್ರವರ್ತಿಯವರ ಕಿ ರಣ ಮಹೋತ್ಸವವು ವೈಭವದಿಂದ ಜರುಗಿಸಲ್ಪಟ್ಟಿ ಪ್ರಾಣದೇವರ ದೇವಸ್ಥಾನದಲ್ಲಿ ಬಡಬಗ್ಗರಿಗೆ ಅನ್ನವು ಲ್ಪಟ್ಟಿತು. ಈ ಉತ್ಸವಕಾರ್ಯದಲ್ಲಿ ಮಠದ ಶ್ರೀ ವಿ. ಂದ್ರಶೇಖರಯ್ಯನವರು ಮುಂದಾಳುಗಳಾಗಿದ್ದರಲ್ಲದೆ, ಗ್ಗರಿಗೆ ಧಾನ್ಯ ಮತ್ತೂ ದುಡ್ಡನ್ನು ದಾನಮಾಡಿದರು.

ದಗ ತಾ॥ ಡೊಂಬಳ ಸಮ್ಮತು ವೆಂಕಟಾಪುರ.

ಲ್ಲಿಯ ಮುಖಂಡರಾದ ರಾ॥ರಾ॥ ಗುರುಬಸವನಗೌಡ ಗೌಡ ಪೊಲೀಸು ಪಾಟೀಲ ಇವರು ಡಿಸೆಂಬರ್ ತಾ॥ ಕಿರೀಟಧಾರಣ ಮಹೋತ್ಸವವನ್ನು ವೈಭವದಿಂದ ಜ ರರು. ಆ ದಿವಸ ಲಿಂಗಪ್ಪ ಅಡಿವೆಪ್ಪನವರು ಬಡಜನ ಮಭೋಜನವನ್ನು ಮಾಡಿಸಿದರು. ಗುರುಬಸವನಗೌ ದ್ಯಾರ್ಥಿಗಳಿಗೆ ಮಿಠಾಯಿಯನ್ನೂ ಪದಕಗಳನ್ನೂ ರು. ಪ್ರಭುದಂಪತಿಗಳ ಶ್ರೇಯಃಪ್ರಾರ್ಥನೆಯು ದೇ ಗಳಲ್ಲಿ ಮಾಡಲ್ಪಟ್ಟಿತ್ತು.

ದೇವನಹಳ್ಳಿ ತಾ॥ ಬಿದಲೂರು ಗ್ರಾಮ.

ಗ್ರಾಮದ ನಿವಾಸಿಗಳು ಕಿರೀಟಧಾರಣ ಮಹೋ ಉದ್ದಿಶ್ಯ ಕಳೆದ ಡಿಸೆಂಬರ್ ತಾ॥ ೧೨ ರಲ್ಲಿ ಸ್ಕೂಲಿನ ಗದಲ್ಲಿ ದಿವ್ಯವಾಗಿ ರಚಿಸಿದ್ದ ಮಂಟಪದಲ್ಲಿ ಸಭೆ ಸೇ ವರ್ತಿ ದಂಪತಿಗಳ ಭಾವಚಿತ್ರವನ್ನು ಪೂಜಿಸಿ ಅವರ ತನವನ್ನು ಮಾಡಿದುದಲ್ಲದೆ, ಶ್ರೀ ಚನ್ನಕೇಶ್ವರ ಸ್ವಾ ಭಿಷೇಕ ಕುಂಕುಮಾರ್ಚನೆಯನ್ನು ಮಾಡಿಸಿ ಪ್ರಭು ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ವಿದ್ಯಾರ್ಥಿ ಟನಾಟಕಗಳಿಂದಲೂ ಫಲಾಹಾರದಿಂದಲೂ ತೃಪ್ತಿಪ ಟ್ಟರು.

ಮಂಜರಾಬಾದು ತಾ॥ ದೋಣಿಗಾಲ್.

ಣಿಗಾಲಿನ ಕಾಫಿ ಪ್ಲಾಂಟರ್ ಮ॥ ಬಸವೇಗೌಡರ ಮ॥ ಶಾಂತಮಲ್ಲೇಗೌಡರು ಇವರ ಸಹೋದರರಾ ಂಜೇಗೌಡರು ಈ ಗ್ರಾಮದವರೊಡನೆ ಕಳೆದ ಡಿ ತಾ॥ ೧೨ ರಲ್ಲಿ ಚಕ್ರವರ್ತಿ ಸಾರ್ವಭೌಮರ ಕಿರೀ ಮಹೋತ್ಸವವನ್ನು ಅತ್ಯಂತ ಉತ್ಸಾಹದಿಂದ ನ ನೂರಾರು ಬಡಜನರಿಗೆ ಅನ್ನವನ್ನು ಹಾಕಿದುದಲ್ಲದೆ ಅಂಗವಿಹೀನರಿಗೆ ಒಟ್ಟಿಗೆಗಳನ್ನು ದಾನಮಾಡಿದರು. ಸಾರ್ವಭೌಮರ ಹೆಸರಿನಮೇಲೆ ಕೆಲ ಬಡ ವಿದ್ಯಾ ವೇತನವನ್ನು ಕೊಡುವುದಾಗಿ ವಾಗ್ದಾನಮಾಡಿ ುವ ರಾಜನಿಷ್ಠೆಯನ್ನು ಪ್ರಕಾಶಗೊಳಿಸಿದರು.

ಚಳ್ಳಕೆರೆ ತಾ॥ ದೊಡ್ಡೇರಿ.

ದ ಡಿಸೆಂಬರ್ ತಾ॥ ೧೨ ರಲ್ಲಿ ಈ ಊರ ಸ್ಕೂಲ್ ಮ॥ ಪಟೇಲ್ ವೀರಣ್ಣನವರ ಅಧ್ಯಕ್ಷತೆಯಲ್ಲಿ ಗಳಾದ ಶ್ರೀ ಮಠದ ಕೆಂಚವೀರಪ್ಪನವರು, ಶ್ರೀ ಪ್ಪಯ್ಯನವರು, ಜಿ. ಸುಬ್ಬಣ್ಣನವರು, ರುದ್ರಪ್ಪನ ನಾಗಪ್ಪನವರು, ಗೌ॥ ರುದ್ರಪ್ಪನವರು, ಗಣೇಶ ಯ್ಯನವರು, ವೆಂಕಟಪ್ಪನವರು, ಅಮರಾಪುರದ ಡೇಬಲು ಮುಂತಾದ ದೊಡ್ಡ ಮನುಷ್ಯರು ಸಭೆ ಟಧಾರಣಮಹೋತ್ಸವವನ್ನು ವಿಜೃಂಭಣೆಯಿಂದ ಈ ಊರಿನಲ್ಲಿ ಹೊಸದಾಗಿ ಸ್ಕೂಲನ್ನು ಕಟ್ಟಿ ಪ ಗಡಿಕೆಗಳು ತಿಪ್ಪಯ್ಯನವರಿಗೆ ಸರ್ವರಿಂದಲೂ ಮಾನಲ್ಪಟ್ಟಿತು.

ಚೆನ್ನಗಿರಿ ತಾ॥ ಜೋತೋಣಿ.

ಈ ಹೋಬಳಿಯ ಶೇಕದಾರರೂ, ಸ್ಕೂಲ್ಮಾಸ್ತರುಗಳೂ, ಕಮಿಟಿ ಮೆಂಬರುಗಳೂ, ಪರಸ್ಥಳದವರೂ ಸೇರಿ ಚಂದಾ ಹಣವನ್ನು ಕೂಡಿಸಿ ಗ್ರಾಮವನ್ನೆಲ್ಲಾ ಅಲಂಕಾರಮಾಡಿ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರ ಪಟಗಳನ್ನಿಟ್ಟು ಪೂಜಿಸಿ, ಸ್ಕೂಲ್ ಕಟ್ಟಡದಲ್ಲಿ ಒಂದು ದೊಡ್ಡ ಸಭೆಯನ್ನು ಸೇರಿಸಿದ್ದಾಗ್ಗೆ ಬ್ರಿಟಿಷ್ ಸಾರ್ವಭೌಮರ ಆಳುವಿಕೆಗೂ ಹಿಂದಣ ರಾಜರುಗಳ ಆಳುವಿಕೆಗೂ ಇರುವ ವ್ಯತ್ಯಾಸಗಳು ಧರ್ಮ ವಿಚಾರವೂ ಉಪನ್ಯಸಿಸಲ್ಪಟ್ಟವು. ಅನಂತರ ಮಿಠಾಯಿ ಹಣ್ಣು ಹಂಪಲುಗಳು ಹಂಚಲ್ಪಟ್ಟವಲ್ಲದೆ ವಿದ್ಯಾರ್ಥಿಗಳಿಂದ ಆಟಮಾಡಿಸಲ್ಪಟ್ಟು ಗೆದ್ದವರಿಗೆ ಬಹುಮಾನವು ಕೊಡಲ್ಪಟ್ಟಿತು.

ಮೊಳಕಾಲ್ಮೂರು ತಾ॥ ಕೊಂಡ್ಲಹಳ್ಳಿ.

ಚಕ್ರವರ್ತಿಯವರ ದರ್ಬಾರು ಮಹೋತ್ಸವವು ಕಳೆದ ಡಿಸೆಂಬರ್ ತಾ॥ ೧೨ ರಲ್ಲಿ ಈ ಗ್ರಾಮಸ್ಥರಿಂದ ನೆರವೇರಿಸಲ್ಪಟ್ಟಿತು. ಸ್ಕೂಲ್ ಕಮಿಟಿಯ ಮೆಂಬರುಗಳಾದ ಪ॥ ಅಜ್ಜಪ್ಪಗೌಡರು, ಹೊಲುಮಾಳಿಗೆ ವೀರಣ್ಣನವರು, ಸಣ್ಣೀರಜ್ಜಪ್ಪನವರು, ಗೌಡರ ಅಪ್ಪಯ್ಯವರುಗಳು ಮತ್ತೂ ಗ್ರಾಮದ ಮುಖಂಡರಾದ ಗೊಂಚಿಗಾರ ಓಬೋ ತಿಮ್ಮಣ್ಣನವರು, ಬುಡರೆಡ್ಡಿ ನಾಗಪ್ಪನವರು, ಹೊಸಮನೆಯ ರುದ್ರಪ್ಪನವರು ಮುಂತಾದವರು ಸಭೆ ಸೇರಿ ವಿದ್ಯಾರ್ಥಿಗಳಿಂದ ಸಾರ್ವಭೌಮ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿದರು ಸಾಯಂಕಾಲದಲ್ಲಿ ವಿದ್ಯಾರ್ಥಿಗಳಿಂದ ಆಟಪಾಟಗಳನ್ನಾಡಿಸಿ ಅವರಿಗೆ ತಿಂಡಿಯು ಕೊಡಲ್ಪಟ್ಟಿತು. ರಾತ್ರಿ ದೀಪೋತ್ಸವವಾಯಿತು.

ಚಿತ್ರದುರ್ಗದ ತಾ॥ ಭರಮಸಾಗರ

ಶ್ರೀಚಕ್ರವರ್ತಿಯವರ ಕಿರೀಟಧಾರಣೋತ್ಸವಕ್ಕಾಗಿ ಸ್ಕೂಲ್ ಮಾ॥ ಕೃಷ್ಣಮೂರ್ತಿರಾವ್, ಟಿ. ಶ್ರೀನಿವಾಸರಾವ್, ಎಂ. ಕರಿಬಸವಯ್ಯ, ಸ್ಕೂಲ್ ಮೆಂಬರುಗಳೂ, ಜಮಾದಾರರೂ, ಅಬ್ಕಾರಿ ಇನ್ಸ್ಪೆಕ್ಟರೂ ಮುಂತಾದವರೆಲ್ಲಾ ಸ್ಕೂಲಿನಲ್ಲಿ ಸಭೆಸೇರಿ ಹುಡುಗರಿಂದ ಆಟವಾಡಿಸಿ ಹನುಮಂತರಾಯರಿಂದ ಮಿಠಾಯಿ ಮುಂತಾದುದನ್ನು ಕೊಡಿಸಿ, ಶ್ರೀ ಚಕ್ರವರ್ತಿಗಳಿಗೂ, ನಮ್ಮ ಶ್ರೀಮನ್ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಇಂತಹ ಮಹೋತ್ಸವಕ್ಕೆ ಮ॥ಹೆಡ್ ಮಾ॥ ಗುರುರಾಜಪ್ಪನವರು ಶಾಯಿಲೆಯ ನಿಮಿತ್ತ ಬರಲಾಗದೇ ಇದ್ದುದಕ್ಕೆ ಸರ್ವರೂ ಪಶ್ಚಾತ್ತಾಪಗೊಂಡರು, ಸಭೆಯಲ್ಲಿ ವಿದ್ಯಾರ್ಥಿಗಳ ಗೀತವು ಇಂಪಾಗಿ ಅಂದಿನ ಉತ್ಸವವು ಸಂತೋಷಕಾರಿಯಾಗಿದ್ದಿತು.

ಬೆಳಗಾಂ ಡಿ॥ ನಿಡಸೋಸಿ.

ಶ್ರೀ ದುರದುಂಡೇಶ್ವರ ಸ್ವಾಮಿ ಸಿದ್ಧಸಂಸ್ಥಾನ ಮಠಾಧೀಶರಾದ ಶ್ರೀಮನ್ನಿರಂಜನ ಲಿಂಗೇಶ್ವರಸ್ವಾಮಿಗಳು ಜಾರ್ಜ ಸಾರ್ವಭೌಮರವರ ರಾಜ್ಯಾರೋಹಣ ಸಮಾರಂಭವನ್ನ ತಮ್ಮ ಸಂಸ್ಥಾನಮಠದಲ್ಲಿ ಕಳೆದ ಡಿಸೆಂಬರ್ ತಾ॥೧೨ ರಲ್ಲಿ ಸಂಸ್ಥಾನದ ಪುರಾತನಕಾಲದ ಸಿಂಹಾಸನಾರೋಹಣವನ್ನು ಮಾಡಿ ಊರ ಪ್ರಮುಖ ಜನರನ್ನು ಬರಮಾಡಿಕೊಂಡು ಸಭೆಯನ್ನು ಮಾಡಿ ವಿಶೇಷ ವೈಭವದಿಂದ ಜರುಗಿಸಿ ಬಡಜನರಿಗೆ ಅನ್ನ ಮತ್ತೂ ವಸ್ತ್ರದಾನವನ್ನು ಮಾಡಿ ಜಂಗಮರು ಮೊದಲಾದ ವೈದಿಕರಿಗೆ ಸುಭೋಜನವನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟರು. ಈ ಉತ್ಸವಕ್ಕಾಗಿ ಮಠವು ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿತ್ತು. ಮತ್ತೂ ಅದಿನ ರಾತ್ರಿ ದೀಪಾರಾಧನೆಯು ನಡೆಯಿಸಲ್ಪಟ್ಟಿತು.

ಶಿಕಾರಿಪುರ ತಾ॥ ಶಿರಾಳಕೊಪ್ಪ.

ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವ ಸಂಬಂಧವಾಗಿ ಈ ಊರು ಡಿಸೆಂಬರ್ ತಾ॥ ೧೨ರಲ್ಲಿ ಮನೋಹರವಾಗಲಂಕರಿಸಲ್ಪಟ್ಟು ದೇವತಾರ್ಚನೆಯೂ ದೀಪೋತ್ಸವವೂ ನಡೆಯಿಸಲ್ಪಟ್ಟಿತು. ಊರಿನ ಪ್ರಮುಖರು ಸಭೆ ಸೇರಿ ಚಕ್ರವರ್ತಿಯವರ ಚಿತ್ರಪಟವನ್ನು ಅಲಂಕರಿಸಿ, ಅವರ ಪ್ರಶಂಸೆಯನ್ನು ಕುರಿತು ಭಾಷಣಗಳನ್ನು ಮಾಡಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಆಟಗಳಲ್ಲಿ ಗೆದ್ದ ಹುಡುಗರಿಗೆ ದುಡ್ಡು ಪುಸ್ತಕ ಮೊದಲಾದ ಬಹುಮಾನಗಳೂ, ಮಿಠಾಯಿಯೂ ಬಡಬಗ್ಗರಿಗೆ ಪಂಚೆ, ಸೀರೆ, ಕಣಗಳೂ ಕೊಡಲ್ಪಟ್ಟುವು. ಈ ಊರಿನಲ್ಲಿ ಇಂಗ್ಲೀಷು ಸ್ಕೂಲನ್ನು ಸ್ಥಾಪಿಸಲು ವಿದ್ಯಾಭ್ಯಾಸದ ಶಾಖಾಧಿಕಾರಿಗಳ ಅಪ್ಪಣೆಯ ಪ್ರಕಾರ ೫೦೦ ರೂ. ಕಂಟ್ರಿಬ್ಯೂಷನ್ ಮೊಬಲಗು ಚಂದಾ ಎತ್ತಲ್ಪಟ್ಟು ಡಿಪಾಜಿಟ್ಟು ಇಡಲ್ಪಟ್ಟಿತು.

ಬಳ್ಳಾರಿ ಜಿಲ್ಲಾ ಉಜ್ಜಯಿನಿ.

ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವದ ಸಂತೋಷ ಸೂಚಕವಾಗಿ ಡಿಸೆಂಬರ್ ತಾ॥ ೧೨ ರಲ್ಲಿ ಇಲ್ಲಿಯ ಗ್ರಾಮ ಮುನ್ಸೀಫ್ ರಾ॥ ಜಿ. ಬಸವನಗೌಡರು, ರಾ॥ ಕರಣಂ ಶ್ರೀನಿವಾಸಾಚಾರರು, ಸರ್ಕಾರಿ ಸ್ಕೂಲ್ ಹೆಡ್ಮಾಸ್ಟರ್ ಮ॥ ಶ್ರೀನಿವಾಸರಾಯರು ಮುಂತಾದ ದೊಡ್ಡಮನುಷ್ಯರು ವಿಶೇಷ ಶ್ರದ್ಧೆಯನ್ನು ವಹಿಸಿ ಊರನ್ನು ಶೃಂಗರಿಸಿ ಚಕ್ರವರ್ತಿ ದಂಪತಿಗಳ ಭಾವಚಿತ್ರಪಟವನ್ನು ಊರಿನಲ್ಲೆಲ್ಲ ಮೆರೆಯಿಸಿಕೊಂಡು ಬಂದು ಒಂದು ದೊಡ್ಡ ಸಭೆಗೂಡಿಸಿ, ಬ್ರಿಟಿಷ್ ಸಾಮ್ರಾಜ್ಯದಿಂದ ಲಭ್ಯವಾಗಿರುವ ಮಹದುಪಕಾರಗಳನ್ನು ನೆರದಿದ್ದ ಜನರಿಗೆಲ್ಲ ತಿಳಿಯ ಹೇಳಿದಮೇಲೆ ಬಾಲಕಬಾಲಿಕೆಯರಿಗೆ ಮಿಠಾಯಿ ಮುಂತಾದ ತಿಂಡಿಯ ಪದಾರ್ಥಗಳು ಕೊಡಲ್ಪಟ್ಟು ಪ್ರಭುದಂಪತಿಗಳ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಬಡಜನರಿಗೆ ಅನ್ನವಸ್ತ್ರಾದಿಗಳು ದಾನಮಾಡಲ್ಪಟ್ಟವು.

ಜಗಲೂರ್ ತಾ॥ ಸೊಕ್ಕೆ.

ತಾ॥ ೧೨ ರಲ್ಲಿ ಸ್ಕೂಲನ್ನು ಅಂದವಾಗಿ ಅಲಂಕರಿಸಿ ಅಲ್ಲಿ ಮ॥ ಗಳಾದ ಸಾ॥ ಕಟಸೆಟ್ಟಿ ಅಡಿವೆಪ್ಪನವರು, ಕೊ॥ ಭೀಮಪ್ಪನವರು, ಬಿ. ಸಿದ್ದಪ್ಪನವರು, ಹೂ ಚನ್ನವೀರಪ್ಪನವರು, ಬಿ॥ ಹನುಮಗೌಡರು, ತಿಮ್ಮಪ್ಪನವರು, ಆ॥ ಹನುಮಪ್ಪನವರು ಪಟೇಲರು, ಯೂನಿಯನ್ ಮುನ್ಸೀಫರು, ಜಗಲೂರ್ ಸಾ॥ ವಿರೂಪಾಕ್ಷಪ್ಪನವರೇ ಮುಂತಾದವರು ಸಭೆಗೂಡಿ ನಮ್ಮ ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರವರ ಪಟಗಳಿಗೆ ನಜರ್ ಮುಂತಾದವುಗಳನ್ನರ್ಪಿಸಿದ ಮೇಲೆ ಸ್ಕೂಲ್ ಮಾ॥ ಸಿ. ಕರಿಬಸವಯ್ಯನವರು ಇಂಗ್ಲೀಷ್ ಪ್ರಭುತ್ವದಿಂದಾದ ಉಪಕಾರಗಳನ್ನು ಉಪನ್ಯಾಸಮಾಡಲು ಬಾಲಕರು ಶ್ರೇಯಃಪ್ರಾರ್ಥನೆಯನ್ನು ಮಾಡಿದರು, ಪ್ರಭುಗಳ ಚಿತ್ರಗಳನ್ನು ಊರಲ್ಲಿ ಮೆರವಣಿಗೆಯನ್ನು ಮಾಡಿದರು. ಆ ರಾತ್ರಿ ದೇವಾಲಯಗಳಲ್ಲಿ ಉತ್ಸವಗಳು ಸಂಭ್ರಮವಾಗಿ ನಡೆದುವು. ಸಭೆಯಲ್ಲಿ ಪ॥ ಹನುಮಪ್ಪನವರು ಗಂಧಪುಷ್ಪತಾಂಬೂಲಗಳೊಡನೆ ಸಕ್ಕರೆಯನ್ನು ಸರ್ವರಿಗೂ ಹಂಚಿದ ಮೇಲೆ ಎಲ್ಲರೂ ಅವರವರ ಮನೆಗೆ ತೆರಳಿದರು.

ಚಾಮರಾಜನಗರ ತಾ॥ ಮೂಡ್ಲಕೊಡು ಗ್ರಾಮ.

ಈ ಗ್ರಾಮದ ಪಟೇಲ್ ಶಾನುಭೋಗ ಮೊದಲಾದ ಪ್ರಮುಖರು ಡಿಸೆಂಬರ್ ತಾ॥ ೧೪ ರಲ್ಲಿ ಚಕ್ರವರ್ತಿ ಸಾರ್ವಭೌಮರ ಕಿರೀಟಧಾರಣ ಮಹೋತ್ಸವವನ್ನು ವೈಭವದಿಂದ ಜರುಗಿಸಿದರು ಆ ದಿವಸ ಮಲೆಯೂರು ಮಠದ ಶ್ರೀ ಚಿಕ್ಕಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಸಾರ್ವಭೌಮರ ಸರ್ಕಾರದಿಂದ ಲಭ್ಯವಾಗಿರುವ ಸೌಲಭ್ಯಗಳು ತಿಳಿಸಲ್ಪಟ್ಟವಲ್ಲದೆ ದಿಲ್ಲಿಯಲ್ಲಿ ನಡೆಯುವ ಮಹೋತ್ಸವದ ವೈಭವದ ವರ್ಣನೆಯು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿತವಾಗಿದ್ದು ಓದಲ್ಪಟ್ಟಿತು. ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನೆಗಾಗಿ ದೇವಸ್ಥಾನಗಳಲ್ಲಿ ಪೂಜೆಯೂ ರಾತ್ರಿ ದೀಪೋತ್ಸವವೂ ನಡೆಸಲ್ಪಟ್ಟವು. ಮತ್ತು ರಾತ್ರಿ ಸಾರಂಗಧರ ನಾಟಕವು ಅಭಿನಯಿಸಲ್ಪಟ್ಟಿತು. ಕಾವೇರೀನದಿ ಪ್ರವಾಹದಿಂದ ನಷ್ಟಪಟ್ಟವರ ಸಹಾಯಾರ್ಥವಾಗೇರ್ಪಡಿಸಲ್ಪಟ್ಟಿರುವ ಫಂಡಿಗೆ ಹಣವನ್ನು ಕಳುಹಲು ಸಭಿಕರಿಂದ ೩ ರೂ. ಚಂದಾ ಹಣವೆತ್ತಲ್ಪಟ್ಟು ಸ್ಟಾರ್ ಪತ್ರಿಕಾಕರ್ತರ ವಶಕ್ಕೆ ಕಳುಹಿಸಲ್ಪಟ್ಟಿತು.

[ಈ ಹಣವನ್ನು ನಾವು ಸಂತೋಷದಿಂದ ಸ್ವೀಕರಿಸಿ ಸೆಕ್ರಟರಿಯವರಿಗೆ ತಲಿಪಿಸಿರುತ್ತೇವೆ.—ಪ. ಪ್ರ.]

ದೇವನಹಳ್ಳಿ ತಾ॥ ಹುಣಸಮಾರ್ನಹಳ್ಳಿ.

ತಾ॥ ೧೨ ನೆಯ ಮಂಗಳವಾರ ಇಲ್ಲಿನ ಸ್ಕೂಲನ್ನು ಮನೋಹರವಾಗಿ ಅಲಂಕರಿಸಿ ಉನ್ನತಾಸನದ ಮೇಲೆ ಶ್ರೀ ಚಕ್ರವರ್ತಿ ದಂಪತಿಗಳ ಪಟವನ್ನೂ ಎಡಬಲಗಳಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಮತ್ತು ಶ್ರೀಮನ್ಮಹಾರಾಜರವರ ಪಟಗಳನ್ನೂ ಇಟ್ಟು ಪುಷ್ಪಗುಚ್ಛಗಳಿಂದಲಂಕರಿಸಿ ಮಠದ ಶ್ರೀ ಸ್ವಾಮಿಗಳಪ್ಪಣೆಯಂತೆ ಏಜಂಟ್ ಮ॥ ಚೆನ್ನಬಸವ ಒಡೆಯರವರು ಸರ್ವಾಧಿಕಾರಿಗಳೂ, ಜಮಾದಾರ್, ಸೇಕದಾರ್ ಮುಂತಾದ ಪ್ರಮುಖರೂ ಸಭೆ ಸೇರಿರುವಾಗ ಬ್ರಿಟಿಷ್ ಪ್ರಭುತ್ವದ ಪರೋಪಕಾರಗಳನ್ನು ವಿ. ಗುರುಪಾದಪ್ಪನವರು ವಿವರಿಸಿದ ಮೇಲೆ ಬಾಲಕರಿಂದ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಬಾಲಕರಿಗೆ ಆಟಗಳಿಗಾಗಿ ಬಹುಮಾನವೂ, ಸರ್ವರಿಗೂ ಗಂಧಪುಷ್ಪತಾಂಬೂಲಾದಿಗಳೂ, ಮಿಠಾಯಿಯೂ ಹಂಚಲ್ಪಟ್ಟುವು. ಚಂದ್ರಮೌಳೇಶ್ವರ ದೇವೋತ್ಸವವು ದೀಪ, ಬಾಣ ಮುಂತಾದುವುಗಳಿಂದ ವೈಭವಯುಕ್ತವಾಗಿ ಊರಲ್ಲೆಲ್ಲಾ ನಡೆದು ದೇವಸ್ಥಾನದಲ್ಲಿ ಪ್ರಾರ್ಥನೆಯು ನಡೆದಮೇಲೆ ಆ ರಾತ್ರಿಯೇ ನಾಟಕವೂ ಆಡಲ್ಪಟ್ಟಿತು. ಈ ಕಿರೀಟಧಾರಣ ಮಹೋತ್ಸವದಜ್ಞಾಪನಾರ್ಥವಾಗಿ ಮ॥ ಚನ್ನಬಸವ ಒಡೆಯರವರಿಂದಸ್ಕೂಲಿಗೆ ೧೦ರೂಪಾಯಿನ ಗಡಿಯಾರವು ಕೊಡಲ್ಪಟ್ಟಿತು.

ಚಿಕ್ಕೋಡಿ ತಾ॥ ಸದಲಗೆ ಗ್ರಾಮ.

ಈ ಗ್ರಾಮದ ಶಾಲಾಮಾಸ್ತರರೂ ಪ್ರಮುಖಜನರೂ ಚಂದಾಹಣವನ್ನು ಕೂಡಿಸಿ ಬಾದಶಹರ ಕಿರೀಟಧಾರಣ ಮಹೋತ್ಸವವು ಡಿಸೆಂಬರ್ ತಾ॥ ೧೨ ರಲ್ಲಿ ಅತ್ಯಂತ ವಿಜೃಂಭ

[೩ ನೇಯ ಪುಟದಿಂದ ಮುಂದೆಸಾಗಿದುದು.]

ಕಾಗಿರುವರೆಂದರೆ ಸಖೇದಾಶ್ಚರ್ಯವಾಗುತ್ತದೆ. ಇದರಿಂದ ನಮ್ಮಲ್ಲಿ ವಿದ್ಯಾ ಶಿಕ್ಷಣವು ಸಾಕಷ್ಟಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಪದವೀಧರರಲ್ಲಿ ಎಂ. ಎ. ಪ್ರಶಸ್ತಿಯನ್ನು ಪಡೆದಿರುವವರು ಒಬ್ಬರಾದರೂ ಇಲ್ಲದಿರುವುದು ಅತ್ಯಂತ ವ್ಯಸನವಾಗುತ್ತದೆ. ದಯಾಳು ಸರ್ಕಾರದವರ ಸಹಾನುಭೂತಿಯೂ, ಫಂಡಿನ ಸಾಹ್ಯವೂ ಇರತಕ್ಕ ಈ ಜಿಲ್ಲೆಗಳಲ್ಲಿ ಶಿಕ್ಷಣ ಸ್ಥಿತಿಯು ಹೀಗಿರುವಾಗ ಇನ್ನು ಫಂಡಿನ ಸಹಾಯವಿಲ್ಲದಿರುವ ಪ್ರಾಂತಗಳ ಸ್ಥಿತಿಯನ್ನು ಹೇಳತೀರದು. ಈ ನಮ್ಮ ಶಿಕ್ಷಣಾಂಕುರವನ್ನು ಮಹಾವೃಕ್ಷವನ್ನಾಗಿ ಮಾಡಿ ಅದರ ಮಧುರವಾದ ಫಲವನ್ನು ಸೇವಿಸಿ ಆನಂದಿಸಲಿಕ್ಕೆ ನಾವೆಲ್ಲರೂ ಮನಃಪೂರ್ವಕ ಒಮ್ಮನದಿಂದ ಯತ್ನಮಾಡುವುದು ಎಲ್ಲಕ್ಕೂ ಮಹತ್ವದ ಮತ್ತು ಆದ್ಯ ಕರ್ತವ್ಯವಾಗಿರುತ್ತದೆ. ಶಿಕ್ಷಣೋನ್ನತಿಯ ಬಗ್ಗೆ ನಾವು ಯತ್ನ ಮಾಡತಕ್ಕದ್ದೇನೆಂದರೆ–

ಪ್ರಾಥಮಿಕ ಶಿಕ್ಷಣವು.

ಎಲ್ಲಾ ವಿಧವಾದ ವಿದ್ಯಾ ಶಿಕ್ಷಣಕ್ಕೂ ಪ್ರಾಥಮಿಕ ಶಿಕ್ಷಣವು ಮೂಲವಾದುದರಿಂದ ವಿದ್ಯಾರ್ಥಿಗಳು ಇದನ್ನು ಚೆನ್ನಾಗಿ ಪಡೆದ ಹೊರತು ಉಚ್ಚ ಶಿಕ್ಷಣಕ್ಕೆ ಅವಕಾಶವಿಲ್ಲವು. ಇದನ್ನು ದಯಾಳು ಸರ್ಕಾರದವರರಿತು ಅದರ ಪ್ರಸಾರಣೆಯ ಬಗೆಗೆ ಹೆಚ್ಚು ವ್ಯವಸ್ಥೆಯನ್ನು ಮಾಡಹತ್ತಿರುವರು. ಮತ್ತು ಪರಮಪೂಜ್ಯರಾದ ಜಾರ್ಜ ಸಾರ್ವಭೌಮರು ತಮ್ಮ ಪಟ್ಟಾಭಿಷೇಕ ಸಮಾರಂಭದ ಜ್ಞಾಪನಾರ್ಥವಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ೫೦ ಲಕ್ಷ ರೂ. ಗಳನ್ನು ತಮ್ಮ ಪ್ರಜೆಗಳಾದ ನಮ್ಮೆಲ್ಲರಿಗೂ ವರದಾನಮಾಡಿರುವುದಲ್ಲದೆ ಕ್ರಮೇಣ ಇನ್ನೂ ಹೆಚ್ಚು ಸಹಾಯವನ್ನು ಮಾಡುವದಾಗಿ ವಾಗ್ದಾನವನ್ನು ಮಾಡಿ ಭಾರತೀಯರ ವಂದನೆಗೆ ಪಾತ್ರರಾಗಿರುವರು. ನಾವು ಈ ದಾನದ ಫಲವನ್ನು ಈಗ ಮಾಡಿಕೊಳ್ಳದೆ ಇನ್ನಾವಾಗ ಮಾಡಿಕೊಳ್ಳುವುದು? ಗಾಳಿ ಬರುವಾಗ ತೂರಿಕೊಳ್ಳಬೇಕು. ನಮ್ಮ ಸಮಾಜದ ಚುರುಕು ಬುದ್ಧಿಯ ಎಷ್ಟು ಹುಡುಗರು ಬಡತನ ಮುಂತಾದ ಕಾರಣಗಳಿಂದ ಹಳ್ಳಿಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಲಾಭವನ್ನು ಕಾಣದಿರುವರು. ಅಂತಹವರನ್ನು ಗೊತ್ತುಮಾಡಿ ಪ್ರಾಥಮಿಕ ಶಿಕ್ಷಣೆಗೆ ಗುರಿಮಾಡುವುದು ಅತ್ಯಾವಶ್ಯಕವು. ಈ ಶಿಕ್ಷಣವಿಲ್ಲದ ಜನರು ನಮ್ಮಲ್ಲಿ ವಿಶೇಷವಾಗಿರುವುದರಿಂದಲೇ, ನಮ್ಮ ಸಮಾಜವು ಹೀನಸ್ಥಿತಿಯಲ್ಲಿರುವುದು. ಮನುಷ್ಯರನ್ನು ತಿದ್ದುವ ಕಷ್ಟ ಕೆಲಸಕ್ಕಿಂತ ಭಾರಿ ಸಮಾಜವನ್ನು ತಿದ್ದುವ ಸುಲಭಕಾರ್ಯವನ್ನು ಕೈಗೊಳ್ಳುವುದು ಹೆಚ್ಚು ಅವಶ್ಯಕವು. ನಮ್ಮ ಶಿಕ್ಷಣೋತ್ಕರ್ಷ ವಿಷಯದಲ್ಲಿ ಎರಡನೆಯ ಯತ್ನವಾವುದೆಂದರೆ– ನಮ್ಮವರು ಸರ್ವತ್ರ ಇಂಗ್ಲೀಷ ರಾಜಭಾಷೆಯನ್ನು ಕಲಿಯುವುದು. ಎಷ್ಟು ಯೋಗ್ಯತೆಯುಳ್ಳ ಪುರುಷನಿದ್ದರೂ ಈ ರಾಜಭಾಷೆಯೊಂದಿಲ್ಲದಿದ್ದರೆ ಹಿಂದುಳಿದು ಕೆಲಸಮಾಡಬೇಕಾಗುವುದು ಮತ್ತೊಬ್ಬರ ಮಧ್ಯಸ್ಥತೆಯಿಲ್ಲದೆ ಇವರಿಂದೇನೂ ಆಗುವಹಾಗಿಲ್ಲ ಎರಡನೆಯವರ ಬೊಗಸೆಯಿಂದ ನೀರು ಕುಡಿಯುವುದೂ, ಮತ್ತೊಬ್ಬರ ಮಧ್ಯಸ್ಥತೆಯಿಂದ ಕೆಲಸಮಾಡಿಕೊಳ್ಳುವುದೂ ಸಮವಾಗಿರುವುವು. ಇದನ್ನು ತಾವು ಮನದಲ್ಲಿ ತರಬೇಕು. ಕೇವಲ ಸರ್ಕಾರದ ಕೆಲಸಮಾಡಬೇಕೆಂಬುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಇದನ್ನು ಕಲಿಯಬಾರದು. ಇಂಗ್ರೇಜಿ ಸಾಮ್ರಾಜ್ಯವು ಹಬ್ಬಿದಂತೆ ಭೂಮಂಡಲದ ತುಂಬ ಇಂಗ್ಲೀಷ ಭಾಷೆಯೂ ಹಬ್ಬಿರುವುದು ಆದುದರಿಂದ ಅದನ್ನು ನಾವು ಅಭ್ಯಾಸಿಸಿದರೆ ನಮ್ಮ ವ್ಯಾಪಾರ, ಒಕ್ಕಲತನ, ಕೈಗಾರಿಕೆ ಇನ್ನು ಮುಂತಾದ ಅನೇಕ ಸುಧಾರಣೆಗಳಿಗೆ ಅನುಕೂಲವಾಗುವುದು. ಹೆಚ್ಚಾಗಿ ಉಚ್ಚ ಶಿಕ್ಷಣವನ್ನು ಸಾಧಿಸುವುದೇ ನಮ್ಮ ಮುಖ್ಯ ಉದ್ದೇಶವು. ಉಚ್ಚ ಪದವೀಧರರು ನಮ್ಮಲ್ಲಿ ಆದಹೊರತು ನಮ್ಮ ಯಾವ ಬಗೆಯ ಉನ್ನತಿಗೂ ಗತ್ಯಂತರವೇ ಇಲ್ಲ. ಇದಕ್ಕಾಗಿ ವಿಶ್ವವಿದ್ಯಾಲಯವೊಂದು ನಮ್ಮ ಕರ್ನಾಟಕ ಪ್ರಾಂತದಲ್ಲಿಯೇ ಇರುವುದು ಅತ್ಯಾವಶ್ಯಕವು. ಆದರೆ ಇದನ್ನು ಯಾವುದಾದರೂ ಒಂದೇ ಸಮಾಜವು ಮುಂದುವರಿದು ಸ್ಥಾಪಿಸುವ ಯತ್ನಮಾಡುವುದು ತುಸು ಬಿಗಿಯಾದುದು. ನಮ್ಮ ಕರ್ನಾಟಕ ಬಾಂಧವರೆಲ್ಲರೂ ಒಂದಾಗಿ ಯೋಚಿಸಿ ತಂತಮ್ಮ ಪ್ರಮಾಣ ಮತ್ತು ಸ್ಥಿತಿ ಇವುಗಳಿಗೆ ಅನುಗುಣವಾಗಿ ಸಹಾಯಮಾಡಿದಲ್ಲಿ ಆಗುವ ಕೆಲಸವಾಗಿದೆ. ಪ್ರತಿಯೊಬ್ಬನು ನ್ಯಾಯದಿಂದಲೂ, ನೀತಿಯಿಂದಲೂ ನಡೆಯಬೇಕು. ಇಷ್ಟೇ ಅಲ್ಲ; ಅನ್ಯಾಯ ಅನೀತಿಗಳ ಬಗ್ಗೆ ಆತನ ಮನದಲ್ಲಿ ಸ್ವಾಭಾವಿಕವಾಗಿಯೇ ತಿರಸ್ಕಾರವು ಹುಟ್ಟಲಿಕ್ಕೇಬೇಕು. ತಾನು ಸ್ವತಃ ವಿದ್ವಾಂಸನಾಗಿರುವುದಲ್ಲದೆ ಇತರರ ವಿದ್ವತ್ತೆಯ ಬಗ್ಗೆ ಆದರವುಳ್ಳವನಾಗಿರಬೇಕು. ಸ್ವತಃ ಶುದ್ಧಾಚರಣೆಯುಳ್ಳವನಾಗಿರುವುದಲ್ಲದೆ, ಪರಿಶುದ್ಧಾಚರಣೆಗೆ ಸಹಾಯಮಾಡಬೇಕು. ಸ್ವತಃ ನ್ಯಾಯದಿಂದ ನಡೆಯುವುದಲ್ಲದೆ, ಯಾವಾಗಲೂ ನ್ಯಾಯಪಕ್ಷವನ್ನೇ ಕೈಗೊಳ್ಳಬೇಕು. ಈ ಪ್ರಕಾರ ಮನಸ್ಸು ಸುಸಂಸ್ಕೃತವಾಗಿ ನಿಜವಾದ ಮನುಷ್ಯತ್ವವನ್ನು ಹೊಂದಬೇಕಾದರೆ ಉಚ್ಚಪ್ರತಿಯ ಶಿಕ್ಷಣಾಲಯದ ಪ್ರಾ[illegible]ಗಳೆಲ್ಲರೂ ಒಟ್ಟಿಗೆ ಕೂಡಿ ಇರಲಿಕ್ಕೆ ಬಹಳ ಹಾಗೆ ವ್ಯವಸ್ಥೆಯನ್ನು ಮಾಡಿ ಕೊಡುವುದು ಒಂದು ಮೇಲಾದ ಉಪಾಯವು. ಈ ಸ್ತುತ್ಯಕಾರ್ಯಕ್ಕೆ ಪ್ರಥಮತಃ ಅನುಕೂಲಮಾಡಿಕೊಟ್ಟಿರುವ ನಮ್ಮ ಶ್ರೀ ಕರವೀರ ಸಂಸ್ಥಾನದ ಉಪಕಾರಕ್ಕಾಗಿ ನಾವು ಕೃತಜ್ಞರಿದ್ದೇವೆ.

ಸ್ತ್ರೀ ಶಿಕ್ಷಣದ ಆವಶ್ಯಕತೆ.

ಉಚ್ಚಪ್ರತಿಯ ಶಿಕ್ಷಣವು ಪ್ರಾಥಮಿಕ ಶಿಕ್ಷಣವನ್ನು ಹೇಗೆ ಅವಲಂಬಿಸಿರುವುದೋ, ಹಾಗೆ ಪ್ರಾಥಮಿಕ ಶಿಕ್ಷಣವು ಚಿಕ್ಕಂದಿನಲ್ಲಿ ತಾಯಿಯಿಂದ ದೊರೆಯುವ ಶಿಕ್ಷಣವನ್ನು ಅವಲಂಬಿಸಿರುವುದು. ಇದಕ್ಕಾಗಿ ತಾಯಿಯು ಚೆನ್ನಾಗಿ ಕಲಿತವಳಿರುವುದು ಅತ್ಯವಶ್ಯವು. ಮನುಷ್ಯಜನ್ಮವು ಸಫಲವಾಗಲಿಕ್ಕೂ, ವಿಫಲವಾಗಲಿಕ್ಕೂ ತಂದೆಗಿಂತ ತಾಯಂದಿರೇ ಹೆಚ್ಚು ಕಾರಣರಾಗಿರುವರು. ಆದುದರಿಂದ ನಾವು ಉಚ್ಚ ಶಿಕ್ಷಣವನ್ನು ಪಡೆಯುವುದು ಎಷ್ಟು ಮಹತ್ವದ್ದಾಗಿರುವುದೋ ಅದಕ್ಕಿಂತಲೂ, ಉತ್ತಮ ತಾಯಂದಿರನ್ನು ಸಿದ್ಧಪಡಿಸುವುದು ಹೆಚ್ಚು ಮಹತ್ವವಾಗಿರುವುದು. ಇದಕ್ಕಾಗಿಯೇ ಪ್ರಖ್ಯಾತ ಫ್ರೆಂಚ ಚಕ್ರವರ್ತಿಯಾದ ನೆಪೋಲಿಯನ್ನ ಬೋನಾಪಾರ್ಟನು 'ನೂರುಮಂದಿ ಶಿಕ್ಷಕರ ಯೋಗ್ಯತೆಗಿಂತ, ಒಬ್ಬ ಮೇಲಾದ ಮಾತೆಯ ಯೋಗ್ಯತೆಯು ಹೆಚ್ಚಿನದು.' ಎಂದು ಒಂದು ಪ್ರಸಂಗದಲ್ಲಿ ಆಡಿಕೊಂಡಿರುವನು. 'ತೊಟ್ಟಿಲನ್ನು ತೂಗಬಲ್ಲವಳು ಜಗತ್ತನ್ನೇ ತೂಗಿಸಬಲ್ಲಳು.' ಎಂದಿರುವ ಒಬ್ಬ ಪಾಶ್ಚಿಮಾತ್ಯ ಪಂಡಿತನ ಅಭಿಪ್ರಾಯವಾದರೂ ಇದನ್ನೇ ಸೂಚಿಸುವುದು. ಇಂಗ್ಲೆಂಡು, ಜರ್ಮನಿ, ಅಮೇರಿಕಾ ಜಪಾನ ಮುಂತಾದ ಸುಧಾರಿಸಿದ ರಾಷ್ಟ್ರಗಳು ಬಳವಣಿಗೆಗೆ ಬರಲಿಕ್ಕೆ ಸ್ತ್ರೀ ಶಿಕ್ಷಣವೂ ಒಂದು ಮುಖ್ಯಕಾರಣವಾಗಿರುವುದು. ಸಮಾಜವೆಂದರೆ ಸ್ತ್ರೀಪುರುಷರಿಬ್ಬರೂ ಕೂಡಿ ಆಗಿರುವುದು. ಎಂದಬಳಿಕ ಸಮಾಜಸುಧಾರಣೆಯೆಂದರೆ, ಸ್ತ್ರೀಪುರುಷರಿಬ್ಬರದೂ ಸುಧಾರಣೆಯು ಎಂದು ತಿಳಿಯಬೇಕು. ಇಲ್ಲವಿದ್ದರೆ ಅರ್ಧಾಂಗವಾಯುವಿನಿಂದ ಇಡೀ ಶರೀರವು ನಿರುಪಯೋಗಿಯಾಗುವಂತೆ ಸ್ತ್ರೀ ಶಿಕ್ಷಣವಿಲ್ಲದಿದ್ದರೆ ನಮ್ಮ ಸಮಾಜದ ಸ್ಥಿತಿ ಆಗುವುದು. ಆದುದರಿಂದ ನಮ್ಮ ಸಮಾಜಪದ್ಧತಿಗೆ ಅನುಸರಿಸಿ ಮೇಲಾದ ಮಾತೆಯರೂ, ಉತ್ತಮ ಗೃಹಿಣಿಯರೂ ಆಗುವಮಟ್ಟಿಗೆ ನಮ್ಮ ಬಾಲಿಕೆಯರಿಗೆ ಸುಮಾರು ೧೨ ವರ್ಷದ ವರೆಗೆ ಶಿಕ್ಷಣವನ್ನು ಕೊಡಬೇಕು. ಅನಂತರ ಅವರನ್ನು ವಿದ್ಯಾವಂತರಿಗೆ ಕೊಟ್ಟು ಮದುವೆಯನ್ನು ಮಾಡಬೇಕು. ಎಂದರೆ ಸ್ತ್ರೀಶಿಕ್ಷಣವು ಸಫಲವಾಗುವುದಲ್ಲದೆ ಪ್ರೌಢವಿವಾಹದ ಲಾಭವೂ ನಮಗೆ ದೊರಕುವುದು. ಇಲ್ಲದಿದ್ದರೆ 'ಭಾವಿ ತೋರುವಾಗ್ಗೆ ಬೇತಾಳ ಹೊರಟಿತು.' ಎಂಬಂತೆ ಸ್ತ್ರೀ ಶಿಕ್ಷಣದ ಪರಿಣಾಮವಾಗುವ ಸಂಭವವಿದೆ. ಇದು ಇನ್ನು ಇಲ್ಲಿಗೆ ಸಾಕು. ಸ್ತ್ರೀ ಶಿಕ್ಷಣದ ಆವಶ್ಯಕತೆ ನಮಗೆ ಎಷ್ಟಿರುವುದೆಂಬ ಬಗೆಗೆ ಪಾಶ್ಚಾತ್ಯ ತತ್ವಜ್ಞಾನಿಗಳಂತೆಯೇ ನಮ್ಮವನಾದ ಸರ್ವಜ್ಞ ಮಹಾಕವಿಯು ಹೇಳಿರುವ ತತ್ವವು ಬಹಳ ಮನೋವೇಧಕವಾಗಿರುವುದರಿಂದ, ಅದನ್ನೊಂದಿಷ್ಟು ಇಲ್ಲಿ ಹೇಳಿ ಈ ವಿಷಯವನ್ನು ಮುಗಿಸುತ್ತೇನೆ. "ನಾರಿ ಸ್ವರ್ಗಕೆ ದಾರಿ ನಾರಿ ಇಹಕುಪಕಾರಿ। ನಾರಿ ಪುರುಷರಿಗೆ ಸಹಕಾರಿ ಕೆಟ್ಟರೆ। ನಾರಿ ಹೆಮ್ಮಾರಿ ಸರ್ವಜ್ಞ ॥ ೧ ॥"

ಸಂಸಾರಸುಖಾಪೇಕ್ಷಿಯಾದ ಪ್ರತಿಯೊಬ್ಬನೂ ಬಂಗಾರದಂತಹ ಈ ವಚನವನ್ನು ಬಂಗಾರದ ಅಕ್ಷರಗಳಿಂದ ಬರೆದಿಟ್ಟುಕೊಳ್ಳುವಂತಿದೆ.

ದಾನಪದ್ಧತಿ.

ಈಗಣ ಮನ್ವಂತರದಲ್ಲಿ ಧರ್ಮದ ನೆವದಿಂದ ಅಪಾತ್ರದಾನವು ನಮ್ಮಲ್ಲಿ ಬಹಳಮಟ್ಟಿಗೆ ಆಗುವದು ಕಂಡುಬರುವುದು. ಇದರಿಂದ ದಾನದ ಉದ್ದೇಶವು ಒತ್ತಟ್ಟಿಗೆ ಉಳಿದು, ಸಮಾಜಕ್ಕೆ ಹಾನಿಯಾಗುವ ಸಂಭವವು ಬಹಳವಿದೆ. ಕೆಲಮಟ್ಟಿಗೆ ಈ ಅಪಾತ್ರದಾನಪದ್ಧತಿಯಿಂದ ಹಾನಿಯಾಗುತ್ತ ನಡೆದಿದೆ ಎಂದರೂ ಅಡ್ಡಿಯಿಲ್ಲ. ಆದುದರಿಂದ ನಮ್ಮ ಈ ರೂಢಿಯ ದಾನಪದ್ಧತಿಯಲ್ಲಿ ರೂಪಾಂತರಮಾಡಿ ಅದನ್ನು ನಮ್ಮ ಶಿಕ್ಷಣೋತ್ಕರ್ಷ ಕೆಲಸದ ಕಡೆಗೆ ತಿರುಗಿಸಿಕೊಳ್ಳುವುದು ಈ ಕಾಲಕ್ಕೆ ಬಹು ಸ್ತುತ್ಯವಾದ ದಾನಪದ್ಧತಿಯೆಂದು ತೋರುತ್ತದೆ. ಈ ಬಗ್ಗೆ ಅತ್ಯಂತ ಅನುಕರಣೀಯವಾದ ಒಂದು ಸಂಗತಿಯನ್ನು ಉದಾಹರಿಸುವೆನು.

ನಮ್ಮ ಸಾಂಗಲಿ ಸಂಸ್ಥಾನದಲ್ಲಿ ಶ್ರೀ ಗಣಪತಿದೇವರ ಸಮಾರಾಧನೆಗಾಗಿ ಬಹು ದೊಡ್ಡ ವರ್ಷಾಶನವು ಮೊದಲಿನಿಂದ ನಡೆಯುತ್ತ ಬಂದಿದ್ದಿತು. ಈಗಣ ಶ್ರೀಮಂತರು ಈ ಕಾಲಕ್ಕನುಸರಿಸಿ "ಗಣಪತಿಯು ವಿದ್ಯಾಧಿದೇವತೆಯಾಗಿರುವನು. ಆದುದರಿಂದ ಸಂಸ್ಥಾನದ ವಿದ್ಯಾಭಿವೃದ್ಧಿಗಾಗಿ ಆತನ ವರ್ಷಾಶನದ ಕೆಲವು ಭಾಗವನ್ನು ವೆಚ್ಚಮಾಡುವುದೇ ಅವನ ತೃಪ್ತಿಯ ಫಲವು." ಎಂದು ಈ ವರ್ಷದಿಂದ ಆ ಹಣವನ್ನು ಶಿಕ್ಷಣ ಸಂಸ್ಥೆಗೆ ಕೊಡಹತ್ತಿರುವರು. ಇದಕ್ಕಿಂತಲೂ ಹೆಚ್ಚಿಗೆ ಅನುಕರಣೀಯವಾದ ದಾನ ಪದ್ಧತಿಯನ್ನು ನಮ್ಮ ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಶ್ರೀ ಶ್ರೀಗಳವರು ಮೊದಲುಮಾಡಿ ಅಲ್ಲಿಯ ನಮ್ಮ ಬಂಧವರು ಸುಮಾರು ೫೦೦೦೦ ರೂಪಾಯಿ ಬಂಡವಲದಿಂದ ಒಂದು ಅರಳೆಯ ಪ್ರೆಸ್ಸನ್ನು ಸಾಗಿಸಿ, ಅದರ ಬರುವ ಉತ್ಪನ್ನದಲ್ಲಿ ಕಾಲು ಭಾಗವನ್ನು ಶಿಕ್ಷಣಕ್ಕೆ ಕೊಡುವುದಾಗಿನಿಶ್ಚಯಿಸಿರುವರೆಂಬುದನ್ನು ಕೇಳಿ ಅತ್ಯಾನಂದವಾಗುತ್ತದೆ. ಇದರಂತೆ ಇನ್ನೂ ಬೇರೆ ಕಡೆಗೆ ಆಗಿರುವುದೆಂದು ಕೇಳುತ್ತೇನೆ. ನಿಜವಿದ್ದಲ್ಲಿ ಬಹು ಸಂತೋಷವು! ನಮ್ಮ ಗುರುವರ್ಗವೂ, ಶ್ರೀಮಂತವರ್ಗವೂ, ವ್ಯಾಪಾರಿವರ್ಗವೂ ಪ್ರತ್ಯೇಕ ವ್ಯಕ್ತಿಯೂ ತಂತಮ್ಮ ಶಕ್ತ್ಯನುಸಾರ ಈ ಮೊದಲಾದ ದಾನ ಪದ್ಧತಿಯನ್ನು ಅನುಸರಿಸಿ ನಡೆದರೆ ಇದರಿಂದ ಇಹಪರವೆರಡೂ ಸಾಧಿಸಿದಂತಾಗುವುದು.

ನಮ್ಮ ಸಮಾಜದಲ್ಲಿ ನೂರಕ್ಕೆ ೮೦ ರಂತಿರುವ ವ್ಯವಸಾಯಕಾರರಿಗೆ ವಿದ್ಯೆಯೂ, ಧನವೂ ಇಲ್ಲದಿರುವುದರಿಂದ ಅವರು ಎಷ್ಟು ಕಷ್ಟಪಟ್ಟಾಗ್ಯೂ ಹೊಟ್ಟೆಯನ್ನು ಹೊರೆಯುವುದು ಬಹು ಕಷ್ಟವಾಗಿರುವುದಲ್ಲದೆ, ಬರಗಾಲದಲ್ಲಿ ಇವರಿಗೆ ಪ್ರಾಪ್ತವಾಗುವ ಕಷ್ಟವನ್ನು ವರ್ಣಿಸಲಾಗದು. ಇವರು ಅಭಿವೃದ್ಧಿಯಾದ ಹೊರತು ಸಮಾಜವು ಅಭಿವೃದ್ಧಿಯಾಗುವಂತಿಲ್ಲವು. ಅದುಕಾರಣ ಸಮಾಜದ ಹಿತಾಭಿಲಾಷಿಗಳಾದವರು ಪ್ರತಿಯೊಂದು ಗ್ರಾಮದಲ್ಲೂ ಪರಸ್ಪರ ಸಹಾಯಕ ಸಂಘಗಳನ್ನೇರ್ಪಡಿಸಿ ಬಡ ಕಸಬುದಾರರು ವಿದ್ಯೆಯನ್ನು ಕಲಿತು ತಮ್ಮ ಕಸಬನ್ನು ಸುಧಾರಿಸಿಕೊಂಡು ಪುಷ್ಟಿವಂತರಾಗುವಂತೆ ಮಾಡತಕ್ಕದಾಗಿದೆ. ಕಸಬುದಾರರ ದ್ರವ್ಯಾರ್ಜನೆಗೆ ಇದು ಒಳ್ಳೆಯ ಸಾಧಕವಾಗಿರುವುದು. ಸರ್ಕಾರಿಯ ಸೇವಿಂಗ್ಸ್ ಬ್ಯಾಂಕಿನಲ್ಲಿ ೩ ರೂ. ಬಡ್ಡಿಯಿಂದ ಹಣವನ್ನಿಡತಕ್ಕವರು ಈ ಪರಸ್ಪರಸಹಾಯಕಸಂಘಗಳಿಗೆ ಹಣವನ್ನು ಕೊಡುವುದರಿಂದ ತಮಗೂ ಬಡ್ಡಿಯು ಬರುವುದಲ್ಲದೆ ಬಡ ಕಸಬುದಾರರ ಅಭಿವೃದ್ಧಿಗೆ ಸಹಾಯಮಾಡಿದಂತಾಗುವುದು. ಇಂತಹ ಸಂಘಗಳ ಮೇಲ್ವಿಚಾರಣೆಗೆ ವಿದ್ಯಾವಂತರೂ ನಿಸ್ಪೃಹರೂ, ಅಭಿಮಾನಶಾಲಿಗಳೂ ಆದವರೇ ನಿಯಮಿಸಲ್ಪಡಬೇಕಲ್ಲದೆ, ಕಸಬುದಾರರ ಸಾಮಗ್ರಿಗಳನ್ನು ಕೊಂಡುಕೊಳ್ಳಲು, ಕಂದಾಯವನ್ನು ಕಟ್ಟಲು ಅವರಿಗೆ ಸಾಲಕೊಡಲ್ಪಡಬೇಕೇ ವಿನಾ ಲಗ್ನಮುಂತಾದ ಕಾರ್ಯಗಳಿಗೆ ಕೊಡಲ್ಪಡತಕ್ಕದಲ್ಲ. ಈ ಸಂಘಗಳ ಹಿತಾರ್ಥವಾಗಿ ಕೆಲವು ಕಟ್ಟಳೆಗಳನ್ನು ಸಹ ಮಾಡಿರುತ್ತಾರೆ. ಸರ್ಕಾರೀ ಕಂದಾಯ ವಸೂಲಿಯಾದನಂತರ ಬ್ಯಾಂಕಿಗೆ ಬರಬೇಕಾದ ಸಾಲವನ್ನು ಮೊದಲು ವಸೂಲ ಮಾಡಬಹುದು ಇಂತಹ ಸಂಘಗಳಲ್ಲಿರುವ ಲೆಕ್ಕಪತ್ರಗಳು ಕೋರ್ಟು ಕಚೇರಿಗಳಲ್ಲಿ ಸಾಕ್ಷಿಯಾಗಿ ತೆಗೆದುಕೊಳ್ಳಲ್ಪಡುವುವು. ಈ ತೆರದ ಸಂಘಗಳನ್ನು ಸ್ಥಾಪಿಸಿ ನಮ್ಮ ವೀರಶೈವ ಸಮಾಜದ ದಾರಿದ್ರ್ಯಸ್ಥಿತಿಯನ್ನು ದೂರಮಾಡುವುದಕ್ಕೆ ಎಲ್ಲರೂ ಯತ್ನಿಸತಕ್ಕದು.

ಈ ಸಂಘಗಳಿಗಿಂತಲೂ ಮುಖ್ಯವಾಗಿ ಒಕ್ಕಲಿಗರಿಗೆ ಅಗ್ರಿಕಲ್ಚರಲ್ ಅಸೋಸಿಯೇಷನ (ವ್ಯವಸಾಯಕಸಂಘ) ಗಳು ಹೆಚ್ಚು ಪ್ರಯೋಜನ ಹಾಗೂ ಅವಶ್ಯಕರವಾಗಿರುವುವು. ಈ ಸಂಘಗಳು ಜಿಲ್ಲೆಗಳಲ್ಲಿ ದೊಡ್ಡವು ಇದ್ದು ಅವುಗಳ ಕೆಳಗೆ ತಾಲ್ಲೂಕ ಗ್ರಾಮಗಳಲ್ಲಿ ಸಣ್ಣಸಣ್ಣ ಅನೇಕ ಸಂಸ್ಥೆಗಳ ಆವಶ್ಯಕತೆ ಹೆಚ್ಚಾಗಿರುವುದು. ದೊಡ್ಡ ಸಂಸ್ಥೆಗಳ ಉದ್ದೇಶ:—(೧) ಇಡೀ ಜಿಲ್ಲೆಯ ವ್ಯವಸಾಯ ಸ್ಥಿತಿಯನ್ನು ಕುರಿತು ಪರಿಶೋಧನೆ ಹಾಗೂ ಅದರ ಸುಧಾರಣೆಯ ಬಗ್ಗೆ ವಿಮರ್ಶನೆ. (೨) ಸರಕಾರದಿಂದ ಶೇತಕಿ ಖಾತೆಯವರು ಆಗಿಂದಾಗ ಗೊತ್ತುಹಚ್ಚುವ ಸುಧಾರಣೆಗಳನ್ನು ಅರಿತು ಕೆಳಗಣ ಸಂಸ್ಥೆಗಳಿಂದ ಅವುಗಳನ್ನು ಪ್ರಯೋಗಮಾಡಿಸುವುದು. (೩) ಈ ವ್ಯವಸಾಯ ಸಂಬಂಧ ಸಂಚಾರದಿಂದಲೂ, ವಾಚನದಿಂದಲೂ ಹೊಸಹೊಸ ಮಾಹಿತಿಯನ್ನು ದೊರಕಿಸುವುದೂ ಮತ್ತು ಉಪನ್ಯಾಸದಿಂದಲೂ, ಮಾಸಿಕ ಪುಸ್ತಕಗಳಿಂದಲೂ ಅದನ್ನು ಜನರಲ್ಲಿ ಹಬ್ಬಿಸುವುದು (೪) ತಾಲ್ಲೂಕ ಗ್ರಾಮ ಸಂಘಗಳ ಮೇಲ್ವಿಚಾರಣೆ ಮತ್ತೂ ಅವಶ್ಯವಿದ್ದ ಸಹಾಯಮಾಡುವುದು. (೫) ಹೆಚ್ಚು ವ್ಯವಸಾಯ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹಕೊಡುವುದು. (೬) ರೈತರಿಗೆ ವಿಶೇಷವಾಗಿ ಉಪಯೋಗಬೀಳುವ ಕಬ್ಬಿಣರೆಂಟೆ ಮುಂತಾದ ಯಂತ್ರಗಳನ್ನೂ, ಗೊಬ್ಬರಗಳನ್ನೂ ತಾಲ್ಲೂಕ ಗ್ರಾಮಗಳ ಸಂಸ್ಥೆಗಳಿಗೆ ದೊರಕಿಸಿಕೊಡುವುದು.

ಇನ್ನು ಗ್ರಾಮ ಸಂಸ್ಥೆಗಳ ಉದ್ದೇಶ:—(೧) ಒಳ್ಳೆಯ ಬೀಜ ಮತ್ತು ಗೊಬ್ಬರಗಳನ್ನು ಕಾದಿಟ್ಟು ರೈತರಿಗೆ ಒದಗಿಸಿಕೊಡುವುದು (೨) ಬಡರೈತರಿಂದ ಒಬ್ಬೊಬ್ಬರೇ ಕೊಂಡುಕೊಳ್ಳಲಸಾಧ್ಯವಾದ ಕಬ್ಬಿಣರೆಂಟೆ ಮುಂತಾದ ಉಪಯುಕ್ತವಾದ ಯಂತ್ರಗಳನ್ನು ಬಾಡಿಗೆಯಿಂದ ಕೊಟ್ಟು ಸಹಾಯಮಾಡುವುದು. (೩) ಸಂಘಗಳಿಗೆ ಸಂಬಂಧಿಸಿದ ಹೊಲಗಳಲ್ಲಿ ಉಪಯುಕ್ತವಾದ ಪ್ರಯೋಗಗಳ ಪ್ರದರ್ಶನ ಮಾಡುವುದು. (೪) ಆಯಾ ಬೆಳೆಗಳ ರೋಗಗಳನ್ನು ಮೇಲಣ ಸಂಸ್ಥೆಯ ಅನುಮತಿಯ ಮೇರೆಗೆ ಕಡಿಮೆ ಮಾಡಲಿಕ್ಕೆ ಪ್ರಯತ್ನಮಾಡುವುದು (೫) ವ್ಯವಸಾಯದ ಸುಧಾರಣೆಗಾಗಿ ಜನರಿಗೆ ಆಗಾಗ್ಗೆ ಉಪನ್ಯಾಸಮಾಡುವುದು ಮತ್ತು ಅದರ ಮೂಢ ತಿಳುವಳಿಕೆಗಳನ್ನು ತೆಗೆದು ಹಾಕುವುದು. (೬) ಆಯಾ ಗ್ರಾಮಗಳಿಗನುಸಾರವಾಗಿ ಯಾವುದೊಂದು ಗೃಹಕೃತ್ಯವನ್ನು ಶೋಧಿಸಿ ಕೊಟ್ಟು ಅವರನ್ನು ನಿರಂತರ ಉದ್ಯೋಗಿಗಳನ್ನಾಗಿ ಮಾಡುವುದು. (೭) ಸಂಘದಿಂದ ಕೆಲವು ಗೂಳಿಗಳನ್ನು ಕಟ್ಟಿ ಅವುಗಳ ಉಪಯೋಗವನ್ನು ಜನರಿಗೆ ಮಾಡಿಕೊಟ್ಟು ಗ್ರಾಮದಲ್ಲಿದ್ದ ದನಗಳ ಸುಧಾರಣೆಮಾಡುವುದು ಮತ್ತು ಆ ದನಗಳಿಗೆ ೧ ವರ್ಷದ ಮೇವಿನ ವ್ಯವಸ್ಥೆಯನ್ನು ಮಾಡಿಟ್ಟುಕೊಳ್ಳಲಿಕ್ಕೆ ಜನರಿಗೆ ಬೋಧಿಸುವುದು.

(ಸಶೇಷ.)

ಟಧಾರಣಮಹೋತ್ಸವಸಂಬಂಧವಾಗಿ ನಾನಾ ಡೆಯಲ್ಲಿ ನಡೆದ ಉತ್ಸವಸಮಾರಂಭಗಳು.

ಚೆನ್ನಗಿರಿ ತಾ॥ ಸಂತೆಬೆನ್ನೂರು.

ಳೆದ ಡಿಸೆಂಬರ್ ತಾ॥ ೧೨ ರಲ್ಲಿ ಸಾರ್ವಭೌಮರ ಕಿ ರಣಮಹೋತ್ಸವದ ಬಗೆಗೆ ಈ ಊರ ಹುಡುಗರ ನ್ನಲ್ಲಿ ಪುರನಿವಾಸಿಗಳೂ, ಉಪಾಧ್ಯಾಯರುಗಳೂ, ವಿ ಗಳೂ ಮ॥ ದೇಶಪಾಂಡೆ ಲಕ್ಷ್ಮಣರಾಯರ ಅಧ್ಯಕ್ಷ ಸಭೆ ಸೇರಿದ್ದರು ಆ ಕಾಲದಲ್ಲಿ ಉಪಾಧ್ಯಾಯರುಗ ದೇವತಾಸ್ತೋತ್ರ ಮತ್ತೂ ಉಪನ್ಯಾಸಗಳು ನಡೆಯಿ ಟ್ಟವು.

ಹೆಗ್ಗಡದೇವನಕೋಟೆ ತಾ॥ ಜಿನ್ನಹಳ್ಳಿ.

ಗ್ರಾಮಸ್ತರು ಮೇ॥ ಆರ್. ಕುಮಾರಾರಾಧ್ಯರ ಅಧ್ಯ ಂದ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸ ಡಿಸೆಂಬರ್ ತಾ॥ ೧೨ ರಲ್ಲಿ ನಡೆಯಿಸಿದರು. ಮಹಾ ಸ್ವಾಮಿಯವರಿಗೆ ರುದ್ರಾಭಿಷೇಕಾದಿ ಅರ್ಚನೆಯು ಆ ರಾತ್ರಿ ದೀಪೋತ್ಸವವು ಮಾಡಲ್ಪಟ್ಟಿತು. ಈ ಗ್ರಾ ಸೇರಿದ ಹುಂಡಿ ಗ್ರಾಮದಲ್ಲೂ ಉತ್ಸವವು ವಿಜೃಂಭಣೆ ನಡೆಯಿಸಲ್ಪಟ್ಟಿತು.

ಹಿರಿಯೂರು ತಾ॥ ವೇಣಿಕೆಲ್ಲು ಗುಡ್ಡ.

ಗ್ರಾಮದಲ್ಲಿ ತಾ॥ ಅಮಲ್ದಾರರ ಅಪ್ಪಣೆಯ ಮೇರೆ ದ ಡಿಸೆಂಬರ್ ತಾ॥ ೧೨ ರಲ್ಲಿ ಚಕ್ರವರ್ತಿಯವರ ಕಿ ರಣ ಮಹೋತ್ಸವವು ವೈಭವದಿಂದ ಜರುಗಿಸಲ್ಪಟ್ಟಿ ಪ್ರಾಣದೇವರ ದೇವಸ್ಥಾನದಲ್ಲಿ ಬಡಬಗ್ಗರಿಗೆ ಅನ್ನವು ಲ್ಪಟ್ಟಿತು. ಈ ಉತ್ಸವಕಾರ್ಯದಲ್ಲಿ ಮಠದ ಶ್ರೀ ಪಿ. ಂದ್ರಶೇಖರಯ್ಯನವರು ಮುಂದಾಳುಗಳಾಗಿದ್ದರಲ್ಲದೆ, ರಿಗೆ ಧಾನ್ಯ ಮತ್ತೂ ದುಡ್ಡನ್ನು ದಾನಮಾಡಿದರು.

ದಗ ತಾ॥ ಡೊಂಬಳ ಸಮ್ಮತು ವೆಂಕಟಾಪುರ.

ಲ್ಲಿಯ ಮುಖಂಡರಾದ ರಾ॥ರಾ॥ ಗುರುಬಸವನಗೌಡ ಗೌಡ ಪೊಲೀಸು ಪಾಟೀಲ ಇವರು ಡಿಸೆಂಬರ್ ತಾ॥ ಕಿರೀಟಧಾರಣ ಮಹೋತ್ಸವವನ್ನು ವೈಭವದಿಂದ ಜ ರು. ಆ ದಿವಸ ಲಿಂಗಪ್ಪ ಅಡಿವೆಪ್ಪನವರು ಬಡಜನ ಭೋಜನವನ್ನು ಮಾಡಿಸಿದರು. ಗುರುಬಸವನಗೌ ದ್ಯಾರ್ಥಿಗಳಿಗೆ ಮಿಠಾಯಿಯನ್ನೂ ಪದಕಗಳನ್ನೂ ರು. ಪ್ರಭುದಂಪತಿಗಳ ಶ್ರೇಯಃಪ್ರಾರ್ಥನೆಯು ದೇ ಗಳಲ್ಲಿ ಮಾಡಲ್ಪಟ್ಟಿತ್ತು.

ದೇವನಹಳ್ಳಿ ತಾ॥ ಬಿದಲೂರು ಗ್ರಾಮ.

ಗ್ರಾಮದ ನಿವಾಸಿಗಳು ಕಿರೀಟಧಾರಣ ಮಹೋ ಉದ್ದಿಶ್ಯ ಕಳೆದ ಡಿಸೆಂಬರ್ ತಾ॥ ೧೨ ರಲ್ಲಿ ಸ್ಕೂಲಿನ ಗದಲ್ಲಿ ದಿವ್ಯವಾಗಿ ರಚಿಸಿದ್ದ ಮಂಟಪದಲ್ಲಿ ಸಭೆ ಸೇ ವರ್ತಿ ದಂಪತಿಗಳ ಭಾವಚಿತ್ರವನ್ನು ಪೂಜಿಸಿ ಅವರ ತವವನ್ನು ಮಾಡಿದುದಲ್ಲದೆ, ಶ್ರೀ ಚನ್ನಕೇಶ್ವರ ಸ್ವಾ ಭಿಷೇಕ ಕುಂಕುಮಾರ್ಚನೆಯನ್ನು ಮಾಡಿಸಿ ಪ್ರಭು ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ವಿದ್ಯಾರ್ಥಿ ಟಪಾಟಗಳಿಂದಲೂ ಫಲಾಹಾರದಿಂದಲೂ ತೃಪ್ತಿಪ ಟ್ಟರು.

ಮಂಜರಾಬಾದು ತಾ॥ ದೋಣಿಗಾಲ್.

ಣಿಗಾಲಿನ ಕಾಫಿ ಪ್ಲಾಂಟರ್ ಮ॥ ಬಸವೇಗೌಡರ ಮ॥ ಶಾಂತಮಲ್ಲೇಗೌಡರು ಇವರ ಸಹೋದರರಾ ಂಜೇಗೌಡರು ಈ ಗ್ರಾಮದವರೊಡನೆ ಕಳೆದ ಡಿ ತಾ॥ ೧೨ ರಲ್ಲಿ ಚಕ್ರವರ್ತಿ ಸಾರ್ವಭೌಮರ ಕಿರೀ ಮಹೋತ್ಸವವನ್ನು ಅತ್ಯಂತ ಉತ್ಸಾಹದಿಂದ ನ ನೂರಾರು ಬಡಜನರಿಗೆ ಅನ್ನವನ್ನು ಹಾಕಿದುದಲ್ಲದೆ ಅಂಗವಿಹೀನರಿಗೆ ಒಟ್ಟಿಗಳನ್ನು ದಾನಮಾಡಿದರು. ಸಾರ್ವಭೌಮರ ಹೆಸರಿನಮೇಲೆ ಕೆಲ ಬಡ ವಿದ್ಯಾ ವೇತನವನ್ನು ಕೊಡುವುದಾಗಿ ವಾಗ್ದಾನಮಾಡಿ ವ ರಾಜನಿಷ್ಠೆಯನ್ನು ಪ್ರಕಾಶಗೊಳಿಸಿದರು.

ಚಳ್ಳಕೆರೆ ತಾ॥ ದೊಡ್ಡೇರಿ.

ದ ಡಿಸೆಂಬರ್ ತಾ॥ ೧೨ ರಲ್ಲಿ ಈ ಊರ ಸ್ಕೂಲ್ ಮ॥ ಪಟೇಲ್ ವೀರಣ್ಣನವರ ಅಧ್ಯಕ್ಷತೆಯಲ್ಲಿ ಗಳಾದ ಶ್ರೀ ಮಠದ ಕಂಚೆವೀರಪ್ಪನವರು, ಶ್ರೀ ಪ್ಪಯ್ಯನವರು, ಜಿ. ಸುಬ್ಬಣ್ಣನವರು, ಓಬ್ರಪ್ಪನ ನಾಗಪ್ಪನವರು, ಗೌ॥ ರುದ್ರಪ್ಪನವರು, ಗಣೇಶ ಯ್ಯನವರು, ವೆಂಕಟಪ್ಪನವರು, ಅಮರಾಪುರದ ಯೇಬರು ಮುಂತಾದ ದೊಡ್ಡ ಮನುಷ್ಯರು ಸಭೆ ಟಧಾರಣಮಹೋತ್ಸವವನ್ನು ವಿಜೃಂಭಣೆಯಿಂದ ಈ ಊರಿನಲ್ಲಿ ಹೊಸದಾಗಿ ಸ್ಕೂಲನ್ನು ಕಟ್ಟಿ ಮತ ಗಣೇಶಪ್ಪ ತಿಪ್ಪಯ್ಯನವರಿಂದ ಸರ್ವರಿಂದಲೂ ಟಾಪಿಸಲ್ಪಟ್ಟಿತು.

ಚೆನ್ನಗಿರಿ ತಾ॥ ಜೋಡಿದೋಣಿ.

ಈ ಹೋಬಳಿಯ ಶೇಕದಾರರೂ, ಸ್ಕೂಲ್ಮಾಸ್ತರುಗಳೂ, ಕಮಿಟಿ ಮೆಂಬರುಗಳೂ, ಪರಸ್ಥಳದವರೂ ಸೇರಿ ಚಂದಾ ಹಣವನ್ನು ಕೂಡಿಸಿ ಗ್ರಾಮವನ್ನೆಲ್ಲಾ ಅಲಂಕಾರಮಾಡಿ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರ ಪಟಗಳನ್ನಿಟ್ಟು ಪೂಜಿಸಿ, ಸ್ಕೂಲ್ ಕಟ್ಟಡದಲ್ಲಿ ಒಂದು ದೊಡ್ಡ ಸಭೆಯನ್ನು ಸೇರಿಸಿರುವಾಗ್ಗೆ ಬ್ರಿಟಿಷ್ ಸಾರ್ವಭೌಮರ ಆಳುವಿಕೆಗೂ ಹಿಂದಣ ರಾಜರುಗಳ ಆಳುವಿಕೆಗೂ ಇರುವ ವ್ಯತ್ಯಾಸಗಳು ಧರ್ಮ ವಿಚಾರವೂ ಉಪನ್ಯಸಿಸಲ್ಪಟ್ಟವು. ಅನಂತರ ಮಿಠಾಯಿ ಹಣ್ಣು ಹಂಪಲುಗಳು ಹಂಚಲ್ಪಟ್ಟವಲ್ಲದೆ ವಿದ್ಯಾರ್ಥಿಗಳಿಂದ ಆಟವಾಡಿಸಲ್ಪಟ್ಟು ಗೆದ್ದವರಿಗೆ ಬಹುಮಾನವು ಕೊಡಲ್ಪಟ್ಟಿತು.

ಮೊಳಕಾಲ್ಮೂರು ತಾ॥ ಕೊಂಡ್ಲಹಳ್ಳಿ.

ಚಕ್ರವರ್ತಿಯವರ ದರ್ಬಾರು ಮಹೋತ್ಸವವು ಕಳೆದ ಡಿಸೆಂಬರ್ ತಾ॥ ೧೨ ರಲ್ಲಿ ಈ ಗ್ರಾಮಸ್ಥರಿಂದ ನೆರವೇರಿಸಲ್ಪಟ್ಟಿತು. ಸ್ಕೂಲ್ ಕಮಿಟಿಯ ಮೆಂಬರುಗಳಾದ ಪ॥ ಅಜ್ಜಪ್ಪಗೌಡರು, ಮೇಲುಮಾಳಿಗೆ ವೀರಣ್ಣನವರು, ಸಣ್ಣೀರಜ್ಜಪ್ಪನವರು, ಗೌಡರ ಅಪ್ಪಿಯವರುಗಳು ಮತ್ತೂ ಗ್ರಾಮಮುಖಂಡರಾದ ಗೊಂಚೆಗಾರ ಓಬೋ ತಿಮ್ಮಣ್ಣನವರು, ಬುಸರಡ್ಡಿ ನಾಗಪ್ಪನವರು, ಹೊಸಮನೆಯ ರುದ್ರಪ್ಪನವರು ಮುಂತಾದವರು ಸಭೆ ಸೇರಿ ವಿದ್ಯಾರ್ಥಿಗಳಿಂದ ಸಾರ್ವಭೌಮ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿಸಿದರು ಸಾಯಂಕಾಲದಲ್ಲಿ ವಿದ್ಯಾರ್ಥಿಗಳಿಂದ ಆಟಪಾಟಗಳನ್ನಾಡಿಸಿ ಅವರಿಗೆ ತಿಂಡಿಯು ಕೊಡಲ್ಪಟ್ಟಿತು. ರಾತ್ರಿ ದೀಪೋತ್ಸವವಾಯಿತು.

ಚಿತ್ರದುರ್ಗದ ತಾ॥ ಭರಮಸಾಗರ

ಶ್ರೀಚಕ್ರವರ್ತಿಯವರ ಕಿರೀಟಧಾರಣೋತ್ಸವಕ್ಕಾಗಿ ಸ್ಕೂಲ್ ಮಾ॥ ಕೃಷ್ಣಮೂರ್ತಿರಾವ್, ಟಿ. ಶ್ರೀನಿವಾಸರಾವ್, ಎಂ. ಕರಿಬಸವಯ್ಯ, ಸ್ಕೂಲ್ ಮೆಂಬರುಗಳೂ, ಜಮಾದಾರರೂ, ಅಬ್ಕಾರಿ ಇನ್ಸ್ಪೆಕ್ಟರೂ ಮುಂತಾದವರೆಲ್ಲಾ ಸ್ಕೂಲಿನಲ್ಲಿ ಸಭೆಸೇರಿ ಹುಡುಗರಿಂದ ಆಟವಾಡಿಸಿ ಪಾ॥ಹನುಮಂತರಾಯರಿಂದ ಮಿಠಾಯಿ ಮುಂತಾದುದನ್ನು ಕೊಡಿಸಿ, ಶ್ರೀ ಚಕ್ರವರ್ತಿಗಳಿಗೂ, ನಮ್ಮ ಶ್ರೀಮನ್ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಇಂತಹ ಮಹೋತ್ಸವಕ್ಕೆ ಮು॥ಹೆತ್ ಮಾ॥ ಗುರುರಾಜಪ್ಪನವರು ಕಾಯಿಲೆಯ ನಿಮಿತ್ತ ಬಗಲಾಗದೇ ಇದ್ದುದಕ್ಕೆ ಸರ್ವರೂ ಪಶ್ಚಾತ್ತಾಪಗೊಂಡರು, ಸಭೆಯಲ್ಲಿ ವಿದ್ಯಾರ್ಥಿಗಳ ಗೀತವು ಇಂಪಾಗಿ ಅಂದಿನ ಉತ್ಸವವು ಸಂತೋಷಕಾರಿಯಾಗಿದ್ದಿತು.

ಬೆಳಗಾಂ ಜಿ॥ ನಿಡಸೂಸಿ.

ಶ್ರೀ ದುರದುಂಡೀಶ್ವರ ಸ್ವಾಮಿ ಸಿದ್ಧಸಂಸ್ಥಾನ ಮಠಾಧೀಶರಾದ ಶ್ರೀಮನ್ನಿರಂಜನ ಲಿಂಗೇಶ್ವರಸ್ವಾಮಿಗಳು ಜಾರ್ಜ ಸಾರ್ವಭೌಮರವರ ರಾಜ್ಯಾರೋಹಣ ಸಮಾರಂಭವನ್ನ ತಮ್ಮ ಸಂಸ್ಥಾನಮಠದಲ್ಲಿ ಕಳೆದ ಡಿಸೆಂಬರ್ ತಾ॥೧೨ ರಲ್ಲಿ ಸಂಸ್ಥಾನದ ಪುರಾತನಕಾಲದ ಸಿಂಹಾಸನಾರೋಹಣವನ್ನು ಮಾಡಿ ಊರ ಪ್ರಮುಖ ಜನರನ್ನು ಬರಮಾಡಿಕೊಂಡು ಸಭೆಯನ್ನು ಮಾಡಿ ವಿಶೇಷ ವೈಭವದಿಂದ ಜರುಗಿಸಿ ಬಡಜನರಿಗೆ ಅನ್ನ ಮತ್ತೂ ವಸ್ತ್ರದಾನವನ್ನು ಮಾಡಿ ಜಂಗಮರು ಮೊದಲಾದ ವೈದಿಕರಿಗೆ ಸುಖಭೋಜನವನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟರು. ಈ ಉತ್ಸವಕ್ಕಾಗಿ ಮಠವು ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿತ್ತು. ಮತ್ತೂ ಆದಿನ ರಾತ್ರಿ ದೀಪಾರಾಧನೆಯು ನಡೆಯಿಸಲ್ಪಟ್ಟಿತು.

ಶಿಕಾರಿಪುರ ತಾ॥ ಶಿರಾಳಕೊಪ್ಪ.

ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವ ಸಂಬಂಧವಾಗಿ ಈ ಊರು ಡಿಸೆಂಬರ್ ತಾ॥ ೧೨ರಲ್ಲಿ ಮನೋಹರವಾಗಲಂಕರಿಸಲ್ಪಟ್ಟು ದೇವತಾರ್ಚನೆಯೂ ದೀಪೋತ್ಸವವೂ ನಡೆಯಿಸಲ್ಪಟ್ಟಿತು. ಊರಿನ ಪ್ರಮುಖರು ಸಭೆ ಸೇರಿ ಚಕ್ರವರ್ತಿಯವರ ಚಿತ್ರಪಟವನ್ನು ಅಲಂಕರಿಸಿ, ಅವರ ಪ್ರಶಂಸೆಯನ್ನು ಕುರಿತು ಭಾಷಣಗಳನ್ನು ಮಾಡಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಆಟಗಳಲ್ಲಿ ಗೆದ್ದ ಹುಡುಗರಿಗೆ ದುಡ್ಡು ಪುಸ್ತಕ ಮೊದಲಾದ ಬಹುಮಾನಗಳೂ, ಮಿಠಾಯಿಯೂ ಬಡಬಗ್ಗರಿಗೆ ಪಂಚೆ, ಸೀರೆ, ಕಣಗಳೂ ಕೊಡಲ್ಪಟ್ಟುವು. ಈ ಊರಿನಲ್ಲಿ ಇಂಗ್ಲೀಷ ಸ್ಕೂಲನ್ನು ಸ್ಥಾಪಿಸಲು ವಿದ್ಯಾಭ್ಯಾಸದ ಶಾಖಾಧಿಕಾರಿಗಳ ಅಪ್ಪಣೆಯ ಪ್ರಕಾರ ೧೮೦ ರೂ. ಕಂಟ್ರಿಬ್ಯೂಷನ್ ಮೊಬಲಗು ಚಂದಾ ಎತ್ತಲ್ಪಟ್ಟು ಡಿಪಾಜಿಟ್ಟು ಇಡಲ್ಪಟ್ಟಿತು.

ಬಳ್ಳಾರಿ ಜಿಲ್ಲೆ ಉಜ್ಜಯಿನಿ.

ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವದ ಸಂತೋಷ ಸೂಚಕವಾಗಿ ಡಿಸೆಂಬರ್ ತಾ॥ ೧೨ ರಲ್ಲಿ ಇಲ್ಲಿಯ ಗ್ರಾಮ ಮುನ್ಸೀಫ್ ರಾ॥ ಪಿ. ಬಸವನಗೌಡರು, ರಾ॥ ಕರಣಂ ಶ್ರೀನಿವಾಸಾಚಾರರು, ಸರ್ಕಾರಿ ಸ್ಕೂಲ್ ಹೆಡ್ಮಾಸ್ಟರ್ ಮ॥ ಶ್ರೀನಿವಾಸರಾಯರು ಮುಂತಾದ ದೊಡ್ಡಮನುಷ್ಯರು ವಿಶೇಷ ಶ್ರದ್ಧೆಯನ್ನು ವಹಿಸಿ ಊರನ್ನು ಶೃಂಗರಿಸಿ ಚಕ್ರವರ್ತಿ ದಂಪತಿಗಳ ಭಾವಚಿತ್ರಪಟವನ್ನು ಊರಿನಲ್ಲೆಲ್ಲ ಮೆರೆಯಿಸಿಕೊಂಡು ಬಂದು ಒಂದು ದೊಡ್ಡ ಸಭೆಗೂಡಿಸಿ, ಬ್ರಿಟಿಷ್ ಸಾಮ್ರಾಜ್ಯದಿಂದ ಲಭ್ಯವಾಗಿರುವ ಮಹದುಪಕಾರಗಳನ್ನು ನೆರದಿದ್ದ ಜನರಿಗೆಲ್ಲ ತಿಳಿಯಹೇಳಿದಮೇಲೆ ಬಾಲಕಬಾಲಿಕೆಯರಿಗೆ ಮಿಠಾಯಿ ಮುಂತಾದ ತಿಂಡಿಯ ಪದಾರ್ಥಗಳು ಕೊಡಲ್ಪಟ್ಟು ಪ್ರಭುದಂಪತಿಗಳ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಬಡವರಿಗೆ ಅನ್ನವಸ್ತ್ರಾದಿಗಳು ದಾನಮಾಡಲ್ಪಟ್ಟುವು.

ಜಗಲೂರ್ ತಾ॥ ಸೊಕ್ಕೆ.

ತಾ॥ ೧೨ ರಲ್ಲಿ ಸ್ಕೂಲನ್ನು ಅಂದವಾಗಿ ಅಲಂಕರಿಸಿ ಅಲ್ಲಿ ಮ॥ ಗಳಾದ ಸಾ॥ ಕಕಟ್ಟೆ ಅಡಿವೆಪ್ಪನವರು, ಕೊ॥ ಭೀಮಪ್ಪನವರು, ಬಿ. ಸಿದ್ದಪ್ಪನವರು, ಹೂ ಚನ್ನವೀರಪ್ಪನವರು, ಲ॥ ಹನುಮಂಗೌಡರು, ತಿಮ್ಮಪ್ಪನವರು, ಆ॥ ಹನುಮಪ್ಪನವರು ಪಟೇಲರು, ಯೂನಿಯನ್ ಮುನ್ಸಿಫರು, ಜಗಲೂರ್ ಸಾ॥ ವಿರೂಪಾಕ್ಷಪ್ಪನವರೇ ಮುಂತಾದವರು ಸಭೆಗೂಡಿ ನಮ್ಮ ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರವರ ಪಟಗಳಿಗೆ ನಜರ್ ಮುಂತಾದವುಗಳನ್ನರ್ಪಿಸಿದ ಮೇಲೆ ಸ್ಕೂಲ್ ಮಾ॥ ಸಿ. ಕರಿಬಸವಯ್ಯನವರು ಇಂಗ್ಲೀಷ್ ಪ್ರಭುತ್ವದಿಂದಾದ ಉಪಕಾರಗಳನ್ನು ಉಪನ್ಯಾಸಮಾಡಲು ಬಾಲಕರು ಶ್ರೇಯಃಪ್ರಾರ್ಥನೆಯನ್ನು ಮಾಡಿದರು, ಪ್ರಭುಗಳ ಚಿತ್ರಗಳನ್ನು ಊರಲ್ಲಿ ಮೆರವಣಿಗೆಯನ್ನು ಮಾಡಿದರು. ಆ ರಾತ್ರಿ ದೇವಾಲಯಗಳಲ್ಲಿ ಉತ್ಸವಗಳು ಸಂಭ್ರಮವಾಗಿ ನಡೆದುವು. ಸಭೆಯಲ್ಲಿ ಸಾ॥ ಹನುಮಪ್ಪನವರು ಗಂಧಪುಷ್ಪತಾಂಬೂಲಗಳೊಡನೆ ಸಕ್ಕರೆಯನ್ನು ಸರ್ವರಿಗೂ ಹಂಚಿದ ಮೇಲೆ ಎಲ್ಲರೂ ಅವರವರ ಮನೆಗೆ ತೆರಳಿದರು.

ಚಾಮರಾಜನಗರ ತಾ॥ ಮೂಡ್ಲಕೊಡು ಗ್ರಾಮ.

ಈ ಗ್ರಾಮದ ಪಟೇಲ್ ಶಾನುಭೋಗ ಮೊದಲಾದ ಪ್ರಮುಖರು ಡಿಸೆಂಬರ್ ತಾ॥ ೧೪ ರಲ್ಲಿ ಚಕ್ರವರ್ತಿ ಸಾರ್ವಭೌಮರ ಕಿರೀಟಧಾರಣ ಮಹೋತ್ಸವವನ್ನು ವೈಭವದಿಂದ ಜರುಗಿಸಿದರು ಆ ದಿವಸ ಮಲೆಯೂರು ಮಠದ ಶ್ರೀ ಚಿಕ್ಕಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಸಾರ್ವಭೌಮ ಸರ್ಕಾರದಿಂದ ಲಭ್ಯವಾಗಿರುವ ಸೌಲಭ್ಯಗಳು ತಿಳಿಸಲ್ಪಟ್ಟವಲ್ಲದೆ ದಿಲ್ಲಿಯಲ್ಲಿ ನಡೆಯುವ ಮಹೋತ್ಸವದ ವೈಭವದ ವರ್ಣನೆಯು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿತವಾಗಿದ್ದು ಓದಲ್ಪಟ್ಟಿತು. ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನೆಗಾಗಿ ದೇವಸ್ಥಾನಗಳಲ್ಲಿ ಪೂಜೆಯೂ ರಾತ್ರಿ ದೀಪೋತ್ಸವವೂ ನಡೆಸಲ್ಪಟ್ಟವು. ಮತ್ತು ರಾತ್ರಿ ಸಾರಂಗಧರ ನಾಟಕವು ಅಭಿನಯಿಸಲ್ಪಟ್ಟಿತು. ಕಾವೇರೀನದಿ ಪ್ರವಾಹದಿಂದ ನಷ್ಟಪಟ್ಟವರ ಸಹಾಯಾರ್ಥವಾಗೇರ್ಪಡಿಸಲ್ಪಟ್ಟಿರುವ ಫಂಡಿಗೆ ಹಣವನ್ನು ಕಳುಹಲು ಸಭಿಕರಿಂದ ೧೦ ರೂ. ಚಂದಾ ಹಣವೆತ್ತಲ್ಪಟ್ಟು ಸ್ಟಾರ್ ಪತ್ರಿಕಾಕರ್ತರ ವಶಕ್ಕೆ ಕಳುಹಿಸಲ್ಪಟ್ಟಿತು.

[ಈ ಹಣವನ್ನು ನಾವು ಸಂತೋಷದಿಂದ ಸ್ವೀಕರಿಸಿ ಸೆಕ್ರಟರಿಯವರಿಗೆ ತಲಪಿಸಿರುತ್ತೇವೆ.—ಪ. ಪ್ರ.]

ದೇವನಹಳ್ಳಿ ತಾ॥ ಹುಣಸಮಾರ್ನಹಳ್ಳಿ.

ತಾ॥ ೧೨ ನೆಯ ಮಂಗಳವಾರ ಇಲ್ಲಿನ ಸ್ಕೂಲನ್ನು ಮನೋಹರವಾಗಿ ಅಲಂಕರಿಸಿ ಉನ್ನತಾಸನದ ಮೇಲೆ ಶ್ರೀ ಚಕ್ರವರ್ತಿ ದಂಪತಿಗಳ ಪಟವನ್ನೂ ಎಡಬಲಗಳಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಮತ್ತು ಶ್ರೀಮನ್ಮಹಾರಾಜರವರ ಪಟಗಳನ್ನೂ ಇಟ್ಟು ಪುಷ್ಪಗುಚ್ಛಗಳಿಂದಲಂಕರಿಸಿ ಮಠದ ಶ್ರೀ ಸ್ವಾಮಿಗಳಪ್ಪಣೆಯಂತೆ ಏಜೆಂಟ್ ಮ॥ ಚೆನ್ನಬಸವ ಒಡೆಯರವರು ಸರ್ವಾಧಿಕಾರಿಗಳೂ, ಜಮಾದಾರ್, ಸೇಕದಾರ್ ಮುಂತಾದ ಪ್ರಮುಖರೂ ಸಭೆ ಸೇರಿರುವಾಗ ಬ್ರಿಟಿಷ್ ಪ್ರಭುತ್ವದ ಪರೋಪಕಾರಗಳನ್ನು ವಿ. ಗುರುಪಾದಪ್ಪನವರು ವಿವರಿಸಿದ ಮೇಲೆ ಬಾಲಕರಿಂದ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಬಾಲಕರಿಗೆ ಆಟಗಳಿಗಾಗಿ ಬಹುಮಾನವು, ಸರ್ವರಿಗೂ ಗಂಧಪುಷ್ಪತಾಂಬೂಲಾದಿಗಳೂ, ಮಿಠಾಯಿಯೂ ಹಂಚಲ್ಪಟ್ಟುವು. ಚಂದ್ರಮೌಳೇಶ್ವರ ದೇವೋತ್ಸವವು ದೀಪ, ಬಾಣ ಮುಂತಾದುವುಗಳಿಂದ ವೈಭವಯುಕ್ತವಾಗಿ ಊರಲ್ಲೆಲ್ಲಾ ನಡೆದು ದೇವಸ್ಥಾನದಲ್ಲಿ ಪ್ರಾರ್ಥನೆಯು ನಡೆದಮೇಲೆ ಆ ರಾತ್ರಿಯೇ ನಾಟಕವೂ ಆಡಲ್ಪಟ್ಟಿತು. ಈ ಕಿರೀಟಧಾರಣ ಮಹೋತ್ಸವದ ಜ್ಞಾಪನಾರ್ಥವಾಗಿ ಮ॥ ಚನ್ನಬಸವ ಒಡೆಯರವರಿಂದ ಸ್ಕೂಲಿಗೆ ೧೦ ರೂಪಾಯಿನ ಗಡಿಯಾರವು ಕೊಡಲ್ಪಟ್ಟಿತು.

ಚಿಕ್ಕೋಡಿ ತಾ॥ ಸದಲಗೆ ಗ್ರಾಮ.

ಈ ಗ್ರಾಮದ ಶಾಲಾಮಾಸ್ತರರೂ ಪ್ರಮುಖಜನರೂ ಚಂದಾಹಣವನ್ನು ಕೂಡಿಸಿ ಬಾದಶಹರ ಕಿರೀಟಧಾರಣ ಮಹೋತ್ಸವವು ಡಿಸೆಂಬರ್ ತಾ॥ ೧೨ ರಲ್ಲಿ ಅತ್ಯಂತ ವಿಜೃಂಭ

ಯಿಂದ ಜರುಗಿಸಲ್ಪಟ್ಟಿತು. ರಾ॥ ವಾಲಿಗೌಡ ರಾಯಗೌಡ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು, ಇಂಗ್ಲೀಷ್ ಚಕ್ರಾಧಿಪತ್ಯದಿಂದುಂಟಾಗಿರುವ ಸೌಭಾಗ್ಯಗಳು ವರ್ಣಿಸಲ್ಪಟ್ಟು ಗೀತೆಗಳನ್ನು ಹೇಳಿದ ಇಬ್ಬರು ಹುಡುಗರಿಗೆ ೨ ರೂ. ನಂತೆಯೂ, ಇತರ ಹುಡುಗರಿಗೆ ಪದಕಗಳೂ, ಟೊಪ್ಪಿಗೆಗಳೂ, ಬಾಲಿಕೆಯರಿಗೆ ಕಣಗಳೂ ಕೊಡಲ್ಪಟ್ಟವು. ಮತ್ತೂ ಎಲ್ಲ ದೇವಾಲಯಗಳಲ್ಲೂ ದೇವತಾರ್ಚನೆಯೂ, ದೀಪಾರಾಧನೆಯೂ ನಡೆಯಿಸಲ್ಪಟ್ಟವಲ್ಲದೆ, ಬಡಬಗ್ಗರಿಗೆ ಅನ್ನವಸ್ತ್ರಗಳು ಕೊಡಲ್ಪಟ್ಟವು. ಆ ದಿವಸ ಸುಮಾರು ೨೦೦೦ ಜನರವರೆಗೆ ಸೇರಿದ್ದರು. ರಾ॥ ರಾ॥ ಗಳಾದ ದಾದಾಜಿ ಪಾಟೀಲ, ಸಾತಪ್ಪ ಗುರಪ್ಪ ಹಾಲಪ್ಪ ದತ್ತೋ ಸುಬಾರಾವ ಎಳಗೂಡಕರ, ಗುಂಡೋ ಬಾಬೂರಾವ ವಸಗಡೇಕರ ಇತ್ಯಾದಿ ಜನರ ಹಸ್ತದಿಂದ ಮೇಲೆ ಹೇಳಿದ ಅನ್ನವಸ್ತ್ರದ ಕೆಲಸವು ಸಂಪೂರ್ಣಗೊಳಿಸಲ್ಪಟ್ಟಿತು. ಮರುದಿನ ಮಲ್ಲಯುದ್ಧವು ನಡೆದು ಗೆದ್ದ ಜಟ್ಟಿಗಳಿಗೆ ರೂಪಾಯಿ ವಸ್ತ್ರಗಳು ಕೊಡಲ್ಪಟ್ಟವು. ಈ ಪ್ರಕಾರ ಈ ಗ್ರಾಮದ ಜನರು ರಾಜನಿಷ್ಠೆಯನ್ನು ಪ್ರದರ್ಶಿಸಿದರು.

ಟಿ. ನರಸೀಪುರದ ತಾ॥ ಸೋಸಲೆ.

ಚಕ್ರವರ್ತಿಗಳ ಕಿರೀಟಧಾರಣ ಮಹೋತ್ಸವವು ಕಳೆದ ಡಿಸೆಂಬರ್ ತಾ॥ ೧೨ರಲ್ಲಿ ಎಲ್ಲಾ ಮತಸ್ಥರೂ ಸೇರಿ ಅತ್ಯಂತ ವಿಜೃಂಭಣೆಯಿಂದ ಜರುಗಿಸಿದರು. ಆ ದಿವಸ ಬೆಳಿಗ್ಗೆ ಹೊನ್ನಾದೇವಮ್ಮನವರ ಮತ್ತು ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ಅಭಿಷೇಕಾದಿ ಅರ್ಚನೆಯೂ ದೀಪೋತ್ಸವವೂ ಸಾಂಗವಾಗಿ ನಡೆಸಲ್ಪಟ್ಟವು. ಊರೆಲ್ಲವೂ ಮನೋಹರವಾಗಿ ಶೃಂಗರಿಸಲ್ಪಟ್ಟು ಪ್ರಭುದಂಪತಿಗಳ ಮತ್ತು ಮಹಾರಾಜರವರ ಭಾವಚಿತ್ರಪಟಗಳು ಅಲಂಕೃತವಾದ ಮಂಟಪದಲ್ಲಿಡಲ್ಪಟ್ಟು ಜನರು ಸಭೆಸೇರಿ ಬ್ರಿಟಿಷ್ ಚಕ್ರಾಧಿಪತ್ಯದಿಂದ ಭರತಖಂಡಕ್ಕೆ ಲಭ್ಯವಾಗಿರುವ ಪ್ರಯೋಜನಗಳನ್ನು ತಿಳಿಸಿ ಚಕ್ರವರ್ತಿಯವರ ಗುಣಕಥನವನ್ನು ಮಾಡಿದರು. ಕೃಷ್ಣರಾಜಪುರದ ಅಗ್ರಹಾರದಲ್ಲಿರುವ ಇನಾಂದಾರ್ ಮತ್ತು ಜೋಡಿದಾರ್ ಶ್ರೀಮಾನ್ ತಿರುಮಲೆ ಶ್ರೀರಂಗಾಚಾರ್ಯರು ಶ್ರೀರಂಗರಾಜಪುರ, ಹೆಮ್ಮಿಗೆ, ಎಡತಲೆ, ಮೈಸೂರು ಮೊದಲಾದ ಸ್ಥಳಗಳಿಂದ ಶ್ರೀವೈಷ್ಣವ ಮಹಾಜನರನ್ನು ಈ ಮಹೋತ್ಸವಕ್ಕಾಗಿ ಬರಮಾಡಿಕೊಂಡು ಸಮಾರಾಧನೆಯನ್ನು ಮಾಡಿಸಿದರು. ಶ್ರೀವ್ಯಾಸರಾಯಮಠದ ಸ್ವಾಮಿಗಳು ಮಾಧ್ವಮಂಡಲಿಯವರಿಗೂ, ವೇ॥ ನಾರಾಯಣಜೋಯಿಸರು ಸ್ಮಾರ್ತಮಂಡಲಿಗೂ, ಮ॥ ಸಿದ್ಧಲಿಂಗ ಮರಿದೇವರು ವೀರಶೈವ ಮಂಡಲಿಗೂ, ಇತರ ಮಂಡಲಿಯ ಪ್ರಮುಖರು ತಮ್ಮತಮ್ಮ ಮಂಡಲಿಗಳಿಗೂ ಭೋಜನವನ್ನು ಮಾಡಿಸಿದರು. ವಿದ್ಯಾರ್ಥಿಗಳಿಂದ ಆಟವಾಡಿಸಲ್ಪಟ್ಟು ಗೆದ್ದವರಿಗೆ ಬಹುಮಾನವು ಕೊಡಲ್ಪಟ್ಟಿತು. ಆ ರಾತ್ರಿ ಎಲ್ಲಾ ಬೀದಿಗಳಲ್ಲೂ ದೀಪೋತ್ಸವವು ನಡೆದು ಎಲ್ಲಾ ದೇವರುಗಳ ಉತ್ಸವವೂ ಜರಗಿಸಲ್ಪಟ್ಟಿತು. ಈ ಪ್ರಕಾರವಾಗಿ ಇಲ್ಲಿಯ ನಿವಾಸಿಗಳು ಉತ್ಸವ ಸಮಾರಂಭವನ್ನು ನೆರವೇರಿಸಿ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ಮಹಾರಾಜ ಸಹೋದರರುಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದರು.

ಬಿರೂರು.

ಬಹು ಗುಣಭರಿತರಾದ ಶ್ರೀ ಚಕ್ರವರ್ತಿ ದಂಪತಿಗಳು ಕಿರೀಟಧಾರಣೋತ್ಸವದ ದಿವಸ ಮಹಿಶೂರ ಸಂಸ್ಥಾನದ ವೀರಶೈವ ಶ್ರೀಮಂತರಲ್ಲಿ ಮೊದಲನೆಯವರೆನಿಸಿದ ಮಾನ್ಯರಾದ ಬೀರೂರ್ ಪತ್ರೆ ಚೆ॥ ವೀರಪ್ಪಯ್ಯನವರು, ಮ॥ ಗಳಾದ ಚಾ॥ ನಂಜುಂಡಯ್ಯನವರು, ಪ್ರೊ॥ ಇ॥ ರಘೋತ್ತಮರಾಯರು, ಸ್ಕಾ॥ ಇ॥ ನರಹರಿಶಾಸ್ತ್ರಿಗಳು, ಶೇಕದಾರ್, ಜಮೇದಾರ್, ಸ್ಕೂಲ್ಮಾಸ್ಟರ್‌ಗಳೂ, ಶಾಲಾಧ್ಯಾಪಕ ಸಿದ್ಧಲಿಂಗಶಾಸ್ತ್ರಿಗಳೂ, ಪ್ರಮುಖರಾದ ಯಮ್. ಯಂ. ಶಿವಲಿಂಗಪ್ಪನವರು, ದಾ॥ ಟಿ. ಯಂ. ರುದ್ರಪ್ಪನವರು, ದೊಡ್ಡಮನೆ ವೀರಪ್ಪನವರು, ನಂಜಪ್ಪನವರು, ಮರಿಯಪ್ಪನವರು, ಎಸ್. ಚೆನ್ನಯ್ಯನವರು, ಖರೀದಿ ಲಿಂಗಪ್ಪನವರು, ಕೋಗಿ ಮಲ್ಲಪ್ಪನವರು, ಮು॥ ನೆರಳೆ ಸಿದ್ದಯ್ಯನವರು ಇವರೇ ಮೊದಲಾದವರು ಸಭೆಗೂಡಿರುವಾಗ ಕಡೂರ್ ತಾ॥ ಅಮಲ್ದಾರರವರು ಸಭಾಧ್ಯಕ್ಷತೆಯನ್ನು ವಹಿಸಿದರು. ಶ್ರೀ ಚಕ್ರವರ್ತಿ ದಂಪತಿಗಳ ಚಿತ್ರಪಟಕ್ಕೆ ಪುಷ್ಪಾಂಜಲಿಯನ್ನರ್ಪಿಸುವಾಗ ವಾದ್ಯಗಳು ಘೋರ್ಗರೆದುವು. ಬಾಲಕ ಬಾಲಿಕೆಯರು ಸಂಭಾಷಣ ಗೀತಗಳಿಂದ ಸಭಿಕರಿಗಾನಂದಗೊಳಿಸಿದರು. ಬಾಲಕ ಬಾಲಿಕೆಯರ ಆಟಗಳಿಗಾಗಿ ಶ್ರೀ॥ ಪ॥ ಚೆ॥ ವೀರಪ್ಪಯ್ಯನವರಿಂದ ವಿಧವಿಧ ಪದಾರ್ಥಗಳೂ ತಿಂಡಿಯೂ ಸಿದ್ಧಪಡಿಸಿ ಕೊಡಲ್ಪಟ್ಟವು. ಅಲ್ಲದೆ ಇವರಿಂದಲೇ ಆ ದಿವಸ ಸಮಸ್ತವರ್ಗದವರಿಗೂ, ಬಡವರಿಗೂ ಅಶನವಶನಗಳು ಕೊಡಲ್ಪಟ್ಟವು. ಸಭೆಯಲ್ಲಿ ಅಜ್ಜಂಪುರದ ಮಠದ ಉಮೇಶರತಿಶಾಸ್ತ್ರಿಗಳು ರಾಜಭಕ್ತಿಯ ವಿಷಯವಾಗಿ ಶ್ರಾವ್ಯವಾಗಿ ಉಪನ್ಯಸಿಸಿದರು. ಸರ್ವರೂ ಭಕ್ತಿಯುತರಾಗಿ ಶ್ರೀ ಚಕ್ರವರ್ತಿಗಳಿಗೂ, ಶ್ರೀಮನ್ಮಹಾರಾಜರವರಿಗೂ ಅವರ ಸರ್ವಪರಿವಾರಕ್ಕೂ ಸಫಲಶ್ರೇಯಸ್ಸುಂಟಾಗಲೆಂದು ದೇವರನ್ನು ಪ್ರಾರ್ಥಿಸಿದರು. ಈ ಮಹೋತ್ಸವದ ಜ್ಞಾಪನಾರ್ಥವಾಗಿ ಬೀರೂರ್ ನಿವಾಸಿಗಳು ಕೈಗೊಂಡಿದ್ದ ರೀಡಿಂಗ್ ರೂಮಿನ ಶಂಕುಸ್ಥಾಪನೆಯು ಮ॥ ಅಮಲ್ದಾರರವರಿಂದ ಮಾಡಲ್ಪಟ್ಟಿತು.

ನೋಟೀಸ್.

ಈ ಕೆಳಗೆ ಸಹಿಮಾಡಿರುವ ನಾನು ಎಲ್ಲಾ ಕಡೆಗೂ ತಿಳಿಯಪಡಿಸುವದೇನಂದರೆ:—ನನ್ನ ತಮ್ಮ ನಂಜುಂಡಯ್ಯನು ಸುಮಾರು ೩-೪ ವರ್ಷಗಳಲಾಗಾಯ್ತು ಬುದ್ಧಿಸ್ವಾಧೀನವಿಲ್ಲದೆ ತಿರುಗುತ್ತಾ ಇದ್ದಾನೆ. ಈತನಿಗೆ ಯಾರಾದರೂ ಹಣ ಮೊದಲಾದದ್ದನ್ನ ಕೊಟ್ಟು ಪ್ರಾಂಸರಿ, ದಸ್ತೈವೇಜು, ಅಗಪುರಿಜಸ್ಟ್ರು, ಕ್ರಯರಿಜಸ್ಟ್ರು ಮುಂತಾದುದನ್ನ ಮಾಡಿಸಿಕೊಂಡದ್ದೇ ಆದರೆ, ಆ ಹಣಕ್ಕೂ ಕೋರ್ಟುಖರ್ಚು ಮುಂತಾದ ಸರ್ವಕ್ಕೂ ನಾನು ಬಾಧ್ಯನಲ್ಲವೆಂಬ ಸಂಗ್ತಿಯನ್ನ ಖಂಡಿತ ತಿಳಿಯುವದು, ಮತ್ತು ಹಣಕೊಟ್ಟವರು ಆ ಸ್ವತ್ತುಗಳಿಗೆ ಎಂದೆಂದಿಗೂ ಬಾಧ್ಯರಾಗುವುದಿಲ್ಲ. ತಿಳಿಯುವದು.

ರಾಜು ಚಂದ್ರಪ್ಪನವರ ಅಡಿಯಪ್ಪ,
ಸಂತೇಬೆನ್ನೂರ ಹೋಬಳಿ, ಚನ್ನಗಿರಿ ತಾಲೋಕ್,

ಮಳವಳ್ಳಿ ತಾ॥ ಬೆಳಕವಾಡಿ.

ಈ ಊರಿನಲ್ಲಿ ವಾಸವಾಗಿರುವ ಶಿವನಸಮುದ್ರದ ಜಹಗೀರ್ದಾರ್ ಜನೋಪಕಾರಿಗಳಾದ ಶ್ರೀಮಂತ ಆನಂದರಾಯಿ ಮೊದಲಿಯಾರವರು ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವವನ್ನು ಕಳೆದ ಡಿಸೆಂಬರ್ ತಾ॥ ೧೨ರಲ್ಲಿ ಈ ಊರಿನಲ್ಲೂ ಶಿವನಸಮುದ್ರದಲ್ಲೂ ಅತ್ಯಂತ ವೈಭವದಿಂದ ಜರುಗಿಸಿದರು. ಜಹಗೀರ್ದಾರರು ಶಿವನಸಮುದ್ರವನ್ನು ನಾನಾವಿಧವಾಗಿ ಶೃಂಗರಿಸಿ ನೆರೆಗ್ರಾಮಗಳಿಂದ ಎಲ್ಲಾ ಜಾತಿಯ ಜನರನ್ನೂ ಬರಮಾಡಿಕೊಂಡು ೨-೩ ಸಾವಿರ ಜನಗಳಿಗೆ ಸುಖಭೋಜನವನ್ನು ಮಾಡಿಸಿ, ದೇವರ ಸಾನ್ನಿಧ್ಯದಲ್ಲಿ ಚಕ್ರವರ್ತಿ ದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ಕೊಲ್ಲಾಪುರದ ಸರ್ಕಸ್ಸಿನವರು ಮಧ್ಯಾಹ್ನದಲ್ಲಿ ತಮ್ಮ ಅಂಗಸಾಧನೆಯನ್ನು ಮಾಡಿ ತೋರಿಸಿ, ಜನರಿಗಾನಂದವನ್ನುಂಟುಮಾಡಿದರು. ರಾತ್ರಿ ದೀಪೋತ್ಸವ ವಾಯಿತು. ಇಂತಹ ಉತ್ಸವವು ಈ ಊರು ನಿರ್ಮಿತವಾದಾರಭ್ಯ ನೋಡಿರಲಿಲ್ಲವೆಂದು ವೃದ್ಧರು ಅಂದುಕೊಳ್ಳುತ್ತಿದ್ದರಲ್ಲದೆ ಈ ರೀತಿಯಾಗಿ ಜಹಗೀರ್ದಾರರು ರಾಜಭಕ್ತಿಯನ್ನು ಪ್ರದರ್ಶಿಸಿ, ಜನರನ್ನು ಆನಂದಗೊಳಿಸಿದುದಕ್ಕಾಗಿ ನೆರದಿದ್ದವರೆಲ್ಲರೂ ಅವರನ್ನು ಕೊಂಡಾಡಿದರು. ಅದೇ ದಿವಸ ಬೆಳಕವಾಡಿಯೂ ಅಲಂಕರಿಸಲ್ಪಟ್ಟು, ಸ್ಕೂಲ್ ಮಾಸ್ಟರುಗಳಾದ ಮ॥ ಬಿ. ವಿಶ್ವೇಶ್ವರಯ್ಯನವರು, ಕೆ. ವೆಂಕಟಸುಬ್ಬಯ್ಯನವರು ಪುರಪ್ರಮುಖರನ್ನು ಬರಮಾಡಿಕೊಂಡು ಒಂದು ಸಭೆಯನ್ನು ಸೇರಿಸಿದ್ದರು. ಈ ಸಭೆಗೆ ಮ॥ ಗಳಾದ ಮ್ಯಾನೇಜರ್ ಕೃಷ್ಣಯ್ಯಂಗಾರರು, ಜಮೀನ್ದಾರ್ ಅಶ್ವತ್ಥನಾರಣಪ್ಪನವರು, ಮಠದ ಏಜಂಟ್ ಹಲಗಪ್ಪನವರು, ಶ್ಯಾ॥ ನಂಜುಂಡಯ್ಯನವರು, ಸಾಹುಕಾರ್ ಪುಟ್ಟಹೊನ್ನಪ್ಪನವರು, ಸಾ॥ ಮಸ್ತಾನ್‌ಖಾನ್ ಸಾಹೇಬರು, ಸಾ॥ ಗೋಪಾಲಕೃಷ್ಣಸೆಟ್ಟರು ಕೆ. ವೆಂಕಟರಮಣಸೆಟ್ಟರು ಮುಂತಾದ ದೊಡ್ಡಮನುಷ್ಯರು ದಯಮಾಡಿಸಿದ್ದರು. ಮನುಷ್ಯರು ಕೆಲಸಮಾಡುವುದರಿಂದ ದೃಢಕಾಯರಾಗಿರುವರೆಂಬುದನ್ನು ವಿದ್ಯಾರ್ಥಿಗಳು ಅಭಿನಯಿಸಿ ತೋರಿಸಿದರು. ಸ್ಕೂಲ್ ಹೆಡ್ಮಾಸ್ಟರ್ ಮ॥ ಜಿ. ರಾಮಯ್ಯನವರು, ಮ॥ ಕೆ. ವೆಂಕಟಸುಬ್ಬಯ್ಯನವರು ಸಾರ್ವಭೌಮರ ಆಳುವಿಕೆಯಿಂದುಂಟಾಗಿರುವ ಸುಖಸಂಪತ್ತನ್ನು ವಿಸ್ತರಿಸಿ ಹೇಳಿದರು.

ಬಾಗಲಕೋಟೆ ತಾ॥ ಗಲಗಲಿ.

ಬಾದಶಹರ ರಾಜ್ಯಾರೋಹಣ ಮಹೋತ್ಸವವನ್ನು ಜರುಗಿಸುವ ಬಗೆಗೆ ಈ ಊರಲ್ಲಿ ಅತ್ಯಂತ ಸುಂದರವಾದ ಮಂಟಪವು ಕಟ್ಟಲ್ಪಟ್ಟು, ಊರೆಲ್ಲ ಶೃಂಗರಿಸಲ್ಪಟ್ಟಿತ್ತು. ನೆರೆಗ್ರಾಮಗಳಿಂದ ನೂರಾರು ಜನರು ನಿತ್ಯದಲ್ಲೂ ಬಂದು ಈ ಮಂಟಪವನ್ನೋಡಿ ಆನಂದಪಟ್ಟು ಹೋಗುತ್ತಿದ್ದರು. ರಾ। ಸಾ। ಮಹಲಕಾರಿ ಸಾಹೇಬ ಪೇಠಾ ಬೀಳಗಿ ಇವರಿಂದ ಮೊದಲೆ ಗೊತ್ತಾಗಿದ್ದ ಪ್ರಕಾರ ತಾ॥ ೧೨ ರ ಬೆಳಿಗ್ಗೆ ಚಕ್ರವರ್ತಿ ದಂಪತಿಗಳ ಚಿತ್ರಪಟವು ಪಾಲಕಿಯಲ್ಲಿರಿಸಲ್ಪಟ್ಟು ವಾದ್ಯಘೋಷದೊಡನೆ ಅತಿ ವಿಜೃಂಭಣೆಯಿಂದ ಊರಿನಲ್ಲೆಲ್ಲ ಉತ್ಸವಮಾಡಲ್ಪಟ್ಟಿತು. ಈ ಉತ್ಸವದಲ್ಲಿ ಶ್ರೀಮಂತ ದೇಸಾಯರವರೂ, ಈ ಗ್ರಾಮದ ಮುಖಂಡರೂ, ಶಾಲಾ ಮಾಸ್ತರರುಗಳೂ, ವಿದ್ಯಾರ್ಥಿಗಳೂ ವಸ್ತ್ರಾಭರಣಭೂಷಿತರಾಗಿ ನಡೆತಂದರು. ಅಂಗಡಿಯವರೂ, ಇತರರೂ ಉತ್ಸವಬರುವಾಗ್ಗೆ ಬತಾಸು ಹಣ್ಣು ಹಂಪಲುಗಳನ್ನು ಪಾಲಕಿಯಮೇಲೆ ಸುರಿದು ತಮ್ಮ ಭಕ್ತಿಯನ್ನು ಪ್ರಕಟಿಸಿದರು. ಉತ್ಸವವಾದಮೇಲೆ ಒಂದು ದೊಡ್ಡ ಸಭೆಯು ಸೇರಿಸಲ್ಪಟ್ಟು ರಾಜಾಜ್ಞಾಪತ್ರಿಕೆಯು ಓದಲ್ಪಟ್ಟಿತು. ತರುವಾಯ ವಿದ್ಯಾರ್ಥಿಗಳಿಗೆ ಶ್ರೀಮಂತರಿಂದ ಮಿಠಾಯಿ ಹಂಚಲ್ಪಟ್ಟಿತು. ಮತ್ತು ಮಹೋತ್ಸವದ ಜ್ಞಾಪನಾರ್ಥವಾಗಿ ಬಾಣಬಿರು ಒಂದು ಸಸಿಯು ನೆಡಲ್ಪಟ್ಟಿತು. ಬಡಬಗ್ಗರಿಗೆ ವಸ್ತ್ರದಾನಗಳು ಮಾಡಲ್ಪಟ್ಟವು. ಸಾಯಂಕಾಲ ರ್ಥಿಗಳು ಅಂಗಸಾಧನೆಯನ್ನು ಮಾಡಿ ಪ್ರೇಕ್ಷಕರ ಆನಂದಗೊಳಿಸಿದರು. ಹಾಡುಪದರೇಯೂ, ಓಟಯೂ, ಮಲ್ಲಕಾಳಗದಲ್ಲಿಯೂ ಗೆದ್ದವರಿಗೆ ಶ್ರೀಮ ಪಾರಿತೋಷಕಗಳನ್ನು ಕೊಟ್ಟರು. ಕೋಲಾಟವ ದಿದ ಬಾಲಿಕೆಯರಲ್ಲಿ ೬ ಜನರಿಗೆ ಕಣಗಳೂ, ಗ ಸಾಧಕವನ್ನು ತೋರಿಸಿದವರಿಗೆ ೧೧ ರೂ. ಗಳೂ ಟ್ಟವು. ರಾತ್ರಿ ದೀಪೋತ್ಸವವು ಸುಶೋಭಿತವಾಗಿ ಚಿತ್ರವಾದ ಮದ್ದು ಸುಡಲ್ಪಟ್ಟಿತು. ರಾತ್ರಿ ೯ ಗ ಮೇಲೆ ಮುಧೋಳಕರ ನಾಟಕವನ್ನು ಬೆಳಕು ಹರಿ ರೆಗೂ ಪ್ರಯೋಗಿಸಿ ತೋರಿಸಿದರು. ಇವರಿಗೆ ೫೦ ಹುಮಾನಿಸಲ್ಪಟ್ಟಿತು. ತಾ॥ ೧೩ ರ ಬೆಳಿಗ್ಗೆ ಊರ ನ ಬೈಲಿನಲ್ಲಿ ಮಲ್ಲಯುದ್ಧವು ನಡೆದು ಗೆದ್ದವರು ಬ ಸಲ್ಪಟ್ಟರು. ಈ ಪ್ರಕಾರ ರಾಜ್ಯಾರೋಹಣ ಮಹೋ ವು ೫೦೦ ರೂ. ಖರ್ಚಿನಿಂದ ಬಹು ವೈಭವದಿಂದ ನಡೆ ಟ್ಟಿತು. ಇಲ್ಲಿಯ ಶ್ರೀಮಂತ ದೇಸಾಯರವರು, ಶಂಕರಪ್ಪ ಪಾಟೀಲ, ಅಣ್ಣಾರಾವ ಕನ್ನಿಲೇಕರ ಮ ದ ಪ್ರಮುಖರೂ, ಸ್ಕೂಲ ಮಾಸ್ತರುಗಳೂ ತನು ಶ್ರಮವನ್ನು ಲೆಕ್ಕಿಸದೆ ಪರಿಪೂರ್ಣಮಾಡಿ ತಮ್ಮ ಷ್ಠೆಯನ್ನು ಪ್ರದರ್ಶಿಸಿದುದು ಭೂಷಣಾವೇ ಸರಿ.

ಪತ್ರವ್ಯವಹಾರವು.

ಕಳೆದ ಡಿಸೆಂಬರ್ ತಾ॥ ೨೯ ರಲ್ಲಿ ಸಕಲೇಶಪು ಗಿನ ಬೀದಿಯಲ್ಲಿ ಅಬ್ದುಲ್ ಲತೀಫ್‌ಸಾಬಿ ಎಂಬುವ ಮನೆಗೆ ಬೆಂಕಿಯು ಬಿದ್ದು ಒಳಗಿದ್ದ ಪದಾರ್ಥಗಳೆ ನಾಶವಾಯಿತು. ಈ ಮನೆಯಿಂದ ೮ ಗಜ ದ ೫೦ ಅಡಿ ಎತ್ತರದ ತೆಂಗಿನಮರದ ಗರಿಗಳಿಗೆ ಕಿಡಿ ಮೊಟ್ಟೆಗಳೆಲ್ಲಾ ಹೊತ್ತಿಕೊಂಡು ಉರಿಯಲಾರ ಲ್ಲದೆ ಅಲ್ಲಿಂದ ಕಿಡಿಗಳು ಸಮೀಪದ ಮನೆಗಳಿಗೆ ಹ ಅನಾಹುತವನ್ನುಂಟುಮಾಡುವಷ್ಟರಲ್ಲಿ ಜನರು ತೆಂಗಿನಮರವನ್ನು ಕತ್ತರಿಸಿ ಉರುಳಿಸಿಬಿಟ್ಟರು. ಇನ್ಸ್ಪೆಕ್ಟರ್ ಮಿ॥ ಲ್ಯೂಯಿಸ್ ಸಾಹೇಬರು ಬೆಂ ಆರಿಸಲು ಬಹು ಶ್ರಮವನ್ನು ವಹಿಸಿದುದು ಸ್ತುತ ದೊಡ್ಡ ಊರುಗಳಲ್ಲಿ ಮನೆಗಳೊತ್ತಾಗಿರುವುದರಿಂ ಮಧ್ಯೆ ಹುಲ್ಲಿನ ಅಥವಾ ಮೊಟ್ಟೆಯ ಮನೆಗಳನ್ನು ತೆ ಮ್ಯುನಿಸಿಪಾಲಿಟಿಯವರಪ್ಪಣೆ ಮಾಡಿದಲ್ಲಿ ಇಂ ಹುತಗಳಿಗವಕಾಶವಿರುವುದಿಲ್ಲವು. ಪ್ರತ್ಯಕ್ಷ

ತುಮಕೂರಿನ ಮಹಮ್ಮದೀಯರಲ್ಲಿ ಸುಜನ ಣಿಗಳಾಗಿದ್ದ ಹಕೀಂ ಮಹಮ್ಮದ್ ಸಾಹೇಬರು ಳವರೆಗೆ ಅಸ್ವಸ್ಥರಾಗಿದ್ದು ಕಳೆದ ಡಿಸೆಂಬರ್ ತಾ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತ ರಿಗೆ ಮರಣಕಾಲದಲ್ಲಿ ೬೫ ವರ್ಷ ವಯಸ್ಸಾಗಿದ್ದಿ ರು ಮ್ಯುನಿಸಿಪಲ್ ಮತ್ತು ಡಿ॥ ಬೋರ್ಡು ಮೆಂ ಪ್ರಸಿದ್ಧರಾಗಿದ್ದರಲ್ಲದೆ ಬಡವರು ಬಲ್ಲಿದರು ಎಂಬ ತ್ಯದಲ್ಲೂ ೨೦೦-೩೦೦ ರೋಗಿಗಳಿಗೆ ಧರ್ಮಾರ್ಥ ಷಧವನ್ನು ಕೊಟ್ಟು ಬಡವರಾಧಾರಿಯಾಗಿದ್ದು ಯರಾಗಿದ್ದರು. ಈ ದೊಡ್ಡ ಮನುಷ್ಯರು ಅಸ್ವ ವೇಳೆಯಲ್ಲಿ ಡಿ॥ ಕಮಿಷನರೇ ಆದಿಯಾಗಿ ಎಲ್ಲಾ ಳೂ ದೊಡ್ಡಮನುಷ್ಯರುಗಳೂ ಅವರ ಮನೆ ನೋಡಿಕೊಂಡು ಬಂದಿದ್ದರು. ಇಂತಹ ಗುಣಾ ನೋಪಕಾರಿಗಳೂ ಆದವರನ್ನು ಕಳೆದುಕೊಂಡು ಪ್ರಾಂತ್ಯದ ನಿವಾಸಿಗಳೆಲ್ಲರೂ ಬಹಳ ವ್ಯಸನಪ

ಗುಣೈಕಪ

ಕಡೂರು ತಾ॥ ಚಿಕ್ಕನಲ್ಲೂರಿನಲ್ಲಿ ಕಳೆದ ಳಿಂದಲೂ ಪ್ಲೇಗುರೋಗವು ಪ್ರಾಪ್ತವಾಗಿ ಜನರ ಸಲುಗಳಲ್ಲಿ ವಾಸಮಾಡಿಕೊಂಡಿರುವರು. ಕಳೆ ರಲ್ಲಿ ಒಂದು ಗುಡಿಸಲಿಗೆ ಆಕಸ್ಮಿಕವಾಗಿ ಬೆಂಕಿ ನೆರೆಯಲ್ಲಿ ಜನರು ವಾಸಮಾಡುವ ೩೦ ಗುಡಿ ದನಗಳನ್ನು ಕಟ್ಟುವ ೩೦ ಗುಡಿಸಲುಗಳೂ ಸ ವಾದುವು ಮೊದಲು ಬೆಂಕಿಯಿಂದ ಹೊತ್ತಿ ಡಿಸಲಿನಲ್ಲಿ ಊಟಮಾಡುತಿದ್ದ ಒಬ್ಬ ವೃದ್ಧಳು ಲಿಕ್ಕಾಗದೆ ಅಗ್ನಿಯ ಪಾಲಾಗುತ್ತಿರುವಷ್ಟರಲ್ಲಿ ರು ಬಂದು ಪ್ರಯಾಸದಿಂದ ಅವಳನ್ನು ಜೀವ ಗೆ ಕರೆದುಕೊಂಡು ಬಂದರು. ಆದರೆ ಅವಳ ರೀರವಾಗಿ ಸುಟ್ಟು ಹೋಗಿದ್ದುದರಿಂದ ಮೂರನೆ ತಪಟ್ಟಳು. ದನಗಳ ಗುಡಿಸಲಿನಲ್ಲಿ ಕಟ್ಟಿದ್ದ ಬಿಚ್ಚಿ ಬಿಡಲಾಗದೆ ಹೋದುದರಿಂದ ಅವು ಅಗ್ನಿ ಗಿ ಸತ್ತು ಹೋಯಿತು. ಹೊಲದ ಕೆಲಸಗಳ ಜನರು ಹಿಂತಿರುಗಿ ಬಂದು ತಮ್ಮ ಗುಡಿಸಲುಗಳ [illegible] ಪದಾರ್ಥಗಳೂ ಸುಟ್ಟುಹೋಗಿದ್ದು ಬಹಳವಾಗಿ ವ್ಯಸನಪಟ್ಟರು. ಪ್ರ

೯೧೧ ನೆಯ ಡಿಸೆಂಬರ್ ತಾ॥ ೨೩, ೨೪ ಮತ್ತೂ ೨೫ರಲ್ಲಿ ಬೆಳಗಾವಿಯಲ್ಲಿ ಕೂಡಿದ್ದ ೬ ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಾದ ನಿರ್ಧಾರಗಳು.

೧. ಶ್ರೀಮತ್ ೫ ನೆಯ ಜಾರ್ಜ್ ಸಾರ್ವಭೌಮರೂ ಮ ತ್ರಿ ಮೇರೀ ಮಹಾರಾಜ್ಞಿಯವರೂ ಭರತಖಂಡಕ್ಕೆ ದಯಮಾಡಿಸಿ ದಿಲ್ಲಿಯ ರಾಜಧಾನಿಯಲ್ಲಿ ರಾಜ್ಯಾರೋಹಣ ಸಮಾರಂಭವನ್ನು ನೆರವೇರಿಸಿದುದಕ್ಕಾಗಿ ಈ ವೀರಶೈವ ಮಹಾಸಭೆಯವರು ಅಭಿನಂದಿಸುತ್ತಾರೆ.

೨. ಶೈವಸಿದ್ಧಾಂತಸಭೆಯವರು ನಮ್ಮ ವೀರಶೈವ ಧರ್ಮದಲ್ಲಿ ಶ್ರದ್ಧೆಯನ್ನು ವಹಿಸಿ ಅವರ ಅಭಿವೃದ್ಧಿಯನ್ನು ಕೋರುತ್ತಿರುವ ಬಗೆಗೆ ಈ ವೀರಶೈವ ಮಹಾಸಭೆಯವರು ಅವರನ್ನು ವಂದಿಸುತ್ತಾರೆ.

೩. ಕೊಲ್ಲಾಪುರದ ಛತ್ರಪತಿ ಶಾಹು ಮಹಾರಾಜರವರಿಗೆ ಸಾರ್ವಭೌಮರವರು ತಮ್ಮ ಕಿರೀಟಧಾರಣಮಹೋತ್ಸವ ಸಮಾರಂಭಕಾಲದಲ್ಲಿ ಜಿ. ಸಿ. ಎಸ್. ಐ., ಪ್ರಶಸ್ತಿಯನ್ನು ದಯಪಾಲಿಸಿದುದಕ್ಕಾಗಿ ಈ ವೀರಶೈವ ಮಹಾಸಭೆಯವರು ಮಹಾರಾಜರನ್ನು ಅಭಿವಂದಿಸುತ್ತಾರೆ.

೪. ನಮ್ಮ ಶ್ರೀಮದ್ವೀರಶೈವ ಧರ್ಮವು ಸನಾತನವೂ, ವೇದಾಗಮೋಪನಿಷತ್ಸ್ಮೃತಿಸಾಧ್ಯವೂ ಉದಾರಮತ ಪರಿಪ್ಲುತವೂ ಆಗಿರುವುದರಿಂದ, ಅದರಂತೆ ಶ್ರದ್ಧಾಭಕ್ತಿಪುರಸ್ಸರವಾಗಿ ತನ್ಮತೀಯರು ವರ್ತಿಸಬೇಕೆಂದು ಈ ಮಹಾಸಭೆಯವರು ಅಭಿಪ್ರಾಯಪಡುತ್ತಾರೆ.

೫. ನಮ್ಮ ಸಮಾಜದಲ್ಲಿ ಪ್ರತಿಕುಟುಂಬದವರೂ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚಿಸಬೇಕೆಂತಲೂ, ತರುವಾಯ ಮಧ್ಯಮಶಿಕ್ಷಣವನ್ನು ಕೊಡತಕ್ಕದೆಂತಲೂ, ಬಡವರಾದ ವಿದ್ಯಾರ್ಥಿಗಳ ಸಹಾಯಕ್ಕೋಸ್ಕರ ಧನನಿಧಿಗಳನ್ನು ಸ್ಥಾಪಿಸಬೇಕೆಂತಲೂ ಅವರ ನೈತಿಕ, ಧಾರ್ಮಿಕ ಮತ್ತೂ ಶಾರೀರಕ ಉನ್ನತಿಗಾಗಿ ಅಲ್ಲಲ್ಲಿ ಬೋರ್ಡಿಂಗುಗಳನ್ನು ಸಮಾಜದವರು ಸ್ಥಾಪಿಸಬೇಕೆಂತಲೂ, ಜಂಗಮರು ಸಹ ಧರ್ಮಜ್ಞಾನದೊಡನೆ ಇಂಗ್ಲೀಷ ವಾಙ್ಮಯದ ಪರಿಚಯವನ್ನು ಮಾಡಿಕೊಳ್ಳಬೇಕೆಂತಲೂ ಈ ಮಹಾಸಭೆಯವರು ನಿರ್ಧರಿಸುತ್ತಾರೆ.

೬. ನಮ್ಮ ಸಮಾಜದ ಏಳಿಗೆಗೆ ಸ್ತ್ರೀಶಿಕ್ಷಣವು ಅತ್ಯಾವಶ್ಯಕವಾದುದರಿಂದ, ಅದನ್ನು ಪ್ರತಿಯೊಬ್ಬ ವೀರಶೈವನೂ ತನ್ನ ಹೆಣ್ಣು ಮಕ್ಕಳಿಗೆ ವಿದ್ಯಾ ಶಿಕ್ಷಣವನ್ನು ಕೊಡತಕ್ಕದೆಂದು ಈ ಮಹಾ ಸಭೆಯವರು ನಿರ್ಧರಿಸುತ್ತಾರೆ.

೭. ಉತ್ತರ ಕರ್ನಾಟಕದಲ್ಲಿಯ ಸರಕಾರದ ಹೈಸ್ಕೂಲುಗಳಿಗೆ ತೆಗೆದುಕೊಳ್ಳಲು ಸರಕಾರದಿಂದ ನಿಯಮಿತರಾಗಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ೭ ನೆಯ ೧ ಭಾಗಕ್ಕೆ ಲಿಂಗವಂತ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವಂತೆ ಅಪ್ಪಣೆಯನ್ನು ಕೊಡಿರಬೇಕೆಂದು ಸರಕಾರಕ್ಕೆ ವಿಜ್ಞಾಪಿಸಿಕೊಳ್ಳಬೇಕಾಗಿ ಈ ಮಹಾ ಸಭೆಯವರು ನಿರ್ಧರಿಸುತ್ತಾರೆ.

೮. ನಮ್ಮ ವೀರಶೈವರಲ್ಲಿ ಸಾಂಪತ್ತಿಕ ಸ್ಥಿತಿಯು ಅಭಿವೃದ್ಧಿಯಾಗುವುದಕ್ಕಾಗಿ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಗಳನ್ನೂ, ಜಾಯಿಂಟ್ ಸ್ಟಾಕ್‌ಕಂಪನಿಗಳನ್ನೂ ಸ್ಥಾಪಿಸಬೇಕೆಂತಲೂ, ಪರದೇಶದವರ ಸಂಗಡ ವ್ಯಾಪಾರವನ್ನು ಮಾಡಲಾರಂಭಿಸಬೇಕೆಂತಲೂ ಈ ಮಹಾ ಸಭೆಯವರು ಅಭಿಪ್ರಾಯಪಡುತ್ತಾರೆ.

೯ ನಮ್ಮ ವೀರಶೈವರಲ್ಲಿ ಅಯೋಗ್ಯವಾಗಿ ನಡೆಯುವ ದಾನಪದ್ಧತಿಗಳನ್ನು ತಪ್ಪಿಸಿ ಯೋಗ್ಯಕಾರ್ಯಗಳಿಗೆ ವಿನಿಯೋಗವಾಗುವಂತೆ ಧರ್ಮವು ಮಾಡಲ್ಪಡಬೇಕೆಂದು ಈ ಮಹಾಸಭೆಯವರು ಅಭಿಪ್ರಾಯಪಡುತ್ತಾರೆ.

೧೦. ವೀರಶೈವರಲ್ಲಿ ಒಕ್ಕಲತನವು ಒಳ್ಳೆಯ ಮಹತ್ವವಾದ ಉದ್ಯೋಗವಾಗಿರುವುದರಿಂದ, ಸರಕಾರದವರು ಸ್ಥಾಪಿಸಿರುವ ಪ್ರಯೋಗ ಭೂಮಿಗಳಿಗೆ ಹೋಗಿ, ಪ್ರಯೋಗಗಳನ್ನು ತಿಳಿದುಕೊಳ್ಳಬೇಕೆಂತಲೂ, ವ್ಯವಸಾಯಸಂಬಂಧವಾಗಿ ಅವರು ಪ್ರಕಟಿಸುವ ಮಾಸಿಕ ಪುಸ್ತಕಗಳನ್ನು ಸಮಾಜದವರು ತರಿಸಿಕೊಂಡು ಓದಿ ಅದರ ಉಪಯೋಗವನ್ನು ಮಾಡಿಕೊಳ್ಳಬೇಕೆಂತಲೂ, ಅಲ್ಲಲ್ಲಿ ವ್ಯವಸಾಯ ಸಂಘಗಳನ್ನು ಸ್ಥಾಪಿಸಬೇಕೆಂತಲೂ ಈ ಮಹಾ ಸಭೆಯವರು ಅಭಿಪ್ರಾಯ ಪಡುತ್ತಾರೆ.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಅಡ್ಡಪಾಲಕಿಯುತ್ಸವವು

ಜಗದ್ಗುರುಗಳು ಹುನಗುಂದ ತಾ॥ ಸಂಗಮಕ್ಷೇತ್ರದ ವಾಸಿಗಳಾದ ದೇಶಪಾಂಡೆಯರು, ಕುಲಕರ್ಣಿಗಳು, ದೈವದವರು ಮೊದಲಾದವರ ಪ್ರಾರ್ಥನೆಯ ಪ್ರಕಾರ ಕಳೆದ ಡಿಸೆಂಬರ್ ತಾ॥ ೧೨ ರಲ್ಲಿ ಪಂಚಕಲಶ ಯುಕ್ತವಾದ ಅಡ್ಡಪಾಲಕಿಯಲ್ಲಿ ಮಂಡಿಸಿ ಸಮಸ್ತ ಬಿರುದಾವಳಿಗಳೊಡನೆ ಚೈತ್ರೈಸಿ ಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಬೀದಿಗಳಲ್ಲಿ ಉತ್ಸವಗೊಂಡು [illegible] ವಿರಕ್ತಮಠಕ್ಕೆ ಬಿಜಯಂಗೈದು ಅಲಂಕೃತವಾದ ಸಿಂಹಾಸನಾರೋಹಣವಂ ಮಾಡಿ ನೆರೆದಿದ್ದ ಸಭಿಕರ ಹೃದಯಂಗಮವಾಗುವಂತೆ ಸರಸವಾದ ಭಾಷಣಗಳನ್ನು ಮಾಡಿ ಫಲಾಶೀರ್ವಾದಗಳನ್ನು ದಯಪಾಲಿಸಿದರು. ಬಾಗಲಕೋಟೆ ಮೊದಲಾದ ದೂರ ಪ್ರದೇಶದಿಂದಲೂ ನೆರೆಯಗ್ರಾಮಗಳಿಂದಲೂ ಸಾವಿರಾರು ಭಕ್ತಜನರು ಬಂದಿದ್ದರು. ಇವರುಗಳ ಪ್ರಾರ್ಥನೆಯಂತೆ ಮಹಾಸ್ವಾಮಿಗಳ ಸ್ವಾರಿಯು ತಾ॥ ೧೯ರಲ್ಲಿ ಅಡ್ಡಪಾಲಕಿಯಲ್ಲಿ ಬಿರುದಾವಳಿಗಳೊಡನೆ ಉತ್ಸವಗೊಂಡು ಶ್ರೀಸಂಗಮೇಶ್ವರದೇವಸ್ಥಾನಕ್ಕೆ ಚೈತ್ರೈಸಿತು. ತಾ॥ ೨೦ ರಲ್ಲಿ ಸನ್ನಿಧಿಯಪ್ಪಣೆಯ ಪ್ರಕಾರ ನೆರೆದಿದ್ದ ಸಾವಿರಾರು ಜನರಿಗೆ ಸುಖಭೋಜನವು ಮಾಡಿಸಲ್ಪಟ್ಟಿತು. ಸಂಗಪ್ಪಪಾಟೀಲ, ಮಹಾಂತಪ್ಪ ಮಾಟೂರ, ಸಂಗಪ್ಪ ಶೇಲೂರ, ಸಂಗಪ್ಪ ಮಾಟೂರ, ಗಂಗಪ್ಪಗೌಡ ಮಲ್ಲಿಕಾರ್ಜುನಪ್ಪ ಮಾಟೂರ, ಸಂಗಪ್ಪ ದಾವಣಗೆರೆ ಮೊದಲಾದವರು ವಿಶೇಷ ಶ್ರದ್ಧೆಯನ್ನು ವಹಿಸಿ ಜಗದ್ಗುರುಗಳ ಸೇವೆಯನ್ನು ಮಾಡಿ ಕೃತಾರ್ಥರಾದರು. ರಾ॥ರಾ॥ ರಾಘವಪ್ಪ ದೇಶಪಾಂಡೆ, ರಾಘವಪ್ಪ ಕುಲಕರ್ಣಿ ಮತ್ತೆ ಕೆಲರು ಬ್ರಾಹ್ಮಣ ಮತಸ್ಥರೂ ಈ ಉತ್ಸವ ಕಾಲದಲ್ಲಿ ವೀರಶೈವರಕೂಡ ನೇರವಾಗಿ ಶ್ರದ್ಧೆಯನ್ನು ವಹಿಸಿದ್ದುದು ಸ್ತುತ್ಯವಾಗಿದೆಯಲ್ಲದೆ ಇತರರಿಗೆ ಮಾರ್ಗದರ್ಶಕವಾಗಿದೆ. ದೊಡ್ಡ ವತನದಾರರಾದ ರಾ॥ ರಾಘವಪ್ಪ ದೇಶಪಾಂಡೆ ಮತ್ತು ರಾಘವಪ್ಪ ಕುಲಕರ್ಣಿ ಇವರಿಗೆ ಈಶ್ವರನು ದೀರ್ಘಾಯುರಾರೋಗ್ಯವನ್ನೂ ಸಕಲ ಸಂಪತ್ತನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಶ್ರೀಗಳವರ ಸ್ವಾರಿಯು ತಾ॥ ೨೩ ರಲ್ಲಿ ಧನೂರು ಗ್ರಾಮಕ್ಕೆ ಚೈತ್ರೈಸಿ ಅಲ್ಲಿ ಭಕ್ತರು ಮಾಡಿದ ಭಿಕ್ಷಾ ಪಾದಪೂಜೆಗಳನ್ನು ಕೈಕೊಂಡು ತಾ॥ ೨೦ ರಲ್ಲಿ ಮುದ್ದೆಬಿಹಾಳಕ್ಕೆ ಅಡ್ಡಪಾಲಕಿ ಶ್ವೇತಛತ್ರ ಮೊದಲಾದ ಬಿರುದಾವಳಿಗಳೊಡನೆ ವಿಧವಿಧವಾಗಿ ಅಲಂಕರಿಸಲ್ಪಟ್ಟಿದ್ದ ಬೀದಿಗಳಲ್ಲಿ ಉತ್ಸವಗೊಂಡು ಕೋಟೆಯಲ್ಲಿರುವ ವಿರಕ್ತಮಠಕ್ಕೆ ಚೈತ್ರೈಸಿತು. ಈ ಸಮಯದಲ್ಲಿ ರಾ॥ ಸಾ॥ ಶ್ರೀ ಹಿರೇಮಠ ಡಿ॥ ಕಲೆಕ್ಟರವರು ಸರ್ಕಾರಿ ಉದ್ಯೋಗದಮೇಲೆ ಮುದ್ದೆಬಿಹಾಳದಲ್ಲಿದ್ದುದರಿಂದ ಅವರೂ ತಾಲ್ಲೋಕು ಮಾಮಲೆದಾರ್ ರಾ।ಸಾ। ಗುರುನಾಥರಾವ್ ಜಮಖಂಡಿಕರವರೂ, ರಾ। ಸಾ। ರಾಮರಾವ ಗೋಪಾಳರಾವ ಶಿರಾಳಿ ಸಬ್‌ಜಡ್ಜ್ ಮಿ॥ ಮಾಧವರಾವ್ ಪೋಲೀಸ್ ಸಬ್ ಇನ್ಸ್ಪೆಕ್ಟರ್ ರಾ। ಸಾ। ಅಣ್ಣಾರಾವ ದೇಶಪಾಂಡೆ ವಕೀಲ, ಮಿ॥ ವೆಂಕಟರಾವ ವಕೀಲ, ಮಿ॥ ಕೃಷ್ಣರಾವ ವಕೀಲ, ಮಿ॥ ಬಾಪೂರಾವ ವಕೀಲ ಮೊದಲಾದ ಸರ್ಕಾರಿ ಉದ್ಯೋಗಸ್ಥರೂ ಬ್ರಾಹ್ಮಣ ವಕೀಲರುಗಳೂ ವಿಶ್ವಾಸದಿಂದ ಬಂದು ಉತ್ಸವದಲ್ಲಿ ಭಾಗಿಗಳಾಗಿದ್ದು ಶ್ರೀಯವರ ಅನುಗ್ರಹವನ್ನು ಪಡೆದುಕೊಂಡು ಹೋದರೆಂದು ತಿಳುಹಲು ಪರಮಾನಂದವಾಗುತ್ತದೆ. ಈ ಉತ್ಸವ ವೈಭವವನ್ನು ನೋಡಲಿಕ್ಕೆ ಪರಗ್ರಾಮಗಳಿಂದ ಪ್ರಾಯಶಃ ೧೫—೨೦ ಸಾವಿರದವರೆಗೆ ಜನರು ಸೇರಿದ್ದರು. ಇಲ್ಲಿಯ ಪ್ರಮುಖ ಶ್ರೀಮಂತ ಮಲ್ಲಿಕಾರ್ಜುನಪ್ಪ ಅಣ್ಣ ಚೆನಿವಾರ, ಶ್ರೀಮಂತ ಗುರುಲಿಂಗಪ್ಪ ಅಣ್ಣ ಮೊಟಗಿ ಶ್ರೀಮಂತ ಬಸವಲಿಂಗಪ್ಪ ದೇಶಮುಖ ನಾಲತವಾಡಕರರು ಮುಂತಾದವರು ಅತಿ ಸಾಹಸದಿಂದಲೂ, ಸಂತೋಷದಿಂದಲೂ ಉತ್ಸವವನ್ನು ನೆರವೇರಿಸಿದರು. ತಾ। ೨೦ರಲ್ಲಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಡಿ।ಕ।ರಾ।ಸಾ। ಹಿರೇಮಠ ಮೊದಲಾಗಿ ಸರ್ಕಾರಿ ಯಧಿಕಾರಿಗಳೂ, ವಕೀಲರುಗಳೂ, ಇತರ ಪ್ರಮುಖರೂ ಸಭೆ ಸೇರಿರುವಾಗ್ಗೆ ರಾ। ಸಾ। ಹಿರೇಮಠದವರು ಸ್ಥಳೀಯಾಧಿಕಾರಿಗಳ ಗುಣಕಥನವನ್ನು ಮಾಡಿದಮೇಲೆ ಜಗದ್ಗುರುಗಳು ಭಕ್ತಿ, ವೈರಾಗ್ಯ ಮೊದಲಾದ ವಿಷಯಗಳ ಮೇಲೆ ಸರ್ವಜನ ಸಮ್ಮತವಾಗಿಯೂ, ಯುಕ್ತಿಯುಕ್ತವಾಗಿಯೂ ಹೃದಯಂಗಮವಾಗಿಯೂ ಭಾಷಣವನ್ನು ೩ ಗಂಟೆಯವರೆಗೆ ಮಾಡಿದರು ತರುವಾಯ ಸಭಿಕರಿಗೆ ಗಂಧ ಪುಷ್ಪ ಹಾರಗಳೂ ಶ್ರೀಗಳವರಿಂದ ಫಲಾಶೀರ್ವಾದವೂ ಕೊಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ತಾ। ೨೫ ರಿಂದ ೨೮ ರವರೆಗೆ ಗುರಪ್ಪ ಅಣ್ಣ ಚೆನಿವಾರ, ಗುರಪ್ಪ ಅಣ್ಣ ಮೊಟಗಿ, ವೀರಪ್ಪ ಬಸಪ್ಪ ಚೆನಿವಾರ, ತೋಟಪ್ಪ ರಾಚಪ್ಪ ಅಣ್ಣ ಚೆನಿವಾರ ಈ ಸದ್ಗೃಹಸ್ಥರುಗಳಿಂದ ಭಿಕ್ಷವೂ ಪಾದಪೂಜೆಯೂ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ತಾ। ೧೨ ರಲ್ಲಿ ಮಹಾಸ್ವಾಮಿಗಳ ಸ್ವಾರಿಯು ಅಡ್ಡಪಾಲಕಿ ಮೊದಲಾದ ಸಕಲ ಬಿರುದಾವಳಿಗಳಿಂದ ಸೊಲ್ಲಾಪುರಕ್ಕೆ ಚೈತ್ರೈಸುವುದು. ಪ್ರತ್ಯಕ್ಷದರ್ಶಿ.

ಸಿಂಗಿರಾಜಪುರಾಣವಿಜಯಂ

10

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೪ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು.

ವಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

38

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬಸ್ತಿಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂದಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆ ಗುಲ್ಲ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಕ್ಕೆ ಮೊದಲಾದವಳೆ ಸವರುವ ಡಬ್ಬಿ ೧ ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.
(ಸ್ವ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.
(ಸ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮವೈದ್ಯಶಾಲಾ,
ಮೈಸೂರು.

☞ ಪ್ರಸಿದ್ಧವಾದ ಮೈಸೂರುಸ್ಟಾರ್ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ.

ಲೇಡೀಸ್ ಸಿಲ್ವರ್ ವಾಚ್. 2

ಇದರ ಅನುಕೂಲವು ಮತ್ತೆ ಯಾವುದಕ್ಕೂ ಇಲ್ಲ. ನಿಮ್ಮ ಇಷ್ಟ ಬಂತಂತೆ, ಕೈಯಲ್ಲಿಯೂ ಕಟ್ಟಿಕೊಳ್ಳಬಹುದು; ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಬೆಳ್ಳಿ ಮುಚ್ಚಳವುಳ್ಳದ್ದು. ಇದರ ಹಿಂಭಾಗದ ಮುಚ್ಚಳದ ಮೇಲೆ ಸುಂದರವಾದ ಹುವ್ವಿನ ಕೆಲಸದಿಂದ ತಯಾರಿಸಿರುತ್ತೆ. ಬಹುಸುಂದರವಾದದ್ದು. ಅನೇಕವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಖಾತ್ರಿಯಾದದ್ದು. 5 ವರುಷಗಳ ಗ್ಯಾರೆಂಟಿ ಈಗಿನ ಕ್ರಯ. ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಅವಶ್ಯ ಬೇಕಾಗುವ ಚರ್ಮದಪಟ್ಟಿ, ಎಂದಿಗೂ ಕಪ್ಪಾಗದ ವಾಚ್ ಸರಪಣಿ, ಮತ್ತು ವಾಚ್ ಪೆಟ್ಟಿಗೆ ಸಮೇತ 4—15—0 ಮಾತ್ರ

ಇಮಿಟೇಷನ್ ನಗಗಳು!

ಬಹು ಸುಲಭಕ್ರಯ!

ಈ ನಗಗಳು ವಜ್ರದ ನಗಗಳಂತೆ ಥಳಥಳಿಸುತ್ತೆ. ನೋಡುವರು ಆಶ್ಚರ್ಯಪಡುವರು. ಬೆಂಡೋಲೆ ಜೊತೆಗೆ 1—8—0. ಮೂಗಬಟ್ಟು 1 ಕ್ಕೆ 6 ಆಣೆ. ಬುಲಾಕು 1 ಕ್ಕೆ 12 ಆಣೆ. ಪಾಟ್ಲಾಕು ಕಡುಕು ಜೊತೆಗೆ 1—4—0, ಸವರ್ಣಕಾರದ ಉಂಗುರ 12 ಆಣೆ, ಪ್ರೆಜಂಟೇಷನ್ ವಾಚ್ 2—4—0. ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ,
ಮದರಾಸು.

ಸರಸವಾದ ನೂತನಪುಸ್ತಕಗಳು.

ವಿರಕ್ತಳಾದ ಲೌಲಿಟಿನಿ—ನವರಸಭರಿತವಾದ ನೂತನಕಾದಂಬರಿ ೦—೩—೩; ಶಾಹಸಿಲೆ—ಚಮತ್ಕಾರವಾದ ಕಥೆ ೦—೨—೩; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦—೧—೩ ಶ್ರೀಹರಿಕಥಾಧನಾ ೦—೧—೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ವಿ. ಶಾಸ್ತ್ರಿ, ಚಾಮರಾಜನಗರ.

20 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗಣೇಶಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
73 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು [illegible] ಶಕ್ತಿ, ಅಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೦ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೩—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

---

10 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು

ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೋಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೦—೪—೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲಬಾನ ಮಾಡಗಾಂವ್ಕರ, ಮುರ್ಕಂಡಿ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

೧೯೧೨ನೆಯ ಇಸವಿ ಜನವರಿ ತಾ॥ ೮ ರಿಂದ ೧೯೧೨ನೆಯ ಜನವರಿ ತಾ॥ ೧೪ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಪುಷ್ಯ ಬ॥ ಚೌತಿಯಿಂದ ಪುಷ್ಯ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಡಿ
8	¹ಸೋಮ	ಚ	9-20	ಮಖ	15-16	24
9	ಮಂಗ	ಪಂ	5 8	ಪುಬ್ಬ	12-44	25
10	ಬುಧ	ಷ	1-48	ಉತ್ತರ	57-32	26
11	ಗುರು	ಅ	58-2	ಹಸ್ತ	10-40	27
12	ಶುಕ್ರ	ನ	56-56	ಚಿತ್ತ	10-50	28
13	ಶನಿ	ದ	59-40	ಸ್ವಾತಿ	12-44	29
14	²ಭಾನು	ಏ	60-0	ವಿಶಾಖ	16-6	1

(1) [illegible]. (2) ಉತ್ತರಾಯಣ ಪುಣ್ಯಕಾಲ, ತ್ರಿಸ್ಪೃಶ್, ಉತ್ಸವ[illegible], ಶಿವಗಂಗೆಯಲ್ಲಿ ಗಂಗೋತ್ಪತ್ತಿ.

ಮೈಸೂರ್ : ಶ್ರೀ. ವಿ. [illegible] ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮೋದಿಗತರಾಜಮಂಡಲಹಿತೈಷಾ ಘನಪದಭಕ್ತಿಶಾಲಿನಾ [illegible] ಕೃಷ್ಣರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ[illegible]ಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರೀಯಂ ಸದಾ[illegible] ।

ಸಂಪುಟ ೨೫] ಮೈಸೂರ ಸ್ಟಾರ್ ಸೆ ೧೯೧೨ ನೆಯ ಇಸವಿ ಜನವರಿ ತಾರೀಖು ೨೨ ನೆಯ ಸೋಮವಾರ. [ಸಂಚಿಕೆ ೪

46 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರುಗಳಿಗೆ ೧—೦—೦ ೪—೦—೦; ೩—೦—೧; ೨—೮—೦; ೧—೪—೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧—೦—೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಜವಾಂಗ ಪೆಟ್ಟಿ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
ಪರವಾದಿಗಜಾಂಕುಶಕಾರಿಕೆ	೦—೮—೦
ಚಾರುಶೀಲೆ ಚರಿತ್ರೆ	೦—೫—೦
[illegible]	೦—೪—೦
ಸಟೀಕಕರ್ಣಾಟಕಶಬ್ದಮಂಜರಿ	೦—೪—೦
ಸಟೀಕಸಂ[illegible]	೦—೪—೦
ಸಟೀಕ ವಿವಾಹವಿಧಿ	೦—೩—೦
ವ್ರತಪಂಚಕ	೦—೨—೦
[illegible]	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

30 ಗುಣವಾಗದಿದ್ದರೆ ಹಣವಾಪಸು.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲಾ ಉತ್ತರಕನ್ನಡ.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

33

(೧) ಕಾಗದ—ನುಣುಪು, ಬಿಳಿದು ಸುಂದರವಾದ್ದು. (೨) [illegible]—ಸುಂದರವಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಿಂದ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಿತವಾದ್ದು. (೪) [illegible]—ಪ್ರತಿಪುಟಕ್ಕೂ [illegible] ಹಾಕಿದೆ. (೫) ವಿಷಯ—ಟಪಾಲು, ರೈಲ್ವೆ, ಕೋರ್ಟ್, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಅರು ನಮೂನೆ ಡೈರಿಗಳು

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮ ಗ್ರಂಥಗಳು.

23

ಬಸವರಾಜವಿಜಯಂ— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಿಗೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ನಂಗಳಿ. ಮೈಸೂರು.

19 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕವಟು:— ಇದರ ಸೇವನದಿಂದ ವ್ಯಾ[illegible]ಕನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೋಕ್ತಿಯು ಹೆಚ್ಚಾಗಿ ಸಂತತಿ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. [illegible] ವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣದಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧—೧೦—೦ ರೂ. ೨. ಬಾ, ೨—೧೨—೦ ರೂ. ೩. ಬಾ, ೩—೧೪—೦ ರೂ. ಒಮ್ಮೆಗೆ ೧ ಡಜನ್ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮಟ ತೇಗುಗಳು ಬರುವದಿಲ್ಲ. ೧ ಬಾ, ೪ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕ ವಗೈರೆ ಕಂಪನಿ”
ಧಾರವಾಡ ಮುಂಬಯಿ ಇಲಾಖ (ಇಂಡಿಯಾ)

ನೋಟೀಸ್.

7

ಇಂಡಿಯಾದೇಶದ ವ್ಯಾಪಾರದರ್ಪಣ.

ಎಂಬ ಪುಸ್ತಕವು ವ್ಯಾಪಾರಿಕರಿಗೆ ಇಂಡಿಯಾದೇಶದ ಮತ್ತು ದ್ವೀಪಾಂತರಗಳ ಅನೇಕ ವಿಷಯಗಳನ್ನು ಅತಿ ಸುಲಭರೀತಿಯಿಂದ ತಿಳಿಯುವಂತೆ ಪ್ರಿಂಟ್‌ಮಾಡಿಸಲ್ಪಡುತ್ತೆ. ಈ ತರಹಾ ಪುಸ್ತಕ ಈಗ್ಗೆ ಯಾವದೂ ಪ್ರಿಂಟಾಗಿಲ್ಲ. ಸದ್ಯಕ್ಕೆ ಅನೇಕ ಸ್ಥಳಗಳಲ್ಲಿನ ೫ ಸಹಸ್ರ ಮೇಲ್ಪಟ್ಟು ದೊಡ್ಡವ್ಯಾಪಾರೀಕರ ಹೆಸರುಗಳು, ಆಸ್ಥಳಗಳ ಉತ್ಪತ್ತಿ, ರಫ್ತು, ಆಮದರಫ್ತು, ಅಳತೆ, ತೂಕ ಮೊದಲಾದ ಅನೇಕ ವಿಷಯಗಳು ಸಂಗ್ರಹವಾಗಿರುತ್ತದೆ. ಕನ್ನಡದಲ್ಲಿ ಮೊದಲು ಪ್ರಚುರಪಡಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟದ್ದರಿಂದ ಕನ್ನಡದಲ್ಲಿ ಪ್ರಿಂಟ್‌ಮಾಡ್ಸಿನಂತರ ಇಂಗ್ಲೀಷಿನಲ್ಲಿಯೂ ರಚಿಸಲ್ಪಡುತ್ತೆ. ಈ ಪುಸ್ತಕದಲ್ಲಿ ೧ ಪೇಜು, ಅರ್ಧ ಪೇಜು, ಕಾಲ್‌ಪೇಜಿನಲ್ಲಿ ಈ ರೀತಿ ತಂತಮ್ಮ ಹೆಸರನ್ನು ವ್ಯಾಪಾರವಿಷಯವನ್ನು ವಿಶಾಲವಾಗಿ ನಮೂದಿಸಬೇಕೆಂಬುವವರು ಅದರ ಚಾರ್ಜಿನ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಪ್ರತಿಯೊಂದು ಪುಸ್ತಕದ ೧ ನೇ ಪೇಜಿನಲ್ಲಿ ಒಂದೊಂದು ಕೂಪನ್ ನಂಬರುಹಾಕಿಸಿ ಯಿಡಲ್ಪಡುತ್ತೆ. ೧೦೦೦ ಪ್ರತಿ ಖರ್ಚಾದಕೂಡಲೆ ೫೦ ರೂ. ನ್ನು ಲಾಟರಿಹಾಕಿ ೧, ೨, ೩ ನೆಯವರಿಗೆ ರೂ. ೨೫, ೧೫, ೧೦ ರಂತೆ ವಿನಿಯೋಗಿಸುತ್ತೆ, ಪುಸ್ತಕ ಕ್ರಯ ಅಡ್ವಾನ್ಸಾಗಿ ೧೯೧೨ ನೇ ಫೆಬ್ರವರಿ ತಾ॥ ೨೫ರ ಒಳಗೆ ಕಳುಹಿಸುವವರಿಗೆ ರೂ. ೨—೦—೦ ಪ್ರಿಂಟಾದನಂತರ ರೂ. ೩—೦—೦ ವರ್ತಕರಾದವರು ತಮ್ಮ ಸ್ಥಳದಲ್ಲಿನ ಉತ್ಪತ್ತಿ ರಫ್ತು ಆಮದರಫ್ತು ಅಳತೆ ತೂಕ ಮೊದಲಾದ ವಿಷಯಗಳನ್ನು ತಮ್ಮ ಹೆಸರನ್ನು ಪುಸ್ತಕದಲ್ಲಿ ನಮೂದಿಸಬೇಕೆಂಬುವ ಸಂಗತಿಯನ್ನೂ ತೀವ್ರವಾಗಿ ದಯವಿಟ್ಟು ಕಳುಹಿಸುವದು. ವ್ಯಾಪಾರಭಾಗದಲ್ಲಿ ಹೆಚ್ಚಿನ ಸಹಾಯತೆಯನ್ನು ನೂತನ ವಿಷಯಗಳನ್ನೂ ತಿಳಿಸುವವರಿಗೆ ಪೂರ್ಣ ಕೃತಜ್ಞನಾಗಿರುವೆ.

ಟಿ. ಪಿ. [illegible]
೫೫. [illegible]
ಬೆಂಗಳೂರು

ಸೌಗಂಧಿಕಾಪರಿಣಯ.

(೧೯೧೧ನೆಯ ನವೆಂಬರ್ ತಾ|| ೨೦ರ ಸಂಚಿಕೆಯಿಂದ ಮುಂದೆಸಾಗಿದುದು.)

ಒಂದು ಭಾಗದಲ್ಲಿ ವಜ್ರಪುರಿ ಎಂಬ ಪಟ್ಟಣವಿರುವುದು. ಆ ಪಟ್ಟಣಕ್ಕೆ ಜಲದಿಂದಲೂ, ಅಗ್ನಿಯಿಂದಲೂ, ಸರ್ಪಗಳಿಂದಲೂ, ಸಿಂಹಗಳಿಂದಲೂ, ಅನೇಕ ವಿಧಂಗಳಾದ ಮುಖಗಳುಳ್ಳ ರಾಕ್ಷಸರುಗಳಿಂದಲೂ ಐದುಸುತ್ತಿನ ಆವರಣಂ ಮಾಡಿ ಅದರೊಳಗೆ ವಜ್ರದ ಜಗತಿಗಳ ಮೇಲೆ ಪದ್ಮರಾಗದ ಕಂಭಗಳನ್ನಿಳ್ಳಿಸಿ, ಪಚ್ಚೆಯ ಬೋದಿಗೆಗಳಂ ಮಡಗಿ, ವೈಡೂರ್ಯದ ತೊಲೆಗಳನ್ನೆತ್ತಿ, ನೀಲದ ಗವಾಕ್ಷಗಳಂ ಮಡಗಿ, ಹವಳದ ಗೋಪಿಗಳಂ ಬಿಗಿದು ಮುತ್ತಿನ ನೇಲುಕಟ್ಟುಗಳಂ ಕಟ್ಟಿರುವ ಏಳು ಅಂತಸ್ತಿನ ಉಪ್ಪರಿಗೆಗಳನ್ನುಂಟುಮಾಡಿ, ಆ ಮನೆಯೊಳ್ ಮಹಾ ಮಾಯಾವಿಯಾದ ಜಂಘಾಮಾರುತನೆಂಬೊರ್ವ ರಾಕ್ಷಸನಿರುವನು. ಅವನು ತನ್ನ ಪರಿವಾರವಾಗಿರುವ ಹತ್ತಾರುಲಕ್ಷ ಘೋರರಾಕ್ಷಸರಿಂದಲೂ, ಮಂತ್ರಿಯಾದ ವಜ್ರದಂಷ್ಟ್ರನಿಂದಲೂ ಕೂಡಿ ಲೋಕದೊಳ್ ಸಕಲ ಜಂತುಗಳಂ ಸಂಹಾರವಂ ಮಾಡುತ್ತ ಋಷಿಗಳಂ ಮನಬಂದಂತೆ ಕಾಡಿಸುತ್ತಲಿರುವನು. ಅವನ ಮನೆಯಲ್ಲಿ ಒಬ್ಬ ರಾಜಪುತ್ರಿಯು ಇರುವಳು. ಅವಳ ಸೌಂದರ್ಯವಂ ನಾನು ಎಷ್ಟೆಂದು ಹೇಳಲಿ, ಚಂದ್ರನೋ, ಕಮಲವೋ, ಕನ್ನಡಿಯೋ! ಎಂಬ ಸಂದೇಹಕ್ಕೆ ಆಸ್ಪದವಾದ ಮೊಗದಿಂ, ಕನ್ನೆಯ್ದಿಲಿನ ಎಸಳುಗಳೋ, ಎಳೆಯ ಮೀನುಗಳೋ, ಮನ್ಮಥನ ಬಾಣಗಳೊ! ಎಂಬ ಸಂಶಯವಂ ಪುಟ್ಟಿಸುವ ಕಣ್ಣುಗಳಿಂ, ಕನಕಕಲಶಂಗಳೋ, ಬಿಲ್ವಫಲಂಗಳೋ, ತಾವರೆಯ ಮೊಗ್ಗುಗಳೋ! ಎಂದು ಭ್ರಮೆಗೊಳಿಸುವ ಕುಚಂಗಳಿಂದೊಪ್ಪಿ, ಸರ್ವಾಂಗಂಗಳಲ್ಲಿಯೂ ಲಾವಣ್ಯವಂ ಧರಿಸಿರುವಳಾದರೂ, ಆ ರಾಕ್ಷಸನ ಭಯದಿಂದ ಬೆದರಿ ಮಲಿನ ವಸ್ತ್ರವನ್ನುಟ್ಟು, ಆಭರಣವಂ ಬಿಟ್ಟು, ಕಾರ್ಮುಗಿಲೊಳಿರುವ ಎಳೆಯ ಮಿಂಚಿನಂತೆ ಮಹಾರಣ್ಯದೊಳಿರುವ ಮಲ್ಲಿಗೆಯ ಬಳ್ಳಿಯಂತೆ ಬಳಲಿದ ಶರೀರದಿಂದೊಪ್ಪಿರುವಳು. ಇಂತಿರ್ಪ ಕಾಂತೆಯಂ ಯಾವ ದೇಶದಿಂದ ಅಪಹರಿಸಿಕೊಂಡು ಬಂದಿರುವನೋ ತಿಳಿಯದು. ಇನ್ನೂ ಮನೆಗಳಲ್ಲಿ ಅವನ ಸ್ವಜಾತಿ ಕಾಂತೆಯರು ಬಹುಜನಗಳಿರುವರು. ಇಂತಲ್ಲದೇ ಸ್ವಾಮಿಯವರು ಅಪ್ಪಣೆಯಂಕೊಟ್ಟ ಪರಿಯಿಂದಲೂ, ನಾನಾ ದೇವಲೋಕದೊಳ್ ನೋಡಿರುವ ರೀತಿಯಿಂದಲೂ, ಸಲ್ಲಕ್ಷಣ ಸಂಪನ್ನವಾದ ಒಂದು ಅಶ್ವರತ್ನವು ಈ ಜಂಘಾಮಾರುತನಿಂ ಪಾಲಿತವಾಗಿ ಅವನ ಮಂದಿರದೊಳಿರುವದು. ಅವನು ಹತ್ತುದಿನ ಮನೆಯೊಳಿದ್ದರೆ ಇಪ್ಪತ್ತುದಿನ ಆಹಾರಕ್ಕೋಸುಗ ಮಂತ್ರಿ ಸಹಿತನಾಗಿ ದೇಶಸಂಚಾರಕ್ಕೆ ಹೋಗುವನು. ನಾನು ಈಪರಿ ವೃತ್ತಾಂತಂಗಳನೆಲ್ಲವಂ ತಿಳಿದು ಬಂದಿರುವೆನೆಂದು ಬಿನ್ನವಿಸಲು, ಸುಗಂಧರಾಜೇಂದ್ರನು ಆ ಮಾತಂ ಕೇಳಿ, ಧನಾರ್ಜನವಂ ಮಾಡಬೇಕೆಂದು ಮೂಲಿಕೆಯಂ ತೆಗೆದರೆ ಅಲ್ಲಿಯೇ ನಿಕ್ಷೇಪವು ಸಿಕ್ಕಿದಂತೆ ಪಣಕ್ಕೋಸುಗ ಅಶ್ವರತ್ನವಂ ಹುಡುಕಲು ಅಲ್ಲಿಯೇ ಸ್ತ್ರೀರತ್ನವು [illegible], ಇಂತಿರುವ ನಮ್ಮ ಪುಣ್ಯಕ್ಕೆ ಎಣೆಯಾವುದೆಂದು ತನ್ನೊಳ್ತಾನೇ ಆನಂದಭರಿತನಾಗಿ ಸುಮತಿಯ ಮುಖವನ್ನೋಡಿ ಎಲೈ ಮಂತ್ರಿಯೇ! ನಾನು ದೇವೀಕಟಾಕ್ಷದಿಂ ಪಡೆದಿರುವ ದಿವ್ಯಾಸ್ತ್ರಗಳಿಗೆ ಪರೀಕ್ಷಾಕಾಲ ಪೊದಗಿತೆಂದು ನುಡಿದು ಆಗಲೇ ವೀರಸೇನನಂ ಕರೆಯಿಸಿ ಸೇನೆಯಂ ರಕ್ಷಿಸುವುದರಲ್ಲಿ ಜಾಗರೂಕನಾಗಿರು, ನಾನು ಕಾರ್ಯಗೌರವದಿಂಪೋಗಿ ಶೀಘ್ರದಿಂ ಬರುವೆನೆಂದು ಅಪ್ಪಣೆಯಂಕೊಟ್ಟು, ಸುಮತಿಸಹಗೂಡಿ ಯಕ್ಷಾಧಿಪನಾದ ಛಾಯಾಗುಪ್ತನ ಭುಜಸ್ಕಂದವನ್ನೇರಿ ಇಳಾವೃತಖಂಡವಂ ಕುರಿತು ತೆರಳಿ ವಿಲಾಸದಿಂ ಅಂತರಿಕ್ಷದೊಳ್ಬರುತ ಮಾರ್ಗದೊಳ್ ಅಲ್ಲಲ್ಲಿರುವ ರಮಣೀಯಂಗಳಾದ ವನಂಗಳಂ ನಾನಾಜಾತಿ ಮೃಗಂಗಳಂ ನೋಡುತ, ಆಯಾಯ ಭೂಮಿಗಳಲ್ಲಿರುವ ವಿಚಿತ್ರ ವಸ್ತುಗಳಂ ಸುಮತಿಗೆ ತೋರಿ ವರ್ಣಿಸುತ ಇಳಾವೃತಖಂಡ ಸಮೀಪ ಪ್ರದೇಶವಂ ಸೇರಿ ಅಲ್ಲಿರುವ ಸುವರ್ಣ ಕದಳೀ ವನಾಂತರದೊಳ್ ಇಳಿದು, ಅಲ್ಲಿ ರಮಣೀಯವಾದ ಚಂದ್ರಸರೋವರದೊಳ್ ಹಸ್ತಪಾದಗಳಂ ತೊಳೆದು ಮುಖಮಜ್ಜನವಂಗೈದು ತೃಷ್ಣಾಪರಿಹಾರಾರ್ಥವಾಗಿ ಅಮೃತದಂತಿರುವ ಜಲಪಾನವಂ ಗೈದು, ಆ ವನದೊಳಿರುವ ತರುಗಳ ಸಾಲುಗಳ ಮಧ್ಯದೊಳ್ ಮೆಲ್ಲನೆ ಸಂಚರಿಸುತ ಛಾಯಾಗುಪ್ತನಂ ಕರೆದು ಎಲೈ ಯಕ್ಷನೇ! ನೀನು ಬೇಗನೆ ಪೋಗಿ ಇದಿರಾಗಿ ಕಾಣುವ ವಜ್ರಪುರಿಯೊಳ್ ಮುಖ್ಯನಾದ ರಾಕ್ಷಸನು ಇರುವನೋ ಸಂಚಾರಾರ್ಥವಾಗಿ ಪೋಗಿರುವನೋ ನೋಡಿಬಾರೆಂದಪ್ಪಣೆಯಂ ಕೊಟ್ಟು, ಹಾಗೇ ಮಂತ್ರಿಯಂ ಕುರಿತು ಎಲೈ ಸುಮತಿಯೆ, ನಾವು ಕಳಿಂಗರಾಜ ಪುತ್ರಿಯ ಮೇಲಣ ಪ್ರೇಮಾತಿಶಯಕ್ಕೋಸುಗ ಈ ಪಣವಂ ತಂದುಕೊಡುವೆನೆಂದು ಸಭಾಮಧ್ಯದೊಳ್ ಪ್ರತಿಜ್ಞೆಯಂ ಮಾಡಿ ಬಂದೆವು, ಈಗ ಪರ್ಯಾಲೋಚನೆಯಂ ಮಾಡುವಲ್ಲಿ ಈ ಕಾರ್ಯವು ಅಮಾನುಷಕಾರ್ಯವಾಗಿ ತೋರುತಲಿದೆ. ಇಂತಿರುವಲ್ಲಿ ಮನುಷ್ಯಜನ್ಮವಂ ತಾಳಿರುವ ನಮ್ಮಿಂದ ಹೇಗೆ ಸಾಧ್ಯವಾಗುವುದೆಂದು ನುಡಿದು ಖಿನ್ನನಾಗಿರಲು, ಅದಂನೋಡಿ ಸುಮತಿಯು ಕ್ಷಣಮಾತ್ರ ಆಲೋಚನೆಯಂಗೈದು ಎಲೈ ಭೂಮೀಂದ್ರನೇ! ಸಕಲ ಭುವನಭಾರವಂ ಪೊತ್ತಿರುವ ಆದಿಶೇಷನು ತನ್ನ ಶಿರೋರತ್ನಭಾರದಿಂ ಆಯಾಸಗೊಂಡಂತೆ ಸ್ವಾಮಿಯವರು ಅಪ್ಪಣೆಯಂ ಕೊಡುವುದಾಗಿ ತೋರುತ್ತದೆ. ಶ್ರೀ ದೇವೀಪ್ರಸಾದಪಾತ್ರನಾಗಿ ಸಕಲ ದಿವ್ಯಾಸ್ತ್ರಂಗಳಂ ಸಂಪಾದಿಸಿ ಪ್ರೇಮಾತಿಶಯವಂ ಪಡೆದ ನಿನಗೆ ಅಸಾಧ್ಯವಾದ ಕಾರ್ಯವಾವುದಿರುವುದು? ಆದರೂ ನಿನ್ನಲ್ಲಿರುವ ಶೌರ್ಯ ಸಾಮರ್ಥ್ಯವೂ, ಪ್ರಭಾವವೂ ಕೂಡ ನಿನಗೆ ಕಾಣುವುದಿಲ್ಲ. ಬೂದಿ ಮುಚ್ಚಿದ ಕೆಂಡದಂತೆ ಗೂಢವಾಗಿದ್ದು ಕಾರ್ಯಕಾಲದೊಳ್ ತಾನೇ ವ್ಯಕ್ತವಾಗುವುದು. ನಿನಗೆ ಸಕಲ ಇಷ್ಟವು ಕರಗತವಾಗಿ ಇಂದ್ರನು ಶಚೀದೇವಿಯ ಪಾಣಿಗ್ರಹಣವಂ ಮಾಡಿದಂತೆ, ನೀನು ಸಂತೋಷದಿಂ ಸೌಗಂಧಿಕಾದೇವಿಯ ಪಾಣಿಗ್ರಹಣವಂ ಮಾಡಿ ಭೂಮೀಂದ್ರನೆಂದು ಲೋಕದೊಳ್ ಪ್ರಖ್ಯಾತಿಯಂ ಪಡೆಯುವನಾಗುವೆ ಎಂದು ಎನ್ನ ಬುದ್ಧಿಗೆ ನಿಶ್ಚಯವಾಗಿ ತೋರುತಲಿದೆ, ಇಂತಲ್ಲದೆ ನನ್ನ ಬಲದಭುಜವು ಚಲಿಸುತಲಿದೆ, ದಕ್ಷಿಣ ನಯನದ ರೆಪ್ಪೆಯು ಹಾರುತಲಿದೆ, ಇದರ ಫಲಂಗಳು ಶೀಘ್ರದಿಂ ಕೈಗೂಡುವುದೆಂದು ಅರಿಕೆಮಾಡಲು, ಸುಗಂಧರಾಜನು ಮಿತ್ರನಾದ ಸುಮತಿಯ ವಾಕ್ಯಚಾತುರ್ಯದಿಂ ಅತ್ಯಂತ ಸಂತೋಷಭರಿತನಾಗಿರಲಾಗ, ಛಾಯಾಗುಪ್ತನು ಬಂದು ಪ್ರಣಾಮವಂ ಮಾಡಿ ಎಲೈ ರಾಜೇಂದ್ರನಾದ ಸುಗಂಧರಾಜನೇ! ವಜ್ರಪುರಿಯೊಳ್ ಮುಖ್ಯನಾದ ಜಂಘಾಮಾರುತನು ಈ ದಿನ ಆಹಾರಾರ್ಥವಾಗಿ ಸಂಚಾರಕ್ಕೆ ಪೋಗಿರುವನು. ಇನ್ನೂ ಇಪ್ಪತ್ತು ದಿವಸದವರೆಗೂ ಬರುವುದಿಲ್ಲವೆಂದು ಅಲ್ಲಿ ಕಾವಲಾಗಿರುವ ರಾಕ್ಷಸರ ತಂಡಂಗಳು ಕಂಡಕಂಡ ಬಳಿಗಳಲ್ಲಿ ಗುಂಪುಗುಂಪಾಗಿ ಹೇಳುತ್ತಲಿರುವರು. ಆ ಮಾತಂ ಕೇಳಿ ನಂಬುಗೆ ಸಾಲದೇ ಆ ರಾಕ್ಷಸನ ಮಂದಿರದೊಳ್ ಉದ್ಯಾನವನಂಗಳಲ್ಲಿಯೂ, ಕ್ರೀಡಾಸರೋವರಂಗಳಲ್ಲಿಯೂ, ಪಾಕಶಾಲೆ ಮೊದಲಾದ ಸಕಲ ಸ್ಥಲಂಗಳಲ್ಲಿಯೂ ಪೋಗಿ ನೋಡಿ, ಆ ಕಾವಲುಗಾರರ ಮಾತುಗಳು ನಿಶ್ಚಯವೆಂದೆಣಿಸಿ ಬಿನ್ನವಿಸಲು ಬಂದೆನೆಂದು ನುಡಿಯಲು, ಸುಗಂಧರಾಜೇಂದ್ರನು ಯಕ್ಷಾಧಿಪನ ಮಾತಂ ಲಾಲಿಸಿ, ಮಂತ್ರಿಯ ಮೊಗವಂನೋಡಲು, ಸುಮತಿಯು ಎಲೈ ರಾಜಮಾರ್ತಾಂಡನೆ! ಈಗ ರಾಕ್ಷಸನು ಇಲ್ಲದೇ ಇರುವುದು ಬಹಳ ಉತ್ತಮವು. ಏಕೆಂದರೆ, ರಾಕ್ಷಸರು ಮಹಾ ಕಪಟರು, ನಮ್ಮ ಮೇಲಣ ದ್ವೇಷಕ್ಕೆ ಆ ತರುಣಿಯಂ ಸಂಹರಿಸುವನೋ, ಇಲ್ಲದಿರೆ ಅಶ್ವವಂ ಎಲ್ಲಾದರೂ ಗುಹಾಂತರಗಳಲ್ಲಿ ಇರಿಸುವನೋ, ಏನುಮಾಡುವನೋ? ತಿಳಿಯಕೂಡದು. ಆದರೂ ಚಿಂತೆಯಿಲ್ಲ, ಹುಡುಕುವಾ ಎಂದರೆ ಬಹಳ ಸಾವಕಾಶವಾಗುವುದು.

ಸಶೇಷ.

ಒಂದು ಮದವೇರಿದ ಆನೆಯು.

ವಲ್ಲೂರಿನ ದೊಡ್ಡ ಭೂಸ್ವಾಮಿಗಳು (ಜಮೀನ್ದಾರರು) ಕಳೆದ ಡಿಸೆಂಬರ್ ತಿಂಗಳಲ್ಲಿ ತಮ್ಮ ಪರಿವಾರದ ಜನರು ಮತ್ತೂ ಕೆಲ ಆನೆಗಳು ಇವುಗಳೊಡನೆ ವಸಂತವಾಡ ಎಂಬಲ್ಲಿಗೆ ಬಂದಿರುವಾಗ್ಗೆ, ಅವರಾನೆಗಳಲ್ಲೊಂದರ ಮಾವುತನನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿ ಹೊಸಬನನ್ನು ನಿಯಮಿಸಿದ್ದರು. ಇವನು ಕಳೆದ ಡಿಸೆಂಬರ್ ತಾ|| ೨೭ ರಲ್ಲಿ ಆ ಆನೆಯನ್ನು ಕೆರೆಗೆ ತೆಗೆದುಕೊಂಡು ಹೋಗಿ ನೀರನ್ನು ಕುಡಿಸಿ ಅದರ ಮೇಲುಗಡೆ ತಾನು ಕುಳಿತುಕೊಂಡು, ಮತ್ತೊಬ್ಬನು ಅದರ ಮುಂದೆ ನಡೆಯುತ ಹಿಂತಿರುಗಿ ಬರುತ್ತಿರುವಾಗ್ಗೆ, ಆನೆಯು ಇದ್ದಕ್ಕಿದ್ದಹಾಗೆ ರೇಗಿ ತನ್ನ ಮುಂದೆ ನಡೆಯುತ್ತಿದ್ದವನನ್ನು ತನ್ನ ಸೊಂಡಿಲಿಂದ ಸುತ್ತಿ ಹಿಡಿದುಕೊಂಡು ದೂರ ಬಿಸಾಡಿತು. ಅವನು ಹಾಗೆಯೇ ಚೇತರಿಸಿಕೊಂಡು ಓಡಿಹೋಗಿ ಒಂದು ಗುಡಿಸಲಿನೊಳಗೆ ನುಗ್ಗಿ ಅಲ್ಲಿಂದ ಎಲ್ಲಿಯೋ ಮಾಯವಾದನು. ಆನೆಯು ಅವನು ಗುಡಿಸಲಿನೊಳಗೆ ಹೋದುದನ್ನು ಕಂಡು, ಆ ಗುಡಿಸಲನ್ನು ತನ್ನ ಸೊಂಡಿಲಿಂದ ಕಿತ್ತೊಗೆದು ಅವನನ್ನು ಎಷ್ಟು ಹುಡುಕಿದಾಗ್ಯೂ ಅವನು ಕಣ್ಣಿಗೆ ಬೀಳದೆ ಹೋದುದರ ಮೇಲೆ ಅದು ಮತ್ತಿಷ್ಟು ರೇಗಿ ಕುಣಿದಾಡತೊಡಗಿತು. ಈ ಸಂದರ್ಭವನ್ನು ಭೂಸ್ವಾಮಿಯು ತಿಳಿದು ಒಬ್ಬ ಮಾವುತನನ್ನು ಆಯುಧಸಮೇತ ಕರೆದುಕೊಂಡು ಬಂದು ಅದನ್ನು ಹಿಡಿಯಲು ಸಾಹಸಪಡುತ್ತಿರುವಾಗ್ಗೆ, ನೆರೆಯ ಗುಡಿಸಲಿನಲ್ಲಿ ವಾಸವಾಗಿದ್ದ ಒಬ್ಬ ವೃದ್ಧಸ್ತ್ರೀಯು ಗದ್ದಲವನ್ನು ಕೇಳಿ ಭಯಪಟ್ಟು ಹೊರಗೆ ಬಂದಳು. ಆನೆಯು ಅಕೆಯನ್ನು ಸೊಂಡಿಲಿನಿಂದ ಹಿಡಿದು ಮೇಲಕ್ಕೆತ್ತಿ ನೆಲದಮೇಲೆ ಬಿಸಾಡಿತು. ಅವಳು ಈ ಪೆಟ್ಟಿಗೆ ಸ್ಮೃತಿತಪ್ಪಿ ಬಿದ್ದಳು. ಅದುವರೆಗೂ ಮಾವುತನು ಆನೆಯಮೇಲೆ ನಿರಾಧಾರದಿಂದ ಕುಳಿತುಕೊಂಡಿದ್ದನು. ಆದರೆ ಆನೆಯು ತನ್ನ ಮುಂಗಾಲುಗಳನ್ನು ಮೇಲಕ್ಕೆತ್ತಿ ಹಿಂಗಾಲುಗಳ ಮೇಲೆ ನಿಂತುಕೊಳ್ಳಲು ಅದರಮೇಲೆ ಕುಳಿತಿದ್ದ ಮಾವುತನು ಭದ್ರವಾಗಿ ಕುಳಿತುಕೊಂಡಿರುವುದರ ಬದಲು ಗ್ರಹಚಾರವಶಾತ್ ತನ್ನ ಕಾಲನ್ನು ಅದರ ಕೊಂಬಿನಮೇಲೆ ಮಡಗಿದನು. ಆನೆಯು ಆ ಕಾಲನ್ನು ಸೊಂಡಿಲಿಂದ ಹಿಡಿದು ಅವನನ್ನು ಕೆಳಕ್ಕೆಳೆದುಕೊಂಡು ನೆಲದಮೇಲೆ ಹಾಕಿ ತುಳಿದು ಕೊಂಬುಗಳಿಂದ ತಿವಿದು ರಕ್ತವನ್ನು ಬರಿಸಿ ಕೊಂದುಬಿಟ್ಟಿತು. ಇದಕ್ಕೆ ಮೊದಲು ನೆಲದಮೇಲೆ ಅಪ್ಪಳಿಸಿ ಬಿಟ್ಟಿದ್ದ ಮೂರ್ಛೆಹೋಗಿದ್ದ ವೃದ್ಧಸ್ತ್ರೀಯು ಸ್ಮೃತಿಯನ್ನು ಹೊಂದಿ ಚೇತರಿಸಿಕೊಂಡೆದ್ದು ಕೂಗಿಕೊಳ್ಳುತ್ತಾ ಹೋಗುತ್ತಿರುವಾಗ್ಗೆ ಆನೆಯು ಅವಳ ಕೂಗನವನ್ನು ಕೇಳಿ ಅವಳ ಸಮೀಪಕ್ಕೆ ಓಡಿಬಂದು ಅವಳನ್ನು ಸೊಂಡಿಲಿನಿಂದೆತ್ತಿಕೊಂಡು ಬೆಳೆದ ಹತ್ತಿಗಳಲ್ಲಿ ಎಳೆದುಕೊಂಡು ಹೋಗಿ ಆ ಮರಕ್ಕೆ ಬಾಚಿ ಕೊಂಬಿನಿಂದ ತಿವಿದು ಸಾಯಿಸಿಬಿಟ್ಟು ಅಲ್ಲಿಂದ ಹೊರಟು ಸಮೀಪದ ತೋಟದಲ್ಲಿದ್ದ ಇಬ್ಬರನ್ನು ಕೊಂದುಬಿಟ್ಟಿತು. ಆ ಗ್ರಾಮಸ್ತರು ಅದರ ಹಾವಳಿಯನ್ನು ಕೇಳಿ ಬಹು ಭಯಗ್ರಸ್ತರಾಗಿ ಮನೆಗಳ ಬಾಗಿಲುಗಳನ್ನು ಭದ್ರಪಡಿಸಿ ಮನೆಗಳ ಮೇಲೆ ಹತ್ತಿ ನಿಂತುಕೊಂಡರು. ಅಷ್ಟು ಹೊತ್ತಿಗೆ ಸಾಯಂಕಾಲ ೭ ಗಂಟೆಯಾಗಿದ್ದಿತು. ಆನೆಯು ಅಲ್ಲಿಂದ ಹೊರಟು ಮಾರ್ಗದಲ್ಲಿ ಒಂದು ಹುಲ್ಲಿನ ಮೆದೆಯನ್ನು ನೋಡಿ ಅದರಮೇಲೆ ಬಿದ್ದು ಅದನ್ನು ಚಲ್ಲಾಡತೊಡಗಿತು. ಈ ಮೆದೆಯಿಂದ ಕೊಂಚ ದೂರದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದ ರೈತರು ಯಾರೋ ಕಳ್ಳರು ಹುಲ್ಲನ್ನು ಇರಿಯುತ್ತಿದ್ದಾರೆಂದೂಹಿಸಿ ೭-೮ ಜನರು ಗುಂಪುಗೂಡಿಕೊಂಡು ಬಂದು ಎಷ್ಟು ಹುಡುಕಿದಾಗ್ಯೂ ಯಾವ ಮನುಷ್ಯನೂ ಸಿಕ್ಕಲಿಲ್ಲವು. ಆದರೆ ಕಪ್ಪಗೆ ಅದ್ಭುತಾಕಾರವಾದುದೊಂದು ಅವರ ದೃಷ್ಟಿಗೆ ಬಿದ್ದಿತು. ಅವರು ಕತ್ತಲೆಯಲ್ಲಿ ಅದನ್ನು ಆನೆಯೆಂದು ತಿಳಿಯದೆ ಯಾವುದೋ ಒಂದು ಭೂತವು ಬಂದಿರುತ್ತದೆಂದು ಭಾವಿಸಿಕೊಂಡು ಕೂಗಿಕೊಂಡರು. ಆ ಗುಡಿಸಲುಗಳಲ್ಲಿ ವಾಸವಾಗಿದ್ದ ಪ್ರಾಯಶಃ ೫೦ ಜನರು ದಿಗಿಲುಬಿದ್ದು ದಿಕ್ಕಾಪಾಲಾಗೋಡಲಾರಂಭಿಸಿದರು. ಭೂತವೆಂದು ಕೂಗಿಕೊಂಡು ಬಂದವರನ್ನು ಆನೆಯು ಹಿಂಬಾಲಿಸಿ ಅವರ ಗುಡಿಸಲುಗಳನ್ನು ಕಿತ್ತುಹಾಕತೊಡಗಿತು. ಒಂದು ಗುಡಿಸಲಿನೊಳಗಿದ್ದ ಒಬ್ಬ ತಾಯಿಯು ತನ್ನ ಎರಡು ಮಕ್ಕಳ ಕೂಡ ಹೊರಗೆ ಬಂದಳು. ಅವಳ ಮಕ್ಕಳು ಹೇಗೋ ತಪ್ಪಿಸಿಕೊಂಡರು. ಆದರೆ ಅಕೆಯು ಮಾತ್ರ ಆನೆಯ ಕೈಗೆ ಸಿಕ್ಕಿ ಹತಳಾದಳು. ಆನೆಯು ಅಲ್ಲಿಂದ ಮುಂದೆ ಹೊರಟು ಪೆದನಾಡು ಗ್ರಾಮವನ್ನು ಪ್ರವೇಶಿಸಿ, ಮನೆಗಳ ಬಾಗಿಲುಗಳನ್ನು ಭದ್ರಪಡಿಸಿದ್ದುದರಿಂದ ಅವುಗಳ ಗೋಡೆಗಳನ್ನೆಲ್ಲ ನೂಕಿ ಕೆಡವಿಬಿಟ್ಟು ಅನೇಕ ಅನರ್ಥಗಳನ್ನು ಮಾಡುತ ಒಂದು ಮನೆಯಲ್ಲಿ ವಾಸವಾಗಿದ್ದ ಗಂಡಹೆಂಡತಿಯರನ್ನು ಅವರ ಮಕ್ಕಳ ಸಮೇತ ಕೊಂದುಬಿಟ್ಟಿತು. ಅಲ್ಲಿಂದ ಉಪ್ಪರಗೂಡುಗ್ರಾಮಕ್ಕೆ ಹೋಗಿ ಒಬ್ಬ ಮನುಷ್ಯನನ್ನೂ, ಒಂದು ಕೋಣವನ್ನೂ ಕೊಂದುಹಾಕಿತು. ಮತ್ತೊಬ್ಬ ಗರ್ಭಿಣಿಸ್ತ್ರೀಯ ಹೊಟ್ಟೆಯನ್ನು ತುಳಿದುದರಿಂದ ಗರ್ಭದಲ್ಲಿದ್ದ ಮಗುವು ಛಿನ್ನಭಿನ್ನವಾಗಿ ಅಕೆಯು ಉತ್ಕ್ರಮಣಾವಸ್ಥೆಯಲ್ಲಿರುವಳು. ಇನ್ನೊಂದು ಮಗುವನ್ನೂ ಇದೇ ರೀತಿಯಾಗಿ ಕೊಂದುಬಿಟ್ಟಿತು. ತಾ|| ೨೮ ರ ಬೆಳಿಗ್ಗೆ ಪೆದನಾಡು ಗ್ರಾಮದವರು ವಸಂತವಾಡ ಗ್ರಾಮಕ್ಕೆ ಹೋಗಿ ಆ ಆನೆಯ ಯಜಮಾನರಾದ ಭೂಸ್ವಾಮಿಗಳಿಗೆ ನಡೆದ ಅನಾಹುತವನ್ನು ಹೇಳಲು, ಅವರು ಎರಡು ದಿನಗಳಿಂದಲೂ ಅದನ್ನು ಹಿಡಿಯಲೆಷ್ಟು ಸಾಹಸಪಟ್ಟಾಗ್ಯೂ ಅದು ದಕ್ಕದೆ ತಮ್ಮ ಪ್ರಯತ್ನವೆಲ್ಲ ನಿರರ್ಥಕವಾಯಿತೆಂದು ಹೇಳಿದರು. ಅಷ್ಟರಲ್ಲಿ ಗ್ರಾಮಾಧಿಕಾರಿಯು ಈ ವರ್ತಮಾನವನ್ನು ಏಲೂರು ಪೋಲೀಸಿನವರಿಗೆ ತಿಳುಹಲು, ಡೆಪ್ಯುಟಿ ಸೂಪರಿಂಟೆಂಡೆಂಟರು ಕೆಲ ಪೋಲೀಸರನ್ನು ಆಯುಧಸಮೇತ ಕರೆದುಕೊಂಡು ಆನೆಯಿದ್ದೆಡೆಗೆ ಹೋದರು. ಪೋಲೀಸರು ಆನೆಯ ಕಾಲಿನಮೇಲೆ ೩೦ ಆವೃತ್ತಿ ಗುಂಡನ್ನು ಹೊಡೆದರೂ ಆನೆಯು ದಕ್ಕದೆ ಅವರಲ್ಲಿ ಕೆಲರನ್ನು ತನ್ನ ಸೊಂಡಿಲಿನಿಂದ ಮೇಲಕ್ಕೆತ್ತಿ ಬಿಸಾಡುತ್ತಿದ್ದಿತು. ಹೀಗೆ ಸಾಯಂಕಾಲದ ವರೆಗೂ ಹೋರಾಟವು ನಡೆಯಲು ಅದನ್ನು ಗುಂಡಿನಿಂದ ಹೊಡೆದು ಸಾಯಿಸುವಂತೆ ಪೋಲೀಸು ಸೂಪರಿಂಟೆಂಡೆಂಟು ಆಜ್ಞೆಯನ್ನಿತ್ತನು. ಪೋಲೀಸರು ಅದೇಪ್ರಕಾರ ಗುಂಡನ್ನು ಹೊಡೆಯುತ್ತಿದ್ದರೂ ಆನೆಯು ಅವರ ಗುಂಡಿನೇಟಿಗೆ ಸಿಕ್ಕದೆ ತಪ್ಪಿಸಿಕೊಂಡು ತಿರುಗುತ್ತಿದ್ದಿತು. ತಾ|| ೨೯ ರ ಬೆಳಿಗ್ಗೆ ಆ ಆನೆಯ ಪೂರ್ವದ ಮಾವುತನು ಬಂದು ಅದರ ಮುಂದೆ ನಿಂತುಕೊಳ್ಳಲು, ಅನೇಕ ಪ್ರಾಣಹಾನಿಗಳನ್ನು ಮಾಡಿ ಪೋಲೀಸರು ಸುರಿಸಿದ ಗುಂಡಿನ ಮಳೆಗೂ ಜಗ್ಗದೆ ಹೋದ ಆನೆಯು ಅವನ ಸಮೀಪಕ್ಕೆ ಬಂದು, ತನ್ನ ಸೊಂಡಿಲಿನಿಂದ ಅವನನ್ನು ತಬ್ಬಿಕೊಂಡು ಕಣ್ಣೀರನ್ನು ಸುರಿಸುತ್ತ ತನ್ನ ಮೈಗೆ ಬಿದ್ದಿದ್ದ ಪೆಟ್ಟುಗಳನ್ನೆಲ್ಲ ಅವನಿಗೆ ತೋರಿಸಿ ಅವನ ಹತ್ತಿರ ಸುಮ್ಮನೆ ನಿಂತುಕೊಂಡಿತು. ಎಂದು ಕೃಷ್ಣಾಪತ್ರಿಕೆಗೊಬ್ಬರು ಬರೆದಿರುತ್ತಾರೆ.

ಶ್ರೀ ರಾಜ ಚಕ್ರವರ್ತಿ ದಂಪತಿಗಳು ಕಲಕತ್ತಾದಲ್ಲಿ ಗವರ್ನಮೆಂಟ್ ಹೌಸಿಗೆ ದಯಮಾಡಿಸುತ್ತಿರುವ ಸಮಯದಲ್ಲಿ, ಪ್ರೇಕ್ಷಕರ ಗುಂಪಿನಿಂದ ನುಗ್ಗಿ ಬಂದು ಶ್ರೀಯವರಿಗೆ ಅರ್ಜಿಯನ್ನು ಕೊಡಲುಜ್ಜುಗಿಸಿದ ೧೧ ಜನರು ಸೆರೆಯಲ್ಲಿಡಲ್ಪಟ್ಟಿದ್ದು ಚಕ್ರವರ್ತಿದಂಪತಿಗಳು ಕಲಕತ್ತಾ ಪಟ್ಟಣವನ್ನು ಬಿಟ್ಟು ತೆರಳಿದಮೇಲೆ ಬಿಡಲ್ಪಟ್ಟರು. ಮತ್ತೂ ಕಲಕತ್ತಾದಲ್ಲಿ ಶ್ರೀ ಚಕ್ರವರ್ತಿದಂಪತಿಗಳ ದರ್ಶನವನ್ನು [illegible]ಲು ಕಿಕ್ಕಿರಿದು ನಿಂತಿದ್ದ ಪ್ರೇಕ್ಷಕ ಜನರನ್ನು [illegible]ರು ಲಾಠಿ[illegible]ಗಳನ್ನು [illegible] ಗೆಂಡ ನಿವೃತ್ತಿಗೊಳಿಸಿದರು.

ಶ್ರೀರಾಜ ಚಕ್ರವರ್ತಿದಂಪತಿಗಳ ಭರತಖಂಡದ ಪ್ರವಾಸವು.

ಚಕ್ರವರ್ತಿಯವರು ಜಯಪುರಕ್ಕೆ ದಯಮಾಡಿದ್ದ ವೇಳೆಯಲ್ಲಿ ನಾಗುಬಾಡಿಯಲ್ಲಿ ಕುಳಿತಿದ್ದರು:— ಶೈಣಗ್ರಾಹಿಕಲ್ಲಿನಿಂದ ನಿರ್ಮಿಸಲ್ಪಟ್ಟ ಅದ್ಭುತವಾಗಿರುವ ಪುರಾತನ ಪಟ್ಟಣವನ್ನು ಪರಾಮರ್ಶಿಸಿ ಪರವಶ್ಯರ್ಯಪಟ್ಟರು ಮಹಾರಾಜ್ಞಿಯವರು ಪಟ್ಟಣವನ್ನು ಪುಟ್ಟಪುಟ್ಟ ಸುತ್ತಿ ಎಲ್ಲಾ ವಿಷಯವನ್ನು ಚೆನ್ನಾಗಿ ಕೇಳಿ ತಿಳಿದುಕೊಂಡು ಆಗ ಹೊಂದಿದ ಆನಂದಾತಿಶಯವನ್ನು ವರ್ಣಿಸಲರಿದು. ಆ ಪಟ್ಟಣದಲ್ಲಿ ಬಂಡಿಯು ತಿರುಗಾಡಲಾಗದ ಸ್ಥಳಕ್ಕೆ ಗಾಲಿಗಳನ್ನು ಹಾಕಿದ್ದ ಕುರ್ಚಿಯನ್ನು ಸಿದ್ಧಪಡಿಸಿದ್ದಾಗ್ಯೂ ಮಹಾರಾಜ್ಞಿಯವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪಾದಚಾರಿಗಳಾಗಿ ೨ ಗಂಟೆಯ ಕಾಲದವರೆಗೆ ಬಹು ಉತ್ಸಾಹದಿಂದ ವಿಹರಿಸಿಕೊಂಡಿದ್ದರು. ಜಯಪುರದ ಪ್ರವಾಸದಲ್ಲಿ ಪರಾಮರ್ಶಿಸಿದ ಶೈಣಗ್ರಾಹಿ ಶಿಲೆಯಿಂದ ಕಟ್ಟಲ್ಪಟ್ಟಿರುವ ಕಟ್ಟಡವಾಗಲಿ, ಪಟ್ಟಣದ ರತ್ನಪಡಿ ವರ್ತಕರು ತೋರಿಸಿದ ನವರತ್ನಖಚಿತವಾದ ಆಭರಣಗಳ ವೈಭವವಾಗಲಿ ಅಷ್ಟು ವಿಶೇಷವಾದುವಲ್ಲವು. ಆದರೆ ಎತ್ತಿನಬಂಡಿಯನ್ನು ಹತ್ತಬೇಕೆಂಬ ರಾಜ್ಞಿಯವರ ಕುತೂಹಲವು ಬಹು ವಿಶೇಷವಾದುದು. ಜಿತ್ವಾರ ಸಂಸ್ಥಾನದವರು ಶ್ರೀ ಮಹಾರಾಣಿಯವರ ಈ ವಿಧವಾದ ಮನೋಗತವನ್ನರಿತು, ಜಿತ್ವಾರಾ ಪುರಾತನನಗರಕ್ಕೆ ಚಿತ್ತೈಸಿ, ಅದನ್ನು ಪರಾಮರ್ಶಿಸಿಕೊಂಡು ಬರುವುದಕ್ಕಾಗಿ ಒಂದುಜತೆ ಎತ್ತಿನಬಂಡಿಯನ್ನು ಸಿದ್ಧಗೊಳಿಸಿ, ಅದರಲ್ಲಿ ಶ್ರೀಯವರು ಕುಳಿತುಕೊಳ್ಳಲು ತಕ್ಕ ಏರ್ಪಾಟನ್ನು ಮಾಡುವುದರಲ್ಲಿ ಕಾಲಹರಣವಾಗುತ್ತಿರುವುದನ್ನು ಚಕ್ರವರ್ತಿನಿಯವರು ಕಂಡು, ಬಂಡಿಯನ್ನು ಹತ್ತುವ ಸಮಯದಲ್ಲಿ ಎತ್ತುಗಳು ಬೆದರಲು, ಬಂಡಿಯನ್ನು ಹತ್ತಬಾರದೆಂದು ಎಲ್ಲರೂ ಎಷ್ಟು ಪ್ರಾರ್ಥಿಸಿಕೊಂಡಾಗ್ಯೂ ಮಹಾರಾಣಿಯವರು ಕೇಳದೆ ಕಡೆಗೂ ಬಂಡಿಯನ್ನು ಹತ್ತಿ ಅದರ ಅನುಭವವನ್ನು ಮಾಡಿಕೊಂಡು, ಎತ್ತಿನ ಬಂಡಿಯನ್ನೇರಬೇಕೆಂದು ಮಾಡಿದ ತಮ್ಮ ಸಂಕಲ್ಪವನ್ನು ಕಡೆಗೂ ಸಾಧಿಸಿದರು.

ಚಕ್ರವರ್ತಿಯವರ ಭಾಷಣವು.

ಈ ತಿಂಗಳು ತಾ|| ೬ ರಲ್ಲಿ ಕಲಕತ್ತಾ ಸರ್ವಕಲಾಶಾಲೆಯವರು ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿದ ವಿಜ್ಞಾಪನ ಪತ್ರಿಕೆಯನ್ನು ಚಕ್ರವರ್ತಿಯವರು ಸ್ವೀಕರಿಸಿ ದಯಪಾಲಿಸಿದ ಉತ್ತರವು:— ಈಗ್ಗೆ ೬ ವರ್ಷಗಳ ಹಿಂದೆ ಕಲಕತ್ತಾದ ಸರ್ವಕಲಾಶಾಲೆಯವರು ಡಾಕ್ಟರ್ ಆಫ್ ಲಾ ಎಂಬ ಗೌರವಾರ್ಥ ಪ್ರದವಾದ ಪ್ರಶಸ್ತಿಯನ್ನು ನನಗೆ ಕೊಟ್ಟ ಸಂದರ್ಭವನ್ನು ನಾನು ಸಂತೋಷದಿಂದ ಸ್ಮರಿಸಿಕೊಳ್ಳುತ್ತೇನೆ. ಭರತಖಂಡದ ಪ್ರೌಢವಿದ್ಯೆಯಲ್ಲಿ ನನಗಿರುವ ಪೂರ್ಣಾಸಕ್ತಿಯನ್ನು ತಿಳುಹಲು ಈ ದಿವಸ ಸಮಯವು ದೊರೆತುದಕ್ಕಾಗಿ ನಾನು ಹರ್ಷಿತನಾಗಿರುವೆನು. ಭರತಖಂಡದ ಪುರೋಭಿವೃದ್ಧಿಗೆ ಕಾರಣಭೂತರಾದ ಐಕಮತ್ಯದ ಮತ್ತೂ ಭಾರತೀಯರ ಪರಿಜ್ಞಾನವೂ, ಆಶೋತ್ತರವೂ ಕ್ರಮೇಣ ಐಕ್ಯವಾಗಲು ಭರತಖಂಡದ ಸರ್ವಕಲಾಶಾಲೆಗಳು ಸಹಕಾರಿಗಳಾಗುವುವೆಂದು ನಾನು ನಿರೀಕ್ಷಿಸುತ್ತೇನೆ. ವಿದ್ಯಾಪ್ರಸರಣೆಯ ಮತ್ತು ಪ್ರಮಾಣದ ಅಭಿವೃದ್ಧಿಗಾಗಿ ಭರತಖಂಡದ ಸರ್ವಕಲಾಶಾಲೆಗಳು ಆಗಾಗ್ಗೆ ಮಾಡುತ್ತಿರುವ ಪ್ರಯತ್ನವಿಶೇಷವನ್ನು ನಾನು ಸಹಾನುಭೂತಿಯಿಂದ ಗಮನಿಸುತ್ತಿರುವೆನು. ಇನ್ನೂ ಮಾಡಬೇಕಾದುದು ಬಹಳವಾಗಿದೆ. ಈ ಕಾಲದಲ್ಲಿ ಬಹು ಮುಖ್ಯವಾದ ಎಲ್ಲಾ ಶಾಸ್ತ್ರಶಾಖೆಗಳಲ್ಲೂ, ಕಲೆಗಳಲ್ಲೂ ತಕ್ಕ ಬೋಧಕೋಪಕರಣಗಳು ಒದಗಿಸಲ್ಪಟ್ಟ ಹೊರತು ಮತ್ತೂ ಶಾಸ್ತ್ರಪರಿಶೋಧನೆಗೆ ಬೇಕಾದ ಸದುಪಾಯಗಳನ್ನು ಕಲ್ಪಿಸಿಕೊಂಡ ಹೊರತು ಯಾವ ಸರ್ವಕಲಾಶಾಲೆಯೂ ಪರಿಪೂರ್ಣವಾಗುವುದಿಲ್ಲವು. ನೀವು ನಿಮ್ಮ ಪ್ರಾಚೀನ ವಿದ್ಯೆಯನ್ನು ಕಾಪಾಡಿಕೊಂಡು, ಅದರ ಕೂಡ ಪಾಶ್ಚಾತ್ಯಶಾಸ್ತ್ರಜ್ಞಾನವನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕಾಗಿರುತ್ತದೆ. ನೀವು ವಿದ್ಯಾರ್ಥಿಗಳನ್ನು ಒಳ್ಳೆಯಗುಣಾಢ್ಯರನ್ನಾಗಿಮಾಡಬೇಕಾಗಿದೆ. ಅದರ ಪಿನಾ ವಿದ್ಯೆಯು ನಿರರ್ಥಕವು. ನೀವು ನಿಮ್ಮಮೇಲಿರತಕ್ಕ ಅಧಿಕವಾದುತ್ತರವಾದಿತ್ವವನ್ನು ತಿಳಿದವರಾಗಿರುವಿರೆಂದು ಹೇಳಿರುತ್ತೀರಿ. ನೀವುಕೈಕೊಂಡಿರುವ ಕಾರ್ಯದಲ್ಲಿ ನಿಮಗೆ ಜಯವುಂಟಾಗಲೆಂದು ಕೋರುತ್ತೇನೆ. ನಿಮ್ಮ ಮನೋಭೀಷ್ಟಗಳು ಘನವಾದುವುಗಳಾಗಿರಲಿ ಮತ್ತೂ ಅವುಗಳನ್ನು ಸಾಧಿಸಲು ಸತತಪ್ರಯತ್ನವನ್ನು ಮಾಡಿರಿ; ಭಗವಂತನ ಕೃಪೆಯಿಂದ ನಿಮಗೆ ಜಯವಾಗುವುದು. ೬ ವರ್ಷಗಳ ಹಿಂದೆ ಇಂಗ್ಲೆಂಡಿನಿಂದ ಭರತಖಂಡಕ್ಕೆ ಸಹಾನುಭೂತಿಯ ವರ್ತಮಾನವನ್ನು ಕಳುಹಿಸಿಕೊಟ್ಟೆನು. [illegible] ಭರತಖಂಡದಲ್ಲೇ ಇದ್ದು 'ಆಶಾ' ಎಂಬ [illegible] ಮಾತನ್ನು ಭರತಖಂಡಕ್ಕೆ ಕೊಡುತ್ತೇನೆ. [illegible] ಎಲ್ಲಾ [illegible] ವಿದ್ಯೆಯು ನಿಮಗೆ [illegible]

[illegible] ಯನ್ನು ಹೊಂದುವಿರಿ. ಭರತಖಂಡದಲ್ಲಿ ವಿದ್ಯಾಪ್ರಸಾರಣೆಗಾಗಿಯೂ ಮತ್ತೂ ವಿದ್ಯಾಭಿವೃದ್ಧಿಗಾಗಿಯೂ ಹೆಚ್ಚು ದ್ರವ್ಯದ ವಿನಿಯೋಗವನ್ನು ಗೌರ್ನರ್ ಜನರಲ್‌ರವರು ಮಾಡುವರೆಂದು ನನ್ನ ಅನುಜ್ಞೆಯಂತೆ ಪ್ರಕಟಪಡಿಸಲ್ಪಟ್ಟಿತು. ಪಾಠಶಾಲೆಗಳೂ, ಪ್ರೌಢವಿದ್ಯಾಲಯಗಳೂ ಎಲ್ಲಾ ಕಡೆಯೂ ಬಲೆಯೋಪಾದಿಯಲ್ಲಿ ಹರಡಬೇಕೆಂಬುದೇ ನನ್ನ ಉದ್ದೇಶವು. ಈ ವಿದ್ಯಾಶಾಲೆಗಳಿಂದ ಜನರು ರಾಜಭಕ್ತಿಯುತರಾಗಿಯೂ ಧೈರ್ಯಶಾಲಿಗಳಾಗಿಯೂ, ಪ್ರಯೋಜಕರಾಗಿಯೂ ಆಗಿ ತಮ್ಮ ಕೈಗಾರಿಕೆ, ಬೇಸಾಯ ಮತ್ತೂ ಇತರ ಜೀವನೋಪಾಯಗಳನ್ನು ಕಲ್ಪಿಸಿಕೊಳ್ಳ ಸಮರ್ಥರಾಗುವರು. ವಿದ್ಯಾವ್ಯಾಸಂಗದಿಂದಲೂ, ಇದರ ಫಲದಿಂದ ಲಭ್ಯವಾಗುವ ಅಧಿಕಾಭಿಲಾಷೆ, ಸುಖ, ಆರೋಗ್ಯ ಮೊದಲಾದುವುಗಳಿಂದಲೂ ನನ್ನ ಭಾರತಪ್ರಜೆಗಳ ಗೃಹವು ಬೆಳಗಬೇಕೆಂಬುದೂ ಮತ್ತೂ ಅವರ ಪರಿಶ್ರಮವು ಪ್ರೀತಿಕರವಾಗಿರಬೇಕೆಂಬುದೂ ನನ್ನ ಕೋರಿಕೆಯಾಗಿದೆ. ನನ್ನೀ ಕೋರಿಕೆಯು ವಿದ್ಯೆಯ ಮೂಲಕ ನೆರವೇರಬೇಕಾಗಿರುವುದಲ್ಲದೆ, ಭರತಖಂಡದಲ್ಲಿ ವಿದ್ಯಾಪ್ರಸಾರಣೆಯ ವಿಚಾರವು ಯಾವಾಗಲೂ ನನ್ನ ಮನಸ್ಸಿಗೆ ಹತ್ತಿಯೇ ಇರುತ್ತದೆ. ನನ್ನಲ್ಲೂ, ನನ್ನ ವಂಶಸ್ಥರಲ್ಲೂ ನಿಮಗೆ ಭಕ್ತಿಯಿರುತ್ತದೆಂದೂ, ಗ್ರೇಟ್‌ಬ್ರಿಟನ್ನಿಗೂ ಭರತಖಂಡಕ್ಕೂ ಇರತಕ್ಕ ಪರಸ್ಪರ ಸಂಬಂಧವು ಪ್ರಬಲತರವಾಗಿರಬೇಕೆಂಬುದು ನಿಮ್ಮ ಅಭೀಷ್ಟವಾಗಿದೆಯೆಂದೂ, ಬ್ರಿಟಿಷರ ಆಳಿಕೆಯಲ್ಲಿ ನೀವು ಅನುಭವಿಸುತ್ತಿರುವ ಸೌಲಭ್ಯಗಳನ್ನು ನೀವು ಮೆಚ್ಚಿರುವಿರೆಂದೂ ನನಗೆ ಭರವಸಹುಟ್ಟುವಂತೆ ಆಡಿರುವ ಮಾತುಗಳು ಸಂತೋಷಕರವಾಗಿವೆ. ನೀವು ಭಕ್ತಿಪುರಸ್ಸರವಾಗರ್ಪಿಸಿದ ನಿಮ್ಮ ವಿಜ್ಞಾಪನಪತ್ರಿಕೆಗಾಗಿ ನಿಮ್ಮನ್ನು ನಾನು ವಂದಿಸುತ್ತೇನೆ.

ಕಳೆದ ತಾ|| ೧೦ ರಲ್ಲಿ ಬೊಂಬಾಯಿನ ಅಪಾಲೊ ಬಂದರಿನಲ್ಲಿ ನಿಯಮ ನಿರ್ಮಾಣ ಸಭೆಯವರೊಪ್ಪಿಸಿದ ವಿಜ್ಞಾಪನ ಪತ್ರಿಕೆಗೆ ಚಕ್ರವರ್ತಿಯವರು ದಯಪಾಲಿಸಿದುತ್ತರವು:— ಬೊಂಬಾಯಾಧಿಪತ್ಯದ ಪ್ರಜೆಗಳ ಪರವಾಗಿ ನಮ್ಮನ್ನು ಬೀಳ್ಕೊಡುವ ಕಾಲದಲ್ಲೊಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ದಯಾಪೂರಿತವಾದ ಮಾತುಗಳನ್ನಾಡಿರುವುದಕ್ಕಾಗಿ ಚಕ್ರವರ್ತಿನಿಯವರ ಪಕ್ಷವಾಗಿಯೂ, ಸ್ವಪಕ್ಷವಾಗಿಯೂ ನಿಮ್ಮನ್ನು ನಿಷ್ಕಪಟಮನಸ್ಸಿನಿಂದ ವಂದಿಸುತ್ತೇನೆ. ನಾವು ಬೊಂಬಾಯಿನಲ್ಲಿಳಿದಾಗ ನೀವು ಆದರಪುರಸ್ಸರವಾಗಿ ನಮಗೆ ಮಾಡಿದ ಸ್ವಾಗತವು ಕಳೆದ ೫ ವಾರಗಳ ವರೆಗೆ ನಾವುನಡಿಸಿದ ಪ್ರವಾಸದಲ್ಲಿ ಅಲ್ಲಲ್ಲಿ ದೃಗ್ಗೋಚರವಾದ ವಿಶೇಷ ರಾಜಭಕ್ತಿಗೆ ಪೀಠಿಕೆಯಾಯಿತು. ಈಗ ನಾವು ನಮ್ಮ ಸ್ವದೇಶಕ್ಕೆ ಪ್ರಯಾಣ ಮಾಡುವ ಸಂದರ್ಭವನ್ನು ಪುರಸ್ಕರಿಸಿ, ನಮ್ಮ ಪ್ರಯಾಣವು ಸುಖಪ್ರದವಾಗಲೆಂದು ನೀವು ದೇವರನ್ನು ಪ್ರಾರ್ಥಿಸಿ ಆಡಿರುವ ಮಾತುಗಳನ್ನು ನಾವು ದುಃಖದಿಂದಲೂ, ತೃಪ್ತಿಯಿಂದಲೂ ಲಾಲಿಸಿರುತ್ತೇವೆ. ನಮ್ಮಾಗಮನದಿಂದ ಭರತಖಂಡಕ್ಕೆ ಮಹೋಪಕಾರವಾಗುತ್ತದೆಂಬ ನಿಮ್ಮ ನಂಬುಗೆಯು ನಮ್ಮ ಪ್ರೀತಿಪೂರ್ವಕವಾದ ಮನೋಭೀಷ್ಟವು ನೆರವೇರಿದುದರಿಂದ ನಮಗುಂಟಾಗಿರುವ ಸಂತೋಷಾತಿಶಯವನ್ನು ಮತ್ತಿಷ್ಟು ವೃದ್ಧಿಗೊಳಿಸುತ್ತಿದೆ. ನಮ್ಮಲ್ಲಿ ಇಷ್ಟೊಂದು ಶ್ರದ್ಧಾಭಕ್ತಿಯನ್ನಿಟ್ಟಿರುವ ನಮ್ಮ ಭಾರತಪ್ರಜಾಮಧ್ಯದಲ್ಲಿ ಬೇರೊಂದು ನೆಲದಿಂದ ಮತ್ತೊಂದುಕಡೆ ಸೇರುವುದಕ್ಕೆ ನನಗೆ ವಿಶೇಷ ಆನಂದವಾಗುತ್ತದೆ. ನೀವು ನಮಗೆ ತೋರಿಸಿದ ನೈಜವಾದ ಭಕ್ತಿವಿಶ್ವಾಸಗಳಿಂದ ಚಕ್ರವರ್ತಿನಿಯವರಿಗೂ, ನನಗೂ ಉಂಟಾಗಿರುವ ಸಂತೋಷವನ್ನು ವರ್ಣಿಸಲಸಾಧ್ಯವು. ಈ ಭಕ್ತಿ ವಿಶ್ವಾಸಗಳು ಪ್ರಜೆಗಳ ಮನಸ್ಸಿನಲ್ಲಿ ಚೆನ್ನಾಗಿ ನಾಟಿರುವುವೆಂದು ನಾನು ದೃಢವಾಗಿ ನಂಬುತ್ತೇನೆ. ಈ ದೇಶದಲ್ಲಿ ಇನ್ನೂ ಹೆಚ್ಚು ಕಾಲ ನಿಂತು ಪುರಾತನರಾಜಧಾನಿಯಾದ ಮದ್ರಾಸನ್ನೂ, ಉದಾರಮನಸ್ಸಿನಿಂದ ಆಮಂತ್ರಣವನ್ನು ಕೊಟ್ಟಿರುವ ಅನೇಕ ದೇಶೀಯರಾಜರುಗಳ ಸಂಸ್ಥಾನಗಳನ್ನೂ ಪರಾಮರ್ಶಿಸಲು ಅವಕಾಶವಿಲ್ಲದಿರುವುದೊಂದುಮಾತ್ರ ನಮ್ಮ ಮನಸ್ಸಿಗೆ ಖೇದಕರವಾಗಿರುತ್ತದೆ. ಬಹು ಜಾಗ್ರತೆಯಿಂದಲೂ, ಪ್ರೀತಿಯಿಂದಲೂ ಏರ್ಪಾಟುಮಾಡಿದ ನಿಮ್ಮ ಆದರ ಮರ್ಯಾದೆಗಳನ್ನು ಚಿರಕಾಲ ಸ್ಮರಿಸುತ್ತೇವೆ. ನಮ್ಮ ಆಗಮನದಿಂದ ಈ ವಿಶಾಲವಾದ ರಾಜ್ಯದಲ್ಲಿ ವಾಸವಾಗಿರುವ ಪ್ರಜೆಗಳಿಗೆ ಈಶಾನುಗ್ರಹದಿಂದ ಮೇಲುಂಟಾಗಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಪ್ರಪಂಚದ ಇತರ ಭಾಗಗಳಲ್ಲಿರುವ ನಮ್ಮ ಕೋಟ್ಯಾನುಕೋಟಿ ಪ್ರಜೆಗಳ ಕ್ಷೇಮಲಾಭವನ್ನು ಕೋರುವಂತೆ, ಈ ಭಾರತಪ್ರಜೆಗಳ ಕ್ಷೇಮಲಾಭವನ್ನು ಸರ್ವದಾ ಕೋರುತ್ತಿರುವೆನು. ನಮಗೆ ಪ್ರೀತಿಪೂರ್ವಕವಾಗಿ ಸ್ವಾಗತವನ್ನು ಕೋರಲು ಎಲ್ಲಾ ಮತಸ್ಥರೂ, ಜಾತಿಯವರೂ ಒಮ್ಮನಸ್ಸಿನಿಂದ ಒಟ್ಟಾಗಿ ಸೇರಿದ್ದುದು ನನಗೆ ಅತ್ಯಂತ ತೃಪ್ತಿಕರವಾಗಿದೆ. ಅವರು ತಮ್ಮ ಸ್ವಂತಕಾರ್ಯದಲ್ಲಾಗಲಿ, ಬಹುಜನರ ಕಾರ್ಯದಲ್ಲಾಗಲಿ ಈ ಪ್ರಬಲವಾದ ಐಕಮತ್ಯದಿಂದ ನಡೆಯುವಹಾಗೆ, ನಾನು ಭರತಖಂಡಕ್ಕೆ ಆಗಮಿಸಿರುವ ಫಲ [illegible] ನಾನು ನಂಬುತ್ತೇನೆ. ನಾವು ಭರತಖಂಡವನ್ನು ಸೇರಿದಾಗಲು ಮತ್ತೂ ಬಿಡುವಾಗಲೂ ನಮ್ಮನ್ನು ಈ ರೀತಿಯಾಗಿ ಪ್ರೀತಿಯಿಂದ ಗೌರವಿಸಿದ ಬೊಂಬಾಯಿನ ಪ್ರತಿನಿಧಿಗಳಾದ ನಿಮಗೆ, ಭರತಖಂಡದ ಚಕ್ರಾಧಿಪತ್ಯಕ್ಕೆ ಮೇಲನ್ನು ಕೋರುವ ನಮ್ಮ ಕಡೆಯ ಸಂದೇಶವನ್ನು ವಿಶದಪಡಿಸುತ್ತಿದ್ದೇವೆ. ಭರತಖಂಡದ [illegible] ಕ್ಷೇಮಾಭಿವೃದ್ಧಿಯನ್ನು ಆಶೀರ್ವದಿಸಲೆಂದು ಕೋರುವಲ್ಲಿ ನನಗೂ, ನನ್ನ ಸಂತತಿಯವರಿಗೂ ಸರ್ವಶಕ್ತನಾದ ಭಗವಂತನು ಯಾವಾಗಲೂ ಸಹಾಯಕನಾಗಿರಲಿ.

ಚಕ್ರವರ್ತಿಯವರು ಒಂದು ಮಗುವನ್ನು ಮುದ್ದಿಸಿದುದು.

ಚಕ್ರವರ್ತಿದಂಪತಿಗಳು ತಾ|| ೮ ರಲ್ಲಿ ಕಲಕತ್ತಾದಿಂದ ಬರುವಾಗ್ಗೆ ಮಧ್ಯಮಾರ್ಗದಲ್ಲಿ ನಾಗಪುರದ ನಿಲ್ದಾಣದಲ್ಲಿಳಿದು ಮೋಟಾರು ಬಂಡಿಯಲ್ಲಿ ಕುಳಿತು, ನಾಗಪುರದ ಕೋಟೆಗೆ ದಯಮಾಡಿಸಿ ಎಲ್ಲವನ್ನೂ ಪರಾಮರ್ಶಿಸಿಕೊಂಡು ಹಿಂದಿರುಗುವಾಗ್ಗೆ ಮೋಟಾರು ಬಂಡಿಯನ್ನು ಹತ್ತಿ ಕುಳಿತುಕೊಳ್ಳುವ ಸಮಯದಲ್ಲಿ ಒಂದು ಚಿಕ್ಕ ಮಗುವು ಮೋಟಾರುಬಂಡಿಯ ಬಳಿಗೆ ಬರಲು ಚಕ್ರವರ್ತಿಯವರು ಅದಕ್ಕೆ ಸಲಾಮನ್ನು ಮಾಡಿ ತಮ್ಮ ಕೈಯಿಂದ ಅದರ ತಲೆಯನ್ನು ಸವರಿದರು.

ಬಹುಮಾನಗಳು:— ಶ್ರೀ ರಾಜಚಕ್ರವರ್ತಿ ದಂಪತಿಗಳು ತಮ್ಮ ಸ್ವಹಸ್ತಾಕ್ಷರಗಳಿಂದ ಪರಿಶೋಭಿತವಾದ ತಮ್ಮ ಭಾವಚಿತ್ರಪಟವನ್ನು ಅಶ್ವಶಾಲಾಧ್ಯಕ್ಷರ ಮೂಲಕ ಮದರಾಸಿನ ಸಕಲ ಕಲಾಶಾಲೆಯ ವೈಸ್ ಚಾನ್ಸಲರವರಿಗೆ ಕಳುಹಿಸಿಕೊಟ್ಟರು. ಈ ವಿಧವಾಗಿ ಬಹುಮಾನಿತರಾದುದಕ್ಕಾಗಿ ಮದ್ರಾಸಿನ ಸಿನೇಟಿನವರು ತಮ್ಮ ಪರವಾಗಿಯೂ ವಿದ್ಯಾರ್ಥಿಗಳ ಪರವಾಗಿಯೂ ಚಕ್ರವರ್ತಿದಂಪತಿಗಳಿಗೆ ವಂದನೆಯನ್ನರ್ಪಿಸಿದರು. ಚಕ್ರವರ್ತಿಯವರು ತಮ್ಮ ಸ್ವಂತ ಉಪಯೋಗಕ್ಕಾಗಿಟ್ಟುಕೊಂಡಿದ್ದ ಎರಡು ಭಾವಚಿತ್ರಪಟಗಳಲ್ಲೊಂದನ್ನು ಅಶ್ವಶಾಲಾಧ್ಯಕ್ಷರ ಮೂಲಕ ಲೋವರ್ ಬರ್ಮಾ ಚೀಫ್‌ಕೋರ್ಟಿಗೂ, ಮತ್ತೊಂದನ್ನು ರಂಗೂನಿನ ಪ್ರೌಢವಿದ್ಯಾಲಯದ ಮುಖ್ಯೋಪಾಧ್ಯಾಯರಿಗೂ ದಯಪಾಲಿಸಿದರು.

ಚಕ್ರವರ್ತಿದಂಪತಿಗಳು ಕಲಕತ್ತಾದ ಗೌರ್ನಮೆಂಟ್ ಹೌಸಿನಲ್ಲಿ ವಿಸ್ತೃತರವಾದ ಅನೇಕ ಬಹುಮಾನಗಳನ್ನು ದಯಪಾಲಿಸಿದರಲ್ಲದೆ, ಶ್ರೀಯವರು ಭರತಖಂಡಕ್ಕೆ ದಯಮಾಡಿಸಿದಾರಭ್ಯ ಅವರ ಸಮೀಪದಲ್ಲಿ ಕಾದಿದ್ದು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದ ಗೌರ್ನಮೆಂಟ್ ಹೌಸಿನ ಇನ್ಸ್‌ಪೆಕ್ಟರ್ ಕರ್ನಲರವರಿಗೆ ಗಟ್ಟಿ ಬಂಗಾರದ ಗಡಿಯಾರವನ್ನು ಬಹುಮಾನಿಸಿದರು. ಇದಲ್ಲದೆ ಚಕ್ರವರ್ತಿಯವರು ಪ್ರಿನ್ಸ್ ಆಫ್ ವೇಲ್ಸರಾಗಿ ಭರತಖಂಡಕ್ಕೆ ಹಿಂದೆ ದಯಮಾಡಿಸಿದ್ದ ವೇಳೆಯಲ್ಲಿ ಅವರ ಸೇವೆಯನ್ನು ಈ ಇನ್ಸ್‌ಪೆಕ್ಟರೇ ಬಹು ಸಮರ್ಪಕತೆಯಿಂದ ಮಾಡಿದ್ದುದಕ್ಕಾಗಿ ಬಹುಮಾನಿಸಲ್ಪಟ್ಟಿದ್ದ ರಾಯಲ್ ವಿಕ್ಟೋರಿಯನ್ ಪದಕವನ್ನು ಸಿಕ್ಕಿಸುವುದಕ್ಕೆ ಈ ವೇಳೆ ಒಂದು ಕಡ್ಡಿಯನ್ನು ಸಹ ದಯಪಾಲಿಸಿದರು.

ರಾಯಲ್ ವಿಕ್ಟೋರಿಯನ್ ಆರ್ಡರ್ ಪ್ರಶಸ್ತಿಯು:— ಚಕ್ರವರ್ತಿಯವರು ಕಲಕತ್ತಾ ಪಟ್ಟಣವನ್ನು ಬಿಟ್ಟು ತೆರಳುವ ಸಮಯದಲ್ಲಿ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರಿಗೆ ರಾಯಲ್ ವಿಕ್ಟೋರಿಯನ್ ಆರ್ಡರ್ ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಈ ಪ್ರಶಸ್ತಿಯು ಇತರ ಎಲ್ಲಾ ಪ್ರಶಸ್ತಿಗಳಿಗಿಂತಲೂ ಅತಿಶಯವೂ, ಗೌರವವೂ ಆದುದಾಗಿರುವುದಲ್ಲದೆ, ಇದು ಸಾಮಾನ್ಯವಾಗಿ ರಾಜಕುಟುಂಬದವರಿಂದಲೇ ಧರಿಸಲ್ಪಡತಕ್ಕದಾಗಿರುವುದು. ಈವರೆಗೆ ಡ್ಯೂಕ್ ಆಫ್ ಆರ್ಗೈಲ್, ಡ್ಯೂಕ್ ಆಫ್ ಫೈಫ್, ಮಾರ್ಕ್ವಿಸ್ ಆಫ್ ಲ್ಯಾನ್ಸ್‌ಡೌನ್, ಅರ್ಲ್ ಆಫ್ ಕೆಡಲ್‌ಸ್ಟನ್ ಮತ್ತೂ ಆರ್ಚ್ ಬಿಷಪ್ ಕ್ಯಾಂಟರ್‌ಬರಿ ಈ ಐದುಮಂದಿಗಳಿಗೆ ಮಾತ್ರ ಈ ಪ್ರಶಸ್ತಿಯು ಲಭ್ಯವಾಗಿದ್ದುದು, ಈಗ ೬ನೆಯವರಾದ ಲಾರ್ಡ್ ಹಾರ್ಡಿಂಜ್‌ರವರಿಗೂ ಲಭ್ಯವಾಗಿರುವುದು.

ಚಕ್ರವರ್ತಿಯವರ ಪ್ರೈವೆಟ್ ಸೆಕ್ರೆಟರಿಯವರು ಕಲಕತ್ತಾದ ಕಾರ್ಪೊರೇಷನ್ನಿಗೆ ತಂತ್ರೀವಾರ್ತೆಯನ್ನು ಕೊಟ್ಟರು:— "ಕಲಕತ್ತಾದ ಕಾರ್ಪೊರೇಷನ್ನಿನವರು ತಮಗೆ ವಿಜ್ಞಾಪಿಸಿಕೊಂಡ ತೀರ್ಮಾನವನ್ನು ಶ್ರೀ ರಾಜದಂಪತಿಗಳು ಅತ್ಯಂತವಿಶ್ವಾಸದಿಂದ ಅಂಗೀಕರಿಸಿ ವಂದಿಸುತ್ತಾರೆಂದು ಕಾರ್ಪೊರೇಷನ್ನಿನವರಿಗೆ ತಿಳುಹಬೇಕಾಗಿ ಆಜ್ಞಪ್ತನಾಗಿರುತ್ತೇನೆ. ಚಕ್ರವರ್ತಿದಂಪತಿಗಳು ಈ ದೇಶವನ್ನು ಬಹು ವ್ಯಸನದಿಂದ ಬಿಟ್ಟು ತೆರಳುತ್ತಾರೆ. ಆದರೆ ಅವರು ಈ ದೇಶದಲ್ಲಿ ಅನುಭವಿಸಿದ ಸಂತೋಷಕ್ಕಾಗಿಯೂ, ಆ ಸಂತೋಷದಲ್ಲಿ ಭಾರತಪ್ರಜೆಗಳುಕೂಡ ಭಾಗಿಗಳಾಗಿದ್ದುದಕ್ಕಾಗಿಯೂ ವಿಶೇಷ ಕೃತಜ್ಞರಾಗಿರುತ್ತಾರೆ."

ಚಕ್ರವರ್ತಿಯವರು ಪ್ರಧಾನಮಂತ್ರಿಗಳಾದ ಮಿ|| ಆಸ್ಕ್ವಿತ್‌ರವರಿಗೆ ತಾ|| ೧೦ ರಲ್ಲಿ ಕಳುಹಿದ ತಂತ್ರಿವಾರ್ತೆಯು:— "ನನ್ನ ಘನತರವಾದ ಆಶಾಪೂರ್ತಿಯಾಯಿತೆಂಬುದನ್ನೂ, ನಮ್ಮಾಗಮನವು ಬೊಂಬಾಯಿ, ಡಿಲ್ಲಿ, ಕಲಕತ್ತಾಗಳಲ್ಲಿನ [illegible], ನಾನಾ ಸಂಸ್ಥಾನದ [illegible]

ಕಡೆಗಳಲ್ಲೆಲ್ಲಾ ನಮ್ಮ ನಿರೀಕ್ಷಣೆಗಿಂತಲೂ ಹೆಚ್ಚು ಜಯಪ್ರದವಾಗಿ ನೆರವೇರಿರುವುದನ್ನೂ ನಾವು ಭರತಖಂಡವನ್ನು ಬಿಟ್ಟು ಸ್ವದೇಶೋನ್ಮುಖರಾಗುವುದಕ್ಕೆ ಪೂರ್ವ, ನನ್ನ ಸರ್ಕಾರಕ್ಕೆ ಮುಖಂಡರಾದ ನೀವು ಕೇಳಿ ಸಂತೋಷಿಸುವಿರೆಂದು ನಾನು ದೃಢವಾಗಿರುತ್ತೇನೆ. ವ್ಯಕ್ತವಾದ ಅಭಿನಿವೇಶದಿಂದಲೂ, ಪ್ರೇಮದಿಂದಲೂ ನಮಗೆ ಸ್ವಾಗತವನ್ನು ಮಾಡಲು ಎಲ್ಲಾ ಜನಾಂಗದವರೂ, ಮತಸ್ಥರೂ, ಜಾತಿಯವರೂ ಒಟ್ಟುಗೂಡಿದ್ದರು. ವೈಸ್‌ರಾಯರೂ ಅವರ ಕೈಕೆಳಗೆ ಕೆಲಸಮಾಡಿದವರೂ ಚೆನ್ನಾಗಿ ಪರ್ಯಾಲೋಚಿಸಿ ಅವಿಶ್ರಾಂತ ಶ್ರಮವನ್ನು ವಹಿಸಿ ಅತ್ಯುತ್ತಮವಾದ ಏರ್ಪಾಡುಗಳನ್ನು ಮಾಡಿದ್ದುದರಿಂದ, ದಿಲ್ಲಿಯ ದರ್ಬಾರು ಬಹು ಶೋಭಾಯಮಾನದಿಂದಲೂ, ಅಟ್ಟಹಾಸದಿಂದಲೂ ನೆರವೇರಿದುದಾಗಿದೆ. ನಾನು ವೈಸ್‌ರಾಯರ ದರ್ಶನಕ್ಕಾಗಿ ಕಲಕತ್ತಾಕ್ಕೆ ಹೋಗಿದ್ದ ವೇಳೆಯಲ್ಲಿ ನಮಗೆ ಸುಖಸಂತೋಷವನ್ನುಂಟುಮಾಡಲು ತಮಗೆ ಸಾಧ್ಯವಾದ ಏರ್ಪಾಡುಗಳನ್ನು ಮಾಡುವಲ್ಲಿ ಎಲ್ಲಾ ಮತದ ಮತ್ತೂ ಜಾತಿಯವರೂ ಏಕೀಭವಿಸಿದ್ದರು. ನನ್ನ ಮನೋಭೀಷ್ಟವನ್ನು ನೆರವೇರಿಸಿಕೊಳ್ಳುವಂತಾದುದಕ್ಕಾಗಿ ಸಂತೋಷಿಸಿ ತೃಪ್ತಿಪಟ್ಟು ಆ ವಿಷಯದಲ್ಲಿ ನನಗೂ ನನ್ನ ಸ್ವದೇಶದಲ್ಲಿರುವ ನಮ್ಮ ಜನರಿಗೂ ಪರಸ್ಪರ ನಂಬುಗೆ ಇದ್ದುದಕ್ಕಾಗಿ ನಾನು ಕೃತಜ್ಞನಾಗಿರುತ್ತೇನೆ. ನಮ್ಮಾಗಮನದಿಂದ ಭರತಖಂಡಕ್ಕೂ, ವಿಶಾಲವಾದ ನನ್ನ ರಾಷ್ಟ್ರಕ್ಕೂ ನಿರಂತರವಾದ ಶ್ರೇಯಸ್ಸುಂಟಾದಲ್ಲಿ ನನಗೀಗುಂಟಾಗಿರುವ ತೃಪ್ತಿಯು ಇನ್ನೂ ಅತಿಶಯವಾಗುವುದು.

ಬೊಂಬಾಯಿ ಗೌರ್ನರು ಏಡನ್ನಿನಲ್ಲಿರುವ ಚಕ್ರವರ್ತಿ ದಂಪತಿಗಳಿಗೆ ಈ ಪ್ರಕಾರವಾಗಿ ತಂತಿಯವಾರ್ತೆಯನ್ನು ಕೊಟ್ಟರು:— "ಬೊಂಬಾಯಿ ರಾಜಧಾನಿಯ ಪ್ರಜೆಗಳು ತಮ್ಮ ಮನಃಪೂರ್ವಕವಾಗಿ ಬೊಂಬಾಯಾಧಿಪತ್ಯದ ಎಲ್ಲೆಯವರೆಗೆ ತಮ್ಮನ್ನು ಸಾಗಕಳುಹುತ್ತಾರೆ. ಚಕ್ರವರ್ತಿ ದಂಪತಿಗಳಿಗೆ ಆಯುರಾರೋಗ್ಯವುಂಟಾಗಲೆಂದು ಉಪಕಾರ ಬುದ್ಧಿಯಿಂದ ತಮ್ಮ ಪ್ರಜೆಗಳು ಮನಃಪೂರ್ವಕವಾಗಿ ಪ್ರಾರ್ಥಿಸುತ್ತಾರೆ" ಇದಕ್ಕೆ ಚಕ್ರವರ್ತಿಯವರು ದಯಪಾಲಿಸಿದ ಉತ್ತರವು:— "ನೀವೂ ಬೊಂಬಾಯಿ ಪ್ರಜೆಗಳೂ ನಮ್ಮನ್ನು ಸಾಗಕಳುಹುವಾಗ್ಗೆ ನಮ್ಮ ಆಯುರಾರೋಗ್ಯವನ್ನು ಬಯಸಿದುದಕ್ಕಾಗಿ ನಿಮ್ಮನ್ನೂ, ಬೊಂಬಾಯಿ ಪ್ರಜೆಗಳನ್ನೂ ನಾವು ನಮ್ಮ ಮನಃಪೂರ್ವಕವಾಗಿ ವಂದಿಸುತ್ತೇವೆ. ನಾವು ಈ ಬೊಂಬಾಯಾಧಿಪತ್ಯದ ಎಲ್ಲೆಯನ್ನು ಬಹು ಚಿಂತೆಯಿಂದ ಬಿಟ್ಟು ಹೊರಟಿರುತ್ತೇವಾದರೂ, ನೀವು ನಮಗಾಗಿ ಮಾಡಿದ ಅನೇಕ ಸೌಕರ್ಯಗಳು ನಾವು ಯಾವಾಗಲೂ ಸ್ಮರಿಸುವಂತಿಹವೇ ವಿನಾ ಮರೆಯುವಂತಿಲ್ಲವು."

ಆ॥ ದೇವಪ್ರಸಾದ ಸರ್ವಾಧಿಕಾರಿಯವರಿಗೆ ಶ್ರೀ ಚಕ್ರವರ್ತಿ ದಂಪತಿಗಳ ದರ್ಶನಲಾಭವಾದುದು:—ಕಳೆದ ತಾ॥ ೬ ರಲ್ಲಿ ಪ್ರಸಾದರವರು ಚಕ್ರವರ್ತಿ ದಂಪತಿಗಳ ದರ್ಶನಕ್ಕೆ ಭಾಜನರಾದಾಗ್ಗೆ, ಶ್ರೀಯವರು ತನ್ನ ಭಾವಚಿತ್ರ ಪಟದ ಮೇಲೆ ಸ್ವಹಸ್ತದಿಂದ ಲಿಖಿಸಿ ಅದನ್ನು ಪ್ರಸಾದರವರಿಗೆ ಬಹುಮಾನಿಸಿದರು. ಪ್ರಸಾದರವರು ಅದನ್ನು ಸ್ವೀಕರಿಸಿ "ಇದನ್ನು ನಾನೂ, ನನ್ನ ಕುಟುಂಬದವರೂ ಕುಲಧನವನ್ನಾಗಿ ಕಾಪಾಡಿಕೊಳ್ಳುವೆವು" ಎಂದು ಹೇಳಿ ಚಕ್ರವರ್ತಿಯವರಿಗೆ ವಂದನೆಯನ್ನರ್ಪಿಸಿದರು. ದೇವಪ್ರಸಾದರವರ ಸರಸೋಕ್ತಿಗಳನ್ನು ಕೇಳಿ ಚಕ್ರವರ್ತಿಯವರು ಆನಂದಪಟ್ಟು ಅವರ ಕರಾಸ್ಫಾಲನವನ್ನು ಮಾಡಿ ಮರ್ಯಾದಿಸಿ ಕಳುಹಿಸಿಕೊಟ್ಟರು.

ಬಾಬು ಮೋತಿಲಾಲ ಘೋಸ್‌ರವರು:— ಕಲಕತ್ತಾ ಪಟ್ಟಣದಲ್ಲಿ ನಿತ್ಯದಲ್ಲೂ ಪ್ರಕಟವಾಗುವ ಅಮೃತಬಜಾರ್ ಪತ್ರಿಕೆಯ ಪ್ರಕಾಶಕರಾದ ಬಾಬು ಮೋತಿಲಾಲ ಘೋಸ್‌ರವರು ತಮ್ಮ ದೇಹಾರೋಗ್ಯವು ತಪ್ಪಿರುವಪ್ರಯುಕ್ತ, ಚಕ್ರವರ್ತಿಯವರ ದರ್ಶನವನ್ನು ಪ್ರತ್ಯಕ್ಷವಾಗಿ ತೆಗೆದುಕೊಂಡು ತಮ್ಮ ಭಕ್ತಿ ವಿಶ್ವಾಸವನ್ನು ಪ್ರದರ್ಶಿಸುವುದಕ್ಕಿಲ್ಲವಾದುದರಿಂದ, ಲಿಖಿತಮೂಲಕವಾಗಿ ವಿಜ್ಞಾಪಿಸಿಕೊಂಡಿದ್ದುದಕ್ಕೆ ಚಕ್ರವರ್ತಿಯವರ ಪ್ರೈವೆಟ್ ಸೆಕ್ರೆಟರಿಯವರು ಈ ಪ್ರಕಾರವಾಗುತ್ತರವನ್ನು ಕೊಟ್ಟರು:— "ಈ ತಿಂಗಳ ತಾ॥ ೩ ರಲ್ಲಿ ನೀವು ಬರೆದ ಕಾಗದದಭಿಪ್ರಾಯವೂ, ಆ ಕಾಗದದ ಕೂಡ ಕಳುಹಿಕೊಟ್ಟ ನಿಮ್ಮ ಅಮೃತಬಜಾರ್ ಪತ್ರಿಕೆಯ ಅಭಿಪ್ರಾಯವೂ ಚಕ್ರವರ್ತಿಯವರ ಮನಸ್ಸಿಗೆ ಚೆನ್ನಾಗಿ ವೇದ್ಯವಾಗಿರುತ್ತವೆ ೬ ವರ್ಷಗಳ ಹಿಂದೆ ನಿಮ್ಮನ್ನು ಇಲ್ಲಿ ನೋಡಿದುದನ್ನು ಚಕ್ರವರ್ತಿಯವರು ಬಹು ಸಂತೋಷದಿಂದ ಸ್ಮರಿಸಿಕೊಂಡಿರುತ್ತಾರೆ; ಈಗ ಪುನಃ ನಿಮ್ಮನ್ನು ಬರಮಾಡಿಕೊಳ್ಳಲು ನಿಮ್ಮ ದೇಹಾಲಸ್ಯದಿಂದ ಅವಕಾಶವಿಲ್ಲದಿರುವುದಕ್ಕಾಗಿ, ಚಕ್ರವರ್ತಿಯವರು ಬಹಳ ಚಿಂತಿಸುತ್ತಾರಲ್ಲದೆ ನಿಮಗೆ ಶೀಘ್ರದಲ್ಲಿ ಆರೋಗ್ಯವುಂಟಾಗಲೆಂದು ಇಚ್ಛಿಸುತ್ತಾರೆ."

"ನನ್ನ ಬಂಧವಿಮೋಚನೆಯಾಯಿತೆಂದು ಹುಟ್ಟಿರುವ ಸುದ್ದಿಯು ನಿರಾಧಾರವಾದುದು ಮತ್ತೂ ನಾನು ಆರೋಗ್ಯವಾಗಿರುತ್ತೇನೆ." ಎಂದು ಮ॥ ಬಾಲಗಂಗಾಧರತಿಲಕರವರು ತಮ್ಮ ಬಂಧುಗಳಿಗೆ ಕಳೆದ ತಾ॥ ೩ ರಲ್ಲಿ ಮಾಂಡಲೆಯಿಂದ ಬರೆದಿರುವ ಕಾಗದವು ಕೇಸರಿ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಮೈಸೂರ್ ಸ್ಟಾರ್

೧೯೧೨ ನೆಯ ಜನವರಿ ತಾ॥ ೨೨ ನೆಯ ಸೋಮವಾರ

ಚೈನಾರಾಜ್ಯದ ದುಸ್ಥಿತಿಯು.

ಚೈನಾರಾಜ್ಯವು ಏಶ್ಯಾಖಂಡದಲ್ಲಿ ಉತ್ತರಕ್ಕೆ ಆಸ್ಯಾಟಿಕ್ ರಷ್ಯಾ, ಪೂರ್ವಕ್ಕೆ ಫೆಸಿಫಿಕ್ ಸಾಗರ, ದಕ್ಷಿಣಕ್ಕೆ ಇಂಡೂ ಚೈನಾ ದ್ವೀಪಕಲ್ಪ ಮತ್ತೂ ಇಂಡ್ಯಾ ಮತ್ತೂ ಪಶ್ಚಿಮಕ್ಕೆ ರಷ್ಯಾದ ತುರ್ಕಿಸ್ಥಾನ ಇವುಗಳ ಮಧ್ಯೆ ಇರುತ್ತದೆ ಈ ಮಹಾರಾಜ್ಯಕ್ಕೆ ಮಾಂಚೂರಿಯಾ, ಮಾಂಗೋಲಿಯಾ ತಿಬೆಟ್ ಮತ್ತೂ ಪೂರ್ವ ತುರ್ಕಿಸ್ಥಾನ ಇವುಗಳು ಸೇರಿರುತ್ತವೆ ಚೈನಾ ರಾಜ್ಯವು ೪೨,೭೭,೧೭೦ ಚದರಮೈಲಿ ವಿಸ್ತೀರ್ಣವನ್ನೂ, ೪೩,೩೯,೫೩,೦೦೦ ಪ್ರಜಾ ಸಂಖ್ಯೆಯನ್ನೂ ಉಳ್ಳದಾಗಿ ಬಹು ಫಲವತ್ತಾಗಿರುವುದು. ಚೀನಿಯವರು ತಮ್ಮ ರಾಜ್ಯವನ್ನು ಟಾರ್ಟರ್ ಜನರು ಮುತ್ತಿಗೆ ಹಾಕದಂತೆ ಅಡ್ಡಿಪಡಿಸಲು ೨೦೦೦ ವರ್ಷಗಳ ಹಿಂದೆ ೧೫೦೦ ಮೈಲಿಯ ವಿಸ್ತೀರ್ಣವುಳ್ಳ ಒಂದು ಅಗಾಧವಾದ ಗೋಡೆಯನ್ನು ಕಟ್ಟಿದ್ದಾಗ್ಯೂ, (ಈ ಗೋಡೆಯು ಈಗಲೂ ಇರುವುದು) ಈ ರಾಜ್ಯವು ೧೨೭೯ ರಲ್ಲಿ ಮಂಗೋಲಿಯನರ ವಶವಾಗಿದ್ದು ೧೬೪೪ ರಲ್ಲಿ ಮಂಚೂಟಾರ್ಟರ್ ಜನರ ವಶವಾಗಿ ಈಗಲೂ ಅವರಿಂದಲೇ ಆಳಲ್ಪಡುತ್ತಿದೆ. ಇಲ್ಲಿಯ ಚಕ್ರವರ್ತಿಯು ನಿರಂಕುಶ ಪ್ರಭುತ್ವವನ್ನು ಮಾಡುತ್ತಿರುವನಲ್ಲದೆ ಎರಡು ಮಂತ್ರಾಲೋಚನಾ ಸಭೆಗಳನ್ನು ಏರ್ಪಡಿಸಿಕೊಂಡಿದ್ದಾಗ್ಯೂ ತನ್ನ ಅಧಿಕಾರವನ್ನು ಪ್ರಾಮುಖ್ಯವಾಗಿಟ್ಟುಕೊಂಡಿರುವನು ಶಾಸನಗಳೆಲ್ಲವೂ ಚಕ್ರವರ್ತಿಯಾಜ್ಞೆಯ ಪ್ರಕಾರ ಮಾಡಲ್ಪಡುವುವು. ಈ ರಾಜ್ಯವು ೧೮ ಪ್ರಾಂತಗಳಾಗಿ ವಿಭಾಗಿಸಲ್ಪಟ್ಟು ಪ್ರತಿಯೊಂದು ಪ್ರಾಂತವೂ ಒಬ್ಬೊಬ್ಬ ವೈಸರಾಯಿಂದ ಆಳಲ್ಪಡುತ್ತಿರುವುದು. ಈ ವೈಸರಾಯರು ತಾವೇ ಸಕಲಾಧಿಕಾರವನ್ನು ನಡೆಯಿಸುತ್ತ ಚಕ್ರವರ್ತಿಗೆ ಉತ್ತರವಾದಿಗಳಾಗಿರುವರು. ಚಕ್ರವರ್ತಿಯ ನಿರಂಕುಶಾಧಿಕಾರವನ್ನು ಪರಿಮಿತಿಗೊಳಿಸುವುದಕ್ಕಾಗಿ ಒಂದು ಸುಧಾರಿಸಿದ ಮತ್ತೂ ಪ್ರಬಲತರವಾದ ಪಕ್ಷವು ಏರ್ಪಟ್ಟುದರಮೇಲೆ ಕಳೆದ ೫೦ ವರ್ಷಗಳಿಂದೀಚೆಗೆ ರಾಜ್ಯಾಡಳಿತದ ಕ್ರಮವು ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿ ಸರ್ಕಾರಿಯ ಎಲ್ಲಾ ಶಾಖೆಗಳೂ ೮ ಬೋರ್ಡುಗಳ ಅಧ್ಯಕ್ಷತೆಯಲ್ಲಿ ನಡೆಯಿಸಲ್ಪಡುತ್ತಿವೆ.

ಈಗಿನ ಚಕ್ರವರ್ತಿಯು ಇನ್ನೂ ಬಾಲನಾದುದರಿಂದ ಸ್ವತಃ ಅಧಿಕಾರವನ್ನು ನಡಿಸುವಂತಿಲ್ಲವು. ಚಕ್ರವರ್ತಿಯ ಸಮೀಪವರ್ತಿಗಳೂ, ವೈಸರಾಯರುಗಳೂ ಸ್ವತಂತ್ರಾಧಿಕಾರಿಗಳಾಗಿ ರಾಜ್ಯಾಡಳಿತವನ್ನು ಪ್ರಜಾರಂಜಕವಾಗಿ ನಡಿಸುತ್ತಿಲ್ಲವಾದುದರಿಂದ, ಪ್ರಜೆಗಳು ಕ್ಷುಬ್ಧರಾಗಿ ದಂಗೆಯೆದ್ದು ಮಂಚೂವಂಶಸ್ಥರಿಗೆ ಪ್ರಭುತ್ವವನ್ನು ತಪ್ಪಿಸಿಬಿಟ್ಟು ಅವರನ್ನು ವಿನಾಶಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ಅನೇಕ ನಷ್ಟಕಷ್ಟಗಳಿಗೆ ಗುರಿಯಾಗಿ ಸಾಹಸಪಡುತ್ತಿರುವರು. ಮತ್ತೂ ಚಕ್ರವರ್ತಿಯ ಸಮೀಪವರ್ತಿಗಳು ಮಂಚೂವಂಶಸ್ಥರೇ ಪ್ರಭುಗಳಾಗಿದ್ದುಕೊಂಡು ಕಾಲಾನುಗುಣವಾದ ರಾಜನೀತಿಯಂತೆ ಪಾರ್ಲಿಮೆಂಟ್ ಸಭೆಗಳನ್ನೇರ್ಪಡಿಸಿಕೊಂಡು ರಾಜ್ಯಾಡಳಿತವನ್ನು ನಡಿಸುತ್ತಿರಬೇಕೆಂದು ಪ್ರಯತ್ನಿಸುತ್ತಿವರು. ಸೈನಿಕರಿಗೆ ಸರ್ಕಾರದಿಂದ ಕ್ರಮವಾಗಿ ವೇತನವು ದೊರೆಯುತ್ತಿಲ್ಲವಾದುದರಿಂದ, ಅವರಲ್ಲನೇಕರು ದಂಗೆಕೋರರ ಪಕ್ಷವನ್ನು ಸೇರಿ, ಸರ್ಕಾರಿಯ ಪಕ್ಷದ ಸೇನೆಯವರ ಕೂಡ ಕಾದಾಡಿ ಅರ್ಥಪ್ರಾಣಹಾನಿಗಳನ್ನುಂಟುಮಾಡಿ ಅನೇಕ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡರು. ಸರ್ಕಾರಿಯ ಪಕ್ಷದ ಸೈನಿಕರಾದರೂ ದಂಗೆಯಕೋರರ ಕೂಡ ಯುದ್ಧಮಾಡಿ ಅವರಲ್ಲನೇಕರನ್ನು ಕೊಂದಿರುವರು. ಈ ವರೆಗೆ ೧೧೦೦೦ ಮಾಂಚೂರಿಯಾ ಜನರು ವಧಿಸಲ್ಪಟ್ಟಿರುವುದಾಗಿ ತಿಳಿದುಬಂದಿರುತ್ತದೆ. ದಂಗೆಯಕೋರರು ಸಿಡಿಮದ್ದುಗಳನ್ನು ಹಾಕಿ ಅನೇಕ ಅಧಿಕಾರಿಗಳನ್ನು ಕೊಂದಿರುವರು. ರಷ್ಯನರೂ, ಇಂಗ್ಲೀಷರೂ ಈ ರಾಜ್ಯದಲ್ಲಿರುವ ತಮ್ಮ ಸ್ಥಳಗಳನ್ನೂ ಜನರನ್ನೂ ಸಂರಕ್ಷಿಸುವುದಕ್ಕಾಗಿ ಸೇನೆಯನ್ನು ಕಳಿಸಿರುವರು. ದಂಗೆಕೋರರು ತಮ್ಮಿಷ್ಟಾರ್ಥವು ಪೂರ್ತಿಯಾದ ಹೊರತು ಶಾಂತರಾಗುವುದಿಲ್ಲವೆಂಬುದನ್ನು ಪ್ರಭುಪಕ್ಷದವರರಿತು, ಚಕ್ರವರ್ತಿಯು ಪಿಂಚನ್ನನ್ನು ಪಡೆದುಕೊಂಡು ರಾಜ್ಯವನ್ನು ಪ್ರಜಾಪ್ರಭುತ್ವದವರಿಗೆ ಬಿಟ್ಟುಕೊಟ್ಟು ತಾನು ನಿವೃತ್ತನಾಗುತ್ತಾನೆಂದು ಮೊದಲು ಗೊತ್ತಾಗಿದ್ದಿತು. ಆದರೆ ಈಚೆಗೆ ಬಂದ ವರ್ತಮಾನದಿಂದ ಪ್ರಭುಪಕ್ಷದವರು ಪ್ರಜಾಪ್ರಭುತ್ವವನ್ನಪೇಕ್ಷಿಸುವವರು ಹೇಳುವ ವಿಧಾನ (ಶರತ್ತು) ಗಳಿಗೊಡಂಬಡುವವರೆಂದೂ, ಇಷ್ಟರಲ್ಲೇ ಸಮಾಧಾನಕರವಾದ ಒಡಂಬಡಿಕೆಯು ಉಭಯಪಕ್ಷದವರಿಂದಲೂ ಮಾಡಲ್ಪಡುವುದೆಂದೂ ತಿಳಿಯಬರುತ್ತದೆ. ಚೈನಾರಾಜ್ಯದಲ್ಲಿ ಜನರು ಇನ್ನೂ ವಿದ್ಯೆಯಲ್ಲಿ ಮುಂದುವರಿದಿಲ್ಲವಾದುದರಿಂದಲೂ, ಸಂ[illegible] ಅವಶ್ಯಕತೆಗಳು ವಿಶೇಷವಾಗಿರುವುದರಿಂದಲೂ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಡತಕ್ಕದು ಕ್ಷೇಮದಾಯಕವಾಗಲಾರದು. ಆದರೆ ಈಗಿನ ರಾಜವಂಶಸ್ಥರೇ ಸುಧಾರಿಸಿದ ಇಂಗ್ಲೆಂಡು ಜಪಾನು ದೇಶಗಳಲ್ಲಿರುವಂತೆ ಪಾರ್ಲಿಮೆಂಟ್ ಸಭೆಗಳನ್ನೇರ್ಪಡಿಸಿಕೊಂಡು, ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟು ಅವರ ಸಮ್ಮತಿಯಿಂದ ಸಾಂಕುಶಪ್ರಭುತ್ವವನ್ನು ಮಾಡಿಕೊಂಡು ಹೋಗುವುದು ಪ್ರಭುಪ್ರಜೆಗಳಿಬ್ಬರಿಗೂ ಕ್ಷೇಮಕರವಾಗಿರುವುದು.

ಬಿಜಾಪುರ ಡಿ॥ ಗೆ ಸೇರಿದ ಬಾಗಲಕೋಟೆ ತಾ॥ ಮಾಮಲೆದಾರರಾದ ಮ॥ ರೇವಣಸಿದ್ದಪ್ಪ ಕಿತ್ತೂರ್, ಎಲ್. ಸಿ. ಇ. ಇವರ ಪತ್ನಿಯವರು ಕೆಲಕಾಲದಿಂದ ಕ್ಷಯರೋಗ ಪೀಡಿತರಾಗಿದ್ದು ಕಳೆದ ತಾ॥ ೭ ರ ಬೆಳಗ್ಗೆ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳುಹಲು ವಿಷಾದವಾಗುತ್ತದೆ. ಮ॥ ಕಿತ್ತೂರರವರಿಗೆ ಪತ್ನೀವಿಯೋಗ ದುಃಖಪ್ರಾಪ್ತಿಯಾದುದಕ್ಕಾಗಿ ನಾವು ಬಹುವಾಗಿ ಚಿಂತಿಸಿ, ಮೃತರ ಆತ್ಮಕ್ಕೆ ಶಾಂತಿಯೂ ಅವರ ಪತಿ ಪುತ್ರಾದಿಗಳಿಗೆ ದುಃಖಶಮನವೂ ಉಂಟಾಗಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪೇಟೆಯಲ್ಲಿ ಪ್ಲೇಗು ಮರಣವು ಹೆಚ್ಚುವುದರಲ್ಲಿದೆ.

ಗುಬ್ಬಿಯಲ್ಲಿ ಪ್ಲೇಗುರೋಗವು ಶಾಂತವಾಗಿರುವುದರಿಂದ ಜನರು ತಂತಮ್ಮ ಮನೆಗಳಿಗೆ ಹಿಂತಿರುಗಿ ಬರುವ ಪ್ರಯತ್ನದಲ್ಲಿದಾರೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಮ॥ ಬಾಲಸುಂದರಂಅಯ್ಯರ್‌ರವರು, ಪ್ರೈವೆಟ್ ಸೆಕ್ರೆಟರಿ ಮ॥ ಗೋವಿಂದರಾಯರು, ಡಾ॥ ರಾಘವೇಂದ್ರರಾಯರು ಮತ್ತೆ ಕೆಲರೊಡನೆ ಈಗ ಕಲಕತ್ತಾದಲ್ಲಿರುವ ದಿವಾನರು ಈ ದಿವಸ ಕಲಕತ್ತಾ ಬಿಟ್ಟು ಬೆಂಗಳೂರಿಗೆ ಪ್ರಯಾಣಮಾಡುವರು.

ಚಿಕ್ಕಬಳ್ಳಾಪುರದಲ್ಲಿ ಪ್ಲೇಗುರೋಗವಾರಂಭವಾಗಿ ಜನರು ಮನೆಗಳನ್ನು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡಲುಪಕ್ರಮಿಸಿದ್ದಾರೆ. ಇಲ್ಲಿಯ ಒಬ್ಬ ಪ್ಲೀಡರ ೮ ವರ್ಷ ವಯಸ್ಸಿನ ಮಗಳು ಬಾವಿಯಿಂದ ನೀರನ್ನು ಸೇದುವಾಗ್ಗೆ ಮುಂದಕ್ಕೆ ಮುಗ್ಗರಿಸಿ ಬಾವಿಯೊಳಗೆ ಬಿದ್ದು ಸತ್ತುಹೋದಳು.

ಅಪ್ರಾಪ್ತ ವಯಸ್ಕರೂ, ಇತರರೂ ಕೆಲಸಮಾಡಿ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಮೈಸೂರ ಸೀಮೆಯನ್ನು ಬಿಟ್ಟು ಹೊರಗಣದೇಶಕ್ಕೆ ವಲಸ ಹೋಗುವವರ ಸಂಬಂಧವಾಗಿ ಕೆಲನಿಬಂಧನೆಗಳು ಅನುಷ್ಠಾನಕ್ಕೆ ತರಲ್ಪಡುವ ಬಗೆಗೆ ಕಳೆದವಾರ ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಪಡಿಸಲ್ಪಟ್ಟಿವೆ.

ಬೆಂಗಳೂರ ಹೆಂಚಿನ ಕಾರ್ಯಾಲಯದ ಮ॥ ರಿಕ್ಕಿಯವರು ಕಳೆದ ತಾ॥ ೧೯ ರಲ್ಲಿ ಬೈಸಿಕಲ್ ಸವಾರಿಯನ್ನು ಮಾಡಿಕೊಂಡು ಬರುತ್ತಿರುವಾಗ್ಗೆ ಇದಿರಾಗಿ ಬರುತ್ತಿದ್ದ ಒಬ್ಬ ಹುಡುಗನಿಗೆ ತಾಕುಬಡಿದು ಕೆಳಗೆ ಬಿದ್ದುಬಿಟ್ಟರು. ಅವರ ಕಾಲಿನ ಮೂಳೆಯು ಮುರಿದುಹೋಗಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು.

ನಮ್ಮ ಸಂಸ್ಥಾನದ ಹಿಂದಿನ ದಿವಾನರಾಗಿದ್ದ ಮ॥ ವಿ. ಪಿ. ಮಾಧವರಾಯರು ಬರೋಡಾ ಮಹಾರಾಜರವರ ಆಮಂತ್ರಣದ ಮೇಲೆ ಬರೋಡಾಕ್ಕೆ ಹೋಗಿರುತ್ತಾರೆ. ಇವರು ಗತಿಸಿದ ಆ॥ ವಿ. ಕೃಷ್ಣಸ್ವಾಮಿಅಯ್ಯರ್‌ರವರ ಬದಲು ಮದ್ರಾಸ್ ಗೌರ್ನರ ಎಕ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನಿಯಮಿಸಲ್ಪಡುವರೆಂದು ಒಂದು ವದಂತಿಯಿದೆ.

ಚೆನ್ನರಾಯಪಟ್ಟಣದ ವೀರಶೈವ ಪ್ರಮುಖರು ತಾ॥ ಅಮಲ್ದಾರ್ ಮ॥ ಗೋಪಾಲಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಚಕ್ರವರ್ತಿಯವರಿಂದ ದಿವಾನ್ ಬಹದ್ದೂರ್ ಪ್ರಶಸ್ತಿಯು ಲಭ್ಯವಾದುದಕ್ಕಾಗಿ ತಮಗುಂಟಾಗಿರುವ ಆನಂದಾತಿಶಯವನ್ನು ಪ್ರದರ್ಶಿಸಿ, ಮ॥ ಸೆಟ್ಟರಿಗೆ ಅಭಿನಂದನವನ್ನು ತಂತಿಯಮೂಲಕ ತಿಳುಹಿದರು.

ಶ್ರೀಮನ್ ಮಹಾರಾಜರವರ ಮಾತೃಶ್ರೀಯವರ ಮಾತೆಯವರ ದೇಹಸ್ಥಿತಿಯು ಗುಣಮುಖವಾಗಿದೆಯೆಂದು ತಿಳುಹಲು ಹರ್ಷವಾಗುತ್ತದೆ. ಶ್ರೀಮನ್ ಮಹಾರಾಜರವರೂ, ಮಾತೃಶ್ರೀಯವರೂ, ಮ॥ ಕಾಂತರಾಜಅರಸಿನವರೂ ರುಗ್ಣಶಾಯಿಗಳಾದ ವೃದ್ಧಮಾತೆಯರ ಸಮೀಪದಲ್ಲಿದ್ದು ವಿಚಾರಿಸಿಕೊಳ್ಳುತ್ತಿರುವರು. ಇವರಿಗೆ ಪ್ರಾಯಶಃ ೬೫ ವರ್ಷ ವಯಸ್ಸಾಗಿರಬಹುದು.

ಚೆನ್ನಪಟ್ಟಣದ ಮಹಮ್ಮದೀಯರ ಕೇರಿಗಳಲ್ಲಿ ಪ್ಲೇಗುರೋಗವು ಬಹು ಉಲ್ಬಣವಾಗಿದ್ದು ನಿತ್ಯದಲ್ಲೂ ೮—೧೦ ರ ಮೇಲೆಯೇ ಮರಣವಾಗುತ್ತಿದೆ. ಊರಹೊರಗೆ ಮುನೀಶ್ವರ ದೇವಸ್ಥಾನದ ಬಳಿ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುವವರಲ್ಲಿ ಆಗಾಗ್ಗೆ ಒಂದೊಂದು ಮರಣವಾಗುತ್ತಿದೆ. ಕೋಟೆಯಲ್ಲಿ ಈಗ ಮರಣವಾಗಲಾರಂಭಿಸಿ[illegible] ಅಲ್ಲಿಯ ಜನರೆಲ್ಲರೂ ಹೊರಗೆ ವಾಸಮಾಡ ಹತ್ತಿದ್ದಾರೆ.

ಮಾಲೂರು ತಾ॥ ಅಮಲ್ದಾರರಾದ ಮ॥ ಕೇಶರಸಿಂಗ್‌ರವರು ರಜದಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಪೋಲೀಸು ಇನ್ಸ್‌ಪೆಕ್ಟರ್ ಮ॥ ಶಾಂತವೀರಪ್ಪ ಬಿ. ಎ. ಯವರು ಮಾಲೂರು ತಾ॥ ಆಕ್ಟಿಂಗ್ ಅಮಲ್ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ. ಮ॥ ಶಾಂತವೀರಪ್ಪನವರಿಗೆ ಅಮಲ್ದಾರಿಯುದ್ಯೋಗವು ಬಹುಕಾಲದ ಹಿಂದೆಯೇ ದೊರಕಬೇಕಾಗಿದ್ದಿತಾದರೂ, ಏನುಕಾರಣದಿಂದಲೋ ದೊರೆಯದೆ ಈಗಲಾದರೂ ಲಭ್ಯವಾದುದಕ್ಕಾಗಿ ನಾವು ಸಂತೋಷಿಸುತ್ತೇವಲ್ಲದೆ, ಈ ಉದ್ಯೋಗದಲ್ಲಿ ಅವರು ಸ್ಥಿರಗೊಳಿಸಲ್ಪಡಲೆಂದು ಅಪೇಕ್ಷಿಸುತ್ತೇವೆ.

ಮೈಸೂರ ಸಂಪದಭಿವೃದ್ಧಿಯ ಆಲೋಚನಾ ಸಭೆಗೆ ಸಂಬಂಧಪಟ್ಟ ಬೇಸಾಯ ಸಂಘದವರು ೧ ನೆಯ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ನಾಳೆಯ ದಿನ ಸಭೆಸೇರಿ ಅನೇಕ ವಿಷಯಗಳನ್ನು ಪರ್ಯಾಲೋಚಿಸುವಾಗ್ಗೆ ಈ ಸಂಘದ ಮೆಂಬರಿಗೆ ಈಗ ಸಲ್ಲುತ್ತಿರುವ ರೈಲು ಬಂಡಿಯ ೨ ನೆಯ ತರಗತಿಯ ಎರಡರಷ್ಟು ಬಾಡಿಗೆಯನ್ನೂ ದಿನ ೧ ಕ್ಕೆ ೩ ರೂ. ಭತ್ಯವನ್ನೂ ಇತಃಪರ ತಪ್ಪಿಸಿ ೧ ನೆಯ ತರಗತಿಯ ದ್ವಿಗುಣವಾದ ಬಾಡಿಗೆಯು ರೈಲುಛಾರ್ಜನ್ನೂ ದಿನ ೧ಕ್ಕೆ ೫ರೂ. ಭತ್ಯವನ್ನೂ ಕೊಡಬೇಕೆಂಬ ವಿಚಾರವೂ, ಒಂದು ದೇಶಭಾಷಾ ಪತ್ರಿಕೆಗೆ ಸಂಬಂಧಪಟ್ಟಿರುವವರೊಬ್ಬರು ಈ ಸಂಘದ ಮೆಂಬರಾಗಿರುವುದರಿಂದ, ವೃತ್ತಪತ್ರಿಕೆಗಳ ಪ್ರತಿನಿಧಿಗಳೆಲ್ಲರಿಗೂ ಸಭೆಯ ಕಾಲದಲ್ಲಿ ಪ್ರವೇಶವು ದೊರಕಬೇಕೆಂಬ ವಿಚಾರವೂ ಚರ್ಚಿಸಲ್ಪಡುವುವು.

ಶ್ರೀಮನ್ ಮಹಾರಾಜ ದಂಪತಿಗಳು ಮಹಾಮಾತೃಶ್ರೀಯವರೂ ಕಳೆದ ಸೋಮವಾರ ಬೆಳಗ್ಗೆ ಕಲಕತ್ತಾದಿಂದ ಬೆಂಗಳೂರಿಗೆ ದಯಮಾಡಿಸಿ ಊಟವನ್ನು ತೀರಿಸಿಕೊಂಡು ಮೋಟಾರು ಬಂಡಿಯಲ್ಲಿ ಹೊರಟು ರಾಜಧಾನಿಗೆ ಅದೇ ಮಧ್ಯಾಹ್ನ ೩ ಗಂಟೆಗೆ ಚಿತ್ತೈಸಿದರು. ಮಹಾಸ್ವಾಮಿಯವರ ಸವಾರಿಯ ಕೂಡ ಹೋಗಿದ್ದ ಸರ್‌ದಾರ್ ಗೋಪಾಲರಾಜಅರಸಿನವರು, ಅಮೃತಮಹಲ್ ಭಕ್ಷಿ ಮ॥ ನಂಜುಂಡರಾಜಅರಸಿನವರು, ದರ್ಬಾರ್‌ಭಕ್ಷಿ ಮ॥ ಲಿಂಗರಾಜಅರಸಿನವರು, ಮ॥ ಚಿಕ್ಕಲಿಂಗಪ್ಪಾಜಿಅರಸಿನವರು ಮತ್ತೆ ಕೆಲರು ಹಿಂತಿರುಗಿ ದಯಮಾಡಿಸಿರುವರು ಈಗ ಕಲಕತ್ತಾದಲ್ಲಿರುವ ಶ್ರೀ ಯುವರಾಜ ದಂಪತಿಗಳು, ಮ॥ ದಳವಾಯಿ ದೇವರಾಜ ಅರಸಿನವರು, ಮ॥ ಪುಟ್ಟಯಪ್ಪಾಜಿಅರಸಿನವರು ಮೊದಲಾದವರೊಡನೆ ನಾಳೆಯದಿನ ಬೆಂಗಳೂರಿಗೆ ದಯಮಾಡಿರುವುದಾಗಿ ಅರಿಯುತ್ತೇವೆ.

ಹಾಸನದಲ್ಲಿ ಈಗ ಪ್ಲೇಗುರೋಗವು ಅಡಗಿರುವುದರಿಂದ ಊರ ಹೊರಗಿರುವ ಜನರೆಲ್ಲರೂ ತಂತಮ್ಮ ಮನೆಗಳಿಗೆ ಬಂದುಸೇರಲುಪಕ್ರಮಿಸಿರುವರು. ಇದಕ್ಕಾಗಿ ಸರ್ಕಾರದವರು ಮನೆಗಳ ಶುಚೀಕರಣ ಕಾರ್ಯವನ್ನು ಶ್ರದ್ಧೆಯಿಂದ ಮಾಡಿಸುತ್ತಿದಾರೆ. ಕಿರೀಟಧಾರಣ ಮಹೋತ್ಸವದ ಜ್ಞಾಪನಾರ್ಥವಾಗಿ ಈ ಹಾಸನದಲ್ಲಿ ಜ್ಯುಬಿಲಿಹಾಲಿನ ಸಮೀಪದಲ್ಲಿ ಒಂದು ಕೈಗಾರಿಕೆಯ ಪಾಠಶಾಲೆಯನ್ನು ಸ್ಥಾಪಿಸ ಸಂಕಲ್ಪಿಸಿ ಚಂದಾಹಣವು ಎತ್ತಲ್ಪಡುತ್ತಿದೆ. ಆ॥ ಕಮಿಷನರ್ ಮ॥ ಎಂ. ಶ್ರೀನಿವಾಸಮೂರ್ತಿಯವರೂ, ಅಡ್ವೋಕೇಟ್ ಮ॥ ಎಸ್. ವೆಂಕಟೇಶಯ್ಯನವರೂ ಇದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಕಾರ್ಯಕಾರಿ ಮಂಡಲಿಯ ಜಾಯಿಂಟ್ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ. ಮತ್ತೂ ಈ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಬೇಕೆಂದು ಶ್ರೀಮನ್ ಮಹಾರಾಜರವರನ್ನು ಪ್ರಾರ್ಥಿಸಬೇಕೆಂದಿರುತ್ತಾರೆ.

ಒಂದನೆಯ ಕೌನ್ಸಿಲರ್ ರಾಜಸಭಾಭೂಷಣ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಶ್ರೀರಾಜ ಚಕ್ರವರ್ತಿಯವರಿಂದ ದಿವಾನ್‌ಬಹದ್ದೂರ್ ಎಂಬ ಅಪೂರ್ವವಾದ ಪ್ರಶಸ್ತಿಯು ಲಭ್ಯವಾದುದರ ಸಂತೋಷ ಸೂಚನಾರ್ಥವಾಗಿ ಬೆಂಗಳೂರ ನಿವಾಸಿಗಳೆಲ್ಲರೂ ಅಲ್ಲಿಯ ಲಾಲ್‌ಬಾಗಿನಲ್ಲಿ ಇಷ್ಟರಲ್ಲೇ ಒಂದು ವಿನೋದೋತ್ಸವವನ್ನು ನಡಿಸಿ ಮ॥ ಸೆಟ್ಟರನ್ನು ಸತ್ಕರಿಸಬೇಕೆಂದು ಪ್ರಯತ್ನಪಟ್ಟಿದಾರೆ. ಈ ಉತ್ಸವ ಸಮಾರಂಭವನ್ನು ಯಾವರೀತಿಯಲ್ಲಿ ನಡೆಯಿಸಬೇಕೆಂಬ ಬಗೆಗೆ ಮ॥ ಗಳಾದ ಮಂಡಿ ಹರಿಯಣ್ಣನವರು, ಅಡ್ವೋಕೇಟ್ ಎಚ್. ವಿ. ನಂಜುಂಡಯ್ಯನವರು, ಯಜಮಾನ್ ಬಸಪ್ಪನವರು, ವೀರಭದ್ರಸೆಟ್ಟರು ಮೊದಲಾಗಿ ಎಲ್ಲಾ ಸಂಗಡದ ಮುಖಂಡರು ಆಲೋಚಿಸುತ್ತಿರುವರು. ನಮ್ಮ ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾಗಿ ಬಹುಕಾಲವಿದ್ದು ಈಗ ಧಾರವಾಡ ಡಿಸ್ಟ್ರಿಕ್ಟ್ ಕಲೆಕ್ಟರಾಗಿರುವ ಮ॥ ಇ. ಮೆಕಾನಕಿ, ಐ. ಸಿ. ಎಸ್., ರವರು ಮ॥ ಸೆಟ್ಟರಿಗೆ ಅಭಿನಂದನ ಪತ್ರಿಕೆಯನ್ನು ಬರೆಯುವಾಗ್ಗೆ, "ನಿಮಗೆ ಲಭ್ಯವಾಗಿರತಕ್ಕ ಪ್ರಶಸ್ತಿಯು ನಿಮ್ಮ ಯೋಗ್ಯತೆಯ ಮುಖ್ಯಫಲವಾಗಿರುತ್ತದೆ." ಎಂದು ತಿಳಿಸಿರುತ್ತಾರೆ.

ವರ್ತಮಾನ ಸಂಗ್ರಹವು.

ಜರ್ಮನೀಯವು ಭರತಖಂಡದ [illegible]ದುವುದೆಂಬ ಸುದ್ದಿಯು ನಿರಾಧಾರವಾದುದು.

ಭರತಖಂಡಕ್ಕೆ ಈಜಿಪ್ಟ್ ಎಂಬ ಹಡಗಿನಲ್ಲಿ ೨೬,೫೦,೦೦೦ ರೂ. ಬೆಲೆಯ ಬಂಗಾರವು ಕಳುಹಿಸಲ್ಪಟ್ಟಿರುತ್ತದೆ.

ಒಬ್ಬ ಫ್ರಾನ್ಸಿನ ಆಕಾಶವೈಮಾನಿಕನು ೧೦೦೦ ಅಡಿ ಎತ್ತರದಿಂದ ಬಿದ್ದು ಪ್ರಾಣಾಪಾಯವನ್ನು ಹೊಂದಿದನು.

ಹಿಂದೂ ಸರ್ವಕಲಾಶಾಲೆಯ ಸ್ಥಾಪನೆಗಾಗಿ ಬಿಕನೀರ ಮಹಾರಾಜರು ೪೩೬೦೦೦ ರೂ. ಗಳನ್ನು ಕೊಡಲು ವಾಗ್ದಾನಮಾಡಿರುತ್ತಾರೆ.

ಫ್ರೆಂಚ್ ಸರ್ಕಾರದವರು ಸೇನೆಯ ಉಪಯೋಗಕ್ಕಾಗಿ ಆಕಾಶ ವಿಮಾನಗಳನ್ನು ಕೊಂಡುಕೊಳ್ಳಲು ೧,೩೫,೧೦,೦೦೦ ರೂ. ಗಳನ್ನು ಕೊಡಬೇಕೆಂದು ಪಾರ್ಲಿಮೆಂಟಿನವರನ್ನು ಕೇಳಿರುತ್ತಾರೆ.

ಬರ್ಮಾದ ಅನೇಕ ಕಡೆಯಲ್ಲಿ ಈಚೆಗಾದ ಮಳೆಯಿಂದ ಬತ್ತದಬೆಳೆಯು ಬಹುವಾಗಿ ನಷ್ಟವಾಗಿರುವುದರಿಂದ, ಹೊಸದಾಗಿ ಹಾಕಿರುವ ಬೆಳೆಯು ಕೈಗೂಡುವವರೆಗೂ ಬತ್ತದ ಬೆಲೆಯು ಹೆಚ್ಚಿಸಲ್ಪಡುವ ಸಂಭವವಿರುತ್ತದೆ.

ಜಪಾನಿಗೆ ಸೇರಿದ ಒಸಾಕಾ ಎಂಬಲ್ಲಿ ಬಹು ಭೀಕರವಾದ ಅಗ್ನಿಯ ಅನಾಹುತವು ನಡೆದು ೪೦೩೩ ಮನೆಗಳು ಸುಟ್ಟುಹೋಗಿ ೩೦,೦೦೦ ಜನರಿಗೆ ಮನೆಯಿಲ್ಲದಂತಾಗಿದೆ. ಅನೇಕ ಹೆಂಗುಸರು ಹತರಾಗಿರಬಹುದೆಂದೂಹಿಸಲ್ಪಟ್ಟಿದೆ.

ಬರೋಡಾದ ಗಾಯಕವಾಡ ಮಹಾರಾಜರವರು ತಮ್ಮ ಕುವರಿ ಸೌ॥ ಇಂದಿರಾಬಾಯಿಯವರನ್ನು ಗ್ವಾಲಿಯರ್ ಮಹಾರಾಜರವರಿಗೆ ಕೊಟ್ಟು ಕಳೆದ ತಾ॥ ೨೦ ರಲ್ಲಿ ವಿವಾಹ ಮಹೋತ್ಸವವನ್ನು ಬೆಳೆಯಿಸಬೇಕಾಗಿದ್ದುದನ್ನು ತಪ್ಪಿಸಿ ಮುಂದೆ ನಡೆಯಿಸಲು ನಿರ್ಧರಿಸಿರುವರು.

ನದ್ಯಾ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದ ವಾಸಸ್ಥಳಾದ ೯೪ ವರ್ಷ ವಯಸ್ಸಿನ ಒಬ್ಬ ವೃದ್ಧಸ್ತ್ರೀಯು ತನಗೆ ಚಕ್ರವರ್ತಿಗಳ ದರ್ಶನಲಾಭದಿಂದ ತನ್ನ ಪಾಪವೆಲ್ಲವೂ ನಿವಾರಿತವಾಗಿ ವೈಕುಂಠಪ್ರಾಪ್ತಿಯಾಗುವಂತೆ ಆಶೀರ್ವದಿಸಬೇಕೆಂದು ಬೇಂಗಾಲಿ ಪತ್ರಿಕೆಗೆ ಒಂದು ಲೇಖನವನ್ನು ಬರೆದು ಕಳುಹಿಸಿದ್ದಳು.

ಕೊಲೊಂಬೋದಲ್ಲಿ ಒಬ್ಬ ಜರ್ಮನಿಯ ಆಕಾಶ ವೈಮಾನಿಕನು ತನ್ನ ವಿಮಾನವನ್ನು ೨೦೦ ಅಡಿ ಎತ್ತರದ ಮೇಲಕ್ಕೆ ನಡೆಯಿಸಿಕೊಂಡು ಹೋಗಿ ಪರೀಕ್ಷಿಸುತ್ತಿರುವಾಗ್ಗೆ, ಅದು ಕೆಳಕ್ಕೆ ಬಿದ್ದುಬಿಟ್ಟಿತು. ನಡೆಯಿಸುವವನು ವಿಮಾನದ ಕೆಳಗೆ ಸಿಕ್ಕಿಬಿದ್ದು ಅವನ ತೋಳು ಮುರಿದು ಹೋಯಿತಲ್ಲದೆ ಅವನ ಮೈಗೆ ಪೂರಾಪೆಟ್ಟು ಬಿದ್ದಿರುವುದು

ಇಂಗ್ಲೆಂಡು ಮತ್ತೂ ಸ್ಕಾಟ್ಲೆಂಡುಗಳಲ್ಲಿ ಮಂಜಿನಮಳೆಯು ವಿಪರೀತವಾಗಿ ಸುರಿಯುತ್ತಿರುವುದರಿಂದ, ಡಾಲ್ವೈನಿ ಎಂಬಲ್ಲಿ ಮೇಲುಬಂಡಿಯು ೪೫ ನಿಮಿಷಗಳ ವರೆಗೆ ಮಂಜಿನಲ್ಲಿ ಮುಳುಗಿಹೋಗಿದ್ದಿತು. ಮತ್ತೂ ವೇಲ್ಸಿನಲ್ಲಿ ಲೋಹಮಾರ್ಗವು ಮಂಜಿನಲ್ಲಿ ಮುಚ್ಚಿಹೋಗಿದೆ. ಒಂದು ಹಡಗು ಒಡೆದುಹೋಗಿ ೪೩ ಜನರು ಮುಳುಗಿಹೋದರು.

ಕೋರಿಯಾದ ಸಿಂಹಾಸನಕ್ಕೆ ಮೊದಲು ಉತ್ತರಾಧಿಕಾರಿಯಾಗಿದ್ದು, ಈಗ [illegible] ಶ್ರೀಮಂತನಾಗಿರುವ ಪ್ರಿನ್ಸ್ ಮಿನ್ ಎಂಬುವವನನ್ನು ದಂಗೆಯಕೋರರು ಒಂದು ಹೋಟಲಿನಿಂದೆತ್ತಿಕೊಂಡು ಹೋಗಿ ತಮ್ಮ ದಂಗೆಯ ಕಾರ್ಯಕ್ಕಾಗೇರ್ಪಡಿಸಿಕೊಂಡಿರುವ ಧನರಾಶಿಗೆ ಹಣವನ್ನು ಕೊಡುವಂತೆ ಒಂದು ಹೆಚ್ಚು ಮೊಬಲಗಿನ ಚೆಕ್ಕಿಗೆ ರುಜು ಹಾಕುವಂತೆ ಹಿಂಸೆಮಾಡಿದರು.

ಪಂಜಾಬಿನ ಅಡ್ವೋಕೇಟರುಗಳಲ್ಲೆಲ್ಲ ಬಹು ಪ್ರಸಿದ್ಧರಾಗಿದ್ದ ರಾಯಿಬಹದ್ದೂರ್ ಲಾಲಚಂದರವರು ರೋಗಗ್ರಸ್ತರಾಗಿದ್ದು ಕಳೆದ ತಾ॥ ೧೮ ರಲ್ಲಿ ವಿಧಿವಶರಾದರು. ಇವರಿಗೆ ೬೦ ವರ್ಷ ವಯಸ್ಸಾಗಿದ್ದಿತು. ಇವರು ದಯಾನಂದರವರ ಆಂಗ್ಲೋ ವೈದಿಕ ಪ್ರೌಢವಿದ್ಯಾಲಯದ ಕಾರ್ಯನಿರ್ವಾಹಕ ಸಂಘದ ಮತ್ತೂ ಪಂಜಾಬು ಪ್ರಾಂತಿಕ ಸಭೆಯ ಅಧ್ಯಕ್ಷರಾಗಿದ್ದರು

ಯಾಕೋಹಾಮದಲ್ಲಿ ಒಬ್ಬ ಡಾಕ್ಟರು ಕ್ರಿಮಿಗಳು ಪ್ರವೇಶಿಸದಂತೆ ಒಂದು ವಿಚಿತ್ರತರವಾದ ಮನೆಯನ್ನು ಕಟ್ಟಿರುತ್ತಾನೆ. ಇದರ ಗೋಡೆಗಳಿಗೆಲ್ಲ ಪೊಳ್ಳಾದ ಗಾಜುಗಳು ಪ್ರಯೋಗಿಸಲ್ಪಟ್ಟಿರುತ್ತವೆ ಈ ಪೊಳ್ಳು ಭಾಗದಲ್ಲಿ ಸೋತಾವುಷ್ಣಿತ ನೀರನ್ನು ತುಂಬಿಟ್ಟಲ್ಲಿ ಮನೆಯೊಳಗಣ ವಾಯುಗುಣದ ಹೆಚ್ಚು ಕಡಿಮೆಯನ್ನು ಕ್ರಮಪಡಿಸುತ್ತದೆ. ಕಿಟಿಕಿಗಳು ಮುಚ್ಚಲ್ಪಟ್ಟಿವೆ. ಹೊರಗಣ ವಾಯುವು ಪರಿಶುದ್ಧಪಡಿಸಲ್ಪಟ್ಟು ಒಳಗೆ ಬಿಡಲ್ಪಡುವುದು.

ಕಳೆದ ತಾ॥ ೧೫ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಪ್ಲೇಗುಮರಣವು ಹಿಂದಣ ವಾರದಲ್ಲಾಗಿದ್ದುದಕ್ಕಿಂತ ೧೪೩೯ ಹೆಚ್ಚಿರುತ್ತದೆ ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೧೪೮ ಮತ್ತೂ ಬಂಗಾಳದಲ್ಲಿ ೪೦೩ ಮರಣಗಳು ಹೆಚ್ಚಿರುವುವಲ್ಲದೆ, ಮದ್ರಾಸಾಧಿಪತ್ಯದಲ್ಲಿ ೪೯೦; ಸಂಯುಕ್ತ ಪ್ರಾಂತಗಳಲ್ಲಿ ೩,೦೪೩; ಪಂಜಾಬಿನಲ್ಲಿ ೧೩೦; ಬರ್ಮಾದಲ್ಲಿ ೬೦; ಮೈಸೂರು ಸೀಮೆಯಲ್ಲಿ ೩೯೪; ಹೈದರಾಬಾದ್ ಸೀಮೆಯಲ್ಲಿ ೨೦೩೩ ಮತ್ತೂ ಮಧ್ಯಹಿಂದೂಸ್ಥಾನದಲ್ಲಿ ೪೩೦ ಈ ಪ್ರಕಾರ ಮರಣವಾಗಿರುತ್ತದೆ.

ಕಳೆದ ತಾ॥ ೧೯ ರಲ್ಲಿ ಪ್ರಯಾಗದಲ್ಲಿ ಗಂಗಾಯಮುನಾ ನದಿಗಳ ಸಂಗಮದಲ್ಲಿ ೨೦ ಲಕ್ಷ ಜನರು ಸ್ನಾನವನ್ನು ಮಾಡಿದರು. ಇದಕ್ಕಾಗಿ ಭರತಖಂಡದ ಬಹುಭಾಗದಿಂದ ಲಕ್ಷಾಂತರ ಯಾತ್ರಿಕರು ಬಂದಿದ್ದರು. ನಾನಾಪಂಗಡದ ಸಾಧುಗಳು ಗುಂಪುಗುಂಪಾಗಿ ಉತ್ಸವದೊಡನೆ ಬಹು ವಿಜೃಂಭಣೆಯಿಂದ ಬಂದುದು ಪ್ರೇಕ್ಷಣೀಯವಾಗಿದ್ದಿತು. ಈ ಉತ್ಸವಗಳಲ್ಲಿ ಕೆಲರು ಮಕಮಲ್ಲಿನ ಮೇಲೆ ಚಿನ್ನದ ಸರಿಗೆಯಿಂದ ಕಸೂತಿಮಾಡಿರುವ ಬಾವುಟಗಳನ್ನು ಹಿಡಿದುಕೊಂಡಿದ್ದರು. ಇವುಗಳೊಂದೊಂದಕ್ಕೆ ೧೦೦೦ರೂ. ವರೆಗೆ ಕ್ರಯವಾಗಿದ್ದಿತು.

ಅಮೇರಿಕಾದ ಧರ್ಮಪ್ರವೃತ್ತಿಗಳು ೧೯೧೧ ರಲ್ಲಿ ೩೩೫೦೦೦೦೦ ರೂ. ಗಳನ್ನು ಧರ್ಮಕಾರ್ಯಗಳಿಗಾಗಿ ಕೊಟ್ಟಿರುವರು. ೧೯೦೧ ರ ಆರಭ್ಯ ಈ ವರೆಗೆ ಒಟ್ಟು ೬೩೩೫೦೦೦೦೦ ರೂ. ಗಳು ಧರ್ಮಕ್ಕಾಗಿ ಕೊಡಲ್ಪಟ್ಟಿರುತ್ತವೆ ಕಲಿಕರ್ಣನೆಂದು ಹೆಸರ್ವಡೆದ ಕಾರ್ನಿಗಿಯು ಕಳೆದವರ್ಷದಲ್ಲಿ ೧೨,೦೦,೦೦,೦೦೦ ರೂ. ಗಳನ್ನೂ ಕೊಟ್ಟಿರುತ್ತಾನೆ. ಈತನಿಗಿಂತಲೂ ಧನಾಢ್ಯನಾದ ರಾಕ್‌ಫೆಲರು ೧,೩೫,೦೦,೦೦೦ ರೂ. ಗಳನ್ನು ಧರ್ಮಮಾಡಿ ಧರ್ಮಿಷ್ಠರಲ್ಲಿ ೨ ನೆಯ ಸ್ಥಾನಾಪನ್ನನಾಗಿದ್ದಾನೆ.

ಹಿಪೊಡ್ರೋಂ ಕುದುರೆಯಾಟದ ಸಂಘದ ಮ್ಯಾನೇಜರಾದ ಎಬಲ್ ಎಂಬುವನು ಬರ್ಮಾದಲ್ಲಿ ಒಂದು ಹೋಟಲಿನಲ್ಲಿ ಕಾಡುಮೃಗಗಳ ವ್ಯಾಪಾರವನ್ನು ಮಾಡುವ ಎಲ್ಮೋರ್ ಎಂಬುವನ ಕೂಡ ಊಟಮಾಡುತ್ತಿರುವಾಗ್ಗೆ ತನ್ನ ಒಂದು ಹೆಣ್ಣು ಹುಲಿಯನ್ನು ೧೦೦೦ ರೂಪಾಯಿಗೆ ವಿಕ್ರಯಿಸುತ್ತೇನೆಂದು ಒಪ್ಪಿಕೊಂಡು ಒಬ್ಬ ಸಾಕ್ಷಿಯ ಇದಿರಿಗೆ ೧೦೦೦ ರೂಪಾಯಿಗಳನ್ನು ತೆಗೆದುಕೊಂಡು ಹುಲಿಯನ್ನು ಕೊಡದೆಹೋದುದರ ಮೇಲೆ, ಎಲ್ಮೋರ್ ಎಂಬುವನು ಕೋರ್ಟಿನಲ್ಲಿ ವಿವಾದವನ್ನು ಮಾಡಿ ಹುಲಿಯನ್ನು ಹಿಡಿದು ಕೋರ್ಟಿಗೆ ತರುವಂತೆ ಅಪ್ಪಣೆಯನ್ನು ಪಡೆದುಕೊಂಡನು. ಆದರೆ ಪಂಜರವನ್ನು ಜಪ್ತಿಮಾಡಲು ಕೋರ್ಟಿನ ಅಪ್ಪಣೆಯಿಲ್ಲವಾದುದರಿಂದ, ಪಂಜರವಿಲ್ಲದೆ ಹುಲಿಯನ್ನು ಹೊರಗೆ ತರಲಾಗಲಿಲ್ಲವು. ಹುಲಿಯು ಈಗ ಕೊಲೊಂಬೋಕ್ಕೆ ಹೋಗಿರುತ್ತದೆ.

ಕಾರ್ನವಾಲಿನಲ್ಲಿ ಒಬ್ಬ ಮನುಷ್ಯನ ಮನೆಯು ಅದರೊಳಗಿದ್ದ ಸಮಸ್ತ ಪದಾರ್ಥಗಳು ಮತ್ತೂ ಉದ್ಯಾನ ಇವುಗಳೊಡನೆ ಅಕಸ್ಮಾತ್ ಅದೃಶ್ಯವಾಗಿರುತ್ತದೆ. ಜೀವಸಹಿತ ತಪ್ಪಿಸಿಕೊಂಡ ಆ ಮನೆಯ ವಾಸಸ್ಥರು ತಮ್ಮ ಮನೆಯು ನಾಶವಾದುದರ ಕಾರಣವನ್ನು ಕಂಡುಹಿಡಿಯಲು ನಾನಾವಿಧ ಪ್ರಯತ್ನವನ್ನು ಮಾಡಿದುದರಲ್ಲಿ, ಉಪಯೋಗಿಸಲ್ಪಡದಿರುವ ಒಂದು ಗಣಿಯ ಪ್ರದೇಶದಲ್ಲಿ ಮನೆಯು ತಳಹದಿಯು ಕಟ್ಟಲ್ಪಟ್ಟಿದ್ದುದರಿಂದ, ಇಂತಹ ದುರವಸ್ಥೆಯು ಪ್ರಾಪ್ತವಾಯಿತೆಂದು ಗೊತ್ತಾಯಿತು. ಫರ್ನೆಸ್ ಎಂಬಲ್ಲಿ ಲೋಹಮಾರ್ಗದ ಒಂದು ಭಾಗವು ಕಲ್ಲಿದ್ದಲೂ, ಕಬ್ಬಿಣವೂ ವಿಶೇಷವಾಗಿ ದೊರೆಯುವ ಸ್ಥಳದಲ್ಲಿ ಹಾದುಹೋಗಿರುತ್ತದೆ. ಒಂದು ದಿವಸ ಒಂದು ಹಳೆಯ ಎಂಜನ್ನು ಆ ಮಾರ್ಗವಾಗಿ ಹೋಗುತ್ತಿರುವಾಗ್ಗೆ, ಮಾರ್ಗವು ಕುಸಿದುಹೋಗಿ ಇಂಜನ್ನು ಭೂಮಿಯೊಳಗೆ ಕುಸಿದುಹೋಯಿತು. ನಡೆಸುವವರು ಬಹು ಚಮತ್ಕಾರದಿಂದ ಹೊರಗೆ ಹಾರಿ ಪ್ರಾಣಸಹಿತ ಉಳಿದುಕೊಂಡರು. ಆ ಇಂಜನ್ನು ಪಾತಾಳಕ್ಕೆ ಹೋಗಿ ಸೇರಿದುದರಿಂದ ಈ ವರೆಗೂ ಅದು ದೊರೆಯಲಿಲ್ಲವು.

ರಘುನಂದನನೆಂಬುವನು ಕೆಲ ಹುಡುಗಿಯರ ಕೂಡ ಕಾಡಿನಲ್ಲಿ ಕಟ್ಟಿಗೆಯನ್ನು ಕೂಡಿಹಾಕುತ್ತಿರುವಾಗ್ಗೆ, ಹಠಾತ್ತಾಗಿ ಒಬ್ಬ ಹುಡುಗಿಯ ವಿನಾ ಇತರ ಹುಡುಗಿಯರನ್ನೆಲ್ಲಾ ಓಡಿಸಿಬಿಟ್ಟು, ಆ ಹುಡುಗಿಯನ್ನು ಒದೆದು ಕೆಳಗೆ ಕೆಡವಿ ಅನಂತರ ಅವಳನ್ನು ತಾನು ಅಗಿಯುತ್ತಿದ್ದ ಗುಳಿಗೆ ತೆಗೆದುಕೊಂಡು ಹೋಗಿ ಅದರೊಳಗೆ ಅವಳನ್ನು ಹಾಕಿ "ಮಹಾವೀರ! ಇಳಿದು ಬಾ: ಕರಿದೇವತೆಯೆ! ಇಳಿದು ಬಾ; ಬಿಂದಾಚಲ! ಇಳಿದು ಬಾ; ನಿಮಗೆ ಒಂದು ನರಬಲಿಯನ್ನು ಕೊಡುತ್ತೇನೆ." ಎಂದು ಮೂರಾವೃತ್ತಿ ಕೂಗಿಕೊಂಡು, ಅನಂತರ ಎರಡು ಕಲ್ಲುಗಳನ್ನು ತೆಗೆದುಕೊಂಡು ಅವುಗಳಲ್ಲೊಂದನ್ನು ಅವಳ ಬೆನ್ನಿಗೂ, ಮತ್ತೊಂದನ್ನು ಅವಳ ತಲೆಗೂ ಹೊಡೆದು ಅವಳ ಮೇಲೆ ಮಣ್ಣನ್ನು ಎಳೆದು ಗುಳಿಯನ್ನು ಮುಚ್ಚಿಬಿಟ್ಟನು. ಈ ವರ್ತಮಾನವನ್ನು ಆ ಹುಡುಗಿಯ ತಾಯಿಯು ಕೇಳಿ ಕೆಲ ಜನರ ಕೂಡ ಕೃತ್ಯನಡೆದ ಸ್ಥಳಕ್ಕೆ ಬಂದು ಆ ಚಂಡಾಲನು ಗುಳಿಗೆ ಮಣ್ಣನ್ನು ಹಾಕಿ ಕಾಲಿನಿಂದ ಅದುಮುತ್ತಿದ್ದುದನ್ನು ನೋಡಿ ಹತ್ತಿರಕ್ಕೆ ಬರುತ್ತಿರುವಲ್ಲಿ, ಆ ಚಂಡಾಲನು ಒಂದು ದೊಣ್ಣೆಯನ್ನು ಹೆಗಲಿನ ಮೇಲಿಟ್ಟುಕೊಂಡು "ಕಪ್ಪುದೇವತೆಯೆ! ಪ್ರಸನ್ನಳಾಗು; ಬಿಂದಾಚಲ! ಪ್ರಸನ್ನನಾಗು; ಮಹಾವೀರ! ಪ್ರಸನ್ನನಾಗು." ಎಂದು ಗಟ್ಟಿಯಾಗಿ ಕೂಗಿಕೊಂಡು ಅವರ ಸಮೀಪಕ್ಕೆ ಬಂದು ತನ್ನ ದೊಣ್ಣೆಯನ್ನು ಕೈಲಿ ಹಿಡಿದುಕೊಂಡು "ಇದು ನನ್ನ ಪವಿತ್ರಸ್ಥಳವು; ಇಲ್ಲಿಗೆ ನೀವು ಬರಕೂಡದು" ಎಂದು ಕೂಗಿಕೊಂಡನು. ಅನಂತರ ಅವನು ಸೆರೆಹಿಡಿಯಲ್ಪಟ್ಟು ಪರೀಕ್ಷಿಸುವಲ್ಲಿ ಬುದ್ಧಿಭ್ರಾಂತನಾಗಿ ಕಂಡುಬಂದನು. ಆದರೂ ನಡೆಯಿಸಿದ ಕೃತ್ಯವನ್ನೆಲ್ಲ ಸರಿಯಾಗಿ ಒಪ್ಪಿಕೊಂಡುದರಿಂದ ಮರಣದಂಡನೆಗೆ ಗುರಿಯಾದನು.

[ವರ್ತಮಾನಕಾರರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು — ಪ. ಪ್ರ.]

ಪತ್ರವ್ಯವಹಾರವು.

ಬೆಂಗಳೂರ ಮಾಮೂಲ್‌ಪ್ಯಾಟೆ ಜಂಗಮಮಠ ಪುರುಷ್ ಗಂಜಾಮ್ಮಠದ ಶ್ರೀ ನಂಜುಂಡಸ್ವಾಮಿಗಳವರ ಕರಕಂಜೋದ್ಭವರಾದ ಶ್ರೀಮಚ್ಚಿದ್ಘನ ಶಿವಾಚಾರ್ಯಪೂಜ್ಯಪಾದರು ತಾ॥ ೬-೧-೧೨ ನೇ ಶನಿವಾರ ರಾತ್ರಿ ದೇಹದಲ್ಲಿ ಹೆಚ್ಚು ಅಸ್ವಸ್ಥತೆ ಇರುವದನ್ನು ತಿಳಿದು ೩-೪ ಗಂಟೆ ಮುಂಚಿತವಾಗಿ ಬರೆಯಿಸಿದ ವಿಲ್ ಯಾನೆ ಮರಣಶಾಸನದ ಕ್ರಮವೆಂತೆಂದರೆ— ಶ್ರೀಗಳವರ ಅಪ್ಪಣೆಯಂತೆ ಹೇಳಿ ಬರೆಯಿಸಿದ್ದು. ನಮ್ಮ ಮಠದಲ್ಲಿಯೇ ವಿದ್ಯಾಭ್ಯಾಸಕ್ಕೂ, ಸದಾಚಾರವನ್ನು ತಿಳಿದುಕೊಳ್ಳುವದಕ್ಕೂ ಬಂದಿರುವ ಈಗ ಅನಿತ್ಯವಾಗಿ ಅರಸೀಕೆರೆ ತಾಲ್ಲೋಕ್ ಜಾವಗಲ್ ಹೋಬಳಿ ಹಾಲಿ ಗುತ್ತೇನಹಳ್ಳಿಯಲ್ಲಿ ವಾಸವಾಗಿರುವ ಕೂಡ್ಲಿಗಿ ಮಠದ ಚಂದಪ್ಪನವರ ಮಕ್ಕಳು ಬಸವರಾಜ ಮರಿದೇವರನ್ನೇ ಆಶ್ರಮಮಾಡುವಹಾಗೆ ಅಪ್ಪಣೆಮಾಡಿದರು. ಸೆಟ್ಟಿ ಯಜಮಾನರೇ ಮುಂತಾದ ಪುರಪ್ರಮುಖರ್ಯಾವತ್ತೂ ಚಿದ್ಘನ ಶಿವಾಚಾರ್ಯ ಪೂಜ್ಯಪಾದರ ಪೂರ್ವಾಶ್ರಮಕ್ಕೆ ಅತ್ಯಂತ ಸಮೀಪಸ್ಥರಾಗಿರುವ ಮರಿದೇವರ ವಿಷಯದಲ್ಲಿ ಶ್ರೀಗಳವರ ಮಾತಿಗೆ ಬದಲುಜವಾಬು ಇಲ್ಲವೇಯಿಲ್ಲವೆಂತಲೂ ಹೇಳುವಷ್ಟರೊಳಗೆ ಅಂಗ ಸಹಿತವಾಗಿರುವಾಗಲೇ (ಸಜೀವಿಗಳಾಗಿರುವಾಗಲೇ) ಇದನ್ನು ಕ್ರಮವಾಗಿ ಬರಸಿ, ಶ್ರೀಗಳವರು ಜಯನಮಃ ಪಾರ್ವತೀಪತೇ ಹರಹರ ಮಹದೇವ ಎಂತ ಅಂತರ್ಮುಖರಾದರು. ವಸ್ತುವನ್ನು ಬಿಟ್ಟರು. ತಾ॥ ೧೪-೧-೧೨ ನೇ ಭಾನುವಾರ ಅಪರಾಹ್ಣದಲ್ಲಾಯಿತ್ತು. ದೊಡ್ಡಪ್ಯಾಟೆಯಲ್ಲಿ ಕೊಳದ ಮಠಕ್ಕೆ ಹೋಗುವ ದಾರಿಯುದ್ದಕ್ಕೂ ಸಮಸ್ತ ಜಾತಿಯವರೂ ಶ್ರೀಗಳವರ ಮೂರ್ತ್ಯುತ್ಸವಕ್ಕೆ ಕಾಯಿ ಕರ್ಪೂರ ಮೊದಲಾದ್ದನ್ನು ಪಡಸುತ್ತಾ ಇದ್ದುದಲ್ಲದೆ ರೋದನ ಧ್ವನಿಯಿಂದಲೂ ಜನಗಳಿಂದಲೂ ಸಾಂದ್ರವಾಗಿತ್ತು. ಗುರುಭಕ್ತ.

ಚನ್ನಗಿರಿ.

ಮೈಸೂರು ದೇಶದ ಶ್ರೀಮಾನ್ ಮಹಾರಾಜರಾಜಾಸಾಹೇಬ್ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್. ಜಿ. ಸಿ. ಎಸ್. ಐ., ಇವರಿಂದ ಪೋಷಿಸಲ್ಪಡುತ್ತಿರುವ ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿಯಲ್ಲಿ ಪುರಾತನವಾದ ಕೋಟೆಯೂ, ಬೆಟ್ಟವೂ, ಇದರ ಮೇಲೆ ಸುಂದರವಾದ ಶ್ರೀರಂಗನಾಥಸ್ವಾಮಿಯವರ ದೇವಾಲಯವೂ, ಮನೋಹರವಾದ ಕೊಳವೂ ಪ್ರಕಾಶಿಸುತ್ತಿರುವವು. ಬೆಟ್ಟದ ಮೇಲಿರುವ ದೇವಸ್ಥಾನಕ್ಕೆ ಹೋಗುವುದೇ ಬಹು ಕಷ್ಟವಾಗಿತ್ತು. ಈ ಮುಂಚೆ ಈ ತಾಲ್ಲೂಕಿಗೆ ಅಮಲ್ದಾರರಾಗಿ ದಯಮಾಡಿಸಿದ್ದ ಮ॥ ಸಾಲಗಾಮೆ ನರಸಿಂಗರಾಯರವರು ಈ ಬೆಟ್ಟಕ್ಕೆ ಉತ್ತರ ಭಾಗದಲ್ಲಿ ೧ ರಸ್ತೆಯನ್ನು ಮಾಡಿಸಿ ಅನುಕೂಲಪಡಿಸಿದರು. ಈಗ ಸುಮಾರು ೧೦ ವರ್ಷಗಳಿಂದ ಯಾವಕಾರಣದಿಂದಲೋ ಈ ದೇವಸ್ಥಾನವೂ, ಬೆಟ್ಟವೂ ಹೀನಸ್ಥಿತಿಗೆ ಬಂದು ದೇವರ ರಥೋತ್ಸವವೇ ನಿಂತುಹೋಗಿತ್ತು. ತೇರಿನ ಗಾಲಿಗಳೆಲ್ಲಾ ಗೆದ್ದಲುಹಿಡಿದು ಕೆಟ್ಟುಹೋಗಿದ್ದುವು. ಈಗ ಈ ತಾಲ್ಲೂಕಿಗೆ ಅಮಲ್ದಾರರಾಗಿ ಮ॥ ರಾ॥ ಎಸ್. ಎನ್. ಶ್ರೀನರಸಿಂಹಶಾಸ್ತ್ರಿಗಳವರು ದಯಮಾಡಿಸಿದ ಒಡನೆಯೇ ರಥೋತ್ಸವವು ನಿಂತಿರುವುದನ್ನು ಕೇಳಿ ಬಹಳ ಶ್ರಮವಹಿಸಿ ರಥದ ಗಾಲಿಗಳನ್ನು ಮಾಡಿಸಿದರು. ರಥೋತ್ಸವವು ೩ ತಿಂಗಳು ಇರುವಾಗ ಬೆಟ್ಟದಮೇಲೆ ಉತ್ತಮವಾದ ಆನಂದವಿಲಾಸವೆಂಬ ಮನೆಗಳನ್ನೂ, ಪಾಕಶಾಲಾ, ಬುರ್ಜಿನಮೇಲೆ ಬಂಗಲೆ ಇವುಗಳನ್ನು ಸಿದ್ಧಗೊಳಿಸಿದರು, ಬೆಟ್ಟದಮೇಲೆ ರಸ್ತೆಗಳೂ ತಯಾರಾದವು. ಮಾಘಶುದ್ಧ ೧೫ ರಲ್ಲಿ ರಥೋತ್ಸವವನ್ನು, ವ್ಯವಸಾಯ ಕೈಗಾರಿಕೆ ವಸ್ತುಗಳ ಮತ್ತು ಜಾನುವಾರುಗಳ ಪ್ರದರ್ಶನವನ್ನೂ ಅತಿವಿಜೃಂಭಣೆಯಿಂದ ನಡಿಸಿದರು. ಈ ವರ್ಷದ ರಥೋತ್ಸವ ಕಾಲದ ಒಳಗಾಗಿ ಇವರು ನೆರವೇರಿಸಿರುವ ಮಹತ್ಕಾರ್ಯಗಳು ಚಿರಸ್ಮರಣೀಯವಾದವುಗಳಾಗಿವೆ. ಟವನ್‌ನಲ್ಲಿ ವಿಶಾಲವಾದ ರಸ್ತೆಗಳನ್ನು ಮಾಡಿಸಿದರು. ೪೭ ಗ್ರಾಮಗಳ ಪ್ರಜೆಗಳಿಗೆ ಅನುಕೂಲವಾಗಿರುವಂತೆ ಪರಸ್ಪರಸಹಾಯ ಸಂಘವನ್ನು ಸ್ಥಾಪಿಸಿ ಇದಕ್ಕೋಸ್ಕರ ಒಂದು ಹೊಸ ಕಟ್ಟಡವನ್ನು ತಯಾರುಮಾಡಿಸಿದರು. ಈ ಬೆಟ್ಟಕ್ಕೆ ಪೂರ್ವಭಾಗದಲ್ಲಿ ರಸ್ತೆಯನ್ನೂ ಸೋಪಾನಗಳನ್ನೂ ಮಾಡಿಸಿದರು. ಈ ಮಹಾನುಭಾವರ ಪ್ರೇರಣೆಯಿಂದ ಈ ರಸ್ತೆಯಮೇಲ್ಭಾಗದಲ್ಲಿ ಅಜ್ಜಿಹಳ್ಳಿ ವಾಸಿ ರೇವಪ್ಪನ ಮಹದೇವಣ್ಣ ಮರುಳಣ್ಣ ಎಂಬ ಅಣ್ಣ ತಮ್ಮಂದಿರು ಶ್ರೀಮದಿಂಡಿಯಾ ಚಕ್ರವರ್ತಿಯವರ ಪಟ್ಟಾಭಿಷೇಕ ಮಹೋತ್ಸವ ಜ್ಞಾಪನಾರ್ಥವಾಗಿ ಉತ್ತಮವಾದ ಮಹಾದ್ವಾರವನ್ನು ಕಟ್ಟಿಸಿದರು. ಈ ವರ್ಷ ರಥೋತ್ಸವ ಕಾಲದಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನವನ್ನು ನಡಿಸುವ ಬಗ್ಗೆ ನಮ್ಮ ಅಮಲ್ದಾರರವರು ನಡಿಸುತ್ತಿರುವ ಅನರ್ಘ್ಯವಾದ ಸಾಹಸಕಾರ್ಯಗಳನ್ನು ಈ ತಾಲ್ಲೂಕಿನ ಪ್ರಜೆಗಳು ಯಾವಾಗಲೂ ಮರೆಯುವಹಾಗಿಲ್ಲ. ಕೋಟೆಯಮೇಲೆ ಎಲ್ಲಿ ನೋಡಿದಾಗ್ಯೂ ರಸ್ತೆಗಳೂ, ಚಪ್ಪರಗಳೂ, ಬಂಗಲೆಗಳೂ, ಮನೋಹರವಾದ ಹೂದೋಟವೂ ಇವುಗಳಿಂದ ರಮಣೀಯವಾಗಿವೆ. ಬರುವ ಫೆಬ್ರವರಿ ತಾರೀಖು ೨-೩-೪ ಈ ದಿವಸಗಳಲ್ಲಿ ರಥೋತ್ಸವವೂ, ವ್ಯವಸಾಯ ಕೈಗಾರಿಕೆ ವಸ್ತುಗಳ ಮತ್ತು ಪ್ರಾಣಿಗಳ ಪ್ರದರ್ಶನವೂ ನಡಿಸಲ್ಪಡುತ್ತೆ. ಉತ್ತಮವಾದ ವಸ್ತುಗಳಿಗೆ ಬಂಗಾರದ ಮತ್ತು ಬೆಳ್ಳಿಯ ಮೆಡಲ್‌ಗಳೂ, ದ್ರವ್ಯರೂಪವಾದ ಬಹುಮಾನಗಳೂ ಹಂಚಲ್ಪಡುವುವು. ಒಳ್ಳೆಯ ಕುಸ್ತಿಗಳು ನಡೆಯಲು ಏರ್ಪಾಡಾಗಿರುವುದು. ಕುಸ್ತಿಯಲ್ಲಿ ಗೆದ್ದವರಿಗೆ ಬಂಗಾರದ ಮತ್ತು ಬೆಳ್ಳಿಯ ಬಳೆಗಳ ಬಹುಮಾನವು ದೊರೆಯಲು ಏರ್ಪಾಡಾಗಿರುವುದು. ಈಗಾಗಲೇ ಅನೇಕ ಕಡೆಗಳಿಂದ ಸಾಮಾನುಗಳು ಬರುತ್ತಾ ಇವೆ. ಇದೇ ಕಾಲದಲ್ಲಿಯೇ ಶ್ರೀ ಶಿವಲಿಂಗಸ್ವಾಮಿಗಳವರ ಗದ್ದಿಗೆ ಮಠದಲ್ಲಿ ದುಗ್ಗಳೆಂಬ ದೇವರ ಉತ್ಸವವೂ, ಬಹುಕಡೆಯಿಂದ ಬರುವ ಲಿಂಗಾಯತ ಮಂಡಲಿಯವರಿಗೂ, ಇತರ ಮತಸ್ಥರಿಗೂ ಆತಿಥ್ಯವು ನಡಿಸಲ್ಪಡುವುದು. ಮತ್ತು ಈ ಊರಿಗೆ ೧ ಮೈಲಿ ದೂರದಲ್ಲಿರುವ ಮುದ್ದೇಹಳ್ಳಿ ಶ್ರೀ ಆಂಜನೇಯ ದೇವರ ರಥೋತ್ಸವವೂ ನಡಿಸಲ್ಪಡುವುದು. ಈ ಊರಿನಲ್ಲಿ ಅವಿಚ್ಛಿನ್ನವಾಗಿ ದೇವತಾಸೇವೆಯೂ ಅತಿಥಿ ಸತ್ಕಾರವೂ ನಡಿಯುತ್ತಿರುವುದರಿಂದಲೇ ಈ ಊರಿಗೆ ಯಾವ ವಿಧವಾದ ಈತಿಬಾಧೆಯೂ ಇಲ್ಲದೆ ಇವೆ. ಇದಕ್ಕೆಲ್ಲಾ ನಮ್ಮ ಅಮಲ್ದಾರರೇ ಕಾರಣರಾಗಿ ಪ್ರಜೆಗಳೆಲ್ಲಾ ಸೌಖ್ಯವನ್ನು ಅನುಭವಿಸುತ್ತಾ ತಾವೇ ರಾಮರಾಜ್ಯವಾಸಿಗಳೆಂದು ತಮ್ಮ ಸಂತೋಷವನ್ನು ಏಕಕಂಠದಿಂದ ಉದ್ಘೋಷಿಸುತ್ತಲಿದ್ದಾರೆ. ಇಂತಹ ವಿಜೃಂಭಣೆಯಾಗಿ ನಡೆಯುವ ಉತ್ಸವಗಳನ್ನು ನೋಡಲಿಕ್ಕೂ ವ್ಯವಸಾಯ ಮತ್ತು ಕೈಗಾರಿಕೆಯ ವಸ್ತುಗಳನ್ನೂ ದನಗಳನ್ನೂ ಪ್ರದರ್ಶಿಸಲಿಕ್ಕೂ ಅನೇಕ ಸ್ಥಳಗಳಿಂದ ಜನಗಳು ಬರತಕ್ಕವರಾಗಿದ್ದಾರೆ. ಈ ಉತ್ಸವಗಳ ಕಾಲಕ್ಕೆ ದಯಮಾಡಿಸಿ ಪ್ರದರ್ಶನವನ್ನು ತೆರೆಯಲಿಕ್ಕೆ ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನ್ ಸಾಹೇಬರವರು ಕಳುಹಿಸಿಕೊಟ್ಟ ಬಿನ್ನಪವನ್ನು ನಮ್ಮ ದೇಶದ ಸೀನಿಯರ್ ಕೌನ್ಸಿಲರ್ ಶ್ರೀಮಾನ್ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಅಂಗೀಕರಿಸಿರುತ್ತಾರಾಗಿ ಕೇಳಿ ಬಹಳ ಸಂತೋಷಪಡುತ್ತೇವೆ. ನಮ್ಮನ್ನು ಆಳುತ್ತಿರುವ ಶ್ರೀಮಾನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಜಿ. ಸಿ. ಎಸ್. ಐ, ಇವರ ಆಳುವಿಕೆಯಲ್ಲಿ ಬಡ ಪ್ರಜೆಗಳಾದ ನಾವುಗಳು ಈಗಿನ ಕಾಲಕ್ಕೆ ಇಂತಹ ಮಹದುತ್ಸವವನ್ನು ನೋಡತಕ್ಕ ಕಾಲವು ಒದಗಿರುವದಕ್ಕಾಗಿ ಬಹಳ ಕೃತಜ್ಞರಾಗಿದ್ದೇವೆ. ಇಂತಹ ಉತ್ಸವಗಳ್ಯಾವತ್ತು ನಿರ್ವಿಘ್ನವಾಗಿ ನಡೆಯುವಂತೆ ಶ್ರೀರಂಗನಾಥದೇವರನ್ನು ಪ್ರಾರ್ಥಿಸುತ್ತೇವೆ.

ಸೊಲ್ಲಾಪುರದಲ್ಲಿ ನಡೆದ ಉತ್ಸವ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸವಾರಿಯು ಇದೇ ತಿಂಗಳು ೧೧ ನೇ ತಾರೀಖಿನ ದಿವಸ ಶ್ರೀ ರೇವಣಸಿದ್ಧೇಶ್ವರ ದೇವಾಲಯದಲ್ಲಿ ಉಷಃಕಾಲದ ಪೂಜಾನುಷ್ಠಾನವನ್ನು ನೆರವೇರಿಸಿಕೊಂಡು ಏಳುಘಂಟೆಗೆ ಅಲ್ಲಿಂದ ಹೊರಟು ಅನೇಕ ದೇಶದಿಂದ ಬಂದಿದ್ದ ಮಹಾಜನ ಪುರಜನ ಪರಿಜನ ಕರಿತುರಗರಥ ಪದಾತಿಗಳಿಂ ನಿಬಿಡೀಕೃತವಾಗಿರ್ದ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನವನ್ನು ಪೊಕ್ಕು ಅಲ್ಲಿ ನಡೆಯುವ ಪೂಜಾವಿನಿಯೋಗಾದಿಗಳನ್ನು ಪರಾಮರ್ಶಿಸಿ ಅಲ್ಲಿಂದ ಅಡ್ಡಪಾಲಕಿ ಪಂಚಕಲಶ ಶ್ವೇತಛತ್ರ ಹಗಲುದೀವಟಿಗೆ ಮೊರ್ಚಾಲು ಮಕರತೋರಣ ಮೊದಲಾದ ಸಮಸ್ತ ಬಿರುದುಗಳಿಂದಲೂ, ಮುಂದೆ ಸಂದಣಿಸಿ ನಡೆವ ಅನೇಕ ದೇಶದ ಚರಮೂರ್ತಿಗಳು ಪಟ್ಟಾಧಿಕಾರಿಗಳಿಂದಲೂ, ಪಂಡಿತಮಂಡಲಿಯಿಂದಲೂ, ಉಭಯ ಪಾರ್ಶ್ವಗಳಲ್ಲಿ ಸಾಲಾಗಿನಿಂತಿದ್ದ ವೈದಿಕರ ವೇದಪಠನಗಳಿಂದಲೂ, ಅವರ ಮುಂದೆ ಸಾಲುಸಾಲಾಗಿ ಶೋಭಿಸುವ ಶ್ರೀಮಂತರ ಸಮುದಾಯದಿಂದಲೂ, ಅವರ ಮುಂದೆ ರಾಜಿಸುವ ಮೆಹರ್ಬಾನ್ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರು, ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು, ರಾವ್‌ಸಾಹೇಬ್ ಮಾಮಲೆದಾರರು, ರಾ॥ ಪೇರ್ಮ ಡೆಪ್ಯುಟಿ ಕಲೆಕ್ಟರ್ ಮತ್ತು ಡಾಕ್ಟರ್ ಕಿರ್ಲೋಸ್ಕರ್ ಇವರೇ ಮೊದಲಾದ ರಾಜಾಧಿಕಾರಿಗಳಿಂದಲೂ ಬೇರೆಬೇರೆ ತರಹದ ಉಡುಪುಗಳುಳ್ಳ ಸಂಗೀತ ಭಜನೆಯ ಸಂಘದವರಿಂದಲೂ ಮತ್ತು ಕುದುರೆಯ ಮೇಲೆ ಬ್ಯಾಂಡು ಒಂಟೆಯಮೇಲೆ ಬ್ಯಾಂಡು ಗಾಡಿಯಮೇಲೆ ಬ್ಯಾಂಡು ಮತ್ತು ಕಾಲಾಳುಗಳ ಬ್ಯಾಂಡುಗಳಿಂದಲೂ, ಸುಮಾರು ನೂರು ಕುದುರೆಗಳಿಂದಲೂ, ಆನೆಗಳಿಂದಲೂ ಅಲಂಕೃತವಾಗಿದ್ದ ಹಿಡಿ ಕುದುರೆಗಳಿಂದಲೂ, ಇಪ್ಪತ್ತೈದು ತರಹದ ರಥಗಳಿಂದಲೂ ಇಪ್ಪತ್ತೈದು ತರಹದ ವಾಲಗದವರಿಂದಲೂ ಅನೇಕ ಪಟಹಗಳಿಂದಲೂ ಅನೇಕ ತಮ್ಮಟೆ ಕಹಳೆಗಳಿಂದಲೂ ಸಾಲುಸಾಲಾಗಿ ಶೋಭಿಸುವ ನಾನಾವರ್ಣದ ನಿಶಾನೆಗಳಿಂದಲೂ ಸುಮಾರು ಇಪ್ಪತ್ತು ಸಾವಿರ ಜನಸಂಖ್ಯೆಯುಳ್ಳ ನೋಟಕರಿಂದಲೂ ಉಭಯ ಪಾರ್ಶ್ವಗಳಲ್ಲಿ ತಮ್ಮತಮ್ಮ ಮಂದಿರಗಳ ಮುಂದೆ ಕಿಕ್ಕಿರಿದು ನಿಂತು ನೀರಾಜನಾದಿಗಳಿಂ ಬೆಳಗುವ ಪುಣ್ಯಪುರಂಧ್ರಿಯರಿಂದಲೂ, ತಳಿರುತೋರಣ ಬಾಳೆಕಾರಣೆ ಪೂಮಾಲೆ ಸರಳೆ ಕದಳೀಶಾಖೆಗಳಿಂದಲೂ ನೋಡುವರ ಕಂಗಳಿಗೆ ಮಂಗಳಕರವಾಗಿ ಠೀಕಾಲ್ ಮುಂದೆ ಗಲ್ಲಿ ಬಜಾರದಿಂದ ಹಾದು ವಿಕ್ಟೋರಿಯಾ ಮಾರ್ಕೆಟ್ಟಿನ ಮುಂದುಗಡೆ ಪೊರಮಟ್ಟು ಬಿಜಾಪುರದ ಅಗಸೆಯಿಂದ ಮಾಣಿಕ್ಯ ಚೌಕವನ್ನು ಹಿಡಿದು ಫೌಜುದಾರ್ ಚಾವಡಿ ಹಳೆ ಹೈಸ್ಕೂಲು ಮಾರ್ಗವಾಗಿ ಬ್ರಾಹ್ಮಣರ ಬೀದಿಯನ್ನು ಬಳಸಿ ಗಂಗಾಭಾವಿ ಮತ್ತು ಗರ್ಲ್ಸ್ ಸ್ಕೂಲ್ ಬೀದಿಗಳಲ್ಲಿ ಸುಳಿದು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಮುಂದೆ ನಡೆದು ಮಂಗಳವಾರಪೇಟೆಯಲ್ಲಿ ಮೆರೆದು ಜವಳಿ ಕಿರಾಣಿ ಕಬ್ಬಿಣ ಬಜಾರದಿಂದ ಶ್ರೀಮಂತ ಪಸಾರೆ ಮತ್ತು ಉಮ್ಮರ್ಜಿ ರಾವಬಹದ್ದೂರ್ ಶ್ರೀಮಂತ ಅಪ್ಪಾಸಾಹೇಬ್ ವಾರದ ಇವರ ಸುಂದರ ಮಂದಿರಗಳೆದುರಿಗೆ ಅಂದಂಬಡೆದು ಬೂಸ್‌ಪೇಟೆಯಲ್ಲಿ ಜೋಡುಭಾವಿ ಪೇಟೆಯಲ್ಲಿಯೂ ಸುಳಿದು ರಾ॥ ಗಂಗಪ್ಪ ಜೇರಿಗೆ ಇವರು ಬೀದಿಬೀದಿಗಳಲ್ಲಿಯೂ ಶ್ರೀಗಳವರ ಫೋಟೋಗಳನ್ನು ತೆಗೆದು ಮತ್ತು ಒಂದು ಫೋಟೋಮಾಯಿಡ್ ಎನ್‌ಲಾರ್ಜಡ್ (ದೊಡ್ಡ) ಫೋಟೋವನ್ನು ಸಮರ್ಪಿಸಿದ ನಂತರ ಹನ್ನೆರಡು ಘಂಟೆಗೆ ಸರಿಯಾಗಿ ಶ್ರೀ ಕಿರೀಟಮಠಕ್ಕೆ ದಿಗ್ವಿಜಯದೊಡನೆ ದಯಮಾಡಿಸಿದರು. ಅಲ್ಲಿ ಬಂಧುರತರ ಭವ್ಯಭದ್ರಾಸನದೋಳ್ ಮೂರ್ತಗೊಳಲು ವೇದಘೋಷಮಂಗಲ ಘೋಷಗಳು ನಡೆದ ಬಳಿಕ ಶ್ರೀಗಳವರ ಅಪ್ಪಣೆಯಮೇರೆಗೆ ದಾವಣಗೆರೆ ಪ್ರತೆಲಗಿ ಮಠದ ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ಈ ಸೊಲ್ಲಾಪುರಿ ಮಹಾಕ್ಷೇತ್ರದ ಮಹಿಮೆಯನ್ನೂ ಇಲ್ಲಿ ಶಿವಶರಣರೆಂದು ಪ್ರಸಿದ್ಧರಾಗಿ ಘನತೆಯಂ ಪಡೆದಿದ್ದ ರಾವಸಾಹೇಬ್ ವಾರದ ಅಪ್ಪಾಸಾಹೇಬರವರು ಕೈಲಾಸವಾಸಿಗಳಾದುದರಿಂದುಂಟಾದ ಸಮಸ್ತರ ಮನಃಖೇದವನ್ನೂ “ನರಃಪತಿತ ಕಾಯೋಪಿಯಶಃ ಕಾಯೇನಜೀವತಿ” ಎಂಬಂತೆ ಅವರ ಕೀರ್ತಿಕಾಯಸ್ಥಾಪನೆಯ ವರ್ಣನೆಯಿಂದ ಹೊಗಳಾಡಿಸಿ ಅವರ ಪ್ರಯತ್ನದಿಂದುಂಟಾದ ಈ ಪಂಡಿತ ಜಗದ್ಗುರುತ್ವದ ಅಲಭ್ಯಲಾಭದಿಂದ ಈಗ ನಮ್ಮ ಮತಕ್ಕೆ ಉಂಟಾಗುವ ಅಸಾಧಾರಣ ಪ್ರಯೋಜನ ಪರಂಪರೆಗಳನ್ನು ಬಹು ಸರಳಶೈಲಿಯಿಂದ ಉಪನ್ಯಾಸಮಾಡಿದರು. ಇದೇ ಅರ್ಥವನ್ನೇ ರಾ॥ ಸಿದ್ಧರಾಮಪ್ಪ ಅಣ್ಣ ಚಪ್ಪಳಗಿ ಇವರು ಮಹಾರಾಷ್ಟ್ರ ಭಾಷೆಯಿಂದ ಪರಿವರ್ತನಮಾಡಿದರು. ಮತ್ತು ಸೊಲ್ಲಾಪುರದ ವೀರಶೈವ ಜನಹಿತೈಷಿ ಮಂಡಲಿಯವರ ವಿಜ್ಞಾಪನ ಪತ್ರಿಕೆಯು ಬಂತೆಪ್ಪಾ ಜಾಂಜಿ ವಕೀಲ್ ಇವರು ಓದಿ ಒಪ್ಪಿಸಿದರು. ಈ ಸೊಲ್ಲಾಪುರದ ವೀರಶೈವ ಪ್ರಮುಖರು ಐಕಮತ್ಯ ಭಕ್ತಿಗಳಿಂದ ಈ ಜಗದ್ಗುರು ಪೂಜ್ಯಪಾದರವರ ಮಹೋತ್ಸವ ಕಾಲದಲ್ಲಿ ಮಾಡಿದ್ದ ಏರ್ಪಾಟುಗಳು ಬಹು ತೃಪ್ತಿಕರವಾಗಿದ್ದವು. ಮತ್ತು ಇಲ್ಲಿಯ ಅಶೇಷ ವೀರಶೈವ ಜನಾಂಗಕ್ಕೆ ಮೂಲ ಚೈತನ್ಯ ಸ್ವರೂಪದಂತಿರುವ ಕಿರೀಟಮಠದ ಶ್ರೀ ನಿಜಗುಣಸ್ವಾಮಿಗಳವರ ಭಕ್ತಿಸಾಹಸಗಳು ಬಹುಶ್ಲಾಘನೀಯಂಗಳಾಗಿದ್ದವು

ಹನ್ನೆರಡನೆ ತಾರೀಖಿನ ದಿವಸ ಪ್ರಾತಃಕಾಲ ಏಳುಘಂಟೆಯಿಂದ ಹನ್ನೊಂದುಘಂಟೆ ವರೆವಿಗು ಪ್ರೋಗ್ರಾಂನಂತೆ ನಡೆದ ಸೊಲ್ಲಾಪುರ ಬಾರ್ಶಿ ಭಾರಾಮತಿ ವಗೈರೆ ಭಜನಾ ಸಂಗೀತ ಸಂಘದವರು ಹಾಡಿದ ಶ್ರೀಗಳವರ ಸ್ತೋತ್ರರೂಪವಾದ ಕೀರ್ತನಗಳನ್ನು ಪರೀಕ್ಷಿಸಿ ಶಿವಭಜನೆಯು ಅವಶ್ಯಕರ್ತವ್ಯವೆಂತಲೂ ಚಿತ್ತೈಕಾಗ್ರತೆಯಿಂದ ಮಾಡಿದರೆ ಬಹುಫಲಪ್ರದವೆಂತಲೂ ಹೀಗೆಯೇ ಮಾಡತಕ್ಕದೆಂತಲೂ ಅಪ್ಪಣೆಕೊಡಿಸಿದರು. ಇಲ್ಲಿಯ ಪಾಠಶಾಲಾಧ್ಯಾಪಕರಾದ ವೇ॥ ನಾಲ್ವಾರದ ಜಗದೀಶ ಶಾಸ್ತ್ರಿಗಳವರು ಶ್ರೀಗಳವರ ಮೇಲೆ ರಚಿಸಿದ ಪದಗಳನ್ನು ಸದರಿ ಪಾಠಶಾಲಾ ವಿದ್ಯಾರ್ಥಿಗಳು ಕೋಲಾಟದಿಂದಲೂ ನಾಟಕಶೈಲಿಯಿಂದಲೂ ಹಾಡಿ ತೋರಿಸಿ ಸಭೆಯವರಿಗೂ ಶ್ರೀಗಳವರಿಗೂ ಅತ್ಯಾನಂದವನ್ನುಂಟುಮಾಡಿದರು. ಇದರಂತೆಯೇ ಇಲ್ಲಿಯ ಇನ್ನು ಕೆಲವು ಕೋಲಾಟದಸಂಘದವರು ಸುಶ್ರಾವ್ಯವಾಗಿಹಾಡಿ ಆನಂದಗೊಳಿಸಿದರು. ಸಾಯಂಕಾಲ ೪ ಘಂಟೆಯಿಂದ ೬ ಘಂಟೆವರೆವಿಗೂ ಶಾಂತವಾಗಿ ನೆರೆದ ಭಕ್ತರ ಸಮುದಾಯಕ್ಕೆ ಶ್ರೀಗಳವರು ಆಚಾರಕಾಂಡವನ್ನು ಸರಳವಾಗಿ ಉಪದೇಶಿಸಿದರು. ಶ್ರೀ ಜಗದ್ಗುರು ಪೂಜ್ಯಪಾದರವರು ಒಂದುತಿಂಗಳ ವರೆವಿಗೂ ಇಲ್ಲಿ ಮೊಕ್ಕಾಂ ಮಾಡುವರೆಂದು ತಿಳಿದುಬಂದಿದೆ. ಗುರುಭಕ್ತ.

ಹುಂಬಳಿ.

ಶ್ರೀಮನ್ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರ ಹುಂಬಳಿಗ್ರಾಮದ ಜಾತ್ರೆಯು ಮಾಘ ಬ॥ ೧ ಶನಿವಾರ ಸಾಯಂಕಾಲ ಮಘಾನಕ್ಷತ್ರದಲ್ಲಿ ರಥೋತ್ಸವವು ನಡೆಯುವಂತೆ ನಿಶ್ಚಯಿಸಿದೆ.

ಪಟ್ಟದ್ದೇವರು ಪ್ರಭುದೇವರು, ಗದಗ.

ಎಲೈ ಪ್ರಿಯವಾಚಕರಾದ ವಿದ್ವಜ್ಜನರೆ! ನಾನೀ ಕೆಳಗಿಬರೆದ ಅಭಿಪ್ರಾಯಕ್ಕೆ ತಮ್ಮ ಸರಿಯಾದ ಮನೋಭಿಪ್ರಾಯವನ್ನು ವ್ಯಕ್ತಪಡಿಸಿ ಈ ಸಂದಿಗ್ಧವಿಷಯವನ್ನು ಸ್ಪಷ್ಟಮಾಡುವಿರೆಂದು ಆಶಿಸುತ್ತೇನೆ.—

ನಮ್ಮ ವೀರಶೈವಸಮಾಜಕ್ಕೆ ಮಹಾಮಂತ್ರಗಳೆಂದು ಹೊಗಳಿಸಿಕೊಳ್ಳಲ್ಪಡುವ ಪಂಚಾಕ್ಷರಿ ಮತ್ತು ಷಡಕ್ಷರಿಗಳು ಗುಪ್ತವಾಗಿರಬೇಕೆ? ಅಥವಾ ವ್ಯಕ್ತವಾಗಿರಬೇಕೆ? ಎಂಬೀ ವಿಷಯವು ಸಂಶಯಾತ್ಮಕ ಸಂಗತಿಯಾಗಿದೆ. ಮಂತ್ರ— ಈ ಶಬ್ದದ ಅರ್ಥದ ಮೇಲಿಂದ (ಮನನಾ ತ್ರಾಯತೇಇತಿ ಮಂತ್ರಃ) ಯಾವತ್ತೂ ಮಂತ್ರಗಳು ಗುಪ್ತವಾಗಿರಬೇಕೆಂದೇ ವ್ಯಕ್ತವಾಗುತ್ತದೆ. ಇದಲ್ಲದೆ ಮಂತ್ರಗೋಪ್ಯ ಸೂಕ್ಷ್ಮಾಗಮ ಇವೇ ಮೊದಲಾದ ಅನೇಕಾನೇಕ ಉದ್ಗ್ರಂಥಗಳು ಕೂಡ ಈ ಮಹಾ ಮಂತ್ರಗಳು ಗುಪ್ತವಾಗಿರಬೇಕೆಂದು ಸ್ಪಷ್ಟವಾಗಿ ಸಾರಿಹೇಳುತ್ತವೆ. ಇದೂ ಅಲ್ಲದೆ ಅಹಿವೃಶ್ಚಿಕಾದಿಗಳಿಗೋಸ್ಕರ ಅಭಿಮಂತ್ರಿಸಲ್ಪಡುವ ಚಿಕ್ಕ ಪುಟ್ಟ ಮಂತ್ರಗಳು ಕೂಡ ವ್ಯಕ್ತವಾಗಿ ಉಚ್ಚರಿಸಲ್ಪಡುವದಿಲ್ಲಂದಮೇಲೆ, ಮಹಾ ಮಂತ್ರಗಳೆಂದು ಪ್ರಸಿದ್ಧಿಯನ್ನು ಪಡೆದ ಈ ಪಂಚಾಕ್ಷರಿ ಮತ್ತೂ ಷಡಕ್ಷರಿಗಳು ಗುಪ್ತವಾಗಿಯೇ ಇರಬೇಕೆಂದು ಕಾಣುತ್ತದೆ. ಮತ್ತೂ ಒಂದು ಮಹತ್ತರವಾದ ಪ್ರಮಾಣವೇನಂದರೆ:—ಗುರುಗಳು ಮಂತ್ರೋಪದೇಶವನ್ನು ಮಾಡುವಕಾಲಕ್ಕೆ ಕರ್ಣದಲ್ಲಿ ಗುಪ್ತವಾಗಿಯೇ ಹೇಳುತ್ತಾರೇ ಹೊರ್ತು ಬಹಿರಂಗವಾಗಿ ಎಂದೂ ಹೇಳುವದಿಲ್ಲ. ಇವೇ ಮೊದಲಾದ ಅನೇಕ ಪ್ರಮಾಣಗಳಿಂದ ಮಂತ್ರವು ಗೌಪ್ಯವಾದುದೆಂದು ತಿಳಿಯುತ್ತಿದ್ದರೂ, ಮತ್ತೆ ಹಲ ಕೆಲವು ಕಾರಣಗಳಿಂದ ಇದು ಸಂಶಯಗ್ರಸ್ತವಾದ ಸಂಗತಿಯೆಂದು ಭಾಸವಾಗುವಂತಿದೆ. ಏಕೆಂದರೆ—ಪೂರ್ವದಲ್ಲಿ ಸುಪ್ರಖ್ಯಾತರಾದ ಸಾನಂದಋಷಿಗಳು ಇದೇ ಮಹಾ ಮಂತ್ರವನ್ನು ವ್ಯಕ್ತವಾಗಿ ಉಚ್ಚರಿಸಿ, ಯಮಪಟ್ಟಣದಲ್ಲಿದ್ದ ಯಾವತ್ತು ನರಕಿಗಳನ್ನು ಉದ್ಧಾರಮಾಡಿದರೆಂದು ಹೇಳುತ್ತಾರೆ. ಅವರಿಂದೀಚೆಗೆ ಅತ್ಯಂತ ಪ್ರಾಮುಖ್ಯವನ್ನು ಪಡೆದ ನಿಜಗುಣಾರಾಧ್ಯರೆಂಬ ಶಿವಯೋಗಿಗಳು ತಮ್ಮಿಂದ ರಚಿಸಲ್ಪಟ್ಟ ಕೈವಲ್ಯಪದ್ಧತಿ ಎಂಬ ಗ್ರಂಥದಲ್ಲಿ (ಕಾರುಣ್ಯಸ್ಥಲದ ನಾಲ್ಕನೇ ಪದ್ಯದ ಅಂತ್ಯದಲ್ಲಿ) ಇದೇ ಸಾನಂದಋಷಿಗಳ ಉದಾಹರಣೆಯನ್ನು ತೋರಿಸಿ, ಷಡಕ್ಷರಿಮಂತ್ರವನ್ನು ವ್ಯಕ್ತವಾಗಿ ಇಟ್ಟದ್ದು ಕಂಡುಬರುತ್ತದೆ. ಇದಲ್ಲದೆ ರಾಮೇಶಾಷ್ಟಕವೇ ಮುಂತಾದ ಅಷ್ಟಕಗಳಲ್ಲಿ ಈ ಪಂಚಾಕ್ಷರಿಯನ್ನು ಪುನಃ ಪುನಃ ಉಚ್ಚರಿಸಿದ್ದು ಕಂಡುಬರುತ್ತದೆ. ಈಗ್ಗೆ ಅಲ್ಪಕಾಲದ ಹಿಂದೆ ಹೈದರಾಬಾದ್ ಸಂಸ್ಥಾನದ ಭಾವಣೀ ತಾಲ್ಲೋಕಿನಲ್ಲಿ ನೀರಲಕೇರಿ ಎಂಬ ಗ್ರಾಮದೊಳಗೆ ಅತ್ಯಂತ ಘನತೆಯನ್ನು ಹೊಂದಿದ ಪಂಚಾಕ್ಷರಾಖ್ಯರು (ಇವರು ನಿರಾಭಾರಿವೀರಶೈವರು) ತಮ್ಮದೊಂದು ಪದ್ಯದಲ್ಲಿ ಈ ಷಡಕ್ಷರಿಮಂತ್ರದ ಪ್ರಾಶಸ್ತ್ಯವನ್ನು ವಿಶೇಷವಾಗಿ ವರ್ಣಿಸಿ ಅದು ಗೌಪ್ಯದಲ್ಲಿರಬೇಕೆಂಬ ಬಗ್ಗೆ ಅಭಿಪ್ರಾಯಪಟ್ಟರೂ, ಅದೇ ಪದ್ಯದಲ್ಲಿ ಈ ಮಂತ್ರವನ್ನು ಪುನಃ ಪುನಃ ಉಚ್ಚರಿಸಿದ್ದಾರೆ. ಈಗಿನ ಕಾಲದಲ್ಲಿ ಸಹ ಶಾಸ್ತ್ರಿಗಳೆಂಬ ಬಿರುದನ್ನು ಹೊಂದಿದ ಎಷ್ಟೋ ಜನ ಪಂಡಿತರಿಂದ ರಚಿಸಲ್ಪಟ್ಟ ಹಲ ಕೆಲವು ಪುಸ್ತಕಗಳಲ್ಲಿಯೂ ಕೂಡ ಈ ಮಂತ್ರವನ್ನು ವ್ಯಕ್ತವಾಗಿಯೇ ಇಟ್ಟದ್ದು (ಅಕ್ಷರಶಃ ಬರೆದುದು) ದೃಷ್ಟಿಗೆ ಬೀಳುತ್ತದೆ. ಈ ಎರಡು ತರಹದ ಪ್ರಮಾಣಗಳ ಮೇಲಿಂದ ಈ ಮಂತ್ರಗಳುಗುಪ್ತವಾಗಿರಬೇಕೋ ಅಥವಾ ವ್ಯಕ್ತವಾಗಿರಬೇಕೋ ಎಂಬುದು ತಿಳಿಯದೆ ಹೋಗಿರುವದು. ಕಾರಣ ಇದರ ನಿಜಸ್ಥಿತಿಯನ್ನರಿಯುವುದಕ್ಕೋಸ್ಕರ ನಮ್ಮ ಸಮಾಜಸುಧಾರಣೆಗೆ ಅತ್ಯಂತ ಸಹಾಯಕಾರಿಯಾದ ಈ ಸ್ಟಾರಪತ್ರಿಕೆಯ ದ್ವಾರ ತಮ್ಮಗಳ ಸಮ್ಮುಖದಲ್ಲಿ ಪ್ರಕಟಗೊಳಿಸಿರುವೆನು.

ಈಗ್ಗೆ ನಮ್ಮ ಸಮಾಜದಲ್ಲಿ ಕೆಲಕೆಲವು ಕಡೆಗೆ, ಎಷ್ಟೋ ಜನ ಸ್ತ್ರೀಪುರುಷರೆಲ್ಲರೂ ಒಟ್ಟಾಗಿ ದುರುಳವೇದಾಂತಿಗಳ ಸಹವಾಸದಲ್ಲಿ ಸೇರಿ ಜಾತಿಭೇದಗಳಿಲ್ಲದೆ ಕಂಡಕಂಡವರ ಕಾಲುಬೀಳುತ್ತ, ಹುಬ್ಬೋರೆಗಳನ್ನು ಸೊಟ್ಟಸೊಟ್ಟಾಗಿ ಮಾಡಿ ಕುಣಿಯುತ್ತ, ಕೈಯಲ್ಲಿ ತಾಳದಮ್ಮಡಿಗಳನ್ನು ಹಿಡಿದುಕೊಂಡು ಪಂಚಾಕ್ಷರಿ ಮತ್ತೂ ಷಡಕ್ಷರಿಗಳನ್ನು ಊರುಕೇರಿಗಳೊಂದಾಗುವಂತೆ ಕೂಗುತ್ತ ಆ ಸದ್ಗುರುವಿನ ಸದಿಚ್ಛೆಯನ್ನು ಸಲ್ಲಿಸುತ್ತಿರುವ ಈ ಮಹಾವೇದಾಂತಿಗಳಿಗೆ ಪ್ರಾಯಶ್ಚಿತ್ತವಿಲ್ಲವೋ ಹೇಗೋ? ತಿಳಿಯದು. ಅದರೆ ಇಷ್ಟೊಂದು ಧೈರ್ಯದಿಂದ ಈ ಕಾರ್ಯವನ್ನು ಕೈಕೊಂಡಂತಹ ಇವರಿಗೆ ಮೇಲ್ಭಾಗದಲ್ಲಿ ಬರೆದ ಕೆಳಗಿನ ಒಂದೆರಡು ಕಾರಣಗಳೇ (ಮಂತ್ರಗಳನ್ನು ವ್ಯಕ್ತವಾಗಿಟ್ಟ ಪ್ರಮಾಣಗಳು) ಪ್ರಾಮುಖ್ಯವಾಗಿರುತ್ತವೆಂದು ಹೇಳಬಹುದು.

ಈ ಮೇಲೆಬರೆದ ಪರಿಸ್ಥಿತಿಯನ್ನು ನಮ್ಮ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲಿಯೂ ವಿಶೇಷವಾಗಿ ವಿಜಾಪುರ ಜಿಲ್ಲಾದ ಗ್ರಾಮಗಳಲ್ಲಿಯೂ, ಕೇರಿಕೇರಿಯಲ್ಲಿಯೂ, ಮನೆಗಳಲ್ಲಿಯೂ ಕೂಡ ಕಂಡುಬರುತ್ತಿದೆ. ಮತ್ತೂ ಈ ಮಹಾವೇದಾಂತಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತ ನಡೆದಿದೆ. ಅದಕೆ ಇದರ ನಿಜಾಂಶವನ್ನು ತಿಳಿಯದೆ ಇವರ ಕೋಲಾಹಲವನ್ನು ಕಡಿಮೆಮಾಡುವ ಕಾರ್ಯದಲ್ಲಿ ಕೈಹಾಕುವುದು ಯೋಗ್ಯವಾಗಲಾರದೆಂದು ತಿಳಿದು, ವಿದ್ವಜ್ಜನರ ಸನ್ನಿಧಿಯಲ್ಲಿ ವಿಜ್ಞಾಪನೆ ಮಾಡಿಕೊಳ್ಳುವುದಾಗಿದೆ. ಕಾರಣ ಪ್ರಕಟವಾಗಿ ಬರೆದ ಪ್ರಮಾಣಗಳಿಗೋಸ್ಕರ ತಮ್ಮಗಳ ಸದಭಿಪ್ರಾಯವನ್ನು ವ್ಯಕ್ತಮಾಡುವಿರೆಂದು ಆಶಿಸುವೆನು.

ಇನ್ನು ಉಪದೇಶ ಹೊಂದಿದವರಿಗೇನೇ ಮಂತ್ರಗೌಪ್ಯದ ನಿಯಮವಲ್ಲದೆ ಅನ್ಯರಿಗೆ ಅದಿಲ್ಲವೆಂದು ಕಲ್ಪಿಸಿದರೆ, ನಾವೆಲ್ಲರೂ ವೀರಶೈವ ಧರ್ಮಾನುವರ್ತಿಗಳಾಗಿರುವುದರಿಂದ, ನಮಗೆ ಗರ್ಭಾಷ್ಟಕದಲ್ಲಿಯೋ, ಇಲ್ಲವೆ ಭೂಪತನವಾಗುವ ಸಮಯದಲ್ಲಿಯೋ ಲಿಂಗಧಾರಣೆಯೂ, ಮಂತ್ರೋಪದೇಶವೂ ಮಾಡಲ್ಪಟ್ಟಿರುತ್ತವೆ. ಆದಕಾರಣ ವೀರಶೈವರೆಲ್ಲರೂ, ಉಪದೇಶವನ್ನು ಹೊಂದಿದವರೆಂದೇ ಭಾವಿಸಬೇಕಾಗುತ್ತದೆ. ಇದರಿಂದ ಮೇಲಿನ ಕಲ್ಪನೆಯು ಅಸಮಂಜಸವಾದುದೆಂದು ಕಂಡುಬರುವುದು. ಲಿಂಗಧಾರಣೆಯ ಕಾಲದಲ್ಲಿ ಅಜ್ಞಾನಸ್ಥಿತಿಯಿರುವ ಕಾರಣ ಅಗ್ಗೆ ಮಂತ್ರೋಪದೇಶಮಾಡಿದ್ದು, ಅಯೋಗ್ಯವಾದುದರಿಂದ ಸುಜ್ಞಾನಸ್ಥಿತಿಯಲ್ಲಿ ಉಪದೇಶವನ್ನು ಹೊಂದಿದವರಿಗೇನೇ ಮಂತ್ರಗೌಪ್ಯದ ನಿಯಮವೆಂದು ಪುನಃ ಕಲ್ಪನೆಮಾಡಿದರೆ, ಈ ಅಯೋಗ್ಯತೆಗೆ ಗುರುವೇ ಪಾತ್ರನೆಂದು ವಿಚಾರಶೀಲರಾದ ಪ್ರತಿಯೊಬ್ಬರಿಗೂ ತಿಳಿಯದಿರಲಾರದು. ಆದರೆ ಗುರುವು ಅಯೋಗ್ಯನೆಂದು ಹೇಳುವುದು ಸರ್ವಥಾ ಆಗದಮಾತು. ಇದರಿಂದ ಎರಡನೆಯ ಕಲ್ಪನೆಯೂ ಅಸಮಂಜಸವಾದುದೆಂದು ಮತ್ತೆ ಊಹಿಸಬೇಕಾಗುತ್ತದೆ. ಇವೇ ಮೊದಲಾದ ಅನೇಕಾನೇಕ ಕಲ್ಪನಾ ಮತ್ತೂ ಊಹೆಯ ತರಂಗಗಳಿಂದ ನನ್ನ ಮನಸ್ಸು ಕಡೆಗಾಣದೆ ಶಂಕಾಕಲಿತವಾಗಿರುವುದು. ಆದಕಾರಣ ಇದರ ಸತ್ಯಸ್ಥಿತಿಯನ್ನು ಶಾಸ್ತ್ರೋಕ್ತವಾಗಿ ಸಿದ್ಧಪಡಿಸಿ ಮನಃಸಂದೇಹವನ್ನು ಹೋಗಲಾಡಿಸಿ ಸಮಾಜಸುಧಾರಣೆಯ ವಿಷಯದಲ್ಲಿ ಸಹಾಯ ಮಾಡುವಿರೆಂದು ಸಂಪೂರ್ಣ ನಂಬಿದ್ದೇನೆ

ಗುರಪ್ಪ ಸಾತಪ್ಪ ಅಂಗಡಿ,
೧ನೆಯ ಅಂ॥ ಮಾಸ್ತರ ಗಲಗಲಿ.

3

ನೋಟೀಸ್.

ಈ ಕೆಳಗೆ ಸಹಿಮಾಡಿರುವ ನಾನು ಎಲ್ಲಾ ಕಡೆಗೂ ತಿಳಿಯಪಡಿಸುವದೇನಂದರೆ:—ನನ್ನ ತಮ್ಮ ನಂಜುಂಡಯ್ಯನು ಸುಮಾರು ೩-೪ ವರ್ಷಗಳಿಂದಾಗಾಯ್ತು ಬುದ್ಧಿ ಸ್ವಾಧೀನವಿಲ್ಲದೆ ತಿರುಗುತ್ತಾ ಇದ್ದಾನೆ. ಈತನಿಗೆ ಯಾರಾದರೂ ಹಣ ಮೊದಲಾದದ್ದನ್ನು ಕೊಟ್ಟು ಪ್ರಾಂಸರಿ, ದಸ್ತೈವೇಜು, ಅಡವರಿಪತ್ರ, ಕ್ರಯಾರಿಪತ್ರ ಮುಂತಾದುದನ್ನು ಮಾಡಿಸಿಕೊಂಡದ್ದೇ ಆದರೆ, ಆ ಹಣಕ್ಕೂ ಕೋರ್ಟುಖರ್ಚು ಮುಂತಾದ ಸರ್ವಕ್ಕೂ ನಾನು ಬಾಧ್ಯನಲ್ಲವೆಂಬ ಸಂಗ್ತಿಯನ್ನು ಖಂಡಿತ ತಿಳಿಯುವದು, ಮತ್ತು ಹಣಕೊಟ್ಟವರು ಆ ಸ್ವತ್ತುಗಳಿಗೆ ಎಂದೆಂದಿಗೂ ಬಾಧ್ಯರಾಗುವುದಿಲ್ಲ. ತಿಳಿಯುವದು.

ರುಜು ಚಂದಪ್ಪನವರ ಅಡಿವಯ್ಯ,
ಸಂತೇಬೆನ್ನೂರ ವಾಸಿ, ಚನ್ನಗಿರಿ ತಾಲೋಕ್.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಂಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಂಕ್ತಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವದು.

ಲಿಂಗರಾಜಪುರಾಣವಿಜಯಂ

12

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇವೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವರು. ಆದಕಾರಣದಿಂದಲೇ ವೀರಶೈವ ಮತಾನುಯಾಯಿಗಳೆಲ್ಲರೂ ಈ ಗ್ರಂಥವನ್ನು ಒಂದುಮೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದು ಆದರೆ ವೀರಶೈವಮತಸಿದ್ಧಾಂತವು ಉದಾಹರಣೆ ಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂದೇಹವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೯ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, [illegible] ಮೈಸೂರು

ಪಾಳ್ಯದ ಪಂಚಾಚಲ ಪಂಡಿತರ ಸಿದ್ಧೌಷಧಗಳು.

40

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಜೊಗಳಿಯಲ್ಲಿ ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಅಯ್ಯಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ ಸೀತಾರಾಮಪಂಡಿತಸ್ವಾಮಿಗಳು,
ಮೈಸೂರು.

☞ ಪ್ರಸಿದ್ಧವಾದ ಮೈಸೂರುಸ್ಟಾರ್ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ.

ಲೇಡೀಸ್ ಸಿಲ್ವರ್‌ವಾಚ್. 4



ಇದರ ಅನುಕೂಲವು ತ್ತಿ ಯಾವುದಕ್ಕೂ ಇಲ್ಲ. ನಿಮ್ಮ ಇಷ್ಟಬಂದಂತೆ, ಕೈಯಲ್ಲಿಯೂ ಕಟ್ಟಿಕೊಳ್ಳಬಹುದು; ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಬೆಳ್ಳಿ ಮುಚ್ಚಳವುಳ್ಳದ್ದು. ಇದರ ಹಿಂಭಾಗದ ಮುಚ್ಚಳದ ಮೇಲೆ ಸುಂದರವಾದ ಹುವ್ವಿನ ಕೆಲಸದಿಂದ ತಯಾರಿಸಿರುತ್ತೆ. ಬಹುಸುಂದರವಾದದ್ದು. ಅನೇಕವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಖಾತ್ರಿಯಾದದ್ದು. 5 ವರುಷಗಳ ಗ್ಯಾರೆಂಟಿ ಈಗಿನ ಕ್ರಯ. ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ವಶ್ಯವಾಗುವ ಚರ್ಮದಪಟ್ಟಿ, ಎಂದಿಗೂ ಕಪ್ಪಾಗದ ವಾಚ್‌ಸರಪಣಿ, ಮತ್ತು ವಾಚ್ ಪೆಟ್ಟಿಗೆ ಸಮೇತ 4—15—0 ಮಾತ್ರ

ಇಮಿಟೇಷನ್ ನಗಗಳು!

ಬಹು ಸುಲಭಕ್ರಯ!

ಈ ನಗಗಳು ವಜ್ರದ ನಗಗಳಂತೆ ಥಳಥಳಿಸುತ್ತೆ. ನೋಡುವರು ಆಶ್ಚರ್ಯಪಡುವರು. ಬೆಂಡೋಲೆ ಜೊತೆಗೆ 1—8—0. ಮೂಗಬಟ್ಟು 1 ಕ್ಕೆ 6 ಆಣೆ. ಬುಲಾಕು 1 ಕ್ಕೆ 12 ಆಣೆ. ಪಾಟ್ಲಾಕು ಕಡುಕು ಜೊತೆಗೆ 1—4—0, ಸರ್ಪಾಕಾರದ ಉಂಗುರ 12 ಆಣೆ, ಪ್ರೆಜಂಟೇಷನ್ ವಾಚ್ 2—4—0. ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ,
ಮದರಾಸು.

3 **ಸರಸವಾದ ನೂತನಪುಸ್ತಕಗಳು.**

ವಿರಕ್ತಳಾದ ಲಾವಣ್ಯವತಿ—ನವರಸಭರಿತವಾದ ನವೀನಕಾದಂಬರಿ ೦—೬—೬; ಸಾಹಸಿಕೆ—ಚಮತ್ಕಾರವಾದ ಕಥೆ ೦—೨—೬; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦—೧—೬ ಶ್ರೀಹರಿಶರಣ್ಯಾಥನಾ ೦—೧—೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ವಿ. ಶಾಸ್ತ್ರಿ, ಚಾಮರಾಜನಗರ.

22 **ಉತ್ತಮ ಗ್ರಂಥಗಳು.**

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್‌ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

12 **ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.**

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.



ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಷ್ಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಹಾತ್ರಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi, North Kanara District

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ ಮೈಸೂರು.

74

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ತೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಅಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಅವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ನೆಯ ಇಸವಿ ಜನವರಿ ತಾ॥೨೨ರಿಂದ ೧೯೧೨ನೆಯ ಜನವರಿ ತಾ॥ ೨೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ನೆಯ ವಿರೋಧಿಕೃತು ಸಂವತ್ಸರದ ಮಾಘ ಶು॥ ತದಿಗೆಯಿಂದ ಮಾಘ ಶು॥ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ದಿ
22	¹ಸೋ	ತ	35-25	ಶತಭಿ	60-0	9
23	ಮಂಗ	ಚ	37-37	ಶತಬಿ	0-24	10
24	ಬುಧ	ಪಂ	38-28	ಪೂಭಾ	8-40	11
25	²ಗುರು	ಷ	38 2	ಉತ್ತಭಾ	5-28	12
26	³ಶುಕ್ರ	ಸ	36-34	ರೇವತಿ	6-10	13
27	ಶನಿ	ಅ	34 8	ಅಶ್ವಿನಿ	5-46	14
28	ಭಾನು	ನ	30-30	ಭರಣಿ	4-12	15

(1) ಕೈಲಾಸಗೌರೀವ್ರತಂ, ಚತುರ್ಥಿಗೌರೀವ್ರತಂ, [illegible] ರೋಹಿಣಿ ೧. (2) ಕುಮಾರಷಷ್ಠಿ, ಶ್ರೀರಂಗಪಟ್ಟಣದಲ್ಲಿ [illegible] ರಂಗನಾಥನರಥ, (3) ರಥಸಪ್ತಮಿ, [illegible] ಅರ್ಕೋದಯ [illegible]

ಮೈಸೂರ್ : ಶ್ರೀ [illegible] [illegible]

REGISTERED NO. M. 184

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಮಜನ ಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕವಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಜನವರಿ ತಾರೀಖು ೨೯ ನೆಯ ಸೋಮವಾರ. [ಸಂಚಿಕೆ ೫

ಸಂತೋಷಕರವಾದ ಪ್ರಕಟನೆ! ಸರ್ವರೂ ಓದಿ ಪ್ರೋತ್ಸಾಹಕೊಡಿರಿ!!

☞ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚಂಟ್ಸ್, ಮೈಸೂರ್.

ನಮ್ಮ ಪದಾರ್ಥವನ್ನು ನಾವು ಹೊಗಳಿ ಪ್ರಯೋಜನವೇನು? ನೀವು ಅನೇಕ ಕಡೆಯಿಂದ ತರಿಸಿರಬಹುದು. ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ಸೀಮೆಯಿಂದ ರಖಂವಾರ್ ವಾಚುಗಳ ಹೊಸಗುಡ್ಸು ಬಂದಿರುವುದರಿಂದ ಬೆಲೆಯನ್ನು ಬಹಳ ಕಡಮೆಮಾಡಿದ್ದೇವೆ. ಆದ್ದರಿಂದ ಪ್ರತಿನಿತ್ಯವೂ ಅನೇಕ ಆರ್ಡರ್‌ಗಳು ಬಂದು ಡಜನ್‌ಗಟ್ಟಲೆ ಬಿಕರಿಯಾಗುತ್ತಾ ಇವೆ. ಇಂಥಾ ಸಮಯವನ್ನು ಕಳೆದುಕೊಳ್ಳದೆ ಸರ್ವರೂ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ. ವಾಚಿನ ಡಿಪ್ಸಿಲ್:— ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦; ಗ್ಯಾರಂಟಿ ರೈಲ್ವೆರೆಗ್ಯುಲೇಟರ್‌ವಾಚ್ ೧ ಕ್ಕೆ ೩-೮-೦; ಸುಂದರವಾದ ಪ್ಲಾಟ್‌ವಾಚ್ ೧ ಕ್ಕೆ ೫-೮-೦; ಕ್ವೀನ್‌ವಾಚ್ ೧ ಕ್ಕೆ ೬-೮-೦; ಪರ್ಪಲ್‌ವರ್ಕ್ ಡ್ರೆಸ್‌ವಾಚ್ ಎಂಬ ಗ್ಯಾರೆಂಟಿಯಾದ ವಾಚ್ ೧ ಕ್ಕೆ ೮-೮-೦, ಒಂದುಸಾರಿ ಕೀಗಕೊಟ್ಟರೆ ೮ ದಿವಸದವರಿಗೂ ವ್ಯತ್ಯಾಸವಿಲ್ಲದೆ ನಡಿಯತಕ್ಕ ವಾಚ್ ೧ ಕ್ಕೆ ೧೦-೮-೦; ನಮ್ಮ ಹಿಂದೂದೇವರ ಫೋಟೋಗಳು ತಮ್ಮಕಷ್ಟಕ್ಕೆತಾವೆ ತಿರುಗುತ್ತಾ ಘಂಟೆ ನಿಮಿಷಗಳನ್ನು ಸಹ ತೋರಿಸುವ ವಾಚ್ ೧ ಕ್ಕೆ ೬-೮-೦; ಘಂಟೆ ನಿಮಿಷ ಸೆಕೆಂಡ್ ತೋರಿಸಿ ತಾರೀಖು ಸಹ ತೋರಿಸುವ ವಾಚ್ ೧ ಕ್ಕೆ ೫-೧೨-೦; ಮತ್ತೂ ಮೇಲ್ಕಂಡವೆಲ್ಲಾ ಇದ್ದು ವಾರಾ ತಾರೀಖು ತಿಂಗಳು ಪೂರ್ಣಿಮಾ ಅಮಾವಾಸ್ಯೆ ಇವೆಲ್ಲಾ ತೋರಿಸುವ ವಾಚ್ ೧ ಕ್ಕೆ ೧೨-೪-೦; ಸುಂದರವಾದ ಟೇಬಲ್ ಗಡಿಯಾರ ಘಂಟೆ ಅರ್ಧಘಂಟೆ ಸಹ ಹೊಡೆಯುತ್ತೆ ಕ್ರಯ ೧ ಕ್ಕೆ ೪-೧೨-೦; ಡಿಟೋ ಅಲಾರಂ ಸಹಾ ಇರುವುದಕ್ಕೆ ೫-೪-೦; ಮನೋಹರವಾಗಿ ಗಾನಮಾಡುವ ಕ್ಲಾಕ್ ೧ ಕ್ಕೆ ೫-೮-೦; ಸಾದಾ ಟೈಂಪೀಸ್ ೧ ಕ್ಕೆ ೧-೪-೦; ಅಲಾರಂ ಇರತಕ್ಕದ್ದು ೨-೪-೦; ಅಮೇರಿಕನ್ ಅನ್‌ಸೋನಿಯಾ ಅಲಾರಂ ಟೈಂಪೀಸ್ ೧ ಕ್ಕೆ ೩-೮-೦; ಅನ್‌ಸೋನಿಯಾ ದೊಡ್ಡ ಟೈಂಪೀಸ್ ಘಂಟೆ ಅರ್ಧಘಂಟೆ ಹೊಡೆದು ಅಲಾರಂಸಹ ಇರತಕ್ಕದ್ದು ೬-೧೨-೦; ವಾಚ್‌ಸರಪಣಿಗಳು ೪ ಆಣೆ ಲಾಗಾಯ್ತು ನಾಲ್ಕು ರೂಪಾಯಿ ವರಿಗೂ ಇದೆ ಯಸ್ಟ್ಯುಖರೀದಿಯಲ್ಲಿ ಬೇಕಾದರೂ ಖಾತ್ರಿಯಿಂದ ರವಾನಿಸುತ್ತೇವೆ ಬೆಳ್ಳಿ ಸರಪಣಿ ೨॥ ತೊಲ ಲಾಗಾಯಿತು ೪ ತೊಲದ ವರೆಗೆ ಇದೆ. ತೊಲ ೧ ಕ್ಕೆ ೧-೪-೦. ಮತ್ತು ವಾಚ್‌ರಿಪೇರಿಂಗ್ ಡಿಪಾರ್ಟ್‌ಮೆಂಟನ್ನೂ ಸಹ ಇಟ್ಟಿರುತ್ತೇವೆ. ಪರಸ್ಥಳದಿಂದ ರಿಪೇರಿಗಾಗಿ ಬರತಕ್ಕ ವಾಚ್‌ಗಳಿಗೆ ಸರಿಯಾದ ಚಾರ್ಜಿಗೆ ರಿಪೇರಿಮಾಡಿ ರವಾನಿಸಲಾಗುತ್ತೆ. ವಾಚಿನ ಬಿಡಿಸಾಮಾನುಗಳೂ ವಾಚ್ ರಿಪೇರಿಂಗ್ ಆಯುಧಗಳೂ ರಖಂವಾರ್ ಗಂಧದಬಿಲ್ಲೆ ಊದುಬತ್ತಿ ಅತ್ತರ್ ಪನ್ನೀರು ತಲೆಗೆ ಹಚ್ಚತಕ್ಕ ರಖಂವಾರ್ ಸುವಾಸನೆ ಯಣ್ಣೆಗಳೂ ಸಹ ನಮ್ಮಲ್ಲಿ ದೊರೆಯುತ್ತವೆ. ನಮ್ಮಷ್ಟು ಕಡಮೇ ಬೆಲೆಗೆ ಮತ್ಯಾರಲ್ಲೂ ದೊರೆಯುವದಿಲ್ಲಾ ಖಂಡಿತ ತಿಳಿಯಿರಿ



ರಾತ್ರಿಯವೇಳೆ ಎಂತಹ ಕತ್ತಲೆಯಲ್ಲಿ ನೋಡಿದಾಗ್ಯೂ ದೀಪದ ಅವಶ್ಯವಿಲ್ಲದೆ ಇಷ್ಟೇಗಂಟೆಯೆಂಬುವುದನ್ನು ತೋರಿಸುವ ಹೊಸನಮೂನೆವಾಚ್ ಬಂದಿದೆ. ಸ್ಟೀಲ್‌ಕೇಸ್ ವಾಚ್ ೧ ಕ್ಕೆ ೨೪-೦-೦; ಡಿಟೋ ಅಚ್ಚಬೆಳ್ಳಿಯ ಕೇಸ್ ವಾಚ್ ೧ ಕ್ಕೆ ೨೬-೮-೦. ಈ ವಾಚ್ ಬೇಕಾದವರು ೨ ರೂಪಾಯಿ ಅಡ್ವಾನ್ಸಾಗಿ ರವಾನಿಸಬೇಕು. ೫ ರೂ. ಗೆ ೧ ಬೈಸಿಕಲ್, ೪ ಆಣೆಗೆ ೧ ವಾಚ್ ಸಿಕ್ಕುವಹಾಗೆ ಮಾಡಿದೇವೆ. ಈ ವಿಷಯವನ್ನು ತಿಳಿಯಲಪೇಕ್ಷಿಸುವವರು ಅರ್ಧಾಣೆ ಲೇಬಿಲ್ಲನ್ನು ನಮ್ಮ ವಿಳಾಸಕ್ಕೆ ರವಾನಿಸಬೇಕು.

೧೯೧೨ ನೆಯ ಇಸವಿ ಪಂಚಾಂಗ ಕ್ಯಾಲೆಂಡರು ೧ ಕ್ಕೆ ೬ ಪೈ. [illegible] ಕ್ಕೆ ೧-೩-೦, ಟಪಾಲ್ ಖರ್ಚ್ ಪ್ರತ್ಯೇಕ

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್.
ಜನರಲ್‌ಮರ್ಚಂಟ್ಸ್ [illegible]
ಮೈಸೂರು.

47 **ಊದಬತ್ತಿಗಳು.**

ವಿಧವಿಧವಾದ ಊದಬತ್ತಿಗಳು ಸೇರುಗಳಿಗೆ ೧೨-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಶರಣಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

24

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧-೩-೦. ವೀರಶೈವ ಮತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.– ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು [illegible] ಕೆಲಕ್ಷವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.– ಬಸವೇಶ [illegible] ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ಶಿಕ್ಷಾಶತಕಂ.–೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ ತಿಂಗಳಲ್ಲೂ [illegible] ಫಾರಂಗಳು ಬರುವವು. ವರ್ಷಕ್ಕೆ ಚಂದಾ ೨-೮-೦.

ಎಸ್. ಆರ್. [illegible]
[illegible]

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ.]

ಅದುದರಿಂದ ಈಗಲೇ ಅವನ ಮಂದಿರಕ್ಕೆ ಹೋಗಿ, ಆ ರಾಜಪುತ್ರಿಯಂ ಕಂಡು ಅವಳ ವೃತ್ತಾಂತವಂ, ಅಸ್ವದ ಪರಿಯಂಸ ಪಾತಿಳಿದು, ಹಾಗೆಯೇ ಆ ರಾಕ್ಷಸನ ಪಾಯೋಪಾಯಂಗಳಂ ಅವನ ಪರಾಕ್ರಮವಂ ಕೂಡ ವಿಚಾರಿಸಿ, ಅನಂತರ ಅದಕ್ಕೆ ತಕ್ಕ ಉಪಾಯವಂ ಆಲೋಚಿಸಬೇಕೆಂದು ಬಿನ್ನವಿಸಲಾಗ ರಾಜೇಂದ್ರನು ಸುಮತಿಯಂ ಸಂತವಿಟ್ಟು, ಯಕ್ಷನಂ ಕುರಿತು ನೀನು ಜಯಸಾಮರ್ಥನೆಂಬ ರಾಕ್ಷಸನು ಬರುವುದನ್ನು ನೋಡುತ್ತ ಇಲ್ಲಿಯೇ ಕಾದಿರು ಎಂದು ನಿಯಮಿಸಿ ಮಂತ್ರಿ ಸಮೇತನಾಗಿ ತೆರಳಿ ಕಪ್ಪುರ ವೀಳ್ಯವಂ ಸವಿಯುತ್ತಾ, ಅಲ್ಲಲ್ಲಿ ಕಾಲುಸಾಲಾಗಿರುವ ತೋಪುಗಳ ಉಪರಿ ಭಾಗದೊಳ್ ಕುಳಿತು ಮೃದುವಾಗಿ ನುಡಿವ ಗಿಣಿಗಳ ಧ್ವನಿಗಳಂ ಕಿವಿಗಿಂಪಾಗಿ ಕೇಳುತ, ವನಮಧ್ಯದೊಳ್ ಮರಿಹುಲ್ಲೆಗಳ ಹಾರಾಟವನ್ನು ನೋಡುತ್ತಾ, ಎಳೆ ಬಿಸಿಲಿನೊಳ್ ರತ್ನಮಯವಾದ ಹಾದಿಯಂ ಮೆಟ್ಟಿ ಬರುತ ಕೆಲವು ದೂರದಮೇಲೆ ಅಗಾಧವಾಗಿ ಕಾಣಿಸುವ ವಜ್ರಪುರಿಯ ಜಲಾವರಣವಂ ಕಂಡು ಸುಮತಿಯಂ ಕುರಿತು ಇದೇನೆಂದು ಕೇಳಲು, ಆ ಮಂತ್ರಿಯು ಎಲೈ ದಾನವಾಂತಕನೇ ಕೇಳು. ಇದು ವಜ್ರಪುರಿಯ ಮೊದಲಾವರಣವು, ಇದು ಜಲಮಯವಾಗಿ ನಾನಾವಿಧಂಗಳಾದ ನಕ್ರಂಗಳಂ ಅನೇಕಂಗಳಾದ ತಿಮಿತಿಮಿಂಗಿಲಂಗಳಂ, ವಿಜಾತೀಯಂಗಳಾದ ಮತ್ಸ್ಯಂಗಳಂ, ಇಂತಲ್ಲದೇ ಶುಷ್ಕಂಗಳಾದ ಮುನಿಗಳ ಶರೀರಂಗಳಂ, ಮತ್ತೂ ಜಂತುಗಳ ರಕ್ತಪ್ರವಾಹದಿಂ ಸಹಾ ಕೂಡಿ ಅತಿ ಘೋರವಾಗಿ ವೈತರಣಿಯೋ ಎಂಬಂತೆ ನೋಡುವುದಕ್ಕೆ ಅಶಕ್ಯವಾಗಿ ಇದೆ. ಎಂದು ಯಕ್ಷನು ಬಿನ್ನವಿಸಿದ ನೆಲದೆ ಇದೇ ಆವರಣವೆಂದು ಪೇಳಲು, ರಾಜೇಂದ್ರನು ಆ ನುಡಿಯಂ ಲಾಲಿಸುತೆ ಆ ಆವರಣದ ಸಮೀಪಕ್ಕೆ ಬಂದು ಸುಮತಿಯಂ ಕುರಿತು ಎಲೈ ಮಂತ್ರಿಯೆ! ಅಗಾಧವಾಗಿರುವ ಈ ಆವರಣವಂ ದಾಟುವುದು ಅತಿ ದುರ್ಘಟವಾಗಿದೆ ಎಂದು ಪೇಳಲು, ಆ ಮಾತಿಗೆ ಸುಮತಿಯು ಎಲೈ ರಾಜಕುಲತಿಲಕನೆ! ಕೇಳು. ಪೂರ್ವದಲ್ಲಿ ದಾಶರಥಿಯು ಮನುಷ್ಯಾವತಾರವಂ ತಾಳಿದ್ದರೂ ಲವಣ ಸಮುದ್ರವಂ ತನ್ನ ಬಾಣದಿಂದ ಶೋಷಣಂಗೈಸಿ ಖ್ಯಾತಿಯಂಪಡೆದ ಪರಿಯು ಗ್ರಂಥವು ನಿಮಗೆ ವಿದಿತವಾಗಿರುವಲ್ಲಿ ನಾನು ಬಿನ್ನವಿಸತಕ್ಕದೇನಿದೆ ಎಂದು ನುಡಿಯಲು, ಆ ಮಾತಿಗೆ ರಾಜೇಂದ್ರನು ನಿಶ್ಚಯಂ ತಿಳಿದು ಎಚ್ಚೆತ್ತವನಂತೆ, ತನ್ನ ಪೆಗಲೊಳ್ ಧರಿಸಿರುವ ಬತ್ತಳಿಕೆಯಲ್ಲಿ ಒಂದು ಅಮೋಘವಾದ ಬಾಣವಂತೆಗೆದು ಅದಕ್ಕೆ ಶೋಷಣಾಸ್ತ್ರ ಮಂತ್ರವಂ ಅಭಿಮಂತ್ರಿಸುವುದಕ್ಕೆ ಉದ್ಯೋಗಿಸಿ ಮಂತ್ರದೇವತೆಯಂ ಧ್ಯಾನಿಸಿ, ಎಲೈ ದೇವತೆಯೇ ಆವರಣಾಂತರಗತವಾದ ಜಲವಂ ನಿಶ್ಶೇಷವಂಮಾಡು ಎಂದು ನಿಯಮಿಸಿ ಅಭಿಮಂತ್ರಿಸಿದ ಬಾಣವಂ ಆಕರ್ಣಾಂತವಾಗಿ ಸೆಳೆದು ಪ್ರಯೋಗವಂ ಮಾಡಲು, ಆ ಅಸ್ತ್ರದಿಂದ ಪುಟ್ಟಿದ ಪ್ರಚಂಡವಾಯುವಿನ ರಭಸಕ್ಕೆ ಪರ್ವತಂಗಳೆಲ್ಲವೂ ಚಲಿಸಿ ಈ ಜಲಾವರಣದಲ್ಲಿ ಬಿಂದುಮಾತ್ರ ಉದಕವಿಲ್ಲದಂತೆ ಶೋಷಿಸಿ, ಮತ್ತೂ ಅದರ ದೆಸೆಯಿಂದ ಪರಿಪರಿಯಾಗಿ ಪುಟ್ಟಿದ ಸುಂಟರ ಘಾಳಿಯು, ಆ ಆವರಣ ದ್ವಾರ ರಕ್ಷಕರಾದ ದೈತ್ಯ ಸಮೂಹವಂ ನಭೋಮಂಡಲ ಪರಿಯಂತ ಅಡರಿಸಿ ಅಸುವಂ ಸೆಳೆದು ಅವರ ಶರೀರ ಸಮೂಹವಂ ದಿಕ್ಕು ದಿಕ್ಕುಗಳೊಳ್ ಬಿಸುಟು ಪ್ರಪಂಚವೆಲ್ಲವಂ ಅಲ್ಲಾಡಿಸುತ್ತಿರಲು, ಅದಂ ಕಂಡು ಸುಗಂಧರಾಜೇಂದ್ರನು ಆ ಅಸ್ತ್ರವಂ ಉಪಸಂಹಾರವಂ ಗೈದು, ಬಳಿಕ ಪಾತಾಳದಂತೆ ಅತಿಭಯಂಕರವಾದ ಆ ಆವರಣವನ್ನು ನೋಡಿ ಪರ್ವತಾಸ್ತ್ರವಂ ಪ್ರಯೋಗಿಸಿ ಆ ಜಲಾವರಣದ ಗುರುತು ಕೂಡಾ ತಿಳಿಯದ ಹಾಗೆ ಮಾಡಿ ಅಲ್ಲಿಂದ ಹೊರಟು ಸ್ವಲ್ಪ ದೂರದೊಳ್ ಎರಡನೆಯ ಆವರಣವಾದ ಅಗ್ನ್ಯಾವರಣದಲ್ಲಿ ದಾವಾಗ್ನಿ ಜ್ವಾಲೆಗಳು ಅಂತರಿಕ್ಷವನ್ನಡರಿ ಉದಕದಿಂ ಕೂಡಿದ ಮೇಘಮಂಡಲವಂ ಶೋಷಿಸುವಂತೆ ಕಾಣಿಸುತ್ತಿರುವದನ್ನು ನೋಡಿ ಅಚ್ಚರಿಗೊಂಡು, ಇದಕ್ಕೆ ಪ್ರತೀಕಾರವು ವಾರುಣಾಸ್ತ್ರದಿಂ ಆಗುವುದೆಂದು ಮನದೊಳ್ ನಿಶ್ಚಯಿಸಿ, ಮೂದಿಗೆಯಿಂದ ಮತ್ತೊಂದು ಬಾಣವಂ ತೆಗೆದು, ಆ ಬಾಣಕ್ಕೆ ವಾರುಣಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿ ಅದಂ ಪ್ರಯೋಗಿಸಲಾಗ ಪ್ರಳಯಕಾಲದ ಮೇಘಗಳೋ ಎಂಬಂತೆ ತತ್ ಕ್ಷಣದಲ್ಲಿ ಕೆಲವು ಮೇಘಗಳು ಉದಯಿಸಿ ಗಜಶುಂಡಾದಂಡಂಗಳಂತೆ ಉದಕಧಾರೆಗಳಂ ಅವಿಚ್ಛಿನ್ನವಾಗಿ ಕರೆಯಲಾಕ್ಷಣದಲ್ಲೇ ಆ ಅಗ್ನಿಜ್ವಾಲೆಗಳು ನದಿಯೊಳ್ ಕೊಳ್ಳಿಯನ್ನಿಕ್ಕಿದಂತೆ ಶಾಂತವಾಗಲೂ, ಆ ಸಮಯದೊಳ್ ಆ ವಾರುಣಾಸ್ತ್ರದಿಂ ಪುಟ್ಟಿದ ಸಿಡಿಲುಗಳ ಘಾತದಿಂ ಆ ಆವರಣದ ಬಾಗಿಲಲ್ಲಿ ಕಾದಿರ್ದ ರಾಕ್ಷಸಭಟರುಗಳು ಭಸ್ಮೀಭೂತರಾಗಲು, ಮತ್ತೂ ಸುತ್ತಮುತ್ತಲು ಆದ ಪ್ರವಾಹಗಳಿಂದ ಭೂಮಿಯೆಲ್ಲವೂ ಕರಗುವಂತೆಯೂ ಸಿಡಿಲುಗಳಿಂದ ಪರ್ವತಗಳೆಲ್ಲವೂ ಒಡೆದು ಹೋಗುವಂತೆಯೂ ತೋರಲು, ಆ ಅಸ್ತ್ರವಂ ಉಪಸಂಹಾರವಂ ಮಾಡಿ ಮುಂದೆ ಬರುತ ಮೂರನೆಯ ಆವರಣದಲ್ಲಿರುವ ಮಹಾಸರ್ಪಂಗಳ ವಿಷಜ್ವಾಲೆಗಳಿಂದ ಸುತ್ತಮುತ್ತಲೂ ಬರುವ ಮೃಗಪಕ್ಷಿಗಳೆಲ್ಲವೂ ನಷ್ಟಂಗಳಾಗಿ ಅದರ ಶರೀರಗಳು ಪರ್ವತಗಳಂತೆ ರಾಶಿರಾಶಿಯಾಗಿ ಬಿದ್ದಿರುವದಂ ನೋಡಿ ಅತಿ ಕುಪಿತನಾಗಿ ಗಾರುಡಾಸ್ತ್ರವಂ ಅಭಿಮಂತ್ರಿಸಿ ಪ್ರಯೋಗಿಸಲು, ಅಕ್ಷಣದಲ್ಲಿಯೇ ಅನೇಕ ಕೋಟಿ ಗರುಡರು ಅವಿರ್ಭವಿಸಿ ಸಕಲ ಸರ್ಪಗಳಂ ಹಿಡಿದು ಸೀಳಿ ದಿಕ್ಕುದಿಕ್ಕುಗಳೊಳ್ ಬಿಸುಟು ತಮ್ಮ ಪಕ್ಷಘಾತದಿಂದ ಅಲ್ಲಿದ್ದ ರಾಕ್ಷಸ ಭಟರಂ ಸಂಹರಿಸಲಾಕ್ಷಣದೊಳ್ ಸುಗಂಧರಾಜೇಂದ್ರನು ಆ ಅಸ್ತ್ರವಂ ಉಪಸಂಹಾರವಂಗೈದು ಅಲ್ಲಿಂದ ತೆರಳಿ ಬರುತ ಮುಂದುಗಡೆಯೊಳ್ ಸಿಂಹವೃಂದಗಳಿಂದ ಪರಿವೃತವಾದ ನಾಲ್ಕನೆಯ ಆವರಣವಂ ಕಂಡು ಶರಭಾಸ್ತ್ರವಂ ಪ್ರಯೋಗಿಸಲು ಲಕ್ಷಾಂತರ ಶರಭಗಳು ಒಂದೇ ಕಾಲದಲ್ಲಿ ಜನಿಸಿ ಅಲ್ಲಿದ್ದ ಮಹಾಸಿಂಹಗಳೆಲ್ಲವಂ ಸೀಳಿ ನಿಶ್ಶೇಷವಂ ಮಾಡಿ ಅಲ್ಲಿದ್ದ ರಾಕ್ಷಸರಂ ಸಂಹರಿಸಿ ಆಹಾರಸಾಲದೇ ಆರ್ಭಟಿಸುವುದಂ ಕಂಡು ರಾಜೇಂದ್ರನು ಆ ಅಸ್ತ್ರವಂ ಉಪಸಂಹಾರವಂಮಾಡಿ ಅಲ್ಲಿಂದ ಮುಂದೆ ಅಡಿಯಿಟ್ಟು ಬರುತ್ತಿರಲೂ, ಐದನೆಯ ಆವರಣವಂ ಕಾದಿರುವ ರಾಕ್ಷಸರ ಸಮೂಹಂಗಳು, ಅಸಾಧ್ಯಂಗಳಾದ ನಾಲ್ಕು ಆವರಣಗಳಂ ದಾಟಿಬರುತ್ತಿರುವ ರಾಯನಂ ಕಂಡು, ಅಚ್ಚರಿಯಿಂದಲೂ, ಕೋಪದಿಂದಲೂ ತಮ್ಮತಮ್ಮ ಆಯುಧಂಗಳಂ ಸವರಿಸಿಕೊಂಡು ಮೇಲ್ವರಿದು ಬರುತ್ತಿರಲು, ಅದಂ ಕಂಡು ರಾಜೇಂದ್ರನು ಸುಮತಿಯೊಡಗೂಡಿ ಧನುವಂ ಸಜ್ಜುಗೊಳಿಸಿ ಟೇಂಕಾರಶಬ್ದ ಮಾತ್ರದಿಂದಲೇ ಶತ್ರುಗಳ ಎದೆಗುಂಡಿಗೆಗಳಂ ತಲ್ಲಣಗೊಳಿಸುತ್ತ, ತೀಕ್ಷ್ಣಂಗಳಾದ ಬಾಣಂಗಳನೆಡೆಬಿಡದೆ ಬೀರುತ್ತ ಆ ರಾಕ್ಷಸರ ಸಿರಸ್ಸುಗಳು ಗಗನವಂ ತುಂಬುವಂತೆ ಚೆಂಡಾಡುತಲಿರಲಾಗ, ಆ ರಾಕ್ಷಸರಿಗೆ ಬೆಂಬಲವಾಗಿ ಬಂದ ರಾಕ್ಷಸರು ಕಾರ್ಮುಗಿಲಂತೆ ಕವಿದಿರುವುದಂ ಕಂಡು ಸುಮತಿಯು ರಾಜೇಂದ್ರನಂ ಕುರಿತು ಎಲೈ ರಾಕ್ಷಸಾಂತಕನೇ ! ಈಗ ರಾಕ್ಷಸರ ಗುಂಪುಗಳು ಎಣಿಸಕೂಡದಂತೆ ಬರುತಲಿವೆ. ಇವರೊಡನೆ ಆಯಾಸ ಪಡಲೇಕೆ? ಮೋಹನಾಸ್ತ್ರವಂ ಪ್ರಯೋಗಿಸಿ ವಿನೋದವನ್ನೋಡಬಹುದೆಂದು ಬಿನ್ನವಿಸಲಾಗ ಸುಗಂಧರಾಜೇಂದ್ರನು ಅಮೋಘವಾದ ಒಂದುಬಾಣವಂ ಬತ್ತಳಿಕೆಯಿಂದ ತೆಗೆದು ಗಂಧರ್ವಾಸ್ತ್ರ ಮಂತ್ರದಿಂ ಅಭಿಮಂತ್ರಿಸಿ ಪ್ರಯೋಗಿಸಿ ವಿನೋದವಂ

(ಸಶೇಷ.)

ವ್ಯವಸಾಯಕ ವಿಷಯಗಳು.

ಅನೇಕ ಸ್ಥಳಗಳಲ್ಲಿ ಕಾಕಂಬಿಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಎಕರೆಗೆ ೪೦೦ ರಿಂದ ೬೦೦ ಗ್ಯಾಲನ್ ಗಳಷ್ಟು ಹಾಕಬೇಕಾಗುವುದು. (ಗ್ಯಾಲನ್ ಅಂದರೆ ೪ ಸೀಮೆ ಎಣ್ಣೆ ಸೀಸೆ ಹಿಡಿಯುವಷ್ಟಾಗುವುದು.) ಇದನ್ನು ಜಮೀನಿನಲ್ಲಿ ಸುಮ್ಮನೆ ಚೆಲ್ಲುತ್ತಾರೆ; ಇಲ್ಲವೆ ಕಬ್ಬನ್ನು ನೆಡುವುದಕ್ಕೆ ಸುಮಾರು ಒಂದು ವಾರಕ್ಕೆ ಮುಂಚೆ ನೇಗಿಲಿನ ಗುರುತಿನಲ್ಲಿ ಉದ್ದಕ್ಕೂ ಚೆಲ್ಲಬೇಕು. ಹೀಗೆ ಕಾಕಂಬಿಯನ್ನು ಗೊಬ್ಬರವಾಗಿ ಹಾಕುವುದರಿಂದ ಕಬ್ಬು ಬಹಳ ಹುಲುಸಾಗಿಯೂ ಮತ್ತು ಒಂದೆರಡು ತಿಂಗಳಿಗೆ ಮೊದಲೆ ನೆಡಲ್ಪಟ್ಟ ಇತರ ಜಮೀನುಗಳ ಕಬ್ಬುಗಳಿಗಿಂತ ಉದ್ದವಾಗಿಯೂ ಬೆಳೆಯುವುವು

ಬೊಂಬಾಯಿ ಸರ್ಕಾರಕ್ಕೆ ಸೇರಿದ ಒಂದು ವ್ಯವಸಾಯ ಶಾಲೆಯಲ್ಲಿ ಬಿತ್ತನೆಯ ಜೋಳವನ್ನು ಮೈಲುತುತ್ತವು ಕದಡಲ್ಪಟ್ಟ ನೀರಿನಲ್ಲಿ ೧೦ ನಿಮಿಷಗಳ ಕಾಲ ನೆನಸಿಟ್ಟದ್ದನಂತರ ಬಿತ್ತನೆಮಾಡುವುದರಿಂದ ಜೋಳಕ್ಕೆ ಹತ್ತತಕ್ಕ ಮಸೀರೋಗವು ಬಹಳಮಟ್ಟಿಗೆ ಕಡಿಮೆಯಾಗುವುದೆಂದು ರೈತರುಗಳಿಗೆಲ್ಲಾ ನಿದರ್ಶಿಸಿ ತೋರಿಸಿರುತ್ತಾರೆ. ನಾಲ್ಕು ಗುಂಟೆ ಜಮೀನಿನಲ್ಲಿ ಮೈಲುತುತ್ತದಲ್ಲಿ ನೆನಿಸಲ್ಪಟ್ಟ ಜೋಳವೂ, ಆ ಜಮೀನಿನ ಪಕ್ಕದಲ್ಲಿ ಮತ್ತೊಂದು ನಾಲ್ಕು ಗುಂಟೆ ಜಮೀನಿನಲ್ಲಿ ನೆನಿಸದೇ ಇರುವ ಜೋಳವೂ ಬಿತ್ತಲ್ಪಟ್ಟವು. ಮೊದಲನೆಯ ತಾಕಿನಲ್ಲಿ ಒಟ್ಟು ೫೪೮ ತೆನೆಗಳಾದವು. ಈ ಪೈಕಿ ೧೩ ತೆನೆಗಳಿಗೆ ಮಾತ್ರ ಮಸೀರೋಗವು ತಗಲಿತ್ತು. ಎರಡನೆಯ ತಾಕಿನಲ್ಲಿ ಒಟ್ಟು ೫೫೯ ತೆನೆಗಳಾಗಿದ್ದವು. ಈ ಪೈಕಿ ೧೦೬ ತೆನೆಗಳಿಗೆ ರೋಗವು ತಗಲಿತ್ತು. ರೈತರೆಲ್ಲರೂ ಇದನ್ನು ಕಣ್ಣಾರ ನೋಡಿ ಬಿತ್ತನೆ ಜೋಳವನ್ನು ಮೈಲುತುತ್ತವು ಕದಡಲ್ಪಟ್ಟ ನೀರಿನಲ್ಲಿ ನೆನಸಿ ಬಿತ್ತನೆ ಮಾಡುವುದು ಬಹಳ ಪ್ರಯೋಜನಕಾರಿಯೆಂದು ಒಪ್ಪಿರುತ್ತಾರೆ. ನಮ್ಮ ರೈತರುಗಳು ಇದೇ ರೀತಿ ಮಾಡುವುದು ಒಳ್ಳೇದು.

ಪರಂಗಿ ಹಣ್ಣಿನ ವ್ಯವಸಾಯವು.

ಇಂಡಿಯಾ ದೇಶದ ಶ್ರೇಷ್ಠವಾದ ಹಣ್ಣುಗಳಲ್ಲಿ ಪರಂಗಿ ಹಣ್ಣು ಒಂದಾಗಿದೆ. ಜನರು ಇದನ್ನು ತಿನ್ನುವುದು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ ಮತ್ತು ಉಪಯೋಗಕ್ಕೆ ಆವಶ್ಯಕವಾದಷ್ಟು ಹಣ್ಣುಗಳು ಒದಗುತ್ತಿಲ್ಲವಾದುದರಿಂದಲೂ ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಂದೊಂದು ಹಣ್ಣಿಗೆ ಒಂದು ರೂಪಾಯಿ ಬೆಲೆಯನ್ನು ಕೊಡುತ್ತಿರುವರು. ಮುಖ್ಯವಾಗಿ ಇಲ್ಲಿರತಕ್ಕ ಯೂರೋಪು ದೇಶಸ್ಥರು ಈ ಹಣ್ಣನ್ನು ಬಹಳ ಅಕ್ಕರೆಯಿಂದ ತಿನ್ನುತ್ತಾರೆ. ಈ ಹಣ್ಣು ಬಹಳ ಜೀರ್ಣಕಾರಿಯಾಗಿರುವುದಲ್ಲದೆ, ಮಾವು ಮೊದಲಾದ ಇತರ ಹಣ್ಣುಗಳಂತೆ ದಪ್ಪನಾದ ಓಟೆ ಅಥವಾ ಬೀಜಗಳಿಲ್ಲದೆ, ಹಣ್ಣು ದಪ್ಪನಾಗಿ ಮತ್ತು ಬೀಜಗಳು ಸಣ್ಣನಾಗಿರುವುದೂ ಮತ್ತು ಹಣ್ಣು ಬಹಳ ರಸವತ್ತಾಗಿಯೂ ಮತ್ತು ರುಚಿಯಾಗಿಯೂ ಇರುವುದೇ ಇಲ್ಲಿನ ಯೂರೋಪ್ ದೇಶಸ್ಥರು ಈ ಹಣ್ಣನ್ನು ಇಷ್ಟು ಮೋಹಿಸುವುದಕ್ಕೂ ಮತ್ತು ಕೇಳಿದ ಬೆಲೆಯನ್ನು ಕೊಡುವುದಕ್ಕೆ ಸಿದ್ಧರಾಗಿರುವುದಕ್ಕೂ ಕಾರಣವಾಗಿದೆ. ಅಲ್ಲದೆ ಬಹಳ ಸ್ವಲ್ಪ ಬಂಡವಾಳ ವಿರತಕ್ಕವರು ಸಹಾ ಈ ಹಣ್ಣನ್ನು ಸುಲಭವಾಗಿ ಬೆಳೆದು ಮಾರಿ ತುಂಬಾ ಲಾಭವನ್ನು ಸಂಪಾದಿಸಬಹುದು. ಆದುದರಿಂದ ಇದರ ವ್ಯವಸಾಯಕ್ಕೆ ಬಹಳ ಉಪಯೋಗಕರವಾದ ಕೆಲವು ಅಂಶಗಳು ಈ ಕೆಳಗೆ ಸೂಚಿಸಲ್ಪಟ್ಟಿವೆ

ಪರಂಗಿ ಗಿಡವು ಬಹಳ ಜಾಗ್ರತೆಯಾಗಿ ಮರವಾಗುತ್ತದೆ. ಒಂದು ಸಾಲಿನ ಬೇಸಿಗೆಯಲ್ಲಿ ನೆಟ್ಟ ಬೀಜವು ಮುಂದಿನ ಸಾಲಿನಲ್ಲಿ ಮರವಾಗಿ ಫಲಕೊಡುವುದು

ಒಳ್ಳೆಯಜಾತಿಯ ಬೀಜಗಳನ್ನೇ, ಅಗೆದು ಗೊಬ್ಬರಹಾಕಿ ಅಚ್ಚುಕಟ್ಟು ಮಾಡಲ್ಪಟ್ಟಿರತಕ್ಕ ಮತ್ತು ನೆರಳಿನಲ್ಲಿರುವ ಮಡಿಗಳಲ್ಲಿ ಒತ್ತಲ್ಲ ಹೊಯ್ಯಬೇಕು. ಸೊಸಿಗಳು ಸುಮಾರು ೬ ಅಂಗುಲ ಎತ್ತರವಾಗಿರುವಾಗ ಬಹಳ ಕೋಮಲವಾಗಿರುವುದರಿಂದ ನೀರು ಹೊಯ್ಯುವಾಗ್ಯೆ ಮೇಲಿನಿಂದ ಧಡಧಡನೆ ಸುರಿಯಕೂಡದು. ಮತ್ತು ಮಳೆಯ ಹೊಡತಕ್ಕೆ ಸಿಕ್ಕದಂತೆ ಸೊಸಿಗಳಿಗೆ ಮರೆಮಾಡಬೇಕು. ಸೊಸಿಗಳಲ್ಲಿ ಆರು ಎಲೆಗಳಿರುವಾಗ ಅವುಗಳನ್ನು ಕಿತ್ತು ಬೇಕಾದ ಕಡೆಗಳಲ್ಲಿ ನೆಡಬೇಕು. ಸ್ಥಳದಿಂದಸ್ಥಳಕ್ಕೆ ಕಿತ್ತು ನೆಡುವುದರಿಂದ ಸೊಸಿಗಳಿಗೆ ಘಾಸಿಯಾಗುವ ಕಾರಣ, ಸಾಯಂಕಾಲದ ವೇಳೆಯಲ್ಲೇ ಕಿತ್ತು ನೆಟ್ಟರೆ ಬೆಳಗಿನ ಹೊತ್ತಿಗೆ ಅವುಗಳು ಚೇತರಿಸಿಕೊಳ್ಳುವುವು.

ಸೊಸಿಗಳನ್ನು ನೆಡತಕ್ಕ ಪ್ರದೇಶವನ್ನು ನೆಡುವುದಕ್ಕೆ ಮುಂಚೆಯೆ ಅಗೆದು ಮಟ್ಟ ಹೊಡೆದು ಬೇಕಾದ ಜಾಗಗಳಲ್ಲಿ ೩ ಅಡಿಗಳ ಮತ್ತು ೧॥ ಅಡಿ ಅಗಲವಾದ ಗುಂಡಿಗಳನ್ನು ಹೊಡಿಯಬೇಕು. ದನವಿನ ಗೊಬ್ಬರ ಮತ್ತು ಮಣ್ಣನ್ನು ಸಮನಾಗಿ ಬೆರಸಿ ಗುಂಡಿಗಳೊಳಕ್ಕೆ ತುಂಬಿರಬೇಕು. ಅನಂತರ ಈ ಗುಂಡಿಗಳಲ್ಲಿ ಸೊಸಿಗಳನ್ನು ನೆಡಬೇಕು. ಮೊದಲು ಕೈಯ್ಯಿಂದ ನೀರು ಹಾಕತಕ್ಕದು. ಸೊಸಿಗಳು ಎರಡು ಅಡಿ ಎತ್ತರವಾದ ಮೇಲೆ ಸಾಧ್ಯವಾದರೆ ಸಣ್ಣ ಸಣ್ಣ ಕಾಲುವೆಗಳನ್ನು ಕಟ್ಟಿ ಅವುಗಳ ಮುಖಾಂತರವಾಗಿ ನೀರು ಹಾಯಿಸಬಹುದು. ಬೇಸಗೆಯಲ್ಲಿ ಮೂರು ದಿನಗಳಿಗೊಂದಾವೃತ್ತಿ ನೀರು ಹಾಕಬೇಕು. ಮಳೆಗಾಲದಲ್ಲಿ ನೀರು ಹಾಕಬೇಕಾದ ಆವಶ್ಯಕವಿಲ್ಲ. ಗಿಡಗಳು ಬಹಳ ಜಾಗ್ರತೆಯಾಗಿ ಬೆಳೆಯುವವು ಗಿಡಗಳು ಡೊಂಕಾಗಿ ಬೆಳೆಯುವುದಾಗಿ ಕಂಡುಬಂದರೆ ಅವುಗಳಿಗೆ ಬಲವಾದ ಊರೆಗಳನ್ನು ಕೊಡಬೇಕು.

ಅಲ್ಲಿಂದ ಮುಂದೆ ಗಿಡಗಳಿಗೆ ನೀರು ಹಾಕಬೇಕಾದ ಅವಶ್ಯಕವಿಲ್ಲ; ಆದರೆ ಮರದಲ್ಲಿ ಫಲ ಬಿಟ್ಟು ಕಾಯಿಗಳು ದಪ್ಪವಾಗುತ್ತಿರುವಾಗ ಬಹಳವಾಗಿ ನೀರು ಹಾಕಬೇಕಾಗುವುದು. ಮತ್ತು ಮರದಲ್ಲಿ ಹುವ್ವು ಕಚ್ಚುತ್ತಿರುವಾಗಲೂ ಚೆನ್ನಾಗಿ ಕೊಳೆತ ಸ್ವಲ್ಪ ದನವಿನ ಗೊಬ್ಬರವನ್ನು ಹಾಕಿದರೆ ಹಣ್ಣು ಬಹಳ ರುಚಿಯಾಗುವುದು. ಕಾಯಿಗಳು ಬಲಿತು ಪಕ್ವವಾಗುತ್ತಿರುವ ಕಾಲದಲ್ಲಿ ನೀರು ಹೊಯ್ಯುವುದನ್ನು ನಿಲ್ಲಿಸಬೇಕು.

ಸಾಮಾನ್ಯವಾಗಿ ಪರಂಗಿ ಹಣ್ಣುಗಳು ಗಾತ್ರದಲ್ಲಿ ಒಂದೇ ಸಮನಾಗಿರುವುದಿಲ್ಲ; ಆದರೆ ದಪ್ಪ ದಪ್ಪನಾದ ಹಣ್ಣುಗಳೇ ಬೇಕಾದರೆ, ಚೆನ್ನಾಗಿ ಬಲಿಯದ ಮತ್ತು ವಿಕಾರವಾಗಿರತಕ್ಕ ಕಾಯಿಗಳನ್ನೆಲ್ಲಾ ಹರಿತವಾದ ಚಾಕುವಿನಿಂದ ಒಂದೇಏಟಿಗೆ ಕತ್ತರಿಸಿ ಹಣ್ಣುಗಳ ಮಧ್ಯೇ ಮಧ್ಯೇ ಜಾಗವನ್ನು ಮಾಡಬೇಕು.

ಹಣ್ಣುಗಳನ್ನು ರೈಲಿನಲ್ಲಿ ಬಹಳದೂರ ದೇಶಗಳಿಗೆ ಕಳುಹಿಸಬೇಕಾದರೆ ಚೆನ್ನಾಗಿ ಬಲಿತು ಅತಿ ಪಕ್ವವಾಗಿಲ್ಲದಂತಹವುಗಳನ್ನೇ ಆರಿಸಿ ಕುಯ್ಯಬೇಕು. ಹಣ್ಣುಗಳು ಒಂದಕ್ಕೊಂದು ತಗಲದಂತೆ ಪ್ರತಿ ಹಣ್ಣನ್ನೂ ಬೇರೆ ಬೇರೆಯಾಗಿ ಕಾಗದಗಳಲ್ಲಿ ಸುತ್ತಿ ಬುಟ್ಟಿಗಳಲ್ಲಿ ಭರ್ತಿ ಮಾಡಬೇಕು. ಕೆಲವರು ಹಣ್ಣುಗಳನ್ನು ಪರಂಗಿ ಎಲೆಗಳಲ್ಲಿ ಸುತ್ತುವರು. ಆದರೆ ಹೀಗೆ ಮಾಡಿದರೆ ಹಣ್ಣುಗಳು ಬಹಳ ಜಾಗ್ರತೆಯಾಗಿ ಪಕ್ವವಾಗುವುದಾದುದರಿಂದ ಅವುಗಳನ್ನು ಎಲೆಗಳಲ್ಲಿ ಎಂದಿಗೂ ಸುತ್ತಬಾರದು.

ಪರಂಗಿ ಗಿಡಗಳಲ್ಲಿ ಹೆಣ್ಣು ಮತ್ತು ಗಂಡೆಂಬದಾಗಿ ಎರಡು ಜಾತಿಯುಂಟು. ಇದನ್ನು ಸುಲಭವಾಗಿ ಗೊತ್ತು ಮಾಡಬಹುದು. ಗಂಡುಮರದಲ್ಲಿ ಸಣ್ಣ ಸಣ್ಣ ಹೂಗಳು ಗೊಂಚಲು ಗೊಂಚಲಾಗಿ ನೇತಾಡುತ್ತಿರುವುವು. ಹೆಣ್ಣು ಮರಗಳಲ್ಲಿ ಹೂಗಳು ಗಿಡಕ್ಕೆ ಅಂಟಿಕೊಂಡಿರುವುವು. ಪರಂಗಿ ತೋಟಗಳಲ್ಲಿ ಅಲ್ಲಲ್ಲಿ ಒಂದೊಂದು ಗಂಡು ಮರವನ್ನು ಬಿಟ್ಟು ಉಳಿದ ಗಂಡು ಮರಗಳನ್ನೆಲ್ಲಾ ಕತ್ತರಿಸಿ ಹಾಕಬೇಕು. ಅದಲ್ಲದೆ ಒಂದೆರಡು ಗಂಡು ಮರಗಳು ಹೆಣ್ಣು ಮರಗಳಲ್ಲಿ [illegible] [illegible] ಸಂಗ್ರಹಿಸಲ್ಪಟ್ಟದ್ದು.

ಕೃ. ಕೆ.

ಪಿ. ಸುಬ್ರಹ್ಮಣ್ಯರಾಜ ಅರಸಿನವರು ಹುಜೂರು ಸೆಕ್ರೆಟರಿ ಪಿ. ರಾಘವೇಂದ್ರರಾಯರು ಮೊದಲಾದವರೊಡನೆ ಯುವರಾಣಿಯವರೂ, ಇಬ್ಬರು ರಾಜಕುಮಾರಿಯವರೂ ಮಂಗಳವಾರ ರಾತ್ರಿ ಹೆಚ್ಚು ಕಟ್ಟಳೆಯ ರೈಲು ಬಂಡಿಯಲ್ಲಿ ಹೊರಟು ಬುಧವಾರ ಬೆಳಿಗ್ಗೆ ರಾಜಧಾನಿಗೆ ಚಿತ್ತೈಸಿದರು.

ಕೋಲಾರದ ಚಿನ್ನದ ಗಣಿಗಳಲ್ಲಿ ಕೆಲಸಮಾಡುವ ಆಳುಗಳು ಪ್ರಾಯಶಃ ೧೦೦೦ ವರೆಗೆ ಕಳೆದ ತಾ|| ೨೦ ರಲ್ಲಿ ತಮ್ಮ ಕೂಲಿಯನ್ನು ಹೆಚ್ಚಿಸಿಕೊಡುವುದಲ್ಲದೆ ಕೆಲ ಸೌಲಭ್ಯವನ್ನು ಕಲ್ಪಿಸಿಕೊಟ್ಟ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಹಟಹಿಡಿದು ನಿಂತುಬಿಟ್ಟಿದ್ದುದರಮೇಲೆ, ಗಣಿಯ ಸೂಪರಿಂಟೆಂಡೆಂಟರು, ಸ್ಪೆಷಲ್ ಮ್ಯಾಜಿಸ್ಟ್ರೇಟರು ಮತ್ತೂ ಪೋ|| ಸೂಪರಿಂಟೆಂಡೆಂಟರು ಆಯುಧಪಾಣಿಗಳಾದ ಪೋಲೀಸರು ಇವರುಗಳೊಡನೆ ಕೆಲಸಗಾರರ ವಾಸಸ್ಥಳಕ್ಕೆ ಹೋಗಿ ಅವರೆಲ್ಲರನ್ನೂ ಬರಮಾಡಿಕೊಂಡು ಅವರು ಹೇಳುವುದನ್ನೆಲ್ಲಾ ಕೇಳಿ, ಅವರ ಕೂಲಿಯನ್ನು ಹೆಚ್ಚಿಸಲಾಗುವುದಿಲ್ಲವೆಂದೂ, ಅವರಿಗಿರುವ ಇತರ ತೊಂದರೆಗಳನ್ನೆಲ್ಲಾ ಪರಿಹರಿಸಿ ಕೊಡುತ್ತೇವೆಂದೂ ಗಣಿಯ ಸೂಪರಿಂಟೆಂಡೆಂಟರು ಹೇಳಿದುದರ ಮೇಲೆ ಕೆಲಸಗಾರರೆಲ್ಲರೂ ತಂತಮ್ಮ ಕೆಲಸಗಳ ಮೇಲೆ ಹೋಗಲೊಪ್ಪಿಕೊಂಡರು. ಇವರಿಗೆಲ್ಲ ದುರ್ಬೋಧೆಯನ್ನು ಮಾಡಿದ್ದವರಲ್ಲಿ ೧೦-೧೧ ಜನರನ್ನು ಪೋಲೀಸರು ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿರುವರು. ಗಣಿಯ ಕೆಲಸವು ಯಥಾಪ್ರಕಾರ ನಡೆಯುತ್ತಿದೆ.

ಜೇಫ್ ಕೋರ್ಟಿನ ಜೇಫ್ ಜಡ್ಜರಾದ ಸರ್ ಸ್ಟಾನ್ಲೆ ಇಜ್ ಮೆಯವರಿಗೆ ಕೆ. ಸಿ. ಎಸ್. ಐ., ಪ್ರಶಸ್ತಿಯು ಲಭ್ಯವಾದುದರಿಂದ ತಮಗಳಿಗುಂಟಾದ ಸಂತೋಷಸೂಚನಾರ್ಥವಾಗಿ ಬೆಂಗಳೂರ ಲಾಯರುಗಳೆಲ್ಲರೂ ಕಳೆದ ತಾ|| ೨೦ರಲ್ಲಿ ಬೆಂಗಳೂರ ಕಬ್ಬನ್ ಉದ್ಯಾನವನ್ನು ಅಲಂಕರಿಸಿ ಅಲ್ಲಿಗೆ ಸರ್ ಇಜ್ ಮೆಯವರನ್ನು ಬರಮಾಡಿಕೊಂಡು ವಿನೋದೋತ್ಸವಗಳಿಂದ ಆನಂದಪಡಿಸಿ, ಒಂದು ವಿಜ್ಞಾಪನಪತ್ರಿಕೆಯನ್ನು ಓದಿ ಅವರಿಗೊಪ್ಪಿಸಿದರು. ತರುವಾಯ ದಿವಾನ್ ಬಹದ್ದೂರ್ ಮ|| ಕೆ. ಪಿ. ಪುಟ್ಟಣ್ಣ ಸೆಟ್ಟರು ಸರ್ ಇಜ್ ಮೆಯವರ ಗುಣಕಥನವನ್ನು ಸಂಕ್ಷೇಪವಾಗಿ ಮಾಡಿದರು. ಇವುಗಳಿಗೆ ಸರ್ ರವರು ಯುಕ್ತಿಯುಕ್ತವಾದುತ್ತರವನ್ನು ಕೊಟ್ಟರು. ರಾಜಧಾನಿಯ ಲಾಯರುಗಳೆಲ್ಲರೂ ಸರ್ ಇಜ್ ಮೆಯವರನ್ನು ಇಷ್ಟರಲ್ಲೇ ಬರಮಾಡಿಕೊಂಡು ವಿನೋದೋತ್ಸವದಿಂದ ಹರ್ಷಗೊಳಿಸಿ, ಅವರಿಗೆ ಪ್ರಶಸ್ತಿಯು ಲಭ್ಯವಾಗಿರುವುದರ ಬಗೆಗೆ ತಮಗುಂಟಾಗಿರುವ ಸಂತೋಷವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿರುತ್ತಾರೆ.

ವರ್ತಮಾನ ಸಂಗ್ರಹವು.

ಮದರಾಸಿನ ಗೌರ್ನರರಾದ ಲಾರ್ಡ್ ಕಾರ್ಮೈಕಲ್ ರವರು ಬಂಗಾಳಾ ಗೌರ್ನರರಾಗಿ ನಿಯಮಿಸಲ್ಪಟ್ಟಿರುವರು.

ಇಂಗ್ಲೆಂಡಿನಲ್ಲಿ ಮಳೆಯಾಧಿಕ್ಯದಿಂದಲೂ, ಮಂಜು ಕರಗುವುದರಿಂದಲೂ ಥೇಂಸ್ ಮೊದಲಾದ ನದಿಗಳಲ್ಲಿ ಪ್ರವಾಹವು ವಿಪರೀತವಾಗಿ ಬಂದಿರುತ್ತದೆ.

ಅಮೇರಿಕಾದಲ್ಲಿ ಎರಡು ರೈಲುಬಂಡಿಗಳು ತಾಕುಬಡಿದು ಒಂದು ಬಂಡಿಯು ನುಚ್ಚುನೂರಾಗಿ ೪ ಜನರು ಸತ್ತುಹೋದರು. ಮತ್ತೂ ೨೦ ಜನರು ಗಾಯಪಡೆದವರು.

ತುರ್ಕಿ—ಇಟಲಿ ದೇಶಗಳ ಯುದ್ಧದಲ್ಲಿ ಗಾಯಪಡೆದ ಮತ್ತೂ ವಿಪನ್ನರಾದವರ ಸಹಾಯಾರ್ಥವಾಗಿ ರೆಡ್ ಕ್ರೆಸೆಂಟ್ ಸಂಘದವರು ಕೂಡಿಸುತ್ತಿರುವ ಫಂಡಿಗೆ ರಂಗೂನಿನಿಂದ ಈವರೆಗೆ ೬೫,೪೦೦ ರೂ. ವರೆಗೆ ಚಂದಾಹಣವು ಬಂದಿರುತ್ತದೆ.

ಜಾರ್ಜ್ ಚಕ್ರವರ್ತಿಯವರ ಭಾವಚಿತ್ರವೊಡನೆ ೧೯೧೧ ರ ಕಡೆಯ ಭಾಗದಲ್ಲಿ ಅಚ್ಚಾಗಿ ಉಪಯೋಗದಲ್ಲಿರುವ ಹೊಸ ರೂಪಾಯಿಗಳನ್ನು ಕೂಡಲೆ ಹಿಂದಕ್ಕೆ ಬರಮಾಡಿಕೊಂಡು ಮುಂದೆ ಉಪಯೋಗಿಸಕೂಡದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಹೊಸದಾಗಿ ಕಟ್ಟಲ್ಪಡುವ ಡಿಲ್ಲಿಯ ರಾಜಧಾನಿಯಲ್ಲಿ ಜಾರ್ಜ್ ಚಕ್ರವರ್ತಿಯವರ ಪ್ರತಿಮೆಯನ್ನು ಗ್ವಾಲಿಯರ್ ಮಹಾರಾಜರವರೂ, ಮೇರಿ ರಾಣಿಯವರ ಪ್ರತಿಮೆಯನ್ನು ಬಿಕನೀರ್ ಮಹಾರಾಜರವರೂ ಸ್ಥಾಪಿಸಿಕೊಡಲು ವಾಗ್ದಾನ ಮಾಡಿರುವರು.

“ಬಿಗಿಯಾದ ಕತ್ತಿನ ಪಟ್ಟಿಯು (ಕಾಲರ್) ನ್ನು ಉಪಯೋಗಿಸುವುದರಿಂದ ಬಹು ಶೀಘ್ರವಾಗಿ ಬಿಳಿಯ ಕೂದಲು ಬಂದು ಮತ್ತೂ ತಲೆಯ ಕೂದಲು ಉದುರಿ ಹೋಗಿ ವೃದ್ಧರಂತೆ ಕಾಣಿಸಿಕೊಳ್ಳುವರು.” ಎಂದು ಒಬ್ಬ ವೈದ್ಯನು ವಿಚಿತ್ರವಾದ ಅಭಿಪ್ರಾಯಪಟ್ಟಿರುತ್ತಾನೆ.

ಲಂಡನ್ ಪಟ್ಟಣದಲ್ಲಿ ಕಟ್ಟಲ್ಪಡುವ ಮಹಮ್ಮದೀಯರ ಮ[illegible] ರೂ. ಗಳು [illegible]ಬೇಕಾಗುವುದೆಂದೂ, ಇದಕ್ಕಾಗಿ ಆಗಲೇ ಕೆಲ ಚಂದಾದ್ರವ್ಯವು ಕೊಡಲ್ಪಟ್ಟಿರುವುದೆಂದೂ ಇಂಡಿಯಾ ಕೌನ್ಸಿಲ್ ಮೆಂಬರರಾದ ರೈಟ್ ಆನರಬಲ್ ಸಯದ್ ಅಮೀರಾಲಿಯವರು ತಿಳಿಸಿರುತ್ತಾರೆ.

ಬರ್ಮಾದಲ್ಲಿ ಇಬ್ಬರು ಸ್ತ್ರೀಯರು ತಮ್ಮ ಮನೆಗೆ ಕಳ್ಳತನಕ್ಕಾಗಿ ನುಗ್ಗಿದ್ದವನನ್ನು ಬಹು ಧೈರ್ಯದಿಂದ ಕೆಳಗೆ ಕೆಡವಿ ಪೋಲೀಸಿನವರು ತಮ್ಮ ಸಹಾಯಕ್ಕೆ ಬರುವವರೆಗೂ ಗಟ್ಟಿಯಾಗಿ ಹಿಡಿದುಕೊಂಡಿದ್ದುದಕ್ಕಾಗಿ ಡೆಪ್ಯುಟಿ ಕಮಿಷನರು ಅವರಿಬ್ಬರ ಧೈರ್ಯವನ್ನು ಮೆಚ್ಚಿ ಇಬ್ಬರಿಗೂ ಎರಡು ಬೆಳ್ಳಿಯ ಬಟ್ಟಲುಗಳನ್ನು ಬಹುಮಾನಿಸಿದರು.

ಆನರಬಲ್ ಪಂಡಿತ ಮದನಮೋಹನ ಮಾಳವಿಯರವರ ಬಂಧುಗಳಾದ ಪಂಡಿತ ಜಯಗೋವಿಂದ ಮಾಳವಿಯರವರು ಅಲಹಾಬಾದಿನಲ್ಲಿ ವಿಧಿವಶರಾದರು. ಇವರು ಬಹು ಪ್ರಸಿದ್ಧ ಸಂಸ್ಕೃತಪಂಡಿತರಾದ ಗಜಧರ ಮಾಳವಿಯರವರ ಕುಮಾರರಾಗಿದ್ದರಲ್ಲದೆ, ಸಂಸ್ಕೃತದಲ್ಲಿ ಒಳ್ಳೆಯ ಪಂಡಿತರಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿ ಪ್ರಖ್ಯಾತರಾಗಿದ್ದರು.

ಚಕ್ರವರ್ತಿ ದಂಪತಿಗಳ ಪರಾಮರಿಕೆಗಾಗಿ ಬೊಂಬಾಯಿನಲ್ಲಿ ಪುರಾತನ ನಗರವೂ, ಹಿಮಾಲಯಾ ಪರ್ವತ ಪ್ರಾಂತದಲ್ಲಿ ರೈಲುಬಂಡಿಯು ಹೋಗುವ ವಿಧಾನವೂ ಪ್ರದರ್ಶಿಸಲ್ಪಟ್ಟಿದ್ದುವಷ್ಟೆ. ಈ ರೈಲುಬಂಡಿಯಲ್ಲಿ ೪೦ ವರ್ಷ ವಯಸ್ಸಿನ ಒಬ್ಬ ಐರೋಪ್ಯನು ಮತ್ತೆ ಕೆಲ ಸ್ನೇಹಿತರೊಡನೆ ಕುಳಿತು ಪ್ರಯಾಣಮಾಡುತ್ತಿರುವಾಗ್ಗೆ ಬಂಡಿಯಿಂದ ಬಿದ್ದು ಸತ್ತುಹೋದನು.

ಬರೋಡಾ ಸಂಸ್ಥಾನದ ಹಿಂದಣ ದಿವಾನರಾಗಿದ್ದ ಖಾನ್ ಬಹದ್ದೂರ್ ಕರ್ ಷಾಪ್ ಜಿ ರುಸ್ತುಂಜಿಯವರ ಪುತ್ರಿಗೂ, ಬೊಂಬಾಯಿನ ಸಾಲಿಸಿಟರ್ ಮಿಂಚಾರ್ ಪಾಲೋಜಿ ಹಾರ್ಮಸ್ಜೀಯವರಿಗೂ ವಿವಾಹವಾಯಿತು. ಬರೋಡಾ ಮಹಾರಾಜರು ತಮ್ಮ ಚಿಕ್ಕ ಕುಮಾರರ ಮೂಲಕ ೫೦೦೦ ರೂ. ಗಳ ಬೆಲೆಯ ಆಭರಣಗಳನ್ನೂ, ೭೫,೦೦೦ ರೂ, ಗಳನ್ನೂ ವಧುವಿಗೆ ಬಹುಮಾನವಾಗಿ ಕಳುಹಿಸಿ ಕೊಟ್ಟಿದ್ದರು.

ಮದ್ರಾಸಿನಲ್ಲಿ ಟ್ರಾಂ ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬಾತನು ಇಳಿಯುಲು ಅಜಾಗರೂಕತೆಯಿಂದ ದುಮುಕಿದಾಗ್ಗೆ ಕೌಕ್ಯಾಚರ್ ಅಂದರೆ ಅಡ್ಡಲಾಗಿ ಸಿಕ್ಕುವ ಪದಾರ್ಥಗಳನ್ನು ತೆಗೆದೊಗೆಯುವ ಭಾಗಕ್ಕೆ ಸಿಕ್ಕಿ ಕೊಂಚದೂರ ಎಳೆದುಕೊಂಡು ಹೋಗಲ್ಪಡುತ್ತಿರುವಲ್ಲಿ, ಬಂಡಿಯನ್ನು ನಡೆಯಿಸುವವನು ಉಪಾಯದಿಂದ ನಿಲ್ಲಿಸಿ ಆ ಪ್ರಯಾಣಿಕನ ಪ್ರಾಣವನ್ನುಳಿಸಿದನು. ಆತನಿಗೆ ಕೊಂಚ ಗಾಯಮಾತ್ರವಾಯಿತು.

ಅಮೇರಿಕಾಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸಿನಲ್ಲಿ ಸ್ತ್ರೀಯರು ದೇವಾಲಯಕ್ಕೆ ಬಂದಾಗ್ಗೆ ಪುರುಷರಂತೆ ಟೊಪ್ಪಿಗೆಗಳನ್ನು ತೆಗೆಯದೆ ಧರಿಸಿಕೊಂಡೇ ಇರುವುದರಿಂದ, ಗುರುಗಳ ಮುಖವು ಪುರುಷರಿಗೆ ಕಂಡು ಬರುವುದಿಲ್ಲವಾದ ಪ್ರಯುಕ್ತ ಹೆಂಗುಸರು ಟೊಪ್ಪಿಗೆಗಳನ್ನು ತೆಗೆಯದೆ ಹೋದರೆ, ತಾವುಗಳು ದೇವಾಲಯಕ್ಕೆ ಬರುವುದಿಲ್ಲವೆಂದು ಪುರುಷರು ಹಟವನ್ನಿಡಿದುದರಮೇಲೆ ಟೊಪ್ಪಿಗೆಗಳನ್ನು ತೆಗೆದು ಕುಳಿತುಕೊಳ್ಳಲು ಸ್ತ್ರೀಯರೊಪ್ಪಿಕೊಂಡರು.

ಇಂಗ್ಲೆಂಡಿಗೆ ಉತ್ತರದಲ್ಲೂ, ಮಿಡ್ಲಾಂಡುಗಳಲ್ಲೂ ಮಂಜು ಒಂದೇಸಮನಾಗಿ ೨೦ ಗಂಟೆಗಳ ಕಾಲದವರೆಗೆ ಬೀಳುತ್ತಿದ್ದು ಮಾರ್ಗಗಳೂ, ಲೋಹಮಾರ್ಗಗಳೂ ಮುಚ್ಚಿಹೋಗಿವೆ. ಯೂರೋಪಿನ ಮಧ್ಯ ಪ್ರಾಂತದಲ್ಲಿ ಮಂಜು ವಿಪರೀತವಾಗಿ ಬೀಳುತ್ತಿರುವುದರಿಂದ, ವಿಯಾನಾ ಪಟ್ಟಣದ ಸಮೀಪದಲ್ಲಿ ಬಹು ಜನರು ಸಾಯುತ್ತಿರುವರು. ಸಮುದ್ರದಲ್ಲಿ ಬಿರುಗಾಳಿಯು ಎದ್ದಿರುವುದರಿಂದ ಎರಡು ಹಡಗುಗಳು ನಾಶವಾಗಿ ಕೆಲಜನರು ಸತ್ತುಹೋದರು.

ಪುಂಗನೂರಲ್ಲಿ ಪ್ಲೇಗುರೋಗವು ನಿತ್ಯದಲ್ಲೂ ಹೆಚ್ಚುತಲಿದೆ. ಅನೇಕ ಜನರು ಊರಹೊರಗೆ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರಲ್ಲದೆ, ರಾಜರು ತಮ್ಮ ಪರಿವಾರದೊಡನೆ ದಿಲ್ ಖುಷ್ ಬಾಗ್ ಎಂಬ ಉದ್ಯಾನದಲ್ಲಿ ವಾಸಮಾಡುತಿದಾರೆ. ಸ್ವಲ್ಪಕಾಲದ ಹಿಂದೆ ಇಲ್ಲಿಯ ರಾಜರ ಅರಮನೆಯಲ್ಲಿ ಕಳುವಾದ ಪ್ರಾಯಶಃ ೫೧,೦೦೦ ರೂ. ಬೆಲೆಯ ಆಭರಣಗಳು ಇನ್ನೂ ದೊರೆಯದಿಲ್ಲವಾದುದರಿಂದ, ಪೋಲೀಸರು ಕಳ್ಳರನ್ನು ಪ್ರಯಾಸಪಟ್ಟು ಹುಡುಕುತ್ತಿದಾರೆ.

ಮಲಬಾರಿಗೆ ಸೇರಿದ ಒಂದು ಗ್ರಾಮದ ಭಾವಿಯೊಳಗೆ ಒಂದು ಚಿರತೆಯ ಮರಿಯು ಬಿದ್ದುಹೋಗಿರಲು ಅದನ್ನು ರಕ್ಷಿಸುವುದಕ್ಕಾಗಿ ಎರಡು ದೊಡ್ಡ ಚಿರತೆಗಳೂ ಭಾವಿಯೊಳಗೆ ದುಮುಕಿದುವು. ಒಬ್ಬ ಐರೋಪ್ಯನು ಇದನ್ನು ಕಂಡು ಅವುಗಳು ಮೇಲಕ್ಕೆ ಬಾರದಂತೆ ಭಾವಿಯ ಮೇಲ್ಭಾಗದಲ್ಲಿ ಮುಚ್ಚಿಬಿಟ್ಟು ಅವುಗಳನ್ನು ಜೀವಸಹಿತ ಹಿಡಿದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಲ್ಲಿ, ಅವು ಎರಡು ದಿನಗಳ ವರೆಗೆ ಆಹಾರವಿಲ್ಲದಿದ್ದುದರಿಂದ ಭಾವಿಯೊಳಗೇ ಸತ್ತುಹೋದುವು.

ಕಳೆದ ತಾ|| ೨೦ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು [illegible] ಜನರಿಗೆ ಪ್ಲೇಗು ರೋಗವು ತಗಲಿ [illegible] ಜನರು ಸತ್ತಿರುತ್ತಾರೆ. [illegible] ಅಧಿಪತ್ಯದಲ್ಲಿ [illegible]; ಮದ್ರಾಸಾಧಿಪತ್ಯದಲ್ಲಿ [illegible]; ಬಂಗಾಳಾದಲ್ಲಿ [illegible]; ಸಂಯುಕ್ತಪ್ರಾಂತಗಳಲ್ಲಿ [illegible]; ಪಂಜಾಬಿನಲ್ಲಿ [illegible]; ಬರ್ಮಾದಲ್ಲಿ [illegible]; ಮಧ್ಯಪ್ರಾಂತಗಳಲ್ಲಿ [illegible]; ಮೈಸೂರ ಸೀಮೆಯಲ್ಲಿ [illegible]; ಹೈದರಾಬಾದು ಸೀಮೆಯಲ್ಲಿ [illegible] ಮತ್ತೂ ಮಧ್ಯಹಿಂದೂಸ್ಥಾನದಲ್ಲಿ [illegible] ಈ ಪ್ರಕಾರವಾಗಿ ಮರಣಗಳಾಗಿರುತ್ತವೆ.

ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಸ್ತ್ರೀಗೆ ನಾಯಿಮರಿಗಳ ಮೇಲೆ ತುಂಬಾ ಪ್ರೀತಿ ಇರುವುದನ್ನು ಒಬ್ಬ ವರ್ತಕನು ತಿಳಿದು, ಒಂದು ಇಲಿಯಮೇಲೆ ನಾಯಿಯ ಚರ್ಮವನ್ನು ಹಾಕಿ ಹೊಲಿದು ಅದು ನಾಯಿಯೆಂದು ಹೇಳಿ ಅದನ್ನು ಆಕೆಗೆ ಕೊಟ್ಟನು. ಆ ಸ್ತ್ರೀಯು ಅಷ್ಟು ಸಣ್ಣನಾಯಿಯನ್ನು ಎಂದೂ ನೋಡಿರಲಿಲ್ಲವೆಂದು ಅತ್ಯಂತಾಶ್ಚರ್ಯಪಟ್ಟು ಆ ವರ್ತಕನಿಗೆ ಹೆಚ್ಚು ಹಣವನ್ನು ಕೊಟ್ಟು ಕೊಂಡುಕೊಂಡು ಮನೆಗೆ ತೆಗೆಸಿಕೊಂಡು ಹೋದಳು. ನಾಯಿಯ ಚರ್ಮವನ್ನು ಹೊದಿಸಲ್ಪಟ್ಟಿದ್ದ ಇಲಿಯು ಕಂಭದಮೇಲೆ ಹತ್ತುತಿದ್ದುದನ್ನು ನೌಕರರು ಕಂಡು ಅದನ್ನು ಹಿಡಿದು ನೆಲದಮೇಲೆ ಬಿಡುವಾಗ್ಗೆ ಅದರ ಚರ್ಮವು ಹೊರಬಿದ್ದಿತು. ಲೋಕದಲ್ಲಿ ಮೋಸವು ಎಷ್ಟು ವಿಧವಾಗಿರುವುದು !

ಮಧುರಾ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಐಶ್ವರ್ಯವಂತನು ತನ್ನ ಏಜಂಟನ ಕೂಡ ಸರ್ಕಾರಿಯ ಕೆಲಸದ ನಿಮಿತ್ತವಾಗಿ ವಾಡ್ ಪಾಟ್ಟಿ ಎಂಬಲ್ಲಿಗೆ ಹೋಗಿರುವಾಗ್ಗೆ, ಅಂಡವಾಯುವಿಗೆ ಏನಾದರೂ ಕೊಂಚ ಔಷಧವನ್ನು ತೆಗೆದುಕೊಂಡು ಬರುವಂತೆ ಆ ಐಶ್ವರ್ಯವಂತನು ತನ್ನ ಏಜಂಟಿಗೆ ಹೇಳಲು, ಆ ಏಜಂಟು ಯಜಮಾನನಿಗೆ ತಾನು ಕೊಡಬೇಕಾಗಿದ್ದ ಋಣವನ್ನು ಮಿಗಿಸಿಕೊಳ್ಳಬೇಕೆಂಬ ದುರಾಲೋಚನೆಯಿಂದ ಗಂಧಕ ದ್ರಾವಕದ ಔಷಧವನ್ನು ತಂದುಕೊಟ್ಟನು. ಯಜಮಾನನು ಅದನ್ನು ಕುಡಿದು ವಾಂತಿ ಮಾಡಿಕೊಂಡು ಆಸ್ಪತ್ರೆಯಲ್ಲಿ ಸತ್ತುಹೋದನು. ಇದರಮೇಲೆ ಪೋಲೀಸರು ಆ ಏಜಂಟನನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವಲ್ಲಿ ಅವನಿಗೆ ಮರಣಾವಧಿ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಲಾಹೋರ ಪ್ರಾಂತಕ್ಕೆ ಸೇರಿದ ಕಪುರ್ತಲ ಎಂಬಲ್ಲಿ ಒಬ್ಬ ವಕೀಲನ ಮನೆಯಲ್ಲಿ ಒಂದು ಆಕಳು ಈನಿತ್ತು. ಆ ಹಸುವನ್ನು ಮನೆಯ ಹೊರಗಡೆ ಕಟ್ಟಿ ಹಾಲನ್ನು ಕರೆದು ಮನೆಯೊಳಗೆ ತೆಗೆದುಕೊಂಡು ಹೋಗಿ ನೋಡುವಲ್ಲಿ ಕರೆದಾಗ ಬೆಳ್ಳಗಿದ್ದುದು ಆಗ ಕೆಂಪಾಗಿದ್ದಿತು. ಅದರ ಮೇಲೆ ಆ ವಕೀಲರು ಅನುಮಾನಪಟ್ಟು ತಮ್ಮ ಬಂಧುವಿನ ಮನೆಗೆ ಕಳುಹಿಕೊಟ್ಟರು. ಆ ಹಾಲು ಅವರ ಮನೆಯಲ್ಲಿ ಬೆಳ್ಳಗಿದ್ದುದರ ಮೇಲೆ ಹಿಂತಿರುಗಿ ವಕೀಲರ ಮನೆಗೇನೇ ಕಳುಹಿಸಿಕೊಡಲ್ಪಟ್ಟಿತು. ಅದು ಪುನಃ ಕೆಂಪಾಗಿದ್ದುದನ್ನು ನೋಡಿ ತಾವು ವಾಸಿಸುವ ಮನೆಯಲ್ಲಿ ಏನೋ ದೋಷವಿರಬೇಕೆಂದು ತಿಳಿದು ಮನೆಯನ್ನು ಬಿಟ್ಟು ಬೇರೆಯಮನೆಯ ವಾಸಕ್ಕೆ ಹೋದರು. ಹೊಸ ಮನೆಯಲ್ಲಿ ಆ ಹಸುವಿನ ಹಾಲು ಬೆಳ್ಳಗೇ ಇರುವುದಂತೆ. ಇದೆಂತಹ ಚೋದ್ಯವು !

ಪ್ರಷ್ಯಾ ರಾಜ್ಯದಲ್ಲಿ ಆಸ್ಥಾನ ಸಂಗೀತ ವಿದ್ವಾಂಸನು ತನ್ನ ಸ್ನೇಹಿತನಾದ ಸಂಗೀತಗಾರನು ಅಸ್ವಸ್ಥತೆಯಿಂದ ಒಂದು ಸಭೆಗೆ ಹೋಗಿ ಪಾಡಲು ಶಕ್ಯವಿಲ್ಲವಾಗಿದ್ದುದರ ಮೇಲೆ, ತಾನು ಆ ಸ್ನೇಹಿತನ ಬದಲುಹೋಗಿ ಹಾಡಿ ಬಹುಮಾನಗಳನ್ನೇನನ್ನೂ ತೆಗೆದುಕೊಳ್ಳದೆ ಬಂದನು. ಆದರೆ ಆಸ್ಥಾನ ವಿದ್ವಾಂಸನು ರಾಜನ ಅಪ್ಪಣೆಯನ್ನು ಪಡೆಯದೆ ಈರೀತಿ ಹೊರಗಡೆ ಹೋಗಿ ಸಂಗೀತವನ್ನು ಹಾಡಿದುದು ಅಪರಾಧವೆಂದು ಪ್ರಷ್ಯಾದೊರೆಯು ಅಂದರೆ ಕೇಜರ್ ಚಕ್ರವರ್ತಿಯು ಆ ವಿದ್ವಾಂಸನಿಗೆ ಅರ್ಥ ದಂಡವನ್ನು ವಿಧಿಸಿದನು. ದೊರೆಯು ಈ ರೀತಿಯಾಗಿ ಅನ್ಯಾಯದಿಂದ ಅರ್ಥ ದಂಡವನ್ನು ವಿಧಿಸಿದ್ದಾನೆಂದು ಆ ವಿದ್ವಾಂಸನು ಕೇಜರ್ ಮೇಲೆ ವಿವಾದವನ್ನು ಹೂಡಲು, ಅಲ್ಲಿ ಕೇಜರಿಗೆ ಪ್ರತಿಯಾಗಿ ಅರ್ಥ ದಂಡವು ವಿಧಿಸಲ್ಪಟ್ಟಿತಂತೆ. ಇದಲ್ಲವೇ ನ್ಯಾಯಪಕ್ಷಪಾತತೆಯು !

ಚೈನಾ ರಾಜ್ಯದಲ್ಲಿ ಇನ್ನೂ ಗೊಂದಲವು ನಿಂತಿಲ್ಲವು. ಅಲ್ಲಲ್ಲಿ ಸಣ್ಣಪುಟ್ಟ ಕದನಗಳಾಗುತ್ತಿವೆ. ಚೈನಾ ರಾಜ್ಯದಲ್ಲಿ ಪ್ರಜಾಧಿಪತ್ಯವನ್ನು ಸ್ಥಾಪಿಸುವ ಬಗೆಗೆ ಜಪಾನ್ ರಾಜ್ಯದ ಅಂಗೀಕಾರವನ್ನು ತೆಗೆದುಕೊಳ್ಳಲು ಪ್ರಜಾಧಿಪತ್ಯದ ಪಕ್ಷದವರ ಪ್ರತಿನಿಧಿಯು ಜಪಾನಿಗೆ ಹೋಗಿ ಚಕ್ರವರ್ತಿ ಮತ್ತೂ ಮಂತ್ರಿಗಳನ್ನು ಕಂಡು ಆಲೋಚಿಸುವಲ್ಲಿ ಪ್ರಜಾಪ್ರಭುತ್ವಸ್ಥಾಪನೆಗೆ ಇನ್ನೂ ಸಕಾಲವೊದಗಿಲ್ಲವೆಂದು ಅವರೆಲ್ಲರೂ ಅಭಿಪ್ರಾಯಪಟ್ಟರು. ಚೈನಾರಾಜ್ಯದಲ್ಲಿರುವ ಜರ್ಮನಿಯವರ ರಕ್ಷಣಾರ್ಥವಾಗಿ ಅಧಿಕಾರಿಗಳ ಸಮೇತ ೫೦೦ ಜನ ಸೈನಿಕರು ಸಿದ್ಧರಾಗಿರಬೇಕೆಂದು ಜರ್ಮನಿ ಸರ್ಕಾರದವರು ಚೈನಾದಲ್ಲಿರುವ ಅಧಿಕಾರಿಗಳಿಗೆ ಅಪ್ಪಣೆಮಾಡಿರುತ್ತಾರೆ. ಪ್ರಭುಪಕ್ಷದವರಿಗೂ, ಪ್ರಜಾಪಕ್ಷದವರಿಗೂ ಹುಟ್ಟಿರುವ ಮನಸ್ತಾಪವನ್ನು ಸಮಾಧಾನಪಡಿಸಲು [illegible] ಉಭಯಪಕ್ಷದವರಿಗೂ [illegible] ಸಮಾಧಾನಪಡಿಸ[illegible] [illegible]

ಪತ್ರವ್ಯವಹಾರವು.

ಶ್ರೀ ಕ್ಷೇತ್ರ ಕಾಶೀ ಜಂಗಮವಾಡೀ ಸಂಸ್ಥಾನ.

ಸಕಲ ವೀರಶೈವ ಬಂಧುಗಳೇ! ಈ ನಮ್ಮ ಸಂಸ್ಥಾನದಲ್ಲಿ ಸಂಸ್ಕೃತ ವಿದ್ಯೆಯ ಉನ್ನತಿಗಾಗಿ ಸ್ಥಾಪಿಸಲ್ಪಟ್ಟ ವಿದ್ಯಾಭಿವೃದ್ಧಿ ಫಂಡಿನಿಂದ ಯಾವದ್ವೀರಶೈವ ವಿದ್ಯಾರ್ಥಿಗಳು ನಿರಾಬಾಧತೆಯಿಂದ ಶಾಸ್ತ್ರಾಧ್ಯಯನ ಮಾಡಬೇಕೆಂದೂ, ಚಿರಕಾಲವಾಗಿ ನಡೆದು ಬಂದ ಈ ವಿದ್ಯಾದಾನ ಪದ್ಧತಿಯು ಚಿರಸ್ಥಾಯಿಯಾಗಬೇಕೆಂದೂ ಸದ್ಗುರು ಸದರೀ ಫಂಡಿನ ಅಭಿವೃದ್ಧಿಗಾಗಿ ಪ್ರಯತ್ನ ಪಡುತ್ತಲಿರುವುದೂ ಮತ್ತೂ ಸ್ವಧರ್ಮಾಭಿಮಾನಿಗಳಾದ ಕೆಲವು ಜನ ಮಹನೀಯರು ಮುಂದಾಳುಗಳಾಗಿ ಸಹಾಯಮಾಡಿರುವುದೂ ತಮ್ಮೆಲ್ಲರಿಗೆ ಹಿಂದೆ ಪ್ರಸಿದ್ಧಮಾಡಲ್ಪಟ್ಟ ಪತ್ರಿಕೆಯಿಂದ ವಿದಿತವಾಗಿದೆಯಷ್ಟೇ. ಆದರೆ ಈ ಮಹತ್ತರವಾದ ಕಾರ್ಯವು ಸ್ವಧರ್ಮೋನ್ನತಿಗೆ ಮುಖ್ಯವಾದ ಕಾರಣವೆಂದರಿದ ಮಹಾಜನರು ಇತ್ತೀಚೆಗೆ ಸಹಾಯ ಮಾಡಿರುವದನ್ನೂ, ಕೆಲವರು ಹಾಗೆಯೇ ಪ್ರತಿವರ್ಷ ಫಂಡಿಗೆ ವರ್ಷಾಶನೆಯಾಗಿ ಸಹಾಯಮಾಡುತ್ತಿರುವದನ್ನೂ ಈ ಪತ್ರಿಕೆಯಿಂದ ತಿಳಿಸಲು ತುಂಬಾ ಸಂತೋಷಿಸುತ್ತೇವೆ. ಇತ್ತೀಚೆಗೆ ಧನವನ್ನು ಒಪ್ಪಿಸಿದವರು— ರಾಮಚಂದ್ರವಿಠೋಬ ಅಪ್ಪಾಕಲ್ಲ ಲೋಹಣವೇಡ ೨೫ ರೂ. ಗಂಗಾರಾಮ ಸದಾಶಿವ ಪೇಟಕರ ೨೫ ರೂ. ರಾಮಚಂದ್ರಬಾಬಾ ಹುಂಡೇಕರ ಮು|| ಬೋರೇಗಾವ ೨೫ ರೂ. ಶಿವಲಿಂಗಪ್ಪಾ ಬಿರ್ಜಿ ಮಡಿವಾಳಪ್ಪಾ ಕರ್ಜಗಿ ಮು|| ತೋಣೆ ೨೫ ರೂ. ಸಂಗಪ್ಪಾ ಶೇಷಪ್ಪಾ ಮುಜಳಂಬೆ ಮು|| ಅಮರಾವತಿ ೨೫ ರೂ. ಇನ್ನು ಕೊಡಲೊಡಂಬಟ್ಟ ಜನರು ಶಿವಾನಂದತ್ರ್ಯಂಬಕ ಮು|| ನಾಶಿಕ ೨೫ ರೂ ಬಾಬಾವಲ್ಲದ ಅಪ್ಪಾಜಿ ಪಾಟೀಲ ಮು|| ಧುಮನವಾಡಿ ೨೫ ರೂ. ಶಿವಲಿಂಗಪ್ಪಾ ವಲ್ಲದ ಅಪ್ಪಣಪ್ಪಾ ಚಿಕೋಟೀ ಮು|| ಲಾತೂರ ೫೧ ರೂ ಇನ್ನು ವರ್ಷಾಶನೆಯಾಗಿ ಕೊಡತಕ್ಕವರು ಶಿವಮೂರ್ತಯ್ಯಾ ಮಮದಾಪೂರ ಜಿಲ್ಲಾ ವಿಜಾಪೂರ ೧ ರೂ. ಕಾಡಯ್ಯಾ ಸಿದ್ಧರಾಮಯ್ಯಾ ಹಿರೇಮಠ ದೊಡಬಾವಿ ಮಮದಾಪೂರ ಜಿಲ್ಲಾ ವಿಜಾಪೂರ ೧ ರೂ ವೀರೇಶ್ವರ ಬಸವೇಶ್ವರ ಹೆ|| ಮಾಸ್ತರ ಮುಕ್ಕಾಂ ಮಮದಾಪೂರ ಜಿಲ್ಲಾ ವಿಜಾಪೂರ ೧ ರೂ. ಭೀಮಯ್ಯಾ ಪೂಜಾರಿ ಮು|| ಮಮದಾಪೂರ ಜಿಲ್ಲಾ ವಿಜಾಪೂರ ೧ ರೂ ಇಂತು ಜನರು "ಧರ್ಮೋಧನಂಬ್ರಾಹ್ಮಣ ಸತ್ತಮಾನಾಂ" ಎಂಬ ವಚನಸಾಫಲ್ಯಕ್ಕಾಗಿ ಸಹಾಯಮಾಡಿಯೂ ಮಾಡುತ್ತಲೂ ಇರುವರು. ಇದರಂತೆಯೇ ಮುಂದಾದರೂ ವಿದ್ಯಾಧರ್ಮಾಭಿಮಾನಿಗಳು "ಸ್ವದಾನಾದಪಿತತ್ಪುಣ್ಯಂ ಪರದಾನಾನುಮೋದನಂ || ದೇಶೇಕಾಲೇಚ ಪಾತ್ರೇಚ ಯದ್ದಾನಂ ಸಾತ್ವಿಕಂವಿದುಃ" ಎಂಬ ಅಭಿಯುಕ್ತ ವಚನಾನುಸಾರವಾಗಿ ಸ್ವಹಸ್ತಪರಹಸ್ತಗಳಿಂದ ಸಹಾಯಮಾಡಿಯೂ, ಮಾಡಿಸುತ್ತಲೂ ಕ್ರಮವಾಹಿಗಳಾಗಿ ವಿಹಿತಕಾರ್ಯದ ಅಭಿವೃದ್ಧಿಗೈವರೆಂದು ನಂಬಿದ್ದೇವೆ. ಹಿಂದಿನಪತ್ರಿಕೆಯಲ್ಲಿ ನಮೂದಿಸಿದ್ದಲ್ಲದೆ ಇತ್ತಕಡೆ ನಮ್ಮ ಸಂಸ್ಥಾನಕ್ಕೆ ಶಾಸ್ತ್ರಾಧ್ಯಯನ ಮಾಡಲು ಬಂದವರು– ಉಮಾಪತಿಶಾಸ್ತ್ರಿ ಸೂದಿಕರ ಸಿದ್ಧಲಿಂಗಶಾಸ್ತ್ರೀ ಪತ್ತಿಕಟ್ಟಿ, ಇಂದುಧರಶಾಸ್ತ್ರೀ ಕೆರದಿ ಇವರೇ ಮೊದಲಾದವರು. ಕೃಪಾಳುಗಳೇ! ಈ ಮಧ್ಯದಲ್ಲಿ ನಮ್ಮ ಸಂಸ್ಥಾನದಲ್ಲಿ ಜರಗಿದ ನವೀನವಾದ ಇದೊಂದು ಸುಸಂಗತಿಯನ್ನು ತಮ್ಮೆಲ್ಲರಿಗೆ ತಿಳಿಸಲು ಅತ್ಯಂತ ಹರ್ಷನಿರ್ಭರರಾಗುತ್ತೇವೆ. ಅದೇನೆಂದರೆ–ಇಂಡಿಯಾ ಸಾರ್ವಭೌಮರವರ ಕಿರೀಟ ಧಾರಣ ಮಹೋತ್ಸವಕ್ಕಾಗಿ ಆಗಮಿಸಿದ್ದ ಮೈಸೂರ ಸಂಸ್ಥಾನದ ೧ನೆಯ ಕೌನ್ಸಿಲ್‌ರಾದ ಮ|| ಕೇ.ಪಿ ಪುಟ್ಟಣ್ಣಶೆಟ್ಟರು ದಿಲ್ಲಿಗೆ ಹೋಗಿ ದಿವಾನ್ ಬಹದ್ದೂರ ಎಂಬ ಪ್ರಶಸ್ತಿಯನ್ನು ಪಡೆದುಕೊಂಡು ಶ್ರೀ ಕ್ಷೇತ್ರ ಕಾಶಿಗೆಬಂದು ಶ್ರೀ ಶ್ರೀ ಮಹಾಸ್ವಾಮಿಗಳವರ ದರ್ಶನವಂ ತೆಗೆದುಕೊಂಡುದಲ್ಲದೇ ಭಕ್ತಿಸುಶೀಲರಾದ ಈ ಮಹನೀಯರು ಶ್ರೀ ಜಗದ್ವಂದ್ಯನಾದ ವಿಶ್ವನಾಥನ ದರ್ಶನದಿಂದಲೂ ಅಲ್ಲಿಜರುಗಿಸಲ್ಪಟ್ಟ ಅಭಿಷೇಕ ಮುಂತಾದ ವೈಭವದಿಂದಲೂ ಅಲ್ಲದೇ ಜಗನ್ಮಾತೆಯಾದ ಅನ್ನಪೂರ್ಣೆಯ ಪೂಜಾಪಠನೆಯಿಂದಲೂ ಶ್ರೀಮನ್ಮಹಾಮಠದಲ್ಲಿ ಜರುಗಿಸಲ್ಪಟ್ಟ ಜಂಗಮಾರ್ಚನ ವೇದಘೋಷ ಮುಂತಾದ್ದರಿಂದಲೂ ಅತಿ ಸಂತುಷ್ಟಿಯನ್ನು ಹೊಂದಿದುದಕ್ಕಾಗಿಯೂ ದಿಲ್ಲಿಯದರ್ಬಾರ ಕಾಲದಲ್ಲಿ ಇವರಿಗೆ ದೊರೆತ ದಿವಾನ್ ಬಹದ್ದೂರ ಎಂಬ ಪ್ರಶಸ್ತಿಗಾಗಿಯೂ ನಮ್ಮ ಶ್ರೀಶ್ರೀ ಮಹಾಸ್ವಾಮಿಗಳವರು ತುಂಬಾ ಅಭಿನಂದಿಸುತ್ತಾರೆ. ಇದಲ್ಲದೇ ಸದರೀ ದಿವಸವೇ ಶ್ರೀ ಮಹಾಸನ್ನಿಧಿಯಲ್ಲಿ ಉಕ್ತಮಹಾಶಯರಿಗೆ ಪುಷ್ಪತಾಂಬೂಲಗಳು ಹಂಚಲ್ಪಟ್ಟು ಸಂಸ್ಥಾನಪಂಡಿತರಾದ ಕೃಷ್ಣಶಾಸ್ತ್ರಿಗಳವರಿಂದಲೂ, ವಿಶ್ವೇಶ್ವರಭಟ್ಟಾಚಾರ್ಯರಿಂದಲೂ ಇನ್ನಿತರ ಎಲ್ಲಾ ಶಾಸ್ತ್ರೀಜನರಿಂದಲೂ ಪರಿವೃತವಾದ ಈ ಆಸ್ಥಾನ ಮಂಟಪವು ಅತ್ಯಂತ ರಮಣೀಯವಾಗಿದ್ದದಲ್ಲದೇ ತತ್ಕಾಲದಲ್ಲಿಯೇ ದಿವಾನ್ ಬಹದ್ದೂರ್‌ರವರ ಪ್ರೀತ್ಯರ್ಥಕಾಗಿ ಶಾಸ್ತ್ರೀ ಜನರಿಂದ ನ್ಯಾಯವ್ಯಾಕರಣವೇ ಮೊದಲಾದ ವಿವಿಧ [illegible] ಶಾಸ್ತ್ರಗಳಲ್ಲಿ ಪೂರ್ವೋತ್ತರ ಪಕ್ಷಗಳಾಗಿ ಈ ಮಹಾಶಯರಿಗೆ ಅತ್ಯಾನಂದಕರವಾಗಲು ಕೊಡಲೆ ಶಾಸ್ತ್ರೀ ನಿಜಯುಕ್ತಿ ಬಹುಮೂಲ್ಯವಾದ ಪುಸ್ತಕರೂಪ ಪಾರಿತೋಷಿಕವನ್ನು ಕೊಟ್ಟು—"ನೀವೆಲ್ಲರೂ ಇದರಂತೆ ಶಾಸ್ತ್ರಾಧ್ಯಯನಪೂರ್ವ ಉತ್ತೇಜನವನ್ನು ಪಡೆಯುತ್ತಾ ಸ್ವಮತದ ಏಳಿಗೆಯನ್ನು ಬಯಸಿ ಭಕ್ತರನ್ನು ಕೃತಾರ್ಥರನ್ನಾಗಿ ಮಾಡುವದು" ಎಂದು ಅನೇಕ ಪ್ರಕಾರವಾಗಿ ಉಚಿತಭಾಷಣಗಳಿಂದ ಮೋದಿಸಿದ್ದಲ್ಲದೆ ಇಲ್ಲಿ ಸ್ಥಾಪಿತವಾದ ವಿದ್ಯಾಭಿವೃದ್ಧಿ ಫಂಡಿನ ವಿಷಯವಾಗಿ ಅತ್ಯಾನಂದಪಟ್ಟು ಈ ಫಂಡು ಊರ್ಜಿತಸ್ಥಿತಿಗೆ ಬರುವ ವಿಷಯದಲ್ಲಿ ತಾವೂ ಕೂಡಾ ಸಹಾಯ ಮಾಡುತ್ತೇವೆಂದು ಹೇಳಿದರು. ಈ ತೆರದಿ ಉದಾರ ಮನಸ್ಕರಾದ ದಿವಾನಬಹದ್ದೂರರವರ ವಿಷಯದಲ್ಲಿ ಸರ್ವಶಾಸ್ತ್ರೀಜನರು ಕೃಪಾಸ್ಮಾರಕರಾಗಿರುವರು. ಶ್ಲೋಕ|| ಕೇಪಿಪುಟ್ಟಣ್ಣವರ್ಯಂ ಜನಪದ ಸುಖದಂ ಲೋಕವಿಖ್ಯಾತಕೀರ್ತಿಂ। ವಿದ್ಯಾಲಂಕಾರಯುಕ್ತಂ ಗುಣಗಣಮಹಿತಂ ಮಂತ್ರದಕ್ಷಂಜಿತಾಕ್ಷಂ॥ ದೀನೇಭ್ಯಃ ಕಲ್ಪವೃಕ್ಷಂ ಸಚಿವಪದಗತಂ ರಾಜಸನ್ಮಾನಪಾತ್ರಂ। ಪಾಯಾದ್ವಿಶ್ವೇಶ್ವರೋಯಸ್ಸಕಲ ಜನಮನೋಭೀಷ್ಟದಶ್ಚಂದ್ರ ಚೂಡಃ ॥ ೧ ॥ ತರುವಾಯ ಸದರೀ ಮಹಾಶಯರು ವಿಶ್ವಾರಾಧ್ಯ ಮಹಾಪೀಠಕ್ಕೆ ಯೋಗ್ಯತಾನುಸಾರವಾಗಿ ಕಾಣಿಕೆಯನ್ನೊಪ್ಪಿಸಿ ಶ್ರೀ ಸನ್ನಿಧಿಯಿಂದ "ಪಂಥಾನಃ ಸಂತುಶಿವಾಃ" ಎಂಬ ವಚನ ಮೂಲಕವಾಗಿ ದರ್ಶನಾಶೀರ್ವಾದವನ್ನು ಹೊಂದಲು ಎಲ್ಲರೂ ಪರಶಿವ ಸ್ವರೂಪನಾದ ವಿಶ್ವಾರಾಧ್ಯ ಗುರುವರ್ಯನ ನಾಮೋಚ್ಚರಣೆಯೊಡನೆ ತೆರಳಿದರು.

ಫಂಡ ಸೆಕ್ರೆಟರಿ, ಮಠ ಜಂಗಮವಾಡಿ.

ಪ್ರಿಯ ವೀರಶೈವ ಬಾಂಧವರೇ ಧರ್ಮವು ಮನುಷ್ಯನ ಸರ್ವ ಪುರುಷಾರ್ಥಗಳ ಮೂಲಸಾಧನವಾಗಿರುತ್ತದೆಂದು ಶ್ರುತಿ, ಸ್ಮೃತಿ, ಪುರಾಣಾದಿಗಳ ಅಭಿಪ್ರಾಯವಿರುತ್ತದೆ. ಆದಕಾರಣ ಈ ನರಜನ್ಮದ ಸಾರ್ಥಕ್ಯವಾಗಬೇಕಾದರೆ ಧರ್ಮಾಚರಣೆಯು ಅವಶ್ಯವಿರುತ್ತದೆ. ಧರ್ಮವು ಬಹು ವ್ಯಾಪಕವಾದದ್ದು. ಅದರಲ್ಲಿ ಸ್ವಾರ್ಥ (ತನ್ನ ಹಾಗೂ ತನ್ನ ಕುಟುಂಬದವರ ಸಲುವಾಗಿ ಮಾಡತಕ್ಕ ಕರ್ತವ್ಯ), ಸಮಾಜಹಿತ (ಸಮಾಜದ ಸಲುವಾಗಿ ಮಾಡತಕ್ಕ ಕರ್ತವ್ಯ), ಈಶಾರಾಧನೆ (ದೇವರ ಸಲುವಾಗಿ ಮಾಡತಕ್ಕ ಕರ್ತವ್ಯ) ಹೀಗೆ ಮೂರು ಅಂಗಗಳಿರುತ್ತವೆ. ಇವುಗಳಲ್ಲಿ ಸ್ವಾರ್ಥವು ಪ್ರಾಣಿಮಾತ್ರಗಳಿಗೆಲ್ಲ ಜನ್ಮಗುಣವಾಗಿರುತ್ತದೆ. ಅದನ್ನು ಪಶುಪಕ್ಷಿಗಳು ಕೂಡ ಆಚರಿಸುವವು. ಆದರೆ ಸಮಾಜಹಿತ, ಈಶಾರಾಧನೆ ಎಂಬ ಎರಡು ಅಂಗಗಳು ಮಾತ್ರ ಮುಖ್ಯವಾಗಿ ಮನುಷ್ಯ ಜನ್ಮದ ಕರ್ತವ್ಯಗಳಾಗಿರುತ್ತವೆ. ಇವುಗಳಲ್ಲಿ ಸಮಾಜ ಹಿತವಾದರೂ ಒಂದುತರದ ಈಶಾರಾಧನೆಯೆಂದು ಹೇಳಲ್ಪಡುತ್ತದೆಂಬದಿಷ್ಟೇ ಅಲ್ಲ. ಈಶ್ವರನಿಗೆ ಹೆಚ್ಚು ಪ್ರಿಯವಾದದ್ದು. "ಯೇನಕೇನ ಪ್ರಕಾರೇಣ ಯಸ್ಯಕಸ್ಯಾಪಿ ದೇಹಿನಃ॥ ಸಂತೋಷಂಜನಯೇತ್ ಪ್ರಾಜ್ಞಸ್ತದೇವೇಶ್ವರ ಪೂಜನಂ" ಎಂಬ ಜ್ಞಾನಿಗಳ ಉಕ್ತಿಯಂತೆ ಜನರನ್ನು ಸಂತೋಷಪಡಿಸುವುದೇ ಶ್ರೇಷ್ಠವಾದ ಈಶ್ವರ ಪೂಜೆಯೆನ್ನಿಸಿಕೊಳ್ಳುವುದು. ಸ್ಥಿರವಾದ ಸಂತೋಷವು ಜ್ಞಾನದ ಹೊರತು ಪ್ರಾಪ್ತವಾಗಲಾರದು. ಜ್ಞಾನಪ್ರಾಪ್ತಿಗಾಗಿ ವಿದ್ಯಾಭ್ಯಾಸವು ಅವಶ್ಯವಿರುತ್ತದೆ. ಅಂದಮೇಲೆ ವಿದ್ಯಾದಾನವೇ ಸಮಾಜಹಿತದ ಮುಖ್ಯಉಪಾಯವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಧಾರ್ಮಿಕರಾದ ಸದ್ಗೃಹಸ್ಥರು ಕೆಲವರು ಅನ್ನದಾನ ಮಾಡುವರು, ಕೆಲವರು ವಸ್ತ್ರದಾನಮಾಡುವರು. ಈ ಅನ್ನವಸ್ತ್ರಾದಿಗಳ ದಾನದ ಪರಿಣಾಮವು ಅಲ್ಪಕಾಲದ ವರೆಗೆ ಇರುವದು. ಅತ್ಯಂತ ಶ್ರೇಷ್ಠವಾದ ಜ್ಞಾನದಾನವು ಇಡೀ ಆಯುಷ್ಯದಲ್ಲೆಲ್ಲ ಸುಖ ಕೊಡುವದೆಂಬದಿಷ್ಟೇ ಅಲ್ಲ, ಅದು ಮನುಷ್ಯನ ಸದ್ಗತಿಗೆ ಸಹಕಾರಣವಾಗುವುದು. ಆದುದರಿಂದ ಜ್ಞಾನದಾನವು ಮಹಾದಾನವೆಂದು ಅನ್ನಿಸಿಕೊಳ್ಳುವುದು.

ಇನ್ನು ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ಸಮಾಜದೊಳಗಿನ ಪ್ರತಿಯೊಬ್ಬ ವ್ಯಕ್ತಿಯು ಆ ಸಮಾಜದ ಅವಯವವಾಗುತ್ತಾನೆ. ಒಂದೆರಡು ಅವಯವಗಳು ಕೆಟ್ಟರೂ ಇಡೀ ಶರೀರದ ಶೋಭೆಯು ಕಡಿಮೆಯಾಗುವದಲ್ಲದೆ ಶರೀರ ವ್ಯಾಪಾರಕ್ಕೆ ತೊಂದರೆಯುಂಟಾಗುವದು. ಕಾರಣ ಅಶಿಕ್ಷಿತ ಜನರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುವಂತೆ ಮಾಡಿದ ಹೊರತು ಸಮಾಜ ಸುಧಾರಣೆಯು ಆಗಲಾರದು. ತನ್ನ ಕುಟುಂಬದೊಳಗಿನ ಜನರೆಲ್ಲರು ನಿರೋಗಿಗಳಾಗಿರುವಂತೆ ಯತ್ನಿಸುವದು ಹೇಗೆ ಕುಟುಂಬದ ಮುಖ್ಯ ಮನುಷ್ಯನ ಕರ್ತವ್ಯವೋ ಹಾಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಅಜ್ಞಾನವೆಂಬ ರೋಗವನ್ನು ಹೋಗಲಾಡಿಸುವದು ಸಮಾಜದೊಳಗಿನ ಪ್ರಮುಖರ ಕರ್ತವ್ಯವಾಗಿರುತ್ತದೆ.

ಈ ಸಂಗತಿಯನ್ನರಿತು ಮುಂಬಯಿ ಕರ್ನಾಟಕದೊಳಗಿನ ಕೆಲವು ಮಹನೀಯರು ಒಳ್ಳೇ ಪರಿಶ್ರಮದಿಂದ "ಲಿಂಗಾಯತ ಎಜ್ಯುಕೇಶನ್ ಫಂಡ" ಎಂಬ ಹೆಸರಿನದೊಂದು ಫಂಡು ಕೂಡಿಸಿ ೨೫-೩೦ ವರ್ಷಗಳಿಂದ ವೀರಶೈವರ ವಿದ್ಯಾಭಿವೃದ್ಧಿಯ ಸಲುವಾಗಿ ಯತ್ನಮಾಡುತ್ತಿರುವರು. ಈ ಫಂಡು ಈಗ ಸುಮಾರು ೭೫೦೦೦ ರೂ. ಆಗಿದೆ. ಇದರ ಬಡ್ಡಿಯೊಳಗಿಂದ ವಿದ್ಯಾರ್ಥಿಗಳಿಗೆ ಹಣದ ಸಹಾಯವು ದೊರೆಯುತ್ತದೆ. ಇದರಿಂದ ಹಲವು ಜನರು ವಿಶ್ವವಿದ್ಯಾಲಯದ ಪದವೀಧರರೂ, ಕೆಲವು ಜನರು ಮೆಟ್ರಿಕ್, ಫಾಯಿನಲ್ ಮುಂತಾದ ಬೇರೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೂ ಆಗಿರುತ್ತಾರೆ. ಈ ಬಡ್ಡಿಯ ಹಣವು ಬಹುತರವಾಗಿ ಕಾಲೇಜಗಳಲ್ಲಿ ಕಲಿಯುವ ಜನರಿಗೆ ಮಾತ್ರ ಸಾಲುತ್ತಿರುವದರಿಂದ ಹಾಯಸ್ಕೂಲಗಳಲ್ಲಿ ಕಲಿಯುವ ಜನರಿಗೆ ತಕ್ಕಷ್ಟು ಸಹಾಯ ಮಾಡುವದಕ್ಕೆ ಅನುಕೂಲವಾಗುವಂತೆ ಇಲ್ಲ. ಹಾಯಸ್ಕೂಲಿನ ಅಭ್ಯಾಸವನ್ನು ಸ್ವಂತ ಖರ್ಚಿನಿಂದ ಮುಗಿಸುವಷ್ಟು ಯೋಗ್ಯತೆಯಿದ್ದರೆ ಮಾತ್ರ ಅವರಿಗೆ ಮುಂದೆ ಕಲಿಯುವುದಕ್ಕೆ ಈ ಫಂಡಿನಿಂದ ಸಹಾಯದೊರೆಯುವದು. ಆದರೆ ಇಂಥವರ ಸಂಖ್ಯೆಯು ಕಡಿಮೆ ಬಹು ಜನರಿಗೆ ಹಾಯಸ್ಕೂಲಿನಲ್ಲಿ ನಿಂತು ಕಲಿಯುವಷ್ಟು ಯೋಗ್ಯತೆಯಿರುವದಿಲ್ಲ ಅಂತಹವರು ಬುದ್ಧಿವಂತರಾಗಿದ್ದರೂ ನಿರುಪಾಯದಿಂದ ಕಲಿಯುವದನ್ನು ಬಿಟ್ಟುಬಿಡಬೇಕಾಗುವದು. ಹಣವು ಸಾಲದೆ ಇರುವುದರಿಂದ ಈಗ ಪ್ರತಿವರ್ಷ ಸುಮಾರು ೩೦೦ ಮಂದಿ ಕಲಿಯುವ ಅಪೇಕ್ಷೆಯುಳ್ಳ ವಿದ್ಯಾರ್ಥಿಗಳಿಗೆ ಫಂಡು ಸಿಗಲಾರದೆಂದು ಹೇಳಬೇಕಾಗುತ್ತದೆ. ಅದರಿಂದ ಅವರು ಕಲಿಯುವದನ್ನು ಬಿಟ್ಟು ಮನೆಗೆ ಹೋಗಿ ಕೂಡುವರು. ಇದು ಎಂತಹ ದುಃಖಕರವಾದ ಸಂಗತಿಯೆಂಬುದನ್ನು ವಾಚಕರೇ ವಿಚಾರಮಾಡಬೇಕು.

ಮೊದಲು ಜನರಲ್ಲಿ ಕಲಿಯುವ ಅಭಿರುಚಿಯೇ ಇದ್ದಿಲ್ಲ. ಕಾರಣ ಫಂಡಿನ ಉತ್ಪಾದಕರು ಬಹು ಪರಿಶ್ರಮದಿಂದ ಫಂಡುಕೂಡಿಸಿ ಜನರಲ್ಲಿ ಕಲಿಯುವ ಅಭಿರುಚಿಯನ್ನು ಹುಟ್ಟಿಸಿದರು. ಅವರ ಪ್ರಯತ್ನದಿಂದ ಈಗ ಬಹುಜನರಲ್ಲಿ ಕಲಿಯುವ ಅಪೇಕ್ಷೆಯು ಹುಟ್ಟಿರುತ್ತದೆ. ಈ ಮಾತು ಫಂಡುಸಿಗದೆ ಪ್ರತಿವರ್ಷ ತಿರುಗಿ ಹೋಗುವ ೩೦೦ ಮಂದಿ ವಿದ್ಯಾರ್ಥಿಗಳ ಸಂಖ್ಯೆಯಿಂದ ತಮಗೆ ಕಂಡು ಬರುವದು.

ಹೋದವರ್ಷ ಮಹಾಸಭೆಯು ಕೂಡದೆ ಸ್ಟ್ಯಾಂಡಿಂಗ ಕಮಿಟಿಯು ಮಾತ್ರ ಕೂಡಿತ್ತು. ಆಗ ವಿಚಾರವಾಗಲು ಕಲಿಯುತ್ತಿರುವ ಕೆಲವು ವಿದ್ಯಾರ್ಥಿಗಳನ್ನು ಬಿಡಿಸಿ ಮನೆಗೆ ಕಳಿಸುವ ಪ್ರಸಂಗಬಂತು. ಮುಂಬರ ಜನರಲ್ಲಿ ಕೆಲವರು ಈ ಶೋಚನೀಯ ಸ್ಥಿತಿಯನ್ನು ನೋಡಿ ತಾವು ಸ್ವತಃ ಹಣಕೊಟ್ಟು ಅವರ ಕಲಿಯುವ ಕೆಲಸವನ್ನು ಸಾಗಿಸಲಿಕ್ಕೆ ಒಪ್ಪಿಕೊಂಡರು. ಶ್ರೀಮಂತ ಸಿದ್ದಪ್ಪಾ ಅಣ್ಣಾ ಸರನಾಯಿಕ ಹಲಾಳಿ, ಶಿವಮೂರ್ತಿಗಳಾದ ಶಿವಮೂರ್ತಿಸ್ವಾಮಿ ಕಣಬರಗಿಮಠ ಮ|| ರಾ|| ರಾ|| ಸಿದ್ದಪ್ಪಾಅಣ್ಣಾ ಕಂಬಳಿ ವಕೀಲ ಇವರು ಪ್ರತಿಯೊಬ್ಬರು ಉದಾರ ಮನಸ್ಸಿನಿಂದ ನೂರು ನೂರು ರೂಪಾಯಿಗಳನ್ನು ಕೂಡಲೆ ಕಳಿಸಿಕೊಟ್ಟು ಸಹಾಯಮಾಡಿದರು. ಇದು ಅವರಿಗೆ ಭೂಷಣವಿದ್ದು ಅನುಕರಣೀಯವಾಗಿದೆ.

ಹಾಯಸ್ಕೂಲಗಳಲ್ಲಿ ಕಲಿಯುವವರ ಸಂಖ್ಯೆಯು ಹೆಚ್ಚಾದ ಹೊರತು ಕಾಲೇಜಗಳಲ್ಲಿ ಕಲಿಯುವವರು ಹೆಚ್ಚಾಗಲಾರರು. ಕಾಲೇಜಗಳಲ್ಲಿ ಕಲಿಯುವವರು ಹೆಚ್ಚಾದ ಹೊರತು ಪದವೀಧರರು ಹೆಚ್ಚಾಗಲಾರರು. ಪದವೀಧರರು ಹೆಚ್ಚಾದ ಹೊರತು ಸಮಾಜದ ಉನ್ನತಿಯಾಗಲಾರದು. ಕಾರಣ ಹಾಯಸ್ಕೂಲಗಳಲ್ಲಿ ಕಲಿಯುವವರ ಸಂಖ್ಯೆಯು ಬೆಳೆಯುವಂತೆ ಮಾಡುವದು ಅವಶ್ಯವಿರುತ್ತದೆ. ಈಗಿರುವ ಫಂಡಿನ ಉತ್ಪನ್ನದಿಂದ ಈ ಕಾರ್ಯವು ಆಗುವಂತೆ ಇಲ್ಲ. ಆದುದರಿಂದ ಫಂಡನ್ನು ಬೆಳಸಿದ ಹೊರತು ನಿರ್ವಾಹವಿಲ್ಲ. ಕಾರಣ ಫಂಡನ್ನು ಬೆಳಸುವ ಕೆಲವು ಸುಲಭ ಉಪಾಯಗಳನ್ನು ಇದರಡಿಯಲ್ಲಿ ಸೂಚಿಸಿದೆ. ಎಲ್ಲರೂ ಅದರಂತೆ ವರ್ತಿಸಿದರೆ ಬೇಗನೆ ಫಂಡು ಬೆಳೆದು ವಿದ್ಯಾಭಿವೃದ್ಧಿಗೆ ಅನುಕೂಲವಾಗುವದು.

೧. ಒಕ್ಕಲತನ ಮಾಡುವ ವೀರಶೈವರು ಸುಗ್ಗಿಯೊಳಗೆ ಎಷ್ಟೋ ಧಾನ್ಯವನ್ನು ಆಯ ಅಥವಾ ದಾನದ ರೂಪದಿಂದ ಖರ್ಚುಮಾಡುವರು. ಅವರು ಅತ್ಯಂತ ಪುಣ್ಯಕರವಾದ ವಿದ್ಯಾಭಿವೃದ್ಧಿಯ ಕೆಲಸಕ್ಕಾಗಿ ತಮ್ಮ ಯೋಗ್ಯತೆಯಂತೆ ಒಂದುಪಡಿ, ಚಟ್ಟಿ ಅಥವಾ ಎಷ್ಟೇ ಆಗಲಿ ಧಾನ್ಯವನ್ನು ತೆಗೆದಿಟ್ಟು ಊರಲ್ಲಿ ಒಬ್ಬ ಪ್ರಮುಖರನ್ನು ಗೊತ್ತುಮಾಡಿ ಅವರ ಕಡೆಗೆ ಮುಟ್ಟಿಸಿದರೆ ಅವರು ಅದರ ಲೆಖ್ಖವನ್ನಿಟ್ಟು ಒಟ್ಟುಗೂಡಿಸಿ ಮಾರಿ ಬಂದ ಹಣವನ್ನು ಲಿಂಗಾಯತ ಫಂಡು ಸೆಕ್ರೆಟರಿಯವರ ಕಡೆಗೆ ಕಳಿಸುವರು. ಸಶೇಷ.

ಸರಸಪ್ರಾಪ್ತ ನೂತನಪುಸ್ತಕಗಳು.

ವಿರಕ್ತಖಂಡ ಲೋಡಾಮುನಿ—ನವರಸಭರಿತವಾದ ಪದ್ಯಕಾದಂಬರಿ ೦-೬-೬; ಕಾಪಸಿಳಿ—ಚಮತ್ಕಾರವಾದ ಕಥೆ ೦-೨-೬; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ ೦-೧-೦. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦-೧-೬ ಶ್ರೀಹರಿಪ್ರಾರ್ಥನಾ ೦-೧-೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹು [illegible]. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ [illegible] ವಿಳಾಸ—

ಶಿ. ಶಿ. ಶಾಸ್ತ್ರಿ [illegible]

ತುರ್ಕಿ—ಇಟಲಿಗಳ ಯುದ್ಧವು.

ಜನವರಿ ತಾ|| ೧೯.— ತುರ್ಕಿಯವರು ತಮ್ಮ ಪಾಳೆಯಕ್ಕೆ ಶತ್ರುಗಳು ನುಗ್ಗದಂತೆ ಕಟ್ಟಿಕೊಂಡಿರುವ ಗೋಡೆಗಳ ಹಿಂದೆಯೇ ಅವಿತುಕೊಂಡಿದ್ದು ಮತ್ತೂ ನೆರೆಯ ಗುಡ್ಡಗಳ ಮೇಲೆ ಸೇರಿಕೊಂಡಿದ್ದು ತಾ|| ೧೯ ರಲ್ಲಿ ಇಟಲಿಯವರ ಕೂಡ ಕ್ರೂರವಾಗಿ ಕಾದಾಡಿದರು. ಇಟಲಿಯವರು ತಮ್ಮ ಫಿರಂಗಿಗಳನ್ನು ತೆಗೆದುಕೊಂಡು ಬಂದು ೮ ಗಂಟೆಯವರೆಗೆ ಎಡೆಬಿಡದೆ ಯುದ್ಧಮಾಡಿ ತುರ್ಕಿಯವರ ಕೋಟೆಗಳನ್ನು ವಶಮಾಡಿಕೊಂಡು ಅವರನ್ನು ಗುಡ್ಡದಮೇಲಿಂದೋಡಿಸಿ ಬಿಟ್ಟರು. ತುರ್ಕಿಯವರು ಮತ್ತೂ ಅರಬ್ಬಿಯವರು ೭ ಗಂಟೆಗಳ ಕಾಲ ಘೋರಯುದ್ಧವನ್ನು ಮಾಡಿ ೧೦೦ ರವರೆಗೆ ಸತ್ತವರನ್ನು ಮತ್ತೂ ಮದ್ದುಗುಂಡುಗಳನ್ನು ರಣಭೂಮಿಯಲ್ಲೇ ಬಿಟ್ಟು ೩೦೦೦ ಜನರ ವರೆಗೂ ಓಡಿಹೋದರು. ಈ ಕದನದಲ್ಲಿ ಕೆಲ ಇಟಲಿಯವರೂ ಮಡಿದರು ತಾ|| ೧೯ ರಲ್ಲಿ ಟ್ರಿಪೋಲಿಯಲ್ಲಿ ಹಾಲಿನಲ್ಲೆಲ್ಲಾ ಮತ್ತೊಂದು ಘೋರ ಯುದ್ಧವು ನಡೆದಿತು. ಗಾರ್ಗರೇಶದಲ್ಲಿ ಆತ್ಮರಕ್ಷಣೆಗಾಗಿ ಕೋಟೆಗಳನ್ನು ಕಟ್ಟುತ್ತಿದ್ದ ಇಟಲಿಯವರ ಮೇಲೆ ತುರ್ಕಿಯವರು ಬಿದ್ದು ಅವರಿಂದ ಓಡಿಸಲ್ಪಟ್ಟರು. ಆದರೆ ಇಟಲಿಯವರು ರಾತ್ರಿಯಲ್ಲಿ ತಾವೇ ಹಿಂತಿರುಗಿದರು. ಈ ಯುದ್ಧದಲ್ಲಿ ಇಟಲಿಯವರ ಕಡೆ ೩೦ ಜನರು ಮಡಿದು ತುರ್ಕಿಯವರ ಪಕ್ಷದಲ್ಲಿ ಬಹು ನಷ್ಟವಾಯಿತು. ತುರ್ಕಿ ಸೇನೆಯ ಒಂದು ಪಂಗಡದವರು ಇಟಲಿಯವರ ಬೆಂಗಾವಲಿನ ದೋಣಿಗಳಿಗೆ ಗುಂಡನ್ನು ಹೊಡೆಯಲು ಇಟಲಿಯವರ ಯುದ್ಧನಾವೆಯ ಫಿರಂಗಿಯನ್ನು ಹೊಡೆದು ಅನೇಕ ಕಟ್ಟಡಗಳನ್ನೂ, ತುರ್ಕಿಯವರು ರಕ್ಷಣೆಗಾಗಿ ಕಟ್ಟಿಕೊಂಡಿದ್ದ ಕಾಲುವೆಗಳನ್ನೂ ನಾಶಪಡಿಸಿದರು. ಕೆಂಪು ಕಡಲಿನಲ್ಲೂ, ಮೆಡಿಟರೇನಿಯನ್ ಸಮುದ್ರದಲ್ಲೂ ಇಟಲಿಯವರ ಯುದ್ಧನಾವೆಗಳ ಓಡಾಟವು ವಿಶೇಷವಾಗಿರುವುದರಿಂದ ಬ್ಯಾಂಕಿನವರು ಈಜಿಪ್ಟಿನಿಂದ ಯೂರೋಪಿಗೆ ಬಂಗಾರವನ್ನು ಕಳುಹಲು ಹೆದರಿರುತ್ತಾರೆ. ಕಾಗದಗಳನ್ನೊಯ್ಯುವ ಫ್ರೆಂಚರ ಹಡಗು ಟ್ಯೂನಿಸಿಗೆ ಹೋಗುತ್ತಿರುವಾಗ ಇಟಲಿಯವರಿಂದ ಹಿಡಿಯಲ್ಪಟ್ಟದ್ದು ಮಾರ್ಸಲಿಸಿನಿಂದ ಟ್ರಿಪೋಲಿಗೆ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದ ೨೧ ಜನ ತುರ್ಕಿಯವರ ಅಧಿಕಾರಿಗಳನ್ನು ಇಳಿಸಿದಮೇಲೆ ಬಿಡಲ್ಪಟ್ಟಿತು. ಯುದ್ಧದಲ್ಲಿ ಗಾಯವಡೆದ ತುರ್ಕಿಯವರನ್ನು ಉಪಚರಿಸಲು ರೆಡ್ ಕ್ರೆಸೆಂಟ್ ಸಂಘದವರು ಕೆಲ ಜನರನ್ನು ಕಳುಹಿಸಿಕೊಟ್ಟಿದ್ದರು ಅವರನ್ನು ಇಟಲಿಯವರ ವಶಮಾಡಲು ತಿರಸ್ಕರಿಸಿದುದರಿಂದ ತನ್ನ ಹಡಗು ಇಟಲಿಯವರಿಂದ ಹಿಡಿಯಲ್ಪಟ್ಟಿತು ಎಂದು ಮನೌಬಾ ಹಡಗಿನ ಕ್ಯಾಪ್ಟನ್ನು ಹೇಳುತ್ತಾನೆ. ಈ ಹಡಗಿನ ಕೂಡ ಪ್ರಯಾಣಮಾಡುತ್ತಿದ್ದ ಜರ್ಮನಿಯವರ ಒಂದು ಹಡಗು ಸಹ ಹಿಡಿಯಲ್ಪಟ್ಟದ್ದು ಅನಂತರ ಬಿಡಲ್ಪಟ್ಟಿತು. ಇದರಮೇಲೆ ಫ್ರಾನ್ಸ್ ದೇಶದ ಹಡಗಿನ ಯಜಮಾನರುಗಳು— ಇಟಲಿಯವರು ಈ ರೀತಿಯಾಗಿ ತಮ್ಮ ಹಡಗುಗಳನ್ನು ಹಿಡಿಯುವುದು ಒಡಂಬಡಿಕೆಗೆ ವಿರುದ್ಧವಾಗಿದೆಯೆಂತಲೂ ಇದನ್ನು ವಿಚಾರಿಸಲು ಒಂದು ಕೋರ್ಟನ್ನೇರ್ಪಡಿಸಬೇಕೆಂತಲೂ ಫ್ರೆಂಚ್ ಸರ್ಕಾರದವರನ್ನು ಪ್ರಾರ್ಥಿಸಿರುತ್ತಾರೆ. ತುರ್ಕಿಯ ಸುಲ್ತಾನನು ಕೂಡಿಸಿದ್ದ ಮಂತ್ರಾಲೋಚನಾ ಸಭೆಯು ವಿಸರ್ಜಿಸಲ್ಪಟ್ಟಿತು.

ಜನವರಿ ತಾ|| ೨೧.— ೪೦೦ ತುರ್ಕಿಯವರು ಮತ್ತೂ ಅರಬ್ಬಿಯವರು ಕಳೆದ ತಾ|| ೧೯ ರಲ್ಲಿ ಬೆಂಘಾಜಿಯಲ್ಲಿ ಇಟಲಿಯವರ ಮೇಲೆ ಬಿದ್ದು ಪರಾಜಿತರಾದರು. ಇದರಲ್ಲಿ ತುರ್ಕಿಯವರ ಕಡೆ ೨೯ ಜನರು ಸತ್ತರು.

ತಾ|| ೨೨.— ಸಮರ್ಪಕವಾದ ಭರವಸವು ಫ್ರಾನ್ಸಿನಿಂದ ಕೊಡಲ್ಪಟ್ಟಲ್ಲಿ ಕಾರ್ತಜ್ ಎಂಬ ಫ್ರೆಂಚಿನವರ ಹಡಗನ್ನು ಬಿಟ್ಟುಬಿಡುವುದೆಂದು ಇಟಲಿಯ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಇಟಲಿಯವರು ಫ್ರೆಂಚಿನವರ ಹಡಗನ್ನು ಹಿಡಿದುದರ ಬಗೆಗೆ ಫ್ರಾನ್ಸಿನ ವೃತ್ತಪತ್ರಿಕೆಗಳು ಬಹು ಆಕ್ಷೇಪವನ್ನು ಮಾಡಿ ಇತಃಪರ ಈ ರೀತಿಯಾಗದಂತೆ ತಕ್ಕೇರ್ಪಾಟನ್ನು ಮಾಡಬೇಕೆಂದು ಬರೆದಿರುತ್ತವೆ.

ತಾ|| ೨೧.— ಮನೌಬಾ ಹಡಗಿನಲ್ಲಿದ್ದ ತುರ್ಕಿಯ ಪ್ರಯಾಣಿಕರನ್ನು ಬಿಟ್ಟುಕೊಡಬೇಕೆಂದು ಫ್ರೆಂಚ್ ಸರ್ಕಾರದವರು ಕೇಳಿರುವಲ್ಲಿ ಇಟಲಿಯವರು ತಿರಸ್ಕರಿಸಿದರೆಂದು ತಿಳಿದು ಬಂದಿದೆ.

ತಾ|| ೧೬.— ಏಡನ್ನಿಗೆ ಹೋಗುತ್ತಿದ್ದ ಅಫ್ರಿಕಾ ಎಂಬ ಬ್ರಿಟಿಷರ ಹಡಗನ್ನು ಇಟಲಿಯವರು ಪೆರಿಂ ಎಂಬಲ್ಲಿ ತಡೆದು ನಿಲ್ಲಿಸಿ ಅದರೊಳಗೆ ಪ್ರಯಾಣಮಾಡುತ್ತಿದ್ದ ಏಡನಲ್ಲಿ ಪ್ರಸಿದ್ಧ ಯುದ್ಧಭಟನಾದ ರೆಜಿಯಾಬೆ ಎಂಬುವನಾದಿಯಾಗಿ ೨೦ ಜನ ತುರ್ಕಿಯ ಅಧಿಕಾರಿಗಳನ್ನು ಹಿಡಿದುಕೊಂಡು ಹೋದರು.

ತಾ|| ೨೨.— ಇಟಲಿಯ ಯುದ್ಧನಾವೆಗಳು ಕೆಂಪುಕಡಲಿನಲ್ಲಿ ಅನುಮಾನಗ್ರಸ್ತವಾದ ಹಡಗುಗಳನ್ನೆಲ್ಲಾ ಹುಡುಕುತ್ತಿರುವುವು ಇಟಲಿಯವರ ಎರಡು ಕ್ರೂಯಿಸರುಗಳು ಇಬ್ಬ ಅಬ್ಬಾಸ್ ಎಂಬ ತೀರಪಟ್ಟಣದ ಹತ್ತಿರಕ್ಕೆ ಹೋಗಿ ಗುಂಡನ್ನು ಹೊಡೆದು ಕೆಲ ಕಟ್ಟಡಗಳನ್ನೂ, ಗುಡಿಸಲುಗಳನ್ನೂ ನಾಶಪಡಿಸಿದವು. ಯುದ್ಧನಾವೆಗಳು ಇಬ್ಬ ಅಬ್ಬಾಸಿನಿಂದ ಹೊರಟು ತುರ್ಕಿಯವರ ರೇವುಪಟ್ಟಣವಾದ ಲೋಹಿಯೋ ಎಂಬಲ್ಲಿಗೆ ಬಂದು ಅದಕ್ಕೆ ಗುಂಡನ್ನು ಹೊಡೆದವು. ಆದರೆ ಅಷ್ಟೇನೂ ನಷ್ಟವಾಗಲಿಲ್ಲವು. ಇಟಲಿಯವರ ಕ್ರೂಯಿಜರುಗಳು ಮಿಡಿ ಮತ್ತೂ ಸ್ಯಾಲಿಫ್ ಎಂಬಲ್ಲಿಗೆ ಗುಂಡನ್ನು ಹೊಡೆಯುತ್ತಿರುವುವು. ಎಂದು ಈಚೆಗೆ ವರ್ತಮಾನ ಬಂದಿರುತ್ತದೆ. ಇಟಲಿಯ ಯುದ್ಧನಾವೆಗಳು ಕೆಂಪುಕಡಲಿನಲ್ಲಿ ಸಂಚರಿಸುವ ವ್ಯಾಪಾರದ ಹಡಗುಗಳನ್ನೂ ಹಿಡಿದು ಶೋಧಿಸುವುದರಿಂದ ಏಡನ್ನಿಗೂ, ತುರ್ಕಿಯವರ ರೇವುಪಟ್ಟಣಗಳಿಗೂ ಮಧ್ಯೆ ನಡೆಯುವ ವ್ಯಾಪಾರಕ್ಕಡಚಣೆಯಾಗಿದೆ. ಇದನ್ನು ನಿಲ್ಲಿಸಿಕೊಡಬೇಕೆಂದು ಏಡನ್ನಿನ ಕೆಲ ವರ್ತಕರು ಪೊಲಿಟಿಕಲ್ ರೆಸಿಡೆಂಟರಿಗೆ ದೂರಿಕೊಂಡಿರುತ್ತಾರೆ.

ತಾ|| ೨೨.—ಇಟಲಿಯವರು ನೆನ್ನೆಯದಿನ ಗಾರ್ಗರೇಷವನ್ನು ಪುನಃ ಸ್ವಾಧೀನಪಡಿಸಿಕೊಂಡು ೫ ಮೈಲಿಯ ಸುತ್ತಲೂ ಹುಡುಕುವಲ್ಲಿ ಶತ್ರುಗಳು ಕಣ್ಣಿಗೆ ಬೀಳಲಿಲ್ಲವು. ಇದರಿಂದ ಶತ್ರುಪಕ್ಷದಲ್ಲಿ ಅನೇಕ ಪ್ರಾಣನಷ್ಟವಾಗಿರುವುದೆಂದು ಸಿದ್ಧವಾಗುವುದಲ್ಲದೆ, ತಮ್ಮ ಪಕ್ಷದಲ್ಲಿ ೧೫೦ ಜನರು ಮಡಿದರೆಂದು ಶತ್ರುಗಳೇ ಒಪ್ಪಿಕೊಂಡಿರುತ್ತಾರೆ. ಫ್ರೆಂಚರಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದ ತುರ್ಕಿಯವರನ್ನು ಸೆರೆಹಿಡಿದಿರುವ ವಿಚಾರದಲ್ಲಿ ಇಟಲಿಯವರು ಸಮರ್ಪಕವಾದ ಉತ್ತರವನ್ನು ಕೊಡದಿರುವಪಕ್ಷದಲ್ಲಿ, ಅವರಿಗೆ ತಮ್ಮ ನೌಕಾಬಲವನ್ನು ತೋರಿಸಿಕೊಡಬೇಕೆಂದು ಆಲೋಚಿಸಿ ಒಂದು ನೌಕಾಸೇನಾಂಗವು ಸಿದ್ಧವಾಗಿರಲು ಫ್ರೆಂಚ್ ಸರ್ಕಾರದವರು ಅಪ್ಪಣೆಯನ್ನು ಮಾಡಿರುವುದಾಗಿ ಒಂದು ವೃತ್ತಪತ್ರಿಕೆಯು ತಿಳಿಸುತ್ತದೆ. ತಮ್ಮ ವಶದಲ್ಲಿರುವ ತುರ್ಕಿಯವರನ್ನು ಬಿಟ್ಟುಕೊಡುವುದಾಗಿ ಕಾಗ್ಲೇರಿಯಲ್ಲಿರುವ ಫ್ರೆಂಚ್ ರಾಯಭಾರಿಗೆ ಒಂದು ತಂತಿಯ ವರ್ತಮಾನ ಬಂದಿರುತ್ತದೆ. ಆದರೆ ಇಂತಹ ಒಂದು ವರ್ತಮಾನವನ್ನೂ ಕಳುಹಿಲ್ಲವೆಂದು ಫ್ರೆಂಚ್‌ಸರ್ಕಾರದವರು ಹೇಳುತ್ತಿದ್ದಾರೆ. ಯಾರೋ ಸುಳ್ಳುವರ್ತಮಾನವನ್ನು ಕೊಟ್ಟಿರುವರೆಂದೂ, ಹಿಂದೆ ಫ್ರಾನ್ಸಿಗೂ, ಜರ್ಮನಿಗೂ ಯುದ್ಧವು ನಡೆಯುವದಕ್ಕೆ ಪೂರ್ವವೆ ಈ ರೀತಿ ಸುಳ್ಳುವರ್ತಮಾನಗಳು ಕೊಡಲ್ಪಡುತ್ತಿದ್ದುವೆಂದೂ ಫ್ರಾನ್ಸಿನ ವೃತ್ತಪತ್ರಿಕೆಗಳು ಸೂಚಿಸುತ್ತಿವೆ. ಇಟಲಿಯವರು ತಮ್ಮ ವರ್ತನವು ಯುಕ್ತವಾದುದೆಂದು ಹೇಳುತ್ತಿದಾರಲ್ಲದೆ, ತಾವು ಬಂದಿಗಳನ್ನಾಗಿ ಹಿಡಿದಿರತಕ್ಕವರು ವೈದ್ಯರಲ್ಲವೆಂದೂ, ಅವರ ವಶದಲ್ಲಿ ಶಸ್ತ್ರಸಂಬಂಧವಾದ ಆಯುಧಗಳಾವುವೂ ಇರಲಿಲ್ಲವೆಂದೂ ಸಿದ್ಧಾಂತಮಾಡಿ ಹೇಳುತ್ತಿದ್ದಾರೆ. ಫ್ರೆಂಚರ ಸಂಬಂಧವಾದ ಹಡಗನ್ನು ಹಿಡಿದಿರುವುದರ ವಿವಾದವು ಹೇಗ್ ಕೋರ್ಟಿನ ಪಂಚಾಯಿತರ ಇತ್ಯರ್ಥದ ಬಗೆಗೆ ಹಾಕಲ್ಪಡತಕ್ಕದೆಂದು ಇಟಲಿಯು ಸೂಚಿಸುತ್ತದೆ.

ತಾ|| ೨೩.— ಕೆಂಪುಕಡಲಿನ ತುರ್ಕಿಯ ರಾಜ್ಯಕ್ಕೆ ಸೇರಿದ ದಡದಲ್ಲಿ ಒಂದು ತಡೆಯು ಕಟ್ಟಲ್ಪಟ್ಟಿರುತ್ತದೆ. ಇದನ್ನು ಮೀರಿ ಬರತಕ್ಕ ಹಡಗುಗಳು ಕಾಲನ್ನು ಮೀರಿ ನಡೆದ ತಪ್ಪಿತಕ್ಕೆ ಗುರಿಮಾಡಲ್ಪಡುವುವೆಂದು ಇಟಲಿಯು ಪ್ರಸಿದ್ಧಪಡಿಸಿರುತ್ತದೆ. ಇಟಲಿಯವರು ನೌಕಿಮ್ಮಗೂ, ಹೊದೇಫಾಕ್ಕೂ, ಮಧ್ಯೆಯಿರುವ ತಂತಿಯನ್ನು ನಾಶಪಡಿಸಿರುತ್ತಾರೆ. ಮಹಮ್ಮದೀಯರ ಲೀಗಿನವರು ರೆಡ್ ಕ್ರೆಸೆಂಟ್ ಸಂಘದವರು ಏರ್ಪಡಿಸಿರುವ ಫಂಡಿಗೆ ಮುಖ್ಯವಾಗಿ ಭರತಖಂಡದಲ್ಲಿ ೭೫,೦೦೦ ರೂ.ಗಳನ್ನು ಕೂಡಿಸಿರುತ್ತಾರೆ. ಇಬ್ಬರು ಡಾಕ್ಟರುಗಳು, ಒಬ್ಬ [illegible] ಮತ್ತೂ ಇಬ್ಬರು [illegible] ಅಸ್ವಸ್ಥರಾದ ಮತ್ತೂ ಗಾಯವಡೆದ ಮಹಮ್ಮದೀಯರನ್ನು [illegible] ಟ್ರಿಪೋಲಿಗೆ ಕಳುಹಲ್ಪಟ್ಟಿರುತ್ತಾರೆ. ಇಟಲಿಯವರು ಈಗ ಬಂಧನದಲ್ಲಿಟ್ಟುಕೊಂಡಿರುವ ತುರ್ಕಿಯವರನ್ನು ಪುನಃ ಫ್ರೆಂಚರ ರೇವಿಗೆ ಕರೆದುಕೊಂಡು ಬಂದು ಬಿಡುವಲ್ಲಿ ತಕ್ಕ ಪ್ರತಿಕ್ರಿಯೆಯು ಕೈಗೊಳ್ಳಲ್ಪಡುವುದೆಂದೂ, ವಿವಾದವಿಚಾರವು ಹೇಗಿನ ಪಂಚಾಯಿತರ ಇತ್ಯರ್ಥಕ್ಕಾಗಿ ಇಡಲ್ಪಡುವುದೆಂದೂ ಫ್ರೆಂಚ್ ಸರ್ಕಾರದವರು ತಿಳಿಸಿರುತ್ತಾರೆ.

ತಾ|| ೨೪.—ಇಟಲಿಯವರು ಆಸ್ಟ್ರೇಲಿಯಾಕ್ಕೆ ಸೇರಿದ ಬ್ರಿಗೆಂಜ್ ಎಂಬ ಹಡಗನ್ನು ತಡೆದಿರುವರು. ಈಗ ಸೆರೆಯಲ್ಲಿಡಲ್ಪಟ್ಟಿರುವ ಮನೌಬಾ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದ ತುರ್ಕಿಯವರನ್ನು ಬಿಟ್ಟು ಕೊಡಬೇಕೆಂದು ರೋಮಿನಲ್ಲಿರುವ ಫ್ರೆಂಚರ ರಾಯಭಾರಿಯು ಪರರಾಜ್ಯಸಂಬಂಧಪಟ್ಟ ವಿಷಯಗಳಿಗಾಗಿ ಮಂತ್ರಿಯಾಗಿರುವವರನ್ನು ಕೇಳಿರುವಲ್ಲಿ, ಆ ಮಂತ್ರಿಯು ಅದಕ್ಕೆ ಉತ್ತರವನ್ನು ಕೊಡಲು ತಾಮಸಮಾಡಿರುತ್ತಾನೆ ಮನೌಬಾ ಹಡಗಿನ ಪ್ರಯಾಣಿಕರ ಸಂಬಂಧವಾಗಿ ಇಟಲಿ ಮತ್ತೂ ಫ್ರಾನ್ಸು ರಾಜ್ಯಗಳಿಗೆ ಹುಟ್ಟಿರುವ ವಿವಾದವು ಇಷ್ಟರಲ್ಲೇ ಅನ್ಯೋನ್ಯದಿಂದ ಇತ್ಯರ್ಥವಾಗುವ ಸಂಭವವಿರುತ್ತದೆ.

ತಾ|| ೨೫.— ಮನೌಬಾ ಹಡಗಿನ ಪ್ರಯಾಣಿಕರನ್ನು ಬಂಧವಿಮುಕ್ತರನ್ನಾಗಿ ಮಾಡುವ ವಿಚಾರವು ಅನುಕೂಲವಾಗಿ ನಡೆಯುತ್ತಿದೆ. ಇಟಲಿಯ ಯುದ್ಧನಾವೆಗಳು ಗಾಜಾ ಮತ್ತೂ ರೀಫಾ ಮಧ್ಯೆಯಿರುವ ಸಿರಿಯಾ ದಡಕ್ಕೆ ಗುಂಡುಗಳನ್ನು ಹೊಡೆಯುತ್ತ ಅಲ್ಲಿಯ ನಿವಾಸಿಗಳೆಲ್ಲರಿಗೂ ಬಹು ಭಯವನ್ನುಂಟುಮಾಡಿರುತ್ತವೆ.

ಜನಗಳು ಅಡಿಗೆಗೆ ಉಪಯೋಗಿಸುವ ಉಪ್ಪನ್ನು ನೀರಿನಲ್ಲಿ ಕದರಿ ರಸ್ತೆ ಮತ್ತು ಕಾಲುದಾರಿಗಳಲ್ಲಿ ಬೆಳೆದಿರತಕ್ಕ ಹುಲ್ಲು ಮತ್ತು ಸೊಪ್ಪುಸದೆ ಮೊದಲಾದವುಗಳ ಮೇಲೆ ಚೆಲ್ಲಿದರೆ ಅವು ಜಾಗ್ರತೆಯಾಗಿ ನಾಶವಾಗುವುವು. ಆದರೆ ಹೀಗೆ ಉಪ್ಪಿನ ನೀರನ್ನು ಸುರಿದರೆ ಉಪ್ಪು ಭೂಮಿಯ ಮೇಲ್ಭಾಗದಲ್ಲಿ ನಿಂತು ವಾಯುಮಂಡಲದಲ್ಲಿರುವ ನೀರನ್ನು ಹೀರಿಕೊಳ್ಳುವುದರಿಂದ ಬಹಳ ಮೋಡವಾಗಿರುವ ದಿನಗಳಲ್ಲಿ ದಾರಿಯೆಲ್ಲಾ ಅಂಟಾಗಿರುವುದು. ಆದ್ದರಿಂದ ಉಪ್ಪಿಗೆ ಬದಲಾಗಿ ಸುಮಾರು ೫ ಸೇರು ಅಣ್ಣೆಬೇದಿಯನ್ನು ೫೦ ಸೇರು ನೀರಿನಲ್ಲಿ ಕರಗಿಸಿ ಆ ನೀರನ್ನು ಹುಲ್ಲು ಮೊದಲಾದ ಕಳೆಗಳ ಮೇಲೆ ಚಿಮುಕಿಸಿದರೆ ಅವುಗಳೆಲ್ಲವೂ ನಾಶವಾಗಿ ಹೋಗುವುವು. ಮತ್ತು ಉಪ್ಪಿನ ನೀರನ್ನು ಚಿಮುಕಿಸಿದರೆ ಆಗುವಂತೆ ಅಂಟಾಗುವುದಿಲ್ಲ. ಆದರೆ ಕಳೆಗಳಲ್ಲಿ ಹುವ್ವು ಬಿಟ್ಟು ಕಾಯಾಗುವುದಕ್ಕೆ ಮೊದಲೇ ಗಿಡಗಳು ಎಳೆಯವಾಗಿರುವಾಗ್ಗೆ ಅಣ್ಣೆಬೇದಿಯ ನೀರನ್ನು ಚಿಮುಕಿಸಬೇಕು. ಹಾಗಿಲ್ಲದಿದ್ದರೆ ಗಿಡಗಳು ಸತ್ತುಹೋದಾಗ್ಯೂ ನೆಲದಮೇಲೆ ಉದುರಿರುವ ಬೀಜಗಳು ಮೊಳೆತು ಪುನಃ ಕಳೆಯು ಹೆಚ್ಚುವುದು. ಕೃ. ಕಿ.

ಇಲಿಗಳನ್ನು ಸಮೂಲ ನಾಶಮಾಡುವ ಕ್ರಮವು.

ಪ್ರತಿಯೊಂದು ಮನೆಗಳಲ್ಲಿ ಇಲಿಗಳು ಹೆಚ್ಚಾಗಿ ಕಾಳುಕಡ್ಡಿಗಳನ್ನು ತಿಂದು ನಾಶಮಾಡುತ್ತಿರುವವು. ಕಿರಾಣಿಯ ದೊಡ್ಡ ದೊಡ್ಡ ಅಂಗಡಿಗಳಲ್ಲಂತೂ ಇಲಿ ಹೆಗ್ಗಣಗಳ ಕಾಟದಿಂದ ಅಂಗಡಿಕಾರರಿಗೆ ಬಹಳ ಹಾನಿತಟ್ಟುತ್ತಿರುವದು. ಹೊಲಗಳಲ್ಲಿ ಸಹ ಇಲಿಗಳು ಹೆಚ್ಚಾಗಿ ಬೆಳೆದ ಪೈರನ್ನೂ, ಒಮ್ಮೊಮ್ಮೆ ಬಿತ್ತಿದ ಬೀಜಗಳನ್ನೂ ತಿಂದುಬಿಡುತ್ತವೆ. ಕಾರಣ ಇಲಿ ಹೆಗ್ಗಣಗಳನ್ನೂ ಕೊಲ್ಲುವದು ಒಕ್ಕಲಿಗರಿಗೂ, ವ್ಯಾಪಾರಸ್ಥರಿಗೂ, ಪ್ರತಿಯೊಂದು ಕುಟುಂಬದವರಿಗೂ ಬಹಳ ಹಿತವಾದ ಸಂಗತಿಯಾಗಿದೆ. ಆದ್ದರಿಂದ ಅವುಗಳನ್ನು ನಿರ್ಮೂಲಮಾಡುವ ಸಾಧನವು ಎಲ್ಲರಿಗೂ ಗೊತ್ತಿರುವದು ಅತ್ಯವಶ್ಯವಾದದ್ದು.

ದಕ್ಷಿಣ ಆಫ್ರಿಕಾ ದೇಶದ ನಿವಾಸಿಗಳಾದ ಎ. ಈ. ಆರ್. ಬ್ರೂಮ್‌ಫೀಲ್ಡ ಸಾಹೇಬರು ತಮ್ಮ ಹೊಲದಲ್ಲಿ ಬಿತ್ತಿದ ಬೀಜಗಳನ್ನೂ, ಬೆಳೆದ ಪೈರನ್ನೂ ಇಲಿಗಳು ತಿಂದು ಹಾಳುಮಾಡಹತ್ತಿದ ಕಾರಣ ಅವುಗಳ ನಾಶಕ್ಕಾಗಿ ನಾನಾತರದ ಪ್ರಯತ್ನಗಳನ್ನು ಮಾಡಿ ಬೇಸತ್ತರು. ಕೊನೆಗೆ ಇಲಿಗಳ ಬಹು ಪ್ರೀತಿಯ ಪದಾರ್ಥವೆಂದು ಗೊತ್ತಾದ ಕುಂಬಳಕಾಯಿಯಲ್ಲಿ ವಿಷಾರಿ ದ್ರವ್ಯವನ್ನು ಕೂಡಿಸಿ ಇಲಿಗಳಿದ್ದಲ್ಲಿ ಇಟ್ಟರೆ ಅವು ಅದನ್ನು ತಿಂದು ಸತ್ತು ಹೋಗಬಹುದೆಂದು ಆಲೋಚಿಸಿ ಅದರ ಪ್ರಯೋಗವನ್ನು ಮಾಡಿ ನೋಡಿದರು. ಅದನ್ನು ತಿಂದು ಇಲಿಗಳೆಲ್ಲ ಚಟಪಟನೆ ಒದ್ದಾಡಿ ಸಾಯಹತ್ತಿದವು. ಈ ರೀತಿಯಿಂದ ಅವರು ಎಲ್ಲ ಇಲಿಗಳನ್ನು ಸಹಮೂಲ ನಾಶಮಾಡಿದರು. ಅವರು ಕೈಕೊಂಡ ಕ್ರಮವು ಹೇಗೆಂದರೆ:—

ಇಲಿ ಪಾಷಣ (ಸುಬಳಬಾರ) ವನ್ನು ನೀರಿನಲ್ಲಿ ಹಾಕಿ ಉತ್ತಮ ತೀಕ್ಷ್ಣವಾಗುವಷ್ಟು ಮಿಶ್ರಣವನ್ನು ಸಿದ್ಧಪಡಿಸಬೇಕು. ಅನಂತರ ಕುಂಬಳಕಾಯಿಯನ್ನು ಹೆಚ್ಚಿ ಸಣ್ಣ ಸಣ್ಣ ಹೋಳು ಮಾಡಿ ಎಲ್ಲ ಹೋಳುಗಳನ್ನು ಆ ಮಿಶ್ರಣದಲ್ಲಿ ಸುರಿದು ಕಲಿಸಿಡಬೇಕು. ಬಳಿಕ ಇಲಿಗಳಿದ್ದ ಸ್ಥಳದಲ್ಲಿ ಅಲ್ಲಲ್ಲಿಗೆ ಆ ಹೋಳುಗಳನ್ನು ಇಟ್ಟಿತೆಂದರೆ ಅವುಗಳನ್ನು ತಿಂದ ಇಲಿಗಳೆಲ್ಲ ಸತ್ತು ಹೋಗುತ್ತವೆ. ಆದರೆ ಈ ಹೋಳುಗಳೂ ಮಿಶ್ರಣವೂ ಸಣ್ಣ ಮಕ್ಕಳ ಕೈಸೇರದಂತೆಯೂ, ದನಗಳ ಬಾಯಿಗೆ ಬೀಳದಂತೆಯೂ ಯಾವಾಗಲೂ ಬಹು ಎಚ್ಚರ ವಹಿಸತಕ್ಕದ್ದು.

ಈ ಕ್ರಮವು ಎಲ್ಲರಿಗೂ ಗೊತ್ತಾಗಬೇಕೆಂದು ಮಿ. ಬ್ರೂಮಫೀಲ್ಡ ಸಾಹೇಬರು ಅವರು ದಕ್ಷಿಣ ಆಫ್ರಿಕಾ ದೇಶದ ಶೇತಕೀ ಖಾತೆಯಿಂದ ಇಂಗ್ಲೀಷ ಭಾಷೆಯಲ್ಲಿ ಹೊರಡುವ ಮಾಸಪತ್ರಿಕೆಯ ಕಳೆದ ಜೂನ ತಿಂಗಳ ಸಂಚಿಕೆಯಲ್ಲಿ ಪ್ರಸಿದ್ಧಮಾಡಿರುವರು. ಕಾರಣ ಅವಶ್ಯವಿದ್ದವರು ಈ ಕ್ರಮವನ್ನು ಬಹು ಎಚ್ಚರದಿಂದ ಕೈಕೊಂಡು ಪರಿಣಾಮವನ್ನು ನಮಗೆ ತಿಳಿಸಬೇಕೆಂದು ವಿನಯದ ಪ್ರಾರ್ಥನೆಯುಂಟು.

ಒಕ್ಕಲಿಗರ ಒಕ್ಕಲಿಗ

ತುರ್ಕಿ–ಇಟಲಿಗಳ ಯುದ್ಧವು.

ಜನವರಿ ತಾ॥ ೧೯.— ಮನೌಬಾ ಹಡಗಿನಲ್ಲಿ ಅನೇಕ ತಾಕ್ಟರುಗಳೊ, ವಿಷಭೋಜಕಾರಗಳನ್ನು ಹೊರತಕ್ಕವರೂ ಇದ್ದರೆಂಬುದು ಇಟಲಿಯವರ ವಿಚಾರಣೆಯಿಂದಲೇ ಸ್ಥಿರಪಟ್ಟಿರುವುದೆಂದು ಸರ್ಕಾರದವರು ತಿಳಿಸಿರುತ್ತಾರೆ. ಇತರ ಪ್ರಯಾಣಿಕರು ಖಜಾನಿಯ ಕಲಾಸಿಗಳಾಗಿದ್ದರೆಂದು ತಿಳಿದು ಬಂದಿದೆ. ಅವರುಗಳ ಬಿಡುಗಡೆಯ ವಿಚಾರದಲ್ಲಿ ಈಗ ಚರ್ಚೆಯು ನಡೆಯುತ್ತಿರುವುದು.

ತಾ॥ ೨೦— ವಲ್ಕನೋ ಎಂಬ ಫಿರಂಗಿಯ ದೋಣಿಯು ೨೩ ಜನ ತುರ್ಕಿಯ ಸೈನ್ಯಾಧಿಕಾರಿಗಳನ್ನು ಕೈಸೆರೆ ಹಿಡಿದುಕೊಂಡು ಬಂದಿರುವುದಾಗಿಯೂ, ಇವರೆಲ್ಲರೂ ಅಫ್ರಿಕಾ ಮತ್ತೂ ಬಿಸೆಂಟ್ ಎಂಬ ಹಡಗುಗಳಲ್ಲಿ ಪ್ರಯಾಣಮಾಡುತ್ತಿದ್ದಾಗ್ಗೆ ಸೆರೆ ಹಿಡಿಯಲ್ಪಟ್ಟರೆಂದೂ ಒಂದು ತಂತಿಯವಾರ್ತೆಯಿಂದ ತಿಳಿಯಬರುತ್ತದೆ. ಕಳೆದ ಅಕ್ಟೋಬರ್ ತಾ॥ ೧ ರಲ್ಲಿ ಹೂಡಿದಾ ಎಂಬ ಕೋಟೆಯಲ್ಲಿದ್ದುಕೊಂಡು ವಲ್ಕನೋ ಹಡಗಿಗೆ ಗುಂಡನ್ನು ಹೊಡೆದಂತಹ ಕಮಾಂಡಿಂಗ್ ಮೇಜರನು ಈ ೨೩ ಬಂದಿಗಳಲ್ಲೊಬ್ಬನಾಗಿರುವವನು. ತುರ್ಕಿಯವರ ಸಹಾಯಕ್ಕಾಗಿ ಹೊರಟಿದ್ದ ಡಾಕ್ಟರು ಮೊದಲಾದವರನ್ನು ಕರೆದುಕೊಂಡು ಹೋಗುತ್ತಿದ್ದ ಮನೌಬಾ ಮೊದಲಾದ ಹಡಗುಗಳನ್ನು ಇಟಲಿಯವರು ತಡೆದು ಪ್ರಯಾಣಿಕರನ್ನು ತಮ್ಮ ಸ್ವಾಧೀನ ಮಾಡಿಕೊಂಡುದರ ಮೇಲೆ ಫ್ರಾನ್ಸ್ ಮತ್ತೂ ಇಟಲಿ ರಾಜ್ಯಗಳಿಗೂ ಉಂಟಾಗಿದ್ದ ಮನಸ್ತಾಪವು ಉಭಯ ರಾಜ್ಯಗಳಿಗೂ ಸಮಾಧಾನಕರವಾಗಿ ಇತ್ಯರ್ಥಗೊಳಿಸಲ್ಪಟ್ಟಿತು.

ತಾ॥ ೨೧.— ಇಟಲಿಯವರ ಸೆರೆಯಲ್ಲಿದ್ದ ಮನೌಬಾ ಹಡಗಿನ ಪ್ರಯಾಣಿಕರೆಲ್ಲರೂ ಫ್ರಾನ್ಸಿಗೆ ಕಳುಹಲ್ಪಡುವರು. ಮತ್ತೂ ಇಟಲಿಯವರು ಹಡಗನ್ನು ಹಿಡಿದು ಪ್ರಯಾಣಿಕರನ್ನು ಸೆರೆ ಹಿಡಿದಿದ್ದುದರ ಸಂಬಂಧವಾದ ನ್ಯಾಯವಿಚಾರವು ಹೇಗ್ ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಡುವುದು. ಇಟಲಿಯವರ ಟಾರ್ಪಿಡೋ ಹಡಗುಗಳಿಂದ ಫ್ರೆಂಚಿನ ಟ್ರಾವಿಗನನ ಎಂಬ ಹಡಗು ಟ್ಯಾನಿಸ್ ದಡದಲ್ಲಿ ಹಿಡಿಯಲ್ಪಟ್ಟು ಟ್ರಿಪೋಲಿಗೆ ತೆಗೆದುಕೊಂಡು ಹೋಗಲ್ಪಟ್ಟಿರುವುದು

ಮೈಸೂರ್ ಸ್ಟಾರ್

೧೯೧೨ ನೆಯ ಜನವರಿ ತಾ॥ ೨೨ ನೆಯ ಸೋಮವಾರ.

ಮೈಸೂರ ಸೀಮೆಯ ಆರೋಗ್ಯಸ್ಥಿತಿಯ ವರದಿಯು.

೧೯೧೦ ನೆಯ ವರ್ಷದ ಈ ಸೀಮೆಯ ಆರೋಗ್ಯಸ್ಥಿತಿಯ ವರದಿಯು ೧೯೧೧ನೆಯ ನವಂಬರ್ ತಿಂಗಳಲ್ಲಿ ಪ್ರಕಟಿತವಾಗಿ ಈ ತಾ॥ ೧೦-೧ರಲ್ಲಿ ನಮ್ಮ ಹಸ್ತಗತವಾಗಿರುತ್ತದೆ. ನಮ್ಮ ಸರ್ಕಾರದ ಎಲ್ಲಾ ಶಾಖೆಗಳ ವರದಿಗಳೂ ಬಹು ಸಾವಕಾಶದಿಂದ ಪ್ರಕಟಿತವಾಗುವುದು ವಾಡಿಕೆಯಾಗಿರುವ ಪ್ರಯುಕ್ತ ಪ್ರಸಕ್ತ ವರದಿಯ ಸಾವಕಾಶಕ್ಕೆ ಕಾರಣವನ್ನು ಕೇಳಬೇಕಾದುದಿಲ್ಲವು. ಆದರೂ ಈ ವರದಿಯನ್ನು ಸರ್ಕಾರದವರು ವಿಮರ್ಶಿಸುವಾಗ್ಗೆ "ಇತಃಪರ ಈ ವರದಿಯನ್ನು ಸಿದ್ಧಗೊಳಿಸಲು ಇಷ್ಟು ಕಾಲವಿಳಂಬಮಾಡದೆ ತ್ವರೆಮಾಡಬೇಕು." ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಪ್ರಕಾರವಾಗಿ ಪ್ರತಿಯೊಂದು ವರದಿಯಲ್ಲೂ ಸೂಚಿಸುತ್ತಿದ್ದಾಗ್ಗೂ, ಅದು ಬಹು ಆಲಸ್ಯದಿಂದ ಸಿದ್ಧಪಡಿಸಲ್ಪಡುವುದು ಮಾತ್ರ ತಪ್ಪಲಿಲ್ಲವು. ಆಯಾವರ್ಷದ ವರದಿಯನ್ನು ಆಕೂಡಲೆ ಪ್ರಕಟಿಸುವುದರಿಂದ ಅವುಗಳಲ್ಲಿ ಕಂಡುಬರುವ ನ್ಯೂನಾತಿರೇಕಗಳನ್ನು ಮುಂದಣ ಸಂವತ್ಸರದಲ್ಲಿ ಸರಿಪಡಿಸಿಕೊಳ್ಳಲು ಅನುಕೂಲವಾಗುತ್ತಾದ ಪ್ರಯುಕ್ತ, ನಮ್ಮ ಸರ್ಕಾರದವರು ಇತಃಪರ ಎಲ್ಲಾ ಶಾಖೆಗಳ ವರದಿಗಳೂ ಆಯಾ ವರ್ಷವು ಕಳೆದ ಕೂಡಲೇ ಪ್ರಕಟವಾಗುವಂತೆ ಕಟ್ಟಪ್ಪಣೆಯನ್ನು ಮಾಡುವುದು ಅತ್ಯಾವಶ್ಯಕವಾಗಿದೆ.

೧೯೧೧ನೆಯ ವರ್ಷದ ಜನಪರಿಗಣನೆಯ ಪ್ರಕಾರ ಪ್ರಸಕ್ತ ವರ್ಷದಲ್ಲಿ ೧೦೦೦ ಜನಸಂಖ್ಯೆಗೆ ೧೭.೨೫ ರಂತೆ ಜನನವಾಗಿರುತ್ತದೆ. ಆದರೆ ೧೯೦೯ ರಲ್ಲಿ ೧೯.೩೩ ರಂತೆಯೂ ೧೯೦೮ ರಲ್ಲಿ ೧೯.೨೮ ರಂತೆಯೂ ಜನನವಾಗಿದ್ದಿತು. ಈ ಜನನ ಸಂಖ್ಯೆಗಳನ್ನು ನೋಡುವುದರಿಂದ, ೧೯೦೮ ನೆಯ ವರ್ಷಕ್ಕಿಂತ ೧೯೦೯ ರಲ್ಲಿ ಕಡಿಮೆಯಾಗಿಯೂ, ೧೯೦೯ ಕ್ಕಿಂತ ೧೯೧೦ ರಲ್ಲಿ ಇನ್ನೂ ಕಡಿಮೆಯಾಗಿಯೂ ಜನನವಾಗಿರುವುದು ವ್ಯಕ್ತವಾಗುತ್ತದೆ. ಹೀಗೆ ಜನನ ಸಂಖ್ಯೆಯು ಕಡಿಮೆಯಾಗಲು, ಜನನದ ಲೆಕ್ಕವನ್ನಿಡತಕ್ಕ ಕ್ರಮವು ಸಮರ್ಪಕವಾಗಿಲ್ಲದಿರುವುದು ಕಾರಣವೆಂದೂ, ಈಗ ಕೊಡಲ್ಪಟ್ಟಿರುವ ಸಂಖ್ಯೆಗಳನ್ನು ನಂಬತಕ್ಕುದಲ್ಲವೆಂದೂ ಸ್ಯಾನಿಟರಿ ಕಮಿಷನರು ಅಭಿಪ್ರಾಯಪಟ್ಟಿರುತ್ತಾರೆ. ಇದರ ಮೇಲೆ ಸ್ಯಾನಿಟರಿ ಕಮಿಷನರು ಮತ್ತೂ ಡೆಪ್ಯುಟಿ ಕಮಿಷನರುಗಳು ಸರಿಯಾದ ಮೇಲ್ವಿಚಾರಣೆಯನ್ನು ತೆಗೆದುಕೊಂಡು ಮತ್ತೂ ಆರೋಗ್ಯಶಾಖಾಧಿಕಾರಿಗಳೂ, ರೆವಿನ್ಯೂ ಕಾರ್ಯಾಧಿಕಾರಿಗಳೂ ಕಳುಹತಕ್ಕ ಲೆಕ್ಕಗಳ ತಾಳೆಯನ್ನು ನೋಡಿ ವಾಸ್ತವ್ಯವಾದ ಜನನ ಸಂಖ್ಯೆಯು ಗೊತ್ತಾಗಲು ತಕ್ಕೇರ್ಪಾಡನ್ನು ಇಡತಕ್ಕುದೆಂದು ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಈ ವರ್ಷದಲ್ಲಿ ಮರಣಸಂಖ್ಯೆಯು ೧೦೦೦ ಪ್ರಜಾಸಂಖ್ಯೆಗೆ ೨೦.೯೯ ರಂತೆ ಆಗಿರುತ್ತದೆ. ಆದರೆ ೧೯೦೯ ರಲ್ಲಿ ೧೭.೪೦ ರ ಪ್ರಕಾರವೂ, ಅದರ ಹಿಂದಣ ೫ ವರ್ಷಗಳಲ್ಲಿ ೧೭.೭೮ ರ ಪ್ರಕಾರವೂ ಮರಣಗಳಾಗಿದ್ದುವು. ೧ ವರ್ಷ ವಯಸ್ಸಿನೊಳಗಿರುವ ಮಕ್ಕಳಲ್ಲೂ, ೬೦ ವರ್ಷ ವಯಸ್ಸಿನ ಮತ್ತೂ ಅದಕ್ಕೆ ಮೇಲ್ಪಟ್ಟ ವೃದ್ಧರಲ್ಲೂ ಮರಣವು ಹೆಚ್ಚಾಗಿ ಆಗಿರುತ್ತದೆ. ೧೯೧೧ ರ ಜನಪರಿಗಣನೆಯಿಂದ ಗೊತ್ತಾದ ಮಕ್ಕಳ ಸಂಖ್ಯೆಯ ಮೇಲಿಂದ ನೋಡಿದುದರಲ್ಲಿ, ೧೯೦೯ ರಲ್ಲಿ ಪ್ರತಿ ೧೦೦೦ ಮಕ್ಕಳಿಗೆ ೭೭.೦೮ ರಂತೆ ಗಂಡುಮಕ್ಕಳ ಮತ್ತೂ ೬೦.೭೦ ರಂತೆ ಹೆಣ್ಣುಮಕ್ಕಳ ಮರಣವಾಗಿದ್ದುದು ೧೯೧೦ ರಲ್ಲಿ ೮೦.೯೫ ರಂತೆ ಗಂಡುಮಕ್ಕಳ ಮತ್ತೂ ೬೭.೫೦ ರಂತೆ ಹೆಣ್ಣುಮಕ್ಕಳ ಮರಣವು ಹೆಚ್ಚಿತು. ಹೀಗೆ ಮಕ್ಕಳ ಮರಣವು ಹೆಚ್ಚಿದುದಕ್ಕೆ ಕಾರಣವನ್ನು ಕಂಡುಹಿಡಿಯಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ. ಈ ವರ್ಷದಲ್ಲಿ ವಾಂತಿಭೇದಿ ರೋಗದಿಂದ ಸತ್ತವರ ಸಂಖ್ಯೆಯು ಇದರ ಹಿಂದಣವರ್ಷದಲ್ಲಿ ಆದುದಕ್ಕಿಂತ ಕೊಂಚಮಟ್ಟಿಗೆ, ಹೆಚ್ಚಾಗಿರುತ್ತದೆ. ಜುಲೈ ತಿಂಗಳಲ್ಲಿ ಈ ರೋಗದಿಂದ ಹೆಚ್ಚು ಮರಣವಾಯಿತು. ಈ ರೋಗವನ್ನು ಅಡಗಿಸಲು ತಕ್ಕ ಏರ್ಪಾಡು ಕೂಡಲೆ ಮಾಡಲ್ಪಟ್ಟಿತೆಂದು ತಿಳುಹಲ್ಪಟ್ಟಿದೆ. ಈ ವರ್ಷದಲ್ಲಿ ಸಿಡುಬಿನ ರೋಗದಿಂದ ೫೭೦೬ ಮರಣಗಳಾದುವು. ೧೯೦೯ ರಲ್ಲಿ ಇದಕ್ಕಿಂತಲೂ ೮೪೬ ಮರಣವು ಕಡಿಮೆಯಾಗಿದ್ದಿತು. ಈ ರೋಗವು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ವ್ಯಾಪಿಸಿದ್ದಿತಾದರೂ ಮೈಸೂರ ಡಿ॥ ನಲ್ಲಿ ಮಾತ್ರ ಬಹು ಕ್ರೂರವಾಗಿದ್ದು ೨೫೦೫ ಜನರನ್ನು ಆಹುತಿಗೊಂಡಿತು. ಸಾಧಾರಣ ಜ್ವರದಿಂದ ಕಳೆದ ವರ್ಷದಲ್ಲಾದುದಕ್ಕಿಂತ ೪೩೯೧ ಮರಣಗಳು ಹೆಚ್ಚಾಗಿ ಆಗಿರುತ್ತವೆ. ಇದರಲ್ಲಿ ಕಡೂರ ಡಿ॥ ನಲ್ಲಿ ಅತ್ಯಂತ ಹೆಚ್ಚಾಗಿ ಅಂದರೆ ೧೩.೬೦ ರಂತೆಯೂ, ಕೋಲಾರ ಡಿ॥ ನಲ್ಲಿ ಅತ್ಯಂತ ಕಡಿಮೆಯಾಗಿ ಅಂದರೆ ೬.೯ ರಂತೆಯೂ ಮರಣವಾಗಿರುತ್ತದೆ. ಚಿತ್ರಕಲ್‌ದುರ್ಗ ಡಿ॥ ನ ಎಲ್ಲಾ ಊರುಗಳಲ್ಲೂ ಜ್ವರದಿಂದಾದ ಮರಣವೇ ಹೆಚ್ಚಾಗಿರುವುದು. ಮತ್ತೂ ಹಿರಿಯೂರು, ಚಿತ್ರದುರ್ಗ, ಹೊಸದುರ್ಗ ಮತ್ತೂ ದಾವಣಗೆರೆ ಈ ಊರುಗಳಲ್ಲಿ ಮಲೇರಿಯಾ ಜ್ವರವು ಅತಿ ಕಠಿಣವಾಗಿ ಪರಿಣಮಿಸಿದ್ದಿತು. ಕ್ವಿನೈನನ್ನು ಎಥೇಚ್ಛವಾಗಿಯೂ, ಉಚಿತವಾಗಿಯೂ ಕೊಡುವುದೇ ಮೊದಲಾದ ಸಾಧನಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಈ ರೋಗವನ್ನಡಗಿಸಲು ಸೀನಿಯರ್ ಸರ್ಜನರು ಮತ್ತೂ ಸ್ಯಾನಿಟರಿ ಕಮಿಷನರು ತಕ್ಕ ಏರ್ಪಾಟನ್ನಿಡತಕ್ಕುದೆಂದು ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ೧೯೦೯ರಲ್ಲಿ ೮೦೬೮ ಪ್ಲೇಗುಮರಣವಾಗಿದ್ದುದು ಈ ವರ್ಷದಲ್ಲಿ ೬೭೭೮ ಮರಣವಾಗಿರುವುದು. ಎಲ್ಲಾ ಡಿ॥ ಗಳಿಗಿಂತಲೂ ಮೈಸೂರ ಡಿ॥ ನಲ್ಲಿ ಹೆಚ್ಚಾಗಿ ಅಂದರೆ ರಾಜಧಾನಿಯಲ್ಲಲ್ಲದೆ ೧೧೫೯ ಮರಣವಾಗಿರುತ್ತದೆ. ಆರೋಗ್ಯಕಾರ್ಯಗಳಿಗಾಗಿ ಮರಹಮ್ಮತ್ ಶಾಖೆಯವರಿಂದಲೂ, ಎಲ್ಲಾ ಮ್ಯುನಿಸಿಪಾಲಿಟಿಗಳಿಂದಲೂ ಈ ವರ್ಷದಲ್ಲಿ ೧೬೭೨೫೬ ರೂ. ವ್ಯಯವಾಗಿರುವುದು. ಆದರೆ ೧೯೦೯ ರಲ್ಲಿ ೫೬೮೬೦೮ ರೂ. ವ್ಯಯವಾಗಿದ್ದಿತು.

ಈ ವರದಿಯನ್ನು ಆದ್ಯಂತವಾಗಿ ನೋಡಿದರಲ್ಲಿ ೧೯೦೮ ರ ಲಾಗಾಯಿತು ಒಂದೇ ಸಮನಾಗಿ ಜನನ ಸಂಖ್ಯೆಯು ಕಡಿಮೆಯಾಗುತ್ತ ಮರಣಸಂಖ್ಯೆಯು ವಿಪರೀತವಾಗಿ ಹೆಚ್ಚುತ್ತಿರುವುದೆಂಬುದು ವ್ಯಕ್ತವಾಗುತ್ತದೆ. ಆರೋಗ್ಯಾಭಿವೃದ್ಧಿಯ ಕಾರ್ಯಗಳಿಗಾಗಿ ಪ್ರತಿವರ್ಷದಲ್ಲೂ ಲಕ್ಷಾಂತರ ರೂಪಾಯಿಗಳು ವ್ಯಯಮಾಡಲ್ಪಡುತ್ತಿದ್ದಾಗ್ಗೂ, ಈ ರೀತಿ ಜನನಸಂಖ್ಯೆಯು ಕಡಿಮೆಯಾಗಿ ಮರಣಸಂಖ್ಯೆಯು ಹೆಚ್ಚುವುದು ಬಹು ಖೇದಕರವಾಗಿರುವುದಲ್ಲದೆ, ಇದರಿಂದ ಯಾವುದೊಂದು ಪ್ರಯೋಜನವೂ ಇಲ್ಲದೆ ವೃಥಾ ದ್ರವ್ಯವ್ಯಯವಾಗುತ್ತಿರುವುದೆಂದು ಹೇಳಬಹುದಾಗಿದೆ. ಅದು ಕಾರಣ ನಮ್ಮ ಸರ್ಕಾರದವರು ಈ ಶಾಖೆಯ ಅಧಿಕಾರಿಗಳ ಅಥವಾ ಕೆಲಸಗಾರರ ಸಂಖ್ಯೆಯನ್ನು ಹೆಚ್ಚಿಸಿ, ತನ್ಮೂಲಕ ವೃಥಾ ದುಡ್ಡಿನ ವ್ಯಯಕ್ಕೆ ಅವಕಾಶವನ್ನುಂಟುಮಾಡದೆ, ಯಾವ ಉಪಾಯದಿಂದ ಕ್ಷುದ್ರೋಗಗಳು ಕಡಿಮೆಯಾಗಿ ಜನರ ಆರೋಗ್ಯಾಭಿವೃದ್ಧಿಯಾಗುತ್ತದೆಂಬುದು ನಿರ್ಧರಪಡುತ್ತದೋ ಅಂತಹ ಉಪಾಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಎಷ್ಟು ದ್ರವ್ಯವ್ಯಯವನ್ನು ಮಾಡಿದರೂ ಸಾರ್ಥಕವಾಗುವುದು. ರೋಗೋಪದ್ರವಗಳು ವಿಶೇಷವಾಗಿರದೆ ಮರಣವು ಕಡಿಮೆಯಾಗಿ ಆಗಿದ್ದಂತಹ ೧೯೦೯ ನೆಯ ವರ್ಷದಲ್ಲಿ ೫ ಲಕ್ಷ ಚಿಲ್ಲರೆ ರೂ. ವ್ಯಯಮಾಡಲ್ಪಟ್ಟದ್ದು, ರೋಗೋಪದ್ರವಗಳ ವಿಶೇಷದಿಂದ ಮರಣವು ಹಿಂದಣವರ್ಷಕ್ಕಿಂತ ಹೆಚ್ಚಾಗಿ ಆದ್ದಂತಹ ೧೯೧೦ ರಲ್ಲಿ ೧ ಲಕ್ಷ ಚಿಲ್ಲರೆ ರೂ. ವ್ಯಯಮಾಡಲ್ಪಟ್ಟಿರುವುದು ಆಶ್ಚರ್ಯವಾಗಿರುತ್ತದೆ. ೧೯೧೦ ರಲ್ಲಿ ಜನನ ಸಂಖ್ಯೆಯು ಕಡಿಮೆಯಾಗಿ ಮರಣವು ಹೆಚ್ಚಿದಕ್ಕಿಂತಲೆ ಇನ್ನು ಕೆಲವರ್ಷಗಳ ವರೆಗೆ ನಡೆದುಕೊಂಡು ಬಂದಲ್ಲಿ ಈ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲವು. ಅದುಕಾರಣ ನಮ್ಮ ಸರ್ಕಾರದವರು ಈ ದೇಶದ ನಿಜವಾದ ಆರೋಗ್ಯಾಭಿವೃದ್ಧಿಯ ಕಡೆಗೆ ತಕ್ಕ ಗಮನವನ್ನು ಕೊಡುವರಾಗಲೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರ ದೇಹಸ್ಥಿತಿಯು ಗುಣಮುಖವಾಗಿರುತ್ತದೆಂದು ತಿಳುಹಲು ಸಂತೋಷವಾಗುತ್ತದೆ.

ಚೀಫ್ ಇಂಜನೀರ್ ಮಿ॥ ವಿಶ್ವೇಶ್ವರಯ್ಯನವರು, ಪ್ರೈವೆಟ್ ಸೆಕ್ರೆಟರಿ ಮಿ॥ ಗೋವಿಂದರಾಯರು ಇವರುಗಳೊಡನೆ ದಿವಾನರು ಕಳೆದ ಶುಕ್ರವಾರ ಮದ್ರಾಸಿನಿಂದ ಬೆಂಗಳೂರಿಗೆ ಬಂದರು.

ಕಳೆದ ಶುಕ್ರವಾರ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ದಿನವಾದುದರಿಂದ, ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿ ಮತ್ತೂ ಪಾಠಶಾಲೆಗಳಿಗೆ ರಜವು ಕೊಡಲ್ಪಟ್ಟಿದ್ದಿತಲ್ಲದೆ, ರಾಜಧಾನಿಯಲ್ಲಿ ೨೧ ಗುಂಡುಗಳು ಹಾರಿಸಲ್ಪಟ್ಟುವು.

ರಾಜಧಾನಿಯಲ್ಲಿ ಬೆಳಗಿನ ವೇಳೆಯಲ್ಲಿ ಚಳಿಯೂ ಮಧ್ಯಾಹ್ನದಲ್ಲಿ ಬಿಸಿಲೂ ಅಧಿಕವಾಗಿರುತ್ತವೆ. ಪ್ಲೇಗುಮರಣವು ಎಲ್ಲಿಯೋ ಒಂದೊಂದು ಆಗುತ್ತದೆ. ಇತರ ರೋಗಗಳೇನೂ ಇಲ್ಲವು. ಈಗ ಬತ್ತದ ಸುಗ್ಗಿಯಾಗಿದ್ದರೂ ಅದರ ಬೆಲೆಯು ಮಾತ್ರ ಕಡಿಮೆಯಾಗಿಲ್ಲವು. ಪ್ರಾಯಶಃ ಹೊರಗಡೆಗೆ ಬತ್ತವು ವಿಶೇಷವಾಗಿ ಸಾಗುತ್ತಿರುವುದರಿಂದ ಬೆಲೆಯು ಹೀಗೆ ಹೆಚ್ಚಿರುವುದೆಂದು ತೋರುತ್ತದೆ.

ಶ್ರೀ ಉತ್ತರಾದಿ ಮಠದ ಗುರುಗಳಾದ ಸತ್ಯಜ್ಞಾನತೀರ್ಥ ಸ್ವಾಮಿಗಳು ಈಗ ರಾಜಮಹೇಂದ್ರದಲ್ಲಿರುವರು ಅಲ್ಲಿ ಅವರಿಗೆ ಪ್ರಾಣಾಪಾಯಕರವಾದ ಅಸ್ವಸ್ಥತೆಯುಂಟಾಗಲು ತಮ್ಮ ಹಿಂದಣ ಸ್ವಾಮಿಗಳ ಮಕ್ಕಳಾದ ವಿದ್ವಾನ್ ಬ್ರಹ್ಮಶ್ರೀ ಸೇತುರಾಮಾಚಾರರಿಗೆ ಶ್ರೀ ಸತ್ಯಧ್ಯಾನತೀರ್ಥ ಸ್ವಾಮಿಗಳವರು ಎಂಬ ನಾಮಕರಣದಿಂದ ತಮ್ಮ ಉತ್ತರಾಧಿಕಾರದ ಪಟ್ಟವನ್ನು ಕಟ್ಟಿದರು. ಈ ನೂತನ ಸ್ವಾಮಿಗಳು ಪೂರ್ಣ ವಿದ್ಯಾವಂತರಾಗಿಯೂ, ಪ್ರಾಚೀನ ವಿದ್ಯಾಭಿಮಾನಿಗಳಾಗಿಯೂ ಇರುತ್ತಾರೆ.

ರಾಜಧಾನಿಯ ದೊಡ್ಡಬೀದಿಯಲ್ಲಿ ಸೇಟರಮಸೀತಿ ಬಳಿಯಿರುವ ಮಿ॥ ಚಂದ್ರಪ್ಪನವರ ಮನೆಯಲ್ಲಿ ೮೯ ನೂರು ರೂ. ಗಳ ಬೆಲೆಬಾಳುವ ಬೆಳ್ಳಿ ಬಂಗಾರದ ಆಭರಣಗಳು ೧೦-೧೫ ದಿನಗಳ ಹಿಂದೆ ಕಳುವಾಗಿದ್ದುವು. ಹೆಡ್ ಕಾನೆಸ್ಟಬಲ್ ಮಿ॥ ಕೊಂಡಪ್ಪನೆಂಬುವರು ಚಂದ್ರಪ್ಪನವರ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದ ಒಬ್ಬ ಹೆಂಗುಸನ್ನು ಅನುಮಾನದಮೇಲೆ ಹಿಡಿದು ಬಹು ಸಾಹಸದಿಂದ ೬-೭ ನೂರು ರೂ. ಗಳ ವರೆಗಿನ ಆಭರಣಗಳನ್ನು ಕಂಡು ಹಿಡಿದಿರುವರು. ಉಳಿದುದನ್ನು ಇಷ್ಟರಲ್ಲೇ ಗೊತ್ತು ಮಾಡತಕ್ಕವರಾಗಿರುವರು.

ಚುಂಚನಕಟ್ಟೆಯ ಜಾತ್ರೆಯು ತಾ॥ ೧೭ ರಲ್ಲಿ ಮುಗಿದಿತು. ಈ ಮೇಳೆ ದನಗಳ ಪರ್ಷೆಗೆ ಬಹುಕಡೆಯಿಂದ ಉತ್ತಮವಾದ ದನಗಳು ವಿಶೇಷವಾಗಿ ಬಂದಿದ್ದು ಮಾರಾಟವಾದುವು. ಕಣಿವೆಯ ಕೆಳಗಿನಿಂದ ಬಂದಿದ್ದ ಜನರು ನೂರಾರು ಜತೆ ದನಗಳನ್ನು ಕೊಂಡುಕೊಂಡು ಹೋದರು. ಈ ಪರ್ಷೆಗಾಗಿ ಸೂಳಗಿರಿಯ ಜಮೀನ್ದಾರರು ಬಂದಿದ್ದು ೫೦೦ ರೂ. ಗಳಲ್ಲಿ ೨ ಜತೆ ಎತ್ತುಗಳನ್ನು ತೆಗೆದುಕೊಂಡು ಹೋದರು.

ಕಳೆದವಾರ ಮುಳಬಾಗಿಲಿನ ಸಮೀಪದಲ್ಲಿ ೮–೧೦ ಜನರು ವಾಸ್ತವ್ಯವಾದ ಪ್ರಯಾಣಿಕರಂತೆ ನಟಿಸಿ ಮಾರ್ಗದಲ್ಲಿ ಹೋಗುತ್ತಿದ್ದ ಒಂದು ಬಂಡಿಯನ್ನು ಬಾಡಿಗೆಗೆ ಗೊತ್ತುಮಾಡಿ ಅದರಲ್ಲಿ ಕುಳಿತುಕೊಂಡು ಕೊಂಚದೂರ ಹೋಗಿ ಆ ಬಂಡಿಯನ್ನು ನಡೆಸುವವನನ್ನು ಕೆಳಗೆ ಕೆಡವಿ ಸ್ಮೃತಿತಪ್ಪುವವರೆಗೂ ಪ್ರಹರಿಸಿ ಅವನನ್ನು ಅಲ್ಲಿಯೇ ಬಿಟ್ಟು ತಾವು ಬಂಡಿಯನ್ನು ಅಟ್ಟಿಕೊಂಡು ಹೋದರು. ಆ ಮಾರ್ಗದಲ್ಲಿ ಹೋಗುತ್ತಿದ್ದವರು ನರಳುತ್ತ ಬಿದ್ದಿದ್ದ ಬಂಡಿಯವನನ್ನು ಕಂಡು ಉಪಚರಿಸಿ ಮುಳಬಾಗಿಲಿಗೆ ಕರೆದುಕೊಂಡು ಬಂದು ನಡೆದ ವೃತ್ತಾಂತವನ್ನು ಪೋಲೀಸರಿಗೆ ತಿಳುಹಿದರು. ಪೋಲೀಸರು ಆ ಕಳ್ಳರನ್ನು ಹುಡುಕುತ್ತಿದ್ದಾರೆ. ಆ ಬಂಡಿಯವನ ಒಂದು ಕಾಲು ಮುರಿದುಹೋಗಿರುವುದು.

ಶ್ರೀಯುವರಾಜ ದಂಪತಿಗಳು ಪರಿವಾರ ಸಮೇತರಾಗಿ ಕಲಕತ್ತಾದಿಂದ ಕಳೆದ ತಾ॥ ೨೭ ರಲ್ಲಿ ಬೆಂಗಳೂರಿಗೆ ದಯಮಾಡಿಸಿ, ಶ್ರೀಯುವರಾಜರು ಮಾತ್ರ ಅಲ್ಲೇ ಇಳಿದು [illegible] ಮೋಟಾರು ಬಂಡಿಯಲ್ಲಿ ಹೊರಟು ಮಧ್ಯಾಹ್ನ ರಾಜಧಾನಿಗೆ ದಯಮಾಡಿಸಿದರು. ಸರಕಾರ್ [illegible] ರಾಜ ಅರಸಿನವರು, ಸರಕಾರ್ ಗೋಪಾಲಕೃಷ್ಣ ಅರಸು ಮತ್ತು ಮಿ॥ ಗಳಾದ ಎಂ. ಪಿ. ಕೃಷ್ಣ ಅರಸಿನವರು, ಮಿ॥ [illegible]

ಮೈಸೂರು ಸ್ಟಾರ್ ಚಂದಾದರವು

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ದೇಶವುದಲ್ಲದೆ ಅಂಚೆಯ ವೆಚ್ಚವನ್ನು ಮೇಲೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೫—೦.
೨ ರಿಂದ ೪ ರವರೆಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯ ದರ

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೨॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು

ನೋಟೀಸ್.

ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.— ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಪೆಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತೆ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯರವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦-೧೦-೦.

ಸಂಪೂರ್ಣಜಾತಕವು.

ಸನ್ಮಿತ್ರರೆ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್‍ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಸ್ಫುಟ ದಶಾದಿ ಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥೆ ಜನ್ಮಸಂಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೫೦-೫೫ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣ ಜಾತಕ ೧ ಕ್ಕೆ ಕ್ರಯ ರೂ ೧೦-೦-೦.

ನಷ್ಟಜಾತಕವು

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವದು ಬಿಟ್ಟುಬಹಳ ತೊಂದರೆ ಪಡುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನೆವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನೆವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯುಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳಶಾಂತಿ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಕಟವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ಕೊಡಲಾಗುತ್ತದೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತಪ್ಪಿಸಿಕೊಂಡವರಿಗೆ ನವಗ್ರಹಶಾಂತಿ ಉಚಿತಕೊಡುತ್ತೇವೆ. ಯುಕ್ತಿಕಮ್ಮತು ವಿ. ಪಿ. ಸಹಿತ ದೊರೆಯುತ್ತದೆ.

ಬಸ್. ಎಂ. ಶಾಸ್ತ್ರಿಗಳು ಗಳಿಕಾವಾಡಿ
[illegible]

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಅರ್ಧನಾರೀಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಕ್ರಯದಿಂದ ಲಗ್ನಪತ್ರಿಕೆಗಳನ್ನು ಮುದ್ರಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

20 **ಸೂಚನಾ.**

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೋಷ್ಣೆಯು ಹೆಚ್ಚಾಗಿ ಸಂತತಿ [illegible] ಯೋಗ್ಯವಾದ ಧಾತುವಾಗುತ್ತದೆ. [illegible] ಅಥವಾ ಯಾಪಾರದಿಂದ [illegible] ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ [illegible]ತ್ತದೆ. ಸ್ತ್ರೀ ಹುಡುಗರಿಗೆ, ಅನ್ನ, ಅಥವಾ ಹಾಲು [illegible] ವಾಗದಿದ್ದರೆ ಹೊಟ್ಟೆಯು ಹೊರ್ಪ್ರವಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ ೧-೧೦-೦ ರೂ. ೨ ಬಾ. ೨-೬-೦ ರೂ. ೬ ಬಾ. ೬-೧೪-೦ ರೂ. ಒಮ್ಮೆಗೆ ೧ ಡಜನ್ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪರ್ಪಟರವು:— ಇದರಿಂದ ಸ್ವಪ್ನಸ್ಖಲನವು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದಾಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬರವಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಬಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವವು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕವಳ ತೇಗುಗಳು ಬರುವದಿಲ್ಲ. ೧ ಬಾ. ೮ ಆಣೆ. ಟ.ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮೀರಜ. (ಇಂಡಿಯಾ)

ಶಿಂಗಿರಾಜಪುರಾಣವಿಜಯಂ 1

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಕಟವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೦೦ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ಪಿಂಚಣಿಬೀದಿ ಮೈಸೂರು.

ಖಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

41

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೆಲಪ್ಪಕೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಕೆತ್ತುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.



ಪ. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂದಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ [illegible]. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. [illegible] ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಸೀಸೆ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವುಗಳ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನೌಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರೆಲ್ಲರಿಗೂ ಗುಣವಾಯಿತೆಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.
(ಸೈ) ರಾಜಮನ್ನಾರುನಾಯುಡು, [illegible]
ಇನ್ಸ್‌ಪೆಕ್ಟರ್, ರಾಮಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಳ್ಳುವವರೆಲ್ಲರಿಗೂ ಗುಣವಾಗಿರುತ್ತದೆ.
(ಸೈ) ಲಕ್ಷ್ಮಣರಾಯರು, ಹಾರ್ಸ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ವೆಂಕಟಾಚಲಪಂಡಿತ[illegible]
[illegible]

೧೯೧೨ ನೆ ಇಸವಿಯ ಪಾಕೆಟ್ಡೈರಿ.

34

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಪಷ್ಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರಗಳಿಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಇತರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

31 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ್ಯ ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಟ್ಟಿಗೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

---

24 **ಉತ್ತಮ ಗ್ರಂಥಗಳು.**

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೬-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗಣೇಶಪುರಿ ಇವರ

ಓರಿಯಂಟಲ್ ಫಾರ್ಮಸಿ, ಚಿಕ್ಕಗಡಿಯಾರದ ಬಳಿ
ಮೈಸೂರು.

75

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೬-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ನೆಯ ಇಸವಿ ಜನವರಿ ತಾ॥ ೨೯ರಿಂದ ೧೯೧೨ನೆಯ ಫೆಬ್ರವರಿ ತಾ॥ ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ನೆಯ ವಿರೋಧಿಕೃತು ಸಂವತ್ಸರದ ಮಾಘ ಶು॥ ದಶಮಿಯಿಂದ ಮಾಘ ಬ॥ ಬಿದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
29	[1] ಸೋ	ದ	25-50	ಕೃತ್ತಿಕೆ	1-30	16
30	[2] ಮಂಗ	ಏ	21-28	ಮೃಗಶಿರ	55-2	17
31	[3] ಬುಧ	ದ್ವಾ	15-30	ಆರಿದ್ರೆ	50-58	18
1	ಗುರು	ತ್ರ	9 40	ಪುನರ್ವಸು	46-38	19
2	[4] ಶುಕ್ರ	ಚ	8 38	ಪುಷ್ಯ	54-52	20
3	ಶನಿ	ಪೌ	52 20	ಆಶ್ಲೇಷೆ	38-50	21
4	[5] ಭಾನು	ಬಿ	47-26	ಮಖೆ	35-28	22

(1) ಮುದುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥ. ಮಾರೀಹಬ್ಬ. (2) ಸರ್ವತ್ರ ಭೀಷ್ಮೈಕಾದಶಿ. (3) ಭೀಷ್ಮದ್ವಾದಶಿ, ಶಿವನಸಮುದ್ರದಲ್ಲಿ ರಂಗನಾಥರಥ. (4) ವ್ಯಾಸ ಪೂರ್ಣಿಮಾ. (5) ಮಾರೀಹಬ್ಬ, ಉತ್ತನಹಳ್ಳಿ ಜಾತ್ರೆ.

ಮೈಸೂರ್ : ಶ್ರೀ. ವಿರೂಪಾಕ್ಷಶಾಸ್ತ್ರಿಗಳಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

---

13 **ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.**

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೬-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾರುಗಾವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District

REGISTERED NO. M. [illegible]

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಂ ಸದಾಪೊರೆಗೆ ಗೌರೀಕಾಂತನುಕಂಪ್ರೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ಸೆರ್ ೧೯೧೨ ನೆಯ ಇಸವಿ ಫೆಬ್ರವರಿ ತಾರೀಖು ೫ ನೆಯ ಸೋಮವಾರ. [ಸಂಚಿಕೆ ೬

ಸಂತೋಷಕರವಾದ ಪ್ರಕಟನೆ! ಸರ್ವರೂ ಓದಿ ಪ್ರೋತ್ಸಾಹಕೊಡಿರಿ !!

2 ☞ **ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚಂಟ್ಸ್, ಮೈಸೂರ್.**

ನಮ್ಮ ಪದಾರ್ಥವನ್ನು ನಾವು ಹೊಗಳಿ ಪ್ರಯೋಜನವೇನು? ನೀವು ಅನೇಕ ಕಡೆಯಿಂದ ತರಿಸಿರಬಹುದು. ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ಸೀಮೆಯಿಂದ ರಖಂವಾರ್ ವಾಚುಗಳ ಹೊಸಗುಡ್ಸು ಬಂದಿರುವದರಿಂದ ಬೆಲೆಯನ್ನು ಬಹಳ ಕಡಮೆಮಾಡಿದ್ದೇವೆ. ಆದ್ದರಿಂದ ಪ್ರತಿನಿತ್ಯವೂ ಅನೇಕ ಆರ್ಡರ್‌ಗಳು ಬಂದು ದರ್ಜಗಟ್ಟಲೆ ಬಿಕರಿಯಾಗುತ್ತಾ ಇವೆ. ಇಂಥಾ ಸಮಯವನ್ನು ಕಳೆದುಕೊಳ್ಳದೆ ಸರ್ವರೂ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ. ವಾಚಿನ ತಪ್ಸಿಲ್:— ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦; ಗ್ಯಾರೆಂಟಿ ರೈಲ್ವೇರೆಗ್ಯುಲೇಟರ್‌ವಾಚ್ ೧ ಕ್ಕೆ ೩-೮-೦; ಸುಂದರವಾದ ಪ್ಲಾಟ್‌ವಾಚ್ ೧ ಕ್ಕೆ ೫-೮-೦; ಕ್ವೀನ್‌ವಾಚ್ ೧ ಕ್ಕೆ ೬-೮-೦; ಪರ್ಲ್‌ವರ್ಲ್ಡ್ ಬ್ರೂಸ್‌ವಾಚ್ ಎಂಬ ಗ್ಯಾರೆಂಟಿಯಾದ ವಾಚ್ ೧ ಕ್ಕೆ ೮-೮-೦, ಒಂದುಸಾರಿ ಕೀಗಕೊಟ್ಟರೆ ೮ ದಿವಸದವರಿಗೂ ವ್ಯತ್ಯಾಸವಿಲ್ಲದೆ ನಡಿಯತಕ್ಕ ವಾಚ್ ೧ ಕ್ಕೆ ೧೦-೮-೦; ನಮ್ಮ ಹಿಂದೂದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೆ ತಿರುಗುತ್ತಾ ಘಂಟೆ ನಿಮಿಷಗಳನ್ನು ಸಹ ತೋರಿಸುವ ವಾಚ್ ೧ ಕ್ಕೆ ೬-೮-೦; ಘಂಟೆ ನಿಮಿಷ ಸೆಕೆಂಡ್ ತೋರಿಸಿ ತಾರೀಖು ಸಹ ತೋರಿಸುವ ವಾಚ್ ೧ ಕ್ಕೆ ೫-೧೨-೦; ಮತ್ತೂ ಮೇಲ್ಕಂಡವೆಲ್ಲಾ ಇದ್ದು ವಾರಾ ತಾರೀಖು ತಿಂಗಳು ಪೂರ್ಣಮಿ ಅಮಾವಾಸ್ಯೆ ಇವೆಲ್ಲಾ ತೋರಿಸುವ ವಾಚ್ ೧ ಕ್ಕೆ ೧೨-೪-೦; ಸುಂದರವಾದ ಟೇಬಲ್ ಗಡಿಯಾರ ಘಂಟೆ ಅರ್ಧಘಂಟೆ ಸಹ ಹೊಡೆಯುತ್ತೆ ಕ್ರಯ ೧ ಕ್ಕೆ ೪-೧೨-೦; ಡಿಟೋ ಅಲಾರಂ ಸಹಾ ಇರುವುದಕ್ಕೆ ೫-೪-೦; ಮನೋಹರವಾಗಿ ಗಾನಮಾಡುವ ಕ್ಲಾಕ್ ೧ ಕ್ಕೆ ೫-೮-೦; ಸಾದಾ ಟೈಂಪೀಸ್ ೧ ಕ್ಕೆ ೧-೪-೦; ಅಲಾರಂ ಇರತಕ್ಕದ್ದು ೨-೪-೦; ಅಮೇರಿಕನ್ ಅರ್ಸೋನಿಯಾ ಅಲಾರಂ ಟೈಂಪೀಸ್ ೧ ಕ್ಕೆ ೩-೮-೦; ಅರ್ಸೋನಿಯಾ ದೊಡ್ಡ ಟೈಂಪೀಸ್ ಘಂಟೆ ಅರ್ಧಘಂಟೆ ಹೊಡೆದು ಅಲಾರಂಸಹ ಇರತಕ್ಕದ್ದು ೬-೧೨-೦; ವಾಚ್‌ಸರಪಣಿಗಳು ೪ ಆಣೆ ಲಾಗಾಯ್ತು ನಾಲ್ಕು ರೂಪಾಯಿ ವರಿಗೂ ಇದೆ ಯಸ್ಟು ಖರೀದಿಯಲ್ಲಿ ಬೇಕಾದರೂ ಖಾತ್ರಿಯಿಂದ ರವಾನಿಸುತ್ತೇವೆ ಬೆಳ್ಳಿ ಸರಪಣಿ ೨॥ ತೊಲ ಲಾಗಾಯಿತು ೪ ತೊಲದ ವರೆಗೆ ಇದೆ. ತೊಲ ೧ ಕ್ಕೆ ೧-೪-೦. ಮತ್ತು ವಾಚ್‌ರಿಪೇರಿಂಗ್ ಡಿಪಾರ್ಟ್‌ಮೆಂಟನ್ನೂ ಸಹ ಇಟ್ಟಿರುತ್ತೇವೆ. ಪರಸ್ಥಳದಿಂದ ರಿಪೇರಿಗಾಗಿ ಬರತಕ್ಕ ವಾಚ್‌ಗಳಿಗೆ ಸರಿಯಾದ ಚಾರ್ಜಿನಿಂದ ರಿಪೇರಿಮಾಡಿ ರವಾನಿಸಲಾಗುತ್ತೆ. ವಾಚಿನ ಬಿಡಿ ಸಾಮಾನುಗಳೂ ವಾಚ್ ರಿಪೇರಿಂಗ್ ಆಯುಧಗಳೂ ರಖಂವಾರ್ ಗಂಧದಬಿಲ್ಲೆ ಊದುಬತ್ತಿ ಅತ್ತರ್ ಪನ್ನೀರು ತಲೆಗೆ ಹಚ್ಚತಕ್ಕ ರಖಂವಾರ್ ಸುವಾಸನೆ ಯಣ್ಣೆಗಳೂ ಸಹ ನಮ್ಮಲ್ಲಿ ದೊರೆಯುತ್ತವೆ. ನಮ್ಮಷ್ಟು ಕಡಮೆ ಬೆಲೆಗೆ ಮತ್ಯಾರಲ್ಲೂ ದೊರೆಯುವದಿಲ್ಲಾ ಖಂಡಿತ ತಿಳಿಯಿರಿ

ರಾತ್ರಿಯವೇಳೆ ಎಂತಹ ಕತ್ತಲೆಯಲ್ಲಿ ನೋಡಿದಾಗ್ಯೂ ದೀಪದ ಅವಶ್ಯವಿಲ್ಲದೆ ಇಷ್ಟೇ ಗಂಟೆಯೆಂಬುವುದನ್ನು ತೋರಿಸುವ ಹೊಸನಮೂನೆವಾಚ್ ಬಂದಿದೆ. ಸ್ಟೀಲ್‌ಕೇಸ್ ವಾಚ್ ೧ ಕ್ಕೆ ೨೪-೦-೦; ಡಿಟೋ ಅಚ್ಚಬೆಳ್ಳಿಯ ಕೇಸ್ ವಾಚ್ ೧ ಕ್ಕೆ ೨೬-೮-೦. ಈ ವಾಚ್ ಬೇಕಾದವರು ೨ ರೂಪಾಯಿ ಅಡ್ವಾನ್ಸಾಗಿ ರವಾನಿಸಬೇಕು. ೫ ರೂ. ಗೆ ೧ ಬೈಸಿಕಲ್, ೪ ಆಣೆಗೆ ೧ ವಾಚ್ ಸಿಕ್ಕುವಹಾಗೆ ಮಾಡಿದೇವೆ. ಈ ವಿಷಯವನ್ನು ತಿಳಿಯಲಪೇಕ್ಷಿಸುವವರು ಅರ್ಧಾಣೆ ಲೇಬಲ್ಲನ್ನು ನಮ್ಮ ವಿಳಾಸಕ್ಕೆ ರವಾನಿಸಬೇಕು.

೧೯೧೨ ನೇ ಇಸವಿ ಕೊಟ್ಟ ಕ್ಯಾಲೆಂಡರ್ ೧ ಕ್ಕೆ ೬ ಪೈ. ೧೦೦ ಕ್ಕೆ ೧-೬-೦ ಟಪಾಲ್ ಖರ್ಚ್ ಮಾಫಿ.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್‌ಮರ್ಚಂಟ್ಸ್ [illegible]
ಮೈಸೂರು.

---

48 **ಊದುಬತ್ತಿಗಳು.**

ವಿಧವಿಧವಾದ ಊದುಬತ್ತಿಗಳು ಸೇರಬಾಳಿ [illegible] ೫-೦-೦; ೩-೦-೧; ೨-೮-೦; ೧-೬-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಾ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೬-೦
ಸಟೀಕನಂದೀವ್ರತ	೦-೬-೦
ಸಟೀಕ ವಿವಾಹವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

25

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೬-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನ ಸಾಧನೆಗಳ ಅಷ್ಟಾವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

[illegible].— ೨ ಆಣೆ. [illegible] ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— [illegible] ವೀರಶೈವ ಗ್ರಂಥಗಳನ್ನು ಪ್ರಕಟಿಸುವ [illegible]

[illegible]

ಸೌಗಂಧಿಕಾ ಪರಿಣಯ.

[ಕಳೆದ ವಾರದ ಶೇಷ.]

ನೋಡುತ್ತಿರಲಾಗ ಆ ಅಸ್ತ್ರವು, ಒಬ್ಬೊಬ್ಬ ರಾಕ್ಷಸನಿಗೆ ಒಬ್ಬೊಬ್ಬ ಸುಗಂಧರಾಜೇಂದ್ರನು ಇದಿರಿಗೆ ನಿಂತು ಯುದ್ಧಂ ಮಾಡುವಂತೆ ಆ ರಾಕ್ಷಸರಿಗೆ ಕಾಣಿಸಿ ಅವರಂ ಅಂಧಕಾರದೊಳ್ ಕಣ್ಣುಬಿಟ್ಟು ನೋಡದಂತೆ ಬೆಪ್ಪುಮಾಡಿರಲು, ಸುಗಂಧರಾಜೇಂದ್ರನು ಅವರಂ ನೋಡಿ ನಗುತ, ಅಸ್ತ್ರದ ಪ್ರಭಾವಕ್ಕೆ ಆಶ್ಚರ್ಯಪಡುತ, ವಾರಿಗೆ ಅಡ್ಡನಾಗಿರುವ ಕೆಲವು ರಾಕ್ಷಸರಂ ಸಂಹರಿಸಿ ಮಾರ್ಗವಂ ಮಾಡಿ, ಮಿಕ್ಕಾದವರಂ ಯಾವಾಗಲಾದರೂ ಸಂಹರಿಸುವ ಎಂದು ಆ ಗಂಧರ್ವಾಸ್ತ್ರವಂ ಉಪಸಂಹಾರವಂ ಮಾಡದೆ ಅಲ್ಲಯೇ ನಿಲ್ಲಿಸಿ, ಅಲ್ಲಿಂದ ಮುಂದಕ್ಕೆ ನಡೆದುಬಂದು ಆ ರಾಕ್ಷಸಾಧಿಪನ ಮನೆಯ ಸುತ್ತಲೂ ಆಕಾಶವಂ ಸೋಂಕುವಂತೆ ಮಾಯಾಸಾಮರ್ಥ್ಯದಿಂ ಮಾಡಿರುವ ಗೋಡೆಯಂ ಕಂಡು ಎತ್ತಲೂ ಬಾಗಿಲಂ ಕಾಣದೆ ತಿರಿತಿರಿಗಿ ನೋಡಿ ಮಂತ್ರಿಯಂ ಕುರಿತು ಎಲೈ ಸುಮತಿಯೇ! ಇದೇನು ಚೋದ್ಯವು, ಈ ಆವರಣಕ್ಕೆ ಬಾಗಿಲೇ ಕಾಣಿಸುವುದಿಲ್ಲವೆಂದು ನುಡಿಯಲಾ ಮಾತಿಗೆ, ಸುಮತಿಯು ಎಲೈ ಪ್ರತಾಪಶಾಲಿಯಾದ ನರೇಂದ್ರನೇ! ಇದು ರಾಕ್ಷಸನ ಕಪಟಕೃತ್ಯವಾಗಿ ತೋರುವುದು. ಅದರಿ ಹೇಗೆಂದರೆ ಈ ಗೋಡೆಯು ಅದೃಶ್ಯವಾಗಿದ್ದರೂ ಒಳಗಿರುವ ಉದ್ಯಾನವನಂಗಳು, ಸರಸ್ಸುಗಳು, ಮಂದಿರಂಗಳು ಮೊದಲಾದುದೆಲ್ಲವೂ ಕಾಣುತಲಿರುವುವು. ಒಳಗೆ ಪೋಗುವಾ ಎಂದರೆ ಪೋಗಲೀಯದೆ ಗೋಡೆಯಂತೆ ಅಡ್ಡವಾಗಿ ತಡೆಯುವುದು. ಅದುದರಿಂದ ಆ ರಾಕ್ಷಸನು ತಾನು ಇಲ್ಲದಾಗ ಮತ್ತಾರಾದರೂ ಬಂದು ಸ್ತ್ರೀರತ್ನವಂ ಅಶ್ವರತ್ನವಂ ಕೂಡಾ ಅಪಹರಿಸಾರೆಂದು ಈ ವಿಚಿತ್ರವಾದ ಕೋಟೆಯಂ ಮಾಡಿರುವನು. ಇದು ವಜ್ರವು ಮೊದಲಾದ ನಿರ್ಮಲ ಮಣಿಗಳಿಂದ ನಿರ್ಮಿತವಾಗಿರುವಲ್ಲಿ ನಿನ್ನ ಬಾಣಪ್ರಯೋಗದಿಂದ ಭಿನ್ನವಾಗುತ್ತಲ್ಲದೆ ನಿಲ್ಲಲಾರದು, ಪರಾಂಬರಿಸಬಹುದೆಂದು ಬಿನ್ನವಿಸಲಾ ಮಾತಂ ಕೇಳಿ, ರಾಜೇಂದ್ರನು ಸಾಧಾರಣವಾದ ಒಂದು ಬಾಣವಂ ತೆಗೆದು ಪ್ರಯೋಗಿಸಲು, ಆ ಬಾಣವು ಆ ವಿಚಿತ್ರವಾದ ಗೋಡೆಗೆ ತಗಲಿ ಖಣಖಣಾ ಎಂದು ಶಬ್ದವಂ ಮಾಡಲು, ಅದಂ ಕೇಳಿ ಇದೇನು ಬಾಣಂಗಳಿಗೆ ಅಶಕ್ಯವಾಗಿರುವಂತೆ ಕಾಣುತಲಿದೆ? ಎಂದು ನುಡಿವ ರಾಜೇಂದ್ರನಂ ಕುರಿತು ಮಂತ್ರಿಯು ಎಲೈ ಸ್ವಾಮಿಯೇ! ಶ್ರೀದೇವಿಯ ಕಟಾಕ್ಷದಿಂದ ಯಾವ ಕಾರ್ಯವು ನಿನಗೆ ಅಶಕ್ಯವಾಗಿರುವುದು? ಈಗ ಈ ಮಾತಂ ಕೇಳಿ ನನಗೆ ಅಚ್ಚರಿಯಾಗುತಲಿದೆ. ಎಂದು ವಿಜ್ಞಾಪನೆಯಂ ಗೆಯ್ಯಲು ಆಗ ರಾಜೇಂದ್ರನು ಮಂತ್ರಿಯು ಪೇಳಿದ ಧೈರ್ಯದ ಮಾತುಗಳ ಜಾತಿಯಂ ತಿಳಿದು, ಎಲೈ ಮಿತ್ರನೇ! ನಾನು ಚತುರ್ದಂತಯುಕ್ತನಾದ ಆನೆಯಂ ತರುವಾಗ ಪ್ಲಕ್ಷದ್ವೀಪದೊಳ್ ಉಗ್ರಬಾಹುವೆಂಬ ರಾಕ್ಷಸನೊಡನೆ ಕಾಳಗವಂ ಕಾದುವ ಕಾಲದಲ್ಲಿ ಅವನು ಮಾಡಿದ ನಾನಾವಿಧಂಗಳಾದ ಮಾಯಾವಿದ್ಯೆಗಳಂ ನೋಡಿರುವೆನು. ಅದಂ ನೀನೂ ಕಂಡಿರುವೆಯಷ್ಟೆ. ಈ ಜಂಬೂಮಾರುತನ ಮಾಯೆಯು ರಾಕ್ಷಸರ ಒಳಗಾಗಿ ಬಲವತ್ತರವಾಗಿ ಕಾಣುತಲಿದೆ. ಆದರೇನಾಯಿತು, ನಮ್ಮ ಛಾಯಾಗುಪ್ತನು ಉಪರಿಭಾಗದೊಳ್ ಬಂದು ಈ ಪುರವಂ ಪ್ರವೇಶಿಸಿದಂತೆ ನಾವೂ ಪೋಗಬಹುದು. ಅದು ಈಗಿನ ಕಾರ್ಯವಲ್ಲ ನಾನು ಬಂದಮೇಲೆ ಶತ್ರುವಂ, ಅವನ ಪುರಜಂ, ಅವನ ಪರಿವಾರವೆಲ್ಲವಂ ನಾಶವಂ ಗೈಸಿದಲ್ಲದೇ ಪ್ರಕೃತ ಕಾರ್ಯಮಾತ್ರವಂ ಮಾಡಿಕೊಂಡು ಪೋಗುವುದು ರಾಜರುಗಳ ಪರಾಕ್ರಮದ ಲಕ್ಷಣವಲ್ಲವೆಂದು ತಿಳಿದು ಈ ಹಿಂದಿನ ಐದು ವಿಧಂಗಳಾದ ಜಲಾವರಣವಂ, ಅಗ್ನ್ಯಾವರಣವಂ, ಸರ್ಪಾವರಣವಂ, ಸಿಂಹಾವರಣವಂ, ರಾಕ್ಷಸಾವರಣವಂ ಕೂಡಾ ಇಲ್ಲದಂತೆ ಮಾಡಿ ಬಂದಿರುವೆನು. ಅವುಗಳಂತೆ ಈ ದುರ್ಭೇದ್ಯವಾದ ವಜ್ರಾವರಣವಂ ಕೂಡಾ ಜಗನ್ಮಾತೆಯಾದ ಶ್ರೀದೇವಿಯ ಪರಿಪೂರ್ಣ ಕಟಾಕ್ಷದಿಂದ ಪುಡಿಪುಡಿಯಾಗಿ ಮಾಡುವೆನು. ನೋಡುವನಾಗು. ಮತ್ತೂ ನೀನು ಪ್ರಾಕೃತ ಜನದಂತೆ ಭಯಗೊಳ್ಳಬೇಡವೆಂದು ಧೈರ್ಯವಂ ಪೇಳಿ ತನ್ನ ಕೈಯೊಳಿದ್ದ ಬಿಲ್ಲು ಬತ್ತಳಿಕೆಗಳಂ ಮಂತ್ರಿಯಾದ ಸುಮತಿಯ ಕೈಯೊಳ್ ಕೊಟ್ಟು, ಎಲೈ ಮಿತ್ರನೇ! ನೀನು ಇಲ್ಲಿಯೇ ಇದ್ದುಕೊಂಡು ಈಗ ನಡೆಯುವ ಆಶ್ಚರ್ಯಕರವಾದ ಈ ವಿನೋದವಂ ನೋಡೆಂದು ಪೇಳಿ, ಮುಹೂರ್ತ ಮಾತ್ರ ದೇವಿಯ ಧ್ಯಾನವಂ ಗೈದು, ಅಷ್ಟಸಿದ್ಧಿಗಳೊಳ್ ಮುಖ್ಯವಾದ ಅಣಿಮಾ ಎಂಬ ಸಿದ್ಧಿಯಂ ನೆನೆದು, ಅಕ್ಷಣದಲ್ಲಿಯೇ ಅಣುರೂಪನಾಗಿ ಸಕಲ ಸೂಕ್ಷ್ಮ ಪದಾರ್ಥಂಗಳಂ ಭೇದಿಸಿ ಒಳಪುಗುವ ಸಾಮರ್ಥ್ಯವಂ ಧರಿಸಿ ಆ ವಜ್ರಪುರಿಯ ಮಾಣಿಕ್ಯನಿರ್ಮಿತವಾದ, ಮತ್ತೊಬ್ಬರಿಂದ ಭೇದಿಸಲಶಕ್ಯವಾದ ವಜ್ರಾವರಣದ ಗೋಡೆಗಳಂ ಭೇದಿಸಿ, ಒಳಕೆ ಮಹಿಮಾ ಎಂಬ ಸಿದ್ಧಿಯಂ ಸ್ಮರಿಸಿದ ಮಾತ್ರದಿಂದಲೇ ಒಳಒಳಗೆ ಬೆಳೆದು [illegible] ಶರೀರನಾದ ತನ್ನ ಶರೀರದಿಂದ ವಜ್ರಾವರಣವೆಲ್ಲವಂ [illegible] ಪುಡಿಪುಡಿಯಾಗುವ ಕಾಲ[illegible] ಕೋಟಿ ಸಿಡಿಲುಗಳು ಒಂದೇ ಕಾಲದೊಳ್ ಎರಗಿದಂತೆ ಘೋರವಾದ ಶಬ್ದವುಂಟಾಗಿ ಅದರಿಂ ಭೂಮಿಯೆಲ್ಲವೂ ಅಲ್ಲಾಡಿ, ಪರ್ವತಂಗಳೆಲ್ಲವೂ ಗಡಗಡನೆ ನಡುಗಿ ಗುಹೆಗಳೊಳ್ ಪ್ರತಿಧ್ವನಿಗಳುಂಟಾಗಲು, ಆಗ ಸುಮತಿಯು ಈ ಧ್ವನಿಯಂ ಕೇಳಿ ಪುಡಿಯಾಗುತ್ತಿರುವ ವಜ್ರದ ಗೋಡೆಯನ್ನು ನೋಡಿ ಭೀತನಾಗಿ ಇದೇನು ಉತ್ಪಾತವೋ ಎಂದು ಚಿಂತಿಸಿ ತನ್ನ ಮನದೊಳ್ ಮಹಾರಾಜನಾದ ಸುಗಂಧರಾಜೇಂದ್ರನು ನನಗೆ ತಿಳಿಯದಂತೆ ತಿರಸ್ಕರಣೀ ಎಂಬ ವಿದ್ಯೆಯಂ ಮಾಡಿದನೋ, ಅಥವಾ ನನಗೆ ಅದೃಶ್ಯನಾಗಿ ಈ ಪುರದೊಳಗಿರುವ ರಾಕ್ಷಸರೊಡನೆ ಘೋರಯುದ್ಧವಂ ಮಾಡುವನೋ? ಜಯಾಪಜಯಂಗಳು ಎಂತಿರುವುವೋ ಇದನ್ನ ನಾನು ಹೇಗೆ ತಿಳಿಯುವೆನು? ಇವರ ಪರಿಯಂ ಛಾಯಾಗುಪ್ತನಂ ಕರೆದು ಕೇಳುವಾ ಎಂದರೆ, ಅವನು ರಾಜಾಜ್ಞಾನುಸಾರವಾಗಿ ಜಂಬೂಮಾರುತನು ಬರುವ ಮಾರ್ಗದೊಳ್ ಕಾದಿರುವನು. ಇಂತಲ್ಲದೆ ರಾಯನ ಯೋಗಕ್ಷೇಮಂಗಳಂ ತಿಳಿದು ಹಿತವಂ ಬಯಸುತ್ತಿರುವುದೇ ಮಂತ್ರಿಗೆ ಲಕ್ಷಣವು. ಈಗ ನಾನು ಏನು ಹಿತವಂ ಮಾಡುವೆನು? ದೇವಾಂಶಪುರುಷನಾದವಂಗೆ ನನ್ನ ಸಹಾಯವೇಕೆಂದು ಧೈರ್ಯವಂ ಭಯವಂಗೊಂಡು ದೇವಿಯಂ ಧ್ಯಾನಿಸುತ್ತಿರಲು, ಆಗ ರಾಜೇಂದ್ರನು ಮೊದಲಿನಂತೆ ಮನುಷ್ಯನಾಗಿ, ಮೇಘಮಂಡಲದಿಂ ಬರುವ ಪೂರ್ಣಚಂದ್ರನಂತೆ ಇದಿರಾಗಿ ಬರಲು, ಸುಮತಿಯು ಆ ರಾಯನಂ ಕಂಡು ಅತಿ ಸಂತೋಷಂಗೊಂಡು ಸಾಷ್ಟಾಂಗವೆರಗಿ ಸ್ವಾಮಿಯೇ! ನೀನು ದೇವಾಂಶ ಪುರುಷನೆಂದರಿತಿರುವೆನು ಈಗ ನಿನ್ನ ಮಹಿಮೆಯಂ ಕಂಡು, ತ್ರಿಮೂರ್ತಿಗಳೊಳ್ ಒಂದು ಮೂರ್ತಿಯೊ! ಅಲ್ಲದೆ ತ್ರಿಲೋಕಾಧಿಪತಿಯಾದ ದೇವೇಂದ್ರನೇ ಅವತಾರವಂ ಮಾಡಿ ನಿನ್ನ ರೂಪದಿಂದಿರುವನೆಂದು ತಿಳಿದಿರುವೆನೆಂದು ನುಡಿಯಲು, ರಾಜೇಂದ್ರನು ಮಿತ್ರನಾದ ಸುಮತಿಯಂ ಕರೆದುಕೊಂಡು ಬಂದು ಬಿದ್ದಿರುವ ಆವರಣವಂ ತೋರಿ, ಜಂಬೂಮಾರುತನ ಮಂದಿರದ ಪುರೋಭಾಗದೊಳ್ ನೂರುಬಣ್ಣದ ಸುವರ್ಣದ ಭೂಮಿಯಂ, ಅಲ್ಲಿರುವ ಮೊಲ್ಲೆ, ಮಲ್ಲಿಗೆ, ಸುರಗಿ, ಸುರಹೊನ್ನೆ, ಸಂಪಿಗೆ, ದವನ ಮೊದಲಾದ ಚಿನ್ನದ ಲತೆಗಳಂ ಕಂಡು ಚೌಕವಾದ ವಜ್ರದ ದಿಂಡುಗಳಂ, ಪಚ್ಚೆಯ ಹಾಸುಗಲ್ಲುಗಳಂ, ಕುರುವಿಂದದ ಜಗತಿಗಳಿಂದ ಕಟ್ಟಿ ಚಿನ್ನದ ಗಾರೆಯಂ ಮಾಡಿ, ವಿಶ್ವಕರ್ಮನಿಂದ ನಿರ್ಮಿತಮಾಗಿ, ನಿರ್ಮಲೋದಕದಿಂದ ಪೂರ್ಣವಾಗಿ, ಸುವರ್ಣ ಪಕ್ಷಗಳುಳ್ಳ ರಾಜಹಂಸೆಗಳಂ, ಸುವರ್ಣ ಕಮಲಗಳಲ್ಲಿರುವ ಮಕರಂದವಂ ಸವಿದು ಸರಸವಾದ ಗಾನವಂ ಮಾಡುತ್ತಿರುವ ತುಂಬಿಗಳಂ ಕೂಡಿ, ಭೂಮಿಯೆಂಬ ಕಾಂತೆಯ ಹೃದಯದಲ್ಲಿರುವ ರತ್ನದ ಪದಕವೋ ಎಂಬಂತೆ ಗಗನಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡುವುದಕ್ಕೆ ಮಡಗಿರ್ದ ಕನ್ನಡಿಯೋ ಎಂಬಂತೆ ಕಾಣುತಲಿರುವ ಅಮೃತ ಸರಸ್ಸಂ ಕಂಡು, (ಸಶೇಷ.)

« ಪರದ್ರವ್ಯಾಣಿ ಲೋಷ್ಟವತ್ »

ಎಂದರೆ ಪರರಸ್ವತ್ತು ಮಣ್ಣು ಹೆಂಟೆಗೆ ಸಮವಾದುದು.

ಎಂಬ ನೀತಿಯು ನಮ್ಮ ಆರ್ಯರಿಂದ ಪ್ರೋಕ್ತವಾಗಿದೆ. ಇದರಂತೆ ಮನಃಪೂರ್ವಕವಾಗಿ ನಡೆಯತಕ್ಕವರಾರೋ ಅವರೇ ಮಹನೀಯರು; ಅವರೇ ಪೂಜ್ಯರು; ಅವರೇ ಲೋಕವಂದ್ಯರು. ಈ ಅಭಿಪ್ರಾಯವಿಲ್ಲದವರೇ ರಾಕ್ಷಸರೆನ್ನಿಸಿಕೊಳ್ಳುವರು. ಅದುದರಿಂದಲೇ ಭರ್ತೃಹರಿ ಮಹಾಕವಿಯು « ಸ್ವಾರ್ಥಕೇತಾಂ ಪರಾರ್ಥವ ವಿಘಾತಿಸುವರ್ ನರರಾಕ್ಷಸರ್ಗದಾ » ಎಂದು ಹೇಳಿರುವನು. ಆಧುನಿಕ ಕಾಲದ ನವನಾಗರಿಕ ಶಿಖಾಮಣಿಗಳೊಳಗೆ ಶಿರೋಲೇಖನದಲ್ಲಿ ಲೇಖಿಸಿರುವ ನೀತಿಯಂತೆ ನಡೆವವರು ಸಿಕ್ಕುವುದು ದುರ್ಲಭವೆಂದರೆ ವಾಚಕರು ಲೇಖಕನ ಮೇಲೆ ಕೋಪಗೊಳ್ಳುವರೊ? ಹಾಗೆ ಕೋಪಿಸಬಾರದು. ಒಂದುನೂರು ಜನರಲ್ಲಿ ಹತ್ತು ಮಂದಿಯಾದರೂ ಅಂತಹವರು ದೊರೆತರೆ ಸಾಕು. ಅಷ್ಟುಮಾತ್ರವೂ ಕಾಣಬಾರದಿರುವ ಕಾರಣದಿಂದಲೇ ದುರ್ಲಭವೆಂದುದು. ಇದರಿಂದ ಸಹಜವಾದ ಸನ್ಮಾರ್ಗಪ್ರವರ್ತಕರಾರೂ ನಮ್ಮನ್ನು ಕ್ರೂರದೃಷ್ಟಿಯಿಂದ ನೋಡುವುದಿಲ್ಲವೆಂಬ ನಂಬುಗೆಯಿದೆ. ಅವರು ಸ್ವಜವಸ್ಥರಿತವರು. ನಮ್ಮ ಲೇಖನಿಯು ಅತ್ತಮರನ್ನು ನಿಂದಿಸುವ ಲೇಖನವನ್ನು ಲೇಖಿಸುವದಿಲ್ಲವು. ಇದಂತಿರಲಿ.

ಈಗಿನ ಕಾಲಕ್ಕಿಂತಲೂ ನಮ್ಮ ಆರ್ಯರ ಪುರಾತನ ಕಾಲದಲ್ಲಿದ್ದವರು ಎಷ್ಟರಮಟ್ಟಿಗೆ « ನಿಸ್ಪೃಹತೆ » ಯುಳ್ಳವರಾಗಿದ್ದರೆಂಬುದನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂಬ ಇಷ್ಟವಿದೆ. ಅದನ್ನು ಒಂದು ಇತಿಹಾಸದಿಂದ ತಿಳಿಸಲಪೇಕ್ಷಿಸುವೆವು.

ನಮ್ಮವರ ಇತಿಹಾಸಗಳಲ್ಲಿ ' ರಾವಣ ' ನೆಂಬುವನ ಹೆಸರನ್ನೂ, ಅತನ ನಡತೆಯನ್ನೂ, ಅದರ ಪರಿಣಾಮವನ್ನೂ ಕೇಳದಿರುವವರೇ ಇಲ್ಲವೆನ್ನಬಹುದು. ಪರದ್ರವ್ಯ ಪರದಾರ [illegible] ಮುಂತಾದುವುಗಳಲ್ಲಿ ಅತ್ಯಾಸಕ್ತಚಿತ್ತನಾದುದರಿಂದಲೇ [illegible] [illegible] ರಾಕ್ಷಸನನ್ನಾಗಿ [illegible] ಅಂತಹ [illegible] ಧವನನ್ನು ತಿದ್ದರು. ಇವನು ಅನೇಕ ದಿನಗಳು ರಾಜ್ಯಭಾರವನ್ನು ಮಾಡಿದನು; ಅನೇಕ ದೇಶಗಳನ್ನು ಗೆದ್ದನು. ಒಂದಾನೊಂದು ವೇಳೆ ತನ್ನ ದಿಗ್ವಿಜಯಯಾತ್ರೆಗೆ ಸ್ಮಾರಕವಾದ ಏನಾದರೊಂದನ್ನು ತನ್ನ ರಾಜಧಾನಿಯಾದ ಲಂಕೆಯಲ್ಲಿ ತಂದಿಡಬೇಕೆಂದು ನಿಶ್ಚಯಿಸಿದನು. ಅವನಿಗೆ ಋಷಿಗಳ ತಪವನ್ನು ಕೆಡಿಸುವುದರಲ್ಲಿಯೂ, ಯಜ್ಞಾದಿಗಳನ್ನು ನಾಶಮಾಡುವುದರಲ್ಲಿಯೂ ಬಹು ಅಪೇಕ್ಷೆ. ಒಂದಾನೊಂದು ಕಾಲದಲ್ಲಿ ದಂಡಕಾರಣ್ಯಕ್ಕೆ ಬಂದು, ಅಲ್ಲಿನ ಋಷಿಗಳೆಲ್ಲರನ್ನೂ ಒಂದುಗೂಡಿಸಿ ಅವರ ದೇಹಗಳಲ್ಲಿ ಸ್ವಲ್ಪಸ್ವಲ್ಪ ರಕ್ತವನ್ನು ಕೊಡುವಂತೆ ಕೇಳಿದನು. ಅವರು ಒಪ್ಪಿ ಕೊಡದಿರಲು, ಮುಳ್ಳುಗಳಿಂದ ಅವರನ್ನು ಚುಚ್ಚಿ ಸ್ವಲ್ಪಸ್ವಲ್ಪ ರಕ್ತವನ್ನು ಸುರಿಸಿಕೊಂಡು ಬರುವಂತೆ ತನ್ನ ಸೇವಕರಿಗೆ ಅಜ್ಞಾಪಿಸಿದನು. ಅವರು ಅದರಂತೆಯೇ ಮಾಡಿ ಒಂದು ಕೊಂಭದ ತುಂಬ ರಕ್ತವನ್ನು ತಂದು ಮುಂದಿರಿಸಿದರು. ಆ ಋಷಿಗಳೆಲ್ಲರೂ « ಇದರ ದೆಸೆಯಿಂದಲೇ ನಿನ್ನ ವಂಶಸ್ಥರೊಡನೆ ನೀನೂ ನಾಶವಾಗುವೆ. » ಎಂದು ಶಾಪವನ್ನಿಟ್ಟರು. ಈ ಕೊಂಭವೇ ತನ್ನ « ಜಯಸ್ಮಾರಕ ವಸ್ತು. » ಎಂದು ಅದನ್ನು ತನ್ನ ಮುಂದಿಕ್ಕಿ ತಂದು ತನ್ನ ಹೆಂಡತಿಯಾದ ಮಂಡೋದರಿಯ ಕೈಗೆ ಕೊಟ್ಟು, ಭದ್ರವಾಗಿಟ್ಟು ಇರುವುದೆಂದು ಹೇಳಿದನು. ಆಕೆಯು ಅದರಂತೆಯೇ ಇರಿಸಿದ್ದಳು.

ಈ ಲೋಕಕಂಟಕನಾದ ರಾವಣನು ಯುದ್ಧಯಾತ್ರೆಗಾಗಿ ಪ್ರಯಾಣಮಾಡಿದನು. ಅಲ್ಲಲ್ಲಿ ಸಿಕ್ಕಿದ ಪತಿವ್ರತೆಯರ ವ್ರತಗಳನ್ನು ಹಾಳುಮಾಡುತ್ತ ಮತ್ತೂ ಎಲ್ಲಾ ಕಡೆಯೂ ಹಾವಳಿಯನ್ನು ಮಾಡುತ್ತ ಬಹುಕಾಲದವರೆಗೆ ಪಟ್ಟಣಕ್ಕೆ ಬರಲಿಲ್ಲವು. ಅನೇಕ ದಿನಗಳಮೇಲೆ ಪತ್ನಿಯಾದ ಮಂಡೋದರಿಯು ತನ್ನ ಪತಿಯ ದುರಾಚಾರಗಳನ್ನು ಕೇಳುವುದರಿಂದಲೂ, ಅತನ ಸಂದರ್ಶನವಿಲ್ಲದುದರಿಂದಲೂ ಬಹುವ್ಯಸನಪೀಡಿತಳಾಗಿ ಇನ್ನು ಬದುಕಿರಬಾರದೆಂದು ನಿಶ್ಚಯಿಸಿ, ಮೊದಲು ತನ್ನ ಪತಿಯು ತನ್ನ ಕೈಗೆ ತಂದುಕೊಟ್ಟಿದ್ದ ಕೊಂಭದ ಮುಚ್ಚುಗೆಯನ್ನು ಎತ್ತಿಕ್ಕೋ ತೆಗೆಯಲು, ಅದರ ತುಂಬಾಯಿದ್ದ ರಕ್ತವನ್ನು ಕಂಡು ' ಈ ನಂಜಿನ ದೆಸೆಯಿಂದಲೇ ನನ್ನನ್ನು ನೀಗಿ ತಾನು ಅನ್ಯಸ್ತ್ರೀಲೋಲನಾಗಿರಬೇಕೆಂದು ಈ ನಂಜನ್ನು ನನ್ನ ಕೈಗೆ ಪತಿಯು ತಂದುಕೊಟ್ಟಿರುವನು. ಇನ್ನು ಜೀವಿಸಿರುವುದು ಸರಿಯಲ್ಲವು. " ಎಂದು ಅದನ್ನು ಕುಡಿದುಬಿಟ್ಟಳು. ಅದರಿಂದ ಆಕೆಯು ಸಾಯಲಿಲ್ಲವು. ಅದೇ ಬೀಜವಾಯಿತು. ಕೂಡಲೆ ಗರ್ಭಸೂಚನೆಯಾಯಿತು. ಈ ವ್ಯಸನದಲ್ಲಿಯೇ ಒಂಬತ್ತು ತಿಂಗಳುಗಳಾದುವು. ಇನ್ನು ಪ್ರಸವಕಾಲವೂ ಸನ್ನಿಹಿತವಾಯಿತು. ಪತಿಯು ಪರದೇಶಕ್ಕೆ ಹೋಗಿರುವಾಗ ಎಷ್ಟೋ ದಿವಸಗಳ ಮೇಲೆ ಸತಿಯು ಗರ್ಭವನ್ನು ತಾಳಿದರೆ ಲೋಕಾಪವಾದವಲ್ಲವೆ? ಇದನ್ನು ಸಹಿಸುವುದೆಂತೆಂಬ ಯೋಚನೆಯುಂಟಾಯಿತು. ದುಃಖವಿಮ್ಮಡಿಸಿತು. ಇನ್ನು ಸ್ವಸ್ಥಾನದಲ್ಲಿರುವುದು ಸರಿಯಲ್ಲವೆಂದು ತಿಳಿದು ಕೂಡಲೇ ವಿಮಾನಾರೂಢಳಾಗಿ ಪ್ರಯಾಣಮಾಡಿದಳು. ಒಂದುಕಡೆ ಪ್ರಸವಿಸಿದಳು; ಹೆಣ್ಣುಮಗು; ಅದನ್ನೇನುಮಾಡಬೇಕೆಂದು ತೋರದೆ ಒಂದು ಪೆಟ್ಟಿಗೆಯಲ್ಲಿ ಅದನ್ನು ಭದ್ರಪಡಿಸಿ ಒಂದು ಸ್ಥಳದಲ್ಲಿ ಗುಣಿಯನ್ನು ತೋಡಿ, ಅದನ್ನು ಭೂಮಿಯಲ್ಲಿ ಹೂಳಿಟ್ಟು ಮೊದಲಿನಂತೆ ದಾರಿಗಳಾದಳು.

ಅಹ! ಈಕೆಯದು ಎಂತಹ ಕಠಿಣಚಿತ್ತ? ಇಂತಹ ಕೃತ್ಯಗಳನ್ನು ಮಾಡುತ್ತಿದ್ದುದರಿಂದಲೇ, ಇವರು ರಾಕ್ಷಸಿಯರೆನ್ನಿಸಿಕೊಳ್ಳುತ್ತಿದ್ದರು. ಈಗಲೂ ಕೆಲವು ನೀಚರು ಇಂತಹ ಕೃತ್ಯಗಳನ್ನು ಮಾಡುತ್ತಿರುವುದನ್ನು ಕೇಳುತ್ತೇವೆ. ಇವರೂ ರಾಕ್ಷಸಿಯರೇ ಅಲ್ಲದೆ ಮತ್ತೆ ಬೇರೆ ಅಲ್ಲವೆಂಬುವುದು ಇಂತಹ ದೃಷ್ಟಾಂತಗಳಿಂದ ಊಹಿಸಬಹುದು. ಇದನ್ನಿಷ್ಟಕ್ಕೇ ನಿಲ್ಲಿಸುವ.

ಆ ಪೆಟ್ಟಿಗೆಯು ಸ್ಥಾಪಿಸಲ್ಪಟ್ಟಿದ್ದ ಪ್ರದೇಶವು ಜನಕನೆಂಬ ದೊರೆಯಿಂದ ಒಬ್ಬ ಬ್ರಾಹ್ಮಣನಿಗೆ ದಾನವಾಗಿ ಕೊಡಲ್ಪಟ್ಟಿತ್ತು. ಆ ಬ್ರಾಹ್ಮಣನು ಅದನ್ನು ಒಬ್ಬ ಒಕ್ಕಲಿಗನಿಗೆ ವ್ಯವಸಾಯಮಾಡಲಿಕ್ಕೆ ಕೊಟ್ಟಿದ್ದನು. ವರ್ಷಾಕಾಲ. ಮುಂದು ಒಂದು ಭೂಮಿಯನ್ನು ಉಳುವುದಕ್ಕೆ ಸುಕಾಲವಾಗಿದ್ದಿತು. ಆ ಒಕ್ಕಲಿಗನು ನೇಗಿಲಿನಿಂದ ಹೊಲವನ್ನು ಉಳುತ್ತಿರುವಾಗ ಆ ಪೆಟ್ಟಿಗೆಯು ಸಿಕ್ಕಿತು. ಆ ಒಕ್ಕಲಿಗನು ಅದನ್ನು ಹೊರಕ್ಕೆ ತೆಗೆದನು. ಅದು ಒಬ್ಬನು ಎತ್ತುವಷ್ಟು ಮಾತ್ರ ಭಾರವಾಗಿದ್ದಿತು. ಅದನ್ನು ತನ್ನ ಧಣಿಯಾದ ಬ್ರಾಹ್ಮಣನ ಬಳಿಗೆ ತಂದಿರಿಸಿ « ಸ್ವಾಮಿ! ನಿಮ್ಮ ನೆಲದಲ್ಲಿ ಈ ಪೆಟ್ಟಿಗೆಯು ಸಿಕ್ಕಿತು; ತೆಗೆದುಕೊಳ್ಳಿರಿ. » ಎಂದು ಅರ್ಪಿಸಿದನು. ಎಲೆ ಅಧುನಿಕ ನವನಾಗರಿಕ ಮತಿವಂತರಾದ ಒಕ್ಕಲಿಗ ಬಂಧುಗಳೆ! ಈಗ ನಿಮ್ಮ ಮನದಲ್ಲಿ ಈ ಅಭಿಪ್ರಾಯವು ಲೇಶಮಾತ್ರವಾದರೂ ಇರುವುದೆ? ಹಾಗೆ ನಿಮ್ಮಲ್ಲಿ ಅರಿಗಿರುವುದೋ ಅವರಿಗೆ ಸಕಲ ಸಂಪದವೂ ಪ್ರಾಪ್ತವಾಗಲಿ.

ಆ ಬಳಿಕ ಬ್ರಾಹ್ಮಣನು ಒಕ್ಕಲಿಗನನ್ನು ನೋಡಿ— « ಅಯ್ಯಾ! ಇದು ನನಗೆ ಬೇಡ; ನಿನಗೆ ಸಿಕ್ಕಿದ ಒಡವೆಯು ನಿನ್ನದಲ್ಲದೆ, ನನಗೆ ಹೇಗೆ ಬಂದೀತು ಓ ಪರರೊಡವೆಗೆ ಆಶಿಸುವುದು ಧರ್ಮವಲ್ಲವು » ಎನ್ನಲು, ಆ ಒಕ್ಕಲಿಗನು— « ಸ್ವಾಮಿ! ನಿಮ್ಮ ನೆಲದಲ್ಲಿದ್ದುದು ನಿಮ್ಮದು; ನಾನು ಕಷ್ಟಪಟ್ಟು ಬೆಳೆದುದರಲ್ಲಿ ರಾಜಾಯವನ್ನು ಕಳೆದಮೇಲೆ ಉಳಿದುದೇ ನನ್ನದಲ್ಲದೆ, ಕಷ್ಟವಿಲ್ಲದೆ ಸಿಕ್ಕಿದುದು ನನ್ನದಲ್ಲವು. » ಎಂದುದನ್ನು ಬ್ರಾಹ್ಮಣನು ಕೇಳಿ, ಅಯ್ಯಾ! ಇದು ನಿನಗೆ ಸಿಕ್ಕಿದೆ; ಇದರಲ್ಲಿ ಏನಾದರೂ ಇರಲಿ. ಅದು ನಿನ್ನದೇ ಸರಿ. ರಾಜನು ನನಗೆ ನೆಲವನ್ನು ಫಲಾನುಭವಕ್ಕೆ ಕೊಟ್ಟಿರುವನಲ್ಲದೆ, ಇದರಲ್ಲಿ ಸಿಕ್ಕಿದುದನ್ನು ತೆಗೆದುಕೊಳ್ಳುವಂತೆ ನನಗೆ ಹೇಳಿಲ್ಲವು. ನಿನಗೆ ಸಿಕ್ಕಿದುದನ್ನು ನೀನೇ ತೆಗೆದುಕೊ; ನನಗೆ ನಿಜವಾಗಿಯೂ ಬೇಡ ಎಂದನು. ಅಯ್ಯಾ ಆಧುನಿಕ ಕಾಲದ ಬ್ರಾಹ್ಮಣ ಮಹನೀಯರೆ! ಇದೆಂತಹ ಬುದ್ಧಿಯು? ಅತನನ್ನು ಮತಿಹೀನನೆಂದು ದೂರುವಿರೋ? ಅಥವಾ ನಿಸ್ಪೃಹನೆನ್ನುವಿರೊ? ಈ ನಿಸ್ಪೃಹಮತಿಯು ನಿಮ್ಮಲ್ಲಿ ಶಾಶ್ವತವಾಗಿರಬೇಕು.

ಆ ಬ್ರಾಹ್ಮಣನು ತೆಗೆದುಕೊಳ್ಳದೆಯೂ, ಒಕ್ಕಲಿಗನು ಬಿಡದೆಯೂ ಸ್ವಲ್ಪಹೊತ್ತು ಸಂಭಾಷಣೆಗಳು ನಡೆದು ಕೊನೆಗೆ ರಾಜನಲ್ಲಿ ತೆಗೆದುಕೊಂಡು ಹೋಗಿ ಒಪ್ಪಿಸಬೇಕೆಂದು ನಿಶ್ಚಯಿಸಲ್ಪಟ್ಟಿತು. ಇಬ್ಬರೂ ಪೆಟ್ಟಿಗೆಯನ್ನು ರಾಜನ ಮುಂದಿರಿಸಿ, ತಂತಮ್ಮ ವಿವಾದವನ್ನು ಹೇಳಿಕೊಂಡರು. ಮತ್ತೂ ಬ್ರಾಹ್ಮಣನು— ಅಯ್ಯಾ ದೊರೆಯೆ! ನೆಲವು ನಿನ್ನದಾದುದರಿಂದ, ಇದನ್ನು ನೀನೇ ತೆಗೆದುಕೊಳ್ಳಬೇಕೆಂದು ಹೇಳಿದನು. ರಾಜನು— ಅಯ್ಯಾ ಬ್ರಾಹ್ಮಣೋತ್ತಮ! ಭೂಮಿಯನ್ನು ನಿನಗೇ ಕೊಟ್ಟಿರುವೆನು ಅದರಲ್ಲಿನ ಎಲ್ಲಾ ಪ್ರಯೋಜನಗಳೂ ನಿನಗೇ ಸೇರತಕ್ಕವು; ನನಗೆ ಆವಶ್ಯಕವಿಲ್ಲವು; ನೀನೇ ತೆಗೆದುಕೊಂಡು ಹೋಗು ಎನ್ನಲು, « ರಾಜನೆ! ಏನು ಹೀಗೆನ್ನುವೆ? ಭೂಮಿಯ ಬೆಳೆಯನ್ನು ಮಾತ್ರ ನಾನು ಅನುಭವಿಸಬೇಕಲ್ಲದೆ, ಭೂಗರ್ಭದಲ್ಲಿ ದೊರೆಯುವ ವಸ್ತುಗಳು ದೊರೆಗೆ ಸೇರತಕ್ಕವುಗಳು. » ಎಂಬ ಶಾಸ್ತ್ರವಿದೆ. ಆದುದರಿಂದ ಇದು ನಿನಗೇ ಸೇರತಕ್ಕದು ಎಂದ ಬ್ರಾಹ್ಮಣನ ಮಾತನ್ನು ಸಮೀಪದಲ್ಲಿದ್ದ ಮಂತ್ರಿಯು ಕೇಳಿ ಆಲೋಚಿಸಿ ಮಹಾರಾಜನನ್ನು ನೋಡಿ— « ಸ್ವಾಮಿ! ಈ ಬ್ರಾಹ್ಮಣನ ವಚನವು ನಿಶ್ಚಯವಾದುದು. ಇದರಲ್ಲಿ ಇರುವುದೇನೆಂಬುದನ್ನು ನೋಡಿ ತಮಗೆ ಬೇಡವಾದರೂ, ಈತನಿಗೇ ಈ ವಸ್ತುವನ್ನು ಕೊಡಬೇಕೆಂಬ ಇಷ್ಟವಿದ್ದರೂ ಈತನಿಗೆ ಕೊಡಬಹುದು. » ಎಂದು ಹೇಳಿ ಇಬ್ಬರನ್ನೂ ಸಮ್ಮತಿಪಡಿಸಿ ಪೆಟ್ಟಿಗೆಯ ಮುಚ್ಚಳವನ್ನು ತೆಗೆಯಲು ಅದರಲ್ಲಿ ಲೋಕೈಕ ಸುಂದರವಾದ ಸ್ತ್ರೀಶಿಶುವಿದ್ದುದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಆ ರಾಜನಿಗೆ ಅದುವರೆಗೆ ಮಕ್ಕಳಿಲ್ಲದುದರಿಂದ ಅಲ್ಲಿನ ಪೂಜ್ಯರ ಅಪ್ಪಣೆಯಂತೆ ಪುತ್ರಿಯನ್ನಾಗಿ ಸ್ವೀಕರಿಸಿ ಅಕ್ಕರೆಯಿಂದ ಪೋಷಿಸಿದನು « ಸೀತಾ » ಎಂದರೆ ನೇಗಲಿನ ಕೊನೆಯು. ಅದರ ದೆಸೆಯಿಂದ ಸಿಕ್ಕಿದುದಾದುದರಿಂದ ಆ ಶಿಶುವಿಗೆ « ಸೀತಾ » ಎಂದೇ ನಾಮಕರಣ ಮಾಡಿದರು. ಆ ಬ್ರಾಹ್ಮಣನೂ, ಆ ಒಕ್ಕಲಿಗನೂ ಮಹಾರಾಜನ ಅಧಿಕವಾದ ಗೌರವಕ್ಕೆ ಪಾತ್ರರಾಗಿ ದರಿದ್ರದೇವತೆಯಿಂದ ವಿಮುಕ್ತರಾಗಿ ಸ್ವಸ್ಥಾನಕ್ಕೆ ತೆರಳಿ ಅತ್ಯಧಿಕ ಸುಖದಿಂದಿದ್ದರು. « ನಿಸ್ಪೃಹತೆ » ಯು ಎಂತಹ ಆನಂದ ಸತ್ಕೀರ್ತಿಗಳನ್ನುಂಟು ಮಾಡುವದೆಂಬುದನ್ನು ವಾಚಕ ಮಹಾಶಯರೆ! ನೀವೇ ಈಗ ಊಹಿಸಿರಿ.

ಕಂಚ ತನ್ನಿಂದಾರ್ಜಿತವಾದುದೆ ।
ತನ್ನಿಂದುಪಭೋಗ ಮಾಗದೆಂಬುದನರಿತುಂ ।
ತನ್ನದೆ ಸಂಪತ್ಸ್ವರದಂ ।
ಗನ್ನತನಂ ಗೊಳಿಸಿ ಕೊಳದವುಪರೊಳಿತೇ ।

ತಾ॥ ವೆಂಕಟರಮಣಯ್ಯ, ಕಾರ್ಯದರ್ಶಿ,
ಅಲಕಪುರಿ ಧಾರ್ಮಿಕ ಪಾಠಶಾಲಾ,
ಜಲಕೊರು, ಗೌರೀಬಿದನೂರು ತಾ॥

ವಿವೇಕಮಂಜರಿ

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೫೦ ಆಖ್ಯಾನಗಳಿರುವುವು. ವಿಷಯವಿಶದತೆ, ವಾಕ್ಯಮಾಧುರ್ಯ, [illegible] ಮನೋಹರತ್ವ, ಭಾಷಾಶುದ್ಧಿ, ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೆ [illegible] ಮೊದಲಭಾಗದಂತೆಯೇ [illegible] ಉಪಾಧ್ಯಾಯರೂ [illegible] ವಿದ್ಯಾರ್ಥಿಗಳೂ [illegible] ಸಂಗ್ರಹಿಸಬಹುದಾಗಿದೆ. ಬೆಲೆ [illegible]

೧ ನೆಯ ಭಾಗ ೨ ಅಣೆ ೧೦೦ ಪುಟಗಳು.
೨ ನೆಯ ಭಾಗ ೩ ಅಣೆ [illegible] ಪುಟಗಳು.
ಅಂಚೆಯ ಖರ್ಚು ಬೇರೆ
ವಿಳಾಸ.— « ಮೈಸೂರ್ ಸ್ಟಾರ್ » ಆಫೀಸು.

ಜೂಡ್‌ಕೀಲ್ ರವರ ಭವಿಷ್ಯನ್ನುಡಿಯು.

೧೯೧೨ ನೆಯ ಸಂವತ್ಸರದಲ್ಲಿ ಈ ಅರಿಷ್ಟಗಳು ಪ್ರಾಪ್ತವಾಗುತ್ತವೆಂದು ಈ ಜ್ಯೋತಿಷ್ಯರು ಕಳೆದ ವರ್ಷ ಬರೆದಿದ್ದರು. ಈ ಸಂವತ್ಸರದಲ್ಲಿ ಈ ತಿಂಗಳುಗಳಿಗೆ [illegible] [illegible] ಅಪಾಯ ಪ್ರಾಪ್ತವಾಗುವುದೆಂದು ಬರೆದಿರುತ್ತಾರೆ. ಈ ಸಂವತ್ಸರದಲ್ಲಿ ಅಂಗಾರಕನು ವೃಷಭ ರಾಶಿಯಲ್ಲಿ ಪ್ರವೇಶಿಸಿರುವುದರಿಂದ, ಜನವರಿ ಮೊದಲ್ಗೊಂಡು ಐರ್ಲೆಂಡಿನಲ್ಲಿ ತೊಂದರೆಯುಂಟಾಗುವುದು; ಬಂಗಾಳದಲ್ಲಿಯೂ ಬೊಂಬಾಯಿಯಲ್ಲಿಯೂ ದೌರ್ಜನ್ಯವು ನಡೆಯುವುದು; ಅಮೆರಿಕಾದ ಯುನೈಟೆಡ್ ಸ್ಟೇಟಿಗೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿಯೂ ಅದರ ನೆರೆಹೊರೆಯ ಪ್ರದೇಶದಲ್ಲಿಯೂ ದೌರ್ಜನ್ಯವೂ, ಭೂಕಂಪನವೂ ಸಂಭವಿಸುವುವು. ಜನವರಿ ತಾ॥ ೪ ರಿಂದ ಬೇಸಾಯಗಾರರಿಗೂ, ಮನೆಯನ್ನು ಕಟ್ಟುವವರಿಗೂ, ಕಲ್ಲಿದ್ದಲು, ಸೀಸ, ಸೀಮೆಯೆಣ್ಣೆ, ಮತ್ತೂ ಇಟ್ಟಿಗೆ ಈ ಪದಾರ್ಥಗಳ ವ್ಯಾಪಾರವನ್ನು ಮಾಡುವವರಿಗೂ ಆದಾಯಕರವಾಗಿರುತ್ತದೆ. ಫೆಬ್ರುವರಿ ತಿಂಗಳಲ್ಲಿ ರಷ್ಯಾ ಮತ್ತೂ ಪ್ರಷ್ಯಾ ದೇಶಗಳಲ್ಲಿ ಅಶಾಂತಿಗೆ ಪ್ರಾರಂಭವಾಗುವುದು. ಈ ಎರಡು ದೇಶಗಳ ಹೆಸರುಗಳ ಅಂತ್ಯಾಕ್ಷರಗಳು ಒಂದೇ ಆಗಿರುವುದರಿಂದ, ಅವುಗಳ ಫಲಪ್ರಾಪ್ತಿಯು ಒಂದೇಯಾಗಿರುವುದೆಂದು ಹೇಳತಕ್ಕುದಾಗಿಲ್ಲವು. ಅದರೆ ಶನಿಯು ಮೇಷ ರಾಶಿಯಿಂದ ವೃಷಭರಾಶಿಗೆ ಬಂದಿರುವುದೇ ಈ ಎರಡು ದೇಶಗಳ ಫಲವೂ ಒಂದೇ ಆಗಿರಲು ಕಾರಣವಾಗಿರುತ್ತದೆ. ಐರ್ಲೆಂಡ್ ದೇಶವು ಇನ್ನೂ ಅಶಾಂತಿಯ ತೊಂದರೆಯಲ್ಲಿ ಸಿಕ್ಕಿಕೊಂಡಿರುವುದು. ಫೆಬ್ರುವರಿ ತಿಂಗಳ ಕಡೆಯಲ್ಲಿ ಇಟಲಿದೇಶದ ದೊರೆಯು ರಹಸ್ಯಕೊಲೆಗಾರರ ಉಪಟಳಕ್ಕೆ ಗುರಿಯಾಗಿ ನಿರ್ವಾಹವಾಗುವಷ್ಟು ಅಪಾಯಸ್ಥಿತಿಯಲ್ಲಿರುವನು. ಲಂಡನ್ ನಗರದಲ್ಲಿ ಅಗ್ನಿಯಾಪತ್ತು ಸಂಭವಿಸುವುದಲ್ಲದೆ, ಉತ್ತರ ಅಮೇರಿಕಾದ ಪೂರ್ವ ದೇಶಗಳಲ್ಲಿ ಅನೇಕ ದುಷ್ಕೃತ್ಯಗಳು ಜರುಗುವುವು. ಸಂವತ್ಸರದ ಕಡೆಯವರೆಗೂ ವಿಪತ್ತುಗಳು ಒಂದೇ ಸಮನಾಗಿ ಸಂಭವಿಸುತ್ತಿರುವುವು ಮಾರ್ಚಿ ತಿಂಗಳಲ್ಲಿ ಸೂರ್ಯನು ಶನಿಯ ಕೂಡ ತನ್ನ ಸ್ಥಾನಕ್ಕೆ ಹಿಂದಿರುಗಿ ಅಂಗಾರಕ, ಬೃಹಸ್ಪತಿಗಳ ಕೂಡ ಜರುಗುವುದರಿಂದ ಐರೋಪ್ಯದೇಶದ ನ್ಯಾಯಸ್ಥಾನಾಧಿಪತಿಗಳಲ್ಲಿ ಉಲ್ಲೋಲಕಲ್ಲೋಲ ಉಂಟಾಗಿ ಯುದ್ಧವಿಚಾರದಲ್ಲೋ ಅಥವಾ ಸಂಧಿಯ ವಿಚಾರದಲ್ಲೋ ಗ್ರೇಟ್ ಬ್ರಿಟನ್ನ, ಫ್ರಾನ್ಸ್, ಆಸ್ಟ್ರಿಯಾ, ಜರ್ಮನಿ, ರಷ್ಯಾ- ಈ ದೇಶಗಳಿಗೆ ಅಪಾಯವು ಸಂಭವಿಸುವುದು. ಆಸ್ಟ್ರಿಯಾ ಜರ್ಮನಿ ಮತ್ತೂ ರಷ್ಯಾ ಈ ಮೂರು ದೇಶಗಳಲ್ಲೊಂದರಲ್ಲಿಯ ಒಬ್ಬ ಮಹಾಪುರುಷನಿಗೆ ಮರಣವು ಸಂಭವಿಸುವುದು. ನಮ್ಮ ದೇಶವು ಮಾತ್ರ ಗೌರವದಿಂದ ಸುಖವಾಗಿರುವುದು. ಲಂಡನ್ ಪಟ್ಟಣದಲ್ಲಿ ಅಗ್ನಿಯ ಅನಾಹುತವೂ, ಇನ್ನೂ ಅನೇಕ ಘೋರಕೃತ್ಯಗಳೂ ನಡೆಯುವುವು. ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತೂ ಐರ್ಲೆಂಡ್ ಈ ಸಂಯುಕ್ತ ದೇಶಗಳಲ್ಲಿ ಕಂಠರೋಗ ಮತ್ತೂ ಎದೆಯನೋವು ಪ್ರಾಪ್ತವಾಗುವುವು. ಏಪ್ರಿಲ್ ತಿಂಗಳಲ್ಲಿ ಗ್ರೇಟ್ ಬ್ರಿಟನ್ನಿಗೂ, ಪರದೇಶಗಳಿಗೂ ಮನಸ್ತಾಪವೂ, ಕೆಲಸಗಾರರ ಹೋರಾಟವೂ, ಗೊಂದಲವೂ ಉಂಟಾಗುವುವು. ಜರ್ಮನಿಯಲ್ಲಿಯೂ ಕೂಡಾ ದೊಡ್ಡದೊಡ್ಡವರಲ್ಲಿ ಮನಸ್ತಾಪ, ಹೋರಾಟ, ಬಡಿದಾಟಗಳು ಆಗುವುವು. ಬವೇರಿಯ ದೇಶದ ದೊರೆಯು ದುಃಖಕ್ಕೀಡಾಗಿ ಕುಂದಿಹೋಗುವನು. ಮೇ ತಿಂಗಳಲ್ಲಿ ಯುನೈಟೆಡ್ ರಾಜ್ಯದಲ್ಲೂ, ಯುನೈಟೆಡ್ ಸ್ಟೇಟುಗಳಲ್ಲೂ ಕಷ್ಟವು ಎಡೆಬಿಡದೆ ಪ್ರಾಪ್ತವಾಗುವುದು. ಅಂಗಾರಕನು ಕಟಕರಾಶಿಯಲ್ಲಿರುವುದರಿಂದ ನೌಕಾಯುದ್ಧವೂ, ನೌಕಾನಾಶನವೂ ಆಗುವುವು. ಐರ್ಲೆಂಡ್ ದೇಶವು ಇನ್ನೂ ಹೆಚ್ಚಾದ ದುಃಖಸ್ಥಿತಿಗೆ ಗುರಿಯಾಗುವುದು. ಆಗ ಬಂಗಾಳಾ ದೇಶದಲ್ಲಿ ಅಸಮಾಧಾನವುಂಟಾಗುವುದು. ಈ ಮೇ ತಿಂಗಳ ತಾ॥ ೨೭ ರಿಂದ ೨೯ ರವರೆಗೂ ಯೂರೋಪು ದೇಶದಲ್ಲಿ ' ಸ್ತ್ರೀ ವಿಷಯಕವಾಗಿ ಹುಟ್ಟಿರುವ ತೊಂದರೆಗಳು ಪ್ರಬಲಿಸುವುವು. ಯೂರೋಪಿನ ದಕ್ಷಿಣ ಭಾಗದಲ್ಲಿ ಅಗ್ನಿಯಾಪತ್ತು ಸಂಭವಿಸದೆ ಇರುವುದು ಆ ದೇಶದ ಭಾಗ್ಯವೆಂದೇ ಹೇಳಬೇಕಾಗಿದೆ. ಅದರೆ ಇಂತಹ ವಿಪತ್ತು ಸಂಭವಿಸಿದರೂ ಈವರೆಗೆ ದೇಶದಲ್ಲೆಲ್ಲಾ ಸಂತುಷ್ಟಿಯು ವ್ಯಾಪಿಸಿಯೇ ಇರುವುದು. ಜೂನ್ ತಾ॥ ೧೦ ರಲ್ಲಿ ಅಂಗಾರಕನು ಬೃಹಸ್ಪತಿಯ ಕೂಡ ಸೇರುವುದರಿಂದ, ಯುದ್ಧವು ಜರುಗಿ ರಕ್ತಪಾತವಾಗುವುದು. ಜುಲೈ ತಿಂಗಳಲ್ಲಿ ರಾಜಮಂತ್ರಾಲೋಚನಸಭೆಯಲ್ಲಿ ಅನೇಕ ತೊಂದರೆಗಳು ಪ್ರಾಪ್ತವಾಗುವುವು. ಮಾಸಾಂತ್ಯದಲ್ಲಿ ಉತ್ಪತ್ತಿಯಭಿವೃದ್ಧಿಯಾಗುವುದು ಮತ್ತೂ ಮಾರಿರೋಗಪ್ರಬಲದಿಂದ ವಿಶೇಷ ಮರಣವಾಗುವುದು. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ದುಃಖವು ಸಂಭವಿಸುವುದು. ನವೆಂಬರ್ ತಿಂಗಳಲ್ಲಿ ರೈಲ್ವೆಯ ಕೆಲಸಗಾರರಲ್ಲಿ ಗೊಂದಲವೆದ್ದು ಅಪಾಯವುಂಟಾಗುವುದಲ್ಲದೆ, ಪ್ರಯಾಣಿಕರಿಗೆ ನಾನಾವಿಧಕಷ್ಟವು ಸಂಭವಿಸುವುದು. ಆ [illegible] ಇಂಗ್ಲೆಂಡಿನಲ್ಲಿ ಸಾಧಾರಣವಾಗಿ ಅತ್ಯಧಿಕ [illegible] ಇತ್ಯಾದಿರೋಗಗಳು ಪ್ರಾಪ್ತವಾಗುವುದಲ್ಲದೆ [illegible] [illegible] ಜಾರ್ಜರವರು [illegible]

ವ್ಯವಸಾಯಕ ವಿಷಯಗಳು.

ಕೆಲವು ಹಣ್ಣು ಮತ್ತು ಹುವ್ವುಗಳ ಸಸಿಗಳನ್ನು ನೆಟ್ಟ ಪ್ರಾರಂಭದಲ್ಲಿ ಅವುಗಳ ಮೇಲೆ ಬಿಸಿಲು ಮತ್ತು ಧಾರೆಗೆ ಮರೆಯಾಗಿ ಇತರ ಸೊಪ್ಪುಗಳನ್ನು ಮುಚ್ಚುತ್ತಾರಷ್ಟೆ. ಹೀಗೆ ಮುಚ್ಚಲ್ಪಟ್ಟ ಸೊಪ್ಪುಗಳು ಭೂಮಿಯಲ್ಲಿ ತೇವವು ಬಹಳ ಕಾಲ ನಿಲ್ಲುವಂತೆಯೂ ಮತ್ತೂ ಕಳೆಗಳು ವಿಶೇಷವಾಗಿ ಬೆಳೆಯದಂತೆಯೂ ಮಾಡುವುವು. ಕಾಲಕ್ರಮೇಣ ಈ ಸೊಪ್ಪುಗಳು ಕೊಳೆತು ಪೈರಿಗೆ ಒಳ್ಳೇ ಗೊಬ್ಬರವಾಗಿ ಪರಿಣಮಿಸುವುವು. ಅದ್ದರಿಂದ ರೈತರು ರಸ್ತೆಗಳ ಪಕ್ಕ, ದಿಬ್ಬ, ಗುಡ್ಡ ಮತ್ತು ಜಮೀನುಗಳ ಅಕ್ಕಪಕ್ಕದಲ್ಲಿ ಬೆಳೆದಿರುವ ಹುಲ್ಲು, ಸೊಪ್ಪು ಮತ್ತು ಪೊದೆಗಳನ್ನು ನಿಷ್ಕೃಷ್ಟ ಮಾಡದೆ ಅವುಗಳನ್ನು ಕತ್ತರಿಸಿ ಜಮೀನುಗಳಿಗೆ ಹಾಕಿ ಕೊಳಸಿದರೆ ಅವು ಬಹಳ ಬೆಲೆ ಬಾಳುವ ಗೊಬ್ಬರವಾಗಿ ಅವರಿಗೆ ಬಹಳ ಅದಾಯವಾಗುವುದು.

ಕಾರ್ವಪುರದ ಮ್ಯುನಿಸಿಪಾಲಿಟಿಯವರು ಪಟ್ಟಣದ ಗಲೀಜನ್ನು ಸಾಗಿಸಲು ಇಟ್ಟಿರುವ ಎತ್ತುಗಳಿಗೆ ಹತ್ತಿಬೀಜದ ಹಿಂಡಿಯನ್ನು ಆಹಾರವಾಗಿ ಕೊಡುತ್ತಾರೆ. ಮೊದಲು ಪರೀಕ್ಷಾರ್ಥವಾಗಿ ಸುಮಾರು ೨೦ ರಾಸುಗಳಿಗೆ ಅವಕ್ಕೆ ದಿನಗಟ್ಟಲೆ ಕೊಡುತ್ತಿದ್ದ ಭಕ್ಷ್ಯದಲ್ಲಿ ಒಂದು ಸೇರು ಹುರುಳಿಗೆ ಬದಲಾಗಿ ಒಂದು ಸೇರು ಹತ್ತಿಯ ಹಿಂಡಿಯು ಕೊಡಲ್ಪಟ್ಟಿತ್ತು. ಐದು ವಾರಗಳು ಇದೇ ರೀತಿನಾದಿ ಹತ್ತಿಯ ಹಿಂಡಿಯನ್ನು ತಿಂದ ರಾಸುಗಳನ್ನು ತೂಕಮಾಡಲಾಗಿ ಅವು ಬರೀ ಹುರುಳಿ ಮಾತ್ರವನ್ನೇ ತಿನ್ನುತ್ತಿದ್ದ ರಾಸುಗಳಿಗಿಂತ ಜಾಸ್ತಿ ತೂಗುವುದಾಗಿ ಕಂಡುಬಂದಿತು. ಹೀಗೆ ಮಾಡಿದ್ದರಿಂದ ರಾಸುಗಳು ಬಹಳ ಆರೋಗ್ಯವಾಗಿರುವುವಲ್ಲದೆ ಅವುಗಳಿಗೆ ಹತ್ತಿಯ ಹಿಂಡಿಯನ್ನು ಕೊಡುವುದಕ್ಕೆ ಮೊದಲು ದಿನಕ್ಕೆ ರಾಸು ಒಂದಕ್ಕೆ ೧೦ ಸೇರು ಗೋಧಿಯ ತವುಡನ್ನು ತಿನ್ನಿಸುತ್ತಿದ್ದದ್ದು ತಪ್ಪಿ ಈಗ ದಿನಕ್ಕೆ ೮ ಸೇರೇ ಸಾಕಾಗುವುದಾಗಿ ಗೊತ್ತಾಗಿದೆ. ಕೆ. ಗೆ.

ತುರ್ಕಿ ಇಟಲಿಗಳ ಯುದ್ಧವು.

ಜನವರಿ ತಾ॥ ೨೯.— ಇಟಲಿಯವರು ಏರ್ಮ ತೀರವನ್ನು ತಮ್ಮ ಸೇನೆಯಿಂದ ಆವರಿಸಿಕೊಂಡಿರುತ್ತಾರೆ. ಹೊದೀಥ ಎಂಬಲ್ಲಿರುವ ಬ್ರಿಟಿಷರ ರಾಯಭಾರಿಯು ತಮ್ಮ ಕಡೆಯ ಒಂದು ಯುದ್ಧನಾವೆಯು ಸಿದ್ಧವಾಗಿರಬೇಕೆಂದು ಕೇಳಿಕೊಂಡಿರುತ್ತಾನೆ. ಇಟಲಿಯವರು ಆ ಪಟ್ಟಣವನ್ನು ಫಿರಂಗಿಯಿಂದ ನಾಶಪಡಿಸುತ್ತೇವೆಂದು ಹೆದರಿಸುತ್ತಿರುವರು. ೩೦೦೦ ಅರಬ್ಬಿಯವರು ರಾತ್ರಿಯೆಲ್ಲಾ ಹೋರಾಡುತ್ತಿದ್ದು ತಾ॥ ೨೭ ರ ಬೆಳಗ್ಗೆ ಅರುಣೋದಯದಲ್ಲಿ ಟ್ರಿಪೋಲಿಯ ಹೊರಗಡೆ ಶತ್ರುಗಳ ಮೇಲೆ ಬಿದ್ದು ಹಿಂದಕ್ಕೋಡಿಸಲ್ಪಟ್ಟರು. ಈ ಕದನದಲ್ಲಿ ಇಟಲಿಯವರ ಕಡೆ ಇಬ್ಬರು ಸತ್ತರು, ಮತ್ತೂ ೮ ಜನರು ಗಾಯವಡೆದರು.

ತಾ॥ ೨೯.— ಮನೌಬಾ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದು ಸೆರೆ ಹಿಡಿಯಲ್ಪಟ್ಟಿದ್ದ ತುರ್ಕಿಯವರೆಲ್ಲರೂ ಕಾಗ್ಲಿ ಎಂಬಲ್ಲಿ ಫ್ರೆಂಚರ ರಾಯಭಾರಿಯ ವಶಕ್ಕೆ ಕೊಡಲ್ಪಟ್ಟರು. ರೋಮಿನಲ್ಲಿರುವ ಛಾರ್ಜ್ ಡಿ ಅಫೇರ್ಸ್ ಎಂಬುವನು ತುರ್ಕಿಯವರನ್ನು ಇಟಲಿಯವರ ವಶಮಾಡಿದುದರ ಕಾರಣವನ್ನು ತಿಳುಹಲು ಫ್ರಾನ್ಸಿಗೆ ಬರಮಾಡಲ್ಪಟ್ಟಿರುವನು.

ತಾ॥ ೨೯.— ಮನೌಬಾ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದ ತುರ್ಕಿಯ ಪ್ರಯಾಣಿಕರೆಲ್ಲರೂ ತಾ॥ ೨೯ ರ ಬೆಳಿಗ್ಗೆ ಮಾರ್ಸೆಲ್ಸಿಗೆ ಪ್ರಯಾಣಮಾಡಿದರು. ಇಟಲಿಯವರ ಕ್ರೂಯಿಜರ್ ಪೀಮಾಂಟಿಯು ಯೂನಿಯನ್‌ಜಾಕ್ ಎಂಬ ಧ್ವಜಪಟವನ್ನೇರಿಸಿಕೊಂಡು ಹೋಗುತ್ತಿದ್ದ ಫಾರ್ನಿಕ್ರಾಫ್ಟ್ ಕಂಪೆನಿಯವರಿಗೆ ಸೇರಿದ ಒಂದು ಮೋಟಾರು ದೋಣಿಯನ್ನು ಹಿಡಿದುಕೊಂಡಿತು. ಈ ರೀತಿಯಾಗಿ ಹಡಗುಗಳನ್ನು ಪುನಃ ಹಿಡಿಯುವುದನ್ನು ಅಡ್ಡಿಪಡಿಸುವುದಕ್ಕಾಗಿ ಫ್ರಾನ್ಸು ಮತ್ತೂ ಇಟಲಿ ರಾಜ್ಯಗಳ ಪರವಾಗಿ ಒಂದು ಪಂಚಾಯಿತಿಯು ನಡೆಯಲು ಪರ್ಯಾಲೋಚಿಸಲ್ಪಡುತ್ತಿದೆ.

ಫೆಬ್ರುವರಿ ತಾ॥ ೧.— ಇಟಲಿಯವರ ಪೀಮಾಂಟಿ ಎಂಬ ಕ್ರೂಯಿಜರು ಹಿಡಿದಿದ್ದ ಫಾರ್ನಿಕ್ರಾಫ್ಟ್ ಕಂಪೆನಿಯವರ ಮೋಟಾರು ಲಾಂಚು ಮಸೌವಾ ಎಂಬಲ್ಲಿಗೆ ಬಂದಿರುತ್ತದೆ. ಫಾರ್ನಿಕ್ರಾಫ್ಟ್ ಕಂಪೆನಿಯವರ ಲಾಂಚು ಬ್ರಿಟಿಷ್ ವರ್ತಕರು ಉಪಯೋಗಿಸುವ ಧ್ವಜಪಟವನ್ನೂ, ತುರ್ಕಿ ರಾಜ್ಯದ ಚಿಹ್ನೆಯನ್ನೂ ಉಪಯೋಗಿಸಿಕೊಂಡು ಬರುತ್ತಿದ್ದುದೇ ಅದನ್ನು ಹಿಡಿಯಲು ಕಾರಣವಾಯಿತೆಂದೂ ಇಟಲಿಯವರು ಹೇಳುತ್ತಾರೆ. ಇಟಲಿಯವರ ಯುದ್ಧನಾವೆಯು ಕಳೆದ ಜನವರಿ ತಾ॥ ೨೦ ರಲ್ಲಿ ಏರ್ಮ ದಡದಲ್ಲಿ ತುರ್ಕಿಯವರ ದೋಣಿಯನ್ನು ಹಿಡಿದು ಅದರೊಳಗಿದ್ದವರಲ್ಲಿ ೧೦ ಜನರನ್ನು ಖೈದಿಗಳನ್ನಾಗಿ ಹಿಡಿದುಕೊಳ್ಳದೆ ದಡಕ್ಕೆ [illegible] ಹೋಗುತ್ತಿದ್ದ ಇಬ್ಬರನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು. [illegible]

ಫೆಬ್ರವರಿ ತಾ॥ ೨— ಮನೌಬಾ ಹಡಗಿನಲ್ಲಿ ಪ್ರಯಾಣ ಮಾಡುತಿದ್ದ ಇಟಲಿಯವರಿಂದ ಸೆರೆಹಿಡಿಯಲ್ಪಟ್ಟಿರುವ ತುರ್ಕಿಯವರಲ್ಲಿ ೨೩ ಜನರು ರೆಡ್ ಕ್ರೆಸೆಂಟಿಗೆ ಸೇರಿದ ಆರೈಕೆ ಮಾಡುವವರೆಂದೂ ಅವರೆಲ್ಲರೂ ಸಿಯಾಕಿಗೆ ಕಳುಹಲ್ಪಡುವರೆಂದೂ ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿದೆ. ೨೯ ನೆಯ ನಫಸು ಪ್ರಾಣಾಪಾಯ ಸ್ಥಿತಿಯಲ್ಲಿರುವನು. ಮತ್ತೂ ೨೯ ಯವನ ಗುರ್ತನ್ನು ಕಂಡು ಹಿಡಿಯಲಾಗದಿದ್ದುದರಿಂದ ಅವನು ಟ್ಯೂನಿಸಿಗೆ ಹೋಗಗೊಡಲ್ಪಡುವುದಿಲ್ಲ. ತುರ್ಕಿಯವರ ಕೋಟೆಗಳಿಂದ ಏರ್ಪ ತೀರಕ್ಕೆ ಒಂದೇಸಮನಾಗಿ ಫಿರಂಗಿಗಳು ಹೊಡೆಯಲ್ಪಡುತ್ತಿದ್ದುವು. ಇಟಲಿಯ ವೈಮಾನಿಕನಾದ ಸಿಗ್ನಾರಾಸ್ಸಿಯು ಕ್ಯಾಪ್ಟ ಮಾಂಟು ಎಂಬ ಪ್ರಯಾಣಿಕನೊಡನೆ ತಾ॥ ೧ ರಲ್ಲಿ ಟಿಬ್ರುಕ್ ಬಳಿಯಿರುವ ತುರ್ಕಿಯವರ ಪಾಳೆಯಗಳ ಮೇಲೆ ಸಂಚರಿಸುತ್ತ ಸಿಡಿಮದ್ದುಗಳನ್ನು ಹಾಕಿದನು. ತುರ್ಕಿಯವರು ಹಿಂತಿರುಗಿ ವಿಮಾನಕ್ಕೆ ಗುರಿಕಟ್ಟಿ ಗುಂಡುಗಳನ್ನು ಹೊಡೆದುದರಲ್ಲಿ ೪ ಗುಂಡುಗಳು ವಿಮಾನಕ್ಕೆ ತಗಲಿದುವಲ್ಲದೆ ಮಾಂಟುಗೆ ಕೊಂಚಗಾಯವನ್ನು ಮಾಡಿದುವು.

ತಾ॥ ೩— ಜನವರಿ ತಾ॥ ೩೦ ರಲ್ಲಿ ಬೆಂಗಾಜಿಯಲ್ಲಾದ ಕದನದಲ್ಲಿ ಇಟಲಿಯವರು ೪ ಜನರನ್ನು ಕಳೆದುಕೊಂಡು ಹಿಂದಕ್ಕೋಡಿಸಲ್ಪಟ್ಟರು. ಈ ಯುದ್ಧದಿಂದ ಈವರೆಗೆ ೫೫ ಲಕ್ಷ ರೂ ಗಳು ವ್ಯಯವಾಗಿರುವುದಲ್ಲದೆ ಸಾಲವನ್ನು ತೆಗೆಯುವ ಸಂಭವವಿರುವುದಿಲ್ಲವು. ಇಟಲಿಯವರು ಜನವರಿ ತಾ॥ ೨೩ ರಲ್ಲಿ ಜಾಬ್ನಾ ಕೋಟೆಗೆ ಫಿರಂಗಿಗಳನ್ನು ಹೊಡೆದು ೨ ಡೇರಾಗಳಿಗೆ ಬೆಂಕಿಯನ್ನು ಹೊತ್ತಿಸಿದರು. ಮತ್ತೂ ೧ ಆಳನ್ನು ಕೊಂದರು.

ಮೈಸೂರ್ ಸ್ಟಾರ್

೧೯೧೨ ನೆಯ ಫೆಬ್ರವರಿ ತಾ॥ ೫ ನೆಯ ಸೋಮವಾರ.

ಪೋರ್ಚುಗಲ್ ದೇಶದಲ್ಲಿಯ ಗೊಂದಲವು.

ಈ ದೇಶವು ಸ್ಪೇನ್ ರಾಜ್ಯದ ಪಶ್ಚಿಮ ದಿಗ್ಭಾಗದಲ್ಲಿ ಅದಕ್ಕೆ ಸೇರಿಕೊಂಡೇ ಇರುವುದು. ಇದರ ವಿಸ್ತೀರ್ಣವು ೩೫೦೦೦ ಚದರಮೈಲಿಗಳಿರುವುದಲ್ಲದೆ, ಪ್ರಜಾಸಂಖ್ಯೆಯು ೫೫ ಲಕ್ಷಕ್ಕೆ ಮೇಲ್ಪಟ್ಟಿರುವುದು. ಈ ಪೋರ್ಚುಗಲ್ ದೇಶಸ್ಥರು ನಡೆನುಡಿಗಳಲ್ಲಿ ಸ್ಪೇನ್ ದೇಶಸ್ಥರನ್ನು ಹೋಲುವವರಾದರೂ, ಉಭಯ ದೇಶಸ್ಥರುಗಳಲ್ಲಿ ಪರಸ್ಪರ ವೈಮನಸ್ಯವು ಅಧಿಕವಾಗಿರುವುದು. ಪೂರ್ವದಲ್ಲಿ ಪೋರ್ಚುಗಲ್ ದೇಶವು ಸ್ಪೇನ್ ರಾಜ್ಯದ ಒಂದು ಭಾಗವಾಗಿದ್ದು ೧೧೪೩ ರಲ್ಲಿ ಸ್ವತಂತ್ರರಾಜ್ಯವಾಗೇರ್ಪಟ್ಟಿತು. ೧೫ ನೆಯ ಶತಮಾನದಲ್ಲಿ ಈ ಪೋರ್ಚುಗಲ್ ದೇಶವು ಯುದ್ಧನಾವೆಗಳ ಸಾಹಸಕ್ಕೆ ಪ್ರಖ್ಯಾತವಾಗಿದ್ದುದಲ್ಲದೆ, ಬಹು ಪ್ರಬಲವಾದ ವ್ಯಾಪಾರವನ್ನು ನಡೆಯಿಸುತ ಅನೇಕ ಸ್ವಾಸ್ಥ್ಯಗಳನ್ನುಳ್ಳುದಾಗಿದ್ದಿತು. ಈ ದೇಶವು ೧೫೮೦ ರಲ್ಲಿ ಸ್ಪೇನ್ ದೇಶದ ದೊರೆಯಾದ ಎರಡನೆಯ ಫಿಲಿಪನಿಂದ ಅಧೀನಗೊಳಿಸಲ್ಪಟ್ಟಿದ್ದು, ೧೬೪೦ ರಲ್ಲಿ ಪುನಃ ತನ್ನ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿತು. ಅಂದಿನಿಂದ ಕಳೆದ ೧೯೧೦ ನೆಯ ಅಕ್ಟೋಬರ್ ತಾ॥ ೫ ರವರೆಗೆ ಕೊರ್ಟಿಸ್ ಎಂದು ಕರೆಯಲ್ಪಡುತ್ತಿದ್ದ ಪಾರ್ಲಿಮೆಂಟ್ ಸಭಾ ಸಮೇತನಾದ ದೊರೆಯಿಂದ ಆಳಲ್ಪಡುತ್ತಿದ್ದಿತು. ಆದರೆ ಆ ದೇಶದ ವಿದ್ಯಾವಂತರೂ, ನಾಗರಿಕರೂ ಆದ ಕೆಲ ಜನರು ದೊರೆಯು ಮತಪ್ರಸಾರಕ ವರ್ಗದವರ ಆಜ್ಞಾನುವರ್ತಿಯಾಗಿ ಪ್ರಜೆಗಳಿಗೆ ಅಹಿತವಾದ ಕಾರ್ಯಗಳನ್ನು ಮಾಡುತ್ತಾನೆಂದು ಬೇಸತ್ತು, ಅಮೇರಿಕಾ ಮತ್ತೂ ಫ್ರಾನ್ಸ್ ದೇಶಗಳಲ್ಲಿರುವಂತೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿ, ೧೯೧೦ ನೆಯ ಅಕ್ಟೋಬರ್ ತಿಂಗಳಲ್ಲಿ ದಂಗೆಯನ್ನೆಬ್ಬಿಸಿದರು. ದೊರೆಯ ಆಡಳಿತದ ಕ್ರಮದಿಂದ ಜಿಗುಪ್ಸೆಪಟ್ಟಿದ್ದ ಅಧಿಕಾರಿಗಳೂ, ಸೈನಿಕರೂ ಪ್ರಜಾಪಕ್ಷದವರಾದ ದಂಗೆಯವರ ಕೂಡ ಸೇರಿ, ಪ್ರಭುಪಕ್ಷದವರ ಕೂಡ ಕಾದಾಡಿ ಅವರನ್ನು ಸೋಲಿಸಿ ಅರಮನೆಯನ್ನೂ, ಕೋಶವನ್ನೂ ಸ್ವಾಧೀನಪಡಿಸಿಕೊಂಡರು. ಆಗ ಪ್ರಭುಪಕ್ಷದವರೆಲ್ಲರೂ ಪರಾಜಿತರಾಗಿ ತಲೆತಪ್ಪಿಸಿಕೊಂಡೋಡಿದರಲ್ಲದೆ, ಡಾಂಮ್ಯಾನ್ಯುಯಲ್ ದೊರೆಯು ತನ್ನ ಕುಟುಂಬದವರೊಡನೆ ಅರಮನೆಯಿಂದ ತಪ್ಪಿಸಿಕೊಂಡುಬಂದು ನಾವೆಯನ್ನು ಹತ್ತಿ ಪ್ರಾಣರಕ್ಷಣೆಯನ್ನು ಮಾಡಿಕೊಂಡನು. ಪದಚ್ಯುತನಾದ ಡಾಂಮ್ಯಾನ್ಯುಯಲ್ ದೊರೆಯ ತಂದೆಯೂ, ಅಣ್ಣನೂ ಪ್ರಜಾಪ್ರಭುತ್ವಾಕಾಂಕ್ಷಿಗಳಾದವರಿಂದ ಕೊಲ್ಲಲ್ಪಟ್ಟಿದ್ದರು. ತನ್ನ ತಂದೆಯು ೬೫,೦೦೦ ರೂ. ಗಳನ್ನು ವೆಚ್ಚಕ್ಕಾಗಿ ತೆಗೆದುಕೊಳ್ಳುತ್ತಿದ್ದರೂ, ಡಾಂಮ್ಯಾನ್ಯುಯಲ್ ದೊರೆಯು ೧೫,೦೦೦ ರೂ. ಗಳನ್ನು ಮಾತ್ರ ತೆಗೆದುಕೊಳ್ಳುತ, ಪಾರ್ಲಿಮೆಂಟ್ ಸಭೆಯ ಅನುಮತಿಯನ್ನು ಮೀರಿ ನಡೆಯುವುದಿಲ್ಲವೆಂದು ಒಪ್ಪಿಕೊಂಡು, ವರ್ತಮಾನಪತ್ರಿಕೆಗಳ ದ್ವಾರಾ ಪ್ರಜಾಭಿಪ್ರಾಯವನ್ನು ತಿಳಿದುಕೊಂಡು ಪ್ರಜೆಗಳಿಗೆ ಹಿತಕರನಾಗಿರುವಂತೆ ರಾಜ್ಯಭಾರವನ್ನು ಮಾಡಬೇಕೆಂಬ ಸತ್ಸಂಕಲ್ಪವನ್ನುಳ್ಳವನಾಗಿದ್ದನು. ಹೀಗಿದ್ದರೂ ಪ್ರಜಾಧಿಪತ್ಯಾಭಿಲಾಷಿಗಳು ತಮ್ಮ ದೊರೆಯು ಮತಪ್ರಸಾರಕರ ವಶನಾಗಿ ಅವರ ಕೈಸೂತ್ರದ ಬೊಂಬೆಯಂತೆ ಪರಿಣಮಿಸಿರುವನೆಂದು ಕ್ಷುಬ್ಧರಾಗಿ ಅವನನ್ನು ಪದಚ್ಯುತನನ್ನಾಗಿ ಮಾಡಿ, ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ತಮ್ಮ ಇಷ್ಟಾರ್ಥಪೂರ್ತಿಯನ್ನು ಮಾಡಿಕೊಂಡರು.

ಪೋರ್ಚುಗಲ್ ದೇಶದಲ್ಲಿ ಪ್ರಜಾಧಿಪತ್ಯವು ಸ್ಥಾಪಿತವಾದರೂ ನಿರುಪಾಧಿಕವಾದ ರಾಜ್ಯದಾಡಳಿತವೂ, ಜನರಲ್ಲಿ ಸುಖಸಮಾಧಾನವೂ ಉಂಟಾಗಲಿಲ್ಲವು. ಏಕೆಂದರೆ— ಪ್ರಜಾಪ್ರಭುತ್ವವು ಸ್ಥಾಪಿತವಾದ ಕೂಡಲೆ ಮೊದಲಿನ ಕೆಡಕುಗಳೆಲ್ಲವೂ ಬೇರೆಬೇರೆ ರೂಪಗಳಿಂದ ತಲೆದೋರಹತ್ತಿದುವು. ರಾಜಕಾರ್ಯನಿರ್ವಾಹಕರು ಅನ್ಯಾಯ ಮೊದಲಾದ ದುಷ್ಕೃತ್ಯಪ್ರವೃತ್ತರಾದರು. ಮತ್ತೂ ಮೊದಲಿದ್ದ ಮಂತ್ರಿಸಭೆಯ ತನಗೂ, ಪ್ರಜಾಧಿಪತ್ಯದವರಿಗೂ ಭಿನ್ನಾಭಿಪ್ರಾಯ ಹುಟ್ಟಿದುದರಿಂದ ಕೊನೆಗಂಡುದು ಪುನಃ ಏರ್ಪಡಲಿಲ್ಲವು. ಪ್ರಜಾಪ್ರಭುತ್ವವು ತನ್ನೊಳಗೇ ಬಲಹೀನವಾಗಿರುವುದಲ್ಲದೆ, ಹೊರಗಡೆ ಪ್ರಭುಪಕ್ಷದವರಿಂದ ಹೆದರಿಸಲ್ಪಡುತ್ತಿದೆ. ಪ್ರಭುಪಕ್ಷದವರಲ್ಲಿ ಕೆಲರು ಪದಭ್ರಷ್ಟನಾದ ಡಾಂಮ್ಯಾನ್ಯುಯಲನನ್ನು ಪುನಃ ಪ್ರಭುತ್ವಕ್ಕೆ ತರಬೇಕೆಂದೂ, ಮತ್ತೆ ಕೆಲರು ಅವನ ದಾಯಾದಿಯಾದ ಡಾಂಮಿಗಲ್ ಎಂಬುವನನ್ನು ಪ್ರಭುತ್ವಕ್ಕೆ ತರಬೇಕೆಂದೂ ಹೋರಾಡುತ್ತಿರುವರು. ಆದರೆ ಈ ಉಭಯಪಕ್ಷದವರೂ ಇಷ್ಟರಲ್ಲೇ ಒಂದುಗೂಡಿ ಪ್ರಜಾಪ್ರಭುತ್ವಪಕ್ಷದವರನ್ನು ಪ್ರತಿಭಟಿಸತಕ್ಕವರಾಗಿರುವರು. ಡಾಂಮ್ಯಾನ್ಯುಯಲ್ ದೊರೆಯನ್ನು ಪದಚ್ಯುತನನ್ನಾಗಿ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಹಾಯಕರಾಗಿದ್ದವರು ಕಾರ್ಬೋನೇರಿಸ್ ಎಂಬ ಪ್ರಬಲವಾದ ಸಂಘಕ್ಕೆ ಸೇರಿದವರು. ಇವರಿಗೂ, ಪ್ರಜಾಪ್ರಭುತ್ವಪಕ್ಷದವರಿಗೂ ಈಗ ಮನಸ್ತಾಪ ಹುಟ್ಟಿರುವುದು. ಇದಲ್ಲದೆ ಕಳೆದ ವರ್ಷದಿಂದಲೂ ಕೆಲಸಗಾರರ ಉಪಟಲಗಳು ಆಗಾಗ್ಗೆ ಆಗುತ್ತಲೇ ಇದ್ದು ಈಗ ವಿಪರೀತವಾಗಿ ಪರಿಣಮಿಸಿವೆ. ಕಳೆದ ಜನವರಿ ತಾ॥ ೨೯ ರಲ್ಲಿ ಪೋರ್ಚುಗಲ್ಲಿಗೆ ಸೇರಿದ ಇವಾರಾ ಡಿಸ್ಟ್ರಿಕ್ಟಿನಲ್ಲಿ ಬೇಸಾಯ ಕೆಲಸಗಾರರೆಲ್ಲರೂ ಮೊದಲು ದಂಗೆಯೆದ್ದರು. ಅನಂತರ ಈ ದಂಗೆಯು ರಾಜಧಾನಿಯಾದ ಲಿಸ್ಬನ್ ಮೊದಲಾದ ಕಡೆಗಳಲ್ಲಿ ಹರಡಿಕೊಂಡಿತು. ಟ್ರಾಂಬಂಡಿಗಳ ಓಡಾಟವು ನಿಂತಿತು ಮತ್ತೂ ಅಂಗಡಿಗಳು ಮುಚ್ಚಲ್ಪಟ್ಟುವು. ಅನಾಯಕರಾಜ್ಯಾಭಿಲಾಷಿಗಳೂ, ಪ್ರಭುಪಕ್ಷದವರೂ ಜನರನ್ನು ಸುಲಿಗೆಮಾಡಿಕೊಂಡುಹಾಕುವಂತೆ ದಂಗೆಕೋರರನ್ನು ಪ್ರೇರೇಪಿಸಹತ್ತಿದರು. ಅದರಮೇಲೆ ಅಧಿಕಾರಿಗಳು ತುಂಟರನ್ನು ಹಿಡಿದು ಗದ್ದಲವನ್ನು ನಿಲ್ಲಿಸುವಂತೆ ಸೇನೆಗೆ ಅಪ್ಪಣೆಯನ್ನು ಮಾಡಿದುದರ ಮೇಲೆ, ಸೇನೆಯವರು ತಂಡತಂಡವಾಗಿ ಬಂದು ಬೀದಿಗಳಲ್ಲಿ ಕಾವಲಿದ್ದು ದಂಗೆಗಾರರು ಗುಂಪುಕೂಡದಂತೆ ಚದರಿಸುತ್ತಿದ್ದರು. ರೊಟ್ಟಿಗೆ ಅಭಾವವು ಬರದಂತೆ ಅಧಿಕಾರಿಗಳು ತಕ್ಕ ಏರ್ಪಾಟನ್ನಿಟ್ಟಿದ್ದರು. ಲಿಸ್ಬನ್ನಿನಲ್ಲಿ ಸರ್ಕಾರಿಯ ಪಕ್ಷದ ಸೇನೆಗೆ ಒಂದು ಸಿಡಿಮದ್ದು ಹಾಕಲ್ಪಟ್ಟುದರಮೇಲೆ ವಿಚಾರಣೆಯಿಲ್ಲದೆ ತುಂಟರನ್ನು ಹಿಡಿದು ಶಿಕ್ಷಿಸುವುದೆಂದು ಸರ್ಕಾರದವರು ಮಾಡಿದ ಅಪ್ಪಣೆಯನ್ನನುಸರಿಸಿ ಸೈನಿಕರು ೧೧೫ ಜನರನ್ನು ಹಿಡಿದು ಒಂದು ಯುದ್ಧನಾವೆಗೆ ಸಾಗಿಸಿದರು. ಮಾಲ್ಪಾದ ಮುಖ್ಯಾಧಿಕಾರಿಯನ್ನು ದಂಗೆಗಾರರು ಕೊಡಲಿಯಿಂದ ತುಂಡು ತುಂಡಾಗಿ ಕತ್ತರಿಸಿ ಹಾಕಿದರು. ರೈಲ್ವೆಯ ಕೆಲಸಗಾರರು ದಂಗೆಯೇಳಲು ತಿರಸ್ಕರಿಸಿದುದರಿಂದ, ದಂಗೆಯು ಬಲವು ಕುಗ್ಗಿಹೋಗಿದೆಯೆಂದು ಯುದ್ಧಶಾಖೆಯ ಮಂತ್ರಿಯು ಪ್ರಾಂತಗಳ ಗೌರ್ನರಿಗೆ ತಂತಿಯ ಮೂಲಕ ತಿಳುಹಿರುತ್ತಾನೆ. ರಾಜಧಾನಿಯಲ್ಲಿ ಸೈನಿಕರು ಬಲವಾಗಿ ಕಾವಲಿದ್ದು ನೂರಾರುಜನ ದಂಗೆಗಾರರನ್ನು ಹಿಡಿದು ಯುದ್ಧನಾವೆಗಳಿಗೆ ಸಾಗಿಸುತ್ತಿದ್ದಾರೆ. ಪರದೇಶಗಳ ಸಂಬಂಧವಾಗಿ ಮಂತ್ರಿಯಾಗಿದ್ದು ನಿವೃತ್ತನಾಗಿರುವ ಸಿನ್ಯಾರ್ ಕ್ಯಾಸ್ಟಲೋ ಬ್ರಾಂಕೋ ಎಂಬುವನು ಪ್ರಜಾಪ್ರಭುತ್ವವನ್ನು ನಾಶಪಡಿಸಲುದ್ಯುಕ್ತನಾಗಿದ್ದನೆಂಬಪರಾಧದ ಮೇಲೆ ಸೆರೆಹಿಡಿಯಲ್ಪಟ್ಟು ಶಿಕ್ಷೆಗೆ ಗುರಿಮಾಡಲ್ಪಟ್ಟಿರುವನಲ್ಲದೆ, ಈವರೆಗೆಒಟ್ಟು ೧೦೦೦ ಜನ ಸೆರೆಹಿಡಿಯಲ್ಪಟ್ಟಿರುವರು. ಮತ್ತೂ ರಾಜಧಾನಿಯು ಶಾಂತಸ್ಥಿತಿಗೆಬಂದು ವೃತ್ತಪತ್ರಿಕೆಗಳು ಯಥಾಪ್ರಕಾರವಾಗಿ ಹೊರಡಲಾರಂಭವಾಗಿರುವುವು. ಇದರಂತೆಯೇ ಇವಾರಾದಲ್ಲೂ ಶಾಂತವಾಗಿರುತ್ತದೆ. ಆದರೆ ಕೊಯಿಂಬ್ರೋದಲ್ಲಿ ಮಾತ್ರ ದಂಗೆಯೆದ್ದಿದ್ದು ಪೋಲೀಸರಿಂದ ಅಡಗಿಸಲ್ಪಟ್ಟಿತು. ವ್ಯಾಪಾರಸಂಘದವರು ಅನಾಯಕರಾಜ್ಯಾಭಿಲಾಷಿಗಳ ಸಹಪ್ರವೃತ್ತಿಯಿಂದಲೂ, ಪ್ರಭುಪಕ್ಷದವರ ಒತ್ತಾಸೆಯಿಂದಲೂ ದಂಗೆಯ ಪ್ರಾಬಲ್ಯಕ್ಕೆ ಕಾರಣಭೂತರಾಗಿದ್ದರೆಂದು ಸೂಚಿಸುವ ಪತ್ರಿಕೆಗಳನ್ನು ಸರ್ಕಾರದವರು ಮೋಟಾರು ಬಂಡಿಗಳ ದ್ವಾರಾ ರಾಜ್ಯದ ಎಲ್ಲಾ ಪ್ರಾಂತಗಳಲ್ಲೂ ಹಂಚಿಸಿದರು. ಸೈನಿಕರೇನೋ ದಂಗೆಯಾಗಿದ್ದ ಸ್ಥಳಗಳಲ್ಲಿ ಇನ್ನೂ ಎಚ್ಚರಿಕೆಯಿಂದ ಕಾವಲಿದ್ದು ಅನುಮಾನಗ್ರಸ್ತರಾದ ಜನರನ್ನು ಸೆರೆಹಿಡಿಯುತ್ತಿರುವರಲ್ಲದೆ, ವ್ಯಾಪಾರಸಂಘದವರ ಮುಖ್ಯ ಸ್ಥಳದಲ್ಲಿ ಸಿಡಿಮದ್ದಿನ ಕಾರ್ಯಾಲಯವಿರುವುದನ್ನು ಕಂಡುಹಿಡಿದಿರುತ್ತಾರೆ.

ಪೋರ್ಚುಗಲ್ಲಿನ ಪ್ರಸ್ತುತಸ್ಥಿತಿಯು ಹೀಗಿರುತ್ತದೆ. ಒಂದು ಕಡೆ ಪ್ರಭುಪಕ್ಷದವರು, ಮತ್ತೊಂದು ಕಡೆ ಕಾರ್ಬನೇರಿಸ್ ಎಂಬ ಬಲವಾದ ಸಂಘದವರು ಪ್ರಜಾಪ್ರಭುತ್ವವನ್ನು ಬೆದರಿಸುತ್ತಿರುವುದರಿಂದಲೂ, ಕೆಲಸಗಾರರ ತೊಂದರೆಯು ಅಧಿಕವಾಗುತ್ತಿರುವುದರಿಂದಲೂ, ಸರ್ಕಾರಿಯಧಿಕಾರಿಗಳಲ್ಲಿ ಲಂಚ ಮತ್ತೂ ಸಂಚುಗಳು ನಡೆಯುತ್ತಿರುವುದರಿಂದಲೂ ಪ್ರಸಕ್ತ ರಾಜ್ಯದಾಡಳಿತವು ಅಂತ್ಯಾವಸ್ಥೆಗೆ ಬಂದಿರುತ್ತದೆ. ಇದರಿಂದ ಪ್ರಜಾಪ್ರಭುತ್ವವು ಪುನಃ ರಚಿಸಲ್ಪಡುವುದೋ ಅಥವಾ ರಾಜಸತ್ತಾತ್ಮಕವು ಪುನರುಜ್ಜೀವಿಸಲ್ಪಡುವುದೋ ಸದ್ಯದಲ್ಲಿ ಹೇಳಲಿಕ್ಕಿಲ್ಲವು.

ಒಳದೇಶದ ವೃತ್ತಾಂತಗಳು.

ಮ॥ ಸ್ಪಾರ್ಕ್ಸ್‌ರವರ ದೇಹಸ್ಥಿತಿಯು ನಿತ್ಯದಲ್ಲೂ ಅನುಕೂಲವಾಗುತ್ತಿದೆ.

ಮೈಸೂರ ನಿಯಮನಿರ್ಮಾಣಸಭೆಯವರು ಈ ತಾ॥ ೨೧ ರಲ್ಲಿ ಬೆಂಗಳೂರ ಪಬ್ಲಿಕ್ ಅಫೀಸ್ ಕಟ್ಟಡದಲ್ಲಿ ಸಭೆಗೂಡುವರು.

ಮೈಸೂರ ಡಿ॥ ಕಮಿಷನರು ಮ॥ ಎಂ. ಕಾಂತರಾಜ ಅರಸಿನವರು ೨೩ ದಿನಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಳ್ಳುತ್ತಾರೆಂದು ಕೇಳುತ್ತೇವೆ.

ಈಗ ರಜದ ಮೇಲಿರುವ ಪೊಲೀಸು ಇ॥ ಜನರಲ್‌ರವರು ಕಳೆದ ತಾ॥ ೨ ರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು. ಇವರ ರಜವು ನಾಳೆಯ ದಿನಕ್ಕೆ ಮುಗಿಯುತ್ತಾದುದರಿಂದ ಕೆಲಸದಮೇಲೆ ದಯಮಾಡಿಸುವರೋ ಅಥವಾ ಪುನಃ ರಜವನ್ನು ಹೆಚ್ಚಿಸಿಕೊಳ್ಳುವರೋ? ಇನ್ನೂ ಗೊತ್ತಾಗಲಿಲ್ಲವು.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ತಾ॥ ೩೧ ರಲ್ಲಿ ರಾಜಧಾನಿಗೆ ದಯಮಾಡಿಸಿ ಶ್ರೀಮನ್ ಮಹಾರಾಜರವರ ದರ್ಶನವನ್ನು ತೆಗೆದುಕೊಂಡರು. ಮತ್ತು ತಾ॥ ೨ ರಲ್ಲಿ ಇಲ್ಲಿಯ ನಾರ್ಮಲ್ ಸ್ಕೂಲಿಗೆ ದಯಮಾಡಿಸಿದ್ದು ಅಲ್ಲಿಯ ಕಾರ್ಯಕ್ರಮವನ್ನು ಪರಾಮರ್ಶಿಸಿಕೊಂಡು ಬಂದು ನಿನ್ನೆಯ ದಿನ ಬೆಂಗಳೂರಿಗೆ ಹಿಂತಿರುಗಿದಯಮಾಡಿಸುವವರಾಗಿದ್ದರು.

ಶ್ರೀಮನ್ ಮಹಾರಾಜರವರು ತಮ್ಮ ಸೆಕ್ರೆಟರಿಗಳೊಡನೆ ನಿನ್ನೆಯ ಮಧ್ಯಾಹ್ನ ೩॥ ಗಂಟೆಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ಮಹಾಸ್ವಾಮಿಯವರು ಬೆಂಗಳೂರಲ್ಲಿ ಕೆಲವಾರಗಳವರೆಗಿದ್ದು ಮಧ್ಯದಲ್ಲಿ ಬೊಂಬಾಯಿಗೆ ದಯಮಾಡಿಸಿ ತಮ್ಮ ಕೃಪಾಪಾತ್ರರಾದ ಶ್ರೀಮಂತ ಸೇಟರ ಮನೆಯ ವಿವಾಹವನ್ನು ತೀರಿಸಿಕೊಂಡು ಬೆಂಗಳೂರಿಗೆ ದಯಮಾಡಿಸುವುದಾಗಿ ಕೇಳುತ್ತೇವೆ.

ಮೈಸೂರು ಡಿ॥ ಪೊಲೀಸು ಸೂಪರಿಂಟೆಂಡೆಂಟ್ ಮ॥ ರಾಣೋಜಿರಾಯರು ಈಗ್ಗೆ ೧೨ ತಿಂಗಳ ಕೆಳಗೆ ನಾಯಿಂದ ಕಡಿಯಲ್ಪಟ್ಟಿದ್ದು, ಆ ನಾಯಿಯು ಹುಚ್ಚುನಾಯಾಗಿದ್ದಿತೆಂಬ ಅನುಮಾನದ ಮೇಲೆ ಚಿಕಿತ್ಸೆಯನ್ನು ಹೊಂದಲು ೧ ತಿಂಗಳ ರಜವನ್ನು ಪಡೆದು ಕೂನೂರಿಗೆ ಹೋಗುತ್ತಾರೆಂದೂ, ಅವರು ಬರುವವರೆಗೆ ಹೆಡ್‌ಕ್ವಾರ್ಟರ್ ಇನ್ಸ್ಪೆಕ್ಟರ್ ಮ॥ ಕಲ್ಯಾಣಸುಂದರಂ ಮೊದಲಿಯಾರರು ಬದಲಿ ನೋಡುತ್ತಾರೆಂದೂ ಕೇಳುತ್ತೇವೆ.

ಕಳೆದ ತಾ॥ ೩೧ ರಲ್ಲಿ ಚೆನ್ನಪಟ್ಟಣದ ವರ್ತಕರುಗಳು ನಿಡಗಟ್ಟಕ್ಕೆ ಸಂತೆಯ ವ್ಯಾಪಾರಕ್ಕಾಗಿ ಹೋಗಿರುವಾಗ ದಾಸಬಣಜಿಗರ ಮತ್ತೂ ಎಲೆಬಣಜಿಗರ ಕೆಲ ಹುಡುಗರಿಗೆ ಕಲಹವಾಗಿದ್ದು ರಾತ್ರಿ ಮಹದೇಶ್ವರನ ದೇವಸ್ಥಾನದ ಬಳಿ ಹಾಕಿಕೊಂಡಿರುವ ಗುಡಿಸಲುಗಳಿಗೆ ಬಂದಮೇಲೆ ಅದೇ ವಿಷಯವಾಗಿ ದೊಡ್ಡವರುಗಳಲ್ಲಿ ಕಲಹವು ನಡೆದು ಕೆಲವರಿಗೆ ಅಪಾಯಕರವಾದ ಪೆಟ್ಟುಗಳು ಬಿದ್ದಿರುವುದಾಗಿಯೂ, ಇವರಲ್ಲೊಂದು ಪಕ್ಷದವರು ಆ ಕೂಡಲೆ ಊರಿಗೆ ಹೋಗಿ ಪೊಲೀಸರಿಗೆ ತಿಳುಹುವಲ್ಲಿ ಅವರು ಗಮನಕ್ಕೆ ತರಲಿಲ್ಲವೆಂದೂ ಕೇಳುತ್ತೇವೆ. ಪೊಲೀಸಿನವರು ಹಾಗೆ ಉದಾಸೀನರಾಗಿದ್ದುದು ನಿಜವಾಗಿದ್ದ ಪಕ್ಷದಲ್ಲಿ ಅದನ್ನು ಮೇಲಿನ ಅಧಿಕಾರಿಗಳು ವಿಚಾರಿಸತಕ್ಕದಾಗಿದೆ.

ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿ ಕೆ. ಸಿ ಐ. ಇ. ಯವರ ತಮ್ಮಂದಿರ ಮಕ್ಕಳಾದ ಅ॥ ಕಮಿಷನರು ಮ॥ ನರಸಿಂಗರಾವ್ ಪೂರ್ಣಯ್ಯನವರು ತಮ್ಮ ದೊಡ್ಡಪ್ಪನವರ ಸ್ಥಾನದಲ್ಲಿ ತಮ್ಮನ್ನು ಯಳಂದೂರ ಜಹಗೀರದಾರರನ್ನಾಗಿ ಪರಿಗಣಿಸಬೇಕೆಂದು ಮೈಸೂರ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದರಿಂದ, ಸರ್ಕಾರದವರು ಅವರ ಪ್ರಾರ್ಥನೆಯನ್ನು ಈ ತಾ॥ ೨೩ ರಲ್ಲಿ ಪರ್ಯಾಲೋಚನೆಗೆ ಇಟ್ಟುಕೊಂಡು ಯಳಂದೂರು ಜಹಗೀರಿಯ ಉತ್ತರಾಧಿಕಾರದ ವಿಚಾರದಲ್ಲಿ ಏನನ್ನಾದರೂ ತಿಳುಹಬೇಕೆಂದಿದ್ದ ಸಮಸ್ತರು ಮೇಲೆ ಕಂಡ ತಾರೀಖಿನೊಳಗೆ ಜನರಲ್ ಮತ್ತೂ ರೆವಿನ್ಯೂ ಶಾಖೆಗಳ ಸೆಕ್ರೆಟರಿಯವರಲ್ಲಿಗೆ ಬರೆದುಕೊಂಡಲ್ಲಿ ಅದು ಪರ್ಯಾಲೋಚಿಸಲ್ಪಡುವುದೆಂದು ಕಳೆದ ವಾರದ ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ.

ಬೆಂಗಳೂರ ನಿವಾಸಿಗಳು ೧ ನೆಯ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಶ್ರೀಮನ್ಮಹಾರಾಜರವರಿಂದ ರಾಜಸಭಾಭೂಷಣ ಪ್ರಶಸ್ತಿಯೂ, ಸಾರ್ವಭೌಮರಿಂದ ದಿವಾನ್ ಬಹದ್ದೂರ್ ಪ್ರಶಸ್ತಿಯೂ ಲಭ್ಯವಾಗಿರುವುದಕ್ಕಾಗಿ ಮ॥ ಸೆಟ್ಟರನ್ನು ವಿನೋದೋತ್ಸವದಿಂದ ತೃಪ್ತಿಗೊಳಿಸಿ ಅಭಿನಂದಿಸಲು ತಕ್ಕೇರ್ಪಾಟುಗಳನ್ನು ಮಾಡಿಕೊಂಡು, ಮುಖ್ಯ ಕಾರ್ಯಕರ್ತೃಗಳಾದ ಅಡ್ವೋಕೇಟ್ ಮ॥ ಡಿ. ವೆಂಕಟರಾಮಯ್ಯನವರು, ಅಡ್ವೋಕೇಟ್ ಮ॥ ಎಚ್. ಕೆ. ವೀರಬಸವಯ್ಯನವರು, ಮ॥ ಯಜಮಾನ್ ಬಸಪ್ಪನವರು, ಮ॥ ವೀರಭದ್ರಸೆಟ್ಟರು, ಮ॥ ಮಂಡಿ ಹರಿಯಣ್ಣನವರು, ಮ॥ ಬಿ. ಎಸ್. ಪುಟ್ಟರಪ್ಪನವರು, ಮ॥ ಕೆ. ಎಚ್. ರಾಮಯ್ಯನವರು ಮ॥ ಮಹಮ್ಮದ್ ರಜಾಮಿಯವರು, ಮ॥ ಸಿ. ವೆಂಕಟಮುನಿಯಪ್ಪಸೆಟ್ಟರು ಮತ್ತೂ ಮ॥ ಡಿ. ಆದಪ್ಪನವರು ಇವರುಗಳ ಮೂಲಕ ಸೆಟ್ಟರ ಅನುಮತಿಯನ್ನು ಕೇಳಿರುವಲ್ಲಿ, ಅವರು “ಶ್ರೀಮನ್ಮಹಾರಾಜರವರೂ, ಚಕ್ರವರ್ತಿ ಸಾರ್ವಭೌಮರವರೂ ಕೃಪೆಯಿಂದ ದಯಪಾಲಿಸಿರುವ ಪ್ರಶಸ್ತಿಗಳಿಗಾಗಿ ನನ್ನ ಮಿತ್ರರೂ, ಸ್ವದೇಶೀಯರೂ ನನ್ನಕೂಡ ಸಂತೋಷಭಾಗಿಗಳಾಗಿರುವುದರಿಂದ, ನನ್ನ ಸಂತೋಷವು ಇನ್ನೂ ಹೆಚ್ಚಾಗಿರುತ್ತದೆ. ವಿನೋದೋತ್ಸವದಿಂದ ನನ್ನನ್ನು ಸಂತೋಷಗೊಳಿಸಬೇಕೆಂದು ನೀವು ಮಾಡಿಕೊಂಡಿರುವ ಪ್ರಯತ್ನದಿಂದ ನನಗೆ ವಿಶೇಷ ಮರ್ಯಾದೆಯುಂಟಾಗಿರುವುದಲ್ಲದೆ ಅದಕ್ಕಾಗಿ ನಾನು ವಂದಿಸುತ್ತೇನೆ ಆದರೆ ನಿಮ್ಮಗಳ ಆಮಂತ್ರಣವನ್ನು ಅಂಗೀಕರಿಸಲಾಗುವುದಿಲ್ಲವೆಂದು ತಿಳುಹಲು ವಿಷಾದಿಸುತ್ತೇನೆ.” ಎಂದುತ್ತರವನ್ನು ಕೊಟ್ಟಿರುವರು. ಇದರಿಂದ ಮ॥ ಸೆಟ್ಟರು ಬಾಹ್ಯಾಡಂಬರಗಳಿಗೆ ಅವಕಾಶವನ್ನು ಕೊಡತಕ್ಕವರಲ್ಲವೆಂಬುದು ವ್ಯಕ್ತವಾಗುತ್ತದೆ.

ವರ್ತಮಾನ ಸಂಗ್ರಹವು.

ಬರ್ಮಾದಲ್ಲಿ ಒಬ್ಬ ಐರೋಪ್ಯನು ರೈಲು ಬಂಡಿಯು ಹೋಗುವಾಗ್ಗೆ ಹತ್ತಲು ಪ್ರಯತ್ನಪಟ್ಟು ಕೆಳಗೆ ಬಿದ್ದು ಸತ್ತುಹೋದನು

ಹಿಂದೂ ಸರ್ವವಿದ್ಯಾಶಾಲೆಯ ಸ್ಥಾಪನೆಗಾಗಿ ಏರ್ಪಟ್ಟಿರುವ ಫಂಡಿಗೆ ೫೨ ಲಕ್ಷ ರೂ. ಗಳಿಗಿಂತ ಹೆಚ್ಚಾಗಿ ಚಂದಾ ವಾಗ್ದಾನಮಾಡಲ್ಪಟ್ಟಿರುತ್ತದೆ.

ರಷ್ಯಾ ಚಕ್ರವರ್ತಿಯು ಗತಿಸಿದ ಕೌಂಟ್ ಟಾಲ್‌ಸ್ಟಾಯಿಯ ಹೆಂಡತಿಗೆ ೧೫೩೫ ರೂ. ಗಳ ವರ್ಷಾಶನವನ್ನು ಕೊಡಲಪ್ಪಣೆಮಾಡಿರುತ್ತಾನೆ.

ವಿಯನ್ನಾದಲ್ಲಿ ಕೆಲ ಬಲ್ಗೇರಿಯಾ ದೇಶಸ್ಥರು ತುರ್ಕಿಯವರ ಸಹಾಯಾರ್ಥವಾಗಿ ೩ ಸಿಡಿಮದ್ದುಗಳನ್ನು ಹಾರಿಸಿದುದರಲ್ಲಿ ೩ ಜನರು ಸತ್ತರು, ಮತ್ತೂ ೨೦ ಜನರು ಗಾಯವಡೆದರು.

ಸಿಲೋನಿನಲ್ಲಿ ಪ್ರಯಾಣಿಕರ ಒಂದು ರೈಲುಬಂಡಿಯು ಸಾಮಾನಿನ ಬಂಡಿಗೆ ತಾಕುಬಡಿದು ಅನೇಕ ಬಂಡಿಗಳು ಹಾಳಾದುವಲ್ಲದೆ ೩೦ ಜನ ಪ್ರಯಾಣಿಕರಿಗೆ ತುಂಬಾ ಅಪಾಯವಾಗಿರುತ್ತದೆ.

ಅಬೋತಾಬಾದಿನಲ್ಲಿ ಪ್ರಕಟಿತವಾಗುವ ಎಡ್ವರ್ಡ್ ಗೆಜಿಟ್ ಎಂಬ ದೇಶಭಾಷಾ ಪತ್ರಿಕೆಯ ಪ್ರಕಾಶಕರು ೩೦೦೦ ರೂ. ಗಳ ಹೊಣೆಯನ್ನು ಕೊಡಬೇಕೆಂದು ಚೀಫ್ ಕಮಿಷನರು ಅಪ್ಪಣೆ ಮಾಡಿರುತ್ತಾರೆ.

ಸಿಯಾಂ ಸರ್ಕಾರದವರು ಆಕಾಶ ವಿಮಾನ ಯಾನಕ್ರಮವನ್ನು ಕಲಿತುಕೊಂಡು ತಮ್ಮ ಕೂಡ ೩ ವಿಮಾನಗಳನ್ನು ತೆಗೆದುಕೊಂಡು ಬರಲು ೩ ಜನ ಅಧಿಕಾರಿಗಳನ್ನು ಫ್ರಾನ್ಸಿಗೆ ಕಳುಹತಕ್ಕವರಾಗಿರುವರು.

ಪ್ಲಿಮತ್ತಿನಲ್ಲಿ ೭೮ ವರ್ಷ ವಯಸ್ಸಿನ ಒಬ್ಬ ವೃದ್ಧನಾದ ಬ್ಯಾರಿಸ್ಟರು ತನ್ನ ಮಗನನ್ನು ದೂಷಿಸಿದುದಕ್ಕಾಗಿ, ಮಗನು ತಂದೆಯಮೇಲೆ ವಿವಾದವನ್ನು ಹೂಡಲು ತಂದೆಯಾದ ಬ್ಯಾರಿಸ್ಟರು ಆತ್ಮಹತ್ಯೆಯನ್ನು ಮಾಡಿಕೊಂಡು ಸತ್ತನು.

ರಾಂಚಿನಿಂದ ೫ ಮೈಲಿ ದೂರದಲ್ಲಿರುವ ಷಾಬಾಗ್ ಎಂಬ ಕಣಿವೆಯಲ್ಲಿ ಕಳೆದ ತಾ॥ ೨೫ ರಲ್ಲಿ ೧೫ ಜನ ಮುಸುದ್ ಜನರು ಪ್ರಯಾಣಿಕರ ಮೇಲೆಬಿದ್ದು ಒಬ್ಬ ಮಹಮ್ಮದೀಯನನ್ನು ಕೊಂದು ಬೇರೊಬ್ಬ ಮಹಮ್ಮದೀಯನನ್ನೂ ಇಬ್ಬರು ಹಿಂದೂಗಳನ್ನೂ ಚೆನ್ನಾಗಿ ಪ್ರಹರಿಸಿದರು.

ಪಟ್ನಾ ಸಂಸ್ಥಾನದ ಮಹಾರಾಣಿಯವರು ಹಿಂದೂ ವಿಶ್ವವಿದ್ಯಾಲಯ ಫಂಡಿಗೆ ೧ ಲಕ್ಷ ರೂ. ಗಳನ್ನು ಕೊಟ್ಟರಲ್ಲದೆ. ಬಾಲ ಮಹಾರಾಜರು ಪ್ರಾಪ್ತವಯಸ್ಕರಾದ ಮೇಲೆ ಇನ್ನೂ ೧೨ ಲಕ್ಷ ರೂ. ಗಳನ್ನು ಕೊಡುವರೆಂದು ಹೇಳಿದರು. ಈ ಫಂಡಿಗೆ ದುಮ್ರಾವಿನ ಬಾಬು ಹರಿಹರ ಪ್ರತಾಪಸಿಂಗ್‌ರವರು ೫೦೦೦೦ ರೂ. ಬೆಲೆ ಬಾಳುವ ಆಸ್ತಿಯನ್ನು ಕೊಟ್ಟಿರುವರು.

ಬೊಂಬಾಯಿನಲ್ಲಿ ಒಬ್ಬ ಐರೋಪ್ಯ ಶಿಪ್ಪನೆಂಬುವನು ಬೊಂಬಾಯಿಗೆ ಹೋಗಿದ್ದ ಕೆಂಪುಕೋಟು ಸ್ವಾಧೀನಮಾಡಿಕೊಂಡು ಬರುತ್ತಿರುವಾಗ್ಗೆ, ರೈಲ್ವೆಯ ಸ್ಟೇಷನ್ನಿನಿಂದ ೭ ಮೈಲಿ ದೂರದಲ್ಲಿ [illegible] ಆತ ಮೇಲೆ [illegible] ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತ ಬಹು ಅಪಾಯಸ್ಥಿತಿಯಲ್ಲಿರುವನು.

ಕಳೆದ ಕ್ರಿಸ್ತಮಸ್ ಕಾಲದಲ್ಲಿ ಬ್ರಿಟಿಷ್ ಜನರಲ್ ಪೋಸ್ಟಾಫೀಸಿನಿಂದ ಪ್ರಪಂಚದ ಎಲ್ಲಾ ಭಾಗಗಳಿಗೂ ಕಳುಹಲ್ಪಟ್ಟಷ್ಟು ಕಾಗದಗಳೂ, ಬಾಂಗಿಗಳೂ ಹಿಂದೆ ಯಾವಕಾಲದಲ್ಲೂ ಕಳುಹಲ್ಪಟ್ಟಿರಲಿಲ್ಲವು. ಹೇಗೆಂದರೆ:— ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡಿಗೆ ೧೩,೩೦೦೦೦; ಭರತಖಂಡ, ಚೈನಾ ಮತ್ತು ಸಿಲೋನುಗಳಿಗೆ ೧೯,೦೦,೦೦೦; ದಕ್ಷಿಣ ಆಫ್ರಿಕಾಕ್ಕೆ ೯೩೫೦೦೦; ಕಾನಡಾಕ್ಕೆ ೧೩,೩೫,೦೦೦ ಯುನೈಟೆಡ್ ಸ್ಟೇಟ್ಸಿಗೆ ೧೩,೭೪,೦೦೦

ಕಳೆದ ತಾ॥ ೨೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೩೩೭೮ ಜನರಿಗೆ ಪ್ಲೇಗುರೋಗವು ತಗಲಿ ೧೧೯೩೩ ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ೧೯೩೫; ಮದ್ರಾಸಾಧಿಪತ್ಯದಲ್ಲಿ ೪೭; ಬಂಗಾಳದಲ್ಲಿ ೧೩೪೦; ಸಂಯುಕ್ತ ಪ್ರಾಂತಗಳಲ್ಲಿ ೪೦೨೩; ಪಂಜಾಬಿನಲ್ಲಿ ೨೦೦; ಬರ್ಮಾದಲ್ಲಿ ೯೧; ಮಧ್ಯಪ್ರಾಂತಗಳಲ್ಲಿ ೧೩೫೧; ಹೈದರಾಬಾದು ಸಂಸ್ಥಾನದಲ್ಲಿ ೧೫೭; ಮೈಸೂರ ಸೀಮೆಯಲ್ಲಿ ೩೩೧; ಮತ್ತು ಮಧ್ಯಹಿಂದುಸ್ಥಾನದಲ್ಲಿ ೨೩೦ ಈ ಪ್ರಕಾರ ಸತ್ತಿರುತ್ತಾರೆ.

ಕ್ಷಾಮಪೀಡಿತವಾಗಿರುವ ಕಥೆವಾಡ ಮತ್ತೂ ಗುಜರಾತು ಡಿಸ್ಟ್ರಿಕ್ಟುಗಳಿಗೆ ಆಹಾರ ಪದಾರ್ಥಗಳನ್ನೂ, ದನಗಳಿಗೆ ಮೇವನ್ನೂ ಸಾಗಿಸುವಲ್ಲಿ ಬೊಂಬಾಯಿ ಬರೋಡಾ ಮತ್ತೂ ಸೆಂಟ್ರಲ್ ಇಂಡ್ಯಾ ರೈಲ್ವೆಗಳಲ್ಲಿರುವ ಸಾಮಾನಿನ ಬಂಡಿಗಳೆಲ್ಲವೂ ಉಪಯೋಗಿಸಲ್ಪಡುತ್ತಿರುವುದರಿಂದ ಇತರ ಕಡೆಗೆ ಪದಾರ್ಥಗಳನ್ನು ಸಾಗಿಸಲು ಬಂಡಿಗಳು ದೊರೆಯುವುದಿಲ್ಲವಾದ ಪ್ರಯುಕ್ತ ಅನೇಕವಾದ ದೂರಿಗಾಸ್ಪದವಾಗಿದೆ. ಕ್ಷಾಮದ ದೆಸೆಯಿಂದ ಮೊದಲು ಬೇಕಾಗಿದ್ದ ಬಂಡಿಗಳಿಗಿಂತ ಹತ್ತರಷ್ಟು ಬಂಡಿಗಳು ಒದಗಿಸಲ್ಪಟ್ಟರೂ ಪ್ರಕೃತ ಸ್ಥಿತಿಯಲ್ಲಿ ಸಾಕಾಗುವುದಿಲ್ಲವು.

ಕಳೆದ ತಾ॥ ೨೩ ರಲ್ಲಿ ಕ್ಯಾಲಾನಿನ ಪಲಿಯಕಟ್ಟೆ ಬೀದಿಯಲ್ಲಿ ಒಬ್ಬ ಪೊಲೀಸಿನವನಿಗೂ ಒಬ್ಬ ಮಹಮ್ಮದೀಯ ವರ್ತಕನಿಗೂ ವಾಗ್ವಾದವು ನಡೆದು ಕಡೆಯಲ್ಲಿ ಬಡಿದಾಟವಾಗಲು, ಪೊಲೀಸಿನವನು ಟರ್ನ ಪೊ॥ ಇನ್ಸ್ಪೆಕ್ಟರಿಗೆ ನಡೆದ ಸಂದರ್ಭವನ್ನು ತಿಳುಹಿದನು. ಪೊ॥ ಇನ್ಸ್ಪೆಕ್ಟರು ಆ ವರ್ತಕನನ್ನೂ, ಅವನ ಸಹಕಾರಿಗಳನ್ನೂ ಹಿಡಿಸಿ ಸೆರೆಯಲ್ಲಿಡಿಸಿದನು. ಇವರನ್ನು ಪೊಲೀಸರು ಮರ್ದಿಸಿದರೆಂಬ ಸುದ್ದಿಯು ಊರಲ್ಲೆಲ್ಲಾ ಹರಡಿಕೊಳ್ಳಲು ಅನೇಕ ಮಹಮ್ಮದೀಯರು ಗುಂಪು ಕೂಡಿಕೊಂಡು ಬಂದು ಠಾಣದ ಸುತ್ತಲೂ ನಿಂತು ಅತ್ಯಾಚಾರವನ್ನು ನಡಿಸಲುದ್ಯುಕ್ತರಾದರು. ಅಷ್ಟರಲ್ಲಿ ತಾ॥ ಪೊ॥ ಇನ್ಸ್ಪೆಕ್ಟರು ಮತ್ತೂ ಅ॥ ಸೂಪರಿಂಟೆಂಡರೂ ಪೊಲೀಸರನ್ನು ಕೂಡಾ ಕರೆದುಕೊಂಡು ಬಂದು ಗುಂಪನ್ನು ಚದರಿಸಲು ಸಾಹಸಪಟ್ಟರೂ ಸಾಧ್ಯವಾಗಲಿಲ್ಲವು. ಮತ್ತೂ ದೊಡ್ಡ ಕದನವಾಗುತ್ತದೆಂಬ ಶಂಕೆಯೂ ಹುಟ್ಟಿತು. ಇದರಮೇಲೆ ಟರ್ನ ಮ್ಯಾಜಿಸ್ಟ್ರೇಟರೂ, ಡಿ॥ ಮ್ಯಾಜಿಸ್ಟ್ರೇಟರೂ ಬಂದು ಗೊಂದಲದಲ್ಲಿ ಮುಖಂಡರಾದ ಜನರ ಮುಚ್ಚಳಿಕೆಯನ್ನು ತೆಗೆದುಕೊಂಡು ಗುಂಪನ್ನು ಚದರಿಸಿಬಿಟ್ಟರು.

ಬಾಲಮುಕುಂದ ಎಂಬ ಒಬ್ಬ ದ್ರಾಕ್ಷಾರಸದ ವ್ಯಾಪಾರಿಯು ತನ್ನ ಹೆಸರಿಗೆ ಅಂಚೆಯ ಮಣಿಯಾರ್ಡರ ದ್ವಾರ ಬಂದ ೩೪ ರೂ. ಗಳನ್ನು ಮನಿಯಾರ್ಡರ್ ಫಾರಮಿಗೆ ತನ್ನ ಹಸ್ತಾಕ್ಷರವನ್ನು ಬರೆದು ತೆಗೆದುಕೊಂಡಿದ್ದು, ಸ್ಟಾಂಪನ್ನು ಹಚ್ಚಿ ಹಣರಸೀತಿಯನ್ನು ಬರೆದುಕೊಡಬೇಕೆಂದು ಹಣವನ್ನು ಕಳುಹಿದವನು ಅಪೇಕ್ಷಿಸಲು ಬೇರೊಂದು ರಸೀತಿಯನ್ನು ಬರೆದುಕೊಡುವುದಿಲ್ಲವೆಂದು ತಿರಸ್ಕರಿಸಿಬಿಟ್ಟನು. ಇದರ ಮೇಲೆ ಹಣವನ್ನು ಕಳುಹಿದವನು ಸ್ಟಾಂಪ್ ಆಕ್ಟ್ ೬೫ ನೆಯ ಸೆಕ್ಷನ್ ಪ್ರಕಾರ ಬಾಲಮುಕುಂದನ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನು ಹೂಡಲು ಮ್ಯಾಜಿಸ್ಟ್ರೇಟರು ಬಾಲಮುಕುಂದನಿಗೆ ೫೦ ರೂ. ದಂಡವನ್ನು ವಿಧಿಸಿದರು. ಮತ್ತೂ ಅಪೀಲಿನಲ್ಲಿ ಸೆಷನ್ಸ್‌ಜಡ್ಜರು ಕೆಳಕೋರ್ಟಿನ ತೀರ್ಪನ್ನೇ ಸ್ಥಿರಗೊಳಿಸಿದರು. ಆದರೆ ಅಲಹಾಬಾದಿನ ಹೈಕೋರ್ಟಿನಲ್ಲಿ ಅಪೀಲನ್ನು ಮಾಡಿರುವಲ್ಲಿ “ಬಾಲಮುಕುಂದನು ಹಣವನ್ನು ತೆಗೆದುಕೊಂಡು ಮನಿಯಾರ್ಡರು ರಸೀತಿಯಲ್ಲಿ ತನ್ನ ಹಸ್ತಾಕ್ಷರ (ರುಜು) ವನ್ನು ಬರೆದು ಅದನ್ನು ಪೋಸ್ಟ್‌ದ್ವಾರ ಹಣವನ್ನು ಕಳುಹಿದವನಿಗೆ ತಲುಪಿಸಿರುವುದೇ ಸಾಕಾಗಿರುವುದರಿಂದ ಅವನು ಬೇರೊಂದು ರಸೀತಿಯನ್ನು ಕೊಡಬೇಕಾದ ಅಗತ್ಯವಿಲ್ಲವು. ಮತ್ತೂ ಅವನು ಎರಡನೆಯ ರಸೀತಿಯನ್ನು ಕೊಡುವುದಿಲ್ಲವೆಂದು ತಿರಸ್ಕರಿಸಿದುದು ಸ್ಟಾಂಪ್ ಆಕ್ಟ್ ೬೫ ನೆಯ ಸೆಕ್ಷನ್ ಪ್ರಕಾರ ಅಪರಾಧವಾಗುವುದಿಲ್ಲವು.” ಎಂದು ಚೀಫ್‌ಜಡ್ಜಿ ಮತ್ತು ಇನ್ನೊಬ್ಬ ಜಡ್ಜಿಯೂ ನಿರ್ಧರಿಸಿ ಅರ್ಥದಂಡ ಶಿಕ್ಷೆಯನ್ನು ವಜಾಮಾಡಿದ್ದಾರೆ. ಮನಿಯಾರ್ಡರು ದ್ವಾರ ಹಣವನ್ನು ಪಡೆದುಕೊಂಡವರು ಹಣವನ್ನು ಕಳುಹಿದವನಿಗೆ ಸ್ಟಾಂಪನ್ನು ಹಚ್ಚಿ ಪ್ರತ್ಯೇಕವಾದ ರಸೀತಿಯನ್ನು ಬರೆದುಕೊಡಬೇಕಾದುದಿಲ್ಲವೆಂಬುದು ಪ್ರಕೃತ ವಿಚಾರಣೆಯಿಂದ [illegible]

ಪತ್ರವ್ಯವಹಾರವು.

ಶ್ರೀ ಶಿವಯೋಗಮಂದಿರದಲ್ಲಿ ನೆರೆಯುವ ಮೂರನೆಯ ಶ್ರೀಮದ್ವೀರಶೈವ ಧರ್ಮೋತ್ತೇಜಕ ಸಭಾ.

ಸಮಸ್ತ ವೀರಶೈವ ಮತಾಭಿಮಾನಿಗಳಿಗೆ,—

ವೇದಾಗಮಪುರಾಣಗಳಲ್ಲಿ ಸ್ತುತ್ಯವೆನಿಸಿದ ವೀರಶೈವ ಮತವು ಕಲಿಪ್ರಾಬಲ್ಯದಿಂದ ಗ್ಲಾನಿಹೊಂದಿ ಹೀನಾವಸ್ಥೆಗೆ ಬಂದುದನ್ನು ಕಂಡು ಸ್ವಧರ್ಮಾಭಿಮಾನಿಗಳು ಧರ್ಮೋತ್ತೇಜಕವೆಂಬ ಹೆಸರಿನ ಒಂದು ಸಭೆಯನ್ನು ಸ್ಥಾಪಿಸಿ ತನ್ಮೂಲಕ ಧರ್ಮಗ್ಲಾನಿಯನ್ನು ಹೋಗಲಾಡಿಸಿ ಸ್ವಮತ ತತ್ವಗಳನ್ನು ಪ್ರಕಾಶಗೊಳಿಸಬೇಕೆಂಬ ಸದುದ್ದೇಶದಿಂದ ಮೊದಲನೆಯ ಧರ್ಮೋತ್ತೇಜಕ ಸಭೆಯನ್ನು ಬಂಕಾಪುರದ ಮಹನೀಯರ ಸಹಾಯದಿಂದಲೂ ಎರಡನೆಯ ಧರ್ಮೋತ್ತೇಜಕ ಸಭೆಯನ್ನು ಹರ್ಲಾಪುರದ ಫಕೀರಪ್ಪನವರ ಮತ್ತು ನೆರೆಹೊರೆಯ ಗ್ರಾಮಗಳ ಪ್ರಮುಖರ ಸಹಾಯದಿಂದಲೂ ಅತ್ಯಂತಭಕ್ತಿಯಿಂದ ನೆರವೇರಿಸಿರುವುದು ಸರ್ವಶ್ರುತವಾಗಿರುವುದಷ್ಟೆ. ಮೂರನೆಯ ಸಭೆಯು ಈ ವರುಷ ದುಷ್ಕಾಲವಾದುದರಿಂದ ಎರಡನೆಯ ಕಡೆಗೆ ಎಲ್ಲಿಯೂ ನೆರೆಯಲು ಅವಕಾಶವು ದೊರೆಯದ ಮೂಲಕ ಶಿವರಾತ್ರಿ ಕಾಲದಲ್ಲಿ ಅನೇಕ ವೀರಶೈವರು ಪದ್ಧತಿಪ್ರಕಾರ ಶಿವಯೋಗಮಂದಿರದಲ್ಲಿ ಮಿಳಿತರಾಗುವ ಪ್ರಸಂಗವಿರುವುದರಿಂದ ಇದೇ ಮಾಘ ಕೃಷ್ಣ ಚತುರ್ದಶಿ ಶನಿವಾರ, ಅಮಾವಾಸ್ಯೆ ರವಿವಾರ, ಫಾಲ್ಗುಣ ಶುದ್ಧ ಪ್ರತಿಪತ್ ಚಂದ್ರವಾರ ಎಂದರೆ (ತಾ॥ ೧೭, ೧೮, ೧೯ ಫೆಬ್ರುವರಿ ಸನ್ನ ೧೯೧೨) ಈ ಮೂರು ದಿವಸ ಸಭೆಯು ಕೆಲಸವು ನಡೆಯುವುದಾಗಿ ನಿಶ್ಚಯಿಸಲ್ಪಟ್ಟಿರುತ್ತದೆ. ಆದುದರಿಂದ ಸ್ವಮತಾಭಿಮಾನಿಗಳನ್ನೊಡಗೊಂಡು ತಪ್ಪದೆ ಬಂದು ಈ ಮಹಾಕಾರ್ಯವನ್ನು ಸಾಂಗಗೊಳಿಸಿ, ಪುಣ್ಯಶ್ರೇಯಸ್ಸನ್ನು ಸಂಪಾದಿಸುವರೆಂದು ನಮ್ಮ ಸವಿನಯ ಪ್ರಾರ್ಥನೆಯುದೆ.

ಸಭೆಯಲ್ಲಿ ಜರುಗುವ ವಿಷಯಗಳು,

(೧) ಮಾಹೇಶ್ವರರ ಸುಧಾರಣೆ ಮತ್ತು ಅವರವರ ಕರ್ತವ್ಯ ಜಾಗರೂಕತೆ. (೨) ವೀರಶೈವಮತ ಸಂಬಂಧವಾದ ಕ್ಷೇತ್ರ, ಜಾತ್ರೆಗಳ ಸುಧಾರಣೆ. (೩) ಸಭೆಯಲ್ಲಿ ಯೋಗ್ಯ ಸೂಚನೆಗಳು ಬಂದಲ್ಲಿ ಅವುಗಳನ್ನು ಚೆನ್ನಾಗಿ ಚರ್ಚಿಸಿ ಸರ್ವಾನುಮತದಿಂದ ನಿರ್ಧರಿಸುವುದು. ಸಂದಿಗ್ಧವಾದ ಸೂಚನೆಗಳು ಬಂದಲ್ಲಿ ಮುಂದೆ ಚರ್ಚಿಸುವುದಕ್ಕಾಗಿ ಇಟ್ಟುಕೊಳ್ಳುವುದು. (೪) ಹಿಂದಿನ ಮಹಾಸಭೆಗಳಲ್ಲಿ ಮತ್ತು ಧರ್ಮೋತ್ತೇಜಕ ಸಭೆಗಳಲ್ಲಿ ಆದ ಧರ್ಮಸಂಬಂಧದ ಸುಲಭಸಾಧ್ಯ ಠರಾವು ಪ್ರಚಾರದಲ್ಲಿ ತರುವುದು. (೫) ಶಿವಯೋಗಮಂದಿರದ ಆಲೋಚನೆ (೬) ವೀರಶೈವ ಮತಸಂಬಂಧದ ವರ್ತಮಾನ ಪತ್ರಗಳ ಆಲೋಚನೆ. (೭) ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳ ದೆಸೆಯಿಂದ ಯೋಗ್ಯ ಉಪಯೋಗವಾಗುವಂತಹ ಕಾವ್ಯಗಳನ್ನು ತಯಾರಿಸುವ ಉಪಾಯ.

ಪ್ರತಿಯೊಂದು ಗ್ರಾಮದವರು ತಮ್ಮಲ್ಲಿಯ ಪ್ರತಿನಿಧಿಗಳನ್ನು ಆರಿಸಿ ಅವರ ಹೆಸರುಗಳನ್ನು ಮುಂಚಿತವಾಗಿ ಶಿವಯೋಗಮಂದಿರದ ಅಧ್ಯಾಪಕರಾದ ಸೋಮನಾಥ ಶಾಸ್ತ್ರಿಗಳ ಕಡೆಗೆ ಕಳುಹಿಸಬೇಕು.

ಟೀಪು— ಧರ್ಮಗುರುಗಳು, ಶಾಸ್ತ್ರಿಗಳು, ಕನ್ನಡ ಶಾಲಾ ಅಧ್ಯಾಪಕರು ಧರ್ಮ ಸುಧಾರಣೆಗೆ ಮುಖ್ಯರೆನಿಸಿರುವುದರಿಂದ ಪ್ರತಿಯೊಬ್ಬರು ತಪ್ಪದೆ ಸಭೆಗೆ ಬಂದು ಧರ್ಮಾಭಿಮಾನವನ್ನು ವ್ಯಕ್ತಪಡಿಸುವರೆಂದು ಅತ್ಯಂತ ಆಗ್ರಹದ ಸೂಚನೆಯುಂಟು. ಮತ್ತೂ ವೀರಶೈವರ ಒಳಭೇದದ ಪೈಕಿ ಹೂಗಾರರೂ, ಗುಂತಾಭಕ್ತರೂ (ಕಂಬಾರರು) ಇವರ ಸುಧಾರಣೆಯ ಬಗ್ಗೆ ಅನೇಕ ತರದಿಂದ ಸೂಚನೆಗಳು ಬಂದಿರುವುವು. ಆದುದರಿಂದ ಈ ಪಂಗಡದವರು ಪ್ರತಿಯೊಬ್ಬರು ತಪ್ಪದೆ ಬಂದು ತಮ್ಮತಮ್ಮ ಸುಧಾರಣೆಯನ್ನು ಮಾಡಿಕೊಳ್ಳಬೇಕು. ಎಲ್ಲರೂ ಬಾದಾಮಿ ಸ್ಟೇಶನಕ್ಕೆ ಇಳಿಯಬೇಕು. ಇಲ್ಲಿಂದ ಶಿವಯೋಗಮಂದಿರವು (೯) ಮೈಲು ಆಗುವುದು. ಇಲ್ಲಿ ಬರುವವರಿಗೆ ಮಹಾಕ್ಷೇತ್ರ ಪುಣ್ಯವು ಲಭಿಸುವುದಲ್ಲದೆ ಮಹನೀಯರ ಸಂದರ್ಶನ ಲಾಭವಾದರೂ ಆಗುವುದಾದುದರಿಂದ ಉಳಿವಿ ಮೊದಲಾದ ಕ್ಷೇತ್ರಗಳಿಗೆ ಸಕಲ ಸನ್ನಾಹದಿಂದ ಹೋಗುವಂತೆ ಇಲ್ಲಿಗೆ ಬಂದು ಸ್ವಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂಬೀವಿಷಯವನ್ನು ಸಮಸ್ತರಿಗೂ ಪ್ರಸಿದ್ಧಪಡಿಸುವರೆಂದು ಸವಿನಯ ಪ್ರಾರ್ಥನೆಯುಂಟು. ವೇತನವನ್ನು ತೆಗೆದುಕೊಂಡು ಬೋಧನಮಾಡಲು ಸಮ್ಮತಿಯುಳ್ಳವರು ಈ ಸಭೆಗೆ ಅವಶ್ಯವಾಗಿ ಬರಬೇಕು; ಯಾರಿಗೆ ಬೋಧಕರ ಅವಶ್ಯವಿದೆಯೋ ಅವರು ಅಗತ್ಯ ಸಭೆಗೆಬಂದು ತಿಳಿಸಬೇಕು. ತಮಗೆ ಅನನುಕೂಲವಾದರೆ ಪತ್ರದಿಂದ ತಿಳಿಸಬೇಕು.

ಶಿವಲಿಂಗಶಾಸ್ತ್ರಿ,
ಧರ್ಮೋತ್ತೇಜಕ ಸಭೆಯ ಕಾರ್ಯದರ್ಶಿ,
ಶಿವಯೋಗ ಮಂದಿರ.

ಅನಂತಪುರ ಜಿಲ್ಲಾ ಗುತ್ತಿ ತಾಲ್ಲೂಕು [illegible] ಗ್ರಾಮದ ವಿರಕ್ತಮಠದ ಶ್ರೀ [illegible]

೧೮೩೩ ನೇಯ ವಿರೋಧಿಕೃನ್ನಾಮ ಸಂ॥ದ ಕಾರ್ತೀಕ ಶು॥ ೧೦ ಯಲ್ಲಿ ಧರ್ಮಾರ್ಥವಾಗಿ ಸ್ಥಾಪಿಸಿ ನಡೆಸಿಕೊಂಡು ಬರುತ್ತಿರುವ ಸಂಸ್ಕೃತಪಾಠಶಾಲೆಗೆ ಪ್ರತಿವರ್ಷ ಚಂದಾಕೊಡಲೊಪ್ಪಿರುವವರ ವಿವರ:—

ಉರುಕೊಂತೆ ಗ್ರಾಮದ ಗವಿಮಠದ ಸಂಸ್ಥಾನದ ಶ್ರೀ ಚನ್ನಬಸವ ಸ್ವಾಮಿಗಳು ೧೦೦ ರೂ., ವ॥ ರಾ॥ ಗಳಾದ ಬಳ್ಳಾರಿಯ ಗಡಿಗೆ ವೀರಭದ್ರಪ್ಪನವರು ೨೫ ರೂ., ಕೊಂಡಕೆಂಚಿ ಚಂದಪ್ಪನವರು ೧೫ ರೂ., ಮುಂಡಾಸದ ಚಿಕ್ಕಲ್ಲಿ ದೊಡ್ಡವೀರಭದ್ರಪ್ಪನವರು ೧೫ ರೂ., ಕೌತಾಳದ ಗುರುಶಾಂತಪ್ಪನವರು ೧೦ ರೂ., ಸಿಂದಗಿ ಗವಿಯಪ್ಪನವರು ೧೦ ರೂ., ರಾಯದುರ್ಗದ ತಾ॥ ಕಲ್ಲುಹೊಳೆಮಠದ ಕಲ್ಲುಹೊಳೆಯ್ಯನವರು ೧೦ ರೂ., ಬಳ್ಳಾರಿಯ ಅಲ್ಲಂಬಸಪ್ಪನವರು ೧೦ ರೂ., ಮೇಚೆರಡ್ಡಿ ಚೆಂಗಳಪ್ಪನವರು ೧೦ ರೂ., ಸಿಂದಗಿ ಮರಿಸಿದ್ಧಪ್ಪನವರ ಮಕ್ಕಳು ಸಿದ್ದಪ್ಪನವರು ೯ ರೂ., ಉಂತುಕಲ್ಲು ಆಸ್ಪಲ್ಲಿ ನೀಲಕಂಠಪ್ಪನವರು ೫ ರೂ., ಬಳ್ಳಾರಿಯ ಹತ್ತಿ ವೀರಭದ್ರಪ್ಪನವರು ೫ ರೂ., ಬಳೆವೀರಭದ್ರಪ್ಪನವರು ೫ ರೂ., ಆಸ್ಪಲ್ಲಿ ಪಂಚಪ್ಪನವರು ೫ ರೂ., ಅರಳೆಯ ಬಸಪ್ಪನವರು ೫ ರೂ., ತಗಡಿ ವೀರಮಲ್ಲಪ್ಪನವರು ೫ ರೂ., ಸಿಂದಗಿ ಬೌರಣ್ಣನವರ ಸಿದ್ಧಗಂಗಪ್ಪನವರು ೫ ರೂ., ಮೋಟಿ ಬಸಪ್ಪ ಕುಪ್ಪಲ್ಲು ಅಯ್ಯಪ್ಪನವರು ೫ ರೂ. ಬೊಚೆಗಟಿ ಮಹಾದೇವಪ್ಪನವರು ೫ ರೂ., ಶಿವಚನ್ನಬಸಪ್ಪ ಕರೆಪ್ಪನವರು ೫ ರೂ., ಜಾನಕುಂಟಿ ಶಿವರಾಯಪ್ಪನವರು ೫ ರೂ., ಬಳ್ಳಾರಿ ಜಿಲ್ಲ ಹೊಸ್ಪೇಟಿಯ ಕುದುರೆಮೋತಿ ಸಿದ್ಧಲಿಂಗಪ್ಪನವರು ೫ ರೂ., ಗುತ್ತಿ ಗಡ್ಡಪ್ಪನವರು ೫ ರೂ., ಹೊಸಪೇಟಿ ತಾ॥ ಚಿತ್ತವಾಡಗಿಯ ಗುಗ್ರಿ ದೊಡ್ಡಹುಚ್ಚಪ್ಪನವರು ೫ ರೂ, ಚೆನ್ನಯ್ಯ ವೆಂಕಪ್ಪಣ್ಣನವರು ೫ ರೂ, ಬೊಮ್ಮನಹಾಳು ಗ್ರಾಮದ ಕಲ್ಲುಹೊಳೆಮಠದ ಕೆಂಪಯ್ಯನವರು ೪ ರೂ, ಚಿತ್ತವಾಡಿಗಿಯ ವುಳ್ಳೆಗಡ್ಡಿ ಕಲ್ಮಠಪ್ಪನವರು ೪ ರೂ., ಬಂಡೆ ಹನುಮಂತಪ್ಪನವರು ೪ ರೂ., ಬಳ್ಳಾರಿಯ ಮಸಿಗಿ ಶಾಂತಪ್ಪನವರು ೪ ರೂ, ಹೊಸಪೇಟಿಯ ವಾಲ್ಮೂರು ನಾಗಲಿಂಗಪ್ಪ ಮರುಳಪ್ಪನವರು ೩ ರೂ., ಚಿತ್ತವಾಡಿಗಿ ವಿರಕ್ತಮಠದ ತೋಟಯ್ಯನವರು ೩ ರೂ.

ಸಶೇಷ.

ಶ್ರೀ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಗುರುವೀರಭಿಕ್ಷಾವೃತ್ತಿ ರಾಜದೇಶಿಕೇಂದ್ರಮಹಾಸ್ವಾಮಿಗಳ ದೇಶಸಂಚಾರ:—

ನಿಜಾಂ ಇಲಾಖಾ ರಾಯಿಚೂರು ಡಿ॥ ನಲ್ಲಿ ಸಿಂಧನೂರು ತಾ॥ ರಾಗಲಪರವಿ ಗ್ರಾಮದ ಮಾಲಿ ಪಾಟೀಲ ವ॥ ಬಸವಲಿಂಗಗೌಡರ ಪ್ರಾರ್ಥನೆಯಂತೆ ಕಳೆದ ತಿಂಗಳಲ್ಲಿ ಮಹಾಸ್ವಾಮಿಗಳು ಸಕಲ ಪರಿವಾರದೊಡನೆ ಚಿತ್ತೈಸಿ ಬಸವಲಿಂಗಗೌಡರು ಬಹು ಭಕ್ತಿಯಿಂದ ಮಾಡಿದ ಪಾದಪೂಜಾ ಸೇವೆಯನ್ನು ಕೈಕೊಂಡು ಖರಾಬುದಿನ್ನೆ ಮೊಕ್ಕಾಮಿಗೆ ಚಿತ್ತೈಸಿ ಅಲ್ಲಿಯ ಭಕ್ತರು ಭಕ್ತಿಯಿಂದಮಾಡಿದ ಸೇವೆಯನ್ನು ತೀರಿಸಿಕೊಂಡು ಮಾನ್ವಿ ತಾ॥ ಪೈಕಿ ಹೊಸೂರು ಗ್ರಾಮಕ್ಕೆ ದಯಮಾಡಿಸಿ ಅಲ್ಲಿ ಅನೇಕ ವೀರಶೈವರು ಮುಂತಾದವರು ಸೇವೆಯನ್ನು ತೀರಿಸಿದನಂತರ ಅದೇ ಗ್ರಾಮದ ಗುಂತಾಭಕ್ತರು ವ॥ ವಿರುಪಣ್ಣನವರು ಪಾದಪೂಜೆಯನ್ನು ಮಾಡಿ ಒಪ್ಪಿಸಿದ ರಜತಪಾತ್ರೆಯನ್ನು ಅಂಗೀಕರಿಸಿ ಭೋಜನಾನಂತರ ಒಂದು ಸಭೆಯನ್ನು ಕೂಡಿಸಿ ವೀರಯ್ಯಶಾಸ್ತ್ರಿಗಳ ಮೂಲಕ ವೀರಶೈವ ಧರ್ಮಸಂಬಂಧವಾಗಿ ಉಪನ್ಯಾಸವನ್ನು ಮಾಡಿಸಿದುದಲ್ಲದೆ ತಾವೂ ಅಪ್ಪಣೆಯನ್ನು ಕೊಡಿಸಿ ಭಕ್ತರನ್ನು ಧನ್ಯರನ್ನಾಗಿ ಮಾಡಿದರು. ಮತ್ತು ಸಕಲಭಕ್ತರಿಗೂ ಸಕಲೈಶ್ವರ್ಯವನ್ನು ಕೊಟ್ಟು ಬಹುಕಾಲ ರಕ್ಷಿಸಲಿ ಎಂದು ಆಶೀರ್ವದಿಸಿದರು. ಶ್ರೀಗಳು ಮಾರನೆಯ ದಿನ ಪ್ರಾತಃಕಾಲದ ಶಿವಾರ್ಚನೆಯನ್ನು ಮುಗಿಸಿಕೊಂಡು ಹಿರೇಕೊಳ್ಳಕಲ್ಲು ಗ್ರಾಮಕ್ಕೆ ಚಿತ್ತೈಸಿ ಅಲ್ಲಿಯ ವೀರಶೈವರು ಒಪ್ಪಿಸಿದ ಪಾದಕಾಣಿಕೆಯನ್ನು ಸ್ವೀಕರಿಸಿ, ಅದೇ ಗ್ರಾಮದ ಗಂಗಾವತಿ ಗುಂಡಪ್ಪ ಗವುಡಪ್ಪ ಬಸಪ್ಪ ಮೊದಲಾದ ಭಕ್ತರು ಉತ್ಸವ ವೈಭವದಿಂದ ಮಹಾಸ್ವಾಮಿಗಳನ್ನು ತಮ್ಮ ಗೃಹಗಳಿಗೆ ಕರೆದುಕೊಂಡು ಹೋಗಿ ಪಾದಪೂಜೆಯನ್ನು ಮಾಡಿ ಬೆಳ್ಳಿಯ ಪಾತ್ರೆಗಳ ಕಾಣಿಕೆಯನ್ನೂ ಸಮರ್ಪಿಸಿದರು. ಮಾರನೆಯ ದಿನ ಮಹಾಸ್ವಾಮಿಯವರ ಸ್ವಾರಿಯು ಜಾನೆಕಲ್ಲು ಮೊಕ್ಕಾಮಿಗೆ ಚಿತ್ತೈಸುತ್ತಲೆ ಅಲ್ಲಿಯ ಮಾಲಿ ಪಾಟೀಲ ಚನ್ನನಗೌಡರು ಶ್ರೀಗಳ ಸ್ವಾರಿಯನ್ನು ತಮ್ಮ ಮನೆಗೆ ಬಿಜಮಾಡಿಸಿಕೊಂಡು ೫-೬ ದಿನಗಳ ವರೆಗೆ ನಿಲ್ಲಿಸಿಕೊಂಡು ಪಾದಪೂಜೆಯಿಂದ ಸತ್ಕರಿಸಿ ಬೆಳ್ಳಿಯ ಪಾತ್ರೆಯನ್ನು ಕಾಣಿಕೆಯಾಗಿ ಒಪ್ಪಿಸಿದರು. ಶ್ರೀಗಳವರು ಅಲ್ಲಿಯ ಭಕ್ತರೆಲ್ಲರಿಗೂ ಪೂರ್ಣಾಶೀರ್ವಾದವನ್ನಿತ್ತು ಉತ್ಸವದೊಡನೆ ಹೊರಟು ಸಾಯಂಕಾಲದಲ್ಲಿ ಬಲ್ಲಟಿಗಿಪ್ಯಾಟಿಯಲ್ಲಿ ಮೊಕ್ಕಾಂಮಾಡಿ ಅಲ್ಲಿಯ ಭಕ್ತರು ಮಾಡಿದ ಸೇವೆಯನ್ನು ಕೈಕೊಂಡು ಮಳೆದ ಪಡಿಯಪ್ಪನವರ ಬಿನ್ನಪವನ್ನು ತೀರಿಸಿ ಜಾಗಟಾವಿ ಗ್ರಾಮಕ್ಕೆ ದಯಮಾಡಿಸಿದರು.

ಒಬ್ಬಭಕ್ತ.

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಆಮಂತ್ರಣ ಪತ್ರಿಕೆಯು.

ಪ್ರಿಯ ಮಹಾಶಯರೇ,

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ೧೮ ನೆಯ ವಾರ್ಷಿಕೋತ್ಸವವು ಬರುವ ಫಾಲ್ಗುಣ ಮಾಸದಲ್ಲಿ ತಾ॥ ೧ ನೆಯ ಮಾರ್ಚ ಸನ್ನ ೧೯೧೨ ಇಸ್ವಿ ಶುಕ್ರವಾರದಿಂದ ಬೆಳಗಾವಿಯಲ್ಲಿ ಪ್ರಾರಂಭವಾಗುವುದು. ಆ ಸಮಾರಂಭದ ಮುಖ್ಯ ಅಂಗಗಳು ಯಾವುವೆಂದರೆ:—

(೧) ಜೈನ ಪರಿಷತ್ತು, (೨) ಜೈನಮಹಿಲಾಪರಿಷತ್ತು, (೩) ಶ್ರೀಯುತ ಚೌಗುಲೆ ವಕೀಲ ಇವರ ನೂತನ ಜಿನಮಂದಿರದ ಪ್ರತಿಷ್ಠಾಮಹೋತ್ಸವ, (೪) ರಥೋತ್ಸವ ಇವೇ ಮೊದಲಾದ ಉತ್ಸವಗಳಿದ್ದು, ಅದರ ಸಲುವಾಗಿ ಉತ್ತರ ಮತ್ತು ದಕ್ಷಿಣ ಹಿಂದುಸ್ಥಾನಗಳಿಂದ ದೊಡ್ಡದೊಡ್ಡ ವಿದ್ವಾಂಸರೂ ಶ್ರೀಮಂತರೂ ಆದ ಜೈನ ಸದ್ಗೃಹಸ್ಥರು ಬರತಕ್ಕವರಿರುವರು ಮತ್ತು ಎಷ್ಟೋ ಜೈನೇತರ ವಿದ್ವಾಂಸರಾದರೂ ತಮ್ಮ ಆಗಮನದಿಂದ ನಮ್ಮಾ ಜೈನ ಪರಿಷತ್ತನ್ನು ಅಲಂಕರಿಸುವವರಿರುವರು. ಈ ಸಂಗತಿಯನ್ನು ತಮಗೆ ತಿಳಿಸಲಿಕ್ಕೆ ನಮಗೆ ಪರಮಾನಂದವಾಗುತ್ತದೆ.

ಈ ಸಾರಿ ಈ ಸಭೆಯ ಅಧ್ಯಕ್ಷಸ್ಥಾನವನ್ನು ಗ್ವಾಲ್ಹೇರ ಸಂಸ್ಥಾನದೊಳಗಿನ ಮೋರೇನಾ ಗ್ರಾಮದ ನಿವಾಸಿಗಳಾದ ಜೈನ ವಿದ್ವದ್ರತ್ನ ಸ್ಯಾದ್ವಾದವಾರಿಧಿ ಪಂಡಿತ ಗೋಪಾಲದಾಸಜಿ ಬರೈಯಾ ಎಂಬವರು ಸ್ವೀಕರಿಸಲಿಕ್ಕೆ ಒಪ್ಪಿಕೊಂಡಿರುವರು. ಈ ಮಾತನ್ನು ತಮ್ಮೆಲ್ಲರಿಗೆ ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಆದ್ದರಿಂದ ಇದರ ಸಂಬಂಧವಾಗಿ ಪರಿಷತ್ತಿನ ಸ್ವಾಗತ ಕಮಿಟಿಯವರು ತಮ್ಮನ್ನು ಕುರಿತು ವಿನಯಪೂರ್ವಕ ಪ್ರಾರ್ಥಿಸುವುದೇನೆಂದರೆ:— ತಾವು ತಮ್ಮ ಆಪ್ತಮಿತ್ರರೆಲ್ಲರನ್ನು ಒಡಗೊಂಡು ಬೆಳಗಾವಿಯಲ್ಲಿ ಆಗುವ ಈ ಉತ್ಸವಕ್ಕೆ ಅಗತ್ಯವಾಗಿ ಬರಬೇಕು. ನಮ್ಮ ಈ ವಿನಂತಿಯನ್ನು ಮಾನ್ಯಮಾಡಿ ಸಭೆಯ ವೇಳೆ ಉಪಕಾರಮಾಡಿರೆಂದು ಆಶಿಸುತ್ತೇವೆ

ತಾವು ಮುಂಚಿತವಾಗಿ ಎಂದರೆ ತಾರೀಖು ೨೦ ನೆಯ ಫೆಬ್ರುವರಿಯೊಳಗಾಗಿ ನಮಗೆ ತಿಳಿಸಿದಲ್ಲಿ ಸ್ವಾಗತ ಕಮಿಟಿಯವರು ಕೈಲಾದಮಟ್ಟಿಗೆ ತಮ್ಮ ಇಳಕೊಳ್ಳುವ ಮೊದಲಾದ ವ್ಯವಸ್ಥೆಯನ್ನು ಮಾಡುವರು. ಈ ಸಂಬಂಧದ ಎಲ್ಲ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ಬರೆಯಬೇಕು. ತಿಳಿಯುವುದು. ಇಂತೀ ಬಿನ್ನಹ:—

ತಮ್ಮ ಕೃಪೆಯನ್ನು ಅಪೇಕ್ಷಿಸುವ,
ಸಾವಂತಪ್ಪಾ ತವನಪ್ಪಾ ಪತ್ರಾವಳಿ.
ಆನರರಿ ಜನರಲ್ ಸೆಕ್ರೆಟರಿ ಸ್ವಾಗತಕಮಿಟಿ,
ಜೈನ ಪರಿಷದ ಬೆಳಗಾವ.
Post. Shahapur-Belgaum. S.M.C.

ಸಭೆಯ ಕಾರ್ಯಕ್ರಮವು

(೧) ತಾ॥ ೧ ಮಾರ್ಚ ೧೯೧೨ ಶುಕ್ರವಾರ—ಮಧ್ಯಾಹ್ನದಲ್ಲಿ ಸಭೆಯ ಆರಂಭ, ಸ್ವಾಗತ ಕಮಿಟಿಯ ಚೇರಮನ್ನರ ಭಾಷಣ, ಅಧ್ಯಕ್ಷರ ಭಾಷಣ, ರಿಪೋರ್ಟವಾಚನ ಮುಂತಾದದ್ದು. (೨) ತಾ॥ ೨ ಮಾರ್ಚ ೧೯೧೨ ಶನಿವಾರ ಮಧ್ಯಾಹ್ನದ ವೇಳೆ ಸಭೆಯ ಠರಾವ, ರಾತ್ರಿಯಲ್ಲಿ ಧರ್ಮಸಂಬಂಧವಾಗಿ ವಿದ್ವಾಂಸರ ಭಾಷಣ (೩) ತಾ॥ ೩ ಮಾರ್ಚ ೧೯೧೨ ರವಿವಾರ ಮಧ್ಯಾಹ್ನದಲ್ಲಿ ಸಭೆಯ ಠರಾವ, ರಾತ್ರಿಯಲ್ಲಿ ಧರ್ಮೋಪದೇಶ. (೪) ತಾ॥ ೪ ಮಾರ್ಚ ೧೯೧೨ ಸೋಮವಾರ—ಮಧ್ಯಾಹ್ನದಲ್ಲಿ ಸಭೆಯ ಠರಾವ, ರಾತ್ರಿಯಲ್ಲಿ ಜೈನ ಮಹಿಲಾಪರಿಷತ್ತು. (೫) ತಾ॥ ೫ ಮಾರ್ಚ ೧೯೧೨ ಮಂಗಳವಾರ—ಮಧ್ಯಾಹ್ನದಲ್ಲಿ ಸಭೆಯ ಠರಾವ, ಕೊನೆಗೆ ಸಭೆಯ ಉಪಸಂಹಾರ.

ಈ ಕಾರ್ಯಕ್ರಮವು ಸದ್ಯಕ್ಕೆ ಗೊತ್ತಾಗಿದ್ದು, ಪ್ರಸಂಗೋಪಾತ್ತ ಇದರಲ್ಲಿ ಹೆಚ್ಚು ಕಡಿಮೆಯಾಗಬಹುದು.

• ಬೆಳಗಾವ ಇದು M. S. M. ರೇಲ್ವೆಯ ಮುಖ್ಯ ಸ್ಟೇಶನಿದ್ದು ಇಲ್ಲಿಯ ಹವೆಯೂ ನೀರೂ ಚೆನ್ನಾಗಿ ಇರುತ್ತವೆ.

ಶ್ರೀ ಗುರುಬಸವರಾಜೋ ವಿಜಯತೇತರಾಮ್.

(ಭಾಮಿನೀ ಷಟ್ಪದಿ)

ಬಸವದೇವನ ಪಾದಕಮಲವ। ನಸವು ಭಕ್ತಿಯ ನೊಸೆದು ಜಾನಿಸಿ। ಪಶುಪತಿಯ ಮತದೇಳ್ಗೆಯನು ಬಯಸುವ ಸುಜನ ತತಿಗೆ। ವಸುಧೆಯೊಳ ಸಷ್ಟಾಂಗದಿಂದಲೆ। ಸಸಿನವೆರಗುತ ಬೇಡಿಕೊಂಬೆವು। ವಸುಮತೀಧರ ದುಹಿತೃ ವಲ್ಲಭ ಕಾರ್ಯ ಕೊಳ್ಳಸವ।

ಶಿವಭಕ್ತ ಶಿರೋಮಣಿಗಳೇ!

ಅನಾದಿ ಸಂಸಿದ್ಧವಾದ ವೀರಶೈವ ಧರ್ಮವು ನಮ್ಮೆಲ್ಲರ ಧರ್ಮಾಶ್ರದ್ಧೆಯಿಂದ ದಿನದಿನಕ್ಕೆ ಮಸುಳಿಸಹತ್ತಿರುವದು. ಶ್ರೀಮದ್ಬಸವಾದಿ ಪ್ರಮಥರು ಆಚರಿಸಿದ ಮಾರ್ಗವು ಅತ್ಯುತ್ತಮವಾದದ್ದೂ, ಇಹಪರ ಉಭಯಸುಖ ಹೇತುವಾದದ್ದೂ ಆದರೂ ಹೇಡಿಯ ಕೈಯಲ್ಲಿ ಚಂದ್ರಾಯುಧದಂತೆಯೂ, ಮೂರ್ಖನ ಕೈಯಲ್ಲಿ ಮಾಣಿಕದಂತೆಯೂ, ನಮ್ಮ ಹಸ್ತಗತವಾಗಿ ನಿರರ್ಥಕವಾಗಿರುತ್ತದೆ. ಅಥವಾ ಅದರ ಆಚಾರವೇ ನಮಗೆ ಪ್ರಾಪ್ತವಾಗಿಲ್ಲೆನ್ನಬಹುದು. ಅದರಿಂದ [illegible] ಜನಿಸುತ್ತ ಇರಿಯ [illegible] ಪಾಷಂಡಿಗಳಾದ ಕೆಲರು ನಮ್ಮ ಮತದ ಆಚಾರ ತತ್ವಗಳಿಗೆ ಅಪಾರ್ಥವನ್ನು ಕಲ್ಪಿಸಿ ಇದೇ ಶ್ರೀಮದ್ಬಸವಾದಿ ಪ್ರಮಥರು ನಡೆಸಿದ ಆಚಾರ, ಇದೇ ಶ್ರೀಮನ್ನಿಜಗುಣಾದಿಗಳು ಬೋಧಿಸಿದ ತತ್ವ, ಇದೀಗ ಮುಕ್ತಿಯ ನಿಧಿ, ಭಕ್ತಿಯ ಖಣಿ, ಸದಾಚಾರಕ್ಕೆ ಕೈಗನ್ನಡಿ, ಎಂದು ಬೋಧಿಸಿ ತಮ್ಮ ವಾಗಾಡಂಬರದಿಂದ ಜನರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದಾರೆ. ಮಂದಿಮಾಡಿದ ಪದ್ಯಗಳನ್ನು ಕದ್ದು ತಮ್ಮವೆಂದು ಪ್ರಕಟಿಸುತ್ತಲಿಹರು. ಶ್ರೀಮದ್ಬಸವ ಪುರಾಣಾದಿಗಳಲ್ಲಿ ನಮ್ಮ ಶ್ರೀ ಶಿವಶರಣರು ಮಾಡಿದ ಪವಾಡಗಳನ್ನು ಕೇಳಿ, ಅಂತಹ ಕಟ್ಟು ಪವಾಡಗಳನ್ನು ತಾವು ಮಾಡಿದ್ದೇವೆಂದು ಜನರ ಮುಂದೆ ನಿಃಶಂಕೆಯಿಂದ ಹೇಳುತ್ತಿಹರು. ತಮ್ಮ ಶಾಸ್ತ್ರಗಳಿಗೆ ಈ ದುರುಳರು ಮಾಡುವ ಅಪಾರ್ಥವನ್ನೂ ಮತತ್ತು ತಮ್ಮ ಪ್ರಾಸಾದಿಕ ವಾಣಿಯಿಂದ ಆ ಶ್ರೀ ಪರಶಿವನನ್ನೂ ಶ್ರೀ ಪರಶಿವನ ಶರಣರನ್ನೂ ಹೊಗಳಿದ ನುಡಿಗಳನ್ನು ಪಾಮರರಿಗೆ ಕದ್ದು ಹಚ್ಚುವದನ್ನು ನೋಡಿ ನಮ್ಮಾದ್ಯ ಶರಣರು ಇಂಥ ಜನರಿಗೆ ತಕ್ಕ ಶಿಕ್ಷೆಯನ್ನು ಮಾಡುವರೆಂಬಲ್ಲಿ ಸಂದೇಹವಿಲ್ಲ ಆದರೆ ಮಹಾಪುಣ್ಯ ಪಣ್ಯದಿಂದ ಶ್ರೀಮದ್ವೀರಶೈವ ಧರ್ಮದಲ್ಲಿ ಪ್ರಾಪ್ತವಾಗಿರುವ ಈ ನಮ್ಮ ಜನ್ಮವನ್ನು ಧರ್ಮದ ಅಪಾಕರಣವನ್ನು ನಿಲ್ಲಿಸಿ, ಸಾರ್ಥಕಗೊಳಿಸುವುದು ಅದ್ಯಕರ್ತವ್ಯವಾಗಿದೆ. ಆದುದರಿಂದ ಈ ಜನರ ಜೊಳ್ಳುಮಾತುಗಳು ಅಪ್ರಮಾಣವಾಗಿವೆಯೆಂತಲೂ, ಇವರ ಆಚಾರವು ವೀರಶೈವ ಧರ್ಮಕ್ಕೆ ಎಷ್ಟೋ ಸಲ್ಲತಕ್ಕದ್ದಲ್ಲವೆಂತಲೂ ನಮ್ಮ ಮತಾನುಯಾಯಿಗಳಿಗೆ ತೋರಿಸುವುದು ಆವಶ್ಯಕವಾಗಿದೆ. ಆ ಕಾರಣದಿಂದ ಶ್ರೀ ಶಿವಭಕ್ತರಿಗೆ ಪರ್ವಕಾಲವಾದ ಇದೇ ಬರುವ ಶ್ರೀ ಮಹಾಶಿವರಾತ್ರಿಯಲ್ಲಿ ಕೆಳಗೆ ಬರೆದ ಪ್ರಕಾರ ವ್ಯಾಖ್ಯಾನಗಳನ್ನು ಹೊಸಹುಬ್ಬಳ್ಳಿ ಬಮ್ಮಾಪೂರ ಓಣೀಮಠದಲ್ಲಿ ಕೊಡಲು ನೇಮಿಸಿರುತ್ತದೆ. ಸರ್ವರೂ ದಯವಿಟ್ಟು ಬರಬೇಕೆಂಬುದೇ ಕೋರಿಕೆ.

ವ್ಯಾಖ್ಯಾನಗಳು.

ಇದೇ ಫೆಬ್ರುವರಿ ತಾ॥ ೧೫ ನೆಯ ಗುರುವಾರ-ಸಂಜೆ ೩ ಗಂಟೆಯಿಂದ ೯ ರ ವರೆಗೆ ಸತ್ಸಂಗತಿ, ಸಾಮಾನ್ಯ ನಿರೂಪಣೆ, ಅಮಾರ್ಗಿಕಲೇಖದ ನಿರಾಕರಣೆ ತಾ॥ ೧೬ ನೆಯ ಶುಕ್ರವಾರ ಶ್ರೀಮಹಾಶಿವರಾತ್ರಿದಿವಸ ಸಂಜೆ ೪ ಗಂಟೆಯಿಂದ ೬ ರ ವರೆಗೆ ಶ್ರೀಮತ್ಪ್ರಾಣಲಿಂಗಸ್ವರೂಪ. ಮತ್ತು ರಾತ್ರಿ ೮ ಗಂಟೆಯಿಂದ ಪ್ರಾತಃಕಾಲ ೪ ರವರೆಗೆ ಶ್ರೀಮದ್ಬಸವಪುರಾಣ ಕೀರ್ತನ. ತಾ॥ ೧೭ ನೆಯ ಶನಿವಾರ ಸಂಜೆ ೩ ಗಂಟೆಯಿಂದ ೯ ರ ವರೆಗೆ ಶ್ರೀಮದ್ಬಸವಪುರಾಣ ಕೀರ್ತನ. ತಾ॥ ೧೮ ನೆಯ ರವಿವಾರ ಸಂಜೆ ೩ ಗಂಟೆಯಿಂದ ೯ ರ ವರೆಗೆ ವಾಗದ್ವೈತ ನಿರಾಕರಣೆ, ಕೈವಲ್ಯಪದ್ಧತಿ, ಕೈವಲ್ಯಕಲ್ಪವಲ್ಲರಿ, ಪರಮಾನುಭವಬೋಧೆ ಇವುಗಳ ಲಿಂಗಾಂಗ ಸಾಮರಸ್ಯ ವಿಷಯಕ ತಾತ್ಪರ್ಯ.

ಶ್ರೀ ಶಿವಪಾದಪದ್ಮ ಮಧುಪ,
ಸಿದ್ಧರಾಮಪ್ಪಾ ದುಂಡಪ್ಪಾ ಪಾವಟೆ, B A. LL B.
ಕಾರ್ಯಕಾರಿ ಶ್ರೀ ಶಿವಪ್ರೇಯಸೀ ಸಭಾ ಹುಬ್ಬಳ್ಳಿ.

ವೀರಶೈವ ಧರ್ಮತರಂಗಿಣಿ.

ಸಮಸ್ತ ಧರ್ಮಾಭಿಮಾನಿಗಳಿಗೆ ತಿಳಿಸುವುದೇನೆಂದರೆ,- ನಮ್ಮ ವೀರಶೈವರಲ್ಲಿ ಧಾರ್ಮಿಕ, ವ್ಯಾವಹಾರಿಕ, ನೈತಿಕ ವಿಷಯಗಳನ್ನು ಬೋಧಿಸುವ ಮಾಸಪತ್ರಿಕೆಯ ಕೊರತೆಯು ಬಹು ದಿವಸದಿಂದ ಇದ್ದುದನ್ನು ಕಂಡು ಧರ್ಮೋತ್ತೇಜಕ ಸಭೆಯವರು ಶ್ರೀ ಶಿವಯೋಗ ಮಂದಿರದ ಪತಿಯಿಂದ ಈ "ಧರ್ಮತರಂಗಿಣೀ" ಎಂಬ ಹೆಸರಿನ ಮಾಸಪತ್ರಿಕೆಯನ್ನು ಹೊರಡಿಸಬೇಕೆಂದು ಗೊತ್ತುಮಾಡಿದ ಮೇರೆಗೆ ಧಾರವಾಡದಲ್ಲಿ ಸನ್ ೧೯೧೧ ನೇ ಡಿಶಂಬರ ತಿಂಗಳಿನಿಂದ ಹೊರಡಹತ್ತಿ ಕೆಲವುಜನ ಚಂದಾದಾರರ ಕೈಯಲ್ಲಿ ಬಂದಿರುವುದು. ಮತತತ್ವಗಳನ್ನು ಅರಿದು ಆಚರಿಸಲಿಕ್ಕೆ ಎಲ್ಲರಿಗೂ ಅನುಕೂಲವಾಗಲೆಂದು ಇದರ ಬೆಲೆಯನ್ನು ತೀರ ಕಡಿಮೆ ಅಂದರೆ ಅಂಚೆವೆಚ್ಚ ಸಹಿತ ೧-೪-೦ರೂ. ಮಾತ್ರ ಇಟ್ಟಿದೆ. ಚಂದಾದಾರರ ಸಂಖ್ಯೆಯು ಹೆಚ್ಚಾಗುತ್ತ ಹೋದಲ್ಲಿ ಇದಕ್ಕೂ ಕಡಿಮೆ ಇಡಬೇಕೆಂಬ ಉದ್ದೇಶವುಂಟು. ಈ ಮಾಸಪತ್ರಿಕೆಯಿಂದ ಉಂಟಾಗುವ ಲಾಭವು ಈ ಮಾಸಪತ್ರಿಕೆಯ ಚಿರಸ್ಥಾಯಿಗೂ ಏಳಿಗೆಗೂ ವಿನಿಯೋಗಿಸಲ್ಪಡುವುದು. ಕೇವಲ ಸಮಾಜ ಸುಧಾರಣೆಗಾಗಿಯೇ ಇದರ ಉತ್ಪತ್ತಿಯು. ಆದುದರಿಂದ ಇದನ್ನು ಪ್ರತಿಯೊಬ್ಬ ಧರ್ಮಾಭಿಮಾನಿಯೂ ಸಂಗ್ರಹಿಸುವುದು ಸರ್ವ ರೀತಿಯಿಂದ ಕಲ್ಯಾಣಕರವಾಗಿರುವುದು. ಚಂದಾದಾರರ ಸಂಖ್ಯೆಯನ್ನು ಬೆಳಸಿದವರು ಈ ಮಾಸಪತ್ರಿಕೆಯಲ್ಲಿ ಶ್ಲಾಘನೆಗೆ ಪಾತ್ರರಾಗುವರಲ್ಲದೆ ಮುಂದೆ ಕಮಿಟಿಯವರು ಗೊತ್ತುಮಾಡಿದ ಮೇರೆಗೆ ಸಂಭಾವನೆಗೆ ಯೋಗ್ಯರಾಗುವರು. ಚಂದಾದಾರರಾಗಬಿಚ್ಛಿಸುವವರು ತಮ್ಮ ತಮ್ಮ ವಿಳಾಸಗಳನ್ನು ಕೆಳಗೆ ಸಹಿಮಾಡಿದವರ ಕಡೆಗೆ ಕಳಿಸಿದಲ್ಲಿ ಪ್ರತಿ ಸಂಚಿಕೆಗಳನ್ನೂ ಕಳಿಸುತ್ತಾ ಹೋಗುವೆವು.

ವಿಳಾಸ:— ಎಚ್. ಎಸ್. ಶಿವಲಿಂಗಶಾಸ್ತ್ರಿ,
ವೀರಶೈವ ಧರ್ಮತರಂಗಿಣೀ ಸಂಪಾದಕ,
[illegible] ಗುಡಿಗಲ್ಲ ಧಾರವಾಡ.

ವಿದ್ಯಾಭಿವೃದ್ಧಿಫಂಡಿಗೆ ಸಹಾಯ್ಯವು.

(ಕಳೆದವಾರದ ಶೇಷ.)

೨. ವ್ಯಾಪಾರ ಮಾಡುವ ವೀರಶೈವರು ದೇವಾದಾಯ್ಯ ಧರ್ಮಾದಾಯಗಳಿಗಾಗಿ ಚಟಾಕಿನಪಟ್ಟಿ, ಧರ್ಮೋಪಟ್ಟಿ ಎಂಬ ಹೆಸರಿನಿಂದ ಹಣವನ್ನು ಕೂಡಿಸುತ್ತಿರುವರು. ಅವರು ವಿದ್ಯಾಭಿವೃದ್ಧಿಯ ಮಹತ್ವವನ್ನು ಮನಸ್ಸಿನಲ್ಲಿ ತಂದು ಈ ಧರ್ಮ ಕಾರ್ಯಕ್ಕಾಗಿ ತಮ್ಮ ಫಂಡಿಗೆ ಕೆಲವು ಅಂಶವನ್ನು ಲಿಂಗಾಯತ ವಿದ್ಯಾಭಿವೃದ್ಧಿಯ ಫಂಡಿನ ಸೆಕ್ರೆಟರಿಯವರ ಕಡೆಗೆ ಕಳಿಸಿದರೆ ಎಷ್ಟೋ ಸಹಾಯವಾಗುವದು.

೩. ಸರಕಾರಿ ಉದ್ಯೋಗಮಾಡುವ ವೀರಶೈವರು ತಾವು ವಿದ್ಯೆಯ ಮಹತ್ವವನ್ನು ಅರಿತವರಾದ್ದರಿಂದ, ಈ ಕೆಲಸಕ್ಕೆ ಸಹಾಯ್ಯಮಾಡುವುದು ತಮ್ಮ ಅಗತ್ಯವಾದ ಕರ್ತವ್ಯವೆಂಬುದನ್ನು ಮನಸ್ಸಿನಲ್ಲಿ ತಂದು ವಿದ್ಯಾಭಿವೃದ್ಧಿಯ ಫಂಡಿಗೆ ಪ್ರತಿವರ್ಷ ತಮ್ಮಿಂದಾದಷ್ಟು ಹಣವನ್ನು ಮುಟ್ಟಿಸುತ್ತ ಹೋದರೆ, ಫಂಡು ಬಳೆಯಲಿಕ್ಕೆ ಅನುಕೂಲವಾಗುವುದು.

೪. ಊರ ಪ್ರಮುಖರೂ, ಮಠದಯ್ಯನವರೂ ಊರೊಳಗಿನ ಪ್ರತಿಯೊಂದು ಶುಭಾಶುಭ ಕಾರ್ಯಗಳಲ್ಲಿ ಇದ್ದೇ ಇರುತ್ತಾರೆ. ಆ ಕಾಲಕ್ಕೆ ಅವರು ಕಾರ್ಯದ ಮನೆಯವರಿಂದ ಅನೇಕ ಪ್ರಕಾರದ ಬಾಬುಗಳನ್ನು ತೆಗೆದುಕೊಳ್ಳುವರು. ಆಗ ವಿದ್ಯಾಭಿವೃದ್ಧಿಯ ಕೆಲಸವಾದರೂ ಒಂದುಬಾಬು ಎಂದು ಎಣಿಸಿ ಅದಕ್ಕಾಗಿ ಸಾಧ್ಯವಿದ್ದ ಮಟ್ಟಿಗೆ ಹಣತಕ್ಕೊಂಡು ಅದರ ಲೆಖ್ಖವನ್ನಿಟ್ಟು ವರ್ಷಕ್ಕೊಮ್ಮೆಯಾಗಲಿ, ನಡುವೆಯಾಗಲಿ ಕೂಡಿದಷ್ಟು ಹಣವನ್ನು ವಿದ್ಯಾಭಿವೃದ್ಧಿಯ ಫಂಡಿಗೆ ಕಳಿಸಿದರೆ ಹೆಚ್ಚು ಉಪಯೋಗವಾಗುವದು.

೫. ಸಿಂಹಾಸನಾಧಿಪತಿಗಳಾಗಲಿ, ಶೂನ್ಯ ಸಿಂಹಾಸನದವರೇ ಆಗಲಿ, ಬಹುಜನ ಶಿಷ್ಯರುಳ್ಳ ದೊಡ್ಡದೊಡ್ಡ ಮಠಸ್ಥರಾಗಲಿ ತಮ್ಮ ಉತ್ಪನ್ನದೊಳಗಿನ ಕೆಲವು ಅಂಶವನ್ನು ವಿದ್ಯಾಭಿವೃದ್ಧಿಯ ಫಂಡಿಗೆ ಕಳಿಸಿಕೊಟ್ಟರೆ, ಭಕ್ತರನ್ನು ಉದ್ಧಾರಮಾಡಿದ ಕೀರ್ತಿಯು ಅವರಿಗೆ ಬರುವದು.

೬. ಎಷ್ಟೋ ಜನರು ಏನಾದರೊಂದು ತಮ್ಮ ಮನೋಭೀಷ್ಟವು ಕೈಗೂಡಿದರೆ ಇಂತಿಷ್ಟು ಜನರ ಗಣಾರಾಧನೆ ಮಾಡುವೆವೆಂದು ದೇವರಿಗೆ ಬೇಡಿಕೊಂಡು ನೂರಾರು ರೂಪಾಯಿ ಖರ್ಚುಮಾಡಿ ಅನೇಕ ಜನರಿಗೆ ಭೋಜನಮಾಡಿಸುವರು. ಧಾರ್ಮಿಕರಾದ ಸದ್ಗೃಹಸ್ಥರು ಕೆಲವರು ಪ್ರತಿವರ್ಷ ಶ್ರಾವಣಮಾಸದಲ್ಲಿ ಈಶ್ವರ ಪ್ರೀತ್ಯರ್ಥವಾಗಿ ಸಾವಿರಾರು ಜನರ ಭೋಜನಮಾಡಿಸುವರು. ಇಂತಹವರು ಶ್ರೇಷ್ಠಧರ್ಮ ಕಾರ್ಯವಾದ ವಿದ್ಯಾಭಿವೃದ್ಧಿಗೋಸ್ಕರ ಪ್ರತಿವರ್ಷವೂ ಕೆಲವು ಹಣ ಕಳಿಸಿದರೆ, ಜನರಿಗೆ ಜ್ಞಾನಾಮೃತವನ್ನು ಭೋಜನಮಾಡಿಸಿದ ಮಹತ್ವದ ಪುಣ್ಯವು ಪ್ರಾಪ್ತವಾಗುವುದು.

೭. ಕೆಲವು ಶ್ರೀಮಂತ ಜನರು ಲಗ್ನ ಮುಂತಾದ ಸಮಾರಂಭಗಳಲ್ಲಿ ಮದ್ದು, ನೃತ್ಯ, ಗೀತ ಮುಂತಾದವುಗಳಿಗಾಗಿ ಸಾವಿರಾರು ರೂಪಾಯಿ ಖರ್ಚುಮಾಡಿ ಜನರಂಜನ ಮಾಡಲಿಕ್ಕೆ ಪ್ರಯತ್ನಮಾಡುತ್ತಾರೆ. ಅವರು ಅಂತಹ ಖರ್ಚನ್ನು ಸ್ವಲ್ಪ ಕಡಿಮೆಮಾಡಿ ವಿದ್ಯಾಭಿವೃದ್ಧಿಯ ಫಂಡಿಗೆ ಕೆಲವುಹಣವನ್ನುಕೊಟ್ಟರೆ ಅವರಿಗೆ ಒಳ್ಳೆಯಶ್ರೇಯಸ್ಸುಂಟಾಗುವುದು.

೮. ದೊಡ್ಡದೊಡ್ಡ ವತನದಾರರಿಗೆ ದೇವರ ದಯದಿಂದ ಸಮಾಜದ ಕಲ್ಯಾಣಮಾಡುವ ಸಾಮರ್ಥ್ಯವಿರುತ್ತದೆ. ಅವರು ದೊಡ್ಡವಂಶದಲ್ಲಿ ಜನ್ಮ ತಾಳಿದ್ದರಿಂದ, ಅವರಲ್ಲಿ ಉದಾರ ಬುದ್ಧಿಯಾದರೂ ಸ್ವಾಭಾವಿಕವಾಗಿ ಇದ್ದೇ ಇರುವುದು. ಅಂತಹವರು ತಮ್ಮುತ್ಪನ್ನದೊಳಗಿನ ಕೆಲವು ಅಂಶವನ್ನು ಈ ಮಹತ್ವದ ಧರ್ಮಕಾರ್ಯಕ್ಕೆ ವಿನಿಯೋಗಿಸಿದರೆ, ಅವರಿಗೆ ಪುಣ್ಯ ಕೀರ್ತಿಗಳು ದೊರಕುವವು.

೯. ವೀರಶೈವರಾದ ನೇಕಾರ, ಬಣ್ಣಗಾರ, ಬಡಿಗ, ಸಿಂಪಿಗ ಮುಂತಾದವರು ಪ್ರತಿವರ್ಷದಲ್ಲೂ ತಮ್ಮ ಒಂದುದಿವಸದ ಉತ್ಪನ್ನವನ್ನಾದರೂ ವಿದ್ಯಾವೃದ್ಧಿಯ ಫಂಡಿಗೆ ಕೊಡಲು ನಿಶ್ಚಯಮಾಡಿದರೆ ಫಂಡು ಬಳೆಯಲಿಕ್ಕೆ ಎಷ್ಟೋ ಸಹಾಯವಾಗುವುದು.

೧೦. ಸಾರಾಂಶವೇನೆಂದರೆ,—ಪ್ರತಿಯೊಬ್ಬ ವೀರಶೈವನು ಸಮಾಜಸುಧಾರಣೆಯ ಮುಖ್ಯ ಉಪಾಯವಾದ ವಿದ್ಯಾಭಿವೃದ್ಧಿಯ ಕೆಲಸಕ್ಕೆ ಸಹಾಯಮಾಡುವುದು ತನ್ನ ಆದ್ಯಕರ್ತವ್ಯವೆಂಬುದನ್ನು ಮರೆಯದೆ ಈ ಪುಣ್ಯಕಾರ್ಯಕ್ಕೆ ಸ್ವಹಸ್ತಪರಹಸ್ತಗಳಿಂದ ಕೈಲಾದಮಟ್ಟಿಗೆ ಸಹಾಯಮಾಡಿದರೆ ಬೇಗನೆ ಸಮಾಜದ ಉನ್ನತಿಯಾಗುವುದೆಂಬುದಕ್ಕೆ ಸಂದೇಹವಿಲ್ಲ.

ನಮ್ಮ ಸುಜ್ಞವಾಚಕರು ಈ ವಿಚಾರಗಳನ್ನು ತಮ್ಮ ನೆರೆಯವರಾದ ವೀರಶೈವ ಬಾಂಧವರ ಮನಸ್ಸಿನಲ್ಲಿ ತಂದುಕೊಟ್ಟು ಅವರು ವಿದ್ಯಾಭಿವೃದ್ಧಿಯ ಕೆಲಸಕ್ಕೆ ತಮ್ಮಿಂದಾದಷ್ಟು ಸಹಾಯ್ಯ ಮಾಡಲಿಕ್ಕೆ ಪ್ರವೃತ್ತರಾಗುವಂತೆ ಮಾಡಿ ನಮ್ಮ ಪ್ರಯತ್ನಕ್ಕೆ ಸಹಾಯ್ಯಮಾಡಬೇಕೆಂದು ಆಶಿಸುತ್ತೇವೆ.

ಕಾಂತವೀರಪ್ಪಾ ಮೆಣಸಿನಕಾಯಿ,
ಆನರರಿ ಸೆಕ್ರೆಟರಿ ಲಿಂಗಾಯತ ವಿದ್ಯಾ
ಭಿವೃದ್ಧಿಯ ಫಂಡು ಧಾರವಾಡ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರೆಗೆ ೧—೧೦—೦.
ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ನೋಟೀಸ್.

2 ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತೆ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯದವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦-೧೦-೦.

ಸಂಪೂರ್ಣಜಾತಕವು.

ಸನ್ಮಿತ್ರರೆ-ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಪುಟಭಾವಕುಂಡಲಿ ದಶಾದಿಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶಿವರ್ಗ ಷಷ್ಟಾಂಶಗಳು ಗ್ರಹಗಳಸಮಯ ಅವಸ್ಥೆ ಜನ್ಮಪದಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರೆವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತು ಫಲಗಳನ್ನು ೫೦-೫೫ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦-೦-೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವದು ಬಿಟ್ಟುಬಹಳಕೊಂದರೆ ಪಡುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಒಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತೆಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳಕಂಡಿಕೆ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಫುಕಟವಾಗಿ ಕೊಡುತ್ತೇವೆ. ನಷ್ಟಜಾತಕವನ್ನು [illegible] ಕೊಡುತ್ತೇವೆ. ಜಾತಕಸುಧಾಸಾರ ವೀರಶೈವ ಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದ ಕಂಡಿಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತವಿರುತ್ತೆ.

ಯಚ್. ಯಂ. ಶಾಸ್ತ್ರಿಗಳು ಗಣೇಶಬೀಡು
ಬಳ್ಳಾರಿ.

25 ## ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣೀ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವೀ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟಡೈರಿ.

35

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊಎಂಬ ಬಟ್ಟೆಯಿಂದಯಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕೂ ವಾರದಕೆಳಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಷಿದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

32 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ರೋಗ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ಕಳುಹಿಸುವೆವು.

ವಿಳಾಸ—
ವೈದ್ಯ. ಜೆ. ಎಸ್. ಜೋಶಿ ಮತ್ತು ಕಂಪನಿ,
ಫೋರ್ಟ್ ಬಜಾರ್,
[illegible]

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

21

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೋತ್ಪತ್ತಿಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕಲವೃತುವಿನಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗೆಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧॥ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರು ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

---

5 ಸರಸವಾದ ನೂತನಪುಸ್ತಕಗಳು.

ವಿರಕ್ತಳಾದ ಸೌದಾಮಿನಿ—ನವರಸಭರಿತವಾದ ನವೀನಕಾದಂಬರಿ ೦-೬-೬; ಪಾಹಸಿಳೆ—ಚಮತ್ಕಾರವಾದ ಕಥೆ ೦-೨-೬; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ ೦-೧-೦. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦-೧-೬ ಶ್ರೀಹರಿಕೀರ್ತನಾ ೦-೧-೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ವಿ. ಶಾಸ್ತ್ರಿ, ಚಾಮರಾಜನಗರ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
76 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ — ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦
ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ನೆಯ ಇಸವಿ ಫೆಬ್ರವರಿ ತಾ|| ೫ ರಿಂದ ೧೯೧೨ನೆಯ ಫೆಬ್ರವರಿ ತಾ|| ೧೧ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಮಾಘ ಬ|| ತದಿಗೆಯಿಂದ ಮಾಘ ಬ|| ನಾಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	[illegible]
5	ಸೋ	ತ	43-54	ಪುಬ್ಬ	32-3	23
6	ಮಂಗ	ಚೌ	40-2	ಉತ್ತರ	30-58	24
7	ಬುಧ	ಪಂ	37-50	ಹಸ್ತ	30-13	25
8	ಗುರು	ಷ	37-17	ಚಿತ್ತ	30-2	26
9	ಶುಕ್ರ	ಸ	36-58	ಸ್ವಾತಿ	32-4	27
10	ಶನಿ	●	38-30	ವಿಶಾಖ	34-3	28
11	ಭಾನು	ನ	39-39	ಅನೂರಾ	39-19	29

ಮೈಸೂರ್ : ಶ್ರೀ [illegible] ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

2

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

42

ಲೋಕಾಮಯಾಪಹ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಗಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚ ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ [illegible],
ಮೈಸೂರು.

REGISTERED NO. M 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯನ್ತಿನ ಕೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭರ್ತ್ತಿ ಶ್ರೀಯಂ ಸದಾಪೂರಿಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಗ ೧೯೧೨ ನೆಯ ಇಸವಿ ಫೆಬ್ರವರಿ ತಾರೀಖು ೧೨ ನೆಯ ಸೋಮವಾರ. [ಸಂಚಿಕೆ ೭

ಸಂತೋಷಕರವಾದ ಪ್ರಕಟನೆ! ಸರ್ವರೂ ಓದಿ ಪ್ರೋತ್ಸಾಹಕೊಡಿರಿ !!

8 ☞ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಮೈಸೂರ್.

ನಮ್ಮ ಪದಾರ್ಥವನ್ನು ನಾವು ಹೊಗಳಿ ಪ್ರಯೋಜನವೇನು? ನೀವು ಅನೇಕ ಕಡೆಯಿಂದ ತರಿಸಿರಬಹುದು. ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ಸೀಮೆಯಿಂದ ರಖಂವಾರ್ ವಾಚುಗಳ ಹೊಸಗುಡ್ಸು ಬಂದಿರುವುದರಿಂದ ಬೆಲೆಯನ್ನು ಬಹಳ ಕಡಮೆಮಾಡಿದ್ದೇವೆ. ಆದ್ದರಿಂದ ಪ್ರತಿನಿತ್ಯವೂ ಅನೇಕ ಆರ್ಡರ್‌ಗಳು ಬಂದು ಡಜಗಟ್ಟಲೆ ವಿಕರಿಯಾಗುತ್ತಾ ಇವೆ. ಇಂಥಾ ಸಮಯವನ್ನು ಕಳೆದುಕೊಳ್ಳದೆ ಸರ್ವರೂ ಜಾಗ್ರತೆ ಆರ್ಡರ್‌ಕೊಟ್ಟು ತರಿಸಿಕೊಳ್ಳಿರಿ. ವಾಚಿನ ಪಟ್ಟಿಲ್:— ರಾಸ್ಕೋಫ್ ಸಿಸ್ಟಂವಾಚ್ ೧ ಕ್ಕೆ ೨-೮-೦; ಗ್ಯಾರೆಂಟಿ ರೈಲ್ವೆರೆಗ್ಯುಲೇಟರ್‌ವಾಚ್ ೧ ಕ್ಕೆ ೩-೮-೦; ಸುಂದರವಾದ ಪ್ಲಾಟ್‌ವಾಚ್ ೧ ಕ್ಕೆ ೫-೮-೦; ಕ್ವೀನ್‌ವಾಚ್ ೧ ಕ್ಕೆ ೬-೮-೦; ಪರ್ಟಲ್‌ಮೆರ್ ಡ್ರೆಸ್‌ವಾಚ್ ಎಂಬ ಗ್ಯಾರೆಂಟಿಯಾದ ವಾಚ್ ೧ ಕ್ಕೆ ೮-೮-೦, ಒಂದುಸಾರಿ ಬೀಗಕೊಟ್ಟರೆ ೮ ದಿವಸದವರೆಗೂ ವ್ಯತ್ಯಾಸವಿಲ್ಲದೆ ನಡಿಯತಕ್ಕ ವಾಚ್ ೧ ಕ್ಕೆ ೧೦-೮-೦; ನಮ್ಮ ಹಿಂದೂದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೆ ತಿರುಗುತ್ತಾ ಘಂಟೆ ನಿಮಿಷಗಳನ್ನು ಸಹ ತೋರಿಸುವ ವಾಚ್ ೧ ಕ್ಕೆ ೬-೮-೦; ಘಂಟೆ ನಿಮಿಷ ಸೆಕೆಂಡ್ ತೋರಿಸಿ ತಾರೀಖು ಸಹ ತೋರಿಸುವ ವಾಚ್ ೧ ಕ್ಕೆ ೫-೧೨-೦; ಮತ್ತೂ ಮೇಲ್ಕಂಡವೆಲ್ಲಾ ಇದ್ದು ವಾರಾ ತಾರೀಖು ತಿಂಗಳು ಪೂರ್ಣಿಮಾ ಅಮಾವಾಸ್ಯೆ ಇವೆಲ್ಲಾ ತೋರಿಸುವ ವಾಚ್ ೧ ಕ್ಕೆ ೧೨-೪-೦; ಸುಂದರವಾದ ಟೇಬಲ್ ಗಡಿಯಾರ ಘಂಟೆ ಅರ್ಧಘಂಟೆ ಸಹ ಹೊಡೆಯುತ್ತೆ ಕ್ರಯ ೧ ಕ್ಕೆ ೪-೧೨-೦; ಡಿಟೋ ಅಲಾರಂ ಸಹಾ ಇರುವುದಕ್ಕೆ ೫-೪-೦; ಮನೋಹರವಾಗಿ ಗಾನಮಾಡುವ ಕ್ಲಾಕ್ ೧ ಕ್ಕೆ ೫-೮-೦; ಸಾದಾ ಟೈಂಪೀಸ್ ೧ ಕ್ಕೆ ೧-೪-೦; ಅಲಾರಂ ಇರತಕ್ಕದ್ದು ೨-೪-೦; ಅಮೇರಿಕನ್ ಅರ್ಸೋನಿಯಾ ಅಲಾರಂ ಟೈಂಪೀಸ್ ೧ ಕ್ಕೆ ೩-೮-೦; ಅರ್ಸೋನಿಯಾ ದೊಡ್ಡ ಟೈಂಪೀಸ್ ಘಂಟೆ ಅರ್ಧಘಂಟೆ ಹೊಡೆದು ಅಲಾರಂಸಹ ಇರತಕ್ಕದ್ದು ೬-೧೦-೦; ವಾಚ್‌ಸರಪಣಿಗಳು ೪ ಆಣೆ ಲಾಗಾಯ್ತು ನಾಲ್ಕು ರೂಪಾಯಿ ವರಿಗೂ ಇಧೆ ಯಸ್ಮುಖರೀದಿಯಲ್ಲಿ ಬೇಕಾದರೂ ಖಾತ್ರಿಯಿಂದ ರವಾನಿಸುತ್ತೇವೆ ಬೆಳ್ಳಿ ಸರಪಣಿ ೨|| ತೊಲ ಲಾಗಾಯಿತು ೪ ತೊಲದ ವರೆಗೆ ಇದೆ. ತೊಲ ೧ ಕ್ಕೆ ೧-೪-೦. ಮತ್ತು ವಾಚ್‌ರಿಪೇರಿಂಗ್ ಡಿಪಾರ್ಟ್ಮೆಂಟನ್ನೂ ಸಹ ಇಟ್ಟಿರುತ್ತೇವೆ. ಪರಸ್ಥಳದಿಂದ ರಿಪೇರಿಗಾಗಿ ಬರತಕ್ಕ ವಾಚ್‌ಗಳಿಗೆ ಸರಿಯಾದ ಚಾರ್ಜಿಗೆ ರಿಪೇರಿಮಾಡಿ ರವಾನಿಸಲಾಗುತ್ತೆ. ವಾಚಿನ ಬಿಡಿಸಾಮಾನುಗಳೂ ವಾಚ್ ರಿಪೇರಿಂಗ್ ಆಯುಧಗಳೂ ರಖಂವಾರ್ ಗಂಧದಬಿಲ್ಲೆ ಊದುಬತ್ತಿ ಅತ್ತರ್ ಪನ್ನೀರು ತಲೆಗೆ ಹಚ್ಚತಕ್ಕ ರಖಂವಾರ್ ಸುವಾಸನೆ ಯಣ್ಣೆಗಳೂ ಸಹ ನಮ್ಮಲ್ಲಿ ದೊರೆಯುತ್ತವೆ. ನಮ್ಮಷ್ಟು ಕಡಮೆ ಬೆಲೆಗೆ ಮತ್ತ್ಯಾರಲ್ಲೂ ದೊರೆಯುವದಿಲ್ಲಾ ಖಂಡಿತ ತಿಳಿಯಿರಿ



ರಾತ್ರಿಯವೇಳೆ ಎಂತಹ ಕತ್ತಲೆಯಲ್ಲಿ ನೋಡಿದಾಗ್ಯೂ ದೀಪದ ಅವಶ್ಯವಿಲ್ಲದೆ ಇಷ್ಟೇಗಂಟೆಯೆಂಬುವುದನ್ನು ತೋರಿಸುವ ಹೊಸನಮೂನೆವಾಚ್ ಬಂದಿದೆ. ಸ್ಟೀಲ್‌ಕೇಸ್ ವಾಚ್ ೧ ಕ್ಕೆ ೨೪-೦-೦; ಡಿಟೋ ಅಚ್ಚಬೆಳ್ಳಿಯ ಕೇಸ್ ವಾಚ್ ೧ ಕ್ಕೆ ೨೬-೮-೦. ಈ ವಾಚ್ ಬೇಕಾದವರು ೨ ರೂಪಾಯಿ ಅಡ್ವಾನ್ಸಾಗಿ ರವಾನಿಸಬೇಕು. ೫ ರೂ. ಗೆ ೧ ಬೈಸಿಕಲ್, ೪ ಆಣೆಗೆ ೧ ವಾಚ್ ಸಿಕ್ಕುವಹಾಗೆ ಮಾಡಿದೇವೆ. ಈ ವಿಷಯವನ್ನು ತಿಳಿಯಲಪೇಕ್ಷಿಸುವವರು ಅರ್ಧಾಣೆ ಲೇಬಿಲ್ಲನ್ನು ನಮ್ಮ ವಿಳಾಸಕ್ಕೆ ರವಾನಿಸಬೇಕು.

೧೯೧೨ ನೆಯ ಇಸವಿ ದೊಡ್ಡ ಕ್ಯಾಲೆಂಡರಾ ೧ ಕ್ಕೆ ೬ ಪೈ ೧೦೦ ಕ್ಕೆ ೧-೬-೦. ಟಪಾಲ್ ಖರ್ಚ ಬೇರೆ.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್
ಜನರಲ್‌ಮರ್ಚೆಂಟ್ಸ್ ಕೃಷ್ಣರಾಜಬುಲೆವಾರ್ಡ್
ಮೈಸೂರು.

---

49 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಟ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

26

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧-೩-೦. ವಿರಶೈವಮತಸ್ವರೂಪವೂ–ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧-೩-೦. ಸೌಂದರ ಸಂಬ್ಬಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.– ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೨ ಆಣೆ

ಸ್ತುತಿ ಮುಕ್ತಾವಳಿ.– ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ ೬ ಆಣೆ

ರಕ್ಷಾಶತಕಂ.–೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ ತಿಂಗಳಲ್ಲೂ ೮೦ ಪುಟಗಳು ಬರುವುವು. ವಾರ್ಷಿಕ ಚಂದಾ [illegible]

ಎಸ್. ಆರ್. [illegible]
ಗ್ರಂಥಪ್ರಕಾಶಕರು [illegible], ಮೈಸೂರು.

ಸೌಗಂಧಿಕಾ ಪರಿಣಯ.

[ಕಳೆದ ವಾರದ ಶೇಷ.]

ಆ ಕೊಳದ ಸೋಪಾನದೊಳ್ ಕುಳಿತು ಮಂದಮಾರುತನ ಸೋಂಕಿನಿಂ ಸೊಂಪುಗೊಂಡು, ಸುಮತಿಯೊಡನೆ ಆ ಸರಸ್ಸಿನ ಮಧುರವಾದ ಜಲಪಾನವಂ ಗೈದು, ಮಾನಸ ಸರೋವರವೇ ಇಲ್ಲಿ ಬಂದಿರುವುದೆಂದು ಮನಸ್ಸಿನೊಳ್ ಸಂತೋಷಿಸುತ್ತಿರಲಾ ಸಮಯದೊಳ್, ಈ ಸರಸ್ಸಿನ ಪುರೋಭಾಗದಲ್ಲಿ ನವರತ್ನ ಕಲಶಂಗಳಿಂದ ವಿಚಿತ್ರಗಳಾದ ಧ್ವಜಪತಾಕೆಗಳಿಂದ ದೇದೀಪ್ಯಮಾನವಾದ ಮಂದಿರದ ಉಪರಿಭಾಗದೊಳ್ ನಿಂತು ನೋಡುತಲಿರುವ ಕುಸುಮಲತೆಯು ಪಟ್ಟಣದ ಆವರಣಗಳಲ್ಲಿ ಎಸೆದು ಪುತ್ಥಳಿಯಾಗಿರುವ ವಜ್ರದ ಕೋಟೆಯು, ಚಿತ್ರದ ಬೊಂಬೆಗಳಂತೆ ನಿಂತಿರುವ ರಾಕ್ಷಸರ ಗೋಪುರಗಳಂ ಇದುವಲ್ಲದೆ ಸಿಂಹಗಳ ಆರ್ಭಟಗಳು ನಿಂತಿರುವುದಂ, ಮತ್ತೂ ಸರ್ಪವರಣದಲ್ಲಿ ಪುಟ್ಟಿದ ವಿಷಜ್ವಾಲೆಗಳು ಕವಿದು ಕತ್ತಲೆಯಾಗಿರುವುದಲ್ಲದೆ ಪ್ರಕಾಶಮಾನವಾಗಿರುವುದಂ, ಇಂತಲ್ಲದೆ ಅಗ್ನ್ಯಾವರಣದೊಳ್ ಗಗನವಂ ಸೋಂಕುವ ಜ್ವಾಲೆಗಳತಿ ಶಾಂತವಾಗಿರುವುದಂ, ಮತ್ತೂ ಜಲಾವರಣದೊಳ್ ತೆರೆಗಳು ಮೊರೆಯುವ ರಭಸವಂ ಬಿಟ್ಟು ನಿದ್ರೆಯಂ ಮಾಡುವುದೋ! ಎಂಬಂತೆ ನಿಶ್ಶಬ್ದವಾಗಿರುವುದಂ, ಇದುವಲ್ಲದೆ ರಾಕ್ಷಸರ ಶರೀರದ ದುರ್ಗಂಧವೆಲ್ಲವೂ ಪೋಗಿ ಸುಗಂಧಯುಕ್ತವಾಗಿ ತಣ್ಣಗೆ ಬೀಸುವುದಂ ಕಂಡು ತನ್ನ ಮನದೊಳ್ ಇದೇನು ವಿಚಿತ್ರವು! ಈಪರಿಯಾಗಿ ನಡೆದಿರುವುದು ನನ್ನ ಸಂಪತ್ತಿಗೆ ಕಾರಣವೋ! ಇಲ್ಲದೆ ವಿಪತ್ತಿಗೆ ಸೂಚನೆಯೋ? ಎಂದು ಆಲೋಚಿಸುತ, ಮುತ್ತಿನ ಮಲಕಿನ ಜಾಲಂದರದ ಗವಾಕ್ಷದೊಳ್ ಮೆಲ್ಲಮೆಲ್ಲನೆ ನೋಡುತ, ತನ್ನ ಶಯನಾಗೃಹದ ಮುಂದೆ ಕ್ರೀಡಾ ಸರಸ್ಸಿನಲ್ಲಿ ಕುಳಿತಿರ್ಪ ಇರ್ವರು ಪುರುಷರಂ ಕಂಡು ದುರ್ಘಟವಾಗಿರುವ ಈ ಕೊಳಕ್ಕೆ ಮನುಷ್ಯರು ಬರುವುದಕ್ಕೆ ಸಮರ್ಥರಲ್ಲವಾದುದರಿಂ ದೇವತೆಗಳೇ ಈ ರೂಪದಿಂ ಬಂದಿರುವರೋ! ಇಲ್ಲದೆ ರಾಕ್ಷಸರು ಮಾಯೆಯಿಂದ ಮಾನುಷ ವೇಷವಂ ಧರಿಸಿರುವರೋ! ತಿಳಿಯಕೂಡದೆಂದು ತನ್ನ ಕೆಳದಿಯರ ಕೂಡೆ ಪೇಳುತ, ಅಲ್ಲಿಂದ ಸ್ವಲ್ಪ ಉನ್ನತವಾದ ಮತ್ತೊಂದು ಅಂತಸ್ತಿನ ಬಿಸಿಲುಮಚ್ಚಿನೊಳ್ ನಿಂತು ಚೆನ್ನಾಗಿ ನೋಡಿ, ಸಖಿಯಂ ಕುರಿತು ಎಲೈ ಸಖಿಯೇ! ಕೇಳು. ಇವರುಗಳಂ ದೇವತೆಗಳೆಂದು ಪೇಳುವಾ ಎಂದರೆ ಭೂಮಿಯೊಳ್ ಕುಳಿತಿರುವುದರಿಂದ ದೇವತೆಗಳೆಂದು ಪೇಳಕೂಡದು; ರಾಕ್ಷಸರ ಮಾಯೆಯೆಂದು ಪೇಳುವಾ ಎಂದರೆ, ಈ ಜಂಬುಮಾರುತನ ಮುಂದೆ ಮತ್ತೊರ್ವ ರಾಕ್ಷಸನ ಮಾಯೆಯು ನಡೆಯಲಾರದು. ಈಗ ಈ ಪುರುಷರೊಳ್ ಓರ್ವನನ್ನೀಕ್ಷಿಸಿದರೆ ಕರ್ಣ ಪರ್ಯಂತವಾಗಿ ತಾವರೆಯ ಎಸಳಿನಂತೆ ವಿಸ್ತಾರಗಳಾಗಿರುವ ನೇತ್ರಂಗಳಂ, ಚಿತ್ರದೊಳ್ ಬರೆದಂತೆ ನೀಳವಾದ ಪುಬ್ಬುಗಳಂ ಉನ್ನತವಾದ ನಾಸಾಗ್ರವಂ, ಅರಳಿದ ಕಮಲದೊಳ್ ಮರಿದುಂಬಿಗಳ ಗರಿಗಳಂತಿರ್ಪಂತೆ ಹೊಸದಾಗಿ ಬರುವ ಎಳೇ ಮೀಸೆಗಳಂ, ಪೋಣಿಸಿದ ಆಣಿಮುತ್ತುಗಳಂತೆ ಬಿತ್ತರದ ಪಲ್ಯಾರಸೆಗಳಂ, ಜಾನುಪರ್ಯಂತವಾಗಿ ಗಜಶುಂಡಾ ದಂಡದಂತೆ ಇರುವ ಬಾಹುಗಳಂ, ವಿಶಾಲವಾದ ವಕ್ಷಸ್ಥಲವಂ, ಪಲ್ಲವದಂತಿರುವ ಪಾದಂಗಳಂ, ತಾಂಬೂಲವಂ ಧರಿಸಿರುವ ಪರಿಯಂ ನೋಡುವ ನೇತ್ರಂಗಳಿಗೆ ಏನೋ ಒಂದು ಬಗೆಯಾದ ಆನಂದವಂ ಪುಟ್ಟಿಸುವ ತೇಜೋ ವಿಶೇಷವಂ, ಇಂತಲ್ಲದೆ ಹೆಗಲೊಳ್ ಧರಿಸಿರುವ ಬಿಲ್ಲುಬತ್ತಳಿಕೆಗಳಂ, ಹಸ್ತದೊಳ್ ಪಿಡಿದಿರುವ ಚಂದ್ರಹಾಸವಂ ಸಹಾ ನೋಡಿ ಯೋಚಿಸಿದರೆ, ದೇವಾಂಶದಿಂದ ಮನುಷ್ಯಲೋಕದೊಳ್ ಪುಟ್ಟಿದ ಧೀರನಾದ ಕ್ಷತ್ರಿಯ ಕುಮಾರನಂತೆ ತೋರುತಲಿದೆ. ಅವನ ಸಮೀಪದೊಳ್ ಆತನ ಮನೋನುಸಾರವಾಗಿ ಉಪಚಾರವಂ ಮಾಡುತ್ತ, ಭಯದಿಂದೆದ್ದು ಕೈ ಕಟ್ಟಿಕೊಂಡು ಮಾತುಗಳನಾಡುತ್ತಿರುವುದಂ ನೋಡಿದರೆ, ಆ ರಾಜಕುಮಾರನಿಗೆ ಮಂತ್ರಿಯೋ, ಮಿತ್ರನೋ? ಎಂದು ತೋರುತಲಿದೆ. ಈ ಮಹಾಪುರುಷನು ಏನು ನಿಮಿತ್ತವಾಗಿ ಇಂತಿರ್ಪ ಸಾಹಸವಂ ಮಾಡಿ ಈ ಸ್ಥಳವಂ ಕುರಿತು ಬಂದನೋ ತಿಳಿಯಕೂಡದು. ಈ ಪುರದ ಆವರಣಂಗಳಂ ಈತನೆ ಈಪರಿಯಾಗಿ ಮಾಡಿದ್ದರೆ, ಘೋರನಾದ ಜಂಬುಮಾರುತನು ಬಂದರೂ, ಅವನೊಡನೆ ಯುದ್ಧವಂ ಮಾಡಿ ಸಂಹಾರವಂ ಮಾಡುವುದರಲ್ಲಿ ಸಂದೇಹವಿಲ್ಲವೆಂದು ನುಡಿಯುತ್ತ ತನಗೆ ಅನುರೂಪವಾದ ಸೌಂದರ್ಯವನ್ನು ನೋಡಿ ಅಚ್ಚರಿಪಡುತ್ತ ಮೋಹವಂಗೊಂಡು ಪರಾಕ್ರಮಶಾಲಿಯಾಗಿ, ಮನೋಹರನಾಗಿರುವ ಈ ಪುರುಷನಿಗೆ ಕಾಂತೆಯಾದರೆ ನನ್ನ ಚಿಂತೆಯೆಲ್ಲವೂ ಹೋಗುವುದು ಎಂದು ಮನದೊಳ್ ನಿಶ್ಚೈಸಿ ಮೈಯೆಲ್ಲಾ ಪುಳಕಂಗೊಂಡು ಸರಿಬೆವರಿ ಮನಕರಗಿ ಬಳಿಕ, ಕೆಲವು ಶೃಂಗಾರ ಭಾವಗಳಲ್ಲಿ ತೋರಿ ಮನ್ಮಥನ ಬಾಣಗಳಿಗೆ ಗುರಿಯಾಗಲು ಈ ಸುಕುಮಾರಾಂಗನಾದ ರಾಜಕುಮಾರನಂ ಪತಿಯಾಗಿ ನಾನು ವರಿಸಿದೆನು. ದೈವವೇನು ಮಾಡುವುದೋ ತಿಳಿಯೆನು ಎಂದು ನಿಟ್ಟುಸಿರಂ ಬಿಡುತ ಇನ್ನು ಈ ಪುರುಷನೊಡನೆ ಮಾತನಾಡಲು ತವಕಾದರೆ ತಡೆಯಲಾರೆನೆಂದು ಉಕ್ಕುಬರುವ ಮಮತೆಯಿಂದ ಲಜ್ಜೆಯಿಲ್ಲದೆ ಕೆಳದಿಯರೊಡನೆ ಈ ಪರಿಯಿಂದ ಮಾತನಾಡುತ್ತ, ಕಾರ್ಮುಗಿಲಲ್ಲಿ ಪೊಳೆವ ಮಿಂಚಿನಂತೆ ಮೆರೆಯುವ ಕುಸುಮಲತೆಯು ಮಾತುಗಳಂ ಕೇಳಿ, ಇದೇನು ಈ ಭೂಮಿಯ ಗಿಳಿಗಳು ಮಾನಿನಿಯರು ಮಾತಾಡಿದಂತೆ ನುಡಿಯುತಲಿವೆ? ಎಂದು ತಲೆಯೆತ್ತಿ ಇದಿರಾಗಿ ನೋಡಲಾಗ ಮಣಿಮಂದಿರದ ಮೇಲುಮಚ್ಚಿನೊಳ್ ನಿಂತಿರುವ ಕುಸುಮಲತೆಯು ಮೊಗದೊಳಿರುವ ತಿಲಕವೆಂಬ ಭಲ್ಲೆವು ಸುಗಂಧರಾಜೇಂದ್ರನ ಹೃದಯವಂ ಭೇದಿಸಲು, ಆ ಸಮಯದೊಳ್ ಮನ್ಮಥನು ತನ್ನ ಮನಸ್ಸಿನೊಳ್ ಈ ಸುಗಂಧರಾಜೇಂದ್ರನು ಶ್ರೀ ದೇವಿಯ ಪ್ರಸಾದವಂ ಪಡೆದು ತೀಕ್ಷ್ಣಂಗಳಾದ ಸಕಲಾಯುಧಗಳಿಂದ ಲೋಕದೊಳೆಲ್ಲರಂ ಜಯಿಸುವನು. ಇವನಂ ನಾನು ದೇವಿ ಕಟಾಕ್ಷದಿಂದಲೇ ಮೃದುಗಳಾದ ಪುಷ್ಪಬಾಣಂಗಳಿಂದ ತಲ್ಲಣಿಸುವಂತೆ ಮಾಡುವಾ ಎಂದು ಅಟ್ಟಹಾಸವಂ ಮಾಡಿ, ಅಷ್ಟರೊಳ್ ಯೋಚಿಸಿ ಇದಿರಾಗಿ ಪೋಗಿ ಬಾಣಗಳಂ ಪ್ರಯೋಗಿಸಿದರೆ ನನ್ನ ಪುಷ್ಪಂಗಳಿಗೂ, ವರ್ಣದಿಂದಲೂ, ವಾಸನೆಯಿಂದಲೂ ಅಧಿಕವಾದ ತನ್ನ ಶರೀರದ ಸೌಂದರ್ಯದಿಂದಲೇ ನನ್ನಂ ಜಯಿಸುವನೋ! ಎಂದು ತಿಳಿದು ಇದಿರಾಗಿ ಪೋಗದೆ ಮನಸ್ಸಿನೊಳಗೆ ಇದ್ದು ಕಳವಳಗೊಳಿಸಿದನೋ! ಎಂಬಂತೆ ವಿಸ್ಮಯಗೊಂಡ ರಾಜೇಂದ್ರನು ನಿಮಿಷಮಾತ್ರ ಮೂರ್ಛಿತನಾಗಲು, ಆ ಕಾಲದೊಳ್ ಸುಮತಿಯು, ಇದೇನು ಕಾರಣವಿಲ್ಲದ ಮೂರ್ಛೆಯೆಂದು, ಇದು ರಾಕ್ಷಸರ ಮಾಯೆಯೋ ಇಲ್ಲದೆ ಈ ಸರೋವರದ ಉದಕವು ವಿಷದಿಂ ಕೂಡಿರುವುದೋ, ಅಲ್ಲದೆ ಈ ಭೂಮಿಯು ಮನುಷ್ಯ ಸಂಚಾರಕ್ಕೆ ಯೋಗ್ಯವಾಗದೆ ಶಾಪಯುಕ್ತವಾಗಿರುವುದೋ ಎಂದು ಸಂಶಯಂಗೊಂಡು ಭ್ರಮಿಸಿ ನಾಲ್ಕು ದಿಕ್ಕುಗಳನ್ನು ನೋಡಿ ಬಳಿಕ ಇದು ಈ ಕಾಂತೆಯರಂ ಕಂಡಕಾರಣದಿಂ ಬಂದ ವ್ಯಾಮೋಹವೆಂದು ತಿಳಿದು ಕಮಲ ದಳದಿಂದ ಜಲವಂ ತಂದು, ನೇತ್ರಂಗಳಂ, ಹೃದಯ ಪ್ರದೇಶಂಗಳಂ ಕೂಡ ನನೆಸಿ ಬೇಗದಿಂ ಪೋಗಿ ಸಮೀಪದಲ್ಲಿರುವ ತಳಿರುಗಳಂ ಪುಷ್ಪಂಗಳಂ ಕೂಡಾ ತಂದು ಹಾಸಿಗೆಯಂ ರಚಿಸಿ, ತಾವರೆಯ ದಂಟುಗಳಿಂದ ತಲೆದಿಂಬುಮಾಡಿ ಅದರೊಳ್ ಕುಸುಮ ಸುಕುಮಾರಾಂಗನಾದ ಸುಗಂಧರಾಜೇಂದ್ರನಂ ಮಲಗಿಸಿ, ಕರ್ಪೂರದ ಎಳೆ ಸುಳಿಯ ಬಾಳೆಯ ದಳಂಗಳೆಂಬ ಬೀಸಣಿಗೆಯಿಂದ ಬೀಸುತ, ಮದನತಾಪದಿಂ ಬಾಡಿರುವ ಪುಷ್ಪಂಗಳಂ ತೆಗೆದು ಬದಲುಮಾಡುತ, ಬಾರಿಬಾರಿಗೂ ಕರ್ಪೂರದ ಜಲವಂ ಮೇಲೆ ತಳಿಯುತಲಿರುವ ಸಮಯದೊಳ್, (ಸಶೇಷ.)

ವ್ಯವಸಾಯಕ ವಿಷಯಗಳು.

ಗೋಧಿ ಮತ್ತು ನುಸಿ.

ಅಕ್ಕಿ, ಗೋಧಿ, ಹುರುಳಿ, ಕಡಲೆ, ಹೆಸರು ಮೊದಲಾದ ದಿನಸಿಗಳು ಹಳೆದಾದಾಗ್ಗೆ ಎಂದರೆ ಸ್ವಲ್ಪಕಾಲ ಉಗ್ರಾಣ ಅಥವಾ ಕೋಠಿಗಳಲ್ಲಿಡಲ್ಪಟ್ಟ ತರುವಾಯ ಅವುಗಳಿಗೆ ಹುಳುಗಳು ಮುತ್ತಿರುವುದನ್ನು ಸಾಧಾರಣವಾಗಿ ಸರ್ವರೂ ನೋಡಿರಬಹುದು. ಅಲ್ಪಸ್ವಲ್ಪ ಹುಳುಗಳು ಧಾನ್ಯವನ್ನು ಮುತ್ತಿರುವಾಗ್ಗೆ ಅವು ಬಹಳ ಸಣ್ಣನಾಗಿರುವ ಕಾರಣ ಜನರಿಗೆ ಕಂಡುಬರುವುದಿಲ್ಲ. ಕಾಲಕ್ರಮೇಣ ಇವು ಬಹಳವಾಗಿ ಹೆಚ್ಚಿದಾಗ ಇವುಗಳ ಕಾಟವು ನಮಗೆ ಗೊತ್ತಾಗುವುದು. ಆದರೆ ಇವು ಅತ್ಯಂತ ಸೂಕ್ಷ್ಮವಾದ ಪ್ರಾಣಿಗಳಾಗಿರುವ ಕಾರಣ, ಇವುಗಳಿಂದ ಉಂಟಾಗತಕ್ಕ ನಷ್ಟವು ಬಹಳ ಹೆಚ್ಚು. ಪೈರು ಅಥವಾ ಧಾನ್ಯಗಳಿಗೆ ಮುತ್ತತಕ್ಕ ಹುಳುಗಳು ದೊಡ್ಡವುಗಳಾಗಿದ್ದರೆ, ಅವುಗಳಿಂದ ನಷ್ಟ ಕಡಿಮೆ ಮತ್ತು ಅವು ಸೂಕ್ಷ್ಮ ರೂಪದವುಗಳಾಗಿದ್ದರೆ ನಷ್ಟವು ಬಹಳ.

ನುಸಿಗಳಿಂದ ಉಂಟಾಗತಕ್ಕ ನಷ್ಟವು ಕಾಲದೇಶಾನುಗುಣವಾಗಿರುವುದೇ ಹೊರತು ಇಂತಹ ಸ್ಥಳದಲ್ಲಿ ಇಷ್ಟೇ ಸರಿಯೆಂದು ಗೊತ್ತಾಗಿ ಹೇಳಲಾಗುವುದಿಲ್ಲ. ಆದರೆ ಪೂಸಾ ಪಟ್ಟಣದ ಕ್ರಿಮಿಶೋಧಕ ಶಾಲೆಯಲ್ಲಿ ಪರೀಕ್ಷಿಸಿ ನೋಡಿದ್ದರಲ್ಲಿ, ಗೋಧಿಯಲ್ಲಿ ಸುಮಾರು ಆರುತಿಂಗಳು ಕಾಲ ನುಸಿಯಾದಿದರೆ, ಒಟ್ಟು ಗೋಧಿಯ ಮೂರನೆಯ ಒಂದುಭಾಗವು ನಷ್ಟವಾಗುವುದೆಂದು ತಿಳಿಯಬಂದಿದೆ. ಅಂತೂ ನುಸಿಗಳಿಂದ ಸಾಲಿಯಾನ ಶೇಕಡ ಸರಾಸರಿ ೫ ರಷ್ಟು ಧಾನ್ಯವು ನಷ್ಟವಾಗುವುದೆಂದು ಲೆಕ್ಕ ಹಾಕಿದಾಗ್ಯೂ ಲಕ್ಷಾಂತರ ರೂಪಾಯಿ ಬೆಲೆ ಬಾಳುವಷ್ಟು ಧಾನ್ಯವು ವ್ಯರ್ಥವಾದಂತೆ ಆಗುವುದು.

ನುಸಿಯ ಜೀವನ ಚರಿತ್ರೆ:— ತಾಯಿ ನುಸಿಯು ಧಾನ್ಯದ ಕಾಳುಗಳಲ್ಲಿ ಸಣ್ಣ ತೂತು ಕೊರೆದು ತೂತುಗಳೊಳಗೆ ಮೊಟ್ಟೆಗಳನ್ನಿಟ್ಟು ಚೆನ್ನಾಗಿ ಅಗಿಯಲ್ಪಟ್ಟ ಧಾನ್ಯದ ಧೂಳಿನಿಂದ ತೂತನ್ನು ಮುಚ್ಚಿ ಬಿಡುವುದು. ಕೆಲವು ಸಂದರ್ಭಗಳಲ್ಲಿ ತೂತುಗಳನ್ನು ಮುಚ್ಚದೆ ಬಿಡುವುದೂ ಉಂಟು. ಆಗ್ಗೆ ಮೊಟ್ಟೆಯು [illegible] ಬರುವುದು. ಧಾನ್ಯವನ್ನು ಒಡೆದು ನೋಡಿದರೆ ಅದರ ಒಳಭಾಗಕ್ಕೂ ಮತ್ತೂ ಮೊಟ್ಟೆಗಳಿಗೂ ವ್ಯತ್ಯಾಸವೇ ಕಂಡು ಬರುವುದಿಲ್ಲ. ಕೆಲವು ವೇಳೆ ತಾಯಿನುಸಿಯು ಕಾಳುಗಳನ್ನು ಕೊರೆಯದೆ ಅವುಗಳ ಮೇಲ್ಭಾಗದಲ್ಲಿಯೇ ಮೊಟ್ಟೆಗಳನ್ನಿಡುವುದೂ ಉಂಟು. ಅವುಗಳು ಇಡಲ್ಪಟ್ಟ ನಾಲ್ಕು ದಿನಗಳ ತರುವಾಯ ಮೊಟ್ಟೆಗಳೊಡೆದು ಹುಳುಗಳು ಧಾನ್ಯದ ಕಾಳಿನ ಒಳಭಾಗವನ್ನೆಲ್ಲಾ ಕೊರೆದು ತಿನ್ನಲು ಆರಂಭಿಸುವುವು. ಹುಳುಗಳು ದಪ್ಪನಾಗಿಯೂ, ಪುಷ್ಟವಾಗಿಯೂ, ಬಿಳುಪಾಗಿಯೂ, ಮತ್ತೂ ಕಾಲುಗಳಿಲ್ಲದವುಗಳಾಗಿಯೂ ಇರುವುವು. ಇವು ಆಹಾರವನ್ನು ಬಿಟ್ಟು ಹೊರಗೆ ಚಲಿಸುವುದಿಲ್ಲವಾದುದರಿಂದಲೂ ಮತ್ತೂ ಕಾಳುಗಳೊಳಗೆ ಸೇರಿಕೊಂಡಿರುವುದರಿಂದಲೂ ಧಾನ್ಯವನ್ನು ಇವು ಮುತ್ತಿರುವುದು ಗೊತ್ತಾಗುವುದಿಲ್ಲ. ಮೊಟ್ಟೆಯೊಡೆದ ಸುಮಾರು ೩-೭ ದಿನಗಳ ಅನಂತರ ಹುಳುಗಳು ಕಾಳುಗಳನ್ನು ಕೊರೆದುಕೊಂಡು ರೆಕ್ಕೆ ಹುಳುಗಳಾಗಿ ಹೊರಗೆ ಬರುವುವು. ಹುಳುವಾದಿದ ಧಾನ್ಯಗಳ ಕಾಳುಗಳಲ್ಲಿರತಕ್ಕ ರಂಧ್ರಗಳು ಮೇಲೆಕಂಡರೀತಿಯಲ್ಲಿ ಮಾಡಲ್ಪಟ್ಟವುಗಳಾಗಿರುತ್ತವೆ. ಸಾಮಾನ್ಯವಾಗಿ, ಹುಳುಗಳು ಕ್ರಿಮಿರೂಪವಾಗಿದ್ದಾಗ್ಗೆ ಧಾನ್ಯಗಳನ್ನು ನಷ್ಟಪಡಿಸುವುವೇ ಹೊರತು ರೆಕ್ಕೆ ಹುಳುಗಳಾದಾಗ ಧಾನ್ಯದ ತಂಟೆಗೆ ಹೋಗುವುದಿಲ್ಲ; ಆದರೆ ಅಕ್ಕಿ ಗೋಧಿ ಮತ್ತೂ ಜೋಳಕ್ಕೆ ತಗಲತಕ್ಕ ಹುಳುಗಳು ರೆಕ್ಕೆ ಬಂದಮೇಲೆ ಧಾನ್ಯವನ್ನು ಬಹಳವಾಗಿ ತಿಂದು ನಾಶಪಡಿಸುವುವು. ಅಲ್ಲದೆ ಇವುಗಳಿಗೆ ಆಹಾರ ಪದಾರ್ಥವು ಸದಾಕಾಲದಲ್ಲೂ ಒದಗುವ ಕಾರಣ ಇವು ಸದಾಕಾಲದಲ್ಲೂ ಹುಟ್ಟುತ್ತಲೇ ಇರುವುವು.

ನುಸಿಗಳನ್ನು ಅಡಗಿಸತಕ್ಕ ವಿಧಾನ:— (೧) ಬಹಳ ಸ್ವಲ್ಪಕಾಲದಲ್ಲಿ ಅತಿಯಾಗಿ ಹೆಚ್ಚಿ ಮನುಷ್ಯರ ಮುಖ್ಯ ಆಹಾರ ಪದಾರ್ಥಗಳಾದ ಅಕ್ಕಿ ಗೋಧಿ ಮೊದಲಾದ ಧಾನ್ಯಗಳನ್ನು ತಿಂದು ನಾಶಮಾಡತಕ್ಕ ನುಸಿಗಳನ್ನು ನಾಶಮಾಡುವುದಕ್ಕಾಗಿ ಮತ್ತೊಂದು ಪ್ರಾಣಿಯು ಸೃಷ್ಟಿಸಲ್ಪಟ್ಟಿರುತ್ತದೆ. ಇದು ಒಂದು ತರಹೆಯ ಸಣ್ಣನಾದ ನೊಣ. ನುಸಿಯು ಕ್ರಿಮಿರೂಪವಾಗಿ ಯಾವ ಕಾಳಿನೊಳಗಿರುವುದೋ ಅಂತಹ ಕಾಳುಗಳನ್ನೇ ಹುಡುಕಿ ಆ ನುಸಿಗಳ ಕ್ರಿಮಿಗಳ ಮೇಲೆ ಈ ನೊಣಗಳು ತಮ್ಮ ಮೊಟ್ಟೆಗಳನ್ನಿಡುವುವು. ಈ ಮೊಟ್ಟೆಗಳೊಡೆದು ಸಣ್ಣನಾದ ಹುಳುಗಳು ಹೊರಗೆ ಬರುವುವು. ಈ ಹುಳುಗಳು ನುಸಿಯ ಕ್ರಿಮಿಗಳನ್ನೇ ತಿಂದು ನಾಶಮಾಡಿ ಸ್ವಲ್ಪ ಕಾಲದಮೇಲೆ ಸಣ್ಣನಾದ ನೊಣಗಳಾಗುವುವು. ಕಾಲಕ್ರಮದಲ್ಲಿ ಈ ನೊಣಗಳು ತಾವೇ ನುಸಿ ಹಿಡಿದಿರತಕ್ಕ ಕಾಳುಗಳ ಮೇಲೆ ಮೊಟ್ಟೆಗಳನ್ನಿಡುವುವು.

(೨) ಧಾನ್ಯಕ್ಕೆ ಹೊಗೆಕೊಡುವುದು (Fumigation) ಧಾನ್ಯವನ್ನು ಸ್ವಲ್ಪ ಹೆಚ್ಚು ಕಡಿಮೆ ಗಾಳಿಯಸಂಚಾರಕ್ಕೆ ಅವಕಾಶವಿಲ್ಲದ ಪೆಟ್ಟಿ ಅಥವಾ ತೊಂಬೆಗಳಲ್ಲಿ ತುಂಬಬೇಕು. ಒಂದು ಟನ್ ತೂಕ ಧಾನ್ಯಕ್ಕೆ ೧೪ ಪೌಂಡು ಕಾರ್ಬನ್ ಬೈಸಲ್ ಫೈಡ್ (Carbon Bisulphide) ಎಂಬ ದ್ರಾವಕವನ್ನು ಮೇಲೆ ಸುರಿಯಬೇಕು. ಅಥವಾ ಮೇಲೆಕಂಡ ದ್ರಾವಕವನ್ನು ತಟ್ಟೆಯಾಗಿರುವ ಪಾತ್ರೆಗಳಿಗೆ ಹಾಕಿ ಧಾನ್ಯದಮೇಲೆ ಇಟ್ಟು ದ್ರಾವಕದ ಹೊಗೆಯು ಹೊರಕ್ಕೆ ಬರದಂತೆ ೨೪ ಘಂಟೆಗಳ ಕಾಲ ಮುಚ್ಚಿಡಲೂ ಬಹುದು. ಈ ದ್ರಾವಕದ ಹೊಗೆಯು ಬಹಳ ವಿಷಮಯವಾದಕಾರಣ ಜನಗಳಾರೂ ಈ ಹೊಗೆಯನ್ನು ಉಸಿರಿನಲ್ಲಿ ಒಳಕ್ಕೆ ಎಳೆದುಕೊಳ್ಳಕೂಡದು. ಮತ್ತೂ ಈ ಹೊಗೆಯು ಗಾಳಿಯೊಡನೆ ಸೇರಿರುವಾಗ ಇದರ ಸಮೀಪಕ್ಕೆ ಬೆಂಕಿಯು ತರಲ್ಪಟ್ಟಲ್ಲಿ ಹೊಗೆಯು ಕೂಡಲೆ ಹೊತ್ತಿಕೊಳ್ಳುವುದರಿಂದ, ಜನರು ಇದನ್ನು ಇಟ್ಟಿರತಕ್ಕ ಸ್ಥಳದಲ್ಲಿ ಚುಟ್ಟಾ ಬೀಡಿ ಮೊದಲಾದುವುಗಳನ್ನು ಸಹಾ ಸೇದಕೂಡದು.

ಈ ಹೊಗೆಯು ಧಾನ್ಯದಲ್ಲಿ ಇರಬಹುದಾದ ಕ್ರಿಮಿಗಳನ್ನೆಲ್ಲಾ ಕೊಂದು ಬಿಡುವುದು; ಆದರೆ ಒಂದಾವೃತ್ತಿ ಈ ಹೊಗೆಯನ್ನು ಕೊಟ್ಟಮಾತ್ರಕ್ಕೆ ಎಂದೆಂದಿಗೂ ಧಾನ್ಯಕ್ಕೆ ಹುಳುವು ಮುತ್ತುವುದಿಲ್ಲವೆಂದು ಹೇಳಲಾಗುವುದಿಲ್ಲ. ಆರು ತಿಂಗಳಿಗೊಂದಾವೃತ್ತಿ ಈ ರೀತಿ ಹೊಗೆಯನ್ನು ಕೊಡುತ್ತಿರಬೇಕಾಗುವುದು. ಈ ಹೊಗೆಗೆ ಬದಲಾಗಿ ಧಾನ್ಯದೊಡನೆ ನ್ಯಾಫ್ಥಲೀನ್ (Naphthalin) ಎಂಬ ಪದಾರ್ಥವನ್ನು ಸ್ವಲ್ಪ ಬೆರಸಿದರೆ ಹೆಚ್ಚು ಪ್ರಯೋಜನವುಂಟು. ಈ ಪದಾರ್ಥವು ಬೆರಸಲ್ಪಟ್ಟ ಧಾನ್ಯವನ್ನು ಅಡುಗೆಗೆ ಉಪಯೋಗಿಸುವಾಗ್ಗೆ ಅದನ್ನು ಒಂದರಿಯಾಡಿ ಅನಂತರ ಬಿಸಿಲಿನಲ್ಲಿ ಹರವಿ ಒಂದೆರಡು ದಿನಗಳ ಕಾಲ ಒಣಗಿಸಬೇಕು. ಅಲ್ಲದೆ ಮೇಲೆಕಂಡ ಪದಾರ್ಥವನ್ನು ಬೆರಸುವುದರಿಂದ, ಕಾಳುಗಳಿಗೆ ಮೊಳೆಯುವ ಪ್ರಾಣವೇನೂ ಕಡಿಮೆಯಾಗುವುದಿಲ್ಲ. ಪೂಸಾ ಪಟ್ಟಣದಲ್ಲಿ ಒಂದು ಪೆಟ್ಟಿಗೆಯ ತುಂಬಾ ಗೋಧಿಯನ್ನು ತುಂಬಿ ಮೇಲೆ ಕಾಗದವನ್ನು ಹಾಕಿ ಅದರ ಮೇಲೆ ನ್ಯಾಫ್ಥಲೀನನ್ನು ಉದುರಿಸಿತ್ತು; ಮತ್ತೊಂದು ಪೆಟ್ಟಿಗೆಗೂ ಇದೇ ರೀತಿ ಗೋಧಿಯನ್ನು ತುಂಬಿ ನ್ಯಾಫ್ಥಲೀನನ್ನು ಹಾಕಲಿಲ್ಲ. ಆರು ತಿಂಗಳ ತರುವಾಯ ಪೆಟ್ಟಿಗೆಗಳನ್ನು ತೆಗೆದುನೋಡಲು, ಮೊದಲನೆಯ ಪೆಟ್ಟಿಗೆಯೊಳಗಿದ್ದ ಧಾನ್ಯವು ಸ್ವಲ್ಪವೂ ಕೆಟ್ಟಿರಲಿಲ್ಲ; ಎರಡನೆಯ ಪೆಟ್ಟಿಗೆಯಧಾನ್ಯವೋ ಹುಳುಗಳಿಂದ ನಾಶವಾಗಲ್ಪಟ್ಟಿತ್ತು.

(೩) ಒಣಗಿಸುವುದು (Drying):— ಧಾನ್ಯವನ್ನು ಚೆನ್ನಾಗಿ ಒಣಗಿಸಿ ತುಂಬಿದ್ದರೆ ಹುಳುಗಳು ಬರುವ ಸಂಭವವಿ. ಗೋಧಿಯನ್ನು ಅಜಮಾಯಿಷಿ ಮಾಡಲಾಗಿ ಕಟಾವಾ ಬಂದ ಗೋಧಿಯಲ್ಲಿ ಶೇಕಡ ಸುಮಾರು ೪ ಭಾಗ ತೇವ ರುವುದೆಂದೂ, ಏಪ್ರಿಲ್ ಮತ್ತೂ ಮೇ ತಿಂಗಳುಗಳ ಬಿಸಿ ನಲ್ಲಿ ಇದನ್ನು ಒಣಗಿಸಿದರೆ, ತೇವವನ್ನು ಶೇಕಡಾ ಸುಮಾರು ೮ ಭಾಗಕ್ಕೆ ಇಳಿಸಬಹುದೆಂದೂ, ಈ ರೀತಿಯಲ್ಲಿ ಶೇಕಡ ಂಟು ಭಾಗಕ್ಕೆ ಕಡಿಮೆ ತೇವವಿರತಕ್ಕ ಗೋಧಿಗೆ ಹುಳು ರುವುದಿಲ್ಲವೆಂದೂ ಮತ್ತೂ ಹುಳು ಪ್ರವೇಶಿಸುವುದಕ್ಕೆ ಅವಕಾಶವಿಲ್ಲದ ಪಾತ್ರೆಗಳಲ್ಲಿ ಹುಳುಗಳು ತಗಲದ ಧಾನ್ಯವನ್ನು ತುಂಬಿದ್ದರೆ, ಅವಕ್ಕೆ ನುಸಿಯು ಕಾಟವಿಲ್ಲವೆಂಬುದಾಗಿಯೂ ತಿಳಿಯ ಬರುತ್ತದೆ.

ಪಂಜಾಬು ಸರಕಾರದ ೧೯೧೦-೧೧ ನೆಯ ಸಾಲಿನ ವ್ಯವಸಾಯ ಕಾರ್ಯಗಳ ರಿಪೋರ್ಟಿನ ಕೆಲವು ಮುಖ್ಯ ಸಂಗತಿಗಳು.

(a) Cotton. (ಎ) ಹತ್ತಿ.—ಲಯಾಲಪುರ (Lyallpur) ದಲ್ಲಿ ಸರಕಾರದವರಿಂದ ಒಂದು ವ್ಯವಸಾಯದ ಪರೀಕ್ಷಾ ಕ್ಷೇತ್ರವು ಇಡಲ್ಪಟ್ಟಿದೆ. ಅಲ್ಲಿ ಮೇಲೆಕಂಡ ೧೯೧೦-೧೧ ನೆಯ ಸಾಲಿನಲ್ಲಿ ಹ್ಯಾರ್ಸಿ ಎಂಬ ಹತ್ತಿಯನ್ನು ಮೂರುವಿಧವಾಗಿ ವ್ಯವಸಾಯ ಮಾಡಿದರು. ಒಂದು ತಾಕಿನ ಜಮೀನಿನಲ್ಲಿ ಬದುವುಗಳನ್ನು ಕಟ್ಟಿ ಅವುಗಳ ಮೇಲೆ ಸಾಲಾಗಿ ಬೀಜಗಳನ್ನು ನೆಟ್ಟಿದ್ದರು. ಇನ್ನೊಂದು ತಾಕಿನಲ್ಲಿ ಜಮೀನನ್ನು ಮಟ್ಟಹೊಡೆದು ಬೀಜವನ್ನು ನೆಟ್ಟಿದ್ದರು. ಮೂರನೆಯ ತಾಕಿನಲ್ಲಿ ಮೊದಲು ಜಮೀನನ್ನು ಮಟ್ಟಹೊಡೆದು ಬೀಜವನ್ನು ನೆಟ್ಟು ಪೈರಾದಮೇಲೆ ಬದುಗಳನ್ನು ಕಟ್ಟಿದ್ದರು. ಕಳೆದ ಸಾಲಿನಲ್ಲಿ ಮೇಲೆಕಂಡ ಮೂರು ತರಹೆಯ ವ್ಯವಸಾಯದಲ್ಲೂ ಹಿಂದಿನ ಸಾಲುಗಳಿಗಿಂತ ಹೆಚ್ಚಾಗಿ ಉತ್ಪತ್ತಿಯಾದುದೇ ಒಂದು ವಿಶೇಷ ಸಂಗತಿಯಾಗಿದೆ. ಮೂರು ತಾಕುಗಳಿಂದ ಎಕರೆಗೆ ಸರಾಸರಿ ೧೮ ಮಣದಷ್ಟು ಉತ್ಪತ್ತಿಯಾಯಿತು. ಎರಡನೆಯ ತಾಕಿನಲ್ಲಿ ಎಕರೆಗೆ ೧೩ ಮಣದಷ್ಟು ಉತ್ಪತ್ತಿಯಾಯಿತು. ಇಷ್ಟು ಹೆಚ್ಚಾಗಿ ಉತ್ಪತ್ತಿಯಾದುದು ಇದೇ ಮೊದಲು. ಹಿಂದಣ ಸಾಲಿನಲ್ಲಿ ಬದುವುಗಳ ಮೇಲೆ ಬೀಜಗಳನ್ನು ನೆಟ್ಟ ಜಮೀನಿನಲ್ಲಿ ಜಾಸ್ತಿ ಉತ್ಪತ್ತಿಯಾಯಿತು. ಈ ಸಾಲಿನಲ್ಲಿಯಾದರೋ ಮಟ್ಟಹೊಡೆದು ಬಿತ್ತನೆ ಮಾಡುವುದೇ ಪ್ರಯೋಜನಕರವೆಂದು ಗೊತ್ತಾಗಿದೆ. ಬದುವುಗಳ ಮೇಲೆ ಬಿತ್ತನೆ ಮಾಡಬೇಕಾದರೆ ಹೆಚ್ಚು ಶ್ರಮ ಪಡಬೇಕಾಗುವುದು. ಮತ್ತೂ ನೀರು ಸಹಾ ಜಾಸ್ತಿ ಬೇಕಾಗುವುದು. ಆದುದರಿಂದ ಒಳ್ಳೆಯ ಹಸನಾದ ಜಮೀನುಗಳಲ್ಲಿ ಜಮೀನನ್ನು ಮಟ್ಟಹೊಡೆದು ಬಿತ್ತನೆಮಾಡುವುದೇ ಅತ್ಯುತ್ತಮವಾದ ಪದ್ಧತಿಯೆಂದು ಧಾರಾಳವಾಗಿ ಹೇಳಬಹುದು.

ಕಳೆದ ಸಾಲಿನಲ್ಲಿ ಹತ್ತಿ ಮತ್ತೂ ಗೋಧಿಯ ವ್ಯವಸಾಯಕ್ಕೆ ತಕ್ಕುದಾಗಿರುವ ೧೦ ಎಕರೆ ವಿಸ್ತೀರ್ಣದಲ್ಲಿ ಹತ್ತಿಯ ವ್ಯವಸಾಯವು ಮಾಡಲ್ಪಟ್ಟಿತು. ಜಮೀನು ಸ್ವಲ್ಪ ಮಧ್ಯಸ್ಥಿತಿಯ ಜಿಗಟುಮಣ್ಣಿನ ಪ್ರದೇಶವಾಗಿತ್ತು. ಕಾಲಸ್ಥಿತಿಯೂ ಅನುಕೂಲವಾಗಿದ್ದದಲ್ಲದೆ ರೋಗಾದಿಗಳಿಂದ ಯಾವವಿಧವಾದ ನಷ್ಟವೂ ಉಂಟಾಗಲಿಲ್ಲ. ಹತ್ತು ಎಕರೆ ಜಮೀನಿನ ಪೈಕಿ ಮುಕ್ಕಾಲು ಮುಕ್ಕಾಲು ಎಕರೆಯ ಎರಡು ತುಂಡುಗಳಲ್ಲಿ ಒಂದರಲ್ಲಿ ಕ್ಷಾರವು ಜಾಸ್ತಿಯಾಗಿದ್ದುದರಿಂದಲೂ, ಇನ್ನೊಂದರಲ್ಲಿ ಒಂದು ಜಾತಿಯ ಹುಲ್ಲು ಬೆಳೆದಿದ್ದುದರಿಂದಲೂ ಗಿಡಗಳು ಮಧ್ಯಸ್ಥವಾಗಿ ಬೆಳೆದಿದ್ದುವು. ಆದರೆ ಪೈರು ಆರೋಗ್ಯವಾಗಿಯೂ ಎಲ್ಲಾ ಕಡೆಯಲ್ಲೂ ಒಂದೇ ಸಮನಾಗಿಯೂ ಇದ್ದುವು.

ಹಿಂದಣ ಸಾಲುಗಳಲ್ಲಿ ಬುರಿ (Buri) ಎಂಬ ಹತ್ತಿಯು ಬಹಳ ತಡವಾಗಿ ಕಟಾವಿಗೆ ಬಂದಕಾರಣ ಅದನ್ನು ಹೋದ ಸಾಲಿನಲ್ಲಿ ಇತರ ಹತ್ತಿಗಳಿಗಿಂತ ಒಂದು ತಿಂಗಳು ಮುಂಚಿತವಾಗಿಯೇ ಬಿತ್ತನೆಮಾಡಿದುದಾಯಿತು. ಎಂದಿನಂತೆ ಪೈರು ಬಹಳ ಸೊಂಪಾಗಿಯೂ ಮತ್ತೂ ಆರೋಗ್ಯವಾಗಿಯೂ ಇದ್ದಿತು. ಅಕ್ಟೋಬರ್ ತಿಂಗಳ ಮೊದಲಿನಲ್ಲಿ ಇತರ ಹತ್ತಿಗಳನ್ನು ಬಿಡಿಸಲು ಪ್ರಾರಂಭವಾಯಿತು. ಆಗ್ಗೆ ಬುರಿ ಹತ್ತಿ ಗಿಡಗಳಲ್ಲಿ ಇನ್ನು ಹೂವೇ ಬಿಟ್ಟಿರಲಿಲ್ಲ. ಅಕ್ಟೋಬರ್ ಕೊನೆಯಲ್ಲಿ ಹೂವುಗಳು ಬಿಟ್ಟು, ಡಿಸೆಂಬರು ಕೊನೆಯಲ್ಲಿ ಹತ್ತಿಯು ಬಿಡಿಸಲ್ಪಟ್ಟಿತು. ಅನಂತರದಲ್ಲಿ ಮಂಜುಬಿದ್ದು ಪೈರೆಲ್ಲಾ ಹಾಳಾಗಿಹೋಯಿತು. ಈ ಬುರಿ ಹತ್ತಿಯನ್ನು ೧೯೦೭ ನೇ ಇಸವಿಯ ಲಾಗಾಯಿತು ಲಯಾಲಪುರದಲ್ಲಿ ವ್ಯವಸಾಯಮಾಡಿ ನೋಡಿದುದರಲ್ಲಿ ಇದು ಆ ಪ್ರದೇಶಕ್ಕೆ ಉಪಯೋಗವಿಲ್ಲವೆಂದು ತಿಳಿಯಬಂದಿದೆ.

ಕಳೆದ ಸಾಲಿನಲ್ಲಿ ಸ್ವಲ್ಪ ಕಾಂಬೋಡಿಯಾ ಹತ್ತಿಯನ್ನು ಅಜಮಾಯಿಷಿಗೋಸ್ಕರ ಲಯಾಲಪುರದಲ್ಲಿ ಬೆಳೆಸಿ ನೋಡಲಾಗಿ ಇದೂ ಕೂಡ ಬುರಿ ಹತ್ತಿಯಂತೆ ಅಲ್ಲಿ ಲಾಭಕರವಲ್ಲವೆಂದು ಗೊತ್ತಾಯಿತು. ಇದೇ ರೀತಿಯಲ್ಲಿ ಕಳೆದ ನಾಲ್ಕು ವರುಷಗಳ ಅನುಭವದಿಂದ ಈಜಿಪ್ಟ್ ದೇಶದ ಹತ್ತಿಗಳ [illegible] ಪ್ರಯೋಜನವಿಲ್ಲವೆಂದು ತಿಳಿಯಬಂದಿದೆ.

ಸಾಧಾರಣ ಹತ್ತಿಗಳನ್ನು ಬಿತ್ತುವ ಕಾಲದಲ್ಲೇ ಧಾರವಾಡದ ಅನೇಕ ತರಹಾ ಅಮೇರಿಕಾ ಹತ್ತಿಗಳು ಬಿತ್ತಲ್ಪಟ್ಟವು. ಗಿಡಗಳು ಚೆನ್ನಾಗಿ ಕವಲೊಡೆಯಲೆಂದೂ ಮತ್ತೂ ಹತ್ತಿ ಕಾಯಿಗಳಿಗೆ ಹುಳುಗಳು ಮುತ್ತದಿರಲೆಂದೂ, ಆಗಸ್ಟ್ ತಿಂಗಳ ಮೊದಲಿನಲ್ಲಿ ಚಿಗರು ಮತ್ತೂ ಮೊದಲು ಮೊದಲು ಬಿಟ್ಟ ಹತ್ತಿ ಕಾಯಿಗಳನ್ನು ಚಿಗಟಿ ಹಾಕಿದ್ದಾಯಿತು. ಹೋದ ಸಾಲಿನಲ್ಲಿ ಹುಳುಗಳಿಂದ ಹೆಚ್ಚು ನಷ್ಟವಾಗಲಿಲ್ಲ. ಎಲ್ಲಾ ತರಹೆಯ ಪೈರೂ ಒಂದೇ ಸಮನಾಗಿ ಆದುದರಿಂದ ಹಿಂದಿನ ಮೂರು ಸಾಲುಗಳಲ್ಲಿ ಇವುಗಳಲ್ಲಿ ಆದ ಉತ್ಪತ್ತಿಯನ್ನು ಕಳೆದ ಸಾಲಿನ ಉತ್ಪತ್ತಿಯೊಡನೆ ಹೋಲಿಸಿ ಆ ಪ್ರದೇಶಕ್ಕೆ ತಕ್ಕವುಗಳಾವುವೆಂದು ಗೊತ್ತುಮಾಡಿದುದಾಯಿತು. ಇವುಗಳಲ್ಲಿ ಕೆಲವು ಅಮೆರಿಕಾದೇಶದ ಮಧ್ಯಸ್ಥವಾದ ಹತ್ತಿಗಳಿಗಿಂತ ಉತ್ತಮವಾದವುಗಳೆಂದು ಲಿವರ್‌ಪೂಲಿನಲ್ಲಿರುವ ಹತ್ತಿ ಬೆಳೆಯುವವರ (The British Cotton Growing Association, Liverpool) ಸಂಘದವರೂ ಮತ್ತೂ ಬೊಂಬಾಯಿನ ವ್ಯಾಪಾರ ಸಂಘದವರೂ (Chamber of Commerce, Bombay) ಅಭಿಪ್ರಾಯ ಪಟ್ಟಿರುತ್ತಾರೆ. ಇವುಗಳನ್ನು ಇನ್ನೂ ಅಭಿವೃದ್ಧಿ ಮಾಡಲು ಅವಕಾಶವಿದೆ.

ದೇಶೀಯ ಹತ್ತಿಗಳಲ್ಲೆಲ್ಲಾ ಅತಿಶಯವಾದ ಉತ್ಪತ್ತಿಯಾಯಿತು. ಧಾರವಾಡದ ಅಮೇರಿಕಾ ಹತ್ತಿಗಳಿಗಿಂತಲೂ ಜಾಸ್ತಿ ಉತ್ಪತ್ತಿಯಾಗಿದೆ. ಅತ್ಯುತ್ತಮವಾದ ದೇಶೀಯ ಹತ್ತಿಯು ಎಕರೆಗೆ ೧೫ ರಿಂದ ೧೭ ಮಣಗಳ ವರೆಗೂ ಉತ್ಪತ್ತಿಯಾಯಿತು. ಆದರೆ ಹಿಂದಿನ ಎರಡು ವರುಷಗಳಲ್ಲೂ ದೇಶೀಯ ಹತ್ತಿಗಳಿಗಿಂತ ಧಾರವಾಡದ ಅಮೆರಿಕಾ ಹತ್ತಿಯ ಉತ್ಪತ್ತಿಯು ಜಾಸ್ತಿಯಾಗಿತ್ತು.

ಅಂತೂ ಕಿಡ್ನಿ (Kidney) ಸ್ಪೆನ್ಸ್ (Spence) ಮತ್ತೂ ಕೆರವನಿಕ Caravonica) ಮೊದಲಾದ ಮರಹತ್ತಿಗಳೂ, ಆಫ್ರಿಕ, ಈಜಿಪ್ಟ್, ಕ್ಯಾಂಬೋಡಿಯ ಮತ್ತೂ ಬುರಿ ಹತ್ತಿಗಳು ಪಂಜಾಬಿನಲ್ಲಿ ಚೆನ್ನಾಗಿ ಬೆಳೆಯುವುದಿಲ್ಲವೆಂದು ಕಳೆದ ಕೆಲವು ವರುಷಗಳ ಅನುಭವದಿಂದ ತಿಳಿಯಬರುತ್ತದೆ. ಧಾರವಾಡದ ಅಮೇರಿಕಾ ಮತ್ತೂ ದೇಶೀಯ ಹತ್ತಿಗಳೇ ಅಲ್ಲಿ ಹುಲುಸಾಗಿ ಬೆಳೆಯುವುವು. ಸುಮಾರು ಆರು ತರಹೆಯ ಧಾರವಾಡದ ಅಮೇರಿಕಾ ಹತ್ತಿಯನ್ನು ಲಯಾಲಪುರದಲ್ಲಿರುವ ಪಂಜಾಬು ವ್ಯವಸಾಯದ ವಿದ್ಯಾಲಯದ ಮುಖ್ಯಸ್ಥರಿಗೆ ಕಳುಹಿಸಿಕೊಟ್ಟಿದೆ. ಅವರು ದೊಡ್ಡದೊಡ್ಡ ಜಮೀನುಗಳಲ್ಲಿ ಅವುಗಳ ಬೆಳೆಯನ್ನು ಮಾಡಿ ಆದಾಯವೆಂದು ಕಂಡುಬಂದರೆ ಅನಂತರ ರೈತರೆಲ್ಲರೂ ಅವುಗಳನ್ನು ಬೆಳೆಯುವಂತೆ ಬೋಧಿಸುವರು.

(b) Research Operations. (ಬಿ) ಶೋಧನ ಕಾರ್ಯಗಳು.— ಉಪ್ಪು ಮಣ್ಣಿನ ಜಮೀನು (Alkali Lands) ಗಳನ್ನು ವ್ಯವಸಾಯಕ್ಕೆ ಯೋಗ್ಯವಾದವುಗಳನ್ನಾಗಿ ಮಾಡುವುದಕ್ಕೋಸ್ಕರ ಅಂತಹ ಜಮೀನುಗಳ ಮಣ್ಣಿನಲ್ಲಿ ಯಾವಯಾವ ಪದಾರ್ಥಗಳಿವೆ? ಹಾಗೆ ಉಪ್ಪುಗಳು ಜಾಸ್ತಿಯಾಗಲು ಕಾರಣವೇನು? ಇದನ್ನು ನಿವಾರಣೆಮಾಡಲು ಏನು ಕೆಲಸಗಳನ್ನು ಮಾಡಬಹುದು ಇವೇ ಮೊದಲಾದವುಗಳನ್ನು ಕುರಿತು ಒಂದು ರಿಪೋರ್ಟು ಮಾಡಲ್ಪಟ್ಟಿದೆ. ಹೀಗೆ ಜಮೀನುಗಳಲ್ಲಿ ಉಪ್ಪು ಸೇರುವುದಕ್ಕೆ ಹವ ಮತ್ತು ಅವುಗಳು ಇರತಕ್ಕ ಸ್ಥಳ ಇವುಗಳೇ ಕಾರಣವಾಗಿವೆ. ಮುಖ್ಯವಾಗಿ ನೀರಾವರಿ ಪ್ರದೇಶಗಳ ಕೆಲವು ಜಮೀನುಗಳಲ್ಲಿ ಉಪ್ಪು ಜಾಸ್ತಿಯಾಗಿರಲು ಕಾರಣವೇನೆಂದು ಪರೀಕ್ಷಿಸುತ್ತಿದಾರೆ. ಇದುವರೆಗೆ ಪರೀಕ್ಷಿಸಿ ನೋಡಿದ್ದರಲ್ಲಿ ಇಂತಹ ಜಮೀನುಗಳಿಗೆ ಹೇರಳವಾಗಿ ನೀರುಹಾಯಿಸಿ ನೀರು ಚೆನ್ನಾಗಿ ಬಸಿದುಹೋಗಲು ತಕ್ಕ ಏರ್ಪಾಡುಗಳನ್ನು ಮಾಡುವುದೇ ಬುದ್ಧಿವಂತಿಕೆಯೆಂದು ತೋರುತ್ತದೆ. ಆದಕಾರಣ ನೀರು ಸರಬರಾಜಿಗೆ ಸಾಕಾದಷ್ಟು ಅನುಕೂಲವಿರುವ ಉಪ್ಪು ಜಮೀನುಗಳನ್ನು ಮಾತ್ರ ವ್ಯವಸಾಯಕ್ಕೆ ಯೋಗ್ಯವಾದವುಗಳನ್ನಾಗಿ ಮಾಡಬಹುದೆಂದಾಯಿತು. ನಾಲಾ ನೀರಿನ ಆಸರೆಯಿರುವ ಜಮೀನುಗಳಲ್ಲಿ ಉಪ್ಪು ಜಾಸ್ತಿಯಾಗುವುದೆಂಬುದಕ್ಕೆ ಸಾಕಾದ ಕಾರಣಗಳಿರುವುದರಿಂದ ಅಂತಹ ಜಮೀನುಗಳಿಂದ ನೀರು ಬಸಿದುಹೋಗಲು ಸರಿಯಾದ ಏರ್ಪಾಡನ್ನು ಮಾಡುವುದು ಅತ್ಯಾವಶ್ಯಕ. ಬಸಿದು ಹೋಗುವ ನೀರಿನೊಡನೆ ಉಪ್ಪು ಜಮೀನನ್ನು ಬಿಟ್ಟು ಹೊರಗೆ ಹೋಗುವುದು.

[illegible] ಕಬ್ಬಿನ ಬೀಜ ಬೇಕೆಂದಿರುವವರು ಮಲಬಾರಿನ ತಳಿಪರಂಬ ಫಾರ್ಮಿನ ಮ್ಯಾನೇಜರವರಿಗೆ ಬರೆದರೆ ಅಲ್ಲಿಂದಲ್ಲಿ ಉತ್ತಮವಾದ ಬೀಜವನ್ನು ಸಾವಿರಕ್ಕೆ ಮೂರು ರೂಪಾಯಿ ದರದಲ್ಲಿ ಕೊಡುವರು. ಮತ್ತು ರೈಲಿನಲ್ಲಿ ಹಾಕಿ ಕಳುಹಿಸುವ ಏರ್ಪಾಡು ಮಾಡುವರು. ರೈಲು ಚಾರ್ಜು ಸಾವಿರಕ್ಕೆ ಒಂದು ರೂಪಾಯಿ ಆಗುತ್ತದೆ. [illegible]

[illegible] ಪುಡಿಯನ್ನು [illegible] ಇರತಕ್ಕ ಸ್ಥಳಗಳಲ್ಲಿ ಎರಚಿದರೆ ಅವುಗಳ ಕಾಟವು ಕಡಿಮೆಯಾಗುವುದು. ಯಾವುದಾದರೊಂದು [illegible] ಪುಡಿಯನ್ನು ಬೆರಸಿ ಅದನ್ನು ಸಣ್ಣ ಸಣ್ಣ ತವರದ ತುಂಡುಗಳಿಗೆ ಹಚ್ಚಿ ಗೂಡುಗಳಲ್ಲಿಟ್ಟರೆ [illegible] ಆ ಪ್ರದೇಶಕ್ಕೆ ಬರುವುದಿಲ್ಲ.— ವ್ಯ. ಗೆ.

ಬ್ರಾಹ್ಮಣರ ಯುದ್ಧ.

ವಿದ್ಯಾವಂತರಾಗಿಯೂ, ಚಿತ್ರದುರ್ಗದ ಹೈಸ್ಕೂಲ್ ಹೆಡ್ಮಾಸ್ತರರಾಗಿಯೂ ಇರುವ ಮಿ॥ ಆರ್. ರಘುನಾಥರಾವ್ ಬಿ. ಎ., ಯವರು "ಸ್ತ್ರೀಸಂಸ್ಕಾರ ಪ್ರಕಾಶಿಕೆ" ಎಂಬ ಪುಸ್ತಕವನ್ನು ರಚಿಸಿ, ಎಲ್ಲೆಡೆಯಲ್ಲಿಯೂ ಪ್ರಚುರಗೊಳಿಸಿರುವರು. ಇದರಲ್ಲಿ ಸ್ತ್ರೀಗೆ ಉಪನಯನಾದಿ ಸಂಸ್ಕಾರವೂ, ಪ್ರೌಢಾವಿವಾಹವೂ ಶಾಸ್ತ್ರಸಮ್ಮತವೆಂದೂ, ಬಾಲ್ಯವಿವಾಹಾದಿಗಳನ್ನಾಚರಿಸುತ್ತಿರುವ ಈಗಣ ಬ್ರಾಹ್ಮಣ ವೈಖರ ನಡೆವಳಿಕೆಯು ಅಶಾಸ್ತ್ರೀಯವೆಂದೂ ಮೊದಲಾಗಿ ವಿವರಿಸಲ್ಪಟ್ಟಿರುವುದು. ಇದನ್ನು ದೊಡ್ಡಮನುಷ್ಯರೂ, ಪಂಡಿತರೂ, ಪತ್ರಿಕೆಗಳೂ ಶ್ಲಾಘಿಸಿರುವುವು.

ಈ ಪುಸ್ತಕವು ತಮಗೂ, ತಮ್ಮ ಮತಕ್ಕೂ, ಗುರುಗಳಿಗೂ ಬಾಧಕವೆಂದು ಇದೇ ಚಿತ್ರದುರ್ಗದ ಮಠಾಧಿಕಾರಿ ಮೇ॥ ಹನುಮಂತಾಚಾರ್ಯರು ಕೆಲವರೊಡನೆ ಗ್ರಂಥಕರ್ತರನ್ನು ದೂಷಿಸಿ, ಇಂಡಿಯನ್ ಪೆನಲ್‌ಕೋಡು ೨೯೫, ೨೯೮, ೫೦೦, ೫೦೪ ನೆಯ ಸೆಕ್ಷನುಗಳಂತೆ ಅವರಮೇಲೆ ಫಿರ್ಯಾದ್ ಮಾಡಿರುವರು. ಇದು ವಿಚಾರಣೆಯಲ್ಲಿರುವಾಗಲೇ ಶ್ರೀವ್ಯಾಸರಾಯಸ್ವಾಮಿಗಳ ಮಠದಿಂದ ಮಿ॥ ರಘುನಾಥರಾಯರಿಗೆ ಬಹಿಷ್ಕಾರವು ಬಂದುದಲ್ಲದೆ, ರೂಬರೂಬು ಹಾಜರಾಗುವಂತೆ ವಾಯಿದೆನಿಸಿ ಅಪ್ಪಣೆಗಳು ಬರುತ್ತಲೇ ಇವೆ. ನಿಜಕ್ಕೆ ವಿಧೇಯರಾಗಿರುವವರು ರಾಯರಲ್ಲಿ ಸವ್ಯವಹಾರವನ್ನು ಮಾಡುತ್ತಲೇ ಇರುವರು.

ಪ್ರಜೆಗಳೆಲ್ಲರೂ ದೇವರ ಮಕ್ಕಳಾಗಿ ಸಹೋದರರಂತಿರದೆ, ಜಾತಿದ್ವೇಷದಿಂದ ಒಬ್ಬರಿಗೊಬ್ಬರು ಕೀಳ್ಮೇಲೆಂದು ಭಾವಿಸಿ, ವೃದ್ಧಿಗೆ ತಡೆಯಾದ ಬಾಲ್ಯವಿವಾಹಾದಿಗಳಲ್ಲಿ ವರ್ತಿಸುತ್ತಿರುವುದರಿಂದಲೇ ನಮ್ಮ ದೇಶದಲ್ಲಿ ವಿಧವೆಯರೂ, ಗರ್ಭಸ್ರಾವಾದಿಗಳೂ ಹೆಚ್ಚಲು ಕಾರಣವಾದುವು. ಜೀವನಕ್ಕಾಗಿ ಬೇರೆಬೇರೆ ದೇಶಗಳಲ್ಲಿ ಸೇರಿ ಬೇರೆಬೇರೆ ಜನಾಂಗಗಳಾಗಿದ್ದರೂ ನಾವು ಇತರರಂತೆ ಐಕಮತ್ಯವಿಲ್ಲದೆ ದುರವಸ್ಥೆಗೆ ಬರಬೇಕಾಯಿತು. ಸತ್ಪ್ರಜೆಗಳಾಗಬೇಕೆಂಬ ಉದ್ದೇಶಕ್ಕೆ ನಾವು ಸಹಕಾರಿಗಳಾಗದೆ ಆಡುವುದೊಂದು ಮಾಡುವುದೊಂದು ಆಗಿ ಸರ್ಕಾರದ ಸದುದ್ದೇಶವನ್ನು ವ್ಯರ್ಥಗೊಳಿಸುತ್ತಿರುವುದಾಗಿದೆ. ಇಂಡಿಯನ್ ಪೆನಲ್ ಕೋಡಿನ ೨೯೫-೨೯೮ ನೆಯ ಸೆಕ್ಷನುಗಳು ಹಿಂದೂ ದೇಶಕ್ಕೆ ಫಲಕಾರಿಯಾಗದೆಯೇ ಹೋಗಿದೆ.

ಪ್ರೌಢಾವಿವಾಹಾದಿ ಸಂಸ್ಕಾರಗಳು ಆವಶ್ಯಕವೆಂದು ಘನಹೊಂದಿದ ರಿಟೈರ್ಡ್ ದಿವಾನ್ ಮಿ॥ ವಿ. ಪಿ. ಮಾಧವರಾವ್ ಬಿ. ಎ., ಸಿ. ಐ. ಇ., ಯವರೂ ಇಂತಹ ವ್ಯಾಜ್ಯಗಳನ್ನು ಸಿವಿಲ್‌ಕೋರ್ಟಿನವರು ಹಿಡಿಯಬಾರದೆಂದು ಕುಂಭಕೋಣದ ದಿವಾನ್ ಬಹದ್ದೂರ್ ಮಿ॥ ರಘುನಾಥರಾಯರವರೂ ಮಿಸ್ ಟಿನೆಂಟ್ ಮುಂತಾದವರೂ ಪ್ರಜೆಗಳ ಉಪಕಾರಗಳಿಗಾಗಿ ಎಷ್ಟೋ ಕಷ್ಟಪಟ್ಟು ಪತ್ರಿಕೆಗಳ ಮೂಲಕ ಪ್ರಚುರಗೊಳಿಸುತ್ತಿರುವರು.

ನಮ್ಮನ್ನಾಳುವ ರಾಜಸೂತ್ರಗಳು ನಿಷ್ಪಕ್ಷಪಾತಗಳಾಗಿವೆ. ಜಾತಿತಾರತಮ್ಯವು ಅದರಲ್ಲಿಲ್ಲ. ನಮ್ಮನ್ನು ಹಿಂದೂ ಪ್ರಭುಗಳೇ ಆಳುತ್ತಿರುವರು ಮತವಿಚಾರದಲ್ಲಿ ಈ ಗೌರ್ನಮೆಂಟು ಪ್ರವರ್ತಿಸಬಹುದೋ, ಇಲ್ಲವೆ ೧೮೫೮-ನೆಯ ಲೇಟ್ ಚಕ್ರವರ್ತಿನಿಯವರ ಪ್ರೊಕ್ಲಮೇಷನ್ನಿನಂತೆ ತಾಟಸ್ಥ್ಯದಿಂದಿರಬಹುದೋ? ಗೊತ್ತಿಲ್ಲವು. ಅದರೆ ಈ ಸರ್ಕಾರವು ಪ್ರತಿಮತದ ಗುರುಗಳಿಗೂ ಸ್ಟೇಟ್ ಫಂಡಿನಿಂದ ಸಹಾಯಮಾಡುತ್ತಿರುವುದರ ಪ್ರತಿಫಲವು ಇಂತಹ ವ್ಯಾಜ್ಯಗಳ ಪ್ರೋತ್ಸಾಹಕ್ಕಾದಂತಾಗಿದೆ. ಇಂತಹ ವ್ಯಾಜ್ಯಗಳನ್ನು ಕೋರ್ಟಿನ ಮೂಲಕ ವ್ಯವಸ್ಥೆಗೊಳಿಸುವುದು ಇನ್ನೂ ಹೆಚ್ಚಾದ ದ್ವೇಷಕ್ಕೆ ಅವಕಾಶಮಾಡಿದಂತಾಗುವುದು. ಹೀಗೆ ಮತವೈರದ ವೃದ್ಧಿಗೆ ಅವಕಾಶವನ್ನು ಕೊಡುವುದಕ್ಕಿಂತಲೂ ಸರ್ಕಾರದವರೂ, ದೊಡ್ಡಮನುಷ್ಯರೂ ಏಕೀಭವಿಸಿ ಇಂತಹ ಅನಾಹುತಗಳು ನಡೆಯದಂತೆಯೂ, ಸರ್ಕಾರದ ಸಹಾಯವನ್ನು ಪಡೆದಿರುವ ಜಾತಿಗುರುಗಳು ಸರ್ಕಾರದ ಉದ್ದೇಶಕ್ಕೆ ಸಹಕಾರಿಗಳಾಗಿ ವರ್ತಿಸುವಂತೆಯೂ, ನಾಗರಿಕಕಾಲಕ್ಕೆ ತಕ್ಕ ಸದಾಚಾರಗಳು ಜನರಲ್ಲಿ ಅನುಷ್ಠಾನಕ್ಕೆ ಬರುವಂತೆಯೂ ಮಾಡಿ ಜನರಲ್ಲಿ ಐಕಮತ್ಯವನ್ನು ಹೆಚ್ಚಿಸುವುದು ದೇಶಕ್ಕೆ ಶ್ರೇಯಸ್ಕರವಾಗಿದೆ. ನಿಜವಾದ [illegible] ಪ್ರಜೆಗಳಿಗೂ, ಸರ್ಕಾರಕ್ಕೂ [illegible] ವಿದ್ಯಾವಿಶಾರದರಾಗಿರುವವರು. [illegible] ವಿದ್ಯಾವಂತರೆನಿಸಿರುವವರು ವ್ಯಾಜ್ಯಗಳಲ್ಲಿ [illegible]. ಇದೇ ನಮ್ಮ ಕೋರಿಕೆ.

ಒಬ್ಬ [illegible] ಅಭಿಮಾನಿ.

ಸೂಚನೆ.

ಪದ್ಧತಿಯ ಪ್ರಕಾರ ಮಹಾಶಿವರಾತ್ರಿ ಹಬ್ಬದ ಉದ್ದೇಶದಿಂದ ಈ ಫೆಬ್ರುವರಿ ತಾ॥ ೧೯ ರ ಮೈಸೂರ ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್

೧೯೧೨ ನೆಯ ಫೆಬ್ರುವರಿ ತಾ॥ ೧೨ ನೆಯ ಸೋಮವಾರ.

ಮೈಸೂರ ಸಂಸ್ಥಾನದ ಮಂತ್ರಿತ್ವವು.

ಸಂಸ್ಥಾನದ ಈಗಿನ ಮಂತ್ರಿಗಳಾದ ಮ॥ ಟಿ. ಆನಂದ ರಾವ್, ಬಿ. ಎ, ಸಿ. ಐ. ಇ., ಯವರ ೩ ವರ್ಷಗಳ ಅಧಿಕಾರದಮಿತಿಯು ಬರುವ ಮಾರ್ಚಿ ತಿಂಗಳ ಕಡೆಯಲ್ಲಿ ಮುಗಿಯುವುದಾದುದರಿಂದ, ಮುಂದೆ ಇವರೇ ಇನ್ನೂ ಕೆಲಕಾಲ ಮಂತ್ರಿ ಪದವಿಯಲ್ಲಿರಿಸಲ್ಪಡುವರೋ, ಅಥವಾ ಬೇರೊಬ್ಬರು ಹೊಸದಾಗಿ ನಿಯಮಿಸಲ್ಪಡುವರೋ? ಎಂಬಂಶವು ಈ ದೇಶೀಯರ ಮನಸ್ಸಿನಲ್ಲಿ ಬಹು ಕುತೂಹಲವನ್ನುಂಟುಮಾಡಿದೆ. ಆದರೆ ಮ॥ ಆನಂದರಾಯರು ತಮಗೆ ಪ್ರಾಪ್ತವಾಗಿರುವ ಕಣ್ಣಿನ ಬೇನೆಯಿಂದ ಹೆಚ್ಚು ಕೆಲಸವನ್ನು ಮಾಡಲಿಕ್ಕಿಲ್ಲವಾದುದರಿಂದ, ಕೆಲಕಾಲದ ಹಿಂದೆಯೇ ನಿವೃತ್ತಿ ಸುಖವನ್ನು ಹೊಂದಬೇಕೆಂದಿದ್ದರಾದರೂ, ಶ್ರೀಮನ್ಮಹಾರಾಜರವರ ಇಷ್ಟಪ್ರಕಾರ ಈವರೆಗೆ ಅಧಿಕಾರದಲ್ಲಿರಬೇಕಾಗಿ ಬಂದಿತೆಂದೂ, ಕಣ್ಣಿನ ಬೇನೆಯು ದಿನೇದಿನೇ ಹೆಚ್ಚಾಗುತ್ತಿರುವುದರಿಂದ ಇನ್ನು ಮುಂದೆ ಕೆಲಸಮಾಡಲು ಇಷ್ಟಪಡುವುದಿಲ್ಲವೆಂದೂ ಈ ಕಾರಣದಿಂದ ಮತ್ತೊಬ್ಬರು ಮಂತ್ರಿಪದವಿಗೆ ನಿಯಮಿಸಲ್ಪಡುವುದು ನಿಶ್ಚಿತವಾಗಿರುವುದೆಂದೂ ಕೇಳುತ್ತೇವೆ. ಬರೋಡಾ ಮೊದಲಾದ ೩ ದೇಶೀಯ ಸಂಸ್ಥಾನಗಳಲ್ಲಿ ಮಂತ್ರಿಗಳಾಗಿದ್ದು ಸುಪ್ರಸಿದ್ಧರಾಗಿದ್ದ ಗ॥ ಸರ್ ಟಿ. ಮಾಧವರಾಯರ ಕುಮಾರರಾದ ಮ॥ ಆನಂದರಾಯರು ಪೂರ್ಣ ವಿದ್ಯಾವಂತರೂ, ಅಗರ್ಭ ಶ್ರೀಮಂತರೂ, ನಿಸ್ಪೃಹರೂ, ನಿಗರ್ವ ಶಿಖಾಮಣಿಗಳೂ ಆಗಿರುವರಲ್ಲದೆ ಚೀಫ್ ಕಮಿಷನರ ಕಾಲದಲ್ಲಿ ಈ ಸಂಸ್ಥಾನದ ಉದ್ಯೋಗಕ್ಕೆ ಸೇರಿ ಎಲ್ಲಾ ಶಾಖೆಗಳಲ್ಲೂ ಕೆಲಸವನ್ನು ಮಾಡಿ ಒಳ್ಳೆಯ ಅನುಭವಸ್ಥರಾಗಿರುವುದರಿಂದಲೇ ಇವರು ಮ॥ ಮಾಧವರಾಯರ ಅಧಿಕಾರಾನಂತರ ಮಂತ್ರಿಗಳಾಗಿ ನೇಮಿಸಲ್ಪಟ್ಟರೆಂಬ ಸುದ್ದಿಯನ್ನು ಕೇಳಿ, ಇವರ ಕಾಲದಲ್ಲಾದರೂ ಸಮಸ್ತಜನರೂ ಜಾತಿಭೇದವಿಲ್ಲದೆ ಪುತ್ರನಿರ್ವಿಶೇಷದಿಂದ ಕಾಪಾಡಲ್ಪಟ್ಟು, ಈ ದೇಶವು ಅಭಿವೃದ್ಧಿಗೆ ತರಲ್ಪಡುವುದೆಂದು ಈ ದೇಶೀಯರೆಲ್ಲರೂ ಹರ್ಷಚಿತ್ತರಾಗಿದ್ದರು; ಆದರೆ ಮ॥ಆನಂದರಾಯರು ತಮ್ಮ ಕಣ್ಣಿನ ಬಾಧೆಯಿಂದ ಸ್ವತಃ ಉದ್ಯೋಗವನ್ನು ಸಮರ್ಪಕವಾಗಿ ನೋಡಲವಕಾಶವಿಲ್ಲದಿದ್ದುದರಿಂದಲೋ, ಅಥವಾ ಈ ದೇಶದ ಮಂತ್ರಿಸ್ಥಾನದ ಮಹಿಮೆಯಿಂದಲೊ ತಮ್ಮ ನಿರ್ಗರ್ವವಾದ ಗುಣಕ್ಕೆ ವಿರೋಧವಾಗಿ, ವೀರಶೈವ ವಿದ್ಯಾರ್ಥಿಗಳನ್ನು ಸಂಸ್ಕೃತ ಕಾಲೇಜಿಗೆ ಸೇರಿಸುವ ವಿಚಾರವಾಗಿ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆಯು ನಡೆದಾಗ ಈ ದೇಶದ ಒಟ್ಟು ಪ್ರಜಾಸಂಖ್ಯೆಯಲ್ಲಿ ಪ್ರಾಯಶಃ ೪ ನೆಯ ೧ ಭಾಗವಿರುವ ವೀರಶೈವ ಜನಾಂಗಕ್ಕೇ ಖೇದಕರವಾದ ಉತ್ತರವನ್ನು ಇತ್ತು, ಅವರ ಮನಸ್ಸನ್ನು ನೋಯಿಸಿದುದಲ್ಲದೆ ಭಾರತಸೇವಾ ಮಂಡಳಿಗೆ ಸೇರಿದ ಮ॥ ಶ್ರೀನಿವಾಸಶಾಸ್ತ್ರಿಗಳು ಬೆಂಗಳೂರಲ್ಲಿ ಭಾಷಣಮಾಡದಂತೆ ಅಡ್ಡಿಪಡಿಸಿ ಭರತಖಂಡದ ಎಲ್ಲಾ ವೃತ್ತಪತ್ರಿಕೆಗಳ ಮತ್ತೂ ದೇಶಸೇವಾ ಧುರಂಧರರ ಆಕ್ಷೇಪಕ್ಕೂ, ಅಸಮಾಧಾನಕ್ಕೂ ಅವಕಾಶವನ್ನುಂಟುಮಾಡಿ ಈ ದೇಶೀಯರ ನಿರೀಕ್ಷಣೆಯನ್ನು ಸಾರ್ಥಕಪಡಿಸಲಿಲ್ಲವಾಗಿ ವಿಷಾದಿಸುತ್ತೇವೆ. ಸರ್ವೇಂದ್ರಿಯಗಳಲ್ಲೂ ಪ್ರಧಾನವಾದ ನಯನೇಂದ್ರಿಯದ ಕೊರತೆಯಿಂದ ಯಾವುದೊಂದು ಮಹಾಕಾರ್ಯವನ್ನೂ ಮಾಡಲಿಕ್ಕೆ ಇವರಿಗೆ ಯತ್ನವಿಲ್ಲದೆಹೋಗಿ, ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿಯವರ ಆಡಳಿತವು ಚಿರಸ್ಮರಣೀಯವಾಗಿಲ್ಲದಿರುವಂತೆ ಇವರ ಆಡಳಿತವಾದರೂ ಆಗುತ್ತಿದ್ದಿತು. ಆದರೆ ದೈವವಶಾತ್ ಮ॥ ವಿಶ್ವೇಶ್ವರಯ್ಯನವರು ಇಲ್ಲಿಯ ಚೀಫ್ ಇಂಜನಿಯರ್ ಉದ್ಯೋಗಕ್ಕೆ ಬಂದು ಮಾರಿಕಣಿವೆಯ ಕೆರೆಗಿಂತಲೂ ಅತ್ಯಧಿಕವಾದ ಜಲಾಶಯವನ್ನು ಕನ್ನಂಬಾಡಿಯ ಹತ್ತಿರ ನಿರ್ಮಿಸಲೂ, ಸಂಸ್ಥಾನದ ಪ್ರಾಯಶಃ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಲೋಹಮಾರ್ಗಗಳನ್ನು ಹಾಕಲೂ ತಕ್ಕ ಸೂಚನೆಯನ್ನೂ ಧೈರ್ಯವನ್ನೂ ಕೊಟ್ಟು ಕಾರ್ಯಾರಂಭಮಾಡಿಸಿರುವುದರಿಂದ, ಮ॥ ಆನಂದರಾಯರ ಮಂತ್ರಿತ್ವವು ಗತಿಸಿದ ಪ್ರಸಿದ್ಧ ಶೇಷಾದ್ರಿ ಅಯ್ಯರ್‌ರವರ ಮಂತ್ರಿತ್ವದಂತೆ ಚಿರಸ್ಮರಣೀಯವಾಗಲು ಅವಕಾಶವಾಯಿತು.

ಮ॥ಆನಂದರಾಯರ ತರುವಾಯ ಮಂತ್ರಿಪದವಿಗೆ ಮೈಸೂರು ಡಿಸ್ಟ್ರಿಕ್ಟ್ ಕಲೆಕ್ಟರ್ ಮ॥ ರಾಮಚಂದ್ರರಾಯರು ಬರುವರೆಂಬ ವದಂತಿಯು ಬಹುಕಾಲದಿಂದಿದ್ದಿತ್ತು, ಆದರೆ ಈಗ ನಮ್ಮ ಸಂಸ್ಥಾನದ ಚೀಫ್ ಇಂಜನಿಯರಾಗಿರುವ ಮ॥ವಿಶ್ವೇಶ್ವರಯ್ಯನವರು ಬರುವರೆಂದು ಈತ್ತೀಚೆಗೆ ದೊಡ್ಡದೊಡ್ಡ ಸ್ಥಳಗಳಲ್ಲೆಲ್ಲಾ ವರ್ತಮಾನವು ಪ್ರಬಲತರವಾಗಿರುವುದು. ಇದರ ನಿಷ್ಪತ್ತಿಯು ಪ್ರಾಯಶಃ ಈ ತಿಂಗಳ ಅಂತ ಭಾಗದಲ್ಲಿ ಹೊರಬೀಳುವುದೆಂದು ತೋರುತ್ತದೆ. ಮ॥ ವಿಶ್ವೇಶ್ವರಯ್ಯನವರು ಈ ದೇಶೀಯರು; ಇವರು ಸಿವಿಲ್ ಇಂಜನಿಯರ್ ಪರೀಕ್ಷೆಯನ್ನು ಕೊಟ್ಟು ಸೀಮೆಗೆ ಹೋಗಿ ಅಲ್ಲಿ ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದು ಬೊಂಬಾಯಿ ಸರ್ಕಾರದಲ್ಲಿ ಬಹುಕಾಲ ದೊಡ್ಡದೊಡ್ಡ ಇಂಜನೀರ್ ಅಧಿಕಾರವನ್ನು ವಹಿಸಿಕೊಂಡು ಅನೇಕ ಅಸಾಧಾರಣವಾದ ನೀರಾವರಿ ಕಾರ್ಯಗಳನ್ನು ಮಾಡಿಸಿ ಬಹು ಪ್ರಖ್ಯಾತಿಯನ್ನು ಪಡೆದಿರುವರು. ಹೈದರಾಬಾದಿನ ಹಿಂದಣ ನಿಜಾಮರವರು ಮ॥ ಯವರ ಪ್ರಖ್ಯಾತಿಯನ್ನು ಕೇಳಿ ತಮ್ಮ ಸಂಸ್ಥಾನಕ್ಕೆ ಕನ್ಸಲ್ಟಿಂಗ್ ಇಂಜನಿಯರನ್ನಾಗಿ ಕರೆಯಿಸಿಕೊಂಡು ಬಹು ಹೆಚ್ಚು ಸಂಬಳವನ್ನು ಕೊಡುತ್ತಿದ್ದರು. "ಅತುಳಮೇಧಾವಿಗಳಾಗಿದ್ದು ಪರದೇಶಗಳಲ್ಲಿ ಅನೇಕ ಅಸಾಧಾರಣ ಕಾರ್ಯಗಳನ್ನು ಮಾಡಿ ಐರೋಪ್ಯ ಇಂಜನಿಯರುಗಳ ಮೆಚ್ಚುಗೆಗೆ ಪಾತ್ರರಾಗಿರುವುದು ತಮ್ಮ ಮಾತೃಸ್ಥಾನವಾದ ಮೈಸೂರು ಸೀಮೆಗೇ ಕೀರ್ತಿಪ್ರತಿಷ್ಠೆಯನ್ನುಂಟುಮಾಡಿರುತ್ತದೆ. ಇನ್ನಾದರೂ ಕೆಲಕಾಲ ಸ್ವದೇಶದಲ್ಲಿ ಅಧಿಕಾರವನ್ನು ವಹಿಸಿಕೊಂಡು ಈ ದೇಶದಭಿವೃದ್ಧಿಯ ಕಾರ್ಯಗಳನ್ನು ಮಾಡುವವರಾಗಬೇಕು." ಎಂದು ಕೆಲ ಆಪ್ತೇಷ್ಟರು ಪ್ರಾರ್ಥಿಸಿಕೊಂಡುದರ ಮೇಲೆ ಮ॥ ಅಯ್ಯನವರು ಬೇರೆ ಸಂಸ್ಥಾನದಲ್ಲಿ ಹೆಚ್ಚು ಸಂಬಳವು ಬರುತ್ತಿದ್ದಾಗ್ಯೂ ಸ್ವದೇಶಾಭಿಮಾನದಿಂದ ಕಡಿಮೆಯ ಸಂಬಳದ ಮೇಲೆ ಇಲ್ಲಿಯ ಚೀಫ್ ಇಂಜನಿಯರ್ ಅಧಿಕಾರಕ್ಕೆ ಬರುವವರಾದರು. ಇಂಗ್ಲೆಂಡಿನಲ್ಲೂ, ಭರತಖಂಡದ ಬ್ರಿಟಿಷ್ ಸರ್ಕಾರದಲ್ಲೂ ತಮ್ಮ ಬುದ್ಧಿಶಕ್ತಿಯಿಂದ ಖ್ಯಾತಿಯನ್ನು ಪಡೆದಿರುವ ಇವರ ಸಾಮರ್ಥ್ಯದ ವಿಚಾರದಲ್ಲಿ ಹೇಳಬೇಕಾದುದೇನಿದೆ? ಆದರೆ ಇವರಿಗೆ ಇಂಜನೀರು ಕೆಲಸದಲ್ಲಿ ವಿಶೇಷ ಸಾಮರ್ಥ್ಯವೂ, ಅನುಭವವೂ ಇರುವುದಾದರೂ ರೆವಿನ್ಯೂ, ಜುಡಿಷಿಯಲ್ ಮೊದಲಾದ ಶಾಖೆಗಳಲ್ಲಿ ಅನುಭವವಿಲ್ಲದಿರುವುದರಿಂದ, ಇವರು ರಾಜ್ಯಾಡಳಿತವನ್ನು ನಿರ್ವಹಿಸಲಾರರೆಂದು ಕೆಲರು ಶಂಕಿಸುತ್ತಾರೆ. ಇಂಜನೀರು ಉದ್ಯೋಗಕ್ಕೆ ಮುಖ್ಯವಾಗಿ ಮೇಧಾಶಕ್ತಿಯಿರಬೇಕು. ಅಂತಹ ಮೇಧಾಶಕ್ತಿಯು ಮ॥ ಅಯ್ಯನವರಲ್ಲಿ ಅಸಾಧಾರಣವಾಗಿರುವುದರಿಂದ, ಇವರು ಎಂತಹ ಕಾರ್ಯಗಳನ್ನಾದರೂ ನಿರ್ವಹಿಸಬಹುದೆಂಬುದರಲ್ಲಿ ಸಂದೇಹವಿಲ್ಲವು. ಇದೂ ಅಲ್ಲದೆ ಇವರು ಬಹು ಶಾಂತಚಿತ್ತರೂ, ಸ್ವದೇಶಾಭಿಮಾನಿಗಳೂ, ನಿಸ್ಪೃಹರೂ, ನಿಗರ್ವಿಗಳೂ, ಜಾತಿಮಾತ್ಸರ್ಯರಹಿತರೂ, ಕೈಕೆಳಗಿನ ಉದ್ಯೋಗಸ್ಥರಲ್ಲಿ ಪೂರ್ಣಾಭಿಮಾನಶಾಲಿಗಳೂ ಆಗಿರುವುದರಿಂದ, ಮಂತ್ರಿತ್ವವನ್ನು ಬಹು ವಿಚಕ್ಷಣೆಯಿಂದಲೂ ಸಮರ್ಥತೆಯಿಂದಲೂ ನಿರ್ವಹಿಸಿ ಪ್ರಭುಚಿತ್ತಕ್ಕೆ ಆನಂದವನ್ನೂ, ತಮಗೂ, ತಮ್ಮ ದೇಶಕ್ಕೂ ಕೀರ್ತಿಯನ್ನೂ ತರುವರೆಂಬುದರಲ್ಲಿ ಸಂದೇಹವಿಲ್ಲವು. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳಿದಲ್ಲಿ ಅಪ್ರಸಕ್ತವೆನಿಸದೆಂದು ತೋರುತ್ತದೆ. ಅದೇನೆಂದರೆ:— ಮ॥ ಆನಂದರಾಯರು ಒಂದನೆಯ ಕೌನ್ಸಿಲರಾಗಿರುವಾಗ ಅವರ ಕೂಡ ಎರಡನೆಯ ಕೌನ್ಸಿಲರಾಗಿದ್ದು ಅವರು ಮಂತ್ರಿಪದವಿಗೆ ಬಂದಮೇಲೆ ಒಂದನೆಯ ಕೌನ್ಸಿಲರ ಕೆಲಸಕ್ಕೆ ಬಂದಂತಹ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು ಈ ಮಾರ್ಚಿ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗಬೇಕೆಂದು ನಿರ್ಧರವಾಗಿರುವುದಾಗಿ ಕೇಳುತ್ತೇವೆ. ಮ॥ ಸೆಟ್ಟರು ಈಗ ೩೪ ವರ್ಷಗಳ ಕೆಳಗೆ ಈ ಸಂಸ್ಥಾನದ ಮರಹಮ್ಮತ್ ಶಾಖೆಯಲ್ಲಿ ಒಂದು ಸಣ್ಣ ಉದ್ಯೋಗಕ್ಕೆ ಸೇರಿ, ಅಲ್ಲಿಂದ ತಮ್ಮ ಸ್ವಸಾಮರ್ಥ್ಯದಿಂದ ಅನೇಕ ಶಾಖೆಗಳಲ್ಲಿ ಉದ್ಯೋಗವನ್ನು ನಿರ್ವಹಿಸಿ ಪ್ರಕೃತಪದವಿಗೆ ಬಂದಿರುವರು. ಇವರು ದೊಡ್ಡ ದೊಡ್ಡ ವಿದ್ಯಾಪ್ರಶಸ್ತಿಗಳನ್ನು ಪಡೆಯದೆ ಇದ್ದಾಗ್ಯೂ, ಪ್ರಶಸ್ತಿಯನ್ನು ಪಡೆದಿರುವವರಿಗಿಂತಲೂ ಹೆಚ್ಚಾದ ಬುದ್ಧಿಯನ್ನುಳ್ಳವರಾಗಿರುವರಲ್ಲದೆ, ತಾವು ಉದ್ಯೋಗಮಾಡಿದ ಪ್ರತಿ ಒಂದು ಶಾಖೆಯಲ್ಲೂ ಕೆಲಸವನ್ನು ಬಹು ಸಮರ್ಥತೆಯಿಂದ ನಿರ್ವಹಿಸಿ ವಿಶೇಷ ಅನುಭವಶಾಲಿಗಳಾಗಿರುವರು ಮತ್ತೂ ಮೇಲ್ಪಟ್ಟ ಅಧಿಕಾರಿಗಳ ಮೆಚ್ಚುಗೆಗೂ, ಸಹೋದ್ಯೋಗಿಗಳ ಸಹಾನುಭೂತಿಗೂ, ಜನಾನುರಾಗಕ್ಕೂ ಪಾತ್ರರಾಗಿರುವರೆಂಬುದು ಆಬಾಲವೃದ್ಧರೆಲ್ಲರಿಗೂ ತಿಳಿದುದಾಗಿದೆ. ಈ ಸಂಸ್ಥಾನದ ದೊಡ್ಡ ಅಧಿಕಾರಗಳಲ್ಲಿ ಹಿಂದೆ ಇದ್ದಂತಹ ಮತ್ತೂ ಈಗ ಇರುವಂತಹ ಪ್ರತಿಯೊಬ್ಬರೂ ಸ್ವಜನಾಭಿಮಾನವನ್ನು ಅನೇಕ ಸಂದರ್ಭದಲ್ಲಿ ಪ್ರದರ್ಶಿಸಿರುತ್ತಾರೆ. ಮ॥ ಸೆಟ್ಟರಾದರೋ ಈವರೆಗೆ ಸಜಾತಿಯವರಲ್ಲಿ ಒಬ್ಬನಿಗಾದರೂ ಯಾವ ವಿಧದಿಂದಲಾದರೂ ಅಭಿಮಾನವನ್ನು ತೋರಿಸಿರುವರೆಂದು ಯಾರಾದರೂ ಹೇಳಬಲ್ಲರೆ? ಹೀಗೆ ಸರ್ವವಿಧದಲ್ಲೂ ನಿಸ್ಪೃಹರಾಗಿಯೂ, ಕಾರ್ಯದಕ್ಷರಾಗಿಯೂ, ಪ್ರಭುಗಳ ಕೃಪೆಗೆ ಪಾತ್ರರಾಗಿಯೂ, ಸಮಸ್ತಜನರ ಅನುರಾಗವನ್ನು ಸಂಪಾದಿಸಿದವರಾಗಿಯೂ ಇರುವ ಮ॥ ಸೆಟ್ಟರು ಮಂತ್ರಿಪದವಿಗೆ ಎಲ್ಲಾ ಭಾಗದಲ್ಲೂ ಅರ್ಹರಾಗಿದ್ದಾಗ್ಯೂ, ಆ ಪದವಿಯು ಇವರಿಗೆ ಕೊಡಲ್ಪಡದೆ ಇವರು ನಿವೃತ್ತಿಗೊಳಿಸಲ್ಪಡುವುದು ಅನೇಕರಿಗೆ ಸಖೇದಾಶ್ಚರ್ಯಕರವಾಗಿರುತ್ತದೆ; ಆದರೆ ಇವರಿಗೆ ೫೫ ವರ್ಷಗಳ ವಯಸ್ಸಾಗಿರುವಪ್ರಯುಕ್ತ ಇವರ ಕೈಯಿ ಇನ್ನು ಅಧಿಕಾರವನ್ನು ಮಾಡಲು ಶಕ್ತಿಸಾಲದೆಂಬ ಕಾರಣದಿಂದ ಇವರು ನಿವೃತ್ತಿಗೊಳಿಸಲ್ಪಡಬಹುದೆಂದು ತೋರುತ್ತದೆ. ಈಗ ಸರ್ಕಾರಿಯ ಅಧಿಕಾರಗಳಲ್ಲಿರತಕ್ಕ ಇನ್ನೂ ಚಿಕ್ಕ ವಯಸ್ಸಿನ ಎಷ್ಟೋ ಜನರಿಗಿಂತ ಮ॥ ಸೆಟ್ಟರು ಆರೋಗ್ಯ ದೃಢಕಾಯರಾಗಿರುವರಲ್ಲದೆ, ಅವರೆಲ್ಲರಿಗಿಂತಲೂ ಇನ್ನೂ ಕೆಲಕಾಲ ಲವಲವಿಕೆಯಿಂದ ಕೆಲಸಗಳನ್ನು ಮಾಡಬಲ್ಲರೆಂದು ಕೈಯೆತ್ತಿ ಹೇಳಬಹುದಾಗಿದೆ. ಇವರ ಕಾರ್ಯಪಟುತ್ವ ಮತ್ತೂ ದೇಹದಾರ್ಢ್ಯಗಳನ್ನು ಸರ್ಕಾರದವರು ಗಣನೆಗೆ ತಾರದೆ ಹೋದುದು ಚೆನ್ನಾಗಿ ತೋರುವುದಿಲ್ಲವು. ಹಾಗೆ ೫೫ ವರ್ಷ ವಯಸ್ಸಿಗೆ ಮೀರಿರುವವರನ್ನು ಉದ್ಯೋಗದಲ್ಲಿರಿಸಕೂಡದೆಂಬುದು ಸರ್ಕಾರದವರ ಸಂಕಲ್ಪವಾಗಿದ್ದಲ್ಲಿ ಈಗ ೫೯ ವರ್ಷ ವಯಸ್ಸಾಗಿರುವ ಮ॥ ಆನಂದರಾಯರನ್ನು ಮತ್ತೂ ಮ॥ ಸೆಟ್ಟರನ್ನು ೪–೫ ವರ್ಷಗಳ ಮೊದಲೇ ನಿವೃತ್ತಿಗೊಳಿಸಿದ್ದರೆ ಅಂತಹ ಸಂಕಲ್ಪವು ಸಾರ್ಥಕವಾಗುತ್ತಿದ್ದಿತು, ಅಲ್ಲದೆ ಆ ವಿಚಾರದಲ್ಲಾರೂ ಆಕ್ಷೇಪಿಸುತ್ತಿರಲಿಲ್ಲ. ಮ॥ ಸೆಟ್ಟರಿಗೆ ಕೆಲಕಾಲದಮಟ್ಟಿಗೆ ಮಂತ್ರಿಪದವಿಯನ್ನು ಕೊಟ್ಟಿದ್ದಲ್ಲಿ ಅವರು ಇಷ್ಟು ವರ್ಷಕಾಲ ನಿಸ್ಪೃಹತೆಯಿಂದಲೂ, ದಕ್ಷತೆಯಿಂದಲೂ ದೇಹವನ್ನು ದಂಡಿಸಿ ದುಡಿದುದು ಸಾರ್ಥಕವಾಗುತ್ತಿದ್ದುದಲ್ಲದೆ ಬ್ರಾಹ್ಮಣೇತರರೆಲ್ಲರಿಗೂ ಮತ್ತೂ ನಿಷ್ಪಕ್ಷಪಾತಿಗಳಾದ ಬ್ರಾಹ್ಮಣರಿಗೂ ಬಹಳ ಸಂತೋಷವಾಗುತ್ತಿದ್ದಿತೆಂಬುದನ್ನು ಹೇಳಬೇಕಾದುದಿಲ್ಲವು.

ಒಳದೇಶದ ವೃತ್ತಾಂತಗಳು.

ಕಡೂರ ಡಿ॥ ಕಮಿಷನರ್ ಮ॥ ಕೆ. ಆರ್. ಶ್ರೀನಿವಾಸಯ್ಯಂಗಾರರು ಈ ತಾ॥ ೧೩ ರಿಂದ ೨ ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವರು.

ಬೆಂಗಳೂರ ತಾಲ್ಲೂಕಿಗೆ ಸೇರಿದ ಗುಡ್ಡದಹಳ್ಳಿಯಲ್ಲಿ ಮುನಿಯಪ್ಪ ಮತ್ತೆ ಮೂವರು ಮುಗ್ಗಲರಾಗಿಯ ಹಿಟ್ಟನ್ನು ತಿಂದು ಅಸ್ವಸ್ಥರಾಗಿದ್ದು ಮುನಿಯಪ್ಪನು ಸತ್ತುಹೋದನು; ಉಳಿದವರು ಚೇತರಿಸಿಕೊಂಡರು.

ಬೆಂಗಳೂರ ದಂಡಿನಲ್ಲಿ ನಾಣ್ಯದಿಂದ ಪಂದ್ಯದಾಟವ (ಜೂಜ) ನ್ನು ಆಡುತ್ತಿದ್ದ ಕೆಲವರನ್ನು ಪೋಲೀಸರು ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ ಮ್ಯಾಜಿಸ್ಟ್ರೇಟರು, ನಾಣ್ಯದಿಂದ ಜೂಜಾಡುವುದು ಅಪರಾಧವಾಗುವುದಿಲ್ಲವೆಂದು ತೀರ್ಮಾನಿಸಿ ದೋಷಮುಕ್ತರನ್ನಾಗಿ ಮಾಡಿದರು.

ಮೈಸೂರ ಡಿ॥ ಪೋಲೀಸು ಸೂಪರಿಂಟೆಂಡೆಂಟರವರು ನಾಯಿಂದ ಕಡಿಯಲ್ಪಟ್ಟಿದ್ದುದರ ಚಿಕಿತ್ಸೆಗಾಗಿ ಕೂನೂರಿಗೆ ಹೋಗಿರುತ್ತಾರೆಂದು ಕಳೆದವಾರ ತಿಳುಹಿದ್ದ ಪ್ರಕಾರ, ಇವರು ಕೂನೂರಿ ಹೋಗಿ ಅಲ್ಲಿಯ ಡಾಕ್ಟರುಗಳಿಂದ ಪರೀಕ್ಷಿಸಲ್ಪಟ್ಟು ಚಿಕಿತ್ಸೆಯನಾವಶ್ಯಕವೆಂದು ಹೇಳಲ್ಪಟ್ಟುದರ ಮೇಲೆ ರಾಜಧಾನಿಗೆ ಹಿಂತಿರುಗಿ ಬಂದುಬಿಟ್ಟರು.

ಶ್ರೀಮದ್ಯುವರಾಜರು ಬೆಂಗಳೂರಿಗೆ ದಯಮಾಡಿರುವುದಕ್ಕೆ ಪೂರ್ವವೆ ೬–೭ ವರ್ಷದ ಒಬ್ಬ ಮಹಮ್ಮದೀಯ ಹುಡುಗನು ಮಹಾಸ್ವಾಮಿಯವರಲ್ಲಿಗೆ ಹೋಗಿ, ದಿಲ್ಲಿಯ ದರ್ಬಾರಿನಲ್ಲಿ ಸಾರ್ವಭೌಮರವರಿಂದ ಮಹಾಸ್ವಾಮಿಯವರಿಗೆ ಕೆ. ಸಿ. ಐ. ಇ, ಪ್ರಶಸ್ತಿಯು ಲಭ್ಯವಾದುದರ ಅಭಿನಂದನ ಸೂಚಿತವಾದ ಒಂದು ಸಣ್ಣ ಭಾಷಣವನ್ನು ರಾಜಧಾನಿಯ ಮಹಮ್ಮದೀಯರ ಪರವಾಗಿ ಹೇಳಿದನು. ಯುವರಾಜರು ಆ ಹುಡುಗನು ಧೈರ್ಯದಿಂದ ಅನ್ಯಭಾಷೆಯಲ್ಲಿ ಹೇಳಿದುದಕ್ಕಾಗಿ ಮೆಚ್ಚಿ ಅವನಿಗೆ ೨ ಸವರನ್ನುಗಳನ್ನೂ ಯೋಗ್ಯವಾದ ಉಡುಪುಗಳನ್ನೂ ಬಹುಮಾನಿಸಿದರು.

ಮಾಗಡಿಯಲ್ಲಿ ಕಿರೀಟಧಾರಣ ಮಹೋತ್ಸವದ ಜ್ಞಾಪನಾರ್ಥವಾಗಿ ಒಂದು ವಾಚನಾಲಯವನ್ನೂ, ಅದಕ್ಕೆ ಸೇರಿದ ಹಾಗೆ ಒಂದು ಪುಸ್ತಕಭಂಡಾರವನ್ನೂ, ಪರಸ್ಥಳೀಯರು ಇಳಿದುಕೊಳ್ಳಲು ಒಂದು ಕೊಠಡಿಯನ್ನೂ ಕಟ್ಟಬೇಕೆಂದು ಆ ಊರಿನ ದೊಡ್ಡ ಮನುಷ್ಯರುಗಳು ಸಂಕಲ್ಪಿಸಿ, ಈ ಕಾರ್ಯಕ್ಕಾಗಿ ೩೦೦೦ ರೂ ಗಳ ಚಂದಾವಾಗ್ದಾನವನ್ನು ಮಾಡಿದ್ದರು ಈಗಾಗಲೇ ೫೦೦೦ ರೂ. ವರೆಗೆ ಹಣವು ಶೇಖರಿಸಲ್ಪಟ್ಟಿರುತ್ತದೆ. ಮತ್ತೂ ಈ ಕಟ್ಟಡವನ್ನು ಕಟ್ಟಲು ತಾಲ್ಲೋಕು ಕಚೇರಿಯ ಸಮೀಪದಲ್ಲಿ ೨ ಎಕರೆ ೨೧ ಗುಂಟೆಯ ಜಾಗವು ಕ್ರಯಕ್ಕೆ ಕೊಳ್ಳಲ್ಪಟ್ಟಿರುತ್ತದೆ.

ತುಮಕೂರ ಡಿ॥ ಟ್ರಿಜರಿ ಛಾರ್ಜಿಗೆ ವರ್ಗಾಯಿಸಲ್ಪಟ್ಟಿರುವ ಅ॥ ಕಮಿಷನರ್ ಮ॥ ನರಸಿಂಗರಾವ್ ಪೂರ್ಣಯ್ಯನವರು ತುಮಕೂರಿಗೆ ಹೋಗಿ ಕಳೆದ ತಾ॥ ೧೦ ರಲ್ಲಿ ಮ॥ ಬಿ ಸವಾರಾಧ್ಯರಿಂದ ಟ್ರಿಜರಿ ಛಾರ್ಜನ್ನು ವಹಿಸಿಕೊಂಡುದರಿಂದ ಮ॥ ಆರಾಧ್ಯರು ಚೀಫ್ ಕೋರ್ಟಿನ ತಮ್ಮ [illegible] ರಿಜಿಸ್ಟ್ರಾರ್ ಕೆಲಸಕ್ಕೆ ಹಿಂತಿರುಗಿ [illegible]

ಈ ಕಾರಣದಿಂದ ಮುನಸೀಫ್ ಮ॥ ಬಿ. ರಂಗಯ್ಯಂಗಾರರು ಡಿ॥ ರಿಜಿಸ್ಟ್ರಾರರಾಗಿಯೂ, ಅಡ್ವೋಕೇಟ್ ಮ॥ ಎನ್. ಕೆ ಶ್ರೀನಿವಾಸಶಾಸ್ತ್ರಿಯವರು ಆಗಂತ ಮುನಸೀಫರಾಗಿಯೂ ಬರಲು ನೇಮಿಸುವ [illegible] ಕಳೆದವಾರದ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದ್ದುದು ಅನುಷ್ಠಾನಕ್ಕೆ ಬರಲಿಲ್ಲವಾಯಿತು.

ಕಳೆದ ತಾ॥ ೪ ನೆಯ ಭಾನುವಾರ ಶ್ರೀಮನ್ಮಹಾರಾಜರ ಸ್ವಾರಿಯು ಕೂಡ ಶ್ರೀಮದ್ಯುವರಾಜರ ಸ್ವಾರಿಯು ದಯಮಾಡಿಸಿತು. ಮಹಾಸ್ವಾಮಿಯವರ ಸ್ವಾರಿಯು ಇನ್ನೂ ೪ ವಾರಗಳವರೆಗೆ ಅಲ್ಲೇ ಇದ್ದು ಸರ್ಕಾರಿಯ ದೊಡ್ಡದೊಡ್ಡ ಅಧಿಕಾರಿಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳ ಏರ್ಪಾಟನ್ನು ಮಾಡಿಸಿ ಯುಗಾದಿ ಹಬ್ಬದ ಸಮಯಕ್ಕೆ ರಾಜಧಾನಿಗೆ ಹಿಂತಿರುಗುವುದಾಗಿಯೂ, ಬೊಂಬಾಯಿನಲ್ಲಿ ತಮ್ಮ ಕೃಪಾಪಾತ್ರರಾದ ಸೇಟರ ಮನೆಯ ವಿವಾಹವು ಹಿಂದೆಯೇ ನಡೆದು ಹೋಗಿರುವುದರಿಂದ ಅಲ್ಲಿಗೆ ದಯಮಾಡಿಸುವ ಪ್ರಮೇಯವಿಲ್ಲವೆಂದೂ, ಶ್ರೀಮದ್ಯುವರಾಜರು ಮಿಲ್ಟರಿ ಸೆಕ್ರಟರಿಯವರ ಉದ್ಯೋಗವನ್ನು ಪರಾಮರ್ಶಿಸುತ್ತಿರುವುದಾಗಿಯೂ ಕೇಳುತ್ತೇವೆ.

ಬೆಂಗಳೂರ ಮ॥ ಹನುಮಣ್ಣನವರ ಗೃಹದಲ್ಲಿ ಪ್ರಮುಖಜನರೆಲ್ಲರೂ ಸಭೆ ಸೇರಿದ್ದು ಶ್ರೀಮದ್ಯುವರಾಜರವರನ್ನು ಲಾಲಬಾಗಿಗೆ ಬರಮಾಡಿಕೊಂಡು ವಿನೋದೋತ್ಸವಗಳಿಂದ ಆನಂದಗೊಳಿಸಿ, ಅವರಿಗೆ ಚಕ್ರವರ್ತಿ ಸಾರ್ವಭೌಮರವರು ದಯಪಾಲಿಸಿರುವ ಪ್ರಶಸ್ತಿಯಿಂದ ತಮಗೆಲ್ಲರಿಗುಂಟಾಗಿರುವ ಸಂತೋಷವನ್ನು ಪ್ರದರ್ಶಿಸಿ ಅಭಿನಂದನವನ್ನು ತಿಳುಹತಕ್ಕದೆಂದು ನಿರ್ಧರಿಸಿ, ಈ ಕಾರ್ಯಕ್ಕಾಗಿ ಬೇಕಾಗಿರುವ ೨೦೦೦ ರೂ. ಗಳನ್ನು ಚಂದಾಮೂಲಕ ಕೂಡಿಸಬೇಕೆಂದು ನಿರ್ಧರಿಸಿದರು. ಡಿ॥ ಕಮಿಷನರುಗಳಾಗಿದ್ದ ಮ॥ ಎ. ಎನ್. ನಾರಾಯಣರಾಯರು ಮತ್ತೂ ಎಂ. ಚೆಂಗಯ್ಯಸೆಟ್ಟರು ಚಂದಾ ಕೊಡಲು ಆಗಲೇ ವಾಗ್ದಾನ ಮಾಡಿರುವರಲ್ಲದೆ ಅನೇಕರು ಕೊಡತಕ್ಕವರಾಗಿರುವರು.

ಪೋಲೀಸು ಇ॥ ಜನರಲ್ ರವರಾದ ಮ॥ ಡಿ. ದೇವರಾಜ ಅರಸಿನವರಿಗೆ ಮೊದಲು ಕೊಡಲ್ಪಟ್ಟಿದ್ದ ಪ್ರಿವಿಲೆಜ್ ರಜವು ಕಳೆದ ತಾ॥ ೪ರಿಂದ ಇನ್ನೂ ೧ ತಿಂಗಳಿಗೆ ಹೆಚ್ಚಿಸಲ್ಪಟ್ಟಿದ್ದಿತು. ಅವರೆ ಕೂಡಲೆ ಉದ್ಯೋಗದಮೇಲೆ ಹೋಗಬೇಕೆಂದು ಅಪ್ಪಣೆ ಮಾಡಲ್ಪಟ್ಟುದರಮೇಲೆ ತಾ॥೧೦ ರಲ್ಲಿ ಮ॥ [illegible]ರವರಿಂದ ಅಧಿಕಾರವನ್ನು ವಹಿಸಿಕೊಂಡರು ಮ॥ ದೊರೆಸಾಮಯ್ಯರ್‌ರವರು ಮ॥ ಸ್ಪಾರ್ಕ್ಸ್‌ರವರ ಬದಲು ಎಕ್ಸೈಜ್ ಕಮಿಷನರಾಗಿ ನಿಯಮಿಸಲ್ಪಟ್ಟರು ಮ॥ ಅರಸಿನವರು ಅಕಸ್ಮಿಕವಾಗಿ ಉದ್ಯೋಗದ ಮೇಲೆ ಬರಮಾಡಲ್ಪಟ್ಟರೆಂದು ತೋರುತ್ತದೆ.

ಮೈಸೂರ ರೆಸಿಡೆಂಟರೂ ಕೊಡಗಿನ ಚೀಫ್ ಕಮಿಷನರೂ ಆದ ಸರ್ ಹಫ್ ಡ್ಯಾಲಿಯವರು ಈ ತಾ॥ ೧೭ ರಲ್ಲಿ ಬೆಂಗಳೂರಿಂದ ರಾಜಧಾನಿಗೆ ಬಂದು ತಾ॥ ೧೮ ರಲ್ಲಿ ಮಡಕೇರಿಗೆ ಪ್ರಯಾಣಮಾಡುವರು; ತಾ॥ ೧೯ ರಲ್ಲಿ ಮಡಕೇರಿಯಲ್ಲಿದ್ದು ತಾ॥ ೨೦ ರಲ್ಲಿ ಸೋಮವಾರಪೇಟೆ, ಫ್ರೇಜರ್‌ಪೇಟೆ ಮತ್ತೂ ಸುಂಟಿಕೊಪ್ಪ ಈ ಸ್ಥಳಗಳಿಗೆ ಹೋಗಿ ನೋಡಿಕೊಂಡು ಪುನಃ ಮಡಕೇರಿಗೆ ಹಿಂತಿರುಗಿ ಬಂದು ತಾ॥ ೨೧ ರಲ್ಲಿ ಅಲ್ಲೇ ಇದ್ದು ತಾ॥ ೨೨ ರಲ್ಲಿ ವೀರರಾಜೇಂದ್ರಪೇಟೆ, ನಪಕೋಲು ಮತ್ತೂ ಮೂರನಾಡು ಈ ಸ್ಥಳಗಳಿಗೆ ಹೋಗಿ ನೋಡಿಕೊಂಡು ಮಡಕೇರಿಗೆ ಮರಳಿ ಬಂದು ತಾ॥ ೨೩ ರಲ್ಲಿ ಅಲ್ಲೇ ನಿಲ್ಲುವರು; ತಾ॥ ೨೪ ರಲ್ಲಿ ಪೊನ್ನಂಪೇಟೆ ಗೋಣಿಕೊಪ್ಪಲು, ಪಾಲಿಬೆಟ್ಟ ಮತ್ತೂ ಅಮ್ಮತ್ತಿ ಈ ಸ್ಥಳಗಳಿಗೆ ಹೋಗಿ ಪರಾಮರ್ಶಿಸಿಕೊಂಡು ಮಡಕೇರಿಗೆ ಹಿಂತಿರುಗಿ ಬಂದು ತಾ॥ ೨೫ ರಿಂದ ೨೭ ರವರೆಗೆ ಅಲ್ಲೇಯಿದ್ದು, ತಾ॥ ೨೮ ರಲ್ಲಿ ರಾಜಧಾನಿಗೆ ಬಂದು; ತಾ॥ ೨೯ ರಲ್ಲಿ ಬೆಂಗಳೂರಿಗೆ ಪ್ರಯಾಣಮಾಡುವರು.

ಚಿಕ್ಕಬಳ್ಳಾಪುರದಲ್ಲಿ ಪ್ಲೇಗುರೋಗವು ಸಂಪೂರ್ಣವಾಗಿ ನಿಂತಿಲ್ಲವು. ಇಲ್ಲಿಯ ಹೈಸ್ಕೂಲ್ ಹೆಡ್ಮಾಸ್ಟರರವರ ಗುಡಿಸಲಿನಲ್ಲಿ ೪೦ ರೂ. ಗಳ ವರೆಗೆ ಬಾಳುವ ಬಟ್ಟೆ ಬರೆಗಳು ಕಳುವಾದುವು. ಈ ಊರಿಗೆ ಕೊಳಾಯಿಗಳ ಮೂಲಕ ರಂಗಧಾಮಕೆರೆಯಿಂದ ಕುಡಿಯುವ ನೀರನ್ನೊದಗಿಸಲು ೬೧,೦೦೦ ರೂ. ಗಳನ್ನು ಮ್ಯುನಿಸಿಪಾಲಿಟಿಯವರು ಸರ್ಕಾರದವರಿಂದ ಸಾಲ ತೆಗೆದುಕೊಳ್ಳಬೇಕಾಗಿ ಆಲೋಚಿಸಿರುವರು ಆಚೆ ವಾರದಲ್ಲಿ ೩ ಜನ ವರ್ತಕರು ವರ್ತಕಂಡೆಯಿಂದ ಬಂಡಿಗಳಲ್ಲಿ ದಿನಸಿಯನ್ನು ತುಂಬಿಕೊಂಡು ಈ ಊರಿಗೆ ಮಾರಾಟಕ್ಕೆ ತೆಗೆದುಕೊಂಡು ಬರುತ್ತಿರುವಾಗ್ಗೆ ಮುರ್ಗನಹಳ್ಳಿಯ ಹತ್ತಿರ ಸ್ಯಾನಿಟರಿ ಇನ್ಸ್‌ಪೆಕ್ಟರು ಅದೇ ಮಾರ್ಗದಲ್ಲಿ ಬೈಸಿಕಲ್ ಸವಾರಿಮಾಡಿಕೊಂಡು ತ್ವರಿತವಾಗಿ ಬರುತ್ತ ಮಾರ್ಗವನ್ನು ಬಿಡಲು ಗಂಟೆಯನ್ನು ಬಾರಿಸುತ್ತಿದ್ದುದರ ಮೇಲೆ ಒಂದು ಬಂಡಿಯ ಎತ್ತುಗಳು ಬೆದರಿ ಪಕ್ಕದ ಬಚ್ಚಲಿಗೆ ಬಂಡಿಯನ್ನು ಕೆಡುಹಿಬಿಟ್ಟವು. ಇದರಿಂದ ಬಂಡಿಯನ್ನು ಹೊಡೆಯುತ್ತಿದ್ದವನು ಕೆಳಗೆ ಬಿದ್ದು ಅವನ ಕಾಲಿನಮೇಲೆ ಬಂಡಿಯ ಚಕ್ರವು ಹರಿದು ತುಂಬಾ ಅಪಾಯವನ್ನುಂಟುಮಾಡಿತು. ಮತ್ತೂ ಅದೇ ದಿವಸ [illegible] ಹತ್ತಿರ ಒಂದು ಬಂಡಿಯು ಮಗುಚಿಕೊಂಡು ಅದರೊಳಗೆ ಕುಳಿತಿದ್ದ ಒಬ್ಬ ಹೆಂಗುಸಿಗೆ ತುಂಬಾ ಪೆಟ್ಟುಬಿದ್ದಿತು.

ಕಳೆದ ತಾ॥ ೪ ರ ಸಾಯಂಕಾಲ ಬೆಂಗಳೂರ ಅಡ್ವೋಕೇಟ್ ಮ॥ ಎಚ್. ಕೆ. ವೀರಬಸವಯ್ಯನವರು ತಮ್ಮ ವೀರಶೈವ ಮಂಡಲಿಯ ಪ್ರಮುಖರನ್ನೂ ಇತರ ಮಿತ್ರರನ್ನೂ ಚಾಮರಾಜಪೇಟೆಯಲ್ಲಿರುವ ತಮ್ಮ ಗೃಹಕ್ಕೆ ಬರಮಾಡಿಕೊಂಡು ದಿವ್ಯವಾದ ಔತಣದಿಂದಲೂ, ವೀಣೆಯ ಇಂಚರದಿಂದಲೂ ಆನಂದಗೊಳಿಸಿದರು. ಈ ಔತಣಕ್ಕೆ ೧ ನೆಯ ಕೌನ್ಸಿಲರಾದ ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಮ॥ ಕೆ. ಪಿ ಪುಟ್ಟಣ್ಣಸೆಟ್ಟರನ್ನು, ಮ॥ ಗಳಾದ ಯಜಮಾನ್ ಬಸಪ್ಪನವರನ್ನು, ಗಂಧಿಗೆ ಅಂಗಡಿ ಪಾಪಣ್ಣನವರನ್ನು, ವೀರಭದ್ರಪ್ಪನವರನ್ನು, ಪೋಲೀಸ್ ಇನ್ಸ್ಪೆಕ್ಟರ್ ಕೆ. ಸಿದ್ಧರಾಮಪ್ಪನವರನ್ನು, ತಾ॥ ನಂಜಪ್ಪನವರನ್ನು, ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಎಚ್. ಕೆ. ರಾಮಯ್ಯನವರು ಮೊದಲಾದ ಮಿತ್ರಮಂಡಲಿಯವರು ಮ॥ ವೀರಬಸವಯ್ಯನವರ ಆಮಂತ್ರಣವನ್ನು ಸನ್ಮಾನಿಸಿ ದಯಮಾಡಿಸಿದ್ದು ಅಡ್ವೋಕೇಟರ ಅತಿಥಿಸತ್ಕಾರಾದರಣೆಗಳಿಂದ ಬಹುವಾಗಿ ತೃಪ್ತಿಪಟ್ಟು ಅವರನ್ನು ವಂದಿಸಿದರು. ಔತಣಾನಂತರ ಮ॥ ರಾಮಯ್ಯನವರೆದ್ದು ಮ॥ ಪುಟ್ಟಣ್ಣಸೆಟ್ಟರು ಸರ್ಕಾರಿಯುದ್ಯೋಗವನ್ನು ಕಳೆದ ೩೪ ವರ್ಷಗಳಿಂದಲೂ ಬಹು ನಿಸ್ಪೃಹತೆಯಿಂದಲೂ ಶ್ರದ್ಧೆಯಿಂದಲೂ ಮಾಡಿ ಪ್ರಭುಗಳ ಮೆಚ್ಚುಗೆಗೂ, ಪ್ರಜೆಗಳ ಅನುರಾಗಕ್ಕೂ ಪಾತ್ರರಾಗಿರುವ ವಿಚಾರವನ್ನು ಕುರಿತು ಬಹು ಶ್ಲಾಘ್ಯಕರವಾಗಿ ಭಾಷಣ ಮಾಡಿದರಲ್ಲದೆ, ಮ॥ ಸೆಟ್ಟರು ತಮ್ಮ ಬೆಂಗಳೂರ ಮಿತ್ರಮಂಡಲಿಯವರ ಆಮಂತ್ರಣವನ್ನು ತಿರಸ್ಕರಿಸಿದುದರಿಂದ ತಮ್ಮಗಳಿಗುಂಟಾಗಿರುವ ಅಪಾರವಾದ ವ್ಯಾಕುಲವನ್ನು ಪ್ರದರ್ಶಿಸಿದರು.

ವರ್ತಮಾನ ಸಂಗ್ರಹವು.

ಬಿಹಾರ್ ಮತ್ತೂ ಒರಿಸ್ಸಾ ಪ್ರಾಂತಗಳಿಗೇ ಪ್ರತ್ಯೇಕವಾಗಿ ಒಂದು ಹೈಕೋರ್ಟು ಏರ್ಪಡಿಸಲ್ಪಡುವ ಸಂಭವವಿರುತ್ತದೆ.

ಧಾರವಾಡ ಜಿಲ್ಲೆಯ ಕೋರ್ಟುಗಳಿಗೆ ಬರುವ ಏಪ್ರಿಲ್ ತಾ॥ ೧೦ ರಿಂದ ಮೆ ತಾ॥೨೨ ರವರೆಗೆ ೬ ವಾರದ ಬೇಸಿಗೆಯ ರಜವು ಕೊಡಲ್ಪಟ್ಟಿರುತ್ತದೆ.

ಆಸ್ಟ್ರೇಲಿಯಾದಲ್ಲಿ ಉಷ್ಣಾಧಿಕ್ಯದಿಂದ ಸಸ್ಯಾದಿಗಳೆಲ್ಲ ನಾಶವಾಗಿ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿರುವಾಗ್ಗೆ, ಗ್ರೇಟ್ ಬ್ರಿಟನ್ನಿನಲ್ಲಿ ಶೀತವು ವಿಪರೀತವಾಗಿ ಕೆರೆ ಮತ್ತೂ ನದಿಗಳಲ್ಲಿಯ ನೀರೆಲ್ಲವೂ ಗಡ್ಡೆ ಕಟ್ಟಿಕೊಳ್ಳುತ್ತಿದೆ.

೨೪ ವರ್ಷ ವಯಸ್ಸಿನ ಒಬ್ಬ ಫ್ರಾನ್ಸ್ ದೇಶಸ್ಥನು ಅಲ್ಜೀರಿಸಿನಿಂದ ಟಿಂಬಕ್ಟೂಗೆ ಸಹರಾಮರಳುಕಾಡಿನಲ್ಲಿ ೧೩ ತಿಂಗಳ ವರೆಗೆ ೫೦೦೦ ಮೈಲಿ ದೂರ ಸಂಚರಿಸಿ ಆಕಾಶವಿಮಾನವನ್ನು ನಡೆಯಿಸಿಕೊಂಡು ಬರಲು ಮಾರ್ಗವನ್ನು ಗೊತ್ತುಮಾಡಿಕೊಂಡು ಬಂದಿರುತ್ತಾನೆ.

ಆಚೆ ವಾರದಲ್ಲಿ ಹುಬ್ಬಳ್ಳಿಯಲ್ಲಿ ಹುಲ್ಲು ಬಣವೆಗಳಿಗೆ ಬೆಂಕಿಯು ಬಿದ್ದು ೩೦೦ ಬಣವೆಗಳು ಸುಟ್ಟುಹೋದುವು. ಇಲ್ಲಿ ನೀರಿಗಭಾವವಾದುದರಿಂದ ಕೂಡಲೆ ಆರಿಸಲು ಅವಕಾಶವಿಲ್ಲವಾಯಿತು. ಇಲ್ಲಿಯ ಮ್ಯುನಿಸಿಪಾಲಿಟಿಯ ಮೆಂಬರುಗಳನ್ನು ಆರಿಸುವಿಕೆಯು ಈ ತಾ॥ ೨೨ ರಲ್ಲಿ ನಡೆಯುವುದು.

ಫ್ರಾನ್ಸ್, ಸ್ಪೇನ್ ಮತ್ತೂ ಪೋರ್ಚುಗಲ್ಲುಗಳಲ್ಲಿಯ ನದಿಗಳಲ್ಲಿ ಪೂರ್ಣ ಪ್ರವಾಹವು ಬಂದಿರುತ್ತದೆ. ಸ್ಪೇನಿನ ರಾಜದಂಪತಿಗಳು ಪರೀಸಿನಿಂದ ಮ್ಯಾಡ್ರಿಡಿಗೆ ಹಿಂತಿರುಗಿ ಬರುವಾಗ್ಗೆ ಪ್ರವಾಹದ ದೆಸೆಯಿಂದ ಕೆಲಕಾಲ ಬಿಯೋನಿನಲ್ಲಿ ನಿಲ್ಲಬೇಕಾಗಿ ಬಂದಿತು. ಈ ಪ್ರವಾಹದಿಂದ ಆ ಪ್ರಾಂತಗಳಲ್ಲಿ ಬಹು ನಷ್ಟ ಸಂಭವಿಸಿರುವುದಾಗಿ ವದಂತಿಯಿದೆ.

೧೦ ವರ್ಷ ವಯಸ್ಸಿನೊಳಗಿರುವ ಮಕ್ಕಳು ಮುಂದೆ ತಮ್ಮಮೇಲಿರುವ ಉತ್ತರವಾದಿತ್ವ, ತಮ್ಮ ಕರ್ತವ್ಯ, ತಮ್ಮಲ್ಲಿರಬೇಕಾದ ಸಹಾನುಭೂತಿ ಮತ್ತೂ ಸ್ವಾರ್ಥತ್ಯಾಗ ಇತ್ಯಾದಿಗುಣಗಳು ಈಗಳಿಂದಲೂ ಕಲಿಸಲ್ಪಡದಿದ್ದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯವು ಉಳಿಯುವುದು ಕಷ್ಟತರವಾಗುವುದೆಂದು ಬರ್ಮಾಕ್ಕೆ ಹೋಗುವುದಕ್ಕಾಗಿ ಸಿಲೋನಿಗೆ [illegible]ರಾಗಿ ಬಂದಿರುವ ಅರ್ಲ್ ಆಫ್ ಮೀತ್ ಎಂಬುವರು ಅಭಿಪ್ರಾಯಪಡುತ್ತಾರೆ.

ಕಳೆದ ತಾ॥ ೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೫೦೮೨ ಜನರಿಗೆ ಪ್ಲೇಗುರೋಗವು ತಗಲಿ ೧೧೩೪೯ ಜನರು ಮೃತಪಟ್ಟರು. ಇವರಲ್ಲಿ ಬೊಂಬಾಯಿ ಅಧಿಪತ್ಯದಲ್ಲಿ ೧೩೩೩; ಮದ್ರಾಸಾಧಿಪತ್ಯದಲ್ಲಿ ೬೬; ಬಂಗಾಳದಲ್ಲಿ ೨೪೯; ಸಂಯುಕ್ತ ಪ್ರಾಂತಗಳಲ್ಲಿ ೫೪೪೪; ಪಂಜಾಬಿನಲ್ಲಿ ೬೨; ಬರ್ಮಾದಲ್ಲಿ ೩೯; ಮಧ್ಯಪ್ರಾಂತಗಳಲ್ಲಿ ೧೫೧೯; ಹೈದರಾಬಾದು ಸೀಮೆಯಲ್ಲಿ ೧೬೦೫; ಮೈಸೂರು ಸಂಸ್ಥಾನದಲ್ಲಿ ೩೩೩ ಮತ್ತೂ ಮಧ್ಯ ಹಿಂದೂಸ್ಥಾನದಲ್ಲಿ [illegible] ಜನ ಈ ರೋಗದಿಂದ ಸತ್ತಿರುತ್ತಾರೆ.

ತಿನ್ನವೆಲ್ಲಿಯ ಹಿಂದೂ ಕಾಲೇಜಿನ ೩ ನೆಯ ಫಾರಂ ವಿದ್ಯಾರ್ಥಿಗಳು ಅವಿಧೇಯರಾಗಿ ನಡೆದುದರಿಂದ ಮುಖ್ಯೋಪಾಧ್ಯಾಯರು ಆ ವಿದ್ಯಾರ್ಥಿಗಳೆಲ್ಲರಿಗೂ ೧ ರೂ. ಅರ್ಥದಂಡವನ್ನು ವಿಧಿಸಿದುದರ ಮೇಲೆ ಅವರೆಲ್ಲರೂ ದಂಡವನ್ನು ಕೊಡತಕ್ಕದೆಂದು ಕಟ್ಟುಮಾಡಿಕೊಂಡಿದ್ದರು. ಆದರೆ ಒಂದೆರಡು ದಿನಗಳು ಕಳೆದಮೇಲೆ ಕೆಲ ಹುಡುಗರು ಕಟ್ಟನ್ನು ಮೀರಿ ದಂಡವನ್ನು ಕೊಟ್ಟುಬಿಟ್ಟುದಕ್ಕಾಗಿ ಇತರರು ರೇಗಿ ಕಳೆದ ಸೋಮವಾರ ವಸ್ತುನಿರ್ಣಯ ಶಾಸ್ತ್ರವನ್ನು ಬೋಧಿಸುತ್ತಿದ್ದ ಸಮಯದಲ್ಲಿ ದಂಡವನ್ನು ಕೊಟ್ಟಿದ್ದ ಒಬ್ಬ ಹುಡುಗನಮೇಲೆ ಗಂಧಕದ್ರಾವಕವನ್ನು ಹಾಕಿದರು. ಆದರೆ ದೈವಾನುಗ್ರಹದಿಂದ ವಿಶೇಷ ಅಪಾಯವೇನೂ ಆಗಲಿಲ್ಲವು. ಈ ಅತ್ಯಾಚಾರವನ್ನು ನಡೆಯಿಸಿದ ಹುಡುಗರ ವಿಚಾರದಲ್ಲಿ ಮ॥ ಉಪಾಧ್ಯಾಯರು ವಿದ್ಯಾಶಾಖೆಯವರಿಗೆ ಬರೆದು ಅವರೆಲ್ಲರನ್ನೂ ಕಾಲೇಜಿಗೆ ಬಾರದಂತೆ ಮಾಡಿಸಿದರು.

ಈಸ್ಟ್ ಇಂಡಿಯನ್ ರೈಲ್ವೆಗೆ ಸೇರಿದ ಲಖಿಸೆರಾಯಿಸ್ಟೇಷನ್ ಸಮೀಪದಲ್ಲಿ ಕಳೆದ ಜನವರಿ ತಾ॥ ೧೫ ರ ರಾತ್ರಿ ಒಂದು ಸಾಮಾನಿನ ಬಂಡಿಯು ॥ ಘಂಟೆಯಕಾಲ ಇದ್ದಕ್ಕಿದ್ದಹಾಗೆ ನಿಲ್ಲಿಸಲ್ಪಟ್ಟಿತು. ಆಗ ಐರೋಪ್ಯ ಗಾರ್ಡ್ ಕೆಳಗಿಳಿದು ಮಿಕ್ಕ ಬಂಡಿಗಳಲ್ಲಿ ಕಳ್ಳತನವು ಆಗದಂತೆ ನೋಡಿಕೊಳ್ಳುತ್ತಿರುವಾಗ್ಗೆ ಬಂಡಿಗಳ ಸಮೀಪದಲ್ಲಿ ೩ ಜನರು ಸುಳಿದಾಡುತ್ತಿದ್ದುದನ್ನು ಕಂಡು ಯಾರೆಂದು ಗದ್ದರಿಸಿ ಕೇಳಿ ಅವರು ಉತ್ತರವನ್ನು ಕೊಡದೆ ಅಲ್ಲೇ ನಿಂತಿದ್ದುದರ ಮೇಲೆ, ಗಾರ್ಡ್ ಅವರ ಸಮೀಪಕ್ಕೆ ಹೋದನು. ಆಗ ಆ ಜನರ ಮುಖಂಡನು ಕೂಡಲೆ ಹಿಂದಕ್ಕೆ ಹೊರಟು ಹೋಗಬೇಕೆಂದು ಗಾರ್ಡಿಗೆ ಅಪ್ಪಣೆಮಾಡಿದನು, ಅವನು ಆ ಪ್ರಕಾರ ಹೋಗದೆ ಇರಲು, ಆ ಕಳ್ಳರಲ್ಲಿ ನಾಲ್ವರು ಗಾರ್ಡನನ್ನು ಹಿಡಿದು ಚೆನ್ನಾಗಿ ಮರ್ದಿಸಿ ಅವನನ್ನು ಹೊತ್ತುಕೊಂಡು ಹೋಗಿ ಅವನ ಬಂಡಿಯಲ್ಲಿ ಹಾಕಿಬಿಟ್ಟರು. ಅಷ್ಟರಲ್ಲಿ ಉಳಿದಿದ್ದ ಮೂವರು ಕಳ್ಳರು ಬಂಡಿಗಳ ಬಾಗಿಲುಗಳನ್ನೊಡೆದು ತೆಗೆದು ಅನೇಕ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು.

ಕಳೆದ ಜನವರಿ ತಾ॥ ೧೮ ರಲ್ಲಿ ವಾಷಿಂಗ್‌ಟನ್ನಿನಲ್ಲಿ ಫಿಲಡೆಲ್ಫಿಯಾ ಬ್ಯಾಂಕಿನ ಮುಖಂಡನಾದ ಸ್ಟೋಟಸ್‌ಬರಿ ಎಂಬಾತನು ಆಲಿವರ್ ಕ್ರಾಂವೆಲ್ ಎಂಬ ವಿಧವೆಯನ್ನು ಲಗ್ನಮಾಡಿಕೊಂಡನು. ವರನು ವಧುವಿಗೆ ವಿವಾಹ ನಿಶ್ಚಿತಾರ್ಥ ಕಾಲದಲ್ಲಿ ಕೊಡಲೊಪ್ಪಿದ್ದ ೧೫೦೦೦೦೦ ರೂ. ಗಳಲ್ಲದೆ ೩೦೦೦೦೦೦ ರೂ. ಬೆಲೆಯ ನವರತ್ನ ಖಚಿತವಾದ ಆಭರಣ ಉಡುಪು ಮೊದಲಾದ ಬಹುಮಾನಗಳನ್ನು ಕೊಟ್ಟನು. ಈ ಬಹುಮಾನವಾಗಿ ಕೊಡಲ್ಪಟ್ಟ ಆಭರಣಗಳಲ್ಲೆಲ್ಲಾ ೧೫೦೦೦೦೦ ರೂ. ಬೆಲೆಯ ಮುತ್ತಿನ ಕಂಠಹಾರವು ಪ್ರಪಂಚದಲ್ಲೆಲ್ಲಾ ಅತ್ಯಂತ ಸುಂದರವಾದುದು. ವರನು ಅನೇಕವರ್ಷ ಪ್ರಯಾಸಪಟ್ಟು ಈ ಮುತ್ತುಗಳನ್ನು ಶೇಖರಿಸಿದ್ದನು. ಈ ವರನ [illegible] ೧೦೦೦೦೦ ರೂ. ಬೆಲೆಯ ೨೦೦ ವಜ್ರಗಳಿಂದ ಕಟ್ಟಲ್ಪಟ್ಟಿದ್ದ ಕಂಠಹಾರವನ್ನು ಉಡುಗೊರೆಯಾಗಿ ಕಳುಹಿಸಿಕೊಟ್ಟಿದ್ದನು. ೩೦೦೦೦೦ ರೂ. ಬೆಲೆಯ ಒಂದು ಇಂದ್ರನೀಲಮಣಿಯು ಉಡುಗೊರೆಯಾಗಿ ಕಳುಹಲ್ಪಟ್ಟಿದ್ದಿತು. ಈ ಮಣಿಯು ಪ್ರಪಂಚದಲ್ಲೆಲ್ಲಾ ಅಮೋಘವಾದ ಮಣಿಗಳಲ್ಲೊಂದಾಗಿರುವುದು. ಈ ಉಡುಗೊರೆಗಳಲ್ಲದೆ ನವರತ್ನಖಚಿತವಾದ ಉಂಗುರಗಳು, ಕೈಬಳೆಗಳು, ಒಡ್ಯಾಣಗಳು, ತಟ್ಟೆಗಳು, ಉಡುಪುಗಳು ಮೊದಲಾದ ಅಮೋಘವಾದ ಪದಾರ್ಥಗಳು ಮಿತವಿಲ್ಲದಷ್ಟು ವಧೂವರರ ಮಿತ್ರಮಂಡಲಿಯವರಿಂದ ಕಳುಹಲ್ಪಟ್ಟಿದ್ದುವು. ಈ ಕಾರಣದಿಂದ ಕ್ರಾಂವೆಲ್ ಎಂಬಾಕೆಯನ್ನು ೧॥ ಕೋಟಿ ರೂಪಾಯಿನ ವಧುವೆಂದು ಜನರು ಕರೆಯುತ್ತಿರುವರಲ್ಲದೆ ಇಂತಹ ಅತಿಶಯವಾದ ವಿವಾಹವು ವಾಷಿಂಗ್‌ಟನ್ನಿನಲ್ಲಿ ಎಂದೂ ನಡೆದಿರಲಿಲ್ಲವೆಂದು ಹೇಳುತ್ತಿರುವರು. ವರನು ವಧುವಿಗೆ ೧॥ ಕೋಟಿಯ ರೂಪಾಯಿಗಳ ಪದಾರ್ಥಗಳನ್ನು ಕೊಡಬೇಕಾಗಿದ್ದಲ್ಲಿ ಅವನಾಸ್ತಿಯು ಇನ್ನೆಷ್ಟಿರಬೇಕು?

ಪತ್ರವ್ಯವಹಾರಕರಿಗೆ ಸೂಚನೆ.

ಈ ಮೈಸೂರ್ ಸ್ಟಾರ್ ಪತ್ರಿಕೆಗೆ ಲೇಖನವನ್ನು ಕಳುಹತಕ್ಕ ಪತ್ರವ್ಯವಹಾರಕರು ಬಹು ಜನೋಪಯುಕ್ತವಾದ ಮತ್ತೂ ಮನೋರಂಜಕವಾದ ವಿಷಯಗಳನ್ನು [illegible] ಪ್ರಯತ್ನಪಟ್ಟು ಸಂಕ್ಷೇಪವಾಗಿಯೂ, ಪತ್ರದ ಒಂದು ಪಕ್ಕದಲ್ಲಿ ಮಾತ್ರ ಸ್ಪಷ್ಟವಾಗಿಯೂ ಬರೆದು ಕಳುಹಬೇಕೆಂದು ನಾವು ಅನೇಕ ಸಲ ಸೂಚಿಸಿದ್ದಾಗ್ಯೂ ಬಹು ಜನರು ಅದನ್ನು ಗಮನಿಸದೆ ಕೆಲಸಕ್ಕೆ ಬಾರದ ವಿಷಯಗಳನ್ನು ಕಾಗದದ ಎರಡು ಪಕ್ಕದಲ್ಲೂ ಅವಿರಳವಾಗಿ ಬರೆದು ನಮಗೆ ಬಹು ತೊಂದರೆಯನ್ನುಂಟುಮಾಡುತ್ತಿರುವರಲ್ಲದೆ, ಅನುಪಯುಕ್ತವಾದ ಲೇಖನಗಳಿಗೆ ಸ್ಥಳವು ದೊರೆಯದೆ ಹೋದರೆ ಆಗ್ರಹಯುಕ್ತರಾಗುವರು. ಎಷ್ಟೋ ಜನರು ತಮಗೆ [illegible]ವನ್ನು [illegible], [illegible]

ಕಾಸಿಯೂ ಬರೆಯುತ್ತಿರುವರು. ಅಂತಹ ಲೇಖನಗಳಿಗೆ ಈ ಪತ್ರಿಕೆಯಲ್ಲಿ ಅವಕಾಶವನ್ನು ಕೊಡುವುದಾದರೆ, ಅನೇಕ ವಾಚಕರ ಮನಸ್ಖೇದಕ್ಕೆ ಕಾರಣವಾಗುವುದಲ್ಲದೆ ಪತ್ರಿಕೆಯ ಯೋಗ್ಯತೆಗೆ ಕುಂದುಂಟಾಗುತ್ತದೆಂಬ ವಿಷಯವನ್ನು ಇಲ್ಲಿ ಹೇಳಬೇಕಾದದ್ದಿಲ್ಲವು. ಅದುಕಾರಣ ಲೇಖನಗಳನ್ನು ಕಳುಹಿಸುವವರು ಜನರ ಹೊಗಳಿಕೆಯ ಭಾಗವನ್ನು ಬಿಟ್ಟು ನಿಜಾಂಶವನ್ನು ಯುಕ್ತಿಯುಕ್ತವಾಗಿ ಪತ್ರದ ಒಂದು ಪಕ್ಕದಲ್ಲಿ ಮಾತ್ರ ಸ್ಫುಟಾಕ್ಷರಗಳಿಂದ ಬಹು ಸಂಕ್ಷೇಪವಾಗಿ ಬರೆದು ಪ್ರತಿ ಬುಧವಾರದೊಳಗೆ ಕಳುಹತಕ್ಕದು. ಮತ್ತೂ ಪ್ರತಿಯೊಬ್ಬರೂ ತಮ್ಮ ಪೂರ್ಣವಾದ ಹೆಸರನ್ನೂ, ಚಂದಾ ರಿಜಿಸ್ಟರ್ ನಂಬರನ್ನೂ ನಮ್ಮ ತಿಳಿವಿಗಾಗಿ ಬರೆಯಬೇಕು. ಈ ಸೂಚನೆಯನ್ನು ಮೀರಿಬರತಕ್ಕ ಲೇಖನಗಳಿಗೆ ಖಂಡಿತವಾಗಿಯೂ ಈ ಪತ್ರಿಕೆಯಲ್ಲಿ ಸ್ಥಳವು ದೊರೆಯುವುದಿಲ್ಲವು. ಮತ್ತೂ ತಿರಸ್ಕರಿಸಲ್ಪಟ್ಟ ಲೇಖನಗಳು ಹಿಂದಕ್ಕೆ ಕಳುಹಲ್ಪಡುವುದಿಲ್ಲವು ಎಂಬ ಭಾಗವನ್ನು ಪ್ರತಿಯೊಬ್ಬರೂ ಅಗತ್ಯವಾಗಿ ಗಮನಿಸಬೇಕು.— ಪ. ಪ್ರ.

ಪತ್ರವ್ಯವಹಾರವು.

ಗುಂಡ್ಲುಪೇಟೆ ತಾ॥ ಕಬ್ಬಹಳ್ಳಿ ಗ್ರಾಮದ ಪಾರುಪತ್ಯೇಗಾರ್ ಶ್ರೀಮಂತ ಸಿದ್ಧಲಿಂಗಪ್ಪನವರು ಸದರಿ ಕಬ್ಬಹಳ್ಳಿ ಗ್ರಾಮದ ಚಲುವರಾಯಸ್ವಾಮಿ ದೇವಸ್ಥಾನದ ಪ್ರಾಕಾರದಲ್ಲಿ ಸ್ವಂತವಾಗಿ ಒಂದು ಸಣ್ಣ ದೇವಸ್ಥಾನವನ್ನು ತಯಾರ್ಮಾಡಿಸಿ ಅದರಲ್ಲಿ ಕಳೆದ ಜನವರಿ ತಾ॥ ೨೫ ರಲ್ಲಿ ನಾಗದೇವತಾ ಪ್ರತಿಷ್ಠೆಯನ್ನು ಮಲೆಯೂರು ಮಠದ ಶ್ರೀ ಚಿಕ್ಕಸ್ವಾಮಿಗಳವರಿಂದ ವಿಧ್ಯುಕ್ತವಾಗಿ ಮಾಡಿಸಿದರು. ವೀರಶೈವ ಪ್ರಮುಖ ಜನಗಳೇ ಆದಿಯಾಗಿ ಚತುರ್ವರ್ಣಾಶ್ರಮದವರು ಸುಮಾರು ಮೂರುಸಾವಿರ ಜನರವರೆಗೆ ನೆರೆದಿದ್ದರು. ನೆರೆದಿದ್ದ ಸರ್ವರನ್ನು ಸುಖಭೋಜನದಿಂದ ತೃಪ್ತಿಪಡಿಸಿದರು. ರಾತ್ರಿ ಪಂಚದೇವತೋತ್ಸವವು ಬಿರುದಾವಳಿಗಳೊಡನೆ ಬಹು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಬ್ಯಾಂಡು ವಾದ್ಯದಿಂದಲೂ, ಗ್ಯಾಸ್ಲೈಟ್ ದೀಪಗಳಿಂದಲೂ, ವಿಚಿತ್ರವಾದ ಮದ್ದಿನ ವಿನೋದದಿಂದಲೂ, ವಿಶೇಷಜನ ಸಂದಣಿಯಿಂದಲೂ ಉತ್ಸವವು ಕಣ್ಣಿಗೆ ಮಂಗಳಕರವಾಗಿ ಕಂಗೊಳಿಸುತ್ತಿದ್ದಿತು. ಇಂತಹ ಶ್ರೇಯಸ್ಕರಕಾರ್ಯಕ್ಕಾಗಿ ತುಂಬಾ ಮೆಹನತ್ತು ವಹಿಸಿ ದೇವತಾ ಕಾರ್ಯವನ್ನು ಸಾಂಗವಾಗಿ ನೆರವೇರಿಸಿದ ಸದರಿ ಸಿದ್ಧಲಿಂಗಪ್ಪನವರನ್ನು ತುಂಬಾ ಶ್ಲಾಘಿಸಬೇಕಾಗಿದೆ.

ಪ್ರತ್ಯಕ್ಷದರ್ಶಿ.

ಈಗಿನ ಕಾಲದಲ್ಲಿ ವಾಚಕ ಮಂದಿರದ ಅವಶ್ಯಕತೆಯು ವಿದ್ಯಾವಂತರೆಲ್ಲರಿಗೂ ವೇದ್ಯವಾಗಿ ಈಚೀಚೆಗೆ ಎಲ್ಲೆಲ್ಲಿಯೂ ನೂತನ ವಾಚಕ ಮಂದಿರಗಳು ಸ್ಥಾಪಿಸಲ್ಪಡುವುದು ಸರಿಯಷ್ಟೆ. ಹತ್ತೆಂಟುಸಾವಿರಪ್ರಜಾಸಂಖ್ಯೆಯುಳ್ಳ ನಂಜನಗೂಡಿನ ನಾಗರಿಕ ಜನ ಸಮೂಹದಲ್ಲಿ ವಾಚಕಮಂದಿರವಿಲ್ಲದೆ ಉಂಟಾಗಿದ್ದ ಲೋಪವನ್ನು ಹೋಗಲಾಡಿಸುವುದಕ್ಕಾಗಿ ಕೆಲವು ಜನ ಮಹನೀಯರು ಈ ದಿನ ಇಲ್ಲಿನ ವೆಸ್ಲಿಯನ್ ಮಿಷನ್ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಶ್ರೀ ಶ್ರೀಕಂಠವಾಚಕಶಾಲಾ ಎಂಬ ಹೆಸರಿನಿಂದ ಒಂದು ವಾಚಕ ಮಂದಿರವನ್ನು ಪ್ರಾರಂಭಿಸಿರುತ್ತಾರೆ. ಆ ಕಾಲದಲ್ಲಿ ಮಹಾರಾಜಶ್ರೀ ಸಿ. ನಂಜುಂಡಯ್ಯನವರು ವಾಚಕ ಮಂದಿರಗಳ ಅವಶ್ಯಕತೆಯನ್ನೂ, ಅವುಗಳಿಂದ ಭಾಷೆಗೂ, ಜನಾಂಗಕ್ಕೂ ಉಂಟಾಗುವ ಮೇಲ್ಮೆಯನ್ನೂ ಕುರಿತು ಹೃದಯಂಗಮವಾಗಿ ಉಪನ್ಯಾಸಮಾಡಿದರಲ್ಲದೆ, ಮಾತೃಭಾಷೆಯ ದುಃಸ್ಥಿತಿಯನ್ನು ತಿಳಿಸಿ, ಭಾಷೆಯನ್ನು ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವೆಂಬುದನ್ನೂ ಭಾಷಾಭಿವೃದ್ಧಿಗಾಗಿ ಕ್ಷಿಪ್ರದಲ್ಲಿಯೇ ಒಂದು ಗ್ರಂಥಮಾಲೆಯು ಪ್ರಕಟಿಸಲ್ಪಡಬೇಕೆಂಬುದನ್ನು ಸೂಚಿಸಿದರು. ಮಹಾರಾಜಶ್ರೀ ಮುಳ್ಳೂರು ಶ್ಯಾನುಭೋಗ್ ಚಂದ್ರಶೇಖರಯ್ಯನವರು ಗ್ರಂಥಮಾಲೆಗೆ ಅನುಕೂಲ್ಯವನ್ನು ಕಲ್ಪಿಸಿಕೊಡುವುದಾಗಿ ಒಪ್ಪಿಕೊಂಡಿರುವರು. ಅದುದರಿಂದ ಈ ವಾಚಕಮಂದಿರದ ಮೆಂಬರುಗಳು ಅವರಿಗೆ ಬಹಳ ಕೃತಜ್ಞರಾಗಿರುವರು. ಉಪಪನ್ನರೂ ಇವರ ಮೇಲ್ಪಂಕ್ತಿಯನ್ನು ಅನುಸರಿಸುವರೆಂದು ನಂಬಿರುವ,

A. Rama Rao, Head-mastar,
W. M. A. V. School, Nanjangud.

ಸಂತೆ ಬಾಚಿಹಳ್ಳಿಯಲ್ಲಿರುವ ಸಂಪಿಗೆ ಹಿರೇಮಠದ ಚಿಕ್ಕಪ್ಪಶಾಸ್ತ್ರಿಗಳ ಪೌತ್ರರಾದ ಸ್ವತಂತ್ರ ಸಿದ್ಧಲಿಂಗಶಾಸ್ತ್ರಿಗಳು ಕೆಲವು ದಿವಸಗಳಿಂದಲೂ ಅಸ್ವಸ್ಥರಾಗಿದ್ದು ಕಳೆದ ಪುಷ್ಯ ಬಹುಳ ಅಮಾವಾಸ್ಯೆ ಗುರುವಾರ ಗುರುಧ್ಯಾನ ತತ್ಪರರಾಗಿ ಶಿವಾಧೀನರಾದರೆಂದು ತಿಳಿಸಲು ಖೇದವಾಗುತ್ತೆ. ಇವರಿಗೆ ಅವಸಾನ ಕಾಲದಲ್ಲಿ ಎಂಭತ್ತು ವರ್ಷ ವಯಸ್ಸಾಗಿದ್ದಿತು. ಇವರು ಪ್ರಸಿದ್ಧ ವಂಶೀಯರಾಗಿಯೂ ಶ್ರೀಮದ್ರಂಭಾಪುರೀ ವೀರಸಿಂಹಾಸನದ ಆಸ್ಥಾನ ಶಾಸ್ತ್ರಿಗಳಾಗಿದ್ದ ಚನ್ನಪ್ಪಶಾಸ್ತ್ರಿಗಳ ಪೌತ್ರರಾಗಿಯೂ, ವಿದ್ವಾಂಸರಾಗಿಯೂ ಇದ್ದದ್ದಲ್ಲದೆ ಅನೇಕ ಶಿಷ್ಯರುಗಳಿಗೆ ಮಹೋಪಕಾರಿಗಳಾಗಿಯೂ ಇದ್ದು ತಮಗಿದ್ದ ವಿದ್ಯಾಗೌರವವನ್ನು ಸಾರ್ಥಕಪಡಿಸಿದರು. ಇಂತಹ ಮಹನೀಯರನ್ನು ಕಳೆದುಕೊಂಡುದಕ್ಕೆ ನಮ್ಮ ವೀರಶೈವ ಮಂಡಲಿಗೂ ಚನ್ನಪ್ಪಶಾಸ್ತ್ರಿಗಳ ವಂಶೀಯರಿಗೂ ಸಹಾ ತುಂಬಾ ವ್ಯಸನಕರವೆಂದು ಹೇಳಲು ಅಭ್ಯಂತರವೇನೂ ತೋರದು. ಇವರಿಗೆ ಪ್ರಾಪ್ತವಯಸ್ಕರಾದ ನಯವಿನಯ ಸಂಪನ್ನರಾದ ಸೋಮಪ್ಪದೇವರೆಂಬ ಒಬ್ಬ ಪುತ್ರರೂ ೪ ಜನ ಹೆಣ್ಣು ಮಕ್ಕಳು ಸಹಾ ಇರುವರು. ಇವರ ಕಳೇಬರವು ವಿಧ್ಯುಕ್ತವಾಗಿ ಉತ್ತರಕ್ರಿಯಾದಿಗಳಿಂದ ಸಂಸ್ಕರಿಸಲ್ಪಟ್ಟಿತಲ್ಲದೆ ಇವರ ಆರಾಧನೆಯು ಇದೇ ಮಾಘಬಹುಳ ೯-೧೧ ರಲ್ಲಿ ನೆರವೇರಿಸಲ್ಪಟ್ಟಿತು. ಬಹು ದೂರದಿಂದ ಶಿಷ್ಯ ಮತ್ತೂ ಬಂಧು ಸಮುದಾಯವು ಕೂಡ ಬಂದಿತ್ತು. ಅತಿ ವಿಜೃಂಭಣೆಯಿಂದ ನಡೆದ ಸಂತರ್ಪಣೆಯಿಂದಲೂ, ದಶದಾನ ಭೂದಾನ ಭೂರಿದಾನಗಳಿಂದಲೂ ವೀರಶೈವ ಮಾಹೇಶ್ವರರೆಲ್ಲರೂ ಆನಂದಪಟ್ಟರು. ಲಿಂಗೈಕ್ಯರ ಆತ್ಮಕ್ಕೆ ಶಾಂತಿಯನ್ನೂ, ತತ್ಸಂಬಂಧಿಗಳಿಗೆ ದುಃಖಸಮಾಧಾನವನ್ನೂ ಉಂಟುಮಾಡಲೆಂದು ಸಾಂಬಮೂರ್ತಿಯನ್ನು ಕೋರುತ್ತೇನೆ.

ಮಠದ ಗುರುಬಸವಶಾಸ್ತ್ರಿ.
ಬೂಕನಕೆರೆ.

ಆಡುವುದು ಸುಲಭ ಮಾಡುವುದು ಕಷ್ಟ.

ವಾಚಕಮಹಾಶಯರೆ! ವೀರಶೈವ ಮಹಾಸಭೆಗಳು ಆರು ಆದುವು; ಉಪಸಭೆಗಳು ಅನೇಕವಾದುವು; ಗ್ರಾಮಸಭೆಗಳು ನಿರ್ಮಾಣವಾದುವು; ಆದರೂ ಆ ಸಭೆಗಳಲ್ಲಿ ಘಂಟಾಘೋಷವಾಗಿ ಮಾಡಲ್ಪಟ್ಟ ಕೆಲವು ನಿರ್ಧಾರಗಳು ಮಾತ್ರ ಅನುಷ್ಠಾನಕ್ಕೆ ಬರಲು ಹಿಂತೆಗೆಯುತ್ತಲಿರುವುವು. ಹೀಗೆ ಹಿಂತೆಗೆಯುವುದರಲ್ಲಿ ಸ್ತ್ರೀ ವಿದ್ಯಾಭ್ಯಾಸವೇ ಮೊದಲನೆಯದೆಂದು ತೋರುತ್ತಲಿದೆ. ಈ ವಿಷಯದಲ್ಲಿ ನಮ್ಮ ಶಿಕಾರಿಪುರದ ಒಂದು ಊರನ್ನೇ ಸಾಕ್ಷಿಯಾಗಿ ತೆಗೆದುಕೊಳ್ಳೋಣ. ಈ ಊರಿನಲ್ಲಿ ಸುಮಾರು ೮೦ ವೀರಶೈವ ಮನೆಗಳಿವೆ. ಸುಮಾರು ೨೫ ಬಾಲಕಿಯರು ಮಾತ್ರ ಪಾಠಶಾಲೆಗೆ ಸೇರಿರುತ್ತಾರೆ ಅವರಲ್ಲಿ ಸರಾಸರಿ ೮ ಜನ ವಿದ್ಯಾರ್ಥಿನಿಯರು ಕ್ರಮವಾಗಿ ವಿದ್ಯಾಭ್ಯಾಸಮಾಡಬಹುದಾಗಿದೆ. ಹೀಗೆ ಆಗಲು ಕಾರಣವೇನೆಂದರೆ— ಕೆಲವು ಐಶ್ವರ್ಯವಂತರೇ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸದೆ ನಿರ್ಲಕ್ಷ್ಯೆಯಿಂದ ಬಿಟ್ಟುಬಿಟ್ಟಿರುವರು. ಮಕ್ಕಳು ಏನುಮಾಡುತ್ತಾರೆ? ಏನು ಆಡುತ್ತಾರೆ? ಏನು ಕಲಿಯುತ್ತಾರೆ? ಹೇಗೆ ವರ್ತಿಸುತ್ತಾರೆ? ಎಂಬುದನ್ನು ವಿಚಾರಿಸುವುದು ಗೃಹಸ್ಥ ಮಹನೀಯರ ಲಕ್ಷಣವಾಗಿದೆ. ಹೀಗಿದ್ದು ಸ್ತ್ರೀವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ಆಚಾರವನ್ನೇನೋ ಬಾಯಿಯಲ್ಲಿ ಹೇಳಿ ಕಾಗದದಲ್ಲಿ ಮಾತ್ರ ಈ ರೀತಿ ಮಾಡಿದರೆ, ಕಾರ್ಯಸಾಧನೆಯಾದಂತೆ ಆಯಿತೆ? ಹೇಳುವುದೊಂದು, ಮಾಡುವುದೊಂದು ಆದರೆ ಅನ್ಯಮತಸ್ಥರು ಹಾಸ್ಯಮಾಡದೆ ಬಿಡುವರೆ? ಈ ಅಪಮಾನದಿಂದ ತಪ್ಪಿಸಿಕೊಳ್ಳಬೇಕಾದರೆ ಈ ಕೆಳಗೆ ಕಂಡ ಸೂತ್ರಗಳನ್ನು ಕೈಕೊಳ್ಳಬೇಕು.

(೧) ತಿಳುವಳಿಕೆಯಿಲ್ಲದವರಿಗೆ ತಿಳಿದವರು ಬುದ್ಧಿ ಹೇಳುವುದು. (೨) ಗ್ರಾಮಮುಖಂಡರು (ಸಂಘದವರು) ಈ ವಿಷಯದಲ್ಲಿ ವಿಚಾರತೆಗೆದುಕೊಂಡು ಮಕ್ಕಳನ್ನು ಕಳುಹಿಸುವಂತೆ ಮಾಡುವುದು. (೩) ಈ ವಿಷಯದಲ್ಲಿ ಮನೆಯ ಹೆಂಗುಸರಿಗೆ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವಂತೆ ಪುರುಷರು ಕಟ್ಟಪ್ಪಣೆಯನ್ನು ಮಾಡುವುದು. (೪) ಮಕ್ಕಳ ನಡೆವಳಿಕೆ ಮತ್ತೂ ಪಾಠ ಇವುಗಳಲ್ಲಿ ಆಗಾಗ್ಗೆ ವಿಚಾರವನ್ನು ತೆಗೆದುಕೊಳ್ಳುವುದು. ಹೀಗೆ ಮಾಡುವುದರಿಂದ ಮೇಲೆಕಂಡ ಕಾರ್ಯವು ತಕ್ಕಷ್ಟು ಸಾಧ್ಯವಾಗಲು ಅಡ್ಡಿಯಿರುವುದಿಲ್ಲ. ಇದಕ್ಕೆ ಪರಮೇಶ್ವರನೇ ಬುದ್ಧಿಯನ್ನು ಕೊಡಬೇಕಾಗಿದೆ.

ಎಸ್. ರುದ್ರಶಾಸ್ತ್ರಿ,
ಗರ್ಲ್‌ಸ್ಕೂಲ್ ಹೆಡ್ಮಾಸ್ಟರ್, ಶಿಕಾರಿಪುರ.

ನರಗುಂದ ಪೇಟಾ ಶಿರೋಳದಲ್ಲಿ ಪದ್ಧತಿಯಂತೆ ಪುಷ್ಯ ಬ॥ ೫ ಯಲ್ಲಿ ಜಗದ್ಗುರು ಶ್ರೀ ತೋಂಟದಾರ್ಯರ ಜಾತ್ರೆಯು ಆರಂಭವಾಯಿತು. ಈ ಜಾತ್ರೆಯ ಕೆಲಸಕ್ಕೆ ಶಿರೋಳದ ವಸ್ತ್ರದ ಮಠದ ಶ್ರೀ ಗುರುಬಸಯ್ಯನವರು ವರ್ಗಣಿ ಕೂಡಿಸಿ, ಅನೇಕ ಕಡೆಯಿಂದ ಸದ್ಗೃಹಸ್ಥರನ್ನು ಬರಮಾಡಿಕೊಂಡು ಮಂಗಳವಾರ ೫ ಗಂಟೆಗೆ ರಥೋತ್ಸವವನ್ನು ಆರಂಭಿಸಿದರು. ಆ ಕಾಲದಲ್ಲಿ ಅನೇಕವಿಧ ವಾದ್ಯದೊಡನೆ ಆನೆ ಕುದುರೆ ರಥ ಸಕಲ ಸನ್ನಾಹದೊಡನೆ ತೇರು ಎಳೆಯಲ್ಪಟ್ಟಿತು. ಜಾತ್ರೋತ್ಸವವು ಬಹಳ ಜೋರು ಆಯಿತು. ಬುಧವಾರ ಪ್ರಾತಃಕಾಲದಲ್ಲಿ ನಿರಂಜನ ಗುರುವರ್ಯ ಸದಾಶಿವಸ್ವಾಮಿಗಳ ಪಾದಪೂಜೆಯೂ, ಯಾವತ್ತು ಬಂದ ಜನರಿಗೆ ಅನ್ನೋದಕ ಸಂತರ್ಪಣೆಯೂ ನಡೆದುವು. ಸಂಜೆಗೆ ಸಭೆಯಾಗಿ ಸಂಗೀತ ವಿದ್ವಜ್ಜನರ ಗಾನವಾಯಿತು. ಗುರುವಾರ ಮಧ್ಯಾಹ್ನ ಪದ್ಧತಿಯಂತೆ ಆನೆಯಮೇಲೆ ಅಂಬಾರಿಯಲ್ಲಿ ನಿರಂಜನ ಗುರುವರ್ಯ ಗುರುಬಸವಸ್ವಾಮಿಗಳವರು ಮುಹೂರ್ತಮಾಡಿಸಿ, ಅಗ್ರಭಾಗದಲ್ಲಿ ಸವಾರಿಸ್ವಾಮಿಗಳನ್ನು ಪಾಲಕಿಯಲ್ಲಿ ಕೂಡಿಸಿ ರಥದಲ್ಲಿ ಗದಗಿನ ಸಂಸ್ಥಾನ ಶಿವಾಚಾರಿಗಳ ಸಮುದಾಯವನ್ನು ಕುಳ್ಳಿರಿಸಿ ಸಕಲವಾದ್ಯ ಸಹಿತವಾಗಿ ಹನ್ನೊಂದು ಗಂಟೆಯಿಂದ ಮಠದಿಂದ ಹೊರಟು ಪಾಟೀಲರ ಮನೆಗೆ ೨ಗಂಟೆಗೆ ದಯಮಾಡಿಸಿದರು. ಪಾಟೀಲರ ಮನೆಯಲ್ಲಿ ಸಭೆಯಾಗಿ ೩ ನೆಯ ವೀರಶೈವ ಸಭೆಯ ಸಂಕ್ಷಿಪ್ತ ಇತಿಹಾಸವನ್ನು ಗದಗಿನ ಪಟ್ಟದದೇವರು ಹೇಳಿದುದಲ್ಲದೆ, ಪಾಟೀಲರು ಮಾಡಿದ ವ್ಯವಸ್ಥಾ ವಿಷಯವನ್ನು ಮತ್ತು ಗುರುಬಸವಯ್ಯನವರ ವ ಚನ್ನಬಸಯ್ಯನವರು ಮಾಡಿದ ಯಾವತ್ತು ವ್ಯವಸ್ಥಾವಿಷಯಗಳನ್ನು ಸಭಿಕರಿಗೆ ತಿಳಿಸಿದರು. ಆಗ್ಗೆ ಪೂಜಾ ವಿನಿಯೋಗವಾಗಿ ಆರತಿ ಅಕ್ಷತೆಯಾಗಿ ಸಕಲ ಮಹನೀಯರಿಗೆ ಪಾಟೀಲರಿಂದ ಸನ್ಮಾನವಾಗಿ ಹಾರತಾಂಬೂಲವು ಹಂಚಲ್ಪಟ್ಟಿತು. ಅನಂತರ ಮೊದಲಿನಂತೆ ಉತ್ಸವದೊಡನೆ ಮಠಕ್ಕೆ ಸಕಲ ಮಹನೀಯರು ಬಂದು ಸಂತರ್ಪಣೆಗೆ ಪ್ರಾರಂಭಮಾಡಿದರು. ೫ ದಿನಗಳ ವರೆಗೆ ಮಠದಲ್ಲಿ ಅನ್ನ ಸಂತರ್ಪಣೆಯಾಗುವುದಲ್ಲದೆ, ವಸ್ತ್ರದ ಮಠದ ಚನ್ನಬಸಯ್ಯನವರ ಮಠದಲ್ಲಿಯೂ ಜಾತ್ರೆ ಪ್ರಾರಂಭದಿಂದ ಮುಗಿಯುವ ವರೆಗೆ ಅವಿಚ್ಛಿನ್ನಸಂತರ್ಪಣೆ ನಡೆದಿತ್ತು. ಮತ್ತೂ ಶುಕ್ರವಾರ ಕುಸ್ತಿಗಳು ಪ್ರಾರಂಭವಾಗಿ ದೂರಪ್ರದೇಶದಿಂದ ಬಂದ ಮಲ್ಲಜನರು ತಂತಮ್ಮ ಪರಾಕ್ರಮವನ್ನು ತೋರಿಸಿ ಯೋಗ್ಯ ಮರ್ಯಾದೆಯನ್ನು ಹೊಂದಿದರು. ಕುಸ್ತಿಯ ಕೆಲಸವು ಸೋಮವಾರದ ವರೆಗೆ ನಡೆಯಿತು. ಈ ಯಾವತ್ತು ಕೆಲಸಗಳನ್ನು ಷುರುವಿನಿಂದ ಗುರುಬಸಯ್ಯನವರು ವಿಶೇಷ ಭಕ್ತಿಯಿಂದ ನಡೆಯಿಸಿದರು. ಪ್ರಯುಕ್ತ ಜಗದೀಶ್ವರನು ಅವರಿಗೆ ಆಯುಷ್ಯ ಧನ ಇವುಗಳ ಅಭಿವೃದ್ಧಿಮಾಡಬೇಕೆಂದು ಅಪೇಕ್ಷಿಸಿ ಸತ್ಕಾರ್ಯಗಳು ಪದೇ ಪದೇ ನಡೆಯಬೇಕಾಗಿ ಇಚ್ಛಿಸುತ್ತೇನೆ.

ಒಬ್ಬ ವೀರಶೈವ ಮತಾಭಿಮಾನಿ.

ಮಾಗಡಿ ಜಡೇದೇವರ ಮಠ.

ವೃತ್ತ ॥ ಪರಮವಿರೋಧಿಕೃದ್ವರ ಶರದ್ಘನ ಮಾಘವಳರ್ಕ್ಷಪಕ್ಷಭಾ । ಸುರತರ ಪಾಡ್ಯಮೀ ರವಿಜವಾಸರದೋಳ್ ನಿಜಭವ್ಯಪಾಣಿಕಂ ॥ ಬರಜಪಸಿದ್ಧಲಿಂಗಯತಿಪಂಗೊಲಿದಿತ್ತು ಚಿರಾಧಿಕಾರಮಂ । ಹರನೊಳಗೊಂದಿದಂ ಬಸವರಾಜ ಗುರೂತ್ತಮನಾತ್ತಚಿತ್ಸುಖಂ ॥ ೧ ॥ ಮುರುಳೆಮಠೇಶ ಸಚ್ಚರಕುಲಾಧಿಪಸೋಮಯತೀಶ್ವರಂಲಸತ್ । ವಿರತಿಪ ವೀರದೇಶಿಕವರಂ ಮನವೊಲ್ದು ಶಿವಾಗಮಾಧ್ವದಿಂ ॥ ಪರಮ ಸಮಾಧಿ ಸತ್ಕ್ರಿಯೆಯನುತ್ಸವದಿಂ ಗುರುಭಕ್ತ ಸಂಕುಲಂ । ಹರ ಜಯಶಬ್ದಮಂ ಪಠಿಸುತಾನತರಾಗಿರೆ ಪೂರ್ಣಮಾಡಿದರ್ ॥

ರಾಗ ಮಟ್ಟು.

ಜಯಜಯಾನತ ಭಕ್ತಶಂಕರ ಪಾರ್ವತೀಶ್ವರ ಶರ್ವನೆ! ಜಯಜಯಾಘವಿನಾಶ ಸರ್ವಸುರಾಳಿ ಪೂಜಿತ ಪಾದನೇ ॥ ಬೆಂಗಳೂರೆಲೆ ಸಿದ್ಧಲಿಂಗ ಶ್ರೇಷ್ಠಿವರ್ಯರು ಭಕ್ತಿಯಿಂ । ಸಾಂಗಮೆನಲೀ ಗುರುವಿನಾರಾಧನೆಯ ಮಾಡಿದರಕ್ತಿಯಿಂ ॥ ೧ ॥ ಲೋಭವಂ ಕಳೆ ನೂಂಕಿಪುಣ್ಯದ ಲಾಭವೇ ಘನವೆಂದುತಾವ್ । ಶೋಭಿಸುವ ಗಣಪತಿಗೆ ತೃಪ್ತಿಯ ನೊಂದಿಸಿದರತಿ ಮೋದದಿಂ ॥ ೨ ॥ ಭಕ್ತಿಯೇ ನಿಜ ಮುಕ್ತಿಭಾಗ್ಯಕೆ ಮೂಲ ಕಾರಣವೆಂದುತಾವ್ । ಶಕ್ತಿಗನುಗುಣವಾಗಿ ವಸ್ತ್ರಹಿರಣ್ಯದಾನವ ಮಾಡಿದರ್ ॥ ೩ ॥ ಗುರುವೆ ಶಿವನೆಂದರಿತುಭಾವದಿ ತನುಮನಸ್ಸು ಧನಂಗಳಂ । ಚರಣಕರ್ಪಿಸಿ ನಡೆವ ಸದ್ಗುರುಭಕ್ತರಿವರೇ ನಿಶ್ಚಯಂ ॥ ೪ ॥ ಶಿವನು ಹರ್ಷದೊಳಿವರಿಗಧಿಕಾಯುಷಮ ನಮಲಸುಪುತ್ರರಂ । ಸವೆಯದುರೆಭಾಗ್ಯವನು ಕರುಣಿಸಿ ಪೊರೆಯಲೆಂದಾಂ ಪ್ರಾರ್ಥಿಪೇಂ ॥ ೫ ॥

ಶ್ರೀಮರ್ವಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಧಿಕಾರಕ್ಕೆ ಒಳಪಟ್ಟಿರುವ ಮಾಗಡಿ ಶ್ರೀ ಜಡೇದೇವರ ಮಠದ ಶ್ರೀ ಚರಮೂರ್ತಿ ಬಸವರಾಜ ದೇಶಿಕೇಂದ್ರರು ಇದೇ ವಿರೋಧಿಕೃತು ಸಂವತ್ಸರ ಮಾಘಶುದ್ಧ ಪಾಡ್ಯಮಿ ಸ್ಥಿರವಾರ ೧೦ ಘಂಟೆಗೆ ತಮ್ಮ ಸರ್ವಪೂಜ್ಯವಾದ ಚರಪಟ್ಟಾಧಿಕಾರವನ್ನು ತಮ್ಮ ಸೇವೆಯಲ್ಲಿ ಹದಿನೆಂಟು ವರುಷಗಳಿಂದಲೂ ನಿರತರಾಗಿ ಸಮೀಪದಲ್ಲಿದ್ದ ವಿರಕ್ತ ಮೂರ್ತಿಗಳಾದಶ್ರೀ ಸಿದ್ಧಲಿಂಗಸ್ವಾಮಿಗಳವರಿಗೆ ವಹಿಸಿಕೊಟ್ಟು ಎರಡು ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರು. ಇವರ ಸಮಾಧಿ ಕ್ರಿಯೆಯನ್ನು ಶ್ರೀ ಮುರುಳೆ ಮಠದ ಚರಮೂರ್ತಿ ಸೋಮದೇವ ಯತೀಶ್ವರರು ಮತ್ತೂ ನಿರಾಭಾರಿ ವೀರಪ್ಪಸ್ವಾಮಿಗಳವರು ಸಮಸ್ತ ಭಕ್ತಮಾಹೇಶ್ವರರುಗಳೊಡನೆ ಪೂರ್ಣ ಮಾಡಿದರು. ಅಲ್ಲದೆ ಬೆಂಗಳೂರು ಮ॥ ರಾ॥ ರಾ॥ ಯಜಮಾನ್ ದೂರ್ ಎಲೆ ಮಲ್ಲಪ್ಪಶೆಟ್ಟರವರ ಮಕ್ಕಳಾದ ಸಿದ್ಧಲಿಂಗಪ್ಪಶೆಟ್ಟರು ಈ ಗುರುವರ್ಯರ ಆರಾಧನೆಯನ್ನು ಮಾಘಶುದ್ಧ ೧೩ ಗುರುವಾರ ನಡೆಯಿಸಿ ಅನೇಕ ಭಕ್ತಮಾಹೇಶ್ವರರುಗಳಿಗೆ ತೃಪ್ತಿಯನ್ನು ಪಡಿಸಿದುದಲ್ಲದೆ ವಸ್ತ್ರ ಹಿರಣ್ಯದಾನವನ್ನು ಮಾಡಿ ಪೂರ್ತಿಮಾಡಿದರು. ಈ ಸತ್ಕರ್ತರಿಗೆ ಪರಮೇಶ್ವರನು ಸ್ಥಿರತರಾಯುರಾರೋಗ್ಯೈಶ್ವರ್ಯ ಸುಪುತ್ರರಂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಅನಂತಪುರ ಜಿಲ್ಲೆ ಗುತ್ತಿ ತಾ॥ ಪೈಕಿ ನಿಂಬಗಲ್ಲು ಗ್ರಾಮದ ಸಂಸ್ಕೃತಪಾಠಶಾಲೆಗೆ ಚಂದಾಕೊಡಲೊಪ್ಪಿರುವವರು.

(ಕಳೆದವಾರದ ಶೇಷ.)

ಕಲ್ಲುಹೊಳೆಗ್ರಾಮದ ಪಾಟೀಲ ನಿಂಗನಗೌಡ, ಪುಜ್ಜಗಿ ಚೆನ್ನಬಸಪ್ಪ, ಬಳ್ಳಾರಿಯ ಬಳೆಯ ಚೆನ್ನಬಸಯ್ಯ, ದೇಶಾಯಿ ಕರಭನಗೌಡ, ಹಾವಳಿಗಿ ನಂಜಪ್ಪ, ವಸ್ನ ವೀರಭದ್ರಪ್ಪ, ಕೊರ್ಲಗುಂದಿ ಶಿವಚೆನ್ನಬಸಪ್ಪ, ಆನೆಗೊಂದಿ ಪರಪ್ಪನವರ ಮಕ್ಕಳು ಮಲ್ಲಿಕಾರ್ಜುನಪ್ಪ ಪಂಪಪ್ಪ, ಅಮಿದ್ಯಾಳು ಹನುಮಂತಪ್ಪ, ಒಡ್ಡಿಗಿ ಮರಿಬಸಪ್ಪ, ಚಿತ್ರವಾಡಿಗಿಯ ಅರಳಿ ಬಸಪ್ಪಪ್ಪ, ಕೊಸಗಿ ಸಣ್ಣಪ್ಪ, ಸೊಂಡೂರು ಅಜ್ಜಪ್ಪ, ಅಮರಾವತಿ ಉಳ್ಳಿಗಡ್ಡಿ ಚಂದ್ರಪ್ಪ ಈ ಮಹನೀಯರುಗಳು ತಲೆಗೆ ೨ ರೂ ನಂತೆಯೂ, ಕಲ್ಲುಹೊಳೆ ಗ್ರಾಮದ ಅಕ್ಕಸಾಲೆ ರುದ್ರಪ್ಪ, ಬೊಮ್ಮನಹಾಳು, ಗ್ರಾಮದ ರಡ್ಡಿ ರಾಚಯ್ಯ, ಕರಣಂ ಕೃಷ್ಣಪ್ಪ, ನಲ್ಲಗೊಂಡ್ಲ ಹೊನ್ನಪ್ಪ, ಬಳ್ಳಾರಿಯ ಗಿಣಚಾ ಬಸಪ್ಪ, ನಿಂಬಗಲ್ಲು ಗುರುಸಿದ್ಧಪ್ಪ, ಕಂಪ್ಲಿ ಸೋಮಪ್ಪ, ಕುರುಬರ ದಂಡೆಪ್ಪ, ಚಿತ್ರವಾಡಿಗಿಯ ಸೆಟ್ಟರ ಸೋಮಪ್ಪ, ಚೆಟರಿ ಶಿವಲಿಂಗಪ್ಪ ಈ ಮಹನೀಯರುಗಳು ತಲೆಗೆ ೧ ರೂ. ನಂತೆಯೂ, ಶೆಟ್ಟಿನ ನಾಗಪ್ಪನವರು ೧೨ ಆಣೆಯಂತೆಯನೂ, ಕೊಡಲು ವಾಗ್ದಾನಮಾಡಿರುತ್ತಾರೆ.

6

ಸರಸವಾದ ನೂತನಪುಸ್ತಕಗಳು.

ವಿರಕ್ತಳಾದ ಸೌದಾಮಿನಿ—ನವರಸಭರಿತವಾದ ನವೀನಕಾದಂಬರಿ ೦—೩—೩; ಸಾಹಸಿಕೆ—ಚಮತ್ಕಾರವಾದ ಕಥೆ ೦—೨—೩; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ ೦—೧—೦. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦—೧—೩ ಶ್ರೀಹರಿಪ್ರಾರ್ಥನಾ ೦—೧—೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ವಿ. ಶಾಸ್ತ್ರಿ, ಚಾಮರಾಜನಗರ.

ವಿವೇಕಮಂಜರಿ.

2

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯಚಾತುರ್ಯದಪ್ರೌಢಿಮೆ, ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೧೦ ಪುಟಗಳು.
೨ ನೆಯ ಭಾಗ ೩ ಆಣೆ ೧೫೦ ಪುಟಗಳು.

ಅಂಚೆಯವೆಚ್ಚವು ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

ನೀತಿಮಂಜರಿ.

(ಎರಡನೆಯಾವೃತ್ತಿ ಸುಧಾರಿಸಿದುದು)

ಇದರಲ್ಲಿ ಅನೇಕ ನೀತಿಯ ವಿಷಯಗಳೂ, ಮನೋರಂಜಕ ವಿಷಯಗಳೂ ನಿಬಂಧರೂಪವಾಗಿ ಬರೆಯಲ್ಪಟ್ಟಿರುತ್ತವೆ. ಇದರಲ್ಲಿ ಮುಖ್ಯವಾಗಿ ಸರ್ ಜಾನ್‌ಲಬಕ್, ಚೆಸ್ಟರ ಫೀಲ್ಡ್, ಚೇಂಬರ್ಸ್, ಬೇಕನ್ನ ಮೊದಲಾದವರ ಗ್ರಂಥಗಳಿಂದಲೂ, ಹಿಂದುಸ್ಥಾನದ ಪ್ರಾಚೀನ ಮತ್ತೂ ಅರ್ವಾಚೀನ ಇತಿಹಾಸಗಳ ಮೇಲಿಂದಲೂ ನಿಬಂಧಗಳನ್ನು ಬರೆದಿರುತ್ತಿದ್ದು, ಈ ಪುಸ್ತಕವು ಅಬಾಲವೃದ್ಧಸ್ತ್ರೀಪುರುಷರಿಗೆ ಓದಲಿಕ್ಕೆ ಬಹಳ ಯೋಗ್ಯವಾಗಿರುತ್ತದೆ. ಮುಂಬಯಿ ಸರ್ಕಾರದ ವಿದ್ಯಾಖಾತೆಯವರು ಇದನ್ನು ಇನಾಮಿನ ಪುಸ್ತಕವೆಂದು ಮಂಜೂರ ಮಾಡಿರುವುದರಿಂದ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಅವಶ್ಯವಾಗಿ ಓದತಕ್ಕದು. ೨ ನೆಯಾವೃತ್ತಿಯ ಪ್ರತಿಗಳು ಮುಗಳೂರ ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿರುವುವು. ಪುಟಸಂಖ್ಯೆ ೧೯೯. ಬೆಲೆ ೩ ಆಣೆ. ಅಂಚೆಯ ವೆಚ್ಚ ೧ ಆಣೆ.

ಗ. ಹು. ಹೊನ್ನಾಪುರಮಠ
ವಕೀಲ, ಧಾರವಾಡ.

26

ಉತ್ತಮ ಗ್ರಂಥಗಳು.

[illegible]— ಬೆಲೆ ವಿ.ಪಿ. ೪ ಆಣೆ. ಇದು ಸಂಸ್ಕೃತ ಉತ್ತಮವಾದ ಕನ್ನಡವ್ಯಾಖ್ಯಾನದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೩ ಆಣೆ. ಸ್ವಸ್ವರೂಪ ಪ್ರಕಾಶಿಕಾ ಸಹಿತವಾಗಿಧೆ. ಹೋಸಲಿ ಶಿವಗಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

36

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದಯಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

33

ಗುಣವಾಗದಿದ್ದರೆ ಹಣವಾಪಸ್ಸು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ [illegible] ಗುಪ್ತಪ್ರಮೇಹ [illegible] ಎಲ್ಲಾ ಜಾಡ್ಯಗಳೂ, [illegible] ಅತಿ ಶೀಘ್ರಗುಣವುಂಟಾಗಿ, [illegible] ರೋಗಸ್ಥರಿಗೆ, ಶಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಟ್ಟಿಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲೆ ಉತ್ತರಕಾನಡಾ.

ನೋಟೀಸ್.

3

ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯರವರಿಗು ಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦—೧೦—೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾದಿಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥೆಜನ್ಮನರಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತು ಫಲಗಳನ್ನು ೫೦-೫೫ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦—೦—೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವದು ಬಿಟ್ಟುಬಹಳ ತೊಂದರೆ ಪಡುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನವೇಳೆಯನ್ನ ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನ ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫—೦—೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ೧ಕ್ಕೆ ಕ್ರಯ ರು ೧-೨-೦

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಸಾರ ರು ೦—೧೦—೦; ವೀರಶೈವಮತಬೋಧಿನಿ ರು ೦—೮—೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦—೩—೦; ನವಗ್ರಹಗಳದಂಡಕ ರು ೦—೨—೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಉಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಿಸುವವರಿಗುಸಹ ದೊರೆಯುತ್ತದೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾತರು ತರ್ಪಿಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಾವುದಕ್ಕೂ ಟಪಾಲು ವಿ. ಪಿ. ಖರ್ಚು ಬಿಳುತ್ತೆ.

ನಮ್ಮ ವಿಳಾಸ:—
ಎಸ್. ಮು. ಶಾಸ್ತ್ರಿಗಳು [illegible]
[illegible]

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ.ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

2

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೋಟ್ಟಿಯು ಹೆಚ್ಚಾಗಿ ಸಂತತಿ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. ಕಟವೃದ್ಧತನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೪೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

3

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯೂಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು.

ಕೊಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

43

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೬. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡದಿರಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ ಹೊಗಳಿಕೆಯಲ್ಲ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಜ್ಜಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ [illegible] ವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
ಮೈಸೂರು.

77

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ನೆಯ ಇಸವಿ ಫೆಬ್ರವರಿ ತಾ॥ ೧೨ ರಿಂದ ೧೯೧೨ನೆಯ ಫೆಬ್ರವರಿ ತಾ॥ ೧೮ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ನೆಯ ವಿರೋಧಿಕೃತು ಸಂವತ್ಸರದ ಮಾಘ ಬ॥ ದಶಮಿಯಿಂದ ಮಾಘ ಬ॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ತೇದಿ
12	ಸೋ	ದ	43-42	ಜ್ಯೇ	42-43	1
13	[1] ಮಂಗ	ಏ	48-30	ಮೂ	48-40	2
14	ಬುಧ	ದ್ವಾ	53-38	ಪೂಷಾ	54-48	3
15	ಗುರು	ತ್ರ	59-20	ಉಷಾ	60-0	4
16	[2] ಶುಕ್ರ	ಚ	60-0	ಉಷಾ	1-24	5
17	[3] ಶನಿ	ಚ	4-14	ಶ್ರ	6-58	6
18	[4] ಭಾನು	ಅ	8-46	ಧ	11-30	7

(1) ಸರ್ವತ್ರೈಕಾದಶಿ, ವರಾಹಕಲ್ಪಾದಿ. (2) ಮಹಾಶಿವರಾತ್ರಿ, ತಿರ್ಮಕೂಡ್ಲು, ನಂಜನಗೂಡಿನಲ್ಲಿ ಬೆಳ್ಳಿ ಕೈಲಾಸವಾಹನ. (3) ಸರ್ವತ್ರ ಅಮಾವಾಸ್ಯ, ಶ್ರೀರಂಗಪಟ್ಟಣದಲ್ಲಿ ಗಂಗಾಧರೇಶ್ವರಸ್ವಾಮಿ ರಥ. (4) ದ್ವಾಪರಯುಗಾದಿ, [illegible]ದ್ಧಕಯೋಗಃ.

ಮೈಸೂರ್ : ಶ್ರೀ. ವಿರೂಪಾಕ್ಷಶಾಸ್ತ್ರಿಗಳಿಂದ ಸ್ಟಾ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಕಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಫೆಬ್ರವರಿ ತಾರೀಖು ೧೨ ನೆಯ ಸೋಮವಾರ. [ಸಂಚಿಕೆ ೭

ಸಂತೋಷಕರವಾದ ಪ್ರಕಟನೆ! ಸರ್ವರೂ ಓದಿ ಪ್ರೋತ್ಸಾಹಕೊಡಿರಿ !!

4 ☞ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚಂಟ್ಸ್, ಮೈಸೂರ್.

ನಮ್ಮ ಪದಾರ್ಥವನ್ನು ನಾವು ಹೊಗಳಿ ಪ್ರಯೋಜನವೇನು? ನೀವು ಅನೇಕ ಕಡೆಯಿಂದ ತರಿಸಿರಬಹುದು. ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ಸೀಮೆಯಿಂದ ರಖಂವಾರ್ ವಾಚಗಳ ಹೊಸಗುಡ್ಸ್ ಬಂದಿರುವುದರಿಂದ ಬೆಲೆಯನ್ನು ಬಹಳ ಕಡಮೆಮಾಡಿದ್ದೇವೆ. ಅದ್ದರಿಂದ ಪ್ರತಿನಿತ್ಯವೂ ಅನೇಕ ಆರ್ಡರ್‌ಗಳು ಬಂದು ಡಜನ್‌ಗಟ್ಟಲೆ ವಿಕರಿಯಾಗುತ್ತಾ ಇವೆ. ಇಂಥಾ ಸಮಯವನ್ನು ಕಳೆದುಕೊಳ್ಳದೆ ಸರ್ವರೂ ಜಾಗ್ರತೆ ಆರ್ಡರ್‌ಕೊಟ್ಟು ತರಿಸಿಕೊಳ್ಳಿರಿ. ವಾಚಿನ ತಪ್ಸೀಲ್:— ರಾಸ್ಕೋಫ್ ಸಿಸ್ಟಂವಾಚ್ ೧ ಕ್ಕೆ ೨-೮-೦; ಗಟ್ಟಿಂ ಕೈವೈರ್ ಸ್ಕೀಲೆಟನ್ ವಾಚ್ ೧ ಕ್ಕೆ ೩-೮-೦; ಸುಂದರವಾದ ಪ್ಲಾಟ್‌ವಾಚ್ ೧ ಕ್ಕೆ ೫-೮-೦; ಕ್ವೀನ್‌ವಾಚ್ ೧ ಕ್ಕೆ ೬-೮-೦; ಜಂಟಲ್‌ಮನ್ ಗ್ರುರ್‌ವಾಚ್ ಎಂಬ ಗ್ಯಾರಂಟಿಯಾದ ವಾಚ್ ೧ ಕ್ಕೆ ೮-೮-೦, ಒಂದುಸಾರಿ ಕೀಗಕೊಟ್ಟರೆ ೮ ದಿವಸದವರೆಗೂ ವ್ಯತ್ಯಾಸವಿಲ್ಲದೆ ನಡೆಯುತಕ್ಕ ವಾಚ್ ೧ ಕ್ಕೆ ೧೦-೮-೦; ನಮ್ಮ ಹಿಂದೂದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೆ ತಿರುಗುತ್ತಾ ಘಂಟೆ ನಿಮಿಷಗಳನ್ನು ಸಹ ತೋರಿಸುವ ವಾಚ್ ೧ ಕ್ಕೆ ೬-೮-೦; ಘಂಟೆ ನಿಮಿಷ ಸೆಕೆಂಡ್ ತೋರಿಸಿ ತಾರೀಖು ಸಹ ತೋರಿಸುವ ವಾಚ್ ೧ ಕ್ಕೆ ೫-೧೨-೦; ಮತ್ತೂ ಮೇಲ್ಕಂಡವೆಲ್ಲಾ ಇದ್ದು ವಾರಾ ತಾರೀಖು ತಿಂಗಳು ಪೂರ್ಣಿಮಾ ಅಮಾವಾಸ್ಯೆ ಇವೆಲ್ಲಾ ತೋರಿಸುವ ವಾಚ್ ೧ ಕ್ಕೆ ೧೨-೪-೦; ಸುಂದರವಾದ ಟೇಬಲ್ ಗಡಿಯಾರ ಘಂಟೆ ಅರ್ಧಘಂಟೆ ಸಹ ಹೊಡೆಯುತ್ತೆ ಕ್ರಯ ೧ ಕ್ಕೆ ೪-೧೨-೦; ಡಿಟೋ ಅಲಾರಂ ಸಹಾ ಇರುವುದಕ್ಕೆ ೫-೪-೦; ಮನೋಹರವಾಗಿ ಗಾನಮಾಡುವ ಕ್ಲಾಕ್ ೧ ಕ್ಕೆ ೫-೮-೦; ಸಾದಾ ಟೈಂಪೀಸ್ ೧ ಕ್ಕೆ ೧-೪-೦; ಅಲಾರಂ ಇರತಕ್ಕದ್ದು ೨-೪-೦; ಅಮೇರಿಕ್ ಅನ್ಸೋನಿಯಾ ಅಲಾರಂ ಟೈಂಪೀಸ್ ೧ ಕ್ಕೆ ೩-೮-೦; ಅನ್ಸೋನಿಯಾ ದೊಡ್ಡ ಟೈಂಪೀಸ್ ಘಂಟೆ ಅರ್ಧಘಂಟೆ ಹೊಡೆದು ಅಲಾರಂಸಹ ಇರತಕ್ಕದ್ದು ೬-೧೨-೦; ವಾಚ್‌ಸರಪಣಿಗಳು ೪ ಆಣೆ ಲಾಗಾಯ್ತು ನಾಲ್ಕು ರೂಪಾಯಿವರಿಗೂ ಇದೆ ಯಸ್ಸುಖರೀದಿಯಲ್ಲಿ ಬೇಕಾದರೂ ಖಾತ್ರಿಯಿಂದ ರವಾನಿಸುತ್ತೇವೆ ಬೆಳ್ಳಿ ಸರಪಣಿ ೨॥ ತೊಲ ಲಾಗಾಯಿತು ೪ ತೊಲದ ವರೆಗೆ ಇದೆ. ತೊಲ ೧ ಕ್ಕೆ ೧-೪-೦ ಮತ್ತು ವಾಚ್‌ರಿಪೇರಿಂಗ್ ಡಿಪಾರ್ಟ್‌ಮೆಂಟನ್ನೂ ಸಹ ಇಟ್ಟಿರುತ್ತೇವೆ. ಪರಸ್ಥಳದಿಂದ ರಿಪೇರಿಗಾಗಿ ಬರತಕ್ಕ ವಾಚ್‌ಗಳಿಗೆ ಸರಿಯಾದ ಚಾರ್ಜಿಗೆ ರಿಪೇರಿಮಾಡಿ ರವಾನಿಸಲಾಗುತ್ತೆ ವಾಚಿನ ಬೆಲ್ಟ್‌ಸಾಮಾನುಗಳೂ ವಾಚ್‌ರಿಪೇರಿಂಗ್ ಆಯುಧಗಳೂ ರಖಂವಾರ್ ಗಂಧದಕಡ್ಡಿ ಊದಬತ್ತಿ ಅತ್ತರ್ ಪನ್ನೀರು ತಲೆಗೆ ಹಚ್ಚತಕ್ಕ ರಖಂವಾರ್ ಸುವಾಸನೆ ಎಣ್ಣೆಗಳೂ ಸಹ ನಮ್ಮಲ್ಲಿ ದೊರೆಯುತ್ತವೆ. ನಮ್ಮಷ್ಟು ಕಡಮೆ ಬೆಲೆಗೆ ಮತ್ತಾರಲ್ಲೂ ದೊರೆಯುವದಿಲ್ಲಾ ಖಂಡಿತ ತಿಳಿಯಿರಿ



ರಾತ್ರಿಯವೇಳೆ ಎಂತಹ ಕತ್ತಲೆಯಲ್ಲಿ ನೋಡಿದಾಗ್ಯೂ ದೀಪದ ಅವಶ್ಯವಿಲ್ಲದೆ ಇಷ್ಟೇಗಂಟೆಯೆಂಬುವುದನ್ನು ತೋರಿಸುವ ಹೊಸನಮೂನೆವಾಚ್ ಬಂದಿದೆ. ಸ್ಟೀಲ್ ಕೇಸ್ ವಾಚ್ ೧ ಕ್ಕೆ ೨೪-೦-೦; ಡಿಟೋ ಅಚ್ಚಬೆಳ್ಳಿಯ ಕೇಸ್ ವಾಚ್ ೧ ಕ್ಕೆ ೨೬-೮-೦. ಈ ವಾಚ್ ಬೇಕಾದವರು ೨ ರೂಪಾಯಿ ಅಡ್ವಾನ್ಸಾಗಿ ರವಾನಿಸಬೇಕು. ೫ ರೂ. ಗೆ ೧ ಬೈಸಿಕಲ್, ೪ ಆಣೆಗೆ ೧ ವಾಚ್ ಸಿಕ್ಕುವಹಾಗೆ ಮಾಡಿದೇವೆ. ಈ ವಿಷಯವನ್ನು ತಿಳಿಯಲಪೇಕ್ಷಿಸುವವರು ಅರ್ಧಾಣೆ ಲೇಬಿಲ್ಲನ್ನು ನಮ್ಮ ವಿಳಾಸಕ್ಕೆ ರವಾನಿಸಬೇಕು.

೧೯೧೨ ನೆಯ ಇಸವಿ ದೊಡ್ಡ ಕ್ಯಾಲೆಂಡರ್ ೧ ಕ್ಕೆ ೩ ಪೈ. ೧೨ ಕ್ಕೆ ೧-೬-೦. ಟಪಾಲ್ ಖರ್ಚು [illegible].

ನಮ್ಮ ವಿಳಾಸ:— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್‌ಮರ್ಚಂಟ್ಸ್ ಕೃಷ್ಣರಾಜಮೊಹಲ್ಲಾ
ಮೈಸೂರು.

50

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧-೨-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಶರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೩-೦
ಸಟೀಕ ವಿವಾಹವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

27

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೩-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿದೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ಸಂ[illegible]ನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಕೋತ್ತರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವು, ಮೋಕ್ಷವು [illegible] ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾಶ ಗದ್ಯಗಳಿವೆ. ೬ ಆಣೆ

ರತ್ನಾಕರಶತಕಂ.— ೨ ಆಣೆ. ಶಂಕರಲಿಂಗ ಶತಕಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ [illegible] ಪುಟಗಳು ಬರುವುವು. [illegible] ೨-೮-೦

ಎಸ್. ಆರ್. [illegible],
ಗ್ರಂಥಪ್ರಕಾಶಕರು [illegible], ಮೈಸೂರು.

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ.]

ಸುಗಂಧರಾಜೇಂದ್ರನು ಮೆಲ್ಲನೆ ನಿದ್ರೆಯಿಂದ ಎಚ್ಚರಂಗೊಂಡಂತೆ ಕಣ್ಣುಗಳಂ ತೆರೆದುನೋಡಿ, ಇದಿರಾದ ವಸ್ತುಗಳೆಲ್ಲವಂ ಕಾಂತೆಯಂತೆ ತಿಳಿದು, ಎಲೈ ಬಾಲೆಯೆ! ಈಗ ಮೀರಿಬರುವ ಮದನಜ್ವರವಂ ಸೈರಿಸಲಾರೆನು; ನಿನ್ನ ಮುಖಪೂರ್ಣಚಂದ್ರೋದಯದೊಡನೆ ಅಧರಸುಧೆಯ ಅನುಪಾನವಂಗೈಸಿ, ಸೇವನೆಯಂ ಮಾಡಿಸಿ, ನಿನ್ನ ಕುಚಂಗಳೆಂಬ ಮಾದಳಫಲಂಗಳಂ ಕೊಟ್ಟು ಸಂತಾಪವಂ ಪರಿಹರಿಸಿ, ನನ್ನ ಇಚ್ಛಾನುಸಾರ ಪಥ್ಯವಂ ಕೊಟ್ಟು ಈ ಮದನಜ್ವರವಂ ಪೋಗಲಾಡಿಸಿ ರಕ್ಷಿಸಬೇಕೆಂದು ಮನಬಂದಂತೆ ಮಾತನಾಡುತಲಿರಲಾಗ ಸುಮತಿಯು ಆ ವಿರಹಚೇಷ್ಟೆಯಂ ಕಂಡು, ಸ್ತ್ರೀಯರುಗಳೊಳ್ ಮಹಿಮೆಯು ಇಂತಿರುವುದೆ! ಎಂದು ನುಡಿಯುತ, ಎಲೈ ಸ್ವಾಮಿಯೆ! ಇಲ್ಲಿ ಕಾಂತೆಯೆಲ್ಲಿರುವಳು? ಇದು ಇಳಾವೃತಖಂಡದೊಳ್ ವಜ್ರಪುರಿಯು; ಇದು ಅಮೃತಸರೋವರವು; ನಾನು ಸುಮತಿಯು ಎಂದು ಬಿನ್ನವಿಸಲು ಸುಗಂಧರಾಜೇಂದ್ರನು ಆ ಮಾತುಗಳಂ ಸ್ವಪ್ನದೊಳ್ ಕೇಳಿದಂತೆ ಕೇಳಿ ಎಚ್ಚರಂಗೊಂಡು ಬಳಲಿಕೆಯೊಡಗೂಡಿದ ನಿಟ್ಟುಸುರಂಬಿಟ್ಟು, ಸುಮತಿಗೆ ತಿಳಿಯದಂತೆ ಲಜ್ಜಾಪರಾಙ್ಮುಖನಾಗಿರಲಾಗ ಸುಮತಿಯು ಆ ಭಾವವಂ ತಿಳಿದು, ಎಲೈ ಸುಕುಮಾರಾಂಗನೆ! ಈಗ ಬಿಸಿಲೇರಿ ಬಂದು ರತ್ನಶಿಲೆಗಳಂ ನಿರ್ಮಿತವಾದ ಈ ಸರೋವರದೊಳ್ ತಾಪವು ಅಧಿಕವಾಗಿ ತೋರುವುದಾದುದರಿಂದ, ಇದಿರಾಗಿ ಚಂದ್ರಕಾಂತಶಿಲೆಗಳಂ ನಿರ್ಮಿತವಾದ ಈ ನಂದನದ ಕೈಸಾಲೆಯೊಳ್ ವಿಶ್ರಮಂಗೊಳ್ವುದಾ ಎಂದು ಪೇಳೆ, ಹಸ್ತಾಲಂಬನನ್ನಿತ್ತು ಮೆಲ್ಲನೆ ದಾವಟಿಗೆಗಳನ್ನೇರಿಸಿ ಕೈಸಾಲೆಯ ಸಮೀಪವಂ ಸೇರಿಸಿ ಬರುತ್ತಿರುವಷ್ಟರೊಳ್, ಮುಂದಿದ ಮೇಲಂತಸ್ತಿನೊಳ್ ನಿಂತಿದ್ದ ಕುಸುಮಲತೆಯು ಈ ಪುರುಷನೇ ತನ್ನ ಮಂದಿರಕ್ಕೆ ಬರುವನು; ಇದೇನು ತನ್ನ ಸುಕೃತವೆಂದು ತನ್ನ ಸಖಿಯರಂ ಕರೆದು, ನೀವು ಬೇಗದಿಂ ಪೋಗಿ ಬಂಗಲೆಯೊಳ್ ಬರುತಲಿರುವ ರಾಜಕುಮಾರಂಗೆ ಉಪಚಾರಗಳಂ ಮಾಡಿ, ಮಧುರವಾತುಗಳಿಂದ ಕುಶಲವಂ ಕೇಳಿ, ಮುಂದಿನ ಒಳಹಜಾರಕ್ಕೆ ಬರುವಂತೆ ಮಾಡಿರಿ ಎಂದು ಪೇಳಲು, ಆ ಕೆಳದಿಯರು ಆ ಮಾತಂ ಕೇಳಿ ಮಂದಿರದ ಬಾಗಿಲೊಳ್ ಬಂದು ಕಾದಿರ್ದು ಬಹುಕಾಲದಿಂದ ಪರಿಚಿತರಾಗಿರುವ ನಾರಿಯರಂತೆ ನಿರ್ಭಯರಾಗಿ ತಂಪಾಗಿರುವ ಪನ್ನೀರುಗಳಿಂದ ಪಾದಂಗಳಂ ತೊಳೆದು, ವಸ್ತ್ರಗಳಂ ವರಸಿ, ಆರತಿಯನ್ನೆತ್ತಿ, ದೃಷ್ಟಿಯಂ ತೆಗೆದು, ಇಲ್ಲಿ ಬಿಸಲಿನ ಶಕೆ ತೋರುವುದು—ಮುಂದಿನ ಒಳಹಜಾರಕ್ಕೆ ದಯಮಾಡಬೇಕೆಂದು ಉಪಚಾರೋಕ್ತಿಗಳಂ ಪೇಳಲಾಗ ಸುಗಂಧರಾಜೇಂದ್ರನು— ಕೆಳದಿಯರೇ ಇಷ್ಟು ಜಾಣೆಯರಾಗಿರುವಾಗ, ಇವರ ಒಡತಿಯು ಎಷ್ಟು ಚತುರೆಯೊ! ಅವಳಂ ಬೇಗನೋಡಬೇಕೆಂದು ಉತ್ಸಾಹವಂ ಗೊಂಡು ಆ ಮಂದಿರವಂ ಪೊಕ್ಕು, ಅಲ್ಲಿ ಮಡಗಿರ್ದ ಮಣಿಪೀಠದೊಳ್ ಕುಳಿತು, ಎಲೈ ನಾರಿಯರಾ! ನೀವು ಯಾರು? ಈ ದಾನವನ ಮಂದಿರದೊಳ್ ಇರುವುದಕ್ಕೆ ಕಾರಣವೇನು? ಎಂದು ಕೇಳಲಾ ಕೆಳದಿಯರು— ಸ್ವಾಮಿಯೆ! ನೀವು ಕೇಳುವ ಕುಶಲಪ್ರಶ್ನೆಗೆ ಉತ್ತರವಂ ಬಿನ್ನವಿಸುವ ಯೋಗ್ಯತೆಯು ನಮಗೆ ಸಾಲದು; ನಮ್ಮ ಅರಸಿಯು ಬೇರೆಯಿರುವಳೆಂದು ವಿಜ್ಞಾಪನೆಯಂ ಗೈಯಲು, ಆಗ ರಾಜೇಂದ್ರನು ನಿಮ್ಮ ಅರಸಿಯನ್ನು ನಾವು ನೋಡಬಹುದೆ? ಎಂದು ಕೇಳಲಾ ಸಖಿಯರು ರಾಜೇಂದ್ರನೆ! ನಮ್ಮ ರಾಣಿಯು ರಾಕ್ಷಸನ ಭಯದಿಂದ ಅಡಿಯಿಡುವುದಕ್ಕೆ ಭಯಪಡುವಳು. ಅದುಕಾರಣ ಸ್ವಾಮಿಯೇ ಕರುಣೆಯನ್ನಿಟ್ಟು ಉಪ್ಪರಿಗೆಯೊಳಿರುವ ಕಾಂತೆಯಂ ಕಟಾಕ್ಷಿಸಬಹುದೆಂದು ಅರಿಕೆಮಾಡಲಾಗ, ಸುಗಂಧರಾಜೇಂದ್ರನು ಆನಂದದಿಂದ ಪಾವಿಗೆಯಂ ಮೆಟ್ಟಿ, ಮೆಟ್ಟಿಗೆಗಳನ್ನೇರಿ ಬರುವಾಗ ಕುಸುಮಲತೆಯು ಪಾವಿಗೆಯ ಧ್ವನಿಯಂ ಕೇಳಿ, ಮನಸ್ಸಿನೊಳ್ ಸಂತೋಷವು ಹೆಚ್ಚಿ ರಾಜಕುಮಾರನನ್ನೇ ಇಲ್ಲಿಗೆ ಈ ಸಖಿಯರು ಕರತರುವರು, ಇವರ ಸಾಮರ್ಥ್ಯವೆಷ್ಟೆಂದು ಅಚ್ಚರಿಗೊಂಡು ಆ ಮಹಾಪುರುಷನೇ ಇಲ್ಲಿಗೆ ಬರುವಾಗ ನಾನು ಇದಿರ್ಗೊಳ್ಳುವುದು ಉಚಿತವೆಂದು ಶಯ್ಯಾಗೃಹದಿಂ ತೆರಳಿ, ಕಂದರ್ಪಸುಂದರನಾದ ರಾಜೇಂದ್ರನ ಸೌಂದರ್ಯವಂ ನೋಡಿ ಮೂರ್ಛೆಯಂಗೊಂಡು ಬಿದ್ದಳೋ ಎಂಬಂತೆ ಪಾದಂಗಳೊಳ್ ಬಿದ್ದು, ಕಂಬನಿಗಳಿಂದಲೇ ಪಾದಂಗಳಂ ತೊಳೆಯುವಳೋ ಎಂಬಂತಿರಲು, ರಾಜೇಂದ್ರನು ಆ ಕಾಂತೆಯಂ ಕರಂಗಳಿಂದೆತ್ತಿ ತತ್ತರಂಗೊಳ್ಳಬೇಡೆಂದು ಸಂತೈಸಿ, ಕರವಂ ಪಿಡಿದು ಅವಳೊಡನೆ ಶಯ್ಯಾಗೃಹದ ಮಣಿಮಂಚದೊಳ್ಕುಳಿತು ಪ್ರೇಮಾತಿಶಯದಿಂ ಕುಶಲಪ್ರಶ್ನೆಯಂ ಮಾಡುತ, ಎಲೈ ಬಾಲೆಯೆ! ಈ ಮಲಿನವಸ್ತ್ರವಂ ಧರಿಸಿ ಆಭರಣಗಳಂ ಧರಿಸದೆ ದುಃಖಿತಳಾಗಿ ಕಟ್ಟಿಗೆಯ ಕೇಶಭಾರವಂ ಬಾಚಿ ಬೈತಲೆಯಂ ತಿದ್ದದೆ ಬಳಲಿರುವುದಕ್ಕೆ ಕಾರಣವೇನು? ನೀನು ಮನುಷ್ಯಲೋಕದೊಳ್ ಹುಟ್ಟಿದಂತೆ ಕಾಣಿಸುವೆ. ನೀನಾರು? ನಿನ್ನ ಪೆಸರೇನು? ನಿನ್ನ ತಾಯಿತಂದೆಗಳಾರು? ನೀನು ಇಲ್ಲಿಗೆ ಬರುವುದಕ್ಕೆ ಕಾರಣವೇನು? ಎಲ್ಲವಂ ವಿಸ್ತಾರವಾಗಿ ಪೇಳಬೇಕೆನಲ್ಕೆ, ಕುಸುಮಲತೆಯು ಆ ರಾಜಕುಮಾರನ ಮಾತುಗಳಂ ಕೇಳಿ ಲಜ್ಜೆಯಿಂದ ತಲೆವಾಗಿ, ಮೆಲ್ಲಮೆಲ್ಲನೆ ಆ ಮನೋಹರಾಂಗನಂ ನೋಡಿ-ನೋಡದಂತಿರುವ ಪರಿಯಿಂದ ವಾರೆನೋಟದಿಂ ನೋಡುತ, ಎನ್ನ ಮನೋಭಿರಾಮನೆ ಕೇಳು-- ನಾನು ಹುಟ್ಟಿಬೆಳದ ಕಥೆಯಂ ಎಷ್ಟೆಂದುಪೇಳಲಿ! ಆದರೂ ಕೊಂಚವಾಗಿ ಬಿನ್ನವಿಸುವೆನು, ಲಾಲಿಸು— ಜಂಬೂದ್ವೀಪದಲ್ಲಿರುವ ಐವತ್ತಾರು ದೇಶಂಗಳೊಳ್ ಅತಿ ಗಮನೀಯವಾದ ಆರಟ್ಟದೇಶವೆಂದಿರುವುದು. ಆ ದೇಶವಂ ಕುಸುಮಧ್ವಜರಾಯನೆಂಬ ಅರಸು ಕುಲಕ್ರಮದಿಂದ ಪಾಲಿಸುವನು. ಆ ರಾಯಂಗೆ ಅನಂಗಲೀಲೆಯೆಂಬ ರಾಣಿಯು ಇರುವಳು. ಆ ಅರಸಿಯ ಉದರದೊಳ್ ಜನಿಸಿದ ನನ್ನಂ ಜನಗಳು ಕುಸುಮಲತೆಯೆಂದು ಕರೆಯುವರು. ನನ್ನ ತಂದೆಯು ಧರ್ಮದಿಂ ಪ್ರಜಾರಕ್ಷಣೆಯಂ ಮಾಡುತ್ತಿರಲು, ಒಂದಾನೊಂದು ದಿನ ನಾನು ಮಜ್ಜನಸ್ನಾನವಂ ಗೈದು ಸಜ್ಜೆಯ ಮೇಲುಭಾಗದೊಳ್ ಎಳೆಯಬಿಸಿಲಿನಲ್ಲಿ ಕುರುಳುಗಳನ್ನಾರಿಸುತ, ಅನೇಕ ಸಖಿಯರೊಡಗೂಡಿ ನಿಂತಿರಲಾಗ, ಈ ಮಾಯಾವಿಯಾದ ಜಂಘಾಮಾರುತನೆಂಬ ರಾಕ್ಷಸನು ಉಪರಿಭಾಗದೊಳ್ ಸಂಚಾರಮಾಡುತ ಬಂದು, ಕಪೋತವಂ ಕಂಡು ಎರಗುವ ಗಿಡುಗನ ಅಂದದಿಂದ ಆಕಾಶದಿಂ ಧುಮುಕಿ, ಎನ್ನನ್ನು, ಈ ಕೆಲ ಕೆಳದಿಯರನ್ನೂ ಕೂಡ ಎತ್ತಿಕೊಂಡು ಬಂದು ಈ ಮಂದಿರದೊಳ್ ಇರಿಸಿದನೆಂದು ಪೇಳಲು, ಅದಂ ಕೇಳಿ ರಾಜಶಿಖಾಮಣಿಯು ತಲೆದೂಗಿ ಕಮಲದಂತಿರುವ ಮುಖದೊಳ್ ಕಾಂತಿಯು ಕಂದಿ ಬಿನ್ನನಾಗಲು, ಕುಸುಮಲತೆಯು— ರಾಜೇಂದ್ರನೆ! ನಾನು ಪರಿಶುದ್ಧಳಹುದೊ, ಅಲ್ಲವೊ ಎಂಬ ಸಂಶಯದಿಂ ಕಮಲದಂತಿರುವ ನಿನ್ನ ಮುಖವು ಬಾಡಿದಂತೆ ಕಾಣುತ್ತಲಿದೆ; ಇದರ ಪರಿಯಂ ವಿಸ್ತಾರವಾಗಿ ಪೇಳುವೆನು— ಈ ರಾಕ್ಷಸನು ಬಲಾತ್ಕಾರದಿಂ ನನ್ನಂ ಕೈಹಿಡಿಯಬೇಕೆಂದು ಉದ್ಯೋಗಿಸಿದನು. ಆಗ ನಾನು ಆ ರಾಕ್ಷಸನೊಡನೆ, ಎಲೈ ರಾಕ್ಷಸನೆ! ಕೇಳು— ಎನಗೆ ಸಂವತ್ಸರ ಪರ್ಯಂತವು ಒಂದು ವ್ರತವನ್ನು ಮಾಡಬೇಕಾದುದುಂಟು. ಅದು ಸಂಪೂರ್ಣವಾದ ಬಳಿಕ ನಿನಗೆ ವಶಳಾಗುವೆನು ಅದಕ್ಕೆ ಸೈರಿಸದೇ ಬಲಾತ್ಕಾರವಂ ಮಾಡುವೆಯಾದರೆ, ಪ್ರಾಣಗಳನ್ನೇ ಕೊಡುವೆನು ಈ ವ್ರತಕ್ಕೆ ಸೇರುವ ಆರತಿಗಳಂ ವಿಳಂಬಿಸಬೇಕೆಂದು ಪೇಳಲು,

(ಸಶೇಷ.)

ದೊಡ್ಡ ರೋಗ.

ದೊಡ್ಡ ರೋಗವು ದನಗಳಿಗೆ ತಗಲತಕ್ಕ ಒಂದು ಅಂಟು ಜಾಡ್ಯವಾಗಿದೆ. ಇದರಷ್ಟು ಪ್ರಬಲವಾದ ಅಂಟು ಜಾಡ್ಯವು ಮತ್ತಾವುದೂ ಇಲ್ಲ. ಒಂದು ವಿಧವಾದ ವಿಷ ಕ್ರಿಮಿಗಳು ಮುಖ್ಯವಾಗಿ ದನಗಳ ನಾಲ್ಕನೆಯ ಆಹಾರ ಕೋಶ ಮತ್ತು ಕರುಳನ್ನು ಬಾಧಿಸುವದರಿಂದಲೂ ರೋಗವು ಉಂಟಾಗುತ್ತದೆ. ಜಾಡ್ಯವು ಇರತಕ್ಕ ಗ್ರಾಮಗಳಿಗೆ ದನಗಳು ಹೋಗಿ ಬರುವುದರಿಂದಾಗಲಿ ಅಥವಾ ರೋಗತಗಲಿದ ದನಗಳೊಡನೆ ಸೇರುವುದರಿಂದಾಗಲಿ, ಸೋಂಕಿಗೆ ಗುರಿಮಾಡಲ್ಪಟ್ಟ ಎರಡು ಮೂರು ದಿನಗಳೊಳಗೆ ಜಾಡ್ಯವು ಕಾಣಿಸಿಕೊಳ್ಳುತ್ತದೆ.

ರೋಗದ ಲಕ್ಷಣಗಳು:—ಮೊದಲು ಜ್ವರವು ಬರುತ್ತದೆ ಮತ್ತು ಜಾಡ್ಯವು ಪ್ರಬಲವಾದ ಹಾಗೆಲ್ಲಾ ಇದರ ಲಕ್ಷಣವು ಎಲ್ಲರಿಗೂ ಗೊತ್ತಾಗುತ್ತದೆ. ರೋಗವು ಹೆಚ್ಚುವುದರಲ್ಲಿ ಮೂರು ಅಂತರಗಳಿವೆ.

ಮೊದಲನೆ ಅಂತರ:—ರೋಗತಗಲಿದೊಡನೆಯೇ ದನವು ಶಕ್ತಿಗುಂದುವುದು, ನಡಗುವುದು, ಮೆಲ್ಲಗೆ ನಡೆಯುತ್ತದೆ. ಬಾಯಿಯು ಕೆಂಪಾಗಿಯೂ ಮತ್ತು ಬಿಸಿಯಾಗಿಯೂ ಇರುವುದು. ದನವು ಕೆಮ್ಮುವುದು, ಕಿವಿಯನ್ನು ಜೋಲು ಬಿಡುವುದು, ಮಲವು ಬದ್ಧಿಸುವುದು, ಒಂದು ವೇಳೆ ಮಲವಿಸರ್ಜನೆಯಾದರೆ ಸಗಣಿಯೊಡನೆ ಅಮುಕಟ್ಟಿ ಹೋಗುವುದು, ಹಸಿವು ಕಡಿಮೆಯಾಗುವುದು ಮತ್ತು ಬಾಯಾರಿಕೆಯು ಹೆಚ್ಚುವುದು, ಬೆನ್ನು ಬಿಲ್ಲಿನಂತೆ ಬಾಗುವುದು, ನಾಲ್ಕು ಕಾಲುಗಳೂ ಒಟ್ಟಾಗಿ ಕೂಡಿಕೊಳ್ಳುವುವು, ಹಲ್ಲು ಕಡಿಯುವುದು ಮತ್ತು ನಾಡಿಯು ಬಹಳ ಜೋರಾಗಿ ಆಡುವುದು.

ಎರಡನೆ ಅಂತರ:—ಶರೀರವು ಒಂದು ಸಮಯದಲ್ಲಿ ಬಹಳ ಕಾವಾಗಿರುವುದು; ಪ್ರತಿ ಕ್ಷಣದಲ್ಲಿಯೇ ತಣ್ಣಗಾಗುವುದು. ವೇಗವಾಗಿ ಉಸಿರಾಡುವುದು, ಹಸಿವು ಅಡಗಿಹೋಗಿ ಮೆಲಕುಹಾಕುವುದು ನಿಂತುಹೋಗುವುದು, ಕಣ್ಣಿನಿಂದ ನೀರು ಸುರಿಯುತ್ತದೆ, ತಲೆಯನ್ನು ಪಕ್ಕಕ್ಕೆ ತಿರುಗಿಸಿಕೊಂಡು ಮಲಗುತ್ತದೆ, ಜ್ವರವು ಬಹಳ ವೇಗವಾಗಿ ನಿಶ್ಶಕ್ತಿಯಿಂದ ದನವು ನಿಲ್ಲಲಾರದು, ಬಾಯಿಯು ಬಹಳ ಬಿಸಿಯಾಗಿ ನಾಲಿಗೆಯು ಒಡೆದು ಹೋಗುವುದು, ಮಲವು ಬದ್ಧಿಸುವುದು, ಹಾಗೆ ಮಲವು ಸಡಿಲಿದರೆ ಅದರೊಡನೆ ರಕ್ತ ಮತ್ತು ಅಮವು ಬೀಳುವುವು.

ಮೂರನೆ ಅಂತರ:—ಕಣ್ಣು, ಬಾಯಿ ಮತ್ತು ಮೂಗಿನ ಹೊಳ್ಳೆಗಳಿಂದ ಗಟ್ಟಿಯಾದ ನೀರು ಸುರಿಯುವುದು. ಉಸಿರು ದುರ್ಗಂಧವಾಗುವುದಲ್ಲದೆ ಮುಖ ಮತ್ತು ತುಟಿಗಳ ಮೇಲೆ ಬೊಕ್ಕೆಗಳು ಕಾಣಿಸಿಕೊಳ್ಳುವುವು. ಮುಂದಿನ ಹಲ್ಲುಗಳು ಸಡಿಲವಾಗುವುವು. ಈ ಸಮಯಕ್ಕೆ ಉಚ್ಚಾಟವು ಪ್ರಾರಂಭವಾಗುವುದು. ಮೊದಲು ಸಗಣಿಯು ಗಟ್ಟಿಯಾಗಿಯೂ ಮತ್ತು ರಕ್ತ ಮತ್ತು ಅಮಿನಿಂದ ಕೂಡಿದ್ದಾಗಿಯೂ ಇರುವುದು. ಸ್ವಲ್ಪ ಹೊತ್ತಿನ ಮೇಲೆ ಉಚ್ಚಾಟವು ಪ್ರಾರಂಭವಾಗಿ ದುರ್ಗಂಧದಿಂದ ಕೂಡಿರುವುದು ದನವು ಶಕ್ತಿ ಗುಂದುವುದು. ಹಸುವು ಚೆನೆಯಾಗಿದ್ದರೆ ಸಾಧಾರಣವಾಗಿ ಗರ್ಭಸ್ರಾವವಾಗುವುದು. ಸ್ವೇಚ್ಛೆಯಾಗಿ ರಕ್ತ ಬೇಧಿಯಾಗಿ ಎರಡನೆ ಮೊದಲ್ಗೊಂಡು ಆರು ದಿನಗಳಲ್ಲಿ ಹಸುವು ಸತ್ತು ಹೋಗುವುದು.

ಮೇಲೆ ಹೇಳಿದ ಲಕ್ಷಣಗಳಲ್ಲದೆ ಬೆನ್ನು ಮತ್ತು ಭುಜಗಳ ಮೇಲೆ ಬೊಕ್ಕೆಗಳು ಕಾಣಿಸುವುದೂ ಉಂಟು. ಇಂಥಾ ಸಂದರ್ಭಗಳಲ್ಲಿ ಸಾಧಾರಣವಾಗಿ ದನವು ಬದುಕಿಕೊಳ್ಳುವುದು. ಈ ಗುಳ್ಳೆಗಳೇಳುವುದರಿಂದ ದನವು ಕೈ ಕಾಲು ಮುದುರಿಕೊಂಡು ಬೀಳುವುದಿಲ್ಲ. ಇದರಿಂದ ಪ್ರಾಣಭಯು ಕಡಿಮೆ. ಗುಳ್ಳೆಗಳೆದ್ದರೆ ಜನರು ಅದನ್ನು ಸಿಡುಬೆಂದು ಹೇಳುವರು; ರಕ್ತ ಬೇಧಿಯಾದರೆ ಹೊಟ್ಟೆಯೊಳಗಿನ ಸಿಡುಬೆನ್ನುವರು.

ಚಿಕಿತ್ಸೆಗಳು:—ರೋಗದ ವಿಷ ಕ್ರಿಮಿಗಳನ್ನು ಶರೀರದಿಂದ ಹೊರಗೆ ತೆಗೆದಲ್ಲದೆ ನಿವಾರಣೆ ಮಾಡಲಾಗದಿರುವ ಸಾಂಕ್ರಾಮಿಕ ಜಾಡ್ಯಗಳಲ್ಲಿ ದೊಡ್ಡ ರೋಗವು ಒಂದಾಗಿದೆ. ಆದ್ದರಿಂದ ಮೊದಲು ರೋಗದ ವಿಷಕ್ರಿಮಿಗಳನ್ನು ನಾಶಮಾಡಿ ನಂತರ ನೋವಿನ ವಿಚಾರದಲ್ಲಿ ಗಮನಕೊಡಬೇಕು. ರೋಗವು ತಲೆದೋರಿದ ಮೊದಲಿನಲ್ಲಿ ನೀರು ಕುಡಿಸುವುದರಿಂದ ಅಪಾಯವೇನು ಇಲ್ಲ; ಆದರೆ ಉಚ್ಚಾಟವು ಪ್ರಾರಂಭವಾದಮೇಲೆ ನೀರು ಕುಡಿಸುವುದರಿಂದ ಉಚ್ಚಾಟವು ಹೆಚ್ಚುವುದಲ್ಲದೆ ದನವು ಶಕ್ತಿಗುಂದಿ ಜಾಗ್ರತೆಯಾಗಿ ಸಾಯುವುದು. ಇಂಥಾ ಸಮಯದಲ್ಲಿ ಹಿಂಡಿ ಅಥವಾ ಅಕ್ಕಿಯ ಗಂಜಿಯನ್ನು ಸ್ವಲ್ಪ ಸ್ವಲ್ಪ ಹೊತ್ತಿಗೊಂದಾವರ್ತಿ ಕೊಂಚಕೊಂಚವಾಗಿ ಕುಡಿಸಬೇಕು. ಎಣ್ಣೆ ಮತ್ತು ಬಿಸಿ ನೀರನ್ನು ಪಿಚಕಾರಿ ಹೊಡಿಯುವುದರಿಂದ ಗುಣವುಂಟು. ಬೇಧಿಯು ಆರಂಭವಾಗುವುದಕ್ಕೆ ಮೊದಲು ದಿನಕ್ಕೆ ಎರಡು ಮೂರಾವರ್ತಿ ೧೦ ಅಥವಾ ೧೫ ತೊಲೆ ಉಪ್ಪನ್ನು ಕೊಡಬಹುದು.

ಇಪ್ಪತ್ತನಾಲ್ಕು ಘಂಟೆಗಳಿಂದ ಜಾಸ್ತಿ ಕಾಲ ಬೇಧಿಯಾಗುತ್ತಿದ್ದರೆ ಕೆಳಗೆ ಕಂಡ ಅವುಷಧಿಯನ್ನು ಕೊಡಬೇಕು.

ಶೀಮೆಸುಣ್ಣದ ಪುಡಿ ೩||| ತೊಲ, ಕಾಚು ಅಥವಾ ಮುತ್ತುಗದ ಮೇಣ ||| ತೊಲ, ಅಫೀಮು ||| ತೊಲ, ಚಿರಾಯಿತದ ಪುಡಿ ೩। ತೊಲ ಇವುಗಳನ್ನೆಲ್ಲಾ ಚನ್ನಾಗಿ ಪುಡಿಮಾಡಿ ೪ ತೊಲೆ ಹೆಂಡ ಮತ್ತು ೧ಸೇರು ಅಕ್ಕಿ ಗಂಜಿಯೊಡನೆ ಬೆರಸಿ ಕುಡಿಸಬೇಕು. ಬೇಧಿಯು ನಿಂತಮೇಲೆ ಸ್ವಲ್ಪ ಹಸುರು ಹುಲ್ಲನ್ನು ತಿನ್ನಿಸಬೇಕು. ಸ್ವಲ್ಪ ಉಪ್ಪನ್ನು ಮೇವಿನೊಡನೆ ಬೆರಸುವುದು ಒಳ್ಳೇದು. ದನವು ತನ್ನ ಮನಸ್ಸು ಬಂದಾಗ ನೆಕ್ಕುವುದಕ್ಕಾಗಿ ಅದರ ಮುಂದೆ ಸೈಂಧವಲವಣದ ಗಡ್ಡೆಯನ್ನಿಟ್ಟರಬೇಕು. ದೊಡ್ಡ ರೋಗ ತಗಲಿ ಗುಣಹೊಂದುವ ಪ್ರಾಣಿಗೆ ಒಣಗಿದ ಮತ್ತು ಒರಟಾದ ಮೇವನ್ನು ತಿನ್ನಿಸಿದರೆ ಮಲಬದ್ಧಿಸಿ ರೋಗವು ಮರುಕಳಿಸಬಹುದಾದ್ದರಿಂದ ಅಂಥಾ ಮೇವನ್ನು ಕೊಡಬಾರದು.

ಕುರಿ ಮತ್ತು ಮೇಕೆಗಳಿಗೆ ಸಹಾ ಈ ರೋಗವು ತಗಲುವುದುಂಟು; ಆದರೆ ದನಗಳಿಗೆ ತಗಲುವಷ್ಟು ಜಾಗ್ರತೆಯಾಗಿ ತಗಲುವುದಿಲ್ಲ ಯಾವುದಾದರೊಂದು ಕುರಿ ಅಥವಾ ಮೇಕೆಯು ತಾನೇ ರೋಗಕ್ಕೆ ಗುರಿಯಾಗದೆ ಒಂದು ಮಂದೆಯಿಂದ ಮತ್ತೊಂದು ಮಂದೆಗೆ ರೋಗದ ಸೋಂಕನ್ನು ತೆಗೆದುಕೊಂಡು ಹೋಗುವುದು. ಇದು ಆಶ್ಚರ್ಯವೇಸರಿ. ಕುರಿ ಮತ್ತು ಮೇಕೆಗಳಿಗೆ ರೋಗತಗಲಿದಾಗಲೂ ಮೇಲ್ಕಂಡ ಚಿಕಿತ್ಸೆಯನ್ನೇ ಮಾಡಬೇಕು.

ಕೆ. ಗಿ.

ಭೋಪಾಲ್ ಸಂಸ್ಥಾನದ ಬೇಗಂ ರಾಣಿಯವರು ಸ್ತ್ರೀಯರಿಗೆ ಕೊಟ್ಟ ಬುದ್ಧಿವಾದವು.

ಉತ್ತರ ಇಂಡಿಯಾ ದೇಶದಲ್ಲಿ ಭೋಪಾಲ್ ಎಂಬ ಒಂದು ಚಿಕ್ಕ ಸಂಸ್ಥಾನವಿದೆ. ಅದಕ್ಕೆ ಬೇಗಂ ಎಂಬ ನಾಮಧೇಯವುಳ್ಳ ಮುಸಲ್ಮಾನ್ ಸ್ತ್ರೀಯು ರಾಣಿಯಾಗಿರುವಳು. ಈ ರಾಣಿಯವರು ಕಳೆದವರ್ಷ ಶ್ರೀಮತ್ ಚಕ್ರವರ್ತಿ ಜಾರ್ಜ್ ಭೌಮರವರ ಕಿರೀಟಧಾರಣಮಹೋತ್ಸವಕ್ಕೋಸ್ಕರ ಇಂಗ್ಲೆಂಡಿಗೆ ಹೋಗಿದ್ದರು. ಅವರು ಆ ದೇಶದಲ್ಲಿ ನೋಡಿದುದನ್ನೂ ಮತ್ತೂ ಪಡೆದುಕೊಂಡಿರುವ ಅನುಭವವನ್ನೂ ಕುರಿತು ಭೋಪಾಲ್ ಪಟ್ಟಣದ ಸ್ತ್ರೀಯರ ಸಭೆಯಲ್ಲಿ ಒಂದು ಪ್ರಾರಸ್ಯಕರವಾದ ಉಪನ್ಯಾಸವನ್ನು ಕೊಟ್ಟರು. ಅವರು ಹೇಳಿದುದೇನೆಂದರೆ:—

ನಾರೀಮಣಿಯರೆ! ಪಶ್ಚಿಮದೇಶೀಯರು ಪಡೆದಿರುವ ಅಭಿವೃದ್ಧಿಯನ್ನು ಮತ್ತೂ, ನವನಾಗರೀಕತೆಯನ್ನೂ ನೋಡಿಕೊಂಡು ಬರಬೇಕೆಂಬ ಅಪೇಕ್ಷೆಯಿಂದ ನಾನು ಹತ್ತು ತಿಂಗಳ ಹಿಂದೆ ಯೂರೋಪು ಖಂಡಕ್ಕೆ ಹೋದೆನು. ಮತ್ತೂ ನಾನು ಅಲ್ಲಿ ಕಲಿತುಕೊಂಡು ಬಂದ ವಿಷಯಗಳನ್ನು ನಿಮ್ಮ ಜನರ ಮತ್ತೂ ನಮ್ಮ ದೇಶದ ಅಭಿವೃದ್ಧಿಗೋಸ್ಕರ ವಿನಿಯೋಗಿಸಬೇಕೆಂಬುವ ತಾತ್ಪರ್ಯದಿಂದಲೂ ನಾನು ಅಲ್ಲಿಗೆ ಹೋಗಿ ಬಂದೆನು. ಆದರೆ ನನ್ನ ಅನ್ಯದೇಶದ ಪ್ರಯಾಣದಲ್ಲಿ ನನಗೆ ಲಭಿಸಿರುವ ಅನುಭವಗಳನ್ನು ಮತ್ತೂ ತಿಳುವಳಿಕೆಯನ್ನು ಕಾರ್ಯತಃ ಪ್ರಕಾಶಪಡಿಸಬೇಕಾದರೆ, ನನ್ನ ಸಂಸ್ಥಾನದಲ್ಲಿ ವಿದ್ಯೆಯು ಚೆನ್ನಾಗಿ ಹರಡಬೇಕಾಗಿದೆ. ನನ್ನ ಪ್ರಯಾಣದಲ್ಲಿ ನಾನು ಅನೇಕ ದೇಶಗಳನ್ನೂ ಅನೇಕ ರಾಜ್ಯಭಾರಗಳನ್ನೂ ನೋಡಿದೆನು ಮತ್ತು ಅನೇಕ ಜನಾಂಗದವರನ್ನು ನೋಡಿ ಅವರ ಆಚಾರವ್ಯವಹಾರಗಳನ್ನು ಮತ್ತು ಅವರು ವಾಸಮಾಡುತ್ತಿರುವ ರೀತಿಯನ್ನೂ ನೋಡಿದೆನು. ಪ್ರಜೋಪಕಾರಗಳಾದ ಅನೇಕ ಏರ್ಪಾಡುಗಳನ್ನೂ ಮತ್ತು ಜನರ ಸುಖಸಂತೋಷಗಳಿಗೆ ಕಾರಣಗಳಾದ ಅನೇಕ ಚೇಷ್ಟೆಗಳನ್ನು ನೋಡಿಕೊಂಡುಬಂದಿರುವೆನು. ದೇಶಗಳು ಐಶ್ವರ್ಯಯುಕ್ತವಾಗಿರುವುದೂ, ವ್ಯವಸಾಯವು ಅತ್ಯಂತ ಅಭಿವೃದ್ಧಿಸ್ಥಿತಿಯಲ್ಲಿರುವುದೂ ಸಹ ನನ್ನ ಮನಸ್ಸಿನಲ್ಲಿ ನಾಟಿದುವು. ಈ ದೇಶದ ಜನರು ನವನಾಗರಿಕತೆಯುಳ್ಳವರಾಗಿಯೂ, ಧೈರ್ಯೋತ್ಸಾಹಗಳುಳ್ಳವರಾಗಿಯೂ ಮತ್ತು ಪ್ರಜಾಹಿತಚಿಂತಕರಾಗಿಯೂ ಇರುವುದು ಕಂಡುಬಂದಿತು. ಈ ಸದ್ಗುಣಗಳೆಲ್ಲವೂ ದೊಡ್ಡವರಲ್ಲಿಯೂ ಚಿಕ್ಕವರಲ್ಲಿಯೂ ಮತ್ತು ಮಕ್ಕಳಲ್ಲಿಯೂ ಸಹ ಒಂದೇಸಮನಾಗಿದ್ದುವು.

ವಿದ್ಯಾಭ್ಯಾಸದ ಪ್ರಯೋಜನವು.

ಪಶ್ಚಿಮದೇಶೀಯರಲ್ಲಿ ಕಂಡುಬರುವ ಮಹತ್ತರವಾದ ಸದ್ಗುಣಗಳೂ, ಹೆಚ್ಚಾಗುತ್ತಿರುವ ಅವರ ಐಶ್ವರ್ಯವೂ ಮತ್ತು ಎಲ್ಲಾ ಮಾರ್ಗಗಳಲ್ಲಿಯೂ ಅವರು ಹೊಂದುತ್ತಿರುವ ಅವರ ಅಭಿವೃದ್ಧಿಯೂ ಸಹ ಅವರ ಸ್ತ್ರೀಯರು ವಿದ್ಯಾವಂತರಾಗಿರುವುದರಿಂದಲೂ ಮತ್ತು ಆ ಸ್ತ್ರೀಯರು ತಮ್ಮ ಮಕ್ಕಳಿಗೆ ಕೊಡುತ್ತಿರುವ ಶಿಕ್ಷಣದಿಂದಲೂ ಉಂಟಾಗಿರುವುವು. ರಾಜರು ಮೊದಲುಗೊಂಡು ರೈತರವರೆಗೂ ಪ್ರತಿಯೊಂದು ಅಂತಸ್ತಿನ ಜನರಲ್ಲಿಯೂ ತಾಯಿಯರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಟ್ಟು ಸಾಕುತ್ತಿರುವುದು ಪ್ರತ್ಯಕ್ಷವಾಗುವುದು. ಅಲ್ಲಿ ತಾಯಿಯರು ಆರೋಗ್ಯಶಾಸ್ತ್ರದ ವಿಧಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರಾದುದರಿಂದ ಅವರು ತಮ್ಮ ಮನೆಬಾಗಿಲುಗಳನ್ನು ಬಹಳ ಚೊಕ್ಕಟವಾಗಿಟ್ಟುಕೊಂಡಿರುವರು ಮತ್ತು ತಮ್ಮ ಮಕ್ಕಳನ್ನೂ ಸಹ ಆರೋಗ್ಯಕರವಾಗಿ ಸಲಹುತ್ತಿರುವರು. ಅಲ್ಲಿ ಮಕ್ಕಳು ಚಿಕ್ಕಂದಿನಿಂದಲೂ ಅಸತ್ಯವನ್ನು ದೂರಮಾಡತಕ್ಕವರಾಗಿಯೂ, ತಮ್ಮ ಸಹೋದರರನ್ನೂ ತಮ್ಮ ದೇಶವನ್ನೂ ಪ್ರೀತಿಸತಕ್ಕವರಾಗಿಯೂ, ತಮ್ಮ ಹಿರಿಯರನ್ನು ಗೌರವಿಸತಕ್ಕವರಾಗಿಯೂ, ಉತ್ಕೃಷ್ಟವಾದ ಉದ್ದೇಶಗಳುಳ್ಳವರಾಗಿಯೂ ಮತ್ತು ದೀರ್ಘವಾದ ರಾಜಭಕ್ತಿಯುಳ್ಳವರಾಗಿಯೂ ಆಗುವಂತೆ ಬೆಳೆಯಿಸಲ್ಪಡುತ್ತಿರುವರು. ಅವರಿಗೆ 9. 10 ವರ್ಷ ವಯಸ್ಸಾಗುವುದರೊಳಗಾಗಿ ಅವರು ಪಡೆದುಕೊಂಡಿರುವ ಸುಗುಣಾವಳಿಗಳು ಅವರ ಮರಣ ಪರ್ಯಂತವೂ ಅವರನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಬೋಧಿಸತಕ್ಕವುಗಳಾಗಿರುವುವು.

ವಿದ್ಯಾಭ್ಯಾಸದಿಂದಲೇ ಯೂರೋಪು ಖಂಡವು ಪ್ರಪಂಚದಲ್ಲೆಲ್ಲಾ ಅತ್ಯಂತ ಅಭಿವೃದ್ಧಿಯನ್ನು ಹೊಂದಿರುವ ಖಂಡವೆಂದು ಹೆಸರುಗೊಂಡಿರುವುದು. ಇಂಗ್ಲೆಂಡ್ ದೇಶವಾದರೋ ಆ ಯೂರೋಪುಖಂಡವೆಂಬ ಕಿರೀಟದಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಿರುವ ಅತ್ಯಂತ ಪ್ರಕಾಶಮಾನವಾದ ರತ್ನವಾಗಿರುವುದು. ಸುಮಾರು 200, 300, ವರ್ಷಗಳ ಹಿಂದೆ ಯೂರೋಪುಖಂಡವು ಅನಾಗರಿಕ ಸ್ಥಿತಿಯಲ್ಲಿಯೇ ಇದ್ದಿತು. ಆದರೆ ಪುರುಷರು ಅಭಿವೃದ್ಧಿಯೊಂದುತ್ತಾ ಬಂದಹಾಗೆಲ್ಲಾ ಸ್ತ್ರೀಯರಿಗೆ ವಿದ್ಯೆಯು ಅವಶ್ಯಕವೆಂಬುದನ್ನು ಅವರು ಕಂಡುಕೊಂಡು ಸ್ತ್ರೀ ವಿದ್ಯಾಭ್ಯಾಸದಲ್ಲಿ ಆಸಕ್ತರಾಗಲುಪಕ್ರಮಿಸಿದರು. ಸ್ತ್ರೀಯರೂ ಸಹ ಪರಸ್ಪರ ಒತ್ತಾಸೆಯನ್ನು ಕೊಟ್ಟುಕೊಂಡು ವಿದ್ಯಾವಂತರಾಗಿ ಈಗ ನವನಾಗರಿಕತೆಯಲ್ಲಿಯೂ ವಿದ್ಯೆಯಲ್ಲಿಯೂ, ನಕ್ಷತ್ರಗಳಂತೆ ಪ್ರಕಾಶಿಸುತ್ತಿದ್ದಾರೆ.

ಆದುದರಿಂದ ಎಲೌ ಸ್ತ್ರೀಯರೆ! ನೀವು ವಿದ್ಯಾವಂತರಾಗಬೇಕೆಂದು ದೃಢಸಂಕಲ್ಪಮಾಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯವಾಗಿರುವುದು. ವಿದ್ಯೆಯನ್ನು ಪಡೆದುಕೊಳ್ಳಲು ಅಸಮರ್ಥರಾದವರಿಗೆ ನೀವು ಸಹಾಯ್ಯವನ್ನು ಕೊಡಬೇಕು ಮತ್ತು ಇತರರಿಗೆ ವಿದ್ಯೆಯು ಲಭಿಸುವಂತೆ ಮಾಡತಕ್ಕದೇ ನೀವು ನಡಸಬೇಕಿರುವ ಸತ್ಕಾರ್ಯದಲ್ಲಿ ಉತ್ತಮೋತ್ತಮವಾದ ಸತ್ಕಾರ್ಯವೆಂದು ಭಾವಿಸಬೇಕು. ಕೆಲಸಕ್ಕೆ ಬಾರದ ಕಾರ್ಯಗಳಿಗೆ ದ್ರವ್ಯವನ್ನು ವ್ಯರ್ಥವಾಗಿ ಖರ್ಚುಮಾಡದೆ ಬಾಲಿಕಾ ಪಾಠಶಾಲೆಗಳನ್ನು . ಸ್ಥಾಪಿಸುವುದಕ್ಕೂ, [illegible] ವಿದ್ಯಾ ಹಣವನ್ನು ವಿನಿಯೋಗಿಸಿರಿ. ಏಕೆಂದರೆ ನೀವು ವಿಶೇಷವಾಗಿ [illegible] ಸ್ತ್ರೀಯರು ವಿದ್ಯಾವಂತರಾಗುವುದೇ ಮುಖ್ಯವಾದ ಮಾರ್ಗ. [illegible] ಸ್ತ್ರೀಯರು [illegible] ವಿದ್ಯಾವಂತರಾದರೆ ದಾರಿದ್ರ್ಯವೂ, ಮೌಢ್ಯವೂ ಸಹ ತೊಲಗಿಹೋಗುವುದಕ್ಕೆ ಮಾರ್ಗವಾಗುತ್ತದೆಂಬುದನ್ನು ಚೆನ್ನಾಗಿ ಜ್ಞಾಪ್ತಿಯಲ್ಲಿಟ್ಟುಕೊಳ್ಳಿರಿ. ಆದರೆ ಸ್ತ್ರೀಯರು ವಿದ್ಯಾವಂತರಾಗಿ ನಾಚಿಕೆಯನ್ನು ತೊರೆದು ಸ್ವತಂತ್ರ ಪ್ರವರ್ತನೆಯುಳ್ಳವರಾಗಬೇಕೆಂಬುದು ನನ್ನ ತಾತ್ಪರ್ಯವಲ್ಲವೆಂಬುದನ್ನು ನೆನಪಿಸಲ್ಲದಿರಿ.

ಸ್ತ್ರೀ ಸ್ವಾತಂತ್ರ್ಯವು.

ಯೂರೋಪುಖಂಡದಲ್ಲಿ ಸ್ತ್ರೀಯರು ಪಡೆದಿರುವ ಸ್ವಾತಂತ್ರ್ಯವು ಎಷ್ಟೆಂಬುದು ಪ್ರಾಯಶಃ ನಿಮಗೆ ತಿಳಿದಿರಲಾರದು. ಈ ಸ್ವಾತಂತ್ರ್ಯವು ಆ ದೇಶಕ್ಕೂ ಮತ್ತು ಆ ಜನಾಂಗದವರಿಗೂ ಸರಿಹೋಗಿರಬಹುದು; ನಮಗೆ ತಕ್ಕುದಲ್ಲವು. ನಮಗೆ ದೇವರ ಆಜ್ಞೆಯೇ ದಾರಿಯಾಗಿರಬೇಕು. ನಮ್ಮ ಮತಸ್ಥಾಪಕರು ಹೇಳಿರುವಂತೆ ಇತರರಲ್ಲಿ ಒಳ್ಳೆಯದಾಗಿರುವುದನ್ನು ಅನುಸರಿಸಿ ಕೆಟ್ಟುದನ್ನು ಬಿಟ್ಟುಬಿಡಬೇಕು. ನಮ್ಮ ಮತದಲ್ಲಿ ಸ್ತ್ರೀಯರಿಗೆ ಎಷ್ಟರಮಟ್ಟಿಗೆ ಸ್ವಾತಂತ್ರ್ಯವು ವಿಧಿಸಲ್ಪಟಿದೆಯೋ ಅದನ್ನು ಮೀರಿ ನಾವು ಎಂದಿಗೂ ಹೋಗಬಾರದು. ಅಷ್ಟುಸ್ವಾತಂತ್ರ್ಯದಲ್ಲಿಯೇ ನಾವು ಬೇಕಾದಷ್ಟು ಅಭಿವೃದ್ಧಿಯನ್ನು ಪಡೆದು ಅನೇಕ ಅನುಕೂಲಗಳನ್ನು ಹೊಂದಿ ಸಂತೋಷಪಡಬಹುದು.

ತುರ್ಕೀದೇಶದಲ್ಲಿ ಸ್ತ್ರೀಯರು ಜಾಗ್ರತೆಯಾಗಿ ವಿದ್ಯಾವತಿಯರಾಗುತ್ತಿದ್ದಾರೆ, ಆದರೆ ಅವರು ಪಶ್ಚಿಮದೇಶೀಯರ ಸ್ವಾತಂತ್ರ್ಯವನ್ನು ಅನುಸರಿಸುತ್ತಾ ಬರುತ್ತಿರುವರು. ಇದು ನನಗೆ ತುಂಬಾ ವ್ಯಸನಕರವಾಗಿರುವುದು. ಇದರಿಂದ ಅವರಿಗೆ ಅಪಾಯಗಳು ಸಂಭವಿಸುವುವೆಂದು ನಾನು ಭಯಗ್ರಸ್ತಳಾಗಿದ್ದೇನೆ. ದೇವರು ಅವರಿಗೆ ಸರಿಯಾದ ಮಾರ್ಗವನ್ನು ತೋರಿಸಲಿ ಎಂದು ಪ್ರಾರ್ಥಿಸುತ್ತೇನೆ.

ಆದಕಾರಣ ನೀವು ನಿಮ್ಮ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಂಡು ಪ್ರಪಂಚದಲ್ಲಿ ಜಯಶೀಲರಾಗಬೇಕಾದರೆ, ವಿದ್ಯಾವಂತರಾಗಬೇಕು ಮತ್ತು ನಿಮ್ಮ ಮತಕ್ಕನುಸಾರವಾಗಿ ನಡೆದುಕೊಳ್ಳಬೇಕು. ಬ್ರಿಟಿಷ್ ಸರ್ಕಾರದವರು ಈ ದೇಶದಲ್ಲಿ ವಿದ್ಯೆಯನ್ನು ಹರಡಬೇಕೆಂದು ತುಂಬಾ ಅಪೇಕ್ಷೆಯುಳ್ಳವರಾಗಿರುವುದಕ್ಕೋಸ್ಕರ ನಾವು ದೇವರಿಗೆ ತುಂಬಾ ಕೃತಜ್ಞರಾಗಿರಬೇಕಾಗಿದೆ. ಇಂತಹ ಸಮಯಗಳನ್ನು ನಾವು ತಿರಸ್ಕರಿಸಿದರೆ ನಾವು ಕೆಟ್ಟುಹೋಗುವೆವು"

ಜ. ಪ.

ಗ್ರಂಥವಿಮರ್ಶೆಯು.

ನೀತಿಮಂಜರಿ.

ರಾಮದಾಸರ ಚರಿತ್ರೆ, ಮೋಹಿನೀನಾಟಕ, ಬಾಲಭಾರತ ಮೊದಲಾದ ಗ್ರಂಥಗಳ ಕರ್ತರಾದ ಶ್ರೀ ಗದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ ವಕೀಲ ಧಾರವಾಡ ಇವರು ಬಾಲಕ ಬಾಲಿಕೆಯರುಗಳಿಗುಪಯುಕ್ತವಾಗಿರುವಂತೆ ಬಿಡುಗನ್ನಡದಲ್ಲಿ ಲಲಿತವಾಗಿ ಬರೆದು ೧೯೦೪ರಲ್ಲಿ ಮೊದಲನೆಯಾವೃತ್ತಿ ಪ್ರಕಟಿಸಿದ್ದು ಈಗ ಕೆಲ ಹೊಸ ವಿಷಯಗಳನ್ನು ಸೇರಿಸಿ ಎರಡನೆಯಾವೃತ್ತಿ ಪ್ರಕಟಿಸಿರುವರು. ಈ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಕೊಡಲು ಬೊಂಬಾಯಿ ಮತ್ತೂ ಮೈಸೂರ ಸರ್ಕಾರದವರು ಕೊಂಡು ಗ್ರಂಥಕರ್ತರನ್ನು ಪ್ರೋತ್ಸಾಹಿಸಿರುವರು ಈ ಪುಸ್ತಕವು ವಿದ್ಯಾಕಾಂಕ್ಷಿಗಳಾದ ಮಕ್ಕಳಿಗೆ ಒಳ್ಳೆಯ ನೀತಿಬೋಧಕವಾಗಿರುವುದರಿಂದಲೂ, ಮುಕ್ತಾಫಲದಂತಿರುವ ಅಕ್ಷರಗಳಿಂದ ಬಹು ಮುದ್ದಾಗಿ ಪ್ರಿಂಟುಮಾಡಲ್ಪಟ್ಟು ೩ ಆಣೆ ಬೆಲೆ ಮಾತ್ರ ಇಡಲ್ಪಟ್ಟಿರುವುದರಿಂದಲೂ ಪ್ರತಿಯೊಬ್ಬರೂ ಸಂಗ್ರಹಿಸತಕ್ಕದಾಗಿದೆ.

ಮಧುರವಾಣಿ

ಎಂಬ ಹೆಸರಿನಿಂದ ಒಂದು ಕನ್ನಡದ ಮಾಸಪತ್ರಿಕೆಯನ್ನು ಹನುಮಾನ್ ಕಂಪೆನಿಯವರು ಈ ಫೆಬ್ರುವರಿ ತಿಂಗಳಿಂದ ಹೊರಡಿಸಲಾರಂಭಿಸಿರುವರು. ಇದರಲ್ಲಿ ವಿದ್ಯಾ ನೀತಿ, ಮತ್ತು ಪ್ರಕೃತಿಶಾಸ್ತ್ರ, ಪ್ರಹಸನ ಮೊದಲಾದ ವಿಷಯಗಳು ಮ॥ ಗಳಾದ ಆರ್. ತಾತಾಚಾರ್, ಎಂ.ಎ., ಎಲ್. ಟಿ. ಯವರು, ಕೊಲ್ಲೀಸ್ ಪೇಟೆಯ ಆರ್. ಶ್ರೀನಿವಾಸರಾಯರು, ಮದ್ರಾಸ್ ಗೌರ್ನಮೆಂಟ್ ಕನಡ ಟ್ರಾನ್ಸಲೇಟರ್ ಬಿ. ರಾಮರಾವ್ ಎಂ.ಎ., ಎಲ್‌ಎಲ್.ಬಿ., ಯವರು ಮೊದಲಾದ ಪ್ರಸಿದ್ಧ ಲೇಖಕರುಗಳಿಂದ ಬರೆಯಲ್ಪಡುತ್ತ ಹೆಸರಿಗೆ ತಕ್ಕಂತೆ ಮಧುರವಾಗಿರುತ್ತದೆ. ಈ ಮಾಸಪತ್ರಿಕೆಯು ಗ್ರಾಹಕರ ಉದಾರಾಶ್ರಯದಿಂದ ಬಹುಕಾಲ ಜೀವಿಸಿ ಉದ್ದಿಷ್ಟ ಕಾರ್ಯವನ್ನು ನೆರವೇರಿಸುತ ಸರ್ವಜನಾದರಣೀಯವಾಗಿರಲೆಂದು ಅಪೇಕ್ಷಿಸುತ್ತೇವೆ. ಇದರ ವಾರ್ಷಿಕಚಂದಾ ಅಂಚೆಯವೆಚ್ಚ ಸೇರಿ ಪೋಷಕರಿಗೆ ೩ ರೂ. ಮತ್ತೂ ಇತರರಿಗೆ ೧॥ ರೂ.

ಸ್ತ್ರೀ ಸಂಸ್ಕಾರ ಪ್ರಕಾಶಿಕೆ.

ಬ್ರಾಹ್ಮಣ ಪುರುಷರಿಗೆ ಉಪನಯನ ಅಧ್ಯಯನಗಳಿಂದ ದ್ವಿಜತ್ವವು ಸಿದ್ಧಿಸುವಂತೆ ಬ್ರಾಹ್ಮಣ ಸ್ತ್ರೀಯರಿಗೆ ವಿವಾಹ ಕರ್ಮದಿಂದಲೇ ದ್ವಿಜತ್ವವು ಸಿದ್ಧಿಸುವುದಲ್ಲದೆ ಪ್ರತ್ಯೇಕವಾಗಿ [illegible] ವೂ ಶುದ್ಧ ಅಸಂಗತವು ಮತ್ತೂ ಅಶಾಸ್ತ್ರೀಯವೂ ಬ್ರಾಹ್ಮಣ ಸ್ತ್ರೀಯರಿಗೆ ಬ್ರಹ್ಮೋಪದೇಶವೂ ಅಧ್ಯಯನವೂ ಅದರಿಂದ ಹೊರತು ದ್ವಿಜತ್ವವು ಸಿದ್ಧಿಸುವುದಿಲ್ಲವು ಮತ್ತೂ ಅಪ್ರೌಢಾವಿವಾಹವು ಶಾಸ್ತ್ರನಿಷಿದ್ಧವು. ಎಂಬ ಬಗೆಗೆ ಬ್ರಹ್ಮವಿದ್ಯಾಪರಿಷತ್ತಿನ ಚಿತ್ರದುರ್ಗ ಶಾಖಾಧ್ಯಕ್ಷರಾದ ಮತ್ತೂ ಚಿತ್ರದುರ್ಗ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ॥ ರಾ. ರಘುನಾಥರಾವ್, ಬಿ.ಎ., ಯವರು ಅನೇಕ ಶ್ರುತಿಗಳ ಆಧಾರದಿಂದ ಪ್ರತಿಪಾದಿಸಿ ಸ್ತ್ರೀ ಸಂಸ್ಕಾರ ಪ್ರಕಾಶಿಕೆ ಎಂಬ ಹೆಸರಿನಿಂದ ಗ್ರಂಥವನ್ನು ರಚಿಸಿರುವರು. ಈ ಗ್ರಂಥ ರಚನೆಯಲ್ಲಿ ಕರ್ತರು ವಿಶೇಷ ಶ್ರಮವನ್ನು ವಹಿಸಿರುವರೆಂಬುದು ಗ್ರಂಥಾವಲೋಕನದಿಂದ ವ್ಯಕ್ತವಾಗುತ್ತದೆ. ಸ್ತ್ರೀ ಸಂಸ್ಕಾರಾಭಿಲಾಷಿಗಳಾದ ಪ್ರತಿಯೊಬ್ಬ ಸ್ತ್ರೀ ಪುರುಷರೂ ಈ ಗ್ರಂಥವನ್ನು ಅಗತ್ಯವಾಗಿ ಸ್ವೀಕರಿಸಿ ಅವಲೋಕಿಸತಕ್ಕದಾಗಿದೆ. ಇದರಿಂದ ಪತ್ನಿಯು ಪತಿಯ ಸಹಚಾರಿಣಿಯಲ್ಲದೆ ಪರಿಚಾರಿಣಿಯಲ್ಲವೆಂಬುದು ಸ್ಪಷ್ಟವಾಗುವುದು. ಇದರ ಬೆಲೆ ರೂ. ೧-೪-೦.

ಆರ್ಯಬಾಲಸಮಾಜ ಮಾಸಪತ್ರಿಕೆ.

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಆರ್ಯಬಾಲ ಸಮಾಜದವರು ವಿದ್ಯಾರ್ಥಿಗಳ ಮತ್ತೂ ಇತರರ ನೈತಿಕ, ಸಾಮಾಜಿಕ, ವ್ಯಾವಹಾರಿಕ ಮೊದಲಾದ ವಿಚಾರಗಳ ಸುಧಾರಣೆಯ ಬಗೆಗೆ ಕಳೆದ ಜನವರಿಯಿಂದ ಮೇಲೆ ಹೇಳಿದ ಮಾಸಿಕ ಪುಸ್ತಕವನ್ನು ಪ್ರಚುರಪಡಿಸುತ್ತಿರುವರು. ಓರಿಯಂಟಲ್ ಲೈಬ್ರರಿಯ ಮ॥ ಎ. ಮಹದೇವಶಾಸ್ತ್ರಿ, ಬಿ.ಎ., ಎಂ.ಆರ್.ಎ.ಎಸ್., ರವರು, ರಾಜಧಾನಿಯ ಮ॥ ವಿ. ಎಲ್. ನರಸಿಂಹ ಅಯ್ಯಂಗಾರ್, ಎಂ. ಆರ್. ಎ. ಎಸ್. ರವರು, ಮದ್ರಾಸಿನ ಡಾಕ್ಟರ್ ಸಿ. ನಂಜುಂಡರಾವ್, ಬಿ.ಎ., ಎಂ. ಬಿ. ಸಿ. ಎಂ. ರವರು ಮೊದಲಾಗಿ ದೊಡ್ಡ ವಿದ್ವಾಂಸರುಗಳು ಈ ಪತ್ರಿಕೆಗೆ ಲೇಖನ ಸಾಹ್ಯವನ್ನು ಮಾಡುತ್ತಿರುವುದರಿಂದ, ಇದರಲ್ಲಿ ಬಹು ಘನವಾದ ಮತ್ತೂ ಉಪಯುಕ್ತವಾದ ವಿಷಯಗಳು ಪ್ರಕಟಿಸಲ್ಪಡುತ್ತವೆಂಬುದರಲ್ಲಿ ಸಂದೇಹವಿಲ್ಲವು. ಈ ಪತ್ರಿಕೆಗೆ ಆರ್ಯಬಾಲ ಸಮಾಜದ ಆನರರಿ ಸೆಕ್ರಿಟರಿಯವರಾದ ಮ॥ ಜಿ. ಪುರುಷೋತ್ತಮರವರು ಸಂಪಾದಕರಾಗಿಯೂ, ಮರಿಮಲ್ಲಪ್ಪನವರ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ॥ ಎಂ. ವೆಂಕಟಕೃಷ್ಣಯ್ಯನವರು ಮ್ಯಾನೇಜರಾಗಿಯೂ ಇರುವರು. ಇದರ ವಾರ್ಷಿಕಚಂದಾ ಅಂಚೆಯವೆಚ್ಚ ಸೇರಿ ಪೋಷಕರಿಗೆ ೧೫ ರೂ., ದೊಡ್ಡಮನುಷ್ಯರಾದ ಸ್ತ್ರೀ ಪುರುಷರಿಗೆ ೩ ರೂ. ಮತ್ತೂ ವಿದ್ಯಾರ್ಥಿಗಳಿಗೆ ೨ ರೂ. ಈ ಪ್ರಕಾರವಾಗಿ ನಿರ್ಣೀತವಾಗಿರುತ್ತದೆ. ಈ ಮಾಸಪತ್ರಿಕೆಯು ಚಂದಾದಾತರ ಉದಾರಾಶ್ರಯದಿಂದ ಚಿರಜೀವಿಯಾಗಿರಲೆಂದು ಹಾರೈಸುವೆವು.

ಮೈಸೂರ್ ಗೆಜೆಟ್ ಸಂಗ್ರಹವು.

:o:

ರಜದಮೇಲಿದ್ದ ಅ॥ ಕಮೀಷನರ್ ಮ॥ ಟಿ. ರಾಯಲುಸೆಟ್ಟಿಯವರು ಉದ್ಯೋಗದ ಮೇಲೆ ಬರಮಾಡಲ್ಪಟ್ಟು ಮ॥ ಕೃಷ್ಣಯ್ಯರ್‌ರವರು ಬೇರೆ ಕೆಲಸದ ಮೇಲಿರುವ ವರೆಗೆ ಅಥವಾ ಮತ್ತೊಂದು ಅಪ್ಪಣೆಯಾಗುವ ವರೆಗೆ ದಾವಣಗೆರೆಯ ಛಾರ್ಜಿನಲ್ಲಿರಲು ನಿಯಮಿಸಲ್ಪಟ್ಟಿರುವರು.

ಪ್ರಬೇಷನರಿ ಪೋಲೀಸು ಅಸಿಸ್ಟಂಟ್ ಸೂಪರಿಂಟೆಂಡೆಂಟ್ ಮ॥ ಟಿ. ಎಸ್. ಅಲ್ಲಬರ್ರವರಿಗೆ ಸಂಬಳವಿಲ್ಲದೆ ಕೊಡಲ್ಪಟ್ಟಿರುವ ರಜವು ೧೯೧೩ನೆಯ ಮಾರ್ಚ್ ತಾ॥ ೩೧ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಡೆಪ್ಯುಟಿ ಅಮಲ್ದಾರ್ ಮ॥ ಎಸ್. ಅನಂತರಾಮಯ್ಯಂಗಾರರು ಆಲೂರು ಸಬ್ ತಾಲ್ಲೋಕಿನಿಂದ ಹರಿಹರ ಸಬ್ ತಾ॥ ಗೂ, ಆಕ್ಟಿಂಗ್ ಡಿ॥ ಅಮಲ್ದಾರ್ ಮ॥ ಎಸ್. ಸುಂದರರಾಜಯ್ಯಂಗಾರರು ಹರಿಹರ ಸಬ್ ತಾ॥ ಇಂದ ಆಲೂರು ಸಬ್ ತಾ॥ ಗೂ, ಅಮಲ್ದಾರರುಗಳಾದ ಮೆಸರ್ಸ್. ಜಿ. ಬಾಲರವರು ತುಮಕೂರಿಂದ ಕುಣಿಗಲ್ಲಿಗೂ, ಎಂ. ಎಸ್. ರಾಮಚಂದ್ರರಾಯರು ಮದ್ದಗಿರಿಯಿಂದ ತುಮಕೂರಿಗೂ, ಎಚ್. ಗಂಗಾಧರಯ್ಯನವರು ಕುಣಿಗಲ್ಲಿನಿಂದ ಮದ್ದಗಿರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ. ಇವರುಗಳು ತಾ॥ ಷಿರಸ್ತೇದಾರರಿಗೆ ಅಧಿಕಾರವನ್ನು ವಹಿಸಿಕೊಟ್ಟು ಕೂಡಲೆ ತಂತಮ್ಮ ಹೊಸಸ್ಥಳಗಳಿಗೆ ಹೋಗತಕ್ಕದ್ದು.

ಮ॥ ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್., ರವರು ೧ ನೆಯ ಕೌನ್ಸಿಲರ ಅಧಿಕಾರವನ್ನೂ, ಮ॥ ಬಿ. ಪೀಠರಾಜ ಅರಸಿನವರು ೨ ನೆಯ ಕೌನ್ಸಿಲರ ಅಧಿಕಾರವನ್ನೂ ೧೯೧೩ ನೆಯ ಫೆಬ್ರುವರಿ ತಾ॥ ೧೯ ರ ಪೂರ್ವಾಹ್ನದಲ್ಲಿ ವಹಿಸಿಕೊಂಡರು.

ಮ॥ ಪಿ. ಶ್ರೀಕಂಠೇಶ್ವರಯ್ಯರ್, ಬಿ. ಎ., ಬಿ. ಎಲ್., ರವರು ಮ॥ ಬಿ. ಪೀಠರಾಜ ಅರಸಿನವರಿಂದ [illegible] ರವರ ಅಧಿಕಾರವನ್ನು ೧೯೧೩ ನೆಯ ಫೆಬ್ರುವರಿ ತಾ॥ ೧೯ ರ ಪೂರ್ವಾಹ್ನದಲ್ಲಿ ವಹಿಸಿಕೊಂಡರು.

ಮೈಸೂರ್ ಸ್ಟಾರ್

೧೯೧೨ ನೆಯ ಫೆಬ್ರುವರಿ ತಾ|| ೨೬ ನೆಯ ಸೋಮವಾರ.

ಮೈಸೂರ ಸಂಸ್ಥಾನದ ನೂತನ ಕೌನ್ಸಿಲರ್ ಮ|| ಡಿ. ದೇವರಾಜ ಅರಸಿನವರು.

ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೌನ್ಸಿಲರ ಪದವಿಯಿಂದ ಬರುವ ಮಾರ್ಚಿ ತಿಂಗಳ ಕಡೆಯಲ್ಲಿ ನಿವೃತ್ತಿಗೊಳಿಸಲ್ಪಡುವುದು ನಿರ್ಧರವಾಗಿರುವುದಾಗಿ ಕೇಳುತ್ತೇವೆಂದು ಹಿಂದಣ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದಿತಷ್ಟೆ; ಆದರೆ ದಿ|| ಬ|| ಶೆಟ್ಟರು ಈ ತಾ|| ೧೯ ರಲ್ಲಿಯೇ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ೨ ನೆಯ ಕೌನ್ಸಿಲರಾಗಿದ್ದ ಮ|| ಎಚ್. ವಿ. ನಂಜುಂಡಯ್ಯನವರು ಒಂದನೆಯ ಕೌನ್ಸಿಲರಾಗಿಯೂ, ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಾಗಿದ್ದ ಮ|| ದಳವಾಯಿ ದೇವರಾಜ ಅರಸಿನವರು ಎರಡನೆಯ ಕೌನ್ಸಿಲರಾಗಿಯೂ ನಿಯಮಿಸಲ್ಪಟ್ಟಿರುವರು.

ಮ|| ರಾ|| ಡಿ. ದೇವರಾಜ ಅರಸಿನವರು ಮೈಸೂರಿನಲ್ಲಿ ಪುರಾತನವೂ, ಪ್ರಸಿದ್ಧವೂ ಆದ ದಳವಾಯಿ ಮನೆತನಕ್ಕೆ ಸೇರಿದವರು. ನಂಜನಗೂಡಿನಿಂದ ಮೂರು ಮೈಲಿ ಆಚೆ ನೈರುತಿ ಮೂಲೆಯಲ್ಲಿರುವ ಕಳಲೆಯಲ್ಲಿ ೧೫೮೦ ನೆಯ ಇಸವಿಯಲ್ಲಿ ತಿಮ್ಮರಾಜರವರಿಂದ ಸ್ಥಾಪಿಸಲ್ಪಟ್ಟ ಕಳಲೆಯ ಮನೆತನಕ್ಕೆ ಈ ದಳವಾಯಿ ಮನೆತನವು ಮೊದಲು ಸೇರಿದುದಾಗಿದ್ದಿತು. ತಿಮ್ಮರಾಜರವರು ಈ ಕಳಲೆಯಲ್ಲಿ ಕೋಟೆಯನ್ನು ಕಟ್ಟಿಕೊಂಡು ಆಳುತಲಿದ್ದು ದಕ್ಷಿಣ ಹಿಂದೂಸ್ಥಾನದಲ್ಲಿ ಕೇಂದ್ರಸ್ಥಾನವನ್ನು ಹೊಂದಿದ್ದ ವಿಜಯನಗರದ ಮಹಾರಾಜರ ಕೂಡ ಸಖ್ಯವನ್ನು ಬಳೆಯಿಸಿ ಬಹು ಪ್ರಬಲರಾಗಿದ್ದರು. ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಪೂರ್ವಜರಾದ ರಾಜ ಒಡೆಯರವರು ೧೬೧೦ ರಲ್ಲಿ ಶ್ರೀರಂಗಪಟ್ಟಣವನ್ನು ಸ್ವಾಧೀನಪಡಿಸಿಕೊಂಡು, "ಮೈಸೂರ ಸೀಮೆಯಲ್ಲಿ ವಿಜಯನಗರದ ಮಹಾರಾಜನ ಪ್ರಾಬಲ್ಯವನ್ನು ಕಡಿಮೆಮಾಡಿ ಆತನ ಪ್ರತಿನಿಧಿಯನ್ನು ಈ ದೇಶದಿಂದೋಡಿಸಲು ಸಾಹ್ಯಮಾಡಿದಲ್ಲಿ ಮೈಸೂರ ರಾಜ್ಯದ ದಳವಾಯಿ ಎಂದರೆ ಮುಖ್ಯ ಸೇನಾನಾಯಕತ್ವವೂ ಮತ್ತೂ ಮಂತ್ರಿತ್ವವೂ ಯಾವಾಗಲೂ ಕಳಲೆಯ ಮನೆತನದವರಿಗೇ ಕೊಡಲ್ಪಡುವುದು" ಎಂದು ತಿಮ್ಮರಾಜರ ಕೂಡ ಒಡಂಬಡಿಕೆಯನ್ನು ಮಾಡಿ ಅವರನ್ನು ತಮ್ಮ ವಶಮಾಡಿಕೊಂಡರು. ಅಂದಿನಿಂದ ಈ ಕಳಲೆ ಮನೆತನವು ದಳವಾಯಿ ಮನೆತನವೆಂದು ಮಾರ್ಪಡಲು ಕಾರಣವಾಯಿತು, ಮತ್ತೂ ಉಭಯ ಮನೆತನದವರಿಗೂ ಬಾಂಧವ್ಯವು ಬಳೆದುಕೊಂಡು ಬಂದಿತು. ಈ ದಳವಾಯಿ ಮನೆತನದವರಲ್ಲಿ ದೇವರಾಜರೆಂಬುವರು ೧೭೩೨ ರಿಂದ ೧೭೩೪ ರ ವರೆಗೆ ಆಳಿದ ೭ ನೆಯ ಚಾಮರಾಜ ಒಡೆಯರವರ ಕಾಲದಲ್ಲಿ ದಳವಾಯರಾಗಿದ್ದು ಬಹು ಪ್ರಬಲರಾಗಿದ್ದರು. ಚಾಮರಾಜಒಡೆಯರು ದೇವರಾಜರ ಸಹೋದರರಾದ ನಂಜರಾಜರವರ ಕುವರಿಯವರನ್ನು ವಿವಾಹಮಾಡಿಕೊಂಡಿದ್ದರು; ಅಲ್ಲಿಂದೀಚೆಗೆ ೧೮೦ ವರ್ಷಗಳವರೆಗೆ ಉಭಯಮನೆತನದವರಿಗೂ ಯಾವ ಬಾಂಧವ್ಯವೂ ನಡೆಯಲಿಲ್ಲವೆಂದು ತೋರಿಬರುತ್ತದೆ. ದೇವರಾಜ ಮತ್ತೂ ನಂಜರಾಜ ಸಹೋದರರುಗಳು ಬಹು ಪ್ರಬಲರಾಗಿದ್ದು ಅನೇಕ ನೆರೆದೇಶಗಳನ್ನು ಜಯಿಸಿ ಮೈಸೂರ ಸೀಮೆಗೆ ಸೇರಿಸಿಕೊಂಡರು. ಆಗ್ಗೆ ಸಣ್ಣ ವಯಸ್ಕರಾಗಿದ್ದ ಚಾಮರಾಜ ಪ್ರಭುಗಳು ದೇವರಾಜ ಸಹೋದರರುಗಳ ಪ್ರಾಬಲ್ಯವನ್ನು ನೋಡಿ ಸಹಿಸದೆ ಸಹೋದರರಿಬ್ಬರನ್ನೂ ಉದ್ಯೋಗದಿಂದ ನಿವೃತ್ತಿಗೊಳಿಸ ಯತ್ನಿಸಿದರು. ಅದರ ಮೇಲೆ ದೇವರಾಜರವರು ರಾಜ್ಯದಾಡಳಿತವನ್ನು ತಮ್ಮ ತಮ್ಮಂದಿರ ವಶಮಾಡಿದರು. ನಂಜರಾಜರವರು ಬಹು ತಂತ್ರಜ್ಞರೂ ಮತ್ತೂ ಒಳ್ಳೆಯ ಯುದ್ಧಭಟರೂ ಆಗಿದ್ದರು. ಇವರು ಮೈಸೂರದೇಶದ ಮೇಲಣ ಅಭಿಮಾನದಿಂದ ೧೭೪೬ ರಲ್ಲಿ ಧರ್ಮಪುರಿಯನ್ನೂ, ೧೭೪೯ ರಲ್ಲಿ ಹೈದರಿನ ಜನ್ಮಸ್ಥಾನವಾದ ದೇವನಹಳ್ಳಿಯನ್ನೂ ಜಯಿಸಿ ಹೈದರಿನ ಬುದ್ಧಿಸಾಮರ್ಥ್ಯಕ್ಕೆ ಮೆಚ್ಚಿ ಅವನನ್ನು ಕೆಲ ಸೇನಾಬಲದೊಡನೆ ಸಂಸ್ಥಾನದ ಗಡಿಯಲ್ಲಿ ನೇಮಿಸಿದರು. ನಂಜರಾಜರವರು ಬಹು ದೂರದೃಷ್ಟಿಯುಳ್ಳವರಾದುದರಿಂದ, ಆರ್ಕಾಟಿನಲ್ಲಿ ಯುದ್ಧಮಾಡುತ್ತಿದ್ದ ಕ್ಲೈವಿನ ಸಾಹ್ಯಕ್ಕೆ ಹೋಗಿದ್ದರು. ಕಾರ್ನಾಟಕದ ನವಾಬನಾದ ಮಹಮ್ಮದಲ್ಲಿಯು ಸಕಾಲದಲ್ಲಿ ತನಗೆ ನಂಜರಾಜರು ಸಾಹಾಯ್ಯವನ್ನು ಮಾಡಿದುದಕ್ಕೋಸ್ಕರ ತಿರುಚಿನಾಪಳ್ಳಿಯನ್ನು ಅವರಿಗೆವಹಿಸಿಕೊಡುವುದಾಗಿ ರಹಸ್ಯದಲ್ಲಿ ವಾಗ್ದಾನಮಾಡಿದ್ದನು. ಈ ರಹಸ್ಯವು ಹೊರಬಿದ್ದು ನಂಜರಾಜರವರಿಗೆ ಬಹು ತೊಂದರೆಯು ಸಂಭವಿಸಿದುದಲ್ಲದೆ ಕಡೆಗೆ ಅವರ ಅಧೀನದಲ್ಲಿದ್ದ ಹೈದರನೇ ಅವರಮೇಲೆ ತಿರುಗಿಬಿದ್ದು ಅವರನ್ನು ಪದಭ್ರಷ್ಟರನ್ನಾಗಿ ಮಾಡಲುದ್ಯುಕ್ತನಾಗಲು ನಂಜರಾಜರವರು ೧೭೫೯ ರಲ್ಲಿ ಉದ್ಯೋಗದಿಂದ ನಿವೃತ್ತರಾದರು. ಈ ನಂಜರಾಜರವರು ಒಳ್ಳೆಯ ಶಿವಭಕ್ತರಾಗಿದ್ದರಲ್ಲದೆ, ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ೬೬ ಪುರಾತನರ ವಿಗ್ರಹಗಳನ್ನು ಲೋಹದಲ್ಲಿ ಮಾಡಿಸಿ ಒಪ್ಪಿಸಿದರು. ಈಗಲೂ ಈ ವಿಗ್ರಹಗಳ ಉತ್ಸವವು ಪ್ರತಿ ವರ್ಷದಲ್ಲೂ ನಡೆಯುವುದು. ರಾಜ ಒಡೆಯರವರು ತಮ್ಮ ಮನೆತನಕ್ಕೂ ಕಳಲೆ ಮನೆತನಕ್ಕೂ ಬಾಂಧವ್ಯವು ನಡೆದುಕೊಂಡು ಬರತಕ್ಕದೆಂದೂ, ಕಳಲೆಯ ಮನೆತನದವರೇ ಮೈಸೂರ ದೇಶದ ದಳವಾಯಿ ಉದ್ಯೋಗವನ್ನು ಅನುಭವಿಸಿಕೊಂಡು ಬರತಕ್ಕದೆಂದೂ ಒಡಂಬಡಿಕೆಯನ್ನು ಮಾಡಿದ್ದಂತೆಯೇ ನಂಜರಾಜರವರು ೧೭೫೫ ರಲ್ಲಿ ಮಹಾರಾಜ ಕೃಷ್ಣರಾಜ ಒಡೆಯರವರಿಂದಲೂ ಒಂದು ವಾಗ್ದಾನಪತ್ರಿಕೆಯನ್ನು ಪಡೆದುಕೊಂಡಿದ್ದರು; ಆದರೆ ಈಚೆಗೆ ಏನುಕಾರಣದಿಂದಲೋ ಅದರಂತೆ ನಡೆಯದೆ ನಿಂತುಹೋಯಿತು.

ಹೀಗೆ ಚರಿತ್ರಪ್ರಸಿದ್ಧರಾಗಿದ್ದ ನಂಜರಾಜರ ವಂಶೀಕರಾದ ಮ|| ದೇವರಾಜ ಅರಸಿನವರು ೧೮೬೨ ರಲ್ಲಿ ಜನಿಸಿ ವಿದ್ಯಾವ್ಯಾಸಂಗವನ್ನು ಮಾಡಿ ೧೮೮೭ ನೆಯ ಫೆಬ್ರುವರಿ ತಾ|| ೧೧ ರಲ್ಲಿ ಅಟಾಚಿಯಾಗಿ ಸೇರಿ ೧೮೮೮ ರಲ್ಲಿ ೪ ನೆಯ ತರಗತಿ ಅ|| ಕಮಿಷನರಾಗಿ ನಿಯಮಿಸಲ್ಪಟ್ಟರು. ೧೮೮೯ ರಲ್ಲಿ ೩ ನೆಯ ತಾ|| ಗೆ ಹೆಚ್ಚಿಸಲ್ಪಟ್ಟು ೧೮೯೧ ರಲ್ಲಿ ೨ ನೆಯ ತಾ|| ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟು, ೧೮೯೪ ರಲ್ಲಿ ೧ ನೆಯ ತಾ|| ಗೆ ಅಭಿವೃದ್ಧಿಗೊಳಿಸಲ್ಪಟ್ಟರು. ೧೮೯೭ ರಲ್ಲಿ ಕ್ಲೋಸ್‌ಪೇಟೆಯ ಸಬ್‌ಡಿವಿಜನರಾಗಿಯೂ ೧೮೯೮ ರಲ್ಲಿ ಹಾಸನದಲ್ಲಿ ೩ ನೆಯ ತಾ|| ಸಬ್ ಪ್ರೋಟೆಂ ಡೆಪ್ಯುಟಿಕಮಿಷನರಾಗಿಯೂ ಇದ್ದು ೯೯ ರಲ್ಲಿ ಸ್ಥಿರಗೊಳಿಸಲ್ಪಟ್ಟು ೧೯೦೪ ನೆಯ ಫೆಬ್ರುವರಿಯ ವರೆಗೂ ಹಾಸನದ ಡೆ|| ಕಮಿಷನರಾಗಿದ್ದು ಜುಲೈಯಲ್ಲಿ ಬೆಂಗಳೂರಿಗೆ ೨ ನೆಯ ತಾ|| ಡೆ|| ಕ|| ರವರಾಗಿ ವರ್ಗಾಯಿಸಲ್ಪಟ್ಟರು. ಅಲ್ಲಿಂದ ೧೯೦೫ ರಲ್ಲಿ ಚಿಕ್ಕಮಗಳೂರಿಗೆ ವರ್ಗವಾಗಿ ೧೯೦೬ ರಲ್ಲಿ ೧ ನೆಯ ತಾ|| ಗೆ ಹೆಚ್ಚಿಸಲ್ಪಟ್ಟು ಬೆಂಗಳೂರಿಗೆ ಮರಳಿ ವರ್ಗಾಯಿಸಲ್ಪಟ್ಟರು. ಅಲ್ಲಿಂದ ೧೯೦೮ ರಲ್ಲಿ ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಾಗಿ ನಿಯಮಿಸಲ್ಪಟ್ಟು ೧೯೧೨ ನೆಯ ಫೆಬ್ರುವರಿ ತಾ|| ೧೮ ರ ವರೆಗೆ ಆ ಉದ್ಯೋಗದಲ್ಲಿದ್ದು ತಾ|| ೧೯ ರಲ್ಲಿ ಸಂಸ್ಥಾನದ ೨ ನೆಯ ಕೌನ್ಸಿಲರಾದರು.

ಆದಿಯಲ್ಲಿ ಸ್ವತಃರಾಜ್ಯವನ್ನಾಳುತ್ತಿದ್ದು ಅನಂತರ ನಮ್ಮ ಶ್ರೀಮನ್ ಮಹಾರಾಜರವರ ಪೂರ್ವಜರ ಕಾಲದಲ್ಲಿ ದೇಹಸಂಬಂಧವನ್ನು ಬಳೆಯಿಸಿ ದೇಶದ ಮುಖ್ಯಸೇನಾನಾಯಕತ್ವವನ್ನೂ, ಮಂತ್ರಿತ್ವವನ್ನೂ ವಹಿಸಿಕೊಂಡು ಪ್ರಖ್ಯಾತರಾಗಿದ್ದಂತಹ ದಳವಾಯಿ ಮನೆತನಕ್ಕೆ ಸೇರಿದವರಾಗಿಯೂ ಈಗ ತಮ್ಮ ಕುವರಿಯವರನ್ನು ಶ್ರೀಮದ್ಯುವರಾಜರವರಿಗೆ ವಿವಾಹಮಾಡಿಕೊಟ್ಟು ೧೮೦ ವರ್ಷಗಳ ಹಿಂದೆ ನಡೆದಿದ್ದ ಬಾಂಧವ್ಯವನ್ನು ಪುನಃ ಬಳೆಯಿಸಿ ರಾಜಮನೆತನದವರ ಪ್ರೀತಿಗೌರವಕ್ಕೆ ಪಾತ್ರರಾಗಿಯೂ, ಕಳೆದ ೨೪ ವರ್ಷಗಳಿಂದಲೂ ಸಂಸ್ಥಾನದ ನಾನಾಶಾಖೆಗಳಲ್ಲಿ ಉದ್ಯೋಗವನ್ನು ಮಾಡಿ ಪೂರ್ಣಕಾರ್ಯಾನುಭವವನ್ನೂ ಜನಾನುರಾಗವನ್ನೂ ಸಂಪಾದಿಸಿದವರಾಗಿಯೂ ಇರುವ ಮ|| ದೇವರಾಜಅರಸಿನವರು ಘನತರವಾದ ಮತ್ತೂ ಉತ್ತರವಾದಿತ್ವವನ್ನುಳ್ಳ ಈ ಉಪಮಂತ್ರಿಪದವಿಗೆ ನಿಯಮಿಸಲ್ಪಟ್ಟಿರುವುದರಿಂದ, ಈ ದೇಶೀಯರೆಲ್ಲರಿಗೂ ಅಪಾರ ಸಂತೋಷವಾಗಿರುವುದಲ್ಲದೆ, ಸರ್ವವಿಧದಿಂದಲೂ ಮುಖ್ಯಮಂತ್ರಿಪದವಿಗೆ ಅರ್ಹರಾಗಿದ್ದ ಲೋಕಪ್ರಿಯ ದಿ|| ಬ|| ಪುಟ್ಟಣ್ಣಶೆಟ್ಟರನ್ನು ನಿವೃತ್ತಿಗೊಳಿಸಿದುದರಿಂದ ಪ್ರಜೆಗಳಿಗುಂಟಾಗಿರುವ ಖೇದವು ಬಹುಮಟ್ಟಿಗೆ ಶಮನವಾಗಿರುತ್ತದೆ. ಮ|| ದೇವರಾಜಅರಸಿನವರು ಸ್ವದೇಶೀಯರಿಗೆ ಉಪಕಾರವನ್ನು ಮಾಡಲು ಈಗ ದೊರೆತಿರುವ ಸುಸಮಯದಲ್ಲಿ ನಿರ್ಭಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ ಯುಕ್ತವಾದ ಸೂಚನೆಗಳನ್ನು ಕೊಡುತ ಜನರ ನಿರೀಕ್ಷಣೆಯನ್ನು ಸಾರ್ಥಕಪಡಿಸಿ ದಿಗಂತವಿಖ್ಯಾತರಾಗಿ ಇನ್ನೂ ಉನ್ನತ ಪದವಿಯನ್ನು ಪಡೆಯಲು ಅವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದು ಸರ್ವಶಕ್ತನಾದ ಭಗವಂತನನ್ನು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಶ್ರೀಮದ್ಯುವರಾಜರನ್ನು ಪ್ರಜೆಗಳು ಸತ್ಕರಿಸುವುದು.

ಬೆಂಗಳೂರ ನಿವಾಸಿಗಳು ಶ್ರೀಮದ್ಯುವರಾಜರನ್ನು ಈ ತಾ|| ೨೮ ರಲ್ಲಿ ಲಾಲಬಾಗಿಗೆ ಬಿಜಯಂಗೈಸಿಕೊಂಡು ಈಗ ಬೆಂಗಳೂರಿಗೆ ಬಂದು ಅದ್ಭುತ ಅಂಗಸಾಧನೆಗಳನ್ನು ಪ್ರದರ್ಶಿಸುತ್ತಿರುವ ಪ್ರೊಫೆಸರ್ ರಾಮಮೂರ್ತಿಯವರ ಅಂಗಸಾಧನೆ ಮೊದಲಾದ ವಿನೋದಗಳಿಂದ ಆನಂದಗೊಳಿಸಿ ವಿಜ್ಞಾಪನ ಪತ್ರಿಕೆಯನ್ನು ಯೋಗ್ಯವಾದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿ ಶ್ರೀಗಳವರಿಗೆ ಚಕ್ರವರ್ತಿ ಸಾರ್ವಭೌಮರವರು ದಯಪಾಲಿಸಿರುವ ಪ್ರಶಸ್ತಿಯಿಂದ ತಮಗುಂಟಾಗಿರುವ ಆನಂದಾತಿಶಯವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿಕೊಂಡಿರುವರು. ಈ ಪ್ರಕಾರವಾಗಿ ರಾಜಧಾನಿಯ ನಿವಾಸಿಗಳೂ ಶ್ರೀಮದ್ಯುವರಾಜರನ್ನು ಬರುವ ಮಾರ್ಚಿ ತಾ|| ೧೪ ರಲ್ಲಿ ಪರ್ವಕಾಲಿಗೆ ಬಿಜಮಾಡಿಕೊಂಡು ಸಂಗೀತ ಮೊದಲಾದ ವಿನೋದಗಳಿಂದ ಸತ್ಕರಿಸಿ ೫೦೦ ರೂ ಬೆಲೆ ಬಾಳುವ ಸುಂದರವಾದ ಪೆಟ್ಟಿಗೆಯಲ್ಲಿ ವಿಜ್ಞಾಪನಪತ್ರಿಕೆಯನ್ನಿಟ್ಟು ಒಪ್ಪಿಸಿ ತಮಗುಂಟಾಗಿರುವ ಪರಮ ಸಂತೋಷವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿಕೊಂಡು ಈ ಕಾರ್ಯಕ್ಕಾಗಿ ಚಂದಾಹಣವನ್ನೆತ್ತಲು ಕೆಲ ದೊಡ್ಡಮನುಷ್ಯರುಗಳನ್ನು ಗೊತ್ತುಪಡಿಸಿಕೊಂಡಿರುವರು.

ಒಳದೇಶದ ವೃತ್ತಾಂತಗಳು.

ಮಹಾರಾಣಿಯವರು ಮತ್ತೂ ಯುವರಾಣಿಯವರು ರಾಜಧಾನಿಯ ಬಾಳಬಂಗಲೆಯಲ್ಲಿ ಅಬಲಾಶ್ರಮದ ಮತ್ತೂ ಮಹಾರಾಣೀಕಾಲೇಜಿನ ವಿದ್ಯಾರ್ಥಿನಿಯರಿಂದ ಟೆನಿಸ್ ಎಂಬಾಟವನ್ನು ಪಂದ್ಯದಮೇಲೆ ಆಡಿಸಿ ಗೆದ್ದವರಿಗೆ ನಿನ್ನೆಯ ದಿನ ಬಹುಮಾನಗಳನ್ನು ದಯಪಾಲಿಸಿದರೆಂದು ಕೇಳುತ್ತೇವೆ.

ಅಫೀಷಿಯೇಟಿಂಗ್ ಎಕ್ಸೈಸ್ ಕಮಿಷನರಾಗಿ ನಿಯಮಿಸಲ್ಪಟ್ಟಿರುವ ಮ|| ಎಂ. ಕಾಂತರಾಜ ಅರಸಿನವರಿಗೆ ರಾಜಧಾನಿಯ ಮ್ಯುನಿಸಿಪಾಲಿಟಿಯ ಉದ್ಯೋಗಸ್ಥರು ಕಳೆದ ತಾ|| ೨೪ ರಲ್ಲೂ ಡಿಸ್ಟ್ರಿಕ್ಟ್ ಆಫೀಸಿನ ಉದ್ಯೋಗಸ್ಥರು ತಾ|| ೨೫ ರಲ್ಲೂ ವಿನೋದೋತ್ಸವಗಳಿಂದಲೂ ಅಲ್ಪಾಹಾರಾದಿಗಳಿಂದಲೂ ಸತ್ಕರಿಸಿ ತಮ್ಮಗಳಿಗೆ ಅವರಲ್ಲಿದ್ದ ಭಕ್ತಿವಿಶ್ವಾಸವನ್ನು ಪ್ರದರ್ಶಿಸಿದರು.

ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರೊಡನೆ ಕಳೆದ ತಾ|| ೧೭ ರಲ್ಲಿ ಹೊಸೂರ ಸಮೀಪದಲ್ಲಿರುವ ಮತ್ತಿಗೆರೆಗೆ ಮೋಟಾರು ಬಂಡಿಯಲ್ಲಿ ದಯಮಾಡಿಸಿ ಅಲ್ಲಿ ಬ್ರಿಟಿಷ್ ಸರ್ಕಾರದವರು ಕುದುರೆಯ ಮರಿಗಳನ್ನಿಳಿಸಿ ಸಾಕುವ ಆಲಯವನ್ನು ಪರಾಮರ್ಶಿಸಿಕೊಂಡು ಬಂದರು. ಮಹಾಸ್ವಾಮಿಯವರ ಸ್ವಾರಿಯು ಬರುವ ತಾ|| ೪ ರಲ್ಲಿ ರಾಜಧಾನಿಗೆ ಚಿತ್ತೈಸುವುದಾಗಿ ಕೇಳುತ್ತೇವೆ.

ಭರತಖಂಡದ ಕಲಿಭೀಮನೆಂದು ಹೆಸರ್ಪಡೆದಿರುವ ರಾಮಮೂರ್ತಿಯವರು ಇಷ್ಟರಲ್ಲಿ ರಾಜಧಾನಿಗೆ ಬಂದು ವೇಗವಾಗಿ ಹೋಗುವ ಮೋಟಾರು ಬಂಡಿಯನ್ನು ಹಿಡಿದು ನಿಲ್ಲಿಸುವುದು, ೨೦ ಜನರು ಕುಳಿತಿರುವ ಎತ್ತಿನಬಂಡಿಯನ್ನು ಎದೆಯಮೇಲೆ ನಡೆಯಿಸಿಕೊಳ್ಳುವುದು, ಆನೆಯನ್ನು ಎದೆಯಮೇಲೆ ನಿಲ್ಲಿಸಿಕೊಳ್ಳುವುದು ಮೊದಲಾಗಿ ಅದ್ಭುತ ಚಮತ್ಕೃತಿಗಳನ್ನು ತೋರಿಸುವುದಾಗಿ ಪ್ರಕಟವಾಗಿರುವುದು. ಇವನ್ನು ನೋಡಲು ಜನರು ಆತುರಪಡುತ್ತಿರುವರು.

ಬೆಂಗಳೂರ ತಾ|| ಮಾಗಡಿಗೆ ಹೋಗುವ ಮಾರ್ಗದಲ್ಲಿರುವ ತಿಮ್ಮೇನಹಳ್ಳಿಯ ವಾಸಸ್ಥಾನದ ೧೪ ವರ್ಷ ವಯಸ್ಸಿನ ಹುಡುಗನು ಒಂದು ಕೆರೆಯಬಳಿ ಮಾವಿನಮರದ ಕೆಳಗೆ ಕುಳಿತುಕೊಂಡು ಅನ್ನವನ್ನು ತಿನ್ನುತ್ತಿರುವಾಗ್ಗೆ ಮರದ ಕೊಂಬೆಯ ಮೇಲೆ ಮಡಗಲ್ಪಟ್ಟಿದ್ದ ಒಂದು ಕಲ್ಲು ಜಾರಿ ಅವನ ಮೊಳಕಾಲಿನಮೇಲೆ ಬಿದ್ದುದರಿಂದ, ಕಾಲಿನ ಮೂಳೆಯು ಮುರಿದು ಹೋಗಲು ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು.

ಚೇಫ್‌ಕೋರ್ಟಿನ ೨ ನೆಯ ಜಡ್ಜರಾದ ಮ|| ಕೃಷ್ಣರಾಯರು ಹಿಂದೆ ತೆಗೆದುಕೊಂಡಿದ್ದ ರಜವನ್ನು ಉಪಯೋಗಿಸಿಕೊಳ್ಳಲಿಲ್ಲವಾದುದರಿಂದ, ಮುಂದಣ ತಿಂಗಳ ತಾ|| ೧ ರಿಂದ ೧ ತಿಂಗಳ ಪ್ರಿವಿಲೆಜ್ ರಜದಮೇಲೆ ಹೋಗುವವರಾಗಿರುವರು. ಆಗ್ಗೆ ಬೆಂಗಳೂರ ಡಿ|| ಜಡ್ಜ್ ಮ|| ಪರಮಶಿವಯ್ಯರ್‌ರವರು ಚೇಫ್‌ಕೋರ್ಟಿಗೂ, ಮೈಸೂರ ಸಬ್‌ಜಡ್ಜ್ ಮ|| ಡಿ. ಎಂ. ನರಸಿಂಗರಾಯರು ಬೆಂಗಳೂರ ಡಿ|| ಕೋರ್ಟಿಗೂ ಮುನಸೀಫ್ ಮ|| ಗೋಪಾಲಯ್ಯಂಗಾರರು ಮೈಸೂರು ಸಬ್‌ಜಡ್ಜ್ ಕೋರ್ಟಿಗೂ ಹೋಗಬೇಕಾಗಿ ಬರುವುದೆಂದು ತೋರುತ್ತದೆ.

ಶ್ರೀಮನ್ ಮಹಾರಾಜರವರ ಭಾವಮೈದುನರಾದ ಸರದಾರ್ ಲಕ್ಷ್ಮೀಕಾಂತರಾಜ ಅರಸಿನವರು ಕಪಡಿಯಲ್ಲಿರುವ ತಮ್ಮ ಮನೆದೇವರ ಸಾನ್ನಿಧ್ಯದಲ್ಲಿ ತಮ್ಮ ಮಗುವಿಗೆ ಕಿವಿಯನ್ನು ಚುಚ್ಚಿಸುವುದಕ್ಕಾಗಿ ಆಪ್ತೇಷ್ಟರಿಗೆಲ್ಲಾ ಆಮಂತ್ರಣವನ್ನು ಕೊಟ್ಟು ಕಳೆದ ಬುಧವಾರ ಹೊರಡುವವರಾಗಿದ್ದರು; ಅದರೆ ಅಷ್ಟರಲ್ಲಿ ತಮ್ಮ ಸಮೀಪಬಂಧುಗಳಾದ ಪೋಲೀಸ್ ಇನ್ಸ್‌ಪೆಕ್ಟರು ಮ|| ದೇವರಾಜಅರಸಿನವರ ತಮ್ಮ ಮ|| ನಂಜರಾಜಅರಸಿನವರು ಎದೆಯ ನೋವಿನಿಂದ ವಿಧಿವಶರಾದ ಪ್ರಯುಕ್ತ ಕಪಡಿಯ ಪ್ರಯಾಣವನ್ನು ನಿಲ್ಲಿಸಿದರೆಂದು ಕೇಳುತ್ತೇವೆ.

ಖಜಾನೆ ಬಕ್ಷಿ ನರಸಪ್ಪನವರ ದತ್ತಕ ಪುತ್ರರ ವಿವಾಹವು ಕಳೆದ ತಾ|| ೨೧ ರಲ್ಲಿ ರಾಜಧಾನಿಯಲ್ಲಿ ವಿಜೃಂಭಣೆಯಿಂದ ನಡೆದಿತು. ನರಸಪ್ಪನವರು ಕೈ|| ಶ್ರೀ ಚಾಮರಾಜೇಂದ್ರ ಒಡೆಯರವರ ದತ್ತಸ್ವೀಕಾರ ಸ್ಥಿರತೆಯ ವಿಚಾರದಲ್ಲಿ ಬಹು ಸಾಹಸಪಟ್ಟಿದ್ದುದರ ಜ್ಞಾಪನಾರ್ಥವಾಗಿ ಪೂರ್ವದಿಂದಲೂ ನಡೆದು ಬಂದಿರುವಂತೆ ಈ ಸಾರಿಯೂ, ಛತ್ರ, ಬೆಳ್ಳಿ ಕಟ್ಟಿಗೆಗಳೂ, ಆನೆಯಮೇಲಣ ಹೌದಾ ಮೊದಲಾದ ಮರ್ಯಾದೆಗಳೂ ಅರಮನೆಯಿಂದ ಕೊಡಲ್ಪಟ್ಟಿದ್ದುವು. ಸರದಾರ್ ಕಾಂತರಾಜಅರಸಿನವರು ಮೊದಲಾಗಿ ಸರ್ಕಾರಿಯಧಿಕಾರಿಗಳೂ ದೊಡ್ಡ ಮನುಷ್ಯರುಗಳೂ ವಿವಾಹ ಮುಹೂರ್ತಕ್ಕೆ ದಯಮಾಡಿಸಿದ್ದರು.

ಮ|| ಕೆ. ಕೃಷ್ಣಯ್ಯಂಗಾರ್‌ರವರು ಕಳೆದ ತಾ|| ೨೩ ರಲ್ಲಿ ಮ|| ಎಂ. ಕಾಂತರಾಜಅರಸಿನವರಿಂದ ಮೈಸೂರ ಡಿ|| ಡೆಪ್ಯುಟಿ ಕಮಿಷನರ ಅಧಿಕಾರವನ್ನು ವಹಿಸಿಕೊಂಡರು. ಮ|| ಕಾಂತರಾಜಅರಸಿನವರು ತಾವು ಪಡೆದುಕೊಂಡಿರುವ ೨೩ ದಿನಗಳ ಪ್ರಿವಿಲೆಜ್ ರಜವು ಪೂರೈಸಿದಮೇಲೆ ಎಕ್ಸೈಸ್ ಕಮಿಷನರುದ್ಯೋಗವನ್ನು ವಹಿಸಿಕೊಳ್ಳುವರು, ಮತ್ತೂ ತಾವು ಮೊದಲಿಂದಲೂ ನೋಡುತ್ತಿರುವ ಟ್ರಸ್ಟ್ ಬೋರ್ಡಿನ ಛೇರಮನ್ನರ ಕೆಲಸವನ್ನು ತಮ್ಮ ಹೊಸ ಉದ್ಯೋಗದೊಡನೆ ನೋಡಿಕೊಳ್ಳುವರೆಂದು ಕೇಳುತ್ತೇವೆ. ಈಗ ೨ ತಿಂಗಳ ರಜದ ಮೇಲಿರುವ ಕಡೂರ ಡೆ|| ಕ|| ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ರಜವು ಪೂರೈಸಿದ ಮೇಲೆ ಮೈಸೂರ ಡಿ|| ಗೆ ಬರಬಹುದೆಂದು ತೋರುತ್ತದೆ.

ಹಾಸನದಿಂದ ೮ ಮೈಲಿ ದೂರದಲ್ಲಿರುವ ಹಳ್ಳಿಗಳಿಗೆ ಒಂದು ಆನೆಯು ರಾತ್ರಿವೇಳೆ ಬಂದು ಹೊಲಗಳಲ್ಲಿ ಸಂಚರಿಸುತ್ತ ಆ ಗ್ರಾಮಸ್ಥರುಗಳಿಗೆಲ್ಲ ಬಹು ಭೀತಿಯನ್ನುಂಟುಮಾಡುತ್ತಿದ್ದು ಕೆಲ ದಿವಸಗಳ ಕೆಳಗೆ ಡಿ|| ಕ|| ಮ|| ವೆದರಾಲ್ ಸಾಹೇಬರು ಜಮಾಬಂದಿಯಮೇಲೆ ಬಂದು ಒಂದು ಗ್ರಾಮದ ಹೊರಗೆ ಡೇರೆಯನ್ನು ಹಾಕಿಸಿಕೊಂಡಿರುವಾಗ್ಗೆ ಸಾಯಂಕಾಲದಲ್ಲಿ ಒಂದು ಚೆಕ್ಕಾನೆಯು ಬಂದು ಡೇರಾ ಹಗ್ಗಗಳನ್ನು ಕಟ್ಟಿದ್ದ ೨-೩ ಗೂಟಗಳನ್ನು ಕಿತ್ತು ಬಿಸಾಡಲು ಡೇರೆಯು ಆಕಸ್ಮಾತ್ತಾಗಿ ಉರುಳಿಕೊಂಡಿತು. ಆಗ ಒಳಗಿದ್ದ ಕೆಲಸಗಾರರು ದಿಗಿಲುಬಿದ್ದು ಕೂಗಿಕೊಂಡು ಹೊರಗೆ ಬಂದರು. ಆ ಆನೆಯು ೨೦ ವರ್ಷ ವಯಸ್ಸಿನ ಒಬ್ಬ ಯುವಕನನ್ನು ಹಿಡಿದು ಕೆಳಗೆ ಕೆಡವಿ ಅವನ ಒಂದು ಕಾಲನ್ನು ತನ್ನ ಮುಂಗಾಲುಗಳಿಂದ ಮೆಟ್ಟಿಕೊಂಡು ಮತ್ತೊಂದು ಕಾಲನ್ನು ತನ್ನ ಸೊಂಡಲಿನಿಂದ ಹಿಡಿದು ಸೀಳಿ ಸಾಯಿಸಿ ಶವವನ್ನು ಸಮೀಪದಲ್ಲಿದ್ದ ಒಂದು ನಾಲೆಗೆ ತೆಗೆದುಕೊಂಡು ಹೋಗಿ ಮಳಲ ಮೇಲೆ ಹಾಕಿಬಿಟ್ಟಿತು.

ವರ್ತಮಾನ ಸಂಗ್ರಹವು.

ನ್ಯೂಯಾರ್ಕಿಗೆ ಸೇರಿದ ಹೌರ್ಸ್ಟ್ ಎಂಬಲ್ಲಿ ಹತ್ತಿಯ ಶೇಖರಾಲಯಕ್ಕೆ ಬೆಂಕಿಯುಬಿದ್ದು ೪೫೦೦೦ ಮೂಟೆ ಹತ್ತಿ ಸುಟ್ಟುಹೋಗಿ ೩೦ ಲಕ್ಷ ರೂಪಾಯಿ ನಷ್ಟವಾಗಿರುವುದು.

ಬೊಂಬಾಯಿ ಪಟ್ಟಣದ ಕೊಲಬಾದಲ್ಲಿ ಒಂದು ಹತ್ತಿಯ ಶೇಖರಾಲಯಕ್ಕೆ ಬೆಂಕಿಯು ಬಿದ್ದು ೩೦೦೦೦ ಮೂಟೆಗಳವರೆಗೆ ಸುಟ್ಟುಹೋಗಿ ೪೦ ಲಕ್ಷ ರೂ. ನಷ್ಟವಾಗಿರುವುದು.

ಬರ್ಮಾ ಸರ್ಕಾರದವರು ಮೆರ್ಗಿ ಆರ್ಕಿಪೆಲಗೊ ಎಂಬಲ್ಲಿ ೧೯೧೦-೧೧ ರಲ್ಲಿ ಮುತ್ತುಗಳನ್ನು ತೆಗೆಯಿಸಿದುದರಲ್ಲಿ ೪೦೦೦೦ ರೂ. ಬೆಲೆಯ ಒಂದು ಮುತ್ತೂ ೧೦೦೦೦ ರೂ. ಬೆಲೆಯ ಮತ್ತೊಂದು ಮುತ್ತೂ ದೊರೆತಿರುತ್ತವೆ.

ಕೊಲಂಬೋದಲ್ಲಿ ಈಚೆಗಾದ ಒಂದು ವಿವಾಹದಲ್ಲಿ ವರನು ವಧುವಿನ ಉಡುಪನ್ನೂ, ವಧುವು ವರನ ಉಡುಪನ್ನೂ ಧರಿಸಿಕೊಂಡಿದ್ದುದರಿಂದ ಅವರುಗಳ ಗುರ್ತು ಹಿಡಿಯಲ್ಪಡುವುದು ಕಷ್ಟವಾಗಿದ್ದಿತು. ಇಂತಹ ವಿವಾಹವು ಊರ್ಜಿತವಾಗುವುದೆ? ಎಂದು ಆ ವಧೂವರರ ಮಿತ್ರರು ತರ್ಕಿಸುತ್ತಿರುವರು.

ಅಲಹಾಬಾದಿನ ಆನರಬಲ್ ಪಂಡಿತ ಮೋತಿಲಾಲ ನೆಹರುಯವರ ಚಿಕ್ಕಪ್ಪನವರಾದ ಹೈಕೋರ್ಟ್ ವಕೀಲ್ ಪಂಡಿತ ಮೋಹನಲಾಲ ನೆಹರುಯವರ ಪತ್ನಿಯು ಅಲಹಾಬಾದಿನ ಮ್ಯುನಿಸಿಪಾಲಿಟಿಯ ಮೆಂಬರಾಗಿ ಆರಿಸಲ್ಪಡಲಪೇಕ್ಷಿಸಿರುವವರಲ್ಲೊಬ್ಬರಾಗಿರುತ್ತಾರೆ. ಭರತಖಂಡದಲ್ಲಿ ಸ್ತ್ರೀಯರು ಮೆಂಬರಾಗಲು ಯತ್ನಿಸಿರುವುದು ಇದೇ ಮೊತ್ತಮೊದಲು.

ಬರೋಡಾ ಮಹಾರಾಜರವರ ಕುಮಾರಿ ಇಂದಿರಾರಾಣಿಯವರಿಗೂ ಗ್ವಾಲಿಯರಿನ ಹೋಲ್ಕರ್ ಮಹಾರಾಜರಿಗೂ ನಡೆಯುವ ವಿವಾಹ ಸಂಬಂಧವಾಗಿ ದಿವಾನ್ ಬಹದ್ದೂರ್ ವಾಸುದೇವ ಸಂರಾಟ್ ರವರೂ, ಗಾಯಕವಾಡಿಯವರ ಸಹೋದರರಾದ ಶ್ರೀಮನ್ ಸಂಪತ್ತುರಾವ್ ಯವರೂ ಗ್ವಾಲಿಯರಿಗೆ ಹೋಗಿದ್ದಾರೆ. ಗಾಯಕವಾಡ ಮಹಾರಾಜರು ಪ್ರಕೃತದಲ್ಲಿ ಕ್ಷಾಮಪೀಡಿತವಾದ ಪ್ರದೇಶಗಳನ್ನು ಪರಾಮರ್ಶಿಸಿಕೊಂಡು ಬರಲು ಪ್ರಯಾಣಮಾಡಿರುವರು.

ಹೌರಾದಲ್ಲಿ ಒಬ್ಬ ಬಂಗಾಳಿ ಸ್ತ್ರೀಯು ವಿಷಾನುಗಳನ್ನು ಅಡುಗೆಗೆ ಅಣಿಮಾಡುವುದಕ್ಕಾಗಿ ಒಂದು ತಟ್ಟೆಯಲ್ಲಿಟ್ಟುಕೊಂಡು ತೊಳೆಯುತ್ತಿದ್ದು ಇತರ ಕೆಲಸದ ಮೇಲೆ ಹೋಗಿರುವಾಗ್ಗೆ, ಅವಳ ಮಗಳು ಚೇಷ್ಟೆಯಿಂದಿರುವ ಒಂದು ವಿಷಾನುವನ್ನು ತೆಗೆದು ತನ್ನ ಬಾಯೊಳಗೆ ಹಾಕಿಕೊಂಡಳು. ಅದು ಗಂಟಲಿಗೆ ಜಾರಿಹೋಗಿ ಅಂಗಳಿಗೆ ತಗುಲಿಕೊಳ್ಳಲು ಹುಡುಗಿಯು ಉಸಿರಾಡುವುದಕ್ಕೆ ಯತ್ನವಿಲ್ಲದೆ ಸತ್ತುಹೋದಳು.

ಮಹಮ್ಮದೀಯರ ವಿಶ್ವ ವಿದ್ಯಾಲಯ ಸ್ಥಾಪನೆಗಾಗೀ ಶೇಖರಿಸುವ ಧನರಾಶಿಗೆ ಕೊಡಲು ವಾಗ್ದಾನಮಾಡಿರುವ ಒಟ್ಟು ೩೩ ಲಕ್ಷದಲ್ಲಿ ಇದುವರೆಗೆ ೨೪ ಲಕ್ಷ ರೂಪಾಯಿಗಳು ಶೇಖರಿಸಲ್ಪಟ್ಟಿರುತ್ತವೆ. ಬಾಕಿ ೧೧ ಲಕ್ಷ ರೂ. ಗಳನ್ನು ಆದಷ್ಟು ಜಾಗ್ರತೆಯಾಗಿ ಶೇಖರಿಸಬೇಕೆಂದೂ, ಅದರ ಕೂಡಲೆ ಕಾರ್ಯಾರಂಭ ಮಾಡಲ್ಪಡಬಹುದೆಂದೂ ಮಹಮ್ಮದೀಯರ ಮುಂದಾಳುಗಳಾದ ಆಗಾಖಾನರವರು ಚಂದಾಹಣವನ್ನೆತ್ತುವ ಕಾರ್ಯದಲ್ಲಾಸಕ್ತರಾಗಿರುವವರಿಗೆ ತಿಳಿಸಿರುತ್ತಾರೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಆಲೋಚನಾ ಸಭೆಯ ಮೆಂಬರಾದ ರೈಟ್ ಆನರಬಲ್ ಸಯ್ಯದ್ ಅಮೀರಲಿಯವರು ತುರ್ಕಿ ಇಟಲಿಗಳ ಯುದ್ಧದಲ್ಲಿ ಮಡಿದ ಮತ್ತೂ ಅಶಕ್ತರಾದ ತುರ್ಕಿ ಕುಟುಂಬದವರ ಸಹಾಯಾರ್ಥವಾಗಿ ಏರ್ಪಡಿಸಿರುವ ಫಂಡಿಗೆ ೪೫೦೦ ರೂ. ಗಳು ಬೇಕಾಗಿರುತ್ತವೆಯಾದುದರಿಂದ ಪ್ರತಿಯೊಬ್ಬ ಮಹಮ್ಮದೀಯನೂ ದ್ರವ್ಯಸಹಾಯಮಾಡಬೇಕೆಂದು ಆಗಾಖಾನರವರು ಒಂದು ಮಹಮ್ಮದೀಯರ ಸಭೆಯಲ್ಲಿ ಆವೇಶಯುಕ್ತವಾಗಿ ಭಾಷಣವನ್ನು ಮಾಡಿದುದರ ಮೇಲೆ, ಆ ಸ್ಥಳದಲ್ಲೇ ೬೦೦೦ ರೂ. ಚಂದಾಹಣವು ವಾಗ್ದಾನಮಾಡಲ್ಪಟ್ಟಿತು.

ಗತಿಸಿದ ಕೂಚ್‌ಬಿಹಾರಿನ ಮಹಾರಾಜರ ಕುಮಾರಿಯಾದ ಪ್ರತಿಭಾ ಎಂಬುವರಿಗೂ ಐರೋಪ್ಯನಾದ ಮ್ಯಾಂಡರ್ ಎಂಬಾತನಿಗೂ ಬ್ರಹ್ಮಸಮಾಜಧರ್ಮದರೀತ್ಯಾ ಕಳೆದ ತಾ|| ೨೧ ರಲ್ಲಿ ವಿವಾಹವು ನಡೆದಿತು. ಈ ವಿವಾಹ ಮಹೋತ್ಸವಕ್ಕೆ ದೊಡ್ಡ ಮಹಾರಾಣಿಯವರೂ ರಾಜಬಂಧುಗಳೂ ವೈಸ್‌ರಾಯ ಪತ್ನಿಯವರೂ ಬಂದಿದ್ದರು. ದಂಪತಿಗಳಿಬ್ಬರೂ ಲಗ್ನಕಾಲದಲ್ಲಿ ಭಾರತೀಯರ ಉಡುಪನ್ನು ಧರಿಸಿದ್ದರು, ಮತ್ತೂ ಕಳೆದ ಶನಿವಾರ ಸೀಮೆಗೆ ಪ್ರಯಾಣಮಾಡಿದರು. ಈ ವರೆಗೆ ಭಾರತ ರಾಜರುಗಳು ಮೊದಲಾದವರು ಐರೋಪ್ಯ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುವುದು ವಾಡಿಕೆಯಾಗಿದ್ದಿತು. ಈಗ ಭಾರತಮಹಿಳೆಯರು ಐರೋಪ್ಯ ಪುರುಷರನ್ನು ವಿವಾಹಮಾಡಿಕೊಂಡುದು ಇದೇ ಪ್ರಥಮವು.

ಶ್ರೀವಿಲ್ಲಿಪುತ್ತೂರಿನಲ್ಲಿ ನೇಗೆಯಜಾತಿಯ ೧೪ ವರ್ಷ ವಯಸ್ಸಿನ ಆರ್ಮುಗನೆಂಬ ಒಬ್ಬ ಹುಡುಗನಿಗೆ ಅಂಕಗಣಿತದಲ್ಲಿ ಅದ್ಭುತ ಸಾಮರ್ಥ್ಯವಿರುವುದು. ಇವನು ಎಂತಹ ಕಠಿಣತರವಾದ ಪ್ರಶ್ನೆಯು ಕೊಡಲ್ಪಟ್ಟಾಗ್ಗೂ ಅತಿಜಾಗ್ರತೆಯಾಗಿಯೂ, ಲೀಲಾಜಾಲವಾಗಿಯೂ ಉತ್ತರವನ್ನು ಕೊಡಬಲ್ಲನು. [illegible] ನ್ನು [illegible] ರಿಂದ ರೆಪ್ಪೆ ಮುಚ್ಚಿ ಬಿಚ್ಚುವಷ್ಟರೊಳಗೆ ಗುಣಿಸಿ [illegible] ಲಬ್ಧವೆಂದು ಹೇಳುವನು. ಹೀಗೆ ಎಷ್ಟೊಂದು ಸಂಖ್ಯೆಗಳನ್ನು ಕೊಟ್ಟಾಗ್ಗೂ ಅವುಗಳಿಗೆ ವರ್ಗಮೂಲ, ಘನಮೂಲ ಮೊದಲಾದುವುಗಳನ್ನು ಕ್ಷಣಮಾತ್ರದಲ್ಲಿ ಹೇಳುವನಲ್ಲದೆ, ಸರಳಬಡ್ಡಿ ಚಕ್ರಬಡ್ಡಿ ಮೊದಲಾಗಿ ಅಂಕಗಣಿತದಲ್ಲಿ ಎಂತಹ ಕಠಿಣತಮವಾದ ಲೆಕ್ಕವನ್ನೂ ಅತ್ಯಂತ ಶೀಘ್ರದಲ್ಲೂ, ನಿರಾಯಾಸದಿಂದಲೂ ಮಾಡುವನು. ಇವನಿಗೆ ಈ ಅಂಕಗಣಿತದಲ್ಲಿ ಅಸಾಧಾರಣವಾದ ಸಾಮರ್ಥ್ಯವಿರುವುದೇ ವಿನಾ ತದಿತರ ಪಾಠಗಳಲ್ಲಿ ಸಾಮಾನ್ಯವಾದ ಪರಿಜ್ಞಾನವೂ ಕೂಡ ಇಲ್ಲವು.

ಕಳೆದ ತಾ|| ೧೨ ರಲ್ಲಿ ಶ್ರೀಕಾಕುಳಂ ರೈಲ್ವೆಯ ಸ್ಟೇಷನ್ನಿನಲ್ಲಿ ಒಬ್ಬ ಅನಾಥ ಸ್ತ್ರೀಯಳು ಒಂದು ಸಣ್ಣ ಮಗುವನ್ನು ಎತ್ತಿಕೊಂಡು ಬಂಡಿಯನ್ನಿಳಿಯುತಲೇ ಟಿಕೆಟ್ಟನ್ನು ತೆಗೆದುಕೊಳ್ಳುವವರು ಆಕೆಯನ್ನು ಹೊರಗೆ ಬಿಡದೆ ಅಲ್ಲಿಯೇ ನಿಲ್ಲಿಸಿಕೊಂಡು ಮಗುವಿಗೆ ಟಿಕೆಟ್ಟನ್ನು ಕೊಡದೆ ಪ್ರಯಾಣಮಾಡಿದುದರಿಂದ ೧ ರೂ. ದಂಡವನ್ನೂ, ಅರ್ಧ ಟಿಕೆಟ್ಟಿನ ಛಾರ್ಜನ್ನೂ ಕೊಡಬೇಕೆಂದು ಹಿಂದಣ ಸ್ಟೇಷನ್ನಿನಿಂದ ತಂತಿಯು ಬಂದಿರುತ್ತಾದುದರಿಂದ, ಅಷ್ಟು ಹಣವನ್ನು ಕೊಟ್ಟ ಹೊರತು ಹೊರಗೆ ಬಿಡುವುದಿಲ್ಲವೆಂದು ಅಡ್ಡಿಪಡಿಸಿದುದರ ಮೇಲೆ, ಆ ಅನಾಥಳು ತನ್ನ ಬಳಿ ೧೨ ಆಣೆಯನ್ನೂ ಕೆಲಬಟ್ಟೆಯನ್ನೂ ಇಟ್ಟುಕೊಂಡಿದ್ದಳೇ ವಿನಾ ಮತ್ತೇನೂ ಇಲ್ಲವಾಗಿ ಹಣವನ್ನು ಕೊಡಲು ಚೈತನ್ಯವಿಲ್ಲದೆ ೨೪ ಗಂಟೆಯವರೆಗೆ ಸ್ಟೇಷನ್ನಿನಲ್ಲೇ ತಡೆಯಲ್ಪಟ್ಟಿದ್ದಳು. ಯಾವ ಊರಿಗೋ ಪ್ರಯಾಣಮಾಡಲು ಬಂದಿದ್ದ ದಿವಾನ್ ಬಹದ್ದೂರ್ ಅನಂತರಾಮ ಪಂತಲುಯವರು ಈ ಅನಾಥ ಸ್ತ್ರೀಯಳ ದುಃಸ್ಥಿತಿಯನ್ನು ನೋಡಿ ಮರುಗಿ, ಮಕ್ಕಳು ೩ ವರ್ಷ ವಯಸ್ಸಿನೊಳಗಿರುತ್ತವೆಂಬ ಬಗೆಗೆ ಯಾರಾದರೂ ದೊಡ್ಡಮನುಷ್ಯರು ಸರ್ಟಿಫಿಕೇಟನ್ನು ಕೊಟ್ಟಲ್ಲಿ ಟಿಕೆಟ್ಟಿಲ್ಲದೆ ಮಕ್ಕಳು ಪ್ರಯಾಣಮಾಡಬಹುದೆಂದು ರೈಲ್ವೆಯ ವಿಧಿಯಲ್ಲಿರುವುದನ್ನನುಸರಿಸಿ ಆ ಅನಾಥಳ ಮಗುವು ೩ ವರ್ಷ ವಯಸ್ಸಿನೊಳಗಿದೆ ಅದನ್ನು ದುಡ್ಡು ಕೇಳದೆ ಬಿಟ್ಟುಕೊಡಬೇಕೆಂದು ಸ್ಟೇಷನ್ ಮಾಸ್ಟರಿಗೆ ಸಮಾಧಾನವನ್ನು ಹೇಳಲು ಆತನು ಹಾಗೆ ಬಿಡಲು ತನಗಧಿಕಾರವಿಲ್ಲವು ಮತ್ತೂ ೪ ರೂ. ಗಳನ್ನು ಕೊಡದಿದ್ದಲ್ಲಿ ಆಕೆಯನ್ನು ಪೋಲೀಸರ ವಶಮಾಡುತ್ತೇನೆ ಎಂದು ಹೇಳಿದನು. ಆಗ ದಿವಾನ್ ಬಹದ್ದೂರ್ ರವರು ೪ ರೂ. ಗಳನ್ನು ಕೊಟ್ಟು ಆ ಅನಾಥಳಾದ ಹೆಂಗುಸನ್ನು ಅವಳ ಮಗುವಿನೊಡನೆ ಬಿಡಿಸಿದಲ್ಲದೆ ತಾವು ಪ್ರಯಾಣಮಾಡಬೇಕೆಂದಿದ್ದ ತರಗತಿಯ ಟಿಕೆಟ್ಟನ್ನು ಕೊಂಡುಕೊಳ್ಳಲು ದುಡ್ಡು ಕಡಿಮೆಯಾದುದರಿಂದ ಕಡಿಮೆಯ ತರಗತಿಯಲ್ಲಿ ಪ್ರಯಾಣಮಾಡಿದರು.

ಜಂಗಲ್‌ಪಟ್ಟಿನ ಜಾಯಿಂಟ್ ಮೆಜಿಸ್ಟ್ರೇಟ್ ಮ|| ಪಾರ್ಕ್ಸ್, ಐ.ಸಿ.ಎಸ್., ಯವರು ಕಳೆದ ತಾ|| ೬ ರಲ್ಲಿ ಒಂದು ವಿವಾದದಲ್ಲಿ ಒಬ್ಬ ಅಪರಾಧಿಗೆ ೨೮ ದಿನಗಳ ವರೆಗೆ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದ್ದು ತರುವಾಯ, ಆ ಅಪರಾಧಿಯ ಕಡೆಯ ವಕೀಲರು ಜಡ್ಜ್‌ಮೆಂಟಿನ ಕಾಪಿಯನ್ನು ಕೊಡಿಸಿಕೊಡಬೇಕೆಂದು ಮ್ಯಾಜಿಸ್ಟ್ರೇಟರನ್ನು ಕೇಳಿಕೊಳ್ಳಲು ಅವರು ಅರ್ಜಿಯನ್ನು ಬರೆದುಕೊಳ್ಳುವುದೆಂದು ಅಪ್ಪಣೆಮಾಡಿದರು. ಆ ವಕೀಲನು ಪುನರ್ವಿಚಾರಣೆಯ ಬಗೆಗೆ ಅರ್ಜಿಯನ್ನು ಕೊಡುವುದಕ್ಕಾಗಿ ಜಡ್ಜ್‌ಮೆಂಟಿನ ಕಾಪಿಯನ್ನು ಕೊಡಿಸಿಕೊಡಬೇಕೆಂದು ನ್ಯಾಯರೀತ್ಯಾ ಪ್ರಾರ್ಥಿಸಿ ಅರ್ಜಿಯನ್ನು ಕೊಡಲು, ಮ್ಯಾಜಿಸ್ಟ್ರೇಟರು ಅದನ್ನು ನೋಡಿ ವಿಶೇಷ ಕೋಪಾವಿಷ್ಟರಾಗಿ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ನೀವು ಈ ರೀತಿ ಅರ್ಜಿ ಕೊಟ್ಟಿರುವುದು ಅಧಿಕ ಪ್ರಸಂಗಿತನವು ಮತ್ತು ಅಸಂಗತವು ಎಂದು ಹೇಳಿ ಅರ್ಜಿಯನ್ನು ಮುದುರಿ ಬಿಸಾಡಿ "ನನ್ನ ತೀರ್ಪನ್ನು ಬದಲಾಯಿಸಬೇಕೆಂದು ಬರೆದಿರುವುದು ಶುದ್ಧ ಪೋಕರಿತನವು ಮತ್ತೂ ಅವಮಾನಕರವು." ಎಂದು ಹೇಳಿದರು. ಜಡ್ಜ್‌ಮೆಂಟಿನ ನಕಲನ್ನು ಅಪೇಕ್ಷಿಸುವಾಗ್ಗೆ ಅದರ ಕಾರಣವನ್ನು ಅರ್ಜಿಯಲ್ಲಿ ಬರೆಯಬೇಕಾದ ಪದ್ಧತಿಯನ್ನನುಸರಿಸಿ ಬರೆದಿರುತ್ತೇನೆ, ಎಂದು ವಕೀಲನು ಪ್ರತ್ಯುತ್ತರವಾಗಿ ಹೇಳಿ, ಮ್ಯಾಜಿಸ್ಟ್ರೇಟರು ತನ್ನ ಮೇಲೆ ದ್ವೇಷವನ್ನಿಟ್ಟು ಮುಂದೇನು ಕೆಡಕನ್ನು ಮಾಡುವರೋ? ಎಂಬ ಶಂಕೆಯಿಂದ "ಈ ಅರ್ಜಿಯಲ್ಲಿ ತಮಗೆ ಅಸಮಾಧಾನಕರವಾದ ವಿಷಯವಿದ್ದಲ್ಲಿ ನನ್ನನ್ನು ಕ್ಷಮಿಸಬೇಕು." ಎಂದು ವಕೀಲನು ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡನು. ಇದರಿಂದ ಮ್ಯಾಜಿಸ್ಟ್ರೇಟರ ಕೋಪವು ಶಾಂತವಾಯಿತು, ಇಲ್ಲದಿದ್ದಲ್ಲಿ ಪರ್ಯವಸಾನವು ವಿಪರೀತವಾಗುತ್ತಿದ್ದಿತು. ಡಿಸ್ಟ್ರಿಕ್ಟ್ ಮುನಸೀಫರಲ್ಲಾಗಲಿ ಸಿವಿಲ್ ಜಡ್ಜರಲ್ಲಾಗಲಿ ಈ ರೀತಿ ಅರ್ಜಿಯನ್ನು ಬರೆದುಕೊಡುವುದುಂಟೆ? ಎಂದು ಮ್ಯಾಜಿಸ್ಟ್ರೇಟರವರು ಕೋಪದಿಂದ ಕೇಳಲು, ವಕೀಲನು ಪದ್ಧತಿಯ ನಿಬಂಧನೆಯನ್ನು ಸಾಹೇಬರ ಗಮನಕ್ಕೆ ತರಲು ಸಾಹೇಬರು ಸಮಾಧಾನಚಿತ್ತರಾಗಿ ಬಿಸಾಡಿದ್ದ ಅರ್ಜಿಯನ್ನು ತೆಗೆದುಕೊಂಡು ಜಡ್ಜ್‌ಮೆಂಟಿನ ನಕಲನ್ನು ಕೊಡಲಪ್ಪಣೆಮಾಡಿದರು. ಈ ಸಾಹೇಬರೇ ಕೆಲದಿನಗಳ ಕೆಳಗೆ ಬೈಸಿಕಲ್ ಸ್ವಾರಿಯನ್ನು ಮಾಡುತ್ತಿರುವಾಗ್ಗೆ ಸಲಾಮನ್ನು ಮಾಡದ ಹುಡುಗನಿಗೆ ಅರ್ಥದಂಡವನ್ನು ವಿಧಿಸಿದ್ದವರು.

ನೆಲ್ಲೂರು ಡಿ|| ಕಾವಲಿ ಎಂಬಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರ್ ಮ|| ಡೇವಿಡ್ ಬಿ.ಎ., ಯವರು ಕಾರ್ಯಾರ್ಥವಾಗಿ ಮದರಾಸಿಗೆ ಹೋಗಿರುವಾಗ್ಗೆ ಅವರ ಮನೆಯ ಸೇವಕನು ಕಳೆದ ತಾ|| ೧೦ ರಲ್ಲಿ "ಕೂಡಲೆ ೫೦೦ ರೂ. ಗಳನ್ನು ಕಳುಹಿಸಿಕೊಡುವಂತೆ ಇನ್ಸ್‌ಪೆಕ್ಟರು ತಂತಿಯನ್ನು ಕೊಟ್ಟಿರುತ್ತಾರಾದುದರಿಂದ ಹಣವನ್ನು ಕೊಡಿ." ಎಂದು ಇನ್ಸ್‌ಪೆಕ್ಟರ ಹೆಂಡತಿಯನ್ನು ಕೇಳಲು, ೫೦೦ ರೂ. ಗಳು ಬೇಕಾಗಿರುವಂತಹ ಸಮಯವೇನಿರುವುದು? ಒಂದುವೇಳೆ ಇದ್ದರೂ ಮದ್ರಾಸಿನಲ್ಲಿರುವ ತಮ್ಮ ಮಿತ್ರರಿಂದ ತೆಗೆದುಕೊಳ್ಳಲಾಗದೆ ಹೋದರೆ? ಎಂದು ಆಕೆಯು ಅನುಮಾನಪಟ್ಟು ಸೇವಕನಿಗೆ ಹಣವನ್ನು ಕೊಡಲಿಲ್ಲವು. ಇದರಮೇಲೆ ಅವನು ಇನ್ಸ್‌ಪೆಕ್ಟರ ಹೆಂಡತಿಯು ತನ್ನ ಮೂರುಮಕ್ಕಳ ಕೂಡ ಮಲಗಿ ನಿದ್ರೆಯನ್ನು ಮಾಡುತ್ತಿರುವ ಸಮಯದಲ್ಲಿ ಆ ಗರ್ಭಿಣಿಯನ್ನೂ, ಮೂರು ಮಕ್ಕಳನ್ನೂ ಕೊಂದುಹಾಕಿ ಅವಳ ಬಳಿಯಿದ್ದ ಆಭರಣಗಳನ್ನು ಅಪಹರಿಸಿಕೊಂಡು ಒಬ್ಬ ಸರಾಫನ ಬಳಿಗೆ ಹೋಗಿ ಈ ನಗಗಳನ್ನಿಟ್ಟುಕೊಂಡು ೫೦೦ ರೂ. ಗಳನ್ನು ಕಳುಹಿಸಿಕೊಡುವಂತೆ ಇನ್ಸ್‌ಪೆಕ್ಟರ ಹೆಂಡತಿಯು ಹೇಳಿ ಕಳುಹಿಸಿದಾರೆಂದು ಹೇಳಿದನು. ಆ ಸರಾಫನು ಆ ರೀತಿಯಾಗಿ ಆಕೆಯಿಂದ ಒಂದು ಕಾಗದವನ್ನು ತಂದರೆ ನಗಗಳನ್ನಿಟ್ಟುಕೊಂಡು ಹಣವನ್ನು ಕೊಡುತ್ತೇನೆಂದು ಹೇಳಲು, ಆ ಸೇವಕನು ಅದಕ್ಕೊಪ್ಪಿ ಎಲ್ಲಿಗೋ ಹೋಗಿ ಆ ಸರಾಫನಿಗೆ ತಿಳಿಯದಂತೆ ತಮಿಳು ಭಾಷೆಯಲ್ಲಿ ಒಂದು ಚೀಟಿಯನ್ನು ಬರೆದು ತಂದುಕೊಟ್ಟನು. ಸರಾಫನು ಚೀಟಿಯನ್ನು ನಂಬದೆ ತಾನೇ ಬಂದು ಕೇಳುತ್ತೇನೆಂದು ಹೇಳಿ ಸೇವಕನ ಕೂಡ ಇನ್ಸ್‌ಪೆಕ್ಟರ ಮನೆಬಳಿ ಬಂದು ಮ|| ಡೇವಿಡ್‌ರವರನ್ನು ೨-೩ ಆವೃತ್ತಿ ಕೂಗಿದಾಗ್ಗೂ ಉತ್ತರ ಬಾರದಿದ್ದುದರಮೇಲೆ ಅವರ ಹೆಂಡತಿಯನ್ನು ಕೂಗಿದನು. ಅದಕ್ಕೂ ಉತ್ತರವು ಬರಲಿಲ್ಲವಾಗಿ ಸೇವಕನು ಹಿತ್ತಲಬಾಗಿಲಿನಿಂದ ಕರೆದುಕೊಂಡು ಹೋಗಿ ಸತ್ತುಬಿದ್ದಿದ್ದ ತಾಯಿಯನ್ನೂ, ಅವಳ ಮಕ್ಕಳನ್ನೂ ದೂರದಿಂದಲೇ ತೋರಿಸಿ ಅವರುಗಳು ಮಲಗಿಕೊಂಡು ನಿದ್ರೆಯನ್ನು ಮಾಡುತ್ತಿದಾರೆಂದು ಹೇಳಿ ಹಣವನ್ನು ತನ್ನ ಕೈಗೆ ಕೊಡಬೇಕೆಂದು ಕೇಳಿದನು. ಸರಾಫನಿಗೆ ಅನುಮಾನವು ಮತ್ತಷ್ಟು ಹೆಚ್ಚಾಗಿ ಆ ಕೂಡಲೆ ಆ ನಗಗಳನ್ನೂ, ಅದಕ್ಕಾಗಿ ಕೊಡಲು ತಾನು ತಂದಿದ್ದ ಹಣವನ್ನೂ ಸಹಿತ ಮ್ಯಾಜಿಸ್ಟ್ರೇಟರಲ್ಲಿಗೆ ತೆಗೆದುಕೊಂಡು ಹೋಗಿ ಕೊಟ್ಟು ನಡೆದ ಸಂಗತಿಯನ್ನು ತಿಳಿಸಿದನು. ಸೇವಕನು ಪಲಾಯನವಾದನು. ಪೋಲೀಸರು ಮನೆಗೆ ಬಂದು ಇನ್ಸ್‌ಪೆಕ್ಟರ ಹೆಂಡತಿ ಮಕ್ಕಳು ಸತ್ತುಬಿದ್ದಿರುವುದನ್ನು ಕಂಡು ಆ ಸಂಗತಿಯನ್ನು ಮದರಾಸಿನಲ್ಲಿದ್ದ ಗಂಡನಿಗೆ ತಿಳಿಸಿ, ಕೊಲೆಗಾರನನ್ನು ಹುಡುಕುತ್ತಿರುವರು.

ಸರ್ಕಾರಿಯ ಗೆಜೆಟ್.

ಮಿ॥ ಫ್ರೇಸರ್ ಸಾಹೇಬರು ರಜವನ್ನು ಪೂರೈಸಿಕೊಂಡು ಜಂಕಟಿಲಿ ಬೆಳಗಾವಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಇರತಕ್ಕದ್ದು.

ಮಿ॥ ಹಾಲಿಂಡ್ ಸಾಹೇಬರು ರೈಲ್ವೆಯ ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಳಗಾಂ, ಧಾರವಾಡ ಮತ್ತು ಕಾರವಾರ ಡಿ॥ ಗಳ ಅಬಕಾರಿ ಅಸಿಸ್ಟೆಂಟ್ ಕಲೆಕ್ಟರಾದ ಮಿ॥ ಇಂಗಲಿ ಸಾಹೇಬರಿಗೆ ೧೯೦೭ ನೆಯ ಮಾರ್ಚಿ ತಾ॥ ೧ ರಿಂದ ೩ ವಾರಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಮಿ॥ ಫಂಲೆಂಸಾಹೇಬರು ಅಬ್ಕಾರಿ ಅ॥ ಕಲೆಕ್ಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬಿಜಾಪುರದ ಹುಜೂರು ಡೆಪ್ಯುಟಿ ಕಲೆಕ್ಟರಾದ ಮಿ॥ ಕೃಷ್ಣಾಜಿ ಬಳವಂತ ಮೋಘೆಯವರು ಪೆನ್ಶನ್ನಿನಮೇಲೆ ನಿವೃತ್ತರಾದುದರಿಂದ, ಅವರ ಕೆಲಸಕ್ಕೆ ಮಿ॥ ವಿಶ್ವನಾಥ ನಾರಾಯಣ ಸಾಠೆಯವರು ನಿಯಮಿಸಲ್ಪಟ್ಟಿರುತ್ತಾರೆ.

ರಾ॥ ರಾ॥ ಬಸವನಗೌಡ ಬಿ॥ ಬಸವನಗೌಡ ತಬಕೆರ ಹೊನ್ನಿಹಳ್ಳಿ ಇವರು ಕನ್ಸಿಲಿಯೇಟರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಯಲ್ಲಾಪುರದ ಮಾಮಲೇದಾರರಾದ ಮಿ॥ ಸುಬ್ಬರಾವ್ ವೆಂಕಪ್ಪ ಕಲವಾರ ಇವರಿಗೆ ಕೊಡಲ್ಪಟ್ಟಿರುವ ರಜವು ಇನ್ನೂ ೩ ತಿಂಗಳಿಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಬೀಳಗಿ ಗ್ರಾಮವು ಪ್ಲೇಗುರೋಗಪೀಡಿತವಾಗಿರುವುದೆಂದು ಬಿಜಾಪುರದ ಕಲೆಕ್ಟರವರು ಪ್ರಸಿದ್ಧಮಾಡಿರುತ್ತಾರೆ.

ಪತ್ರವ್ಯವಹಾರವು.

ಬಾಗಲಕೋಟಿ.

ಇಲ್ಲಿಯ ಪ್ಲೇಗುರೋಗವು ಶಮನವಾಗಿರುವದರಿಂದ ಜನರೆಲ್ಲರೂ ತಮ್ಮ ಗುಡಿಸಲಗಳನ್ನು ಬಿಟ್ಟು ಊರೊಳಗೆ ಬರಲು ಉದ್ಯುಕ್ತರಾಗಿದ್ದಾರೆ, ಮತ್ತು ಇಂಗ್ಲಿಷಶಾಲೆಯು ತಾ॥ ೨೦-೨-೧೯೦೭ ನೆ ದಿವಸ ಪ್ರಾರಂಭವಾಗುವುದು. ಶ್ರೀ ಜಗದ್ಗುರು ಮುರುಘರಾಜೇಂದ್ರಸ್ವಾಮಿ ಚಿತ್ರದುರ್ಗ ಇವರ ಆಶ್ರಯದಿಂದಿರುವ ವಾರದ ಬೋರ್ಡಿಂಗವಾದರೂ ಅದೇ ದಿವಸ ಆರಂಭವಾಗುವದು. ವೀರಶೈವ ವಿದ್ಯಾರ್ಥಿಗಳಿಗೆ ಅನೇಕ ರೀತಿಗಳಿಂದ ಅನುಕೂಲವಾಗುವಂತೆ ಬೋರ್ಡಿಂಗದ ಉತ್ಪಾದಕರಾದ ಶ್ರೀ ಮನ್ನಿರಂಜನ ರೇವಣಸಿದ್ಧಸ್ವಾಮಿ ಟೀಕಿನಮಠ ಇವರು ವ್ಯವಸ್ಥೆಯನ್ನು ಚನ್ನಾಗಿಇಟ್ಟಿದ್ದಾರೆ. ಆದಕಾರಣ ಎಲ್ಲಾ ವೀರಶೈವವಿದ್ಯಾರ್ಥಿಗಳು ಅಗತ್ಯವಾಗಿ ಬರಬೇಕು.

ಎಂ. ಎಸ್. ಜಂಗಿನ. ಸೆಕ್ರೆಟರಿ,
ವೀರಶೈವಲಾಯಬ್ರರಿ, ಬಾಗಲಕೋಟಿ.

ಮಹನೀಯರುಗಳೆ ! ಲಾಲಿಸಿರಿ.— ಗುಂಡಲಪೇಟೆ ತಾ॥ ಉಲ್ಲಾಣದ ಮ॥ ರಾ॥ ಪಟೇಲ್ ಬಸವಪ್ಪನವರು ಸದ್ಯದಲ್ಲಿ ಹತ್ತುಜನ ವಿದ್ಯಾರ್ಥಿಗಳಿಗೆ ಸಂಸ್ಕೃತಪಾಠವನ್ನ ಹೇಳಿಸಲು ಒಡಂಬಟ್ಟಿರುತ್ತಾರೆ. ಆದುದರಿಂದ ಸಂಸ್ಕೃತ ಕನ್ನಡ ಕಾವ್ಯಗಳಲ್ಲಿ ಬಲ್ಲದರಾಗಿಯೂ, ವೀರಶೈವ ಮತಶಾಸ್ತ್ರಗಳನ್ನ ವೇದಪಾಠವನ್ನ ಮತ್ತು ವೀರಶೈವ ದಶಕರ್ಮವಿಧಿಗಳನ್ನು ಬೋಧಿಸತಕ್ಕವರಾಗಿಯೂ, ವೀರಶೈವ ಮತದ ಗುರುಸ್ಥಲಾಧಿಕಾರಿಗಳಾಗಿಯೂ, ಶಾಂತಿಕರುಣಾರಸಭರಿತರಾಗಿಯೂ ಇರುವ ಒಬ್ಬರು ಶಾಸ್ತ್ರಿಗಳು ಅವಶ್ಯಬೇಕಾಗಿರುತ್ತದೆ. ಮಾಹೆಯಾನಾ ೨೦ ರೂಪಾಯಿ ತಲಬು ತೆಗೆದುಕೊಂಡು ಬರಲಿಷ್ಟವುಳ್ಳವರು ಮಾರ್ಚಿ ೧೫ ನೆಯ ತಾರೀಖಿನೊಳಗಾಗಿ ಗುಂಡಲಪೇಟೆ ತಾ॥ ಉಲ್ಲಾಣದ ಗ್ರಾಮದ ಪಟೇಲ್ ಬಸವಪ್ಪನವರ ಹೆಸರಿಗೆ ಬರೆದುಕೊಂಡಲ್ಲಿ ಅವರಲ್ಲಿ ಅರ್ಹರಾದವರೊಬ್ಬರು ಆರಿಸಲ್ಪಟ್ಟು ಬರಮಾಡಿಕೊಳ್ಳಲ್ಪಡುವರು.

ಗಬ್ಬವಿರಪ್ಪಶಾಸ್ತ್ರಿ.

ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು.

ಸ್ಟಾರ್ ಪತ್ರಿಕೆಯಲ್ಲಿ ಸೂಚಿಸಿದ್ದಪ್ರಕಾರ ರಾಜಸಭಾಭೂಷಣ ದಿವಾನಬಹದ್ದೂರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಈ ತಿಂಗಳ ೧೯ ನೆಯ ತಾರೀಖಿನ ಮೊದಲ್ಗೊಂಡು "ರಿಟೈರ್" ಆಯಿತು. ಇವರಿಗೆ "ದಿವಾನ್" ಪದವಿಯು ಲಭ್ಯವಾಗುವುದೆಂದು ಬ್ರಾಹ್ಮಣೇತರರೆಲ್ಲರೂ ನಿರೀಕ್ಷಿಸಿಕೊಂಡಿದ್ದರು. ಆದರೆ ಅವರ ನಿರೀಕ್ಷಣೆಯು ಸಫಲವಾಗದಿದ್ದುದಕ್ಕಾಗಿ ವಿಷಾದಿಸಬೇಕಾಗಿದೆ.

ಬೆಂಗಳೂರು ಬೇಲಿಮಠದ ಶ್ರೀ ನಿರಂಜನಶಿವರುದ್ರಸ್ವಾಮಿಗಳು.

ಇವರು ನೆಲಮಂಗಲ ತಾಲ್ಲೂಕು ಹುಸ್ಕೂರಲ್ಲಿ ಬ್ರಾಹ್ಮಣ ಅಧಿಕಾರಿಗಳು ಮತ್ತು ಬೆಂಗಳೂರಿನ ಕೆಲವುಜನ ದೊಡ್ಡ ದೊಡ್ಡ ವೀರಶೈವರಿಗು ಕಳೆದ ತಾ॥ ೧೧ನೆಯ ಅದ್ವಿತೀಯವಾದ ಭೋಜನವನ್ನು ಮಾಡಿಸಿದರು. ಈ ಸ್ವಾಮಿಗಳವರು ವೀರಶೈವ ಮಹೋಪಯೋಗವಾದ ಕೆಲವು ಕೆಲಸಗಳನ್ನು ಮಾಡಿದರೆ ವೀರಶೈವಮತಕ್ಕೆ ಮಹದುಪಕಾರ ಮಾಡಿದಂತಾಗುವುದು.

ಹಿತಚಿಂತಕ.

ಆಡುವುದು ಸುಲಭ ಮಾಡುವುದು ಕಷ್ಟ.

ಆಚೆ ವಾರದ ತಮ್ಮ ಘನವಾದ ಪತ್ರದಲ್ಲಿ ಬೆಳ್ಳಂದಕಿ ಕೋಲೀಖವುಳ್ಳ ಸ್ತ್ರೀವಿದ್ಯಾಭ್ಯಾಸವನ್ನು ಕುರಿತು ನಮ್ಮ ಶಿಕಾರಿಪುರವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಲ್ಪಟ್ಟಿರುವ ಒಂದು ಲೇಖನವು ಪ್ರಕಟವಾಗಿತ್ತು. ಇಲ್ಲಿಯ ಬಾಲಿಕಾ ಪಾಠಶಾಲೆಯು ಮಿಡ್ಲ್ ಸ್ಕೂಲಾಗಿದೆ; ಇಲ್ಲಿ ವರ್ಷ ವರ್ಷವೂ ಉಪಾಧ್ಯಾಯರು ಬದಲಾವಣೆಯಾಗುತ್ತಾರೆ; ಆದರೆ ತಕ್ಕ ಕ್ರಮವಾಗಿಲ್ಲ; ಶಾಲೆಯಲ್ಲಿ ಹೆಣ್ಣುಮಕ್ಕಳು ಅವುದನ್ನು ಕಲಿಯಬೇಕೋ ಅದನ್ನು ಕಲಿಯುವಹಾಗಿಲ್ಲ. ಇದನ್ನು ತಿಳಿದು ನಮ್ಮ ಊರಿಗೆಸೇರಿದ ಹಳ್ಳಿಯಲ್ಲಿ ಬ್ರಾಹ್ಮಣರು ಅಲ್ಲಿನ ಮಿಡ್ಲ್ ಸ್ಕೂಲಿಗೆ ಮಕ್ಕಳನ್ನು ಕಳುಹಿಸದೆ ಬೇರೊಂದು ಸ್ಕೂಲನ್ನು ಸ್ಥಾಪಿಸಿಕೊಂಡಿರುತ್ತಾರೆ. ಹೀಗೆಯೇ ಅನೇಕ ಕಡೆಗಳಲ್ಲಿ ಬೇರೆ ಸ್ಕೂಲುಗಳು ಸ್ಥಾಪನೆಯಾಗಿರುತ್ತವೆ. ಇದರಂತೆಯೇ ಇಲ್ಲಿಯೂ ಸರ್ವರಿಗೂ ಅನುಕೂಲವಾದ ಸ್ಕೂಲನ್ನು ಸ್ಥಾಪಿಸಿ ಸ್ತ್ರೀವಿದ್ಯಾವೃದ್ಧಿಯನ್ನು ಮಾಡುವುದುತ್ತಮ. ಹಾಗಲ್ಲದೆ ಶಾಲೆಗೆಹೋಗಿ ಬೇಕಾದ ವಿದ್ಯೆಯನ್ನು ಕಲಿಯದಿರುವುದಕ್ಕಿಂತಲೂ ಮನೆಯಲ್ಲಿಯೇ ಇದ್ದು ಗೃಹಕೃತ್ಯವನ್ನು ಕಲಿಯುವುದು ಸರ್ವೋತ್ತಮವು.

ಯಥಾರ್ಥವಾದಿ.

ಚೆನ್ನಗಿರಿ.

ಈ ತಾಲ್ಲೋಕ್ ಅಮಲ್ದಾರ್ ಮಿ॥ ನರಸಿಂಹಶಾಸ್ತ್ರಿಗಳವರ ಪ್ರಯತ್ನವಿಶೇಷದಿಂದುಂಟಾದ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನಕ್ಕಾಗಿ ಮಿ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣಸೆಟ್ಟರವರು ದಯಮಾಡಿರುತ್ತಾರೆಂದು ಅನೇಕ ಪ್ರಾಂತಗಳ ಮಹಾಜನಗಳು ಶಿವಮೊಗ್ಗಾ ಡಿ॥ ಆಫೀಸರವರು, ಶಿವಮೊಗ್ಗ, ಸೊರಬ, ಹೊನ್ನಾಳಿ ವಗ್ಗೈರೆ ತಾ॥ ಅಮಲ್ದಾರರುಗಳು ಫೆಬ್ರುವರಿ ತಾ॥ ೧ ರಿಂದಲೇ ಈ ಗ್ರಾಮಕ್ಕೆ ಬರಲಾರಂಭಿಸಿದರು. ಇಂತಹ ಸಮಯದಲ್ಲಿಯೇ ಚಿತ್ರದುರ್ಗದ ಶ್ರೀಮಜ್ಜಗದ್ಗುರು ಮಹಾಸ್ವಾಮಿಯವರಿಂದ ಕಳೆದ ವೈಶಾಖ ಶು॥ ೩ ದಿವಸ ಇಲ್ಲಿ ಸ್ಥಾಪಿಸಲ್ಪಟ್ಟ ಜ್ಯೋತಿಷ ಪಾಠಶಾಲಾಪರೀಕ್ಷೆಗೋಸ್ಕರ ಇಲ್ಲಿನ ವಿರಕ್ತಮಠದ ಶ್ರೀಗಳವರು ಮೇ॥ ದಾವಣಗೆರೆ ಹಿರೇಮಠದ ರುದ್ರಪ್ಪಶಾಸ್ತ್ರಿಗಳವರನ್ನು ಬರಮಾಡಿಕೊಂಡಿದ್ದರು. ತಾ॥ ೧ ರ ದಿವಸ ಇಲ್ಲಿನ ಪಾಠಶಾಲಾಧ್ಯಾಪಕರಾದ ಮೇ॥ ಹಾಲಪ್ಪಶಾಸ್ತ್ರಿಗಳವರಲ್ಲಿ ಅಧ್ಯಯನಮಾಡಿದ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿದರು. ಆ ಕಾಲಕ್ಕೆ ಶಿರಾಳಕೊಪ್ಪದ ವಿರಕ್ತಮಠದ ಶ್ರೀಗಳವರು ಅಧ್ಯಕ್ಷತೆಯನ್ನು ವಹಿಸಿದ್ದರಲ್ಲದೆ, ಈ ಪಾಠಶಾಲೆಯ ಮುಖ್ಯ ಚಾಲಕರಾದ ಮ॥ರಾ॥ ಸಾವಕಾರ ಅದಿವಪ್ಪಸೆಟ್ಟರು, ಮ॥ ಸಾವಕಾರ ನಂಜುಂಡಯ್ಯನವರು, ನಲ್ಲೂರು ಪಟೇಲ್ ಹಾಲಪ್ಪನವರು ಸೀರ್ಗೈ, ದಾವಣಗೆರೆ, ತರೀಕೆರೆ ಮೊದಲಾದ ಗ್ರಾಮಗಳ ಶ್ರೀಮಂತರುಗಳು ದಯಮಾಡಿಸಿದ್ದರು. ಪರೀಕ್ಷಾಂತ್ಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನವು ಹಂಚಲ್ಪಟ್ಟಿತು. ಅನಂತರ ದಾವಣಗೆರೆಯಲ್ಲಿ ಕಳೆದ ಶ್ರಾವಣಮಾಸದಿಂದ ಸ್ಥಾಪಿತವಾದ ವೀರಶೈವ ಹಿತೋಪದೇಶ ಸಂಘದ ಶಾಖಾಸಂಘವನ್ನು ಇಲ್ಲಿ ಸ್ಥಾಪಿಸಬೇಕೆಂದು ಮ॥ರಾ॥ ಹರ್ಡೀಕರ್ ಮಂಜಪ್ಪನವರು ಸ್ತುತಪಡಿಸಲು ಇಲ್ಲಿನ ವೀರಶೈವರು ಅನುಮೋದಿಸಿ ಇಲ್ಲಿನ ಶ್ರೀಮಂತ ಮ॥ ನಂಜುಂಡಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಹಾಲಪ್ಪನವರ ಮಠದ ಮುರಿಗೆಪ್ಪಯ್ಯನವರು ಕಾರ್ಯದರ್ಶಿಗಳಾಗಿಯೂ ಇರಲು ಅನುಮೋದಿಸಿದರು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿನ ಬೆಳಗಿನ ೮ ಗಂಟೆಗೆ ದಿವಾನ್‌ಬಹದ್ದೂರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರ ಸ್ವಾರಿಯು ದಯಮಾಡಿಸಲಾಗದಿದ್ದುದಕ್ಕಾಗಿ ಶಿವಮೊಗ್ಗ ಡಿ॥ ಡೆಪ್ಯುಟಿಕಮಿಷನರ್ ಸಾಹೇಬರು ಮತ್ತು ಮ॥ ಶ್ರೀನಿವಾಸರಾಯರು ವಿಷಾದವನ್ನು ಪ್ರದರ್ಶಿಸಿ ಸಭಿಕರ ಅರಿಕೆಯಂತೆ ಅಗ್ರಾಸನವನ್ನು ವಹಿಸಿದರು. ಆಗ್ಗೆ ಪ್ರಜಾಹಿತಚಿಂತಕರೂ, ದೈವಭಕ್ತಿನಿರತರೂ ಆದ ಅಮಲ್ದಾರ್ ಮ॥ ಶ್ರೀ ನರಸಿಂಹಶಾಸ್ತ್ರಿಗಳವರು ಸಭೆಯ ಉದ್ದೇಶವನ್ನೂ, ಈ ಪ್ರದರ್ಶನದಿಂದ ಪ್ರಜೆಗಳು ಪಡೆಯುವ ಸುಖಲಾಭಗಳನ್ನೂ, ಇದಕ್ಕಾಗಿ ತಮಗೆ ಸಹಾಯಕರಾಗಿ ವರ್ತಿಸಿದ ಶ್ರೀಮಂತ ಪ್ರಸಿಡೆಂಟ್ ಅದಿವಪ್ಪಸೆಟ್ಟರು ಶ್ರೀಮಂತ ನಂಜುಂಡಯ್ಯನವರು ಸೆಕ್ರೆಟರಿ ಮೇ॥ ನಾಗಪ್ಪಶಾಸ್ತ್ರಿಗಳು, ವೀರಪ್ಪನವರು ಮೊದಲಾದವರ ಶ್ರಮವನ್ನೂ ಕುರಿತು ಅಪ್ಪಣೆ ಕೊಡಿಸಿದನಂತರ ಅಧ್ಯಕ್ಷರು ಪ್ರದರ್ಶನದ ಬಾಗಿಲನ್ನು ತೆರೆದರು. ಈ ಪ್ರದರ್ಶನಮಂಟಪದಲ್ಲಿ ಪ್ರತಿದಿನ ಸಭೆಯಲ್ಲಿ ಆಯಾ ಶಾಖಾಧಿಕಾರಿಗಳಿಂದ ವ್ಯವಸಾಯ ಮತ್ತು ಕೈಗಾರಿಕೆಯ ವಿಷಯದಲ್ಲಿ ಉಪನ್ಯಾಸಗಳು ಜರುಗಿಸಲ್ಪಟ್ಟುವು. ತಾ॥ ೨ ರ ದಿವಸ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಅನೇಕ ಕಡೆಗಳಿಂದ ಬಂದ ವೀರಶೈವರೇ ಮೊದಲಾದವರಿಗೆ ಉಪದೇಶಪರವಾಗಿ ಸಾಯಂಕಾಲಕ್ಕೆ ಮೇ॥ ದಾವಣಗೆರೆ ರುದ್ರಪ್ಪಶಾಸ್ತ್ರಿಗಳಿಂದ ಪುರಾಣವೂ, ಬ್ರಹ್ಮಶ್ರೀ ಸಂಪಿಗೆ ಸಿದ್ಧಲಿಂಗಶಾಸ್ತ್ರಿಗಳವರ ಉಪನ್ಯಾಸವೂ ನಡೆದುವು. ತಾ॥ ೩ ರ ದಿನ ಚಿತ್ರದುರ್ಗದ ಶ್ರೀ ಜಗದ್ಗುರು ಸಂಸ್ಥಾನದ ಪ್ರತಿನಿಧಿಗಳಿಂದ ಇಲ್ಲಿನ ವಿರಕ್ತಮಠದ ಶ್ರೀ ಜಪ್ಪಣ್ಣಯ್ಯ ಸ್ವಾಮಿಗಳಿಂದ ಕೊಡಲ್ಪಡುವ ಫಲತಾಂಬೂಲಗಳನ್ನು ಸ್ವೀಕರಿಸಲು ಆತಿಥ್ಯವನ್ನು ಅನುಮೋದಿಸಿ ಮೆ॥ ಡೆ॥ ಕ॥ ಸಾಹೇಬ್ ಬಹದ್ದೂರ್‌ರವರ ಸ್ವಾರಿಯು ಸಾಯಂಕಾಲ ೩ ಗಂಟೆಗೆ ಕಲ್ಲುಮಠದಲ್ಲಿ ಸೇರಿದ್ದ ಸಭೆಗೆ ದಯಮಾಡಿಸಿತು. ಮೇ॥ ರುದ್ರಪ್ಪಶಾಸ್ತ್ರಿಗಳವರು ಡೆ॥ ಕ॥ ಮ॥ ಶ್ರೀನಿವಾಸರಾಯರವರಮೇಲೂ, ಅಮಲ್ದಾರ್ ಶ್ರೀ ನರಸಿಂಹಶಾಸ್ತ್ರಿಗಳಮೇಲೂ ಚಮತ್ಕಾರವಾಗಿ ಸಂಸ್ಕೃತದಲ್ಲಿ ತಾವು ರಚಿಸಿದ ಪದ್ಯಗಳನ್ನು ಹೇಳಿದರು. ಅನಂತರ ದಾವಣಗೆರೆ ಮ॥ ಮುದಿವಾಳಪ್ಪನವರು ತಮ್ಮ ಗಾಯನ ವೈಖರಿಯಿಂದ ಸಭಿಕರಿಗೆ ಅತ್ಯಾನಂದವನ್ನುಂಟುಮಾಡಿದರು. ಅನಂತರ ಮ॥ ಹರ್ಡೀಕರ್ ಮಂಜಪ್ಪನವರು ಆತಿಥ್ಯವನ್ನು ಸ್ವೀಕರಿಸಲು ದಯಮಾಡಿಸಿದ ಬಗ್ಗೆ ಮೆ॥ ಡೆ॥ ಕ॥ ಶ್ರೀನಿವಾಸರಾಯರಿಗೂ ಇತರ ಅಧಿಕಾರಿಗಳಿಗೂ ಚನ್ನಗಿರಿ ವೀರಶೈವ ಜನಗಳ ಪರವಾಗಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. ಆ ವೇಳೆ ಸಭೆಯು ವಿಸರ್ಜಿಸಲ್ಪಟ್ಟಿತು. ತಾ॥ ೪ ರ ದಿವಸ ಸಾವಕಾರ ಮ॥ ರಾ॥ ನಂಜುಂಡಯ್ಯನವರ ಸ್ವಗೃಹದಲ್ಲಿ ದಾವಣಗೆರೆ ವೀರಶೈವ ಮಹಾಜನಗಳಿಗೆ ಫಲತಾಂಬೂಲವನ್ನು ಕೊಡುವುದಕ್ಕಾಗಿ ಸಭೆಯು ಸೇರಿಸಲ್ಪಟ್ಟಿತ್ತು. ಆಗ್ಗೆ ಶ್ರೀಮಂತ ಹೊದಿಗೆರೆ ಅಡಿವಯ್ಯಸೆಟ್ಟರವರು, ಪಟೇಲ್ ಹಾಲಪ್ಪನವರು, ತರೀಕೆರೆ ದೊಡ್ಡಮನೆ ಮಹದೇವಪ್ಪನವರೇ ಮೊದಲಾದ ಅನೇಕ ಗ್ರಾಮಗಳ ಪ್ರಮುಖರು ದಯಮಾಡಿಸಿದ್ದರು. ಪುರಾಣ, ಉಪನ್ಯಾಸ, ಸಂಗೀತ ಮೊದಲಾದುವುಗಳಿಂದ ಸಭಿಕರಾನಂದಪಟ್ಟರು. ಆಗ್ಗೆ ಮ॥ರಾ॥ ರುದ್ರಪ್ಪಶಾಸ್ತ್ರಿಗಳವರು, ಹರ್ಡೀಕರ್ ಮಂಜಪ್ಪನವರು, ಸುಬ್ರಾಯಶಾಸ್ತ್ರಿಗಳೇ ಮೊದಲಾದವರು ಮ॥ ಅಮಲ್ದಾರ್ ನರಸಿಂಹಶಾಸ್ತ್ರಿಗಳವರ ಶ್ರಮವನ್ನೂ ಮ॥ ರಾ॥ ಅದಿವಪ್ಪಸೆಟ್ಟರವರ ನಂಜುಂಡಯ್ಯನವರ ಉದಾರ ಮತ್ತು ಇತರರಲ್ಲಿರುವ ಪರಸ್ಪರ ಪ್ರೀತಿಯ ಏಕಮತ್ಯವನ್ನು ಇಂತಹ ಘನವಾದ ಜಾತ್ರೆಯ ಕಾಲದಲ್ಲಿ ಸಹಾ ಪರಸ್ಥಳಗಳಿಂದ ಬಂದ ಎಲ್ಲಾ ಕೋಮಿನ ಜನಗಳಿಗೂ ಪಕ್ಷಪಾತವಿಲ್ಲದೆ ಸ್ವಜನರಂತೆ ಆದರಿಸುತ್ತ ದೇಹಶ್ರಮವನ್ನು ನೋಡದೆ ವೃದ್ಧಾಪ್ಯದಲ್ಲಿಯೂ ಇತರರ ಸುಖವನ್ನೇ ಸ್ವಸುಖವನ್ನಾಗಿ ಎಣಿಸಿ ಉಪಚಾರಮಾಡುತ್ತಾ ಇರುವ ಸಾವಕಾರ ನಂಜುಂಡಯ್ಯನವರ ಮಾತೃಶ್ರೀ ರುದ್ರಮ್ಮನವರ ಹಾಗೆ ಇತರ ಶ್ರೀಮಂತ ಶ್ರೀಯರು ವರ್ತಿಸಬೇಕೆಂದು ವಗೈರೆ ಉಪನ್ಯಾಸಗಳು ಜರುಗಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಶೈವ ಮತಸ್ಥರಿಗೆ ಅತ್ಯಾವಶ್ಯಕಗಳಾದ ಪುಸ್ತಕಗಳು.

ವೀರಶೈವಾಮೃತ ಪುರಾಣ ತಾತ್ಪರ್ಯ ಸಹಿತ ಕಾಂಡ ೪ ಭಾಗ ೨ ಕ್ಕೆ ರೂ.	೯-೦-೦
ಸಟೀಕಾ ಗಣಭಾಷ್ಯ ರತ್ನಮಾಲಾ	೧-೮-೦
ಸಿದ್ಧೇಶ್ವರವಚನ ವಿಜಯ ವಚನಕಾವ್ಯ	೧-೦-೦
ವೀರಶೈವಾಚಾರಬೋಧೆ	೦-೮-೦
ಶಿವಯೋಗರಹಸ್ಯ	೦-೨-೦
ಶಿವಮಹಿಮಾಶತಕ	೦-೨-೦

ಈ ಪುಸ್ತಕಗಳು ವೀರಶೈವ ಮತವನ್ನೂ ಲಿಂಗಾಂಗಸಾಮರಸ್ಯ ಷಟ್ಸ್ಥಲ ವಿಷಯಗಳನ್ನೂ ಕರತಲಾಮಲಕವಾಗಿ ಬೋಧಿಸುವವು. ಒಳ್ಳೆಯ ಮುದ್ರಣ, ಒಳ್ಳೆಯ ಕಾಗದ, ಒಳ್ಳೆಯ ಬೈಂಡ್ ಮಾಡಿರುವವು.

ಪುಸ್ತಕ ದೊರೆಯುವ ಸ್ಥಳ,—
ಬಸವಲಿಂಗಸ್ವಾಮಿ, ಹೊಸಮಠ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರೆಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಂಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಂಕ್ತಿ ೧ ಕ್ಕೆ ೧ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾಗಿ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಪ್ರತ್ಯೇಕವಾಗಿ ದರವು ಬೀಳುವುದು.

---

7 ಸರಸವಾದ ನೂತನಪುಸ್ತಕಗಳು.

ವಿರಕ್ತಳಾದ ರಾಧಾಮಣಿ—ನವರಸಭರಿತವಾದ ನವೀನಕಾದಂಬರಿ ೦-೩-೬; ಸಾಹಸಿಕೆ—ಚಮತ್ಕಾರವಾದ ಕಥೆ ೦-೨-೬; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ ೦-೧-೦. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦-೧-೬ ಶ್ರೀಹರಿಪ್ರಾರ್ಥನಾ ೦-೧-೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ಎ. ಶಾಸ್ತ್ರಿ, ಚಾಮರಾಜನಗರ.

ವಿವೇಕಮಂಜರಿ

8

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವವು ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ, ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚಿಗೆಗೊಳಗಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು ಬೆಲೆ ಬಲು ಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೩೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

ನೀತಿಮಂಜರಿ.

2

(ಎರಡನೆಯಾವೃತ್ತಿ ಸುಧಾರಿಸಿದುದು)

ಇದರಲ್ಲಿ ಅನೇಕ ನೀತಿಯ ವಿಷಯಗಳೂ, ಮನೋರಂಜಕ ವಿಷಯಗಳೂ ನಿಬಂಧರೂಪವಾಗಿ ಬರೆಯಲ್ಪಟ್ಟಿರುತ್ತವೆ ಇದರಲ್ಲಿ ಮುಖ್ಯವಾಗಿ ಸರ್ ಜಾನ ಲಬಕ್, ಚೆಸ್ಟರ್ ಫೀಲ್ಡ್, ಚೇಂಬರ್ಸ್, ಬೇಕನ್ನ ಮೊದಲಾದವರ ಗ್ರಂಥಗಳಿಂದಲೂ, ಹಿಂದುಸ್ಥಾನದ ಪ್ರಾಚೀನ ಮತ್ತು ಅರ್ವಾಚೀನ ಇತಿಹಾಸಗಳ ಮೇಲಿಂದಲೂ ನಿಬಂಧಗಳನ್ನು ಬರೆದಿರುತ್ತಿದ್ದು, ಈ ಪುಸ್ತಕವು ಆಬಾಲವೃದ್ಧ ಸ್ತ್ರೀಪುರುಷರಿಗೆ ಓದಲಿಕ್ಕೆ ಬಹಳ ಯೋಗ್ಯವಾಗಿರುತ್ತದೆ ಮುಂಬಯಿ ಸರ್ಕಾರದ ವಿದ್ಯಾಖಾತೆಯವರು ಇದನ್ನು ಇನಾಮಿನ ಪುಸ್ತಕವೆಂದು ಮಂಜೂರ ಮಾಡಿರುವುದರಿಂದ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಅವಶ್ಯವಾಗಿ ಓದತಕ್ಕದು. ೨ ನೆಯಾವೃತ್ತಿಯ ಪ್ರತಿಗಳು ಮಂಗಳೂರ ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿರುವುವು. ಪುಟಸಂಖ್ಯೆ ೧೭೯. ಬೆಲೆ ೬ ಆಣೆ. ಅಂಚೆಯ ವೆಚ್ಚ ೧ ಆಣೆ.

ಗ. ಹು. ಹೊನ್ನಾಪುರಮಠ
ವಕೀಲ, ಧಾರವಾಡ.

27 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ—ಬೆಲೆ ವಿ ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೮-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹತ್ವ ಪಂಚಾಚಾರವಿಚಾರ ಷಡ್ವರ್ಗಜಾತ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ಶಿವಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ಸರಳವಾದ ಲಿಂಗಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೦೭ ನೆ ಇಸವಿಯ ಪಾಕೆಟ್‌ಡೈರಿ.

37

(೧) ಕಾಗದ—ಹೆಚ್ಚು ಬಿಳುಪು, ನುಣುಪಾದ್ದು. (೨) ಬೈಂಡು—ಮನೋಹರವಾದ ಕ್ಯಾಲಿಕೋ ಎಂಬ ಬಟ್ಟೆಯಿಂದ ಮುಂತಾದ ಬಣ್ಣಗಳಲ್ಲಿ ಮಾಡಿದ್ದು. (೩). ಅಕ್ಷರ—ಸ್ಪಷ್ಟವಾದ್ದು. ಮುದ್ರೆಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡೀ ಕೆಂಪುರೂಲುಗಳಿರುವುದೂ, ಇದರ ಕೆಳಗೆ ಪುಟದ ಕೊನೆಯವರೆಗೆ ೨ ನೀಲಿರೂಲುಗಳಿರುವುದೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿ ರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

34 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನ್ನಡ.

ನೋಟೀಸ್.

4 ಜಾತಕ ಸುಧಾಕರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮಾರ್ಗವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತನಾನು ಅನೇಕ ಪುರಾತನ ಪರಿಶಂಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯದವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾಂಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಕರಗ್ರಂಥ ೧ ಕ್ಕೆ ರೂ ೦-೧೦-೦ ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತ.

ಸಂಪೂರ್ಣಜಾತಕವು.

ಸನ್ಮಿತ್ರರೆ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾಧಿಫಲಭಾವಕುಂಡಲಿ ಅಷ್ಟಕವರ್ಗ ದಿಂದಶೋಧನೆ ತ್ರಯೋದಶವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥೆಗಳನ್ನು ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರೆವಿಗು ಅಂತರ್ದಶಾದಿ ಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೫೦-೬೦ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦-೦-೦.

ಪ್ರಶ್ನಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆ ಇರುವುದರಿಂದ ಜಾತಕವನ್ನು ಬರೆಸಲು ಕಷ್ಟಪಡುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ವಯಸ್ಸನ್ನು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನವೇಳೆಯನ್ನ ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರೆವಿಗು ಬರೆದು ಕಳಿಸುತ್ತೇವೆ. ಪ್ರಶ್ನಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿವಸದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಕರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ವುಚಿತವಾಗಿ ಕೊಡುತ್ತೇವೆ. ಪ್ರಶ್ನಜಾತಕವನ್ನು ಬರಿಸಿದವರಿಗುಸಹ ದೊರೆಯುತ್ತವೆ. ಜಾತಸುಧಾಕರ ವೀರಶೈವಮತಬೋಧಿನಿ ಯಾವದಾದರು ತರ್ರಿಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಾವತ್ತಕಿಮ್ಮತು ವಿ. ಪಿ. ಸಹಿತವಿರುತ್ತೆ.

ನಮ್ಮ ವಿಳಾಸ:—
ಯಸ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

ಬರುವ ಮೆ ತಿಂಗಳು ಅಖೈರು ವರೆಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವೆಂದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತ ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬದದು ಸರ್ವರಿಗೂ ತಿಳಿದವಿಷಯವೇ ಸರಿ ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟ್ ಬಂಗಾರದ ವಾಚ್ ಸರಪಣಿ (2) ಉತ್ತಮ [illegible] (3) ನಾಜೂಕಾದ ಕೆರವಸ್ತ್ರ (4) ಲೆವಂಡರ್ ವಾಟರ್ ಎಂಬ ಪರಿಮಳ ವಾಸನೆ ದ್ರವ್ಯತುಂಬಿದ ಶೀಷೆ (5) ಷೋಕ್ ಉಂಗರ (6) [illegible]ಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟ್ ಬಂಗಾರದ ನಾಗೆರು (8) ಎಲೆಕ್ಟ್ರಿಕ್ ಗಿಲ್ಟ್ ಶಾವಂತಿಗೆ ಹೂವು (9) ಫೌಂಟನ್ ಪೆನ್ (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವಳ್ಳಿ ಡಬ್ಬಿ (ಡಬ್ಬಿಯನ್ನು ತೆರೆದರೆ ಹಾವು ಇರುತ್ತದೆ) (12) [illegible] ಗೊಂಬೆ ಸಹ

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ— ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂಬರು 7 [illegible]
ಮದ್ರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨ ೪-೦ ರೂ. ಆಗುತ್ತದೆ ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯಾಗುತ್ತ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನು ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನು ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೦-೧-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

23

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ವ್ಯಾಯೋಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಶಾಪೇಟಿಟ್ಟೆಯು ಹೆಚ್ಚಾಗಿ ಸಂತತಿ ಫಲಿಣಿಕೆ ಯೋಗ್ಯವಾದ ಧಾತುವಾಗುತ್ತದೆ. ಜಗವೈಷಮ್ಯದಿಂದ ಅಥವಾ ಯೌವನದಾನದರೊಂದು ಕಾರಣದಿಂದ ನರದುರ್ಬಲತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಪುಷ್ಟ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗೇ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧|| ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರು ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ನಿಂಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

78

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೨೦ ಮಾತ್ರೆ ಸೀಸೆ ೦-೪-೦., ೫೦ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೦ ಮಾತ್ರೆ ಸೀಸೆ ೦-೧೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೦-೮-೦.

ಪಕ್ವಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೨೦ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೦-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೨೦ ದಿನಗಳ ಔಷಧಿ ೦-೧೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೫೦ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦.

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ನೆಯ ಇಸವಿ ಫೆಬ್ರವರಿ ತಾ|| ೨೬ ರಿಂದ ೧೯೧೨ನೆಯ ಮಾರ್ಚಿ ತಾ|| ೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಫಾಲ್ಗುಣ ಶು|| ಅಷ್ಟಮಿಯಿಂದ ಫಾಲ್ಗುಣ ಶು|| ಪೌರ್ಣಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ತೇದಿ
26	ಸೋ	ಅ	3-36	ಉಷರಿ	55-30	15
27	ಮಂಗ	ದ	53-2	ಮೃಗಶಿರ	15-50	16
28	ಬುಧ	ಏ	47 6	ಆರಿದ್ರ	11 48	17
29	[1]ಗುರು	ದ್ವಾ	41-2	ಪುನರ್ವ	7-27	18
1	[2]ಶುಕ್ರ	ತ್ರ	35 12	ಪುಷ್ಯ	3-30	19
2	[3]ಶನಿ	ಚ	29-50	ಮಖ	56 0	20
3	[4]ಭಾನು	ಪೌ	24-48	ಪುಬ್ಬ	53 10	21

(1) ನೃಸಿಂಹದ್ವಾದಶಿ, ತೊಂಡನೂರು ಗೋಪಾಲಕೃಷ್ಣ ರಥ. (2) ಚಾಮರಾಜೇಶ್ವರರಥ, ಚಂದ್ರಪುರದ ಚಂದ್ರಮೌಳೀಶ್ವರ ರಥ. (3) ಕಾಮದಹನ, (4) ಹೋಳಿಕೋತ್ಸವ, ಪ್ರಸನ್ನ ನಂಜುಂಡೇಶ್ವರ ರಥ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

4

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು.

ಸಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

44



ಲೋಕಾಮಯಾಪಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಲದಲ್ಲಿಯೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. **ಪ್ಲೇಗಿನೌಷಧ.**— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ ಹೊಗಳಿಕೆಯಲ್ಲ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ ೧ ಗೆಡ್ಡೆ ಮೊದಲಾದವಳೆ ಸವರುವ ಡಬ್ಬಿ ೧ ಕ್ಕೆ ಆ ೮. ಏರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದದು. ಇದನ್ನು ಉಪಯೋಗಿಸಿದವರೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸ್ವ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸ್ವ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಮೌಷಧಶಾಲಾ,
ಮೈಸೂರು.

REGISTERED NO. M 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಪಿತೃಪಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ಸ೧೯೧೨ ನೆಯ ಇಸವಿ ಮಾರ್ಚಿ ತಾರೀಖು ೪ ನೆಯ ಸೋಮವಾರ. [ಸಂಚಿಕೆ ೧೦

ಸಂತೋಷಕರವಾದ ಪ್ರಕಟನೆ! ಸರ್ವರೂ ಓದಿ ಪ್ರೋತ್ಸಾಹಕೊಡಿರಿ !!

5 ☞ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಮೈಸೂರ್.

ನಮ್ಮ ಪದಾರ್ಥವನ್ನು ನಾವು ಹೊಗಳಿ ಪ್ರಯೋಜನವೇನು? ನೀವು ಅನೇಕ ಕಡೆಯಿಂದ ತರಿಸಿರಬಹುದು. ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ಸೀಮೆಯಿಂದ ರಖಂವಾರ್ ವಾಚುಗಳ ಹೊಸಗುಡ್ಸು ಬಂದಿರುವುದರಿಂದ ಬೆಲೆಯನ್ನು ಬಹಳ ಕಡಮೆಮಾಡಿದ್ದೇವೆ. ಆದ್ದರಿಂದ ಪ್ರತಿನಿತ್ಯವೂ ಅನೇಕ ಆರ್ಡರ್‌ಗಳು ಬಂದು ದರ್ಜಗಟ್ಟಲೆ ಬಿಕರಿಯಾಗುತ್ತಾ ಇವೆ. ಇಂಥಾ ಸಮಯವನ್ನು ಕಳೆದುಕೊಳ್ಳದೆ ಸರ್ವರೂ ಜಾಗ್ರತೆ ಆರ್ಡರ್‌ಕೊಟ್ಟು ತರಿಸಿಕೊಳ್ಳಿರಿ. ವಾಚಿನ ತಪ್ಸಿಲ್:— ರಾಸ್ಕೋಫ್ ಸಿಸ್ಟಂವಾಚ್ ೧ ಕ್ಕೆ ೨-೮-೦; ಗಟ್ಟಿಂ ರೈಲ್ವೇರೆಗ್ಯುಲೇಟರ್‌ವಾಚ್ ೧ ಕ್ಕೆ ೩-೮-೦; ಸುಂದರವಾದ ಪ್ಲಾಟ್‌ವಾಚ್ ೧ ಕ್ಕೆ ೫-೮-೦; ಕ್ವೀನ್‌ವಾಚ್ ೧ ಕ್ಕೆ ೬-೮-೦; ಜ್ಯುಬಿಲ್‌ಪ್ರೆಸ್‌ವಾಚ್ ಎಂಬ ಗ್ಯಾರೆಂಟಿಯಾದ ವಾಚ್ ೧ ಕ್ಕೆ ೮-೮-೦, ಒಂದುಸಾರಿ ಬೀಗಕೊಟ್ಟರೆ ೮ ದಿವಸದವರಿಗೂ ವ್ಯತ್ಯಾಸವಿಲ್ಲದೆ ನಡಿಯತಕ್ಕ ವಾಚ್ ೧ ಕ್ಕೆ ೧೦-೮-೦; ನಮ್ಮ ಹಿಂದೂದೇವರ ಫೋಟೋಗಳು ತಮ್ಮಷ್ಟಕ್ಕೆತಾವೆ ತಿರುಗುತ್ತಾ ಘಂಟೆ ನಿಮಿಷಗಳನ್ನು ಸಹ ತೋರಿಸುವ ವಾಚ್ ೧ ಕ್ಕೆ ೬-೮-೦; ಘಂಟೆ ನಿಮಿಷ ಸೇಕೆಂಡ್ ತೋರಿಸಿ ತಾರೀಖು ಸಹ ತೋರಿಸುವ ವಾಚ್ ೧ ಕ್ಕೆ ೫-೧೨-೦; ಮತ್ತೂ ಮೇಲ್ಕಂಡವೆಲ್ಲಾ ಇದ್ದು ವಾರಾ ತಾರೀಖು ತಿಂಗಳು ಪೂರ್ಣಮಿ ಅಮಾವಾಸ್ಯೆ ಇವೆಲ್ಲಾ ತೋರಿಸುವ ವಾಚ್ ೧ ಕ್ಕೆ ೧೨-೪-೦; ಸುಂದರವಾದ ಟೇಬಲ್ ಗಡಿಯಾರ ಘಂಟೆ ಅರ್ಧಘಂಟೆ ಸಹ ಹೊಡೆಯುತ್ತೆ ಕ್ರಯ ೧ ಕ್ಕೆ ೪-೧೨-೦; ಡಿಟೋ ಅಲಾರಂ ಸಹಾ ಇರುವುದಕ್ಕೆ ೫-೪-೦; ಮನೋಹರವಾಗಿ ಗಾನಮಾಡುವ ಕ್ಲಾಕ್ ೧ ಕ್ಕೆ ೫-೮-೦; ಸಾದಾ ಟೈಂಪೀಸ್ ೧ ಕ್ಕೆ ೧-೪-೦; ಅಲಾರಂ ಇರತಕ್ಕದ್ದು ೨-೪-೦; ಅಮೇರಿಕನ್ ಅನ್ಸೋನಿಯಾ ಅಲಾರಂ ಟೈಂಪೀಸ್ ೧ ಕ್ಕೆ ೩-೮-೦; ಅನ್ಸೋನಿಯಾ ದೊಡ್ಡ ಟೈಂಪೀಸ್ ಘಂಟೆ ಅರ್ಧಘಂಟೆ ಹೊಡೆದು ಅಲಾರಂಸಹ ಇರತಕ್ಕದ್ದು ೬-೧೨-೦; ವಾಚ್‌ಸರಪಣಿಗಳು ೪ ಆಣೆ ಲಾಗಾಯ್ತು ನಾಲ್ಕು ರೂಪಾಯಿ ವರಿಗೂ ಇದೆ ಯೆಷ್ಟು ಖರೀದಿಯಲ್ಲಿ ಬೇಕಾದರೂ ಖಾತ್ರಿಯಿಂದ ರವಾನಿಸುತ್ತೇವೆ ಬೆಳ್ಳಿ ಸರಪಣಿ ೨|| ತೊಲ ಲಾಗಾಯಿತು ೪ ತೊಲದ ವರೆಗೆ ಇದೆ. ತೊಲ ೧ ಕ್ಕೆ ೧-೪-೦. ಮತ್ತು ವಾಚ್‌ರಿಪೇರಿಂಗ್ ಡಿಪಾರ್ಟ್‌ಮೆಂಟನ್ನೂ ಸಹ ಇಟ್ಟಿರುತ್ತೇವೆ. ಪರಸ್ಥಳದಿಂದ ರಿಪೇರಿಗಾಗಿ ಬರತಕ್ಕ ವಾಚ್‌ಗಳಿಗೆ ಸರಿಯಾದ ಚಾರ್ಜಿಗೆ ರಿಪೇರಿಮಾಡಿ ರವಾನಿಸಲಾಗುತ್ತೆ. ವಾಚಿನ ಬಿಲ್ಲೆಸಾಮಾನುಗಳೂ ವಾಚ್ ರಿಪೇರಿಂಗ್ ಆಯುಧಗಳೂ ರಖಂವಾರ್ ಗಂಧದಬಿಲ್ಲೆ ಊದುಬತ್ತಿ ಅತ್ತರ್ ಪನ್ನೀರು ತಲೆಗೆ ಹಚ್ಚತಕ್ಕ ರಖಂವಾರ್ ಸುವಾಸನೆ ಯಣ್ಣೆಗಳೂ ಸಹ ನಮ್ಮಲ್ಲಿ ದೊರೆಯುತ್ತವೆ. ನಮ್ಮಷ್ಟು ಕಡಮೆ ಬೆಲೆಗೆ ಮತ್ತ್ಯಾರಲ್ಲೂ ದೊರೆಯುವದಿಲ್ಲಾ ಖಂಡಿತ ತಿಳಿಯಿರಿ

ರಾತ್ರಿಯವೇಳೆ ಎಂತಹ ಕತ್ತಲೆಯಲ್ಲಿ ನೋಡಿದಾಗ್ಯೂ ದೀಪದ ಅವಶ್ಯವಿಲ್ಲದೆ ಇಷ್ಟೇಗಂಟೆಯೆಂಬುವದನ್ನು ತೋರಿಸುವ ಹೊಸನಮೂನೆವಾಚ್ ಬಂದಿದೆ. ಸ್ಟೀಲ್‌ಕೇಸ್ ವಾಚ್ ೧ ಕ್ಕೆ ೨೪-೦-೦; ಡಿಟೋ ಅಚ್ಚುಬೆಳ್ಳಿಯ ಕೇಸ್ ವಾಚ್ ೧ ಕ್ಕೆ ೬-೮-೦. ಈ ವಾಚ್ ಬೇಕಾದವರು ೨ ರೂಪಾಯಿ ಅಡ್ವಾನ್ಸಾಗಿ ರವಾನಿಸಬೇಕು. ೫ ರೂ. ಗೆ ೧ ಬೈಸಿಕಲ್, ೪ ಆಣೆಗೆ ೧ ವಾಚ್ ಸಿಕ್ಕುವಹಾಗೆ ಮಾಡಿದೇವೆ. ಈ ವಿಷಯವನ್ನು ತಿಳಿಯಲಪೇಕ್ಷಿಸುವವರು ಅರ್ಧಾಣೆ ಲೇಬಿಲ್ಲನ್ನ ನಮ್ಮ ವಿಳಾಸಕ್ಕೆ ರವಾನಿಸಬೇಕು.

೧೯೧೨ ನೇ ಇಸವಿ ಕೊನ್ಯ ಕ್ಯಾಲೆಂಡರ್ ೧ ಕ್ಕೆ ೩ ಪೈ. ೧೦೦ ಕ್ಕೆ ೧-೩-೦. ಟಪಾಲ್ ಖರ್ಚ ಮಾಫಿ.

ನಮ್ಮ ವಿಳಾಸ:— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್‌ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ
ಮೈಸೂರು.

1

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಬಳಿಕೆ ೨-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

28

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾಭಿಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಸ್ತೋತ್ರಾದಿಗಳಿವೆ. ೬ ಆಣೆ. ಸಹಿತ

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದ ೧೫ [illegible]

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ [illegible] ಪುಟಗಳು [illegible]

ಎಸ್. ಆರ್. [illegible]
ಗ್ರಂಥಪ್ರಕಾಶಕರು [illegible] ಮೈಸೂರು.

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ.]

ಆ ರಕ್ಕಸನು ಆ ಮಾತಂ ಕೇಳಿ ಮರುಳಾಗಿ ಹಾಗೇ ಆಗಲಿ ನನ್ನ ಮಂದಿರದಲ್ಲಿ ಬೇಕಾದ ವಸ್ತುಗಳಂ ತಂದು ಮಡಗಿರುವೆನು, ನೀನು ವ್ರತವಂ ಯಥಾಶಾಸ್ತ್ರವಾಗಿ ನಡೆಸೆಂದು ನುಡಿದು ದೂರದೂರವಾಗಿರುತ ತನ್ನ ಮನದೊಳ್ ಆರು ಮಾಸಂಗಳು ಎಂದಿಗಾಗುವುವೋ? ಎಂದು ಚಿಂತಿಸುತ್ತಿರಲು, ಅವನ ಮನೋಗತವಂ ತಿಳಿದು ಆತನ ಮಂತ್ರಿಯಾದ ವಜ್ರದಂಷ್ಟ್ರನು ತನ್ನ ದೊರೆಯೊಡನೆ ಎಲೈ ರಾಕ್ಷಸರಾಯನೇ! ಕೇಳು, ನಿನ್ನ ಕರಗತಳಾಗಿರುವ ಈ ಬಾಲೆಯು ಎಲ್ಲಿ ಪೋಗುವಳು? ಲೋಕದೊಳ್ ಕವಿತ್ವವು, ವನಿತೆಯು ತಾನಾಗಿ ಒಲಿದರೆ ಸರಸವಾಗಿರುವುದು, ಆದುದರಿಂದ ಈ ಕನ್ನೆಯ ಮನೋನುಕೂಲವಾಗಿ ಆರುತಿಂಗಳು ವ್ರತ ಸಂಪೂರ್ಣವಾಗಿ ನಡೆಯುವುದು ಉಚಿತವೆಂದು ಪೇಳಲಾ ಮಾತಂ ಕೇಳಿ, ಆ ರಾಕ್ಷಸನು ನನ್ನಂ ನಿರ್ಬಂಧಪಡಿಸದೆ, ದಿನದಿನದೊಳ್ ಸಖಿಯರ ಮುಖದಿಂದ ನನ್ನಂ ವಿಚಾರಿಸುತ, ವ್ರತದಿನಂಗಳನ್ನೆಣಿಸುತಲಿರುವನು. ನಾನು ತ್ರಿಕಾಲದಲ್ಲೂ ಗೌರೀದೇವಿಯ ಆರಾಧನೆಯಂ ಮಾಡುತ ಕಾಲವಂ ಕಳೆಯುತ, ವ್ರತವು ಸಾಂಗವಾದ ನಂತರ ದೇವಿಯು ಪ್ರಸಾದವಂ ದಯೆಮಾಡದಿದ್ದರೆ ದೇಹವಂ ತ್ಯಜಿಸಬೇಕೆಂದು ಇದ್ದೆನು. ಈಗಲಾ ದೇವಿಯ ಪ್ರಸಾದದಿಂದಲೂ, ನನ್ನ ಪೂರ್ವಪುಣ್ಯಾತಿಶಯದಿಂದಲೂ, ನನ್ನ ತಾಯಿತಂದೆಗಳ ಪ್ರಭಾವದಿಂದಲೂ, ದೈವಗತಿಯಿಂದಲೂ ಬಂದ ನಿನ್ನಂ ಕಂಡು ಮತ್ತೂ ನಿನ್ನ ಸಾಹಸವಂ ನೋಡಿ ಯನ್ನ ಕ್ಲೇಶವಂ ಪರಿಹರಿಸುವುದಕ್ಕೆ ಸಮರ್ಥನೆಂದರಿತು ನಿನ್ನನ್ನೇ ಪತಿಯಾಗಿ ವರಿಸಿರುವೆನು ಎಂದು ನುಡಿದು, ಮುತ್ತಿನಸರಂಗಳಂತೆ ಕಂಬನಿಗಳಂ ಬಿಡುತ ಗದ್ಗದ ಸ್ವರದಿಂದ ನಿನ್ನ ಮರೆಯಂ ಹೊಕ್ಕಿರುವ ನನ್ನಂ ಎಂತು ಮಾಡಿದರೂ ಆ ಕೀರ್ತಿ ನಿನ್ನದೇ ಎಂದು ನಿಟ್ಟುಸಿರಂ ಬಿಡಲು ಆಗ ಸುಗಂಧರಾಜೇಂದ್ರನು ಆ ಬಾಲೆಯನ್ನು ನೋಡಿ ಶಿವಶಿವಾ! ನಿನ್ನೊಳಗೆ ಈ ಸಂಕಟವಂಗೊಂಡು ನನ್ನ ಮುಖಕಾಂತಿಯು ಕಂದಲಿಲ್ಲ, ಇಂತು ಸುಕುಮಾರಾಂಗಿಯಾದ ನಿನ್ನಂ ಆ ದುಷ್ಟ ರಾಕ್ಷಸನು ಎತ್ತಿಕೊಂಡು ಹೋಗುವಂತೆ ಮಾಡಬಹುದೇ? ದೈವವೆಂದು ನನ್ನ ಮನದೊಳ್ ಚಿಂತಿಸಿದೆನು. ನಿನ್ನ ಮಲಿನ ವಸ್ತ್ರವಂ, ಬಳಲಿರುವ ಶರೀರವಂ, ಕಟ್ಟಿರುವ ಕೇಶಭಾರವಂ ಸಹಾ ನೋಡಲು ನನಗೆ ನೀನು ಪೇಳಿದ ಸಂಶಯವು ಪುಟ್ಟಲಾರದೆಂದು ನುಡಿದು ಅವಳ ಕೈಪಿಡಿದು ತನ್ನಂಕದೊಳ್ ಕುಳ್ಳಿರಿಸಿ, ಕುರುಳುಗಳನ್ನೇವರಿಸುತ, ಎಲೈ ಪ್ರಾಣವಲ್ಲಭೆಯೆ! ಕೇಳು, ನಿನಗೆ ಅಪರಾಧವಂ ಮಾಡಿದ ಆ ರಾಕ್ಷಸನಂ ಭೂತಂಗಳಿಗೆ ಆಹುತಿಯಂ ಕೊಡುವೆನೆಂದು ಅಭಯವನ್ನೀಯಲು, ಕುಸುಮಲತೆಯು ಇಂದಿನವರೆಗೆ ನನ್ನ ಮನಶ್ಶಾಂತವೆಲ್ಲವೂ ತೀರಿತೆಂದು ಅತಿ ಸಂತೋಷವಂ ಪಟ್ಟು ಎನ್ನೊಡೆಯನೇ! ಇನ್ನೊಂದು ಬಿನ್ನಪವಂ ಮಾಡುವೆನು, ಚಿತ್ತದೊಳ್ ಬ್ಯಾಸರಂಗೊಳ್ಳಲಾಗದು. ಈ ಕ್ರೂರನಾದ ಜಂರುಹಾವೆನಾರುತನ ನಗರಿಯಂ ಕುರಿತು ನೀವು ದಯಮಾಡುವುದಕ್ಕೆ ನಿಮಿತ್ತವೇನೆಂದು ನುಡಿದು, ಮತ್ತೂ ಯಾವಯಾವ ದೇಶಂಗಳು ನಿಮ್ಮಿಂದ ಪಾಲಿತಂಗಳಾಗಿರುವವು ಇದಂ ಪೇಳಬೇಕೆಂದು ಬೇಡಲು, ಆ ಮಾತಂ ಕೇಳಿ ರಾಜೇಂದ್ರನು ಪೇಳಲುಜ್ಜುಗಿಸಲಷ್ಟರೊಳ್ ಕುಸುಮಲತೆಯ ಸಮೀಪದೊಳಿರ್ದ ಕುಶಲೆಯಾದ ಒಬ್ಬ ಸಖಿಯು, ಎಲೈ ಅರಸಿಯೇ ಕೇಳು, ಈ ಮಹಾರಾಜೇಂದ್ರನು ಈ ನಗರಿಯಂ ಕುರಿತು ಬಂದಿರುವ ಪರಿಯಂ ವಿಸ್ತಾರವಾಗಿ ಪೇಳುವೆನು. ಭರತಖಂಡದೊಳ್ ಕುಲಪರ್ವತವಾದ ಸಹ್ಯಗಿರಿಗೆ ಕಿರೀಟರೂಪವಾದ ಕರ್ನಾಟಕ ದೇಶವನ್ನಾಳುವ ವಸುಚರಿತ್ರ ಮಹಾರಾಯನಂ ನೀನು ಕೇಳಿರುವೆಯಷ್ಟೆ. ಆ ರಾಯನ ಧರ್ಮಪತ್ನಿಯಾದ ಗುಣವತಿದೇವಿಯ ಗರ್ಭದಲ್ಲಿ ಶ್ರೀ ದೇವಿಯ ವರಪ್ರಸಾದದಿಂದ ಅವತರಿಸಿದ ಈ ಮಹಾರಾಜನು ಸಕಲ ವಿದ್ಯಂಗಳಂ ಕಲಿತು ಹತ್ತಾರು ಲಕ್ಷ ಸಂಖ್ಯೆಯುಳ್ಳ ಅಕ್ಷೌಹಿಣೀ ಸೇನಾ ಸಮೇತನಾಗಿ ಬಂದು ಮಹಾರಾಷ್ಟ್ರಾದಿ ದೇಶಂಗಳಂ ಜಯಿಸಿಕೊಂಡು ಬರುವಾಗ ಕಳಿಂಗ ದೇಶದೊಳ್ ನಮ್ಮ ವಿಜಯವರ್ಮರಾಯನ ಕುಮಾರಿಯಾದ ಸೌಗಂಧಿಕಾದೇವಿಯ ವಿವಾಹಾರ್ಥವಾಗಿ ಸ್ವಯಂವರವಂ ಸಾರಿದರಂತೆ. ಆಗ ಅಲ್ಲಿ ಸಕಲ ದೇಶದ ಅರಸುಗಳು ಕೂಡಿರುವಾಗ ಸೌಗಂಧಿಕಾದೇವಿಯು ಎಂಟು ಪಣಂಗಳಂ ಕುರಿತು ಆ ಪಣಂಗಳಂ ತಂದಿತ್ತ ರಾಜಕುಮಾರನಂ ವರಿಸುವೆನೆಂದು ಪ್ರತಿಜ್ಞೆಯಂ ಮಾಡಿರುವಳಂತೆ. ಇದಂ ಕೇಳಿ ಸಕಲ ಭೂಪಾಲರೂ ಅಶಕ್ಯವೆಂದು ಪೇಳುತ್ತಿರಲು ಈ ಸತ್ಯಪರಾಕ್ರಮನು ತಾನು ಎಂಟು ಪಣಂಗಳಂ ಒಪ್ಪಿಸುವೆನೆಂದು ಆ ರಾಜಸಭೆಯೊಳ್ ಪಂಥವಂಗೈದು, ವಜ್ರದಂತಿರುವ ಅಸಾಧ್ಯವಾದ ಒಂದು ಆಯುಧ ವಿಶೇಷವಂ ಇಲ್ಲಿಯೇ ಒಂದು ಪಣವಾಗಿ ಎತ್ತಿ ತನ್ನ ಭುಜಬಲವಂ ತೋರಿ ಇದಲ್ಲದೆ ಚತುರ್ದಂತವಾದ ಬಿಳಿಯ ಆನೆಯಂ ತಂದಿತ್ತು, ಮತ್ತೂ ರೆಕ್ಕೆಗಳುಳ್ಳ ಕುದುರೆಯಂ ತರುವೆನೆಂದು ಈ ನಗರವಂ ಕುರಿತು ಬಂದಿರುವನಂತೆ. ಇಂತಿರ್ಪ ಪ್ರತಾಪಶಾಲಿ ಲೋಕೈಕವೀರಂಗೆ ಯಾವ ಪಣವು ಅಶಕ್ಯವಾಗುವುದು? ನಮ್ಮ ಸೌಗಂಧಿಕಾದೇವಿಗೆ ಈತನೇ ಪತಿಯಾಗುವನು, ಸಂದೇಹವಿಲ್ಲ. ಅದುಕಾರಣ ನಮಗೆ ಬಹು ಸಮೀಪ ಬಂಧುವಾಗಿರುವಾಗ ವಿಚಾರವಂ ಗೈವುದೇನು? ಈ ವೃತ್ತಾಂತವೆಲ್ಲವಂ ಈ ಮಹಾರಾಜನ ಮಂತ್ರಿಯಾದ ಸುಮತಿಯಿಂ ತಿಳಿದು ಬಂದಿರುವೆನು. ನಿನ್ನ ಪುಣ್ಯವು ಈಗ ಶರಗಿನೊಳ್ ಕಟ್ಟಿದ ಭಂಗಾರದಂತೆ ಫಲಿಸಿತು ಎಂದು ನುಡಿಯಲು, ಸುಗಂಧರಾಜಭೂಪಾಲನು ಮಹಾ ಪ್ರೌಢೆಯಾದ ಆ ಕೆಳದಿಯ ಮಾತಂ ಕೇಳಿ ಎಲೈ ಸಖಿಯೆ! ಕಳಿಂಗರಾಜಪುತ್ರಿಗೂ ಈ ಕುಸುಮಲತೆಗೂ ಎಂತು ನಂಟತನವೆಂದು ಕೇಳಲು, ಆ ಸಖಿಯು ಎಲೈ ಸ್ವಾಮಿಯೇ ಈ ಈರ್ವರ ಅರಸಿಯರ ತಾಯಿಗಳಾದ ಸುಲೋಚನಾದೇವಿಯು, ಅನಂಗಲೇಖೆಯೂ ಅಕ್ಕತಂಗಿಯರೂ ಆ ನಂಟತನವು ನಿನಗೋಸುಗವೇ ಮಾಡಿದಂತೆ ಘಟನೆಯಾಗಿರುವುದು. ಇನ್ನು ಮಾತುಗಳಂ ಸಾಕುಮಾಡಿ ವೇಗದಿಂ ಮಂಗಳಸ್ನಾನಕ್ಕೆ ಚಿತ್ತೈಸಬೇಕೆಂದು ವಿಜ್ಞಾಪನೆಯಂಗೈಯಲು, ಅಲ್ಲಿರುವ ಸಖಿಯರೆಲ್ಲರೂ ಕೂಡಿ, ಕುಸುಮಲತಾದೇವಿ, ಸುಗಂಧರಾಜೇಂದ್ರರೀರ್ವರಿಗೂ ಅಕ್ಷತೆಯನ್ನಿಟ್ಟು ಎಣ್ಣೆಯನ್ನೊತ್ತಿ ಪನ್ನೀರಿನಿಂ ಜಳಕವಂ ಮಾಡಿಸಿ, ವಸ್ತ್ರಾಭರಣಗಳಿಂದ ಈರ್ವರಂ ಅಲಂಕರಿಸಿ, ಆ ಬಳಿಕ ಶಾಸ್ತ್ರೋಕ್ತವಾಗಿ ಗಂಧರ್ವ ವಿವಾಹವಂ ಗೈದು ಸತಿಪತಿಗಳೀರ್ವರಿಗೂ ಮಧುರಾನ್ನಂಗಳಂ ಮಂಪೇಯಿತೆಯೊಳ್ ಭೋಜನವಂಗೈಸಿ, ಶಯ್ಯಾಗೃಹವಂ ಅಲಂಕರಿಸಿ, ಭೋಗಯೋಗ್ಯಂಗಳಾದ ಗಂಧಪುಷ್ಪ ತಾಂಬೂಲಗಳನ್ನಿರಿಸಿ, ರಾಜೇಂದ್ರನೊಡನೆ ಎಲೈ ಸ್ವಾಮಿಯೇ! ಇದು ಶುಭ ಸಮಯವೆಂದು ಬಿನ್ನವಿಸಲಾಗ, ಸುಗಂಧರಾಜೇಂದ್ರನು ಭೋಗದೊಳಾಸಕ್ತನಾಗಿ ಸುಮತಿಯಂ ಕರೆದು ಎಲೈ ಸುಮತಿಯೆ! ಯಕ್ಷನು ಯಾವಾಗ ಬಂದು ಏನು ಪೇಳುವನೋ ಅದಂ ತಿಳಿಯಲೋಸುಗ ಜಾಗರೂಕನಾಗಿರೆಂದು ಪೇಳಿಕಳುಹಿ, ತಾನು ಶಯ್ಯಾಗೃಹವಂ ಸೇರಿ ಮಣಿಮಂಚದೊಳ್ ಕುಳಿತು, ಕುಸುಮಲತೆಯು ಒಪ್ಪಿಸುವ ಕಪ್ಪುರವೀಳ್ಯವಂ ಸವಿಯುತ, ಅವಳಂ ಮಾತುಮಾತಿಗೆ ಆನಂದಪಡಿಸುತ, ಮದನಸಾಮ್ರಾಜ್ಯಕ್ಕೆ ಪಟ್ಟವಂ ಕಟ್ಟಿದ ಮೊದಲು ವಿಚಾರಣೆಯಂತೆ ದಿನಕ್ರಮವಾಗಿ ವಿಲಾಸಂಗಳು ಅಧಿಕವಾಗಿ ಸುಖದಿಂದಿರುತಿರ್ದು, (ಸಶೇಷ)

ಮೈಸೂರು ದೇಶದಲ್ಲಿ ಹಸುರು ಗೊಬ್ಬರವನ್ನು ಹಾಕುವಿಕೆ.

ಮೈಸೂರು ಸರ್ಕಾರದ ಕ್ರಿಮಿಶಾಸ್ತ್ರಜ್ಞರಾದ ಡಾಕ್ಟರ್ ಲೆಸ್ಲಿ ಸಿ. ಕೋಲ್ಮನ್‌ರವರು (Dr. Leslie C. Coleman, M. A. PH. D) ಮೈಸೂರು ಸಂಸ್ಥಾನದಲ್ಲಿ ಪೈರುಗಳಿಗೆ ಹಸುರು ಗೊಬ್ಬರವನ್ನು ಹಾಕುವ ವಿಚಾರದಲ್ಲಿ ಬಹಳ ಸ್ವಾರಸ್ಯವಾದ ಒಂದು ಸಣ್ಣ ಪುಸ್ತಕವನ್ನು ಇಂಗ್ಲೀಷು ಭಾಷೆಯಲ್ಲಿ ಪ್ರಚುರಪಡಿಸಿರುತ್ತಾರೆ. ಕಳೆದ ಎರಡು ವರುಷಗಳಿಂದ ಡಾ॥ ಕೋಲ್ಮನ್‌ರವರು ಮೈಸೂರು ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ಸಂಚಾರಮಾಡಿ ಆಯಾ ಪ್ರದೇಶಗಳಲ್ಲಿ ಅನುಸರಿಸಲ್ಪಡುತ್ತಿರುವ ಕ್ರಮಗಳನ್ನೆಲ್ಲಾ ಚೆನ್ನಾಗಿ ಅಜಮಾಯಿಷಿ ಮಾಡಿ ಮತ್ತು ವಿಚಾರಮಾಡಿ ತಿಳಿದುಕೊಂಡು ಆ ಸಂಗತಿಗಳನ್ನೆಲ್ಲಾ ಮೇಲ್ಕಂಡ ಪುಸ್ತಕದಲ್ಲಿ ಅಡಕಮಾಡಿದ್ದಾರೆ. ಇದರಲ್ಲಿರತಕ್ಕ ವಿಷಯಗಳು ರೈತಾಬಿ ಜನರಿಗೆ ಬಹಳ ಪ್ರಯೋಜನಕರವಾದದ್ದೆಂದು ಹೇಳಬೇಕಾದ್ದೇ ಇಲ್ಲ. ಆದುದರಿಂದ ಮೇಲ್ಕಂಡ ಇಂಗ್ಲೀಷು ಪುಸ್ತಕದಲ್ಲಿ ಅಡಕವಾಗಿರುವ ಅತ್ಯಂತ ಉಪಯೋಗಕರವಾದ ಕೆಲವು ಅಂಶಗಳ ಕನ್ನಡ ಭಾಷಾಂತರವು ರೈತರುಗಳ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಲ್ಪಟ್ಟಿದೆ.

ಮೈಸೂರು ಸಂಸ್ಥಾನದಲ್ಲಿ ಭತ್ತದ ವ್ಯವಸಾಯವು ಹೆಚ್ಚಾಗಿರುವ ಪ್ರದೇಶದಲ್ಲೆಲ್ಲಾ ರೈತರು ಜಮೀನಿಗೆ ಹಾಕತಕ್ಕ ಕೊಟ್ಟಿಗೆ ಗೊಬ್ಬರದ ಜತೆಗೆ ಹಸುರು ಗೊಬ್ಬರವನ್ನು ಸೇರಿಸುತ್ತಾರೆ. ಇದರಲ್ಲಿ ಎರಡು ಕ್ರಮಗಳುಂಟು. ಮೊದಲನೇದು, ಜಮೀನಿನ ಸುತ್ತ ಮುತ್ತಲಿರುವ ಮರಗಳ ಮತ್ತು ಸಮೀಪದಲ್ಲಿರುವ ಕಾಡುಗಳ ಮರಗಳ ಎಲೆಯನ್ನು ಕೂಡಿಹಾಕಿ ಅದನ್ನು ಗೊಬ್ಬರವಾಗಿ ಹಾಕುವುದು; ಎರಡನೇದು, ಜಮೀನಿನಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆದು ಅವುಗಳ ಪೈರನ್ನು ಉತ್ತು ಬಿಡುವುದು. ಈ ಪೈಕಿ ಮೊದಲನೇ ಕ್ರಮವು ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಪ್ರಚಾರದಲ್ಲಿದೆ. ಎರಡನೆಯದಾದರೋ ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ರೂಢಿಯಲ್ಲಿರುವಂತೆ ತೋರುತ್ತದೆ.

ಹೊಂಗೆಮರದ ಸೊಪ್ಪು ಮತ್ತು ಕಡ್ಡಿಗಳನ್ನೇ ಕೂಡಿಹಾಕುವುದು ಸಾಧಾರಣವಾಗಿ ವಾಡಿಕೆಯಾಗಿದೆ. ಹೊಂಗೆಮರವು ಇಲ್ಲದಿದ್ದರೆ ಕಕ್ಕೆ ಕೆಗ್ಗಿ ಮತ್ತು ದೇವಿಸೊಪ್ಪು ಮತ್ತು ಕಡ್ಡಿಗಳನ್ನು ಕೂಡಿಡುವರು. ತಂಗಡಿ ಮತ್ತು ಎಕ್ಕದ ಗಿಡಗಳು ಮತ್ತು ಉಗನಿ ಹಂಬನ್ನೂ ಉಪಯೋಗಿಸುವುದುಂಟು.

ಗೊಬ್ಬರಕ್ಕಾಗಿ ಎಲೆಗಳು ಬೇಕಾದ ಸ್ಥಳಗಳಲ್ಲೆಲ್ಲಾ ಎಳೆಯದಾಗಿ ಮತ್ತು [illegible] ಕೊಳೆಯುವುದು ಮತ್ತು ಅವುಗಳನ್ನು ಕೂಡಿಹಾಕಲು ರೈತನು ಸ್ವಲ್ಪ ಶ್ರಮ ತೆಗೆದುಕೊಂಡರೆ ಸಾಕೆಂದು ಕೆಲವರು ಹೇಳಬಹುದು. ಆದರೆ ಅದು ಹಾಗಿಲ್ಲ. ಮರಗಳು ಇತರರ ಜಮೀನು ಅಥವಾ ಸರ್ಕಾರಿ ಕಾಡುಗಳಲ್ಲಿ ಇದ್ದದ್ದೇ ಆದರೆ ಎಲೆಯನ್ನು ಅರಿಸಿಕೊಳ್ಳಬೇಕಾದರೆ ರೈತನು ಗಾಡಿ ಒಂದಕ್ಕೆ ಎಂಟಾಣೆ ಮೊದಲ್ಗೊಂಡು ಒಂದು ರೂಪಾಯಿನ ವರಿವಿಗೂ ಬೆಲೆ ಕೊಡಬೇಕಾಗುವುದು. ಆದರೆ ಈ ಗೊಬ್ಬರವು ಬಹಳ ಅಮೌಲ್ಯವಾದದ್ದೆಂದು ರೈತನು ತಿಳಿದುಕೊಂಡಿರುವುದರಿಂದ ಅವನು ಮೇಲ್ಕಂಡಂತೆ ಬೆಲೆಯನ್ನು ಕೊಡುವುದಲ್ಲದೆ ತನ್ನ ಜಮೀನಿನಿಂದ ಸುಮಾರು ಹತ್ತು ಹದಿನೈದು ಮೈಲಿ ದೂರದೇಶಗಳಿಂದ ಶ್ರಮಪಟ್ಟು ಸೊಪ್ಪನ್ನು ಗಾಡಿಗಳಲ್ಲಿ ತುಂಬಿಕೊಂಡು ಹೋಗುತ್ತಾನೆ. ಇತರ ಆರಂಭ ಕಾರ್ಯಗಳ್ಯಾವವೂ ಇಲ್ಲದ ಕಾಲದಲ್ಲಿ ಈ ರೀತಿ ಗೊಬ್ಬರವು ಸಾಗಿಸಲ್ಪಡುವುದರಿಂದ ಗೊಬ್ಬರವನ್ನು ಸಾಗಿಸಲು ತಗಲುವ ಗಾಡಿಬಾಡಿಗೆಯ ಖರ್ಚನ್ನು ರೈತನು ಲೆಕ್ಕಕ್ಕೆ ತರುವುದಿಲ್ಲ. ಆದರೆ ಸ್ವಂತ ವ್ಯವಸಾಯಗಾರರಲ್ಲದ ಜಮೀನುದಾರರು ಸೊಪ್ಪಿನ ಗೊಬ್ಬರಕ್ಕೂ ಅದನ್ನು ಜಮೀನುಗಳ ಬಳಿಗೆ ಸಾಗಿಸುವುದಕ್ಕೂ ಲಾಗವಡು ಮುಟ್ಟಿಸಬೇಕಾಗುವುದು.

ಗೊಬ್ಬರಕ್ಕಾಗಿ ಎಲೆಗಳನ್ನು ಕೂಡಿಡುವಾಗ್ಗೆ ಯಾವುದನ್ನು ಗೊಬ್ಬರಕ್ಕೆ ಉಪಯೋಗಿಸಬಹುದು, ಯಾವುದನ್ನು ಉಪಯೋಗಿಸಕೂಡದು ಎಂಬುದನ್ನು ರೈತನು ಚೆನ್ನಾಗಿ ಪರಿಶೀಲಿಸುವಂತೆ ಕಂಡುಬರುವುದಿಲ್ಲ. ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಅನೇಕ ಎಲೆಗಳು ಒಂದು ಬೆಳೆಯನ್ನು ತೆಗೆಯಬಹುದಾದಷ್ಟು ಅಂದರೆ ಆರುತಿಂಗಳ ಕಾಲದಲ್ಲಿ ಕೊಳೆಯುವುದಿಲ್ಲ ಆದುದರಿಂದಲೇ ಎರಡನೆಯ ಬೆಳೆಗೆ ರೈತನು ಜಮೀನನ್ನು ಹದಮಾಡುವಾಗ್ಗೆ ಮೊದಲನೆಯ ಬೆಳೆಗೋಸ್ಕರವಾಗಿ ಹಾಕಿದ್ದ ಎಲೆ ಗೊಬ್ಬರದ ಪೈಕಿ ಕೊಳೆಯದೇ ಇದ್ದ ಅನೇಕ ಕಡ್ಡಿಗಳು ಸಿಕ್ಕುವುವು. ಇವುಗಳನ್ನೆಲ್ಲಾ ಅದು ಒಲೆಗೆ ಹಾಕಿ ಉರಿಸಿ ಬಿಡುವರು.

ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಬೇರೆ ಬೇರೆ ಸೊಪ್ಪು ಮತ್ತು ಅವುಗಳ ಕಡ್ಡಿಗಳನ್ನು ಪರೀಕ್ಷಿಸಿ ನೋಡಿದ್ದರಲ್ಲಿ, ಸೊಪ್ಪಿನಲ್ಲಿ ಕಡ್ಡಿಗಳಿರುವುದಕ್ಕಿಂತ ಎರಡರಷ್ಟು ನೈಟ್ರೋಜನ್ (Nitrogen) ವಾಯುವೂ ಹೆಚ್ಚು ಫಾಸ್ಫಾರಿಕ್ ದ್ರಾವಕವೂ (Phosphoric Acid) ಮತ್ತು ಸಮಭಾಗ ಸುಣ್ಣವೂ (Lime) ಇರುವುದಾಗಿ ತಿಳಿಯಬಂದಿದೆ. ಬೇರೆ ಬೇರೆ ಸೊಪ್ಪು ಮತ್ತು ಕಡ್ಡಿಗಳಲ್ಲಿ ಪೈರುಗಳ ಆಹಾರ ಪದಾರ್ಥಗಳು ಶೇಕಡ ಎಷ್ಟೆಷ್ಟಿವೆ ಎಂಬುದನ್ನು ಈ ಕೆಳಗಿನ ಪಟ್ಟಿಯಿಂದ ಗೊತ್ತುಮಾಡಿಕೊಳ್ಳಬಹುದು:—

ಗಿಡದ ಹೆಸರು.		ಸುಣ್ಣ.	ಫಾಸ್ಫಾರಿಕ್ ದ್ರಾವಕ.	ಮರದ ಉಪ್ಪು.	ನೈಟ್ರೋಜನ್
ಹೊಂಗೆ:—	ಸೊಪ್ಪು	1.54	0.14	0.49	1.16
	ಕಡ್ಡಿ...	1.58	0.11	0.62	0.71
ತಂಗಡಿ:—	ಸೊಪ್ಪು	1.06	0.12	0.67	0.98
	ಕಡ್ಡಿ...	0.41	0.06	0.36	0.35
ಎಕ್ಕ:—	ಸೊಪ್ಪು	0.20	0.12	0.37	0.42
	ಕಡ್ಡಿ...	...	0.19	...	0.22

ರೈತರು ಗೊಬ್ಬರಕ್ಕಾಗಿ ಉಪಯೋಗಿಸತಕ್ಕ ಕಡ್ಡಿಗಳು ಬಹಳ ಬಲಿತು ಹೋಗಿರುವುವು. ಅವು ಆರು ತಿಂಗಳು ಕಾಲ ಜಮೀನಿನಲ್ಲಿದ್ದಾಗ್ಯೂ ಕೊಳೆಯುವುದಿಲ್ಲ. ಸುಲಭವಾಗಿ ಕೊಳೆಯತಕ್ಕ ಸಜೀವ ಪದಾರ್ಥಗಳನ್ನು ಜಮೀನಿಗೆ ಒದಗಿಸಿಕೊಡುವುದೇ ಹಸರು ಗೊಬ್ಬರವನ್ನು ಹಾಕುವುದಕ್ಕೆ ಒಂದು ಮುಖ್ಯಾಂಶವಾಗಿದೆ. ಬಲಿತ ಕಡ್ಡಿಗಳು ಹೀಗೆ ಕೊಳೆಯುವುದಿಲ್ಲವಾದ್ದರಿಂದ ಅವುಗಳನ್ನು ಜಮೀನಿಗೆ ಹಾಕುವುದರಿಂದ ಪ್ರಯೋಜನವೇನೂ ಇಲ್ಲ ಮತ್ತು ಕಡ್ಡಿಗಳನ್ನು ಕೂಡಿಡಲು ಮಾಡಿದ ಕೆಲಸವು ನಿರರ್ಥಕವಾಗುತ್ತದೆ. ಎಳೆದಾದ ಕಡ್ಡಿಗಳು ಜಾಗ್ರತೆಯಾಗಿ ಕೊಳೆಯುವುದಲ್ಲದೆ ಬಲಿತ ಕಡ್ಡಿಗಳಿಗಿಂತ ಹೆಚ್ಚು ಸಸ್ಯಾಹಾರಗಳನ್ನು ಒದಗಿಸಿಕೊಡುತ್ತವೆ.

ಹೆಚ್ಚು ಖರ್ಚಿಲ್ಲದೆ ಸುಲಭವಾಗಿ ಜಮೀನಿಗೆ ನೈಟ್ರೋಜನ್ (Nitrogen) ವಾಯುವ ದೊರಕುವಂತೆ ಮಾಡುವುದೂ ಹಸರು ಗೊಬ್ಬರವನ್ನು ಹಾಕುವುದರ ಮುಖ್ಯೋದ್ದೇಶಗಳಲ್ಲೊಂದಾಗಿದೆ. ಸೊಪ್ಪುಗಳಲ್ಲಿ ಕಡ್ಡಿಗಳಲ್ಲಿರುವುದಕ್ಕಿಂತ ಎರಡರಷ್ಟು ನೈಟ್ರೋಜನ್ ವಾಯುವು ಇರುವುದೆಂದು ಹಿಂದೆಯೇ ನಮೂದುಮಾಡಿದೆ. ಎಂದರೆ ಒಂದು ಗಾಡಿ ಸೊಪ್ಪಿನ ಗೊಬ್ಬರದಿಂದ ಎರಡು ಗಾಡಿ ಕಡ್ಡಿಗೊಬ್ಬರದಿಂದ ಹೊಂದಬಹುದಾದ ಪ್ರಯೋಜನವನ್ನು ಹೊಂದಬಹುದು. ಆದ್ದರಿಂದ ಹಸರು ಗೊಬ್ಬರವನ್ನು ಉಪಯೋಗಿಸತಕ್ಕ ಪ್ರತಿ ರೈತನೂ ಹೆಚ್ಚು ಸೊಪ್ಪನ್ನೂ ಕಡಿಮೆ ಕಡ್ಡಿಯನ್ನೂ ಕೂಡಿಡಬೇಕು.

ಯಾವ ಯಾವ ಸೊಪ್ಪಿನಲ್ಲಿ ಗೊಬ್ಬರಕ್ಕಾಗಿ ಉಪಯೋಗವಾಗುವ ಪದಾರ್ಥಗಳು ಶೇಕಡ ಎಷ್ಟೆಷ್ಟಿವೆಯೆಂಬುವುದನ್ನು ಈ ಕೆಳಗಣ ಪಟ್ಟಿಯಿಂದ ತಿಳಿದುಕೊಳ್ಳಬಹುದು:—

ಗಿಡದ ಹೆಸರು.	ಸುಣ್ಣ.	ಫಾಸ್ಫಾರಿಕ್ ದ್ರಾವಕ.	ಮರದ ಉಪ್ಪು.	ನೈಟ್ರೋಜನ್
ಹೊಂಗೆ ...	1.54	0.14	0.49	1.16
ತಂಗಡಿ ...	1.06	0.12	0.67	0.98
ಎಕ್ಕ ...	0.20	0.12	0.37	0.42
ಲಾಂಟಾನ ...	0.61	0.15	0.90	0.88
ಮರಗಳ ಎಲೆಗಳು ...				
ಹುಣಸೆ ...	5.29	0.15	...	0.82
[illegible] ...	5.11	0.15	...	0.93
[illegible] ...	3.01	0.15	...	0.81
ಅತ್ತಿ ...	5.57	0.16	...	0.91
ಬೇವು ...	1.77	0.22	...	1.59
ಹಲಸು ...	2.77	0.11	...	1.66
ಉಗನಿ ಹಂಬು ...	0.80	0.14	0.47	0.63

ಲಾಂಟಾನ ಮತ್ತು ಉಗನಿ ಹಂಬುಗಳು ಒಳ್ಳೆಯ ಹಸರು ಗೊಬ್ಬರಗಳೆಂದು ಮೇಲಿನ ಪಟ್ಟಿಯಿಂದ ಗೊತ್ತಾಗುತ್ತದೆ. ಲಾಂಟಾನ ಸೊಪ್ಪಿನಲ್ಲಿರುವಷ್ಟು ಮರದ ಉಪ್ಪು ಮತ್ತಾವ ಸೊಪ್ಪಿನಲ್ಲೂ ಇರುವುದಿಲ್ಲ. ಇತರ ಸಸ್ಯಾಹಾರಗಳೂ ಅಲ್ಪಸ್ವಲ್ಪವಾಗಿ ಇದ್ದೇ ಇರುತ್ತವೆ ಆದ್ದರಿಂದ ರೈತರು ಈ ಸೊಪ್ಪನ್ನೂ ಗೊಬ್ಬರಕ್ಕಾಗಿ ಉಪಯೋಗಿಸಬಹುದು. ಸೊಪ್ಪನ್ನು ಮಾತ್ರವೇ ಕೂಡಿಡಲು ಸಾಧ್ಯವಲ್ಲದಿದ್ದರೆ ಒಟ್ಟು ಗಿಡವನ್ನೇ ಸುಟ್ಟು ಬೂದಿಯನ್ನು ಇತರ ಸೊಪ್ಪುಗಳೊಡನೆ ಬೆರಸಿ ಉಪಯೋಗಿಸಬೇಕು. ಹೀಗೆ ಗಿಡವನ್ನೇ ಸುಡುವುದರಿಂದ ನೈಟ್ರೋಜನ್ ವಾಯುವು ಸ್ವಲ್ಪ ವ್ಯರ್ಥವಾದಾಗ್ಯೂ ಬೂದಿಯಲ್ಲಿ ಶೇಕಡ ೧೫ ಭಾಗ ಮರದ ಉಪ್ಪು (Potash), ೪-೫ ಭಾಗ ಫಾಸ್ಫಾರಿಕ್ ದ್ರಾವಕವೂ (Phosdhoric-acid) ಇರುವುದರಿಂದ, ಉತ್ತಮವಾದ ಗೊಬ್ಬರವೇ ಸಿಕ್ಕಿದಂತಾಯಿತು.

ಉಗನಿಹಂಬು ಅನೇಕ ಕಡೆಗಳಲ್ಲಿ ಯಥೇಚ್ಛವಾಗಿ ಬೆಳೆಯುವುದು. ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಬತ್ತವನ್ನು ಬೆಳೆಯತಕ್ಕ ಜಮೀನುಗಳಿಗೆ ಈ ಹಂಬನ್ನು ಗೊಬ್ಬರವಾಗಿ ಹಾಕುವರು. ಮತ್ತೆ ಕೆಲವು ಕಡೆಗಳಲ್ಲಿ ಇದರ ಹಂಬನ್ನು ಕಂತೆ ಮೂಟೆ ಮೊದಲಾದುವುಗಳನ್ನು ಕಟ್ಟಲು ಹಗ್ಗವಾಗಿ ಉಪಯೋಗಿಸುವರು. ಇಂತಹ ಕಡೆಗಳಲ್ಲಿ, ಇದು ಉತ್ತಮವಾದ ಹಸರು ಗೊಬ್ಬರವಾಗುವುದೆಂಬುದು ರೈತರಿಗೆ ತಿಳಿಯದೇ ಇರಬಹುದೆಂದು ತೋರುತ್ತದೆ. ಇನ್ನು ಮುಂದೆ ರೈತರೆಲ್ಲರೂ ಈ ಹಂಬನ್ನು ಹೊರೆಗಳನ್ನು ಕಟ್ಟುವುದಕ್ಕೆ ಉಪಯೋಗಿಸಿ ವ್ಯರ್ಥ ಮಾಡದೆ ಗೊಬರಕ್ಕಾಗಿ ಉಪಯೋಗಿಸುವುದು ಒಳ್ಳೆಯದು.

ಹೊಂಗೇಸೊಪ್ಪು ಅತ್ಯುತ್ತಮವಾದ ಹಸರು ಗೊಬ್ಬರವೆಂದು ಜನರು ರೂಢಿಯಾಗಿ ಹೇಳುವರು. ರಸಾಯನ ಶಾಸ್ತ್ರಜ್ಞರ ಶೋಧನೆಯಲ್ಲೂ ಇದು ನಿಜವೆಂದು ತಿಳಿಯಬಂದಿದೆ.—ಮೈ. ಗೆ.

ಸರ್ಕಾರಿಯ ಅಪ್ಪಣೆ.

ದೇವಸ್ಥಾನಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ಕಾಗಿ ಬಡ್ಡಿಯ ಮೊಬಲಗನ್ನು ಉಪಯೋಗಿಸಬೇಕೆಂಬ ಉದ್ದೇಶದಿಂದ ಡಿಪಾಜಿಟ್ಟು ಮಾಡಲ್ಪಡುವ ಮೊಬಲಗುಗಳು ಮಾತ್ರ ಮುಡುಪಿಟ್ಟ ಫಂಡುಗಳಾಗಿ ಭಾವಿಸಲ್ಪಡತಕ್ಕವಾಗಿರುತ್ತವೆ.

ಒಂದು ದೇವಸ್ಥಾನದ ರಿಪೇರಿ ಕೆಲಸಕ್ಕಾಗಲಿ ಅಥವಾ ದೇವಸ್ಥಾನದ ಉಪಯೋಗಕ್ಕಾಗಿ ಒಂದು ರಥವನ್ನು ಒದಗಿಸುವುದಕ್ಕಾಗಲಿ ಹಾಜರ್‌ಮಾಡಲ್ಪಡುವ ಮೊಬಲಗು ಆ ಮೊಬಲಗು ಖರ್ಚಾಗತಕ್ಕ ಕಾರಣದಿಂದ ಮುಡುಪಿಟ್ಟ ಫಂಡಾಗಿ ಭಾವಿಸಲ್ಪಡಲಾಗದು. ಆದರೆ, ಕರ್ತರು ಮೊಬಲಗನ್ನು ಹಾಜರ್‌ಮಾಡುವ ಕಾಲದಲ್ಲಿ, ಅದನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡಬೇಕೆಂದು ಅಪೇಕ್ಷಿಸಿ, ಅಸಲು ಮೊಬಲಗನ್ನು ಬಡ್ಡಿಯನ್ನು ಸಹ ಉದ್ದೇಶಿಸಲ್ಪಟ್ಟ ಕಾರ್ಯಕ್ಕಾಗಿ ವಾಪಸು ತೆಗೆದುಕೊಳ್ಳಬೇಕೆಂಬ ಷರತನ್ನು ಸೇರಿಸಿದರೆ, ಅಂತಹ ಷರತ್ತುಗಳಿಗೊಳಪಟ್ಟ ಸದರಿ ಮೊಬಲಗನ್ನು ತೆಗೆದುಕೊಳ್ಳತಕ್ಕ ವಿಷಯದಲ್ಲಿ ಯಾವ ಅಭ್ಯಂತರವೂ ಇಲ್ಲ.

ಮೈಸೂರ್ ಗೆಜೆಟ್ ಸಂಗ್ರಹವು.

ರಜದ ಮೇಲಿದ್ದ ಅ॥ ಕಮಿಷನರ್ ಮೆ॥ ವೆಂಕೋಬರಾಯರು ಉದ್ಯೋಗದ ಮೇಲೆ ಬರಮಾಡಲ್ಪಟ್ಟು, ಮೆ॥ ಟಿ. ಚೊಕ್ಕಣ್ಣನವರು ಬೇರೆ ಕೆಲಸದ ಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಅ॥ ಸರ್ಜನ್ ಮೆ॥ ಎನ್. ರಂಗಾಚಾರ್ಯರಿಗೆ ೧೯೧೨ ನೆಯ ಜನವರಿ ತಾ॥ ೩೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿದೆ.

ಸೀನಿಯರ್ ಅ॥ ಕಮಿಷನರ್ ಮತ್ತೂ ಅಂಡರ್ ಸೆಕ್ರಿಟರಿ ಮೆ॥ ಕೆ. ಮಥಾನ್, ಬಿ. ಎ. ಯವರು ೧ ನೆಯ ತರಗತಿಯ ಮ್ಯಾಜಿಸ್ಟ್ರೇಟರಾಗಿ ಮಾಡಲ್ಪಟ್ಟು ಕೋಲಾರದ ಗೋಲ್ಡ್‌ಫೀಲ್ಡ್ಸಿನ ಅ॥ ಕಮಿಷನರ್ ಮತ್ತೂ ೧ನೆಯ ತ॥ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ.

ದಿವಾನರ ಪ್ರೈವೆಟ್ ಸೆಕ್ರಿಟರಿಯವರಾದ ಮೆ॥ ಟಿ. ಗೋವಿಂದರಾಯರು ಬಿ ಷೆಡ್ಯೂಲ್ ೫ ನೆಯ ತ॥ ಅ॥ ಕಮಿಷನರಾಗಿ ಶ್ರೀಮನ್ಮಹಾರಾಜರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಅ॥ ಕಮಿಷನರ್ ಮೆ॥ ಪಿ. ಎಫ್. ಬೌರಿಂಗ್‌ರವರು ಕೋಲಾರದ ಡಿಸ್ಟ್ರಿಕ್ಟ್ ಮತ್ತೂ ಟ್ರಜರಿ ಛಾರ್ಜನ್ನು ಡಿ॥ ಕಮಿಷನರ್ ಮೆ॥ ಸಿ. ಶ್ರೀಕಂಠೇಶ್ವರಯ್ಯರ್ ಬಿ. ಎ., ಬಿ. ಎಲ್., ರವರಿಂದ ೧೯೧೨ ನೆಯ ಫೆಬ್ರವರಿ ತಾ॥ ೧೭ ರ ಅಪರಾಹ್ನದಲ್ಲಿ ವಹಿಸಿಕೊಂಡರು.

ಡಿ॥ ಕಮಿಷನರ್ ಮೆ॥ ಕೆ. ಎಸ್. ದೊರಸ್ವಾಮಿ ಅಯ್ಯರ್‌ರವರು ರೆವಿನ್ಯೂ ಕಮಿಷನರ್ ಛಾರ್ಜನ್ನು ರಾಜಸಭಾಭೂಷಣ ದಿವಾನ್ ಬಹದ್ದೂರ್ ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟರಿಂದ ೧೯೧೨ ನೆಯ ಫೆಬ್ರವರಿ ತಾ॥ ೧೧ ರ ಪೂರ್ವಾಹ್ನದಲ್ಲಿ ವಹಿಸಿಕೊಂಡರು.

ಡಿ॥ ಕಮಿಷನರ್ ಮೆ॥ ಎಂ. ಕಾಂತರಾಜಅರಸಿನವರು ಮೈಸೂರ ಡಿಸ್ಟ್ರಿಕ್ಟ್ ಮತ್ತೂ ಟ್ರಜರಿ ಛಾರ್ಜನ್ನು ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಕೃಷ್ಣಯ್ಯರ್‌ರವರಿಗೆ ೧೯೧೨ ನೆಯ ಫೆಬ್ರವರಿ ತಾ॥ ೨೭ ರ ಅಪರಾಹ್ನದಲ್ಲಿ ವಹಿಸಿಕೊಟ್ಟರು.

ಮೈಸೂರ ಅಫೀಷಿಯೇಟಿಂಗ್ ಪೊಲೀಸು ಇನ್ಸ್ಪೆಕ್ಟರ್ ಜನರಲ್‌ರವರಾದ ಮೆ॥ ಸಿ. ಶ್ರೀಕಂಠೇಶ್ವರಯ್ಯರ್ ಬಿ. ಎ., ಬಿ. ಎಲ್., ರವರು ಎಕ್ಸೈಜು ಕಮಿಷನರ ರೆಜಿಸ್ಟ್ರೇಷನ್ನಿನ ಇ॥ ಜನರಲ್‌ರವರ ಜಾಯಿಂಟ್ ಸ್ಟಾಕ್ ಕಂಪೆನಿಗಳ ಎಕ್ಸ್ ಅಫೀಷಿಯೋ ರಿಜಿಸ್ಟ್ರಾರ ಮತ್ತೂ ಸ್ಟಾಂಪ್ ಕಮಿಷನರ ಅಧಿಕಾರಗಳನ್ನು ೧೯೧೨ ನೆಯ ಫೆಬ್ರವರಿ ತಾ॥ ೧೯ ರ ಪೂರ್ವಾಹ್ನದಲ್ಲಿ ವಹಿಸಿಕೊಂಡರು

ಕೋಲಾರ ಗೋಲ್ಡ್‌ಫೀಲ್ಡ್ಸಿನ ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಮಥಾನ್, ಬಿ. ಎ., ಯವರು ಸಾಕ್ಷಿಗಳ ಹೇಳಿಕೆಯನ್ನು ಕನ್ನಡ ಭಾಷೆಯಲ್ಲಿ ಸ್ವಹಸ್ತಾಕ್ಷರದಲ್ಲಿ ತೆಗೆದುಕೊಳ್ಳತಕ್ಕದು.

ತುರ್ಕಿ—ಇಟಲಿಗಳ ಯುದ್ಧವು.

ಫೆಬ್ರವರಿ ತಾ॥ ೨೪.— ಪಾರ್ಲಿಮೆಂಟ ಸಭೆಯು ಪುನಃ ಕೂಡಿದ್ದು ೪೩೦ ಜನ ಮೆಂಬರುಗಳಲ್ಲಿ ೯ ಜನರ ವಿನಾ ಉಳಿದವರೆಲ್ಲರೂ ಏಕವಾಕ್ಯತೆಯಿಂದಲೂ, ಕೋಲಾಹಲದಿಂದಲೂ ಟ್ರಿಪೋಲಿಯಲ್ಲಿ ಇಟಲಿಯವರ ಪ್ರಭುತ್ವವನ್ನು ಸ್ಥಾಪಿಸತಕ್ಕದೆಂದು ನಿರ್ಧರಿಸಿದರು. ಆ ದಿವಸ ಇಟಲಿಯ ನಿವಾಸಿಗಳೆಲ್ಲರೂ ಹಬ್ಬದಿನವನ್ನಾಗಿ ಪರಿಗಣಿಸಿ ಜಯಪತಾಕೆಗಳನ್ನು ಹಿಡಿದು ಪಾರ್ಲಿಮೆಂಟ್ ಸಭೆಯ ಮುಂದೆ ಕೂಗಾಡಿ ಕೋಲಾಹಲವನ್ನು ಮಾಡಿದರಲ್ಲದೆ ಪ್ರಭುದಂಪತಿಗಳನ್ನು ಉತ್ಸವದಿಂದ ಮೆರೆಯಿಸಿದರು.

ತಾ॥೨೫.— ಟ್ರಿಪೋಲಿಯನ್ನು ಸ್ವಾಧೀನಪಡಿಸಿಕೊಂಡು ತಮ್ಮ ಆಧಿಪತ್ಯವನ್ನು ಸ್ಥಾಪಿಸಿದುದರ ಸಂಬಂಧವಾದ ಬಿಲ್ಲನ್ನು ಸೆನೇಟಿನವರು ಬಹುಕೋಲಾಹಲದಿಂದ ಅನುಮೋದಿಸಿ ಆ ವೇಳೆಯಲ್ಲಿದ್ದ ಆಸ್ಟ್ರೀ ಮತ್ತೂ ಜನಿವಾ ಡ್ಯೂಕರುಗಳನ್ನು ಜಯೋತ್ಸವದಿಂದ ಬಹುಮಾನಿಸಿದರು. ಹೊದೀದಾದಲ್ಲಿದ್ದ ೭ ಹಡಗುಗಳು ೩೦ ಜನ ಐರೋಪ್ಯರನ್ನೂ, ೩೦ ಸೋಮಾಲಿಯವರನ್ನೂ, ಭಾರತೀಯರನ್ನೂ ಫ್ರೆಂಚರ ಶರಣಾಗತರನ್ನೂ ಸ್ವಾಧೀನಪಡಿಸಿಕೊಂಡುವು. ಇಟಲಿಯವರ ಟಾರ್ಪೆಡೋ ದೋಣಿಯು ಶರಣಾಗತರಾದವರನ್ನು ದಡದಿಂದ ಹಡಗಿಗೆ ಕರೆದುಕೊಂಡು ಬಂದು ಬಿಡುವಲ್ಲಿ ಸಹಾಯಮಾಡಿತು. ಇಟಲಿಯವರ ೩ ಯುದ್ಧನಾವೆಗಳು ಬೇರೂಟನ್ನು ಸಮೀಪಿಸಿದುವು. ಪಟ್ಟಣಿಗರೆಲ್ಲರೂ ಪ್ರಾಣಭಯದಿಂದ ತತ್ತರಿಸುತ್ತಿರುವರು. ಬಂದರಿನಲ್ಲಿರುವ ತುರ್ಕಿಯವರ ಫಿರಂಗಿಯ ನಾವೆಗಳು ಕೂಡಲೆ ತಮ್ಮ ಶರಣುಹೊಗಬೇಕೆಂದು ಇಟಲಿಯವರ ಪಲ್ಮನೋರ್ ಮತ್ತೂ ಗೆರಿಬಾಲ್ಡಿ ಕ್ರೂಯಿಜರುಗಳು ಅಪೇಕ್ಷಿಸಿದುವು. ಗೌರ್ನರು ಮಧ್ಯಸ್ಥಿಕೆಯನ್ನು ಮಾಡುವಷ್ಟರಲ್ಲಿ ಇಟಲಿಯವರು ಬಂದರಿನಲ್ಲಿದ್ದ ಫಿರಂಗಿಯ ಹಡಗುಗಳನ್ನು ಮುಳುಗಿಸಿದಿದ್ದರು. ಅನೇಕ ಕಟ್ಟಡಗಳು ನಾಶಪಡಿಸಲ್ಪಟ್ಟು ೩೦ ಜನರು ಕೊಲ್ಲಲ್ಪಟ್ಟರು. ಜನರು ಬಹು ಭಯಗ್ರಸ್ತರಾಗಿ ಲೆಬನಾನಿಗೋಡಿದರು. ಸೈನ್ಯಾಧಿಕಾರಿಗಳೂ ಅಲ್ಲಿಯ ಸ್ಥಿತಿಯನ್ನು ಸರಿಪಡಿಸಲಶಕ್ತರಾಗಿರುವರು. ಬೇರೂಟು ಕೋಟೆಗಳಲ್ಲೂ, ಅನ್ನಿಲ್ಲಾ ಮತ್ತೂ ಟಾರ್ಪೆಡೋ ದೋಣಿಗಳಲ್ಲೂ ಇದ್ದ ಜನರು ಇಟಲಿಯವರು ಹೊಡೆದ ಫಿರಂಗಿಗಳಿಗೆ ಪ್ರತಿಯಾಗಿ ಗುಂಡುಗಳನ್ನು ಹೊಡೆದರು. ಇಟಲಿಯ ಯುದ್ಧನಾವೆಗಳು ಅನ್ನಿಲ್ಲಾ ಯುದ್ಧನಾವೆಯನ್ನು ಸುಟ್ಟು ಟಾರ್ಪೆಡೋ ದೋಣಿಯನ್ನು ನೀರಿನಲ್ಲಿ ಮುಳುಗಿಸಿ ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಹೊರಟುವು. ಇದರಿಂದ ೧೫ ಜನರು ಸತ್ತರು ಮತ್ತೂ ೧೦೦ ಜನರು ಗಾಯಪಡೆದರು. ಫಿರಂಗಿಯೇಟುಗಳಿಂದ ಭೀತರಾದ ಜನರು ಸರ್ಕಾರಿಯ ಆಯುಧಶಾಲೆಗೆ ನುಗ್ಗಿ ಆಯುಧಗಳನ್ನೆಲ್ಲ ತೆಗೆದು ಧರಿಸಿಕೊಂಡು ಕದನಕ್ಕೆ ನುಗ್ಗಿದರು. ಈ ಗೊಂದಲದಲ್ಲಿ ಇಬ್ಬರು ರಷ್ಯಾದವರ ಸಮೇತ ೩೦ ಜನರು ಕೊಲ್ಲಲ್ಪಟ್ಟರು ಮತ್ತು ೫೦ ಜನರು ಗಾಯಪಡೆದರು. ಬೇರೂಟಿನ ಸ್ಥಿತಿಯು ಸಮಾಧಾನಕರವಾಗಿರುತ್ತದೆ, ಮತ್ತೂ ಜನರು ಶಾಂತಚಿತ್ತರಾಗಿರುತ್ತಾರೆ. ವಿಚಾರಣೆಯಿಲ್ಲದೆ ಶಿಕ್ಷೆಗೆ ಗುರಿಮಾಡಲ್ಪಡುವರೆಂಬ ಶಾಸನ (ಮಾರ್ಷಿಯಲ್‌ಲಾ) ವು ಅನುಷ್ಠಾನಕ್ಕೆ ತರಲ್ಪಟ್ಟಿರುವುದೆಂದು ಪ್ರಕಟಿಸಲ್ಪಟ್ಟಿತು. ಬೇರೂಟಿನಲ್ಲಿ ೩೦ ಜನರು ಕೊಲ್ಲಲ್ಪಟ್ಟು ೯೮ ಜನರು ಗಾಯಪಡೆದರೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಈ ಅನಾಹುತವೆಲ್ಲವೂ ತುರ್ಕಿಯ ಕೆಲಸಗಾರರಲ್ಲೂ ಪ್ರೇಕ್ಷಕರಲ್ಲೂ ನಡೆದಿರುತ್ತದೆ. ಇಟಲಿಯವರ ದಾಂಧಲೆಯು ಇಂಟರ್‌ನ್ಯಾಷನಲ್‌ಲಾ ಅಂದರೆ ಎಲ್ಲಾ ರಾಜ್ಯದವರೂ ಸೇರಿ ಮಾಡಿಕೊಂಡಿರುವ ಒಡಂಬಡಿಕೆಗೆ ವಿರುದ್ಧವಾಗಿರುತ್ತದೆ ಎಂದು ತುರ್ಕಿಯವರು ಪರರಾಜ್ಯದವರಿಗೆ ತಿಳಿಸಿರುತ್ತಾರೆ. ಸಾಗಿಹೋಗುವ ಪದಾರ್ಥಗಳನ್ನು ಅಡ್ಡಿಪಡಿಸುವುದಕ್ಕಾಗಿಯೂ, ತುರ್ಕಿಯವರ ಯುದ್ಧನಾವೆಗಳನ್ನು ನಾಶಪಡಿಸುವುದಕ್ಕಾಗಿಯೂ ಬೇರೂಟಿಗೆ ಯುದ್ಧನಾವೆಗಳು ಕಳುಹಲ್ಪಟ್ಟಿದ್ದುವು ಎಂದು ರೋಮಿನಲ್ಲಿ ಸರ್ಕಾರದವರು ಪ್ರಸಿದ್ಧಪಡಿಸಿರುತ್ತಾರೆ. ಇಟಲಿಯವರು ಏಜಿಯನ್ ಸಮುದ್ರದಲ್ಲಿ ತಮ್ಮ ಕೃತ್ಯಗಳನ್ನು ನಡೆಯಿಸುವ ಪಕ್ಷದಲ್ಲಿ ಡಾರ್ಡನಲ್ಸ್ ಮಾರ್ಗವನ್ನು ತಡೆದು ತುರ್ಕಿಯಲ್ಲಿರುವ ಇಟಲಿಯವರನ್ನೆಲ್ಲಾ ಹೊರಗೆ ಕಳುಹಲು ನಿರ್ಧರಿಸಿರುವುದಾಗಿ ತುರ್ಕಿಯವರು ಪರರಾಜ್ಯದವರಿಗೆಲ್ಲಾ ತಿಳುಹಿಸಿರುತ್ತಾರೆ.

ಫೆಬ್ರವರಿ ತಾ॥೨೬ — ಬೇರೂಟು, ದಮಾಸ್ಕಸ್ಸು, ಜೆರುಸಲಂ ಮತ್ತೂ ಆಲಿಪ್ಪೊ ಈ ಸ್ಥಳಗಳಲ್ಲಿರುವ ಪಾದ್ರಿಗಳ ವಿನಾ ಇತರ ಇಟಲಿಯವರು ೧೫ ದಿನಗಳ ಅವಧಿಯಲ್ಲಿ ಸ್ಥಳವನ್ನು ಬಿಟ್ಟು ಹೋಗದಿದ್ದ ಪಕ್ಷದಲ್ಲಿ ಹೊರಗೋಡಿಸಲ್ಪಡುವರೆಂದು ಕಾನಸ್ಟಾಂಟಿನೋಪಲ್ಲಿನ ಮಂತ್ರಿ ಸಭೆಯವರು ನಿರ್ಧರಿಸಿರುತ್ತಾರೆ.

ತಾ॥ ೨೭.— ಇಟಲಿಯವರ ಕ್ರೂಯಿಜರುಗಳು ತಾ॥ ೨೫ ರಲ್ಲಿ ಹೊಡೆದ ಗುಂಡಿನೇಟಿನಿಂದ ಸತ್ತ ಮತ್ತೂ ಗಾಯಪಡೆದ ೨೦೦ ಪ್ರೇಕ್ಷಕರು ಮತ್ತೂ ಕೆಲ ವ್ಯಾಪಾರದ ಕಟ್ಟಡಗಳು ನಾಶವಾದುವು. ಅನ್ನಿಲ್ಲಾ ಯುದ್ಧನಾವೆಯನ್ನೂ ಟಾರ್ಪೆಡೊ ದೋಣಿಯನ್ನು ಬೇರೂಟಿನ ರೇವಿನಲ್ಲಿ ಅರುಣೋದಯ ಸಮಯದಲ್ಲಿ ಕಂಡು ಅವುಗಳು ಹೊರಟು ಹೋಗಲು ೯ ಗಂಟೆಯವರೆಗೂ ಅವಕಾಶವನ್ನು ಕೊಟ್ಟಾಗ್ಯೂ ಅವುಗಳು ಹೋಗಲಿಲ್ಲವಾಗಿ ಇಟಲಿಯವರು ಅವುಗಳ ಮೇಲೆ ಗುಂಡುಗಳನ್ನು ಹಾರಿಸಿದರು. ಅನ್ನಿಲ್ಲಾ ಯುದ್ಧನಾವೆಯೂ ಬಹು ಆವೇಶದಿಂದ ಗುಂಡುಗಳನ್ನು ಹೊಡೆದಿತ್ತು. ಆದರೆ ೨೦ ನಿಮಿಷಗಳಲ್ಲಿ ಅದರ ಸೊಲ್ಲು ಅಡಗಿಸಲ್ಪಟ್ಟಿತು. ಅನಂತರ ಟಾರ್ಪೆಡೊ ದೋಣಿಯು ಗುಂಡು ಹೊಡೆಯಲ್ಪಟ್ಟು ಮುಳುಗಿಸಲ್ಪಟ್ಟಿತು. ಪಟ್ಟಣದ ಮೇಲೆ ಗುಂಡುಗಳನ್ನು ಹಾರಿಸಿದುದು ಮಾತ್ರ ಸುಳ್ಳು ಎಂದು ಇಟಲಿಯ ಹಡಗಿನ ಯಜಮಾನನಾದ ಅಡ್ಮಿರಲ್ ಫಾರವೆಲ್ಲಿಯು ತಿಳಿಸಿರುತ್ತಾನೆ. ಬ್ರಿಟಿಷರ ಲಂಕಾಸ್ಟರ್ ಎಂಬ ಕ್ರೂಯಿಜರು ಕೂಡಲೆ ಹೊರಡಬೇಕೆಂದು ಮೇಲಿನಿಂದ ಅಪ್ಪಣೆಯು ಬಂದುದರಿಂದ ಬಹು ತ್ವರಿತವಾಗಿ ಕಲ್ಲಿದ್ದಲನ್ನು ತುಂಬಿಕೊಂಡು [illegible] ಹೊರಟಿರುತ್ತದೆ. ಬೇರೂಟಿನಲ್ಲಿ ಫ್ರಾನ್ಸು ಮತ್ತೆ ಕೆಲ ರಾಜ್ಯಗಳಿಗೆ ಸಂಬಂಧವಿರುವುದರಿಂದ, ಅಲ್ಲಿ ಇಟಲಿಯವರು ಮಾಡಿದ ಕೃತ್ಯಕ್ಕಾಗಿ ಫ್ರಾನ್ಸಿನಲ್ಲಿ ಅಸಮಾಧಾನ ಉಂಟಾಗಿದೆ ಮತ್ತೂ ಫ್ರೆಂಚಿನವರು ತಮ್ಮ ರಕ್ಷಣೆಗಾಗಿ ಲವಾಂಟಿಗೆ [illegible] ಒಂದು ಕ್ರೂಯಿಜರನ್ನು ಕಳುಹಲು ಪ್ರಯತ್ನಿಸಿರುತ್ತಾರೆ.

ತಾ॥ ೨೮.—ಟ್ರಿಪೋಲಿಯಲ್ಲಿರುವ ತುರ್ಕಿಯವರ [illegible] ವಾಗಿ ೩೦೦ [illegible] ಯುದ್ಧ [illegible] ಒಪ್ಪುತ್ತಿದ್ದ ಒಂದು ಹಡಗು [illegible]

ತುರ್ಕಿ—ಇಟಲಿಗಳ ಯುದ್ಧವನ್ನು ಕೊನೆಗಾಣಿಸುವ ವಿಚಾರದಲ್ಲಿ ಪರರಾಜ್ಯದವರು ಪ್ರಯತ್ನಿಸುವುದಾದರೆ ಅವರ ಕೂಡ ತಾನೂ ಸೇರಲು ಸಿದ್ಧವಾಗಿರುತ್ತೇನೆಂದು ಫ್ರೆಂಚ್ ರಾಜ್ಯವು ತಿಳಿಸಿರುತ್ತದೆ.

ತಾ॥ ೨೮.—ಇಟಲಿಯವರ ಗುಂಡಿನೇಟುಗಳಿಂದ ಯುದ್ಧನಾವೆಯಲ್ಲಿದ್ದವರಲ್ಲಿ ೪೧ ಜನರು ಕೊಲ್ಲಲ್ಪಟ್ಟರು ಮತ್ತು ೩೦ ಜನರು ಗಾಯವಡೆದರು; ಅಲ್ಲದೆ ಪಟ್ಟಣದ ನಿವಾಸಿಗಳಲ್ಲಿ ೫೦ ಜನರು ಮಡಿದು ೭೮ ಜನರು ಗಾಯವಡೆದರು ಎಂದು ಬೇರೂಟಿನಿಂದ ವರ್ತಮಾನ ಬಂದಿರುತ್ತದೆ. ತಾ॥ ೨೭ ರಲ್ಲಿ ಲ್ಲಾ ಹಾಮ್ಸ್ ಎಂಬಲ್ಲಿ ಕದನವು ನಡೆಯಿತು. ಇಟಲಿಯವರು ಮೆರ್ಗೆಬ್ ಎಂಬಲ್ಲಿಗೆ ನುಗ್ಗಿ ಸಾಯಂಕಾಲದವರೆಗೂ ಬಡಿದಾಡಿ ಅದನ್ನು ತಮ್ಮ ಸ್ವಾಧೀನಮಾಡಿಕೊಂಡರು. ತುರ್ಕಿಯವರೂ ಅರಬ್ಬಿಯವರೂ ಅದುವರೆಗೂ ಯುದ್ಧಮಾಡಿ ಬಹು ನಷ್ಟವನ್ನನುಭವಿಸಿ ಸತ್ತವರನ್ನೂ, ಗಾಯವಡೆದವರನ್ನೂ ಯುದ್ಧರಂಗದಲ್ಲೇ ಬಿಟ್ಟು ಹಿಂತಿರುಗಿದರು. ಈ ಕದನದಲ್ಲಿ ಇಟಲಿಯವರ ಕಡೆ ೧೧ ಜನರು ಸತ್ತರು ಮತ್ತು ೮೩ ಜನರು ಗಾಯವಡೆದರು.

ತಾ॥ ೨೯.—ಇಟಲಿ ಮತ್ತು ತುರ್ಕಿರಾಜ್ಯಗಳಿಗೆ ಸಮಾಧಾನವನ್ನುಂಟುಮಾಡಲು ರಷ್ಯಾರಾಜ್ಯವು ಹೊಸ ಸೂಚನೆಗಳನ್ನು ಕೊಟ್ಟಿರುವುದಲ್ಲದೆ, ಇಟಲಿಯವರು ತಮ್ಮ ಪ್ರಭುತ್ವವನ್ನು ಟ್ರಿಪೋಲಿಯಲ್ಲಿ ಸ್ಥಿರಪಡಿಸಿಕೊಂಡು ಮತ್ತಾವ ಶರ್ತಿನಿಂದ ಕದಲಿಗೊಪ್ಪುವರೆಂಬುದನ್ನು ತಿಳಿದು ಇತರ ೪ ರಾಜ್ಯಗಳು ಕೂಡ ಆಲೋಚಿಸುವುದಾಗಿ ತಿಳಿಸಿರುತ್ತದೆ. ರಷಾ ರಾಜ್ಯವು ಕದಲಿನ ವಿಚಾರದಲ್ಲಿ ಮುಂದುವರಿಯುವುದರಿಂದ ಅಷ್ಟು ಸಾಧ್ಯವಾಗುತ್ತದೆಂಬ ಭಾಗದಲ್ಲಿ ಕಾನಸ್ಟಾಂಟಿನೋಪಲ್ಲಿನ ಜನರಿಗೆ ನಂಬುಗೆಯು ಸಾಲದು. ಟ್ರಿಪೋಲಿಯನ್ನು ಸ್ವಾಧೀನಮಾಡಿಕೊಂಡ ಬಗೆಗೆ ಇಟಲಿಯ ಪಾರ್ಲಿಮೆಂಟಿನವರು ಒಂದು ಬಿಲ್ಲನ್ನು ಮಾಡಿರುವುದು ಒಡಂಬಡಿಕೆಗೆ ದೊಡ್ಡ ಅಡಚಣೆಯಾಗಿರುತ್ತದೆ. ಪ್ಯಾಲಸ್ಟೈನಿನಿಂದ ಇಟಲಿಯವರನ್ನು ಓಡಿಸಬೇಕೆಂದು ನಿರ್ಧರವಾಗಿರುವುದರಿಂದ ೩೦೦೦—೪೦೦೦ ಜನರು ಊರನ್ನು ಬಿಟ್ಟು ಹೋಗಬೇಕಾಗಿದೆ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ॥ ೪ ನೆಯ ಸೋಮವಾರ.

ಭರತಖಂಡದ ರಾಜ್ಯಾಡಳಿತದ ವಿಚಾರವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯು.

ದಿಲ್ಲಿಯ ದರ್ಬಾರಿನದಿವಸ ಚಕ್ರವರ್ತಿಯವರ ಅಪ್ಪಣೆಯ ಮೇರೆಗೆ ಭರತಖಂಡದ ರಾಜ್ಯಪರಿಪಾಲನೆಯ ವಿಚಾರವಾಗಿ ವೈಸ್‌ರಾಯರೊಡನೆ ಪ್ರಕಟನಪತ್ರಿಕೆಯಲ್ಲಿ ಕಂಡ ಕೆಲ ಅಂಶಗಳನ್ನು ಕುರಿತು ಕಳೆದ ಫೆಬ್ರವರಿ ತಾ॥ ೨೧—೨೨ ರಲ್ಲಿ ಇಂಗ್ಲೆಂಡಿನಲ್ಲಿ ಸೇರಿದ್ದ ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಚರ್ಚೆಯು ನಡೆಯಿತು. ಆಗ ಲಾರ್ಡ್ ಕರ್ಜನರವರು ಕಲಕತ್ತಾಪಟ್ಟಣವನ್ನು ತಪ್ಪಿಸಿ ದಿಲ್ಲಿಯನ್ನು ರಾಜಧಾನಿಯನ್ನಾಗಿ ಮಾಡಿದ ಮತ್ತು ಬಂಗಾಳಾ ವಿಭಜನವನ್ನು ತಪ್ಪಿಸಿದ ಏರ್ಪಾಟನ್ನು ಬಹುವಾಗಿ ಖಂಡಿಸಿ, ವೈಸ್‌ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಮತ್ತು ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರೂಯವರು ಭರತಖಂಡದ ವಿಚಾರದಲ್ಲಿ ಜ್ಞಾನಾನುಭವವಿಲ್ಲದೆ ಮತ್ತು ಹಿಂದೆ ಭರತಖಂಡದ ವೈಸ್‌ರಾಯರಾಗಿದ್ದು ವಿಶೇಷ ಅನುಭವಸ್ಥರಾಗಿರುವ ಲಾರ್ಡ್ ಲ್ಯಾನ್ಸ್‌ಡೌನರಕೂಡವಾಗಲಿ, ತಮ್ಮಕೂಡವಾಗಲಿ ಅಥವಾ ಮತ್ತಾರಕೂಡವಾಗಲಿ ಆಲೋಚಿಸದೆ ಒಳಗೊಳಗೇ ಏರ್ಪಾಟುಗಳನ್ನು ಮಾಡಿಕೊಂಡು ಚಕ್ರವರ್ತಿಯವರ ಮುಖೇನ ಪ್ರಕಟಗೊಳಿಸಿದುದರಿಂದ ಆ ಪ್ರಕಟನೆಗೆ ಪ್ರಾಶಸ್ತ್ಯಗೆ ಉಂಟಾಯಿತೆಂದೂ, ಅದರಲ್ಲಿ ಕಂಡ ಪ್ರತಿಯೊಂದಂಶವೂ ಖಂಡಿಸಲ್ಪಡತಕ್ಕದಾಗಿರುವುದೆಂದೂ, ನವಾಬ್ ಸಲ್ಲಿಮುಲ್ಲಾಯವರು ಚಕ್ರವರ್ತಿಯವರಿಂದ ಪ್ರಶಸ್ತಿಯ ಮರ್ಯಾದೆಯನ್ನು ಪಡೆದುಕೊಳ್ಳುವ ಕಾಲದಲ್ಲಿ, ವಂಗಭಂಗವನ್ನು ಚಕ್ರವರ್ತಿಯವರು ತಪ್ಪಿಸಿಬಿಟ್ಟ ವಿಷಯವು ತಮ್ಮ ಹೃದಯವನ್ನು ಈಟಿಯಿಂದ ಭೇದಿಸಿದಂತೆ ಮಾಡಿರುತ್ತದೆಂದು ಹೇಳಿದುದರಿಂದ ಚಕ್ರವರ್ತಿಯವರು ಮಾಡಿದೀಯೇರ್ಪಾಟು ಅಕ್ರಮವೆಂಬುದು ವ್ಯಕ್ತವಾಗುತ್ತದೆಂದೂ ಪ್ರಸ್ತಾಪಿಸಿದರು. ಕಲಕತ್ತಾ ಪಟ್ಟಣವನ್ನು ಬಿಟ್ಟು ದಿಲ್ಲಿಯ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡುವ ವಿಚಾರವು ಅನೇಕಸಾರಿ ಚರ್ಚಿಸಲ್ಪಟ್ಟಿರುವುದು; ಆದರೆ ಈ ಬದಲಾವಣೆಯಿಂದ ಕಲಕತ್ತಾಕ್ಕೆ ಆಗತಕ್ಕ ನಷ್ಟವನ್ನು ತಿರಸ್ಕರಿಸತಕ್ಕದಾಗಿಲ್ಲವು. ರಾಜಧಾನಿಯನ್ನು ಕಲಕತ್ತಾದಿಂದ ತೆಗೆದುಬಿಟ್ಟುದರಿಂದ ದುಃಖಿತರಾದವರ ಮನಸ್ಸಮಾಧಾನಪಡಿಸುವುದಕ್ಕಾಗಿ ಬಂಗಾಳಾವಿಭಜನವನ್ನು ತಪ್ಪಿಸಿರುವುದಾಗಿದೆ. ಎಂದು ಲಾರ್ಡ್ ಮಿಂಟೋರವರು ಹೇಳಿದರು. ಈ ರಾಜಪ್ರಕಟನೆಯು ರಾಜನೀತಿನೈಪುಣ್ಯಕ್ಕನುಸಾರವಾಗಿರುವುದಲ್ಲದೆ, ಭಾರತೀಯರಿಗೆ ಬಹು ಸಂತೋಷಕರವಾಗಿದೆ, ಈ ಏರ್ಪಾಟಿನಿಂದ ಭರತಖಂಡಕ್ಕೆ ಬಹು ಕ್ಷೇಮವಾಗುತ್ತದೆ. ಎಂದು ಲಾರ್ಡ್ ರೇಯವರೂ; “ಈ ಪ್ರಕಟನಪತ್ರಿಕೆಯು ಬಹಿರಂಗಪಡಿಸಲ್ಪಟ್ಟಾಗಲೂ ಅನಂತರ ಕೆಲಕಾಲದವರೆಗೂ ನಾನು ಭರತಖಂಡದಲ್ಲಿದ್ದೆನು ಆದರೆ ಇದರಿಂದ ಪ್ರತಿಕೂಲವೇನಾದರೂ ಆಗುವುದೆಂದು ಭಾವಿಸಿಕೊಂಡಿದ್ದ ಒಬ್ಬ ಭಾರತೀಯನನ್ನಾದರೂ ನಾನು ನೋಡಲಿಲ್ಲವು” ಎಂದು ಲಾರ್ಡ್ ಹ್ಯಾರಿಸ್‌ರವರೂ; ಸೆಕ್ರೆಟರಿ ಲಾರ್ಡ್ ಕ್ರೂಯವರು ಅನುಸರಿಸಿರುವ ಪದ್ಧತಿಯು ಸಮಂಜಸವಾಗಿರುವುದಲ್ಲದೆ, ಇದರಿಂದ ಭಾರತೀಯರ ಅಸಮಾಧಾನವು ಹೋಗಿ ರಾಜಭಕ್ತಿಯು ಅಭಿವೃದ್ಧಿಯಾಗಿ ರಾಜಪ್ರಕಟನೆಯು ಭರತಖಂಡದ ಚರಿತ್ರೆಯಲ್ಲಿ ಅತ್ಯುನ್ನತಿಯಸ್ಥಾನವನ್ನು ಹೊಂದುವುದು. ಎಂದು ಲಾರ್ಡ್ ಮೆಕ್‌ಡೊನಾಲ್ಡ್‌ರವರೂ; ಈ ಹೊಸ ಏರ್ಪಾಟು ಬಹು ಸಮರ್ಪಕವಾಗಿರುತ್ತದಲ್ಲದೆ, ಇದನ್ನು ಸಿದ್ಧಗೊಳಿಸಿದವರ ಧೈರ್ಯವನ್ನು ಕೊಂಡಾಡತಕ್ಕದಾಗಿರುತ್ತದೆ, ಮತ್ತು ಇದರಿಂದ ಭಾರತೀಯರಿಗೆ ಸುಖವಾಗುತ್ತಾದದ್ದರಿಂದ ಯುಕ್ತ ತಾವು ಅನುಮೋದಿಸುತ್ತೇವೆ. ಎಂದು ಲಾರ್ಡ್ ಆಂಪ್ಥಿಲ್‌ರವರೂ ಪ್ರಸ್ತಾಪಿಸಿದರು. ಲಾರ್ಡುಗಳಾದ ಕರ್ಜನರವರು, ಲ್ಯಾನ್ಸ್‌ಡೌನ್‌ರವರು ಮೊದಲಾದವರು ಮಾಡಿದಾಕ್ಷೇಪಗಳನ್ನು ಹಿಂದೆ ಸ್ಟೇಟ್ ಸೆಕ್ರೆಟರಿಯವರಾಗಿದ್ದ ಲಾರ್ಡ್ ಮಾರ್ಲೆಯವರು ಖಂಡಿಸಿ ನವಾಬ್ ಸಲ್ಲಿಮುಲ್ಲಾಯವರು ಪ್ರಶಸ್ತಿಯನ್ನು ಪಡೆಯುವ ಕಾಲದಲ್ಲಿ ಬಂಗಾಳಾ ವಿಭಜನವನ್ನು ತಪ್ಪಿಸಿದುದಕ್ಕಾಗಿ ತಮ್ಮ ಅಸಮಾಧಾನವನ್ನೂ, ಅಸೂಯೆಯನ್ನೂ ತೋರಿಸಿದರೆಂದು ಲಾರ್ಡ್ ಕರ್ಜನರವರು ಹೇಳಿದಂಶವು ನಿರಾಧಾರವಾದುದೆಂದೂ, ರಾಜಪ್ರಕಟನೆಯನ್ನು ತಾವು ಅನುಮೋದಿಸುತ್ತೇವೆಂದೂ ಹೇಳಿದರು.

ಹಿಂದಣ ದಿಲ್ಲಿಯ ದರ್ಬಾರಿನಕಾಲದಲ್ಲಿ ಚಕ್ರವರ್ತಿಯವರ ಸಹೋದರರು ಪ್ರತ್ಯಕ್ಷವಾಗಿ ಬಂದಿದ್ದರೂ, ಅವರನ್ನು ಹಿಂದಿಟ್ಟು ತಾವೇ ಮುಂದುವರಿದು ಎಲ್ಲಾ ರಾಜಮರ್ಯಾದೆಯನ್ನು ಹೊಂದಿದಂತಹ ಮತ್ತು ತಾವು ಮಾಡಿದ ಏರ್ಪಾಟುಗಳಿಗೆಂದೂ ಚ್ಯುತಿಯಿಲ್ಲವೆಂದು ನಿರ್ಧರಿಸಿಕೊಂಡಿದ್ದಂತಹ ಲಾರ್ಡ್ ಕರ್ಜನರವರು ಧೋರಣೆಯಿಂದಲೋ ಅಥವಾ ಬಂಗಾಳಿ ಜನರ ಮೇಲಣ ಅಸೂಯೆಯಿಂದಲೋ, ಮತ್ತಾವ ಕಾರಣದಿಂದಲೋ ಮಾಡಿದ್ದ ಬಂಗಾಳಾ ವಿಭಜನವು ತಮ್ಮ ಕಣ್ಣಿದಿರಿಗೆ ತಪ್ಪಿಸಲ್ಪಟ್ಟುದರಿಂದ ತಮ್ಮ ಮೂಗು ಕತ್ತರಿಸಲ್ಪಟ್ಟಂತಾಗಿರುವುದನ್ನು ನೋಡಿ ಸಹಿಸಿಕೊಂಡಿರಲಾಗದೆ ರಾಜಪ್ರಕಟನೆಯ ವಿಚಾರವಾಗಿ ಆಕ್ಷೇಪಗಳನ್ನು ಮಾಡಿರುವುದರಲ್ಲಿ ಆಶ್ಚರ್ಯವೇನೂ ತೋರುವುದಿಲ್ಲವು. ಲಾರ್ಡ್ ಕರ್ಜನ್‌ರವರು ಬಂಗಾಳಾ ವಿಭಜನವನ್ನು ಮಾಡದಿದ್ದರೆ ಭಾರತೀಯರು ಸ್ವೋನ್ನತಿಯ ಪ್ರಯತ್ನವನ್ನು ಎಂದಿಗೆತಾನೇ ಮಾಡುತ್ತಿದ್ದರು, ಮತ್ತು ರಾಜ್ಯಪರಿಪಾಲನ ಕ್ರಮದಲ್ಲಿ ಈಗಿನ ಸುಧಾರಣೆಗಳೂ, ಸೌಲಭ್ಯಗಳೂ ಕಲ್ಪಿಸಲ್ಪಡುತ್ತಿದ್ದುವೆ? ಅದುಕಾರಣ ಅವರ ವಂಗಭಂಗಕ್ರಮದಿಂದ ಭರತಖಂಡಕ್ಕೆ ಒಂದು ವಿಧದಲ್ಲಿ ಕ್ಷೇಮವಾಯಿತೆಂದೇ ಹೇಳಬೇಕಾಗಿದೆ.

ಶ್ರೀಮದ್ಯುವರಾಜರಿಗೆ ಬೆಂಗಳೂರಲ್ಲಾದ ಸನ್ಮಾನವು.

ಬೆಂಗಳೂರ ನಿವಾಸಿಗಳು ಕಳೆದ ಬುಧವಾರ ಸಾಯಂಕಾಲದಲ್ಲಿ ಲಾಲಬಾಗನ್ನು ಧ್ವಜಪತಾಕೆಗಳಿಂದಲೂ, ತಳಿರು ತೋರಣಗಳಿಂದಲೂ ಬಹು ರಮ್ಯವಾಗಿ ಶೃಂಗರಿಸಿ, ಶ್ರೀಮದ್ಯುವರಾಜರನ್ನು ಬರಮಾಡಿಕೊಂಡು ಅವರ ಭಾವಚಿತ್ರವನ್ನು ತೆಗೆಯಿಸಿದ ಮೇಲೆ ಹಾಡುಗಾರಿಕೆ, ವೀಣೆಯ ನುಡಿತ, ದೊಂಬರಾಟ ಮೊದಲಾದ ವಿನೋದಗಳಿಂದ ಆನಂದಗೊಳಿಸಿ ಚಕ್ರವರ್ತಿ ಸಾರ್ವಭೌಮರಿಂದ ಮಹಾಸ್ವಾಮಿಯವರಿಗೆ ಲಭ್ಯವಾಗಿರುವ ಪ್ರಶಸ್ತಿಯಿಂದ ತಮ್ಮಗಳಿಗುಂಟಾಗಿರುವ ಅಪಾರವಾದ ಸಂತೋಷ ಸೂಚಿತ ವಿಜ್ಞಾಪನ ಪತ್ರಿಕೆಯನ್ನು ಓದಿ ಒಂದು ಸುಂದರವಾದ ಬೆಳ್ಳಿಯ ಪೆಟ್ಟಿಗೆಯೊಳಿಟ್ಟೊಪ್ಪಿಸಿದರು. ಈ ಉತ್ಸವಕ್ಕೆ ದಿವಾನರು, ಕೌನ್ಸಿಲರುಗಳು, ಮ॥ ವಿ. ಪಿ. ಮಾಧವರಾವ್ ಸಿ. ಐ. ಇ, ಯವರು, ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು, ಚೀಫ್‌ಜಡ್ಜ್ ಸರ್ ಇಜ್‌ಮೆ ಮತ್ತು ಅವರ ಪತ್ನಿಯವರು, ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಮ॥ ಟೇಟ್‌ರು ಮತ್ತು ಅವರ ಪತ್ನಿಯವರು, ಚೀಫ್ ಕೋರ್ಟಿನ ೨ ಮತ್ತು ೩ ನೆಯ ಜಡ್ಜಿಯರುಗಳು, ಡಿ॥ ಕೌ॥ ಮ॥ ಕುಮಾರಸ್ವಾಮಿನಾಯಕರು, ಚೀಫ್ ಇಂಜನಿಯರ್ ಮ॥ ವಿಶ್ವೇಶ್ವರಯ್ಯ, ಸಿ.ಐ.ಇ., ಯವರು, ಚೀ॥ ಮತ್ತು ರೆ॥ ಸೆಕ್ರೆಟರಿ ಮ॥ ಬಾಲಸುಂದರಂ ಅಯ್ಯರ್‌ರವರು, ಡಾ॥ ರಾಮಸ್ವಾಮಯ್ಯಂಗಾರರು, ರಾಜಕಾರ್ಯ ಪ್ರವೀಣ ಮ॥ ಎ. ರಂಗಸ್ವಾಮಯ್ಯಂಗಾರರು, ಮ॥ ಸಿ. ಶ್ರೀನಿವಾಸಯ್ಯಂಗಾರರು ಮೊದಲಾದ ಅಧಿಕಾರಿಗಳೂ, ಲಾಯರುಗಳೂ ವರ್ತಕರುಗಳೂ ದಯಮಾಡಿಸಿದ್ದರು ಶ್ರೀಮದ್ಯುವರಾಜರು ಗಂಧಪುಷ್ಪ ಹಾರಗಳನ್ನು ಸ್ವೀಕರಿಸಿ ದಯಮಾಡಿಸಿದಮೇಲೆ ಅತಿಥಿಗಳು ಅಲ್ಪಾಹಾರದಿಂದ ಸತ್ಕರಿಸಲ್ಪಟ್ಟರು.

ವಿಜ್ಞಾಪನಪತ್ರಿಕೆಯ ಸಾರಾಂಶವು:—

ಸಾರ್ವಭೌಮರವರು ಮಹಾಸ್ವಾಮಿಯವರಿಗೆ “ನೈಟ್ ಕಮ್ಯಾಂಡರ್ ಆಫ್ ದಿ ಮೋಸ್ಟ್ ಎಕ್ಸಲೆಂಟ್ ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್” ಎಂಬ ಪ್ರಶಸ್ತಿಯನ್ನು ದಯಪಾಲಿಸಿರುವುದು ಪುರಾತನವೂ, ಚರಿತ್ರ ಪ್ರಸಿದ್ಧವೂ ಆದ ಈ ಸಂಸ್ಥಾನದ ಮಹಾರಾಜರವರ ಮನೆತನದವರಲ್ಲಿ ಚಕ್ರವರ್ತಿಯವರಿಗೆ ಯಾವಾಗಲೂ ಪೂರ್ಣವಾದ ಅಭಿಮಾನಾಸಕ್ತಿಯಿರುತ್ತದೆಂಬುದಕ್ಕೆ ಪ್ರಬಲತಮವಾದ ಸೂಚನೆಯಾಗಿರುವುದೆಂದು ನಮಗೆ ತೋರುತ್ತದೆ, ಅಲ್ಲದೆ ಸಾರ್ವಭೌಮದಂಪತಿಗಳು ಭರತಖಂಡದ ರಾಜಧಾನಿಯಾದ ದಿಲ್ಲಿಪಟ್ಟಣಕ್ಕೆ ದಯಮಾಡಿಸಿದ್ದ ಮಹಾಸಂದರ್ಭವನ್ನು ಯಾವಾಗಲೂ ಸ್ಮೃತಿಪಥಕ್ಕೆ ತರತಕ್ಕದಾಗಿದೆ. ಮಹಾಸ್ವಾಮಿಯವರು ಪ್ರಜೆಗಳಾದ ನಮಗೂ, ತಮ್ಮ ಪ್ರಖ್ಯಾತ ಭ್ರಾತೃಗಳಾದ ನಮ್ಮ ಪರಮಪ್ರಿಯ ಪ್ರಭುಗಳಿಗೂ ಮಧ್ಯವರ್ತಿಗಳಾಗಿರುವುದು ನಮಗೆ ಹೆಮ್ಮೆಯನ್ನುಂಟುಮಾಡಿರುತ್ತದೆ. ಮಹಾಸ್ವಾಮಿ ಸಹೋದರರುಗಳಲ್ಲಿರತಕ್ಕ ಪ್ರಬಲವಾದ ವಿಶ್ವಾಸವೂ, ಪ್ರಜೆಗಳ ಪ್ರಾರ್ಥನೆಯನ್ನು ಕೂಡಲೇ ನೆರವೇರಿಸುವುದರಲ್ಲಿ ಮಹಾಸ್ವಾಮಿಯವರಿಗಿರತಕ್ಕ ಸಹಾನುಭೂತಿಯೂ ಸಂಸ್ಥಾನದ ಎಲ್ಲಾ ಜಾತಿ ಮತಗಳ ಪ್ರಜೆಗಳಿಗೂ ತಮ್ಮನ್ನು ಪರಮ ಪ್ರಿಯರನ್ನಾಗಿ ಮಾಡಿರುತ್ತವೆ. ಮಹಾಸ್ವಾಮಿಯವರ ಭ್ರಾತೃಗಳಾದ ನಮ್ಮ ಪರಮ ಪ್ರಿಯ ಪ್ರಭುಗಳು ರಾಜ್ಯಸೂತ್ರವನ್ನು ಸ್ವತಃವಹಿಸಿಕೊಂಡಾರಭ್ಯ ಮೈಸೂರ ಸೀಮೆಯ ಪ್ರಜೆಗಳ ಸಂಪದಭಿವೃದ್ಧಿ ವಿಚಾರದಲ್ಲಿ ಚಿಂತಾಸಕ್ತರಾಗಿರುವುದೂ ಆಗಾಗ್ಗೆ ಉಪಯುಕ್ತವಾದ ಏರ್ಪಾಟುಗಳನ್ನು ಮಾಡುತ್ತಿರುವುದೂ ಪ್ರಜೆಗಳೆಲ್ಲರಿಗೂ ಶ್ರೀಮನ್ ಮಹಾರಾಜರ ವಿಚಾರದಲ್ಲಿ ವಿಶೇಷ ಪೂಜ್ಯಬುದ್ಧಿಯನ್ನೂ, ಕೃತಜ್ಞತೆಯನ್ನೂ ಉಂಟುಮಾಡಿರುತ್ತವೆ. ಮಹಾಸ್ವಾಮಿಯವರು ಬೆಂಗಳೂರ ನಿವಾಸಿಗಳ ಪ್ರಾರ್ಥನೆಯನ್ನು ಅಂಗೀಕರಿಸಿ ಇಲ್ಲಿ ಎಲ್ಲರಿಗೂ ದರ್ಶನವನ್ನಿತ್ತುದಕ್ಕಾಗಿ ತಮ್ಮನ್ನು ವಂದಿಸುತ್ತೇವೆ ಮತ್ತು ತಮಗೂ, ತಮ್ಮ ಭ್ರಾತೃಗಳಾದ ಶ್ರೀಮನ್ ಮಹಾರಾಜರವರಿಗೂ, ಉಳಿದ ರಾಜಕುಟುಂಬದವರಿಗೂ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಡಲೆಂದು ಜಗದ್ರಕ್ಷಕನನ್ನು ಅನನ್ಯಭಾವದಿಂದ ಬೇಡುತ್ತೇವೆ. ಇದಕ್ಕೆ ಶ್ರೀಮದ್ಯುವರಾಜರು ಅಪ್ಪಣೆಕೊಡಿಸಿದ ಉತ್ತರದಸಾರವು :—

ನಾನು ಚಕ್ರವರ್ತಿಯವರಿಂದ ನೈಟ್ ಹುಡ್ ಪ್ರಶಸ್ತಿಯನ್ನು ದಯಪಾಲಿಸಲ್ಪಟ್ಟವನಾಗಿ ದಿಲ್ಲಿಯಿಂದ ಇಲ್ಲಿಗೆ ಬಂದಮೇಲೆ ನಿಮ್ಮಗಳನ್ನೆಲ್ಲಾ ಈ ದಿವಸ ಇಲ್ಲಿ ಸಂದರ್ಶಿಸಿ ನೀವುಗಳು ವಿಶ್ವಾಸಪೂರ್ವಕವಾಗಿ ಒಪ್ಪಿಸಿದ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಲು ನೀವು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ನಿಮ್ಮಗಳನ್ನೆಲ್ಲಾ ನಾನು ಕೃತಜ್ಞತಾಭಾವದಿಂದ ವಂದಿಸುತ್ತೇನೆ. ನೀವು ವಾಸ್ತವ್ಯವಾಗಿ ಹೇಳಿರುವಂತೆ ನನಗೆ ಲಭ್ಯವಾಗಿರುವ ಪ್ರಶಸ್ತಿಯ ಮರ್ಯಾದೆಯು, ಚಕ್ರವರ್ತಿಯವರು ನಮ್ಮ ಮನೆತನದ ಕ್ಷೇಮಾಭಿಲಾಷಿಗಳಾಗಿರುವರೆಂಬುದಕ್ಕೆ ಒಳ್ಳೆಯ ನಿದರ್ಶನವಾಗಿರುತ್ತದೆ. ಮತ್ತು ಚಕ್ರವರ್ತಿಯವರು ಈ ದೇಶದಲ್ಲಿ ಅಪ್ಪಣೆಕೊಡಿಸಿರುವ ಶುಭವಚನಗಳಿಂದಲೂ, ಮಾಡಿರುವ ಉದಾರಕಾರ್ಯಗಳಿಂದಲೂ ನಿಸ್ಸಂದೇಹವಾಗಿ ವ್ಯಕ್ತವಾಗಿರುತ್ತದೆ ಈ ಭರತಖಂಡದ ಮಹಾಸಾಮ್ರಾಜ್ಯದರಾಜರುಗಳ ಮತ್ತು ಪ್ರಜೆಗಳ ಕ್ಷೇಮಾಭಿವೃದ್ಧಿಯಲ್ಲಿ ಚಕ್ರವರ್ತಿಯವರಿಗೆ ಅಪಾರವಾದ ಸಹಾನುಭೂತಿಯೂ, ಆಸಕ್ತಿಯೂ ಇರುವುವು. ಮಹಾಸಾಮ್ರಾಜ್ಯದಲ್ಲಿ ಒಂದು ಅಂಶದವರಾದ ನಾವು ಇತರರಂತೆಯೇ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವ ಸಂತೋಷಭಾಗಿಗಳಾಗಿದ್ದೆವು. ಚಕ್ರವರ್ತಿಯವರಲ್ಲೂ, ಅವರ ಸಿಂಹಾಸನದಲ್ಲೂ ರಾಜಭಕ್ತಿ ವಿಶ್ವಾಸಗಳಿಂದಿರುವುದರಲ್ಲಿ ನಾವು ಇತರರಿಗೆ ಎರಡನೆಯವರಾಗಿಲ್ಲವೆನ್ನುವುದರಲ್ಲಿ ನಮ್ಮಗಳೆಲ್ಲರಲ್ಲೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ದೃಢವಾಗಿತಿಳಿದಿರುತ್ತೇನೆ. ನಾನು ನಿಮಗೂ ನನ್ನ ಅಣ್ಣಂದಿರಾದ ನಿಮ್ಮ ಶ್ರೀಮನ್ ಮಹಾರಾಜರವರಿಗೂ ಮಧ್ಯವರ್ತಿಯಾಗಿರುವೆನೆಂದು ನೀವು ಹೇಳಿರುತ್ತೀರಿ. ಈ ವಿಚಾರದಲ್ಲಿ ನನಗೆ ಪ್ರಾಪ್ತವಾಗುವ ಮಹಾಕಾರ್ಯವನ್ನು ನಿಮ್ಮ ನಿರೀಕ್ಷಣೆಯಂತೆ ನೆರವೇರಿಸಲು ನಾನು ಸತತವೂ ಪ್ರಯತ್ನಪಡುವೆನು. ನನ್ನ ಪ್ರಿಯ ಅಣ್ಣಂದಿರು ಸರ್ವದಾ ತಮ್ಮ ಪ್ರಜೆಗಳ ಕ್ಷೇಮ ಚಿಂತನೆಯಲ್ಲಿರುವರೆಂದೂ ನಿಮಗೆ ಪೂರ್ಣವಾದ ರಾಜಭಕ್ತಿ ವಿಶ್ವಾಸವಿರುವುದೆಂದೂ ನಿಮ್ಮ ವಿಜ್ಞಾಪನ ಪತ್ರಿಕೆಯಲ್ಲಿ ಹೇಳಿರುತ್ತೀರಿ. ಇದಕ್ಕಾಗಿ ನನ್ನ ಅಣ್ಣಂದಿರ ಮತ್ತು ನನ್ನ ಕುಟುಂಬದವರ ಪರವಾಗಿ ವಂದಿಸುತ್ತೇನಲ್ಲದೆ, ನೀವು ಯಾವಾಗಲೂ ನನ್ನಗಳಿಗೆ ವಿಶೇಷ ಮರ್ಯಾದೆಯನ್ನೂ, ಪ್ರೀತಿಯನ್ನೂ ತೋರಿಸುತ್ತಿರುವುದಕ್ಕಾಗಿ ನಿಮಗೆ ನಾವುಗಳು ಬಹುಕೃತಜ್ಞರಾಗಿರುತ್ತೇವೆ.

ಒಳದೇಶದ ವೃತ್ತಾಂತಗಳು.

ಅಂಡರ್ ಸೆಕ್ರೆಟರಿ ಮ॥ [illegible]ಯವರು ಸಕಲೇಶಪುರದ ಸಬ್‌ಡಿವಿಜನ್ ಛಾರ್ಜಿಗೆ ವರ್ಗಾಯಿಸಲ್ಪಟ್ಟಿರುವರು.

ಚೀಫ್ ಕೋರ್ಟಿನ ೨ ನೆಯ ಜಡ್ಜಿಯರಾದ ರಾ॥ ಬ॥ ಕೃಷ್ಣರಾಯರು ರಜಾಮೇಲೆ ಹೋಗುವುದಿಲ್ಲವೆಂದು ಗೊತ್ತಾಗಿರುವುದು.

ಕಳೆದ ಶುಕ್ರವಾರ ರಾತ್ರಿ ಬೆಂಗಳೂರಲ್ಲಿ ೨ ಅಂಗುಲ ೩ ಸೆಂಟು ಮಳೆಯೂ, ರಾಜಧಾನಿಯಲ್ಲಿ ಪ್ರಾಯಶಃ ೧ ಅಂಗುಲ ಮಳೆಯೂ ಆಯಿತು.

ಕಳೆದ ಶನಿವಾರ ಅ॥ ಪೊಲೀಸು ಇ॥ ಜನರಲ್ ಮ॥ ಶ್ರೀಕಂಠೇಶ್ವರಯ್ಯರ್‌ರವರು ತಮ್ಮ ಅಸಿಸ್ಟೆಂಟರೊಡನೆ ರಾಜಧಾನಿಗೆ ಬಂದರು.

ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೆಟ್ ಸೆಕ್ರೆಟರಿಗಳೊಡನೆ ಉತಕಮಂಡಲದಿಂದ ರಾಜಧಾನಿಗೆ ನೆನ್ನೆಯ ಬೆಳಿಗ್ಗೆ ದಯಮಾಡಿಸಿದರು, ಶ್ರೀಮದ್ಯುವರಾಜರವರೂ ಬೆಂಗಳೂರಿಂದ ರಾಜಧಾನಿಗೆ ಈ ದಿವಸ ದಯಮಾಡಿಸುವವರಾಗಿರುವರು.

ಮಾಲೂರು ತಾಲ್ಲೋಕು ಆಕ್ಟಿಂಗ್ ಅಮಲ್ದಾರರಾಗಿದ್ದ ಪೊಲೀಸು ಇನ್ಸ್‌ಪೆಕ್ಟರ್ ಮ॥ ಜಿ. ಶಾಂತವೀರಪ್ಪ, ಬಿ.ಎ., ಯವರು ೨ ನೆಯ ಕೌನ್ಸಿಲರ್ ಮ॥ ದೇವರಾಜ ಅರಸಿನವರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆಂದು ಕೇಳುತ್ತೇವೆ.

ಕಳೆದ ತಾ॥ ೨೩ ರಲ್ಲಿ ರಾಜಧಾನಿಯಲ್ಲಿ ಒಂದು ಮೋಟಾರು ಬೈಸಿಕಲ್ಲು ಇದಿರಾಗಿ ಬರುತ್ತಿದ್ದ ಕುದುರೆಯ ಬಂಡಿಗೆ ತಾಕಿಬಿಡಲು ಬೈಸಿಕಲ್ಲಿನ ಮುಂದಣ ಚಕ್ರವು ಜಜ್ಜಿಹೋಗಿ ಸ್ವಾರರಿಗೆ ಕೊಂಚ ಪೆಟ್ಟುಬಿದ್ದಿತಲ್ಲದೆ ಕುದುರೆಗೆ ಪೂರಾ ಅಪಾಯವಾಯಿತು, ಮತ್ತು ಬಂಡಿಯನ್ನು ಹೊಡೆಯುತ್ತಿದ್ದವನು ಕೆಳಗೆ ಬಿದ್ದು ತುಂಬಾ ಪೆಟ್ಟನ್ನು ತಿಂದನು. ಸಾರಥಿಯೂ ಕುದುರೆಯೂ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ ಗುಣವಾಗಿರುವರೆಂದು ತಿಳಿಯುತ್ತೇವೆ.

ಚೆನ್ನಪಟ್ಟಣದಲ್ಲಿ ಈ ವೇಳೆ ಪ್ಲೇಗ್ ರೋಗವು ಬಹು ಉಲ್ಬಣವಾಗಿದ್ದು ಅನೇಕ ಜನರನ್ನು ಆಹುತಿಗೊಂಡು ಕಳೆದ ೧೨ ವಾರದಿಂದ ಶಮನವಾಗಿರುತ್ತಾದ ಪ್ರಯುಕ್ತ, ಜನರೆಲ್ಲರೂ ಊರಿಗೆ ಹಿಂದಿರುಗಿ ಬರುತ್ತಿರುವರು ಡಾಕ್ಟರ್ ಮುತ್ತುಸ್ವಾಮಿದಾಸರು ಕೆಲ ದಿವಗಳ ಕೆಳಗೆ ಇಲ್ಲಿಗೆ ಬಂದಿದ್ದು ಆರೋಗ್ಯವಿಚಾರದಲ್ಲೂ ಪ್ಲೇಗ್ ರೋಗನಿವಾರಣೆಯ ವಿಚಾರದಲ್ಲೂ ಕೆಲ ಉಪನ್ಯಾಸಗಳನ್ನು ಕೊಟ್ಟು ಹೋದರು. ಬೈಸಿಕಲ್ ವಿಚಾರದಲ್ಲಿ ಕೆಲವು ದಿನಗಳ ಕೆಳಗೆ ಕಲಹವನ್ನು ಮಾಡಿ ಹೊಡೆದಾಡಿದ ಕೆಲ ದಾಸಬಣಜಿಗರೂ ಎಲೆಬಣಜಿಗರೂ ಒಬ್ಬರಮೇಲೆ ಮತ್ತೊಬ್ಬರು ಕ್ಲೋಸ್‌ಪೇಟೆಯ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರಲ್ಲಿ ವಿವಾದಗಳನ್ನು ಹೂಡಿರುತ್ತಾರೆ. ಈ ವಿವಾದಗಳಲ್ಲಿ ಉಭಯಪಕ್ಷದ ಪ್ರಮುಖ ಜನರು ಅಪರಾಧಿಗಳಾಗಿ ಸೇರಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಸೀರಾದಲ್ಲಿ ಒಬ್ಬ ದೊಡ್ಡ ವರ್ತಕನ ಮನೆಯಲ್ಲಿ ಆತನ ಮಕ್ಕಳಿಂದ ಕಳೆದ ತಾ॥ ೨೩ ರಲ್ಲಿ ಬೆಂಕಿಯು ಹೊತ್ತಿಸಲ್ಪಟ್ಟು ೧॥ ಸಾವಿರ ರೂ. ಬೆಲೆಯ ಧಾರದ ಕಟ್ಟುಗಳು ಸುಟ್ಟುಹೋದುವು. ಅಮಲ್ದಾರರು ಕೂಡಲೆ ಬಂದು ನೆರೆಯ ಜನರ ಸಹಾಯದಿಂದ ನೀರನ್ನು ಹೊಯಿಸಿ ಬೆಂಕಿಯನ್ನು ಆರಿಸಿದುದಲ್ಲದೆ ನೆರೆಯ ಸಾಹುಕಾರನ ಮನೆಯಲ್ಲಿದ್ದ ೧೫೦೦೦ರೂ. ಬೆಲೆಯ ಬಟ್ಟೆಯನ್ನು ಹೊರಗೆ ಸಾಗಿಸಿ ಗೈಲಿನಲ್ಲಿ ಹಾಕಿಸಿದರು. ಇಲ್ಲದಿದ್ದಲ್ಲಿ ಬಹು ಅನರ್ಥವಾಗುತ್ತಿದ್ದಿತು. ಆ ಮನೆಯ ಯಜಮಾನನು ಆ ಸಮಯದಲ್ಲಿ ಹೊರಗೆ ಹೋಗಿದ್ದವನು ಮನೆಗೆ ಬಂದು ತನ್ನ ಪದಾರ್ಥಗಳು ಹೊರಗೆ ಸಾಗಿಸಲ್ಪಟ್ಟಿರುವುದನ್ನು ಕಂಡು ಆನಂದಪರವಶನಾಗಿ ಆ ಜನರನ್ನು ಅತ್ಯಂತವಾಗಿ ಶ್ಲಾಘಿಸಿದನು.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಸಿ. ಐ., ಯವರ ಮತ್ತು ಸರದಾರ್ ಎಂ. ಕಾಂತರಾಜ ಅರಸಿನವರ ಮಾತೃಶ್ರೀಯವರಾದ ಕೆಂಪನಂಜಮ್ಮಣ್ಣಿಯವರು ಕಳೆದ ತಾ॥ ೨ ನೆಯ ಶನಿವಾರ ಸಾಯಂಕಾಲ ೫-೫॥ ಗಂಟೆಯ ಸಮಯದಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಶವವು ತಕ್ಕ ರಾಜಮರ್ಯಾದೆಯೊಡನೆ ಅದೇ ರಾತ್ರಿ ೮॥ ಗಂಟೆಯಲ್ಲಿ ಉತ್ಸವದಿಂದ ಮಧುವನಕ್ಕೆ ಸಾಗಿಸಲ್ಪಟ್ಟು ದಹನಮಾಡಲ್ಪಟ್ಟಿತು. ದಹನ ಕಾರ್ಯವೆಲ್ಲವೂ ಮುಗಿಯುವ ಹೊತ್ತಿಗೆ ರಾತ್ರಿ ೧ ಗಂಟೆಯಾಗಿದ್ದಿತು. ಡಿ॥ ಕೌ॥ ಮ॥ ಕೃಷ್ಣಯ್ಯರ್‌ರವರು, ಪೊ॥ ಇ॥ ಜನರಲ್ ಮ॥ ಶ್ರೀಕಂಠೇಶ್ವರಯ್ಯರ್‌ರವರು, ಚೀಫ್ ಇಂಜನೀರ್ ಮ॥ ವಿಶ್ವೇಶ್ವರಯ್ಯನವರು ಮೊದಲಾದ ಸರ್ಕಾರಿ ಉದ್ಯೋಗಸ್ಥರುಗಳೂ, ರಾಜಬಂಧುಗಳೂ ಶವದೊಡನೆ ರುದ್ರಭೂಮಿಗೆ ದಯಮಾಡಿಸಿದ್ದರು. ಗತಿಸಿದ ಕೆಂಪನಂಜಮ್ಮಣ್ಣಿಯವರಿಗೆ ಪ್ರಾಯಶಃ ೬೫ ವರ್ಷ ವಯಸ್ಸಾಗಿದ್ದಿತೆಂದು ತೋರುತ್ತದೆ. ಇವರಿಗೆ ಮಹಾಮಾತೃಶ್ರೀ ವಾಣೀವಿಲಾಸದವರು ಮತ್ತು ಸರದಾರ್ ಕಾಂತರಾಜಅರಸಿನವರುಗಳಲ್ಲದೆ ಗತಿಸಿದ ಬಾಳೆಅರಸಿನವರ ಪತ್ನಿಯೂ ನಂಜರಾಜಅರಸಿನವರ ಪತ್ನಿಯವರೂ ಕನಿಷ್ಠ ಪುತ್ರಿಯರಾಗಿದ್ದರು. ಗತಿಸಿದ ವೃದ್ಧಮಹಿಳೆಯವರು ಬಹು ಸುಕೃತಶಾಲಿಗಳಾದ ಮಕ್ಕಳನ್ನು ಪಡೆದು ಸಕಲ ರಾಜವೈಭವವನ್ನನುಭವಿಸಿ ಮೊಮ್ಮಕ್ಕಳು ಮರಿಮಕ್ಕಳುಗಳಿಂದ ಕೂಡಿ ಬಹು ಸನ್ಮಾನಿತರಾಗಿದ್ದರಲ್ಲದೆ ಒಳ್ಳೆಯ ದೈವಭಕ್ತರೂ, ಬಡಕುಟುಂಬಿಗಳ ಆಧಾರಿಗಳೂ ಆಗಿದ್ದರು. ಮಹಾಮಾತೃಶ್ರೀ ವಾಣೀವಿಲಾಸದವರಿಗೂ ಸರದಾರ್ ಕಾಂತರಾಜಅರಸಿನವರಿಗೂ ಮಾತೃವಿಯೋಗದುಃಖವು ಪ್ರಾಪ್ತವಾದುದಕ್ಕಾಗಿ ನಾವು ಬಹುವಾಗಿ ಚಿಂತಿಸಿ ಇವರುಗಳಿಗೆ ದುಃಖಸಮಾಧಾನವನ್ನೂ, ಮೃತರ ಆತ್ಮಕ್ಕೆ ಶಾಂತಿಯನ್ನೂ ಉಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನ ಸಂಗ್ರಹವು.

ಹೈದರಾಬಾದಲ್ಲಿ ೧೫೮ ಜನ ರೈತರು ಮಂಜಿನ ಗಡ್ಡೆಗಳ ಕೆಳಗೆ ಸಿಕ್ಕಿ ಸತ್ತುಹೋದರು.

ಸಿಂಲಾದ ಪರ್ವತಗಳ ಮೇಲೆ ಧರಂಪುರದಲ್ಲಿ ಎಡ್ವರ್ಡ್ ಪ್ರಭುಗಳ ಹೆಸರಿನಿಂದ ಕಟ್ಟಲ್ಪಡುವ ಕ್ಷಯರೋಗಿಗಳ ಆರೋಗ್ಯಾಲಯಕ್ಕಾಗಿ ಬರೋಡಾ ಮಹಾರಾಜರವರು ಎರಡನೆಯವೇಳೆ ೧೦೦೦೦ ರೂ. ಗಳನ್ನು ಕೊಟ್ಟಿರುತ್ತಾರೆ.

ಬೊಂಬಾಯಿನಲ್ಲಿ ಒಬ್ಬ ಫಕೀರನು ೧ ಗಂಟೆಯವರೆಗೆ ನೀರಿನೊಳಗಿರುತ್ತೇನೆಂದು ಹೇಳಿಕೊಳ್ಳುತ ಒಂದು ಭಾವಿಯೊಳಗೆ ಮುಳುಗಿದವನು, ೧॥ ಗಂಟೆಯ ಕಾಲವಾದರೂ ಹೊರಗೆ ಬಾರದೆ ಹೋಗಲು ಹೊರಗೆ ತೆಗೆಯಲ್ಪಟ್ಟು ನೋಡುವಲ್ಲಿ ಸತ್ತುಹೋಗಿದ್ದನು.

ಆಹಾರ ಪದಾರ್ಥಗಳ ಬೆಲೆಯೇರಲು ಕಾರಣವನ್ನು ವಿಚಾರಿಸಲು ಇಂಡ್ಯಾ ಸರ್ಕಾರದವರಿಂದ ನಿಯಮಿತರಾಗಿರುವ ಮ॥ ಕೆ. ಎಲ್. ದತ್ತರವರು ಲಾಹೋರ್ ಪಟ್ಟಣಕ್ಕೆ ಬಂದು ಅಲ್ಲಿಯ ಟವನ್‌ಹಾಲಿನಲ್ಲಿ ಜನರ ವಾಙ್ಮೂಲವನ್ನು ಕೇಳಿ ತಿಳಿದುಕೊಳ್ಳುತ್ತಿರುವರು.

ಭಾರತ ಮಹಿಳೆಯರು ಇಂಗ್ಲೆಂಡಿಗೆ ಹೋಗಿ ಉಪಾಧ್ಯಾಯಿನಿಯರಾಗಿ ಬರಲು ವೇತನವನ್ನು ಕೊಡುವುದಕ್ಕಾಗಿ ಒಂದು ಧನರಾಶಿಯನ್ನು ಕೂಡಿಸಬೇಕೆಂದು ಭಾರತಮಹಿಳೆಯರ ವಿದ್ಯಾಸಂಘದ ಪರವಾಗಿ ೪ ಜನ ಭಾರತಮಹಿಷಿಯರು ಲಂಡನ್ ಟೈಂಸ್ ಪತ್ರಿಕೆಯಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

ಬಿಲ್ಬೋವಾ ಎಂಬಲ್ಲಿ ನೂತನ ವಧೂವರರು ಉತ್ಸವದಿಂದ ಹೊರಟು ದೇವಸ್ಥಾನವನ್ನು ಪ್ರವೇಶಿಸುವಷ್ಟರಲ್ಲಿ ಒಬ್ಬ ರೈತನು ಗುಂಪಿನಲ್ಲಿ ನುಗ್ಗಿ ತನ್ನನ್ನು ವಂಚಿಸಿದ್ದ ಆ ವಧುವಿನಮೇಲೆ ಬಿದ್ದು ಕುಡುಗೋಲಿನಿಂದ ಅವಳ ಕತ್ತನ್ನು ಕತ್ತರಿಸಿ ಆವೇಶಯುಕ್ತನಾಗಿ ಇತರರಮೇಲೆ ಬಿದ್ದು ಅನೇಕರಿಗೆ ಕುಡುಗೋಲಿನಿಂದ ಹೊಡೆದು ಗಾಯವನ್ನು ಮಾಡಿದನು.

ಪೋರ್ಚುಗೀಸು ಸರ್ಕಾರದ ಸೈನ್ಯಶಾಖೆಯ ಗೌರ್ನರು ಸರ್ಕಾರದ ಅಪ್ಪಣೆಯಿಲ್ಲದೆ ಮದ್ದಿನ ಆಯುಧಗಳನ್ನಿಟ್ಟುಕೊಂಡಿರುವವರು ೪೮ ಗಂಟೆಯೊಳಗೆ ಸರ್ಕಾರದ ವಶಮಾಡದಿದ್ದಲ್ಲಿ ಕ್ರೂರತರವಾದ ಶಿಕ್ಷೆಗೆ ಗುರಿಮಾಡಲ್ಪಡುವರೆಂದು ಪ್ರಸಿದ್ಧಪಡಿಸಿರುವನು. ಪೋರ್ಚುಗೀಸು ಸರ್ಕಾರದವರು ತಮ್ಮ ರಾಜ್ಯದಲ್ಲಿರುವ ರಹಸ್ಯ ಕೂಟಗಳನ್ನು ತಪ್ಪಿಸಲು ಸಾಧ್ಯವಾಗದಿದ್ದುದರ ಮೇಲೆ, ಅವರನ್ನು ನಿರಾಯುಧರನ್ನಾಗಿ ಮಾಡಿದರೆ ಅವರು ನಿರುಪಾಧಿಕರಾಗಿರುವರೆಂಬ ನಿರೀಕ್ಷಣೆಯಿಂದ ಈ ರೀತಿ ಮಾಡಿರಬಹುದಾಗಿ ತೋರುತ್ತದೆ.

ಕಳೆದ ಫೆಬ್ರವರಿ ತಾ॥ ೨೪ ಕ್ಕೆ ಕಡೆಯಾದ ಒಂದು ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೩೦೭೮ ಜನರಿಗೆ ಪ್ಲೇಗು ರೋಗವು ತಗಲಿ [illegible] ಜನರು ಸತ್ತರು ಸಂಯುಕ್ತಪ್ರಾಂತಗಳೊಂದರಲ್ಲಿ ವಿಶೇಷವಾಗಿ ಎಂದರೆ ೩೮೪೦ ಜನರಿಗೆ ತಗಲಿ ೩೧೬೪ ಜನರು ಸತ್ತಿರುವರು. ಬಂಗಾಳಾದಲ್ಲಾದ ೭೩೯೪ ಮರಣಗಳಲ್ಲಿ ಪಾಟ್ನಾ ಊರಿನಲ್ಲಿ ೨೨೧, ಮತ್ತು ಡಿಸ್ಟ್ರಿಕ್ಟಿನಲ್ಲಿ ೨೨೪ ಮರಣವಾಗಿರುತ್ತದೆ. ಬೊಂಬಾಯಾಧಿಪತ್ಯದಲ್ಲಿ ೧೩೩೩; ಮದ್ರಾಸಾಧಿಪತ್ಯದಲ್ಲಿ ೩೧೩; ಪಂಜಾಬಿನಲ್ಲಿ ೭೭೩; ಬರ್ಮಾದಲ್ಲಿ ೧೦೦ ಮತ್ತು ಮಧ್ಯಪ್ರಾಂತಗಳಲ್ಲಿ ೧೮೯ ಈ ಪ್ರಕಾರ ಮರಣವಾಗಿರುತ್ತದೆ.

ಈಗ ಇಂಗ್ಲೆಂಡಿನಲ್ಲಿರುವ ಒಟ್ಟು ೧೩೦೦ ಭಾರತ ವಿದ್ಯಾರ್ಥಿಗಳಲ್ಲಿ ೧೦೦೦ ಜನರು ಲಂಡನ್ ನಗರ ಒಂದರಲ್ಲಿರುತ್ತಾರೆ. ಯಾವ ಯುವಕನಾಗಲಿ ತನ್ನ ತಂದೆತಾಯಿಗಳು ತನ್ನ ವೆಚ್ಚಕ್ಕಾಗಿ ಕನಿಷ್ಠ ಪಕ್ಷ ೧೦೦೦೦ ರೂ. ಗಳನ್ನು ಒದಗಿಸಿಕೊಟ್ಟ ಹೊರತು ಕಳುಹಲ್ಪಡಕೂಡದು. ವಿದ್ಯಾರ್ಥಿಗಳಲ್ಲಿ ಬಹು ಭಾಗದವರು ಬುದ್ಧಿವಂತರಾಗಿಯೂ ವಿಧೇಯರಾಗಿಯೂ ಇರುತ್ತಾರೆ. ಆದರೆ ಅನೇಕರು ಕಳುಹಲ್ಪಡದಿದ್ದರೆ ಚೆನ್ನಾಗಿದ್ದಿತೆಂದು ತೋರುತ್ತದೆ. ಎಂದು ಶ್ರಮ ಪಡುತ್ತಿರುವ ಭಾರತ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಇಂಗ್ಲೆಂಡಿನಲ್ಲಿ ಏರ್ಪಟ್ಟಿರುವ ಸಂಘದವರು ತಮ್ಮ ವಾರ್ಷಿಕ ವರದಿಯಲ್ಲಿ ತಿಳಿಸಿರುತ್ತಾರೆ.

ಪಾಪರ್ ಸರ್ಟಿಫಿಕೇಟನ್ನು ಪಡೆಯಲು ಮದ್ರಾಸ್ ಹೈಕೋರ್ಟಿಗೆ ಅರ್ಜಿಯನ್ನು ಬರೆದು ಮದ್ರಾಸಿನ ಎಗ್ಮೋರಿನಲ್ಲಿ ವಾಸವಾಗಿದ್ದ ಎಂ. ವೆಂಕಟಸ್ವಾಮಿನಾಯುಡು ಎಂಬವರು ಕಳೆದ ತಾ॥ ೧ ರಲ್ಲಿ ತಾವು ವಾಸವಾಗಿದ್ದ ಉದ್ಯಾನದಲ್ಲಿರುವ ಕೆರೆಗೆ ಬಿದ್ದು ಆತ್ಮಹತ್ಯೆಯನ್ನು ಮಾಡಿಕೊಂಡರು. ಈ ನಾಯುಡುಯವರು ತಮ್ಮ ಮೇಲೆ ಕೋರ್ಟುಗಳಲ್ಲಿ ನಡೆಯುತ್ತಿರುವ ವಿವಾದಗಳ ಸಂಬಂಧವಾಗಿ ತಮ್ಮ ಮನಸ್ಸಿಗೆ ಬಹು ವ್ಯಾಕುಲವಾಗಿರುವುದರಿಂದ ಪ್ರಾಣವನ್ನು ಕಳೆದುಕೊಳ್ಳುವೆನೆಂದು [illegible] ೧೫ ದಿವಸಗಳ ಹಿಂದೆ ತಮ್ಮ ಕೂಡ ಹೇಳಿದ್ದರೆಂದು ನಾಯುಡುಯವರ ವಕೀಲರು ಪೊಲೀಸಿಗೆ ತಿಳಿಸಿದರು.

ಪ್ಯಾರಿಸ್ ಪಟ್ಟಣದಲ್ಲಿ ಪ್ರಾಚೀನ[illegible] ಪದಾರ್ಥಸಂಗ್ರಹಾಪೇಕ್ಷಿಯಾದ ಒಬ್ಬನು ಪ್ರಾಚೀನ ಪದಾರ್ಥಗಳನ್ನು ಮಾರುವ ಒಂದು ಅಂಗಡಿಯಲ್ಲಿ ಒಂದು ಅರಬ್ಬಿದೇಶದ ಪುರಾತನ ತುಪಾಕಿಯನ್ನು ಕ್ರಯಕ್ಕೆ ತೆಗೆದುಕೊಂಡು ಹೋಗಿ ಅದನ್ನು ಉಜ್ಜುವುದಕ್ಕಾಗಿ ಒಂದು ಮೇಜಿನಮೇಲೆ ಮಗುಚಿ ಕೋವಿಯ ಬಾಯಿಗೆ ಹಾಕಿದ್ದ ಹಳೆಯ ಬಿರಡೆಯನ್ನು ತೆಗೆಯಲು ತುಕ್ಕು ಹಿಡಿದಿದ್ದ ಕೋವಿಯಿಂದ ೨೩ ಬಹುಕಾಂತಿಯುಳ್ಳ ನೀಲದ ಮಣಿಗಳು ಸುರಿದುವು. ಕೋವಿಯನ್ನು ಕೊಂಡುಕೊಂಡವನು ಆ ಮಣಿಗಳನ್ನು ಮಾರಲು ಪ್ರಯತ್ನಿಸಿದಾಗ, ಅದನ್ನು ವಿಕ್ರಯಿಸಿದ ಅಂಗಡಿಯವನು ಅವು ತನಗೆ ಸಲ್ಲಬೇಕೆಂದು ಅಡ್ಡಬರಲು ಅವರಿಬ್ಬರೂ ತಮ್ಮ ವ್ಯಾಜ್ಯವನ್ನು ಇತ್ಯರ್ಥಮಾಡಲು ಒಬ್ಬ ಮ್ಯಾಜಿಸ್ಟ್ರೇಟನನ್ನು ಪ್ರಾರ್ಥಿಸಿಕೊಂಡಿರುವರು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತೆ ಆ ಕೊಂಡವನ ಹಾಡಾಗಿದೆ.

ಮೂವರು ಗ್ರಾಮಸ್ಥರು ಒಂದುಮಣ ಅಕ್ಕಿಗೆ ೩ ರೂ. ನಂತೆ ಕ್ರಯ ಗೊತ್ತುಮಾಡಿ ಒಂದುಮಣ ಅಕ್ಕಿಯನ್ನು ತೆಗೆದುಕೊಂಡು ಹಣವನ್ನು ಕೊಡಲು ಗತಿಯಿಲ್ಲದೆ, ೧೦೦ ರೂ. ಗೆ ೧೫ ರೂ. ಬಡ್ಡಿಯ ಪ್ರಕಾರ ಪ್ರತಿ ೩ ತಿಂಗಳಿಗೊಂದಾವೃತ್ತಿ ಬಡ್ಡಿಗೆ ಬಡ್ಡಿಯನ್ನು ಸೇರಿಸಿಕೊಡಲೊಪ್ಪಿ ೭ ರೂ. ಗೆ ಪತ್ರವನ್ನು ಬರೆದುಕೊಟ್ಟರು. ಪತ್ರವನ್ನು ಬರೆಯಿಸಿಕೊಂಡಿದ್ದ ವರ್ತಕನು ೩ ವರ್ಷಗಳೊಳಗೆ ಅವರುಗಳ ಮೇಲೆ ವಿವಾದವನ್ನು ಮಾಡಿರುವಲ್ಲಿ ಮುನಸೀಫನು ೨೦೦ ರೂ. ಗೆ ಪ್ರತಿವಾದಿಗಳಮೇಲೆ ಡಿಕ್ರಿಯನ್ನು ಕೊಟ್ಟನು. ಮತ್ತೊಂದು ವಿವಾದದಲ್ಲಿ ಮೂವರು ಗ್ರಾಮಸ್ಥರು ಸೇರಿ ಒಂದು ಬಟ್ಟೆಯನ್ನು ತೆಗೆದುಕೊಂಡು ೩ ತಿಂಗಳಿಗೊಂದಾವೃತ್ತಿ ೧೦೦ ಕ್ಕೆ ೧೮೩ ರೂ. ಬಡ್ಡಿಯ ಪ್ರಕಾರ ಕೊಡಲೊಪ್ಪಿ ೯ ರೂ. ಗಳಿಗೆ ಬರೆದುಕೊಟ್ಟಿದ್ದುದರ ಮೇಲೆ ಅದೇ ಮುನಸೀಫನು ೧೦೦ ಕ್ಕೆ ೭೫ ರೂ. ಪ್ರಕಾರ ಬಡ್ಡಿಯನ್ನು ಕೊಡಿಸಿದನಲ್ಲದೆ, ಇನ್ನೊಂದು ವಿವಾದದಲ್ಲಿ ಇಬ್ಬರು ೧೦೦ ಕ್ಕೆ ೨೪೩-೫-೪ ಪ್ರಕಾರ ಬಡ್ಡಿಯನ್ನು ಕೊಡುತ್ತೇವೆಂದು ಬರೆದುಕೊಟ್ಟಿದ್ದುದಕ್ಕೆ ೩ ವರುಷದ ಕಡೆಯವರೆಗೆ ೯೯೯ ರೂ. ಗೆ ಡಿಕ್ರಿಯನ್ನು ಕೊಟ್ಟನು.

ಸಂಗೀತ ಸಾಹಿತ್ಯ ನಾಟ್ಯಾಭಿನಯಗಳಲ್ಲಿ ಸುಪ್ರಸಿದ್ಧಳಾದ ಕಲಕತ್ತಾದ ಗೋಹರ್‌ಜಾನಳು ಕಳೆದ ತಾ॥ ೨೪ ರಲ್ಲಿ ಮದರಾಸಿಗೆ ಬಂದಿದ್ದು ಅಲ್ಲಿಯ ವಿಕ್ಟೋರಿಯಾ ಟವನ್‌ಹಾಲಿನಲ್ಲಿ ತನ್ನ ಅದ್ಭುತ ಪಾಂಡಿತ್ಯವನ್ನು ಪ್ರದರ್ಶಿಸಿದಳು. ತಾ॥ ೨೪ ರ ಸಾಯಂಕಾಲ ಟವನ್‌ಹಾಲಿನಲ್ಲಿ ಎಳ್ಳು ಹಾಕಿದರೆ ಕೆಳಗೆ ಬೀಳಲವಕಾಶವಿಲ್ಲದಷ್ಟು ಪ್ರೇಕ್ಷಕಜನರು ಸೇರಿದ್ದರು. ಅಲ್ಲದೆ ಇನ್ನೂ ನೂರಾರು ಜನರು ದುಡ್ಡನ್ನು ಕೊಟ್ಟು ಟಿಕೆಟ್ಟುಗಳನ್ನು ಪಡೆದಿದ್ದರೂ ಒಳಗಡೆ ಸ್ಥಳವಿಲ್ಲದಿದ್ದುದರಿಂದ ಹೊರಗಡೆ ನಿಂತುಕೊಂಡಿದ್ದರು. ಗೋಹರ್‌ಜಾನಳು ಮೊದಲು ಕೊಂಚಕಾಲ ನೃತ್ಯಾಭಿನಯಗಳಿಂದ ಪ್ರೇಕ್ಷಕರಿಗೆ ಆನಂದವನ್ನುಂಟುಮಾಡಿ ಅನಂತರ ತನ್ನ ಸಂಗೀತ ಸಾಹಿತ್ಯದಿಂದ ೨॥ ಗಂಟೆಯಕಾಲದವರೆಗೆ ನೆರೆದಿದ್ದವರನ್ನು ಆನಂದಾಬ್ಧಿಯಲ್ಲಿ ಮುಳುಗಿಸಿ ಚಿತ್ರದ ಬೊಂಬೆಯಂತೆ ಮಾಡಿಬಿಟ್ಟಳು. ಈಕೆಯು ಹಾಡಿದ ಪೀಲು, ಸುರಟಿ ಮತ್ತು ಭೈರವಿ ರಾಗಗಳು ಅತ್ಯಂತ ಶ್ಲಾಘ್ಯವಾಗಿದ್ದುವಲ್ಲದೆ ಅವುಗಳೆಲ್ಲವೂ ಹಿಂದಿ ಮತ್ತು ಉರುದು ಭಾಷೆಗಳಲ್ಲಿದ್ದಾಗ್ಯೂ ಹಿತಕರವಾಗಿದ್ದುವು. ಈಕೆಯು ತ್ಯಾಗರಾಜರ ಕೃತಿಗಳಲ್ಲಿ ಕೆಲವನ್ನೂ, ಇಂಗ್ಲೀಷು ರಾಗಗಳನ್ನೂ ಹಾಡುವಾಗ ಜನರು ಆನಂದದಿಂದ ಒಂದೇ ಸಮನಾಗಿ ಕರತಾಡನವನ್ನು ಮಾಡುತ್ತಿದ್ದರು.

ಸರ್ಕಾರಿಯ ಗೆಜೆಟ್ ಸಂಗ್ರಹ.

ಮ॥ ಸಯ್ಯದ್ ವಿಜಾಯರ್ ಕದ್ರಿಯವರಿಗೆ ರಜವು ಕೊಡಲ್ಪಟ್ಟಿರುವುದರಿಂದ, ಮ॥ ಜಹಾಂಗೀರ್ ಅದಲ್ಜಿ ಸಂಜಾನಾ ಇವರು ಆಕ್ಟಿಂಗ್ ಓರಿಯಂಟಲ್ ಟ್ರಾನ್ಸ್‌ಲೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬಾಗೆಯಜಾಯಿಂಟ್ ಮುನಸೀಫರಾದ ಮ॥ ಪಾಠಕರ ಇವರು ಕನ್ನಡ ಹಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಪಶ್ಚಿಮ ಖಾನದೇಶದ ಕಲೆಕ್ಟರಾದ ಮ॥ ಬೊಮ್ಮಂಜಿ ಇವರಿಗೆ ೩ ತಿಂಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಇವರ ಬದಲು ಮ॥ ಫೆರೋಜ್‌ಷಾ ಪಿಸ್ತಂಜಿ ಜಾಹಂಗೀರ್ ಇವರು ನಿಯಮಿಸಲ್ಪಟ್ಟಿರುತ್ತಾರೆ.

ಈ ಕೆಳಗೆ ಕಂಡವರು ಹಯರ್ ಸ್ಟ್ಯಾಂಡರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ:—

೧. ಮ॥ ಅನಂತರಾವ್ ಶೇಷಗಿರಿರಾವ್ [illegible] ಸರ್ಕಲ್ ಇನ್ಸ್‌ಪೆಕ್ಟರ್ ಬೆಳಗಾವಿ, ೨. ಮ॥ ನಾರಾಯಣ ವಾಸುದೇವ ಅಷ್ಟಪುತ್ರೆ ಸರ್ಕಲ್ ಇನ್ಸ್‌ಪೆಕ್ಟರ್ [illegible]

೩. ಮೆ॥ ಎಂ. ಎಂ. ಪಠಾಣ ಸರಕಲ್ ಇನ್ಸ್‌ಪೆಕ್ಟರ್ ಅಥಣಿ, ೪. ಮೆ॥ ಹನುಮಂತ ಶ್ರೀನಿವಾಸ ಕಾನುಲಾಪೂರ ಕ್ಲಾರ್ಕ ಕಮಿಶನರ ಕಛೇರಿ ಬೆಳಗಾಂ, ೫. ಮೆ॥ ಅಬ್ದುಲ್ ರಹಿಮಾನ ಶೇಕ್ ಅಬ್ದುಲ್ಲಾ ಕರೀಂ ಕ್ಲಾರ್ಕ ಸಟಲ್‌ಮೆಂಟ್ ಆಫೀಸ್ ಕಾರವಾರ.

ವರ್ಗಾವರ್ಗಿಗಳು.

ಬೆಳಗಾವಿನ ಚಿಟ್ನೀಸರಾದ ಮೆ॥ ಮಂಗೇಶವಿಠಲ ಮೂಡಬಿದ್ರಿ ಇವರು ಸಂಗಮೇಶ್ವರದ ಮಾಮಲೆದಾರರಾಗಿಯೂ ಸಿದ್ದಾಪುರದ ಮಾಮಲೆದಾರರಾದ ಮೆ॥ ಶ್ರೀನಿವಾಸ ಸೇಪೋ ಕೊಯಮತ್ತೂರ ಇವರು ಬೆಳಗಾವಿನ ಚಿಟ್ನೀಸರಾಗಿಯೂ, ರಾಜಾಪುರದ ಮಾಮಲೆದಾರರಾದ ಮೆ॥ ಮಧ್ವ ರಾಮಚಂದ್ರ ಹರಪನಹಳ್ಳಿ ಇವರು ಸಿದ್ದಾಪುರದ ಮಾಮಲೆದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೆ॥ ರುದ್ರಯ್ಯ ಹಿರೇಮಠ ಉಪ್ಪಿನಬೇರಿ ಇವರು ಕಲಘಟಗಿಯ ತಾಲ್ಲೂಕ್ ಲೋಕಲ್ ಬೋರ್ಡ್ ಮೆಂಬರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಧಾರವಾಡದಲ್ಲಿ ಸಿಡುಬಿನ ರೋಗವು ಉಲ್ಬಣವಾಗಿದ್ದು ಈ ವರೆಗೆ ೨೦೦ ಮರಣಗಳಾಗಿವೆ. ಇಲ್ಲಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಆರಿಸುವಿಕೆಯ ಕಾರ್ಯವು ಕಳೆದ ತಾ॥ ೨೧ ರಲ್ಲಿ ನಡೆದು ರಾ॥ ರಾ॥ ಗಳಾದ (೧) ಗೋಪಾಲರಾವ್ ದೇಶಪಾಂಡೆ (೨) ಬಿಂದುರಾವ್ ಮುತಾಲೀಕದೇಸಾಯಿ (೩) ಶ್ರೀ ಗುರುಪಾದಯ್ಯ ಗೊಂಡೀಮಠ (೪) ರಾಮರಾವ್ ಜಕಾತಿ (೫) ಹನುಮಂತರಾವ್ ದೇಸಾಯಿ, (೬) ಶ್ರೀ ಗದಗಯ್ಯ ಹೊನ್ನಾಪುರಮಠ (೭) ಬಂಡೇರಾವ್ ಜೋಗ, (೮) ಮೋರೋಪಂತ ಕಾಳೆ, (೯) ವಿಶ್ವನಾಥರಾವ್ ಹೊಲೇಕರ, (೧೦) ಮೌ॥ ಸಯ್ಯದ್ ಪೀರಕರುದ್ದೀನ್, (೧೧) ನಾರಾಯಣರಾವ್ ಕರಿಗುದರಿ, (೧೨) ಅಣ್ಣಾಚಾರ್ಯ ಕಟ್ಟಿ, (೧೩) ಚೆನ್ನಪ್ಪಅಣ್ಣಾ ಲಕಮನಹಳ್ಳಿ, (೧೪) ಗುರುಶಾಂತಪ್ಪ ಕೋಟೂರ, (೧೫) ಚೆನ್ನಮಲ್ಲಯ್ಯ ಗಣಾಚಾರಿ, (೧೬) ಶ್ರೀ ಚೆನ್ನಬಸಯ್ಯ ಚರಂತಿ ಇಂತಿಷ್ಟು ದೊಡ್ಡಮನುಷ್ಯರುಗಳು ಮೆಂಬರುಗಳಾಗಿ ಆರಿಸಲ್ಪಟ್ಟರು.

ಧಾರವಾಡದ ಹುಜೂರು ಡಿಪ್ಯುಟಿ ಕಲೆಕ್ಟರ್ ರಾ॥ ರಾ॥ ವೆಂಕಟರಾವ್ ದತ್ತಾತ್ರೇಯ ಕುಪ್ಪಿಕರ ಇವರು ೨ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ, ಇವರ ಸ್ಥಾನದಲ್ಲಿ ಮೆ॥ ಸಲಢಾಣಾಯವರು ನಿಯಮಿಸಲ್ಪಟ್ಟಿರುತ್ತಾರೆ.

ಪತ್ರವ್ಯವಹಾರವು.

ಬೇಲೂರು ತಾ॥ ಅರೇಹಳ್ಳಿ ಬೆಳ್ಳಾವುರದಲ್ಲಿ ದೊಡ್ಡ ಕಾಫಿ ತೋಟಗಾರರಾಗಿಯೂ, ಲಕ್ಷಾಂತರ ರೂ. ಗಳ ಅಡತಗಳನ್ನು ನಡೆಯಿಸುತ್ತಲೂ ಇದ್ದ ಪಟೇಲ್ ಪುಟ್ಟೇಗೌಡರು ಕಳೆದ ನವೆಂಬರ್ ತಿಂಗಳಲ್ಲಿ ತಮ್ಮ ಕೂಡ ೨೦ ಮನೆಯವರನ್ನು ಕರೆದುಕೊಂಡು ಪುಷ್ಪಗಿರಿಗೆ ತಮ್ಮ ಮನೆದೇವರ ಸೇವೆಗಾಗಿ ಹೋಗಿದ್ದು ಕಳೆದ ಫೆಬ್ರುವರಿ ತಾ॥ ೨೦ ರಲ್ಲಿ ಹಿಂತಿರುಗಿ ಸ್ವಗ್ರಾಮಕ್ಕೆ ಬಂದು ಅಸ್ವಸ್ಥರಾಗಿ ತಾ॥ ೨೩ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಇವರು ಅನೇಕ ಬಡರೈತ ಕುಟುಂಬಿಗಳಿಗೆ ಆಧಾರವಾಗಿದ್ದರಲ್ಲದೆ ಯಾರಾದರೂ ಕಲಹವನ್ನು ಮಾಡಿಕೊಂಡು ತಮ್ಮಲ್ಲಿಗೆ ಬಂದಲ್ಲಿ ಅವರ ಕಲಹವನ್ನು ಬಗೆಹರಿಸಿ ಸಮಾಧಾನಮಾಡಿ ಉಭಯರಿಗೂ ಬುದ್ಧಿವಾದವನ್ನು ಹೇಳಿ ಕಳುಹಿಸುತ್ತಿದ್ದರು. ಇಂತಹ ಪರೋಪಕಾರಿಗಳನ್ನು ಇಷ್ಟು ಶೀಘ್ರವಾಗಿ ಕಳೆದುಕೊಂಡುದಕ್ಕಾಗಿ ಈ ಪ್ರಾಂತ್ಯದ ಜನರೆಲ್ಲಾ ಬಹಳ ವ್ಯಸನಪಡುತ್ತಾರೆ.

ಬೆಂಗಳೂರಿನ ವೀರಶೈವ ಪ್ರಮುಖರಲ್ಲೊಬ್ಬರಾದ ಕಂಟ್ರಾಕ್ಟರ್ ಮ॥ ಎಂ. ನಾಗಪ್ಪನವರ ಪತ್ನಿಯವರು ಕಳೆದ ಫೆಬ್ರವರಿತಾ॥ ೧೯ರಲ್ಲಿ ಅಸ್ವಸ್ಥರಾಗಿ ಮಹಾಶಿವರಾತ್ರಿ ದಿವಸ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಮ॥ ನಾಗಪ್ಪನವರು ಮೈಸೂರ ಡಿ॥ ಹೆಗ್ಗಡದೇವನಕೋಟೆ ತಾ॥ ಕಾಕನಕೋಟೆಯ ಕಾಡುಗಳಲ್ಲಿ ಸ್ಲಿಪರ್ ಕಂಟ್ರಾಕ್ಟನ್ನು ಮಾಡಲು ಈ ಪ್ರಾಂತ್ಯ ಬಂದು ೩-೪ ವರ್ಷಗಳಾದವು. ಆ ಲಾಗಾಯಿತು ಇವರು ಇಲ್ಲಿ ಬಡಜನರಿಗೆ ಬಹು ಉಪಕಾರಿಗಳಾಗಿದ್ದು ಸಮಸ್ತ ಜನರ ಪ್ರೀತಿಗೆ ಪಾತ್ರರಾಗಿರುವರು. ಇಂತಹ ಪರೋಪಕಾರಿಗಳಿಗೆ ಪತ್ನೀವಿಯೋಗವು ಪ್ರಾಪ್ತವಾದುದಕ್ಕಾಗಿ ಈ ಪ್ರಾಂತ್ಯದ ಜನರೆಲ್ಲ ಬಹಳವಾಗಿ ವ್ಯಸನಪಡುತ್ತಾರಲ್ಲದೆ, ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಪತಿಯವರಿಗೆ ದುಃಖಸಮಾಧಾನವನ್ನೂ ಉಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತಾರೆ.

ಅಂತರಸಂತೆ ನಿವಾಸಿ.

ದಾವಣಗೆರೆ.

“ವೀರಶೈವ ಹಿತೋಪದೇಶಕ” ಸಂಘದ ಪರವಾಗಿ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಕಳೆದ ತಾರೀಖು ೨೦ ನೆಯ ಫೆಬ್ರುವರಿಯಲ್ಲಿ ಸಭೆ ಸೇರಿದ್ದಿತು. ಆ ಕಾಲಕ್ಕೆ ಸಂಘಾಧ್ಯಕ್ಷರಾದ ಇಲ್ಲಿನ ಶ್ರೀ ವಿರಕ್ತಮಠದ ಮಹಾಸ್ವಾಮಿಗಳವರು ಅಗ್ರಾಸನವನ್ನು ವಹಿಸಿದ್ದರು ಸಂಘದ ಉಪಾಧ್ಯಕ್ಷರಾದ ಶ್ರೀಮಂತ ಶೆ॥ ಮಡಕ್ಷಿರಯ್ಯನವರು, ಸಂಘದ ಕಾರ್ಯದರ್ಶಿಗಳಾದ ಮ॥ ರಾ॥ ಮಾಗಾನಹಳ್ಳಿ ಸಂಗಪ್ಪನವರು, ಗ್ರಾಮದ ಪ್ರಮುಖ ವೀರಶೈವರನ್ನು ಬರಮಾಡಿಕೊಂಡನಂತರ ನಾಲ್ಕು ಘಂಟೆಗೆ ಸಭೆಯ ಕಾರ್ಯವು ಪ್ರಾರಂಭವಾಯಿತು. ಆರಂಭದಲ್ಲಿ ಮ॥ ರಾ॥ ಹರ್ಡೇಕರ್ ಮಂಜಪ್ಪನವರು ಈ ಸಭೆಯು ಯಾವ ಸಮಾಜೋದ್ಧಾರಕರ ನಿಮಿತ್ತವಾಗಿ ಸೇರಿಸಲ್ಪಟ್ಟಿದೆಯೋ ಅಂತಹ ಇಂದಿನ ಉಪನ್ಯಾಸಕರಾದ ಶೆ॥ ಶ್ರೀಯುತ ಶಿವಮೂರ್ತಿಸ್ವಾಮಿ ಕಣಬುರಗಿಮಠ ಇವರನ್ನು ತಮಗೆ ಪರಿಚಯಮಾಡಿಕೊಡುವ ಅಗತ್ಯವೇ ಇಲ್ಲ. ಶ್ರೀಯುತ ಕಣಬುರಗಿಯವರು ನಿಂತಿದ್ದ ಆರನೆಯ ಶ್ರೀಮದ್ವೀರಶೈವ ಮಹಾಸಭೆಯನ್ನು ತಮ್ಮ ತನುಮನಧನಗಳನ್ನು ವ್ಯಯಮಾಡಿ ನೆರವೇರಿಸಿ ಸುಶಿಕ್ಷಿತರಾದ ಪ್ರತಿಯೊಬ್ಬ ವೀರಶೈವರಿಗೆ ಎಂದಿಗೂ ಮರೆಯದ ರೀತಿಯಲ್ಲಿ ಪರಿಚಯವುಳ್ಳವರಾಗಿರುತ್ತಾರೆ. ಇಂತಹ ಸಮಾಜೋದ್ಧಾರಕರು ಈ ದಿವಸ ಇಲ್ಲಿ “ವೀರಶೈವರಭಿವೃದ್ಧಿ” ಎಂಬ ವಿಷಯಕ್ಕೆ ಉಪನ್ಯಾಸಮಾಡುತ್ತಾರೆ; ತಾವುಗಳೆಲ್ಲ ಶಾಂತಚಿತ್ತದಿಂದ ಕೇಳಬೇಕೆಂದು ಅರಿಕೆಮಾಡಿಕೊಂಡನಂತರ, ಉಪನ್ಯಾಸಕರಾದ ಶ್ರೀಯುತ ಶಿವಮೂರ್ತಿಸ್ವಾಮಿಗಳವರು ಭಾಷಣಮಾಡಲಾರಂಭಿಸಿದರು. ಇವರು ಮಾಡಿದ ಘನವಾದ ಉಪನ್ಯಾಸದ ಸಾರಾಂಶವೇನೆಂದರೆ, “ಆಚಾರವೇ ಧರ್ಮಕ್ಕೆ ಮೂಲವಾಗಿದೆ. ಪ್ರಕೃತ ನಮ್ಮ ಧರ್ಮದವರಲ್ಲಿ ಆಚಾರಾದಿಗಳು ಕಡಿಮೆಯಾಗಿಯೂ, ತಪ್ಪಾಗಿಯೂ ಆಚರಿಸಲ್ಪಡುತ್ತವೆ. ಮನಸ್ಸು ಬಹು ಚಂಚಲವಾದುದು; ಇದನ್ನು ಸದಾಚಾರದಲ್ಲಿ ನಿಲ್ಲಿಸಬೇಕಾದರೆ ಇಂತಹ ಸದ್ಗುರುಗಳ ದರ್ಶನವು, ಸತ್ಸಹವಾಸವೂ ಅತ್ಯಾವಶ್ಯಕವು. ಇವೆಲ್ಲಕ್ಕೂ ಮನೋಜಯವಾಗಬೇಕಾದರೆ ಇಷ್ಟಲಿಂಗದಲ್ಲಿ ನೈಷ್ಠೆಯಿಂದ ವಿಧಿವತ್ತಾಗಿ ಅರ್ಚನಾದಿಗಳಿಂದ ಮನಸ್ಸನ್ನಿಡಬೇಕಾದುದತ್ಯಾವಶ್ಯಕವು. ಈ ವಿಷಯದಲ್ಲಿ ಪದಾರ್ಥ ವಿಜ್ಞಾನಶಾಸ್ತ್ರಕ್ಕೂ, ಪಾರಮಾರ್ಥಶಾಸ್ತ್ರಕ್ಕೂ ಇರತಕ್ಕ ಸಂಬಂಧವನ್ನು ಚೆನ್ನಾಗಿ ವಿವರಿಸಿದರು. ಇದೆಲ್ಲ ತಿಳಿಯದೆ ಜನಗಳು ಅನಾಚಾರಿಗಳಾಗುವುದಕ್ಕೆ ವಿದ್ಯಾವಿಹೀನತೆಯೇ ಕಾರಣವಾಗಿದೆ. ಇದರಿಂದ ಜನಗಳಲ್ಲಿ ಪಂಗಡಗಳೂ, ಅನೈಕ್ಯಮತ್ಯವೂ ನೆಲೆಗೊಂಡು ಸಕಲ ವಿಧದಲ್ಲಿಯೂ ಶೋಚನೀಯಸ್ಥಿತಿಗೆ ಹೋಗುತ್ತಿರುವೆವು. ವರ್ತಕರಲ್ಲಿ ಅಪ್ರಮಾಣಿಕತೆ, ದ್ವೇಷಾಸೂಯಗಳು ಹೆಚ್ಚುತ್ತಲಿವೆ. ಆದುದರಿಂದ ಪಾಶ್ಚಾತ್ಯರಂತೆ ಸಂಘಗಳ ಮೂಲಕವಾಗಿ ವ್ಯಾಪಾರಮಾಡುವ ಪದ್ಧತಿಯು ನಮ್ಮಲ್ಲಿ ಬರಲೊಲ್ಲದು. ಈ ಪ್ರಕಾರ ಪ್ರತಿಯೊಂದು ವಿಷಯದಲ್ಲಿಯೂ, ನಮ್ಮ ಜನರಿಗೆ ತಿಳಿವಳಿಕೆ ಬರುವುದಕ್ಕಾಗಿ ಈ ವಿಧವಾದ ಸಂಘಗಳು ಅಲ್ಲಲ್ಲಿ ಸ್ಥಾಪಿತವಾಗುವುದು ಅತ್ಯಾವಶ್ಯಕವು. ಇಲ್ಲಿ “ವೀರಶೈವ ಹಿತೋಪದೇಶಕ” ಎಂಬ ಸಂಘವು ಸ್ಥಾಪಿಸಲ್ಪಟ್ಟಿರುವುದನ್ನೂ, ಇದರ ಕಾರ್ಯಕ್ರಮವನ್ನೂ ನೋಡಿ ನನಗೆ ಅತ್ಯಾನಂದವಾಯಿತು. ನಾನು ಇದಕ್ಕೆ ಸಂತೋಷದಿಂದ ಮೆಂಬರನಾಗುತ್ತೇನೆ. ಇವೆಲ್ಲಾ ಮಹಾಸಭೆಯ ಫಲಗಳೆಂದು ಹೇಳಿ ತಮ್ಮ ಉಪನ್ಯಾಸವನ್ನು ಪೂರೈಸಿದರು. ಅನಂತರ ಮ॥ ರಾ॥ ಹರ್ಡೇಕರ್ ಮಂಜಪ್ಪನವರು ಉಪನ್ಯಾಸದ ಸಾರಾಂಶವನ್ನು ಹೇಳಿ ತಮ್ಮ ಅಮೂಲ್ಯವಾದ ಕಾಲವನ್ನು ಇಲ್ಲಿ ಈ ರೀತಿ ಕಳೆದುದಕ್ಕೆ ಸಂಘದ ಪರವಾಗಿ ಕೃತಜ್ಞತೆಯನ್ನು ಉಪನ್ಯಾಸಕರಿಗೊಪ್ಪಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಇದೇ ಸಂಘದ ಪರವಾಗಿ ತಾ॥ ೨೩ ನೆಯ ದಿವಸ ಶ್ರೀ ವಿರಕ್ತಮಠದಲ್ಲಿ ಮ॥ ರಾ॥ ಕರಜಗಿ ಗುರುನಾಥಪ್ಪನವರಿಂದ ಶಿವಕಥೆಯು ಜರುಗಿಸಲ್ಪಟ್ಟಿತು. ಗ್ರಾಮದ ಪ್ರಮುಖ ವೀರಶೈವರೆಲ್ಲ ದಯಮಾಡಿಸಿದ್ದರು. ಮ॥ ರಾ॥ ಗುರುನಾಥಪ್ಪನವರ ಅತ್ಯಂತ ಸ್ವಾರಸ್ಯವಾದ ಬೋಧಾಕ್ರಮದಿಂದ ಅಲ್ಲಲ್ಲಿ ಶಿವಕಥೆಗಳು ಜರುಗುತ್ತಿರುವುವು.

ಪ್ರತ್ಯಕ್ಷದರ್ಶಿ.

ಅನಂತಪುರ ಡಿ॥ ಗುತ್ತಿ ತಾ॥ ಅವಿದ್ಯಾಲ್ ಗ್ರಾಮದಲ್ಲಿ ನೆರದಿದ್ದ ವೀರಶೈವ ಪ್ರಾಂತಿಕ ಸಭೆಯು.

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಗುರುಪಟ್ಟಾಧ್ಯಕ್ಷ ಶ್ರೀಮತ್ ಚನ್ನವೀರರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಅವಿದ್ಯಾಲ್ ಗ್ರಾಮಕ್ಕೆ ಚಿತ್ತೈಸಿರುವಾಗ್ಗೆ ಅವರ ಪ್ರೋತ್ಸಾಹದಿಂದ ಮೇಲೆ ಹೇಳಿದ ಪ್ರಾಂತಿಕ ಸಭೆಯು ಈ ಗ್ರಾಮದ ವೀರಶೈವ ವಿದ್ಯಾ ಮತ್ತೂ ಮತಾಭಿಮಾನಿಗಳಾದ ಶ್ರೀಮಂತ ಮಲ್ಲಿಕಾರ್ಜುನಗೌಡರ ಅಧ್ಯಕ್ಷತೆಯಲ್ಲಿ ಕಳೆದ ಫೆಬ್ರುವರಿ ತಾ॥ ೧೨ ಮತ್ತೂ ೧೩ರಲ್ಲಿ ಊರ ಮುಂದಣ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಬಹು ರಮ್ಯವಾಗಿ ರಚಿಸಲ್ಪಟ್ಟಿದ್ದ ಮಂಟಪದಲ್ಲಿ ಸೇರಿತ್ತು. ಈ ಸಭೆಗೆ ಅನೇಕ ಗ್ರಾಮಗಳ ಭಕ್ತಮಾಹೇಶ್ವರರೂ ನಿಂಬಗಲ್ಲು ಮತ್ತೂ ಉರುಕೊಂಡೆ ಮಠಾಧ್ಯಕ್ಷರುಗಳೂ ಆಗಮಿಸಿದ್ದರು. ನಿಂಬಗಲ್ ಪಾಠಶಾಲಾಧ್ಯಕ್ಷರು ಸಭೆಯ ಮಂಗಳಾಚರಣೆಯನ್ನು ಮಾಡಿದಮೇಲೆ ಸಂಸ್ಥಾನದ ಸುಬೇದಾರ್ ಎಂ. ಎ. ಚಂದ್ರಶೇಖರಯ್ಯನವರು ಅಧ್ಯಕ್ಷರು ಮುಂತಾದವರ ಸ್ವಾಗತವನ್ನು ಮಾಡಿದರು. ಅನಂತರ ಅಧ್ಯಕ್ಷರು ಉಜ್ಜಯಿನಿ ಸಂಸ್ಥಾನಾಧೀಶ್ವರರು ಈ ಸಭೆಯನ್ನೆರೆಯಿಸಲು ಕೊಟ್ಟ ಪ್ರೋತ್ಸಾಹ ವಿಷಯವನ್ನು ತಿಳಿಸಿ ಸಭಾಪರವಾದ ವಂದನೆಯನ್ನು ಮಹಾಸ್ವಾಮಿಯವರಿಗರ್ಪಿಸಿ ತಮ್ಮ ಭಾಷಣವನ್ನು ಮಾಡಿ ಶ್ರೀ ಪೂಜ್ಯಪಾದರು ಈ ಗ್ರಾಮಕ್ಕೆ ಆಗಮಿಸಿದುದರ ಜ್ಞಾಪನಾರ್ಥವಾಗಿ ಒಂದು ಫಂಡನ್ನು ಕೂಡಿಸಬೇಕೆಂದು ಹೇಳಿ ಕುಳಿತುಕೊಂಡರು. ಸನ್ನಿಧಿಯ ವಿದ್ಯಾರ್ಥಿಯಾದ ಎಂ. ಚನ್ನಬಸವಯ್ಯನವರು ಲಗ್ನ ಮುಂತಾದ ಕಾರ್ಯಗಳಲ್ಲಿ ದುಂದುವೆಚ್ಚದಿಂದಾಗುವ ಹಾನಿ ಮತ್ತೂ ಅದರ ಪರಿಹಾರೋಪಾಯಗಳನ್ನು ಕುರಿತು ಭಾಷಣ ಮಾಡಿದಮೇಲೆ ಆಸ್ಥಾನದ ಸುಬೇದಾರ್ ವೀರಭದ್ರಯ್ಯನವರು ಸಭಾನಡೆವಳಿಕೆಯನ್ನೂ ಈ ಮುಂದೆ ಪಾಸಾದ ಠರಾವುಗಳನ್ನೂ ವಾಙ್ಮೂಲವಾಗಿ ಶ್ರುತಪಡಿಸಿದರು. ಅಲ್ಲಿಗೆ ಸಾಯಂಕಾಲವಾಗಲು ಪೂಜ್ಯಪಾದರುಗಳಿಗೂ ಸಭಿಕರಿಗೂ ಹಾರತಾಂಬೂಲಗಳು ಹಂಚಲ್ಪಟ್ಟು ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿನ ಮಧ್ಯಾಹ್ನವು ಸಭೆಯು ಕೂಡಿ ಆಸ್ಥಾನದ ಕರಣೀಕರು ಎಸ್. ಎಂ. ರವರು ಸ್ತ್ರೀ ಶಿಕ್ಷಣದ ಮೇಲೂ, ಸಂಸ್ಥಾನದ ಮ್ಯಾನೇಜರ್ ಬಿ. ಎಂ. ಉದ್ಯಾನಪ್ಪನವರು ಜಗದಾಚಾರ್ಯರು ತಮ್ಮ ದೇಶಸಂಚಾರದಲ್ಲಿ ಧರ್ಮ ಬೋಧಕರನ್ನು ಅಲ್ಲಲ್ಲಿ ನೇಮಕಮಾಡುವುದರಿಂದಾಗುವ ಮಹದುಪಕಾರದ ಮೇಲೂ ಸಂಸ್ಥಾನದ ಎಸ್. ಎಂ. ರವರು ವೀರಶೈವಮತದ ಉತ್ಕರ್ಷ ಮತ್ತೂ ಅಪಕರ್ಷಗಳ ಮೇಲೂ, ನಿಂಬಗಲ್ ಧರ್ಮ ಪಾಠಶಾಲಾಧ್ಯಕ್ಷರು ಮೈಸೂರ್ ಸ್ಟಾರ್ ಮತ್ತೂ ಧರ್ಮತರಂಗಿಣೀ ಪತ್ರಿಕೆಗಳ ಚಂದಾದಾರರ ಅಭಿವೃದ್ಧಿಯ ಮೇಲೂ ಭಾಷಣಗಳನ್ನು ಯುಕ್ತಿಯುಕ್ತವಾಗಿಯೂ ಸರಸವಾಗಿಯೂ ಮಾಡಿದರು. ಸಾಯಂಕಾಲದಲ್ಲಿ ಪೂಜ್ಯಪಾದರುಗಳು ಅಧ್ಯಕ್ಷರು ಮೊದಲಾದ ಪ್ರಮುಖರ ಭಾವಚಿತ್ರಗಳು ತೆಗಿಸಲ್ಪಟ್ಟು ಸಭಿಕರಿಗೆ ಗಂಧಪುಷ್ಪ ತಾಂಬೂಲ ವಿನಿಯೋಗದಿಂದ ಸಭೆಯು ಜಯರವದೊಡನೆ ವಿಸರ್ಜಿಸಲ್ಪಟ್ಟಿತು.

ಸಭಾನಿರ್ಣಯಗಳು.

೧. ಅವಿದ್ಯಾಲ್ ಗ್ರಾಮಕ್ಕೆ ಆಚಾರ್ಯರು ದಯಮಾಡಿಸಿದುದರ ಜ್ಞಾಪನಾರ್ಥವಾಗಿ ಒಂದು ಫಂಡು ಸ್ಥಾಪಿಸಲ್ಪಡಬೇಕು.

೨. ವಿದ್ಯಾಸಕ್ತಿಯುಳ್ಳ ಉಜ್ಜಯಿನಿ ಸಂಸ್ಥಾನದ ಸ್ಥಿರಪಟ್ಟಾಧ್ಯಕ್ಷ ಶ್ರೀ ಚನ್ನವೀರಸ್ವಾಮಿಗಳು ಶಿವಯೋಗಮಂದಿರದಲ್ಲಿ ವಿದ್ಯಾಭ್ಯಾಸಂಗಮಾಡುವಂತೆ ಪ್ರೋತ್ಸಾಹಿಸಬೇಕಾಗಿ ಧರ್ಮೋತ್ತೇಜಕ ಸಭೆಯವರನ್ನು ಪ್ರಾರ್ಥಿಸಿಕೊಳ್ಳಬೇಕು.

೩. ವೀರಶೈವ ಬಾಲಕ ಬಾಲಿಕೆಯರುಗಳನ್ನು ಅಗತ್ಯವಾಗಿ ವಿದ್ಯಾವಂತರನ್ನಾಗಿ ಮಾಡಬೇಕು.

೪. ವೀರಶೈವರು ಲಗ್ನ ಮುಂತಾದ ಕಾರ್ಯಗಳನ್ನು ಮಠಸ್ಥರಿಂದಲೇ ಮಾಡಿಸಿಕೊಳ್ಳತಕ್ಕದು.

೫. ನಮ್ಮ ಪ್ರಾಂತ್ಯದಲ್ಲಿರುವ ನಿಂಬಗಲ್ ಧರ್ಮಪಾಠಶಾಲೆಯಲ್ಲಿ ವೈದಿಕ ವಿದ್ಯೆಯನ್ನು ಹೇಳಿಸಬೇಕಲ್ಲದೆ, ಈ ಪ್ರಾಂತ್ಯದ ಪ್ರತಿಯೊಬ್ಬ ಮಠಸ್ಥರೂ ವೈದಿಕವಿದ್ಯಾ ಸಂಪನ್ನರಾಗಬೇಕು.

೬. ಮೈಸೂರು ಸ್ಟಾರ್ ಪತ್ರಿಕೆಗೂ ಧಾರವಾಡದ ಧರ್ಮತರಂಗಿಣಿಯ ಪತ್ರಿಕೆಗೂ ಈ ಪ್ರಾಂತ್ಯ ಕನಿಷ್ಠ ಪಕ್ಷ ಗ್ರಾಮಕ್ಕೊಬ್ಬರಾದರೂ ಚಂದಾದಾರರಾಗಬೇಕು. (ಚಂದಾದಾರರಾಗಲು ಸಭಿಕರನೇಕರೊಪ್ಪಿದರು.)

೭. ಈ ಸಭೆಯ ನಡೆವಳಿಕೆಗಳನ್ನು ಧರ್ಮೋತ್ತೇಜಕ ಸಭೆಗೂ, ಮೈಸೂರು ಸ್ಟಾರ್ ಮತ್ತೂ ಆಂಧ್ರಪತ್ರಿಕೆಗಳಿಗೂ ಕಳುಹಿಸಬೇಕು. ಎಂದು ನಿರ್ಧಾರಗಳಾದುವು.

A. Mallikarjuna Gowda.
ಪ್ರಾಂತಿಕಸಭಾ ಪ್ರೆಸಿಡೆಂಟ್.

ವೀರಶೈವ ಮತಸ್ಥರಿಗೆ ಅತ್ಯಾವಶ್ಯಕಗಳಾದ ಪುಸ್ತಕಗಳು.

ವೀರಶೈವಾಮೃತ ಪುರಾಣ ತಾತ್ಪರ್ಯ ಸಹಿತ ಕಾಂಡ ೭ ಭಾಗ ೨ ಕ್ಕೆ ರೂ.	೯—೦—೦
ಸಟೀಕಾ ಗಣಭಾಷ್ಯ ರತ್ನಮಾಲಾ	೧—೪—೦
ಸಿದ್ಧೇಶ್ವರವಚನ ವಿಜಯ ವಚನಕಾವ್ಯ	೧—೦—೦
ವೀರಶೈವಾಚಾರಬೋಧೆ	೦—೪—೦
ಶಿವಯೋಗರಹಸ್ಯ	೦—೨—೦
ಶಿವಮಹಿಮಾಶತಕ	೦—೨—೦

ಈ ಪುಸ್ತಕಗಳು ವೀರಶೈವ ಮತವನ್ನೂ ಲಿಂಗಾಂಗ ಸಾಮರಸ್ಯ ಷಟ್ಸ್ಥಲ ವಿಷಯಗಳನ್ನೂ ಕರತಲಾಮಲಕವಾಗಿ ಬೋಧಿಸುವುವು. ಒಳ್ಳೆಯ ಮುದ್ರಣ, ಒಳ್ಳೆಯ ಕಾಗದ, ಒಳ್ಳೆಯ ಬೈಂಡ್ ಮಾಡಿರುವುವು.

ಪುಸ್ತಕ ದೊರೆಯುವ ಸ್ಥಳ—
ಬಸವಲಿಂಗಸ್ವಾಮಿ, ಹೊಸಮಠ, ಮೈಸೂರು.

8 ಸರಸವಾದ ನೂತನಪುಸ್ತಕಗಳು.

ವಿರಕ್ತಳಾದ ಲಾವಣ್ಯವತಿ—ನವರಸಭರಿತವಾದ ನವೀನಕಾದಂಬರಿ ೦—೬—೩; ಸಾಹಸಿಕೆ—ಚಮತ್ಕಾರವಾದ ಕಥೆ ೦—೨—೬; ವಿಶ್ವನಾಥ—ಶ್ಲೇಷಾರ್ಥಗರ್ಭಿತವಾದ ನೂತನಕಾದಂಬರಿ ೦—೧—೦. ಶಿವಭುಜಂಗಸ್ತೋತ್ರ ಸತಾತ್ಪರ್ಯ ೦—೧—೬ ಶ್ರೀಹರಿಪ್ರಾರ್ಥನಾ ೦—೧—೦.

ಗ್ರಾಹಕರಿಗೆ ಪಂಚಲಿಂಗದರ್ಶನವೆಂಬ ಪುಸ್ತಕವು ಬಹುಮಾನ. ಸ್ಟಾರ್ ಪತ್ರಿಕೆಯ ಚಂದಾದಾರರಿಗೆ ಅಂಚೆಯ ವೆಚ್ಚವಿಲ್ಲ. ನಮ್ಮ ವಿಳಾಸ—

ಸಿ. ವಿ. ಶಾಸ್ತ್ರಿ, ಚಾಮರಾಜನಗರ.

ವಿವೇಕಮಂಜರಿ

1

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೩೬ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:—“ಮೈಸೂರ್ ಸ್ಟಾರಾಫೀಸ್” ಮೈಸೂರ್.

ನೀತಿಮಂಜರಿ.

3

(ಎರಡನೆಯಾವೃತ್ತಿ ಸುಧಾರಿಸಿದುದು.)

ಇದರಲ್ಲಿ ಅನೇಕ ನೀತಿಯ ವಿಷಯಗಳೂ, ಮನೋರಂಜಕ ವಿಷಯಗಳೂ ನಿಬಂಧರೂಪವಾಗಿ ಬರೆಯಲ್ಪಟ್ಟಿರುತ್ತವೆ. ಇದರಲ್ಲಿ ಮುಖ್ಯವಾಗಿ ಸರ್ ಜಾನ್‌ಲಬಕ್, ಚೆಸ್ಟರ ಫಿಲ್ಡ್, ಚೇಂಬರ್ಸ್, ಬೇಕನ್ನ ಮೊದಲಾದವರ ಗ್ರಂಥಗಳಿಂದಲೂ, ಹಿಂದುಸ್ಥಾನದ ಪ್ರಾಚೀನ ಮತ್ತೂ ಅರ್ವಾಚೀನ ಇತಿಹಾಸಗಳ ಮೇಲಿಂದಲೂ ನಿಬಂಧಗಳನ್ನು ಬರೆದಿರುತ್ತಿದ್ದು, ಈ ಪುಸ್ತಕವು ಆಬಾಲವೃದ್ಧ ಸ್ತ್ರೀಪುರುಷರಿಗೆ ಓದಲಿಕ್ಕೆ ಬಹಳ ಯೋಗ್ಯವಾಗಿರುತ್ತದೆ ಮುಂಬಯಿ ಸರ್ಕಾರದ ವಿದ್ಯಾಖಾತೆಯವರು ಇದನ್ನು ಇನಾಮಿನ ಪುಸ್ತಕವೆಂದು ಮಂಜೂರ ಮಾಡಿರುವುದರಿಂದ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಅವಶ್ಯವಾಗಿ ಓದತಕ್ಕದು. ೨ ನೆಯಾವೃತ್ತಿಯ ಪ್ರತಿಗಳು ಮಂಗಳೂರ ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿರುವುವು. ಪುಟಸಂಖ್ಯೆ ೧೯೯. ಬೆಲೆ ೬ ಆಣೆ. ಅಂಚೆಯ ವೆಚ್ಚ ೧ ಆಣೆ.

ಗ. ಹು. ಹೊನ್ನಾಪುರಮಠ
ವಕೀಲ, ಧಾರವಾಡ.

28 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ನೊಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

38

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಳಿಗೆಗೆ ಹಿಂದು ಜೋಡಿ ಕೆಂಪುರೂಲುಗೆರೆಯೂ, ಇತರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಪಂಚಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೭ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

35 ಗುಣವಾಗದಿದ್ದರೆ ಹಣವಾಪಸು.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

5

ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯರವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦—೧೦—೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ–ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾದಿ ಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥೆಜನ್ಮನರ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೩೦-೫೦ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣ ಜಾತಕ ೧ ಕ್ಕೆ ಕ್ರಯ ರೂ ೧೦—೦—೦.

ಪಟ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕಗಳನ್ನು ಬರೆಸದೆ ದಿಕ್ಕುಗಾಣದೆ ಕೊಂಡಿರುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನೆ ವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನೆವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯಿನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಸಾರ ರು ೦—೧೦—೦; ವೀರಶೈವಮತಬೋಧಿನಿ ರು ೦—೭—೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦—೩—೦; ನವಗ್ರಹಗಳದಂಡಕ ರು ೦—೨—೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ವುಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್‍ಸಿಕೋಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತಯಿರುತ್ತೆ. ನಮ್ಮ ವಿಳಾಸ:—

ಯಸ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

2 ಬರುವ ಮೆ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!
ಘನವಂತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ. (3) ನಾಜೂಕಾದ ಕರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಸೀಸೆ (5) ಷೋಕ್ ಉಂಗರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ) (12) ಮರ್ಜ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಡಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಚ್ ವೆಂಕಟಾಚಲಯ್ಯರ್ ಬೀದಿ,
ಮದ್ರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಂದಿ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

---

24 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಂತಿಶಕ್ತಿಯು ಹೆಚ್ಚಾಗಿ ಸಂತತಿ ಧಾರಣೆಕೆ ಯೋಗ್ಯವಾದ ಧಾತುವಾಗುತ್ತದೆ. ಗರ್ಭವತಿಯರ ಉಷ್ಣದ ಅಥವಾ ಯಾವದಾದರೊಂದು ಕಾರಣದಿಂದ ಪಡುವ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

5

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಬೆಳೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು

ಕಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

45

ಲೋಕಾಮಯಾಪಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೫ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂದಿಗೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗುಳ್ಳೆ ಮೊದಲಾದವಳಿ ಸವರುವ ಡಬ್ಬಿ ೧ ಕ್ಕೆ ೮. ೮. ಏರಡರಿಂದ ಟಪಾಲ್ ಖರ್ಚು ೬ ಆಣೆ ಮಾತ್ರ

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸ್ವ॥) ರಾಜಮನ್ನಾರುನಾಯುಡು, ಶ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸ್ವ॥) ಲಕ್ಷ್ಮಣರಾಯರು, ವಾರ್ಕ್ ಓವರ್‌ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ [illegible],
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ ಮೈಸೂರು.

79

೫೦. ರೋಚಕ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೫ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೭೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೫ ಮಾತ್ರೆ ಸೀಸೆ ೦-೩-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೫ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೭೪ ಮಾತ್ರೆ ಸೀಸೆ ೦-೩-೦

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೬೦ ಮಾತ್ರೆ ಸೀಸೆ ೦-೧೦-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೆಯ ಇಸವಿ ಮಾರ್ಚಿ ತಾ॥ ೪ ರಿಂದ ೧೯೧೨ ನೆಯ ಮಾರ್ಚಿ ತಾ॥ ೧೦ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಫಾಲ್ಗುಣ ಬ॥ ಪಾಡ್ಯಮಿಯಿಂದ ಫಾಲ್ಗುಣ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ತೇದಿ
4	[1]ಸೋ	ಪಾ	20-26	ಉತ್ತ	51-12	22
5	ಮಂಗ	ಬಿ	17-24	ಹಸ್ತ	50-2	23
6	ಬುಧ	ತ	15-10	ಚಿತ್ತ	50-1	24
7	[2]ಗುರು	ಚ	14-3	ಸ್ವಾತಿ	50-30	25
8	[3]ಶುಕ್ರ	ಪ	14-20	ವಿಶಾಖ	54-18	26
9	[4]ಶನಿ	ಷ	15-50	ಅನೂ	58-40	27
10	ಭಾನು	ಸ	18-38	ಜ್ಯೇಷ್ಠ	60-0	28

(1) ಪೆಂಡೇವಿ ತಿರುನಕ್ಷತ್ರಂ, ಕರಿಘಟ್ಟದ ಶ್ರೀನಿವಾಸ ಸ್ವಾಮಿರಥ. (2) ವಾದಿರಾಜಸ್ವಾಮಿಗಳ ಪುಣ್ಯದಿನ. (3) ವ್ಯಾಸರಾಯಸ್ವಾಮಿಗಳ ಪುಣ್ಯದಿನ. (4) ಬೆಟ್ಟದ ಮಹಾಬಲೇಶ್ವರ ರಥ, ಸತ್ಯವ್ರತತೀರ್ಥರ ಪುಣ್ಯದಿನ.

ಮೈಸೂರ್ : ಶ್ರೀ. [illegible] ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 104

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯತ್ವಸ ಪತ್ರ ಪೋಷರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಪ್ಸಿತದಶೀಲ ನಾಕಲಿತಪಾದ್ಮನ್ಯಾಲವಾಲಂವಲಂ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಕಾಂತನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಮಾರ್ಚಿ ತಾರೀಖು ೧೧ ನೆಯ ಸೋಮವಾರ. [ಸಂಚಿಕೆ ೧೧

ನುಣುಪಾದ ದೊಡ್ಡಸೈಜಿನ ದಪ್ಪ ಪೋಸ್ಟ್ ಕಾರ್ಡು! ಸರ್ವರಿಗೂ ಉಪಯೋಗ!! ಬೆಲೆ ಸುಲಭ!!!

ಸರ್ವರ ಉಪಯೋಗಕ್ಕಾಗಿ ಈ ಮಾದ್ರಿ ಪೋಸ್ಟ್ ಕಾರ್ಡುಗಳನ್ನು ಪ್ರಿಂಟ್ ಮಾಡಿಸಿದೇವೆ. ಸಾವಕಾರಿಗಳು ವರ್ತಕರು ಮೊದಲಾದವರಿಗೆ ಇದು ಮುಖ್ಯವಾಗಿ ಬೇಕಾದುದರಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ.

6

ನಂ.........
ಮಹಾರಾಜಶ್ರೀ..............................ಸಾಕ್ಕೆ
....ಮಾಡುವ
............ಅದಾಗಿ ಈವರಿಗೆ ಉಭಯಕುಶಲೋಪರಿ ಸಾಂ॥

ಕಾರ್ಡಿನಲ್ಲಿ ಮೇಲ್ಭಾಗದಲ್ಲಿ ಮೇಲೆಕಂಡಂತೆ ಪ್ರಿಂಟುಮಾಡಿಸಿರುತ್ತೇವೆ. ಮತ್ತು ಸ್ಥಳಸಂಕೋಚದಿಂದ ಇಲ್ಲಿ ಕಾರ್ಡಿನ ಚಿಕ್ಕ ಆಕೃತಿ ಕಾಣಿಸಿದೆ. ನಾವು ತಯಾರ್ಮಾಡಿಸಿರತಕ್ಕ ಕಾರ್ಡುಗಳು ಈಗಿನ ಪೋಸ್ಟ್ ರೂಲಿಗೆ ಸರಿಯಾಗಿ ದೊಡ್ಡ ಆಕೃತಿಯುಳ್ಳದಾಗಿರುತ್ತವೆ.

ಈ ಮಾದ್ರಿ ಪ್ರಿಂಟಾದ ಪೋಸ್ಟ್ ಕಾರ್ಡ್ ೧೦೦ ಕ್ಕೆ ೧-೪-೦. ೧೦೦೦ ಕಾರ್ಡುಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಒಂದು ಟೈಂಪೀಸೆಂಬ ಟೇಬಲ್ ಗಡಿಯಾರವನ್ನು ಬಹುಮಾನಕೊಡುತ್ತೇವೆ. ಪೋಸ್ಟೇಜು ಅಲಾಯಿದ. ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ.

ಸುಂದರವಾದ ಕ್ಯಾರೇಜ್ ಕ್ಲಾಕ್.



೧. ಇದು ಗಂಟೆ ಅರ್ಧಗಂಟೆ ಸಹ ಹೊಡೆಯುತ್ತೆ. ಕ್ರಯ ೪-೮-೦

೨. ದಿಟೋ ಗಂಟೆ ಅರ್ಧಗಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೧ ಕ್ಕೆ ೬-೪-೦

೩. ಇದೇ ರಥಮಂನಲ್ಲಿ ಪ್ರತಿಗಂಟೆಗೂ ತನ್ನಷ್ಟಕ್ಕೆ ತಾನೇ ಕರ್ಣಾನಂದವಾಗುವಂತೆ ಗಾನಮಾಡುವ ಕ್ಲಾಕ್ ೧ ಕ್ಕೆ ೬-೮-೦. ೪. ನಾವು ಇಟ್ಟ ಟೈಮಿಗೆ ಸರಿಯಾಗಿ ಕರ್ಣಾನಂದವಾಗುವಂತೆ ಗಾನಮಾಡುವ ಕ್ಲಾಕ್ ೧ ಕ್ಕೆ ೬-೮-೦.

ಈ ನಕ್ಷೆಯಲ್ಲಿರುವ ವಾಚ್ ಮುಫತ್ ಕೊಡಲಾಗುತ್ತೆ ನಿಮಗೆ ಬೇಕೊ ?

ಇಂಥ ಸಮಯ ಮುಂದೆ ಸಿಕ್ಕಲಾರದು. ಅಂದರೆ ಮುಂದೆ ಯಾವಾಗ್ಲೂ ಹೀಗೆ ಮುಫತ್ತು ಕೂಪನ್ ರವಾನಿಸುವುದಿಲ್ಲವಾದುದರಿಂದ ಈ ಕೂಪನ್ನನ್ನು ಹಾಳುಮಾಡದೆ ಉಪಯೋಗಿಸಿರಿ.

ಅನೇಕರ ಕೋರಿಕೆಯಂತೆ ಈ ಸಾರಿ ಮಾತ್ರ ಹೊಸವರ್ಷದ ಉಗಾದಿಗಾಗಿ ಬಹುಮಾನವಾಗಿ ಕೂಪನ್ ಮುಫತ್ತು ಕೊಟ್ಟಿರುತ್ತೇವೆ. ಸ್ವಲ್ಪ ಶ್ರಮಪಟ್ಟು ನಮ್ಮಿಂದ ವಾಚ್ ಬಹುಮಾನ ಪಡೆಯಿರಿ.

ಅತ್ತ ಕಡೆ ಪಕ್ಕದಲ್ಲಿರುವ ಫ್ರೀ ಕೂಪನ್ನಿನಲ್ಲಿ ಈ ತಾರೀಖು ಲಾಗಾಯತು ೨ ತಿಂಗಳೊಳಗಾಗಿ ನಿಮ್ಮ ಸರಿಯಾದ ವಿಳಾಸವನ್ನು ಸ್ಪಷ್ಟವಾಗಿ ಬರೆದು ಮೇಲಿನ ಗೆರೆಗೆ ಸರಿಯಾಗಿ ಕತ್ತರಿಸಿ ಒಂದು ಕವರಿನಲ್ಲಿಟ್ಟು ನಮಗೆ ರವಾನಿಸಿರಿ. ಮತ್ತೂ ಒಂದು ರೂಪಾಯಿಯನ್ನು ನಮ್ಮ ವಿಳಾಸಕ್ಕೆ ಮಣಿಆರ್ಡರ್ ಮಾಡಿರಿ. ನಿಮ್ಮ ರೂಪಾಯಿ ಬಂದವಡನೆಯೇ ನಿಮಗೆ ನಾಲ್ಕು ಕೂಪನುಗಳನ್ನು ರವಾನಿಸುತ್ತೇವೆ. ಆ ಕೂಪನುಗಳನ್ನು ನೀವು ನಿಮ್ಮ ಮಿತ್ರರಿಗೆ ಕೂಪನ್ ೧ ಕ್ಕೆ ೪ ಆಣೆ ಮೇರೆಗೆ ಮಾರಿ ಬಂದ ಹಣ ೧ ರೂಪಾಯಿಯನ್ನು ನೀವು ಇಟ್ಟುಕೊಂಡು ಬಿಡಿರಿ. ಅಗ್ಗೆ ನೀವು ನಮಗೆ ರವಾನಿಸಿದ್ದ ೧ ರೂಪಾಯಿ ನಿಮಗೆ ಸಂದಿದಹಾಗಾಯಿತು. ನಿಮ್ಮಿಂದ ಕೂಪನ್ ಪಡೆದವರು ನಮ್ಮಿಂದ ನಾಲ್ಕು ನಾಲ್ಕು ಕೂಪನ್ ತರಿಸಿಕೊಂಡವೊಡನೆಯೇ ನಿಮಗೆ ಈ ಚಿತ್ರದಲ್ಲಿ ಕಂಡಂತಹ ಸರಿಯಾದ ಕಾಲವನ್ನು ತೋರಿಸುವವಾಚನ್ನು ಗೋಲ್ಡ್ ಗಿಲ್ಟ್ ಸರಪಣಿಯು ಸಹಿತ ಪೋಸ್ಟೇಜು ಪ್ಯಾಕಿಂಗ್ ಖರ್ಚು ಕೇಳದಂತೆ ಮುಫತ್ತು ರವಾನಿಸುತ್ತೇವೆ.ನಿಮ್ಮಿಂದ ಕ್ರಯಕ್ಕೆ ಕೂಪನ್ ಪಡೆದವರೂ ಸಹ ನೀವು ಬಿಕರಿಮಾಡಿದಂತೆಯೇ ಮಾಡಿ ನಮ್ಮಿಂದ ವಾಚ್ ಬಹುಮಾನಪಡೆಯುತ್ತಾರೆ.



ಮುಫತ್ತು ಕೊಡುವ ಕೂಪನ್.

ಹೆಸರು...
ಕಸಬು...
ಗ್ರಾಮ...............ಪೋಸ್ಟ್...................
ತಾಲ್ಲೂಕು.......................................
ಡಿಸ್ಟ್ರಿಕ್ಟು......................................
ತಾ॥೧೧-೩-೧೯೧೨ ಎ. ಎಸ್. ಎಸ್. ಅಂಡ್ ಬ್ರದರ್ಸ್
ಮೈಸೂರ್.

ಸೂಚನೆ:— ಈ ಕೂಪನನ್ನು ಈ ತಾರೀಖು ಲಾಗಾಯತು ೨ ತಿಂಗಳೊಳಗಾಗಿ ಒಂದು ರೂಪಾಯಿನೊಡನೆ ನಮಗೆ ರವಾನಿಸಿದಲ್ಲ ತೆಗೆದುಕೊಳ್ಳುತ್ತೇವೆ. [illegible] ಅಂದರೆ ಮೇಲ್ಕಂಡ ತಾರೀಖ ಮುಗಿದುಹೋದಮೇಲೆ [illegible] ನಮಗೆ ನಾಲ್ಕಾಣೆ ರವಾನಿಸಿ ೧ ಕೂಪನ್ ಪಡೆದು [illegible] ಒಂದು ರೂಪಾಯಿ [illegible] ಕೂಪನ್ [illegible]. [illegible] ಜಾಗ್ರತೆ ರೂಪಾಯಿ ರವಾನಿಸಿ ಕೂಪನ್ ತರಿಸಿಕೊಳ್ಳಿರಿ. [illegible]

[illegible] ಎ. ಎಸ್. ಎಸ್. ಅಂಡ್ ಬ್ರದರ್ಸ್ [illegible]
ಮೈಸೂರು.

---

2 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿನಾಳಿಗೆ ೧-೨-೦ ೬-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೫ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೬-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

29

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ನಿರೂಪಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ಸಂಬ್ಯನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿವೆ.

ಸಟೀಕ ಶತಸೂತ್ರರತ್ನಂ.— [illegible] [illegible] [illegible] [illegible] ಸಂಗತಿಯೂ [illegible] [illegible] ನಿರೂಪಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ [illegible].— [illegible] [illegible] [illegible] ಬೆಲೆ ೫ ಆಣೆ.

ಸ್ತುತಿ [illegible].— [illegible] [illegible] [illegible] ೬ ಆಣೆ.

[illegible].— ೨ ಆಣೆ. [illegible] [illegible] ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— [illegible] [illegible] ಶೈವ ಗ್ರಂಥಗಳನ್ನು ಪ್ರಕಟಿಸುವ [illegible] [illegible]

[illegible]
[illegible]

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ]

ಒಂದಾನೊಂದು ದಿನ ಮಂದಿರವಂ ನೋಡಬೇಕೆಂದು ಆನಂದದಿಂದ ಸತಿಪತಿಗಳಿರ್ವರೂ ತೆರಳಿ ಕೆಲವು ಹಜಾರಂಗಳಂ ಕೆಲವು ಚಂದ್ರಶಾಲೆಗಳಂ, ಕೆಲವು ಮಂಟಪಂಗಳಂ ಕೂಡ ನೋಡುತ, ಹಾಗೆಯೇ ಮೆಲ್ಲನೆ ಬರುತ ಮೇಗಮುಂದೆ, ಕಂ ಮಾಡಿರುವ ಸಾಲು ಮನೆಗಳಂ ಕಂಡು ಇದೇನೆಂದು ಕೇಳಿದ ರಾಜೇಂದ್ರನಂ ಕುರಿತು ನಾರೀ ಶಿರೋಮಣಿಯಾದ ಕುಸುಮಲತೆಯು, ಎಲೈ ಪ್ರಾಣನಾಥನೇ ಕೇಳು!, ಈಗೃಹಂಗಳೊಳ್ ನಾನಾದ್ವೀಪಾಂತರಂಗಳ ಪದಾರ್ಥಂಗಳಂ, ನವರತ್ನ ರಾಶಿಗಳು ಮೊದಲಾದುವಂ ಸೇರಿ ಮಡಗಿರುವವು. ಅದಂತಿರಲಿ, ಈಗ ನಿನಗೆ ಸೇರಿದ ಅಶ್ವರತ್ನವು ಅದೋ ಆ ಮನೆಯೊಳ್ ಕಟ್ಟಿರುವುದು ಎಂದು ನುಡಿಯೆ, ಆ ಮನೆಯ ಮುಂಭಾಗದೊಳ್ ರಾಜೇಂದ್ರನಾದ ಸುಗಂಧರಾಜನೊಡನೆ ವಿಲಾಸದಿಂ ಬಂದು ನಿಂತು ನಿಟ್ಟಿಸಿದಂ ಬಿಕ್ಕಿ ಎಲೈ ಸ್ವಾಮಿಯೇ! ಈ ದುಷ್ಟರಾಕ್ಷಸನು ಒಂದೊಂದು ಮಾಡಿದನೆ? ನಮ್ಮಂ ತಂದಂತೆ ನಮ್ಮ ದೇಶದಿಂದ ಈ ಅಶ್ವವಂ ಕೂಡ ಅಪಹರಿಸಿ ತಂದನೆಂದು ನುಡಿಯಲು, ಸುಗಂಧರಾಜೇಂದ್ರನು ಆ ಮಾತಂ ಕೇಳಿ ಇಂತಿರ್ದ ಅಶ್ವವು ನಿಮ್ಮ ದೇಶಕ್ಕೆ ಯಾವ ಪರಿಯಿಂದ ಬಂದಿತೆಂದು ಕೇಳಲು ಚಂದ್ರಮುಖಿಯು ಎಲೈ ಸ್ವಾಮಿಯೇ! ಚಿತ್ತವಿಟ್ಟು ಲಾಲಿಸಬೇಕು ನಮ್ಮ ತಂದೆಯಾದ ಕುಸುಮಧ್ವಜರಾಯನು ಒಂದುದಿನ ವಿನೋದಾರ್ಥವಾಗಿ ಬೇಂಟೆಯಾನ್ನಾಡುವುದಕ್ಕೆ ಪೋಗಿ, ಅಲ್ಲಿದ್ದ ಸಿಂಹಶಾರ್ದೂಲಗಳಂ ಸಂಹರಿಸಿ, ಬಹುದೂರ ಸಂಚಾರವಂ ಮಾಡಿ ಸಾಯಂಕಾಲವಾಗಲು, ಒಬ್ಬಾನೊಬ್ಬ ಜಾಬಾಲಿ ಋಷಿಯಿರುವ ಆಶ್ರಮವಂ ಕಂಡು ಅಲ್ಲಿಗೆ ಪೋಗಲು, ಆ ಋಷಿಯು ಅರಸಾದ ನಮ್ಮ ತಂದೆಗೆ ಮಧುರಸಾರ್ಘ್ಯಾದಿಗಳಂ ಕೊಟ್ಟು ಸಂತೈಸಿ, ಕೆಲವಂ ಕೇಳುತ್ತಿರುವ ಕಾಲದೊಳ್, ಆ ಆಶ್ರಮದಲ್ಲಿ ಸರ್ವಲಕ್ಷಣ ಸಂಪನ್ನವಾದ ಅನೇಕಾಭರಣಂಗಳಿಂದ ಅಲಂಕೃತವಾದ ವಿಜಾತೀಯವಾಗಿ ರೆಕ್ಕೆಗಳಂ ಕೂಡಿರುವ ಒಂದು ಕುದುರೆಯು ಸಂಚರಿಸುತ್ತಿರಲು, ನಮ್ಮ ತಂದೆಯು ಅದಂ ಕಂಡು ಆ ಋಷಿಯೊಡನೆ ಎಲೈ ಮಹಾತ್ಮನೇ! ಈ ಲೋಕಾತಿಶಯವಾದ ಅಶ್ವರತ್ನವು ಎಲ್ಲಿಯದು, ಏನು ಕಾರಣದಿಂದ ಇಲ್ಲಿಗೆ ಬಂದಿರುವುದು, ಇದರಿಂದ ತಮಗೆ ಆಗುವ ಕಾರ್ಯವೇನು? ಎಂದು ಬಿನ್ನವಿಸಲು, ಆ ಜಾಬಾಲಿಮುನಿಯು ಆ ಮಾತಂ ಕೇಳಿ ರಾಯನು ಮಹಾಧರ್ಮಪರನೆಂದರಿತು ದಯೆಯಿಂದ ಎಲೈ ಅರಸೇ! ಕೇಳು, ಈ ಅಶ್ವವು ಅಮಾನುಷವಾದುದು; ಈಗ ಈ ಭೂಲೋಕದೊಳ್ ಬಂದು ವಿಹಾರವಂ ಮಾಡುತಲಿದೆ; ಇದರ ವೃತ್ತಾಂತವು ದೇವರಹಸ್ಯವಾದಕಾರಣ ವಿಸ್ತಾರವಾಗಿ ನಿರೂಪಿಸಕೂಡದು. ಈ ಕುದುರೆಯೊಳ್ ನಿನಗೆ ಆಸಕ್ತಿಯಿದ್ದರೆ ಇದಂ ನಿನ್ನ ಮನೆಯೊಳ್ ಇರಿಸಿ ಪೂಜಿಸಿಕೊಂಡಿದ್ದಲ್ಲಿ ಕೆಲವು ಕಾಲ ಕಳೆದ ಬಳಿಕ ಇದರ ದೆಸೆಯಿಂದ ನಿನಗೆ ಶುಭವುಂಟಾಗುವುದೆಂದು ಆಶೀರ್ವಾದವಂ ಮಾಡಿ ಅಶ್ವರತ್ನವಂ ದಯಪಾಲಿಸಲು, ರಾಯನು ಆ ಋಷಿಗೆ ದಂಡಪ್ರಣಾಮವಂ ಮಾಡಿ ಈ ಉತ್ತಮಾಶ್ವವಂ ಕೊಂಡು ತನ್ನ ಅರಮನೆಗೆ ಬಂದು ನಿತ್ಯದಲ್ಲೂ ಪೂಜಿಸುತ ಇದಕ್ಕೆ ವಿಜಯರತ್ನವೆಂದು ಹೆಸರನ್ನಿಟ್ಟು ಅತಿ ಸಂತೋಷದಿಂದಿರಲು, ಈ ಕ್ರೂರರಾಕ್ಷಸನು ಈ ಅಶ್ವದ ವೃತ್ತಾಂತವಂ ಎಲ್ಲಿಯೋ ಕೇಳಿ ಅದಂ ಅಪಹರಿಸಬೇಕೆಂದು ನಿಶ್ಚೈಸಿ ಒಬ್ಬರಿಗೂ ತಿಳಿಯದಂತೆ ಮಾಯಾವಿದ್ಯೆಯಿಂದ ಅಲ್ಲಿ ತಿರುಗುತ್ತಿದ್ದು, ಒಂದಾನೊಂದು ಸಮಯವನ್ನು ನೋಡಿ ಈ ಅಶ್ವವಂ ಅಪಹರಿಸಿಕೊಂಡು ಹೋಗುವ ಸಮಯದೊಳ್ ಅನಾಯಾಸವಾಗಿ ಸಿಕ್ಕಿರುವ ಉತ್ತಮ ಪದಾರ್ಥವಂ ಏತಕ್ಕೆ ಬಿಡಬೇಕೆಂದು ಬಿಸಲು ಮಚ್ಚಿನೊಳ್ ವಿಲಾಸದಿಂ ಕುರುಳುಗಳನ್ನಾರಿಸಿಕೊಂಡು ನಿಂತಿರ್ದ ನಮ್ಮಂ ಇಲ್ಲಿಗೆ ಅಪಹರಿಸಿಕೊಂಡು ಬಂದನು. ಆದರೆ ಒಂದು ಉಪಕಾರವಂ ಮಾಡಿದನು ಎನ್ನಬಹುದು. ನನಗೆ ಪರಮಾಪ್ತರಾದ ಕೆಲವು ಕೆಳದಿಯರಂ ನನ್ನ ಸಂಗಡಲೇ ಅಪಹರಿಸಿಕೊಂಡು ಬಂದುದರಿಂದ ಇಂದಿನವರೆಗೂ ಜೀವಿಸಿಕೊಂಡು ಇರುವೆನು. ಈಗ ಮಹಾನುಭಾವನಾದ ಆ ಜಾಬಾಲಿ ಮಹಾಮುನಿಯ ವಾಕ್ಯವು ಸಫಲವಾಯಿತೆಂದು ಪೇಳಿ ಈ ಅಶ್ವರತ್ನವು ನಿಮಗೆ ಪಟ್ಟದ ಕುದುರೆಯಾಗುವುದಕ್ಕೆ ಯೋಗ್ಯವಾಗಿದೆಯೆಂದು ನುಡಿಯಲು, ಸುಗಂಧಮಹಾರಾಜೇಂದ್ರನು ಆ ಕುಸುಮಲತೆಯ ಮಾತಂ ಕೇಳಿ ಹರ್ಷಿತನಾಗಿ ರತಿಯಂತಿರುವ ಸತಿಯಂ ಬಿಗಿದಪ್ಪಿ ಅಡಿಗಡಿಗೆ ಮುದ್ದಿಸುತ, ಕೆಲವು ಹೊತ್ತು ಶೃಂಗಾರವನಂಗಳೊಳ್, ಕೆಲವು ಹೊತ್ತು ಸರೋವರಂಗಳೊಳ್, ಕೆಲವು ಹೊತ್ತು ಚಂದ್ರಶಾಲಾದಿ ಉತ್ತಮ ಮಂದಿರಂಗಳೊಳ್ ಉಪರತಿ ಸಮರತಿಗಳಿಂದಲೂ, ಚೌಕೀತಿಬಂಧ ವಿಶೇಷಂಗಳಿಂದಲೂ ಬೆರೆದು ಮದನ ವೈಭವದಿಂದ ಮೈಮರೆತು ಒಂದೊಂದು ದಿನವಂ ಒಂದೊಂದು ಕ್ಷಣದಂತೆ ಕಳೆಯುತ ಸುಖದಿಂದಿರುತಿರ್ದನೆಂಬಲ್ಲಿಗೆ, ಕೆಂಡವಿಶಯಖಂಡಪರಶು ಪುಂಡರೀಕ ಭವಾಖಂಡಲಪ್ರಮುಖ ನಿಖಿಲಸುರವರ ಪರಿಭವ ಪರಿಣತ ಪ್ರಚಂಡಬಲ ದಿಂಡಿಮಂಡಿತ ಖಂಡಿತ ನಿಪುಣ ಕೋದಂಡಕಾಂಡ ಮಂಡಲಾಗ್ರಧರ ಭುಜಾದಂಡ ಪರಿಮಂಡಿತ ಚಾಮುಂಡಿಕಾ ಕಟಾಕ್ಷವೀಕ್ಷಣ ಪ್ರವರ್ಧಮಾನ ಭೂಮಂಡಲಾಧಿಪತ್ಯ ಸತ್ಪ್ರಭಾವ ಸಕಲ ಭಾಷಾಕಲಾವಿದ್ಯಾ ಸರ್ವಾಂಗಕ ಚತುರ್ವಿಧ ಸರಸ ಕವಿತಾನಿರ್ಮಾಣ ನಿರ್ಮಾಣಧೌರೇಯ ಘಟಿಕಾಶತಗ್ರಂಥ ವಿರಚಿತ ಪ್ರಬಂಧ ನಿಬಂಧನ ಧುರಂಧರ ತ್ರಿಭುವನ ಪವಿತ್ರಾತ್ರೇಯಸ ಗೋತ್ರಾಪ್ತವಲಾಯಿತ ಸೂತ್ರ ರುಚಿರಿಕ ಚಾಮರಾಜ ಮಹಾಪುತ್ರ ನರಪತಿವಿರುದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರಿಂದ ರಸಿಕ ಜನಾನಂದಕರವಾಗಿ ವಿರಚಿತವಾದ ಸೌಗಂಧಿಕಾಪರಿಣಯವೆಂಬ ಈ ನವೀನ ಕೃತಿಯೊಳ್ ಸುಗಂಧರಾಜೇಂದ್ರನು ಅಶ್ವರಣವಂ ಸಾಧಿಸುವನೆಂದು ತೆರಳಿ ಇಳಾವೃತಖಂಡದೊಳ್ ವಜ್ರಪುರಿಯಂ ಪೊಕ್ಕು ಕುಸುಮಲತೆಯಿಂದ ಅಶ್ವದ ವೃತ್ತಾಂತವೆಲ್ಲವಂ ತಿಳಿದು ಅವಳೊಡಗೂಡಿ ಅಲ್ಲಿಯೇ ಸುಖದಿಂದಿರ್ದನೆಂಬ ಹದಿನೇಳನೆಯ ಆಶ್ವಾಸ ನಿರೂಪಣಕ್ಕೆ ಮಂಗಳಮಹಾ ॥

ಹದಿನೆಂಟನೆಯ ಆಶ್ವಾಸ ಪ್ರಾರಂಭ.

ಅನಂತರದಲ್ಲಿ ಕೆಲವು ದಿನಗಳು ಕಳೆದಬಳಿಕ ಜಂಝಾಮಾರುತನೆಂಬ ರಾಕ್ಷಸನು ಘೋರಾರಣ್ಯದೊಳ್ ಅನೇಕಂಗಳಾದ ಸಿಂಹ, ಶಾರ್ದೂಲ, ಶರಭ, ಗಜ, ವರಾಹ, ಭಲ್ಲೂಕಶಶ ಮೊದಲಾದ ಮೃಗಂಗಳಂ, ಜಲಜಂತುಗಳಾದ ಕೂರ್ಮ ಮಕರಮತ್ಸ್ಯ ತಿಮಿಂಗಿಲಂಗಳಂ, ಅನೇಕ ಮನುಷ್ಯಶರೀರಂಗಳಂ ಕೂಡ ಸಂಗ್ರಹಿಸಿಕೊಂಡು ತನ್ನ ಆಲಯವಾದ ವಜ್ರಪುರಿಯಂ ಕುರಿತು ವೇಗದಿಂ ಬರುತ್ತಿರಲು, ಛಾಯಾಗುಪ್ತನು ಅವನಂ ಕಂಡು ಬೇಗಬಂದು ಸುಮತಿಯು ಮುಖದಿಂದ ಸಖೀಜನಕ್ಕೆ ತಿಳುಹಿಸಿ ರಾಜೇಂದ್ರರಿಗೆ ಬಿನ್ನವಿಸುವಂತೆ ಮಾಡಲು, ಸುಗಂಧರಾಜೇಂದ್ರನು ಅದಂ ಕೇಳಿ ರಾಕ್ಷಸನು ಬರುವ ಪರಿಯಂ ನೋಡುವಾ ಎಂದು ಮಂದಿಗದ ಉಪರಿ ಭಾಗವನ್ನೇರಿ ಕುಸುಮಲತೆಯೊಡಗೂಡಿ ನೋಡುತ ಭಯಂಕರವಾಗಿ ದೂರದೊಳ್ ಬರುತ್ತಿರುವ ರಾಕ್ಷಸಸೇನೆಯಂ ಕಂಡು ಬಿರುಗಾಳಿ ತಗಲಿ ಅಲ್ಲಾಡುವ ಲತೆಯಂತೆ ನಡಗುತಲಿರುವ ಕುಸುಮಲತೆಯಂ ನೋಡಿ ಎಲೈ ಬಾಲೆಯೆ! ಈಗ ಕಕ್ಕಸವಾಗಿ ಬರುವ ಈ ರಕ್ಕಸನಂ ಬಲದಿಂದ ಬೊಗ್ಗಿಸಿ ದಕ್ಕಿಸಿಕೊಳ್ಳುವೆನು, ನೀನು ತತ್ತರಂಗೊಳ್ಳಬೇಡವೆಂದು ಚಿತ್ತರಬಪ್ರತಿಮೆಯಂತಿರುವ ಚಿತ್ತರಿಯಂ ಅಕ್ಕರೆಯಿಂದ ಸಕ್ಕರೆಯಂತೆ ಸವಿಯಾದ ನುಡಿಗಳಂ ಪೇಳಿ ಧೈರ್ಯಗೊಳಿಸುತ ನೋಡುತಲಿರುವ ಸಮಯದೊಳ್, (ಸಶೇಷ)

ಮೈಸೂರು ದೇಶದಲ್ಲಿ ಹಸುರು ಗೊಬ್ಬರವನ್ನು ಹಾಕುವಿಕೆ.

ಜಮೀನಿನ ಸುತ್ತಮುತ್ತಲಿರುವ ಮರಗಳ ಮತ್ತು ಸಮೀಪದಲ್ಲಿರುವ ಕಾಡುಗಳಲ್ಲಿರುವ ಮರಗಳ ಸೊಪ್ಪನ್ನು ಕೂಡಿಹಾಕಿ ಅವನ್ನು ಹಸರು ಗೊಬ್ಬರವಾಗಿ ಉಪಯೋಗಿಸುವುದು ಮತ್ತು ಜಮೀನಿನಲ್ಲಿ ದ್ವಿದಳಧಾನ್ಯಗಳನ್ನು ಬೆಳೆದು ಅವುಗಳ ಪೈರನ್ನು ಮುಚ್ಚಿಬಿಡುವುದು ಈ ರೀತಿಯಾಗಿ ಎರಡು ವಿಧದಲ್ಲಿ ಹಸರು ಗೊಬ್ಬರವನ್ನು ಉಪಯೋಗಿಸುವರು. ಮೊದಲನೆಯ ಕ್ರಮವು ಕಳೆದ ಸಂಚಿಕೆಯಲ್ಲಿ ವಿವರಿಸಲ್ಪಟ್ಟಿದೆ. ಎರಡನೆಯ ಕ್ರಮವು ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ರೂಢಿಯಲ್ಲಿರುವಂತೆ ಕಾಣುತ್ತದೆ. ಸಾಧಾರಣವಾಗಿ ಹುರುಳಿ, ಸಣಬು, ಉದ್ದು, ಹೆಸರು, ಮತ್ತು ಹಲಸಂದೆ ಇವುಗಳನ್ನು ಬೆಳೆಯುವುದು ವಾಡಿಕೆಯಲ್ಲಿದೆ. ಕೆಲವರು ಪ್ರತಿವರುಷವೂ ದ್ವಿದಳ ಧಾನ್ಯವನ್ನೇ ಬೆಳೆದು ಪೈರನ್ನು ಉತ್ತುಬಿಡುವರು; ಕೆಲವರು ಒಂದು ವರುಷ ದ್ವಿದಳ ಧಾನ್ಯದ ಪೈರನ್ನು ಇಟ್ಟು ಮುಂದಣ ವರುಷ ತರಗಿನ ಗೊಬ್ಬರವನ್ನು ಹಾಕುವರು; ಮತ್ತೆ ಕೆಲವರು, ಮುಖ್ಯವಾಗಿ ಚನ್ನಪಟ್ಟಣದ ತಾಲ್ಲೂಕಿನ ಕೆಲವು ಗ್ರಾಮಗಳ ರೈತರು ಮೂರು, ಐದು ಅಥವಾ ಹತ್ತು ವರುಷಗಳಿಗೊಂದಾವೃತ್ತಿ ದ್ವಿದಳ ಧಾನ್ಯಗಳನ್ನು ಬೆಳೆದು ಉಳಿದ ವರುಷಗಳಲ್ಲಿ ದನದ ಮತ್ತು ತರಗಿನ ಗೊಬ್ಬರವನ್ನು ಉಪಯೋಗಿಸುತ್ತಾರೆ.

ಈ ದ್ವಿದಳ ಧಾನ್ಯಗಳ ಪೈಕಿ ಯಾವುದನ್ನೂ ಒಂದೊಂದನ್ನೇ ಮಾತ್ರ ಬೆಳೆಯುವುದಿಲ್ಲ. ಹಸರು ಗೊಬ್ಬರಕ್ಕಾಗಿ ಉಪಯೋಗಿಸಬೇಕೆಂಬ ಉದ್ದೇಶದಿಂದ ಬೆಳೆಯತಕ್ಕವರು ಹುರುಳಿಯನ್ನಾಗಲಿ ಅಥವಾ ಹುರುಳಿ ಮತ್ತು ಸಣಬನ್ನೂ ಜತೆಯಲ್ಲಾಗಲಿ ಬೆಳೆಯುತ್ತಾರೆ. ದ್ವಿದಳ ಧಾನ್ಯದ ಫಸಲನ್ನು ಅಪೇಕ್ಷಿಸುವವರು ಹೆಸರು, ಉದ್ದು ಮತ್ತು ಅಲಸಂದೆಯನ್ನು ಬೆಳೆಯುವವರು ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಾತ್ರ ಸಣಬು ಒಂದನ್ನೇ ಬೇರೆಯಾಗಿ ಬೆಳೆದು ಗೊಬ್ಬರವಾಗಿ ಉತ್ತುಬಿಡುವರು. ಉಳಿದ ಪ್ರದೇಶಗಳಲ್ಲಿ ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರು ಕೊಡನೆ ಜೋಳವನ್ನು ಬೆಳೆಯುತ್ತಾರೆ. ಇದು ಆರಂಭಕಾರ್ಯಕ್ಕೆ ಸಹಾಯಕಾರಿಗಳಾಗಿರುವ ದನಕರುಗಳಿಗೆ ಬಹಳ ರಸವತ್ತಾದ ಮೇವಾಗಿದೆ. ಕೆಲವರು ಹಸರು ಗೊಬ್ಬರದ ಪೈರುಗಳೊಡನೆ ಎಳ್ಳನ್ನೂ ಬೆಳೆಯುತ್ತಾರೆ; ಆದರೆ ಇದನ್ನು ಗೊಬ್ಬರಕ್ಕಾಗಿ ಉಪಯೋಗಿಸುವುದು ಬಹಳ ಅಪರೂಪ.

ದ್ವಿದಳ ಧಾನ್ಯಗಳು ಸಾಧಾರಣವಾಗಿ ಮಳೆಯ ನೀರಿನ ಆಸರೆಯಿಂದ ಬೆಳೆಯಲ್ಪಡುವುವು ಮುಂಗಾರು ಮಳೆಯು ಪ್ರಾರಂಭವಾದ ಕೂಡಲೆ ಇವುಗಳು ಬಿತ್ತನೆಯಾಗಲ್ಪಡುವುವು. ಬಿತ್ತನೆಯಾದ ಮೂರು ತಿಂಗಳ ತರುವಾಯ ಉದ್ದು, ಹೆಸರು ಅಥವಾ ಅಲಸಂದೆಯನ್ನು ಬಿತ್ತಿದ್ದವರೆಲ್ಲರೂ ಸಿಕ್ಕುವಷ್ಟು ಕಾಯನ್ನೆಲ್ಲಾ ಕಿತ್ತು ಎರಡು ವಾರಗಳವರೆಗೆ ಉಳಿವ ಎತ್ತುಗಳು ಮತ್ತು ಬೀಜದ ಹೋರಿಗಳನ್ನು ಬಿಟ್ಟು ಮೇಯಿಸಿ ನಂತರ ಉಳಿದತಕ್ಕ ಪೈರನ್ನು ಉತ್ತುಬಿಡುವರು. ಈ ರೀತಿ ಉಳಲ್ಪಟ್ಟ ಪೈರು ಕೆಸರು ಗದ್ದೆಯಲ್ಲಿ ಸುಮಾರು ಎರಡು ವಾರಗಳ ವರೆಗೆ ಕೊಳೆತ ತರುವಾಯ ಭತ್ತದ ಪೈರನ್ನು ನಾಟಿಹಾಕುತ್ತಾರೆ.

ಹುರುಳಿ ಮತ್ತು ಸಣಬನ್ನು ಮಾತ್ರವೇ ಬೆಳೆಯತಕ್ಕವರು ಅರ್ಧ ಅಥವಾ ಕಾಲುಭಾಗದ ಪೈರನ್ನು ಗೊಬ್ಬರಕ್ಕಾಗಿ ಉಪಯೋಗಿಸುವರು ಸಣಬು ಒಂದನ್ನೇ ಬೆಳೆಯುವವರು ಮುಕ್ಕಾಲು ಬೆಳೆಯನ್ನು ಉಪಯೋಗಿಸುತ್ತಾರೆ. ದನಗಳನ್ನು ಮೇಯುವುದಕ್ಕೆ ಬಿಟ್ಟಾಗ ಅವು ಹಸರು ಹುಲ್ಲು ಮತ್ತು ಸಣಬಿನ ಗಿಡಗಳ ಕುಡಿಗಳನ್ನು ಮಾತ್ರ ತಿನ್ನುವುವು. ಹುರುಳಿಸೊಪ್ಪು ಅಷ್ಟು ರುಚಿಯಾಗಿರುವಂತೆ ತೋರುವುದಿಲ್ಲ. ಹೆಸರು, ಉದ್ದು ಮತ್ತು ಅಲಸಂದೆಯನ್ನು ಬೆಳೆಯತಕ್ಕವರು ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಎರಡು ವಾರಗಳವರೆಗೆ ದನಗಳನ್ನು ಬಿಟ್ಟು ಮೇಯಿಸಿ ಅನಂತರ ಉಳಿದುದನ್ನು ಮಾತ್ರ ಗೊಬ್ಬರಕ್ಕೆ ಬಿಡುವರು. ಹೀಗೆ ಮಾಡುವುದರಿಂದ ಪೈರಿನ ಕೂಳೆಗಳು ಮಾತ್ರ ಗೊಬ್ಬರಕ್ಕೆ ಸಿಕ್ಕುವವೇ ಹೊರತು ಪೈರಿನ ಹಸರು ಭಾಗವು ಬೇರೆ ಸಿಕ್ಕಿದಂತಾಗುವುದಿಲ್ಲ. ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ಮನುಷ್ಯರ ಆಹಾರಕ್ಕೆ ಒದಗತಕ್ಕ ಹೆಸರು, ಕಡಲೆ, ಉದ್ದು ಮೊದಲಾದ ದ್ವಿದಳ ಧಾನ್ಯಗಳ ಪೈರನ್ನೇ ಇಟ್ಟು ತಪ್ಪದೆ ಕ್ರಮವಾಗಿ ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಅನಂತರ ದನಗಳನ್ನು ಬಿಟ್ಟು ಮೇಯಿಸಿ ಉಳಿದಿರುವ ಕೂಳೆಯನ್ನು ಉತ್ತು ಭತ್ತವನ್ನು ನಾಟಿ ಹಾಕುವರು. ಅಂತೂ ಈ ಪ್ರಾಂತ್ಯ ಪೈರಿನ ಹಸರು ಪದಾರ್ಥವು ಜಮೀನಿಗೆ ಸ್ವಲ್ಪವಾದರೂ ಸೇರುವುದಿಲ್ಲ. ಮನುಷ್ಯರ ಆಹಾರಕ್ಕೆ ಒದಗದೆ ಇರುವಂತಹ ಹಸರು ಗೊಬ್ಬರದ ಪೈರು ಸಣಬು. ಈ ಪ್ರಾಂತ್ಯ ಇದನ್ನು ಬೆಳೆಯುವುದು ಬಹಳ ಅಪರೂಪ. ಹಾಗೆ ಬೆಳೆಯುವ ಒಬ್ಬಿಬ್ಬರು ಸಣಬಿನ ಪೈರನ್ನು ಕತ್ತರಿಸಿ ಕರೆಯುವ ಹಸುಗಳಿಗೆ ಜೋಳದ ಕಡ್ಡಿಯನ್ನು ತಿನ್ನಿಸುವಂತೆ ತಿನ್ನಿಸಿ ಬಿಡುವರು. ಮೇಲೆಕಂಡ ವಿಷಯಗಳನ್ನೆಲ್ಲಾ ಪರಿಶೀಲಿಸಿ ನೋಡಿದರೆ ಶ್ರೀರಂಗಪಟ್ಟಣದ ಪ್ರಾಂತ್ಯ ಹಸರು ಗೊಬ್ಬರಕ್ಕಾಗಿ ಯಾವ ಪೈರನ್ನೂ ಬೆಳೆಯುವುದಿಲ್ಲವೆಂದು ಹೇಳಬೇಕು.

ಪೈರಿಗೆ ಮುಖ್ಯಾಹಾರವಾದ ನೈಟ್ರೋಜನ್ (Nitrogen) ವಾಯು ಮತ್ತು ಸುಲಭವಾಗಿ ಕೊಳೆಯತಕ್ಕ ಸಜೀವಪದಾರ್ಥಗಳನ್ನು ಹಸರು ಗೊಬ್ಬರವು ಭೂಮಿಗೆ ಸೇರಿಸುತ್ತದೆ

ಹಸರು ಗೊಬ್ಬರದ ಪೈರುಗಳಲ್ಲಿ ಹೂಬಿಟ್ಟಿರುವಾಗ್ಗೆ ಅವುಗಳನ್ನು ಜಮೀನಿನಲ್ಲಿ ಉಳುವುದಕ್ಕೆ ಸಕಾಲವಾಗಿದೆ. ಆ ಸಮಯದಲ್ಲಿ ಅವುಗಳನ್ನು ಉತ್ತರೆ, ಹಸರು ಗೊಬ್ಬರದ ಪೈರುಗಳು ಅದುವರೆವಿಗೆ ಕೂಡಿ ಹಾಕಿರುವ ಪದಾರ್ಥಗಳೆಲ್ಲಾ ಜಮೀನಿಗೆ ಸೇರುವುವು.

ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರುಗಳಲ್ಲಿ ಸಣಬು ಮತ್ತು ಹಲಸಂದೆಯ ಪೈರುಗಳು ಇತರ ಪೈರುಗಳಿಗಿಂತ ಹೆಚ್ಚಾಗಿ ಎಂದರೆ ಎಕರೆಗೆ ೩೦ ಮತ್ತು ೩೦ ಪೌಂಡುಗಳು ತೂಕ ನೈಟ್ರೋಜನ್ ವಾಯುವನ್ನು ಸೇರಿಸುತ್ತವೆ. ತಿರುಮಕೂಡ್ಲು ನರಸೀಪುರದ ಪ್ರಾಂತ್ಯ ಸಣಬನ್ನೇ ಬೆಳೆದು ಪೈರಿನಲ್ಲಿ ಹೂ ಕಚ್ಚುತ್ತಿರುವ ಸಮಯದಲ್ಲಿ ಉತ್ತುಬಿಡುವರು. ಈ ರೀತಿಯಲ್ಲಿ ಸಣಬನ್ನು ಮಾತ್ರ ಬೆಳೆದು ಭೂಮಿಗೆ ಗೊಬ್ಬರವನ್ನಾಗಿ ಹಾಕತಕ್ಕ ಪ್ರದೇಶಗಳಲ್ಲೆಲ್ಲಾ ಹಸರು ಗೊಬ್ಬರವನ್ನು ಹಾಕುವುದರಿಂದ ಹೊಂದಬಹುದಾದ ಪೂರ್ಣ ಪ್ರಯೋಜನವನ್ನು ಹೊಂದಬಹುದೆಂದು ಹೇಳಬೇಕು. ಸಣಬನ್ನು ಮಾತ್ರವಲ್ಲದೆ, ಮತ್ತಾವ ದ್ವಿದಳ ಧಾನ್ಯವನ್ನಾಗಲಿ ಅಥವಾ ಸಣಬಿನೊಡನೆ ಇತರ ಯಾವುದಾದರೊಂದು ದ್ವಿದಳ ಧಾನ್ಯವನ್ನಾಗಲಿ ಬೆಳೆಯುವವರು ಸಾಮಾನ್ಯವಾಗಿ ಸಿಕ್ಕಿದಷ್ಟು ಫಸಲನ್ನು ತೆಗೆದುಕೊಂಡು ಕೂಳೆಯನ್ನು ಮಾತ್ರ ಗೊಬ್ಬರಕ್ಕೆ ಬಿಡುತ್ತಾರೆ. ಪೈರಿನಲ್ಲಿ ಕಾಳಾಗುವವರೆವಿಗೂ ಬಿಟ್ಟಿದ್ದರೆ ಪೈರಿನಲ್ಲಿ ಕೂಡಿಡಲ್ಪಟ್ಟಿದ್ದ ನೈಟ್ರೋಜನ್ (Nitrogen) ವಾಯುವಿನ ಹೆಚ್ಚು ಭಾಗವು ಕಾಳಿನಲ್ಲಿ ಸೇರಿಹೋಗುವುದು. ಯಾವಯಾವ ಕಾಳಿನಲ್ಲಿ ನೈಟ್ರೋಜನ್ (Nitrogen) ವಾಯುವು ಶೇಕಡ ಎಷ್ಟೆಷ್ಟು ಭಾಗವಿರುವುದೆಂಬುದನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ.

ಧಾನ್ಯದ ಹೆಸರು.	ನೈಟ್ರೋಜನ್
ಉದ್ದು	೩.೪೯
ಹೆಸರು	೩.೭೧
ಹಲಸಂದೆ	೩.೧೦
ಅವರೆ	೩.೩೯
ಭತ್ತ	೧.೦೯

ಎಂದರೆ ಕಾಳನ್ನು ಬಿಡಿಸಿಕೊಂಡು ಕಡ್ಡಿಯನ್ನು ಮಾತ್ರ ಗೊಬರಕ್ಕಾಗಿ ಉಪಯೋಗಿಸಿದರೆ, ಜಮೀನಿಗೆ ಸೇರಬೇಕಾಗಿದ್ದ ಹೆಚ್ಚು ಭಾಗ ನೈಟ್ರೋಜನ್ ವಾಯುವು ಜಮೀನಿಗೆ ಸಿಕ್ಕದಂತೆ ಮಾಡಿದಹಾಗಾಯಿತು. ಹೀಗೆ ಮಾಡುವುದರಿಂದ ಮುಂದಣ ಭತ್ತದ ಬೆಳೆಗೆ ಹಸರು ಗೊಬ್ಬರದಿಂದ ಉಂಟಾಗುತ್ತಿದ್ದ ಪೂರ್ಣ ಪ್ರಯೋಜನವು ದೊರೆಯುವುದಿಲ್ಲ. ಅಲ್ಲದೆ ಕಾಳಿನೊಡನೆ ನೈಟ್ರೋಜನ್ ಮಾತ್ರವಲ್ಲದೆ ಫಾಸ್ಫಾರಿಕ್ ಆಸಿಡ್ (Phosphoric Acid) ಮರದ ಉಪ್ಪು (Potash) ಮತ್ತು ಸುಣ್ಣ (Lime) ವೂ ಸೇರಿಹೋಗುವುವು. ಹೀಗೆ ಕಾಳನ್ನು ಬಿಡಿಸಿಕೊಳ್ಳುವುದರಿಂದ ಯಾವ ಪದಾರ್ಥಗಳನ್ನು ಜಮೀನಿಗೆ ಒದಗಿಸಿಕೊಡಬೇಕೆಂಬ ಉದ್ದೇಶದಿಂದ ತಾವು ಹಸರು ಗೊಬ್ಬರಕ್ಕಾಗುವ ಪೈರನ್ನು ಬೆಳೆವರೋ ಆ ಪದಾರ್ಥಗಳು ಸಿಕ್ಕದಂತಾಗುವುವೆಂಬುವುದನ್ನು ಅನೇಕರು ತಿಳಿದುಕೊಂಡಿರುವುದಿಲ್ಲ. ಜಮೀನಿಗೆ ಬೇಕಾಗಿರುವುದು ಹಸರಾಗಿರುವ ಸೊಪ್ಪು ಮಾತ್ರವೇ ಎಂದೂ, ಕಾಳಿನಿಂದ ಜಮೀನಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲವೆಂದೂ ಜನರು ಹೇಳುವರು ಆದರೆ ಸೊಪ್ಪಿನಲ್ಲಿ ಸೇರಿದ್ದ ಪದಾರ್ಥಗಳ ಹೆಚ್ಚು ಭಾಗವು ಕಾಳುಗಳಲ್ಲಿ ಸೇರಿಹೋಗುವುದೆಂಬುವುದನ್ನು ಅವರು ಅರಿಯರು ಕಾಳನ್ನು ಬಿಡಿಸಿಕೊಂಡರೆ ಮುಂದಣ ಭತ್ತದ ಪೈರು ಸರಿಯಾಗಿ ಆಗುವುದಿಲ್ಲವೆಂದು ಕೆಲವರು ಒಪ್ಪಿಕೊಳ್ಳುತ್ತಾರೆ; ಆದರೆ ತಾವು ಬಡವರಾದುದರಿಂದ ನಾಟಿ ಪೈರು ಪಸೈರೆಗಳಿಗೆ ತಗಲತಕ್ಕ ಖರ್ಚನ್ನು ಕೊಡಲು ತಮಗೆ ತ್ರಾಣವಿಲ್ಲದುದರಿಂದ ಈ ಕಾಳುಗಳ ಫಸಲನ್ನು ಕಟಾವುಮಾಡಿ ಅದನ್ನು ಮಾರಿದರೆ, ಅದರಿಂದ ಬರುವ ದುಡ್ಡು ಮೇಲೆಕಂಡ ಕೆಲಸಗಳಿಗೆ ಒದಗುತ್ತದೆಂದು ಹೇಳುತ್ತಾರೆ. ಕೆಲವರು ಪುಷ್ಕಳರಾದ ರೈತರು ಸಹಾ ಈರೀತಿ ಫಸಲನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಹದವಾಗಿ ಬೆಳೆದಿರುವ ಫಸಲನ್ನು ಬಿಡಲಾರದ ಮರಳುತನವೇ ಕಾರಣವಾಗಿದೆ. ಆದುದರಿಂದ ಪೈರಿನಲ್ಲಿ ಹೂ ಕಚ್ಚಿದ ತರುಣದಲ್ಲಿಯೇ ಉತ್ತುಬಿಟ್ಟರೆ ಇಂಥಾ ಮರಳುತನಕ್ಕೆ ಗುರಿಯಾಗಬೇಕಾದುದಿಲ್ಲ. ಹಾಗಿಲ್ಲದಿದ್ದರೆ ಬರೀ ಸಣಬು ಹೊರತು ಮತ್ತಾವುದನ್ನೂ ಬೆಳೆಯದಿರುವುದು ಸರ್ವೋತ್ತಮವಾಗಿದೆ.

ಸಾಧಾರಣ ಕಾಲದಲ್ಲೂ ಸಣಬು ಚೆನ್ನಾಗಿ ಬೆಳೆಯುತ್ತದೆ. ಮಳೆಯು ಹದವಾಗಿ ಬಿದ್ದರೆ ಬಿತ್ತನೆಯಾದ ೨ ಅಥವಾ ೨½ ತಿಂಗಳೊಳಗೆ ಸಣಬು ಆರೇಳು ಅಡಿಗಳ ಎತ್ತರವಾಗಿ ಬೆಳೆದು ಎಕರೆಗೆ ೪೦೦೦ ಪೌಂಡು ಹಸರು ಗೊಬ್ಬರವನ್ನು ಕೊಡುತ್ತದೆ. ಸಕಾಲದಲ್ಲಿ ಉಳದೆ ಗಿಡಗಳು ಬಲಿತು ಬೀಜಗಳಾದಾಗ್ಗೂ ಅವನ್ನು ಜನರು ತಿನ್ನುವುದಿಲ್ಲವಾದುದರಿಂದ ಅದರ ಫಸಲನು ತೆಗೆದುಕೊಳ್ಳುವ ಸಂಭವವೇ ಇಲ್ಲ. ಹಾಗೆ ದನಕರುಗಳನ್ನು ಮೇಯಲು ಬಿಟ್ಟಾಗ್ಗೂ ಅವು ಎಳೆದಾದ ಕುಡಿಗಳನ್ನು ಮಾತ್ರ ತಿನ್ನುವುವೇ ಹೊರತು ಇತರ ಭಾಗಗಳ ತಂಟೆಗೆ ಹೋಗುವುದಿಲ್ಲ. ಮೇಲೆಕಂಡ ವಿಷಯಗಳನ್ನೆಲ್ಲಾ ವಿಚಾರಮಾಡಿ ನೋಡಿದರೆ ಭತ್ತದ ಜಮೀನುಗಳಿಗೆ ಹಸರು ಗೊಬ್ಬರಕ್ಕೆ ಸಣಬಿನಷ್ಟು ಉತ್ತಮವಾದ ಪೈರು ಮತ್ತಾವುದೂ ಇಲ್ಲವೆಂದು ಹೇಳಬಹುದು. ಆದುದರಿಂದ ಸಾಧ್ಯವಾದ ಮಟ್ಟಿಗೂ ಸಣಬಿನ ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕು. ಕಾಳುಗಳ ಫಸಲನ್ನು ಕಟಾಯಿಸಿಕೊಳ್ಳುವವರೂ ಸಹಾ ಎರಡು ಮೂರು ವರುಷಗಳಿಗೊಂದಾವೃತ್ತಿ ಗೊಬ್ಬರಕ್ಕಾಗಿ ಬರಿಯ ಸಣಬನ್ನು ಮಾತ್ರವೇ ಬೆಳೆಯುವುದು ಒಳ್ಳೆಯದು. (ಸಶೇಷ)

ಕಲಿಭೀಮ ರಾಮಮೂರ್ತಿಯವರ ಭಾಷಣವು.

ಕಳೆದ ೧೪-೧೫ ದಿನಗಳಿಂದಲೂ ಬೆಂಗಳೂರ ಪಟ್ಟಣದಲ್ಲೂ, ದಂಡಿನಲ್ಲೂ ಅದ್ಭುತ ಕಾಯಶಕ್ತಿಯನ್ನು ಪ್ರದರ್ಶಿಸಿ ಜನರನ್ನು ವಿಸ್ಮಯಗನ್ನಾಗಿ ಮಾಡುತ್ತಿರುವ ಕಲಿಭೀಮನೆಂದು ಹೆಸರ್ವಡೆದ ಮಿ॥ ರಾಮಮೂರ್ತಿಯವರು ವಿಜಯನಗರದಲ್ಲಿ ಅನೇಕ ದಾನಧರ್ಮಗಳನ್ನು ಮಾಡಿ ಪ್ರಸಿದ್ಧರಾಗಿದ್ದ ರಾವ್ ಬಹದ್ದೂರ್ ನಾರಾಯಣಸ್ವಾಮಿಯವರ ಮಕ್ಕಳು. ಕಾಯಬಲದಲ್ಲಿ ಪ್ರಪಂಚದಲ್ಲೆಲ್ಲಾ ಅದ್ವಿತೀಯರೆಂದು ಪ್ರಸಿದ್ಧರಾಗಿರುವ ಪಾಶ್ಚಾತ್ಯ ದೇಶೀಯರಾದ ಸ್ಯಾಂಡೋ ಯವರನ್ನು ದೇಹಬಲದಲ್ಲೂ, ಅಂಗಸಾಧನೆಯ ಪ್ರದರ್ಶನದಲ್ಲೂ ಮೀರಿಸಿ ಅಮೇರಿಕಾ ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲೂ, ಭರತಖಂಡದಲ್ಲೂ ವಿಶೇಷ ಖ್ಯಾತಿಯನ್ನು ಪಡೆದಿರುವ ಈ ರಾಮಮೂರ್ತಿಯವರನ್ನು ಬೆಂಗಳೂರಿನ ಆಂಧ್ರಕ್ಷತ್ರಿಯ ಸಂಘದವರು ಕಳೆದ ತಾ॥ ೩ ರಲ್ಲಿ ದಂಡಿನಲ್ಲಿರುವ ರಾ॥ ಬ॥ ಅರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರ ಪಾಠಶಾಲಾ ಮಂದಿರಕ್ಕೆ ಬರಮಾಡಿಕೊಂಡು ಸತ್ಕರಿಸಿದರು. ಆ ಕಾಲದಲ್ಲಿ ಅವರ ಗುಣಕಥನವನ್ನು ಮಾಡುವುದಕ್ಕೆ ಅಡ್ವೋಕೇಟ್ ಮಿ॥ ಪಿ. ವಿ. ರಾಜು ಸ್ವಾಮಿಯವರು "ಈಗ ಇಂಗ್ಲೆಂಡಿನಲ್ಲಿ ಸರ್ಕಾರಿಯುದ್ಯೋಗಕ್ಕೆ ಸೇರಿಕೊಂಡಿರುವ ಸ್ಯಾಂಡೋಯವರು ಭರತಖಂಡಕ್ಕೆ ಬಂದು ತಮ್ಮ ಅದ್ಭುತ ಕಾಯಶಕ್ತಿಯನ್ನು ಪ್ರದರ್ಶಿಸಿದಾಗ್ಗೆ ಅವರನ್ನು ಅತ್ಯಂತ ಪರಾಕ್ರಮಶಾಲಿಗಳೆಂದು ತಿಳಿದುಕೊಂಡಿದ್ದೆವು ಆದರೆ ಈಗ ರಾಮಮೂರ್ತಿಯವರ ಅದ್ಭುತಶಕ್ತಿಯನ್ನು ನೋಡಿದಲ್ಲಿ ಪ್ರಪಂಚದಲ್ಲೆಲ್ಲಾ ಇವರು ಅದ್ವಿತೀಯ ಪರಾಕ್ರಮಶಾಲಿಗಳೆಂದು ಗೊತ್ತಾಗುತ್ತದೆ. ಇವರ ಪರಾಕ್ರಮವು ಅತಿಶಯವಾದುದು. ಇದು ಎಲ್ಲರಿಗೂ ಲಭ್ಯವಾಗಿರತಕ್ಕದ್ದಲ್ಲ ಮತ್ತೂ ಇದಕ್ಕೆ ಸ್ವಬುದ್ಧಿಯೂ, ತಾಳ್ಮೆಯೂ, ಸ್ಥಿರಬುದ್ಧಿಯೂ ಅತ್ಯಾವಶ್ಯಕವು. ಇವರ ಉದಾರ ಮನಸ್ಸಂತೂ ಎಲ್ಲರಿಗೂ ಗೊತ್ತೇ ಇದೆ. ಇವರು ಮತ್ತಾವ ವಿಧವಾದ ವೃತ್ತಿಯನ್ನವಲಂಬಿಸಿದ್ದರೂ, ಅದರಲ್ಲಿಯೂ ಖ್ಯಾತಿವಂತರಾಗುತ್ತಿದ್ದರು. ಇವರು ಅನೇಕ ಧರ್ಮಕಾರ್ಯಗಳಿಗೋಸ್ಕರ ಬಹು ಉದಾರವಾಗಿ ಚಂದಾ ದ್ರವ್ಯವನ್ನು ಕೊಟ್ಟಿರುವುದರಿಂದ ಇವರ ಹೃದಯವೈಶಾಲ್ಯವೂ ಮತ್ತೂ ಸಮಸ್ತರಲ್ಲೂ ಇರತಕ್ಕ ಸಹಾನುಭೂತಿಯೂ ವ್ಯಕ್ತವಾಗುವುವು. ಎಂದು ಪ್ರಸ್ತಾಪಿಸಿದ ನಂತರ ಬೆಂಗಳೂರು ಒಕ್ಕಲಿಗರ ಸಂಘದ ಸೆಕ್ರೆಟರಿಯವರಾದ ಮಿ॥ ಕೆ. ಎಚ್. ರಾಮಯ್ಯನವರು "ಭರತಖಂಡವು ಪೂರ್ವದಲ್ಲಿ ಮುನಿಗಳ ಆವಾಸಸ್ಥಾನವಾಗಿದ್ದಿತೆಂದೂ, ಜನಕ ಮತ್ತೂ ಶ್ರೀರಾಮರುಗಳಂತಹ ರಾಜಶ್ರೇಷ್ಠರುಗಳೂ, ವಸಿಷ್ಠ ಮತ್ತೂ ವಿಶ್ವಾಮಿತ್ರರುಗಳಂತಹ ಮಹರ್ಷಿಗಳೂ, ಭೀಮಾರ್ಜುನರುಗಳಂತಹ ಮಹಾ ಪರಾಕ್ರಮಶಾಲಿಗಳೂ ಇದ್ದರೆಂದೂ ಪುರಾಣಗಳಿಂದ ಕೇಳಿ ತಿಳಿದಿರುತ್ತೇವೆ. ಆದರೆ ಅವರುಗಳಿದ್ದುದು ಅನುಮಾನಗ್ರಸ್ತವೆಂದೂ, ಪುರಾಣಗಳೆಲ್ಲವೂ ಕಟ್ಟುಕಥೆಗಳೆಂದೂ ಈಚೆಗೆ ಜನರು ಭಾವಿಸತೊಡಗಿದರು. ಈ ಭಾವನೆಯಿಂದ ಭಾರತೀಯರು ಕ್ಷೀಣಗತಿಗೆ ಬರಲು ಕಾರಣವಾಯಿತು. ಭೀಮಸೇನನು ಆನೆಗಳನ್ನು ತನ್ನ ಕೈಗಳಿಂದೆತ್ತಿ ಬಿಸಾಡಿದುದಲ್ಲದೆ ಲಕ್ಷಾಂತರ ಸೇನೆಯನ್ನು ತಾನೊಬ್ಬನೇ ಸಂಹರಿಸಿದನೆಂಬುದರಲ್ಲಿಯೂ, ಅಂಜನೇಯನು ಪರ್ವತಗಳನ್ನು ಬುಡ ಸಮೇತ ಕಿತ್ತು ಬಿಟ್ಟನೆಂಬುದರಲ್ಲಿಯೂ ಜನರಿಗೆ ನಂಬುಗೆ ಇಲ್ಲವಾಯಿತು ಆದರೆ ರಕ್ತಮಾಂಸಗಳಿಂದ ಕೂಡಿದವರಾದ ರಾಮಮೂರ್ತಿಯವರು ತಮ್ಮ ದೆಯಮೇಲೆ ಆನೆಯನ್ನು ನಿಲ್ಲಿಸಿಕೊಳ್ಳುವುದನ್ನೂ, ತಮ್ಮ ಎರಡು ಕೈಗಳಿಂದಲೂ ಓಡುವ ಮೊಟಾರು ಬಂಡಿಗಳನ್ನು ತಡೆದು ನಿಲ್ಲಿಸುವುದನ್ನೂ ಕಣ್ಣಾರೆ ನೋಡಿದುದರ ಮೇಲೆ ಪುರಾಣದಲ್ಲಿ ವರ್ಣಿಸಲ್ಪಟ್ಟಿರುವ ಭೀಮಾರ್ಜುನ ಮತ್ತೂ ಆಂಜನೇಯರುಗಳ ಅದ್ಭುತ ಕಾರ್ಯಗಳೆಲ್ಲವೂ ವಾಸ್ತವವಾದುವುವೆಂಬುದು ಎಲ್ಲರಿಗೂ ನಿದರ್ಶನಕ್ಕೆ ಬಂದಿತು. ಭಾರತೀಯರಿಗೆ ಆಧ್ಯಾತ್ಮಿಕ ವಿಚಾರದಲ್ಲಿರತಕ್ಕ ಮಹಾ ಸಾಮರ್ಥ್ಯವನ್ನು ಸ್ವಾಮಿ ವಿವೇಕಾನಂದರವರು ಪ್ರಪಂಚಕ್ಕೆಲ್ಲಾ ತೋರ್ಪಡಿಸಿದರು. ಆದರೆ ಪ್ರೊಫೆಸರ್ ರಾಮಮೂರ್ತಿಯವರು ಈಗ ಕಾಯಶಕ್ತಿಯ ಅತಿಶಯವನ್ನು ತೋರ್ಪಡಿಸುತ್ತಿರುವರು. ಬ್ರಿಟಿಷ್ ಪ್ರಭುಗಳು ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಶಾಂತತೆಯನ್ನು ಉಂಟುಮಾಡಿರುವರು. ನಮ್ಮ ಮೈಸೂರ ಸೀಮೆಯ ಸ್ಥಿತಿಯು ಅಸಾಧಾರಣವಾಗಿರುವುದು ನಮ್ಮ ಶ್ರೀಮನ್ಮಹಾರಾಜರವರೂ, ಅವರ ಸಹೋದರರಾದ ಶ್ರೀ ಯುವರಾಜರೂ ಆಯಾ ಜನಾಂಗದವರ ಅಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿರುವ ಸಂಘಗಳಿಗೆ ವಿಶೇಷವಾಗಿ ಸಾಹ್ಯಮಾಡುತ್ತಿರುವರು. ಹುಡುಗರು ವಿದ್ಯಾವಂತರಾಗಲು ತಕ್ಕ ಸಾಹ್ಯವಿಲ್ಲದೆ ಅವಿವೇಕಿಗಳಾಗಿ ಕೆಟ್ಟು ಹೋಗುತ್ತಿರುವರಾದುದರಿಂದ, ಸಾಂಘಿಕ ಪ್ರಯತ್ನವು ಅತ್ಯಾವಶ್ಯಕವು. ಈ ಆಂಧ್ರಕ್ಷತ್ರಿಯರಿಗೆ ಅಂತಹ ಪ್ರಯತ್ನಕ್ಕೆ ಒಬ್ಬ ಮುಖಂಡರು ಬೇಕಾಗಿರುವುದು." ಎಂದು ಹೇಳಿದರು ತರುವಾಯ ಪ್ರೊ॥ ರಾಮಮೂರ್ತಿಯವರೆದ್ದು ನಿಂತುಕೊಂಡು ತಮ್ಮ ಮಾತೃಭಾಷೆಯಾದ ತೆಲುಗಲ್ಲದೆ ಹಿಂದಿ ಭಾಷೆಯು ಚೆನ್ನಾಗಿ ಬರುತ್ತದೆಂದೂ, ಇಂಗ್ಲೀಷು ಭಾಷೆಯು ತಮ್ಮ ಉದ್ಯೋಗ ನಿರ್ವಾಹ ಪೂರ್ತಿಬರುತ್ತಾದುದರಿಂದ ತೆಲುಗಿನಲ್ಲಿ ಭಾಷಣ ಮಾಡುತ್ತೇನೆಂದು ಹೇಳಿ ೧ ಗಂಟೆಯ ಕಾಲದವರೆಗೆ ಸ್ವಚ್ಛವಾದ ತೆಲುಗು ಭಾಷೆಯಲ್ಲಿ ಬಹುರಸವತ್ತಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ:-

ಈ ವರ್ತಮಾನ ಕಾಲದಲ್ಲಿ ಪ್ರತಿಯೊಂದು ಪಂಗಡದವರಲ್ಲೂ ಏಕಮತ್ಯವು ಅತ್ಯಾವಶ್ಯಕವಾಗಿರಬೇಕಾಗಿದೆ. ನಾನು ಬಹು ದೂರದೇಶಗಳಲ್ಲೆಲ್ಲಾ ಸಂಚರಿಸಿ ಅನೇಕ ಸ್ಥಳಗಳನ್ನೂ, ಪದಾರ್ಥಗಳನ್ನೂ ನೋಡಿ ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದಿರುತ್ತೇನೆ. ನಾನು ಎಲ್ಲಿಗೆ ಹೋದಾಗ್ಗೂ ನನ್ನ ಗಮನವೆಲ್ಲವೂ ಭರತಖಂಡದ ಕಡೆಯೇ ಇರುತ್ತದೆ. ಏಕೆಂದರೆ ಪ್ರಪಂಚದ ಮೇಲೆಲ್ಲಾ ಭರತಖಂಡವೊಂದೇ ಪುಣ್ಯಭೂಮಿಯಾಗಿರುವುದು. ಇದು ನನ್ನ ಭಾಗಕ್ಕೆ ಸ್ವರ್ಗವಾಗಿದೆ. ಎಷ್ಟೋ ಜನಾಂಗದವರು ಇಲ್ಲಿಗೆ ಬಂದು ಹೋದರು. ಆದರೆ ಭಾರತೀಯರು ಮಾತ್ರ ಸ್ಥಿರವಾಗಿರುವರು. ಹೀಗೆ ಭರತಖಂಡಕ್ಕೆ ಅವಿಚ್ಛಿನ್ನತೆಯು ಇದು ಪುಣ್ಯ ಭೂಮಿಯಾಗಿರುವುದೇ ಮುಖ್ಯ ಕಾರಣವಾಗಿದೆ. ಭಾರತೀಯರ ಕಾಯಶಕ್ತಿಯು ಕಡಿಮೆಯಾದುದರಿಂದ ಭರತಖಂಡಕ್ಕೆ ಹೀನಸ್ಥಿತಿಯು ಪ್ರಾಪ್ತವಾಗಿರುತ್ತದೆ. ಭಾರತೀಯರು ಇಲ್ಲಿಗೆ ಬಂದ ಅನ್ಯದೇಶೀಯರನ್ನು ಔದಾಸೀನ್ಯದಿಂದಲೂ, ಅಜಾಗ್ರತೆಯಿಂದಲೂ ಕಂಡರು, ಮತ್ತೂ ತಮ್ಮ ಸ್ವಭಾಷೆಯನ್ನು ಮರೆತುಬಿಟ್ಟರು. ಅಲ್ಲದೆ ತಂತಮ್ಮೊಳಗೆ ಒಬ್ಬರನ್ನೊಬ್ಬರು ಪುರಸ್ಕರಿಸುವುದಕ್ಕೆ ಬದಲು ತಿರಸ್ಕರಿಸಹತ್ತಿದರು. ಬ್ರಿಟಿಷ್ ಪ್ರಭುಗಳ ಆಳಿಕೆಯಲ್ಲಿ ಭರತಖಂಡವು ತನ್ನ ತಲೆಯನ್ನೆತ್ತಲು ಅವಕಾಶವಿರುತ್ತದೆಂದು ನಾನು ಪೂರ್ಣವಾಗಿ ನಂಬಿರುತ್ತೇನೆ ಭಾರತೀಯರು ತತ್ರಾಪಿ ಮದ್ರಾಸಿನವರು ಬಹು ಬಲಹೀನರಾಗಿದ್ದಾರೆ. ಸೈನ್ಯ ಶಾಖೆಯಲ್ಲಿ ಒಬ್ಬ ನಾಯಡು ಆದರೂ ಉದ್ಯೋಗದಲ್ಲಿರುವುದನ್ನು ಕಾಣೆನು. ಅಲ್ಲದೆ ಇವರು ಸಶಕ್ತರಲ್ಲವಾದುದರಿಂದ ಬ್ರಿಟಿಷರು ಇವರನ್ನು ಸೈನ್ಯಕ್ಕೆ ಸೇರಿಸುವುದಿಲ್ಲವು. ಈಸ್ಟ್ ಇಂಡಿಯಾ ಕಂಪೆನಿಯವರು ಈ ಮದ್ರಾಸನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಈ ನಾಯುಡು ಜನರು ವಿಶೇಷವಾಗಿ ಸಾಹ್ಯಮಾಡಿದ್ದರು. ಆದುಕಾರಣ ಮದ್ರಾಸಿನವರು ತಮ್ಮ ಕಾಯಶಕ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳತಕ್ಕದು ಮಹತ್ವದ ವಿಷಯವಾಗಿದೆ. ಭಾರತೀಯರಲ್ಲಿ ಸಾಧಾರಣ ಜನರು ವಿದ್ಯಾವಂತರಾಗಬೇಕಾದುದು ಅತ್ಯಂತಾವಶ್ಯಕವು. ಬಹು ಜನರು ತಮ್ಮ ಕರ್ತವ್ಯವೇನೆಂಬುದನ್ನು ಅರಿತವರಾಗಿಲ್ಲವು. ಮತ್ತೂ ಅನೇಕರು ದಾರಿದ್ರ್ಯ ಪೀಡಿತರಾಗಿದ್ದಾರೆ ಆದುಕಾರಣ ಈ ವಿದ್ಯಾಭಿವೃದ್ಧಿಯ ಕಾರ್ಯಕ್ಕಾಗಿ ಧನವನ್ನು ಸಾಹ್ಯಮಾಡಬೇಕೆಂದು ಸಂಕಲ್ಪಿಸಿ, ಹೋದಕಡೆಯಲ್ಲೆಲ್ಲಾ ಕೆಲ ಆಟಗಳನ್ನಾಡಿ ಅಮೆರಿಕಾದಲ್ಲಿ ದಿನಕ್ಕೆ ಒಂದಕ್ಕೆ ೧೫೦೦ ರೂ. ಗಳನ್ನು ತೆಗೆದುಕೊಂಡು ಆಟವನ್ನಾಡಲೊಪ್ಪಿ ಒಂದು ವಸ್ತುಪ್ರದರ್ಶನಾಲಯದಲ್ಲಿ ಆಡುತ್ತಿರುವಾಗ್ಗೆ ಒಬ್ಬ ಮನುಷ್ಯನು ಹೊಟ್ಟೆಕಿಚ್ಚಿನಿಂದ ನನ್ನ ವ್ಯಾಯಾಮಶಾಲೆಯನ್ನು ಮುರಿಯುವಂತೆ ಮಾಡಿದನು. ಅದರಿಂದ ನನಗೆ ೧ ಲಕ್ಷದ ೩೫ ಸಾವಿರ ರೂ. ಗಳ ನಷ್ಟವಾಯಿತು. ಮಲೆಯ ಸ್ಟೇಟಿನಲ್ಲಿ ನನ್ನ ಚಮತ್ಕೃತಿಯನ್ನು ಪ್ರದರ್ಶಿಸುತ್ತಿರುವಾಗ್ಗೆ ಬಹು ಒಳ್ಳೆಯ ಮಿತ್ರನಾಗಿ ನಟಿಸಿದವನೊಬ್ಬನು ನನಗೆ ವಿಷಪ್ರಯೋಗವನ್ನು ಮಾಡಿದ್ದನು, ಆದರೆ ಆ ವಿಷದಿಂದ ನನಗೇನೂ ಕೇಡಾಗದಿದ್ದರೂ, ನನ್ನ ಆಸ್ಟ್ರೇಲಿಯಾ ದೇಶದ ಬಹು ಬೆಲೆಯ ಒಂದು ಕುದುರೆಯು ಸತ್ತುಹೋಯಿತು. ಆ ಮಿತ್ರನು ಅಷ್ಟಕ್ಕೆ ತೃಪ್ತನಾಗದೆ ನನ್ನನ್ನು ಕೊಲ್ಲಬೇಕೆಂದು ನಿರ್ಧರಿಸಿ ಎರಡನೆಯ ವೇಳೆ ನನ್ನ ಅಡಿಗೆಯವನ ಮೂಲಕ ವಿಷಪ್ರಯೋಗ ಮಾಡಿಸಿದನು. ವಿಷವು ಈ ವೇಳೆ ನನ್ನ ದೇಹದಲ್ಲಿ ವ್ಯಾಪಿಸಿ ಪ್ರಾಣಾಪಾಯವನ್ನುಂಟುಮಾಡದಿದ್ದರೂ ೪ ತಿಂಗಳ ವರೆಗೆ ಯಾವುದೊಂದು ಕಾರ್ಯವನ್ನು ಮಾಡಲಿಕ್ಕಿಲ್ಲದಂತೆ ನಿಶ್ಶಕ್ತನನ್ನಾಗಿ ಮಾಡಿಬಿಟ್ಟಿದ್ದಿತು. ಇದರಿಂದ ನಾನು ಪ್ರಪಂಚದಲ್ಲೆಲ್ಲಾ ಸಂಚರಿಸಿಕೊಂಡು ಬರಲಿಕ್ಕಾಯಿತು. ಈಗ ನಾನು ನೆಟ್ಟಗಿದ್ದೇನೆ ನಾನು ಬ್ರಹ್ಮಚಾರಿಯಾಗಿರುವುದರಿಂದ ಭಾರತ ಮಾತೆಯ ಸೇವೆಯನ್ನು ಮಾಡಬೇಕೆಂಬ ಅಭಿಲಾಷೆಯು ನನಗಿದೆ. ಈಗ ಭರತಖಂಡದಲ್ಲಿ ಸಮಸ್ತ ಜನರನ್ನೂ ವಿದ್ಯಾವಂತರನ್ನಾಗಿ ಮಾಡಬೇಕಾಗಿರುವುದು ಅತ್ಯಾವಶ್ಯಕವಾಗಿದೆ. ಪ್ರಪಂಚದಲ್ಲಿ ವಿದ್ಯಾದಾನಕ್ಕಿಂತಲೂ ಅತಿಶಯವಾದ ದಾನವು ಬೇರೊಂದಿಲ್ಲವು. ಆದುಕಾರಣ ಬಾಲವಿದ್ಯಾ ಪ್ರಸರಣ ಕಾರ್ಯಕ್ಕಾಗಿ ೧೦ ಲಕ್ಷ ರೂ. ಗಳನ್ನು ಸಾಹ್ಯಮಾಡಬೇಕೆಂದು ನಾನು ಸಂಕಲ್ಪಿಸಿರುತ್ತೇನೆ. ಇದರ ವಿನಾ ಬೇರೆಯಾಶೆಯು ನನಗಿಲ್ಲವು. ಪ್ರಕೃತಕಾಲದಲ್ಲಿ ಭರತಖಂಡವು ಕ್ಷೀಣಗತಿಯಲ್ಲಿದೆ. ಭಾರತೀಯರು ಒಂದು ಜನಾಂಗವಾಗಿಲ್ಲವಾದುದರಿಂದ ಇವರ ಅಭಿಪ್ರಾಯವು ಗಣನೆಗೆ ತರಲ್ಪಟ್ಟಿಲ್ಲವು. ಭರತಖಂಡಕ್ಕೆ ಸಾಹ್ಯವಿಲ್ಲದಿರುವುದರಿಂದ ಇದು ಅಭಿವೃದ್ಧಿಗೆ ಬರುವುದು ಅನುಮಾನವಾಗಿದೆ ಮತ್ತೂ ಇದಕ್ಕೆ ರೂಪು ಇಲ್ಲದಿರುವುದರಿಂದ ನಾಚಿಗೆಯಿಲ್ಲವಾಗಿದೆ. ಯುವಕರು ಯಾವುದಾದರೂ ಒಂದು ಗೊತ್ತಾದ ವಿಚಾರದಲ್ಲಿ ಸ್ಥಿರಮನಸ್ಕರಿಸುವುದನ್ನು ಅಭ್ಯಾಸಮಾಡಲು, ಅಂಗಸಾಧನೆಯನ್ನು ಮಾಡಲು, ತಾವು ಮಾಡತಕ್ಕ ಗುಣಾವಗುಣವನ್ನು ತಿಳಿಯಲು ಮತ್ತೂ ಪಾರಮಾರ್ಥಿಕ ವಿಚಾರಪರರಾಗಲು ಸದಭಿಪ್ರಾಯವುಳ್ಳವರಾಗಿರಬೇಕು. ಎಂದು ಉಪನ್ಯಾಸವನ್ನು ಮಾಡಿ ಆಂಧ್ರಕ್ಷತ್ರಿಯ ಸಂಘಕ್ಕೆ ೫೦೦ ರೂ. ಗಳನ್ನು ಕೊಡುವುದಾಗಿ ಹೇಳಿದುದಲ್ಲದೆ ತಾವು ಹೋದ ಕಡೆಯಲ್ಲೆಲ್ಲಾ ನಾಯುಡುಜನರ ವಿದ್ಯಾಭಿವೃದ್ಧಿಯ ಪ್ರೋತ್ಸಾಹಕ್ಕಾಗಿ ಕೆಲ ಪ್ರದರ್ಶನಗಳಿಂದ ಬರುವ ಉತ್ಪತ್ತಿಯನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದರು.

ತುರ್ಕಿ-ಇಟಲಿಗಳ ಯುದ್ಧವು.

ಮಾರ್ಚಿ ತಾ॥ ೧.— ಫೆಬ್ರವರಿ ತಾ॥ ೨೪ ರಲ್ಲಿ ತುರ್ಕಿ ಬರ್ ಎಂಬಲ್ಲಾದ ಕದನದಲ್ಲಿ ನಿರತರಾಗಿದ್ದ ೫೦೦೦ ತುರ್ಕಿಯವರು ಮತ್ತೂ ಅರಬ್ಬಿಯವರುಗಳಲ್ಲಿ ೫೦೦ ಜನರು ಹತರಾದರೆಂದೂ, ಇಟಲಿಯವರ ಕಡೆ ೧೪ ಜನರು ಸತ್ತು, ೧೦೦ ಜನರು ಗಾಯಪಟ್ಟರೆಂದೂ ಸರ್ಕಾರಿಯ ವರದಿಯಿಂದ ಗೊತ್ತಾಗುತ್ತದೆ.

ಸೌಗಂಧಿಕಾಪರಿಣಯ.

[ಕಳೆದ ವಾರದ ಶೇಷ]

ಒಂದಾನೊಂದು ದಿನ ಮಂದಿರವಂ ನೋಡಬೇಕೆಂದು ಆನಂದದಿಂದ ಸತಿಪತಿಗಳಿರ್ವರೂ ತೆರಳಿ ಕೆಲವು ಹಜಾರಂಗಳಂ ಕೆಲವು ಚಂದ್ರಶಾಲೆಗಳಂ, ಕೆಲವು ಮಂಟಪಂಗಳಂ ಕೂಡ ನೋಡುತ, ಹಾಗೆಯೇ ಮೆಲ್ಲನೆ ಬರುತ ಬೇಗಮುದ್ರೆಗೆಯ್ದು ಮಾಡಿರುವ ಸಾಲು ಮನೆಗಳಂ ಕಂಡು ಇದೇನೆಂದು ಕೇಳಿದ ರಾಜೇಂದ್ರನಂ ಕುರಿತು ನಾರೀ ಶಿರೋಮಣಿಯಾದ ಕುಸುಮಲತೆಯು, ಎಲೈ ಪ್ರಾಣನಾಥನೇ ಕೇಳು!, ಈ ಗೃಹಂಗಳೊಳ್ ನಾನಾವಿಧ್ವಾಯುಧಂತರಂಗಳ ಪದಾರ್ಥಂಗಳಂ, ನವರತ್ನ ರಾಶಿಗಳು ಮೊದಲಾದುವಂ ಶೇಖರಿಸಿ ಮಡಗಿರುವನು. ಅದಂತಿರಲಿ, ಈಗ ನಿನಗೆ ಬೇಕಾದ ಅಶ್ವರತ್ನವು ಅದೋ ಆ ಮನೆಯೊಳ್ ಕಟ್ಟಿರುವುದು ಎಂದು ನುಡಿಯೆ, ಆ ಮನೆಯ ಮುಂಭಾಗದೊಳ್ ರಾಜೇಂದ್ರನಾದ ಸುಗಂಧರಾಜನೊಡನೆ ವಿಲಾಸದಿಂ ಬಂದು ನಿಂತು ವಿಸ್ಮಯದಿಂ ಬಿಕುತ ಎಲೈ ಲಾವಣ್ಯವತಿಯೇ! ಈ ದುಷ್ಟರಾಕ್ಷಸನು ಒಂದೊಂದು ಮಾಡಿದನೆ? ನಮ್ಮಂ ತಂದಂತೆ ನಮ್ಮ ದೇಶದಿಂದ ಈ ಅಶ್ವವಂ ಕೂಡ ಅಪಹರಿಸಿ ತಂದನೆಂದು ನುಡಿಯಲು, ಸುಗಂಧರಾಜೇಂದ್ರನು ಆ ಮಾತಂ ಕೇಳಿ ಇಂತಿರ್ಪ ಅಶ್ವವು ನಿಮ್ಮ ದೇಶಕ್ಕೆ ಯಾವ ಪರಿಯಿಂದ ಬಂದಿತೆಂದು ಹೇಳಲು ಚಂದ್ರಮುಖಿಯು ಎಲೈ ಲಾವಣ್ಯನಿಧಿಯೇ! ಚಿತ್ತವಿಟ್ಟು ಲಾಲಿಸಬೇಕು ನಮ್ಮ ತಂದೆಯಾದ ಕುಸುಮಧ್ವಜರಾಯನು ಒಂದುದಿನ ವಿನೋದಾರ್ಥವಾಗಿ ಬೇಟೆಯನ್ನಾಡುವುದಕ್ಕೆ ಪೋಗಿ, ಅಲ್ಲಿದ್ದ ಸಿಂಹಶಾರ್ದೂಲಗಳಂ ಸಂಹರಿಸಿ, ಬಹುದೂರ ಸಂಚಾರವಂ ಮಾಡಿ ಸಾಯಂಕಾಲವಾಗಲು, ಒಬ್ಬಾನೊಬ್ಬ ಜಾಬಾಲಿ ಋಷಿಯಿರುವ ಆಶ್ರಮವಂ ಕಂಡು ಅಲ್ಲಿಗೆ ಪೋಗಲು, ಆ ಋಷಿಯು ಅರಸಾದ ನಮ್ಮ ತಂದೆಗೆ ಮಧುಪರ್ಕಾದಿಗಳಂ ಕೊಟ್ಟು ಸಂತೈಸಿ, ಕೆಲವಂ ಕೇಳುತ್ತಿರುವ ಕಾಲದೊಳ್, ಆ ಆಶ್ರಮದಲ್ಲಿ ಸರ್ವಲಕ್ಷಣ ಸಂಪನ್ನವಾದ ಅನೇಕಾಭರಣಂಗಳಿಂದ ಅಲಂಕೃತವಾದ ವಿಜಾತೀಯವಾಗಿ ರೆಕ್ಕೆಗಳಂ ಕೂಡಿರುವ ಒಂದು ಕುದುರೆಯು ಸಂಚರಿಸುತ್ತಿರಲು, ನಮ್ಮ ತಂದೆಯು ಅದಂ ಕಂಡು ಆ ಋಷಿನೊಡನೆ ಎಲೈ ಮಹಾತ್ಮನೇ! ಈ ಲೋಕಾತಿಶಯವಾದ ಅಶ್ವರತ್ನವು ಎಲ್ಲಿಯದು, ಏನು ಕಾರಣದಿಂದ ಇಲ್ಲಿಗೆ ಬಂದಿರುವುದು, ಇದರಿಂದ ತಮಗೆ ಆಗುವ ಕಾರ್ಯವೇನು? ಎಂದು ಬಿನ್ನವಿಸಲು, ಆ ಜಾಬಾಲಿಮುನಿಯು ಆ ಮಾತಂಕೇಳಿ ರಾಯನು ಮಹಾಧರ್ಮಪರನೆಂದರಿತು ದಯೆಯಿಂದ ಎಲೈ ಅರಸೇ! ಕೇಳು, ಈ ಅಶ್ವವು ಅಮಾನುಷವಾದುದು; ಈಗ ಈ ಭೂಲೋಕದೊಳ್ ಬಂದು ವಿಹಾರವಂ ಮಾಡುತಲಿದೆ; ಇದರ ವೃತ್ತಾಂತವು ದೇವರಹಸ್ಯವಾದಕಾರಣ ವಿಸ್ತರವಾಗಿ ನಿರೂಪಿಸಲೊಡದು. ಈ ಕುದುರೆಯೊಳ್ ನಿನಗೆ ಆಸಕ್ತಿಯಿದ್ದರೆ ಇದಂ ನಿನ್ನ ಮನೆಯೊಳ್ ಇರಿಸಿ ಪೂಜಿಸಿಕೊಂಡಿದ್ದಲ್ಲಿ ಕೆಲವು ಕಾಲ ಕಳೆದ ಬಳಿಕ ಇದರ ದೆಸೆಯಿಂದ ನಿನಗೆ ಶುಭವುಂಟಾಗುವುದೆಂದು ಆಶೀರ್ವಾದವಂ ಮಾಡಿ ಅಶ್ವರತ್ನವಂ ದಯಪಾಲಿಸಲು, ರಾಯನು ಆ ಋಷಿಗೆ ದಂಡಪ್ರಣಾಮವಂ ಮಾಡಿ ಈ ಉತ್ತಮಾಶ್ವವಂಕೊಂಡು ತನ್ನ ಅರಮನೆಗೆ ಬಂದು ನಿತ್ಯದಲ್ಲೂ ಪೂಜಿಸುತ ಇದಕ್ಕೆ ವಿಜಯರತ್ನವೆಂದು ಹೆಸರನ್ನಿಟ್ಟು ಅತಿ ಸಂತೋಷದಿಂದಿರಲು, ಈ ಕ್ರೂರರಾಕ್ಷಸನು ಈ ಅಶ್ವದ ವೃತ್ತಾಂತವಂ ಎಲ್ಲಿಯೋ ಕೇಳಿ ಅದಂ ಅಪಹರಿಸಬೇಕೆಂದು ನಿಶ್ಚಯಿಸಿ ಒಬ್ಬರಿಗೂ ತಿಳಿಯದಂತೆ ಮಾಯಾವಿದ್ಯೆಯಿಂದ ಅಲ್ಲಲ್ಲಿ ತಿರುಗುತ್ತಿದ್ದು, ಒಂದಾನೊಂದು ಸಮಯವನ್ನುನೋಡಿ ಈ ಅಶ್ವವಂ ಅಪಹರಿಸಿಕೊಂಡು ಹೋಗುವ ಸಮಯದೊಳ್ ಅನಾಯಾಸವಾಗಿ ಸಿಕ್ಕಿರುವ ಉತ್ತಮ ಪದಾರ್ಥವಂ ಏತಕ್ಕೆ ಬಿಡಬೇಕೆಂದು ಬಿಸಿಲು ಮಚ್ಚಿನೊಳ್ ವಿಲಾಸದಿಂ ಕುರುಳುಗಳನ್ನಾರಿಸಿಕೊಂಡು ನಿಂತಿರ್ದ ನಮ್ಮಂ ಇಲ್ಲಿಗೆ ಅಪಹರಿಸಿಕೊಂಡು ಬಂದನು. ಆದರೆ ಒಂದು ಉಪಕಾರವಂ ಮಾಡಿದನು ಎನ್ನಬಹುದು. ನನಗೆ ಪರಮಾಪ್ತರಾದ ಕೆಲವು ಕೆಳದಿಯರಂ ನನ್ನ ಸಂಗಡಲೇ ಅಪಹರಿಸಿಕೊಂಡು ಬಂದುದರಿಂದ ಇಂದಿನವರೆಗೂ ಜೀವಿಸಿಕೊಂಡು ಇರುವೆನು. ಈಗ ಮಹಾನುಭಾವನಾದ ಆ ಜಾಬಾಲಿ ಮಹಾಮುನಿಯ ವಾಕ್ಯವು ಸಫಲವಾಯಿತೆಂದು ಪೇಳಿ ಈ ಅಶ್ವರತ್ನವು ನಿಮಗೆ ಪಟ್ಟದ ಕುದುರೆಯಾಗುವುದಕ್ಕೆ ಯೋಗ್ಯವಾಗಿಹುದೆಂದು ನುಡಿಯಲು, ಸುಗಂಧಮಹಾರಾಜೇಂದ್ರನು ಆ ಕುಸುಮಲತೆಯ ಮಾತಂಕೇಳಿ ಹರ್ಷಿತನಾಗಿ ರತಿಯಂತಿರುವ ಸತಿಯಂ ಬಿಗಿದಪ್ಪಿ ಅಡಿಗಡಿಗೆ ಮುದ್ದಿಸುತ, ಕೆಲವು ಹೊತ್ತು ಶೃಂಗಾರವನಂಗಳೊಳ್, ಕೆಲವು ಹೊತ್ತು ಸರೋವರಂಗಳೊಳ್, ಕೆಲವು ಹೊತ್ತು ಚಂದ್ರಶಾಲಾದಿ ಉತ್ತಮ ಮಂದಿರಂಗಳೊಳ್ ಉಪರತಿ ಸಮರತಿಗಳಿಂದಲೂ, ಚೌಶೀತಿಬಂಧ ವಿಶೇಷಂಗಳಿಂದಲೂ ಬೆರೆದು ಮದನ ವೈಭವದಿಂದ ಮೈಮರೆತು ಒಂದೊಂದು ದಿನವಂ ಒಂದೊಂದು ಕ್ಷಣದಂತೆ ಕಳೆಯುತ ಸುಖದಿಂದಿರುತಿರ್ದನೆಂಬಲ್ಲಿಗೆ, ಕೆಂಡವಿಳೆಯಖಂಡಪರಶು ಪುಂಡರೀಕ ಭವಾಖಂಡಲಪ್ರಮುಖ ನಿಖಿಲಸುರವರ ಪರಿಭವ ಪರಿಣತ ಪ್ರಚಂಡಬಲ ಚಂಡಮುಂಡ ಖಂಡನ ನಿಪುಣ ಕೋದಂಡಕಾಂಡ ಮಂಡಲಾಗ್ರಧರ ಭುಜಾದಂಡ ಪರಿಮಂಡಿತ ಚಾಮುಂಡಿಕಾ ಕಟಾಕ್ಷವೀಕ್ಷಣ ಪ್ರವರ್ಧಮಾನ ಭೂಮಂಡಲಾಧಿಪತ್ಯ ಸನ್ನಾಹತಾಪ ಸಕಲ ಭಾಷಾಲೋಲ ಸಾಮ್ರಾಜ್ಯ ಸರ್ವಾಂಗ ಸುಚತುರ್ವಿದ ಸರಸ ಕವಿತಾನಿರ್ಮಾಣ ನಿರ್ಮಾಣಧೌರೇಯ ಘಟಿಕಾಶತಗ್ರಂಥ ಬಿರುದಿನ ಪ್ರಬಂಧ ನಿಬಂಧನ ಧುರಂಧರ ತ್ರಿಭುವನ ಪವಿತ್ರಾತ್ರೇಯ ಗೋತ್ರಪ್ರವರ್ತಕಾಯನ ಸೂತ್ರ ಸುಚರಿತ್ರ ಚಾಮರಾಜ ಮಹಾಪುತ್ರ ನರಪತಿಬಿರುದ ಮಹೀಶೂರಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರಿಂದ ರಸಿಕ ಜನಾನಂದಕರವಾಗಿ ವಿರಚಿತಮಾದ ಸೌಗಂಧಿಕಾಪರಿಣಯವೆಂಬ ಈ ನವೀನ ಕೃತಿಯೊಳ್ ಸುಗಂಧರಾಜೇಂದ್ರನು ಅಶ್ವರತ್ನವಂ ಸಾಧಿಸಿರುವೆನೆಂದು ತೆರಳಿ ಇಳಾಪ್ರಖಂಡದೊಳ್ ವಜ್ರಪುರಿಯಂ ಪೊಕ್ಕು ಕುಸುಮಲತೆಯಿಂದ ಅಶ್ವದ ವೃತ್ತಾಂತವೆಲ್ಲವಂ ತಿಳಿದು ಅವಳೊಡಗೂಡಿ ಅಲ್ಲಿಯೇ ಸುಖದಿಂದಿರ್ದನೆಂಬ ಹದಿನೇಳನೆಯ ಆಶ್ವಾಸ ನಿರೂಪಣಕ್ಕೆ ಮಂಗಳಮಹಾ ॥

ಹದಿನೆಂಟನೆಯ ಆಶ್ವಾಸ ಪ್ರಾರಂಭ.

ಅನಂತರದಲ್ಲಿ ಕೆಲವು ದಿನಗಳು ಕಳೆದಬಳಿಕ ಜಂಬುಮಾರುತನೆಂಬ ರಾಕ್ಷಸನು ಘೋರಾರಣ್ಯದೊಳ್ ಅನೇಕಂಗಳಿಂದ ಸಿಂಹ, ಶಾರ್ದೂಲ, ಶರಭ, ಗಜ, ವರಾಹ, ಭಲ್ಲೂಕಗಳೆ ಮೊದಲಾದ ಮೃಗಂಗಳಂ, ಜಲಜಂತುಗಳಿಂದ ಕೂರ್ಮ ಮಕರಮತ್ಸ್ಯ ತಿಮಿಂಗಿಲಂಗಳಂ, ಅನೇಕ ಮನುಷ್ಯ ಶರೀರಂಗಳಂ ಕೂಡ ಸಂಗ್ರಹಿಸಿಕೊಂಡು ತನ್ನ ಆಲಯವಾದ ವಜ್ರಪುರಿಯಂ ಕುರಿತು ವೇಗದಿಂ ಬರುತ್ತಿರಲು, ಛಾಯಾಗುಪ್ತನು ಅವನಂ ಕಂಡು ವೇಗಬಂದು ಸುಮತಿಯ ಮುಖದಿಂದ ಸಖೀಜನಕ್ಕೆ ತಿಳುಹಿಸಿ ರಾಜೇಂದ್ರರಿಗೆ ಬಿನ್ನವಿಸುವಂತೆ ಮಾಡಲು, ಸುಗಂಧರಾಜೇಂದ್ರನು ಅದಂಕೇಳಿ ರಾಕ್ಷಸನು ಬರುವಪರಿಯಂ ನೋಡುವಾ ಎಂದು ಮಂದಿರದ ಉಪರಿ ಭಾಗವನ್ನೇರಿ ಕುಸುಮಲತೆಯೊಡಗೂಡಿ ನೋಡುತ ಭಯಂಕರವಾಗಿ ದೂರದೊಳ್ ಬರುತ್ತಿರುವ ರಾಕ್ಷಸಸೇನೆಯಂ ಕಂಡು ಬಿರುಗಾಳಿ ತಗಲಿ ಅಲ್ಲಾಡುವ ಲತೆಯಂತೆ ನಡುಗುತಲಿರುವ ಕುಸುಮಲತೆಯಂ ನೋಡಿ ಎಲೈ ಬಾಲೆಯೆ! ಈಗ ಕಕ್ಕಸವಾಗಿ ಬರುವ ಈ ರಕ್ಕಸನಂ ಬಲದಿಂದ ಬೊಗ್ಗಿಸಿ ದಕ್ಕಿಸಿಕೊಳ್ಳುವೆನು, ನೀನು ತತ್ತರಂಗೊಳ್ಳಬೇಡವೆಂದು ಚಿತ್ತರದ ಪ್ರತಿಮೆಯಂತಿರುವ ಚಿತ್ತರಿಯಂ ಅಕ್ಕರೆಯಿಂದ ಸಕ್ಕರೆಯಂತೆ ಸವಿಯಾದ ನುಡಿಗಳಂ ಪೇಳಿ ಧೈರ್ಯಗೊಳಿಸುತೆ ನೋಡುತಲಿರುವ ಸಮಯದೊಳ್, (ಸಶೇಷ)

ಮೈಸೂರು ದೇಶದಲ್ಲಿ ಹಸುರು ಗೊಬ್ಬರವನ್ನು ಹಾಕುವಿಕೆ.

ಜಮೀನಿನ ಸುತ್ತಮುತ್ತಲಿರುವ ಮರಗಳ ಮತ್ತು ಸಮೀಪದಲ್ಲಿರುವ ಕಾಡುಗಳಲ್ಲಿರುವ ಮರಗಳ ಸೊಪ್ಪನ್ನು ಕೂಡಿಹಾಕಿ ಅವನ್ನು ಹಸರು ಗೊಬ್ಬರವಾಗಿ ಉಪಯೋಗಿಸುವುದು ಮತ್ತು ಜಮೀನಿನಲ್ಲಿ ದ್ವಿದಳಧಾನ್ಯಗಳನ್ನು ಬೆಳೆದು ಅವುಗಳ ಪೈರನ್ನು ಉತ್ತುಬಿಡುವುದು ಈ ರೀತಿಯಾಗಿ ಎರಡು ವಿಧದಲ್ಲಿ ಹಸರು ಗೊಬ್ಬರವನ್ನು ಉಪಯೋಗಿಸುವರು ಮೊದಲನೆಯ ಕ್ರಮವು ಕಳೆದ ಸಂಚಿಕೆಯಲ್ಲಿ ವಿವರಿಸಲ್ಪಟ್ಟಿದೆ. ಎರಡನೆಯ ಕ್ರಮವು ಮುಖ್ಯವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ರೂಢಿಯಲ್ಲಿರುವಂತೆ ಕಾಣುತ್ತದೆ. ಸಾಧಾರಣವಾಗಿ ಹುರುಳಿ, ಸಣಬು, ಉದ್ದು, ಹೆಸರು, ಮತ್ತು ಹಲಸಂದೆ ಇವುಗಳನ್ನು ಬೆಳೆಯುವುದು ವಾಡಿಕೆಯಲ್ಲಿದೆ. ಕೆಲವರು ಪ್ರತಿವರುಷವೂ ದ್ವಿದಳ ಧಾನ್ಯವನ್ನೇ ಬೆಳೆದು ಪೈರನ್ನು ಉತ್ತುಬಿಡುವರು; ಕೆಲವರು ಒಂದು ವರುಷ ದ್ವಿದಳ ಧಾನ್ಯದ ಪೈರನ್ನು ಇಟ್ಟು ಮುಂದಣ ವರುಷ ತರಗಿನ ಗೊಬ್ಬರವನ್ನು ಹಾಕುವರು; ಮತ್ತೆ ಕೆಲವರು, ಮುಖ್ಯವಾಗಿ ಚನ್ನಪಟ್ಟಣದ ತಾಲ್ಲೂಕಿನ ಕೆಲವು ಗ್ರಾಮಗಳ ರೈತರು ಮೂರು, ಐದು ಅಥವಾ ಹತ್ತು ವರುಷಗಳಿಗೊಂದಾವೃತ್ತಿ ದ್ವಿದಳ ಧಾನ್ಯಗಳನ್ನು ಬೆಳೆದು ಉಳಿದ ವರುಷಗಳಲ್ಲಿ ದನದ ಮತ್ತು ತರಗಿನ ಗೊಬ್ಬರವನ್ನು ಉಪಯೋಗಿಸುತ್ತಾರೆ.

ಈ ದ್ವಿದಳ ಧಾನ್ಯಗಳ ಪೈಕಿ ಯಾವುದನ್ನೂ ಒಂದೊಂದನ್ನೇ ಮಾತ್ರ ಬೆಳೆಯುವುದಿಲ್ಲ. ಹಸರು ಗೊಬ್ಬರಕ್ಕಾಗಿ ಉಪಯೋಗಿಸಬೇಕೆಂಬ ಉದ್ದೇಶದಿಂದ ಬೆಳೆಯತಕ್ಕವರು ಹುರುಳಿಯನ್ನಾಗಲಿ ಅಥವಾ ಹುರುಳಿ ಮತ್ತು ಸಣಬನ್ನೂ ಜತೆಯಲ್ಲಾಗಲಿ ಬೆಳೆಯುತ್ತಾರೆ. ದ್ವಿದಳ ಧಾನ್ಯದ ಫಸಲನ್ನು ಅಪೇಕ್ಷಿಸುವವರು ಹೆಸರು, ಉದ್ದು ಮತ್ತು ಅಲಸಂದೆಯನ್ನು ಬೆಳೆಯುವರು ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಾತ್ರ ಸಣಬು ಒಂದನ್ನೇ ಬೇರೆಯಾಗಿ ಬೆಳೆದು ಗೊಬ್ಬರವಾಗಿ ಉತ್ತುಬಿಡುವರು. ಉಳಿದ ಪ್ರದೇಶಗಳಲ್ಲಿ ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರು ಕೊಡನೆ ಜೋಳವನ್ನು ಬೆಳೆಯುತ್ತಾರೆ. ಇದು ಆರಂಭಕಾರ್ಯಕ್ಕೆ ಸಹಾಯಕಾರಿಗಳಾಗಿರುವ ದನಕರುಗಳಿಗೆ ಬಹಳ ರಸವತ್ತಾದ ಮೇವಾಗಿದೆ. ಕೆಲವರು ಹಸರು ಗೊಬ್ಬರದ ಪೈರುಗಳೊಡನೆ ಎಳ್ಳನ್ನು ಬೆಳೆಯುತ್ತಾರೆ; ಆದರೆ ಇದನ್ನು ಗೊಬ್ಬರಕ್ಕಾಗಿ ಉಪಯೋಗಿಸುವುದು ಬಹಳ ಅಪರೂಪ.

ದ್ವಿದಳ ಧಾನ್ಯಗಳು ಸಾಧಾರಣವಾಗಿ ಮಳೆಯ ನೀರಿನ ಆಸರೆಯಿಂದ ಬೆಳೆಯಲ್ಪಡುವುವು ಮುಂಗಾರು ಮಳೆಯು ಪ್ರಾರಂಭವಾದ ಕೂಡಲೆ ಇವುಗಳು ಬಿತ್ತನೆಮಾಡಲ್ಪಡುವುವು. ಬಿತ್ತನೆಯಾದ ಮೂರು ತಿಂಗಳ ತರುವಾಯ ಉದ್ದು, ಹೆಸರು ಅಥವಾ ಅಲಸಂದೆಯನ್ನು ಬಿತ್ತಿದ್ದವರೆಲ್ಲರೂ ಸಿಕ್ಕುವಷ್ಟು ಕಾಯನ್ನೆಲ್ಲಾ ಕಿತ್ತು, ಎರಡು ವಾರಗಳವರೆಗೆ ಉಳುವ ಎತ್ತುಗಳು ಮತ್ತು ಬೀಜದ ಹೋರಿಗಳನ್ನು ಬಿಟ್ಟು ಮೇಯಿಸಿ ನಂತರ ಉಳಿದಿರತಕ್ಕ ಪೈರನ್ನು ಉತ್ತುಬಿಡುವರು. ಈ ರೀತಿ ಉಳಲ್ಪಟ್ಟ ಪೈರು ಕೆಸರು ಗದ್ದೆಯಲ್ಲಿ ಸುಮಾರು ಎರಡು ವಾರಗಳ ವರೆಗೆ ಕೊಳೆತ ತರುವಾಯ ಭತ್ತದ ಪೈರನ್ನು ನಾಟಿಹಾಕುತ್ತಾರೆ.

ಹುರುಳಿ ಮತ್ತು ಸಣಬನ್ನು ಮಾತ್ರವೇ ಬೆಳೆಯತಕ್ಕವರು ಅರ್ಧ ಅಥವಾ ಕಾಲುಭಾಗದ ಪೈರನ್ನು ಗೊಬ್ಬರಕ್ಕಾಗಿ ಉಪಯೋಗಿಸುವರು ಸಣಬು ಒಂದನ್ನೇ ಬೆಳೆಯುವವರು ಮುಕ್ಕಾಲು ಬೆಳೆಯನ್ನು ಉಪಯೋಗಿಸುತ್ತಾರೆ. ದನಗಳನ್ನು ಮೇಯಿಸುವುದಕ್ಕೆ ಬಿಟ್ಟಾಗ ಅವು ಹಸರು ಹುಲ್ಲು ಮತ್ತು ಸಣಬಿನ ಗಿಡಗಳ ಕುಡಿಗಳನ್ನು ಮಾತ್ರ ತಿನ್ನುವುವು. ಹುರುಳಿಸೊಪ್ಪು ಅಷ್ಟು ರುಚಿಯಾಗಿರುವಂತೆ ತೋರುವುದಿಲ್ಲ. ಹೆಸರು, ಉದ್ದು ಮತ್ತು ಅಲಸಂದೆಯನ್ನು ಬೆಳೆಯತಕ್ಕವರು ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಎರಡು ವಾರಗಳವರೆಗೆ ದನಗಳನ್ನು ಬಿಟ್ಟು ಮೇಯಿಸಿ ಅನಂತರ ಉಳಿದುದನ್ನು ಮಾತ್ರ ಗೊಬ್ಬರಕ್ಕೆ ಬಿಡುವರು. ಹೀಗೆ ಮಾಡುವುದರಿಂದ ಪೈರಿನ ಕೂಳೆಗಳು ಮಾತ್ರ ಗೊಬ್ಬರಕ್ಕೆ ಸಿಕ್ಕುವುವೇ ಹೊರತು ಪೈರಿನ ಹಸರು ಭಾಗವು ಬೇರೆ ಸಿಕ್ಕಿದಂತಾಗುವುದಿಲ್ಲ. ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ಮನುಷ್ಯರ ಆಹಾರಕ್ಕೆ ಒದಗತಕ್ಕ ಹೆಸರು, ಕಡಲೆ, ಉದ್ದು ಮೊದಲಾದ ದ್ವಿದಳ ಧಾನ್ಯಗಳ ಪೈರನ್ನೇ ಇಟ್ಟು ತಪ್ಪದೆ ಕ್ರಮವಾಗಿ ಕಾಯಿಗಳನ್ನೆಲ್ಲಾ ಬಿಡಿಸಿಕೊಂಡು ಅನಂತರ ದನಗಳನ್ನು ಬಿಟ್ಟು ಮೇಯಿಸಿ ಉಳಿದಿರುವ ಕೂಳೆಯನ್ನು ಉತ್ತು ಭತ್ತವನ್ನು ನಾಟಿ ಹಾಕುವರು. ಅಂತೂ ಈ ಪ್ರಾಂತ್ಯ ಪೈರಿನ ಹಸರು ಪದಾರ್ಥವು ಜಮೀನಿಗೆ ಸ್ವಲ್ಪವಾದರೂ ಸೇರುವುದಿಲ್ಲ. ಮನುಷ್ಯರ ಆಹಾರಕ್ಕೆ ಒದಗದೆ ಇರುವಂತಹ ಹಸರು ಗೊಬ್ಬರದ ಪೈರು ಸಣಬು. ಈ ಪ್ರಾಂತ್ಯ ಇದನ್ನು ಬೆಳೆಯುವುದು ಬಹಳ ಅಪರೂಪ. ಹಾಗೆ ಬೆಳೆಯುವ ಒಬ್ಬಿಬ್ಬರು ಸಣಬಿನ ಪೈರನ್ನು ಕತ್ತರಿಸಿ ಕರೆಯುವ ಹಸುಗಳಿಗೆ ಜೋಳದ ಕಡ್ಡಿಯನ್ನು ತಿನ್ನಿಸುವಂತೆ ತಿನ್ನಿಸಿ ಬಿಡುವರು. ಮೇಲೆಕಂಡ ವಿಷಯಗಳನ್ನೆಲ್ಲಾ ಪರಿಶೀಲಿಸಿ ನೋಡಿದರೆ ಶ್ರೀರಂಗಪಟ್ಟಣದ ಪ್ರಾಂತ್ಯ ಹಸರು ಗೊಬ್ಬರಕ್ಕಾಗಿ ಯಾವ ಪೈರನ್ನೂ ಬೆಳೆಯುವುದಿಲ್ಲವೆಂದು ಹೇಳಬೇಕು.

ಪೈರಿಗೆ ಮುಖ್ಯಕಾರವಾದ ನೈಟ್ರೋಜನ್ (Nitrogen) ವಾಯು ಮತ್ತು ಸುಲಭವಾಗಿ ಕೊಳೆಯುತಕ್ಕ ಸಜೀವಪದಾರ್ಥಗಳನ್ನು ಹಸರು ಗೊಬ್ಬರವು ಜಮೀನಿಗೆ ಸೇರಿಸುತ್ತದೆ.

ಹಸರು ಗೊಬ್ಬರದ ಪೈರುಗಳಲ್ಲಿ ಹೂಬಿಟ್ಟಿರುವಾಗ್ಗೆ ಅವುಗಳನ್ನು ಜಮೀನಿನಲ್ಲಿ ಉಳುವುದಕ್ಕೆ ಸಕಾಲವಾಗಿದೆ. ಆ ಸಮಯದಲ್ಲಿ ಅವುಗಳನ್ನು ಉತ್ತರೆ, ಹಸರು ಗೊಬ್ಬರದ ಪೈರುಗಳು ಅದುವರೆವಿಗೆ ಕೂಡಿ ಹಾಕಿರುವ ಪದಾರ್ಥಗಳೆಲ್ಲಾ ಜಮೀನಿಗೆ ಸೇರುವುವು.

ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಪೈರುಗಳಲ್ಲಿ ಸಣಬು ಮತ್ತು ಹಲಸಂದೆಯ ಪೈರುಗಳು ಇತರ ಪೈರುಗಳಿಗಿಂತ ಹೆಚ್ಚಾಗಿ ಎಂದರೆ ಎಕರೆಗೆ ೩೦ ಮತ್ತು ೩೦ ಪೌಂಡುಗಳು ತೂಕ ನೈಟ್ರೋಜನ್ ವಾಯುವನ್ನು ಸೇರಿಸುತ್ತವೆ. ತಿರುಮಕೂಡ್ಲು ನರಸೀಪುರದ ಪ್ರಾಂತ್ಯ ಸಣಬನ್ನೇ ಬೆಳೆದು ಪೈರಿನಲ್ಲಿ ಹೂ ಕಚ್ಚುತ್ತಿರುವ ಸಮಯದಲ್ಲಿ ಉತ್ತುಬಿಡುವರು. ಈ ರೀತಿಯಲ್ಲಿ ಸಣಬನ್ನು ಮಾತ್ರ ಬೆಳೆದು ಭೂಮಿಗೆ ಗೊಬ್ಬರವನ್ನಾಗಿ ಹಾಕತಕ್ಕ ಪ್ರದೇಶಗಳಲ್ಲೆಲ್ಲಾ ಹಸರು ಗೊಬ್ಬರವನ್ನು ಹಾಕುವುದರಿಂದ ಹೊಂದಬಹುದಾದ ಪೂರ್ಣ ಪ್ರಯೋಜನವನ್ನು ಹೊಂದಬಹುದೆಂದು ಹೇಳಬೇಕು. ಸಣಬನ್ನು ಮಾತ್ರವಲ್ಲದೆ, ಮತ್ತಾವ ದ್ವಿದಳ ಧಾನ್ಯವನ್ನಾಗಲಿ ಅಥವಾ ಸಣಬಿನೊಡನೆ ಇತರ ಯಾವುದಾದರೊಂದು ದ್ವಿದಳ ಧಾನ್ಯವನ್ನಾಗಲಿ ಬೆಳೆಯುವವರು ಸಾಮಾನ್ಯವಾಗಿ ಸಿಕ್ಕಿದಷ್ಟು ಫಸಲನ್ನು ತೆಗೆದುಕೊಂಡು ಕೂಳೆಯನ್ನು ಮಾತ್ರ ಗೊಬ್ಬರಕ್ಕೆ ಬಿಡುತ್ತಾರೆ. ಪೈರಿನಲ್ಲಿ ಕಾಳಾಗುವವರೆವಿಗೂ ಬಿಟ್ಟಿದ್ದರೆ ಪೈರಿನಲ್ಲಿ ಕೂಡಿಡಲ್ಪಟ್ಟಿದ್ದ ನೈಟ್ರೋಜನ್ (Nitrogen) ವಾಯುವಿನ ಹೆಚ್ಚು ಭಾಗವು ಕಾಳಿನಲ್ಲಿ ಸೇರಿಹೋಗುವುದು. ಯಾವಯಾವ ಕಾಳಿನಲ್ಲಿ ನೈಟ್ರೋಜನ್ (Nitrogen) ವಾಯುವು ಶೇಕಡ ಎಷ್ಟೆಷ್ಟು ಭಾಗವಿರುವುದೆಂಬುದನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ.

ಧಾನ್ಯದ ಹೆಸರು.	ನೈಟ್ರೋಜನ್
ಉದ್ದು	೩.೪೯
ಹೆಸರು	೩.೧೦
ಹಲಸಂದೆ	೩.೧೧
ಅವರೆ	೩.೬೯
ಭತ್ತ	೧.೦೯

ಎಂದರೆ ಕಾಳನ್ನು ಬಿಡಿಸಿಕೊಂಡು ಕಡ್ಡಿಯನ್ನು ಮಾತ್ರ ಗೊಬರಕ್ಕಾಗಿ ಉಪಯೋಗಿಸಿದರೆ, ಜಮೀನಿಗೆ ಸೇರಬೇಕಾಗಿದ್ದ ಹೆಚ್ಚು ಭಾಗ ನೈಟ್ರೋಜನ್ ವಾಯುವು ಜಮೀನಿಗೆ ಸಿಕ್ಕದಂತೆ ಮಾಡಿದಹಾಗಾಯಿತು. ಹೀಗೆ ಮಾಡುವುದರಿಂದ ಮುಂದಣ ಭತ್ತದ ಬೆಳೆಗೆ ಹಸರು ಗೊಬ್ಬರದಿಂದ ಉಂಟಾಗುತ್ತಿದ್ದ ಪೂರ್ಣ ಪ್ರಯೋಜನವು ದೊರೆಯುವುದಿಲ್ಲ. ಅಲ್ಲದೆ ಕಾಳಿನೊಡನೆ ನೈಟ್ರೋಜನ್ ಮಾತ್ರವಲ್ಲದೆ ಫಾಸ್‌ಫಾರಿಕ್ ಆಸಿಡ್ (Phosphoric Acid) ಮರದ ಉಪ್ಪು (Potash) ಮತ್ತು ಸುಣ್ಣ (Lime) ವೂ ಸೇರಿಹೋಗುವುವು. ಹೀಗೆ ಕಾಳನ್ನು ಬಿಡಿಸಿಕೊಳ್ಳುವುದರಿಂದ ಯಾವ ಪದಾರ್ಥಗಳನ್ನು ಜಮೀನಿಗೆ ಒದಗಿಸಿಕೊಡಬೇಕೆಂಬ ಉದ್ದೇಶದಿಂದ ತಾವು ಹಸರು ಗೊಬ್ಬರಕ್ಕಾಗುವ ಪೈರನ್ನು ಬೆಳೆವರೋ ಆ ಪದಾರ್ಥಗಳು ಸಿಕ್ಕದಂತಾಗುವುವೆಂಬುವುದನ್ನು ಅನೇಕರು ತಿಳಿದುಕೊಂಡಿರುವುದಿಲ್ಲ. ಜಮೀನಿಗೆ ಬೇಕಾಗಿರುವುದು ಹಸರಾಗಿರುವ ಸೊಪ್ಪು ಮಾತ್ರವೇ ಎಂದೂ, ಕಾಳಿನಿಂದ ಜಮೀನಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲವೆಂದೂ ಜನರು ಹೇಳುವರು. ಆದರೆ ಸೊಪ್ಪಿನಲ್ಲಿ ಸೇರಿದ್ದ ಪದಾರ್ಥಗಳ ಹೆಚ್ಚು ಭಾಗವು ಕಾಳುಗಳಲ್ಲಿ ಸೇರಿಹೋಗುವುದೆಂಬುವುದನ್ನು ಅವರು ಅರಿಯರು ಕಾಳನ್ನು ಬಿಡಿಸಿಕೊಂಡರೆ ಮುಂದಣ ಭತ್ತದ ಪೈರು ಸರಿಯಾಗಿ ಆಗುವುದಿಲ್ಲವೆಂದು ಕೆಲವರು ಒಪ್ಪಿಕೊಳ್ಳುತ್ತಾರೆ; ಆದರೆ ತಾವು ಬಡವರಾದುದರಿಂದ ನಾಟಿ ಪೈರು ಪಸ್ತೈರೆಗಳಿಗೆ ತಗಲತಕ್ಕ ಖರ್ಚನ್ನು ಕೊಡಲು ತಮಗೆ ತ್ರಾಣವಿಲ್ಲದುದರಿಂದ ಈ ಕಾಳುಗಳ ಫಸಲನ್ನು ಕಟಾವುಮಾಡಿ ಅದನ್ನು ಮಾರಿದರೆ, ಅದರಿಂದ ಬರುವ ದುಡ್ಡು ಮೇಲೆಕಂಡ ಕೆಲಸಗಳಿಗೆ ಒದಗುತ್ತದೆಂದು ಹೇಳುತ್ತಾರೆ. ಕೆಲವರು ಪುಷ್ಕಳರಾದ ರೈತರು ಸಹಾ ಈರೀತಿ ಫಸಲನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಹದವಾಗಿ ಬೆಳೆದಿರುವ ಫಸಲನ್ನು ಬಿಡಲಾರದ ಮರಳುತನವೇ ಕಾರಣವಾಗಿದೆ. ಆದುದರಿಂದ ಪೈರಿನಲ್ಲಿ ಹೂ ಕಚ್ಚಿದ ತರುಣದಲ್ಲಿಯೇ ಉತ್ತುಬಿಟ್ಟರೆ ಇಂಥಾ ಮರಳುತನಕ್ಕೆ ಗುರಿಯಾಗಬೇಕಾದುದಿಲ್ಲ. ಹಾಗಿಲ್ಲದಿದ್ದರೆ ಬರೀ ಸಣಬು ಹೊರತು ಮತ್ತಾವುದನ್ನೂ ಬೆಳೆಯದಿರುವುದು ಸರ್ವೋತ್ತಮವಾಗಿದೆ.

ಸಾಧಾರಣ ಕಾಲದಲ್ಲೂ ಸಣಬು ಚೆನ್ನಾಗಿ ಬೆಳೆಯುತ್ತದೆ. ಮಳೆಯು ಹದವಾಗಿ ಬಿದ್ದರೆ ಬಿತ್ತನೆಯಾದ ೨ ಅಥವಾ ೨॥ ತಿಂಗಳೊಳಗೆ ಸಣಬು ಆರೇಳು ಅಡಿಗಳ ಎತ್ತರವಾಗಿ ಬೆಳೆದು ಎಕರೆಗೆ ೪೦೦೦ ಪೌಂಡು ಹಸರು ಗೊಬ್ಬರವನ್ನು ಕೊಡುತ್ತದೆ. ಸಕಾಲದಲ್ಲಿ ಉಳದೆ ಗಿಡಗಳು ಬಲಿತು ಬೀಜಗಳಾದಾಗ್ಯೂ ಅವನ್ನು ಜನರು ತಿನ್ನುವುದಿಲ್ಲವಾದುದರಿಂದ ಅದರ ಫಸಲನ್ನು ತೆಗೆದುಕೊಳ್ಳುವ ಸಂಭವವೇ ಇಲ್ಲ. ಹಾಗೆ ದನಕರುಗಳನ್ನು ಮೇಯಲು ಬಿಟ್ಟಾಗ್ಯೂ ಅವು ಎಳೆದಾದ ಕುಡಿಗಳನ್ನು ಮಾತ್ರ ತಿನ್ನುವುವೇ ಹೊರತು ಇತರ ಭಾಗಗಳ ತಂಟೆಗೆ ಹೋಗುವುದಿಲ್ಲ. ಮೇಲೆಕಂಡ ವಿಷಯಗಳನ್ನೆಲ್ಲಾ ವಿಚಾರಮಾಡಿ ನೋಡಿದರೆ ಭತ್ತದ ಜಮೀನುಗಳಿಗೆ ಹಸರು ಗೊಬ್ಬರಕ್ಕೆ ಸಣಬಿನಷ್ಟು ಉತ್ತಮವಾದ ಪೈರು ಮತ್ತಾವುದೂ ಇಲ್ಲವೆಂದು ಹೇಳಬಹುದು. ಆದುದರಿಂದ ಸಾಧ್ಯವಾದ ಮಟ್ಟಿಗೂ ಸಣಬಿನ ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕು. ಕಾಳುಗಳ ಫಸಲನ್ನು ಕಟಾಯಿಸಿಕೊಳ್ಳುವವರೂ ಸಹಾ ಎರಡು ಮೂರು ವರುಷಗಳಿಗೊಂದಾವೃತ್ತಿ ಗೊಬ್ಬರಕ್ಕಾಗಿ ಬರಿಯ ಸಣಬನ್ನು ಮಾತ್ರವೇ ಬೆಳೆಯುವುದು ಒಳ್ಳೆಯದು. (ಸಶೇಷ)

ಕಲಿಭೀಮ ರಾಮಮೂರ್ತಿಯವರ ಭಾಷಣವು.

ಕಳೆದ ೧೫-೨೦ ದಿನಗಳಿಂದಲೂ ಬೆಂಗಳೂರ ಪಟ್ಟಣದಲ್ಲೂ, ದಂಡಿನಲ್ಲೂ ಅದ್ಭುತ ಕಾಯಶಕ್ತಿಯನ್ನು ಪ್ರದರ್ಶಿಸಿ ಜನರನ್ನು ವಿಸ್ಮಯಗನ್ನಾಗಿ ಮಾಡುತ್ತಿರುವ ಕಲಿಭೀಮನೆಂದು ಹೆಸರ್ಪಡೆದ ಮ॥ ರಾಮಮೂರ್ತಿಯವರು ವಿಜಯನಗರದಲ್ಲಿ ಅನೇಕ ದಾನಧರ್ಮಗಳನ್ನು ಮಾಡಿ ಪ್ರಸಿದ್ಧರಾಗಿದ್ದ ರಾವ್ ಬಹದ್ದೂರ್ ನಾರಾಯಣಸ್ವಾಮಿಯವರ ಮಕ್ಕಳು. ಕಾಯಬಲದಲ್ಲಿ ಪ್ರಪಂಚದಲ್ಲೆಲ್ಲಾ ಅದ್ವಿತೀಯರೆಂದು ಪ್ರಸಿದ್ಧರಾಗಿರುವ ಪಾಶ್ಚಾತ್ಯ ದೇಶೀಯರಾದ ಸ್ಯಾಂಡೋಯವರನ್ನು ದೇಹಬಲದಲ್ಲೂ, ಅಂಗಸಾಧನೆಯ ಪ್ರದರ್ಶನದಲ್ಲೂ ಮೀರಿಸಿ ಅಮೇರಿಕಾ ಇಂಗ್ಲೆಂಡು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲೂ, ಭರತಖಂಡದಲ್ಲೂ ವಿಶೇಷ ಖ್ಯಾತಿಯನ್ನು ಪಡೆದಿರುವ ಈ ರಾಮಮೂರ್ತಿಯವರನ್ನು ಬೆಂಗಳೂರಿನ ಆಂಧ್ರಕ್ಷತ್ರಿಯ ಸಂಘದವರು ಕಳೆದ ತಾ॥ ೫ ರಲ್ಲಿ ದಂಡಿನಲ್ಲಿರುವ ರಾ॥ ಬ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರ ಪಾಠಶಾಲಾ ಮಂದಿರಕ್ಕೆ ಬರಮಾಡಿಕೊಂಡು ಸತ್ಕರಿಸಿದರು. ಆ ಕಾಲದಲ್ಲಿ ಅವರ ಗುಣಕಥನವನ್ನು ಮಾಡುವಾಗ್ಗೆ ಅಡ್ವೊಕೇಟ್ ಮ॥ ಪಿ. ಎ. ರಾಮಸ್ವಾಮಿಶೆಟ್ಟರು ಈಗ ಇಂಗ್ಲೆಂಡಿನಲ್ಲಿ ಸರ್ಕಾರಿ ಉದ್ಯೋಗಕ್ಕೆ ಸೇರಿಕೊಂಡಿರುವ ಸ್ಯಾಂಡೋಯವರು ಭರತಖಂಡಕ್ಕೆ ಬಂದು ತಮ್ಮ ಅದ್ಭುತ ಕಾಯಶಕ್ತಿಯನ್ನು ಪ್ರದರ್ಶಿಸಿದಾಗ್ಗೆ ಅವರನ್ನು ಅತ್ಯಂತ ಪರಾಕ್ರಮಶಾಲಿಗಳೆಂದು ತಿಳಿದುಕೊಂಡಿದ್ದೆವು ಆದರೆ ಈಗ ರಾಮಮೂರ್ತಿಯವರ ಅದ್ಭುತಶಕ್ತಿಯನ್ನು ನೋಡಿದಲ್ಲಿ ಪ್ರಪಂಚದಲ್ಲೆಲ್ಲಾ ಇವರು ಅದ್ವಿತೀಯ ಪರಾಕ್ರಮಶಾಲಿಗಳೆಂದು ಗೊತ್ತಾಗುತ್ತದೆ. ಇವರ ಪರಾಕ್ರಮವು ಅತಿಶಯವಾದುದು. ಇದು ಎಲ್ಲರಿಗೂ ಲಭ್ಯವಾಗಿರತಕ್ಕದ್ದಲ್ಲ ಮತ್ತೂ ಇದಕ್ಕೆ ಸ್ವಬುದ್ಧಿಯೂ, ತಾಳ್ಮೆಯೂ, ಸ್ಥಿರಬುದ್ಧಿಯೂ ಅತ್ಯಾವಶ್ಯಕವು. ಇವರ ಉದಾರ ಮನಸ್ಸಂತೂ ಎಲ್ಲರಿಗೂ ಗೊತ್ತೇ ಇದೆ. ಇವರು ಮತ್ತಾವ ವಿಧವಾದ ವೃತ್ತಿಯನ್ನವಲಂಬಿಸಿದ್ದರೂ, ಅದರಲ್ಲಿಯೂ ಖ್ಯಾತಿವಂತರಾಗುತ್ತಿದ್ದರು. ಇವರು ಅನೇಕ ಧರ್ಮಕಾರ್ಯಗಳಿಗೋಸ್ಕರ ಬಹು ಉದಾರವಾಗಿ ಚಂದಾದ್ರವ್ಯವನ್ನು ಕೊಟ್ಟಿರುವುದರಿಂದ ಇವರ ಹೃದಯವೈಶಾಲ್ಯವೂ ಮತ್ತೂ ಸಮರ್ಥರಲ್ಲೂ ಇರತಕ್ಕ ಸಹಾನುಭೂತಿಯೂ ವ್ಯಕ್ತವಾಗುವುವು. ಎಂದು ಪ್ರಸ್ತಾಪಿಸಿದ ನಂತರ ಬೆಂಗಳೂರು ಒಕ್ಕಲಿಗರ ಸಂಘದ ಸೆಕ್ರೆಟರಿಯವರಾದ ಮ॥ ಕೆ. ಎಚ್. ರಾಮಯ್ಯನವರು “ಭರತಖಂಡವು ಪೂರ್ವದಲ್ಲಿ ಮುನಿಗಳ ಆವಾಸಸ್ಥಾನವಾಗಿದ್ದಿತೆಂದೂ, ಜನಕ ಮತ್ತೂ ಶ್ರೀರಾಮರುಗಳಂತಹ ರಾಜಶ್ರೇಷ್ಠರುಗಳೂ, ವಸಿಷ್ಠ ಮತ್ತೂ ವಿಶ್ವಾಮಿತ್ರರುಗಳಂತಹ ಮಹರ್ಷಿಗಳೂ, ಭೀಮಾರ್ಜುನರುಗಳಂತಹ ಮಹಾ ಪರಾಕ್ರಮಶಾಲಿಗಳೂ ಇದ್ದರೆಂದೂ ಪುರಾಣಗಳಿಂದ ಕೇಳಿ ತಿಳಿದಿರುತ್ತೇವೆ. ಆದರೆ ಅವರುಗಳಿದ್ದುದು ಅನುಮಾನಗ್ರಸ್ತವೆಂದೂ, ಪುರಾಣಗಳೆಲ್ಲವೂ ಕಟ್ಟುಕಥೆಗಳೆಂದೂ ಈಚೆಗೆ ಜನರು ಭಾವಿಸತೊಡಗಿದರು. ಈ ಭಾವನೆಯಿಂದ ಭಾರತೀಯರು ಕ್ಷೀಣಗತಿಗೆ ಬರಲು ಕಾರಣವಾಯಿತು. ಭೀಮಸೇನನು ಆನೆಗಳನ್ನು ತನ್ನ ಕೈಗಳಿಂದೆತ್ತಿ ಬಿಸಾಡಿದುದಲ್ಲದೆ ಲಕ್ಷಾಂತರ ಸೇನೆಯನ್ನು ತಾನೊಬ್ಬನೇ ಸಂಹರಿಸಿದನೆಂಬುದರಲ್ಲಿಯೂ, ಆಂಜನೇಯನು ಪರ್ವತಗಳನ್ನು ಬುಡ ಸಮೇತ ಕಿತ್ತು ಬಿಟ್ಟನೆಂಬುದರಲ್ಲಿಯೂ ಜನರಿಗೆ ನಂಬುಗೆ ಇಲ್ಲವಾಯಿತು ಆದರೆ ರಕ್ತಮಾಂಸಗಳಿಂದ ಕೂಡಿದವರಾದ ರಾಮಮೂರ್ತಿಯವರು ತಮ್ಮೆದೆಯಮೇಲೆ ಆನೆಯನ್ನು ನಿಲ್ಲಿಸಿಕೊಳ್ಳುವುದನ್ನೂ, ತಮ್ಮ ಎರಡು ಕೈಗಳಿಂದಲೂ ಓಡುವ ಮೋಟಾರು ಬಂಡಿಗಳನ್ನು ತಡೆದು ನಿಲ್ಲಿಸುವುದನ್ನೂ ಕಣ್ಣಾರೆ ನೋಡಿದುದರ ಮೇಲೆ ಪುರಾಣದಲ್ಲಿ ವರ್ಣಿಸಲ್ಪಟ್ಟಿರುವ ಭೀಮಾರ್ಜುನ ಮತ್ತೂ ಆಂಜನೇಯರುಗಳ ಅದ್ಭುತ ಕಾರ್ಯಗಳೆಲ್ಲವೂ ವಾಸ್ತವವಾದುವುವೆಂಬುದು ಎಲ್ಲರಿಗೂ ನಿದರ್ಶನಕ್ಕೆ ಬಂದಿತು. ಭಾರತೀಯರಿಗೆ ಆಧ್ಯಾತ್ಮಿಕ ವಿಚಾರದಲ್ಲಿರತಕ್ಕ ಮಹಾ ಸಾಮರ್ಥ್ಯವನ್ನು ಸ್ವಾಮಿ ವಿವೇಕಾನಂದರವರು ಪ್ರಪಂಚಕ್ಕೆಲ್ಲಾ ತೋರ್ಪಡಿಸಿದರು. ಆದರೆ ಪ್ರೊಫೆಸರ್ ರಾಮಮೂರ್ತಿಯವರು ಈಗ ಕಾಯಶಕ್ತಿಯ ಅತಿಶಯವನ್ನು ತೋರ್ಪಡಿಸುತ್ತಿರುವರು ಬ್ರಿಟಿಷ್ ಪ್ರಭುಗಳು ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಶಾಂತತೆಯನ್ನು ಉಂಟುಮಾಡಿರುವರು. ನಮ್ಮ ಮೈಸೂರ ಸೀಮೆಯ ಸ್ಥಿತಿಯು ಅಸಾಧಾರಣವಾಗಿರುವುದು ನಮ್ಮ ಶ್ರೀಮನ್ಮಹಾರಾಜರವರೂ, ಅವರ ಸಹೋದರರಾದ ಶ್ರೀ ಯುವರಾಜರೂ ಆಯಾ ಜನಾಂಗದವರ ಅಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿರುವ ಸಂಘಗಳಿಗೆ ವಿಶೇಷವಾಗಿ ಸಹಾಯಮಾಡುತ್ತಿರುವರು. ಹುಡುಗರು ವಿದ್ಯಾವಂತರಾಗಲು ತಕ್ಕ ಸಹಾಯವಿಲ್ಲದೆ ಅವಿವೇಕಿಗಳಾಗಿ ಕೆಟ್ಟು ಹೋಗುತ್ತಿರುವರಾದುದರಿಂದ, ಸಾಂಘಿಕ ಪ್ರಯತ್ನವು ಅತ್ಯಾವಶ್ಯಕವು. ಈ ಆಂಧ್ರಕ್ಷತ್ರಿಯರಿಗೆ ಅಂತಹ ಪ್ರಯತ್ನಕ್ಕೆ ಒಬ್ಬ ಮುಖಂಡರು ಬೇಕಾಗಿರುವುದು.” ಎಂದು ಹೇಳಿದರು ತರುವಾಯ ಪ್ರೊ॥ ರಾಮಮೂರ್ತಿಯವರೆದ್ದು ನಿಂತುಕೊಂಡು ತಮ್ಮ ಮಾತೃಭಾಷೆಯಾದ ತೆಲುಗಲ್ಲದೆ ಹಿಂದಿ ಭಾಷೆಯು ಚೆನ್ನಾಗಿ ಬರುತ್ತದೆಂದೂ, ಇಂಗ್ಲೀಷು ಭಾಷೆಯು ತಮ್ಮ ಉದ್ಯೋಗ ನಿರ್ವಾಹ ಪೂರ್ತಿ ಬರುತ್ತಾದುದರಿಂದ ತೆಲುಗಿನಲ್ಲಿ ಭಾಷಣ ಮಾಡುತ್ತೇನೆಂದು ಹೇಳಿ ೧ ಗಂಟೆಯ ಕಾಲದವರೆಗೆ ಸ್ವಚ್ಛವಾದ ತೆಲುಗು ಭಾಷೆಯಲ್ಲಿ ಬಹುರಸವತ್ತಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ:-

ಈ ವರ್ತಮಾನ ಕಾಲದಲ್ಲಿ ಪ್ರತಿಯೊಂದು ಪಂಗಡದವರಲ್ಲೂ ಏಕಮತ್ಯವು ಅತ್ಯಾವಶ್ಯಕವಾಗಿರಬೇಕಾಗಿದೆ. ನಾನು ಬಹು ದೂರದೇಶಗಳಲ್ಲೆಲ್ಲಾ ಸಂಚರಿಸಿ ಅನೇಕ ಸ್ಥಳಗಳನ್ನೂ, ಪದಾರ್ಥಗಳನ್ನೂ ನೋಡಿ ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದಿರುತ್ತೇನೆ. ನಾನು ಎಲ್ಲಿಗೆ ಹೋದಾಗ್ಯೂ ನನ್ನ ಗಮನವೆಲ್ಲವೂ ಭರತಖಂಡದ ಕಡೆಯೇ ಇರುತ್ತದೆ. ಏಕೆಂದರೆ ಪ್ರಪಂಚದ ಮೇಲೆಲ್ಲಾ ಭರತಖಂಡವೊಂದೇ ಪುಣ್ಯಭೂಮಿಯಾಗಿರುವುದು. ಇದು ನನ್ನ ಭಾಗಕ್ಕೆ ಸ್ವರ್ಗವಾಗಿದೆ. ಎಷ್ಟೋ ಜನಾಂಗದವರು ಇಲ್ಲಿಗೆ ಬಂದು ಹೋದರು. ಆದರೆ ಭಾರತೀಯರು ಮಾತ್ರ ಸ್ಥಿರವಾಗಿರುವರು. ಹೀಗೆ ಭರತಖಂಡಕ್ಕೆ ಅವಿಚ್ಛಿನ್ನಲು ಇದು ಪುಣ್ಯ ಭೂಮಿಯಾಗಿರುವುದೇ ಮುಖ್ಯ ಕಾರಣವಾಗಿದೆ. ಭಾರತೀಯರ ಕಾಲ್ಪನಿಕ ಶಕ್ತಿಯು ಕಡಿಮೆಯಾದುದರಿಂದ ಭರತಖಂಡಕ್ಕೆ ಹೀನಸ್ಥಿತಿಯು ಪ್ರಾಪ್ತವಾಗಿರುತ್ತದೆ. ಭಾರತೀಯರು ಇಲ್ಲಿಗೆ ಬಂದ ಅನ್ಯದೇಶೀಯರನ್ನು ದಿವಾಸೀನ್ಯದಿಂದಲೂ, ಅಪಜನ್ಮಾಕ್ಷೆಯಿಂದಲೂ ಕಂಡರು, ಮತ್ತೂ ತಮ್ಮ ಸ್ವಭಾಷೆಯನ್ನು ಮರೆತುಬಿಟ್ಟರು. ಅಲ್ಲದೆ ತಂತಮ್ಮೊಳಗೆ ಒಬ್ಬರನ್ನೊಬ್ಬರು ಪುರಸ್ಕರಿಸುವುದಕ್ಕೆ ಬದಲು ತಿರಸ್ಕರಿಸಹತ್ತಿದರು. ಬ್ರಿಟಿಷ್ ಪ್ರಭುಗಳ ಆಳಿಕೆಯಲ್ಲಿ ಭರತಖಂಡವು ತನ್ನ ತಲೆಯನ್ನೆತ್ತಲು ಅವಕಾಶವಿರುತ್ತದೆಂದು ನಾನು ಪೂರ್ಣವಾಗಿ ನಂಬಿರುತ್ತೇನೆ ಭಾರತೀಯರು ತಥಾಪಿ ಮದ್ರಾಸಿನವರು ಬಹು ಬಲಹೀನರಾಗಿದ್ದಾರೆ. ಸೈನ್ಯ ಶಾಖೆಯಲ್ಲಿ ಒಬ್ಬ ನಾಯುಡು ಆದರೂ ಉದ್ಯೋಗದಲ್ಲಿರುವುದನ್ನು ಕಾಣೆನು. ಅಲ್ಲದೆ ಇವರು ಸಶಕ್ತರಲ್ಲವಾದುದರಿಂದ ಬ್ರಿಟಿಷರು ಇವರನ್ನು ಸೈನ್ಯಕ್ಕೆ ಸೇರಿಸುವುದಿಲ್ಲವು. ಈಸ್ಟ್ ಇಂಡಿಯಾ ಕಂಪೆನಿಯವರು ಈ ಮದ್ರಾಸನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಈ ನಾಯುಡು ಜನರು ವಿಶೇಷವಾಗಿ ಸಹಾಯಮಾಡಿದ್ದರು. ಆದುಕಾರಣ ಮದ್ರಾಸಿನವರು ತಮ್ಮ ಕಾಯಶಕ್ತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳತಕ್ಕದು ಮಹತ್ವದ ವಿಷಯವಾಗಿದೆ. ಭಾರತೀಯರಲ್ಲಿ ಸಾಧಾರಣ ಜನರು ವಿದ್ಯಾವಂತರಾಗಬೇಕಾದುದು ಅತ್ಯಂತಾವಶ್ಯಕವು. ಬಹು ಜನರು ತಮ್ಮ ಕರ್ತವ್ಯವೇನೆಂಬುದನ್ನು ಅರಿತವರಾಗಿಲ್ಲವು. ಮತ್ತೂ ಅನೇಕರು ದಾರಿದ್ರ್ಯ ಪೀಡಿತರಾಗಿದ್ದಾರೆ ಆದುಕಾರಣ ಈ ವಿದ್ಯಾಭಿವೃದ್ಧಿಯ ಕಾರ್ಯಕ್ಕಾಗಿ ಧನವನ್ನು ಸಾಹ್ಯಮಾಡಬೇಕೆಂದು ಸಂಕಲ್ಪಿಸಿ, ಹೋದಕಡೆಯಲ್ಲೆಲ್ಲಾ ಕೆಲ ಆಟಗಳನ್ನಾಡಿ ಅವಳಿಕಾದಲ್ಲಿ ದಿನಕ ಒಂದಕ್ಕೆ ೧೫೩೦ ರೂ. ಗಳನ್ನು ತೆಗೆದುಕೊಂಡು ಆಟವನ್ನಾಡಲೊಪ್ಪಿ ಒಂದು ಮಸ್ತಿ ಪ್ರದರ್ಶನಾಲಯದಲ್ಲಿ ಆಡುತ್ತಿರುವಾಗ್ಗೆ ಒಬ್ಬ ಮನುಷ್ಯನು ಹೊಟ್ಟೆಕಿಚ್ಚಿನಿಂದ ನನ್ನ ವ್ಯಾಯಾಮಶಾಲೆಯನ್ನು ಮುರಿಯುವಂತೆ ಮಾಡಿದನು. ಅದರಿಂದ ನನಗೆ ೧ ಲಕ್ಷದ ೩೫ ಸಾವಿರ ರೂ. ಗಳ ನಷ್ಟವಾಯಿತು. ಮಲೆಯ ಸ್ಟೇಟಿನಲ್ಲಿ ನನ್ನ ಚಮತ್ಕೃತಿಯನ್ನು ಪ್ರದರ್ಶಿಸುತ್ತಿರುವಾಗ್ಗೆ ಬಹು ಒಳ್ಳೆಯ ಮಿತ್ರನಾಗಿ ನಟಿಸಿದವನೊಬ್ಬನು ನನಗೆ ವಿಷಪ್ರಯೋಗವನ್ನು ಮಾಡಿದ್ದನು, ಆದರೆ ಆ ವಿಷದಿಂದ ನನಗೇನೂ ಕೇಡಾಗದಿದ್ದರೂ, ನನ್ನ ಆಸ್ಟ್ರೇಲಿಯಾ ದೇಶದ ಬಹು ಬೆಲೆಯ ಒಂದು ಕುದುರೆಯು ಸತ್ತುಹೋಯಿತು. ಆ ಮಿತ್ರನು ಅಷ್ಟಕ್ಕೆ ತೃಪ್ತನಾಗದೆ ನನ್ನನ್ನು ಕೊಲ್ಲಬೇಕೆಂದು ನಿರ್ಧರಿಸಿ ಎರಡನೆಯ ವೇಳೆ ನನ್ನ ಅಡಿಗೆಯವನ ಮೂಲಕ ವಿಷಪ್ರಯೋಗ ಮಾಡಿಸಿದನು. ವಿಷವು ಈ ವೇಳೆ ನನ್ನ ದೇಹದಲ್ಲಿ ವ್ಯಾಪಿಸಿ ಪ್ರಾಣಾಪಾಯವನ್ನುಂಟುಮಾಡದಿದ್ದರೂ ೪ ತಿಂಗಳ ವರೆಗೆ ಯಾವುದೊಂದು ಕಾರ್ಯವನ್ನು ಮಾಡಲಿಕ್ಕಿಲ್ಲದಂತೆ ನಿಶ್ಶಕ್ತನನ್ನಾಗಿ ಮಾಡಿಬಿಟ್ಟಿದ್ದಿತು. ಇದರಿಂದ ನಾನು ಪ್ರಪಂಚದಲ್ಲೆಲ್ಲಾ ಸಂಚರಿಸಿಕೊಂಡು ಬರಲಡ್ಡಿಯಾಯಿತು. ಈಗ ನಾನು ನೆಟ್ಟಗಿದ್ದೇನೆ ನಾನು ಬ್ರಹ್ಮಚಾರಿಯಾಗಿರುವುದರಿಂದ ಭಾರತ ಮಾತೆಯ ಸೇವೆಯನ್ನು ಮಾಡಬೇಕೆಂಬ ಅಭಿಲಾಷೆಯು ನನಗಿದೆ. ಈಗ ಭರತಖಂಡದಲ್ಲಿ ಸಮಸ್ತ ಜನರನ್ನೂ ವಿದ್ಯಾವಂತರನ್ನಾಗಿ ಮಾಡಬೇಕಾಗಿರುವುದು ಅತ್ಯಾವಶ್ಯಕವಾಗಿದೆ. ಪ್ರಪಂಚದಲ್ಲಿ ವಿದ್ಯಾದಾನಕ್ಕಿಂತಲೂ ಅತಿಶಯವಾದ ದಾನವು ಬೇರೊಂದಿಲ್ಲವು. ಆದುಕಾರಣ ಬಾಲವಿದ್ಯಾ ಪ್ರಸರಣ ಕಾರ್ಯಕ್ಕಾಗಿ ೨೦ ಲಕ್ಷ ರೂ. ಗಳನ್ನು ಸಾಹ್ಯಮಾಡಬೇಕೆಂದು ನಾನು ಸಂಕಲ್ಪಿಸಿರುತ್ತೇನೆ. ಇದರ ವಿನಾ ಬೇರೆಯಾಶೆಯು ನನಗಿಲ್ಲವು. ಪ್ರಕೃತಕಾಲದಲ್ಲಿ ಭರತಖಂಡವು ಕ್ಷೀಣಗತಿಯಲ್ಲಿದೆ. ಭಾರತೀಯರು ಒಂದು ಜನಾಂಗವಾಗಿಲ್ಲವಾದುದರಿಂದ ಇವರ ಅಭಿಪ್ರಾಯವು ಗಣನೆಗೆ ತರಲ್ಪಟ್ಟಿಲ್ಲವು. ಭರತಖಂಡಕ್ಕೆ ಸಾಹ್ಯವಿಲ್ಲದಿರುವುದರಿಂದ ಇದು ಅಭಿವೃದ್ಧಿಗೆ ಬರುವುದು ಅನುಮಾನವಾಗಿದೆ ಮತ್ತೂ. ಇದಕ್ಕೆ ರೂಪು ಇಲ್ಲದಿರುವುದರಿಂದ ನಾಚಿಗೆಯಿಲ್ಲವಾಗಿದೆ. ಯುವಕರು ಯಾವುದಾದರೂ ಒಂದು ಗೊತ್ತಾದ ವಿಚಾರದಲ್ಲಿ ಸ್ಥಿರಮನಸ್ಕರಿಸುವುದನ್ನು ಅಭ್ಯಾಸ ಮಾಡಲು, ಅಂಗಸಾಧನೆಯನ್ನು ಮಾಡಲು, ತಾವು ಮಾಡತಕ್ಕ ಗುಣಾವಗುಣವನ್ನು ತಿಳಿಯಲು ಮತ್ತೂ ಪಾರಮಾರ್ಥಿಕ ವಿಚಾರಪರರಾಗಲು ಸದಭಿಪ್ರಾಯವುಳ್ಳವರಾಗಿರಬೇಕು. ಎಂದು ಉಪನ್ಯಾಸವನ್ನು ಮಾಡಿ ಆಂಧ್ರಕ್ಷತ್ರಿಯ ಸಂಘಕ್ಕೆ ೫೦೦ ರೂ. ಗಳನ್ನು ಕೊಡುವುದಾಗಿ ಹೇಳಿದುದಲ್ಲದೆ ತಾವು ಹೋದ ಕಡೆಯಲ್ಲೆಲ್ಲಾ ನಾಯುಡುಜನರ ವಿದ್ಯಾಭಿವೃದ್ಧಿಯ ಪ್ರೋತ್ಸಾಹಕ್ಕಾಗಿ ಕೆಲ ಪ್ರದರ್ಶನಗಳಿಂದ ಬರುವ ಉತ್ಪತ್ತಿಯನ್ನು ಕೊಡುತ್ತೇನೆಂದು ವಾಗ್ದಾನಮಾಡಿದರು.

ತುರ್ಕಿ—ಇಟಲಿಗಳ ಯುದ್ಧವು.

ಮಾರ್ಚಿ ತಾ॥ ೧.—ಫೆಬ್ರವರಿ ತಾ॥ ೨೮ ರಲ್ಲಿ ಮಿಸರ್ ಬುರ್ಗ ಎಂಬಲ್ಲಾದ ಕದನದಲ್ಲಿ ನಿರತರಾಗಿದ್ದ ೫೦೦೦ ತುರ್ಕಿಯವರು ಮತ್ತೂ ಅರಬ್ಬಿಯವರುಗಳಲ್ಲಿ ೫೦೦ ಜನರು ಮಡಿದರೆಂದೂ, ಇಟಲಿಯವರ ಕಡೆ ೧೮ ಜನಗಳು ಸತ್ತು, ೧೦೦ ಜನರು ಗಾಯಪಟ್ಟರೆಂದೂ ಸರ್ಕಾರಿಯ ವರದಿಯಿಂದ ಗೊತ್ತಾಗುತ್ತದೆ.

ತಾ॥ ೨.— ಯುದ್ಧ ಸಂಭವಾದಂದಿನಿಂದ ಇಟಲಿಯವರ ಕಡೆ ೧೭೩೩ ಜನರು ಸತ್ತಿರುತ್ತಾರೆ ಮತ್ತು ೨೦೮ ಜನರು ಅದೃಶ್ಯವಾಗಿರುತ್ತಾರೆ.

ತಾ॥ ೮.— ಡೆರ್ನಾ ಎಂಬಲ್ಲಿ ತಮ್ಮ ಸ್ಥಳಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದ ಇಟಲಿಯವರ ಮೇಲೆ ತುರ್ಕಿಯವರು ಮತ್ತು ಅರಬ್ಬಿಯವರು ಬಿದ್ದು ಬಂದೂಕಿನ ಸನೀನುಗಳಿಂದ ತಿವಿಯಲುದ್ಯುಕ್ತರಾಗಿರುವಲ್ಲಿ ಇಟಲಿಯ ಯೊಳಸೇನೆಯು ಬಂದು ಸಹಾಯಕ್ಕಾಗುವವರೆಗೂ ಶತ್ರುಗಳ ಸಂಗಡ ಹೋರಾಡುತ್ತಿದ್ದುದರಿಂದ ತುರ್ಕಿಯವರು ಹಿಮ್ಮೆಟ್ಟಿದರು. ಈ ಹೋರಾಟದಲ್ಲಿ ತುರ್ಕಿಯವರಿಗಾದ ನಷ್ಟವು ಗೊತ್ತಾಗಿಲ್ಲ. ಆದರೆ ಇಟಲಿಯವರ ಕಡೆ ಗಾಯವಡೆದವರು ಮತ್ತು ಸತ್ತವರು ಸೇರಿ ೧೪೦ ಜನಗಳಾಗುವರು.

ತಾ॥ ೩.—೪ ನೆಯ ತಾ॥ ನಲ್ಲಿ ಡೆರ್ನಾದಲ್ಲಾದ ಕದನದಲ್ಲಿ ಇಟಲಿಯವರ ಕಡೆ ೬೦ ಜನರು ಸತ್ತರು, ಮತ್ತು ೧೧೦ ಜನರು ಗಾಯವಡೆದರು

ತಾ॥ ೭.— ೩,೦೦೦ ತುರ್ಕಿಯವರು ಮರ್ಕೆಬ್ ಎಂಬಲ್ಲಿ ಮಾಗ್ಗವಾಗಿ ರಾತ್ರಿ ಇಟಲಿಯವರ ಮೇಲೆ ಬಿದ್ದು ಹೋರಾಡಿದರು. ಇಟಲಿಯವರು ಬಹು ಶೌರ್ಯವಾಗಿ ತುಪಾಕಿಗಳನ್ನು ಹಾರಿಸಿ ೪೦೦ ಜನ ತುರ್ಕಿಯವರನ್ನು ಕೊಂದು ಉಳಿದವರನ್ನೋಡಿಸಿಬಿಟ್ಟರು. ಇಟಲಿಯವರ ಕಡೆ ಒಬ್ಬನು ಸತ್ತನು ಮತ್ತು ೪ ಜನರು ಗಾಯವಡೆದರು. ತುರ್ಕಿಯವರ ಸ್ವಾಧೀನದಲ್ಲಿರುವ ಫಾರ್ಸ್ ದ್ವೀಪಗಳಲ್ಲೊಂದಾದ ಸಾಯಿರ್ ಎಂಬ ದ್ವೀಪವನ್ನು ಇಟಲಿಯವರು ಸ್ವಾಧೀನಪಡಿಸಿಕೊಂಡು ಅಲ್ಲಿ ತಮ್ಮ ಸೇನೆಯನ್ನು ತಂದಿರಿಸಿರುವರೆಂದು ಕೆಂಪುಕಡಲಿನಿಂದ ಬಂದ ಕಾಗದದಿಂದ ತಿಳಿಯಬರುತ್ತದೆ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ॥ ೧೧ ನೆಯ ಸೋಮವಾರ.

ಪರರಾಜ್ಯಗಳ ಪ್ರಕೃತಸ್ಥಿತಿಯು.

ಗ್ರೇಟ್ ಬ್ರಿಟನ್ನಿನ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರು ಹೆಚ್ಚು ಬೆಲೆಯನ್ನು ಕೊಟ್ಟು ಆಹಾರ ಪದಾರ್ಥಗಳನ್ನು ಕೊಂಡು ಜೀವಿಸಲು ತಮಗೆ ಬರತಕ್ಕ ಕೂಲಿಯು ಸಾಲುವುದಿಲ್ಲವಾದ ಪ್ರಯುಕ್ತ ತಮ್ಮ ಕೂಲಿಯನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರೂ ಗಣಿಗಳ ಯಜಮಾನರುಗಳು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಡದೆ ಹೋದುದರಮೇಲೆ, ೧೦ ಲಕ್ಷ ಜನರು ಹಠವಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ. ಗ್ರೇಟ್ ಬ್ರಿಟನ್ನಿನಲ್ಲಿ ಕಾರ್ಖಾಲಯಗಳ ಯಂತ್ರಗಳೂ, ಹೊಗೆಯ ಹಡಗುಗಳೂ ರೈಲ್ವೆಯ ಇಂಜನ್ನುಗಳೂ ಬರಿದು ಕಲ್ಲಿದ್ದಲಿನ ಸಹಾಯ್ಯದಿಂದಲೇ ನಡೆಯಬೇಕಾಗಿವೆ. ಮತ್ತು ಅಲ್ಲಿಯ ಜನರು ಅಡಿಗೆಯನ್ನು ಮಾಡಲೂ, ಚಳಿಯಿಂದ ಮೈಯನ್ನು ಕಾಯಿಸಿಕೊಳ್ಳಲೂ ಕಲ್ಲಿದ್ದಲನ್ನೇ ವಿಶೇಷವಾಗುಪಯೋಗಿಸುತ್ತಿರುವರು. ಈಗ ಗಣಿಗಳಲ್ಲಿ ಕೆಲಸಮಾಡುವವರೆಲ್ಲರೂ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವುದರಿಂದ, ಕಲ್ಲಿದ್ದಲುದೊರೆಯದೆ ಅನೇಕ ಕಾರ್ಖಾಲಯಗಳು ಮುಚ್ಚಲ್ಪಟ್ಟಿವೆ; ಅನೇಕ ರೈಲ್ವೆಗಳೂ, ಹಡಗುಗಳೂ ಸಂಚರಿಸದೆ ನಿಂತುಹೋಗಿವೆ ಮತ್ತು ಜನರ ಊಟ ಉಪಚಾರ ಮೊದಲಾದುದಕ್ಕೆ ಅಡಚಣೆಯಾಗಿದೆಯಲ್ಲದೆ, ಅವುಗಳಲ್ಲಿ ಕೆಲಸಮಾಡತಕ್ಕವರು ನಿರುದ್ಯೋಗಿಗಳಾಗಿ ಜೀವನಕ್ಕೆ ತೊಂದರೆಯನ್ನು ಪಡಬೇಕಾಗಿಬಂದಿವೆ. ಈ ಕಾರಣದಿಂದಲೇ ಜಾರ್ಜ್‌ಪ್ರಭುಗಳು ಪರಸ್ಥಳ ಪ್ರಯಾಣಮಾಡುವುದು ಕೂಡ ನಿಂತುಹೋಗಿರುವುದು. ಈ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರಿಗೂ, ಅವರ ಯಜಮಾನರುಗಳಿಗೂ ಉಂಟಾಗಿರುವ ಅಸಮಾಧಾನಗಳೂ, ಹೋರಾಟಗಳೂ ಕೂಡಲೆ ಪರಿಹರಿಸಲ್ಪಟ್ಟು ಕೂಲಿಕಾರರೆಲ್ಲರೂ ಉದ್ಯೋಗದ ಮೇಲೆ ಹೋಗುವಂತೆ ಮಾಡಲ್ಪಡದಿದ್ದಲ್ಲಿ ಇತರ ಕಾರ್ಖಾಲಯಗಳಲ್ಲೂ, ಹಡಗುಗಳಲ್ಲೂ, ರೈಲ್ವೆಗಳಲ್ಲೂ ಕೆಲಸಮಾಡುವವರು ಕಲ್ಲಿದ್ದಲು ಗಣಿಗಳ ಕೆಲಸಗಾರರ ಕೂಡ ಸೇರಿಕೊಂಡು ಗಲಭೆಯನ್ನು ಮಾಡುವ ಮತ್ತು ಇದರಿಂದ ಜನರ ಸಂಚಾರಕ್ಕೂ ಊಟಉಪಚಾರಾದಿಗಳಿಗೂ ಅಡಚಣೆಯಾಗಿ ಬಲು ತೊಂದರೆಯಾಗುವ ಸಂಭವವಿರುತ್ತದೆ. ಈ ಕಾರಣದಿಂದಲೇ ಇಂಗ್ಲೆಂಡಿನ ಅಮಾತ್ಯಶ್ರೇಷ್ಠರಾದ ಮಿ॥ ಆಸ್ಕ್ವಿತ್‌ರವರು ಕೆಲಸಗಾರರ ಮತ್ತು ವ್ಯಾಪಾರಗಾರರ ಸಂಘಗಳ ಪ್ರತಿನಿಧಿಗಳ ಕೂಡ ಪರ್ಯಾಲೋಚಿಸಿ ಅವರ ಮೂಲಕವಾಗಿ ಗಣಿಗಳ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನೂ, ಮನಸ್ತಾಪಗಳನ್ನೂ ಹೋಗಲಾಡಿಸಿ ಪರಸ್ಪರ ಸಮಾಧಾನವನ್ನುಂಟುಮಾಡಬೇಕೆಂದು ಯತ್ನಿಸಿರುವರು. ಈ ಮಂತ್ರಿವರ್ಗದ ಪ್ರಯತ್ನವಿಶೇಷದಿಂದ ಮೇಲೆಕಂಡ ತೊಂದರೆಗಳು ಕೂಡಲೆ ಪರಿಹಾರವಾಗಿ ಅಲ್ಲಿಯ ಕೆಲಸಗಳೆಲ್ಲವೂ ಯಥಾಪ್ರಕಾರ ನಡೆಯುವಂತೆ ಆಗುವವೆಂದು ನಿರೀಕ್ಷಿಸುತ್ತೇವೆ. ಹಾಗೆ ದಯಾಶೂನ್ಯರಾದ ಗಣಿಗಳ ಯಜಮಾನರುಗಳು ಮೈ ಮುರಿಯೆ ದುಡಿದು ತಮ್ಮ ಬೊಕ್ಕಸವನ್ನು ತುಂಬಿಸುವ ಕೆಲಸಗಾರರಿಗೆ ಅವರ ಉದರಭರಣಕ್ಕೆ ಸಾಕಾಗುವಷ್ಟು ಕೂಲಿಯನ್ನು ಕೊಡಲೊಪ್ಪದಿದ್ದಲ್ಲಿ ಬಹು ಅನರ್ಥವಾಗುವುದರಲ್ಲಿ ಸಂದೇಹವಿಲ್ಲವು.

ಚೈನಾದೇಶೀಯರು ಮಂಚು ವಂಶೀಯರ ರಾಜ್ಯದಾಡಳಿತಕ್ರಮದಿಂದ ಜುಗುಪ್ಸೆಯನ್ನು ಹೊಂದಿ, ದೇಶಾಭಿಮಾನಾಗ್ರೇಸರನಾದ ಡಾಕ್ಟರ್ ಸನ್‌ಯಾಟ್‌ಸನ್ನಿನ ಪ್ರೇರಣೆಯಿಂದ ಪ್ರಭುಪಕ್ಷದವರ ಕೂಡ ಯುದ್ಧಮಾಡಿ ಅವರನ್ನು ಸೋಲಿಸಿ ಚಕ್ರವರ್ತಿಯನ್ನು ತಾನಾಗಿ ಪದಚ್ಯುತನಾಗುವಂತೆ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪನಗೊಳಿಸಿ ಅದಕ್ಕೆ ಡಾ॥ ಸನ್‌ಯಾಟ್ಸನ್ನನನ್ನು ಅಧ್ಯಕ್ಷನನ್ನಾಗಿ ಆರಿಸಿದರು. ಈ ಸನ್‌ಯಾಟ್ಸನ್ನನು ಪ್ರಜಾಪ್ರಭುತ್ವವನ್ನು ದೃಢಮೂಲವನ್ನಾಗಿ ಮಾಡಬೇಕೆಂದು ತನ್ನ ದೂರದರ್ಶಿತ್ವ ಬುದ್ಧಿಯಿಂದ, ಚಕ್ರಾಧಿಪತ್ಯದ ಮುಖ್ಯ ಅಮಾತ್ಯನಾಗಿದ್ದು ಪ್ರಭುಪಕ್ಷವನ್ನು ಹಿಡಿದು ಪ್ರಜಾಪ್ರಭುತ್ವಪಕ್ಷದವರ ಕೂಡ ಕಾದಾಡಿದ ರಾಜತಂತ್ರ ನಿಪುಣನಾದ ಯುವಾನ್‌ಷಿಕಾಯಿಯನ್ನು ಪ್ರಜಾಪ್ರಭುತ್ವದ ಕಡೆಗೆ ತಿರುಗಿಸಿಕೊಂಡು, ಅಧ್ಯಕ್ಷಪದವಿಯಿಂದ ತಾನು ನಿವೃತ್ತನಾಗಿ, ಪ್ರಜೆಗಳೆಲ್ಲರೂ ಆತನನ್ನು ಅಧ್ಯಕ್ಷನನ್ನಾಗಿ ಆರಿಸುವಂತೆ ತಕ್ಕೇರ್ಪಾಟನ್ನು ಮಾಡಿದನು. ಈ ಪ್ರಜಾಪಕ್ಷದವರಿಗೆ ಪ್ರಭುಪಕ್ಷದವರಲ್ಲದೆ ಅನಾಯಕ ರಾಜ್ಯಾಭಿಲಾಷಿಗಳೂ ವಿರೋಧಿಗಳಾಗಿರುವರು. ಈ ಉಭಯಪಕ್ಷದವರೂ ಏನನ್ನೂ ಅರಿಯದ ಜನರನ್ನೂ, ಸೈನಿಕರನ್ನೂ ಪ್ರಜಾಪ್ರಭುತ್ವದವರ ಮೇಲೆ ಎತ್ತಿಕಟ್ಟಿ ಅವರ ಪಕ್ಷದ ಸೈನಿಕರ ಕೂಡ ಕಾದಾಡಿ ಊರುಗಳನ್ನು ಸೂರೆಮಾಡುತ ಬಲು ದಾಂಧಲೆಯನ್ನು ಮಾಡುತ್ತಿರುವರು. ಈ ಗಲಿಬಿಲಿಯು ಒಂದುಕಡೆಯಿಂದ ಮತ್ತೊಂದು ಕಡೆಗೆ ಹಬ್ಬುತ್ತಿದೆಯಲ್ಲದೆ ದಂಗೆಗಾರರ ಕೋಪವು ಉದ್ರೇಕವಾಗುತ್ತಿದೆ. ಈ ದೇಶದಲ್ಲಿ ಜಪಾನಿನವರಿಗೆ ಸೇರಿರುವ ಸ್ಥಳಗಳ ಮತ್ತು ಅಲ್ಲಿರುವ ಜಪಾನೀಯರ ರಕ್ಷಣಾರ್ಥವಾಗಿ ೨೦,೦೦೦ ಜಪಾನ್ ಸೈನಿಕರು ಕಳುಹಲ್ಪಟ್ಟಿರುತ್ತಾರೆ. ಇದರಂತೆ ಇತರ ರಾಜ್ಯದವರೂ ತಂತಮ್ಮ ಸೇನೆಯನ್ನು ಕಳುಹುವವರಾಗಿರುತ್ತಾರೆ. ಪ್ರಜಾಪ್ರಭುತ್ವಕ್ಕೆ ಅಧ್ಯಕ್ಷನಾಗಿ ಆರಿಸಲ್ಪಡಲಿಕ್ಕಿರುವ ಯುವಾನ್‌ಷಿಕಾಯಿಗೆ ಬ್ರಿಟಿಷ್, ಫ್ರಾನ್ಸು, ಅಮೇರಿಕಾ, ಜರ್ಮನಿ, ರಷ್ಯಾ ಮತ್ತು ಜಪಾನ್ ರಾಜ್ಯಗಳ ಬ್ಯಾಂಕಿನವರು ಸಾಲವನ್ನು ಕೊಟ್ಟು ಆತನ ಅಧಿಕಾರವನ್ನು ಬಲಪಡಿಸಬೇಕೆಂದು ಯೋಚಿಸುತ್ತಾರೆ.

ತುರ್ಕಿ—ಇಟಲಿ ರಾಜ್ಯಗಳ ಪ್ರಕೃತ ವಿದ್ಯಮಾನವನ್ನು ನೋಡುವುದರಲ್ಲಿ ಉಭಯ ರಾಜ್ಯಗಳಿಗೂ ನಡೆಯುತ್ತಿರುವ ಯುದ್ಧವು ಇನ್ನೂ ಪ್ರಬಲವಾಗಿ ಅನೇಕ ಅರ್ಥಹಾನಿ ಮತ್ತು ಪ್ರಾಣಹಾನಿಗಳಾಗುವಂತೆ ತೋರುವುದಲ್ಲದೆ ಶಮನವಾಗುವಂತೆ ತೋರುವುದಿಲ್ಲವು. ಪರರಾಜ್ಯಗಳು ತುರ್ಕಿ-ಇಟಲಿಗಳಿಗುಂಟಾಗಿರುವ ಕಲಹದ ವಿಚಾರದಲ್ಲಿ ತಮ್ಮಗಳಿಗೆ ಅಸಮಾಧಾನವಾಗಿರುವುದೆಂದೂ, ಉಭಯ ರಾಜ್ಯಗಳಿಗೂ ಮಧ್ಯಸ್ಥಿಕೆಯನ್ನು ಮಾಡಬೇಕೆಂದೂ ವಾಙ್ಮಾತ್ರದಲ್ಲಿ ಹೇಳುತ್ತಿವೆಯಲ್ಲದೆ ಕಾರ್ಯತಃ ತೋರ್ಪಡಿಸುವುದಿಲ್ಲವು. ಇದರಿಂದ ಆ ಉಭಯ ರಾಜ್ಯಗಳು ತಮ್ಮೊಳಗೆ ಸಮಾಧಾನ ಮಾಡಿಕೊಳ್ಳುವುದರಿಂದಾಗಲಿ ಅಥವಾ ಇಟಲಿಯ ಇಚ್ಛಾನುಸಾರವಾಗಿ ಟ್ರಿಪೋಲಿಯನ್ನು ತುರ್ಕಿಯು ಬಿಟ್ಟು ಕೊಡುವುದರಿಂದಾಗಲಿ ಈಗ ನಡೆಯುತ್ತಿರುವ ಯುದ್ಧವು ಶಾಂತವಾಗಬೇಕಲ್ಲದೆ ಅನ್ಯಥಾ ಉಪಾಯವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಶ್ರೀಮಂತರ ಕುಟುಂಬದಲ್ಲಾದ ವಿವಾಹಮಹೋತ್ಸವವು.

ರಾಜಧಾನಿಯಲ್ಲಿ ಜನೋಪಕಾರಿಗಳೆಂದು ಹೆಸರುಗೊಂಡಿರುವ ಶ್ರೀಮಂತ ನೀಲಗಿರಿ ಮದ್ದಣ್ಣನವರು ತಮ್ಮ ಕುಮಾರಿ ಸೌ॥ ಮದ್ದಮ್ಮನನ್ನು ಅನೇಕ ಧರ್ಮಕಾರ್ಯಗಳನ್ನು ಮಾಡಿ ಶ್ರೀಮನ್ಮಹಾರಾಜರವರಿಂದ "ಧರ್ಮಪ್ರವರ್ತಕ" ಎಂಬ ಪ್ರಶಸ್ತಿಯನ್ನು ಪಡೆದಿದ್ದ ಗುಂಜಾನರಸಿಂಹಯ್ಯನವರ ಮಕ್ಕಳು ಮಿ॥ ಜವರಪ್ಪನವರ ಮಗ ಚಿ॥ ನರಸಿಂಹಯ್ಯನಿಗೆ ಕೊಟ್ಟು ಕಳೆದ ತಾ॥ ೯ ರಲ್ಲಿ ಬಹುಕಾಲದಿಂದಲೂ ನಡೆದು ಬಂದಿರುವ ತಮ್ಮ ಮನೆತನದ ಗೌರವಕ್ಕೆ ತಕ್ಕಹಾಗೆ ಅತ್ಯಂತ ವಿಜೃಂಭಣೆಯಿಂದ ಸಾಲಂಕೃತ ಕನ್ಯಾದಾನವನ್ನು ಮಾಡಿ ಲಗ್ನಕ್ಕೆ ಪೂರ್ವವೆ ಒಂದು ವಾರದಿಂದ ನಿತ್ಯದಲ್ಲೂ ತಮ್ಮ ಬಂಧುವರ್ಗದವರಿಗೆಲ್ಲಾ ಭಕ್ಷ್ಯಭೋಜ್ಯಾದಿಗಳಿಂದ ಔತಣವನ್ನು ಮಾಡಿಸಿದುದಲ್ಲದೆ ಸಾವಿರಾರು ಬಡಜನರಿಗೆ ಮನಸ್ಸು ತಣಿಯುವಷ್ಟು ಅನ್ನವನ್ನು ಹಾಕಿದರೆಂದು ತಿಳುಹಲು ಹರ್ಷವಾಗುತ್ತದೆ. ಈ ಮಹೋತ್ಸವಕ್ಕಾಗಿ ಮನೆಯ ಮುಂಗಡೆ ಅತಿವಿಶಾಲವಾದ ಮತ್ತು ಸುಂದರವಾದ ಮಂಟಪವನ್ನು ಸಾವಿರಾರು ರೂಪಾಯಿಗಳ ವೆಚ್ಚದಿಂದ ಕಟ್ಟಿಸಿ ವಾಷಿಂಗ್ಟನ್ ದೀಪಗಳಿಂದಲೂ, ಚಿತ್ರಪಟಗಳಿಂದಲೂ ಅಲಂಕಾರಮಾಡಿ ಮನೋಹರವಾದ ವಾದ್ಯವಿಶೇಷಗಳಿಂದಲೂ, ವೇಶ್ಯಾನೃತ್ಯಗೀತಗಳಿಂದಲೂ, ಅತಿಥಿಗಳನ್ನೂ, ಪ್ರೇಕ್ಷಕ ಜನರನ್ನೂ ಪ್ರತಿನಿತ್ಯವಲ್ಲೂ ಆನಂದಗೊಳಿಸುತ್ತಿದ್ದರು. ಧಾರೆಯ ಮುಹೂರ್ತದ ದಿವಸ ಬಂದಿದ್ದ ಸರ್ಕಾರಿಯ ಅಧಿಕಾರಿಗಳಿಗೂ ವೈದಿಕರುಗಳಿಗೂ ಅವರವರ ಯೋಗ್ಯತಾನುಸಾರ ಬಹು ಉದಾರವಾಗಿ ದಕ್ಷಿಣೆಯನ್ನು ಕೊಟ್ಟರು. ಅರಮನೆಯಿಂದ ಕಿಲ್ಲತ್ತು ಭಲ್ಲೆಯವೇ ಮೊದಲಾದ ಮರ್ಯಾದೆಗಳು ಕಳುಹಲ್ಪಟ್ಟಿದ್ದುವು. ನಿನ್ನೆಯ ರಾತ್ರಿ ನೂತನ ದಂಪತಿಗಳ ಮೆರವಣಿಗೆಯು ಎಲ್ಲಾ ಬೀದಿಗಳಲ್ಲೂ ಬಹು ಅಟ್ಟಹಾಸದಿಂದ ನಡೆಯಿತು. ಈ ಉತ್ಸವ ಕಾಲದಲ್ಲಿ ಮದ್ದಿನ ವಿನೋದಕ್ಕಾಗಿಯೂ ದೀಪಗಳಿಗಾಗಿಯೂ ೧೫೦೦ರೂ. ಗಳ ಮೇಲೆಯೇ ವೆಚ್ಚವಾಗಿದ್ದಿತೆಂದು ತೋರುತ್ತದೆ. ಇವರ ಚಿಕ್ಕ ತಂದೆಯವರಾದ ಗಾ॥ ಚಿಕ್ಕಬಸವಣ್ಣನವರು ತಮ್ಮ ಕುಮಾರಿಯ ಮತ್ತು ಕುಮಾರನ ವಿವಾಹಗಳನ್ನು ವೈಭವದಿಂದಮಾಡಿದುದಕ್ಕಿಂತ ಈವೇಳೆ ಮಿ॥ ಮದ್ದಣ್ಣನವರು ೧೦-೧೨ ಸಾವಿರರೂಪಾಯಿಗಳ ವೆಚ್ಚದಿಂದ ಅತಿಶಯವಾಗಿ ಮಾಡಿದರೆಂದು ಹೇಳಿದಲ್ಲಿ ಉತ್ಪ್ರೇಕ್ಷೆಯಾಗಲಾರದು. ನೂತನ ದಂಪತಿಗಳಿಗೆ ದೀರ್ಘಾಯುರಾರೋಗ್ಯ ಸುಖಸಂಪತ್ತುಂಟಾಗಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರಿಟರಿಗಳೊಡನೆ ಕಳೆದ ತಾ॥ ೯ ರಲ್ಲಿ ರಾಜಧಾನಿಗೆ ದಯಮಾಡಿಸುತ್ತಾರೆಂದು ಇಲ್ಲಿ ಊಟವುಪಚಾರಕ್ಕೆ ಅಣಿಮಾಡಲ್ಪಟ್ಟಿದ್ದಿತು. ಆದರೆ ಸದ್ಯದಲ್ಲಿ ಬರುವುದಿಲ್ಲವೆಂದು ಗೊತ್ತಾಗುತ್ತದೆ.

ರಾಜಧಾನಿಯ ಅಡ್ವೋಕೇಟರುಗಳಲ್ಲಿ ಬಹು ಹಿರಿಯರಾಗಿದ್ದ ಮಿ॥ ಕೆಂಗೀಗವಾಚಾರ್ಯರು ಪ್ಲೇಗುರೋಗಗ್ರಸ್ತರಾಗಿದ್ದು ಕಳೆದ ತಾ॥ ೪ ರಲ್ಲಿ ವಿಧಿವಶರಾದರು. ಇವರಿಗೆ ಮರಣಕಾಲದಲ್ಲಿ ೬೦ ವರ್ಷ ವಯಸ್ಸಾಗಿದ್ದಿತು.

ಶ್ರೀವಾಣೀವಿಲಾಸ ಸನ್ನಿಧಾನದ ಮಾತೃಶ್ರೀಯವರ ಮರಣದಿಂದ ರಾಜಕುಟುಂಬಕ್ಕುಂಟಾದ ದುಃಖಸೂಚನಾರ್ಥವಾಗಿ ಪ್ರತಿದಿನ ರಾತ್ರಿಯಲ್ಲಿಯೂ ಬೆಳಗಿನ ಜಾವದಲ್ಲೂ ಹಾರಿಸಲ್ಪಡುವ ಗುಂಡುಗಳೂ ಮಂಗಳವಾದ್ಯಗಳೂ ೩ ದಿನಗಳವರೆಗೂ ನಿಲ್ಲಿಸಲ್ಪಟ್ಟದ್ದುವು.

ರಾಜಧಾನಿಯ ಕೈಗಾರಿಕೆಯ ಪಾಠಶಾಲೆಯಿಂದ ಮದ್ರಾಸ್ ಸರ್ಕಾರದವರು ನಡೆಯಿಸುವ ಕೈಗಾರಿಕೆಯ ಪರೀಕ್ಷೆಗೆ ಹೋಗಿದ್ದ ೬೯ ವಿದ್ಯಾರ್ಥಿಗಳಲ್ಲಿ ೧೩ ವಿದ್ಯಾರ್ಥಿಗಳು ಉತ್ತೀರ್ಣರಾದರು. ಇವರಲ್ಲಿ ೧೨ ಜನರು ೧ ನೆಯ ತರಗತಿಯಲ್ಲಿ ತೇರ್ಗಡೆಯಾಗಿರುವರು

ತ್ಯಾಮಗೊಂಡ್ಲಿನ ಬ್ರಹ್ಮಶ್ರೀ ಅಗ್ನಿಹೋತ್ರ ನರಸಿಂಹಶಾಸ್ತ್ರಿಗಳು ಬರುವ ಯುಗಾದಿಯ ಹಬ್ಬದ ದಿವಸದಿಂದ ಪಶುಯಾಗವನ್ನು ಮಾಡಲುದ್ಯುಕ್ತರಾಗಿರುವರು ಈ ಕಾರ್ಯಕ್ಕಾಗಿ ಶ್ರೀಮನ್ಮಹಾರಾಜರವರು ೧೦೦ ರೂ. ಗಳನ್ನು ಸಹಾಯ್ಯಮಾಡಿರುವುದಾಗಿ ಅರಿಯುತ್ತೇವೆ.

ಬೆಂಗಳೂರಿಂದ ಇಂಗ್ಲೆಂಡು, ಸ್ಟ್ರೈಟ್ಸ್ ಅಥವಾ ಈಜಿಪ್ಟ್, ಏಡೆನ್, ದಕ್ಷಿಣ ಆಫ್ರಿಕಾ ಮತ್ತು ಸಿಂಗಪೂರ್ ಈ ಸ್ಥಳಗಳಿಗೆ ತಂತಿಯಿಲ್ಲದೆ ವಾಯು ಮೂಲಕ ವರ್ತಮಾನವನ್ನು ಕಳುಹಲು ಠಾಣಗಳನು ಕಟ್ಟುವುದಕ್ಕಾಗಿ ಮಾರ್ಕೊನಿ ಕಂಪನಿಯವರಿಗೆ ಇಂಡ್ಯಾ ಸರ್ಕಾರದವರು ಅನುಜ್ಞೆಯನ್ನಿತ್ತಿರುತ್ತಾರೆ.

ಕೆಲವರ್ಷಗಳ ಹಿಂದೆ ರಾಜಧಾನಿ, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಪೋಲೀಸು ಇನ್ಸ್‌ಪೆಕ್ಟರರಾಗಿಯೂ, ಕೆಲಕಾಲ ಬೆಂಗಳೂರ ಸೆಂಟ್ರಲ್ ಜೈಲರಾಗಿಯೂ ಇದ್ದು ಈಗ ಬೆಂಗಳೂರ ದಂಡಿನಲ್ಲಿ ಪೋಲೀಸು ಇನ್ಸ್‌ಪೆಕ್ಟರಾಗಿರುವ ಮಿ॥ ನಾಗವಾಕರ್‌ರವರು ಮರಳಿ ಮೈಸೂರ ಸರ್ಕಾರಿಯುದ್ಯೋಗಕ್ಕೆ ಬರಲು ಯತ್ನಿಸುತ್ತಿರುವುದಾಗಿ ಕೇಳುತ್ತೇವೆ.

ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರು ಅಂಗಸಾಧನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಳೆದ ತಾ॥ ೭ ರಲ್ಲಿ ಬಹುಮಾನವನ್ನು ದಯಪಾಲಿಸಿದರು. ಆ ಕಾಲದಲ್ಲಿ ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರವರೂ ಮಿ॥ ಕೇಂಬಲ್‌ರವರ ಪತ್ನಿಯವರೊಡನೆ ಅನಿರೀಕ್ಷಿತವಾಗಿ ಅಲ್ಲಿಗೆ ದಯಮಾಡಿಸಿದ್ದರೆಂದು ಕೇಳುತ್ತೇವೆ.

ಮೊದಲು ಹಾಸನದ ಡಿ॥ ಎಕ್ಸೈಸ್ ಆಫೀಸರಾಗಿದ್ದು ಶ್ರೀಮದ್ಯುವರಾಜರ ವಿವಾಹಕಾಲದಿಂದಲೂ ಅರಮನೆಯಲ್ಲಿ ಹೆಚ್ಚುಗಟ್ಟಲೆಯ ಉದ್ಯೋಗದಮೇಲೆ ನಿಯಮಿಸಲ್ಪಟ್ಟಿರುವ ಮಿ॥ ಎಂ. ರಂಗರಾಯರು ೨ ತಿಂಗಳ ರಜವನ್ನು ಪಡೆದುಕೊಂಡಿರುವ ಮಿ॥ ಜಹರುದ್ದೀನ್ ಮೆಕ್ಕಿಯವರ ಬದಲು ಕೋಲಾರ ಡಿ॥ ಎಕ್ಸೈಸ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕನ್ನಂಬಾಡಿಯಲ್ಲಿ ೨೦ ಜನ ಪೋಲೀಸು ಕಾನಸ್ಟೇಬಲುಗಳನ್ನೂ ಒಬ್ಬ ಜಮೇದಾರನನ್ನೂ ನಿಯಮಿಸಲು ಸರ್ಕಾರದ ಅಪ್ಪಣೆಯಾಗಿರುವುದರಿಂದ ಅಲ್ಲಿ ಒಂದು ಪೋಲೀಸು ಠಾಣವನ್ನು ಕಟ್ಟಲು ಸ್ಥಳ ಮೊದಲಾದುದನ್ನು ಗೊತ್ತುಮಾಡುವುದಕ್ಕಾಗಿ ಕಳೆದ ತಾ॥ ೩ ರಲ್ಲಿ ಪೋ॥ ಇ॥ ಜನರಲ್‌ರವರೂ ಮೈಸೂರ ಡಿ॥ ಡೆಪ್ಯುಟಿ ಕಮಿಷನರರೂ ಕನ್ನಂಬಾಡಿಗೆ ಹೋಗಿದ್ದು ಬಂದರು.

ಸರದಾರ್ ಕಾಂತರಾಜಅರಸಿನವರಿಗೆ ಪ್ರಾಪ್ತವಾಗಿರುವ ಮಾತೃವಿಯೋಗ ದುಃಖವನ್ನು ವಿಚಾರಿಸಲು ೨ ನೆಯ ಕೌನ್ಸಿಲರು ಮಿ॥ ದಳವಾಯಿ ದೇವರಾಜಅರಸಿನವರು ರಾಜಧಾನಿಗೆ ದಯಮಾಡಿಸಿದ್ದು ಕಳೆದ ಬುಧವಾರ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು, ಮತ್ತು ಈ ತಾ॥ ೧೪ ರಲ್ಲಿ ಇಲ್ಲಿಗೆ ದಯಮಾಡಿಸುವುದಾಗಿ ತಿಳಿಯುತ್ತೇವೆ. ದುಃಖವನ್ನು ವಿಚಾರಿಸಲು ದಯಮಾಡಿಸಿರುವ ಕರ್ನಲ್ ದೇಶರಾಜಅರಸಿನವರು ಇಲ್ಲಿಯೇ ಇರುವರು.

ಮೈಸೂರು ಮಹಾರಾಜಾ ಕಾಲೇಜಿನ ರೈಟರಾದ ಮಿ॥ ಎ. ಕೃಷ್ಣರಾಯರು ಹಿಂದೆ ಸಂಸ್ಥಾನದ ವಿದ್ಯಾಶಾಖೆಯ ಇ॥ ಜನರಲ್‌ರವರಾಗಿದ್ದು ಗತಿಸಿಹೋದ ಮಿ॥ ಜೆ. ವೀರ್‌ರವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳ ಪ್ರದರ್ಶನಾರ್ಥವಾಗಿ, ಪ್ರತಿ ವರ್ಷದಲ್ಲೂ ಈ ದೇಶದ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯ ಗಣಿತ ಭಾಗದಲ್ಲಿ ಹೆಚ್ಚು ನಂಬರನ್ನು ಪಡೆಯುವ ವಿದ್ಯಾರ್ಥಿಗಾಗಲಿ ಅಥವಾ ವಿದ್ಯಾರ್ಥಿನಿಗಾಗಲಿ ಮಿ॥ ವೀರ್‌ರವರ ಹೆಸರಿನಿಂದ ೩ ರೂ. ಗಳ ಬಹುಮಾನವನ್ನು ಸರ್ಕಾರದವರ ಮೂಲಕ ಕೊಡಲು ಏರ್ಪಡಿಸಿರುತ್ತಾರೆ

ರಾಜಧಾನಿಯವರು ಈ ತಾ॥ ೧೪ ರಲ್ಲಿ ಶ್ರೀಮದ್ಯುವರಾಜರನ್ನು ವಿನೋದೋತ್ಸವದಿಂದ ಸತ್ಕರಿಸಿ ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿ, ಶ್ರೀಯವರಿಗೆ ಚಕ್ರವರ್ತಿಯವರಿಂದ ಅತಿಶಯವಾದ ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾಗಿರುವ ಆನಂದಾತಿಶಯವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿದ್ದರಷ್ಟೆ. ಆದರೆ ಈ ಮಧ್ಯೆ ಸರದಾರ್ ಕಾಂತರಾಜಅರಸಿನವರ ಮಾತೃಶ್ರೀಯವರ ಮರಣದಿಂದ ರಾಜಕುಟುಂಬದವರಿಗೆ ವ್ಯಸನವು ಪ್ರಾಪ್ತವಾದುದರ ದೆಸೆಯಿಂದ ಮೇಲೆಕಂಡ ಪ್ರಯತ್ನವು ನಿಲ್ಲಿಸಲ್ಪಟ್ಟಿತಲ್ಲದೆ ಮತ್ತೊಂದುವೇಳೆ ನಡಿಸಲ್ಪಡುವ ಸಂಭವವಿಲ್ಲವೆಂದು ತೋರುತ್ತದೆ.

ಸರದಾರ್ ಕಾಂತರಾಜಅರಸಿನವರು ದೀರ್ಘಕಾಲ ರಜವನ್ನು ಪಡೆದುಕೊಳ್ಳುವುದಾಗಿಯೂ, ಅವರ ಸ್ಥಾನದಲ್ಲಿ ಬೆಂಗಳೂರ ಡಿ॥ ಜಡ್ಜರು ಮಿ॥ ಟಿ. ಪರಮಶಿವಯ್ಯರ್‌ರವರು ಎಕ್ಸೈಜ್ ಕಮಿಷನರಾಗಿ ನಿಯಮಿಸಲ್ಪಡುತ್ತಾರೆಂದೂ ಸರ್ ಇಜ್‌ಮೆಯವರು ಬರುವ ಜೂನ್ ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವುದರಿಂದ ೨ ನೆಯ ಜಡ್ಜರಾದ ರಾ॥ಬ॥ ಕೃಷ್ಣರಾಯರು ೨೦೦೦ ಸಂಬಳದ ಮೇಲೆ ಚೀಫ್‌ಜಡ್ಜರಾಗಿಯೂ, ಮೈಸೂರ್ ಡಿ॥ ಜಡ್ಜ ಮಿ॥ ಗ್ಲಮರ್‌ರವರು ಚೀಫ್‌ಕೋರ್ಟಿನ ೨ ನೆಯ ಜಡ್ಜರಾಗಿಯೂ ನಿಯಮಿಸಲ್ಪಡುತ್ತಾರೆಂದೂ ಡೇಲಿಪೋಸ್ಟ್ ಪತ್ರಿಕೆಯು ತಿಳಿಸುತ್ತದೆ. ಇದು ಎಷ್ಟರಮಟ್ಟಿಗೆ ನಿಜವಾಗಿರುವುದೋ ನೋಡಬೇಕಾಗಿದೆ.

ಮೈಸೂರ ಆಸ್ಥಾನ ಸಂಗೀತ ವಿದ್ವಾಂಸರಾದ ವಾಸುದೇವಾಚಾರರು ಜಲಂಧರದಲ್ಲಿ ನಡೆದ ಭರತಖಂಡದ ಸಂಗೀತ ವಿದ್ವತ್ಪರಿಷತ್ತಿಗೆ ಹೋಗಿದ್ದು ಅಲ್ಲಿಂದ ಅನೇಕ ಸಂಸ್ಥಾನಗಳಲ್ಲಿ ಸಂಚರಿಸಿ ಭೂಪಾಲ ಸಂಸ್ಥಾನಕ್ಕೆ ಬಂದು ಅಲ್ಲಿ ಬಂಗಾರದ ಪದಕವನ್ನು ಪಡೆದುಕೊಂಡು ಬೊಂಬಾಯಿಗೆ ಬರಲು ಅಲ್ಲಿ ಗತಿಸಿದ ಸರ್ ಕೆ. ಶೇಷಾದಿಅಯ್ಯರ್‌ರವರ ಕನಿಷ್ಠಪುತ್ರರಾದ ಮಿ॥ ಕೆ. ಎಸ್. ರಾಮಸ್ವಾಮಿಅಯ್ಯರ್ ಬಿ. ಎ, ಬಿ. ಎಲ್ ರವರ ಅಧ್ಯಕ್ಷತೆಯಿಂದ ಸ್ಥಾಪಿತವಾಗಿರುವ ಸೌತ್ ಇಂಡಿಯನ್ ಅಸೋಸಿಯೇಷನ್ನಿನವರು ಒಂದು ದೊಡ್ಡ ಸಭೆಯನ್ನು ಕೂಡಿಸಿ ಒಂದು ಬಂಗಾರದ ಪದಕವನ್ನು ಬಹುಮಾನಿಸಿದರು. ಎಂದು ನಮ್ಮ ಪತ್ರಿಕಾವಾಚಕರೊಬ್ಬರು ತಿಳಿಸುತ್ತಾರೆ.

ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರು ೨೩ ವರ್ಷಗಳಿಂದಲೂ ಮೈಸೂರ ಸಂಸ್ಥಾನದಲ್ಲಿ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟ್, ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್ ಪೋಲೀಸ್ ಇ॥ ಜನರಲ್ ಮತ್ತು ಎಕ್ಸೈಜ್ ಕಮಿಷನರ್ ಈ ಉದ್ಯೋಗಗಳನ್ನು ಬಹು ಸಮರ್ಪಕತೆಯಿಂದ ನಿರ್ವಹಿಸಿರುವ ಪ್ರಯುಕ್ತ ಅವರು ಅಸ್ವಸ್ಥರಾಗಿದ್ದ ಕಾಲದಲ್ಲಿ ಎಂದರೆ ೧೯೧೧ ನೆಯ ಡಿಸೆಂಬರ್ ತಾ॥ ೨೯ ರಿಂದ ೧೯೧೨ ನೆಯ ಫೆಬ್ರುವರಿ ತಾ॥ ೧೯ ರ ವರೆಗೆ ಅವರು ಉದ್ಯೋಗದ ಮೇಲೆ ಇದ್ದಂತೆಯೇ ಭಾವಿಸಲ್ಪಟ್ಟು ಪೂರ್ಣವಾದ ಸಂಬಳವನ್ನು ಕೊಡುವಹಾಗೆ ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿರುತ್ತದೆ. ಇವರು ಏಪ್ರಿಲ್ ತಾ॥೧೦ ರಲ್ಲಿ ಮದರಾಸಿಗೆ ಹೋಗಿ ಅಲ್ಲಿಂದ ಕೊಲಂಬೋ ಮಾರ್ಗವಾಗಿ ಸೀಮೆಗೆ ಪ್ರಯಾಣಮಾಡುವರೆಂದು ತಿಳಿಯಬರುತ್ತದೆ.

ಕಳೆದ ತಾ॥ ೩ ರಲ್ಲಿ ರಾಜಧಾನಿಯ ವೆಲ್ಲಿಂಗ್‌ಟನ್ ಬಂಗಲೆಯ ಇದಿರು ಭಾಗದಲ್ಲಿರುವ ಒಂದು ಬಂಗಲೆಯೊಳಗೆ ಕಟ್ಟಲ್ಪಟ್ಟಿದ್ದ ಒಂದು ಸಾರಂಗವು ಹಗ್ಗವನ್ನು ಕಿತ್ತುಕೊಂಡು ಅಲ್ಲಿ ಕುದುರೆ ಬಂಡಿಯನ್ನು ಬಿಟ್ಟುಕೊಂಡಿದ್ದ ಮಿ॥ ಅಬ್ಬಾಬುಕರ್‌ಸೇಟನ ಆಳಿನ ಹೊಟ್ಟೆಯನ್ನು ತಿವಿದುಬಿಟ್ಟಿತು. ಅದರ ಕೊಂಬು ಹೊಟ್ಟೆಯಿಂದ ಬೆನ್ನಿನೊಳಗೆ ಹಾದು ಹೊರಗೆ ಬಂದಿದ್ದುದರಿಂದ ರಕ್ತವು ಹರಿದು ಸ್ಮೃತಿತಪ್ಪಿ ಇರಲು ಕೂಡಲೆ ದೊಡ್ಡಾಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟನು. ಆದಾಗ್ಯೂ ಅವನು ಗುಣವನ್ನು ಹೊಂದದೆ ಅದೇ ರಾತ್ರಿ ಸತ್ತುಹೋದನು. ಆ ಆಳು ಸಾಯುವ ಕಾಲದಲ್ಲಿ ಮ್ಯಾಜಿಸ್ಟ್ರೇಟರಿಗೆ ಆ ಸಾರಂಗವು ಕಟ್ಟಿದ್ದ ಹಗ್ಗವನ್ನು ಕಿತ್ತುಕೊಂಡು ಬಂದು ತನ್ನನ್ನು ತಿವಿದು ಬಿಟ್ಟಿತೆಂದು ಹೇಳಿರುವುದಾಗಿಯೂ, ಕ್ರೂರಮೃಗವನ್ನು ಭದ್ರವಾಗಿ ಕಟ್ಟಿ ಎಚ್ಚರಿಕೆಯಿಂದ ನೋಡಿಕೊಳ್ಳದೆ ಹೋದ ಅಪರಾಧಕ್ಕೆ ಅದರ ಯಜಮಾನನನ್ನು ಗುರಿಮಾಡಬೇಕೆಂದು ಅಪ್ಪಣೆಮಾಡಿರುವುದಾಗಿಯೂ ಕೇಳುತ್ತೇವೆ.

ಧೋಂಡುಸಾ ಎಂಬುವನು ಪರಾಭವ ಸಂವತ್ಸರದ ಮಾರ್ಗಶೀರ್ಷ ಎಂದರೆ ೧೯೦೬ ನೆಯ ಡಿಸೆಂಬರ್ ತಿಂಗಳಲ್ಲಿ ಧೋಂಡುಬಾಯಿ ಎಂಬಾಕೆಯನ್ನು ಮದುವೆಯಾಗಿ ಒಂದು ವರ್ಷಕಾಲ ನಂತರ ಮನೆಯಲ್ಲಿದ್ದು ಅನಂತರ ತನ್ನ ಚಿಕ್ಕ ವಯಸ್ಸಿನಲ್ಲಿ ಮಾಡಿಕೊಂಡಿದ್ದ ದೇವರ ಹರಿಕೆಯನ್ನು ತೀರಿಸಲು ಪರಸ್ಥಳಕ್ಕೆ ಹೋಗಿರುವಾಗ್ಗೆ, ಅವನ ಹೆಂಡತಿ ಧೋಂಡುಬಾಯಿಯನ್ನು ಅವಳ ತಾಯಿ ಶೇಷೂಬಾಯಿಯು ಕೃಷ್ಣಪ್ಪನೆಂಬುವನಿಗೆ ೧೯೧೧ ನೆಯ ಅಕ್ಟೋಬರ್ ತಿಂಗಳಲ್ಲಿ ಮದುವೆಯನ್ನು ಮಾಡಿಕೊಟ್ಟಳು. ಆ ಧೋಂಡುಬಾಯಿಯ ಮೊದಲನೆಯ ಗಂಡನು ಬಂದು ಈಗ ತನ್ನ ಹೆಂಡತಿ ಧೋಂಡುಬಾಯಿ, ಅವಳ ಎರಡನೆಯ ಗಂಡ ಕೃಷ್ಣಪ್ಪ ಮತ್ತು ಅವಳ ತಾಯಿ ಶೇಷೂಬಾಯಿ ಈ ಮೂವರುಗಳ ಮೇಲೆ ಬೆಂಗಳೂರ ಮ್ಯಾಜಿಸ್ಟ್ರೇಟರಲ್ಲಿ ಮಾಡಿದ್ದ ವಿವಾದವು ಸೆಷನ್ಸ್‌ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ ಕೃಷ್ಣಪ್ಪನಿಗೆ ೩ ತಿಂಗಳ ಕಠಿನ ಕಾರಾಗೃಹವಾಸವೂ, ೨೦೦ ರೂ. ಗಳ ದಂಡವೂ, ದಂಡವನ್ನು ಕೊಡಲು ತಪ್ಪಿದಲ್ಲಿ ಇನ್ನೂ ೩ ತಿಂಗಳ ಕಠಿನ ಕಾರಾಗೃಹವಾಸವೂ, ಶೇಷೂಬಾಯಿಗೂ ಅವಳ ಮಗಳು ಧೋಂಡುಬಾಯಿಗೂ ೩ ತಿಂಗಳ ಸಾಧಾರಣ ಕಾರಾಗೃಹವಾಸವೂ ವಿಧಿಸಲ್ಪಟ್ಟಿತಲ್ಲದೆ ೨೦೦ ರೂ. ಗಳು ಧೋಂಡುಸಾ ಎಂಬುವನಿಗೆ ಸಲ್ಲಬೇಕೆಂದು ತೀರ್ಮಾನಿಸಲ್ಪಟ್ಟಿತು

ವರ್ತಮಾನ ಸಂಗ್ರಹವು.

ಹೈದರಾಬಾದಿನ ನೈಜಾಮರವರಿಗೆ ಪುತ್ರೋತ್ಸವ ಪ್ರಯುಕ್ತವಾದ ಸಂತೋಷ ಸೂಚನಾರ್ಥವಾಗಿ ಕಳೆದ ತಾ॥ ೪ ರಲ್ಲಿ ೨೧ ಗುಂಡು ಹಾರಿಸಲ್ಪಟ್ಟವು. ಮತ್ತು ಎಲ್ಲಾ ಸರ್ಕಾರಿಯ ಕಚೇರಿಗಳು ಮುಚ್ಚಲ್ಪಟ್ಟಿದ್ದುವು.

ಲೈಲಾಪುರದಲ್ಲಿ ಕೆಲಕಾಲ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಬ್ಯಾರಿಸ್ಟರ್ ಹಕೀಂ ಅಮಿನುದ್ದೀನ್ ಎಂಬಾತನು ಮೋಸದ ಮತ್ತು ಸೃಷ್ಟಿಯ ಅಪರಾಧಗಳಿಗಾಗಿ ೧೦೦ ರೂ. ದಂಡವನ್ನು ೨ ವರ್ಷಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನೂ ಲಾಹೋರಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ವಿಧಿಸಲ್ಪಟ್ಟನು.

ಕಳೆದ ತಾ॥ ೮ರಲ್ಲಿ ಭೂಪಾಲ ಸಂಸ್ಥಾನದ ಬೇಗಂರವರಿಗೂ ವೈಸ್‌ರಾಯ ದಂಪತಿಗಳಿಗೂ ದರ್ಶನ ಪ್ರತಿದರ್ಶನಗಳಾದುವು. ಮತ್ತು ವೈಸ್‌ರಾಯರು ಅದೇ ಸಾಯಂಕಾಲದಲ್ಲಿ ಸುಲ್ತಾನಾ ಜಹಾಂಗೀರ್ ಪ್ರಾಸಾದಕ್ಕೆ ಹೋಗಿದ್ದು ಅಲ್ಲಿ ಶೇಖರಿಸಲ್ಪಟ್ಟಿದ್ದ ಕಲಾಕೌಶಲ್ಯ ವಸ್ತುಗಳನ್ನು ಪರಾಮರ್ಶಿಸಿಕೊಂಡು ಬಂದರು.

ಕಳೆದ ೮ರಲ್ಲಿ ಬೆಳಗಾವಿನಲ್ಲಿ ಕೂಡಿದ್ದ ಜೈನ ಮಹಿಳಾಪರಿಷತ್ತಿನವರು ಜೈನ ವಿಧವೆಯರು ವಿದ್ಯಾವ್ಯಾಸಂಗದಲ್ಲೂ ಸೋದರಿಯರ ಅಭ್ಯುದಯಕಾರ್ಯದಲ್ಲೂ ನಿರತರಾಗಿರಬೇಕೆಂದೂ, ಬಾಲ್ಯವಿವಾಹವು ನಿಷಿದ್ಧವಾದುದೆಂದೂ, ಪ್ರತಿಯೊಂದು ಜೈನ ಕುಟುಂಬದವರು ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಸಬೇಕೆಂದೂ' ನಿರ್ಧಾರಗಳನ್ನು ಮಾಡಿದರು.

ಕಳೆದ ತಾ॥ ೨ರಲ್ಲಿ ರಂಗೂನಿನಲ್ಲಿ ಒಬ್ಬ ಸೆಟ್ಟಿಯ ಮನೆಯು ಬೆಂಕಿಯಿಂದ ಹೊತ್ತಿಕೊಂಡು ಅದರ ಜ್ವಾಲೆಯು ೪೦೦ ಗಜಗಳ ದೂರದವರೆಗೆ ಹರಡಿಕೊಂಡಿತು. ಇದರಿಂದ ಮರಗಳನ್ನು ಕೊಯ್ಯುವ ೭ ಕಾರ್ಖಾಲಯಗಳೂ ೪೫ ಮರದ ಕೋಠಿಗಳೂ ಸುಟ್ಟು ಭಸ್ಮವಾಗಿ ೧೦ ಲಕ್ಷ ರೂಪಾಯಿಗಳ ವರೆಗೆ ನಷ್ಟವಾಗಿರುವುದೆಂದು ನಿರೀಕ್ಷಿಸಲ್ಪಟ್ಟಿದೆ. ಇಂತಹ ನಷ್ಟವು ಕಳೆದ ೨೦ ವರ್ಷಗಳಿಂದಲೂ ಅಲ್ಲಿ ಆಗಿರಲಿಲ್ಲವು.

ಕಳೆದ ತಾ॥ ೨ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು [illegible] ಪ್ಲೇಗು ಮರಣವಾಯಿತು. ಇದರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ೯೭೩; ಮದ್ರಾಸಾಧಿಪತ್ಯದಲ್ಲಿ ೨೪೧೪; ಬಂಗಾಳದಲ್ಲಿ [illegible]; ಸಂಯುಕ್ತ ಪ್ರಾಂತ್ಯಗಳಲ್ಲಿ ೪೩೩೩; ಪಂಜಾಬಿನಲ್ಲಿ ೩೪೪; ಅಜ್ಮೀರದಲ್ಲಿ ೧೯; ಮಧ್ಯಪ್ರಾಂತಗಳಲ್ಲಿ ೧೯೩೩; ಮೈಸೂರ ಸೀಮೆಯಲ್ಲಿ ೧೦೩; ಹೈದರಾಬಾದು ಸೀಮೆಯಲ್ಲಿ ೪೪೧೯ ಮಧ್ಯಹಿಂದೂಸ್ಥಾನದಲ್ಲಿ ೨೩೩; ರಾಜಪುತಾನದಲ್ಲಿ ೪೯; ಮತ್ತು ಕಾಶ್ಮೀರದಲ್ಲಿ ೪ ಈ ಪ್ರಕಾರ ಮರಣಗಳಾಗಿರುತ್ತವೆ.

ಭಾರತೀಯರ ವಿದ್ಯಾಭಿವೃದ್ಧಿಗಾಗಿ ೫೦ ಲಕ್ಷ ರೂ. ಗಳನ್ನು ಕೊಡತಕ್ಕದೆಂದು ಡಿಲ್ಲಿ ದರ್ಬಾರು ಕಾಲದಲ್ಲಿ ಚಕ್ರವರ್ತಿಯವರ ವರದಾನವಾಗಿರುವುದಷ್ಟೆ. ಈ ೫೦ ಲಕ್ಷದಲ್ಲಿ ಮದ್ರಾಸಾಧಿಪತ್ಯಕ್ಕೆ ಕೊಡಲ್ಪಟ್ಟಿರುವ ೭ ಲಕ್ಷ ರೂ. ಗಳಲ್ಲಿ ಬಾಲಕರ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ೪೫೫೦೦೦ ರೂ.; ಬಾಲಿಕೆಯರ ವಿದ್ಯಾಭ್ಯಾಸಕ್ಕಾಗಿ ೭೫೦೦೦ ರೂ.; ವಿದ್ಯಾರ್ಥಿನಿಲಯಗಳಿಗಾಗಿ ೯೬೦೦೦; ಕೈಗಾರಿಕೆಯ ವಿದ್ಯಾಭ್ಯಾಸಕ್ಕಾಗಿ ೧೨೦೦೦ ರೂ.; ಯೂರೋಪಿಯನರ ವಿದ್ಯಾಭ್ಯಾಸಕ್ಕಾಗಿ ೫೨೦೦೦ ರೂ.; ಈ ಪ್ರಕಾರ ವಿನಿಯೋಗಿಸಲ್ಪಡುವುದು.

ಕವಿರತ್ನ ಜ್ಞಾನಸುಂದರಿ ಎಂಬ ನಾರೀಮಣಿಯು ಭೋಗ (ವೇಶ್ಯ) ಕುಲದಲ್ಲಿ ಹುಟ್ಟಿದವಳಾದಾಗ್ಯೂ, ತನ್ನ ದೇಹವನ್ನು ವಿಕ್ರಯಿಸಿ ಜೀವಿಸುವ ಕುಲವೃತ್ತಿಯನ್ನು ಬಿಟ್ಟು ಸಂಸ್ಕೃತದಲ್ಲೂ, ಸಂಗೀತದಲ್ಲೂ ಪೂರ್ಣ ಪಾಂಡಿತ್ಯವನ್ನು ಸಂಪಾದಿಸಿ ಸಂಸ್ಕೃತದಲ್ಲಿ ಕವಿತ್ವವನ್ನು ಮಾಡುವ ಅದ್ಭುತ ಸಾಮರ್ಥ್ಯವನ್ನುಳ್ಳವಳಾಗಿ ಮೈಸೂರು, ತಿರುವಾಂಕೂರು ಪುದುಕೋಟೆ ಮೊದಲಾದ ರಾಜಸಂಸ್ಥಾನಗಳಲ್ಲಿ ಒಳ್ಳೆಯ ಗೌರವ ಪ್ರತಿಷ್ಠೆಯನ್ನು ಪಡೆದು ಸರಸ್ವತೀಯವತಾರವೆಂದು ಭ್ರಮಿಸುವಷ್ಟು ಪಂಡಿತಳಾಗಿದ್ದರೂ ನಿರ್ಮಲಶೀಲಮಣಿಯಾಗಿಯೂ, ಬಹು ಗುಣಸಂಪನ್ನೆಯಾಗಿಯೂ, ದೈವಭಕ್ತಿ ಗುರುಭಕ್ತಿಯುತಳಾಗಿಯೂ ಇರುವುದು ಬಹು ಶ್ಲಾಘ್ಯವಾಗಿದೆ. ಈಕೆಗೆ ಈಗ ೫೦ ವರ್ಷ ವಯಸ್ಸಾಗಿದೆ. ಈ ಸ್ತ್ರೀಕುಲತಿಲಕವು ತಾನು ಆರ್ಜಿಸುವ ಧನದಲ್ಲಿ ತನ್ನ ಅನ್ನವಸ್ತ್ರಕ್ಕೆ ಕಳೆದು ಮಿಗುವುದನ್ನು ತನ್ನಾಶ್ರಿತಜನರ ಸಹಾಯಾರ್ಥವಾಗಿಯೂ, ತನ್ನ ವಿದ್ಯಾಗುರುಗಳಾದ ಕುಂಭಕೋಣದ ಕುಪ್ಪುಸ್ವಾಮಿ ಶಾಸ್ತ್ರಿಗಳ ಗುರುದಕ್ಷಿಣೆಗಾಗಿಯೂ ವಿನಿಯೋಗಿಸುವಳು. ಈ ಕವಿರತ್ನ ಜ್ಞಾನಸುಂದರಿಯು ಇತರರಿಗೆ ಮಾರ್ಗದರ್ಶಿಕಳಾಗಿರುವಳು.

ಗುಜರಾತು, ಕಾಥೆವಾಡ ಮತ್ತು ಕಚ್ಛ ಈ ಸ್ಥಳಗಳಲ್ಲಿ ದನಗಳ ಮೇವಿಗೂ ನೀರಿಗೂ ಉಂಟಾಗಿರುವ ತೊಂದರೆಯನ್ನು ವರ್ಣಿಸತೀರದು. ಇಂತಹ ತೊಂದರೆಯ ಕಾಲದಲ್ಲೇ ಪದಾರ್ಥಗಳನ್ನು ಸಾಗಿಸುವ ರೈಲ್ವೆಯ ಬಂಡಿಗಳಿಗೆ ಅಭಾವವಾಗಿರುವುದು ಇನ್ನೂ ಅತ್ಯಂತ ಶೋಚನೀಯವಾಗಿದೆ. ಜನರಿಗುಂಟಾಗಿರುವ ಕ್ಷಾಮವು ಸಾರ್ವತ್ರಿಕವಾಗಿಲ್ಲದಿದ್ದರೂ ಕೆಲಕಡೆ ಬಹು ಭೀಕರವಾಗಿರುತ್ತದೆ. ಪಂಚಮಹಲುಗಳಲ್ಲಿ ಸಂಪೂರ್ಣವಾಗಿದ್ದು ನಿವಾರಣಾ ಕಾರ್ಯಗಳಿಂದಲೂ ಭಿಕ್ಷೆಯಿಂದಲೂ ಜೀವಿಸುವವರ ಸಂಖ್ಯೆಯು ಒಂದೇ ಸಮನಾಗಿ ಹೆಚ್ಚುತ್ತಿದೆ. ೩ ಲಕ್ಷ ಪ್ರಜಾಸಂಖ್ಯೆಯುಳ್ಳ ಈ ಪ್ರಾಂತದಲ್ಲಿ ೩೦೦೦೦ ಜನರು ಮೇಲೆಕಂಡ ಮಾರ್ಗದಿಂದ ಹೊಟ್ಟೆಯನ್ನು ಹೊರೆಯುತ್ತಿದ್ದಾರೆ. ಡಿಸ್ಟ್ರಿಕ್ಟ್ ಕಲೆಕ್ಟರು ಇದೊಂದು ಡಿಸ್ಟ್ರಿಕ್ಟಿನಲ್ಲಿ ಕ್ಷಾಮನಿವಾರಣಾ ಕಾರ್ಯಗಳಿಗಾಗಿ ೩ ಲಕ್ಷ ರೂ. ಗಳನ್ನು ವ್ಯಯಮಾಡುವವರಾಗಿರುವರು. ಇತರ ಡಿಸ್ಟ್ರಿಕ್ಟುಗಳಲ್ಲೂ ಜನರ ಕಷ್ಟನಿವಾರಣಾ ಕಾರ್ಯಗಳು ಮಾಡಲ್ಪಡಬೇಕಾದುದು ಆವಶ್ಯಕವಾಗಿರುವುದು. ಎಂದು ಬೊಂಬಾಯಿನಲ್ಲಿ ಇರುವ ಕ್ಷಾಮನಿವಾರಣಾ ಫಂಡಿನ ಸಂಘದವರು ವರದಿಯನ್ನು ಮಾಡಿರುತ್ತಾರೆ.

ಸಾರ್ವಭೌಮರವರು ಭರತಖಂಡಕ್ಕೆ ಆಗಮಿಸಿದ್ದುದರ ಜ್ಞಾಪನಾರ್ಥವಾಗಿ ಸರ್ಕಾರಿಯ ಕೆಲಸಗಾರರೆಲ್ಲರಿಗೂ ಉಚಿತವಾಗಿ ಕೊಡಲ್ಪಡುವ ಅರ್ಧತಿಂಗಳ ಸಂಬಳವು ತಮಗೆ ಕೊಡಲ್ಪಡುವುದಿಲ್ಲವೆಂದು ಜಮಾಲಪುರದ ರೈಲ್ವೆಯ ಕೆಲಸಗಾರರು ಕಂಟ್ರಾಕ್ಟರ ಮುಖೇನ ತಿಳಿದುದಲ್ಲದೆ, ಕಂಟ್ರಾಕ್ಟರುಗಳೇ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿ ಹಣವನ್ನು ಕೊಡದಂತೆ ಅಡ್ಡಿಮಾಡಿರುವರೆಂದೂಹಿಸಿ ೧೦೦೦ ಜನರವರೆಗೆ ಕಳೆದ ತಾ॥ ೧ರಲ್ಲಿ ಕೆಲಸಕ್ಕೆ ಹೋಗದೆ ಗುಂಪುಕೂಡಿಕೊಂಡು ಇತರ ಕೆಲಸಗಾರರು ಹೋಗದಂತೆ ಅಡ್ಡಿಪಡಿಸುತ ಗೊಂದಲವನ್ನು ಮಾಡುತ್ತಿರುವಾಗ್ಗೆ, ಪೋಲೀಸರು ಬಂದು ಚದರಿಸಲು ಪ್ರಯತ್ನಿಸಿದರು. ಆಗ ಆ ದಂಗೆಯವರು ಇಟ್ಟಿಗೆಯ ಚೂರುಗಳಿಂದ ಪೋಲೀಸರನ್ನು ಹೊಡೆಯ ತೊಡಗಿದರು. ಇದರಿಂದ ಸಬ್ ಇನ್ಸ್‌ಪೆಕ್ಟರಿಗೆ ಅಪಾಯಕರವಾದ ಪೆಟ್ಟುಗಳು ಬಿದ್ದುವು. ಅಷ್ಟರಲ್ಲಿ ಇತರ ಕೆಲಸಗಾರರೂ ೪೦೦೦ ವರೆಗೆ ದಂಗೆಯವರೊಡನೆ ಸೇರಿ, ಮಾಂಘೈರಿನಿಂದ ಬಂದ ಆಯುಧಪಾಣಿಗಳಾದ ಪೋಲೀಸರು ಎಷ್ಟು ಪ್ರಯತ್ನಿಸಿದಾಗ್ಯೂ ಚದರಿಹೋಗದೆ ಅವರ ಮೇಲೆ ಬೀಳಲು ಅವರಿಗೂ ಕದನವಾಗಿ ೯ ಜನ ಪೋಲೀಸಿನವರಿಗೆ ಪ್ರಾ[illegible] ಪೆಟ್ಟುಬಿದ್ದಿತು. ದಂಗೆಯವರು ಯೂರೋಪ್ಯರ ಮನೆಗಳಿಗೆ ಕಲ್ಲುಗಳೆನ್ನೆಸದು ಕಿಟಕಿಗಳ ಗಾಜುಗಳೆನ್ನೆಲ್ಲಾ ಒಡೆದು ಹಾಕಿದರು. ತಾ॥ ೪ ರ ವರೆಗೂ ಗೊಂದಲವು ನಿಲ್ಲದಿದ್ದುದರಿಂದ ಪಾಟ್ನಾದಿಂದ ಸೈನಿಕರು ಬಂದು ಶಮನಮಾಡಬೇಕಾಗಿ ಬಂದಿತು. ೪೦ ಜನರು ಸೆರೆ ಹಿಡಿಯಲ್ಪಟ್ಟಿರುತ್ತಾರೆ. ಕೆಲಸಗಾರರು ಇನ್ನೂ ಕೆಲಸಕ್ಕೆ ಹೋಗುವವರಾಗಿಲ್ಲವು.

ತಾ॥ ೩.— ಯುದ್ಧ ಆರಂಭವಾದಂದಿನಿಂದ ಇಟಲಿಯವರ ಕಡೆ ೫೩೩ ಜನರು ಸತ್ತಿರುತ್ತಾರೆ ಮತ್ತು ೨೦೮ ಜನರು ಅದೃಶ್ಯವಾಗಿರುತ್ತಾರೆ.

ತಾ॥ ೪.— ಡೆರ್ನಾ ಎಂಬಲ್ಲಿ ತಮ್ಮ ಸ್ಥಳಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದ ಇಟಲಿಯವರ ಮೇಲೆ ತುರ್ಕಿಯವರು ಮತ್ತು ಅರಬ್ಬಿಯವರು ಬಿದ್ದು ಬಂದೂಕಿನ ಸನೀನುಗಳಿಂದ ತಿವಿಯಲುದ್ಯುಕ್ತರಾಗಿರುವಲ್ಲಿ ಇಟಲಿಯ ಯುದ್ಧಸೇನೆಯು ಬಂದು ಸಾಯಂಕಾಲದವರೆಗೂ ಶತ್ರುಗಳ ಸಂಗಡ ಹೋರಾಡುತ್ತಿದ್ದುದರಿಂದ ತುರ್ಕಿಯವರು ಹಿಮ್ಮೆಟ್ಟಿದರು. ಈ ಹೋರಾಟದಲ್ಲಿ ತುರ್ಕಿಯವರಿಗಾದ ನಷ್ಟವು ಗೊತ್ತಾಗಿಲ್ಲ ಆದರೆ ಇಟಲಿಯವರ ಕಡೆ ಗಾಯವಡೆದವರು ಮತ್ತು ಸತ್ತವರು ಸೇರಿ ೧೫೦ ಜನಗಳಾಗುವರು.

ತಾ॥ ೩-೪ ನೆಯ ತಾ॥ ನಲ್ಲಿ ಡೆರ್ನಾದಲ್ಲಾದ ಕದನದಲ್ಲಿ ಇಟಲಿಯವರ ಕಡೆ ೩೦ ಜನರು ಸತ್ತರು, ಮತ್ತು ೧೧೦ ಜನರು ಗಾಯವಡೆದರು

ತಾ॥ ೮.— ೨,೦೦೦ ತುರ್ಕಿಯವರು ಟೊಬ್ರುಕ್ ಎಂಬಲ್ಲಿ ಮಂಗಳವಾರರಾತ್ರಿ ಇಟಲಿಯವರ ಮೇಲೆ ಬಿದ್ದು ಹೋರಾಡಿದರು. ಇಟಲಿಯವರು ಬಹು ಶೌರ್ಯವಾಗಿ ತುಪಾಕಿಗಳನ್ನು ಹಾರಿಸಿ ೪೦೦ ಜನ ತುರ್ಕಿಯವರನ್ನು ಕೊಂದು ಉಳಿದವರನ್ನೋಡಿಸಿಬಿಟ್ಟರು. ಇಟಲಿಯವರ ಕಡೆ ಒಬ್ಬರು ಸತ್ತರು ಮತ್ತು ೫ ಜನರು ಗಾಯವಡೆದರು. ತುರ್ಕಿಯವರ ಸ್ವಾಧೀನದಲ್ಲಿರುವ ಛಾರ್ಡೆ ದ್ವೀಪಗಳಲ್ಲೊಂದಾದ ಸಾಮಿಸ್ ಎಂಬ ದ್ವೀಪವನ್ನು ಇಟಲಿಯವರು ಸ್ವಾಧೀನಪಡಿಸಿಕೊಂಡು ಅಲ್ಲಿ ತಮ್ಮ ಸೇನೆಯನ್ನು ತಂದಿರಿಸಿರುವರೆಂದು ಲೆಂಪುಕದಿಂದ ಬಂದ ಕಾಗದದಿಂದ ತಿಳಿಯಬರುತ್ತದೆ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ॥ ೧೧ ನೆಯ ಸೋಮವಾರ.

ಪರರಾಜ್ಯಗಳ ಪ್ರಕೃತಸ್ಥಿತಿಯು.

ಗ್ರೇಟ್ ಬ್ರಿಟನ್ನಿನ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರು ಹೆಚ್ಚು ಬೆಲೆಯನ್ನು ಕೊಟ್ಟು ಆಹಾರ ಪದಾರ್ಥಗಳನ್ನು ಕೊಂಡು ಜೀವಿಸಲು ತಮಗೆ ಬರತಕ್ಕ ಕೂಲಿಯು ಸಾಲುವುದಿಲ್ಲವಾದ ಪ್ರಯುಕ್ತ ತಮ್ಮ ಕೂಲಿಯನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರೂ ಗಣಿಗಳ ಯಜಮಾನರುಗಳು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಡದೆ ಹೋದುದರಮೇಲೆ, ೧೦ ಲಕ್ಷ ಜನರು ಹಠವಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ ಗ್ರೇಟ್ ಬ್ರಿಟನ್ನಿನಲ್ಲಿ ಕಾರ್ಖಾನೆಗಳ ಯಂತ್ರಗಳೂ, ಹೊಗೆಯ ಹಡಗುಗಳೂ ರೈಲ್ವೆಯ ಇಂಜನ್ನುಗಳೂ ಬರಿದು ಕಲ್ಲಿದ್ದಲಿನ ಸಹಾಯ್ಯದಿಂದಲೇ ನಡೆಯಬೇಕಾಗಿವೆ. ಮತ್ತು ಅಲ್ಲಿಯ ಜನರು ಅಡಿಗೆಯನ್ನು ಮಾಡಲೂ, ಚಳಿಯಿಂದ ಮೈಯನ್ನು ಕಾಯಿಸಿಕೊಳ್ಳಲೂ ಕಲ್ಲಿದ್ದಲನ್ನೇ ವಿಶೇಷವಾಗುಪಯೋಗಿಸುತ್ತಿರುವರು. ಈಗ ಗಣಿಗಳಲ್ಲಿ ಕೆಲಸಮಾಡುವವರೆಲ್ಲರೂ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವುದರಿಂದ, ಕಲ್ಲಿದ್ದಲು ದೊರೆಯದೆ ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ; ಅನೇಕ ರೈಲ್ವೆಗಳೂ, ಹಡಗುಗಳೂ ಸಂಚರಿಸದೆ ನಿಂತುಹೋಗಿವೆ ಮತ್ತು ಜನರ ಊಟ ಉಪಚಾರ ಮೊದಲಾದುದಕ್ಕೆ ಅಡಚಣೆಯಾಗಿದೆಯಲ್ಲದೆ, ಅವುಗಳಲ್ಲಿ ಕೆಲಸಮಾಡತಕ್ಕವರು ನಿರುದ್ಯೋಗಿಗಳಾಗಿ ಜೀವನಕ್ಕೆ ತೊಂದರೆಯನ್ನು ಪಡಬೇಕಾಗಿಬಂದಿವೆ ಈ ಕಾರಣದಿಂದಲೇ ಜಾರ್ಜ್ ಪ್ರಭುಗಳು ಪರಸ್ಥಳ ಪ್ರಯಾಣಮಾಡುವುದು ಸಹ ನಿಂತುಹೋಗಿರುವುದು. ಈ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವವರಿಗೂ, ಅವರ ಯಜಮಾನರುಗಳಿಗೂ ಉಂಟಾಗಿರುವ ಅಸಮಾಧಾನಗಳೂ, ಹೋರಾಟಗಳೂ ಕೂಡಲೆ ಪರಿಹರಿಸಲ್ಪಟ್ಟು ಕೂಲಿಕಾರರೆಲ್ಲರೂ ಉದ್ಯೋಗದ ಮೇಲೆ ಹೋಗುವಂತೆ ಮಾಡಲ್ಪಡದಿದ್ದಲ್ಲಿ ಇತರ ಕಾರ್ಖಾನೆಗಳಲ್ಲೂ, ಹಡಗುಗಳಲ್ಲೂ, ರೈಲ್ವೆಗಳಲ್ಲೂ ಕೆಲಸಮಾಡುವವರು ಕಲ್ಲಿದ್ದಲು ಗಣಿಗಳ ಕೆಲಸಗಾರರ ಕೂಡ ಸೇರಿಕೊಂಡು ಗಲಭೆಯನ್ನು ಮಾಡುವ ಮತ್ತು ಇದರಿಂದ ಜನರ ಸಂಚಾರಕ್ಕೂ ಊಟಉಪಚಾರಾದಿಗಳಿಗೂ ಅಡಚಣೆಯಾಗಿ ಬಲು ತೊಂದರೆಯಾಗುವ ಸಂಭವವಿರುತ್ತದೆ ಈ ಕಾರಣದಿಂದಲೇ ಇಂಗ್ಲೆಂಡಿನ ಅಮಾತ್ಯಶ್ರೇಷ್ಠರಾದ ಮಿ॥ ಆಸ್ಕ್ವಿತ್‌ರವರು ಕೆಲಸಗಾರರ ಮತ್ತು ವ್ಯಾಪಾರಗಾರರ ಸಂಘಗಳ ಪ್ರತಿನಿಧಿಗಳಕೂಡ ಪರ್ಯಾಲೋಚಿಸಿ ಅವರ ಮೂಲಕವಾಗಿ ಗಣಿಗಳ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನೂ, ಮನಸ್ತಾಪಗಳನ್ನೂ ಹೋಗಲಾಡಿಸಿ ಪರಸ್ಪರ ಸಮಾಧಾನವನ್ನುಂಟುಮಾಡಬೇಕೆಂದು ಯತ್ನಿಸಿರುವರು. ಈ ಮಂತ್ರಿವರ್ಯರ ಪ್ರಯತ್ನವಿಶೇಷದಿಂದ ಮೇಲೆ ಕಂಡ ತೊಂದರೆಗಳು ಕೂಡಲೆ ಪರಿಹಾರವಾಗಿ ಅಲ್ಲಿಯ ಕೆಲಸಗಳೆಲ್ಲವೂ ಯಥಾಪ್ರಕಾರ ನಡೆಯುವಂತೆ ಆಗುವುವೆಂದು ನಿರೀಕ್ಷಿಸುತ್ತೇವೆ. ಹಾಗೆ ನಯಾಶೂನ್ಯರಾದ ಗಣಿಗಳ ಯಜಮಾನರುಗಳು ಮೈಮುರಿಯ ದುಡಿದು ತಮ್ಮ ಬೊಕ್ಕಸವನ್ನು ತುಂಬಿಸುವ ಕೆಲಸಗಾರರಿಗೆ ಅವರ ಉದರಭರಣಕ್ಕೆ ಸಾಕಾಗುವಷ್ಟು ಕೂಲಿಯನ್ನು ಕೊಡಲೊಪ್ಪದಿದ್ದಲ್ಲಿ ಬಹು ಅನರ್ಥವಾಗುವುದರಲ್ಲಿ ಸಂದೇಹವಿಲ್ಲವು.

ಚೈನಾದೇಶೀಯರು ಮಂಚು ವಂಶೀಯರ ರಾಜ್ಯದಾಡಳಿತಕ್ಕೆ ಅಂದಿಂದ ಜುಗುಪ್ಸೆಯನ್ನು ಹೊಂದಿ, ದೇಶಾಭಿಮಾನಾಗ್ರೇಸರನಾದ ಡಾಕ್ಟರ್ ಸನ್‌ಯಾಟ್‌ಸನ್ನಿನ ಪ್ರೇರಣೆಯಿಂದ ಪ್ರಭುಪಕ್ಷದವರ ಕೂಡ ಯುದ್ಧಮಾಡಿ ಅವರನ್ನು ಸೋಲಿಸಿ ಚಕ್ರವರ್ತಿಯನ್ನು ತಾನಾಗಿ ಪದಚ್ಯುತನಾಗುವಂತೆ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪನಗೊಳಿಸಿ ಅದಕ್ಕೆ ಡಾ॥ ಸನ್‌ಯಾಟ್ಸನ್ನನನ್ನು ಅಧ್ಯಕ್ಷನನ್ನಾಗಿ ಆರಿಸಿದರು ಈ ಸನ್‌ಯಾಟ್ಸನ್ನನು ಪ್ರಜಾಪ್ರಭುತ್ವವನ್ನು ರೂಢಮೂಲವನ್ನಾಗಿ ಮಾಡಬೇಕೆಂದು ತನ್ನ ದೂರದರ್ಶಿತ್ವ ಬುದ್ಧಿಯಿಂದ, ಚಕ್ರಾಧಿಪತ್ಯದ ಮುಖ್ಯ ಅಮಾತ್ಯನಾಗಿದ್ದು ಪ್ರಭುಪಕ್ಷವನ್ನು ಹಿಡಿದು ಪ್ರಜಾಪ್ರಭುತ್ವಪಕ್ಷದವರ ಕೂಡ ಕಾದಾಡಿದ ರಾಜತಂತ್ರ ನಿಪುಣನಾದ ಯುವಾನ್‌ಷಿಕಾಯಿಯನ್ನು ಪ್ರಜಾಪ್ರಭುತ್ವದ ಕಡೆಗೆ ತಿರುಗಿಸಿಕೊಂಡು, ಅಧ್ಯಕ್ಷಪದವಿಯಿಂದ ತಾನು ನಿವೃತ್ತನಾಗಿ, ಪ್ರಜೆಗಳೆಲ್ಲರೂ ಆತನನ್ನು ಅಧ್ಯಕ್ಷನನ್ನಾಗಿ ಆರಿಸುವಂತೆ ತಕ್ಕೇರ್ಪಾಟನ್ನು ಮಾಡಿದನು. ಈ ಪ್ರಜಾಪಕ್ಷದವರಿಗೆ ಪ್ರಭುಪಕ್ಷದವರಲ್ಲದೆ ಅನಾಯಕ ರಾಜ್ಯಾಭಿಲಾಷಿಗಳೂ ವಿರೋಧಿಗಳಾಗಿರುವರು. ಈ ಉಭಯಪಕ್ಷದವರೂ ಏನನ್ನೂ ಅರಿಯದ ಜನರನ್ನೂ, ಸೈನಿಕರನ್ನೂ ಪ್ರಜಾಪ್ರಭುತ್ವದವರ ಮೇಲೆ ಎತ್ತಿಕಟ್ಟಿ ಅವರ ಪಕ್ಷದ ಸೈನಿಕರ ಕೂಡ ಕಾದಾಡಿ ಊರುಗಳನ್ನು ಸೂರೆಮಾಡುತ ಬಲು ದಾಂಧಲೆಯನ್ನು ಮಾಡುತ್ತಿರುವರು. ಈ ಗಲಿಬಿಲಿಯು ಒಂದುಕಡೆಯಿಂದ ಮತ್ತೊಂದು ಕಡೆಗೆ ಹಬ್ಬುತ್ತಿದೆಯಲ್ಲದೆ ದಂಗೆಗಾರರ ಕೋಪವು ಉದ್ರೇಕವಾಗುತ್ತಿದೆ. ಈ ದೇಶದಲ್ಲಿ ಜಪಾನಿನವರಿಗೆ ಸೇರಿರುವ ಸ್ಥಳಗಳ ಮತ್ತು ಅಲ್ಲಿರುವ ಜಪಾನೀಯರ ರಕ್ಷಣಾರ್ಥವಾಗಿ ೨೦,೦೦೦ ಜಪಾನ್ ಸೈನಿಕರು ಕಳುಹಲ್ಪಟ್ಟಿರುತ್ತಾರೆ ಇದರಂತೆ ಇತರ ರಾಜ್ಯದವರೂ ತಂತಮ್ಮ ಸೇನೆಯನ್ನು ಕಳುಹುವವರಾಗಿರುತ್ತಾರೆ. ಪ್ರಜಾಪ್ರಭುತ್ವಕ್ಕೆ ಅಧ್ಯಕ್ಷನಾಗಾರಿಸಲ್ಪಡಲಿಕ್ಕಿರುವ ಯುವಾನ್‌ಷಿಕಾಯಿಗೆ ಬ್ರಿಟಿಷ್, ಫ್ರಾನ್ಸು, ಅಮೇರಿಕಾ, ಜರ್ಮನಿ, ರಷ್ಯಾ ಮತ್ತು ಜಪಾನ್ ರಾಜ್ಯಗಳ ಬ್ಯಾಂಕಿನವರು ಸಾಲವನ್ನು ಕೊಟ್ಟು ಆತನ ಅಧಿಕಾರವನ್ನು ಬಲಪಡಿಸಬೇಕೆಂದು ಯೋಚಿಸುತ್ತಾರೆ.

ತುರ್ಕಿ—ಇಟಲಿ ರಾಜ್ಯಗಳ ಪ್ರಕೃತ ವಿದ್ಯಮಾನವನ್ನು ನೋಡುವುದರಲ್ಲಿ ಉಭಯ ರಾಜ್ಯಗಳಿಗೂ ನಡೆಯುತ್ತಿರುವ ಯುದ್ಧವು ಇನ್ನೂ ಪ್ರಬಲವಾಗಿ ಅನೇಕ ಅರ್ಥಹಾನಿ ಮತ್ತು ಪ್ರಾಣಹಾನಿಗಳಾಗುವಂತೆ ತೋರುವುದಲ್ಲದೆ ಶಮನವಾಗುವಂತೆ ತೋರುವುದಿಲ್ಲವು ಪರರಾಜ್ಯಗಳು ತುರ್ಕಿ-ಇಟಲಿಗಳಿಗುಂಟಾಗಿರುವ ಕಲಹದ ವಿಚಾರದಲ್ಲಿ ತಮ್ಮಗಳಿಗೆ ಅಸಮಾಧಾನವಾಗಿರುವುದೆಂದೂ, ಉಭಯ ರಾಜ್ಯಗಳಿಗೂ ಮಧ್ಯಸ್ಥಿಕೆಯನ್ನು ಮಾಡಬೇಕೆಂದೂ ವಾಜ್ಮಾತ್ರದಲ್ಲಿ ಹೇಳುತ್ತಿವೆ ಸಲ್ಲದೆ ಕಾರ್ಯತಃ ತೋರ್ಪಡಿಸುವುದಿಲ್ಲವು. ಇದರಿಂದ ಆ ಉಭಯ ರಾಜ್ಯಗಳು ತಮ್ಮೊಳಗೆ ಸಮಾಧಾನ ಮಾಡಿಕೊಳ್ಳುವುದರಿಂದಾಗಲಿ ಅಥವಾ ಇಟಲಿಯ ಇಚ್ಛಾನುಸಾರವಾಗಿ ಟ್ರಿಪೋಲಿಯನ್ನು ತುರ್ಕಿಯು ಬಿಟ್ಟು ಕೊಡುವುದರಿಂದಾಗಲಿ ಈಗ ನಡೆಯುತ್ತಿರುವ ಯುದ್ಧವು ಶಾಂತವಾಗಬೇಕಲ್ಲದೆ ಅನ್ಯಥಾ ಉಪಾಯವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಶ್ರೀಮಂತರ ಕುಟುಂಬದಲ್ಲಾದ ವಿವಾಹಮಹೋತ್ಸವವು.

ರಾಜಧಾನಿಯಲ್ಲಿ ಜನೋಪಕಾರಿಗಳೆಂದು ಹೆಸರುಗೊಂಡಿರುವ ಶ್ರೀಮಂತ ನೀಲಗಿರಿ ಮದ್ದಣ್ಣನವರು ತಮ್ಮ ಕುಮಾರಿ ಸೌ॥ ಮದ್ದಮ್ಮನವನ್ನು ಅನೇಕ ಧರ್ಮ ಕಾರ್ಯಗಳನ್ನು ಮಾಡಿ ಶ್ರೀಮನ್ ಮಹಾರಾಜರವರಿಂದ "ಧರ್ಮಪ್ರವರ್ತಕ" ಎಂಬ ಪ್ರಶಸ್ತಿಯನ್ನು ಪಡೆದಿದ್ದ ಗುಂಜಾನರಸಿಂಹಯ್ಯನವರ ಮಕ್ಕಳು ಮಿ॥ ಜವರಪ್ಪನವರ ಮಗ ಚಿ॥ ನರಸಿಂಹಯ್ಯನಿಗೆ ಕೊಟ್ಟು ಕಳೆದ ತಾ॥ ೯ ರಲ್ಲಿ ಬಹುಕಾಲದಿಂದಲೂ ನಡೆದು ಬಂದಿರುವ ತಮ್ಮ ಮನೆತನದ ಗೌರವಕ್ಕೆ ತಕ್ಕಹಾಗೆ ಅತ್ಯಂತ ವಿಜೃಂಭಣೆಯಿಂದ ಸಾಲಂಕೃತ ಕನ್ಯಾದಾನವನ್ನು ಮಾಡಿ ಲಗ್ನಕ್ಕೆ ಪೂರ್ವವೆ ಒಂದು ವಾರದಿಂದ ನಿತ್ಯದಲ್ಲೂ ತಮ್ಮ ಬಂಧುವರ್ಗದವರಿಗೆಲ್ಲಾ ಭಕ್ಷ್ಯಭೋಜ್ಯಾದಿಗಳಿಂದ ಔತಣವನ್ನು ಮಾಡಿಸಿದುದಲ್ಲದೆ ಸಾವಿರಾರು ಬಡಜನರಿಗೆ ಮನಸ್ಸು ತಣಿಯುವಷ್ಟು ಅನ್ನವನ್ನು ಹಾಕಿದರೆಂದು ತಿಳುಹಲು ಹರ್ಷವಾಗುತ್ತದೆ. ಈ ಮಹೋತ್ಸವಕ್ಕಾಗಿ ಮನೆಯ ಮುಂಗಡೆ ಅತಿವಿಶಾಲವಾದ ಮತ್ತು ಸುಂದರವಾದ ಮಂಟಪವನ್ನು ಸಾವಿರಾರು ರೂಪಾಯಿಗಳ ವೆಚ್ಚದಿಂದ ಕಟ್ಟಿಸಿ ವಾಷಿಂಗ್‌ಟ ದೀಪಗಳಿಂದಲೂ, ಚಿತ್ರಪಟಗಳಿಂದಲೂ ಅಲಂಕಾರಮಾಡಿ ಮನೋಹರವಾದ ವಾದ್ಯವಿಶೇಷಗಳಿಂದಲೂ, ವೇಶ್ಯಾನೃತ್ಯಗಳಿಂದಲೂ, ಅತಿಥಿಗಳನ್ನೂ, ಪ್ರೇಕ್ಷಕ ಜನರನ್ನೂ ಪ್ರತಿನಿತ್ಯವೂ ಆನಂದಗೊಳಿಸುತ್ತಿದ್ದರು. ಧಾರೆಯ ಮುಹೂರ್ತದ ದಿವಸ ಬಂದಿದ್ದ ಸರ್ಕಾರಿಯ ಅಧಿಕಾರಿಗಳಿಗೂ ವೈದಿಕರುಗಳಿಗೂ ಅವರವರ ಯೋಗ್ಯತಾನುಸಾರ ಬಹು ಉದಾರವಾಗಿ ದಕ್ಷಿಣೆಯನ್ನು ಕೊಟ್ಟರು. ಅರಮನೆಯಿಂದ ಕಿಲ್ಲತ್ತು ಭಲ್ಲೆಯವೇ ಮೊದಲಾದ ಮರ್ಯಾದೆಗಳು ಕಳುಹಲ್ಪಟ್ಟಿದ್ದುವು. ನಿನ್ನೆಯ ರಾತ್ರಿ ನೂತನ ದಂಪತಿಗಳ ಮೆರವಣಿಗೆಯು ಎಲ್ಲಾ ಬೀದಿಗಳಲ್ಲೂ ಬಹು ಅಟ್ಟಹಾಸದಿಂದ ನಡೆಯಿತು. ಈ ಉತ್ಸವ ಕಾಲದಲ್ಲಿ ಮದ್ದಿನ ವಿನೋದಕ್ಕಾಗಿಯೂ ದೀಪಗಳಿಗಾಗಿಯೂ ೧೫೦೦ರೂ. ಗಳ ಮೇಲೆಯೇ ವೆಚ್ಚವಾಗಿದ್ದಿತೆಂದು ತೋರುತ್ತದೆ ಇವರ ಚಿಕ್ಕ ತಂದೆಯವರಾದ ಗ॥ ಚಿಕ್ಕ ಮಾಪಣ್ಣನವರು ತಮ್ಮ ಕುಮಾರಿಯ ಮತ್ತು ಕುವರನ ವಿವಾಹಗಳನ್ನು ವೈಭವದಿಂದಮಾಡಿದುದಕ್ಕಿಂತ ಈವೇಳೆ ಮ॥ ಮದ್ದಣ್ಣನವರು ೧೦-೧೨ ಸಾವಿರರೂಪಾಯಿಗಳ ವೆಚ್ಚದಿಂದ ಅತಿಶಯವಾಗಿ ಮಾಡಿದರೆಂದು ಹೇಳಿದಲ್ಲಿ ಉತ್ಪ್ರೇಕ್ಷೆಯಾಗಲಾರದು. ನೂತನ ದಂಪತಿಗಳಿಗೆ ದೀರ್ಘಾಯುರಾರೋಗ್ಯ ಸುಖಸಂಪತ್ತುಂಟಾಗಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ತಾ॥ ೯ ರಲ್ಲಿ ರಾಜಧಾನಿಗೆ ದಯಮಾಡಿಸುತ್ತಾರೆಂದು ಇಲ್ಲಿ ಊಟವುಪಚಾರಕ್ಕೆ ಅಣಿಮಾಡಲ್ಪಟ್ಟಿದ್ದಿತು. ಆದರೆ ಸದ್ಯದಲ್ಲಿ ಬರುವುದಿಲ್ಲವೆಂದು ಗೊತ್ತಾಗುತ್ತದೆ.

ರಾಜಧಾನಿಯ ಅಡ್ವೋಕೇಟರುಗಳಲ್ಲಿ ಬಹು ಹಿರಿಯರಾಗಿದ್ದ ಮಿ॥ ಕೆಂಪೀಗವಾಚಾರ್ಯರು ಪ್ಲೇಗುರೋಗಗ್ರಸ್ತರಾಗಿದ್ದು ಕಳೆದ ತಾ॥ ೫ ರಲ್ಲಿ ವಿಧಿವಶರಾದರು. ಇವರಿಗೆ ಮರಣಕಾಲದಲ್ಲಿ ೬೦ ವರ್ಷ ವಯಸ್ಸಾಗಿದ್ದಿತು.

ಶ್ರೀವಾಣೀವಿಲಾಸ ಸನ್ನಿಧಾನದ ಮಾತೃಶ್ರೀಯವರ ಮರಣದಿಂದ ರಾಜಕುಟುಂಬಕ್ಕುಂಟಾದ ದುಃಖಸೂಚನಾರ್ಥವಾಗಿ ಪ್ರತಿದಿನ ರಾತ್ರಿಯಲ್ಲಿಯೂ ಬೆಳಗಿನ ಜಾವದಲ್ಲೂ ಹಾರಿಸಲ್ಪಡುವ ಗುಂಡುಗಳೂ ಮಂಗಳವಾದ್ಯಗಳೂ ೩ ದಿನಗಳವರೆಗೂ ನಿಲ್ಲಿಸಲ್ಪಟ್ಟಿದ್ದುವು.

ರಾಜಧಾನಿಯ ಕೈಗಾರಿಕೆಯ ಪಾಠಶಾಲೆಯಿಂದ ಮದ್ರಾಸ್ ಸರ್ಕಾರದವರು ನಡೆಯಿಸುವ ಕೈಗಾರಿಕೆಯ ಪರೀಕ್ಷೆಗೆ ಹೋಗಿದ್ದ ೬೯ ವಿದ್ಯಾರ್ಥಿಗಳಲ್ಲಿ ೧೬ ವಿದ್ಯಾರ್ಥಿಗಳು ಉತ್ತೀರ್ಣರಾದರು. ಇವರಲ್ಲಿ ೧೨ ಜನರು ೧ ನೆಯ ತರಗತಿಯಲ್ಲಿ ತೇರ್ಗಡೆಯಾಗಿರುವರು

ತ್ಯಾಮಗೊಂಡ್ಲಿನ ಬ್ರಹ್ಮಶ್ರೀ ಅಗ್ನಿಹೋತ್ರ ನರಸಿಂಹಶಾಸ್ತ್ರಿಗಳು ಬರುವ ಯುಗಾದಿಯ ಹಬ್ಬದ ದಿವಸದಿಂದ ಪಶುಯಾಗವನ್ನು ಮಾಡಲುದ್ಯುಕ್ತರಾಗಿರುವರು ಈ ಕಾರ್ಯಕ್ಕಾಗಿ ಶ್ರೀಮನ್ ಮಹಾರಾಜರವರು ೧೦೦ ರೂ. ಗಳನ್ನು ಸಹಾಯ್ಯಮಾಡಿರುವುದಾಗಿ ಅರಿಯುತ್ತೇವೆ.

ಬೆಂಗಳೂರಿಂದ ಇಂಗ್ಲೆಂಡು, ಸೈಪ್ರಸ್ ಅಥವಾ ಈಜಿಪ್ಟ್, ಏಡನ್, ದಕ್ಷಿಣ ಆಫ್ರಿಕಾ ಮತ್ತು ಸಿಂಗಪೂರ್ ಈ ಸ್ಥಳಗಳಿಗೆ ತಂತಿಯಿಲ್ಲದೆ ವಾಯು ಮೂಲಕ ವರ್ತಮಾನವನ್ನು ಕಳುಹಲು ಠಾಣಗಳನ್ನು ಕಟ್ಟುವುದಕ್ಕಾಗಿ ಮಾರ್ಕೊನಿ ಕಂಪನಿಯವರಿಗೆ ಇಂಡ್ಯಾ ಸರ್ಕಾರದವರು ಅನುಜ್ಞೆಯನ್ನಿತ್ತಿರುತ್ತಾರೆ.

ಕೆಲವರ್ಷಗಳ ಹಿಂದೆ ರಾಜಧಾನಿ, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಪೋಲೀಸು ಇನ್ಸ್‌ಪೆಕ್ಟರರಾಗಿಯೂ, ಕೆಲಕಾಲ ಬೆಂಗಳೂರ ಸೆಂಟ್ರಲ್ ಜೈಲರಾಗಿಯೂ ಇದ್ದು ಈಗ ಬೆಂಗಳೂರ ದಂಡಿನಲ್ಲಿ ಪೋಲೀಸು ಇನ್ಸ್‌ಪೆಕ್ಟರಾಗಿರುವ ಮಿ॥ ನಾಗವಾಕರ್‌ರವರು ಮರಳಿ ಮೈಸೂರ ಸರ್ಕಾರಿಯುದ್ಯೋಗಕ್ಕೆ ಬರಲು ಯತ್ನಿಸುತ್ತಿರುವುದಾಗಿ ಕೇಳುತ್ತೇವೆ.

ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರು ಅಂಗಸಾಧನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಳೆದ ತಾ॥ ೮ ರಲ್ಲಿ ಬಹುಮಾನವನ್ನು ದಯಪಾಲಿಸಿದರು. ಆ ಕಾಲದಲ್ಲಿ ಶ್ರೀಮನ್ ಮಹಾರಾಜರವರೂ, ಶ್ರೀಮದ್ಯುವರಾಜರವರೂ ಮಿ॥ ಕೇಂಬಲ್‌ರವರ ಪತ್ನಿಯವರೊಡನೆ ಅನಿರೀಕ್ಷಿತವಾಗಿ ಅಲ್ಲಿಗೆ ದಯಮಾಡಿಸಿದ್ದರೆಂದು ಕೇಳುತ್ತೇವೆ.

ಮೊದಲು ಹಾಸನದ ಡಿ॥ ಎಕ್ಸೈಸ್ ಆಫೀಸರಾಗಿದ್ದು ಶ್ರೀಮದ್ಯುವರಾಜರ ವಿವಾಹಕಾಲದಿಂದಲೂ ಅರಮನೆಯಲ್ಲಿ ಹೆಚ್ಚುಗಟ್ಟಲೆಯ ಉದ್ಯೋಗದಮೇಲೆ ನಿಯಮಿಸಲ್ಪಟ್ಟಿರುವ ಮಿ॥ ಎಂ. ರಂಗರಾಯರು ೩ ತಿಂಗಳ ರಜವನ್ನು ಪಡೆದುಕೊಂಡಿರುವ ಮಿ॥ ಜಹರುದ್ದೀನ್ ಮೆಕ್ಕಿಯವರ ಬದಲು ಕೋಲಾರ ಡಿ॥ ಎಕ್ಸೈಸ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕನ್ನಂಬಾಡಿಯಲ್ಲಿ ೩೦ ಜನ ಪೋಲೀಸು ಕಾನಿಸ್ಟೇಬಲರುಗಳನ್ನೂ ಒಬ್ಬ ಜಮಾದಾರನನ್ನೂ ನಿಯಮಿಸಲು ಸರ್ಕಾರದ ಅಪ್ಪಣೆಯಾಗಿರುವುದರಿಂದ ಅಲ್ಲಿ ಒಂದು ಪೋಲೀಸು ಠಾಣವನ್ನು ಕಟ್ಟಲು ಸ್ಥಳ ಮೊದಲಾದುದನ್ನು ಗೊತ್ತುಮಾಡುವುದಕ್ಕಾಗಿ ಕಳೆದ ತಾ॥ ೩ ರಲ್ಲಿ ಪೋ॥ ಇ॥ ಜನರಲ್‌ರವರೂ ಮೈಸೂರ ಡಿ॥ ಡೆಪ್ಯುಟಿ ಕಮಿಷನರರೂ ಕನ್ನಂಬಾಡಿಗೆ ಹೋಗಿದ್ದು ಬಂದರು.

ಸರದಾರ್ ಕಾಂತರಾಜಅರಸಿನವರಿಗೆ ಪ್ರಾಪ್ತವಾಗಿರುವ ಮಾತೃವಿಯೋಗ ದುಃಖವನ್ನು ವಿಚಾರಿಸಲು ೩ ನೆಯ ಕೌನ್ಸಿಲರು ಮಿ॥ ದಳವಾಯಿ ದೇವರಾಜಅರಸಿನವರು ರಾಜಧಾನಿಗೆ ದಯಮಾಡಿಸಿದ್ದು ಕಳೆದ ಬುಧವಾರ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು. ಮತ್ತು ಈ ತಾ॥ ೧೫ ರಲ್ಲಿ ಇಲ್ಲಿಗೆ ದಯಮಾಡಿಸುವುದಾಗಿ ತಿಳಿಯುತ್ತೇವೆ. ದುಃಖವನ್ನು ವಿಚಾರಿಸಲು ದಯಮಾಡಿಸಿರುವ ಕರ್ನಲ್ ದೇಶರಾಜಅರಸಿನವರು ಇಲ್ಲಿಯೇ ಇರುವರು.

ಮೈಸೂರು ಮಹಾರಾಜಾ ಕಾಲೇಜಿನ ರೈಟರಾದ ಮಿ॥ ಎ. ಕೃಷ್ಣರಾಯರು ಹಿಂದೆ ಸಂಸ್ಥಾನದ ವಿದ್ಯಾಶಾಖೆಯ ಇ॥ ಜನರಲ್‌ರವರಾಗಿದ್ದು ಗತಿಸಿಹೋದ ಮಿ॥ ಜೆ. ವೀರ್‌ರವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳ ಪ್ರದರ್ಶನಾರ್ಥವಾಗಿ, ಪ್ರತಿ ವರ್ಷದಲ್ಲೂ ಈ ದೇಶದ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯ ಗಣಿತ ಭಾಗದಲ್ಲಿ ಹೆಚ್ಚು ನಂಬರನ್ನು ಪಡೆಯುವ ವಿದ್ಯಾರ್ಥಿಗಾಗಲಿ ಅಥವಾ ವಿದ್ಯಾರ್ಥಿನಿಗಾಗಲಿ ಮಿ॥ ವೀರ್‌ರವರ ಹೆಸರಿನಿಂದ ೩ ರೂ. ಗಳ ಬಹುಮಾನವನ್ನು ಸರ್ಕಾರದವರ ಮೂಲಕ ಕೊಡಲು ಏರ್ಪಡಿಸಿರುತ್ತಾರೆ

ರಾಜಧಾನಿಯವರು ಈ ತಾ॥ ೧೫ ರಲ್ಲಿ ಶ್ರೀಮದ್ಯುವರಾಜರನ್ನು ವಿನೋದೋತ್ಸವದಿಂದ ಸತ್ಕರಿಸಿ ವಿಜ್ಞಾಪನಾಪತ್ರಿಕೆಯನೊಪ್ಪಿಸಿ, ಶ್ರೀಯವರಿಗೆ ಚಕ್ರವರ್ತಿಯವರಿಂದ ಅತಿಶಯವಾದ ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾಗಿರುವ ಆನಂದಾತಿಶಯವನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿದ್ದರಷ್ಟೆ ಆದರೆ ಈ ಮಧ್ಯೆ ಸರದಾರ್ ಕಾಂತರಾಜಅರಸಿನವರ ಮಾತೃಶ್ರೀಯವರ ಮರಣದಿಂದ ರಾಜಕುಟುಂಬದವರಿಗೆ ವ್ಯಸನವು ಪ್ರಾಪ್ತವಾದುದರ ದೆಸೆಯಿಂದ ಮೇಲೆ ಕಂಡ ಪ್ರಯತ್ನವು ನಿಲ್ಲಿಸಲ್ಪಟ್ಟಿತಲ್ಲದೆ ಮತ್ತೊಂದುವೇಳೆ ನಡೆಸಲ್ಪಡುವ ಸಂಭವವಿಲ್ಲವೆಂದು ತೋರುತ್ತದೆ.

ಸರದಾರ್ ಕಾಂತರಾಜಅರಸಿನವರು ದೀರ್ಘಕಾಲ ರಜವನ್ನು ಪಡೆದುಕೊಳ್ಳುವವರಾಗಿಯೂ, ಅವರ ಸ್ಥಾನದಲ್ಲಿ ಬೆಂಗಳೂರ ಡಿ॥ ಜಡ್ಜರು ಮಿ॥ ಟಿ. ಪರಮಶಿವಯ್ಯರ್‌ರವರು ಎಕ್ಸೈಜ್ ಕಮಿಷನರರಾಗಿ ನಿಯಮಿಸಲ್ಪಡುತ್ತಾರೆಂದೂ ಸರ್ ಇಜ್‌ಮೆಯವರು ಬರುವ ಜೂನ್ ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವುದರಿಂದ ೩ ನೆಯ ಜಡ್ಜರಾದ ರಾ॥ ಬ॥ ಕೃಷ್ಣರಾಯರು ೨೦೦೦ ಸಂಬಳದ ಮೇಲೆ ಚೀಫ್‌ಜಡ್ಜರಾಗಿಯೂ, ಮೈಸೂರ್ ಡಿ॥ ಜಡ್ಜ್ ಮಿ॥ ಸ್ಲಮರ್‌ರವರು ಚೀಫ್‌ಕೋರ್ಟಿನ ೩ ನೆಯ ಜಡ್ಜರಾಗಿಯೂ ನಿಯಮಿಸಲ್ಪಡುತ್ತಾರೆಂದೂ ಡೇಲಿಪೋಸ್ಟ್ ಪತ್ರಿಕೆಯು ತಿಳಿಸುತ್ತದೆ. ಇದು ಎಷ್ಟರ ಮಟ್ಟಿಗೆ ನಿಜವಾಗಿರುವುದೋ ನೋಡಬೇಕಾಗಿದೆ.

ಮೈಸೂರ ಆಸ್ಥಾನ ಸಂಗೀತ ವಿದ್ವಾಂಸರಾದ ವಾಸುದೇವಾಚಾರರು ಜಲಂಧರದಲ್ಲಿ ನಡೆದ ಭರತಖಂಡದ ಸಂಗೀತ ವಿದ್ವತ್ಪರಿಷತ್ತಿಗೆ ಹೋಗಿದ್ದು ಅಲ್ಲಿಂದ ಅನೇಕ ಸಂಸ್ಥಾನಗಳಲ್ಲಿ ಸಂಚರಿಸಿ ಭೂಪಾಲ ಸಂಸ್ಥಾನಕ್ಕೆ ಬಂದು ಅಲ್ಲಿ ಬಂಗಾರದ ಪದಕವನ್ನು ಪಡೆದುಕೊಂಡು ಬೊಂಬಾಯಿಗೆ ಬರಲು ಅಲ್ಲಿ ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ಕನಿಷ್ಠಪುತ್ರರಾದ ಮ॥ ಕೆ. ಎಸ್. ರಾಮಸ್ವಾಮಿಅಯ್ಯರ್ ಬಿ. ಎ, ಬಿ. ಎಲ್ ರವರ ಅಧ್ಯಕ್ಷತೆಯಿಂದ ಸ್ಥಾಪಿತವಾಗಿರುವ ಸೌತ್ ಇಂಡಿಯನ್ ಅಸೋಸಿಯೇಷನ್ನಿನವರು ಒಂದು ದೊಡ್ಡ ಸಭೆಯನ್ನು ಕೂಡಿಸಿ ಒಂದು ಬಂಗಾರದ ಪದಕವನ್ನು ಬಹುಮಾನಿಸಿದರು. ಎಂದು ನಮ್ಮ ಪತ್ರಿಕಾವಾಚಕರೊಬ್ಬರು ತಿಳಿಸುತ್ತಾರೆ.

ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರು ೩೩ ವರ್ಷಗಳಿಂದಲೂ ಮೈಸೂರ ಸಂಸ್ಥಾನದಲ್ಲಿ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟ್, ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್ ಪೋಲೀಸ್ ಇ॥ ಜನರಲ್ ಮತ್ತು ಎಕ್ಸೈಜ್ ಕಮಿಷನರ್ ಈ ಉದ್ಯೋಗಗಳನ್ನು ಬಹು ಸಮರ್ಥತೆಯಿಂದ ನಿರ್ವಹಿಸಿರುವ ಪ್ರಯುಕ್ತ ಅವರು ಅಸ್ವಸ್ಥರಾಗಿದ್ದ ಕಾಲವನ್ನು ಎಂದರೆ ೧೯೧೧ ನೆಯ ಡಿಸೆಂಬರ್ ತಾ॥ ೬ ರಿಂದ ೧೯೧೨ ನೆಯ ಫೆಬ್ರುವರಿ ತಾ॥ ೧೯ ರ ವರೆಗೆ ಅವರು ಉದ್ಯೋಗದ ಮೇಲೆ ಇದ್ದಂತೆಯೇ ಭಾವಿಸಲ್ಪಟ್ಟು ಪೂರ್ಣವಾದ ಸಂಬಳವನ್ನು ಕೊಡುವಹಾಗೆ ಶ್ರೀಮನ್ ಮಹಾರಾಜರವರ ಅಪ್ಪಣೆಯಾಗಿರುತ್ತದೆ. ಇವರು ಏಪ್ರಿಲ್ ತಾ॥ ೧೦ ರಲ್ಲಿ ಮದರಾಸಿಗೆ ಹೋಗಿ ಅಲ್ಲಿಂದ ಕೊಲಂಬೋ ಮಾರ್ಗವಾಗಿ ಸೀಮೆಗೆ ಪ್ರಯಾಣಮಾಡುವರೆಂದು ತಿಳಿಯಬರುತ್ತದೆ.

ಕಳೆದ ತಾ॥ ೩ ರಲ್ಲಿ ರಾಜಧಾನಿಯ ವೆಲ್ಲಿಂಗ್‌ಟನ್ ಬಂಗಲೆಯ ಇದಿರು ಭಾಗದಲ್ಲಿರುವ ಒಂದು ಬಂಗಲೆಯೊಳಗೆ ಕಟ್ಟಲ್ಪಟ್ಟಿದ್ದ ಒಂದು ಕಾಳಗದ ಟಗರು ಹಗ್ಗವನ್ನು ಕಿತ್ತುಕೊಂಡು ಅಲ್ಲಿ ಕುದುರೆ ಬಂಡಿಯನ್ನು ಬಿಟ್ಟುಕೊಂಡಿದ್ದ ಮಿ॥ ಅಬ್ಬಾಸ್ ಮುಕರ್‌ನೀಬ್ ಅರಸು ಹೊಟ್ಟೆಯನ್ನು ತಿವಿದುಬಿಟ್ಟಿತು. ಅದರ ಕೊಂಬು ಹೊಟ್ಟೆಯಿಂದ ಬೆನ್ನಿನೊಳಗೆ ಹಾದು ಹೊರಗೆ ಬಂದಿದ್ದುದರಿಂದ ರಕ್ತವು ಹರಿದು ಸ್ಮೃತಿತಪ್ಪಿ ಬೀಳಲು ಕೂಡಲೆ ಡೊಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಮಾಡಲ್ಪಟ್ಟನು ಆದಾಗ್ಯೂ ಅವನು ಗುಣವನ್ನು ಹೊಂದದೆ ಅದೇ ರಾತ್ರಿ ಸತ್ತುಹೋದನು. ಆ ಆಳು ಸಾಯುವ ಕಾಲದಲ್ಲಿ ಮ್ಯಾಜಿಸ್ಟ್ರೇಟರಿಗೆ ಆ ಟಗರವು ಕಟ್ಟಿದ್ದ ಹಗ್ಗವನ್ನು ಕಿತ್ತುಕೊಂಡು ಬಂದು ತನ್ನನ್ನು ತಿವಿದು ಬಿಟ್ಟಿತೆಂದು ಹೇಳಿರುವುದಾಗಿಯೂ, ಕ್ರೂರಮೃಗವನ್ನು ಭದ್ರವಾಗಿ ಕಟ್ಟಿ ಎಚ್ಚರಿಕೆಯಿಂದ ನೋಡಿಕೊಳ್ಳದೆ ಹೋದ ಅಪರಾಧಕ್ಕೆ ಅದರ ಯಜಮಾನನನ್ನು ಗುರಿಮಾಡಬೇಕೆಂದು ಅಪ್ಪಣೆಮಾಡಿರುವುದಾಗಿಯೂ ಕೇಳುತ್ತೇವೆ.

ಇದಿರಾಗಿ ಬರುವ ಜಂಝಾಮಾರುತನು ಸುಂದರಗಾಳಿಯಿಂದೆದ್ದ ಕೆಂಧೂಳಿನ ಸುಳಿಗಳಂತೆ ಎಸೆದು ಗುಂಗುರಾಗಿ ಕೆಂಪುವರ್ಣಗಳುಳ್ಳ ಗುಂಗುರು ಕೂದಲುಗಳಿಂ, ಸಂಜೆ ಕಾರ್ಮುಗಿಲಂತೆ ಒಪ್ಪಿರುವ ಗಂಡುಪುರ್ಬುಗಳಿಂ, ಪರ್ವತದಂತಿರುವ ಶಿರಸ್ಸಿನಿಂ, ಗುಹಾಂತರಂಗಳಂತೆ ಕಾಣಿಸುವ ಅರಳಿದ ಮೂಗಿನ ಹೊಳ್ಳೆಗಳಿಂ, ಗಂಡಭೇರುಂಡದ ಪಕ್ಷಂಗಳಂತಿರುವ ಕಿವಿಗಳಿಂ, ಗುಂಡಾಗಿ ಅಗ್ನಿಕುಂಡದಂತಿರುವ ಕಣ್ಣುಗುಡ್ಡೆಗಳಿಂ, ಕಾಲಸರ್ಪದಂತೆ ಜೋಬಿರುವ ಅತಿಭಯಂಕರಂಗಳಾಗಿ ಕುಣಿಯುವ ಮೀಸೆಗಳಿಂ, ಜೋಲುತ ನದಿಯ ದಡಂಗಳಂತಿರುವ ತುಟಿಗಳಿಂ, ಅಗಾಧವಾದ ಪಾತಾಳ ಕುಹರದಂತಿರುವ ವದನದಿಂ, ಕೋಡುಗಲ್ಲಿನ ಚಂದದಂತಿರುವ ಕೋರೆದಾಡೆಗಳಿಂ, ಗಿರಿಶಿಖರಂಗಳಂತಿರುವ ಭುಜಸ್ಕಂಧಂಗಳಿಂ, ತಾಳವೃಕ್ಷಂಗಳಂತೆ ನೀಳವಾಗಿರುವ ತೋಳುಗಳಿಂ, ಕೂದಲುಗಳಿಂ ಕೂಡಿ ಘೋರಾರಣ್ಯದಂತೆ ಕಾಣುವ ವಕ್ಷಸ್ಥಲದಿಂ, ಡಮ್ಮರಂಗಳಂತೆ ತೋರ್ಪ ಕಾಲುಗಳಿಂ ಕೂಡಿ ಕರ್ಣಂಗಳೊಳ್ ಸ್ವರ್ಣಕುಂಡಲಗಳಂ ಧರಿಸಿ, ಕಂಠದೊಳ್ ನರಶಿರೋಮಾಲಿಗಳಂ ಹಾಕಿ, ಕುಲಾಲಚಕ್ರದಂತೆ ಒಪ್ಪುವ ಬೆಳ್ಳಿಯ ಗಗ್ಗರಂಗಳಂ ಕಾಲುಗಳೊಳಳವಡಿಸಿ, ಘಂಡಿಗಳಂತೆ ಕಾಣುವ ಕಡಗಗಳಂ ಕೈಗಳೊಳ್ ಅಲಂಕರಿಸಿ, ಒಂದೊಂದು ತುತ್ತಿಗೆ ಅನೇಕ ಪ್ರಾಣಿಗಳಂ ಕಲಸಿ ಅಗಿಯುತ, ಜಲಜಂತುಗಳಂ ಪುಡಿಸಕ್ಕರೆಯಂತೆ ಮುಕ್ಕುತ, ಅನೇಕ ಗಜಗಳಂ, ಸಾವಿರ ಸಿಂಹಗಳಂ, ನೂರಾರು ಶರಭಂಗಳಂ, ಕಾಲಾಗ್ನಿ ಘೋಷಿಸಿರುವ ಮಹಾಶೂಲಾಯುಧವಂ ಪಿಡಿದು, ಅನೇಕ ಜಾತಿಯುಂಗಳಾದ ಕಳೇಬರಗಳಂ ಬಿಗಲೊಳೆಪ್ಪುತ್ತ, ಉಡಿದಾರದಲ್ಲಿ ಅನೇಕ ಸರ್ಪಂಗಳಂ, ಶಾರ್ದೂಲಂಗಳಂ ಸಿಕ್ಕಿಸಿಕೊಂಡು, ಸಿಡಿಲಿನಂತೆ ಬೊಬ್ಬಿರಿದು ಕೂಗುವ ಧ್ವನಿಗಳಿಂ, ದಿಕ್ಕುದಿಕ್ಕುಗಳಂ ತಲ್ಲಣಂಗೊಳಿಸುತ ನಾನಾ ಜಾತಿಯುಂಗಳಾದ ಮುಖಂಗಳುಳ್ಳ ರಾಕ್ಷಸರ ತಂಡತಂಡಂಗಳಂ ಕೂಡಿ, ಅಡಿಗಡಿಗೆ ಆರ್ಭಟಿಸುತ, ನೇತ್ರಂಗಳಿಂ ಕಿಡಿಗಳಂ ಉದುರಿಸುತ, ಮೂರನೆಯ ಸಮುದ್ರದ ಸಾರವಂ ಹೀರಿ ತಾರುಮಾರಾಗಿ ನಡೆಯುತ ಮದಾಂಧನಾಗಿ ಬರುತ್ತಿರಲು, ಆಗ ಸುಗಂಧರಾಜೇಂದ್ರನು ಕುಸುಮಲತೆಯಂ ಕುರಿತು ಎಲೈ ಪ್ರಿಯಾಳೆ! ಜಂಝಾಮಾರುತನ ಸೌಂದರ್ಯವಂ ಕಂಡೆಯಾ? ಎಂದು ಪೇಳಿ ನಸುನಗುತ ಉತ್ಸಾಹದಿಂ ಮೆರೆಯುವ ರಾಜೇಂದ್ರನಂ ಕಂಡು ಕುಸುಮಲತೆಯು ಮೃದುವಾದ ನುಡಿಗಳಿಂದ ಎಲೈ ಸುಕುಮಾರಶರೀರನೇ! ಕೇಳು, ನೀನು ಪ್ರತಾಪಶಾಲಿಯೆಂದು ತಿಳಿದಿರುವೆನು ಆದರೂ ಒಂದುಮಾತಂ ಪೇಳುವೆನು, ಎನ್ನೊಡೆಯನೇ ನೀನು ನನಿಗೋಸುಗ ಆ ಡಿಂಡರಕ್ಕಸನಂ ಕಾಣಿಸಿಕೊಂಡು ಅವನೊಡನೆ ಕಾಳಗವಂ ಮಾಡಿ ಕಷ್ಟಪಡಲೇಕೆ? ಜಯಾಪಜಯಂಗಳೆಂತಿರುವುವೊ? ನನ್ನಂತಹರು ನಿನ್ನ ಪಾದಪದ್ಮಂಗಳೊಳ್ ಅನೇಕ ಮಂದಿ ಬಿದ್ದಿರುವರು, ನಿನ್ನ ಸುಂದರವಾದ ಶರೀರವಂ ಬಳಲಿಸಬೇಡ, ಮತ್ತೂ ನೀನು ಎಲ್ಲಾದರೂ ಮರೆಯಾಗಿ ಸುಖದಿಂದಿರುವವನಾಗು, ನನ್ನ ಹಣೆಯಲ್ಲಿ ಬರೆದಿರುವ ಲಿಪಿಯು ಎಂತಿರುವುದೋ ಅದರಂತೆ ಆಗುವುದೆಂದು ಕಣ್ಣನಿದುಂಬಿ ಗದ್ಗದ ಸ್ವರದಂತೆ ನುಡಿಯುತ್ತ ಬೆದರಿ ಕನಕ ಪುತ್ಥಳಿಯಂತೆ ಮೈಮರೆದು ನಿಂತಿರಲು, ಸುಗಂಧರಾಜೇಂದ್ರನು ಎಲೈ ಪ್ರಾಣಪ್ರಿಯಳೇ! ಕೇಳು, ಹಲವು ಪರಿಯಿಂದ ಹಂಬಲಿಸಲೇಕೆ? ಕಣ್ಣನಿದುಂಬದಿರು, ಕಮಲ ನಯನಳೇ! ಗಡಗಡನೆ ನಡುಗದಿರು, ತಡಮಾಡದೆ ದೃಢನಾದ ಈ ರಕ್ಕಸನಂ ಈಗ ಕೊಂದು ಭೂತಂಗಳಿಗೆ ಬಲಿಯನಿಕ್ಕುವೆನು; ನೀನು ಬೆದರದಿರು ನನ್ನಾಣೆ ಮದಿರಾಕ್ಷಿಯೇ ಎಂದು ನುಡಿದು, ಸೆರಗಿನಿಂದ ಬಾಲೆಯ ಕಣ್ಣೀರ್ಗಳಂ ಒರಸಿ ಮೈ ಸವರಿ ತಕ್ಕೈಸಿ ಧೈರ್ಯದಿಂ ನೋಡುತ ನುಡಿದು ತಾನು ಪನ್ನೀರಿನಿಂದ ಹಸ್ತಪಾದಂಗಳಂ ತೊಳೆದು, ಶುದ್ಧೋದಕದಿಂದ ಆಚಮನವಂಮಾಡಿ, ತನ್ನ ಇಷ್ಟದೇವತೆಯಂ ಧ್ಯಾನಿಸಿ ಕೈಯೊಳಿರುವ ಬಿಲ್ಲಿಗೆ ನಾರಿಯಂ ಬಿಗಿದು, ಅಮೋಘವಾದ ಒಂದುಬಾಣವಂ ತನ್ನ ಬಲದ ಹಸ್ತದೊಳ್ಪಿಡಿದು ಲೀಲೆಯಂ ತಿರಿಗಿಸುತ, ಸುಮತಿಯಂ ಕುರಿತು ಎಲೈ ಮಂತ್ರಿಯೇ! ಎನ್ನ ಅರಸಿಯ ರಕ್ಷಣಾರ್ಥವಾಗಿ ನೀನು ಕಾದಿರು, ನಾನು ಯಕ್ಷನನ್ನೇರಿ, ಕಕ್ಷೆಗಳಂ ಮೀರಿ ಬರುವ ವಿಲಕ್ಷಣನಾದ ರಾಕ್ಷಸನಂ ಶಿಕ್ಷಿಸಿ ಶೀಘ್ರದಿಂ ಜಯಲಕ್ಷ್ಮಿಯಿಂದೊಡಗೂಡಿ ಬರುವೆನು ಎಂದು ಅಪ್ಪಣೆಯಂಕೊಟ್ಟು, ದೂರದೊಳ್ ಬರುತ್ತಿರುವ ರಾಕ್ಷಸಸೇನೆಯಂ ನೋಡುತ್ತಾ ನಿಂತಿರುವ ಸಮಯದೊಳ್ ಜಂಝಾಮಾರುತನೆಂಬ ರಾಕ್ಷಸನು ಅನೇಕ ಕೋಟಿ ರಾಕ್ಷಸರ ಸೇನೆಗಳಿಂದ ಪರಿವೃತನಾಗಿ ಬರುವಾಗ ಮಾರ್ಗದೊಳ್ ಅತಿ ದೀನಸ್ವರಗಳಿಂದ ವಿಕಾರವಾಗಿ ಕೂಗುತ ದಾರಿಯನ್ನಡ್ಡಗಟ್ಟಿ ಇದಿರಾಗಿ ನಿಂತಿರುವ ನರಿಗಳ ತಂಡತಂಡಗಳಂ, ಮೇಲೆ ಬೀಳುವುದಕ್ಕೆ ಬರುವ ಕಾಗೆಗಳಂ ಸಹಾ ನೋಡುತ್ತಾ, ಮತ್ತೂ ಗಗನಮಾರ್ಗದೊಳ್ ಸಂಚರಿಸುವ ಹದ್ದುಗಳು ತನ್ನ ಶೂಲಾಗ್ರಕ್ಕೆ ಬಂದು ಎರಗುವುದಂ, ಇದಲ್ಲದೆ ಕಾಗೆಗಳು ತಾನು ಧರಿಸಿರುವ ಕಿರೀಟದೊಳ್ ಅಳವಡಿಸಿದ ಮಣಿಗಳ ಮೇಲೆ ಬಿದ್ದು ಬಡಿಯುವುದಂ ಕಂಡು ಇದೇನು ವಿಪರೀತವೋ! ಎಂದೆಂದಿಗೂ ಇಲ್ಲದ ಅಪಶಕುನಗಳು ಇಂದೇನುಕಾರಣ ಸಂಭವಿಸಿತು? ವಿಪತ್ತುಗಳಿಗೆ ಸೂಚಕವಾಗಿ ಕಾಣುವುದು ಎಂದು ನುಡಿದು, ಈ ಅಪಶಕುನಗಳ ಫಲವು ನನ್ನ ಶತ್ರುಗಳಿಗೆ ಆದರೆ ಕುಲದೇವತೆಯಾದ ನಿಕುಂಬಿಳಾದೇವಿಗೆ ಅನೇಕ ನರಬಲಿಗಳಂ ಕೊಟ್ಟು ಅನೇಕ ಸುರಾಭಾಂಡಂಗಳಂ ಸಮರ್ಪಿಸುವೆನೆಂದು ಪ್ರಾರ್ಥಿಸುತ್ತಿರುವ ರಾಕ್ಷಸಾಧಿಪತಿಯ ಮನೋಭಾವವಂ ತಿಳಿದು ಮಂತ್ರಿಯಾದ ವಜ್ರದಂಷ್ಟ್ರನು ಎಲೈ ಭೂಪತಿಯೆ! ಕೇಳು, ನಾನು ಸೇನಾಮುಖವಂ ಕುರಿತು ತೆರಳುವಾಗ ಮುಂಭಾಗದೊಳ್ ನಡೆಯುತಲಿರುವ ಬಿರುದುಗಳಾದ ಧ್ವಜಪತಾಕೆಗಳು ಮುರಿದು ಅದರ ಮೇಲಣ ಕಲಶಂಗಳು ನೆಲದಲ್ಲಿ ಬಿದ್ದು ಉರುಳಿದುವು; ಇಂತುಮಲ್ಲದೆ ಮಾರ್ಗದರ್ಶಿಗಳಾದ ಚಾರರು ಓಡಿಬಂದು ಜಲಾವರಣದ ಘೋಷವೂ, ಅಗ್ನ್ಯಾವರಣದ ಕಾಂತಿಯೂ, ಅಡಗಿರುವುದು ಎಂದು ಪೇಳಿದ ನುಡಿಗಳಂ ನಾನು ನಿನ್ನಡಿಗಳಿಗೆ ಬಿನ್ನವಿಸಬೇಕೆಂದು ಬರುವಷ್ಟರೊಳ್ ಇಲ್ಲಿ ನಡೆಯುವ ಅಪಶಕುನಂಗಳನ್ನೋಡಲು, ಈಗ ನಮಗೆ ಏನೋ ಒಂದು ಮಹಾ ವಿಪತ್ತು ಬರುವಂತೆ ತೋರುತಲಿದೆ, ಇದಕ್ಕೋಸುಗ ಬೇಗನೆ ಚಾರರಂ ಕಳುಹಿ, ವಜ್ರಪುರಿಯ ವೃತ್ತಾಂತವಂ ತಿಳಿದು ಬಳಿಕ ತೆರಳುವುದು ನನ್ನ ಬುದ್ಧಿಗೆ ಉತ್ತಮವೆಂದು ತೋರುತ್ತಿರುವುದೆಂದು ಬಿನ್ನೈಸಲು, ಆ ಮಾತಂಕೇಳಿ ಜಂಝಾಮಾರುತನು ಎಲೈ ವಜ್ರದಂಷ್ಟ್ರನೇ ಕೇಳು ನಮ್ಮ ರಾಕ್ಷಸಕುಲಕ್ಕೆ ಅಪಶಕುನವೇ ಶಕುನವು, ಎನ್ನ ಭುಜಬಲ ಪರಾಕ್ರಮಂಗಳಿಗೆ ಈ ಅಪಶಕುನಗಳಿಂದ ಏನಾಗುವುದು? ಇಂದ್ರಾದಿ ದಿಕ್ಪಾಲಕರು ನಮಗೆ ಲಕ್ಷ್ಯರಲ್ಲ, ಮತ್ತೂ ನಾರಾಯಣನನ್ನಲ್ಲಾಡಿಸುವೆನು, ಈಶ್ವರನನ್ನೀಸಾರಿ ತೀರಿಸುವೆನು, ಬ್ರಹ್ಮನಂ ಬ್ರಹ್ಮಾಂಡದಿಂದ ಆಚೆಗೆ ಓಡಿಸುವೆನು, ಸುರರ ಪ್ರಾಣಗಳಂ ಸೂರೆಗೊಳಿಸುವೆನು ಎಂದು ನುಡಿಯುತ ತನ್ನ ಹಸ್ತದಿಂ ಬಾರಿಬಾರಿಗೂ ಸುರಾಭಾಂಡಗಳಂ ಎತ್ತಿ ಕುಡಿಯುತ ಭುಜಗಳಂ ತಟ್ಟುತ ಮತ್ತೂ ಮಂತ್ರಿಯಂ ಕುರಿತು ಎಲೈ ವಜ್ರದಂಷ್ಟ್ರನೇ! ಕೇಳು, ಈ ನರಿಗಳು ನಾವು ತರುವ ಮಾಂಸಗಳ ವಾಸನೆಗೆ ಇದಿರಾಗಿ ಬರುವವು, ಹದ್ದುಗಳು ಶೂಲದಲ್ಲಿ ಚುಚ್ಚಿರುವ ಹೆಣಗಳಂ ಕಿತ್ತು ತಿನ್ನುವುದಕ್ಕೆ ಎರಗುವುವು, ಕಾಗೆಗಳು ನನ್ನ ಕಿರೀಟದಲ್ಲಿರುವ ರತ್ನಗಳಂ ಮಾಂಸಖಂಡಗಳೆಂದು ಭ್ರಮಿಸಿ ಕೀಳುವುದಕ್ಕೆ ಬರುವುವಲ್ಲದೆ ಅಪಶಕುನವಲ್ಲವೆಂದು ನುಡಿಯಲು

(ಸಶೇಷ).

ಯುಗಾದಿ.

ಪಾರಲೌಕಿಕ ವಿಚಾರದಲ್ಲಿ ಪ್ರಪಂಚವನ್ನೇ ಬೆರಗುಗೊಳಿಸುತ್ತಿರುವ ಭಾರತೀಯರು ಐಹಲೌಕಿಕ ಸುಖವನ್ನು ಪ್ರಾಧಾನ್ಯವಾಗೆಣಿಸದಿದ್ದರೂ ಸುಖಪಡುವುದರಲ್ಲಿ ತಾವು ಯಾವ ಜನಾಂಗದವರಿಗೂ ಹಿಂದಾಗಲಿಲ್ಲ. ಆದರೆ ಪರದೇಶದ ಜನಾಂಗದ ಇಹಸುಖಕ್ಕೂ, ಭಾರತೀಯರ ಇಹಸುಖಕ್ಕೂ ಒಂದು ವಿಲಕ್ಷಣವಾದ ತಾರತಮ್ಯವಿರುವುದು. ಪರದೇಶೀಯರು ಇಹಸುಖವನ್ನೇ ಪ್ರಾಧಾನ್ಯವಾಗೆಣಿಸಿರುವರು. ಭಾರತೀಯರಾದರೋ ಪರಸುಖವನ್ನೇ ನಿತ್ಯಸುಖವನ್ನಾಗಿ ಭಾವಿಸಿ, ಇಹಸುಖವನ್ನು ಅದರ ಅಂಗವಾಗಿ ಅನುಭವಿಸುತ್ತಿರುವರು. ಇದರಿಂದಲೇ ಭಾರತೀಯರ ದೂರಾಲೋಚನೆಯ ಚಾತುರ್ಯವು ತಾನಾಗಿ ವ್ಯಕ್ತವಾಗುವುದು. ಭಾರತೀಯರು ಇಹಸುಖಕ್ಕಾಗಿ ಏರ್ಪಡಿಸಿಕೊಂಡಿರುವ ವಿಷಯಗಳಲ್ಲಿ ಹಬ್ಬಗಳನ್ನಾಚರಿಸುವುದೂ ಒಂದು ಮುಖ್ಯವೆನಿಸಿದೆ. ಹಬ್ಬವೆಂದರೆ ರುಚಿರುಚಿಯಾಗಿ ತಿಂದು ಸುಂದರ ವಸ್ತ್ರಗಳಿಂದಲಂಕೃತರಾಗಿ ನಾನಾವಿಧವಾದ ವಿನೋದಗಳಿಂದ ಕಾಲಕಳೆಯುವುದೇ ಉದ್ದೇಶವೆಂದು ಅನೇಕರು ಭಾವಿಸಿರಬಹುದು. ನಮ್ಮ ಪ್ರಾಚೀನರ ಅಭಿಪ್ರಾಯವು ಅಂತಹುದಲ್ಲ; ಯಾವ ಆಚರಣೆಯಾದರೂ, ಸದಾಚಾರಕ್ಕೂ ಸತ್ಫಲಕ್ಕೂ ಕಾರಣವಾಗಿರಬೇಕೆಂಬುದೇ ಉದ್ದೇಶವಾಗಿದ್ದಿತು. ಅಂತಹ ಉದ್ದೇಶವಿಲ್ಲದೆ ಯಾವುದನ್ನೂ ಅವರು ಆಚರಣೆಗೆ ತರಲಿಲ್ಲ. ಪ್ರಯೋಜನದುದ್ದೇಶವಿಲ್ಲದೆ ಮೂಢನೂ ಒಂದು ಕೆಲಸಕ್ಕೆ ಪ್ರವರ್ತಿಸುವುದಿಲ್ಲವೆಂದು ಲೋಕೋಕ್ತಿಯಿರುವಾಗ ಮಹನೀಯರಾದ ನಮ್ಮ ಪೂರ್ವಿಕರು ತಿಂದು ಮೆರೆಯುವುದಕ್ಕಾಗಿ ಧನವ್ಯಯಾದಿಗಳನ್ನು ಏರ್ಪಡಿಸಲಿಲ್ಲ. ಅನೇಕ ಪ್ರಯೋಜನಗಳು ಉಂಟಾಗಬೇಕೆಂಬ ಉದ್ದೇಶದಿಂದಲೇ ಒಂದೊಂದು ಹಬ್ಬವನ್ನೂ ಆಚರಣೆಗೆ ತಂದರು. ಈ ಹಬ್ಬಗಳಲ್ಲೆಲ್ಲಾ ಯುಗಾದಿಯೆಂಬುದು ಬಹು ಶ್ರೇಷ್ಠವಾದ ಹಬ್ಬವೆಂಬುದನ್ನು ಪ್ರತಿಯೊಬ್ಬ ಭಾರತೀಯನು ತಿಳಿದೇ ಇರುವನು. ಏಕೆಂದರೆ ಯುಗಾದಿಯೆಂಬ ಶಬ್ದದಿಂದಲೇ ಆ ಶಬ್ದಕ್ಕೆ ಶ್ರೇಷ್ಠತ್ವವನ್ನು ಕೊಡಬೇಕಾದುದು ನ್ಯಾಯವೆಂದು ಎಂತಹನಾದರೂ ಊಹಿಸಬಹುದು. ನಾವೂ ಮತ್ತು ಇತರ ಪ್ರಾಣಿಗಳೂ ಅಲ್ಲದೆ ನಮ್ಮ ಕಣ್ಣಿಗೆ ಕಾಣುವ ವಿಶಿಷ್ಟ ಪ್ರಪಂಚವೂ ಯಾವುದೋ ಒಂದು ದಿನದಲ್ಲಿ ಆರಂಭವಾಗಿರಬೇಕು ಅಂತಹ ದಿನವನ್ನು ಜ್ಞಾಪಿಸತಕ್ಕುದೇ ಈ ಯು ಯಾಗಿದೆ.

ಯುಗದ ಆದಿಯೆಂದರೆ ಮೊದಲನೆಯ ದಿನದ ದಿನವೆಂದು ಸ್ಪಷ್ಟವಾಗುವುದು. ಈ ಪ್ರಪಂಚವು ಹ ಎಷ್ಟು ದಿನಗಳಾದುವೆಂಬುದನ್ನು ಸೂಚಿಸುವುದಕ್ಕೆ ಈ ಯು ಗಾದಿಯ ದಿನವು ದೊಡ್ಡ ಉಪದೇಶಕನಂತೆ ಪರಿಣಮಿ “ಸೃಷ್ಟ್ಯಾದಿಯಾಗಿ ಇಂದಿಗೆ ನೂರತೊಂಬತ್ತೈದು ಕೋ ಯು ಐವತ್ತೆಂಟು ಲಕ್ಷವೂ ಎಂಬತ್ತೈದು ಸಾವಿರದ ಮೂರು ವರ್ಷಗಳು ಮುಗಿದು ಹೋದವು. ಈಗ ನಡೆ ತ್ತಿರುವ ಕಲಿಯುಗವು ಐದುಸಾವಿರದ ಹದಿಮೂರು ವ ಗಳನ್ನು ದಾಟಿ ಹದಿನಾಲ್ಕನೆಯ ವರ್ಷಕ್ಕೆ ನಾಳೆಯು ಕಸಾರ್ಪಣವಮಾಡುವುದು. ಎಲೈ ಮಾನವರೆ! ಕಾಲಚಕ್ರದ ಹಿಮೆಯನ್ನು ನೋಡಿ. ಎಲ್ಲವೂ ಅಶಾಶ್ವತವೆಂಬುದಕ್ಕೆ ಇ ಕ್ಕಿಂತಲೂ ಸಾಕ್ಷಿಯೇಕೆ? ಪಾರ ಲೌಕಿಕ ಸುಖಕಾ ನಿಮ್ಮ ಧರ್ಮಾಚರಣೆಯ ಪಾಥೇಯವು ಕಳೆದ ವರ್ಷಗ ಎಷ್ಟು ಸಿದ್ಧವಾಗಿದೆ? ನಿಮ್ಮನ್ನು ಜಾಗರೂಕರನ್ನಾ ಮಾಡಲು ಇಗೋ ಪುನಃ ಯುಗಾದಿಯ ದಿನದಲ್ಲಿ ಎಚ್ಚರಿಸು ವೆನು.” ಎಂದು ಭಾರತೀಯರನ್ನು ಉನ್ಮತ್ತಾವಸ್ಥೆಯಿಂದ ಮುಖರನ್ನಾಗಿ ಮಾಡತಕ್ಕ ನುಡಿಯು ಶ್ರೇಷ್ಠವಾದುದೆಂ ವುದರಲ್ಲಿ ಸಂದೇಹವೇ ಇಲ್ಲ. ಇಂತಹ ಹಬ್ಬವನ್ನೇ ನಾ ಬಿಟ್ಟರೆ, ನಮಗೆ ಸೃಷ್ಟಿಕಾಲದ ವಿಚಾರವೇ ಕಾಲಾನುಕ ಲದಲ್ಲಿ ಮರೆತುಹೋಗಬಹುದು. ಯುಗಾದಿಯೆಂಬುದು ಸೃ ಷ್ಟ್ಯಾದಿಯ ದಿನದ ಸೂಚನೆಯೆಂಬುದಕ್ಕೆ ಆಧಾರವಿಲ್ಲದೆ ಇಲ್ಲ. ಈ ಯುಗಾದಿಗೆ ಚಾಂದ್ರಮಾನ ಯುಗಾದಿಯೆಂದು ಹೆಸರು. ಷೋಡಶಕಲಾ ಪರಿಪೂರ್ಣನಾದ ಪೂರ್ಣಿಮ ಚಂದ್ರನ ಪ್ರಥಮ ಕಲಾದರ್ಶನವು ಭಾರತೀಯರಿಗೆ ಪಾಡ್ಯ ದಿನವೇ ಎಂಬುದು ಸ್ಪಷ್ಟವಷ್ಟೆ? ಆ ಪ್ರಥಮಕಲಾ ದರ್ಶನದ ದಿನವನ್ನೇ ಪ್ರಥಮ ದಿವಸವಾಗಿ ಪರಿಗಣಿಸಿರುವುದರಿಂ ಲೇ ಇದಕ್ಕೆ ಚಾಂದ್ರಮಾನ ಯುಗಾದಿಯೆಂದು ಹೆಸರು ಬಂ ದೆ. ವರ್ಷದ ಪರಿಮಿತಿಯನ್ನು ಭಾರತೀಯರು ಬಹುದೂರಾಲೋಚನೆಯಿಂದ ಪರೀಕ್ಷಿಸಿ, ಸೂರ್ಯನ ಗತಿಯಿಂದ ಅಯನಗಳನ್ನು ನಿಶ್ಚೈಸಿ ಆರುತಿಂಗಳಿಗೆ ಒಂದರಂತೆ ಎರಡು ಅಯನಗಳಾಗುವುವೆಂಬುದನ್ನೂ, ಬಿಸಿಲು-ಗಾಳಿ-ಶೀತ ಮುಂತಾದುವುಗಳ ಸಮತಾಧಿಕ್ಯಗಳ ತಾರತಮ್ಯವನ್ನು ಶೋಧಿಸಿ ಎರಡು ತಿಂಗಳಿಗೊಂದು ಋತುವನ್ನೂ ನಿಶ್ಚೈಸಿದರು. ಚಂದ್ರನ ಕಳಾನ್ಯೂನಾಧಿಕಗಳ ಮೂಲಕ ತಿಂಗಳನ್ನೂ ಗೊತ್ತುಮಾಡಿರುವರು. ವಾರ್ಷಿಕ ಫಲಗಳನ್ನು ಕೊಡುವ ತರುಲತಾದಿಗಳ ಸ್ಥಿತಿಯನ್ನು ನಿಷ್ಕರ್ಷಿಸಿ ವರ್ಷಾರಂಭಕ್ಕೆ ಸೃಷ್ಟ್ಯಾದಿಯ ದಿವಸವು ಜನರಿಗೆ ಉಲ್ಲಾಸವನ್ನುಂಟುಮಾಡುವುದಾಗಿರುವುದೆಂಬುದನ್ನು ಚೆನ್ನಾಗಿ ಶೋಧಿಸಿರುವರು. ಈ ಯುಗಾದಿಯ ಹಬ್ಬದ ದಿವಸವು ಯುಗದ ಆದಿಯನ್ನು ಮಾತ್ರ ತಿಳಿಸತಕ್ಕುದಾಗಿಲ್ಲವು; ಸೃಷ್ಟ್ಯಾದಿಯನ್ನು ವರ್ತಮಾನದ ಕಲಿಯುಗದ ಆದಿಯನ್ನೂ, ಸಂವತ್ಸರದ ಆದಿಯನ್ನೂ, ಋತುಗಳ ಆದಿಯನ್ನೂ, ಮಾಸಗಳ ಆದಿಯನ್ನೂ ಸೂಚಿಸುವ ದಿನವಾಗಿದೆ. ಯಾವ ಯುಗಾದಿಯು ವಸಂತಋತುವಿನ ಮನೋಹರತೆಯನ್ನೂ, ಸೃಷ್ಟಿಯ ವೈಚಿತ್ರ್ಯವನ್ನೂ, ಭಗವಂತನ ಅದ್ಭುತ ಶಕ್ತಿಯನ್ನೂ ತೋರ್ಪಡಿಸುವುದಾಗಿದೆಯೋ ಅಂತಹ ಯುಗಾದಿಯ ಸಂತೋಷವನ್ನು ಸ್ಥಾವರಜಂಗಮಗಳೆಲ್ಲವೂ ಪಡೆದಿರುವುವೋ! ಎಂಬಂತೆ ತರುಲತಾದಿಗಳೆಲ್ಲವೂ ಚಿಗುರಿ ಕೋಮಲತೆಯಿಂದ ನಗುತ್ತಿರುವಂತೆ ಕಾಣುವುವಲ್ಲವೆ? ಮಲ್ಲಿಕಾದಿ ಪುಷ್ಪಗಳೆಲ್ಲವೂ ಪ್ರಫುಲ್ಲವಾಗಿ ಮಂದಹಾಸದಿಂದ ವಸಂತನನ್ನು ಇದಿರ್ಗೊಳ್ಳುವಂತೆ ತೋರುವುವಲ್ಲವೆ? ಶುಕಪಿಕಾದಿಗಳೆಲ್ಲವೂ ಮಂಜುಳ ಗಾನಗಳಿಂದ ಇಂಪಾಗಿ ಭಗವಂತನ ಉಪಕಾರವನ್ನು ಸ್ಮರಿಸಲು ಹಾಡುತ್ತಿರುವುವೋ ಎಂಬಂತಿರುವುವಲ್ಲವೆ? ನೀರೆಲ್ಲವೂ ನಿರ್ಮಲವಾಗಿ ಎಲ್ಲರೂ ನಿಷ್ಕಲ್ಮಷರಾಗಿರಬೇಕೆಂಬ ಭಾವನೆಯನ್ನುಂಟುಮಾಡುತ್ತಿಲ್ಲವೆ? ಮಂದಮಾರುತನು ಮಂದಮಂದವಾಗಿ ಸುಳಿದು ಜನರಿಗೆ ಹಿತವನ್ನು ಮಾಡಬೇಕಾದುದಾವಶ್ಯಕವೆಂಬುದನ್ನು ಬೋಧಿಸುವುದಿಲ್ಲವೆ? ಜನರೆಲ್ಲರೂ ಶೀತವಾತಾದಿ ಬಾಧೆಗಳಿಲ್ಲದೆ, ನೀರೋಗರಾಗಿ ಅಮಂದಾನಂದ ತುಂದಿಲ ಸ್ವಾಂತರಾಗಿರಲು ಇಂತಹ ಕಾಲಕ್ಕಿಂತಲೂ ಬೇರೆಯಾದ ದಿವಸವೇ ಇರುವುದಿಲ್ಲ. ಇಂತಹ ಉತ್ತಮ ದಿವಸವನ್ನು ಮರೆತುಬಿಡತಕ್ಕವನು ಎಂತಹ ಕೃತಘ್ನನಾಗಬಹುದು. ಬಹು ಪ್ರಯೋಜನವನ್ನುಂಟುಮಾಡುವ ದಿವಸದ ಜ್ಞಾಪಕದಿಂದಲೇ ಮನುಷ್ಯನು ಕೃತಜ್ಞತೆಯನ್ನು ಕಲಿಯಬೇಕಾಗಿದೆ. ಇದಕ್ಕಾಗಿಯೆ ಪ್ರತಿಯೊಬ್ಬ ಭಾರತೀಯನೂ ಈ ಹಬ್ಬವನ್ನು ಆಚರಿಸಲೇಬೇಕು.

ಧರ್ಮಸಾಧನೆಯೇ ಮುಖ್ಯ ಫಲವೆಂದೆಣಿಸಿರುವ ಭಾರತೀಯರ ಹಬ್ಬಗಳಲ್ಲಿ ಪರೋಪಕಾರದ ಮೂಲಕವಾದ ಧರ್ಮಸಾಧನೆಯೇ ಹಬ್ಬಗಳಲ್ಲಿ ಉಂಟಾಗಬೇಕಾದ ಪ್ರಯೋಜನಗಳಲ್ಲಿ ಮುಖ್ಯವಾದುದು. ಈ ದಿವಸ ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರವಾಗಿ ಜನರಿಗೆ ಉಪಕರಿಸ

[illegible] ನ್ಯಾಯವಾಗಿದೆ. ಅದಕ್ಕಾಗಿಯೇ ಈ ದಿವಸ ಸೃಷ್ಟಿಕರ್ತನ ಮಹಿಮೆಯನ್ನು ಜ್ಞಾಪಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಪಂಚಾಂಗ ಪೂಜೆಯನ್ನು ನೆರವೇರಿಸಿ, ಅದನ್ನು ದೈವಜ್ಞರ ಮೂಲಕವಾಗಿ ತಿಳಿದುಕೊಂಡು ತನ್ನ ಶುಭಾಶುಭಗಳಿಗೆ ತಕ್ಕ ವಿಷಯಗಳನ್ನೂ ಪ್ರಾಪಂಚಿಕ ವಿಷಯ ವಿಚಾರವನ್ನೂ ತಿಳಿದು ಸರ್ವರಿಗೂ ಮಂಗಳವಾಗುವಂತೆ ಭಗವಂತನ ಪೂಜೆಯನ್ನು ನೆರವೇರಿಸಿ ಇಷ್ಟಮಿತ್ರರೊಡನೆ ಸುಭಭೋಜನಮಾಡಿ ಸತ್ಪಾತ್ರಗಳಲ್ಲಿ ತಕ್ಕಂತೆ ದಾನವನ್ನು ಮಾಡುವುದು ಪದ್ಧತಿಯಾಗಿದೆ. ಆ ದಿವಸ ಗೃಹಸ್ಥನು ಅಭ್ಯಂಜನವನ್ನು ಮಾಡಿಕೊಳ್ಳಬೇಕಾದರೂ ಮತ್ತೊಬ್ಬರಿಗೆ ಮಾಡಿಸದ ಹೊರತು ತಾನು ಮಾಡಿಕೊಳ್ಳದಿರುವುದರಿಂದ, ಪರೋಪಕಾರದ ಪ್ರಾಶಸ್ತ್ಯವು ಆದಿಯಿಂದಲೂ ಅಭ್ಯಾಸಮಾಡಬೇಕೆಂಬುದಕ್ಕೆ ಇದೊಂದು ಮುಖ್ಯ ಸೂಚನೆಯಾಗಿದೆ.

ಅಭ್ಯಂಜನ ಸ್ನಾನಾನಂತರದಲ್ಲಿ ಸತ್ಪಾತ್ರರಾದ ಬ್ರಾಹ್ಮಣರಿಗೂ, ದೀನರಿಗೂ ದಕ್ಷಿಣೆ ಮೊದಲಾದುವನ್ನು ಕೊಡುವ ಪದ್ಧತಿಯೂ ಇರುವುದು. ಭೋಜನಕ್ಕೆ ಮೊದಲೇ ಆಗಲಿ ಅಥವಾ ಭೋಜನಾನಂತರವಾಗಲೀ ಪಂಚಾಂಗವನ್ನು ದೈವಜ್ಞರಿಂದಲೇ ತಿಳಿಯಬೇಕಾದ ಪದ್ಧತಿಯೂ ಇದೆ ಇದರಿಂದ ತನಗೆ ಪಂಚಾಂಗವನ್ನು ನೋಡಲು ಬಾರದೆ ಅವರಿಂದ ತಿಳಿಯಬೇಕೆಂಬುದಲ್ಲ. ಆಯಾಯ ಶಾಸ್ತ್ರಜ್ಞರಿಗೆ ತಕ್ಕ ಉತ್ತೇಜನವೀಯಬೇಕಾದುದಾವಶ್ಯಕವಾದದರಿಂದ ತಾನು ಎಷ್ಟು ತಿಳಿದಿದ್ದರೂ ಎರಡನೆಯವರಿಂದ ಉಪದೇಶವನ್ನು ಗ್ರಹಿಸುತ್ತಿರಬೇಕೆಂಬುದೇ ಅದರ ನಿಜಾಂಶವು. ಇದರಿಂದ ಮನುಷ್ಯನ ಸ್ವಾಹಂಕಾರ ಪ್ರತಿಷ್ಠೆಯು ತಗ್ಗಿ ವಿನೀತಭಾವವೂ, ಶಾಸ್ತ್ರೀಯಕ ಶರಣ್ಯತೆಯೂ ಸ್ಥಿರವಾಗುವುವು ಎಲ್ಲಾ ಹಬ್ಬಗಳಿಗಿಂತಲೂ ಈ ಹಬ್ಬದಲ್ಲಿ ಒಂದು ವಿಚಿತ್ರವಾದ ಪದ್ಧತಿಯಿರುವುದು. ಅದರ ತತ್ವವೇನೆಂಬುದನ್ನು ಹೀಗೇ ಸರಿಯೆಂದು ಸ್ಪಷ್ಟವಾಗಿ ಹೇಳಲಾಗದಿದ್ದರೂ ಅದರಲ್ಲಿ ಸಾಮಾನ್ಯವಾಗಿ ನಾವು ತಿಳಿಯಬಹುದಾದ ಭಾಗಗಳಷ್ಟೇ ಇರುವುವು. ಈ ಹಬ್ಬದ ದಿವಸ ಬೇವಿನ ಚಿಗುರನ್ನು ತಿನ್ನುವುದೂ, ಸೊಪ್ಪನ್ನು ಬಾಗಿಲ ತೋರಣದ ಇರ್ಕ್ಕೆಡೆಗಳಲ್ಲಿ ನೇತುಹಾಕುವುದೂ ಪದ್ಧತಿಯಿದೆ. ಇದನ್ನು ವಿಚಾರಮಾಡಿದರೆ, ಇದು ಮನುಷ್ಯನ ಸುಖದ ಸ್ಥಿತಿಯ ಆವಶ್ಯಕತೆಗೆ ಸಹಾಯಮಾಡುವುದಕ್ಕಾಗಿ ಏರ್ಪಡಿಸಲ್ಪಟ್ಟಿರುವಂತೆ ಕಾಣುವುದು “ಶರೀರಮಾದ್ಯಂ ಖಲುಧರ್ಮಸಾಧನಂ” ಎಂದು ಹೇಳಿರುವಂತೆ ನಾವು ಧರ್ಮಸಾಧನೆಗಾಗಿಯೇ ಅನೇಕ ದಿವಸಗಳವರೆಗೂ ಬದುಕಬೇಕಾಗಿದೆ ಶರೀರವೆಂಬುದು ರೋಗಕ್ಕೆ ಆಶ್ರಯಸ್ಥಾನವೂ ಆಗಿದೆ. ಅಂತಹ ರೋಗಕ್ಕೆ ಆಸ್ಪದವಾದರೆ ಧರ್ಮಸಾಧನೆಗೆ ನ್ಯೂನತೆಯೊದಗುವುದು ಆದುದರಿಂದ ದೇಹಕ್ಕೆ ರೋಗವು ತಗಲದಂತೆ ಎಚ್ಚರವಾಗಿರಬೇಕಾದುದಗತ್ಯವಾಗಿದೆ. ವೈದ್ಯಶಾಸ್ತ್ರದ ರೀತಿಯಾಗಿ ಕಹಿಯಾದ ಔಷಧಿಗಳು ರೋಗವನ್ನು ನಿರ್ಮೂಲ ಮಾಡುವಂತೆ ಮತ್ತಾವುದೂ ಮಾಡಲಾರದು. ಅದರಲ್ಲಿಯೂ ಕೆಲವು ಸಸ್ಯಸಂಬಂಧವಾದ ಕಹಿಗಳು ಬಹು ಗುಣವನ್ನುಂಟು ಮಾಡುವುವುಗಳಾಗಿವೆ. ಬೇವು ಕಹಿಯೆಂಬುದು ನಮ್ಮ ವಾಚಕರಿಗೆ ಗೊತ್ತೇ ಇದೆ. ವೈದ್ಯಶಾಸ್ತ್ರದಲ್ಲಿ ಬೇವಿನ ಕಹಿಯು ವಿಷಕ್ರಿಮಿನಾಶಕವಾಗಿಯೂ-ವ್ರಣಹರವಾದುದಾಗಿಯೂ, ಹಲ್ಲು ಮತ್ತು ಶರೀರದಲ್ಲಿರುವ ಕೆಟ್ಟರಕ್ತದ ಕ್ರಿಮಿಗಳನ್ನು ನಾಶಮಾಡತಕ್ಕುದಾಗಿಯೂ, ಸ್ಫೋಟಕಾದಿ ಮಾರಿಕೋಪದ್ರವಗಳಿಗೆ ಪರಮೌಷಧಿಯಾಗಿಯೂ ಇರುವುದೆಂದು ಹೇಳಲ್ಪಟ್ಟಿರುವುದು. ಹುಣ್ಣುಗಳಿಗೂ, ಕಜ್ಜಿ ಮುಂತಾದುವುಗಳಿಗೂ ಬೇವಿನೆಣ್ಣೆಯನ್ನು ಉಪಯೋಗಿಸುತ್ತಿರುವುದನ್ನು ಅನೇಕರು ತಿಳಿದಿರಬಹುದು. ಸಿಡುಬಿನ ಹುಣ್ಣುಗಳಿಗೆ ಬೇವಿನಸೊಪ್ಪನ್ನು ಅರೆದು ಬಳಿಯುವುದು ನಮ್ಮ ಜನರ ಪ್ರತಿ ಮನೆಯವರಿಗೂ ಗೊತ್ತೇ ಇದೆ ಕಷಾಯಾದಿಗಳಲ್ಲಿ ಬೇವಿನ ಚಕ್ಕೆಯನ್ನು ಹಾಕಿ ಕ್ರೂರವಾದ ಜ್ವರಗಳಿಗೆ ಕೊಡುವ ಪದ್ಧತಿಯೂ ಉಂಟು. ಅಲ್ಲಲ್ಲಿ ಕೆಲವರು ಪ್ಲೇಗಿಗಾಗಿ ಬೇವಿನಸೊಪ್ಪನ್ನೂ, ಎಣ್ಣೆಯನ್ನೂ ಉಪಯೋಗಿಸಿ ಗುಣ ಹೊಂದಿರುವುದೂ ಉಂಟು. ರಕ್ತಶುದ್ಧಿಗಾಗಿಯೂ, ಕೆಲವು ರೋಗಗಳ ಪರಿಹಾರಕ್ಕಾಗಿಯೂ ಮಿತವಾದ ಪ್ರಮಾಣದಿಂದ ಬೇವಿನೆಣ್ಣೆಯನ್ನು ಹೊಟ್ಟೆಗೆ ಹಾಕುವುದೂ ರೂಢಿಯು. ಮುಖ್ಯವಾಗಿ ಇತರ ದುಷ್ಟ ಕ್ರಿಮಿನಾಶಕ ಗುಣವು ಬೇವಿನಲ್ಲಿದ್ದೇ ಇರುವುದು. ಮೊದಲೇ ಜನರ ಜಾಗರೂಕತೆಗಾಗಿ ಹಬ್ಬದ ದಿನ ತಿಳಿಸಿದ್ದರೆ ಅಂತಹ ಬಾಧೆಗೊಳಗಾದಾಗಲೆಲ್ಲ ಅದನ್ನು ಉಪಯೋಗಿಸಿಕೊಳ್ಳಲೆಂದು ಸೂಚಿಸುವುದೇ ಈ ದಿನದಲ್ಲಿ ಬೇವಿನಸೊಪ್ಪನ್ನು ತಿನ್ನುವ ಪದ್ಧತಿಯಾಗಿದೆ. ಏಕೆಂದರೆ ಕಹಿಯಾದ ಪದಾರ್ಥವನ್ನು ಹೊಟ್ಟೆಗೆ ತೆಗೆದುಕೊಳ್ಳುವುದು ಒಳ್ಳೆಯದೊ, ಕೆಟ್ಟುದೊ ಎಂದು ಕೆಲವರು ಶಂಕಿಸಬಹುದು; ಯಾವ ದೇಹಕ್ಕೆ ಆಗುವುದೊ ಯಾರಿಗೆ ಒಂದುವುದಿಲ್ಲವೋ ಎಂಬ ಅನುಮಾನವೂ ಬರಬಹುದು. ಇಂತಹ ಶಂಕೆಯನ್ನೆಲ್ಲಾ ದೂರಮಾಡಿ ಎಲ್ಲಾ ಕಾಲದಲ್ಲಿಯೂ ಎಲ್ಲರೂ ಉಪಯೋಗಿಸಲರ್ಹವಾದುದೆಂಬುದನ್ನು ಉದಾಹರಣೆಯ ಮೂಲಕ ತೋರಿಸುವುದಕ್ಕಾಗಿಯೇ ಇಂತಹುದ ಬೇವಿನ ಚಿಗುರನ್ನು ತಿನ್ನುವ ಪದ್ಧತಿಯಾಗಿದೆ. ಸಂವತ್ಸರದ ಪ್ರಥಮ ದಿವಸದ ಜ್ಞಾಪಕವು ಸಂವತ್ಸರಾಂತ್ಯದವರೆಗೂ ನೆನಪಿನಲ್ಲಿರುವುದು ಸಹಜವೆಂದೂಹಿಸಿ ಆ ದಿನವೇ ಅಂತಹ ಅನುಕೂಲ್ಯವಾದ ಬೇವಿನ ಚಿಗುರನ್ನು ತಿನ್ನಲು ಏರ್ಪಡಿಸಿದರು. ಬೇವನ್ನೇ ತಿನ್ನಲೇರ್ಪಡಿಸಲು ನಿಮಿತ್ತವೇನೆಂದರೆ— ಬೇವಿಗಿಂತಲೂ ಗುಣಕಾರಿಯಾಗಿಯೂ, ಅಪಾಯವಿಲ್ಲದೆಯೂ, ಇರುವ ಬೇರೆ ಮೂಲಿಕೆಗಳಾಗಲೀ ಗಿಡಗಳಾಗಲೀ ಸುಲಭವಾಗಿ ಎಲ್ಲೆಲ್ಲಿಯೂ ದೊರೆಯಲಾರದು. ಬೇವು ಎಲ್ಲೆಡೆಯಲ್ಲಿಯೂ ದೊರೆಯಬಹುದಾಗಿದೆ. ಪೂರ್ವಕಾಲದಲ್ಲಿ ಜನರಿಗೆ ವೈದ್ಯರ ಸಹಾಯವಿಲ್ಲದೆ ಅನೇಕರು ತೊಂದರೆಪಡುತ್ತಿದ್ದರು. ಪೂರ್ವಕಾಲವೆಂದೇಕೆ ಹೇಳಬೇಕು. ಈಗಲೂ ಗ್ರಾಮಾಂತರಗಳಲ್ಲಿರುವ ಜನರ ಅವಸ್ಥೆಯು ಅದೇಗತಿಯಾಗಿದೆ. ವೈದ್ಯರುಗಳಿರುವ ಕಡೆಯೂ ಸಾರ್ವತ್ರಿಕವಾಗಿ ಅದರ ಪ್ರಯೋಜನವು ಸಿದ್ಧಿಸುವಂತಿಲ್ಲ. ಏಕೆಂದರೆ ಕೆಲವರು ನಾಮಮಾತ್ರಕ್ಕೆ ವೈದ್ಯರೆನಿಸಿರುವರು. ಕೆಲವರು ದುರಾಶಾಬದ್ಧರಾಗಿರುವರು ಹೀಗಿರುವಾಗ ಸರ್ವರಿಗೂ ಸುಖಕರವಾಗುವ ಔಷಧಿಗಳು ದೊರೆಯುವುದು ದುರ್ಲಭವೇ ಸರಿ. ಇದು ಹೇಗಾದರೂ ಇರಲಿ. ಬೇವಿನ ಮಹಿಮೆಯು ಅಮೋಘವಾದುದು. ಅದರ ಪ್ರತಿಯೊಂದು ಭಾಗವೂ ಪ್ರಯೋಜನಕರವಾದುದು. ತಿಳಿದವರಿಂದ ಅದರ ಫಲಗಳನ್ನೂ ಪ್ರಮಾಣವನ್ನೂ ತಿಳಿದು ಜನಗಳು ಉಪಯೋಗಿಸಿಕೊಳ್ಳಲು ಸುಲಭಸಾಧ್ಯವಾಗಿದೆಯೆಂಬುದನ್ನು ಕಾರ್ಯತಃ ತೋರಿಸುವುದೇ ಬೇವಿನ ಸ್ವೀಕಾರದ ಪರಮೋದ್ದೇಶವಾಗಿದೆ. ಇದೇ ಪ್ರಾಚೀನ ಮನೋತತ್ವವು.

ಇನ್ನೂ ವರ್ಷಾದಿಯ ದಿವಸದ ಶ್ರೇಷ್ಠತೆಯನ್ನು ಎಷ್ಟೋ ಹೇಳಬಹುದು. ಪೂರ್ವವರ್ಷದ ವಿಷಯಗಳನ್ನೆಲ್ಲಾ ಸಿಂಹಾವಲೋಕನನ್ಯಾಯದಂತೆ ಸಮಾಲೋಕನಮಾಡಬಹುದು. ಮುಂದಣ ವರ್ಷದ ಫಲಾಫಲಗಳನ್ನು ತಿಳಿದುಕೊಳ್ಳಬಹುದು. ಗ್ರಹಗತಿಗಳನ್ನೂ ಅದರಿಂದ ಭೂಮಿಗೊದಗುವ ಲಾಭನಷ್ಟಗಳನ್ನೂ ತಿಳಿಯಬಹುದು. ಇಂತಹ ವಿಷಯಗಳಿಗೆಲ್ಲಾ ಪ್ರಯೋಜನದ ದೃಷ್ಟಿಯನ್ನೇ ಮುಂದಿಟ್ಟು ಹಬ್ಬವನ್ನೇರ್ಪಡಿಸಿರುವರು. ನಮ್ಮ ಪ್ರತಿಯೊಂದು ಹಬ್ಬವೂ ನಮಗೆ ಶ್ರೇಯಸ್ಸನ್ನು ಕೊಟ್ಟು ಸನ್ಮಾರ್ಗಕ್ಕೆ ಹೋಗುವಂತೆ ಉತ್ತೇಜಿಸಿ ಪಾಪದೂರರನ್ನಾಗಿ ಮಾಡಿ ಪರಕ್ಕೆ ತಕ್ಕ ಸಾಧನೆಯನ್ನು ಕೈಗೊಳ್ಳಲು ಸಾಹ್ಯಮಾಡುವುದಾಗಿರುವುದು. ಇದರ ತತ್ವವನ್ನು ತಿಳಿದು ಪರೋಪಕಾರದ ಮೂಲಕ ಸರ್ವರೂ ಕೃತಕೃತ್ಯರಾಗಲೆಂದು ಬಯಸುವೆವು.

ಈ ಯುಗಾದಿಯು ಮಂಗಳವಾರವೇ ಪ್ರಾರಂಭವಾಗಿರುವುದರಿಂದ ನಮ್ಮ ವಾಚಕರೂ ಮತ್ತು ಇತರರೂ ಈ ವರ್ಷವೆಲ್ಲಾ ಮಂಗಳವನ್ನೇ ಅನುಭವಿಸುತ್ತಾ ಬರಲೆಂದು ಭಗವಂತನನ್ನು ಪ್ರಾರ್ಥಿಸುವೆವು.

ಆರ್. ಶ್ರೀನಿವಾಸರಾವ್.

ಮೈಸೂರ್ ಗೆಜೆಟ್ ಸಂಗ್ರಹವು.

:o:

ಅಫಿಷಿಯೇಟಿಂಗ್ ಎಕ್ಸೈಜ್ ಕಮಿಷನರಾದ ಮ॥ ಎಂ. ಕಾಂತರಾಜಅರಸಿನವರಿಗೆ ೧೯೧೨ ನೆಯ ಫೆಬ್ರವರಿ ತಾ॥ ೨೮ ರಿಂದ ಕೊಡಲ್ಪಟ್ಟಿದ್ದ ಪ್ರಿವಿಲೆಜ್ ರಜವು ೧೯೧೨ ನೆಯ ಜೂನ್ ತಾ॥ ೩೦ ರವರೆಗೆ ಸಂಬಳವಿಲ್ಲದೆ ಹೆಚ್ಚಿಸಲ್ಪಟ್ಟಿದೆ.

ಚಿತ್ರಕಲ್‌ದುರ್ಗದ ಡಿ॥ ಎಕ್ಸೈಜ್ ಆಫೀಸರ್ ಮ॥ ಮಹಮದ್ ಅಬ್ದುಲ್ಲಾ ಷರೀಫ್‌ರವರಿಗೆ ೧೫ ದಿನಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ, ಅವರು ಬರುವವರೆಗೆ ಪ್ರಬೇಷನರಿ ಅ॥ ಕಮಿಷನರ್ ಮ॥ ಟಿ. ಜಿ. ರಾಮಯ್ಯರ್ ರವರು ಡಿ॥ ಎ॥ ಆಫೀಸರ ಛಾರ್ಜಿನಲ್ಲಿರತಕ್ಕದು.

ತುಮಕೂರು ಡಿ॥ ಎಕ್ಸೈಜ್ ಆಫೀಸರ್ ಮ॥ ಜಿ. ಹನುಮಂತರಾಯರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧ ರಿಂದ ೨ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರ ಬದಲು ಶಿವಮೊಗ್ಗ ಡಿ॥ ಎಕ್ಸೈಜ್ ಆಫೀಸರ್ ಮ॥ ಬಿ. ಭೀಮರಾಯರು ತುಮಕೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಶಿವಮೊಗ್ಗೆಯ ಸೂಪರಿಂಟೆಂಡೆಂಟ್ ಮ॥ ಬಿ. ರಾಮಸ್ವಾಮಯ್ಯನವರು ಮತ್ತೊಂದು ಏರ್ಪಾಡಾಗುವವರೆಗೂ ತಮ್ಮ ಕೆಲಸದೊಡನೆ ಶಿವಮೊಗ್ಗೆಯ ಡಿ॥ ಎ॥ ಆಫೀಸರ ಛಾರ್ಜಿನಲ್ಲಿರತಕ್ಕದು.

ತುಮಕೂರ ತಾ॥ ಅಮಲ್ದಾರ್ ಮ॥ ಎಂ. ಎಸ್. ರಾಮಚಂದ್ರರಾವ್, ಬಿ. ಎ., ಯವರು ೨ ನೆಯ ತ॥ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು.

ಕಡೆಯ ತರಗತಿಯ ಅಡೀಷನಲ್ ಮುನಸೀಫರಾಗಿ ನಿಯಮಿಸಲ್ಪಟ್ಟಿರುವ ಮ॥ ಅಳಸಿಂಗರಾಚಾರ್, ಬಿ. ಎ., ಬಿ. ಎಲ್., ರವರು ಚಿಕ್ಕಬಳ್ಳಾಪುರದಲ್ಲಿ ಮತ್ತೊಂದು ಅಪ್ಪಣೆಯಾಗುವವರೆಗೂ ತಮ್ಮ ಕೋರ್ಟನ್ನು ನಡಿಸತಕ್ಕದು.

೧ ನೆಯ ತರಗತಿಯ ಅಸಿಸ್ಟೆಂಟ್ ಕಮಿಷನರುಗಳಾದ ಮೆಸರ್ಸ್. ಬಿ. ಕೆ. ನಾರಾಯಣಯ್ಯ, ಬಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್., ರವರು ಮತ್ತು ಪಿ. ಜಿ. ಡಿ'ಸೌಜಾ, ಬಿ ಎ, ಬಿ. ಎಲ್, ರವರು ಸೀನಿಯರ್ ಅ॥ ಕಮಿಷನರಾಗಿ ಅನಿತ್ಯವಾಗಿ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಬೆಂಗಳೂರ ಡಿ॥ ಪೋಲೀಸು ಸೂಪರಿಂಟೆಂಡೆಂಟರಾದ ಮ॥ ಟಿ. ತಂಬೂಸೆಟ್ಟಿ, ಬಿ ಎ., ಯವರು [illegible] ಕಡೆಯ ತರಗತಿಯಿಂದ ೩ ನೆಯ ತ॥ ಅಸಿಸ್ಟೆಂಟ್ ಕಮಿಷನರಾಗಿ ೧೯೧೧ ನೆಯ ನವೆಂಬರ್ ತಾ॥ ೧೩ ರಿಂದ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಚೈನಾರಾಜ್ಯದಲ್ಲಿ ಗೊಂದಲವು.

ಮಾರ್ಚಿ ತಾ॥ ೯.—ಫ್ರೆಂಚ್ ಸೈನಿಕರು ಕೈಷ್ಟಿಯು ಸ್ಟೇಷನ್ನಿನ ಹತ್ತಿರ ೨೦೦ ಚೈನಾಸೈನಿಕರನ್ನು ತಡೆದು ಅವರಲ್ಲಿ ೮೦ ಜನರನ್ನು ನಿರಾಯುಧರನ್ನಾಗಿ ಮಾಡಿದರಲ್ಲದೆ, ಟೀಸ್ಟಿನ್ನಿಗೆ ಹೋಗುತ್ತಿದ್ದ ಚೈನಾದವರ ದೊಡ್ಡ ಸೇನೆಯನ್ನು ಫ್ರೆಂಚ್ ಮತ್ತೂ ಜಪಾನಿನ ಸೈನಿಕರು ತಡೆದು ಅವರಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡರು. ಅಮೇರಿಕಾದ ಯುನೈಟೆಡ್ ಸಂಸ್ಥಾನದ ೨ ಕಂಪೆನಿ ಜನರುಗಳು ಟಾಕುಗೆ ಕಳುಹಲ್ಪಟ್ಟಿರುತ್ತವೆ. ಅನೇಕ ಜನರು ನಿತ್ಯದಲ್ಲೂ ವಧಿಸಲ್ಪಡುತ್ತ ದಿನಕ್ರಮೇಣ ಅಲ್ಲಿಯ ಸ್ಥಿತಿಯು ಕ್ರಮಕ್ಕೆ ತರಲ್ಪಡುತ್ತಿದೆ ಮತ್ತೂ ದಂಗೆಯಕೋರರು ಸೂರೆಮಾಡಿಕೊಂಡು ಹೋಗಿದ್ದ ಪದಾರ್ಥಗಳು ಹಿಂದಕ್ಕೆ ಬರಮಾಡಲ್ಪಡುತ್ತಿವೆ. ಪೆಕಿನ್ನಿನಲ್ಲಿರುವ ಮಂಚು ಸೋಲ್ಜರುಗಳು ಬಹು ಧೈರ್ಯೋತ್ಸಾಹದಿಂದ ಸಾಹಸಪಡುತ್ತಿರುವರು. ಬ್ರಿಟಿಷ್, ಫ್ರೆಂಚ್, ಅಮೇರಿಕಾ, ಜರ್ಮನಿ, ರಷ್ಯಾ ಮತ್ತೂ ಜಪಾನ್ ರಾಜ್ಯಗಳ ಬ್ಯಾಂಕಿನವರು ಚೈನಾ ಸರ್ಕಾರದವರಿಗೆ ಅವರ ಉತ್ಪತ್ತಿಯು ಕ್ರಮವಾಗಿ ಬರುವವರೆಗೂ ಸಾಲವನ್ನು ಕೊಡಲು ಯೋಚಿಸಿ ಆಗಲೇ ೨,೩೦,೪೦೦ ರೂ.ಗಳನ್ನು ಕೊಟ್ಟಿರುತ್ತಾರೆ. ಚೈನಾರಾಜ್ಯದ ಪರಿಸ್ಥಿತಿಯು ಹೀಗಿರುವುದರಿಂದ ಬ್ರಿಟಿಷ್‌ನವರು ಚೈನಾದಲ್ಲಿರುವ ತಮ್ಮ ಸೇನೆಯ ಒಂದು ಪಂಗಡವನ್ನು ಭರತಖಂಡಕ್ಕೂ ಮತ್ತೊಂದು ಪಂಗಡವನ್ನು ಏಡನ್ನಿಗೂ ಏಡನ್ನಿನಲ್ಲಿರುವ ಸೇನೆಯನ್ನು ಇಂಗ್ಲೆಂಡಿಗೂ ವರ್ಗಾಯಿಸುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆ.

ತಾ॥ ೧೦.—ಚೈನಾರಾಜ್ಯದ ಎಲ್ಲಾ ಪ್ರಾಂತಗಳ ಪ್ರತಿನಿಧಿಗಳೂ, ಎಲ್ಲಾ ಜಾತಿಯ ಜನರೂ ನೆರೆದಿರುವಾಗ್ಗೆ ಯುಯಾನ್‌ಷಿಕಾಯಿಗೆ ಪ್ರಜಾಪ್ರಭುತ್ವದ ಅಧ್ಯಕ್ಷತೆಯ (ಪ್ರೆಸಿಡೆಂಟ್) ಪಟ್ಟವು ಅತಿ ವಿಜೃಂಭಣೆಯಿಂದ ಕಟ್ಟಲ್ಪಟ್ಟಿತು. ಯುದ್ಧ ಶೂರರೂ, ಮುಂದಾಳುಗಳಾದ ಯುವಕರೂ ಈ ಮಹೋತ್ಸವ ಸಮಾರಂಭದಲ್ಲಿ ಭಾಗಿಗಳಾಗಿದ್ದುದು ಚೈನಾರಾಜ್ಯದ ಆಡಳಿತದ ಬದಲಾವಣೆಯ ವಿಚಾರದಲ್ಲಿ ಅವರುಗಳಿಗಿದ್ದ ಉತ್ಸುಕತೆಯನ್ನು ಚೆನ್ನಾಗಿ ಪ್ರದರ್ಶಿಸುತ್ತಿದ್ದಿತು.

ತಾ॥ ೧೧.— ಮೇಲೆಕಂಡ ಆರು ರಾಜ್ಯಗಳ ಬ್ಯಾಂಕಿನವರು ಚೈನಾ ಸರ್ಕಾರಕ್ಕೆ ಪ್ರತಿತಿಂಗಳಲ್ಲೂ ೨,೩೩,೪೦,೦೦೦ ರೂ. ಗಳನ್ನು ಕೊಡಬೇಕಾಗಿ ಬರುವುದೆಂದು ನಿರೀಕ್ಷಿಸಲ್ಪಟ್ಟಿದೆ. ಯುಯಾನ್‌ಷಿಕಾಯಿಯು ಪಟ್ಟಾಭಿಷಿಕ್ತನಾಗುವ ಸಮಯದಲ್ಲಿ ಹೇಳಿದುದೇನೆಂದರೆ:— “ಪ್ರಜಾಪ್ರಭುತ್ವವನ್ನು ಪುಷ್ಟೀಕರಿಸಿ ರಾಜ್ಯದ ಸುಖಸಂಪತ್ತನ್ನು ಅಭಿವೃದ್ಧಿಗೊಳಿಸಲು ಮತ್ತೂ ಈ ರಾಜ್ಯದಲ್ಲಿ ಇರತಕ್ಕ ೫ ಕುಲದವರನ್ನೆಲ್ಲಾ ಒಂದು ಪ್ರಬಲವಾದ ಜನಾಂಗದವರನ್ನಾಗಿ ಒಟ್ಟುಗೂಡಿಸಲು ನಾನು ವಿಧೇಯತೆಯಿಂದ ಸಾಹಸಪಡುವೆನು. ಸಾರ್ವಜನಿಕ ಮಹಾಸಭೆಯವರು ಒಬ್ಬ ಅಧ್ಯಕ್ಷನನ್ನು ನಿತ್ಯವಾಗಿ ನೇಮಿಸಿಕೊಳ್ಳುವಾಗ್ಗೆ ನಾನು ಉದ್ಯೋಗದಿಂದ ನಿವೃತ್ತನಾಗುವೆನು.” ಹಳದೀಬಣ್ಣದ ಉಡುಪುಗಳನ್ನು ಧರಿಸಿದ್ದ ಇಬ್ಬರು ಲಾಮಾಗಳು ಯುಯಾನ್‌ಷಿಕಾಯಿಗೆ ಫಲಮಂತ್ರಾಕ್ಷತೆಯನ್ನು ಕೊಟ್ಟರು.

ತಾ॥ ೧೨ – ಟಾಂಗ್‌ಷೋಯಿಯು ಪ್ರಧಾನಿಯಾಗಿ ನಿಯಮಿಸಲ್ಪಟ್ಟಿರುತ್ತಾನೆ. ಹಿಂದೆ ಸಮುದ್ರದ ಕಳ್ಳನಾಗಿದ್ದವನ ಯಾಜಮಾನ್ಯದಲ್ಲೇರ್ಪಟ್ಟಿರುವ ಆಯುಧಪಾಣಿಗಳಾದ ಜನರಿಗೂ ಸರ್ಕಾರದ ಸೈನಿಕರಿಗೂ ಕ್ಯಾಂಟನ್ನಿನಲ್ಲಿ ಜಗಳವಾಗಿ ೨೦೦ ಜನರಿಗೆ ಅಪಾಯವು ಸಂಭವಿಸಿತು. ಸಮುದ್ರದ ಕಳ್ಳನಾಗಿದ್ದವನು ನೌಕಾಸೇನಾಧಿಪತ್ಯದವರ ಕಟ್ಟಡಗಳನ್ನು ತನ್ನ ಸ್ವಾಧೀನಪಡಿಸಿಕೊಂಡನು. ಬ್ರಿಟಿಷರ ಯುದ್ಧದ ಹಡಗು ಮಿರ್ಥ ಸಂಘದ ಹುಡುಗಿಯರನ್ನೂ, ಶರಣಾಗತರನ್ನೂ ಹೊರಕ್ಕೆ ಸಾಗಿಸುತ್ತಿರುವುದು.

ತಾ॥ ೧೩.– ಕಾನ್ಸೂಯಲ್ಲೇರ್ಪಟ್ಟಿರುವ ಸೇನೆಯು ಸರ್ಕಾರದ ಸೇನೆಯನ್ನು ಸೋಲಿಸಿ ಕೆಲಸಾರ ಕೈಷ್ಟಿಯಾಕಡೆ ಸಾಗಿಹೋಗುತ್ತಿರುವುದು. ಈ ಸೇನೆಯು ಒಳ್ಳೆಯ ಆಯುಧಪಾಣಿಗಳಾದ ೧೦೦೦೦ ಜನರನ್ನೊಳಗೊಂಡು, ಚಕ್ರವರ್ತಿಯನ್ನು ಪುನಃ ಅಧಿಕಾರಕ್ಕೆ ತರುತ್ತೇನೆಂದು ಹೇಳಿಕೊಳ್ಳುತ್ತಿರುವ ಜನರಲ್ ಷೆಂಗ್‌ಯುಸ್ ಎಂಬುವನ ನಾಯಕತ್ವದಿಂದ ನಡಿಸಲ್ಪಡುತ್ತಿರುವುದು. ಅಧ್ಯಕ್ಷನಾದ ಯುಯಾನ್‌ಷಿಕಾಯಿಯು ರಾಯಭಾರಿಗಳು ಜನರಲ್ ಷೆಂಗ್‌ಯುಸ್ನನ್ನು ಕಂಡು ಪ್ರಸ್ತುತಸ್ಥಿತಿಯನ್ನು ಅವನಿಗೆ ತಿಳಿಯಹೇಳಲು ಹೋಗಿರುತ್ತಾರೆ.

ತುರ್ಕಿ-ಇಟಲಿಗಳ ಯುದ್ಧವು.

ಮಾರ್ಚಿ ತಾ॥ ೧೦.— ಬ್ರಿಟಿಷ್, ಜರ್ಮನಿ, ಫ್ರಾನ್ಸು, ಆಸ್ಟ್ರಿಯಾ ಹಂಗೇರಿ ಮತ್ತೂ ರಷ್ಯಾ ರಾಜ್ಯಗಳ ಪ್ರತಿನಿಧಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಫಾರಿನ್ ಆಫೀಸಿನಲ್ಲಿ ಇಟಲಿ ರಾಜ್ಯದ ಮಂತ್ರಿಯನ್ನು ಕಂಡು ಪರರಾಜ್ಯದವರೆಲ್ಲರೂ ಒಟ್ಟುಗೂಡಿ ಯಾವ ರೀತಿಯಾಗಿ ಮಧ್ಯಸ್ಥಿಕೆಯನ್ನು ಮಾಡಿದರೆ ಇಟಲಿಯು ಸಮ್ಮತಿಸುತ್ತದೆ? ಎಂದು ಕೇಳಿದುದಕ್ಕೆ ಮಂತ್ರಿಯು ಇನ್ನೂ ಉತ್ತರವನ್ನು ಕೊಟ್ಟಿಲ್ಲವು. ಟ್ರಿಪೋಲಿಯಲ್ಲಿರುವ ಲಂಡನ್ನಿನ ವೈದ್ಯಸಂಘದವರ ಸಹಾಯಾರ್ಥವಾಗಿ ಹಣವನ್ನು ಅಪೇಕ್ಷಿಸಿದ್ದ ರೈಟ್ ಆನರಬಲ್ ಮೆ॥ ಅಮೀರಾಲಿಯವರಲ್ಲಿಗೆ ಲಾಹೋರಿನಲ್ಲಿ ಹೊರಡುವ ಜಮೀಂದಾರ್ ಎಂಬ ಮಹಮ್ಮದೀಯ ಪತ್ರಿಕಾಧಿಪತಿಯು ಬಂಗಾಳ ಬ್ಯಾಂಕಿನ ಮೂಲಕ ೯೦೦೦ ರೂ. ಗಳನ್ನು ಕಳುಹಿರುವನು. ತುರ್ಕಿ ಯುದ್ಧ ಪ್ರಾರಂಭವಾದಾರಭ್ಯ ಟ್ರಿಪೋಲಿಯಲ್ಲಿ ಗಾಯವಡೆದ ಮಹಮ್ಮದೀಯರ ಸಹಾಯಾರ್ಥವಾಗಿ ಕಾನ್ಸ್ಟಾಂಟಿನೋಪಲ್ಲಿನಲ್ಲಿರುವ ರೆಡ್ ಕ್ರೆಸೆಂಟ್ ಸಂಘದವರ ಮತ್ತೂ ಅಮೀರಾಲಿಯವರ ಮೂಲಕ ಈವರೆಗೆ ೩೦೦೦೦ ರೂಪಾಯಿಗಳನ್ನು ಚಂದಾಯೆತ್ತಿ ಕಳುಹಿಸಿಕೊಟ್ಟಿರುವನು.

ತಾ॥ ೧೨– ಇಟಲಿಯ ಮಂತ್ರಿಸಭೆಯವರು ಟ್ರಿಪೋಲಿ ಯುದ್ಧ ಸಂಬಂಧವಾಗಿ ೧೩೦೦೦೦೦೦ ರೂ. ಗಳನ್ನು ವ್ಯಯಮಾಡತಕ್ಕ ಬಗೆಗೆ ಏರ್ಪಟ್ಟಿರುವ ವಿಧಿಯನ್ನು ಅನುಮೋದಿಸಿದರು.

ತಾ॥ ೧೩– ಜಬ್ರಕ್ ಎಂಬಲ್ಲಿ ಇಟಲಿಯವರು ಹೊಸದಾಗಿ ಕಟ್ಟುತ್ತಿರುವ ಕೋಟೆಯನ್ನು ತುರ್ಕಿಯವರು ತಾ॥ ೧೧ ರಲ್ಲಿ ಮುತ್ತಿಗೆಯನ್ನು ಹಾಕಲು ೩ ಇಟಲಿಯ ರಿಜಮೆಂಟಿನವರು ಘೋರಯುದ್ಧವನ್ನು ಮಾಡಿ ಶತ್ರುಗಳನ್ನೋಡಿಸಿದರು. ಈ ಕದನದಲ್ಲಿ ಇಟಲಿಯವರ ಕಡೆ ೧೨ ಜನರು ಮಡಿದರು ಮತ್ತೂ ೩೩ ಜನರು ಗಾಯವಡೆದರು. ಶತ್ರುಗಳ ಪಕ್ಷದಲ್ಲಿ ವಿಪರೀತ ನಷ್ಟವಾಯಿತು. ಬೇಘಾಜಿಯಲ್ಲಿ ಭೀಕರವಾದ ಯುದ್ಧವು ನಡೆದು ಇಟಲಿಯವರು ಬಂದೂಕಿನ ಸನೀನಿಂದ ಶತ್ರುಗಳನ್ನು ತಿವಿದು ಓಡಿಸಿದರು. ಇಟಲಿಯವರ ಕಡೆ ೨೬ ಜನರು ಸತ್ತರಲ್ಲದೆ ೬೦ ಜನರು ಮಡಿದರು. ಅತ್ತಲಾಗಿ ಶತ್ರುಗಳ ಕಡೆ ೧೦೦೦ ತುರ್ಕಿಯವರೂ ಅರಬ್ಬಿಯವರೂ ಸತ್ತರಲ್ಲದೆ ಬಹುಜನರು ಗಾಯವಡೆದರು.

ತಾ॥ ೧೩.– ಯುದ್ಧಶಾಖೆಯ ಮಂತ್ರಿಯು ಬೇಘಾಜಿಯಲ್ಲಿ ಇಟಲಿಯವರಿಗಾದ ಜಯಪ್ರದವನ್ನು ಕುರಿತು "ಜಯವೆಂಬ ಸೂರ್ಯನ ಪ್ರಭೆಯು ಎಂದಿಗಿಂತಲೂ ಹೆಚ್ಚಾಗಿ ಕಾಂತಿ ವಿಶಿಷ್ಟನಾಗಿದ್ದಿತು" ಎಂದು ಬಹು ಶ್ಲಾಘಿಸಿ ಪ್ರಸ್ತಾಪಿಸಿದುದನ್ನು ಕೇಳಿ ಇತರರೆಲ್ಲರಿಗೂ ಬಹು ಉತ್ಸಾಹವುಂಟಾಯಿತು. ಇಟಲಿಯ ಯುದ್ಧನಾವೆಗಳು ಏಜಿಯನ್ ಸಮುದ್ರದಲ್ಲಿರುವುವೆಂಬುದು ಸುಳ್ಳೆಂಬುದಾಗಿ ವರ್ತಮಾನವಿದೆ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ॥ ೧೮ ನೆಯ ಸೋಮವಾರ.

ಪರೀಧಾವಿ ಸಂವತ್ಸರವು.

ವಿರೋಧಿಕೃತುಸಂವತ್ಸರವು ಇಂದಿಗೆ ಮುಗಿದು ನಾಳೆಯ ದಿನದಿಂದ ಪರೀಧಾವಿ ಸಂವತ್ಸರವು ಆರಂಭವಾಗುವುದು. ಈ ವಿರೋಧಿಕೃತು ಸಂವದಲ್ಲಿ ಕೆಲಕಡೆ ಅತಿವೃಷ್ಟಿಯೂ, ಬಹುಕಡೆ ಅನಾವೃಷ್ಟಿಯೂ ಈ ಪ್ರಕಾರವಾಗಿ ಖಂಡವೃಷ್ಟಿಯಾದ ೩ ಬೆಳೆಯು ತಕ್ಕಷ್ಟಿಗಾದುದರಿಂದ, ಬಹುಭಾಗದಲ್ಲಿ ಸುಭಿಕ್ಷವಾಗಲಿ ದುರ್ಭಿಕ್ಷವಾಗಲಿ ಇರದೆ ಸಮಪಕ್ಷವಾಗಿ ಇದ್ದಿತು. ಆದರೆ ಬೊಂಬಾಯಾಧಿಪತ್ಯಕ್ಕೆ ಸೇರಿದ ಗುಜರಾತು, ಕಾಥೆವಾಡ ಮೊದಲಾದ ಪ್ರಾಂತಗಳಲ್ಲಿ ಮಾತ್ರ ಸುತರಾಂ ಮಳೆಯಿಲ್ಲದೆ ಜನರ ಮತ್ತೂ ಪಶುಗಳ ನೀರಿಗೂ, ಆಹಾರಕ್ಕೂ ಅಭಾವವಾಗಿ ಕ್ಷಾಮ ಪ್ರಾಪ್ತವಾಗಿರುವುದು. ಪ್ಲೇಗು ರೋಗವು ಅನೇಕ ಕಡೆ ಪ್ರಬಲವಾಗಿದ್ದು ಬಹು ಜನರನ್ನು ಆಹುತಿಗೊಂಡಿತು. ಈ ಸಂವತ್ಸರವು ವಿರೋಧವನ್ನು ಮಾಡತಕ್ಕುದಾಗಿ ಅದರ ಹೆಸರಿನಿಂದ ತೋರುವುದಾದರೂ ಫಲಿತಾಂಶದಲ್ಲಿ ಮಾತ್ರ ಅಂತಹ ವಿರೋಧವನ್ನೇನೂ ಮಾಡಲಿಲ್ಲವು. ಭರತಖಂಡದ ಸಾರ್ವಭೌಮ ದಂಪತಿಗಳು ಈ ಸಂವತ್ಸರದಲ್ಲಿ ಭರತಖಂಡಕ್ಕೆ ಪ್ರತ್ಯಕ್ಷವಾಗಿ ಚಿತ್ತೈಸಿ ಪುರಾಣಪ್ರಸಿದ್ಧವಾದ ದಿಲ್ಲಿಯ ನಗರದಲ್ಲಿ ತಮ್ಮ ಕಿರೀಟಧಾರಣ ಮಹೋತ್ಸವವನ್ನು ಅಭೂತಪೂರ್ವವಾಗಿ ನಡೆಯಿಸಿ, ದಿಲ್ಲಿಯ ನಗರವನ್ನು ಭರತಖಂಡದ ರಾಜಧಾನಿಯನ್ನಾಗಿ ಮಾಡಿ, ಬಂಗಾಳ ವಿಭಜನವನ್ನು ತಪ್ಪಿಸಿಬಿಟ್ಟು ಆ ದೇಶೀಯರಿಗುಂಟಾಗಿದ್ದ ಅಸಮಾಧಾನವನ್ನು ಹೋಗಲಾಡಿಸಿ ಭಾರತೀಯರ ಪ್ರಾಥಮಿಕ ವಿದ್ಯಾಪ್ರಸರಣಕ್ಕಾಗಿ ಪ್ರತಿವರ್ಷದಲ್ಲೂ ಆಗುವುದಕ್ಕಿಂತ ೫೦ ಲಕ್ಷ ರೂ. ಗಳನ್ನು ಹೆಚ್ಚಾಗಿ ವ್ಯಯಮಾಡಲಪ್ಪಣೆಯನ್ನಿತ್ತು ಭಾರತೀಯರೆಲ್ಲರಿಗೂ ಪರಮಾನಂದವನ್ನುಂಟುಮಾಡಿದರಷ್ಟೆ. ಈ ಕಾರಣದಿಂದ ವಿರೋಧಿಕೃತು ಸಂವತ್ಸರವು ಹಿಂದಣ ಎಲ್ಲಾ ಸಂವತ್ಸರಗಳಿಗಿಂತಲೂ ಚಿರಸ್ಮರಣೀಯವಾಗಿರುವುದು.

ಪರೀಧಾವಿ ಸಂವತ್ಸರದಲ್ಲಿ ಅಂಗಾರಕನು ರಾಜನಾಗಿರುವುದರಿಂದ, ಗಾಳಿ ಬೆಂಕಿಗಳ ಅನಾಹುತಗಳಾಗುವುವು. ಶುಕ್ರನು ಮಂತ್ರಿಯಾಗಿಯೂ, ಸೇನಾಧಿಪತಿಯಾಗಿಯೂ ಅರ್ಘಾಧಿಪತಿಯಾಗಿಯೂ, ಮೇಘಾಧಿಪತಿಯಾಗಿಯೂ ಇರುವುದರಿಂದ ಮಳೆಯು ಸಮರ್ಪಕವಾಗಾಗಿ ಪೈರುಪಚ್ಚೆಗಳು ಚನ್ನಾಗಾಗುವುವು, ಗೋವುಗಳು ಸಮೃದ್ಧಿಯಾಗಿ ಹಾಲನ್ನು ಕರೆಯುವುವು, ಧಾನ್ಯಗಳ ಬೆಲೆಯು ಕಡಿಮೆಯಾಗುವುದು ಮತ್ತೂ ಬ್ರಾಹ್ಮಣರೂ, ರಾಜರುಗಳೂ ಸ್ವಧರ್ಮನಿರತರಾಗುವರು. ಶನಿಯು ಧಾನ್ಯಾಧಿಪತಿಯಾಗಿರುವುದರಿಂದ ಖಂಡವೃಷ್ಟಿಯೂ ಬೆಳೆಯೂ ಆಗುವುವು, ಮತ್ತು ಪ್ರಜೆಗಳಿಗೆ ನಾನಾವಿಧವಾದ ಪೀಡೆಗಳುಂಟಾಗುವುವು. ಬುಧನು ರಸಾಧಿಪತಿಯಾಗಿರುವುದರಿಂದ ಹಿಪ್ಪಲಿ, ಶುಂಠಿ, ಇಂಗು ಮೊದಲಾದ ತೈಲವಸ್ತುಗಳ ಬೆಲೆಯೇರುವುದು. ಚಂದ್ರನು ನೀರಸಾಧಿಪತಿಯಾಗಿರುವುದರಿಂದ ಭಂಗಾರ ಬೆಳ್ಳಿ ಮೊದಲಾದ ಪದಾರ್ಥಗಳು ವೃದ್ಧಿಯಾಗುವುವು. ಪಶುನಾಯಕನು ಬಲಭದ್ರನಾದುದರಿಂದ ಪಶುಗಳಿಗೆ ಜಲತೃಣ ಸಮೃದ್ಧಿಯಾಗುವುದು, ಆದರೆ ಪಶುಸಂರಕ್ಷಕನು ಯಮನಾಗಿರುವುದರಿಂದ ಪಶುಗಳಿಗೆ ರೋಗೋಪದ್ರವವುಂಟಾಗುವುದು. ಎರಡು ಕೊಳಗ ಮಳೆಯೂ, ೧೦ ಆಣೆಯ ಬೆಳೆಯೂ ಆಗುವುವು. ಚೈತ್ರ ಶುದ್ಧ ಪೂರ್ಣಿಮಾ ಸೋಮವಾರ ಚಂದ್ರಗ್ರಹಣವಾಗುವುದು, ಮತ್ತೂ ಇದೇ ಚೈತ್ರ ಬಹುಳ ಅಮಾವಾಸ್ಯೆ ಬುಧವಾರದಲ್ಲಿ ಸೂರ್ಯಗ್ರಹಣವಾಗುವುದು, ಆದರೆ ಅದು ಈ ದೇಶೀಯರಿಗೆ ಕಾಣಿಸುವುದಿಲ್ಲವು. ಫಾಲ್ಗುಣ ಶುದ್ಧ ಪೂರ್ಣಿಮೆಯಲ್ಲಿ ಆಗುವ ಗ್ರಹಣವು ದೃಶ್ಯಾದೃಶ್ಯವಾಗುವುದು. ಈ ಸಂವತ್ಸರದಲ್ಲಿ ಆಷಾಢಮಾಸವು ಅಧಿಕವಾಗುವುದು. ಚೈತ್ರವೈಶಾಖ ಮಾಸಗಳಲ್ಲಿ ಎಲ್ಲಾ ಕಡೆಯಲ್ಲೂ, ಜ್ಯೇಷ್ಠ ಆಷಾಢ ಮಾಸಗಳಲ್ಲಿ ಖಂಡವಾಗಿಯೂ, ನಿಜಾಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ ಮಾಸಗಳಲ್ಲಿ ಸಮವಾಗಿಯೂ, ಕಾರ್ತಿಕ ಮಾರ್ಗಶೀರ್ಷ ಮಾಸಗಳಲ್ಲಿ ವಿಶೇಷವಾಗಿಯೂ ಮಳೆಯಾಗುವುದು. ಎಂದು ದೈವಜ್ಞರು ನೂತನ ಸಂವತ್ಸರದ ಫಲವನ್ನು ಹೇಳಿರುವರು. ಇದನ್ನು ನೋಡಿದರೆ ಪರೀಧಾವಿ ಸಂವತ್ಸರವು ವಿರೋಧಿಕೃತು ಸಂವತ್ಸರಕ್ಕಿಂತ ಅಷ್ಟೇನೂ ಸುಖದಾಯಕವಾಗಿರುವಂತೆ ತೋರುವುದಿಲ್ಲವು. ಆದರೂ ಭಗವದನುಗ್ರಹದಿಂದ ಈ ನೂತನ ಸಂವತ್ಸರದಲ್ಲಿ ಸಮಸ್ತ ಪ್ರಾಣಿಗಳಿಗೂ ಕ್ಷೇಮವುಂಟಾಗಲೆಂದು ಪ್ರಾರ್ಥಿಸುತ್ತೇವೆ.

ಶ್ರೀ॥ ಸಿರಸಂಗಿ ದೇಸಾಯರ ಮರಣಶಾಸನವು.

ಹಿಮಾಚಲದಿಂದ ಕನ್ಯಾಕುಬ್ಜದವರೆಗೂ ಇರುವ ಪ್ರತಿಯೊಬ್ಬ ವೀರಶೈವನ ಗೃಹದಲ್ಲಿ ಆ ಮಹಾಪುರುಷನ ಭಾವಚಿತ್ರಪಟವು ಪ್ರತಿದಿನದಲ್ಲೂ ಪೂಜಿಸಲ್ಪಡುತ್ತಿದೆಯೋ ಮತ್ತೂ ಆರ ಪವಿತ್ರನಾಮವು ಶಿವಶರಣರ ನಾಮಗಳೊಂದಿಗೆ ಪಠಿಸಲ್ಪಡುತ್ತಿದೆಯೊ ಅಂತಹ ವೀರಶೈವ ಮತೋದ್ಧಾರಕರಾದ ಸರ್ ಸಿರಸಂಗಿ ದೇಸಾಯರು "ಇನ್ನು ಮುಂದೆ ನಾನು ನಿಶ್ಚಿಂತನಾದೆನು; ನಾನು ಈ ಜನ್ಮದಲ್ಲಿ ಮಾಡಬೇಕಾಗಿದ್ದ ಕೆಲಸವೆಲ್ಲವೂ ಮುಗಿದಿತು; ಇನ್ನು ನನಗೆ ಪೃಥ್ವಿಯ ಮೇಲಣ ಯಾವ ಸುಖಲಾಭೇಚ್ಛೆಯೂ ಇಲ್ಲ; ಭಕ್ತವತ್ಸಲನ ಪದಸಾಮೀಪ್ಯವೊಂದೇ ನನಗೆ ಗುರಿ; ಇನ್ನು ಯಾವಾಗಬೇಕಿದ್ದರೂ ಪ್ರಾಣವು ಹೋಗಲಿ; ನಾನು ಇನ್ನು ಕೆಲಕಾಲ ಮರ್ತ್ಯಲೋಕದಲ್ಲಿರಬೇಕಾದುದು ಶಿವಸಂಕಲ್ಪವಾಗಿದ್ದರೆ ಮಾತ್ರ ನನ್ನ ಯತ್ನವಿಲ್ಲ; ಆಗ್ಗೆ ನನ್ನ ಪ್ರತಿಯೊಂದು ನಿಮಿಷವನ್ನೂ ನಮ್ಮ ಪವಿತ್ರಮತದ ಪುರೋಭಿವೃದ್ಧಿಗಾಗಿಯೇ ವಿನಿಯೋಗಿಸುವೆನೇ ವಿನಾ ಬೇರೊಂದುಕಾರ್ಯವೂ ನನಗೆ ಸೇರುವಂತಿಲ್ಲ; ಸಂಸ್ಥಾನದ ಉತ್ಪತ್ತಿಯನ್ನು ಇನ್ನೂ ಹೆಚ್ಚಿಸಿ, ಅದೆಲ್ಲವನ್ನೂ ಲಿಂಗಾಯತಫಂಡಿಗೇ ಕೊಡಿಸುತ್ತೇನೆ; ದೈವೇಚ್ಛೆಯಿಂದ ನನಗೆ ಪುತ್ರರಿಲ್ಲದಿದ್ದರೂ, ದತ್ತಸುತನನ್ನು ಮಾತ್ರ ನಾನು ಮಾಡಿಕೊಳ್ಳುವುದಿಲ್ಲ; ಒಬ್ಬ ಮಗನನ್ನು ಮಾಡಿಕೊಳ್ಳುವುದಕ್ಕಿಂತ ಸಂಸ್ಥಾನದ ಹಣದ ಸಹಾಯದಿಂದ ವಿದ್ಯಾವಂತರಾದವರೆಲ್ಲ ಉಪಕಾರಸ್ಮರಣಾರ್ಥವಾಗಿ ಅದರ ಹೆಸರನ್ನು ಹೇಳುತ್ತಾರಾದಕಾರಣ ಅವರೆಲ್ಲರನ್ನೂ ಮಕ್ಕಳೆಂದು ತಿಳಿಯುವುದರಲ್ಲಿ ಅಭ್ಯಂತರವಿಲ್ಲ; ಒಂದುವೇಳೆ ನನಗೆ ಮಗನಾದರೆ, ಆತನು ಪ್ರಾಪ್ತವಯಸ್ಕನಾಗುವುದರೊಳಗೆ ಎಂದರೆ ೨೧ ವರ್ಷದ ವರೆಗೂ ಸಂಸ್ಥಾನದ ಉತ್ಪನ್ನವನ್ನು ಫಂಡಿಗೆ ಕೊಡಿಸುತ್ತ, ಮನೆ, ದನಕರು, ಹೊಲಗಳನ್ನು ಮಾತ್ರ ಮಗನಿಗೆ ಬಿಡತಕ್ಕುದೆಂದು ಮರಣಶಾಸನವನ್ನು ಬರೆದಿಡುತ್ತೇನೆ." ಎಂದು ತಮ್ಮ ಅವಸಾನಕ್ಕೆ ಕೊಂಚಕಾಲ ಮೊದಲಿಂದಲೂ ಹೇಳುತ್ತಿದ್ದ ಪ್ರಕಾರ ಮೃತ್ಯುಪತ್ರವನ್ನು ಬರೆದು ಲೋಕಕ್ಕೇ ವಿಸ್ಮಯವನ್ನುಂಟುಮಾಡಿದ್ದರಷ್ಟೆ. ಆದರೆ ವೀರಶೈವರ ಅಭಿವೃದ್ಧಿಯನ್ನು ನೋಡಿ ಸಹಿಸದ ಕೆಲ ಪರಮತೀಯರೂ ಮತ್ತೂ ಸ್ವಾರ್ಥಪರಾಯಣರಾದ ಕೆಲ ಸ್ವಮತೀಯರೂ ದೇಸಾಯರ ಧರ್ಮಪತ್ನಿಯವರಿಗೆ ದುರ್ಬೋಧೆಯಿಂದ ಒಬ್ಬ ಹುಡುಗನನ್ನು ದತ್ತನ ಮಾಡಿಸಿ, ದತ್ತಕಪುತ್ರನನ್ನು ಮಾಡಿಕೊಳ್ಳಲು ತಮ್ಮ ಪತಿಯವರು ಮರಣಕಾಲದಲ್ಲಿ ಸಮ್ಮತಿಯನ್ನು ಕೊಟ್ಟಿದ್ದರೆಂದೂ ದೇಶಗತಿಯನ್ನು ಪರಾಧೀನಮಾಡಲು ತಮ್ಮ ಪತಿಯವರಿಗೆ ಅಧಿಕಾರವಿಲ್ಲವೆಂದೂ ಆಕೆಯವರ ಕೈಲಿ ಅರ್ಜಿಯನ್ನು ಬರೆಯಿಸಿ ಬೊಂಬಾಯಿ ಸರ್ಕಾರದವರಿಗೆ ಕೊಡಿಸಿದರು. ಸರ್ಕಾರದವರು ದೇಸಾಯರ ಮೃತ್ಯುಪತ್ರವನ್ನು ಚೆನ್ನಾಗಿ ಪರಿಶೀಲಿಸಿ, ದೇಶಗತಿಯನ್ನು ಪರಾಧೀನಮಾಡಲು ದೇಸಾಯರು ಸ್ವತಂತ್ರರಿದ್ದರು. ಎಂದು ತೀರ್ಮಾನಿಸಿದ ಮೇಲೆ, ಮೃತ್ಯುಪತ್ರವನ್ನು ಯಾವ ಪ್ರಯತ್ನದಿಂದಲಾದರೂ ನಿರರ್ಥಕವನ್ನಾಗಿ ಮಾಡಬೇಕೆಂದು ಸೊಂಟಕಟ್ಟಿಕೊಂಡು ನಿಂತಿರುವ ಮಹಾಪುರುಷರುಗಳು ಸಬ್ ಜಡ್ಜರ ಕೋರ್ಟಿನಲ್ಲಿ ಸಿವಿಲ್ ವಿವಾದವನ್ನು ಹೂಡಿಸಿದರು. ಅಲ್ಲಿಯ ವಿಚಾರಣೆಯಲ್ಲಿ ದತ್ತಸ್ವೀಕಾರವು ಸ್ಥಿರಪಟ್ಟಿತಲ್ಲದೆ, ಗತಿಸಿದ ದೇಸಾಯರ ಮೃತ್ಯುಪತ್ರವು ಅಸ್ಥಿರಪಡಿಸಲ್ಪಟ್ಟಿತು. ಈ ತೀರ್ಪಿನ ಮೇಲೆ ಬೊಂಬಾಯಿ ಹೈಕೋರ್ಟಿಗೆ ಅಪೀಲುಮಾಡಲ್ಪಟ್ಟಿದ್ದು ಈ ತಿಂಗಳ ತಾ॥ ೧೧ ರಲ್ಲಿ ಜಸ್ಟಿಸ್ ಚಂದ್ರಾವಾರ್ಕರ್ ಮತ್ತೂ ಜಸ್ಟಿಸ್ ಬ್ಯಾಚಲರ್ ರವರಲ್ಲಿ ವಿಚಾರಿತವಾಗಿ ದೇಸಾಯರು ಬರೆದಿರುವ ಮೃತ್ಯುಪತ್ರವು ಸ್ಥಿರಗೊಳಿಸಲ್ಪಟ್ಟಿತೆಂದು ತಿಳಿಯಲು ಅತ್ಯಾನಂದವಾಗುತ್ತದೆ. ಬೊಂಬಾಯಿನಲ್ಲಿ ಬಹು ಪ್ರಸಿದ್ಧ ಬ್ಯಾರಿಸ್ಟರಾಗಿರುವ ಇನ್ವರಾರಿಟಿಯವರು ದೇಸಾಯರ ಪತ್ನಿಯವರ ಪಕ್ಷವಾಗಿ ನಿಯಮಿಸಲ್ಪಟ್ಟಿದ್ದರು. ಇದಿರು ಪಕ್ಷದವರು ಬ್ಯಾ॥ ರಾಬರ್ಟ್ಸನ್ ರವರನ್ನು ಮತ್ತೂ ಬ್ಯಾ॥ ಜಿ. ರುದ್ರಪ್ಪನವರನ್ನು ನಿಯಮಿಸಿಕೊಂಡಿದ್ದರು.

ವೀರಶೈವ ಮತೋದ್ಧರಣಕ್ಕಾಗಿ ಅವತರಿಸಿದ್ದ ಆ ಮಹಾಪುರುಷರ ಧರ್ಮಪತ್ನಿಯವರು ವೀರಶೈವರ ಉತ್ಕರ್ಷಾಸಹನೆಯ ಜನರ ಮತ್ತೂ ಸ್ವಕುಲಕಂಟಕರ ದುರ್ಬೋಧೆಗೆ ಕಿವಿಗೊಡದೆ ತಮ್ಮ ಪತಿಯವರ ಇಷ್ಟಾರ್ಥವನ್ನು ನೆರವೇರಿಸಿಕೊಂಡು ಹೋಗಿದ್ದ ಪಕ್ಷದಲ್ಲಿ ಬಹು ಅರ್ಥಹಾನಿ ದೇಹಶ್ರಮ ಮತ್ತೂ ಲೋಕನಿಂದೆಗಳಿಗೆ ಗುರಿಯಾಗದೆ ಸಕಲ ವೀರಶೈವರಿಂದಲೂ ಜಗನ್ಮಾತೆಯಂತೆ ಪೂಜಿಸಲ್ಪಡುತ್ತಿದ್ದರು. ಈಗಲಾದರೂ ಆಕೆಯವರು ಹಿಂದಾದುದನ್ನು ಮರೆತು ತಮ್ಮ ಪತಿಯ ಧರ್ಮಸಂಕಲ್ಪವನ್ನು ನೆರವೇರಿಸುವುದರಲ್ಲಿ ಸಹಾಯಕರಾಗಿದ್ದು ವೀರಶೈವರ ಮನ್ನಣೆಗೆ ಪಾತ್ರರಾಗ ಯತ್ನಿಸುವರೆಂದು ನಿರೀಕ್ಷಿಸುತ್ತೇವೆ.

ಇಟಲಿಯ ದೊರೆಯು ಪ್ರಾಣಾಪಾಯದಿಂದ ಪಾರಾದುದು.

ಹಂಬರ್ಟ್ ದೊರೆಯ ಜನ್ಮದಿನೋತ್ಸವ ಸಮಾರಂಭದಲ್ಲಿ ಭಾಗಿಯಾಗಲು ವಿಕ್ಟರ್ ಮ್ಯಾನ್ಯುಯಲ್ ದೊರೆಯು ರಾಣಿಯ ಸಮೇತ ರಥಾರೂಢನಾಗಿ ಅಂಗರಕ್ಷಕರೊಡನೆ ಪೆಂಥೋನಿಗೆ ಹೋಗುತ್ತಿರುವಾಗ್ಗೆ, ಅರಾಜಕ ಪ್ರವರ್ತಕನಾದ ಡೆಲ್ಬಾ ಎಂಬ ಒಬ್ಬ ಯುವಕನು ದೊರೆಗೆ ಗುರಿಕಟ್ಟಿ ಮೂರಾವೃತ್ತಿ ಗುಂಡನ್ನು ಹೊಡೆದನು. ಅದು ದೈವಾಧೀನದಿಂದ ದೊರೆಗೆ ತಗಲದೆ ಅಂಗರಕ್ಷಕನಾದ ಮೇಜರ್ ಲಾನ್ ಎಂಬುವನಿಗೆ ತಗಲಿ ಗಾಯಮಾಡಿತು. ಅವನು ಕುದುರೆಯಿಂದ ಕೆಳಗೆ ಬಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟನು. ಆ ಅರಾಜಕ ಪ್ರವರ್ತಕನು ಆ ಕೂಡಲೆ ಹಿಡಿಯಲ್ಪಟ್ಟು ಕಂಠಗತ ಪ್ರಾಣನಾಗುವವರೆಗೂ ಮರ್ದಿಸಲ್ಪಟ್ಟನು. ರಾಜದಂಪತಿಗಳ ದರ್ಶನಕ್ಕಾಗಿ ಮಾರ್ಗದ ಇಕ್ಕೆಲದಲ್ಲೂ ನಿಂತಿದ್ದ ಜನರು ದೊರೆಯು ಗಂಡಾಂತರದಿಂದ ಪಾರಾದುದಕ್ಕಾಗಿ ಕೋಲಾಹಲ ಧ್ವನಿಯನ್ನು ಮಾಡಿದರು. ಮತ್ತೂ ಜಾರ್ಜ್ ಪ್ರಭುಗಳು ಮೊದಲಾಗಿ ಎಲ್ಲಾ ಪರರಾಜ್ಯದ ದೊರೆಗಳೂ ಪಾರ್ಲಿಮೆಂಟ್ ಸಭಿಕರೂ ತಮ್ಮ ಅಭಿನಂದನವನ್ನು ತಂತಿಯ ಮೂಲಕ ತಿಳುಹುತ್ತಿರುವರು. ದೊರೆಯು ಸಾಯಂಕಾಲದಲ್ಲಿ ಮೋಟಾರು ಬಂಡಿಯಲ್ಲಿ ಕುಳಿತು ಆಸ್ಪತ್ರೆಗೆ ಹೋಗಿ ಗಾಯವಡೆದು ಬಿದ್ದಿದ್ದ ಮೇಜರ್ ಲಾನ್ಗನನ್ನು ನೋಡಿಕೊಂಡು ಬಂದರು.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕುದು.

ಬೆಂಗಳೂರಿಗೆ ಪ್ರತಿವರ್ಷದಲ್ಲೂ ಲೋವರ್ ಸೆಕೆಂಡರಿ, ಮೆಟ್ರಿಕ್ಯುಲೇಷನ್ ಮತ್ತೂ ಎಫ್.ಎ., ಪರೀಕ್ಷೆಗಳಿಗಾಗಿ ಪರಸ್ಥಳದಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟ ಉಪಚಾರಾದಿಗಳಿಗೆ ಬೆಂಗಳೂರಿನ ಊದುಬತ್ತಿ ಷಾಪ್ ಮೆ॥ ಕಳ್ಳಪ್ಪನವರು ಕೆಲ ವರ್ಷಗಳಿಂದಲೂ ಸ್ವಂತಖರ್ಚಿನಿಂದ ತಕ್ಕೇರ್ಪಾಟನ್ನಿಡುತ್ತಿದ್ದಂತೆ ಈ ವರ್ಷದಲ್ಲೂ ತಕ್ಕೇರ್ಪಾಟನ್ನು ಮಾಡತಕ್ಕವರಾಗಿರುವರಾದಕಾರಣ ಲೋವರ್ ಸೆಕೆಂಡರಿ, ಮೆಟ್ರಿಕ್ಯುಲೇಷನ್, ಇಂಟರ್ ಮೀಡಿಯೆಟ್, ಮತ್ತೂ ಬಿ. ಎ., ಪರೀಕ್ಷೆಗಳಿಗಾಗಿ ಬೆಂಗಳೂರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ತಾವು ಬರುವುದಕ್ಕೆ ೨ ದಿವಸ ಮುಂಚಿತವಾಗಿ ಮೆ॥ ಕಳ್ಳಪ್ಪನವರಿಗೆ ಬರೆದು ತಿಳುಹತಕ್ಕದ್ದು.

ಒಳದೇಶದ ವೃತ್ತಾಂತಗಳು.

ಎರಡನೆಯ ಕೌನ್ಸಿಲ್ ಮೆ॥ ದಳವಾಯಿ ದೇವರಾಜ ಅರಸಿನವರು ನೆನ್ನೆಯದಿನ ರಾಜಧಾನಿಗೆ ದಯಮಾಡಿಸಿದರು.

ಅಪ್ರಾಪ್ತ ವಯಸ್ಕರ ಧೂಮಪಾನ ನಿಷೇಧ ವಿಧಿಯು ಕೋಲಾರದ ಚಿನ್ನದ ಗಣಿಗಳಲ್ಲಿ ಬರುವ ಏಪ್ರಿಲ್ ತಾ॥ ೧ ರಿಂದ ಆಚರಣೆಗೆ ತರಲ್ಪಡಲು ಸರ್ಕಾರದ ಅಪ್ಪಣೆಯಾಗಿರುತ್ತದೆ.

ಮದ್ರಾಸಿನ ಸೌಭಾಗ್ಯವತಿ ಸರಸ್ವತೀಬಾಯಿ ಎಂಬಾಕೆಯು ಬೆಂಗಳೂರಿಗೆ ಬಂದು ದೊಡ್ಡಣ್ಣನವರ ಪಾಠಶಾಲಾ ಮಂದಿರದಲ್ಲಿ ಹರಿಕಥೆಯನ್ನು ಬಹು ಪ್ರೌಢಿಮೆಯಿಂದಲೂ, ಭಕ್ತಿಪ್ರದವಾಗಿಯೂ ಮಾಡಿ ಜನರ ಶ್ಲಾಘನೆಗೆ ಪಾತ್ರರಾಗಿರುತ್ತಾರೆ.

ಮೈಸೂರು ಸೀಮೆಯ ಚೀಫ್ ಕೋರ್ಟು ಮತ್ತೂ ಎಲ್ಲಾ ಸಿವಿಲ್ ಕೋರ್ಟುಗಳು ಬೇಸಗೆಯ ಉದ್ದೇಶದಿಂದ ಬರುವ ಏಪ್ರಿಲ್ ತಾ॥ ೧೫ ರಿಂದ ಮುಚ್ಚಲ್ಪಟ್ಟು ಚೀಫ್ ಕೋರ್ಟು ಜೂನ್ ೧೨ ರಲ್ಲೂ ಇತರ ಸಿವಿಲ್ ಕೋರ್ಟುಗಳು ಮೇ ತಾ॥ ೨೨ ರಲ್ಲೂ ತೆರೆಯಲ್ಪಡುವುವು.

ಹುಣಸೂರಿನಲ್ಲಿ ಒಂದು ಹುಲಿಯು ಊರೊಳಗೆ ಬಂದು ಜನರಿಗೂ, ದನಕರುಗಳಿಗೂ ಬಲು ತೊಂದರೆಯನ್ನು ಕೊಡುತ್ತಿದ್ದಿತು. ಕಳೆದ ಫೆಬ್ರುವರಿ ತಿಂಗಳ ಕಡೆಯಲ್ಲಿ ಪರಸ್ಥಳದಿಂದ ಬಂದಿದ್ದ ಒಬ್ಬ ಯುರೋಪ್ಯನು ಅದನ್ನು ಗುಂಡಿನಿಂದ ಸುಟ್ಟು ಕೊಂದುಹಾಕಲು, ಊರಿನವರೆಲ್ಲಾ ಬಹು ಸಂತೋಷದಿಂದ ಆ ದುಷ್ಟ ಪ್ರಾಣಿಯ ಶವವನ್ನು ಊರಿನಲ್ಲೆಲ್ಲಾ ಮೆರೆಯಿಸಿದರು

ದಿವಾನರು ಕಳೆದ ತಾ॥ ೧೪ ರ ಮಧ್ಯಾಹ್ನ ಮೇಲುಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿ ಸರದಾರ್ ಕಾಂತರಾಜ ಅರಸಿನವರನ್ನು ಕಂಡು ಅವರ ಮಾತೃವಿಯೋಗದುಃಖವನ್ನು ವಿಚಾರಿಸಿ ಅವರಿಗೆ ಸಮಾಧಾನವನ್ನು ಹೇಳಿ ಹಾಗೆಯೆ ಜನರಲ್ ಆಸ್ಪತ್ರೆಯನ್ನು ಪರಾಮರ್ಶಿಸಿಕೊಂಡು ನೆನ್ನೆಯದಿನ ಬೆಂಗಳೂರಿಗೆ ಪ್ರಯಾಣಮಾಡಿದರು.

ರಾಜಧಾನಿಯ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದ ಮೇಲುಭಾಗದಲ್ಲಿ ಗೂಡನ್ನು ಕಟ್ಟಿಕೊಂಡಿರುವ ಹೆಜ್ಜೇನು ಹುಳುಗಳು ಯಾರಿಂದಲಾದರೂ ಕೆಣಕಲ್ಪಟ್ಟೋ ಅಥವಾ ಮತ್ತಾವ ಕಾರಣದಿಂದಲೋ ಗೂಡನ್ನು ಬಿಟ್ಟು ಆ ಕಟ್ಟಡದ ಬೈಲಿನಲ್ಲೆಲ್ಲಾ ಹಾರಾಡುತ ಆ ಪ್ರಾಂತ ತಿರುಗುತ್ತಿದ್ದ ಕೆಲವರನ್ನು ಕಡಿದು ಬಿಟ್ಟಿದ್ದುವು. ಹೀಗೆ ಕಡಿಸಿಕೊಂಡವರಲ್ಲಿ ತುಂಬಾ ಅಪಾಯವನ್ನು ಹೊಂದಿದ್ದ ಒಬ್ಬ ಹಳ್ಳಿಯವನು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಮಾಡಲ್ಪಟ್ಟರೂ ಬದುಕದೆ ಸತ್ತು ಹೋದನು ಮತ್ತೂ ಟರ್ಮಹಾಲಿನಲ್ಲಿ ಗೂಡನ್ನು ಕಟ್ಟಿದ್ದ ಜೇನುಹುಳುಗಳೂ ಎದ್ದುಬಿಟ್ಟು ಕೆಲವರನ್ನು ಕಡಿದುವು. ಇವರಲ್ಲಿ ಒಬ್ಬ ಬ್ರಾಹ್ಮಣ ವೃದ್ಧ ವಿಧವೆಯು ಸತ್ತು ಹೋದಳು.

ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಜಡ್ಜರಾದ ಮೆ॥ ಹಂಜಾಹುಸೇನ್, ಬಿ. ಎ., ಬಿ. ಎಲ್., ರವರು ತಮ್ಮ ಕುವರಿಯನ್ನು ಮೈಸೂರ ಡಿಸ್ಟ್ರಿಕ್ಟಾಫೀಸಿನಲ್ಲಿ ಕೆಲಸವನ್ನು ಕಲಿಯುತ್ತಿರುವ ರೆವಿನ್ಯೂ ಪ್ರೊಬೇಷನರ್ ಮೆ॥ ಅಜೀಜ್ ಖಾನ್, ಬಿ. ಎ., ಯವರಿಗೆ ಕೊಟ್ಟು ಬರುವ ಜೂನ್ ಅಥವಾ ಜುಲೈ ತಿಂಗಳಲ್ಲಿ ರಾಜಧಾನಿಯಲ್ಲಿ ವಿವಾಹವನ್ನು ಬೆಳೆಯಿಸುವವರಾಗಿರುವರೆಂದು ಕೇಳುತ್ತೇವೆ. ಇವರಿಬ್ಬರೂ ಸುನ್ನಿ ಮತ್ತೂ ಷಿಯಾ ಎಂಬ ಭಿನ್ನಪಂಗಡಗಳಿಗೆ ಸೇರಿದವರು. ಈ ಎರಡು ಪಂಗಡದವರಿಗೂ ಈವರೆಗೆ ವಿವಾಹ ಸಂಬಂಧವು ಬೆಳೆದಿರಲಿಲ್ಲವಾದುದರಿಂದ ಈ ನೂತನಸಂಬಂಧವು ಸ್ತುತ್ಯವಾಗಿರುವುದಲ್ಲದೆ ಈ ಇಬ್ಬರು ದೊಡ್ಡಮನುಷ್ಯರುಗಳೂ, ವಿದ್ಯಾವಂತರೂ ನಾಗರಿಕರೂ ಆದುದಕ್ಕೆ ಸಾರ್ಥಕವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು.

ಸರದಾರ್ ಕಾಂತರಾಜಅರಸಿನವರು ತಮ್ಮ ಪ್ರಿಯ ಮಾತೃಶ್ರೀಯವರು ವಿಧಿವಶರಾದಾರಭ್ಯ ೧೫ ದಿನಗಳ ವರೆಗೆ ನಿತ್ಯದಲ್ಲೂ ಉತ್ತರಕ್ರಿಯಾದಿಗಳನ್ನು ವಿಧ್ಯುಕ್ತವಾಗಿ ಮಾಡಿ ೧೩ನೆಯ ದಿನದ ಬೆಳಿಗ್ಗೆ ಶ್ರೀ ಪರಕಾಲಸ್ವಾಮಿಗಳನ್ನು ತಮ್ಮ ಗೃಹಕ್ಕೆ ಬರಮಾಡಿಕೊಂಡು ತೀರ್ಥಪ್ರಸಾದ ಸ್ವೀಕರಿಸಿ ಶ್ರೀವೈಷ್ಣವ ಪದ್ಧತಿಯಂತೆ ವೈದಿಕ ಬ್ರಾಹ್ಮಣರುಗಳ ಕೂಡ ತಾವೂ ಕಬ್ಬಿನ ಜಲ್ಲೆಗಳನ್ನು ಹಿಡಿದುಕೊಂಡು ಕೋಟೆಯ ಸುತ್ತಲೂ ಪ್ರದಕ್ಷಿಣೆ ಬಂದು ರಾತ್ರಿ ಉತ್ಸವ ಸಮೇತ ದೇವಸ್ಥಾನಕ್ಕೆ ಚಿತ್ತೈಸಿ ದೇವರ ದರ್ಶನವನ್ನು ಮಾಡಿಕೊಂಡು ಬಂದರು; ಬ್ರಾಹ್ಮಣರಿಗೆ ಎತೆಗಳನ್ನು ಬಹು ಧಾರಾಳವಾಗಿ ಕೊಟ್ಟುದಲ್ಲದೆ ತ್ರಿಮತಸ್ಥ ಬ್ರಾಹ್ಮಣ ಸ್ತ್ರೀಪುರುಷರಿಗೆ ತಾ॥ ೧೩ ರಲ್ಲಿ ಸಮಾರಾಧನೆಯನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟರು ಮತ್ತೂ ರಾಜಧಾನಿಯ ಅನಾಥಾಲಯಕ್ಕೆ ೧೦೦ ರೂ. ಗಳನ್ನೂ, ಅಬಲಾಶ್ರಮಕ್ಕೆ ೫೦ ರೂ. ಗಳನ್ನೂ ದಯಪಾಲಿಸಿದರು. ಕಬ್ಬಿನ ಜಲ್ಲೆಯನ್ನು ಹಿಡಿದುಕೊಂಡು ಹೋಗುವುದು ಪ್ರಾಕ್ತನ ವೈಷ್ಣವರಲ್ಲಿ ರೂಢಿಯಲ್ಲಿದ್ದರೂ ಈ ಸಂದರ್ಭದಲ್ಲಿ ಕೆಲರು ಹಿಡಿದುಕೊಂಡಿದ್ದುದು ಅನೇಕರಿಗೆ ಆಶ್ಚರ್ಯಕರವಾಗಿತ್ತು.

ವರ್ತಮಾನ ಸಂಗ್ರಹವು.

ರಾವಲ್ಪಿಂಡಿಯಲ್ಲಿ ಪ್ಲೇಗುರೋಗವು ಪ್ರಾಪ್ತವಾಗಿರುವುದರಿಂದ ಸರ್ಕಾರದವರು ಜನರ ಮನೆಗಳಲ್ಲಿ ಇಲಿಗಳನ್ನು ಕೊಲ್ಲಲು ಯತ್ನಿಸಿದ್ದಾರೆ. ಆದರೆ ಜೈನರು ತಮ್ಮ ಮನೆಗಳಲ್ಲಿ ಇಲಿಗಳನ್ನು ಹಿಡಿದು ಕೊಲ್ಲಕೂಡದೆಂದು ಮುಷ್ಕರವಿಡಿದಿರುವರು.

ಅಂಬಾಲಾದಲ್ಲಿ ಕೆಲಜನರಿಂದ ಸ್ಥಾಪಿಸಲ್ಪಟ್ಟು ನಡೆಸಲ್ಪಡುತ್ತಿರುವ ಗಾಜಿನ ಕಾರ್ಖಾನೆಯ ಪ್ರೋತ್ಸಾಹಾರ್ಥವಾಗಿ ಪಂಜಾಬ್ ಸರ್ಕಾರದವರು ವರ್ಷ ೧ ಕ್ಕೆ ೫ ರಿಂದ ೩ ಸಾವಿರ ರೂ. ಗಳವರೆಗೆ ೫ ವರ್ಷದವರೆಗೂ ಸಹಾಯ್ಯಮಾಡಲೊಪ್ಪಿರುವರು.

ಮಹಮ್ಮದೀಯರ ವಿಶ್ವವಿದ್ಯಾಲಯಸ್ಥಾಪನೆಗಾಗಿ ಭೂಪಾಲಿನ ಬೇಗಂರವರು ಹಿಂದೆ ಕೊಟ್ಟಿರುವ ೧ ಲಕ್ಷ ರೂ. ಚಂದಾ ಅಲ್ಲದೆ ಈಗ ಹೊಸದಾಗಿ ೧೩೫೦೦೦ ರೂ. ಗಳನ್ನು ಕೊಟ್ಟಿರುತ್ತಾರೆ. ಜುನಘಡ್ ಸಂಸ್ಥಾನಾಧೀಶರು ೧ ಲಕ್ಷ ರೂ. ಗಳಿಗೆ ಕಡಿಮೆಯಿಲ್ಲದ ಚಂದಾಹಣವನ್ನು ಕೊಡತಕ್ಕವರಾಗಿರುವರು.

ಬೊಂಬಾಯಿಯ ರೇವಿನಲ್ಲಿ ಡೈನಾಮೇಟು ಮದ್ದು ತುಂಬಿಟ್ಟಿದ್ದ ಹಡಗು ಹೇಗೊ ಬೆಂಕಿಯಿಂದ ಹೊತ್ತಿಕೊಂಡು ಮದ್ದೆಲ್ಲಾ ಸುಟ್ಟುಹೋಗಿ ಅತ್ಯಂತ ಭೀಕರವಾದ ಶಬ್ದವುಂಟಾಯಿತು. ಈ ಅನಾಹುತದಿಂದ ಹಡಗಿನೊಳಗಿದ್ದ ೧೧ ಜನರು ಸತ್ತುಹೋದರು, ಮತ್ತೂ ಊರೊಳಗೆ ಅನೇಕ ಕಟ್ಟಡಗಳು ಜರ್ಜರಿಸಿದುವು.

ಕಲಕತ್ತಾದಲ್ಲಿ ಕೂಡಿದ್ದ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಗೆ ಭೂಪಾಲಿನ ಬೇಗಂರವರು ಹೋಗಿ ೨ ಗಂಟೆಯಕಾಲವಿದ್ದು ಅಲ್ಲಿ ನಡೆದ ವಿಷಯ ವಿಮರ್ಶೆಯನ್ನು ಪರಾಮರ್ಶಿಸಿಕೊಂಡು ಬಂದರು. ರಾಜಕೀಯ ವಿಚಾರದಲ್ಲಿ ಈ ಬೇಗಂರವರಿಗೆ ಎಂತಹ ಉತ್ಸುಕತೆಯಿದೆಯೆಂಬುದು ಪ್ರಕೃತ ಸಂದರ್ಭದಲ್ಲಿ ವ್ಯಕ್ತವಾಗುವುದು

ಈಗ ಭರತಖಂಡದಲ್ಲೆಲ್ಲಾ ಒಟ್ಟು ೨೯೮೮೮೦೦೦ ಎಕರೆ ಭೂಮಿಯಲ್ಲಿ ಗೋಧಿಯು ಬೆಳೆಯಲ್ಪಟ್ಟಿರುತ್ತದೆ. ಕಳೆದ ವರ್ಷ ೨೯೫೫೬೦೦೦ ಎಕರೆ ಭೂಮಿಯಲ್ಲಿ ಬೆಳೆಯಲ್ಪಟ್ಟಿದ್ದಿತು. ಇದರಿಂದ ಈ ವರ್ಷದಲ್ಲಿ ೧೧೨೦೦೦ ಎಕರೆಯಷ್ಟು ಬೆಳೆ ಕಡಿಮೆಯಾದಂತಾಯಿತು. ಬೊಂಬಾಯಾಧಿಪತ್ಯದಲ್ಲಿ ವಿನಾ ಇತರ ಕಡೆಯಲ್ಲೆಲ್ಲಾ ಬೆಳೆಯು ಸಮರ್ಪಕವಾಗಿರುತ್ತದೆ

ಚಕ್ರವರ್ತಿಯವರು ದಿಲ್ಲಿಯ ದರ್ಬಾರಿನ ಕಾಲದಲ್ಲಿ ಧರಿಸಿದ್ದ ಕಿರೀಟವು ಚಕ್ರವರ್ತಿಯವರು ತಮ್ಮ ಚಕ್ರಾಧಿಪತ್ಯವನ್ನು ಭರತಖಂಡದ ಮೇಲೆ ಪ್ರತ್ಯಕ್ಷವಾಗಿ ಸ್ಥಾಪಿಸಿದುದರ ಜ್ಞಾಪನಾರ್ಥವಾಗಿ ಅಪೂರ್ವವಾದ ವಸ್ತುಗಳ ಕೂಡ ಪ್ರದರ್ಶಿಸಲ್ಪಡುವುದಾಗಿಯೂ, ಈ ಕಿರೀಟವನ್ನು ಮಾಡಿಸಲು ತಗಲಿದ ೯೦೦೦೦೦ರೂ. ಗಳು ಭರತಖಂಡದುತ್ಪತ್ತಿಯಿಂದ ಕೊಡಲ್ಪಡತಕ್ಕುದಾಗಿಯೂ ನಿರ್ಧರಿಸಲ್ಪಟ್ಟಿರುವುದು.

ಕಳೆದ ತಾ॥ ೯ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೯೧೫೪ ಜನರಿಗೆ ಪ್ಲೇಗು ರೋಗವು ತಗಲಿ ೧೩೬೮ ಜನರು ಮಡಿದರು. ಇವರಲ್ಲಿ ಬೊಂಬಾಯಾಧಿಪತ್ಯದಲ್ಲಿ ೯೨೯; ಮದ್ರಾಸಾಧಿಪತ್ಯದಲ್ಲಿ ೧೯೯; ಬಂಗಾಳದಲ್ಲಿ ೩೨೯೮; ಸಂಯುಕ್ತ ಪ್ರಾಂತಗಳಲ್ಲಿ ೨೮೮೮; ಪಂಜಾಬಿನಲ್ಲಿ ೯೮೯, ಬರ್ಮಾದಲ್ಲಿ ೬೨; ಮಧ್ಯಪ್ರಾಂತಗಳಲ್ಲಿ ೧೯೬; ಮೈಸೂರ ಸೀಮೆಯಲ್ಲಿ ೧೦೬; ಹೈದರಾಬಾದು ಸೀಮೆಯಲ್ಲಿ ೩೨೯; ಮತ್ತೂ ಮಧ್ಯ ಹಿಂದೂಸ್ಥಾನದಲ್ಲಿ ೬೧೮; ಈ ಪ್ರಕಾರವಾಗಿ ಮರಣವಾಗಿರುತ್ತದೆ.

ಭೂಪಾಲ ಸಂಸ್ಥಾನದ ಮುಖ್ಯ ಮಂತ್ರಿಯಾದ ಖಾನ್ ಬಹದ್ದೂರ್ ಸಯುದ್ ನಸರುದ್ದೀನ್, ಸಿ. ಐ. ಇ., ಯವರು ಅಸ್ವಸ್ಥರಾಗಿದ್ದು ಕಳೆದ ತಾ॥ ೧೩ ರಲ್ಲಿ ವಿಧಿವಶರಾದರು. "ನಿಮ್ಮ ಸಹೋದರರ ಮರಣವಾರ್ತೆಯನ್ನು ಕೇಳಿ ನನಗೆ ತುಂಬಾ ವ್ಯಸನವಾಯಿತು. ಬಹು ಸಮರ್ಥರೂ, ವಿಧೇಯರೂ ಆದ ಅಧಿಕಾರಿಗಳಲ್ಲೊಬ್ಬರಾಗಿದ್ದ ಅವರ ಮರಣದಿಂದ ಸಂಸ್ಥಾನಕ್ಕೆ ಅಪಾರ ನಷ್ಟವಾಗಿರುತ್ತದೆ." ಎಂದು ಬೇಗಂರವರು ಇಂದೂರಿನಿಂದ ಆನರಬಲ್ ಜಸ್ಟಿಸ್ ಷರ್ಫುದ್ದೀನರವರಿಗೆ ತಂತಿಯ ಮೂಲಕ ತಿಳಿಸಿರುತ್ತಾರೆ.

ಪಂಜಾಬಿಗೆ ಸೇರಿದ ಹಮಿಯಾ ಡಿಸ್ಟ್ರಿಕ್ಟಿನ ಒಂದು ಹಳ್ಳಿಯಲ್ಲಿ ಆಯುಧಪಾಣಿಗಳಾದ ೬೦ ಜನ ಮಹಮ್ಮದೀಯರು ಮಹಾರಾಜಾ ರಣಜಿತಸಿಂಗನ ಕಾಲದಲ್ಲಿ ಬೊಕ್ಕಸಾಧೀಶನಾಗಿದ್ದ ಖಜಾನಿಷಾ ಎಂಬ ಪ್ರಸಿದ್ಧ ಶ್ರೀಮಂತನ ವಂಶೀಕರ ಮನೆಗೆ ನುಗ್ಗಿ ೧ ಲಕ್ಷ ರೂ. ಬೆಲೆಯ ಪದಾರ್ಥಗಳನ್ನೂ ಕಾಗದಪತ್ರಗಳನ್ನೂ ಅಪಹರಿಸಿಕೊಂಡು ಕಾಗದಪತ್ರಗಳನ್ನು ಅಲ್ಲಿಯೇ ಸುಟ್ಟು ಪಲಾಯನವಾದರು. ಸೇಲ್ಕೋಟಿ ಡಿ॥ ಗೆ ಸೇರಿದ ಒಂದು ಗ್ರಾಮದಲ್ಲಿ ೨೦ ಜನರು ಆಯುಧಪಾಣಿಗಳಾಗಿ ಗೋಪಿಚಂದ್ ಶ್ರೀಮಂತರ ಮನೆಗೆ ನುಗ್ಗಿ ೩೦ ಸಾವಿರ ರೂ. ಬೆಲೆಯ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು.

ಅಮೃತಸರ ಡಿಸ್ಟ್ರಿಕ್ಟಿಗೆ ಸೇರಿದ ನೌಷಾರಾ ಎಂಬ ಹಳ್ಳಿಯಲ್ಲಿ ಹಣದ ವ್ಯಾಪಾರಸ್ಥನಾದ ಲಚಮನರಾಯ್ ಎಂಬುವನು ಹೋಳಿ ಹಬ್ಬವನ್ನು ಮಾಡಲು ತನ್ನ ೧೦ ವರ್ಷ ವಯಸ್ಸಿನ ಮೊಮ್ಮಗನನ್ನು ಕೂಡ ಕರೆದುಕೊಂಡು ನೆರೆಯ ಗ್ರಾಮಕ್ಕೆ ಹೋಗಿ ಮದ್ಯಪಾನವನ್ನು ಮಾಡಿರುವಾಗ್ಗೆ ಕೆಲರು ಅವನ ಕುತ್ತಿಗೆಯನ್ನು ಹಿಸುಕಿ ಅವನನ್ನು ಕೊಂದುಬಿಟ್ಟು ಅವನ ಮೊಮ್ಮಗನನ್ನು ಮತ್ತೊಂದು ಸ್ಥಳಕ್ಕೆ ಸಾಗಿಸಿ ಆ ಹೆಣವನ್ನು ಅವನ ಸ್ವಂತ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಒಂದು ಹೊಲದಲ್ಲಿ ಒಣಕಟ್ಟಿಗೆಯನ್ನು ಹಾಕಿ ಸುಟ್ಟುಬಿಟ್ಟರು. ಪೋಲೀಸರು ಕೆಲರನ್ನು ಅನುಮಾನದ ಮೇಲೆ ಹಿಡಿದು ಬಂಧನದಲ್ಲಿಟ್ಟಿರುತ್ತಾರೆ.

ಈಗ ಮದರಾಸ್ ಗೌರ್ನರಾಗಿರುವ ಲಾರ್ಡ್ ಕಾರ್ಮೈಕೇಲ್ ರವರು ಬಂಗಾಳ ಗೌರ್ನರ ಉದ್ಯೋಗವನ್ನು ವಹಿಸಿಕೊಳ್ಳಲು ಬರುವ ಏಪ್ರಿಲ್ ಮಧ್ಯಭಾಗದಲ್ಲಿ ಹಡಗಿನಮೇಲೆ ಕಲಕತ್ತಾಕ್ಕೆ ಪ್ರಯಾಣಮಾಡುವರು. ಇವರ ಬದಲು ಮದರಾಸಿನ ಗೌರ್ನರಾಗಿ ನಿಯಮಿಸಲ್ಪಟ್ಟಿರುವ ಲಾರ್ಡ್ ಪೆಂಟ್ಲಾಂಡ್ ರವರು ಅದೇ ಸಮಯಕ್ಕೆ ಮದ್ರಾಸನ್ನು ತಲುಪುವವರಾಗಿರುವರು. ಇವರು ಸೀಮೆಯನ್ನು ಬಿಟ್ಟು ಹೊರಡುವುದಕ್ಕೆ ಮೊದಲು ಕಾಮನ್ಸ್ ಸಭೆಯ ಲಿಬರಲ್ ಪಕ್ಷದ ಸಭಾಸದರೆಲ್ಲರೂ ಇವರಿಗೆ ಒಂದು ಔತಣವನ್ನು ಮಾಡಿಸಿ ಮಂತ್ರಿವರ್ಗದ ಆಸ್ಕ್ವಿತ್ ರವರೇ ಮೊದಲಾಗಿ ಕೆಲವರು ಇವರ ಗುಣಕಥನವನ್ನು ಮಾಡಿ ಮದ್ರಾಸಿನಲ್ಲಿ ತಮ್ಮ ಕಾರ್ಯನಿರ್ವಾಹ ಶಕ್ತಿಯಿಂದ ವಿಶೇಷ ಗೌರವವನ್ನು ಪಡೆಯುವರೆಂದು ಹೇಳಿದರು.

ಲಂಡನ್ ಪಟ್ಟಣದಲ್ಲಿ ೫ ವರ್ಷಗಳಿಂದಲೂ ಬಹುಮೂತ್ರ ಮತ್ತೆ ಕೆಲ ಪ್ರಬಲರೋಗಗಳಿಂದ ನರಳುತ್ತಿದ್ದ ಒಬ್ಬ ಯುವತಿಗೆ ಅಂಧತ್ವವೂ ಕಿವುಡುತನವೂ ಪ್ರಾಪ್ತವಾಗಿ ಅವಳು ಬದುಕುವುದಿಲ್ಲವೆಂದು ವೈದ್ಯನು ನಿರ್ಧರಿಸಿ ಬಿಟ್ಟಿದ್ದನು. ವೈದ್ಯನ ಮಾತಿನಮೇರೆಗೆ ಆ ರೋಗಿಯ ತಾಯಿ ಅಣ್ಣ ತಮ್ಮ ಮೊದಲಾಗಿ ಎಲ್ಲಾ ಬಂಧುಗಳೂ ಆ ಹುಡುಗಿಯ ಹಾಸುಗೆಯ ಸಮೀಪದಲ್ಲಿ ಯಾವಾಗ ಪ್ರಾಣಹೋಗುವುದೋ ಎಂದು ನಿರೀಕ್ಷಿಸಿಕೊಂಡಿರುವಲ್ಲಿ ಹುಡುಗಿಯು ಹಠಾತ್ತಾಗಿ ಹಾಸುಗೆಯಿಂದೆದ್ದು ಮುಂದಕ್ಕೆ ನಡೆದುಕೊಂಡು ಬಂದಳು. ಅಂದಿನಿಂದ ಅವಳ ಕಣ್ಣು ಚೆನ್ನಾಗಿ ಕಾಣಿಸುವುದಲ್ಲದೆ ಕಿವಿಯು ಕೇಳಿಸುತ ಸೌಖ್ಯವಾಗಿರುವಳು. "ನನಗೆ ಒಂದು ಮಹಾ ಪ್ರಕಾಶವು ಕಾಣಿಸಿಕೊಂಡು ಯಾವುದೋ ಎರಡು ಕೈಗಳು ನನ್ನ ಎರಡು ಕೈಗಳನ್ನು ಹಿಡಿದು ನನ್ನ ಕಣ್ಣುಗಳ ಸಮೀಪಕ್ಕೆತ್ತಿ ನನ್ನನ್ನು ಹಾಸುಗೆಯಿಂದ ಮೇಲಕ್ಕೆತ್ತಿದುವು. ನಾನು ನೆಟ್ಟಗೆ ಕೂತುಕೊಂಡಾಗ ಎರಡಾವೃತ್ತಿ ನಿನ್ನ ಕಷ್ಟವೆಲ್ಲವೂ ಪರಾಭವವಾಗಿರುತ್ತದೆ, ಎದ್ದು ನಡೆ, ಎಂದು ಹೇಳಿದಹಾಗಾಯಿತು." ಎಂಬುದಾಗಿ ಕೇಳಿದವರಿಗೆಲ್ಲಾ ಹೇಳಿ ಆಶ್ಚರ್ಯವನ್ನುಂಟುಮಾಡುತ್ತಿರುವಳು. ನಮ್ಮ ಸೀಮೆಯಲ್ಲಿ ಹೀಗೆ ಎಷ್ಟೋ ಸಂದರ್ಭದಲ್ಲಾಗಿರುವುದು ಮತ್ತೂ ಆಗುತ್ತಿರುವುದು. ಅದನ್ನು ಹೀಯಾಳಿಸತಕ್ಕ ಪಾಶ್ಚಾತ್ಯರು ಪ್ರಕೃತ ಸಂದರ್ಭದಲ್ಲಿ ಏನನ್ನು ಹೇಳುವರೋ?

ಬೊಂಬಾಯಿಯ ಕರ್ನಾಟಕ ಪ್ರಾಂತದ ವರ್ತಮಾನವು.

ಧಾರವಾಡ.— ಇಲ್ಲಿ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಪೂರ್ಣಾಶ್ರಯದಿಂದ ಕಟ್ಟಲ್ಪಡುತ್ತಿರುವ ವೀರಶೈವ ಮಂದಿರಕ್ಕೆ (ಧರ್ಮಶಾಲೆಗೆ) ಚಂದಾ ಹಣವನ್ನೆತ್ತಲು ಧಾರವಾಡದ ಲಿಂಗಾಯತ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿಯವರಾದ ಮ॥ ಶಾಂತವೀರಪ್ಪ ಮೆಣಸಿನಕಾಯಿ ಇವರು ಪರಸ್ಥಳ ಸಂಚಾರ ಹೊರಟಿರುತ್ತಾರೆ. ರಕ್ಕಸಗಿಯ ಸರ್ ದೇಸಾಯರಾದ ಶ್ರೀಮಂತ ಸಂಗಪ್ಪನವರು ಈ ಕಟ್ಟಡಕ್ಕಾಗಿ ೧೦೦೦ ರೂ. ಗಳನ್ನು ಕೊಟ್ಟರಲ್ಲದೆ ಇನ್ನೂ ಅನೇಕ ಜನರು ಉದಾರವಾಗಿ ಚಂದಾ ಹಣವನ್ನು ಕೊಡಲೊಪ್ಪಿರುತ್ತಾರೆ. ಇಲ್ಲಿ ಕುಡಿಯುವ ನೀರಿನ ತೊಂದರೆಯು ನಿತ್ಯದಲ್ಲೂ ಹೆಚ್ಚುತ್ತಿದೆ. ಈ ಕಾಲದಲ್ಲಿ ಹುಬ್ಬಳ್ಳಿಯ ಮಾರ್ಕೆಟ್ಟಿಗೆ ನಿತ್ಯದಲ್ಲೂ ೨೦೦೦ ಅಂಡಿಗೆಗಳವರೆಗೂ ಹತ್ತಿಯು ಮಾರಾಟಕ್ಕೆ ಬರಬೇಕಾಗಿದ್ದರೂ ಈಗ ೨೦೦ ರವರೆಗೆ ಬರುವುದೇ ದುರ್ಲಭವಾಗಿರುವುದರಿಂದ ಅನೇಕ ಜಿನ್ನುಗಳು ಮುಚ್ಚಲ್ಪಟ್ಟಿರುತ್ತವೆ. ಹಗಲಿನಲ್ಲಿ ಬಿಸಿಲಿನ ತಾಪವೂ ರಾತ್ರಿಯಲ್ಲಿ ಚಳಿಯೂ ಸಹಿಸಲಶಕ್ಯವಾಗಿವೆ. ಮುಂದಿನ ತಿಂಗಳು ತಾ॥ ೩ ರಲ್ಲಿ ಈ ಊರಲ್ಲೂ ಇಲ್ಲಿಗೆ ೮ ಮೈಲಿ ದೂರದಲ್ಲಿರುವ ಗರಗದಲ್ಲೂ ಬ್ರೋಚ್ ಹತ್ತಿಯ ಲಿಲಾವು ಆಗುವುದು.

ಈಗ ವಿಜಾಪುರದಲ್ಲಿ ಡೆಪ್ಯುಟಿ ಕಲೆಕ್ಟರಾಗಿರುವ ಶ್ರೀ ಗುರುಸಿದ್ಧಪ್ಪ ಹಿರೇಮಠರವರ ಕೂಡ ಎಲ್. ಎ. ಜಿ., ಪರೀಕ್ಷೆಯನ್ನು ಕೊಟ್ಟು ಪ್ರಶಸ್ತಿಯನ್ನು ಪಡೆದಿರುವ ಶ್ರೀ ರುದ್ರಪ್ಪ ಹಿರೇಮಠ ಇವರು ಡೆಪ್ಯುಟಿ ಕಲೆಕ್ಟರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಲು ಹರ್ಷವಾಗುತ್ತದೆ. ಇವರು ತಮ್ಮ ಕಾರ್ಯದಕ್ಷತೆಯಿಂದಲೂ, ಬುದ್ಧಿಚತುರತೆಯಿಂದಲೂ ಅಭಿವೃದ್ಧಿಯನ್ನು ಹೊಂದುವರಾಗಲೆಂದು ಇಚ್ಛಿಸುತ್ತೇವೆ.

ಪತ್ರವ್ಯವಹಾರವು.

ಶಿವಯೋಗಮಂದಿರದಲ್ಲಿ ನಡೆದ ವೀರಶೈವ ಧಾರ್ಮಿಕ ಸಭೆಯು.

ಹಿಂದೂಜನರಿಗೆ ಮುಖ್ಯವಾಗಿರುವ ಶಿವರಾತ್ರಿಯ ಹಬ್ಬದ ಕಾಲದಲ್ಲಿ ಶಿವಯೋಗಮಂದಿರದಲ್ಲಿ ಪದ್ಧತಿ ಪ್ರಕಾರ ಲಿಂಗಾಯತ ಧರ್ಮದ ಜನರು ಅನೇಕರು ಕೂಡಿ ಧಾರ್ಮಿಕ ಸಭೆಯು ಜರಿಗಿ ಮಂಗಲಕ್ಕಾಗಿ ರಥೋತ್ಸವವು ನಡೆದು ಪೂಜಾ ಮುಂತಾದ ಕಾರ್ಯಗಳು ಜರುಗುವದು ಸರ್ವಶ್ರುತವಾಗಿರುವದಷ್ಟೇ. ಆ ಪ್ರಕಾರ ಈ ವರ್ಷ ಅಂದರೆ ವಿರೋಧಿಕೃತು ನಾಮಸಂವತ್ಸರದಲ್ಲಿ ಯಾತ್ರೆಯು ಹಿಂದಿನ ವರ್ಷಗಳಿಗಿಂತಲೂ ಬಹು ಉತ್ತಮವಾಗಿ ನೆರವೇರಿತು. ಈ ಶಿವಯೋಗಮಂದಿರವು ದಕ್ಷಿಣಕಾಶಿ ಎನಿಸುವ ಮಹಾಕೂಟಕ್ಷೇತ್ರೋಪಾಂತ್ಯದ ಪೂರ್ವಭಾಗದಲ್ಲಿ ಉತ್ತರವಾಹಿನಿಯಾಗಿಯೂ ತನ್ನಲ್ಲಿ ಮಿಂದ ಜನರನ್ನು ಪರಿಶುದ್ಧಗೊಳಿಸುವದಾಗಿಯೂ ಪ್ರಸಿದ್ಧಿಹೊಂದಿದ ಮಲಾಪಹಾರೀ ತೀರದಲ್ಲಿ ಸ್ಥಾಪಿತವಾಗಿದ್ದು ಪುಣ್ಯಸ್ಥಾನವಾಗಿರುತ್ತದೆ. ಸುತ್ತುಮುತ್ತು ಗುಡ್ಡಗಳೂ ಅಗಲವಾದ ನದಿಯ ಪ್ರವಾಹವೂ ಮತ್ತು ಸಣ್ಣದಾಗಿರುವ ನೀರಿನ ದಭದಭಿಯೂ ಬಹು ಮನೋಹರವಾಗಿದ್ದು ಸಾವಿರಾರು ಜನರು ಪ್ರಶಸ್ತವಾಗಿ ಇಳಿಯಲಿಕ್ಕೆ ಸೌಕರ್ಯ ಸ್ಥಾನವು ಸ್ವಭಾವಸಿದ್ಧವಾಗಿರುತ್ತದೆ. ಶಿವಯೋಗಮಂಟಪವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ವೀರಶೈವ ಜಗತ್ತನ್ನು ಗರ್ಭೀಕರಿಸಿಕೊಂಡು ಶೋಭಿಸುವ ತನ್ನ ಸಹಜ ಧರ್ಮವನ್ನು ತೋರಿಸುವಂತೆ ಶೋಭಿಸುವ ಕನ್ನಡಿಗಳಿಂದಲೂ ಅನೇಕ ಮಹಿಮಾಶೀಲರ ಭಾವಚಿತ್ರಗಳಿಂದಲೂ ಪ್ರೇಕ್ಷಕರ ಕಣ್ಮನಗಳನ್ನು ಶೀಘ್ರವಾಗಿ ಸೆಳೆದು ಆನಂದಾಶ್ಚರ್ಯಗಳಪಯೋಧಿಯಲ್ಲಿ ಮುಳುಗಿಸುವದಾಗಿ ಅನೇಕ ಸ್ಥಳಗಳಿಂದ ಪೂಜ್ಯಪಾದರಾದ ಶ್ರೀಮನ್ನಿರಂಜನ ಮಹಾಸ್ವಾಮಿಗಳೂ ಸ್ಥಿರಚರಪಟ್ಟಾಧ್ಯಕ್ಷರೂ ಶಾಸ್ತ್ರಿಗಳೂ ಧರ್ಮೋಪದೇಶಕರೂ ಶಿವಕೀರ್ತನಕಾರರೂ ಗಾಯಕರರೂ ದೇಶಾಯಿ ದೇಶಪಾಂಡೇಯರೂ ಪದವೀಧರರೂ ಶ್ರೀ ಶಿವಯೋಗಮಂದಿರದ ಕಮಿಟಿಯ ಮೆಂಬರರೂ ಇವರೇ ಮೊದಲಾದ ವೀರಶೈವ ಪ್ರಮುಖರು ಕೂಡಿದ್ದರು. ಇದೇ ಮಾಘ ಬ॥ ೧೪ ಶುಕ್ರವಾರ ಶಿವಯೋಗದ ದಿನ ಶ್ರೀ ಗುರುಪಾದ ಪೂಜಾರುದ್ರಾಭಿಷೇಕ ಮಹಾವಿನಿಯೋಗವು ಸಂಸಾರತಾಪದಿಂದ ಕಂಗೆಡುವ ಜನರ ಮನಸ್ಸಿನಲ್ಲಿದ್ದ ದುಃಸಂಸ್ಕಾರವನ್ನು ಪರಿಹರಿಸಿ ಶಿವಭಾವವನ್ನೇ ಬೀರುತ್ತಿತ್ತು. ವೇದಮೂರ್ತಿ ಹಾವೇರಿ ಸದಾಶಿವಶಾಸ್ತ್ರಿಗಳಿಂದಲೂ ವೇ॥ ದ್ಯಾಮಾಪುರದ ಬಸವಲಿಂಗಶಾಸ್ತ್ರಿಗಳಿಂದಲೂ ಶಿ॥ ಬೆಳವಣಕಿ ಗುರುಶಿದ್ಧಯ್ಯಾನವರಿಂದಲೂ ಶಿವಯೋಗಭಕ್ತಿಜ್ಞಾನ ವೈರಾಗ್ಯ ಮುಂತಾದ ವಿಷಯಗಳ ಪರವಾಗಿ ಬಹುಸರಸ ಕೀರ್ತನೆಗಳೂ ಶಿವಭಜನೆಯ ಗವಾಯಿಗಳ ಗಾನವೂ ಶಿವಶರಣರ ಚರಿತ್ರಗಳ ನಾಟಕಗಳೂ ವಾದ್ಯಕರಟಿ ಮುಂತಾದ ಸಮ್ಮೇಳನಗಳೂ ಅಲ್ಲಲ್ಲಿಗೆ ಎಡಬಿಡದೆ ಅಹೋರಾತ್ರಿ ನಡೆಯುತ್ತಿದ್ದದರಿಂದ ಶ್ರೀ ಶಿವಯೋಗಿಗಳ ಪ್ರಭಾವಕ್ಕೆ ಸೂರ್ಯನು ಪರಾಜಿತನಾಗಿ ತನ್ನ ಸಂಚಾರವನ್ನು ಸಂಕ್ಷೇಪಮಾಡಿದನೋ ಏನೋ ಎಂಬುವಂತೆ ಯಾತ್ರಿಕರಿಗೆ ವೇಳೆಯೇ ಸಾಲದಾಯಿತು. ರಥೋತ್ಸವ ಕಾಲದಲ್ಲಂತೂ ರತ್ನಗರ್ಭಭೂದೇವಿಯು ತನ್ನ ಸೌಭಾಗ್ಯವನ್ನು ತೋರಿಸುವದಕ್ಕೋ ಅಥವಾ ಶಿವಯೋಗಿಗಳ ಸೇವೆಗೋ ಕನಕ ರತ್ನಾಭರಣಗಳಿಂದ ಅಲಂಕೃತರಾದ ಮಕ್ಕಳನ್ನು ತತ್ಕಾಲಕ್ಕೆ ಪಡೆದು ಕಳಿಸಿದಳೆಂಬುವಂತೆ ಅನೇಕ ಮಹನೀಯರು ಕೂಡಿದ್ದ ಜನದಟ್ಟಣೆಯು ವಿಶೇಷವಾಗಿತ್ತು. ಸಂಘಟಿತವಾದ ರತಿಕಾಮರುಪೇರರಂಥ ಅನೇಕ ಜನರ ಸಂದಣಿಯಲ್ಲಿ ಒಳ್ಳೇ ಶೂರನು ಸಹ ಅಡಿಗೆ ಪಾರಾಗಲ ಸದಳವಿತ್ತು. ಬಳೆಗಾರರ ಮಿಠಾಯಿಗಾರರ ಪಂಚಗಾರರ ಬಳಿಗಾರರ ಮಣಿಗಾರರ ಕಿರಾಣಿ ವಸ್ತುಗಳ ಅಂಗಡಿಗಳು ಸಾಲುಸಾಲಾಗಿ ಬಹು ರಮ್ಯವಾಗಿದ್ದವು. ಈ ವರ್ಷ ದುಷ್ಕಾಲವಿರುವದರಿಂದ ಅನ್ಯಸ್ಥಳದಲ್ಲಿ ಬಾರ್ಸಿಸದ ಸಂಗತಿಯನ್ನು ವಿಚಾರಿಸಿ ಮೂರನೇ ಧರ್ಮೋತ್ತೇಜಕ ಸಭೆಯು ಇದೇ ಕಾಲದಲ್ಲಿ ಜರುಗುವದಾಗಿ ಸಭೆಗೆ ಮುಂಚೆ ಅತಿಸ್ವಲ್ಪ ದಿನಗಳಲ್ಲಿ ಗೊತ್ತಾದ ವೇಳೆಗೆ ಸಕಾಲಕ್ಕೆ ಸಭಾ ಕಾರ್ಯವನ್ನು ನಿರ್ವಹಿಸಲು ತಮಗೆ ತಗಲಿದ ಅತಿಶ್ರಮವನ್ನು ಸಹಿಸಿಕೊಂಡು ನಿರ್ವಿಘ್ನವಾಗಿ ಕೊನೆಗಾಣಿಸಿದ ಶ್ರೀಗುರುಪಾದ ಕೃಪಾರಸವೆಂಬ ಪಯಃಪಾನದಿಂದ ಸಭಾಪಾಲಕರು ನಲಿದಾಡುತ್ತಿರುವರು. ಧರ್ಮೋತ್ತೇಜಕ ಸಭೆಯು ಮೊದಲನೇ ದಿನ ತಾರೀಖು ೧೭ ನೇ ಫೆಬ್ರುವರಿ ೧೯೧೨ ಇಸ್ವಿ ಶನಿವಾರದ ಕಾರ್ಯಕ್ರಮಗಳು ಶಿವಯೋಗಮಂದಿರದ ಆವಾರಣದೊಳಗೆ ಮನೋಹರವಾಗಿ ರಚಿಸಿದ್ದ ಸಭಾಮಂಟಪದಲ್ಲಿ ಹಗಲು ಹನ್ನೊಂದು ಘಂಟೆಗೆ ಸರಿಯಾಗಿ ನಿರಾಭಾರಿ ದೇಶಿಕೇಂದ್ರರೂ ಸ್ಥಿರಚರ ಪಟ್ಟಾಧ್ಯಕ್ಷರೂ ಶಾಸ್ತ್ರಿಗಳೂ ಶ್ರೀಮಂತರೂ ಸಾವಕಾರರೂ ಸರಕಾರಿ ಉದ್ಯೋಗಸ್ಥರೂ ಮುಂತಾದ ಸಕಲ ವೀರಶೈವ ಮತಾಭಿಮಾನಿಗಳೂ ಸೇರಿದ್ದ ಈ ಧರ್ಮೋತ್ತೇಜಕ ಸಭೆಯನ್ನು ನೋಡಿದರೆ ಪುರಾಣದಲ್ಲಿ ವರ್ಣಿಸಿದ್ದ ಕೈಲಾಸದ ಪರಶಿವಸಭೆಯು ನೆನಪಾಗಿ ಎಂಥಾ ಪಾಮರನ ಮನಸ್ಸಿನಲ್ಲಿ ಕೂಡಾ ಸಮಾಜ ಸೇವೆಯ ಹುರುಪು ಹುಟ್ಟದೆ ಹೋಗುವಂತೆ ಇದ್ದಿಲ್ಲ. ಆಗ ಶಿವಯೋಗಮಂದಿರದ ಸಂಗೀತ ವಿದ್ಯಾರ್ಥಿಯಾದ ಸಂಗಾಪುರಿಮಯ್ಯನು ಸಭೆಯ ಮಂಗಲಗೋಸುಗ ಶಿವಸ್ತುತಿಯನ್ನು ಮಾಡಿದನು. ಬಳಿಕ ಶಿ॥ ಶಾಂತಗಿರಿ ಅಪ್ಪಣ್ಣಪ್ಪನವರು ಸ್ವಾಗತ ಕಮಿಟಿ ಅಧ್ಯಕ್ಷರಪರವಾಗಿ ಭಾಷಣಮಾಡಿದರು ಆ ವೇಳೆ ಶಮದಮಾದಿಗುಣಸಂಪನ್ನರೂ ಸದಾಚಾರಿಗಳೂ ಲಿಂಗಪೂಜಾನಿರತರೂ ಶಿವಧರ್ಮಾಭಿಮಾನಿಗಳೂ ಆದ ಕೆಳದಿ ಸಂಸ್ಥಾನದ ಹಿರೇಮಠದ ಪಟ್ಟಾಧ್ಯಕ್ಷ ಶ್ರೀ ರೇವಣಸಿದ್ಧಸ್ವಾಮಿಗಳು ಅಧ್ಯಕ್ಷತೆಯನ್ನು ವಹಿಸಿದ್ದಾದರೆ ಈ ಸಭಾಕಾರ್ಯವು ನಿರಂತರವಾಗಿಯೂ ನಿರ್ದೋಷವಾಗಿಯೂ ಉತ್ತಮಫಲಕಾರಿಯಾಗಿಯೂ ಕೊನೆಗಾಣುವದೆಂಬ ತಮ್ಮ ಸದುದ್ದೇಶವನ್ನು ಬಾಗಲಕೋಟೆಯ ಪಾಠಶಾಲಾಧ್ಯಾಪಕರಾದ ಮಂಟಮೂರಿ ವೇ॥ ಚನ್ನಬಸವಶಾಸ್ತ್ರಿಗಳು ಸಭೆಯ ಮುಂದಿರಿಸಲದಕ್ಕೆ ಬಾಗಲಕೋಟಿ ವೇ॥ ಜಂಗಿನ ಮುರಿಗೆಯ್ಯನವರ ಅನುಮೋದಿಸಿದ್ದರಿಂದ ಸರ್ವರು ಉತ್ಸಾಹದಿಂದೊಪ್ಪಿರುವದನ್ನು ತಿಳಿದು ಈ ಪಟ್ಟಾಧ್ಯಕ್ಷರು ಸಭಾಸದರ ದಾಕ್ಷಿಣ್ಯವನ್ನು ಕೈಕೊಂಡು ಸಭೆಯಲ್ಲಿ ನೆರೆದ ಎಲ್ಲ ಜನರ ಜಯಘೋಷದೊಡನೆ ಅಧ್ಯಕ್ಷಸ್ಥಾನಾಸೀನರಾದರು. ಸಭಾಕಾರ್ಯವು ಆರಂಭವಾಗುವಲ್ಲಿ ಮೊದಲು ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶರಿಂದ ಬಂದ ಆಶೀರ್ವಾದ ಪತ್ರಿಕೆಯನ್ನು ಓದಿ ಸೌಭಾಗ್ಯವತಿಗಳಾದ ಬಾಗೀರಥಿಬಾಯಿ ಪಾಟೀಲ ಸೋಲ್ಲಾಪೂರ ಇವರಿಂದ ಮಹಾರಾಷ್ಟ್ರ ಭಾಷೆಯಲ್ಲಿ ತಯಾರಿಸಿದ ಧರ್ಮಸುಧಾರಕ ಪದ್ಯಗಳನ್ನು ಹಾಡಿದರು. ಮತ್ತು ಹಿಂದೆ ನಡೆದ ಧರ್ಮೋತ್ತೇಜಕ ಸಭೆಯ ರಿಪೋರ್ಟನ್ನು ಓದೋಣವಾಯಿತು. ನಿರಾಭಾರಿ ದೇಶಿಕರ ವಿಷಯವಾಗಿ ಬಾಗಲಕೋಟಿ ಪಾಠಶಾಲಾಧ್ಯಾಪಕರಾದ ವೇ॥ ಮಂಟಮೂರಿ ಚನ್ನಬಸವಶಾಸ್ತ್ರಿಗಳು ಎರಡು ಘಂಟೆಗಳವರಿಗೂ ಅಸ್ಖಲಿತವಾಣಿಯಿಂದ ಬಹು ಮರ್ಮವೆರಸಿ ಮಾತಾಡಿದರು. ಅದೇ ವಿಷಯದ ಮೇಲೆ ಕೆಲವು ಧರ್ಮಾಭಿಮಾನಿಗಳು ತಂದ ಸೂಚನೆಗಳು ಸಭಿಕರಿಂದ ಚರ್ಚಿಸಲ್ಪಟ್ಟವು. ವೀರಶೈವ ಮತಸಂಬಂಧವಾದ ಕ್ಷೇತ್ರಯಾತ್ರೆಗಳ ಸುಧಾರಣೆಯ ಬಗ್ಗೆ ಗದಗಿನ ಮಂಗಳೂರ ಸಿದ್ಧಲಿಂಗಯ್ಯನವರ ಪುತ್ರನಾದ ಶಿವಲಿಂಗಯ್ಯನೆಂಬ ಬಾಲವಿದ್ಯಾರ್ಥಿಯು ಮಾಹೇಶ್ವರರ ಸುಧಾರಣೆಯಬಗ್ಗೆ ಹಳ್ಳೀಕೇರಿ ಹಿರೇಮಠದ ವಿರೂಪಾಕ್ಷಯ್ಯನವರ ಪುತ್ರನಾದ ಚನ್ನಬಸವಯ್ಯನೆಂಬ ಬಾಲವಿದ್ಯಾರ್ಥಿಯು ಬಹು ಸ್ಪಷ್ಟಶುದ್ಧವಾಣಿಯಿಂದ ಆನಂದ ಆಶ್ಚರ್ಯ ಹಾಸ್ಯರಸಭರಿತವಾದ ನಿಬಂಧವನ್ನು ಓದಿ ಸಭಿಕರನ್ನು ತಲೆದೂಗಿಸಿದ್ದಲ್ಲದೆ ಪ್ರತಿಯೊಬ್ಬರ ಹೃದ್ಭೂಮಿಯಲ್ಲಿ ತಮ್ಮ ತಮ್ಮ ಸಂತತಿಯ ಏಳಿಗೆಗಾಗಿ ಕಳವಳಿಕೆಯ ಬೀಜವನ್ನು ಬಿತ್ತಿದರು. ಇಷ್ಟಕ್ಕೆ ಐದು ಘಂಟೆಯ ವೇಳೆಯಾಗಲು ರಥೋತ್ಸವಕ್ಕಾಗಿ ಅಂದಿನ ಸಭೆಯು ಸಮಾಪ್ತಿಯಾಯಿತು.

ಎರಡನೆಯ ದಿವಸ ತಾ॥ ೧೮—೨—೧೯೧೨ ಇಸ್ವಿ ರವಿವಾರ ದಿವಸ ಕಾರ್ಯಕ್ರಮಗಳು.—ಮುಂಜಾನೆ ಎಂಟು ಘಂಟೆಗೆ ಸಭೆಕೂಡಿ ಸಿಂಹಾಸನಾಧಿಪತಿಗಳ ತದನುಯಾಯಿಗಳಾದ ಸ್ಥಿರಚರಪಟ್ಟಾಧ್ಯಕ್ಷರ ಗೃಹಸ್ಥಮಾಹೇಶ್ವರರ ಸುಧಾರಣೆಗಳ ವಿಷಯವಾಗಿ ಹಂಗರಗಿ ಮಲ್ಲಿಕಾರ್ಜುನಶಾಸ್ತ್ರಿಗಳು ಸರ್ವರ ಮನಸ್ಸಿನಲ್ಲಿ ಬಿಂಬಿಸುವಂತೆ ಉಪನ್ಯಾಸಮಾಡಿದರು. ಬಳಿಕ ಲಕ್ಷ್ಮೇಶ್ವರದ ಹಿರೇಮಠದ ಕಾಶಯ್ಯನವರ ಭಾಷಣವಾಯಿತು. ಅವರ ಭಾಷಣದ ತಾತ್ಪರ್ಯವೇನೆಂದರೆ ನಮ್ಮಲ್ಲಿ ಕೆಲವರು ದುರಳವೇದಾಂತಿಗಳ ಮರಳುಮಾತಿಗೆ ಭ್ರಾಂತರಾಗಿ ಜಾತಿಕುಲಕ್ರಿಯೆಗಳೇ ಬಂಧವೆಂದು ಧರ್ಮವನ್ನು ದೂಷಿಸುತ್ತಾರೆ. ನಾನಾದರೂ ಇಂತಹ ಮರುಳ ವೇದಾಂತಿಗಳ ದುರ್ಬೋಧೆಯಿಂದ ಧರ್ಮದಲ್ಲಿ ಸಂಶಯಾತ್ಮಕನಾಗಿದ್ದೆನು. ಆದರೆ ಈ ಧರ್ಮದ ಮೂಲತತ್ವವನ್ನು ಶೋಧಿಸುವ ಉದ್ದೇಶವಿಡಿದು ಕಳೆದ ವರ್ಷ ಇದೇ ಶಿವಯೋಗಮಂದಿರದ ಯಾತ್ರೆಗೆ ಬಂದು ಶಕ್ತಿ ವಿಶಿಷ್ಟಾದ್ವೈತ ಮತ್ತೂ ಧರ್ಮ ಈ ಎರಡು ವಿಷಯವಾಗಿ ಮಾಡಬೇಕಾದಷ್ಟು ಆಕ್ಷೇಪಣೆಗಳನ್ನು ಸಭೆಯ ಮುಂದಿಟ್ಟು ವಾದಬಳೆಸಿದೆನು. ಆಗ ತತ್ವಜ್ಞರೂ ಸದಾಚಾರಿಗಳೂ ಶಾಂತರೂ ಅನುಭವಿಕರೂ ಆದ ಪಂಡಿತ ಶಿರೋಮಣಿಗಳೂ ನನ್ನ ಆಕ್ಷೇಪಗಳನ್ನು ತಕ್ಕ ಪ್ರಮಾಣಗಳಿಂದ ಪರಿಹರಿಸಿ ಧರ್ಮಭ್ರಷ್ಟರಾದ ವೇದಾಂತಿಗಳ ವಿಷಯದಲ್ಲಿ ಪೂರ್ಣ ನಿಷೇಧ ಬುದ್ಧಿಯನ್ನುಂಟುಮಾಡಿದ್ದರಿಂದ ಉಳಿದೆನು ಇಲ್ಲದಿದ್ದರೆ ಪತಿತನಾಗುವ ಪ್ರಸಂಗವು ನನಗಾಗಿ ಹವಣಿಸುತ್ತಿತ್ತು. ಅದರಿಂದ ಯಾರಾದರೂ ದುರುಳವೇದಾಂತಿಗಳ ನೆರೆಗೆ ಹೋಗಿ ಅವರ ದುರ್ಬೋಧೆಗೆ ಕಿವಿಗೊಡಬಾರದೆಂದು ಮನಗಂಡು ಮೂರು ಮೂರು ವೇಳೆ ನಮ್ಮ ಸಮಾಜ ಬಂಧುಗಳಿಗೆ ಹೇಳುತ್ತೇನೆಂಬದಾಗಿ ಅನೇಕ ಪ್ರಮಾಣಗಳಿಂದ ತಿಳಿಸಲು ಅದಕ್ಕೆ ಸರ್ವರೂ ಸಂತುಷ್ಟರಾಗಿ ಕೈವಾರಿಸಿದರು. ಮ॥ ವೀರಬಸಪ್ಪಾಶೆಟ್ಟಿ ಬಿ. ಎ., ಕೊಲ್ಹಾಪೂರ ಇವರು ಮಹಾಮಂತ್ರವನ್ನು ಬಹಿರಂಗವಾಗಿ ಉಚ್ಚರಿಸಬಾರದೆಂತಲೂ ಗುಪ್ತವಾಗಿ ಜಪಿಸಿದರೆ ಪೂರ್ಣಫಲಕಾರಿಯಾಗುವದೆಂತಲೂ ಅನೇಕಶೃತಿ ಆಗಮಾದಿ ಅನುಭವಗಳಿಂದ ಸಿದ್ಧಗೊಳಿಸಿದರು. ಬಳಿಕ ಮಧ್ಯಾಹ್ನದ ಎರಡು ಘಂಟೆಗೆ ನಡೆವ ಸಭೆಯಲ್ಲಿ ಶಿರಶೆಟ್ಟಿ ಬಿ. ಎ., ಇವರು ಲಿಂಗವಂತರು ಯಾವಾಗಲೂ ಲಿಂಗವನ್ನು ಧರಿಸೇ ಇರಬೇಕು; ಲಿಂಗವನ್ನು ಬಿಟ್ಟವನು ಜ್ಞಾನಿ ಅಲ್ಲವೆಂದು ಮೊದಲಾದ ಷಟ್‌ಸ್ಥಲಸಿದ್ಧಾಂತ ಗೂಢ ವಿಚಾರಗಳನ್ನು ಸುಲಭವಾದ ಲೋಕದೃಷ್ಟಾಂತಗಳಿಂದಲೂ ಆಧುನಿಕ ಪಾಶ್ಚಾತ್ಯಶಾಸ್ತ್ರಗಳಿಂದಲೂ ಅಖಿಲಪ್ರಮಾಣವೆರಸಿ ಮನದಟ್ಟು ಮಾಡಿಕೊಡಲದಕ್ಕೆ ಸಭಿಕರು ಆನಂದಪರವಶರಾದರು. ಆಗ ಈ ಶೆಟ್ಟಿ ಮಹಾಸ್ತರರನ್ನು ಎರಡನೆಯ ಪ್ರಾಂತದಲ್ಲಿ ಜರಗುವ ಧರ್ಮಪರಿಷತ್ತುಗಳಿಗೆ ನಮ್ಮ ಸಮಾಜದ ಖರ್ಚಿನಿಂದ ಕಳಿಸಿ ಮತತತ್ವ ಪ್ರಸರಣಮಾಡಬೇಕೆಂದು ಶಿ॥ ಶಿವಮೂರ್ತಯ್ಯನವರು ಕಣಬುರ್ಗಿಮಠ ಇವರು ಸೂಚನೆಕೊಡಲು ಬಳಿಕ ಶ್ರೀಮಂತ ಶಿವಶಿದ್ಧಪ್ಪಾ ಸರ್ ನಾಯಿಕ ಇವರು ಅನುಮೋದಿಸಿದರು. ಆ ವೇಳೆ ಶ್ರೀಮಂತ ಮಲ್ಲಪ್ಪಾ ಬಸಪ್ಪಾ ದೇಸಾಯಿ ಎರಹಳ್ಳಿ ಪರಗಣೆ ಗಲಗಲಿ ಇವರು ಈ ಶೆಟ್ಟಿಯವರ ವಕ್ತೃತ್ವಕಲೆಗೆ ಮತ್ತು ವಿಷಯ ಪ್ರತಿಪಾದನ ರೀತಿಗೆ ಮೆಚ್ಚಿ ಅವರಿಗೆ ಒಂದು ಸುವರ್ಣ ಪದಕವನ್ನು ಕೊಡುವದಕ್ಕೆ ವಾಗ್ದಾನಮಾಡಿದರು (ಸಶೇಷ).

ವಿದ್ಯಾಭಿವೃದ್ಧಿಗೆ ಧನಸಹಾಯ್ಯವು.

"ಯೇನಕೇನಪ್ರಕಾರೇಣ ಯಸ್ಯಕಸ್ಯಾಪಿ ದೇಹಿನಃ। ಸಂತೋಷಂ ಜನಯೇತ್ಪ್ರಾಜ್ಞ ಸ್ತದೇವೇಶ್ವರ ಪೂಜನಂ"। ಎಂಬ ಜ್ಞಾನಿಗಳ ಉಕ್ತಿಯಂತೆ ಜನರನ್ನು ಸಂತೋಷಪಡಿಸುವುದೇ ಶ್ರೇಷ್ಠವಾದ ಈಶ್ವರ ಪೂಜೆಯೆನ್ನಿಸಿಕೊಳ್ಳುವುದು. ಸ್ಥಿರವಾದ ಸಂತೋಷವು ಜ್ಞಾನದ ಹೊರತು ಪ್ರಾಪ್ತವಾಗಲಾರದು. ಅಂತಹ ಜ್ಞಾನಪ್ರಾಪ್ತಿಗಾಗಿ ವಿದ್ಯಾಭ್ಯಾಸವು ಅತ್ಯಾವಶ್ಯಕವಾಗಿರುತ್ತದೆ. ಅಂದ ಮೇಲೆ ವಿದ್ಯಾದಾನವೇ ಸಮಾಜಹಿತದ ಮುಖ್ಯೋಪಾಯವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈತತ್ವವನ್ನರಿತೇ ಮುಂಬಯಿ ಕರ್ನಾಟಕದೊಳಗಿನ ಕೆಲ ಮಹನೀಯರು ಒಳ್ಳೇ ಪರಿಶ್ರಮದಿಂದ "ಲಿಂಗಾಯತ ಎಜ್ಯುಕೇಷನಲ್ ಫಂಡ್" ಎಂಬ ಹೆಸರಿನಿಂದ ಒಂದು ಧನರಾಶಿಯನ್ನು ಕೂಡಿಸಿ ಕಳೆದ ೨೫-೩೦ ವರ್ಷಗಳಿಂದಲೂ ವೀರಶೈವರ ವಿದ್ಯಾಭಿವೃದ್ಧಿಯ ಸಲುವಾಗಿ ಯತ್ನಮಾಡುತ್ತಿರುವರು. ಈ ಧನರಾಶಿಯು ಈಗ ಪ್ರಾಯಶಃ ೨೦೦೦೦ ರೂ. ಆಗುವುದು. ಈ ಹಣದ ಬಡ್ಡಿಯು ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳ ವೇತನ ವಿನಯೋಗಕ್ಕೆ ಮಾತ್ರ ಸಾಕಾಗುತ್ತಿದೆಯೇ ವಿನಾ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಕೊಡಲು ಸಾಲುವುದಿಲ್ಲವು. ಈ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಧನಸಹಾಯ್ಯವಿಲ್ಲದುದರಿಂದ ಅನೇಕರು ಓದುವುದನ್ನು ಬಿಟ್ಟು ಮನೆಗೆ ಹೋಗಿ ಕೂಡುತ್ತಿರುವರು. ಅದುಕಾರಣ ಈಗಿರುವ ಫಂಡನ್ನು ಇನ್ನೂ ಅಭಿವೃದ್ಧಿಗೊಳಿಸಬೇಕೆಂದು ಸಂಕಲ್ಪಿಸಿದೆ. ವೀರಶೈವ ವರ್ತಕರು ಸರ್ಕಾರಿಯ ಉದ್ಯೋಗಸ್ಥರು, ಮಠಪತಿಗಳು, ಸಿಂಹಾಸನಾಧೀಶ್ವರರು, ವಿರಕ್ತ ಮೂರ್ತಿಗಳು ತಂತಮ್ಮಾದಾಯದಲ್ಲಿ ಇಂತಿಷ್ಟು ಹಣವೆಂದು ತೆಗೆದಿಟ್ಟು ವರ್ಷಕ್ಕೊಮ್ಮೆಯಾಗಲಿ ಅಥವಾ ಮಧ್ಯಕಾಲದಲ್ಲಾಗಲಿ ವಿದ್ಯಾಭಿವೃದ್ಧಿಯ ಫಂಡಿಗೆ ಕಳುಹಿಸಿಕೊಡುವುದಲ್ಲದೆ ಊರ ಪ್ರಮುಖರೂ, ಮಠದಯ್ಯನವರೂ ಊರೊಳಗಿನ ಪ್ರತಿಯೊಂದು ಮನೆಯ ಶುಭಾಶುಭಕಾರ್ಯದಲ್ಲೂ ಕಾಣಿಕೆಯನ್ನು ತೆಗೆಯಿಸಿ ಅದರ ಲೆಖ್ಖವನ್ನಿಟ್ಟುಕೊಂಡಿದ್ದು ಆಯಾಕೂಡಲೆಯಾಗಲಿ ಅಥವಾ ವರ್ಷಕ್ಕೊಂದಾವೃತ್ತಿಯಾಗಲಿ ಕಳುಹಿಸಿಕೊಡುತ್ತಹೋದರೆ ಮಹೋಪಕಾರವನ್ನು ಮಾಡಿದಂತಾಗುತ್ತದೆ. ಎಷ್ಟೋ ಜನರು ತಮ್ಮ ಮನೋಭೀಷ್ಟವು ನೆರವೇರಿದಲ್ಲಿ ಗಣಾರಾಧನೆಯನ್ನು ಮಾಡಿಸುತ್ತೇವೆಂದು ಹರಕೆಯನ್ನು ಮಾಡಿಕೊಂಡು ಬೇಕಾದಷ್ಟು ಹಣವ್ಯಯದಿಂದ ಅನೇಕ ಜನರಿಗೆ ಸುಖಭೋಜನವನ್ನು ಮಾಡಿಸುವರಲ್ಲದೆ ಶ್ರಾವಣಮಾಸದಲ್ಲಿ ಈಶ್ವರ ಪ್ರೀತ್ಯರ್ಥವಾಗಿ ಸವಿರಾರು ಜನರಿಗೆ ಭೋಜನವನ್ನು ಮಾಡಿಸುವರು. ಈ ಮಹನೀಯರುಗಳು ದಾನಗಳಲ್ಲೆಲ್ಲಾ ಶ್ರೇಷ್ಠವಾದ ವಿದ್ಯಾದಾನದ ಕಡೆಗೆ ಲಕ್ಷ್ಯವಿಟ್ಟು ಪ್ರತಿವರ್ಷದಲ್ಲೂ ತಮ್ಮ ಶಕ್ತ್ಯನುಸಾರ ಈ ವಿದ್ಯಾಭಿವೃದ್ಧಿ ಫಂಡಿಗೂ ಸಾಹ್ಯಮಾಡುತ್ತ ಬಂದರೆ ಮಹಾಪುಣ್ಯವು ಲಭ್ಯವಾಗುತ್ತೆನ್ನುವುದರಲ್ಲಿ ಸಂದೇಹವಿಲ್ಲವು. ಆದುದರಿಂದ ಪ್ರತಿಯೊಬ್ಬ ಮತಾಭಿಮಾನಿಗಳೂ ಸ್ವಹಸ್ತ ಪರಹಸ್ತಗಳಿಂದ ವಿದ್ಯಾಭಿವೃದ್ಧಿ ಫಂಡಿಗೆ ಧನಸಹಾಯ್ಯವನ್ನು ಮಾಡಿಸಿ ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಪುಣ್ಯವನ್ನೂ, ಸಂಪಾದಿಸಿಕೊಳ್ಳುವರಾಗಲೆಂದು ಆಶಿಸುತ್ತೇವೆ.

ಶಾಂತವೀರಪ್ಪ ಮೆಣಸಿನಕಾಯಿ ಆನರರಿ ಸೆಕ್ರೆಟರಿ,
ಲಿಂಗಾಯತ ಎಜ್ಯುಕೇಷನ್ ಫಂಡು ಧಾರವಾಡ.

ವಿವೇಕಮಂಜರಿ

6

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೫೦ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯಶುದ್ಧತೆ, ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ನೆಯ ಭಾಗ ೨ ಆಣೆ ೧೧೦ ಪುಟಗಳು.
೨ನೆಯ ಭಾಗ ೩ ಆಣೆ ೧೩೨ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:—"ಮೈಸೂರ್ ಸ್ಟಾರ್ ಆಫೀಸ್" ಮೈಸೂರ್.

1

ವೀರಶೈವ ಮತಸ್ಥರಿಗೆ ಅತ್ಯಾವಶ್ಯಕಗಳಾದ ಪುಸ್ತಕಗಳು.

ವೀರಶೈವಾಮೃತ ಪುರಾಣ ತಾತ್ಪರ್ಯ ಸಹಿತ ಕಾಂಡ ೮ ಭಾಗ ೨ಕ್ಕೆ ರೂ.	೯-೦-೦
ಸಟೀಕಾ ಗಣಭಾಷ್ಯ ರತ್ನಮಾಲಾ	೧-೪-೦
ಸಿದ್ಧೇಶ್ವರವಚನ ವಿಜಯ ವಚನಕಾವ್ಯ	೧-೦-೦
ವೀರಶೈವಾಚಾರಬೋಧೆ	೦-೪-೦
ಶಿವಯೋಗರಹಸ್ಯ	೦-೨-೦
ಶಿವಮಹಿಮಾಶತಕ	೦-೨-೦

ಈ ಪುಸ್ತಕಗಳು ವೀರಶೈವ ಮತವನ್ನೂ ಲಿಂಗಾಂಗಸಾಮರಸ್ಯ ಷಟ್‌ಸ್ಥಲ ವಿಷಯಗಳನ್ನೂ ಕರತಲಾಮಲಕವಾಗಿ ಬೋಧಿಸುವುವು. ಒಳ್ಳೆಯ ಮುದ್ರಣ, ಒಳ್ಳೆಯ ಕಾಗದ, ಒಳ್ಳೆಯ ಬೈಂಡ್ ಮಾಡಿರುವುವು.

ಪುಸ್ತಕ ದೊರೆಯುವ ಸ್ಥಳ,—
ಬಸವಲಿಂಗಸ್ವಾಮಿ, ಹೊಸಮಠ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

30

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ ಪಿ. ೩ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

40

೧೯೧೨ ನೆ ಇಸವಿಯ ಪಾಕೆಟ್ಡೈರಿ.

(೧) ಕಾಗದ—ದಪ್ಪ ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೋ ಎಂಬ ಬಟ್ಟೆಯುಂಟ ಯಂತ್ರದಲ್ಲಿ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದ ಕೆಳಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿವೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

27

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

7

ಜಾತಕ ಸುಧಾಸಾರ.

ಅಯ್ಯಾ ಲೋಕಬಂಧಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯದವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦-೧೦-೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಶಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗೃಹಸ್ಫುಟಭಾವಕುಂಡಲಿ ದಶಾಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶಿವರ್ಗ ಷಷ್ಠ್ಯಾಂಶಗಳು ಗ್ರಹಗಳಸಮಯ ಅವಸ್ಥೆಯನ್ನುಸರ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಶಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೪೦-೫೦ ಪಾನುಗಳುಳ್ಳ ಪುಸ್ತಕದಲ್ಲಿ ಬರೆದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦—೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದಿರುವುದರಿಂದ ಜಾತಕವನ್ನು ಬರೆಸದೆ [illegible] ದುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನೆವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನೆವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನೀಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮುಂದುವರಿಯುವ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಉಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತಯಿರುತ್ತೆ.

ನಮ್ಮ ವಿಳಾಸ:—
ಯಸ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

4 ಬರುವ ಮೆ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನಮಂತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವೆದು ಸರ್ವರಿಗೂ ತಿಳಿದವಿಷಯವೇ ಸರಿ ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ. (3) ನಾಜೂಕಾದ ಕೆರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್ ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ) (12) ಷರ್ಟ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂಬರು 7 ಕೋಟ್ ವೆಂಕಟಾಚಲಯ್ಯರ್ ಬೀದಿ,
[illegible]

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಕಂಬಿ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಸಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನು, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

26

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕರವ್ಯಾಧಿಯಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೦-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರರಸ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

«ಪಾಚಕ.»

(«ಪಚನಮಾಡುವ ಔಷಧವು.»)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ «ಅಂಜೀರಾರ್ಕಮಧು ಕಂಪನಿ»
ದಾಗವಾಡ ಮತ್ತು ವಿಜಾಪು. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

81

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಕ್ಷೀರಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೨-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಸಿಂಗಿರಾಜಪುರಾಣವಿಜಯಂ

7

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

47



ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಶ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

೧೯೧೨ನೆಯ ಇಸವಿ ಮಾರ್ಚಿ ತಾ॥ ೧೮ ರಿಂದ ೧೯೧೨ನೆಯ ಮಾರ್ಚಿ ತಾ॥೨೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೩ ನೇ ವಿರೋಧಿಕೃತು ಸಂ॥ದ ಫಾಲ್ಗುಣ ಬ॥ಅಮಾವಾಸ್ಯೆಯಿಂದ ಪರೀಧಾವಿ ಸಂ॥ದ ಚೈತ್ರ ಶು॥ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ತೇದಿ
18	[1]ಸೋ	ಅ	53-50	ಪೂಭಾ	43-23	6
19	[2]ಮಂಗ	ಪಾ	53-32	ಉಭಾ	44-47	7
20	[3]ಬುಧ	ಬಿ	53-1	ರೇ	46-5	8
21	[4]ಗುರು	ತ	51-13	ಅಶ್ವಿ	46-58	9
22	[5]ಶುಕ್ರ	ಚೌ	48-16	ಭರ	45-3	10
23	[6]ಶನಿ	ಪಂ	44-26	ಕೃತ್ತಿ	43-1	11
24	[7]ಭಾನು	ಷ	39-38	ರೋ	39-59	12

(1) ಸರ್ವತ್ರ ಅಮಾವಾಸ್ಯಾ, ಅಮಾಸೋಮವಾರ ತಂ. (2) ಚಾಂದ್ರ ಸಂವತ್ಸರಾರಂಭ, ಆರೋಗ್ಯಪ್ರ ತ್. (3) ರಬ್ಬಿಲಾನಿ ಚಂದು ೧. (4) ಸೌಭಾಗ್ಯಗೌ ತಂ, ಲಕ್ಷ್ಮೀವಿಲಾಸದವರ ವರ್ಧಂತಿ. (5) ವರಗಣಪ ತಂ. (6) ಕೂರ್ಮಕಲ್ಪಾದಿ. (7) ಸೂತ್ಯಕಾಷಷ್ಠಿ ತಂ, ಶ್ರೀರಂಗದಲ್ಲಿ ಬ್ರಹ್ಮೋತ್ಸವಾರಂಭ, ವೇಲಾಪು ಯಲ್ಲಿ ಕಲ್ಯಾಣೋತ್ಸವ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ,
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಸೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ ನೇಯ ಇಸವಿ ಮಾರ್ಚಿ ತಾರೀಖು ೨೫ ನೇಯ ಸೋಮವಾರ. [ಸಂಚಿಕೆ ೧೨

8 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ

ದೊಡ್ಡ ಪೋಸ್ಟ್ ಕಾರ್ಡುಗಳನ್ನು {
ನಂ.........
ಮಹಾರಾಜಶ್ರೀ..................................ಸಾಕ್ಷಿ
....ಮಾಡುವ
..............ಅದಾಗಿ ಈವರಿಗೆ ಉಭಯಕುಶಲೋಪರಿಸಾಂ॥
} ಎಂಬದಾಗಿ ಮೇಲು

ಭಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦-೪-೦. ವಿ. ಪಿ. ಮೂಲಕ ೦-೬-೦. ೧೦೦೦ ಕ್ಕೆ ೨-೦-೦. ೧೦೦೦ ಗಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆಬೀಳುವುದು. ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೂಪನ ಬಹುಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೂಪನ ಇನಾಮು ಕೊಡಲಾಗುತ್ತೆ.

ರಖಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಜಾಟಲ್‌ವರ್ಜ ಧ್ರುಸ್‌ವಾಚ್.



(2) ಕ್ಯಾಲೆಂಡರ್‌ವಾಚ್.



(3) ಗನ್‌ಟೈಂ ರೈಲ್ವೆ ರೆಗ್ಯುಲೇಟರ್‌ವಾಚ್.



(1) ಹೈಟ್ ಹೇಸ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ಬೆಲೆ:— (1) ಜಾಟಲ್‌ವರ್ಜ ಧ್ರುಸ್ ವಾಚೆಂಬ ಗಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತದೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮-೮-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೮-೦. (2) ಕ್ಯಾಲೆಂಡರ್ ವಾಚ್– ಇದು ಟೈಂ ತಾರೀಖು ತೋರಿಸುತ್ತದೆ. ೫-೧೨-೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದುದೇ ಆದರೆ ತನ್ನ ಸಂಗಡ ಒಬ್ಬ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೨-೪-೦ ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೩-೪-೦. (3) ಗನ್‌ಟೈಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್– ಇದು ಗೌರ್ನಮೆಂಟ್ ಗಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩-೮-೦. (4) ಹೈಟ್ ಹೇಸ್ ಕೀ ವಾಚ್– ವಾರಕ್ಕೊಂದಾವೃತ್ತಿ ಕೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-[illegible] ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೫-೪-೦. (5) ಪಿಕ್ಚರ್ಸ್ ವಾಚ್– ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. [illegible] ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಪ್ಪು ಸ್ಪಷ್ಟ ಕಾಣ್ತಾ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ಆರಿಸಬಹುದು. ೧ ಕ್ಕೆ ೬-೮-೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು [illegible] ಸರಿಯಾದ ಕಾಲವನ್ನು ತೋರಿಸುತ್ತದೆ. ವಾಚ್ ೧ಕ್ಕೆ ೨-೮-೦. [illegible] ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದ್ದು.

ಎಂ. ಎಸ್. [illegible] ಮೈಸೂರು.

4

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರುಗಳಿಗೆ ೧-೧೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

31

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧-೩-೦. ವೀರಶೈವ ಮತಸ್ವರೂಪವೂ–ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧-೩-೦. ಸೌಂದರ ಸಂಬ್ಬಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿವೆ.

ಸಟೀಕ ಶತಸೂತ್ರರತ್ನಂ.– ಜ್ಞಾನಸಿದ್ಧಿಗಳ [illegible], ಮೋಕ್ಷವು [illegible] ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.– ಬಸವೇಶ ಪಂಚಪ್ರಕಾಶ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.–೨ ಆಣೆ. ಶಂಕರಲಿಂಗ ಶತಕ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ವರ್ಷ ಒಂದಕ್ಕೆ ೬೦ ಫಾರಗಳು ಬರುವುವು. ವರ್ಷದ [illegible]

ಎಮ್. ಆರ್. [illegible],
ಗ್ರಂಥಪ್ರಕಾಶಕರು [illegible]

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆ ಕಾಲದೊಳ್ ಮಂತ್ರಿಯಾದ ವಜ್ರದಂಷ್ಟ್ರನು ಮನದೊಳ್ ಯೋಚಿಸಿದನು— ಈ ರಾಕ್ಷಸಾಧಿಪತಿಯು ಅವಶಕುನಂಗಳಂ ಲೆಕ್ಕಿಸದೆ ಮತ್ತೂ ಹಿತವಾದ ನನ್ನ ಮಾತುಗಳಂ ಕೇಳದೆ, ದೇವತೆಗಳಂ ಹರಿಹರಿಯಾಗಿ ಬಾಯಿಗೆ ಬಂದಂತೆ ಬೊಗಳುತ ಅಹಂಕಾರದಿಂದಿರುವನು. ಆದುದರಿಂದ ಇವನಿಗೆ ಮೃತಿಕಾಲವು ಸಮೀಪಿಸಿರುವುದಾಗಿ ತೋರುತ್ತಲಿದೆ. ಇಂತಪ್ಪ ಸಾಮರ್ಥ್ಯವುಳ್ಳವಂಗೆ ಎಂತು ವಿಪತ್ತು ಸಂಭವಿಸುವುದೆಂದು ಯೋಚಿಸಿದರೆ, ಈತನು ಬಲಾತ್ಕಾರದಿಂ ತಂದಿರುವ ಕುಸುಮಲತೆಯು ಮೂಲಕವಾಗಿಯೇ ವಿಪತ್ತು ಉಂಟಾಗುವುದು. ಆದ್ದರಿಂ ಈಗ ನಮ್ಮ ಕುಲದೇವತೆಯಾದ ನಿಕುಂಭಿಲಾ ದೇವಿಯ ಕಟಾಕ್ಷದಿಂದಲೇ ಕ್ಷೇಮವಾಗಬೇಕಲ್ಲದೆ ಮತ್ತೊಂದು ಸಾಧನವಿಲ್ಲವೆಂದು ಚಿಂತಿಸುತ ಸಂಗಡಬರುತ್ತಿರಲು, ಜಯಾಮಾರುತನು ತನ್ನ ಬಲಸಮೇತನಾಗಿ ಸುರೆಯು ತಲೆಗೇರಿ ಮನಬಂದಂತೆ ಕೂಗುತ ಬಂದು ಜಲಾವರಣದ ಸಮೀಪದೊಳ್ ನಿಂತು ಅಲ್ಲಿ ಸತ್ತುಬಿದ್ದಿರುವ ರಾಕ್ಷಸರ ಸಮೂಹವಂ, ಆ ಆವರಣದೊಳ್ ಬಿಂದುಮಾತ್ರ ಜಲವಿಲ್ಲದೆ ಇರುವುದಂ ಕೂಡ ನೋಡಿ, ವಜ್ರದಂಷ್ಟ್ರನಂ ಕುರಿತು, ಎಲೈ ಬುದ್ಧಿಶಾಲಿಯಾದ ಮಂತ್ರಿಯೆ! ನೀನು ಪೇಳಿದಂತೆ ಅನರ್ಥವಾಗಿಯೇ ಇರುವುದು. ಆದುದರಿಂ ಈರ್ವ ಚಾರರಂ ಕಳುಹಿ ಪಟ್ಟಣದೊಳ್ ಏನಾಗಿರುವುದೋ ಆ ಸಮಾಚಾರವಂ ತರಿಸುವುದೆಂದು ನುಡಿಯಲು, ಆಗ ಮಂತ್ರಿಯು ಉಲೂಕ ಕಂಕರರೆಂಬ ಈರ್ವ ಚಾರರಂ ಕರೆದು ಪಟ್ಟಣವಂ ಪೊಕ್ಕು ಅಲ್ಲಿಯ ಸಮಾಚಾರವಂ ತಿಳಿದು ತಡಮಾಡದೆ ಬೇಗಬರುವುದೆಂದು ಕಟ್ಟುಮಾಡಿ ಕಳುಹಲು, ಆ ಉಲೂಕ ಕಂಕರರು ಅಪ್ಪಣೆಯಿಂದು ಹೊರಟು ಪಕ್ಷಿ ರೂಪಗಳಂ ತಾಳಿ ಪಟ್ಟಣವಂ ಪ್ರವೇಶಿಸಿ ಅಲ್ಲಲ್ಲಿ ನೋಡುತ್ತಿರಲು, ಛಾಯಾಗುಪ್ತನು ಅದಂ ತಿಳಿದು ಸುಗಂಧರಾಜೇಂದ್ರಂಗೆ ಬಿನ್ನವಿಸಲು, ಅದಂ ಕೇಳಿ ರಾಜೇಂದ್ರನು ಅವರಂ ನೀನೇ ಪಿಡಿದು ತರುವುದೆಂದಾಜ್ಞಾಪಿಸಲು, ಛಾಯಾಗುಪ್ತನು ಅವರ ನೆಳಲ್ಲಿಯೇ ಪೋಗಿ ಇರ್ವರಂ ಎರಡು ಕೈಗಳಿಂದ ಪಿಡಿದುಕೊಂಡು ಬರಲು, ಪಕ್ಷಿರೂಪದಿಂದಿರುವ ಆ ದೂತರು ಯಕ್ಷನ ಹಿಡಿತವಂ ಸೈರಿಸಲಾರದೆ ಎಂದಿನಂತೆ ರಾಕ್ಷಸರಾಗಲು, ಯಕ್ಷನು ಆ ಇರ್ವ ರಾಕ್ಷಸ ಚಾರರಂ ರಾಜೇಂದ್ರನ ಬಳಿಗೆ ಕರೆತರಲು, ರಾಜೇಂದ್ರನು ಅವರುಗಳನ್ನು ನೋಡಿ, ಎಲೈ ದುಷ್ಟರಾದ ದಾನವರುಗಳಿರಾ! ಕೇಳಿ— ನಿಮಗೆ ಅರಸಾದ ಜಯಾಮಾರುತನೊಡನೆ ಕರ್ನಾಟ ದೇಶಾಧಿಪತಿಯಾದ ಸುಗಂಧರಾಜೇಂದ್ರನೆಂಬ ಅರಸು ಯುದ್ಧಾರ್ಥಿಯಾಗಿ ಬಂದಿರುವನು; ನಿಮ್ಮಂ ಸಂಹರಿಸುವನೆಂದು ಪೇಳುವುದು. ಅಲ್ಲದೆ ದೂತಕಾರ್ಯಕ್ಕೆ ಬಂದವರಂ ಸಂಹರಿಸಲು ಯುಕ್ತವಲ್ಲವೆಂದು ಶಾಸ್ತ್ರವಿರುವುದರಿಂದ ನಿಮ್ಮನ್ನು ಸಂಹರಿಸುವುದಿಲ್ಲವೆಂದು ನುಡಿದು, ಎಲೈ ಛಾಯಾಗುಪ್ತನೆ! ಇವರುಗಳ ಮೂಗುಗಳಂ ಕುಯಿದು ಕಳುಹುವವನಾಗೆಂದು ಆಜ್ಞಾಪಿಸಲು ಛಾಯಾಗುಪ್ತನು ಅದೇ ವೇಳೆಗೆ ಅವರ ಮೂಗುಗಳಂ ಕುಯಿದು ಮರಳಿ ಕಳುಹಿಸಲು, ಅವರಿರ್ವರೂ ಪ್ರಾಣಮಾತ್ರ ಉಳಿಯಿತೇ ಎಂದು ಗಡಗಡನೆ ನಡುಗುತ ಓಡಿಬರುವುದಕ್ಕೆ ಕಾಲುಬಾರದೆ, ಹಿಂತಿರುಗಿ ಭಯದಿಂ ನೋಡುತ್ತ, ತಮ್ಮ ಸೇನೆಯಿರುವ ಬಳಿಗೆ ಬಂದು ಎಲ್ಲರನ್ನು ನೋಡಿ ಅಳುತ, ಅರಸಾದ ಜಯಾಮಾರುತನ ಬಳಿಯನ್ನೈದಿ ಸಾಷ್ಟಾಂಗ ನಮಸ್ಕಾರವಂ ಮಾಡಿ ಎದ್ದು ನಿಂತು ಗದ್ಗದ ಸ್ವರದಿಂದ ಸುಗಂಧರಾಜೇಂದ್ರನು ಪೇಳಿದ ಮಾತುಗಳಂ ಪೇಳಿದೊಡೆ ಇವನೇನು ಮಾಡುವನೋ ಎಂದು ಭಯದಿಂ ಕೊಂಚಕೊಂಚವಾಗಿ ಪೇಳಲು, ಆಗ ಜಯಾಮಾರುತನು ಈ ದೂತರುಗಳ ಮೂಗು ಕುಯ್ದಿರುವುದಂ ನೋಡಿ ಅವರು ಹೇಳಿದ ಮಾತುಗಳಂ ಕೇಳಿ ಕೋಪೋದ್ದೀಪಿತನಾಗಿ ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ, ಕಟಕಟನೆ ಹಲ್ಲುಗಳಂ ಕಡಿಯುತ್ತ, ಕಮ್ಮೀಸೆಗಳಂ ಕುಣಿಸುತ್ತ, ಕಾಲಾಗ್ನಿಯಂತೆ ಉರಿಯುತ್ತ, ಕ್ರೋಧವೇ ಮೂರ್ತಿಭವಿಸಿ ಬಂದಂತೆ ತೋರುತ್ತ, ಎಲೈ ಉಲೂಕ ಕಂಕರುಗಳಿರಾ! ಆ ನರಾಧಮನು ನಿಮಗೆ ಈ ಪರಿಯಾಗಿ ಮೂಗುಗಳಂ ಕುಯಿದು ಅವಮಾನವಂ ಮಾಡಿದನೆ? ಅವನ ತಲೆಯನ್ನೇ ಕುಯಿದು ನಿಮಗೆ ಆಹಾರವನ್ನಾಗಿ ಕೊಡುವೆನೆಂದು ಪೇಳಿ, ಆಭರಣಗಳಿಂದಲೂ, ಕೆಲವು ಪ್ರತಾಪದ ಮಾತುಗಳಿಂದಲೂ ಅವರಂ ಸಂತೋಷಗೊಳಿಸಿ, ಮಂತ್ರಿಯನ್ನು ನೋಡಿ, ಮನುಷ್ಯರಲ್ಲಿ ಇಂತಹ ಸಾಹಸವಂತರುಂಟೆ? ಎಂದು ನುಡಿಯುತ್ತ, ಈ ಆವರಣಂಗಳಂ ಯಾವ ಬಲದಿಂದ ಹೀಗೆ ಮಾಡಿರುವನೋ ಎಂದು ನುಡಿಯಲು, ಆ ಮಾತಿಗೆ ವಜ್ರದಂಷ್ಟ್ರನು ಎಲೈ ರಾಕ್ಷಸೇಶ್ವರನೇ! ಕೇಳು— ವಾಯವ್ಯಾಸ್ತ್ರದಿಂದ ಜಲಾವರಣವಂ ಶೋಷಣಂ ಗೈಸಿ, ಅಗ್ನ್ಯಾವರಣವಂ ವಾರುಣಾಸ್ತ್ರದಿಂದ ಅಡಗಿಸಿ, ಸರ್ಪಾವರಣವಂ ಗಾರುಡಾಸ್ತ್ರದಿಂ ನಾಶಗೊಳಿಸಿ, ಸಿಂಹಾವರಣವಂ ಶರಭಾಸ್ತ್ರದಿಂದ ಸಂಹಾರವಂ ಮಾಡಿದ ಬಳಿಕ ರಾಕ್ಷಸಾವರಣವಂ ಸ್ತಂಭನಾಸ್ತ್ರದಿಂದ ಸ್ತಬ್ಧವನ್ನಾಗಿ ಮಾಡಿರುವಂತೆ ಕಾಣುತ್ತಿದೆ. ಈ ಸ್ತಂಭನಾಸ್ತ್ರಕ್ಕೆ ಪ್ರತೀಕಾರವಾದ ಅಸ್ತ್ರವಿದ್ದರೆ ಪ್ರಯೋಗಿಸಿ ರಾಕ್ಷಸರಂ ಎಬ್ಬಿಸಬಹುದೆಂದು ವಿಜ್ಞಾಪನೆಯಂ ಗೈಯಲು, ಆಗ ಜಯಾಮಾರುತನು ತನ್ನ ಪೆಗಲೊಳಿರ್ದ ಧನುಸ್ಸಂ ತೆಗೆದು ಬಾಣಸಂಧಾನವಂ ಗೈದು ಪ್ರಜ್ಞಾಸ್ತ್ರನಂ ಅಭಿಮಂತ್ರಿಸಿ ಬಿಡಲು, ಆ ರಾಕ್ಷಸರೆಲ್ಲರೂ ನಿದ್ರೆಯಿಂ ತಿಳಿದು ಎಚ್ಚತ್ತು ಸುತ್ತಲೂ ಬಿದ್ದಿರುವ ತಂತಮ್ಮ ಆಯುಧಗಳಂ ಎತ್ತಿಕೊಂಡು ಎಲಾ ಮನುಷ್ಯಮಾತ್ರದವನು ಕಾಪಟ್ಯಕೃತ್ಯದಿಂದ ಬಂದು ನಮ್ಮೆಲ್ಲರಂ ಈ ಪರಿಯಾಗಿ ಮೋಸದಿಂದ ಜಯಿಸಿ ನಮಗೆ ಅರಸಾದ ರಾಕ್ಷಸೇಶ್ವರನಿಲ್ಲದೇ ಇರುವ ಸಮಯದೊಳ್ ಅರಮನೆಯಂ ಪೊಕ್ಕು ಏನೇನು ಮಾಡಿರುವನೋ ತಿಳಿಯಬಿಲ್ಲ. ನಾವು ಕಾವಲಾಗಿದ್ದುದು ವ್ಯರ್ಥವಾಯಿತೆಂದು ಎಲ್ಲರೂ ಗುಂಪಾಗಿ ಬ್ರಹ್ಮಾಂಡವು ಒಡೆಯುವಂತೆ ಆರ್ಭಟಿಸುತ ಬರುತ್ತಿರಲು, ಆ ಶಬ್ದವಂ ಕೇಳಿ ಸುಗಂಧರಾಜೇಂದ್ರನು ಇದೇನು? ಸಮುದ್ರವೇ ಮೇರೆದಪ್ಪಿ ಭೋರಿಡುತ್ತ ಬರುತ್ತಿರುವುದೋ ಎಂಬಂತೆ ಏರಿಬರುವ ರಾಕ್ಷಸ ಸೇನೆಯಂ ನೋಡಿ ಯಕ್ಷನ ನೊಸಲಿ ಕುಳಿತು ನಾನಾವಿಧ ಬಾಣಂಗಳಿಂದ ಆ ರಾಕ್ಷಸಬಲಂಗಳಂ ಸಂಹರಿಸಲು, ಬೆಂಕಿಯಂ ಸೋಂಕಿದ ಮದ್ದಿನರಾಶಿಯಂತೆ ನಿಮಿಷದೊಳ್ ಮಡಿದ ರಾಕ್ಷಸರಂ ಕಂಡು, ಜಯಾಮಾರುತನು ತನ್ನ ಸಮೀಪದೊಳಿರುವ ಮಹಾಬಲಶಾಲಿಗಳಾದ ಮೈಗಾವಲು ರಾಕ್ಷಸರಂ ಕಳುಹಿಸಲು, ಅವರು ಎಂಭತ್ತುನಾಲ್ಕುಲಕ್ಷ ಜೀವರಾಶಿಗಳರೂಪವಂ ಬೇರೆಬೇರೆ ಧರಿಸಿ, ಏಕವಾಗಿ ಸುತ್ತುವರಿದು ಕವಿದುಕೊಂಡಿರುವ ಅಂಧಕಾರಂಗಳು ಸೂರ್ಯನಂ ಕವಿದಂತೆ ಸುಗಂಧರಾಜೇಂದ್ರನಂ ಕವಿದು ಜಯಿಸುವೆವೆಂದು ಬರುತ್ತಿರಲು, ಸುಗಂಧರಾಜೇಂದ್ರನು ಈ ವಿಚಿತ್ರವಾದ ರೂಪಂಗಳಂ ಕಂಡು ಇವರೆಲ್ಲರೂ ರಾಕ್ಷಸರೆಂದು ತಿಳಿದು, ಒಂದೊಂದು ಜಾತಿಗೆ ಒಂದೊಂದು ಪರಿಯಾದ ಬಾಣಗಳಂ ಪ್ರಯೋಗಿಸಲು, ಆ ರಾಕ್ಷಸರು ಇದಿರಾಗಿ ಬರುವ ಈ ಬಾಣಗಳಂ ಪಿಡಿದು ಮುರಿಯುವವರು ಕೆಲಂಬರು; ತಪ್ಪಿಸಿಕೊಳ್ಳುವವರು ಕೆಲಂಬರು; ಅವುಗಳಿಂದಲೇ ಪ್ರತಿಯಾಗಿ ಯಕ್ಷನನ್ನೆಯಿಸುವವರು ಕೆಲಂಬರು; ಆ ಬಾಣಂಗಳಂ ನುಂಗುವವರು ಕೆಲಂಬರು, ಇಂತು ಇದಿರುಬೀಳಲು ಸುಗಂಧರಾಜೇಂದ್ರನು ಮಹಾಕೋಪಗೊಂಡು ಈ ಬಾಣಗಳಿಂದ ಇವರು ತಗ್ಗುವರಲ್ಲವೆಂದು ತಿಳಿದು, (ಸಶೇಷ)

ದನಕರುಗಳ ಕೆಮ್ಮು.

ಈ ರೋಗವು ಯಾವ ಕಾಲದಲ್ಲಾದರೂ ದನಕರುಗಳಿಗೆ ತಗಲುವುದುಂಟು; ಆದರೆ ಇತರ ಪ್ರಾಣಿಗಳಿಗೆ ಇದರ ತೊಂದರೆಯಿಲ್ಲ. ದೊಡ್ಡ ದೊಡ್ಡ ಮಂದೆಗಳಲ್ಲಿ ಈ ರೋಗವು ತಲೆದೋರಿದರೆ ಏಕಕಾಲದಲ್ಲಿ ಅನೇಕ ದನಗಳಿಗೆ ತಗಲುವ ಕಾರಣ ಇದಕ್ಕೆ ಮಾರೀರೋಗವೆಂದು ಹೆಸರಿಟ್ಟಿರುವರು. ಮಾರಿ ಅಂದರೆ ಮರಣವೆಂದು ಹೇಳಬಹುದು. ಕೆಲವು ವೇಳೆ ರೋಗವು ಸುಲಭವಾಗಿ ವಾಸಿಯಾಗುತ್ತದೆ; ಮತ್ತೆ ಕೆಲವು ಸಂದರ್ಭಗಳಲ್ಲಿ ರೋಗ ತಗಲಿದ ದನವು ನಾಲ್ಕು ತಿಂಗಳ ವರೆಗೂ ನರಳುವುದುಂಟು.

ಇದೂ ಒಂದು ಅಂಟು ಜಾಡ್ಯವು. ರೋಗವು ತಲೆದೋರಿದ ಸಮಯದಲ್ಲಿ ಮಂದೆಯನ್ನು ಚದರಿಸಿ ದನಗಳನ್ನು ಒಂಟೊಂಟಿಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ಕಟ್ಟಿಹಾಕಿದರೆ ಅವಕ್ಕೆ ರೋಗವು ತಗಲುವುದಿಲ್ಲ.

ಲಕ್ಷಣ:—ಯಾವುದಾದರೊಂದು ದನಕ್ಕೆ ರೋಗವು ತಗಲುವುದಕ್ಕೆ ಕೆಲವು ದಿನಗಳಿಗೆ ಮುಂಚೆ ಅದು ಬಹಳ ದಪ್ಪನಾಗಿ ತೆನೆಯಾಗಿರುವಂತೆ ಕಂಡುಬರುವುದು. ರೋಗವು ತಗಲಿದೊಡನೆಯೆ ದನವು ನಡಗುವುದು, ಬಾಯಿ ಬಿಸಿಯಾಗುವುದು, ಮೂಗಿನ ಹೊಳ್ಳೆಗಳಲ್ಲಿ ದ್ರವವಿಲ್ಲದಂತಾಗುವುದು, ಅನಂತರ ಕೆಮ್ಮು ಪ್ರಾರಂಭವಾಗಿ ಹಸಿವು ನಿಂತುಹೋಗುವುದು ಕರೆಯುವ ಹಸುವಾದರೆ ಹಾಲು ಬಹಳ ಕಡಿಮೆಯಾಗಿ ಒಂದೆರಡು ದಿನಗಳ ಅನಂತರ ಜ್ವರವು ಬರುವುದು. ದನವು ಉಸಿರಾಡುವಾಗ ಮೂಗಿನ ಹೊಳ್ಳೆಗಳು ಅರಳುವುವು ಮತ್ತು ದನವು ನರಳುವುದು ಅಲ್ಲದೆ ಎದೆಯಲ್ಲಿ ನೋವಿರುವಂತೆ ಕಂಡುಬರುವುದು; ಹೊಟ್ಟೆಯು ಊದಿಕೊಳ್ಳುವುದು. ಜ್ವರವು ಕಡಿಮೆಯಾಗುತ್ತಾ ಬಂದರೂ ಉಸಿರಾಡುವುದು ಬಹಳ ಕಷ್ಟವಾಗಿ ಕೊನೆಗೆ ಪ್ರಾಣಿಯು ಉಸಿರುಕಟ್ಟಿ ಸತ್ತುಹೋಗುವುದು. ರೋಗವು ಬಹಳ ಪ್ರಬಲವಾಗಿದ್ದರೆ ದನವು ರೋಗ ತಗಲಿದ ಎಂಟು ಹತ್ತು ದಿನಗಳಲ್ಲಿ ಸಾಯುವುದು; ಇಲ್ಲದಿದ್ದರೆ ಮೂರು ತಿಂಗಳಕಾಲ ಬದುಕಿರಬಹುದು.

ಚಿಕಿತ್ಸೆ:—ಈ ರೋಗವು ಔಷಧದಿಂದ ಗುಣವಾಗುವುದು ಕಡಿಮೆ. ಇದು ಅಂಟು ಜಾಡ್ಯವೆಂಬುದನ್ನು ಮಾತ್ರ ಜನರು ಮರೆಯದೆ ರೋಗವು ಗ್ರಾಮದ ದನಗಳಿಗೆಲ್ಲಾ ವ್ಯಾಪಿಸದಂತೆ ನೋಡಿಕೊಳ್ಳಬೇಕು. ರೋಗ ತಗಲಿದ ದನವನ್ನು ಕೂಡಲೆ ದೂರವಾಗಿಟ್ಟು ಅದಕ್ಕೆ ಉಪಚಾರಮಾಡಲು ಗೊತ್ತುಮಾಡಲ್ಪಟ್ಟಿರುವವನು ಇತರ ದನಗಳ ಸಮೀಪಕ್ಕೆ ಹೋಗದಂತೆ ಕಟ್ಟುಮಾಡಬೇಕು. ರೋಗದ ದನಗಳಿಗೆ ಬಹಳ ಎಚ್ಚರಿಕೆಯಿಂದ ಉಪಚಾರಮಾಡಬೇಕು. ಕೊಟ್ಟಿಗೆಯು ಬಹಳ ಬೆಚ್ಚಗಾಗಿಯೂ ಮತ್ತು ಗಾಳಿಯು ಸಂಚಾರಕ್ಕೆ ಅನುಕೂಲವಾಗಿಯೂ ಇರಬೇಕು. ಮೃದುವಾದ ಹಸುರು ಹುಲ್ಲನ್ನು ತಿನ್ನಿಸಿ ದನವು ಕುಡಿಯುವಷ್ಟು ನಿರ್ಮಲವಾದ ನೀರನ್ನು ಕುಡಿಸಬೇಕು. ಒಣ ಹುಲ್ಲನ್ನಾಗಲಿ ಅಥವಾ ಬತ್ತದ ಹುಲ್ಲನ್ನಾಗಲಿ ಖಂಡಿತವಾಗಿಯೂ ತಿನ್ನಿಸಕೂಡದು. ಜ್ವರಬಂದ ಕಾಲದಲ್ಲಿ ಕೆಳಗೆ ಹೇಳುವ ಔಷಧಿಯನ್ನು ಕುಡಿಸಬೇಕು. ಎರಡು ತೊಲೆ ಕರ್ಪೂರ, ಎರಡು ತೊಲೆ ಕಡ್ಡುಪ್ಪು, ಒಂದು ತೊಲೆ ದತ್ತೂರಿ ಬೀಜದ ಪುಡಿ ಇವು ಮೂರನ್ನು ಅರ್ಧ ಚಟಾಕು ಹೆಂಡದಲ್ಲಿ ಕದಡಿ ಕುಡಿಸಬೇಕು. ಮಲವು ಬದ್ಧಸಿದ್ದರೆ ೧ ಪಾವು ಉಪ್ಪು ೧॥ ಚಟಾಕು ಗಂಧಕದಪುಡಿ, ೧॥ ತೊಲೆ ಒಣಶುಂಠಿಪುಡಿ ಇವುಗಳನ್ನು ೧॥ ಚಟಾಕು ಕಾಕಂಬಿಯಲ್ಲಿ ಬೆರಸಿ ಕುಡಿಸಬೇಕು.

ಜ್ವರವು ನಿಂತಮೇಲೆ ೧॥ ತೊಲೆ ಮೈಲುತುತ್ತ ಮತ್ತು ೧॥ ತೊಲೆ ಚೆರಾಯಿತದ ಪುಡಿಯನ್ನು ಅಕ್ಕಿಯ ಗಂಜಿಯೊಡನೆ ಬೆರಸಿ ಕುಡಿಸಬೇಕು. ಕೆಮ್ಮು ಬಹಳ ಹೆಚ್ಚಾಗಿ ಉಸಿರಾಡುವುದಕ್ಕೆ ತೊಂದರೆಯಾದರೆ, ಒಂದು ಹಳೆಯ ಕಂಬಳಿ ಚೂರನ್ನು ಬಿಸುನೀರಲ್ಲಿ ಅದ್ದಿ ಎದೆಗೆ ಶಾಕವನ್ನು ಕೊಟ್ಟು ಅನಂತರ ಒಣಗಿದ ಬಟ್ಟೆಯಿಂದ ಚೆನ್ನಾಗಿ ಒರಸಬೇಕು.

ಎಮ್ಮೆ.

ಎಮ್ಮೆಗಳಿಂದ ಆರಂಬಗಾರರಿಗೆ ಬಹಳ ಪ್ರಯೋಜನವುಂಟೆಂಬುದನ್ನು ಎಷ್ಟು ಹೇಳಿದರೂ ಕೊಂಚವೇ ಆಗುತ್ತದೆ. ಹೀಗಿದ್ದರೂ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಪಡಿಸಲು ನಾವು ಸ್ವಲ್ಪವೂ ಪ್ರಯತ್ನಪಡದಿರುವುದು ಬಹಳ ಅನ್ಯಾಯವೇಸರಿ. ಹಾಲು ಕೊಡತಕ್ಕ ವಿಷಯದಲ್ಲಿ ಎಮ್ಮೆಯು ಯೂರೋಪುದೇಶದ ಹಸುಗಳಿಗೆ ಹೆಚ್ಚು ಕಡಿಮೆ ಸಮಾನವಾಗಿದೆ, ಮತ್ತು ಇಂಡಿಯಾ ದೇಶದ ದನಕರುಗಳಲ್ಲೆಲ್ಲಾ ಎಮ್ಮೆಯನ್ನು ಸಾಕುವುದು ಅತಿಸುಲಭವು. ಇಂಡಿಯಾ ದೇಶದ ಬಹಳ ಶ್ಲಾಘ್ಯವಾದ ತಳಿಯ ಹಸುವು ಸಹಾ ಒಂದು ಸಾಧಾರಣವಾದ ಎಮ್ಮೆಯಷ್ಟು ಹಾಲು ಕೊಡುವುದಿಲ್ಲ. ಅಲ್ಲದೆ ಎಮ್ಮೆಯು ಯಾವ ಮೇವನ್ನು ಹಾಕಿದರೂ ತಿನ್ನುವುದಲ್ಲದೆ ಹಗಲು ಮತ್ತು ರಾತ್ರಿ ಎರಡು ವೇಳೆಗಳಲ್ಲೂ ಮೇಯುವುದು. ಹಸುವಿಗೆ ಕಸಕಡ್ಡಿಯಿಂದ ಕೂಡಿದ ಕಶ್ಮಲವಾದ ಮೇವನ್ನು ತಿನ್ನಿಸಕೂಡದು; ಎಮ್ಮೆಗಾದರೋ ಯಾವ ಮೇವನ್ನು ಬೇಕಾದರೂ ಹಾಕಬಹುದು. ಎಮ್ಮೆಯ ಹಾಲಿನಲ್ಲಿ ಹಸುವಿನ ಹಾಲಿಗಿಂತ ಹೆಚ್ಚು ಬೆಣ್ಣೆಯು ಸಿಕ್ಕುವುದು. ಅಂತೂ ವರುಷಕ್ಕೆ ಒಂದು ಎಮ್ಮೆಯಿಂದ ೮೦ ರೂಪಾಯಿ ವರಮಾನವು ದೊರೆಯುವುದೆಂದು ಹೇಳಬಹುದು. ಹೀಗಿದ್ದರೂ ಬೀಜಕ್ಕೆ ಅತ್ಯುತ್ತಮವಾದ ತಳಿಗಳ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳಿಂದ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಲು ಯಾರೂ ಸ್ವಲ್ಪವೂ ಪ್ರಯತ್ನಪಟ್ಟಿಲ್ಲ. ಗಾಡಿಗಳನ್ನೆಳೆದು ಅರ್ಧಜೀವವಾಗಿರುವ ಕೋಣಗಳನ್ನೆಲ್ಲಾ ಬೀಜಕ್ಕೆ ಉಪಯೋಗಿಸುವರು. ಹೀಗೆ ಮಾಡುವುದರಿಂದ ಎಮ್ಮೆಗಳು ದಿನೇ ದಿನೇ ಕ್ಷೀಣಗತಿಯನ್ನು ಹೊಂದುವುವು.

ದಿನ ಒಂದಕ್ಕೆ ನಾಲ್ಕು ಸೇರು ಮೊದಲ್ಗೊಂಡು ನಲವತ್ತು ಸೇರಿನ ವರೆಗೂ ಹಾಲು ಕೊಡತಕ್ಕ ಅನೇಕ ತರದ ಎಮ್ಮೆಯ ತಳಿಗಳಿವೆ. ಯಾವುದಾದರೊಂದು ಗ್ರಾಮದಲ್ಲಿ ನಾಲ್ಕು ಸೇರು ಹಾಲನ್ನು ಕರೆಯುವ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಿ, ೧೬ ಸೇರು ಹಾಲು ಕರೆಯುವ ತಳಿಗಳನ್ನಾಗಿ ಮಾಡಿದರೆ ಅಲ್ಲಿನ ವರಮಾನವೂ ಸಹಾ ಒಂದಕ್ಕೆ ನಾಲ್ಕರಷ್ಟಾಗುತ್ತದೆಂಬುದರಲ್ಲಿ ಅನುಮಾನವೇ ಇಲ್ಲ. ಆದುದರಿಂದ ಪ್ರತಿ ಗ್ರಾಮಸ್ಥರೂ ಒಳ್ಳೆಯ ಶ್ರೇಷ್ಠವಾದ ತಳಿಗಳಿಗೆ ಸೇರಿದ ಉತ್ತಮವಾದ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳನ್ನು ಬೀಜಕ್ಕೆ ಉಪಯೋಗಿಸಿದರೆ ಅವರುಗಳ ವರಮಾನವು ಹೆಚ್ಚಿ ಅವರು ಐಶ್ವರ್ಯವಂತರಾಗುವುದಲ್ಲದೆ ಹಾಲು, ಮೊಸರು ಮತ್ತು ಬೆಣ್ಣೆಯೂ ಸಮೃದ್ಧಿಯಾಗಿ ದೊರೆದು ಬಡಬಗ್ಗರೆಲ್ಲಾ ಸುಲಭಬೆಲೆಗೆ ಹಾಲು, ಮೊಸರು ಬೆಣ್ಣೆಯನ್ನು ಕೊಳ್ಳಲು ಅನುಕೂಲವಾಗುವುದು.

ಇಂಗ್ಲೆಂಡು ದೇಶದ ಹಸುಗಳು ವಿಶೇಷವಾಗಿ ಹಾಲು ಕರೆಯುವುದಕ್ಕೆ ಶಾಸ್ತ್ರದ ಅನುಸಾರವಾಗಿ ಅವುಗಳ ತಳಿಯನ್ನು ಅಭಿವೃದ್ಧಿಗೊಳಿಸಿ ಅವುಗಳನ್ನು ಪೋಷಿಸುವುದೇ ಕಾರಣವಾಗಿದೆ. ಇವು ಹಾಲು ಕೊಡುವ ಯಂತ್ರಗಳಾಗಿ ಪರಿಣಮಿಸಿವೆ. ಕರುಗಳಿಲ್ಲದೇ ಇವು ಹಾಲು ಕೊಡುವುದೇ ಇದಕ್ಕೆ ದೊಡ್ಡ ನಿದರ್ಶನವಾಗಿದೆ. ಆ ದೇಶದಲ್ಲಿ ಸಾಮಾನ್ಯವಾಗಿ ಕರುಗಳನ್ನು ಮಾರಿಬಿಡುವರು. ಇಂಡಿಯಾ ದೇಶದಲ್ಲಾದರೋ, ಕರುಗಳು ಸತ್ತುಹೋದರೆ ಹಸುಗಳು ಕರೆಯುವುದಿಲ್ಲ; ಆದರೆ ಎಮ್ಮೆಗಳು ಮಾತ್ರ ಕರುಗಳು ಇಲ್ಲದಿದ್ದರೂ ಕರೆಯುವುವು.

ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಕಾಡುಕೋಣಗಳನ್ನು ಬೀಜಕ್ಕೆ ಉಪಯೋಗಿಸಬೇಕೆಂದು ಕೆಲವರು ಹೇಳುತ್ತಾರೆ; ಆದರೆ ಹೀಗೆ ಮಾಡಿದರೆ ಕರುಗಳು

ಚ್ಚು ಬಲವುಳ್ಳವುಗಳಾಗುವುವೇ ಹೊರತು ಅವುಗಳು ಡ್ಡವುಗಳಾದಾಗ ಹಾಲುಕೊಡುವುದು ಅನುಮಾನಾಸ್ಪದವಾಗಿದೆ.

ಮುಖ್ಯವಾಗಿ ಇಂಡಿಯಾ ದೇಶದ ಜನರಿಗೆ ಬೇಕಾದ ಾಲಿನ ಹೆಚ್ಚು ಭಾಗವು ಎಮ್ಮೆಗಳಿಂದ ಒದಗಿಸಲ್ಪಡುತ್ತದೆ. ದುದರಿಂದ ಇವುಗಳ ತಳಿಯನ್ನು ಅಭಿವೃದ್ಧಿಪಡಿಸುವುದು ೃತಿ ರೈತನ ಕರ್ತವ್ಯವಾಗಿದೆ. ಈ ಕೆಲಸಕ್ಕಾಗಿ ಪ್ರತಿ ೈತನೂ ಬೀಜಕ್ಕಾಗಿ ಕೊನೆಯ ಪಕ್ಷ, ಒಳ್ಳೆಯ ತಳಿಯ ಂದು ಕೋಣವನ್ನಾದರೂ ಇಟ್ಟುಕೊಂಡಿರುವುದು ಉತ್ತಮವಾದ ಏರ್ಪಾಟಾಗಿದೆ. ಕೆ. ಸಿ.

ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಗಳವರ ಪರಂಧಾಮವು.

ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕರಾದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಗುರುಪೀಠದಲ್ಲಿ ಪರಂಪರಾಗತರಾಗಿ ಗುರುಸ್ಥಾನವನ್ನಲಂಕರಿಸಿದ್ದ ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಯವರು ಕಳೆದ ಪರೀಧಾವಿ ಸಂವತ್ಸರದ ಚೈತ್ರ ಶುದ್ಧ ದ್ವಿತೀಯಾ ಬುಧವಾರದ ದಿವಸ ಎಂದರೆ ೧೯೧೨ ನೆಯ ಮಾರ್ಚಿ ತಾ॥ ೨೦ ರಲ್ಲಿ ಪರಂಧಾಮವನ್ನೈದಿದರೆಂಬ ವರ್ತಮಾನವು ಎಲ್ಲರಲ್ಲಿಯೂ ಅತ್ಯಂತ ವಿಷಾದವನ್ನುಂಟುಮಾಡತಕ್ಕದಾಗಿದೆ. ಇವರ ಇಹಲೋಕದ ವ್ಯಾಪಾರ ವೈಮುಖ್ಯದಿಂದ, ಅದ್ವೈತಜಗತ್ತಿನ ಮುಖ್ಯವಾದ ಒಂದು ಪಂಡಿತರತ್ನವೇ ಅದೃಶ್ಯವಾದಂತಾಗಿ, ಅದ್ವೈತ ಸಿದ್ಧಾಂತದ ಆಸ್ತಿಕ ಧರ್ಮೋತ್ತೇಜನಕ್ಕೆ ಎಷ್ಟೋ ನ್ಯೂನತೆಯೊದಗುವ ಕಾಲವು ಸನ್ನಿಹಿತವಾಯಿತೆಂದೇ ಊಹಿಸಬಹುದಾಗಿದೆ. ಏಕೆಂದರೆ, ಶ್ರೀ ಶಂಕರಾಚಾರ್ಯರು ವೈದಿಕ ಧರ್ಮರಕ್ಷಣಾರ್ಥವಾಗಿ ಭರತಖಂಡಕ್ಕೆಲ್ಲಾ ನಾಲ್ಕು ಮಠಗಳನ್ನು ಮಾತ್ರ ಸ್ಥಾಪಿಸಿದ್ದರು. ಅವುಗಳಲ್ಲಿ ಒಂದು ಭರತಖಂಡದ ಪಶ್ಚಿಮಭಾಗವಾದ ದ್ವಾರಕೆಯಲ್ಲಿಯೂ, ಮತ್ತೊಂದು ಪೂರ್ವಭಾಗವಾದ ಜಗನ್ನಾಥ ಕ್ಷೇತ್ರದಲ್ಲಿಯೂ, ಇನ್ನೊಂದು ಉತ್ತರ ಬದರಿಕಾಶ್ರಮದಲ್ಲಿಯೂ ಸ್ಥಾಪಿತವಾಗಿ ದಕ್ಷಿಣ ಹಿಂದೂಸ್ಥಾನಕ್ಕೆಲ್ಲಾ ಶೃಂಗಗಿರಿಯೊಂದರಲ್ಲಿಯೇ ಪ್ರಧಾನ ಮಠವೊಂದು ಸ್ಥಾಪಿಸಲ್ಪಟ್ಟಿತು. ತ್ರಿಮತೀಯರ ಶಿಷ್ಯಕೋಟಿಗಿಂತಲೂ ಅದ್ವೈತಮತಾನುಯಾಯಿಯಾದ ಶಿಷ್ಯಕೋಟಿಯು ಶೃಂಗಗಿರಿಯ ಗುರುಸ್ಥಾನಕ್ಕೆ ಸೇರಿರುವಷ್ಟು ಹೆಚ್ಚಾಗಿ ಇತರ ಮಠಗಳಿಗೆ ಸೇರಿಲ್ಲ. ಹೀಗಿರುವುದರಿಂದ ದಕ್ಷಿಣ ಹಿಂದೂ ದೇಶದ ಅದ್ವೈತ ಶಿಷ್ಯಕೋಟಿಗೆಲ್ಲಾ ವೈದಿಕ ಧರ್ಮೋಪದೇಶದಲ್ಲಿ ಬಹ್ವಾಧಿಕಾರಿಗಳಾಗಿದ್ದವರ ಮರಣದಿಂದುಂಟಾದ ನಷ್ಟವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಈ ಶೃಂಗಗಿರಿಯ ಪ್ರಾಶಸ್ತ್ಯವು ಉತ್ತರದೇಶದ ಇತರ ಮೂರು ಮಠಗಳಿಗಿಂತಲೂ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೆ ಮತ್ತೊಂದು ಕಾರಣವುಂಟು. ಭಗವತ್ಪಾದರು ಶೃಂಗಗಿರಿಯಲ್ಲಿಯೇ ಬಹುಕಾಲ ವಸಿಸಿ, ತಮ್ಮ ಶಿಷ್ಯರಲ್ಲಿ ಅತ್ಯುತ್ತಮವಿದ್ವಾಂಸರಾದ ಸುರೇಶ್ವರಾಚಾರ್ಯರನ್ನು ಆ ಮಠದಲ್ಲಿಯೇ ಸ್ಥಾಪಿಸಿದುದರಿಂದ, ಶೃಂಗಗಿರಿಯ ಪೀಠಪ್ರಾಶಸ್ತ್ಯವು ಇತೋಽಪ್ಯತಿಶಯವಾದುದಾಗಿರುವುದು. ಶೃಂಗಗಿರಿಯಲ್ಲಿ ಮಠವು ಸ್ಥಾಪನೆಯಾಗಿ ಪ್ರಾಯಶಃ ೧೯೦೦ ವರ್ಷಗಳ ಮೇಲೆಯೇ ಆಗಿರಬಹುದು. ಇದಕ್ಕಿಂತಲೂ ಪ್ರಾಚೀನ ಮಠಸ್ಥಾಪನೆಯು ಮತ್ತಾವುದೂ ಇರಲಾರದು. ಅಲ್ಲಿಂದೀಚೆಗೆ ಪರಂಪರಾಗತರಾಗಿ ಬಂದವರಲ್ಲಿ ಈ ಸ್ವಾಮಿಗಳು ೩೩ ನೆಯವರೆಂದು ಕೆಲವರೂ, ೩೧ ನೆಯವರೆಂದು ಕೆಲವರೂ ಅಭಿಪ್ರಾಯಪಡುವರು. ಇವರ ಹಿಂದಣವರಾಗಿದ್ದ ಶ್ರೀ ನೃಸಿಂಹಭಾರತೀಸ್ವಾಮಿಗಳವರು ತಮ್ಮ ಅನಂತರದಲ್ಲಿ ಇಂತಹ ಶ್ರೇಷ್ಠವಾದ ಪೀಠಕ್ಕೆ ಅರ್ಹರಾದವರನ್ನು ಸಿದ್ಧಪಡಿಸಲು ಬಹು ದೂರಾಲೋಚನೆಯನ್ನು ಮಾಡಿದರು. ಏಕೆಂದರೆ, ದಕ್ಷಿಣದೇಶದ ಬಹು ಸಂಖ್ಯಾಕವಾದ ಅದ್ವೈತ ಜಗತ್ತಿನ ಗುರುಸ್ಥಾನವನ್ನಲಂಕರಿಸುವುದು ಸಾಮಾನ್ಯವಾದ ಮಾತಲ್ಲ. ಅದಕ್ಕೆ ತಕ್ಕವರನ್ನೇ ಸಿದ್ಧಪಡಿಸಬೇಕಾದುದು ಆವಶ್ಯಕವಾಗಿದ್ದಿತು. ಅದಕ್ಕಾಗಿ ತಪಸ್ವಿಗಳೂ, ಪಂಡಿತವರ್ಯರೂ ಆಗಿದ್ದ ಶ್ರೀ ನೃಸಿಂಹಭಾರತೀಸ್ವಾಮಿಗಳವರು ಆ ಕಾಲದಲ್ಲಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಲ್ಲಿ ಆಲೋಚಿಸಿ ವಿಚಾರಮಾಡತೊಡಗಿದರು. ಆಗ ಕುಣಿಗಲ ರಾಮಶಾಸ್ತ್ರಿಯವರಿಗೆ ತೇಜಸ್ವಿಯಾದ ಒಬ್ಬ ಪುತ್ರನಿರುವನೆಂಬುದನ್ನು ತಿಳಿದು, ಆ ಬಾಲಕನೇ ಈ ಪೀಠಕ್ಕೆ ಅರ್ಹನೆಂದು ಸಿದ್ಧಾಂತಗೊಳಿಸಿದರು. ಏಕೆಂದರೆ, ಸದರಿ ರಾಮಶಾಸ್ತ್ರಿಗಳ ಶಾಸ್ತ್ರಜ್ಞಾನವೂ, ವೈದಿಕಕರ್ಮಾನುಷ್ಠಾನವೂ, ಧರ್ಮಶ್ರದ್ಧೆಯೂ ಮಹಿಮಾತಿಶಯವನ್ನುಂಟುಮಾಡತಕ್ಕದಾಗಿದ್ದಿತು. ಅಲ್ಲದೆ ಅವರಲ್ಲಿ ಜನಿಸಿದ್ದ ಪುತ್ರರಲ್ಲಿ ಕೊನೆಯ ಮಗನ ಜಾತಕವೂ ಇಂತಹ ಗುರುಸ್ಥಾನಾಧಿಪತ್ಯಕ್ಕೆ ತಕ್ಕವನೆಂದು ಸೂಚಿಸುವಂತಿದ್ದಿತು. ಪ್ಲವಂಗ ಸಂವತ್ಸರದ ಫಾಲ್ಗುಣ ಬಹುಳ ಷಷ್ಠೀ ಗುರುವಾರದ ದಿವಸ ಎಂದರೆ [illegible] ರಲ್ಲಿ ಜನಿಸಿ ರಾಮಶಾಸ್ತ್ರಿಗಳ ಕನಿಷ್ಠ ಪುತ್ರರಾಗಿಯೂ, ಶಿವಾಭಿಧಾನದಿಂದ ಪ್ರಖ್ಯಾತರಾಗಿಯೂ ಇದ್ದವರೇ ಈಗಿನ ಶ್ರೀ ಶೃಂಗಗಿರಿ ಸಚ್ಚಿದಾನಂದಭಾರತೀ ಸ್ವಾಮಿಯವರಾಗಿದ್ದರು. ಇವರು ೧೮೬೬ ರಲ್ಲಿ ಶ್ರೀ ನೃಸಿಂಹಭಾರತೀ ಸ್ವಾಮಿಗಳಿಂದ ಶ್ರೀ ಶೃಂಗಗಿರಿ ಅದ್ವೈತ ಜಗದ್ಗುರು ಪೀಠದಲ್ಲಿ ಅಧಿಷ್ಠಿತರಾದರು. ಇವರು ಈ ಸ್ಥಾನವನ್ನಲಂಕರಿಸುವಾಗ ೮ ವರ್ಷ ವಯಸ್ಕರಾಗಿದ್ದರು. ಇವರಿಗೆ ಯೋಗ್ಯವಾದ ಶಾಸ್ತ್ರಾಭ್ಯಾಸವನ್ನು ಮಾಡಿಸಲು ಇವರ ಪೂರ್ವಾಶ್ರಮದ ಜ್ಯೇಷ್ಠಭ್ರಾತೃಗಳಾಗಿದ್ದ ಲಕ್ಷ್ಮೀನೃಸಿಂಹಶಾಸ್ತ್ರಿಗಳೇ ಬದ್ಧಕಂಕಣರಾದರು. ಲಕ್ಷ್ಮೀನೃಸಿಂಹಶಾಸ್ತ್ರಿಗಳಂತಹ ತರ್ಕವೇದಾಂತ ಪಾರಂಗತರೂ, ವೈದಿಕಕರ್ಮ ಶ್ರದ್ಧಾಳುಗಳೂ ಆ ಕಾಲದಲ್ಲಿ ವಿರಳರಾಗಿದ್ದರು. ಅತುಳ ಮೇಧಾವಿಗಳಾದ ಸ್ವಾಮಿಗಳವರ ಗುರುಪೀಠಾಧಿಷ್ಠಿತೆಗೆ ತಕ್ಕಂತೆ ಅನೇಕ ಶಾಸ್ತ್ರಗಳಲ್ಲಿ ಅದ್ಭುತಪಾಂಡಿತ್ಯವನ್ನು ಪಡೆದು ಅದ್ವೈತ ತತ್ವಗಳನ್ನೂ, ಯೋಗರಹಸ್ಯಗಳನ್ನೂ, ಮಠದ ಸಂಪ್ರದಾಯಗಳನ್ನೂ ಚೆನ್ನಾಗಿ ಅರಿತವರಾಗಿ ಸರ್ವರಿಗೂ ಹಿತಕಾರಿಗಳಾಗಿ ಪರಿಣಮಿಸಿದ್ದರು. ಶ್ರೀ ನೃಸಿಂಹಭಾರತೀಸ್ವಾಮಿಗಳು ತಮ್ಮ ಕರಕಮಲಸಂಜಾತರಾದ ಶ್ರೀಯವರೊಡನೆ ಪ್ರಭವ ಸಂವತ್ಸರದಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದು ಪ್ರಮಾಥಿ ಸಂವತ್ಸರದಲ್ಲಿ ಬ್ರಹ್ಮೈಕ್ಯರಾದರು, ಎಂದರೆ, ಶ್ರೀಯವರಿಗೆ ೨೧ ನೆಯ ವಯಸ್ಸಿನಲ್ಲಿ ಮಠದ ಸರ್ವಾಧಿಕಾರವೂ ತಮ್ಮೊಬ್ಬರ ಭಾಗಕ್ಕೇ ನಿಂತಂತಾಯಿತು. ಅನಂತರ ಶ್ರೀಯವರು ಮನ್ಮಥ ಸಂವತ್ಸರದಲ್ಲಿಯೂ, ಪ್ಲವಂಗಸಂವತ್ಸರದಲ್ಲಿಯೂ ಬೆಂಗಳೂರಿಗೆ ದಯಮಾಡಿಸಿದ್ದರು. ಆಗ ಶ್ರೀಮನ್ಮಹಾರಾಜರವರಿಂದಲೂ, ಮಂತ್ರಿವರ್ಯರಾದ ಮ॥ ಶೇಷಾದ್ರಿ ಅಯ್ಯರವರೇ ಮೊದಲಾದವರಿಂದಲೂ, ಸನ್ಮಾನಿತರಾಗಿ, ಅನ್ಯಮತೀಯರಿಂದಲೂ, ಇತರ ಮತೀಯರಿಂದಲೂ ಗೌರವಿಸಲ್ಪಡುತ್ತಿದ್ದರು.

ಶ್ರೀಯವರು ಕಾಲಟೀ ಅಗ್ರಹಾರದಲ್ಲಿ ಶ್ರೀ ಶಂಕರಾಚಾರ್ಯರ ಜನ್ಮಸ್ಥಳವನ್ನು ಶಾಶ್ವತಗೊಳಿಸಿದುದು ಅವರ ಕರ್ತವ್ಯಗಳಲ್ಲಿ ಮುಖ್ಯವಾದುದೆನಿಸಿದೆ. ಇದಕ್ಕೆ ಅನಂತಶಯನದಲ್ಲಿಯೂ, ನಮ್ಮ ದೇಶದಲ್ಲಿಯೂ ದಿವಾನರಾಗಿದ್ದ ಮ॥ ಮಾಧವರಾಯರೂ, ನ್ಯಾಯಾಧಿಪತಿಗಳಾಗಿದ್ದ ರಾಮಚಂದ್ರಯ್ಯರೂ ಸಹಾಯಕರಾಗಿ ಶ್ರೀಯವರ ಅನುಗ್ರಹಕ್ಕೆ ಪಾತ್ರರಾದರು. ಸದರಿ ಕಾಲಟಿಯಲ್ಲಿ ಒಂದು ಮಂದಿರವು ಸ್ಥಾಪಿತವಾಗಿ ಅಲ್ಲಿ ಆದಿಶಂಕರಾಚಾರ್ಯರ ಪ್ರತಿಮಾಪ್ರತಿಷ್ಠೆಯು ಕಳೆದ ಸೌಮ್ಯಸಂವತ್ಸರದ ಮಾಘಮಾಸದಲ್ಲಿ ವಿಜೃಂಭಣೆಯಿಂದ ಬಳೆಯಿತು. ಶ್ರೀಯವರು ತಾವು ನೆರವೇರಿಸಬೇಕಾಗಿದ್ದ ಕೃತ್ಯಗಳಲ್ಲಿ ಬೆಂಗಳೂರಿನ ವಿದ್ಯಾಶಾಲಾಸ್ಥಾಪನೆಯು ಎರಡನೆಯದೆನಿಸಿದೆ. ಮಠದ ಗೌರವಕ್ಕೂ ಬೆಂಗಳೂರು ನಗರದ ಪ್ರಜಾಸಂಖ್ಯೆಗೂ ತಕ್ಕಂತೆ ಅಂದವಾದ ಒಂದು ಮಂದಿರವನ್ನು ನಿರ್ಮಿಸಿ ವೇದವೇದಾಂತಾದಿ ಶ್ರೌತವಿದ್ಯೆಯ ಬೋಧನೆಗೆ ಅವಕಾಶವನ್ನು ಕಲ್ಪಿಸಿದರು. ಅದರ ಅಭಿವೃದ್ಧಿಯನ್ನು ನೋಡಿ ಇತೋಽಪ್ಯತಿಶಯವಾದ ಪ್ರೋತ್ಸಾಹವನ್ನು ಕೊಡಬಹುದಾಗಿದ್ದ ಶ್ರೀಯವರು ಇಷ್ಟು ಅಲ್ಪಕಾಲದಲ್ಲಿಯೇ ಎಂದರೆ ತಮ್ಮ ೫೪ ನೆಯ ವಯಸ್ಸಿನಲ್ಲಿಯೇ ಪರಮಪದವನ್ನೈದಿದುದು ತದುದ್ದೇಶಕ್ಕೆ ಎಷ್ಟೋ ಭಂಗವೊದಗಿತೆಂದು ಹೇಳಬೇಕಾಗಿದೆ. ಸುಕೃತಿಗಳು ಚಿರಾಯುಗಳಾಗದಿರುವುದು ಮಾನವಲೋಕದ ದುರ್ದಶಾಸೂಚಕವಾಗಿದೆ.

ಶ್ರೀಯವರು ವೈದಿಕಧರ್ಮ ರಕ್ಷಣೆಗಾಗಿ ಗುರುಪೀಠವನ್ನಲಂಕರಿಸಿದವರಾದರೂ ಲೌಕಿಕಧರ್ಮದಲ್ಲಿಯೂ ಅವರು ಅನ್ಯಾದೃಶರಾಗಿದ್ದರು. ಇದರಿಂದಲೇ ಶಿಷ್ಯಕೋಟಿಯ ಉಚ್ಛೃಂಖಲ ಪ್ರವರ್ತನೆಗೆ ತಡೆಯಿದ್ದಿತು. ಇವರು ಅಲ್ಲಲ್ಲಿ ಸಂಚಾರಮಾಡಿ ಜನರಿಗೆ ಹಿತೋಪದೇಶಗಳ ಮೂಲಕ ವೈದಿಕಧರ್ಮವನ್ನು ಆಸ್ತಿಕರಿಗೆ ಬೋಧಿಸುತ್ತಾ ಸರ್ವರಿಂದಲೂ ಪೂಜಾರ್ಹರೆಂದು ಪ್ರಸಿದ್ಧಿಗೊಂಡಿದ್ದರು. ಇಂತಹರ ಮರಣದಿಂದುಂಟಾದ ವ್ಯಸನವು ನಿವಾರಣೆಯಾಗಬೇಕಾದರೆ, ಈ ಗುರುಪೀಠಕ್ಕೆ ಇಂತಹ ಮೇಧಾವಿಗಳಾದವರೇ ಪುನಃ ಸ್ಥಾಪಿತರಾಗಬೇಕಾಗಿದೆ.

ಶ್ರೀ ಶೃಂಗಗಿರಿಯ ಮಠಕ್ಕೆ ಅದ್ವೈತ ಮತಾನುಯಾಯಿಗಳಾದ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಮುಂತಾದವರು ಶಿಷ್ಯರನೇಕರಿರುವರು. ಪ್ರಾಯಶಃ ೬೦೦ ವರ್ಷಗಳ ಹಿಂದೆಯೇ ಅನೇಕ ರಾಜರೂ, ಪಾಳೆಯಗಾರರೂ, ಶಿಷ್ಯಪ್ರಮುಖರೂ ಮುಂತಾದವರು ಮಠಕ್ಕೆ ಅನೇಕವಾಗಿ ಜಹಗೀರಿಗಳನ್ನೂ, ಬಿರುದುಗಳನ್ನೂ, ಧನವನ್ನೂ ಸಹಾಯಮಾಡಿದಂತೆ ತಿಳಿಯಬಂದಿರುವುದು. ಅವು ಬ್ರಿಟಿಷರಿಂದಲೂ ನಮ್ಮ ಮಹಾರಾಜರವರಿಂದಲೂ ಈವರೆಗೂ ಕಾಪಾಡಲ್ಪಡುತ್ತಿರುವುವು. ಶೃಂಗಗಿರಿಯೆಂಬುದೂ ಮಠಕ್ಕೆ ಜಹಗೀರಾದುದಾಗಿದೆ. ಇದು ೮ ಮೈಲಿ ಉದ್ದವೂ, ೬ ಮೈಲಿ ಅಗಲವೂ ಇರುವುದಲ್ಲದೆ ೧೫೦೦ ಪ್ರಜಾಸಂಖ್ಯೆಯನ್ನೂ ವರ್ಷ ೧ಕ್ಕೆ ಪ್ರಾಯಶಃ ೫೦ ಸಾವಿರ ರೂಪಾಯಿ ಉತ್ಪತ್ತಿಯನ್ನೂ ಉಳ್ಳುದಾಗಿದೆ. ನಮ್ಮ ಶ್ರೀಮನ್ಮಹಾರಾಜರವರೂ ಈ ಮಠಕ್ಕೆ ತಕ್ಕ ಮರ್ಯಾದೆಯನ್ನು ಕೊಟ್ಟು ಗೌರವಿಸುತ್ತಿರುವರು. ಇಂತಹ ಪ್ರಬಲವಾದ ಗುರುಪೀಠದಲ್ಲಿ ಯಾರು ಅಧಿಷ್ಠಿತರಾಗುವರೋ ಇನ್ನೂ ಗೊತ್ತಾಗಿರುವುದಿಲ್ಲ. ಆರ್. ಶ್ರೀನಿವಾಸರಾವ್.

ರಾಜ್ಯಾಡಳಿತವು.

“ಬಹು ಚರ್ಚಾಸ್ಪದವಾದ ರಾಜ್ಯಾಡಳಿತದಲ್ಲಿಯ ಬದಲಾವಣೆಗಳು ಈ ಕೆಳಗೆ ಹೇಳುವ ಪ್ರಕಾರ ಸರಿಯಾದುದಾಗಿ ನಂಬುಗೆಯಾದ ಸ್ಥಳದಿಂದ ಅರಿತಿರುತ್ತೇವೆ.”

ದಿವಾನರು.—ಮ॥ ಕೆ.ಎಸ್. ದೊರಸಾಮಯ್ಯರ್‌ರವರು

ಕೌನ್ಸಿಲರುಗಳು.— ಮ॥ ಗಳಾದ ಬಿ. ದೇವರಾಜ ಅರಸಿನವರು ಮತ್ತೂ ಪಿ. ಶ್ರೀಕಂಠೇಶ್ವರಯ್ಯರ್‌ರವರು.

ಚೀಫ್‌ಕೋರ್ಟಿನ ಜಡ್ಜಿಗಳು.— ಮ॥ ಗಳಾದ ಎಸ್. ವಿ. ನಂಜುಂಡಯ್ಯನವರು ಚೀಫ್ ಜಡ್ಜರು; ಕೆ. ಎಸ್. ಚಂದ್ರಶೇಖರಯ್ಯರ್‌ರವರು ೨ ನೆಯ ಜಡ್ಜರು; ಮ॥ ಆರ್. ಬಿ. ಪ್ಲಚರ್‌ರವರು ೩ ನೆಯ ಜಡ್ಜರು.

ಶಾಖಾಧಿಕಾರಿಗಳು.— ಮ॥ ಗಳಾದ ಎಂ. ಕಾಂತರಾಜ ಅರಸಿನವರು ರೆವಿನ್ಯೂ ಕಮಿಷನರು; ಟಿ. ಪರಮಶಿವಯ್ಯರ್‌ರವರು ಎಕ್ಸೈಜ್ ಕಮಿಷನರವರು; ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂ. ಎ., ಯವರು ವಿದ್ಯಾಭ್ಯಾಸದ ಇ ಜನರಲ್‌ರವರು; ಜಿ. ಚಕ್ರವರ್ತಿಯವರು ಕಂಟ್ರೋಲರು; ಕೆ. ಶ್ರೀನಿವಾಸರಾಯರು ಸರ್ವೆ ಸೂಪರಿಂಟೆಂಡೆಂಟರು; ಡಾಕ್ಟರ್ ಪಿ.ಎಸ್. ಅಚ್ಯುತರಾಯರು ಸೀನಿಯರ್ ಸರ್ಜನರು; ಮೇಜರ್ ಫೋರ್ಸ್ ಐ. ಎಂ. ಎಸ್., ರವರು ದರ್ಬಾರ್ ಸರ್ಜನರು; ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ಚೀಫ್ ಸೆಕ್ರೆಟರಿ ಮತ್ತೂ ಬಿ. ರಾಮಸ್ವಾಮಯ್ಯನವರು ಮುಜರಾಯಿ ಸೂಪರಿಂಟೆಂಡೆಂಟರು.

ಡಿಸ್ಟ್ರಿಕ್ಟ ಜಡ್ಜಿಯವರುಗಳು.— ಮ॥ ಹಂಜಾಹುಸೇನರವರು, ಬೆಂಗಳೂರು; ಎ. ಎ. ರಾಜರತ್ನ ಮೊದಲಿಯಾರರು ಶಿವಮೊಗ್ಗೆ ಮತ್ತೂ ಸಿ. ಎಸ್. ದೊರಸಾಮಯ್ಯರ್‌ರವರು ಮೈಸೂರು.

ಡೆಪ್ಯುಟಿ ಕಮಿಷನರುಗಳು.— ಮ॥ ಗಳಾದ ಬಿ. ಜಿ. ಕುಮಾರಸ್ವಾಮಿನಾಯಕರು, ಶಿವಮುಗ್ಗ; ಮ॥ ಕೆ. ಚಾಂಡಿಯವರು, ಬೆಂಗಳೂರು; ಎ. ಆರ್. ತ್ಯಾಗರಾಜ ಅಯ್ಯರ್‌ರವರು, ಹಾಸನ; ಎಂ. ಕಾಮರಾಯರು, ತುಮಕೂರು; ಎ. ಸುಬ್ರಹ್ಮಣ್ಯಯ್ಯರ್‌ರವರು, ಕಡೂರು; ಮ॥ ಪಿ. ಎಫ್. ಬೌರಿಂಗ್‌ರವರು, ಕೋಲಾರ; ಕೆ. ಎಸ್. ಕೃಷ್ಣಯ್ಯರ್‌ರವರು, ಮೈಸೂರು ಮತ್ತೂ ಮ॥ ಕೆ. ಮೆಥ್ಯಾರವರು ಚಿತ್ರಕಲ್‌ದುರ್ಗ.

ಸಬ್ ಜಡ್ಜಿಗಳು.— ಮ॥ ಗಳಾದ ಬಿ. ನಾಗಪ್ಪನವರು ಮೈಸೂರು; ಎಲ್. ಹಿರಣ್ಣಯ್ಯನವರು, ಬೆಂಗಳೂರು ಮತ್ತೂ ಕೆ. ಮೈಲಾರಿರಾಯರು ಶಿವಮೊಗ್ಗ.

ವೈಸ್ ಪ್ರೆಸಿಡೆಂಟರುಗಳು.— ಮ॥ ಗಳಾದ ಎ. ಮಾಧವರಾಯರು, ಮೈಸೂರು ಮತ್ತೂ ಶಿರ್ಶಿ ಆನಂದರಾಯರು ಬೆಂಗಳೂರು.

ಅರಮನೆಯಾಫೀಸರು.—ಮ॥ ಬಿ. ವೆಂಕೋಬರಾಯರು

ಸಿಟಿ ಮ್ಯಾಜಿಸ್ಟ್ರೇಟರುಗಳು.— ಮ॥ ಗಳಾದ ಟಿ. ಚೊಕ್ಕಣ್ಣನವರು, ಮೈಸೂರು ಮತ್ತೂ ರಂಗನಾಥರಾವ್ ಸಾಹೇಬರು, ಬೆಂಗಳೂರು.

ದಿವಾನರ ಪ್ರೈವೇಟ್ ಸೆಕ್ರೆಟರಿ.— ಮ॥ ಕೆ. ಎಸ್. ರಾಮಸ್ವಾಮಯ್ಯರ್, ಬಿ. ಎ., ಬಿ. ಎಲ್., ರವರು

ಅಂಡರ್ ಸೆಕ್ರೆಟರಿಗಳು.— ಮ॥ ಜಿ. ಆರ್ವಮುದಂ ಅಯ್ಯಂಗಾರರು ಮತ್ತೂ ಮ॥ ಪಿ. ಡಿಸೌಜಾಯವರು.

ಅಸಿಸ್ಟೆಂಟ್ ಸೆಕ್ರೆಟರಿಗಳು.— ಮ॥ಗಳಾದ ಎಸ್. ಪಿ. ರಾಜಗೋಪಾಲಾಚಾರ್ಯರು, ಎ. ವಿ. ರಾಮನಾಥ ಮತ್ತೂ ಎ. ಅನಂತರಾಮಯ್ಯರವರುಗಳು.

ಗೌರ್ನಮೆಂಟ್ ಅಡ್ವೊಕೇಟರು.— ಬ್ಯಾರಿಸ್ಟರ್ ಮ॥ ಬಿ. ಲಾರೆನ್ಸ್‌ರವರು.

ಕೋ ಆಪರೇಟೀವ್ ಸೊಸೈಟಿಗಳ ರೆಜಿಸ್ಟ್ರಾರರು.— ಮ॥ ಎಂ. ಎ. ನಾರಾಣಯ್ಯಂಗಾರರು. (ಡೆಪ್ಯುಟಿಕಮಿಷನರ ತರಗತಿ).

ಮ॥ಗಳಾದ ಟಿ. ಗೋವಿಂದರಾಯರು ಮೈಸೂರ [illegible] ಅಸಿಸ್ಟೆಂಟರು, ಎಂ. ಜಿ. ಕೃಷ್ಣಸ್ವಾಮಿರಾಯರು ಎಕ್ಸೈಜ್ ಅ॥ ಕಮಿಷನರು, ಮತ್ತೂ ಅಸಿಸ್ಟೆಂಟ್ ಕಮಿಷನರುಗಳಲ್ಲಿ ಬಹು ವರ್ಗಾವರ್ಗಗಳಾಗುವುವು. ([illegible])

ಮೈಸೂರ್ ಗೆಜೆಟ್ ಸಂಗ್ರಹವು.

ಅಫಿಸಿಯೇಟಿಂಗ್ ರೆವಿನ್ಯೂ ಕಮಿಷನರ್ ಮ॥ ಕೆ. ಎಸ್. ದೊರೆಸ್ವಾಮಯ್ಯರ್‌ರವರಿಗೆ ಈ ತಾ॥ ೧೯ ರಿಂದ ೩ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಕಡೂರ ಡಿ॥ ಪೊಲೀಸು ಸೂಪರಿಂಟೆಂಡೆಂಟ್ ಮ॥ ಎಸ್. ಮಲ್ಲಾರಿಯವರಿಗೆ ೧೯೧೩ ನೆಯ ಏಪ್ರಿಲ್ ತಾ॥ ೧ ರಿಂದ [illegible] ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದರಿಂದ [illegible] ಮ॥ ಅಮಲ್ದಾರ್ ಮ॥ ಎಸ್. [illegible] ಬಿ. ಎ. [illegible] ಡಿಸ್ಟ್ರಿಕ್ಟ್ [illegible]

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆ ಕಾಲದೊಳ್ ಮಂತ್ರಿಯಾದ ವಜ್ರದಂಷ್ಟ್ರನು ಮನದೊಳ್ ಯೋಚಿಸಿದನು— ಈ ರಾಕ್ಷಸಾಧಿಪತಿಯು ಅವಿವೇಕನುಂ ಗಳಂ ಲೆಕ್ಕಿಸದೆ ಮತ್ತೂ ಹಿತವಾದ ನನ್ನ ಮಾತುಗಳಂ ಕೇಳದೆ, ದೇವತೆಗಳಂ ಪರಿಪರಿಯಾಗಿ ಬಾಯಿಗೆ ಬಂದಂತೆ ಬೊಗಳುತ ಅಹಂಕಾರದಿಂದಿರುವನು. ಆದುದರಿಂದ ಇವನಿಗೆ ಮೃತಿಕಾಲವು ಸಮೀಪಿಸಿರುವುದಾಗಿ ತೋರುತ್ತಲಿದೆ. ಇಂತಪ್ಪ ಸಾಮರ್ಥ್ಯವುಳ್ಳವಂಗೆ ಎಂತು ವಿಪತ್ತು ಸಂಭವಿಸುವುದೆಂದು ಯೋಚಿಸಿದರೆ, ಈತನು ಬಲಾತ್ಕಾರದಿಂ ತಂದಿರುವ ಕುಸುಮಲತೆಯ ಮೂಲಕವಾಗಿಯೇ ವಿಪತ್ತು ಉಂಟಾಗುವುದು. ಆದುದರಿಂ ಈಗ ನಮ್ಮ ಕುಲದೇವತೆಯಾದ ನಿಕುಂಭಿಲಾ ದೇವಿಯ ಕಟಾಕ್ಷದಿಂದಲೇ ಕ್ಷೇಮವಾಗಬೇಕಲ್ಲದೆ ಮತ್ತೊಂದು ಸಾಧನವಿಲ್ಲವೆಂದು ಚಿಂತಿಸುತ ಸಂಗಡಬರುತ್ತಿರಲು, ಜಯಮಾರುತನು ತನ್ನ ಬಲಸಮೇತನಾಗಿ ಸುರೆಯು ತಲೆಗೇರಿ ಮನಬಂದಂತೆ ಕೂಗುತ ಬಂದು ಜಲಾವರಣದ ಸಮೀಪದೊಳ್ ನಿಂತು ಅಲ್ಲಿ ಸತ್ತುಬಿದ್ದಿರುವ ರಾಕ್ಷಸರ ಸಮೂಹವಂ, ಆ ಆವರಣದೊಳ್ ಬಿಂದುಮಾತ್ರ ಜಲವಿಲ್ಲದೆ ಇರುವುದಂ ಕಂಡು ನೋಡಿ, ವಜ್ರದಂಷ್ಟ್ರನಂ ಕುರಿತು, ಎಲೈ ಬುದ್ಧಿಶಾಲಿಯಾದ ಮಂತ್ರಿಯೆ ! ನೀನು ಪೇಳಿದಂತೆ ಅನರ್ಥವಾಗಿಯೇ ಇರುವುದು. ಆದುದರಿಂ ಈರ್ವ ಚಾರರಂ ಕಳುಹಿ ಪಟ್ಟಣದೊಳ್ ಏನಾಗಿರುವುದೋ ಆ ಸಮಾಚಾರವಂ ತರಿಸುವುದೆಂದು ನುಡಿಯಲು, ಆಗ ಮಂತ್ರಿಯು ಉಲೂಕ ಶಂಕರರೆಂಬ ಈರ್ವ ಚಾರರಂ ಕರೆದು ಪಟ್ಟಣವಂ ಪೊಕ್ಕು ಅಲ್ಲಿಯ ಸಮಾಚಾರವಂ ತಿಳಿದು ತಡಮಾಡದೆ ಬೇಗಬರುವುದೆಂದು ಕಟ್ಟುಮಾಡಿ ಕಳುಹಲು, ಆ ಉಲೂಕಶಂಕರರು ಅಪ್ಪಣೆಯೆಂದು ಹೊರಟು ಪಕ್ಷಿ ರೂಪಗಳಂ ತಾಳಿ ಪಟ್ಟಣವಂ ಪ್ರವೇಶಿಸಿ ಅಲ್ಲಲ್ಲಿ ನೋಡುತ್ತಿರಲು, ಛಾಯಾಗುಪ್ತನು ಅದಂ ತಿಳಿದು ಸುಗಂಧರಾಜೇಂದ್ರಂಗೆ ಬಿನ್ನವಿಸಲು, ಅದಂ ಕೇಳಿ ರಾಜೇಂದ್ರನು ಅವರಂ ನೀನೇ ಪಿಡಿದು ತರುವುದೆಂದಾಜ್ಞಾಪಿಸಲು, ಛಾಯಾಗುಪ್ತನು ಅವರ ನೆಳಲ್ಲಿಯೇ ಪೋಗಿ ಇರ್ವರಂ ಎರಡು ಕೈಗಳಿಂದ ಪಿಡಿದುಕೊಂಡು ಬರಲು, ಪಕ್ಷಿರೂಪದಿಂದಿರುವ ಆ ದೂತರು ಯಕ್ಷನ ಹಿಡಿತವಂ ಸೈರಿಸಲಾರದೆ ಎಂದಿನಂತೆ ರಾಕ್ಷಸರಾಗಲು, ಯಕ್ಷನು ಆ ಇರ್ವ ರಾಕ್ಷಸ ಚಾರರಂ ರಾಜೇಂದ್ರನ ಬಳಿಗೆ ಕರೆತರಲು, ರಾಜೇಂದ್ರನು ಅವರುಗಳನ್ನು ನೋಡಿ, ಎಲೈ ದುಷ್ಟರಾದ ದಾನವರುಗಳಿರಾ ! ಕೇಳಿ— ನಿಮಗೆ ಅರಸಾದ ಜಯಮಾರುತನೊಡನೆ ಕರ್ನಾಟ ದೇಶಾಧಿಪತಿಯಾದ ಸುಗಂಧರಾಜೇಂದ್ರನೆಂಬ ಅರಸು ಯುದ್ಧಾರ್ಥಿಯಾಗಿ ಬಂದಿರುವನು ; ನಿಮ್ಮಂ ಸಂಹರಿಸುವನೆಂದು ಪೇಳುವುದು. ಅಲ್ಲದೆ ದೂತಕಾರ್ಯಕ್ಕೆ ಬಂದವರಂ ಸಂಹರಿಸಲು ಯುಕ್ತವಲ್ಲವೆಂದು ಶಾಸ್ತ್ರವಿರುವುದರಿಂದ ನಿಮ್ಮನ್ನು ಸಂಹರಿಸುವುದಿಲ್ಲವೆಂದು ನುಡಿದು, ಎಲೈ ಛಾಯಾಗುಪ್ತನೆ ! ಇವರುಗಳ ಮೂಗುಗಳಂ ಕುಯಿದು ಕಳುಹುವವನಾಗೆಂದು ಆಜ್ಞಾಪಿಸಲಾ ಛಾಯಾಗುಪ್ತನು ಅದೇ ರೀತಿಗೆ ಅವರ ಮೂಗುಗಳಂ ಕುಯಿದು ಮರಳಿ ಕಳುಹಿಸಲು, ಅವರಿರ್ವರೂ ಪ್ರಾಣಮಾತ್ರ ಉಳಿಯಿತೇ ಎಂದು ಗಡಗಡನೆ ನಡುಗುತ ಓಡಿಬರುವುದಕ್ಕೆ ಕಾಲುಬಾರದೆ, ಹಿಂತಿರುಗಿ ಭಯದಿಂ ನೋಡುತ್ತ, ತಮ್ಮ ಸೇನೆಯಿರುವ ಬಳಿಗೆ ಬಂದು ಎಲ್ಲರನ್ನು ನೋಡಿ ಅಳುತ, ಅರಸಾದ ಜಯಮಾರುತನ ಬಳಿಯನೈದಿ ಸಾಷ್ಟಾಂಗ ನಮಸ್ಕಾರವಂ ಮಾಡಿ ಎದ್ದುನಿಂತು ಗದ್ಗದ ಸ್ವರದಿಂದ ಸುಗಂಧರಾಜೇಂದ್ರನು ಪೇಳಿದ ಮಾತುಗಳಂ ಪೇಳಿದೊಡೆ ಇವನೇನು ಮಾಡುವನೋ ಎಂದು ಭಯದಿಂ ಕೊಂಚಕೊಂಚವಾಗಿ ಪೇಳಲು, ಆಗ ಜಯಮಾರುತನು ಈ ದೂತರುಗಳ ಮೂಗು ಕುಯ್ದಿರುವುದಂ ನೋಡಿ ಅವರು ಕೇಳಿದ ಮಾತುಗಳಂ ಕೇಳಿ ಕೋಪೋದ್ದೀಪಿತನಾಗಿ ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ, ಕಟಕಟನೆ ಹಲ್ಲುಗಳಂ ಕಡಿಯುತ್ತ, ಕೆಮ್ಮೀಸೆಗಳಂ ಕುಣಿಸುತ್ತ, ಕಾಲಾಗ್ನಿಯಂತೆ ಉರಿಯುತ್ತ, ಕ್ರೋಧವೇ ಮೂರ್ತೀಭವಿಸಿ ಬಂದಂತೆ ತೋರುತ್ತ, ಎಲೈ ಉಲೂಕಶಂಕರುಗಳಿರಾ ! ಆ ನರಾಧಮನು ನಿಮಗೆ ಈ ಪರಿಯಾಗಿ ಮೂಗುಗಳಂ ಕುಯಿದು ಅವಮಾನವಂ ಮಾಡಿದನೆ? ಅವನ ತಲೆಯನ್ನೇ ಕುಯಿದು ನಿಮಗೆ ಆಹಾರವನ್ನಾಗಿ ಕೊಡುವೆನೆಂದು ಪೇಳಿ, ಆಭರಣಗಳಿಂದಲೂ, ಕೆಲವು ಪ್ರತಾಪದ ಮಾತುಗಳಿಂದಲೂ ಅವರಂ ಸಂತೋಷಗೊಳಿಸಿ, ಮಂತ್ರಿಯನ್ನು ನೋಡಿ, ಮನುಷ್ಯರಲ್ಲಿ ಇಂತಹ ಸಾಹಸವಂತರುಂಟೆ? ಎಂದು ನುಡಿಯುತ್ತ, ಈ ಆವರಣಂಗಳಂ ಯಾವ ಬಲದಿಂದ ಹೀಗೆ ಮಾಡಿರುವನೋ ಎಂದು ನುಡಿಯಲು, ಆ ಮಾತಿಗೆ ವಜ್ರದಂಷ್ಟ್ರನು ಎಲೈ ರಾಕ್ಷಸೇಶ್ವರನೇ ! ಕೇಳು— ವಾಯುವ್ಯಾಸ್ತ್ರದಿಂದ ಜಲಾವರಣವಂ ಶೋಷಣಂಗೈಸಿ, ಅಗ್ನ್ಯಾವರಣವಂ ವಾರುಣಾಸ್ತ್ರದಿಂದ ಅಡಗಿಸಿ, ಸರ್ಪಾವರಣವಂ ಗಾರುಡಾಸ್ತ್ರದಿಂ ನಾಶಗೊಳಿಸಿ, ಸಿಂಹಾವರಣವಂ ಶರಭಾಸ್ತ್ರದಿಂದ ಸಂಹಾರವಂ ಮಾಡಿದ ಬಳಿಕ ರಾಕ್ಷಸಾವರಣವಂ ಸ್ತಂಭನಾಸ್ತ್ರದಿಂದ ಸ್ತಬ್ಧವನ್ನಾಗಿ ಮಾಡಿರುವಂತೆ ಕಾಣುತ್ತಿದೆ. ಈ ಸ್ತಂಭನಾಸ್ತ್ರಕ್ಕೆ ಪ್ರತೀಕಾರವಾದ ಅಸ್ತ್ರವಿದ್ದರೆ ಪ್ರಯೋಗಿಸಿ ರಾಕ್ಷಸರಂ ಎಬ್ಬಿಸಬಹುದೆಂದು ವಿಜ್ಞಾಪನೆಯಂ ಗೈಯಲು, ಆಗ ಜಯಮಾರುತನು ತನ್ನ ಪೆಗಲೊಳಿರ್ದ ಧನುಸ್ಸಂ ತೆಗೆದು ಬಾಣಸಂಧಾನವಂ ಗೈದು ಪ್ರಜ್ಞಾಸ್ತ್ರನಂ ಅಭಿಮಂತ್ರಿಸಿ ಬಿಡಲು, ಆ ರಾಕ್ಷಸರೆಲ್ಲರೂ ನಿದ್ರೆಯಿಂ ತಿಳಿದು ಎಚ್ಚತ್ತು ಸುತ್ತಲೂ ಬಿದ್ದಿರುವ ತಂತಮ್ಮ ಆಯುಧಗಳಂ ಎತ್ತಿಕೊಂಡು ಎಲಾ ಮನುಷ್ಯಮಾತ್ರದವನು ಕಾಪಟ್ಯಕೃತ್ಯದಿಂದ ಬಂದು ನಮ್ಮೆಲ್ಲರಂ ಈ ಪರಿಯಾಗಿ ಮೋಸದಿಂದ ಜಯಿಸಿ ನಮಗೆ ಅರಸಾದ ರಾಕ್ಷಸೇಶ್ವರನಿಲ್ಲದೇ ಇರುವ ಸಮಯದೊಳ್ ಅರಮನೆಯಂ ಪೊಕ್ಕು ಏನೇನು ಮಾಡಿರುವನೋ ತಿಳಿಯಲಿಲ್ಲ. ನಾವು ಕಾವಲಾಗಿದ್ದುದು ವ್ಯರ್ಥವಾಯಿತೆಂದು ಎಲ್ಲರೂ ಗುಂಪಾಗಿ ಬ್ರಹ್ಮಾಂಡವು ಒಡೆಯುವಂತೆ ಆರ್ಭಟಿಸುತ ಬರುತ್ತಿರಲು, ಆ ಶಬ್ದವಂ ಕೇಳಿ ಸುಗಂಧರಾಜೇಂದ್ರನು ಇದೇನು ? ಸಮುದ್ರವೇ ಮೇರೆದಪ್ಪಿ ಘೋರಿಡುತ್ತ ಬರುತ್ತಿರುವುದೋ ಎಂಬಂತೆ ಎದಿರುಬರುವ ರಾಕ್ಷಸರ ಸೇನೆಯಂ ನೋಡಿ ಯಕ್ಷನ ಮೇಲೆ ಕುಳಿತು ನಾನಾವಿಧ ಬಾಣಂಗಳಿಂದ ಆ ರಾಕ್ಷಸಬಲಂಗಳಂ ಸಂಹರಿಸಲು, ದೆಂಕಿಯಂ ಸೋಂಕಿದ ಮದ್ದಿನರಾಸಿಯಂತೆ ನಿಮಿಷದೊಳ್ ಮಡಿದ ರಾಕ್ಷಸರಂ ಕಂಡು, ಜಯಮಾರುತನು ತನ್ನ ಸಮೀಪದೊಳಿರುವ ಮಹಾಬಲಶಾಲಿಗಳಾದ ಮೈಗಾವಲು ರಾಕ್ಷಸರಂ ಕಳುಹಿಸಲು, ಅವರು ಎಂಭತ್ತುನಾಲ್ಕುಲಕ್ಷ ಜೀವರಾಶಿಗಳರೂಪವಂ ಬೇರೆಬೇರೆ ಧರಿಸಿ, ಏಕವಾಗಿ ಸುತ್ತುವರಿದು ಕವಿದುಕೊಂಡಿರುವ ಅಂಧಕಾರಂಗಳು ಸೂರ್ಯನಂ ಕವಿದಂತೆ ಸುಗಂಧರಾಜೇಂದ್ರನಂ ಕವಿದು ಜಯಿಸುವೆವೆಂದು ಬರುತ್ತಿರಲು, ಸುಗಂಧರಾಜೇಂದ್ರನು ಈ ವಿಚಿತ್ರವಾದ ರೂಪಂಗಳಂ ಕಂಡು ಇವರೆಲ್ಲರೂ ರಾಕ್ಷಸರೆಂದು ತಿಳಿದು, ಒಂದೊಂದು ಜಾತಿಗೆ ಒಂದೊಂದು ಪರಿಯಾದ ಬಾಣಗಳಂ ಪ್ರಯೋಗಿಸಲು, ಆ ರಾಕ್ಷಸರು ಇದಿರಾಗಿ ಬರುವ ಈ ಬಾಣಗಳಂಪಿಡಿದು ಮುರಿಯುವವರು ಕೆಲಂಬರು; ತಪ್ಪಿಸಿಕೊಳ್ಳುವವರು ಕೆಲಂಬರು; ಅವುಗಳಿಂದಲೇ ಪ್ರತಿಯಾಗಿ ಯಕ್ಷನನ್ನೆಯಿಸುವವರು ಕೆಲಂಬರು ; ಆ ಬಾಣಂಗಳಂ ನುಂಗುವವರು ಕೆಲಂಬರು, ಇಂತು ಇದಿರುಬೀಳಲು ಸುಗಂಧರಾಜೇಂದ್ರನು ಮಹಾಕೋಪಗೊಂಡು ಈ ಬಾಣಗಳಿಂದ ಇವರು ತಗ್ಗುವರಲ್ಲವೆಂದು ತಿಳಿದು, (ಸಶೇಷ)

ದನಕರುಗಳ ಕೆಮ್ಮು.

ಈ ರೋಗವು ಯಾವ ಕಾಲದಲ್ಲಾದರೂ ದನಕರುಗಳಿಗೆ ತಗಲುವುದುಂಟು; ಆದರೆ ಇತರ ಪ್ರಾಣಿಗಳಿಗೆ ಇದರ ತೊಂದರೆಯಿಲ್ಲ. ದೊಡ್ಡ ದೊಡ್ಡ ಮಂದೆಗಳಲ್ಲಿ ಈ ರೋಗವು ತಲೆದೋರಿದರೆ ಏಕಕಾಲದಲ್ಲಿ ಅನೇಕ ದನಗಳಿಗೆ ತಗಲುವಕಾರಣ ಇದಕ್ಕೆ ಮಾರೀರೋಗವೆಂದು ಹೆಸರಿಟ್ಟಿರುವರು. ಮಾರಿ ಅಂದರೆ ಮರಣವೆಂದು ಹೇಳಬಹುದು. ಕೆಲವು ವೇಳೆ ರೋಗವು ಸುಲಭವಾಗಿ ವಾಸಿಯಾಗುತ್ತದೆ; ಮತ್ತೆ ಕೆಲವು ಸಂದರ್ಭಗಳಲ್ಲಿ ರೋಗ ತಗಲಿದ ದನವು ನಾಲ್ಕು ತಿಂಗಳವರೆಗೂ ನರಳುವುದುಂಟು.

ಇದೂ ಒಂದು ಅಂಟು ಜಾಡ್ಯವು. ರೋಗವು ತಲೆದೋರಿದ ಸಮಯದಲ್ಲಿ ಮಂದೆಯನ್ನು ಚದರಿಸಿ ದನಗಳನ್ನು ಒಂಟೊಂಟಿಯಾಗಿ ಬೇರೆ ಬೇರೆ ಸ್ಥಳಗಳಲ್ಲಿ ಕಟ್ಟಿಹಾಕಿದರೆ ಅವಕ್ಕೆ ರೋಗವು ತಗಲುವುದಿಲ್ಲ.

ಲಕ್ಷಣ:—ಯಾವುದಾದರೊಂದು ದನಕ್ಕೆ ರೋಗವು ತಗಲುವುದಕ್ಕೆ ಕೆಲವು ದಿನಗಳಿಗೆ ಮುಂಚೆ ಅದು ಬಹಳ ದಪ್ಪನಾಗಿ ತಿನೆಯಾಗಿರುವಂತೆ ಕಂಡುಬರುವುದು. ರೋಗವು ತಗಲಿದೊಡನೆಯೆ ದನವು ನಡಗುವುದು, ಬಾಯಿ ಬಿಸಿಯಾಗುವುದು, ಮೂಗಿನ ಹೊಳ್ಳೆಗಳಲ್ಲಿ ದ್ರವವಿಲ್ಲದಂತಾಗುವುದು, ಅನಂತರ ಕೆಮ್ಮು ಪ್ರಾರಂಭವಾಗಿ ಹಸಿವು ನಿಂತುಹೋಗುವುದು ಕರೆಯುವ ಹಸುವಾದರೆ ಹಾಲು ಬಹಳ ಕಡಿಮೆಯಾಗಿ ಒಂದೆರಡು ದಿನಗಳ ಅನಂತರ ಜ್ವರವು ಬರುವುದು. ದನವು ಉಸಿರಾಡುವಾಗ ಮೂಗಿನ ಹೊಳ್ಳೆಗಳು ಅರಳುವುವು ಮತ್ತು ದನವು ನರಳುವುದು ಅಲ್ಲದೆ ಎದೆಯಲ್ಲಿ ನೋವಿರುವಂತೆ ಕಂಡುಬರುವುದು; ಹೊಟ್ಟೆಯು ಊದಿಕೊಳ್ಳುವುದು. ಜ್ವರವು ಕಡಿಮೆಯಾಗುತ್ತಾ ಬಂದರೂ ಉಸಿರಾಡುವುದು ಬಹಳ ಕಷ್ಟವಾಗಿ ಕೊನೆಗೆ ಪ್ರಾಣಿಯು ಉಸಿರುಕಟ್ಟಿ ಸತ್ತುಹೋಗುವುದು. ರೋಗವು ಬಹಳ ಪ್ರಬಲವಾಗಿದ್ದರೆ ದನವು ರೋಗ ತಗಲಿದ ಎಂಟು ಹತ್ತು ದಿನಗಳಲ್ಲಿ ಸಾಯುವುದು; ಇಲ್ಲದಿದ್ದರೆ ಮೂರು ತಿಂಗಳಕಾಲ ಬದುಕಿರಬಹುದು.

ಚಿಕಿತ್ಸೆ:—ಈ ರೋಗವು ಔಷಧದಿಂದ ಗುಣವಾಗುವುದು ಕಠಿಣ. ಇದು ಅಂಟು ಜಾಡ್ಯವೆಂಬುದನ್ನು ಮಾತ್ರ ಜನರು ಮರೆಯದೆ ರೋಗವು ಗ್ರಾಮದ ದನಗಳಿಗೆಲ್ಲಾ ವ್ಯಾಪಿಸದಂತೆ ನೋಡಿಕೊಳ್ಳಬೇಕು. ರೋಗ ತಗಲಿದ ದನವನ್ನು ಕೂಡಲೆ ದೂರವಾಗಿಟ್ಟು ಅದಕ್ಕೆ ಉಪಚಾರಮಾಡಲು ಗೊತ್ತುಮಾಡಲ್ಪಟ್ಟಿರುವವನು ಇತರ ದನಗಳ ಸಮೀಪಕ್ಕೆ ಹೋಗದಂತೆ ಕಟ್ಟುಮಾಡಬೇಕು. ರೋಗದ ದನಗಳಿಗೆ ಬಹಳ ಎಚ್ಚರಿಕೆಯಿಂದ ಉಪಚಾರಮಾಡಬೇಕು. ಕೊಟ್ಟಿಗೆಯು ಬಹಳ ಶುಚಿಯಾಗಿಯೂ ಮತ್ತು ಗಾಳಿಯ ಸಂಚಾರಕ್ಕೆ ಅನುಕೂಲವಾಗಿಯೂ ಇರಬೇಕು. ಮೃದುವಾದ ಹಸುರು ಹುಲ್ಲನ್ನು ತಿನ್ನಿಸಿ ದನವು ಕುಡಿಯುವಷ್ಟು ನಿರ್ಮಲವಾದ ನೀರನ್ನು ಕುಡಿಸಬೇಕು. ಒಣ ಹುಲ್ಲನ್ನಾಗಲಿ ಅಥವಾ ಬತ್ತದ ಹುಲ್ಲನ್ನಾಗಲಿ ಖಂಡಿತವಾಗಿಯೂ ತಿನ್ನಿಸಕೂಡದು. ಜ್ವರಬಂದ ಕಾಲದಲ್ಲಿ ಕೆಳಗೆ ಹೇಳುವ ಔಷಧಿಯನ್ನು ಕುಡಿಸಬೇಕು. ಎರಡು ತೊಲೆ ಕರ್ಪೂರ, ಎರಡು ತೊಲೆ ಕಡ್ಡುಪ್ಪು, ಒಂದು ತೊಲೆ ದತ್ತೂರಿ ಬೀಜದ ಪುಡಿ ಇವು ಮೂರನ್ನು ಅರ್ಧ ಚಟಾಕು ಹೆಂಡದಲ್ಲಿ ಕದಡಿ ಕುಡಿಸಬೇಕು. ಮಲವು ಬದ್ಧಿಸಿದ್ದರೆ ॥ ಪಾವು ಉಪ್ಪು ೧॥ ಚಟಾಕು ಗಂಧಕದಪುಡಿ, ೧॥ ತೊಲೆ ಒಣಶುಂಠಿಪುಡಿ ಇವುಗಳನ್ನು ೧॥ ಚಟಾಕು ಕಾಕಂಬಿಯಲ್ಲಿ ಬೆರಸಿ ಕುಡಿಸಬೇಕು.

ಜ್ವರವು ನಿಂತವೇಲೆ ೧। ತೊಲೆ ಮೈಲುತುತ್ತ ಮತ್ತು ೧।ತೊಲೆ ಜೆರಾಯಿತದ ಪುಡಿಯನ್ನು ಅಕ್ಕಿಯ ಗಂಜಿಯೊಡನೆ ಬೆರಸಿ ಕುಡಿಸಬೇಕು. ಕೆಮ್ಮು ಬಹಳ ಹೆಚ್ಚಾಗಿ ಉಸಿರಾಡುವುದಕ್ಕೆ ತೊಂದರೆಯಾದರೆ, ಒಂದು ಹಳೆಯ ಕಂಬಳಿ ಚೂರನ್ನು ಬಿಸುನೀರಲ್ಲಿ ಅದ್ದಿ ಎದೆಗೆ ಶಾಕವನ್ನು ಕೊಟ್ಟು ಅನಂತರ ಒಣಗಿದ ಬಟ್ಟೆಯಿಂದ ಚೆನ್ನಾಗಿ ಒರಸಬೇಕು.

ಎಮ್ಮೆ.

ಎಮ್ಮೆಗಳಿಂದ ಆರಂಬಗಾರರಿಗೆ ಬಹಳ ಪ್ರಯೋಜನವುಂಟೆಂಬುದನ್ನು ಎಷ್ಟು ಹೇಳಿದರೂ ಕೊಂಚವೇ ಆಗುತ್ತದೆ. ಹೀಗಿದ್ದರೂ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಪಡಿಸಲು ನಾವು ಸ್ವಲ್ಪವೂ ಪ್ರಯತ್ನಪಡದಿರುವುದು ಬಹಳ ಅನ್ಯಾಯವೇಸರಿ. ಹಾಲು ಕೊಡತಕ್ಕ ವಿಷಯದಲ್ಲಿ ಎಮ್ಮೆಯು ಯೂರೋಪುದೇಶದ ಹಸುಗಳಿಗೆ ಹೆಚ್ಚು ಕಡಿಮೆ ಸಮಾನವಾಗಿದೆ, ಮತ್ತು ಇಂಡಿಯಾ ದೇಶದ ದನಕರುಗಳಲ್ಲೆಲ್ಲಾ ಎಮ್ಮೆಯನ್ನು ಸಾಕುವುದು ಅತಿಸುಲಭವು. ಇಂಡಿಯಾ ದೇಶದ ಬಹಳ ಶ್ಲಾಘ್ಯವಾದ ತಳಿಯ ಹಸುವು ಸಹಾ ಒಂದು ಸಾಧಾರಣವಾದ ಎಮ್ಮೆಯಷ್ಟು ಹಾಲು ಕೊಡುವುದಿಲ್ಲ. ಅಲ್ಲದೆ ಎಮ್ಮೆಯು ಯಾವ ಮೇವನ್ನು ಹಾಕಿದರೂ ತಿನ್ನುವುದಲ್ಲದೆ ಹಗಲು ಮತ್ತು ರಾತ್ರಿ ಎರಡು ವೇಳೆಗಳಲ್ಲೂ ಮೇಯುವುದು. ಹಸುವಿಗೆ ಕಸಕಡ್ಡಿಯಿಂದ ಕೂಡಿದ ಕಶ್ಮಲವಾದ ಮೇವನ್ನು ತಿನ್ನಿಸಕೂಡದು; ಎಮ್ಮೆಗಾದರೋ ಯಾವ ಮೇವನ್ನಿ ಬೇಕಾದರೂ ಹಾಕಬಹುದು. ಎಮ್ಮೆಯ ಹಾಲಿನಲ್ಲಿ ಹಸುವಿನ ಹಾಲಿಗಿಂತ ಹೆಚ್ಚು ಬೆಣ್ಣೆಯು ಸಿಕ್ಕುವುದು. ಅಂತೂ ವರುಷಕ್ಕೆ ಒಂದು ಎಮ್ಮೆಯಿಂದ ೪೦ ರೂಪಾಯಿ ವರಮಾನವು ದೊರೆಯುವುದೆಂದು ಹೇಳಬಹುದು. ಹೀಗಿದ್ದರೂ ಬೀಜಕ್ಕೆ ಅತ್ಯುತ್ತಮವಾದ ತಳಿಗಳ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳಿಂದ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಲು ಯಾರೂ ಸ್ವಲ್ಪವೂ ಪ್ರಯತ್ನಪಟ್ಟಿಲ್ಲ. ಗಾಡಿಗಳನ್ನೆಳೆದು ಅರ್ಧಜೀವವಾಗಿರುವ ಕೋಣಗಳನ್ನೆಲ್ಲಾ ಬೀಜಕ್ಕೆ ಉಪಯೋಗಿಸುವರು. ಹೀಗೆ ಮಾಡುವುದರಿಂದ ಎಮ್ಮೆಗಳು ದಿನೇ ದಿನೇ ಕ್ಷೀಣಗತಿಯನ್ನು ಹೊಂದುವುವು.

ದಿನ ಒಂದಕ್ಕೆ ನಾಲ್ಕು ಸೇರು ಮೊದಲ್ಗೊಂಡು ನಲವತ್ತು ಸೇರಿನ ವರೆಗೂ ಹಾಲು ಕೊಡತಕ್ಕ ಅನೇಕ ತರದ ಎಮ್ಮೆಯ ತಳಿಗಳಿವೆ. ಯಾವುದಾದರೊಂದು ಗ್ರಾಮದಲ್ಲಿ ನಾಲ್ಕು ಸೇರು ಹಾಲನ್ನು ಕರೆಯುವ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಿ, ೧೬ ಸೇರು ಹಾಲು ಕರೆಯುವ ತಳಿಗಳನ್ನಾಗಿ ಮಾಡಿದರೆ ಅಲ್ಲಿನ ವರಮಾನವೂ ಸಹಾ ಒಂದಕ್ಕೆ ನಾಲ್ಕರಷ್ಟಾಗುತ್ತದೆಂಬುದರಲ್ಲಿ ಅನುಮಾನವೇ ಇಲ್ಲ. ಆದುದರಿಂದ ಪ್ರತಿ ಗ್ರಾಮಸ್ಥರೂ ಒಳ್ಳೆಯ ಶ್ರೇಷ್ಠವಾದ ತಳಿಗಳಿಗೆ ಸೇರಿದ ಉತ್ತಮವಾದ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳನ್ನು ಬೀಜಕ್ಕೆ ಉಪಯೋಗಿಸಿದರೆ ಅವರುಗಳ ವರಮಾನವು ಹೆಚ್ಚಿ, ಅವರು ಐಶ್ವರ್ಯವಂತರಾಗುವುದಲ್ಲದೆ ಹಾಲು, ಮೊಸರು ಮತ್ತು ಬೆಣ್ಣೆಯೂ ಸಮೃದ್ಧಿಯಾಗಿ ದೊರೆದು ಬಡಬಗ್ಗರಿಗೆಲ್ಲಾ ಸುಲಭಬೆಲೆಗೆ ಹಾಲು, ಮೊಸರು ಬೆಣ್ಣೆಯನ್ನು ಕೊಳ್ಳಲು ಅನುಕೂಲವಾಗುವುದು.

ಇಂಗ್ಲೆಂಡು ದೇಶದ ಹಸುಗಳು ವಿಶೇಷವಾಗಿ ಹಾಲು ಕರೆಯುವುದಕ್ಕೆ ಶಾಸ್ತ್ರದ ಅನುಸಾರವಾಗಿ ಅವುಗಳ ತಳಿಯನ್ನು ಅಭಿವೃದ್ಧಿಗೊಳಿಸಿ ಅವುಗಳನ್ನು ಪೋಷಿಸುವುದೇ ಕಾರಣವಾಗಿದೆ. ಇವು ಹಾಲು ಕೊಡುವ ಯಂತ್ರಗಳಾಗಿ ಪರಿಣಮಿಸಿವೆ. ಕರುಗಳಿಲ್ಲದೇ ಇವು ಹಾಲು ಕೊಡುವುದೇ ಇದಕ್ಕೆ ದೊಡ್ಡ ನಿದರ್ಶನವಾಗಿದೆ. ಆ ದೇಶದಲ್ಲಿ ಸಾಮಾನ್ಯವಾಗಿ ಕರುಗಳನ್ನು ಮಾರಿದಿಡುವರು. ಇಂಡಿಯಾ ದೇಶದಲ್ಲಾದರೋ, ಕರುಗಳು ಸತ್ತುಹೋದರೆ ಹಸುಗಳು ಕರೆಯುವುದಿಲ್ಲ; ಆದರೆ ಎಮ್ಮೆಗಳು ಮಾತ್ರ ಕರುಗಳು ಇಲ್ಲದಿದ್ದರೂ ಕರೆಯುವುವು.

ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಕಾಡುಕೋಣಗಳನ್ನು ಬೀಜಕ್ಕೆ ಉಪಯೋಗಿಸಬೇಕೆಂದು ಕೆಲವರು ಹೇಳುತ್ತಾರೆ; ಆದರೆ ಹೀಗೆ ಮಾಡಿದರೆ ಕರುಗಳು ಚ್ಚು ಬಲವತ್ತುಗಳಾಗುವುವೇ ಹೊರತು ಅವುಗಳು ಡ್ಡವುಗಳಾದಾಗ ಹಾಲುಕೊಡುವುದು ಅನುಮಾನಾಸ್ಪ ವಾಗಿದೆ.

ಮುಖ್ಯವಾಗಿ ಇಂಡಿಯಾ ದೇಶದ ಜನರಿಗೆ ಬೇಕಾದ ಲಿನ ಹೆಚ್ಚು ಭಾಗವು ಎಮ್ಮೆಗಳಿಂದ ಒದಗಿಸಲ್ಪಡುತ್ತದೆ. ದುದರಿಂದ ಇವುಗಳ ತಳಿಯನ್ನು ಅಭಿವೃದ್ಧಿಪಡಿಸುವುದು ಪ್ರತಿ ರೈತನ ಕರ್ತವ್ಯವಾಗಿದೆ. ಈ ಕೆಲಸಕ್ಕಾಗಿ ಪ್ರತಿ ರೈತನೂ ಬೀಜಕ್ಕಾಗಿ ಕೊನೆಯ ಪಕ್ಷ, ಒಳ್ಳೆಯ ತಳಿಯ ಂದು ಕೋಣವನ್ನಾದರೂ ಇಟ್ಟುಕೊಂಡಿರುವುದು ಉತ್ತಮವಾದ ಏರ್ಪಾಟಾಗಿದೆ. ಕೆ. ಕೆ.

ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಗಳವರ ಪರಂಧಾಮವು.

ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕರಾದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಗುರುಪೀಠದಲ್ಲಿ ಪರಂಪರಾಗತವಾಗಿ ಗುರುಸ್ಥಾನವನ್ನಲಂಕರಿಸಿದ್ದ ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಯವರು ಕಳೆದ ಪರೀಧಾವಿ ಸಂವತ್ಸರದ ಚೈತ್ರ ಶುದ್ಧ ದ್ವಿತೀಯಾ ಬುಧವಾರದ ದಿವಸ ಎಂದರೆ ೧೯೧೨ ನೆಯ ಮಾರ್ಚಿ ತಾ॥ ೨೦ ರಲ್ಲಿ ಪರಂಧಾಮವನ್ನೈದಿದರೆಂಬ ವರ್ತಮಾನವು ಎಲ್ಲರಲ್ಲಿಯೂ ಅತ್ಯಂತ ವಿಷಾದವನ್ನುಂಟುಮಾಡತಕ್ಕದಾಗಿದೆ. ಇವರ ಇಹಲೋಕದ ವ್ಯಾಪಾರ ವೈಮುಖ್ಯದಿಂದ, ಅದ್ವೈತಜಗತ್ತಿನ ಮುಖ್ಯವಾದ ಒಂದು ಪಂಡಿತರತ್ನವೇ ಅದೃಶ್ಯವಾದಂತಾಗಿ, ಅದ್ವೈತ ಸಿದ್ಧಾಂತದ ಆಸ್ತಿಕ ಧರ್ಮೋತ್ತೇಜನಕ್ಕೆ ಎಷ್ಟೋ ನ್ಯೂನತೆಯೊದಗುವ ಕಾಲವು ಸನ್ನಿಹಿತವಾಯಿತೆಂದೇ ಊಹಿಸಬಹುದಾಗಿದೆ. ಏಕೆಂದರೆ, ಶ್ರೀ ಶಂಕರಾಚಾರ್ಯರು ವೈದಿಕ ಧರ್ಮರಕ್ಷಣಾರ್ಥವಾಗಿ ಭರತಖಂಡಕ್ಕೆಲ್ಲಾ ನಾಲ್ಕು ಮಠಗಳನ್ನು ಮಾತ್ರ ಸ್ಥಾಪಿಸಿದ್ದರು. ಅವುಗಳಲ್ಲಿ ಒಂದು ಭರತಖಂಡದ ಪಶ್ಚಿಮಭಾಗವಾದ ದ್ವಾರಕೆಯಲ್ಲಿಯೂ, ಮತ್ತೊಂದು ಪೂರ್ವಭಾಗವಾದ ಜಗನ್ನಾಥ ಕ್ಷೇತ್ರದಲ್ಲಿಯೂ, ಇನ್ನೊಂದು ಉತ್ತರ ಬದರಿಕಾಶ್ರಮದಲ್ಲಿಯೂ ಸ್ಥಾಪಿತವಾಗಿ ದಕ್ಷಿಣ ಹಿಂದೂಸ್ಥಾನಕ್ಕೆಲ್ಲಾ ಶೃಂಗಗಿರಿಯೊಂದರಲ್ಲಿಯೇ ಪ್ರಧಾನ ಮಠವೊಂದು ಸ್ಥಾಪಿಸಲ್ಪಟ್ಟಿತು. ತ್ರಿಮಠೀಯರ ಶಿಷ್ಯಕೋಟಿಗಿಂತಲೂ ಅದ್ವೈತಮತಾನುಯಾಯಿಯಾದ ಶಿಷ್ಯಕೋಟಿಯು ಶೃಂಗಗಿರಿಯ ಗುರುಸ್ಥಾನಕ್ಕೆ ಸೇರಿರುವಷ್ಟು ಹೆಚ್ಚಾಗಿ ಇತರ ಮಠಗಳಿಗೆ ಸೇರಿಲ್ಲ. ಹೀಗಿರುವುದರಿಂದ ದಕ್ಷಿಣ ಹಿಂದೂ ದೇಶದ ಅದ್ವೈತ ಶಿಷ್ಯಕೋಟಿಗೆಲ್ಲಾ ವೈದಿಕ ಧರ್ಮೋಪದೇಶದಲ್ಲಿ ಬವಾಧಿಕಾರಿಗಳಾಗಿದ್ದವರ ಮರಣದಿಂದುಂಟಾದ ನಷ್ಟವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಈ ಶೃಂಗಗಿರಿಯ ಪ್ರಾಶಸ್ತ್ಯವು ಉತ್ತರದೇಶದ ಇತರ ಮೂರು ಮಠಗಳಿಗಿಂತಲೂ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೆ ಮತ್ತೊಂದು ಕಾರಣವುಂಟು. ಭಗವತ್ಪಾದರು ಶೃಂಗಗಿರಿಯಲ್ಲಿಯೇ ಬಹುಕಾಲ ವಸಿಸಿ, ತಮ್ಮ ಶಿಷ್ಯರಲ್ಲಿ ಅತ್ಯುತ್ತಮವಿದ್ವಾಂಸರಾದ ಸುರೇಶ್ವರಾಚಾರ್ಯರನ್ನು ಆ ಮಠದಲ್ಲಿಯೇ ಸ್ಥಾಪಿಸಿದುದರಿಂದ, ಶೃಂಗಗಿರಿಯ ಪೀಠಪ್ರಾಶಸ್ತ್ಯವು ಇತೋಪ್ಯತಿಶಯವಾದುದಾಗಿರುವುದು. ಶೃಂಗಗಿರಿಯಲ್ಲಿ ಮಠವು ಸ್ಥಾಪನೆಯಾಗಿ ಪ್ರಾಯಶಃ ೧೧೦೦ ವರ್ಷಗಳ ಮೇಲೆಯೇ ಆಗಿರಬಹುದು. ಇದಕ್ಕಿಂತಲೂ ಪ್ರಾಚೀನ ಮಠಸ್ಥಾಪನೆಯು ಮತ್ತಾವುದೂ ಇರಲಾರದು. ಅಲ್ಲಿಂದೀಚೆಗೆ ಪರಂಪರಾಗತರಾಗಿ ಬಂದವರಲ್ಲಿ ಈ ಸ್ವಾಮಿಗಳು ೩೩ ನೆಯವರೆಂದು ಕೆಲವರೂ, ೪೧ ನೆಯವರೆಂದು ಕೆಲವರೂ ಅಭಿಪ್ರಾಯಪಡುವರು. ಇವರ ಹಿಂದಣವರಾಗಿದ್ದ ಶ್ರೀ ನೃಸಿಂಹ ಭಾರತೀಸ್ವಾಮಿಗಳವರು ತಮ್ಮ ಅನಂತರದಲ್ಲಿ ಇಂತಹ ಶ್ರೇಷ್ಠವಾದ ಪೀಠಕ್ಕೆ ಅರ್ಹರಾದವರನ್ನು ಸಿದ್ಧಪಡಿಸಲು ಬಹು ದೂರಾಲೋಚನೆಯನ್ನು ಮಾಡಿದರು. ಏಕೆಂದರೆ, ದಕ್ಷಿಣದೇಶದ ಬಹು ಸಂಖ್ಯಾಕವಾದ ಅದ್ವೈತ ಜಗತ್ತಿನ ಗುರುಸ್ಥಾನವನ್ನಲಂಕರಿಸುವುದು ಸಾಮಾನ್ಯವಾದ ಮಾತಲ್ಲ. ಅದಕ್ಕೆ ತಕ್ಕವರನ್ನೇ ಸಿದ್ಧಪಡಿಸಬೇಕಾದುದು ಆವಶ್ಯಕವಾಗಿದ್ದಿತು. ಅದಕ್ಕಾಗಿ ತಪಸ್ವಿಗಳೂ, ಪಂಡಿತವರ್ಯರೂ ಆಗಿದ್ದ ಶ್ರೀ ನೃಸಿಂಹಭಾರತೀಸ್ವಾಮಿಗಳವರು ಆ ಕಾಲದಲ್ಲಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಲ್ಲಿ ಆಲೋಚಿಸಿ ವಿಚಾರಮಾಡತೊಡಗಿದರು. ಆಗ ಕುಣಿಗಲ ರಾಮಶಾಸ್ತ್ರಿಯವರಿಗೆ ತೇಜಸ್ವಿಯಾದ ಒಬ್ಬ ಪುತ್ರನಿರುವನೆಂಬುದನ್ನು ತಿಳಿದು, ಆ ಬಾಲಕನೇ ಈ ಪೀಠಕ್ಕೆ ಅರ್ಹನೆಂದು ಸಿದ್ಧಾಂತಗೊಳಿಸಿದರು. ಏಕೆಂದರೆ, ಸದರಿ ರಾಮಶಾಸ್ತ್ರಿಗಳ ಶಾಸ್ತ್ರಜ್ಞಾನವೂ, ವೈದಿಕಕರ್ಮಾನುಷ್ಠಾನವೂ, ಧರ್ಮಶ್ರದ್ಧೆಯೂ ಮಹಿಮಾತಿಶಯವನ್ನುಂಟುಮಾಡತಕ್ಕದಾಗಿದ್ದಿತು. ಅಲ್ಲದೆ ಅವರಲ್ಲಿ ಜನಿಸಿದ್ದ ಪುತ್ರರಲ್ಲಿ ಕೊನೆಯ ಮಗನ ಜಾತಕವೂ ಇಂತಹ ಗುರುಸ್ಥಾನಾಧಿಪತ್ಯಕ್ಕೆ ತಕ್ಕವನೆಂದು ಸೂಚಿಸುತಲಿದ್ದಿತು. ಪಿಂಗಳ ಸಂವತ್ಸರದ ಫಾಲ್ಗುಣ ಬ[illegible] ಗುರುವಾರದ ದಿವಸ ಎಂದರೆ ೧೮೫೮ ರಲ್ಲಿ ಜನಿಸಿ ರಾಮಶಾಸ್ತ್ರಿಗಳ ಕನಿಷ್ಠಪುತ್ರರಾಗಿಯೂ, ಶಿವಾಭಿಧಾನದಿಂದ ಪ್ರಖ್ಯಾತರಾಗಿಯೂ ಇದ್ದವರೇ ಈಗಿನ ಶ್ರೀ ಶೃಂಗಗಿರಿ ಸಚ್ಚಿದಾನಂದಭಾರತೀ ಸ್ವಾಮಿಯವರಾಗಿದ್ದರು. ಇವರು ೧೮೬೬ ರಲ್ಲಿ ಶ್ರೀ ನೃಸಿಂಹಭಾರತೀ ಸ್ವಾಮಿಗಳಿಂದ ಶ್ರೀ ಶೃಂಗಗಿರಿ ಅದ್ವೈತ ಜಗದ್ಗುರು ಪೀಠದಲ್ಲಿ ಅಧಿಷ್ಠಿತರಾದರು. ಇವರು ಈ ಸ್ಥಾನವನ್ನಲಂಕರಿಸುವಾಗ ೮ ವರ್ಷ ವಯಸ್ಕರಾಗಿದ್ದರು. ಇವರಿಗೆ ಯೋಗ್ಯವಾದ ಶಾಸ್ತ್ರಾಭ್ಯಾಸವನ್ನು ಮಾಡಿಸಲು ಇವರ ಪೂರ್ವಾಶ್ರಮದ ಜ್ಯೇಷ್ಠಭ್ರಾತೃಗಳಾಗಿದ್ದ ಲಕ್ಷ್ಮೀನೃಸಿಂಹಶಾಸ್ತ್ರಿಗಳೇ ಬದ್ಧಕಂಕಣರಾದರು. ಲಕ್ಷ್ಮೀ ನೃಸಿಂಹಶಾಸ್ತ್ರಿಗಳಂತಹ ತರ್ಕವೇದಾಂತ ಪಾರಂಗತರೂ, ವೈದಿಕಕರ್ಮ ಶ್ರದ್ಧಾಳುಗಳೂ ಆ ಕಾಲದಲ್ಲಿ ವಿರಳರಾಗಿದ್ದರು. ಅತುಳ ಮೇಧಾವಿಗಳಾದ ಸ್ವಾಮಿಗಳವರ ಗುರುಪೀಠಾಧಿಷ್ಠಿತೆಗೆ ತಕ್ಕಂತೆ ಅನೇಕ ಶಾಸ್ತ್ರಗಳಲ್ಲಿ ಅದ್ಭುತಪಾಂಡಿತ್ಯವನ್ನು ಪಡೆದು ಅದ್ವೈತ ತತ್ವಗಳನ್ನೂ, ಯೋಗರಹಸ್ಯಗಳನ್ನೂ, ಮಠದ ಸಂಪ್ರದಾಯಗಳನ್ನೂ ಚೆನ್ನಾಗಿ ಅರಿತವರಾಗಿ ಸರ್ವರಿಗೂ ಹಿತಕಾರಿಗಳಾಗಿ ಪರಿಣಮಿಸಿದ್ದರು. ಶ್ರೀ ನೃಸಿಂಹಭಾರತೀಸ್ವಾಮಿಗಳು ತಮ್ಮ ಕರಕಮಲಸಂಜಾತರಾದ ಶ್ರೀಯವರೊಡನೆ ಪ್ರಭವ ಸಂವತ್ಸರದಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದು ಪ್ರಮಾಥಿ ಸಂವತ್ಸರದಲ್ಲಿ ಬ್ರಹ್ಮೈಕ್ಯರಾದರು, ಎಂದರೆ, ಶ್ರೀಯವರಿಗೆ ೨೧ ನೆಯ ವಯಸ್ಸಿನಲ್ಲಿ ಮಠದ ಸರ್ವಾಧಿಕಾರವೂ ತಮ್ಮೊಬ್ಬರ ಭಾಗಕ್ಕೇ ನಿಂತಂತಾಯಿತು. ಅನಂತರ ಶ್ರೀಯವರು ಮನ್ಮಥ ಸಂವತ್ಸರದಲ್ಲಿಯೂ, ಪ್ಲವಂಗಸಂವತ್ಸರದಲ್ಲಿಯೂ ಬೆಂಗಳೂರಿಗೆ ದಯಮಾಡಿಸಿದ್ದರು. ಆಗ ಶ್ರೀಮನ್ಮಹಾರಾಜರವರಿಂದಲೂ, ಮಂತ್ರಿವರ್ಯರಾದ ಮ॥ ಶೇಷಾದ್ರಿ ಅಯ್ಯರವರೇ ಮೊದಲಾದವರಿಂದಲೂ, ಸನ್ಮಾನಿತರಾಗಿ, ಅನ್ಯಮತೀಯರಿಂದಲೂ, ಇತರ ಮತೀಯರಿಂದಲೂ ಗೌರವಿಸಲ್ಪಡುತ್ತಿದ್ದರು.

ಶ್ರೀಯವರು ಕಾಲಟೀ ಅಗ್ರಹಾರದಲ್ಲಿ ಶ್ರೀ ಶಂಕರಾಚಾರ್ಯರ ಜನ್ಮಸ್ಥಳವನ್ನು ಶಾಶ್ವತಗೊಳಿಸಿದುದು ಅವರ ಕರ್ತವ್ಯಗಳಲ್ಲಿ ಮುಖ್ಯವಾದುದೆನಿಸಿದೆ. ಇದಕ್ಕೆ ಅನಂತಶಯನದಲ್ಲಿಯೂ, ನಮ್ಮ ದೇಶದಲ್ಲಿಯೂ ದಿವಾನರಾಗಿದ್ದ ಮ॥ ಮಾಧವರಾಯರೂ, ನ್ಯಾಯಾಧಿಪತಿಗಳಾಗಿದ್ದ ರಾಮಚಂದ್ರಯ್ಯರೂ ಸಹಾಯಕರಾಗಿ ಶ್ರೀಯವರ ಅನುಗ್ರಹಕ್ಕೆ ಪಾತ್ರರಾದರು. ಸದರಿ ಕಾಲಟಿಯಲ್ಲಿ ಒಂದು ಮಂದಿರವು ಸ್ಥಾಪಿತವಾಗಿ ಅಲ್ಲಿ ಆದಿಶಂಕರಾಚಾರ್ಯರ ಪ್ರತಿಮಾಪ್ರತಿಷ್ಠೆಯು ಕಳೆದ ಸೌಮ್ಯಸಂವತ್ಸರದ ಮಾಘಮಾಸದಲ್ಲಿ ವಿಜೃಂಭಣೆಯಿಂದ ಬಳೆಯಿತು. ಶ್ರೀಯವರು ತಾವು ನೆರವೇರಿಸಬೇಕಾಗಿದ್ದ ಕೃತ್ಯಗಳಲ್ಲಿ ಬೆಂಗಳೂರಿನ ವಿದ್ಯಾಶಾಲಾಸ್ಥಾಪನೆಯು ಎರಡನೆಯದೆನಿಸಿದೆ. ಮಠದ ಗೌರವಕ್ಕೂ ಬೆಂಗಳೂರು ನಗರದ ಪ್ರಜಾಸಂಖ್ಯೆಗೂ ತಕ್ಕಂತೆ ಅಂದವಾದ ಒಂದು ಮಂದಿರವನ್ನು ನಿರ್ಮಿಸಿ ವೇದವೇದಾಂತಾದಿ ಶ್ರೌತವಿದ್ಯೆಯ ಬೋಧನೆಗೆ ಅವಕಾಶವನ್ನು ಕಲ್ಪಿಸಿದರು. ಅದರ ಅಭಿವೃದ್ಧಿಯನ್ನು ನೋಡಿ ಇತೋಪ್ಯತಿಶಯವಾದ ಪ್ರೋತ್ಸಾಹವನ್ನು ಕೊಡಬಹುದಾಗಿದ್ದ ಶ್ರೀಯವರು ಇಷ್ಟು ಅಲ್ಪಕಾಲದಲ್ಲಿಯೇ ಎಂದರೆ ತಮ್ಮ ೫೪ ನೆಯ ವಯಸ್ಸಿನಲ್ಲಿಯೇ ಪರಮಪದವನ್ನೈದಿದುದು ತದುದ್ದೇಶಕ್ಕೆ ಎಷ್ಟೋ ಭಂಗವೊದಗಿತೆಂದು ಹೇಳಬೇಕಾಗಿದೆ. ಸುಕೃತಿಗಳು ಚಿರಾಯುಗಳಾಗದಿರುವುದು ಮಾನವಲೋಕದ ದುರ್ದಶಾಸೂಚಕವಾಗಿದೆ.

ಶ್ರೀಯವರು ವೈದಿಕಧರ್ಮ ರಕ್ಷಣೆಗಾಗಿ ಗುರುಪೀಠವನ್ನಲಂಕರಿಸಿದವರಾದರೂ ಲೌಕಿಕಧರ್ಮದಲ್ಲಿಯೂ ಅವರು ಅನಾದೃಶರಾಗಿದ್ದರು. ಇದರಿಂದಲೇ ಶಿಷ್ಯಕೋಟಿಯ ಉಚ್ಛೃಂಖಲ ಪ್ರವರ್ತನೆಗೆ ತಡೆಯಿದ್ದಿತು. ಇವರು ಅಲ್ಲಲ್ಲಿ ಸಂಚಾರಮಾಡಿ ಜನರಿಗೆ ಹಿತೋಪದೇಶಗಳ ಮೂಲಕ ವೈದಿಕಧರ್ಮವನ್ನು ಆಸ್ತಿಕರಿಗೆ ಬೋಧಿಸುತ್ತಾ ಸರ್ವರಿಂದಲೂ ಪೂಜಾರ್ಹರೆಂದು ಪ್ರಸಿದ್ಧಿಗೊಂಡಿದ್ದರು. ಇಂತಹರ ಮರಣದಿಂದುಂಟಾದ ವ್ಯಸನವು ನಿವಾರಣೆಯಾಗಬೇಕಾದರೆ, ಈ ಗುರುಪೀಠಕ್ಕೆ ಇಂತಹ ಮೇಧಾವಿಗಳಾದವರೇ ಪುನಃ ಸ್ಥಾಪಿತರಾಗಬೇಕಾಗಿದೆ.

ಶ್ರೀ ಶೃಂಗಗಿರಿಯ ಮಠಕ್ಕೆ ಅದ್ವೈತ ಮತಾನುಯಾಯಿಗಳಾದ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಮುಂತಾದವರು ಶಿಷ್ಯರನೇಕರಿರುವರು. ಪ್ರಾಯಶಃ ೩೦೦ ವರ್ಷಗಳ ಹಿಂದೆಯೇ ಅನೇಕ ರಾಜರೂ, ಪಾಳೆಯಗಾರರೂ, ಶಿಷ್ಯಪ್ರಮುಖರೂ ಮುಂತಾದವರು ಮಠಕ್ಕೆ ಅನೇಕವಾಗಿ ಜಹಗೀರಿಗಳನ್ನೂ, ಬಿರುದುಗಳನ್ನೂ, ಧನವನ್ನೂ ಸಹಾಯಮಾಡಿದಂತೆ ತಿಳಿಯಬಂದಿರುವುದು. ಅವು ಬ್ರಿಟಿಷರಿಂದಲೂ ನಮ್ಮ ಮಹಾರಾಜರವರಿಂದಲೂ ಈವರೆಗೂ ಕಾಪಾಡಲ್ಪಡುತ್ತಿರುವುವು. ಶೃಂಗಗಿರಿಯೆಂಬುದೂ ಮಠಕ್ಕೆ ಜಹಗೀರಾದುದಾಗಿದೆ. ಇದು ೮ ಮೈಲಿ ಉದ್ದವೂ, ೬ ಮೈಲಿ ಅಗಲವೂ ಇರುವುದಲ್ಲದೆ ೯೧೮೮ ಪ್ರಜಾಸಂಖ್ಯೆಯನ್ನೂ ವರ್ಷ ಒಂದಕ್ಕೆ ಪ್ರಾಯಶಃ ೫೦ ಸಾವಿರ ರೂಪಾಯಿ ಉತ್ಪತ್ತಿಯನ್ನೂ ಉಳ್ಳುದಾಗಿದೆ. ನಮ್ಮ ಶ್ರೀಮನ್ಮಹಾರಾಜರವರೂ ಈ ಮಠಕ್ಕೆ ತಕ್ಕ ಮರ್ಯಾದೆಯನ್ನು ಕೊಟ್ಟು ಗೌರವಿಸುತ್ತಿರುವರು. ಇಂತಹ ಪ್ರಬಲವಾದ ಗುರುಪೀಠದಲ್ಲಿ ಯಾರು ಅಧಿಷ್ಠಿತರಾಗುವರೋ ಇನ್ನೂ ಗೊತ್ತಾಗಿರುವುದಿಲ್ಲ. ಎಲ್. ಶ್ರೀನಿವಾಸರಾವ್.

ರಾಜ್ಯಾಡಳಿತವು.

" ಬಹು ಜಟಿಲಸ್ವರೂಪವಾದ ರಾಜ್ಯಾಡಳಿತದಲ್ಲಿಯ ಬದಲಾವಣೆಗಳು ಈ ಕೆಳಗೆ ಹೇಳುವ ಪ್ರಕಾರ ನಡೆಯುವುವಾಗಿ ನಂಬುಗೆಯಾದ ಸ್ಥಳದಿಂದ ಅರಿತಿರುತ್ತೇವೆ. "

ದಿವಾನರು.—ಮ॥ ಕೆ.ಎಸ್. ದೊರಸಾಮಯ್ಯರ್‌ರವರು

ಕೌನ್ಸಿಲರುಗಳು.— ಮ॥ ಗಳಾದ ಡಿ. ದೇವರಾಜ ಅರಸಿನವರು ಮತ್ತೂ ಸಿ. ಶ್ರೀಕಂಠೇಶ್ವರಯ್ಯರ್‌ರವರು.

ಚೀಫ್‌ಕೋರ್ಟಿನ ಜಡ್ಜಿಗಳು.— ಮ॥ ಗಳಾದ ಎಚ್. ವಿ. ನಂಜುಂಡಯ್ಯನವರು ಚೀಫ್ ಜಡ್ಜರು; ಕೆ. ಎಸ್. ಚಂದ್ರಶೇಖರಯ್ಯರ್‌ರವರು ೨ ನೆಯ ಜಡ್ಜರು; ಮ॥ ಆರ್. ಬಿ. ಪ್ಲಮರ್‌ರವರು ೩ ನೆಯ ಜಡ್ಜರು.

ಶಾಖಾಧಿಕಾರಿಗಳು.— ಮ॥ ಗಳಾದ ಎಂ. ಕಾಂತರಾಜ ಅರಸಿನವರು ರೆವಿನ್ಯೂ ಕಮಿಷನರು; ಟಿ. ಪರಮಶಿವಯ್ಯರ್‌ರವರು ಎಕ್ಸೈಜ್ ಕಮಿಷನವರು; ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂ. ಎ., ಯವರು ವಿದ್ಯಾಭ್ಯಾಸದ ಇ ಜನರಲ್‌ರವರು; ಜಿ. ಚಕ್ರವರ್ತಿಯವರು ಕಂಟ್ರೋಲರು; ಕೆ. ಶ್ರೀನಿವಾಸರಾಯರು ಸರ್ವೆ ಸೂಪರಿಂಟೆಂಡೆಂಟರು; ಡಾಕ್ಟರ್ ಪಿ.ಎಸ್. ಅಚ್ಯುತರಾಯರು ಸೀನಿಯರ್ ಸರ್ಜನರು; ಮೇಜರ್ ಫೋರ್ಸ್ ಐ. ಎಂ. ಎಸ್., ರವರು ದರ್ಬಾರ್ ಸರ್ಜನರು; ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ಚೀಫ್ ಸೆಕ್ರಟರಿ ಮತ್ತೂ ಬಿ. ರಾಮಸ್ವಾಮಯ್ಯನವರು ಮುಜರಾಯಿ ಸೂಪರಿಂಟೆಂಡೆಂಟರು.

ಡಿಸ್ಟ್ರಿಕ್ಟ್ ಜಡ್ಜಿಯರುಗಳು.— ಮ॥ ಹಂಜಾಹುಸೇನರವರು, ಬೆಂಗಳೂರು; ಎ. ಎ. ರಾಜರತ್ನ ಮೊದಲಿಯಾರರು ಶಿವಮೊಗ್ಗ ಮತ್ತೂ ಸಿ. ಎಸ್. ದೊರಸಾಮಯ್ಯರ್‌ರವರು ಮೈಸೂರು.

ಡೆಪ್ಯುಟಿ ಕಮಿಷನರುಗಳು.— ಮ॥ ಗಳಾದ ಬಿ. ಜಿ. ಕುಮಾರಸ್ವಾಮಿನಾಯಕರು, ಶಿವಮೊಗ್ಗ; ಮ॥ ಕೆ. ಚಾಂಡಿಯವರು, ಬೆಂಗಳೂರು; ಎ. ಆರ್. ತ್ಯಾಗರಾಜ ಅಯ್ಯರ್‌ರವರು, ಹಾಸನ; ಎಂ. ಶಾಮರಾಯರು, ತುಮಕೂರು; ಎ. ಸುಬ್ರಹ್ಮಣ್ಯಯ್ಯರ್‌ರವರು, ಕಡೂರು; ಮ॥ ಪಿ. ಎಫ್. ಬೌರಿಂಗ್‌ರವರು, ಕೋಲಾರ; ಕೆ. ಎಸ್. ಕೃಷ್ಣಯ್ಯರ್‌ರವರು, ಮೈಸೂರು ಮತ್ತೂ ಮ॥ ಕೆ. ಮೆಘಾರವರು ಚಿತ್ರಕಲ್‌ದುರ್ಗ.

ಸಬ್ ಜಡ್ಜಿಗಳು.— ಮ॥ ಗಳಾದ ಬಿ. ನಾಗಪ್ಪನವರು ಮೈಸೂರು ; ಎಲ್. ಹಿರಣ್ಣಯ್ಯನವರು, ಬೆಂಗಳೂರು ಮತ್ತೂ ಕೆ. ಮೈಲಾರಿರಾಯರು ಶಿವಮೊಗ್ಗ.

ವೈಸ್ ಪ್ರೆಸಿಡೆಂಟರುಗಳು.— ಮ॥ ಗಳಾದ ಎ. ಮಾಧವರಾಯರು, ಮೈಸೂರು ಮತ್ತೂ [illegible] ಆನಂದರಾಯರು ಬೆಂಗಳೂರು.

ಅರಮನೆಯಾಫೀಸರು.—ಮ॥ ಬಿ. ವೆಂಕೋಬರಾಯರು

ಸಿಟಿ ಮ್ಯಾಜಿಸ್ಟ್ರೇಟರುಗಳು.— ಮ॥ ಗಳಾದ ಟಿ. ಚೊಕ್ಕಣ್ಣನವರು, ಮೈಸೂರು ಮತ್ತೂ ರಂಗನಾಥರಾವ್ ಸಾಹೇಬರು, ಬೆಂಗಳೂರು.

ದಿವಾನರ ಪ್ರೈವೇಟ್ ಸೆಕ್ರಟರಿ.— ಮ॥ ಕೆ. ಎಸ್. ರಾಮಸ್ವಾಮಯ್ಯರ್, ಬಿ. ಎ., ಬಿ. ಎಲ್., ರವರು

ಅಂಡರ್ ಸೆಕ್ರಟರಿಗಳು.— ಮ॥ ಜಿ. ಆರ್ವಮುದಂ ಅಯ್ಯಂಗಾರರು ಮತ್ತೂ ಮ॥ ಪಿ. ಡಿಸೌಜಾಯವರು.

ಅಸಿಸ್ಟೆಂಟ್ ಸೆಕ್ರಟರಿಗಳು.— ಮ॥ಗಳಾದ ಎಸ್. ಪಿ. ರಾಜಗೋಪಾಲಾಚಾರ್ಯರು, ಎ. ವಿ. ರಾಮನಾಥ ಮತ್ತೂ ಎ. ಅನಂತರಾಮಯ್ಯರವರುಗಳು.

ಗೌರ್ನಮೆಂಟ್ ಅಡ್ವೋಕೇಟರು.— ಬ್ಯಾರಿಸ್ಟರ್ ಮ॥ ಬಿ. ಲಾರೆನ್ಸ್‌ರವರು.

ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರು.— ಮ॥ ಎಂ. ಎ. ನಾರಣಯ್ಯಂಗಾರರು. (ಡೆಪ್ಯುಟಿಕಮಿಷನರ ತರಗತಿ).

ಮ॥ಗಳಾದ ಟಿ. ಗೋವಿಂದರಾಯರು ಮೈಸೂರ [illegible] ಅಸಿಸ್ಟೆಂಟರು, ಎಂ. ಜಿ. ಕೃಷ್ಣಸ್ವಾಮಿರಾಯರು ಎಕ್ಸೈಜ್ ಆ॥ ಕಮಿಷನರು, ಮತ್ತೂ ಅಸಿಸ್ಟೆಂಟ್ ಕಮಿಷನರುಗಳಲ್ಲಿ ೩॥ ವರ್ಗಾವರ್ಗಗಳಾಗುವುವು. ([illegible])

ಮೈಸೂರ್ ಗೆಜೆಟ್ ಸಂಗ್ರಹವು.

ಅಫಿಷಿಯೇಟಿಂಗ್ ರೆವಿನ್ಯೂ ಕಮಿಷನರ್ ಮ॥ ಕೆ. ಎಸ್. ದೊರೆಸ್ವಾಮಯ್ಯರ್‌ರವರಿಗೆ ಈ ತಾ॥ ೧೯ ರಿಂದ ೩ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಕಡೂರ ಡಿ॥ ಪೊಲೀಸು ಸೂಪರಿಂಟೆಂಡೆಂಟ್ ಮ॥ ಅಬ್ದುಲ್ಲಾಯವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧ರಿಂದ ೩ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವುದರಿಂದ ಅವರಿಗೆ ತಾ॥ ಅಮಲ್ದಾರ್ ಮ॥ ಎಸ್. [illegible] ಬಿ. ಎ. [illegible]

ಕಮಿಷನರಾಗಿ ಮಾಡಲ್ಪಟ್ಟ ಮಿ|| ಒಬೇದುಲ್ಲಾಯವರು ಇರುವವರೆಗೆ ಅಥವಾ ಮತ್ತೊಂದು ಅಪ್ಪಣೆಯಾಗುವವರೆಗೆ ಕಡೂರು ಡಿ|| ಪೋ|| ಸೂಪರಿಂಟೆಂಡೆಂಟರ ಉದ್ಯೋಗದ ಮೇಲೆ ನಿಯಮಿಸಲ್ಪಟ್ಟಿರುತ್ತಾರೆ.

ಜನರಲ್ ಮತ್ತು ರೆವಿನ್ಯೂ ಶಾಖೆಗಳ ಅ|| ಸೆಕ್ರೆಟರಿ ಮಿ|| ಎಚ್. ಹಿರಿಯಣ್ಣಯ್ಯ, ಎಂ. ಎ., ಬಿ. ಎಲ್., ರವರಿಗೆ ೧೯೧೨ ನೆಯ ಮಾರ್ಚಿ ತಾ|| ೧೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವಂದಿನಿಂದ ೧೮ ದಿನಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ.

೩ ನೆಯ ತ|| ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ|| ಜಿ. ಕೃಷ್ಣಮೂರ್ತಿನಾಯಡುಯವರು ೨ನೆಯ ತ|| ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಪ್ರೊಬೆಷನರಿ ಸಬ್‌ರಿಜಿಸ್ಟ್ರಾರ್ ಎ. ಕೆ. ವೆಂಕಟರಮಣಶೆಟ್ಟರು ೧೯೧೨ ನೆಯ ಮಾರ್ಚಿ ತಾ|| ೧ ರಿಂದ ೪ ನೆಯ ತ|| ಸಬ್‌ರಿಜಿಸ್ಟ್ರಾರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೨ ನೆಯ ಮಾರ್ಚಿ ತಾ|| ೨೫ ನೆಯ ಸೋಮವಾರ

ಸೀಮೆಯ ಕಲ್ಲಿದ್ದಲಿನ ಗಣಿಯ ಕೆಲಸಗಾರರ ಗೊಂದಲವು.

ಗಣಿಗಳಲ್ಲಿ ಕೆಲಸಮಾಡುವವರು ದೊಡ್ಡವರಿಗೆ ರೂ. ೩-೧೧-೧ ರಿಂದ ರೂ. ೫-೧೦-೦ ಗೂ, ಹುಡುಗರಿಗೆ ರೂ. ೧-೮-೦ ವರೆಗೂ ಕಡಿಮೆಯಿಲ್ಲದಂತೆ ಕೂಲಿಯು ಕೊಡಲ್ಪಟ್ಟ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರವಿಡಿದು ನಿಂತುಬಿಟ್ಟುದರಿಂದ, ಉಕ್ಕು, ಕಬ್ಬಿಣ ಮತ್ತು ತವರಗಳ ಕೆಲಸಗಾರರು ೨೩೩೫೦೦; ಬಟ್ಟೆಯನ್ನು ನೇಯುವ ಕೆಲಸಗಾರರು ೮೫೩೮೦; ರೈಲ್ವೆಯ ಕೆಲಸಗಾರರು ೭೩೦೦೦; ಹಡಗುಗಳನ್ನು ಕಟ್ಟುವ ಸ್ಥಳದಲ್ಲಿ ಕೆಲಸಮಾಡುವವರು ೬೮೫೦೦; ಕುಂಬಾರರು ೮೦೦೦೦; ಮನೆ ಮೊದಲಾದುವನ್ನು ಕಟ್ಟುವವರು ೨೯೩೦೦; ಅಂಬಿಗರು ೨೯೩೦೦; ಜೋಡಿನ ಕೆಲಸಗಾರರು ೨೫೦೦೦; ಕಲ್ಲಾಸತ್ತಿನ ಕೆಲಸಗಾರರು ೮೨೦೦೦; ಬೆಸ್ತರು ೩೫೦೦; ಇಂಜನಿಯರುಗಳು ೩೫೦೦; ಟಪ್ಪಾಮಾಡುವವರು ೬೫೦೦; ಕಲ್ಲಿದ್ದಲನ್ನು ಸಾಗಿಸುವವರು ೧೧೧೦೦; ಮಿಠಾಯಿಯನ್ನು ಮಾಡುವವರು ೩೫೦೦; ಕಲ್ಲನ್ನೊತ್ತೆಯುವವರು ೩೫೦೦; ಸರಪಳಿಯನ್ನು ಮಾಡುವವರು ೩೧೦೦೦; ರಟ್ಟಾಯಿನಗಾರರು ೨೫೦೦; ಕಾಜೂನನ್ನು ಮಾಡುವವರು ೨೦೦೦; ಬೇಸಾಯದುಮುಟ್ಟುಗಳನ್ನು ಮಾಡುವವರು ೧೩೫೦; ಗಾಜಿನ ಕೆಲಸಗಾರರು ೧೫೫೦; ಹಗ್ಗವನ್ನು ಹೊಸೆಯುವವರು ೧೧೦೦; ಜೇಡಿಮಣ್ಣಿನಲ್ಲಿ ಕೆಲಸಮಾಡುವವರು ೯೦೦; ಟ್ರಾಂ ಬಂಡಿಗಳ ಕೆಲಸಗಾರರು ೩೦೦ ಮತ್ತು ಇತರ ಕೆಲಸಗಾರರು ೨೦೩೫೦ ಇಂತಿಷ್ಟು ಜನರು ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದೆ ಬಹು ಕಷ್ಟಪಡಬೇಕಾಗಿ ಬಂದಿತು. ಗ್ರಿಂಸ್‌ಬಿ ಎಂಬಲ್ಲಿ ಕ್ಷುಧಾತುರರಾದ ಜನರು ಬೀದಿಗಳಲ್ಲಿ ಅಲೆಯುವುದನ್ನು ಪೊಲೀಸು ಚೀಫ್ ಕಾನ್‌ಸ್ಟೆಬಲನು ನೋಡಿ ಕನಿಕರಪಟ್ಟು ಅವರುಗಳೆಲ್ಲರಿಗೂ ಆಹಾರವನ್ನೂ, ಟೀಯನ್ನೂ ಹಂಚಿದನು. ಕೆಲಸಗಳಿಗೆ ಹೋಗದೆ ಮುಷ್ಕರವನ್ನು ಹಿಡಿದು ಗೊಂದಲವನ್ನೆಬ್ಬಿಸಿರುವವರಿಗೂ, ನಿರುದ್ಯೋಗಿಗಳಾಗಿರುವವರಿಗೂ ಈ ವರೆಗೆ ೧೨೨೩೦೦೦೦ ರೂ. ಗಳು ಕೂಲಿಕಾರರ ಸಂಘದವರಿಂದ ಹಂಚಲ್ಪಟ್ಟಿರುತ್ತವೆ. ಮಂತ್ರಿವರ್ಯರಾದ ಮಿ|| ಆಸ್ಕ್ವಿತ್‌ರವರು ಕೂಲಿಕಾರರಲ್ಲಿ ದೊಡ್ಡವರಿಗೆ ರೂ. ೩-೧೨-೦ ಗಿಂತಲೂ, ಹುಡುಗರಿಗೆ ರೂ. ೧-೮-೦ ಗಿಂತಲೂ ಕಡಿಮೆ ಕೂಲಿಯು ದೊರೆಯಕೂಡದೆಂದು ಒಂದು ಬಿಲ್ಲನ್ನು ಮಾಡಿ ಸಭೆಯಲ್ಲಿ ಮೊದಲನೆಯ ದಿವಸ ಓದಿದಾಗ ಅನೇಕ ಮೆಂಬರುಗಳು ಅದನ್ನು ಸಮ್ಮತಿಸದೆ ಹೋದುದಲ್ಲದೆ, ಕಾಮನ್ಸ್ ಸಭೆಯು ವಿಸರ್ಜಿಸಲ್ಪಡುವುದು ಎಂಬುವಷ್ಟರಮಟ್ಟಿಗೆ ಭಯೋತ್ಪಾತವಾಗಿದ್ದಿತು. ಆದರೆ ಎರಡನೆಯ ದಿನ ಆ ಬಿಲ್ಲು ಪುನಃ ಓದಲ್ಪಟ್ಟು ೩೪೮ ಮೆಂಬರುಗಳಿಂದ ಅಂಗೀಕರಿಸಲ್ಪಟ್ಟಿತು. ಮಂತ್ರಿಯವರು ಗಣಿಗಳ ಯಜಮಾನರುಗಳ ಮತ್ತು ಕೂಲಿಕಾರರ ಸಂಘಗಳ ಪ್ರತಿನಿಧಿಗಳ ಸಭೆಯೊಂದನ್ನು ಈ ದಿವಸ ಕೂಡಿಸಿ ಪಾರ್ಲಿಮೆಂಟ್ ಸಭೆಯಲ್ಲಿ ಅಂಗೀಕೃತವಾಗಿರುವ ಬಿಲ್ಲಿಗೆ ಉಭಯಪಕ್ಷದ ಪ್ರತಿನಿಧಿಗಳ ಒಪ್ಪಿಗೆಯನ್ನು ಕೇಳುವರು. ಹಾಗೆ ಅವರು ಆ ಬಿಲ್ಲನ್ನೊಪ್ಪದೆಹೋಗಿ ಇನ್ನೂ ಗೊಂದಲಕ್ಕಾಸ್ಪದವನ್ನುಂಟುಮಾಡುವ ಪಕ್ಷದಲ್ಲಿ ಜನರ ನೆಮ್ಮದಿಗೆ ಭಂಗಬಾರದಂತೆ ನೋಡಿಕೊಳ್ಳಲು ಸರ್ಕಾರದವರು ತಕ್ಕ ಏರ್ಪಾಟನ್ನಿಡಲು ಸಿದ್ಧರಾಗಿರುವರು. ಇದುವರೆಗೆ ಕೂಲಿಕಾರರು ಹಟವಿಡಿದು ಗಣಿಗಳಲ್ಲಿ ಕೆಲಸಮಾಡದೆ ನಿಂತುಬಿಟ್ಟಿರುವುದರಿಂದ ಕಾರ್ಯಾಲಯಗಳು, ನಾವೆಗಳು ರೈಲ್ವೆಗಳು ಮೊದಲಾದವುಗಳ ಕೆಲಸಗಳಿಗೆ ಕಲ್ಲಿದ್ದಲು ದೊರೆಯದೆ ನಿಂತುಹೋಗಿರುವುದರಿಂದ, ಅವುಗಳಲ್ಲಿಯ ಕೆಲಸಗಾರರು ಜೀವನಕ್ಕಿಲ್ಲದೆ ಬಲು ತೊಂದರೆಪಡುತ್ತಿರುವರು. ಮತ್ತು ಇದರಿಂದ ಈಗಾಗಲೇ ಕಲ್ಲಿದ್ದಲುಗಣಿಗಳ ಯಜಮಾನರಿಗೂ, ಕೆಲಸಗಾರರಿಗೂ ಎಷ್ಟೋ ನಷ್ಟವಾಗಿರುವುದು. ಇವರುಗಳ ಹೋರಾಟದಿಂದ ಇತರ ಕಾರ್ಯಾಲಯದ ಯಜಮಾನರಿಗೂ, ಅವರ ಕೆಲಸಗಾರರಿಗೂ ನಷ್ಟವು ಸಂಭವಿಸಿರುವುದು. ಪ್ರಕೃತದ ಅಸಮಾಧಾನಸ್ಥಿತಿಯು ಇನ್ನೂ ಕೆಲಕಾಲ ನಡೆಯುವುದಾದರೆ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ವಿಶೇಷ ನಷ್ಟವಾಗುವುದಲ್ಲದೆ, ಬಡಕೂಲಿಯ ಜನರು ಹೊಟ್ಟೆಗಿಲ್ಲದೆ ದಾಂಧಲೆಯನ್ನು ನಡಿಸುವ ಸಂಭವವಿರುವುದರಿಂದ ಗಣಿಯ ಯಜಮಾನರುಗಳೂ, ಅವರ ಕೆಲಸಗಾರರೂ ಗವರ್ನಮೆಂಟಿನವರು ಸಿದ್ಧಗೊಳಿಸಿರುವ ಬಿಲ್ಲನ್ನು ಅಂಗೀಕರಿಸಿ ಪರಸ್ಪರ ಕೈಕೊಂಡಿರುವ ಹೋರಾಟವನ್ನು ಬಿಟ್ಟು ತಂತಮ್ಮ ಕೆಲಸಗಳು ಯಥಾಪ್ರಕಾರ ನಡೆಯುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸುವುದು

ಆನರಬಲ್ ಗೋಖಲೆಯವರು ಭಾರತೀಯರಿಗೆ ಬಲವಂತದಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿಸುವ ಬಗೆಗೆ ವಿಧಿಯನ್ನು ಮಾಡುವುದಕ್ಕಾಗಿ ಒಂದು ಬಿಲ್ಲನ್ನು ಸಿದ್ಧಗೊಳಿಸಿ ವೈಸ್‌ರಾಯರ ನಿಯಮನಿರ್ಮಾಣಸಭೆಯ ಸಮ್ಮತಿಗಾಗಿಟ್ಟಿದ್ದರು. ಈ ಸಂಬಂಧವಾದ ವಿಧಿಯನ್ನು ನಿರ್ಮಾಣಮಾಡುವ ವಿಚಾರದಲ್ಲಿ ಇಂಡ್ಯಾ ಸರ್ಕಾರದವರು ಎಲ್ಲಾ ಪ್ರಾಂತಗಳ ಅಧೀನಸರ್ಕಾರದವರನುಮತಿಯನ್ನು ಕೇಳಿರುವಲ್ಲಿ ಅವರುಗಳಲ್ಲಿ ಬಹುಭಾಗದವರು—ಅದರಲ್ಲಿಯೂ ಲೋಕಲ್ ಬೋರ್ಡಿನವರು ಈ ವಿಧಿಯನ್ನು ಅಗತ್ಯವಾಗಿ ಅನುಷ್ಠಾನಕ್ಕೆ ತರಬೇಕೆಂದೂ, ದುಡ್ಡಿನ ಕೊರತೆಯಿಂದ ಬಿಟ್ಟುಬಿಡದೆ ಅದಕ್ಕಾಗಿ ಕಂದಾಯವನ್ನು ಹೆಚ್ಚಿಸಿದರೂ ಕೊಡಲು ಸಿದ್ಧರಾಗಿದ್ದೇವೆಂದೂ ತಮ್ಮ ಅಭಿಪ್ರಾಯಗಳನ್ನು ತಿಳುಹಿದರು. ಅಲ್ಲದೆ ಪ್ರಾಥಮಿಕ ವಿದ್ಯಾಪ್ರೋತ್ಸಾಹಕ್ಕಾಗಿ ೫೦ ಲಕ್ಷ ರೂ. ಗಳನ್ನು ಪ್ರತಿವರ್ಷದಲ್ಲೂ ಆಗುವ ವ್ಯಯಕ್ಕಿಂತ ಹೆಚ್ಚಾಗಿ ವ್ಯಯಮಾಡತಕ್ಕದೆಂದು ಸಾರ್ವಭೌಮರವರು ತಮ್ಮ ಕಿರೀಟಧಾರಣ ಮಹೋತ್ಸವಕಾಲದಲ್ಲಿ ವರಪ್ರದಾನಮಾಡಿದರು. ಈ ಕಾರಣಗಳಿಂದ ಮ|| ಗೋಖಲೆಯವರ ಬಿಲ್ಲು ನಿಯಮನಿರ್ಮಾಣಸಭೆಯಲ್ಲಿ ಅನುಮೋದಿಸಲ್ಪಟ್ಟು ವಿಧಿಯು ನಿರ್ಮಾಣವಾಗುವುದೆಂದು ಈವರೆಗೆ ಭರವಸವಿದ್ದಿತು. ಆದರೆ ಈಚೆಗೆ ನಡೆದ ನಿಯಮನಿರ್ಮಾಣಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದು ಬಹುಜನ ಮೆಂಬರುಗಳ ಅಭಿಮತವು ವಿರುದ್ಧವಾಗಿದ್ದುದರಿಂದ, ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದ ಮಾಡಿಸುವುದರ ಸಂಬಂಧವಾದ ಬಿಲ್ಲು ಅನಂಗೀಕೃತವಾಗಿ ವಿಧಿಯು ನಿರ್ಮಾಣಕ್ಕೆ ಅವಕಾಶವಿಲ್ಲವಾಯಿತೆಂದು ತಿಳುಹಲು ಬಹು ಖೇದವಾಗುತ್ತದೆ. ಇಂಗ್ಲೆಂಡು, ಜಪಾನು ಮೊದಲಾದ ರಾಷ್ಟ್ರಗಳು ಈಗ ಉಚ್ಛ್ರಯಸ್ಥಿತಿಗೆ ಬರಲು ಅಲ್ಲಿಯ ಜನರಿಗೆ ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದಲೂ, ಉಚಿತದಿಂದಲೂ ಮಾಡಿಸುತ್ತಿರುವುದೇ ಮುಖ್ಯ ಕಾರಣವಾಗಿರುವುದರಿಂದ ಬಲು ಹಿಂದುಳಿದಿರುವ ಭಾರತೀಯರನ್ನು ವಿದ್ಯಾವಂತರನ್ನಾಗಿ ಮಾಡಲು ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದ ಮಾಡಿಸುವುದು ಅತ್ಯಾವಶ್ಯಕವು. ಅದು ವಿನಾ ಭಾರತೀಯರ ಸಂಪತ್ತು ಪರರಾಷ್ಟ್ರದವರಂತೆ ಅಭಿವೃದ್ಧಿಯಾಗುವುದಿಲ್ಲವೆಂದು ಅನೇಕ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಜನೀತಿಜ್ಞರೂ, ಸಮಾಜ ಸುಧಾರಕರೂ ಅಭಿಪ್ರಾಯಪಟ್ಟಿರುತ್ತಾರೆ. ಇಂತಹುದರಲ್ಲಿ ಭಾರತೀಯರ ಶ್ರೇಯೋಭಿವೃದ್ಧಿಗಾಗಿ ಹಗಲಿರುಳೂ ಪಾಟುಪಡುತ್ತಿರುವ ಆ|| ಗೋಖಲೆಯವರು ಬಹು ದೂರಾಲೋಚನೆಯಿಂದಲೂ, ಬುದ್ಧಿವಂತಿಕೆಯಿಂದಲೂ, ಅನುಭವದಿಂದಲೂ ಸಿದ್ಧಗೊಳಿಸಿದ್ದ ಬಿಲ್ಲಿನ ರಚನೆಯನ್ನು ಭಾರತೀಯರ ಪ್ರತಿನಿಧಿಗಳಾಗಿರುವ ಮೆಂಬರುಗಳೇ ಅನುಮೋದಿಸದೆ ಹೋದುದದು ಈ ದೇಶೀಯರ ದುರದೃಷ್ಟವೆಂತಲೇ ಹೇಳಬೇಕಾಗಿದೆ.

ಅಧಿಕಾರಿಗಳ ಬದಲಾವಣೆಯು.

ಮೈಸೂರ ಸಂಸ್ಥಾನದ ದಿವಾನರಾದ ಮ|| ಟಿ. ಆನಂದರಾಯರು, ಚೀಫ್ ಜಡ್ಜಿಯವರಾದ ಸರ್ ಇಜ್ಮಿಯವರು ಮತ್ತು ಕೆಲ ದೊಡ್ಡ ಅಧಿಕಾರಿಗಳು ವಯೋವೃದ್ಧರಾಗಿರುವುದರಿಂದಲೂ, ಅವರ ಉದ್ಯೋಗದವಧಿಯು ಪೂರೈಸಿರುವುದರಿಂದಲೂ, ಅವರುಗಳು ಕೂಡಲೆ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ಹೊಸಬರು ನಿಯಮಿಸಲ್ಪಡುವರೆಂದೂ ತತ್ಸಂಬಂಧದಲ್ಲಿ ಅನೇಕ ಅಧಿಕಾರಿಗಳ ಬದಲಾವಣೆಗಳಾಗುವುವೆಂದೂ ಈದೇಶದ ಮತ್ತು ಹೊರಗಣ ವೃತ್ತಪತ್ರಿಕೆಗಳಲ್ಲಿ ಚರ್ಚೆಗಳು ತೆರವಿಲ್ಲದೆ ನಡೆಯುತ್ತಿವೆ. ಇದೇ ವಿಚಾರದಲ್ಲಿ ತಾ|| ೨೧ ರ ಡೇಲಿ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನವನ್ನು ಬೇರೆಕಡೆ ಉದ್ಧರಿಸಿರುತ್ತೇವೆ. ನಾವು ವಿಚಾರಿಸಿದುದರಲ್ಲಿ ಬರುವ ಜೂನ್ ತಿಂಗಳ ಕಡೆಯವರೆಗೂ ಯಾವ ಬದಲಾವಣೆಗಳಾಗುವ ಸಂಭವವಿಲ್ಲವೆಂದೂ, ಮ|| ಆನಂದರಾಯರು ನಿವೃತ್ತರಾಗುವ ಪಕ್ಷದಲ್ಲಿ ೧ ನೆಯ ಕೌನ್ಸಿಲರಾದ ಮ|| ಎಚ್. ವಿ. ನಂಜುಂಡಯ್ಯನವರು ದಿವಾನರಾಗಿ ನಿಯಮಿಸಲ್ಪಡುವ ಸಂಭವವಿರುವುದೆಂದೂ ಕೇಳುತ್ತೇವೆ. ಇದಾದರೂ ನಿರ್ಧರವೆಂಬುದನ್ನು ಮಾತ್ರ ಈಗಾಗಲೇ ಹೇಳಲಿಕ್ಕಾಗುವುದಿಲ್ಲ. ಇಂತಹುದರಲ್ಲಿ ನಿನ್ನೆತಾನೇ ಅಫಿಷಿಯೇಟಿಂಗ್ ರೆವಿನ್ಯೂಕಮಿಷನರಾಗಿ ನಿಯಮಿಸಲ್ಪಟ್ಟಿರುವ ಮತ್ತು ಕೌನ್ಸಿಲರುಗಳಾದ ಮ|| ನಂಜುಂಡಯ್ಯನವರಿಗಿಂತಲೂ ಮ|| ದೇವರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮ|| ದೊರೆಸಾಮಯ್ಯರ್‌ರವರು ದಿವಾನರಾಗಿಯೂ, ಮ|| ಎಂ. ಕಾಂತರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮತ್ತು ಈಗ ಅಫಿಷಿಯೇಟಿಂಗ್ ಪೊಲೀಸು ಇ|| ಜನರಲ್‌ರವರಾಗಿರುವ ಮ|| ಶ್ರೀಕಂಠೇಶ್ವರಯ್ಯರ್‌ರವರು ಎರಡನೆಯ ಕೌನ್ಸಿಲರಾಗಿಯೂ ನಿಯಮಿಸಲ್ಪಡುವರೆಂದು ಡೇಲಿಪೋಸ್ಟ್ ಪತ್ರಿಕೆಯು ಹೇಳಿರುವುದನ್ನು ಎಷ್ಟರಮಟ್ಟಿಗೆ ನಿಜವೆಂದು ನಂಬಬಹುದಾಗಿದೆ?

ಶ್ರೀ ಶೃಂಗಗಿರಿಸ್ವಾಮಿಗಳು ವಿಧಿವಶರಾದುದು.

ಶ್ರೀ ಶೃಂಗಗಿರಿ ಜಗದ್ಗುರು ಸಚ್ಚಿದಾನಂದ ಭಾರತೀಸ್ವಾಮಿಗಳು ವೃದ್ಧಾಪ್ಯದಸೆಯಿಂದ ಸ್ವಲ್ಪಕಾಲ ಅಸ್ವಸ್ಥರಾಗಿದ್ದು ಕಳೆದ ತಾ|| ೨೦ ನೆಯ ಬುಧವಾರದಿವಸ ಪರಂಧಾಮವನ್ನು ಹೊಂದಿದರು. ಇವರ ಅಸ್ವಸ್ಥತೆಯ ವಿಚಾರವನ್ನು ಸರ್ಕಾರದವರು ಕೇಳಿ ಡಾಕ್ಟರ್ ಕೃಷ್ಣಸ್ವಾಮಿಯ್ಯರ್‌ರವರನ್ನು ಶೃಂಗಗಿರಿಗೆ ಕಳುಹಿಸಿಕೊಟ್ಟರು. ಆದರೆ ಇವರು ಅಲ್ಲಿಗೆ ಹೋಗಿ ತಲುಪುವುದರೊಳಗಾಗಿ ಸ್ವಾಮಿಯವರು ಪರಲೋಕ ಮುಖರಾಗಿದ್ದರೆಂದು ತೋರುತ್ತದೆ. ಡಾಕ್ಟರವರು ಕೂಡಲೆ ತಲುಪುವುದಕ್ಕಾಗಿ ತರೀಕೆರೆಯ ರೈಲ್ವೆಸ್ಟೇಷನ್ನಿನಲ್ಲಿ ಮೋಟಾರುಬಂಡಿಯು ಸಿದ್ಧಗೊಳಿಸಲ್ಪಟ್ಟಿದ್ದಿತು. ಸ್ವಾಮಿಯವರು ತರ್ಕಶಾಸ್ತ್ರದಲ್ಲಿ ಪೂರ್ಣಪಂಡಿತರೂ, ಅದ್ವೈತವಿಚಾರದಲ್ಲಿ ಅದ್ವಿತೀಯರೂ ಮತ್ತು ಮಹಾತಪಸ್ವಿಗಳೂ ಆಗಿದ್ದರು. ಈ ಯತಿವರ್ಯರ ಸಂಕ್ಷಿಪ್ತ ಜೀವನಚರಿತ್ರೆಯು ಮತ್ತೊಂದುಕಡೆ ಕೊಡಲ್ಪಟ್ಟಿದೆ.

ತುರ್ಕಿ ಇಟಲಿರಾಜ್ಯಗಳಿಗೆ ಸಮಾಧಾನವನ್ನುಂಟುಮಾಡಲು ಪರರಾಜ್ಯದವರು ಪ್ರವೇಶಿಸಿ ಇಟಲಿಯವರು ಯಾವ ಪ್ರಕಾರವಾಗೊಡಂಬಡುವರೆಂದು ಅವರ ಮಂತ್ರಿಯನ್ನು ಕೇಳಿದ್ದರೆಂದು ಹಿಂದೆ ಪ್ರಕಟವಾಗಿದ್ದುದರಮೇಲೆ ಉಭಯರಾಜ್ಯಗಳ ಕದನವು ಶಾಂತವಾಗಿ ಅದರಿಂದಾಗುತ್ತಿದ್ದ ಅರ್ಥಹಾನಿ ಪ್ರಾಣಹಾನಿಗಳು ನಿಲ್ಲುವುವೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಆದರೆ ಆ ರೀತಿ ತುರ್ಕಿಇಟಲಿರಾಜ್ಯಗಳಿಗೆ ಸಮಾಧಾನವನ್ನು ಮಾಡಲು ಪರರಾಜ್ಯದವರು ಪ್ರಯತ್ನಿಸಿರುವುದಿಲ್ಲವೆಂತಲೂ, ತಮ್ಮಗಳ ಮೌನಾಚರಣೆಯನ್ನು ಬಿಟ್ಟು ಒಡಂಬಡಿಕೆಯ ವಿಚಾರದಲ್ಲುದ್ಯುಕ್ತರಾಗುವುದು ತಮ್ಮಗಳ ನೀತಿಗೆ ವಿರುದ್ಧವಾದುದೆಂದೂ ಈಚೆಗೆ ಪ್ರಕಟವಾಗಿರುತ್ತದೆ. ಇದರಿಂದ ಆ ಉಭಯರಾಜ್ಯಗಳ ಕದನವು ಇನ್ನೂ ಪ್ರಬಲವಾಗಿ ಅರ್ಥಹಾನಿ ಪ್ರಾಣಹಾನಿಗಳು ಮೊದಲಿಗಿಂತಲೂ ಅಧಿಕವಾಗುವುವೆಂದು ತೋರುವುದು.

ಚೈನಾರಾಜ್ಯದಲ್ಲಿ ಗೊಂದಲವು ಕಡಿಮೆಯಾಗಿ ಶಾಂತತೆಯು ಈಗೀಗ ನೆಲಸಲಾರಂಭವಾಗಿದೆ. ಪ್ರಜಾಧಿಪತ್ಯದ ಸರಕಾರದವರಿಗೆ ಪರರಾಜ್ಯದ ಬ್ಯಾಂಕಿನವರು ಹಣವನ್ನು ಸಾಲವಾಗಿ ಕೊಡುವ ವಿಚಾರದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ. ಇದು ಸಾಧ್ಯವಾದ ಕೂಡಲೆ ಪ್ರಜಾಧಿಪತ್ಯದ ಸರ್ಕಾರದವರು ಅಲ್ಲಿಯ ಸ್ಥಿತಿಯೆಲ್ಲವನ್ನೂ ಕ್ರಮಪಡಿಸಿ ಬೇರೆಬೇರೆ ಕುಲದವರನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಜನಾಂಗವನ್ನಾಗಿ ಮಾಡಯತ್ನಿಸುವರು.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದು.

ಬೆಂಗಳೂರಿಗೆ ಪ್ರತಿವರ್ಷದಲ್ಲೂ ಲೋವರ್‌ಸೆಕೆಂಡರಿ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ., ಪರೀಕ್ಷೆಗಳಿಗೆ ಪರಸ್ಥಳದಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟ ಉಪಚಾರಾದಿಗಳಿಗೆ ಬೆಂಗಳೂರಿನ ಊದುಬತ್ತಿಷಾಪ್ ಮ|| ಕಳ್ಳಪ್ಪನವರು ಕೆಲ ವರ್ಷಗಳಿಂದಲೂ ಸ್ವಂತಖರ್ಚಿನಿಂದ ತಕ್ಕ ಏರ್ಪಾಟನ್ನಿಡುತ್ತಿದ್ದಂತೆ ಈ ವರ್ಷದಲ್ಲೂ ತಕ್ಕ ಏರ್ಪಾಟನ್ನು ಮಾಡಿರುವರಾದಕಾರಣ ಲೋವರ್‌ಸೆಕೆಂಡರಿ, ಮೆ. ಮತ್ತು ಬಿ.ಎ., ಪರೀಕ್ಷೆಗಳಿಗಾಗಿ ಬೆಂಗಳೂರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ತಾವು ಬರುವುದಕ್ಕೆ ೨ ದಿವಸ ಮುಂಚಿತವಾಗಿ ಮ|| ಕಳ್ಳಪ್ಪನವರಿಗೆ ಬರೆದು ತಿಳುಹತಕ್ಕದು.

ಒಳದೇಶದ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ನಿನ್ನೆಯ ಮೇಲು ಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು.

ಕಳೆದ ತಾ|| ೨೪ ರ ರಾತ್ರಿ ರಾಜಧಾನಿಯ ನಜರ್‌ಬಾದಲ್ಲಿ ಒಂದು ಹುಡಿಗೆ ಬೆಂಕಿಯುಬಿದ್ದು ಸುಟ್ಟುಹೋಯಿತು.

ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಸರ್ ಅಫ್‌ತಾಲಿಯವರು ಕಳೆದ ತಾ|| ೨೦ ರಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಪಿ. ಶ್ರೀನಿವಾಸರಾಯರ ಉದ್ಯೋಗದವಧಿಯು ೧೯೧೩ ನೆಯ ಜೂನ್ ತಿಂಗಳ ಕಡೆಯವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಮೈಸೂರ ಡಿ|| ಸಬ್ ಡಿವಿಜನ್ ಅ|| ಕಮಿಷನರಾದ ಮ|| ಎಚ್. ಮಾಧವರಾಯರು ೨ ತಿಂಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡು ಸ್ವಸ್ಥಳಕ್ಕೆ ಹೋಗಬರುವುದಾಗಿ ಕೇಳುತ್ತೇವೆ.

ಈ ತಾ|| ೩೦ ರಲ್ಲಿ ನಂಜನಗೂಡಿನಲ್ಲಿ ನಡೆಯುವ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪಂಚರಥೋತ್ಸವವನ್ನು ಪರಾಮರ್ಶಿಸಿಕೊಂಡು ಬರಲು ಶ್ರೀಮನ್ ಮಹಾರಾಜರವರ ಸ್ವಾರಿಯು ಚಿತ್ತೈಸುವುದಾಗಿ ಕೇಳುತ್ತೇವೆ.

ಕನ್ನಂಬಾಡಿಯಲ್ಲಿ ಈಗ ೬೦೦೦ ಜನರವರೆಗೆ ಕೆಲಸವನ್ನುಮಾಡುತ್ತಿದ್ದಾರೆ. ಸುರಂಗವನ್ನು ಹಾಕುವಾಗ್ಗೆ ಮದ್ದು ಹಾರಿ ೩ ಜನ ಕೂಲಿಯವರು ಸತ್ತುಹೋದರೆಂಬ ವರ್ತಮಾನವು ಸುಳ್ಳೆಂಬುದಾಗಿ ಗೊತ್ತಾಗಿದೆ.

ರಾಜಧಾನಿಯ ಆಯುರ್ವೇದ ಪ್ರೌಢವಿದ್ಯಾಲಯದ ಮುಖ್ಯೋಪಾಧ್ಯಾಯರಾದ ಮ|| ಕೆಂಪರಾಮ ಪಂಡಿತರು ಪಾರ್ಶ್ವವಾಯುರೋಗಗ್ರಸ್ತರಾಗಿದ್ದು ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರ ಚಿಕಿತ್ಸೆಯಿಂದ ಗುಣಹೊಂದುತ್ತಿರುವರು.

ಅರಮನೆಯ ಇನ್‌ಛಾರ್ಜ್ ಆಫೀಸರಾದ ಮ|| ಬಿ. ರಾಮಕೃಷ್ಣರಾಯರ ಉದ್ಯೋಗದವಧಿಯು ಇನ್ನೊಂದು ವರ್ಷದವರೆಗೆ ಹೆಚ್ಚಿಸಲ್ಪಟ್ಟು, ಅವರು ಇನ್ನುಮುಂದೆ ಅರಮನೆಯ ಕಂಟ್ರೋಲರಾಗಿ ಕರೆಯಲ್ಪಡುವಂತೆ ಶ್ರೀಮನ್ಮಹಾರಾಜರವರಿಂದ ಅಪ್ಪಣೆಮಾಡಲ್ಪಟ್ಟಿರುತ್ತದೆ.

ಸರದಾರ್ ಕಾಂತರಾಜ ಅರಸಿನವರು ಕೈ|| ತಮ್ಮ ಮಾತೃಶ್ರೀಯವರ ಹೆಸರಿನ ಮೇಲೆ ರಾಜಧಾನಿಯ ಅನಾಥಾಲಯ, ಅಬಲಾಶ್ರಮಗಳಿಗೆ ಧರ್ಮಮಾಡಿದಂತೆ ಆರ್ಯಬಾಲ ಸಮಾಜಕ್ಕೂ ೧೦೦ ರೂ. ಗಳನ್ನು ದಯಪಾಲಿಸಿದರು. ಸರದಾರರವರು ಕಾಶಿ, ಪ್ರಯಾಗ, ಗಯಾ ಮೊದಲಾದ ಪುಣ್ಯಸ್ಥಳಗಳಿಗೆ ಹೋಗಿ ಬರುವುದಾಗಿ ಕೇಳುತ್ತೇವೆ.

೨ ನೆಯ ಕೌನ್ಸಿಲರಾದ ಮ|| ಡಿ. ದೇವರಾಜ ಅರಸಿನವರು ಯುಗಾದಿಯ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು ಹಬ್ಬದ ದಿವಸ ಶ್ರೀಮದ್ಯುವರಾಜ ದಂಪತಿಗಳನ್ನು ತಮ್ಮ ಮನೆಗೆ ಬರಮಾಡಿಕೊಂಡು ದಿವ್ಯವಾದ ಔತಣವನ್ನು ಮಾಡಿಸಿ ೮೦೦ ರೂ. ಬೆಲೆಯ ಕಲಾಪತ್ತಿನ ಧೋತ್ರ ಷಾಲು ಮೊದಲಾದ ಉಡುಗೊರೆಯನ್ನು ಅಳಿಯಂದಿರಿಗೂ, ಬಹು ಬೆಲೆಯ ಸೀರೆ ಕುಪ್ಪಸಗಳನ್ನು ತಮ್ಮ ಕುಮಾರಿಯವರಾದ ಯುವರಾಣಿಯವರಿಗೂ ಒಪ್ಪಿಸಿ, ಕಳೆದ ತಾ|| ೨೧ ರಲ್ಲಿ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಬೆಂಗಳೂರ ಡಿ|| ಆಫೀಸ್ ಕಟ್ಟಡದಲ್ಲಿರುವ ಕೋರ್ಟುಗಳಿಗೆ ಸಾಕ್ಷಿಗಳಾಗಿ ಬರತಕ್ಕ ಜನರು ಮರಗಳ ಕೆಳಗಡೆಯಲ್ಲಿ ಅಥವಾ ಬೈಲಿನಲ್ಲಿದ್ದುಕೊಂಡು ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನನೆದು ಕಾಲಹರಣಮಾಡಬೇಕಾಗಿರುವುದಷ್ಟೆ. ಆದರೆ ಈ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದು ಸಾಕ್ಷಿಗಳಾಗಿ ಬರತಕ್ಕ ಜನರು ಕುಳಿತುಕೊಳ್ಳುವುದಕ್ಕಾಗಿ ರಿಕಾರ್ಡು ಕೊಠಡಿಗಳ ಸಮೀಪದಲ್ಲಿ ಒಂದು ಕೊಠಡಿಯು ಕಟ್ಟಲ್ಪಡುತ್ತಿರುವುದು. ಇದರಿಂದ ಆ ಜನರಿಗೆ ಸರಕಾರದವರು ಮಹೋಪಕಾರಮಾಡಿದಂತಾಗಿರುವುದರಲ್ಲಿ ಸಂದೇಹವಿಲ್ಲವು.

ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಮಂತ್ರಿಪದವಿಯಿಂದ ನಿವೃತ್ತರಾದಮೇಲೆ ತಿಂಗಳೊಂದಕ್ಕೆ ೫೦೦ ರೂ. ಗಳ ಪೇರಿ ಪೆನ್ಷನನ್ನು ತೆಗೆದುಕೊಳ್ಳಲು ಸಮ್ಮತಿಸದೆ ಬಹುಕಾಲದವರೆಗೆ ಬಿಟ್ಟಿದ್ದು ಮ|| ವಿ. ಪಿ. ಮಾಧವರಾಯರಿಗೆ ಸಲ್ಲುತ್ತಿರುವ ಪೆನ್ಷನ್ನಿನಷ್ಟಾದರೂ ಅಥವಾ ಅದು ಸಾಧ್ಯವಿಲ್ಲದಿದ್ದಲ್ಲಿ ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್ ರವರಿಗೆ ಗೊತ್ತಾಗಿದ್ದಷ್ಟಕ್ಕಾದರೂ ತಮ್ಮ ಪೆನ್ಷನನ್ನು ಹೆಚ್ಚಿಸಿ, ತಮ್ಮ ಎಲಂದೂರು ಜಹಗೀರಿಯ ಸಮೀಪದಲ್ಲಿ ಒಂದು ಭೂಮಿಯ ರೂಪವಾಗಿ ಕೊಡಿಸಿಕೊಡಬೇಕೆಂದೂ, ಅದರ ಉತ್ಪನ್ನದಿಂದ ಬೆಂಗಳೂರಲ್ಲಿ ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಒಂದು ಅನಾಥಾಲಯವನ್ನು ಸ್ಥಾಪಿಸುವುದಲ್ಲದೆ, ಸಂಸ್ಕೃತ ವಿದ್ಯಾಭಿವೃದ್ಧಿಯನ್ನು ಮಾಡಿಸುತ್ತೇವೆಂದೂ ೧೯೧೧ ನೆಯ ನವಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಂಡಿದ್ದರು. ಆದರೆ ಶ್ರೀಮನ್ಮಹಾರಾಜರವರು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಡಲು ಸಕಾರಣವನ್ನು ಕಾಣದೆ, ೫೦೦ ರೂ. ಗಳ ಪೆನ್ಷನ್ ಮಾತ್ರ ಸಲ್ಲತಕ್ಕದೆಂದು ಅಪ್ಪಣೆಮಾಡಿರುವರು. ಸರ್ ಕೃಷ್ಣಮೂರ್ತಿಯವರ ಪತ್ನಿಯವರು ತಮ್ಮ ಜೀವಿತದವರೆಗೆ ಪೆನ್ಷನ್ನಿಗಾಗಿ ಪೂರ್ತಿಯಾಗಿ ೩೫೦೦೦ ರೂ, ಗಳನ್ನು ಕೊಡಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದರಮೇಲೆ ಅದನ್ನು ಕೊಡಿಸಿಕೊಡಬೇಕೆಂದು ಈಗಿನ ದಿವಾನರೂ ಅಭಿಪ್ರಾಯಪಟ್ಟಿರುತ್ತಾರೆ.

ವರ್ತಮಾನ ಸಂಗ್ರಹವು.

ನ್ಯೂಯಾರ್ಕಿನಲ್ಲಿ ಒಂದು ರೈಲ್ವೆಯ ಇಂಜನ್ನು ಒಡೆದುಹೋಗಿ ೨೫ ಜನರು ಸತ್ತುಹೋದರು.

ರಾಜಚಕ್ರವರ್ತಿಯವರ ಜನ್ಮದಿನೋತ್ಸವವು ಭರತಖಂಡದಲ್ಲಿ ಜೂನ್ ತಾ|| ೩ ರಲ್ಲಿ ನೆರವೇರಿಸಲ್ಪಡುವುದಾಗಿ ಗೊತ್ತಾಗಿದೆ.

ಸೀಮೆಯಲ್ಲಿ ಒಂದು ಕಲ್ಲಿದ್ದಲು ಗಣಿಯು ಒಡೆದುಹೋಗಿ ಒಳಗಿದ್ದವರಲ್ಲಿ ೧೦೫ ಜನರು ಜೀವಸಹಿತಸಮಾಧಿಯನ್ನೈದಿದರು.

ಪಂಜಾಬಿನಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಎಡ್ವರ್ಡ್ ಸಾರ್ವಭೌಮರ ಸ್ಮಾರಕಕಾರ್ಯಕ್ಕಾಗಿ ಈವರೆಗೆ ೧೨ ಲಕ್ಷ ರೂ.ಗಳ ಫಂಡು ಸೇರಿದೆ.

ಆಕಾಶನಾವೆಯಲ್ಲಿಟ್ಟುಕೊಂಡು ಬಹು ತ್ವರೆಯಿಂದ ಗುಂಡನ್ನು ಹೊಡೆಯಲನುಕೂಲಿಸುವಂತೆ ಒಂದು ಫಿರಂಗಿಯು ಹೊಸದಾಗಿ ನಿರ್ಮಿಸಲ್ಪಟ್ಟಿರುತ್ತದೆ.

ಪೋರ್ಚುಗಲ್ಲಿನಲ್ಲಿ ಅನಾಯಕ ರಾಜ್ಯಾಭಿಲಾಷಿಗಳು ಒಂದು ಮನೆಯಲ್ಲಿ ರಹಸ್ಯವಾಗಿ ಸಿಡಿಮದ್ದನ್ನು ಮಾಡುತ್ತಿರುವಾಗ್ಗೆ, ಅದು ಅಕಸ್ಮಾತ್ತಾಗಿ ಹಾರಿ ೪ ಜನರು ಸತ್ತುಹೋದರು. ೫ ಜನರು ಗಾಯವಡೆದರು.

ತಿಬಿಟ್ಟಿನಲ್ಲಿ ಚೈನಾ ದೇಶೀಯರಿಗೂ ಅಲ್ಲಿಯ ಜನರಿಗೂ ಮನಸ್ತಾಪವುಂಟಾಗಿ ಬಹಳ ಬಡಿದಾಟವಾಯಿತು. ಆದರೆ ಯಾರಕಡೆ ಎಷ್ಟು ಜನರು ಮಡಿದರು ಮತ್ತು ಗಾಯವಡೆದರು ಎಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲವು.

ಬಂಗಾಳಾ ಸರ್ಕಾರದವರು 'ಸುಲಭಸಮಾಚಾರ' ಎಂದು ದೇಶಭಾಷೆಯಲ್ಲಿ ಹೊರಡುವ ಪತ್ರಿಕೆಯ ೨೫೦೦೦ ಪ್ರತಿಗಳನ್ನು ಕೊಂಡು ಜನರಿಗೆ ಉಚಿತವಾಗಿ ಹಂಚುತ್ತಿರುವುದನ್ನು ಜನರು ಅಪೇಕ್ಷಿಸದುದರಮೇಲೆ ಈ ಪತ್ರಿಕೆಯನ್ನು ಕೊಳ್ಳುವುದನ್ನು ನಿಲ್ಲಿಸಿಬಿಡುವವರಾಗಿರುವರು.

ಲಾಹೋರಿನಲ್ಲಿ ಪ್ರತಿನಿತ್ಯದಲ್ಲೂ ಮತ್ತು ವಾರಕ್ಕೊಂದಾವೃತ್ತಿ ಹೊರಡುವ ಜಮೀಂದಾರಿ ಎಂಬ ಮಹಮ್ಮದೀಯ ಪತ್ರಿಕೆಗಳ ಲೇಖನಗಳು ಆಕ್ಷೇಪಕರವಾಗಿರುವುದರಿಂದ ೨ ಪತ್ರಿಕೆಗಳಿಗಾಗಿ ಒಂದೊಂದು ಸಾವಿರ ರೂ ಗಳನ್ನು ಹೊಣೆಯಾಗಿಡಬೇಕೆಂದು ಲಾಹೋರಿನ ಡಿ|| ಮ್ಯಾಜಿಸ್ಟ್ರೇಟರಪ್ಪಣೆ ಮಾಡಿರುತ್ತಾರೆ.

ಭರತಖಂಡದ ವಾಯವ್ಯಮೂಲೆಯಲ್ಲಿರುವ ಅಪ್ಪರ್ ಸ್ವಾತಿನ ಜನರು ಕಂದಾಯವನ್ನು ಕೊಡಲು ತಿರಸ್ಕರಿಸಿದುದರಮೇಲೆ ಅವರಿಗೂ ದಿರ್ ಸಂಸ್ಥಾನದ ನವಾಬರಿಗೂ ವೈಮನಸ್ಯವುಂಟಾಗಿದೆ. ಈ ಸ್ವಾತಿನ ಜನರು ಅಫಘಾನಿಸ್ಥಾನದ ವರ್ತಕರಿಂದ ಹಳೆಯ ಕೋವಿಗಳನ್ನು ಹೆಚ್ಚುಬೆಲೆಯನ್ನು ಕೊಟ್ಟು ಕೊಂಡುಕೊಂಡಿರುವರು.

ಕಲಕತ್ತಾದ ಸರ್ವವಸ್ತು ಪ್ರದರ್ಶನಶಾಲೆಯಲ್ಲಿ ಬಹು ಪುರಾತನವಾದ ಸಿತಾರು ಒಂದು ಗಾಜಿನ ಬೀರುವಿನಲ್ಲಿಡಲ್ಪಟ್ಟಿದ್ದಿತು. ಯಾರೊ ಕಳ್ಳರು ಆ ಬೀರುವಿನ ಗಾಜನ್ನೊಡೆದು ಹಾಕಿ ಸಿತಾರಿಗೆ ಕಟ್ಟಿದ್ದ ಚಿನ್ನದ ತಂತಿಗಳನ್ನೂ, ಬಿರಡೆಗಳನ್ನೂ ಸಿತಾರಿನ ಮೇಲ್ಭಾಗದಲ್ಲಿ ಕಿರೀಟದಾಕೃತಿಯಲ್ಲಿ ಮಾಡಲ್ಪಟ್ಟಿದ್ದ ಭಂಗಾರದ ಆಭರಣವನ್ನೂ ಅಪಹರಿಸಿಕೊಂಡು ಹೋಗಿರುವರು.

ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ತೆಗೆದುಕೊಳ್ಳುತ್ತಿದ್ದ ಶ್ರೀಮಂತರುಗಳನ್ನು ಸೂರೆಮಾಡುತ್ತ ೧೩ ಕೊಲೆಗಳನ್ನು ಮಾಡಿರುವ ಕಳ್ಳರ ಯಜಮಾನನಾದ ನಾದಿ ಎಂಬುವನು ಜೇಲಂ ಡಿಸ್ಟ್ರಿಕ್ಟಿನಲ್ಲಿ ಪಿಂಡಿದಾದಾರ್ಖಾನ್ ಬಳಿ ಸೆರೆಹಿಡಿಯಲ್ಪಟ್ಟನು. ಇವನನ್ನು ಹಿಡಿದವರಿಗೆ ೬೦೦ ರೂ. ಬಹುಮಾನವು ಕೊಡಲ್ಪಡುವುದಾಗಿ ಸರ್ಕಾರದವರಿಂದ ಪ್ರಸಿದ್ಧಪಡಿಸಲ್ಪಟ್ಟಿದ್ದಿತು.

ಲಾರ್ಡ್ ಕಾರ್ಮೈಕೇಲ್‌ರವರು ಈ ತಾ|| ೨೯ ರಲ್ಲಿ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ಸರ್ಕಾರಿಯಧಿಕಾರಿಗಳು, ಕೌನ್ಸಿಲುಗಳ ಮೆಂಬರುಗಳು, ದೊಡ್ಡಮನುಷ್ಯರುಗಳು ಮೊದಲಾದವರಿಂದ ಮರ್ಯಾದಾಪುರಸ್ಸರವಾಗಿ ಬೀಳ್ಕೊಟ್ಟು ದಫರಿ ಎಂಬ ಹಡಗನ್ನು ಹತ್ತಿ ಪ್ರಯಾಣಮಾಡುವರು. ಮತ್ತು ಏಪ್ರಿಲ್ ತಾ|| ೮ ರ ವರೆಗೆ ಕಲಕತ್ತಾದಲ್ಲಿದ್ದು ತಾ|| ೯ ರಲ್ಲಿ ಡಾರ್ಜಿಲಿಂಗಿಗೆ ಹೋಗುವರು.

ನಿರ್ಗತಿಕರಾದವರು ಕೆಲಸವನ್ನು ಮಾಡಿ ಜೀವಿಸಬೇಕೆಂದು ಸಿಲೋನಿಗೆ ಹೋಗಿ ಅಲ್ಲಿ ಬಹು ತೊಂದರೆಯನ್ನನುಭವಿಸುತ್ತಿರುವುದನ್ನು ಇಂಡ್ಯಾ ಸರ್ಕಾರದವರು ಸಿಲೋನಿನ ಸರ್ಕಾರದವರಿಂದ ತಿಳಿದು ಇನ್ನುಮೇಲೆ ಸಿಲೋನಿನಲ್ಲಿ ಕೆಲಸವು ದೊರೆಯುವುದು ಗೊತ್ತಾಗಿದ್ದ ಹೊರತು ಅಥವಾ ಅಲ್ಲಿ ಜೀವನಕ್ಕೆ ಸಾಕಷ್ಟು ಹಣವನ್ನು ಕೈಯಲ್ಲಿಟ್ಟುಕೊಂಡಿದ್ದ ಹೊರತು ಯಾರೂ ಸಿಲೋನಿಗೆ ಹೋಗಕೂಡದೆಂದು ಎಚ್ಚರಿಸುತ್ತಾರೆ.

ಸುಕ್ಕೂರ್‌ನಿಂದ ಪಂಜಾಬಿಗೆ ಪ್ರಯಾಣಮಾಡಲಿಕ್ಕಿದ್ದ ಒಬ್ಬ ಯಿರೋಪ್ಯಸ್ತ್ರೀಯು ಭ್ರಾಂತಿಯಿಂದ ಬೇರೆಕಡೆಗೆ ಹೊರಡುವ ಬಂಡಿಯಲ್ಲಿ ಕುಳಿತುಕೊಂಡು ಬಂಡಿಯು ಹೊರಡುವ ಸಮಯದಲ್ಲಿ ತನ್ನ ತಪ್ಪನ್ನು ತಿಳಿದು ಹೊರಗಿಳಿಯಲು ಯತ್ನಿಸುವಾಗ್ಗೆ ಕಾಲುಜಾರಿ ಕೆಳಗೆ ಬಿದ್ದು ಬಂಡಿಯ ಚಕ್ರಗಳಿಗೆ ಸಿಕ್ಕಿ ಕೂಡಲೆ ಸತ್ತುಹೋದಳು. ಅವಳ ಕೂಡ ಬಂಡಿಯಲ್ಲಿದ್ದ ಅವಳ ೪ ವರ್ಷ ವಯಸ್ಸಿನ ಮಗುವು ಮಾತ್ರ ದೈವಕೃಪೆಯಿಂದ ಅಪಾಯವಿಲ್ಲದೆ ತಪ್ಪಿಸಿಕೊಂಡು ಹೊರಗೆ ಬಂದಿತು.

ಕೇಂಬ್ರಿಡ್ಜ್ ಸರ್ವಕಲಾಶಾಲೆಯಲ್ಲಿ ವ್ಯಾಸಂಗಮಾಡುತ್ತಿರುವ ಭರತಖಂಡದ ವಿದ್ಯಾರ್ಥಿಗಳು ಕೆಲದಿನಗಳ ಕೆಳಗೆ ಸಂಸ್ಕೃತಪಂಡಿತರಾದ ರಾಪ್ಸನ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಭರತಖಂಡದಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಹಿಂದೂ ಮಹಮ್ಮದೀಯ ಸರ್ವಕಲಾಶಾಲೆಗಳ ಸಂಬಂಧವಾಗಿ ಪ್ರೋತ್ಸಾಹಕರವಾದ ಭಾಷಣಗಳನ್ನು ಮಾಡಿ ಕೇಂಬ್ರಿಡ್ಜಿನಲ್ಲಿರುವ ವಿದ್ಯಾರ್ಥಿಗಳೆಲ್ಲರಿಂದಲೂ ಚಂದಾಹಣವನ್ನೆತ್ತಿ ಹಿಂದೂ ಮಹಮ್ಮದೀಯರ ಸರ್ವಕಲಾಶಾಲೆಗಳ ಸಹಾಯಾರ್ಥವಾಗಿ ಕಳುಹಿಸಿಕೊಡಬೇಕೆಂದು ನಿರ್ಧರಿಸಿದರು.

ಕಳೆದ ತಾ|| ೧೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೮೦೧೧ ಜನರಿಗೆ ಪ್ಲೇಗುರೋಗವು ತಗಲಿ ೧೫೩೦೧ ಜನರು ಸತ್ತರು. ಇವರಲ್ಲಿ ಬೊಂಬಾಯಾಧಿಪತ್ಯದಲ್ಲಿ ೭೨೧೯; ಮದ್ರಾಸಾಧಿಪತ್ಯದಲ್ಲಿ ೧೬೮; ಬಂಗಾಳಾದಲ್ಲಿ ೩೨೯೭; ಸಂಯುಕ್ತಪ್ರಾಂತಗಳಲ್ಲಿ ೭೬೩೦; ಪಂಜಾಬಿನಲ್ಲಿ ೧೮೯೩; ಬರ್ಮಾದಲ್ಲಿ ೯೧; ಸಂಯುಕ್ತ ಪ್ರಾಂತಗಳಲ್ಲಿ ೧೫೬೭; ಮೈಸೂರ ಸೀಮೆಯಲ್ಲಿ ೮೫; ಹೈದರಾಬಾದಿನಲ್ಲಿ ೫೭೩; ಮಧ್ಯಹಿಂದೂಸ್ಥಾನದಲ್ಲಿ ೭೭೩ ಮತ್ತು ರಜಪುಟಾನದಲ್ಲಿ ೯೮ ಈ ಪ್ರಕಾರ ಮರಣಗಳಾಗಿರುತ್ತವೆ.

ಒಬ್ಬ ಬಂಗಾಳಿ ಯುವಕನು ಬರ್ಲಿನ್ನಿಗೆ ಹೋಗಿ ಒಂದು ಮಿಠಾಯಿಯಂಗಡಿಯನ್ನು ಇಟ್ಟುಕೊಂಡಿರುತ್ತಾನೆ. ಬಂಗಾಳಾದಲ್ಲಿ ಬಹು ಪ್ರಸಿದ್ಧಿಯಾದ ಜಿಲೇಬಿ, ಜಾಮೂನು ಗಜರಿ, ನಿಮಿಕಿ ಮೊದಲಾದ ಮಿಠಾಯಿ ಪದಾರ್ಥಗಳು ಜರ್ಮನಿಯ ದೇಶಸ್ಥರಿಗೆ ಅತ್ಯಂತ ರುಚಿಕರವಾಗಿ ಕಂಡಿರುವುದರಿಂದ ವಿಶೇಷವಾಗಿ ವಿಕ್ರಯವಾಗುತ್ತ ಆ ಯುವಕನು ಬಲು ದುಡ್ಡನ್ನು ಸ್ವಲ್ಪಕಾಲದಲ್ಲಿ ಸಂಪಾದಿಸಿ ಶ್ರೀಮಂತನಾಗಿರುತ್ತಾನೆ. ಅದುಕಾರಣ ಮಿಠಾಯಿಗಾರರಾದ ಬಂಗಾಳಿಯ ಯುವಕರು ಪ್ರಪಂಚದಮೇಲೆಲ್ಲಾ ಅಂಗಡಿಗಳನ್ನಿಟ್ಟು ದುಡ್ಡನ್ನು ಸಂಪಾದಿಸಬಹುದೆಂದು ಒಂದು ಪತ್ರಿಕೆಯು ತಿಳಿಸುತ್ತದೆ.

ರಷ್ಯಾದಲ್ಲಿ ಫಾದರ್ ದಮಾಜಿನುಕೋಟ್ ಎಂಬ ಪಾದ್ರಿಯು ಮೇರಿ ಅಮ್ಮನ ದೇವಾಲಯದಿಂದ ೧೫೦೦೦೦೦ ರೂ. ಬೆಲೆಬಾಳುವ ವಜ್ರದ ಕಿರೀಟವನ್ನು ಅಪಹರಿಸಿಕೊಂಡು ತನ್ನ ಚಿಕ್ಕಪ್ಪನಾದ ವಲ್ಕಾರ್‌ಮಕೋಟ್ ಎಂಬ ಪಾದ್ರಿಯ ಮೂಲಕ ಆ ಕಿರೀಟವನ್ನು ವಿಕ್ರಯಿಸಿದ್ದುದರಿಂದ ಚಿಕ್ಕಪ್ಪನು ತನ್ನ ರಹಸ್ಯವನ್ನು ಬಹಿರಂಗಮಾಡಬಹುದೆಂದು ಶಂಕಿಸಿ ಅವನನ್ನು ಕೊಂದು ಅವನ ಶವವನ್ನು ಹಾಸಿಗೆಯೊಳಗಿಟ್ಟು ಹೊಲಿದಿದ್ದೆನೆಂದು ೧೯೦೯ ನೆಯ ಅಕ್ಟೋಬರ್ ತಾ|| ೨೩ ರಲ್ಲಿ ಪೋಲೀಸಿನ ವಿಚಾರಣೆಯಲ್ಲಿ ಒಪ್ಪಿಕೊಂಡುದರ ಮೇಲೆ ಅವನು ಬಹಿಷ್ಕೃತನಾಗಿ ಮಾಡಲ್ಪಟ್ಟಿದ್ದನು. ಈಗ ಆ ಪಾದ್ರಿಯು ಮತ್ತು ಅವನ ಸಹಾಯಕರಾಗಿದ್ದ ಬೇರೆ ೩ ಜನ ಪಾದ್ರಿಗಳ ಕ್ರಿಮಿನಲ್ ವಿಚಾರಣೆಯ ಸಂಬಂಧವಾಗಿ ೧೦೦ ಜನ ಸಾಕ್ಷಿಗಳ ವಿಚಾರಣೆಯು ನಡೆಯತಕ್ಕದಾಗಿದೆ.

ಬೊಂಬಾಯಿ ಕರ್ನಾಟಕ ಪ್ರಾಂತದ ಸರ್ಕಾರಿ ಗೆಜೆಟ್‌ಸಂಗ್ರಹ.

ಬೆಳಗಾವಿಯ ಕಲೆಕ್ಟರಾದ ಮಿ|| ಬ್ರ್ಯಾಂಡರ್‌ರವರು ಒಂದು ವರ್ಷ ರಜವನ್ನು ಪಡೆದುಕೊಂಡಿರುವುದರಿಂದ, ಬಿಜಾಪುರದ ಕಲೆಕ್ಟರಾದ ಮಿ|| ಬ್ರೌನರವರು ಬೆಳಗಾವಿಯ ಕಲೆಕ್ಟರಾಗಿಯೂ, ಕುಲಾಬಾದ ಕಲೆಕ್ಟರಾದ ಮಿ|| ಕಾಬ್ರಾಜಿಯವರು ಬಿಜಾಪುರದ ಕಲೆಕ್ಟರಾಗಿಯೂ, ಧಾರವಾಡದ ಅಸಿಸ್ಟೆಂಟ್ ಕಲೆಕ್ಟರಾದ ಮಿ|| ಥಾಮಸ್‌ರವರು ಕುಲಾಬಾದ ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಕಾರವಾರದ ಡಿಸ್ಟ್ರಿಕ್ಟ್ ಡಿಪ್ಯುಟಿ ಕಲೆಕ್ಟರಾದ ಮಿ|| ಪಾಟೀಲ್‌ರವರಿಗೆ ೨ ತಿಂಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಮಿ|| ಶ್ರೀನಿವಾಸಸ್ವಾಮಿರಾವ್ ದೇಶಪಾಂಡೆಯವರು ಕಾರವಾರದ ಡಿ|| ಡೆ|| ಕಲೆಕ್ಟರಾಗಿಯೂ ಗದಗಿನ ಮಾಮಲೆದಾರರಾದ ಮಿ|| ಗೋಪಾಲರಾಮಚಂದ್ರ ಬಾಳೇಕುದ್ರಿಯವರು ಕಾರವಾರದ ಹುಜೂರು ಡಿ|| ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಬಾಗಲಕೋಟೆಯ ಮಾಮಲೆದಾರರಾದ ಮಿ|| ರೇವಣಸಿದ್ದಪ್ಪ ಬಸಪ್ಪಕಿತ್ತೂರರವರು ಬೆಳಗಾವಿಯ ಹುಜೂರು ಡಿ|| ಕಲೆಕ್ಟರಾಗತಕ್ಕದ್ದು.

ಕಾರವಾರದ ಕಲೆಕ್ಟರ ಚಿಟನೀಸರಾದ ಮಿ|| ರಾಮಚಂದ್ರಕೃಷ್ಣ [illegible] ಇವರು ಗೋಕಾವಿಯ ಮಾಮಲೆದಾರರಾಗಿಯೂ, ಮಿ|| [illegible]

ಕಮಿಷನರಾಗಿ ಮಾಡಲ್ಪಟ್ಟ ಮ|| ಒಬೇದುಲ್ಲಾಯವರು ಬರುವವರೆಗೆ ಅಥವಾ ಮತ್ತೊಂದು ಅಪ್ಪಣೆಯಾಗುವವರೆಗೆ ಕಡೂರು ಡಿ|| ಪ್ರೊ|| ಸೂಪರಿಂಟೆಂಡೆಂಟರ ಉದ್ಯೋಗದ ಮೇಲೆ ನಿಯಮಿಸಲ್ಪಟ್ಟಿರುತ್ತಾರೆ.

ಜನರಲ್ ಮತ್ತು ರೆವಿನ್ಯೂ ಶಾಖೆಗಳ ಅ|| ಸೆಕ್ರೆಟರಿ ಮ|| ಎಚ್, ಹಿರಿಯಣ್ಣಯ್ಯ, ಎಂ. ಎ., ಬಿ. ಎಲ್., ರವರಿಗೆ ೧೯೧೩ ನೆಯ ಮಾರ್ಚಿ ತಾ|| ೧೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವಂದಿನಿಂದ ೧೮ ದಿವಸಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ.

೨ ನೆಯ ತ|| ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಜಿ. ಕೃಷ್ಣಮೂರ್ತಿನಾಯಿಡುಯವರು ೧ನೆಯ ತ|| ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಪ್ರೊಬೇಷನರಿ ಸಬ್‌ಜಡ್ಜ್ ಮ|| ಎ. ಕೆ. ವೆಂಕಟರಮಣ ಶೆಟ್ಟರು ೧೯೧೩ ನೆಯ ಮಾರ್ಚಿ ತಾ|| ೧ ರಿಂದ ೪ ನೆಯ ತ|| ಸಬ್‌ಜಡ್ಜ್‌ರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೩ ನೆಯ ಮಾರ್ಚಿ ತಾ|| ೨೪ ನೆಯ ಸೋಮವಾರ

ಸೀಮೆಯ ಕಲ್ಲಿದ್ದಲಿನ ಗಣಿಯ ಕೆಲಸಗಾರರ ಗೊಂದಲವು.

ಗಣಿಗಳಲ್ಲಿ ಕೆಲಸಮಾಡುವವರು ದೊಡ್ಡವರಿಗೆ ರೂ. ೭-೧೧-೦ ರಿಂದ ರೂ. ೪-೧೦-೦ ಗೂ, ಹುಡುಗರಿಗೆ ರೂ. ೧-೮-೦ ವರೆಗೂ ಕಡಿಮೆಯಿಲ್ಲದಂತೆ ಕೂಲಿಯು ಕೊಡಲ್ಪಟ್ಟ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರವಿಡಿದು ನಿಂತುಬಿಟ್ಟುದರಿಂದ, ಉಕ್ಕು, ಕಬ್ಬಿಣ ಮತ್ತು ತವರಗಳ ಕೆಲಸಗಾರರು ೨೩೭೪೦೦; ಬಟ್ಟೆಯನ್ನು ನೇಯುವ ಕೆಲಸಗಾರರು ೮೫೩೭೦; ರೈಲ್ವೆಯ ಕೆಲಸಗಾರರು ೭೨೦೦೦; ಹಡಗುಗಳನ್ನು ಕಟ್ಟುವ ಸ್ಥಳದಲ್ಲಿ ಕೆಲಸಮಾಡುವವರು ೬೦೫೦; ಕುಂಬಾರರು ೮೦೦೦೦; ಮನೆ ಮೊದಲಾದುವನ್ನು ಕಟ್ಟುವವರು ೨೯೭೦೦; ಅಂಬಿಗರು ೨೯೭೦೦; ಜೋಟಿನ ಕೆಲಸಗಾರರು ೨೪೦೦೦; ಕಲ್ಲಾಪತ್ತಿನ ಕೆಲಸಗಾರರು ೮೨೦೦೦; ಬೆಸ್ತರು ೭೫೦೦; ಇಂಜನಿಯರುಗಳು ೭೫೦೦; ಟಪ್ಪಾಮಾಡುವವರು ೬೫೦೦; ಕಲ್ಲಿದ್ದಲನ್ನು ಸಾಗಿಸುವವರು ೧೧೦೦೦; ಮಿಠಾಯಿಯನ್ನು ಮಾಡುವವರು ೩೫೦೦; ಕಲ್ಲನ್ನೊಡೆಯುವವರು ೩೫೦೦; ಸರಪಳಿಯನ್ನು ಮಾಡುವವರು ೩೧೦೦; ರಸಾಯನಗಾರರು ೨೫೦೦; ಕಾಗದವನ್ನು ಮಾಡುವವರು ೨೦೦೦; ಬೇಸಾಯದ ಮುಟ್ಟುಗಳನ್ನು ಮಾಡುವವರು ೧೩೫೦; ಗಾಜಿನ ಕೆಲಸಗಾರರು ೧೫೫೦; ಹಗ್ಗವನ್ನು ಹೊಸೆಯುವವರು ೧೧೦೦; ಜೇಡಿಮಣ್ಣಿನಲ್ಲಿ ಕೆಲಸಮಾಡುವವರು ೯೦೦; ಟ್ರಾಂ ಬಂಡಿಗಳ ಕೆಲಸಗಾರರು ೩೦೦ ಮತ್ತು ಇತರ ಕೆಲಸಗಾರರು ೨೦೩೫೦ ಇಂತಿಷ್ಟು ಜನರು ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದೆ ಬಹು ಕಷ್ಟಪಡಬೇಕಾಗಿ ಬಂದಿತು. ಗ್ರಿಂಸ್‌ಬಿ ಎಂಬಲ್ಲಿ ಕ್ಷುಧಾತುರರಾದ ಜನರು ಬೀದಿಯಲ್ಲಿ ಅಲೆಯುವುದನ್ನು ಪೊಲೀಸು ಚೀಫ್ ಕಾನ್ಸ್‌ಟೆಬಲನು ನೋಡಿ ಕನಿಕರಪಟ್ಟು ಅವರುಗಳೆಲ್ಲರಿಗೂ ಆಹಾರವನ್ನೂ, ಟೀಯನ್ನೂ ಹಂಚಿದನು. ಕೆಲಸಗಳಿಗೆ ಹೋಗದೆ ಮುಷ್ಕರವನ್ನು ಹಿಡಿದು ಗೊಂದಲವನ್ನೆಬ್ಬಿಸಿರುವವರಿಗೂ, ನಿರುದ್ಯೋಗಿಗಳಾಗಿರುವವರಿಗೂ ಈ ವರೆಗೆ ೧೨೭೫೦೦೦೦ ರೂ. ಗಳು ಕೂಲಿಕಾರರ ಸಂಘದವರಿಂದ ಹಂಚಲ್ಪಟ್ಟಿರುತ್ತವೆ. ಮಂತ್ರಿವರ್ಗ್ಯರಾದ ಮ|| ಆಸ್ಕ್ವಿತ್‌ರವರು ಕೂಲಿಕಾರರಲ್ಲಿ ದೊಡ್ಡವರಿಗೆ ರೂ. ೭-೧೧-೦ ಗಿಂತಲೂ, ಹುಡುಗರಿಗೆ ರೂ. ೧-೮-೦ ಗಿಂತಲೂ ಕಡಿಮೆ ಕೂಲಿಯು ದೊರೆಯಕೂಡದೆಂದು ಒಂದು ಬಿಲ್ಲನ್ನು ಮಾಡಿ ಸಭೆಯಲ್ಲಿ ಮೊದಲನೆಯ ದಿವಸ ಓದಿದಾಗ ಅನೇಕ ಮೆಂಬರುಗಳು ಅದನ್ನು ಸಮ್ಮತಿಸದೆ ಹೋದುದಲ್ಲದೆ, ಕಾಮನ್ಸ್ ಸಭೆಯು ವಿಸರ್ಜಿಸಲ್ಪಡುವುದು ಎಂಬುವಷ್ಟರಮಟ್ಟಿಗೆ ಭಯೋತ್ಪಾತವಾಗಿದ್ದಿತು. ಆದರೆ ಎರಡನೆಯ ದಿನ ಆ ಬಿಲ್ಲು ಪುನಃ ಓದಲ್ಪಟ್ಟು ೨೨೮ ಮೆಂಬರುಗಳಿಂದ ಅಂಗೀಕರಿಸಲ್ಪಟ್ಟಿತು. ಮಂತ್ರಿಯವರು ಗಣಿಗಳ ಯಜಮಾನರುಗಳ ಮತ್ತು ಕೂಲಿಕಾರರ ಸಂಘಗಳ ಪ್ರತಿನಿಧಿಗಳ ಸಭೆಯೊಂದನ್ನು ಈ ದಿವಸ ಕೂಡಿಸಿ ಪಾರ್ಲಿಮೆಂಟ್ ಸಭೆಯಲ್ಲಿ ಅಂಗೀಕೃತವಾಗಿರುವ ಬಿಲ್ಲಿಗೆ ಉಭಯಪಕ್ಷದ ಪ್ರತಿನಿಧಿಗಳ ಒಪ್ಪಿಗೆಯನ್ನು ಕೇಳುವರು. ಹಾಗೆ ಅವರು ಆ ಬಿಲ್ಲನ್ನೊಪ್ಪದೆಹೋಗಿ ಇನ್ನೂ ಗೊಂದಲಕ್ಕಾಸ್ಪದವನ್ನುಂಟುಮಾಡುವ ಪಕ್ಷದಲ್ಲಿ ಜನರ ನೆಮ್ಮದಿಗೆ ಭಂಗಬಾರದಂತೆ ನೋಡಿಕೊಳ್ಳಲು ಸರ್ಕಾರದವರು ತಕ್ಕೇರ್ಪಾಟನ್ನಿಡಲು ಸಿದ್ಧರಾಗಿರುವರು. ಇದುವರೆಗೆ ಕೂಲಿಕಾರರು ಹಟವಿಡಿದು ಗಣಿಗಳಲ್ಲಿ ಕೆಲಸಮಾಡದೆ ನಿಂತುಬಿಟ್ಟಿರುವುದರಿಂದ ಕಾರ್ಖಾಲಯಗಳು, ನಾವೆಗಳು, ರೈಲ್ವೆಗಳು ಮೊದಲಾದವುಗಳ ಕೆಲಸಗಳಿಗೆ ಕಲ್ಲಿದ್ದಲು ದೊರೆಯದೆ ನಿಂತುಹೋಗಿರುವುದರಿಂದ, ಅವುಗಳಲ್ಲಿಯ ಕೆಲಸಗಾರರು ಜೀವನಕ್ಕಿಲ್ಲದೆ ಬಲು ತೊಂದರೆಪಡುತ್ತಿರುವರು. ಮತ್ತು ಇದರಿಂದ ಈಗಾಗಲೇ ಕಲ್ಲಿದ್ದಲುಗಣಿಗಳ ಯಜಮಾನರಿಗೂ, ಕೆಲಸಗಾರರಿಗೂ ಎಷ್ಟೋ ನಷ್ಟವಾಗಿರುವುದು. ಇವರುಗಳ ಹೋರಾಟದಿಂದ ಇತರ ಕಾರ್ಖಾಲಯದ ಯಜಮಾನರಿಗೂ, ಅವರ ಕೆಲಸಗಾರರಿಗೂ ನಷ್ಟವು ಸಂಭವಿಸಿರುವುದು. ಪ್ರಕೃತದ ಅಸಮಾಧಾನಸ್ಥಿತಿಯು ಇನ್ನೂ ಕೆಲಕಾಲ ನಡೆಯುವುದಾದರೆ ಯಜಮಾನರುಗಳಿಗೂ, ಅವರ ಕೆಲಸಗಾರರಿಗೂ ವಿಶೇಷ ನಷ್ಟವಾಗುವುದಲ್ಲದೆ, ಬಡಕೂಲಿಯ ಜನರು ಹೊಟ್ಟೆಗಿಲ್ಲದೆ ದಾಂಧಲೆಯನ್ನು ನಡಿಸುವ ಸಂಭವವಿರುವುದರಿಂದ ಗಣಿಯ ಯಜಮಾನರುಗಳೂ, ಅವರ ಕೆಲಸಗಾರರೂ ಗೌರ್ನಮೆಂಟಿನವರು ಸಿದ್ಧಗೊಳಿಸಿರುವ ಬಿಲ್ಲನ್ನು ಅಂಗೀಕರಿಸಿ ಪರಸ್ಪರ ಕೈಕೊಂಡಿರುವ ಹೋರಾಟವನ್ನು ಬಿಟ್ಟು ತಂತಮ್ಮ ಕೆಲಸಗಳು ಯಥಾಪ್ರಕಾರ ನಡೆಯುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸುವುದು

ಆನರಬಲ್ ಗೋಖಲೆಯವರು ಭಾರತೀಯರಿಗೆ ಬಲವಂತದಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿಸುವ ಬಗೆಗೆ ವಿಧಿಯನ್ನು ಮಾಡುವುದಕ್ಕಾಗಿ ಒಂದು ಬಿಲ್ಲನ್ನು ಸಿದ್ಧಗೊಳಿಸಿ ವೈಸ್‌ರಾಯರ ನಿಯಮನಿರ್ಮಾಣಸಭೆಯ ಸಮ್ಮತಿಗಾಗಿಟ್ಟಿದ್ದರು. ಈ ಸಂಬಂಧವಾದ ವಿಧಿಯನ್ನು ನಿರ್ಮಾಣಮಾಡುವ ವಿಚಾರದಲ್ಲಿ ಇಂಡ್ಯಾ ಸರ್ಕಾರದವರು ಎಲ್ಲಾ ಪ್ರಾಂತಗಳ ಅಧೀನಸರ್ಕಾರದವರನುಮತಿಯನ್ನು ಕೇಳಿರುವಲ್ಲಿ ಅವರುಗಳಲ್ಲಿ ಬಹುಭಾಗದವರು—ಅದರಲ್ಲಿಯೂ ಲೋಕಲ್ ಬೋರ್ಡಿನವರು ಈ ವಿಧಿಯನ್ನು ಅಗತ್ಯವಾಗಿ ಅನುಷ್ಠಾನಕ್ಕೆ ತರಬೇಕೆಂದೂ, ದುಡ್ಡಿನ ಕೊರತೆಯಿಂದ ಬಿಟ್ಟುಬಿಡದೆ ಅದಕ್ಕಾಗಿ ಕಂದಾಯವನ್ನು ಹೆಚ್ಚಿಸಿದರೂ ಕೊಡಲು ಸಿದ್ಧರಾಗಿದ್ದೇವೆಂದೂ ತಮ್ಮ ಅಭಿಪ್ರಾಯಗಳನ್ನು ತಿಳುಹಿದರು. ಅಲ್ಲದೆ ಪ್ರಾಥಮಿಕ ವಿದ್ಯಾಪ್ರೋತ್ಸಾಹಕ್ಕಾಗಿ ೫೦ ಲಕ್ಷ ರೂ. ಗಳನ್ನು ಪ್ರತಿವರ್ಷದಲ್ಲೂ ಆಗುವ ವ್ಯಯಕ್ಕಿಂತ ಹೆಚ್ಚಾಗಿ ವ್ಯಯಮಾಡತಕ್ಕದೆಂದು ಸಾರ್ವಭೌಮರವರು ತಮ್ಮ ಕಿರೀಟಧಾರಣ ಮಹೋತ್ಸವಕಾಲದಲ್ಲಿ ವರಪ್ರದಾನಮಾಡಿದರು. ಈ ಕಾರಣಗಳಿಂದ ಮ|| ಗೋಖಲೆಯವರ ಬಿಲ್ಲು ನಿಯಮನಿರ್ಮಾಣಸಭೆಯಲ್ಲಿ ಅನುಮೋದಿಸಲ್ಪಟ್ಟು ವಿಧಿಯು ನಿರ್ಮಾಣವಾಗುವುದೆಂದು ಈವರೆಗೆ ಭರವಸವಿದ್ದಿತು. ಆದರೆ ಈಚೆಗೆ ನಡೆದ ನಿಯಮನಿರ್ಮಾಣಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದು ಬಹುಜನ ಮೆಂಬರುಗಳ ಅಭಿಮತವು ವಿರುದ್ಧವಾಗಿದ್ದುದರಿಂದ, ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದ ಮಾಡಿಸುವುದರ ಸಂಬಂಧವಾದ ಬಿಲ್ಲು ಅನಂಗೀಕೃತವಾಗಿ ವಿಧಿಯು ನಿರ್ಮಾಣಕ್ಕೆ ಅವಕಾಶವಿಲ್ಲವಾಯಿತೆಂದು ತಿಳುಹಲು ಬಹು ಖೇದವಾಗುತ್ತದೆ. ಇಂಗ್ಲೆಂಡು, ಜಪಾನು ಮೊದಲಾದ ರಾಷ್ಟ್ರಗಳು ಈಗ ಉಚ್ಛ್ರಯಸ್ಥಿತಿಗೆ ಬರಲು ಅಲ್ಲಿಯ ಜನರಿಗೆ ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದಲೂ, ಉಚಿತದಿಂದಲೂ ಮಾಡಿಸುತ್ತಿರುವುದೇ ಮುಖ್ಯ ಕಾರಣವಾಗಿರುವುದರಿಂದ ಬಲು ಹಿಂದುಳಿದಿರುವ ಭಾರತೀಯರನ್ನು ವಿದ್ಯಾವಂತರನ್ನಾಗಿ ಮಾಡಲು ಪ್ರಾಥಮಿಕ ವಿದ್ಯೆಯನ್ನು ಬಲವಂತದಿಂದ ಮಾಡಿಸುವುದು ಅತ್ಯಾವಶ್ಯಕವು. ಅದು ವಿನಾ ಭಾರತೀಯರ ಸಂಪತ್ತು ಪರರಾಷ್ಟ್ರದವರಂತೆ ಅಭಿವೃದ್ಧಿಯಾಗುವುದಿಲ್ಲವೆಂದು ಅನೇಕ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಜನೀತಿಜ್ಞರೂ, ಸಮಾಜ ಸುಧಾರಕರೂ ಅಭಿಪ್ರಾಯಪಟ್ಟಿರುತ್ತಾರೆ. ಇಂತಹುದರಲ್ಲಿ ಭಾರತೀಯರ ಶ್ರೇಯೋಭಿವೃದ್ಧಿಗಾಗಿ ಹಗಲಿರುಳೂ ಪಾಡುಪಡುತ್ತಿರುವ ಆ|| ಗೋಖಲೆಯವರು ಬಹು ದೂರಾಲೋಚನೆಯಿಂದಲೂ, ಬುದ್ಧಿವಂತಿಕೆಯಿಂದಲೂ, ಅನುಭವದಿಂದಲೂ ಸಿದ್ಧಗೊಳಿಸಿದ್ದ ಬಿಲ್ಲಿನ ರಚನೆಯನ್ನು ಭಾರತೀಯರ ಪ್ರತಿನಿಧಿಗಳಾಗಿರುವ ಮೆಂಬರುಗಳೇ ಅನುಮೋದಿಸದೆ ಹೋದುದದು ಈ ದೇಶೀಯರ ದುರದೃಷ್ಟವೆಂತಲೇ ಹೇಳಬೇಕಾಗಿದೆ.

ಅಧಿಕಾರಿಗಳ ಬದಲಾವಣೆಯು.

ಮೈಸೂರ ಸಂಸ್ಥಾನದ ದಿವಾನರಾದ ಮ|| ಟಿ. ಆನಂದರಾಯರು, ಚೀಫ್ ಜಡ್ಜಿಯವರಾದ ಸರ್ ಇಜ್ಮಿಯವರು ಮತ್ತು ಕೆಲ ದೊಡ್ಡ ಅಧಿಕಾರಿಗಳು ವಯೋವೃದ್ಧರಾಗಿರುವುದರಿಂದಲೂ, ಅವರ ಉದ್ಯೋಗದವಧಿಯು ಪೂರೈಸಿರುವುದರಿಂದಲೂ, ಅವರುಗಳು ಕೂಡಲೆ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ಹೊಸಬರು ನಿಯಮಿಸಲ್ಪಡುವರೆಂದೂ ತತ್ಸಂಬಂಧದಲ್ಲಿ ಅನೇಕ ಅಧಿಕಾರಿಗಳ ಬದಲಾವಣೆಗಳಾಗುವುವೆಂದೂ ಈದೇಶದ ಮತ್ತು ಹೊರಗಣ ವೃತ್ತಪತ್ರಿಕೆಗಳಲ್ಲಿ ಚರ್ಚೆಗಳು ತೆರಪಿಲ್ಲದೆ ನಡೆಯುತ್ತಿವೆ. ಇದೇ ವಿಚಾರದಲ್ಲಿ ತಾ|| ೨೧ ರ ಡೇಲಿ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನವನ್ನು ಬೇರೆಕಡೆ ಉದ್ಧರಿಸಿರುತ್ತೇವೆ. ನಾವು ವಿಚಾರಿಸಿದುದರಲ್ಲಿ ಬರುವ ಜೂನ್ ತಿಂಗಳ ಕಡೆಯವರೆಗೂ ಯಾವ ಬದಲಾವಣೆಗಳಾಗುವ ಸಂಭವವಿಲ್ಲವೆಂದೂ, ಮ|| ಆನಂದರಾಯರು ನಿವೃತ್ತರಾಗುವ ಪಕ್ಷದಲ್ಲಿ ೧ ನೆಯ ಕೌನ್ಸಿಲರಾದ ಮ|| ಎಚ್. ವಿ. ನಂಜುಂಡಯ್ಯನವರು ದಿವಾನರಾಗಿ ನಿಯಮಿಸಲ್ಪಡುವ ಸಂಭವವಿರುವುದೆಂದೂ ಕೇಳುತ್ತೇವೆ. ಇದಾದರೂ ನಿರ್ಧರವೆಂಬುದನ್ನು ಮಾತ್ರ ಈಗಾಗಲೇ ಹೇಳಲಿಕ್ಕಾಗುವುದಿಲ್ಲ. ಇಂತಹುದರಲ್ಲಿ ನಿನ್ನೆತಾನೇ ಅಫಿಷಿಯೇಟಿಂಗ್ ರೆವಿನ್ಯೂಕಮಿಷನರಾಗಿ ನಿಯಮಿಸಲ್ಪಟ್ಟಿರುವ ಮತ್ತು ಕೌನ್ಸಿಲರುಗಳಾದ ಮ|| ನಂಜುಂಡಯ್ಯನವರಿಗಿಂತಲೂ ಮ|| ದೇವರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮ|| ದೊರೆಸಾಮಯ್ಯರ್‌ರವರು ದಿವಾನರಾಗಿಯೂ, ಮ|| ಎಂ. ಕಾಂತರಾಜ ಅರಸಿನವರಿಗಿಂತಲೂ ಕೆಳಗಿನ ತರಗತಿಯಲ್ಲಿರುವ ಮತ್ತು ಈಗ ಅಫಿಷಿಯೇಟಿಂಗ್ ಪೊಲೀಸು ಇ|| ಜನರಲ್‌ರವರಾಗಿರುವ ಮ|| ಶ್ರೀಕಂಠೇಶ್ವರಯ್ಯರ್‌ರವರು ಎರಡನೆಯ ಕೌನ್ಸಿಲರಾಗಿಯೂ ನಿಯಮಿಸಲ್ಪಡುವರೆಂದು ಡೇಲಿಪೋಸ್ಟ್ ಪತ್ರಿಕೆಯು ಹೇಳಿರುವುದನ್ನು ಎಷ್ಟರಮಟ್ಟಿಗೆ ನಿಜವೆಂದು ನಂಬಬಹುದಾಗಿದೆ?

ಶ್ರೀ ಶೃಂಗಗಿರಿಸ್ವಾಮಿಗಳು ವಿಧಿವಶರಾದುದು.

ಶ್ರೀ ಶೃಂಗಗಿರಿ ಜಗದ್ಗುರು ಸಚ್ಚಿದಾನಂದ ಭಾರತೀಸ್ವಾಮಿಗಳು ವೃದ್ಧಾಪ್ಯದಸೆಯಿಂದ ಸ್ವಲ್ಪಕಾಲ ಅಸ್ವಸ್ಥರಾಗಿದ್ದು ಕಳೆದ ತಾ|| ೨೦ ನೆಯ ಬುಧವಾರದಿವಸ ಪರಂಧಾಮವನ್ನು ಹೊಂದಿದರು. ಇವರ ಅಸ್ವಸ್ಥತೆಯ ವಿಚಾರವನ್ನು ಸರ್ಕಾರದವರು ಕೇಳಿ ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರನ್ನು ಶೃಂಗಗಿರಿಗೆ ಕಳುಹಿಸಿಕೊಟ್ಟರು. ಆದರೆ ಇವರು ಅಲ್ಲಿಗೆ ಹೋಗಿ ತಲುಪುವುದರೊಳಗಾಗಿ ಸ್ವಾಮಿಯವರು ಪರಲೋಕ ಮುಖರಾಗಿದ್ದರೆಂದು ತೋರುತ್ತದೆ. ಡಾಕ್ಟರವರು ಕೂಡಲೆ ತಲುಪುವುದಕ್ಕಾಗಿ ತರೀಕೆರೆಯ ರೈಲ್ವೆ ಸ್ಟೇಷನ್ನಿನಲ್ಲಿ ಮೋಟಾರುಬಂಡಿಯು ಸಿದ್ಧಗೊಳಿಸಲ್ಪಟ್ಟಿದ್ದಿತು. ಸ್ವಾಮಿಯವರು ತರ್ಕಶಾಸ್ತ್ರದಲ್ಲಿ ಪೂರ್ಣಪಂಡಿತರೂ, ಅದ್ವೈತವಿಚಾರದಲ್ಲಿ ಅದ್ವಿತೀಯರೂ ಮತ್ತು ಮಹಾತಪಸ್ವಿಗಳೂ ಆಗಿದ್ದರು. ಈ ಯತಿವರ್ಯರ ಸಂಕ್ಷಿಪ್ತ ಜೀವನಚರಿತ್ರೆಯು ಮತ್ತೊಂದುಕಡೆ ಕೊಡಲ್ಪಟ್ಟಿದೆ.

ತುರ್ಕಿ ಇಟಲಿರಾಜ್ಯಗಳಿಗೆ ಸಮಾಧಾನವನ್ನುಂಟುಮಾಡಲು ಪರರಾಜ್ಯದವರು ಪ್ರವೇಶಿಸಿ ಇಟಲಿಯವರು ಯಾವ ಪ್ರಕಾರವಾಗೊಡಂಬಡುವರೆಂದು ಅವರ ಮಂತ್ರಿಯನ್ನು ಕೇಳಿದ್ದರೆಂದು ಹಿಂದೆ ಪ್ರಕಟವಾಗಿದ್ದುದರಮೇಲೆ ಉಭಯರಾಜ್ಯಗಳ ಕದನವು ಶಾಂತವಾಗಿ ಅದರಿಂದಾಗುತ್ತಿದ್ದ ಅರ್ಥಹಾನಿ ಪ್ರಾಣಹಾನಿಗಳು ನಿಲ್ಲುವುವೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಆದರೆ ಆ ರೀತಿ ತುರ್ಕಿಇಟಲಿರಾಜ್ಯಗಳಿಗೆ ಸಮಾಧಾನವನ್ನು ಮಾಡಲು ಪರರಾಜ್ಯದವರು ಪ್ರಯತ್ನಿಸಿರುವುದಿಲ್ಲವೆಂತಲೂ, ತಮ್ಮಗಳ ಮೌನಾಚರಣೆಯನ್ನು ಬಿಟ್ಟು ಒಡಂಬಡಿಕೆಯ ವಿಚಾರದಲ್ಲುದ್ಯುಕ್ತರಾಗುವುದು ತಮ್ಮಗಳ ನೀತಿಗೆ ವಿರುದ್ಧವಾದುದೆಂದೂ ಈಚೆಗೆ ಪ್ರಕಟವಾಗಿರುತ್ತದೆ. ಇದರಿಂದ ಆ ಉಭಯರಾಜ್ಯಗಳ ಕದನವು ಇನ್ನೂ ಪ್ರಬಲವಾಗಿ ಅರ್ಥಹಾನಿ ಪ್ರಾಣಹಾನಿಗಳು ಮೊದಲಿಗಿಂತಲೂ ಅಧಿಕವಾಗುವುವೆಂದು ತೋರುವುದು.

ಚೈನಾರಾಜ್ಯದಲ್ಲಿ ಗೊಂದಲವು ಕಡಿಮೆಯಾಗಿ ಶಾಂತತೆಯು ಈಗೀಗ ನೆಲಸಲಾರಂಭವಾಗಿದೆ. ಪ್ರಜಾಧಿಪತ್ಯದ ಸರಕಾರದವರಿಗೆ ಪರರಾಜ್ಯದ ಬ್ಯಾಂಕಿನವರು ಹಣವನ್ನು ಸಾಲವಾಗಿ ಕೊಡುವ ವಿಚಾರದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ. ಇದು ಸಾಧ್ಯವಾದ ಕೂಡಲೆ ಪ್ರಜಾಧಿಪತ್ಯದ ಸರ್ಕಾರದವರು ಅಲ್ಲಿಯ ಸ್ಥಿತಿಯೆಲ್ಲವನ್ನೂ ಕ್ರಮಪಡಿಸಿ ಬೇರೆಬೇರೆ ಕುಲದವರನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಜನಾಂಗವನ್ನಾಗಿ ಮಾಡಯತ್ನಿಸುವರು.

ವೀರಶೈವ ವಿದ್ಯಾರ್ಥಿಗಳು ಗಮನಿಸತಕ್ಕದು.

ಬೆಂಗಳೂರಿಗೆ ಪ್ರತಿವರ್ಷದಲ್ಲೂ ಲೋವರ್‌ಸೆಕೆಂಡರಿ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ., ಪರೀಕ್ಷೆಗಳಿಗೆ ಪರಸ್ಥಳದಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟ ಉಪಚಾರಾದಿಗಳಿಗೆ ಬೆಂಗಳೂರಿನ ಊದುಬತ್ತಿ ಷಾಪ್ ಮ|| ಕಳ್ಳೆಪ್ಪನವರು ಕೆಲವರ್ಷಗಳಿಂದಲೂ ಸ್ವಂತಖರ್ಚಿನಿಂದ ತಕ್ಕೇರ್ಪಾಟನ್ನಿಡುತ್ತಿದ್ದಂತೆ ಈ ವರ್ಷದಲ್ಲೂ ತಕ್ಕೇರ್ಪಾಟನ್ನು ಮಾಡಿರುವರಾದಕಾರಣ ಲೋವರ್‌ಸೆಕೆಂಡರಿ, ಮತ್ತು ಬಿ.ಎ., ಪರೀಕ್ಷೆಗಳಿಗಾಗಿ ಬೆಂಗಳೂರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ತಾವು ಬರುವುದಕ್ಕೆ ೨ ದಿವಸ ಮುಂಚಿತವಾಗಿ ಮ|| ಕಳ್ಳೆಪ್ಪನವರಿಗೆ ಬರೆದು ತಿಳುಹತಕ್ಕದು.

ಒಳದೇಶದ ವೃತ್ತಾಂತಗಳು.

ದಿವಾನರು ತಮ್ಮ ಸಕ್ರಿಟರಿಗಳೊಡನೆ ನಿನ್ನೆಯ ಮೇಲು ಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು.

ಕಳೆದ ತಾ|| ೨೨ ರ ರಾತ್ರಿ ರಾಜಧಾನಿಯ ನಜರ್‌ಬಾದಿನಲ್ಲಿ ಒಂದು ಮನೆಗೆ ಬೆಂಕಿಯುಬಿದ್ದು ಸುಟ್ಟುಹೋಯಿತು.

ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಸರ್ ಅಫ್‌ಡಾಲಿಯವರು ಕಳೆದ ತಾ|| ೨೦ ರಲ್ಲಿ ಊಟಕಮಂಡಲಕ್ಕೆ ಪ್ರಯಾಣಮಾಡಿದರು.

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಪಿ. ಶ್ರೀನಿವಾಸರಾಯರ ಉದ್ಯೋಗದವಧಿಯು ೧೯೧೩ ನೆಯ ಜೂನ್ ತಿಂಗಳ ಕಡೆಯವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಮೈಸೂರ ಡಿ|| ಸಬ್ ಡಿವಿಜನ್ ಅ|| ಕಮಿಷನರಾದ ಮ|| ಎನ್. ಮಾಧವರಾಯರು ೨ ತಿಂಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡು ಸ್ವಸ್ಥಳಕ್ಕೆ ಹೋಗಬರುವುದಾಗಿ ಕೇಳುತ್ತೇವೆ.

ಈ ತಾ|| ೩೦ ರಲ್ಲಿ ನಂಜನಗೂಡಿನಲ್ಲಿ ನಡೆಯುವ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪಂಚರಥೋತ್ಸವವನ್ನು ಪರಾಮರ್ಶಿಸಿಕೊಂಡು ಬರಲು ಶ್ರೀಮನ್ ಮಹಾರಾಜರವರ ಸ್ವಾರಿಯು ಚಿತ್ತೈಸುವುದಾಗಿ ಕೇಳುತ್ತೇವೆ.

ಕನ್ನಂಬಾಡಿಯಲ್ಲಿ ಈಗ ೬೦೦೦ ಜನಗಳವರೆಗೆ ಕೆಲಸವನ್ನು ಮಾಡುತ್ತಿದ್ದಾರೆ. ಸುರಂಗವನ್ನು ಹಾಕುವಾಗ್ಗೆ ಮದ್ದು ಹಾರಿ ೩ ಜನ ಕೂಲಿಯವರು ಸತ್ತುಹೋದರೆಂಬ ವರ್ತಮಾನವು ಸುಳ್ಳೆಂಬುದಾಗಿ ಗೊತ್ತಾಗಿದೆ.

ರಾಜಧಾನಿಯ ಆಯುರ್ವೇದ ಪ್ರೌಢವಿದ್ಯಾಲಯದ ಮುಖ್ಯೋಪಾಧ್ಯಾಯರಾದ ಮ|| ಕೆಂಪರಾಮ ಪಂಡಿತರು ಪಾರ್ಶ್ವವಾಯುರೋಗಗ್ರಸ್ತರಾಗಿದ್ದು ಡಾಕ್ಟರ್ ಕೃಷ್ಣಸ್ವಾಮಯ್ಯರ್‌ರವರ ಚಿಕಿತ್ಸೆಯಿಂದ ಗುಣಹೊಂದುತ್ತಿರುವರು.

ಅರಮನೆಯ ಇಂಛಾರ್ಜ್ ಆಫೀಸರಾದ ಮ|| ಬಿ. ರಾಮಕೃಷ್ಣರಾಯರ ಉದ್ಯೋಗದವಧಿಯು ಇನ್ನೊಂದು ವರ್ಷದವರೆಗೆ ಹೆಚ್ಚಿಸಲ್ಪಟ್ಟು, ಅವರು ಇನ್ನುಮುಂದೆ ಅರಮನೆಯ ಕಂಟ್ರೋಲರಾಗಿ ಕರೆಯಲ್ಪಡುವಂತೆ ಶ್ರೀಮನ್ಮಹಾರಾಜರವರಿಂದ ಅಪ್ಪಣೆಮಾಡಲ್ಪಟ್ಟಿರುತ್ತದೆ.

ಸರದಾರ್ ಕಾಂತರಾಜ ಅರಸಿನವರು ಕೈ|| ತಮ್ಮ ಮಾತೃಶ್ರೀಯವರ ಹೆಸರಿನ ಮೇಲೆ ರಾಜಧಾನಿಯ ಅನಾಥಾಲಯ, ಅಬಲಾಶ್ರಮಗಳಿಗೆ ಧರ್ಮಮಾಡಿದಂತೆ ಆರ್ಯಬಾಲ ಸಮಾಜಕ್ಕೂ ೧೦೦ ರೂ. ಗಳನ್ನು ದಯಪಾಲಿಸಿದರು. ಸರದಾರರವರು ಕಾಶಿ, ಪ್ರಯಾಗ, ಗಯಾ ಮೊದಲಾದ ಪುಣ್ಯಸ್ಥಳಗಳಿಗೆ ಹೋಗಿ ಬರುವುದಾಗಿ ಕೇಳುತ್ತೇವೆ.

೨ ನೆಯ ಕೌನ್ಸಿಲರಾದ ಮ|| ಡಿ. ದೇವರಾಜ ಅರಸಿನವರು ಯುಗಾದಿಯ ಹಬ್ಬಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು ಹಬ್ಬದ ದಿವಸ ಶ್ರೀಮದ್ಯುವರಾಜ ದಂಪತಿಗಳನ್ನು ತಮ್ಮ ಮನೆಗೆ ಬರಮಾಡಿಕೊಂಡು ದಿವ್ಯವಾದ ಔತಣವನ್ನು ಮಾಡಿಸಿ ೮೦೦ ರೂ. ಬೆಲೆಯ ಕಲಾಪತ್ತಿನ ಧೋತ್ರ ಷಾಲು ಮೊದಲಾದ ಉಡುಗೊರೆಯನ್ನು ಅಳಿಯಂದಿರಿಗೂ, ಬಹು ಬೆಲೆಯ ಸೀರೆ ಕುಪ್ಪಸಗಳನ್ನು ತಮ್ಮ ಕುವರಿಯವರಾದ ಯುವರಾಣಿಯವರಿಗೂ ಒಪ್ಪಿಸಿ, ಕಳೆದ ತಾ|| ೨೧ ರಲ್ಲಿ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಬೆಂಗಳೂರ ಡಿ|| ಆಫೀಸ್ ಕಟ್ಟಡದಲ್ಲಿರುವ ಕೋರ್ಟುಗಳಿಗೆ ಸಾಕ್ಷಿಗಳಾಗಿ ಬರತಕ್ಕ ಜನರು ಮರಗಳ ಕೆಳಗಡೆಯಲ್ಲಿ ಅಥವಾ ಬೈಲಿನಲ್ಲಿದ್ದುಕೊಂಡು ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನನೆದು ಕಾಲಹರಣಮಾಡಬೇಕಾಗಿರುವುದಷ್ಟೆ. ಆದರೆ ಈ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದು ಸಾಕ್ಷಿಗಳಾಗಿ ಬರತಕ್ಕ ಜನರು ಕುಳಿತುಕೊಳ್ಳುವುದಕ್ಕಾಗಿ ರಿಕಾರ್ಡು ಕೊಠಡಿಗಳ ಸಮೀಪದಲ್ಲಿ ಒಂದು ಕೊಠಡಿಯು ಕಟ್ಟಲ್ಪಡುತ್ತಿರುವುದು. ಇದರಿಂದ ಆ ಜನರಿಗೆ ಸರಕಾರದವರು ಮಹೋಪಕಾರಮಾಡಿದಂತಾಗಿರುವುದರಲ್ಲಿ ಸಂದೇಹವಿಲ್ಲವು.

ಗತಿಸಿದ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಮಂತ್ರಿಪದವಿಯಿಂದ ನಿವೃತ್ತರಾದಮೇಲೆ ತಿಂಗಳೊಂದಕ್ಕೆ ೫೦೦ ರೂ. ಗಳ ಮೇರೆ ಪೆನ್ಷನನ್ನು ತೆಗೆದುಕೊಳ್ಳಲು ಸಮ್ಮತಿಸದೆ ಬಹುಕಾಲದವರೆಗೆ ಬಿಟ್ಟಿದ್ದು ಮ|| ವಿ. ಪಿ. ಮಾಧವರಾಯರಿಗೆ ಸಲ್ಲುತ್ತಿರುವ ಪೆನ್ಷನ್ನಿನಷ್ಟಾದರೂ ಅಥವಾ ಅದು ಸಾಧ್ಯವಿಲ್ಲದಿದ್ದಲ್ಲಿ ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್ ರವರಿಗೆ ಗೊತ್ತಾಗಿದ್ದಷ್ಟಕ್ಕಾದರೂ ತಮ್ಮ ಪೆನ್ಷನನ್ನು ಹೆಚ್ಚಿಸಿ, ತಮ್ಮ ಎಳಂದೂರು ಜಹಗೀರಿಯ ಸಮೀಪದಲ್ಲಿ ಒಂದು ಭೂಮಿಯ ರೂಪವಾಗಿ ಕೊಡಿಸಿಕೊಡಬೇಕೆಂದೂ, ಅದರ ಉತ್ಪನ್ನದಿಂದ ಬೆಂಗಳೂರಲ್ಲಿ ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಒಂದು ಅನಾಥಾಲಯವನ್ನು ಸ್ಥಾಪಿಸುವುದಲ್ಲದೆ, ಸಂಸ್ಕೃತ ವಿದ್ಯಾಭಿವೃದ್ಧಿಯನ್ನು ಮಾಡಿಸುತ್ತೇವೆಂದೂ ೧೯೧೧ ನೆಯ ನವೆಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಂಡಿದ್ದರು. ಆದರೆ ಶ್ರೀಮನ್ಮಹಾರಾಜರವರು ಅವರ ಪ್ರಾರ್ಥನೆಯನ್ನು ನೆರವೇರಿಸಿಕೊಡಲು ಸಕಾರಣವನ್ನು ಕಾಣದೆ, ೫೦೦ ರೂ. ಗಳ ಪೆನ್ಷನ್ ಮಾತ್ರ ಸಲ್ಲತಕ್ಕದೆಂದು ಅಪ್ಪಣೆಮಾಡಿದರು. ಸರ್ ಕೃಷ್ಣಮೂರ್ತಿಯವರ ಪತ್ನಿಯವರು ತಮ್ಮ ಪತಿಯವರಿಗೆ ಪೆನ್ಷನ್ನಿನಾಗಿ ಸಲ್ಲಬೇಕಾಗಿದ್ದ ೩೫೦೦೦ ರೂ. ಗಳನ್ನು ಕೊಡಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವುದರಮೇಲೆ ಅದನ್ನು ಕೊಡಿಸಿಕೊಡಬೇಕೆಂದು ಈಗಿನ ದಿವಾನರೂ ಅಭಿಪ್ರಾಯಪಟ್ಟಿರುತ್ತಾರೆ.

ವರ್ತಮಾನ ಸಂಗ್ರಹವು.

ನ್ಯೂಯಾರ್ಕಿನಲ್ಲಿ ಒಂದು ರೈಲ್ವೆಯ ಇಂಜನ್ನು ಒಡೆದುಹೋಗಿ ೨೫ ಜನರು ಸತ್ತುಹೋದರು.

ರಾಜಚಕ್ರವರ್ತಿಯವರ ಜನ್ಮದಿನೋತ್ಸವವು ಭರತಖಂಡದಲ್ಲಿ ಜೂನ್ ತಾ|| ೩ ರಲ್ಲಿ ನೆರವೇರಿಸಲ್ಪಡುವುದಾಗಿ ಗೊತ್ತಾಗಿದೆ.

ಸೀಮೆಯಲ್ಲಿ ಒಂದು ಕಲ್ಲಿದ್ದಲು ಗಣಿಯು ಒಡೆದುಹೋಗಿ ಒಳಗಿದ್ದವರಲ್ಲಿ ೧೫ ಜನರು ಜೀವಸಹಿತಸಮಾಧಿಯನ್ನೈದಿದರು.

ಪಂಜಾಬಿನಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಎಡ್ವರ್ಡ್ ಸಾರ್ವಭೌಮರ ಸ್ಮಾರಕಕಾರ್ಯಕ್ಕಾಗಿ ಈವರೆಗೆ ೧೨ ಲಕ್ಷ ರೂ.ಗಳ ಫಂಡು ಸೇರಿದೆ.

ಆಕಾಶನಾವೆಯಲ್ಲಿಟ್ಟುಕೊಂಡು ಬಹು ತ್ವರೆಯಿಂದ ಗುಂಡನ್ನು ಹೊಡೆಯಲನುಕೂಲಿಸುವಂತೆ ಒಂದು ಫಿರಂಗಿಯು ಹೊಸದಾಗಿ ನಿರ್ಮಿಸಲ್ಪಟ್ಟಿರುತ್ತದೆ.

ಪೋರ್ಚುಗಲ್ಲಿನಲ್ಲಿ ಅನಾಯಕ ರಾಜ್ಯಾಭಿಲಾಷಿಗಳು ಒಂದು ಮನೆಯಲ್ಲಿ ರಹಸ್ಯವಾಗಿ ಸಿಡಿಮದ್ದನ್ನು ಮಾಡುತ್ತಿರುವಾಗ್ಗೆ, ಅದು ಅಕಸ್ಮಾತ್ತಾಗಿ ಹಾರಿ ೪ ಜನರು ಸತ್ತುಹೋದರು. ೫ ಜನರು ಗಾಯವಡೆದರು.

ಟಿಬೆಟ್ಟಿನಲ್ಲಿ ಚೈನಾ ದೇಶೀಯರಿಗೂ ಅಲ್ಲಿಯ ಜನರಿಗೂ ಮನಸ್ತಾಪವುಂಟಾಗಿ ಬಹಳ ಬಡಿದಾಟವಾಯಿತು. ಆದರೆ ಯಾರಕಡೆ ಎಷ್ಟು ಜನರು ಮಡಿದರು ಮತ್ತು ಗಾಯವಡೆದರು ಎಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲವು.

ಬಂಗಾಳಾ ಸರ್ಕಾರದವರು 'ಸುಲಭಸಮಾಚಾರ' ಎಂದು ದೇಶಭಾಷೆಯಲ್ಲಿ ಹೊರಡುವ ಪತ್ರಿಕೆಯ ೨೫೦೦೦ ಪ್ರತಿಗಳನ್ನು ಕೊಂಡು ಜನರಿಗೆ ಉಚಿತವಾಗಿ ಹಂಚುತ್ತಿರುವುದನ್ನು ಜನರು ಅಪೇಕ್ಷಿಸದುದರಮೇಲೆ ಈ ಪತ್ರಿಕೆಯನ್ನು ಕೊಳ್ಳುವುದನ್ನು ನಿಲ್ಲಿಸಿಬಿಡುವವರಾಗಿರುವರು.

ಲಾಹೋರಿನಲ್ಲಿ ಪ್ರತಿನಿತ್ಯದಲ್ಲೂ ಮತ್ತು ವಾರಕ್ಕೊಂದಾವೃತ್ತಿ ಹೊರಡುವ ಜಮೀನ್ದಾರಿ ಎಂಬ ಮಹಮ್ಮದೀಯ ಪತ್ರಿಕೆಗಳ ಲೇಖನಗಳು ಆಕ್ಷೇಪಕರವಾಗಿರುವುದರಿಂದ ೨ ಪತ್ರಿಕೆಗಳಿಗಾಗಿ ಒಂದೊಂದು ಸಾವಿರ ರೂ ಗಳನ್ನು ಹೊಣೆಯಾಗಿಡಬೇಕೆಂದು ಲಾಹೋರಿನ ಡಿ|| ಮ್ಯಾಜಿಸ್ಟ್ರೇಟರಪ್ಪಣೆ ಮಾಡಿರುತ್ತಾರೆ.

ಭರತಖಂಡದ ವಾಯವ್ಯಮೂಲೆಯಲ್ಲಿರುವ ಅಪ್ಪರ್ ಸ್ವಾತಿನ ಜನರು ಕಂದಾಯವನ್ನು ಕೊಡಲು ತಿರಸ್ಕರಿಸಿದುದರಮೇಲೆ ಅವರಿಗೂ ದಿರ್ ಸಂಸ್ಥಾನದ ನವಾಬರಿಗೂ ಮನಸ್ತಾಪವುಂಟಾಗಿದೆ. ಈ ಸ್ವಾತಿನ ಜನರು ಅಫಘಾನಿಸ್ಥಾನದ ವರ್ತಕರಿಂದ ಹಳೆಯ ಕೋವಿಗಳನ್ನು ಹೆಚ್ಚುಬೆಲೆಯನ್ನು ಕೊಟ್ಟು ಕೊಂಡುಕೊಂಡಿರುವರು.

ಕಲಕತ್ತಾದ ಸರ್ವವಸ್ತು ಪ್ರದರ್ಶನಶಾಲೆಯಲ್ಲಿ ಬಹು ಪುರಾತನವಾದ ಸಿತಾರು ಒಂದು ಗಾಜಿನ ಬೀರುವಿನಲ್ಲಿಡಲ್ಪಟ್ಟಿದ್ದಿತು. ಯಾರೋ ಕಳ್ಳರು ಆ ಬೀರುವಿನ ಗಾಜನ್ನೊಡೆದು ಹಾಕಿ ಸಿತಾರಿಗೆ ಕಟ್ಟಿದ್ದ ಚಿನ್ನದ ತಂತಿಗಳನ್ನೂ, ಬಿರಡೆಗಳನ್ನೂ ಸಿತಾರಿನ ಮೇಲ್ಭಾಗದಲ್ಲಿ ಕಿರೀಟದಾಕೃತಿಯಲ್ಲಿ ಮಾಡಲ್ಪಟ್ಟಿದ್ದ ಭಂಗಾರದ ಆಭರಣವನ್ನೂ ಅಪಹರಿಸಿಕೊಂಡು ಹೋಗಿರುವರು.

ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ತೆಗೆದುಕೊಳ್ಳುತ್ತಿದ್ದ ಶ್ರೀಮಂತರುಗಳನ್ನು ಸೂರೆಮಾಡುತ್ತ ೧೩ ಕೊಲೆಗಳನ್ನು ಮಾಡಿರುವ ಕಳ್ಳರ ಯಜಮಾನನಾದ ನಾಡಿ ಎಂಬುವನು ಜೇಲಂ ಡಿಸ್ಟ್ರಿಕ್ಟಿನಲ್ಲಿ ಪಿಂಡಿದಾದಾಖಾನ್ ಬಳಿ ಸೆರೆಹಿಡಿಯಲ್ಪಟ್ಟನು. ಇವನನ್ನು ಹಿಡಿದವರಿಗೆ ೬೦೦ ರೂ. ಬಹುಮಾನವು ಕೊಡಲ್ಪಡುವುದಾಗಿ ಸರ್ಕಾರದವರಿಂದ ಪ್ರಸಿದ್ಧಪಡಿಸಲ್ಪಟ್ಟಿದ್ದಿತು.

ಲಾರ್ಡ್ ಕಾರ್ಮಿಕೇಲ್‌ರವರು ಈ ತಾ|| ೨೯ ರಲ್ಲಿ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ಸರ್ಕಾರಿಯಧಿಕಾರಿಗಳು, ಕೌನ್ಸಿಲ್ಲುಗಳ ಮೆಂಬರುಗಳು, ದೊಡ್ಡಮನುಷ್ಯರುಗಳು ಮೊದಲಾದವರಿಂದ ಮರ್ಯಾದಾಪುರಸ್ಸರವಾಗಿ ಬೀಳ್ಕೊಟ್ಟು ದರ್ಬಾರ್ ಎಂಬ ಹಡಗನ್ನು ಹತ್ತಿ ಪ್ರಯಾಣಮಾಡುವರು. ಮತ್ತು ಏಪ್ರಿಲ್ ತಾ|| ೮ ರ ವರೆಗೆ ಕಲಕತ್ತಾದಲ್ಲಿದ್ದು ತಾ|| ೯ ರಲ್ಲಿ ಡಾರ್ಜಿಲಿಂಗಿಗೆ ಹೋಗುವರು.

ನಿರ್ಗತಿಕರಾದವರು ಕೆಲಸವನ್ನು ಮಾಡಿ ಜೀವಿಸಬೇಕೆಂದು ಸಿಲೋನಿಗೆ ಹೋಗಿ ಅಲ್ಲಿ ಬಹು ತೊಂದರೆಯನ್ನನುಭವಿಸುತ್ತಿರುವುದನ್ನು ಇಂಡ್ಯಾ ಸರ್ಕಾರದವರು ಸಿಲೋನಿನ ಸರ್ಕಾರದವರಿಂದ ತಿಳಿದು ಇಷ್ಟರ ಸಿಲೋನಿನಲ್ಲಿ ಕೆಲಸವು ದೊರೆಯುವುದು ಗೊತ್ತಾಗಿದ್ದ ಹೊರತು ಅಥವಾ ಅಲ್ಲಿ ಜೀವನಕ್ಕೆ ಸಾಕಷ್ಟು ಹಣವನ್ನು ಕೈಯಲ್ಲಿಟ್ಟುಕೊಂಡಿದ್ದ ಹೊರತು ಯಾರೂ ಸಿಲೋನಿಗೆ ಹೋಗಕೂಡದೆಂದು ಎಚ್ಚರಿಸುತ್ತಾರೆ.

ಸುಕರ್‌ಯಿಂದ ಪಂಜಾಬಿಗೆ ಪ್ರಯಾಣಮಾಡುತ್ತಿದ್ದ ಒಬ್ಬ ಯುರೋಪ್ಯನ್ ಸ್ತ್ರೀಯು ಭ್ರಾಂತಿಯಿಂದ ಬೇರೆಕಡೆಗೆ ಹೊರಡುವ ಬಂಡಿಯಲ್ಲಿ ಕುಳಿತುಕೊಂಡು ಬಂಡಿಯು ಹೊರಡುವ ಸಮಯದಲ್ಲಿ ತನ್ನ ತಪ್ಪನ್ನು ತಿಳಿದು ಹೊರಗಿಳಿಯಲು ಯತ್ನಿಸುವಾಗ್ಗೆ ಕಾಲುಜಾರಿ ಕೆಳಗೆ ಬಿದ್ದು ಬಂಡಿಯ ಚಕ್ರಗಳಿಗೆ ಸಿಕ್ಕಿ ಕೂಡಲೆ ಸತ್ತುಹೋದಳು. ಅವಳ ಕೂಡ ಬಂಡಿಯಲ್ಲಿದ್ದ ಅವಳ ೪ ವರ್ಷ ವಯಸ್ಸಿನ ಮಗುವು ಮಾತ್ರ ದೈವಕೃಪೆಯಿಂದ ಅಪಾಯವಿಲ್ಲದೆ ತಪ್ಪಿಸಿಕೊಂಡು ಹೊರಗೆ ಬಂದಿತು.

ಕೇಂಬ್ರಿಡ್ಜ್ ಸರ್ವಕಲಾಶಾಲೆಯಲ್ಲಿ ವ್ಯಾಸಂಗಮಾಡುತ್ತಿರುವ ಭರತಖಂಡದ ವಿದ್ಯಾರ್ಥಿಗಳು ಕೆಲದಿನಗಳ ಕೆಳಗೆ ಸಂಸ್ಕೃತಪಂಡಿತರಾದ ರಾಪ್ಸನ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಭರತಖಂಡದಲ್ಲಿ ಸ್ಥಾಪಿಸಲ್ಪಡಲಿಕ್ಕಿರುವ ಹಿಂದೂ ಮಹಮ್ಮದೀಯ ಸರ್ವಕಲಾಶಾಲೆಗಳ ಸಂಬಂಧವಾಗಿ ಪ್ರೋತ್ಸಾಹಕರವಾದ ಭಾಷಣಗಳನ್ನು ಮಾಡಿ ಕೇಂಬ್ರಿಡ್ಜಿನಲ್ಲಿರುವ ವಿದ್ಯಾರ್ಥಿಗಳೆಲ್ಲರಿಂದಲೂ ಚಂದಾಹಣವನ್ನೆತ್ತಿ ಹಿಂದೂ ಮಹಮ್ಮದೀಯರ ಸರ್ವಕಲಾಶಾಲೆಗಳ ಸಹಾಯಾರ್ಥವಾಗಿ ಕಳುಹಿಸಿಕೊಡಬೇಕೆಂದು ನಿರ್ಧರಿಸಿದರು.

ಕಳೆದ ತಾ|| ೧೫ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೮೧೧೦ ಜನರಿಗೆ ಪ್ಲೇಗುರೋಗವು ತಗಲಿ ೧೫೪೦೧ ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ೩೦೯; ಮದ್ರಾಸಾಧಿಪತ್ಯದಲ್ಲಿ ೧೩೮; ಬಂಗಾಳದಲ್ಲಿ ೩೦೯೨; ಸಂಯುಕ್ತಪ್ರಾಂತಗಳಲ್ಲಿ ೭೬೩೦; ಪಂಜಾಬಿನಲ್ಲಿ ೧೦೯೩; ಬರ್ಮಾದಲ್ಲಿ ೯೧; ಸಂಯುಕ್ತ ಪ್ರಾಂತಗಳಲ್ಲಿ ೧೫೬೭; ಮೈಸೂರ ಸೀಮೆಯಲ್ಲಿ ೮೫; ಹೈದರಾಬಾದಿನಲ್ಲಿ ೫೨೩; ಮಧ್ಯಹಿಂದೂಸ್ಥಾನದಲ್ಲಿ ೨೨೩ ಮತ್ತು ರಜಪುಟಾನದಲ್ಲಿ ೯೮ ಈ ಪ್ರಕಾರ ಮರಣಗಳಾಗಿರುತ್ತವೆ.

ಒಬ್ಬ ಬಂಗಾಳಿ ಯುವಕನು ಬರ್ಲಿನ್ನಿಗೆ ಹೋಗಿ ಒಂದು ಮಿಠಾಯಿಯಂಗಡಿಯನ್ನು ಇಟ್ಟುಕೊಂಡಿರುತ್ತಾನೆ. ಬಂಗಾಳದಲ್ಲಿ ಬಹು ಪ್ರಸಿದ್ಧಿಯಾದ ಜಿಲೇಬಿ, ಜಾಮೂನು ಗಬರಿ, ನಿಮಿಕಿ ಮೊದಲಾದ ಮಿಠಾಯಿ ಪದಾರ್ಥಗಳು ಜರ್ಮನಿಯ ದೇಶಸ್ಥರಿಗೆ ಅತ್ಯಂತ ರುಚಿಕರವಾಗಿ ಕಂಡಿರುವುದರಿಂದ ವಿಶೇಷವಾಗಿ ವಿಕ್ರಯವಾಗುತ ಆ ಯುವಕನು ಬಲು ದುಡ್ಡನ್ನು ಸ್ವಲ್ಪಕಾಲದಲ್ಲಿ ಸಂಪಾದಿಸಿ ಶ್ರೀಮಂತನಾಗಿರುತ್ತಾನೆ. ಅದುಕಾರಣ ಮಿಠಾಯಿಗಾರರಾದ ಬಂಗಾಳಿಯ ಯುವಕರು ಪ್ರಪಂಚದಮೇಲೆಲ್ಲಾ ಅಂಗಡಿಗಳನ್ನಿಟ್ಟು ದುಡ್ಡನ್ನು ಸಂಪಾದಿಸಬಹುದೆಂದು ಒಂದು ಪತ್ರಿಕೆಯು ತಿಳಿಸುತ್ತದೆ.

ರಷ್ಯಾದಲ್ಲಿ ಫಾದರ್ ದವಾಜಿನಮಕೋಚ್ ಎಂಬ ಪಾದ್ರಿಯು ಮೇರಿ ಅಮ್ಮನ ದೇವಾಲಯದಿಂದ ೧೫೦೦೦೦ ರೂ. ಬೆಲೆಬಾಳುವ ವಜ್ರದ ಕಿರೀಟವನ್ನು ಅಪಹರಿಸಿಕೊಂಡು ತನ್ನ ಚಿಕ್ಕಪ್ಪನಾದ ವಲ್ಕಾರ್‌ಮಕೋಚ್ ಎಂಬ ಪಾದ್ರಿಯ ಮೂಲಕ ಆ ಕಿರೀಟವನ್ನು ವಿಕ್ರಯಿಸಿದ್ದುದರಿಂದ ಚಿಕ್ಕಪ್ಪನು ತನ್ನ ರಹಸ್ಯವನ್ನು ಬಹಿರಂಗಮಾಡಬಹುದೆಂದು ಶಂಕಿಸಿ ಅವನನ್ನು ಕೊಂದು ಅವನ ಶವವನ್ನು ಹಾಸಿಗೆಯೊಳಗಿಟ್ಟು ಹೊಲಿದಿದ್ದೆನೆಂದು ೧೯೧೨ನೆಯ ಅಕ್ಟೋಬರ್ ತಾ|| ೨೩ ರಲ್ಲಿ ಪೋಲೀಸ ವಿಚಾರಣೆಯಲ್ಲಿ ಒಪ್ಪಿಕೊಂಡುದರ ಮೇಲೆ ಅವನು ಬಹಿಷ್ಕೃತನಾಗಿ ಮಾಡಲ್ಪಟ್ಟಿದ್ದನು. ಈಗ ಆ ಪಾದ್ರಿಯು ಮತ್ತು ಅವನ ಸಹಾಯಕರಾಗಿದ್ದ ಬೇರೆ ೩ ಜನ ಪಾದ್ರಿಗಳ ಕ್ರಿಮಿನಲ್ ವಿಚಾರಣೆಯ ಸಂಬಂಧವಾಗಿ ೧೦೦ ಜನ ಸಾಕ್ಷಿಗಳ ವಿಚಾರಣೆಯು ನಡೆಯತಕ್ಕದಾಗಿದೆ.

ಬೊಂಬಾಯಿ ಕರ್ನಾಟಕ ಪ್ರಾಂತದ ಸರ್ಕಾರಿ ಗೆಜೆಟ್‌ಸಂಗ್ರಹ.

ಬೆಳಗಾಮಿನ ಕಲೆಕ್ಟರಾದ ಮಿ|| ಬ್ರ್ಯಾಂಡರ್‌ರವರು ಒಂದು ವರ್ಷ ರಜವನ್ನು ಪಡೆದುಕೊಂಡಿರುವುದರಿಂದ, ಬಿಜಾಪುರದ ಕಲೆಕ್ಟರಾದ ಮಿ|| ಬ್ರೌನ್‌ರವರು ಬೆಳಗಾಮಿನ ಕಲೆಕ್ಟರಾಗಿಯೂ, ಕುಲಾಬಾದ ಕಲೆಕ್ಟರಾದ ಮಿ|| ಕಾಬ್ರಾಜಿಯವರು ಬಿಜಾಪುರದ ಕಲೆಕ್ಟರಾಗಿಯೂ, ಧಾರವಾಡದ ಅಸಿಸ್ಟೆಂಟ್ ಕಲೆಕ್ಟರಾದ ಮಿ|| ಥಾಮಸ್‌ರವರು ಕುಲಾಬಾದ ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಕಾರವಾರದ ಡಿಸ್ಟ್ರಿಕ್ಟ್ ಡಿಪ್ಯುಟಿ ಕಲೆಕ್ಟರಾದ ಮಿ|| ಪಾಟೀಲ್‌ರವರಿಗೆ ೨ ತಿಂಗಳ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಮಿ|| ಶ್ರೀನಿವಾಸಸ್ವಾಮಿರಾವ್ ದೇಶಪಾಂಡೆಯವರು ಕಾರವಾರದ ಡಿ|| ಡೆ|| ಕಲೆಕ್ಟರಾಗಿಯೂ ಗೋಕಾಕ ಮಾಮಲೆದಾರರಾದ ಮಿ|| ಗೋಪಾಲರಾಮಚಂದ್ರ ಬಾಳೇಕುಂದ್ರಿಯವರು ಕಾರವಾರದ ಹುಜೂರು ಡಿ|| ಕಲೆಕ್ಟರಾಗಿಯೂ ನಿಯಮಿಸಲ್ಪಟ್ಟಿರುವರು.

ಬಾಗಲಕೋಟೆಯ ಮಾಮಲೆದಾರರಾದ ಮಿ|| ಸಿದ್ಧಪ್ಪ ಬಸಪ್ಪಕಿತ್ತೂರರವರು ಬೆಳಗಾಮಿನ ಹುಜೂರು ಡಿ|| ಕಲೆಕ್ಟರಾಗತಕ್ಕದು.

ಕಾರವಾರದ ಕಲೆಕ್ಟರ ಚಿಟಣೀಸರಾದ ಮಿ|| ರಾಮಚಂದ್ರಕೃಷ್ಣ ಪರ್ಯಾಣೀಕರ ಇವರು ಗೋಕಾಕದ ಮಾಮಲೆದಾರರಾಗಿಯೂ, ಮಿ|| [illegible]

ಇವರು ಗೋಕಾವಿಯಿಂದ ಬೆಳಗಾವಿಯ ಮಾಮಲೇದಾರರಾಗಿಯೂ, ಹೊನ್ನಾಪುರದ ಮಾಮಲೇದಾರರಾದ ಮಿ॥ ಶಂಕರ ನಾರಾಯಣ ಕೃಷ್ಣ ಬಿಜಾಪುರಕರ ಇವರು ಚಿಕೋಡಿಗೂ ಮಿ॥ ರಾಮಚಂದ್ರ ರಘುನಾಥ ಕುಲಕರ್ಣಿಯವರು ಚಿಕೋಡಿಯಿಂದ ರಾಣಿಬೆನ್ನೂರಿಗೂ, ಯಲ್ಲಾಪುರದ ಮಾಮಲೇದಾರರಾದ ಮಿ॥ ನರಸಿಂಗನಾರಾಯಣ ಉಡಿಯವರ ಇವರು ಕಾರವಾರದ ಕಲೆಕ್ಟರ ಆಕ್ಟಿಂಗ್ ಚಿಟ್ನೀಸರಾಗಿಯೂ, ಧಾರವಾಡದ ಡೆಪ್ಯುಟಿ ಚಿಟ್ನೀಸರಾದ ಮಿ॥ ಕೇಶವ ಶ್ರೀನಿವಾಸ ಕೆಳಸರವರು ಯಲ್ಲಾಪುರದ ಮಾಮಲೇದಾರರಾಗಿಯೂ, ಕುಮಟೆಯ ಮಾಮಲೇದಾರರಾದ ಮಿ॥ ರಾಘವೇಂದ್ರ ಗೋವಿಂದರಾಯದುರ್ಗ ಇವರು ಬರುವ ಏಪ್ರಿಲ್ ತಾ॥ ೧ರಿಂದ ಪೆನ್ಷನ್ನಿನಮೇಲೆ ನಿವೃತ್ತರಾಗಿರುವ ಪ್ರಯುಕ್ತ ಮುರುಗೋಡದ ಮಹಾಲಕಾರಿಯವರಾದ ಮಿ॥ ರಾಘುನಾಥ ನರಸಿಂಹಪಂಡಿತರವರು ಕುಮಟೆಯ ಆಕ್ಟಿಂಗ್ ಮಾಮಲೇದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಗುಪ್ತಪೊಲೀಸುಶಾಖೆಯ ಅಸಿಸ್ಟೆಂಟ್ ಕಮಿಶನರರಾದ ಮಿ॥ ಎಲೆಂಟ್‌ರವರಿಗೆ ೧ ವರ್ಷ ರಜವೂ, ರತ್ನಗಿರಿಯ ಪೊಲೀಸು ಇನ್ಸ್ಪೆಕ್ಟರರಾದ ಮಿ॥ ಲಕ್ಷ್ಮಣರಾವ್ ಗಣಪತಿರಾವ್ ಯವರಿಗೆ ೩ ತಿಂಗಳ ರಜವೂ ಕೊಡಲ್ಪಟ್ಟಿದೆ.

ಮಿ॥ ಫಕೀರಪ್ಪ ಚನ್ನಬಸಪ್ಪ ಅಂಗಡಿ ಇವರು ಕೈಲಾಸವಾಸಿಗಳಾದುದರಿಂದ, ನವಲಗುಂದ ತಾಲೂಕು ಲೋಕಲ್‌ಬೋರ್ಡ ಮೆಂಬರಾದ ಮಿ॥ ರಾಘವೇಂದ್ರಕೃಷ್ಣ ಇನಾಮತಿಯವರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಮೆಂಬರಾಗಿ ಮಾಡಲ್ಪಟ್ಟಿರುತ್ತಾರೆ.

ವರ್ತಮಾನ.

ಧಾರವಾಡದ ತುಂಬದಪೇಟೆಯಲ್ಲಿ ವಾಸವಾಗಿದ್ದ ಬೋಗಾರದ ನರಸಪ್ಪನನ್ನು ಕಳೆದ ತಾ॥ ೧೨ರ ಮಧ್ಯರಾತ್ರಿಯಲ್ಲಿ ಯಾರೋ ಕೊಲೆಮಾಡಿದ್ದರು. ಪೊಲೀಸರು ಘಾತುಕರನ್ನು ಹುಡಕ ಯತ್ನಿಸಿದ್ದಾರೆ.

ಧಾರವಾಡದ ಕೈ॥ ಚನ್ನಮಲ್ಲಪ್ಪ ತೆಂಗಿನಕಾಯಿಯವರ ಕುಮಾರರಾದ ಮಿ॥ ಚನ್ನಬಸಪ್ಪ ತೆಂಗಿನಕಾಯಿಯವರು ಸವದತ್ತಿಯಲ್ಲಿ ಸ್ಥಾಪಿಸಿದ್ದ ಜನ್ನಿನ ಆರಂಭೋತ್ಸವವನ್ನು ಕಳೆದ ತಾ॥ ೧೯ರಲ್ಲಿ ಅಲ್ಲಿಯ ಮಾಮಲೇದಾರರಿಂದ ನೆರವೇರಿಸಿದರು.

ಹಾನಗಲ್ ತಾ॥ ಆಲದಕಟ್ಟಿಯ ದೇಶಪಾಂಡೆಯವರಾದ ಮಿ॥ ಸ್ವಾಮಿರಾಯರು ಸವಣೂರಲ್ಲಿರುವ ಶ್ರೀ ಸತ್ಯಬೋಧಸ್ವಾಮಿಗಳ ಮಠಕ್ಕೆ ೧೦೦೦ ರೂಪಾಯಿಗಳನ್ನು ಕಾಣಿಕೆಯಾಗೊಪ್ಪಿಸಿದರು.

ಧಾರವಾಡ ಡಿಸ್ಟ್ರಿಕ್ಟಿನಲ್ಲಿ ೧೯೧೦-೧೧ ನೆಯ ಸಂವತ್ಸರದಲ್ಲಿ ೯೮೩೮ ಗ್ಯಾಲನ್ನು ಸಾರಾಯಿಯು ಮಾರಾಟವಾಗಿರುವುದೆಂದೂ, ಇದರ ಹಿಂದಣ ವರ್ಷದಲ್ಲಿ ೮೧೩೩ ಗ್ಯಾಲನ್ನು ಮಾತ್ರ ಮಾರಾಟವಾಗಿದ್ದಿತೆಂದೂ ಕಮಿಶನರ ವರದಿಯಿಂದ ಗೊತ್ತಾಗುತ್ತದೆ.

ಪತ್ರವ್ಯವಹಾರವು.

ಬಿಜಾಪುರ ಜಿ॥ ಸಿಂದಗಿ ತಾ॥ ಕೆರುಟಗಿಯಲ್ಲಿ ನಿತ್ಯದಲ್ಲೂ ಬರುವಂತಹ ಅತಿಥಿ ಅಭ್ಯಾಗತರಿಗೆ ಸುಖಭೋಜನವನ್ನೂ ಶ್ರಾವಣಮಾಸದಲ್ಲಿ ಪಾದಪೂಜೆ ಮತ್ತೂ ಪುರಾಣಶ್ರವಣಗಳನ್ನೂ ಮಾಡಿಸುತ ವೀರಶೈವ ಆಬಾಲವೃದ್ಧರಿಗೆಲ್ಲಾ ಭಕ್ತಿಜ್ಞಾನ ವೈರಾಗ್ಯ ಅಷ್ಟಾವರಣಗಳನ್ನು ಬೋಧಿಸುತ್ತ ತ್ರಿಕಾಲ ಲಿಂಗಪೂಜಾಧುರಂಧುರರಾಗಿದ್ದ ಶ್ರೀ ಪಟ್ಟದದೇವರು ಅಕಸ್ಮಾತ್ತಾಗಿ ಕೂತಿದ್ದಹಾಗೆಯೇ ಶಿವೈಕ್ಯರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಈ ಮಹಾಸ್ವಾಮಿಗಳ ಅಕಾಲಮರಣದಿಂದ ಈ ಪ್ರಾಂತ್ಯದ ವೀರಶೈವರಿಗೆ ಬಹಳ ವ್ಯಸನವಾಗಿರುತ್ತದೆ. ಶಿವೈಕ್ಯರಾದ ಪಟ್ಟದ ದೇವರ ಮರಿಗಳಿಗೆ ಈಶಾನುಗ್ರಹವಿರಲೆಂದು ಪ್ರಾರ್ಥಿಸುವ

ತಮ್ಮ ಚಂದಾದಾರ್.

ಪ್ಯಾಂದರಗಿ.

ಇಲ್ಲಿಯ ಶ್ರೀಮದ್ವೀರಶೈವ ಲಾಯಬ್ರರಿಯ ಸೆಕ್ರೆಟರಿಯವರ ಅಧ್ಯಕ್ಷತೆಯ ಕೆಳಗೆ ಸಭೆಸೇರಿ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಶ್ರೀ ಜಾರ್ಜ ಪ್ರಭುಗಳು ೧೯೧೧ ನೆಯ ಡಿಸೆಂಬರ ತಾ॥ ೧೨ರ ದಿವಸ ದಿಲ್ಲಿಯ ರಾಜಧಾನಿಯಲ್ಲಿ ರಾಜ್ಯಾರೋಹಣ ಸಮಾರಂಭಕಾಲದಲ್ಲಿ ಮ॥ ರಾ॥ ರಾವ್ ಬಹದ್ದೂರ ರುದ್ರಗೌಡ ಅರಟಾಳ ಜಿ॥ ಡೆಪ್ಯುಟಿ ಕಲೆಕ್ಟರ ಜಿಲ್ಲ ಬೆಳಗಾಂವ ಇವರಿಗೆ ಪ್ರಭುಗಳ ಕಡೆಯಿಂದ ಸಿ. ಐ. ಎಸ್. ಇ, ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾದಾನಂದವನ್ನು ಲಾಯಬ್ರರಿಯ ಮೆಂಬರರು ಮತ್ತು ಸಕಲ ವೀರಶೈವರು ಸ್ಟಾರ್ ಪತ್ರದ ಮುಖಾಂತರ ರಾವಬಹದ್ದೂರರವರಿಗೆ ಅರಿಕೆಯನ್ನು ಮಾಡಬೇಕೆಂದು ನಿರ್ಧರಿಸಿರುತ್ತಾರೆ.

ಮ॥ ರಾ॥ ರಾವಬಹದ್ದೂರ ರುದ್ರಗೌಡ ಅರಟಾಳ ಸಿ.ಐ. ಎಸ್. ಇ., ಡಿ॥ ಡೆ॥ ಕ॥ ಜಿಲ್ಲ ಬೆಳಗಾಂವ ಇವರ ಸನ್ನಿಧಿಗೆ— ತಾವು ಸರಕಾರಿ ಕೆಲಸದಲ್ಲಿ ಸೇರಿದಂದಿನಿಂದ ಇಂದಿನವರೆಗೂ ರಾಜಸೇವೆಯನ್ನು ಬಹು ವಿಶ್ವಾಸದಿಂದಲೂ, ದಕ್ಷತೆಯಿಂದಲೂ, ಪ್ರಜೆಗಳಿಗೆ ಸುಖಕರವಾಗಿಯೂ ನೆರವೇರಿಸಿ ಲೋಕಪ್ರಿಯರಾಗಿರುವುದು ಪ್ರಭುಗಳ ಚಿತ್ತಕ್ಕೊಪ್ಪಿ ಶ್ರೀ ಸಾರ್ವಭೌಮರ ರಾಜ್ಯಾರೋಹಣ ಸಮಾರಂಭಕಾಲದಲ್ಲಿ ಸಿ. ಐ. ಎಸ್. ಇ., ಎಂಬ ಪದವಿಯು ತಮಗೆ ದಯಪಾಲಿಸಲ್ಪಟ್ಟುದಕ್ಕಾಗಿ ನಮಗೆ ಆದ ಆನಂದವನ್ನು ಬರಿಯಲಸದಳವಾಗಿದೆ. ಮತ್ತು ನಮ್ಮ ವೀರಶೈವರ ಮೇಲೆ ಸಾರ್ವಭೌಮ ಪ್ರಭುಗಳು ಮಾಡಿದ ಉಪಕಾರವು ಇದರಮೇಲಿಂದ ವ್ಯಕ್ತವಾಗುತ್ತದೆ. ನಮ್ಮ ವೀರಶೈವ ಮತವೆಂಬುದು ಕತ್ತಲೆಯಲ್ಲಿ ಕುಗ್ಗಿಹೋಗಿರುವುದನ್ನು ತಾವು ಕಂಡು ಕನಿಕರಪಟ್ಟು ನಮ್ಮಮೇಲೆ ಮಾಡಿದ ಉಪಕಾರವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಅಲ್ಲದೆ ಪೂರ್ವಕಾಲದಲ್ಲಿ ಬಸವಣ್ಣನವರು ನಮ್ಮ ಮತವನ್ನು ಊರ್ಜಿತಸ್ಥಿತಿಗೆ ತಂದಂತೆ ಈಗಾದರೂ ತಾವು ಮಾಡುವ ಪ್ರಯತ್ನದಿಂದ ಪ್ರತಿ ಬಸವೇಶ್ವರನೆಂದು ತಿಳಿಯುತ್ತೇವೆ. ಕೊಲ್ಲಾಪುರದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ತಾವು ಮಾಡಿದ ಸುಬೋಧ ಭಾಷಣವನ್ನು ನಾವು ಕೇಳಿ ಅದು ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಹೆಚ್ಚು ಜ್ಞಾನವನ್ನುಂಟುಮಾಡದೆ ಇರಲಾರದೆಂದು ತಿಳಿಯುತ್ತೇವೆ. ತಮ್ಮ ಉಪಕಾರವನ್ನೂ, ಸುಗುಣವನ್ನೂ ಎಷ್ಟುವರ್ಣಿಸಿದರೂ ತೀರದು. ಎರಡನೆಯ ಮಹಾಸಭೆಯು ಕೊಲ್ಲಾಪುರದಲ್ಲಿ ಕೂಡುವುದೆಂದು ತಿಳಿದುಬರುತ್ತದೆ. ಆ ಸಭೆಯ ಅಧ್ಯಕ್ಷಸ್ಥಾನವನ್ನು ತಾವು ವಹಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಯಾವತ್ಕಾಲದಲ್ಲಿ ಜಗಜ್ಜಾಲಕನಾದಾ ಪರಮೇಶ್ವರನು ತಮಗೆ ಸುಖಸಂಪತ್ತನ್ನೂ ಇನ್ನೂ ಅತಿಶಯವಾದ ಬಹುಮಾನಗಳನ್ನೂ ಕೊಟ್ಟು ರಕ್ಷಿಸಲೆಂದು ಈ ಸಭೆಯವರು ಅನನ್ಯಭಾವದಿಂದ ಬೇಡಿಕೊಂಡು ಈ ಮಾನಪತ್ರದಲೇಖನವನ್ನು ಮುಗಿಸುತ್ತಾರೆ.

ಶ್ರೀಮದ್ವೀರಶೈವ ಲಾ॥ ಸೆಕ್ರೆಟರಿ, ಮಲ್ಲಪ್ಪ ಹೋಳಿಕಟ್ಟಿ
ಮೆಂಬರು ವೀರಪ್ಪ ಲೋಣಿ.

ವೀರಶೈವ ವಿದ್ಯಾಭಿವೃದ್ಧಿಯು.

ತಿರುಮಕೊಡ್ಲು ನರಸೀಪುರದ ತಾಲ್ಲೋಕು ಕುರುಬೂರು ಗ್ರಾಮದಲ್ಲಿ ವಾಸಿಸುತ್ತಿರುವ ಶ್ರೀ॥ ಕಲ್ಬುರ್ಗಿ ಮುರುಗೇಂದ್ರಸ್ವಾಮಿಗಳೆಂಬುವರು ನರಸೀಪುರ ಪ್ರಾಂತದ ಮತ್ತು ಚಾಮರಾಜನಗರ ಪ್ರಾಂತದ ವೀರಶೈವ ಮಹಾಜನಗಳ ವಿಶ್ವಾಸಕ್ಕೆ ಪಾತ್ರರಾಗಿ, ಆ ಜನಗಳ ಕೋರಿಕೆಯ ಪ್ರಕಾರ ಅವರುಗಳ ಸಹಾಯವನ್ನು ಹೊಂದಿ "ಪರೋಪಕಾರಾರ್ಥ ಮಿದಂಶರೀರಂ" ಎಂಬಂತೆ ತಮ್ಮ ದೇಹವನ್ನು ಶಿವಭಕ್ತಜನರ ಹಿತಕ್ಕೋಸ್ಕರ ದಂಡಿಸಿ ಅನೇಕ ದ್ರವ್ಯ ವ್ಯಯಮಾಡಿ ಚಾಮರಾಜನಗರದ ತಾಲ್ಲೋಕು "ಮರಿಯಾಲದಲ್ಲಿ" ಒಂದು ನೂತನಮಠವನ್ನೂ "ಕುರುಬೂರಿನಲ್ಲಿ" ಒಂದು ನೂತನಮಠವನ್ನೂ ತಕ್ಕ ಭೂಸ್ಥಿತಿಗಳೊಡನೆ ಸ್ಥಾಪಿಸಿ, ಸತ್ಕುಲಪ್ರಸೂತರೂ, ಮಠಪತಿಗಳೂ, ಸದಾಚಾರಶೀಲರೂ ಆದ ಕುರುಬೂರು ಗ್ರಾಮಸ್ಥರಾದ ಮತ್ತೂ ಕೆಲವು ಕಾಲ ಮೈಸೂರಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ, ಶ್ರೀ॥ ಮಹಾಂತದೇವರು ಶ್ರೀ॥ ಮಲ್ಲನಾಥದೇವರು ಎಂಬ ಈ ಈರ್ವರಲ್ಲಿ ಒಂದನೆಯವರನ್ನು ಮರಿಯಾಲದ ಮಠಕ್ಕೂ ಎರಡನೆಯವರನ್ನು ಕುರುಬೂರು ಮಠಕ್ಕೂ ಈ ತಿಂಗಳು ತಾ॥ ೧ರಲ್ಲಿ ಪಟ್ಟಾಭಿಷಿಕ್ತರನ್ನಾಗಿ ಮಾಡಿಸಿದುದಲ್ಲದೆ ೧೫೩ ಬಾಲಕರಿಗೆ ಶಿವದೀಕ್ಷಾ ಸಂಸ್ಕಾರವನ್ನೂ ಮಾಡಿಸಿ ತದಂಗಭೂತವಾದ ಮಹಾ ಸಮಾರಾಧನೆಯನ್ನೂ, ನೂತನ ಸ್ವಾಮಿಗಳ ಉತ್ಸವವನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸುತ್ತೂರು ಮಠಾಧಿಪತಿಗಳಾದ ಶ್ರೀ ಸ್ವಾಮಿಗಳವರೂ, ಸಾಲೂರುಮಠದ ಶ್ರೀ ಸ್ವಾಮಿಗಳವರೂ, ಮುಡುಕುತೊರೆ ಕಲ್ಲುಮಠದ ಶ್ರೀ ಮಹಾಸ್ವಾಮಿಗಳವರೂ, ಮೊದಲಾದ ಅನೇಕ ಮಠಾಧಿಕಾರಿಗಳೂ ಮ॥ ಗಳಾದ ಮೂಗೂರು ಪುಟ್ಟಸುಬ್ಬಣ್ಣನವರು ಮೊದಲಾದ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಸುಮಾರು ಹತ್ತು ಸಹಸ್ರ ಜನರು ಸೇರಿದ್ದರು. ಸರ್ವರಿಗೂ ವಿತರಣೆಯಿಂದ ಭೋಜನಾದಿಗಳು ನೆರವೇರಿಸಲ್ಪಟ್ಟವು. ಸರ್ವರೂ ಕಲ್ಬುರ್ಗಿ ಸ್ವಾಮಿಗಳವರ ಔದಾರ್ಯವನ್ನು ಕೊಂಡಾಡುತ್ತಿದ್ದರು. ಪಟ್ಟಾಧಿಕಾರ ನಡೆದ ದಿವಸದಲ್ಲಿ ನಡೆದಂತೆ ಮರುದಿನ ಅಂದರೆ ೨ನೇ ತಾ॥ ದಿವಸವೂ ಮಹಾ ಸಮಾರಾಧನೆಯು ನಡೆಯಿತು. ಅನಂತರ ಸುತ್ತೂರು ಶ್ರೀಗಳವರ ಅಪ್ಪಣೆಪ್ರಕಾರ ಕಲ್ಬುರ್ಗಿ ಸ್ವಾಮಿಗಳವರು ಒಂದು ಸಭೆಯನ್ನು ಸೇರಿಸಿ ವಿದ್ಯಾವಿಷಯಕವಾಗಿಯೂ, ಆಚಾರಾದಿ ವಿಷಯಕವಾಗಿಯೂ ವಿದ್ವಾಂಸರಿಂದ ಉಪನ್ಯಾಸಗಳನ್ನು ಮಾಡಿಸಿದರು. ಈ ಸಭೆಗೆ ಶ್ರೀ ಸುತ್ತೂರು ಸ್ವಾಮಿಗಳವರು ಅಧ್ಯಕ್ಷರಾಗಿದ್ದರು. ಪ್ರಸ್ತುತದಲ್ಲಿ ಕುರುಬೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಸುತ್ತೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಕೊಳ್ಳೇಗಾಲ ಪ್ರಾಂತ್ಯದಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ ಸ್ಥಾಪಿಸಲ್ಪಡಬೇಕೆಂತಲೂ ಪ್ರತಿವರ್ಷವೂ ಮುಡುಕುತೊರೆ ನಾಮುಮಠದಲ್ಲಿ ಸಭೆಯು ಸೇರಿ ಆಚಾರ, ವಿದ್ಯೆ ಮೊದಲಾದ ವಿಷಯದಲ್ಲಿ ತಕ್ಕ ಏರ್ಪಾಡುಗಳು ನಡಿಸಲ್ಪಡತಕ್ಕದೆಂತಲೂ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನವು ಆಯಿತು. ಅನಂತರ ಶಿವಕಥಾ ಪಂಡಿತರಾದ ಮಿ॥ ಶಿವಪ್ಪಶಾಸ್ತ್ರಿಗಳಿಂದ ಶಿವಕಥಾಶ್ರವಣವೂ ನಡೆಯಿತು. ಇವರು ಮಾಡಿದ ಕಥೆಯನ್ನು ಕೇಳಿ ಸಭಿಕರೆಲ್ಲರೂ ಆನಂದಪರವಶರಾದರು. ಕಲ್ಬುರ್ಗಿಸ್ವಾಮಿಗಳವರು, "ಅನ್ನದಾನಂ, ಮಹಾದಾನಂ, ವಿದ್ಯಾದಾನಂ ತತೋಧಿಕಂ" ಎಂಬುವ ವಿಷಯದಲ್ಲಿ ಪ್ರಯತ್ನಮಾಡುತ್ತಿರುವದೂ ಆಚಾರ ಪ್ರಥಮೋಧರ್ಮ ಎಂಬುದು ಮೊದಲಾದುಕ್ತಿಗಳನ್ನು ಪರ್ಯಾಲೋಚಿಸಿ ಸ್ವಮತ ಜನಮಧ್ಯದಲ್ಲಿ ಆಚಾರಾಭಿವೃದ್ಧಿಗೂ ತಕ್ಕ ಪ್ರಯತ್ನವಂ ಮಾಡುವುದರಲ್ಲಿ ಉದ್ಯುಕ್ತರಾದುದೂ ಅತ್ಯಂತ ಶ್ಲಾಘನೀಯವಾಗಿರುತ್ತದೆ. ಸುತ್ತೂರು ಶ್ರೀಗಳವರು ಈ ಪ್ರಾಂತ್ಯದ ಮಠಾಧಿಕಾರಿಗಳೆಲ್ಲಿಲ್ಲ ಗಣ್ಯರೂ, ಉಪಪನ್ನರೂ, ಅನೇಕ ಶಿಷ್ಯ ಸಂಪತ್ತು ಉಳ್ಳವರೂ ಆಗಿರುವರು. ಇವರು ಯಾರ ಸಹಾಯವನ್ನು ಅಪೇಕ್ಷಿಸದೆ ತಾವೊಬ್ಬರೇ ಒಂದು ಪಾಠಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅಶನವಸನಗಳನ್ನು ಕೊಡಬಹುದು. ಆದರೆ ಎಷ್ಟು ಉಪಪನ್ನರಾದಾಗ್ಯೂ ಒಬ್ಬೊಬ್ಬರೇ ಒಂದು ಮಹಾಕಾರ್ಯವನ್ನು ಮಾಡುವುದು ಸ್ವಲ್ಪ ಪ್ರಯಾಸವೇ ಸರಿ. ಅನೇಕರು ಏಕಮನಸ್ಕರಾಗಿ ಯತ್ನಿಸಿದರೆ ಎಂತಹ ಮಹಾಕಾರ್ಯವನ್ನಾದರೂ ಸಾಧಿಸಬಹುದು. ಈ ಸಭೆಗೆ ಇವರೇ ಅಧ್ಯಕ್ಷರಾಗಿ ನಿಂತು ಸ್ವಮತೀಯರ ವಿಷಯದಲ್ಲಿ ಕೃಪೆಯಿಟ್ಟು ಅನೇಕ ಶುಭಸೂಚಕವಾದ ಏರ್ಪಾಟುಗಳನ್ನು ಪ್ರಾರಂಭಿಸಲು ಯತ್ನವಂ ಮಾಡಿದ್ದಕ್ಕಾಗೀ ವಿದ್ಯಾಭಿಮಾನಿಗಳೂ ಮತಾಭಿಮಾನಿಗಳೂ ಆದ ಮಹನೀಯರುಗಳೆಲ್ಲರೂ ಆನಂದಪಡುತ್ತಾರೆ. ಗಣ್ಯರೂ, ಮತಾಭಿಮಾನ, ವಿದ್ಯಾಭಿಮಾನಶೀಲರೂ ಆದ ಮ॥ ಪುಟ್ಟಸುಬ್ಬಣ್ಣನವರು ಮಲ್ಲಿಕಾರ್ಜುನಯ್ಯನವರೂ ಮೊದಲಾದ ಮಹನೀಯರುಗಳು ಈ ಕಾರ್ಯಗಳಲ್ಲಿ ಭಾಗಿಗಳಾಗಿ ಸೇರಿದುದು ಮತದ ಭಾಗ್ಯೋದಯವೇ ಸರಿ. ಆದರೆ ಪಾಠಶಾಲೆಗಳನ್ನು ಸ್ಥಾಪಿಸಿ ಸರಿಯಾದ ಪಾಠಕರನ್ನು ನೇಮಿಸಿ ಪಾಠಕರಿಗೆ ವೇತನವನ್ನೂ ವಿದ್ಯಾರ್ಥಿಗಳಿಗೆ ಅಶನವನ್ನೂ ಕೊಟ್ಟುಕೊಂಡು ಸ್ಥಿರವಾಗಿ ಪಾಠಶಾಲೆಗಳನ್ನು ನಡಿಸಿಕೊಂಡು ಬರುವದು ಸಾಮಾನ್ಯವಾದುದಲ್ಲ. ಅನೇಕ ದ್ರವ್ಯವನ್ನು ಶೇಖರಿಸಿ ಇಡಬೇಕಾಗುತ್ತದೆ. ಇದಕ್ಕಾಗಿ ಅಧ್ಯಕ್ಷ ಮಹಾಶಯರು, ಕಲ್ಬುರ್ಗಿ ಸ್ವಾಮಿಗಳವರ ಮೊದಲಾದ ಮಠಾಧೀಶರೂ, ಪುಟ್ಟಸುಬ್ಬಣ್ಣನವರೂ, ಮಣೇಗಾರ್ ಮಲ್ಲಿಕಾರ್ಜುನಪ್ಪನವರೂ ಮೊದಲಾದವರು ಆತ್ಮಸುಖವನ್ನು ತ್ಯಜಿಸಿ ತಮ್ಮ ದೇಹವನ್ನು ಕೆಲವು ಕಾಲ ಮತಸೇವೆಗೆ ವಿನಿಯೋಗಿಸಿದರೆ ದೊಡ್ಡ ಫಂಡು ಸೇರುತ್ತದೆ. ಆಗ್ಯೆ ಪಾಠಶಾಲೆಗಳು ನಿರ್ವಿಘ್ನವಾಗಿ ನಡಿಯುವಂತಾಗಿ ಈ ಮಹಾನುಭಾವರಿಗೆ ಪುಣ್ಯಕೀರ್ತಿಗಳು ಲಭಿಸಲು ಅಭ್ಯಂತರವಿಲ್ಲ. ನಾವುಮಾತ್ರಕ್ಕೆ ಬೇಕಾದಷ್ಟು ಸಭೆಗಳನ್ನು ಏರ್ಪಡಿಸುವದು ಸುಲಭವು. ಸಭೆಯಲ್ಲಿ ನಿರ್ಣಯಿಸಿದಂತೆ ಎಲ್ಲರೂ ಏಕಮನಸ್ಕರಾಗಿ ತಮ್ಮಲ್ಲಿರುವ ನ್ಯೂನತೆಗಳನ್ನು ಪರಿಹರಿಸಿಕೊಂಡು ಸುಧಾರಣೆಮಾಡಿಕೊಳ್ಳಬೇಕಾದುದು ಮುಖ್ಯ ಕರ್ತವ್ಯವು. ಈ ಸಂಗತಿಗಳನ್ನೆಲ್ಲಾ ಅಧ್ಯಕ್ಷರು ಮೊದಲಾದವರು ಚನ್ನಾಗಿ ಯೋಚಿಸಿ ಸ್ವಜನಪುರೋಭಿವೃದ್ಧಿ ವಿಷಯದಲ್ಲಿ ಬದ್ಧಾದರರಾಗಿ ತಕ್ಕ ಏರ್ಪಾಟುಗಳನ್ನು ಮಾಡುವರೆಂದು ನಂಬಿರುತ್ತೇನೆ. ಸರ್ವರ ತಿಳುವಳಿಕೆಗೋಸ್ಕರ ಸಭೆಯಲ್ಲಿ ನಿರ್ಣಯಗಳಾದ ವಿಷಯಗಳನ್ನು ಅಚ್ಚು ಮಾಡಿಸಿ ಪ್ರಚಾರಮಾಡುವರೆಂತಲೂ ನಂಬಿ ಸ್ವಜನ ವಿದ್ಯಾಭಿವೃದ್ಧಿಯ ವಿಷಯಗಳಲ್ಲಿ ಪ್ರವರ್ತಿಸಿರುವ ಈ ಮಹನೀಯರಿಗೆ ನನ್ನ ವಂದನೆಯನ್ನು ಸಮರ್ಪಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶಿವಯೋಗಮಂದಿರದಲ್ಲಿ ನಡೆದ ವೀರಶೈವ ಧಾರ್ಮಿಕ ಸಭೆಯು. (ಕಳೆದವಾರದ ಶೇಷ.)

ತಾ॥ ೧೯ರ ಮುಂಜಾನೆ ೮ ಗಂಟೆಗೆ ಸಭೆಯು ಪ್ರಾರಂಭವಾಯಿತು. ಆಗ ಸಮಾಜಸುಧಾರಕರಲ್ಲಿ ೩ ವರ್ಗಗಳು ಏರ್ಪಡಿಸಲ್ಪಟ್ಟವು. ಸ್ವಾರ್ಥತ್ಯಾಗದಿಂದ ಸಮಾಜಸುಧಾರಣೆಗೆ ನಿರಂತರ ದುಡಿಯುವವರು ೧ನೆಯ ವರ್ಗದೊಳಗೆ ಬರುತ್ತಾರೆ. ಇದಕ್ಕೆ ಶ್ರೀಮನ್ನಿರಂಜನ ಅನ್ನದಾನ ದೇವರು ಹಾಳಕೇರಿ, ಪಟ್ಟದ್ದೇವರು ಸೂಡಿ, ಮಲ್ಲಿಕಾರ್ಜುನಶಾಸ್ತ್ರಿಗಳು ಹಂಗರಗಿ, ಶಿ॥ ನನ್ನಯ್ಯನವರು ಬಳಗಾನೂರ ಇವರು ಒಪ್ಪಿದರು. (೨) ಸ್ವಾರ್ಥತ್ಯಾಗದಿಂದ ನಿಯಮಿತಕಾಲಗಳಲ್ಲಿ ಸಮಾಜ ಸೇವೆಯು ಕೈಕೊಂಡವರು ೨ನೆಯ ವರ್ಗದವರು. ಇದಕ್ಕೆ ಉಜ್ಜಯಿನೀಸದ್ಧರ್ಮ ಸಿಂಹಾಸನದ ಶ್ರೀಮೂರ್ತಿಗಳಾದ ಶ್ರೀಮನ್ನಿರಂಜನ ಜೋಳದ ಸ್ವಾಮಿಗಳು, ಈ ಧರ್ಮೋತ್ತೇಜಕಸಭೆಗೆ ಅಧ್ಯಕ್ಷರಾಗಿರುವ ಕೆಳದಿ ಸಂಸ್ಥಾನ ಹಿರೇಮಠದ ಪಟ್ಟಾಧ್ಯಕ್ಷರು, ಶ್ರೀ ಬಿದರಿ ಪಟ್ಟದ ದೇವರು, ೪ ಹಾನಗಲ್ಲ ತಾ॥ ಪೈಕಿ ಅಲೂರ ಶ್ರೀ ಶಿವಾಚಾರ್ಯ ಮಠದ ಅಣಿವಪ್ಪಯ್ಯನವರು ಮೆಂಬರಾಗಲೊಪ್ಪಿದರು. (೩) ಭಕ್ತರು ಭಕ್ತಿಯಿಂದ ಕೊಟ್ಟ ದ್ರವ್ಯವನ್ನು ಸ್ವೀಕರಿಸುತ್ತ

ಸ್ವಮತಸುಧಾರಣೆಯನ್ನು ಕೈಕೊಂಡ ಕೀರ್ತನಕಾರರು ಪುರಾಣಿಕರು ೩ ನೆಯ ವರ್ಗದಲ್ಲಿ ಸಮಾವೇಶವಾಗುತ್ತಾರೆ. ಇದಕ್ಕೆ ಮಿ॥ ಸದಾಶಿವಶಾಸ್ತ್ರಿಗಳು ಹಾವೇರಿ, ಮಿ॥ ಬಸವಲಿಂಗಶಾಸ್ತ್ರಿಗಳು ದ್ಯಾವಾಪೂರ, ಶಿ॥ ಗುರುಸಿದ್ಧಯ್ಯನವರು ಬೆಳವಣಕಿ, ವೀರಯ್ಯನವರು ಹಿರೇಹಾಳ ಮೆಂಬರಾಗಲೊಪ್ಪಿದರು. ರೋಣದ ಗುಲಗಂಜಿಮಠದ ಶ್ರೀಮನ್ನಿರಂಜನ ಗುರುಪಾದ ಮಹಾಸ್ವಾಮಿಗಳವರು ಅಧ್ಯಕ್ಷತೆಯಿಂದ ತಮ್ಮಲ್ಲಿ ತಾಲೂಕ ಕಮಿಟಿಯನ್ನು ಸ್ಥಾಪಿಸಿದ ರೋಣ ವೀರಶೈವ ಪ್ರಮುಖರು ಈಗ ಎರಡು ವರುಷಗಳವರೆಗೂ ಧರ್ಮೋಪದೇಶವನ್ನು ಇಟ್ಟ ಮತಸುಧಾರಣಾ ಕೆಲಸದಲ್ಲಿ ತೊಡಗಿದ್ದ ಸಂಗತಿಯು ಬಹು ಶ್ಲಾಘ್ಯವಾದದ್ದೆಂದು ಸಭಿಕರು ಆನಂದಪಟ್ಟರು. ಹಾವೇರಿ ಹುಕ್ಕೇರಿಮಠದ ಶ್ರೀಮನ್ನಿರಂಜನ ಶಿವಬಸವ ಮಹಾಸ್ವಾಮಿಗಳವರು ತಮ್ಮ ಸವದತ್ತಿಮಠದ ಉತ್ಪನ್ನದಿಂದ ಒಬ್ಬ ಉಪದೇಶಿಗಳನ್ನು ನಿಯಮಿಸಿ ಧರ್ಮಪ್ರಸರಣಗೊಳಿಸಲು ಒಪ್ಪಿದ್ದಕ್ಕಾಗಿ ಈ ಮಹನೀಯರ ಕಾರ್ಯವು ದಿಗ್ವಿಜಯವಾಗಲೆಂದು ಜಗದೀಶನನ್ನು ಭಕ್ತಿಯಿಂದ ಬೇಡಿಕೊಂಡರು. ಗದಗ ತಾಲೂಕ ಪೈಕಿ ಬಳಗಾನೂರ ಶಿ॥ ನನ್ನಯ್ಯನವರು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿರುವದಲ್ಲದೆ ಗದಗ ತಾ॥ ಮಟ್ಟಿಗೆ ಒಬ್ಬ ಧರ್ಮಬೋಧಕನನ್ನು ನಿಯಮಿಸುವದಾಗಿ ವಾಗ್ದಾನಮಾಡಿದ್ದರಿಂದ ಇವರನ್ನು ಕುರಿತು ಈ ಸಭೆಯವರು ಧನ್ಯವಾದ ಮಾಡಿದರು. ರೋಣ ತಾ॥ ಕಮಿಟಿ ಧರ್ಮೋಪದೇಶಕರಾದ ಶಿ॥ ದ್ಯಾಂಪೂರ ಚನ್ನಯ್ಯನವರು ವೇದಾಗಮೋಪನಿಷತ್ಪ್ರಮಾಣಗಳಿಂದಲೂ ಸುಲಭ ದೃಷ್ಟಾಂತಗಳಿಂದಲೂ ಲೋಕೋಕ್ತಿಯಿಂದಲೂ ರಸಭರಿತವಾಗಿ ಕೀರ್ತನಕಾರರಿಗೆ ತಕ್ಕುಪಯುಕ್ತವಾಗುವಂತೆ ೧೦ ಕೀರ್ತನೆಗಳನ್ನು ರಚಿಸಿ ಸಮಾಜಕ್ಕೆ ಭಕ್ತಿಯಿಂದ ಅರ್ಪಿಸಿದ್ದಲ್ಲದೆ ತಾವು ಹೋದ ಹೋದಲ್ಲಿ ಕೀರ್ತನಗಳನ್ನೂ ಕೃತಾವಮಾಡಿ ತೋರಿಸುತ್ತಿರುವ ಕಾರಣ ಈ ಸಂಸ್ಥೆಯಿಂದ ಒಂದು ಪಿಯಾನವು ಬಹುಮಾನವಾಗಿ ಅವರಿಗೆ ಕೊಡಲ್ಪಟ್ಟಿತು. ಹುಬ್ಬಳ್ಳಿ ನಿಶಾನಿಮಠದ ಶಾಂತವೀರಯ್ಯನವರು ತಮ್ಮ ಮೆಟ್ರಿಕ್ಯುಲೇಶನ್ ಪರೀಕ್ಷೆಯಾದ ಬಳಿಕ ೨-೩ ತಿಂಗಳ ನಂತರ ಧರ್ಮೋಪದೇಶಕ್ಕೆ ನಿಲ್ಲುತ್ತೇನೆಂದು ತಿಳಿಸಿದ್ದಕ್ಕೆ ಸಭೆಯವರು ಆನಂದಪಟ್ಟರು. ಬೆಳಗಾವಿಯಲ್ಲಿ ನೆರೆದ ೨ನೆಯ ಶ್ರೀಮದ್ವೀರಶೈವ ಮಹಿಳಾಪರಿಷತ್ತಿನಲ್ಲಿ ಪಾಸಾದ ೨ ನೆಯ ರೂಲಿಗನುಸರಿಸಿ ಆ ಸಭೆಯ ಅಧ್ಯಕ್ಷರಾದ ಸೌಭಾಗ್ಯವತಿ ಭಾಗೀರಥಿಬಾಯಿ ಪಾಟೀಲ ಸೋಲಾಪೂರ ಇವರು ಸಭೆಯ ಪತಿಯಿಂದ ಬರಕೊಂಡು ವಿನಂತಿಗೆ ಈ ಸಭೆಯವರು ಸಹಾನುಭೂತಿಯನ್ನು ತೋರಿಸಿದರು.

೩ ನೆಯ ಧರ್ಮೋತ್ತೇಜಕ ಸಭೆಯ ಠರಾವುಗಳು.

(೧) ವೀರಶೈವ ಸಮಸ್ತ ಗುರುಪೀಠಗಳಿಗೆ ನಿಯಮಿಸಲ್ಪಡುವ ಉತ್ತರಾಧಿಕಾರಿಗಳು ವಿದ್ಯಾಸಂಪನ್ನರೂ, ಪ್ರೌಢವಯಸ್ಕರೂ, ಕುಲೀನರೂ ಸದಾಚಾರ ಸಂಪನ್ನರೂ ಇದ್ದು ಇವರಿಗೆ ಸರ್ವಾನುಮತದಿಂದ ಸಂಪ್ರದಾಯಸಿದ್ಧವಾದ ಸಶಾಸ್ತ್ರವಿಧಾನಗಳಿಂದ ಅಧಿಕಾರವಾಗಬೇಕು. ಇಂಥವರನ್ನೇ ಯೋಗ್ಯ ಅಧಿಕಾರಿಗಳೆಂದು ಸರ್ವರೂ ಮನ್ನಿಸತಕ್ಕದು. ಈ ಗುರುಪೀಠದವರು ಸಮಾಜದವರಿಂದ ಒಂದು ಕಮಿಟಿಯನ್ನು ಸ್ಥಾಪಿಸಿಕೊಂಡು ತಮ್ಮ ಕರ್ತವ್ಯಗಳ ಬಗ್ಗೆ ಇದೇ ಕಮಿಟಿಯಿಂದ ತಯಾರಿಸಿದ ರೂಲ್ಸುಗಳಂತೆ ಸಂಸ್ಥಾನಕಾರ್ಯಗಳನ್ನು ನೆರವೇರಿಸಬೇಕು. ಮತ್ತು ತಮ್ಮ ಸಂಸ್ಥಾನದ ಉತ್ಪನ್ನದ ಏನಿಕೆ ಅಂಶವನ್ನು ಸಮಾಜೋನ್ನತಿಗಾಗಿ ವಿನಿಯೋಗಿಸತಕ್ಕದ್ದೆಂದು ಅತ್ಯಂತ ವಿನಯಪೂರ್ವಕವಾಗಿ ಈ ಸಭೆಯವರು ಪ್ರಾರ್ಥಿಸುತ್ತಾರೆ. (೨) ಸ್ವಮತಸುಧಾರಣೆಯ ದೆಸೆಯಿಂದ ಬೋಧಕರನ್ನು ಏರ್ಪಡಿಸಬೇಕೆಂದು ಸಭೆಯವರು ನಿರ್ಧರಿಸುತ್ತಾರೆ. (೩) ವೀರಶೈವ ಕ್ಷೇತ್ರಜಾತಿಗಳ ಸುಧಾರಣೆಗಾಗಿ ಉಪದೇಶಕರನ್ನು ಕಳಿಸತಕ್ಕದ್ದೆಂದು ಅಭಿಪ್ರಾಯಪಡುತ್ತಾರೆ. (೪) ಸ್ವಮತಾಭಿಮಾನಿಗಳೆಲ್ಲರೂ ಹಿಂದಾದ ಠರಾವುಗಳನ್ನು ಆಯಾಭಾಗದಲ್ಲಿ ಅಮಲಿನಲ್ಲಿ ತರುವ ಬಗ್ಗೆ ತಕ್ಕ ಪ್ರಯತ್ನಗಳನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. (೫) ಶಿವಯೋಗಮಂದಿರ ಸಂಸ್ಥೆಯು ಚಿರಸ್ಥಾಯಿಯಾಗುವ ಬಗ್ಗೆ ಗುರುವರ್ಗದವರೂ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರೂ ಹೆಚ್ಚಾಗಿ ವರ್ಗಣಿಕೊಟ್ಟವರೂ ವಿದ್ವಾಂಸರೂ ಶಾಸ್ತ್ರಿಗಳೂ ಸ್ವಮತಸುಧಾರಣ ಪ್ರಯತ್ನಶೀಲರೂ ಅಂತು ೧೫೧ ಮೆಂಬರರುಳ್ಳ ಒಂದು ಮಹಾಸಂಘವೂ ಅದರಲ್ಲಿ ೨೫ ಜನರುಳ್ಳ ಮತ್ತೊಂದು ಕಾರ್ಯಕಾರೀ ಸಂಘವೂ ಏರ್ಪಾಡ ಮಾಗಲಿಕ್ಕೆ ಬೇಕೆಂದು ಸಭೆಯವರು ನಿರ್ಣಯಿಸುತ್ತಾರೆ. (೬) ಬ್ರಹ್ಮಚರ್ಯ ಪರಿಪಾಲನ ಸ್ವಧರ್ಮಜ್ಞಾನ ಸನ್ನೀತಿಕ ಉನ್ನತಿ ಮುಂತಾದ ಉಪಯುಕ್ತ ವಿಷಯ ಬೆಳವಣಿಗೆಯ ಬಗ್ಗೆ ಶಿವಯೋಗಮಂದಿರದಲ್ಲಿ ಶ್ರೀಮನ್ನಿರಂಜನ ಚಿತ್ತರಗಿ ಮಹಾಂತಸ್ವಾಮಿಗಳಸ್ಮಾರಕಕ್ಕಾಗಿ ಶ್ರೀ ಮಹಾಂತ ಶಿವಯೋಗಿ ಇನ್ಸ್ಟಿಟ್ಯೂಟ್ ಎಂಬ ಹೆಸರಿನ [illegible] ಶಿವಯೋಗಮಂದಿರ ಸಂಸ್ಥೆಯಿಂದ ಸ್ಥಾಪಿಸಬೇಕೆಂದು ಈ ಸಭೆಯವರು ನಿರ್ಣಯಿಸುತ್ತಾರೆ. ಈ ಪ್ರಕಾರ ಠರಾವುಗಳನ್ನು ಪಾಸುಮಾಡಿದ ಮೇಲೆ ಅಧ್ಯಕ್ಷರು ಈ ಸಭೆಯ ಉಪಸಂಹಾರದ ಭಾಷಣ ಮಾಡಿದರು. ಆ ವೇಳೆ ಸದರ ಮಹಾಂತ ಶಿವಯೋಗಿ ವಿದ್ಯಾಲಯದ ಫಂಡನ್ನು ಶಾವಾಗಿ ಕೆಲವರು ಕೊಡಲು ಒಪ್ಪಿದರು. ಸಭೆಗೆ ಸಹಾಯಮಾಡಿದವರ ಮತ್ತು ಅಧ್ಯಕ್ಷ ಮಹಾಶಯರ ಮತ್ತು ಫಂಡುಕೊಡಲೊಪ್ಪಿದ ಮಹನೀಯರ ಆಭಾರವನ್ನು ಮನ್ನಿಸಿ ಈ ಧರ್ಮೋತ್ತೇಜಕ ಸಭೆಯು ಏಳಿಗೆ ಉಂಟಾಗಲೆಂದು ಅನನ್ಯಭಾವದಿಂದ ಶ್ರೀಮನ್ನಿರಂಜನ ಜಂಗಮವರ್ಯರನ್ನು ಪ್ರಾರ್ಥಿಸಿ ಸಭೆಯು ಸಮಾಪ್ತಿ ಮಂಗಲವನ್ನಾಚರಿಸಿದರು

ತಾ॥ ೨೦ರಲ್ಲಿ ಪುನಃ ಬೆಳಗ್ಗೆ ಸಭೆಯು ಸೇರಿತು. ಆಗ್ಗೆ ಧರ್ಮಗ್ರಂಥಗಳ ಪರೀಕ್ಷೆಯನ್ನು ಕೊಡತಕ್ಕವರನ್ನು ಒಟ್ಟಿಗೆ ಕೂಡಿಸಿ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಇದರಂತೆ ಶಿವಯೋಗ ಸಾಧಕ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಆಗ್ಯೆ ಮಹಾಂತ ಮರಿದೇವರು ಇಷ್ಟಲಿಂಗಧಾರಣ ವಿಷಯದ ಬಗ್ಗೆ ಕೇಳುವವರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಸರಳಾದ ವಾಣಿಯಿಂದ ವ್ಯಾಖ್ಯಾನಕೊಟ್ಟರು. ಅಲ್ಲಮಪ್ರಭುಸ್ವಾಮಿಯ ಅನುಯಾಯಿಗಳಾದ ಈ ಶಿವಯೋಗಸಾಧಕರು ಶಿವಯೋಗಸಿದ್ಧಿಯನ್ನು ಪಡೆದು ತೀವ್ರವೇ ಜಗತ್ತಿನ ಉದ್ಧಾರ ಕೆಲಸಕ್ಕಾಗಿ ಅಲ್ಲಮಪ್ರಭುವಿನಂತೆ ಹೊರಟಿದ್ದಾರೆ. ವೀರಶೈವ ಮತ ತತ್ವಗಳು ಇದೀ ಭೂಮಂಡಲದಲ್ಲಿ ತೀವ್ರವೇ ಪ್ರಸಾರವಾಗುವವೆಂಬ ವಿಷಯವು ಎಲ್ಲರ ಮನಸ್ಸಿನಲ್ಲಿ ಪ್ರತಿಬಿಂಬಿಸಿತು. ಮಧ್ಯಾಹ್ನ ಧರ್ಮಗ್ರಂಥ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇನಾಮುಗಳು ಹಂಚಲ್ಪಟ್ಟವು, ಅದರ ವಿವರ:—

೧ ಕಾಶಪ್ಪಯ್ಯ ಹಿರೇಮಠ ಸಾ॥ ಲಕ್ಷ್ಮೇಶ್ವರ–ಪಂಚಪದಿ ೬ ರೂ; ಬಾಗಲಕೋಟೆ ವಿದ್ಯಾರ್ಥಿಗಳು:— (೨) ಕಲ್ಯಾಣಯ್ಯ ಒಂಟಮುರಿ–ಮಲ್ಹಣ– ೨॥ ರೂ; (೩) ಮಹಾಂತ ಮರಿದೇವರು ಒಂಟಮುರಿ–ಶಿವಾನಂದಲಹರಿ– ೨॥ ರೂ; (೪) ಶಾಂತಮರಿದೇವರು ಒಂಟಮುರಿ– ಶಿವಾನಂದಲಹರಿ– ೨। ರೂ; (೫) ಸಿದ್ದಲಿಂಗದೇವರು ಒಂಟಮುರಿ– ಶಿವಾನಂದಲಹರಿ– ೩ ರೂ; (೬) ರಾಜಶೇಖರ–ಮಲ್ಹಣ ಶಿವಾನಂದಲಹರಿ ೩ ರೂ; (೭) ವಿರೂಪಾಕ್ಷ ಮರಿದೇವರು–ಮಹಿಮ್ನ– ೨॥ ರೂ; (೮) ಮಲ್ಲನಾಥಯ್ಯ ಮಲ್ಹಣ– ೨ ರೂ; (೯) ಚಂದ್ರಶೇಖರಯ್ಯ ಕೊಪ್ಪ–ಶತಕತ್ರಯ– ೩॥ ರೂ; (೧೦) ವೀರನಗೌಡ ನಿಡಗುಂದಿ– ಶತಕತ್ರಯ ಬಸವಪುರಾಣ– ೪॥ ರೂ; (೧೧) ಶಾಂತವೀರಯ್ಯ ನಿಶಾನಿಮಠ ಹುಬ್ಬಳ್ಳಿ–ಶೈವಲ್ಯಪದ್ಧತಿ ೨॥ ರೂ; (೧೨) ಸಿದ್ದಯ್ಯನವರು ಮಾದಿನೂರ–ಲಿಂಗಧಾರಣ ವಿಧಿ– ೨॥। ರೂ. ಈ ಪ್ರಕಾರ ನಾಲ್ಕನೆಯ ದಿವಸದ ಕಾರ್ಯವು ನಡೆದು ಶಿವಯೋಗಮಂದಿರ ಕಮಿಟಿಯು ವಿಷಯವಾಗಿ ಆಲೋಚನೆಗಳು ಜರುಗಿದುವು ಮತ್ತೂ ಎಲ್ಲಾ ದೇಶದಿಂದ ಬಂದಂಥ ಜನರು ತಂತಮ್ಮ ಗ್ರಾಮಗಳಿಗೆ ತೆರಳಿದರು.

ಶ್ರೀಮದ್ರಂಭಾಪುರಿ ಪ್ರತಿನಾಮ ಬಾಳೆಹೊನ್ನೂರು ಸಂಸ್ಥಾನಮಠದಲ್ಲಿ ನಡೆದ್ದ ಶ್ರೀ ರುದ್ರಮುನೀಸ್ವಾಮಿ ರಥೋತ್ಸವ ಸಮಾರಂಭವು

ವಿರೋಧಿಕೃತು ನಾಮಸಂವತ್ಸರದ ಫಾಲ್ಗುಣ ಶುದ್ಧ ೧೪ ಸ್ಥಿರವಾರ ಸೂರ್ಯೋದಯವಾದ ೧೫ ಘಟಿಕೆಕ್ಕೆ ಸಲ್ಲುವ ಅಭಿಜಿ ಮುಹೂರ್ತದಲ್ಲಿ ರಥಾರೋಹಣಕ್ಕೋಸ್ಕರ ಸರ್ವರು ಸ್ನಾನಮಡಿಯಿಂದ ಮಹಸ್ವಾಮಿಯವರ ಸವಾರಿಯನ್ನು ಬಿಜಯಂಗೈಸಿಕೊಂಡು ಸಮಸ್ತ ಬಿರುದಾವಳಿಗಳಿಂದಲು ಸ್ತುತಿಪಾಠಕರ ಜಯಧ್ವನಿಗಳಿಂದಲು ವೇದಘೋಷದಿಂದಲು ವಾದ್ಯಸಂದಣಿಯಿಂದಲು ಭಕ್ತರ ತಿಂತಿಣಿಯಿಂದಲು ಉಭಯಪಾರ್ಶ್ವದಲ್ಲಿ ಶೋಭಿಸುವ ಪಟ್ಟಚರಮೂರ್ತಿಗಳ ಮಧ್ಯದಲ್ಲಿ ಶ್ರೀ ಮುಕ್ತಿಮುನೀಶ್ವರಸ್ವಾಮಿಯವರ ಶಿವಯೋಗಮಂಟಪಕ್ಕೆ ದಯಮಾಡಿಸಿ ಮಂಗಳಾರತಿಯನ್ನು ಪೂರೈಸಿಕೊಂಡು ಶ್ರೀ ರುದ್ರಮುನೀಶ್ವರಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿ ಆ ದಿನ ಅಲ್ಲಿ ನಡಿಯತಕ್ಕಂಥ ವಿಧಿಗಳನ್ನು ಪರಾಂಬರಿಸಿ ಮಹಾಮಂಗಳಾರತಿಯು ಪೂರೈಸಿದನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ಬಿಜಯಂಗೈಸಿಕೊಂಡು ಮಹಾರಥದ ಬಳಿಗೆ ದಯಮಾಡಿಸಿ ಅಲ್ಲಿ ನಡಿಯಬೇಕಾದ ಕಾರ್ಯಗಳನ್ನ ನಡಿಸಲು ಅನುಜ್ಞೆಯನ್ನಿತ್ತು ನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ರಥಾರೋಹಣಂಗೈಸಿ ಪುಣ್ಯಸನ್ನಿಧಿಯಿಂದ ರಥಗಾಣಿಕೆಯನ್ನು ಸಮರ್ಪಿಸಿದನಂತರ ಪಟ್ಟಚರಮೂರ್ತಿಗಳು ಸರ್ಕಾರಿ ಅಧಿಕಾರಿಗಳು ಸುಭೇದಾರರು ಏಜಂಟರು ತಾಲ್ಲೂಕ ಇಲಾಖದಾರರು ಪುರಸ್ಥರು ಪ್ರಭೃತಿಗಳೆ ಮೊದಲಾದ ನೆರೆದ ಜನರೆಲ್ಲ ಕಾಣಿಕೆಯನ್ನು ಒಪ್ಪಿಸಿದನಂತರ ವಾದ್ಯಗಳು ಮೊಳಗುತ್ತಿರಲು ಮಹಾ ರಥವು ಕೆಲವು ದೂರ ಮುಂದಕ್ಕೆ ಸಾಗಿಸಲ್ಪಟ್ಟಿತು. ಮಹಾಸ್ವಾಮಿಯವರ ಸವಾರಿಯು ಸಮಸ್ತ [illegible] ಶ್ರೀ ಮಠಕ್ಕೆ ದಯಮಾಡಿಸಿದಮೇಲೆ ಸರ್ವರಿಗೂ ಭಕ್ಷ್ಯಭೋಜ್ಯಗಳಿಂದ ಮಹಾಸಂತರ್ಪಣೆಯಾಗಿ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಈ ದಿನ ರಾತ್ರಿ ೩ ಘಂಟೆ ಸಮಯದಲ್ಲಿ ಮಹಸ್ವಾಮಿಯವರ ಸ್ವಾರಿಯು ರಥದಬಳಿಗೆ ಯಥಾಪೂರ್ವಕ್ಕಿಂತೆಯಿಂದ ದಯಮಾಡಿ ಅಲ್ಲಿ ನೆರೆದಿದ್ದ ಸಭಾಮಧ್ಯದಲ್ಲಿ ರಚಿಸಿದ್ದ ಅಲಂಕಾರಯುಕ್ತವಾದ ಪೀಠವನ್ನು ಅಲಂಕರಿಸಲು ಶಿವಾಕಥಾನಂತರ ಸಂಗೀತವು ಪೂರ್ತಿಯಾಗಲು ಪದ್ಧತಿಯಂತೆ ನಾರಿಕೇಳಫಲಗಳು ಸಭಾಸದರರಾದ ವೀರಶೈವ ಮಂಡಲಿಗು ಸರ್ಕಾರದವರಿಗು ಸ್ವಾನುಭೋಗರಿಗು ಈ ಸೀಮೆ ನಾಡಿನವರಿಗು ಕೊಡ ಹಂಚಿ ರಥದ ಚಕ್ರಗಳಿಗೆ ವಿನಿಯೋಗಿಸಿದನಂತರ ಮಹಸ್ವಾಮಿಯವರ ಸವಾರಿಯು ದೇವಸ್ಥಾನದ ಮುಂದಣ ಗಾ? ಉಪ್ಪರಿಗೆಗೆ ದಯಮಾಡಿ ಪದ್ಧತಿಯಂತೆ ರಥವು ಸಂಪಿಗೆ ಕಟ್ಟೆವರಿಗೆ ಸಾಗಿ ಈ ಶ॥ ೧೫ ಭಾನುವಾರ ಬೆಳಗಿನ ಏಳುಘಂಟೆಗೆ ಸ್ವಸ್ಥಾನಕ್ಕೆ ನೆಲೆಯಾಗಿ ನಿಲ್ಲಿಸಲ್ಪಟ್ಟಿತು. ತದನಂತರ ರುದ್ರಮುನಿಸ್ವಾಮಿಯ ಉತ್ಸವಮೂರ್ತಿಯು ದೇವಸ್ಥಾನ ಪ್ರವೇಶಿಸಿ ವಿಧವತ್ತಾಗಿ ಶಯನೋತ್ಸವವು ಈ ದಿನ ಸಾಯಂಕಾಲ ಐದು ಘಂಟೆಗೆ ಉತ್ಥಾನೋತ್ಸವವು ನಡದು ತದನಂತರ ಶ್ರೀ॥ ರುದ್ರಸ್ವಾಮಿ ದೇವಸ್ಥಾನದ ಪೂರ್ವಭಾಗದ ಚಂದ್ರಶಾಲೆಯಲ್ಲಿ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿತು. ಈ ಸಭೆಯಲ್ಲಿ ಶ್ರೀ ಹೊನ್ನಾಳಿಮಠದ ಚನ್ನವೀರಸ್ವಾಮಿಗಳು, ತರಿಕೆರೆ ತಾಲ್ಲೂಕು ಹಣೆಮಠದ ಕರಿಸಿದ್ಧಸ್ವಾಮಿಗಳು, ದೊಡ್ಡಗುಣಿ ಪಟ್ಟದ ಗುರುಲಿಂಗಸ್ವಾಮಿಗಳು, ಮೂಡಗೆರೆ ಮಠದ ಚರಮೂರ್ತಿ ಶಾಂತವೀರಸ್ವಾಮಿಗಳು ಮೊದಲಾಗಿ ಅನೇಕ ಪಟ್ಟಚರಮೂರ್ತಿಗಳೂ ಮ॥ ರಾ॥ ಸಂಸ್ಥಾನದ ಏಜಂಟದಾರ್ ಸಾಹುಕಾರ್ ಯಡೆಹಳ್ಳಿ ಇಂಗಳಗೊಂದಿ ಶಾಂತಪ್ಪಸೆಟ್ಟರು. ಶ್ರೀ॥ ಬಳ್ಳಾರಿಜಿಲ್ಲಾ ಕೊಡತನಿ ವೀರಪ್ಪಯ್ಯನವರು, ಮ॥ ರಾ॥ ಹಲುಕೂರು ರುದ್ರಪ್ಪಸೆಟ್ಟರು, ಮ॥ ರಾ॥ ಬೆಲಗೂರು ಚನ್ನಬಸಪ್ಪಸೆಟ್ಟರು ಮೊದಲಾದ ದೊಡ್ಡಮನುಷ್ಯರುಗಳು ನೆರೆದಿದ್ದರು.

ಶ್ರೀ ದೊಡ್ಡಗುಣಿ ಪಟ್ಟದಸ್ವಾಮಿಗಳ ಭಾಷಣವು.

ಭೋ ಪೀಠಾಚಾರ್ಯ ಗುರುವರ್ಯರೆ!

ಬಾಳೆಹೊನ್ನೂರು ಸಂಸ್ಥಾನಮಠದಲ್ಲಿ ಅನಾದಿಯಿಂದ ನಡೆಯುವ ಶ್ರೀ ರುದ್ರಮುನೀಶ್ವರ ಸ್ವಾಮಿಗಳ ರಥೋತ್ಸವವನ್ನು ನೋಡಿ ಮಹದಾನಂದವುಂಟಾಗಿ ಇವರ ಮಹತ್ವಗಳನ್ನು ಮತ್ತೂ ಇವರೇ ಮೊದಲಾದ ಪಂಚಾಚಾರ್ಯರ ಉತ್ಪತ್ತಿಯನ್ನು ನನಗೆ ತಿಳಿದಮಟ್ಟಿಗೆ ಉಪನ್ಯಾಸಮಾಡಬೇಕಾಗಿ ಇಚ್ಛೆಯಿರುತ್ತೆ. ಸರ್ವರೂ ಕೇಳಿ ಹಂಸಕ್ಷೀರನ್ಯಾಯದಂತೆ ಗುಣಗ್ರಾಹಿಗಳಾಗಬೇಕಾಗಿ ನನ್ನ ಕೋರಿಕೆ. ಅನಾದಿಯಲ್ಲಿ ಪರಮೇಶ್ವರನು ಕೈಲಾಸದಲ್ಲಿ ಸಭೆಯನ್ನು ಮಾಡಿಕೊಂಡಿರಲಿಕ್ಕಾಗಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ ವಿಶ್ವಕರ್ಣರೆಂಬ ತನ್ನ ಪಂಚಮುಖೋದ್ಭವರಾದ ಇವರುಗಳನ್ನು ಕುರಿತು "ನೀವು ಭೂಲೋಕಕ್ಕೆ ಹೋಗಿ ವೀರಶೈವ ಮತವನ್ನು ಸ್ಥಾಪನಮಾಡಬೇಕಾಗಿ ಅಪ್ಪಣೆಮಾಡಿತ್ತಷ್ಟೆ. ಈಗ ಏನೇನುಮಾಡಿದಿರಿ?" ಎನ್ನಲು ಅದಕ್ಕೆ ಅವರು ಹೇಳಿದ್ದು— "ನಾವು ಭೂಲೋಕಕ್ಕೆ ಹೋಗಿ ನೋಡುವಲ್ಲಿ ಪರ್ವತ, ಗಿಡ, ನದಿ ಇವುಗಳ ಸಮುದಾಯವೇ ಹೊರತು ಯಾರೂ ಇರಲಿಲ್ಲ ಅನಂತರ ತಮ್ಮ ಮಂತ್ರವನ್ನೇ ಏಕಾಗ್ರಚಿತ್ತದಿಂದ ಸ್ಮರಿಸಲು ನಮ್ಮ ರೂಪಿಗೆ ಸದೃಶರಾದ ಐವರು ಮಂತ್ರಶಕ್ತಿಯಿಂದ ಉತ್ಪನ್ನರಾದರು. ಆಗ ಅವರಿಗೋಸ್ಕರ ಶಕ್ತಿಮಂತ್ರವನ್ನು ಜಪಮಾಡಿದೆವು. ಅದರಿಂದ ಐವರು ಸ್ತ್ರೀಯರು ಉತ್ಪನ್ನರಾದರು. ಅವರಿಗೆ ಲಿಂಗಧಾರಣೆಯನ್ನು ಮಾಡಿ ವೀರಶೈವ ಮತದ ಆಚರಣೆಯನ್ನು ಬೋಧಿಸಿ ಅವರಿಗೆ ಸಂಬಂಧವನ್ನು ಮಾಡಿಸಿದೆವು. ನಾವು ಗುರುವಾಗಿ ಜ್ಞಾನಬೋಧೆಯನ್ನು ಮಾಡುತ್ತ ಇರುವಷ್ಟರಲ್ಲೇ ಅನೇಕ ಜನರು ಉತ್ಪನ್ನರಾದರು. ಅವರಿಗೂ ಲಿಂಗಧಾರಣೆಯನ್ನು ಮಾಡಿ, ಉಪದೇಶವಂ ಗೈಯುತ್ತಾ ಬಂದುದರಿಂದ ನಾಲ್ಕು ದಿಕ್ಕಿಗೂ ವೀರಶೈವರೇ ತುಂಬಿಕೊಂಡು ಸದಾಶಿವಪೂಜಾಧುರೀಣರಾಗಿದ್ದಾರೆಂದು ಬಿನ್ನೈಸಿ, ನಾವು ಇನ್ನುಮೇಲೆ ಸನ್ನಿಧಿಯಲ್ಲಿ ಸೇವಾ ಮಾಡಿಕೊಂಡಿರುತ್ತೇವೆಂದು ಹೇಳಲು, ಇನ್ನುಮುಂದೆ ಒಂದೊಂದು ಯುಗದಲ್ಲಿ ಒಂದೊಂದು ಹೆಸರನ್ನು ಪಡೆದು ಪುನಃಪುನಃ ಹೋಗಿ ವೀರಶೈವ ಮತವನ್ನು ವೃದ್ಧಿಹೊಂದಿಸಬೇಕಾಗಿ ಅಪ್ಪಣೆಯಾದಂತೆ ಕೃತಯುಗದಲ್ಲಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ, ವಿಶ್ವಕರ್ಣರೆಂಬದಾಗಿಯೂ, ತ್ರೇತಾಯುಗದಲ್ಲಿ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಪಂಚಾಕ್ಷರ ಎಂಬುದಾಗಿಯೂ, ದ್ವಾಪರಯುಗದಲ್ಲಿ— ಏಕಮುಖ, ದ್ವಿಮುಖ ತ್ರಿಮುಖ ಚತುರ್ಮುಖ, ಪಂಚಮುಖರೆಂಬುದಾಗಿಯೂ, ಕಲಿಯುಗದಲ್ಲಿ— ಏಕೋರಾಮ, ಪಂಡಿತಾರಾಧ್ಯ, ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ, ವಿಶ್ವಾರಾಧ್ಯರೆಂಬುದಾಗಿಯೂ [illegible]— ಏಕೋರಾಮೇಶ್ವರರು [illegible] ಕ್ಷೇತ್ರದಲ್ಲಿ ಸಿಂಹಾಸನ[illegible] ಕೊಂಡರು. ಪಂಡಿತಾರಾಧ್ಯರು ಶ್ರೀ [illegible] ಸಿಂಹಾಸನ[illegible]

ಇವರು ಗೋಕಾವಿಯಿಂದ ಬೆಳಗಾವಿಯ ಮಾಮಲೇದಾರರಾಗಿಯೂ, ಹೊನ್ನಾಪುರದ ಮಾಮಲೇದಾರರಾದ ಮಿ॥ ಶಂಕರ ನಾರಾಯಣ ಕೃಷ್ಣ ಬಿಜಾಪುರಕರ ಇವರು ಚಿಕೋಡಿಗೂ ಮಿ॥ ರಾಮಚಂದ್ರ ರಘುನಾಥ ಕುಲಕರ್ಣಿಯವರು ಚಿಕೋಡಿಯಿಂದ ರಾಣೆಬೆನ್ನೂರಿಗೂ, ಯಲ್ಲಾಪುರದ ಮಾಮಲೇದಾರರಾದ ಮಿ॥ ನರಸಿಂಗನಾರಾಯಣ ಉಬಿಯವರ ಇವರು ಕಾರವಾರದ ಕಲೆಕ್ಟರ ಆಕ್ಟಿಂಗ್ ಚಿಟ್ನೀಸರಾಗಿಯೂ, ಧಾರವಾಡದ ಡೆಪ್ಯುಟಿ ಚಿಟ್ನೀಸರಾದ ಮಿ॥ ಕೇಶವ ಶ್ರೀನಿವಾಸ ಕೆಳಸರವರು ಯಲ್ಲಾಪುರದ ಮಾಮಲೇದಾರರಾಗಿಯೂ, ಕುಮಟೆಯ ಮಾಮಲೇದಾರರಾದ ಮಿ॥ ರಾಘವೇಂದ್ರ ಗೋವಿಂದರಾಯದುರ್ಗ ಇವರು ಬರುವ ಏಪ್ರಿಲ್ ತಾ॥ ೧ರಿಂದ ಪೆನ್ಷನ್ನಿನಮೇಲೆ ನಿವೃತ್ತರಾಗಿರುವ ಪ್ರಯುಕ್ತ ಮುರುಗೋಡದ ಮಹಾಲಕಾರಿಯವರಾದ ಮಿ॥ ರಘುನಾಥ ನರಸಿಂಹಪಂಡಿತರವರು ಕುಮಟೆಯ ಆಕ್ಟಿಂಗ್ ಮಾಮಲೇದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಗುಪ್ತಪೋಲೀಸುಶಾಖೆಯ ಅಸಿಸ್ಟೆಂಟ್ ಕಮಿಶನರರಾದ ಮಿ॥ ವಿನೆಂಟ್‌ರವರಿಗೆ ೧ ವರ್ಷ ರಜವೂ, ರತ್ನಗಿರಿಯ ಪೋಲೀಸು ಇನ್ಸ್‌ಪೆಕ್ಟರರಾದ ಮಿ॥ ಲಕ್ಷ್ಮಣರಾವ್ ಗಣಪತಿರಾವ್ ಯವರಿಗೆ ೩ ತಿಂಗಳ ರಜವೂ ಕೊಡಲ್ಪಟ್ಟಿದೆ.

ಮಿ॥ ಫಕೀರಪ್ಪ ಚನ್ನಬಸಪ್ಪ ಅಂಗಡಿ ಇವರು ಕೈಲಾಸವಾಸಿಗಳಾದುದರಿಂದ, ನವಲಗುಂದ ತಾಲ್ಲೂಕು ಲೋಕಲ್‌ಬೋರ್ಡ ಮೆಂಬರಾದ ಮಿ॥ ರಾಘವೇಂದ್ರಕೃಷ್ಣ ಇನಾಮತಿಯವರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಮೆಂಬರಾಗಿ ಮಾಡಲ್ಪಟ್ಟಿರುತ್ತಾರೆ.

ವರ್ತಮಾನ.

ಧಾರವಾಡದ ತುಂಬದಪೇಟೆಯಲ್ಲಿ ವಾಸವಾಗಿದ್ದ ಬೋಗಾರದ ನರಸಪ್ಪನನ್ನು ಕಳೆದ ತಾ॥ ೧೨ ರ ಮಧ್ಯರಾತ್ರಿಯಲ್ಲಿ ಯಾರೋ ಕೊಲೆಮಾಡಿದ್ದರು. ಪೋಲೀಸರು ಘಾತುಕರನ್ನು ಹುಡಕ ಯತ್ನಿಸಿದ್ದಾರೆ.

ಧಾರವಾಡದ ಕೈ॥ ಚನ್ನಮಲ್ಲಪ್ಪ ತೆಂಗಿನಕಾಯಿಯವರ ಕುಮಾರರಾದ ಮ॥ ಚನ್ನಬಸಪ್ಪ ತೆಂಗಿನಕಾಯಿಯವರು ಸವದತ್ತಿಯಲ್ಲಿ ಸ್ಥಾಪಿಸಿದ್ದ ಜನ್ನಿನ ಆರಂಭೋತ್ಸವವನ್ನು ಕಳೆದ ತಾ॥ ೧೯ ರಲ್ಲಿ ಅಲ್ಲಿಯ ಮಾಮಲೇದಾರರಿಂದ ನೆರವೇರಿಸಿದರು.

ಹಾನಗಲ್ ತಾ॥ ಆಲದಕಟ್ಟಿಯ ದೇಶಪಾಂಡೆಯವರಾದ ಮಿ॥ ಸ್ವಾಮಿರಾಯರು ಸವಣೂರಲ್ಲಿರುವ ಶ್ರೀ ಸತ್ಯಬೋಧಸ್ವಾಮಿಗಳ ಮಠಕ್ಕೆ ೧೦೦೦ ರೂಪಾಯಿಗಳನ್ನು ಕಾಣಿಕೆಯಾಗೊಪ್ಪಿಸಿದರು.

ಧಾರವಾಡ ಡಿಸ್ಟ್ರಿಕ್ಟಿನಲ್ಲಿ ೧೯೧೦-೧೧ ನೆಯ ಸಂವತ್ಸರದಲ್ಲಿ ೯೮೩೬೮ ಗ್ಯಾಲನ್ನು ಸಾರಾಯಿಯು ಮಾರಾಟವಾಗಿರುವುದೆಂದೂ, ಇದರ ಹಿಂದಣ ವರ್ಷದಲ್ಲಿ ೮೦೨೩೩ ಗ್ಯಾಲನ್ನು ಮಾತ್ರ ಮಾರಾಟವಾಗಿದ್ದಿತೆಂದೂ ಕಮಿಷನರ ವರದಿಯಿಂದ ಗೊತ್ತಾಗುತದೆ.

ಪತ್ರವ್ಯವಹಾರವು.

ಬಿಜಾಪುರ ಡಿ॥ ಸಿಂದಗಿ ತಾ॥ ಕೆರುಟಿಗಿಯಲ್ಲಿ ನಿತ್ಯದಲ್ಲಿಯೂ ಬರುವಂತಹ ಅತಿಥಿ ಅಭ್ಯಾಗತರಿಗೆ ಸುಖಭೋಜನವನ್ನೂ ಶ್ರಾವಣಮಾಸದಲ್ಲಿ ಪಾದಪೂಜೆ ಮತ್ತೂ ಪುರಾಣಶ್ರವಣಗಳನ್ನೂ ಮಾಡಿಸುತ ವೀರಶೈವ ಆಬಾಲವೃದ್ಧರಿಗೆಲ್ಲಾ ಭಕ್ತಿಜ್ಞಾನ ವೈರಾಗ್ಯ ಅಷ್ಟಾವರಣಗಳನ್ನು ಬೋಧಿಸುತ್ತ ತ್ರಿಕಾಲ ಲಿಂಗಪೂಜಾಧುರಂಧುರರಾಗಿದ್ದ ಶ್ರೀ ಪಟ್ಟದದೇವರು ಅಕಸ್ಮಾತ್ತಾಗಿ ಕೂತಿದ್ದಹಾಗೆಯೇ ಶಿವೈಕ್ಯರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಈ ಮಹಾಸ್ವಾಮಿಗಳ ಅಕಾಲಮರಣದಿಂದ ಈ ಪ್ರಾಂತ್ಯದ ವೀರಶೈವರಿಗೆ ಬಹಳ ವ್ಯಸನವಾಗಿರುತ್ತದೆ. ಶಿವೈಕ್ಯರಾದ ಪಟ್ಟದ ದೇವರ ಮರಿಗಳಿಗೆ ಈ ಶಾನುಗ್ರಹವಿರಲೆಂದು ಪ್ರಾರ್ಥಿಸುವ

ತಮ್ಮ ಚಂದಾದಾರ್.

ಮೈಂದರಗಿ.

ಇಲ್ಲಿಯ ಶ್ರೀಮದ್ವೀರಶೈವ ಲಾಯಬ್ರರಿಯ ಸೆಕ್ರಟರಿಯವರ ಅಧ್ಯಕ್ಷತೆಯ ಕೆಳಗೆ ಸಭೆಸೇರಿ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಶ್ರೀ ಜಾರ್ಜ್ ಪ್ರಭುಗಳು ೧೯೧೧ ನೆಯ ಡಿಸೆಂಬರ ತಾ॥ ೧೨ ರ ದಿವಸ ದಿಲ್ಲಿಯ ರಾಜಧಾನಿಯಲ್ಲಿ ರಾಜ್ಯಾರೋಹಣ ಸಮಾರಂಭಕಾಲದಲ್ಲಿ ಮ॥ ರಾ॥ ರಾವ್ ಬಹದ್ದೂರ ರುದ್ರಗೌಡ ಅರಟಾಳ ಡಿ॥ ಡೆಪ್ಯುಟಿ ಕಲೆಕ್ಟರ ಜಿಲ್ಲ ಬೆಳಗಾಂವ ಇವರಿಗೆ ಪ್ರಭುಗಳ ಕಡೆಯಿಂದ ಸಿ. ಐ. ಎಸ್. ಒ. ಪ್ರಶಸ್ತಿಯು ಲಭ್ಯವಾದುದರಿಂದ ತಮಗುಂಟಾದಾನಂದವನ್ನು ಲಾಯಬ್ರರಿಯ ಮೆಂಬರರು ಮತ್ತು ಸಕಲ ವೀರಶೈವರು ಸ್ಟಾರ್ ಪತ್ರದ ಮುಖಾಂತರ ರಾವಬಹದ್ದೂರರವರಿಗೆ ಅರಿಕೆಯನ್ನು ಮಾಡಬೇಕೆಂದು ನಿರ್ಧರಿಸಿರುತ್ತಾರೆ.

ಮ॥ರಾ॥ ರಾವಬಹದ್ದೂರ ರುದ್ರಗೌಡ ಅರಟಾಳ ಸಿ.ಐ. ಎಸ್. ಒ., ಡಿ॥ ಡೆ॥ ಕ॥ ಜಿಲ್ಲ ಬೆಳಗಾಂವ ಇವರ ಸನ್ನಿಧಿಗೆ—

ತಾವು ಸರಕಾರಿ ಕೆಲಸದಲ್ಲಿ ಸೇರಿದಂದಿನಿಂದ ಇಂದಿನವರೆಗೂ ರಾಜಸೇವೆಯನ್ನು ಬಹು ವಿಶ್ವಾಸದಿಂದಲೂ, ದಕ್ಷತೆಯಿಂದಲೂ, ಪ್ರಜೆಗಳಿಗೆ ಸುಖಕರವಾಗಿಯೂ ನೆರವೇರಿಸಿ ಲೋಕಪ್ರಿಯರಾಗಿರುವುದು ಪ್ರಭುಗಳ ಚಿತ್ತಕ್ಕೊಪ್ಪಿ ಶ್ರೀ ಸಾರ್ವಭೌಮರ ರಾಜ್ಯಾರೋಹಣ ಸಮಾರಂಭಕಾಲದಲ್ಲಿ ಸಿ. ಐ. ಎಸ್. ಒ., ಎಂಬ ಪದವಿಯು ತಮಗೆ ದಯಪಾಲಿಸಲ್ಪಟ್ಟುದಕ್ಕಾಗಿ ನಮಗೆ ಆದ ಆನಂದವನ್ನು ಬರೆಯಲಶಕ್ಯವಾಗಿದೆ. ಮತ್ತು ನಮ್ಮ ವೀರಶೈವರ ಮೇಲೆ ಸಾರ್ವಭೌಮ ಪ್ರಭುಗಳು ಮಾಡಿದ ಉಪಕಾರವು ಇದರಮೇಲಿಂದ ವ್ಯಕ್ತವಾಗುತ್ತದೆ. ನಮ್ಮ ವೀರಶೈವ ಮತವೆಂಬುದು ಕತ್ತಲೆಯಲ್ಲಿ ಕುಗ್ಗಿಹೋಗಿರುವುದನ್ನು ತಾವು ಕಂಡು ಕನಿಕರಪಟ್ಟು ನಮ್ಮಮೇಲೆ ಮಾಡಿದ ಉಪಕಾರವನ್ನು ಎಷ್ಟು ವರ್ಣಿಸಿದರೂ ತೀರದ್ದಾಗಿದೆ. ಅಲ್ಲದೆ ಪೂರ್ವಕಾಲದಲ್ಲಿ ಬಸವಣ್ಣನವರು ನಮ್ಮ ಮತವನ್ನು ಊರ್ಜಿತಸ್ಥಿತಿಗೆ ತಂದಂತೆ ಈಗಾದರೂ ತಾವು ಮಾಡುವ ಪ್ರಯತ್ನದಿಂದ ಪ್ರತಿ ಬಸವೇಶ್ವರನೆಂದು ತಿಳಿಯುತ್ತೇವೆ. ಸೊಲ್ಲಾಪುರದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ತಾವು ಮಾಡಿದ ಸುಬೋಧ ಭಾಷಣವನ್ನು ನಾವು ಕೇಳಿ ಅದು ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಹೆಚ್ಚು ಜ್ಞಾನವನ್ನುಂಟುಮಾಡದೆ ಇರಲಾರದೆಂದು ತಿಳಿಯುತ್ತೇವೆ. ತಮ್ಮ ಉಪಕಾರವನ್ನೂ, ಸುಗುಣವನ್ನೂ ಎಷ್ಟು ವರ್ಣಿಸಿದರೂ ತೀರದು. ಏಳನೆಯ ಮಹಾಸಭೆಯು ಕೊಲ್ಹಾಪುರದಲ್ಲಿ ಕೂಡುವುದೆಂದು ತಿಳಿದುಬರುತ್ತದೆ. ಆ ಸಭೆಯ ಅಧ್ಯಕ್ಷಸ್ಥಾನವನ್ನು ತಾವು ವಹಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಯಾವತ್ಕಾಲದಲ್ಲಿ ಜಗಜ್ಜಾಲಕನಾದಾ ಪರಮೇಶ್ವರನು ತಮಗೆ ಸುಖಸಂಪತ್ತನ್ನೂ, ಇನ್ನೂ ಅತಿಶಯವಾದ ಬಹುಮಾನಗಳನ್ನೂ ಕೊಟ್ಟು ರಕ್ಷಿಸಲೆಂದು ಈ ಸಭೆಯವರು ಅನನ್ಯಭಾವದಿಂದ ಬೇಡಿಕೊಂಡು ಈ ಮಾನಪತ್ರದಲೇಖನವನ್ನು ಮುಗಿಸುತ್ತಾರೆ.

ಶ್ರೀಮದ್ವೀರಶೈವ ಲಾ॥ ಸೆಕ್ರಟರಿ, ಮಲ್ಲಪ್ಪ ಹೋಳಿಕಟ್ಟಿ
ಮೆಂಬರು ವೀರಪ್ಪ ಲೋಣಿ.

ವೀರಶೈವ ವಿದ್ಯಾಭಿವೃದ್ಧಿಯು.

ತಿರುಮಕೂಡ್ಲು ನರಸೀಪುರದ ತಾಲೋಕು ಕುರುಬೂರು ಗ್ರಾಮದಲ್ಲಿ ವಾಸಿಸುತ್ತಿರುವ ಶ್ರೀ॥ ಕಲ್ಬುರ್ಗಿ ಮುರುಗೇಂದ್ರಸ್ವಾಮಿಗಳೆಂಬುವರು ನರಸೀಪುರ ಪ್ರಾಂತದ ಮತ್ತು ಚಾಮರಾಜನಗರ ಪ್ರಾಂತದ ವೀರಶೈವ ಮಹಾಜನಗಳ ವಿಶ್ವಾಸಕ್ಕೆ ಪಾತ್ರರಾಗಿ, ಆ ಜನಗಳ ಕೋರಿಕೆಯ ಪ್ರಕಾರ ಅವರುಗಳ ಸಹಾಯವನ್ನು ಹೊಂದಿ "ಪರೋಪಕಾರಾರ್ಥ ಮಿದಂಶರೀರಂ" ಎಂಬಂತೆ ತಮ್ಮ ದೇಹವನ್ನು ಶಿವಭಕ್ತಜನರ ಹಿತಕ್ಕೋಸ್ಕರ ದಂಡಿಸಿ ಅನೇಕ ದ್ರವ್ಯ ವ್ಯಯಮಾಡಿ ಚಾಮರಾಜನಗರದ ತಾಲೋಕು "ಮರಿಯಾಲದಲ್ಲಿ" ಒಂದು ನೂತನಮಠವನ್ನೂ "ಕುರುಬೂರಿನಲ್ಲಿ" ಒಂದು ನೂತನಮಠವನ್ನೂ ತಕ್ಕ ಭೂಸ್ಥಿತಿಗಳೊಡನೆ ಸ್ಥಾಪಿಸಿ, ಸತ್ಕುಲಪ್ರಸೂತರೂ, ಮಠಪತಿಗಳೂ, ಸದಾಚಾರಶೀಲರೂ ಆದ ಕುರುಬೂರು ಗ್ರಾಮಸ್ಥರಾದ ಮತ್ತೂ ಕೆಲವು ಕಾಲ ಮೈಸೂರಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ, ಶ್ರೀ॥ ಮಹಾಂತದೇವರು ಶ್ರೀ॥ ಮಲ್ಲನಾಥದೇವರು ಎಂಬ ಈ ಈರ್ವರಲ್ಲಿ ಒಂದನೆಯವರನ್ನು ಮರಿಯಾಲದ ಮಠಕ್ಕೂ ಎರಡನೆಯವರನ್ನು ಕುರುಬೂರು ಮಠಕ್ಕೂ ಈ ತಿಂಗಳು ತಾ॥ ೧ ರಲ್ಲಿ ಪಟ್ಟಾಭಿಷಿಕ್ತರನ್ನಾಗಿ ಮಾಡಿಸಿದುದಲ್ಲದೆ ೧೫೩ ಬಾಲಕರಿಗೆ ಶಿವದೀಕ್ಷಾ ಸಂಸ್ಕಾರವನ್ನೂ ಮಾಡಿಸಿ ತದಂಗಭೂತವಾದ ಮಹಾ ಸಮಾರಾಧನೆಯನ್ನೂ, ನೂತನ ಸ್ವಾಮಿಗಳ ಉತ್ಸವವನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸುತ್ತೂರು ಮಠಾಧಿಪತಿಗಳಾದ ಶ್ರೀ ಸ್ವಾಮಿಗಳವರೂ, ಸಾಲೂರುಮಠದ ಶ್ರೀ ಸ್ವಾಮಿಗಳವರೂ, ಮುಡುಕುತೊರೆ ಕಲ್ಲುಮಠದ ಶ್ರೀ ಮಹಾಸ್ವಾಮಿಗಳವರೂ, ಮೊದಲಾದ ಅನೇಕ ಮಠಾಧಿಕಾರಿಗಳೂ ಮ॥ ಗಳಾದ ಮೂಗೂರು ಪುಟ್ಟಸುಬ್ಬಣ್ಣನವರು ಮೊದಲಾದ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಸುಮಾರು ಹತ್ತು ಸಹಸ್ರ ಜನರು ಸೇರಿದ್ದರು. ಸರ್ವರಿಗೂ ವಿತರಣೆಯಿಂದ ಭೋಜನಾದಿಗಳು ನೆರವೇರಿಸಲ್ಪಟ್ಟವು. ಸರ್ವರೂ ಕಲ್ಬುರ್ಗಿ ಸ್ವಾಮಿಗಳವರ ಔದಾರ್ಯವನ್ನು ಕೊಂಡಾಡುತ್ತಿದ್ದರು. ಪಟ್ಟಾಧಿಕಾರ ನಡೆದ ದಿವಸದಲ್ಲಿ ನಡೆದಂತೆ ಮರುದಿನ ಅಂದರೆ ೨ನೇ ತಾ॥ ದಿವಸವೂ ಮಹಾ ಸಮಾರಾಧನೆಯು ನಡೆಯಿತು. ಅನಂತರ ಸುತ್ತೂರು ಶ್ರೀಗಳವರ ಅಪ್ಪಣೆಪ್ರಕಾರ ಕಲ್ಬುರ್ಗಿ ಸ್ವಾಮಿಗಳವರು ಒಂದು ಸಭೆಯನ್ನು ಸೇರಿಸಿ ವಿದ್ಯಾವಿಷಯಕವಾಗಿಯೂ, ಆಚಾರಾದಿ ವಿಷಯಕವಾಗಿಯೂ ವಿದ್ವಾಂಸರಿಂದ ಉಪನ್ಯಾಸಗಳನ್ನು ಮಾಡಿಸಿದರು. ಈ ಸಭೆಗೆ ಶ್ರೀ ಸುತ್ತೂರು ಸ್ವಾಮಿಗಳವರು ಅಧ್ಯಕ್ಷರಾಗಿದ್ದರು. ಪ್ರಸ್ತುತದಲ್ಲಿ ಕುರುಬೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಸುತ್ತೂರಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ, ಕೊಳ್ಳೇಗಾಲ ಪ್ರಾಂತ್ಯದಲ್ಲಿ ಒಂದು ಸಂಸ್ಕೃತ ಪಾಠಶಾಲೆಯೂ ಸ್ಥಾಪಿಸಲ್ಪಡಬೇಕೆಂತಲೂ ಪ್ರತಿವರ್ಷವೂ ಮುಡುಕುತೊರೆ ನಾಯಮಠದಲ್ಲಿ ಸಭೆಯು ಸೇರಿ ಆಚಾರ, ವಿದ್ಯೆ ಮೊದಲಾದ ವಿಷಯದಲ್ಲಿ ತಕ್ಕ ಏರ್ಪಾಡುಗಳು ನಡಿಸಲ್ಪಡತಕ್ಕದೆಂತಲೂ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನವು ಆಯಿತು. ಅನಂತರ ಶಿವಕಥಾ ಪಂಡಿತರಾದ ಮಿ॥ ಶಿವಪ್ಪಶಾಸ್ತ್ರಿಗಳಿಂದ ಶಿವಕಥಾಶ್ರವಣವೂ ನಡೆಯಿತು. ಇವರು ಮಾಡಿದ ಕಥೆಯನ್ನು ಕೇಳಿ ಸಭಿಕರೆಲ್ಲರೂ ಆನಂದಪರವಶರಾದರು. ಕಲ್ಬುರ್ಗಿಸ್ವಾಮಿಗಳವರು, "ಅನ್ನದಾನಂ, ಮಹಾದಾನಂ, ವಿದ್ಯಾದಾನಂ ತತೋಧಿಕಂ" ಎಂಬುವ ವಿಷಯದಲ್ಲಿ ಪ್ರಯತ್ನಮಾಡುತ್ತಿರುವದೂ ಆಚಾರ ಪ್ರಥಮೋಧರ್ಮ ಎಂಬುದು ಮೊದಲಾದುಕ್ತಿಗಳನ್ನು ಪರ್ಯಾಲೋಚಿಸಿ ಸ್ವಮತ ಜನಮಧ್ಯದಲ್ಲಿ ಆಚಾರಾಭಿವೃದ್ಧಿಗೂ ತಕ್ಕ ಪ್ರಯತ್ನವಂ ಮಾಡುವುದರಲ್ಲಿ ಉದ್ಯುಕ್ತರಾದುದೂ ಅತ್ಯಂತ ಶ್ಲಾಘನೀಯವಾಗಿರುತ್ತದೆ. ಸುತ್ತೂರು ಶ್ರೀಗಳವರು ಈ ಪ್ರಾಂತ್ಯದ ಮಠಾಧಿಕಾರಿಗಳೆಲ್ಲೆಲ್ಲ ಗಣ್ಯರೂ, ಉಪಪನ್ನರೂ, ಅನೇಕ ಶಿಷ್ಯಸಂಪತ್ತು ಉಳ್ಳವರೂ ಆಗಿರುವರು. ಇವರು ಯಾರ ಸಹಾಯವನ್ನು ಅಪೇಕ್ಷಿಸದೆ ತಾವೊಬ್ಬರೇ ಒಂದು ಪಾಠಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅಶನವಸನಗಳನ್ನು ಕೊಡಬಹುದು. ಆದರೆ ಎಷ್ಟು ಉಪಪನ್ನರಾದಾಗ್ಯೂ ಒಬ್ಬೊಬ್ಬರೇ ಒಂದು ಮಹಾಕಾರ್ಯವನ್ನು ಮಾಡುವುದು ಸ್ವಲ್ಪ ಪ್ರಯಾಸವೇ ಸರಿ. ಅನೇಕರು ಏಕಮನಸ್ಕರಾಗಿ ಯತ್ನಿಸಿದರೆ ಎಂತಹ ಮಹಾಕಾರ್ಯವನ್ನಾದರೂ ಸಾಧಿಸಬಹುದು. ಈ ಸಭೆಗೆ ಇವರೇ ಅಧ್ಯಕ್ಷರಾಗಿ ನಿಂತು ಸ್ವಮತೀಯರ ವಿಷಯದಲ್ಲಿ ಕೃಪೆಯಿಟ್ಟು ಅನೇಕ ಶುಭಸೂಚಕವಾದ ಏರ್ಪಾಟುಗಳನ್ನು ಪ್ರಾರಂಭಿಸಲು ಯತ್ನವಂ ಮಾಡಿದ್ದಕ್ಕಾಗಿ ವಿದ್ಯಾಭಿಮಾನಿಗಳೂ ಮತಾಭಿಮಾನಿಗಳೂ ಆದ ಮಹನಿಯರೆಲ್ಲರೂ ಆನಂದಪಡುತ್ತಾರೆ. ಗಣ್ಯರೂ, ಮತಾಭಿಮಾನ, ವಿದ್ಯಾಭಿಮಾನಶೀಲರೂ ಆದ ಮ॥ ಪುಟ್ಟಸುಬ್ಬಣ್ಣನವರು ಮಲ್ಲಿಕಾರ್ಜುನಯ್ಯನವರೂ ಮೊದಲಾದ ಮಹನೀಯರುಗಳು ಈ ಕಾರ್ಯಗಳಲ್ಲಿ ಭಾಗಿಗಳಾಗಿ ಸೇರಿದುದು ಮತದ ಭಾಗ್ಯೋದಯವೇ ಸರಿ. ಆದರೆ ಪಾಠಶಾಲೆಗಳನ್ನು ಸ್ಥಾಪಿಸಿ ಸರಿಯಾದ ಪಾಠಕರನ್ನು ನೇಮಿಸಿ ಪಾಠಕರಿಗೆ ವೇತನವನ್ನೂ, ವಿದ್ಯಾರ್ಥಿಗಳಿಗೆ ಅಶನವನ್ನೂ ಕೊಟ್ಟುಕೊಂಡು ಸ್ಥಿರವಾಗಿ ಪಾಠಶಾಲೆಗಳನ್ನು ನಡಿಸಿಕೊಂಡು ಬರುವದು ಸಾಮಾನ್ಯವಾದುದಲ್ಲ. ಅನೇಕ ದ್ರವ್ಯವನ್ನು ಶೇಖರಿಸಿ ಇಡಬೇಕಾಗುತ್ತದೆ. ಇದಕ್ಕಾಗಿ ಅಧ್ಯಕ್ಷ ಮಹಾಶಯರು, ಕಲ್ಬುರ್ಗಿ ಸ್ವಾಮಿಗಳವರ ಮೊದಲಾದ ಮಠಾಧೀಶರೂ, ಪುಟ್ಟಸುಬ್ಬಣ್ಣನವರೂ, ಮಣೇಗಾರ್ ಮಲ್ಲಿಕಾರ್ಜುನಪ್ಪನವರೂ ಮೊದಲಾದವರು ಆತ್ಮಸುಖವನ್ನು ತ್ಯಜಿಸಿ ತಮ್ಮ ದೇಹವನ್ನು ಕೆಲವು ಕಾಲ ಮತಸೇವೆಗೆ ವಿನಿಯೋಗಿಸಿದರೆ ದೊಡ್ಡ ಫಂಡು ಸೇರುತ್ತದೆ. ಆಗ್ಯೆ ಪಾಠಶಾಲೆಗಳು ನಿರ್ವಿಘ್ನವಾಗಿ ನಡಿಯುವಂತಾಗಿ ಈ ಮಹಾನುಭಾವರಿಗೆ ಪುಣ್ಯಕೀರ್ತಿಗಳು ಲಭಿಸಲು ಅಭ್ಯಂತರವಿಲ್ಲ. ನಾವು ಮಾತ್ರಕ್ಕೆ ಬೇಕಾದಷ್ಟು ಸಭೆಗಳನ್ನು ಏರ್ಪಡಿಸುವದು ಸುಲಭವು. ಸಭೆಯಲ್ಲಿ ನಿರ್ಣಯಿಸಿದಂತೆ ಎಲ್ಲರೂ ಏಕಮನಸ್ಕರಾಗಿ ತಮ್ಮಲ್ಲಿರುವ ನ್ಯೂನತೆಗಳನ್ನು ಪರಿಹರಿಸಿಕೊಂಡು ಸುಧಾರಣೆಮಾಡಿಕೊಳ್ಳಬೇಕಾದುದು ಮುಖ್ಯ ಕರ್ತವ್ಯವು. ಈ ಸಂಗತಿಗಳನ್ನೆಲ್ಲಾ ಅಧ್ಯಕ್ಷರು ಮೊದಲಾದವರು ಚನ್ನಾಗಿ ಯೋಚಿಸಿ ಸ್ವಜನಪುರೋಭಿವೃದ್ಧಿ ವಿಷಯದಲ್ಲಿ ಬದ್ಧಾದರರಾಗಿ ತಕ್ಕ ಏರ್ಪಾಟುಗಳನ್ನು ಮಾಡುವರೆಂದು ನಂಬಿರುತ್ತೇನೆ. ಸರ್ವರ ತಿಳುವಳಿಕೆಗೋಸ್ಕರ ಸಭೆಯಲ್ಲಿ ನಿರ್ಣಯಗಳಾದ ವಿಷಯಗಳನ್ನು ಅಚ್ಚುಮಾಡಿಸಿ ಪ್ರಚಾರಮಾಡುವರೆಂತಲೂ ನಂಬಿ ಸ್ವಜನ ವಿದ್ಯಾಭಿವೃದ್ಧಿಯ ವಿಷಯಗಳಲ್ಲಿ ಪ್ರವರ್ತಿಸಿರುವ ಈ ಮಹನೀಯರಿಗೆ ನನ್ನ ವಂದನೆಯನ್ನು ಸಮರ್ಪಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶಿವಯೋಗಮಂದಿರದಲ್ಲಿ ನಡೆದ ವೀರಶೈವ ಧಾರ್ಮಿಕ ಸಭೆಯು. (ಕಳೆದವಾರದ ಶೇಷ.)

ತಾ॥ ೧೯ ರ ಮುಂಜಾನೆ ೮ ಗಂಟೆಗೆ ಸಭೆಯು ಪ್ರಾರಂಭವಾಯಿತು. ಆಗ ಸಮಾಜಸುಧಾರಕರಲ್ಲಿ ೩ ವರ್ಗಗಳು ಏರ್ಪಡಿಸಲ್ಪಟ್ಟವು. ಸ್ವಾರ್ಥತ್ಯಾಗದಿಂದ ಸಮಾಜಸುಧಾರಣೆಗೆ ನಿರಂತರ ದುಡಿಯುವವರು ೧ ನೆಯ ವರ್ಗದೊಳಗೆ ಬರುತ್ತಾರೆ. ಇದಕ್ಕೆ ಶ್ರೀಮನ್ನಿರಂಜನ ಅನ್ನದಾನ ದೇವರು ಹಾಳಕೇರಿ, ಪಟ್ಟದ್ದೇವರು ಸೂಡಿ, ಮಲ್ಲಿಕಾರ್ಜುನಶಾಸ್ತ್ರಿಗಳು ಹಂಗರಗಿ, ಶಿ॥ ನನ್ನಯ್ಯನವರು ಬಳಗಾನೂರ ಇವರು ಒಪ್ಪಿದರು. (೨) ಸ್ವಾರ್ಥತ್ಯಾಗದಿಂದ ನಿಯಮಿತಕಾಲಗಳಲ್ಲಿ ಸಮಾಜ ಸೇವೆಯ ಕೈಕೊಂಡವರು ೨ ನೆಯ ವರ್ಗದವರು. ಇದಕ್ಕೆ ಉಜ್ಜಯಿನೀಸದ್ಧರ್ಮ ಸಿಂಹಾಸನದ ಕ್ರಿಯಾಮೂರ್ತಿಗಳಾದ ಶ್ರೀಮನ್ನಿರಂಜನ ಜೋಡದ ಸ್ವಾಮಿಗಳು, ಈ ಧರ್ಮೋತ್ತೇಜಕಸಭೆಗೆ ಅಧ್ಯಕ್ಷರಾಗಿರುವ ಕೆಳದಿ ಸಂಸ್ಥಾನ ಹಿರೇಮಠದ ಪಟ್ಟಾಧ್ಯಕ್ಷರು, ಶ್ರೀ ಬದಾಮಿ ಪಟ್ಟದ ದೇವರು, ೪ ಹಾನಗಲ್ಲ ತಾ॥ ಪೈಕಿ ಅಲೂರ [illegible] ಮಠದ ಅಭಿನವ[illegible]ನವರು ಮೆಂಬರಾಗಲೊಪ್ಪಿದರು. (೩) ಭಕ್ತರು ಭಕ್ತಿಯಿಂದ ಕೊಟ್ಟ ದ್ರವ್ಯವನ್ನು ಸ್ವೀಕರಿಸುತ್ತ

ಸ್ವಮತಸುಧಾರಣೆಯನ್ನು ಕೈಕೊಂಡ ಕೀರ್ತನಕಾರರು ಪುರಾಣಿಕರು ೩ ನೆಯ ವರ್ಗದಲ್ಲಿ ಸಮಾವೇಶವಾಗುತ್ತಾರೆ. ಇದಕ್ಕೆ ಮಿ॥ ಸದಾಶಿವಶಾಸ್ತ್ರಿಗಳು ಹಾವೇರಿ, ಮಿ॥ ಬಸವಲಿಂಗಶಾಸ್ತ್ರಿಗಳು ದ್ಯಾವಾಪೂರ, ಶಿ॥ ಗುರುಸಿದ್ಧಯ್ಯನವರು ಬೆಳವಣಿಕಿ, ವೀರಯ್ಯನವರು ಹಿರೇಹಾಳ ಮೆಂಬರಾಗಲೊಪ್ಪಿದರು. ರೋಣದ ಗುಲಗಂಜಿಮಠದ ಶ್ರೀಮನ್ನಿರಂಜನ ಗುರುಪಾದ ಮಹಾಸ್ವಾಮಿಗಳವರು ಅಧ್ಯಕ್ಷತೆಯಿಂದ ತಮ್ಮಲ್ಲಿ ತಾಲೂಕ ಕಮಿಟಿಯನ್ನು ಸ್ಥಾಪಿಸಿದ ರೋಣ ವೀರಶೈವ ಪ್ರಮುಖರು ಈಗ ಎರಡು ವರುಷಗಳವರೆಗೂ ಧರ್ಮೋಪದೇಶವನ್ನು ಇಟ್ಟ ಮತಸುಧಾರಣಾ ಕೆಲಸದಲ್ಲಿ ತೊಡಗಿದ್ದ ಸಂಗತಿಯು ಬಹು ಶ್ಲಾಘ್ಯವಾದದ್ದೆಂದು ಸಭಿಕರು ಆನಂದಪಟ್ಟರು. ಹಾವೇರಿ ಹುಕ್ಕೇರಿಮಠದ ಶ್ರೀಮನ್ನಿರಂಜನ ಶಿವಬಸವ ಮಹಾಸ್ವಾಮಿಗಳವರು ತಮ್ಮ ಸವದತ್ತಿ ಮಠದ ಉತ್ಪನ್ನದಿಂದ ಒಬ್ಬ ಉಪದೇಶಿಗಳನ್ನು ನಿಯಮಿಸಿ ಧರ್ಮಪ್ರಸರಣಗೊಳಿಸಲು ಒಪ್ಪಿದ್ದಕ್ಕಾಗಿ ಈ ಮಹನೀಯರ ಕಾರ್ಯವು ದಿಗ್ವಿಜಯವಾಗಲೆಂದು ಜಗದೀಶನನ್ನು ಭಕ್ತಿಯಿಂದ ಬೇಡಿಕೊಂಡರು. ಗದಗ ತಾಲೂಕ ಪೈಕಿ ಬಳಗಾನೂರ ಶಿ॥ ನನ್ನಯ್ಯನವರು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿರುವದಲ್ಲದೆ ಗದಗ ತಾ॥ ಮಟ್ಟಿಗೆ ಒಬ್ಬ ಧರ್ಮಬೋಧಕನನ್ನು ನಿಯಮಿಸುವದಾಗಿ ವಾಗ್ದಾನಮಾಡಿದ್ದರಿಂದ ಇವರನ್ನು ಕುರಿತು ಈ ಸಭೆಯವರು ಧನ್ಯವಾದ ಮಾಡಿದರು. ರೋಣ ತಾ॥ ಕಮಿಟಿ ಧರ್ಮೋಪದೇಶಕರಾದ ಶಿ॥ ದ್ಯಾಂಪೂರ ಚನ್ನಯ್ಯನವರು ವೇದಾಗಮೋಪನಿಷತ್ಪ್ರಮಾಣಗಳಿಂದಲೂ ಸುಲಭ ದೃಷ್ಟಾಂತಗಳಿಂದಲೂ ಲೋಕೋಕ್ತಿಯಿಂದಲೂ ರಸಭರಿತವಾಗಿ ಕೀರ್ತನಕಾರರಿಗತ್ಯುಪಯುಕ್ತವಾಗುವಂತೆ ೧೦ ಕೀರ್ತನೆಗಳನ್ನು ರಚಿಸಿ ಸಮಾಜಕ್ಕೆ ಭಕ್ತಿಯಿಂದ ಅರ್ಪಿಸಿದ್ದಲ್ಲದೆ ತಾವು ಹೋದ ಹೋದಲ್ಲಿ ಕೀರ್ತನಗಳನ್ನೂ ಕೂಡಾಮಾಡಿ ತೋರಿಸುತ್ತಿರುವ ಕಾರಣ ಈ ಸಂಸ್ಥೆಯಿಂದ ಒಂದು ಪಿಯಾನವು ಬಹುಮಾನವಾಗಿ ಅವರಿಗೆ ಕೊಡಲ್ಪಟ್ಟಿತು. ಹುಬ್ಬಳ್ಳಿ ನಿಶಾನಿಮಠದ ಶಾಂತವೀರಯ್ಯನವರು ತಮ್ಮ ಮೆಟ್ರಿಕ್ಯುಲೇಶನ ಪರೀಕ್ಷೆಯಾದ ಬಳಿಕ ೨-೩ ತಿಂಗಳ ನಂತರ ಧರ್ಮೋಪದೇಶಕ್ಕೆ ನಿಲ್ಲುತ್ತೇನೆಂದು ತಿಳಿಸಿದ್ದಕ್ಕೆ ಸಭೆಯವರು ಆನಂದಪಟ್ಟರು. ಬೆಳಗಾವಿಯಲ್ಲಿ ನೆರೆದ ೨ ನೆಯ ಶ್ರೀಮದ್ವೀರಶೈವ ಮಹಿಳಾಪರಿಷತ್ತಿನಲ್ಲಿ ಪಾಸಾದ ೨ ನೆಯ ರೂಲಿಗನುಸರಿಸಿ ಆ ಸಭೆಯ ಅಧ್ಯಕ್ಷರಾದ ಸೌಭಾಗ್ಯವತಿ ಭಾಗೀರಥಿಬಾಯಿ ಪಾಟೀಲ ಸೋಲಾಪೂರ ಇವರು ಸಭೆಯ ಪತಿಯಿಂದ ಬರಕೊಂಡು ವಿನಂತಿಗೆ ಈ ಸಭೆಯವರು ಸಹಾನುಭೂತಿಯನ್ನು ತೋರಿಸಿದರು.

೩ ನೆಯ ಧರ್ಮೋತ್ತೇಜಕ ಸಭೆಯ ಠರಾವುಗಳು.

(೧) ವೀರಶೈವ ಸಮಸ್ತ ಗುರುಪೀಠಗಳಿಗೆ ನಿಯಮಿಸಲ್ಪಡುವ ಉತ್ತರಾಧಿಕಾರಿಗಳು ವಿದ್ಯಾಸಂಪನ್ನರೂ, ಪ್ರೌಢವಯಸ್ಕರೂ, ಕುಲೀನರೂ ಸದಾಚಾರ ಸಂಪನ್ನರೂ ಇದ್ದು ಇವರಿಗೆ ಸರ್ವಾನುಮತದಿಂದ ಸಂಪ್ರದಾಯಸಿದ್ಧವಾದ ಸಶಾಸ್ತ್ರವಿಧಾನಗಳಿಂದ ಅಧಿಕಾರವಾಗಬೇಕು. ಇಂಥವರನ್ನೇ ಯೋಗ್ಯ ಅಧಿಕಾರಿಗಳೆಂದು ಸರ್ವರೂ ಮನ್ನಿಸತಕ್ಕದು. ಈ ಗುರುಪೀಠದವರು ಸಮಾಜದವರಿಂದ ಒಂದು ಕಮಿಟಿಯನ್ನು ಸ್ಥಾಪಿಸಿಕೊಂಡು ತಮ್ಮ ಕರ್ತವ್ಯಗಳ ಬಗ್ಗೆ ಇದೇ ಕಮಿಟಿಯಿಂದ ತಯಾರಿಸಿದ ರೂಲ್ಸುಗಳಂತೆ ಸಂಸ್ಥಾನಕಾರ್ಯಗಳನ್ನು ನೆರವೇರಿಸಬೇಕು. ಮತ್ತು ತಮ್ಮ ಸಂಸ್ಥಾನದ ಉತ್ಪನ್ನದ ಏನಿಕೆ ಅಂಶವನ್ನು ಸಮಾಜೋನ್ನತಿಗಾಗಿ ವಿನಿಯೋಗಿಸತಕ್ಕದ್ದೆಂದು ಅತ್ಯಂತ ವಿನಯಪೂರ್ವಕವಾಗಿ ಈ ಸಭೆಯವರು ಪ್ರಾರ್ಥಿಸುತ್ತಾರೆ. (೨) ಸ್ವಮತಸುಧಾರಣೆಯ ದೆಸೆಯಿಂದ ಬೋಧಕರನ್ನು ಏರ್ಪಡಿಸಬೇಕೆಂದು ಸಭೆಯವರು ನಿರ್ಧರಿಸುತ್ತಾರೆ. (೩) ವೀರಶೈವ ಕ್ಷೇತ್ರಜಾತ್ರೆಗಳ ಸುಧಾರಣೆಗಾಗಿ ಉಪದೇಶಕರನ್ನು ಕಳಿಸತಕ್ಕದ್ದೆಂದು ಅಭಿಪ್ರಾಯಪಡುತ್ತಾರೆ. (೪) ಸ್ವಮತಾಭಿಮಾನಿಗಳೆಲ್ಲರೂ ಹಿಂದಾದ ಠರಾವುಗಳನ್ನು ಆಯಾಭಾಗದಲ್ಲಿ ಅನುಭವದಲ್ಲಿ ತರುವ ಬಗ್ಗೆ ತಕ್ಕ ಪ್ರಯತ್ನಗಳನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. (೫) ಶಿವಯೋಗಮಂದಿರ ಸಂಸ್ಥೆಯು ಚಿರಸ್ಥಾಯಿಯಾಗುವ ಬಗ್ಗೆ ಗುರುವರ್ಗದವರೂ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರೂ ಹೆಚ್ಚಿಗೆ ವರ್ಗಣಿಕೊಟ್ಟವರೂ ವಿದ್ಯಾವಂತರೂ ಶಾಸ್ತ್ರಿಗಳೂ ಸ್ವಮತಸುಧಾರಣ ಪ್ರಯತ್ನಶೀಲರೂ ಅಂತು ೧೫ ಮೆಂಬರರುಳ್ಳ ಒಂದು ಮಹಾಸಂಘವೂ ಅದರಲ್ಲಿ ೫ ಜನರುಳ್ಳ ಮತ್ತೊಂದು ಕಾರ್ಯಕಾರೀ ಸಂಘವೂ ಏರ್ಪಾಡ ವಾಗಬೇಕೆಂದು ಸಭೆಯವರು ನಿರ್ಣಯಿಸುತ್ತಾರೆ. (೬) ಬ್ರಹ್ಮಚರ್ಯ ಪರಿಪಾಲನ ಸ್ವಧರ್ಮಜ್ಞಾನಸ್ಥಿತಿ ಉನ್ನತಿ ಮುಂತಾದ ಉಪಯುಕ್ತ ವಿಷಯ ಬೆಳವಣಿಗೆಯ ಬಗ್ಗೆ ಶಿವಯೋಗಮಂದಿರದಲ್ಲಿ ಶ್ರೀಮನ್ನಿರಂಜನ ಚಿತ್ತರಗಿ ಮಹಾಂತಸ್ವಾಮಿಗಳವರ ಸ್ಮಾರಕಕ್ಕಾಗಿ ಶ್ರೀ ಮಹಾಂತ ಶಿವಯೋಗ ಇನ್ಸ್ಟಿಟ್ಯೂಟ್ ಎಂಬ ಹೊಸ [illegible] ಶಿವಯೋಗಮಂದಿರದ [illegible]ಯಿಂದ ಸ್ಥಾಪಿಸಬೇಕೆಂದು ಈ ಸಭೆಯವರು ನಿರ್ಣಯಿಸುತ್ತಾರೆ. ಈ ಪ್ರಕಾರ ಠರಾವುಗಳನ್ನು ಪಾಸುಮಾಡಿದ ಮೇಲೆ ಅಧ್ಯಕ್ಷರು ಈ ಸಭೆಯ ಉಪಸಂಹಾರದ ಭಾಷಣ ಮಾಡಿದರು. ಆ ವೇಳೆ ಸದರ ಮಹಾಂತ ಶಿವಯೋಗ ವಿದ್ಯಾಲಯದ ಫಂಡನ್ನು ತಾವಾಗಿ ಕೆಲವರು ಕೊಡಲು ಒಪ್ಪಿದರು. ಸಭೆಗೆ ಸಹಾಯಮಾಡಿದವರ ಮತ್ತು ಅಧ್ಯಕ್ಷ ಮಹಾಶಯರ ಮತ್ತು ಫಂಡುಕೊಡಲೊಪ್ಪಿದ ಮಹನೀಯರ ಆಭಾರವನ್ನು ಮನ್ನಿಸಿ ಈ ಧರ್ಮೋತ್ತೇಜಕ ಸಭೆಯು ಏಳಿಗೆ ಉಂಟಾಗಲೆಂದು ಅನನ್ಯಭಾವದಿಂದ ಶ್ರೀಮನ್ನಿರಂಜನ ಜಂಗಮವರ್ಯರನ್ನು ಪ್ರಾರ್ಥಿಸಿ ಸಭೆಯು ಸಮಾಪ್ತಿ ಮಂಗಲವನ್ನಾಚರಿಸಿದರು.

ತಾ॥ ೨೦ ರಲ್ಲಿ ಪುನಃ ಬೆಳಿಗ್ಗೆ ಸಭೆಯು ನೆರೆಯಿತು. ಆಗ್ಗೆ ಧರ್ಮಗ್ರಂಥಗಳ ಪರೀಕ್ಷೆಯನ್ನು ಕೊಡತಕ್ಕವರನ್ನು ಒತ್ತಟ್ಟಿಗೆ ಕೂಡಿಸಿ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಇದರಂತೆ ಶಿವಯೋಗ ಸಾಧಕ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಆಗ್ಗೆ ಮಹಾಂತ ಮರಿದೇವರು ಇಷ್ಟಲಿಂಗಧಾರಣ ವಿಷಯದ ಬಗ್ಗೆ ಕೇಳುವವರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ಸರಳವಾದ ವಾಣಿಯಿಂದ ವ್ಯಾಖ್ಯಾನಕೊಟ್ಟರು. ಅಲ್ಲಮಪ್ರಭುಸ್ವಾಮಿಯ ಅನುಯಾಯಿಗಳಾದ ಈ ಶಿವಯೋಗಸಾಧಕರು ಶಿವಯೋಗಸಿದ್ಧಿಯನ್ನು ಪಡೆದು ತೀವ್ರವೇ ಜಗತ್ತಿನ ಉದ್ಧಾರ ಕೆಲಸಕ್ಕಾಗಿ ಅಲ್ಲಮಪ್ರಭುವಿನಂತೆ ಹೊರಟಿದ್ದಾರೆ. ವೀರಶೈವ ಮತ ತತ್ವಗಳು ಇಡೀ ಭೂಮಂಡಲದಲ್ಲಿ ತೀವ್ರವೇ ಪ್ರಸಾರವಾಗುವವೆಂಬ ವಿಷಯವು ಎಲ್ಲರ ಮನಸ್ಸಿನಲ್ಲಿ ಪ್ರತಿಬಿಂಬಿಸಿತು. ಮಧ್ಯಾಹ್ನ ಧರ್ಮಗ್ರಂಥ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇನಾಮುಗಳು ಹಂಚಲ್ಪಟ್ಟವು, ಅದರ ವಿವರ:—

೧ ಕಾಶಪ್ಪಯ್ಯ ಹಿರೇಮಠ ಸಾ॥ ಲಕ್ಷ್ಮೇಶ್ವರ–ಪಂಚದಶಿ ೬ ರೂ; ಬಾಗಲಕೋಟಿ ವಿದ್ಯಾರ್ಥಿಗಳು:— (೨) ಕಲ್ಯಾಣಯ್ಯ ಒಂಟಮುರಿ–ಮಲ್ಹಣ– ೨॥। ರೂ; (೩) ಮಹಾಂತ ಮರಿದೇವರು ಒಂಟಮುರಿ–ಶಿವಾನಂದಲಹರಿ– ೨॥ ರೂ; (೪) ಶಾಂತಮರಿದೇವರು ಒಂಟಮುರಿ– ಶಿವಾನಂದಲಹರಿ– ೨। ರೂ; (೫) ಸಿದ್ಧಲಿಂಗದೇವರು ಒಂಟಮುರಿ– ಶಿವಾನಂದಲಹರಿ– ೩ ರೂ; (೬) ರಾಜಶೇಖರ–ಮಲ್ಹಣ ಶಿವಾನಂದಲಹರಿ ೩ ರೂ; (೭) ವಿರೂಪಾಕ್ಷ ಮರಿದೇವರು–ಮಹಿಮ್ನ– ೨॥ ರೂ; (೮) ಮಲ್ಲನಾಥಯ್ಯ ಮಲ್ಹಣ– ೨ ರೂ; (೯) ಚಂದ್ರಶೇಖರಯ್ಯ ಕೊಪ್ಪ–ಶತಕತ್ರಯ– ೩॥ ರೂ; (೧೦) ವೀರನಗೌಡ ನಿಡಗುಂದಿ– ಶತಕತ್ರಯ ಬಸವಪುರಾಣ– ೪॥ ರೂ; (೧೧) ಶಾಂತವೀರಯ್ಯ ನಿಶಾನಿಮಠ ಹುಬ್ಬಳ್ಳಿ–ಶೈವಲ್ಯಪದ್ಧತಿ ೨॥ ರೂ; (೧೨) ಸಿದ್ಧಯ್ಯನವರು ಮಾದಿನೂರ– ಲಿಂಗಧಾರಣ ವಿಧಿ– ೨॥। ರೂ. ಈ ಪ್ರಕಾರ ನಾಲ್ಕನೆಯ ದಿವಸದ ಕಾರ್ಯವು ನಡೆದು ಶಿವಯೋಗಮಂದಿರ ಕಮಿಟಿಯು ವಿಷಯವಾಗಿ ಆಲೋಚನೆಗಳು ಜರುಗಿದುವು ಮತ್ತೂ ಎಲ್ಲಾ ದೇಶದಿಂದ ಬಂದಂಥ ಜನರು ತಂತಮ್ಮ ಗ್ರಾಮಗಳಿಗೆ ತೆರಳಿದರು.

ಶ್ರೀಮದ್ರಂಭಾಪುರಿ ಪ್ರತಿನಾಮ ಬಾಳೆಹೊನ್ನೂರು ಸಂಸ್ಥಾನಮಠದಲ್ಲಿ ನಡೆದ ಶ್ರೀ ರುದ್ರಮುನೀಸ್ವಾಮಿ ರಥೋತ್ಸವ ಸಮಾರಂಭವು

ವಿರೋಧಿಕೃತು ನಾಮಸಂವತ್ಸರದ ಫಾಲ್ಗುಣ ಶುದ್ಧ ೧೪ ಸ್ಥಿರವಾರ ಸೂರ್ಯೋದಯವಾದ ೧೫ ಘಟಿಕೆಗೆ ಸಲ್ಲುವ ಅಭಿಜಿ ಮುಹೂರ್ತದಲ್ಲಿ ರಥಾರೋಹಣಕ್ಕೋಸ್ಕರ ಸರ್ವರು ಸ್ನಾನಮಡಿಯಿಂದ ಮಹಸ್ವಾಮಿಯವರ ಸವಾರಿಯನ್ನು ಬಿಜಯಂಗೈಸಿಕೊಂಡು ಸಮಸ್ತ ಬಿರುದಾವಳಿಗಳಿಂದಲು ಸ್ತುತಿಪಾಠಕರ ಜಯಧ್ವನಿಗಳಿಂದಲು ವೇದಘೋಷದಿಂದಲು ವಾದ್ಯಸಂದಣಿಯಿಂದಲು ಭಕ್ತರ ತಿಂತಿಣಿಯಿಂದಲು ಉಭಯಪಾರ್ಶ್ವದಲ್ಲಿ ಶೋಭಿಸುವ ಪಟ್ಟಚರಮೂರ್ತಿಗಳ ಮಧ್ಯದಲ್ಲಿ ಶ್ರೀ ಮುಕ್ತಿಮುನೀಶ್ವರಸ್ವಾಮಿಯವರ ಶಿವಯೋಗಮಂಟಪಕ್ಕೆ ದಯಮಾಡಿಸಿ ಮಂಗಳಾರತಿಯನ್ನು ಪೂರೈಸಿಕೊಂಡು ಶ್ರೀ ರುದ್ರಮುನೀಶ್ವರಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿ ಆ ದಿನ ಅಲ್ಲಿ ನಡಿಯತಕ್ಕಂಥ ವಿಧಿಗಳನ್ನು ಪರಾಂಬರಿಸಿ ಮಹಾಮಂಗಳಾರತಿಯು ಪೂರೈಸಿದನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ಬಿಜಯಂಗೈಸಿಕೊಂಡು ಮಹಾರಥದ ಬಳಿಗೆ ದಯಮಾಡಿಸಿ ಅಲ್ಲಿ ನಡಿಯಬೇಕಾದ ಕಾರ್ಯಗಳನ್ನ ನಡಿಸಲು ಅನುಜ್ಞೆಯನ್ನಿತ್ತು ನಂತರ ಶ್ರೀ ರುದ್ರಮುನೀಶ್ವರಸ್ವಾಮಿಯವರನ್ನು ರಥಾರೋಹಣಂಗೈಸಿ ಮಹಸನ್ನಿಧಿಯಿಂದ ರಥಗಾಣಿಕೆಯನ್ನು ಸಮರ್ಪಿಸಿದನಂತರ ಪಟ್ಟಚರಮೂರ್ತಿಗಳು ಸರ್ಕಾರಿ ಅಧಿಕಾರಿಗಳು ಸುಭೆದಾರು ಏಜಂಟರು ತಾಲ್ಲೂಕು ಇಲಾಖಾದಾರರು ಮುತಸದ್ದಿಗಳು ಶಾಸ್ತ್ರಿಗಳೆ ಮೊದಲಾದ ನೆರೆದ ಜನರೆಲ್ಲ ಕಾಣಿಕೆಯನ್ನು ಒಪ್ಪಿಸಿದನಂತರ ವಾದ್ಯಗಳು ಮೊಳಗುತ್ತಿರಲು ಮುಂದೆ ರಥವು ಕೆಲವು ದೂರ ಮುಂದಕ್ಕೆ ಸಾಗಿಸಲ್ಪಟ್ಟಿತು. ಮಹಸ್ವಾಮಿಯವರ ಸವಾರಿಯು ಸಮಸ್ತ ಭಕ್ತ[illegible] ಶ್ರೀ ಮಠಕ್ಕೆ [illegible] ಸರ್ವರಿಗೂ ಭಕ್ಷ್ಯಭೋಜ್ಯಗಳಿಂದ ಮಹಾಸಂತರ್ಪಣೆಯಾಗಿ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಈ ದಿನ ರಾತ್ರಿ ೩ ಘಂಟೆ ಸಮಯದಲ್ಲಿ ಮಹಸ್ವಾಮಿಯವರ ಸ್ವಾರಿಯು ರಥದಬಳಿಗೆ ಯಥಾಪ್ರಕಾರ[illegible]ಯಿಂದ ದಯಮಾಡಿ ಅಲ್ಲಿ ನೆರದಿದ್ದ ಸಭಾಮಧ್ಯದಲ್ಲಿ ರಚಿಸಿದ್ದ ಅಲಂಕಾರಯುಕ್ತವಾದ ಪೀಠವನ್ನು ಅಲಂಕರಿಸಲು ಶಿವಾಕಥಾನಂತರ ಸಂಗೀತವು ಪೂರ್ತಿಯಾಗಲು ಪದ್ಧತಿಯಂತೆ ನಾರಿಕೇಳಫಲಗಳು ಸಭಾಸದರರಾದ ವೀರಶೈವ ಮಂಡಲಿಗು ಸರ್ಕಾರದವರಿಗು ಸ್ಥಾನುಭೋಗರಿಗು ಈ ಸೀಮೆ ನಾಡಿನವರಿಗು ಕೊಡ ಹಂಚಿ ರಥದ ಚಕ್ರಗಳಿಗೆ ವಿನಿಯೋಗಿಸಿದನಂತರ ಮಹಸ್ವಾಮಿಯವರ ಸವಾರಿಯು ದೇವಸ್ಥಾನದ ಮುಂದಣ ಗಾಡಿ ಉಪ್ಪರಿಗೆ ದಯಮಾಡಿ ಪದ್ಧತಿಯಂತೆ ರಥವು ಸಂಪಿಗೆ ಕಟ್ಟೆವರಿವಿಗೆ ಸಾಗಿ ಈ ಶು॥ ೧೫ ಭಾನುವಾರ ಬೆಳಗಿನ ಏಳುಘಂಟೆಗೆ ಸ್ವಸ್ಥಾನಕ್ಕೆ ನೆಲೆಯಾಗಿ ನಿಲ್ಲಿಸಲ್ಪಟ್ಟಿತು. ತದನಂತರ ರುದ್ರಮುನಿಸ್ವಾಮಿಯ ಉತ್ಸವಮೂರ್ತಿಯು ದೇವಸ್ಥಾನ ಪ್ರವೇಶಿಸಿ ವಿಧವತ್ತಾಗಿ ಶಯನೋತ್ಸವವು ಈ ದಿನ ಸಾಯಂಕಾಲ ಐದು ಘಂಟೆಗೆ ಉತ್ಥಾನೋತ್ಸವವು ನಡದು ತದನಂತರ ಶ್ರೀ॥ ರುದ್ರಸ್ವಾಮಿ ದೇವಸ್ಥಾನದ ಪೂರ್ವಭಾಗದ ಚಂದ್ರಶಾಲೆಯಲ್ಲಿ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿತು. ಈ ಸಭೆಯಲ್ಲಿ ಶ್ರೀ ಹೊನ್ನಾಪಳಿಮಠದ ಚನ್ನವೀರಸ್ವಾಮಿಗಳು, ತರಿಕೆರೆ ತಾಲ್ಲೂಕು ಹಣೆಮಠದ ಕರಿಸಿದ್ಧಸ್ವಾಮಿಗಳು, ದೊಡ್ಡಗುಣಿ ಪಟ್ಟದ ಗುರುಲಿಂಗಸ್ವಾಮಿಗಳು, ಮೂಡಗೆರೆ ಮಠದ ಚರಮೂರ್ತಿ ಶಾಂತವೀರಸ್ವಾಮಿಗಳು ಮೊದಲಾಗಿ ಅನೇಕ ಪಟ್ಟಚರಮೂರ್ತಿಗಳೂ ಮ॥ ರಾ॥ ಸಂಸ್ಥಾನದ ಏಜಂಟದಾರ್ ಸಾವುಕಾರ್ ಯತಿಹಳ್ಳಿ ಇಂಗಳಗೊಂದಿ ಶಾಂತಪ್ಪಸೆಟ್ಟರು. ಶ್ರೀ॥ ಬಳ್ಳಾರಿಜಿಲ್ಲಾ ಕೆಂಡತನಿ ವೀರಪ್ಪಯ್ಯನವರು, ಮ॥ ರಾ॥ ಹಲುಕೂರು ರುದ್ರಪ್ಪಸೆಟ್ಟರು, ಮ॥ ರಾ॥ ಬೆಲಗೂರು ಚನ್ನಬಸಪ್ಪಸೆಟ್ಟರು ಮೊದಲಾದ ದೊಡ್ಡಮನುಷ್ಯರುಗಳು ನೆರದಿದ್ದರು.

ಶ್ರೀ ದೊಡ್ಡಗುಣಿ ಪಟ್ಟದಸ್ವಾಮಿಗಳ ಭಾಷಣವು.

ಭೋ ಪೀಠಾಚಾರ್ಯ ಗುರುವರ್ಯರೆ!

ಬಾಳೆಹೊನ್ನೂರು ಸಂಸ್ಥಾನಮಠದಲ್ಲಿ ಅನಾದಿಯಿಂದ ನಡೆಯುವ ಶ್ರೀ ರುದ್ರಮುನೀಶ್ವರ ಸ್ವಾಮಿಗಳ ರಥೋತ್ಸವವನ್ನು ನೋಡಿ ಮಹದಾನಂದವುಂಟಾಗಿ ಇವರ ಮಹತ್ವಗಳನ್ನು ಮತ್ತೂ ಇವರೇ ಮೊದಲಾದ ಪಂಚಾಚಾರ್ಯರ ಉತ್ಪತ್ತಿಯನ್ನು ನನಗೆ ತಿಳಿದಮಟ್ಟಿಗೆ ಉಪನ್ಯಾಸಮಾಡಬೇಕಾಗಿ ಇಚ್ಛೆಯಿರುತ್ತೆ. ಸರ್ವರೂ ಕೇಳಿ ಹಂಸಕ್ಷೀರನ್ಯಾಯದಂತೆ ಗುಣಗ್ರಾಹಿಗಳಾಗಬೇಕಾಗಿ ನನ್ನ ಕೋರಿಕೆ. ಅನಾದಿಯಲ್ಲಿ ಪರಮೇಶ್ವರನು ಕೈಲಾಸದಲ್ಲಿ ಸಭೆಯನ್ನು ಮಾಡಿಕೊಂಡಿರಲಿಕ್ಕಾಗಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ ವಿಶ್ವಕರ್ಣರೆಂಬ ತನ್ನ ಪಂಚಮುಖೋದ್ಭವರಾದ ಇವರುಗಳನ್ನು ಕುರಿತು "ನೀವು ಭೂಲೋಕಕ್ಕೆ ಹೋಗಿ ವೀರಶೈವ ಮತವನ್ನು ಸ್ಥಾಪನೆಮಾಡಬೇಕಾಗಿ ಅಪ್ಪಣೆಮಾಡಿತ್ತಷ್ಟೆ. ಈಗ ಏನೇನುಮಾಡಿದಿರಿ?" ಎನ್ನಲು ಅದಕ್ಕೆ ಅವರು ಹೇಳಿದ್ದು– 'ನಾವು ಭೂಲೋಕಕ್ಕೆ ಹೋಗಿ ನೋಡುವಲ್ಲಿ ಪರ್ವತ, ಗಿಡ, ನದಿ ಇವುಗಳ ಸಮುದಾಯವೇ ಹೊರತು ಯಾರೂ ಇರಲಿಲ್ಲ ಅನಂತರ ತಮ್ಮ ಮಂತ್ರವನ್ನೇ ಏಕಾಗ್ರಚಿತ್ತದಿಂದ ಸ್ಮರಿಸಲು ನಮ್ಮ ರೂಪಿಗೆ ಸದೃಶರಾದ ಐವರು ಮಂತ್ರಶಕ್ತಿಯಿಂದ ಉತ್ಪನ್ನರಾದರು. ಆಗ ಅವರಿಗೋಸ್ಕರ ಶಕ್ತಿಮಂತ್ರವನ್ನು ಜಪಮಾಡಿದೆವು. ಅದರಿಂದ ಐವರು ಸ್ತ್ರೀಯರು ಉತ್ಪನ್ನರಾದರು. ಅವರಿಗೆ ಲಿಂಗಧಾರಣೆಯನ್ನು ಮಾಡಿ ವೀರಶೈವ ಮತದ ಆಚರಣೆಯನ್ನು ಬೋಧಿಸಿ ಅವರಿಗೆ ಸಂಬಂಧವನ್ನು ಮಾಡಿಸಿದೆವು. ನಾವು ಗುರುವಾಗಿ ಜ್ಞಾನಬೋಧೆಯನ್ನು ಮಾಡುತ್ತ ಇರುವಷ್ಟರಲ್ಲೇ ಅನೇಕ ಜನರು ಉತ್ಪನ್ನರಾದರು. ಅವರಿಗೂ ಲಿಂಗಧಾರಣೆಯನ್ನು ಮಾಡಿ, ಉಪದೇಶವಂ ಗೈಯುತ್ತಾ ಬಂದುದರಿಂದ ನಾಲ್ಕು ದಿಕ್ಕಿಗೂ ವೀರಶೈವರೇ ತುಂಬಿಕೊಂಡು ಸದಾಶಿವಪೂಜಾಧುರೀಣರಾಗಿದ್ದಾರೆಂದು ಬಿನ್ನೈಸಿ, ನಾವು ಇನ್ನುಮೇಲೆ ಸನ್ನಿಧಿಯಲ್ಲಿ ಸೇವಾ ಮಾಡಿಕೊಂಡಿರುತ್ತೇವೆಂದು ಹೇಳಲು, ಇನ್ನು ಮುಂದೆ ಒಂದೊಂದು ಯುಗದಲ್ಲಿ ಒಂದೊಂದು ಹೆಸರನ್ನು ಪಡೆದು ಪುನಃಪುನಃ ಹೋಗಿ ವೀರಶೈವ ಮತವನ್ನು ವೃದ್ಧಿಹೊಂದಿಸಬೇಕಾಗಿ ಅಪ್ಪಣೆಯಾದಂತೆ ಕೃತಯುಗದಲ್ಲಿ ಘಂಟಾಕರ್ಣ, ಗಜಕರ್ಣ, ರೇಣುಕ, ದಾರುಕ, ವಿಶ್ವಕರ್ಣರೆಂಬುದಾಗಿಯೂ, ತ್ರೇತಾಯುಗದಲ್ಲಿ ಏಕಾಕ್ಷರ, ದ್ವಿಯಕ್ಷರ, ತ್ರಿಯಕ್ಷರ, ಚತುರಕ್ಷರ, ಪಂಚಾಕ್ಷರ ಎಂಬುದಾಗಿಯೂ, ದ್ವಾಪರಯುಗದಲ್ಲಿ– ಏಕಮುಖ, ದ್ವಿಮುಖ, ತ್ರಿಮುಖ, ಚತುರ್ಮುಖ, ಪಂಚಮುಖರೆಂಬುದಾಗಿಯೂ, ಕಲಿಯುಗದಲ್ಲಿ– ಏಕೋರಾಮ, ಪಂಡಿತಾರಾಧ್ಯ, ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ, ವಿಶ್ವಾರಾಧ್ಯರೆಂಬುದಾಗಿಯೂ [illegible] ಎಂದರೆ– ಏಕೋರಾಮೇಶ್ವರರು [illegible] ಸುಧಾಕುಂಡದೆಂಬ ಕ್ಷೇತ್ರದಲ್ಲಿ ಸಿಂಹಾಸನ[illegible]ಕೊಂಡರು. ಪಂಡಿತಾರಾಧ್ಯರು ಶ್ರೀ [illegible]ಲ್ಲಿ ಉತ್ಪತ್ತಿ ಶ್ರೀಶೈಲ[illegible]ದಲ್ಲಿ ಸಿಂಹಾಸನ[illegible]

ದರು. ಮರುಳಸಿದ್ಧೇಶ್ವರರು ಒಜಕ್ಷೇತ್ರದಲ್ಲಿರುವ ಸಿದ್ಧೇಶ್ವರಲಿಂಗದಲ್ಲಿ ಜನಿಸಿ ಉಜ್ಜಯಿನಿಯಲ್ಲಿ ಸಿಂಹಾಸನಾಸೀನರಾದರು. ವಿಶ್ವಾರಾಧ್ಯರು ಕಾಶಿ ವಿಶ್ವೇಶ್ವರಲಿಂಗದಲ್ಲಿ ಆವಿರ್ಭವಿಸಿ ಕಾಶಿಯಲ್ಲಿ ಸಿಂಹಾಸನಾರೂಢರಾದರು. ರೇವಣ ಸಿದ್ಧೇಶ್ವರರು ಪರಮೇಶ್ವರನ ಅಪ್ಪಣೆಯಿಂದ ಶ್ರೀಶೈಲಕ್ಕೆ ಉತ್ತರ ಭಾಗದಲ್ಲಿರುವ ಕೊಲ್ಲಿಪಾಕಿಯ ಸೋಮೇಶ್ವರಲಿಂಗದಲ್ಲಿ ಉದ್ಭವಿಸಿ ಆಕಾಶಮಾರ್ಗವಾಗಿ ಹೋಗಿ ಅಗಸ್ತ್ಯರಿಗೆ ಜ್ಞಾನಬೋಧೆಮಾಡುತ್ತಾ ಅನೇಕಕಡೆ ಸಂಚಾರಮಾಡಿ ಅನೇಕ ಪವಾಡಗಳನ್ನು ಗೆದ್ದು, ಹೊನ್ನೂರಿನಲ್ಲಿ ತುಂಬಿದ್ದ ಶರಮಾದಿಗಳನ್ನು ಸತೆದು ವಿಭೀಷಣನಿಷ್ಟದಂತೆ ಲಂಕೆಗೆ ಹೋಗಿ ಏಕಕಾಲದಲ್ಲೇ (ಏಕಃ ಕರತಮಾತ್ಮ ಬಹುಃ ದೇಹವರ್ತಿ) ಎಂಬಂತೆ ಉಳಿದ ಮೂರು ಕೋಟಿ ಲಿಂಗಗಳನ್ನು ಪ್ರತಿಯೊಂದು ಶಿವಾಲಯದಲ್ಲಿ ತಾನೇ ಇದ್ದುಕೊಂಡು ಶಿವಲಿಂಗ ಸಂಸ್ಕಾರವೆಂಬ ಯಣಾರಿಂದಲೂ ಸಾಧ್ಯವಿಲ್ಲದ ಕಾರ್ಯವನ್ನು ಮುಗಿಸಿ ವಿಭೀಷಣನಿಗೆ ಆಶೀರ್ವದಿಸಿ, ಈ ಪುಣ್ಯಕ್ಷೇತ್ರಕ್ಕೆ ದಯಮಾಡಿಸಿ ಇಲ್ಲಿ ಉಂಟಾಗಿದ್ದ ಭಂಗಕಾರ್ಯಗಳನ್ನು ಕುರಿತು ಹೊಳೆಯಲ್ಲಿ ಸೇರಿದ್ದ ಶ್ರೀ ವೀರಭದ್ರಸ್ವಾಮಿಯನ್ನು ರಂಭಾಗ್ರದಲ್ಲಿ ಇಟ್ಟುಕೊಂಡು ಇಲ್ಲಿ ಪುನಃ ನೆಲಸಿದ್ದರಿಂದ ಈ ಸ್ಥಳಕ್ಕೆ ರಂಭಾಪುರಿ ಎಂಬದಾಗಿ ಅಥವಾ ಬಾಳೆಹೊನ್ನೂರೆಂಬದಾಗಿ ಹೆಸರಾಯಿತು. ನಂತರ ರೇಣುಕರು ಇಲ್ಲಿ ಮಠಸ್ಥಾಪಿಸಿ ತಮ್ಮ ಕರಕಂಜಾತರಾದ ಶ್ರೀ ರುದ್ರಮುನೀಶ್ವರರಿಗೆ ಪಟ್ಟಾಭಿಷೇಕವಂ ಮಾಡಿ ತಮ್ಮ ಮಹತ್ವವು ಇಲ್ಲಿ ನಡೆಯುವಂತೆ ಆಶೀರ್ವದಿಸಿ ದಯಮಾಡಿಸಿದರು. ಅದ್ಯಾಪಿ ಮಹತ್ವವು ನಡೆಯುತ್ತಾ ಇದೆ ತತ್ವಂಶೋದ್ಭವರಾದ ನಮ್ಮ ಆಚಾರ್ಯಪೀಠಾಧಿಕಾರಿಗಳ ಒಬ್ಬೊಬ್ಬರ ಮಹತ್ವವನ್ನು ಎಷ್ಟುವರ್ಣಿಸಿದರೂ ತೀರದ್ದಾಗಿದೆ. ಈ ರಂಭಾಪುರೀಶನ ಸಚ್ಚರಿತ್ರೆಯನ್ನು ಶ್ರೀ ಸನ್ನಿಧಿಯ ಅಪ್ಪಣೆಯಮೇರೆಗೆ ಇಲ್ಲಿಗೆ ಪೂರ್ತಿಮಾಡಿದ್ದೇನೆಂದು ನನ್ನ ವಿನಂತಿಯು.

ಹೊನ್ನಳ್ಳಿ ಮಠದ ಶ್ರೀ ಪಟ್ಟದ ಚನವೀರಸ್ವಾಮಿಗಳ ಉಪನ್ಯಾಸವು:— ಪರಮಪೂಜ್ಯರಾದ ಪೀಠಾಚಾರ್ಯರೆ! ಈ ಮಹಾಸಭೆಯಲ್ಲಿ ವಿದ್ಯಾವಿಷಯವಾಗಿ ಉಪನ್ಯಾಸಮಾಡಲಿಚ್ಛೈಸಿರುವೆನು. ಇದರಲ್ಲಿರತಕ್ಕ ನ್ಯೂನಾತಿರೇಕಗಳಿಗೆ ಕ್ಷಮಾಪಣೆಯನ್ನು ಬೇಡುವೆನು. ॥ ಗ್ರಂ ॥ ಮಾತೇವರಕ್ಷತಿ ಪಿತೇವಹಿತೇನಿಯುಂಕ್ತೆ । ಕಾಂತೇವಚಾಭಿರಯಯತ್ಯಪನೀಯಖೇದಂ ॥ ಕೀರ್ತಿಂಚದಿಕ್ಷುವಿತನೋತಿ ತನೂವತಿವಿತ್ತಂ । ಕಿಂಕಿಂನಸಾಧಯತಿ ಕಲ್ಪಲತೇವ ವಿದ್ಯಾ ॥ ಇಂತಹ ವಿದ್ಯೆಯನ್ನು ಪ್ರತಿಯೊಬ್ಬ ವೀರಶೈವನೂ ಕಲಿತ ಹೊರತು ಮುಂದಕ್ಕೆ ಬರಲಾರನೆಂದು ವೀರಶೈವರು ಅನೇಕಕಡೆ ಪಾಠಶಾಲೆಗಳನ್ನು ಸ್ಥಾಪಿಸಿ ಶಾಸ್ತ್ರಾಭ್ಯಾಸಮಾಡಿಸುತ್ತಾ ಇದ್ದಾರೆ. ನಮ್ಮ ಶ್ರೀಮದ್ರಂಭಾಪುರಿ ಜಗದ್ಗುರು ಪಂಚಾಕ್ಷರಿ ದೇಶಿಕೇಂದ್ರ ಮಹಾಸ್ವಾಮಿಯವರ ಅಪ್ಪಣೆಯಮೇರೆಗೆ ಬೀರೂರಿನಲ್ಲಿ ಶ್ರೀಮಂತ ಪತ್ರಿ ವೀರಪ್ಪನವರು, ಮ॥ರಾ॥ ಏತೇಹಳ್ಳಿ ಶಾಂತಪ್ಪಸೆಟ್ಟರು ಮೊದಲಾದ ವೀರಶೈವ ಮತೀಯರು ಫಂಡನ್ನು ಕೂಡಿಸಿ, ಸಂಸ್ಕೃತಪಾಠಶಾಲೆಯನ್ನು ಇಡಿಸಿ ನಾಲ್ಕಾರು ವರ್ಷಗಳು ನಮ್ಮಂತಹ ವಿದ್ಯಾರ್ಥಿಗಳಿಗೆ ಅನುಕೂಲತೆ ಕೊಡುತ್ತಾ ಇದ್ದುದು ಸರಿಯಷ್ಟೆ. ಈಗ ೩ ವರುಷದಿಂದ ಪ್ಲೇಗಿನ ಹಾವಳಿಯಿಂದ ಆರು ತಿಂಗಳು ಅಭ್ಯಾಸ ಆರು ತಿಂಗಳು ವಿರಾಮ ಹೀಗಾಗಿ ಕೊರತೆಯುಂಟಾಗಿದೆ. ಇದಕ್ಕೆ ಪರಿಹಾರ ಅಂದರೆ ಗಲಾಟಿಕಾಲದಲ್ಲಿಯೂ ಕೊಡ ಬೇರೆ ಕಡೆ ಅಭ್ಯಾಸವು ನಡೆಯುವಂತೆ ಮಹಾಸನ್ನಿಧಾನದಿಂದ ಯಾವುದಾದರೂ ಒಂದು ಏರ್ಪಾಟನ್ನು ಮಾಡಿ ಅನುಕೂಲತೆ ಪಡಿಸಿ ರೇಣುಕಕೃಪೋಜ್ಜೀವಿನಿ ಪಾಠಶಾಲಾ ಎಂದು ಮೊದಲು ಇಟ್ಟಿರತಕ್ಕ ಅಭಿದಾನವು ಶಾಶ್ವತವಾಗಿ ನಡೆಯುವಂತೆ ಅಪ್ಪಣೆ ಮಾಡುತ್ತಾರಾಗಿ ನಂಬಿದ್ದೇನೆ.

ತರೀಕೆರೆ ತಾಲ್ಲೋಕು ಅಣಿ ಪಟ್ಟದ ಸ್ವಾಮಿಗಳ ಭಾಷಣವು:— ಸಭಾಧ್ಯಕ್ಷತೆಯನಾಂತಿರುವ ಪೀಠಾಚಾರ್ಯರೆ! ನಾನು ಲಿಂಗಧಾರಣೆಯ ವಿಷಯವಾಗಿ ಉಪನ್ಯಾಸವನ್ನು ಮಾಡುವೆನು. ಏನಾದರೂ ನ್ಯೂನತೆಯಿದ್ದರೆ ಎಣಿಸದೆ ವಿಷಯಗ್ರಹಣಮಾಡಬೇಕಾಗಿ ನನ್ನ ವಿನಂತಿಯು. ಲಿಂಗಧಾರಣೆಯು ವೇದೋಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವುದರಿಂದ ಅನಾದಿಕಾಲದಿಂದ ನಡೆದು ಬಂದುದೇ ಹೊರತು ಇತ್ತಿತ್ತಲಾಗಿಬಂದುದಲ್ಲವೆಂಬುದಾಗಿ ಸಕಲರಿಗೂ ಸ್ಪಷ್ಟವಾಗಿರುವುದು. ಆದರೂ ಸಂಕ್ಷೇಪವಾಗಿ ತಿಳಿಸಲಪೇಕ್ಷೆಯಿರುವುದರಿಂದ ವೇದ, ಉಪನಿಷತ್ತು, ಸ್ಮೃತಿ, ಪುರಾಣ ಇತಿಹಾಸ ಮುಂತಾದ ಗ್ರಂಥಗಳಲ್ಲಿ ಹೇಳಿದ ವಿಷಯವನ್ನು ಕ್ರಮವಾಗಿ ಹೇಳಲುಪಕ್ರಮಿಸುತ್ತೇನೆ. ಋಗ್ವೇದದಲ್ಲಿ— "ಪವಿತ್ರಂತೇ ವಿತತಂಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ" ಎಲೈ ಪರಶಿವನೆ! ನಿನ್ನ ಲಿಂಗರೂಪವು ಇಷ್ಟ, ಪ್ರಾಣ, ಭಾವವೆಂದು ತ್ರಿವಿಧರೂಪವಾಗಿರುವುದು. ಮತ್ತು ಅಖಂಡಸ್ವರೂಪನಾಗಿ ನೀನು ಇಷ್ಟಲಿಂಗರೂಪಿಯಾಗಿ ಸಕಲ ಶಿವಭಕ್ತರ ಮಸ್ತಕ, ಕಂಠ, ಕಕ್ಷ, ವಕ್ಷಸ್ಥಲ ಮೊದಲಾದ ಭಾಗಗಳಲ್ಲಿ ವಾಸಿಸುವಿ. ಮತ್ತು ಈ ಲಿಂಗವನ್ನು ಪೂರ್ವಜನ್ಮದಲ್ಲಿ ತಪಸ್ಸುಮಾಡದೆ ಇದ್ದ ಮನುಷ್ಯನು ಹೊಂದುವುದಿಲ್ಲ. ಅಂತಹ ತಪಸ್ಸನ್ನು ಮಾಡಿದವನು ಪರಬ್ರಹ್ಮಸ್ವರೂಪಿಯಾದ ಲಿಂಗವನ್ನು ಧರಿಸಲು ಯೋಗ್ಯನಾಗುತ್ತಾನೆ. ಶಿವಭಕ್ತನು ಶುಚಿ, ಅಶುಚಿ ಕಾಲಗಳಲ್ಲಿ ಕೂಡ ಧರಿಸತಕ್ಕದ್ದೆಂದು ಋಗ್ವೇದದಲ್ಲಿ ಹೇಳಿರುವುದು. 'ಅಯಮ್ಮೆ ಹಸ್ತೋಭಗವಾನ್ ಅಯಮ್ಮೆ ಭಗವತ್ತರಃ' ಪ್ರಾಜ್ಞನಾದ ಪರಶಿವನು ನನಗೆ ಅತಿ ಪ್ರಾಜ್ಞನು, ಈ ಇಷ್ಟಲಿಂಗರೂಪಿಯಾದ ಶಿವನು ನನ್ನ ಸಂಸಾರವೆಂಬ ರೋಗವನ್ನು ಹೋಗಲಾಡಿಸುವಲ್ಲಿ ವೈದ್ಯನು; ಇವನನ್ನು ಕರಸ್ಥಲದಲ್ಲಿಟ್ಟು ಪೂಜಿಸಬೇಕೆಂದು ಹೇಳಿರುವುದು. ಯಜುರ್ವೇದದಲ್ಲಿ— 'ಯಾತೇರುದ್ರಶಿವಾತನೂರಘೋರಾಪಾಪಕಾಶಿನಿ' ಎಂಬ ಪ್ರಮಾಣಾನುಸಾರವಾಗಿ ಎಲೈ ಪರಶಿವನೆ! ನಿನ್ನ ಮಂಗಲಸ್ವರೂಪನಾದ ಶಿವಲಿಂಗವನ್ನು ಸಾರ್ವದಾ ಧರಿಸಿರಬೇಕೆಂದು ಸಿದ್ಧವಾಯಿತು. ಶ್ವೇತಾಶ್ವತರೋಪನಿಷತ್ತುಗಳಲ್ಲಿ— 'ಸರ್ವಾನನಶಿರೋಗ್ರೀವಃ । ಸರ್ವಭೂತಗುಹಾಶಯಃ । ಸರ್ವವ್ಯಾಪೀಸ ಭಗವಾನ್ । ತಸ್ಮಾತ್ ಸರ್ವಗತಃಶಿವಃ' ಸಕಲರಿಂದ ಪೂಜ್ಯನಾದ ಪರಶಿವನು ಸಮಸ್ತಪ್ರಾಣಿಗಳ ಶಿರಸ್ಸೇ ಮೊದಲಾದ ಸ್ಥಾನಗಳಲ್ಲಿ ವಾಸಿಸುವನು. ಆದುದರಿಂದ ಲಿಂಗಧಾರಣೆಯು ಮುಖ್ಯವಾದುದು. ಕೆಲವರು ಲಿಂಗವನ್ನು ಸಾರ್ವದಾ ಧರಿಸದೆಯೂ, ಕೆಲವರು ಜನಿವಾರದಹಾಗೆ ಉದ್ದಕ್ಕೆ ಬಿಟ್ಟುಕೊಂಡು ಸೊಂಟಕ್ಕೆ ಸಿಕ್ಕಿಸಿಕೊಂಡಿಯೂ ಇರುತ್ತಾರೆ. 'ನಾಭಿರಧೋಲಿಂಗಧಾರೀ ಪಾಪಾನ್ನಡುಸಲಭ್ಯತೆ । ನಾಭೇರೂರ್ಧ್ವಲಿಂಗಧಾರೀಚ ಸೌಭಾಗ್ಯಂಜ್ಞಾನವರ್ಧನಂ' ನಾಭಿಯ ಕೆಳಭಾಗಕ್ಕೆ ಲಿಂಗವನ್ನು ಧರಿಸಿದವನು ಪಾಪಿಷ್ಟನಾಗುವನು. ನಾಭಿಯ ಮೇಲ್ಭಾಗದಲ್ಲ ಉಕ್ತಸ್ಥಾನದಲ್ಲಿ ಧರಿಸಿದವನು ಸೌಭಾಗ್ಯಜ್ಞಾನವೃದ್ಧಿಯನ್ನು ಪಡಿಯುತ್ತಾನೆ ಆದುದರಿಂದ ಮಹನೀಯರೆಲ್ಲರೂ ಸರಿಯಾದ ಆಚರಣೆಯಲ್ಲಿ ಇರಬೇಕಾಗಿ ನನ್ನ ಕೋರಿಕೆ.

ಮ॥ ಸಾ॥ ಗೋಡಚಪ್ಪಶೆಟ್ಟಿ ಹಲುಕೊರು ಇವರ ಭಾಷಣ:—ಭೋ ಗುರುವರ್ಯರೇ ಸಭಾಸದರೆ! ನಾನು ಅರಿಕೆ ಮಾಡಿಕೊಳ್ಳುವದೇನಂದರೆ—ವೀರಶೈವರಲ್ಲಿ ಕನ್ಯಾವಿಕ್ರಯ ಮಾಡುವ ಕೆಲವು ಪಾಪಿಗಳು ಅವರವರ ಶಕ್ತ್ಯಾನುಸಾರವಾಗಿ ವರನಿಗೆ ವರದಕ್ಷಿಣೆಕೊಟ್ಟು ಕನ್ಯಾದಾನಮಾಡುವದು ಉತ್ತಮವಾದದ್ದು. ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳನ್ನು ವಿಕ್ರಯಿಸುವದಾದರೂ ಉದರಭರಣಕ್ಕಾಗಿ ಮಾಡತಕ್ಕ ಘೋರಕೃತ್ಯವೇ ಸರಿ. ಮನೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ಸಾಕ್ಷಾತ್‌ಲಕ್ಷ್ಮಿಯಂತೆ ಕಾಣಬೇಕೆಂದು ನೀತಿಜ್ಞರು ಹೇಳುತ್ತಾರೆ. ಹೀಗಿರುವಲ್ಲಿ ಅಂತಹ ಲಕ್ಷ್ಮಿಯನ್ನು ಮಾರಿಕೊಂಡು ಹೊಟ್ಟೆಹೊರೆಯಬೇಕೆಂದೆಣಿಸುವ ಅಧಮಾಧಮನಿಗೆ ಲಕ್ಷ್ಮಿಯು ಎಂದಿಗಾದರು ಕೈಸೇರಿಯಾಳೆ? ಅವನಿಗೆ ದರಿದ್ರಲಕ್ಷ್ಮಿಯೆ ಗತಿ. ಈ ದುಷ್ಟಪದ್ಧತಿಯು ನಮ್ಮ ವೀರಶೈವರಲ್ಲಿ ಬಹಳ ಮಟ್ಟಿಗೆ ಇರುವಂತೆ ತಿಳಿಯಬರುತ್ತೆ. ಇದು ಬಹಳ ಶೋಚನೀಯವಾದ ಸಂಗತಿಯೆ ಸರಿ. ಈ ಕನ್ಯಾವಿಕ್ರಯ ಪದ್ಧತಿಯಿಂದ ಪ್ರಾಯಶಃ ಚಿಕ್ಕಹಸುಳೆಯರಿಗೆ ವೃದ್ಧವರನೇ ಶಿಕ್ಕುವದು ವಿಶೇಷ. ಮುದುಕರಿಗೆ ಯೋಗ್ಯರಾದವರು ಯಾರೂ ಹೆಣ್ಣನ್ನು ಕೊಡುವದಿಲ್ಲ. ಆದ್ದರಿಂದ ಮುದುಕರು ಅಪಾರವಾದ ಹಣವನ್ನು ಚೆಲ್ಲಿ ಕೋಮಲಾಂಗಿಯರಾದ ಚಿಕ್ಕಕನ್ನೆಯರನ್ನು ಕೊಂಡುಕೊಂಡು ಅವರನ್ನು ಲಗ್ನಮಾಡಿಕೊಂಡು ಸ್ವಲ್ಪಕಾಲದಲ್ಲೆ ಅವರನ್ನ ದುಃಖಕ್ಕೆ ಗುರಿಮಾಡುತ್ತಾರೆ. ಶುನಕ, ಸರ್ಪ, ಮಾರ್ಜಾಲಗಳು, ತಮ್ಮ ತಮ್ಮ ಮರಿಗಳನ್ನು ತಾವೇ ತಿಂದುಬಿಡುತ್ತವೆ. ಈ ದುರ್ವ್ಯಾಪಾರಿಗಳು ಈ ದುಷ್ಟ ಜಂತುಗಳ ಗುಂಪಿಗೆ ಸೇರಬೇಕೆ ಹೊರತು ಮನುಷ್ಯಮಾತ್ರರಲ್ಲ. ಪ್ರಿಯ ಬಾಂಧವರೆ ಈ ಘೋರಕೃತ್ಯವನ್ನು ಎಷ್ಟು ಹೀಯಾಳಿಸಿದರೂ ಸಾಲದ್ದಾಗಿದೆ ಈ ವಿಷಯದಲ್ಲಿ ಮಹಾ ಸನ್ನಿಧಿಯಿಂದ ತಕ್ಕ ನಿರ್ಬಂಧವು ಕಲ್ಪಿಸಲ್ಪಡಬೇಕು. ಹಾಗೂ ತಪ್ಪಿ ಕನ್ಯಾವಿಕ್ರಯಮಾಡುವ ಜನಗಳಿಗೆ ತಕ್ಕ ಬಂದೊಬಸ್ತು ಮಾಡಿಸುತ್ತಾರಾಗಿ ನಂಬಿ ನಾನು ಈ ಭಾಷಣವನ್ನು ನನ್ನ ಅಲ್ಪಮತಿಗೆ ತೋಚಿದಷ್ಟು ಹೇಳಿ ಮುಗಿಸಿದ್ದೇನೆ. ಮಹಾಸ್ವಾಮಿ.

ಶಿಕಾರಿಪುರ ತಾ॥ ಇಲಾಖದಾರ್ ಬುಡ್ಡಪ್ಪಯ್ಯನವರು ಮಾಡಿದ ಉಪನ್ಯಾಸ. ಪರಮಪೂಜ್ಯರಾದ ಗುರುವರ್ಯರೆ, ಸಭಾಧ್ಯಕ್ಷರೆ, ಪೀಠಾಚಾರ್ಯರೆ! ನಾನು ಈ ಸಭಾದಲ್ಲಿ ನನ್ನ ಬುದ್ಧಿಗೆ ತೋಚಿದಮಟ್ಟಿಗೆ ಕೆಲವು ವಿಷಯಗಳನ್ನು ಉಪನ್ಯಾಸಮೂಲಕ ಅರಿಕೆಮಾಡಿಕೊಳ್ಳುತ್ತೇನೆ ಗಮನವನ್ನು ಕೊಟ್ಟು ಲಾಲಿಸಬೇಕೆಂದು ನನ್ನವಿನಂತಿ. ಈ ಹಿಂದೆ ಧಾರವಾಡ, ಬೆಂಗಳೂರು, ಸೋಲಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾವ್ ಈ ಸ್ಥಳಗಳಲ್ಲಿ ಕೂಡಿದ್ದ ಮಹಾಸಭಾಗಳಲ್ಲಿ ನಡದಿರುವ ವಿಷಯಗಳು ಬಹುಮಹತ್ವದವು ಇರುತ್ತವೆ. ಅವುಗಳನ್ನು ನಡಿಸಿದ ಮಹನೀಯರು ಪರಮಪೂಜ್ಯರು, ದೇಸಾಯಿಗಳು ಒತನದಾರರು, ಕಲೆಕ್ಟರ್ ಮೊದಲಾದ ಸರಕಾರದ ಭಾರಿಹುದ್ದೇದಾರರು ಅಲ್ಲದೆ ಮತ್ತು ಬಿ. ಎ. ಬಿ. ಎಲ್ ಪ್ಯಾಸುಮಾಡಿದ ಸರ್ಕಾರಿ ಉದ್ಯೋಗಸ್ತರು, ಲಾಯರುಗಳು, ಶಾಸ್ತ್ರಜ್ಞರು, ಸಾಹುಕಾರರು ಮೊದಲಾದವರು ಉಪನ್ಯಸಿಸಿದ ವಿಷಯಗಳಿಂದ ನಮ್ಮ ವೀರಶೈವ ಸಮಾಜವು ಬೇಗ ಸುಧಾರಣೆಗೆ ಬರುವದಕ್ಕೆ ಸಂದೇಹವಿಲ್ಲವೆಂಬದಾಗಿ ನಂಬಬೇಕಾಗಿದೆ. ಈಗ್ಗೆ ನನ್ನ ಅರಿಕೆ ಏನಂದರೆ— ತಮ್ಮ ತಮ್ಮ ಸಭಾಗಳಲ್ಲಿ ನಡೆದ ವಿಷಯವು ನಮ್ಮ ವೀರಶೈವಮತದ ಜನಾಂಗವಾದ ಪ್ರತಿ ಒಂದು ಪೇಟೆ ಪಟ್ಟಣ ಹಳ್ಳಿ ಮೊದಲಾದ ಸ್ಥಳಗಳಲ್ಲಿ ಪ್ರಚಾರಕ್ಕೆ ಬಾರದೆ ಅವರವರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಒಂದೊಂದು ಸ್ಥಳದಲ್ಲಿ ಕೂಡಿ ಮಾತನಾಡಿಕೊಂಡು ಹೊಗಳು ಹೋದಂತೆ ಆಗಿದಿಯೆ ಹೊರ್ತು ಕಿಂಚಿತ್ತಾದರು ಪ್ರಚಾರಕ್ಕೆ ಬರಲಿಲ್ಲ. ಇದಕ್ಕೆ ವ್ಯಸನಪಡಬೇಕಾಗಿದೆ. ಪರಮೇಶ್ವರನು ಶಿವಮತೋದ್ಧಾರಕ್ಕೆ ಪಂಚಪೀಠದವರನ್ನು ಅನಾದಿಕಾಲದಲ್ಲೇ ಅಂದರೆ ಸೃಷ್ಟಿಕಾಲದಲ್ಲೇ ನಿರ್ಮಾಣಮಾಡಿದ್ದಾನೆ. ಆ ಪಂಚಪೀಠದವರಕಡೆ ಮಹಾಸಭಾದವರು ಲಕ್ಷ್ಯಗೊಟ್ಟು ಪೀಠಗಳ ಪೈಕಿ ಯಾರನ್ನಾದರು ತಮ್ಮ ಸಭಾಕ್ಕೆ ಅಧ್ಯಕ್ಷರನ್ನಾಗಿ ಮಾಡಿ ತಾವು ಉಪನ್ಯಾಸಮಾಡಿದವುಗಳನ್ನೆಲ್ಲ ಸಾಂಗವಾಗಿ ಆಚರಣೆಗೆ ತರಬೇಕಾಗಿ ವಿನಂತಿಮಾಡಿಕೊಂಡಿದ್ದಲ್ಲಿ ಸದರಿ ವಿಷಯಗಳನ್ನೆಲ್ಲ ಒಂದೊಂದು ಸರಕ್ಯೂಲರನ್ನಾಗಿ ಮಾಡಿಸಿ ಎಲ್ಲಾ ಊರುಗ್ರಾಮಗಳಿಗೂ ಇಲಾಖಾ ಮಾರಿಫತ್ತು ಜಾರಿಮಾಡಿದ್ದಲ್ಲಿ ಇಡಿ ಹಿಂದೂಸ್ಥಾನದ ವೀರಶೈವ ಮತದವರಲ್ಲೆಲ್ಲಾ ತುಂಬಿ ತುಳುಕಾಡುತಿತ್ತು. ಇಂತಾ ವಿಷಯಕ್ಕೆ ಮಹಾಸಭಾದವರು ಲಕ್ಷಗೊಡದೆ ಇರುವದ್ದರಿಂದ ಉಪನ್ಯಾಸವು ಆಚರಣೆಗೆ ಬಾರದೆ ಕೆಲವು ಸ್ಥಳಗಳಲ್ಲಿ ವಿಷಯಗಳನ್ನು ತಿಳಿದರೂ ಆಚರಣೆಗೆತರಲಿಕ್ಕೆ ನಿರ್ಬಂಧವಾಗಿದೆ. ಪ್ರತಿ ಒಂದು ಕಾರ್ಯದಲ್ಲಿಯು ನಾವು ತೊಡಗುವಾಗ ಶ್ರೀ॥ ಸಿದ್ಧಿವಿನಾಯಕ (ಅಂದರೆ) ಗಣಪತಿ ಪೂಜೆಯಿಲ್ಲದೆ ಇದ್ದರೆ ಯಾವ ಕಾರ್ಯವು ನಿರ್ವಿಘ್ನವಾಗುವದಿಲ್ಲವಾಗಿ ಗಣಪತಿ ಪೂಜೆ ಮೊದಲು ನಡಿಸತೀರಬೇಕು. ಪೀಠಾಚಾರ್ಯರನ್ನು ಸಭಾಧ್ಯಕ್ಷರನ್ನಾಗಿ ಮಾಡದೆ ಮರತದ್ದರಿಂದ ನ್ಯೂನತೆಗೆ ಕಾರಣವಾಗಿದೆ. ಈ ಹಿಂದೆ ನಡೆದ ಮಹಾಸಭಾದವರ ಅಭಿಪ್ರಾಯಕ್ಕೆ ತಕ್ಕಂತೆ ಅವರು ನಡಸಿರುವ ಉಪನ್ಯಾಸಗಳನ್ನು ಪರಾಂಬರಿಸಿ ಅಭಿಪ್ರಾಯಕ್ಕನುಸಾರವಾದ ವಿಷಯಗಳನ್ನು ಚುನಾಯಿಸಿಕೊಂಡು ಸಣ್ಣದಾದ ಫಾರ್ಮ ಪುಸ್ತಕವಾಗಿ ಏರ್ಪಾಟನ್ನಡಿಸಿಕೊಂಡು ಪ್ರಚಾರಕ್ಕೆ ತಂದರೆ ಮಹಾಸಭಾದವರ ಮನಸ್ಸು ತೃಪ್ತಿಗೂ ಭಾಜನವಾಗುತ್ತದಲ್ಲದೆ ವೀರಶೈವ ಮತೋದ್ಧಾರಕರೆಂಬ ಬಿರುದು ಚಿತ್ರಪ್ರಕಾಶಕ್ಕೆ ಬರಲು ಹೆಚ್ಚು ಅವಕಾಶಕೊಟ್ಟಂತೆ ಆಗುತ್ತೆ. ಸಮಸ್ತ ಭಕ್ತವೃಂದಕ್ಕೆ ಜ್ಞಾನವನ್ನು ಸನ್ಮಾನವನ್ನು ತೋರಿಸುವ ಮಹಾಕಾರ್ಯಕ್ಕೆ ಮನಗೊಡದ ವಿನಹಾ ಸಮಾಜಸುಧಾರಣೆ ಎಂದಿಗೂ ಆಗಲಾರದು. ಅಲ್ಲಲ್ಲಿ ಒಂದೊಂದು ಸ್ಥಾನದಲ್ಲಿ ಪ್ರಾಂತಿಕಸಭಾ ಮೊದಲಾದವುಗಳನ್ನು ಏರ್ಪಡಿಸಿಕೊಂಡು ಸಮಾಜಸುಧಾರಣೆಗೆ ಪ್ರಯತ್ನಿಸಿದರೆ ಈ ಹಿಂದೆ ನಡೆದ ಮಹಾಸಭಾ ಪ್ರಾಂತಿಕಸಭಾ ಇವುಗಳಲ್ಲಿ ಮಾಡಿದ ವಿಷಯಗಳಲ್ಲಿ ಯಾವುದು ಪ್ರಚಾರಕ್ಕೆ ಬಂತು? ಯಾನೊಂದು ನಡಿಯಲಿಲ್ಲ. ಯಾತಕ್ಕೆ ಸುಮ್ಮನೆ ಸಭಾಗಳನ್ನು ಮಾಡಬೇಕೆಂದು ಅನೇಕ ಜನರು ಅಂದುಕೊಳ್ಳುತ್ತಾ ಇರುವರು. ಇದಕ್ಕೆ ಸಾಕ್ಷಿ ೧ನೆಯ ತೊಗರ್ಸಿಯಲ್ಲಿ ಪ್ರಾಂತಿಕಸಭಾ ಮಾಡಿದರು. ಕೆಳದಿಯಲ್ಲಿ ಒಂದು ಪ್ರಾಂತಿಕಸಭಾ ಮಾಡಿದರು. ಶಿರಾಳಕೊಪ್ಪದಲ್ಲಿ ಪ್ರಾಂತಿಕಸಭಾ ಮಾಡಿದರು. ಇವುಗಳಲ್ಲಿ ತೆರಾ ತೆಗೆದುಕೊಳ್ಳಕೂಡದೆಂದು ಪ್ರಚಾರಪಡಿಸಿದರು. ಮದವಣಿಗರು ಲಗ್ನಕಾಲದಲ್ಲಿ ಪಲ್ಲಕ್ಕಿ ಅಥವ ದಂಡಿಗೆ ಹತ್ತಕೂಡದೆಂದು ವಿಧಿಸಿದರು. ಇವುಗಳಲ್ಲೊಂದೂ ಆಚರಣೆಗೆ ಬರಲಿಲ್ಲ. ಆದ್ದರಿಂದ ಜನರಿಗೆ ನಿರ್ಬಂಧವಿಲ್ಲದೆ ಯಾವಕಾರ್ಯವು ನೆರವೇರುವದಿಲ್ಲವಾಗಿ ತೋರುತ್ತೆ. ಸಮಾಜೋನ್ನತಿಯ ಕೆಲಸವು ಸ್ವಂತ ಕೆಲಸವೆಂದು ತಿಳಿದು ಹಗಲು ಇರಳು ಚಿಂತನಮಾಡುತಿದ್ದು ಯೋಗ್ಯಕಂಡ ಸುಧಾರಣೆಗಳನ್ನು ದೃಢನಿಶ್ಚಯದಿಂದ ವೆವಹಾರದಲ್ಲಿ ತರುತ್ತಾ ಹೋಗುವಲ್ಲಿ ನಮ್ಮ ವೀರಶೈವ ಸಮಾಜವು ಸ್ವಲ್ಪ ದಿವಸದಲ್ಲೇ ಉನ್ನತಸ್ಥಿತಿಗೆ ಬರುವದಕ್ಕೆ ಸಂದೇಹವಿಲ್ಲ. ಈ ಕೆಲಸವು ಅಂತಿಂಥವರಿಂದ ಆಗತಕ್ಕದ್ದಲ್ಲ ಸನ್ನಿಧಿಯಿಂದಲೇ ಜಾರಿಗೆ ಬರತಕ್ಕದ್ದೆಂದು ಹೇಳಿ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ. (ಸಶೇಷ.)

ವಿವೇಕಮಂಜರಿ

7

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ನೆಯ ಭಾಗ ೨ ಆಣೆ ೧೦೦ ಪುಟಗಳು.
೨ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ.— "ಮೈಸೂರ್ ಸ್ಟಾರ್ ಆಫೀಸ್" ಮೈಸೂರ್.

ಖಂಡದ ಅನೇಕ ಮಹಾರಾಜರಿಂದ ಬಹುಮಾನಪಡೆದ

ಎಂ. ಆರ್. ಸುಬ್ಬಾಚೆಟ್ಟಪ್ಪನವರ

ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

ಕೇಸರಮಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ ಅಲ್ಲದೆ ಮಿದುಳಿಗೆ ಬಹು ತಂಪುವಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನಾನಂದಪಡಿಸುತ್ತದೆ. ಇದರ ಬೆಲೆ ಸೀಸೆ ೧ ಕ್ಕೆ ೦-೮-೦.

	ರೂ.		ರೂ.
ಅಂಬರ್‌ಬತ್ತಿ ಸೇರ್ ೧ಕ್ಕೆ	೬	ಕಸ್ತೂರಿಬಿಲ್ಲೆ ತೊಲೆ ೧ಕ್ಕೆ	೨
ಅಂಬರ್‌ಬತ್ತಿ "	೪॥	ಜವಾಜಿಬಿಲ್ಲೆ "	೧
ಕಸ್ತೂರಿಬತ್ತಿ "	೨॥	ಅರಗಜ "	೧
ಪುನಗುಬತ್ತಿ "	೧	ಸುರಂಗಿಸೆಂಟ್ ಸೀ ೧ಕ್ಕೆ	೧
ಗುಲಾಬಿಬತ್ತಿ "	॥	ಮಾಲತಿಸೆಂಟ್ "	।॥

ಎಂ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜ ಮೊಹಲ್ಲಾ ಮೈಸೂರ್.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

31

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅದಕೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

41

(೧) ಕಾಗದ—ದಪ್ಪ, ಬಿಳುಪು, ನುಣುಪಾದ್ದು. (೨) ಬೈಂಡು—ಸುಂದರವಾದ [illegible] ಬಟ್ಟೆಯಿಂದ ಯಂತ್ರಗಳಲ್ಲಿ ಹಾಕಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ಬಾರಡರಿಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರಿಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

28

ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

8

ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.— ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯರವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦-೧೦-೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಶಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾದಿ ಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಷಡ್ಬಲಾಂಶಗಳು ಗ್ರಹಗಳಸಮಯ ಅವಸ್ಥಾಪಕ್ಷನರ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಶಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೩೦-೪೦ ಹಾಳೆಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦-೦-೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದಿರುವುದರಿಂದ ಜಾತಕವನ್ನು ಬರೆಸದವರು ಕಷ್ಟಪಡುತ್ತಿರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ನೋಡಿದ ಪ್ರಶ್ನವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ವೇಳ್ಯಂದ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಚಿತವಾಗಿ ಕೊಡುತ್ತೇವೆ. ನಷ್ಟಜಾತಕನನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತ ಯಿರುತ್ತೆ.

ನಮ್ಮ ವಿಳಾಸ:—
ಯಾರ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

5 ಬರುವ ಮೆ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಬಂಗಾರದ ವಾಚ್ ಸರಪಣಿ. (2) ಉತ್ತರ ಮುಖ. (3) ನಾಜೂಕಾದ ಕರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಪೋಕ್ ಉಂಗರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಬಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್ ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವಳ್ಳ ಡಬ್ಬ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ) (12) ಸಿಗರ್ಟ ಗೊಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂಬರು 7 ಪೋಲಿಸ್ ವೆಂಕಟಾಚಲಮುದಲಿಯಾರ್ ರಸ್ತೆ,
ಮದ್ರಾಸು.

ದರು. ಮರುಳಸಿದ್ಧೇಶ್ವರರು ಬಿಜಕ್ಷೇತ್ರದಲ್ಲಿರುವ ಸಿದ್ಧೇಶ್ವರಲಿಂಗದಲ್ಲಿ ಜನಿಸಿ ಉಜ್ಜಯಿನಿಯಲ್ಲಿ ಸಿಂಹಾಸನಾಸೀನರಾದರು. ವಿಶ್ವಾರಾಧ್ಯರು ಕಾಶಿ ವಿಶ್ವೇಶ್ವರಲಿಂಗದಲ್ಲಿ ಆವಿರ್ಭವಿಸಿ ಕಾಶಿಯಲ್ಲಿ ಸಿಂಹಾಸನಾರೂಢರಾದರು. ರೇವಣಸಿದ್ಧೇಶ್ವರರು ಪರಮೇಶ್ವರನ ಅಪ್ಪಣೆಯಿಂದ ಶ್ರೀಶೈಲಕ್ಕೆ ಉತ್ತರಭಾಗದಲ್ಲಿರುವ ಕೊಲ್ಲಿಪಾಕಿಯ ಸೋಮೇಶ್ವರಲಿಂಗದಲ್ಲಿ ಉದ್ಭವಿಸಿ ಆಕಾಶಮಾರ್ಗವಾಗಿ ಹೋಗಿ ಅಗಸ್ತ್ಯರಿಗೆ ಜ್ಞಾನಬೋಧೆಮಾಡುತ್ತಾ ಅನೇಕಕಡೆ ಸಂಚಾರಮಾಡಿ ಅನೇಕ ಪವಾಡಗಳನ್ನು ಗೆದ್ದು, ಹೊನ್ನೂರಿನಲ್ಲಿ ತುಂಬಿದ್ದ ಪರವಾದಿಗಳನ್ನು ಸದೆದು ವಿಭೀಷಣನಿಷ್ಟದಂತೆ ಲಂಕೆಗೆ ಹೋಗಿ ಏಕಕಾಲದಲ್ಲೇ (ಏಕೋತರಶತಮಹಾತ್ಮ ಬಹುದೇಹವರ್ತಿ) ಎಂಬಂತೆ ಉಳಿದ ಮೂರು ಕೋಟಿ ಲಿಂಗಗಳನ್ನು ಪ್ರತಿಯೊಂದು ಶಿವಾಲಯದಲ್ಲಿ ತಾನೇ ಇದ್ದುಕೊಂಡು ಶಿವಲಿಂಗ ಸಂಸ್ಕಾರವಂ ಬಹು ಚಾತುರ್ಯದಿಂದಲೂ ಸಾಧ್ಯವಿಲ್ಲದ ಕಾರ್ಯವಂ ಮುಗಿಸಿ ವಿಭೀಷಣನಿಗೆ ಆಶೀರ್ವದಿಸಿ, ಈ ಪುಣ್ಯಕ್ಷೇತ್ರಕ್ಕೆ ದಯಮಾಡಿಸಿ ಇಲ್ಲಿ ಉಂಟಾಗಿದ್ದ ಭಂಗಕಾರ್ಯಗಳನ್ನು ಕಿರಿತು ಹೊಳೆಯಲ್ಲಿ ಸೇರಿದ್ದ ಶ್ರೀ ವೀರಭದ್ರಸ್ವಾಮಿಯನ್ನು ರಂಭಾಗ್ರದಲ್ಲಿ ಇಟ್ಟುಕೊಂಡು ಇಲ್ಲಿ ಪುನಃ ನೆಲಸಿದ್ದರಿಂದ ಈ ಸ್ಥಳಕ್ಕೆ ರಂಭಾಪುರಿ ಎಂಬದಾಗಿ ಅಥವಾ ಬಾಳೆಹೊನ್ನೂರೆಂಬದಾಗಿ ಹೆಸರಾಯ್ತು. ನಂತರ ರೇಣುಕರು ಇಲ್ಲಿ ಮಠಸ್ಥಾಪಿಸಿ ತಮ್ಮ ಕರಕಂಜಾತರಾದ ಶ್ರೀ ರುದ್ರಮುನೀಶ್ವರರಿಗೆ ಪಟ್ಟಾಭಿಷೇಕವಂ ಮಾಡಿ ತಮ್ಮ ಮಹತ್ವವು ಇಲ್ಲಿ ನಡೆಯುವಂತೆ ಆಶೀರ್ವದಿಸಿ ದಯಮಾಡಿಸಿದರು. ಅದ್ಯಾಪಿ ಮಹತ್ವವು ನಡೆಯುತ್ತಾ ಇದೆ. ತತ್ವಂಶೋದ್ಭವರಾದ ನಮ್ಮ ಆಚಾರ್ಯಪೀಠಾಧಿಕಾರಿಗಳ ಒಬ್ಬೊಬ್ಬರ ಮಹತ್ವವನ್ನು ಎಷ್ಟುವರ್ಣಿಸಿದರೂ ತೀರದ್ದಾಗಿದೆ. ಈ ರಂಭಾಪುರೀಶನ ಸಚ್ಚರಿತ್ರೆಯನ್ನು ಶ್ರೀ ಸನ್ನಿಧಿಯ ಅಪ್ಪಣೆಯಮೇರೆಗೆ ಇಲ್ಲಿಗೆ ಪೂರ್ತಿಮಾಡಿದ್ದೇನೆಂದು ನನ್ನ ವಿನಂತಿಯು.

ಹೊನ್ನವಳ್ಳಿ ಮಠದ ಶ್ರೀ ಪಟ್ಟದ ಚನವೀರಸ್ವಾಮಿಗಳ ಉಪನ್ಯಾಸವು:— ಪರಮಪೂಜ್ಯರಾದ ಪೀಠಾಚಾರ್ಯರೆ! ಈ ಮಹಾಸಭೆಯಲ್ಲಿ ವಿದ್ಯಾವಿಷಯವಾಗಿ ಉಪನ್ಯಾಸಮಾಡಲಿಚ್ಛೈಸಿರುವೆನು. ಇದರಲ್ಲಿರತಕ್ಕ ನ್ಯೂನಾತಿರೇಕಗಳಿಗೆ ಕ್ಷಮಾಪಣೆಯನ್ನು ಬೇಡುವೆನು. ॥ ಗ್ರಂ ॥ ಮಾತೇವರಕ್ಷತಿ ಪಿತೇವಹಿತೇನಿಯುಂಕ್ತೆ । ಕಾಂತೇವಚಾಭಿರಮಯತ್ಯಪನೀಯಖೇದಂ ॥ ಕೀರ್ತಿಂಚದಿಕ್ಷುವಿತನೋತಿ ತನೂಪತಿವಿತ್ತಂ । ಕಿಂಕಿಂನಸಾಧಯತ್ತಿಕಲ್ಪಲತೇವ ವಿದ್ಯಾ ॥ ಇಂತಹ ವಿದ್ಯೆಯನ್ನು ಪ್ರತಿಯೊಬ್ಬ ವೀರಶೈವನೂ ಕಲಿತ ಹೊರತು ಮುಂದಕ್ಕೆ ಬರಲಾರನೆಂದು ವೀರಶೈವರು ಅನೇಕಕಡೆ ಪಾಠಶಾಲೆಗಳನ್ನು ಸ್ಥಾಪಿಸಿ ಶಾಸ್ತ್ರಾಭ್ಯಾಸಮಾಡಿಸುತ್ತಾ ಇದ್ದಾರೆ. ನಮ್ಮ ಶ್ರೀಮದ್ರಂಭಾಪುರಿ ಜಗದ್ಗುರು ಪಂಚಾಕ್ಷರಿ ದೇಶಿಕೇಂದ್ರ ಮಹಾಸ್ವಾಮಿಯವರ ಅಪ್ಪಣೆಯಮೇರೆಗೆ ಬೀರೂರಿನಲ್ಲಿ ಶ್ರೀಮಂತ ಪತ್ರೆ ವೀರಪ್ಪನವರು, ಮ॥ರಾ॥ ಎತ್ತೀಹಳ್ಳಿ ಶಾಂತಪ್ಪಸೆಟ್ಟರು ಮೊದಲಾದ ವೀರಶೈವ ಮತೀಯರು ಫಂಡನ್ನು ಕೂಡಿಸಿ, ಸಂಸ್ಕೃತಪಾಠಶಾಲೆಯನ್ನು ಇಡಿಸಿ ನಾಲ್ಕಾರು ವರ್ಷಗಳು ನಮ್ಮಂತಹ ವಿದ್ಯಾರ್ಥಿಗಳಿಗೆ ಅನುಕೂಲತೆ ಕೊಡುತ್ತಾ ಇದ್ದುದು ಸರಿಯಷ್ಟೆ. ಈಗ ೩ ವರುಷದಿಂದ ಪ್ಲೇಗಿನ ಹಾವಳಿಯಿಂದ ಆರು ತಿಂಗಳು ಅಭ್ಯಾಸ ಆರು ತಿಂಗಳು ವಿರಾಮ ಹೀಗಾಗಿ ಕೊರತೆಯುಂಟಾಗಿದೆ. ಇದಕ್ಕೆ ಪರಿಹಾರ ಅಂದರೆ ಗಲಾಟೆಕಾಲದಲ್ಲಿಯೂ ಕೂಡ ಬೇರೆ ಕಡೆ ಅಭ್ಯಾಸವು ನಡೆಯುವಂತೆ ಮಹಾಸನ್ನಿಧಾನದಿಂದ ಯಾವುದಾದರೂ ಒಂದು ಏರ್ಪಾಟನ್ನು ಮಾಡಿ ಅನುಕೂಲತೆ ಪಡಿಸಿ ರೇಣುಕಶ್ರೀಪ್ರೋಜ್ಜೀವಿನಿ ಪಾಠಶಾಲಾ ಎಂದು ಮೊದಲು ಇಟ್ಟಿರತಕ್ಕ ಅಭಿದಾನವು ಶಾಶ್ವತವಾಗಿ ನಡೆಯುವಂತೆ ಅಪ್ಪಣೆ ಮಾಡುತ್ತಾರಾಗಿ ನಂಬಿದ್ದೇನೆ.

ತರೀಕೆರೆ ತಾಲ್ಲೋಕು ಅಣೆ ಪಟ್ಟದ ಸ್ವಾಮಿಗಳ ಭಾಷಣವು:— ಸಭಾಧ್ಯಕ್ಷತೆಯನಾಂತಿರುವ ಪೀಠಾಚಾರ್ಯರೆ! ನಾನು ಲಿಂಗಧಾರಣೆಯ ವಿಷಯವಾಗಿ ಉಪನ್ಯಾಸವನ್ನು ಮಾಡುವೆನು. ಏನಾದರೂ ನ್ಯೂನತೆಯಿದ್ದರೆ ಎಣಿಸದೆ ವಿಷಯಗ್ರಹಣಮಾಡಬೇಕಾಗಿ ನನ್ನ ವಿನಂತಿಯು. ಲಿಂಗಧಾರಣೆಯು ವೇದೋಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವುದರಿಂದ ಅನಾದಿಕಾಲದಿಂದ ನಡೆದು ಬಂದುದೇ ಹೊರತು ಇತ್ತಿತ್ತಲಾಗಿಬಂದುದಲ್ಲವೆಂಬುದಾಗಿ ಸಕಲರಿಗೂ ಸ್ಪಷ್ಟವಾಗಿರುವುದು. ಆದರೂ ಸಂಕ್ಷೇಪವಾಗಿ ತಿಳಿಸಲಪೇಕ್ಷೆಯಿರುವುದರಿಂದ ವೇದ, ಉಪನಿಷತ್ತು, ಸ್ಮೃತಿ, ಪುರಾಣ ಇತಿಹಾಸ ಮುಂತಾದ ಗ್ರಂಥಗಳಲ್ಲಿ ಹೇಳಿದ ವಿಷಯವನ್ನು ಕ್ರಮವಾಗಿ ಹೇಳಲುಪಕ್ರಮಿಸುತ್ತೇನೆ. ಋಗ್ವೇದದಲ್ಲಿ- "ಪವಿತ್ರಂತೇ ವಿತತಂಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ" ಎಲೈ ಪರಶಿವನೆ! ನಿನ್ನ ಲಿಂಗರೂಪವು ಇಷ್ಟ, ಪ್ರಾಣ, ಭಾವವೆಂದು ತ್ರಿವಿಧರೂಪವಾಗಿರುವುದು, ಮತ್ತು ಅಖಂಡಸ್ವರೂಪನಾಗಿ ನೀನು ಇಷ್ಟಲಿಂಗರೂಪಿಯಾಗಿ ಸಕಲ ಶಿವಭಕ್ತರ ಮಸ್ತಕ, ಕಂಠ, ಕಕ್ಷ, ವಕ್ಷಸ್ಥಲ ಮೊದಲಾದ ಭಾಗಗಳಲ್ಲಿ ವಾಸಿಸುವಿ. ಮತ್ತು ಈ ಲಿಂಗವನ್ನು ಪೂರ್ವಜನ್ಮದಲ್ಲಿ ತಪಸ್ಸುಮಾಡದೆ ಇದ್ದ ಪುರುಷನು ಹೊಂದುವನಿಲ್ಲ ಅಂತಹ ತಪಸ್ಸನ್ನು ಮಾಡಿದವನು ಪರಬ್ರಹ್ಮಸ್ವರೂಪಿಯಾದ ಲಿಂಗವನ್ನು ಧರಿಸಲು ಯೋಗ್ಯನಾಗುತ್ತಾನೆ. ಶಿವಭಕ್ತನು ಕಂಚೆ, ಅಕಂಚೆ ಕಾಲಗಳಲ್ಲಿ ಕೂಡ ಧರಿಸತಕ್ಕದೆಂದು ಋಗ್ವೇದದಲ್ಲಿ ಹೇಳಿರುವುದು. 'ಅಯಮ್ಮೆ ಅಸ್ತು ಭಗವಾರ್ ಅಯಮ್ಮೆ ಭಗವತ್ತರಃ' ಪೂಜ್ಯನಾದ ಪರಶಿವನು ನನಗೆ ಅತಿ ಪೂಜ್ಯನು, ಈ ಇಷ್ಟಲಿಂಗರೂಪಿಯಾದ ಶಿವನು ನನ್ನ ಸಂಸಾರವೆಂಬ ರೋಗವನ್ನು ಹೋಗಲಾಡಿಸುವಲ್ಲಿ ವೈದ್ಯನು; ಇವನನ್ನು ಕರಸ್ಥಲದಲ್ಲಿಟ್ಟು ಪೂಜಿಸಬೇಕೆಂದು ಹೇಳಿರುವುದು. ಯಜುರ್ವೇದದಲ್ಲಿ- 'ಯಾತೇರುದ್ರಶಿವಾತನೂರಘೋರಪಾಪಕಾಶಿನಿ' ಎಂಬ ಪ್ರಮಾಣಾನುಸಾರವಾಗಿ ಎಲೈ ಪರಶಿವನೆ! ನಿನ್ನ ಮಂಗಲಸ್ವರೂಪವಾದ ಶಿವಲಿಂಗವನ್ನು ಸಾರ್ವದಾ ಧರಿಸಬೇಕೆಂದು ಸಿದ್ಧವಾಯಿತು. ಶ್ವೇತಾಶ್ವತರೋಪನಿಷತ್ತುಗಳಲ್ಲಿ- 'ಸರ್ವಾನನಶಿರೋಗ್ರೀವಃ । ಸರ್ವಭೂತಗುಹಾಶಯಃ । ಸರ್ವವ್ಯಾಪೀಸ ಭಗವಾನ್ । ತಸ್ಮಾತ್ ಸರ್ವಗತಃಶಿವಃ' ಸಕಲರಿಂದ ಪೂಜ್ಯನಾದ ಪರಶಿವನು ಸಮಸ್ತಪ್ರಾಣಿಗಳ ಶಿರಸ್ಸೇ ಮೊದಲಾದ ಸ್ಥಾನಗಳಲ್ಲಿ ವಾಸಿಸುವನು. ಆದುದರಿಂದ ಲಿಂಗಧಾರಣೆಯು ಮುಖ್ಯವಾದುದು. ಕೆಲವರು ಲಿಂಗವನ್ನು ಸಾರ್ವದಾ ಧರಿಸದೆಯೂ, ಕೆಲವರು ಜನಿವಾರದಹಾಗೆ ಉದ್ದಕ್ಕೆ ಬಿಟ್ಟುಕೊಂಡು ಸೊಂಟಕ್ಕೆ ಸಿಕ್ಕಿಸಿಕೊಂಡಿಯೂ ಇರುತ್ತಾರೆ. 'ನಾಭಿರಧೋಲಿಂಗಧಾರೆ ಪಾಪಾನ್ನಶ್ಯುಸಉಚ್ಯತೆ । ನಾಭೇರೂರ್ಧ್ವಲಿಂಗಧಾರೇಚ ಸೌಭಾಗ್ಯಂಜ್ಞಾನವರ್ಧನಂ' ನಾಭಿಯ ಕೆಳಭಾಗಕ್ಕೆ ಲಿಂಗವನ್ನು ಧರಿಸಿದವನು ಪಾಪಿಷ್ಟನಾಗುವನು. ನಾಭಿಯ ಮೇಲ್ಭಾಗದಲ್ಲ ಉತ್ತಸ್ಥಾನದಲ್ಲಿ ಧರಿಸಿದವನು ಸೌಭಾಗ್ಯಜ್ಞಾನವೃದ್ಧಿಯನ್ನು ಪಡಿಯುತ್ತಾನೆ ಆದುದರಿಂದ ಮಹನೀಯರೆಲ್ಲರೂ ಸರಿಯಾದ ಆಚರಣೆಯಲ್ಲಿ ಇರಬೇಕಾಗಿ ನನ್ನ ಕೋರಿಕೆ.

ಮ॥ ರಾ॥ ಗೋಡಚಪ್ಪಶೆಟ್ಟಿ ಹಲುಕೂರು ಇವರ ಭಾಷಣ:—ಭೋ ಗುರುವರ್ಯರೇ ಸಭಾಸದರೆ! ನಾನು ಅರಿಕೆ ಮಾಡಿಕೊಳ್ಳುವದೇನಂದರೆ—ವೀರಶೈವರಲ್ಲಿ ಕನ್ಯಾವಿಕ್ರಯ ಮಾಡುವ ಕೆಲವು ಪಾಪಿಗಳು ಅವರವರ ಶಕ್ತ್ಯಾನುಸಾರವಾಗಿ ವರನಿಗೆ ವರದಕ್ಷಿಣೆಕೊಟ್ಟು ಕನ್ಯಾದಾನಮಾಡುವದು ಉತ್ತಮವಾದದ್ದು. ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳನ್ನು ವಿಕ್ರಯಿಸುವದಾದರೂ ಉದರಭರಣಕ್ಕಾಗಿ ಮಾಡತಕ್ಕ ಘೋರಕೃತ್ಯವೇ ಸರಿ. ಮನೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ಸಾಕ್ಷಾತ್‌ಲಕ್ಷ್ಮಿಯಂತೆ ಕಾಣಬೇಕೆಂದು ನೀತಿಜ್ಞರು ಹೇಳುತ್ತಾರೆ. ಹೀಗಿರುವಲ್ಲಿ ಅಂತಹ ಲಕ್ಷ್ಮಿಯನ್ನು ಮಾರಿಕೊಂಡು ಹೊಟ್ಟೆಹೊರೆಯಬೇಕೆಂದೆಣಿಸುವ ಅಧಮಾಧಮನಿಗೆ ಲಕ್ಷ್ಮಿಯು ಎಂದಿಗಾದರು ಕೈಸೇರಿಯಾಳೆ? ಅವನಿಗೆ ದರಿದ್ರಲಕ್ಷ್ಮಿಯೆ ಗತಿ. ಈ ದುಷ್ಟಪದ್ಧತಿಯು ನಮ್ಮ ವೀರಶೈವರಲ್ಲಿ ಬಹಳ ಮಟ್ಟಿಗೆ ಇರುವಂತೆ ತಿಳಿಯಬರುತ್ತೆ. ಇದು ಬಹಳ ಶೋಚನೀಯವಾದ ಸಂಗತಿಯೆ ಸರಿ. ಈ ಕನ್ಯಾವಿಕ್ರಯ ಪದ್ಧತಿಯಿಂದ ಪ್ರಾಯಶಃ ಚಿಕ್ಕಹುಡುಗೆಯರಿಗೆ ವೃದ್ಧವರನೇ ಸಿಕ್ಕುವದು ವಿಶೇಷ. ಮುದುಕರಿಗೆ ಯೋಗ್ಯರಾದವರು ಯಾರೂ ಹೆಣ್ಣನ್ನು ಕೊಡುವದಿಲ್ಲ. ಆದ್ದರಿಂದ ಮುದುಕರು ಅಪಾರವಾದ ಹಣವನ್ನು ಚೆಲ್ಲಿ ಕೋಮಲಾಂಗಿಯರಾದ ಚಿಕ್ಕಕನ್ನೆಯರನ್ನು ಕೊಂಡುಕೊಂಡು ಅವರನ್ನು ಲಗ್ನಮಾಡಿಕೊಂಡು ಸ್ವಲ್ಪಕಾಲದಲ್ಲಿ ಅವರನ್ನು ದುಃಖಕ್ಕೆ ಗುರಿಮಾಡುತ್ತಾರೆ. ಶುನಕ, ಸರ್ಪ, ಮಾರ್ಜಾಲಗಳು, ತಮ್ಮ ತಮ್ಮ ಮರಿಗಳನ್ನು ತಾವೇ ತಿಂದುಬಿಡುತ್ತವೆ. ಈ ದುರ್ವ್ಯಾಪಾರಿಗಳು ಈ ದುಷ್ಟ ಜಂತುಗಳ ಗುಂಪಿಗೆ ಸೇರಬೇಕೆ ಹೊರತು ಮನುಷ್ಯಮಾತ್ರರಲ್ಲ. ಪ್ರಿಯ ಬಾಂಧವರೆ ಈ ಘೋರಕೃತ್ಯವನ್ನು ಎಷ್ಟು ಹೀಯಾಳಿಸಿದರೂ ಸಾಲದ್ದಾಗಿದೆ ಈ ವಿಷಯದಲ್ಲಿ ಮಹಾ ಸನ್ನಿಧಿಯಿಂದ ತಕ್ಕ ನಿರ್ಬಂಧವು ಕಲ್ಪಿಸಲ್ಪಡಬೇಕು. ಹಾಗೂ ತಪ್ಪಿ ಕನ್ಯಾವಿಕ್ರಯಮಾಡುವ ಜನಗಳಿಗೆ ತಕ್ಕ ಬಂದೋಬಸ್ತು ಮಾಡಿಸುತ್ತಾರಾಗಿ ನಂಬಿ ನಾನು ಈ ಭಾಷಣವನ್ನು ನನ್ನ ಅಲ್ಪಮತಿಗೆ ತೋಚಿದಷ್ಟು ಹೇಳಿ ಮುಗಿಸಿದ್ದೇನೆ. ಮಹಾಸ್ವಾಮಿ.

ಶಿಕಾರಿಪುರ ತಾ॥ ಇಲಾಖದಾರ್ ಬೂದ್ಯಪ್ಪಯ್ಯನವರು ಮಾಡಿದ ಉಪನ್ಯಾಸ. ಪರಮಪೂಜ್ಯರಾದ ಗುರುವರ್ಯರೆ, ಸಭಾಧ್ಯಕ್ಷರೆ, ಪೀಠಾಚಾರ್ಯರೆ! ನಾನು ಈ ಸಭಾದಲ್ಲಿ ನನ್ನ ಬುದ್ಧಿಗೆ ತೋಚಿದಮಟ್ಟಿಗೆ ಕೆಲವು ವಿಷಯಗಳನ್ನು ಉಪನ್ಯಾಸಮೂಲಕ ಅರಿಕೆಮಾಡಿಕೊಳ್ಳುತ್ತೇನೆ ಗಮನವನ್ನು ಕೊಟ್ಟು ಲಾಲಿಸಬೇಕೆಂದು ನನ್ನವಿನಂತಿ. ಈ ಹಿಂದೆ ಧಾರವಾಡ, ಬೆಂಗಳೂರು, ಸೋಲಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾವ್ ಈ ಸ್ಥಳಗಳಲ್ಲಿ ಕೂಡಿದ್ದ ಮಹಾಸಭಾಗಳಲ್ಲಿ ನಡದಿರುವ ವಿಷಯಗಳು ಬಹುಮಹತ್ವದವು ಇರುತ್ತವೆ. ಅವುಗಳನ್ನು ನಡಿಸಿದ ಮಹನೀಯರು ಪರಮಪೂಜ್ಯರು, ದೇಸಾಯಿಗಳು ಒತನದಾರರು, ಕಲೆಕ್ಟರ್ ಮೊದಲಾದ ಸರಕಾರದ ಭಾರಿಹುದ್ದೆದಾರರು ಅಲ್ಲದೆ ಮತ್ತು ಬಿ. ಎ. ಬಿ. ಎಲ್ ಪ್ಯಾಸುಮಾಡಿದ ಸರ್ಕಾರಿ ಉದ್ಯೋಗಸ್ತರು, ಲಾಯರುಗಳು, ಶಾಸ್ತ್ರಜ್ಞರು, ಸಾವುಕಾರರು ಮೊದಲಾದವರು ಉಪಾಧಿಸಿದ ವಿಷಯಗಳಿಂದ ನಮ್ಮ ವೀರಶೈವ ಸಮಾಜವು ಬೇಗ ಸುಧಾರಣೆಗೆ ಬರುವದಕ್ಕೆ ಸಂದೇಹವಿಲ್ಲವೆಂಬದಾಗಿ ನಂಬಬೇಕಾಗಿದೆ. ಈಗ್ಗೆ ನನ್ನ ಅರಿಕೆ ಏನಂದರೆ- ತಮ್ಮ ತಮ್ಮ ಸಭಾಗಳಲ್ಲಿ ನಡೆದ ವಿಷಯವು ನಮ್ಮ ವೀರಶೈವಮತದ ಜನಾಂಗವಾದ ಪ್ರತಿ ಒಂದು ಪೇಟೆ ಪಟ್ಟಣ ಹಳ್ಳಿ ಮೊದಲಾದ ಸ್ಥಳಗಳಲ್ಲಿ ಪ್ರಚಾರಕ್ಕೆ ಬಾರದೆ ಅವರವರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಒಂದೊಂದು ಸ್ಥಳದಲ್ಲಿ ಕೂಡಿ ಮಾತನಾಡಿಕೊಂಡು ಹೊಗದು ಹೋದಂತೆ ಆಗಿದಿಯೆ ಹೊರ್ತು ಕಿಂಚಿತ್ತಾದರು ಪ್ರಚಾರಕ್ಕೆ ಬರಸಿಲ್ಲ. ಇದಕ್ಕೆ ವ್ಯಸನಪಡಬೇಕಾಗಿದೆ. ಪರಮೇಶ್ವರನು ಶಿವಮತೋದ್ಧಾರಕ್ಕೆ ಪಂಚಪೀಠದವರನ್ನು ಅನಾದಿಕಾಲದಲ್ಲೇ ಅಂದರೆ ಸೃಷ್ಟಿಕಾಲದಲ್ಲೇ ನಿರ್ಮಾಣಮಾಡಿದ್ದಾನೆ. ಆ ಪಂಚಪೀಠದವರಕಡೆ ಮಹಾಸಭಾದವರು ಲಕ್ಷ್ಯಗೊಟ್ಟು ಪೀಠಗಳ ಪೈಕಿ ಯಾರನ್ನಾದರು ತಮ್ಮ ಸಭಾಕ್ಕೆ ಅಧ್ಯಕ್ಷರನ್ನಾಗಿ ಮಾಡಿ ತಾವು ಉಪನ್ಯಾಸಮಾಡಿದವುಗಳನ್ನೆಲ್ಲ ಸಾಂಗವಾಗಿ ಆಚರಣೆಗೆ ತರಬೇಕಾಗಿ ವಿನಂತಿಮಾಡಿಕೊಂಡಿದ್ದಲ್ಲಿ ಸದರಿ ವಿಷಯಗಳನ್ನೆಲ್ಲ ಒಂದೊಂದು ಸರಕ್ಯೂಲರನ್ನಾಗಿ ಮಾಡಿಸಿ ಎಲ್ಲಾ ಊರುಗ್ರಾಮುಗಳಿಗೂ ಇಲಾಖಾ ಮಾಡಿಸುತ್ತ ಜಾರಿಮಾಡಿದ್ದಲ್ಲಿ ಇಡಿ ಹಿಂದೂಸ್ಥಾನದ ವೀರಶೈವ ಮತದವರಲ್ಲೆಲ್ಲಾ ತುಂಬಿ ತುಳುಕಾಡುತಿತ್ತು. ಇಂತಾ ವಿಷಯಕ್ಕೆ ಮಹಾಸಭಾದವರು ಲಕ್ಷೆಗೊಡದೆ ಇರುವದ್ದರಿಂದ ಉಪನ್ಯಾಸವು ಆಚರಣೆಗೆ ಬಾರದೆ ಕೆಲವು ಸ್ಥಲಗಳಲ್ಲಿ ವಿಷಯಗಳನ್ನು ತಿಳಿದರೂ ಆಚರಣೆಗೆತರಲಿಕ್ಕೆ ನಿರ್ಬಂಧವಾಗಿದೆ. ಪ್ರತಿ ಒಂದು ಕಾರ್ಯದಲ್ಲಿಯು ನಾವು ತೊಡಗುವಾಗ ಶ್ರೀ॥ ಸಿದ್ಧಿವಿನಾಯಕ (ಅಂದರೆ) ಗಣಪತಿ ಪೂಜೆಯಿಲ್ಲದೆ ಇದ್ದರೆ ಯಾವ ಕಾರ್ಯವು ನಿರ್ವಿಘ್ನವಾಗುವದಿಲ್ಲವಾಗಿ ಗಣಪತಿ ಪೂಜೆ ಮೊದಲು ನಡಿಸಿತೀರಬೇಕು. ಪೀಠಾಚಾರ್ಯರನ್ನು ಸಭಾಧ್ಯಕ್ಷರನ್ನಾಗಿ ಮಾಡದೆ ಮರತದ್ದರಿಂದ ನ್ಯೂನತೆಗೆ ಕಾರಣವಾಗಿದೆ. ಈ ಹಿಂದೆ ನಡೆದ ಮಹಾಸಭಾದವರ ಅಭಿಪ್ರಾಯಕ್ಕೆ ತಕ್ಕಂತೆ ಅವರು ನಡಸಿರುವ ಉಪನ್ಯಾಸಗಳನ್ನು ಪರಾಂಬರಿಸಿ ಅಭಿಪ್ರಾಯಕ್ಕನುಸಾರವಾದ ವಿಷಯಗಳನ್ನು ಚುನಾಯಿಸಿಕೊಂಡು ಸಣ್ಣದಾದ ಪಾರ್ನ್ ಪುಸ್ತಕವಾಗಿ ಏರ್ಪಾಟನ್ನಡಿಸಿಕೊಂಡು ಪ್ರಚಾರಕ್ಕೆ ತಂದರೆ ಮಹಾಸಭಾದವರ ಮನಸ್ಸು ತೃಪ್ತಿಗೂ ಭಾಜನವಾಗುತ್ತದಲ್ಲದೆ ವೀರಶೈವ ಮತೋದ್ಧಾರಕರೆಂಬ ಬಿರುದು ಚಿತ್ರಪ್ರಕಾಶಕ್ಕೆ ಬರಲು ಹೆಚ್ಚು ಅವಕಾಶಕೊಟ್ಟಂತೆ ಆಗುತ್ತೆ. ಸಮಸ್ತ ಭಕ್ತವೃಂದಕ್ಕೆ ಜ್ಞಾನವನ್ನು ಸನ್ಮಾನವನ್ನು ತೋರಿಸುವ ಮಹಾಕಾರ್ಯಕ್ಕೆ ಮನಗೊಡದ ವಿನಹಾ ಸಮಾಜಸುಧಾರಣೆ ಎಂದಿಗೂ ಆಗಲಾರದು. ಅಲ್ಲಲ್ಲಿ ಒಂದೊಂದು ಸ್ಥಾನದಲ್ಲಿ ಪ್ರಾಂತಿಕಸಭಾ ಮೊದಲಾದವುಗಳನ್ನು ಏರ್ಪಡಿಸಿಕೊಂಡು ಸಮಾಜಸುಧಾರಣೆಗೆ ಪ್ರಯತ್ನಿಸಿದರೆ ಈ ಹಿಂದೆ ನಡೆದ ಮಹಾಸಭಾ ಪ್ರಾಂತಿಕಸಭಾ ಇವುಗಳಲ್ಲಿ ಮಾಡಿದ ವಿಷಯಗಳಲ್ಲಿ ಯಾವುದು ಪ್ರಚಾರಕ್ಕೆ ಬಂತು? ಯಾನೊಂದು ನಡಿಯಲಿಲ್ಲ. ಯಾತಕ್ಕೆ ಸುಮ್ಮನೆ ಸಭಾಗಳನ್ನು ಮಾಡಬೇಕೆಂದು ಅನೇಕ ಜನರು ಅಂದುಕೊಳ್ಳುತ್ತಾ ಇರುವರು. ಇದಕ್ಕೆ ಸಾಕ್ಷಿ ೧ನೆಯ ತೊಗರ್ಸಿಯಲ್ಲಿ ಪ್ರಾಂತಿಕಸಭಾ ಮಾಡಿದರು. ಕೆಳದಿಯಲ್ಲಿ ಒಂದು ಪ್ರಾಂತಿಕಸಭಾ ಮಾಡಿದರು. ಶಿರಾಳಕೊಪ್ಪದಲ್ಲಿ ಪ್ರಾಂತಿಕಸಭಾ ಮಾಡಿದರು. ಇವುಗಳಲ್ಲಿ ತೆರಾ ತೆಗೆದುಕೊಳ್ಳಕೂಡದೆಂದು ಪ್ರಚಾರಪಡಿಸಿದರು. ಮದವಣಿಗರು ಲಗ್ನಕಾಲದಲ್ಲಿ ಪಲ್ಲಕ್ಕಿ ಅಥವ ದಂಡಿಗೆ ಹತ್ತಕೂಡದೆಂದು ವಿಧಿಸಿದರು. ಇವುಗಳಲ್ಲೊಂದೂ ಆಚರಣೆಗೆ ಬರಲಿಲ್ಲ. ಆದ್ದರಿಂದ ಜನರಿಗೆ ನಿರ್ಬಂಧವಿಲ್ಲದೆ ಯಾವಕಾರ್ಯವು ನೆರವೇರುವದಿಲ್ಲವಾಗಿ ತೋರುತ್ತೆ. ಸಮಾಜೋನ್ನತಿಯ ಕೆಲಸವು ಸ್ವಂತ ಕೆಲಸವೆಂದು ತಿಳಿದು ಹಗಲು ಇರಳು ಚಿಂತನಮಾಡುತಿದ್ದು ಯೋಗ್ಯಕಂಡ ಸುಧಾರಣೆಗಳನ್ನು ದೃಢನಿಶ್ಚಯದಿಂದ ವೆವಹಾರದಲ್ಲಿ ತರುತ್ತಾ ಹೋಗುವಲ್ಲಿ ನಮ್ಮ ವೀರಶೈವ ಸಮಾಜವು ಸ್ವಲ್ಪ ದಿವಸದಲ್ಲಿ ಉನ್ನತಸ್ಥಿತಿಗೆ ಬರುವದಕ್ಕೆ ಸಂದೇಹವಿಲ್ಲ. ಈ ಕೆಲಸವು ಅಂತಿಂಥವರಿಂದ ಆಗತಕ್ಕದ್ದಲ್ಲ ಸನ್ನಿಧಿಯಿಂದಲೇ ಜಾರಿಗೆ ಬರತಕ್ಕದ್ದೆಂದು ಹೇಳಿ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ. (ಸಶೇಷ.)

ವಿವೇಕಮಂಜರಿ

7 ೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ.

೧ ನೆಯ ಭಾಗ ೨ ಆಣೆ ೧೧೦ ಪುಟಗಳು.
೨ ನೆಯ ಭಾಗ ೩ ಆಣೆ ೧೩೦ ಪುಟಗಳು.
ಅಂಚೆಯವೆಚ್ಚ ಬೇರೆ.

ವಿಳಾಸ— "ಮೈಸೂರ್ ಸ್ಟಾರಾಫೀಸ್" ಮೈಸೂರ್.

ಖಂಡಿತ ಅನೇಕ ಮಹಾರಾಜರಿಂದ ಬಹುಮಾನಪಡೆದ

ಎಂ. ಆರ್. ಸುಬ್ಬಾಜೆಟ್ಟಪ್ಪನವರ

ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

ಕೇಸರವಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ ಅಲ್ಲದೆ ಮಿದುಳಿಗೆ ಬಹು ತಂಪಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನಾನಂದಪಡಿಸುತ್ತದೆ. ಇದರ ಬೆಲೆ ಸೀಸೆ ೧ಕ್ಕೆ ೦-೮-೦.

	ರೂ.		ರೂ.
ಅಂಬರ್‌ಬತ್ತಿ ಸೇರ೧ಕ್ಕೆ	೬	ಕಸ್ತೂರಿಮಲ್ಲಿ ತೋಲ೧ಕ್ಕೆ	೨
ಅಂಬರ್‌ಬತ್ತಿ "	೪॥	ಜವಾಜಿಮಲ್ಲಿ "	೧
ಕಸ್ತೂರಿಬತ್ತಿ "	೨॥	ಅರಗಜ "	೧
ಪುನಗುಬತ್ತಿ "	೧	ಸುರಂಗಿಸೆಂಟ್ ಸೀ೧ಕ್ಕೆ	೧
ಗುಲಾಬಿಬತ್ತಿ "	॥	ಮಾಲತಿಸೆಂಟ್ "	|||

ಎಂ. ಆರ್. ಸುಬ್ಬಾಜಟ್ಟಪ್ಪ,
ಕೃಷ್ಣರಾಜ ಮೊಹಲ್ಲಾ ಮೈಸೂರ್.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೩—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮಾರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

31

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧—೪—೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅದಕೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್‌ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಷಟ್‌ಸ್ಥಲಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತದೆ.

ಶಿವಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

41

(೧) ಕಾಗದ—ದಪ್ಪ, ಬಿಳುಪು, ನುಣುಪಾದ್ದು. (೨) ಬೈಂಡು—ನುಣುಪಾದ [illegible] ಎಂಬ ಬಟ್ಟೆಯಿಂದ ಮುಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಪಷ್ಟವಾದ್ದು. ಮುಂತ್ರಗಳಲ್ಲಿ ಮುದ್ರಣವಾದ್ದು. (೪) ಕಾಲು—ಪ್ರತಿಪುಟಕ್ಕೂ ಪಾಠಕರಿಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೩ ಆಣೆ. ಬಿ. ಚಿಕ್ಕದು ಸೀಸದಕಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

28 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

8 ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯರವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦—೧೦—೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ-ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾದಿಫಲಭಾವಕುಂಡಲಿ ಅಷ್ಟಕವರ್ಗ ಪಿಂಡಶೋಧನೆ ತ್ರಯೋದಶಿವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥಾಭಸ್ಮಸರಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾದಿ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೩೦-೪೦ ಹಾಳೆಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ಕ್ಕೆ ಕ್ರಯ ರೂ ೧—೦—೦.

ಪ್ರಶ್ನಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವದು [illegible] ಯುಕ್ತರುವರು. ಕಾರಣ ಪ್ರತಿಯೊಬ್ಬರು ಅಂದಾಜು ತಮ್ಮ ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನೆವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನೆವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರವಿಗು ಬರೆದು ಕಳಿಸುತ್ತೇವೆ. ಪ್ರಶ್ನಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂಧದಿನದಿಂದ ಮುಂದುವರಿಯುವ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ೧ಕ್ಕೆ ಕ್ರಯ ರು ೧-೦-೦.

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಚಿತವಾಗಿ ಕೊಡುತ್ತೇವೆ. ಪ್ರಶ್ನಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತ ಯಿರುತ್ತೆ.

ನಮ್ಮ ವಿಳಾಸ:—
ಯಾರ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

5 ಬರುವ ಮೆ ತಿಂಗಳು ಆಖೈರು ವರೆಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಭಿನಮಂತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲಿವರ್ ಕೇಸಿನಿಂದ ತಯಾರಾದದ್ದು. ವಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಬಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ. (3) [illegible] (4) ಲಿವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯದ ಸೀಸೆ (5) ಪೋಲ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಸಾವಂತಿಗೆ ಹುವು. (9) ಫೌಂಟನ್ ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವಿನ ಡಬ್ಬ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾಗಿ ಹಾವು ಇರುತ್ತದೆ) (12) ಷರ್ಟ್ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಪೋಸ್ಟ್ ವೆಂಕಟಾಚಲಯ್ಯರ್ ಬೀದಿ,
ಮದ್ರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಿಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨–೪–೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧–೩–೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦–೮–೦ ಆಣೆಯಂತೆ ಕಳುಹಬೇಕು. ಕ್ಲಿಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧–೦–೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

27

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೋದ್ದೀಪ್ತಿಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧–೧೨–೦ ರೂ. ೨ ಬಾ, ೨–೧೨–೦ ರೂ. ೩ ಬಾ, ೩–೧೪–೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಪಚ್ಚಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

8

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

48

ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ॥) ರಾಜಮನ್ನಾರುನಾಯುಡು, ಶ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ॥) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ ವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಶಾ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬ್ಲಾಕ
ಮೈಸೂರು.

82

ಗೋರೋಚನ ಮಾತ್ರೆ.— ೧–೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತವೆ. ೩೦–೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦–೩–೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦–೪–೦, ೨೪ ಮಾತ್ರೆ ಸೀಸೆ ೦–೮–೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧–೦–೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦–೪–೦. ತೊಲೆ ೧ ಕ್ಕೆ ೧–೮–೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦–೪–೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧–೮–೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪–೦–೦. ೧೨ ದಿನಗಳ ಔಷಧಿ ೨–೦–೦.

ಸುಖಭೇದಿ ಮಾತ್ರೆ.— ೧–೨ ಮಾತ್ರೆಗಳನ್ನು ಸೇವಿಸುವುದರಿಂದ ೩–೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦–೬–೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦–೮–೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦–೪–೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨–೦–೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧–೦–೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦–೮–೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦–೧೨–೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦–೩–೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ನೆಯ ಇಸವಿ ಮಾರ್ಚಿ ತಾ॥ ೨೫ ರಿಂದ ೧೯೧೨ನೆಯ ಮಾರ್ಚಿ ತಾ॥ ೩೧ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ಚೈತ್ರ ಶು॥ ಸಪ್ತಮಿಯಿಂದ ಚೈತ್ರ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾನ ತೇದಿ
25	[1] ಸೋ	ಸ	34-13	ಮೃಗ	36-56	13
26	[2] ಮಂಗ	ಅ	28-28	ಆರಿದ್ರ	32-32	14
27	[3] ಬುಧ	ನ	22-26	ಪುನ	28 23	15
28	[4] ಗುರು	ದ	16-19	ಪುಷ್ಯ	24-8	16
29	[5] ಶುಕ್ರ	ಏ	10-28	ಆಶ್ಲೇ	20-9	17
30	[6] ಶನಿ	ದ್ವಾ	5-8	ಉಪರಿ	55-38	18
31	[7] ಭಾನು	ಚ	55-16	ಪುಬ್ಬ	13-35	19

(1) ಸಂತಾನಸಪ್ತಮಿ. (2) ಅಶೋಕಾಷ್ಟಮಿ. (3) ಚಾಂದ್ರ ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠಸ್ವಾಮೀ ಉತ್ಸವಃ. (4) ಏಕಾದಶೀ ತಿಥಿಃ, ಮೇಲುಕೋಟೆಯಲ್ಲಿ ವೈರಮುಡೀ ಉತ್ಸವಃ. (5) ಸರ್ವತ್ರೈಕಾದಶಿ. (6) ಅನಂಗತ್ರಯೋದಶಿ, ಪ್ರದೋಷಃ, ಶ್ರೀಕಂಠೇಶ್ವರರಥಃ, ತಿರುಕೂಡಲ್ಲಿ ಅಗಸ್ತ್ಯೇಶ್ವರ ರಥಃ, ತಲಕಾಡು ವೈದ್ಯೇಶ್ವರ ರಥಃ. (7) ಮೇಲುಕೋಟೆಯಲ್ಲಿ ಚೆಲುವರಾಯಸ್ವಾಮಿರಥಃ, ಮಾಗಡಿ ರಂಗನಾಥಸ್ವಾಮಿ ರಥಃ, ನರಸೀಪುರದಲ್ಲಿ ಪ್ರಹ್ಲಾದೋತ್ಸವಃ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಠ್ಯಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ,
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿಯಂ ಸದಾಪ್ರೋರಿಗೆ ಗೌರೀಶಾನುಕಂಪೋಜ್ಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಏಪ್ರಿಲ್ ತಾರೀಖು ೧ ನೆಯ ಸೋಮವಾರ. [ಸಂಚಿಕೆ ೧೪

9 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ

ದೊಡ್ಡ ಪೋಸ್ಟ್ ಕಾರ್ಡುಗಳನ್ನು {
ನಂ.........
ಮಹಾರಾಜಶ್ರೀ.................................ಸಾಹೇ
....ಮಾನ್ಯರಿಗೆ
............ಅದಾಗಿ ಈವರಿಗೆ ಉಭಯಕುಶಲೋಪರಿಸಾಂ
} ಎಂಬದಾಗಿ ಮೇಲು

ಬಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦–೪–೦. ವಿ. ಪಿ. ಮೂಲಕ ೦–೬–೦. ೧೦೦೦ ಕ್ಕೆ ೨–೦–೦. ೧೦೦೦ ಗಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆಬೀಳುವುದು. ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೂಪರ್ ಬಹುಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೂಪರ್ ಇನಾಮು ಕೊಡಲಾಗುತ್ತೆ.

ರಕಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಜಾಟಲ್‌ವರ್ಕ ಡ್ರೈಕ್‌ವಾಚ್.



(2) ಕ್ಯಾಲೆಂಡರ್ ವಾಚ್.



(3) ಗರ್‌ಟೈಂ ರೈಲ್ವೆ ರೆಗ್ಯುಲೇಟರ್ ವಾಚ್.



(4) ಹ್ಯುಟ್ ಕೇಸ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ಬೆಲೆ:— (1) ಜಾಟಲ್‌ವರ್ಕ ಡ್ರೈಕ್ ವಾಚೆಂಬ ಗ್ಯಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತದೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮–೮–೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩–೮–೦. (2) ಕ್ಯಾಲೆಂಡರ್ ವಾಚ್– ಇದು ಟೈಂ ತಾರೀಖು ತೋರಿಸುತ್ತದೆ. ೫–೧೨–೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮಾ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದರೆ ಅದರೆ ತನ್ನ ಸಂಗಡ ಒಬ್ಬ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೨–೪–೦ ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೩–೪–೦. (3) ಗರ್‌ಟೈಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್– ಇದು ಗೌರ್ನಮೆಂಟ್ ಗಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩–೮–೦. (4) ಹ್ಯುಟ್ ಕೇಸ್ ಕೀ ವಾಚ್– ವಾರಕ್ಕೊಂದಾವೃತ್ತಿ ಬೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦–೮–೦. ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೫–೪–೦. (5) ಪಿಕ್ಚರ್ಸ್ ವಾಚ್– ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಪುನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ಕಳುಹಿಸುತ್ತೇವೆ. ೧ ಕ್ಕೆ ೬–೮–೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತದೆ. ವಾಚ್ ೧ಕ್ಕೆ ೨–೮–೦. ಕಾಗದ ಬರೆಯತಕ್ಕವರು ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದ್ದು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಜನರಲ್‌ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ, ಮೈಸೂರು.

5

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು। ಸೇರೊಂದಕ್ಕೆ ೧೨–೦–೦; ೫–೦–೦; ೩–೦–೦; ೨–೮–೦; ೧–೪–೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧–೦–೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್‌ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦–೧೦–೦
ಪರವಾದಿಗಜಾಂಕುಶತಾರಾವಳಿ	೦–೮–೦
ಚಾರುಶೀಲೆ ಚರಿತ್ರೆ	೦–೫–೦
ಸಟೀಕಕರ್ನಾಟಕಶಬ್ದಮಂಜರಿ	೦–೪–೦
ಸಟೀಕನಂದೀವ್ರತ	೦–೪–೦
ಸಟೀಕ ವಿವಾಹವಿಧಿ	೦–೬–೦
ವ್ರತಪಂಚಕ	೦–೨–೦
ವಿವೇಕಮಂಜರಿ	೦–೨–೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦–೨–೦
ಗುರುಶಂಕರೇಶ್ವರಶತಕಂ	೦–೧–೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

32

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧–೪–೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.– ೧–೮–೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.– ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧–೩–೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.– ೧–೩–೦. ವೀರಶೈವ ಮತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.– ೧–೩–೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.– ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.– ಜ್ಞಾನದೀಕ್ಷೆಗಳ [illegible] ಮೋಕ್ಷವು ದೀಕ್ಷೆಯಿಂದಲ್ಲವೆಂಬ ಸಂಗತಿಯು [illegible]ವಾಗಿ ವಿವರಿಸಲ್ಪಟ್ಟಿದೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.– ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.–೨ ಆಣೆ. ಶಂಕರಲಿಂಗ ಶತಕಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.– [illegible] ವೀರಶೈವ ಗ್ರಂಥಗಳನ್ನು ಪ್ರಕಟಿಸುವ [illegible] ೮೦ ಪುಟಗಳು ಬರುವುವು. ವಾರ್ಷಿಕ ಬೆಲೆ ೨–[illegible]

ಎಸ್. ಆರ್. ಶಿವಲಿಂಗಸ್ವಾಮಿ,
ಗ್ರಂಥಪ್ರಕಾಶಕ [illegible], ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತವೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಸ್ವಲ್ಪ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

27

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಕೆ ಯೋಗ್ಯವಾದ ಧಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮೆಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಸಿಜೂರ್ಣವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ದಾರವಾಡ ಮತ್ತು ಮಿರಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ ಮೈಸೂರು.

82

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು, ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಡುವವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ನೆಯ ಇಸವಿ ಮಾರ್ಚಿ ತಾ॥ ೨೫ ರಿಂದ ೧೯೧೨ನೆಯ ಮಾರ್ಚಿ ತಾ॥೩೧ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ಚೈತ್ರ ಶು॥ ಸಪ್ತಮಿಯಿಂದ ಚೈತ್ರ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ತೇದಿ
25	[1]ಸೋ	ಸ	34-13	ಮೃಗ	36-56	13
26	[2]ಮಂಗ	ಅ	28-28	ಆರಿದ್ರ	32-32	14
27	[3]ಬುಧ	ನ	22-26	ಪುನ	28-23	15
28	[4]ಗುರು	ದ	16-19	ಪುಷ್ಯ	24-8	16
29	[5]ಶುಕ್ರ	ಏ	10-28	ಆಶ್ಲೇ	20-9	17
30	[6]ಶನಿ	ದ್ವಾ	5-8	ಉಪರಿ	55-38	18
31	[7]ಭಾನು	ಚ	55-16	ಪುಬ್ಬ	13-35	19

(1) ಸಂತಾನಸಪ್ತಮಿ. (2) ಅಶೋಕಾಷ್ಟಮಿ. (3) ಚಾಂದ್ರ ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠಮುಡೀ ಉತ್ಸವ. (4) ಏಕಾದಶೀ ತಿಥಿ, ಮೇಲುಕೋಟೆಯಲ್ಲಿ ವೈರಮುಡೀ ಉತ್ಸವ. (5) ಸರ್ವತ್ರೈಕಾದಶಿ. (6) ಅನಂಗತ್ರಯೋದಶಿ, ಪ್ರದೋಷ, ಶ್ರೀಕಂಠೇಶ್ವರರಥ, ತಿರುಮಕೂಡ್ಲು ಅಗಸ್ತ್ಯೇಶ್ವರ ರಥ, ತಲಕಾಡು ವೈದ್ಯೇಶ್ವರ ರಥ. (7) ಮೇಲುಕೋಟೆಯಲ್ಲಿ ಚಲುವರಾಯಸ್ವಾಮಿರಥ, ಮಾಗಡಿ ರಂಗನಾಥಸ್ವಾಮಿ ರಥ, ನರಸೀಪುರದಲ್ಲಿ ಪ್ರಹ್ಲಾದೋತ್ಸವ.

ಮೈಸೂರ್: ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

8

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

48



ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಹೆಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಶ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವಾರ್ಡ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮವೈದ್ಯಶಾಲಾ,
ಮೈಸೂರು.

REGISTERED NO. M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷಜ್ಞಾನ ಹೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ,
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ಸರ್ಗ ೧೯೧೨ ನೆಯ ಇಸವಿ ಏಪ್ರಿಲ್ ತಾರೀಖು ೧ ನೆಯ ಸೋಮವಾರ. [ಸಂಚಿಕೆ ೧೪

9 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ ದೊಡ್ಡ ಪೋಸ್ಟ್ ಕಾರ್ಡುಗಳನ್ನು

ನಂ.........
ಮಹಾರಾಜಶ್ರೀ.................................ಸೌಕ್ಯ
....ಮಾನ್ಯ
............ಅದಾಗಿ ಈವರಿಗೆ ಉಭಯಕುಶಲೋಪರಿಸಾಂ॥

ಎಂಬದಾಗಿ ಮೇಲುಭಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦-೪-೦. ವಿ. ಪಿ. ಮೂಲಕ ೦-೩-೦. ೧೦೦೦ ಕ್ಕೆ ೨-೦-೦. ೧೦೦೦ ಗಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆಬೀಳುವುದು. ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೂಪರ್ಣ ಬಹುಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೂಪರ್ಣ ಇನಾಮು ಕೊಡಲಾಗುತ್ತೆ.

ರಖಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಜಟಲ್‌ವರ್ಥ ತ್ರೀವಾಚ್.



(2) ಕ್ಯಾಲೆಂಡರ್‌ವಾಚ್.



(3) ಗರ್ಟೈಂ ರೈಲ್ವೆ ರೆಗ್ಯುಲೇಟರ್‌ವಾಚ್.



(4) ಯೈಟ್ ಡೇಸ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ಬೆಲೆ:— (1) ಜಟಲ್‌ವರ್ಥ ತ್ರೀ ವಾಚೆಂಬ ಗ್ಯಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ, ಬಹಳ ಬಾಳಿಕೆ ಬರುತ್ತದೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮-೮-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೮-೦. (2) ಕ್ಯಾಲೆಂಡರ್ ವಾಚ್- ಇದು ಟೈಂ ತಾರೀಖು ತೋರಿಸುತ್ತದೆ. ೫-೧೨-೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮೆ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದರೆ ಅದರ ತನ್ನ ಸಂಗಡ ಒಬ್ಬ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ [illegible] ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೩-೪-೦. (3) ಗರ್ಟೈಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್- ಇದು ಗೌರ್ನಮೆಂಟ್ ಗಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩-೮-೦. (4) ಯೈಟ್ ಡೇಸ್ ಕೀ ವಾಚ್- ವಾರಕ್ಕೊಂದಾವೃತ್ತಿ ಬೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೮-೦. ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೫-೪-೦. (5) ಪಿಕ್ಚರ್ಸ್ ವಾಚ್- ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ [illegible] ಪಿಕ್ಚರ್ ಯಾವುದನ್ನಾದರೂ ರವಾನಿಸುತ್ತೇವೆ. ೧ ಕ್ಕೆ ೩-೮-೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತದೆ. ವಾಚ್ ೧ಕ್ಕೆ ೨-೮-೦. ಕಾಗದ ಬರೆಯುತಕ್ಕವರು ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್‌ಮರ್ಚೆಂಟ್ಸ್ ಕೃಷ್ಣರಾಜಬೋಲೆವಾರ್ಡ್, ಮೈಸೂರು.

5

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು।ಸೇರೊಂದಕ್ಕೆ ೧೨-೦-೦, ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ಮೈಸೂರ್‌ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

32

ಬಸವರಾಜವಿಜಯಂ.- ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.- ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.- ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.- ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.- ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.- ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.- ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ.

ಸಟೀಕ ದೀಕ್ಷಾವಿಧಿ- ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೨ ಆಣೆ.

ಸ್ತುತಿ ಮುಕ್ತಾವಳಿ.- ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೩ ಆಣೆ.

ರಕ್ಷಾಶತಕಂ.-೨ ಆಣೆ. ಶಂಕರಲಿಂಗ ಶತಕಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.- ಅತ್ಯುತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೮೦ ಪುಟಗಳು ಬರುವುವು. ವರ್ಷಕ್ಕೆ ಬೆಲೆ ೨-೦-೦.

ಎಸ್. ಆರ್. [illegible]
ಗ್ರಂಥಪ್ರಕಾಶಕರು, [illegible], ಮೈಸೂರು.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಅಕ್ಷಯಬತ್ತಳಿಕೆಯಿಂದ ಅನೇಕ ಬಾಣಂಗಳಂ ತೆಗೆದು ಸುರಿಯುತ್ತಿರ್ದಂತೆ. ಮಳೆಗರೆದಂತೆ ಯಾತೆಬಿಡದೆ ಘೋರಿಂದು ಬಾಣಂಗಳಂ ಬೀರಲಾ ಬಾಣಂಗಳು ಒಂದಕ್ಕೆ ನೂರಾಗಿ, ನೂರಕ್ಕೆ ಸಾವಿರವಾಗಿ, ಸಾವಿರಕ್ಕೆ ಲಕ್ಷವಾಗಿ, ಲಕ್ಷಕ್ಕೆ ಕೋಟಿಯಾಗಿ, ಕೋಟಿಗೆ ಅರ್ಬುದವಾಗಿ, ಅರ್ಬುದಕ್ಕೆ ಅನಂತಾನಂತಗಳಾಗಿ ಆ ರಾಕ್ಷಸರ ಸೇನೆಗಳೆಲ್ಲವಂ ನಿಮಿಷದೊಳ್ ರೂಪುರಹಿತವಾಗಿ ಮಾಡಿ,ಬಳಿಕ ಸಕಲಲೋಕಂಗಳಿಂದಲೂ ಸರ್ವಜನಂಗಳಿಂದಲೂ,ಸರ್ವಾಸ್ತ್ರಪ್ರಕಾರಂಗಳಿಂದಲೂ ಅತ್ಯಂತ ಶ್ಲಾಘನೀಯವಾದ ತನ್ನ ಪರಾಕ್ರಮವಿಶೇಷದಿಂದ ತಾನೇ ವಿಸ್ಮಯವಿಶಿಷ್ಟನಾಗಿ ಮತ್ತೂ ನಿರ್ಭಯವಾಗಿ ಇದಿರಾಗಿ ಬಂದು ನಿಂತು ಯುದ್ಧವಂ ಮಾಡುವರಿಲ್ಲದಿದ್ದುದರಿಂದ ಧನುರ್ಧಾರಿ ಅದರಕೊನೆಯೊಳ್ ಗಲ್ಲವಂ ಇಟ್ಟು ಇನ್ನೂ ಬಂದವರೆಲ್ಲ ಬರಲಿ ನೋಡುವೆನೆಂದು ಕಾಳಗಕ್ಕೆ ಕಾಲ್ಕೆರೆಯುತ ನಿಂತಿರಲು,ಆಗ ಜಂಘಾಮಾರುತನು ತನ್ನ ಮಂತ್ರಿಯಾದ ವಜ್ರದಂಷ್ಟ್ರನಂನೋಡಿ ಎಲೈ ಮಂತ್ರಿಯೆ! ಮನುಷ್ಯರೆಂದರೇನು? ಬಲಿಷ್ಠರಾದ ರಾಕ್ಷಸರಂ ಕ್ಷಣಮಾತ್ರದಲ್ಲಿ ಸಂಹರಿಸು ಸುಮ್ಮನೆ ನಿಂತಿರುವುದೆಂದರೇನು? ಈ ಆಶ್ಚರ್ಯವನ್ನು ನೋಡಿದೆಯಾ! ಬ್ರಹ್ಮನು ಮನುಷ್ಯರಂ ನಮಗೆ ಆಹಾರವಾಗಿ ನಿರ್ಮಿಸಿರುವಾಗ, ಈ ಮಾನವನು ರಾಕ್ಷಸರನ್ನೇ ಸಂಹರಿಸುವನು. ಇದೇನು ದುಷ್ಕಾಲವೆಂದು ಹೇಳಲಾಗ ವಜ್ರದಂಷ್ಟ್ರನು ತನ್ನ ಅರಸಿನ ಮಾತಂ ಕೇಳಿ, ಎಲೈ ರಾಕ್ಷಸಾಧಿಪತಿಯೆ! ಕೇಳು—ಮನುಷ್ಯರು ಈ ಅಶಕ್ಯವಾದ ಸ್ಥಿತಿಗಳಿಗೆ ಬರುವದೆಂದರೇನು? ರಾಕ್ಷಸರಂ ಸಂಹರಿಸುವುದೆಂದರೇನು? ಈತನು ಕೇವಲ ಮನುಷ್ಯಮಾತ್ರನಾಗಿ ತೋರ್ಪುದಿಲ್ಲ. ಪೂರ್ವದೊಳ್ಳನೊಂದು ಮಾತಂ ಕೇಳಿದ್ದೆನು. ಅದೇನೆಂದರೆ— ದೂರ್ವಾಸಮುನಿಯ ಶಾಪದಿಂದ ಇಂದ್ರನೇ ಭೂಲೋಕದಲ್ಲಿ ಪುಟ್ಟಿರುವನಂತೆ; ಇಂತಲ್ಲದೇ ಪ್ಲಕ್ಷದ್ವೀಪಾಧಿಪತಿಯಾದ ಉಗ್ರಬಾಹುವಂ ಓರ್ವ ಮನುಷ್ಯನು ಬಂದು ಯುದ್ಧದೊಳ್ ಸಂಹರಿಸಿದನಂತೆ. ಈ ವರ್ತಮಾನವೆಲ್ಲವಂ ನೀನು ಕೇಳಿಯೇ ಇರುವೆ. ಈಗಲೂ ಈ ಮನುಷ್ಯನು ಅತನೇ ಆಗಿರಬಹುದೆಂದು ನನ್ನ ಮನಸ್ಸಿಗೆ ತೋರುತಲಿದೆ. ಆ ಉಗ್ರಬಾಹುವು ಯುದ್ಧಮಾಡುವ ಕಾಲದೊಳ್ ನೋಡಿ ಬಂದ ಒಬ್ಬ ಚಾರನು ನಮ್ಮ ಸೇನೆಯೊಳಿರುವನು. ಅವನಂ ಕರೆಯಿಸಿ ವಿಚಾರಿಸಬೇಕೆಂದು ವಿಜ್ಞಾಪನೆಯಂ ಗೈಯಲು, ಆ ಕ್ಷಣದಲ್ಲಿಯೇ ಜಂಘಾಮಾರುತನು ಉಗ್ರಬಾಹುವಿನ ಯುದ್ಧವಂ ಕಂಡು ಬಂದು ತಮ್ಮ ಸೇನೆಯೊಳ್ ಸೇರಿದ್ದ ಶಾರ್ದೂಲಮುಖನೆಂಬ ಚಾರನಂ ಕರೆದು ಕೇಳಲು, ಆ ಚಾರನು— ಎಲೈ ರಾಕ್ಷಸರಾಯನೆ! ಈ ರಾಜಪುತ್ರನೇ ಪ್ಲಕ್ಷದ್ವೀಪಕ್ಕೆ ಬಂದು ಉಗ್ರಬಾಹುವಂ ನಿಗ್ರಹಿಸಿದನು. ನಾನು ಕಂಡು ಇರುವೆನು ಎಂದು ನುಡಿಯಲು, ಆ ಮಾತಂ ಕೇಳಿ ವಜ್ರದಂಷ್ಟ್ರನು— ಎಲೈ ಪ್ರಭುವೆ! ಈಗ ಈ ರಾಜಕುಮಾರನೊಡನೆ ಯುದ್ಧವಂ ಮಾಡುವುದು ಯುಕ್ತವಾಗಿ ತೋರುವುದಿಲ್ಲ. ಆ ಉಗ್ರಬಾಹುವು ನಮ್ಮ ಸೈನ್ಯಕ್ಕೆ ನೂರುಮಡಿಯಾದ ಸೇನೆಯಿಂದೊಡಗೂಡಿ ನಿನಗಿಂತಲೂ ಸಾವಿರಮಡಿ ಹೆಚ್ಚಾದ ಬಾಹುಬಲವುಳ್ಳವನಾಗಿದ್ದ ಪ್ಲಕ್ಷದ್ವೀಪವನ್ನೇ ಸ್ವಾಧೀನವಂ ಮಾಡಿಕೊಂಡು ತನ್ನ ಮನೆಯೊಳಿರಿಸಿಕೊಂಡಿದ್ದನು. ಅಂತಹವನನ್ನೇ ಸಂಹರಿಸಿರುವಲ್ಲಿ ನಿನ್ನಂ ಲಕ್ಷ್ಯಕ್ಕೆ ತರುವವನಾಗಿ ತೋರುವುದಿಲ್ಲ. ಇಂತಲ್ಲದೆ ಯಾರಿಗೂ ಪ್ರವೇಶಕ್ಕೆ ಅಶಕ್ಯವಾದ ವಜ್ರಪುರಿಯಂ, ಇದರ ಆವರಣಂಗಳಂ ಸಹಾ ಸಾಧಿಸಿದವನಿಗೆ ಇನ್ನಾವುದು ಅಶಕ್ಯವಾಗಿರುವುದು? ಆದುದರಿಂದ ಈ ರಾಜಕುಮಾರನು ಬಂದಿರುವ ಕಾರ್ಯವಂ ವಿಚಾರಿಸಿ ಅವನ ಮನವಿದ್ದಂತೆ ನಡೆದುಕೊಂಡರೆ ನಮಗೆ ಕ್ಷೇಮವಾಗುವುದು. ಇಲ್ಲದಿದ್ದರೆ ಏನಾಗುವುದೋ ನಾನರಿಯೆನೆಂದು ನುಡಿದು ಸಮೀಪಕ್ಕೆ ಬಂದು ನನ್ನಂ ಕಳುಹಿದರೆ ಅವನೊಡನೆ ಮಾತನಾಡಿ ಸಂಧಿಯಂ ಮಾಡಿಕೊಂಡು ಬರುವೆನು ಎಂದು ಹೇಳಲಾ ಮಾತಂ ಕೇಳಿ ಜಂಘಾಮಾರುತನು ಉರಿಯುವ ಬೆಂಕಿಗೆ ತುಪ್ಪವಂ ಸುರಿದಂತೆ, ಆನೆಯಂ ಹಿಡಿದಿರುವ ಸಿಂಹವಂ ಮೈದಡವಿದಂತೆ, ಹಸಿದು ಮಲಗಿರುವ ಹುಲಿಯಂ ತಲೆದೆಸೆಯೊಳ್ ನಿಂತು ಒದ್ದಂತೆ, ಹರಿಯುವ ಹಾವಂ ಕೋಲಿನಿಂದಬಡಿದು ಬಾಲವಂ ಕೈಯಿಂದ ಹಿಡಿದಂತೆ, ಕೋಪವಂ ತಾಳಿ ಕಣ್ಣುಗಳಿಂದ ಉದುರುವ ಕಿಡಿಗಳಿಂದ ಲೋಕವನ್ನೇ ಸುಡುವನೋ ಎಂಬಂತೆ ತೋರುತ, ಮತ್ತೂ ಎಲೈ ರಾಕ್ಷಸಾಧಮನೇ! ಕೇಳು ಆ ಉಗ್ರಬಾಹುವು ನನ್ನ ಪರಾಕ್ರಮಕ್ಕೆ ಇದಿರಾಗಿ ನಿಲ್ಲಲಾರದೆ ಪಾತಾಳಲೋಕದೊಳ್ ಮನೆಯಂ ಮಾಡಿಕೊಂಡಿದ್ದು ನಿನ್ನೆಮೊನ್ನೆ ಪ್ಲಕ್ಷದ್ವೀಪದ ಪಾಳುಭೂಮಿಯೊಳ್ ನಾನೂ ಓರ್ವ ಧೊರೆ ಎಂದು ಕುಣಿದಾಡುತ್ತಿದ್ದನು. ಅವನು ರಾಕ್ಷಸರೊಳಗಾಗಿ ಅಧಮನು. ಅಂತಹವನು ನನಗೆ ಸಮಾನನಾಗುವನೇ? ಆ ದುರ್ಬಲನಂ ಸಂಹರಿಸಿದ ಮಾತ್ರದಿಂದಲೇ ಈ ನರಾಧಮನು ಬಹು ಪರಾಕ್ರಮವಂತನಾಗುವನೇ? ಈ ದುಷ್ಟನನ್ನೀಗಲೇ ಸಂಹರಿಸಿ ಬಳಿಕ ನಿನ್ನ ತಲೆಯಂ ಚಂಡಾಡುವೆನು, ಮತ್ತೂ ನೀನು ಈ ನರಾಧಮನ ಮರೆಯಂ ಪೊಕ್ಕು ಪ್ರಾಣವಂ ಉಳುಹಿಸಿಕೊಂಡು ಬದುಕಬೇಕೆಂಬ ಭಾವವು ನಿನ್ನ ಮಾತಿನಿಂದಲೇ ತೋರುತಲಿದೆ. ಉಗ್ರಬಾಹುವಿನ ವೃತ್ತಾಂತವಂ ಚಾರನಮುಖದಿಂದ ನೀನೇ ತಿಳುಹಿಸಿದಂತೆ ತೋರುತಲಿದೆ. ನಮ್ಮ ರಾಕ್ಷಸಜನಂಗಳ ಸ್ವರೂಪವೇ ಇಷ್ಟೆಂದು ಪೇಳುತ, ನೀನು ಅನೇಕ ದಿವಸಗಳಿಂದ ನನ್ನಲ್ಲಿದ್ದವನಾದಕಾರಣ ನಿನ್ನಂ ಸಂಹರಿಸದೆ ಪ್ರಾಣಮಾತ್ರದಿಂ ಬಿಟ್ಟಿರುವೆನು. ಇನ್ನೊಮ್ಮೆ ಕೇಳುವುದಕ್ಕೆ ಈ ದುಸ್ಸಹಂಗಳಾದ, ಹುಸಿ ತುಚ್ಛಂಗಳಾದ ಮಾತುಗಳಂ ಪೇಳಿದರೆ ನಿನ್ನ ನೆತ್ತಿಯೊಳ್ ನಾಲಗೆಯಂ ತೆಗೆಯುವುದರಲ್ಲಿ ಅಂತರವಿಲ್ಲವೆಂದು ನುಡಿಯಲು, ಆ ಮಾತಂ ಕೇಳಿ ಮಂತ್ರಿಯಾದ ವಜ್ರದಂಷ್ಟ್ರನು ಅತ್ಯಂತ ಕುಪಿತನಾದ ಆ ಜಂಘಾಮಾರುತನನ್ನು ನೋಡಿ ತನ್ನ ಮನದೊಳ್ ಇವನಿಗೆ ಮರಣಕಾಲವು ಸನ್ನಿಹಿತವಾಯಿತೆಂದು ತಿಳಿದು, ಒಂದು ಮುಹೂರ್ತಮಾತ್ರ ಸುಮ್ಮನೇ ಇದ್ದು ಬಳಿಕ ತನ್ನ ಮನದೊಳ್ ಇಂತೆಂದು ಯೋಚಿಸಿದನು. ಅದೇನೆಂದರೆ— ಈ ದುರಾತ್ಮನು ವಿವೇಕವಿಲ್ಲದೆ ತನ್ನ ಬಲವಂ ಶತ್ರುಬಲವಂ ಕೂಡ ವಿಚಾರಿಸದೆ ನಾನು ಪೇಳಿದ ಹಿತವಾದ ಮಾತುಗಳಂ ಅತ್ಯಂತ ವಿರುದ್ಧಂಗಳಾಗಿ ತಿಳಿದನು. ಆದರೆ ಈವರೆಗೂ ಇವನಿಂದ ಜೀವಿಸಿದೆನು. ಈತನು ಎಂದಿಗಾದರೂ ಒಂದು ದಿವಸ ನನ್ನಂ ಸಂಹರಿಸದೇ ಬಿಡುವನಲ್ಲ. ಆದುದರಿಂದ ಇವನಿಂದ ಮರಣವನ್ನೈದುವುದಕ್ಕಿಂತಲೂ, ಆ ಮಹಾಪುರುಷನ ಇದಿರಾಗಿ ಪೋಗಿ ಹಿಮ್ಮೆಟ್ಟದೆ ಕಾಳಗವಂ ಕಾದಿ ಯುದ್ಧಸಂಸ್ಕೃತನಾದರೆ, ನನ್ನ ಸದ್ಗತಿಗೆ ಸಂಶಯವಿಲ್ಲವೆಂದರಿತು ಜಂಘಾಮಾರುತನ ಇದಿರಾಗಿ ನಿಂತು, ಸಾಷ್ಟಾಂಗ ನಮಸ್ಕಾರವಂ ಮಾಡಿ, ಎಲೈ ರಾಕ್ಷಸಪ್ರಭುವೆ! ನನ್ನಲ್ಲಿ ನೀನು ಇಷ್ಟು ಕೋಪವಂ ಮಾಡುವುದು ಯುಕ್ತವಲ್ಲ. ಈಗ ನಿನ್ನ ಅಪ್ಪಣೆಯಾದರೆ ಸಕಲ ಸಾಹಸವಂ ಮಾಡಿ ಆ ನರಾಧಮನಂ ಸಂಹರಿಸುವೆನೆಂದು ಪೇಳಲು, ಜಂಘಾಮಾರುತನು ಆ ಮಾತಂ ಕೇಳಿ, ಸಕಲ ಸೇನೆಯಂ ಸಂಗಡ ಕರೆದುಕೊಂಡು ಪೋಗೆಂದು ನುಡಿದು, ಬಹುಮಾನವಂ ಮಾಡಿ, ಎಲೈ ಮಂತ್ರಿಶೇಖರನಾದ ವಜ್ರದಂಷ್ಟ್ರನೆ! ಕೇಳು— ನಾನು ನುಡಿದ ಬಿರುನುಡಿಗಳಿಗೆ ನೀನು ಮನದೊಳ್ ಸಂತಾಪವಂ ಗೊಳ್ಳಬೇಡ; ನಿನಗೆ ಯುದ್ಧದೊಳ್ ಆಸಕ್ತಿಯು ಬರಲೆಂದು ಆಗ್ರಹವಂ ಮಾಡಿದೆನಲ್ಲದೆ, ನಿಜವಾಗಿ ಕೋಪವಂ ಮಾಡಲಿಲ್ಲವೆಂದು ಪೇಳಿ, ತನ್ನ ಕೈಗಳೊಳಿರ್ದ ಕಡಗಗಳಂ ಕೊಟ್ಟು ಕಳುಹಿಸಲು, (ಸಶೇಷ.)

ಶ್ರೀ ಸಿರಸಂಗಿ ದೇಸಾಯಿಯರ ಪತ್ನಿಯವರು ಬೊಂಬಾಯಿ ಹೈಕೋರ್ಟಿನಲ್ಲಿ ಮಾಡಿದ್ದ ಅಪೀಲ್ ವಿವಾದದ ಸಂಬಂಧವಾಗಿ ಬೊಂಬಾಯಿ ಟೈಂಸ್ ಆವ್ ಇಂಡಿಯಾ ಪತ್ರಿಕೆಯ ಕಳೆದ ಮಾರ್ಚಿ ತಾ॥ ೨೩ ರ ಸಂಚಿಕೆಯಲ್ಲಿ ಪ್ರಕಟಿತವಾಗಿರುವ ಲೇಖನವು ಈ ಕೆಳಗೆ ಉದ್ಧರಿಸಲ್ಪಟ್ಟು ಅದರ ಕನ್ನಡ ತಾತ್ಪರ್ಯವು ಕೊಡಲ್ಪಟ್ಟಿದೆ.

SIX LAKHS IN CHARITY.

Lingappa Jayappa, Sir Desai of Navalgund in Belgaum, by a will and codicil executed some days before his death which took place on 23rd August, 1906, disposed of six lakhs worth of property in charity for the benefit of his caste the Ligayets and for instructing them in the art and science of agriculture; he appointed a consultative committee of trustees with the Collector of Belgaum for the president. His widow Sundrabai and her adopted son Kalapagonda contested the will in the Court of Mr. E. Clements, District Judge of Belgaum, on the ground that on the day previous to his death the testator had revoked his will, and granted permission to his wife to adopt a son Some witnesses were produced by Sundrabai in substantiation of this story.

Mr. Clements remarked that although the Sir Desai had made up his mind not to have any adoption, it was incredible he should have changed his mind suddenly and revoked his will, which he had deposited in a sealed envelope with Mr. A. M. T. Jackson, the then Collector, and about which the Deputy Collector Mr: Artai knew, and should have given permission to his wife to adopt. The probate of the will was consequently directed to be given with costs to the Collector of Belgaum, Mr. B. A. Brandon, who had aplied for it.

From the decision of Mr: Clements, Sundrabai and her adopted son came in appeal to the Bombay High Court. They were the defendants in the probate suit and among the other defendants were Narsinh Ramachandra Phadnis and ten others. Mr. J. D. Inverarity with Mr. G. S. Rao and Mr. Nilkanth Atmaram appeared for the appellants. Mr. Lindesay J. Robertson with Mr. Hormazdiar C. Coyajee, Mr. Rudiappa and Mr. G. S Mulgaonkar, appeared for the Collector-respondent. Provision had been made under the will that Sundrabai should be provided with a suitable residence, servants including a clerk a mounted sepoy, four sepoys, three cooks, a horse carriage, a bullock carriage, and Rs. 100 per month for her own expenses. All servants should be old men. The Hon Mr. Justice Chandravarkar and the Hon. Mr Justice Batchelor disposed of the appeal

Thier Lordships held that it was in evidence that on the day previous to his death when the testator was alleged to have changed his mind, he was extremely weak and not able to speak; it was a question whether he had the strength of mind to do what some people who were styled as the "deputation" wanted him to do, viz, revoke the will, and the adoption to take place. When he spoke he did so in a low voice and at long intervals; it was possible that to get rid of the persons who were importunate with him, he might have said the words he was alleged to have said. If he did say the words, why were they not committed to writing? The will had been made to the knowledge of the Collector and the codicil to the knowledge of the Mamlatdar, Mr. Artal was on the spot, and neither of them were informed of the testator's change of mind. When the widow called upon the Collector she did not say the will was revoked; she only said she wished to adopt a son. It was therefore extremely improbable that the testator said the words "I revoke the will and authorise my wife to adopt" When there was written testimony against oral in matters of will, it was laid down that a Court should be very zealous and cautious in scrutinizing the oral. Again there was the judgement of the Lower Court in favour of the probate. Mr Jackson when asked as to what the widow had told him at the time of her visit to him, replied that as far as he could recollect she stated to him that she wished to adopt, not that her husband had authorised her to adopt. The appeal was dismissed, with the Collector's cost upon the appellant.

ಬೆಳಗಾವಿ ಜಿಲ್ಲೆಯ ನವಲಗುಂದದ ಸರ್ ದೇಸಾಯಿ ಲಿಂಗಪ್ಪ ಜಯಪ್ಪ ಇವರು ೧೯೦೬ ನೆಯ ಅಗಸ್ಟ್ ತಾ॥ ೨೩ ರಲ್ಲಿ ವಿಧಿವಶರಾದರು. ಇವರು ಸಾಯುವುದಕ್ಕೆ ಕೆಲದಿನಗಳ ಪೂರ್ವವೇ ತಮ್ಮಾಸ್ತಿಯೆಲ್ಲವೂ ತಮ್ಮ ಸಜಾತೀಯರಾದ ಲಿಂಗಾಯತರು ಬೇಸಾಯಶಾಸ್ತ್ರ ಮತ್ತು ಇತರ ಶಾಸ್ತ್ರಗಳನ್ನು ಅಭ್ಯಾಸಮಾಡುವುದಕ್ಕಾಗುಪಯೋಗಿಸಲ್ಪಡತಕ್ಕದೆಂದು ಮೃತ್ಯುಪತ್ರವನ್ನು ಬರೆದು, ಈ ಕಾರ್ಯನಿರ್ವಹಣಾರ್ಥವಾಗಿ ಬೆಳಗಾವಿನ ಕಲೆಕ್ಟರ ಅಧ್ಯಕ್ಷತೆಯಲ್ಲಿ ಟ್ರಸ್ಟಿಗಳನ್ನೇರ್ಪಡಿಸಿದರು. ಮೃತ್ಯುಪತ್ರದ ಆಧಾರಮೇಲೆ ತಮಗೆ ಅಧಿಕಾರವನ್ನು ಕೊಡಿಸಬೇಕೆಂದು ಬೆಳಗಾವಿನ ಕಲೆಕ್ಟರ್ ಮಿ॥ ಬಿ. ಎ. ಬ್ರಾಂಡನ್‌ರವರು ಡಿಸ್ಟ್ರಿಕ್ಟ್ ಕೋರ್ಟ್ ಜಡ್ಜರಾದ ಮಿ॥ ಕ್ಲಿಮೆಂಟ್ಸರವರಲ್ಲಿ ಹೂಡಿದ್ದ ವಿವಾದದಲ್ಲಿ ದೇಸಾಯಿಯರು ತಮ್ಮ ಮರಣದ ಹಿಂದಿನ ದಿವಸ ತಾವು ಬರೆದಿದ್ದ ಮೃತ್ಯುಪತ್ರವನ್ನು ರದ್ದುಪಡಿಸಿ ತಮ್ಮ ಪತ್ನಿಗೆ ಒಬ್ಬ ಮಗನನ್ನು ದತ್ತುಮಾಡಿಕೊಳ್ಳುವಂತೆ ಅನುಜ್ಞೆಯನ್ನಿತ್ತಿದ್ದರೆಂದು ದೇಸಾಯಿಯರ ಪತ್ನಿಯವರಾದ ಸುಂದರಾಬಾಯಿಯವರೂ, ಅವರ ದತ್ತಕ ಪುತ್ರನಾದ ಕಲ್ಲಪ್ಪಗೊಂಡನೂ ವಾದಿಸಿದರು ಮತ್ತೂ ತಮ್ಮ ಪರವಾಗಿ ಕೆಲ ಸಾಕ್ಷಿಗಳನ್ನು ನುಡಿಸಿದರು. ಸರ್ ದೇಸಾಯಿಯರು ದತ್ತುವನ್ನು ಮಾಡಿಕೊಳ್ಳಕೂಡದೆಂದು ಸಂಕಲ್ಪಿಸಿದ್ದಾಗ್ಯೂ ಕೂಡಲೆ ತಮ್ಮ ಮನಸ್ಸನ್ನು ಬದಲಾಯಿಸಿ, ಆಗ್ಗೆ ಕಲೆಕ್ಟರಾಗಿದ್ದ ಮಿ॥ ಎ. ಎಂ. ಟಿ. ಜಾಕ್ಸನರವರಲ್ಲಿ ಬೀಗಮುದ್ರೆಮಾಡಿದ ಲಕೋಟೆಯಲ್ಲಿಟ್ಟಿದ್ದಂತಹ ಮತ್ತೂ ಡೆಪ್ಯುಟಿ ಕಲೆಕ್ಟರ್ ಮಿ॥ ಆರ್ಟಾಳರವರು ಅರಿತಿದ್ದಂತಹ ಮೃತ್ಯು

ಪತ್ರವನ್ನು ರದ್ದುಪಡಿಸಿ ದತ್ತುಮಾಡಿಕೊಳ್ಳಲು ತಮ್ಮ ಪತ್ನಿಗೆ ಅನುಜ್ಞೆಯನ್ನಿತ್ತಿದ್ದರೆಂಬುದು ನಂಬಲ್ಪಡತಕ್ಕದಾಗಿಲ್ಲವೆಂದು ಮಿ॥ ಕ್ಲಿಮೆಂಟ್ಸರವರು ಅಭಿಪ್ರಾಯಪಟ್ಟು, ಕಲೆಕ್ಟರ ಖರ್ಚುಸಹಿತ ಪ್ರೊಬೇಟನ್ನು ಕೊಡಿಸಿದರು. ಮಿ॥ ಕ್ಲಿಮೆಂಟ್ಸರ ತೀರ್ಪಿನಮೇಲೆ ಸುಂದರಾಬಾಯಿಯವರೂ, ಅವರ ದತ್ತಕ ಪುತ್ರನೂ ಬೊಂಬಾಯಿಯ ಹೈಕೋರ್ಟಿಗೆ ಅಪೀಲನ್ನು ಮಾಡಿದರು. ಮೃತ್ಯುಪತ್ರದ ಆಧಾರದ ಮೇಲೆ ತೆಗಲ್ಪಟ್ಟಿದ್ದ ವಿವಾದದಲ್ಲಿ ಸುಂದರಾಬಾಯಿಯವರೂ ಅವರ ದತ್ತಕಪುತ್ರನೂ ಪ್ರತಿವಾದಿಗಳಾಗಿದ್ದರಲ್ಲದೆ ಫಡ್ನಿಸ್ ಮತ್ತೂ ೧೦ ಜನರು ಪ್ರತಿವಾದಿಗಳಾಗಿದ್ದರು. ಮಿ॥ ಜಿ. ಎಸ್. ರಾವ್ ಮತ್ತೂ ಮಿ॥ನೀಲಕಂಠ ಆತ್ಮಾರಾಂ ಇವರುಗಳ ಕೂಡ ಮಿ॥ ಜೆ. ಡಿ. ಇನವರಾರಿಟಿಯವರು ಅಪೀಲು ವಾದಿಗಳಪರ ವಕೀಲರಾಗಿದ್ದರು. ಮಿ॥ ಹಾರ್ಮಜ್ದಿಯಾರ್ ಸಿ. ಕಾಯಜಿ, ಮಿ॥ಜಿ. ರುದ್ರಪ್ಪ ಮತ್ತೂ ಮಿ॥ಜಿ. ಎಸ್. ಮುಳಗಾಂವಕರ್ ಇವರುಗಳಕೂಡ ಮಿ॥ ಲಿಂಡಿಸೆ ಜೆ. ರಾಬರ್ಟ್ಸನ್ನರವರು ಪ್ರತಿವಾದಿ ಕಲೆಕ್ಟರ ಕಡೆಯ ವಕೀಲರಾಗಿದ್ದರು. ಸುಂದರಾಬಾಯಿಯವರಿಗೆ ವಾಸಕ್ಕಾಗಿ ಯೋಗ್ಯವಾದ ಮನೆಯು, ಒಬ್ಬ ಕಾರ್ಕೂನನು, ಒಬ್ಬ ಕುದುರೆಸವಾರನು, ನಾಲ್ಕು ಜನ ಸಿಪಾಯರು, ಮೂರು ಜನ ಅಡಿಗೆಯವರು, ಒಂದು ಕುದುರೆಯ ಬಂಡಿಯು ಒಂದು ಎತ್ತಿನ ಬಂಡಿಯು ಮತ್ತೂ ಸ್ವಂತವೆಚ್ಚಕ್ಕಾಗಿ ತಿಂಗಳೊಂದಕ್ಕೆ ೧೦೦ ರೂಪಾಯಿಗಳು ಸುಂದರಾಬಾಯಿಯವರಿಗೆ ಕೊಡಲ್ಪಡತಕ್ಕದೆಂದು ಮೃತ್ಯುಪತ್ರದಲ್ಲಿ ಬರೆಯಲ್ಪಟ್ಟಿರುವುದು. ಸೇವಕರೆಲ್ಲರೂ ಮುದುಕರಾಗಿರಬೇಕೆಂದಿರುವುದು. ಆನರಬಲ್ ಜಸ್ಟಿಸ್ ಚಂದ್ರಾವರ್ಕರವರು ಮತ್ತೂ ಆನರಬಲ್ ಜಸ್ಟಿಸ್ ಬ್ಯಾಚಲರ್‌ರವರು ಈ ಅಪೀಲು ವಿವಾದವನ್ನು ಇತ್ಯರ್ಥಗೊಳಿಸಿದರು.

“ಮೃತ್ಯುಪತ್ರವನ್ನು ಬರೆದಿರುವ ದೇಸಾಯಿಯರು ಮೃತಿಯನ್ನೈದಿದ ಹಿಂದಣ ದಿವಸ ತಮ್ಮ ಮನಸ್ಸನ್ನು ಬದಲಾಯಿಸಿದರೆಂದು ಹೇಳುವ ಕಾಲದಲ್ಲಿ ಬಹಳ ನಿತ್ರಾಣವಾಗಿ ಮಾತನಾಡಲು ಅಶಕ್ತರಾಗಿದ್ದರೆಂಬುದು ರುಜುವಾತಾಗಿದೆ ಆದುದರಿಂದ, ಮೃತನು ಕೆಲ ಜನರು ಹೇಳುವ ಪ್ರಕಾರ ತನ್ನ ಮೃತ್ಯುಪತ್ರವನ್ನು ರದ್ದುಪಡಿಸಿ ದತ್ತುಪುತ್ರನನ್ನು ಮಾಡಿಕೊಳ್ಳಲಪ್ಪಣೆಯನ್ನು ಕೊಡುವಷ್ಟು ಆತನಿಗೆ ಬುದ್ಧಿ ಸ್ವಾಧೀನವಿದ್ದಿತೆ? ಆತನು ಆ ರೀತಿ ಮಾತನಾಡಿದಾಗ್ಗೆ ಬಹು ಕೀಳುಧ್ವನಿಯಿಂದಲೂ, ಕಾಲ ವಿಳಂಬದಿಂದಲೂ ಹೇಳಿದನೆಂದು ಹೇಳಲ್ಪಟ್ಟಿದೆ. ಜನರು ತನ್ನನ್ನು ಪೀಡಿಸುವುದನ್ನು ತಪ್ಪಿಸುವುದಕ್ಕಾಗಿ ಆ ಪ್ರಕಾರ ಹೇಳಿದ್ದರೂ ಇರಬಹುದು. ಆತನು ಈ ಮಾತುಗಳನ್ನು ಆಡಿದ್ದಲ್ಲಿ ಅವು ಯಾಕೆ ಬರೆಸಲ್ಪಡಲಿಲ್ಲ? ಮೃತ್ಯುಪತ್ರವು ಕಲೆಕ್ಟರ ಗಮನಕ್ಕೂ, ಅದರ ನಕಲು ಮಾಮಲೇದಾರರ ಗಮನಕ್ಕೂ ತರಲ್ಪಟ್ಟಿದ್ದುವು ಅಲ್ಲದೆ ಮಿ॥ ಆರ್ಟಾಳರವರು ಅದೇ ಸ್ಥಳದಲ್ಲಿದ್ದರು. ಹೀಗಿದ್ದರೂ ಮೃತ್ಯುಪತ್ರವನ್ನು ಬರೆದವನು ಮನಸ್ಸು ಬದಲಾಯಿಸಿರುವುದು ಅವರುಗಳ ಗಮನಕ್ಕೆ ತರಲ್ಪಡಲಿಲ್ಲವು. ದೇಸಾಯಿಯರ ಹೆಂಡತಿಯು ಕಲೆಕ್ಟರನ್ನು ಕಂಡಿದ್ದಾಗ್ಗೆ ಮೃತ್ಯುಪತ್ರವು ತನ್ನ ಪತಿಯಿಂದಲೇ ರದ್ದುಪಡಿಸಲ್ಪಟ್ಟಿದ್ದಿತೆಂದು ಹೇಳದೆ ಒಬ್ಬ ಮಗನನ್ನು ದತ್ತುಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ತನಗಿದೆಯೆಂದು ಹೇಳಿದಳು. ಈ ಕಾರಣಗಳಿಂದ “ನನ್ನ ಮೃತ್ಯುಪತ್ರವನ್ನು ರದ್ದುಪಡಿಸಿ ಒಬ್ಬ ಮಗನನ್ನು ದತ್ತುಮಾಡಿಕೊಳ್ಳಲು ನನ್ನ ಪತ್ನಿಗೆ ಅಧಿಕಾರವನ್ನು ಕೊಟ್ಟಿರುತ್ತೇನೆ.” ಎಂದು ಮೃತ್ಯುಪತ್ರವನ್ನು ಬರೆದಾತನು ಹೇಳಿದುದು ಬಹು ಅಸಂಭವವು. ಮೃತ್ಯುಪತ್ರಗಳ ವಿಚಾರದಲ್ಲಿ ಬರೆವಣಿಗೆಯು ಆಧಾರವಿರುವಾಗ್ಗೆ ತತ್ಸಂಬಂಧವಾದ ಬಾಯಿಮಾತಿನ ಆಧಾರವನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ಗೊತ್ತಾಗಿರುವುದು. ಅಲ್ಲದೆ ಕೆಳಕೋರ್ಟಿನಲ್ಲಿ ಮೃತ್ಯುಪತ್ರವು ಸ್ಥಿರಗೊಳಿಸಲ್ಪಟ್ಟಿದೆ. ದೇಸಾಯಿಯರ ಪತ್ನಿಯು ತಮ್ಮನ್ನು ನೋಡಲು ಬಂದಾಗ್ಗೆ ಏನುಹೇಳಿದರೆಂದು ಮಿ॥ಜಾಕ್ಸನರವರನ್ನು ಕೇಳಲಾಗಿ ಅವರು “ಆಕೆಯು ತನಗೆ ದತ್ತುಸ್ವೀಕಾರಮಾಡಲಪೇಕ್ಷೆ ಇರುವುದೆಂದು ಹೇಳಿದರಲ್ಲದೆ ದತ್ತುಸ್ವೀಕಾರಮಾಡಲು ತನಗೆ ತನ್ನ ಪತಿಯು ಅಪ್ಪಣೆಕೊಟ್ಟಿರುವುದಾಗಿ ಹೇಳಲಿಲ್ಲವು.” ಎಂದು ಉತ್ತರವನ್ನು ಕೊಟ್ಟಿರುತ್ತಾರೆ. ಈ ಕಾರಣಗಳಿಂದ ಅಪೀಲ್ ಡಿಸ್ಮಿಸ್ ಮಾಡಲ್ಪಟ್ಟಿದೆ. ಅಪೀಲ್‌ವಾದಿಯು ಕಲೆಕ್ಟರ ವೆಚ್ಚವನ್ನು ಕೊಡತಕ್ಕದು.” ಎಂದು ಜಡ್ಜಿಯರುಗಳು ತೀರ್ಮಾನಿಸಿರುತ್ತಾರೆ.

ಯಳಂದೂರು ಜಹಗೀರಿಯ ವಿವಾದವು.

ಯಳಂದೂರು ಜಹಗೀರ್ದಾರರಾಗಿದ್ದ ಸರ್. ಪಿ. ಎನ್. ಕೃಷ್ಣಮೂರ್ತಿಯವರು ವಿಧಿವಶರಾದಮೇಲೆ ಅವರ ತಮ್ಮಂದಿರ ಮಕ್ಕಳಾದ ಅ॥ ಕಮಿಷನರ್ ಮಿ॥ ನರಸಿಂಗರಾವ್ ಪೂರ್ಣಯ್ಯನವರು ತಮ್ಮ ದೊಡ್ಡಪ್ಪನವರ ಸ್ಥಾನದಲ್ಲಿ ತಾವು ಯಳಂದೂರು ಜಹಗೀರ್ದಾರರಾಗಿ ಪರಿಗಣಿಸಲ್ಪಡಬೇಕೆಂದು ಮೈಸೂರ ಸರ್ಕಾರದವರಲ್ಲಿ ಬಿನ್ನೈಸಿಕೊಳ್ಳಲು ಈ ವಿಚಾರದಲ್ಲಿ ವಿರುದ್ಧಾಭಿಪ್ರಾಯವುಳ್ಳ ಹಕ್ಕುದಾರರಿದ್ದರೆ ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯವರಲ್ಲಿಗೆ ಬರೆದು ತಿಳುಹತಕ್ಕದೆಂದು ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಕೃಷ್ಣಮೂರ್ತಿಯವರ ಪತ್ನಿಯವರೂ, ಅವರ ಮಗಳ ಅಪ್ರಾಪ್ತವಯಸ್ಕನಾದ ಮಗನ ಪರವಾಗಿ ಅವನ ತಂದೆಯೂ, ಪೋಲೀಸು ಸೂಪರಿಂಟೆಂಡೆಂಟರಾಗಿರುವ ಮಿ॥ ವೈ. ವಿ. ಕೃಷ್ಣಮೂರ್ತಿಯವರೂ ಅರ್ಜಿಗಳನ್ನು ಹಾಕಿಕೊಂಡಿದ್ದರು. ಈ ವಿವಾದದ ವಿಚಾರಣೆಯು ಕಳೆದ ಮಾರ್ಚಿ ತಾ॥ ೨೭ ರಲ್ಲಿ ಬೆಂಗಳೂರಲ್ಲಿ ದಿವಾನರು ಮತ್ತೂ ಇಬ್ಬರು ಕೌನ್ಸಿಲರುಗಳಲ್ಲಿ ನಡೆಯಿತು. ಆ ಕಾಲದಲ್ಲಿ ಮಿ॥ ನರಸಿಂಗರಾವ್ ಪೂರ್ಣಯ್ಯನವರ ಪರವಾಗಿ ಮೈಸೂರ ಅಡ್ವೋಕೇಟ್ ಮಿ॥ ಎಂ. ಸಿ. ರಂಗಯ್ಯಂಗಾರ್ ಬಿ. ಎ., ಯವರೂ, ಬೆಂಗಳೂರು ಅಡ್ವೋಕೇಟ್ ಮಿ॥ಎಸ್. ರಂಗಣ್ಣ, ಬಿ. ಎ., ಬಿ. ಎಲ್., ರವರೂ; ಸರ್ ಕೃಷ್ಣಮೂರ್ತಿಯವರ ಪತ್ನಿಯವರ ಕಡೆ ಮದ್ರಾಸು ಹೈಕೋರ್ಟು ವಕೀಲರಾದ ದಿವಾನ್ ಬಹದ್ದೂರ್ ಆನರಬಲ್ ಎಲ್. ಎ. ಗೋವಿಂದರಾಘವಯ್ಯರ್ ಬಿ.ಎ., ಬಿ.ಎಲ್., ರವರೂ; ಮೊಮ್ಮಗನ ಕಡೆ ಕಲಕತ್ತಾದ ಪ್ರಸಿದ್ಧ ಬ್ಯಾರಿಸ್ಟರಾದ ನಾರ್ಟನ್‌ರವರೂ, ಮದ್ರಾಸಿನ ಜೇಂಸ್ ಷಾರ್ಟ್‌ರವರೂ; ಮಿ॥ ವೈ. ವಿ. ಕೃಷ್ಣಮೂರ್ತಿಯವರ ಪರವಾಗಿ ಮಿ॥ ಟಿ. ಅಪ್ಪುರಾಯರೂ ವಾದಿಸಲು ನಿಯಮಿಸಲ್ಪಟ್ಟಿದ್ದರು. ಆದರೆ ಮಿ॥ ನಾರ್ಟನ್‌ರವರು ತಂಜಾವೂರಿನ ಸೆಷನ್ಸು ಕೋರ್ಟಿನಲ್ಲಿ ಒಂದು ಕೊಲೆಯ ವಿವಾದದ ವಿಚಾರಣೆಯಲ್ಲಿದ್ಯುಕ್ತರಾಗಿದ್ದುದರಿಂದ ಆ ದಿವಸ ಬೆಂಗಳೂರಿಗೆ ಬರಲಾಗಲಿಲ್ಲವಾಗಿ ಅವರ ವಿನಾ ಇತರ ವಕೀಲರುಗಳೆಲ್ಲರೂ ಬಂದಿದ್ದರು. ಮಿ॥ ವೈ. ವಿ. ಕೃಷ್ಣಮೂರ್ತಿಯವರಿಗೆ ಜಹಗೀರಿಯಿಂದ ಸಲ್ಲುವ ವರ್ಷಾಶನವನ್ನು ಹೆಚ್ಚಿಸಿಕೊಡಬೇಕೆಂದು ಅವರ ವಕೀಲರಾದ ಮಿ॥ ಅಪ್ಪುರಾಯರು ಹೇಳಲು ಕೌನ್ಸಿಲಿನ ಅಧ್ಯಕ್ಷರಾದ ದಿವಾನರು ಈಗ ಯಳಂದೂರು ಜಹಗೀರಿಯ ಯಜಮಾನರಾರೆಂಬುದನ್ನು ಗೊತ್ತುಮಾಡಬೇಕಾಗಿದೆಯೇ ವಿನಾ ವರ್ಷಾಶನವನ್ನು ಹೆಚ್ಚಿಸತಕ್ಕ ವಿವಾದವಾಗಿಲ್ಲವೆಂದು ಅಪ್ಪಣೆ ಕೊಡಿಸಿದರು. ಅನಂತರ “ಮಿ॥ ನರಸಿಂಗರಾವ್ ಪೂರ್ಣಯ್ಯನವರು ಜಹಗೀರ್ದಾರರ ಗಂಡುಸಂತತಿಯಲ್ಲಿ ಮುಖ್ಯ ಹಕ್ಕುದಾರರಾಗಿರುವರಲ್ಲದೆ ಜಹಗೀರಿಯ ಹಕ್ಕುದಾರಿಕೆಯ ಸಂಬಂಧವಾಗಿ ೧೮೭೩ ನೆಯ ವರ್ಷದಲ್ಲಿ ಹುಟ್ಟಿರುವ ಎಸ್ಟೇಟ್ ಬಿಲ್ಲಿನ ೧ ನೆಯ ಆಕ್ಟಿನಲ್ಲಿ ಹೇಳಿರುವ ಪ್ರಕಾರ ಎಲ್ಲಾ ಅರ್ಹತೆಯನ್ನುಳ್ಳವರಾಗಿರುತ್ತಾರೆ. ಹೆಣ್ಣಿನ ಸಂತತಿಯಿಂದ ದತ್ತುಮಾಡಿಕೊಳ್ಳಲಿಕ್ಕೆ ಬರುವುದಿಲ್ಲ ಮತ್ತೂ ಸರ್. ಪಿ. ಎನ್. ಕೃಷ್ಣಮೂರ್ತಿಯವರು ತಮ್ಮ ಜೀವಿತ ಕಾಲದಲ್ಲಿ ದತ್ತುವನ್ನು ಮಾಡಿಕೊಂಡಿದ್ದರೆಂಬ ಬಗೆಗೆ ಯಾವಾಧಾರವೂ ಇರುವುದಿಲ್ಲ. ಅದುಕಾರಣ ಮಿ॥ ನರಸಿಂಗರಾವ್ ಪೂರ್ಣಯ್ಯನವರು ಸರ್ ಕೃಷ್ಣಮೂರ್ತಿಯವರ ಸ್ಥಾನದಲ್ಲಿ ಜಹಗೀರ್ದಾರರಾಗಿ ದೃಢೀಕರಿಸಲ್ಪಡಬೇಕು.” ಎಂದು ಮಿ॥ ಎಂ. ಸಿ. ರಂಗಯ್ಯಂಗಾರರು ವಾದಿಸಿದರು. ಆ ವೇಳೆ ದಿ॥ಬ॥ಗೋವಿಂದರಾಘವಯ್ಯರ್‌ರವರು ಕೃಷ್ಣಮೂರ್ತಿಯವರ ಪತ್ನಿಯವರಪರವಾಗಿ ವಾದಿಸಲುಪಕ್ರಮಿಸಿ, “ಎಸ್ಟೇಟ್ ಬಿಲ್ ಸಂಬಂಧವಾದ ಆಕ್ಟು ಹಿಂದೂ ಲಾಕ್ಕೆ ವಿರುದ್ಧವಾಗಿರುವುದರಿಂದ, ಸರ್ ಕೃಷ್ಣಮೂರ್ತಿಯವರು ದತ್ತುಮಾಡಿಕೊಳ್ಳುವ ವಿಚಾರದಲ್ಲಿ ಪ್ರತಿಬಂಧಕವಾಗಿರಲಿಲ್ಲವು. ಕಾಗದಪತ್ರಗಳೆಲ್ಲವೂ ಬೀಗಮುದ್ರೆಯಿಂದ ಭದ್ರಮಾಡಲ್ಪಟ್ಟಿರುವ ಪ್ರಯುಕ್ತ, ಗತಿಸಿದ ಜಹಗೀರ್ದಾರರ ಅಭಿಮತವು ಏನಾಗಿದ್ದಿತೆಂಬುದನ್ನು ಹೇಳುವುದಕ್ಕಿಲ್ಲವಾಗಿದೆ. ಅವುಗಳನ್ನು ನೋಡುವುದರಿಂದ ಅವರಭಿಪ್ರಾಯವು ಗೊತ್ತಾಗುವುದಾದ ಪ್ರಯುಕ್ತ ಆ ಕಾಗದಗಳನ್ನು ನೋಡಲು ಅವಕಾಶವನ್ನು ಕೊಡಿಸಬೇಕು.” ಎಂದು ವಾದಿಸಿದರು. ಆ ರೀತಿ ಕಾಗದಗಳನ್ನು ತೆಗೆದು ನೋಡಲಾಗುವುದಿಲ್ಲವೆಂದು ದಿವಾನರು ಹೇಳಲು, ಸರ್ ಕೃಷ್ಣಮೂರ್ತಿಯವರ ಪತ್ನಿಯವರು ಕುಟುಂಬದಲ್ಲಿ ಪ್ರಮುಖರಾದುದರಿಂದ ಅವರ ಪತಿಯವರ ಮನೋಗತವನ್ನು ತಿಳಿಯಲು ಅವರಿಗಧಿಕಾರವಿರುವುದೆಂದು ಮಿ॥ ರಾಘವಯ್ಯರ್‌ರವರು ಸಮಾಧಾನವನ್ನು ಹೇಳಿದರು. ಈ ಸಮಾಧಾನವು ಕೌನ್ಸಿಲರ್ ಮಿ॥ ನಂಜುಂಡಯ್ಯನವರಿಗೆ ಒಪ್ಪಿತವಾದುದರಿಂದಲೂ, ೨ ನೆಯ ಕೌನ್ಸಿಲರು ಮೌನವಾಗಿದ್ದುದರಿಂದಲೂ ಸರ್ ಕೃಷ್ಣಮೂರ್ತಿಯವರ ಪತ್ನಿಯವರು, ಮಿ॥ನರಸಿಂಗರಾವ್ ಪೂರ್ಣಯ್ಯನವರು ಮತ್ತೂ ಸರ್ಕಾರಿಯ ಸೆಕ್ರೆಟರಿಯವರು ಇವರುಗಳ ಪ್ರತ್ಯಕ್ಷದಲ್ಲಿ ಬೀಗಮುದ್ರೆಯಿಂದ ಭದ್ರಪಡಿಸಲ್ಪಟ್ಟಿರುವ ಕಾಗದಪತ್ರಗಳು ಖಜಾನೆಯಿಂದ ತೆಗೆಯಲ್ಪಡತಕ್ಕದೆಂದು ದಿವಾನರು ಅಪ್ಪಣೆಮಾಡಿದರು. ವಿವಾದವನ್ನು ಮುಂದಕ್ಕೆ ಹಾಕಬೇಕೆಂದು ಮಿ॥ ನಾರ್ಟನ್‌ರವರ ಪರವಾಗಿ ಮಿ॥ ಷಾರ್ಟ್‌ರವರು ಅಪೇಕ್ಷಿಸಿದುದರಮೇಲೆ ಈ ವಿಚಾರಣೆಯು ಮುಂದಕ್ಕೆ ಹಾಕಲ್ಪಟ್ಟಿತು.

ಮೈಸೂರ ಗೆಜೆಟ್ ಸಂಗ್ರಹವು.

ರೆವಿನ್ಯೂ ಕಮಿಷನರಾಫೀಸಿಗೆ ಸೇರಿದ ಅ॥ ಕಮಿಷನರ್ ಮಿ॥ ಆನಂದರಾವ್ ಕಿರ್ಲೆ, ಬಿ. ಎ., ಎಲ್‌ಎಲ್. ಬಿ., ಯವರಿಗೆ ೧೯೦೭ನೆಯ ಏಪ್ರಿಲ್ ತಾ॥ ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಮೇಲಿನ ರಜಾಕಾಲದಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೆ ಅ॥ ಕಮಿಷನರ್ ಮತ್ತೂ ಪೋಲೀಸು ಸೂಪರಿಂಟೆಂಡೆಂಟ್ ಮಿ॥ ಬಿ. ತಂಬೂಶೆಟ್ಟಿ, ಬಿ. ಎ., ಯವರು ರೆವಿನ್ಯೂಕಮಿಷನರಾಫೀಸಿನಲ್ಲಿ ಕೆಲಸಮಾಡಲು ಅನಿತ್ಯವಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮಾಗಡಿ ತಾ॥ ಅಮಲ್ದಾರ್ ಮಿ॥ ಎಂ. ರಂಗನಾಥರಾವ್‌ಯವರಿಗೆ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೇಜ್ ರಜದ ಜತೆಗೆ ಅವರ ಸ್ವಂತ ಕೆಲಸಕ್ಕಾಗಿ ಇನ್ನೂ ೩ ತಿಂಗಳ ರಜವು ಹೆಚ್ಚಾಗಿ ಕೊಡಲ್ಪಟ್ಟಿರುತ್ತಾದುದರಿಂದ ಈಗಿರುವ ಬದಲಿ ಏರ್ಪಾಟೇ ನಡೆಯತಕ್ಕದು.

ಎಕ್ಸೈಸ್ ಕಮಿಷನರು ರಿಜಿಸ್ಟ್ರೇಷನ್ ಇ॥ ಜನರಲ್ ರವರು, ಸ್ಟಾಂಪುಗಳ ಎಕ್ಸ್ ಅಫಿಷಿಯೋ ಕಮಿಷನರು ಮತ್ತೂ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರವರು ಆದ ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರಿಗೆ ವೈದ್ಯರ ಅನುಮತಿಯಮೇಲೆ ೧೯೦೭ ನೆಯ ಫೆಬ್ರವರಿ ತಾ॥ ೧೯ ರಿಂದ ೬ ತಿಂಗಳ ರಜವು ಕೊಡಲ್ಪಟ್ಟಿದೆ.

ಮಿ॥ ಆರ್. ರಂಗರಾವ್ ಬಿ. ಎ., ಬಿ. ಎಲ್., ರವರು ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರಿಗೆ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರ ಡಿ॥ ಪೋಲೀಸು ಸೂಪರಿಂಟೆಂಡೆಂಟ್ ಮಿ॥ ತಂಬೂಶೆಟ್ಟಿಯವರು ಬೇರೆ ಉದ್ಯೋಗದ ಮೇಲಿರುವವರೆಗೆ ಪೋಲೀಸು ಇನ್ಸ್‌ಪೆಕ್ಟರ್ ಮಿ॥ ಆರ್. ಶಾಮರಾವ್, ಬಿ. ಎ., ಬಿ. ಎಲ್., ರವರು ಬೆಂಗಳೂರ ಡಿ॥ ಆಕ್ಟಿಂಗ್ ಅ॥ ಕಮಿಷನರಾಗಿಯು ಮತ್ತೂ ಪೊ॥ ಸೂಪರಿಂಟೆಂಡೆಂಟರಾಗಿಯು ನಿಯಮಿಸಲ್ಪಟ್ಟಿರುತ್ತಾರೆ.

ತರೀಕೆರೆಯ ಆಕ್ಟಿಂಗ್ ಅಮಲ್ದಾರ್ ಮತ್ತೂ ೨ ನೆಯ ತಾ॥ ಮ್ಯಾಜಿಸ್ಟ್ರೇಟರಾದ ಮಿ॥ ಬಿ. ಎಂ., ವೆಂಕಟೇಶಯ್ಯ, ಬಿ ಎ., ಯವರು ಆ ತಾಲೋಕಿನ ಅಮಲ್ದಾರರಾಗಿರುವವರೆಗೂ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನಲ್ಲಿ ಕಂಡ ವಿವಾದಗಳನ್ನು ಹಿಡಿದು ವಿಚಾರಿಸಲು ಅಧಿಕಾರಕೊಡಲ್ಪಟ್ಟಿರುತ್ತಾರೆ.

ಮಿ॥ ಪಿ. ಎಸ್. ಅಚ್ಯುತರಾವ್, ಎಲ್. ಎಂ. ಅಂಡ್ ಎಸ್., ರವರು ಸೀನಿಯರ್ ಸರ್ಜನರಾಗಿಯು, ಎಕ್ಸ್ ಅಫಿಷಿಯೋ ಸ್ಯಾನಿಟರಿ ಕಮಿಷನರಾಗಿಯು ಮತ್ತೂ ಜೈಲುಗಳ ಇ॥ ಜನರಲ್‌ರವರಾಗಿಯು ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಪಿ॥ ಮತ್ತೂ ಕೌ॥ ಶಾಖೆಗಳ ಅಂಡರ್ ಸೆಕ್ರೆಟರಿ ಮಿ॥ ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ರವರು ತಮ್ಮ ನಿತ್ಯಗಟ್ಟಲೆಯ ಕೆಲಸಗಳೊಡನೆ ಮಿ॥ ಸುಬ್ರಹ್ಮಣ್ಯಯ್ಯರ್ ರವರು ಬೇರೆ ಉದ್ಯೋಗದಮೇಲೆ ಇರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮುಜರಾಯಿ ಸೂಪರಿಂಟೆಂಡೆಂಟರ ಮತ್ತೂ ಎಕ್ಸ್ ಅಫಿಷಿಯೋ ಅಂಡರ್ ಸೆಕ್ರೆಟರಿಯ ಉದ್ಯೋಗಗಳ ಛಾರ್ಜಿನಲ್ಲಿರತಕ್ಕದು.

ಅರಮನೆಯ ಇನ್‌ಛಾರ್ಜ್ ಆಫೀಸರಾದ ಮಿ॥ ಬಿ. ರಾಮಕೃಷ್ಣರಾಯರು ಇತಃಪರ ಅರಮನೆಯ ಕಂಟ್ರೋಲರೆಂದು ಕರೆಯಲ್ಪಡತಕ್ಕದು.

ಗಣಿಗಳ ಇನ್ಸ್‌ಪೆಕ್ಟರಾದ ಮಿ॥ ಆರ್. ಬಕ್ವೆಟ್‌ರವರಿಗೆ ೧೯೦೭ ನೆಯ ಏಪ್ರಿಲ್ ತಾ॥ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ೩ ತಿಂಗಳ ಪ್ರಿವಿಲೆಜ್ ರಜದೊಡನೆ ೧ ವರ್ಷ ೪ ತಿಂಗಳು ಮತ್ತೂ ೨೧ ದಿನಗಳ ಫರ್ಲೋ ರಜವು ಕೊಡಲ್ಪಟ್ಟಿದೆ.

ಮಿ॥ ಬಕ್ವೆಟ್‌ರವರು ಬರುವವರೆಗೆ ಗಣಿಗಳ ಡಿ॥ ಇನ್ಸ್‌ಪೆಕ್ಟರಾದ ಮಿ॥ ಎಲ್. ಎಚ್. ಬೆಲ್‌ವಿತ್‌ರವರು ಗಣಿಗಳ ಅಫಿಷಿಯೇಟಿಂಗ್ ಇನ್ಸ್‌ಪೆಕ್ಟರಾಗಿರತಕ್ಕದು.

ಫ್ರಾನ್ಸಿನಲ್ಲಿ ೬ ಜನ ಚೋರರು ಮಾರ್ಗದಲ್ಲಿ ಹೋಗುತ್ತಿದ್ದ ಒಂದು ಮೋಟಾರು ಬಂಡಿಯನ್ನು ಅಡ್ಡಕಟ್ಟಿ ನಿಲ್ಲಿಸಿ ಅದನ್ನು ನಡೆಯಿಸುತ್ತಿದ್ದವನನ್ನು ಹೊಡೆದು ಆಚೆಗೆ ನೂಕಿ ತಾವು ಬಂಡಿಯೊಳಗೆ ಕುಳಿತು ಅದನ್ನು ನಡೆಸಿಕೊಂಡು ಒಂದು ಹಣದ ಬ್ಯಾಂಕಿಗೆ ಬಂದು ಅವರೊಬ್ಬನು ಬಂಡಿಯೊಳಗೇ ನಿಂತುಬಿಟ್ಟನು, ಮತ್ತೊಬ್ಬನು ಬ್ಯಾಂಕಿನ ಬಾಗಿಲಬಳಿ ಕಾವಲಿಗೆ ನಿಂತುಕೊಂಡನು; ಉಳಿದ ನಾಲ್ವರು ಒಳಗೆಹೋಗಿ ಅಲ್ಲಿದ್ದ ಇಬ್ಬರು ಕರಣೀಕರನ್ನೂ ಕ್ಯಾಷಿಯರನ್ನೂ ಚೆನ್ನಾಗಿ ಥಳಿಸಿ ೬೦೦೦೦ ರೂ. ಗಳನ್ನು ಅಪಹರಿಸಿಕೊಂಡು ಮೋಟಾರು ಬಂಡಿಯಲ್ಲಿ ಕುಳಿತು ಕೊಂಡೋಡಿಹೋಗಿ ಆ ಬಂಡಿಯನ್ನು ಬಿಟ್ಟುಬಿಟ್ಟು ಎಲ್ಲಿಯೋ ಪಾರಾದರು.

ಮೈಸೂರ್ ಸ್ಟಾರ್

೧೯೧೨ ನೇ ಏಪ್ರಿಲ್ ತಾ॥ ೧ ನೇ ಸೋಮವಾರ

ಕಂಚಿಯಲ್ಲಿ ನಡೆಯುವ ಪಂಡಿತರುಗಳ ಪರಿಷತ್ತು.

ಹಿಂದೂಶಾಸ್ತ್ರಗಳಲ್ಲಿ ಪಂಡಿತರಾದವರುಗಳು ಒಂದು ಕಡೆಸೇರಿ ಹಿಂದೂಗಳ ಧರ್ಮಾಚರಣೆ ಮತ್ತು ಲೌಕಿಕವ್ಯವಹಾರಾದಿ ವಿಷಯಗಳನ್ನು ಪರ್ಯಾಲೋಚಿಸಿ, ಕಾಲಾನುಗುಣವಾದ ಸುಧಾರಣೆಯನ್ನು ಮಾಡತಕ್ಕ ಬಗೆಗೆ ಕಂಚಿಯ ಪಂಡಿತರುಗಳೂ, ಆಚಾರ್ಯರುಗಳೂ ಮದ್ರಾಸಿನ ಡಾಕ್ಟರ್ ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು, ಆನರಬಲ್ ಜಸ್ಟಿಸ್ ಸುಂದರಂ ಅಯ್ಯರ್‌ರವರು, ಪ್ರೊಫೆಸರ್ ರಾ॥ ಬ॥ ರಂಗಾಚಾರ್ಯರು ಮೊದಲಾದ ಪ್ರಮುಖ ವಿದ್ವಾಂಸರುಗಳೊಡನೆ ಆಲೋಚಿಸಿ ಈ ತಾ॥ ೫ ರಿಂದ ೪ ದಿವಸಗಳವರೆಗೆ ಕಂಚಿಯಲ್ಲಿ ಒಂದು ಪಂಡಿತರುಗಳ ಪರಿಷತ್ತನ್ನು ಕೂಡಿಸಬೇಕೆಂದು ನಿರ್ಧರಿಸಿ ಅದಕ್ಕಾಗಿ ಒಂದು ಕಾರ್ಯಕಾರಿ ಮಂಡಳಿಯನ್ನೇರ್ಪಡಿಸಿಕೊಂಡಿರುವರು. ಈ ಪರಿಷತ್ತಿನ ಸಂಬಂಧವಾದ ಪ್ರಕಟನಪತ್ರಿಕೆಗಳೂ, ಆಮಂತ್ರಣಗಳೂ ಎಲ್ಲಾ ಕಡೆಗೂ ಕಳುಹಲ್ಪಟ್ಟಿರುವುವು. ಕಾರ್ಯಕಾರಿ ಮಂಡಳಿಗೆ ಡಾಕ್ಟರ್ ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷರಾಗಿಯೂ, ದಿವಾನ್‌ಬಹದ್ದೂರ್ ಕೆ ಕೃಷ್ಣಸ್ವಾಮಿರಾವ್, ಸಿ.ಐ.ಇ, ಯವರು, ಮ॥ ಟಿ. ಆರ್. ರಾಮಚಂದ್ರ ಅಯ್ಯರ್‌ರವರು, ಆನರಬಲ್ ಮ॥ ಪಿ. ಎಸ್. ಶಿವಸ್ವಾಮಿ ಅಯ್ಯರ್, ಸಿ.ಐ.ಇ., ಯವರು, ಆ॥ ಮ॥ ಟಿ. ವಿ ಶೇಷಗಿರಿ ಅಯ್ಯರ್‌ರವರು, ಆ॥ ರಾ॥ ಬ॥ ಎಲ್. ಎ ಗೋವಿಂದರಾಘವಯ್ಯರ್‌ರವರು, ಮ॥ ಪಿ. ನಾಗಭೂಷಣಂರವರು, ಮ॥ ಎಂ. ಇ. ಸಿಂಗಳಾಚಾರ್ಯರು, ಮಹಾಮಹೋಪಾಧ್ಯಾಯ ಚಂದ್ರಶೇಖರಶಾಸ್ತ್ರಿಗಳು, ಪಂಡಿತ ಟಿ. ಲಕ್ಷ್ಮಣಾಚಾರ್ಯರು, ವಿದ್ವಾನ್ ಪ್ರತಿವಾದಿಭಯಂಕರ ಅನಂತಾಚಾರ್ಯರು, ವಿದ್ವಾನ್ ಶ್ರೀಶೈಲ ತಾತಾಚಾರ್ಯರು, ವಿದ್ವಾನ್ ಕಂದೂರು ರಂಗಾಚಾರ್ಯರು, ವಿದ್ವಾನ್ ಕನ್ನಪಕ್ಕಂ ಶ್ರೀನಿವಾಸಾಚಾರ್ಯರು ಮತ್ತು ಆಯುರ್ವೇದ ಮಾರ್ತಾಂಡಭಿಷಗ್ಮಣಿ ಪಂಡಿತ ಡಿ. ಗೋಪಾಲಾಚಾರ್ಯ, ಎ. ವಿ ಎಸ್., ರವರು ಸಭಾಸ್ತಾರರಾಗಿಯೂ, ವಿದ್ವಾನ್ ಕಂಚಿಯ ಎಂ. ಕುಮಾರ ತಾತಾಚಾರ್ಯರು, ಮ॥ ಆರ್. ಸ್ವಾಮಿನಾಥಯ್ಯರ್‌ರವರು ಮತ್ತು ಭಾರತ ಸೇವಾಸಂಘದ ಮ॥ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಇರುವರು. ಈ ಪರಿಷತ್ತಿನಲ್ಲಿ (೧) ಸಂಸ್ಕೃತ ವಿದ್ಯಾಭ್ಯಾಸ ಪ್ರೋತ್ಸಾಹ, (೨) ಸಮುದ್ರಯಾನ, (೩) ಮತಾಂತರರನ್ನು ಹೊಂದಿದವರನ್ನು ಹಿಂದೂಮತಕ್ಕೆ ಮರಳಿಸೇರಿಸಿಕೊಳ್ಳುವುದು, (೪) ವಿವಾಹವಾಗತಕ್ಕ ಬಾಲಿಕೆಯರ ವಯಸ್ಸು, (೫) ವೈದಿಕಾಚರಣೆಗಳು ಮತ್ತು ಧರ್ಮಶಾಸ್ತ್ರಾನುಸಾರವಾದ ಸಾಮಾನ್ಯ ಆಚರಣೆಗಳು, (೬) ಹಿಂದೂಮತದಲ್ಲಿ ಆವಶ್ಯಕವಾದ ಬದಲಾವಣೆಗಳು, (೭) ಪಂಡಿತರುಗಳಲ್ಲಿ ಐಕ್ಯ, ಸಹಾನುಭೂತಿ ಮತ್ತು ಪರಸ್ಪರ ಮರ್ಯಾದೆಗಳನ್ನು ಕಲ್ಪಿಸುವ ಉಪಾಯ ಇಂತಿಷ್ಟು ವಿಷಯಗಳು ಪರ್ಯಾಲೋಚನೆಗಿಡಲ್ಪಟ್ಟಿರುವುವು. ಈ ಪರಿಷತ್ತಿಗೆ ಬರತಕ್ಕ ಪಂಡಿತರುಗಳ ಪ್ರಯಾಣದ ವೆಚ್ಚವು ಕಾರ್ಯಕಾರಿ ಮಂಡಳಿಯವರಿಂದ ಕೊಡಲ್ಪಡುವುದಲ್ಲದೆ, ಅವರುಗಳ ಊಟ ಉಪಚಾರಗಳೂ ಮಂಡಳಿಯವರಿಂದಲೇ ನಿರ್ವಹಿಸಲ್ಪಡುವುವು.

ಈಗ ಪಾಶ್ಚಾತ್ಯರೂ, ನಮ್ಮ ಪೂರ್ವಾರ್ತ್ಯರಾದ ಜರ್ಮನ್ ಮೊದಲಾದ ದೇಶೀಯರೂ ಕಾಲಾನುಗುಣವಾಗಿ ಸಮಾಜ ಸುಧಾರಣೆಗಳನ್ನು ಮಾಡಿಕೊಂಡು ಸುಖಸಂಪತ್ತಿನಿಂದ ಬಾಳುತ್ತಿರುವಾಗ್ಗೆ, ಭಾರತೀಯರು ಹಿಂದಣಕಾಲಕ್ಕೆ ಅನುಕೂಲವಾಗಿದ್ದ ಆಚಾರವ್ಯವಹಾರಗಳನ್ನು ಕಟ್ಟಿಕೊಂಡು ಈ ನವನಾಗರಿಕಕಾಲದಲ್ಲೂ ಒದ್ದಾಡುತ್ತಿದ್ದರೆ ಎಂದಿಗೂ ಅಭಿವೃದ್ಧಿಗೆ ಬರುವದಿಲ್ಲವೆಂಬುದರಮೇಲೆ, ಹಿಂದೂಗಳು ತಮ್ಮಲ್ಲಿ ಈಗ ಆಚರಣೆಯಲ್ಲಿರುವ ಬಾಲ್ಯವಿವಾಹವನ್ನು ಬಿಟ್ಟು ಪ್ರೌಢಾವಿವಾಹವನ್ನೂ ಪುನರ್ವಿವಾಹವನ್ನೂ ಮಾಡಲು, ಸ್ತ್ರೀಯರು ವಿದ್ಯಾವತಿಯರೂ, ಬುದ್ಧಿಮತಿಯರೂ ಆಗಿ ತಮ್ಮ ಪತಿಗಳ ಕಾರ್ಯಗಳಲ್ಲಿ ನೆರವಾಗುವಂತೆ ಮಾಡಲು ಸಮುದ್ರಯಾನ ಮಾಡಿದವರನ್ನು ಜಾತಿಯಿಂದ ಬಹಿಷ್ಕರಿಸದೆ ಸವ್ಯವಹಾರದಲ್ಲಿ ಸೇರಿಸಿಕೊಳ್ಳಲು, ಅತ್ಯಂಜರನ್ನು ತೂಷ್ಣೀಂಭಾವದಿಂದ ನೋಡದೆ ಅವರುಗಳು ವಿದ್ಯಾವಂತರೂ, ವಿವೇಕಿಗಳೂ ಆಗುವಂತೆ ಮಾಡಲು ಜಸ್ಟಿಸ್ ಚಂದಾವರ್ಕರವರು, ದಿವಾನ್‌ಬಹದ್ದೂರ್ ರಘುನಾಥರಾಯರು ಮೊದಲಾದ ಸಮಾಜ ಸುಧಾರಕರು ಪಾಟುಪಡುತ್ತಿರುವುದು ಎಲ್ಲರಿಗೂ ತಿಳಿದಂಶವಾಗಿದೆ. ಆದರೆ ಈ ಕಾರ್ಯಗಳಲ್ಲಿ ಈವರೆಗೆ ಯಾವ ಪಂಡಿತರುಗಳಾಗಲಿ, ಆಚಾರ್ಯರುಗಳಾಗಲಿ ಪ್ರಯತ್ನಿಸಿದುದಿಲ್ಲವು. ಅಂತಹದರಲ್ಲಿ ವಿಮುಖರಾಗಿದ್ದ ಪಂಡಿತರುಗಳೇ ಸಭೆಸೇರಿ ಸಮಾಜಸುಧಾರಣಾ ವಿಷಯಗಳನ್ನು ಪರ್ಯಾಲೋಚಿಸಿ, ಅನುಕೂಲವಾದ ನಿರ್ಧಾರಗಳನ್ನು ಮಾಡಲು ಸಂಕಲ್ಪಿಸಿರುವುದು ಶುಭಸೂಚಕವೇ ಸರಿ. ಬಾಲ್ಯವಿವಾಹವನ್ನು ತಪ್ಪಿಸಿ ಪ್ರೌಢಾವಿವಾಹವನ್ನು ಆಚರಣೆಗೆ ತರುವುದು, ಪುನರ್ವಿವಾಹಕ್ಕೆ ಪ್ರೋತ್ಸಾಹವನ್ನು ಕೊಡುವುದು, ಸಮುದ್ರಯಾನಮಾಡಿದವರನ್ನು ಜಾತಿಗೆ ಸೇರಿಸಿಕೊಳ್ಳುವುದು, ಒಂದು ಜಾತಿಯ ಭಿನ್ನಪ್ರಭೇದದವರು ಪರಸ್ಪರ ಸನ್ನವಕಾರವನ್ನೂ, ಬಾಂಧವ್ಯವನ್ನೂ ಬೆಳೆಸುವುದು ಮೊದಲಾದ ಕಾರ್ಯಗಳು ಪೂರ್ವಾಚಾರಕ್ಕೂ, ಶಾಸ್ತ್ರಸಮ್ಮತಿಗೂ ವಿರುದ್ಧವಾದುವುವೆಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತ, ಅಂತಹ ಕಾರ್ಯಗಳಲ್ಲುದ್ಯುಕ್ತರಾದವರನ್ನು ಅವರಿಗೆ ಜಾತ್ಯಭಿಮಾನವಿಲ್ಲವೆಂದು ಮೊದಲಾಗಿ ದೂಷಿಸುತ್ತ, ತಾವು ಹೇಳುವುದೇ ಮಹರ್ಷಿವಾಕ್ಯವೆಂದು ವಿಜೃಂಭಿಸುತ್ತಿರುವ ಪಂಡಿತವರ್ಗರು ಕಂಚಿಯ ಮಹಾಪಂಡಿತರುಗಳು ಏರ್ಪಡಿಸಿರುವ ಪರಿಷತ್ತಿಗೆ ಅವಶ್ಯವಾಗಿ ದಯಮಾಡಿಸಿ, ಅಲ್ಲಿ ಪರ್ಯಾಲೋಚನೆಗಿಡಲ್ಪಟ್ಟಿರುವ ವಿಷಯಗಳನ್ನು ಕುರಿತು ಸಯುಕ್ತಿಕವಾಗಿ ಜಿಜ್ಞಾಸವನ್ನು ನಡಿಸಿ ತಾವು ಹಿಂದುಗಡೆ ಹೇಳಿಕೊಳ್ಳುತ್ತಿರುವುದೇ ಸರ್ವಸಮ್ಮತವಾಗಿ ತೋರಿದಲ್ಲಿ ಅದರಂತೆಯಾಗಲಿ, ಅಥವಾ ತಾವು ಹೇಳುವುದು ಅನುಚಿತವೆಂದಾದಲ್ಲಿ ಬಹು ಜನರು ಸಮ್ಮತಿಸುವಂತಾಗಲಿ ನಿರ್ಧಾರಗಳನ್ನು ಮಾಡಿಸಿ, ಕಂಚಿಯ ವಿದ್ವಾಂಸರುಗಳು ಕೈಕೊಂಡಿರುವ ಮಹಾಕಾರ್ಯವು ನಿರ್ವಿಘ್ನವಾಗಿ ನಡೆದು ಸಫಲವಾಗುವಂತೆ ಮಾಡುವರೆಂದೂ, ಸಭೆಯಲ್ಲಾದ ನಿರ್ಧಾರಗಳು ಸರ್ವತ್ರ ಆಚರಣೆಗೆ ಬರಲು ನಿರ್ವಂಚನೆಯಿಂದ ಪ್ರಯತ್ನಿಸಿ ಕೀರ್ತಿವಂತರಾಗುವರೆಂದೂ ನಾವು ನಿರೀಕ್ಷಿಸುತ್ತೇವೆ.

ಸೀನಿಯರ್ ಸರ್ಜನರವರು.

ಮೈಸೂರ ಸಂಸ್ಥಾನದ ಸೀನಿಯರ್ ಸರ್ಜನರಾಗಿದ್ದ ಕರ್ನಲ್ ಸ್ಮೈತ್‌ರವರು ಉದ್ಯೋಗವನ್ನು ಬಿಟ್ಟು ಬ್ರಿಟಿಷ್ ಸರ್ಕಾರದಲ್ಲಿ ತಮ್ಮ ಪೂರ್ವದ ಉದ್ಯೋಗದಮೇಲೆ ಹೋದಂದಿನಿಂದ ಎಂದರೆ ೧೯೧೧ ನೇ ಜೂನ್ ತಾ॥ ೧೩ ರಿಂದ ಸೀನಿಯರ್ ಸರ್ಜನರ, ಸ್ಯಾನಿಟರಿ ಕಮಿಷನರ ಮತ್ತು ಕಾರಾಗೃಹಗಳ ಇ॥ ಜನರಲ್‌ರವರ ಉದ್ಯೋಗಗಳನ್ನು ಅಫಿಷಿಯೇಟಿಂಗಾಗಿ ನೋಡುತ್ತಿದ್ದ ಡಾಕ್ಟರ್ ಪಿ. ಎಸ್. ಅಚ್ಯುತರಾಯರು ಮೇಲಿಕಂಡ ಉದ್ಯೋಗಗಳಲ್ಲಿ ಸ್ಥಿರಗೊಳಿಸಲ್ಪಟ್ಟದ್ದಾರೆಂದು ತಿಳುಹಲು ಪರಮಾನಂದವಾಗುತ್ತದೆ ಈ ಸಂಸ್ಥಾನದ ಸರ್ಜನರ ಅಧಿಕಾರಸ್ಥಾನವು ಏರ್ಪಾಟಾದಂದಿನಿಂದ ಕಳೆದ ಜೂನ್ ತಿಂಗಳವರೆಗೂ ಐರೋಪ್ಯಡಾಕ್ಟರುಗಳಿಗೇ ಅದು ಕೊಡಲ್ಪಡುತ್ತಿದ್ದಿತಲ್ಲದೆ, ದೇಶೀಯರಾದ ಡಾಕ್ಟರುಗಳಲ್ಲಾರಿಗೂ ಕೊಡಲ್ಪಡುತ್ತಿರಲಿಲ್ಲವು. ಇದರಂತೆಯೇ ಸಂಸ್ಥಾನದ ಚೀಫ್ ಇಂಜನಿಯರ ಸ್ಥಾನವು ಪ್ರಸಿದ್ಧ ಇಂಜನಿಯರೆಂದು ಬ್ರಿಟಿಷ್ ಮತ್ತು ನೈಜಾಂ ಸರ್ಕಾರಗಳಲ್ಲೂ, ಸೀಮೆಯಲ್ಲೂ ಹೆಸರ್ವಡೆದಿರುವ ಮ॥ ಮೋಕ್ಷಗೊಂಡಂ ವಿಶ್ವೇಶ್ವರಯ್ಯ, ಬಿ.ಎ., ಎಲ್.ಸಿ.ಇ, ಸಿ.ಐ.ಇ, ಯವರಿಗೆ ಲಭ್ಯವಾಗುವುದಕ್ಕೆ ಮೊದಲು ದೇಶೀಯರಲ್ಲಾರಿಗೂ ಕೊಡಲ್ಪಟ್ಟಿರಲಿಲ್ಲವು. ಇದಕ್ಕೆ ಈ ಉಭಯ ಉನ್ನತಾಧಿಕಾರಸ್ಥಾನಗಳು ಐರೋಪ್ಯರಿಗಲ್ಲದೆ ದೇಶೀಯರಿಗೆ ಕೊಡಲ್ಪಡಲಾಗದೆಂಬುದು ಬ್ರಿಟಿಷ್ ಸರ್ಕಾರದವರ ಅಭಿಪ್ರಾಯವಾಗಿದ್ದುದೇ ಕಾರಣವೆಂದು ಕೆಲರು ಹೇಳುತ್ತಾರೆ. ಆದರೆ ಈಗ ಈ ಉಭಯಸ್ಥಾನಗಳೂ, ದೇಶೀಯರಿಗೇ ಕೊಡಲ್ಪಟ್ಟಿರುವುದರಿಂದ ಮೇಲೆ ಹೇಳಿದ ಕಾರಣವು ಸಮಂಜಸವಾದುದಲ್ಲವೆಂದೂ, ಬಹು ಉತ್ತರವಾದಿತ್ವವುಳ್ಳುದೂ, ಘನವೂ ಆದ ಸ್ಥಾನಗಳಿಗೆ ಅರ್ಹರಾದ ದೇಶೀಯರ ನಿರೀಕ್ಷಣೆಯೇ ಕಾರಣವಾಗಿದ್ದಿತೆಂದೂ ಸ್ಪಷ್ಟವಾಗುತ್ತದೆ. ಚೀಫ್ ಇಂಜನಿಯರ ಸ್ಥಾನವು ಸ್ವದೇಶೀಯರಾದ ಮ॥ ಎಂ. ವಿಶ್ವೇಶ್ವರಯ್ಯನವರಿಗೆ ಲಭ್ಯವಾದುದರಿಂದ, ಈ ದೇಶೀಯರಿಗುಂಟಾಗಿರುವ ಸಂತೋಷವು ಸ್ವದೇಶೀಯರಾದ ಡಾಕ್ಟರ್ ಅಚ್ಯುತರಾಯರಿಗೆ ಸೀನಿಯರ್ ಸರ್ಜನರ ಉದ್ಯೋಗವು ಕೊಡಲ್ಪಟ್ಟಿರುವುದರಿಂದ ಇನ್ನೂ ಅತಿಶಯವಾಗಿರುವುದು.

ಡಾ॥ ಅಚ್ಯುತರಾಯರು ೧೮೬೭ ನೇ ಡಿಸೆಂಬರ್ ತಾ॥ ೨೦ ರಲ್ಲಿ ಸಾಧಾರಣ ಕುಟುಂಬದಲ್ಲಿ ಜನಿಸಿ, ಬೆಂಗಳೂರಲ್ಲಿ ವಿದ್ಯಾಭ್ಯಾಸಂಗಮಾಡಿ ಅಲ್ಲಿಂದ ಬೊಂಬಾಯಿಗೆ ಹೋಗಿ ಅಲ್ಲಿ ವೈದ್ಯಪರೀಕ್ಷೆಗೆ ಓದಿ ಎಲ್. ಎಂ. ಅಂಡ್ ಎಸ್. ಪ್ರಶಸ್ತಿಯನ್ನು ಪಡೆದುಕೊಂಡು ಬಂದು ೧೮೮೪ ನೇ ಏಪ್ರಿಲ್ ತಾ॥ ೧ ರಲ್ಲಿ ಮೈಸೂರ ಸರ್ಕಾರದಲ್ಲಿ ೩ ನೇ ತರಗತಿಯ ಅಸಿಸ್ಟೆಂಟ್ ಸರ್ಜನರಾಗಿ ಉದ್ಯೋಗಕ್ಕೆ ಸೇರಿ ೧೮೮೯ ರಲ್ಲಿ ೨ ನೇ ತಾ॥ ಗೆ ಅಭಿವೃದ್ಧಿಗೊಳಿಸಲ್ಪಟ್ಟು ಬೆಂಗಳೂರು ಮೈಸೂರು, ಕಡೂರು ಮತ್ತು ಶಿವಮೊಗ್ಗೆಗಳಲ್ಲಿ ಕೆಲಸಮಾಡಿ, ೧೮೯೧ ರಲ್ಲಿ ೩ ನೇ ತಾ॥ ಸಿವಿಲ್ ಸರ್ಜನರಾಗಿ ಮಾಡಲ್ಪಟ್ಟರು. ಶಿವಮೊಗ್ಗ ಮತ್ತು ಕಡೂರುಗಳಲ್ಲಿದ್ದು ೧೮೯೩ ರಲ್ಲಿ ೨ ನೇ ತಾ॥ ಗೆ ಅಭಿವೃದ್ಧಿಯನ್ನು ಹೊಂದಿ ಮೈಸೂರಿಗೆ ಬಂದು ೧೮೯೮ ರಲ್ಲಿ ಮೈಸೂರ ಜಿಲ್ಲಾ [illegible]ರಾಗಿಯೂ, ೯೯ ರಲ್ಲಿ ಚೀಫ್ ಪ್ಲೇಗ್ ಆಫೀಸರರಾಗಿಯೂ ಇದ್ದು ೧೯೦೩ ರಲ್ಲಿ ಸಿವಿಲ್ ಸರ್ಜನರ ೧ ನೇ ತಾ॥ ಗೆ ಅಭಿವೃದ್ಧಿಯನ್ನು ಹೊಂದಿ ಮೈಸೂರ ಸಿವಿಲ್ ಸರ್ಜನ್ ಮತ್ತು ಚೀಫ್ ಪ್ಲೇಗ್ ಆಫೀಸರರಾಗಿ ೧೯೦೮ ನೇ ಜೂನ್ ವರೆಗಿದ್ದು ಅನಂತರ ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟರು ಈ ಉದ್ಯೋಗದಲ್ಲಿ ೧೯೧೧ ನೇ ಜೂನ್ ತಾ॥ ೧೦ ರ ವರೆಗಿದ್ದು ತಾ॥ ೧೩ರಲ್ಲಿ ಅಫಿಷಿಯೇಟಿಂಗ್ ಸೀನಿಯರ್ ಸರ್ಜನರಾಗಿ ನಿಯಮಿಸಲ್ಪಟ್ಟು ಈಗ ಸ್ಥಿರಗೊಳಿಸಲ್ಪಟ್ಟಿರುತ್ತಾರೆ. ಇವರು ಹಿಂದೆ ೪ ಸಲ ಸೀನಿಯರ್ ಸರ್ಜನರ ಉದ್ಯೋಗವನ್ನು ಬದಲು ನೋಡಿದ್ದರು ಮತ್ತು ಮದ್ರಾಸು, ವೆಲ್ಲೂರು, ಗುಲ್ಬರ್ಗ, ಅಹಮದಾಬಾದು ಮೊದಲಾದ ಸ್ಥಳಗಳ ಕಾರಾಗೃಹಗಳಲ್ಲಿ ಸೆರೆಗಳನ್ನು ಪಾಲಿಸುವ ವಿಧಾನವನ್ನರಿತು ಬರಲು ಕಳುಹಲ್ಪಟ್ಟಿದ್ದರು. ಯುವರಾಜ ದಂಪತಿಗಳು ರಾಜಧಾನಿಗೆ ದಯಮಾಡಿಸಿದ್ದಾಗ್ಗೆ ಅವರ ಸತ್ಕಾರಕ್ಕಾಗಿ ಮಾಡಲ್ಪಟ್ಟಿದ್ದ ಏರ್ಪಾಡುಗಳಲ್ಲಿ ವಿಶೇಷ ಶ್ರದ್ಧೆಯಿಂದಲೂ, ಸಮರ್ಥತೆಯಿಂದಲೂ ಕೆಲಸಮಾಡಿದುದನ್ನು ಶ್ರೀಮನ್ಮಹಾರಾಜರವರು ಮೆಚ್ಚಿ ಕಿಲ್ಲತ್ತುಗಳನ್ನು ದಯಪಾಲಿಸಿದರು. ಡಾ॥ ಅಚ್ಯುತರಾಯರು ಅತ್ಯಂತ ಸರಸಿಗಳು, ಬಡವರು ಬಲ್ಲಿದರು ಎಂಬ ತಾರತಮ್ಯವಿಲ್ಲದೆ ಪ್ರತಿಯೊಬ್ಬರನ್ನೂ ಒಂದೇ ಸಮನಾಗಿ ಕಾಣುವವರು, ಪೂರ್ಣ ದಯಾಶಾಲಿಗಳು, ತ್ಯಾಗಿಗಳು ಮತ್ತು ಜಾತಿ ತಾರತಮ್ಯರಹಿತರು ಎಂಬುದು ಅವರನ್ನು ಕಂಡು ಕೇಳಿರುವವರಿಗೆಲ್ಲಾ ಚೆನ್ನಾಗಿ ಗೊತ್ತಿದೆ. ಪ್ಲೇಗು ಮಹಾಮಾರಿರೋಗವು ಮೊದಲನೆಯಾವೃತ್ತಿ ರಾಜಧಾನಿಯಲ್ಲಿ ಪ್ರಾರಂಭವಾದಾಗ್ಗೆ, ರೋಗಿಗಳನ್ನು ಬಲವಂತದಿಂದ ಕ್ಯಾಂಪಿಗೆ ಸಾಗಿಸಿ ಬಟ್ಟೆ ಬರೆಗಳನ್ನೆಲ್ಲಾ ಸುಟ್ಟು, ಸೋಂಕು ತಗಲಿದವರನ್ನು ಬೇರ್ಪಡಿಸಲು ಸರ್ಕಾರದವರು ಕಲ್ಪಿಸಿದ್ದ ನಿರ್ಬಂಧದಿಂದ ಜನರೆಲ್ಲರೂ ಭೀತರಾಗಿ ತಲ್ಲಣಿಸುತ್ತಿರುವಾಗ್ಗೆ ಡಾ॥ ಅಚ್ಯುತರಾಯರು ಜನರಿಗೆ ಧೈರ್ಯವನ್ನು ಹೇಳಿ ಅವರ ಭಯವನ್ನು ತಪ್ಪಿಸಿದುದಲ್ಲದೆ, ಸರ್ಕಾರಿಯೇರ್ಪಾಟು ನಿರ್ವಿಘ್ನವಾಗಿ ನಡೆಯುವಂತೆ ಮಾಡಿ, ರೋಗದಿಂದ ನಾಥರನ್ನೂ, ತಂದೆತಾಯಿಗಳನ್ನೂ ಕಳೆದುಕೊಂಡು ನಿರ್ಗತಿಕರಾದ ಎಷ್ಟೋ ಹೆಂಗುಸರು ಮಕ್ಕಳುಗಳಿಗೆ ತಮ್ಮ ಸ್ವಂತದಿಂದ ದುಡ್ಡನ್ನು ಕೊಟ್ಟು ರಾಜಧಾನಿಯ ಜನರಲ್ಲಿ ಚಿರಸ್ಮರಣೀಯರಾಗಿರುವರು. ಇದರಂತೆಯೇ ಇವರು ಕೆಲಸಮಾಡಿರುವ ಇತರ ಸ್ಥಳಗಳಲ್ಲೆಲ್ಲಾ ಜನರ ಪ್ರೀತಿವಿಶ್ವಾಸಗಳನ್ನು ವಿಶೇಷವಾಗಿ ಸಂಪಾದಿಸಿರುವರು. ಈ ರೀತಿಯಾಗಿ ಲೋಕಮಾನ್ಯರಾಗಿರುವ ಡಾ॥ ರಾಯರು ಐರೋಪ್ಯರಿಂದ ಮಾತ್ರ ನಿರ್ವಹಿಸಲ್ಪಡತಕ್ಕದೆಂದು ಭಾವಿಸಲ್ಪಟ್ಟಿದ್ದ ಉದ್ಯೋಗವನ್ನು ಸಮರ್ಥತೆಯಿಂದ ನಿರ್ವಹಿಸಿ ಶ್ರೀಮನ್ಮಹಾರಾಜರವರ ಮೆಚ್ಚಿಗೆಗೆ ಪಾತ್ರರಾಗಿ ಆ ಉದ್ಯೋಗದಲ್ಲಿ ಸ್ಥಿರಗೊಳಿಸಲ್ಪಟ್ಟಿರುವುದು ಅಭೂತಪೂರ್ವವಾಗಿರುವುದಲ್ಲದೆ, ಈ ದೇಶಕ್ಕೇ ಕೀರ್ತಿಪ್ರತಿಷ್ಠೆಯನ್ನುಂಟುಮಾಡತಕ್ಕದಾಗಿದೆ. ಡಾ॥ ರಾಯರು ಈ ನೂತನ ಪದವಿಯಲ್ಲಿ ೪—೫ ವರ್ಷಗಳಿದ್ದು ಪ್ರಭುಗಳ ಪೂರ್ಣವಾದ ದಯೆಯನ್ನೂ, ಪ್ರಜೆಗಳ ಪ್ರೀತಿವಿಶ್ವಾಸಗಳನ್ನೂ ಈಗಿಂತಲೂ ಅತಿಶಯವಾಗಿ ಪಡೆಯುವವರಾಗಲೆಂದು ಇಚ್ಛಿಸುತ್ತೇವೆ

ಒಳದೇಶದ ವೃತ್ತಾಂತಗಳು.

ದಿವಾನರು ಕಳೆದ ಶನಿವಾರದ ರಾತ್ರಿ ಬೆಂಗಳೂರಿಗೆ ದಯಮಾಡಿಸಿದ್ದು ಈ ದಿವಸ ಬೆಳಿಗ್ಗೆ ರಾಜಧಾನಿಗೆ ಬಂದರು; ಪುನಃ ತಾ॥ ೬ ಅಥವಾ ೭ ರಲ್ಲಿ ಬೆಂಗಳೂರಿಗೆ ಹಿಂತಿರುಗುವವರಾಗಿರುವರು.

ಶ್ರೀಮನ್ ಮಹಾರಾಜರವರೂ ಶ್ರೀಯುವರಾಜರೂ ಈ ತಾ॥ ೬ ರಲ್ಲಿ ಉದಕಮಂಡಲಕ್ಕೆ ಸೀಗೂರು ಮಾರ್ಗವಾಗಿ ಮೋಟಾರು ಬಂಡಿಯಲ್ಲಿ ಚಿತ್ತೈಸುವುದಾಗಿಯೂ, ರಾಣಿವಾಸದವರು ರೈಲುಬಂಡಿಯಲ್ಲಿ ಬೆಂಗಳೂರ ಮಾರ್ಗವಾಗಿ ದಯಮಾಡಿಸುವುದಾಗಿಯೂ ಅರಿಯುತ್ತೇವೆ.

ಕರ್ನಲ್ ದೇಶರಾಜ ಅರಸಿನವರ ೨ ನೆಯ ಕುಮಾರಿಯವರ ದೇಹಸ್ಥಿತಿಯನ್ನು ನೋಡುವುದಕ್ಕಾಗಿ ಮದ್ರಾಸಿನ ಡಾ॥ ನಂಜುಂಡರಾಯರು ಕಳೆದ ತಾ॥ ೨೮ ರಲ್ಲಿ ರಾಜಧಾನಿಗೆ ಬಂದರು. ಇವರು ಪ್ರಾಯಶಃ ಈಹೊತ್ತು ನಾಳೆಯಲ್ಲಿ ಹಿಂದಿರುಗುವವರಾಗಿರುವರು

ರಾಜಧಾನಿಯ ಶ್ರೀಮಂತ ನೀಲಗಿರಿ ಪುಟ್ಟಣ್ಣ ಶೆಟ್ಟರು ಕಳೆದ ತಿಂಗಳಲ್ಲಿ ವಿವಾಹಮಾಡಿಕೊಟ್ಟ ತಮ್ಮ ಕುಮಾರ ದಂಪತಿಗಳ ಆರ್ಶೀಕ್ಷತೆಯನ್ನು ಕಳೆದ ತಾ॥ ೨೪ರಲ್ಲಿ ಮಾಡಿಸಿ ದಿವಾನರು, ದರ್ಬಾರ್ ಭಕ್ಷಿಯವರು ಮೊದಲಾದ ಅಧಿಕಾರಿಗಳನ್ನು ಬರಮಾಡಿಕೊಂಡು ಸಂಗೀತಶ್ರವಣದಿಂದಲೂ, ಅಲ್ಪಾಹಾರದಿಂದಲೂ ತೃಪ್ತಿಗೊಳಿಸಿದರು.

ಖೆಡ್ಡಾ ಸೂಪರಿಂಟೆಂಡೆಂಟರಾಗಿದ್ದು ಈಗ ಪೇನ್ಷನ್ನಿನ ಮೇಲೆ ನಿವೃತ್ತರಾಗಿರುವ ಮ॥ ಕೆ. [illegible] ಬೆಂಗಳೂರ ಅಡ್ವೋಕೇಟ್ ಮ॥ ಎಸ್. [illegible] ರೂ., ಮದ್ರಾಸ್ ಬ್ಯಾಂಕಿಗೆ [illegible] ರೂ. [illegible] ಗೆ ಮೊದಲಾಗಿ ಒಟ್ಟು ಕೊಡಬೇಕಾಗಿರುವ ೩೪೫೦೦ ಚಿಲ್ಲರೆ ರೂಪಾಯಿಗಳ ಸಾಲವನ್ನು ತೀರಿಸಲು ಮಾರ್ಗವಿಲ್ಲದೆ ಪಾಪರ್ ಸರ್ಟಿಫಿಕೇಟನ್ನು ಪಡೆದುಕೊಂಡಿರುವರು.

ರಾಜಧಾನಿಗೆ ಜೋಧಪುರದಿಂದ ಬಂದಿರುವ ಒಬ್ಬ ಜ್ಯೋತಿಷ್ಯರು ಶ್ರೀಮನ್ಮಹಾರಾಜರವರ ಜಾತಕವನ್ನು ನೋಡಿ ಗ್ರಹಗಳ ಗತಿಯು ಕೊಂಚ ಕ್ರೂರವಾಗಿರುವುದರಿಂದ, ತಕ್ಕ ಶಾಂತಿಯನ್ನು ಮಾಡಿಸಬೇಕೆಂದು ಹೇಳಿದುದರ ಮೇಲೆ, ಶ್ರೀ ಪರಕಾಲಸ್ವಾಮಿಗಳನ್ನು ೩-೪ ವೇಳೆ ಅರಮನೆಗೆ ಬರಮಾಡಿಕೊಂಡು ಅನೇಕ ಜಪಗಳನ್ನು ಮಾಡಿಸಿ ಬೇಕಾದ ದಾನಧರ್ಮಗಳನ್ನು ಮಾಡಿಸಿದುದಾಗಿ ಅರಿಯುತ್ತೇವೆ.

ಕಳೆದ ತಾ॥ ೨೮ ರಲ್ಲಿ ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮ॥ ಎಂ. ಜಿ ಕೃಷ್ಣಸ್ವಾಮಿರಾಯರು, ಮ್ಯು॥ ಕಮಿಷನರುಗಳಾದ ಮ॥ ಎಂ. ವೆಂಕಟಕೃಷ್ಣಯ್ಯನವರು ಮತ್ತು ಮ॥ ಅಣ್ಣಯ್ಯಪಂಡಿತರು ಇವರುಗಳೊಡನೆ ದಿವಾನರು ಚಾಮರಾಜ ಮೊಹಲ್ಲಾದಲ್ಲಿ ಅನಾಥಾಲಯವನ್ನು ಕಟ್ಟಲು ಸ್ಥಳವನ್ನು ಪರೀಕ್ಷಿಸಿ ಚಾಮರಾಜಪುರದ ಅಂಚೆಯ ಮತ್ತು ತಂತಿಯ ಆಫೀಸಿನ ಬಳಿ ಇರುವ ತ್ರಿಕೋಣಾಕಾರವಾದ ಸ್ಥಳವನ್ನು ಕೊಂಡುಕೊಡತಕ್ಕದೆಂದು ಅಪ್ಪಣೆಮಾಡಿದರು.

ಕಳೆದ ಗುರುವಾರ ಮೇಲುಕೋಟೆಯಲ್ಲಿ ವೈರಮುಡಿಯುತ್ಸವವೂ, ಶನಿವಾರ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪಂಚರಥೋತ್ಸವವೂ ಬಹು ವಿಜೃಂಭಣೆಯಿಂದ ನಡೆದುವು. ಈ ವೇಳೆ ಉಭಯಸ್ಥಳಗಳಲ್ಲೂ ರೋಗೋಪದ್ರವವಿಲ್ಲದಿದ್ದುದರಿಂದ, ಪರಸೆಯ ಜನರ ಸ್ತೋಮವು ವಿಪರೀತವಾಗಿದ್ದಿತು. ನಿತ್ಯಗಟ್ಟಲೆಯ ರೈಲುಬಂಡಿಗಳಲ್ಲದೆ ೨-೩ ಹೆಚ್ಚುಗಟ್ಟಲೆಯ ಬಂಡಿಗಳು ಬಿಡಲ್ಪಟ್ಟುವು. ಶ್ರೀಮನ್ಮಹಾರಾಜರವರ ಸವಾರಿಯು ಮಾತ್ರ ಈ ವೇಳೆ ನಂಜನಗೂಡಿಗೆ ಏನುಕಾರಣದಿಂದಲೋ ಚಿತ್ತೈಸಲಿಲ್ಲವು.

ರಾಜಧಾನಿಯಲ್ಲಿ ಹಗಲಿನಲ್ಲೆಲ್ಲಾ ಬಿಸಿಲಿನ ಝಳವು ಸಹಿಸಲಶಕ್ಯವಾಗಿದ್ದು ರಾತ್ರಿ ಮಾತ್ರ ಗಾಳಿಯು ವಿಪರೀತವಾಗಿ ಬೀಸುತ್ತಿರುವುದು. ಮೊನ್ನೆಯಿಂದ ಸಾಯಂಕಾಲದ ವೇಳೆ ಮೋಡಕಟ್ಟುತ್ತಿದ್ದು ನಿನ್ನೆಯ ಸಾಯಂಕಾಲ ಕೊಂಚ ಮಳೆಯಾಯಿತು. ಮತ್ತು ಮುಂದೆ ಮಳೆಯು ಬರುವ ಚಿನ್ಹೆಯಿದೆ. ಕಳೆದ ತಾ॥ ೨೮ ರಲ್ಲಿ ವೈಸ್‌ರಾಯರ ಮಾರ್ಗದಲ್ಲಿ ಬಹು ವೇಗವಾಗಿ ಬರುತ್ತಿದ್ದ ಜಟಕಾಬಂಡಿಯ ಕುದುರೆಯು ರಾ॥ ಬ॥ ಎ. ನರಸಿಂಹಯ್ಯಂಗಾರರ ಮನೆಯ ಸಮೀಪದಲ್ಲಿ ಬೀದಿ ಮಾರ್ಗದ ಪಕ್ಕದಲ್ಲಿರುವ ಕಟಕಟಿಯ ಮೇಲೆ ನುಗ್ಗಲು ಬಂಡಿಯು ಮಗುಚಿಕೊಂಡಿತು. ಇದರಿಂದ ಕುದುರೆಯ ಮುಂಗಾಲಿಗೆ ತುಂಬಾ ಪೆಟ್ಟುಬಿದ್ದು ರಕ್ತವು ಸುರಿದಿತು ಆದರೆ, ಒಳಗೆ ಕುಳಿತಿದ್ದವರಿಗೆ ಪೆಟ್ಟು ಬೀಳಲಿಲ್ಲವು. ಹತ್ತಿರವಿದ್ದ ಜನರು ಬಂದು ಬಂಡಿಯನ್ನುಮೇಲಕ್ಕೆತ್ತಿದರು.

ಬೆಂಗಳೂರ ಡಿ॥ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಡಾಕ್ಟರ್ ಎ. ಮುತ್ತುಸ್ವಾಮಿದಾಸ್‌ರವರು ರಚಿಸಿರುವ ಪ್ಲೇಗ್ ಚಿಕಿತ್ಸಾಸಾರವೆಂಬ ಪುಸ್ತಕವನ್ನು ಕರ್ತರಿಂದ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿವೆವು. ಈ ಗ್ರಂಥಕರ್ತರು ಪ್ಲೇಗು ರೋಗದ ತರಹೆಗಳು, ಅವುಗಳ ಚಿನ್ಹೆಗಳು, ರೋಗವು ವ್ಯಾಪಿಸುವವಿಧಾನ, ಚಿಕಿತ್ಸಾಕ್ರಮ ಮೊದಲಾದ ವಿಷಯಗಳನ್ನು ಅನುಭವದಿಂದ ಬಹು ಉತ್ಕೃಷ್ಟವಾಗಿ ಬರೆದಿರುವರು. ಈ ರೋಗಕ್ಕೆ ಜನರು ತುತ್ತಾಗದಂತೆ ತಪ್ಪಿಸಿಕೊಳ್ಳಲು ಮತ್ತು ಒಂದುವೇಳೆ ವೈದ್ಯರಿಲ್ಲದ ಸ್ಥಳಗಳಲ್ಲಿ ರೋಗಗ್ರಸ್ತರಾದರೆ ಅದನ್ನು ಪರಿಹರಿಸಿಕೊಳ್ಳಲು ಈ ಚಿಕ್ಕ ಪುಸ್ತಕವು ಅತ್ಯಂತ ಸಾಹಾಯ್ಯಕಾರಿಯಾಗಿರುವುದರಿಂದ ಇದನ್ನು ಪ್ರತಿಯೊಬ್ಬರೂ ಅಗತ್ಯವಾಗಿ ಸಂಗ್ರಹಿಸಿಡತಕ್ಕದಾಗಿದೆ. ಡಾ॥ ಮುತ್ತುಸ್ವಾಮಿದಾಸರವರಂತೆ ಎಲ್ಲಾ ಡಾಕ್ಟರುಗಳೂ ಪ್ರಾಣಿಗಳಿಗೆ ಪ್ರಾಣಾಪಾಯಕರವಾದ ಸಾಂಕ್ರಾಮಿಕ ಜಾಡ್ಯಗಳ ವಿಚಾರದಲ್ಲಿ ತಮ್ಮಗಳಿಗುಂಟಾಗಿರುವ ಅನುಭವವಿಚಾರವನ್ನು ಪುಸ್ತಕರೂಪದಿಂದ ಪ್ರಕಟಿಸಿದರೆ, ಅನೇಕರು ಅಜಾಗರೂಕತೆಯಿಂದಲೋ ಅಥವಾ ತಕ್ಕ ರೋಗನಿವಾರಣೋಪಾಯವನ್ನರಿಯದೆಯೋ ಅಕಾಲಮೃತ್ಯುವಿನ ಪಾಲಾಗುವುದು ಕಡಿಮೆಯಾಗುತ್ತದಲ್ಲದೆ ತಮ್ಮ ಯಶಸ್ಸೂ ಪ್ರಖ್ಯಾತಿಗೆ ಬರುತ್ತದೆನ್ನುವುದರಲ್ಲಿ ಸಂದೇಹವಿಲ್ಲವು.

ಶೃಂಗಗಿರಿ ಮಠದ ಗತಿಸಿದ ಶ್ರೀಗಳವರು ತಮ್ಮುತ್ತರಾಧಿಕಾರಕ್ಕೆ ಯಾರನ್ನೂ ಮೊದಲೇ ಗೊತ್ತುಪಡಿಸಿರಲಿಲ್ಲವಾಗಿ ತಮಗೆ ಅವಸಾನವು ಪ್ರಾಪ್ತಿಸಿದ ವೇಳೆಯಲ್ಲಿ "ಬೆಂಗಳೂರ ಶಂಕರಮಠದಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡುತ್ತಿರುವ ನಮ್ಮ ಪೂರ್ವಾಶ್ರಮ ಬಂಧುವಾದ ೧೩-೧೪ ವರ್ಷ ವಯಸ್ಸಿನ ನರಸಿಂಹಯ್ಯನೆಂಬಾತನಿಗೆ ನಮ್ಮ ಉತ್ತರಾಧಿಕಾರವನ್ನು ಕೊಡಲು ತಮ್ಮ ಸುಮುತಿಯಾಗಬೇಕು" ಎಂದು ಒಂದು ಲೇಖನವನ್ನು ಬರೆದು ಆಪ್ತರೊಬ್ಬರ ಕೈಗೆ ಕೊಟ್ಟು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಕಳುಹಿಸಿರುವಲ್ಲಿ, ಮಹಾರಾಜರು ಅದನ್ನು ಪರಿಶೀಲಿಸಿ ಶ್ರೀಗಳವರ ಇಷ್ಟದಂತೆ ನೆರವೇರಿಸುವುದಾಗಿ ಅಭಿಪ್ರಾಯವನ್ನು ಕೊಟ್ಟಿರುವ ವೇಳೆ, ಆ ಕಾಗದವನ್ನು ತಂದಿದ್ದ ಆಪ್ತರು ಬೆಂಗಳೂರಿಗೆ ಹೋಗಿ ಆ ವಿದ್ಯಾರ್ಥಿಯನ್ನು ಕರೆದುಕೊಂಡು ಶೃಂಗಗಿರಿಯನ್ನು ತಲುಪುವುದರೊಳಗಾಗಿ ಶ್ರೀಗಳವರು ಪರಮಪದವಿಯನ್ನೈದಿದ್ದುದರಿಂದ ಅವರ ಸಂಕಲ್ಪವು ನೆರವೇರಲವಕಾಶವಿಲ್ಲವಾಯಿತೆಂದು ಕೆಲರು ಹೇಳುತ್ತಾರೆ. ಮತ್ತು ಗತಿಸಿದ ಶ್ರೀಗಳವರ ಪ್ರಭೇದದವರಾದ ಆಂಧ್ರರು ತಮ್ಮಲ್ಲಿ ಅರ್ಹನಾದವನು ಅಧಿಕಾರಕ್ಕೆ ನಿಯಮಿಸಲ್ಪಡಬೇಕೆಂದೂ, ದ್ರಾವಿಡರು ಕಳೆದ ೩-೪ ತಲೆಗಳಿಂದಲೂ ಪೀಠದ ಅಧಿಕಾರವು ಆಂಧ್ರರ ಪಾಲಿಗೇ ಬಂದಿರುವುದರಿಂದ ಈವೇಳೆ ತಮ್ಮ ಪ್ರಭೇದದಲ್ಲೊಬ್ಬರು ನಿಯಮಿಸಲ್ಪಡಬೇಕೆಂದೂ ಜಿಜ್ಞಾಸದ ಹೋರಾಟಗಳನ್ನು ನಡೆಯಿಸುತ್ತಿರುವುದಾಗಿ ಕೇಳುತ್ತೇವೆ ಆದರೆ ಜನರು ಹೇಳುವಂತೆ ಶ್ರೀಗಳವರು ತಮ್ಮ ಮನೋಗತವನ್ನು ಪತ್ರದ್ವಾರ ಶ್ರೀಮನ್ಮಹಾರಾಜರವರಿಗೆ ತಿಳಿಸಿರುವುದೂ, ಮಹಾರಾಜರವರು ಅದನ್ನು ಸಮ್ಮತಿಸಿ ಉತ್ತರವನ್ನು ಕೊಟ್ಟಿರುವುದೂ ನಿಜವಾಗಿದ್ದ ಪಕ್ಷದಲ್ಲಿ ಈಗಲೂ ಅದರಂತೆಯೇ ನಡಿಸಲ್ಪಡುವುದೆನ್ನುವುದರಲ್ಲಿ ಭ್ರಾಂತಿಯಿಲ್ಲವು.

ವರ್ತಮಾನ ಸಂಗ್ರಹವು.

ಆಸ್ಟ್ರಿಯಾದಲ್ಲಿರುವ ಆಲಪ್ಸ್ ಪರ್ವತದಲ್ಲಿ ಸಂಚರಿಸುತ್ತಿದ್ದ ೧೦ ಜನರು ಮಂಜಿನಲ್ಲಿ ಸಿಕ್ಕಿ ಸತ್ತುಹೋದರು.

ಆನರಬಲ್ ಗೋಖಲೆಯವರು ದೇಹಾರೋಗ್ಯಕ್ಕಾಗಿ ಇಷ್ಟರಲ್ಲೇ ಯೂರುಪುದೇಶದ ಸಂಚಾರ ಹೊರಡುವವರಾಗಿರುವರು.

ಸೈನ್ಯಕಾಬಿಯವರು ಆಕಾಶವಿಮಾನವನ್ನು ಉಪಯೋಗಿಸುವುದಕ್ಕಾಗಿ ಫ್ರೆಂಚ್ ಸರ್ಕಾರದವರು ೯೬೦೦೦೦ ರೂಗಳನ್ನು ಗೊತ್ತುಮಾಡಿರುವರು.

ಪಿಷಾವರ ಪಟ್ಟಣದಲ್ಲಿ ಅಗ್ನಿಪ್ರವೇಶವಾಗಿ ೩೦೦ ಮನೆಗಳು ಸುಟ್ಟು ಭಸ್ಮವಾದುವು. ಇದರಿಂದ ಬಹು ದ್ರವ್ಯ ನಷ್ಟವಾಗಿರುವುದಲ್ಲದೆ ಅನೇಕರಿಗೆ ನಿಲ್ಲಲು ನೆಳಲಿಲ್ಲದಂತಾಗಿದೆ.

ಲಾಹೋರಿನ ಚೀಫ್‌ಕೋರ್ಟ್ ರಿಜಿಸ್ಟ್ರಾರರಾದ ಮಿ॥ ಎ ಎಲ್. ಡಾರ್ಸ್ಲೆ, ಐ. ಸಿ. ಎಸ್ ರವರು ಮಲಗಿದ್ದ ಕೊಠಡಿಯಿಂದ ನಿದ್ರೆಯಲ್ಲಿಯೇ ಹೊರಗಡೆ ನಡೆದುಕೊಂಡುಬಂದು ಕಟಕಟಿಯಿಂದ ಕೆಳಗೆಬಿದ್ದು ಸತ್ತುಹೋದರು.

ಬರ್ಮಾಕ್ಕೆ ಸೇರಿದ ಒಂದು ಗ್ರಾಮದಲ್ಲಿ ೫೪ ಜನ ಕಳ್ಳರು ಕೋವಿ, ದೊಣ್ಣೆ, ಕತ್ತಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಒಬ್ಬ ಶ್ರೀಮಂತನ ಮನೆಗೆನುಗ್ಗಿ ಒಳಗಿದ್ದ ಪದಾರ್ಥಗಳನ್ನೆಲ್ಲಾ ಅಪಹರಿಸಿಕೊಂಡು ಮನೆಗೆ ಬೆಂಕಿಯನ್ನು ಹೊತ್ತಿಸಿ ಹೊರಟುಹೋದರು.

ಮಹನಿಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಸಾರ ರು ೦—೧೦—೦; ವೀರಶೈವಮತಬೋಧಿನಿ ರು ೦—೮—೦; ಸಂಕ್ಷಿಪ್ತಯುಕ್ತಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦—೨—೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತವಿರುತ್ತೆ. ನಮ್ಮ ವಿಳಾಸ:—

ಯಾರ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

6 ಬರುವ ಮೆ ತಿಂಗಳು ಆಖೈರು ವರೆಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನಮತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಬಂಗಾರದ ವಾಚ್ ಸರಪಣಿ. (2) ಉತ್ತಮ ಪಾಚಿ. (3) ನಾಜೂಕಾದ ಕರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಸೀಸೆ (5) ಷೋಕ್ ಉಂಗುರ (6) ಸರ್ದಾರ್ ಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಬಂಗಾರದ ನಾಗರ. (8) ಎಲೆಕ್ಟ್ರಿಕ್ ಗಿಲ್ಟು ಶಾಮಂತಿಗೆ ಹೂವು. (9) ಫೌಂಟನ್ ಪೆನ್. (10) ಮಕ್ಕಳ ತಮಾಷಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗೆದರೆ ತಮಾಷೆಯಾದ ಹಾವು ಇರುತ್ತದೆ) (12) ಸುಗಂಧ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಟ್ ವೆಂಕಟಾಚಲಯ್ಯರ್ ವೀಧಿ,
ಮದ್ರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೈಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಸ್ವಲ್ಪ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

28

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಗರ್ಭನ್ಯೂನತೆದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮೆಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರರಸ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದಾಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ (ಇಂಡಿಯಾ)

ಪಂಡಿತ ಎಸ್. ಗಣೇಶಪುರಿ ಇವ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಪಕ್ಕ
83 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕ ಪ್ಯರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತ ೩೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವ ಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯು ಟಾಗುವುದು. ೧೨ ಮಾತ್ರೆ ಸೀಷೆ ೦-೪-೦, ೨೪ ಮಾ ಸೀಷಿ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂ ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದ ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಷೆ ೧-೦-

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದ ತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯು ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧ ಮಾತ್ರೆ ಸೀಷೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತ ಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾ ರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸ ವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತ ೨೪ ಮಾತ್ರೆ ಸೀಷೆ ೦-೩-

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆ ದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦-೮-

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋ ಸತಕ್ಕದು. ೩೦೦ ಮಾತ್ರೆ ಸೀಷೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨-೦-
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧-೦-
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦-೮-
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦-೧೨-
ದಂತಶುದ್ಧಿ ಚೂರ್ಣ.— ಡಬ್ಬಿ ೧ ಕ್ಕೆ ೦-೩-

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸ ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲ ಹಿದಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾಸಕ ಬರೆಯಿರಿ.

೧೯೧೨ನೆಯ ಇಸವಿ ಏಪ್ರಿಲ್ ತಾ॥ ೧ರಿಂದ ೧೯೧೨ ನೆ ಏಪ್ರಿಲ್ ತಾ॥ ೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩ ನೆಯ ಪರೀಧಾವಿ ಸಂವತ್ಸರದ ಚೈತ್ರ ಶು॥ ಪೌರ್ಣಿಮೆಯಿ ದ ಚೈತ್ರ ಬ॥ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿಾ ತೇದಿ
1	¹ಸೋ	ಪೌ	52-17	ಉತ್ತರಾ	11-23	20
2	²ಮಂಗ	ಪಾ	49-42	ಹಸ್ತ	10-6	21
3	³ಬುಧ	ಬಿ	48 30	ಚಿತ್ತ	9-52	22
4	⁴ಗುರು	ತ	48-41	ಸ್ವಾತಿ	10-51	23
5	⁵ಶುಕ್ರ	ಚೌ	50 8	ವಿಶಾಖ	13-5	24
6	⁶ಶನಿ	ಪಂ	52-43	ಅನೂ	16-22	25
7	⁷ಭಾನು	ಷ	56-33	ಜ್ಯೇ	21-8	26

(1) ಚಾಂದ್ರ ಚೈತ್ರಪೂರ್ಣಿಮಾ, ಚಂದ್ರಗ್ರಹಣಂ. (2 ನರಸೀಪುರದಲ್ಲಿ ಗುಂಜಾನರಸಿಂಹಸ್ವಾಮಿ ರಥ, ಚಲುವ ಯಜಯಂತೀ, ಶ್ರೀರಂಗದಲ್ಲಿ ಗೋರಥ. (3) ಮೇಲುಕೋ ಟೆಯಲ್ಲಿ ಮಹಾಭಿಷೇಕ, (4) ಶುಭಪ್ರದ ಗೌರೀವ್ರತಂ, ಕಳಲೆ ಲಕ್ಷ್ಮೀಕಾಂತಸ್ವಾಮಿ ರಥ. (5) ಸಂಕಟಹರಚ ರ್ಥಿ. (6) ಮತ್ಸ್ಯಜಯಂತಿ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

9

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ! ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವವು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

49

ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷದವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

REGISTERED NO. M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಸ್ಸ್ವರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಸ್ಸಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ನೆಯ ಇಸವಿ ಏಪ್ರಿಲ್ ತಾರೀಖು ೮ ನೆಯ ಸೋಮವಾರ. [ಸಂಚಿಕೆ ೧೪

10 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ ದೊಡ್ಡ ಪೋಸ್ಟ್ ಕಾರ್ಡುಗಳನು

{ ನಂ.........
ಮಹಾರಾಜಶ್ರೀ..............................ಸಲ್ಕ
....ಮಾಡುವ
...........ಅದಾಗಿ ಈವರಿಗೆ ಉಭಯಕುಶಲೋಪರಿಸಾಂಪ್ರತ }

ಎಂಬದಾಗಿ ಮೇಲುಭಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦-೪-೦. ವಿ. ಪಿ. ಮೂಲಕ ೦-೫-೦. ೧೦೦೦ ಕ್ಕೆ ೨-೦-೦. ೧೦೦೦ ಗಟ್ಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆಬೀಳುವುದು. ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೂಪನ್ ಬಹುಮಾನ, ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫೦ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೂಪನ್ ಇನಾಮು ಕೊಡಲಾಗುತ್ತೆ.

ರಖಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಜಾಟಲ್‌ವರ್ಕ ಡ್ರೆಸ್‌ವಾಚ್.



(2) ಕ್ಯಾಲೆಂಡರ್‌ವಾಚ್.



(3) ಗಟ್ಟೈಂ ರೈಲ್ವೆ ರೆಗ್ಯುಲೇಟರ್‌ವಾಚ್.



(1) ಯ್ಯಟ್ ಡೇಸ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ಬೆಲೆ:— (1) ಜಾಟಲ್‌ವರ್ಕ ಡ್ರೆಸ್ ವಾಚೆಂಬ ಗಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತದೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮-೮-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೮-೦. (2) ಕ್ಯಾಲೆಂಡರ್ ವಾಚ್– ಇದು ಟೈಂ ತಾರೀಖು ತೋರಿಸುತ್ತದೆ. ೫-೧೨-೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದರೇ ಆದರೆ ತನ್ನ ಸಂಗಡ ಒಬ್ಬ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೨-೪-೦ ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೩-೪-೦. (3) ಗಟ್ಟೈಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್– ಇದು ಗೌರ್ನಮೆಂಟ್ ಗಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩-೮-೦. (4) ಯ್ಯಟ್ ಡೇಸ್ ಕೀ ವಾಚ್– ವಾರಕ್ಕೊಂದಾವೃತ್ತಿ ಬೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೮-೦. ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೫-೪-೦. (5) ಪಿಕ್ಚರ್ಸ್ ವಾಚ್– ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ರವಾನಿಸುತ್ತೇವೆ. ೧ ಕ್ಕೆ ೫-೮-೦ (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತದೆ. ವಾಚ್ ೧ಕ್ಕೆ ೨-೮-೦. ಕಾಗದ ಬರೆಯತಕ್ಕವರು ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದ್ದು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಭರತಖಂಡದ ಅನೇಕ ಮಹಾರಾಜರಿಂದ ಬಹುಮಾನಪಡೆದ

ಎಂ. ಆರ್. ಸುಬ್ಬಾಜೆಟ್ಟಪ್ಪನವರ ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

3

ಕೇಸರಮಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ. ಅಲ್ಲದೆ ಮಿದುಳಿಗೆ ಬಹು ತನುವಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನೂ ಆನಂದಪಡಿಸುತ್ತದೆ. ಇದರ ಬೆಲೆ ಸೀಸೆ ೧ ಕ್ಕೆ ೦-೮-೦.

ನಂ.		ರೂ.			ರೂ.
೧. ಅಂಬರ್‌ಬತ್ತಿ	ಸೇ೧ಕ್ಕೆ	೩	ಕಸ್ತೂರಿಬಿಲ್ಲೆ	ತೊ೧ಕ್ಕೆ	೨
೨. ಅಂಬರ್‌ಬತ್ತಿ	"	೪॥	ಜವಾಜಿಬಿಲ್ಲೆ	"	೧
೧. ಕಸ್ತೂರಿಬತ್ತಿ	"	೨॥	ಅರಗಜ	"	೧
೧. ಪುನಗುಬತ್ತಿ	"	೧	ಸುರಂಗಿಸೆಂಟ್	ಸೀ೧ಕ್ಕೆ	೧
೧. ಗುಲಾಬಿಬತ್ತಿ	"	॥	ಮಾಲತಿಸೆಂಟ್	"	॥।

ಎಂ. ಆರ್. ಸುಬ್ಬಾಜೆಟ್ಟಪ್ಪ,
ಕೃಷ್ಣರಾಜ ಮೊಹಲ್ಲಾ ಮೈಸೂರ್.

ಉತ್ತಮ ಗ್ರಂಥಗಳು.

33

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿಲೋಮಣಿ.— ೧-೩-೦. ವಿರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೦-೦

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆಗ ಮಂತ್ರಿಯಾದ ವಜ್ರದಂಷ್ಟ್ರನು ಆ ಒಡವೆಗಳಂ ಸಂಕೋಲೆಗಳನ್ನಾಗಿ ತಿಳಿದು, ಆ ರಾಕ್ಷಸೇಶ್ವರನು ಪೇಳಿದ ಮಾತುಗಳಂ ಕಿವಿಗಳಿಗೆ ಶೂಲಗಳಂತೆ ಎಣಿಸಿ, ಮನಸ್ಸಿನೊಳ್ ಸಂಶಯಮಂ, ಮುಖದೊಳ್ ಸಂತೋಷಮಂ ಸಹ ತಾಳಿ, ಇಂತಲ್ಲದೆ ಕೈಯೊಳ್ ಧನುವಂ ಹೆಗಲೊಳ್ ಬತ್ತಳಿಕೆಯಂ ಶರೀರದೊಳ್ ವಜ್ರಕವಚಮಂ, ಕೂಡ ಧರಿಸಿ, ಸಾವಿರ ಕರಡಿಗಳಂ ಕಟ್ಟಿರುವ ರಥವನ್ನೇರಿ ರಾಕ್ಷಸಸೇನೆಯಿಂದೊಡಗೂಡಿ ಉಪಪರ್ವತಗಳಿಂ ಕೂಡಿದ ಮಂದರಪರ್ವತವೇ ಆಕಾಶದೊಳ್ ಹಾರಿ ಬರುವಂತೆ ತೋರುತ ತೆರಳಿ ಬರುತ್ತಿರಲು, ಅತ್ತಲಾ ಸುಗಂಧರಾಜೇಂದ್ರನು ವಜ್ರದಂಷ್ಟ್ರನು ಯುದ್ಧಕ್ಕೋಸುಗ ಬರುವುದಂ ಕಂಡು ಧನುವನ್ನೆತ್ತಿ ಪರರಿಂದ ಭೇದಿಸಲಶಕ್ಯವಾದ ವಜ್ರಕವಚಮಂ ತೊಟ್ಟು, ಯಕ್ಷನಂ ಕುರಿತು ಸಮಯವನ್ನರಿತು ನಡೆಯುದೇಳೆಂದು ನಿರೂಪಿಸಿ, ವಿಲಾಸದಿಂ ಅವನ ಹೆಗಲೊಳ್ ಕುಳಿತು ಬರುವಷ್ಟರೊಳ್ ಮಳೆಗರೆದಂತೆ ಬಾಣಂಗಳಂ ಬೀರುತ, ಗುಡುಗಿನಂತೆ ಧ್ವನಿಗೈಯುತ ಮಿಂಚಿನಂತೆ ಆಯುಧಮಂ ಝಳಪಿಸುತ, ಕಾಲಮೇಘವೋ ಎಂಬಂತೆ ತೋರುತ ಬರುವ ರಾಕ್ಷಸಸೇನೆಯಂ ಕಂಡು ಕರಲಾಘವದಿಂದ ಕಾಲಾಗ್ನಿಯ ಕಿಡಿಗಳೋ ಎಂಬಂತೆ ಬಾಣಂಗಳಂ ಬೀರುತ, ಅದೃಶ್ಯರಾಗಿ ಬಂದು ಶಸ್ತ್ರಂಗಳಂ ಪ್ರಯೋಗಿಸುವ ರಾಕ್ಷಸರಂ ಹುಡುಕಿ ಅವರೆಲ್ಲರಂ ಕ್ಷಣದೊಳ್ ಸಂಹರಿಸಿ ರಣಮಧ್ಯದೊಳ್ ಸೂರ್ಯನಂತೆ ಮೆರೆಯುತ್ತಿರಲಾಗ, ವಜ್ರದಂಷ್ಟ್ರನು ಆ ಸುಗಂಧರಾಜೇಂದ್ರನಂ ಕಂಡು ಕೋಪಗೊಂಡು ಅಪ್ಪಟಾಸದಿಂದ ಒಂದು ಪಟ್ಟಸಾಯುಧವಂ ಬೀಸಲು, ಆ ಪಟ್ಟಸವು ಸುಗಂಧರಾಜೇಂದ್ರನ ಒಂದು ಬಾಣಪ್ರಯೋಗದಿಂದಲೇ ಕಟ್ಟಿಗೆಯಂತೆ ನಟ್ಟನಡುವೆ ಪಟ್ಟೆಂದು ಮುರಿದು ಬೀಳಲು, ಆ ವಜ್ರದಂಷ್ಟ್ರನು ಅದಂ ನೋಡಿ ಮತ್ತೊಂದು ಗತ್ತು ತೋರಿಸುವಾ ಎಂದು ಗದಾಯುಧವಂ ತೆಗೆದು ಬೊಬ್ಬಿರಿದು ಈ ಸುಗಂಧರಾಜನ ಕೊಬ್ಬನ್ನೀಗಲೇ ಮುರಿಯುವೆನೆಂದು ಪ್ರಯೋಗಿಸಲಾ ಗದೆಯು ಸುಗಂಧರಾಜೇಂದ್ರನಂ ಸೋಂಕುವುದಕ್ಕೆ ಸಾಮರ್ಥ್ಯಸಾಲದೆ ಛಾಯಾಗುಪ್ತನ ಶಿರವನ್ನಪ್ಪಳಿಸಲು, ಆಗ ಆ ಯಕ್ಷನು ಆ ಪೆಟ್ಟಿನಿಂದ ಗಗನದೊಳ್ ಗಿರ್ರೆಂದು ತಿರುಗಿ ತಿಳಿವುತಪ್ಪಿ ಬೀಳುವವನಾಗಿ, ದೇವಜಾತಿಯವನಾದಕಾರಣ ಮತ್ತೂ ಜ್ಞಾನವಂಗೊಂಡು ಗಗನದಲ್ಲಿಯೇ ನಿಂತಿರಲು, ಆಗ ಸುಗಂಧರಾಜೇಂದ್ರನು ಅತಿ ಕೋಪಗೊಂಡು ಈ ವಜ್ರದಂಷ್ಟ್ರನು ಬಹು ಬಲಶಾಲಿಯಾಗಿ ತೋರುವನು; ಸಾಧಾರಣಬಾಣಂಗಳಿಂದ ಬೀಳುವವನಲ್ಲವೆಂದರಿತು, ಅಷ್ಟಘಂಟಾಯೆಂಬ ಒಂದು ಶಕ್ತಿಯಂ ತೆಗೆದು ವಜ್ರದಂಷ್ಟ್ರನಮೇಲೆ ಪ್ರಯೋಗಿಸಲು ಅಮೋಘವಾದ ಆ ಶಕ್ತಿಯು ವಜ್ರದಂಷ್ಟ್ರನ ಎದೆಯೊಳ್ಹೊಕ್ಕು ಬೆನ್ನೊಳ್ ಹೋಗಲು ಮತ್ತೂ ಮೊದಲಿನಂತೆ ಸುಗಂಧರಾಜೇಂದ್ರನ ಕರಕಮಲವನ್ನೈದಲು, ಆಗ ಆ ರಾಕ್ಷಸನಂ ತ್ರಿಯ ಯೋಯೆಂದು ಕೂಗುತ ರಥದಿಂ ಬಿದ್ದು ಭೂಮಿಯಂ ಕಚ್ಚಲು, ಆ ಧ್ವನಿಯು ಈ ಜಂಝಾಮಾರುತನ ಭಾಗ್ಯಲಕ್ಷ್ಮಿಯು ನಾನು ಪೋಗುವೆನೆಂದು ಕೂಗಿದಂತಾಗಲು ಜಂಝಾಮಾರುತನು ಆ ಧ್ವನಿಯಂ ಕೇಳಿ ಪ್ರಲಾಪಿಸುತ, ಎಲೈ ಪರಮಮಿತ್ರನೆ! ಬಹುಕಾಲದಿಂ ನಿನ್ನ ಮಾತುಗಳಂ ಕೇಳಿ ಕಾರ್ಯಂಗಳಂ ಕೈಕೊಳ್ಳುತ ಸುಖಿಸಿಂದಿರುತ್ತಿರ್ದೆನು. ಈಗ ನೀನು ಪೇಳಿದ ಹಿತವಾದ ಮಾತುಗಳಂ ಕೇಳದೆ ನನಗಿಂತ ಬಲಿಷ್ಠನಾದ ನಿನ್ನನ್ನು ರಣಭೂಮಿಗೆ ಬಲಿಯಾಗಿ ಕೊಟ್ಟೆನು; ಇನ್ನು ನಾನು ಕೆಟ್ಟೆನೆಂದು ಹಂಬಲಿಸಿ, ಈ ರಾಜಪುತ್ರನು ಎಷ್ಟು ಬಲಶಾಲಿಯೊ! ರಾಕ್ಷಸಕುಲವೆಲ್ಲವಂ ನಿರ್ಮೂಲವಂ ಮಾಡುವುದಕ್ಕೆ ಪುಟ್ಟಿರುವ ಮಹಾವಿಷ್ಣುವೊ! ಅಲ್ಲದೆ ಷಣ್ಮುಖನೋ! ವಜ್ರದಂಷ್ಟ್ರನು ಪೇಳಿದಂತೆ ದೇವೇಂದ್ರನೋ! ಎಂದು ಪೇಳುತ, ಅವನನ್ನೇ ನೆನೆದು ಭ್ರಾಂತಿಯಿಂದ ಬಾರೈ ವಜ್ರದಂಷ್ಟ್ರನೆ! ಎಂದು ಕರೆಯುತ, ಮುಹೂರ್ತಮಾತ್ರ ಸುಮ್ಮನಿರ್ದು ಚಿಂತಿಸುತ ಬಳಿಕ ಇನ್ನು ಈ ಪಟ್ಟಣದಿಂದೇನು? ಮತ್ತೂ ಮಂತ್ರಿಯು ಹತನಾಗಿ ಬಲವೆಲ್ಲವೂ ನಿರ್ಮೂಲವಾಗಿ, ಕುಸುಮಲತೆಯೂ, ಅಶ್ವರತ್ನವೂ ಕೂಡ ಆ ರಾಜಪುತ್ರನ ವಶಂಗಳಾದ ಬಳಿಕ ನಾನು ಬದುಕಿ ಫಲವೇನು? ಈ ರಾಜಕುಮಾರನೊಡನೆ ಯುದ್ಧವಂ ಮಾಡಿ ಜಯಿಸುವುದೊಂದು, ಅಥವಾ ಆತನಿಂದ ಹತನಾಗಿ ವೀರಸ್ವರ್ಗವಂ ಪಡೆಯುವುದೊಂದು, ಇದಲ್ಲದೇ ಎಲ್ಲಿಗಾದರೂ ಪೋಗಿ ಜೀವಿಸುವಾ ಎಂದರೆ ರಾಕ್ಷಸಕುಲಕ್ಕೆಲ್ಲ ನಾನೇ ಅಪಕೀರ್ತಿಯನ್ನುಂಟುಮಾಡಿದಂತಾಗುವುದು. ಆದುದರಿಂದ ಈಗ ಯುದ್ಧವಂ ಮಾಡುವುದೇ ಯುಕ್ತವೆಂದು ನಿಶ್ಚೈಸಿ, ಬಳಿಕ ಸಕಲಾಯುಧಂಗಳಂ ಪಿಡಿದು ವೃತ್ರಾಸುರನಂತೆ ಭೂಮಿಯಿಂದಾಕಾಶಕ್ಕೆ ಏಕವಾದ ಶರೀರವುಳ್ಳವನಾಗಿ, ಲೋಕಂಗಳೆಲ್ಲವಂ ನುಂಗುವುದಕ್ಕೆ ಬರುವನಂತೆ ಭಯಂಕರನಾಗಿ, ಉಳಿದ ಬಲದಿಂ ಕೂಡಿ ಬ್ರಹ್ಮಾಂಡವೇ ಒಡೆದಂತೆ ಅರ್ಭಟಿಸುತ ಬರುತ್ತಿರಲು, ಸುಗಂಧರಾಜೇಂದ್ರನು ನಸುನಗುತ ಈ ರಕ್ಕಸನು ಮಹಾಬಲವಂತನಾಗಿ ತೋರುವನು. ಇವನೊಡನೆ ಸೆಣಸುವುದು ಸಾಧಾರಣವಲ್ಲವೆಂದರಿತು, ಇದಿರಾಗಿ ಬರುವ ಆ ರಾಕ್ಷಸನಮೇಲೆ ಕಾಣಿಸಿಕೊಂಡು, ಅರ್ಧಚಂದ್ರಬಾಣಗಳಿಂದವನ ಕಿರೀಟವಂ, ಕೈಯೊಳಿರ್ದ ಶೂಲವಂ, ಮೈಯೊಳಿರ್ದ ಕವಚವಂ ಕೂಡ ಕತ್ತರಿಸಿ ಕೆಡಹಲು, ಆಗ ಕುಸುಮಲತೆಯು ಚಂದ್ರಶಾಲೆಯನ್ನೇರಿ ಏನಾಗುವುದೊ? ಎಂದು ಸಂದೇಹಪಡುತ, ಸುಗಂಧರಾಜೇಂದ್ರನ ಕರಲಾಘವವನ್ನು ನೋಡಿದರೆ, ಈ ರಾಕ್ಷಸನು ಈಗಲೇ ಮರಣವನ್ನೈದುವಂತೆ ಕಾಣುತಲಿದೆ ಎಂದು ಮನದೊಳ್ ಸಂತೋಷಪಡುತ ನಿಂತಿರಲಾಗ ಜಂಝಾಮಾರುತನು ಬಹು ಕ್ರೋಧವಂ ತಾಳಿ ಅತಿ ತೀಕ್ಷ್ಣವಾದ ಒಂದು ಶೂಲವಂ ರಾಜಕುಮಾರನ ಮೇಲೆ ಪ್ರಯೋಗಿಸಲು, ಸುಗಂಧರಾಜೇಂದ್ರನು ಅದಂ ಐದು ಬಾಣಗಳಿಂದ ಕಡಿದು, ಎರಡು ಅರ್ಧಚಂದ್ರಬಾಣದಿಂದವನ ಬಾಹುಗಳಂ ಛೇದಿಸಲು ಬಳಿಕ ಮೊದಲಿನಂತೆ ಬಾಹುಗಳಂ ಟಾಗಲು, ಅದನ್ನು ನೋಡಿ ರಾಜೇಂದ್ರನು ಅಚ್ಚರಿಯಿಂದ ನಿಂದಿರಲು, ಆಗ ಜಂಝಾಮಾರುತನು ಎಲೈ ನರಾಧಮನೆ! ನೀನು ಉಗ್ರಬಾಹುವಂ ಕೊಂದು ವಜ್ರದಂಷ್ಟ್ರನಂ ಒಕ್ಕಲಿಕ್ಕಿದೆನೆಂದು ಅಹಂಕಾರಗೊಂಡಿರುವೆ; ನಾನು ಸಾಧಾರಣನಲ್ಲ; ಜಂಝಾಮಾರುತನೆಂದು ತಿಳಿದು ಎಚ್ಚರದಿಂದಿರು ಎಂದು ನುಡಿಯುತ, ನಾನಾವಿಧಂಗಳಾದ ಆಯುಧಂಗಳಂ ಪ್ರಳಯಕಾಲದ ಮೇಘದಂತೆ ವರ್ಷಿಸುತ್ತಿರಲು, ಅದನ್ನು ನೋಡಿ ಶೂರಾಗ್ರಗಣ್ಯನಾದ ಸುಗಂಧರಾಜೇಂದ್ರನು ಪರಿಘಗಳಂ ಮುರಿದು, ಪಟ್ಟಸವಂ ಕುಟ್ಟಿ ಬಿಸುಟು, ಶೂಲಂಗಳಂ ಸೀಳಿ, ತೋಮರಗಳಂ ತುಮುರುತುಮುರುಮಾಡಿ, ಕತ್ತಿಗಳಂ ಕತ್ತರಿಸಿ, ತಾನು ಗಾಯವಡೆಯದೆ ಎಂದಿನಂತೆ ನಿಂದಿರಲು, ಆಗ ರಾಕ್ಷಸನು ರಾಜಕುಮಾರನು ಎಂದಿನಂತಿರುವುದನ್ನೋಡಿ, ಈತನಂ ಋಜುವಾದ ಯುದ್ಧದಿಂ ಜೈಸಕೂಡದು; ಮಾಯಾ ಯುದ್ಧದೊಳ್ ಮೋಸಗೊಳಿಸಬೇಕೆಂದು ಯೋಚಿಸಿ, ಆ ಕ್ಷಣದಲ್ಲಿಯೇ ಅದೃಶ್ಯನಾಗಿ, ಅಂತರಿಕ್ಷದೊಳ್ನಿಂತು ಮೇಘದ ರೂಪವಂ ತಾಳಿ, ಸಿಡಿಲುಮಳೆಯಂ ಕರೆಯಲಾಗ ರಾಜೇಂದ್ರನು ರಾಕ್ಷಸನಂ ಇದಿರಿಗೆ ಕಾಣದೆ ವರ್ಷಿಸುವ ಬೆಂಕಿಯಂ ಮಾತ್ರ ಕಂಡು, ಇದೇನೋ ಮಾಯೆಯೆಂದರಿತು, ಬಳಿಕ ಅವನಂತೆ ತಾನೂ ಮಾಯೆಯಂ ತಾಳಿ ಪ್ರಳಯಕಾಲದ ಗಾಳಿಯಂತಾಗಿ, ಮಾಯೆಯಿಂ ಮಾಡಿರುವ ಮೇಘಗಳೆಲ್ಲವಂ ನಾಶಗೊಳಿಸಲು, ಆ ಕ್ಷಣದಲ್ಲಿಯೇ ರಾಕ್ಷಸನು ಸಿಂಹದಾಕೃತಿಯಂ ತಾಳಿ ಮಂದರಪರ್ವತದಂತೆ ಬೆಳದು ಘುಡಿಘುಡಿಸುತ ಬಂದು ನಖಾಗ್ರಗಳಿಂದ ಛಾಯಾಗುಪ್ತನಂ ಪ್ರಹರಿಸಲುದ್ಯುಕ್ತನಾಗಲಾಗ ರಾಜೇಂದ್ರನು ಅದಂ ಕಂಡು ಆ ಕ್ಷಣದಲ್ಲಿಯೇ ಶರಭರೂಪವಂತಾಳಿ ಆ ಸಿಂಹದ ಶರೀರವೆಲ್ಲವಂ ಖಂಡಖಂಡವಾಗಿ ಸೀಳಲು, (ಸಶೇಷ.)

ವ್ಯವಸಾಯಕ ವಿಷಯಗಳು.

ಹೊಟ್ಟೆಯುಬ್ಬರವು.

ದನಕರುಗಳಿಗೆ ಮೊದಲನೆಯ ಆಹಾರಕೋಶದಲ್ಲಿ ವಾಯುವು ತುಂಬಿಕೊಳ್ಳುವುದರಿಂದ ಈ ರೋಗವು ವ್ಯಾಪ್ತವಾಗುತ್ತದೆ.

ರೋಗಕ್ಕೆ ಕಾರಣಗಳು:—ಸಾಧಾರಣವಾಗಿ ಚೆನ್ನಾಗಿ ಒಗ್ಗಿದ ಮೇವನ್ನು ಬಿಟ್ಟು ಬೇರೆ ಮೇವನ್ನು ತಿನ್ನುವುದೇ ಈ ರೋಗಕ್ಕೆ ಕಾರಣವಾಗಿದೆ. ಬೇಸಗೆಯಲ್ಲಿ ಮೇವು ಕಡಿಮೆಯಾಗಿರುವುದರಿಂದ ಸ್ವಲ್ಪ ಸ್ವಲ್ಪ ಮೇವನ್ನು ತಿನ್ನುತ್ತಿದ್ದು, ಮಳೆಬಿದ್ದು ಹುಲ್ಲುಚಿಗುರಿದೊಡನೆಯೇ ಅತಿಯಾಗಿ ಮೇಯುವ ದನಗಳು ಈ ರೋಗಕ್ಕೆ ಗುರಿಯಾಗುತ್ತವೆ. ಇದು ಅಂಟುಜಾಡ್ಯವಲ್ಲ; ಆದರೆ ಏಕಕಾಲದಲ್ಲಿ ಅನೇಕ ರಾಸುಗಳಿಗೆ ರೋಗವು ತಗಲುವುದರಿಂದ ಇದು ಮತ್ತಾವುದೋ ಒಂದು ಅಂಟುಜಾಡ್ಯವೆಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ.

ರೋಗವು ತಗಲಿದ ಬಹಳ ಸ್ವಲ್ಪಕಾಲದಲ್ಲಿ ದನವು ಸತ್ತುಹೋಗುವುದರಿಂದ, ವಿಷಪದಾರ್ಥವನ್ನು ತಿಂದು, ಅಥವಾ ಹಾವಿನಿಂದ ಕಚ್ಚಲ್ಪಟ್ಟು, ಅಥವಾ ಯಾರಿಂದಲೋ ವಿಷ ಹಾಕಲ್ಪಟ್ಟು ದನವು ಸತ್ತಿತೆಂದು ಜನರು ಹೇಳಿಕೊಳ್ಳುತ್ತಾರೆ. ದನವು ರೋಗ ತಗಲಿದನಂತರ ಮೂರು ಘಂಟೆಗಳ ಮೇಲೆ ೨೦ ಘಂಟೆಗಳ ಒಳಗೆ ಸಾಯುವುದು.

ರೋಗದ ಲಕ್ಷಣ:—ಎಡಪಾರ್ಶ್ವದ ಹಿಂಭಾಗವು ಉಬ್ಬರಿಸಿಕೊಳ್ಳುವುದು, ಬೆಟ್ಟಿನಿಂದ ಮಿಡಿದರೆ ಕೆರಳಿನೊಳಗೆ ವಾಯುವು ಸೇರಿದಂತೆ ಶಬ್ದವಾಗುವುದು. ಉಸಿರುಬಿಡುವುದು ಬಹಳ ಪ್ರಯಾಸವಾಗಿ ದನವು ಕತ್ತನ್ನು ಮುಂದಕ್ಕೆ ಚಾಚುವುದು, ಬಹು ಜಾಗ್ರತೆಯಾಗಿ ಎದ್ದು ನಿಲ್ಲುವುದು, ಮತ್ತು ಪ್ರತಿನಿಮಿಷದಲ್ಲೂ ಹೊಟ್ಟೆಯುಬ್ಬರವು ಹೆಚ್ಚುತ್ತಿರುವುದು, ದನವು ಮಲಗಿಕೊಂಡರೆ ಉಸಿರಾಡುವುದು ಬಹಳ ಕಷ್ಟವಾಗುವುದರಿಂದ ಜಾಗ್ರತೆಯಾಗಿ ತಕ್ಷಣವೆ ಎದ್ದು ನಿಲ್ಲುವುದು, ಒಳಗಿರುವ ಗಾಳಿಯು ಹೊರಕ್ಕೆ ಬರುವಂತೆ ಮಾಡದಿದ್ದರೆ ಉಸಿರಾಡುವುದು ಅತಿಕಷ್ಟವಾಗಿ ಕೊನೆಗೆ ಉಸಿರುಕಟ್ಟಿ ದನವು ಸಾಯುವುದು.

ಚಿಕಿತ್ಸೆ:—ಹೊಟ್ಟೆಯುಬ್ಬರದ ರೋಗವೆಂದು ತಿಳಿದಕೂಡಲೆ ಕೆಳಗೆ ಕಂಡ ಔಷಧಿಯನ್ನು ಕುಡಿಸಬೇಕು.

ಹೆಂಡ ೨ ಚಟಾಕು.
ಒಣಶುಂಠಿಯ ಪುಡಿ ೧ ಚಟಾಕು.
ಕರಿಯಮೆಣಸು ೪ ತೊಲ.

ಈ ಔಷಧದಿಂದ ಅನುಕೂಲವಾಗುವ ಸಂದರ್ಭದಲ್ಲಿ ದನವು ತೇಗುವುದಕ್ಕೆ ಆರಂಭಿಸುವುದು. ಕ್ರಮೇಣ ಹೊಟ್ಟೆಯುಬ್ಬರವು ಇಳಿದು ಕ್ರಮವಾಗಿ ಉಸಿರಾಡುವುದು. ಮೇಲೆಕಂಡ ಔಷಧಿಯಿಂದ ಗುಣಮುಖವಾಗದಿದ್ದರೆ ಒಂದು ದಬ್ಬಳ, ಅಥವಾ ಮತ್ತಾವ ಹರಿತವಾದ ಪದಾರ್ಥದಿಂದ ಹೊಟ್ಟೆಯನ್ನು ಚುಚ್ಚಿ ಗಾಳಿಯನ್ನು ಹೊರಕ್ಕೆ ಹೊರಡಿಸಬೇಕಾಗುವುದು. ಕೊನೆಯ ಪಕ್ಕೆಲುಬಿಗೂ ಮತ್ತು ಕಿಬ್ಬೊಟ್ಟೆಯ ಮೂಳೆಗೂ ಮಧ್ಯೆ ಚುಚ್ಚಬೇಕಾಗುವುದು. ಈ ಕೆಲಸವನ್ನು ಸ್ವಲ್ಪ ಅನುಭವಸ್ಥರಾಗಿ ನಾಲ್ಕಾರುಮೇಳಿ ಕೆಲಸಮಾಡಿರತಕ್ಕವರೇ ಮಾಡಬೇಕು. ಹೀಗೆ ಚುಚ್ಚಿದನಂತರ ಆ ತೂತಿನಿಂದ ಸುಮಾರು ಕಿರುಬೆರಳುಗಾತ್ರವಿರುವ ಆರು ಅಂಗುಲ ಉದ್ದವಾದ ಕೊಳವೆಯನ್ನು ಒಳಕ್ಕೆ ಇಟ್ಟರೆ ಗಾಳಿಯು ಹೊರಕ್ಕೆ ಬರುವುದು. ಕೊಳವೆಯ ಹೊರಗಿನ ತುದಿಗೆ ಕೊಳವೆಯು ಹೊಟ್ಟೆಯೊಳಗೆ ಜಾರಿಹೋಗದಂತೆ ಸುಮಾರು ಮೂರು ಅಂಗುಲ ಉದ್ದವಾದ ಒಂದು ಅಡ್ಡಕಡ್ಡಿಯನ್ನು ಕಟ್ಟಬೇಕು. ಕೊಳವೆಯನ್ನು ಎರಡು ಗಂಟೆಗಳಕಾಲ ಅಥವಾ ಹೊಟ್ಟೆಯುಬ್ಬರವು ಸಂಪೂರ್ಣವಾಗಿ ಇಳಿದು ಹೋಗುವವರಿವಿಗೂ ಹೊಟ್ಟೆಯೊಳಗೆ ಇಟ್ಟಿರಬೇಕು. ಅನಂತರ ಕೊಳವೆಯನ್ನು ತೆಗೆದು ೪ ಚಟಾಕು ಸಾಸಿವೆಯ ಎಣ್ಣೆ ೨ ಚಟಾಕು ಗಂಧದ ಪುಡಿ ಮತ್ತು ೧॥ ತೊಲ ಒಣಶುಂಠಿಯ ಪುಡಿಯನ್ನು ಸೇರಿಸಿ ಕುಡಿಸಬೇಕು.

ಪಥ್ಯ:—ಹೆಚ್ಚು ಮೇವನ್ನು ಕೊಡದಂತೆ ನೋಡಿಕೊಳ್ಳಬೇಕು. ಸ್ವಲ್ಪ ಹಸುರು ಹುಲ್ಲನ್ನು ಕೊಡಬಹುದು. ಒಂದು ಮಂದೆಯಲ್ಲಿ ಯಾವುದಾದರೊಂದು ಹಸುವಿಗೆ ಹೊಟ್ಟೆಯುಬ್ಬರಣೆಯು ಬಂದರೆ ಕೂಡಲೆ ಮಂದೆಯಲ್ಲಿರತಕ್ಕ ಇತರ ಹಸುಗಳ ಮೇವನ್ನು ಕಡಮೆಮಾಡಬೇಕು. ಹೀಗೆ ಮಾಡಿದರೆ ಅವುಗಳಿಗೆ ರೋಗದ ಬಾಧೆಯಿಲ್ಲದಂತಾಗುವುದು.

ಒಬ್ಬ ಮೈಸೂರ ರೈತನ ಅನುಭವಗಳು.

ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಯಸ್. ನಾರಾಯಣರಾವ್ ಬರೆದುಕೊಂಡ ಎರಡನೆಯ ವರ್ಷದ ಸ್ವಾನುಭವ ವ್ಯವಸಾಯಫಲದ ರಿಪೋರ್ಟ್.

ನನಗೆ ಇರುವ ಅಲ್ಪಸ್ವಲ್ಪ ಜಮೀನಿನಲ್ಲಿ ಬೆಳೆದು ಉತ್ತಮವಾದ ಬೀಜಗಳನ್ನು ಮಾಡಿರುತ್ತೇನೆ. ಅವುಗಳಲ್ಲಿ ಮುಖ್ಯವಾದುವುಗಳನ್ನು ಮಾತ್ರ ತಿಳಿಸುತ್ತೇನೆ. ಉತ್ತರ ದೇಶಗಳಿಂದಲೂ ಉತ್ತಮವಾದ ಬೀಜಗಳನ್ನು ತರಿಸಿ ಪರೀಕ್ಷೆಮಾಡಿ ಬೆಳೆದುದರಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಅಲ್ಲಿಯಂತೆಯೇ ಬೆಳೆಯಾಗಿದ್ದಿತು. ಮುಖ್ಯವಾಗಿ ವರ್ಣಮಾತ್ರ ವ್ಯತ್ಯಾಸವಾಗುವುದು. ನಾನು ತರಿಸಿದ್ದ ೧೮ ತರಹ ಭತ್ತಗಳಲ್ಲಿ ಕೆಲವನ್ನು ಮಾತ್ರ ತಿಳಿಸುತ್ತೇನೆ; ಉಳಿದುವುಗಳು ಅಷ್ಟು ಹಸನಾಗಿಯೂ ಇರಲಿಲ್ಲ.

ಭತ್ತಗಳು.

(೧) ಹನ್ಸರಾಜಭತ್ತ.—ನಾಲ್ಕು ತಿಂಗಳಿಗೆ ಬರತಕ್ಕದು. ನಮ್ಮ ದೇಶದ ವ್ಯವಸಾಯದ ಹಾಗೆಯೇ ಮಾಡತಕ್ಕದು. ಎಕರೆ ೧ ಕ್ಕೆ ೬-೭ ಖಂಡಿಯಾಗುತ್ತದೆ. ಅಕ್ಕಿ ಬಹಳ ಸಣ್ಣದು. ಸಾಧಾರಣವಾಗಿ ನಮ್ಮ ದೇಶದಲ್ಲಿ ಇದು ಬೆಳೆದೇ ಇರುವುದಿಲ್ಲವೆಂದು ತೋರುತ್ತದೆ. (೨) ದಿಲ್‍ಪಸಂದ್.—ಭತ್ತ ಕೆಂಪು. ಅಕ್ಕಿ ಬಹಳ ಶುಭ್ರವಾಗಿ ಕೂದಲಿನಷ್ಟು ಸಣ್ಣಗಿದೆ. ಇದು ೫ ತಿಂಗಳಿಗೆ ಫಸಲು ಕಟಾವಿಗೆ ಬರುವುದು. (೩) ಬಂಕು—ಇದು ೧೦೦ ದಿವಸಕ್ಕೆ ಫಸಲು ಬರುತ್ತದೆ. ಬೆಳೆ ೧ಕ್ಕೆ ೩೦ ರಷ್ಟು ಆಗುತ್ತದೆ. ಅಕ್ಕಿ ಬಹಳ ಹಸನಾಗಿರುವುದು. ಇದನ್ನು ಪುಷ್ಯ ಆಷಾಢ ಮಾಸಗಳಲ್ಲಿ ಬಿತ್ತನೆ ಹಾಕಬಹುದು. ಅಕ್ಕಿ ಉದ್ದವಾಗಿರುತ್ತದೆ. (೪) ಚಂದ್ರಕಾಂತಿ.—ಇದನ್ನು ಒರಿಸ್ಸಾ ದೇಶದಿಂದ ತರಿಸಿದ್ದು. ಹುಲುಸಿನಲ್ಲಿ ಸುಮಾರಾಗಿದೆ. ವೈಶಾಖಮಾಸದಲ್ಲಿ ಬಿತ್ತನೆ ಹಾಕಬೇಕು. ಅಕ್ಕಿ ಸಣ್ಣದು. ೪ ತಿಂಗಳಿಗೆ ಫಸಲು ಬರುತ್ತದೆ. (೫) ಅರಮರ್ಗಕುರಿವೆ.—ಇದರ ವಿಷಯವಾಗಿ ಹೋದವರ್ಷವೇ ವಿಶದವಾಗಿ ಬರೆದಿರುತ್ತೇನೆ. ಇವುಗಳೆಲ್ಲಕ್ಕಿಂತಲೂ ಹುಲುಸಾದುದು. ೫ ಸೇರು ಭತ್ತಕ್ಕೆ ೩ ಸೇರು ಅಕ್ಕಿಯಾಗುವುದು. ಒಂದು ನುಚ್ಚು ಕೂಡ ಆಗುವದಿಲ್ಲ. ೧ಕ್ಕೆ ೪೦ರಷ್ಟು ಬೆಳೆಯಾಗುತ್ತದೆ. ಪುಷ್ಯ ಮಾಸದಲ್ಲಿ ಬಿತ್ತನೆ ಹಾಕಬೇಕು. ಇದೇ ಜಾತಿಯಲ್ಲಿ ಎರಡನೆಯ ಫಸಲಿಗೆ ಬೇರೆ ಬೀಜವನ್ನು ಮಾಡಿರುತ್ತೇನೆ. (೬) ಪಿ ಪಿ. ಪೈನಾಸ್.—ಇದು ನಾಲ್ಕು ತಿಂಗಳಿಗೆ ಬರತಕ್ಕದಾಗಿಯೂ, ಹೆಚ್ಚಾಗಿ ನೀರಿಲ್ಲದೆಯೂ, ಸುಮಾರು ಹುಲುಸಾಗಿಯೂ ಇರುತ್ತದೆ. ಜೌಗು ಪ್ರದೇಶದಲ್ಲಿಕೂಡ ಬೆಳೆಯಾಗುತ್ತದೆ. ಅಕ್ಕಿ ಸಣ್ಣದು. (೭) ಭಂಗಾರ ಸರಪಣಿ.—ಇದು ೪ ತಿಂಗಳಿಗೆ ಕಡಿಮೆಯಾಗಿಯೇ ಫಸಲು ಕಟಾವಿಗೆ ಬರುತ್ತದೆ. ಬಹಳ ಹುಲುಸಾದುದು. ೧ ಗೊನೆಯಲ್ಲಿ ೪೦೦ ಕ [illegible] ಕಾಳುಗಳು ಇದ್ದು ಅಕ್ಕಿ ತೊಂಡಾಗಿ ಕೇಸರೀವರ್ಣದಂತೆ ಇರುತ್ತದೆ. ಅನ್ನಮಾಡಿದಲ್ಲಿ ಕೇಸರೀವರ್ಣದಂತೆಯೇ ಆಗುತ್ತದೆ. ಕೆಂಪು ಇಲ್ಲ. ಕೋಮಲವಾಗಿರುತ್ತದೆ. ವೈಶಾಖಮಾಸದಲ್ಲಿ ಬಿತ್ತಬೇಕು. (೮) ಪುಷ್ಯರಾಜ.—ಪುಷ್ಯಮಾಸದಲ್ಲಿ ಬಿತ್ತಬೇಕು. ಇದು ಕೆಂಪುಮಾವೇ ಭತ್ತದಹಾಗೆಯೇ ಇರುತ್ತದೆ. (೯) ಮುತ್ತಿನಸಾಲ್.—೫॥ ತಿಂಗಳಿಗೆ ಬರುತ್ತದೆ. ಹುಲಸು ಹೆಚ್ಚಾಗಿಲ್ಲ. ಅಕ್ಕಿ ಸಣ್ಣದು. ಇದು ಸುವಾಸನೆಯಾಗಿರುತ್ತದೆ. (೧೦) ವಸುಮತಿ.—೪ ತಿಂಗಳಿಗೆ ಬರುತ್ತದೆ. ಸುಮಾರು ಹುಲುಸಾಗಿದೆ. ನೀರು ಕಡಿಮೆಯಾದರೂ ಚೆನ್ನಾಗಿ ಬೆಳೆಯಾಗುತ್ತದೆ ಇದನ್ನು ಒಂಟೀಪೈರಿನ ನಾಟಿಯಂತೆ ಹಾಕಬೇಕು. ಕೆಲವು ಭತ್ತಗಳನ್ನು ಬಿಟ್ಟಿರುತ್ತೇನೆ. ಅವು ಕಾಲಕ್ಕೆ ಬರದೆ ಕೆಲವು ಹುಟ್ಟದೆ ಹೋದುದರಿಂದ ಗೊತ್ತಾಗಲಿಲ್ಲ.

ರಾಗಿ.—(೧) ರಾಜರತ್ನ.—ಇದು ಬೀಹಾರ್ ದೇಶದಿಂದ ತರಿಸಿದುದು. ಬಹಳ ಹಸನಾಗಿಯೂ, ಇಲ್ಲಿಯ ರಾಗಿಗಿಂತಲೂ ಗಾತ್ರವಾಗಿಯೂ ಇರುತ್ತದೆ ೩॥ ತಿಂಗಳಿಗೆ ಫಸಲು ಬರುತಪ್ಪ. ತೊಗರಿ.—(೧) ಪರ್ಪಸುಂದರ.—ಕಾಯಿ ೪ ಅಂಗುಲ ಉದ್ದವಾಗಿರುತ್ತದೆ. ಬಹಳ ರುಚಿಯಾಗಿರುತ್ತದೆ. ಎಳ್ಳು.—(೧) ಗರುಡರಾಮ.—ಒಂದು ಫಸಲು ಬಂದನಂತರ ಎರಡನೆಯ ದಫೆ ಎಳ್ಳು ಫಸಲನ್ನೇ ಮಾಡಬಹುದು. ಉದ್ದು.—(೧) ಹಸುರು ಉದ್ದು.—ಕಲ್ಲೆ ಗಾತ್ರವಿದೆ. ಜಾಗ್ರತೆಯಾಗಿ ಬರುತ್ತದೆ. (೨) ನೀಲಕಂಠ.—ಬಹಳ ಕಪ್ಪಗೆ ಥಳಥಳಿಸುತ್ತದೆ. ಹಲಸಂದೆ.—(೧) ರಾವಣಬಿಲ್ಲು.—ಸುಮಾರು ೧॥ ಅಡಿಯಷ್ಟು ಉದ್ದವಾಗಿ ಬಿಲ್ಲಿನ ಆಕಾರವಾಗಿರುತ್ತದೆ. ಕಡಲೆ.—(೧) ಬಿಳುಪು.—ಬೆಂಗಾಲ್ ದೇಶದ್ದು. ಹುಲುಸಾದುದು. ನೆಲಕಡಲೆ.—(೧) ಸ್ಪಾನಿಷ್.—ಇದು ಒಂದನ್ನೇ ಅಭಿಮಾಯಿಷಿಮಾಡಿದುದು. ಬಹಳ ಚೆನ್ನಾಗಿ ಬೆಳೆಯಾಯಿತು. ಇದರಲ್ಲಿ ತೈಲಾಂಶ ಹೆಚ್ಚಾಗಿರುತ್ತದೆ. ಹತ್ತಿ.—(೧) ಕಾಂಬೋಡಿಯಾ.—ಇದು ರೇಷ್ಮೆಯಂತೆ ಬಹಳ ಹಸನಾಗಿರುತ್ತದೆ. ಇದು ಎಂತಹ ಭೂಮಿಯಲ್ಲಿಯೂ ಆಗುತ್ತದೆ. ಹುಲುಸಾದುದು. ಇದರಷ್ಟು ಫಾಯಿದೆಕರವಾದುದು ಇನ್ನು ಯಾವ ಹತ್ತಿಯೂ ಇರುವುದಿಲ್ಲ. ಹರಳು.—ನಾಲ್ಕು ತರಹ ಇದೆ. ಇದರಲ್ಲಿ ಈರಿರೇಷ್ಮೆ ಹುಳುವಿಗೆ ಹಾಕತಕ್ಕದ್ದು ೩ ತರಹ ಇದೆ. ಅಲಹಾಬಾದಿನಿಂದ ತರಿಸಿಸಿದುದು. ೧ ಯಾವೆಯು ಒಂದು ಜರಿಡಿಯಷ್ಟು ಅಗಲವಾಗಿಯೂ ಬೆಳ್ಳಗೂ ಇರುತ್ತದೆ. ಜೋಳ.—ಇದು ದನಗಳಿಗೆ ಒಳ್ಳೆಯಮೇವು. ಪುಷ್ಟಿಕರವಾದುದು. ಗಿಡಗಳು ಬಹಳ ಉದ್ದ ನಿಲ್ಲುತ್ತದೆ. ಕಬ್ಬಿನಹಾಗೆ ಬೆಳೆಯುತ್ತದೆ ಮುಸುಕಿನ ಜೋಳ.—೮ ತರಹ ಇದೆ. ೧॥ ಅಡಿ ಉದ್ದದವರೆಗೆ ಇದೆ. ಬಹಳ ಹಸನಾದುದು. ಕಾಶ್ಮೀರದಿಂದ ತರಿಸಿದುದು. ಪ್ರದರ್ಶನದಲ್ಲಿ ಬಹುಮಾನ ಬಂದಿರುತ್ತದೆ. ದಂಟು.—ಸುಮಾರು ಕಬ್ಬಿನಂತೆ ೧೦ ಅಡಿ ಉದ್ದವಾಗಿ ಬೆಳೆಯುತ್ತದೆ. ನಾರು ಇರುವುದಿಲ್ಲ. ಆಲೂಗೆಡ್ಡೆಯಂತೆ ಹಿಟ್ಟಾಗಿರುತ್ತದೆ. ಬಹಳ ರುಚಿಯಾಗಿರುತ್ತದೆ. ಅಪೇಕ್ಷಿಸಿದವರಿಗೆ ಬೀಜವನ್ನು ಕಳುಹಿಸುತ್ತೇನೆ. ಇವುಗಳು ಅಲ್ಲದೆ ಅನೇಕ ತರಹ ತರಕಾರಿ ಬೀಜಗಳು ಸಿಕ್ಕುತ್ತವೆ. ಬಲಕೊಡತಕ್ಕ ಸೋಯ ಬಟಾಣಿ, ಬದನೆ, ಬೆಂಡೆ, ಸೌತೆ, ಗೋರಿ, ಕುಂಬಳ, (ಮೂಡೆಗಾತ್ರವಿರತಕ್ಕದುದು). ಬಿನೀಸು, ರನ್ನರ್ ಬೀನ್ಸ್, ಕೆನಡಿಯನ್ ವಾಂಡರ್, ಅಮೇರಿಕಾ ಬಿನೀಸು ಇನ್ನು ಇತರ ತರಕಾರಿಗಳನ್ನು ಬೆಳೆಮಾಡಿದ್ದೆನು. ಸ್ಥಳಸಂಕೋಚದಿಂದ ಸ್ವಲ್ಪ ಸ್ವಲ್ಪವಾಗಿ ಮಾಡಿದ್ದೆನು. ನನಗೆ ಹೆಚ್ಚಾಗಿ ಜಮೀನು ಇಲ್ಲದೆ ಇದ್ದುದರಿಂದಲೂ, ತಕ್ಕ ಸಹಾಯವಿಲ್ಲದುದರಿಂದಲೂ, ಬೀಜಗಳನ್ನು ಹೆಚ್ಚಿಸಲು ಅವಕಾಶವಿಲ್ಲ. ಮಾರಿಷಸ್ ಕಬ್ಬನ್ನು ತರಿಸಿ ಹಾಕಿರುತ್ತೇನೆ.

ಈರಿರೇಷ್ಮೆಯ ವಿಚಾರ.—ಪೂನಾ ಕಾಲೇಜಿನಿಂದ ತರಿಸಿ ಇಲ್ಲಿ ಬೆಳೆಮಾಡಿದುದರಲ್ಲಿ ಅನುಭವಕ್ಕೆ ಬಂದ ವಿಷಯಗಳು:—ಇದರ ಸಾಗುವಳಿಯು ಕಷ್ಟವಿಲ್ಲದುದಾಗಿಯೂ, ಸುಲಭವಾಗಿಯೂ, ಉತ್ಪತ್ತಿಯು ಹೆಚ್ಚುದಾಗಿಯೂ ೪೫ ದಿವಸಕ್ಕೆ ೧ ಫಸಲು ಬರುವುದಾಗಿಯೂ ಇದೆ. ಹರಳುಸೊಪ್ಪು ಇದರ ಆಹಾರ. ಕೊಳ್ಳತಕ್ಕಬೆ ಇರುವುದಿಲ್ಲ. ಸೊಪ್ಪು ಬೆಳೆದು ನನಗೆ ತಿಳಿಸಿದಲ್ಲಿ ಬೀಜಗಳನ್ನು ಕಳುಹಿಸಿಕೊಡುತ್ತೇನೆ. ಯಾವ ಜಾತಿಯವರು ಬೇಕಾದರೂ ಇದರ ವ್ಯವಸಾಯವನ್ನು ಮಾಡಬಹುದು. ನನ್ನಲ್ಲಿ ಈಗ ೩ ಮಣ ಖಾಲಿಗೂಡು ರೇಷ್ಮೆ ಹಾಜರಿದೆ. ಇಲ್ಲಿಯೇ ಧಾರಾತೆಗಿಸುವ ಏರ್ಪಾಡು ಮಾಡುತ್ತಾ ಇದ್ದೇನೆ. ಬೆಳೆದಿರತಕ್ಕ ಪದಾರ್ಥಗಳಿಗೆ ನನಗೆ ದಸರಪ್ರದರ್ಶನದಲ್ಲಿ ಬಹುಮಾನಗಳು ಬಂದಿರುತ್ತವೆ. ಅನೇಕರು ಬಂದು ನೋಡಿಹೋಗುತ್ತಲಿದ್ದಾರೆ. ಇಲ್ಲಿ ಸ್ವಂತವಾಗಿ ಒಂದು ಎಕ್ಸ್‌ಪೆರಿಮೆಂಟಲ್ ಫಾರಂ ಮಾಡಬೇಕೆಂದು ಉದ್ದೇಶಮಾಡಿರುತ್ತೇನೆ.

ಬೊಂಬಾಯಿ ಕರ್ನಾಟಕ ಪ್ರಾಂತದ ಸರ್ಕಾರಿಯ ಗೆಜಿಟ್‍ಸಂಗ್ರಹವು.

ಬಿಜಾಪುರ ಡಿ॥ ಕಲೆಕ್ಟರ್ ಮತ್ತೂ ೧ ನೆಯ ತ॥ ಮ್ಯಾಜಿಸ್ಟ್ರೇಟರಾದ ಮೆ॥ ಜಿ. ಎಂ. ಹಿರೇಮಠ ಇವರಿಗೆ ಕ್ರಿ. ಪ್ರೊ॥ ೧೧೧, ೧೧೩ ಮತ್ತೂ ೩೦೪ ನೆಯ ಪ್ರಕರಣಗಳ ಪ್ರಕಾರ ವಿವಾದವನ್ನು ಹಿಡಿದು ವಿಚಾರಿಸಲು ಅಧಿಕಾರಕೊಡಲ್ಪಟ್ಟಿರುವುದು.

ದಕ್ಷಿಣ ಭಾಗದ ಅ॥ ಕಮಿಷನರ್ ಮೆ॥ ವೈ. ಟಿ. ಬೋರಕರ ಇವರಿಗೆ ಏಪ್ರಿಲ್ ತಾ॥ ೯ ರಿಂದ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಮೆ॥ ಜಮಶೆಟ್‍ಜಿ ನವರೋಜಿ ನಗರವಾಲ ಇವರು ಅವರ ಬದಲು ನೋಡತಕ್ಕದು.

ಧಾರವಾಡದ ಅ॥ ಕಲೆಕ್ಟರ್ ಮೆ॥ ಎ. ಆರ್. ದಲಾಲರವರಿಗೆ ಏಪ್ರಿಲ್ ತಾ॥ ೯ ರಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಖಾನದೇಶದ ಡಿ॥ ಎಕ್ಸೈಸ್ ಇನ್ಸ್‌ಪೆಕ್ಟರ್ ಮೆ॥ ಆರ್. ಜೋರ್ಗರವರು ಧಾರವಾಡದ ಡಿ॥ ಧಾರವಾಡ ಮತ್ತೂ ಹುಬ್ಬಳ್ಳಿಯ ಎಕ್ಸೈಸ್ ಇನ್ಸ್‌ಪೆಕ್ಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬಿಜಾಪುರ ಪಟ್ಟಣವು ೧೯೧೨ರಿಂದ ಪ್ಲೇಗು ರೋಗದಿಂದ ಮುಕ್ತವಾಗಿರುವುದೆಂದು ಪ್ರಕಟಿಸಲ್ಪಟ್ಟಿದೆ.

ಮೆಸರ್ಸ. (೧) ಲಿಂಗೋಶಂಕರಪಾಟೀಲ, (೨) ಫಕೀರಗೌಡ ಕರಿಬಸವನಗೌಡ ಪಾಟೀಲ, (೩) ಸಾಂಬಾಜಿ ಶಂಕರ ದೇಶಪಾಂಡೆ, (೪) ಲಿಂಗನಗೌಡ ಫಕೀರಗೌಡ ಪಾಟೀಲ (೫) ಯಲ್ಲಪ್ಪ ಕುಮಾರಪ್ಪ ಆನೆಗುಂದಿ ಇಂತಿಷ್ಟು ಜನರು ನರಗುಂದದ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ವರ್ತಮಾನ.

ಧಾರವಾಡ.—ಕಳೆದ ತಾ॥ ೩೦ ರಲ್ಲಿ ಒಂದು ಹದ ಮಳೆಯಾಗಿ ಹಾಲಕೇರಿಗೆ ೧ ತಿಂಗಳ ನೀರು ಬಂದಿದೆ. ಆ ದಿವಸ ದನಗಳನ್ನು ಕಾಯಲು ಹೋಗಿದ್ದ ೧೦ ವರ್ಷ ವಯಸ್ಸಿನ ಪೆಂಡಾರರ ಹುಡುಗನು ಸಿಡಿಲುಬಡಿದು ಸತ್ತುಹೋದನು. ತಾ॥ ೧ ರಲ್ಲಿ ಚೈತ್ರಪೂರ್ಣಿಮಾ ಉದ್ದೇಶದಿಂದ ಮುದಿ ಹನುಮಂತದೇವರ ರಥೋತ್ಸವವು ನಡೆಯುವಾಗ ೧೦ ವರ್ಷದ ಒಬ್ಬ ಬಾಲಕನು ರಥದ ಗಾಲಿಗೆ ಸಿಕ್ಕಿ ಸತ್ತುಹೋದನು.

ನವಲಗುಂದ ತಾ॥ ನ ಸ್ಪೆಷಲ್ ಹೆಡ್ ಕಾರಕೂನರಾದ ಮೆ॥ ಕೊಟ್ರಬಸಪ್ಪ ಅಣ್ಣ ಇವರು ಬಿಜಾಪುರ ಡಿ॥ ಸಿಂದಗಿ ತಾಲೂಕಿನ ಮಾಮಲೆದಾರರಾಗಿ ನಿಯಮಿಸಲ್ಪಟ್ಟಿರುವರು.

ಸರ್ಕಾರಿಯ ಅಪ್ಪಣೆಗಳು.

ಕೊಪ್ಪ ಮತ್ತು ತರೀಕೆರೆ ತಾಲ್ಲೂಕುಗಳ ಸಿವಿಲ್ ವಿವಾದಗಳು ಚಿಕ್ಕಮಗಳೂರ ಮುನಸೀಫ್ ಕೋರ್ಟಿನಲ್ಲಿ ವಿಚಾರಿತವಾಗುವುದನ್ನು ತಪ್ಪಿಸಿ ಶಿವಮೊಗ್ಗ ಸಬ್‍ಜಡ್ಜ್ ಕೋರ್ಟಿನಲ್ಲಿ ವಿಚಾರಿತವಾಗುವಂತೆ ಏರ್ಪಡಿಸಿಕೊಡಬೇಕೆಂದು ೧೯೦೯ ಮತ್ತು ೧೯೧೦ ರ ಪ್ರಜಾಪ್ರತಿನಿಧಿಸಭೆಗಳಲ್ಲಿ ಪ್ರಾರ್ಥಿಸಲ್ಪಟ್ಟಿದ್ದುದರ ಮೇಲೆ, ೧೯೧೨ ನೆಯ ಜುಲೈ ತಾ॥ ೧ರಿಂದ ತರೀಕೆರೆ ತಾಲ್ಲೂಕಿನ ವಿವಾದಗಳು ಚಿಕ್ಕಮಗಳೂರ ಮುನಸೀಫ್ ಕೋರ್ಟಿನಲ್ಲಿ ವಿಚಾರಿತವಾಗುವುದು ತಪ್ಪಿಸಲ್ಪಟ್ಟು ಶಿವಮೊಗ್ಗ ಸಬ್‍ಜಡ್ಜ್ ಕೋರ್ಟಿನಲ್ಲಿ ವಿಚಾರಿಸಲ್ಪಡುವಂತೆ ಅಪ್ಪಣೆಮಾಡಲ್ಪಟ್ಟಿರುತ್ತದೆ.

೧೯೧೧ ನೆಯ ಸೆಪ್ಟಂಬರ್ ತಾ॥ ೩೦ಕ್ಕೆ ಕಡೆಯಾದ ೩ ತಿಂಗಳಲ್ಲಿ ಸಂಸ್ಥಾನದಲ್ಲೆಲ್ಲಾ ೬೩೧೦ ಹಸುಗಳು; ೬೧೯೧ ಗೂಳಿಗಳು ಮತ್ತೂ ಎತ್ತುಗಳು; ೧೦೨೩ ಕೋಣಗಳು; ೨೨೫೮ ಎಮ್ಮೆಗಳು; ೭೬೫೧ ಕುರಿಗಳು ಮತ್ತೂ ಆಡುಗಳು; ೮೦ ಕುದುರೆಗಳು; ೮೩ ಕತ್ತೆಗಳು ಈ ಪ್ರಕಾರವಾಗಿ ಒಟ್ಟು ೨೫೩೯೦ ಪಶುಗಳು ರೋಗದಿಂದ, ಕ್ರೂರಪ್ರಾಣಿಗಳಿಂದ ಕೊಲ್ಲಲ್ಪಟ್ಟುದರಿಂದ ಆಕಸ್ಮಿಕದಿಂದ ಇತ್ಯಾದಿ ಕಾರಣಗಳಿಂದ ಸತ್ತಿರುತ್ತವೆ. ಇದರ ಹಿಂದಣ ವರ್ಷದ ಇದೇ ೩ ತಿಂಗಳಲ್ಲಿ ೧೯೬೮೮ ಪ್ರಾಣಿಗಳ ಮರಣವಾಗಿದ್ದಿತು. ಈ ವೇಳೆ ಹೀಗೆ ಮರಣವು ಹೆಚ್ಚಾಗಲು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಚಪ್ಪೆರೋಗವು ಪ್ರಬಲವಾಗಿದ್ದುದೇ ಕಾರಣವಾಗಿದೆ.

ಮೊದಲು ಖಾಸಾಕಾಗದಗಳನ್ನು ರಿಜಿಸ್ಟರ್ ಮಾಡಿಸುವಾಗ್ಗೆ ಬರೆದುಕೊಟ್ಟವರು ಓದುಬರಹ ಬಲ್ಲವರಾಗಿಯೂ ಗೌರವಸ್ಥರಾಗಿಯೂ, ಸಬ್‍ರಿಜಿಸ್ಟ್ರಾರರಿಗೆ ತಿಳಿದವರಾಗಿಯೂ ಇದ್ದಲ್ಲಿ ಅವರುಗಳ ಹೆಬ್ಬೆರಳಿನ ಮುದ್ರೆಯು ತೆಗೆದುಕೊಳ್ಳಲ್ಪಡುತ್ತಿರಲಿಲ್ಲವು. ಈಗ ಸಬ್‍ರಿಜಿಸ್ಟ್ರಾರರಿಗೆ ಪರಿಚಯವಿರುವವರೂ ಇಲ್ಲದವರೂ ಸಹ ಹೆಬ್ಬೆರಳಿನ ಮುದ್ರೆಯನ್ನೊತ್ತಬೇಕೆಂದಿರುವ ಪದ್ಧತಿಯನ್ನು ತಪ್ಪಿಸಿ ಮೊದಲಿನಂತೆ ಮಾಡಿಸಿಕೊಡಬೇಕೆಂದು ೧೯೧೦ ನೆಯ ವರ್ಷದ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಾರ್ಥಿಸಲ್ಪಟ್ಟಿದ್ದಿತು. ಯಾವ ಮನುಷ್ಯರಾಗಲಿ ತಮ್ಮ ಹಸ್ತಾಕ್ಷರದ ಜತೆಗೆ ಹೆಬ್ಬೆರಳಿನ ಮುದ್ರೆಯನ್ನೊತ್ತುವುದು ಅವರ ಮರ್ಯಾದೆಗೆ ಕುಂದಕವಾಗಿರುವುದಿಲ್ಲವಾದುದರಿಂದಲೂ ಮತ್ತೂ ಈ ಕ್ರಮದಿಂದ ಫೋರ್ಜರಿಗೆ ಅವಕಾಶವಿಲ್ಲದಿರುವುದರಿಂದಲೂ ಪತ್ರವನ್ನು ರಿಜಿಸ್ಟರು ಮಾಡಿಸುವಾಗ್ಗೆ ಬರೆದುಕೊಟ್ಟಿರುವ ಪ್ರತಿಯೊಬ್ಬರೂ ಹೆಬ್ಬೆರಳಿನ ಮುದ್ರೆಯನ್ನು ಒತ್ತಿಯೇ ತೀರಬೇಕೆಂದು ಅಪ್ಪಣೆಮಾಡಿರುತ್ತದೆ.

ಮೈಸೂರ್ ಗೆಜೆಟಿ ಸಂಗ್ರಹವು.

ಹೊಸಕೋಟೆ ತಾ॥ ಅಮಲ್ದಾರ್ ಮೆ॥ ಎ. ಎಸ್. ಗುರುರಾಯರಿಗೆ ಕೊಡಲ್ಪಟ್ಟಿದ್ದ ೧ ತಿಂಗಳ ಪ್ರಿವಿಲೇಜ್ ರಜವು ಇನ್ನೂ ೧ ತಿಂಗಳು ೨೮ ದಿವಸಗಳಿಗೆ ಹೆಚ್ಚಿಸಲ್ಪಟ್ಟಿದೆ.

ಮೈಸೂರ ಸಬ್ ಡಿವಿಷನ್ ಅ॥ ಕಮಿಷನರ್ ಮೆ॥ ಎಸ್. ಮಾಧವರಾಯರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೨ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮಳವಳ್ಳಿ ತಾ॥ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮೆ॥ ಎ. ಎ. ರಾಮನಾಥ ಬಿ. ಎ., ಯವರು ಮೈಸೂರ ಸಬ್ ಡಿವಿಷನ್ ಛಾರ್ಜಿನಲ್ಲಿರತಕ್ಕದ್ದು, ಮತ್ತೂ ಮಳವಳ್ಳಿ ತಾಲ್ಲೂಕು ಡಿ॥ ಕಮಿಷನರ ಛಾರ್ಜಿನಲ್ಲಿರತಕ್ಕದು.

ಚಿತ್ರಕಲ್‍ದುರ್ಗ ಡಿ॥ ಪ್ರೊಬೇಷನರಿ ಅ॥ ಕಮಿಷನರ್ ಮೆ॥ ಟಿ. ಜಿ. ರಾಮಯ್ಯರ್, ಬಿ. ಎ., ಯವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೨೨ ರಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಫಾರೆಸ್ಟುಗಳ ಅ॥ ಕನ್ಸರ್ವೇಟರ್ ಮೆ॥ ಎಂ. ಮೋಟಯ್ಯನವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳು ೨೫ ದಿವಸಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಫಾರೆಸ್ಟುಗಳ ಕನ್ಸರ್ವೇಟರಾದ ರಾಯಬಹದ್ದೂರ್ ಮೆ॥ ಎಂ. ಮುತ್ತಣ್ಣನವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳು ೧೦ ದಿವಸಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಫಾರೆಸ್ಟುಗಳ ಡೆ॥ ಕನ್ಸರ್ವೇಟರಾದ ಮೆ॥ ಬಿ. ಹೀರಾಸಿಂಗ್, ಬಿ. ಎ., ಯವರು ಮೆ॥ ಎಂ॥ ಮುತ್ತಣ್ಣನವರು ಬರುವವರೆಗೆ ಫಾರೆಸ್ಟುಗಳ ಕನ್ಸರ್ವೇಟರಾಗಿ ಬದಲು ನೋಡತಕ್ಕದು.

ಮೆ॥ ಕೃಷ್ಣಮನಾಯಿಡುಗಾರವರಿಗೆ ಕೊಡಲ್ಪಟ್ಟಿದ್ದ ರಜವು ಇನ್ನೂ ೪ ತಿಂಗಳಿಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಆಕ್ಟಿಂಗ್ ಡಿಸ್ಟ್ರಿಕ್ಟ್ ಮತ್ತೂ ಸೆಷನ್ಸ್ ಜಡ್ಜ್ ಮೆ॥ ಮೀರ್ ಹಂಜಾಹುಸೇನ್, ಬಿ. ಎ., ಬಿ. ಎಲ್., ರವರು ೧೯೧೧ ನೆಯ ಆಗಸ್ಟ ತಾ॥ ೨೧ ರಿಂದ ೩ ನೆಯ ತರಗತಿಯಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಗೆಜಿಟ್ ವಿಶೇಷ ಪತ್ರಿಕೆ.

೧೯೧೨ ನೆಯ ಏಪ್ರಿಲ್ ತಾ॥ ೪ ನೆಯ ಗುರುವಾರ.

ಪ್ರಕಟಣೆ.

ಶೃಂಗಗಿರಿಮಠದ ಪೂಜ್ಯಪಾದರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀಸ್ವಾಮಿಗಳು ತಮ್ಮ ಪೀಠಕ್ಕೆ ಉತ್ತರಾಧಿಕಾರಿಗಳನ್ನು ಗೊತ್ತುಪಡಿಸಲು ಸಹ ಅವಕಾಶವಿಲ್ಲದೆ ಬ್ರಹ್ಮೈಕ್ಯರಾದುದನ್ನು ಶ್ರೀಮನ್ ಮಹಾರಾಜರವರು ತಿಳಿದು ಬಹು ವ್ಯಸನಾಕ್ರಾಂತರಾಗಿರುವರು. ಪೂಜ್ಯಪಾದರು ತಮ್ಮ ಪೂರ್ಣಪಾಂಡಿತ್ಯದಿಂದಲೂ, ಅಪಾರವಾದ ದೈವಭಕ್ತಿಯಿಂದಲೂ ೪೩ ವರ್ಷಗಳಕಾಲ ಅವಿಚ್ಛಿನ್ನವಾಗಿ ಪೂಜ್ಯಪೀಠವನ್ನಲಂಕರಿಸಿದ್ದು ಭರತಖಂಡದಲ್ಲೆಲ್ಲಾ ಇರುವ ತಮ್ಮ ಶಿಷ್ಯರುಗಳ ಪ್ರೀತಿಗೂ, ಮೆಚ್ಚುಗೆಗೂ ಪಾತ್ರರಾಗಿದ್ದರಲ್ಲದೆ ಯಾವ ರೀತಿಯಿಂದಾದರೂ ತಮ್ಮ ಸಮಾಗಮವಾಗಿದ್ದಂತಹವರ ಪ್ರೀತಿ ಮೆಚ್ಚುಗೆಗೂ ಪಾತ್ರರಾಗಿದ್ದರು. ಇಂತಹರು ದೈವಾಧೀನರಾದುದರಿಂದ ಹಿಂದೂ ಪ್ರಪಂಚಕ್ಕೂ ಮತ್ತೂ ಮತಧರ್ಮಕ್ಕೂ ಅಪರಿಹಾರ್ಯವಾದ ನಷ್ಟವಾಗಿರುವುದೆಂದು ಶ್ರೀಮನ್ ಮಹಾರಾಜರವರು ಚಿಂತಿಸುತ್ತಾರೆ.

ಗೋಪಿಶಾಸ್ತ್ರಿಗಳ ಮಕ್ಕಳಾದ ನರಸಿಂಹಶಾಸ್ತ್ರಿಗಳನ್ನು ಗತಿಸಿದ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಳ್ಳಬೇಕೆಂಬ ಸಂಕಲ್ಪವುಳ್ಳವರಾಗಿದ್ದರೆಂಬುದನ್ನು ಶ್ರೀಮನ್ ಮಹಾರಾಜರವರು ಅರಿತವರಾಗಿದ್ದಾರೆ. ನರಸಿಂಹಶಾಸ್ತ್ರಿಗಳು ಈಗ [illegible] ವರ್ಷಗಳ ವಯಸ್ಸಿನವರಾಗಿದ್ದು ಬೆಂಗಳೂರಿನಲ್ಲಿರುವ ಶೃಂಗಗಿರಿಮಠದ ಪಾಠಶಾಲೆಯಲ್ಲಿ ಮೀಮಾಂಸ ಮತ್ತೂ ವೇದಾಂತಗಳನ್ನು ಅಭ್ಯಸಿಸುತ್ತ ತೇಜಸ್ವಿಯಾದ ವಿದ್ಯಾರ್ಥಿಯಾಗಿಯೂ, ನಿರ್ದುಷ್ಟವಾದ ನಡೆಯುಳ್ಳ ಬ್ರಹ್ಮಚಾರಿಯಾಗಿಯೂ, ಬಹು ಪ್ರಸಿದ್ಧ ಮಾನಕ್ಕೆ ಬರತಕ್ಕವರಾಗಿಯೂ ಇರುವರೆಂದು ವರದಿಯಾಗಿರುತ್ತದೆ. ಇವರನ್ನು ಪೂಜ್ಯಪಾದರು ಇದಕ್ಕಾಗಿ ಶೃಂಗಗಿರಿಗೆ ಕರೆಯಕಳುಹಿದ್ದರು, ಮತ್ತೂ ಇವರು ೨ ದಿವಸ ಮುಂಚಿತವಾಗಿ ಶೃಂಗಗಿರಿಯನ್ನು ತಲುಪಿದ್ದರೆ ಗತಿಸಿದ ಸ್ವಾಮಿಗಳವರಿಂದಲೇ ಉಪದಿಷ್ಟರಾಗುತ್ತಿದ್ದರು. ಈ ಸಂದರ್ಭಗಳಿಂದ ಶ್ರೀಮನ್ ಮಹಾರಾಜರವರು ಪೂಜ್ಯಪಾದರ ಸಂಕಲ್ಪವನ್ನು ನೆರವೇರಿಸಬಿಚ್ಛೆಯುಳ್ಳವರಾಗಿ ನರಸಿಂಹಶಾಸ್ತ್ರಿಗಳು ಶೃಂಗಗಿರಿಮಠದ ಸ್ವಾಮಿಗಳಾಗಿ ಉಚಿತ ರೀತಿಯಲ್ಲಿ ಸಾಧ್ಯವಿದ್ದಷ್ಟು ಶೀಘ್ರವಾಗಿ ಪಟ್ಟ ಕಟ್ಟಲ್ಪಡತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ.

ಟಿ. ಆನಂದರಾವ್,
ಮೈಸೂರ ಸಂಸ್ಥಾನದ ದಿವಾನರು.

ಮೆ॥ ಹಂಜಾ ಹುರ್ಸ್ ರವರು ಬಿ ಮತ್ತು ನೆ॥ ಪತ್ರರಾಗಿ ಸ್ಥಿರಗೊಳಿಸಲ್ಪಟ್ಟುದರಿಂದ ಸಬ್ ಪ್ರೋಟೆಂ ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಮೆರ್ಫ್ ಬಿ. ಎ, ಯವರು ೧೯೧೦ ನೇ ಆಗಸ್ಟ ತಾ॥ ೨೧ ರಿಂದ ಆ ತರಗತಿಯಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೩ ನೇ ಏಪ್ರಿಲ್ ತಾ॥ ೭ ನೇ ಸೋಮವಾರ

ಡಿ॥ ಬಿ॥ ಪುಟ್ಟಣ್ಣಸೆಟ್ಟರು.

ಸರ್ಕಾರಿಯುದ್ಯೋಗದಿಂದ ನಿವೃತ್ತಿಸುಖವನ್ನನುಭವಿಸುತ್ತಿರುವ ರಾಜಸಭಾಭೂಷಣ ದಿವಾನ್ ಬಹದ್ದೂರ್ ಶ್ರೀಯುತ ಕೆ. ಪಿ ಪುಟ್ಟಣ್ಣಸೆಟ್ಟರು ೧೮೭೪ ರಲ್ಲಿ ಮೈಸೂರ ಸರ್ಕಾರದ ಮರಹಮತ್ ಶಾಖೆಯಲ್ಲಿ ಬಹು ಸಣ್ಣ ಉದ್ಯೋಗಕ್ಕೆ ಸೇರಿ ಚಟುವಟಿಕೆಯಿಂದಲೂ, ದಕ್ಷತೆಯಿಂದಲೂ ಕೆಲಸವನ್ನು ಮಾಡಿ ಮೇಲ್ಪಟ್ಟ ನಿರೋಪಾಧಿಕಾರಿಗಳ ಪ್ರೀತಿಗೂ, ಮೆಚ್ಚುಗೆಗೂ ಪಾತ್ರರಾಗಿ ೧೮೭೭ ರಲ್ಲಿ ಸಂಸ್ಥಾನದ ರೈಲ್ವೆಯ ಕನ್ಸಲ್ಟಿಂಗ್ ಇಂಜನಿಯರಾಫೀಸ್ ಹೆಡ್ ಕ್ಲಾರ್ಕಾಗಿಯೂ, ೭೯ ರಲ್ಲಿ ರೈಲ್ವೆಯ ಚೀಫ್ ಇಂಜನಿಯರಾಫೀಸ್ ಮ್ಯಾನೇಜರಾಗಿಯೂ, ೮೧ ರಲ್ಲಿ ರೈಲ್ವೆಯ ಮ್ಯಾನೇಜರಾಫೀಸಿನ ಚೀಫ್ ಕ್ಲಾರ್ಕಾಗಿಯೂ, ೮೨ ರಲ್ಲಿ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿಯೂ, ೮೫ ರಲ್ಲಿ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿಯೂ ಇದ್ದು, ೧೮೮೬ ರಲ್ಲಿ ಸಂಸ್ಥಾನದ ರೈಲ್ವೆಯು ಆಡಳಿತವು ಸದರನ್ ಮರಾಟಾ ಕಂಪೆನಿಯವರಿಗೆ ವಹಿಸಲ್ಪಟ್ಟಾಗ ಜುಲೈ ತಾ॥ ೧ ರಿಂದ ಅಕ್ಟೋಬರ್ ತಾ॥ ೩೧ರ ವರೆಗೆ ಕಂಪೆನಿಯವರಲ್ಲಿ ಕೆಲಸಮಾಡುತ್ತಿದ್ದು, ೮೬ ನೇ ನವಂಬರ್‌ನಲ್ಲಿ ಸಂಸ್ಥಾನದ ಅಸಿಸ್ಟೆಂಟ್ ಕಮಿಷನರಾಗಿ ತೆಗೆದುಕೊಳ್ಳಲ್ಪಟ್ಟರು. ೧೮೯೧ರ ಜನವರಿಯಿಂದ ನವಂಬರ್‌ವರೆಗೆ ಬೆಂಗಳೂರ ವೈಸ್ ಪ್ರೆಸಿಡೆಂಟರಾಗಿದ್ದು ಅನಂತರ ಪೊಲೀಸ್ ಸೂಪರಿಂಟೆಂಡೆಂಟರಾಗಿ ಮಾಡಲ್ಪಟ್ಟರು ೧೮೯೬ ರಲ್ಲಿ ಕೋಲಾರ್‌ಪೇಟೆಯಲ್ಲೂ ೯೭ ರಲ್ಲಿ ಹಿಕೋಟೆಯಲ್ಲೂ ಸಬ್ ಡಿವಿಜನ್ ಆಫೀಸರಾಗಿಯೂ, ೯೮ ರಲ್ಲಿ ಕೆಲಕಾಲ ಮೈಸೂರ ಡಿ॥ ಆಕ್ಟಿಂಗ್ ಡೆ॥ ಕಮಿಷನರಾಗಿಯೂ ಇದ್ದು ಅನಂತರ ಸ್ಥಿರಗೊಳಿಸಲ್ಪಟ್ಟರು ಕೋಲಾರ ಬೆಂಗಳೂರು, ಶಿವಮೊಗ್ಗ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಡೆ॥ ಕಮಿಷನರಾಗಿದ್ದು ೧೯೦೬ ನೇ ಮಾರ್ಚಿ ತಾ॥ ೩೦ ರಲ್ಲಿ ೨ ನೇ ಕೌನ್ಸಿಲರಾಗಿಯೂ, ೧೯೦೯ ನೇ ಏಪ್ರಿಲ್ ತಾ॥ ೧ ರಲ್ಲಿ ೧ ನೇ ಕೌನ್ಸಿಲರಾಗಿಯೂ ನಿಯಮಿಸಲ್ಪಟ್ಟು ೧೯೧೩ ನೇ ಮಾರ್ಚಿ ತಾ॥ ೧೯ ರಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟರು. ಡಿ॥ ಬಿ॥ ಸೆಟ್ಟರು ಸರ್ಕಾರಿಯುದ್ಯೋಗವನ್ನು ಎಷ್ಟು ದಕ್ಷತೆಯಿಂದಲೂ, ಶ್ರದ್ಧೆಯಿಂದಲೂ, ಸತ್ಯದಿಂದಲೂ ನಿರ್ವಹಿಸಿ ಪ್ರಭುಗಳ ಮೆಚ್ಚುಗೆಗೂ ಪ್ರಜೆಗಳ ಪ್ರೀತಿಗೌರವಕ್ಕೂ ಪಾತ್ರರಾಗಿದ್ದರೆಂಬುದು ಈ ಕೆಳಗೆ ಕೊಡಲ್ಪಟ್ಟಿರುವ ಕಳೆದ ತಾ॥ ೪ ರ ಮೈಸೂರ ಗೆಜೆಟ್ಟಿನಪ್ರಕಟನಪತ್ರಿಕೆಯಿಂದ ವ್ಯಕ್ತವಾಗುತ್ತದೆ:—

"೩೭ ವರ್ಷಗಳಿಗಿಂತಲೂ ಅಧಿಕಕಾಲಾವಧಿಯಲ್ಲಿ ಘನವಾದ ನಡತೆಯಿಂದಿದ್ದುಕೊಂಡು ೧೯೧೩ ನೇ ಮಾರ್ಚಿ ತಾ॥ ೧೯ ರಲ್ಲಿ ಸರ್ಕಾರಿಯುದ್ಯೋಗದಿಂದ ನಿವೃತ್ತರಾದ ರಾಜಸಭಾಭೂಷಣ ಮೆ॥ ಕೆ. ಪಿ. ಪುಟ್ಟಣ್ಣಸೆಟ್ಟರು (ದಿವಾನ್ ಬಹದ್ದೂರ್) ಸಂಸ್ಥಾನಕ್ಕೆ ಮಾಡಿದ ಉದ್ಯೋಗ ಸಾಫಲ್ಯ ವಿಚಾರದಲ್ಲಿ ಸರ್ಕಾರದವರು ತಮಗುಂಟಾಗಿರುವ ಅತಿಶಯವಾದ ಮೆಚ್ಚುಗೆಯನ್ನು ಬರೆದಿಡಬಿಚ್ಛಿಸುತ್ತಾರೆ. ಮೆ॥ ಪುಟ್ಟಣ್ಣಸೆಟ್ಟರು ೧೮೭೫ ರಲ್ಲಿ ಉದ್ಯೋಗಕ್ಕೆ ಸೇರಿ ೧೮೮೨ ರಲ್ಲಿ ಸಂಸ್ಥಾನದ ರೈಲ್ವೆಯ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟರ ಸ್ಥಾನವನ್ನು ಹೊಂದಿ ೧೮೮೪ ರಲ್ಲಿ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿ ಮಾಡಲ್ಪಟ್ಟರು. ಸಂಸ್ಥಾನದ ರೈಲ್ವೆಯು ಆಡಳಿತವು ಸದರ್ನ್ ಮರಾಟಾ ರೈಲ್ವೆಯು ಕಂಪನಿಯವರಿಗೆ ವಹಿಸಿಕೊಡಲ್ಪಟ್ಟಾಗ ಇವರು ಅಸಿಸ್ಟೆಂಟ್ ಕಮಿಷನರಾಗಿ ಜನರಲ್ ಶಾಖೆಗೆ ೧೮೮೬ ರಲ್ಲಿ ತೆಗೆದುಕೊಳ್ಳಲ್ಪಟ್ಟು ಪೊಲೀಸು ಮತ್ತು ರೆವಿನ್ಯೂ ಶಾಖೆಗಳಲ್ಲಿ ಕೆಲಸವನ್ನು ಮಾಡಿ ೧೧ ವರ್ಷಗಳ ತರುವಾಯ ಡೆಪ್ಯುಟಿ ಕಮಿಷನರ ಸ್ಥಾನಕ್ಕೇರಿದರು. ೧೯೦೬ ರಲ್ಲಿ ಕೌನ್ಸಿಲ್‌ಮೆಂಬರರಾಗಿ ಆರಿಸಲ್ಪಟ್ಟು ನಿವೃತ್ತರಾಗುವವರೆಗೂ ಆ ದೊಡ್ಡ ಉದ್ಯೋಗದಲ್ಲಿದ್ದರು.

ಮೆ॥ ಪುಟ್ಟಣ್ಣಸೆಟ್ಟರು ತಮ್ಮ ಉದ್ಯೋಗದ ನಡೆವಳಿಕೆಯಲ್ಲೆಲ್ಲಾ ಉಚಿತಜ್ಞತೆಯನ್ನೂ, ಸಾಮರ್ಥ್ಯ ಶಕ್ತಿಯನ್ನೂ ಪ್ರದರ್ಶಿಸಿ ಹೆಸರಾಂತರು. ಈ ಗುಣಗಳಿಂದಲೇ ಅವರು ಒಳ್ಳೆಯ ಸಮರ್ಥರು ಮತ್ತು ಜನಾನುರಾಗಿಗಳು ಆದ ಅಧಿಕಾರಿಗಳಾಗಿ ಆದುದು. ಹಾಗೂ ಇವರು ತಮ್ಮ ಕಾರ್ಯನಿರ್ವಹಣದಲ್ಲಿ ಅತಿಶಯ ಸತ್ಯಸಂಧರಾಗಿಯೂ ಇದ್ದರು. ಶ್ರೀಮನ್ ಮಹಾರಾಜರವರು ತಾವು ಮೆಚ್ಚಿರುವುದರ ಗುರುತಿಗಾಗಿ ಇವರಿಗೆ ರಾಜಸಭಾಭೂಷಣ ಎಂಬ ಪ್ರಶಸ್ತಿಯನ್ನು ಯೋಗ್ಯವಾದ ಖಿಲ್ಲತ್ತಿನೊಡನೆ ಕಳೆದ ದಸರಾ ದರ್ಬಾರಿನಲ್ಲಿ ದಯಪಾಲಿಸಿದರು, ಮತ್ತು ಇವರನ್ನು ಇಂಡಿಯಾ ಸರ್ಕಾರದವರು ಕೂಡ ಈಚೆಗೆ ದಿವಾನ್ ಬಹದ್ದೂರ್ ಪ್ರಶಸ್ತಿಯಿಂದ ಮರ್ಯಾದಿಸಿದರು.

ಮೆ॥ ಪುಟ್ಟಣ್ಣಸೆಟ್ಟರು ಸರ್ಕಾರಿಯುದ್ಯೋಗದಿಂದ ನಿವೃತ್ತರಾಗಲು ಶ್ರೀಮನ್ ಮಹಾರಾಜರವರು ಅನುಜ್ಞೆಯನ್ನಿತ್ತು ಇವರು ದೀರ್ಘಕಾಲವಿದ್ದು ಜನೋಪಯುಕ್ತಕಾರ್ಯಗಳನ್ನೆಸಗುವವರಾಗಲೆಂದು ಆಶಿಸುತ್ತಾರೆ."

ಇದಲ್ಲದೆ ಮೆ॥ ಸೆಟ್ಟರು "ಒಳ್ಳೆಯ ಕಾರ್ಯದಕ್ಷರು, ಪೂರ್ಣಾನುಭವಶಾಲಿಗಳು, ಪ್ರಜಾನುರಾಗಿಗಳು, ನಿಸ್ಪೃಹರು, ಮತಮಾತ್ಸರ್ಯರಹಿತರು, ನಿಷ್ಪಕ್ಷಪಾತಿಗಳು ಸರಸಿಗಳು" ಎಂದು ಮೊದಲಾಗಿ ಸ್ವದೇಶ ಪರದೇಶಗಳ ಆಂಗ್ಲ ಮತ್ತು ಕರ್ನಾಟಕ ಪತ್ರಿಕೆಗಳು ಅವರ ಗುಣಕಥನವನ್ನು ಮಾಡಿ, ಅವರು ಪ್ರಜಾಮುಂದಾಳುಗಳಾಗಿ ದೇಶಾಭ್ಯುದಯ ಕಾರ್ಯಗಳನ್ನು ಮಾಡುವವರಾಗಲೆಂದು ಬಯಸಿರುವವು. ಅಲ್ಲದೆ ಸರ್ವವಿಧದಿಂದಲೂ ಮಂತ್ರಿಪದವಿಗೆ ಅರ್ಹರೆನಿಸಿಕೊಂಡಿದ್ದವರನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿದುದರಿಂದ ಮೆ॥ ಸೆಟ್ಟರ ಮಂತ್ರಿತ್ವದಲ್ಲಿ ಮೈಸೂರ ದೇಶಕ್ಕೆ ಉಪಕಾರವಾಗುತ್ತದೆಂದು ಭಾವಿಸಿಕೊಂಡಿದ್ದ ಸ್ವದೇಶೀಯರ ಆಶೆಯೇ ನಾಶವಾಯಿತೆಂದು, ಮದ್ರಾಸಿನ ಇಂಡಿಯನ್ ಪೇಟ್ರಿಯಟ್, ಮತ್ತು ಹಿಂದೂ, ಲಾಹೋರಿನ ಟ್ರಿಬ್ಯೂನ್ ಇತ್ಯಾದಿ ಆಂಗ್ಲ ಭಾಷಾಪತ್ರಿಕೆಗಳು ಬರೆದಿರುತ್ತವೆ. ಇದರಿಂದ ಮೆ॥ ಪುಟ್ಟಣ್ಣಸೆಟ್ಟರ ವಿಚಾರದಲ್ಲಿ ಜನರ ಅಭಿಪ್ರಾಯವು ಹೇಗಿರುವುದೆಂಬುದೂ, ಇವರು ಮಂತ್ರಿಪದವಿಗೆ ಬಾರದೆ ನಿವೃತ್ತರಾದುದು ಈ ದೇಶೀಯರ ದೌರ್ಭಾಗ್ಯವೆಂಬುದೂ ಸ್ಪಷ್ಟವಾಗುತ್ತವೆ. ಮೆ॥ ಸೆಟ್ಟರು ಪ್ರಭುಗಳ ಮೆಚ್ಚುಗೆಗೂ, ಜನರ ಪ್ರೀತಿವಿಶ್ವಾಸಕ್ಕೂ ಪಾತ್ರರಾಗಿರುವಂತೆ ತಮ್ಮ ಕೈಕೆಳಗೆ ಉದ್ಯೋಗಮಾಡಿದವರ ಪ್ರೀತಿಗೌರವಕ್ಕೂ ಪಾತ್ರರಾಗಿರುವುದರಿಂದಲೇ ಸೆಕ್ರೆಟೆರಿಯಟ್ ಕ್ಲಬ್ಬಿನವರು ಕಳೆದ ತಾ॥ ೨೧ರಲ್ಲಿ ಮೆ॥ಸೆಟ್ಟರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ, ವಿನೋದೋತ್ಸವದಿಂದಲೂ ತೃಪ್ತಿಗೊಳಿಸಿ, ಅವರ ಗುಣಕಥನವನ್ನು ಮಾಡಿ ಅವರ ವಿಚಾರದಲ್ಲಿ ತಮಗಿದ್ದ ಗೌರವಬುದ್ಧಿಯನ್ನು ಪ್ರದರ್ಶಿಸಿದರು. ಮೆ॥ ಸೆಟ್ಟರು ಆ ಸಂದರ್ಭದಲ್ಲಿ ಮಾತನಾಡುವಾಗ್ಗೆ, "ಮನುಷ್ಯನ ನಡೆಯು ಚನ್ನಾಗಿದ್ದರೆ, ಅದು ಮಿತ್ರರನ್ನೂ, ಪೋಷಕರನ್ನೂ, ಹಿತೈಷಿಗಳನ್ನೂ, ಐಶ್ವರ್ಯವನ್ನೂ, ಸುಖಸಂಪತ್ತನ್ನೂ ಸಂಪಾದಿಸಿಕೊಡುವುದೆಂಬುದು ನನ್ನ ಸ್ವಾನುಭವವಾಗಿರುತ್ತದೆ. ಅದುಕಾರಣ ಮುಂದೆ ಅಭಿವೃದ್ಧಿಗೆ ಬರಲಿಚ್ಛಿಸುವ ಚಿಕ್ಕವಯಸ್ಸಿನ ಉದ್ಯೋಗಸ್ಥರು ಈ ಮೂಲತತ್ವವನ್ನು ಜ್ಞಾಪಕದಲ್ಲಿಟ್ಟುಕೊಂಡು ವರ್ತಿಸಿದರೆ,ಅವರಿಗೆ ಸುಖಸಂಪತ್ತುಂಟಾಗುವುದರಲ್ಲಿ ಅಭ್ಯಂತರವಿಲ್ಲವು." ಎಂದು ಅಪ್ಪಣೆಕೊಡಿಸಿದರು. ಮೆ॥ ಸೆಟ್ಟರು ಇಂತಹ ಗುಣಸಂಪನ್ನರಾಗಿರುವುದರಿಂದಲೇ ಸರ್ವತ್ರಮಾನ್ಯರಾಗಿರುವರು. ಇವರು ಲೋಕಪ್ರಿಯರಾಗಿಯೂ, ದೀರ್ಘಕಾಲ ಸರ್ಕಾರಿಯ ಉದ್ಯೋಗವನ್ನು ಮಾಡಿ ಪೂರ್ಣಕಾರ್ಯಾನುಭವಿಗಳಾಗಿಯೂ ಇರುವರಲ್ಲದೆ, ದೃಢಕಾಯರಾಗಿಯೂ ಕಾರ್ಯಪಟುಗಳಾಗಿಯೂ ಇರುವುದರಿಂದ ಜನರ ಕೋರಿಕೆಯಂತೆ ದೇಶಹಿತಕಾರ್ಯವನ್ನು ಮುಖ್ಯವಾಗಿ ಸ್ವಸಮಾಜಸುಧಾರಣೆಯನ್ನು ಮಾಡಲು ಸಮರ್ಥರಾಗಿರುವರು. ಇವರಂತೆಯೇ ದೊಡ್ಡ ದೊಡ್ಡ ಉದ್ಯೋಗದಿಂದ ನಿವೃತ್ತರಾಗಿರುವವರು ಸರ್ಕಾರದ ಮೆಚ್ಚುಗೆಗೂ,ಜನಾನುರಾಗಕ್ಕೂ ಪಾತ್ರರಾಗಿದ್ದರೂ ತಕ್ಕ ದೇಹಧಾರ್ಢ್ಯವಿಲ್ಲದಿರುವುದರಿಂದ ದೇಶಾಭಿವೃದ್ಧಿ ಅಥವಾ ಸ್ವಜನಾಭಿವೃದ್ಧಿ ಕಾರ್ಯಗಳನ್ನೆಸಗಲು ಅಸಮರ್ಥರಾಗಿರುವರು. ಒಂದುವೇಳೆ ಅವರುಗಳಿಗೆ ತಕ್ಕ ಕಾಯಪುಷ್ಟಿಯು ಇದ್ದರೂ ಅವರು ತಮ್ಮ ವರ್ಗದವರು ವಿದ್ಯಾಬುದ್ಧಿಯಲ್ಲೂ, ನಾಗರಿಕತೆಯಲ್ಲೂ ಬಹು ಮುಂದುವರಿದವರಾದುದರಿಂದ ಅವರ ಅಭಿವೃದ್ಧಿಗಾಗಿ ಪಾಟುಪಡಬೇಕಾದ ಆವಶ್ಯಕತೆಯು ಇಲ್ಲವು. ಮೆ॥ ಸೆಟ್ಟರಾದರೋ ವಿದ್ಯಾಬುದ್ಧಿಯಲ್ಲಿ ಬಲು ಹಿಂದುಳಿದಿರುವ ಜನಾಂಗಕ್ಕೆ ಸೇರಿದವರಾದುದರಿಂದ, ತಮ್ಮವರ ಅಭಿವೃದ್ಧಿಗಾಗಿ ಮುಂದಾಳುಗಳಾಗಿ ನಿಂತು, ಅವರುಗಳನ್ನು ವಿದ್ಯಾವಂತರನ್ನಾಗಿಯೂ ವಿವೇಕಿಗಳನ್ನಾಗಿಯೂ, ನಾಗರಿಕರನ್ನಾಗಿಯೂ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಇವರು ಮೈಸೂರ ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿನ ಮುಖ್ಯವಿಚಾರಣಾಸಂಘಕ್ಕೆ ಅಧ್ಯಕ್ಷರಾಗಿರುವರಾದರೂ ಈವರೆಗೆ ಸರ್ಕಾರಿಯ ಉದ್ಯೋಗದಲ್ಲಿದ್ದುದರಿಂದ ಫಂಡಿಗೆ ಸಾಕಷ್ಟು ಹಣವನ್ನು ಶೇಖರಿಸುವ ಕಾರ್ಯದಲ್ಲಿ ಶ್ರದ್ಧೆಯನ್ನು ವಹಿಸಲವಕಾಶವಿರಲಿಲ್ಲವು. ಆದರೆ ಈಗ ಸರ್ಕಾರದ ನಿರ್ಬಂಧವು ತಪ್ಪಿರುವುದರಿಂದ ಬೇಕಾದ ಪ್ರಯತ್ನ ಮಾಡಲನುಕೂಲವಿರುವುದು, ಮತ್ತು ಇವರು ಹಾಗೆ ಪ್ರಯತ್ನಿಸಿದರೆ ಔತ್ತರೇಯ ಲಿಂಗಾಯತ ಬಂಧುಗಳು ಏರ್ಪಡಿಸಿಕೊಂಡಿರುವ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿಗೆ ೬ ಲಕ್ಷ ರೂ.ಗಳ ವರೆಗೆ ಕೂಡಿಸಲ್ಪಟ್ಟಿರುವಂತೆ ಈ ದೇಶದ ಫಂಡಿಗೂ ಹಣವು ಶೇಖರವಾಗುವುದೆಂದು ನಾವು ಧಾರಾಳವಾಗಿ ಹೇಳುತ್ತೇವೆ. ಈಗ ಪ್ರಪಂಚದಲ್ಲೆಲ್ಲಾ ನೂರಾರು ವರ್ಷಗಳಿಂದಲೂ ಜನರಿಂದ ದೇವರಂತೆ ಭಾವಿಸಲ್ಪಟ್ಟು ಪೂಜಿಸಲ್ಪಡುತ್ತಿರುವ ಮಹಾಪುರುಷರುಗಳೆಲ್ಲಾ ತಮ್ಮ ಮತೋದ್ಧಾರಕ್ಕಾಗಿ ಪಾಟುಪಟ್ಟವರೇ ಹೊರತು ಸರ್ಕಾರಿಯುದ್ಯೋಗದಲ್ಲಿದ್ದು ತಮ್ಮ ನೈಪುಣ್ಯವನ್ನು ತೋರಿಸಿದವರಲ್ಲವು. ಇದಕ್ಕೆ ಈಗ್ಗೆ ೭೦೦—೮೦೦ ವರ್ಷಗಳ ಹಿಂದೆ ಬಿಜ್ಜಳನ ಮಂತ್ರಿಯಾಗಿದ್ದ ಬಸವೇಶ್ವರನು ಬಲವಾಗಿದ್ದ ವೀರಶೈವ ಮತವನ್ನು ಉದ್ಧರಿಸಿದುದರಿಂದಲೇ ವೀರಶೈವರೆಲ್ಲರೂ ಆತನನ್ನು ದ್ವಿತೀಯ ಶಂಭುವೆಂದು ಭಾವಿಸಿ ಪೂಜಿಸುತ್ತಿರುವರೇ ಹೊರತು ಆತನು ಬಿಜ್ಜಳನ ಮಂತ್ರಿಯಾಗಿದ್ದುದರಿಂದಲ್ಲವೆಂಬುದು ಒಳ್ಳೆಯ ನಿದರ್ಶನವಾಗಿದೆ. ಅಲ್ಲದೆ ಕೈ॥ ಸಿರಸಂಗಿ ದೇಸಾಯರು ತಮ್ಮ ಸರ್ವಸ್ವವನ್ನೂ ಸ್ವಮತೀಯರ ಅಭಿವೃದ್ಧಿಗಾಗಿ ಧಾರೆಯನ್ನೆರೆದು ಕೊಟ್ಟುದರಿಂದಲ್ಲವೇ ವೀರಶೈವ ಜಗತ್ತಿನಲ್ಲೆಲ್ಲಾ ಪರಮಪೂಜ್ಯರಾಗಿ ಭಾವಿಸಲ್ಪಟ್ಟಿರುವರು? ಮತ್ತು ರಾ॥ಬ॥ ಅರ್ಟಾಳ್ ರುದ್ರಗೌಡರವರು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿನ ಮೂಲಕರ್ತೃಗಳಲ್ಲಿ ಮುಖ್ಯರಾಗಿಯೂ,ಸ್ವಮತೀಯರ ಅಭಿವೃದ್ಧಿಗಾಗಿ ಈಗಲೂ ಪಾಟುಪಡುತ್ತಿರುವವರಾಗಿಯೂ ಇರುವುದರಿಂದಲೇ ಅಲ್ಲವೆ ಸನ್ಮಾನಿಸಲ್ಪಡುತ್ತಿರುವುದು? ಅದು ಕಾರಣ ನಮ್ಮ ಪ್ರಿಯರಾದ ಡಿ॥ ಬ॥ ಮೆ॥ ಪುಟ್ಟಣ್ಣಸೆಟ್ಟರು ಸ್ವಮತಾಭಿವೃದ್ಧಿಯ ಕಾರ್ಯಗಳಲ್ಲಿ ಮುಂದಾಳುಗಳಾಗಿ ನಿಂತುಕೊಂಡು ತಾವೇರ್ಪಡಿಸಿರುವ ಫಂಡಿಗೆ ಸಾಕಷ್ಟು ಹಣವನ್ನು ಶೇಖರಿಸಿ, ವೀರಶೈವರು ವಿದ್ಯಾಬುದ್ಧಿಸಂಪನ್ನರಾಗಿಯೂ ನಾಗರಿಕರಾಗಿಯೂ ಆಗುವಂತೆ ಮಾಡಿ ಮೇಲೆಕಂಡ ಮಹಾಪುರುಷರುಗಳಂತೆ ತಾವೂ ಸ್ವಮತೀಯರಿಂದ ಪುಣ್ಯಮೂರ್ತಿಯಾಗಿ ಭಾವಿಸಲ್ಪಟ್ಟು ಶಾಶ್ವತವಾದ ಕೀರ್ತಿಯನ್ನೂ, ಜಗದ್ರಕ್ಷಕನಾದ ಈಶ್ವರನ ಪ್ರೀತಿಯನ್ನೂ ಸಂಪಾದಿಸಲೆಂದೂ, ಇವರಿಗೆ ದೀರ್ಘಾಯುಷ್ಯವೂ, ಹೆಚ್ಚಾದ ದೇಹದಾರ್ಢ್ಯವೂ ದೇವರಿಂದ ಆಶೀರ್ವದಿಸಲ್ಪಡಲೆಂದೂ ನಾವು ಕೋರುತ್ತೇವೆ.

ಶೃಂಗಗಿರಿಯ ಮಠಕ್ಕೆ ಹೊಸ ಸ್ವಾಮಿಗಳು ನೇಮಕವಾದುದು.

ಗತಿಸಿದ ಶ್ರೀಗಳವರು ತಮ್ಮುತ್ತರಾಧಿಕಾರವನ್ನು ಕೊಡುವುದಕ್ಕಾಗಿ ಬೆಂಗಳೂರ ಶಂಕರಮಠದಲ್ಲಿ ಮೀಮಾಂಸೆ ಮತ್ತು ವೇದಾಂತಗಳನ್ನು ವ್ಯಾಸಂಗಮಾಡುತ್ತಿದ್ದ ಗೋಪಿಶಾಸ್ತ್ರಿಗಳ ಮಕ್ಕಳು ೧೯ ವರ್ಷ ವಯಸ್ಸಿನ ನರಸಿಂಹಶಾಸ್ತ್ರಿಗಳನ್ನು ಕರೆ ಕಳುಹಿಸಿದ್ದು, ಅವರು ಬರುವುದರೊಳಗಾಗಿ ಬ್ರಹ್ಮೈಕ್ಯರಾದುದರಿಂದ, ಅವರ ಸಂಕಲ್ಪವನ್ನು ನೆರವೇರಿಸುವ ಬಗೆಗೆ ಶ್ರೀಮನ್ಮಹಾರಾಜರವರು ಗೆಜೆಟಿನ ವಿಶೇಷಪತ್ರಿಕೆಯಲ್ಲಪ್ಪಣೆಕೊಡಿಸಿರುವ ಪ್ರಕಟಣೆಯು ಮತ್ತೊಂದುಕಡೆ ಕೊಡಲ್ಪಟ್ಟಿದೆ. ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ೧ ನೇ ಕೌನ್ಸಿಲರ್ ಮೆ॥ ಎಚ್. ವಿ. ನಂಜುಂಡಯ್ಯನವರು, ಮುಜರಾಯಿ ಸೂಪರಿಂಟೆಂಡೆಂಟ್ ಮೆ॥ ಬಿ. ರಾಮಸ್ವಾಮಯ್ಯನವರು, ಪೊಲೀಸು ಇ॥ ಜನರಲ್ ಮೆ॥ ಶ್ರೀಕಂಠೇಶ್ವರಯ್ಯರ್‌ರವರು, ಕಡೂರ ಡೆ॥ ಕ॥ ಮೆ॥ ಸುಬ್ರಹ್ಮಣ್ಯಯ್ಯರ್‌ರವರು ಮತ್ತೆ ಕೆಲ ಅಧಿಕಾರಿಗಳು ಶೃಂಗೇರಿಗೆ ಹೋಗಿ ಕಳೆದ ತಾ॥ ೨ ರಲ್ಲಿ ಬ್ರಹ್ಮಶ್ರೀ ನರಸಿಂಹಶಾಸ್ತ್ರಿಗಳಿಗೆ ಶೃಂಗಗಿರಿ ಮಠದ ಅಧಿಕಾರವನ್ನು ಕೊಟ್ಟು ಪಟ್ಟಾಭಿಷೇಕ ಮಹೋತ್ಸವವನ್ನು ಸಕಲ ಮರ್ಯಾದೆಯಿಂದ ನಡೆಸಿದರು. ಈ ದಿವಸ ಶ್ರೀಗಳವರ ಉತ್ಸವವು ಶೃಂಗಗಿರಿಯಲ್ಲಿ ವಿಜೃಂಭಣೆಯಿಂದ ನಡೆಯುವುದು. ಈ ಉತ್ಸವಕ್ಕಾಗಿ ಮೆ॥ ವಿ. ಪಿ. ಮಾಧವರಾಯರೂ ದಯಮಾಡಿಸಿರುವರು

ಒಳದೇಶದ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ಶನಿವಾರ ಮೇಲುಬಂಡಿಯಲ್ಲಿ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಶ್ರೀಮನ್ ಮಹಾರಾಜ ಸಹೋದರರೂ, ರಾಣಿವಾಸದವರೂ ಕಳೆದ ತಾ॥ ೩ ರ ಬೆಳಿಗ್ಗೆ ೭ ಗಂಟೆಯಲ್ಲಿ ಉದಕಮಂಡಲಕ್ಕೆ ಚಿತ್ತೈಸಿದರು.

ಕಳೆದ ತಾ॥ ೩ ರ ಸಾಯಂಕಾಲ ರಾಜಧಾನಿಯಲ್ಲಿ ಒಂದು ಹದ ಮಳೆಯು ಚೆನ್ನಾಗಿ ಆಯಿತು. ಅಂದಿನಿಂದ ಬಿಸಿಲಿನ ತಾಪವಂತೂ ಹೇಳತೀರದಷ್ಟಾಗಿದೆ. ಮತ್ತು ಪ್ರತಿದಿನ ಸಾಯಂಕಾಲ ಮೋಡಮುಸಿಕಿಕೊಂಡು ಮಿಂಚು ಗುಡುಗಿನ ಆರ್ಭಟಿಸುತ್ತಿದ್ದು ಮಳೆಯು ಬಾರದೆ ಹಾಗೆಯೇ ಮಾಯವಾಗುತ್ತಿದೆ.

ಆಕಸ್ಮಿಕವಾಗಿ ಗಾಯಪಡೆದವರಿಗೆ ನೆರೆಹೊರೆಯವರೇ ತಕ್ಕ ಔಷಧೋಪಚಾರ ಮಾಡುವ ಕ್ರಮವನ್ನು ಕಲಿಯುತ್ತಿರುವ ವಿದ್ಯಾರ್ಥಿನಿಯರಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದವರಿಗೆ ಮಹಾಮಾತೃಶ್ರೀ ವಾಣಿವಿಲಾಸ ಸನ್ನಿಧಿಯವರು ಬೆಳ್ಳಿಯ ಪದಾರ್ಥಗಳನ್ನು ಪಾರಿತೋಷಕವಾಗಿ ದಯಪಾಲಿಸಿದರು.

ಯಳಂದೂರ ಜಹಗೀರಿಯ ವಿವಾದದ ೨ ನೇ ವಿಚಾರಣೆಯು ಕಳೆದ ತಾ॥ ೩೧ರಲ್ಲಿ ದಿವಾನರು ಮತ್ತು ಕೌನ್ಸಿಲರುಗಳಲ್ಲಿ ನಡೆಯಿತು. ಸರ್ ಕೃಷ್ಣಮೂರ್ತಿಯವರ ಮೊಮ್ಮಗನ ಪಕ್ಷದ ವಕೀಲರುಗಳಾದ ಬ್ಯಾರಿಸ್ಟರ್ ನಾರ್ಟನ್‌ರವರೂ ಪಾರ್ಟರವರೂ ಬಂದಿರಲಿಲ್ಲವು, ಉಳಿದವರಕಡೆಯ ವಕೀಲರುಗಳು ಬಂದಿದ್ದರು. ಡಿ॥ ಬ॥ ಗೋವಿಂದರಾಘವಯ್ಯರೂ, ಮೊಮ್ಮಗನಕಡೆ ಬ್ಯಾರಿಸ್ಟರ ಬದಲು ಮದ್ರಾಸಿನಿಂದ ಬಂದಿದ್ದ ಮೆ॥ ಕೆ. ಶ್ರೀನಿವಾಸಯ್ಯಂಗಾರರು ಜಹಗೀರಿಯ ಸಂಬಂಧವಾದ ರೆಗ್ಯುಲೇಷನ್ನು ಹಿಂದೂಲಾಕ್ಕೆ ವಿರುದ್ಧವಾಗಿದೆ, ಆದುದರಿಂದ ಪ್ರಕೃತವಿವಾದದಲ್ಲಿ ಅದೊಂದನ್ನೇ ಆಧಾರವಾಗಿಟ್ಟುಕೊಳ್ಳಕೂಡದು ಮತ್ತು ಸರ್ ಕೃಷ್ಣಮೂರ್ತಿಯವರ ಜಹಗೀರಿಗೆ ಅವರ ಮೊಮ್ಮಗನೇ ಉತ್ತರಾಧಿಕಾರಿಯಾಗಿ ಮಾಡಲ್ಪಡಬೇಕು. ಎಂದು ಮೊದಲಾಗಿ ೧—೨ ಗಂಟೆಗಳ ವರೆಗೆ ವಾದಿಸಿದರು. ಅನಂತರ ಮೆ॥ ರಂಗಯ್ಯಂಗಾರರು ಅವರಾಕ್ಷೇಪಣೆಗಳಿಗೆಲ್ಲಾ ಸಮಾಧಾನವನ್ನು ಕೊಟ್ಟರು. ಇವರ ಫಲಿತಾಂಶವು ಇನ್ನೂ ಗೊತ್ತಾಗತಕ್ಕದಾಗಿದೆ.

ರಾಜಧಾನಿಯ ಅಡ್ವೊಕೇಟರಾದ ಮೆ॥ ಕೆ. ಚಂದ್ರಶೇಖರಯ್ಯ, ಬಿ. ಎ., ಬಿ ಎಲ್ ರವರು, ಲಾಹುಕಾರ್ ಮತ್ತು ಮುನ್ಸಿ॥ ಕೌನ್ಸಿಲರ್‌ಗಳಾದ ಮೆ॥ ಶ್ರೀಕಂಠಯ್ಯನವರು, ನರಸಿಂಹಸ್ವಾಮಿಯವರು ಮತ್ತು ಇಂಡಿಯನ್ ಮ್ಯೂಜಿಕ್ ಜರ್ನಲ್ಲಿನ ಸಂಪಾದಕರಾದ ಮೆ॥ ಎಚ್. ಪಿ. ಕೃಷ್ಣರಾವ್, ಬಿ. ಎ., ಯವರು ಸಂಗೀತ ವಿದ್ಯಾನಿಲಯವನ್ನು ಸ್ಥಾಪಿಸುವ ಬಗೆಗೆ ಕಳೆದ ತಾ॥ ೩ ರ ಸಾಯಂಕಾಲ ಜರ್ವಹಾಲಿನಲ್ಲಿ ರಾಜಧಾನಿಯ ನಿವಾಸಿಗಳ ಸಭೆಯನ್ನು ಡಿಪ್ಯುಟಿ ಚೀಫ್ ಇಂಜನಿಯರುದ್ಯೋಗದಿಂದ ನಿವೃತ್ತರಾಗಿರುವ ಮೆ॥ ವೈ ಶ್ರೀನಿವಾಸರಾವ್, ಬಿ. ಎ., ಯವರ ಅಧ್ಯಕ್ಷತೆಯಲ್ಲಿ ಕೂಡಿಸಿದ್ದರು. ಅಧ್ಯಕ್ಷರು ಭರತಖಂಡದ ಸಂಗೀತಶಾಸ್ತ್ರಾಭ್ಯಾಸಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡಲು ಒಂದು ಸಂಘವು ಏರ್ಪಡತಕ್ಕದಾವಶ್ಯಕವೆಂದು ಬಹು ಸ್ವಾರಸ್ಯವಾಗಿಯೂ ಯುಕ್ತಿಯುಕ್ತವಾಗಿಯೂ ಉಪನ್ಯಾಸವನ್ನು ಮಾಡಿದರು ಅನಂತರ ಸರದಾರ್ ಎಂ. ಕಾಂತರಾಜ ಅರಸಿನವರ ಅಧ್ಯಕ್ಷತೆಯಿಂದ ಒಂದು ಸಂಘವು ಏರ್ಪಡಿಸಲ್ಪಟ್ಟು ಮೆ॥ ಎಚ್. ಪಿ. ಕೃಷ್ಣರಾಯರು ಕಾರ್ಯದರ್ಶಿಗಳಾಗಿಯೂ ಕೆಲ ಸಂಗೀತ ವಿದ್ಯಾಭಿಮಾನಿಗಳು ಮೆಂಬರುಗಳಾಗಿಯೂ ಮಾಡಲ್ಪಟ್ಟರು ಈ ಸಂಗೀತ ವಿದ್ಯೆಯು ಇಹಪರ ಸುಖಸಾಧಕವಾದುದರಿಂದ ಪ್ರತಿಯೊಬ್ಬ ಮನುಷ್ಯನೂ ಈ ವಿದ್ಯೆಯ ಪ್ರೋತ್ಸಾಹಕ್ಕಾಗಿ ಶಕ್ತ್ಯನುಸಾರ ದ್ರವ್ಯಸಹಾಯವನ್ನು ಮಾಡಿ ಮುಂದಾಳುಗಳ ಉದ್ದೇಶವು ಸಫಲವಾಗುವಂತೆ ಮಾಡದೆ ಇರಲಾರರೆಂದು ನಂಬುತ್ತೇವೆ.

ವರ್ತಮಾನ ಸಂಗ್ರಹವು.

ಚಿಕಾಗೋ ಪಟ್ಟಣದಲ್ಲಿ ೧೫೦೦೦ ಮರಗೆಲಸದವರು ಕೂಲಿಯನ್ನು ಹೆಚ್ಚಾಗಿ ಕೊಟ್ಟಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದು ನಿಂತುಬಿಟ್ಟಿರುವುದರಿಂದ ೯೫೦ ಲಕ್ಷ ರೂ. ಗಳ ಬೆಲೆಯ ಕಟ್ಟಡಗಳ ಕೆಲಸವು ನಿಂತುಹೋಗಿದೆ.

ಆಸ್ಟ್ರೇಲಿಯಾದಲ್ಲಿ ಯಾವಸ್ವತ್ತೂ ಒಬ್ಬನದಾಗಿರದೆ ಸಮಸ್ತರದಾಗಿರುವುದೆಂದು ವಾದಿಸುವವನೊಬ್ಬನು ತನ್ನ ಮಗನು ರಾಜ್ಯರಕ್ಷಣೆಗಾಗಿ ಸೇನೆಯಲ್ಲಿ ಸೇರಲು ಅಡ್ಡಿಪಡಿಸಿದುದರ ಅಪರಾಧಕ್ಕಾಗಿ ೧೫೦ ರೂಪಾಯಿಗಳನ್ನು ಕೊಡಲು ತಪ್ಪಿದಲ್ಲಿ ೩ ತಿಂಗಳ ಕಠಿಣ ಕಾರಾಗೃಹವಾಸ ಮಾಡಬೇಕೆಂದು ಶಿಕ್ಷೆವಿಧಿಸಲ್ಪಟ್ಟನು.

ಗಯಾಬಳಿ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲುಬಂಡಿಯ ಇಂಜನ್ನಿಗೆ ಒಂದು ಹುಲಿಯು ಸಿಕ್ಕಿಕೊಂಡಿದ್ದುದರಿಂದ ಬಂಡಿಯು ನಿಲ್ಲಿಸಲ್ಪಟ್ಟು ಗುಂಡಿನಿಂದ ಹೊಡೆಯಲ್ಪಟ್ಟಿತು. ಆದರೆ ಅದರಿಂದ ಹುಲಿಯು ಸಾಯದೆ ಬಂಡಿಯು ಮುಂದಕ್ಕೆ ಹೊರಟು ೩೦ ಮೈಲಿ ದೂರ ಹೋದಮೇಲೆ ತಪ್ಪಿಸಿಕೊಂಡು ಹೋಗಿದ್ದು ಕಡೆಯಲ್ಲಿ ಒಬ್ಬರಿಂದ ಕೊಲ್ಲಲ್ಪಟ್ಟಿತು.

ಭಾಗಲಪುರದ ಸಮೀಪದಲ್ಲಿ ಸುಲ್ತಾನಗಂಜ್ ಎಂಬಲ್ಲಿ ೬ ಅಂಗುಲ ಮಳೆಯು ಬಂದು ಆಲಿಕಲ್ಲು ವಿಪರೀತವಾಗಿ ಸುರಿದು ಅನೇಕ ಮೈಲಿ ವಿಸ್ತೀರ್ಣದಲ್ಲಿ ೪೮ ಗಂಟೆಯ ವರೆಗೆ ಮಂಜು ಹೆಪ್ಪುಕಟ್ಟಿಕೊಂಡು ನಿಂತಿದ್ದಿತು. ಇದರಿಂದ ಪೈರುಗಳೆಲ್ಲ ಕೊಚ್ಚಿಹೋದುವಲ್ಲದೆ ಸಾವಿರಾರು ದನಗಳು ನಾಶವಾದುವು, ಮತ್ತು ಕೆರೆಗಳಲ್ಲಿದ್ದ ಮೀನುಗಳೂ ಸತ್ತುಹೋದುವು.

ಗುಜರಾತಿನಲ್ಲಿ ಪ್ರಾಪ್ತವಾಗಿರುವ ಕ್ಷಾಮನಿವಾರಣಾರ್ಥವಾಗಿ ಬೊಂಬಾಯಿನಲ್ಲೇರ್ಪಟ್ಟಿರುವ ಫಂಡಿಗೆ ಒಟ್ಟು ೬೦೦೯೬ ರೂ. ಗಳ ಚಂದಾಹಣವು ಶೇಖರವಾಗಿದ್ದುದರಲ್ಲಿ ಪಶುಗಳ ಸಹಾಯಾರ್ಥವಾಗಿ ೧೯೩೦೫ ರೂ. ಗಳೂ, ಮನುಷ್ಯರ ಸಹಾಯಾರ್ಥವಾಗಿ ೬೫೫೦ ರೂ. ಗಳೂ, ಭಾವಿಗಳನ್ನು ತೋಡಲು ೮೫೦ ರೂ. ಗಳೂ ವ್ಯಯಮಾಡಲ್ಪಟ್ಟುವು.

ಪೆಷಾವರಿನಲ್ಲಿ ಅಗ್ನಿಪ್ರವೇಶವಾಗಿ ಮುಕ್ಕಾಲು ಮೈಲು ಪ್ರದೇಶದವರೆಗೆ ಆವರಿಸಿಕೊಂಡಿದ್ದು ೨॥ ದಿನಗಳು ಒಂದೇ ಸಮನಾಗಿ ಉರಿಯುತ್ತಿದ್ದಿತು. ಇದರಿಂದ ಅರಮನೆಯಂತಹ ಅನೇಕ ಮನೆಗಳು ಹೊತ್ತಿಕೊಂಡು ನಾಶವಾದುವು. ಈ ಅಗ್ನಿಯ ಅನಾಹುತದಿಂದ ಒಟ್ಟು ೧೦ ಲಕ್ಷ ರೂ. ಗಳವರೆಗೆ ನಷ್ಟವಾಗಿರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಜರ್ಮನಿಯಲ್ಲಿ ತಂತಿಯಿಲ್ಲದೆ ವಾಯುಮಂಡಲದಲ್ಲಿ ವರ್ತಮಾನವನ್ನು ಕಳುಹಿಸುವ ತಾಣಕ್ಕೆ ಅಲ್ಲಿಯ ಇಂಜನಿಯರುಗಳೆಲ್ಲ ಬಹು ಬುದ್ಧಿಯನ್ನುಪಯೋಗಿಸಿ ೬೫೦ ಅಡಿ ಎತ್ತರವಿರುವ ಒಂದು ಶಿಖರವನ್ನು ಬರೀ ಕಬ್ಬಿಣದಲ್ಲಿ ಅತ್ಯಂತ ಚಮತ್ಕಾರದಿಂದ ಸ್ವಲ್ಪ ಕಾಲದ ಹಿಂದೆ ಕಟ್ಟಿದ್ದರು. ಈ ಅಪೂರ್ವವಾದ ಶಿಖರವು ಪ್ರಚಂಡವಾದ ಗಾಳಿಯೇಟಿಗೆ ಮುರಿದು ಬಿದ್ದುಹೋಯಿತು.

ಈಗ ಇಂಗ್ಲೆಂಡಿನಲ್ಲಿ ಹೆಂಗುಸರು ಪಾರ್ಲಿಮೆಂಟ್ ಸಭಾಸ್ತರರಾಗಾರಿಸಲ್ಪಟ್ಟಿರುವ ಹಕ್ಕನ್ನು ಸಂಪಾದಿಸಬೇಕೆಂದು ಅನೇಕ ನಷ್ಟಕಷ್ಟಗಳನ್ನು ಅನುಭವಿಸಿಕೊಂಡು ಹೋರಾಡುತ್ತಿರುವಂತೆ ಸ್ವೀಡನ್ನಿನಲ್ಲಿ ಹೋರಾಡುತ್ತಿದ್ದುದರ ವೇಳೆ ಅಲ್ಲಿಯ ಪಾರ್ಲಿಮೆಂಟ್ ಸಭಾಸ್ತರರಾಗಿ ಹೆಂಗುಸರು, ಆರಿಸಲ್ಪಡಬಹುದೆಂದೂ ೩ ವರ್ಷಗಳ ವರೆಗೆ ಕಂದಾಯವನ್ನು ಕೊಡದೆ ಇರತಕ್ಕ ಪುರುಷರುಗಳ ಹೆಂಡತಿಯರುಗಳು ಮತವನ್ನು ಕೊಡಲರ್ಹರಾಗುವುದಿಲ್ಲವೆಂದೂ ಪಾರ್ಲಿಮೆಂಟ್ ಸಭೆಯವರು ವಿಧಿಸಿರುವರು.

ಲಂಡನ್ ನಗರದಲ್ಲಿ ಹೋದವಾರದಲ್ಲಿ ಕೆಲ ಕಳ್ಳರು ಒಂದು ಆಭರಣದ ಅಂಗಡಿಗೆ ನುಗ್ಗಿ ೧,೫೦,೦೦೦ ರೂ. ಬೆಲೆಯ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು. ಕಳ್ಳರು ಆ ಆಭರಣದ ಅಂಗಡಿಯಿಂದ ಕೊಂಚ ದೂರದಲ್ಲಿರುವ ಅಲ್ಪಾಹಾರಗೃಹದಲ್ಲಿದ್ದುಕೊಂಡು ಅಲ್ಲಿಂದ ಆ ಅಂಗಡಿಗೆ ನೆಲದಲ್ಲಿ ಸುರಂಗವನ್ನು ಮಾಡಿಕೊಂಡು ಬಂದು ೬ ಅಡಿ ಮಂದವಿರುವ ೩ ಗೋಡೆಗಳನ್ನು ಕೊರೆದು ಒಳಗೆನುಗ್ಗಿ ಆಭರಣಗಳನ್ನಿಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ತೆಗೆಯಲು ಸಾಹಸಪಡುವಾಗ್ಗೆ ಮಧ್ಯೆ ಅಲ್ಪಾಹಾರ ಗೃಹಕ್ಕೆ ಹೋಗಿ ವಿಶ್ರಮಿಸಿಕೊಂಡು ಬರುತ್ತಿದ್ದರು. ಕಳ್ಳತನದಲ್ಲೂ ಎಂತಹ ನಾಗರಿಕತೆಯು!

ಮೇರಿ ಚಕ್ರವರ್ತಿನಿಯವರು ಭರತಖಂಡಕ್ಕೆ ದಯಮಾಡಿಸಿದ್ದುದರ ಜ್ಞಾಪನಾರ್ಥವಾಗಿ ಭೂಪಾಲಿನ ಬೇಗಂರವರು ತಮ್ಮ ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭಿವೃದ್ಧಿಕಾರ್ಯವನ್ನು ಮಾಡಬೇಕೆಂದು ಸಂಕಲ್ಪಿಸಿ, ಕಾಲಕ್ರಮೇಣ ಮಾರ್ಗದರ್ಶಕವಾಗಿ ಪರಿಣಮಿಸುವಂತಹ ಉತ್ಕೃಷ್ಟವಾದ ಒಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ. ಮತ್ತು ಈ ಕಾರ್ಯಾರಂಭಕ್ಕಾಗಿ ಬೇಕಾಗುವ ೧೬ ಲಕ್ಷ ರೂಪಾಯಿಗಳಲ್ಲಿ ತಮ್ಮ ಸರ್ಕಾರದಿಂದ ೧ ಲಕ್ಷ ರೂ. ಗಳನ್ನೂ ಸ್ವಂತದಿಂದ ೬೦೦೦೦ ರೂ. ಗಳನ್ನೂ ಕೊಡಲು ವಾಗ್ದಾನಮಾಡಿರುವರು. ಅಲ್ಲದೆ ಇವರ ಸೊಸೆಯರುಗಳು ೧೯೦೦೦ ರೂ. ಗಳನ್ನು ಕೊಡಲೊಪ್ಪಿರುವರು.

ವೇಲ್ಸ್ ದೇಶದ ಒಬ್ಬ ಕುಂಟಹುಡುಗನಿಗೆ ಕೃತ್ರಿಮದ ಕಾಲುಗಳನ್ನು ಮಾಡಿಸಿ ಹಾಕಿಕೊಳ್ಳುವುದಕ್ಕಾಗಿ ಜಾರ್ಜ್ ಪ್ರಭುಗಳು ೩೫ ರೂಪಾಯಿಗಳನ್ನು ಬಹುಮಾನಿಸಿದರು. ಆ ಹುಡುಗನು ಪ್ರಭುಗಳನ್ನು ಕಂಡು ಅವರ ಕೃಪೆಗಾಗಿ ಅವರನ್ನು ವಂದಿಸಬೇಕೆಂದು ಬಕಿಂಗ್ಹಾಂ ಅರಮನೆಯ ಬಳಿ ನಿರೀಕ್ಷಿಸಿಕೊಂಡಿದ್ದು ಪ್ರಭುಗಳ ದರ್ಶನವಾಗದೆ ಬಹು ಆಶಾಭಗ್ನನಾಗಿದ್ದನು. ಈ ಸಂಗತಿಯನ್ನು ಪ್ರಭುಗಳು ತಿಳಿದು ಆ ಕುಂಟಹುಡುಗನನ್ನು ಅರಮನೆಯೊಳಕ್ಕೆ ಬರಮಾಡಿಕೊಂಡು ಅವನನ್ನು ಬಹು ಪ್ರೀತಿವಿಶ್ವಾಸದಿಂದ ಕಂಡು ಅವನ ಆರೋಗ್ಯ ಬಾಳಿಕೆ ಮೊದಲಾದ ಸಂಗತಿಗಳನ್ನು ವಿಚಾರಿಸಿ, ರತ್ನಖಚಿತವಾದ ಒಂದು ಆಭರಣವನ್ನು ದಯಪಾಲಿಸಿದರು.

ಭಾರತೀಯರಲ್ಲೆಲ್ಲಾ ಮಲ್ಲಕಾಳಗದಲ್ಲಿ ಎಂದರೆ ಕುಸ್ತಿಯಲ್ಲಿ ಪ್ರಸಿದ್ಧನಾಗಿರುವ ಮತ್ತು ಸೀಮೆಗೆ ಹೋಗಿ ಬಹು ಪ್ರಸಿದ್ಧರಾದ ಐರೋಪ್ಯರ ಕೂಡ ಕುಸ್ತಿಯನ್ನು ಮಾಡಿ ಅವರುಗಳನ್ನು ಸೋಲಿಸಿ ಅನೇಕ ಬಹುಮಾನಗಳನ್ನು ಪಡೆದು ಬಂದಿರುವ ಗಾಮಾ ಪೈಲ್ವಾನನಿಗೂ, ಭರತಖಂಡದ ಕಲಿಭೀಮನೆಂದು ಪ್ರಸಿದ್ಧನಾಗಿರುವ ರಾಮಮೂರ್ತಿಯ ಕೂಡ ಸೀಮೆಗೆ ಹೋಗಿದ್ದ ಬಿದ್ದೂ ಎಂಬ ಹಿಂದುವಿಗೂ ಕಳೆದ ತಾ॥ ೧ ರಲ್ಲಿ ಲಾಹೋರಿನಲ್ಲಿ ಕುಸ್ತಿಯು ನಡೆಯಿತು. ಗಾಮಾ ಪೈಲ್ವಾನನು ಬಿದ್ದೂವನ್ನು ಕೊಂಚಹೊತ್ತು ಸೆಣಸಾಡುತ್ತಿದ್ದು ಅವನನ್ನು ಮುಖಕೆಳಗಾಗಿ ಕೆಡುವಿ ತನ್ನ ಶಕ್ತಿಯಿಂದ ಕೂಡಲೆ ಅವನನ್ನುರುಳಿಸಿ ಅವನ ಬೆನ್ನನ್ನು ನೆಲದಕಡೆಗೆ ಮಾಡಿ ಅವನ ಎದೆಯಮೇಲೆ ಕುಳಿತುಕೊಂಡನು. ಈ ಕುಸ್ತಿಯನ್ನು ನೋಡಲು ೪೦೦೦೦ ಜನರ ವರೆಗೆ ಸೇರಿದ್ದರು. ಜಯಶೀಲನಾದ ಗಾಮನನ್ನು ಜನರು ಉತ್ಸವದಿಂದ ಪಟ್ಟಣದಲ್ಲೆಲ್ಲಾ ಕರೆದುಕೊಂಡು ಹೋಗಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು.

ಸೇಲಂ ಡಿಸ್ಟ್ರಿಕ್ಟಿಗೆ ಸೇರಿದ [illegible] ಎಂಬ ಗ್ರಾಮದಲ್ಲಿ ೬೪ ಜನ ಆಯುಧಪಾಣಿಗಳಾದ ತಲೆಬಡಿಕರು ಒಬ್ಬ ಶ್ರೀಮಂತರ ಮನೆಗೆ ನುಗ್ಗಿ ಚೌರ್ಯವನ್ನು ಮಾಡುತ್ತಿರುವಾಗ್ಗೆ ಗ್ರಾಮದವರು ಆ ಮನೆಯ ಯಜಮಾನನ ಸಹಾಯಕ್ಕೆ ಬಂದು ಕಳ್ಳರಕೂಡ ಕಾದಾಡಲು ೩ ಜನ ಕಳ್ಳರು ಸತ್ತರು ಮತ್ತೊಬ್ಬನು ಸೆರೆಹಿಡಿಯಲ್ಪಟ್ಟನು; ಗ್ರಾಮಸ್ಥರಲ್ಲಿ ಒಬ್ಬ ಚೌಕಿದಾರನಿಗೆ ಪ್ರಾಣಾಪಾಯವಾಗಿದೆ. ಮತ್ತೊಂದು ಚೆತ್ಪಾಲ ಎಂಬ ಊರಿನಲ್ಲಿ ಒಬ್ಬ ಶ್ರೀಮಂತನ ಮನೆಗೆ ತಲೆಬಡಿಕರು ಆಯುಧಪಾಣಿಗಳಾಗಿ ನುಗ್ಗಿ ಶ್ರೀಮಂತನಿಗೂ ಅವನ ಹೆಂಡತಿಗೂ ಪ್ರಾಣಾಪಾಯವನ್ನುಂಟುಮಾಡಿ ಆಸ್ತಿಯನ್ನೆಲ್ಲಾ ದೋಚಿಕೊಂಡು ಹೋದರು. ಆ ದಂಪತಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದಾರೆ ಇನ್ನೊಂದು ಗ್ರಾಮದಲ್ಲಿ ತಲೆಬಡಿಕರು ಒಬ್ಬ ಶ್ರೀಮಂತರ ಮನೆಗೆ ನುಗ್ಗಿ ಯಜಮಾನನನ್ನು ಚೆನ್ನಾಗಿ ಪ್ರಹರಿಸಿ ಪದಾರ್ಥಗಳನ್ನು ಅಪಹರಿಸಿಕೊಂಡು ಹೋಗುವಷ್ಟರಲ್ಲಿ ಗ್ರಾಮಸ್ಥರು ಸಹಾಯಕ್ಕೆ ಬರಲು ಕಳ್ಳರು ಪದಾರ್ಥಗಳನ್ನು ಬಿಟ್ಟೋಡಿದರು.

ಪತ್ರವ್ಯವಹಾರವು.

ಅಯ್ಯಾ ಪತ್ರಕರ್ತರೆ!

ನನಗೆ ಶ್ರೀಮದಿಂಡಿಯಾ ಚಕ್ರವರ್ತಿಯವರಿಂದ ಪ್ರಶಸ್ತಿಯು ದಯಪಾಲಿಸಲ್ಪಟ್ಟಿರುವುದಕ್ಕಾಗಿ ಮೈಸೂರಿನ ವೀರಶೈವ ಲೈಬ್ರರಿಯ ಮೆಂಬರುಗಳು ಮತ್ತು ಅಲ್ಲಿಯ ಎಲ್ಲ ವೀರಶೈವರೂ ತಮಗುಂಟಾಗಿರುವ ಆನಂದಾತಿಶಯವನ್ನು ಕಳೆದ ಮಾರ್ಚಿ ತಾ॥ ೨೪ ರ ಮೈಸೂರ ಸ್ಟಾರ್ ಪತ್ರಿಕೆಯ ಮೂಲಕ ನನಗೆ ತಿಳಿಸಿರುವುದಕ್ಕಾಗಿ ನನ್ನ ಮನಃಪೂರ್ವಕವಾದ ವಂದನೆಗಳನ್ನು ಅವರಿಗೆ ಈ ಪತ್ರಿಕಾದ್ವಾರಾ ತಾವು ದಯವಿಟ್ಟು ತಿಳುಹಬೇಕಾಗಿ ಅಪೇಕ್ಷಿಸುತ್ತೇನೆ. ಅಂತಹ ಪ್ರಶಸ್ತಿಯು ಲಭ್ಯವಾದುದರಿಂದುಂಟಾದ ಸಂತೋಷವು ಮಿತ್ರರ ಮತ್ತು ಕ್ಷೇಮಚಿಂತಕರ ಅಭಿನಂದನ ವಚನಗಳಿಂದ ಮಿಗಿಲಾಗಿರುವುದು.

ತಮ್ಮ ಮಿತ್ರ
ರುದ್ರಗೌಡ ಅರ್ಟಾಳ್, ಡೆಪ್ಯುಟಿ ಕಲೆಕ್ಟರ್
ಕ್ಯಾಂಪ್-ಬುರ್ಲಹಟ್ಟಿ ಅಥಣಿ ತಾಲ್ಲೋಕು.
ತಾ॥ ೩೧—೩—೧೩.

ಬಿಳಿಬೇಗೂರು.

ಇದೇ ಪರಿಧಾವಿ ಸಂವತ್ಸರದ ಚೈತ್ರ ಶು॥ ೬ ಬುಧವಾರ ಕೈ. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರ್ ದೇಸಾಯಿ ಸಂಸ್ಥಾನ ನವಲ್ಗುಂದ, ಇವರ ಮರಣಶಾಸನದ ಪರಿಣಾಮವು ಪ್ರಿಯಪತ್ರವಾದ ಮೈಸೂರ್ ಸ್ಟಾರ್ ಮೂಲಕ ತಿಳಿದು ಇಲ್ಲಿಯ ವೀರಶೈವ ಪ್ರಮುಖರೆಲ್ಲರೂ ಬಹಳ ಆನಂದತುಂದಿಲರಾದರು. ಅದೇ ದಿನ ಸಾಯಂಕಾಲ ಚಂದ್ರದರ್ಶನವಾದೊಡನೆ ಸರ್ವರೂ ಶ್ರೀಗುರುಸಿದ್ಧಸ್ವಾಮಿ ಮಠದಲ್ಲಿ ಸೇರಿ ಸದರಿ ಶ್ರೀಮಂತರ ಭಾವಚಿತ್ರವನ್ನು ಹಿಡಿದುಕೊಂಡು ವಾದ್ಯವೈಭವದೊಡನೆ ಕೋಟೆಯಲ್ಲಿರುವ ಶ್ರೀ ರಾಮೇಶ್ವರ ದೇವಾಲಯಕ್ಕೆ ಉತ್ಸವದಿಂದ ಹೋಗಿ ಮೇಲ್ಕಂಡವರ ಆತ್ಮಕ್ಕೆ ಶಾಂತಿಯನ್ನು ಬಯಸಿ, ಶ್ರೀ ದೇವರಿಗೆ ಮಂಗಳಾರತಿಯನ್ನು ಮಾಡಿಸಿದನಂತರ ಈ ವಿದವಾದ ಸಂತೋಷಕ್ಕೋಸ್ಕರ ಮೂರಾವೃತ್ತಿ ಮಹಾಘೋಷವನ್ನು ಮಾಡಿದರು. ಅಲ್ಲಿಂದ ಮೊದಲಿನಂತೆಯೇ ಉತ್ಸವ ಹೊರಟು ಶ್ರೀ ಗುರುಸಿದ್ಧಸ್ವಾಮಿ ಮಠಕ್ಕೆ ಬಂದು ಅಲ್ಲಿ ಮೊದಲೇ ಏರ್ಪಡಿಸಿದ್ದ ಪ್ರಕಾರ ಉಚಿತಾಸನದಲ್ಲಿ ದೇಸಾಯರ ಫೋಟೋವನ್ನಿಟ್ಟು ಸಂತೋಷಪೂರ್ವಕವಾಗಿ ಮೂರಾವೃತ್ತಿ ಬಂದೂಕು ಉಡಾಯಿಸಲ್ಪಟ್ಟಿತು. ಯಥಾಪ್ರಕಾರ ಶ್ರೀ ಸ್ವಾಮಿಗೆ ಮಂಗಳಾರತಿಯಾದನಂತರ ಸರ್ವರೂ ಕುಳಿತುಕೊಂಡರು. ಆಮೇಲೆ ಕೆ. ಯಂ. ಕರಿಬಸವಾರಾಧ್ಯರಿಂದ ನೂತನ ವರ್ಷದ ಪಂಚಾಂಗಶ್ರವಣವಾಯಿತು ಅನಂತರ ಮಹನೀಯರ ದರ್ಶನದಿಂದಾಗತಕ್ಕ ಫಲವನ್ನು ಮೆ॥ ರಾ॥ ಸೆಟ್ಟರ ರುದ್ರಪ್ಪನವರು ಎಲ್ಲರಿಗೂ ಬೋಧಿಸಿದರು ತರುವಾಯ ಮೇಲೆಕಂಡ ಮಹನೀಯರು ಮತಕ್ಕೆ ಮಾಡಿರುವ ಮಹೋಪಕಾರವನ್ನು ಕುರಿತು ಮೆ॥ರಾ॥ ಸೆಟ್ಟರ ಮುದ್ದೀರಪ್ಪನವರು ಸರಸವಾಗಿ ಭಾಷಣಮಾಡಿದರು. ಇದನ್ನು ಕೇಳಿ ಸಭೆಯಲ್ಲಿ ನೆರೆದಿದ್ದವರೆಲ್ಲರೂ ಆಶ್ಚರ್ಯಭರಿತರಾಗಿ ಜಯರವದೊಡನೆ ಸಭೆಯು ಭಂಗವಾಯಿತು. ಅಯ್ಯಾ ಪ್ರಿಯ ವಾಚಕರೆ! ಘನವನ್ನು ಹೊಂದಿ ತಮ್ಮ ಜೀವಿತಕಾಲವನ್ನೆಲ್ಲಾ ಮತಾಭ್ಯುದಯಕ್ಕಾಗಿ ಕಳೆದು ತನುಮನಧನವನ್ನರ್ಪಿಸಿ ಕಡೆಗೆ ತಮ್ಮ ದೇಹವನ್ನೇ ಸೂರೆಗೊಟ್ಟ ಈ ಮಹನೀಯರ ಅಗಾಧವಾದ ಪುಣ್ಯಚರಿತ್ರೆಯನ್ನು ವರ್ಣಿಸಲು ಆರಿಂದಲೂ ಅಸದಳವು. ಈ ರೀತಿಯಾಗಿ ಈ ಪುಣ್ಯಾತ್ಮರು ಮತಕ್ಕೆ ಮಹೋಪಕಾರವನ್ನು ಮಾಡಿ ಮತಬಾಂಧವರೆಲ್ಲರಿಂದಲೂ ಚಿರಸ್ಮರಣೀಯರಾಗಿ ಶಿವಸಾಯುಜ್ಯವನ್ನು ಪಡೆದು ಆಚಂದ್ರಾರ್ಕವಾದ ತಮ್ಮ ಕೀರ್ತಿಯನ್ನು ಪ್ರಕಾಶಪಡಿಸಿದರು. ಇವರ ಮೇಲ್ಪಂಕ್ತಿಯನ್ನನುಸರಿಸಿ

ರೂ ನಾತ್ರೀಯರೆಲ್ಲರೂ ನಡೆಯುತ್ತಾ ಯೋಗದಲ್ಲಿ ಬೇಗನೆ ನಾವು ಅಭಿವೃದ್ಧಿಸ್ಥಿತಿಗೆ ಬರಲು ಯಾವ ಅಭ್ಯಂತರವೂ ಇಲ್ಲ. ಮತ್ತೂ ಇವರ ಪಿಲ್ಲದ ವಿಷಯದಲ್ಲಿ ಇವರ ಧರ್ಮಪತ್ನಿಯವರು ಕೆಲ ಕುಹಕರ ಮಾತನ್ನು ಕಟ್ಟಿಕೊಂಡು ವ್ಯಾಜ್ಯಕ್ಕಾಸ್ಪದವನ್ನುಂಟುಮಾಡಿದುದ್ದು ಎಲ್ಲರಿಗೂ ಕೊಂಚ ವಿಷಾದವೆನಿಸಿತ್ತು. ಆದರೆ ಶ್ರೀ ಭಗವದನುಗ್ರಹದಿಂದ ಅದೆಲ್ಲವೂ ಪಾರಾದುದಕ್ಕೆ ತುಂಬಾ ಸಂತೋಷಿಸಬೇಕಾಗಿದೆ. ಧರ್ಮಾಭಿಮಾನಿಗಳಾದ ನಮ್ಮ ಬ್ರಿಟಿಷ್ ಗೌರ್ನಮೆಂಟಿನವರು ಇದನ್ನು ಚೆನ್ನಾಗಿ ಪರಿಶೀಲಿಸಿ ಇತ್ಯರ್ಥಮಾಡಿದುದಕ್ಕಾಗಿ ಅವರನ್ನು ನಾವು ಎಷ್ಟು ಕೊಂಡಾಡಿದರೂ ತೀರದು. ಆದುದರಿಂದ ಆಂಗ್ಲಸಾಮ್ರಾಜ್ಯ ಸ್ವರಾಟ್ಛತ್ರದ ನೆರಳು ಚಿರಸ್ಥಾಯಿಯಾಗಿ ಯಾವಾಗಲೂ ನಮ್ಮ ಮೇಲಿರಲೆಂದು ಆ ಜಗತ್ಕರ್ತನಾದ ಪರಮಾತ್ಮನನ್ನು ಅನನ್ಯಭಾವದಿಂದ ಬೇಡುವ.

ಪ್ರತ್ಯಕ್ಷದರ್ಶಿ.

ದಾವಣಗೆರೆ.

“ವೀರಶೈವ ಹಿತೋಪದೇಶಕ ಸಂಘ” ದ ಪರವಾಗಿ ಕಳೆದಏಪ್ರಿಲ್ ತಾ॥ ೧ ನೆಯ ಸೋಮವಾರ ಸಾಯಂಕಾಲಕ್ಕೆ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಸಭೆ ನೇರಿದ್ದಿತು. ಈ ಸಂಘದ ಉಪಾಧ್ಯಕ್ಷರೂ, ಕಾರ್ಯದರ್ಶಿಗಳೂ, ಇತರ ಪ್ರಮುಖರೂ ಬಂದೊಡನೆ ವೇ॥ ಗುರುಮೂರ್ತಿಶಾಸ್ತ್ರಿಗಳವರು “ನಗುರೋರಧಿಕಂ” ಎಂಬ ವಿಷಯಕ್ಕೆ ಬರೆದಿದ್ದ ಲೇಖನವನ್ನು ಮ॥ ರಾ॥ ಹರ್ತಿಕರ್ ಮಂಜಪ್ಪನವರು ಸಭಿಕರಿಗೆ ಓದಿ ಹೇಳಿದ ನಂತರ “ಶ್ರೀ ಬಸವೇಶ್ವರ ಜನ್ಮತಿಥಿಯನ್ನು” ಶೋಧಿಸುವುದಕ್ಕಾಗಿ ಇಲ್ಲಿನ ಜ್ಯೋತಿಷಜ್ಞರಾದ ವೇ॥ ಗುರುಬಸಪ್ಪಯ್ಯನವರಿಗೂ, ವೇ॥ ಪರ್ವತಯ್ಯನವರಿಗೂ, ಕೆಲವು ಕಾಲ ಚರ್ಚೆನಡೆದು ಅನಂತರ ಈ ಉಭಯಪಂಡಿತರಲ್ಲಿ ಭಿನ್ನಾಭಿಪ್ರಾಯಗಳುಂಟಾದುದರಿಂದ ಪರಸ್ಥಳದ ಜ್ಯೋತಿಷಜ್ಞರ ಅಭಿಪ್ರಾಯವನ್ನು ಪಡೆದು ಈ ಕಾಲವನ್ನು ನಿಶ್ಚೈಸಬೇಕೆಂದು ಸಭಿಕರು ತೀರ್ಮಾನವಮಾಡಿದನಂತರ ಸಭೆಯು ವಿಸರ್ಜನೆಯಾಯಿತು. ಆದ ಪ್ರಯುಕ್ತ ವೀರಶೈವರಲ್ಲಿ ಈ ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರವೀಣರಾದವರು ಈ ಕೆಳಗಿನ ಕುಂಡಲಿಯ ಮೇಲಿಂದ ಜನ್ಮತಿಥಿಯನ್ನು ನಿಶ್ಚೈಸಿ ಸ್ಟಾರ್ ಪತ್ರಿಕೆಯ ಮೂಲಕವಾಗಲಿ, ಇಲ್ಲವೆ ಶಾಖಾಸಂಘಗಳ ಕಾರ್ಯದರ್ಶಿಗಳಾದ ಮ॥ ರಾ॥ ಇಲ್ಲಿನ ಹರ್ತಿಕರ್ ಮಂಜಪ್ಪನವರಿಗೆ ಪತ್ರಮೂಲಕವಾಗಲಿ, ತಿಳುಹಿಸಿ ವೀರಶೈವ ಪ್ರಾಚೀನ ಮಹಾಪುರುಷರ ಜನ್ಮಕಾಲವನ್ನು ಶೋಧಿಸಿದ ಕೀರ್ತಿಗೂ, ಪುಣ್ಯಕ್ಕೂ ಭಾಜನರಾಗಬೇಕೆಂದು ಸಂಘದವರು ಕೋರುತ್ತಾರೆ. ವೈಶಾಖಶುದ್ಧವೆಂಬುದರಲ್ಲಿ ಮತಭೇದವೇನೂ ಇಲ್ಲ. ಆದರೆ ಕೆಲವರು ೨ ಎಂಬುದಾಗಿಯೂ, ಮತ್ತೆ ಕೆಲವರು ೩ ಎಂಬುದಾಗಿಯೂ, ಪ್ರತಿಪಾದಿಸುತ್ತಿರುವರು. ಕಾಲವು ಸಮೀಪಿಸಿರುವುದರಿಂದ ಜಾಗ್ರತೆ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಬೇಕೆಂದು ಕೋರಿಕೆ.

ಶು	ರ	ಚ	
ಕು			ಗು ಲಗ್ನ
		ಶ	

ಜನ್ಮನಕ್ಷತ್ರ “ರೋಹಿಣಿ”

ಸೆಕ್ರೆಟರಿ,
“ವೀರಶೈವ ಹಿತೋಪದೇಶಕಸಂಘ”

ಕೊಂಡಕುಂದಿ ತಾಲ್ಲೂಕು ಗುತ್ತಿ ಜಿಲ್ಲ ಅನಂತಪುರ.

ಈ ಗ್ರಾಮದ ಶ್ರೀಮನ್ಮಹಾನಿರಂಜನಸಂಸ್ಥಾನ ಕೌಂಡಿನ್ಯಾಶ್ರಮದ ಶಿವಾನುಭವಚಕ್ರವರ್ತಿ ಕರಿವೃಷಭರಾಜೇಂದ್ರ ದೇಶಿಕ ಮಹಸ್ವಾಮಿಗಳವರ ಮಠದಲ್ಲಿ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಗುರುಪಟ್ಟಾಧ್ಯಕ್ಷ ಶ್ರೀ ಚನ್ನವೀರರಾಜ ದೇಶಿಕೇಂದ್ರ ಮಹಸ್ವಾಮಿಗಳ ಸನ್ನಿಧಿಯಲ್ಲಿ ತಾ॥ ೧೩-೩-೧೨ನೆಯ ಬುಧವಾರ ಸಾಯಂಕಾಲ ೪ ಘಂಟೆ ಸಮಯದಲ್ಲಿ ಕೊಂಡಕುಂದಿ, ಹಬೆಗನಾಳು, ಗೂಳಪಾಳ್ಯ, ತಪ್ರಕಲ್ಲು, ಗಂಜಗುಂಟಿ, ನಿಂಬಗಲ್ ವಗೈರೆ ಗ್ರಾಮಗಳ ವೀರಶೈವ ಮಂಡಳಿಯಿಂದ ಸಭೆಯು ನೆರೆದಿತ್ತು. ಈ ಸಭೆಗೆ ನಿಂಬಗಲ್ ನಿರಂಜನ ಮಹಸ್ವಾಮಿಗಳು ಆಗಮಿಸಿದ್ದರು. ಶ್ರೀಮದಾಚಾರ್ಯ ಪರ್ವತ ಸಿಂಹಾಸನದ ಗುರುಪಟ್ಟಾಧ್ಯಕ್ಷ ನಾಗಲೂಟಿ ಭಿಕ್ಷಾವರ್ತಿ ಮಹಾಸ್ವಾಮಿಗಳವರು ತಮ್ಮ ಆಫೀಸ್ ಅಧಿಕಾರಿಗಳಾದ ಸಂ॥ ಕಂ॥ ಹಾವಳಿಗಿ ಹಿರೇಮಠದ ಕಲ್ಲುಹೊಳೆ ರುದ್ರಪ್ಪಯ್ಯನವರನ್ನು ಕಳುಹಿಸಿದ್ದರು. ಚಿಕ್ಕಾಪಿಗಿನಾಮಠದ ತೋಂಟಪ್ಪಯ್ಯನವರು ಸಿದ್ದಮ್ಮನಹಳ್ಳಿ ರುದ್ರಕಾಲದ ಬಸವಯ್ಯನವರು ವಗೈರೆ ಸದ್ಗೃಹಸ್ಥರು ದಯಮಾಡಿಸಿದ್ದರು. ಈ ಮೊದಲಾದ ಪ್ರಮುಖ ಮಂಡಳಿಯವರಿಂದ ಸಭೆಯು ಕೂಡಿದನಂತರ ಕೌಂಡಿನ್ಯಾಶ್ರಮ ಸಂಸ್ಥಾನದ ಶ್ರೀಗಳು ಈ ಸಭೆಯ ಅಧ್ಯಕ್ಷತೆಯಂ ವಹಿಸಬೇಕೆಂದು ಉಜ್ಜಯಿನಿ ಸಂಸ್ಥಾನದ ಸ್ಥಿರಪಟ್ಟಾಧ್ಯಕ್ಷ ಶ್ರೀಗಳು ತಮ್ಮ ಮಧುರವಾಣಿಯಿಂದ ಅಪ್ಪಣೆಕೊಡಿಸಿದರು. ಸರ್ವಾನುಮತಿಯಿಂದ ಶ್ರೀ॥ ಶ್ರೀಗಳು ಜಯಘೋಷದೊಡನೆ ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಸಭೆಯವರಿಂದ ಪುಷ್ಪವೃಷ್ಟಿಗರೆಯಲ್ಪಟ್ಟಿತು. ಅಧ್ಯಕ್ಷರು ದಿವ್ಯವಾಗಿ ಅಲಂಕರಿಸಿದ್ದ ಉನ್ನತಾಸನದಲ್ಲಿ ಕುಳಿತುಕೊಂಡಿದ್ದರು. ಅವರ ಉಭಯಪಾರ್ಶ್ವಗಳಲ್ಲಿಯೂ ನಿಂಬಗಲ್ ನಿರಂಜನ ಶ್ರೀಗಳವರು ಆಚಾರ್ಯ ಶ್ರೀಗಳವರು ಉನ್ನತಾಸನಾಸೀನರಾದರು. ನಂತರ ಸಂ॥ ಸುಬೇದಾರ್ ವಿ. ಯಂ. ಚಂದ್ರಶೇಖರಯ್ಯನವರು ಅಧ್ಯಕ್ಷರೇ! ಮೊದಲಾದ ಸಭಿಕರಿಗೆ ಸ್ವಾಗತ ಮಾಡಿದರು. ಅಧ್ಯಕ್ಷರು ಇಂಗ್ಲೀಷ್ ವಿದ್ಯೆಯಿಂದಲೂ ಸಾರ್ವಭೌಮರ ಆಳಿಕೆಯಿಂದಲೂ ಆಗಿರುವ ಮಹಾಪ್ರಯೋಜಗಳನ್ನು ಕುರಿತು ಇಂಗ್ಲೀಷಿನಲ್ಲಿ ಭಾಷಣಮಾಡಿ ಕನ್ನಡದಲ್ಲಿ ವಿಶದೀಕರಿಸಿ ಮತಕ್ಕಾಗಿ ದುಡಿಯುತ್ತಿರುವ ಸ್ಟಾರ್ ಪತ್ರಿಕೆಯನ್ನು ಕುರಿತು ಅಪಾರವಾಗಿ ಶ್ಲಾಘಿಸಿದ ಆ ಮಹಾಸ್ವಾಮಿಗಳ ವಾಗ್ವಿಜೃಂಭಣೆಗೆ ಸಭೆಯು ಆನಂದಸಾಗರದಲ್ಲಿ ತೇಲಾಡುತ್ತಿತ್ತು. ಈ ಸಂಸ್ಥಾನದ ಕ್ಲಾರ್ಕ ವಿ. ಯಂ ರಾಜೇಂದ್ರಯ್ಯನವರು ವಿದ್ಯಾಮಹತ್ವವನ್ನು ಕುರಿತು ಒಂದು ಗಂಟೆಕಾಲದವರೆಗೂ ಸಪ್ರಮಾಣವಾಗಿ ಉಪನ್ಯಾಸಮಾಡಿದರು. ಸಂಸ್ಥಾನದ ಹೆಡ್‌ಕ್ಲಾರ್ಕ ಎಸ್. ಯಂ. ವೀರಭದ್ರಯ್ಯನವರು ಸಭೆಗಳಲ್ಲಿ ತಮಗಿರುವ ಅನುಭವಗಳನ್ನೂ ಅಲ್ಲಲ್ಲಿ ಸಭೆಗಳನ್ನು ನೆರಿಸುವದರಿಂದ ಆಗತಕ್ಕ ಪ್ರಯೋಜನಗಳನ್ನೂ ಕುರಿತು ಉಪನ್ಯಾಸಮಾಡಿದರು. (ಈ ಉಪನ್ಯಾಸಗಳಲ್ಲಿ ಅಧ್ಯಕ್ಷರು ಅಲ್ಲಲ್ಲಿ ಮಹತ್ವವಾದ ವಿಷಯಗಳನ್ನು ಗ್ರಂಥೋದಾಹರಣೆಗಳಿಂದ ಪುಷ್ಟೀಕರಿಸಿದರು.) ಆ ವೇಳೆ ಸುಬೇದಾರ್ ವಿ. ಎಂ. ರವರು ಈ ಕೆಳಗಿನ ಎಲ್ಲಾ ವಿಷಯಗಳಲ್ಲಿಯೂ ಪ್ರೌಢವಾದ ಭಾಷಣವನ್ನು ಮಾಡಿದರು. ಸ್ಟಾರ್‌ಪತ್ರಿಕೆಯಿಂದ ನಮ್ಮ ಮತಕ್ಕಾಗತಕ್ಕ ಮಹೋಪಕಾರಗಳನ್ನು ಕುರಿತು ದೀರ್ಘವಾಗಿ ಮಾತನ್ನಾಡಿದರು. ಇವರ ಬೋಧಾಮೃತಪಾನದಿಂದ ಸಭಿಕರು ಸ್ಟಾರ್ ಪತ್ರಿಕೆಯು ಯಾವ ನಿಮಿಷದಲ್ಲಿ ಹಸ್ತಗತವಾಗುವುದೊ ಎಂಬ ಅತ್ಯಾತುರವಂತರಾಗಿ ಈ ಕೆಳಗೆ ನಮೂದುಮಾಡಿರುವ ದೊಡ್ಡಮನುಷ್ಯರು ಎದ್ದು ತಮ್ಮ ತಮ್ಮ ಚಂದಾ ಹಣವನ್ನು ಅಧ್ಯಕ್ಷರ ಮುಂದೆ ಇಟ್ಟುದಲ್ಲದೆ ತಮ್ಮ ಯಾವಜ್ಜೀವವು ತಪ್ಪದೆ ಸಕಾಲಕ್ಕೆ ಚಂದಾ ಹಣವನ್ನು ಸಲ್ಲಿಸುತ್ತೇವೆಂದು, ದೃಢಪ್ರತಿಜ್ಞೆ ಮಾಡಿದರು. ಚಂದಾದಾರರು; ೧. ವು. ಸಂ॥ ಹಾವಳಿಗಿ, ಹಿ. ಮ. ಕಲ್ಲುಹೊಳೆ ರುದ್ರಪ್ಪಯ್ಯನವರು ಪರ್ವತಸಂಸ್ಥಾನ ಖಿರುಪತ್ತೆದಾರ್. ೨. ಸಿದ್ದಮ್ಮನಹಳ್ಳಿ ರುದ್ರಕಾಲದ ಬಸವಯ್ಯನವರು ೩. ಸಾಹುಕಾರ್ ಆದವಾನಿ ಭಂಡೆಪ್ಪ ೪. ಸಾ॥ ರುದ್ರಕಾರ್ ಭಂಡೆಪ್ಪ ೫. ಪ್ರಾ. ದೊಡ್ಡನಗೌಡ ೬. ಸಾ॥ ಕೊಂಡಗುಂದಿ ಜಟಂಗ್ಯಯ್ಯನವರು ೭ ಸಾ॥ ಬೂದಗವಿ ಸಣ್ಣಗುರುಸಿದ್ಧಯ್ಯನವರು ೮. ಪಾಟೀಲ್ ಮುಂಡಭಂಡಿ ಬಸವನಗೌಡ ೯. ಶಾ॥ ಪ್ಯಾಲಲಿರಾಮನಗೌಡ ೧೦. ಗಂಜಗುಂಟಿ ನಾಗನಗೌಡ ೧೧. ಲತ್ವಾರದ ವಿರುಪಾಕ್ಷಗೌಡ. ವೀರಶೈವ ಧರ್ಮತರಂಗಿಣೀ ಶ್ರೀವೀರಶೈವ ಗ್ರಂಥಪ್ರಕಾಶಿಕಾ ಇವುಗಳ ವಿಷಯದಲ್ಲಿಯೂ ಯಥಾವತ್ ಸಭೆಯವರಿಗೆ ತಿಳಿಯಪಡಿಸಲು ಆಯಾಯ ಪತ್ರಿಕೆಗಳಿಗೂ ಚಂದಾದಾರರಾಗಲು ಸಮ್ಮತಿಸಿದವರನ್ನು ಈ ಕೆಳಗೆ ನಮೂದಿಸಿದೆ. ಧರ್ಮತರಂಗಿಣೀಯ ಚಂದಾದಾರರು; ೧. ಕೊಂಡಕುಂದಿನಿರಂಜನ ಸಂ॥ ಶ್ರೀಗಳು. ೨. ನಿಂಬಗಲ್ ನಿರಂಜನ ಶ್ರೀಗಳು ೩. ವು. ಸ. ಕಂ. ಹಾವಳಿಗಿ ಹಿರೇಮಠದ ರುದ್ರಪ್ಪಯ್ಯನವರು ೪. ನಿಂಬಗಲ್ ಹಿ. ಮ. ಚನ್ನವೀರಯ್ಯನವರು. ವೀರಶೈವ ಗ್ರಂಥಪ್ರಕಾಶಿಕಾ ಚಂದಾದಾರರು;—೧. ಕೊಂಡಕುಂದಿ ನಿರಂಜನ ಶ್ರೀಗಳು ೨, ನಿಂಬಗಲ್ ನಿರಂಜನ ಶ್ರೀಗಳು.

ಸಕೇಷ.

ಶ್ರೀಯುತ ಗುರುಬಸಪ್ಪ ಅಣ್ಣಾ ಹಳಕಟ್ಟಿ ಇವರ ತಾಂಬೂಲ ಸಮಾರಂಭವು.

ಉತ್ತರ ಕರ್ನಾಟಕಕ್ಕೆ ಸೇರಿದ ದಕ್ಷಿಣಭಾಗದ ಎಜ್ಯುಕೇಷನಲ್ ಇನ್ಸ್‌ಪೆಕ್ಟರರ ಕಚೇರಿಯ ಕಾರಕೂನರಾಗಿದ್ದ ಮ॥ ಗುರುಬಸಪ್ಪನವರು ೩೦ವರ್ಷ ಸರ್ಕಾರಿ ಉದ್ಯೋಗವನ್ನು ದಕ್ಷತೆಯಿಂದಮಾಡಿ, ತಮ್ಮ ೫೫ನೆಯ ವರ್ಷ ವಯಸ್ಸಿನಲ್ಲಿ ಇವತ್ತಿನ ದಿವಸ ಅಂದರೆ ೧೯೧೨ ನೇ ಮಾರ್ಚಿ ೩೧ನೆಯ ತಾ॥ ದಿವಸ ಸಾಯಂಕಾಲಕ್ಕೆ ಕೆಲಸದಿಂದ ನಿವೃತ್ತರಾದರು. ಈ ದಿವಸ ಅವರ ಕಚೇರಿಯೊಳಗಿನ ಮಿತ್ರಮಂಡಳಿ ಮುಂತಾದವರು ಕೂಡಿ, ಅವರ ಉದ್ದೇಶವಾಗಿ ಅಲ್ಪಾಹಾರದ ವ್ಯವಸ್ಥೆಯನ್ನು ಮಾಡಿ, ರಾ॥ ಸಾ॥ ರಾಮಜೀ ಬಾಳಾಜಿ ಕರಂದಿಕರ ಎಜ್ಯುಕೇಷನಲ್ ಇನ್ಸ್‌ಪೆಕ್ಟರ ದಕ್ಷಿಣಭಾಗ ಇವರ ಅಧ್ಯಕ್ಷತೆಯ ಕೆಳಗೆ ತಮ್ಮ ಕಚೇರಿಯ ಮುಖ್ಯಮಂದಿರದಲ್ಲಿ ಸಭೆನೆರಿಸಿ, ಮ॥ ಹಳಕಟ್ಟಿಯವರನ್ನು ತಾಂಬೂಲಾದಿ ಪರಿಮಳ ದ್ರವ್ಯಗಳಿಂದ ಸತ್ಕರಿಸಿ, ಅವರ ಮೇಲಿರುವ ತಮ್ಮ ಅನುರಾಗವನ್ನು ವ್ಯಕ್ತಗೊಳಿಸಿದರು. ಈ ಕಾಲಕ್ಕೆ ಧಾರವಾಡ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರೂ, ಧಾರವಾಡ ಡಿಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರ ಪರ್ಸನಲ್ ಅಸಿಸ್ಟೆಂಟರೂ ತಮ್ಮ ತಮ್ಮ ಕಾರಕೂನ ಮಂಡಳಿಯ ಸಹಿತವಾಗಿ ಸಭೆಯನ್ನು ಅಲಂಕರಿಸಿದ್ದರು. ಪ್ರಾರಂಭದಲ್ಲಿ ಮ॥ ಜೀವಾಜೀವಿ ಗೋರೆ ಎಂಬವರು ಮ॥ ಹಳಕಟ್ಟಿಯವರ ಗುಣಾನುವಾದವನ್ನು ಮಾಡಿ, ಒಬ್ಬ ಇಷ್ಟಮಿತ್ರರನ್ನಗಲುವದರಿಂದುಂಟಾಗುವ ಖೇದವನ್ನು, ಹಳಕಟ್ಟಿಯವರು ತಮ್ಮ ಉದ್ಯೋಗವನ್ನು ನಿಷ್ಠೆಯಿಂದಮಾಡಿ, ಉಳಿದ ಆಯುಷ್ಯವನ್ನು ಧರ್ಮಕಾರ್ಯಗಳಲ್ಲಿ ತೊಡಗಿಸಲು ಅನುಕೂಲವಾದದ್ದನ್ನು ನೋಡಿ ತಮಗಾದ ಆನಂದವನ್ನು ರಸಾಳವಾದ ವಾಣಿಯಿಂದ ವ್ಯಕ್ತಪಡಿಸಿದರು. ಸಭೆಯೊಳಗಿನ ಒಬ್ಬೊಬ್ಬರ ಭಾಷಣಗಳಾದ ತರುವಾಯ ಅಧ್ಯಕ್ಷರು ಶ್ರೀಯುತ ಹಳಕಟ್ಟಿಯವರಲ್ಲಿರುವ ಶಾಂತತೆ, ವಿನಯ, ಕಾರ್ಯದಕ್ಷತೆ ನಿರ್ಲೋಭೋದ್ಯೋಗ, ಸತ್ಯಾವಲಂಬನ ಮತ್ತು ಅವರ ಮೇಲೆ ತಮಗಿರುವ ಪ್ರೀತಿ, ಇನ್ನು ಮೇಲೆ ಅವರು ಸ್ವೀಕರಿಸತಕ್ಕ ಕಾರ್ಯಗಳ ದಿಗ್ದರ್ಶನ ಇವೇ ಮುಂತಾದ ಸಂಗತಿಗಳ ವಿಷಯವಾಗಿ ಅತಿ ಕನಿಕರದ ಭಾಷಣಮಾಡಿ, ಸುಗಂಧ ಮಾಲೆಯನ್ನು ಹಳಕಟ್ಟಿಯವರ ಕೊರಳಲ್ಲಿ ಹಾಕಿ, ತಾಂಬೂಲಾದಿಗಳನ್ನು ಕೊಟ್ಟು, ಅವರನ್ನು ಸತ್ಕರಿಸಿದರು. ಆ ಮೇಲೆ ಹಳಕಟ್ಟಿಯವರು ಎದ್ದು, ಸಮಯೋಚಿತವಾದ ಭಾಷಣಮಾಡಿ, ಅಧ್ಯಕ್ಷರ ಮತ್ತು ಮಿತ್ರಮಂಡಳಿಯವರ ಉಪಕಾರವನ್ನು ನೆನಸಿದ ತರುವಾಯ, ಮಿಕ್ಕ ಸಭಾಸದರಿಗೆ ಹಾರ ತುರಾಯಿ ಪರಿಮಳ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯ ಕಾರ್ಯವು ಸಮಾಪ್ತವಾಯಿತು. ಇದೇ ಕಾಲದಲ್ಲಿ ಅಕಸ್ಮಿಕವಾಗಿ ವರ್ತಿಸಿದ ಅತ್ಯಾನಂದದ ಸಂಗತಿಯೇನೆಂದರೆ:—ಮೇಘರಾಜನು ಸಹ ಈ ಸಮಾರಂಭವನ್ನೋಡಲಿಕ್ಕೆ ಬಂದನೋ ಏನೋ ಅನ್ನುವಂತೆ ಏಕಕಾಲಕ್ಕೆ ಮಳೆಯು ಹೆಗ್ಗಳವಾಗಿ ಸುರಿದು, ಸಭಿಕರನ್ನು ಮತ್ತಿಷ್ಟು ಆನಂದ ಸಾಗರದಲ್ಲಿ ಮುಳುಗಿಸಿ ಬಿಟ್ಟಿತು. ಈ ಮಳೆಯಿಂದ ಮೋತೀತಲಾವಿಗೆ ತಿಂಗಳೆರಡು ತಿಂಗಳಿನ ನೀರು ಬಂದಿತು. ಮ॥ ಹಳಕಟ್ಟಿಯವರು ತಮ್ಮ ಸರ್ಕಾರಿ ಉದ್ಯೋಗವನ್ನು ಮೇಲಧಿಕಾರಿಗಳ ಮನಸ್ಸಿಗೆ ಬರುವಂತೆ ಸಾಗಿಸಿಕೊಂಡು, ಉಳಿದ ತಮ್ಮ ವೇಳೆಯಲ್ಲಿ ಉದ್ಗ್ರಂಥಗಳನ್ನು ಬರೆದು, ಗ್ರಂಥಕರ್ತರು ಎಂಬ ಕೀರ್ತಿಯನ್ನು ಗಳಿಸಿಕೊಂಡಿರುವರು. ಇವರು ಬರೆದ ಪುಸ್ತಕಗಳೆಲ್ಲ ಮುಂಬಯಿ ಸರ್ಕಾರದವರಿಂದ ಮನ್ನಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಧಾರವಾಡ ಟ್ರೇನಿಂಗ್ ಕಾಲೇಜದ ಕ್ರಮಿಕ ಪುಸ್ತಕಗಳಾಗಿವೆ. ಇವರು ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದ ೧ನೆಯ ತರಗತಿಯ ಆಜೀವಸಭಾಸದರಿರುವರಲ್ಲದೆ, ಆ ಸಂಘದ ಮ್ಯಾನೇಜಿಂಗ ಕಮಿಟಿಯ ಮೆಂಬರರಾಗಿ ಎಷ್ಟೋ ವರ್ಷ ಕೆಲಸಮಾಡಿರುವವರು ಮತ್ತು ಮುಂಬಯಿ ಇಲಾಖೆಯ ವಿದ್ಯಾಖಾತೆಯವರಿಂದ ನೇಮಿಸಲ್ಪಟ್ಟ ಕರ್ನಾಟಕ ವಿದ್ಯಾವರ್ಧಕ ಸಂಘದ ಪುಸ್ತಕ ಪರೀಕ್ಷಾಕಮಿಟಿಯ ಮೆಂಬರರೂ ಆಗಿರುವರು. ಈ ಕಾಲದಲ್ಲಿ ಇವರು ವೀರಶೈವ ಸಮಾಜದ ಎಷ್ಟೋ ಮಹತ್ವದ ಕಾರ್ಯಗಳನ್ನು ಎಸಗಿರುವರು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳುತ್ತೇನೆ.— (೧) ಇವರು ಶ್ರೀಮದ್ವೀರಶೈವ ಮಹಾಸಭೆಯ ಉತ್ಪಾದಕರಲ್ಲಿ ಒಬ್ಬರು. (೨) ಮಹಾಸಭೆಯ ಕಟ್ಟಳೆಗಳನ್ನು ಅತಿ ಶ್ರಮದಿಂದ ಸಿದ್ಧಪಡಿಸಿದ ಮತ್ತು ಅವುಗಳನ್ನು ಬಾಗಲಕೋಟೆಯ ಮಹಾಸಭೆಯ ಮುಂದೆ ತಂದು ಪಾಸಮಾಡಿಸಿದ ಶ್ರೇಯಸ್ಸಿನಲ್ಲಿ ದೊಡ್ಡ ಭಾಗವು ಇವರದು. (೩) ಧಾರವಾಡದಲ್ಲಿಯೂ, ಬಾಗಲಕೋಟೆಯಲ್ಲಿಯೂ ನೆರೆದ ಮಹಾಸಭೆಗಳ ಸ್ವಾಗತ ಕಮಿಟಿಗಳ ಅಧ್ಯಕ್ಷರ ಭಾಷಣಗಳ ಕರ್ತರು. (೪) ಮೊದಲನೆಯ ಮಹಾಸಭೆಯ ರಿಪೋರ್ಟಿನ ಮುದ್ರಣಕ್ಕೆ ಸಹಾಯಕಾರಿಗಳು. (೫) ಬಾಗಲಕೋಟೆಯ ಮಹಾಸಭೆಯಲ್ಲಿ ಭಾಷಣಮಾಡಿದವರ ಭಾಷಣಗಳನ್ನು ಸರಿಗೊಳಿಸಿ ಮುದ್ರಣಕ್ಕೆ ತಕ್ಕವುಗಳನ್ನಾಗಿ ಮಾಡಿಕೊಟ್ಟವರು. (೬) ಸುಮಾರು ೧೫ ವರ್ಷಗಳಿಂದ ಲಿಂಗಾಯತ ಎಜ್ಯುಕೇಶನಫಂಡಿನ ಲೆಖ್ಖದ ಪರೀಕ್ಷಕರು ಇವರೇ ಇರುವರು. ಮೇಲಿನ ವಿವರಣೆಯಿಂದ ಇವರು ತಮ್ಮ ಸರ್ಕಾರಿಯ ಉದ್ಯೋಗದಲ್ಲಿರುವಾಗಲೇ ಕನ್ನಡ ಭಾಷೆಯ ಮತ್ತು ವೀರಶೈವ ಸಮಾಜದ ಏಳ್ಗೆಗಾಗಿ ಅವಿಶ್ರಾಂತ ಶ್ರಮಪಟ್ಟಿರುವರೆಂಬ ಮಾತು ಸ್ಪಷ್ಟವಾಗುತ್ತದೆ. ಈಗ ಇವರು ಸ್ವತಂತ್ರರಾದರು. ಇನ್ನು ಮೇಲೆ ಇವರಿಂದ ವೀರಶೈವ ಸಮಾಜಹಿತದ ಕಾರ್ಯಗಳು ಹೆಚ್ಚು ಪ್ರಮಾಣದಿಂದ ನೆರವೇರಬಹುದೆಂದು ನಿರೀಕ್ಷಿಸಲಿಕ್ಕೆ ಅಡ್ಡಿಯಿಲ್ಲ. ಆದುದರಿಂದ ಶ್ರೀ ಪರಮೇಶ್ವರನು ಇವರಿಗೆ ಉದ್ದಂಡಾಯುಷ್ಯವನ್ನೂ ಆರೋಗ್ಯವನ್ನೂ ಕರುಣಿಸಬೇಕೆಂದು ಆ ಮಹಾಮಹಿಮನನ್ನು ಅನನ್ಯಭಾವದಿಂದ ಬೇಡಿಕೊಂಡು ಈ ಲೇಖವನ್ನು ಮುಗಿಸುತ್ತೇನೆ.

ಪ್ರತ್ಯಕ್ಷದರ್ಶಿ.

---

6 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧-೨-೦ ೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ವಿವೇಕಮಂಜರಿ

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿ ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ.

೧ನೆಯ ಭಾಗ ೨ ಆಣೆ ೧೦೦ ಪುಟಗಳು.
೨ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:— “ಮೈಸೂರ್ ಸ್ಟಾರಾಫೀಸ್” ಮೈಸೂರ್.

ತ್ವರೆಮಾಡಿರಿ! ಅಲಭ್ಯಲಾಭ!! ಅಮೂಲ್ಯಸಮಯ!!!

ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ ದರಕಾಸ್ತನ್ನು ಕಳುಹಿಸುವ “ಮೈಸೂರ್ ಸ್ಟಾರ್” ಚಂದಾದಾರರಿಗೆ ಮಾತ್ರ

ವಾರ್ಷಿಕಚಂದಾ ೧-೪-೦
ಇತರರಿಗೆ ... ೧-೮-೦

ಮಧುರವಾಣಿ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮರ್ಣ ಮತ್ತು ಕಂಪೆನಿ
ಮೈಸೂರು.

33 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

43 (೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಲ್ಲಿ ಹಾಕಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಪಟಾಲು, ಕೈಲು, ಕೋರ್ಟು ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜಿನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜಿನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

40 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

10 ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.— ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯದವರಿಗೂಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೊಡಬಹಳ್ಳ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ ಕ್ಕೆ ರೂ ೦-೧೦-೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ–ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾದಿ ಫಲಭಾವಕುಂಡಲಿ ಅಷ್ಟಕವರ್ಗ ಬಂದಶೋಧನೆ ತ್ರಯೋದಶವರ್ಗ ಷಷ್ಟ್ಯಾಂಶಗಳು ಗ್ರಹಗಳಸಮಯ ಅವಸ್ಥಪನ್ನನರ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೫೦–೫೫ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦-೦-೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವರು ದಿಟ್ಟಪಡುಕೊಂಕರೆ ಜವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚೆನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೨ ತಿಂಗಳ ಭವಿಷತ್ಫಲ.

ಮಹನೀಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೮-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತಯಿರುತ್ತೆ.

ನಮ್ಮ ವಿಳಾಸ:—
ಯಸ್. ಯಂ. ಶಾಸ್ತ್ರಿಗಳು ಗಣೇಶಪೇಟೆ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

7 ಬರುವ ಮೆ ತಿಂಗಳು ಅಖೈರು ವರೆಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ..



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ. (3) ನಾಜ್ಯಾವಾದ ಕರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗರ (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ) (12) ಷರ್ಟ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಟ್ ವೆಂಕಟಾಚಲಯ್ಯರ್ ಬೀದಿ,
ಮದ್ರಾಸು.

ರೂ ನಾಸ್ತಿಯರೆಲ್ಲರೂ ನಡೆಯುತ್ತಾ ಬರೋಣವಲ್ಲಿ ಬೇಗನೆ ನಾವು ಅಭಿವೃದ್ಧಿಸ್ಥಿತಿಗೆ ಬರಲು ಯಾವ ಅಭ್ಯಂತರವೂ ಇಲ್ಲ. ಮತ್ತೂ ಇವರ ವಿಲ್ಲಿನ ವಿಷಯದಲ್ಲಿ ಇವರ ಧರ್ಮಪತ್ನಿಯವರು ಕೆಲ ಕುಹಕರ ಮಾತನ್ನು ಕಟ್ಟಿಕೊಂಡು ವ್ಯಾಜ್ಯಕ್ಕಾಸ್ಪದವನ್ನುಂಟುಮಾಡಿದುದ್ದು ಎಲ್ಲರಿಗೂ ಕೊಂಚ ವಿಷಾದವೆನಿಸಿತ್ತು. ಆದರೆ ಶ್ರೀ ಭಗವದನುಗ್ರಹದಿಂದ ಅದೆಲ್ಲವೂ ಪಾರಾದುದಕ್ಕೆ ತುಂಬಾ ಸಂತೋಷಿಸಬೇಕಾಗಿದೆ. ಧರ್ಮಾಭಿಮಾನಿಗಳಾದ ನಮ್ಮ ಬ್ರಿಟಿಷ್ ಗೌರ್ನಮೆಂಟಿನವರು ಇದನ್ನು ಚೆನ್ನಾಗಿ ಪರಿಶೀಲಿಸಿ ಇತ್ಯರ್ಥಮಾಡಿದುದಕ್ಕಾಗಿ ಅವರನ್ನು ನಾವು ಎಷ್ಟುಕೊಂಡಾಡಿದರೂ ತೀರದು ಆದುದರಿಂದ ಆಂಗ್ಲಸಾಮ್ರಾಜ್ಯ ಶ್ವೇತಚ್ಛತ್ರದ ನೆರಳು ಚಿರಸ್ಥಾಯಿಯಾಗಿ ಯಾವಾಗಲೂ ನಮ್ಮ ಮೇಲಿರಲೆಂದು ಆ ಜಗತ್ಕರ್ತನಾದ ಪರಮಾತ್ಮನನ್ನು ಅನನ್ಯಭಾವದಿಂದ ಬೇಡುವ. ಪ್ರತ್ಯಕ್ಷದರ್ಶಿ.

ದಾವಣಗೆರೆ.

“ವೀರಶೈವ ಹಿತೋಪದೇಶಕ ಸಂಘ” ದ ಪರವಾಗಿ ಕಳೆದಏಪ್ರಿಲ್ ತಾ॥ ೧ನೆಯ ಸೋಮವಾರ ಸಾಯಂಕಾಲಕ್ಕೆ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಸಭೆ ಸೇರಿದ್ದಿತು. ಈ ಸಂಘದ ಉಪಾಧ್ಯಕ್ಷರೂ, ಕಾರ್ಯದರ್ಶಿಗಳೂ, ಇತರ ಪ್ರಮುಖರೂ ಬಂದೊಡನೆ ವೇ॥ ಗುರುಮೂರ್ತಿಶಾಸ್ತ್ರಿಗಳವರು “ನಗುರೋರಧಿಕಂ” ಎಂಬ ವಿಷಯಕ್ಕೆ ಬರೆದಿದ್ದ ಲೇಖನವನ್ನು ಮ॥ ರಾ॥ ಹರ್ತಿಕರ್ ಮಂಜಪ್ಪನವರು ಸಭಿಕರಿಗೆ ಓದಿ ಹೇಳಿದ ನಂತರ “ಶ್ರೀ ಬಸವೇಶ್ವರ ಜನ್ಮತಿಥಿಯನ್ನು” ಶೋಧಿಸುವುದಕ್ಕಾಗಿ ಇಲ್ಲಿನ ಜ್ಯೋತಿಷಜ್ಞರಾದ ವೇ॥ ಗುರುಬಸಪ್ಪಯ್ಯನವರಿಗೂ, ವೇ॥ ಪರ್ವತಯ್ಯನವರಿಗೂ, ಕೆಲವು ಕಾಲ ಚರ್ಚೆನಡೆದು ಅನಂತರ ಈ ಉಭಯಪಂಡಿತರಲ್ಲಿ ಭಿನ್ನಾಭಿಪ್ರಾಯಗಳುಂಟಾದುದರಿಂದ ಪರಸ್ಥಳದ ಜ್ಯೋತಿಷಜ್ಞರ ಅಭಿಪ್ರಾಯವನ್ನು ಪಡೆದು ಈ ಕಾಲವನ್ನು ನಿಶ್ಚೈಸಬೇಕೆಂದು ಸಭಿಕರು ತೀರ್ಮಾನವಮಾಡಿದನಂತರ ಸಭೆಯು ವಿಸರ್ಜನೆಯಾಯಿತು. ಆದ ಪ್ರಯುಕ್ತ ವೀರಶೈವರಲ್ಲಿ ಈ ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರವೀಣರಾದವರು ಈ ಕೆಳಗಿನ ಕುಂಡಲಿಯ ಮೇಲಿಂದ ಜನ್ಮತಿಥಿಯನ್ನು ನಿಶ್ಚೈಸಿ ಸ್ಟಾರ್ ಪತ್ರಿಕೆಯ ಮೂಲಕವಾಗಲಿ, ಇಲ್ಲವೆ ಶಾಖಾಸಂಘಗಳ ಕಾರ್ಯದರ್ಶಿಗಳಾದ ಮ॥ ರಾ॥ ಇಲ್ಲಿನ ಹರ್ತಿಕರ್ ಮಂಜಪ್ಪನವರಿಗೆ ಪತ್ರಮೂಲಕವಾಗಲಿ, ತಿಳುಹಿಸಿ ವೀರಶೈವ ಪ್ರಾಚೀನ ಮಹಾಪುರುಷರ ಜನ್ಮಕಾಲವನ್ನು ಶೋಧಿಸಿದ ಕೀರ್ತಿಗೂ, ಪುಣ್ಯಕ್ಕೂ ಭಾಜನರಾಗಬೇಕೆಂದು ಸಂಘದವರು ಕೋರುತ್ತಾರೆ ವೈಶಾಖಶುದ್ಧವೆಂಬುದರಲ್ಲಿ ಮತಭೇದವೇನೂ ಇಲ್ಲ. ಆದರೆ ಕೆಲವರು ೨ ಎಂಬುದಾಗಿಯೂ, ಮತ್ತೆ ಕೆಲವರು ೩ ಎಂಬುದಾಗಿಯೂ, ಪ್ರತಿಪಾದಿಸುತ್ತಿರುವರು. ಕಾಲವು ಸಮೀಪಿಸಿರುವುದರಿಂದ ಜಾಗ್ರತೆ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಬೇಕೆಂದು ಕೋರಿಕೆ



ಜನ್ಮನಕ್ಷತ್ರ “ರೋಹಿಣಿ”

ಸೆಕ್ರೆಟರಿ,
“ವೀರಶೈವ ಹಿತೋಪದೇಶಕಸಂಘ”

ಕೊಂಡಕುಂದಿ ತಾಲ್ಲೂಕು ಗುತ್ತಿಜಿಲ್ಲ ಅನಂತಪುರ.

ಈ ಗ್ರಾಮದ ಶ್ರೀಮನ್ಮಹಾನಿರಂಜನಸಂಸ್ಥಾನ ಕೌಂಡಿನ್ಯಾಶ್ರಮದ ಶಿವಾನುಭವಚಕ್ರವರ್ತಿ ಕರಿವೃಷಭರಾಜೇಂದ್ರ ದೇಶಿಕ ಮಹಸ್ವಾಮಿಗಳವರ ಮಠದಲ್ಲಿ ಶ್ರೀಮದುಜ್ಜಯನಿ ಸದ್ಧರ್ಮ ಸಿಂಹಾಸನದ ಗುರುಪಟ್ಟಾಧ್ಯಕ್ಷ ಶ್ರೀ ಚನ್ನವೀರರಾಜ ದೇಶಿಕೇಂದ್ರ ಮಹಸ್ವಾಮಿಗಳ ಸನ್ನಿಧಿಯಲ್ಲಿ ತಾ॥ ೧೬-೩-೧೦ನೆಯ ಬುಧವಾರ ಸಾಯಂಕಾಲ ೮ ಘಂಟೆ ಸಮಯದಲ್ಲಿ ಕೊಂಡಕುಂದಿ, ಹಬೆಗನಾಳು, ಗೂಳಪಾಳ್ಯ, ತಪ್ರಕಲ್ಲು, ಗಂಜುಗುಂಟಿ, ನಿಂಬಗಲ್ ವಗೈರೆ ಗ್ರಾಮಗಳ ವೀರಶೈವ ಮಂಡಳಿಯಿಂದ ಸಭೆಯು ನೆರೆದಿತ್ತು. ಈ ಸಭೆಗೆ ನಿಂಬಗಲ್ ನಿರಂಜನ ಮಹಸ್ವಾಮಿಗಳು ಆಗಮಿಸಿದ್ದರು. ಶ್ರೀಮದಾಚಾರ್ಯ ಪರ್ವತ ಸಿಂಹಾಸನದ ಗುರುಪಟ್ಟಾಧ್ಯಕ್ಷ ನಾಗಲೂಟಿ ಭಿಕ್ಷಾವರ್ತಿ ಮಹಾಸ್ವಾಮಿಗಳವರು ತಮ್ಮ ಆಫೀಸ್ ಅಧಿಕಾರಿಗಳಾದ ಸಂ॥ ಕಂ॥ ಹಾವಳಿಗಿ ಹಿರೇಮಠದ ಕಲ್ಲುಹೊಳೆ ರುದ್ರಪ್ಪಯ್ಯನವರನ್ನು ಕಳುಹಿಸಿದ್ದರು. ಚಿತ್ವಾಡಿಗೀಮಠದ ತೋಟಪ್ಪಯ್ಯನವರು ಸಿದ್ದಮ್ಮನಹಳ್ಳಿ ರುದ್ರಾಲದ ಬಸವಯ್ಯನವರು ವಗೈರೆ ಸದ್ಗೃಹಸ್ಥರೂ ದಯಮಾಡಿಸಿದ್ದರು ಈ ಮೊದಲಾದ ಪ್ರಮುಖ ಮಂಡಳಿಯವರಿಂದ ಸಭೆಯು ಕೂಡಿದನಂತರ ಕೌಂಡಿನ್ಯಾಶ್ರಮ ಸಂಸ್ಥಾನದ ಶ್ರೀಗಳು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ಉಜ್ಜಯಿನಿ ಸಂಸ್ಥಾನದ ಸ್ಥಿರಪಟ್ಟಾಧ್ಯಕ್ಷ ಶ್ರೀಗಳು ತಮ್ಮ ಮಧುರವಾಣಿಯಿಂದ ಅಪ್ಪಣೆಕೊಡಿಸಿದರು. ಸರ್ವಾನುಮತಿಯಿಂದ ಶ್ರೀ॥ ಶ್ರೀಗಳು ಜಯಘೋಷದೊಡನೆ ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಸಭೆಯವರಿಂದ ಪುಷ್ಪವೃಷ್ಟಿಗರೆಯಲ್ಪಟ್ಟಿತು. ಅಧ್ಯಕ್ಷರು ದಿವ್ಯವಾಗಿ ಅಲಂಕರಿಸಿದ್ದ ಉನ್ನತಾಸನದಲ್ಲಿ ಕುಳಿತುಕೊಂಡಿದ್ದರು ಅವರ ಉಭಯಪಾರ್ಶ್ವಗಳಲ್ಲಿಯೂ ನಿಂಬಗಲ್ ನಿರಂಜನ ಶ್ರೀಗಳವರು ಆಚಾರ್ಯ ಶ್ರೀಗಳವರು ಉನ್ನತಾಸನಾಸೀನರಾದರು. ನಂತರ ಸಂ॥ ಸುಬೇದಾರ್ ವಿ. ಯಂ. ಚಂದ್ರಶೇಖರಯ್ಯನವರು ಅಧ್ಯಕ್ಷರೇ ಮೊದಲಾದ ಸಭಿಕರಿಗೆ ಸ್ವಾಗತಮಾಡಿದರು ಅಧ್ಯಕ್ಷರು ಇಂಗ್ಲೀಷ್ ವಿದ್ಯೆಯಿಂದಲೂ ಸಾರ್ವಭೌಮರ ಆಳಿಕೆಯಿಂದಲೂ ಆಗಿರುವ ಮಹಾಪ್ರಯೋಜನಗಳನ್ನು ಕುರಿತು ಇಂಗ್ಲೀಷಿನಲ್ಲಿ ಭಾಷಣಮಾಡಿ ಕನ್ನಡದಲ್ಲಿ ವಿಶದೀಕರಿಸಿ ಮತಕ್ಕಾಗಿ ದುಡಿಯುತ್ತಿರುವ ಸ್ಟಾರ್ ಪತ್ರಿಕೆಯನ್ನು ಕುರಿತು ಅಪಾರವಾಗಿ ಶ್ಲಾಘಿಸಿದ ಆ ಮಹಾಸ್ವಾಮಿಗಳ ವಾಗ್ವಿಜೃಂಭಣೆಗೆ ಸಭೆಯು ಆನಂದಸಾಗರದಲ್ಲಿ ತೇಲಾಡುತ್ತಿತ್ತು. ಈ ಸಂಸ್ಥಾನದ ಕ್ಲಾರ್ಕ್ ವಿ. ಯಂ ರಾಜೇಂದ್ರಯ್ಯನವರು ವಿದ್ಯಾಮಹತ್ವವನ್ನು ಕುರಿತು ಒಂದು ಗಂಟೆಕಾಲದವರೆಗೂ ಸಪ್ರಮಾಣವಾಗಿ ಉಪನ್ಯಾಸಮಾಡಿದರು. ಸಂಸ್ಥಾನದ ಹೆಡ್‌ಕ್ಲಾರ್ಕ್ ಎಸ್. ಯಂ. ವೀರಭದ್ರಯ್ಯನವರು ಸಭೆಗಳಲ್ಲಿ ತಮಗಿರುವ ಅನುಭವಗಳನ್ನೂ ಅಲ್ಲಲ್ಲಿ ಸಭೆಗಳನ್ನು ನೆರಿಸುವದರಿಂದ ಆಗತಕ್ಕ ಪ್ರಯೋಜನಗಳನ್ನೂ ಕುರಿತು ಉಪನ್ಯಾಸಮಾಡಿದರು. (ಈ ಉಪನ್ಯಾಸಗಳಲ್ಲಿ ಅಧ್ಯಕ್ಷರು ಅಲ್ಲಲ್ಲಿ ಮಹತ್ವವಾದ ವಿಷಯಗಳನ್ನು ಗ್ರಂಥೋದಾಹರಣೆಗಳಿಂದ ಪುಷ್ಟೀಕರಿಸಿದರು.) ಆ ವೇಳೆ ಸುಬೇದಾರ್ ವಿ. ಎಂ. ರವರು ಈ ಕೆಳಗಿನ ಎಲ್ಲಾ ವಿಷಯಗಳಲ್ಲಿಯೂ ಪ್ರೌಢವಾದ ಭಾಷಣವನ್ನು ಮಾಡಿದರು. ಸ್ಟಾರ್‌ಪತ್ರಿಕೆಯಿಂದ ನಮ್ಮ ಮತಕ್ಕಾಗತಕ್ಕ ಮಹೋಪಕಾರಗಳನ್ನು ಕುರಿತು ದೀರ್ಘವಾಗಿ ಮಾತನ್ನಾಡಿದರು. ಇವರ ಬೋಧಾಮೃತಪಾನದಿಂದ ಸಭಿಕರು ಸ್ಟಾರ್ ಪತ್ರಿಕೆಯು ಯಾವ ನಿಮಿಷದಲ್ಲಿ ಹಸ್ತಗತವಾಗುವುದೋ ಎಂಬ ಅತ್ಯಾತುರವಂತರಾಗಿ ಈ ಕೆಳಗೆ ನಮೂದುಮಾಡಿರುವ ದೊಡ್ಡಮನುಷ್ಯರು ಎದ್ದು ತಮ್ಮ ತಮ್ಮ ಚಂದಾ ಹಣವನ್ನು ಅಧ್ಯಕ್ಷರ ಮುಂದೆ ಇಟ್ಟುದಲ್ಲದೆ ತಮ್ಮ ಯಾವಜ್ಜೀವವು ತಪ್ಪದೆ ಸಕಾಲಕ್ಕೆ ಚಂದಾ ಹಣವನ್ನು ಸಲ್ಲಿಸುತ್ತೇವೆಂದು, ದೃಢಪ್ರತಿಜ್ಞೆಮಾಡಿದರು ಚಂದಾದಾರರು; ೧. ಪ್ರ. ಸಂ॥ ಹಾವಳಿಗಿ, ಹಿ. ಮ. ಕಲ್ಲುಹೊಳೆ ರುದ್ರಪ್ಪಯ್ಯನವರು ಪರ್ವತಸಂಸ್ಥಾನ ಪಾರುಪತ್ತೇದಾರ್. ೨. ಸಿದ್ದಮ್ಮನಹಳ್ಳಿ ರುದ್ರಾಲದ ಬಸವಯ್ಯನವರು ೩. ಸಾಹುಕಾರ್ ಅಡವಿ ಭಂಡೆಪ್ಪ ೪. ಸಾ॥ ರುದ್ರಕಾರ್ ಭಂಡೆಪ್ಪ ೫. ಪ್ರಾ. ದೊಡ್ಡನಗೌಡ ೬. ಸಾ॥ ಕಾಡಗುಂಟಿ ಜಯಂಗ್ರಯ್ಯನವರು ೭. ಸಾ॥ ಬೂದಗವಿಸಣ್ಣ ಗುರುಸಿದ್ದಯ್ಯನವರು ೮. ಪಾಟೀಲ್ ಮುಂಡಭಂಡೆ ಬಸವನಗೌಡ ೯. ಪಾ॥ ಪ್ಯಾಲಲಿರಾಮನಗೌಡ ೧೦. ಗಂಜುಗುಂಟಿ ನಾಗನಗೌಡ ೧೧. ಲತ್ವಾರದ ವಿರುಪಾಕ್ಷಗೌಡ. ವೀರಶೈವ ಧರ್ಮತರಂಗಿಣೀ ಶ್ರೀವೀರಶೈವ ಗ್ರಂಥಪ್ರಕಾಶಿಕಾ ಇವುಗಳ ವಿಷಯದಲ್ಲಿಯೂ ಯಥಾವತ್ ಸಭೆಯವರಿಗೆ ತಿಳಿಯಪಡಿಸಲು ಆಯಾಯ ಪತ್ರಿಕೆಗಳಿಗೂ ಚಂದಾದಾರರಾಗಲು ಸಮ್ಮತಿಸಿದವರನ್ನು ಈ ಕೆಳಗೆ ನಮೂದಿಸಿದೆ. ಧರ್ಮತರಂಗಿಣೀಯ ಚಂದಾದಾರರು; ೧. ಕೊಂಡಕುಂದಿನಿರಂಜನ ಸಂ॥ ಶ್ರೀಗಳು. ೨. ನಿಂಬಗಲ್ ನಿರಂಜನ ಶ್ರೀಗಳು ೩. ಪ್ರ. ಸ. ಕ. ಹಾವಳಿಗಿ ಹಿರೇಮಠದ ರುದ್ರಪ್ಪಯ್ಯನವರು ೪. ನಿಂಬಗಲ್ ಹಿ. ಮ. ಚನ್ನವೀರಯ್ಯನವರು. ವೀರಶೈವ ಗ್ರಂಥಪ್ರಕಾಶಿಕಾ ಚಂದಾದಾರರು;—೧. ಕೊಂಡಕುಂದಿ ನಿರಂಜನ ಶ್ರೀಗಳು ೨, ನಿಂಬಗಲ್ ನಿರಂಜನ ಶ್ರೀಗಳು.

ಸಶೇಷ.

ಶ್ರೀಯುತ ಗುರುಬಸಪ್ಪ ಅಣ್ಣಾ ಹಳಕಟ್ಟಿ ಇವರ ತಾಂಬೂಲ ಸಮಾರಂಭವು.

ಉತ್ತರ ಕರ್ನಾಟಕಕ್ಕೆ ಸೇರಿದ ದಕ್ಷಿಣಭಾಗದ ಎಜ್ಯುಕೇಷನಲ್ ಇನ್ಸ್ಪೆಕ್ಟರರ ಕಚೇರಿಯ ಕಾರಕೂನರಾಗಿದ್ದ ಮ॥ ಗುರುಬಸಪ್ಪನವರು ೩೦ವರ್ಷ ಸರ್ಕಾರಿ ಉದ್ಯೋಗವನ್ನು ದಕ್ಷತೆಯಿಂದಮಾಡಿ, ತಮ್ಮ ೫೫ನೆಯ ವರ್ಷ ವಯುಸ್ಸಿನಲ್ಲಿ ಇವತ್ತಿನ ದಿವಸ ಅಂದರೆ ೧೯೧೦ ನೇ ಮಾರ್ಚ ೩೧ನೆಯ ತಾ॥ ದಿವಸ ಸಾಯಂಕಾಲಕ್ಕೆ ಕೆಲಸದಿಂದ ನಿವೃತ್ತರಾದರು. ಈ ದಿವಸ ಅವರ ಕಚೇರಿಯೊಳಗಿನ ಮಿತ್ರಮಂಡಳಿ ಮುಂತಾದವರು ಕೂಡಿ, ಅವರ ಉದ್ದೇಶವಾಗಿ ಅಲ್ಪಹಾರದ ವ್ಯವಸ್ಥೆಯನ್ನು ಮಾಡಿ, ರಾ॥ ಸಾ॥ ರಾಮಜೀ ಬಾಳಾಜಿ ಕರಂದಿಕರ ಎಜ್ಯುಕೇಷನಲ್ ಇನ್ಸ್ಪೆಕ್ಟರ ದಕ್ಷಿಣಭಾಗ ಇವರ ಅಧ್ಯಕ್ಷತೆಯ ಕೆಳಗೆ ತಮ್ಮ ಕಚೇರಿಯ ಮುಖ್ಯಮಂದಿರದಲ್ಲಿ ಸಭೆನೆರಿಸಿ, ಮ॥ ಹಳಕಟ್ಟಿಯವರನ್ನು ತಾಂಬೂಲಾದಿ ಪರಿಮಳ ದ್ರವ್ಯಗಳಿಂದ ಸತ್ಕರಿಸಿ, ಅವರ ಮೇಲಿರುವ ತಮ್ಮ ಅನುರಾಗವನ್ನು ವ್ಯಕ್ತಗೊಳಿಸಿದರು. ಈ ಕಾಲಕ್ಕೆ ಧಾರವಾಡ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರೂ, ಧಾರವಾಡ ಡಿಪ್ಯುಟಿ ಎಜ್ಯುಕೇಶನಲ್ ಇನ್ಸ್ಪೆಕ್ಟರರ ಪರ್ಸನಲ್ ಅಸಿಸ್ಟೆಂಟರೂ ತಮ್ಮ ತಮ್ಮ ಕಾರಕೂನ ಮಂಡಳಿಯ ಸಹಿತವಾಗಿ ಸಭೆಯನ್ನು ಅಲಂಕರಿಸಿದ್ದರು. ಪ್ರಾರಂಭದಲ್ಲಿ ಮ॥ ಜೀವಾಜೀವಿ ಗೋಳೆ ಎಂಬವರು ಮ॥ ಹಳಕಟ್ಟಿಯವರ ಗುಣಾನುವಾದವನ್ನು ಮಾಡಿ, ಒಬ್ಬ ಇಷ್ಟಮಿತ್ರರನ್ನಗಲುವದರಿಂದುಂಟಾಗುವ ಖೇದವನ್ನು, ಹಳಕಟ್ಟಿಯವರು ತಮ್ಮ ಉದ್ಯೋಗವನ್ನು ನಿಷ್ಠೆಯಿಂದಮಾಡಿ, ಉಳಿದ ಆಯುಷ್ಯವನ್ನು ಧರ್ಮಕಾರ್ಯಗಳಲ್ಲಿ ತೊಡಗಿಸಲು ಅನುಕೂಲವಾದದ್ದನ್ನು ನೋಡಿ ತಮಗಾದ ಆನಂದವನ್ನು ರಸಾಳವಾದ ವಾಣಿಯಿಂದ ವ್ಯಕ್ತಪಡಿಸಿದರು. ಸಭೆಯೊಳಗಿನ ಒಬ್ಬೊಬ್ಬರ ಭಾಷಣಗಳಾದ ತರುವಾಯ ಅಧ್ಯಕ್ಷರು ಶ್ರೀಯುತ ಹಳಕಟ್ಟಿಯವರಲ್ಲಿರುವ ಶಾಂತತೆ, ವಿನಯ, ಕಾರ್ಯದಕ್ಷತೆ ನಿರ್ಮೋದ್ಯೋಗ, ಸತ್ಯಾವಲಂಬನ ಮತ್ತು ಅವರ ಮೇಲೆ ತಮಗಿರುವ ಪ್ರೀತಿ, ಇನ್ನು ಮೇಲೆ ಅವರು ಸ್ವೀಕರಿಸತಕ್ಕ ಕಾರ್ಯಗಳ ದಿಗ್ದರ್ಶನ ಇವೇ ಮುಂತಾದ ಸಂಗತಿಗಳ ವಿಷಯವಾಗಿ ಅತಿ ಕನಿಕರದ ಭಾಷಣಮಾಡಿ, ಸುಗಂಧಮಾಲೆಯನ್ನು ಹಳಕಟ್ಟಿಯವರ ಕೊರಳಲ್ಲಿ ಹಾಕಿ, ತಾಂಬೂಲಾದಿಗಳನ್ನು ಕೊಟ್ಟು, ಅವರನ್ನು ಸತ್ಕರಿಸಿದರು. ಆ ಮೇಲೆ ಹಳಕಟ್ಟಿಯವರು ಎದ್ದು, ಸಮಯೋಚಿತವಾದ ಭಾಷಣಮಾಡಿ, ಅಧ್ಯಕ್ಷರ ಮತ್ತು ಮಿತ್ರಮಂಡಳಿಯವರ ಉಪಕಾರವನ್ನು ನೆನಸಿದ ತರುವಾಯ, ಮಿಕ್ಕ ಸಭಾಸದರಿಗೆ ಹಾರ ತುರಾಯಿ ಪರಿಮಳ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯ ಕಾರ್ಯವು ಸಮಾಪ್ತವಾಯಿತು. ಇದೇ ಕಾಲದಲ್ಲಿ ಅಕಸ್ಮಿಕವಾಗಿ ವರ್ತಿಸಿದ ಅತ್ಯಾನಂದದ ಸಂಗತಿಯೇನೆಂದರೆ:—ಮೇಘರಾಜನು ಸಹ ಈ ಸಮಾರಂಭವನ್ನೋಡಲಿಕ್ಕೆ ಬಂದನೋ ಏನೋ ಅನ್ನುವಂತೆ ಏಕಕಾಲಕ್ಕೆ ಮಳೆಯು ಪುಷ್ಕಳವಾಗಿ ಸುರಿದು, ಸಭಿಕರನ್ನು ಮತ್ತಿಷ್ಟು ಆನಂದ ಸಾಗರದಲ್ಲಿ ಮುಳುಗಿಸಿ ಬಿಟ್ಟಿತು. ಈ ಮಳೆಯಿಂದ ಮೋತೀತಲಾವಿಗೆ ತಿಂಗಳೆರಡು ತಿಂಗಳಿನ ನೀರು ಬಂದಿತು. ಮ॥ ಹಳಕಟ್ಟಿಯವರು ತಮ್ಮ ಸರ್ಕಾರಿ ಉದ್ಯೋಗವನ್ನು ಮೇಲಧಿಕಾರಿಗಳ ಮನಸ್ಸಿಗೆ ಬರುವಂತೆ ಸಾಗಿಸಿಕೊಂಡು, ಉಳಿದ ತಮ್ಮ ವೇಳೆಯಲ್ಲಿ ಉದ್ಗ್ರಂಥಗಳನ್ನು ಬರೆದು, ಗ್ರಂಥಕರ್ತರು ಎಂಬ ಕೀರ್ತಿಯನ್ನು ಗಳಿಸಿಕೊಂಡಿರುವರು. ಇವರು ಬರೆದ ಪುಸ್ತಕಗಳೆಲ್ಲ ಮುಂಬಯಿ ಸರ್ಕಾರದವರಿಂದ ಮನ್ನಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಧಾರವಾಡ ಟ್ರೇನಿಂಗ್ ಕಾಲೇಜದ ಕ್ರಮಿಕ ಪುಸ್ತಕಗಳಾಗಿವೆ. ಇವರು ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದ ೧ನೆಯ ತರಗತಿಯ ಆಜೀವಸಭಾಸದರಿರುವರಲ್ಲದೆ, ಆ ಸಂಘದ ಮ್ಯಾನೇಜಿಂಗ ಕಮಿಟಿಯ ಮೆಂಬರರಾಗಿ ಎಷ್ಟೋ ವರ್ಷ ಕೆಲಸಮಾಡಿರುವರು ಮತ್ತು ಮುಂಬಯಿ ಇಲಾಖೆಯ ವಿದ್ಯಾಖಾತೆಯವರಿಂದ ನೇಮಿಸಲ್ಪಟ್ಟ ಕರ್ನಾಟಕ ವಿದ್ಯಾವರ್ಧಕ ಸಂಘದ ಪುಸ್ತಕ ಪರೀಕ್ಷಾಕಮಿಟಿಯ ಮೆಂಬರರೂ ಆಗಿರುವರು. ಈ ಕಾಲದಲ್ಲಿ ಇವರು ವೀರಶೈವ ಸಮಾಜದ ಎಷ್ಟೋ ಮಹತ್ವದ ಕಾರ್ಯಗಳನ್ನು ಎಸಗಿರುವರು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳುತ್ತೇನೆ.— (೧) ಇವರು ಶ್ರೀಮದ್ವೀರಶೈವ ಮಹಾಸಭೆಯ ಉತ್ಪಾದಕರಲ್ಲಿ ಒಬ್ಬರು. (೨) ಮಹಾಸಭೆಯ ಕಟ್ಟಳೆಗಳನ್ನು ಅತಿ ಶ್ರಮದಿಂದ ಸಿದ್ಧಪಡಿಸಿದ ಮತ್ತು ಅವುಗಳನ್ನು ಬಾಗಲಕೋಟೆಯ ಮಹಾಸಭೆಯ ಮುಂದೆ ತಂದು ಪಾಸಮಾಡಿಸಿದ ಶ್ರೇಯಸ್ಸಿನಲ್ಲಿ ದೊಡ್ಡ ಭಾಗವು ಇವರದು. (೩) ಧಾರವಾಡದಲ್ಲಿಯೂ, ಬಾಗಲಕೋಟೆಯಲ್ಲಿಯೂ ನೆರೆದ ಮಹಾಸಭೆಗಳ ಸ್ವಾಗತ ಕಮಿಟಿಗಳ ಅಧ್ಯಕ್ಷರ ಭಾಷಣಗಳ ಕರ್ತರು. (೪) ಮೊದಲನೆಯ ಮಹಾಸಭೆಯ ರಿಪೋರ್ಟಿನ ಮುದ್ರಣಕ್ಕೆ ಸಹಾಯಕಾರಿಗಳು. (೫) ಬಾಗಲಕೋಟೆಯ ಮಹಾಸಭೆಯಲ್ಲಿ ಭಾಷಣಮಾಡಿದವರ ಭಾಷಣಗಳನ್ನು ಸರಿಗೊಳಿಸಿ ಮುದ್ರಣಕ್ಕೆ ತಕ್ಕವುಗಳನ್ನಾಗಿ ಮಾಡಿಕೊಟ್ಟವರು. (೬) ಸುಮಾರು ೧೬ ವರ್ಷಗಳಿಂದ ಲಿಂಗಾಯಿತ ಎಜ್ಯುಕೇಶನಫಂಡಿನ ಲೆಖ್ಖದ ಪರೀಕ್ಷಕರು ಇವರೇ ಇರುವರು. ಮೇಲಿನ ವಿವರಣೆಯಿಂದ ಇವರು ತಮ್ಮ ಸರ್ಕಾರಿಯ ಉದ್ಯೋಗದಲ್ಲಿರುವಾಗಲೇ ಕನ್ನಡ ಭಾಷೆಯ ಮತ್ತು ವೀರಶೈವ ಸಮಾಜದ ಏಳ್ಗೆಗಾಗಿ ಅವಿಶ್ರಾಂತ ಶ್ರಮಪಟ್ಟಿರುವರೆಂಬ ಮಾತು ಸ್ಪಷ್ಟವಾಗುತ್ತದೆ. ಈಗ ಇವರು ಸ್ವತಂತ್ರರಾದರು. ಇನ್ನು ಮೇಲೆ ಇವರಿಂದ ವೀರಶೈವ ಸಮಾಜಹಿತದ ಕಾರ್ಯಗಳು ಹೆಚ್ಚು ಪ್ರಮಾಣದಿಂದ ನೆರವೇರಬಹುದೆಂದು ನಿರೀಕ್ಷಿಸಲಿಕ್ಕೆ ಅಡ್ಡಿಯಿಲ್ಲ. ಆದುದರಿಂದ ಶ್ರೀ ಪರಮೇಶ್ವರನು ಇವರಿಗೆ ಉದ್ದಂಡಾಯುಷ್ಯವನ್ನೂ ಆರೋಗ್ಯವನ್ನೂ ಕರುಣಿಸಬೇಕೆಂದು ಆ ಮಹಾಮಹಿಮನನ್ನು ಅನನ್ಯಭಾವದಿಂದ ಬೇಡಿಕೊಂಡು ಈ ಲೇಖವನ್ನು ಮುಗಿಸುತ್ತೇನೆ.

ಪ್ರತ್ಯಕ್ಷದರ್ಶಿ.

6 **ಊದಬತ್ತಿಗಳು.**

ವಿಧವಿಧವಾದ ಊದಬತ್ತಿಗಳು ಸೇರು೧ಕ್ಕೆ ೧-೨-೦ ೦-೦; ೩-೦-೧; ೨-೪-೦; ೧-೮-೦; ಕಸ್ತೂರಿ ಬಿಲ್ಲೆ ಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ದಶಾಂಗ ಪೊಟ್ಟ ೧ಕ್ಕೆ ೮ ಆಣೆ; ಧೂಪದಗಟ್ಟಿ ೧ಕ್ಕೆ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೪ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ವಿವೇಕಮಂಜರಿ

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿ, ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ನೆಯ ಭಾಗ ೨ ಆಣೆ ೧೦೦ ಪುಟಗಳು.
೨ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:— “ಮೈಸೂರ್ ಸ್ಟಾರ್ ಹೌಸ್” ಮೈಸೂರ್.

ತ್ವರೆಮಾಡಿರಿ! ಅಲಭ್ಯಲಾಭ!! ಅಮೂಲ್ಯಸಮಯ!!!

ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ ದರಕಾಸ್ತನ್ನು ಕಳುಹಿಸುವ “ಮೈಸೂರ್ ಸ್ಟಾರ್” ಚಂದಾದಾರರಿಗೆ ಮಾತ್ರ

ವಾರ್ಷಿಕಚಂದಾ ೧—೮—೦
ಇತರರಿಗೆ ... ೧—೪—೦

ಮಧುರವಾಣಿ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

33 **ಉತ್ತಮ ಗ್ರಂಥಗಳು.**

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೮ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೮-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೮ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೮ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೦ ನೆ ಇಸವಿಯ ಪಾಕೆಟಡೈರಿ.

43

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಲ್ಲಿ ಹೂಡಿದ್ದು. (೩) ಅಕ್ಷರ—ಸ್ಪುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ. (೫) ವಿಷಯ—ಟಪಾಲು, ರೈಲು, ಕೋರ್ಟು ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದು ೩ ಆಣೆ. ಬಿ. ಚಿಕ್ಕದು ಸೀಸದಕಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೪ ಆಣೆ. ಜನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೮ ಆಣೆ. ಜನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

40 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಪ. ಖ. ೮ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ನೋಟೀಸ್.

10 ಜಾತಕ ಸುಧಾಸಾರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತನಾನು ಅನೇಕ ಪುರಾತನ ಪರಾಶರಗ್ರಂಥಗನ್ನು ಪರಿಶೋಧಿಸಿ ಅಲ್ಪವಿದ್ಯದವರಿಗುಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ. ಕ್ರಯವುಕೊಡಬಹಳ್ವ ಕಮ್ಮಿಯಾಗಿರುತ್ತದೆ. ಜಾತಕಸುಧಾಸಾರಗ್ರಂಥ ೧ಕ್ಕೆ ರೂ ೦-೧೦-೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೆ-ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳ್ಸದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾಧಿಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶಿವರ್ಗ ಷಷ್ಠ್ಯಾಂಶಗಳು ಗ್ರಹಗಳಸಮಯ ಅವಸ್ಥಜನ್ಮನರ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರ ರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕ್ರಮ ಮೊದಲಾದ ಯಾವತ್ತುಫಲಗಳನ್ನು ೫೦-೫೫ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ. ಸಂಪೂರ್ಣಜಾತಕ ೧ಕ್ಕೆ ಕ್ರಯ ರೂ ೧೦-೦-೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕವನ್ನು ಬರೆಸುವದು [illegible] ವಯಸ್ಸು ಹೆಸರನ್ನು ಹಾಗು ತಾವು ಮಾಡಿದ ಪ್ರಶ್ನವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರಿವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫-೦-೦.

೧೨ ತಿಂಗಳ ಭವಿಷತ್ಫಲ.

ಮಹನೀಯರೆ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರಬಂದದಿನದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜರಗುವ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತುಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಅದೃಷ್ಟಪತ್ರಿಕೆ ೧ಕ್ಕೆ ಕ್ರಯ ರು ೧-೦-೦

ನಮ್ಮಲ್ಲಿ ದೊರೆಯುವ ವಿಷಯಗಳು.

ಜಾತಕಸುಧಾಸಾರ ರು ೦-೧೦-೦; ವೀರಶೈವಮತಬೋಧಿನಿ ರು ೦-೪-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರು ೦-೩-೦; ನವಗ್ರಹಗಳದಂಡಕ ರು ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಪುಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗುಸಹ ದೊರೆಯುತ್ತವೆ. ಜಾತಸುಧಾಸಾರ ವೀರಶೈವ ಮತಬೋಧಿನಿ ಯಾವದಾದರು ತರ್ಸಿಕೊಂಡವರಿಗೆ ನವಗ್ರಹ ದಂಡಕ ಉಚಿತಕೊಡುತ್ತೇವೆ. ಯಲ್ಲಕಿಮ್ಮತು ವಿ. ಪಿ. ಸಹಿತೆಯಿರುತ್ತೆ.

ನಮ್ಮ ವಿಳಾಸ:—
ಯುಸ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

7 ಬರುವ ಮೆ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಧನವಂತರೇ..



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬವದು ಸರ್ವರಿಗೂ ತಿಳಿದವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ. (3) ನಾಜೂಕಾದ ಕೆರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹೂವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಟ್ ವೆಂಕಟಾಚಲಯ್ಯರ್ ಬೀದಿ,
ಮದ್ರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಕ್ಲ್ಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೈಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವದು. ನಾನಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೆ ೦-೮-೦ ಆಣೆಯಂತೆ ಕಳುಹಬೇಕು. ಕ್ಲ್ಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ವಿಶೇಷ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

29

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯವು; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೩-೧೦-೦ ರೂ. ೩ ಬಾ, ೫-೧೪-೦ ರೂ, ಒಮ್ಮಿಗಿಲೆ ೧ ಡಜನ್ನು ಬಾಟ್ಲಿ ತರಿಸುವವರಿಗೆ ೪೪ ರೂ. ಮೇಲೆ ೨ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಬಿಜೂರಕವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೨ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಹಿಬ್ಬು, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೨ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೪೪ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಜ

84 ಮೈಸೂರು.

ಗೋರೋಚನ ಮಾತ್ರೆ.— ೧೫ ಮಾತ್ರೆಗಳನ್ನು
ಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸು
೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ
ಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿ
ಟಾಗುವುದು. ೧೫ ಮಾತ್ರೆ ಸೀಸೆ ೦-೪-೦., ೬೪ ಮ
ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒ
ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕ
ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳು
ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇ
ದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇ
ತೆಯೇ. ಸುಮಾರು ೩೦ ಸಲಕ್ಕೆ ಆಗುವ ಔಷಧಿ
೦-೪-೦. ಜೋಳಿ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭಪಿಟ್ಟ
ಶರೀರವು ಕಾಂತಿಯುತವಾಗಿ ದೇಹಕ್ಕೆ ತಂಪಾಗುತ್ತದೆ.
ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿ
ಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ದೇಹಜಾಡ್ಯಗಳಲ್ಲಿ ಬಹುಳ ಬ
ರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೫ ದಿನ
ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೫ ಮಾತ್ರೆಗಳನ್ನು ಸೇವಿ
ಪುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತ
೬೪ ಮಾತ್ರೆ ಸೀಸೆ ೦-೩-

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ
ದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃ
ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋ
ಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-

ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦-೧೨-

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೨-

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ
ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸ
ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲ
ಹಿದಾ ಕೊಡಬೇಕು. ಇಷ್ಟವುಳ್ಳವರು ಮೇಳಿನ ವಿಳಾಸಕ್ಕೆ
ಬರೆಯಿರಿ.

ಸಿಂಗಿರಾಜಪುರಾಣವಿಜಯಂ

10

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇವೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚಸಹಿತವಾಗಿ ೧ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

50

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೫ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ ೧ ನಷ್ಟು ಮೊದಲಾದವರೆ. ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

೧೯೧೨ನೆಯ ಇಸವಿ ಏಪ್ರಿಲ್ ತಾ॥ ೮ರಿಂದ ೧೯೧೨ನೆಯ ಏಪ್ರಿಲ್ ತಾ॥ ೧೪ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ನೆಯ ಪರೀಧಾವಿ ಸಂವತ್ಸರದ ಚೈತ್ರ ಬ॥ ಸಪ್ತಮಿಯಿಂದ ಚೈತ್ರ ಬ॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
8	[1]ಸೋ	ಸ	60	ಮೂ	27-33	27
9	ಮಂಗ	ಸ	1-40	ಪೂಷಾ	32-52	28
10	ಬುಧ	ಅ	6 48	ಉ॥ಷಾ	39-34	29
11	ಗುರು	ನ	12-1	ಶ್ರವಣ	45-57	30
12	[2]ಶುಕ್ರ	ದ	16 55	ಧನಿಷ್ಠ	52-14	1
13	[3]ಶನಿ	ಏ	21-7	ಶತ್ತಭಿಷ	57-35	2
14	[4]ಭಾನು	ದ್ವಾ	24-18	ಪೂಭಾ	60	3

(1) ಶ್ರೀರಂಗದಲ್ಲಿ ಚೈತ್ರೋತ್ಸವಾರಂಭಃ. (2) ಏಕಾದಶಿ ತಿಥಿಃ, ಚಿತ್ರವಿಷು ಪುಣ್ಯಕಾಲಃ, ಶೂನ್ಯಾರ್ಕಃ. (3) ಶೂನ್ಯತಿಥಿಃ, ಸರ್ವತ್ರೈಕಾದಶಿ. (4) ದ್ವಾದಶೀ ತಿಥಿಃ, ಪ್ರದೋಷಃ, ಶ್ವೇತವರಹಾಸ್ವಾಮಿರಥಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124

ಮೈಸೂರ್ ✶ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾಜ್ಞೀಶ್ವರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯವ್ವನ ಹೃತ್ತಮೋಹರಾಜ್ಯೋತಿಃ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಗರಿತಸಾಹಿತ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚಿತ್ರಿಶೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ನೆಯ ಇಸವಿ ಏಪ್ರಿಲ್ ತಾರೀಖು ೧೫ನೆಯ ಸೋಮವಾರ. [ಸಂಚಿಕೆ ೧೬

11 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಆಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ ದೊಡ್ಡ ಪೋಸ್ಟ್ ಕಾರ್ಡುಗಳನು

ನಂ.........
ಮಹಾರಾಜಶ್ರೀ.................................ಸ್ವಾಮಿ
....ನಾಮಿ
............ಅದಾಗಿ ಈವರಿಗೆ ಉಪಚಾರಕುಶಲೋಪರಿಸಾಂ॥

ಎಂಬದಾಗಿ ಮೇಲುಭಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ ೧೦೦ ಕ್ಕೆ ೦-೪-೦. ವಿ. ಪಿ. ಮೂಲಕ ೦-೩-೦. ೧೦೦೦ ಕ್ಕೆ ೨-೦-೦ ೧೦೦೦ ಗಟ್ಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆ ಬೀಳುವುದು ೧೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೊಡಲ್ಪ ಬಹುಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೪ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೊಡಲ್ಪ ಇನಾಮು ಕೊಡಲಾಗುತ್ತೆ.

ರಖಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಪಾವಲ್ ವರ್ಕ ಕ್ರೀ ವಾಚ್.



(2) ಕ್ಯಾಲೆಂಡರ್ ವಾಚ್.



(3) ಗರ್ಟೈಂ ರೈಲ್ವೆ ರೆಗ್ಯುಲೇಟರ್ ವಾಚ್.



(1) ವೈಟ್ ಹೇರ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂವಾಚ್.

ಮೇಲ್ಕಂಡ ವಾಚುಗಳ ವಿವರ:— (1) ಪಾವಲ್ ವರ್ಕ ಕ್ರೀ ವಾಚೆಂಬ ಗ್ಯಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತದೆ ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮-೮-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೮-೦. (2) ಕ್ಯಾಲೆಂಡರ್ ವಾಚ್— ಇದು ಟೈಂ ತಾರೀಖು ತೋರಿಸುತ್ತದೆ. ೪-೧೨-೦ ಮತ್ತು ವಾರ, ತಾರೀಖು, ತಿಂಗಳು, ಪೌರ್ಣಿಮೆ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದರೆ ಅದರ ತನ್ನ ಸಂಗಡ ಒಬ್ಬ ಜೋಯಿಸರನ್ನು ಇಟ್ಟಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೨-೪-೦ ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೫-೪-೦. (3) ಗರ್ಟೈಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್— ಇದು ಗೌರ್ನಮೆಂಟ್ ಗುಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ ವಾಚ್ ೧ ಕ್ಕೆ ೩-೮-೦. (4) ವೈಟ್ ಹೇರ್ ಕೀ ವಾಚ್— ವಾರಕ್ಕೊಂದಾವೃತ್ತಿ ಬೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೮-೦. ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೪-೪-೦. (5) ಪಿಕ್ಚರ್ಸ್ ವಾಚ್— ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ರವಾನಿಸುತ್ತೇವೆ. ೧ ಕ್ಕೆ ೩-೮-೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತದೆ ವಾಚ್ ೧ಕ್ಕೆ ೨-೮-೦. ಕಾಗದ ಬರಿಯತಕ್ಕವರು ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದ್ದು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ, ಮೈಸೂರು.

ಪರಶಖಂಡದಿಂದ ಅನೇಕ ಎ. ಹಾ. ತಸರಿದ ಬಹುಮಾನಪಡೆದ

ಎಂ. ಆರ್. ಸುಬ್ಬಾಜೆಟ್ಟಪ್ಪನವರ

ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

4

ಕೇಸರವಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ ಅಲ್ಲದೆ ಮಿದುಳಿಗೆ ಬಹು ತಣುವಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನೂ ಆನಂದಪಡಿಸುತ್ತದೆ. ಇದರ ಬೆಲೆ ಸೀಸೆ ೧ಕ್ಕೆ ೦-೮-೦.

ನಂ.		ರೂ.			ರೂ.
೧. ಅಂಬರ್ ಬತ್ತಿ	ಸೇರಿಗೆ	೩	ಕಸ್ತೂರಿ ಬಿಲ್ಲೆ	ತೋಲಕ್ಕೆ	೨
೨. ಅಂಬರ್ ಬತ್ತಿ	„	೬॥	ಜವಾಜಿಲ್ಲೆ	„	೧
೧. ಕಸ್ತೂರಿ ಬತ್ತಿ	„	೨॥	ಅಗರು	„	೧
೧. ಪುನಗು	„	೧	ಸ್ಯಾಂಡಲ್ ಸೆಂಟ್	ಸೀಸೆಗೆ	೧
೧. ಗುಲಾಬಿ ಬತ್ತಿ	„	॥	ರೋಸ್ ಸೆಂಟ್	„	॥।

ಎಂ. ಆರ್. ಸುಬ್ಬಾಜೆಟ್ಟಪ್ಪ,
ಕೃಷ್ಣರಾಜ ಮೊಹಲ್ಲಾ ಮೈಸೂರ್.

ಉತ್ತಮ ಗ್ರಂಥಗಳು.

84

ಬಸವರಾಜವಿಜಯಂ.— ೬೪ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಪಿತ್ರಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦ ವೀರಶೈವ ಮತಸ್ವರೂಪ-ತದ್ಧರ್ಮ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತರತ್ನಸಂಗ್ರಹಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷದ ಐಕ್ಯಕಲ್ಯಾಣ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೫ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೩ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೧-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಳಿ, ಮೈಸೂರು.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಅಷ್ಟರೊಳ್ ರಾಕ್ಷಸನು ಸಮವಾಗಿ ಕಾಳಗವಂ ಮಾಡಲೇರೆಂದು ತಾನು ಶರಭರೂಪನಾಗಿ ನೆಗೆಸಿ ಕಾಳಗವಂ ಮಾಡುತ್ತಿರಲಾಗ ಪರ್ವತದೊಡನೆ ಪರ್ವತವು ತಾಟಾಡಿದಂತೆಯೂ, ದಾವಾಗ್ನಿಯೊಡನೆ ಬಡಬಾಗ್ನಿಯು ಕೂಡಿದಂತೆಯೂ, ಅತಿಘೋರವಾದ ಯುದ್ಧವು ದೇವದಾನವರಿಗೆ ಅಚ್ಚರಿಯನ್ನುಂಟುಮಾಡಲಾಗ ಸುಗಂಧರಾಜೇಂದ್ರನು ಘೋರಂ ರಾಕ್ಷಸನ ರೂಪವಂತಾಳಿ ಈ ಶರಭನನ್ನು ನುಂಗುವಂತೆ ಬರುತಿರಲು, ಅದನ್ನು ನೋಡಿ ಜಯಮಾರುತನು ಭಯಪಟ್ಟು ಇನ್ನು ಈ ಮಹಾಯುದ್ಧವಂ ಇವನೊಂದಿಗೆ ಮಾಡಕೂಡದೆಂದು ಮೊದಲಿನಂತೆ ನಿಜರೂಪವಂಕೊಂಡು ಅನೇಕಾಯುಧಗಳಂ ಬೀರಲು, ರಾಜೇಂದ್ರನು ತನ್ನ ಮನದೊಳ್ ನಾನು ಯಾವ ಅಸ್ತ್ರಗಳಂ ಪ್ರಯೋಗಿಸಿದರೂ ಅದಕ್ಕೆ ಪ್ರತೀಕಾರವಾದ ಅಸ್ತ್ರಗಳಂ ಈ ರಾಕ್ಷಸನು ಪ್ರಯೋಗಿಸುವನು ಅದರಿಂ ಎಷ್ಟು ದಿವಸಕ್ಕೆ ಈ ರಾಕ್ಷಸನು ಸಂಹೃತನಾಗುವನೋ ತಿಳಿಯದೆಂದು ಚಿಂತಿಸುತ್ತಿರಲಾಗ ಕುಸುಮಲತೆಯು ಉಪ್ಪರಿಗೆಯ ಮೇಲುಪ್ಪರಿಗೆಯಲ್ಲಿ ನಿಂತು ಇದೆಲ್ಲವಂ ನೋಡುತ್ತಿರಲು, ಆ ಕಾಲದೊಳ್ ಚಂದ್ರಹಾಸವೆಂಬ ಶಬ್ದವಂ ಮೂರಾವರಿ ನುಡಿದಂತೆ ಕೇಳಿ ಬಳಿಕ ಅದರ ಅಭಿಪ್ರಾಯವಂ ತಿಳಿದು ಸಂತೋಷಭರಿತನಾಗಿ ತನ್ನ ಕುಲದೇವತೆಯಾದ ಶ್ರೀದೇವಿಯಂ ಧ್ಯಾನಿಸಿ ಬಳಿಕ ಹಸ್ತದೊಳ್ ಚಂದ್ರಹಾಸವಂ ಹಿಡಿದು ಆ ರಾಕ್ಷಸನನ್ನಟ್ಟಿಕೊಂಡು ಬರಲು, ಆಗ ಆ ರಾಕ್ಷಸನು ಒಂದು ಉತ್ತಮವಾದ ಖಡ್ಗವಂ ಹಿಡಿದು ಸುಗಂಧರಾಜೇಂದ್ರನ ಇದಿರಿಂಗಲು, ಇರ್ವರೂ ಒಬ್ಬರಿಗೊಬ್ಬರು ಬಿತ್ತರವಾಗಿ ಕತ್ತಿಗಳಂ ಬೀಸುತ, ಮೊನೆಗಳಂ ತೋರಿಸುತ ಪೆಟ್ಟುಗಳಂ ತಪ್ಪಿಸಿಕೊಳ್ಳುತ, ಕಾಳಗವಂ ಕಾದುವಷ್ಟರಲ್ಲಿ ಸುಂದೋಪಸುಂದರಂತೆ ಕಾಣಿಸುತ, ಪರಸ್ಪರ ಖಡ್ಗವಿನ್ಯಾಸಗಳಂ ವಿಚಿತ್ರವಾಗಿ ತೋರಿಸುತ ಹಿಮ್ಮೆಟ್ಟಿದೆ ಹೆಜ್ಜೆಗಳಂ ಸರಿಸರಿದು ಬರುತ ಸವ್ಯಾಪಸವ್ಯಾಂಗಗಳ ಭೇದಂಗಳಂ ತೋರಿಸುತ, ಅಹಂಕಾರದಿಂ ಸರಿಸರಿಯಾದ ವೀರವಾದದ ಮಾತುಗಳಂನಾಡುತ ಇಂತು ಕೆಲವು ಹೊತ್ತು ಕಾಳಗವಂ ಕಾದುತ್ತಿರಲು, ಬಳಿಕ ಅವರೊಳ್ ಸುಗಂಧರಾಜೇಂದ್ರನು, ಭೂಲೋಕದೊಳ್ ಧರ್ಮಸಂಸ್ಥಾಪನವಂ ಮಾಡಲೋಸುಗ ಶ್ರೀ ರಾಮಕೃಷ್ಣಾದಿಗಳಂತೆ ಅವತಾರವಂಗೊಂಡಿರುವನಾದುದರಿಂದ ಕ್ಷಣಮಾತ್ರದೊಳ್ ಸಕಲಲೋಕಕಂಟಕನಾದ ಜಯಮಾರುತನೆಂಬ ರಕ್ಕಸನಂ ಕಲ್ಪಾಂತ ಮಿಂಚಿನಂತೆ ಹೊಳೆಯುತ್ತಿರುವ ಚಂದ್ರಹಾಸದಿಂದ ಸಂಹರಿಸಲು, ಆ ಸಮಯದಲ್ಲಿ ಈ ಯುದ್ಧವನ್ನು ನೋಡಲೋಸುಗ ಮೇರುಪರ್ವತದ ಬದಿಯಲ್ಲಿರುವ ದೇವತೆಗಳೆಲ್ಲರೂ ಸುಗಂಧರಾಜೇಂದ್ರನ ಮೇಲೆ ಪುಷ್ಪವೃಷ್ಟಿಯಂ ಕರೆದು ದುಂದುಭಿ ಮೊದಲಾದ ತಮ್ಮ ವಾದ್ಯಂಗಳಂ ವಿಲಾಸದಿಂ ಮೊಳಗಿಸಲು, ಆಗ ಸುಗಂಧರಾಜೇಂದ್ರನು ಕಳಂಕವಿಲ್ಲದ ಚಂದ್ರನಂತೆ ಕಾಣಿಸುತ, ಮತ್ತೂ ಹತಶೇಷರಾದ ರಾಕ್ಷಸರೊಳ್ ಇದಿರುವಿದ್ದವರಂ ಅಲ್ಲಲ್ಲಿಯೆ ಕೊಂದು, ಮರೆಹೊಕ್ಕವರಂ ಉಳಿಸಿ ತಾನು ಕೃತಕೃತ್ಯನಾಗಿ ಭುಜಯುಗಪ್ತನ ಸಮೇತ ವಿಲಾಸದಿಂ ನಿಂತಿರಲು, ಬಳಿಕ ಜಯಮಾರುತನು ಘೋರರಾಕ್ಷಸಶರೀರವಂ ಬಿಟ್ಟು ಅತ್ಯಂತ ಕಾಂತಿಯುಕ್ತನಾದ ದಿವ್ಯವಿಮಾನವನ್ನೇರಿಬಂದು, ಎಲೈ ವೀರಾಧಿವೀರನಾದ ಸುಗಂಧರಾಜೇಂದ್ರನೇ! ಕೇಳು, ನಿನ್ನ ಹಸ್ತದೊಳಿರುವ ಚಂದ್ರಹಾಸದ ಮಹಿಮೆಯಿಂದ ನನ್ನ ಶಾಪವು ಪರಿಹಾರವಾಯ್ತದು; ನಾನು ಸುಕೃತವಂತನಾದೆನು ಎಂದು ಆಕಾಶದೊಳ್ನಿಂತು ನಮಸ್ಕರಿಸಲು, ಸುಗಂಧರಾಜೇಂದ್ರನು, ಇಂತು ನುಡಿಯುವ ವಿದ್ಯಾಧರನನ್ನು ನೋಡಿ ವಿಸ್ಮಯಂಗೊಂಡು ಅವನಂ ಕುರಿತು ಎಲೈ ವಿದ್ಯಾಧರನೇ! ಈ ಪರಮಮನೋಹರನಾದ ನಿನಗೆ ಅತಿಘೋರವಾದ ಆ ರಾಕ್ಷಸರೂಪವು ಯಾವ ಕಾರಣದಿಂ ಪ್ರಾಪ್ತವಾದುದೆಂದು ಕೇಳಲು, ಆಗ ಆ ವಿದ್ಯಾಧರನು ಎಲೈ ಮಹಾಮಹಿಮನೇ! ಕೇಳು; ಹಿಮವಂತಪರ್ವತದ ಉಪರಿಭಾಗದೊಳ್ ಒಂದಾನೊಂದು ವಿಚಿತ್ರವಾದ ಚೈತ್ರವನವಿರುವುದು; ಆ ವನದಲ್ಲಿ ಮನೋಹರವಾದ ದಿವ್ಯೋದಕದಿಂ ಭರಿತವಾಗಿರುವ ಒಂದು ಸರೋವರದೊಳ್ ಪ್ರೇಮವತಿ ಮೊದಲಾದ ವಿದ್ಯಾಧರಸ್ತ್ರೀಯರುಗಳಿಂದಯುಕ್ತನಾಗಿ ಜಲಕ್ರೀಡೆಯನ್ನಾಡುತ ನಾನು ಕೃಶಾಂಗನಾದ, ಜಟಾಧಾರಿಯಾದ ಒಬ್ಬ ತಪಸ್ವಿಯು ಬರಲು ಅವನಂ ಕಂಡು ನಾನು ಆತನ ಮಹಿಮೆಯಂ ತಿಳಿಯದೆ ನಾನಾ ವಿಧವಾಗಿ ಹಾಸ್ಯವಂ ಮಾಡುತ ಕ್ರೀಡೆಯಂ ಬಿಡದೆ ಅಹಂಕಾರದಿಂದಿರಲು, ಆ ತಪಸ್ವಿಯು ಬಹು ಕೋಪದಿಂದ ನಿನಗೆ ಘೋರವಾದ ರಾಕ್ಷಸರೂಪವು ಸಂಭವಿಸಲೆಂದು ನನಗೆ ಶಾಪವಂ ಕೊಡಲಾ ಶಾಪದಿಂ ನಾನು ಗಳಗಳನೆ ಮನನೊಂದು ಕ್ರೀಡೆಯಂ ಬಿಟ್ಟು ಆ ಋಷಿಯ ಪಾದಂಗಳಂ ಘಟ್ಟಿಯಾಗಿ ಹಿಡಿದು ಬೇಡಿಕೊಳ್ಳಲು, ಆ ಋಷಿಯು ಈ ಬುದ್ಧಿಯು ಮೊದಲೇಕೆ ಇಲ್ಲವಾಯಿತೆಂದು ನುಡಿದು ಬಳಿಕ ನನ್ನ ಪಶ್ಚಾತ್ತಾಪವನ್ನು ನೋಡಿ ಕರುಣದಿಂ ಭೂಲೋಕದಲ್ಲಿ ಕರ್ನಾಟದೇಶದೊಳ್ ಸುಗಂಧರಾಜೇಂದ್ರನೆಂಬ ಅರಸು ಉದಯಿಸಿ ದೇವಿಯ ಪ್ರಸಾದಲಬ್ಧವಾದ ಚಂದ್ರಹಾಸದಿಂ ನಿನ್ನಂ ಸಂಹರಿಸಲಾಗ ನೀನು ಈ ಶಾಪದಿಂ ಮುಕ್ತನಾಗಿ ಎಂದಿನಂತೆ ವಿದ್ಯಾಧರನಾಗುವೆ ಎಂದು ವಿಶಾಪವಂಕೊಟ್ಟು ತೆರಳಿದನು, ನನಗೆ ಆ ಕ್ಷಣದಲ್ಲಿಯೆ ಘೋರವಾದ ರಾಕ್ಷಸ ರೂಪು ಉಂಟಾಗಲು, ಆಗ ನನ್ನ ಕೆಂದಿರು ನನ್ನನ್ನು ನೋಡಿ ಓಡಿಹೋದರು; ನಾನು ಈ ಇಳಾವೃತಖಂಡವಂ ಸೇರಿ ಈ ಪುರವನ್ನಿರ್ಮಿಸಿಕೊಂಡು ಇಲ್ಲಿಯೇ ಇರುತಿರ್ದೆನು; ಈಗ ನಿನ್ನಿಂದ ಕೃತಾರ್ಥನಾದೆನೆಂದು ನುಡಿದು ಕ್ಷುತ್ತೃಷ್ಣೆಗಳಂ ಪರಿಹರಿಸುವಾತನಿಗೆ ಪ್ರಾಣಪದಕವೆನಿಸಿರ್ದ, ತೃಪ್ತಿಕರನೀಯುವ ಮಾಳಿಕಾವಿಶೇಷವಂ, ಇಂತಲ್ಲದೆ ಬೇಕಾದ ಕಾಲಂಗಳೊಳ್ ಮನೋರಂಜಕವಾಗಿ ಇಷ್ಟಂಗಳಾದ ರಾಗಂಗಳಂ ನುಡಿವ, ಮಣಿಮಯವಾದ ಒಂದು ವೀಣೆಯಂ ಸಮರ್ಪಿಸಿ, ವೀರವರ್ಯತಕ್ಕೆ ಒಂದು ಚಿನ್ನದ ಉಂಗುರವಂ ಕೊಟ್ಟಂತೆ ಮಹಾಮಹಿಮನಾದ ನಿನಗೆ ನಾನು ಕೊಡತಕ್ಕುದೇನಿದೆ? ರಿಕ್ತಹಸ್ತದಿಂ ರಾಜರುಗಳಂ ಕಾಣಬಾರದೆಂದು ಶಾಸ್ತ್ರವಿರುವುದರಿಂದ ಇದಂತಂದು ಒಪ್ಪಿಸಿದೆನು, ಇದಲ್ಲದೆ ಈ ನಮ್ಮ ಪುರಿಯೊಳ್ ಕುಸುಮಲತೆಯೆಂಬ ರಾಜಪುತ್ರಿಯಂ, ವಿಚಿತ್ರವಾದ ಅಶ್ವರತ್ನವಂ ಕೂಡಾ ನಿನಗೋಸುಗ ಸಂರಕ್ಷಿಸಿಕೊಂಡಿರ್ದೆನು; ಈಗಲಾ ಸ್ತ್ರೀರತ್ನವಂ, ಅಶ್ವರತ್ನವಂ, ಮತ್ತು ನವರತ್ನ ಮೊದಲಾದ ರಾಶಿಗಳೆಲ್ಲವಂ ಒಪ್ಪಿಸಿಕೊಳ್ಳಬೇಕೆಂದು ಬಿನ್ನವಿಸಿ, ಅವನ ಅನುಜ್ಞೆಯಂ ಪಡೆದು ಅಲ್ಲಿಂದ ತನ್ನ ವಿದ್ಯಾಧರಪುರವಂ ಕುರಿತು ತೆರಳಲು, ಆ ಸಮಯದೊಳ್, ನಿಷ್ಪ್ರಾಣನಾದ ಜೀವರಹಿತನಾದ, ಜಯಮಾರುತನ ಕಳೇಬರವು ವಜ್ರಾಘಾತದಿಂದುರುಳಿದ ಗಿರಿಶಿಖರದಂತೆ ಅತಿ ನೀಳವಾಗಿಯೂ ಅತ್ಯುನ್ನತವಾಗಿಯೂ ಬಿದ್ದಿರಲು, ಆ ಕಾಲದೊಳ್ ಆ ರಕ್ಕಸನ ಪತ್ನಿಯರಾದ, ವಜ್ರಲತಾ, ಕಂಕಾಳೀ, ಸುಮಾಲೆ, ದುರ್ಮುಖಿ ಮೊದಲಾದ ನೂರುಮಂದಿ ಕಾಂತೆಯರು, ತಂತಂಮ ಅಂತಃಪುರವಂ ಬಿಟ್ಟು, ಕುಸುಮಲತೆಯೆಂಬ ಮೃತ್ಯುವೇ ಈ ಪುರವಂ ಪೊಕ್ಕು ನಮ್ಮ ರಾಕ್ಷಸಕುಲಸಂಹಾರಕ್ಕೆ ಕಾರಣವಾದಳೆಂದು ನುಡಿಯುತ, ಕುಸುಮಲತೆಯು ಮಂದಿರದ ಮುಂದುಗಡೆಯೊಳ್ ಬರುತ, ನಾನಾಪರಿದುಃಖಪಡುತ ನಿರ್ಜೀವವಾದ ತಮ್ಮ ಪ್ರಾಣವಲ್ಲಭನಾದ ಜಯಮಾರುತನ ಕಳೇಬರವಂ ಕಂಡು ಹಾ ಪ್ರಿಯನೇ! ಹಾ ನನ್ನ ಒಡೆಯನೇ!! ಹಾ ಕುಸುಮಸುಕೋಮಲಾಂಗನೇ!!! ಹಾ ಪ್ರಾಣವಲ್ಲಭನೇ!!!! ನಂಮಂತೊರೆದು ಎಲ್ಲಿ ಹೋಗಿರುವೆ? ಎಲೈ ಪ್ರಾಣಕಾಂತನೇ! ನಿನ್ನ ಪ್ರಾಣಸಖಿಯರಾದ ನಮ್ಮನ್ನು ನೋಡದೆಯೇನು ಕಾರಣ ಈ ಪರಿಯಾಗಿ ಪವಳಿಸಿರುವೆ? ಎಲೈ ನವಮನ್ಮಥನೇ! ನಿನಗೆ ನಿದ್ರೆಯೋ! ನಮ್ಮ ಮೇಲೆ ಕೋಪವೋ? ಯಾವುದೂ ತಿಳಿಯದಿರುವ ಅಬಲೆಯರಾದ ನಮ್ಮಂ ಏನು ಕಾರಣ ಘಾಸಿಪಡಿಸುತಲಿದ್ದೀಯೋ? ಸಶೇಷ.

ಪರ್ಯಟನ.

ಕಲಕತ್ತೆಯಲ್ಲಿ ಪರೀಕ್ಷೆಯನ್ನು ತೀರಿಸಿಕೊಂಡು ಕಾಶಿಗೆ ಬಂದೆನು. ಇಲ್ಲಿ ೩-೪ ದಿವಸವಿದ್ದು ಇಲ್ಲಿಯ ಸಂಸ್ಕೃತ ಕಾಲೇಜನ್ನೂ ವಿಶ್ವನಾಥಾದಿ ಮಂದಿರಗಳನ್ನೂ ನೋಡಿದೆನು. ಇಲ್ಲಿಯ ಸಂಸ್ಕೃತಾಭ್ಯಾಸ ಕ್ರಮವೆಂದರೆ ದೂರದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಮೊದಲು ವ್ಯಾಕರಣ ಕಲಿಯುವುದಾದರೆ ಸಿದ್ಧಾಂತಕೌಮುದಿಯನ್ನು ನ್ಯಾಯ ಕಲಿಯುವುದಾದರೆ ಮುಕ್ತಾವಳೀ ಗ್ರಂಥವನ್ನು ಕೊಡುವರು ಈ ಗ್ರಂಥಗಳನ್ನು ಸೊಲಹಿಡಿದು ಪಾಠಮಾಡುವದಕ್ಕೆ ಹೆಚ್ಚೆಂದರೆ ೪-೫ ವರ್ಷ ಕಾಲವನ್ನು ಕಳೆಯುವರು. ೪-೫ ವರುಷಗಳ ನಂತರ ಅವನಿಗೆ ಮಧ್ಯಮಪರೀಕ್ಷೆಯನ್ನು ಕೊಡಲಿಕ್ಕೆ ಹಚ್ಚುವರು. ಇದರಲ್ಲಿ ಅವನು ೧-೨ ವರುಷಗಳವರೆಗೆ ಉತ್ತೀರ್ಣನಾಗದೆ ಒಂದು ಸಣ್ಣನೆಯ ಮಧ್ಯಮ (ದ್ವಿತೀಯ) ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಬೇಕಾದರೆ ಆಯುಷ್ಯದ ಅರ್ಧಭಾಗವನ್ನು ಕಳೆದು ಒಂದುವಿಪತ್ತಿನಿಂದ ಪಾರಾದಂತಾಗುವನು. ನಂತರ ಇವನಿಗೆ ಉತ್ತಮ (೬ ಖಂಡಗಳುಳ್ಳ ಆಚಾರ್ಯ) ಪರೀಕ್ಷೆ ಆಗಬೇಕಾದರೆ ಜನ್ಮಾಂತ್ಯವೇ ಆಗುವುದು. ಈ ಆಚಾರ್ಯ ಪರೀಕ್ಷೆಯು ಕಲಕತ್ತೆಯ ತೀರ್ಥಪರೀಕ್ಷೆಗೆ ಸಮಾನವಾದುದೆಂದು ಸರಕಾರದವರಿಂದ ನಿಯಮಿಸಲ್ಪಟ್ಟಿರುವುದು. ಇನ್ನು ಅಷ್ಟಮಿ, ತ್ರಯೋದಶಿ, ಚತುರ್ದಶಿ, ಪೌರ್ಣಿಮೆ ಅಥವಾ ಅಮಾವಾಸ್ಯೆ, ಪ್ರತಿಪತ್ತು ಈ ಪ್ರಕಾರ ೧೫ ದಿವಸಗಳಲ್ಲಿ ೫ ದಿವಸ ಸೂಟಿ ೧೫ ದಿವಸಗಳಲ್ಲಿ ೧೦ ದಿವಸವೇ ಪಾಠ ಜರುಗುವದು. ಎಲ್ಲಾ ದಿವಸಗಳು ಪಾಠವನ್ನು ಹೇಳಲು ಈ ಕೆಳಗಿನ ಶ್ಲೋಕವನ್ನು ಹೇಳುವರು,

« ಅಮಾವಾಸ್ಯಾ ಗುರುಂಹಂತಿ ಶಿಷ್ಯಂಹಂತಿ ಚತುರ್ದಶೀ।
ಉಭಾವಷ್ಟಮ್ಯಾಹಂತಿ ಪ್ರತಿಪತ್ಪಾಠನಾಶಿನೀ॥ »

ಆದರೆ ಮುಂಬಯಿ ಕಲಕತ್ತಾಗಳಲ್ಲಿ ಯಾವ ದಿವಸವಂ ಬಿಡದೇ ನಿತ್ಯದಲ್ಲಿ ಮಹಾಭಾಷ್ಯಾದಿ ಪಾಠಗಳನ್ನು ಹೇಳಿಸಿಕೊಳ್ಳುವ ವಿದ್ಯಾರ್ಥಿಗಳಿಗೂ ಹೇಳುವ ಅಧ್ಯಾಪಕರಿಗೂ ಯಾವ ಹಿಡೆಯೂ ಆಗದೆ ಇರುವುದನ್ನು ನೋಡಿಯೂ ಹೇಳದೇ ವಿದ್ಯಾರ್ಥಿಗಳ ಜನ್ಮವನ್ನು ವ್ಯರ್ಥವಾಗಿ ಕಳೆಯುತ್ತಿರುವ ಶಾಸ್ತ್ರಿಗಳ ದುಷ್ಟಬುದ್ಧಿಯನ್ನು ಎಷ್ಟು ದೂಷಿಸಿದರೂ ಸ್ವಲ್ಪವೇ ಸರಿ. ಕಾಶಿಯ ಪಂಡಿತರಲ್ಲಿಯ ವಿದ್ಯಾರ್ಥಿಗಳ ಅಭ್ಯಾಸವು ಹೋದಮೇಲೆ ಶಬ್ದಕೃತಿಯಿಂದಲೇ ಪರಮಪವಿತ್ರವಾದ ವೇದಶಾಸ್ತ್ರ ಧ್ವನಿಯನ್ನು ಯಾವ ಕಾಲದಲ್ಲಿ ಪಠಿಸುವರು? ಇದನ್ನು ವಿಚಾರಮಾಡಿ ನೋಡುವಷ್ಟರಲ್ಲಿ ಕಲಿಯುಗದ ಪ್ರಭಾವ ದಾಲೋಚಿಸಿದರೆ ಕಾಂತಿಕೃತ ನಿರ್ಣಯಕನೆಂಬ ದುರ್ಭಿಕ್ಷಗಳಿಗೆ ವಾಗಾಡಂಬರದಲ್ಲಿಯೇ ಕಾಲವನ್ನು ಕಳೆಯುವ ಮಹರ್ಷಿಗಳಾದರೂ ನ್ಯಾಯ ವ್ಯಾಕರಣಾದಿಶಾಸ್ತ್ರಗಳು ವೇದಾರ್ಥಬೋಧಕ್ಕಾಗಿಯೇ ಎಂದು ಹೇಳುವರು. ವ್ಯಾಕರಣವನ್ನು ಏತಕ್ಕೆ ಕಲಿಯಬೇಕೆಂಬ ಪ್ರಶ್ನೆಗೆ ಮಹಾಭಾಷ್ಯಕಾರರ ಉತ್ತರ—« ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಂ » ವಾರ್ತಿಕ! « ರಕ್ಷಾರ್ಥಂ ವೇದಾನಾಮಧ್ಯೇಯಂ ವ್ಯಾಕರಣಂ » ಇತ್ಯಾದಿ ಉಕ್ತಿಗಳಿರುವವು. ಶಾಸ್ತ್ರ ವ್ಯಾಕರಣಮಹರ್ಷಿಗಳು « ಧರ್ಮಬ್ರಹ್ಮಣೋರೈಕ್ಯ ವಿದ್ಯ ಧರ್ಮಬ್ರಹ್ಮಣೀ ತತ್ವಜ್ಞಾನಂ » ರೀತಿಯಿಂದ ತತ್ವ ಬೋಧರ್ಥವಾಗಿ ಶಾಸ್ತ್ರವನ್ನು ಮಾಡಿರುವರು ಹಾಗೂ ತ್ವರಿತಬುದ್ಧಿಗಳಲ್ಲಿ « ನಾವೇದವಿನ್ಮನುತೇ ತಂ ಬೃಹಂತಂ » ಇತ್ಯಾದಿ ವೇದವನ್ನೋದದೇ ಇದ್ದವನು ಬೃಹತ್ಸ್ವರೂಪನಾದ ಪರಮಾತ್ಮನನ್ನು ಎಂದೂ ತಿಳಿಯುವುದಿಲ್ಲವೆಂಬುದಾಗಿ ಸ್ಪಷ್ಟಮಂತ್ರವಿರುವದು. ತಸ್ಮಾತ್ ಮಹರ್ಷಿಗಳ ವಾಕ್ಯಾನುಸಾರವಾಗಿ ಪ್ರತ್ಯೇಕ ಮನುಷ್ಯರಿಗೂ ವೇದಾಧ್ಯಯನವಿಲ್ಲದೇ ಶಾಸ್ತ್ರಾಭ್ಯಾಸ ಮಾಡಲಿಕ್ಕೆಬೇಕೆಂಬುವ ವಿಚಾರ ಇವರಿಲ್ಲ. ಇನ್ನು ಈ ಕಾಶಿಗೆ ಬಂದ ಯಾತ್ರಿಕರ ದ್ರವ್ಯಾಪಹಾರಮಾಡಿ ಲಕ್ಷಾಧಿಕಾರಿಗಳಾಗಿದ್ದ ಎಷ್ಟೋಜನ ಬ್ರಾಹ್ಮಣರು ಶಹರದಲ್ಲಿರುವರು ಮಂದಿರದಲ್ಲಿ ಯಾತ್ರಿಕರು ಬರುವದಟ್ಟತೆ! ನಿರ್ಲಜ್ಜರು ಆಲಸ್ಯವಂತರು ಆದ ಅನೇಕ ಬ್ರಾಹ್ಮಣರು ಮನುಷ್ಯರನ್ನು ನುಂಗಲಿಕ್ಕೆ ಬಂದ ದುಷ್ಟ ರಾಕ್ಷಸರಂತೆ ಭಿಕ್ಷಾರ್ಥವಾಗಿ ಬಂದು ಸಮ್ಮುಖದಲ್ಲಿ ನಿಲ್ಲುವರು ಇವರ ಉಪದ್ರವವಂ ಸಹಿಸಲಾರದೇ ಗಂಗಾನದೀತೀರಕ್ಕೆ ಹೋಗಬೇಕೆಂದರೆ ಅಲ್ಲಿ ನಾನಾ ವೇಷಧಾರಿಗಳೂ ಹಾಗೂ ಸ್ನಾನಕ್ಕೆ ಬಂದ ಜನರಿಗೆ ಮಂತ್ರಹೇಳುವವರಕ್ಕಾಗಿ ಚಪ್ಪರವನ್ನು ಹಾಕಿಕೊಂಡು ಕೂತಂತಹರ ದೃಷ್ಟಿಬಿದ್ದಕ್ಷಣಕ್ಕೆ ಮನುಷ್ಯನು ದಿಗಿಲುಬೀಳುವನು. ಇವರಿಂದ ಪಾರಾಗುವುದಂತು ದುರ್ಲಭವು. ಈ ದ್ರವ್ಯಾಪಹಾರದ ದುಷ್ಟಕೃತ್ಯವನ್ನು ನೋಡಿ ಸಹಿಸಲಾರದ ಒಬ್ಬ ಬಂಗಾಲದೇಶದ ಶ್ರೀಕೃಷ್ಣಮಿಶ್ರನೆಂಬ ಸುಪ್ರಸಿದ್ಧ ಕವಿಯು ಕೆಳಗಿನ ಶ್ಲೋಕಗಳನ್ನು ಬರೆದಿರುವನು:—

ವೇಶ್ಯಾವೇಶ್ಮಸುಸೀಧುಗಂಧಿಲಲನಾವಕ್ತ್ರಾಸವಾ
ಮೋದಿತೈಃ। ನಿರ್ನೀತ್ವಾನಿರ್ಭರಮನ್ಮಥೋತ್ಸವರ
ಸೈರುನ್ನಿದ್ರಚಂದ್ರಾಃ ಕ್ಷಪಾಃ॥ ಸರ್ವಜ್ಞಾ ಇತಿತಾ
ಪಸಾ ಇತಿಚಿರಂ ರಾತ್ರ್ಯಗ್ನಿಹೋತ್ರಾ ಇತಿ। ಬ್ರಹ್ಮ
ಜ್ಞಾ ಇತಿವಂಚಿತಾ ಇತಿ ಪ್ರಮಾಧರ್ಮೈರ್ಜಗನ್ವಾಂ
ಚ್ಯತೇ॥೧॥

ಗಂಗಾತೀರತರಂಗಶೀತಲಶಿಲಾವಿನ್ಯಸ್ತಭಾಸ್ವದ್ಬೃ
ಸೀ। ಸಂವಿಷ್ಟಾಃ ಕಶವೋಪಿಮುಡಿತಮುಕಾದಂ
ಡಾಃ ಕರಂಡೋಜ್ವಲಾಃ॥ ಪರ್ಯಾಯಗ್ರಥಿತಾ
ಕ್ಷರಾಕ್ಷವಲಯಪ್ರತ್ಯೇಕ ಬೀಜಗ್ರಹ। ಗ್ಯಾಗ್ರಾ
ಗ್ರಾಂಗುಲಯೋಹರತಿ ಧನಿನಾ ಚಿತ್ರಾಣ್ಯಹೋ
ದಾಂಭಿಕಾಃ॥೨॥

ಈ ಶ್ಲೋಕಗಳನ್ನು ಓದುವುದರಿಂದ ವಾಚಕರಿಗೆ ನಿಜಾಂಶವು ಗೊತ್ತಾಗುವುದು. ಇನ್ನು ಇಲ್ಲಿ ಸ್ತ್ರೀಪುರುಷರು ಏಕತ್ರ ಗಂಗಾನದಿಯಲ್ಲಿ ಸ್ನಾನಮಾಡುವದನ್ನು ನೋಡಿದರೆ ಯಾವ ಕಾಶಿಯು ಭೂಮಂಡಲದಲ್ಲಿ ಅದರಿಂದ ಪರಮಪವಿತ್ರವೆಂದು ಹೇಳಿಸಿಕೊಳ್ಳುತ್ತಿತ್ತೋ ಅಂತಹ ಸ್ಥಳವೇ ಸದ್ಯಕ್ಕೆ « ಕಾಶಿ ಪಾಪದ ರಾಶಿ » ಎಂಬ ನಾಮಕ್ಕೆ ಯೋಗ್ಯವಾಗಿರುವುದು. ಇಲ್ಲಿಯ ಅಭ್ಯಾಸಕ್ರಮವೂ ಹಾಗೂ ಇತರ ವ್ಯವಸ್ಥೆಯೂ ನೆಟ್ಟಗಿಲ್ಲದಿರುವುದರಿಂದ ವಿದ್ಯಾರ್ಥಿಗಳು ಇಲ್ಲಿಗೆ ಅಭ್ಯಾಸಕ್ಕಾಗಿ ಬರುವುದು ನೆಟ್ಟಗೆ ಕಾಣುವುದಿಲ್ಲ. ಇಲ್ಲಿಯ ಜಗಮಾನ್ಯ ನಗರದಲ್ಲಿ ವಿದ್ಯಾರ್ಥಿಗಳೂ ಹಾಗು ಪ್ರವಾಸಿಗಳೂ ವಿಶೇಷವಾಗಿ ಬರುವುದರಿಂದ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಪ್ರತಿಕೂಲವಾಗುವುದಾಗಿಯೂ ಪ್ರವಾಸಿಗಳಿಗೂ ಸೌಖ್ಯವಿಲ್ಲದಿರುವುದಾಗಿಯೂ ಕಂಡುಬರುವುದು. ಅದುಕಾರಣ ವಿದ್ಯಾರ್ಥಿಗಳ ಮತ್ತು ಯಾತ್ರಿಕರ ವಾಸಸ್ಥಳಗಳನ್ನು ಬೇರ್ಪಡಿಸಿದಲ್ಲಿ ಉತ್ತಮವಾಗಬಹುದು.

ಮೈಸೂರು ಮಹಾರಾಜರು ದಿಲ್ಲಿ ದರ್ಬಾರಕ್ಕೆ ಬಂದ ಸಮಯದಲ್ಲಿ ಕಾಶಿಗೆ ಬಂದು ವಿಶ್ವನಾಥನ ದರ್ಶನಕ್ಕೆ ಸಾವಿರಾರು ರೂಪಾಯಿ ದಾನ ಮಾಡಿದರಂತಲೂ ವಿಶ್ವನಾಥ ಅನ್ನಪೂರ್ಣಾ ಮೊದಲಾದ ದೇವತೆಗಳಿಗೆ ಸಾವಿರಾರು ರೂಪಾಯಿ ಸಾಮಾನುಗಳನ್ನು ಕೊಟ್ಟರೆಂತಲೂ, ಇಲ್ಲಿಯವರು ಹೇಳುವರು. ಶ್ರೀ ವಿಶ್ವೇಶ್ವರ ಮತ್ತು ಅನ್ನಪೂರ್ಣಾ ದೇವರುಗಳಿಗೆ ಸೇವೆಗಾಗಿ ಇತ್ತ ದ್ರವ್ಯದಿಂದ ಅರ್ಚಕರು ಲಕ್ಷಾಂತರ ದ್ರವ್ಯವೆಲ್ಲವು ಯಾವುದೊಂದು ಧರ್ಮಶಾಸ್ತ್ರಕ್ಕೆ ಉಪಯುಕ್ತವಾಗದೆ ಅರ್ಚಕನ ಸ್ವೇಚ್ಛಾವಿಹಾರಕ್ಕೆ ವಿನಿಯೋಗವಾಗುವುದರಿಂದ ವಿದ್ಯಾಭಿಮಾನಿಗಳಾದ ಮಹಾರಾಜರವರು ಮತ್ತಾವ ಧರ್ಮಸಂಸ್ಥೆಗಾದರೂ ದ್ರವ್ಯಸಹಾಯಮಾಡಿದ್ದಲ್ಲಿ ಸಾರ್ಥಕವಾಗುತ್ತಿದ್ದಿತು. ಇಲ್ಲಿಂದ ನಾಗೇ ಹರಿದ್ವಾರಕ್ಕೆ ಹೋಗಿ ಅಲ್ಲಿಂದ ೪ ಮೈಲು ದೂರದಲ್ಲಿ ನಿರ್ಜನಪ್ರದೇಶವಾಗಿರುವ ಹಿಮಾಲಯ ಸಮೀಪದಲ್ಲಿದ್ದ ಗುರುಕುಲವೆಂಬ ಸ್ಥಳಕ್ಕೆ ಹೋಗಿ ಕೆಲವು ದಿನ ವಾಸಮಾಡಿದೆನು. ಈ ಗುರುಕುಲದ ವಿಷಯವು ಸರ್ವರಿಗೂ ಗೊತ್ತೇ ಅದೆ ಇದನ್ನು ಸ್ಥಾಪನೆಮಾಡುವುದಕ್ಕಾಗಿ ಮೊದಲು ದೊಡ್ಡ ಭೂಸ್ವಾಮಿಯಾಗಿದ್ದ ಉದಾರಮನಸ್ಸಿನ ಮುನಶೀರಾಮನೆಂಬ ಮಹಾತ್ಮನು ತನ್ನ ಸರ್ವಸ್ವವನ್ನು ದಕ್ಷಿಣಾರ್ಥವಾಗಿ ಪಂಜಾಬಿನ ಆರ್ಯಪ್ರತಿನಿಧಿಸಭೆಗೆ ಕೊಟ್ಟು ಗುರುಕುಲವನ್ನು ಸ್ಥಾಪಿಸಲಿಕ್ಕೆ ಆರಂಭಮಾಡಿದನು. ತನ್ನ ಎರಡು ಮಕ್ಕಳನ್ನು ಈ ಗುರುಕುಲದಲ್ಲಿ ಇಟ್ಟಿರುವನು. ಈಗ ಇದು ಸದ್ಯಕ್ಕೆ ಲಕ್ಷಾಂತರ ರೂಪಾಯಿ ಫಂಡುಳ್ಳದಾಗಿ ಶಾಶ್ವತವಾಗುವಂತಾಗಿದೆ. ಈಗ ಇಲ್ಲಿ ೩೦೦ ಬ್ರಹ್ಮಚಾರಿಗಳಿದ್ದು ಶ್ರೇಣಿ (ಗ್ರೇಡ್) ಗನುಸಾರವಾಗಿ ಅಧ್ಯಾಪಕರು ಪ್ರತ್ಯೇಕವಾಗಿದ್ದು ಇವರ ಸರ್ವವ್ಯವಸ್ಥೆಯೂ ಯೋಚನೆಯಾಗುವುದು. ಪ್ರಾತಃಕಾಲ ೪ ಘಂಟೆಗೆ ಒಂದು ಘಂಟೆಯನ್ನು ಬಾರಿಸುವರು. ಘಂಟೆ ಬಾರಿಸುವ ಕ್ಷಣಕ್ಕೆ ಸರ್ವಬ್ರಹ್ಮಚಾರಿಗಳು ಹಾಗು ಅಧ್ಯಾಪಕರೂ ಎದ್ದು ವೇದಮಂತ್ರವನ್ನು ಹೇಳಲಾರಂಭಿಸುವರು ಅನಂತರ ಶೌಚಾದಿಕರ್ಮವು ತೀರಿದಬಳಿಕ ವ್ಯಾಯಾಮವನ್ನು ಮಾಡುವರು ವ್ಯಾಯಾಮವಾದನಂತರ ಸ್ನಾನಕ್ಕೋಸ್ಕರ ಗಂಗಾನದಿಗೆ ಹೋಗುವರು. ಥಂಡಿಕಾಲದಲ್ಲಿ ಇಲ್ಲಿ ವಿಶೇಷ ಥಂಡಿಯು ಬೀಳುವುದರಿಂದ ಗುರುಕುಲ ಸಮೀಪದಲ್ಲಿದ್ದ ಸ್ನಾನಾಗಾರದಲ್ಲಿಯೇ ಸ್ನಾನಮಾಡುವರು. ಈ ವಿದ್ಯಾರ್ಥಿಗಳು ಸ್ನಾನಕ್ಕೆ ಬರುವುದರೊಳಗಾಗಿ ಸಮೀಪದಲ್ಲಿದ್ದ ಭಾವಿಯ ನೀರನ್ನು ಗಾಣದ ತಿರುವ ದೇಶೀಯಂತ್ರಕ್ಕೆ ಎತ್ತುಗಳನ್ನು ಹೂಡಿ ಸೇದು ಗೋದಲೆಯಂತಿದ್ದ ನೀರಿನ ಹೌದನ್ನು ತುಂಬಿಸಿಬಿಡುವರು. ಸರ್ವಬ್ರಹ್ಮಚಾರಿಗಳು ಹೌದಿನ ಎರಡು ಭಾಗದಲ್ಲಿ ನಿಂತು ಏಕಕಾಲದಲ್ಲಿಯೇ ಸ್ನಾನಮಾಡುವರು. ಇಷ್ಟಾಗುವದರೊಳಗೆ ೫॥ ಘಂಟೆ ಆಗುವುದು. ತದನಂತರ ಶುದ್ಧವಾಯುಸಂಚಾರಾರ್ಥವಾಗಿ ಹವನಾದಿಕರ್ಮವನ್ನು ಮಾಡುವರು. ಹವನಾನಂತರ ಸಂಧ್ಯಾಪ್ರಾರ್ಥನಾ ಅಗ್ನಿಹೋತ್ರಾದಿ ನಿತ್ಯಕರ್ಮಗಳನ್ನು ಮಾಡಿ ಹಾಲನ್ನು ಕುಡಿದು ಅಥವಾ ಯಾವದಾದರೊಂದು ಸಾತ್ವಿಕ ಫಲವನ್ನು ತಿಂದು ನಿಯತವಾದ ೬ ಘಂಟೆಗೆ ಗ್ರೀಷ್ಮಋತುವಿನಲ್ಲಿ ೬॥ ಘಂಟೆಗೆ ಅಭ್ಯಾಸಕ್ಕೋಸ್ಕರ ವಿದ್ಯಾಲಯಕ್ಕೆ ಬರುವರು; ಹತ್ತುವರೆ ಘಂಟೆಯವರೆಗೂ ನಿಯತಾಭ್ಯಾಸವನ್ನು ಮಾಡಿ ಭೋಜನಾಲಯಕ್ಕೆ ಬರುವರು; ಆಯಾಯ ಕಾಲಗಳಲ್ಲಿ ಯಥೋಚಿತ ಘಂಟೆಗಳು ಬಾರಿಸಲ್ಪಡುವವು. ಇಲ್ಲಿಯ ಬ್ರಹ್ಮಚಾರಿಗಳ ಊಟವು ಉಪ್ಪು ಕಾರ ರಹಿತವಾಗಿದ್ದು ಸಾತ್ವಿಕಾಹಾರವೇ ವಿಶೇಷ ಕೊಡಲ್ಪಡುತ್ತಿರುವದು. ಬ್ರಹ್ಮಚಾರಿಗಳ ದೇಹವು ತೇಜಸ್ವಿಗಳಾಗಿಯೂ ಇರುವುದು. ಬ್ರಹ್ಮಚಾರಿಗಳು ಬಹಳ ಪುಷ್ಟರಿರುವರು, ಭೋಜನಾನಂತರ ಅರ್ಧಘಂಟೆಯಲ್ಲಿ ವಿದ್ಯಾರ್ಥಿಗಳು ವಿಶ್ರಾಂತಿಯನ್ನು ತೆಗೆದುಕೊಳ್ಳುವರು; ತದನಂತರ ತಮ್ಮ ವಸತಿಗೃಹದಲ್ಲಿಯೇ ಕುಳಿತು ಪುಸ್ತಕಾಲಯದಿಂದ ಪುಸ್ತಕಗಳನ್ನು ತಂದು ಅಭ್ಯಾಸ ಮಾಡುವರು. ಚಿಕ್ಕಬ್ರಹ್ಮಚಾರಿಗಳು ಆ ವಸತಿಗೃಹದಲ್ಲಿಯೇ ಸ್ವಲ್ಪ ಆಟವನ್ನಾಡುವರು. ಚಿಕ್ಕವರಲ್ಲಿಯೇ ಕೆಲವರು ತಮ್ಮ ಪಾಠವನ್ನು ಓದುವವರಾಗಿಯೂ, ಕೆಲವರು ಬರೆಯುವವರಾಗಿಯೂ ೨ ಘಂಟೆಯ ತನಕ ವಸತಿಗೃಹದಲ್ಲಿ ಕಾಲವನ್ನು ಕಳೆದು ಶಾಲಾಪ್ರಾರಂಭಸೂಚಕ ೨ ಘಂಟೆಯ ಘಂಟೆಯು ಬಾರಿಸಿದಾಕ್ಷಣಕ್ಕೆ ಚಿಕ್ಕ ಬ್ರಹ್ಮಚಾರಿಗಳು ತಮ್ಮ ತಮ್ಮ ತರಗತಿಗಳಲ್ಲಿ ಸಿದ್ಧರಾಗುವರು ೩॥ ಘಂಟೆಗೆ ತರುಣಬ್ರಹ್ಮಚಾರಿಗಳಿಗಾಗಿ ಘಂಟೆಬಾರಿಸಲ್ಪಟ್ಟು ಅವರ ತರಗತಿಗಳು ಆರಂಭವಾಗುವವು ಎಲ್ಲಾ ತರಗತಿಗಳು ೫ ಘಂಟೆಯ ಪರ್ಯಂತ ಜರಗಿ ೫ ಘಂಟೆಯಾದ ಕ್ಷಣಕ್ಕೆ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟು ಆಡುವುದಕ್ಕಾಗಿ ಗುರುಕುಲದ ಸುತ್ತಲೂ ಇರುವ ಮನೋಹರವಾದ ಬೈಲಿನಲ್ಲಿ ವಿಹರಿಸುವರು. ಋತುಕಾಲಕ್ಕನುಸಾರವಾಗಿ ಭೋಜನಾಭ್ಯಾಸ ವಿಷಯಗಳನ್ನು ಸ್ವಲ್ಪ ಬದಲುಮಾಡುವರು. ೫ ಘಂಟೆಯ ವಿಶ್ರಾಂತ್ಯನಂತರ ಬೇಸಿಗೆಕಾಲದಲ್ಲಿ ಸಾಯಂಕಾಲ ಗಂಗಾನದಿಯಲ್ಲಿ ಸ್ನಾನಮಾಡುವರು. ನದಿಯಲ್ಲಿ ನಾನಾ ವಿಧವಾಗಿ ಈಸುವುದನ್ನು ಕಲಿಸುವರು. ಥಂಡಿಕಾಲದಲ್ಲಿ ಹಾಗೆಯೇ ಸಾಯಂಕಾಲದ ನಿತ್ಯಕರ್ಮಗಳನ್ನು ಮಾಡುವರು. ಪಶ್ಚಾತ್ ರಾತ್ರಿಯ ಊಟದ ಘಂಟೆ ಬಾರಿಸುವರು. ಬ್ರಹ್ಮಚಾರಿಗಳು ತತ್ಕ್ಷಣವೇ ತಮ್ಮ ತಮ್ಮ ತಂಬಿಗೆವಾಟಿಕಾದಿಗಳನ್ನು ತೆಗೆದುಕೊಂಡು ಭೋಜನಾಲಯಕ್ಕೆ ಬರುವರು; ಭೋಜನಾನಂತರ ಅರ್ಧಘಂಟೆ ಗಂಗಾತೀರದಲ್ಲಿ ವಾಯುವಿಹಾರಾರ್ಥ ಹೋಗುವರು, ಅರ್ಧಘಂಟೆಯನಂತರ ಬಂದು ತಮ್ಮ ತಮ್ಮ ಪಾಠಗಳನ್ನು ೯ ರ ವರಿಗೆ ಓದುವರು. ತದನಂತರ ಶಯನಘಂಟೆಯು ಬಾರಿಸಲ್ಪಡುವುದು. ಸಶೇಷ.

ಗ್ರಂಥವಿಮರ್ಶೆ.

೧೯೦೭ ರಲ್ಲಿ ಲಿಂಗಾಯತರಿಗೆ ಸಿಲುಕಿದ ತಹ ಕರಾವೆ.

ಲಿಂಗಾಯತರ ಮನೆಗಳಲ್ಲಾಗುವ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಬ್ರಾಹ್ಮಣಜೋಯಿಸರಿಗೆ ಪೌರೋಹಿತ್ಯವು ಸಲ್ಲತಕ್ಕದ್ದಲ್ಲವೆಂಬ ಬಗೆಗೆ ಶ್ರೀಮನ್ಮಹಾರಾಜಾ ಶಾಹು ಛತ್ರಪತಿ ಸರ್ಕಾರದಿಂದಾದ ತೀರ್ಮಾನವನ್ನು ಶ್ರೀ ರೇವಯ್ಯ ವಿರುಪಾಕ್ಷಯ್ಯ ಸ್ಥಾವರದಗಲಗಲಿ ಇವರು ಸಣ್ಣ ಪುಸ್ತಕರೂಪದಲ್ಲಿ ಪ್ರಕಟಿಸಿ ೧ ಆಣೆ ಬೆಲೆಯನ್ನಿಟ್ಟಿರುವರು.

ನ್ಯಾಯದರ್ಪಣ

ಪ್ರತಿಯೊಬ್ಬ ಮನುಷ್ಯನೂ ತನ್ನ ಲೌಕಿಕ ವ್ಯವಹಾರ ಸಂಬಂಧವಾಗಿ ಸಿವಿಲ್ ಪ್ರೊಸಿಜರು, ಕ್ರಿಮಿನಲ್ ಪ್ರೊಸಿಜರು, ಹಿಂದೂಲಾ, ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್, ರಿಜಿಸ್ಟ್ರೇಶನ್, ಲಿಮಿಟೇಶನ್, ದ್ರೋಹ ಮೊದಲಾದ ವಿಧಿಗಳನ್ನು ಲಾಯರ ಸಹಾಯವಿಲ್ಲದೆ ಸ್ವತಃ ಓದಿ ತಕ್ಕಷ್ಟುಗೆ ತಿಳಿದು ಜಾಗರೂಕನಾಗಿ ನಡೆಯಲನುಕೂಲಿಸುವಂತೆ ರಾಜಧಾನಿಯ ಪ್ಲೀಡರ್ ಮ॥ ರಾ॥ ಎಂ. ಎನ್. ನಂಜಪ್ಪನವರು ಮೇಲೆ ಕಂಡ ವಿಷಯಗಳನ್ನೆಲ್ಲಾ ಸಂಗ್ರಹಿಸಿ ಸುಲಭಶೈಲಿಯಿಂದ ರಚಿಸಿ ನುಣುಪಾದ ಕಾಗದದಮೇಲೆ ಅಂದವಾಗಿ ಮುದ್ರಣ ಮಾಡಿಸಿರುವರು. ಇದರ ಬೆಲೆ ೧ ರೂಪಾಯಿ ಇಷ್ಟವುಳ್ಳವರು ಗ್ರಂಥಕರ್ತರಿಗೆ ಬರೆದು ತರಿಸಿಕೊಳ್ಳಬಹುದು.

ಬಾಲರಾಮಾಯಣ

ಧಾರವಾಡದ ಹೈಸ್ಕೂಲಿನ ಅಸಿಸ್ಟೆಂಟ್ ಮಾಸ್ತರಾದ ಮ॥ ಗುಂಡೋ ಶ್ರೀನಿವಾಸ ಸರದಗುಂದ ಇವರು ಬಾಲಕಬಾಲಿಕೆಯರುಗಳಿಗೆ ಸುಬೋಧವಾಗಿರುವಂತೆ ರಾಮಾಯಣದ ಕಥೆಗಳನ್ನು ಬಿಡುಗನ್ನಡದಲ್ಲಿ ಬರೆದು 'ಬಾಲರಾಮಾಯಣ' ಎಂಬ ಹೆಸರಿನಿಂದ ರಚಿಸಿ ಮಂಗಳೂರಿನ ಧರ್ಮಪ್ರಕಾಶ ಮುದ್ರಾಲಯದಲ್ಲಿ ಸ್ವಚ್ಛವಾದ ಕಾಗದದಮೇಲೆ ಬಹು ಅಂದವಾಗಿ ಮುದ್ರಣಮಾಡಿಸಿರುವರು. ವಿದ್ಯಾಕಾಂಕ್ಷಿಗಳಾದ ಬಾಲಕ ಬಾಲಿಕೆಯರುಗಳು ಈ ಉಪಯುಕ್ತ ಗ್ರಂಥವನ್ನು ಸಂಗ್ರಹಿಸಿ ಮತ್ತೂ ವಿದ್ಯಾಸಂಸ್ಥೆಯವರು ಪಾಠಶಾಲೆಗಳಲ್ಲಿ ನೀತಿಬೋಧೆಗಿಟ್ಟು ರಚಯಿತೃಗಳ ಶ್ರಮವು ಸಾರ್ಥಕವಾಗುವಂತೆಯೂ ಇಂತಹ ನೀತಿಬೋಧಕ ಪುಸ್ತಕಗಳನ್ನು ರಚಿಸಲು ಪ್ರೋತ್ಸಾಹವುಂಟಾಗುವಂತೆಯೂ ಮಾಡುವವರಾಗಲೆಂದು ಕೋರುತ್ತೇವೆ. ಇದರ ಬೆಲೆ ೮ ಆಣೆ.

ಸರ್ಕಾರಿಯ ಅಪ್ಪಣೆ.

ಜಂಟಿಪಟ್ಟಿ

ಪೂರ್ವದಲ್ಲಿ ಆಚರಣೆಯಲ್ಲಿದ್ದ ಜಂಟಿಪಟ್ಟಿಯ ಪದ್ಧತಿಯನ್ನು ಈಗಲೂ ಅನುಷ್ಠಾನಕ್ಕೆ ತರಬೇಕೆಂದು ೧೯೧೦ರಲ್ಲಿ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಾರ್ಥಿಸಲ್ಪಟ್ಟಿದ್ದುದರಮೇಲೆ ಸರ್ಕಾರದ ಅಪ್ಪಣೆಯಾಗಿರುವುದೇನೆಂದರೆ:-ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಜಂಟಿಪಟ್ಟಿಯನ್ನು ಮಾಡಲು ಅವಕಾಶವಿರುವುದಿಲ್ಲವು, ಮತ್ತೂ ಈಗಿರುವ ವಿಧಿಯನ್ನು ಬದಲಾಯಿಸಿದ ಹೊರತು ಹಾಗೆ ಮಾಡಲಾಗುವುದಿಲ್ಲವು. ೧೮೮೦ ನೆಯ ಇಸವಿಯ ರೆವಿನ್ಯೂ ರೂಲ್ಸಿನ ೩೪ ನೆಯ ವಿಧಿಯ ಪ್ರಕಾರ ಜಂಟಿಪಟ್ಟೆಯು ಮಾಡಿಕೊಡಲ್ಪಡುತ್ತಿದ್ದ ಪದ್ಧತಿಯು ಲ್ಯಾಂಡ್ ರೆವಿನ್ಯೂಕೋಡಿಗೆ ವಿರುದ್ಧವಾಗಿದ್ದುದಲ್ಲದೆ, ಕಂದಾಯವನ್ನು ಬರಮಾಡಿಕೊಳ್ಳುವಲ್ಲಿ ಸರ್ಕಾರದವರಿಗೆ ಬಹು ಅನಾನುಕೂಲವೂ, ತೊಂದರೆಯೂ ಆಗಿದ್ದುದರಿಂದ ತಪ್ಪಿಸಲ್ಪಟ್ಟಿತು ಇದೂ ಅಲ್ಲದೆ ಜನರು ವಿಧಿಯಪ್ರಕಾರ ತಮ್ಮ ಹಕ್ಕನ್ನು ಕಾಪಾಡಿಕೊಳ್ಳುವ ವಿಚಾರದಲ್ಲೂ ಆಲಸ್ಯಮಾಡಲವಕಾಶವನ್ನು ಉಂಟುಮಾಡತಕ್ಕದಾಗಿದ್ದಿತು ಒಬ್ಬನ ಹೆಸರಿನಲ್ಲಿ ಪಟ್ಟೆಯು ಇದ್ದಮಾತ್ರಕ್ಕೆ ಅವನ ಹಕ್ಕು ಬಲವಾಗುವುದಿಲ್ಲವು ಮತ್ತೂ ಅದರಿಂದ ಆ ಭೂಮಿಯಲ್ಲಿ ಇತರರಿಗಿರತಕ್ಕ ಅಧಿಕಾರವೂ ಕೆಡಿಸಿಹೋಗುವುದಿಲ್ಲವು ಒಂದು ಭೂಮಿಗೆ ಒಬ್ಬರಿಗಿನ್ನ ಹೆಚ್ಚಾಗಿ ಭಾಗದಾರರಿದ್ದಲ್ಲಿ, ಆ ಭೂಮಿಯು ಕಂದಾಯದ ಬಾಕಿಗಾಗಿ ಭಾಗದಾರರ ತಿಳುವಳಿಕೆಗೆ ಬಾರದೆ ವಿಕ್ರಯಿಸಲ್ಪಡುವ ಸಂದರ್ಭದಲ್ಲಿ ಆ ಭಾಗದಾರರ ಹಕ್ಕು ಹೋಗದಿರಲು ಲ್ಯಾಂಡ್ ರೆವಿನ್ಯೂಕೋಡಿನಲ್ಲಿ ಅವಕಾಶವಿರುತ್ತದೆ. ಮತ್ತೂ ಜಂಟಿಪಟ್ಟೆಯನ್ನು ಮಾಡಿಕೊಡುವುದರಿಂದ ಆ ಭಾಗದಾರನ ಪರಿಸ್ಥಿತಿಯು ಉತ್ತಮವಾಗುವಂತಿಲ್ಲ ಲ್ಯಾಂಡ್ ರೆವಿನ್ಯೂ ರೂಲುಗಳಲ್ಲಿ ೩೪ ನೆಯ ವಿಧಿಯಪ್ರಕಾರ ಭಾಗದಾರರು ತಮ್ಮ ಭಾಗಗಳನ್ನು ರೆವಿನ್ಯೂ ರಿಜಿಸ್ಟರುಗಳಲ್ಲಿ ಬರೆಯಿಸಲು ಮತ್ತೂ ೪೦ ನೆಯ ವಿಧಿಯ ಪ್ರಕಾರ ಸ್ಪೆಷಲ್ ನೋಟೀಸ್ ರಿಜಿಸ್ಟರಿನಲ್ಲಿ ತಮ್ಮ ಹೆಸರನ್ನು ಯಾವುದೊಂದು ಫೀಯನ್ನೂ ಕೊಡದೆ ಬರೆಸಲೂ ಅವಕಾಶವಿದ್ದು ಜಂಟಿಪಟ್ಟೆಯಿಂದಾಗುವ ಅನುಕೂಲ್ಯಗಳೆಲ್ಲವೂ ಆಗುವುವು. ಪ್ರತಿಯೊಬ್ಬ ಭಾಗದಾರನಿಂದಲೂ ಇಂತಿಷ್ಟು ಕಂದಾಯವು ಬರಬೇಕೆಂದು ವಿಂಗಡಿಸಲ್ಪಟ್ಟು ಸರ್ಕಾರಕ್ಕೆ ಬರಬೇಕಾದ ಕಂದಾಯವನ್ನು ಕೆಲಭಾಗದಾರರು ಕೊಡಲು ತಪ್ಪಿದಲ್ಲಿ ಉಳಿದಭಾಗದಾರರು ತಂತಮ್ಮ ಭಾಗಗಳನ್ನು ಕೊಡಬಹುದೆಂದು ವಿಧಾಯಕವಾಗಲ್ಪಟ್ಟ ಕಾರಣ ಜಂಟಿಪಟ್ಟೆಯಿಂದೇನೂ ಪ್ರಯೋಜನವಾಗುವುದಿಲ್ಲವು. ಅನೇಕ ಕಾರಣಗಳಿಂದ ಜಂಟಿಪಟ್ಟೆಯ ಕ್ರಮವು ಉಪಯುಕ್ತವಾಗಿ ಕಂಡುಬರುವದಿಲ್ಲವಾದ ಪ್ರಯುಕ್ತ—ಈಗಿರುವ ಪದ್ಧತಿಯನ್ನು ಬದಲಾಯಿಸಲು ಸರ್ಕಾರದವರಿಗಿಷ್ಟವಿಲ್ಲವು.

ಮೈಸೂರ ಗೆಜೆಟ ಸಂಗ್ರಹವು.

—:o:—

ಫಾರೆಸ್ಟುಗಳ ಅ॥ ಕನ್ಸರ್ವೇಟರು ಮತ್ತೂ ಗೇಂಪ್ರಿಜರ್ವ್ ಛಾರ್ಜಿನಲ್ಲಿರುವ ಆಫೀಸರು ಆದ ಮ॥ ಕೆ. ಮುತ್ತಯ್ಯನವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಬೆಂಗಳೂರ ಡಿ॥ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಕೆಲಸಗಳೊಡನೆ ಗೇಂಪ್ರಿಜರ್ವ್ ಆಫೀಸಿನ ಕೆಲಸಗಳನ್ನು ನೋಡಿಕೊಳ್ಳತಕ್ಕದು.

ಎಕ್ಸೈಜ್ ಕಮಿಷನರ ಅಸಿಸ್ಟೆಂಟರಾದ ಮ॥ ಬಿ. ಶಾಮಣ್ಣ, ಬಿ. ಎ., ಎಲ್. ಸಿ. ಇ., ಯವರಿಗೆ ೧೯೧೨ ನೆಯ ಏಪ್ರಿಲ್ ತಾ॥ ೧೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ಮ॥ ಟಿ. ಲಕ್ಷ್ಮಣರಾವ್, ಬಿ. ಎ., ಬಿ. ಎಲ್., ರವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಅ॥ ಕಂಟ್ರೋಲರ್ ಮ॥ ಎಸ್. ಶಾಮಣ್ಣ ಬಿ. ಎ., ಯವರು ಸರ್ಕಾರಿಯ ಜನರಲ್ ಮತ್ತೂ ರೆವಿನ್ಯೂ ಶಾಖೆಗಳಲ್ಲಿ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ಬದಲುನೋಡತಕ್ಕದು.

ಮೈಸೂರ ತಾಲ್ಲೋಕು ಅಮಲ್ದಾರ್ ಮ॥ ಮಹಮದ್ ಪೀರ್ರಿಗೆ ೧೯೧೨ನೆಯ ಏಪ್ರಿಲ್ ತಾ॥ ೧೫ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ ಮೈಸೂರ ಡಿಸ್ಟ್ರಿಕ್ಟ್ ಶಿರಸ್ತೇದಾರರಾದ ಎಸ್. ವಿ. ಕೃಷ್ಣಸ್ವಾಮಿಅಯ್ಯರ್ ರವರು ಮ॥ ಮಹಮದ್ ಪೀರ್ರವರು ರಜದಮೇಲಿರುವವರೆಗೂ ಮೈಸೂರ ತಾಲ್ಲೋಕು ಛಾರ್ಜಿನಲ್ಲಿ ಇರತಕ್ಕದು.

ತುರ್ಕಿ—ಇಟಲಿಗಳ ಯುದ್ಧವು.

ಏಪ್ರಿಲ್ ತಾ॥ ೮.—ಏಮೆನ ದಡದ ದಕ್ಷಿಣಭಾಗದವರೆಗೂ, ಉತ್ತರದಲ್ಲಿ ಲೋಹಿಯ ಎಂಬುದರ ಆಚೆಗೂ ಇತರರ ಹಡಗುಗಳು ತಿರುಗಾಡದಂತೆ ಇಟಲಿಯು ಅಡ್ಡಕಟ್ಟಿದೆ, ಆದರೆ ಮೆಕ್ಕಾದಲ್ಲಿಯ ಯಾತ್ರೆಯ ಸಂಬಂಧದಲ್ಲಿ ಆರೋಗ್ಯ ತಾಣವಾಗಿ ಮಾಡಲಟ್ಟಿರುವ ಕ್ಯಾಮರನ್ನಿಗೆ ಹೋಗತಕ್ಕ ಹಡಗುಗಳು ಮಾತ್ರ ಬೆಂಗಾವಲಿನಿಂದ ಬಿಡಲ್ಪಡುವುವು. ಇಟಲಿಯ ಸ್ಟೂಕಾತಿ ಜನೋವಾ ಎಂಬ ವರ್ತಕರ ಹಡಗು ಕಳ್ಳತನದಿಂದ ವ್ಯಾಪಾರನಡೆಸುತ್ತಿರುವ ಒಂದು ಗ್ರೀಕರ ಹಡಗನ್ನು ಹಿಡಿದು ತಪ್ರಿಕೆಗೆ ಸಾಗಿಸಿಕೊಂಡುಹೋಯಿತು.

ತಾ॥ ೯.—ತಬ್ರುಕಿನಲ್ಲಿರುವ ತುರ್ಕಿಯವರ ಸೇನಾನಾಯಕನಾದ ಅನ್ವರ್ ಪಾಷಾ ಎಂಬುವನು ತ್ರಿಪೋಲಿಯಿಂದ ಕೈರೋಗೆ ಬಂದಿದ್ದಾಗ, ತುರ್ಕಿಯವರ ಸೇನೆಯು ಈಗಲೂ ೧೦೦೦೦ ವಿರುವುದಲ್ಲದೆ ೨೦೦೦೦ ಅರಬ್ಬಿಯವರು ಸಹಾಯಕರಾಗಿರುತ್ತಾರಾದುದರಿಂದ ಇನ್ನು ೧ ವರ್ಷದವರೆಗೆ ಕಾದಾಡಬಲ್ಲರೆಂದು ಹೇಳಿದನು. ತುರ್ಕಿಯವರು ಈಚೆಗೆ ಬೆಂಗಾಜಿಯಲ್ಲಿ ಇಟಲಿಯವರ ಒಂದು ಆಕಾಶವಿಮಾನಕ್ಕೆ ಗುಂಡನ್ನು ಹೊಡೆದು ಕೆಡವಿದ್ದರು.

ಇತರ ರಾಜ್ಯಗಳೆಲ್ಲವೂ ತುರ್ಕಿ ಇಟಲಿ ರಾಜ್ಯಗಳಿಗೆ ಸಮಾಧಾನವನ್ನು ಮಾಡಲು ಪ್ರಯತ್ನಿಸುವುದಾದರೆ, ಇಟಲಿಯವರು ಯಾವ ವಿಧಾನಕ್ಕೆ ಒಡಂಬಡುತ್ತಾರೆಂದು ರೋಮಿನಲ್ಲಿರತಕ್ಕ ಇತರ ರಾಜ್ಯಗಳ ಪ್ರತಿನಿಧಿಗಳು ಇಟಲಿ ರಾಜ್ಯದ ಪ್ರತಿನಿಧಿಯನ್ನು ಕಳೆದ ಮಾರ್ಚಿ ತಾ॥ ೧೦ ರಲ್ಲಿ ಕೇಳಿರುವಲ್ಲಿ, ಆ ಪ್ರತಿನಿಧಿಯು ಇಟಲಿ ರಾಜ್ಯದವರ ಕೂಡ ಆಲೋಚಿಸಿ (೧) ತುರ್ಕಿಯ ಸುಲ್ತಾನನ ಹೆಸರನ್ನು ಮಹಮ್ಮದೀಯರು ತಮ್ಮ ನಮಾಜಿನ ಕಾಲದಲ್ಲಿ ಹೇಳಲಡ್ಡಂತರವಿಲ್ಲವು, ಮತ್ತೂ ಮತಸಂಬಂಧದಲ್ಲಿ ಮಾತ್ರ ಸುಲ್ತಾನಿನ ಅಧಿಕಾರವು ನಡೆಯಬಹುದು, ಆದರೆ ರಾಜ್ಯಾಡಳಿತದ ಮತ್ತೂ ನ್ಯಾಯಸಂಬಂಧವಾದ ಅಥವಾ ರಾಜಕೀಯ ಸಂಬಂಧವಾದ ವಿಚಾರದಲ್ಲಿ ಮಾತ್ರ ಸುಲ್ತಾನಿನ ಅಧಿಕಾರವೇನೂ ಇರಕೂಡದು (೨) ಪ್ರಜೆಗಳು ತಂತಮ್ಮ ಜಾತಿಮತ ಪದ್ಧತಿಯ ವಿಚಾರಗಳಲ್ಲಿರುವ ಸ್ವಾತಂತ್ರ್ಯವು ಪುರಸ್ಕರಿಸಲ್ಪಡುವುದು. (೨) ತ್ರಿಪೋಲಿಯು ಇಟಲಿಯವರ ಸ್ವಾಧೀನವಾಯಿತೆಂದು ಪ್ರಸಿದ್ಧಪಡಿಸಲ್ಪಟ್ಟನೇಲೂ ಇಟಲಿಗೆ ವಿರುದ್ಧವಾದ ಆಚರಣೆಯುಳ್ಳವ್ಯಕ್ತರಾಗಿರುವ ದೇಶೀಯರು ಯಾವ ಶಿಕ್ಷೆಗೂ ಗುರಿಮಾಡಲ್ಪಡುವುದಿಲ್ಲವು. (೩) ಲಿಬಿಯಾದಲ್ಲಿ ಅಟೋಮನ್ ಸರ್ಕಾರದವರು ಮಾಡಿರುವ ಸಾಲವು ಅಲ್ಲಿಯ ಸುಂಕದಿಂದ (೪) ತೃಪ್ತಿಯಿಂದ ತೀರಿಸುತ್ತೇವೆಂದು ಹೊಣೆಯಾಗಿಕೊಡಲ್ಪಡುವುದು ಲಿಬಿಯಾದಲ್ಲಿರುವ ಅಟೋಮನ್ ಸರ್ಕಾರದ ಆಸ್ತಿಯು

ಕೊಂಡುಕೊಳ್ಳಲ್ಪಡುತ್ತದೆ. (೬) ತುರ್ಕಿಯಲ್ಲಿ ಅಂಥ ಮತ್ತು ಸ್ಕೂಲುಗಳ ವಿಚಾರದಲ್ಲಿ ಇಟಲಿಯವರಿಗಿರುವ ಅಧಿಕಾರವು ಪುನಃ ಸ್ಥಾಪಿಸಲ್ಪಡತಕ್ಕದ್ದು (೭) ಆಟೋಮನ್ ಚಕ್ರಾಧಿಪತ್ಯವು ತನ್ನ ಮಾತಿಗೆ ತಪ್ಪುವುದಿಲ್ಲವೆಂಬ ಬಗೆಗೆ ಇತರ ರಾಜ್ಯದವರು ಜಾಮೀನಾಗುವಪಕ್ಷದಲ್ಲಿ ಅವರು ಹೇಳುವ ಒಡಂಬಡಿಕೆಯ ಪತ್ರಕ್ಕೆ ರುಜುವನ್ನು ಹಾಕಲು ಇಟಲಿಯ ರಾಜ್ಯವು ತಿರಸ್ಕರಿಸುವುದಿಲ್ಲವು.

ತಾ|| ೧೧.—ಸರಕು ತುಂಬಿಸುವ ಹಡಗು ಯುದ್ಧನಾವೆಗಳ ಬೆಂಗಾವಲಿನಮೂಲಕ ಇಟಲಿಯಿಂದ ಬಂದಂತಹ ಸೈನಿಕರನ್ನು ಯಾವುದೋ ಸ್ಥಳದಲ್ಲಿಳಿಸುವಹಾಗೆ ನಟಿಸಿ, ಜೂರಾ ಟ್ರಿಪೋಲಿಗಳಹತ್ತಿರ ದಂಡುಇಳಿಸಿಕೊಂಡಿತು.

ತಾ||೧೨—ಟ್ರಿಪೋಲಿಯ ಮ್ಯಾಕ್‌ಬೇಟ್ ದ್ವೀಪಕಲ್ಪವನ್ನು ಇಟಲಿಯವರು ಹೊಸದಾಗಿ ಸ್ವಾಧೀನಪಡಿಸಿಕೊಂಡಿರುವರು, ತಾ||೧೧ರಲ್ಲಿ ಬುಬೆಲ್ಕಾಕೋಟೆಯನ್ನು ಸೈನಿಕರು ನಿರಾಯಾಸದಿಂದ ಸ್ವಾಧೀನಪಡಿಸಿಕೊಂಡಿದ್ದರು. ಏಜಿಯನ್ ಸಮುದ್ರದಲ್ಲಿ ಇಟಲಿಯವರು ತಡೆಯನ್ನು ಕಟ್ಟಿರುವುದಾಗಿ ತಾ|| ೮ ರಲ್ಲಿ ಪ್ರಕಟಿಸಿದ್ದುದರ ವಿಚಾರದಲ್ಲಿ ಭರತಖಂಡದ ಮತ್ತೂ ಇತರ ಕಡೆಯ ಮಹಮ್ಮದೀಯರು ಯಾತ್ರಿಕರಿಗೆ ತೊಂದರೆಯುಂಟಾಯಿತೆಂದು ಭೀತರಾಗಿದ್ದುದರ ಮೇಲೆ ಬ್ರಿಟಿಷ್ ಸರ್ಕಾರದವರು ಇಟಲಿ ಸರ್ಕಾರದವನ್ನು ಕೇಳಿದ್ದುದಕ್ಕೆ ಯಾತ್ರಿಕರಿಗೆ ಅಡ್ಡಿಪಡಿಸಬೇಕೆಂಬಿಷ್ಟದಿಂದ ತಡೆಯು ಕಟ್ಟಲ್ಪಟ್ಟಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿರುತ್ತಾರೆ,

---

ಮೈಸೂರ್ ಸ್ಟಾರ್

೧೯೧೨ ನೆಯ ಏಪ್ರಿಲ್ ತಾ|| ೧೫ನೆಯ ಸೋಮವಾರ.

ಕಾಲಸ್ಥಿತಿ.

ಈ ಪರೀಧಾವಿ ಸಂವತ್ಸರದಲ್ಲಿ ಸೂರ್ಯನ ಪ್ರಭುತ್ವವಿಲ್ಲದಿದ್ದರೂ ಬಿಸಿಲಿನ ಝಳವನ್ನು ಮಾತ್ರ ಸಹಿಸಲಶಕ್ಯವಾಗಿದೆ. ಇಷ್ಟರಮಟ್ಟಿನ ಝಳವು ಕಳೆದ ೧೦ ವರ್ಷಗಳಿಂದಲೂ ಪ್ರಾಪ್ತವಾಗಿರಲಿಲ್ಲವೆಂದು ಜನರು ಹೇಳುತ್ತಾರೆ. ಬೆಳಗಿನ ೭ಗಂಟೆಯಲ್ಲಿ ಸೂರ್ಯನ ರಶ್ಮಿಯು ಸಾಧಾರಣಕಾಲದ ೧೦ ಗಂಟೆಯ ಸಮಯದಲ್ಲಿ ತೀಕ್ಷ್ಣವಾಗಿರುವುದಕ್ಕಿಂತಲೂ ಅತಿಶಯವಾಗಿ ತೀಕ್ಷ್ಣವಾಗಿರುವುದರಿಂದ ಹೊರಗೆಹೊರಡುವುದೇ ಕಷ್ಟತರವಾಗಿರುವುದು. ಮತ್ತೂ ಏನೊಂದು ಉದ್ಯೋಗವಿಲ್ಲದೆ ಒಂದೆಡೆಯಲ್ಲಿ ಸುಮ್ಮನೆ ಕುಳಿತಿದ್ದರೂ, ದೇಹವನ್ನು ದಂಡಿಸಿ ದುಡಿಯುವವರಿಗಿಂತಲೂ ಹೆಚ್ಚಾಗಿ ಮೈಬೆವರಿ ನೀರು ಹರಿಯುತ್ತಿರುವುದು. ಸರ್ಕಾರಿಯಧಿಕಾರಿಗಳೂ, ಪೂರ್ಣ ಶ್ರೀಮಂತರೂ ಯಾವುದಾದರೊಂದು ವಿಧವಾದ ವಾಹನದಲ್ಲಿ ಸಂಚರಿಸುವುದರಿಂದ ಅವರ ಪಾದಗಳಿಗೂ, ನೆತ್ತಿಗೂ ಬಿಸಿಲಿನ ಝಳವು ತಗಲಲವಕಾಶವಿಲ್ಲವಾದುದರಿಂದ, ಅವರುಗಳಿಗೆ ಅವರ ತಾಪವೇನೂ ತೋರುವುದಿಲ್ಲವು ಅಲ್ಲದೆ ವಾಹನಾರೂಢರಾಗಿ ಸಂಚರಿಸಲು ಶಕ್ತಿಯಿಲ್ಲದೆ ಪಾದಗಳಲ್ಲಿ ಜೋಡುಗಳನ್ನು ಮೆಟ್ಟಿ ತಲೆಗೆ ಮರೆಯಾಗಿ ಛತ್ರವನ್ನು ಹಿಡಿದು ತಿರುಗಾಡುವವರಿಗೂ ತಾಪವು ತಕ್ಕಮಟ್ಟಿಗೆ ತೋರಿಯೇ ತೋರುವುದು. ಆದರೆ ಪಾದರಕ್ಷೆಗಳನ್ನೂ, ಛತ್ರವನ್ನೂ ಕೊಂಡು ಉಪಯೋಗಿಸಲು ಚೈತನ್ಯವಿಲ್ಲದೆ ತಮ್ಮ ನಿತ್ಯದ ಜೀವನಸಂಪಾದನೆಗಾಗಿ ಕಾಲಿಗೂ, ತಲೆಗೂ ಯಾವ ಮರೆಯಿಲ್ಲದೆ ಉರಿಯುವ ಬಿಸಿಲಿನಲ್ಲೇ ನಡೆದುಕೊಂಡು ಬಂದು ಕೆಂಡದಂತೆ ಕಾದಿರುವ ನೆಲದಮೇಲೆ ನಿಂತು ಬೋಳುತಲೆಯ ಬುರುಡೆಯನ್ನು ಕಾಯಿಸಿಕೊಂಡು ಕೆಲಸವನ್ನು ಮಾಡುವ ಲಕ್ಷೋಪಲಕ್ಷ ಬಡಜನರ ಕಷ್ಟವು ವರ್ಣನಾತೀತವಾಗಿರುವುದು. ಬಡಕೂಲಿಯಜನರು ಹೀಗೆ ಕಾದ ನೆಲವನ್ನು ತುಳಿಯುವುದರಿಂದ ಭೂಮಿಯ ಉಷ್ಣಾಂಶವೆಲ್ಲವೂ ಅವರ ಶರೀರಕ್ಕೆ ವ್ಯಾಪಿಸಿ ಆಮಶಂಕೆ ಮೊದಲಾದ ಉಷ್ಣಸಂಬಂಧ ವ್ಯಾಧಿಗ್ರಸ್ತರಾಗಿ ನರಳುತ್ತಿರುವರು. ಇದೂ ಅಲ್ಲದೆ ಬೀದಿಯಲ್ಲಿ ಸಂಚರಿಸುವಾಗ್ಗೆ ಜನರ ಮತ್ತೂ ಪಶುಗಳ ಪಾದತಾಡನದಿಂದಲೂ, ಗಾಳಿಯ ರಭಸದಿಂದಲೂ ಏಳುವ ಧೂಳನ್ನು ಕುಡಿದು ಅದರಿಂದೊಂದು ವಿಧವಾದ ರೋಗಗ್ರಸ್ತರಾಗುತ್ತಲೂ ಇರುವರು. ಕಾದ ನೆಲದಮೇಲೆ ನಿಂತು ಕೆಲಸಮಾಡುವ ಜನರಲ್ಲದೆ ಇತರರೂ ಉಷ್ಣಾಧಿಕ್ಯದಿಂದ ಆಮಶಂಕೆ ಮೊದಲಾದ ರೋಗಗಳಿಂದ ನರಳುತ್ತಿರುವರು. ಈ ಕಷ್ಟವು ದೇವರ ಚಿತ್ತಕ್ಕೆ ಬಂದು ಭೂಮಿಯ ಉಷ್ಣಾಂಶವೆಲ್ಲವೂ ತಗ್ಗಿ ತಂಪುಂಟಾಗುವಂತೆ ಕೂಡಲೆ ಮಳೆಯನ್ನು ದೇವರು ದಯಪಾಲಿಸುವುದರಿಂದ ಪರಿಹೃತವಾಗಬೇಕಲ್ಲದೆ ಮನುಷ್ಯಮಾತ್ರದವರಿಂದ ಸಾಧ್ಯವಲ್ಲವು. ಮಳೆಯಿಲ್ಲದೆ ಸರ್ವತ್ರ ಹಾಹಾಕಾರವೂ ಹುಟ್ಟಿದೆ. ದನಕರುಗಳು ನೀರೂ, ಮೇವೂ ಇಲ್ಲದೆ ಕೃಶವಾಗಿ ಚಪ್ಪೆರೋಗ ಮೊದಲಾದ ದುಷ್ಟರೋಗಗ್ರಸ್ತವಾಗಿ ಸಾಯಲುಪಕ್ರಮಿಸಿರುವವು. ಅನೇಕಕಡೆ ಕೆರೆಕುಂಟೆಗಳು ಒಣಗಿಹೋಗಿಯೂ ಮತ್ತೂ ಬಾವಿಗಳಲ್ಲಿ ನೀರು ಕಡಿಮೆಯಾಗಿಯೂ ಪಾನಕ್ಕೆ ನೀರಿಲ್ಲದೆ ಕಲ್ಮಲವಾದ ನೀರನ್ನು ಪಾನಮಾಡಿ ಅನೇಕರು ವಾಂತಿಭೇದಿರೋಗಕ್ಕೆ ಗುರಿಯಾಗುತ್ತಿರುವರು. ಈ ತೊಂದರೆಗಳಲ್ಲದೆ ಆಹಾರಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿರುವುದರಿಂದ ಬಡಜನರು ಕೊಂಡು ಜೀವಿಸುವುದು ಕಷ್ಟತರವಾಗುತ್ತಿರುವುದು. ಕೂಡಲೆ ಸಾಕಷ್ಟು ಮಳೆಯಾಗಿ ಕೆರೆಕುಂಟೆಗಳಿಗೆಲ್ಲಾ ನೀರು ಬಂದು ದನಕರುಗಳ ಹುಲ್ಲಿಗೂ, ನೀರಿಗೂ ಅನುಕೂಲವಾಗದೆ ಇದ್ದರೆ ಮುಂದಣ ಬಿತ್ತನೆಯ ಕಾರ್ಯಾರಂಭಕ್ಕೆ ಕ್ಷಿತಿಯಾಗಿ ಆಹಾರ ಪದಾರ್ಥಗಳ ಬೆಲೆಯು ಇನ್ನೂ ಏರಿ ಸಾವಿರಾರು ದನಗಳು ನಾಶವಾಗುವುವಲ್ಲದೆ, ಅನೇಕ ಜನರು ಕ್ಷಾಮಪೀಡಿತರಾಗುವುದರಲ್ಲೂ, ಕ್ಷುದ್ರರೋಗಗ್ರಸ್ತರಾಗಿ ಮೃತ್ಯುವಿನ ಪಾಲಾಗುವುದರಲ್ಲೂ, ಅನ್ಯಂತರವಿಲ್ಲವು. ನಮ್ಮ ಜ್ಯೋತಿಷ್ಕರೋ ಈ ಚೈತ್ರಮಾಸದಲ್ಲಿ ಮಳೆಯಾಗುವುದೆಂದು ತಮ್ಮ ಪಂಚಾಂಗಗಳಲ್ಲಿ ಹೇಳಿರುವರು. ಅದರಂತೆ ಎಲ್ಲಿಯೋ ಕೆಲಕಡೆ ತಕ್ಕಮಟ್ಟಿಗೂ, ಮತ್ತೆ ಕೆಲಕಡೆ ಅದಕ್ಕಿಂತ ಕನಿಷ್ಠವಾಗಿಯೂ ಆಗಿದ್ದರೂ, ಬಹು ಕಡೆ ಏನೊಂದೂ ಮಳೆಯಿಲ್ಲದೆ ಇರುವುದು. ಅಶ್ವಿನಿ ಮಳೆಯು ಬರುವುದೆಂದು ಬಹು ಧೈರ್ಯದಿಂದ ಹೇಳಿರುವರಾದರೂ, ಈ ಮಳೆಯು ಹುಟ್ಟಿ ೭ ದಿನಗಳ ಮೇಲಾದಾಗ್ಯೂ ಇನ್ನೂ ಬಾರದಿರುವುದರಿಂದಲೂ, ಈಗ್ಗೆ ಒಂದು ವಾರದ ಕೆಳಗೆ ನಿತ್ಯದಲ್ಲೂ ಮೋಡವು ಕಟ್ಟಿ ಗುಡುಗು ಮಿಂಚು ಆರ್ಭಟಿಸಿಕೊಂಡು ಬರುತ್ತಿದ್ದು ಈಗ ನಿರ್ಮಲಾಕಾಶವಾಗಿರುವುದರಿಂದಲೂ ಜನರ ಭಯವು ಮತ್ತಷ್ಟು ಹೆಚ್ಚುತ್ತಿದೆ. ಅಶ್ವಿನಿ ಮಳೆಯ ೨ನೆಯ ಪಾದವು ನಾಳೆಯದಿನ ಹುಟ್ಟುವುದು. ಆಗಲಾದರೂ ಮಳೆಯು ಬರಬಹುದೆಂಬ ನಿರೀಕ್ಷಣೆಯಿದೆ. ಆದರೆ ದೈವಪ್ರಗತಿಯು ಹೇಗಿರುವುದೋ ಹೇಳಲು ಸಾಧ್ಯವಿಲ್ಲವು.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾ|| ಉಜ್ಜಯಿನಿ ವಾಸಸ್ಥರಾದ ಹೆಂಚಿನ ಮಠದ ಬಸವಯ್ಯನವರಮಗ ಶಿವಲಿಂಗಯ್ಯನೆಂಬ ೧೬—೧೭ ವರ್ಷದ ವಯಸ್ಸಿನ ವಿದ್ಯಾರ್ಥಿಯು ಸಂಗೀತ ವಿದ್ಯೆಯನ್ನು ಕಲಿಯಬೇಕೆಂಬ ಮಹಾಕಾಂಕ್ಷೆಯಿಂದ ಈಗ ೩ ತಿಂಗಳ ಕೆಳಗೆ ರಾಜಧಾನಿಗೆ ಬಂದು ಇಲ್ಲಿಯ ನಾರ್ಮಲ್ ಸ್ಕೂಲಿನ ಸಂಗೀತ ವಿದ್ಯಾಬೋಧಕರಾದ ಮ|| ಎಚ್. ಪಿ. ಕೃಷ್ಣರಾವ್, ಬಿ. ಎ. ಯವರನ್ನು ಕಾಣಲು ಅವರು ಈ ವಿದ್ಯಾರ್ಥಿಗೆ ಸಂಗೀತ ವಿದ್ಯಾಭ್ಯಾಸದಲ್ಲಿರುವ ಆಸಕ್ತಿಯನ್ನು ತಿಳಿದು ಕನಿಕರಪಟ್ಟು ಈತನನ್ನು ನಾರ್ಮಲ್ ಸ್ಕೂಲಿಗೆ ಸೇರಿಸಿ ಸಂಗೀತವನ್ನು ಹೇಳುತ್ತಿರುವುದಲ್ಲದೆ ಈತನ ಮೇಧಾಶಕ್ತಿಗೂ, ಲವಲವಿಕೆಗೂ ಮೆಚ್ಚಿ ತಮ್ಮ ಮನೆಯಲ್ಲಿ ವೀಣೆಯ ಪಾಠವನ್ನು ಬಹು ಶ್ರದ್ಧೆಯಿಂದ ಹೇಳಿಕೊಡುತ್ತಿರುವರು. ಮ|| ಕೃಷ್ಣರಾಯರು ಜಾತಿಮಾತ್ಸರ್ಯವಿಲ್ಲದೆ ಈ ದೀನ ಜಂಗಮವಿದ್ಯಾರ್ಥಿಗೆ ನಿರ್ವಂಚನೆಯಿಂದ ಪಾಠವನ್ನು ಹೇಳಿಕೊಡುವುದಲ್ಲದೆ ತಮ್ಮ ಕೈಲಾದ ಇತರ ಸಹಾಯ್ಯವನ್ನು ಮಾಡುತ್ತಿರುವುದು ಬಹು ಸ್ತುತ್ಯವಾದುದೇ ಸರಿ. ಇದೇಪ್ರಕಾರ ಇತರ ವಿದ್ಯಾವಂತರುಗಳೂ ಆಚರಿಸಿದರೆ ವಿದ್ಯೆಯಲ್ಲಿ ಹಿಂದುಳಿದ ಜನಾಂಗದವರೆಲ್ಲರೂ ವಿದ್ಯಾವಂತರಾಗಿ ತನ್ಮೂಲಕ ದೇಶೋನ್ನತಿಯು ಶೀಘ್ರವಾಗಾಗುವುದರಲ್ಲಿ ಸಂದೇಹವೇ ಇಲ್ಲವು.

ಈ ವಿದ್ಯಾರ್ಥಿಯ ವೀಣಾ ಪಾಠಕ್ಕೆ ಒಂದು ವೀಣೆಯು ಬೇಕಾಗಿರುವುದು. ಆದರೆ ಈತನು ಬಡತನದಿಂದ ಊಟಉಪಚಾರಕ್ಕೆ ಸಹ ಮಾರ್ಗವಿಲ್ಲದೆ ಭಿಕ್ಷಾನ್ನವನ್ನೆತ್ತಿಕೊಂಡು ಜೀವಿಸುತ್ತ ವೀಣೆಯನ್ನು ಕೊಂಡುಕೊಳ್ಳಲು ಚೈತನ್ಯವಿಲ್ಲದೆ ಪೇಚಾಡುತ್ತಿರುವನಾದುದರಿಂದ, ಅವನ ಸಹಾಯಾರ್ಥವಾಗಿ ನಾವು ಈ ಪತ್ರಿಕೆಯಲ್ಲಿ ಒಂದು ಚಂದಾಪಟ್ಟಿಯನ್ನೇರ್ಪಡಿಸ ಯತ್ನಿಸಿರುತ್ತೇವೆ. ವೀರಶೈವರಲ್ಲಿ ವಿದ್ಯಾಭ್ಯಾಸಮಾಡತಕ್ಕವರ ಸಂಖ್ಯೆಯು ಬಲುಕಡಿಮೆ, ಅದರೊಳಗೂ ಸಂಗೀತ ವಿದ್ಯೆಯನ್ನು ಕಲಿಯತಕ್ಕವರಂತು ಸ್ವಪ್ನಪ್ರಾಯವೇ. ಅಂತಹವರಲ್ಲಿ ಬಡಜಂಗಮ ವಿದ್ಯಾರ್ಥಿಯು ಭಿಕ್ಷಾನ್ನವೆತ್ತಿಕೊಂಡು ಬಹು ಕಷ್ಟಪಟ್ಟು ಸಂಗೀತ ವಿದ್ಯಾಭ್ಯಾಸವನ್ನು ಮಾಡುತ್ತಿರುವಾಗ್ಗೆ ಪ್ರತಿಯೊಬ್ಬ ವೀರಶೈವ ವಿದ್ಯಾಭಿಮಾನಿಯೂ ನಿರ್ವಂಚನೆಯಿಂದ ದ್ರವ್ಯಸಹಾಯ್ಯವನ್ನು ಮಾಡತಕ್ಕದು ಆದ್ಯಕರ್ತವ್ಯವಾದುದರಿಂದ ಉಚಿತವಾಗಿ ತೋರಿದಷ್ಟು ಚಂದಾಹಣವನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಲ್ಲಿ ನಾವು ಅದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿ ವಿದ್ಯಾರ್ಥಿಗೆ ತಲುಪಿಸುವೆವಲ್ಲದೆ ಈ ಪತ್ರಿಕೆಯಲ್ಲಿ ಅವರುಗಳ ಹೆಸರುಗಳನ್ನು ಪ್ರಕಟಿಸುವೆವು.

ಒಳದೇಶದ ವೃತ್ತಾಂತಗಳು.

ಶ್ರೀರಂಗಪಟ್ಟಣದ ಸಾಹುಕಾರ್ ಚೌಡೀನೆ ಸಿದ್ದಯ್ಯನವರು ಧರ್ಮಾರ್ಥವಾಗಿ ಇಬ್ಬರು ದೀನವಟುಗಳ ಉಪನಯನವನ್ನು ತಾ|| ೮ರಲ್ಲಿ ಮಾಡಿದರು. ಇವರು ಅನೇಕವೇಳೆ ಭೂಮಿಯನ್ನೂ, ದುಡ್ಡನ್ನೂ ಬಡಜನರಿಗೆ ದಾನಮಾಡಿರುವರು.

ರಾಜಧಾನಿಯ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಂಘದವರು ಕಳೆದ ಶನಿವಾರರಾತ್ರಿ ಪರ್ವತಹಾಳಿನಲ್ಲಿ ಹರಣಿ ಹಗಣ ಎಂಬ ನಾಟಕವನ್ನಾಡಿದರು. ಪ್ರತಿಯೊಂದು ಪಾತ್ರದವರು ತಂತಮ್ಮ ಪಾತ್ರವನ್ನು ಚೆನ್ನಾಗಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ತಕ್ಕಮಟ್ಟಿಗಿದ್ದಿತು.

ಕಳೆದ ತಾ|| ೧೧ ರ ರಾತ್ರಿ ೧೦ ಗಂಟೆಯ ಸಮಯದಲ್ಲಿ ರಾಜಧಾನಿಯ ಪೂರ್ವದಿಗ್ಭಾಗದಲ್ಲಿ ಒಂದುನಕ್ಷತ್ರವು ಬಿದ್ದು ಲಕ್ಷಾಂತರ ಹಗಲ ಬತ್ತಿಗಳನ್ನು ಏಕಕಾಲದಲ್ಲಿ ಹೊತ್ತಿಸಿದುದಷ್ಟು ಪ್ರಕಾಶವುಂಟಾಗಿ ಕಣ್ಣುಗಳಿಗೆ ರಂಜಕಬಿದ್ದಂತಾಯಿತು. ಈ ಪ್ರಕಾಶವು ಇತರ ಕಡೆಯಲ್ಲೂ ಕಾಣಿಸಿಕೊಂಡಿರಬಹುದೆಂದು ತೋರುತ್ತದೆ. ಇದರ ಕಾರಣವು ಖಗೋಳಶಾಸ್ತ್ರಜ್ಞರಿಂದ ಗೊತ್ತಾಗಬೇಕಾಗಿದೆ.

ಕೆಲ ದಿನಗಳ ಕೆಳಗೆ ಮದರಾಸಿಗೆ ಬಂದು ತನ್ನ ನೃತ್ಯಗೀತಗಳಿಂದ ಅಲ್ಲಿಯ ಜನರನ್ನು ಬೆರಗು ಮಾಡಿ ಅನೇಕ ದ್ರವ್ಯವನ್ನು ಸಂಪಾದಿಸಿದುದಲ್ಲದೆ ಪುರಪ್ರಮುಖರ ಪರವಾಗಿ ಬಂಗಾಳಾ ಗೌರ್ನರಾಗಿ ವರ್ಗಪಟ್ಟುಹೋದ ಲಾರ್ಡ್ ಕಾರ್ಮೈಕಲ್‌ರವರ ಹಸ್ತದಿಂದ ಪದಕವನ್ನು ಬಹುಮಾನಿಸಲ್ಪಟ್ಟ ಕಲಕತ್ತಾದ ಸುಪ್ರಸಿದ್ಧಳಾದ ಗೋಹರ್‌ಜಾನ್ ವಿದ್ವನ್ಮಣಿಯು ಈ ತಾ|| ೨೦ನೆಯ ಶನಿವಾರ ಬೆಂಗಳೂರಿಗೆ ಬಂದು ದಂಡಿನಲ್ಲಿರುವ ಬೌರಿಂಗ್ ಸದನದಲ್ಲಿ ತನ್ನ ಸಂಗೀತಪಾಂಡಿತ್ಯ ಪ್ರದರ್ಶನವನ್ನು ಮಾಡುವುದಾಗಿ ಪ್ರಕಟವಾಗಿರುವುದು. ಈ ಅಪೂರ್ವವಾದ ಸಂಗೀತವನ್ನು ಕೇಳಲು ರಾಜಧಾನಿಯಿಂದ ಕೆಲ ಜನರು ಬೆಂಗಳೂರಿಗೆ ಹೊರಡುವವರಾಗಿರುವರು.

ಕೊಳ್ಳೇಗಾಲದಲ್ಲಿ ಒಳ್ಳೆಯ ಶ್ರೀಮಂತರಾಗಿಯೂ, ಬ್ರಿಟಿಷ್ ಮತ್ತೂ ಮೈಸೂರ ಸರ್ಕಾರಗಳಿಗೆ ಹೆಚ್ಚು ಭೂಗಂದಾಯವನ್ನು ಕಟ್ಟತಕ್ಕವರಾಗಿಯೂ ಒಳ್ಳೆಯ ಗುಣಾಢ್ಯರೂ ಸ್ನೇಹಪರರೂ ವಿದ್ಯಾವಂತರೂ ಮತ್ತೂ ಉದಾರಿಗಳೂ ಆಗಿದ್ದ ಮ|| ರಾ|| ಗಂಡಿಗೆ ಪಿ. ಸುಬ್ಬಯ್ಯನವರು ಕೆಲ ತಿಂಗಳಿಂದ ಕ್ಷಯರೋಗಗ್ರಸ್ತರಾಗಿದ್ದು ನಾನಾವಿಧ ವೈದ್ಯ ಚಿಕಿತ್ಸೆಯನ್ನು ಮಾಡಿಸಿಕೊಂಡರೂ ಗುಣವನ್ನು ಹೊಂದದೆ ಕಳೆದ ಮಾರ್ಚಿ ತಾ|| ೨೯ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ೩೦-೩೨ ವರ್ಷ ವಯಸ್ಸಾಗಿದ್ದಿತೆಂದು ತೋರುತ್ತದೆ. ಇವರು ವಿದ್ಯಾವಂತರಾಗಿದ್ದುದರಿಂದ ಸ್ವಜನರ ವಿದ್ಯಾಭಿವೃದ್ಧಿಯಲ್ಲಿ ಪೂರ್ಣ ಕಾಂಕ್ಷಿಗಳಾಗಿದ್ದರಲ್ಲದೆ ಶ್ರೀ ಮುಡುಕತೊರೆಯ ವೀರಶೈವ ಮತಸಂವರ್ಧಿನೀ ಸಭೆಯ ವರ್ಕಿಂಗ್ ಕಮಿಟಿಯ ಅಧ್ಯಕ್ಷರಾಗಿಯೂ, ಎರಡನೆಯ ವರ್ಷದಲ್ಲಿ ಮಹಾಸಭಾಧ್ಯಕ್ಷರಾಗಿಯೂ, ಕಳೆದ ವರ್ಷ ಸತ್ಕಾರದ ಸಂಘಾಧ್ಯಕ್ಷರಾಗಿಯೂ ಇದ್ದು ಬಹು ಶ್ರದ್ಧಾಭಿಮಾನದಿಂದ ಕೆಲಸಗಳನ್ನು ಮಾಡಿ ತಮ್ಮಲ್ಲಿದ್ದ ಮತಾಭಿಮಾನವನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದರು. ವರ್ಧಿಷ್ಣುಗಳಾಗಿದ್ದ ಇಂತಹ ಗುಣಾಢ್ಯರು ಬಲುಸಣ್ಣ ವಯಸ್ಸಿನಲ್ಲಿ ವಿಧಿವಶರಾದುದಕ್ಕಾಗಿ ಈ ಪ್ರಾಂತದ ವೀರಶೈವರೆಲ್ಲರೂ ವಿಶೇಷವಾಗಿ ಚಿಂತಿಸುತ್ತಾರೆ. ಇವರಂತೆಯೇ ಸಕಲವಿಧದಲ್ಲೂ ಗುಣಾಢ್ಯರಾದ ಇವರ ಸಹೋದರರು ಮ|| ಮಲ್ಲಪ್ಪನವರು ಮತಾಭಿವೃದ್ಧಿಯ ಕಾರ್ಯದಲ್ಲಿ ಉದ್ಯುಕ್ತರಾಗಿ ತಮ್ಮ ಅಣ್ಣನವರಿಗಿಂತಲೂ ಅತಿಶಯವಾದ ಕೀರ್ತಿಯನ್ನು ಪಡೆಯುವರೆಂದು ನಂಬಿರುತ್ತೇವೆ ಮೃತರ ಆತ್ಮಕ್ಕೆ ಶಾಂತಿಯೂ, ಅವರ ವಿಯೋಗದ ದುಃಖಕ್ಕೆ ಗುರಿಯಾಗಿರುವ ಸಣ್ಣ ವಯಸ್ಸಿನ ಪತ್ನೀ ಪುತ್ರರಿಗೂ, ತಮ್ಮಂದಿರು ಮೊದಲಾದ ಬಂಧುವರ್ಗಕ್ಕೂ ದುಃಖಸಮಾಧಾನವೂ ಉಂಟಾಗಲೆಂದು ಪ್ರಾರ್ಥಿಸುತ್ತೇವೆ. ಎಂದು ಒಬ್ಬ ಚಂದಾದಾರರು ಬರೆಯುತ್ತಾರೆ.

ಕಳೆದ ತಾ|| ೭ ರಲ್ಲಿ ಬ್ರ|| ಶ್ರೀ|| ನರಸಿಂಹಶಾಸ್ತ್ರಿಗಳು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ಎಂಬ ಅಭಿಧಾನದಿಂದ ಶೃಂಗಗಿರಿಯ ಜಗದ್ಗುರು ಪೀಠವನ್ನು ವಿಧ್ಯುಕ್ತವಾಗಲಂಕರಿಸಿದರು. ಕಳೆದ ತಾ|| ೯ ರ ಸಾಯಂಕಾಲದಲ್ಲಿ ಶಾರದಾವಿಲಾಸಭವನದಲ್ಲಿ ಮಹಾಸಭೆಯೊಂದು ನೆರೆಯಿಸಲ್ಪಟ್ಟು ಶ್ರೀಗಳವರು ಪಟ್ಟಾಭಿಷಿಕ್ತರಾದ ವಿಚಾರವು ಪ್ರಕಟಿಸಲ್ಪಟ್ಟಿತಲ್ಲದೆ ತಾ|| ೧೦ ರಲ್ಲಿ ಶ್ರೀಮುಖದಮೂಲಕ ಶ್ರೀಮನ್ಮಹಾರಾಜರವರಿಗೆ ತಿಳುಹಲ್ಪಟ್ಟಿತು. ಮತ್ತು ಸಾರಣೆಕಾರಣೆಗಳಿಂದಲೂ, ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ದೀಪಾವಳಿಗಳಿಂದಲೂ ಅಲಂಕೃತಗಳಾಗಿದ್ದ ಎಲ್ಲಾ ಬೀದಿಗಳಲ್ಲೂ ಶ್ರೀಗಳವರ ಅಡ್ಡಪಾಲಕಿಯುತ್ಸವವು ಮೆರೆಯಿಸಲ್ಪಟ್ಟಿತು. ಈ ಪಟ್ಟಾಭಿಷೇಕ ಮಹೋತ್ಸವಕ್ಕೆ ಹೋಗಿದ್ದ ಒಂದನೆಯ ಕೌನ್ಸಿಲರೂ, ಮುಜರಾಯಿ ಸೂಪರಿಂಟೆಂಡೆಂಟರೂ, ಪ್ರೊ|| ಇ|| ಜನಲ್‌ರವರೂ, ಡಿ|| ಕಮೀಷನರೂ ಮತ್ತೂ ಮ|| ಎ. ಪಿ. ಮಾಧವರಾಯರೂ ತಂತಮ್ಮ ಸ್ಥಳಗಳಿಗೆ ಹಿಂದಿರುಗಿ ಬಂದರು. ಪೂರ್ವದ ಸ್ವಾಮಿಗಳ ಕಾಲದಲ್ಲಿ ಮಠದ ಏಜಂಟರಾಗಿದ್ದ ವೇ|| ಶ್ರೀಕಂಠಶಾಸ್ತ್ರಿಗಳೇ ಡಿ|| ಕಮೀಷನರ ಮೇಲ್ವಿಚಾರಣೆಯಲ್ಲಿ ಮಠದ ಏಜಂಟರಾಗಿರತಕ್ಕದ್ದೆಂದು ಸರ್ಕಾರದ ಅಪ್ಪಣೆಯಾಗಿರುತ್ತದೆ. ಧಾರವಾ ದಲ್ಲಿರುವ ಶಂಕರಾಚಾರ್ಯರ ಸಂಸ್ಕೃತಪಾಠಶಾಲೆಯ ಮುಖ್ಯೋಪಾಧ್ಯಾಯರಾದ ವೇ|| ವಿರೂಪಾಕ್ಷಪಂಡಿತರವರು ಶ್ರೀಗಳವರ ವಿದ್ಯಾಭಿವೃದ್ಧಿಯನ್ನು ನೋಡಿಕೊಳ್ಳಲು ನಿಯಮಿಸಲ್ಪಟ್ಟಿರುವುದಾಗಿ ಕೇಳುತ್ತೇವೆ. ಪಟ್ಟಾಭಿಷೇಕ ಮಹೋತ್ಸವಕಾರ್ಯವು ಬಹು ತ್ವರೆಯಿಂದಾದುದರಿಂದ ಅರಮನೆಯಿಂದ ಬಿಲ್ಲತ್ತುಗಳು ಕಳುಹಿಸಲ್ಪಡಲವಕಾಶವಿಲ್ಲವಾಯಿತೆಂದೂ, ಜಾಲಂದೂರು ಜಹಗೀರದಾರರಿಂದ (ಇವರು ಯಾರಿರಬಹುದೋ?) ಕಳುಹಿಸಲ್ಪಟ್ಟಿದ್ದ ಬಹುಬೆಲೆಯ ಶಾಲು ಜತೆಯು ತರೀಕೆರೆಯಲ್ಲಿ ಪ್ರಯಾಣಿಕರು ಇಳಿಯುವ ಛತ್ರದಲ್ಲಿ ಕಳುವಾಗಿ ಪೋಲೀಸಿನವರು ಅದನ್ನು ಕಂಡುಹಿಡಿಯುತ್ತಿರುವರೆಂದೂ ವರ್ತಮಾನವಿದೆ.

ಮಹಾರಾಷ್ಟ್ರ ದೇಶಸ್ಥರಾದ ಪ್ರೊಫೆಸರ್ ಪರಶುರಾಮರಾವ್ ಎಂಬ ವೀರಶೈವರು ಒಂದು ಸರ್ಕಸ್ಸನ್ನು ರಾಜಧಾನಿಗೆ ತೆಗೆದುಕೊಂಡುಬಂದು ಕಳೆದವಾರದಿಂದಲೂ ತಮ್ಮ ಚಮತ್ಕಾರಗಳನ್ನು ಪ್ರದರ್ಶಿಸುತ್ತಿರುವರು. ಇವರಲ್ಲಿ ಕುದುರೆಗಳು, ಆನೆ, ಒಂಟೆ, ಸಿಂಹಗಳು, ಹುಲಿಗಳು, ಕೋತಿಗಳು, ಮೇಕೆಗಳು ಮೊದಲಾದ ಪ್ರಾಣಿಗಳಿರುವುವು. ಇವುಗಳಲ್ಲಿ ಒಂದು ಹುಲಿಯು ೪—೬ ಅಡಿ ಎತ್ತರದಲ್ಲಿರುವ ಒಂದುಅಡ್ಡಪಟ್ಟಿಯಮೇಲೆ ೧-೨ ಆವೃತ್ತಿ ನಡೆದುಕೊಂಡುಬಂದು ಮಧ್ಯಮಾರ್ಗದಲ್ಲಿ ಹಿಂದಿರುಗುವುದೂ, ಹುಲಿಯೂ ಮೇಕೆಯೂ ಕುದುರೆಯೂ ಒಂದೇ ಪಾತ್ರೆಯಲ್ಲಿ ನೀರನ್ನು ಕುಡಿಯುವುದೂ, ಒಂದು ಸಣ್ಣ ಹುಡುಗಿಯ ಕಾಲಕೆಳಗೆ ಹುಲಿಯು ನುಗ್ಗುವುದೂ, ಅವಳು ಮಲಗಿರುವಾಗ ಅವಳಮೇಲೆ ಹಾರುವುದೂ ಬಹಳಆಶ್ಚರ್ಯಕರವಾಗಿವೆ. ಅಡ್ಡಪಟ್ಟಿಗಳ ಮೇಲೆ ಹುಡುಗರು ಸಾಧನೆಗಳನ್ನು ಮಾಡುವುದು, ಇಳಿಜಾರಾದ ತಂತಿಯಮೇಲೆ ಒಬ್ಬ ಹುಡುಗನು ನಡೆದು ಜಾರುವುದು, ಇಳಿಜಾರಾಗಿಯೂ ಗುಂಡಾಗಿಯೂ ಕಟ್ಟಲ್ಪಟ್ಟಿರುವ ಮರದಪಟ್ಟಿಗಳ ಮೇಲೆ ಬೈಸಿಕಲ್‌ಗಳನ್ನು ಓಡಿಸುವುದು, ಒಂದು ಹುಡುಗಿಯೂ ಕೆಲ ಹುಡುಗರೂ ಅಂಗಸಾಧನೆಗಳನ್ನು ಮಾಡುವುದು ಮೊದಲಾದ ಕಾರ್ಯಗಳು ಶ್ಲಾಘ್ಯವಾಗಿವೆ ಈ ವರೆಗೆ ಇಲ್ಲಿಗೆ ಬಂದಿದ್ದಂತಹ ದೇಶೀಯ ಸರ್ಕಸ್ಸುಗಳಲ್ಲೆಲ್ಲಾ ಈ ಸರ್ಕಸ್ಸು ಉತ್ತಮವಾಗಿರುವುದೆನ್ನುವದರಲ್ಲಿ ಅಭ್ಯಂತರವಿಲ್ಲವು. ಇಂತಹವರು ಶ್ರೀಮನ್ಮಹಾರಾಜರವರಲ್ಲಿ ತಮ್ಮ ಚಮತ್ಕಾರಗಳನ್ನು ಪ್ರದರ್ಶಿಸಲು ಅವಕಾಶವು ದೊರೆತಿದ್ದಲ್ಲಿ ಪ್ರಭುಗಳು ಸಂತೋಷಪಟ್ಟು ಉತ್ತಮವಾದ ಬಹುಮಾನವನ್ನು ದಯಪಾಲಿಸುತ್ತಿದ್ದರು. ಇವರು ಆಫ್ರಿಕಾ ಚೈನಾ ಜರ್ಮನಿ ಫಿಲಿಫೈನ್ ಸುಮಾತ್ರಾ ಜಾವಾ ಬರ್ಮಾ ಮೊದಲಾದ ದೇಶಗಳಲ್ಲಿ ೧೧ ವರ್ಷಕಾಲ ಸಂಚರಿಸಿ ಅನೇಕ ಮರ್ಯಾದೆಯ ಪದಕಗಳನ್ನು ಪಡೆದುಕೊಂಡು ಬಂದಿರುವರು. ಕಳೆದ ಶುಕ್ರವಾರ ಸಾಯಂಕಾಲದಲ್ಲಿ ಒಂದು ಕುದುರೆಯ ಮೇಲೆ ಒಂದು ಕೋತಿಯನ್ನು ಕೂರಿಸಿ ಅದರ ಕೈಗೆ ಕುದುರೆಯ ಕಡಿವಾಣವನ್ನು ಕೊಟ್ಟು ಡೇರಾದೊಳಗೆ ಸುತ್ತಿಸುತ್ತಿರುವಾಗ್ಗೆ ಆ ಕುದುರೆಯು [illegible] ಹೊರಗೆಬಂದು ಜಗನ್ಮೋಹನ ಪ್ಯಾಲೇಸಿನ ಬಳಿ ಓಡುತ್ತಿರುವಷ್ಟರಲ್ಲಿ ಜನರು ಅದನ್ನು ಅಡ್ಡಕಟ್ಟಿ ಹಿಡಿದರು. ಆದರೆ ಅದರಮೇಲೆ ಕುಳಿತಿದ್ದ ಕೋತಿಯು ಮಾತ್ರ ಧೈರ್ಯದಿಂದ ಕದಲದೆ ಸುಮ್ಮನೆ ಕುಳಿತಿದ್ದಿತು. ಇದರಿಂದ ಯಾರಿಗೇನೊಂದು ಅಪಾಯವೂ ಆಗಲಿಲ್ಲವು.

ವರ್ತಮಾನ ಸಂಗ್ರಹವು.

ಜರ್ಮನ್ ಸರ್ಕಾರದವರು ಒಂದು ಆಕಾಶವಿಮಾನವನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ.

ಬಂಗಾಳದಲ್ಲಿ ಟ್ಯಾಂಟಲಿಂ ಎಂಬ ಒಂದು ಮಾದರಿಯ ಲೋಹವು ಕಂಡುಹಿಡಿಯಲ್ಪಟ್ಟಿರುತ್ತದೆ. ಇದು ಅದುರಿನಿಂದ ಬೇರ್ಪಡಿಸಲ್ಪಟ್ಟಮೇಲೆ ಟನ್ ೧ಕ್ಕೆ ೮೪೦೦೦೦ ರೂಪಾಯಿಗಳ ಬೆಲೆಯಾಗುವುದಂತೆ.

ಬಂಗಾರದ ೫ ರೂಪಾಯಿನ ನಾಣ್ಯಗಳು ಭರತಖಂಡದಲ್ಲಿ ಎಷ್ಟರಮಟ್ಟಿಗೆ ಉಪಯುಕ್ತವಾಗಿರುವುದೆಂಬುದನ್ನು ಪರೀಕ್ಷಿಸಲು ಇಷ್ಟರಲ್ಲೇ ಆಚರಣೆಗೆ ತರಲ್ಪಡುವುದೆಂಬ ವರ್ತಮಾನವು ನಿರಾಧಾರವಾದುದು.

ರಾಜಷಾಹಿಯಲ್ಲಿ ನರೇಂದ್ರನಾಥನೆಂಬ ವಿದ್ಯಾರ್ಥಿಯು ಕಳೆದ ವರ್ಷದಲ್ಲಿಯೂ, ಈ ವರ್ಷದಲ್ಲೂ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಹೋದುದರ [illegible] ಆತ್ಮಹತ್ಯಮಾಡಿಕೊಂಡನು.

ಜಾರ್ಜ್ ಚಕ್ರವರ್ತಿಯವರು ಭರತಖಂಡಕ್ಕೆ ಕಿರೀಟಧಾರಣಮಹೋತ್ಸವಕ್ಕಾಗಿ ಚಿತ್ತೈಸಿ ಸೈನ್ಯವನ್ನು ಪರಾಮರ್ಶಿಸುವಾಗಲೂ, ಮತ್ತೆ ಬೇರೆ ಸಂದರ್ಭಗಳಲ್ಲಿಯೂ ಸ್ವಾರಿಮಾಡಿದ ಕುದುರೆಯು ಸೀಮೆಗೆ ತೆಗೆದುಕೊಂಡು ಹೋಗಲ್ಪಟ್ಟು ಡಿಲ್ಲಿ ಎಂಬ ನಾಮಕರಣದಿಂದ ಬಕಿಂಗ್ಹಾಂ ಅರಮನೆಯಲ್ಲಿರುವ ಪಾಗಾ ಅಶ್ವಶಾಲೆಯಲ್ಲಿ ಸಾಕಲ್ಪಡುತ್ತಿದೆ.

ಕಲಕತ್ತಾದ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾದ ಡಾಕ್ಟರ್ ಪಿ. ಆರ್. ರಾಯ್‌ಯವರು ಕಾಳೀಘಟ್ಟದಲ್ಲಿ ನಡೆದ ಸುರಮುನಿಯೋಗ ಜಾತ್ರೆಗೆ ಜನರು ವಿಶೇಷವಾಗಿ ಸೇರಿರುವಾಗ ವಾಂತಿಭೇದಿರೋಗವು ಮತ್ತೂ ಪ್ಲೇಗೂ ಹಬ್ಬದಂತೆ ಬಹು ಸಾಹಸದಿಂದ ಕೆಲಸಮಾಡಿ ಕಡೆಗಲ್ಲಿ ತಾವೇ ಪ್ಲೇಗು ರೋಗಪೀಡಿತರಾಗಿ ೩ ದಿವಸ ನರಳುತ್ತಿದ್ದು ವಿಧಿವಶರಾದರು.

ಅಲೆಕ್ಸಾಂಡ್ರಾ ಮಹಾರಾಣಿಯವರು ತಮ್ಮ ಪತಿಗಳಾದ ಎಡ್ವರ್ಡ್ ಪ್ರಭುಗಳು ಸ್ವಂತವಾಗುಪಯೋಗಿಸುತ್ತಿದ್ದ ಗಡಿಯಾರದ ಸರಪಣಿ, ಚುಟ್ಟದ ಪೆಟ್ಟಿಗೆ ಮೊದಲಾದ ಪದಾರ್ಥಗಳನ್ನು ಲಂಡನ್ನಿನ ಸರ್ವವಸ್ತುಪ್ರದರ್ಶನಶಾಲೆಗೆ ಕಳುಹಿಸಿಕೊಟ್ಟಿರುತ್ತಾರೆ. ಇವುಗಳಲ್ಲಿ ಗಡಿಯಾರದ ಸರಪಳಿಯು ರಾಣಿಯವರ ತಲೆಯ ಕೂದಲಿನಿಂದ ಮಾಡಲ್ಪಟ್ಟು ಆಶ್ಚರ್ಯಕರವಾಗಿರುತ್ತದೆ

ಅಮೇರಿಕಕ್ಕೆ ಸೇರಿದ ಆರ್ಕನಾಸ್ ಎಂಬಲ್ಲಿಯ ಬಂಗಾರದ ಸರೋವರವು ಒಡೆದುಹೋಗಿ ನೀರು ೨೦೦೦ ಚದರ ಮೈಲಿ ವಿಸ್ತೀರ್ಣದಲ್ಲಿ ಉಲ್ಲೋಲಕಲ್ಲೋಲವಾಗಿ ಹರಿದು ಬಹು ಫಲವತ್ತಾದ ೫೦೦೦೦ ಎಕರೆ ಪ್ರದೇಶವು ನಾಶವಾಗಿ ೫ ಊರುಗಳು ೬ ಅಡಿಯಿಂದ ೧೦ ಅಡಿ ವರೆಗಿನ ನೀರಿನೊಳಗೆ ಮುಳುಗಿಹೋಗಿವೆ. ಪ್ರವಾಹದ ಅನಾಹುತದಲ್ಲಿ ಎಷ್ಟೋ ಸಾವಿರ ಪ್ರಾಣಿಗಳು ನಷ್ಟವಾಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಈಗ ಸಿಯಾಮಿನಲ್ಲಿ ಪಳಗಿಸಲ್ಪಟ್ಟ ಆನೆಗಳು ೩೦೦೦ ಇವೆ, ಆದರೂ ಇವು ಕಾಲಕ್ರಮೇಣ ಕಡಿಮೆಯಾಗಬಹುದೆಂಬ ಶಂಕೆಯೂ ಇದೆ. ಗಂಡಾನೆಗೆ ೩೫೦೦ ರೂ. ಹೆಣ್ಣಾನೆಗೆ ೫೪೦೦ ರೂ. ಈ ಪ್ರಕಾರ ಬೆಲೆಯಾಗುವುದು. ಆನೆಯನ್ನು ಬೇಟೆಯಾಡಿ ತೆಗೆದುಕೊಂಡುಹೋಗಲು ಅಲ್ಲಿಯ ಸರ್ಕಾರಕ್ಕೆ ೮೫೦ರೂ. ಸುಂಕವನ್ನು ಕೊಡಬೇಕಾಗುತ್ತದೆ. ಕಳೆದ ವರ್ಷ ಸಿಯಾಮಿನಿಂದ ಹೊರದೇಶಕ್ಕೆ ೩೩೦೦೦ರೂ. ಬೆಲೆಯ ದಂತವು ಸಾಗಿಸಲ್ಪಟ್ಟಿತು.

ಈಸ್ಟರ್ ಹಬ್ಬದಲ್ಲಿ ವಿನೋದವಾಗಿ ಕಾಲಹರಣವನ್ನು ಮಾಡಲು ೩೦೦ ಜನರು ಒಂದು ಹಡಗಿನಲ್ಲಿ ಕುಳಿತು ಸಮುದ್ರದಲ್ಲಿ ಹೋಗುತ್ತಿರುವಾಗ, ಆ ಹಡಗು ಮತ್ತೊಂದು ಹಡಗಿಗೆ ತಾಕುಬಡಿದು ಮುಳುಗಿಹೋಯಿತು. ದೋಣಿಯಲ್ಲಿ ಕೆಲ ಜನರು ಕುಳಿತು ಹಡಗಿನ ಬಳಿಗೆ ಹೋಗಿ ಮುಳುಗಿ ಹೋಗುತ್ತಿದ್ದವರಲ್ಲಿ ಕೆಲವರನ್ನು ಹಿಡಿದು ದೋಣಿಯಲ್ಲಿ ಕುಳ್ಳಿರಿಸಿಕೊಂಡರು ಆದರೂ ೨೦೦ ಜನರವರೆಗೆ ಸಮುದ್ರಪಾಲಾದರೆಂದು ನಿರೀಕ್ಷಿಸಲ್ಪಟ್ಟಿದೆ.

ಇಟಾಲಿಯ ಪಶುವೈದ್ಯನಾದ ಪಾಲ್ ಎಂಬಾತನಲ್ಲಿಗೆ ಒಬ್ಬ ಐರೋಪ್ಯನು ಒಂದು ಹುಚ್ಚುನಾಯನ್ನು ಚಿಕಿತ್ಸೆಗಾಗಿ ತೆಗೆದುಕೊಂಡುಬರಲು ಆ ವೈದ್ಯನು ಅದನ್ನು ಒಂದು ಮನೆಯಲ್ಲಿ ಕೂಡುವಾಗ್ಗೆ ಅದು ತಪ್ಪಿಸಿಕೊಂಡುಬಂದು ತನ್ನ ಎಡಗಣ್ಣಿನ ಕೆಳಗೆ ಕಚ್ಚಿಬಿಡಲು ಕಸೌಲಿಗೆ ಚಿಕಿತ್ಸೆಗಾಗಿ ಹೋಗುವುದಕ್ಕೆ ಬದಲು ಚಂದರನಾಗೂರಿಗೆ ಹೋಗಿ ಅಲ್ಲಿ ಚಿಕಿತ್ಸೆಯನ್ನು ಮಾಡಿಸಿಕೊಂಡು ಅದು ಪ್ರಯೋಜನವಾಗದೆ ಹೋದುದರಮೇಲೆ ಕಸೌಲಿಗೆ ಹೋಗಿ ಅಲ್ಲಿ ಸತ್ತುಹೋದನು.

ರೋಮಿನಲ್ಲಿರುವ ಕ್ರೈಸ್ತರ ದೊಡ್ಡ ಗುರುವಾದ ಪೋಪನ ಸೇವಕನೊಬ್ಬನಿಗೆ ಅವನ ತಂದೆಯು (ಪಾಪ) ಸತ್ತುಹೋದನೆಂದು ತಂತಿಯು ಬರಲು, ತಂತಿಯಾಫೀಸಿನವರು ಪಾಪ ಎಂದರೆ ಪೋಪು ಎಂದು ಅರ್ಥವನ್ನು ಮಾಡಿಕೊಂಡು ಪೋಪನು ಸತ್ತುಹೋದನೆಂದು ವೃತ್ತಪತ್ರಿಕೆಯವರಿಗೆ ತಿಳುಹಿಸಿದರು. ಇದರಮೇಲೆ ಆಲ್ಫಾನ್ಸೋ ದೊರೆಯೂ, ಮಂತ್ರಿಗಳೂ ಪೋಪನ ಸೇವಕನಿಗೆ ದುಃಖಪ್ರದರ್ಶಕ ತಂತಿಗಳನ್ನು ಕಳುಹಿಸಿದರು. ಆಗ ಅವನು ತಂತಿಯಾಫೀಸಿನವರಿಂದುಂಟಾದ ತಪ್ಪನ್ನು ಕಂಡುಹಿಡಿದನು.

ನ್ಯೂಯಾರ್ಕಿನ ಸೆಷನ್ಸ್ ಜಡ್ಜಿಯನ್ನು ಕೊಲ್ಲುವ ಪ್ರಯತ್ನಕ್ಕಾಗಿ ಒಂದು ಯಂತ್ರವು ಅಂಚೆಯಮೂಲಕ ಕಳುಹಲ್ಪಟ್ಟಿತು. ಜಡ್ಜಿಯು ಕೋರ್ಟಿನ ಪುಸ್ತಕಭಂಡಾರದಲ್ಲಿ ಕುಳಿತಿರುವಾಗ್ಗೆ ಅಂಚೆಯಿಂದ ಬಂದ ಯಂತ್ರದ ಭಾಂಗಿಯ ವಿಚಾರದಲ್ಲಿ ಅನುಮಾನವು ಹುಟ್ಟಿ ರಸಾಯನಸಂಬಂಧವಾದ ಪದಾರ್ಥಗಳನ್ನು ಪರೀಕ್ಷಿಸುವ ಇನ್ಸ್‌ಪೆಕ್ಟರ ಮೂಲಕ ಆ ಭಾಂಗಿಯನ್ನು ತೆಗೆಯಿಸುವಾಗ್ಗೆ, ಆ ಯಂತ್ರವು ಹಾರಿ ಇನ್ಸ್‌ಪೆಕ್ಟರಿನ ಬೆರಳು ಹಾರಿಹೋಯಿತು. ಮತ್ತೂ ಅವನ ಕುತ್ತಿಗೆ ಮುಖ ಮುಂಗೈಗಳೆಲ್ಲವೂ ಸುಟ್ಟುಹೋದುವು. ಅಲ್ಲದೆ ಬೀರುಗಳಗಾಜುಗಳೆಲ್ಲವೂ ನುಚ್ಚುನೂರಾದುವು.

ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರ ಆಲೋಚನಾಸಭೆಯ ಮೆಂಬರರಾದ ರೈಟ್ ಆನರಬಲ್ ಸಯದ್ ಅಮೀರಲಿಯವರು ಟ್ರಿಪೋಲಿಯುದ್ಧದಲ್ಲಿ ಅನಾಥರಾದವರ ಸಹಾಯಾರ್ಥವಾಗಿ ಚಂದಾಹಣವನ್ನೆತ್ತಿ ರೆಡ್‌ಕ್ರೆಸೆಂಟ್ ಸೊಸೈಟಿಯವರ ಮೂಲಕ ಕಳುಹಿಸಿಕೊಟ್ಟು ತಮಗೆ ಸಜಾತೀಯರ ಮೇಲಿರುವ ಅಭಿಮಾನವನ್ನು ವ್ಯಕ್ತಪಡಿಸಿದುದಕ್ಕಾಗಿ ತುರ್ಕಿಯ ಸುಲ್ತಾನನು ಮೆಚ್ಚಿ ತನ್ನ ಛಾಯಾಚಿತ್ರವನ್ನೂ, ನಮಾಜಿನಕಾಲದಲ್ಲಿ ತಾನು ಸ್ವಂತವಾಗಿ ಉಪಯೋಗಿಸುತ್ತಿದ್ದ ರೇಶ್ಮೆಯ ಗದ್ದುಗೆಯನ್ನೂ, ಜಪಮಾಲಿಕೆಯನ್ನೂ ಅವರಿಗೆ ಕಳುಹಿಸಿಕೊಟ್ಟಿರುವನು.

ಹೈದರಾಬಾದಿನ ನೈಜಾಮರವರು ಮಹಮ್ಮದೀಯ ವಿಶ್ವವಿದ್ಯಾಲಯ ಸ್ಥಾಪನೆಗಾಗೇರ್ಪಟ್ಟಿರುವ ಫಂಡಿಗೆ ಕೊಡಲು ವಾಗ್ದಾನಮಾಡಿದ್ದ ೫ಲಕ್ಷ ರೂಪಾಯಿಗಳನ್ನು ಸಲ್ಲಿಸಿಬಿಟ್ಟುದಲ್ಲದೆ, ಪ್ರತಿವರ್ಷದಲ್ಲೂ ಕೊಡಲೊಪ್ಪಿಸಿರುವ ಹಣವನ್ನು ೩೬೦೦೦ ರೂ. ಗೆ ಹೆಚ್ಚಿಸಿರುತ್ತಾರೆ. ೭ ನೆಯ ಸಾಲಾರಜಂಗರವರು ೧ಲಕ್ಷ ರೂ. ಗಳನ್ನೂ, ಗತಿಸಿದ ಸರ್ ಅಸ್ಮಾನ್‌ಜಾಯವರ ಮಕ್ಕಳು ನವಾಬ್ ಮೊಹಿದೀನ್‌ಜಾರವರು ೧|| ಲಕ್ಷ ರೂ. ಗಳನ್ನೂ ಕೊಟ್ಟಿರುವರು. ಈಗ ಈ ಮಹಮ್ಮದೀಯ ವಿಶ್ವವಿದ್ಯಾಲಯ ಸ್ಥಾಪನೆಯ ಫಂಡಿಗೆ ೨೬ ಲಕ್ಷ ರೂ. ಗಳವರೆಗೆ ನಗದಾಗಿ ಶೇಖರವಾಗಿರುತ್ತದೆ. ಇನ್ನೊಂದು ಲಕ್ಷ ರೂ. ಶೇಖರವಾದರೆ ಕಾರ್ಯಾರಂಭವಾಗುವುದು.

ಚೈನಾರಾಜ್ಯದ ಪ್ರಜಾಪ್ರಭುತ್ವದವರಿಗೆ ಬೆಲಜಿಯಮಿನ ಬ್ಯಾಂಕಿನವರು ಸಾಲವನ್ನು ಕೊಡಲೊಪ್ಪಿ ಈಗ ೭ ಕೋಟಿ ರೂಪಾಯಿಗಳನ್ನು ಕೊಟ್ಟಿರುವರು. ಉತ್ತರಭಾಗದಲ್ಲಿ ಸೈನಿಕರು ಪ್ರಜಾಪ್ರಭುತ್ವ ಸ್ಥಾಪನೆಯಿಂದ ಅತೃಪ್ತರಾಗಿರುತ್ತಾರಲ್ಲದೆ ಯಾವನಾದರೂ ಒಬ್ಬನು ತಮ್ಮ ಮುಖ್ಯಸ್ಥನಾಗಿ ನಿಂತರೆ ರಾಜಪ್ರಭುತ್ವವನ್ನು ಪುನಃ ಸ್ಥಾಪಿಸ ಯೋಚನೆಯುಳ್ಳವರಾಗಿದ್ದಾರೆ. ನಾನ್‌ಕಿಂಗಿನಲ್ಲಿರುವ ಸೈನಿಕರು ದಂಗೆಯೆದ್ದು ಅಂಗಡಿ ಮನೆಗಳನ್ನು ಸೂರೆಮಾಡಿ ಕೆಲ ಕಟ್ಟಡಗಳನ್ನು ಬೆಂಕಿಯಿಂದ ಹೊತ್ತಿಸಿಬಿಟ್ಟರು. ಅಷ್ಟರಲ್ಲಿ ಪ್ರಜಾಪ್ರಭುತ್ವ ಪಕ್ಷದ ಸೈನಿಕರು ದಂಗೆಕೋರರನ್ನು ಹಿಡಿದು ಅವರು ಅಪಹರಿಸಿದ್ದ ಪದಾರ್ಥಗಳನ್ನು ಸ್ವಾಧೀನಪಡಿಸಿಕೊಂಡರು. ಈ ಬಡಿದಾಟದಲ್ಲಿ ೫೦ ಜನರು ಮಡಿದಿರುವುದಾಗಿ ವರ್ತಮಾನವು ಬಂದಿದೆ.

ಕೊಲಂಬೋದಲ್ಲಿ ಹಾವಾಡಿಗನಾದ ಬೊಂಬಾಯಿನ ರಾಮಸ್ವಾಮಿ ಎಂಬುವನು ಕಳೆದ ಸೋಮವಾರ ಒಂದು ಹಡಗಿನಮೇಲೆ ಹೋಗಿ ತನ್ನ ಬುಟ್ಟಿಯಿಂದ ನಾಗರಹಾವನ್ನು ಹೊರಗೆಬಿಟ್ಟುಕೊಂಡು ಆಡಿಸುತ್ತಿರುವಾಗ ಆ ಹಾವು ರೇಗಿ ಎಷ್ಟು ಸಾಹಸಪಟ್ಟಾಗ್ಯೂ ತನ್ನ ಯಜಮಾನನ ಹಿಡಿತಕ್ಕೆ ಸಿಕ್ಕದೆ ಅವನ ಬಲಗೈಯನ್ನು ಬಲವಾಗಿ ಕಚ್ಚಿಬಿಟ್ಟಿತು. ಹಾವಿನ ವಿಷದ ಹಲ್ಲುಗಳು ಕಿತ್ತುಹಾಕಲ್ಪಟ್ಟಿರುವುದರಿಂದ ಏನೂ ಅಪಾಯವಾಗುವುದಿಲ್ಲವೆಂದು ಭಾವಿಸಲ್ಪಟ್ಟಿದ್ದಿತು, ಆ ಹಲ್ಲುಗಳು ಪುನಃ ಬೆಳೆದಿದ್ದುದರಿಂದ ಹಾವಾಡಿಗನವನಿಗೆ ವಿಷವೇರಿ ಅವನು ಕೊಂಚ ಹೊತ್ತಿನಲ್ಲಿ ಸ್ಮೃತಿತಪ್ಪಿ ಹಾಗೆಯೇ ಸತ್ತುಹೋದನು. ಆ ನಾಗರ ಹಾವು ತನ್ನ ಯಜಮಾನನನ್ನು ಕಚ್ಚಿಬಿಟ್ಟು ತನ್ನ ಪುಟ್ಟಿಯೊಳಕ್ಕೆ ಬಂದು ಸೇರಿಕೊಂಡಿದ್ದಿತು. ಆದರೆ ಕೊಂಚ ಹೊತ್ತಿನಮೇಲೆ ಗುಂಡಿನಿಂದ ಸುಡಲ್ಪಟ್ಟಿತು.

ಕೊಚ್ಚಿಯೊಳಗೆ ಒಬ್ಬ ನಾಯರ ಹುಡುಗಿಯೂ ಮತ್ತೊಬ್ಬ ಶೂದ್ರಜಾತಿಯ ಹುಡುಗನೂ ಬಾಲ್ಯದಿಂದಲೂ ಒಂದೇ ಕಡೆ ಆಡಿಕೊಂಡು ಮೈತ್ರಿಯಿಂದಿದ್ದರು. ಆ ಹುಡುಗಿಯು ತನ್ನ ತಂದೆತಾಯಿಗಳು ತನ್ನನ್ನು ಒಬ್ಬ ನಂಬೂದ್ರಿಗೆ ಕೊಟ್ಟು ವಿವಾಹವನ್ನು ಮಾಡುವ ಏರ್ಪಾಟನ್ನು ತಿಳಿದು, ತನ್ನ ಜತೆಗಾರನನ್ನು ಕರೆದು "ನನ್ನ ಕುತ್ತಿಗೆಯನ್ನು ಕುಯಿದು ಅನಂತರ ನಿನ್ನ ಕುತ್ತಿಗೆಯನ್ನು ಕುಯಿದುಕೊಳ್ಳುವುದು." ಎಂದು ಹೇಳಿದಳು. ಆ ಹುಡುಗನು ಅದಕ್ಕೆ ಸಮ್ಮತಿಸಿ ಆ ಹುಡುಗಿಯ ಕುತ್ತಿಗೆಯನ್ನು ಕತ್ತರಿಸಿ ಅನಂತರ ತನ್ನ ಕುತ್ತಿಗೆಯನ್ನು ಕುಯಿದುಕೊಂಡು ಮರಣೋನ್ಮುಖನಾಗಿರುವಷ್ಟರಲ್ಲಿ ಪೋಲೀಸರು ಈ ಸಂಗತಿಯನ್ನು ತಿಳಿದು ಬಂದು ವಿಚಾರಿಸುವಲ್ಲಿ ಆ ಹುಡುಗನು ನಡೆದ ಸಂದರ್ಭವನ್ನು ತಿಳಿಸಿ ಪ್ರಾಣವನ್ನು ಬಿಟ್ಟನು. ಬಾಲ್ಯದಿಂದ ಬಂದ ಅನುರಾಗವನ್ನು ತಪ್ಪಿಸುವುದು ಪ್ರಯಾಸವು.

ಪತ್ರವ್ಯವಹಾರವು.

ಕೊಂಡಕುಂದಿ ತಾಲ್ಲೂಕು ಗುತ್ತಿಜಿಲ್ಲ ಅನಂತಪುರ.

[ಕಳೆದ ವಾರದ ಶೇಷ.]

ಈ ಮೇರೆ ಚಂದಾದಾರರು ನೇಮಿಸಲ್ಪಟ್ಟು ಮಹಾರಾಷ್ಟ್ರ ಕರ್ನಾಟಕ ಭಾಷೆಗಳಲ್ಲಿ ವಾರ್ತಾಪತ್ರಿಕೆಗಳು ಅಲ್ಲಲ್ಲಿ ತಲೆದೋರಿ ಹತ್ತಿವೆ. ಅದರಂತೆ ಈ ಆಂಧ್ರದೇಶದ ವೀರಶೈವ ಧರ್ಮಸುಧಾರಣೆಬಗೆಗೆಬಂದು ಆಂಧ್ರಪತ್ರಿಕೆಯು ಅವಶ್ಯಕ ಬೇಕಾಗಿರುತ್ತದೆ. ಇಂಥ ಪತ್ರಿಕೆಯ ಕಾರ್ಯಕ್ರಮವನ್ನು ಮದರಾಸ್ ಗುಡಿಬಸವ ಅಂಡ್ ಕಂಪನಿಯವರು ಕೈಕೊಳ್ಳುವಂತೆ ಮಾಡಬೇಕೆಂಬ ಪತ್ರಿಕೆ ವಿಷಯಗಳನ್ನು ವಿಸ್ತಾರವಾಗಿಯೂ ನಿದರ್ಶನವಾಗಿಯೂ ಒತ್ತಿಹೇಳಲು ಈ ವಿಷಯದಲ್ಲಿ ಸಭಿಕರೆಲ್ಲರೂ ತುಂಬಾ ಸಂತುಷ್ಟರಾಗಿ ಕರತಾಡನಗಳ ಮೂಲಕ ತಮ್ಮ ಅನುಮೋದನವನ್ನು ಪ್ರದರ್ಶಿಸಿದರು ಸಭಾಧ್ಯಕ್ಷತೆಯಂ ವಹಿಸಿದ್ದ ಕೊಂಡಕುಂದಿ ನಿರಂಜನ ಸಂಸ್ಥಾನ ಸ್ವಾಮಿಗಳ ಮಠವು ಅತಿಪ್ರಸಿದ್ಧವಾದುದಾಗಿಯೂ ಅನೇ

ತ ನಿಂವಾಣವಿದ್ಯಾಭ್ಯಾಸದ ಸಂಸ್ಕಾರಗಳು ಕೇವಲ ಆಂಗ್ಲೇಯ ವಿದ್ಯಾಭ್ಯಾಸಿಗಳಿಗಾಗಿರುತ್ತಾರೆಂಬಂಶವು ತಮ್ಮ ಆಂಗ್ಲೇಯ ಭಾಷೆಯಲ್ಲಿಯೇ ವ್ಯಕ್ತವಾದುದರಿಂದ ಮಠದಲ್ಲಿ ಆಂಗ್ಲೇಯ ಪಾಠಶಾಲೆಯೊಂದನ್ನು ಧರ್ಮಾರ್ಥವಾಗಿ ಸ್ಥಾಪಿಸಬೇಕೆಂತ ಬಹುಜನ ಪ್ರಾರ್ಥನೆಯಿಂದಲು ತಮ್ಮ ಮನೋಭಿಷ್ಟವು ಅನೇಕರೀತಿ ಇರುವುದಾಗಿಯೂ ಕೆಲವು ದಿವಸದ ಸ್ಥಿತಿ ಈ ಏರ್ಪಾಡನ್ನು ಮಾಡುವದಾಗಿಯೂ ಕಲಕೋಟ್ಯವಾಗಿ ಅಪ್ಪಣೆಕೊಡಿಸಿದರು. ತರುವಾಯ ತಾ|| ೧೧-೩-೧೯ ನೆಯ ಸ್ಟಾರಲ್ಲಿ ನಡೆದಿರುವ ಕೊಣ್ಣೂರ್ ಬಸವೇಶ್ವರ ನಾಟಕವನ್ನು ಕುರಿತು ಬೊಂಬಾಯಿ ಗವರ್ನಮೆಂಟಿನಿಂದ ಕೊಡಲಾಗಿರುವ ಬಹುಮಾನ ವಿಷಯದಲ್ಲಿ ಈ ಸಭೆಯು ಪರಿಲ್ಪ ತನ್ನಾನಂದ ದುಃಖವನ್ನು ಪ್ರದರ್ಶಿಸಿದರು. ನಿ ಬ್ರಾಲ್ [illegible] ಶ್ರೀಗಳು ತಮ್ಮ ಉದಾರಮನಸ್ಸಿನಿಂದ ಸ್ಥಾಪಿಸಲ್ಪಟ್ಟ ಧರ್ಮಶಾಲೆಯನ್ನು ಈ ಪ್ರಾಂತದ ಸಮಸ್ತ ವೀರಶೈವರು ವಾರ್ಷಿಕ ಚಂದಾಗೂಡದಿಂದ ಶಾಶ್ವತಗೊಳಿಸಿದಲ್ಲಿ ಧರ್ಮವು ವೃದ್ಧಿಯಾಗಿ ಸಮಾಜಕ್ಕೆ ಮಹಾ ಉಪಕಾರವಾಗುತ್ತೆಂದು ನಿರ್ಣಯವಾಗಿಯೂ ಸ್ವಾರಸ್ಯವಾಗಿಯೂ [illegible] ಪ್ರತಿವಂದಿಸುವಂತೆ ಈ ಸುಬೇದಾರರು ಬೋಧಿಸಿದವೇಳೆ ಅಧ್ಯಕ್ಷರು ಉದಾರಮನಸ್ಸಿನಿಂದ ಈ ಧರ್ಮಶಾಲೆಗೆ ೨೫ ರೂಪಾಯಿನ ವಾರ್ಷಿಕ ಚಂದಾ ಸಲ್ಲಿಸುವದಾಗಿಯೂ, ಆಚಾರ್ಯ ಶ್ರೀಗಳವರು ಅದೇ ೨೫ ರೂಪಾಯಿನ ವಾರ್ಷಿಕ ಚಂದಾವನ್ನು ತಾವು ಸಲ್ಲಿಸುವದಾಗಿ ಒಪ್ಪಿದವೇಳೆ ಈ ಮಾರ್ಗದರ್ಶಕತ್ವದಿಂದ ಕೆಳಗೆ ನಮೂದಿಸಿರುವಂತೆ ಅನೇಕರು ವಾರ್ಷಿಕಚಂದಾ ಕೊಡಲು ಒಪ್ಪಿದರು. ೧ ಕೊಂಡಕೊಂದಿ ಕಲ್ಲಿನ ಮಠದ ದೊಡ್ಡಮೂಕಸ್ವಾಮಿಗಳವರು ರೂ.೧೧, ೨. ಯಂಟಕಿನಮಠದ ಬಸವಸಾವರು ರೂ. ೮, ೩. ಲೋಕಾಪುರ ದೊಡ್ಡಯ್ಯನವರು ರೂ ೧೮. ೪ ಆದವಾನಿ ಭಂಡಪ್ಪ ಸಾಹುಕಾರ್ ರೂ.೧೫, ೫ ಕ.ಬ ಶಾಂತಿ ಭಂಡೆಪ್ಪ ಸಾಹುಕಾರ್ ರೂ. ೧೦ ೬. ರಾಮದುರ್ಗದ ವೀರಭದ್ರಯ್ಯನವರು ರೂ. ೫, ೭. ಕೊಂಹಳ್ಳಿ ಶಿವಪ್ಪ ರೂ ೫, ೮ ಕಲ್ಲಿನಮಠದ ಸಣ್ಣಮೂಕಯ್ಯ ರೂ. ೧. ೯. ಆದವಾನಿ ಲಿಂಗ್ಗೊಲ್ಲಮ್ಮ ರೂ.೨, ೧೦. ಸಮಂತ್ರಿ ಪ್ರೋಕಣ್ಣ ರೂ. ೩, ೧೧ ಲೋಕಾಪುರದಾನಯ್ಯ ರೂ. ೩, ೧೨ ಪಾಟೀಲ್ ದೊಡ್ಡಗೌಡ ರೂ. ೮, ೧೩. ಮಜ್ಜಿಗೆ ಶಂಭಣ್ಣ ರೂ.೧, ೧೪ ಉಪ್ಪಿನಗತ್ತಿ ಭಂಡೆಪ್ಪ ರೂ ೩, ಶ್ರೀಗಳವರದು ಸಹಿತ ಮಾವಲ್ಲಾ ರೂ. ೧೩೩ ಈ ರೀತಿ ಚಂದಾ ಒಪ್ಪಂದವಾದನಂತರ ಸಂಸ್ಥಾನ ಸೊಂಡೂರಿನಿಂದ ಬಂದಿದ್ದ ವೀರಶೈವ ಜ್ಯೋತಿಷಶಾಸ್ತ್ರಿ ಪೂರೆಪ್ಪನೆಂಬ ಸದ್ಗೃಹಸ್ಥನು ತನ್ನ ವಿದ್ಯಾಸಾಹಸದಿಂದ ಅಮೌಲ್ಯವಾದ ವಿಷಯಾನಿದರ್ಶನವಾಗಿರುವ ಪುಸ್ತಕಗಳನ್ನು ಸಭಿಕರಿಗೆ ವಿಶದೀಕರಿಸಿ ಆತನಿಗೆ ಸಭಾಪತ್ಯದಿವರ ಸಂಸ್ಥಾನದಿಂದ ಆಶೀರ್ವಾದರೂಪವಾಗಿ ಪಾರಿತೋಷಕವು ಕೊಡಲ್ಪಟ್ಟಿತು. ಅಂತ್ಯದಲ್ಲಿ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟನಂತರ ವೀರಶೈವ ಮಹಾಸಭೆಯ ಬಾಲಕರಾದ ಹಾನಗಲ್ ಮಹಾಶ್ರೀಗಳನ್ನು ಕುರಿತು ಸರ್ವರು ಜಯಘೋಷದಿಂದ ವಂದನೆಗಳನ್ನು ಸಮರ್ಪಿಸಿ ಶ್ರೀಗಳಿಗೆ ಮಂಗಳವನ್ನೆಸಗಿ ಸಮಯೋಚಿತ [illegible] ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರಾಂತಿಕರೆಲ್ಲರೂ ಅಧ್ಯಕ್ಷರೇ ಮೊದಲಾದ ಸಭಿಕರ ಭಾವಚಿತ್ರವು ತೆಗೆಯಲ್ಪಟ್ಟಿತು.

ನಿರಂಜನ ಸಂಸ್ಥಾನ ಕೊಂಡಕೊಂದಿ ಸಭಾಧ್ಯಕ್ಷರು.

ವಿಜಾಪುರ

ಬೇಸಗೆಯ ಬಿಸಿಲು ಹೆಚ್ಚುತ್ತಲಿದೆ ವಿಜಾಪುರದಲ್ಲಿ ಈಗಲೇ ಉಷ್ಣಮಾಪಕ ಯಂತ್ರದಲ್ಲಿಯ ಪಾರಜವು ೧೦೩ ಅಂಶದವರೆಗೂ ಏರುತ್ತದೆ. ಆದರೆ ಎರಡು ಮೂರು ದಿನಗಳಿಂದ ಮೋಡವಾಗುತ್ತಲಿದೆ. ನಿನ್ನೆ ತುಂತುರುಮಳೆಗಳೂ ಉದುರಿದವು. ಮಿ|| ರೇವಣಸಿದ್ಧಯ್ಯ ಕಿತ್ತೂರು ಇವರು ಬಾಗಲಕೋಟೆಯಿಂದ ಸೋಮವಾರ ಬೆಳಗಾವಿಗೆ ಹುಜೂರು ಡೆ|| ಕಲೆಕ್ಟರರಾಗಿ ತೆರಳಿದರು. ಮೇಲ್ತರದ ಉದ್ಯೋಗವನ್ನು ಹೊಂದಿದುದಕ್ಕಾಗಿ ಇವರನ್ನು ನಾವು ಅಭಿನಂದಿಸುತ್ತೇವೆ. ಬಾಗಲಕೋಟೆಯಲ್ಲಿ ಅವರಿಗಾಗಿ ವೀಳೆಯ ಸಮಾರಂಭಗಳು ಬಹಳವಾಗಿ ನಡೆದವು. ಆಗ ಎಲ್ಲಾ ಜಾತಿಯ ಜನರು ಅವರಿಗಾಗಿ ತಮ್ಮ ಪ್ರೀತಿಯನ್ನೂ, ಆದರವನ್ನೂ ವ್ಯಕ್ತಪಡಿಸಿದರು. ಇದಕ್ಕೆ ಅವರು ಅರ್ಹರೇ ಇರುವರು. ಅವರ ಸಭ್ಯ, ಶಾಂತ, ಸಂಳ ಸ್ವಭಾವಗಳು ಎಲ್ಲರನ್ನೂ ಪ್ರೀತಿಗೊಳಿಸುವಂತೆ ಇವೆ. ವೀರಶೈವ ಜನಾಂಗದ ಹೆಚ್ಚಳದ ವಿಚಾರಗಳೇ ಇವರ ಮನಸ್ಸಿನಲ್ಲಿ ಕಾರ್ಯಗೊಳ್ಳುತ್ತಲಿರುತ್ತದೆ. ಇನ್ನು ಮೇಲೆ ಇವರು ಹೆಚ್ಚಿನ ಅಧಿಕಾರವನ್ನು ಹೊಂದಿದವೇಳೆ ಜನೋಪಯುಕ್ತ ಕಾರ್ಯಗಳನ್ನು ಮೊದಲಿಗಿಂತಲೂ, ಹೆಚ್ಚಾಗಿ ನೆರವೇರಿಸುವರೆಂದು ನಾವೆಲ್ಲರೂ ಹಾರೈಸುತ್ತಿದ್ದೇವೆ. ಈ ವೇಳೆಗೆ ನಮ್ಮ ವಿಜಾಪುರ ಜಿಲ್ಲೆಯಿಂದ ಒಬ್ಬ ವೀರಶೈವ ಮಾಮಲೇದಾರರು ಹೋಗಿರುವಲ್ಲಿ ಇನ್ನೊಬ್ಬರು ಈ ಜಿಲ್ಲೆಗೆ ಬರಮಾಡಿಸಿ ಬಿಡುವುದಕ್ಕೆ ನಾವು ಆನಂದಿಸುತ್ತೇವೆ. ಈ ಮೊದಲು ನವಲಗುಂದದಲ್ಲಿ ಶಿರಸ್ತೇದಾರರಾಗಿದ್ದ ಮಿ|| ಕೊಟ್ಟುರಪ್ಪ ಭಾವಿಕಟ್ಟಿ ಇವರು ಸಿಂದಿಗೆ ಮಾಮಲೇದಾರರಾಗಿ ನಿಯಮಿಸಲ್ಪಟ್ಟಿರುವರು. ಇವರಾದರೂ ನಮ್ಮ ವೀರಶೈವ ಜನಾಂಗದ ಹಿತವನ್ನು ಸದಾ ಕೋರುತ್ತಿರುವವರಲ್ಲಿ ಮುಖ್ಯರೆಂದೆನಿಸಿಕೊಂಡಿರುವರು. ಇವರು ನಮ್ಮ ಹಿಂದಿನ ವೀರಶೈವ ಅಧಿಕಾರಿಗಳಂತೆಯೇ ತಮ್ಮ ಮನಸ್ಸನ್ನೂ ಪ್ರಯತ್ನಗಳನ್ನೂ ಲೋಕಕಲ್ಯಾಣಕ್ಕಾಗಿಯೇ ವಿನಿಸಿ, ಕೀರ್ತಿಯನ್ನು ಸಂಪಾದಿಸುವರೆಂದು ನಾವು ನಂಬಿದ್ದೇವೆ. ಮಿ|| ಗುರುಸಿದ್ಧಯ್ಯ ಹಿರೇಮಠ ಡೆ|| ಡಿ|| ಕಲೆಕ್ಟರ ಇವರನ್ನು ಅಕಸ್ಮಾತ್ತಾಗಿ ೨ ನೆಯ ತಾರೀಖಿನ ದಿವಸ ಹುಚ್ಚುನಾಯಿಯು ಕಚ್ಚಿದುದರಿಂದ, ಅವರು ಅದೇದಿನ ರಾತ್ರಿ ಊದಕಮಂಡಲದ ಪಾಸ್ಟುರವಿರುವ ಕೂನೂರು ಪಾಸ್ಚರ್ ಇನಸ್ಟಿಟ್ಯೂಟಿಗೆ ಉಪಚಾರಕ್ಕಾಗಿ ಹೋದರು. ಇವರು ಕೂಡಲೇ ಗುಣವನ್ನು ಹೊಂದಿ ಮರಳಿ ಬರಲೆಂದು ನಾವು ಹಾರೈಸುತ್ತೇವೆ. ವಿಜಾಪುರ ಶಹರದ ನೇಕಾರರಲ್ಲಿ ಒಂದು ಮತ್ತು ವ್ಯಾಪಾರಸ್ಥರಲ್ಲಿ ಒಂದು ಈ ವೇಳೆಗೆ ಎರಡು ಪರಸ್ಪರ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇನ್ನಲ್ಲದೆ ಒಕ್ಕಲಿಗರಲ್ಲಿಯೂ ಇಂದು ಸಂಘವು ಸ್ಥಾಪಿಸಲ್ಪಡುವ ಚಿಹ್ನೆಗಳು ಇವೆ. ಇವು ಸ್ಥಾಪಿಸಲ್ಪಡಲು ರಾ|| ರಾ|| ಫ. ಗು ಹಳಕಟ್ಟಿ ಮತ್ತು ರಾ|| ರಾ|| ಶಿ. ಜಿ ದೇಶಮುಖ ಆಲಮೇಲ ಇವರ ಪ್ರಯತ್ನಗಳೇ ಮುಖ್ಯಕಾರಣಗಳಾಗಿವೆ. ಇಂತಹಸಂಘಗಳು ಬಡವರಿಗೆ ಬಹು ಸಹಾಯಕಾರಿಗಳೆಂದು ಈಗ ಎಲ್ಲರ ತಿಳುವಳಿಕೆಗೆ ಬರುತ್ತಿದೆ. ಎಲ್ಲ ಉದ್ಯೋಗಗಳಿಗೆ ಜೀವನವಾಗಿರುವ ಹಣದ ಸಹಾಯವು ಇಂತಹ ಸಂಘಗಳ ದ್ವಾರದಿಂದ ಬಡವರಿಗೆ ದೊರೆದು, ಅವರವರ ಉದ್ಯೋಗಗಳು ಬೆಳೆಯಲು ಕಾರಣವಾಗುವದು. ಶ್ರೀಮಂತರು ಆಭರಣಗಳನ್ನು ಮಾಡಿಸುವುದರಲ್ಲಿಯೂ ಭೂಮಿಯಲ್ಲಿ ಹೂಳಿಡುವದರಲ್ಲಿಯೂ ಹಣವನ್ನು ಹಾಳುಮಾಡುವರು. ದುರ್ವ್ಯಾಪಾರಗಳಲ್ಲಿ ವೆಚ್ಚಮಾಡುವದು ಹೇಗೆ ಹಾಳೆಂದು ತಿಳಿಯಲ್ಪಡುವದೋ ಹಾಗೆಯೇ ಮೇಲೆ ಕಂಡ ರೀತಿಯಂತೆ ಹಣವನ್ನು ಇಡುವದು ಹಾಳೆಂದು ಅರ್ಥಶಾಸ್ತ್ರಜ್ಞರು ತಿಳಿಯುತ್ತಾರೆ. ಇದು ಸರಿಯಾದುದು. ಆದುದರಿಂದ ಇಂಥ ಶ್ರೀಮಂತರು ಹೆಚ್ಚುಳಿದ ತಮ್ಮ ಹಣದಿಂದ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿದಲ್ಲಿ ಸ್ವಹಿತವನ್ನಷ್ಟೇ ಅಲ್ಲ ಪರಹಿತವನ್ನೂ ಮಾಡಿದಂತಾಗುವದು. ಇದಲ್ಲದೆ ಇಂತಹ ಸಂಘಗಳಿಂದ ಊರಲ್ಲಿ ಪರಸ್ಪರ ಪ್ರೇಮ, ಉದ್ಯೋಗ ಪ್ರೀತಿ ಒಂದು ಕಟ್ಟಿನಿಂದ ಕಾರ್ಯಮಾಡುವ ಶಕ್ತಿ ಇವೇ ಮೊದಲಾದ ಶ್ರೇಷ್ಠಗುಣಗಳು ಉಂಟಾಗುವವು. ಆದುದರಿಂದ ಎಲ್ಲ ವೀರಶೈವರು ಇವುಗಳ ಬಗ್ಗೆ ಹೆಚ್ಚಾಗಿ ಪ್ರಯತ್ನಿಸುವದು ಅವರ ಏಳಿಗೆಗೆ ಕಾರಣವೆಂದು ತಿಳಿಯುತಕ್ಕದಾಗಿದೆ. ಶ್ರೀ ಹಾನಗಲ್ಲು ಕುಮಾರಸ್ವಾಮಿಗಳವರು ಶಿವಯೋಗಮಂದಿರದ ವರ್ಗಣಿಗಾಗಿ ರೋಣ ಮೊದಲಾದ ಕಡೆಗೆ ಸಂಚರಿಸುತ್ತಿರುವರು. ಮಂದಿರದ ೫೦ ಸಾವಿರ ರೂಪಾಯಿ ಬೆಲೆಯ ಪೇರುಗಳುಳ್ಳ ಶಿವಾನಂದಫ್ಯಾಕ್ಟರಿಯ ಈ ವರುಷದ ಉತ್ಪನ್ನವು ಇತ್ತ ಕಡೆಯ ಹತ್ತಿಯ ಬೆಳೆಯು ತೀರ ಲೋಪವಾಗಿರುವದರಿಂದ ಬರುವ ಸಂಭವವು ಕಡಿಮೆ. ಮಿ|| ವೀರಬಸಪ್ಪ ಶ್ರೇಷ್ಠಿ ಬಿ ಎ. ಇವರು ಮಂದಿರದ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಲು ಸಂತೋಷವಾಗುತ್ತದೆ. ಇವರ ವ್ಯವಸ್ಥೆಯಲ್ಲಿ ಮಂದಿರವು ಬೇಗನೆ ಮುಂದರಿಯಬಹುದೆಂದು ಆಶಿಸುತ್ತೇವೆ. ಇದಲ್ಲದೆ, ಧಾರ್ಮಿಕ ಶಿಕ್ಷಣದ ಕೂಡ ನವನಾಗರಿಕತೆಯ ಜ್ಞಾನದ ಸಮ್ಮೇಲನವೂ ಆವಶ್ಯಕವಾದುದು ಇಲ್ಲವೇಹೋದರೆ, ಧಾರ್ಮಿಕ ವರ್ಗದವರ ಧರ್ಮಮೂಢತೆಯೂ, ವ್ಯವಹಾರಿಕರ ಜಾತಿಡಂಭತೆಯೂ ಸುಶಿಕ್ಷಿತರ ಧರ್ಮಜಿಗುಪ್ಸೆತೆಯೂ ಹೋಗಲಾರವು. ಮಿ|| ಶ್ರೇಷ್ಠಿಯವರ ವ್ಯವಸ್ಥಾಪಕತೆಯಲ್ಲಿ ಯೋಗ್ಯತರದ ಶಿಕ್ಷಣ ವ್ಯವಸ್ಥೆಯು ಆಗಿ, ಈ ಸಂಸ್ಥೆಯು ಸರ್ವಮಾನ್ಯವೂ, ಉಪಯುಕ್ತವೂ, ಬಲಪುಷ್ಟವೂ ಆಗುವದೆಂದು ಕೋರುತ್ತೇವೆ. ಈ ಜಿಲ್ಲೆಯಲ್ಲಿ ಒಂದು ವೀರಶೈವ ಹೈಸ್ಕೂಲು ಸ್ಥಾಪಿಸಬೇಕೆಂಬ ಪ್ರಯತ್ನಗಳು ನಡೆದಿವೆ. ಇದು ಶ್ಲಾಘ್ಯವಾದದುದು. ಶಿವಯೋಗಮಂದಿರದಲ್ಲಿಯೇ ಇದನ್ನು ಕೂಡಲೆ ಸ್ಥಾಪಿಸಲ್ಪಡಬೇಕೆಂದು ಕೆಲವರಅಭಿಪ್ರಾಯವದೆ ಮಂದಿರದ ಅಧಿಕಾರಿಗಳು ಇದಕ್ಕೆ ಅನುಮೋದಿಸಿರುವರೆಂದು ತಿಳಿಯುತ್ತದೆ ಇದು ನಿಜವಿದ್ದರೆ ಅವರಿಗೆ ಭೂಷಣವಾದದ್ದು. ಯಾಕೆಂದರೆ ಕಾಲಗತಿಯ ಕೂಡ ಮುಂದೊರಿಯಬೇಕೆಂಬ ಅವರ ಬಯಕೆಯು ಇದರಿಂದ ವ್ಯಕ್ತವಾಗುತ್ತದೆ. ಆದರೆ ಒಂದು ಸಂಸ್ಥೆಯು ಶಾಶ್ವತವಾಗಿ ನೆಲೆಗೊಳ್ಳುವಂತೆ ವ್ಯವಸ್ಥೆಮಾಡಿದ ವಿನಾ ಇನ್ನೊಂದಕ್ಕೆ ಮನಗೊಡುವದು ಲೇಸಲ್ಲ. ಮನಗೊಡುವದಾದರೆ, ಸತತ ಪ್ರಯತ್ನಿಸುವವರು ಹಣದ ಸಹಾಯ, ಕಟ್ಟುವ ತೊಂದರೆಗಳು ಇವೇ ಮೊದಲಾದವುಗಳನ್ನು ಅರಿತುಕೊಂಡು ನಿರ್ಮಲ ಮನಸ್ಸಿನಿಂದ ಯತ್ನಿಸುವದು ಒಳ್ಳೆಯದು. ಹೋದವರುಷ ಜಿಲ್ಲಾ ಸಭೆಯು ನೆರೆಯಲಿಲ್ಲ. ಇದರ ಅಧಿಕಾರಿಗಳು ತಟಸ್ಥರಾದಂತೆ ತೋರುತ್ತದೆ. ಕಾರಣಗಳು ತಿಳಿಯಲಿಲ್ಲ. ಈವರುಷವಾದರೂ ನೆರೆಯುವಂತೆ ಯತ್ನಿಸಬೇಕು. ಹಿಂದಣ ಸಭೆಯು ವಿಜಾಪುರದಲ್ಲಿ ನೆರೆದಿದ್ದು, ಈ ವರುಷ ಬಾಗಲಕೋಟೆಯಲ್ಲಿ ನೆರೆಯುವುದು ಏಹಿತವು. ವಿಜಾಪುರ ಜಿಲ್ಲೆಯಲ್ಲಿ ಬೇರೆ ಬೇರೆ ಸಂಸ್ಥೆಗಳು ಹೊರಡ ಹತ್ತಿದ್ದರೂ ದೊಡ್ಡ ಸಭೆಗಳು ಸೇರಿಸಿಂದವೇಳೆ ಆಗುತ್ತಿದ್ದಲ್ಲಿ, ಜನರಲ್ಲಿ ಉತ್ಸಾಹವು ಹೆಚ್ಚಬಲ್ಲಿಕ್ಕೂ, ಸಂಸ್ಥೆಗಳು ಬಲಗೊಳ್ಳಲಿಕ್ಕೂ, ಜನರಲ್ಲಿ ಅವುಗಳ ತತ್ವವು ತಿಳಿಯಲಿಕ್ಕೂ, ಎಲ್ಲ ಪ್ರಯತ್ನಗಳು ಒಕ್ಕಟ್ಟಿನಿಂದ ನಡೆಯಲಿಕ್ಕೂ ಕಾರಣವಾಗುವುದು.

ನೋಟೀಸ್.

ರಾಣಿ ಬನ್ನೂರಲ್ಲಿರುವ ಉಮ್ಮಾಜಿ ಕಸ್ತೂರಿಜಿ ಮಾರ್ವಾಡಿ ಇವರು ಸಮಸ್ತ ಜನರಿಗೂ ತಿಳಿಸುವುದೇನೆಂದರೆ:— ಇದೇ ಧಾರವಾಡಜಿಲ್ಲಾ ರಾಣೇಬನ್ನೂರಲ್ಲಿದ್ದ ರಂಗಾರೆ ಶೇಷಗಿರಿಯಪ್ಪ ನಾಲ್ಕಿ ಈತನ ಹೆಂಡತಿ ಸೀತಾಬಾಯಿ ಎಂಬಾಕೆಯು ನಮ್ಮಿಂದ ೪೦೦ ರೂಪಾಯಿಗಳನ್ನು ತೆಗೆದುಕೊಂಡು ಇದೇ ಪೇಟೆಯಲ್ಲಿ ತನ್ನ ಸ್ವಾಧೀನಾನುಭವದಲ್ಲಿದ್ದ ಸ್ವಂತವು ಮನೆಯನ್ನು ನಮಗೆ ವತ್ತಿ ಹಾಕಿ ಮನೆಗೆ ಬಾಡಿಗೆಯಲ್ಲ ಮತ್ತು ಹಣಕ್ಕೆ ಬಡ್ಡಿಯಿಲ್ಲವೆಂದು ಬರಕೊಟ್ಟಿದ್ದಳಲ್ಲದೆ ಹಣ ಕೊಡದೆ ತಪ್ಪಿದಲ್ಲಿ ಆ ಮನೆಯನ್ನೇ ವಿಲೇವಾರಿ ಕೊಳ್ಳುವುದೆಂದೂ ಕ್ರಯನಾಮೆಯ ಪತ್ರವನ್ನು ಬರೆದು ರಿಜಿಸ್ಟರ್ ಮಾಡಿಸಿಕೊಟ್ಟಿರುವುದಲ್ಲದೆ ೩೫ ರೂಪಾಯಿಗಳಿಗೆ ಪವತಿ ಬಾಕಿ ಮಾಡಿಕೊಂಡು ಚನ್ನಗಿರಿಗೆ ಹೋಗಿರುತ್ತಾಳೆ. ಊರಿಯಿಂದ ಒಟ್ಟು ನಮಗೆ ೧೪೫ ರೂಪಾಯಿಗಳು ಬರಬೇಕಾಗಿವೆ ಈ ಹಣಕ್ಕೆ ತಿಂಗಳೊಂದಕ್ಕೆ ಶೇಕಡ ೧ ರೂಪಾಯಿ ಬಡ್ಡಿ ತೆಗೆದುಕೊಳ್ಳುತ್ತೇವೆ. ಈಕೆಗಿನ್ನು ತಗಾದೆಮಾಡಿ ಕಾಗದ ಬರೆದಾಗ್ಯೂ ಜವಾಬನ್ನು ಕೊಡದೆ ಇದ್ದಾಳೆ. ಈಕೆಯು ನಮಗೆ ವತ್ತಿ ಹಾಕಿರುವ ಮನೆಯನ್ನು ಬೇರೆಯವರಿಗೆ ಖರೀದಿಗೆ ಕೊಡುವ ಪ್ರಯತ್ನದಲ್ಲಿದ್ದಾಳೆಂದು ವರ್ತಮಾನ ಕೇಳುತ್ತೇನೆ. ಈ ಮನೆಯನ್ನು ಎರಡನೆಯವರಿಗೆ ವತ್ತಿ ಹಾಕಲು ಅಥವಾ ಮಾರಲು ಹಕ್ಕು ಇರುವದಿಲ್ಲವಾದ್ದರಿಂದ ಯಾರೂ ಇದನ್ನು ಆಕೆಯಿಂದ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೂ ಅದು ಸಿದ್ಧಿಸುವದಿಲ್ಲವೆಂದು ಈ ನೋಟೀಸಿನಿಂದ ಎಚ್ಚರಿಸಿದೆ.

ಸಹಿ ಉಮ್ಮಾಜಿ ಕಸ್ತೂರಜಿ ಮಾರ್ವಾಡಿ
ರಾಣಿಬನ್ನೂರು.

ನೋಟೀಸ್.

ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಕೊತ್ತನಹಳ್ಳಿಗ್ರಾಮದಲ್ಲಿರುವ ಹೊರಹಟ್ಟಿ ಮಾದೈಯನ ಮಗ ಮಾದಯ್ಯ ಮೈನರ್ ಗಾರ್ಡಿಯನ್ ತಾಯಿ ಮಾದಮ್ಮ ಇದರಿಂದ ಸಮಸ್ತರಿಗೂ ತಿಳಿಸುವದೇನೆಂದರೆ:—ಇದರ ಕೆಳಗೆ ಹೇಳುವವಳ ಮಗನಿಗೆ ನಾನು ಲಗ್ನವಾಗಿಸುವಾಗ ೨೦ ವರುಷವಾಯಿತು. ಆ ಲಾಗಾಯ್ತು ನೈಶಾಖಮಾಸದ ನಗು ಹಗಲ ವಾತಾರ್ಕಂಡನಂತೆ, ನನ್ನ ಅತ್ತೆ ದೇವೀರಂಮನು ನನಗೆ ಕಾಣುತ್ತಾ ಇದ್ದಳು. ಮದುವೆಯಾದಲಾಗಾಯ್ತು ಇದುವರಿಗೂ ಗಂಡನಮನೆಯಾತು ಎಂತ ಒಂದು ಕಾಸಿನ ಬಟ್ಟೆ ಕಾಣೆ ನನ್ನ ದೊಡ್ಡಮ್ಮನು ಕೊಡುತ್ತ ಇದ್ದಳು. ಅನ್ನಕ್ಕೂ ಅಭಾವವೆ. (ಅನ್ನಬಟ್ಟೆಯಿಲ್ಲಾ, ವಡವೆಗೊಡವೆಯಿಲ್ಲಾ) ಗಂಡ ಅತ್ತೆ ಇವರಿಬ್ಬರು ಸುಗ್ರೀವಾಜ್ಞೆ. ಹೀಗೆ ಇದ್ದು ಈಗ್ಗೆ ಒಂದುವರೆವರುಷದಲ್ಲಿ ತಾಯಿಯ ದುರ್ಬೋಧನೆಯಿಂದಬೇರೆ ಒಂದು ಮನೆನಾಡಿಕೊಂಡು ಅವರಿಬ್ಬರೂ ಒಟ್ಟಾಗಿ ಇದ್ದುಕೊಂಡು ಜಮೀನು ವಾರ ಪಾಲಿಗೆ ಕೊಟ್ಟು ಅದರಲ್ಲಿ ಬಂದ ಜಿನಸಿಯನ್ನು ನನಗೆ ಕೊಡದೆ ಹೋದಕಾರಣ ನನ್ನ ಮಕ್ಕಳಿಗೂ ನನಗೂ ಸಹಾ ಜೀವನಕ್ಕೆ ಇಲ್ಲದೆಯಿದ್ದ ಕಾರಣ ಹಣ ಸಾಲಮಾಡಿ ಸೊತ್ತನ್ನು ಈಡುಮಾಡಿ ಪತ್ರಬರೆಯಲು ಹೆದರಿ ನನ್ನ ಅತ್ತೆ ಗಂಡ ಸಹಾ ನನ್ನ ಕೂಡ ಪೆಬ್ರುವರಿ ತಾರೀಖು ೨೮ ರಲ್ಲಿ ಬಂದು ಸೇರಿದರು. ಆದಾಗ್ಯೂ ನನ್ನ ಅತ್ತೆ ಪೂರ್ವದ ತನ್ನ ನಡತೆಯನ್ನು ಮರೆಯದೆ ತನ್ನ ಮಗನಿಗೆ ದುರ್ಬೋಧೆ ಮಾಡಿದರ ಮೇಲೆ ನಾವು ಯಾರಿಗು ದೇಣಕೊಡತಕ್ಕದಿಲ್ಲಾ. ಆದಾಗ್ಯೂ ನಮಗೆ ಮೋಸಮಾಡಬೇಕೆಂಬ ದುರಾಲೋಚನೆಯಿಂದಲು ದುರುಪಯೋಗ ಸ್ವಂತ ಕರ್ಚಿಗೋಸ್ಕರ ಇದರ ಕೆಳಗೆ ವಿವರಿಸುವ ನನ್ನ ಮಗನಿಗೆ ಪಿತರಾರ್ಜಿತವಾದ ಜಮೀನುಗಳನ್ನು ಕ್ರಯಭೋಗ್ಯ ಆಧಾರವಗೈರೆ ಮಾಡಿ ಹಣತೆಗೆಯುವದಾಗಿ ನಿಶ್ಚೈಸಿರವದರಿಂದ ಸಂಸ್ಕೃತ್ವದ ಸ್ವತ್ತನ್ನು ಯಾರಾದರೂ ಗಮನ ಕೊಟ್ಟು ಕ್ರಯ ಭೋಗ್ಯ ಆಧಾರವಗೈರೆ ಮಾಡಿಕೊಂಡು ಹಣವನ್ನು ಕೊಟ್ಟರೆ ಅದು ಊರ್ಜಿತವಾಗಲಾರದು ತಿಳಿಯುವುದು ಮುಂದೆ ಕೋರ್ಟಿನಲ್ಲಿ ನಿಮ್ಮಮೇಲೆ ವಿವಾದ ಬೆಳೆಯುವದರಲ್ಲಿ ಅಭ್ಯಂತರವಿಲ್ಲಾ ತಿಳಿಯುವದು. ಜಮೀನು ತಪ್ಸೀಲ್— ಮಳವಳ್ಳಿ ತಾಲ್ಲೂಕು ಕೊತ್ತನಹಳ್ಳಿ ಗ್ರಾಮದಲ್ಲಿ ನಮ್ಮ ಸ್ವಂತ ಹಿಡುವಳಿ, ಸರ್ವೆನಂಬರು—೧೯೩ ನೇ ಕಂಪ್ಲೆಟ್ ಗೊನಹೊಲಾ ೨೩೧ ಕಂಪ್ಲೆಟ್ ಮರಳುಹೊಲಾ ೨೪೯ ನೆ ಕಂಪ್ಲೆಟ್ ಯರೆ ಹೊಲಾ ೨೩೧ ಪೈಕಿ ೦ ನೆ ಹಲ್ಲುಗಾವಲು ೫೦ ತರಿ ಜಮೀನು. ಒಟ್ಟು ೪ ಸ್ವತ್ತುಗಳು. ಮಾದೈಯನ್ನ ಮೈನರ್ ಗಾರ್ಡಿ ತಾಯಿ ಮಾದಮ್ಮನ ಗುರುತಿನ ರುಜು.

ತಾ|| ೧೯-೩-೧೯೨೩.

---

7 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರೊಂದಕ್ಕೆ ೧೦-೦-೦ ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ವಿವೇಕಮಾಲಾ

10

೨ ನೆಯ ಭಾಗ

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚಿಗೆಗೊಳಗಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನು ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೩೦ ಪುಟಗಳು.
ಅಂಚೆಯವೆಚ್ಚವು ಬೇರೆ.
ವಿಳಾಸ—"ಮೈಸೂರ್ ಸ್ಟಾರ್ ಆಫೀಸ್" ಮೈಸೂರ್.

ತ್ವರೆಮಾಡಿರಿ! ಅಪೂರ್ವಲಾಭ!! ಅಮೂಲ್ಯಸಮಯ.!!!

ಏಪ್ರಿಲ ತಿಂಗಳ ಅಂತ್ಯದೊಳಗಾಗಿ ದರಖಾಸ್ತನ್ನು ಕಳುಹಿಸುವ "ಮೈಸೂರ್ ಸ್ಟಾರ್" ಚಂದಾದಾರರಿಗೆ ಮಾತ್ರ

ವಾರ್ಷಿಕಚಂದಾ ೧—೪—೦
2 ಇತರರಿಗೆ ... ೧ ೮—೦

ವಧೂರಮಣಿ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕ ಇವುಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿಮರ್ಶನ ಗಳ ಉತ್ತಮೋತ್ತಮ ಉಪನ್ಯಾಸಗಳೂ, ಪಾಕಶಾಸ್ತ್ರ ಮೊದಲಾದ ಬಗೆಬಗೆಯ ಉಪಯುಕ್ತ ವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

3 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ:— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣಿಯಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾ ಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣಿದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ

ಬಸವಲಿಂಗಸ್ವಾಮಿಗಳು. ಹೊಸಮಠ ಮೈಸೂರು.

೧೯೨೩ ನೆ ಇಸವಿಯ ಪಾಕೆಟ್‌ಡೈರಿ.

44

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೋ ಎಂಬ ಬಟ್ಟೆಯಿಂದ ಯಂತ್ರಗಳಲ್ಲಿ ಮಾಡಿದ್ದು. (೩) ಅಕ್ಷರ—ಸ್ಪಷ್ಟವಾದ್ದು. ಯಂತ್ರಗಳಲ್ಲಿ ಮುದ್ರಿಸಿದ್ದು. (೪) ರೂಲು—ಪ್ರತಿಪುಟಕ್ಕೂ ತಾರೀಖುಗಳಿಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇತರ ಕೆಳಗೆ ಪುಟದ ಕೊನೆಯವರಿಗೂ ನೀಲಿರೂಲುಗೆರೆಗಳೂ ಹಾಕಿದೆ (೫) ವಿಷಯ—ಪದಾಲು, ರೈಲು, ಕೋರ್ಟ, ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಕ್ರಯಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜನಿವಾರ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜನಿವಾರ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

41 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಚಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೩೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ-

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ ಉತ್ತರಕನ್ನಡ.

ನೋಟೀಸ್.

11 ಜಾತಕ ಸುಧಾಕರ.

ಅಯ್ಯಾ ಲೋಕಬಂಧುಗಳಿರಾ ವಿನಯಪೂರ್ವಕ ತಿಳಿಸುವದೇನೆಂದರೆ.—ಈ ನಮ್ಮ ಭರತಖಂಡದಲ್ಲಿ ಅನೇಕ ವಿದ್ವಾಂಸರು ಜೋತಿಷಶಾಸ್ತ್ರಾಭ್ಯಾಸಮಾಡಿ ಮರ್ಮವನ್ನು ತಿಳಿಯಲಾರದೆ ಮಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ರಚಿಸಲಿಲ್ಲ. ಅಂದ ಪ್ರಯುಕ್ತ ನಾನು ಅನೇಕ ಪುರಾತನ ಪರಾಶರ ಗ್ರಂಥಗಳನ್ನು ಪರಿಶೋಧಿಸಿ ಅಲ್ಪವಿದ್ಯರವರಿಗು ಸಹ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡ ಶ್ಲೋಕ ಟೀಕಾ ತಾತ್ಪರ್ಯದೊಂದಿಗೆ ತಯಾರಿಸಿರುತ್ತೇನೆ ಕ್ರಯವು ಕೂಡ ಬಹಳ ಕಮ್ಮಿಯಾಗಿರುತ್ತದೆ. ಜಾತಕಸುಧಾಕರಗ್ರಂಥ ೧ ಕ್ಕೆ ರೂ ೦-೧೦-೦. ೩ ಪುಸ್ತಕಗಳನ್ನು ಒಟ್ಟಿಗೆ ತರಿಸಿದರೆ ೧ ಪುಸ್ತಕವು ಉಚಿತವಾಗಿ ಕೊಡಲ್ಪಡುತ್ತೆ.

ಸಂಪೂರ್ಣಜಾತಕವು.

ಸನ್ಮಿತ್ರರೇ—ತಮ್ಮ ಮಕ್ಕಳಿಗೆ ಸಂಪೂರ್ಣಜಾತಕವನ್ನು ತಯಾರ್ಮಾಡಿಸಬೇಕೆಂಬ ಅಪೇಕ್ಷೆಯುಳ್ಳವರು ಜನನವಾದ ಸಂವತ್ಸರ ಮಾಸ ವಾರ ನಕ್ಷತ್ರ ಜನನವೇಳೆಯನ್ನು ಬರದು ಕಳಿಸಿದರೆ, ನಾವು ಸಿದ್ಧಾಂತರೀತಿಯಾಗಿ ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಗ್ರಹಸ್ಫುಟಭಾವಕುಂಡಲಿ ದಶಾಫಲಭಾವಕುಂಡಲಿ ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶಿವರ್ಗ ಷಡ್ಬಾಂಶಗಳು ಗ್ರಹಗಳಸಮಯ ಅವಸ್ಥೆಪಂಚಕ ಚಕ್ರವು ಆಯುರ್ದಾಯವನ್ನು ಅನೇಕವಿಧವಾದ ಯಾವತ್ತು ಜಾತಕಗಣಿತಗಳನ್ನು ಸಿದ್ಧಾಂತರೀತಿಯಾಗಿ ಮಾಡಿಕೊಂಡು ತಿಥಿವಾರನಕ್ಷತ್ರರಾಶಿ ಲಗ್ನಫಲ ರಾಜಯೋಗಾದಿಫಲ ತನ್ವಾದಿದ್ವಾದಶ ಭಾವಫಲ ಆಯುಷ್ಯದವರವಿಗು ಅಂತರ್ದಶಾಫಲ ಮಾರಕಾದಿ ಗಂಡಕಾಲಗಳು ಅವುಗಳಿಗೆ ತಕ್ಕ ಶಾಂತಿಕರ್ಮ ಮೊದಲಾದ ಯಾವತ್ತುಫಲಗಳನ್ನು ೫೦—೬೦ ಪಾನುಗಳುಳ್ಳ ಪುಸ್ತಕದಲ್ಲಿ ಬರದು ಕಳಿಸುತ್ತೇವೆ ಸಂಪೂರ್ಣಜಾತಕ ೧ ಕ್ಕೆ ಕ್ರಯ ರೂ ೧೦—೦—೦.

ನಷ್ಟಜಾತಕವು.

ಕೆಲವುಜನರು ತಮ್ಮ ಜನನಕಾಲವು ತಿಳಿಯದೆಯಿರುವುದರಿಂದ ಜಾತಕಗಳನ್ನು ಬರೆಸುವದು ಅಸಾಧ್ಯವೆಂದುಕೊಂಡರೆ ಜ ವಯಸ್ಸು ಹೆಸರನ್ನು ಹಾಗೂ ತಾವು ಮಾಡಿದ ಪ್ರಶ್ನೆವೇಳೆಯನ್ನು ಸಂವತ್ಸರ ಮಾಸ ತಿಥಿ ನಕ್ಷತ್ರವನ್ನು ಚನ್ನಾಗಿ ಬರದು ಕಳಿಸಿದರೆ, ನಾವು ಪ್ರಶ್ನೆವೇಳೆಯನ್ನು ಸ್ಥಿರಪಡಿಸಿಕೊಂಡು ಮೇಲ್ಕಂಡ ಸಂಪೂರ್ಣಜಾತಕದಂತೆ ಯಾವತ್ತು ಫಲಗಳನ್ನು ಆಯುಷ್ಯದವರವಿಗು ಬರೆದು ಕಳಿಸುತ್ತೇವೆ. ನಷ್ಟಜಾತಕ ಕ್ರಯ ರೂ ೫—೦—೦.

೧೨ ತಿಂಗಳ ಭವಿಷತ್ಫಲ.

ಮಹನೀಯರೇ—ತಮ್ಮ ಹೆಸರನ್ನು ಬರದು ಕಳಿಸಿದರೆ ಪತ್ರ ಬಂದದಿನದಿಂದ ಮುಂದುವರುಷದ ಭವಿಷತ್ಫಲ ಅಂದರೆ ಪ್ರತಿ ತಿಂಗಳಲ್ಲಿ ಜಯಾಪಜಯ ಲಾಭ ನಷ್ಟ ದೇಹಪೀಡೆ ಮುಂತಾದ ಯಾವತ್ತು ಯನ್ನು ಅನೇಕ ವಿಷಯಗಳನ್ನು ಬರದು ಕಳಿಸುತ್ತೇವೆ. ಭವಿಷತ್ಫಲ ಆಗ್ಯಪತ್ರಿಕೆಗೆ ಕ್ರಯ ರೂ ೧-೦-೦

ನಮ್ಮಲ್ಲಿ ದೊರಿಯುವ ವಿಷಯಗಳು.

ಜಾತಕಸುಧಾಕರ ರೂ ೦-೧೦-೦; ವೀರಶೈವಮತಬೋಧಿನಿ ರೂ ೦-೮-೦; ಸಂಕ್ಷಿಪ್ತಯಿಷ್ಟಲಿಂಗಾರ್ಚನವಿಧಿ ರೂ ೦-೩-೦; ನವಗ್ರಹಗಳದಂಡಕ ರೂ ೦-೨-೦;

ಸಂಪೂರ್ಣಜಾತಕವನ್ನು ಬರಿಸುವವರಿಗೆ ನಾಲ್ಕು ಗ್ರಂಥ ಉಚಿತವಾಗಿ ಕೊಡುತ್ತೇವೆ. ನಷ್ಟಜಾತಕವನ್ನು ಬರಸಿದವರಿಗು ಸಹ ದೊರೆಯುತ್ತವೆ. ಜಾತಕಸುಧಾಕರ ವೀರಶೈವಮತಬೋಧಿನಿ ಯಾವದಾದರು ತರಿಸಿಕೊಂಡವರಿಗೆ ನವಗ್ರಹದಂಡಕ ಉಚಿತಕೊಡುತ್ತೇವೆ. ಯಲ್ಲವು ವಿ. ಪಿ. ಸಹಿತ ಬರುತ್ತೆ.

ನಮ್ಮ ವಿಳಾಸ:—
ಯುನ್. ಯಂ. ಶಾಸ್ತ್ರಿಗಳು ಗಣೇಶಬೀದಿ
ಬಳ್ಳಾರಿ.

ಸಂತೋಷಕರವಾದ ಪ್ರಕಟಣೆ.

8 ಬರುವ ಮೆ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಬೇಗನ ತರೇ.



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಸಿಲ್ವರ್ ಕೇಸಿನಿಂದ ತಯಾರಾದದ್ದು. ಇದಿಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬದು ಸರ್ವರಿಗೂ ತಿಳಿದವಿಷಯವೇ ಸರಿ ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ (2) ಉತ್ತರ ನಾಬ (3) ನಾಣ್ಯವಾದ ಕರವಸ್ತ್ರ (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯದ ಶೀಷೆ (5) ಪೋಟೋ ಉಂಗರ (6) ಸರ್ಪಕಾರದ ಉಂಗುರ (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹೂವು. (9) ಫೌಂಟನ್ ಪೆನ್ (10) ಮಕ್ಕಳ ತಮಾಷೆಬೊಂಬೆ. (11) ಸುಂದರವಾದ ಹಾವಳ್ಳಿ ಡಬ್ಬಿ (ಡಬ್ಬಿಯನ್ನು ತೆರೆದಲ್ಲಿ ತಮಾಷೆಯಾದ ಹಾವು ಹಾರುತ್ತದೆ) (12) ಮರ್ಮ ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ ಆರ್. ವೆಂಕಟರಾಮ ಅಂಡ್ ಕಂಪೆನಿ,
ನಂಬರು 7 ಕೋಟ್ ವೆಂಕಟಾಚಲಯ್ಯರ್ ಬೀದಿ,
ಮದ್ರಾಸ.

ತ ವರ್ನ್ಯಾಕ್ಯುಲರ ಶಾಲೆಗಳಲ್ಲಿಯೂ ಸಂಚಾಲಕರುಗಳು ಕೇವಲ ಆಂಗ್ಲೀಯ ವಿದ್ಯಾರ್ಥಿಗಳಿಗಾಗಿರುತ್ತಾರೆಂಬಂಶವನ್ನು ಆಂಗ್ಲೀಯ ಬಾಷೆಯಲ್ಲಿಯೇ ವ್ಯಕ್ತಮಾಡುದರಿಂದ ಮಠದಲ್ಲಿ ಆಂಗ್ಲೀಯ ಪಾಠಶಾಲೆಯೊಂದನ್ನು ಧರ್ಮಾರ್ಥವಾಗಿ ಸ್ಥಾಪಿಸಬೇಕೆಂತ ಬಹುಜನ ಸಾರ್ವಜನರು ತಮ್ಮ ಮನೋಭಿಲಾಷೆಯ ಅತಿರೀತಿ ಇರುವುದಾಗಿಯೂ ಕೊಂಚ ದಿವಸಗಳ್ಳಯೇ ಈ ಪರ ಕಾರ್ಯವನ್ನು ಮಾಡುವುದಾಗಿಯೂ ಸಂಕಲ್ಪಿತವಾಗಿ ಅಪ್ಪಣೆಕೊಡಿಸಿದರು. ತರುವಾಯ ತಾ॥ ೧೧-೩-೧೩ ನೇಯ ಶ್ಯಾನಿವಾರ ನೂತನವಾಗಿರುವ ಕೋರ್ಟ್ ಆಫ್ ವಾರ್ಡ್ಸ್ ನಾಟಕವನ್ನು ಕುರಿತು ಬೊಂಬಾಯಿ ಗವರ್ನಮೆಂಟಿನಿಂದ ಕೊಡಲಾಗಿರುವ ವಿರುದ್ಧ ಉತ್ತರದ ವಿಷಯದಲ್ಲಿ ಈ ಸಭೆಯವರೆಲ್ಲ ತಮ್ಮ ಖೇದ ದುಃಖವನ್ನು ಪ್ರದರ್ಶಿಸಿದರು. ನಿಬಳಿಕ ನಿಗದಿ ಶ್ರೀಗಳು ತಮ್ಮ ಉದಾರಮನಸ್ಸಿನಿಂದ ಸ್ಥಾಪಿಸಲ್ಪಟ್ಟ ಧರ್ಮಶಾಲೆಯನ್ನು ಈ ಪ್ರಾಂತದ ಸಮಸ್ತ ವೀರಶೈವರು ವಾರ್ಷಿಕ ಚಂದಾರೂಪದಿಂದ ಶಾಶ್ವತಗೊಳಿಸಿದಲ್ಲಿ ಧರ್ಮವು ವೃದ್ಧಿಯಾಗಿ ಸಮಾಜಕ್ಕೆ ಮಹಾ ಉಪಕಾರವು ಆಗುತ್ತೆಂದು ಸಕಾರಣವಾಗಿಯೂ ಸ್ವಾರಸ್ಯವಾಗಿಯೂ ಶ್ರೀ ತಿಪ್ಪೇರುದ್ರಪ್ಪನವರು ಪ್ರತಿಪಾದಿಸುವಂತೆ ಈ ಸಂದರ್ಭದಲ್ಲಿ ಬೋಧಿಸಿದವೇಲೆ ಅಧ್ಯಕ್ಷರು ಉದಾರಮನಸ್ಸಿನಿಂದ ಈ ಧರ್ಮಶಾಲೆಗೆ ೨೫ ರೂಪಾಯಿನ ವಾರ್ಷಿಕ ಚಂದಾ ಸಲ್ಲಿಸುವದಾಗಿಯೂ, ಆಚಾರ್ಯ ಶ್ರೀಗಳವರು ಅದೇ ೨೫ ರೂಪಾಯಿನ ವಾರ್ಷಿಕ ಚಂದಾವನ್ನು ತಾವು ಸಲ್ಲಿಸುವದಾಗಿ ಒಪ್ಪಿದವೇಲೆ ಈ ಮಾರ್ಗದರ್ಶಕತ್ವದಿಂದ ಕೆಳಗೆ ನಮೂದಿಸಿರುವಂತೆ ಅನೇಕರು ವಾರ್ಷಿಕ ಚಂದಾ ಕೊಡಲು ಒಪ್ಪಿದರು. ೧ ಕೊಂಡಕೊಂಡಿ ಕಲ್ಲಿನಮಠದ ದೊಡ್ಡ ಮಹಾಸ್ವಾಮಿಗಳವರು ರೂ. ೧೧, ೨. ಯಂಬಕಿಂಬರದ ಬಸವಯ್ಯನವರು ರೂ. ೮, ೩. ಲೇಪಡಿ ದೊಡ್ಡಯ್ಯನವರು ರೂ ೧೮. ೪. ಅದವಾನಿ ಭಂಡಪ್ಪ ಸಾಹುಕಾರ್ ರೂ. ೧೧, ೫ ಸ.ಬಿ ಶಾರ್ ಭಂಡಪ್ಪ ಸಾಹುಕಾರ್ ರೂ. ೧೦ ೬. ರಾಮಗಿರಿ ಮಠದ ವೀರಯ್ಯನವರು ರೂ. ೫, ೭. ಕೊಂಹಳ್ಳಿ ಶಿವಪ್ಪ ರೂ ೫, ೮ ಕಲ್ಲುಮಠದ ಸಣ್ಣ ಮಹಾಸ್ವಾಮಿ ರೂ. ೧. ೯. ಅದವಾನಿ ಲದ್ದೆಗಲ್ಲಪ್ಪ ರೂ. ೨, ೧೦. ಸಮಂತ್ರಿ ಪ್ರೊಣ್ಣ ರೂ. ೩, ೧೧ ಲೇಪಡಿ ದಾಸಯ್ಯ ರೂ. ೩, ೧೨ ಪಾಟೀಲ್ ದೊಡ್ಡಗೌಡ ರೂ. ೮, ೧೩. ಮಜ್ಜಿಗೆಶರಭಣ್ಣ ರೂ. ೧, ೧೪ ಉಪ್ಪಿಗಟ್ಟಿ ಭಂಡಪ್ಪ ರೂ. ೩, ಶ್ರೀಗಳವರದು ಸಮೇತ ಮಾಯಣ್ಣ ರೂ. ೧೫೬ ಈ ರೀತಿ ಚಂದಾ ಒಪ್ಪಂದವಾದನಂತರ ಸಂಸ್ಥಾನ ಸೊಂಡೂರಿನಿಂದ ಬಂದಿದ್ದ ವೀರಶೈವ ಜ್ಯೋತಿಷಶಾಸ್ತ್ರಿ ಪೂರೆಪ್ಪನೆಂಬ ಸದ್ಗೃಹಸ್ಥನು ತನ್ನ ವಿದ್ವತ್ತತೆಯಿಂದ ಅಮೌಲ್ಯವಾದ ವಿಷಯ ನಿವರ್ತನಮಾಡಿಕೊಟ್ಟದ್ದನ್ನು ಸಭಿಕರಿಗೆ ವಿಶದೀಕರಿಸಿ ಆತನಿಗೆ ಸಭಾಧ್ಯಕ್ಷತೀರ್ಥ ಸಂಸ್ಥಾನದಿಂದ ಆಶೀರ್ವಾದರೂಪವಾಗಿ ಪಾರಿತೋಷಕವು ಕೊಡಲ್ಪಟ್ಟಿತು. ಅಂತ್ಯದಲ್ಲಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟನಂತರ ವೀರಶೈವ ಮಹಾಸಭೆಯ ಬಾಲಕರಾದ ದಾಸಗಲ್ ಮಹಾಶ್ರೀಗಳನ್ನು ಕುರಿತು ಸರ್ವರು ಜಯಘೋಷದಿಂದ ವಂದನೆಗಳನ್ನು ಸಮರ್ಪಿಸಿ ಶ್ರೀಗಳಿಗೆ ಮಂಗಲವನ್ನೆಸಗಿ ಸಮಯೋಚಿತ ತೀರ್ಥಪ್ರಸಾದದೊಡನೆ ಸಭೆಯು ವಿಸರ್ಜಿಸಲ್ಪಟ್ಟು ಪಾಂಡೀಟಿಗೆ ಅಧ್ಯಕ್ಷರೇ ಮೊದಲಾದ ಸಭಿಕರ ಭಾವಚಿತ್ರವು ತೆಗೆಯಲ್ಪಟ್ಟಿತು.

ನಿರಂಜನ ಸಂಸ್ಥಾನ ಕೊಂಡಕೊಂಡಿ ಸಭಾಧ್ಯಕ್ಷರು.

ಬಿಜಾಪುರ

ಬೇಸಗೆಯ ಬಿಸಿಲು ಈ ಚೈತ್ರದಲ್ಲಿಯೇ ವಿಜಾಪುರದಲ್ಲಿ ಈಗಲೇ ಉಷ್ಣಮಾಪಕ ಯಂತ್ರದಲ್ಲಿಯ ಪಾರಜವು ೧೦೩ ಅಂಶದವರೆಗೂ ಏರುತ್ತದೆ. ಆದರೆ ಎರಡು ಮೂರು ದಿವಸಗಳಿಂದ ಮೋಡವಾಗುತ್ತಲಿದೆ. ನಿನ್ನೆ ತುಂತುರ ಮಳೆಗಳೂ ಉದುರಿದವು. ವಿ॥ ಲೋಕಾಪುರ ಸಿದ್ದಯ್ಯ ಶೆಟ್ಟರು ಇವರು ಬಾಗಲಕೋಟೆಯಿಂದ ಹೇಳುವಾದ ಬೆಳಗಾವಿಗೆ ಹುಜೂರ ಡಿ॥ ಕಲೆಕ್ಟರರಾಗಿ ತೆರಳಿದರು. ಮೇಲ್ತರದ ಉದ್ಯೋಗವನ್ನು ಹೊಂದಿರುವದಕ್ಕಾಗಿ ಇವರನ್ನು ನಾವು ಅಭಿನಂದಿಸುತ್ತೇವೆ. ಬಾಗಲಕೋಟಿಯಲ್ಲಿ ಅವರಿಗಾಗಿ ನಿರೋಪಸಮಾರಂಭಗಳು ಬಹಳವಾಗಿ ನಡೆದವು. ಆಗ ಎಲ್ಲಾ ಜಾತಿಯ ಜನರು ಅವರಿಗಾಗಿ ತಮ್ಮ ಪ್ರೀತಿಯನ್ನೂ, ಆದರವನ್ನೂ ವ್ಯಕ್ತಪಡಿಸಿದರು. ಇದಕ್ಕೆ ಅವರು ಅರ್ಹರೇ ಇರುವರು. ಅವರ ಸಭ್ಯ, ಶಾಂತ, ನಂಬಿಕೆಸ್ವಭಾವಗಳು ಎಲ್ಲರನ್ನೂ ಪ್ರೀತಿಗೊಳಿಸುವಂತೆ ಇದೆ. ವೀರಶೈವ ಜನಾಂಗದ ಹೆಚ್ಚಳದ ವಿಚಾರಗಳೇ ಇವರು ಮನಸ್ಸಿನಲ್ಲಿ ಸದಾ ತುಳುಕಾಡುತ್ತಲಿರುತ್ತದೆ. ಇನ್ನು ಮೇಲೆ ಇವರು ಹೆಚ್ಚಿನ ಪದವಿಯನ್ನು ಹೊಂದಿದವೇಲೆ ಜನೋಪಯುಕ್ತ ಕಾರ್ಯಗಳನ್ನು ಮೊದಲಿಗಿಂತಲೂ, ಹೆಚ್ಚಾಗಿ ನೆರವೇರಿಸುವರೆಂದು ನಾವೆಲ್ಲರೂ ಹಾರೈಸುತ್ತಿದ್ದೇವೆ. ಈ ವೇಳೆಗೆ ನಮ್ಮ ವಿಜಾಪುರ ಜಿಲ್ಲೆಯಿಂದ ಒಬ್ಬ ವೀರಶೈವ ಮಾಮಲೇದಾರರು ಯೋಗ್ಯರಲ್ಲಿ ಇನ್ನೊಬ್ಬರು ಈ ಜಿಲ್ಲೆಗೆ ವರ್ಗಾಯಿಸಿ ಬಂದುದಕ್ಕೆ ನಾವು ಆನಂದಿಸುತ್ತೇವೆ. ಈ ಮೊದಲು ನವಲಗುಂದದಲ್ಲಿ ಶಿರಸ್ತೇದಾರರಾಗಿದ್ದ ವಿ॥ ಕೊಟ್ಟೂರಪ್ಪ ಭಾವಿಕಟ್ಟಿ ಇವರು ಸಿಂದಗಿ ಮಾಮಲೇದಾರರಾಗಿ ನಿಯಮಿಸಲ್ಪಟ್ಟಿರುವರು. ಇವರಾದರೂ ನಮ್ಮ ವೀರಶೈವ ಜನಾಂಗದ ಹಿತವನ್ನು ಸದಾ ಕೋರುತ್ತಿರುವವರಲ್ಲಿ ಮುಖ್ಯರೆಂದೆನಿಸಿಕೊಂಡಿರುವರು. ಇವರು ನಮ್ಮ ಹಿಂದಿನ ವೀರಶೈವ ಅಧಿಕಾರಿಗಳಂತೆಯೇ ತಮ್ಮ ಮನಸ್ಸನ್ನೂ ಪ್ರಯತ್ನಗಳನ್ನೂ ಲೋಕಕಲ್ಯಾಣಕ್ಕಾಗಿಯೇ ವಿನಿಯೋಗಿಸಿ, ಕೀರ್ತಿಯನ್ನು ಸಂಪಾದಿಸುವರೆಂದು ನಾವು ನಂಬಿದ್ದೇವೆ. ವಿ॥ ಗುರುಸಿದ್ದಯ್ಯ ಹಿರೇಮಠ ಡಿ॥ ಡಿ॥ ಕಲೆಕ್ಟರ ಇವರನ್ನು ಅಕಸ್ಮಾತ್ತಾಗಿ ೨ ನೇಯ ತಾರೀಖಿನ ದಿವಸ ಹುಚ್ಚುನಾಯಿಯು ಕಚ್ಚಿದುದರಿಂದ, ಅವರು ಅದೇ ದಿವಸ ರಾತ್ರಿ ಉದಕಮಂಡಲದ ಹತ್ತಿರವಿರುವ ಕೂನೂರು ಪಾಶ್ಚರ್ ಇನಸ್ಟಿಟ್ಯೂಟಿಗೆ ಔಷಧಿಗಾಗಿ ಹೋದರು. ಇವರು ಕೂಡಲೇ ಗುಣವನ್ನು ಹೊಂದಿ ಮರಳಿ ಬರಲೆಂದು ನಾವು ಹಾರೈಸುತ್ತೇವೆ. ವಿಜಾಪುರ ಶಹರದ ನೇಕಾರರಲ್ಲಿ ಒಂದು ಮತ್ತು ವ್ಯಾಪಾರಸ್ಥರಲ್ಲಿ ಒಂದು ಈ ವೇಳೆಗೆ ಎರಡು ಪರಸ್ಪರ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇನ್ನುಳಿದ ಬಿಕ್ಕೂರಿಗರದಾಗಿ ಬಾದು ಸಂಘವು ಸ್ಥಾಪಿಸಲ್ಪಡುವ ಚಿಹ್ನೆಗಳು ಇವೆ. ಇವು ಸ್ಥಾಪಿಸಲ್ಪಡಲು ರಾ॥ ರಾ॥ ಘ. ಗು ಹರಕಟ್ಟಿ ಮತ್ತು ರಾ॥ ರಾ॥ ಶಿ. ಜಿ ದೇಶಪಾಂಡೆ ಇವರ ಪ್ರಯತ್ನಗಳೇ ಮುಖ್ಯಕಾರಣಗಳಾಗಿವೆ. ಇಂತಹ ಸಂಘಗಳು ಬಡವರಿಗೆ ಬಹು ಸಹಾಯಕಾರಿಗಳೆಂದು ಈಗ ಎಲ್ಲರ ತಿಳುವಳಿಕೆಗೆ ಬರುತ್ತಿದೆ. ಎಲ್ಲ ಉದ್ಯೋಗಗಳಿಗೆ ಜೀವನವಾಗಿರುವ ಹಣದ ಸಹಾಯವು ಇಂತಹ ಸಂಘಗಳ ದ್ವಾರದಿಂದ ಬಡವರಿಗೆ ದೊರೆತರೆ, ಅವರವರ ಉದ್ಯೋಗಗಳು ಬೆಳೆಯಲು ಕಾರಣವಾಗುವದು. ಶ್ರೀಮಂತರು ಆಭರಣಗಳನ್ನು ಮಾಡಿಸುವುದರಲ್ಲಿಯೂ ಭೂಮಿಯಲ್ಲಿ ಹೂಳಿಡುವದರಲ್ಲಿಯೂ ಹಣವನ್ನು ಹಾಳುಮಾಡುವರು. ದುರ್ವ್ಯಾಪಾರಗಳಲ್ಲಿ ವೆಚ್ಚಮಾಡುವದು ಹೇಗೆ ಹಾಳೆಂದು ತಿಳಿಯಲ್ಪಡುವದೋ ಹಾಗೆಯೇ ಮೇಲೆ ಕಂಡ ರೀತಿಯಂತೆ ಹಣವನ್ನು ಇಡುವದು ಹಾಳೆಂದು ಅರ್ಥಶಾಸ್ತ್ರಜ್ಞರು ತಿಳಿಯುತ್ತಾರೆ. ಇದು ಸರಿಯಾದುದು. ಆದುದರಿಂದ ಇಂಥ ಶ್ರೀಮಂತರು ಹೆಚ್ಚುಳಿದ ತಮ್ಮ ಹಣದಿಂದ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿದಲ್ಲಿ ಸ್ವಹಿತವನ್ನಷ್ಟೇ ಅಲ್ಲ ಪರಹಿತವನ್ನೂ ಮಾಡಿದಂತಾಗುವದು. ಇದಲ್ಲದೆ ಇಂತಹ ಸಂಘಗಳಿಂದ ಊರಲ್ಲಿ ಪರಸ್ಪರ ಪ್ರೇಮ, ಉದ್ಯೋಗ ಪ್ರೀತಿ ಒಂದು ಕಟ್ಟಿನಿಂದ ಕಾರ್ಯಮಾಡುವ ಶಕ್ತಿ ಇವೇ ಮೊದಲಾದ ಶ್ರೇಷ್ಠಗುಣಗಳು ಉಂಟಾಗುವವು. ಆದುದರಿಂದ ಎಲ್ಲ ವೀರಶೈವರು ಇವುಗಳ ಬಗ್ಗೆ ಹೆಚ್ಚಾಗಿ ಪ್ರಯತ್ನಿಸುವದು ಅವರ ಏಳಿಗೆಗೆ ಕಾರಣವೆಂದು ತಿಳಿಯತಕ್ಕದಾಗಿದೆ. ಶ್ರೀ ಹಾನಗಲ್ಲು ಕುಮಾರಸ್ವಾಮಿಗಳವರು ಶಿವಯೋಗಮಂದಿರದ ವರ್ಗಣಿಗಾಗಿ ಕೋಣ ಮೊದಲಾದ ಕಡೆಗೆ ಸಂಚರಿಸುತ್ತಿರುವರು. ಮಂದಿರದ ೨೦ ಸಾವಿರ ರೂಪಾಯಿ ಬೆಲೆಯ ಹೊಲಗಳೆಲ್ಲ ಶಿವಾನಂದಭಾಷ್ಯರಿಂದ ಈ ವರುಷದ ಉತ್ಪನ್ನವು ಇತ್ತೀಚೆಯ ಹತ್ತಿಯ ಬೆಳೆಯು ತೀರ ಲೋಪವಾಗಿರುವದರಿಂದ ಬರುವ ಸಂಭವವು ಕಡಿಮೆ. ವಿ॥ ವೀರಬಸಪ್ಪ ಶ್ರೇಷ್ಠಿ ಬಿ ಎ. ಇವರು ಮಂದಿರದ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಲು ಸಂತೋಷವಾಗುತ್ತದೆ. ಇವರ ವ್ಯವಸ್ಥೆಯಲ್ಲಿ ಮಂದಿರವು ಬೇಗನೆ ಮುಂದರಿಯಬಹುದೆಂದು ಆಶಿಸುತ್ತೇವೆ. ಇದಲ್ಲದೆ, ಧಾರ್ಮಿಕ ಶಿಕ್ಷಣದ ಕೂಡ ನವನಾಗರಿಕತೆಯ ಜ್ಞಾನದ ಸಮ್ಮೇಲನವೂ ಆವಶ್ಯಕವಾದುದು. ಇಲ್ಲದೇಹೋದರೆ, ಧಾರ್ಮಿಕ ವರ್ಗದವರ ಧರ್ಮಮೂಢತೆಯೂ, ವ್ಯವಹಾರಿಕರ ಜಾತಿದಂಭತೆಯೂ ಸುಶಿಕ್ಷಿತರ ಧರ್ಮಜಿಗುಪ್ಸೆತೆಯೂ ಹೋಗಲಾರವು. ವಿ॥ ಶ್ರೇಷ್ಠಿಯವರ ವ್ಯವಸ್ಥಾಪಕತೆಯಲ್ಲಿ ಯೋಗ್ಯತರದ ಶಿಕ್ಷಣ ವ್ಯವಸ್ಥೆಯು ಆಗಿ, ಈ ಸಂಸ್ಥೆಯು ಸರ್ವಮಾನ್ಯವೂ, ಉಪಯುಕ್ತವೂ, ಬಲಪ್ಪದೂ ಆಗುವದೆಂದು ಕೋರುತ್ತೇವೆ. ಈ ಜಿಲ್ಲೆಯಲ್ಲಿ ಒಂದು ವೀರಶೈವ ಹೈಸ್ಕೂಲು ಸ್ಥಾಪಿಸಬೇಕೆಂಬ ಪ್ರಯತ್ನಗಳು ನಡೆದಿವೆ. ಇದು ಶ್ಲಾಘ್ಯವಾದದುದು. ಶಿವಯೋಗಮಂದಿರದಲ್ಲಿಯೇ ಇದನ್ನು ಕೂಡಲೆ ಸ್ಥಾಪಿಸಲ್ಪಡಬೇಕೆಂದು ಕೆಲವರ ಅಭಿಪ್ರಾಯವದೆ. ಮಂದಿರದ ಅಧಿಕಾರಿಗಳು ಇದಕ್ಕೆ ಅನುಮೋದಿಸಿರುವರೆಂದು ತಿಳಿಯುತ್ತದೆ. ಇದು ನಿಜವಿದ್ದರೆ ಅವರಿಗೆ ಭೂಷಣವಾದದ್ದು. ಯಾಕೆಂದರೆ ಕಾಲಗತಿಯ ಕೂಡ ಮುಂದೊರೆಯಬೇಕೆಂಬ ಅವರ ಬಯಕೆಯು ಇದರಿಂದ ವ್ಯಕ್ತವಾಗುತ್ತದೆ. ಆದರೆ ಒಂದು ಸಂಸ್ಥೆಯು ಶಾಶ್ವತವಾಗಿ ನೆಲೆಗೊಳ್ಳುವಂತೆ ವ್ಯವಸ್ಥೆಮಾಡಿದ ವಿನಾ ಇನ್ನೊಂದಕ್ಕೆ ಮನಗೊಡುವದು ಲೇಸಲ್ಲ. ಮನಗೊಡುವದಾದರೆ, ಸತತ ಪ್ರಯತ್ನಿಸುವವರು ಹಣದ ಸಹಾಯ, ಕಟ್ಟುವ ತೊಂದರೆಗಳು ಇವೇ ಮೊದಲಾದವುಗಳನ್ನು ಅರಿತುಕೊಂಡು ನಿಮ್ಮ ಮನಸ್ಸಿನಿಂದ ಯತ್ನಿಸುವುದು ಒಳ್ಳೆಯದು. ಹೋದವರುಷ ಜಿಲ್ಲಾ ಸಭೆಯು ನೆರೆಯುವಲ್ಲ ಇದರ ಅಧಿಕಾರಿಗಳು ತಟಸ್ಥರಾದಂತೆ ತೋರುತ್ತದೆ. ಕಾರಣಗಳು ತಿಳಿಯುವಿಲ್ಲ. ಈವರುಷವಾದರೂ ನೆರೆಯುವಂತೆ ಯತ್ನಿಸತಕ್ಕದು. ಹಿಂದಿನ ಸಭೆಯು ವಿಜಾಪುರದಲ್ಲಿ ನೆರೆದಿದ್ದು, ಈ ವರುಷ ಬಾಗಲಕೋಟೆಯಲ್ಲಿ ನೆರೆಯುವುದು ವಿಹಿತವು. ವಿಜಾಪುರ ಜಿಲ್ಲೆಯಲ್ಲಿ ಬೇರೆ ಬೇರೆ ಸಂಸ್ಥೆಗಳು ಹೊರಡ ಹತ್ತಿದ್ದರೂ ದೊಡ್ಡ ಸಭೆಗಳು ಮೇಲಿಂದಮೇಲೆ ಆಗುತ್ತಿದ್ದಲ್ಲಿ, ಜನರಲ್ಲಿ ಉತ್ಸಾಹವು ಹೆಚ್ಚುವಿಕೆಯೂ, ಸಂಸ್ಥೆಗಳು ಬಲಗೊಳ್ಳುವಿಕೆಯೂ, ಜನರಲ್ಲಿ ಅವುಗಳ ತತ್ವವು ತಿಳಿಯುವಿಕೆಯೂ, ಎಲ್ಲ ಪ್ರಯತ್ನಗಳು ಒಕ್ಕಟ್ಟಿನಿಂದ ನಡೆಯುವಿಕೆಯೂ ಕಾರಣವಾಗುವದು.

ನೋಟೀಸ್.

ರಾಣಿ ಬನ್ನೂರಲ್ಲಿರುವ ಉಮ್ಮಾಜಿ ಕಸ್ತೂರಿಜಿ ಮಾರ್ವಾಡಿ ಇವರು ಸಮಸ್ತ ಜನರಿಗೂ ತಿಳಿಸುವುದೇನೆಂದರೆ:- ಇದೇ ಧಾರವಾಡಜಿಲ್ಲಾ ರಾಣಿಬನ್ನೂರಲ್ಲಿದ್ದ ರಂಗಾರೆ ಶೇಷಗಿರಿಯಪ್ಪ ನಾಳಿ ಈತನ ಹೆಂಡತಿ ಸೀತಾಬಾಯಿ ಎಂಬಾಕೆಯು ನಮ್ಮಿಂದ ೪೦೦ ರೂಪಾಯಿಗಳನ್ನು ತೆಗೆದುಕೊಂಡು ಇದೇ ಪೇಟೆಯಲ್ಲಿ ತನ್ನ ಸ್ವಾಧೀನಾನುಭವದಲ್ಲಿದ್ದ ಸ್ವಂತದ ಮನೆಯನ್ನು ನಮಗೆ ವತ್ತಿ ಹಾಕಿ ಮನೆಗೆ ಬಾಡಿಗೆಯಿಲ್ಲ ಮತ್ತು ಹಣಕ್ಕೆ ಬಡ್ಡಿಯಿಲ್ಲವೆಂದು ಬರಕೊಟ್ಟದ್ದಲ್ಲದೆ ಹಣ ಕೊಡದೆ ತಪ್ಪಿದಲ್ಲಿ ಆ ಮನೆಮೇಲೆ ವಸೂಲಮಾಡಿಕೊಳ್ಳುವದೆಂದೂ ಕ್ರಯವಾದ ಪತ್ರವನ್ನು ಬರೆದು ರಿಜಿಸ್ಟರ್ ಮಾಡಿಸಿಕೊಟ್ಟಿರುವದಲ್ಲದೆ ೩೫೦ ರೂಪಾಯಿಗಳಿಗೆ ಜವಳಿ ಬಾಕಿ ಮಾಡಿಕೊಂಡು ಚನ್ನಗಿರಿಗೆ ಹೋಗಿರುತ್ತಾಳೆ. ಆಕೆಯಿಂದ ಒಟ್ಟು ನಮಗೆ ೧೪೫೦ ರೂಪಾಯಿಗಳು ಬರಬೇಕಾಗಿವೆ. ಈ ಹಣಕ್ಕೆ ತಿಂಗಳೊಂದಕ್ಕೆ ನೂರಕ್ಕೆ ೧ ರೂಪಾಯಿ ಬಡ್ಡಿ ತೆಗೆದುಕೊಳ್ಳುತ್ತೇವೆ. ಆಕೆಗೆ ನಾವು ತಗಾದೆಮಾಡಿ ಕಾಗದ ಬರೆದಾಗ್ಯೂ ಜವಾಬನ್ನು ಕೊಡದೆ ಇದ್ದಾಳೆ. ಆಕೆಯು ನಮಗೆ ವತ್ತಿ ಹಾಕಿರುವ ಮನೆಯನ್ನು ಬೇರೆಯವರಿಗೆ ಖರೀದಿಗೆ ಕೊಡುವ ಪ್ರಯತ್ನದಲ್ಲಿದ್ದಾಳೆಂದು ವರ್ತಮಾನ ಕೇಳುತ್ತೇನೆ. ಈ ಮನೆಯನ್ನು ಎರಡನೆಯವರಿಗೆ ವತ್ತಿ ಹಾಕಲು ಅಥವಾ ಮಾರಲು ಹಕ್ಕು ಇರುವದಿಲ್ಲವಾದ್ದರಿಂದ ಯಾರೂ ಇದನ್ನು ಆಕೆಯಿಂದ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೂ ಅದು ಸಿದ್ಧಿಸುವದಿಲ್ಲವೆಂದು ಈ ನೋಟೀಸಿನಿಂದ ಎಚ್ಚರಿಸಿದೆ.

ಸಹಿ ಉಮ್ಮಾಜಿ ಕಸ್ತೂರಜಿ ಮಾರ್ವಾಡಿ
ರಾಣಿಬನ್ನೂರು.

ನೋಟೀಸ್.

ಹಾ ಕಾಂತನೇ! ಹಾ ಪ್ರಾಣವಲ್ಲಭನೇ!! ಅಯ್ಯೋ ಶಿವನೇ!!! ನನಗೆ ಈ ಪರಿ ಉಂಟಾಗಬಹುದೇ? ನಿನಗೆ ನಾನು ಏನು ಅಪಕಾರವಂ ಮಾಡಿದೆನು? ಎಂದು ಪರಿಪರಿಯಾಗಿ ಹಂಬಲಿಸುತ್ತಿರಲು, ಮತ್ತಂ ಅವರೊಳ್ವಜ್ರಲತೆಯು ಆ ಪ್ರಾಣಮಾರುತನ ಕಳೇಬರವಂ ಪಿಡಿದು ತಬ್ಬಿಕೊಂಡು ಅವನ ಮುಖವಂ ತನ್ನ ಮುಖದೊಳಿಟ್ಟು ಚುಂಬಿಸುತ, ಎಲೈ ಪ್ರಾಣದರಸನೇ! ನನ್ನ ತೊಡೆಗಳ ಮೇಲೆ ಒರಗುವ ಸುಕುಮಾರವಾದ ನಿನ್ನ ಮೈಯು, ಈಗ ಈ ಕಠಿಣವಾದ ಕಲ್ಲುಗುಂಡುಗಳಂ ತಲೆದಿಂಬು ಮಾಡಿ ಒರಗಬಹುದೇ? ಅತ್ಯಂತ ಮೃದುವಾದ ಹಂಸತೂಲಿಕಾತಲ್ಪದ ಮೇಲೆ ಪವಡಿಸುವ ಶರೀರವು ಈ ಕಠಿಣವಾದ ಭೂಮಿಯೊಳ್ ಮಲಗಬಹುದೇ? ಹಾ ಪ್ರಾಣನಾಯಕನೇ! ದಿವ್ಯವಾದ ಸುಗಂಧವಂ ತಂದು ನನ್ನ ಮನತಣಿವಂತೆ ತೊಡಿಸುತ್ತಿರ್ದ ಈ ದೇಹಕ್ಕೆ ಈ ಭೂಮಿಯ ಧೂಳಿಗಳು ಲೇಪವಾಗಬಹುದೇ? ಹಾ ಪ್ರಾಣಪ್ರಿಯನೇ! ನೀನು ಸ್ವಚ್ಛಂದನಾದಿಗಳಿಂದೊಡಗೂಡಿ ಎನ್ನೊಡನೆ ಅನೇಕವಿಧ ಉದಾತ್ತ ಸುರತಿಗಳಂ ಬೆರೆದು, ಆಯಾಸದಿಂದುಂಟಾದ ಬೆವರುಗಳಂ ಕೂಡಿದ ಈ ದೇಹವು ಈಗ ಈ ಶತ್ರುವಿನ ಬಾಣಪ್ರಹಾರದಿಂದ ರಕ್ತಮಯಕಿರ್ದುದಂ ಕಂಡು ನಾನೆಂತು ಸೈರಿಸಲಿ? ಎಲೈ ಪ್ರಾಣವಲ್ಲಭನೇ! ತೂಗುಮಂಚದೊಳ್ಕುಳಿತು ನಾನು ಒಪ್ಪಿಸುವ ಕರ್ಪೂರವೀಳ್ಯವಂ ಸವಿಯುವ ಹಲ್ಲುಗಳಿಂದ ಈಗ ಕಲ್ಲುಮುಳ್ಳುಗಳಂ ಕೂಡಿರುವ ನೆಲವಂ ನೀನು ಕಚ್ಚಬಹುದೇ? ಎಲೈ ಸುಂದರಾಂಗನೇ! ಹಾ ಮನೋಭಿರಾಮನೇ!! ನೀನು ಮಲಗಿರುವ ಸನುಮದೊಳ್ ನಾನು ಬರುವಾಗ ನೂಪುರಾಭರಣಂಗಳ ಶಬ್ದದಿಂದಲೇ ನೀನು ನಿದ್ರೆಯಂ ತೊರೆದೆದ್ದು ನನ್ನೊಡನೆ ಕ್ರೀಡಿಸುವ ಪ್ರೇಮಕಾಂತನಾದ ನೀನು ಏಕಾಂತವಂ ಬಿಟ್ಟು ಲೋಕಾಂತರವಂ ಹೊಂದಬಹುದೇ? ಎಲೈ ಪ್ರಾಣದೊಡೆಯನೇ! ಏನುಕಾರಣ ಕಣ್ದೆರೆದುನೋಡದೆ ಮೌನವಂ ತಾಳಿದ್ದೀಯೆ? ನಿನ್ನನ್ನೇ ಪ್ರಾಣವೆಂದು ನಂಬಿರುವ ನನ್ನಲ್ಲಿ ಇಷ್ಟು ಕೋಪವಂ ಮಾಡಬಹುದೇ? ನಾನು ನಿನಗೆ ವಂಚನೆಯಂ ಸ್ವಲ್ಪವಾದರೂ ಮಾಡಿದವಳಲ್ಲ. ಇದಕ್ಕೆ ಸಾಕ್ಷಿಗಳು ಆಕಾಶವಾಣಿ, ಭೂದೇವಿ, ದಿಕ್ಪತಿಗಳು ಚಂದ್ರಸೂರ್ಯರು ಮೊದಲಾದವರಿರುವರು. ಮತ್ತೂ ನನ್ನ ಮನದ ನಿಚ್ಚಯವಂ ನಿನ್ನ ಹೃದಯವೇ ಬಲ್ಲುದು, ಎಲೈ ಮೋಹನಾಂಗನೇ! ತಿಳಿದೂ ತಿಳಿಯದವನಂತೆ ನನ್ನಂ ಈ ಪರಿಯೊಳ್ ಹಂಬಲಿಸುವಂತೆ ಮಾಡುವುದು ನಿನಗೆ ಧರ್ಮವೇ? ಎಲೈ ಚೆನ್ನಿಗನೇ! ನನಗೆ ನೀನು ರತಿಕಾಲದಲ್ಲಿ ನಿನ್ನಂ ಕ್ಷಣಮಾತ್ರವೂ ಬಿಟ್ಟಿರುವುದಿಲ್ಲವೆಂದು ನನ್ನ ತಲೆಯಂ ಮುಟ್ಟಿಕೊಟ್ಟ ಭಾಷೆಯಂ ಮರೆತೆಯಾ? ನೀನು ಮರೆಯುವವನಲ್ಲ, ನನ್ನ ವಿಧಿಯೇ ನಿನಗೆ ಮರವೆಯಂ ಕೊಟ್ಟಿತೋ? ನಾನು ಜನ್ಮಾಂತರದೊಳ್ ಯಾವ ಸತಿಪತಿಗಳಂ ಅಗಲಿಸಿದ್ದೆನೋ! ಆ ಪಾಪವೇ ಈ ರೂಪವಾಗಿ ಫಲಿಸಿತೋ? ಹಾ ದೈವವೇ! ಎನಗೆ ಈ ಗತಿಯಂ ಮಾಡಬಹುದೇ? ಹಾ ಪ್ರಾಣನಾಯಕನೇ!" ನೀನು ಮರಣವನ್ನೈದಿದವನಂತೆ ಕರುಣವಿಲ್ಲದೆ ಧರಣಿಯೊಳ್ ನಿದ್ರೆಯೆಂಬ ಸತಿಯೊಡಗೂಡಿ ರಮಿಸಿ ಪರವಶನಾಗಿ ಎನ್ನೊಳ್ ಮುನಿಸು ತಾಳಬಹುದೇ? ಎಲೈ ಸರಸನೇ! ಎನ್ನೊಡನೆ ವಿಲಾಸವಂ ಮಾಡುತ ಕುಚಗಳಂ ಪಿಡಿದು ಆಲಿಂಗನವಂ ಮಾಡುವ ಕಾಲದೊಳ್, ಇನ್ನೊಬ್ಬ ಸತಿಯ ಕುಚವಂ ಪಿಡಿಯುವುದಿಲ್ಲವೆಂದು ಭಾಷೆಯಂಕೊಟ್ಟ ಪರಿಯಂ ಮರೆತು ನಾನು ನೋಡುವಂತೆ ಭೂಮಿಯೆಂಬ ಕಾಂತೆಯಂ ತಬ್ಬಿ ಆಲಿಂಗನವಂಗೈಯಬಹುದೇ? ನೀನು ಕೊಟ್ಟ ಭಾಷೆಯೇನಾಯಿತು? ನನ್ನಂ ಮರೆಮಾಜಿ ಇರುವೆಯೋ ಏನೋನೋಡು? ನಾನು ನಿನ್ನಲ್ಲಿಯೇ ಇರುವೆನು. ದೇವಲೋಕದ ಕುದುರೆಯಂ ತರುವಾಗ ಈ ಕುಸುಮಲತೆಯೆಂಬ ಮಾಲಿಯಂ ತಂದು ಇವಳೊಡಗೂಡುವೆನೆಂದು ಬರಿದು ಭ್ರಮೆಗೊಂಡು ಆಶೆಯನ್ನು ನಾಶಗೈಕೊಂಡು ಅವಳ ದೆಸೆಯಿಂದ ಯಮನ ದೇಶವಂ ಪ್ರವೇಶಗೈಯಬಹುದೇ? ಹಾ ಕಾಂತ! ಹಾ ರಮಣ!! ಹಾ ಮಹಾಬಲ!!! ಹಾ ರಾಕ್ಷಸೇಶ್ವರನೇ!!!! ಎಂದು ಭೂಮಿಯೊಳ್ ಬಿದ್ದು ಹೊರಳಿ ಮೂರ್ಛೆಯಂಗೊಂಡು ಸುಡುತ ಬರುವ ಕಾಳ್ಗಿಚ್ಚಿನೊಳ್ ಬಳಲಿಬಾಡಿದ ಎಳೆಯಬಳ್ಳಿಯಂತೆ ಬಿದ್ದಿರುವ ವಜ್ರಲತೆಯಂ ಕಂಡು, ಕುಂದಿನೀಯೆಂಬೋರ್ವ ಸಖಿಯು ಎಲೈ ವಜ್ರಲತೆಯೇ! ನಿನ್ನ ಪಣೆಯೊಳ್ ಬ್ರಹ್ಮನಿಂತು ಬರೆಯಬಹುದೇ? ನಿನ್ನ ಕುರುಳಿನೊಳಿರುವ ಪುಷ್ಪಮಾಲೆಗಳು ಚದರಿ ಧೂಳಿಗಳಲ್ಲಿ ಬಿದ್ದುರುಳುವಂತೆ ಮಾಡಿತೇ ದೈವ! ನಿನ್ನೇದಿವಸ ನೀನು ಅಲಂಕಾರವಂಗೈಕೊಳ್ಳುವಾಗ ಆಗಬಾರದ ಅಪಶಕುನಗಳಂ ಕಂಡೆನು, ಅದು ಈಗಲೇ ಫಲಿಸಬಹುದೇ? ಆ ರತ್ನದ ನಿಲುಗನ್ನಡಿಗಳಂ ಇನ್ನಾರು ನೋಡುವರು? ನಿನ್ನ ಮೋಹದ ಗಿಳಿಗಳನ್ನಿನ್ನಾರು ಸಾಕುವರು? ನಿನ್ನ ಕೈಯಾರ ಬೆಳೆಸಿದ ಮಲ್ಲಿಗೆ ಬಳ್ಳಿಯ ಮೊಗ್ಗುಗಳನ್ನು

ನಾನು ಇನ್ನಾರಂ ಕರೆಯಲೀ? ಅಲಂಕಾರವಂ ಮಾಡುವ ಜಾಣ್ಮೆಯನ್ನಿನ್ನಾರಲ್ಲಿ ತೋರಿಸಲೀ? ಇನ್ನಾರಂ ಬಿಕ್ಕೆಂದು ಸೇರಲೀ? ಇಂತಾದ ಬಳಿಕ ಎಂತು ಕಾಲವಂ ಕಳೆಯಲೀ? ಈಗ ಈ ಪರಿಯಾದ ನಿನ್ನನ್ನು ನೋಡುವಂತೆ ನನ್ನ ಪಣೆಯೊಳ್ ಬರೆದುದೇ ದೈವವೆಂದು ಹಲವು ಪರಿಯಿಂ ಹಂಬಲಿಸುತ ವಜ್ರಲತೆಯಂ ಪಿಡಿದೆತ್ತಿ ಎದೆ ಕಣ್ಣುಗಳಿಗೆ ನೀರು ತಳ್ಳಲು ಆಗ ವಜ್ರಲತೆಯು ಕಣ್ದೆರೆದು ಕನಸು ಕಂಡಂತೆ ತೋರಿ, ಉನ್ಮಾದವಂನೈದಿ, ಇದೇನಿದು ಭಯವು? ನಾನು ಇಲ್ಲೇಕೆ ಬಂದೆನು? ವಜ್ರಪುರಿಗೆ ಪತಿಯಾದ ರಾಕ್ಷಸೇಶ್ವರನು ಮೃತನಾದಂತೆ ಕಂಡೆನು; ಇದೇನು! ಸ್ವಪ್ನವೋ? ಚಿತ್ತಭ್ರಮೆಯೋ? ಅಲ್ಲದಿರೆ ಯಥಾರ್ಥವೋ? ಯಮನು ಹೆದರುವಂತೆ ಮಾಡುವವನು; ಯಮನ ಪಟ್ಟಣವಂ ಸೇರುವುದುಂಟೇ? ಎಂದು ಒಂದು ಘಳಿಗೆ ಮಂಕುಮರುಳಾಗಿ, ಅಷ್ಟರೊಳ್ ಎಚ್ಚತ್ತು ಇದಿರಾಗಿ ಬಿದ್ದಿರುವ ರಾಕ್ಷಸೇಶ್ವರನನ್ನು ನೋಡಿ ಬೆಟ್ಟದ ಮೇಲಿಂ ಜರಿಗೆ ಬೀಳುವಂತೆ ಎದೆಗುಂದಿ, ಹಾ ಕಾಂತ! ನಿನ್ನ ಜಾತಕಸ್ವರೂಪವಂ ಮಾಡುವಾಗ ಗಣಿತಜ್ಞರು, ಘಟಿತಾರ್ಥಂಗಳೆಲ್ಲವೂ ಚೆನ್ನಾಗಿರುವುವೆಂದು ಹೇಳಿದ ಮಾತುಗಳು ಏನಾದವು? ನನಗೆ ಸ್ಥಿರಸೌಮಂಗಲ್ಯವೆಂದು ಆಶೀರ್ವಾದವಂ ಮಾಡಿದ ಬ್ರಹ್ಮರಾಕ್ಷಸರುಗಳ ಮಾತುಗಳೇನು ಹಾಳಾದವು? ನನ್ನ ಮುಖ ರೂಪರೇಖೆಗಳನ್ನು ನೋಡಿ ಚೆನ್ನಾಗಿಬಾಳುವೆ ಎಂದು ನುಡಿದು ಸಾಮುದ್ರಿಕವಂ ಹೇಳಿದ ಶಾಸ್ತ್ರಿಕನ ಬಾಯಿಬೆಂದುಹೋಗದೇ? ಎಂದು ನಿಂದಿಸುತ್ತಿರುವಾಗ ದುರ್ಮುಖಿಯೆಂಬ ರಾಕ್ಷಸಿಯು, ವಜ್ರಲತೆಯ ಮಗಳಾದ ಕುಂದೋದರಿಯಂ ಕರೆತಂದು ಇದಿರಾಗಿ ನಿಲ್ಲಿಸಲಾಗ ವಜ್ರಲತೆಯು ಆ ಮಗಳನ್ನು ನೋಡಿ, ಈ ಸುಂದರಾಂಗಿಯ ಮದುವೆಯಂ ಮಾಡಬೇಕೆಂದು ಸಕಲ ಸಂಭಾರಗಳಂ ಸನ್ನಹಿಸಿರ್ದು, ಅಶ್ವರತ್ನವಂ ಅಳಿಯನಿಗೆ ಕೊಡುವೆನೆಂದು ಹೇಳಿ ಬಂದನ್ನು ನೋಡದೇ ನಮ್ಮೆಲ್ಲರಂ ಅನಾಥರಂ ಮಾಡಿ ಮನುಷ್ಯಮಾತ್ರದವನಿಂದಿದು ಮಡಿದುಪೋದುದಕ್ಕೆ ಎಷ್ಟೆಂದು ಅಳಲೀ? ಎಂದು ಹಂಬಲಿಸುತ ಆ ಮಗಳಂ ಕುರಿತು ನಿನ್ನ ತಂದೆಯನ್ನು ನೋಡೆಂದು ಹೇಳಿ, ಮತ್ತೂ ಎಲ್ಲರೂ ಒಟ್ಟಾಗಿ ಬೋರೆಂದು ಕಾಲ್ವೆಗಳಂತೆ ಕಣ್ಣೀರುಗಳಂ ಸುರಿಸುತ, ಆಭರಣಗಳನ್ನೀಡಾಡುತ, ಪ್ರಲಾಪವಂಗೈಯುತ್ತಿರಲಾ ಮಹಾಘೋಷವಂ ಕೇಳಿ ಕುಲವೃದ್ಧಳಾದ ಅಜಾಮುಖಿ ಎಂಬವಳು ಬಂದು ಎಲ್ಲರಂ ಓರೋರ್ವರನ್ನಾಗಿ ಸಮಾಧಾನಗೊಳಿಸುತ ವಜ್ರಲತೆಯಂ ಕುರಿತು ಎಲೈ ನೀನೀಸಮಯದೊಳಿಂತು ಗದ್ದಲವಂ ಮಾಡಬಹುದೇ? ಅನಾಥರಾದ ನಮ್ಮಂ ದುಷ್ಟರಾಕ್ಷಸಸ್ತ್ರೀಯರೆಂದು ತಾಟಕಿಯಂತೆ ಈ ಶತ್ರುರಾಯನು ಏನುಮಾಡುವನೋ? ಇಲ್ಲದಿರೆ ಶೂರ್ಪಣಖಿಯಂತೆ ಅಂಗವಿಕಾರವಂ ಮಾಡುವನೋ? ಈ ದೇವತಾಸ್ತ್ರೀಯಂತಿರುವ ಕುಂದೋದರಿಯೆಂಬ ಕನ್ನೆಯನ್ನಪಹರಿಸುವನೋ? ಹೋದ ರಾಕ್ಷಸೇಶ್ವರನೇ, ಕನ್ನೆಯಂದು ದುಃಖವಂ ಮರೆತು, ನಿನ್ನ ಪತಿಯು ಮನಸ್ಸಿನಲ್ಲಿದ್ದಂತೆ ದುರ್ಮರ್ಷನಿಗೆ ಈ ಕನ್ನೆಯಂಕೊಟ್ಟು ಜಂಘಾಮಾರುತನ ವೈಚಿತ್ರ್ಯ ವಂಶವನ್ನಾದರೂ ವೃದ್ಧಿಮಾಡುವ ಎಂದು ನುಡಿದು, ಮತ್ತೂ ಕಳೆದುಹೋದ ಮಾತಿಗೆ ಕಳವಳಪಟ್ಟು ಫಲವೇನು? ಏಳೇಳೆಂದು ಕೈಪಿಡಿದು ಎಳೆಕೊಂಡುಪೋಗೆ ಎಲ್ಲರೂ ಕೂಡಿ ಮಾತಾಡಿ ಬೇಗ ಪಾತಾಳವಂ ಸೇರಿ ದುರ್ಮರ್ಷನನ್ನಾದರೂ ಇಲ್ಲಿಗೆ ಕಳುಹಿಸಿದರೆ ಅವನು ಬಂದು ರಣದೊಳ್ ಸತ್ತುಬಿದ್ದಿರುವ ತನಗೆ ಮಾವನಾದ ಜಂಘಾಮಾರುತನನ್ನು ನೋಡಿ ಕೋಪಗೊಂಡು ಈ ಶತ್ರುರಾಯನೊಡನೆ ಸೆಣಸಿ ಜಯಿಸಬಲ್ಲನು; ಅವನ ಬಲವಂ ನಾನು ಬಲ್ಲೆನೆಂದು ಹೇಳಿ ವಜ್ರಲತೆ ಮೊದಲಾದ ರಾಕ್ಷಸಪತ್ನಿಯರೆಲ್ಲರಂ, ಮತ್ತೂ, ಆ ಜಂಘಾಮಾರುತನ ಪುತ್ರಿಯಾದ ಕುಂದೋದರಿಯೆಂಬ ಕನ್ಯಾರತ್ನವಂ ಸಹಾ ಕರೆದುಕೊಂಡು ಪಾತಾಳಲೋಕವಂ ಕುರಿತು ತೆರಳಲು,

ಸಶೇಷ.

ಪರ್ಯಟನವು.

[ಕಳೆದ ವಾರದ ಶೇಷ]

ಇದರಂತೆ ವಿದ್ಯಾರ್ಥಿಗಳ ದಿನಚರ್ಯವಿದ್ದು ಈ ಗುರುಕುಲದಲ್ಲಿ ವಿದ್ಯಾಲಯ, ಮಹಾ ವಿದ್ಯಾಲಯವೆಂದು ಎರಡು ಭಾಗಗಳಿರುವುವು. ಮಹಾ ವಿದ್ಯಾಲಯದಲ್ಲಿ ಅವರ ನಿಯಮದಂತೆ ಭಾಷ್ಯಾದಿ ಪ್ರೌಢ ಪಾಠಗಳೇ ಜರಗುತ್ತಿದ್ದು ಸ್ವಲ್ಪ ವಿದ್ಯಾರ್ಥಿಗಳಿರುವರು. ಕೃಷಿಕರ್ಮಚಿತ್ರಕಲಾದಿಗಳನ್ನು ವಿದ್ಯಾಲಯದಲ್ಲಿ ಕಲಿತು ಮುಗಿಸೇ ಮಹಾವಿದ್ಯಾಲಯಕ್ಕೆ ಬರುವರು ಇನ್ನು ಹೆಚ್ಚಿನ ವಿಷಯವು ಅವರ ವೃತ್ತಾಂತಪತ್ರಿಕೆಯಲ್ಲಿ ನೋಡಬಹುದು.

ಈ ಗುರುಕುಲವು ಸ್ವಾಮಿ ದಯಾನಂದ ಸರಸ್ವತಿಗಳ ಪಠನ ಪಾಠನ ಕ್ರಮದ ವೈದಿಕಧರ್ಮ ಸಿದ್ಧಾಂತ ಪ್ರಚಾರಕ್ಕೋಸ್ಕರ ಸ್ಥಾಪಿತವಾಗಿದ್ದು ಅದರಲ್ಲಿ ನ್ಯೂನತೆಯ ಭಾಗವು ಕಂಡುಬರುವುದು. ಯಾವ ಸ್ವಾಮಿಗಳು ಮಹಾ ಭಾಷ್ಯವನ್ನು ಸಂಪೂರ್ಣವಾಗಿ ಓದಬೇಕೆಂತಲೂ, ಇತರವ್ಯಾಕರಣ ಗ್ರಂಥಗಳು ತ್ಯಾಜ್ಯವಾಗಬೇಕೆಂತಲೂ, ಚತುರ್ವೇದಗಳನ್ನು ಸಂಪೂರ್ಣ ಅಧ್ಯಯನ ಮಾಡಬೇಕೆಂತಲೂ ಉಪದೇಶಿಸಿ ಸ್ವಹಸ್ತದಿಂದ ಬರೆದು ಹೋಗಿರುವರೋ ಅವರ ನಿಯಮಕ್ಕೆ ವಿರೋಧವಾಗಿ ಮಹಾ ಭಾಷ್ಯದಲ್ಲಿ ಕೇವಲ ನವಾನ್ಹಿಕ ಅಂಗಾಧಿಕಾರ ಮತ್ತು ವೇದಗಳಲ್ಲಿ ಕೆಲವು ಭಾಗಗಳನ್ನು ಕಲಿಸುವ ನಿಯಮವನ್ನು ನೋಡಿದರೆ ಮನಸ್ಸು ವಿಚಾರಗ್ರಸ್ತವಾಗುವುದು. ಏಕೆಂದರೆ ಇವರಿಗೆ ಇತರ ಪರಿಭಾಷೇಂದುಶೇಖರಾದಿ ವ್ಯಾಕರಣ ಗ್ರಂಥಗಳ ಅಧ್ಯಯನವಿಲ್ಲದೇ ಇರುವುದರಿಂದಲೂ, ಸಂಪೂರ್ಣಮಹಾಭಾಷ್ಯಾಧ್ಯಯನವಿಲ್ಲದೆ ಇರುವುದರಿಂದಲೂ ಸರ್ವಶಾಸ್ತ್ರಪ್ರವರ್ತನಕ್ಕೆ ಮೂಲಾಧಾರಭೂತವಾದ ವ್ಯಾಕರಣದಲ್ಲೇ ಆಕಾಶಕುಸುಮಕರಾದರೆ ಇತರಶಾಸ್ತ್ರಪ್ರವೇಶ ವಿಶೇಷವು ಕಠಿಣವಾಗುವದೆಂದು ಕಂಡುಬರುತ್ತದೆ. ಇತರ ಎಲ್ಲಾ ಅಭ್ಯಾಸಕ್ರಮವೂ, ವ್ಯವಸ್ಥೆಯೂ ಪದ್ಧತಿಯೂ ಬಹಳ ಉತ್ತಮ ಇದ್ದು ದೇಶೋನ್ನತಿ ವಿದ್ಯೋನ್ನತಿ ಧೋರಣೆಯುಳ್ಳದ್ದಾಗಿರುವುದು, ದೇಶಹಿತಕ್ಕಾಗಿ ತನುಮನಧನಾದಿಗಳನ್ನು ಒಪ್ಪಿಸಿ ಸರ್ವಸಂಗಪರಿತ್ಯಾಗ ಮಾಡಿ ಅರಣ್ಯವಾಸಿಗಳಾಗಿದ್ದ ಮಹಾತ್ಮಾ ಮುನಸೀರಾಮ ಎಂಬ ಮಹನೀಯರಿಗೆ ಈ ಸಮಯದಲ್ಲಿ ಅನೇಕ ಧನ್ಯವಾದಗಳನ್ನು ಕೊಡುವುದು ಉಚಿತವೆಂದು ಕಂಡುಬಂದುದಲ್ಲದೆ ಜಗದೀಶನು ಇವರ ಮನೋರಥವನ್ನು ಪೂರೈಸಲೆಂದು ಬೇಡುವೆನು. ಗುರುಕುಲದಿಂದ ಜ್ವಾಲಾಪುರಕ್ಕೆ ಬಂದು ಮಹಾ ವಿದ್ಯಾಲಯವನ್ನು ನೋಡಿದೆನು. ಈ ಮಹಾ ವಿದ್ಯಾಲಯದಲ್ಲಿ ೪೦ ಮಂದಿ ವಿದ್ಯಾರ್ಥಿಗಳಿದ್ದು ಚಿಕ್ಕ ಪ್ರೌಢ ವಿದ್ಯಾರ್ಥಿಗಳಿರುವರು. ಇಲ್ಲಿ ೨೫ ಮಂದಿ ಭಾಷ್ಯಾದಿ ಪ್ರೌಢ ಪಾಠಗಳನ್ನು ಹೇಳುವವರು ಮಹಾ ವಿದ್ವಾಂಸರಿದ್ದು ಇತರಾಧ್ಯಾಪಕರು ಸಾಧಾರಣ ಇರುವರು. ಇಲ್ಲಿಯ ಬ್ರಹ್ಮಚಾರಿಗಳಾದರೂ ಸುಶೀಲರು, ಅಭ್ಯಾಸದಲ್ಲಿ ತತ್ಪರರು ಇದ್ದು ಪರಸ್ಪರ ಪ್ರೇಮಭಾವಿಗಳಾಗಿರುವರು. ಈ ಮಹಾ ವಿದ್ಯಾಲಯವು ನೂತನ ಸ್ಥಾಪಿತವಾಗಿರುವುದರಿಂದ ಅಭ್ಯಾಸ ಕ್ರಮವು ಸಾಧಾರಣ ಇದ್ದು ಇಲ್ಲಿ ಕೆಲವು ಅಧ್ಯಾಪಕರು ಪ್ರತಿಫಲವಿಲ್ಲದೆ ದುಡಿಯುತ್ತಿರುವರು. ಇಲ್ಲಿಯ ವಾಯುವು ಬಹಳ ಉತ್ತಮವಾಗಿದೆ. ಈ ಮಹಾ ವಿದ್ಯಾಲಯದ ಸ್ಥಾನವಾದರು ಊರುಬಿಟ್ಟು ದೂರದಲ್ಲಿ ಒಳ್ಳೇ ವಿಶಾಲವಾದ ಬೈಲಿನಲ್ಲಿರುವುದು. ಇಲ್ಲಿಯ ವಿದ್ಯಾರ್ಥಿಗಳೂ, ಅಧ್ಯಾಪಕರೂ ನಾನು ಇಲ್ಲಿಂದ ಹೊರಡುವ ದಿವಸ ಎಲ್ಲರೂ ಏಕತ್ರರಾಗಿ ಬ್ರಹ್ಮಚಾರಿಗಳೂ, ಅಧ್ಯಾಪಕರೂ ಭಾಷಣಮಾಡಿ ನನಗೂ ಸಂಸ್ಕೃತದಲ್ಲಿ ಭಾಷಣಮಾಡಲಿಕ್ಕೆ ತಿಳಿಸಿ, ತಮ್ಮ ಪರಸ್ಪರ ಪ್ರೇಮಭಾವವನ್ನು ವ್ಯಕ್ತಪಡಿಸಿದರು. ಇವರು ತಮ್ಮ ಸಂಸ್ಕೃತಾಭ್ಯಾಸಕ್ರಮದಲ್ಲಿ ಇಂಗ್ಲಿಷ್ ಭಾಷಾಧ್ಯಯನವನ್ನು ಇಟ್ಟಲ್ಲಿ ಸದ್ಯದ ಸ್ಥಿತಿಗನುಸಾರವಾಗಿರುವುದು. ಇದೊಂದು ಇವರ ವಿದ್ಯಾಲಯದ ಉನ್ನತಿಗೆ ಬಹಳ ಕುಂದು ಆದಂತೆ ಆಗಿರುವುದು ಇನ್ನುಮೇಲಾದರೂ ಇಡಬಹುದು. ಈ ವಿದ್ಯಾಲಯಕ್ಕೆ ದುಡ್ಡಿನ ಅಡಚಣೆಯು ಬಹಳ ಇರುವುದು. ಹ್ಯಾಗೇ ಆಗಲಿ ಇಂತಹ ದೊಡ್ಡ ಕಾರ್ಯಗಳಿಗೆ ದುಡ್ಡಿಲ್ಲದೇ ಧೈರ್ಯದಿಂದ ಆರಂಭಮಾಡಿ, ಪ್ರೋತ್ಸಾಹಿಗಳಾಗಿರುವದನ್ನು ನೋಡಿದರೆ ಬಹಳ ಆನಂದವೆನಿಸುತ್ತದೆ.

ಇಲ್ಲಿಂದ ಹರಿದ್ವಾರದ ಸಮೀಪದಲ್ಲಿದ್ದ ಋಷಿಕುಲವೆಂಬ ಸ್ಥಳಕ್ಕೆ ಬಂದೆನು. ಈ "ಋಷಿಕುಲ" ವು ಅನೇಕಮಂದಿ ಶ್ರೇಷ್ಠಿಗಳಿಂದ ಸ್ಥಾಪಿತವಾಗಿದ್ದು ರಾಜರುಗಳ ಸಹಾಯವಾದರು ಇದಕ್ಕೆ ಉಂಟೆಂದು ಹೇಳುವರು. ಇಲ್ಲಿಯ ಅಭ್ಯಾಸಕ್ರಮವು ಸಾಧಾರಣ ಪಾಠಶಾಲೆಗಳಂತಿದ್ದು ವಿದ್ಯಾರ್ಥಿಗಳೂ, ಅಧ್ಯಾಪಕರೂ ಬಹಳ ಜನರಿರುವರು. ಇವರು ತಮ್ಮ ಅಭ್ಯಾಸಕ್ರಮದಲ್ಲಿ ತಮ್ಮ ಶಾಲಾಭ್ಯಾಸ ದಂತಿಮಪರ್ಯಂತ ಆಗುವದರೊಳಗೆಂದರೆ ಮೆಟ್ರಿಕ್ ಆದ ಮನುಷ್ಯನ ಯೋಗ್ಯತೆಯಷ್ಟು ಇಂಗ್ಲೀಷನ್ನು ಇಟ್ಟಿರುವರು. ಇಲ್ಲಿಯ ಮ್ಯಾನೇಜರು ಮೊದಲಾದ ಜನರಾದರು ಒಳ್ಳೇ ನಮ್ರಸ್ವಭಾವದವರೂ ಗೌರವಸ್ಥರೂ ಇರುವರು ಇಲ್ಲಿಯ ಬ್ರಹ್ಮಚಾರಿಗಳು ಸಾಧಾರಣ ಇರುವರು. ಈ ಋಷಿಕುಲದವರು ಸುಧಾರಿಸತಕ್ಕ ವಿಷಯಗಳು ಬಹಳ ಇರುವುವೆಂದು ಕಂಡಬಂದಿತು. ಇದನ್ನೆಲ್ಲಾ ನೋಡಿ ಹೃಷಿಕೇಶವೆಂಬ ಪೂರ್ವದಲ್ಲಿ ಅನೇಕ ಋಷಿಗಳು ತಪಶ್ಚರ್ಯಮಾಡಿದ ಸ್ಥಾನವನ್ನು ನೋಡಲು ಹೊರಟೆನು ಮಧ್ಯದಲ್ಲಿ ಹರಿದ್ವಾರದ ಗಂಗಾತೀರದಲ್ಲಿ ಹೋಗಿನೋಡಲು ಅಲ್ಲಿಬಂದು ಶಂಕರಾಚಾರ್ಯರ ದೇವಾಲಯವೂ, ಇತರ ಅನೇಕ ದೇವಾಲಯಗಳೂ ಇರುವುವು. ಶಂಕರಾಚಾರ್ಯರ ಗುಡಿಯಲ್ಲಿ ಆದಿಶಂಕರಾಚಾರ್ಯರ ಮೂರ್ತಿಯೂ, ಬದರೀನಾರಾಯಣಾದಿ ಮೂರ್ತಿಗಳೂ ಸ್ಥಾಪಿಸಲ್ಪಟ್ಟಿದ್ದು ಒಬ್ಬ ಪೂಜಾರಿಯು ನಿಯಮಿಸಲ್ಪಟ್ಟಿರುವನು. ಈ ಸರ್ವ ದೇವಾಲಯಗಳ ಸಮೀಪದಲ್ಲೇ ಗಂಗಾನದಿಯಿಂದ ಬಂದ ನೀರಿನ ಕುಂಡವಿರುವುದು. ಆ ಕುಂಡದಲ್ಲಿ ಸರ್ವ ಯಾತ್ರಿಕರು ಸ್ನಾನಾದಿಗಳನ್ನು ಮಾಡಿ ಕುಂಡದ ನೀರು ದುರ್ಗಂಧಯುಕ್ತವಾಗಿದ್ದು ಆ ನೀರೇ ಪರಮಪವಿತ್ರವಾದದ್ದೆಂದು ತಿಳಿದುಕೊಂಡೂ ಯಾತ್ರಿಕರು ಸ್ನಾನಪಾನಾದಿಯನ್ನು ಮಾಡುತ್ತಿರುವರು. ಈ ಗ್ರಾಮದಲ್ಲಿ ಪಂಡಾ ಎಂಬ ಭಿಕ್ಷುಕ ಬ್ರಾಹ್ಮಣರೂ ಹಾಗೂ ಸನ್ಯಾಸಿಗಳು ಸಾವಿರಾರುಗಳು

ಹಾಗೇ ಇಲ್ಲಿಂದ ಅರಣ್ಯದಲ್ಲಿ ೧ ಮೈಲು ದೂರದಲ್ಲಿದ್ದ ಹೃಷೀಕೇಶವೆಂಬ ಸ್ಥಳಕ್ಕೆ ಹೊರಟೆನು, ಈ ಅರಣ್ಯಮಾರ್ಗದಲ್ಲಿ ಅಲ್ಲಲ್ಲಿಗೆ ಚಪ್ಪರಗಳನ್ನು ಹಾಕಿಕೊಂಡು ಕೆಲವರು ಜಟಾಧಾರಿಗಳೂ, ಕೆಲವರು ಕಾಷಾಯಾಂಬರಧಾರಿಗಳೂ ಆಗಿ, ಮುಂದೆ ಬೆಂಕಿಯನ್ನು ಹೊತ್ತಿಸ್ಕೊಂಡು ಕೈಯಲ್ಲಿ ಒಂದು ಚಿಲ್ಮೆಯನ್ನು ಹಿಡಿದುಕೊಂಡು ಪ್ರತ್ಯಕ್ಷರಾಕ್ಷಸರಂತೆ ನಿರಕ್ಷರಕುಕ್ಷಿಗಳಾಗಿ ಕುಳಿತಿದ್ದ ಸಾವಿರಾರು ಜನ ವೇಷಧಾರಿಗಳನ್ನು ಕಾಣುತ್ತಲೇ ಹಿಮಾಲಯ ಸಮೀಪದಲ್ಲಿರುವ ಹೃಷೀಕೇಶವೆಂಬ ಸ್ಥಳಕ್ಕೆ ಹೋದೆನು. ಇಲ್ಲಿ ಹೃಷೀಕೇಶ ದೇವಾಲಯವೂ ಭವ್ಯಗಳಾದ ೪-೫ ಧರ್ಮಶಾಲೆಗಳೂ ಹಾಗೂ ಬಂದ ಜನರ ಸೋಯಿಗೋಸ್ಕರ ೨-೩ ಅಂಗಡಿಗಳೂ ಇರುವವು. ಈ ದೇವಾಲಯದ ವೃತ್ತಾಂತವೆಂದರೆ ಪೂಜ್ಯನಾದ ಬುದ್ಧಮಹಾತ್ಮನು-ದೂರದೇಶದ ಜನರು ಬಹುಪರಿಶ್ರಮದಿಂದ ವೃಥಾದುಃಖಿತರಾಗಿ ಬರುವುದನ್ನು ಕಂಡು, ಕಂಡಕಂಡಲ್ಲಿಗೆ ಹೋಗಿ ಕಂಡಕಂಡದ್ದಕ್ಕೆ ನಮಸ್ಕಾರ ಮಾಡಿದರೆ ಮೋಕ್ಷಪ್ರಾಪ್ತಿಯಾಗುವುದುಂಟೇ? ವೃಥಾ ದೇಹಶ್ರಮವಲ್ಲದೆ ಜನ್ಮವನ್ನು ವ್ಯರ್ಥ ಕಳೆದಂತೆ ಆಗುವುದು; ತಸ್ಮಾತ್ ಸ್ವದೇಶ, ಸ್ವಗ್ರಾಮ, ಸ್ವಗೃಹದಲ್ಲಿಯೇ ಪರಸ್ಪರಾತ್ಯಂತ ಪ್ರೇಮಿಗಳಾಗಿ ಸುಜ್ಞಾನವೆಂಬುದಕದಿಂದ ಸ್ನಾನಮಾಡಿ ನಿರ್ಮಲಾಂತಃಕರಣರಾಗಿ ಪರಮವೈರಾಗ್ಯಯುಕ್ತರಾದರೆ ಮೋಕ್ಷಹೊಂದುವರಲ್ಲದೆ ಇಂಥಾ ಗುಡಿ ಗುಡಾರದ ಕಾರ್ಯಗಳಲ್ಲಿ ಸಾವಿರಾರು ಜನ್ಮ ಕಳೆದಾಗ್ಯೂ ಏನೂ ಫಲ ಪ್ರಾಪ್ತಿಯಾಗದೆ ವ್ಯರ್ಥಕಾಲ ಕಳೆದಂತಾಗುವುದು"ಎಂದುಪದೇಶಿಸಿ,ದೇವಾಲಯದಲ್ಲಿದ್ದ ಹೃಷೀಕೇಶನೆಂಬ ಮೂರ್ತಿಯನ್ನು ಕಿತ್ತು,ಸಮೀಪದಲ್ಲಿದ್ದ ಗಂಗಾನದಿಯಲ್ಲಿ ಹಾಕಿಸಿದನೆಂತಲೂ, ತದನಂತರ ಆದಿಶಂಕರಾಚಾರ್ಯರು ಈ ಮೂರ್ತಿಯನ್ನು ಪುನಃ ಸ್ಥಾಪಿಸಿದರೆಂತಲೂ, ಈ ಕಲಿಯುಗದಲ್ಲಿ ಈ ಹೃಷೀಕೇಶವೆಂಬ ದೇವರು ಭಗವದವತಾರವಾದುದರಿಂದ ಭಗವನ್ನಾಮವುಳ್ಳುದೆಂತಲೂ, ಈದೇವಾಲಯದ ಪೌರಾಣಿಕರು ಹೇಳುವರು. ಅದರಂತೆ ಪುರಾಣದ ಕಥೆಯನ್ನೂ ತೋರಿಸುವರು. ಇದನ್ನು ನೋಡಿ ಹಾಗೇ ಒಂದು ಮೈಲಿ ಅರಣ್ಯದಲ್ಲಿ ಹೋಗಲು ಇಲ್ಲಿ ಕೆಲವು ಶ್ರೇಷ್ಠಿಗಳಿಂದ ಉನ್ನತಪ್ರದೇಶದಲ್ಲಿ ಕಟ್ಟಿಸಿದ ಭವ್ಯವಾದ ಇಮಾರತಿಯಿದ್ದು, ಇದಕ್ಕೆ ಕೈಲಾಸವೆಂದು ಹೆಸರನ್ನಿಟ್ಟಿರುವರು. ಇಲ್ಲಿ ೪೦ ಮಂದಿ ವಿದ್ಯಾರ್ಥಿಗಳಿದ್ದು ೪-೫ ಮಂದಿ ಅಧ್ಯಾಪಕ ಸನ್ಯಾಸಿಗಳಿರುವರು. ನಾನು ಹೋದಾಗ್ಯೆ ಇಲ್ಲಿ ಒಂದು ಕಡೆ ಸಿದ್ಧಾಂತಕೌಮುದಿ ಮತ್ತೊಂದು ಕಡೆ ಶಂಕರಭಾಷ್ಯ ಪಾಠಗಳು ನಡೆದಿದ್ದವು. ಈ ಮಂದಿರದಲ್ಲಿ ಆದಿಶಂಕರಾಚಾರ್ಯರ ಸಂಗಮರವರಿಕಲ್ಲಿನ ಭವ್ಯಮೂರ್ತಿಯು ಇದ್ದು, ಮತ್ತೊಂದು ಕಡೆ ಈಶ್ವರಮೂರ್ತಿಯು ಸ್ಥಾಪಿಸಲ್ಪಟ್ಟಿರುವುದು. ಶಂಕರಾಚಾರ್ಯ ಮೂರ್ತಿಯ ಪಲ್ಲಕ್ಕಿಸೇವೆಯೂ, ನಿತ್ಯವಿನಿಯೋಗಾದಿಗಳೂ ನಡೆಯುವವೆಂದು ಹೇಳುವರು. ತದನಂತರ ೨ ಮೈಲಿ ದೂರ ಗಿಡಗಳಿಂದ ದಟ್ಟವಾದ ಅರಣ್ಯದಲ್ಲಿ ಹಾಗೇ ಹೋಗಲು, ಮಾರ್ಗದಲ್ಲಿ ಮಾತ್ರ ಜಟಾಧಾರಿಗಳ ಪರ್ಣಶಾಲೆಗಳು ಕಣ್ಣಿಗೆ ಬಿದ್ದೇಬೀಳುವವು. ಇಲ್ಲಿ ಲಕ್ಷ್ಮಣನ ೧೨ ವರ್ಷದ ತಪಶ್ಚರ್ಯದ ಸ್ಥಾನವೂ ಹಾಗೂ ಧ್ರುವಋಷಿಗಳ ತಪಶ್ಚರ್ಯಸ್ಥಾನವೂ ಸಿಗುವವು. ಇಲ್ಲಿ ಒಂದು ಇತಿಹಾಸವನ್ನು ಹೇಳುವರು.-ಪೂರ್ವದಲ್ಲಿ ಈ ಸ್ಥಳದ ಕೆಳಗಿರುವ ಗಂಗಾನದಿಯು ಒಳ್ಳೇ ಘೋರಶಬ್ದವುಳ್ಳದ್ದಾಗಿ ಹರಿಯುತ್ತಿತ್ತೆಂತಲೂ ಆ ಘೋರಶಬ್ದದಿಂದ ಧ್ರುವಋಷಿಗಳ ಚಿತ್ತೈಕಾಗ್ರತೆಗೆ ಭಂಗವಾದುದರಿಂದ ಧ್ರುವಋಷಿಗಳು ಘೋರಶಬ್ದರಹಿತವಾಗಿ ಹರಿಯಲಿಕ್ಕೆ ಗಂಗಾನದಿಯನ್ನು ಪ್ರಾರ್ಥಿಸಿದರೆಂತಲೂ, ತದನುಸಾರವಾಗಿ ತದ್ದಿನಾದಾರಭ್ಯ ಈಸ್ಥಳದಲ್ಲಿ ಶಬ್ದರಹಿತವಾಗಿಯೂ ಮಂದವಾಗಿಯೂ ಹರಿಯಲು ಆರಂಭವಾಗಿ ಸ್ವಲ್ಪ ಮುಂದಕ್ಕೆ ಹೋಗಿ ವಿಶೇಷ ಶಬ್ದವುಳ್ಳದ್ದಾಗಿರುವುದೆಂತಲೂ ಆದುದರಿಂದಲೇ ಈ ಸ್ಥಳದಲ್ಲಿ ಶಬ್ದವು ಕೇಳಿಸುವುದಿಲ್ಲವೆಂತಲೂ ಹೇಳುವರು. ಈ ಸ್ಥಳವು ಹಿಮಾಲಯದ ಉಚ್ಚಶಿಖರದ ಅತಿನಿಕಟದಲ್ಲಿ ಉನ್ನತವಾದದ್ದಿರುವುದು. ಈ ಕಥೆಯ ವಿಷಯವಾಗಿ ಹೀಗೆ ಊಹವಾಗುವುದು-ಈಸ್ಥಳವು ಉನ್ನತವಾಗಿದ್ದು ಇದರ ಕೆಳಗಿದ್ದ ಗಂಗಾನದಿಗೆ ಮೂರುಕಡೆಗೂ ಉನ್ನತೋನ್ನತ ಹಿಮಾಲಯಪರ್ವತದ ಶಿಖರಗಳಿದ್ದು, ನದಿಯು ಅತಿ ಕೆಳಗಿದ್ದು, ಈ ಸ್ಥಳವು ಅತಿ ಗಿಡಗಳ ಗುಂಪುಳ್ಳದ್ದಾಗಿರೋಣದರಿಂದ ಶೀಘ್ರವಾಯುಸಂಚಾರಕ್ಕೆ ಅಸ್ಪದವಿಲ್ಲದೆ ಇರುವುದರಿಂದ ಕಠೋರಶಬ್ದವು ಕೇಳಿಸದ ಮಂದಸ್ವರವು ಕೇಳಿಬರುವುದು. ಯಾವ ಸ್ಥಳದಲ್ಲಿ ವಿಶೇಷ ಗಿಡಗಳ ಗುಂಪು ಇಲ್ಲವೋ ಅಲ್ಲಿ ಸಾಧಾರಣ ಕಠೋರಶಬ್ದವೇ ಕೇಳಿಬರುವುದು. ಕಾಲ ಹೋದಹೋದಂತೆ ನದಿಯ ಪ್ರವಾಹವು ಬದಲಾಗುವುದು. (ವೇಗವಿದ್ದಲ್ಲಿ ಸಾವಕಾಶವಾಗಿ ಹರಿಯುವುದು, ಸಾವಕಾಶವಿದ್ದಲ್ಲಿ ವೇಗವಾಗಿ ಹರಿಯುವುದು) ಇದು ಸ್ವಾಭಾವಿಕವೆಂಬುದು ನದೀತೀರವಾಸಿಗಳಾದ ಸರ್ವಜನರಿಗೂ ಗೊತ್ತೇ ಇರುವುದು. ಈ ಸ್ಥಳದಿಂದ ಬದಲು ಆಗಿ ಸ್ವಲ್ಪ ದೂರದಲ್ಲಿ ವೇಗದಿಂದ ಹರಿಯುವ ಶಬ್ದವು ಅತ್ಯನ್ನತಿರಹಿತವಾದ ಗಿಡದಗುಂಪಿಲ್ಲದ ಶೀಘ್ರವಾಯುಸಂಚಾರಕ್ಕೆ ಅಸ್ಪದವಿದ್ದ ಜಾಗದಲ್ಲಿ ಹೋಗಿ ನಿಂತರೆ ಕಠೋರಶಬ್ದವು ಸಂಪೂರ್ಣವಾಗಿ ಕೇಳಿಬರುವುದು. ಒಂದು ಬಲುಆಳವಾದ ಬಾವಿಯಲ್ಲಿ ಒಳಗೆ ಇಳಿದು ಕಠೋರಶಬ್ದ ಮಾಡಿದರೆ ಆ ಶಬ್ದವು ಶೀಘ್ರವಾಯುಗಮನಾಗಮನವಿಲ್ಲದೆ ಇರುವುದರಿಂದ ಮೇಲಕ್ಕೆ ಮಂದವಾಗಿ ಕೇಳಿಸಬರುವುದು. ಇದು ಸರ್ವರಿಗೂ ಅನುಭವವಿದ್ದದ್ದೇ ಅದೆ. ಈ ಸ್ಥಳದಲ್ಲಿ ವಿಶೇಷ ತಿರುಗಾಡಿ ನೋಡಬೇಕೆನ್ನುವದಷ್ಟರಲ್ಲಿ ವಿಶೇಷ ಶ್ರಮವಾದುದರಿಂದ ಹಾಗೇ ಹಿಂದಕ್ಕೆ ತಿರುಗಿದೆನು. ಈಸ್ಥಳವು ಅತಿರಮಣೀಯವಾಗಿಯೂ, ನಿರ್ಜನವಾಗಿಯೂ, ಯಾವ ಉಪದ್ರವವೂ ಇಲ್ಲದೆ ಅತಿ ಭಯಂಕರವಾದ ಅರಣ್ಯವಾದುದರಿಂದ ಪೂರ್ವದಲ್ಲಿ ಇಲ್ಲಿ ಋಷಿಗಳು ವಾಸಮಾಡಿದ್ದರೂ ಮಾಡಿರಬಹುದೆಂದು ಅನುಮಾನವಾಗುತ್ತದೆ.

ವಿರೂಪಾಕ್ಷವೊಡೆಯರ್,
ಬ್ರಹ್ಮಚಾರಿ.

ಶೃಂಗಗಿರಿಯ ನೂತನಸ್ವಾಮಿಗಳ ಆಶ್ರಮಸ್ವೀಕಾರವು.

ನೂತನಗುರುಗಳ ಆಶ್ರಮಸ್ವೀಕಾರ ಸಂಬಂಧವಾಗಿ ಕಳೆದ ತಾ॥ ೭ ರ ವೇಳೆಗ್ಗೆ ಶೃಂಗಗಿರಿ ಊರೆಲ್ಲವೂ ಬಹು ಸಡಗರದಿಂದ ಅಲಂಕರಿಸಲ್ಪಟ್ಟು ಎಲ್ಲಾ ಕಾರ್ಯಗಳೂ ಸಜ್ಜುಗೊಳಿಸಲ್ಪಟ್ಟಿದ್ದವು. ಈ ಘನವಾದಪೀಠದ ಉತ್ತರಾಧಿಕಾರಕ್ಕೆ ಪರಮಪದವನ್ನು ಹೊಂದಿದ ಸ್ವಾಮಿಗಳಿಂದ ಆರಿಸಲ್ಪಟ್ಟಿದ್ದ ಬ್ರಹ್ಮಶ್ರೀ ನರಸಿಂಹಶಾಸ್ತ್ರಿಗಳು ತಮ್ಮ ನಿತ್ಯಗಟ್ಟಲೆಯ ಸ್ನಾನಸಂಧ್ಯಾವಂದನಾದಿ ಕರ್ಮಗಳನ್ನು ಬೆಳಗಿನ ೩ ಗಂಟೆಯೊಳಗಾಗಿ ಪೂರೈಸಿಕೊಂಡಿರುವಷ್ಟು, ಮಠದ ಏಜಂಟರಾದ ಬ್ರಹ್ಮಶ್ರೀ ಶ್ರೀಕಂಠಶಾಸ್ತ್ರಿಗಳು ಅವರನ್ನು ಹಿಂದಣ ಶ್ರೀಗಳವರು ಭೌತಿಕಶರೀರವನ್ನು ಬಿಟ್ಟಂತಹ ಮತ್ತೂ ಅವರ ಪಾದುಕೆಗಳಿಡಲ್ಪಟ್ಟಿದ್ದಂತಹ ಕೊಠಡಿಗೆ ಕರೆದುಕೊಂಡು ಹೋಗಿ, ಬ್ರಹ್ಮೈಕ್ಯರಾದ ಶ್ರೀಗಳವರು ತಮಗೆ ಮಾಡಿದ ಆವಶ್ಯಕವಾದ ಮಂತ್ರೋಪದೇಶವನ್ನು ನೂತನ ಗುರುಗಳಿಗೆ ಪಾದುಕೆಗಳಿದಿರಿಗೆ ಬಹುಕಾಲದಿಂದಲೂ ನಡೆದು ಬಂದಿರುವ ಪದ್ಧತಿಯಮೇರೆಗೆ ತಿಳಿಸಿಕೊಟ್ಟರು. ಈ ಕಾರ್ಯವು ಬೆಳಗಿನ ೭ ಗಂಟೆಯಿಂದ ೧೦ ಗಂಟೆಯವರೆಗೂ ನಡೆದಿತು. ಅನಂತರ ಈ ಮಠದಪೀಠಾಧಿಕಾರ ಸ್ವೀಕಾರಮಹೋತ್ಸವಕ್ಕಾಗಿ ಶ್ರೀಮನ್ಮಹಾರಾಜರವರ ಆಜ್ಞೆಯ ಪ್ರಕಾರ ದಯಮಾಡಿಸಿದ್ದ ೧ ನೆಯ ಕೌನ್ಸಿಲರ್ ಮ॥ ಹೆಚ್. ವಿ. ನಂಜುಂಡಯ್ಯನವರು ನರಸಿಂಹಶಾಸ್ತ್ರಿಗಳ ದರ್ಶನಕ್ಕೆ ಪಾತ್ರರಾಗಿ ಕೆಲಬುದ್ಧಿವಾದಗಳನ್ನು ಹೇಳಿದಮೇಲೆ ಭವಿಷ್ಯದ್ ಗುರುಗಳು ಶ್ರೀಚಂದ್ರಮೌಳೀಶ್ವರನ ದೇವಾಲಯಕ್ಕೂ ಗತಿಸಿದ ಶ್ರೀಗಳವರು ತಮ್ಮ ಅವಸಾನಕಾಲದಲ್ಲಿ ದೇವಪೂಜೆಯನ್ನು ಮಾಡಿದಂತಹ ಸ್ಥಳಕ್ಕೂ ಕರೆದುಕೊಂಡು ಹೋಗಲ್ಪಟ್ಟಿದ್ದು, ಅನಂತರ ಬ್ರಹ್ಮಚಾರಿಯು ಸನ್ಯಾಸಾಶ್ರಮಸ್ವೀಕಾರಕ್ಕೆ ಪೂರ್ವ ಮಾಡಬೇಕಾದ ಆತ್ಮತರ್ಪಣ, ನವಶ್ರಾದ್ಧ, ವಿರಜಾಹೋಮ ಮೊದಲಾದ ಕರ್ಮಗಳನ್ನು ನೆರೆದಿದ್ದ ಸಾವಿರಾರು ಜನ ಬ್ರಾಹ್ಮಣರ ಪ್ರತ್ಯಕ್ಷದಲ್ಲಿ ನೆರವೇರಿಸಿದರು. ಮಧ್ಯಾಹ್ನ ೨ ಗಂಟೆಯ ಸಮಯದಲ್ಲಿ ಸನ್ಯಾಸಾಶ್ರಮಸ್ವೀಕಾರಕ್ಕೆ ಉಪಕ್ರಮಿಸಲ್ಪಟ್ಟಿತು ಮೈಸೂರ ಸರ್ಕಾರದಧಿಕಾರಿಗಳಾದ ೧ ನೆಯ ಕೌನ್ಸಿಲರ್ ಮ॥ ಹೆಚ್. ವಿ. ನಂಜುಂಡಯ್ಯನವರು, ಮುಜರಾಯಿ ಸೂಪರಿಂಟೆಂಡೆಂಟ್ ಮ॥ ಬಿ. ರಾಮಸ್ವಾಮಯ್ಯನವರು, ಪೋಲೀಸು ಇ॥ ಜನರಲ್ ಮ॥ ಶ್ರೀಕಂಠೇಶ್ವರಯ್ಯನವರು ಮತ್ತೂ ಕಡೂರ ಡಿ॥ ಕಮಿಷನರ್ ಮ॥ ಸುಬ್ರಹ್ಮಣ್ಯ ಅಯ್ಯರ್‌ರವರು ಅಲ್ಲದೆ ಮೈಸೂರಸೀಮೆಯಿಂದಲೂ, ಹೊರಗಣಿಂದಲೂ ಬಂದಿದ್ದ ಬಹು ಜನ ಶಿಷ್ಯಮಂಡಲಿ-ಇವರುಗಳಿಂದಲೂ, ಪರಿವೃತರಾದ ಭವಿಷ್ಯದ್ ಗುರುಗಳು ತುಂಗಾನದಿಯ ದಡದಮೇಲಕ್ಕೆ ಚಿತ್ತೈಸಿ, ತನ್ನ ಮಾತಾಪಿತೃಗಳು ಮೊದಲಾದ ಬಂಧುವರ್ಗದವರ ಮತ್ತೂ ಮಿತ್ರರಕೂಡ ತಮಗೆ ಯಾವವಿಧವಾದ ದೇಹಸಂಬಂಧವೂ ಇಲ್ಲವೆಂದೂ,ಲೌಕಿಕವ್ಯಾಪಾರವನ್ನು ತಾವು ತ್ಯಜಿಸಿಬಿಟ್ಟಿರುತ್ತೇವೆಂದೂ ನೆರೆದಿದ್ದ ಶಿಷ್ಯಮಂಡಳಿಯೆಲ್ಲವೂ ಕೇಳುವಂತೆ ಗಟ್ಟಿಯಾಗಿ ಹೇಳಿ, ನದಿಯೊಳಗಿಳಿದು ಸ್ನಾನವನ್ನು ಮಾಡಿ, ಎದೆಯುದ್ದ ನೀರಿನೊಳಗೆ ನಿಂತುಕೊಂಡು ಮಂತ್ರಗಳನ್ನು ಉಚ್ಚರಿಸಿ, ಕಡೆಯಲ್ಲಿ ವೇದ ಮಂತ್ರಗಳನ್ನು ಬಹು ಗಂಭೀರಸ್ವರದಿಂದ ಮೂರಾವೃತ್ತಿ ಹೇಳಿದರು. ೧೯ ವರ್ಷ ವಯಸ್ಸಿನ ಯುವಕನು ಈ ರೀತಿ ಬಹಿರಂಗವಾಗಿ ಪ್ರಾಪಂಚಿಕ ಸುಖವನ್ನು ತ್ಯಜಿಸಿ, ಸನ್ಯಾಸಾಶ್ರಮವನ್ನು ಸ್ವೀಕರಿಸಿದುದು ಅತ್ಯಂತಪ್ರೇಕ್ಷಣೀಯವಾಗಿದ್ದಿತು. ಭವಿಷ್ಯದ್ ಗುರುಗಳು ತಮ್ಮ ಶಿರಸ್ಸಿನಲ್ಲಿದ್ದ ಅಲ್ಪಸ್ವಲ್ಪ ಕೂದಲನ್ನು ಕಿತ್ತುಕೊಂಡು ತಮ್ಮ ಯಜ್ಞೋಪವೀತದ ಕೂಡ ನದಿಯೊಳಗೆ ಬಿಸುಡಿದರು. ಬಿಳಿಯುಡುಪುಗಳನ್ನು ತೆಗೆದುಬಿಟ್ಟು ಕಾವಿ ಕಾಟಿಯನ್ನು ಹೊದ್ದು ದಂಡವನ್ನು ಪೂಜಿಸಿ ಹಿಡಿದುಕೊಂಡು ನೆರೆದಿದ್ದ ಪ್ರೇಕ್ಷಕರು ಕರತಾಳನದಿಂದ ಕೋಲಾಹಲ ಧ್ವನಿಯನ್ನು ಮಾಡುತ್ತಿರುವಲ್ಲಿ ದಡದಮೇಲಕ್ಕೆ ಬಂದರು. ಅಲ್ಲಿಂದ ಹಿಂದಣಗುರುಗಳ ಮಹಾಸಮಾಧಿಯಲ್ಲಿಗೆ ಕರೆದುಕೊಂಡು ಹೋಗಲ್ಪಟ್ಟು, ಹಿಂದಣ ಶ್ರೀಗಳವರ ಆಜ್ಞೆಯ ಪ್ರಕಾರ ಮಹಾವಾಕ್ಯೋಪದೇಶವನ್ನು ಮಾಡಲ್ಪಟ್ಟರು. ಇದಾದಮೇಲೆ ನೂತನಗುರುಗಳು ಮಹಾಸಮಾಧಿಯ ಪೂಜೆಯನ್ನೂ, ಶಸ್ತ್ರಾಂಕ ಆಶೌಚ ಕರ್ಮವನ್ನೂ ನೆರವೇರಿಸಿ, ಕಡೆಯಲ್ಲಿ ಹಿಂದಣಶ್ರೀಗಳವರ ಇಷ್ಟಪ್ರಕಾರ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳೆಂಬ ನಾಮಾಂತರವನ್ನು ಹೊಂದಿದರು. ಶ್ರೀಗಳವರ ಈ ನೂತನ ನಾಮಸ್ವೀಕರಣವು ಮಠದ ಏಜಂಟರಿಂದಲೂ, ಭಟ್ಟರುಗಳಿಂದಲೂ ನೆರೆದಿದ್ದ ಮಹಾಜನರಿಗೆಲ್ಲಾ ತಿಳುಹಲ್ಪಟ್ಟಿತು ಇಲ್ಲಿಗೆ ವಿಧ್ಯುಕ್ತಕರ್ಮವೆಲ್ಲವೂ ತೀರಿತು. ಅನಂತರ ಶಿಷ್ಯಮಂಡಲಿಯೆಲ್ಲವೂ ಗುರುಗಳ ಪ್ರಸಾದನಿರೀಕ್ಷಣೆಯಲ್ಲಿರುವಾಗ, ಶ್ರೀಗಳವರು ತಮ್ಮ ಹಿಂದಣ ಗುರುಗಳ ಮಹಿಮಪ್ರಶಂಸೆಯನ್ನು ಮಾಡಿ, ಅವರ ಪೂರ್ಣಾಶೀರ್ವಾದವು ತಮ್ಮಮೇಲೂ, ತಮ್ಮ ಅಶೇಷ ಶಿಷ್ಯಮಂಡಲಿಯಮೇಲೂ ಇರಬೇಕೆಂದು ಪ್ರಾರ್ಥಿಸಿ ೧೦ ಶ್ಲೋಕಗಳನ್ನು ನಿಂತಿತೆಯಲ್ಲಿಯೇ ಕವನಮಾಡಿ ಹೇಳಿದುದಲ್ಲದೆ, ಅದರ ತಾತ್ಪರ್ಯವನ್ನು ಕನ್ನಡದಲ್ಲೂ ಅಪ್ಪಣೆಕೊಡಿಸಿದರು. ಇದರಿಂದ ಶ್ರೀಗಳವರಲ್ಲಿರುವ ಅಪಾರವಾದ ಗುರುಭಕ್ತಿಯೂ, ಕವಿತಾಶಕ್ತಿಯೂ ವ್ಯಕ್ತವಾಗಿ ಆಶ್ಚರ್ಯವುಂಟಾಯಿತು. ಕೂಡಲೇ ಶಿಷ್ಯರೆಲ್ಲರೂ ಶ್ರೀಗಳವರಿಂದ ಪ್ರಸಾದವನ್ನು ಸ್ವೀಕರಿಸಿ, ಪ್ರತಿಯೊಬ್ಬರೂ ಶ್ರೀಗಳವರ ದೈವಭಕ್ತಿ, ಶಾಂತಿ ಮತ್ತೂ ವಿದ್ಯಾವೈದುಷ್ಯಗಳನ್ನು ಕುರಿತು ಕೊಂಡಾಡುತ ತಂತಮ್ಮ ಸ್ಥಳಗಳಿಗೆ ತೆರಳಿದರು. ಅನಂತರ ಶ್ರೀ ಚಂದ್ರಶೇಖರಭಾರತೀಸ್ವಾಮಿಗಳವರು ವಿದ್ಯಾಶಂಕರ ಶ್ರೀಶಾರದೆಯರ ದೇವಸ್ಥಾನಗಳಿಗೂ, ನದಿಯ ಆಚೆ ದಡದಲ್ಲಿರುವ ಶ್ರೀ ನೃಸಿಂಹಭಾರತೀ ಸ್ವಾಮಿಗಳ ಹಿಂದಣ ಗುರುಗಳ ದೇವಾಲಯಕ್ಕೂ ದಯಮಾಡಿ ದೇವರುಗಳ ಆರಾಧನೆಯನ್ನು ತೀರಿಸಿಕೊಂಡು ತಮ್ಮ ವಾಸಸ್ಥಾನವಾದ ಸಚ್ಚಿದಾನಂದ ವಿಲಾಸಕ್ಕೆ ಚಿತ್ತೈಸಿ, ಸ್ನಾನಾನಂತರ ಶ್ರೀ ಚಂದ್ರಮೌಳೀಶ್ವರಸ್ವಾಮಿಯ ಮಧ್ಯಾಹ್ನದ ಪೂಜೆಯನ್ನು ಮಾಡಿ, ಭಿಕ್ಷೆಗೆ ದಯಮಾಡಿಸುವ ವೇಳೆಗೆ ಸಾಯಂಕಾಲ ೫ ಗಂಟೆಯಾಗಿದ್ದಿತು. ತರುವಾಯ ೨೦೦೦ ಜನ ಬ್ರಾಹ್ಮಣರಿಗೆ ಮೃಷ್ಟಾನ್ನಭೋಜನವಾಯಿತು.

ಪವಿತ್ರವಾದ ಮಠದ ಚರಿತ್ರಪ್ರಸಿದ್ಧವಾದ ಪೀಠದಮೇಲೆ ಶ್ರೀಗಳವರ ಪಟ್ಟಾಭಿಷೇಕ ಮಹೋತ್ಸವವನ್ನು ತಾ॥ ೮ ರಲ್ಲಿ ನೆರವೇರಿಸುವುದಕ್ಕಾಗಿ ತಾ॥ ೭ ರ ರಾತ್ರಿಯಲ್ಲೂ ತಾ॥ ೮ ರಲ್ಲೂ ಮಹೋತ್ಸವಕಾರ್ಯಗಳು ಬಹು ಸಡಗರದಿಂದ ಮಾಡಲ್ಪಟ್ಟುವು. ತಾ॥ ೮ ರ ಬೆಳಗ್ಗೆ ೧೦ ಗಂಟೆಯಲ್ಲಿ ಶ್ರೀಗಳವರು ಸಕಲ ಬಿರುದಾವಳಿಗಳೊಡನೆ ಮಠದಾವರಣದೊಳಗಿರುವ ದೇವಸ್ಥಾನಗಳಿಗೆಲ್ಲಾ ದಯಮಾಡಿಸಿ, ದೇವರ ದರ್ಶನವನ್ನು ಮಾಡಿಕೊಂಡು ಮಠದ ಅಧಿದೇವತೆಯಾದ ಶ್ರೀ ಶಾರದಾಂಬಾ ದೇವಾಲಯಕ್ಕೆ ಚಿತ್ತೈಸಿ, ಅಲ್ಲಿ ದೇವರ ಬಲಪಾರ್ಶ್ವದಲ್ಲಿ ಏರ್ಪಡಿಸಿದ್ದ ಹೋಮಕುಂಡದ ಮುಂಗಡೆ ಬೆಳ್ಳಿಯ ಪೀಠದಮೇಲೆ ಮಂಡಿಸಿ ಹೋಮಕಾರ್ಯವನ್ನು ಮುಗಿಸಿಕೊಂಡು ಅನೇಕ ದಾನಗಳನ್ನು ಕೊಟ್ಟು ಅನಂತರ ಉತ್ಸವದಿಂದ ಹೊರಟು ಶ್ರೀಶಾರದೆಯ ಇದಿರಿನೇರ್ಪಡಿಸಿದ್ದ ರಜತ ಸಿಂಹಾಸನದ ಸಮೀಪಕ್ಕೆ ಬಂದು ಸಿಂಹಾಸನವನ್ನು ಪೂಜಿಸಿ ವೈದಿಕರು ವೇದಘೋಷವನ್ನು ಮಾಡುತ್ತಿರುವಾಗ ಮಠದ ಪರಮಶಿಷ್ಯರಾದ ಮ॥ ಎ. ಪಿ. ಮಾಧವರಾಯರ ಹಸ್ತಾವಲಂಬನದಿಂದ ಸಿಂಹಾಸನಾರೋಹಣವನ್ನು ಮಾಡಿದರು. ಆಗ ಮೈಸೂರ ಸರ್ಕಾರಿಯಧಿಕಾರಿಗಳೂ, ಸಂಸ್ಥಾನದ ಮತ್ತೂ ದಕ್ಷಿಣದೇಶದ ಪ್ರಮುಖ ಶಿಷ್ಯರುಗಳೂ ಸಂಸ್ಥಾನದ ಒಂದು ಪಾರ್ಶ್ವದಲ್ಲೂ, ಪುರೋಹಿತರುಗಳೂ ವೈದಿಕ ಬ್ರಾಹ್ಮಣರುಗಳೂ ಮತ್ತೊಂದುಪಾರ್ಶ್ವದಲ್ಲೂ ಸಾಲಾಗಿ ಕುಳಿತುಕೊಂಡರು. ಸರಿಯಾಗಿ ಮಧ್ಯಾಹ್ನದಲ್ಲಿ ಪುರೋಹಿತರುಗಳು ಶ್ರೀಗಳವರ ಶಿರಸ್ಸಿನಮೇಲೆ ಪವಿತ್ರೋದಕವನ್ನು ಪ್ರೋಕ್ಷಿಸಿ, ಅನಂತರ ಸುವರ್ಣಾಭಿಷೇಕವನ್ನೂ, ಲಾಜಾಭಿಷೇಕವನ್ನೂ ಮಾಡಿದರು. ಅಭಿಷೇಕಮಾಡಲ್ಪಟ್ಟ ಭಂಗಾರದ ನಾಣ್ಯಗಳೂ, ಬತ್ತದರಳೂ ಸಭಿಕರಿಗೆಲ್ಲಾ ಹಂಚಲ್ಪಟ್ಟುವು. ಅನಂತರ ಶ್ರೀಗಳವರು ಅಮೋಘವಾದ ವಸ್ತ್ರಾಭರಣಗಳಿಂದಲಂಕೃತರಾದರು. ಆಗ ನೆರೆದಿದ್ದ ಸಭಿಕರೆಲ್ಲರೂ ಶ್ರೀಗಳವರ ವೈಖರಿಯನ್ನೂ, ತೇಜಸ್ಸನ್ನೂ ನೋಡಿ ವಿಸ್ಮಿತರಾಗಿ ಕೋಲಾಹಲಧ್ವನಿಯನ್ನು ಮಾಡಿದರು. ಅನೇಕ ದಾನಧರ್ಮಗಳು ಮಾಡಲ್ಪಟ್ಟುವು, ಮತ್ತೂ ಶ್ರೀ ಶಾರದೆಯ ಪೂಜೆಯು ನಡೆದಿತು. ಶ್ರೀಗಳವರ ಅಪ್ಪಣೆಯ ಪ್ರಕಾರ ಮ॥ಎ.ಪಿ. ಮಾಧವರಾಯರು ಎದ್ದುನಿಂತು— "ಶ್ರೀಕಂಠಶಾಸ್ತ್ರಿಗಳನ್ನು ಜಗದ್ಗುರುಗಳು ಮಠದ ಏಜಂಟರನ್ನಾಗಿ ಪ್ರೀತಿಯಿಂದ ನೇಮಕಮಾಡಿರುತ್ತಾರೆ" ಎಂದು ಸಭಿಕರಿಗೆಲ್ಲಾ ತಿಳಿಯ ಹೇಳಿದರು. ನಮ್ಮ ಶ್ರೀಮನ್ಮಹಾರಾಜರವರೇ ಮೊದಲಾಗಿ ಅನೇಕ ರಾಜರುಗಳೂ, ಭೂಸ್ವಾಮಿಗಳೂ, ದೊಡ್ಡಮನುಷ್ಯರುಗಳೂ, ಮಠದ ಅನೇಕ ಶಿಷ್ಯರೂ ಕಳುಹಿಸಿಕೊಟ್ಟಿದ್ದ ಉಡುಗೊರೆಗಳೂ, ಕಾಣಿಕೆಗಳೂ ಕ್ರಮವಾಗಿ ಒಪ್ಪಿಸಲ್ಪಟ್ಟವೇಳೆ ಸ್ಥಳೀಯಜನರು ಪಾದಪೂಜೆಯನ್ನು ಮಾಡಿದರು. ತೀರ್ಥವಿನಿಯೋಗಾನಂತರ ಸ್ವಾಮಿಗಳು ಶ್ರೀ ಶಾರದಾದೇವಾಲಯದ ಹೊರಕ್ಕೆ ದಯಮಾ

ಡಿಸಿ, ಅಲ್ಲಿ ನಿರೀಕ್ಷಿಸಿಕೊಂಡಿದ್ದ ಬ್ರಾಹ್ಮಣೇತರ ಶಿಷ್ಯರುಗಳಿಂದಲೂ, ಜಹಗೀರಿನ ರೈತರುಗಳಿಂದಲೂ ಕಾಣಿಕೆಯನ್ನು ಸ್ವೀಕರಿಸಿ ಅವರುಗಳಿಗೆ ಆಶೀರ್ವಾದವನ್ನು ಕೊಟ್ಟು ಅನಂತರ ಯಥಾಮರ್ಯಾದೆಯಿಂದ ಸಚ್ಚಿದಾನಂದ ವಿಲಾಸಕ್ಕೆ ದಯಮಾಡಿಸಿದರು. ಅಲ್ಲಿಗೆ ಪಟ್ಟಾಭಿಷೇಕ ಮಹೋತ್ಸವಕಾರ್ಯವು ಪರಿಸಮಾಪ್ತಿಗೊಂಡಿತು. ೫೦೦೦ ಬ್ರಾಹ್ಮಣರಿಗೆ ದಿವ್ಯಸಂತರ್ಪಣೆಯು ನಡೆದು ದಕ್ಷಿಣೆಯು ಕೊಡಲ್ಪಟ್ಟಿತು ಆ ದಿವಸ ಸಾಯಂಕಾಲ ೭ ಗಂಟೆಯಲ್ಲಿ ಶ್ರೀಗಳವರು ದಿವ್ಯವಸ್ತ್ರಾಭರಣಭೂಷಿತರಾಗಿ ಭಂಗಾರದ ಪಲ್ಲಕ್ಕಿಯಲ್ಲಿ ಮಂಡಿಸಿ ಮಲ್ಲಿಕಾರ್ಜುನಗುಡ್ಡದ ನಾಲ್ಕು ವೀಧಿಗಳಲ್ಲೂ ಮಹಾವೈಭವದಿಂದ ಉತ್ಸವಗೊಂಡು ಪ್ರೇಕ್ಷಕ ಜನರ ಮನದಣಿಯ ದರ್ಶನವನ್ನಿತ್ತು ಅವರುಗಳು ಮಾಡಿದ ಪೂಜೆಯನ್ನು ಕೈಕೊಂಡು ಮಧ್ಯರಾತ್ರಿಯ ವೇಳೆಗೆ ಮಠಕ್ಕೆ ಹಿಂದಿರುಗಿ ಚಿತ್ತೈಸಿದರು. ಇಲ್ಲಿಗೆ ಎಲ್ಲ ಉತ್ಸವ ಸಮಾರಂಭವೂ ಕೊನೆಗಂಡಿತು. ನೂತನ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳವರು ತಮ್ಮ ಗುರುಗಳ ಆಶೀರ್ವಾದ ಬಲದಿಂದ ಜ್ಞಾನವೆಂಬ ಕಾಂತಿಯನ್ನು ಬಹುದೂರ ಬೆಳಗುವವರಾಗಲೆಂದೂ, ಮಠದ ಪವಿತ್ರವಾದ ಸಂಪ್ರದಾಯಗಳನ್ನು ಯಾವ ನ್ಯೂನತೆಯೂ ಇಲ್ಲದೆ ಬಹುಕಾಲದವರೆಗೆ ನಡೆಸಿಕೊಂಡು ಬರುವವರಾಗಲೆಂದೂ ಪ್ರತಿಯೊಬ್ಬ ಶಿಷ್ಯನ ನಿಜವಾದ ಪ್ರಾರ್ಥನೆಯಾಗಿರುತ್ತದೆ.

ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀಸ್ವಾಮಿಗಳು ಬ್ರಹ್ಮೈಕ್ಯರಾದುದರಿಂದ, ಮಠದ ಆಡಳಿತವನ್ನೂ, ಆಸ್ತಿಯನ್ನೂ ಅವರ ಉತ್ತರಾಧಿಕಾರಿಗಳು ಸ್ವಸಾಮರ್ಥ್ಯದಿಂದ ನಿರ್ವಹಿಸಿಕೊಂಡು ಹೋಗುವವರೆಗೂ ಅವುಗಳನ್ನು ಕಾಪಾಡತಕ್ಕ ಭಾರವು ಸರ್ಕಾರದವರಮೇಲೆ ಬಿದ್ದಿರುವುದರಿಂದ ಹಿಂದಣ ಶ್ರೀಗಳವರ ಕಾಲದಲ್ಲಿ ಮಠದ ಏಜಂಟರಾಗಿದ್ದ ಬ್ರಾ॥ಶ್ರೀ ಶ್ರೀಕಂಠಶಾಸ್ತ್ರಿಗಳೇ ಪೂರ್ವದಂತೆ ಏಜಂಟರಾಗಿದ್ದುಕೊಂಡು ಕಡೂರ ಡಿ॥ ಕಮಿಷನರ ಮೇಲ್ವಿಚಾರಣೆಯಲ್ಲಿ ಎಲ್ಲಾ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುವ ಹಾಗೂ, ಈ ಸೀಮೆಯಲ್ಲೂ, ಹೊರಗೂ ಬರುವ ಮಠವಾಸ್ತಿಯ ಪಟ್ಟಿಯನ್ನೂ, ಈ ವರ್ಷದ ಮಠದ ಆಯವ್ಯಯದ ಪಟ್ಟಿಯನ್ನೂ ಬರೆದು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದೆಂದೂ ಮೈಸೂರ ಸರ್ಕಾರದಪ್ಪಣೆಯಾಗಿರುತ್ತದೆ. (ಮದ್ರಾಸ್ ಮೇಲ್)

ಮೈಸೂರ್ ಸ್ಟಾರ್

೧೯೧೩ ನೆಯ ಏಪ್ರಿಲ್ ತಾ॥ ೨೧ ನೆಯ ಸೋಮವಾರ

ಕಂಚಿಯ ಪಂಡಿತಮಹಾಸಭೆ.

ಭರತಖಂಡವನ್ನು ಸಕಲವಿಧದಲ್ಲೂ ಅಭಿವೃದ್ಧಿಗೆ ತರಬೇಕೆಂದು ಬಯಸಿ, ಅದಕ್ಕಾಗಿ ಪಾಡುಪಡುತ್ತಿರುವ ದೇಶಾಭಿಮಾನಿಗಳಿಗೆ ಕೆಲವು ತೊಡಕುಗಳು ಅನುಭವಕ್ಕೆ ಬಂದಿರುತ್ತವೆ. ಅವುಗಳನ್ನು ಪರಿಹರಿಸದ ಹೊರತು ಸಮಂಜಸವಾಗಿ ಈ ದೇಶವು ಏಳ್ಗೆಗೊಳ್ಳಲಾರದು. ಅಂಥ ತೊಡಕುಗಳಾವುವೆಂದರೆ— ಬಾಲ್ಯವಿವಾಹಪದ್ಧತಿ, ಸಮುದ್ರಯಾನ ನಿಷೇಧ, ಜಾತಿಮತ್ಸರಪ್ರಾಬಲ್ಯ, ಪುನರ್ವಿವಾಹನಿಷೇಧ ಮೊದಲಾದುವುಗಳು. ಈ ವಿಘ್ನಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಶಾಸ್ತ್ರವಚನಗಳಿಗೆ ವಿರುದ್ಧವಾಗಿಯೇ ಆಗಲಿ ಅಥವಾ ಸ್ವಪ್ರತಿಷ್ಠೆಯಿಂದ ಮನಸ್ಸಿಗೆ ತೋರಿದಂತೆಯೇ ಆಗಲಿ ಪ್ರವರ್ತಿಸಬೇಕೆಂಬುದು ಅವರುಗಳ ಅಭಿಪ್ರಾಯವಾಗಿಲ್ಲ. ಅದು ಕಾರಣ, ಸಂಘಪರಿಷ್ಕರಣ ವಿಷಯದಲ್ಲಿ ಧರ್ಮಶಾಸ್ತ್ರಾದಿಗಳಲ್ಲಿ ಪೂರ್ಣ ಪ್ರಜ್ಞೆಯುಳ್ಳ ವೈದಿಕ ಪಂಡಿತರ ಅಭಿಪ್ರಾಯವನ್ನು ತೆಗೆದುಕೊಂಡೇ ಆ ತೊಡಕುಗಳನ್ನು ತಪ್ಪಿಸಬೇಕೆಂದು ನಿರೀಕ್ಷಿಸುತ್ತಿದ್ದಾರೆ. ಆದರೆ ಪ್ರಕೃತಕಾಲಸ್ಥಿತಿಯನ್ನೂ, ದೇಶಾಂತರಗಳ ಹಾನಿವೃದ್ಧಿಗಳ ಲಕ್ಷಣವನ್ನೂ ಚೆನ್ನಾಗಿ ಪರಿಶೋಧಿಸಿ ಲೌಕಿಕರು ತಿಳಿದಿರುವಂತೆ ವೈದಿಕರು ತಿಳಿದಿರುವುದಿಲ್ಲ. ಲೌಕಿಕರಿಗೆ ದೇಶರಕ್ಷಣೆಯ ಕಡೆಗೆ ಮನಸ್ಸು ಎಳೆಯುತ್ತಿದ್ದರೆ ವೈದಿಕರಿಗೆ ಶಾಸ್ತ್ರರಕ್ಷಣೆಯ ಕಡೆಗೆ ಮನಸ್ಸೆಳೆಯುತ್ತದೆ. ಜಗದ್ರಕ್ಷಣೆಗಾಗಿ ವೇದಶಾಸ್ತ್ರಗಳೆಲ್ಲಾ ಅವತರಿಸಿರುವುವೆಂದು ಲೌಕಿಕರು ಭಾವಿಸುತ್ತಿದ್ದರೆ, ಆ ಶಾಸ್ತ್ರಗಳ ರಕ್ಷಣೆಗಾಗಿಯೇ ನಾವು ಅವತರಿಸಿದ್ದೇವೆಂದು ವೈದಿಕರು ಭಾವಿಸುತ್ತಾರೆ. ಶಾಸ್ತ್ರೈಕಶರಣ್ಯರಾದ ವೈದಿಕರುಗಳು ಕಣ್ಣು ಮುಚ್ಚಿಕೊಂಡು ತಾವು ಹಿಡಿದ ಪಟ್ಟನ್ನು ಬಿಟ್ಟು ೧ ಹಜ್ಜೆಯನ್ನು ಹಿಂದುಮುಂದಕ್ಕಿಡಲೂ ಪ್ರಯತ್ನಿಸುವವರಾಗಿಲ್ಲ. ವೇದಕಾಲದಲ್ಲಿಲ್ಲದ ಜಾತಿಭೇದಗಳೂ, ಕಟ್ಟಳೆಗಳೂ ಮನುವಿನ ಕಾಲದಲ್ಲಿ ಮಾನವರಿಂದ ತಮ್ಮ ಕ್ಷೇಮಕ್ಕೋಸ್ಕರ ಕಲ್ಪಿಸಲ್ಪಟ್ಟಿರುವುವಾದಕಾರಣ, ಆಗಿನ ಕಾಲಕ್ಕೆ ತಕ್ಕಂತೆ ಸಮಾಜದ ಕಟ್ಟಲೆಗಳು ಕಲ್ಪಿಸಲ್ಪಟ್ಟಿರುವಾಗ ಈಗಿನ ಕಾಲಕ್ಕೆ ಅನುಗುಣವಾಗುವಂತೆ ಕೆಲ ಬದಲಾವಣೆಗಳನ್ನು ಕಲ್ಪಿಸಿಕೊಳ್ಳುವುದು ಪಾಪಾಚರಣೆಯೆಂದಿಗೂ ಅಲ್ಲವೆಂದು ಲೌಕಿಕರು ನಂಬುತ್ತಾರೆ. ಈ ಉಭಯರಿಗೂ ಮಧ್ಯಸ್ಥವಾದ ಮತ್ತೊಂದು ಪಕ್ಷವು, ಪ್ರಕೃತದಲ್ಲಿ ಮಾಡಲ್ಪಡಬೇಕೆಂಬ ಸಂಸ್ಕಾರಗಳೆಲ್ಲಾ ವೇದವಿಹಿತವಾದುವುಗಳೇ ಎಂದು ಸಮರ್ಥಿಸಲು ಶಕ್ತವಾಗಿರುತ್ತದೆ.

ಈ ಪಕ್ಷಭೇದಗಳವರೆಲ್ಲರೂ ೧೦-೨೦ ವರ್ಷಗಳಿಂದ ಲೂ ವಾದಾನುವಾದಗಳನ್ನು ಮಾಡುತ್ತಲೂ, ಸಂಸ್ಕರಣೋಪಾಯಗಳನ್ನು ಕಾರ್ಯರೂಪವಾಗಿ ಅಲ್ಲಲ್ಲಿ ನೆರವೇರಿಸುತ್ತಲೂ, ಅವುಗಳನ್ನು ನಿರೋಧಿಸುವ ಯತ್ನಗಳನ್ನು ಪ್ರತಿಪಕ್ಷದವರು ಕೈಲಾದಮಟ್ಟಿಗೆ ನಡೆಯಿಸುತ್ತಲೂ ಬಂದಿದ್ದಾರೆ. ಆದರೆ ದೇಶಹಿತಾರ್ಥವಾಗಿ ಸದುದ್ದೇಶದಿಂದ ಮಾಡಲ್ಪಡಬೇಕಾದ ಇಂಥ ಯತ್ನಗಳಲ್ಲಿಯೂ ಏಕಮತ್ಯವಿಲ್ಲದೆ ಹೋದರೆ ಉದ್ದಿಷ್ಟವಾದ ಫಲವು ಸಮಗ್ರವಾಗಿ ಕೈಗೂಡಲಾರದೆಂಬುದನ್ನು ಮನಗಂಡ ಮಹನೀಯರುಗಳು ಈಗ ಪಕ್ಷಾಂತರದ ಜನರನ್ನು ಸಹ ಒಂದುಕಡೆ ಸೇರಿಸಿ, ವಿಚಾರ ಮಾಡಿ, ಈ ವಿವಾದಾಸ್ಪದವಾದ ವಿಷಯಗಳನ್ನು ಕೊನೆಮುಟ್ಟಿಸಬೇಕೆಂದು ಪ್ರಯತ್ನಿಸುತ್ತಲಿದ್ದಾರೆ.

ಈ ತಿಂಗಳ ಮೊದಲ ವಾರದಲ್ಲಿ ಕಂಚಿಯೊಳಗೆ ಕೂಡಿದ ಪಂಡಿತಸಭೆಯೇ ಮೇಲೆಹೇಳಿದ ಪ್ರಯತ್ನದ ರೂಪವಾದುದು. ಸಂಘಸಂಸ್ಕರಣ ವಿಷಯವನ್ನು ಆಲೋಚಿಸುವುದಕ್ಕೆ ಕಳೆದ ೨೦ ವರ್ಷಗಳಿಂದಲೂ ಅನೇಕ ಮಹಾಸಭೆಗಳೂ, ಪ್ರಾಂತಿಕ ಸಭೆಗಳೂ ಸಹ ಕೂಡುತ್ತ ಬಂದಿವೆ. ಆದರೆ ಅವುಗಳಲ್ಲೆಲ್ಲ ಬರಿಯ ಲೌಕಿಕರೇ ಪ್ರಧಾನರಾಗಿದ್ದರು. ಪ್ರಕೃತಸಭೆಗಾದರೊ ಮದ್ರಾಸಾಧಿಪತ್ಯದಲ್ಲಿ ಪ್ರಮುಖರೆನಿಸಿಕೊಂಡಿರುವ ವೈದಿಕ ಲೌಕಿಕರನೇಕರು ಮುಂದಾಗಿ ನಿಂತಿದ್ದರು. ಮತ್ತೂ ಈ ಸಭೆಗಾಗಿ ಹೊರಗಣಿಂದ ಬರತಕ್ಕ ಪಂಡಿತರುಗಳಿಗೆಲ್ಲಾ ಕಾರ್ಯಕಾರಿ ಮಂಡಲದವರೇ ವೆಚ್ಚವನ್ನು ಕೊಡಲು ಏರ್ಪಡಿಸಿದ್ದರು. ಉಭಯಪಕ್ಷದ ಪ್ರಮುಖರಾದ ಮಹಾಶಯರೆಲ್ಲರೂ ಇಂತಹ ಕಾರ್ಯದಲ್ಲಿ ಮುಂದಾಗಿ ನಿಂತು ಕೂಡಿದುದೇ ಮಹಾಸುಯೋಗವೆಂದೂ, ಸರ್ವಹಿತಕರವಾದ ಪರಿಣಾಮವು ಈ ಸಭೆಯ ಮೂಲಕವಾಗಿ ಆಗುವುದೆಂದೂ ಭಾರತಾಭಿಮಾನಿಗಳೆಲ್ಲರೂ ನಿರೀಕ್ಷಿಸುವಂತೆ ಈ ಪ್ರಯತ್ನವು ಆದಿಭಾಗದಲ್ಲಿ ಕಾಣಿಸಿಕೊಂಡಿತು. ಆದರೆ ಈಚೆಗೆ ಹೊರಬಿದ್ದ ಅದರ ವಿದ್ಯಮಾನಗಳನ್ನು ಕೇಳುವಲ್ಲಿ— "ಉತ್ಪದ್ಯಂತೇವಿಲೀಯಂತೇ ದರಿದ್ರಾಣಾಂಮನೋರಥಾಃ" ಎಂಬುವಂತೆ ಹತಭಾಗ್ಯರಾದ ಭಾರತೀಯರೆಲ್ಲರೂ ಹತಾಶರಾಗುವಂತಾದುದಕ್ಕಾಗಿ ವಿಷಾದವಾಗುತ್ತಿರುವುದು. ಲೌಕಿಕ ವೈದಿಕ ವಿದ್ಯೆಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿದ ಮಹಾಮಹಾಜನರು ಸೇರಿದ್ದ ಈ ಸಭೆಯು ಸಕ್ರಮವಾಗಿ ನಡೆಯುವುದಕ್ಕೂ, ವಿಷಯವಿಮರ್ಶೆಯು ಸಾವಧಾನದಿಂದ ಜರುಗುವುದಕ್ಕೂ ಅವಕಾಶವಿಲ್ಲದೆ, ಅಲ್ಪಕಾರಣಗಳಿಂದ ರಸಾಭಾಸವಾಗಿ ಅರ್ಧಾಂತವಾಗಿ ಪರಿಸಮಾಪ್ತಿಗೊಳ್ಳಬೇಕಾಯಿತೆಂಬುದನ್ನು ಕೇಳಿದರೆ ಮತ್ತಷ್ಟು ದುಃಖವುಂಟಾಗುವುದು. ಮೊದಲದಿನ ತಾ॥ ೫ರಲ್ಲಿ ಕಾರ್ಯಕಾರಿಮಂಡಲಿಯ ಅಧ್ಯಕ್ಷರಾದ ಸರ್ ಸುಬ್ರಹ್ಮಣ್ಯಯ್ಯರ್‌ರವರು ತಮ್ಮ ಆರಂಭೋಪನ್ಯಾಸವನ್ನು ಆಂಗ್ಲಭಾಷೆಯಲ್ಲಿ ಬರೆದು ತಂದಿದ್ದು ಇತರರಿಂದ ಅದನ್ನು ಓದಿಸಿ, ಅದರ ತಾತ್ಪರ್ಯವನ್ನು ದ್ರಾವಿಡಭಾಷೆಯಲ್ಲಿ ತಾವೇ ಹೇಳಿದರು. ಅವರ ಭಾಷಣದಲ್ಲಿ ವೈದಿಕರನ್ನು ಕುರಿತು ಕೆಲವು ಕಠಿನೋಕ್ತಿಗಳು ಉಪಯೋಗಿಸಲ್ಪಟ್ಟಿದ್ದುವೆಂಬ ಕಾರಣದಿಂದ ಆಗಲೇ ಸಭೆಯಲ್ಲಿ ಸ್ವಸ್ಥತಾಭಂಗವು ಕಾಣಿಸಿಕೊಂಡಿತು. ಅದೇದಿನ ಸಾಯಂಕಾಲ ಕೂಡಿದ ಸಭೆಯಲ್ಲಿ ಸಭಾಧ್ಯಕ್ಷರಾದ ರಾ॥ಬ॥ ಎಂ. ರಂಗಾಚಾರ್ಯರವರು ತಮ್ಮ ಉಪನ್ಯಾಸವನ್ನು ಓದಿದರು. ಅದರಲ್ಲಿ ವೈದಿಕಪಂಡಿತರ ಮನಸ್ಸು ಸಂತೋಷಗೊಳ್ಳುವ ಭಾಗವು ಅನೇಕವಾಗಿದ್ದಿತು ಮತ್ತು ಸದ್ಯಃಕಾಲದಲ್ಲಿ ಸಮಾಜದಕಟ್ಟಲೆಗಳ ಸುಧಾರಣೆಯು ಆವಶ್ಯಕವಾಗಿರುವುದೆಂದು ಅವರು ಯುಕ್ತಿಯುಕ್ತವಾಗಿ ನಿರೂಪಿಸಿದ್ದುದಲ್ಲದೆ, ಧರ್ಮಪರಿಕಲ್ಪನದಲ್ಲಿಯೂ ಧರ್ಮಸಂಶಯಬಂದಾಗ್ಗೆ ಅದನ್ನು ನಿರ್ಣಯಿಸುವಲ್ಲಿಯೂ ಧರ್ಮಜ್ಞರಾದ ಶಿಷ್ಟಜನರಿಗೆ ಅಧಿಕಾರವಿರುವುದೆಂದೂ "ಅನಾಮ್ನಾತೇಷುಧರ್ಮೇಷುಕಥಂಸ್ಯಾದಿತಿಚೇದ್ಭವೇತ್। ಯಂಶಿಷ್ಟಾಬ್ರಾಹ್ಮಣಾಬ್ರೂಯುಃ ಸ್ವಧರ್ಮಸ್ಸ್ಯಾದಶಂಕಿತಃ॥" ಎಂದರೆ-ಯಾವುದು ಧರ್ಮ? ಯಾವುದು ಅಧರ್ಮವೆಂದು ಸಂಶಯಬಂದಾಗ ಶ್ರೇಷ್ಠರಾದ ಬ್ರಾಹ್ಮಣರು ಯಾವುದನ್ನು ನ್ಯಾಯವಾದುದೆಂದು ನಿರ್ಧರಿಸಿ ಹೇಳುವರೋ ಅದೇ ಸದ್ಧರ್ಮವೆನಿಸಿಕೊಳ್ಳುವುದು ಎಂದು ಭೃಗುಪ್ರೋಕ್ತ ಮಾನವಧರ್ಮಶಾಸ್ತ್ರವಿರುವುದೆಂದೂ, "ಏತಾನಿಲೋಕಗುಪ್ತ್ಯರ್ಥಂ ಕಲೇರಾದೌಮಹಾತ್ಮಭಿಃ। ನಿವರ್ತಿತಾನಿಕರ್ಮಾಣಿ ವ್ಯವಸ್ಥಾಪೂರ್ವಕಂಬುಧೈಃ॥" ಎಂದರೆ— ಲೋಕರಕ್ಷಣಾರ್ಥವಾಗಿ ಕಲಿಯುಗದ ಆದಿಯಲ್ಲಿ ಮಹನೀಯರಾದ ವಿದ್ವಾಂಸರು ವರ್ಣಾಶ್ರಮೋಚಿತವಾದ ಕರ್ಮಗಳನ್ನು ವ್ಯವಸ್ಥಾಪೂರ್ವಕವಾಗಿ ನಿರ್ಣಯಿಸಿದರು. ಎಂದು ಪ್ರಮಾಣವಿರುವುದೆಂದೂ ಸಹ ಇದೇ ವಿಧವಾಗಿ ಸಪ್ರಮಾಣವಾಗಿ ನಿರೂಪಿಸಿ, ಸಮುದ್ರಯಾನ ಮೊದಲಾದುವುಗಳ ಆವಶ್ಯಕತೆಯನ್ನು ವಿವರಿಸಿ, ಪ್ರಕೃತಕಾಲದಲ್ಲಿ ಲೋಕಹಿತಕ್ಕೆ ಆವಶ್ಯಕವಾದ ಧರ್ಮನಿರ್ಣಯವನ್ನು ವಿದ್ವಾಂಸರುಗಳೂ ಶಿಷ್ಟರೂ ಆದ ಸಭಿಕರು ಮಾಡಬೇಕೆಂದು ಪ್ರಾರ್ಥಿಸಿದರು.

೬ ನೆಯ ದಿವ ಬೆಳಿಗ್ಗೆ ಮರಳಿ ಸಭೆಕೂಡಿತು. ಕಾರ್ಯನಿರ್ವಾಹಕ ಸಭೆಯಲ್ಲಿ ಒಬ್ಬರೊಬ್ಬರಿಗೆ ಪ್ರಬಲವಾದ ವಾಗ್ವಾದವು ನಡೆಯುಹತ್ತಿತು. ಬಳಿಕ ಸಭಾಧ್ಯಕ್ಷರೂ ಕಂಚಿಯ ಇಬ್ಬರು ಪಂಡಿತರುಗಳೂ ಸೇರಿ ಮಧ್ಯಸ್ಥಗಾರರಾಗಿ ಸಭೆಯಲ್ಲಿ ನಿರ್ದಿಷ್ಟ ವಿಷಯವನ್ನು ಕುರಿತು ವಾದಿಸುವುದಕ್ಕಾಗಿ ಕೆಲಪಂಡಿತರನ್ನು ಆರಿಸಿದರು. ಮಧ್ಯಾಹ್ನಕ್ಕೆ ಮತ್ತೆ ಸಭೆ ಕೂಡಿದಾಗ ವಾದಿಸಲು ನಿರ್ಣೀತರಾಗದಿದ್ದವರೂ ವಾದಿಸುವುದಕ್ಕೆ ಬಂದರು. ಎಲ್ಲರನ್ನೂ ಆ ಸಂಘಕ್ಕೆ ಸೇರಿಸಿದರು. ಹಾಗೂಹೀಗೂ ಸ್ವಲ್ಪಹೊತ್ತು ಕಾರ್ಯವನ್ನು ಜರುಗಿಸುತ್ತ ಬಂದರು. ಸಮುದ್ರಯಾನದಪ್ರಸ್ತಾಪವು ಬಂದಿತು. ಆಗ ಕಾರ್ಯಕರಣ ವಿಧಾನಕ್ಕೆ ವಿರುದ್ಧವಾಗಿ ಕೋಟಿಖಂಡನಗಳನು ಇಬ್ಬಿಬ್ಬರೇ ಮಾಡಬೇಕೆಂಬ ಕೋಲಾಹಲವು ಪಂಡಿತರಲ್ಲಿ ಹುಟ್ಟಿತು. ಹೀಗೆ ಇಬ್ಬಿಬ್ಬರೇ ಕೋಟಿಖಂಡನಗಳನ್ನು ನಡೆಯಿಸುತ್ತ ಬಂದರೆ ಕೊನೆಮುಟ್ಟುವುದೆಂದಿಗೆ? ಎಂದಾಲೋಚಿಸಿ, ಮಧ್ಯಸ್ಥಗಾರರನ್ನೂ, ಆ ವಾಗ್ವಾದ ಕ್ರಮವನ್ನೂ ತಪ್ಪಿಸಿ, ಪ್ರತಿಯೊಬ್ಬರೂ ಒಂದೊಂದು ವಿಷಯವನ್ನು ಉಪನ್ಯಾಸಮಾಡಬಹುದು ಎಂದು ಅಧ್ಯಕ್ಷರು ಹೇಳಿದರು. ಪಂಡಿತರುಗಳು ಅದಕ್ಕೊಪ್ಪಲಿಲ್ಲ. ಅನೇಕರು ಅಧ್ಯಕ್ಷರನ್ನೇ ಜರೆಯುವುದಕ್ಕೂ ಅವರ ಮಾತುಗಳನ್ನು ಖಂಡಿಸುವುದಕ್ಕೂ ಉಪಕ್ರಮಿಸಿದರು. ಸಭೆಯು ಸಂತೆಯಾಯಿತು. ಯಾವಯಾವ ಪ್ರಯತ್ನಗಳಿಂದಲೂ ಪಂಡಿತರು ತಮ್ಮ ಪೂರ್ವಾಭ್ಯಸ್ತವಾದ ವಾದಾನುವಾದದ ಕೋಲಾಹಲಗಳನ್ನು ಬಿಡಲಿಲ್ಲ. ಈ ರೀತಿಯಲ್ಲಾದರೆ ಯಾವ ವಿಷಯವೂ ಕೊನೆಮುಟ್ಟಲಾರದೆಂದು ಸಂಪೂರ್ಣವಾಗಿ ತೋರಿಬರಲು, ಸಭಾಧ್ಯಕ್ಷರು ನಿರಾಶೆಯಿಂದ ಸಭೆಯನ್ನು ಉಪಸಂಹರಿಸಬೇಕಾಯಿತು. ಪಂಡಿತ ಸಭೆಯು ಇಂತಹ ಪರ್ಯವಸಾನವನ್ನು ಪಡೆದುದು ಅದರ ಉತ್ಪಾದಕರಿಗೆ ಮಾತ್ರವೇ ಅಲ್ಲದೆ ದೇಶಾಭಿಮಾನಿಗಳಾದ ಸರ್ವರಿಗೂ ವಿಷಾದವನ್ನುಂಟುಮಾಡಿರುತ್ತದೆ.

ಲೌಕಿಕರ ವಿಚಾರಗಳಿಗೂ ವೈದಿಕರ ವಿಚಾರಗಳಿಗೂ ಹಗಲು ರಾತ್ರಿಗಿರುವಷ್ಟು ವ್ಯತ್ಯಾಸವಿದೆ. ಆದರೂ ಲೋಕದ ಜನರ ಹಿತಕ್ಕೆ ಹಗಲು ರಾತ್ರಿಗಳೆರಡೂ ಆವಶ್ಯಕವಾಗಿರುವಂತೆ ದೇಶಹಿತಕ್ಕೆ ಉಭಯರೂ ಆವಶ್ಯಕವಾದವರು. ಆದರೆ ಪ್ರಸಕ್ತ ಪರಿಷತ್ತಿನ ಕೂಟವು ಸೂರ್ಯೇಂದು ಸಂಗಮದ ಪರ್ಯವಸಾನವನ್ನು ಪ್ರದರ್ಶನಮಾಡಿದುದಕ್ಕಾಗಿಯೂ, ವೈದಿಕರ ಒರಟುತನವೇ ಇಂಥ ರಸಾಭಾಸಕ್ಕೆ ಆಸ್ಪದವನ್ನುಂಟುಮಾಡಿತೆಂದು ದೂರುಂಟಾದುದಕ್ಕಾಗಿಯೂ, ದೇಶಹಿತದಕಡೆಗೆ ಅವರ ಮನಸ್ಸು ತಿರುಗಿ ಇನ್ನೂ ಕರಗದೆಯಿರುವುದಕ್ಕಾಗಿಯೂ, ನಾವು ಅತ್ಯಂತವಾಗಿ ವಿಷಾದಿಸುತ್ತೇವೆ. "ಇದು ಪರಸ್ಪರ ವೈದುಷ್ಯವನ್ನು ತೋರಿಸಿ ಜಯಶೀಲರಾಗುವುದಕ್ಕಾಗಿ ಕಲ್ಪಿಸಲ್ಪಟ್ಟಿರುವ ರಂಗಸ್ಥಲವಲ್ಲ; ಇಷ್ಟೊಂದುಜನರು ಅನೇಕ ಧನವ್ಯಯದಿಂದ ಕೂಡಿ ಮಾಡಿದ ಕಾರ್ಯದಿಂದ ಹೇಗಾದರೂ ದೇಶಕ್ಕೆ ಹಿತವಾಗುವಂತೆ ಮಾಡಬೇಕು" ಎಂಬ ಉದ್ದೇಶವನ್ನು ಪಂಡಿತ ಮಂಡಲಿಯವರು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಿದ್ದರೆ ಈ ಸಭೆಯ ಕೀರ್ತಿಯು ಅಚ್ಯುತವಾಗಿ ಉಳಿಯುತ್ತಿದ್ದಿತು. ಇಂಥ ಸುಸಂಧಿಯು ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತೆ ಪರ್ಯವಸನ್ನವಾಗಿ ಹೋದುದಕ್ಕಾಗಿ ಎಷ್ಟು ವ್ಯಥೆಪಟ್ಟರೂ ತೀರದು.

ಒಳದೇಶದ ವೃತ್ತಾಂತಗಳು.

ವೇದಮೂರ್ತಿ ಸೇತುರಾಮಾಚಾರ್ಯರು "ಶ್ರೀ ಸತ್ಯಧ್ಯಾನತೀರ್ಥ ಸ್ವಾಮಿಗಳು" ಎಂಬ ಅಭಿಧಾನದಿಂದ ಶ್ರೀ ಉತ್ತರಾದಿ ಮಠಕ್ಕೆ ಅಧಿಷ್ಠಿತರಾಗಿರುವುದನ್ನು ಮೈಸೂರ ಸರ್ಕಾರದವರು ಅಂಗೀಕರಿಸಿರುತ್ತಾರೆ.

ಮೈಸೂರ ಸರ್ಕಾರದವರು ದಿಲ್ಲಿಯ ದರ್ಬಾರಿನ ಜ್ಞಾಪಕಾರ್ಥವಾಗಿ ಪ್ರತಿವರ್ಷದ ಡಿಸೆಂಬರ್ ತಾ॥ ೧೨ ನೆಯ ದಿವಸ ಎಲ್ಲಾ ಶಾಖೆಗಳ ಕಚೇರಿಗಳಿಗೂ ಕೋರ್ಟುಗಳಿಗೂ ಪಾಠಶಾಲೆಗಳಿಗೂ ದರ್ಬಾರ್ ಡೆ ರಜವು ಕೊಡಲ್ಪಡತಕ್ಕದ್ದಲ್ಲದೆ ಪಾಠಶಾಲೆಗಳಲ್ಲಿ ವಿನೋದೋತ್ಸವಗಳನ್ನು ನಡಿಸತಕ್ಕದೆಂದೂ ಡಿಸೆಂಬರ್ ತಾ॥ ೧೨ ರ ದಿವಸ ರಜಾಕಾಲದಲ್ಲಿ ಬರುವುದಾದರೆ ದರ್ಬಾರ್ ಡೆ ದಿವಸದ ಜ್ಞಾಪಕಾರ್ಥವಾಗಿ ಮತ್ತೊಂದು ದಿವಸವು ರಜವಾಗಿ ಕೊಡಲ್ಪಡತಕ್ಕದೆಂದೂ ಅಪ್ಪಣೆಮಾಡಿರುತ್ತಾರೆ.

ರಾಜಧಾನಿಯ ಶ್ರೀ ಚಾಮರಾಜೇಂದ್ರ ನಾಟಕ ಸಂಘದವರಲ್ಲಿ ೩ ಜನರು ತಮ್ಮ ಅವಿಧೇಯತೆಗಾಗಿಯೂ ಶಿಸ್ತಿನ ರತೆಗಾಗಿಯೂ ಕೆಲಕಾಲದವರೆಗೆ ಸಂಘಕ್ಕೆ ಬರಕೂಡದೆಂದು ಮೊದಲಾಗಿ ಸಂಘದ ಮೇಲ್ವಿಚಾರಕರಾದ ಸರದಾರ್ ಗೋಪಾಲರಾಜ ಅರಸಿನವರಿಂದ ಆಜ್ಞಪ್ತರಾಗಿರುವುದಾಗಿ ಕೇಳುತ್ತೇವೆ. ಕೆಲಯುವಕರು ಹಗಲು ವೇಷಧಾರಿಗಳಂತೆ [illegible] ಉಡುಪನ್ನು ಧರಿಸಿಕೊಂಡು ಬೀದಿಗಳಲ್ಲೂ, ಸಂದುಗಳಲ್ಲೂ ಅಲೆಯುತ ಅತ್ಯಾಚಾರ ಪ್ರಿಯರಾಗಿರುವುದನ್ನು ಅವರ ತಂದೆತಾಯಿಗಳೂ, ಹಿತೈಷಿಗಳೂ ನೋಡಿ ಜುಗುಪ್ಸಿತರಾಗಿರುವರು. ಇಂತಹವರ ದುರ್ವರ್ತನೆಯು ಸರದಾರರ ಗಮನಕ್ಕೆ ಬಂದು ಅವರಿಗೆ ಬುದ್ಧಿಯನ್ನು ಕಲಿಸಲು ತಕ್ಕ ಶಿಕ್ಷೆಯನ್ನು ವಿಧಿಸಿರುವುದು ಇತರರಿಗೆ ಎಚ್ಚರಿಕೆಯನ್ನುಂಟು ಮಾಡತಕ್ಕಂತಾಗಿರುವುದು. ಇದಕ್ಕಾಗಿ ಸರದಾರರನ್ನು ಆ ಯುವಕರ ಮಾತಾಪಿತೃಗಳೂ, ಹಿತೈಷಿಗಳೂ ಬಹುವಾಗಿ ವಂದಿಸುವರು.

ವರ್ತಮಾನ ಸಂಗ್ರಹವು.

ಚೀನಾದಲ್ಲಿ ಚಿನ್ನದ ಗಣಿಗಳಲ್ಲಿ ಕೆಲಸಮಾಡುವವರು ದಂಗೆಯೆದ್ದುದರ ಮೇಲೆ ಸೈನಿಕರು ಬಂದು ಗುಂಡನ್ನು ಹೊಡೆದು ೧೦೩ ಜನರನ್ನು ಕೊಂದರು. ಮತ್ತೂ ೩೦ ಜನರಿಗೆ ಗಾಯವನ್ನು ಮಾಡಿದರು.

ಅಲಹಾಬಾದಿನಲ್ಲಿ ಕಳೆದ ಮಂಗಳವಾರ ರಾತ್ರಿ ಪ್ಲೇಗು ರೋಗಕ್ಕಾಗಿ ಕಟ್ಟಲ್ಪಟ್ಟಿರುವ ಆರೋಗ್ಯದ ಗುಡಿಸಲುಗಳಿಗೆ ಬೆಂಕಿಯು ಬಿದ್ದು ೩ ಗುಡಿಸಲುಗಳು ಸುಟ್ಟುಹೋಗಿ ಅನೇಕ ಪದಾರ್ಥಗಳು ನಾಶವಾದುವು, ಆದರೆ ದೈವಕೃಪೆಯಿಂದ ಪ್ರಾಣಾಪಾಯವೇನೂ ಆಗಲಿಲ್ಲವು.

ಕಳೆದ ಅಮಾವಾಸ್ಯೆಯಲ್ಲಾದ ಸೂರ್ಯಗ್ರಹಣವು ಬ್ರಿಟಿಷರ ದ್ವೀಪಗಳಲ್ಲೆಲ್ಲಾ ಕಾಣಿಸಿಕೊಂಡಿತಲ್ಲದೆ ಭರತಖಂಡದಲ್ಲಿ ಲಾಹೋರಿನಲ್ಲಿ ಮಾತ್ರ ಅರ್ಧಗಂಟೆಯ ಕಾಲಕ್ಕೆ ಮೀರಿ ಚೆನ್ನಾಗಿ ಕಾಣಿಸಿಕೊಂಡಿತು. ಲಾಹೋರಿನಲ್ಲಿ ೪೦-೫೦ ಸಾವಿರ ಜನರು ನದಿಯಲ್ಲಿ ಸ್ನಾನವನ್ನು ಮಾಡುವಾಗ್ಗೆ ೩ ಜನರು ನೂಕಾಟದಲ್ಲಿ ನೀರಿನೊಳಗೆ ಮುಳುಗಿ ಸತ್ತರು.

ಇಂಡ್ಯಾ ಸ್ಟೇಟ್ ಸೆಕ್ರಿಟರಿಯವರಾದ ಲಾರ್ಡ್ ಕ್ರೂಯವರ ಅಪೇಕ್ಷೆಯ ಮೇರೆಗೆ ಆನರಬಲ್ ಗೋಖಲೆಯವರು ಸೀಮೆಗೆ ಪ್ರಯಾಣಮಾಡಿರುತ್ತಾರೆ. ವೈಸ್‌ರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಅರ್ಥಶಾಖೆಯ ಸಂಬಂಧವಾಗಿ ಮೆಂಬರಾಗಿರುವ ಮಿ॥ ಫ್ಲೀಟ್‌ವುಡ್ ವಿಲ್ಸನ್‌ರವರು ತಮ್ಮ ಅಸ್ವಸ್ಥತೆಯ ದೆಸೆಯಿಂದ ಕೂಡಲೆ ನಿವೃತ್ತರಾಗುವ ಪಕ್ಷದಲ್ಲಿ ಮಿ॥ ಗೋಖಲೆಯವರು ನಿಯಮಿಸಲ್ಪಡುವುದಾಗಿ ವರ್ತಮಾನವಿದೆ.

ಅಮೃತಸರದಲ್ಲಿ ಒಬ್ಬ ಕ್ಷತ್ರಿಯಕುಲದ ೧೩ ವರ್ಷ ವಯಸ್ಸಿನ ಹುಡುಗನನ್ನು ಮಹಮ್ಮದೀಯರು ಬಲವಂತದಿಂದ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳುವುದಕ್ಕಾಗಿಟ್ಟುಕೊಂಡಿರುವರಾದುದರಿಂದ ತನ್ನ ಮಗನನ್ನು ತನ್ನ ಸ್ವಾಧೀನಕ್ಕೆ ಬಿಡಿಸಿಕೊಡಬೇಕೆಂದು ಆ ಹುಡುಗನ ತಂದೆಯು ಮ್ಯಾಜಿಸ್ಟ್ರೇಟರಲ್ಲಿ ಬಿನ್ನೈಸಿಕೊಂಡುದರಮೇಲೆ ಆ ಹುಡುಗನನ್ನು ಕೋರ್ಟಿಗೆ ಕರೆದುಕೊಂಡು ಬರಬೇಕೆಂದು ಮ್ಯಾಜಿಸ್ಟ್ರೇಟರು ಮಹಮ್ಮದೀಯರಿಗಪ್ಪಣೆಮಾಡಿರುತ್ತಾರೆ.

ಟಿಟಾನಿಕ್ ಹಡಗು ಮಂಜಿನಗೆಡ್ಡೆಗೆ ತಾಕಿಬಿದ್ದು ಮುಳುಗಿ ಹೋಗಿ ಅದರೊಳಗಿದ್ದ ೨೦೦೦ ಪ್ರಯಾಣಿಕರಲ್ಲಿ ೧೪೯೫ ಜನರು ನೀರಿನಲ್ಲಿ ಮುಳುಗಿಹೋದರು. ಇವರಲ್ಲಿ ಲಂಡನ್ನಿನಲ್ಲಿ ರಿವ್ಯೂ ಆಫ್ ರಿವ್ಯೂಸ್ ಎಂಬ ಜಗತ್ಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕರಾದ ಸ್ಟೆಡ್‌ರವರು ಒಬ್ಬರಾಗಿರುವರು. ಈ ಅನಾಹುತದಿಂದ ವಿಪನ್ನರಾದವರ ಸಾಹಾಯ್ಯಾರ್ಥವಾಗಿ ಜಾರ್ಜ್ ದೊರೆಗಳು ಮೇರಿರಾಣಿಯವರುಮೊದಲಾದ ರಾಜವರ್ಗದವರು ೧೫೦೦೦ ಪೌಂಡಿನ ಮೇಲೆ ಕೊಟ್ಟಿರುವರು. ಕಲಿ ಕುಬೇರನಾದ ಕಾರ್ನಿಗಿ ಮೊದಲಾದ ಶ್ರೀಮಂತರೂ ಇತರರೂ ಸೇರಿ ಈವರೆಗೆ ಕೊಟ್ಟಿರುವುದು ೩೦೦೦೦೦ ರೂ. ಆಗುತ್ತದೆ.

ಕಳೆದ ತಾ॥ ೧೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೩೮೯೩ ಜನರಿಗೆ ಪ್ಲೇಗುರೋಗವು ತಗಲಿ ೧೧೩೦೪ ಮರಣವಾಗಿರುತ್ತದೆ. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೪೧೪; ಮದ್ರಾಸಾಧಿಪತ್ಯದಲ್ಲಿ ೪೩; ಬಂಗಾಳಾದಲ್ಲಿ ೧೫೪: ಬಿಹಾರಿನಲ್ಲಿ ೨೩೯೩; ಸಂಯುಕ್ತ ಪ್ರಾಂತಗಳಲ್ಲಿ ೫೨೫೫; ಪಂಜಾಬಿನಲ್ಲಿ ೨೧೨೫; ಬರ್ಮಾದಲ್ಲಿ ೪೩; ಮಧ್ಯಪ್ರಾಂತಗಳಲ್ಲಿ ೪೩೦; ಮೈಸೂರ ಸೀಮೆಯಲ್ಲಿ ೨೦; ಹೈದರಾಬಾದು ಸೀಮೆಯಲ್ಲಿ ೯೫; ಮಧ್ಯಹಿಂದುಸ್ಥಾನದಲ್ಲಿ ೧೩೧, ರಾಜಪುಟಾನದಲ್ಲಿ ೯೫; ಕಾಶ್ಮೀರದಲ್ಲಿ ೧೩ ಮತ್ತೂ ವಾಯವ್ಯ ಮೂಲೆಯ ಪ್ರಾಂತಕ್ಕೆ ಸೇರಿದ ಡೇರಾ ಇಸ್ಮಾಯಿಲ್ ಖಾನಿನಲ್ಲಿ ೧ ಈ ಪ್ರಕಾರವಾಗಿ ಮರಣವಾಗಿರುತ್ತದೆ.

ದಿವ್ಯಜ್ಞಾನ ಸಭೆಯ ಮೆಂಬರಾದ ಮಿ॥ ಎಫ್. ಟಿ. ಬ್ರೂಕ್ಸ್‌ರವರು ಕಳೆದ ತಾ॥ ೫ ರಲ್ಲಿ ಕಾಶಿಯಲ್ಲಿರುವ ಆರ್ಯಸಮಾಜದ ಅಧ್ಯಕ್ಷರಾದ ಪಂಡಿತ ಕೇಶವದೇವಶಾಸ್ತ್ರಿಗಳವರಿಂದ ಜ್ಞಾನಸನ್ಯಾಸವನ್ನು ಹೊಂದಿ ಬ್ರಹ್ಮಚಾರಿ ಸತ್ಯಾನಂದ ಎಂಬ ಹೆಸರನ್ನಿಟ್ಟುಕೊಂಡಿರುವರು. ಇವರು ಹಿಂದೂ ವೇದಾಂತ ವಿಚಾರದಲ್ಲಿ ಒಳ್ಳೆಯ ಪರಿಶ್ರಮವುಳ್ಳವರಾಗಿ ಅನೇಕ ಉಪನ್ಯಾಸಗಳನ್ನು ಮಾಡಿ ಸುಪ್ರಸಿದ್ಧರಾಗಿರುವರು. ಈ ಬ್ರಹ್ಮಚಾರಿ ಸತ್ಯಾನಂದರವರು ಜ್ಞಾನಸನ್ಯಾಸವನ್ನು ಹೊಂದುವ ಕಾಲದಲ್ಲಿ ಒಂದು ಪ್ರೌಢಭಾಷಣವನ್ನು ಮಾಡಿ ವೈದಿಕಧರ್ಮಪ್ರಕಾರ ವಿಚಾರದಲ್ಲಿ ಇತರ ಸಮಾಜದವರ ಕೂಡ ಸಂತೋಷದಿಂದ ಸಹಪ್ರವೃತ್ತರಾಗಿರುತ್ತೇವೆಂದು ತಿಳುಹಿದರು.

ನೀಲಗಿರಿಯಲ್ಲಿ ಕಳೆದ ತಾ॥ ೧೩ ರ ರಾತ್ರಿ ಕೊಂಚ ಹೆಚ್ಚು ಕಡಮೆ ೧೧ ಅಂಗುಲ ಮಳೆಯಾಗಿ ವೆಲ್ಲಿಂಗ್‌ಟನ್ ಕೆರೆಗೆ ಕಟ್ಟಿದ್ದ ಅಣೆಯು ತುಂಬಿ ಏರಿಯೊಡೆದು ನೀರೆಲ್ಲಾ ಹರಿದುಹೋಗಿ ಕೆರೆಯು ಬರಿದಾಗಿರುವುದಲ್ಲದೆ ವೆಲ್ಲಿಂಗ್‌ಟನ್ ಬ್ಲಾಕ್‌ಬ್ರಿಡ್ಜ್ ಎಂಬ ಸೇತುವೆ ಕೊಚ್ಚಿಹೋಗಿರುವುದು. ನದಿಯ ಪ್ರವಾಹದಲ್ಲಿ ಎರಡು ಮಕ್ಕಳು ಮುಳುಗಿ ಹೋದುವು ಮತ್ತೂ ಪೇಟೆಗಳಲ್ಲಿ ಬಹು ಅನಾಹುತವಾಗಿರುವುದು. ರೈಲುಮಾರ್ಗದಲ್ಲಿ ಮಣ್ಣು ಕೊಚ್ಚಿಹೋಗಿ ಕೂನೂರಿಗೂ ಉದಕಮಂಡಲಕ್ಕೂ ಮಧ್ಯೆ ಸಾಮಗ್ರಿಗಳು ಒಂದು ಬಂಡಿಯಿಂದ ಮತ್ತೊಂದು ಬಂಡಿಗೆ ಸಾಗಿಸಲ್ಪಡುತ್ತಿದ್ದಿತು. ಆ ದಿವಸ ರಾತ್ರಿ ೮ ಗಂಟೆಗೆ ಮಳೆಯಾರಂಭವಾಗಿ ಬೆಳಗಿನ ಜಾವದ ೪ ಗಂಟೆಯವರೆಗೂ ಒಂದೇಸಮನಾಗಿ ಎಡೆಬಿಡದೆ ಸುರಿಯಿತು, ಇಂತಹ ದೊಡ್ಡಮಳೆಯು ಅಲ್ಲಿ ಇದಕ್ಕೆ ಪೂರ್ವ ಯಾವಾಗಲೂ ಆಗಿರಲಿಲ್ಲವು. ಅನೇಕಕಡೆ ಮಳೆಯಿಲ್ಲದೆ ಜನರು ಕಬ್ಬಕ್ಕಿಯಂತೆ ಬಾಯಿ ಬಿಡುತ್ತಿರುವಲ್ಲಿ ನೀಲಗಿರಿಯಲ್ಲಿ ಅಭೂತಪೂರ್ವವಾದ ಮಳೆಯು ಬಂದು ಅನೇಕ ಅನಾಹುತವನ್ನು ಮಾಡಿತು. ದೈವವಿಲಾಸವು ಹೇಗೆಯೋ ಸರಿಯೆಂದು ಯಾರುತಾನೇ ಹೇಳಬಲ್ಲರು!

ಸೀಮೆಯಲ್ಲಿ ಒಬ್ಬ ಮ್ಯಾಜಿಸ್ಟ್ರೇಟನು ಒಬ್ಬ ಯುವಕನಿಗೆ ಅವನ ಅವಿಧೇಯತೆಯ ಗುಣಕ್ಕಾಗಿ ೨೦ ರೂ. ಗಳ ದಂಡವನ್ನೂ ಕೋರ್ಟಿನ ವೆಚ್ಚವನ್ನೂ ವಿಧಿಸಿ ಅವನು ಆ ಹಣವನ್ನು ಕೊಡಲು ಕೈಯಲ್ಲಿಟ್ಟುಕೊಂಡಿರಲಿಲ್ಲವಾಗಿ ಸೆರೆಮನೆಗೆ ಕರೆದುಕೊಂಡು ಹೋಗುವಂತೆ ಅಪ್ಪಣೆಯನ್ನು ಮಾಡಿದನು. ಕೋರ್ಟಿನ ಕೆಲಸವು ಮುಗಿದನಂತರ ಗಂಡನನ್ನು ಅಂಗಡಿಗೆ ಕರೆದುಕೊಂಡು ಹೋಗಲು ಕೋರ್ಟಿಗೆ ಬಂದು ನಿರೀಕ್ಷಿಸಿಕೊಂಡಿದ್ದ ಮ್ಯಾಜಿಸ್ಟ್ರೇಟನ ಹೆಂಡತಿಯು ಆ ಯುವಕ ಅಪರಾಧಿಯನ್ನು ಸೆರೆಮನೆಗೆ ಕಳುಹುವುದು ಕೋಪೋದ್ರೇಕಕರವಾದುದು ಎಂದು ತಾನಾಗಿ ಹೇಳಿದಳು. ಜಡ್ಜಿಯು ಇದನ್ನು ಕೇಳಿ "ಮೌನವಾಗಿರು" ಎಂದು ಹೆಂಡತಿಗೆ ಗದರಿಸಿ ಹೇಳಿದನು. ಆದರೆ ಆಕೆಯು ಮೌನವಾಗಿರದೆ ಹೋದುದರಮೇಲೆ ಗಂಡನಾದ ಮ್ಯಾಜಿಸ್ಟ್ರೇಟನು ಕುಪಿತನಾಗಿ ಹೆಂಡತಿಯನ್ನು ಕುರಿತು "ನೀನು ಸುಮ್ಮನಿರದಿದ್ದರೆ ಅರ್ಥದಂಡವನ್ನು ವಿಧಿಸುತ್ತೇನೆ" ಎಂದು ಹೇಳಿದನು. ಆದರೂ ಹೆಂಡತಿಯು ಸುಮ್ಮನಿರದೆ ಗಂಡನ ಕೂಡ ಚರ್ಚಿಸತೊಡಗಿದಳು. ಆಗ ನ್ಯಾಯಸ್ಥಾನದಲ್ಲೆಲ್ಲಾ ಬಹು ಗದ್ದಲವಾಗಲು, ಮ್ಯಾಜಿಸ್ಟ್ರೇಟನು ಹೆಂಡತಿಗೆ ೨೫ ರೂ. ದಂಡವನ್ನು ವಿಧಿಸಿ, ಆಕೆಯು ಅದನ್ನು ಕೊಡುವುದಿಲ್ಲವೆಂದು ಹಟವಿಡಿದುದರಮೇಲೆ, ೧ ಗಂಟೆಯ ಅವಧಿಯಲ್ಲಿ ದಂಡದ ಮೊಬಲಗನ್ನು ಕೊಡಲು ತಪ್ಪಿದಲ್ಲಿ ಆಕೆಯನ್ನು ಸೆರೆಮನೆಯಲ್ಲಿಡುವಂತೆ ಆಜ್ಞಾಪಿಸಿದನು. ಆಕೆಯು ಬಿಕ್ಕಿಬಿಕ್ಕಿ ಅಳುತ್ತ ಸೆರೆಮನೆಗೆ ಹೋಗಿ ಕಡೆಯಲ್ಲಿ ಬ್ಯಾಂಕಿನಲ್ಲಿ ತಾನಿಟ್ಟಿರುವ ಹಣದಲ್ಲಿ ೨೫ ರೂ. ಗಳನ್ನು ತರಿಸಿ ದಂಡಕ್ಕಾಗಿ ಕೊಟ್ಟು ಸೆರೆಯಿಂದ ಮುಕ್ತಳಾಗಿ ಮನೆಗೆ ಹೋದಳು. ಆಗ ಗಂಡನು ತನ್ನ ಕೋರ್ಟಿನ ಮರ್ಯಾದೆಯನ್ನುಳಿಸುವುದಕ್ಕಾಗಿ ಅರ್ಥದಂಡವನ್ನು ವಿಧಿಸಿದೆನೆಂದು ಹೆಂಡತಿಗೆ ಹೇಳಿದನು. ಆಗ ಹೆಂಡತಿಯು ಇನ್ನುಮೇಲೆ ನ್ಯಾಯವಿಚಾರಣೆಯ ಸಂದರ್ಭದಲ್ಲಿ ತಾನು ಕೋರ್ಟಿಗೆ ಪ್ರವೇಶಿಸುವುದಿಲ್ಲನೆಂದು ಪ್ರಮಾಣಮಾಡಿ ಹೇಳಿದಳು. ಇದೆಯೇ ನ್ಯಾಯಪಕ್ಷಪಾತತೆಯು.

ಪತ್ರವ್ಯವಹಾರವು.

ಮುಂಬಯಿ ವೀರಶೈವಾಶ್ರಮ.

ಸಮಸ್ತ ವೀರಶೈವ ಮಹನೀಯರಿಗೆ ವಿನಯಪೂರ್ವಕ ಅರಿಕೆ ಮಾಡಿಕೊಳ್ಳುವದೇನೆಂದರೆ—ಮುಂಬಯಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವ್ಯವಹಾರಕ್ಕಾಗಿ ಬಂದ ಸದ್ಗೃಹಸ್ಥರಿಗೂ ಸರಕಾರಿ ಕೆಲಸಕ್ಕಾಗಿ ಬಂದ ಮಹನೀಯರಿಗೂ ಊಟಉಪಚಾರಕ್ಕೂ ಇಳಿದುಕೊಳ್ಳಲಿಕ್ಕೂ ಯೋಗ್ಯವಾದ ಸ್ಥಳವಿಲ್ಲದ್ದರಿಂದ ಉಂಟಾಗುವ ಅನನುಕೂಲತೆಗಳನ್ನು ದೂರಮಾಡುವುದಕ್ಕಾಗಿ ಒಂದು ವೀರಶೈವರ ಸಾರ್ವಜನಿಕ ಧರ್ಮಾಲಯವನ್ನು ಕಟ್ಟಿಸುವ ಉದ್ದೇಶದಿಂದ ಮುಂಬಯಿಯಲ್ಲಿ ಪರದೇಶದಿಂದ ಬಂದಿರುವ ವೀರಶೈವ ಅಂಗಡಿಕಾರರ ಆಡಳಿತೆಯ ಕೆಳಗೆ ಶಕೆ ೧೮೩೩ ನೆಯ ಕಾರ್ತಿಕ ಬ॥ ೩೦ ನೇ ಇಷ್ಟಿ ದಿವಸ "ಮುಂಬಯಿ ಲಿಂಗಾಯತ ಫಂಡ" ಎಂಬ ಸಂಸ್ಥೆಯು ಕೈ. ರಾ. ಬ. ಅಪ್ಪಾಸಾಹೇಬವಾರದ ಇವರ ಅಧ್ಯಕ್ಷತೆಯ ಕೆಳಗೆ ಸ್ಥಾಪಿಸಲ್ಪಟ್ಟು ಈ ಸಂಸ್ಥೆಯ ಮೆಂಬರ ಜನರ ಅಂಗಡಿಗಳಲ್ಲಿ ಆದ ಕ್ರಯವಿಕ್ರಯ ಮಾಡಿದ ಮಾಲಿನ ಮೇಲೆ ಮೊದಲು ಸೇಕಡಾ ೩ ಪೈ ಯಂತೆ ಕೆಲವು ದಿವಸಗಳ ಮೇಲೆ ೬ ಪೈ ಗಳಂತೆ ಫಂಡು ವಸೂಲು ಮಾಡುತ್ತಿದ್ದು ಈ ಫಂಡಿನ ಉತ್ಪತ್ತಿಯು ತೀರ ಅಲ್ಪ ಪ್ರಮಾಣವುಳ್ಳದ್ದಾದ್ದರಿಂದ ಫಂಡಿನ ಉದ್ದೇಶದ ಕಾರ್ಯವು ಈ ಫಂಡಿನಿಂದಲೇ ನೆರವೇರುವುದು ಅಶಕ್ಯವಾಗಿ ತೋರಿದ್ದರಿಂದ ೧೯೧೦ ನೆಯ ಫೆಬ್ರುವರಿ ತಾ॥ ೮ ರಲ್ಲಿ ಬಾಡಿಗೆಯಿಂದ ತೆಗೆದುಕೊಂಡ ಆಶ್ರಮದಲ್ಲಿ ಕೈ. ರಾ. ಬ. ಅಪ್ಪಾಸಾಹೇಬವಾರದ ಇವರ ಅಧ್ಯಕ್ಷತೆಯ ಕೆಳಗೆ ಫಂಡಿನ ಜನರಲ್ ಕಮಿಟಿಯು ಕೂಡಿ ವರ್ಗಣಿ ಫಂಡು ಕೂಡಿಸಿ ಆಶ್ರಮಕ್ಕೆ ಸ್ವತಂತ್ರವಾದ ಕಟ್ಟಡವನ್ನು ಕಟ್ಟಿಸಬೇಕೆಂದು ನಿಶ್ಚಯವಾಗಿ ಇಲ್ಲಿಯ ಕೆಲವು ಅಂಗಡಿಯ ಮೆಂಬರ ಜನರು ತಮ್ಮ ಔದಾರ್ಯವನ್ನು ತೋರಿಸಿ ಕೊಟ್ಟಿರುವ ರಕಮಿನ ವಿವರ.—ರಾ. ಬ. ವಾರದ ೫೦೦೦., ಪನ್ನಾಲಾಲ ಖೂಬಚಂದಶೇಟಜಿ ೧೦೦೦., ಬಸವಪ್ರಭಪ್ಪಾ ಅಂಗಾಡಿನಲ್ಲಿ ೧೦೦೦, ಚೆನ್ನಮಲ್ಲಪ್ಪಾ ಮಹಲಿಂಗಪ್ಪಾ ಗೀಜಬ ಡಿ. ೨೦೦೦, ಮಹಲಿಂಗಪ್ಪಾ ರುದ್ರಪ್ಪಾ ಅಂಗಾಶಿರೋಳ ೧೦೦೦, ಶಂಕರಪ್ಪಾ ಅಂಗಾಮರಿಗುದ್ದಿ ೧೦೦೦, ಈ ಪ್ರಕಾರ ಮೇಲ್ಕಂಡ ಮಹನೀಯರು ತಮ್ಮ ಉದಾರಾಶ್ರಯವನ್ನು ಕೊಟ್ಟು ಉಳಿದ ವೀರಶೈವ ಮಹನೀಯರಿಗೆ ಮೇಲ್ಪಂಕ್ತಿಯನ್ನು ತೋರಿಸಿರುತ್ತಾರೆ.

ಇದರಂತೆ ಇನ್ನುಳಿದ ಅಂಗಡಿಕಾರರೂ ಉದಾರಾಶ್ರಯವನ್ನು ಕೊಡತಕ್ಕವರಿದ್ದಾರೆ. ಸದ್ಯಕ್ಕೆ ವಸೂಲಾದ ವರ್ಗಣೀ ಫಂಡಿನ ೧೧೦೦೦, ಮತ್ತು ಲಿಂಗಾಯತ ಫಂಡಿನ ಸಂಬಂಧಿ ವಸೂಲಾದ ೯ ಸಾವಿರ ಅಂತೂ ೧೯-೨೦ ಸಾವಿರ ರಕಮು ಕೂಡಿರುತ್ತದೆ. ಆದರೂ ಈ ಇಪ್ಪತ್ತು ಸಾವಿರ ರೂಪಾಯಿಗಳಿಂದ ವೀರಶೈವ ಆಶ್ರಮದ ಕಟ್ಟಡವು ಆಗುವುದು ಅಶಕ್ಯವಾಗಿದೆ. ಆದುದರಿಂದ ಸಕಲ ಪ್ರಾಂತದ ವೀರಶೈವ ಮಹನೀಯರೂ ಇದಕ್ಕೆ ಉದಾರಾಶ್ರಯವನ್ನು ಕೊಡದ ಹೊರ್ತು ಈ ಕಾರ್ಯವು ಆಗಲಾರದು. ಇಲ್ಲಿ ಆಶ್ರಮದ ಅಗತ್ಯವು ಎಷ್ಟಿರುವುದೆಂಬುದು ಎಲ್ಲ ವೀರಶೈವರ ನಿದರ್ಶನಕ್ಕೆ ಬರುವುದಕ್ಕಾಗಿಯೇ ಸದ್ಯಕ್ಕೆ ಬಾಡಿಗೆಯಿಂದ ಸ್ಥಳವನ್ನು ತೆಗೆದುಕೊಂಡು ವೀರಶೈವ ಜನರಿಗೆ ಊಟ ಮತ್ತು ಇಳಿದುಕೊಳ್ಳುವ ಅನುಕೂಲತೆಗಳನ್ನು ಮಾಡಿರುತ್ತದೆ. ಹೀಗಿದ್ದು ನಮ್ಮ ಜನರ ತಕ್ಕ ಸಹಾಯವಿದಕ್ಕಿಲ್ಲದೇ ಇರುವುದರಿಂದ ಆಶ್ರಮಖಾತೆಗೆ ವರ್ಷ ಒಂದಕ್ಕೆ ೪೦೦-೫೦೦ ರಂತೆ ಹಾನಿಯನ್ನು ಸೋಸಬೇಕಾಗಿದೆ. ಆದರೂ ಚಿಂತೆಯಿಲ್ಲ. ಇದರ ಉಪಯುಕ್ತತೆಯು ಜನರಿಗೆ ಗೊತ್ತಾದ ನಂತರವಾದರೂ ನಿಮ್ಮ ಹಾನಿಯು ತುಂಬಿಬರುವುದು; ಇದನ್ನು ನಿಲ್ಲಿಸದೆ ಚಾಲುಯಿಡಿರೆಂದು ಕೈ. ವಾಸಿ ಅಪ್ಪಾಸಾಹೇಬರು ತಮ್ಮ ಅಂತ್ಯಕಾಲಕ್ಕೆ ಇಲ್ಲಿಗೆ ಆಗಮಿಸಿದ್ದಾಗ್ಗೆ ಆಜ್ಞಾಪಿಸಿದ್ದರಿಂದ ಇದುವರೆಗೂ ಆಶ್ರಮವು ನಡೆದಿರುತ್ತದೆ. ಆಶ್ರಮದ ಉಪಯುಕ್ತತೆಯು ಜನರಿಗೆ ಹೆಚ್ಚು ಹೆಚ್ಚು ಕಂಡುಬರಹತ್ತಿದೆ. ಆದುದರಿಂದ ಕೆಲಕೆಲವು ಮಹನೀಯರು ಆಶ್ರಮದ ಸ್ಥಿರವ್ಯವಸ್ಥೆಯು ಆಗದ ಹೊರ್ತು ನಮ್ಮ ಸಮಾಜದವರಿಗೆ ಮುಂಬಯಿಯಿಂದ ಆಗತಕ್ಕ ಅನೇಕ ವ್ಯಾವಹಾರಿಕ ಔದ್ಯೋಗಿಕ ಶಿಕ್ಷಣದ ಲಾಭಗಳು ಆಗಲಾರವೆಂದು ಅಭಿಪ್ರಾಯ ಪಡುತ್ತಿರುವುದು ನಿಜವಾಗಿದೆ. ಏಕೆಂದರೆ—ಮುಂಬಯಿ ಪಟ್ಟಣವು ಸಕಲ ಸುಧಾರಣೆಗಳಿಗೂ ತವರಮನೆಯಾಗಿದೆ. ಇಷ್ಟೇ ಅಲ್ಲದೆ ಯೂರೋಪ, ಅಮೆರಿಕಾ, ಜರ್ಮನ, ಜಪಾನ, ಚೀನ ಮುಂತಾದ ಪರದೇಶಗಳಿಗೆ ಇಲ್ಲಿಂದ ಅನೇಕ ವ್ಯಾಪಾರದ ಸರಕುಗಳು ಹೋಗಲಿಕ್ಕೂ ಅತ್ತಕಡೆಯಿಂದ ಇಲ್ಲಿಗೆ ಬರಲಿಕ್ಕೂ ಮುಖ್ಯ ಬಂದರವಾಗಿರುವುದರಿಂದ ಇಡೀ ಪೃಥ್ವಿಯ ದಳನ ವಳನವೇ ಮುಂಬಯಿಯಲ್ಲಿ ನಡೆದಿರುತ್ತದೆನ್ನಲಿಕ್ಕೆ ಸಂದೇಹವಿಲ್ಲ. ಇದಲ್ಲದೆ ಸರಕಾರದವರ ಇಲಾಖೆಯ ಪಟ್ಟಣವಾದುದರಿಂದ ಅನೇಕ ತರದ ಉಚ್ಚಶಾಸ್ತ್ರೀಯ ಶಿಕ್ಷಣವು ದೊರೆಯಲಿಕ್ಕಾಸ್ಪದವಾಗಿದೆ. ಆದುದರಿಂದ ಇಂತಹ ಮಹತ್ವದ ಮುಂಬಾಪುರದಲ್ಲಿ ನಮ್ಮ ವೀರಶೈವ ಸಮಾಜದವರ ದಳನ ವಳನವು ಹೆಚ್ಚಾಗದ ಹೊರ್ತು ನಮ್ಮ ಸಮಾಜದಲ್ಲಿ ಅನೇಕ ಸುಧಾರಣೆಗಳೂ ಮತ್ತು ಅನೇಕ ವಿದ್ವಾಂಸರೂ ಉಂಟಾಗಲಾರರೆಂದು ಹೇಳಲಿಕ್ಕೆ ಯಾವ ಅಡ್ಡಿಯೂ ತೋರುವುದಿಲ್ಲ. ಅದಾಗಬೇಕಾದರೆ ಮುಂಬಯಿ ಪಟ್ಟಣದಲ್ಲಿ ಸ್ವಲ್ಪಾದರೂ ಆಶ್ರಯ ಬೇಕಾಗುತ್ತದೆ. ಆಶ್ರಯವೆಂಬುದೇ "ವೀರಶೈವಾಶ್ರಮ" ವೆಂದು ಹೇಳಲ್ಪಡುವುದು. ಈಗಿನ ಇಂಪ್ರುವ್‌ಮೆಂಟ್ ಟ್ರಸ್ಟಿನವರ ನೇಮಕ್ಕನುಸಾರವಾಗಿ ಆಶ್ರಮದ ಕಟ್ಟಡ ಕಟ್ಟಿಸಬೇಕಾದರೆ ಕನಿಷ್ಠ ಪಕ್ಷಕ್ಕೆ ೧-೧॥ ಲಕ್ಷ ರೂ. ಗಳು ಬೇಕಾಗುತ್ತವೆ. ಇಂತಹ ಮಹತ್ವದ ಕಾರ್ಯಗಳು ಜರಗಬೇಕಾದರೆ ನಮ್ಮ ಸಮಾಜದೊಳಗಿನ ಶ್ರೀಮನ್ನಿರಂಜನಸ್ವಾಮಿಗಳೂ ಪಟ್ಟಾಧಿಕಾರಿಗಳೂ ದೇಸಾಯಿ ದೇಶಪಾಂಡೆಯವರೂ ಸರ್ಕಾರಿ ದೊಡ್ಡದೊಡ್ಡ ಅಧಿಕಾರಿಗಳೂ ವಕೀಲ ಮೊದಲಾದವರೂ ಗೌಡ ಶಾನಭೋಗರೂ ಶೆಟ್ಟಿ ಸಾಹುಕಾರ ಜನರೂ ಧರ್ಮಾಭಿಲಾಷೆಯುಳ್ಳ ಸಕಲ ವೀರಶೈವ ಮಹನೀಯರೂ ತಮ್ಮತಮ್ಮ ಯೋಗ್ಯತೆಗನುಸಾರ ಸಹಾಯ ಮಾಡಬೇಕಾಗಿ ಸಕಲ ವೀರಶೈವ ಮಹನೀಯರಿಗೂ ವಿನಯಪೂರ್ವಕವಾಗಿ ತಿಳುಹಿಸಿ ಸದರೀ ಕಾರ್ಯದ ಮಹತ್ವವನ್ನು ಪೂರ್ಣವಾಗಿ ಮನಸಿಗೆತಂದು ಯೋಗ್ಯವಾದ ಧನಸಹಾಯ ಮಾಡಬೇಕೆಂದು ಆಶಿಸುತ್ತೇವೆ.

ಡಿಸಿ, ಅಲ್ಲಿ ನಿರೀಕ್ಷಿಸಿಕೊಂಡಿದ್ದ ಬ್ರಾಹ್ಮಣೇತರ ಶಿಷ್ಯರುಗಳಿಂದಲೂ, ಜಹಗೀರಿಯ ರೈತರುಗಳಿಂದಲೂ ಕಾಣಿಕೆಯನ್ನು ಸ್ವೀಕರಿಸಿ ಅವರುಗಳಿಗೆ ಆಶೀರ್ವಾದವನ್ನು ಕೊಟ್ಟು ಅನಂತರ ಯಥಾಮರ್ಯಾದೆಯಿಂದ ಸಚ್ಚಿದಾನಂದ ವಿಲಾಸಕ್ಕೆ ದಯಮಾಡಿಸಿದರು. ಅಲ್ಲಿಗೆ ಪಟ್ಟಾಭಿಷೇಕ ಮಹೋತ್ಸವಕಾರ್ಯವು ಪರಿಸಮಾಪ್ತಿಗೊಂಡಿತು. ೫೦೦೦ ಬ್ರಾಹ್ಮಣರಿಗೆ ದಿವ್ಯಸಂತರ್ಪಣೆಯು ನಡೆದು ದಕ್ಷಿಣೆಯು ಕೊಡಲ್ಪಟ್ಟಿತು. ಆ ದಿವಸ ಸಾಯಂಕಾಲ ೭ ಗಂಟೆಯಲ್ಲಿ ಶ್ರೀಗಳವರು ದಿವ್ಯವಸ್ತ್ರಾಭರಣಭೂಷಿತರಾಗಿ ಬಂಗಾರದ ಪಲ್ಲಕ್ಕಿಯಲ್ಲಿ ಮಂಡಿಸಿ ಮಲ್ಲಿಕಾರ್ಜುನಗುಡ್ಡದ ನಾಲ್ಕು ವೀಧಿಗಳಲ್ಲೂ ಮಹಾವೈಭವದಿಂದ ಉತ್ಸವಗೊಂಡು ಪ್ರೇಕ್ಷಕ ಜನರ ಮನದಣಿಯ ದರ್ಶನವನ್ನಿತ್ತು ಅವರುಗಳು ಮಾಡಿದ ಪೂಜೆಯನ್ನು ಕೈಕೊಂಡು ಮಧ್ಯರಾತ್ರಿಯ ವೇಳೆಗೆ ಮಠಕ್ಕೆ ಹಿಂದಿರುಗಿ ಚಿತ್ತೈಸಿದರು. ಇಲ್ಲಿಗೆ ಎಲ್ಲ ಉತ್ಸವ ಸಮಾರಂಭವೂ ಕೊನೆಗಂಡಿತು. ನೂತನ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳವರು ತಮ್ಮ ಗುರುಗಳ ಆಶೀರ್ವಾದ ಬಲದಿಂದ ಜ್ಞಾನವೆಂಬ ಕಾಂತಿಯನ್ನು ಬಹುದೂರ ಬೆಳಗುವವರಾಗಲೆಂದೂ, ಮಠದ ಪವಿತ್ರವಾದ ಸಂಪ್ರದಾಯಗಳನ್ನು ಯಾವ ನ್ಯೂನತೆಯೂ ಇಲ್ಲದೆ ಬಹುಕಾಲದವರೆಗೆ ನಡೆಸಿಕೊಂಡು ಬರುವವರಾಗಲೆಂದೂ ಪ್ರತಿಯೊಬ್ಬ ಶಿಷ್ಯನ ನಿಜವಾದ ಪ್ರಾರ್ಥನೆಯಾಗಿರುತ್ತದೆ.

ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು ಬ್ರಹ್ಮೈಕ್ಯರಾದುದರಿಂದ, ಮಠದ ಆಡಳಿತವನ್ನೂ, ಆಸ್ತಿಯನ್ನೂ ಅವರ ಉತ್ತರಾಧಿಕಾರಿಗಳು ಸ್ವಸಾಮರ್ಥ್ಯದಿಂದ ನಿರ್ವಹಿಸಿಕೊಂಡು ಹೋಗುವವರೆಗೂ ಅವುಗಳನ್ನು ಕಾಪಾಡತಕ್ಕ ಭಾರವು ಸರ್ಕಾರದವರಮೇಲೆ ಬಿದ್ದಿರುವುದರಿಂದ ಹಿಂದಣ ಶ್ರೀಗಳವರ ಕಾಲದಲ್ಲಿ ಮಠದ ಏಜಂಟರಾಗಿದ್ದ ಬ್ರ॥ಶ್ರೀ ಶ್ರೀಕಂಠಶಾಸ್ತ್ರಿಗಳೇ ಪೂರ್ವದಂತೆ ಏಜಂಟರಾಗಿದ್ದುಕೊಂಡು ಕಡೂರ ಡಿ॥ ಕಮಿಷನರ ಮೇಲ್ವಿಚಾರಣೆಯಲ್ಲಿ ಎಲ್ಲಾ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುವ ಹಾಗೂ, ಈ ಸೀಮೆಯಲ್ಲೂ, ಹೊರಗೂ ಬರುವ ಮಠವಾಸ್ತಿಯ ಪಟ್ಟಿಯನ್ನೂ, ಈ ವರ್ಷದ ಮಠದ ಆಯವ್ಯಯದ ಪಟ್ಟಿಯನ್ನೂ ಬರೆದು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದೆಂದೂ ಮೈಸೂರ ಸರ್ಕಾರದಪ್ಪಣೆಯಾಗಿರುತ್ತದೆ. (ಮದ್ರಾಸ್ ಮೇಲ್)

ಮೈಸೂರ್ ಸ್ಟಾರ್

೧೯೧೨ ನೆಯ ಏಪ್ರಿಲ್ ತಾ॥ ೨೨ ನೆಯ ಸೋಮವಾರ

ಕಂಚಿಯ ಪಂಡಿತಮಹಾಸಭೆ.

ಭರತಖಂಡವನ್ನು ಸಕಲವಿಧದಲ್ಲೂ ಅಭಿವೃದ್ಧಿಗೆ ತರಬೇಕೆಂದು ಬಯಸಿ, ಅದಕ್ಕಾಗಿ ಪಾಟುಪಡುತ್ತಿರುವ ದೇಶಾಭಿಮಾನಿಗಳಿಗೆ ಕೆಲವು ತೊಡಕುಗಳು ಅನುಭವಕ್ಕೆ ಬಂದಿರುತ್ತವೆ. ಅವುಗಳನ್ನು ಪರಿಹರಿಸದ ಹೊರತು ಸಮಂಜಸವಾಗಿ ಈ ದೇಶವು ಏಳ್ಗೆಗೊಳ್ಳಲಾರದು. ಅಂಥ ತೊಡಕುಗಳಾವುವೆಂದರೆ— ಬಾಲ್ಯವಿವಾಹಪದ್ಧತಿ, ಸಮುದ್ರಯಾನ ನಿಷೇಧ, ಜಾತಿಮತ್ಸರಪ್ರಾಬಲ್ಯ, ಪುನರ್ವಿವಾಹನಿಷೇಧ ಮೊದಲಾದುವುಗಳು. ಈ ವಿಘ್ನಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಶಾಸ್ತ್ರವಚನಗಳಿಗೆ ವಿರುದ್ಧವಾಗಿಯೇ ಆಗಲಿ ಅಥವಾ ಸ್ವಪ್ರತಿಷ್ಠೆಯಿಂದ ಮನಸ್ಸಿಗೆ ತೋರಿದಂತೆಯೇ ಆಗಲಿ ಪ್ರವರ್ತಿಸಬೇಕೆಂಬುದು ಅವರುಗಳ ಅಭಿಪ್ರಾಯವಾಗಿಲ್ಲ. ಅದು ಕಾರಣ, ಸಂಘಪರಿಷ್ಕರಣ ವಿಷಯದಲ್ಲಿ ಧರ್ಮಶಾಸ್ತ್ರಾದಿಗಳಲ್ಲಿ ಪೂರ್ಣ ಪ್ರಜ್ಞೆಯುಳ್ಳ ವೈದಿಕ ಪಂಡಿತರ ಅಭಿಪ್ರಾಯವನ್ನು ತೆಗೆದುಕೊಂಡೇ ಆ ತೊಡಕುಗಳನ್ನು ತಪ್ಪಿಸಬೇಕೆಂದು ನಿರೀಕ್ಷಿಸುತ್ತಿದ್ದಾರೆ. ಆದರೆ ಪ್ರಕೃತಕಾಲಸ್ಥಿತಿಯನ್ನೂ, ದೇಶಾಂತರಗಳ ಹಾನಿವೃದ್ಧಿಗಳ ಲಕ್ಷಣವನ್ನೂ ಚೆನ್ನಾಗಿ ಪರಿಶೋಧಿಸಿ ಲೌಕಿಕರು ತಿಳಿದಿರುವಂತೆ ವೈದಿಕರು ತಿಳಿದಿರುವುದಿಲ್ಲ. ಲೌಕಿಕರಿಗೆ ದೇಶರಕ್ಷಣೆಯ ಕಡೆಗೆ ಮನಸ್ಸು ಎಳೆಯುತ್ತಿದ್ದರೆ ವೈದಿಕರಿಗೆ ಶಾಸ್ತ್ರರಕ್ಷಣೆಯ ಕಡೆಗೆ ಮನಸ್ಸೆಳೆಯುತ್ತದೆ. ಜಗದ್ರಕ್ಷಣೆಗಾಗಿ ವೇದಶಾಸ್ತ್ರಗಳೆಲ್ಲಾ ಅವತರಿಸಿರುವುವೆಂದು ಲೌಕಿಕರು ಭಾವಿಸುತ್ತಿದ್ದರೆ, ಆ ಶಾಸ್ತ್ರಗಳ ರಕ್ಷಣೆಗಾಗಿಯೇ ನಾವು ಅವತರಿಸಿದ್ದೇವೆಂದು ವೈದಿಕರು ಭಾವಿಸುತ್ತಾರೆ. ಶಾಸ್ತ್ರೈಕಶರಣ್ಯರಾದ ವೈದಿಕರುಗಳು ಕಣ್ಣು ಮುಚ್ಚಿಕೊಂಡು ತಾವು ಹಿಡಿದ ಪಟ್ಟನ್ನು ಬಿಟ್ಟು ೧ ಹೆಜ್ಜೆಯನ್ನು ಹಿಂದುಮುಂದಕ್ಕಿಡಲೂ ಪ್ರಯತ್ನಿಸುವವರಾಗಿಲ್ಲ. ವೇದಕಾಲದಲ್ಲಿಲ್ಲದ ಜಾತಿಭೇದಗಳೂ, ಕಟ್ಟಲೆಗಳೂ ಮನುವಿನ ಕಾಲದಲ್ಲಿ ಮಾನವರಿಂದ ತಮ್ಮ ಕ್ಷೇಮಕ್ಕೋಸ್ಕರ ಕಲ್ಪಿಸಲ್ಪಟ್ಟಿರುವುವಾದಕಾರಣ, ಆಗಿನ ಕಾಲಕ್ಕೆ ತಕ್ಕಂತೆ ಸಮಾಜದ ಕಟ್ಟಲೆಗಳು ಕಲ್ಪಿಸಲ್ಪಟ್ಟಿರುವಾಗ ಈಗಿನ ಕಾಲಕ್ಕೆ ಅನುಗುಣವಾಗುವಂತೆ ಕೆಲ ಬದಲಾವಣೆಗಳನ್ನು ಕಲ್ಪಿಸಿಕೊಳ್ಳುವುದು ಪಾಪಾಚರಣೆಯೆಂದಿಗೂ ಅಲ್ಲವೆಂದು ಲೌಕಿಕರು ನಂಬುತ್ತಾರೆ. ಈ ಉಭಯರಿಗೂ ಮಧ್ಯಸ್ಥವಾದ ಮತ್ತೊಂದು ಪಕ್ಷವು, ಪ್ರಕೃತದಲ್ಲಿ ಮಾಡಲ್ಪಡಬೇಕೆಂಬ ಸಂಸ್ಕಾರಗಳೆಲ್ಲಾ ವೇದವಿಹಿತವಾದುವುಗಳೇ ಎಂದು ಸಮರ್ಥಿಸಲು ಶಕ್ತವಾಗಿರುತ್ತದೆ.

ಈ ಪಕ್ಷಭೇದಗಳವರೆಲ್ಲರೂ ೧೦-೨೦ ವರ್ಷಗಳಿಂದಲೂ ವಾದಾನುವಾದಗಳನ್ನು ಮಾಡುತ್ತಲೂ, ಸಂಸ್ಕರಣೋಪಾಯಗಳನ್ನು ಕಾರ್ಯರೂಪವಾಗಿ ಅಲ್ಲಲ್ಲಿ ನೆರವೇರಿಸುತ್ತಲೂ, ಅವುಗಳನ್ನು ನಿರೋಧಿಸುವ ಯತ್ನಗಳನ್ನು ಪ್ರತಿಪಕ್ಷದವರು ಕೈಲಾದಮಟ್ಟಿಗೆ ನಡೆಯಿಸುತ್ತಲೂ ಬಂದಿದ್ದಾರೆ. ಆದರೆ ದೇಶಹಿತಾರ್ಥವಾಗಿ ಸದುದ್ದೇಶದಿಂದ ಮಾಡಲ್ಪಡಬೇಕಾದ ಇಂಥ ಯತ್ನಗಳಲ್ಲಿಯೂ ಐಕಮತ್ಯವಿಲ್ಲದೆ ಹೋದರೆ ಉದ್ದಿಷ್ಟವಾದ ಫಲವು ಸಮಗ್ರವಾಗಿ ಕೈಗೂಡಲಾರದೆಂಬುದನ್ನು ಮನಗಂಡ ಮಹನೀಯರುಗಳು ಈಗ ಪಕ್ಷಾಂತರದ ಜನರನ್ನು ಸಹ ಒಂದುಕಡೆ ಸೇರಿಸಿ, ವಿಚಾರಮಾಡಿ, ಈ ವಿವಾದಾಸ್ಪದವಾದ ವಿಷಯಗಳನ್ನು ಕೊನೆಮುಟ್ಟಿಸಬೇಕೆಂದು ಪ್ರಯತ್ನಿಸುತ್ತಲಿದ್ದಾರೆ.

ಈ ತಿಂಗಳ ಮೊದಲ ವಾರದಲ್ಲಿ ಕಂಚಿಯೊಳಗೆ ಕೂಡಿದ ಪಂಡಿತಸಭೆಯೇ ಮೇಲೆಹೇಳಿದ ಪ್ರಯತ್ನದ ರೂಪವಾದುದು. ಸಂಘಸಂಸ್ಕರಣ ವಿಷಯವನ್ನು ಆಲೋಚಿಸುವುದಕ್ಕೆ ಕಳೆದ ೨೦ ವರ್ಷಗಳಿಂದಲೂ ಅನೇಕ ಮಹಾಸಭೆಗಳೂ, ಪ್ರಾಂತಿಕ ಸಭೆಗಳೂ ಸಹ ಕೂಡುತ್ತ ಬಂದಿವೆ. ಆದರೆ ಅವುಗಳಲ್ಲೆಲ್ಲ ಬರಿಯ ಲೌಕಿಕರೇ ಪ್ರಧಾನರಾಗಿದ್ದರು. ಪ್ರಕೃತಸಭೆಗಾದರೊ ಮದ್ರಾಸಾಧಿಪತ್ಯದಲ್ಲಿ ಪ್ರಮುಖರೆನಿಸಿಕೊಂಡಿರುವ ವೈದಿಕ ಲೌಕಿಕರನೇಕರು ಮುಂದಾಗಿ ನಿಂತಿದ್ದರು. ಮತ್ತೂ ಈ ಸಭೆಗಾಗಿ ಹೊರಗಣಿಂದ ಬರತಕ್ಕ ಪಂಡಿತರುಗಳಿಗೆಲ್ಲಾ ಕಾರ್ಯಕಾರಿ ಮಂಡಲದವರೇ ವೆಚ್ಚವನ್ನು ಕೊಡಲು ಏರ್ಪಡಿಸಿದ್ದರು. ಉಭಯಪಕ್ಷದ ಪ್ರಮುಖರಾದ ಮಹಾಶಯರೆಲ್ಲರೂ ಇಂತಹ ಕಾರ್ಯದಲ್ಲಿ ಮುಂದಾಗಿ ನಿಂತು ಕೂಡಿದುದೇ ಮಹಾಸುಯೋಗವೆಂದೂ, ಸರ್ವಹಿತಕರವಾದ ಪರಿಣಾಮವು ಈ ಸಭೆಯ ಮೂಲಕವಾಗಿ ಆಗುವುದೆಂದೂ ಭಾರತಾಭಿಮಾನಿಗಳೆಲ್ಲರೂ ನಿರೀಕ್ಷಿಸುವಂತೆ ಈ ಪ್ರಯತ್ನವು ಆದಿಭಾಗದಲ್ಲಿ ಕಾಣಿಸಿಕೊಂಡಿತು. ಆದರೆ ಈಚೆಗೆ ಹೊರಬಿದ್ದ ಅದರ ವಿದ್ಯಮಾನಗಳನ್ನು ಕೇಳುವಲ್ಲಿ— "ಉತ್ಪದ್ಯಂತೇವಿಲೀಯಂತೇ ದರಿದ್ರಾಣಾಂಮನೋರಥಾಃ" ಎಂಬುವಂತೆ ಹತಭಾಗ್ಯರಾದ ಭಾರತೀಯರೆಲ್ಲರೂ ಹತಾಶರಾಗುವಂತಾದುದಕ್ಕಾಗಿ ವಿಷಾದವಾಗುತ್ತಿರುವುದು. ಲೌಕಿಕ ವೈದಿಕ ವಿದ್ಯೆಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿದ ಮಹಾಮಹಾಜನರು ಸೇರಿದ್ದ ಈ ಸಭೆಯು ಸಕ್ರಮವಾಗಿ ನಡೆಯುವುದಕ್ಕೂ, ವಿಷಯವಿಮರ್ಶೆಯು ಸಾವಧಾನದಿಂದ ಜರುಗುವುದಕ್ಕೂ ಅವಕಾಶವಿಲ್ಲದೆ, ಅಲ್ಪಕಾರಣಗಳಿಂದ ರಸಾಭಾಸವಾಗಿ ಅರ್ಧಾಂತವಾಗಿ ಪರಿಸಮಾಪ್ತಿಗೊಳ್ಳಬೇಕಾಯಿತೆಂಬುದನ್ನು ಕೇಳಿದರೆ ಮತ್ತಷ್ಟು ದುಃಖವುಂಟಾಗುವುದು. ಮೊದಲದಿನ ತಾ॥ ೫ರಲ್ಲಿ ಕಾರ್ಯಕಾರಿಮಂಡಲಿಯ ಅಧ್ಯಕ್ಷರಾದ ಸರ್ ಸುಬ್ರಹ್ಮಣ್ಯಯ್ಯರ್‌ರವರು ತಮ್ಮ ಆರಂಭೋಪನ್ಯಾಸವನ್ನು ಆಂಗ್ಲಭಾಷೆಯಲ್ಲಿ ಬರೆದು ತಂದಿದ್ದು ಇತರರಿಂದ ಅದನ್ನು ಓದಿಸಿ, ಅದರ ತಾತ್ಪರ್ಯವನ್ನು ದ್ರಾವಿಡಭಾಷೆಯಲ್ಲಿ ತಾವೇ ಹೇಳಿದರು. ಅವರ ಭಾಷಣದಲ್ಲಿ ವೈದಿಕರನ್ನು ಕುರಿತು ಕೆಲವು ಕಠಿನೋಕ್ತಿಗಳು ಉಪಯೋಗಿಸಲ್ಪಟ್ಟಿದ್ದುವೆಂಬ ಕಾರಣದಿಂದ ಆಗಲೇ ಸಭೆಯಲ್ಲಿ ಸ್ವಸ್ಥತಾಭಂಗವು ಕಾಣಿಸಿಕೊಂಡಿತು. ಅದೇದಿನ ಸಾಯಂಕಾಲ ಕೂಡಿದ ಸಭೆಯಲ್ಲಿ ಸಭಾಧ್ಯಕ್ಷರಾದ ರಾ॥ಬ॥ ಎಂ. ರಂಗಾಚಾರ್ಯರವರು ತಮ್ಮ ಉಪನ್ಯಾಸವನ್ನು ಓದಿದರು. ಅದರಲ್ಲಿ ವೈದಿಕಪಂಡಿತರ ಮನಸ್ಸು ಸಂತೋಷಗೊಳ್ಳುವ ಭಾಗವು ಅನೇಕವಾಗಿದ್ದಿತು ಮತ್ತು ಸದ್ಯಃಕಾಲದಲ್ಲಿ ಸಮಾಜದಕಟ್ಟಲೆಗಳ ಸುಧಾರಣೆಯು ಅವಶ್ಯಕವಾಗಿರುವುದೆಂದು ಅವರು ಯುಕ್ತಿಯುಕ್ತವಾಗಿ ನಿರೂಪಿಸಿದ್ದುದಲ್ಲದೆ, ಧರ್ಮಪರಿಕಲ್ಪನದಲ್ಲಿಯೂ ಧರ್ಮಸಂಶಯಬಂದಾಗ್ಗೆ ಅದನ್ನು ನಿರ್ಣಯಿಸುವಲ್ಲಿಯೂ ಧರ್ಮಜ್ಞರಾದ ಶಿಷ್ಟಜನರಿಗೆ ಅಧಿಕಾರವಿರುವುದೆಂದೂ "ಅನಾಮ್ನಾತೇಷುಧರ್ಮೇಷುಕಥಂಸ್ಯಾದಿತಿಚೇದ್ಭವೇತ್। ಯಂಶಿಷ್ಟಾಬ್ರಾಹ್ಮಣಾಬ್ರೂಯುಃ ಸಧರ್ಮಸ್ಸ್ಯಾದಶಂಕಿತಃ॥" ಎಂದರೆ–ಯಾವುದು ಧರ್ಮ ? ಯಾವುದು ಅಧರ್ಮವೆಂದು ಸಂಶಯಬಂದಾಗ ಶ್ರೇಷ್ಠರಾದ ಬ್ರಾಹ್ಮಣರು ಯಾವುದನ್ನು ನ್ಯಾಯವಾದುದೆಂದು ನಿರ್ಧರಿಸಿ ಹೇಳುವರೋ ಅದೇ ಸದ್ಧರ್ಮವೆನಿಸಿಕೊಳ್ಳುವುದು ಎಂದು ಭೃಗುಪ್ರೋಕ್ತ ಮಾನವಧರ್ಮಶಾಸ್ತ್ರವಿರುವುದೆಂದೂ, "ಏತಾನಿ ಲೋಕಗುಪ್ತ್ಯರ್ಥಂ ಕಲೇರಾದೌಮಹಾತ್ಮಭಿಃ। ನಿವರ್ತಿತಾನಿಕರ್ಮಾಣಿ ವ್ಯವಸ್ಥಾಪೂರ್ವಕಂಬುಧೈಃ॥" ಎಂದರೆ– ಲೋಕರಕ್ಷಣಾರ್ಥವಾಗಿ ಕಲಿಯುಗದ ಆದಿಯಲ್ಲಿ ಮಹನೀಯರಾದ ವಿದ್ವಾಂಸರು ವರ್ಣಾಶ್ರಮೋಚಿತವಾದ ಕರ್ಮಗಳನ್ನು ವ್ಯವಸ್ಥಾಪೂರ್ವಕವಾಗಿ ನಿರ್ಣಯಿಸಿದರು. ಎಂದು ಪ್ರಮಾಣವಿರುವುದೆಂದೂ ಸಹ ಇದೇ ವಿಧವಾಗಿ ಸಪ್ರಮಾಣವಾಗಿ ನಿರೂಪಿಸಿ, ಸಮುದ್ರಯಾನ ಮೊದಲಾದುವುಗಳ ಅವಶ್ಯಕತೆಯನ್ನು ವಿವರಿಸಿ, ಪ್ರಕೃತಕಾಲದಲ್ಲಿ ಲೋಕಹಿತಕ್ಕೆ ಆವಶ್ಯಕವಾದ ಧರ್ಮನಿರ್ಣಯವನ್ನು ವಿದ್ವಾಂಸರುಗಳೂ ಶಿಷ್ಟರೂ ಆದ ಸಭಿಕರು ಮಾಡಬೇಕೆಂದು ಪ್ರಾರ್ಥಿಸಿದರು.

೬ ನೆಯ ದಿನ ಬೆಳಗ್ಗೆ ಮರಳಿ ಸಭೆಕೂಡಿತು. ಕಾರ್ಯನಿರ್ವಾಹಕ ಸಭೆಯಲ್ಲಿ ಒಬ್ಬರೊಬ್ಬರಿಗೆ ಪ್ರಬಲವಾದ ವಾಗ್ವಾದವು ನಡೆಯಹತ್ತಿತು. ಬಳಿಕ ಸಭಾಧ್ಯಕ್ಷರೂ ಕಂಚಿಯ ಇಬ್ಬರು ಪಂಡಿತರುಗಳೂ ಸೇರಿ ಮಧ್ಯಸ್ಥಗಾರರಾಗಿ ಸಭೆಯಲ್ಲಿ ನಿರ್ದಿಷ್ಟ ವಿಷಯವನ್ನು ಕುರಿತು ವಾದಿಸುವುದಕ್ಕಾಗಿ ಕೆಲಪಂಡಿತರನ್ನು ಆರಿಸಿದರು. ಮಧ್ಯಾಹ್ನಕ್ಕೆ ಮತ್ತೆ ಸಭೆ ಕೂಡಿದಾಗ ವಾದಿಸಲು ನಿರ್ಣೀತರಾಗದಿದ್ದವರೂ ವಾದಿಸುವುದಕ್ಕೆ ಬಂದರು. ಎಲ್ಲರನ್ನೂ ಆ ಸಂಘಕ್ಕೆ ಸೇರಿಸಿದರು. ಹಾಗೂಹೀಗೂ ಸ್ವಲ್ಪಹೊತ್ತು ಕಾರ್ಯವನ್ನು ಜರುಗಿಸುತ್ತ ಬಂದರು. ಸಮುದ್ರಯಾನದಪ್ರಸ್ತಾಪವು ಬಂದಿತು. ಆಗ ಕಾರ್ಯಕರಣ ವಿಧಾನಕ್ಕೆ ವಿರುದ್ಧವಾಗಿ ಕೋಟಿಖಂಡನಗಳನ್ನು ಇಬ್ಬಿಬ್ಬರೇ ಮಾಡಬೇಕೆಂಬ ಕೋಲಾಹಲವು ಪಂಡಿತರಲ್ಲಿ ಹುಟ್ಟಿತು. ಹೀಗೆ ಇಬ್ಬಿಬ್ಬರೇ ಕೋಟಿಖಂಡನಗಳನ್ನು ನಡೆಯಿಸುತ್ತ ಬಂದರೆ ಕೊನೆಮುಟ್ಟುವುದೆಂದಿಗೆ? ಎಂದಾಲೋಚಿಸಿ, ಮಧ್ಯಸ್ಥಗಾರರನ್ನೂ, ಆ ವಾಗ್ವಾದ ಕ್ರಮವನ್ನೂ ತಪ್ಪಿಸಿ, ಪ್ರತಿಯೊಬ್ಬರೂ ಒಂದೊಂದು ವಿಷಯವನ್ನು ಉಪನ್ಯಾಸಮಾಡಬಹುದು ಎಂದು ಅಧ್ಯಕ್ಷರು ಹೇಳಿದರು. ಪಂಡಿತರುಗಳು ಅದಕ್ಕೊಪ್ಪಲಿಲ್ಲ. ಅನೇಕರು ಅಧ್ಯಕ್ಷರನ್ನೇ ಜರೆಯುವುದಕ್ಕೂ ಅವರ ಮಾತುಗಳನ್ನು ಖಂಡಿಸುವುದಕ್ಕೂ ಉಪಕ್ರಮಿಸಿದರು. ಸಭೆಯು ಸಂತೆಯಾಯಿತು. ಯಾವಯಾವ ಪ್ರಯತ್ನಗಳಿಂದಲೂ ಪಂಡಿತರು ತಮ್ಮ ಪೂರ್ವಾಭ್ಯಸ್ತವಾದ ವಾದಾನುವಾದದ ಕೋಲಾಹಲಗಳನ್ನು ಬಿಡಲಿಲ್ಲ. ಈ ರೀತಿಯಲ್ಲಾದರೆ ಯಾವ ವಿಷಯವೂ ಕೊನೆಮುಟ್ಟಲಾರದೆಂದು ಸಂಪೂರ್ಣವಾಗಿ ತೋರಿಬರಲು, ಸಭಾಧ್ಯಕ್ಷರು ನಿರಾಶೆಯಿಂದ ಸಭೆಯನ್ನು ಉಪಸಂಹರಿಸಬೇಕಾಯಿತು. ಪಂಡಿತ ಸಭೆಯು ಇಂತಹ ಪರ್ಯವಸಾನವನ್ನು ಪಡೆದುದು ಅದರ ಉತ್ಪಾದಕರಿಗೆ ಮಾತ್ರವೇ ಅಲ್ಲದೆ ದೇಶಾಭಿಮಾನಿಗಳಾದ ಸರ್ವರಿಗೂ ವಿಷಾದವನ್ನುಂಟುಮಾಡಿರುತ್ತದೆ.

ಲೌಕಿಕರ ವಿಚಾರಗಳಿಗೂ ವೈದಿಕರ ವಿಚಾರಗಳಿಗೂ ಹಗಲು ರಾತ್ರಿಗಿರುವಷ್ಟು ವ್ಯತ್ಯಾಸವಿದೆ. ಆದರೂ ಲೋಕದ ಜನರ ಹಿತಕ್ಕೆ ಹಗಲು ರಾತ್ರಿಗಳೆರಡೂ ಅವಶ್ಯಕವಾಗಿರುವಂತೆ ದೇಶಹಿತಕ್ಕೆ ಉಭಯರೂ ಅವಶ್ಯಕವಾದವರು. ಆದರೆ ಪ್ರಕೃತ ಪರಿಷತ್ತಿನ ಕೂಟವು ಸೂರ್ಯೇಂದು ಸಂಗಮದ ಪರ್ಯವಸಾನವನ್ನು ಪ್ರದರ್ಶನಮಾಡಿದುದಕ್ಕಾಗಿಯೂ, ವೈದಿಕರ ಒರಟುತನವೇ ಇಂಥ ರಸಾಭಾಸಕ್ಕೆ ಆಸ್ಪದವನ್ನುಂಟುಮಾಡಿತೆಂದು ದೂರುಂಟಾದುದಕ್ಕಾಗಿಯೂ, ದೇಶಹಿತದಕಡೆಗೆ ಅವರ ಮನಸ್ಸು ತಿರುಗಿ ಇನ್ನೂ ಕರಗದೆಯಿರುವುದಕ್ಕಾಗಿಯೂ, ನಾವು ಅತ್ಯಂತವಾಗಿ ವಿಷಾದಿಸುತ್ತೇವೆ. "ಇದು ಪರಸ್ಪರ ವೈದುಷ್ಯವನ್ನು ತೋರಿಸಿ ಜಯಶೀಲರಾಗುವುದಕ್ಕಾಗಿ ಕಲ್ಪಿಸಲ್ಪಟ್ಟಿರುವ ರಂಗಸ್ಥಲವಲ್ಲ; ಇಷ್ಟೊಂದುಜನರು ಅನೇಕ ಧನವ್ಯಯದಿಂದ ಕೂಡಿ ಮಾಡಿದ ಕಾರ್ಯದಿಂದ ಹೇಗಾದರೂ ದೇಶಕ್ಕೆ ಹಿತವಾಗುವಂತೆ ಮಾಡಬೇಕು" ಎಂಬ ಉದ್ದೇಶವನ್ನು ಪಂಡಿತ ಮಂಡಲಿಯವರು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಿದ್ದರೆ ಈ ಸಭೆಯ ಕೀರ್ತಿಯು ಅಚ್ಯುತವಾಗಿ ಉಳಿಯುತ್ತಿದ್ದಿತು. ಇಂಥ ಸುಸಂಧಿಯು ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತೆ ಪರ್ಯವಸನ್ನವಾಗಿ ಹೋದುದಕ್ಕಾಗಿ ಎಷ್ಟು ವ್ಯಥೆಪಟ್ಟರೂ ತೀರದು.

ಒಳದೇಶದ ವೃತ್ತಾಂತಗಳು.

ವೇದಮೂರ್ತಿ ಸೇತುರಾಮಾಚಾರ್ಯರು "ಶ್ರೀ ಸತ್ಯಧ್ಯಾನತೀರ್ಥ ಸ್ವಾಮಿಗಳು" ಎಂಬ ಅಭಿಧಾನದಿಂದ ಶ್ರೀ ಉತ್ತರಾದಿ ಮಠಕ್ಕೆ ಅಧಿಸ್ವತರಾಗಿರುವುದನ್ನು ಮೈಸೂರ ಸರ್ಕಾರದವರು ಅಂಗೀಕರಿಸಿರುತ್ತಾರೆ.

ಮೈಸೂರ ಸರ್ಕಾರದವರು ದಿಲ್ಲಿಯ ದರ್ಬಾರಿನ ಜ್ಞಾಪನಾರ್ಥವಾಗಿ ಪ್ರತಿವರ್ಷದ ಡಿಸೆಂಬರ್ ತಾ॥ ೧೨ ನೆಯ ದಿವಸ ಎಲ್ಲಾ ಶಾಖೆಗಳ ಕಚೇರಿಗಳಿಗೂ ಕೋರ್ಟುಗಳಿಗೂ ಪಾಠಶಾಲೆಗಳಿಗೂ ದರ್ಬಾರ್‌ದ ರಜವು ಕೊಡಲ್ಪಡತಕ್ಕದ್ದಲ್ಲದೆ ಪಾಠಶಾಲೆಗಳಲ್ಲಿ ವಿನೋದೋತ್ಸವಗಳನ್ನು ನಡಿಸತಕ್ಕದೆಂದೂ ಡಿಸೆಂಬರ್ ತಾ॥ ೧೨ ರ ದಿನವು ರಜಾಕಾಲದಲ್ಲಿ ಬರುವುದಾದರೆ ದರ್ಬಾರ್‌ದ ದಿವಸದ ಜ್ಞಾಪನಾರ್ಥವಾಗಿ ಮತ್ತೊಂದು ದಿವಸವು ರಜವಾಗಿ ಕೊಡಲ್ಪಡತಕ್ಕದೆಂದೂ ಅಪ್ಪಣೆಮಾಡಿರುತ್ತಾರೆ.

ರಾಜಧಾನಿಯ ಶ್ರೀ ಚಾಮರಾಜೇಂದ್ರ ನಾಟಕ ಸಂಘದವರಲ್ಲಿ ೩ ಜನರು ತಮ್ಮ ಅವಿಧೇಯತೆಗಾಗಿಯೂ ಕೆಟ್ಟನಡತೆಗಾಗಿಯೂ ಕೆಲಕಾಲದವರೆಗೆ ಸಂಘಕ್ಕೆ ಬರಕೂಡದೆಂದು ಮೊದಲಾಗಿ ಸಂಘದ ಮೇಲ್ವಿಚಾರಕರಾದ ಸರದಾರ್ ಗೋಪಾಲರಾಜ ಅರಸಿನವರಿಂದ ಆಜ್ಞಪ್ತರಾಗಿರುವುದಾಗಿ ಕೇಳುತ್ತೇವೆ. ಕೆಲಯುವಕರು ಹಗಲು ವೇಷಧಾರಿಗಳಂತೆ ತಳುಕ್ಕೆಂದು ಉಡುಪನ್ನು ಧರಿಸಿಕೊಂಡು ಬೀದಿಗಳಲ್ಲೂ, ಸಂ

ಘಗಳಲ್ಲೂ ಅಲೆಯುತ ಅತ್ಯಾಚಾರ ಪ್ರಿಯರಾಗಿರುವುದನ್ನು ಅವರ ತಂದೆತಾಯಿಗಳೂ, ಹಿತೈಷಿಗಳೂ ನೋಡಿ ಜುಗುಪ್ಸಿತರಾಗಿರುವರು. ಇಂತಹವರ ದುರ್ವರ್ತನವು ಸರದಾರರ ಗಮನಕ್ಕೆ ಬಂದು ಅವರಿಗೆ ಬುದ್ಧಿಯನ್ನು ಕಲಿಸಲು ತಕ್ಕ ಶಿಕ್ಷೆಯನ್ನು ವಿಧಿಸಿರುವುದು ಇತರರಿಗೆ ಎಚ್ಚರಿಕೆಯನ್ನುಂಟುಮಾಡತಕ್ಕಂತಾಗಿರುವುದು. ಇದಕ್ಕಾಗಿ ಸರದಾರರನ್ನು ಆ ಯುವಕರ ಮಾತಾಪಿತೃಗಳೂ, ಹಿತೈಷಿಗಳೂ ಬಹುವಾಗಿ ವಂದಿಸುವರು.

ವರ್ತಮಾನ ಸಂಗ್ರಹವು.

ಚೀನಾದಲ್ಲಿ ಚಿನ್ನದ ಗಣಿಗಳಲ್ಲಿ ಕೆಲಸಮಾಡುವವರು ದಂಗೆಯೆದ್ದುದರ ಮೇಲೆ ಸೈನಿಕರು ಬಂದು ಗುಂಡನ್ನು ಹೊಡೆದು ೧೦೩ ಜನರನ್ನು ಕೊಂದರು. ಮತ್ತೂ ೩೦ ಜನರಿಗೆ ಗಾಯವನ್ನು ಮಾಡಿದರು.

ಅಲಹಾಬಾದಿನಲ್ಲಿ ಕಳೆದ ಮಂಗಳವಾರ ರಾತ್ರಿ ಪ್ಲೇಗುರೋಗಕ್ಕಾಗಿ ಕಟ್ಟಲ್ಪಟ್ಟಿರುವ ಆರೋಗ್ಯದ ಗುಡಿಸಲುಗಳಿಗೆ ಬೆಂಕಿಯು ಬಿದ್ದು ೭ ಗುಡಿಸಲುಗಳು ಸುಟ್ಟುಹೋಗಿ ಅನೇಕ ಪದಾರ್ಥಗಳು ನಾಶವಾದುವು, ಆದರೆ ದೈವಕೃಪೆಯಿಂದ ಪ್ರಾಣಾಪಾಯವೇನೂ ಆಗಿಲ್ಲವು.

ಕಳೆದ ಅಮಾವಾಸ್ಯೆಯಲ್ಲಾದ ಸೂರ್ಯಗ್ರಹಣವು ಬ್ರಿಟಿಷರ ದ್ವೀಪಗಳಲ್ಲೆಲ್ಲಾ ಕಾಣಿಸಿಕೊಂಡಿತಲ್ಲದೆ ಭರತಖಂಡದಲ್ಲಿ ಲಾಹೋರಿನಲ್ಲಿ ಮಾತ್ರ ಅರ್ಧಗಂಟೆಯ ಕಾಲಕ್ಕೆ ಮೀರಿ ಚೆನ್ನಾಗಿ ಕಾಣಿಸಿಕೊಂಡಿತು. ಲಾಹೋರಿನಲ್ಲಿ ೪೦-೫೦ ಸಾವಿರ ಜನರು ನದಿಯಲ್ಲಿ ಸ್ನಾನವನ್ನು ಮಾಡುವಾಗ್ಗೆ ೩ ಜನರು ನೂಕಾಟದಲ್ಲಿ ನೀರಿನೊಳಗೆ ಮುಳುಗಿ ಸತ್ತರು.

ಇಂಡ್ಯಾ ಸ್ಟೇಟ್ ಸೆಕ್ರಿಟರಿಯವರಾದ ಲಾರ್ಡ್ ಕ್ರೂಯವರ ಅಪೇಕ್ಷೆಯ ಮೇರೆಗೆ ಆನರಬಲ್ ಗೋಖಲೆಯವರು ಸೀಮೆಗೆ ಪ್ರಯಾಣಮಾಡಿರುತ್ತಾರೆ. ವೈಸ್‌ರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಅರ್ಥಶಾಖೆಯ ಸಂಬಂಧವಾಗಿ ಮೆಂಬರಾಗಿರುವ ಮಿ॥ ಫ್ಲೀಟ್‌ವುಡ್ ವಿಲ್ಸನ್‌ರವರು ತಮ್ಮ ಅಸ್ವಸ್ಥತೆಯ ದೆಸೆಯಿಂದ ಕೂಡಲೆ ನಿವೃತ್ತರಾಗುವ ಪಕ್ಷದಲ್ಲಿ ಮಿ॥ ಗೋಖಲೆಯವರು ನಿಯಮಿಸಲ್ಪಡುವುದಾಗಿ ವರ್ತಮಾನವಿದೆ.

ಅಮೃತಸರದಲ್ಲಿ ಒಬ್ಬ ಕ್ಷತ್ರಿಯಕುಲದ ೧೩ ವರ್ಷ ವಯಸ್ಸಿನ ಹುಡುಗನನ್ನು ಮಹಮ್ಮದೀಯರು ಬಲವಂತದಿಂದ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳುವುದಕ್ಕಾಗಿಟ್ಟುಕೊಂಡಿರುವರಾದುದರಿಂದ ತನ್ನ ಮಗನನ್ನು ತನ್ನ ಸ್ವಾಧೀನಕ್ಕೆ ಬಿಡಿಸಿಕೊಡಬೇಕೆಂದು ಆ ಹುಡುಗನ ತಂದೆಯು ಮ್ಯಾಜಿಸ್ಟ್ರೇಟರಲ್ಲಿ ಬಿನ್ನೈಸಿಕೊಂಡುದರಮೇಲೆ ಆ ಹುಡುಗನನ್ನು ಕೋರ್ಟಿಗೆ ಕರೆದುಕೊಂಡು ಬರಬೇಕೆಂದು ಮ್ಯಾಜಿಸ್ಟ್ರೇಟರು ಮಹಮ್ಮದೀಯರಿಗಪ್ಪಣೆಮಾಡಿರುತ್ತಾರೆ.

ಟಿಟಾನಿಕ್ ಹಡಗು ಮಂಜಿನಗೆಡ್ಡೆಗೆ ತಾಕಿಬಡಿದು ಮುಳುಗಿ ಹೋಗಿ ಅದರೊಳಗಿದ್ದ ೩೦೦೦ ಪ್ರಯಾಣಿಕರಲ್ಲಿ ೧೯೯೫ ಜನರು ನೀರಿನಲ್ಲಿ ಮುಳುಗಿಹೋದರು. ಇವರಲ್ಲಿ ಲಂಡನ್ನಿನಲ್ಲಿ ರಿವ್ಯೂ ಆಫ್ ರಿವ್ಯೂಸ್ ಎಂಬ ಜಗತ್ಪ್ರಸಿದ್ಧ ಮಾಸಪತ್ರಿಕೆಯ ಸಂಪಾದಕರಾದ ಸ್ಟೆಡ್‌ರವರು ಒಬ್ಬರಾಗಿರುವರು. ಈ ಅನಾಹುತದಿಂದ ವಿಪನ್ನರಾದವರ ಸಾಹಾಯ್ಯಾರ್ಥವಾಗಿ ಜಾರ್ಜ್‌ದೊರೆಗಳು ಮೇರಿರಾಣಿಯವರುಮೊದಲಾದ ರಾಜವರ್ಗದವರು ೧೫೦೦೦ ಪೌಂಡಿನ ಮೇಲೆ ಕೊಟ್ಟಿರುವರು. ಕಲಿ ಕುಬೇರನಾದ ಕಾರ್ನಿಗಿ ಮೊದಲಾದ ಶ್ರೀಮಂತರೂ ಇತರರೂ ಸೇರಿ ಈವರೆಗೆ ಕೊಟ್ಟಿರುವುದು ೩೦೦೦೦೦ ರೂ. ಆಗುತ್ತದೆ.

ಕಳೆದ ತಾ॥ ೧೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೫೮೯೬ ಜನರಿಗೆ ಪ್ಲೇಗುರೋಗವು ತಗಲಿ ೧೨೬೫ ಮರಣವಾಗಿರುತ್ತದೆ. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೬೮; ಮದ್ರಾಸಾಧಿಪತ್ಯದಲ್ಲಿ ೬೩; ಬಂಗಾಳದಲ್ಲಿ ೧೫೪; ಬಿಹಾರಿನಲ್ಲಿ ೨೮೯೩; ಸಂಯುಕ್ತ ಪ್ರಾಂತಗಳಲ್ಲಿ ೫೨೫೫; ಪಂಜಾಬಿನಲ್ಲಿ ೨೧೨೫; ಬರ್ಮಾದಲ್ಲಿ ೬೩; ಮಧ್ಯಪ್ರಾಂತಗಳಲ್ಲಿ ೬೩೭; ಮೈಸೂರ ಸೀಮೆಯಲ್ಲಿ ೨೦; ಹೈದರಾಬಾದು ಸೀಮೆಯಲ್ಲಿ ೯೫; ಮಧ್ಯಹಿಂದುಸ್ಥಾನದಲ್ಲಿ ೧೩೧; ರಾಜಪುಟಾನದಲ್ಲಿ ೯೫; ಕಾಶ್ಮೀರದಲ್ಲಿ ೧೩ ಮತ್ತೂ ವಾಯವ್ಯ ಮೂಲೆಯ ಪ್ರಾಂತಕ್ಕೆ ಸೇರಿದ ಡೇರಾ ಇಸ್ಮಾಯಿಲ್ ಖಾನಿನಲ್ಲಿ ೧ ಈ ಪ್ರಕಾರವಾಗಿ ಮರಣವಾಗಿರುತ್ತದೆ.

ದಿವ್ಯಜ್ಞಾನ ಸಭೆಯ ಮೆಂಬರಾದ ಮಿ॥ ಎಫ್. ಟಿ. ಬ್ರೂಕ್ಸ್‌ರವರು ಕಳೆದ ತಾ॥ ೮ ರಲ್ಲಿ ಕಾಶಿಯಲ್ಲಿರುವ ಆರ್ಯಸಮಾಜದ ಅಧ್ಯಕ್ಷರಾದ ಪಂಡಿತ ಕೇಶವದೇವಶಾಸ್ತ್ರಿಗಳವರಿಂದ ಜ್ಞಾನಸನ್ಯಾಸವನ್ನು ಹೊಂದಿ ಬ್ರಹ್ಮಚಾರಿ ಸನ್ಯಾನಂದ ಎಂಬ ಹೆಸರನ್ನಿಟ್ಟುಕೊಂಡಿರುವರು. ಇವರು ಹಿಂದೂ ವೇದಾಂತ ವಿಚಾರದಲ್ಲಿ ಒಳ್ಳೆಯ ಪರಿಶ್ರಮವುಳ್ಳವರಾಗಿ ಅನೇಕ ಉಪನ್ಯಾಸಗಳನ್ನು ಮಾಡಿ ಸುಪ್ರಸಿದ್ಧರಾಗಿರುವರು. ಈ ಬ್ರಹ್ಮಚಾರಿ ಸನ್ಯಾಸಿಗಳವರು ಜ್ಞಾನಸನ್ಯಾಸವನ್ನು [illegible] ಕಾಲದಲ್ಲಿ ಬಂದು [illegible] ಮಾಡಿ ವೈದಿಕಧರ್ಮಪ್ರಸಾರ ವಿಚಾರದಲ್ಲಿ ಇತರ ಸಮಾಜದವರ ಕೂಡ ಸಂತೋಷದಿಂದ ಸಹಪ್ರವೃತ್ತರಾಗಿರುತ್ತೇವೆಂದು ತಿಳಿಸಿದರು.

ನೀಲಗಿರಿಯಲ್ಲಿ ಕಳೆದ ತಾ॥ ೧೨ ರ ರಾತ್ರಿ ಕೊಂಚ ಹೆಚ್ಚು ಕಡಮೆ ೧೧ ಅಂಗುಲ ಮಳೆಯಾಗಿ ವೆಲ್ಲಿಂಗ್‌ಟನ್ ಕೆರೆಗೆ ಕಟ್ಟಿದ್ದ ಅಣೆಯು ತುಂಬಿ ಏರಿಯೊಡೆದು ನೀರೆಲ್ಲಾ ಹರಿದುಹೋಗಿ ಕೆರೆಯು ಬರಿದಾಗಿರುವುದಲ್ಲದೆ ವೆಲ್ಲಿಂಗ್‌ಟನ್ ಬ್ಲಾಕ್‌ಬ್ರಿಡ್ಜ್ ಎಂಬ ಸೇತುವೆ ಕೊಚ್ಚಿಹೋಗಿರುವುದು. ನದಿಯ ಪ್ರವಾಹದಲ್ಲಿ ಎರಡು ಮಕ್ಕಳು ಮುಳುಗಿ ಹೋದುವು ಮತ್ತೂ ಪೇಟೆಗಳಲ್ಲಿ ಬಹು ಅನಾಹುತವಾಗಿರುವುದು. ಕೈಲಾಸಮಾರ್ಗದಲ್ಲಿ ಮಣ್ಣು ಕೊಚ್ಚಿಹೋಗಿ ಕೂನೂರಿಗೂ ಊಟಕಮಂಡಲಕ್ಕೂ ಮಧ್ಯೆ ಸಾಮಗ್ರಿಗಳು ಒಂದು ಬಂಡಿಯಿಂದ ಮತ್ತೊಂದು ಬಂಡಿಗೆ ಸಾಗಿಸಲ್ಪಡುತ್ತಿದ್ದಿತು. ಆ ದಿವಸ ರಾತ್ರಿ ೮ ಗಂಟೆಗೆ ಮಳೆಯಾರಂಭವಾಗಿ ಬೆಳಗಿನ ಜಾವದ ೪ ಗಂಟೆಯವರೆಗೂ ಒಂದೇಸಮನಾಗಿ ಎಡೆಬಿಡದೆ ಸುರಿದಿತು, ಇಂತಹ ದೊಡ್ಡಮಳೆಯು ಅಲ್ಲಿ ಇದಕ್ಕೆ ಪೂರ್ವ ಯಾವಾಗಲೂ ಆಗಿರಲಿಲ್ಲವು. ಅನೇಕಕಡೆ ಮಳೆಯಿಲ್ಲದೆ ಜನರು ಕಬ್ಬಕ್ಕಿಯಂತೆ ಬಾಯಿ ಬಿಡುತ್ತಿರುವಲ್ಲಿ ನೀಲಗಿರಿಯಲ್ಲಿ ಅಭೂತಪೂರ್ವವಾದ ಮಳೆಯು ಬಂದು ಅನೇಕ ಅನಾಹುತವನ್ನು ಮಾಡಿತು. ದೈವವಿಲಾಸವು ಹೇಗೆಯೋ ಸರಿಯೆಂದು ಯಾರುತಾನೇ ಹೇಳಬಲ್ಲರು!

ಸೀಮೆಯಲ್ಲಿ ಒಬ್ಬ ಮ್ಯಾಜಿಸ್ಟ್ರೇಟನು ಒಬ್ಬ ಯುವಕನಿಗೆ ಅವನ ಅವಿಧೇಯತೆಯ ಗುಣಕ್ಕಾಗಿ ೨೦ ರೂ. ಗಳ ದಂಡವನ್ನೂ ಕೋರ್ಟಿನ ವೆಚ್ಚವನ್ನೂ ವಿಧಿಸಿ ಅವನು ಆ ಹಣವನ್ನು ಕೊಡಲು ಕೈಯಲ್ಲಿಟ್ಟುಕೊಂಡಿರಲಿಲ್ಲವಾಗಿ ಸೆರೆಮನೆಗೆ ಕರೆದುಕೊಂಡು ಹೋಗುವಂತೆ ಅಪ್ಪಣೆಯನ್ನು ಮಾಡಿದನು. ಕೋರ್ಟಿನ ಕೆಲಸವು ಮುಗಿದನಂತರ ಗಂಡನನ್ನು ಅಂಗಡಿಗೆ ಕರೆದುಕೊಂಡು ಹೋಗಲು ಕೋರ್ಟಿಗೆ ಬಂದು ನಿರೀಕ್ಷಿಸಿಕೊಂಡಿದ್ದ ಮ್ಯಾಜಿಸ್ಟ್ರೇಟನ ಹೆಂಡತಿಯು ಆ ಯುವಕ ಅಪರಾಧಿಯನ್ನು ಸೆರೆಮನೆಗೆ ಕಳುಹುವುದು ಕೋಪೋದ್ರೇಕಕರವಾದುದು ಎಂದು ತಾನಾಗಿ ಹೇಳಿದಳು. ಜಡ್ಜಿಯು ಇದನ್ನು ಕೇಳಿ "ಮೌನವಾಗಿರು" ಎಂದು ಹೆಂಡತಿಗೆ ಗದರಿಸಿ ಹೇಳಿದನು. ಆದರೆ ಆಕೆಯು ಮೌನವಾಗಿರದೆ ಹೋದುದರಮೇಲೆ ಗಂಡನಾದ ಮ್ಯಾಜಿಸ್ಟ್ರೇಟನು ಕುಪಿತನಾಗಿ ಹೆಂಡತಿಯನ್ನು ಕುರಿತು "ನೀನು ಸುಮ್ಮನಿರದಿದ್ದರೆ ಅರ್ಥದಂಡವನ್ನು ವಿಧಿಸುತ್ತೇನೆ" ಎಂದು ಹೇಳಿದನು. ಆದರೂ ಹೆಂಡತಿಯು ಸುಮ್ಮನಿರದೆ ಗಂಡನ ಕೂಡ ಚರ್ಚೆಸತೊಡಗಿದಳು. ಆಗ ನ್ಯಾಯಸ್ಥಾನದಲ್ಲೆಲ್ಲಾ ಬಹು ಗದ್ದಲವಾಗಲು, ಮ್ಯಾಜಿಸ್ಟ್ರೇಟನು ಹೆಂಡತಿಗೆ ೩೫ ರೂ. ದಂಡವನ್ನು ವಿಧಿಸಿ, ಆಕೆಯು ಅದನ್ನು ಕೊಡುವುದಿಲ್ಲವೆಂದು ಹಟವಿಡಿದುದರಮೇಲೆ, ೧ ಗಂಟೆಯ ಅವಧಿಯಲ್ಲಿ ದಂಡದ ಮೊಬಲಗನ್ನು ಕೊಡಲು ತಪ್ಪಿದಲ್ಲಿ ಆಕೆಯನ್ನು ಸೆರೆಮನೆಯಲ್ಲಿಡುವಂತೆ ಅಜ್ಞಾಪಿಸಿದನು. ಆಕೆಯು ಬಿಕ್ಕಿಬಿಕ್ಕಿ ಅಳುತ ಸೆರೆಮನೆಗೆ ಹೋಗಿ ಕಡೆಯಲ್ಲಿ ಬ್ಯಾಂಕಿನಲ್ಲಿ ತಾನಿಟ್ಟಿರುವ ಹಣದಲ್ಲಿ ೩೫ ರೂ. ಗಳನ್ನು ತರಿಸಿ ದಂಡಕ್ಕಾಗಿ ಕೊಟ್ಟು ಸೆರೆಯಿಂದ ಮುಕ್ತಳಾಗಿ ಮನೆಗೆ ಹೋದಳು. ಆಗ ಗಂಡನು ತನ್ನ ಕೋರ್ಟಿನ ಮರ್ಯಾದೆಯನ್ನುಳಿಸುವುದಕ್ಕಾಗಿ ಅರ್ಥದಂಡವನ್ನು ವಿಧಿಸಿದೆನೆಂದು ಹೆಂಡತಿಗೆ ಹೇಳಿದನು. ಆಗ ಹೆಂಡತಿಯು ಇನ್ನುಮೇಲೆ ನ್ಯಾಯವಿಚಾರಣೆಯ ಸಂದರ್ಭದಲ್ಲಿ ತಾನು ಕೋರ್ಟಿಗೆ ಪ್ರವೇಶಿಸುವುದಿಲ್ಲವೆಂದು ಪ್ರಮಾಣಮಾಡಿ ಹೇಳಿದಳು. ಇದೆಯೇ ನ್ಯಾಯಪಕ್ಷಪಾತತೆಯು.

ಪತ್ರವ್ಯವಹಾರವು.

ಮುಂಬಯಿ ವೀರಶೈವಾಶ್ರಮ.

ಸಮಸ್ತ ವೀರಶೈವ ಮಹನೀಯರಿಗೆ ವಿನಯಪೂರ್ವಕ ಅರಿಕೆ ಮಾಡಿಕೊಳ್ಳುವದೇನೆಂದರೆ–ಮುಂಬಯಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ವ್ಯವಹಾರಕ್ಕಾಗಿ ಬಂದ ಸದ್ಗೃಹಸ್ಥರಿಗೂ ಸರಕಾರಿ ಕೆಲಸಕ್ಕಾಗಿ ಬಂದ ಮಹನೀಯರಿಗೂ ಊಟಉಪಚಾರಕ್ಕೂ ಇಳಿದುಕೊಳ್ಳಲಿಕ್ಕೂ ಯೋಗ್ಯವಾದ ಸ್ಥಳವಿಲ್ಲದ್ದರಿಂದ ಉಂಟಾಗುವ ಅನನುಕೂಲತೆಗಳನ್ನು ದೂರಮಾಡುವುದಕ್ಕಾಗಿ ಒಂದು ವೀರಶೈವರ ಸಾರ್ವಜನಿಕ ಧರ್ಮಾಲಯವನ್ನು ಕಟ್ಟಿಸುವ ಉದ್ದೇಶದಿಂದ ಮುಂಬಯಿಯಲ್ಲಿ ಪರದೇಶದಿಂದ ಬಂದಿರುವ ವೀರಶೈವ ಅಂಗಡಿಕಾರರ ಆಡಳಿತೆಯ ಕೆಳಗೆ ಶಕೆ ೧೮೩೨ ನೆಯ ಕಾರ್ತಿಕ ಶು ೩೦ ನೇ ಇಸ್ವಿ ದಿವಸ "ಮುಂಬಯಿ ಲಿಂಗಾಯತ ಫಂಡು" ಎಂಬ ಸಂಸ್ಥೆಯು ಶ್ರೀ. ರಾ. ಬ. ಅಪ್ಪಾಸಾಹೇಬವಾರದ ಇವರ ಅಧ್ಯಕ್ಷತೆಯ ಕೆಳಗೆ ಸ್ಥಾಪಿಸಲ್ಪಟ್ಟು ಈ ಸಂಸ್ಥೆಯ ಮೆಂಬರ ಜನರ ಅಂಗಡಿಗಳಲ್ಲಿ ಆದ ಕ್ರಯವಿಕ್ರಯ ಮಾಡಿದ ಮಾಲಿನ ಮೇಲೆ ಮೊದಲು ಸೇಕಡಾ ೩ ಪೈ ಯಂತೆ ಕೆಲವು ದಿವಸಗಳ ಮೇಲೆ ೬ ಪೈ ಗಳಂತೆ ಫಂಡು ವಸೂಲು ಮಾಡುತ್ತಿದ್ದು ಈ ಫಂಡಿನ ಉತ್ಪತ್ತಿಯು ಕೀರ ಅಲ್ಪ ಪ್ರಮಾಣವುಳ್ಳದ್ದಾಗಿದ್ದರಿಂದ ಫಂಡಿನ ಉದ್ದೇಶದ ಕಾರ್ಯವು ಈ ಫಂಡಿನಿಂದಲೇ ನೆರವೇರುವುದು ಅಶಕ್ಯವಾಗಿ ತೋರಿದ್ದರಿಂದ ೧೯೧೦ ನೆಯ ಫೆಬ್ರುವರಿ ತಾ॥ ೮ ರಲ್ಲಿ ಬಾಡಿಗೆಯಿಂದ ತೆಗೆದುಕೊಂಡ ಆಶ್ರಮದಲ್ಲಿ ಶ್ರೀ. ರಾ. ಬ. ಅಪ್ಪಾಸಾಹೇಬವಾರದ ಇವರ ಅಧ್ಯಕ್ಷತೆಯ ಕೆಳಗೆ ಫಂಡಿನ ಜನರಲ್ ಕಮಿಟಿಯು ಕೂಡಿ ವರ್ಗಣಿ ಫಂಡು ಕೂಡಿಸಿ ಆಶ್ರಮಕ್ಕೆ ಸ್ವತಂತ್ರವಾದ ಕಟ್ಟಡವನ್ನು ಕಟ್ಟಿಸಬೇಕೆಂದು ನಿಶ್ಚಯವಾಗಿ ಇಲ್ಲಿಯ ಕೆಲವು ಅಂಗಡಿಯ ಮೆಂಬರ ಜನರು ತಮ್ಮ ಔದಾರ್ಯವನ್ನು ತೋರಿಸಿ ಕೊಟ್ಟಿರುವ ರಕಮಿನ ವಿವರ.—ರಾ. ಬ. ವಾರದ ೫೦೦೦., ಪನ್ನಾಲಾಲ ಬೂಪಚಂದಶೇಟಜಿ ೧೦೦೦., ಬಸವಪ್ರಭಪ್ಪಾ ಅಂಗಾಘಸಲ್ಲಿ ೧೦೦೦, ಚನ್ನಮಲ್ಲಪ್ಪಾ ಮಹಲಿಂಗಪ್ಪಾ ಗೀಜಬಿ. ೨೦೦೦, ಮಹಲಿಂಗಪ್ಪಾ ರುದ್ರಪ್ಪಾ ಅಂಗಾಶಿರೋಳ ೧೦೦೦, ಶಂಕರಪ್ಪಾ ಅಂಗಾಮರಿಗುದ್ದಿ ೧೦೦೦, ಈ ಪ್ರಕಾರ ಮೇಲ್ಕಂಡ ಮಹನೀಯರು ತಮ್ಮ ಉದಾರಾಶ್ರಯವನ್ನು ಕೊಟ್ಟು ಉಳಿದ ವೀರಶೈವ ಮಹನೀಯರಿಗೆ ಮೇಲ್ಪಂಕ್ತಿಯನ್ನು ತೋರಿಸಿರುತ್ತಾರೆ.

ತು. ಹಡಗು ಏನೊಂದು ... ರಿಬರವರೆಗೂ ಪ್ರಯಾಣಮಾಡಿತು. ಆ ದಿನ ರಾತ್ರಿ ೧೧॥ ಗಂಟೆಯ ಹೊತ್ತಿಗೆ ಅಟ್ಲಾಂಟಿಕ್ ಸಾಗರದಲ್ಲಿ ಒಂದು ದೊಡ್ಡ ಹಿಮದಗಡ್ಡೆಗೆ ಈ ಹಡಗು ಬಡಿದಕಾರಣ ಅದಿಯಲ್ಲಿ ಒಡೆದುಹೋದದ್ದು ನೀರು ಒಳನುಗ್ಗುವುದಕ್ಕಾರಂಭಿಸಿತು. ಕೂಡಲೆ ಹಡಗಿಗೆ ಅಪಾಯ ತಟ್ಟಿತೆಂಬ ಸೂಚನೆಯು ಹಡಗಿನಲ್ಲೆಲ್ಲಾ ಪ್ರಸಿದ್ಧಪಡಿಸಲ್ಪಟ್ಟಿತಲ್ಲದೆ, ತಂತಿಯಿಲ್ಲದೆ ವರ್ತಮಾನವನ್ನು ಕಳುಹುವ ಸಾಧನಗಳ ದ್ವಾರಾ ಎಲ್ಲಾ ಕಡೆಗೂ ಸುದ್ದಿಯು ತಿಳುಹಿಸಲ್ಪಟ್ಟಿತು. ೫-೬ ನೂರು ಮೈಲಿಗಳ ದೂರದಲ್ಲಿ ಹೋಗುತ್ತಿದ್ದ ಹಡಗುಗಳಿಗೆಲ್ಲಾ ಆ ಸುದ್ದಿಯು ಹೋಗಲು, ೩-೪ ಹಡಗುಗಳು ಇದರ ಸಹಾಯಕ್ಕೆ ಹೊರಟುವು. ಅವುಗಳಲ್ಲೆಲ್ಲಾ "ಕಾರ್ಫೇಥಿಯಾ" ಎಂಬ ಹಡಗು ಮುಂದಾಗಿ ಬಂದು ಬೆಳಗಿನಜಾವದ ೪ ಗಂಟೆಯ ಹೊತ್ತಿನಲ್ಲಿ ದೋಣಿಗಳಮೇಲೆ ಕುಳಿತು ಚಳಿಯಲ್ಲಿ ಕೊರಗುತ್ತಿದ್ದ ಜನರಿಗೆ ಸಹಾಯಕವಾಯಿತು. ತಾಕಲುಬಿದ ೪ ಗಂಟೆಯ ಕಾಲದೊಳಗಾಗಿ ಟಿಟಾನಿಕ್ ಹಡಗು ಮುಳುಗಿತು. ಅಪಾಯ ಕಾಲದಲ್ಲಿ ರಕ್ಷಣೆಗಾಗಿ ಇರುವ ದೋಣಿಗಳು ೩೦-೪೦ನ್ನು ನೀರಿನಮೇಲೆ ಬಿಟ್ಟು ಟಿಟಾನಿಕ್ಕಿನಲ್ಲಿದ್ದ ಹೆಂಗುಸರು ಮಕ್ಕಳನ್ನು ಮೊದಮೊದಲು ದೋಣಿಗಳಿಗೆ ಸಾಗಿಸುತ್ತಾ ಬಂದರು. ಕ್ಷಣಕ್ಷಣಕ್ಕೆ ಆ ಹಡಗು ವಿಷಮಸ್ಥಿತಿಗೆ ಬಂದಿತು. ಹೆಂಗುಸರು ಮಕ್ಕಳ ರೋದನವು ಹಡಗಿನಮೇಲೆ ಆಗುತ್ತಿದ್ದ ಕರುಣಾರಸಮಯವಾದ ವಾದ್ಯದ ಧ್ವನಿಯೊಡನೆ ಕೂಡಿ ಬಿಜ್ಜಂಡಲವನ್ನೆಲ್ಲಾ ತುಂಬಿ, ಆ ಕರಾಳರಾತ್ರಿಯ ಪ್ರಕೃತಿಯನ್ನು ಅತ್ಯಂತ ಭೀಕರವಾಗಿ ಮಾಡಿದ್ದಿತು. ಹೆಂಗುಸರು ಮಕ್ಕಳು ತಮ್ಮತಮ್ಮ ಪತಿಗಳನ್ನೂ, ತಂದೆಗಳನ್ನೂ, ಅಣ್ಣತಮ್ಮಂದಿರನ್ನೂ ಮೃತ್ಯುಗೃಹವಾಗಿ ಪರಿಣಮಿಸಿದ ಆಹಡಗಿನಲ್ಲೇ ಬಿಟ್ಟು ತಮ್ಮ ಪ್ರಾಣವನ್ನು ಮಾತ್ರ ಉಳುಹಿಕೊಳ್ಳಲು ಮನಸ್ಸು ಬರದೆ ಹಂಬಲಿಸುತ್ತಲೂ ಗೋಳಿಡುತ್ತಲೂ ಇದ್ದ ರೀತಿಯು ಅತ್ಯಂತ ಹೃದಯಭೇದಕವಾಗಿದ್ದಿತು. ಹಡಗಿನ ಎಲ್ಲಾ ಕೆಲಸಗಾರರೂ ಅಧಿಕಾರಿಗಳೂ ಅನೇಕ ಪ್ರಯಾಣಿಕರೂ ಸಹ ಸಾಧ್ಯವಾದಷ್ಟು ಜನರನ್ನು ಹೊರಕ್ಕೆ ಸಾಗಿಸಿ ಅವರನ್ನು ಬದುಕಿಸುವ ಪುಣ್ಯಕಾರ್ಯದಲ್ಲಿ ತೊಡಗಿ, ತಮ್ಮ ಪ್ರಾಣಾಪಾಯಕ್ಕೆ ಸ್ವಲ್ಪವೂ ಅಂಜದೆ ಧೈರ್ಯದಿಂದ ಕೊನೆಯುವರೆಗೂ ಕೆಲಸಮಾಡಿದರು. ಹೀಗೆಯೇ ಬಹುಶಃ ೭೦೦ ಮಂದಿಗಳನ್ನು ದೋಣಿಗಳಿಗೆ ಇಳುಹಿ ಸಾಗಿಸಿದರು. ಅಷ್ಟರವೇಳೆಗೆ ಸಾಧ್ಯವಾಗದೆ ತಪ್ಪಿದ್ದ ೧॥ ಸಾವಿರಕ್ಕೆ ತಲೆ ಹೆಚ್ಚಾದ ಜನರೊಡನೆಯೂ ಅಪಾರವಾದ ವಸ್ತುಗಳೊಡನೆಯೂ ಆ ಹಡಗು ಸಮುದ್ರದಲ್ಲಿ ಸಂಪೂರ್ಣವಾಗಿ ಮುಳುಗಿಹೋಯಿತು. ಬೆಳಗಾಗುವುದರೊಳಗೆ ಈ ಸುದ್ದಿಯು ದಿಕ್ಕುದಿಕ್ಕುಗಳಲ್ಲಿ ವ್ಯಾಪಿಸಿ, ಎಲ್ಲೆಲ್ಲೂ ಹಾಹಾಕಾರವನ್ನು ಹುಟ್ಟಿಸಿತು. ನ್ಯೂಯಾರ್ಕ್ ಪಟ್ಟಣದ ಸಮುದ್ರ ತೀರದಲ್ಲಿ ತಮ್ಮತಮ್ಮ ಜನರ ಗತಿಯೇನಾಯ್ತೆಂದೂ, ಯಾರು ಬದುಕಿದರು? ಯಾರು ಅಳಿದರು? ಎಂದು ತಿಳಿಯಬೇಕೆಂದೂ ನಿಸ್ಸಹಾಯರಾದ ಜನರು ತಂಡತಂಡವಾಗಿ ಬಂದು ನೆರೆಯುವಾಗ, ದುಃಖಮಯವಾದ ಕಾರ್ಫೇಥಿಯಾ ಹಡಗು ದಡವನ್ನು ಸೇರಿತು. ಜನರು ಆತುರದಿಂದ ಒಬ್ಬರಮೇಲೊಬ್ಬರು ಇಳಿದುಬಂದನ್ನೆಲ್ಲಾ ನೋಡಿ ತಮ್ಮವರನ್ನು ಹುಡುಕಿ ಕಾಣದೆಹೋದ ಬಳಿಕ ಮಾಡಿದ ದುಃಖವೂ ಶೋಕವೂ ಪ್ರಲಾಪವೂ ಸಂಕಟವೂ ಅವರ್ಣನೀಯವಾಗಿದ್ದುವು. ಈ ದೊಡ್ಡ ವಿಪತ್ತು ಸಂಭವಿಸಿದ ವಿಷಯವಾಗಿ ಪಾರ್ಲಿಮೆಂಟ್ ಸಭೆಯೊಳಗೆ ಈಗ ಅನೇಕ ಚರ್ಚೆಗಳು ನಡೆಯುತ್ತಿವೆ. ಅನೇಕ ಶ್ರೀಮಂತರ ಮತ್ತು ದರಿದ್ರರ ಕುಟುಂಬಗಳಿಗೆ ಅಮೆರಿಕಾದಲ್ಲೂ ಇಂಗ್ಲೆಂಡಿನಲ್ಲೂ ಪ್ರಾಪ್ತವಾಗಿರುವ ದುಃಖವನ್ನು ವರ್ಣಿಸಲಸದಳವಾಗಿದೆ. ಹಲವು ವಂಶಗಳು ನಿರ್ಮೂಲವಾದುವು. ದೀವಾ ಮಾಡಿಕೊಂಡಿದ್ದ ಅನೇಕ ಧನಾಗಾರಗಳು ನಿರ್ನಾಮವಾಗುವ ಹೊತ್ತು ಬಂದಿರುವುದು. ಎಲ್ಲ ಕಡೆಯಲ್ಲೂ ಧರ್ಮಾತ್ಮರು ಸಭೆಗಳನ್ನು ಕೂಡಿಸಿ ಈ ಮಹಾವಿಪತ್ತನ್ನು ವಿವರಿಸಿ, ವಿಪನ್ನರ ಸಹಾಯಾರ್ಥವಾಗಿ ದ್ರವ್ಯವನ್ನೆತ್ತಿ ಕಳುಹುತ್ತಲಿರುವರು. ಶ್ರೀಮಾನ್ ಜಾರ್ಜ್ ಸಾರ್ವಭೌಮರೂ ಅವರ ಪಟ್ಟಮಹಿಷಿಯವರೂ ಅಲೆಗ್ಸಾಂಡ್ರಾ ಮಹಾರಾಣಿಯವರೂ ಜರ್ಮನ್ ಚಕ್ರವರ್ತಿಯವರೂ ಪ್ರಷ್ಯ ಪ್ರಭುಗಳೂ ಇವರೇ ಮೊದಲಾದ ಅನೇಕ ದೇಶಾಧಿಪತಿಗಳು ತಮ್ಮ ಅನುತಾಪವನ್ನು ತಿಳುಹಿಸಿರುವುದಲ್ಲದೆ ವಿಪನ್ನರ ಸಹಾಯದ ಧನನಿಧಿಗೆ ಸಹಾಯವನ್ನೂ ಮಾಡಿರುವರು. ಈಗಾಗಲೇ ಎಷ್ಟೋ ಲಕ್ಷಾಂತರ ರೂ. ಗಳು ಕೂಡಿರುವುವು. ಕೋಟಿಗಟ್ಟಲೆ ಸಹಾಯಮಾಡಿದರೂ ಈ ಮಹಾವಿಪತ್ತಿನಿಂದಾದ ನಷ್ಟವನ್ನು ತುಂಬುವುದು ಅಸಾಧ್ಯವಾಗಿರುವುದು. ಅಪಾರವಾದ ಸೊತ್ತುಗಳ ಮತ್ತು ಅನರ್ಘವಾದ ಪ್ರಾಣಗಳ ಅಪಾಯವನ್ನುಂಟುಮಾಡಿದ ಈ ಮಹಾವಿಪತ್ತು, ಸಮುದ್ರಯಾನವು ಎಷ್ಟು ಭೀಕರವಾದುದೆಂಬ ಯೋಚನೆಯನ್ನು ಸರ್ವರಿಗೂ ಹುಟ್ಟಿಸುತ್ತಲಿದೆ. ಪೂರ್ವದಲ್ಲಿದ್ದ ಪ್ರಯಾಣದ ಅನನುಕೂಲತೆಗಳನ್ನು ತಪ್ಪಿಸಿ ಯಾವ ಸೌಕರ್ಯಾದಿ ಸಾಧನಗಳು ಜಗತ್ತಿಗೆ ಆಶ್ಚರ್ಯವನ್ನು ಹುಟ್ಟಿಸಿ ಹೆಸರುಗೊಂಡಿರುವುವೋ ಅಂತಹ ಉಪಾಯಗಳೇ ಹೀಗೆ ಒಂದೊಂದು ಸಲ ತಾಳಿಕೊಳ್ಳಲಾಗದಷ್ಟು ಅಪಾಯವನ್ನು ಉಂಟುಮಾಡಿ ಜಗತ್ತಿಗೆ ದುಃಖಾತಿರೇಕವನ್ನು ಒದಗಿಸುವುವು.

ಜೇಂಸೆಟ್ಜಿ ತಾತಾಯವರ ಸ್ಮಾರಕಚಿಹ್ನೆ.

ಮಹನೀಯರಾದ ಜೇಂಸೆಟ್ಜಿ ತಾತಾರವರು ತೀರಿಹೋಗಿ ಇಲ್ಲಿಗೆ ೮ ವರ್ಷಗಳಾದುವು. ಅವರು ಗತಿಸಿದ ಕೂಡಲೇ ಅವರ ಚಿರಸ್ಮರಣಾರ್ಥವಾಗಿ ಒಂದು ಲೋಹ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಬೊಂಬಾಯಿ ನಗರದ ಜನರು ಯೋಚಿಸಿ, ಆಗಲೇ [illegible] ಹಣವನ್ನು ಕೂಡಿಸಿ ಪ್ರತಿಮೆಯನ್ನು ಸ್ಥಾಪಿಸಿದರು. ಅದರ ಮುಸುಕನ್ನು ತೆಗೆಯುವ ಮಹೋತ್ಸವವನ್ನು ಕಳೆದ ತಾ|| ೧೧ ರ ದಿವಸ ಬೊಂಬಾಯಿ ಗೌರ್ನರವರು ಆಚರಿಸಿದರು. ಆಗ ಅವರು ಮಾಡಿದ ತಾತಾರವರ ಗುಣಕಥನವು ಸರ್ವರಿಗೂ ಉಪದೇಶಕರವಾಗಿರುತ್ತವೆ. ಅದೇನೆಂದರೆ— ಈ ತಾತಾರವರು ೧೮೭೭ ನೇ ವರ್ಷದಲ್ಲಿ ನಾಗಪುರದೊಳಗೆ 'ಎಂಪ್ರೆಸ್ ಮಿಲ್' ಎಂಬ ಹತ್ತಿಯ ಕಾರ್ಖಾನೆಯನ್ನು ಸ್ಥಾಪಿಸಿದರು. ಇವರು ಪ್ರತ್ಯಕ್ಷವಾಗಿಯೇ ಲಾಂಕಷೈರಿಗೆ ಹೋಗಿ, ಅನೇಕವಾಗಿ ವಿಚಾರಮಾಡಿ, ಲ್ಯಾಂಕಾಷೈರಿನ ಉದ್ಯೋಗಿಗಳನ್ನು ಅಲ್ಲಿಂದಲೇ ಕರೆತಂದು ಅವರ ಮೂಲಕವಾಗಿ ಈ ಕಾರ್ಖಾನೆಯ ಕೆಲಸವು ಸುಸೂತ್ರವಾಗಿ ನಡೆಯುವಂತೆ ಮಾಡಿದರು. ಭರತಖಂಡದಲ್ಲೆಲ್ಲಾ ಆ ಕಾರ್ಖಾನೆಯಷ್ಟು ಸಮನಾಗಿ ನಡೆಯಿಸಲ್ಪಡುತ್ತಿರುವುದಾಗಲಿ, ಅದರಷ್ಟು ಸಂಪಾದನೆ ಮಾಡಿಕೊಡುವುದಾಗಲಿ ಬೇರೊಂದು ಕಾರ್ಖಾನೆಯಾವುದೂ ಇಲ್ಲ. ಇವರ ಆ ಕಾರ್ಖಾನೆಯು ೩೩ ವರ್ಷಗಳ ಕಾಲದಲ್ಲಿ ಅದಕ್ಕಾಗಿ ಹಾಕಿದ ಮೂಲಧನದ ೧೨ ರಷ್ಟಕ್ಕಿಂತಲೂ ಹೆಚ್ಚಾಗಿಯೇ ಸಂಪಾದಿಸಿ ಕೊಟ್ಟಿರುವಿಕೆಯು ಕಾರ್ಖಾನೆಗಳ ಚರಿತ್ರದಲ್ಲೇ ಅದೃಷ್ಟವಾದ ಅಂಶವಾಗಿರುತ್ತದೆ. ಅಲ್ಲದೆ ಇವರು ಉಕ್ಕಿನ ಕೈಗಾರಿಕೆಯೊಂದನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿ, ಅದಕ್ಕಾಗಿ ಶೋಧಕರನ್ನು ಅನ್ಯದೇಶಗಳಿಂದ ಕರೆತರಿಸಿ, ಈ ದೇಶದ ನಾನಾ ಭಾಗಗಳಿಗೆ ಕಳುಹಿಸಿ, ಯೋಗ್ಯವಾದ ಸ್ಥಲವನ್ನು ಗೊತ್ತುಮಾಡಿಸಿ, ಕಡೆಗೆ ಮಧ್ಯಪ್ರಾಂತದ ಸಾಕ್ಚಿ ಯೆಂಬ ಸ್ಥಳದಲ್ಲಿ ಆ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಪ್ರಯತ್ನಮಾಡಿದರು. ಆ ಕೆಲಸವು ಸರ್ವಸನ್ನಾಹಗೊಂಡು ಕಾರ್ಯಾರಂಭವಾಗುವುದನ್ನು ಮಿ|| ತಾತಾರವರು ತಮ್ಮ ಕಣ್ಣಿನಿಂದ ನೋಡುವುದಕ್ಕೆ ಮುಂಚೆ ಪರಲೋಕವಾಸಿಗಳಾಗಿ ಹೋದರೂ ಅವರ ಮಕ್ಕಳು ತಮ್ಮ ತಂದೆಯ ಸಂಕಲ್ಪವನ್ನು ನೆರವೇರಿಸಿದರು. ಆ ಕಾರ್ಖಾನೆಯಲ್ಲಿ ಈಗ ಉಕ್ಕು ಸಿದ್ಧಮಾಡಲ್ಪಡುತ್ತಿದೆ. ಅಲ್ಲಿ ಅಣಿಯಾಗುವ ಸಾಮಾನುಗಳನ್ನೆಲ್ಲಾ ಸರ್ಕಾರದವರೇ ಕೊಂಡುಕೊಳ್ಳುತ್ತಾರೆ. ದೇಶೀಯರ ದ್ರವ್ಯದಿಂದಲೇ ಸ್ಥಾಪಿಸಲ್ಪಟ್ಟು ನಡೆಯುತ್ತಿರುವ ಈ ದೇಶದ ಕೈಗಾರಿಕೆಯ ಕಾರ್ಖಾನೆಯಲ್ಲಿ ಇದೇ ಅಗ್ರಗಣ್ಯವಾದುದು. ಇದಲ್ಲದೆ ಬೊಂಬಾಯಿಗೆ ೫೦ ಮೈಲುಗಳ ದೂರದಲ್ಲಿ ೧೮೦೦ ಅಡಿಗಳ ಎತ್ತರವಾಗಿರುವ ಲೋನಾವಲಾ ಬೆಟ್ಟಗಳ ಮೇಲೆ ಸುರಿಯುವ ಮಳೆಯ ನೀರನ್ನೆಲ್ಲಾ ಒಂದು ಕೆರೆಯಲ್ಲಿ ಸೇರಿಸಿ, ಅದರ ದುಮುಕುವಿಕೆಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ, ಅದನ್ನು ಬೊಂಬಾಯಿನ ಕಾರ್ಖಾನೆಯವರು ಉಪಯೋಗಿಸಿಕೊಳ್ಳಬೇಕೆಂಬ ಸಂಕಲ್ಪವು ಮೊಟ್ಟಮೊದಲು ಈ ತಾತಾರವರ ಮನಸ್ಸಿನಲ್ಲಿಯೇ ಹುಟ್ಟಿತು. ಅದು ಪೂರ್ಣವಾಗುವುದನ್ನು ಕೂಡ ತಾತಾರವರು ನೋಡದೆ ಹೋದರೂ ಅವರ ಮಕ್ಕಳು ಅದಕ್ಕೂ ಕೈಹಾಕಿ ಕೆಲಸವನ್ನಾರಂಭಿಸಿದರು. ಅದೂ ಇನ್ನು ಒಂದು ವರ್ಷದೊಳಗಾಗಿ ಸಿದ್ಧವಾಗುತ್ತದೆ. ಇದೂ ಅಲ್ಲದೆ ಸ್ವದೇಶದ ಕೈಗಾರಿಕೆಗಳು ಉನ್ನತಸ್ಥಿತಿಗೆ ಬರಬೇಕೆಂಬ ಉದ್ದೇಶದಿಂದಲೇ ಶಾಸ್ತ್ರೀಯಶಿಕ್ಷಣವನ್ನು ತಮ್ಮ ದೇಶದ ಯುವಕರಿಗೆ ಉಂಟುಮಾಡಿಕೊಡಬೇಕೆಂದು ಯೋಚಿಸಿ, ಬೆಂಗಳೂರಿನಲ್ಲಿ ಪ್ರಾಕೃತಿಕ ಶಾಸ್ತ್ರಶೋಧನಾಲಯವೊಂದನ್ನು ಸ್ಥಾಪಿಸುವುದಕ್ಕಾಗಿ ೩೦ ಲಕ್ಷ ರೂ. ಗಳನ್ನು ಮಿ|| ತಾತಾರವರು ದಾನಮಾಡಿ, ತಮ್ಮ ಅಸಾಧಾರಣವಾದ ದೇಶಭಕ್ತಿಯನ್ನು ವ್ಯಕ್ತಪಡಿಸಿದರು. ಇವರು ತಮ್ಮ ಮನಸ್ಸಿನಲ್ಲಿ ತೋರಿದ ಯಾವ ವಿಷಯವನ್ನಾದರೂ ಅತ್ಯಂತ ದೂರದವರೆಗೂ ಆಲೋಚಿಸುವುದೂ, ಅದರ ಸಂಬಂಧವಾದ ಸಾಧಕಬಾಧಕಗಳನ್ನು ಕುರಿತು ತಮಗೆ ಪರಿಚಿತರಾದ ಇತರರೊಡನೆಲ್ಲಾ ಆಲೋಚಿಸುವುದೂ, ಸ್ವಾನುಭವವನ್ನು ಸಂಪಾದಿಸುವುದಕ್ಕಾಗಿ ಇತರ ದೇಶಗಳಿಗೆ ಪ್ರತ್ಯಕ್ಷವಾಗಿ ಹೋಗಿ, ತಾವು ಸ್ಥಾಪಿಸಬೇಕೆಂದು ಸಂಕಲ್ಪಮಾಡಿರುವಂತಹ ಕಾರ್ಯಗಳನ್ನು ಎಲ್ಲಿ ಯಾರು ಯಾವ ವಿಧವಾಗಿ ನಡೆಯಿಸುತ್ತಿದ್ದಾರೋ ಅದನ್ನು ಕಣ್ಣಾರ ನೋಡಿ ವಿಷಯಜ್ಞಾನವನ್ನು ಮಾಡಿಕೊಂಡು ಬರುವುದೂ, ಹಾಗೆ ಬರುವಾಗ್ಗೆ ತಮ್ಮ ಸಂಕಲ್ಪವನ್ನು ನೆರವೇರಿಸುವುದಕ್ಕೆ ತಕ್ಕ ಸಾಮರ್ಥ್ಯವುಳ್ಳ ಪಾಶ್ಚಾತ್ಯರನ್ನು ತಮ್ಮ ಸಂಗಡಲೇ ಕರೆದುಕೊಂಡು ಬಂದು, ಅವರ ಮೂಲಕವಾಗಿ ಚೆನ್ನಾಗಿ ಪರಿಶೋಧನಗೊಳಿಸಿ, ತಮ್ಮ ಸಂಕಲ್ಪವು ಜಯಶೀಲವಾಗಿ ನೆರವೇರುವುದೆಂದು ನಿರ್ಧಾರವಾದ ಬಳಿಕ, ಕಾರ್ಯವನ್ನಾರಂಭಿಸಿ ಅದರಲ್ಲಿನ ಪ್ರತಿಯೊಂದು ಸಣ್ಣದೊಡ್ಡ ಸ್ಥಾಯಿಗಳನ್ನೂ ನೋಡುತ್ತ, ನಿಬ್ಬಾಣಗಳ ಕಡೆಗೂ ಲಕ್ಷ್ಯವಿಟ್ಟು ಆ ಕಾರ್ಯವು ಜಯೋನ್ಮುಖವಾಗುವವರೆಗೂ ಪಾಡುಪಡುತ್ತಿರುವುದೂ ಸಹ ಅವರ ಮುಖ್ಯ ಲಕ್ಷಣವಾಗಿದ್ದುವು. ಹೀಗೆ ಕೆಲಸಮಾಡತಕ್ಕವರು ಈ ಭರತಖಂಡದಲ್ಲಿ ಅನೇಕರು ಬೇಕಾಗಿದೆ. ಅಂತರಂಗ ಪರಿಶುದ್ಧ ಗುಣವಿಷಯದಲ್ಲಿ ತಾತಾರವರಂಥ ನಿಷ್ಕಾಮ ಸ್ನೇಹಿತನು ಮತ್ತೊಬ್ಬನು ದೊರೆಯಲಾರನು. ಅತನು ನಾನಾ ದೇಶಗಳನ್ನು ಸಂಚರಿಸಿ ಬಹು ... ಅತನನ್ನು ಅತ್ಯಂತ ಜನಪ್ರಿಯನನ್ನಾಗಿಯೂ, ಅನೇಕ ಸಂಗತಿಗಳ ಪರಿಚಯದಿಂದ ಪ್ರೀತಿಯನ್ನೂ ಸ್ನೇಹಿತನನ್ನಾಗಿ ಮಾಡಿದ್ದುವು. ಅತನ ಜೀವಿತವು ಪೂರ್ಣವಾಗಿ ಜಯಶೀಲವಾದುದು. ಅಂತಹ ಜಯವಾದರೂ ಅದೃಷ್ಟವಶಾತ್ ಲಭಿಸಿದುದಲ್ಲ. ಅದು ಅತನ ದೂರದೃಷ್ಟಿ, ನಿರಂತರ ಪರಿಶ್ರಮ, ನಿಷ್ಕಳಂಕವಾದ ದಕ್ಷತೆ, ಕೈಹಾಕಿದ ಕೆಲಸವನ್ನು ಬಿಡದೆ ಹಿಡಿದು ಪೂರೈಸುವುದು—ಈ ಸುಗುಣಗಳಿಂದಲೇ ಲಭಿಸಿದುದು. ಜಯಶೀಲರೆನಿಸಿಕೊಳ್ಳುವುದು ತಾತಾರವರ ಸದ್ಗುಣಸಂಪತ್ತಿನ ಒಂದು ಮುಖ್ಯ ಚಿಹ್ನವಾಗಿದ್ದಿತು. ಐಶ್ವರ್ಯವು ಅತನಿಗೆ ಸಂಪೂರ್ಣವಾಗಿ ದೊರೆತಿದ್ದಿತು. ಅದರೂ ಅತನು ತಾನು ಬೆಳೆದ ರೀತಿಯಂತೆಯೇ ಕಷ್ಟಕಲೆಯುವರಿಗೂ ಡಾಂಭಿಕತೆಯಿಲ್ಲದೆ ಸಮ್ಮತಿಯುಳ್ಳ ದೊಡ್ಡಮನುಷ್ಯನಾಗಿಯೇ ಇದ್ದನು. ಸಭೆಗಳಲ್ಲಿ ನಿಂತು ದೊಡ್ಡ ಪ್ರಸಂಗಗಳನ್ನು ಮಾಡಿ ವಾಗ್ಮಿಯೆನಿಸಿಕೊಳ್ಳಲು ಪ್ರಯತ್ನಿಸಿದವನಲ್ಲ. ಅತನು ಗೌರವಪ್ರಶಸ್ತಿಗಳಿಗಾಗಲಿ, ಉನ್ನತಪದವಿಗಳಿಗಾಗಲಿ ಅಪೇಕ್ಷಿಸಿದವನಲ್ಲ. ಅತನು ತನ್ನ ಜನ್ಮಭೂಮಿಯನ್ನು ಅವಿಚಾರದ ಪ್ರೇಮದಿಂದ ಪ್ರೀತಿಸಿದ ಮಹಾಪುರುಷನು, ಎಂದು ಸರ್ ಲಾರೆನ್ಸ್ ಜಂಕಿನ್ಸ್‌ರವರು ೭ ವರ್ಷಗಳ ಹಿಂದೆ ನುಡಿದಿದ್ದರು. ಇಂಥ ಮಹನೀಯನ ಜೀವನಚರಿತ್ರವು ಭಾರತ ಯುವಕರ ಪ್ರೋತ್ಸಾಹಾರ್ಥವಾಗಿ ಬರೆಯಲ್ಪಡಬೇಕೆಂದೂ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪಾಠಗಳಲ್ಲಿ ಅದೂ ಒಂದು ಪಠನೀಯ ಪುಸ್ತಕವಾಗುವುದು. ತಾನು ಕೈಹಿಡಿದಿರುವುದೊಂದು ಸಣ್ಣ ದೊಡ್ಡ ಕಾರ್ಯವನ್ನಾದರೂ ಪರಿಪೂರ್ಣವಾದ ಮನಸ್ಸಿನಿಂದಲೂ ಪ್ರಯತ್ನದಿಂದಲೂ ಮಾಡಿ ಮುಗಿಸಬೇಕೆಂಬುದು ಅತನ ದೀಕ್ಷಾಬದ್ಧ ಪ್ರತಿಜ್ಞೆಯಾಗಿದ್ದುದೇ ಅತನ ಜೀವಿತವು ಅಷ್ಟು ಜಯಶಾಲಿಯಾಗಿ ಪರಿಣಮಿಸಿದುದಕ್ಕೆ ಮುಖ್ಯಕಾರಣವು. ದೇಶಭಕ್ತಿಯೇ ಅತನ ಪ್ರತಿಯೊಂದು ಕಾರ್ಯಾಚರಣಕ್ಕೂ ಮೂಲಬೀಜವಾಗಿದ್ದಿತು. ಪಾಶ್ಚಾತ್ಯರು ಸಹ ಆಶ್ಚರ್ಯಪಡುವಂತೆ ವಿಶೇಷವಾದ ಅನುಭವದಿಂದ ಕೆಲವು ಸಂಗತಿಗಳನ್ನು ಕುರಿತು ಅತನು ಮಾತನಾಡುವವನಾಗಿದ್ದನು. ಹೊರಡಿಬ್ಬನ ಮೆರುಗುಗಳು ಅತನನ್ನು ಯಾವಾಗಲೂ ಮೋಸಪಡಿಸಲಾರದಾಗಿದ್ದುವು. ತನಗೆ ಅವಶ್ಯಕರಾದ ಮನುಷ್ಯರನ್ನು ಆರಿಸಿಕೊಳ್ಳುವುದರಲ್ಲಿ ಅತನು ಎಷ್ಟೋ ಕುಶಾಗ್ರಬುದ್ಧಿಯನ್ನು ಉಪಯೋಗಿಸುತ್ತಿದ್ದನು. ಈ ಭರತಖಂಡದಲ್ಲಿ ಇದುವರೆಗೆ ಎಷ್ಟೋಮಂದಿ ಮಹನೀಯರು ಜನಿಸಿದ್ದಾರೆ, ಆದರೆ ಪಾಶ್ಚಾತ್ಯದೇಶದ ಶಕ್ತಿಸಾಧನಗಳನ್ನು ಪೂರ್ವದೇಶದ ಉಪಯೋಗಾರ್ಥವಾಗಿ ವಿನಿಯೋಗಿಸಿದವರಲ್ಲಿ ಮಿ|| ತಾತಾರವರಿಗಿಂತಲೂ ದೊಡ್ಡಮನುಷ್ಯನು ಬೇರೊಬ್ಬನಿಲ್ಲ. ಈ ದಿವಸ ನಾನು ಮುಸುಗನ್ನು ತೆಗೆಯುವ ಅತನ ಸ್ಮಾರಕಚಿಹ್ನವು ಈ ದೇಶದಲ್ಲಿ ಹಾಲೀ ಕಾಲದವರ ಭವಿಷ್ಯತ್ಸಂತತಿಗೂ, ಬೊಂಬಾಯಿ ಅಧಿಪತ್ಯದ ಪ್ರಜೆಗಳಿಗೂ, ಮತ್ತು ಭರತಖಂಡದ ಸಕಲ ಜನರಿಗೂ ಸನ್ಮಾನಯೋಗ್ಯನಾದ ಒಬ್ಬಾನೊಬ್ಬ ಮಹಾಪುರುಷನ ಜೀವನಚರಿತ್ರವನ್ನು ಸ್ಮರಣೆಗೆ ತರುತ್ತಲಿರುತ್ತದೆ; ಒಬ್ಬ ನಿಜವಾದ ದೇಶಭಕ್ತನ ಉದಾರಚರಿತ್ರವನ್ನು ಭಾರತೀಯ ಪ್ರಜೆಗಳ ಮನಸ್ಸಿನಲ್ಲಿ ಪವಿತ್ರವಾಗಿ ಸ್ಮರಿಸುವಂತೆ ಮಾಡುತ್ತದೆ. ಇತರರೆಲ್ಲರಿಗೂ ಯಾವಾಗಲೂ ಅತನ ಸಚ್ಚರಿತ್ರವೂ ನಿರಂತರ ಪರಿಶ್ರಮವೂ, ದೂರಾಲೋಚನೆಯೂ ಮಾರ್ಗದರ್ಶಕವಾಗಿರುತ್ತವೆ.

ಭರತಖಂಡದ ವಿದ್ಯಾಭ್ಯಾಸ.

೧೯೧೦—೧೧ ನೆಯ ವರ್ಷದಲ್ಲಿ ಭರತಖಂಡದೊಳಗೆಲ್ಲಾ ಸರ್ಕಾರಕ್ಕೆ ಸೇರಿದ ಶಾಲೆಗಳಲ್ಲಿ ಓದುತ್ತಿದ್ದ ಹುಡುಗರ ಸಂಖ್ಯೆ ೬೯೩೦೦೯೮. ಅವರಲ್ಲಿ ಬಾಲಿಕೆಯರು ೭೯೩೬೮೬. ಒಟ್ಟು ವಿದ್ಯಾಶಾಖೆಗಾಗಿ ಆದ ವೆಚ್ಚವು ೭೧೯೪೯೦೦೦ ರೂ. ಬೊಂಬಾಯಿ ಅಧಿಪತ್ಯವೊಂದರಲ್ಲಿ ಇರುವ ಸರ್ಕಾರದ ಶಾಲೆಗಳು ೧೧೦೩೭. ಇವುಗಳಲ್ಲಿ ಬಾಲಿಕಾ ಪಾಠಶಾಲೆಗಳು ೧೧೦೧. ಅವುಗಳಲ್ಲಿ ಓದುವ ಬಾಲಿಕೆಯರು ೮೩೨೪೪. ಆ ಅಧಿಪತ್ಯದಲ್ಲೆಲ್ಲಾ ವಿದ್ಯಾಶಾಖೆಯ ವೆಚ್ಚ ೧೨೦೦೦೦೦ ರೂ. ಮದ್ರಾಸು ಅಧಿಪತ್ಯದಲ್ಲಿ ಬಾಲಕರ ಶಾಲೆಗಳು ೩೩೮೦೭. ಬಾಲಿಕೆಯರ ಶಾಲೆಗಳು ೯೦೦. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೩೧೫೬೪೭. ಒಟ್ಟು ವೆಚ್ಚವು ೧೨೩೪೮೦೦೦. ಬಂಗಾಳ ಅಧಿಪತ್ಯದಲ್ಲಿರುವ ಶಾಲೆಗಳು ೩೩೮೩೭. ಎಲ್ಲ ಶಾಲೆಗಳಲ್ಲಿ ಓದುವವರ ಸಂಖ್ಯೆ ೧೩೧೨೩೯. ಒಟ್ಟು ವೆಚ್ಚವು ೧೩೬೨೧೦೦ ರೂ. ಪೂರ್ವ ಬಂಗಾಳ ಅಧಿಪತ್ಯದಲ್ಲಿರುವ ಶಾಲೆಗಳು ೭೪೯೦. ಓದುವವರು ೯೧೫೦೩೭. ಒಟ್ಟು ವೆಚ್ಚವು ೧೨೭೬೩೦೦೦ ರೂ. ಸಂಯುಕ್ತಾಧಿಪತ್ಯದಲ್ಲಿರುವ ಶಾಲೆಗಳು ೯೯೬. ಓದುವ ಬಾಲಿಕೆಯರು ೩೧೪೬೨ ಒಟ್ಟು ವೆಚ್ಚವು ೯೭೨೯೦೦೯ ರೂ. ಪಂಜಾಬು ಅಧಿಪತ್ಯದಲ್ಲಿ ೬೬೩೦ ಶಾಲೆಗಳು, ೩೬೩೬೦ ವಿದ್ಯಾರ್ಥಿಗಳು, ಒಟ್ಟು ವೆಚ್ಚವು ೩೪೩೭೦೦೦ ರೂ. ಬರ್ಮಾದಲ್ಲಿ ೬೯೯೫ ಶಾಲೆಗಳು, ೩೨೯೯೭೦ ವಿದ್ಯಾರ್ಥಿಗಳು, ಒಟ್ಟು ವೆಚ್ಚವು ೫೩೩೩೦೦೦ ರೂ. ಮಧ್ಯಪ್ರಾಂತದಲ್ಲಿ ೩೮೯೦ ಶಾಲೆಗಳು, ೩೬೨೨೩ ವಿದ್ಯಾರ್ಥಿಗಳು, ಒಟ್ಟು ವೆಚ್ಚವು ೩೮೦೯೦೦೦ ರೂ. ...

Supplement to to-day's issue.

ಇದನ್ನು ತಪ್ಪದೆ ಸ್ನೇಹಿತರಿಗೆ ದಯಮಾಡಿ ತೋರಿಸ ಬೇಕು.

ಹಿಂದು ದೇಶದ ಎಲ್ಲಾ ಭಾಗಗಳಲ್ಲಿಯೂ, ಸಿಲೋನ್, ಇಟಲಿ,
ಗ್ರೇಟ್ ಬ್ರಿಟನ್, ಬ್ರಹ್ಮದೇಶ, ಅರಬಸ್ಥಾನ, ಚೀನಾ, ಆಫ್ರಿಕಾ.
ಮತ್ತು ಆಸ್ಟ್ರೇಲಿಯಾ ಪರ್ಯಂತ ವ್ಯಾಪಿಸಿ ಏಕ ರೂಪದಿಂದ
ಹೊಗಳಿಸಿ ಕೊಳ್ಳಲ್ಪಟ್ಟ

ಅದ್ಭುತ ಶಕ್ತಿಯುಳ್ಳ
ಮದನ ಮಂಜರೀ ಮಾತ್ರೆಗಳು.

ಮದನಮಂಜರಿ
MADAN-MANJARI-PILLS

ಸರ್ವಟಾನಿಕ್ಕು ಗಳಿಗೂ ಮಹಾರಾಣಿ.

1. ಕೆಟ್ಟು ಹೋದರಕ್ತವನ್ನು ಶುದ್ಧಿಮಾಡಿ, ಇದನ್ನು ವೃದ್ಧಿಮಾಡಿ ಗಟ್ಟಿಪಡಿಸಿ, ಶರೀರಕ್ಕೆಲ್ಲಾ ಅಸಾಧಾರಣ ಶಕ್ತಿಯನ್ನು ಕಾಂತಿಯನ್ನು ಕೊಡುವದರಲ್ಲಿಯೂ, ಬಿಳುಪಾದ ಮುಖವನ್ನು ಕೆಂಪು ಮತ್ತು ಗುಲಾಬಿಯ ಬಣ್ಣಕ್ಕೆ ತಿರುಗಿಸುವದರಲ್ಲಿಯೂ ಮದನ ಮಂಜರೀ ಮಾತ್ರೆಗಳು ಒಂದು ಅಪೂರ್ವವಾದ ಸುರಕ್ಷಿತ ಉಪಾಯವಾಗಿವೆ.

2. ಮದನ ಮಂಜರೀ ಮಾತ್ರೆಗಳು ಸಡಲಿ ಬಲಹೀನವಾದ ನರಗಳಿಗೆ ದಾರ್ಢ್ಯವನ್ನು ಬಲವನ್ನು ಕೊಡುವದರಲ್ಲಿಯೂ, ಅಕಾಲದಲ್ಲಿ ಪ್ರಾಪ್ತವಾಗುವ ವಾರ್ಧಿಕ್ಯವನ್ನು ತಡೆದು ಶಾಶ್ವತವಾದ ಪುಂಸತ್ವವನ್ನು ಕೊಡುವದರಲ್ಲಿಯೂ ಸಾಟಿಯಿಲ್ಲದವು.

3. ಮದನಮಂಜರೀ ಮಾತ್ರೆಗಳು ಸ್ತ್ರೀಯರಿಗೆ ಉಂಟಾಗುವ ಸಕಲ ವಿಧವಾದ ರೋಗಗಳನ್ನು ಪರಿಹರಿಸಿ, ಅತ್ಯಾರ್ತವ, ಅಲ್ಪಾರ್ತವ ಮುಂತಾದ ದೂಷಿತ ರಜಸ್ರಾವವನ್ನು ವಿದ್ಯುಚ್ಛಕ್ತಿಯಹಾಗೆ ಆಶ್ಚರ್ಯಕರವಾಗಿ ಕ್ರಮಪಡಿಸುವ ದೈವಿಕ ವರಪ್ರಸಾದವು.

4. ಬಾಲ್ಯದಲ್ಲಿ ಬುದ್ಧಿಯಿಲ್ಲದೆ ಕೆಟ್ಟಮಾರ್ಗಗಳಲ್ಲಿ ಬಿದ್ದು ಬರಮಾಡಿಕೊಂಡ ಯೌವನ ಪುರುಷರ ಮರ್ಮಸ್ಥಾನ ರೋಗಗಳನ್ನು ... ಗ್ನಪಿಸಿ, ಅವರಿಗೆ ನಿಜವಾದ ಮತ್ತು ...

ಮದನ ಮಂಜರೀ ಮಾತ್ರೆಗಳ

ಆಶ್ಚರ್ಯಕರವಾದ ಮತ್ತು ದಿವ್ಯ ಗುಣಗಳನ್ನು ಕುರಿತು ನಾವು ಕೋರದಲೇ ಕಳುಹಿಸಲ್ಪಟ್ಟ ಸಹಸ್ರ ಸಂಖ್ಯೆಗಳಾದ ಯೋಗ್ಯತಾ ಪತ್ರಿಕೆಗಳಲ್ಲಿ ಚುನಾಯಿಸಲ್ಪಟ್ಟ ಸಾರಾಂಶಗಳು.

ನಿಮ್ಮ ಮದನಮಂಜರೀ ಮಾತ್ರೆಗಳು ಗುಪ್ತ ರೋಗಗಳನ್ನು ನಿವರ್ತಿ ಮಾಡುವ ದಿವ್ಯಶಕ್ತಿಯು ಅವಕ್ಕೆ ಅದೆ ಯೆಂದು ತೋರಿಸಿದವು. ಅವು ನನ್ನ ಗುಪ್ತ ರೋಗವನ್ನು ಆ ಮೂಲಾಗ್ರವಾಗಿ ನಿವರ್ತಿ ಮಾಡಿದವು.

ಆರ್. ಬಿ. ಸುಬ್ರಹ್ಮಣ್ಯಂ,
ಪಿಲಂಗುಡಿ, ಹರಿದ್ವಾರ ಮಂಗಲಂ,
ತಂಜಾವೂರು.

ನಿಮ್ಮ ಮದನ ಮಂಜರೀ ಮಾತ್ರೆಗಳಿಗೆ ಪಿಟ್ಟ ಪ್ರಕೃತಿಗಿರುವ ಗುಣಗಳೆಲ್ಲವು ಇವೆ. ಈ ಅದ್ಭುತಕಲ್ಪನಾಶಕ್ತಿಗಾಗಿ ಭಗವಂತನ ಆಶೀರ್ವಾದ ನಿಮಗೆ ಸಂಪೂರ್ಣವಾಗಿರಲಿ.

ಪಂಡಿತ ಕಾಲಿದಾಸ ಮಿಶ್ರ,
ಶಿಲ್ಲಾಂಗು, ಆಸಾಮ.

ನಿಮ್ಮ ಮದನ ಮಂಜರಿ ಮಾತ್ರೆಗಳ ಗುಣವನ್ನು ಕುರಿತು ಪ್ರಶಂಸೆ ಮಾಡಲು ನನಗೆ ಶಬ್ದಗಳು ಸಿಕ್ಕುವದಿಲ್ಲವು.

ಅನಂತ ಮುಕುಂದ. ಜೋಷಿ,
ಜಂಗಿನ್ಯಾಂ. ಅಹಮದ್ನಗರ.

ನಿಮ್ಮ ಮದನ ಮಂಜರೀ ಮಾತ್ರೆಗಳು ನಾನು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾದ ಗುಣವನ್ನು ಕೊಟ್ಟವು. ಅದಕ್ಕಾಗಿ ನಾನು ನಿಮಗೆ ಅನೇಕ ವಂದನೆಗಳನ್ನು ಮಾಡುತ್ತೇನೆ.

ವೇಂಕೋಷ್ಟಾ ಹಾರಮೋ ಸ್ಟ್ರೀಬಲ ಸಾರಾ,
ಷಾಂಗ್ಹೈ, ಚೀನ.

ನಿಮ್ಮ ಮದನ ಮಂಜರೀ ಮಾತ್ರೆಗಳು ನನಗೆ ಖಾತ್ರಿಯಾದ ಗುಣವನ್ನು ಕೊಟ್ಟವು.

ದೋರಾಬ್ಜೀ ಎಡಲ್ಜೀ ಮೇವಾ ವಾಲಾ,
C/o ನ್ಯೂ ಆಲ್ಫ್ರೆಡ್ ಡ್ರಾಮಾಟಿಕ್ ಕಂಪೆನಿ,
ಮಹೇಂದ್ರು, ಪಾಟ್ನ.

ನಿಮ್ಮ ಮದನ ಮಂಜರೀ ಮಾತ್ರೆಗಳ ಸರ್ವೋತ್ತಮ ಗುಣಗಳನ್ನು ಹೊಗಳಲು ನಾನು ಅಶಕ್ತನಾಗಿದ್ದೇನೆ. ನಾನು ಕಳದು ಕೊಂಡ ಸರ್ವ ಶಕ್ತಿಯೂ ಈ ಮಾತ್ರೆಗಳಿಂದ ನನಗೆ ದೊರಕಿತು.

ದೇವರಾವ್ ಗಣೇಶ,
ಹೆಡ್‌ಮಾಸ್ಟರ್, ದಹಿಂಗಾವ, ವರಧಾ.

ಪುಷ್ಟಿಯನ್ನು ಕೊಡುವ ಔಷಧಿಗಳಲ್ಲೆಲ್ಲಾ ನಿಮ್ಮ ಮದನ ಮಂಜರೀ ಮಾತ್ರೆಗಳು ಸರ್ವೋತ್ತಮ ವಾದವು.

ಜಿ. ಕೆ. ಅಲ್ಲೇಕರ್,
ನವಸಾರಿ,

ನಿಮ್ಮ ಮದನ ಮಂಜರೀ ...

ಲ್ಲಾ ೩೧॥ ಕೋಟಿ ಜನರಿರುವರೆಂದು ಗೊತ್ತಾಗಿದೆ. ಇಷ್ಟು ಜನಸಂಖ್ಯೆಯಲ್ಲಿ ಓದುವ ಹುಡುಗರು ॥ ಕೋಟಿಯು ಕೂಡಾ ಇಲ್ಲದಿರುವುದನ್ನು ನೋಡಿದರೆ ಬಾಲವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಾದ ಪ್ರಯತ್ನವನ್ನು ಮಾಡಬೇಕಾದುದು ಅವಶ್ಯಕವೆಂದು ಕಾಣುತ್ತದೆ.

ಮೈಸೂರ್ ಸ್ಟಾರ್

೧೯೧೨ ನೆಯ ಏಪ್ರಿಲ್ ತಾ॥ ೨೯ ನೆಯ ಸೋಮವಾರ.

ಸಾಮ್ರಾಜ್ಯಸಭೆ ಮತ್ತು ಭರತಖಂಡದ ಹಣ.

ಲಾರ್ಡ್ ಮಾರ್ಲಿ-ಲಾರ್ಡ್ ಮಿಂಟೋರವರ ಪ್ರಭುತ್ವದಲ್ಲಿ ಭರತಖಂಡದ ರಾಜ್ಯಭಾರದೊಳಗೆ ಮಾಡಲ್ಪಟ್ಟ ಮುಖ್ಯ ಸುಧಾರಣೆಗಳಲ್ಲಿ ವೈಸ್‌ರಾಯರ ಮತ್ತು ಪ್ರಾಂತಿಕ ಗೌರ್ನರುಗಳ ಸಾಮ್ರಾಜ್ಯಸಭೆಯನ್ನೂ ಮತ್ತು ನಿಯಮನಿರ್ಮಾಣ ಸಭೆಯನ್ನೂ ವಿಸ್ತರಿಸಿ, ಅದರಲ್ಲಿ ಭಾರತೀಯ ಸಭಾಸ್ತರರನ್ನು ವಿಶೇಷವಾಗಿ ಸೇರಿಸಿರುವುದೂ, ತತ್ಸಂಬಂಧವಾದ ಕೆಲವಧಿಕಾರಗಳನ್ನು ಭಾರತೀಯರಿಗೆ ಕೊಟ್ಟುದೂ ಸಹ ಚಿರಸ್ಮರಣೀಯವಾಗಿರುತ್ತವೆಯಷ್ಟೆ. ಇಂಥ ವರದಾನವು ಈ ದೇಶೀಯರಿಗೆ ದೊರೆತಿದ್ದರೂ, ಕೆಲವು ಸಾರಿಗಳ ಮೂಲಕವಾಗಿ ಒಂದೊಂದು ಸಲ ನ್ಯಾಯವಾಗಿ ಆಗಬೇಕಾದ ಫಲಗಳು ಆಗದೆ ಹೋಗಿ, ದೇಶೀಯರು ಪರಿತಪಿಸುವ ಸ್ಥಿತಿಯು ಪ್ರಾಪ್ತವಾಗುತ್ತಿದೆ. ಭರತಖಂಡದಲ್ಲಿ ಬಾಲವಿದ್ಯಾಭ್ಯಾಸದ ಪ್ರಸಾರವಾಗಬೇಕಾದುದು ಅತ್ಯಾವಶ್ಯಕವೆಂಬುದನ್ನು ರಾಜ್ಯಪಾಲಕರೆಲ್ಲರೂ ಒಪ್ಪಿಕೊಳ್ಳುತ್ತಿದ್ದರೂ, ಅದರ ಪ್ರಸಾರೋಪಾಯವನ್ನು (ಅಂದರೆ ಬಲಾತ್ಕಾರದಿಂದ ವಿದ್ಯಾಭ್ಯಾಸಮಾಡಿಸಬೇಕಾದ ವಿಧಿಕ್ರಮವನ್ನು) ಆ॥ ಗೋಖಲೆಯವರು ಸಾಮ್ರಾಜ್ಯಸಭೆಯೆದಿರಿಗೆ ಚರ್ಚೆಗೆ ತಂದು, ವಿಧಿಯನ್ನು ಸೂಚಿಸಿದಾಗ್ಗೆ, ಅದಕ್ಕೆ ತಕ್ಕಷ್ಟು ಸಭಾಸದರ ಅನುಮೋದನವು ದೊರೆಯದೆ, ಅದು ದೂಡಲ್ಪಟ್ಟಿತಷ್ಟೆ.

ಅದರಂತೆಯೇ ದೇಶಕ್ಷೇಮಕ್ಕೆ ಅತ್ಯಂತಸಾಧಕವಾದ ಹಣದ ವಿಷಯವೊಂದು ಆ॥ ಸರ್ ವಿಠಲದಾಸ ಥಾಕರ್ಸೆಯವರಿಂದ ಸಾಮ್ರಾಜ್ಯಸಭೆಯಲ್ಲಿ ಚರ್ಚೆಗೆ ತರಲ್ಪಟ್ಟು, ತತ್ಸಂಬಂಧವಾದ ವಿಧಿಯೊಂದನ್ನು ಏರ್ಪಡಿಸಬೇಕೆಂದು ಸೂಚಿಸಿದಾಗ, ಅದಕ್ಕೆ ಭರತಖಂಡದ ನಿವಾಸಿಗಳಾದ ನಾನಾಮತ ಜಾತಿಯ ಪ್ರತಿನಿಧಿಸಭಾಸ್ತರರೆಲ್ಲರೂ ಒಪ್ಪಿದರೂ, ಕೇವಲ ಸರ್ಕಾರದ ಪಕ್ಷದ ಸಭಾಸ್ತರರೊಬ್ಬರೂ ಒಪ್ಪದೆ ಹೋದುದರಿಂದಲೇ ಎಂದರೆ ಥಾಕರ್ಸೆಯವರ ಪಕ್ಷಕ್ಕೆ ೩೪ ಮಂದಿಗಳು ಅಭಿಪ್ರಾಯಕೊಟ್ಟು, ಇದಿರುಪಕ್ಷಕ್ಕೆ ೩೫ ಮಂದಿಗಳು ಸೇರಿದುದರಿಂದಲೇ ಅತಿ ಮುಖ್ಯವಾದ ಈ ವಿಷಯವು ದೂಡಲ್ಪಟ್ಟಿತು. ಆ ವಿಷಯವೇನೆಂದರೆ:—ಸಾಮ್ರಾಜ್ಯ ಸರ್ಕಾರದವರು ಈ ದೇಶದ ವ್ಯವಹಾರಕ್ಕಾಗಿ ಮುದ್ರಿಸುವ ರೂಪಾಯಿಗಳಲ್ಲಿ ರೂ. ೧ ಕ್ಕೆ ೧೦ ಆಣೆಯ ಬೆಳ್ಳಿಯು ಮಾತ್ರ ಇರುವುದರಿಂದ, ಪ್ರತಿ ರೂಪಾಯಿಗೂ ಸರ್ಕಾರಕ್ಕೆ ೬ ಆಣೆಯ ಲಾಭವು ಬರುತ್ತಿದೆ. ಈ ಲಾಭದ ಹಣವೇ ಈಗ ೨೩ ಕೋಟಿ ರೂಪಾಯಿಗಳಷ್ಟಾಗಿದೆ. ಇದಲ್ಲದೆ ಹಣಕ್ಕೆ ಪ್ರತಿಯಾಗಿ [illegible]ರಕ್ಕಿಟ್ಟಿರುವ ನೋಟುಗಳನ್ನು ಪ್ರಜೆಗಳು ಸರ್ಕಾರಕ್ಕೆ ಕೊಟ್ಟು, ಅವುಗಳಿಗೆ ಪ್ರತಿಯಾಗಿ ಹಣವನ್ನು ಯಾವಾಗ ಕೇಳಿದರೂ ಕೊಡಲು ಸಿದ್ಧವಾಗಿರುವುದಕ್ಕಾಗಿ ೧೦ ಕೋಟಿಯೂ ೩೩ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ತೆಗೆದಿಟ್ಟುಕೊಂಡಿದ್ದಾರೆ. ಇವೆರಡು ಭಾಗದಿಂದ ಬಹುಶಃ ೪೦ ಕೋಟಿ ರೂಪಾಯಿಗಳು ಸರ್ಕಾರದವರ ವಶದಲ್ಲಿವೆ. ಈ ಹಣವನ್ನು ಅವರು ಭರತಖಂಡದಲ್ಲಿಟ್ಟಿರುವುದಿಲ್ಲ. ಇದು ಲಂಡನ್ನಿನಲ್ಲಿದೆ. ಪ್ರಭುತ್ವದವರು ಈ ಹಣವನ್ನು ಆಂಗ್ಲವರ್ತಕರಿಗೂ, ಧನಾಗಾರಗಳಿಗೂ ನೂರಕ್ಕೆ ವರ್ಷಕ್ಕೆ ೨-೩ ರೂ. ಗಳ ಬಡ್ಡಿಗಾಗಿ ಕೊಟ್ಟಿರುತ್ತಾರೆ. ಈ ಹಣದ ಮೇಲೆ ಅವರು ೭೦ ಕೋಟಿ ರೂ. ಗಳ ವರೆಗೂ ವ್ಯಾಪಾರವನ್ನು ನಡೆಯಿಸಿಕೊಂಡು ಹೋಗುತ್ತಿದ್ದಾರೆಂದು ಲಾರ್ಡ್ ಮಾರ್ಲೆಯವರೇ ಒಂದಾನೊಂದು ಸಂದರ್ಭದಲ್ಲಿ ಅಪ್ಪಣೆಕೊಡಿಸಿದ್ದರು. ಇಷ್ಟು ದೊಡ್ಡ ಹಣವು ಭರತಖಂಡದುದಾದುದರಿಂದ ಅದು ಈ ದೇಶದಲ್ಲೇ ಇರಬೇಕೆಂದೂ ದೈವೇಚ್ಛೆಯಿಂದ ಯುದ್ಧಮೊದಲಾದ ಉಪಟಲಗಳು ಪ್ರಾಪ್ತವಾದರೆ ಆ ಹಣವು ನಮ್ಮ ದೇಶಕ್ಕೆ ಸೇರುವ ಆಸೆಯೇ ಇಲ್ಲವೆಂದೂ, ಪರದೇಶದವರಿಗೆ ಆ ಹಣವನ್ನು ೨-೩ ರೂ. ಗಳ ಬಡ್ಡಿಗೆ ಕೊಡುವುದಕ್ಕಿಂತಲೂ, ಈ ದೇಶೀಯರಿಗೇ ೫-೬ ರೂ. ಗಳ ಬಡ್ಡಿಗೆ ಕೊಡಬಹುದೆಂದೂ ಸರ್ ಥಾಕರ್ಸೆಯವರು ಸೂಚಿಸಿದರು. ಇದನ್ನು ಅಯುಕ್ತವಾದುದೆಂದು ಹೇಳುವುದಕ್ಕೆ ಸಮಂಜಸವಾದ ಯಾವಕಾರಣವೂ ಇರುವುದಿಲ್ಲ. ಈ ದೇಶದಲ್ಲಿ ಜನರಿಗೆ ಹಣವು ದೊರಕದೆ ಹೆಚ್ಚಾದ ಬಡ್ಡಿಯನ್ನು ಕೊಟ್ಟು ನರಳುತ್ತಿದ್ದಾರೆ. ದ್ರವ್ಯವು ಹೇರಳವಾಗಿ ಸುಲಭವಾದ ಬಡ್ಡಿಗೆ ದೊರೆಯುವಂತಾದರೆ ಈ ದೇಶದ ಕೈಗಾರಿಕೆಯೂ, ವ್ಯಾಪಾರವೂ, ಬೇಸಾಯವೂ ಎಷ್ಟೋ ಅಭಿವೃದ್ಧಿಗೊಳ್ಳುವುವು. ಅವುಗಳ ಹೀನಸ್ಥಿತಿಗೆ ಹಣದ ಕೊರತೆಯೂ ಒಂದು ಮುಖ್ಯಕಾರಣವಾಗಿದೆ. ನಮ್ಮ ದೇಶದವರು ಸಮಯಬಿದ್ದಾಗ ೮-೧೦-೧೨ ರೂ. ಗಳ ಬಡ್ಡಿಗೆ ಸಾಲವನ್ನು ತೆಗೆದುಕೊಳ್ಳುತ್ತಿರುವಾಗ, ನಮ್ಮ ಹಣವೇ ಅನ್ಯದೇಶದಲ್ಲಿ ಅನ್ಯರಿಗೆ ೨-೩ ರೂ. ನ ಬಡ್ಡಿಗೆ ಕೊಡಲ್ಪಡುವದೆಂದರೆ, ಅದು ತೀರ ಅನುಚಿತವಲ್ಲವೆ? ಅದುಕಾರಣ ಆ ಹಣವನ್ನು ಈ ದೇಶಕ್ಕೆ ತರಿಸಿ, ಇಲ್ಲಿನವರಿಗೇ ಬಡ್ಡಿಗೆ ಕೊಡಬೇಕು, ಅಥವಾ ಇಲ್ಲಿಯ ಬೊಕ್ಕಸದಲ್ಲೇ ಇಟ್ಟಿರಬೇಕು, ಎಂಬುದು ಥಾಕರ್ಸೆಯವರ ಅಭಿಪ್ರಾಯವು.

ವ್ಯವಹಾರದಲ್ಲಿರುವ ನೋಟುಗಳನ್ನಾಗಲಿ, ಸರ್ಕಾರಿ ಪತ್ರಗಳನ್ನಾಗಲಿ ಪ್ರಜೆಗಳು ತಂದುಕೊಟ್ಟು ಅವುಗಳ ಹಣವನ್ನು ಕೇಳಿದಾಗ, ಸಲ್ಲಿಸುವುದಕ್ಕೋಸುಗವೆಂಬುದಾಗಿ ಅಮೇರಿಕಾದ ಪ್ರಭುತ್ವದವರು ೩೫೦ ಕೋಟಿ ರೂ. ನ ಭಂಗಾರವನ್ನು ತಮ್ಮ ಬೊಕ್ಕಸದಲ್ಲಿಟ್ಟುಕೊಂಡಿದ್ದಾರೆ. ಇದೇ ತೆರದ ಕಾರಣಕ್ಕೋಸುಗವೇ ಜರ್ಮನಿ-ರಷ್ಯಾ-ಫ್ರಾನ್ಸ್ ಮೊದಲಾದ ದೇಶದವರೂ ನೂರಾರುಕೋಟಿಗಟ್ಟಲೆಯಾದ ಚಿನ್ನವನ್ನು ಕೋಶಗಳಲ್ಲಿಟ್ಟುಕೊಂಡಿದ್ದಾರೆ. ಅದರಂತೆಯೇ ಸಾಮ್ರಾಜ್ಯಸರ್ಕಾರದವರು ನಮ್ಮ ದೇಶದಲ್ಲೂ ಕೆಲ ಹಣವನ್ನು ಇಟ್ಟುಕೊಂಡಿರಬೇಕಾದುದು ಅವಶ್ಯಕವಾದರೂ, ಆ ಹಣವನ್ನು ಭರತಖಂಡದ ಬೊಕ್ಕಸದಲ್ಲಿ ಇಡದೆ ೬ ಸಾವಿರ ಮೈಲುಗಳ ದೂರದಲ್ಲಿರುವ ಲಂಡನ್ನಿನಲ್ಲಿ ವರ್ತಕರ ವಶಕ್ಕೆ ಕೊಟ್ಟಿರಬೇಕಾದುದಕ್ಕೆ ಸಮರ್ಪಕವಾದ ಕಾರಣವೇನೂ ಇರುವುದಿಲ್ಲ.

ಇದಲ್ಲದೆ ಸಾಮ್ರಾಜ್ಯ ಸರ್ಕಾರದವರು ಈ ದೇಶದಲ್ಲಿ ಸರ್ವತ್ರ ವ್ಯವಹರಣೆಯಲ್ಲಿರುವ ೫ ರೂ. ನ ನೋಟುಗಳಂತೆ ೫೦-೧೦೦ ರೂ. ನ ನೋಟುಗಳನ್ನೂ ಎಲ್ಲಾ ಅಧಿಪತ್ಯದಲ್ಲೂ ವ್ಯವಹರಣೆಗೆ ಬರುವಂತೆ ಏರ್ಪಡಿಸಬೇಕೆಂದು ಯೋಚಿಸಿದ್ದರು. ಆದರೆ ಬೊಕ್ಕಸದಲ್ಲಿ ಆ ನೋಟುಗಳ ಬೆಲೆಗೆ ತಕ್ಕಷ್ಟು ದ್ರವ್ಯವು ಇಲ್ಲವೆಂಬ ಕಾರಣದಿಂದಲೇ ಅವುಗಳ ನಿರ್ಮಾಣವನ್ನು ಸದ್ಯಕ್ಕೆ ನಿಲ್ಲಿಸಿಬಿಟ್ಟರು. ಮೇಲೆಕಂಡ ಹಣವು ಈ ದೇಶದಲ್ಲೇ ಇದ್ದರೆ ಆ ನೋಟಿನ ಪ್ರಯತ್ನಕ್ಕೆ ಅಡ್ಡಿಯೂ ಉಂಟಾಗುತ್ತಿರಲಿಲ್ಲ. ನಮ್ಮ ಹಣವು ನಮ್ಮ ಕೈಯಲ್ಲೇ ಇದ್ದರೆ ಧನಾಭಾವದ ತೊಡಕುಗಳು ನಮಗೆಲ್ಲಿರುತ್ತಿದ್ದುವು? ಇವೆಲ್ಲ ಕಾರಣಗಳೂ ಸಮಂಜಸವಾಗಿದ್ದುದರಿಂದಲೇ ಸರ್ ಥಾಕರ್ಸೆಯವರ ಅಭಿಪ್ರಾಯಕ್ಕೆ ಅನಾದ್ಯೋಗಿಕ ಪ್ರಜಾಪ್ರತಿನಿಧಿ ಸಭಾಸ್ತರರು ೨೫ ಮಂದಿಗಳೂ, ಆಂಗ್ಲ ವರ್ತಕಸಂಘದ ಪ್ರತಿನಿಧಿಗಳು ಇಬ್ಬರೂ, ಯೂರೋಪಿಯನರ ಪ್ರತಿನಿಧಿಯೊಬ್ಬನೂ ಸರ್ಕಾರದಿಂದಾರಿಸಿ ನಿಯುಕ್ತರಾಗಿರುವ ಅನಾದ್ಯೋಗಿಕ ಸಭಾಸದರು ೬ ಜನರೂ ಅಂತೂ ಒಟ್ಟು ೩೪ ಮಂದಿಗಳು ಅನುಮೋದಿಸಿದರು. ಸರ್ಕಾರದ ಉದ್ಯೋಗಿಗಳಾದ ೩೫ ಮಂದಿ ಸಭಾಸದರುಗಳೂ ಅದಕ್ಕೆ ವ್ಯತಿರಿಕ್ತವಾಗಿ ಅಭಿಪ್ರಾಯಕೊಟ್ಟರು. ಅಂತೂ ವಿರುದ್ಧಾಭಿಪ್ರಾಯವು ೧ ಅಂಶ ಮಾತ್ರದಿಂದಧಿಕವಾಗಿ ಬಂದಿದ್ದರೂ ಈ ಸೂಚನೆ ಹೇಗೋ ಕಡೆದೊಲಿಸಲ್ಪಟ್ಟಿತು. ಸರ್ಕಾರದ ಉದ್ಯೋಗಿಕಸಭಾಸದರು ಉದ್ಯೋಗಸಂಬಂಧವಾದ ಪಕ್ಷದಿಂದ ಒಟ್ಟಿಗೆ ಒಂದೇತೆರದ ಅಭಿಪ್ರಾಯವನ್ನು ಕೊಟ್ಟು, ಈ ಸಮಂಜಸವಾದ ಸೂಚನೆಯನ್ನು ದಬ್ಬಿದಂತಾಯಿತೇ ಹೊರತು, ಭರತಖಂಡಕ್ಷೇಮಕ್ಕೆ ಈ ಸೂಚನೆಯು ಸಹಾಯಕವೆ? ಅಲ್ಲವೆ? ಎಂಬ ವಿಚಾರದಕಡೆಗೆ ಲಕ್ಷ್ಯವಿತ್ತು ತಮ್ಮ ಅಭಿಪ್ರಾಯಗಳನ್ನು ಕೊಟ್ಟಂತೆ ಕಾಣುವುದಿಲ್ಲ. ಭಾರತೀಯ ಪ್ರಜಾಪ್ರತಿನಿಧಿಗಳೆಲ್ಲರೂ, ಐಕಮತ್ಯದಿಂದ ಕೊಟ್ಟಿರುವ ಈ ಅಭಿಪ್ರಾಯವು ಸರ್ಕಾರದ ಪಕ್ಷದ ಒಂದು ಅನುಮತದ ಹೆಚ್ಚಿಗೆಯ ಮಾತ್ರದಿಂದಲೇ ತಿರಸ್ಕೃತವಾಗಿರುವುದರ ಕಡೆಗೆ ಪ್ರಜಾರಂಜಕರಾದ ಲಾರ್ಡ್ ಹಾರ್ಡಿಂಜ್‌ರವರೂ, ಸ್ಟೇಟ್‌ಸೆಕ್ರಟರಿಗಳೂ ದೂರಾಲೋಚನೆಯಿಂದ ಗಮನವಿತ್ತು, ಮುಂದಾದರೂ ಪ್ರಜೆಗಳ ಇಷ್ಟದಂತೆ ನೆರವೇರಲು ಅವಕಾಶವನ್ನುಂಟುಮಾಡಿದರೆ ಕೌನ್ಸಿಲ್ ಸುಧಾರಣೆಯ ಕೀರ್ತಿಯು ಸುಪ್ರತಿಷ್ಠಿತವಾಗಲು ಮಾರ್ಗವಾಗುವುದು.

ಈ ಪತ್ರಿಕೆಯ ಪ್ರಕಾಶಕರಾದ ಮ॥ ವೈ ವಿರೂಪಾಕ್ಷಯ್ಯನವರ ಪತ್ನಿಯವರು ಶಿಶುವನ್ನು ಪ್ರಸವಿಸಿ ಅಸ್ವಸ್ಥರಾಗಿದ್ದು ಕಳೆದ ತಾ॥ ೨೨ ನೆಯ ಸೋಮವಾರದ ರಾತ್ರಿ ಪರಮಪದವನ್ನು ಹೊಂದಿದರೆಂದು ತಿಳುಹಲು ಅತ್ಯಂತ ಖೇದವಾಗುತ್ತದೆ. ಆಕೆಯವರಿಗೆ ಮರಣಕಾಲದಲ್ಲಿ ೨೦ ವರ್ಷ ವಯಸ್ಸು ಮಾತ್ರವಾಗಿದ್ದಿತು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ಸಾಯಂಕಾಲ ೧॥ ಗಂಟೆಯ ಹೊತ್ತು ಚೆನ್ನಾಗಿಯೂ, ಶನಿವಾರ ಸಾಯಂಕಾಲ ಸಾಧಾರಣವಾಗಿಯೂ ಮಳೆಯಾಯಿತು. ಇನ್ನೂ ಮಳೆಯಾಗುವ ಲಕ್ಷಣವಿದೆ.

ಮ॥ ರಾಜವೈದ್ಯ ನಾರಾಯಣಜೀ, ಕೇಶವಜೀಯ ಆಯುರ್ವೇದೀಯೌಷಧಾಲಯದ ಪ್ರಕಟನ ಪತ್ರಿಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ. ವಾಚಕ ದಯವಿಟ್ಟು ಅದನ್ನು ಅವಗಾಹಿಸಬೇಕೆಂದು ಕೋರುವೆ

ನಾರ್ತ್‌ವೆಸ್ಟ್ ರೈಲ್ವೆಯಲ್ಲಿ ಡೆಪ್ಯುಟಿ ಮ್ಯಾನೇಜರಾಗಿ ಮ॥ ಬೆಲ್ ಎಂಬುವರನ್ನು ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದನುಮತಿಯನ್ನು ಪಡೆದು ಎರಡುವರ್ಷ ಕಾಲದವರೆಗೆ ರೈಲ್ವೆಯ ಅಧ್ಯಕ್ಷರಾಗಿ ನಿಯಮಿಸಿಕೊಂಡಿರುತ್ತಾರೆ. ಇವರು ಈ ಸಂಸ್ಥಾನದಲ್ಲಿ ಲೋಹಮಾರ್ಗಾಭಿವೃದ್ಧಿಯ ಸಾಧನವನ್ನು ಕುರಿತು ಇಷ್ಟರಲ್ಲೇ ಪರ್ಯಾಲೋಚಿಸತಕ್ಕವರಾಗಿರುವರು.

ಪ್ರೊಫೆಸರ್ ಪರಶುರಾಮರಾವ್‌ಯವರು ತಮ್ಮ ಸರ್ಕಸ್ಸನ್ನು ಚನ್ನಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ೫-೬ ಆಟಗಳನ್ನು ಪ್ರದರ್ಶಿಸಿ ಈಗ ಬೆಂಗಳೂರಿಗೆ ಹೋಗಿ ಅಲ್ಲಿ ತಮ್ಮ ಚಮತ್ಕಾರವನ್ನು ತೋರಿಸುತ್ತಿರುವರು. ಚನ್ನಪಟ್ಟಣದಲ್ಲಿ ಪರಶುರಾಮರಾವ್‌ಯವರು ಹುಲಿಯನ್ನು ಆಡಿಸುತ್ತಿರುವಾಗ್ಗೆ ಆ ದುಷ್ಟಮೃಗವು ರೇಗಿ ಅವರ ಮೇಲೆ ಬೀಳಲು ಹೋಗಿ ಅವರ ಕೈಯನ್ನು ಪರಚಿಬಿಟ್ಟಿತೆಂದು ಕೇಳುತ್ತೇವೆ

ಬರೋಡಾ ಗಾಯಕವಾಡ ಮಹಾರಾಜ ದಂಪತಿಗಳು ಪರಿವಾರ ಸಮೇತ ಕಳೆದ ತಾ॥ ೨೬ ರ ಬೆಳಗ್ಗೆ ಬೆಂಗಳೂರಿಗೆ ಬಂದು, ಆ ಕೂಡಲೆ ಮಹಾರಾಣಿಯವರು ಮೋಟಾರುಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು; ಮಹಾರಾಜರವರು ಪರ್ಣ ಭವನಕ್ಕೆ ಮೋಟಾರು ಬಂಡಿಯಲ್ಲಿ ಚಿತ್ತೈಸಿ ಮ॥ ವಿ. ಪಿ. ಮಾಧವರಾಯರ ಕೂಡ ಪ್ರಸ್ತಾಪಿಸಿಕೊಂಡು ಮೋಟಾರು ಬಂಡಿಯಲ್ಲಿ ರಾಜಧಾನಿಗೆ ಬಂದು ಇಲ್ಲಿಂದ ಪತ್ನಿಯ ಕೊಡನೆ ಸೀಗೂರು ಮಾರ್ಗವಾಗಿ ಉದಕಮಂಡಲಕ್ಕೆ ತೆರಳಿದರು.

ರಾಜಧಾನಿಯಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಉಜ್ಜಯಿನಿ ಹೆಂಚಿನಮಠದ ಶಿವಲಿಂಗಯ್ಯನೆಂಬ ದೀನ ವಿದ್ಯಾರ್ಥಿಯ ಸಾಹಾಯ್ಯಾರ್ಥವಾಗಿ ಕಳೆದ ಏಪ್ರಿಲ್ ತಾ॥ ೧೫ ರ ಸಂಚಿಕೆಯಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಸಂತೋಷದಿಂದ ಚಂದಾ ಹಣವನ್ನು ಕೊಟ್ಟಿರುವ ಮಹನೀಯರು:—

	ರೂ ಆ. ಪೈ.
೧. ಶ್ರೀ ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸನ್ನಿಧಿ	೧-೦-೦
೨. ಶ್ರೀರಂಗಪಟ್ಟಣದ ಮುನಸೀಫರು ಮ॥ ಪಿ ಮಹಾದೇವಯ್ಯ ಬಿ ಎ, ಬಿ ಎಲ್., ರವರು	೨-೦-೦
೩. ಮ॥ ವೈ ವಿರೂಪಾಕ್ಷಯ್ಯನವರು ತಮ್ಮ ಕೈ॥ ಪತ್ನಿಯವರ ಜ್ಞಾಪನಾರ್ಥವಾಗಿ	೨-೦-೦
೪. ರೆವಿನ್ಯು ಪ್ರೊಫೆಸರ್ ಮ॥ ಜಿ. ಮಲ್ಲಿಕಾರ್ಜುನಯ್ಯ, ಬಿ. ಎ., ಯವರು	೧-೦-೦
೫. ತಿಪಟೂರಿನ ಜವಳಿವ್ಯಾಪಾರಿ ಮ॥ ಗದ್ದಿಗೆಮನೆ ನಂಜಪ್ಪನವರು	೧-೦-೦
೬. ಕಡೂರು ಡಿ॥ ಬುಕ್ಕಾಂಬುಧಿ ಎಚ್. ಮರುಳಸಿದ್ದಪ್ಪನವರು	೦-೮-೦
ಒಟ್ಟು ರೂ.	೭-೮-೦

ವರ್ತಮಾನ ಸಂಗ್ರಹವು.

ಆಂಗ್ಲ ಸರ್ಕಾರದಲ್ಲಿ ೨೫ ಸಾವಿರ ಒಂಟಿಗಳು ಸಾಕಲ್ಪಡುತ್ತಿವೆ.

ಕಾಫಿ ಬೀಜದ ಮೇಲಣ ಸಿಪ್ಪೆಯಿಂದ ಈಗ ಒಂದು ತರದ ಮದ್ಯವನ್ನು ಇಳಿಸುತ್ತಲಿರುವರು.

ಪಂಜಾಬು ವಿಶ್ವವಿದ್ಯಾಲಯದ ಪುಸ್ತಕಭಾಂಡಾಗಾರದಲ್ಲಿ ೫೫ ಸಾವಿರ ಪುಸ್ತಕಗಳಿರುವುವಂತೆ.

ಕಳೆದ ಜನಪರಿಗಣಿತಿಯ ಪ್ರಕಾರ ಭರತಖಂಡದ ಜನಸಂಖ್ಯೆಯು ೩೧॥ ಕೋಟಿಯೆಂದು ಗೊತ್ತಾಗಿದೆ.

ರಷ್ಯಾದೇಶದಲ್ಲಿ ಉಲ್ಫಹೌಂಡು ಎಂಬ ಒಂದು ಜಾತಿಯ ನಾಯಿಯಿದೆ. ಇದು ಗಂಟೆಯೊಂದಕ್ಕೆ ೫೫ ಮೈಲಿಗಳ ಜೋರೆಗೆ ಓಡುವುದು.

ಚೀನಾದಲ್ಲಿ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟುದಕ್ಕಾಗಿ ತಮ್ಮ ಅಭಿನಂದನವನ್ನು ಅಮೇರಿಕಾ ಪ್ರಜಾಪ್ರಭುತ್ವದವರು ಅವರಿಗೆ ತಿಳಿಯಪಡಿಸಿದ್ದಾರೆ.

ಟಿಟಾನಿಕ್ ಹಡಗಿನ ಆಪತ್ತಿನಲ್ಲಿ ಪ್ರಸಿದ್ಧ ರಿವ್ಯು ಆಫ್ ರಿವ್ಯೂಸ್ ಪತ್ರಕರ್ತರಾದ ಮಿ॥ ವಿಲಿಯಂ ಸ್ಟೆಡ್‌ರವರೂ ಸಮುದ್ರಾರ್ಪಿತರಾದ ವರ್ತಮಾನವು ನಿಜವೆಂದು ಪ್ರಕಟವಾಗಿದೆ.

ಕಂಚಿಯಲ್ಲಿ ನೆರೆದ ಪಂಡಿತ ಸಭೆಯಲ್ಲಿ ಯಾವ ಧಾರ್ಮಿಕ ವಿಷಯದ ನಿರ್ಣಯವೂ ಆಗಲಿಲ್ಲವೆಂಬುದು ವಿಷಾದನೀಯ

ಆದರೂ ಈ ಸಭೆಯು ಮುಂದಣವರ್ಷ ಮದ್ರಾಸಿನಲ್ಲಿ ನೆರವೇರಿಸಲ್ಪಡುವುದಂತೆ.

ಈಗ ರಷ್ಯಾದ ಜಾರರ ಬಳಿಯಲ್ಲಿ ಒಂದು ಪುಟ್ಟ ಕುದುರೆ ಇದೆ. ಅದರ ಎತ್ತರವು ೧೫ ಅಂಗುಲ ಮಾತ್ರವಾಗಿದೆ. ಪ್ರಪಂಚದಲ್ಲೆಲ್ಲಾ ಇದರಷ್ಟು ಚಿಕ್ಕ ಕುದುರೆಯು ಹುಟ್ಟಿಕೊಂಡಿರಲಾರದು.

ಈ ವರ್ಷದಲ್ಲಿ ಶೈವಮತಮಹಾಸಭೆಯು ಕೃಷ್ಣಾಜಿಲ್ಲಾ ತೆನಾಲಿ ತಾ॥ ಕೊತ್ತಪಲ್ಲಿ ಅಗ್ರಹಾರದಲ್ಲಿ ಇದೇ ತಿಂಗಳು ತಾ॥ ೩೦ ರಿಂದ ೩ ದಿನಗಳ ವರೆಗೆ ನಡೆಯುವುದು. ಮುದಿಗೊಂಡದ ಶ್ರೀ ಶಂಕರಾರಾಧ್ಯರು ಸಭಾಧ್ಯಕ್ಷರಾಗುವರು

ಬೊಂಬಾಯಿ ಗೌರ್ನರು ಮೊನ್ನೆ ತಮ್ಮ ಸಂಚಾರದಲ್ಲಿ ಅಂಧೇರಿಗೆ ಹೋಗಿದ್ದಾಗ್ಗೆ ಅಲ್ಲಿ ಮಿ॥ ದಾದಾಭಾಯಿ ನೌರೋಜಿಯವರ ಮನೆಗೆ ಹೋಗಿದ್ದು, ದರ್ಶನವನ್ನಿತ್ತು ಸಂಭಾಷಿಸಿ, ಅವರೊಡನೆ ಟೀಪಾನವನ್ನು ಮಾಡಿ ಸಂತೋಷಗೊಂಡು ಬಂದರು.

ಪಂಜಾಬು ಅಂತರ್ಗತದಲ್ಲಿ ಪ್ರಸಿದ್ಧವಾದ ೫ ಹೊಳೆಗಳಿಂದಲೂ ಹೊಸದಾಗಿ ೩ ದೊಡ್ಡ ಕಾಲುವೆಗಳನ್ನು ತೆಗೆಯಿಸಲು ಗೌರ್ನಮೆಂಟಿನವರು ಯತ್ನಿಸಿ, ಅವುಗಳಲ್ಲಿ ಮೊದಲನೆಯದು ಸಿದ್ಧವಾಗಲು, ಲಾರ್ಡ್ ಹಾರ್ಡಿಂಜ್‌ರವರು ಅದರ ಆರಂಭದ ಮಹೋತ್ಸವವನ್ನು ನೆರವೇರಿಸಿದರು.

ಮಳೆಯಾಧಿಕ್ಯದಿಂದ ಡಾಕಾದಲ್ಲಿ ಪ್ರಯಾಣಿಕರ ರೈಲುಬಂಡಿಯು ಮಗುಚಿಕೊಂಡಿತು; ಕಾಶಿನರಾಜ ಎಂಬಲ್ಲಿ ಕಚೇರಿಯ ಕಟ್ಟಡಗಳೆಲ್ಲಾ ಸಂಪೂರ್ಣವಾಗಿ ಬಿದ್ದುಹೋದುವು ಮತ್ತೂ ಅನೇಕ ಮರಗಳು ಬಿದ್ದುಹೋಗಿ ನಿಂತಿದ್ದ ಬೆಳೆಗೆ ತುಂಬಾ ನಷ್ಟವು ಸಂಭವಿಸಿರುತ್ತದೆ

ಚಕ್ರವರ್ತಿಯವರಾದ ೫ ನೆಯ ಜಾರ್ಜ್ ಪ್ರಭುಗಳು ಕೊಹಿನೂರ್ ಮೊದಲಾದ ತಮ್ಮಲ್ಲಿರುವ ಅನರ್ಘ್ಯವಾದ ರತ್ನಗಳ ಚರಿತ್ರವನ್ನು ಕುರಿತು ತಾವೇ ಒಂದು ಗ್ರಂಥವನ್ನು ಬರೆಯುವವರಾಗಿದ್ದಾರಂತೆ. ಅದು ಮುಗಿದು ಪ್ರಕಟವಾದರೆ ಬಹು ಜನರು ಆದರದಿಂದ ಓದುವುದಕ್ಕೆ ಕಾದಿರುವರು.

ಚೀನದಲ್ಲಿ ಒಂದು ವೈದ್ಯ ಸಂಘದವರು ಪ್ರಪಂಚಕ್ಕೆಲ್ಲಾ ದೊಡ್ಡದಾದ ಒಂದು ಪುಸ್ತಕವನ್ನು ರಚಿಸಿದ್ದಾರೆ. ಅದು ೩ ಅಡಿ ಉದ್ದವೂ ೩॥ ಅಡಿ ಎತ್ತರವೂ ಉಳ್ಳದಾಗಿದೆ. ಅದರ ತೂಕವು ೧೫೦೮ ರಾತಲುಗಳಂತೆ. ವಸ್ತ್ವಾರೂಪ ನಿರೂಪಕಚಿತ್ರಮಯವಾದ ಈ ಚೀನ ಲಿಪಿಯುಳ್ಳ ಚೀನದ ಗ್ರಂಥವು ಅಷ್ಟು ದೊಡ್ಡದಾಗಿರುವುದು ಆಶ್ಚರ್ಯವಲ್ಲ.

ಶ್ರೀಮನ್ ೫ ನೆಯ ಜಾರ್ಜ್ ಪ್ರಭುಗಳು ಭರತ ಖಂಡದ ಸಂಚಾರವನ್ನು ಮುಗಿಸಿಕೊಂಡು ಸುಖವಾಗಿ ಸ್ವಸ್ಥಾನವನ್ನು ಸೇರಿದುದರ ಸಂತೋಷಾರ್ಥವಾಗಿ ಲಂಡನ್ನಿನಲ್ಲಿರುವ ಬಡಜನರೂ ಸೈನಿಕರೂ ಸೇರಿ ತಲೆಗೆ ೧ ಆಣೆಯಂತೆ ವರ್ಗಣಿಯಿಂದ ಕೂಡಿಸಿದ ಹಣದಲ್ಲಿ ಒಂದು ಭಂಗಾರದ ಕತ್ತಿಯನ್ನು ಮಾಡಿಸಿ ಚಕ್ರವರ್ತಿಯವರಿಗೆ ಸಮರ್ಪಿಸಿರುವರು.

ಬ್ರಹ್ಮ ಸಮಾಜದ ಮುಖ್ಯಾಚಾರ್ಯರಾಗಿರುವ ಪಂಡಿತ ಶಿವನಾಥಶಾಸ್ತ್ರಿಯವರ ಕುಮಾರಿ ಹೇಮಲತಾ ದೇವಿಯವರು ಡಾರ್ಜಿಲಿಂಗ್ ಪಟ್ಟಣದ ಆರೋಗ್ಯರಕ್ಷಕಸಭೆಯ ಒಬ್ಬ ಸಭ್ಯಳಾಗಿದ್ದಾರೆ. ಆಕೆಯು ತಮ್ಮ ಜತೆಯ ಇತರ ಸಭಾಸದರಿಗಿಂತಲೂ ಹೆಚ್ಚಾದ ಚಟುವಟಿಕೆಯಿಂದ ತಮ್ಮ ಕೆಲಸವನ್ನು ನಡೆಯಿಸುತ್ತಿರುವರೆಂದು ತಿಳಿಯಬಂದಿದೆ.

ಸೀಮೆಯಲ್ಲಿ ಕಲ್ಲಿದ್ದಲ ಗಣಿಯ ಕೂಲಿಕಾರರ ಕಟ್ಟುಪಾಡಿನಿಂದ ಕಷ್ಟಕ್ಕೀಡಾಗಿ ತೊಳಲುತ್ತಿರುವ ದೀನಜನರ ಸಹಾಯಾರ್ಥವಾದ ಫಂಡಿಗೆ ಶ್ರೀ ಜಾರ್ಜ್ ಪ್ರಭುಗಳು ೧೫೦ ಪೌನುಗಳನ್ನೂ ಶ್ರೀ ಮೇರಿ ರಾಜ್ಞಿಯವರೂ ಶ್ರೀ ಅಲಗ್ಸಾಂಡ್ರ್ಯಾರವರೂ ಸಹಾ ಸೇರಿ ೧೦೦೦ ಪೌನುಗಳನ್ನೂ ಶ್ರೀ ಪ್ರಿನ್ಸ್ ಆಫ್ ವೇಲ್ಸ್‌ರವರು ೫೦೦ ಪೌನುಗಳನ್ನೂ ದಾನಮಾಡಿರುವರು.

ಈಗಿನ ಬೊಂಬಾಯಿ ಗೌರ್ನರ ಅಧಿಕಾರದವಧಿಯು ಬರುವ ನವಂಬರ್ ತಿಂಗಳಿಗೆ ಮುಗಿಯುತ್ತದೆ. ಅಲ್ಲಿಂದಾಚೆಗೆ ಮತ್ತೊಬ್ಬರು ಬರಬೇಕಾಗಿದೆ. ಈಗಿನ ಗೌರ್ನರು ಸರ್ವವಿಧದಲ್ಲೂ ಆ ಅಧಿಪತ್ಯದ ಜನರ ಕೃತಜ್ಞತೆಗೆ ಪಾತ್ರರಾಗಿರುವರು. ಮುಂದೆ ಆ ಸ್ಥಾನಕ್ಕೆ ಸರ್ ಲಾರೆನ್ಸ್ ಜಂಕಿನ್ಸ್‌ರವರು ಬರುವರೆಂಬ ವಾರ್ತೆಯಿದೆ. ಹಾಗಾದರೆ ಅದು ಬೊಂಬಾಯಾಧಿಪತ್ಯಕ್ಕೆ ಸುಯೋಗವೇ ಸರಿ.

ವೀಣಾ ವಾದನದಲ್ಲೂ ಗಾಯನದಲ್ಲೂ ಪೂರ್ಣ ಪಂಡಿತರಾದ ಬಾಬು ಶರಚ್ಚಂದ್ರ ಚತ್ತೋಪಾಧ್ಯಾಯರವರ ಕುಮಾರಿಯಾದ ಶ್ರೀಮತಿ ಸತ್ಯಬಾಲಾದೇವಿಯವರು ಈಗ ಅಮೇರಿಕಾದಲ್ಲಿ ತಮ್ಮ ಗಾನವಿದ್ಯಾ ಪಾಂಡಿತ್ಯವನ್ನು ಪ್ರದರ್ಶನಮಾಡಿ ಕೀರ್ತಿಗೊಳ್ಳುತ್ತಿದ್ದಾರೆ. ಈಕೆಗೆ ಸಾಮವೇದ ಗಾನದಲ್ಲಿ ವಿಶೇಷವಾದ ಪ್ರಜ್ಞೆಯೂ, ಸಂಸ್ಕೃತಾಂಗ್ಲೇಯಾದಿ ೯ ಭಾಷೆಗಳಲ್ಲಿ ಪರಿಚಯವೂ ಸಹ ಇರುವುದು.

ಮಲಬಾರು ಪ್ರಾಂತದಲ್ಲಿ ಒಬ್ಬ ಹೆಂಗಸು ಕಾಡಿನಲ್ಲಿ ಸೌದೆಯನ್ನು ಆರಿಸುತ್ತಿದ್ದಳು. ಆಗ ೧ ವಿಷಸರ್ಪವು ಆಕೆಯನ್ನು ಕಚ್ಚಿತು. ಗಾರುಡ ಮಂತ್ರವನ್ನು ಬಲ್ಲ ಆಕೆಯ ಗಂಡನು ಅಕಸ್ಮಾತ್ತಾಗಿ ಹತ್ತಿರದಲ್ಲೇ ಇದ್ದುದರಿಂದ ಆತನು ತನ್ನ ಮಂತ್ರಬಲದಿಂದ ಆ ಸರ್ಪವನ್ನು ಹುತ್ತಿನಿಂದ ಈಚೆಗೆ ಬರಮಾಡಿ, ಕಚ್ಚಿದ ಸ್ಥಲದಿಂದ ವಿಷವನ್ನು ಹೀರಿಕೊಳ್ಳುವಂತೆ ಮಾಡಿದನು. ಕೂಡಲೆ ಸ್ತ್ರೀಯು ಬದುಕಿದಳು. ಹಾವು ಮಾತ್ರ ಸತ್ತಿತು.

ಆಂಗ್ಲ ಸಾಮ್ರಾಜ್ಯಕ್ಕೆ ಒಳಪಟ್ಟ ಪ್ರತಿಯೊಂದು ದೇಶದಲ್ಲೂ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವುದು ಹೇಗೆಂಬುದನ್ನು ವಿಚಾರಮಾಡಿ ವರದಿಗೊಳಿಸುವುದಕ್ಕಾಗಿ ಆಂಗ್ಲ ಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಿದ್ದಾರೆ. ಈ ಸಂಘದವರು ಪ್ರತಿದೇಶಗಳಿಗೂ ಹೋಗಿ ವಿಚಾರಮಾಡುವವರಾಗಿದ್ದಾರೆ. ಆದರೆ ಅವರು ಭರತಖಂಡಕ್ಕೆ ಮಾತ್ರ ಬರುವವರಾಗಿಲ್ಲವಂತೆ. ಈ ವಿಚಾರಣೆಗೆ ಮೂರು ವರ್ಷಗಳ ಕಾಲವು ಹಿಡಿಯುವುದು.

ಸಕ್ಕರೆಯ ಕೈಗಾರಿಕೆಯನ್ನು ಭರತಖಂಡದಲ್ಲಿ ಅಭಿವೃದ್ಧಿಮಾಡುವ ವಿಷಯವನ್ನು ವಿಚಾರಪೂರ್ವಕವಾಗಿ ವರದಿಮಾಡುವುದಕ್ಕಾಗಿ ನಿಯಮಿತರಾಗಿದ್ದ ಮಿ॥ ಕೋವೆಂಟ್ರಿಯವರು ಕಬ್ಬನ್ನು ಬೆಳೆಯಲು ಒದಗುವ ಭೂಮಿಗಳು ಇನ್ನೂ ಈ ದೇಶದಲ್ಲಿ ಲಕ್ಷಾಂತರ ಎಕರೆಗಳಷ್ಟು ಇರುವುವೆಂತಲೂ ಜಾವಾ ದ್ವೀಪದಂತೆಯೇ ಸಕ್ಕರೆಯನ್ನು ಮಾಡುವ ದೊಡ್ಡ ಕಾರ್ಯಾಲಯವೊಂದನ್ನು ಈ ದೇಶದಲ್ಲೂ ಸ್ಥಾಪಿಸಬೇಕೆಂತಲೂ ಗೌರ್ನಮೆಂಟಿಗೆ ವರದಿ ಮಾಡಿರುತ್ತಾರೆ.

ಹುಬ್ಬಳ್ಳಿಯ ಶ್ರೀ ಶಂಕರಾಚಾರ್ಯ ಉತ್ಸವಸಂಘದವರು ಪದ್ಧತಿಯಂತೆ ಈ ವರ್ಷವೂ ವೈಶಾಖ ಶು॥ ೧೦ ಯಿಂದ ಹುಣ್ಣಿಮೆಯವರೆಗೂ ರುದ್ರಾಭಿಷೇಕ ಪೂಜಾದಿಗಳನ್ನೂ ಭಾಷ್ಯಾದಿ ಪಾರಾಯಣ ಪುರಾಣಪಠನಗಳನ್ನೂ ನಡೆಯಿಸುವರು. ಅದೇ ಸಂಧಿಯಲ್ಲಿ ಪ್ರತಿದಿನವೂ ಉತ್ತಮ ವಿದ್ವಾಂಸರುಗಳ ವ್ಯಾಖ್ಯಾನಗಳು ನಡೆಯುವುವು. ವೇದಾಂತ ಧರ್ಮಶಾಸ್ತ್ರಾದ್ಯನೇಕ ಗ್ರಂಥಗಳ ಪರೀಕ್ಷೆಯು ನಡೆದು, ಉತ್ತೀರ್ಣರಾದವರಿಗೆ ೩-೪-೬-೧೦ ರೂ. ಗಳ ವರೆಗೆ ಬಹುಮಾನಗಳು ಕೊಡಲ್ಪಡುವುವು.

ಸೀಮೆಯಲ್ಲಿ ಕಲ್ಲಿದ್ದಲ ಗಣಿಯ ಕೆಲಸಗಾರರು ಹಟವನ್ನು ಬಿಟ್ಟು ಕೆಲಸಕ್ಕೆ ಸೇರುತ್ತಿದ್ದಾರೆ. ಏಪ್ರಿಲ್ ತಾ॥ ೧೦ ರೊಳಗಾಗಿ ೫ ಲಕ್ಷ ಜನರು ಕೆಲಸಕ್ಕೆ ಹೋಗಿದ್ದರು ಉಳಿದವರೂ ಹಾಗೆಯೇ ಸೇರಿಕೊಳ್ಳುವವರಾಗಿದ್ದರು. ಆ ಕೂಲಿಗಾರರ ಹಟದಿಂದ ಹೊಗೆ ಬಂಡಿಗಳಿಗೆ ಕಲ್ಲಿದ್ದಲು ಒದಗದೆ ೪॥ ಕೋಟಿ ರೂ. ಗಳ ನಷ್ಟವಾಗಿರುವುದು ಇತರ ವ್ಯಾಪಾರಗಾರರಿಗೂ ಕೋಟ್ಯಂತರ ರೂ. ಗಳ ನಷ್ಟವಾಗಿರಬಹುದೆಂದು ಊಹಿಸಲ್ಪಟ್ಟಿದೆ. ಏಪ್ರಿಲ್ ತಾ॥ ೨೦ ರಿಂದ ಅಲ್ಲಿನ ವ್ಯಾಪಾರವು ವಿಶೇಷವಾಗಿ ನಡೆಯುತ್ತಿದೆ.

ಬಂಗಾಳಾ ಗೌರ್ನರ ವಾಸಸ್ಥಳವಾದ ಬೆಲ್ವಿದರೆಯಿಂದ ೪ ಮೈಲಿ ದೂರದಲ್ಲಿರುವ ಜಯಂತ ಎಂಬ ಗ್ರಾಮದಲ್ಲಿ ಎರಡು ಚಿರತೆಗಳು ಸೇರಿಕೊಂಡು ಗ್ರಾಮಸ್ಥರಿಗೆ ಬಹು ತೊಂದರೆಯನ್ನು ಕೊಡುತ್ತಿರುವುವು. ಇವುಗಳಲ್ಲೊಂದು ಕಳೆದ ಸೋಮವಾರ ಬೆಳಗ್ಗೆ ತೊಟ್ಟಿಲೊಳಗೆ ಮಲಗಿದ್ದ ೨ ವರ್ಷ ವಯಸ್ಸಿನ ಮಗುವನ್ನು ಎತ್ತಿಕೊಂಡು ಹೋದುದಲ್ಲದೆ ಮಾರನೆಯ ದಿನ ಒಂದು ಹೊಲದ ಬಳಿ ಇಬ್ಬರು ಹುಡುಗಿಯರ ಕೂಡ ಆಡಿಕೊಂಡಿದ್ದ ೬ ವರ್ಷ ವಯಸ್ಸಿನ ಮಹಮ್ಮದೀಯ ಹುಡುಗಿಯನ್ನು ಹೊತ್ತುಕೊಂಡು ಹೋಗುತ್ತಿರುವಾಗ್ಗೆ ಅದನ್ನು ಜನರು ಕಂಡು ಕೂಗಿಕೊಳ್ಳಲು ಆ ಹುಡುಗಿಯನ್ನು ಬಿಟ್ಟೋಡಿತು.

ಚೀನಾದ ಉತ್ತರ ಭಾಗದಲ್ಲಿರುವ ಸೈನಿಕರು ಈಗಿನ ಪ್ರಜಾಪ್ರಭುತ್ವದ ಮೇಲೆ ಅಸಹ್ಯಗೊಂಡು ಅವಿಧೇಯತೆಯನ್ನು ತೋರಿಸುತ್ತಿದ್ದಾರೆ. ತಮಗೆ ತಕ್ಕ ನಾಯಕನು ದೊರೆದರೆ ಸಾಹಸಮಾಡಿ ಪೂರ್ವದ ರಾಜನನ್ನೇ ಪ್ರಭುತ್ವಕ್ಕೆ ನಿಲ್ಲಿಸಲು ಶಕ್ತರಾಗಿದ್ದಾರೆ. ಈಗ ಅಲ್ಲಿನ ಪ್ರಜಾಪ್ರಭುತ್ವದವರಿಗೆ ಯೂರೋಪ್ ಖಂಡದವರು ೩ ಕೋಟಿ ರೂ. ಗಳನ್ನು ವೆಚ್ಚಕ್ಕಾಗಿ ಸಾಲ ಕೊಟ್ಟಿದ್ದಾರೆ. ನಾನ್ಕಿಂಗಿನಲ್ಲಿ ಪ್ರಜಾಪ್ರಭುತ್ವದ ಕಡೆಯ ಸೈನಿಕರು ತಿರುಗಿಬಿದ್ದು ಮನೆ ಮಠಗಳನ್ನು ಸುಟ್ಟು ಸುಲಿಗೆಮಾಡಿದರು. ಪ್ರಭುಪಕ್ಷದ ಸೈನಿಕರು ಅವರ ಮೇಲೆ ಬಿದ್ದು ಅವರು ದೋಚಿಕೊಂಡಿದ್ದ ಹಣವನ್ನೆಲ್ಲಾ ತಾವು ಕಿತ್ತುಕೊಂಡರು.

ಬೊಂಬಾಯಿಯ ಸರ್ ವಿಠಲದಾಸ ದಾಮೋದರ ಥಾಕರ್ಸೆಯವರು ಪ್ರಸಿದ್ಧರಾದ ಕೋಟೀಶ್ವರರು ಮಾತ್ರವೇ ಅಲ್ಲದೆ ದೇಶಾಭಿಮಾನಿಗಳೂ ಸಾಮ್ರಾಜ್ಯಸಭೆಯ ಸಭಾಸ್ತರರೂ ವಾಗ್ಮಿಗಳೂ ಆಗಿದ್ದಾರೆ. ಇವರು ಪತ್ನೀಸಮೇತ ಇಂಗ್ಲೆಂಡಿಗೆ ಹೋಗಿಬರಬೇಕೆಂದು ಇಚ್ಛೆಗೊಂಡು, ಅಲ್ಲಿಗೆ ಹೋಗಿ ಬಂದನಂತರ ಪ್ರಾಯಶ್ಚಿತ್ತದ ಮೂಲಕ ಸ್ವಜಾತಿಗೆ ಸೇರಿಸಿಕೊಳ್ಳುವಿರಾ? ಎಂದು ತಮ್ಮ ಭಾಟಿಯಾ ಜಾತಿಯ ಜನರನ್ನು ಕೇಳುವಲ್ಲಿ, ಪ್ರಾಯಶ್ಚಿತ್ತವೇನೋ ಆಗಬಹುದು. ಜಾತಿಗೆ ಮಾತ್ರ ಸೇರಿಸಿಕೊಳ್ಳುವುದಿಲ್ಲವೆಂದು ಉತ್ತರವನ್ನು ಕೊಟ್ಟರಂತೆ. ಸಮುದ್ರಯಾನ ವಿಷಯವು ದೇಶಾಭಿಮಾನಿಗಳ ಪ್ರಯತ್ನಕ್ಕೆ ಎಷ್ಟು ತೊಡಕಾಗಿರುವುದೆಂಬುದಕ್ಕೆ ಇದೊಂದು ದೃಷ್ಟಾಂತವು.

ಜರ್ಮನಿಯಲ್ಲಿ ಅಂಚೆಯ ಕೆಲಸದಲ್ಲಿದ್ದವನೊಬ್ಬನು ೮ ಸಾವಿರ ಪೌನ್ನುಗಳನ್ನು ಅಪಹರಿಸಿಕೊಂಡು ಬೇರೊಂದೂರಿಗೆ ಹೋಗಿ ಅವಿತುಕೊಂಡಿದ್ದನು. ಅವನ ರೂಪ ವಿವರಣವನ್ನು ಕೊಟ್ಟು, ಆ ಮನುಷ್ಯನನ್ನು ಹಿಡಿದುಕೊಟ್ಟವರಿಗೆ ದೊಡ್ಡ ಬಹುಮಾನವು ದೊರೆವುದೆಂದು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದ್ದಿತು. ಒಂದುದಿನ ಆ ಕಳ್ಳನು ಒಂದು ಭೋಜನಾಲಯದಲ್ಲಿ ಕುಳಿತಿದ್ದು ಪತ್ರಿಕೆಯಲ್ಲಿದ್ದ ಆ ಪ್ರಕಟನವನ್ನು ನೋಡಿ, ತಾನು ದೊಡ್ಡ ಕೆಲಸವನ್ನು ಮಾಡಿ ಒಬ್ಬರಿಗೂ ಸಿಕ್ಕದೆ ಇರುವೆನೆಂದು ಹಿಗ್ಗಿಯೋ ಏನೋ ಪಕಪಕನೆ ನಕ್ಕನು. ಅವನು ಹಾಗೆ ನಗುವುದಕ್ಕೆ ಪತ್ರಿಕೆಯಲ್ಲಿ ಅಂಥಾ ವಿಷಯವೇನಿದ್ದಿತೋ ನೋಡಬೇಕೆಂದು ಆ ಭೋಜನಾಲಯದ ಆಳುಗಳು ಯೋಚಿಸಿ. ಬಗ್ಗಿ, ಪತ್ರಿಕೆಯನ್ನೋದಿ ನೋಡುವಲ್ಲಿ ಅದರಲ್ಲಿ ನಿರೂಪಿತವಾಗಿರುವ ಲಕ್ಷಣವುಳ್ಳ ಮನುಷ್ಯನು ಇವನೇ ಆಗಿದ್ದನು. ಕೂಡಲೆ ಅವರು ಪೋಲೀಸರಿಗೆ ತಿಳುಹಿಸಿದರು. ಅವರು ಬಂದು ಕಳ್ಳನನ್ನು ಹಿಡಿದರು.

ಅಕಸ್ಮಾತ್ತಾದ ಸಂಭವಗಳಿಂದ ಮನುಷ್ಯರ ಹೃದಯದಲ್ಲಿ ಪ್ರಾಣ ಚಲನೆಯು ನಿಂತು ಹೋಗುವುದುಂಟು. ಕೆಲ ಸಂದರ್ಭಗಳಲ್ಲಿ ಅಂತಹ ಚಿಹ್ನವನ್ನೇ ಮರಣವಾಯಿತೆಂದು ಅನೇಕರು ಭಾವಿಸಿ ಮುಂದಣ ಕೆಲಸವನ್ನು ಮಾಡುವುದುಂಟು. ಅಂಥ ಸ್ಥಿತಿಯಾದ ಮೇಲೂ ಒಂದೊಂದುಕಡೆ ಪ್ರಾಣವು ಚಲನೆಗೆ ಆರಂಭಿಸಿ ಜೀವ ಬಂದಿತೆಂದು ಹಿಗ್ಗುವಂತೆ ಮಾಡುವುದೂ ಉಂಟು. ಆಕಸ್ಮಿಕ ಸಂಭವದಿಂದ ಪ್ರಾಣವಾಯು ಚಲನವು ಬಂಧಿಸಿದರೆ ಒಂದು ಯಂತ್ರವನ್ನು ಪ್ರಯೋಗಿಸಿ ಮರಳಿ ಶ್ವಾಸೋಚ್ಛ್ವಾಸ ನಡೆಸುವಂತಹ ರೀತಿಯನ್ನು ಜರ್ಮನಿದೇಶಸ್ಥನೊಬ್ಬನು ಕಂಡು ಹಿಡಿದಿದ್ದಾನೆ. ಈಗ ಈ ಯಂತ್ರವನ್ನು ಅಮೇರಿಕಾದ ಚಿಕಾಗೋ ಪಟ್ಟಣದಲ್ಲಿ ಉಪಯೋಗಿಸುತ್ತಿರುವರು. ೬೫ ವರ್ಷದ ಒಬ್ಬ ವಕೀಲನಿಗೆ ಪ್ರಾಣವಾಯು ಚಲನವು ನಿಂತು ಹೋಗಿರಲಾಗಿ ಈ ಯಂತ್ರವನ್ನು ಪಯೋಗಿಸಿದ ॥ ಗಂಟೆಯೊಳಗಾಗಿ ಅವನು ಜೀವತುಂಬಿಕೊಂಡನು. ಈಚೆಗೆ ಅನೇಕ ಮಂದಿಗಳು ಇದರ ಪ್ರಯೋಗದಿಂದ ಪುನರ್ಜೀವಿತರಾದರೆಂದು ಪ್ರಕಟವಾಗಿದೆ. ಈ ಯಂತ್ರವು ೭ ಅಡಿ ಉದ್ದವೂ ೩॥ ಅಡಿ ವ್ಯಾಸವೂ ಉಳ್ಳದಾಗಿ ಒಂದು ಕೊಳವೆಯಂತಿದೆ. ಇದರಲ್ಲಿ ೨೮೦೦ ರಾತಲಿನಷ್ಟು ಪ್ರಾಣವಾಯುವನ್ನು ತುಂಬಿಸಿಡಬಹುದಂತೆ. ಇದರ ಹೆಸರು "ಪಲ್ ಮೋಟರ್."

ಸರ್ ವಿಲಿಯಂ ರಾಂಸೆ ಎಂಬ ಒಬ್ಬ ದೊಡ್ಡ ಆಂಗ್ಲ ಶಾಸ್ತ್ರಜ್ಞನು ಕಲ್ಲಿದ್ದಲನ್ನು ಗಣಿಯಿಂದ ಈಚೆಗೆ ತೆಗೆಯದೇನೆಯೇ ಅದರಿಂದಾಗತಕ್ಕ ಪ್ರಯೋಜನವನ್ನು ಪಡೆದುಕೊಳ್ಳಬಹುದಾದ ರೀತಿಯನ್ನು ಕಂಡು ಹಿಡಿದಿದ್ದಾನೆ. ಅದರ ಕ್ರಮವು ಹೇಗೆಂದರೆ—ಕಲ್ಲಿದ್ದಲ ಗಣಿಗಳಲ್ಲಿ ೨ ಅಡಿಯಗಲದ ತೂತುಗಳನ್ನು ಆಳವಾಗಿ ಕೊರೆದು, ಅದಕ್ಕೆ ಬೆಂಕಿ ಹಚ್ಚುವುದು, ಆ ಗಣಿಯಿಂದ ಮೇಲಕ್ಕೆ ಮೂರು ಕೊಳವೆಗಳು ಇಡಲ್ಪಟ್ಟಿರುವುವು. ಒಂದರ ಮೂಲಕವಾಗಿ ಗಾಳಿಯನ್ನು ಗಣಿಯೊಳಕ್ಕೆ ತುಂಬಿ ಬೆಂಕಿಯು ಚೆನ್ನಾಗಿ ಉರಿಯುವಂತೆ ಮಾಡಿದರೆ, ಉಳಿದೆರಡು ಕೊಳವೆಗಳ ಮಾರ್ಗವಾಗಿ, ಗಣಿಯೊಳಗಿನಿಂದ ಕಲ್ಲಿದ್ದಲ ವಾಯುವು ಹೊರಕ್ಕೆ ಬರುವುದು. ಈ ವಾಯುವನ್ನು ಅಲ್ಲೇ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ, ತಂತಿಗಳ ಮೂಲಕವಾಗಿ ಬೇಕಾದ ಕಡೆಗೆ ಸಾಗಿಸುವುದು. ಈ ಶಕ್ತಿಯನ್ನು ಇಂಗ್ಲೆಂಡು ದೇಶದ ಯಾವಕಡೆಗೆ ಬೇಕಾದರೂ ಸಾಗಿಸಿಕೊಳ್ಳಬಹುದೆಂದೂ, ಎಲ್ಲ ಕಾರ್ಯಾಲಯಗಳ ಯಂತ್ರಗಳನ್ನೂ ಹೊಗೆಬಂಡಿಗಳನ್ನೂ ಈ ಶಕ್ತಿಯಿಂದಲೇ ನಡೆಯಿಸಬಹುದೆಂದೂ, ಮನೆಮನೆಯವರು ಇದರಿಂದ ಅಡಿಗೆಯ ಕೆಲಸವನ್ನು ಮಾಡಿಕೊಂಡು, ದೀಪವನ್ನೂ ಉರಿಸಿಕೊಳ್ಳಬಹುದೆಂದೂ, ಆ ಶಾಸ್ತ್ರಜ್ಞನು ನುಡಿಯುತ್ತಾನೆ. ಕಲ್ಲಿದ್ದಲಿಗೆ ಕೊಡುತ್ತಿದ್ದ ಬೆಲೆಯಲ್ಲಿ ಐದನೆಯ ಒಂದು ಭಾಗದಷ್ಟು ಮಾತ್ರವೇ ಇದಕ್ಕೆ ವೆಚ್ಚವಾಗುವುದೆಂದೂ, ಕಾರ್ಯಾಲಯಗಳಿಂದ ಹೊರಡುತ್ತಿದ್ದ ಹೊಗೆಯು ತಪ್ಪಿಹೋಗುವ ಕಾರಣ ಪಟ್ಟಣಗಳಲ್ಲಿ ಆರೋಗ್ಯವುಂಟಾಗುವುದೆಂದೂ, ಗಣಿಗಳಲ್ಲಿ ಈಗ ೧೦ ಲಕ್ಷ ಕೂಲಿಯಾಳುಗಳಿಂದ ಕೆಲಸಮಾಡಿಸಿ, ಅವರಿಗೆ ಅಧಿಕವಾದ ಕೂಲಿಯನ್ನು ಕೊಡುವಭಾರವೂ ತಪ್ಪಿಹೋಗುವುದೆಂದೂ, ಆ ಕೂಲಿಕಾರರ ಕಟ್ಟುಪಾಡಿನಿಂದ ಮೊನ್ನೆತಾನೇ ಸಂಭವಿಸಿದ್ದಂಥ ತೊಂದರೆಯು ಮುಂದೆ ಎಂದೂ ಸಂಭವಿಸಲು ಅವಕಾಶವೇ ಇಲ್ಲವೆಂದೂ, ಈಗಿನ ಪ್ರಕಾರ ಗಣಿಗಳಿಂದ ಕಲ್ಲಿದ್ದಲನ್ನು ಹೊರಕ್ಕೆ ತೆಗೆದು ಉಪಯೋಗಿಸುತ್ತಾ ಬಂದರೆ ೧೦೦ ವರ್ಷಗಳೊಳಗಾಗಿ ಎಲ್ಲವೂ ಮುಗಿದು ಹೋಗುವುದೆಂದೂ, ತಾನು ಸೂಚಿಸುವ ಪದ್ಧತಿ ಪ್ರಕಾರ ಮಾಡಿದರೆ ಎಷ್ಟೋ ಶತಮಾನಗಳವರೆಗೆ ನಡೆದು ಬರುವುದೆಂದೂ ಹೇಳುತ್ತಾನೆ. ಈ ಪ್ರಯತ್ನವನ್ನು ಮಾಡಿಸಿ ನೋಡುವುದಕ್ಕೆ ಆಗಲೇ ಒಬ್ಬ ಗಣಿಯಧಿಕಾರಿಯು ಒಪ್ಪಿ[illegible]ಮಾಡಿಸುತ್ತಿದ್ದಾನೆ. ಇದು ಸಾರ್ಥಕವಾಗುವಾದರೆ ರಾಂಸೆಯಂತಹ ಒಬ್ಬ ಶಾಸ್ತ್ರಜ್ಞನಿಂದ ಪ್ರಪಂಚಕ್ಕೆ ಎಷ್ಟುಪಕಾರವಾಗುವುದೋ ಅದನ್ನು [illegible].

ಲ್ಲಾ ೩೧॥ ಕೋಟಿ ಜನರಿರುವರೆಂದು ಗೊತ್ತಾಗಿದೆ. ಇಷ್ಟು ಜನಸಂಖ್ಯೆಯಲ್ಲಿ ಓದುವ ಹುಡುಗರು ॥ ಕೋಟಿಯು ಕೂಡಾ ಇಲ್ಲದಿರುವುದನ್ನು ನೋಡಿದರೆ ಬಾಲವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಾದ ಪ್ರಯತ್ನವನ್ನು ಮಾಡಬೇಕಾದುದು ಅವಶ್ಯಕವೆಂದು ಕಾಣುತ್ತದೆ.

ಮೈಸೂರ್ ಸ್ಟಾರ್

೧೯೧೨ ನೆಯ ಏಪ್ರಿಲ್ ತಾ॥ ೨೯ ನೆಯ ಸೋಮವಾರ.

ಸಾಮ್ರಾಜ್ಯಸಭೆ ಮತ್ತು ಭರತಖಂಡದ ಹಣ.

ಲಾರ್ಡ್ ಮಾರ್ಲೆ-ಲಾರ್ಡ್ ಮಿಂಟೋರವರ ಪ್ರಭುತ್ವದಲ್ಲಿ ಭರತಖಂಡದ ರಾಜ್ಯಭಾರದೊಳಗೆ ಮಾಡಲ್ಪಟ್ಟ ಮುಖ್ಯ ಸುಧಾರಣೆಗಳಲ್ಲಿ ವೈಸ್‌ರಾಯರ ಮತ್ತು ಪ್ರಾಂತಿಕ ಗೌರ್ನರುಗಳ ಸಾಮ್ರಾಜ್ಯಸಭೆಗಳನ್ನೂ ಮತ್ತು ನಿಯಮನಿರ್ಮಾಣ ಸಭೆಯನ್ನೂ ವಿಸ್ತರಿಸಿ, ಅದರಲ್ಲಿ ಭಾರತೀಯ ಸಭಾಸ್ತರರನ್ನು ವಿಶೇಷವಾಗಿ ಸೇರಿಸಿದುದೂ, ತತ್ಸಂಬಂಧವಾದ ಕೆಲವಧಿಕಾರಗಳನ್ನು ಭಾರತೀಯರಿಗೆ ಕೊಟ್ಟುದೂ ಸಹ ಚಿರಸ್ಮರಣೀಯವಾಗಿರುತ್ತವೆಯಷ್ಟೆ. ಇಂಥ ವರದಾನವು ಈ ದೇಶೀಯರಿಗೆ ದೊರೆತಿದ್ದರೂ, ಕೆಲವುಬಾಧೆಗಳ ಮೂಲಕವಾಗಿ ಒಂದೊಂದು ಸಲ ನ್ಯಾಯವಾಗಿ ಆಗಬೇಕಾದ ಫಲಗಳು ಆಗದೆ ಹೋಗಿ, ದೇಶೀಯರು ಪರಿತಪಿಸುವ ಸ್ಥಿತಿಯು ಪ್ರಾಪ್ತವಾಗುತ್ತಿದೆ. ಭರತಖಂಡದಲ್ಲಿ ಬಾಲವಿದ್ಯಾಭ್ಯಾಸದ ಪ್ರಸಾರವಾಗಬೇಕಾದುದು ಅತ್ಯಾವಶ್ಯಕವೆಂಬುದನ್ನು ಪಾಲ್ಯಪಾಲಕರೆಲ್ಲರೂ ಒಪ್ಪಿಕೊಳ್ಳುತ್ತಿದ್ದರೂ, ಅದರ ಪ್ರಸಾರೋಪಾಯವನ್ನು (ಅಂದರೆ ಬಲಾತ್ಕಾರದಿಂದ ವಿದ್ಯಾಭ್ಯಾಸಮಾಡಿಸಬೇಕಾದ ವಿಧಿಕ್ರಮವನ್ನು) ಆ॥ ಗೋಖಲೆಯವರು ಸಾಮ್ರಾಜ್ಯಸಭೆಯಿದಿರಿಗೆ ಚರ್ಚೆಗೆ ತಂದು, ವಿಧಿಯನ್ನು ಸೂಚಿಸಿದಾಗ್ಗೆ, ಅದಕ್ಕೆ ತಕ್ಕಷ್ಟು ಸಭಾಸದರ ಅನುಮೋದನವು ದೊರೆಯದೆ, ಅದು ದೂಡಲ್ಪಟ್ಟಿತಷ್ಟೆ.

ಅದರಂತೆಯೇ ದೇಶಕ್ಷೇಮಕ್ಕೆ ಅತ್ಯಂತಸಾಧಕವಾದ ಹಣದ ವಿಷಯವೊಂದು ಆ॥ ಸರ್ ವಿಠಲದಾಸ ಥಾಕರ್ಸೆಯವರಿಂದ ಸಾಮ್ರಾಜ್ಯಸಭೆಯಲ್ಲಿ ಚರ್ಚೆಗೆ ತರಲ್ಪಟ್ಟು, ತತ್ಸಂಬಂಧವಾದ ವಿಧಿಯೊಂದನ್ನು ಏರ್ಪಡಿಸಬೇಕೆಂದು ಸೂಚಿಸಿದಾಗ, ಅದಕ್ಕೆ ಭರತಖಂಡದ ನಿವಾಸಿಗಳಾದ ನಾನಾಮತಜಾತಿಯ ಪ್ರತಿನಿಧಿಸಭಾಸ್ತರರೆಲ್ಲರೂ ಒಪ್ಪಿದರೂ, ಕೇವಲ ಸರ್ಕಾರದ ಪಕ್ಷದ ಸಭಾಸ್ತರರೊಬ್ಬರೂ ಒಪ್ಪದೆ ಹೋದುದರಿಂದಲೇ ಎಂದರೆ ಥಾಕರ್ಸೆಯವರ ಪಕ್ಷಕ್ಕೆ ೩೪ ಮಂದಿಗಳು ಅಭಿಪ್ರಾಯಕೊಟ್ಟು, ಇದಿರುಪಕ್ಷಕ್ಕೆ ೩೫ ಮಂದಿಗಳು ಸೇರಿದುದರಿಂದಲೇ ಅತಿ ಮುಖ್ಯವಾದ ಈ ವಿಷಯವು ದೂಡಲ್ಪಟ್ಟಿತು. ಆ ವಿಷಯವೇನೆಂದರೆ:—ಸಾಮ್ರಾಜ್ಯ ಸರ್ಕಾರದವರು ಈ ದೇಶದ ವ್ಯವಹಾರಕ್ಕಾಗಿ ಮುದ್ರಿಸುವ ರೂಪಾಯಿಗಳಲ್ಲಿ ರೂ. ೧ ಕ್ಕೆ ೧೦ ಆಣೆಯ ಬೆಳ್ಳಿಯು ಮಾತ್ರ ಇರುವುದರಿಂದ, ಪ್ರತಿ ರೂಪಾಯಿಗೂ ಸರ್ಕಾರಕ್ಕೆ ೬ ಆಣೆಯ ಲಾಭವು ಬರುತ್ತಿದೆ. ಈ ಲಾಭದ ಹಣವೇ ಈಗ ೨೩ ಕೋಟಿ ರೂಪಾಯಿಗಳಷ್ಟಾಗಿದೆ. ಇದಲ್ಲದೆ ಹಣಕ್ಕೆ ಪ್ರತಿಯಾಗಿ ವ್ಯವಹಾರಕ್ಕಿಟ್ಟಿರುವ ನೋಟುಗಳನ್ನು ಪ್ರಜೆಗಳು ಸರ್ಕಾರಕ್ಕೆ ಕೊಟ್ಟು, ಅವುಗಳಿಗೆ ಪ್ರತಿಯಾಗಿ ಹಣವನ್ನು ಯಾವಾಗ ಕೇಳಿದರೂ ಕೊಡಲು ಸಿದ್ಧವಾಗಿರುವುದಕ್ಕಾಗಿ ೧೦ ಕೋಟಿಯೂ ೩೩ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ತೆಗೆದಿಟ್ಟುಕೊಂಡಿದ್ದಾರೆ. ಇವೆರಡು ಭಾಗದಿಂದ ಬಹುಶಃ ೪೦ ಕೋಟಿ ರೂಪಾಯಿಗಳು ಸರ್ಕಾರದವರ ವಶದಲ್ಲಿವೆ. ಈ ಹಣವನ್ನು ಅವರು ಭರತಖಂಡದಲ್ಲಿಟ್ಟಿರುವುದಿಲ್ಲ. ಇದು ಲಂಡನ್ನಿನಲ್ಲಿದೆ. ಪ್ರಭುತ್ವದವರು ಈ ಹಣವನ್ನು ಆಂಗ್ಲವರ್ತಕರಿಗೂ, ಧನಾಗಾರಗಳಿಗೂ ನೂರಕ್ಕೆ ವರ್ಷಕ್ಕೆ ೨-೩ ರೂ. ಗಳ ಬಡ್ಡಿಗಾಗಿ ಕೊಟ್ಟಿರುತ್ತಾರೆ. ಈ ಹಣದ ಮೇಲೆ ಅವರು ೨೪೦ ಕೋಟಿ ರೂ. ಗಳ ವರೆಗೂ ವ್ಯಾಪಾರವನ್ನು ನಡೆಯಿಸಿಕೊಂಡು ಹೋಗುತ್ತಿದ್ದಾರೆಂದು ಲಾರ್ಡ್ ಮಾರ್ಲೆಯವರೇ ಒಂದಾನೊಂದು ಸಂದರ್ಭದಲ್ಲಿ ಅಪ್ಪಣೆಕೊಡಿಸಿದ್ದರು. ಇಷ್ಟು ದೊಡ್ಡ ಹಣವು ಭರತಖಂಡದುದಾದುದರಿಂದ ಅದು ಈ ದೇಶದಲ್ಲೇ ಇರಬೇಕೆಂದೂ ದೈವೇಚ್ಛೆಯಿಂದ ಯುದ್ಧಮೊದಲಾದ ಪಟಲಗಳು ಪ್ರಾಪ್ತವಾದರೆ ಆ ಹಣವು ನಮ್ಮ ದೇಶಕ್ಕೆ ಸೇರುವ ಆಸೆಯೇ ಇಲ್ಲವೆಂದೂ, ಪರದೇಶದವರಿಗೆ ಆ ಹಣವನ್ನು ೨-೩ ರೂ. ಗಳ ಬಡ್ಡಿಗೆ ಕೊಡುವುದಕ್ಕಿಂತಲೂ, ಈ ದೇಶೀಯರಿಗೇ ೫-೬ ರೂ. ಗಳ ಬಡ್ಡಿಗೆ ಕೊಡಬಹುದೆಂದೂ ಸರ್ ಥಾಕರ್ಸೆಯವರು ಸೂಚಿಸಿದರು. ಇದನ್ನು ಅಯುಕ್ತವಾದುದೆಂದು ಹೇಳುವುದಕ್ಕೆ ಸಮಂಜಸವಾದ ಯಾವಕಾರಣವೂ ಇರುವುದಿಲ್ಲ. ಈ ದೇಶದಲ್ಲಿ ಜನರಿಗೆ ಹಣವು ದೊರಕದೆ ಹೆಚ್ಚಾದ ಬಡ್ಡಿಯನ್ನು ಕೊಟ್ಟು ನರಳುತ್ತಿದ್ದಾರೆ. ದ್ರವ್ಯವು ಹೇರಳವಾಗಿ ಸುಲಭವಾದ ಬಡ್ಡಿಗೆ ದೊರೆಯುವಂತಾದರೆ ಈ ದೇಶದ ಕೈಗಾರಿಕೆಯೂ, ವ್ಯಾಪಾರವೂ, ಬೇಸಾಯವೂ ಎಷ್ಟೋ ಅಭಿವೃದ್ಧಿಗೊಳ್ಳುವುವು. ಅವುಗಳ ಹೀನಸ್ಥಿತಿಗೆ ಹಣದ ಕೊರತೆಯೂ ಒಂದು ಮುಖ್ಯಕಾರಣವಾಗಿದೆ. ನಮ್ಮ ದೇಶದವರು ಸಮಯಬಿದ್ದಾಗ ೮-೧೦-೧೨ ರೂ. ಗಳ ಬಡ್ಡಿಗೆ ಸಾಲವನ್ನು ತೆಗೆದುಕೊಳ್ಳುತ್ತಿರುವಾಗ, ನಮ್ಮ ಹಣವೇ ಅನ್ಯದೇಶದಲ್ಲಿ ಅನ್ಯರಿಗೆ ೨-೩ ರೂ. ನ ಬಡ್ಡಿಗೆ ಕೊಡಲ್ಪಡುವದೆಂದರೆ, ಅದು ತೀರ ಅನುಚಿತವಲ್ಲವೆ? ಅದುಕಾರಣ ಆ ಹಣವನ್ನು ಈ ದೇಶಕ್ಕೆ ತರಿಸಿ, ಇಲ್ಲಿನವರಿಗೇ ಬಡ್ಡಿಗೆ ಕೊಡಬೇಕು, ಅಥವಾ ಇಲ್ಲಿಯ ಬೊಕ್ಕಸದಲ್ಲೇ ಇಟ್ಟಿರಬೇಕು, ಎಂಬುದು ಥಾಕರ್ಸೆಯವರ ಅಭಿಪ್ರಾಯವು.

ವ್ಯವಹಾರದಲ್ಲಿರುವ ನೋಟುಗಳನ್ನಾಗಲಿ, ಸರ್ಕಾರಿ ಪತ್ರಗಳನ್ನಾಗಲಿ ಪ್ರಜೆಗಳು ತಂದುಕೊಟ್ಟು ಅವುಗಳ ಹಣವನ್ನು ಕೇಳಿದಾಗ, ಸಲ್ಲಿಸುವುದಕ್ಕೋಸ್ಕರವೆಂಬುದಾಗಿ ಅಮೇರಿಕಾದ ಪ್ರಭುತ್ವದವರು ೩೫೦ ಕೋಟಿ ರೂ. ನ ಭಂಗಾರವನ್ನು ತಮ್ಮ ಬೊಕ್ಕಸದಲ್ಲಿಟ್ಟುಕೊಂಡಿದ್ದಾರೆ. ಇದೇ ತೆರದ ಕಾರಣಕ್ಕೋಸ್ಕರವೇ ಜರ್ಮನಿ-ರಷ್ಯಾ-ಫ್ರಾನ್ಸ್ ಮೊದಲಾದ ದೇಶದವರೂ ನೂರಾರುಕೋಟಿಗಟ್ಟಲೆಯಾದ ಚಿನ್ನವನ್ನು ಕೋಶಗಳಲ್ಲಿಟ್ಟುಕೊಂಡಿದ್ದಾರೆ. ಅದರಂತೆಯೇ ಸಾಮ್ರಾಜ್ಯಸರ್ಕಾರದವರು ನಮ್ಮ ದೇಶದಲ್ಲೂ ಕೆಲ ಹಣವನ್ನು ಇಟ್ಟುಕೊಂಡಿರಬೇಕಾದುದು ಆವಶ್ಯಕವಾದರೂ, ಆ ಹಣವನ್ನು ಭರತಖಂಡದ ಬೊಕ್ಕಸದಲ್ಲಿ ಇಡದೆ ೬ ಸಾವಿರ ಮೈಲುಗಳ ದೂರದಲ್ಲಿರುವ ಲಂಡನ್ನಿನಲ್ಲಿ ವರ್ತಕರ ವಶಕ್ಕೆ ಕೊಟ್ಟಿರಬೇಕಾದುದಕ್ಕೆ ಸಮರ್ಪಕವಾದ ಕಾರಣವೇನೂ ಇರುವುದಿಲ್ಲ.

ಇದಲ್ಲದೆ ಸಾಮ್ರಾಜ್ಯ ಸರ್ಕಾರದವರು ಈ ದೇಶದಲ್ಲಿ ಸರ್ವತ್ರ ವ್ಯವಹರಣೆಯಲ್ಲಿರುವ ೫ ರೂ. ನ ನೋಟುಗಳಂತೆ ೫೦-೧೦೦ ರೂ. ನ ನೋಟುಗಳನ್ನೂ ಎಲ್ಲಾ ಅಧಿಪತ್ಯದಲ್ಲೂ ವ್ಯವಹರಣೆಗೆ ಬರುವಂತೆ ಏರ್ಪಡಿಸಬೇಕೆಂದು ಯೋಚಿಸಿದ್ದರು. ಆದರೆ ಬೊಕ್ಕಸದಲ್ಲಿ ಆ ನೋಟುಗಳ ಬೆಲೆಗೆ ತಕ್ಕಷ್ಟು ದ್ರವ್ಯವು ಇಲ್ಲವೆಂಬ ಕಾರಣದಿಂದಲೇ ಅವುಗಳ ನಿರ್ಮಾಣವನ್ನು ಸದ್ಯಕ್ಕೆ ನಿಲ್ಲಿಸಿಬಿಟ್ಟರು. ಮೇಲೆಕಂಡ ಹಣವು ಈ ದೇಶದಲ್ಲೇ ಇದ್ದರೆ ಆ ನೋಟಿನ ಪ್ರಯತ್ನಕ್ಕೆ ಅಡ್ಡಿಯೂ ಉಂಟಾಗುತ್ತಿರಲಿಲ್ಲ. ನಮ್ಮ ಹಣವು ನಮ್ಮ ಕೈಯಲ್ಲೇ ಇದ್ದರೆ ಧನಾಭಾವದ ತೊಡಕುಗಳು ನಮಗೆಲ್ಲಿರುತ್ತಿದ್ದುವು? ಇವೆಲ್ಲಕಾರಣಗಳೂ ಸಮಂಜಸವಾಗಿದ್ದುದರಿಂದಲೇ ಸರ್ ಥಾಕರ್ಸೆಯವರ ಅಭಿಪ್ರಾಯಕ್ಕೆ ಅನುದ್ಯೋಗಿಕ ಪ್ರಜಾಪ್ರತಿನಿಧಿ ಸಭಾಸ್ತರರು ೨೫ ಮಂದಿಗಳೂ, ಆಂಗ್ಲವರ್ತಕಸಂಘದ ಪ್ರತಿನಿಧಿಗಳು ಇಬ್ಬರೂ, ಯೂರೇಷಿಯನರ ಪ್ರತಿನಿಧಿಯೊಬ್ಬನೂ ಸರ್ಕಾರದಿಂದಾರಿಸಿ ನಿಯುಕ್ತರಾಗಿರುವ ಅನುದ್ಯೋಗಿಕ ಸಭಾಸದರು ೬ ಜನರೂ ಅಂತೂ ಒಟ್ಟು ೩೪ ಮಂದಿಗಳು ಅನುಮೋದಿಸಿದರು. ಸರ್ಕಾರದ ಉದ್ಯೋಗಿಗಳಾದ ೩೫ ಮಂದಿ ಸಭಾಸದರುಗಳೂ ಅದಕ್ಕೆ ವ್ಯತಿರಿಕ್ತವಾಗಿ ಅಭಿಪ್ರಾಯಕೊಟ್ಟರು. ಅಂತೂ ವಿರುದ್ಧಾಭಿಪ್ರಾಯವು ೧ ಅಂಶ ಮಾತ್ರದಿಂದಧಿಕವಾಗಿ ಬಂದಿದ್ದರೂ ಈ ಸೂಚನೆ ಹೇಗೋ ಕಡೆಗೊಳಿಸಲ್ಪಟ್ಟಿತು. ಸರ್ಕಾರದ ಉದ್ಯೋಗಿಕಸಭಾಸದರು ಉದ್ಯೋಗಸಂಬಂಧವಾದ ಪಕ್ಷದಿಂದ ಒಟ್ಟಿಗೆ ಒಂದೇತೆರದ ಅಭಿಪ್ರಾಯವನ್ನು ಕೊಟ್ಟು, ಈ ಸಮಂಜಸವಾದ ಸೂಚನೆಯನ್ನು ದಬ್ಬಿದಂತಾಯಿತೇ ಹೊರತು, ಭರತಖಂಡಕ್ಷೇಮಕ್ಕೆ ಈ ಸೂಚನೆಯು ಸಹಾಯಕವೆ? ಅಲ್ಲವೆ? ಎಂಬ ವಿಚಾರದಕಡೆಗೆ ಲಕ್ಷ್ಯವಿತ್ತು ತಮ್ಮ ಅಭಿಪ್ರಾಯಗಳನ್ನು ಕೊಟ್ಟಂತೆ ಕಾಣುವುದಿಲ್ಲ. ಭಾರತೀಯ ಪ್ರಜಾಪ್ರತಿನಿಧಿಗಳೆಲ್ಲರೂ, ಐಕಕಂಠ್ಯದಿಂದ ಕೊಟ್ಟಿರುವ ಈ ಅಭಿಪ್ರಾಯವು ಸರ್ಕಾರದ ಪಕ್ಷದ ಒಂದು ಅನುಮತದ ಹೆಚ್ಚಿಗೆಯ ಮಾತ್ರದಿಂದಲೇ ತಿರಸ್ಕೃತವಾಗಿರುವುದರ ಕಡೆಗೆ ಪ್ರಜಾರಂಜಕರಾದ ಲಾರ್ಡ್ ಹಾರ್ಡಿಂಜ್‌ರವರೂ, ಸ್ಟೇಟ್‌ಸೆಕ್ರೆಟರಿಗಳೂ ದೂರಾಲೋಚನೆಯಿಂದ ಗಮನವಿತ್ತು, ಮುಂದಾದರೂ ಪ್ರಜೆಗಳ ಇಷ್ಟದಂತೆ ನೆರವೇರಲು ಅವಕಾಶವನ್ನುಂಟುಮಾಡಿದರೆ ಕೌನ್ಸಿಲ್ ಸುಧಾರಣೆಯ ಕೀರ್ತಿಯು ಸುಪ್ರತಿಷ್ಠಿತವಾಗಲು ಮಾರ್ಗವಾಗುವುದು.

ಈ ಪತ್ರಿಕೆಯ ಪ್ರಕಾಶಕರಾದ ಮ॥ ವೈ ವಿರೂಪಾಕ್ಷಯ್ಯನವರ ಪತ್ನಿಯವರು ಶಿಶುವನ್ನು ಪ್ರಸವಿಸಿ ಅಸ್ವಸ್ಥರಾಗಿದ್ದು ಕಳೆದ ತಾ॥ ೨೨ ನೆಯ ಸೋಮವಾರದ ರಾತ್ರಿ ಪರಮಪದವನ್ನು ಹೊಂದಿದರೆಂದು ತಿಳುಹಲು ಅತ್ಯಂತ ಖೇದವಾಗುತ್ತದೆ. ಆಕೆಯವರಿಗೆ ಮರಣಕಾಲದಲ್ಲಿ ೨೦ ವರ್ಷ ವಯಸ್ಸು ಮಾತ್ರವಾಗಿದ್ದಿತು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ಸಾಯಂಕಾಲ ೧॥ ಗಂಟೆಯ ಹೊತ್ತು ಚೆನ್ನಾಗಿಯೂ, ಶನಿವಾರ ಸಾಯಂಕಾಲ ಸಾಧಾರಣವಾಗಿಯೂ ಮಳೆಯಾಯಿತು. ಇನ್ನೂ ಮಳೆಯಾಗುವ ಲಕ್ಷಣವಿದೆ.

ಮ॥ ರಾಜವೈದ್ಯ ನಾರಾಯಣಜೀ, ಕೇಶವಜೀಯವರ ಆಯುರ್ವೇದೀಯೌಷಧಾಲಯದ ಪ್ರಕಟನ ಪತ್ರಿಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ. ವಾಚಕ ದಯವಿಟ್ಟು ಅದನ್ನು ಅವಗಾಹಿಸಬೇಕೆಂದು ಕೋರುವೆವು.

ನಾರ್ತ್‌ವೆಸ್ಟ್ ರೈಲ್ವೆಯಲ್ಲಿ ಡೆಪ್ಯುಟಿ ಮ್ಯಾನೇಜರಾಗಿದ್ದ ಮ॥ ಬೆಲ್ ಎಂಬುವರನ್ನು ನಮ್ಮ ಸರ್ಕಾರದವರು ಇಂಡ್ಯಾ ಸರ್ಕಾರದನುಮತಿಯನ್ನು ಪಡೆದು ಎರಡುವರ್ಷ ಕಾಲದ ವರೆಗೆ ರೈಲ್ವೆಯ ಅಧ್ಯಕ್ಷರಾಗಿ ನಿಯಮಿಸಿಕೊಂಡಿರುತ್ತಾರೆ. ಇವರು ಈ ಸಂಸ್ಥಾನದಲ್ಲಿ ಲೋಹಮಾರ್ಗಾಭಿವೃದ್ಧಿಯ ಸಾಧನವನ್ನು ಕುರಿತು ಇಷ್ಟರಲ್ಲೇ ಪರ್ಯಾಲೋಚಿಸತಕ್ಕವರಾಗಿರುವರು.

ಪ್ರೊಫೆಸರ್ ಪರಶುರಾಮರಾವ್‌ಯವರು ತಮ್ಮ ಸರ್ಕಸ್ಸನ್ನು ಚನ್ನಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ೫-೬ ಆಟಗಳನ್ನು ಪ್ರದರ್ಶಿಸಿ ಈಗ ಬೆಂಗಳೂರಿಗೆ ಹೋಗಿ ಅಲ್ಲಿ ತಮ್ಮ ಚಮತ್ಕಾರವನ್ನು ತೋರಿಸುತ್ತಿರುವರು. ಚನ್ನಪಟ್ಟಣದಲ್ಲಿ ಪರಶುರಾಮರಾವ್‌ಯವರು ಹುಲಿಯನ್ನು ಆಡಿಸುತ್ತಿರುವಾಗ್ಗೆ ಆ ದುಷ್ಟಮೃಗವು ರೇಗಿ ಅವರ ಮೇಲೆ ಬೀಳಲು ಹೋಗಿ ಅವರ ಕೈಯನ್ನು ಪರಚಿಬಿಟ್ಟಿತೆಂದು ಕೇಳುತ್ತೇವೆ

ಬರೋಡಾ ಗಾಯಕವಾಡ ಮಹಾರಾಜ ದಂಪತಿಗಳು ಪರಿವಾರ ಸಮೇತ ಕಳೆದ ತಾ॥ ೨೩ ರ ಬೆಳಗ್ಗೆ ಬೆಂಗಳೂರಿಗೆ ಬಂದು, ಆ ಕೂಡಲೆ ಮಹಾರಾಣಿಯವರು ರೈಲುಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು; ಮಹಾರಾಜರವರು ಪರ್ವ ಭವನಕ್ಕೆ ಮೋಟಾರು ಬಂಡಿಯಲ್ಲಿ ಚಿತ್ತೈಸಿ ಮ॥ ವಿ. ಪಿ. ಮಾಧವರಾಯರ ಕೂಡ ಪ್ರಸ್ತಾಪಿಸಿಕೊಂಡು ಮೋಟಾರು ಬಂಡಿಯಲ್ಲಿ ರಾಜಧಾನಿಗೆ ಬಂದು ಇಲ್ಲಿಂದ ಪತ್ನಿಯವರೊಡನೆ ಸೀಗೂರು ಮಾರ್ಗವಾಗಿ ಉದಕಮಂಡಲಕ್ಕೆ ತೆರಳಿದರು.

ರಾಜಧಾನಿಯಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಉಜ್ಜಯಿನಿ ಹಿಂಚಿನಮಠದ ಶಿವಲಿಂಗಯ್ಯನೆಂಬ ದೀನ ವಿದ್ಯಾರ್ಥಿಯ ಸಹಾಯಾರ್ಥವಾಗಿ ಕಳೆದ ಏಪ್ರಿಲ್ ತಾ॥ ೧೫ ರ ಸಂಚಿಕೆಯಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಸಂತೋಷದಿಂದ ಚಂದಾ ಹಣವನ್ನು ಕೊಟ್ಟಿರುವ ಮಹನೀಯರು:—

	ರೂ ಆ. ಪೈ.
೧. ಶ್ರೀ ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸನ್ನಿಧಿ	೧-೦-೦
೨. ಶ್ರೀರಂಗಪಟ್ಟಣದ ಮುನಸೀಫರು ಮ॥ ಪಿ ಮಹಾದೇವಯ್ಯ ಬಿ ಎ, ಬಿ ಎಲ್., ರವರು	೨-೦-೦
೩. ಮ॥ ವೈ ವಿರೂಪಾಕ್ಷಯ್ಯನವರು ತಮ್ಮ ಕೈ॥ ಪತ್ನಿಯವರ ಜ್ಞಾಪನಾರ್ಥವಾಗಿ	೨-೦-೦
೪. ಲೆವಿನ್ಯೂ ಪ್ರೊಫೆಸರ್ ಮ॥ ಜಿ. ಮಲ್ಲಿಕಾರ್ಜುನಯ್ಯ, ಬಿ. ಎ., ಯವರು	೧-೦-೦
೫. ತಿಪಟೂರಿನ ಜವಳಿವ್ಯಾಪಾರಿ ಮ॥ ಗದ್ದಿಗೆಮನೆ ನಂಜಪ್ಪನವರು	೧-೦-೦
೬. ಕಡೂರು ಡಿ॥ ಬುಕ್ಕಾಂಬುಧಿ ಎಚ್. ಮರುಳಸಿದ್ಧಪ್ಪನವರು	೦-೪-೦
ಒಟ್ಟು ರೂ.	೭-೪-೦

ವರ್ತಮಾನ ಸಂಗ್ರಹವು.

ಆಂಗ್ಲ ಸರ್ಕಾರದಲ್ಲಿ ೨೫ ಸಾವಿರ ಒಂಟೆಗಳು ಸಾಕಲ್ಪಡುತ್ತಿವೆ.

ಕಾಫಿ ಬೀಜದ ಮೇಲಣ ಸಿಪ್ಪೆಯಿಂದ ಈಗ ಒಂದು ತರದ ಮದ್ಯವನ್ನು ಇಳಿಸುತ್ತಲಿರುವರು.

ಪಂಜಾಬು ವಿಶ್ವವಿದ್ಯಾಲಯದ ಪುಸ್ತಕಭಾಂಡಾಗಾರದಲ್ಲಿ ೫೫ ಸಾವಿರ ಪುಸ್ತಕಗಳಿರುವುವಂತೆ.

ಕಳೆದ ಜನಪರಿಗಣಿತಿಯ ಪ್ರಕಾರ ಭರತಖಂಡದ ಜನಸಂಖ್ಯೆಯು ೩೧॥ ಕೋಟಿಯೆಂದು ಗೊತ್ತಾಗಿದೆ.

ರಷ್ಯಾದೇಶದಲ್ಲಿ ಉಲ್ಫ್‌ಹೌಂಡು ಎಂಬ ಒಂದು ಜಾತಿಯ ನಾಯಿಯಿದೆ. ಇದು ಗಂಟೆಯೊಂದಕ್ಕೆ ೫೫ ಮೈಲಿಗಳ ವೇಗದಿಂದ ಓಡುವುದು.

ಚೀನಾದಲ್ಲಿ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟುದಕ್ಕಾಗಿ ತಮ್ಮ ಅಭಿನಂದನವನ್ನು ಅಮೇರಿಕಾ ಪ್ರಜಾಪ್ರಭುತ್ವದವರು ಅವರಿಗೆ ತಿಳಿಯಪಡಿಸಿದ್ದಾರೆ.

ಟಿಟಾನಿಕ್ ಹಡಗಿನ ಆಪತ್ತಿನಲ್ಲಿ ಪ್ರಸಿದ್ಧ ರಿವ್ಯೂ ಆಫ್ ರಿವ್ಯೂಸ್ ಪತ್ರಿಕೆಕರ್ತರಾದ ಮ॥ ವಿಲಿಯಂ ಸ್ಟೆಡ್‌ರವರೂ ಸಮುದ್ರಾರ್ಪಿತರಾದ ವರ್ತಮಾನವು ನಿಜವೆಂದು ಪ್ರಕಟವಾಗಿದೆ.

ಕಂಚಿಯಲ್ಲಿ ನೆರೆದ ಪಂಡಿತ ಸಭೆಯಲ್ಲಿ ಯಾವ ಧಾರ್ಮಿಕ ವಿಷಯದ ನಿರ್ಣಯವೂ ಆಗಲಿಲ್ಲವೆಂಬುದು [illegible] ಆದರೂ ಈ ಸಭೆಯು ಮುಂದಣವರ್ಷ ಮದ್ರಾಸಿನಲ್ಲಿ ನೆರವೇರಿಸಲ್ಪಡುವುದಂತೆ.

ಈಗ ಜಪಾನ್ಯಾದ ಶಾಸಕರ ಬಳಿಯಲ್ಲಿ ಒಂದು ಪುಟ್ಟ ಕುದುರೆ ಇದೆ. ಅದರ ಎತ್ತರವು ೨೧ ಅಂಗುಲ ಮಾತ್ರವಾಗಿದೆ. ಪ್ರಪಂಚದಲ್ಲೆಲ್ಲಾ ಇದರಷ್ಟು ಚಿಕ್ಕ ಕುದುರೆಯು ಹುಟ್ಟಿರಲಾರದು.

ಈ ವರ್ಷದಲ್ಲಿ ಶೈವಮತಮಹಾಸಭೆಯು ಕೃಷ್ಣಾ ಜಿಲ್ಲಾ ತೆಣಕು ತಾ॥ ಕೊತ್ತಕಲ್ಲ ಅಗ್ರಹಾರದಲ್ಲಿ ಇದೇ ತಿಂಗಳು ತಾ॥ ೩೦ ರಿಂದ ೩ ದಿನಗಳ ವರೆಗೆ ನಡೆಯುವುದು. ಮುದಿಗೊಂಡದ ಶ್ರೀ ಶಂಕರಾರಾಧ್ಯರು ಸಭಾಧ್ಯಕ್ಷರಾಗುವರು

ಬೊಂಬಾಯಿ ಗೌರ್ನರು ಮೊನ್ನೆ ತಮ್ಮ ಸಂಚಾರದಲ್ಲಿ ಅಂಧೇರಿಗೆ ಹೋಗಿದ್ದಾಗ್ಗೆ ಅಲ್ಲಿ ಮಿ॥ ದಾದಾಬಾಯಿ ನೌರೋಜಿಯವರ ಮನೆಗೆ ಹೋಗಿದ್ದು, ದರ್ಶನವನ್ನಿತ್ತು ಸಂಭಾಷಿಸಿ, ಅವರೊಡನೆ ಟೀಪಾನವನ್ನು ಮಾಡಿ ಸಂತೋಷಗೊಂಡು ಬಂದರು.

ಪಂಜಾಬು [illegible] ಪ್ರಸಿದ್ಧವಾದ ೫ ಹೊಳೆಗಳಿಂದಲೂ ಹೊಸದಾಗಿ ೩ ದೊಡ್ಡ ಕಾಲ್ವೆಗಳನ್ನು ತೆಗೆಯಿಸಲು ಗೌರ್ನಮೆಂಟಿನವರು ಯತ್ನಿಸಿ, ಅವುಗಳಲ್ಲಿ ಮೊದಲನೆಯದು ಸಿದ್ಧವಾಗಲು, ಲಾರ್ಡ್ ಹಾರ್ಡಿಂಜ್‌ರವರು ಅದರ ಆರಂಭದ ಮಹೋತ್ಸವವನ್ನು ನೆರವೇರಿಸಿದರು.

ಮಳೆಯಾಧಿಕ್ಯದಿಂದ ಡಾಕಾದಲ್ಲಿ ಪ್ರಯಾಣಿಕರ ರೈಲು ಬಂಡಿಯು ಮಗುಚಿಕೊಂಡಿತು; ಕಾಕಿನರಾಜ ಎಂಬಲ್ಲಿ ಕಚೇರಿಯ ಕಟ್ಟಡಗಳೆಲ್ಲಾ ಸಂಪೂರ್ಣವಾಗಿ ಬಿದ್ದುಹೋದುವು ಮತ್ತು ಅನೇಕ ಮರಗಳು ಬಿದ್ದುಹೋಗಿ ನಿಂತಿದ್ದ ಬೆಳೆಗೆ ತುಂಬಾ ನಷ್ಟವು ಸಂಭವಿಸಿರುತ್ತದೆ

ಚಕ್ರವರ್ತಿಯವರಾದ ೫ ನೆಯ ಜಾರ್ಜ್ ಪ್ರಭುಗಳು ಕೊಹಿನೂರ್ ಮೊದಲಾದ ತಮ್ಮಲ್ಲಿರುವ ಅನರ್ಘವಾದ ರತ್ನಗಳ ಚರಿತ್ರವನ್ನು ಕುರಿತು ತಾವೇ ಒಂದು ಗ್ರಂಥವನ್ನು ಬರೆಯುವವರಾಗಿದ್ದಾರಂತೆ. ಅದು ಮುಗಿದು ಪ್ರಕಟವಾದರೆ ಬಹು ಜನರು ಆದರದಿಂದ ಓದುವುದಕ್ಕೆ ಕಾದಿರುವರು.

ಚೀನದಲ್ಲಿ ಒಂದು ವೈದ್ಯ ಸಂಘದವರು ಪ್ರಪಂಚಕ್ಕೆಲ್ಲಾ ದೊಡ್ಡದಾದ ಒಂದು ಪುಸ್ತಕವನ್ನು ರಚಿಸಿದ್ದಾರೆ. ಅದು ೭ ಅಡಿ ಉದ್ದವೂ ೩॥ ಅಡಿ ಎತ್ತರವೂ ಉಳ್ಳದಾಗಿದೆ. ಅದರ ತೂಕವು ೧೨೪ ರಾತಲುಗಳಂತೆ. ವಸ್ತ್ವಾಕಾರ ನಿರೂಪಕ ಚಿತ್ರಮಯವಾದ ಆ ಚೀನ ಲಿಪಿಯುಳ್ಳ ಚೀನದ ಗ್ರಂಥವು ಅಷ್ಟು ದೊಡ್ಡದಾಗಿರುವುದು ಆಶ್ಚರ್ಯವಲ್ಲ.

ಶ್ರೀಮತ್ ೫ ನೆಯ ಜಾರ್ಜ್ ಪ್ರಭುಗಳು ಭರತ ಖಂಡದ ಸಂಚಾರವನ್ನು ಮುಗಿಸಿಕೊಂಡು ಸುಖವಾಗಿ ಸ್ವಸ್ಥಾನವನ್ನು ಸೇರಿದುದರ ಸಂತೋಷಾರ್ಥವಾಗಿ ಲಂಡನ್ನಿನಲ್ಲಿರುವ ಬಡಜನರೂ ಸೈನಿಕರೂ ಸೇರಿ ತಲೆಗೆ ೧ ಅಣೆಯಂತೆ ವರ್ಗಣಿಯಿಂದ ಕೂಡಿಸಿದ ಹಣದಲ್ಲಿ ಒಂದು ಭಂಗಾರದ ಕತ್ತಿಯನ್ನು ಮಾಡಿಸಿ ಚಕ್ರವರ್ತಿಯವರಿಗೆ ಸಮರ್ಪಿಸಿರುವರು.

ಬ್ರಹ್ಮ ಸಮಾಜದ ಮುಖ್ಯಾಚಾರ್ಯರಾಗಿರುವ ಪಂಡಿತ ಶಿವನಾಥಶಾಸ್ತ್ರಿಯವರ ಕುಮಾರಿ ಹೇಮಲತಾ ದೇವಿಯವರು ಡಾರ್ಜಿಲಿಂಗ್ ಪಟ್ಟಣದ ಆರೋಗ್ಯರಕ್ಷಕಸಭೆಯ ಒಬ್ಬ ಸಭ್ಯಳಾಗಿದ್ದಾರೆ. ಆಕೆಯು ತಮ್ಮ ಜತೆಯ ಇತರ ಸಭಾಸದರಿಗಿಂತಲೂ ಹೆಚ್ಚಾದ ಚಟುವಟಿಕೆಯಿಂದ ತಮ್ಮ ಕೆಲಸವನ್ನು ನಡೆಯಿಸುತ್ತಿರುವರೆಂದು ತಿಳಿಯಬಂದಿದೆ.

ಸೀಮೆಯಲ್ಲಿ ಕಲ್ಲಿದ್ದಲ ಗಣಿಯ ಕೂಲಿಕಾರರ ಕಟ್ಟುಪಾಡಿನಿಂದ ಕಷ್ಟಕ್ಕೀಡಾಗಿ ತೊಳಲುತ್ತಿರುವ ದೀನಜನರ ಸಹಾಯಾರ್ಥವಾದ ಫಂಡಿಗೆ ಶ್ರೀ ಜಾರ್ಜ್ ಪ್ರಭುಗಳು ೧೫೦ ಪೌನುಗಳನ್ನೂ ಶ್ರೀ ಮೇರಿ ರಾಜ್ಞಿಯವರೂ ಶ್ರೀ ಅಲಗ್ಸಾಂಡ್ರ್ಯಾರವರೂ ಸಹಾ ಸೇರಿ ೧೦೦೦ ಪೌನುಗಳನ್ನೂ ಶ್ರೀ ಪ್ರಿನ್ಸ್ ಆಫ್ ವೇಲ್ಸ್‌ರವರು ೫೦ ಪೌನುಗಳನ್ನೂ ದಾನಮಾಡಿರುವರು.

ಈಗಿನ ಬೊಂಬಾಯಿ ಗೌರ್ನರ ಅಧಿಕಾರದವಧಿಯು ಬರುವ ನವೆಂಬರ್ ತಿಂಗಳಿಗೆ ಮುಗಿಯುತ್ತದೆ. ಅಲ್ಲಿಂದಾಚೆಗೆ ಮತ್ತೊಬ್ಬರು ಬರಬೇಕಾಗಿದೆ. ಈಗಿನ ಗೌರ್ನರು ಸರ್ವವಿಧದಲ್ಲೂ ಆ ಅಧಿಪತ್ಯದ ಜನರ ಕೃತಜ್ಞತೆಗೆ ಪಾತ್ರರಾಗಿರುವರು. ಮುಂದೆ ಆ ಸ್ಥಾನಕ್ಕೆ ಸರ್ ಲಾರೆನ್ಸ್ ಜಂಕಿನ್ಸ್‌ರವರು ಬರುವರೆಂಬ ವಾರ್ತೆಯಿದೆ. ಹಾಗಾದರೆ ಅದು ಬೊಂಬಾಯಾಧಿಪತ್ಯಕ್ಕೆ ಸುಯೋಗವೇ ಸರಿ.

ವೀಣಾ ವಾದನದಲ್ಲೂ ಗಾಯನದಲ್ಲೂ ಪೂರ್ಣ ಪಂಡಿತರಾದ ಬಾಬು ಶರಚ್ಚಂದ್ರ ಚಟ್ಟೋಪಾಧ್ಯಾಯರವರ ಕುಮಾರಿಯಾದ ಶ್ರೀಮತಿ ಸತ್ಯಬಾಲಾದೇವಿಯವರು ಈಗ ಅಮೇರಿಕಾದಲ್ಲಿ ತಮ್ಮ ಗಾನವಿದ್ಯಾ ಪಾಂಡಿತ್ಯವನ್ನು ಪ್ರದರ್ಶನಮಾಡಿ ಕೀರ್ತಿಗೊಳ್ಳುತ್ತಿದ್ದಾರೆ. ಈಕೆಗೆ ಸಾಮವೇದ ಗಾನದಲ್ಲಿ ವಿಶೇಷವಾದ ಪ್ರಜ್ಞೆಯೂ, ಸಂಸ್ಕೃತಾಂಗ್ಲೇಯಾದಿ ಭಾಷೆಗಳಲ್ಲಿ ಪರಿಚಯವೂ ಸಹ ಇರುವುದು.

ಮಲಬಾರು ಪ್ರಾಂತದಲ್ಲಿ ಒಬ್ಬ ಹೆಂಗಸು ಕಾಡಿನಲ್ಲಿ ಸೌದೆಯನ್ನು ಆರಿಸುತ್ತಿದ್ದಳು. ಆಗ ೧ ವಿಷಸರ್ಪವು ಆಕೆಯನ್ನು ಕಚ್ಚಿತು. ಗಾರುಡ ಮಂತ್ರವನ್ನು ಬಲ್ಲ ಆಕೆಯ ಗಂಡನು ಅಕಸ್ಮಾತ್ ಹತ್ತಿರವೇ ಇದ್ದುದರಿಂದ ಅವನು ತನ್ನ ಮಂತ್ರಬಲದಿಂದ ಆ ಸರ್ಪವನ್ನು ಹುತ್ತಿನಿಂದ ಆಚೆಗೆ ಬರಮಾಡಿ, ಕಚ್ಚಿದ ಸ್ಥಳದಿಂದ ವಿಷವನ್ನು ಹೀರಿಕೊಳ್ಳುವಂತೆ ಮಾಡಿದನು. ಕೂಡಲೆ ಸ್ತ್ರೀಯು ಬದುಕಿದಳು. ಹಾವು ಮಾತ್ರ ಸತ್ತಿತು.

ಆಂಗ್ಲ ಸಾಮ್ರಾಜ್ಯಕ್ಕೆ ಒಳಪಟ್ಟ ಪ್ರತಿಯೊಂದು ದೇಶದಲ್ಲೂ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವುದು ಹೇಗೆಂಬುದನ್ನು ವಿಚಾರಮಾಡಿ ವರದಿಗೊಳಿಸುವುದಕ್ಕಾಗಿ ಆಂಗ್ಲ ಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಿದ್ದಾರೆ. ಈ ಸಂಘದವರು ಪ್ರತಿದೇಶಗಳಿಗೂ ಹೋಗಿ ವಿಚಾರಮಾಡುವವರಾಗಿದ್ದಾರೆ. ಆದರೆ ಅವರು ಭರತಖಂಡಕ್ಕೆ ಮಾತ್ರ ಬರುವವರಾಗಿಲ್ಲವಂತೆ. ಈ ವಿಚಾರಣೆಗೆ ಮೂರು ವರ್ಷಗಳ ಕಾಲವು ಹಿಡಿಯುವುದು.

ಸಕ್ಕರೆಯ ಕೈಗಾರಿಕೆಯನ್ನು ಭರತಖಂಡದಲ್ಲಿ ಅಭಿವೃದ್ಧಿಮಾಡುವ ವಿಷಯವನ್ನು ವಿಚಾರಪೂರ್ವಕವಾಗಿ ವರದಿಮಾಡುವುದಕ್ಕಾಗಿ ನಿಯಮಿತರಾಗಿದ್ದ ಮಿ॥ ಕೋವೆಂಟ್ರಿಯವರು ಕಬ್ಬನ್ನು ಬೆಳೆಯಲು ಒದಗುವ ಭೂಮಿಗಳು ಇನ್ನೂ ಈ ದೇಶದಲ್ಲಿ ಲಕ್ಷಾಂತರ ಎಕರೆಗಳಷ್ಟು ಇರುವುವೆಂತಲೂ ಜಾವಾ ದ್ವೀಪದಂತೆಯೇ ಸಕ್ಕರೆಯನ್ನು ಮಾಡುವ ದೊಡ್ಡ ಕಾರ್ಯಾಲಯವೊಂದನ್ನು ಈ ದೇಶದಲ್ಲೂ ಸ್ಥಾಪಿಸಬೇಕೆಂತಲೂ ಗೌರ್ನಮೆಂಟಿಗೆ ವರದಿ ಮಾಡಿರುತ್ತಾರೆ.

ಹುಬ್ಬಳ್ಳಿಯ ಶ್ರೀ ಶಂಕರಾಚಾರ್ಯ ಉತ್ಸವಸಂಸ್ಥೆಯವರು ಪದ್ಧತಿಯಂತೆ ಈ ವರ್ಷವೂ ವೈಶಾಖ ಶು॥ ೧೦ ಯಿಂದ ಹುಣ್ಣಿಮೆಯವರೆಗೂ ರುದ್ರಾಭಿಷೇಕ ಪೂಜಾದಿಗಳನ್ನೂ ಭಾಷ್ಯಾದಿ ಪಾರಾಯಣ ಪುರಾಣಪಠನಗಳನ್ನೂ ನಡೆಯಿಸುವರು. ಅದೇ ಸಂಧಿಯಲ್ಲಿ ಪ್ರತಿದಿನವೂ ಉತ್ತಮ ವಿದ್ವಾಂಸರುಗಳ ವ್ಯಾಖ್ಯಾನಗಳು ನಡೆಯುವುವು. ವೇದಾಂತ ಧರ್ಮಶಾಸ್ತ್ರಾದ್ಯನೇಕ ಗ್ರಂಥಗಳ ಪರೀಕ್ಷೆಯು ನಡೆದು, ಉತ್ತೀರ್ಣರಾದವರಿಗೆ ೩-೪-೬-೧೦ ರೂ. ಗಳ ವರೆಗೆ ಬಹುಮಾನಗಳು ಕೊಡಲ್ಪಡುವುವು.

ಸೀಮೆಯಲ್ಲಿ ಕಲ್ಲಿದ್ದಲ ಗಣಿಯ ಕೆಲಸಗಾರರು ಹಟವನ್ನು ಬಿಟ್ಟು ಕೆಲಸಕ್ಕೆ ಸೇರುತ್ತಿದ್ದಾರೆ. ಏಪ್ರಿಲ್ ತಾ॥ ೧೦ ರೊಳಗಾಗಿ ೫ ಲಕ್ಷ ಜನರು ಕೆಲಸಕ್ಕೆ ಹೋಗಿದ್ದರು ಉಳಿದವರೂ ಹಾಗೆಯೇ ಸೇರಿಕೊಳ್ಳುವವರಾಗಿದ್ದರು. ಆ ಕೂಲಿಗಾರರ ಹಟದಿಂದ ಹೊಗೆ ಬಂಡಿಗಳಿಗೆ ಕಲ್ಲಿದ್ದಲು ಒದಗದೆ ೪॥ ಕೋಟಿ ರೂ. ಗಳ ನಷ್ಟವಾಗಿರುವುದು ಇತರ ವ್ಯಾಪಾರಗಾರರಿಗೂ ಕೋಟ್ಯಂತರ ರೂ. ಗಳ ನಷ್ಟವಾಗಿರಬಹುದೆಂದು ಊಹಿಸಲ್ಪಟ್ಟಿದೆ. ಏಪ್ರಿಲ್ ತಾ॥ ೨೦ ರಿಂದ ಅಲ್ಲಿನ ವ್ಯಾಪಾರವು ವಿಶೇಷವಾಗಿ ನಡೆಯುತ್ತಿದೆ.

ಬಂಗಾಳಾ ಗೌರ್ನರ ವಾಸಸ್ಥಳವಾದ ಬೆಲ್ವೆಡರೆಯಿಂದ ೪ ಮೈಲಿ ದೂರದಲ್ಲಿರುವ ಜಯಂತ ಎಂಬ ಗ್ರಾಮದಲ್ಲಿ ಎರಡು ಚಿರತೆಗಳು ಸೇರಿಕೊಂಡು ಗ್ರಾಮಸ್ಥರಿಗೆ ಬಹು ತೊಂದರೆಯನ್ನು ಕೊಡುತ್ತಿರುವುವು. ಇವುಗಳಲ್ಲೊಂದು ಕಳೆದ ಸೋಮವಾರ ಬೆಳಗ್ಗೆ ತೊಟ್ಟಿಲೊಳಗೆ ಮಲಗಿದ್ದ ೨ ವರ್ಷ ವಯಸ್ಸಿನ ಮಗುವನ್ನು ಎತ್ತಿಕೊಂಡು ಹೋದುದಲ್ಲದೆ ಮಾರನೆಯ ದಿನ ಒಂದು ಹೊಲದ ಬಳಿ ಇಬ್ಬರು ಹುಡುಗಿಯರ ಕೂಡ ಆಡಿಕೊಂಡಿದ್ದ ೬ ವರ್ಷ ವಯಸ್ಸಿನ ಮಹಮ್ಮದೀಯ ಹುಡುಗಿಯನ್ನು ಹೊತ್ತುಕೊಂಡು ಹೋಗುತ್ತಿರುವಾಗ್ಗೆ ಅದನ್ನು ಜನರು ಕಂಡು ಕೂಗಿಕೊಳ್ಳಲು ಆ ಹುಡುಗಿಯನ್ನು ಬಿಟ್ಟೋಡಿತು.

ಚೀನಾದ ಉತ್ತರ ಭಾಗದಲ್ಲಿರುವ ಸೈನಿಕರು ಈಗಿನ ಪ್ರಜಾಪ್ರಭುತ್ವದ ಮೇಲೆ ಅಸಹ್ಯಗೊಂಡು ಅವಿಧೇಯತೆಯನ್ನು ತೋರಿಸುತ್ತಿದ್ದಾರೆ. ತಮಗೆ ತಕ್ಕ ನಾಯಕನು ದೊರೆದರೆ ಸಾಹಸಮಾಡಿ ಪೂರ್ವದ ರಾಜನನ್ನೇ ಪ್ರಭುತ್ವಕ್ಕೆ ನಿಲ್ಲಿಸಲು ಶಕ್ತರಾಗಿದ್ದಾರೆ. ಈಗ ಅಲ್ಲಿನ ಪ್ರಜಾಪ್ರಭುತ್ವದವರಿಗೆ ಯೂರೋಪ್ ಖಂಡದವರು ೩ ಕೋಟಿ ರೂ. ಗಳನ್ನು ವೆಚ್ಚಕ್ಕಾಗಿ ಸಾಲ ಕೊಟ್ಟಿದ್ದಾರೆ. ನಾನ್ಕಿಂಗಿನಲ್ಲಿ ಪ್ರಜಾಪ್ರಭುತ್ವದ ಕಡೆಯ ಸೈನಿಕರು ತಿರುಗಿಬಿದ್ದು ಮನೆ ಮಠಗಳನ್ನು ಸುಟ್ಟು ಸುಲಿಗೆಮಾಡಿದರು. ಪ್ರಭುಪಕ್ಷದ ಸೈನಿಕರು ಅವರ ಮೇಲೆ ಬಿದ್ದು ಅವರು ದೋಚಿಕೊಂಡಿದ್ದ ಹಣವನ್ನೆಲ್ಲಾ ತಾವು ಕಿತ್ತುಕೊಂಡರು.

ಬೊಂಬಾಯಿಯ ಸರ್ ವಿಠಲದಾಸ ದಾಮೋದರ ಥಾಕರ್ಸೆಯವರು ಪ್ರಸಿದ್ಧರಾದ ಕೋಟೀಶ್ವರರು ಮಾತ್ರವೇ ಅಲ್ಲದೆ ದೇಶಾಭಿಮಾನಿಗಳೂ ಸಾಮ್ರಾಜ್ಯಸಭೆಯ ಸಭಾಸ್ತರರೂ ವಾಗ್ಮಿಗಳೂ ಆಗಿದ್ದಾರೆ. ಇವರು ಪತ್ನೀಸಮೇತ ಇಂಗ್ಲೆಂಡಿಗೆ ಹೋಗಿಬರಬೇಕೆಂದು ಇಚ್ಛೆಗೊಂಡು, ಅಲ್ಲಿಗೆ ಹೋಗಿ ಬಂದನಂತರ ಪ್ರಾಯಶ್ಚಿತ್ತದ ಮೂಲಕ ಸ್ವಜಾತಿಗೆ ಸೇರಿಸಿಕೊಳ್ಳುವಿರಾ? ಎಂದು ತಮ್ಮ ಭಾಟಿಯಾ ಜಾತಿಯ ಜನರನ್ನು ಕೇಳುವಲ್ಲಿ, ಪ್ರಾಯಶ್ಚಿತ್ತವೇನೋ ಆಗಬಹುದು. ಜಾತಿಗೆ ಮಾತ್ರ ಸೇರಿಸಿಕೊಳ್ಳುವುದಿಲ್ಲವೆಂದು ಉತ್ತರವನ್ನು ಕೊಟ್ಟರಂತೆ. ಸಮುದ್ರಯಾನ ವಿಷಯವು ದೇಶಾಭಿಮಾನಿಗಳ ಪ್ರಯತ್ನಕ್ಕೆ ಎಷ್ಟು ತೊಡಕಾಗಿದೆಯೆಂಬುದಕ್ಕೆ ಇದೊಂದು ದೃಷ್ಟಾಂತವು.

ಜರ್ಮನಿಯಲ್ಲಿ ಅಂಚೆಯ ಕೆಲಸದಲ್ಲಿದ್ದವನೊಬ್ಬನು ೮ ಸಾವಿರ ಪೌನ್ನುಗಳನ್ನು ಅಪಹರಿಸಿಕೊಂಡು ಬೇರೊಂದೂರಿಗೆ ಹೋಗಿ ಅವಿತುಕೊಂಡಿದ್ದನು. ಅವನ ರೂಪ ವಿವರಣವನ್ನು ಕೊಟ್ಟು, ಆ ಮನುಷ್ಯನನ್ನು ಹಿಡಿದುಕೊಟ್ಟವರಿಗೆ ದೊಡ್ಡ ಬಹುಮಾನವು ದೊರೆವುದೆಂದು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದ್ದಿತು. ಒಂದುದಿನ ಆ ಕಳ್ಳನು ಒಂದು ಭೋಜನಾಲಯದಲ್ಲಿ ಕುಳಿತಿದ್ದು ಪತ್ರಿಕೆಯಲ್ಲಿದ್ದ ಆ ಪ್ರಕಟನವನ್ನು ನೋಡಿ, ತಾನು ದೊಡ್ಡ ಕೆಲಸವನ್ನು ಮಾಡಿ ಒಬ್ಬರಿಗೂ ಸಿಕ್ಕದೆ ಇರುವೆನೆಂದು ಹಿಗ್ಗಿಯೋ ಏನೋ ಪಕಪಕನೆ ನಕ್ಕನು. ಅವನು ಹಾಗೆ ನಗುವುದಕ್ಕೆ ಪತ್ರಿಕೆಯಲ್ಲಿ ಅಂಥಾ ವಿಷಯವೇನಿದ್ದಿತೋ ನೋಡಬೇಕೆಂದು ಆ ಭೋಜನಾಲಯದ ಆಳುಗಳು ಯೋಚಿಸಿ. ಬಗ್ಗಿ. ಪತ್ರಿಕೆಯನ್ನೋದಿ ನೋಡುವಲ್ಲಿ ಅದರಲ್ಲಿ ನಿರೂಪಿತವಾಗಿರುವ ಲಕ್ಷಣವುಳ್ಳ ಮನುಷ್ಯನು ಇವನೇ ಆಗಿದ್ದನು. ಕೂಡಲೆ ಅವರು ಪೋಲೀಸರಿಗೆ ತಿಳುಹಿಸಿದರು. ಅವರು ಬಂದು ಕಳ್ಳನನ್ನು ಹಿಡಿದರು.

ಅಕಸ್ಮಾತ್ತಾದ ಸಂಭವಗಳಿಂದ ಮನುಷ್ಯರ ಹೃದಯದಲ್ಲಿ ಪ್ರಾಣ ಚಲನೆಯು ನಿಂತು ಹೋಗುವುದುಂಟು. ಕೆಲ ಸಂದರ್ಭಗಳಲ್ಲಿ ಅಂತಹ ಚಿಹ್ನವನ್ನೇ ಮರಣವಾಯಿತೆಂದು ಅನೇಕರು ಭಾವಿಸಿ ಮುಂದಣ ಕೆಲಸವನ್ನು ಮಾಡುವುದುಂಟು. ಅಂಥ ಸ್ಥಿತಿಯಾದ ಮೇಲೂ ಒಂದೊಂದುಕಡೆ ಪ್ರಾಣವು ಚಲನೆಗೆ ಆರಂಭಿಸಿ ಜೀವ ಬಂದಿತೆಂದು ಹಿಗ್ಗುವಂತೆ ಮಾಡುವುದೂ ಉಂಟು. ಆಕಸ್ಮಿಕ ಸಂಭವದಿಂದ ಪ್ರಾಣವಾಯು ಚಲನವು ಬಂಧಿಸಿದರೆ ಒಂದು ಯಂತ್ರವನ್ನು ಪ್ರಯೋಗಿಸಿ ಮರಳಿ ಶ್ವಾಸೋಚ್ಛ್ವಾಸ ನಡೆಸುವಂತಹ ರೀತಿಯನ್ನು ಜರ್ಮನಿದೇಶಸ್ಥನೊಬ್ಬನು ಕಂಡುಹಿಡಿದಿದ್ದಾನೆ. ಈಗ ಈ ಯಂತ್ರವನ್ನು ಅಮೇರಿಕಾದ ಚಿಕಾಗೋ ಪಟ್ಟಣದಲ್ಲಿ ಉಪಯೋಗಿಸುತ್ತಿರುವರು. ೬೫ ವರ್ಷದ ಒಬ್ಬ ವಕೀಲನಿಗೆ ಪ್ರಾಣವಾಯು ಚಲನವು ನಿಂತು ಹೋಗಿರಲಾಗಿ ಈ ಯಂತ್ರವನ್ನು ಪ್ರಯೋಗಿಸಿದ ॥ ಗಂಟೆಯೊಳಗಾಗಿ ಅವನು ಜೀವತುಂಬಿಕೊಂಡನು. ಈಚೆಗೆ ಅನೇಕ ಮಂದಿಗಳು ಇದರ ಪ್ರಯೋಗದಿಂದ ಪುನರ್ಜೀವಿತರಾದರೆಂದು ಪ್ರಕಟವಾಗಿದೆ. ಈ ಯಂತ್ರವು ೨೧ ಅಡಿ ಉದ್ದವೂ ೩॥ ಅಡಿ ವ್ಯಾಸವೂ ಉಳ್ಳದಾಗಿ ಒಂದು ಕೊಳವೆಯಂತಿದೆ. ಇದರಲ್ಲಿ ೨೮೦೦ ರಾತಲಿನಷ್ಟು ಪ್ರಾಣವಾಯುವನ್ನು ತುಂಬಿಸಿಡಬಹುದಂತೆ. ಇದರ ಹೆಸರು “ಪಲ್ ಮೋಟರ್.”

ಸರ್ ವಿಲಿಯಂ ರಾಂಸೆ ಎಂಬ ಒಬ್ಬ ದೊಡ್ಡ ಆಂಗ್ಲಶಾಸ್ತ್ರಜ್ಞನು ಕಲ್ಲಿದ್ದಲನ್ನು ಗಣಿಯಿಂದ ಈಚೆಗೆ ತೆಗೆಯದೇನೇ ಅದರಿಂದಾಗತಕ್ಕ ಪ್ರಯೋಜನವನ್ನು ಪಡೆದುಕೊಳ್ಳಬಹುದಾದ ರೀತಿಯನ್ನು ಕಂಡುಹಿಡಿದಿದ್ದಾನೆ. ಅದರ ಕ್ರಮವು ಹೇಗೆಂದರೆ—ಕಲ್ಲಿದ್ದಲ ಗಣಿಗಳಲ್ಲಿ ೨ ಅಡಿಯಗಲದ ತೂತುಗಳನ್ನು ಆಳವಾಗಿ ಕೊರೆದು, ಅದಕ್ಕೆ ಬೆಂಕಿ ಹಚ್ಚುವುದು, ಆ ಗಣಿಯಿಂದ ಮೇಲಕ್ಕೆ ಮೂರು ಕೊಳವೆಗಳು ಇಡಲ್ಪಟ್ಟಿರುವುವು. ಒಂದರ ಮೂಲಕವಾಗಿ ಗಾಳಿಯನ್ನು ಗಣಿಯೊಳಕ್ಕೆ ತುಂಬಿ ಬೆಂಕಿಯು ಚೆನ್ನಾಗಿ ಉರಿಯುವಂತೆ ಮಾಡಿದರೆ, ಉಳಿದೆರಡು ಕೊಳವೆಗಳ ಮಾರ್ಗವಾಗಿ, ಗಣಿಯೊಳಗಿನಿಂದ ಕಲ್ಲಿದ್ದಲ ವಾಯುವು ಹೊರಕ್ಕೆ ಬರುವುದು. ಈ ವಾಯುವನ್ನು ಅಲ್ಲೇ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ, ತಂತಿಗಳ ಮೂಲಕವಾಗಿ ಬೇಕಾದ ಕಡೆಗೆ ಸಾಗಿಸುವುದು. ಈ ಶಕ್ತಿಯನ್ನು ಇಂಗ್ಲೆಂಡು ದೇಶದ ಯಾವಕಡೆಗೆ ಬೇಕಾದರೂ ಸಾಗಿಸಿಕೊಳ್ಳಬಹುದೆಂದೂ, ಎಲ್ಲ ಕಾರ್ಯಾಲಯಗಳ ಯಂತ್ರಗಳನ್ನೂ ಹೊಗೆಬಂಡಿಗಳನ್ನೂ ಈ ಶಕ್ತಿಯಿಂದಲೇ ನಡೆಯಿಸಬಹುದೆಂದೂ, ಮನೆಮನೆಯವರು ಇದರಿಂದ ಅಡಿಗೆಯ ಕೆಲಸವನ್ನು ಮಾಡಿಕೊಂಡು, ದೀಪವನ್ನೂ ಉರಿಸಿಕೊಳ್ಳಬಹುದೆಂದೂ, ಆ ಶಾಸ್ತ್ರಜ್ಞನು ನುಡಿಯುತ್ತಾನೆ. ಕಲ್ಲಿದ್ದಲಿಗೆ ಕೊಡುತ್ತಿದ್ದ ಬೆಲೆಯಲ್ಲಿ ಐದನೆಯ ಒಂದು ಭಾಗದಷ್ಟು ಮಾತ್ರವೇ ಇದಕ್ಕೆ ವೆಚ್ಚವಾಗುವುದೆಂದೂ, ಕಾರ್ಯಾಲಯಗಳಿಂದ ಹೊರಡುತ್ತಿದ್ದ ಹೊಗೆಯು ತಪ್ಪಿಹೋಗುವ ಕಾರಣ ಪಟ್ಟಣಗಳಲ್ಲಿ ಆರೋಗ್ಯವುಂಟಾಗುವುದೆಂದೂ, ಗಣಿಗಳಲ್ಲಿ ಈಗ ೧೦ ಲಕ್ಷ ಕೂಲಿಯಾಳುಗಳಿಂದ ಕೆಲಸಮಾಡಿಸಿ, ಅವರಿಗೆ ಅಧಿಕವಾದ ಕೂಲಿಯನ್ನು ಕೊಡುವಭಾರವೂ ತಪ್ಪಿಹೋಗುವುದೆಂದೂ, ಆ ಕೂಲಿಕಾರರ ಕಟ್ಟುಪಾಡಿನಿಂದ ಮೊನ್ನೆತಾನೇ ಸಂಭವಿಸಿದ್ದಂಥ ತೊಂದರೆಯು ಮುಂದೆ ಎಂದೂ ಸಂಭವಿಸಲು ಅವಕಾಶವೇ ಇಲ್ಲವೆಂದೂ, ಈಗಿನ ಪ್ರಕಾರ ಗಣಿಗಳಿಂದ ಕಲ್ಲಿದ್ದಲನ್ನು ಹೊರಕ್ಕೆ ತೆಗೆದು ಉಪಯೋಗಿಸುತ್ತಾ ಬಂದರೆ ೧೦೦ ವರ್ಷಗಳೊಳಗಾಗಿ ಎಲ್ಲವೂ ಮುಗಿದು ಹೋಗುವುದೆಂದೂ, ತಾನು ಸೂಚಿಸುವ ಪದ್ಧತಿ ಪ್ರಕಾರ ಮಾಡಿದರೆ ಎಷ್ಟೋ ಶತಮಾನಗಳವರೆಗೆ ತಡೆದು ಬರುವುದೆಂದೂ ಹೇಳುತ್ತಾನೆ. ಈ ಪ್ರಯತ್ನವನ್ನು ಮಾಡಿ ನೋಡುವುದಕ್ಕೆ ಆಗಲೇ ಒಬ್ಬ ಗಣಿಯಧಿಕಾರಿಯು ಒಪ್ಪಿ ಕೆಲಸಮಾಡಿಸುತ್ತಿದ್ದಾನೆ. ಇದು ಸಾರ್ಥಕವಾಗುವುದಾದರೆ ರಾಂಸೆಯಂತಹ ಒಬ್ಬ ಶಾಸ್ತ್ರಜ್ಞನಿಂದ ಪ್ರಪಂಚಕ್ಕೆ ಎಷ್ಟುಪಕಾರವಾಗುವುದೋ ಅದನ್ನು ಹೇಳಲಾಗದು.

ಪತ್ರವ್ಯವಹಾರವು.

ಶ್ರೀ ಬಸವೇಶ್ವರ ಜಯಂತ್ಯುತ್ಸವವು.

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದಲ್ಲಿ ಕಳೆದ ತಾರೀಖು ೪-೪-೧೨ ನೇ "ಮೈಸೂರ್ ಸ್ಟಾರ್" ಪತ್ರಿಕೆಯಲ್ಲಿ ದಾವಣಗೆರೆ ಹಿತೋಪದೇಶಕರುಗಳವರು ಶ್ರೀಬಸವೇಶ್ವರನು ವೈಶಾಖ ಶುದ್ಧ......ರೋಹಿಣೀ ನಕ್ಷತ್ರದಲ್ಲಿ ಅವತರಿಸಿದನೆಂದು ವ್ಯಾಸೋಕ್ತ ಬಸವಪುರಾಣಾಧಾರದಿಂದ ಕಂಡುಹಿಡಿದಿರುವುದಾಗಿಯೂ, ತಿಥಿಯು ಬಿದಿಗೆ, ತದಿಗೆ ಎಂಬುದು ಸಂಧಿಗ್ಧವಾಗಿದೆಯೆಂದೂ, ಅದನ್ನು ವಿಚಾರದಿಂದ ವೀರಶೈವ ಜ್ಯೋತಿಷ್ಕರು ನಿರ್ಧರಿಸಬೇಕಾಗಿದೆಯೆಂದೂ ಬರೆದ ಪ್ರಕಾರ, ತಿಥಿಯು ನಿರ್ಧರವಾದುದು ಪ್ರಕಟವಾಗದೆ ಇದ್ದಾಗ್ಯೂ ದಿವಸ ಕಳೆಯುವುದೆಂದು ಯೋಚಿಸಿ, ನಮ್ಮ ಮ॥ ರಾ॥ ಶ್ರೀ ಪಟೀಲ್ ಜದಿಯಪ್ಪನವರು ಇದೇ ವೈಶಾಖ ಶುದ್ಧ ತದಿಗೆ ರವಿವಾರ ರೋಹಿಣೀ ನಕ್ಷತ್ರ ಬಂದುದರ ವೇಳೆ, ಪಂಡಿತರುಗಳು ಪರಿಶೋಧಿಸಿ ಪ್ರಕಟಿಸುವವರೆಗೂ ಈ ತದಿಗೆಯನ್ನೇ ಶ್ರೀ ಬಸವೇಶ್ವರನು ಜನಿಸಿದ ಹಬ್ಬವನ್ನಾಗಿ ಆಚರಿಸಬೇಕಾಗಿ ಗ್ರಾಮದಲ್ಲಿ ಡಂಗೂರದ ಮೂಲಕ ಪ್ರಕಟಿಸಿದ ಪ್ರಕಾರ ಪ್ರತಿಯೊಂದು ಜಾತಿಯವರೂ ಭೇದವನ್ನು ಎಣಿಸದೆ, ಯುಗಾದಿಯ ಹಬ್ಬಕ್ಕಿಂತಲೂ ಶ್ರೇಷ್ಠವೆಂದು ಭಾವಿಸಿ, ಬಹು ಸಂಭ್ರಮದಿಂದ ಹಬ್ಬವನ್ನು ಮಾಡಿದರು. ಆ ದಿವಸ ಈ ಗ್ರಾಮದ ವೀರಶೈವರು ಪೇಟೆ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿ ಹಂದರವನ್ನು ಹಾಕಿ ತಳಿರು ತೋರಣಗಳಿಂದ ಅಲಂಕರಿಸಿ ಶ್ರೀ ಕೆರೆಹೊನ್ನಮ್ಮನವರ ದೇವಸ್ಥಾನದಿಂದ ಮಧ್ಯಾಹ್ನದೊಳಗೇನೆ ಶ್ರೀ ನಂದಿ ಬಸವೇಶ್ವರನನ್ನು ಕರೆದು ತಂದು, ವಿಜಯಂಗೈಸಿ ಮತಪದ್ಧತಿ ಪ್ರಕಾರ ಪೂಜಾದಿಗಳನ್ನಾಚರಿಸಿ, ಮಧ್ಯಾಹ್ನ ೪ ಗಂಟೆಯಿಂದ ಶ್ರೀ ಪುರಾಣಶ್ರವಣ ನಡೆಸಿದನಂತರ ಮ॥ರಾ॥ಶ್ರೀ ಪಟೇಲರ ಮಕ್ಕಳಾದ ಗುತ್ತಾಳು ಫಿರ್ಕ ಶಾನುಭೋಗ್ ಮ॥ ರಾ॥ ಶ್ರೀ ಎ. ಪಿ. ಸಿದ್ಧಲಿಂಗಪ್ಪನವರು ಸರ್ವರಿಗೂ ಮನನವಾಗುವಂತೆ ವೀರಶೈವ ಮತೋತ್ಪತ್ತಿ ಶ್ರೀ ಬಸವೇಶ್ವರಾವತಾರಕ್ಕೆ ಕಾರಣ ಮತ್ತೂ ಪ್ರತಿವರ್ಷವೂ ಆಚರಿಸಬೇಕಾದ ಶ್ರೀ ಬಸವೇಶ್ವರ ಜಯಂತಿಯು ಹಬ್ಬವೆಂಬ ವಿಷಯದಲ್ಲಿ ಭಾಷಣ ಮಾಡಿದರು. ಸಾಯಂಕಾಲ ೭ ಗಂಟೆಯಿಂದ ಶ್ರೀ ಬಸವೇಶ್ವರನ ಮೆರವಣಿಗೆಯನ್ನು ಅತಿವಿಜೃಂಭಣೆಯಿಂದ ನಡೆಯಿಸಿ ಪೂರೈಸಿದರು. ಈ ಹಬ್ಬವನ್ನು ಆಚರಿಸುವುದರಲ್ಲಿ ಬಹು ಶ್ರದ್ಧೆಯನ್ನು ತೋರಿಸಿದ ಮ॥ ರಾ॥ ಗಳಾದ ಎ. ಪಿ. ಸಿದ್ಧಲಿಂಗಪ್ಪನವರು, ಕುರುಬರಹಳ್ಳಿ ಶಿವಲಿಂಗಪ್ಪನವರು, ಹ್ಯಾಳೇದ ಗುರುಶಾಂತಪ್ಪನವರು, ಮೇಗಳಗೆರೆ ಮುದ್ದಪ್ಪನವರು, ಸ್ಕೂಲ್ಮಾಸ್ಟರ್ ಎಚ್. ಸಿ. ಸಿದ್ಧಯ್ಯನವರು, ಮಠದ ತಿಪ್ಪಯ್ಯನವರು, ದೇವರಮನೆ ನಾಗಪ್ಪ, ಫಣಿಯಪ್ಪ ಚನ್ನವೀರಪ್ಪ, ಕಡಬಗೆರೆ ಸಣ್ಣನಾರಪ್ಪ, ಕಂಚಿಕೆರೆ ಸಿದ್ಧಲಿಂಗಪ್ಪ, ಶಿದ್ದೂರು ಶಾಂತವೀರಪ್ಪ, ಒಡೆಯರಹಳ್ಳಿ ಮ. ಮಹಾದೇವಪ್ಪ, ದಾ॥ ಗುರುಮೂರ್ತಯ್ಯನವರುಗಳೇ ಮುಂತಾದವರಿಗೆ ವಂದಿಸುತ್ತೇವಲ್ಲದೆ, ಪ್ರತಿವರ್ಷವೂ ಇದೇರೀತಿ ಆಚರಿಸುವಂತೆ ಇವರುಗಳಿಗೆ ಬುದ್ಧಿಯನ್ನೂ ಆಯುರಾರೋಗ್ಯವನ್ನೂ ಶ್ರೀ ಪಾರ್ವತೀಪರಮೇಶ್ವರರು ಪಾಲಿಸಬೇಕಾಗಿ ಬೇಡುತ್ತೇವೆ.

ಪ್ರತ್ಯಕ್ಷದರ್ಶಿ.

ಜಯಂತ್ಯುತ್ಸವ.

ಇದೇ ವರ್ಷದ ಏಪ್ರಿಲ್ ತಾ॥ ೨೨ ನೆ ಸೋಮವಾರದ ದಿನ ಬೆಂಗಳೂರು ಸಿಟಿ ಶಂಕರಪುರದಲ್ಲಿ ಕಟ್ಟಿಸಿರುವ, ಶಂಕರಮಠದಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಸುಮಾರು ೨೦೦೦ ಜನರಿಗೂ ಭೋಜನ ನಡೆಯಿತೆಂದು ಹೇಳುತ್ತಾರೆ. ಶ್ರೀ ಶಂಕರಾಚಾರ್ಯರ ಸಂಪ್ರದಾಯಸ್ಥರು ಈ ರೀತಿ ತಮ್ಮ ಮೂಲಾಚಾರ್ಯರ ಜ್ಞಾಪಕಾರ್ಥವಾಗಿ ವರ್ಷಕ್ಕೊಂದು ಸಾರಿ ಉತ್ಸವ ವೈಭವವನ್ನು ನಡೆಸುತ್ತಿರುವುದು ಅತ್ಯಂತ ಸ್ತುತ್ಯವಾಗಿರುತ್ತದೆ. ಈ ಸಂದರ್ಭದಲ್ಲಿ ನಮ್ಮ ಬಡವೀರಶೈವರ ಸಂಬಂಧವಾಗಿ ಕೊಂಚ ಹೇಳಬೇಕಾದುದಿದೆ. ಶಂಕರಾಚಾರ್ಯ ಸಂಪ್ರದಾಯಸ್ಥರಂತೆ ನಮ್ಮ ವೀರಶೈವರಿಗೂ ಮೂಲಾಚಾರ್ಯರು ಒಬ್ಬರಲ್ಲದೆ ಅನೇಕಮಂದಿ ಇರುತ್ತಾರೆ. ಇವರುಗಳಲ್ಲಿ ಯಾರೊಬ್ಬರನ್ನಾದರೂ ನಮ್ಮವರು ಉತ್ಸವಾದಿಗಳ ರೂಪವಾಗಿ ವರ್ಷಕ್ಕೊಂದು ಸಾರಿ ಜ್ಞಾಪಿಸಿಕೊಳ್ಳುವುದಿಲ್ಲವಲ್ಲ. ಇದು ಕೇವಲ ಶೋಚನೀಯವಾದುದಲ್ಲವೆ? ಹಾ! ಆಚಾರ್ಯರೆ! ನೀವು ಪ್ರಸರಿಸಿದಂತಹ ನಿಮ್ಮ ಕೀರ್ತಿಯಾವತ್ತೂ ನಿಮ್ಮ ಪರಂಪರಾಗತರಿಂದ ಮಾಸುಳಿಸಿ ಹೋಗಿದೆ. ನೀವು ಅನೇಕ ದೇಶಗಳಲ್ಲಿ ನಿಮ್ಮ ಸಂಪ್ರದಾಯದ ಅಸಂಖ್ಯಾತ ಮಠಗಳನ್ನು ಸ್ಥಾಪಿಸಿದ್ದೀರಿ. ಬೆಂಗಳೂರಲ್ಲಿ ನಿಮ್ಮ ಮಠಗಳು ಅನೇಕ ಸಂಖ್ಯೆಯಿಂದಿರುತ್ತವೆ. ಅದರೇನು? ಈಗಿನವರು ಶಂಕರಮಠದಂತಹ ಒಂದುಮಠವನ್ನೂ ಕಟ್ಟಿಸುವ ಪ್ರತಿಷ್ಠೆಯುಳ್ಳವರಾಗಿರುವುದಿಲ್ಲ. ವೀರಶೈವರ ಎಲ್ಲ ಮಠಗಳನ್ನೂ ಶಂಕರಮಠವೆಂದು ನುಂಗಿದಿರುತ್ತದೆ. ಯಾವ ಮತವೇ ಆಗಲಿ ಮಹತ್ಕಾರ್ಯಗಳನ್ನು ಮಾಡಿದ [illegible] ತತ್ವತಕ್ಕೆ ಪ್ರತಿಷ್ಠೆ ಬರುವುದಿಲ್ಲ. ಪ್ರತಿಷ್ಠೆ ಅವಶ್ಯವಿಲ್ಲವೆಂದು ಹೇಳಿ ವೈರಾಗ್ಯವನ್ನು ಓದುವ ಕಷ್ಟದಲ್ಲಿ ಮತ ವಿಚಾರವೇ ಅಗತ್ಯವಿರುವುದಿಲ್ಲ. ಇದು ಹೇಗಾದರೂ ಇರಲಿ, ಸದ್ಯಕ್ಕೆ ವೀರಶೈವ ಸಂಬಾಚಾರ್ಯರ ಜ್ಞಾಪಕಾರ್ಥವಾದ ಉತ್ಸವಗಳನ್ನು ವರ್ಷಕ್ಕೊಂದುಸಾರಿ ನಡೆಸುವ ಏರ್ಪಾಟನ್ನು ಬೆಂಗಳೂರಿನ ಮತ್ತೂ ಮೈಸೂರಿನ ವೀರಶೈವರು ಯತ್ನಿಸಬೇಕು. ಬೆಂಗಳೂರು ಮೈಸೂರಿನವರು ಮಹತ್ಕಾರ್ಯಗಳನ್ನು ಮಾಡಿದರೆ ಸುತ್ತುಮುತ್ತಣ ಪ್ರದೇಶದವರು ಅದರಂತೆ ನಡೆದುಕೊಳ್ಳುತ್ತಾರೆ.

ಮೇಲಿಕಂಡ ೨೨ ನೆ ಸೋಮವಾರದ ದಿನ ಬೆಂಗಳೂರು ಬಳೇಪೇಟೆಯಲ್ಲಿರುವ ಶ್ರೀನಿವಾಸ ಮಂದಿರದಲ್ಲಿ ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರದ ಉತ್ಸವವು ವಿಶೇಷ ವೈಭವದಿಂದ ನಡೆಯಿತು. ಮತ್ತೂ ೨೩ ನೆ ಮಂಗಳವಾರದ ದಿನ ಸಾಯಂಕಾಲದಲ್ಲಿ ದೊಡ್ಡಣ್ಣನವರ ಮಂದಿರದಲ್ಲಿ ತತ್ಸಂಬಂಧವಾಗಿ ಉಪನ್ಯಾಸಾದಿಗಳು ಅತ್ಯಂತ ಪ್ರಮೋದಾವಹವಾಗಿ ನಡೆದುವು. ಇದೂ ಕೂಡ ವೀರಶೈವಮತ ವಾತ್ಸಲ್ಯಶೀಲರುಗಳಿಗೆ ಮಾರ್ಗ ಪ್ರದರ್ಶನವನ್ನು ಮಾಡತಕ್ಕದಾಗಿದೆ.

ಪರಶುರಾಮರಾವ್ ಎಂಬ ವೀರಶೈವರ ಸರ್ಕಸ್.

ಈ ಸರ್ಕಸ್ ಈಗತಾನೇ ಬೆಂಗಳೂರಿಗೆ ಬಂದಿರುತ್ತದೆ. ಇವರ ವಿಚಾರವೆಲ್ಲವೂ ಹಿಂದಿನ 'ಸ್ಟಾರ್' ಪತ್ರಿಕೆಯ ಸಂಚಿಕೆಯಲ್ಲಿ ವಿಸ್ತಾರವಾಗಿ ಬರೆಯಲ್ಪಟ್ಟಿತ್ತು, ವೀರಶೈವರಲ್ಲಿ ಒಬ್ಬ ಮನುಷ್ಯನಾದರು ಇಂತಹ ಕಾರ್ಯವನ್ನು ಮಾಡಿರುವುದು ವೀರಶೈವಮತಕ್ಕೆ ಕೇವಲ ಪ್ರತಿಷ್ಠಾಪ್ರದವಾಗಿರುತ್ತದೆ.

ಹಿತಚಿಂತಕ

ಶ್ರೀಬಸವೇಶ್ವರ ಮಾಹಾತ್ಮ್ಯ.

(ಎನ್ ಬಿ) ಡೊನೇಷನ್ ಕೊಡತಕ್ಕ ಮಹಾಶಯರು ಮೇಲ್ಕಂಡ ಕಮಿಟಿಯ ಟ್ರಜರರ್ ಅಡ್ವೊಕೇಟ್ ಮೆ॥ ಎಂ ಅನಂತಯ್ಯಶೆಟ್ಟಿಯವರ ಹೆಸರಿಗೆ ಹಣವನ್ನು ರವಾನಿಸಬೇಕು ಮತ್ತೂ ದಯವಿಟ್ಟು ಈ ವಿಷಯವನ್ನು ಮ್ಯಾನೇಜರಿಗೆ ಲಿಖಿತಮೂಲಕ ತಿಳುಹಿಸಬೇಕು. ಹಣ ಪಾವತಿಯಾದ ಕೂಡಲೆ ಅವರಿಗೆ ಕಮಿಟಿಯವರ ವಂದನಾಪತ್ರಿಕೆ (ರಶೀದಿ) ಯನ್ನು ತತ್‌ಕ್ಷಣ ಕಳುಹಿಸುವುದಲ್ಲದೆ ಅವರ ಘನವಾದ ಹೆಸರನು ರಿಜಿಸ್ಟರಿಗೆ ದಾಖಲ್ ಮಾಡಿಕೊಂಡು ಪೇಪರ್‌ನಲ್ಲಿ ಪ್ರಕಾಶಪಡಿಸಲ್ಪಡುತ್ತೆ. ಮತ್ತೂ ಈ ಸ್ಕೂಲಿನ ವಾರ್ಷಿಕ ರಿಪೋರ್ಟನ್ನು ದ್ರವ್ಯ ಪ್ರದಾತರೆಲ್ಲರಿಗೂ ರವಾನಿಸಲಾಗುತ್ತೆ.

ಆರ್ಯಧರ್ಮ ಸೇವಕ.
ಎಸ್. ವಿ ಹನುಮಂತರಾಜು, ಮ್ಯಾನೇಜರ್.

ವಿತಂತು ಶರಣಾಲಯ.

ಪುನೆಯಲ್ಲಿ ಸ್ಥಾಪಿಸಲ್ಪಟ್ಟಿರುವ ವಿತಂತು ಶರಣಾಲಯದ ವರದಿಯು ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಕಂಡ ಪ್ರಕಾರಕ್ಕೆ ಆ ಆಲಯವು ಸ್ಥಾಪಿತವಾಗಿ ೧೪ ವರ್ಷಗಳಾದುವು. ಈಗ ಅದರಲ್ಲಿ ೧೦೦ ಮಂದಿ ವಿದ್ಯಾರ್ಥಿನಿಯರಿದ್ದಾರೆ. ಅವರಲ್ಲಿ ೯೨ ಮಂದಿಗಳು ಬ್ರಾಹ್ಮಣ ಸ್ತ್ರೀಯರು, ೩ ಶೂದ್ರರು, ೪ ಕಾಯಸ್ಥಜಾತಿಯವರು, ೧ ವೈಶ್ಯಬಾಲಿಕೆಯು ಮತ್ತೂ ಅವರಲ್ಲಿ ೮೩ ಮಂದಿ ವಿತಂತುಗಳಾಗಿಯೂ, ೧೭ ಮಂದಿ ಮದುವೆಯಿಲ್ಲದ ಕನ್ಯೆಯರಾಗಿಯೂ ಇದ್ದಾರೆ. ದೇಶಭಾಷಾಂತಿಮ ಪರೀಕ್ಷೆಗೆ ಹೋಗಿದ್ದ ೪ ಮಂದಿ ವಿದ್ಯಾರ್ಥಿನಿಯರೂ ಉತ್ತೀರ್ಣರಾದರು. ಚಿತ್ರಲೇಖನ ಪರೀಕ್ಷೆಗೆ ಹೋಗಿದ್ದ ೯ ಜನರಲ್ಲಿ ೭ ಮಂದಿಯು ಉತ್ತೀರ್ಣರಾದರು. ಇನ್ನು ಮುಂದೆ ಮೆಟ್ರಿಕ್ಯುಲೇಷನ್ ಪರೀಕ್ಷೆಯವರೆಗೂ ವಿದ್ಯಾಭ್ಯಾಸ ನಡೆಯುವುದಕ್ಕೆ ಅವರು ಏರ್ಪಾಡನ್ನು ಮಾಡುವರು. ಆ ಆಲಯದಲ್ಲಿ ಬಟ್ಟೆ ನೇಯುವ ಕೆಲಸವೂ ಕಲಿಸಲ್ಪಡುತ್ತದೆ. ಆ ಕೆಲಸಮಾಡುತ್ತಿರುವ ಬಾಲಿಕೆಯರು ಆ ವರ್ಷದಲ್ಲಿ ೧೩೭೧ ಗಜ ಬಟ್ಟೆಯನ್ನು ನೆಯ್ದರು. ಆ ಬಟ್ಟೆಗಳು ಮೈಸೂರಿನ ದಸರಾ ವಸ್ತುಪ್ರದರ್ಶನಕ್ಕೆ ಕಳುಹಲ್ಪಟ್ಟಿದ್ದು ಬಹುಮಾನವನ್ನು ಪಡೆದುಕೊಂಡಿರುತ್ತವೆ. ಸಾವಂತವಾಡಿ ಸರ್ಕಾರು ಪ್ರದರ್ಶನಗಳಲ್ಲೂ ಅವಕ್ಕೆ ಯೋಗ್ಯತಾಪತ್ರಗಳು ದೊರೆತಿರುತ್ತವೆ. ಪ್ರತಿವರ್ಷದಲ್ಲಿಯೂ ೩೦೦—೩೦೦ ಮಂದಿಗಳಿಗೆ ಕಡಿಮೆಯಿಲ್ಲದೆ ಈ ಶರಣಾಲಯವನ್ನು ನೋಡಿಕೊಂಡು ಹೋಗುವುದಕ್ಕೆ ಬರುತ್ತಾರೆ. ಹಾಗೆ ಬಂದವರು ಯಥೋಚಿತವಾಗಿ ದ್ರವ್ಯಸಹಾಯವನ್ನು ಮಾಡುವುದುಂಟು. ಪ್ರಕೃತ ವರ್ಷದಲ್ಲಿ ಇಚಲ್ಕರಂಜೀ ಸರ್ದಾರ್ ಶ್ರೀಮಂತ ಬಾಬಾಸಾಹೇಬ್‌ರವರು ೧೫೦೦ ರೂ. ಗಳನ್ನೂ ಸರ್ಕಾರದ ಸಿವಿಲ್ ಸರ್ಜನರ ಪತ್ನಿ ಸುಂದರಾಬಾಯಿಯವರು ೧೩೦೦ ರೂ ಗಳನ್ನೂ ಸಹಾಯಮಾಡಿದರು. ಪ್ರಕೃತ ವರ್ಷದಲ್ಲೆಲ್ಲಾ ಈ ಆಲಯಕ್ಕೆ ೨೧೦೩೩—೧೦—೧ ರೂ. ಆದಾಯವೂ, ೧೫೧೯೮—೧೨—೨ ರೂ. ವೆಚ್ಚವೂ ಆಯಿತು. ೪೩೭೪೪—೧೧—೩ ರೂ. ಮೂಲಧನವಿರುತ್ತದೆ. ಅಲ್ಲದೆ ಈ ಆಲಯದ ಕಟ್ಟಡವು ೪೦ ಸಾವಿರ ರೂ. ಬಾಳತಕ್ಕುದಾಗಿದೆ. ಇದನ್ನು ನೋಡುವಲ್ಲಿ ಈ ಶರಣಾಲಯವು ದಿನೇದಿನೇ ಅಭಿವೃದ್ಧಿಗೊಳ್ಳುತ್ತಾ ಸಮರ್ಪಕವಾದ ಸ್ಥಿತಿಯಲ್ಲಿರುವುದೆಂದು ಕಾಣುತ್ತಿದೆ.

ಪಟಿಕ.

ಇದು ಒಗರು-ಕಾರ-ಉಪ್ಪು ಈ ಮೂರು ತೆರದ ರುಚಿಗಳಿಂದ ಕೂಡಿದ ವಸ್ತುವು. ಇದರ ಪ್ರಯೋಜನವು ಅನೇಕ ವಿಧವಾಗಿರುವುದು. ಇದನ್ನು ಬೇರೆಬೇರೆ ವಸ್ತುಗಳೊಡನೆ ಸಂಯೋಗಮಾಡಿ ಉಪಯೋಗಿಸುವುದರಿಂದ ಅತ್ಯಂತ ಪ್ರಯೋಜನವನ್ನುಂಟುಮಾಡಿಕೊಳ್ಳುವುದು. ೧ ತೊಲ ಪಟಿಕವನ್ನು ೧೩ ಔನ್ಸು ನೀರಿನಲ್ಲಿ ಕಲಸಿ ಕೆಂಪಾಗಿ ನೋಯುತ್ತಿರುವ ಕಣ್ಣುಗುಡ್ಡೆಗಳನ್ನು ತೊಳೆಯುತ್ತ ಬಂದರೆ ಕಣ್ಣಿನ ಕೆಂಬಣ್ಣವನ್ನು ಹಾರಿಸುವುದು ಮಾತ್ರವೇ ಅಲ್ಲದೆ ನೇತ್ರಸಂಬಂಧವಾದ ಹಲವು ರೋಗಗಳನ್ನು ಗುಣಪಡಿಸುವುದು. ಯಾವಾಗಲೂ ನೀರು ಸೋರುತ್ತಿರುವ ಕಣ್ಣುಗಳನ್ನು ತೊಳೆಯುವದಕ್ಕೆ ಈ ನೀರು ಅತ್ಯಂತ ಪ್ರಶಸ್ತವಾದ ಸಾಧನವು. ೪ ಬತ್ತದಕಾಳಿನ ತೂಕದ ಶೋಧಿಸಿದ ಪಟಿಕದ ಪುಡಿಯನ್ನು ೧ ಪಂಚಪಾತ್ರೆಯ ಪನ್ನೀರಿನಲ್ಲಿ ಹಾಕಿ, ೧ ಔನ್ಸು ಕಾಸಿದ ನೀರನ್ನೂ, ೪ ಬತ್ತದಕಾಳಿನ ತೂಕದ ಸಕ್ಕರೆಯನ್ನೂ ಸೇರಿಸಿ ಒಂದು ಸೀಸೆಯಲ್ಲಿ ಹಾಕಿ ಚೆನ್ನಾಗಿ ಕುಲುಕಿ ಕೆಲವು ಬಿಂದುಗಳಂತೆ ಪ್ರತಿದಿನವೂ ಕಣ್ಣಿಗೆ ೩ ಸಾರಿ ಬಿಡುತ್ತ ಬಂದರೆ, ಕಣ್ಣಿನಲ್ಲಿ ಕಟ್ಟಿದ್ದ ದುರ್ಮಾಂಸವು ಕತ್ತರಿಸಿ ಹೋಗುವುದು. ನಿಂಬೆಹಣ್ಣಿನ ರಸದಲ್ಲಿ ಪಟಿಕವನ್ನೂ ೧ ಕಾಳು ತೂಕ ಅಫೀಮನ್ನೂ ಸೇರಿಸಿ ಕುದಿಸಿ ನೋವಾಗಿರುವ ಕಣ್ಣುಗಳ ಮೇಲೆ ಪಟ್ಟುಹಾಕಿದರೆ, ಒಳಗಿನ ನೋವನ್ನು ಬಲುಬೇಗನೆ ಪರಿಹರಿಸುವುದು. ಹಲ್ಲುಗಳಿಂದ ಆಗಾಗ್ಗೆ ರಕ್ತವು ಸುರಿಯುತ್ತಿರುವವರಿಗೂ, ನಾಲಗೆಯ ಮೇಲೂ ಒಸಡಿನೊಳಗೂ, ತುಟಿಯೊಳಗೂ, ಅಂಗುಳಿನಲ್ಲೂ ಆಗಾಗ್ಗೆ ಗಾಯವಾಗುತ್ತಿರುವವರಿಗೂ ಮೇಲೆ ಹೇಳಿದ ನೀರನ್ನು ದಿನಕ್ಕೆ ೩ ಸಾರಿಯಂತೆ ಮುಕ್ಕಳಿಸುತ್ತ ಇರುವುದು ಅತ್ಯುತ್ತಮವಾದ ಔಷಧವಾಗಿರುವುದು. ಪಟಿಕ-ಕಾಚು ಆರತಿಕರ್ಪೂರ-ಅಡಕೆಯ ಹುಡಿ ಇವುಗಳನ್ನು ಸಮಭಾಗವಾಗಿ ಹುಡಿಮಾಡಿ ಸೇರಿಸಿ ಪ್ರತಿದಿನವೂ ಬೆಳಿಗ್ಗೆ ಸಾಯಂಕಾಲ ಹಲ್ಲುಗಳನ್ನುಜ್ಜುತ್ತ ಬಂದರೆ ಹಲ್ಲುಗಳಿಂದ ಸೋರುವ ರಕ್ತವು ನಿಲ್ಲುವುದಲ್ಲದೆ ಅವುಗಳ ಬುಡವು ಗಟ್ಟಿಯಾಗುವುದು ಬಾಯ ದುರ್ಗಂಧವು ಹೋಗುವುದು. ಪಟಿಕವನ್ನು ಅರೆದು ಚೇಳು ಚುಚ್ಚಿದ ಸ್ಥಲಕ್ಕೆ ಲೇಪಿಸಿ, ಬೆಂಕಿಯ ಸೇಕವನ್ನು ಕೊಡುವರು. ಪಟಿಕವನ್ನು ಬೆಂಕಿಯಲ್ಲಿ ಸುಟ್ಟು ಅರಳುಮಾಡಿ ಅಥವಾ ಹಾಗೆಯೇ ನಿಂಬೆಯಹಣ್ಣಿನ ರಸದಲ್ಲಿ ತೆಯ್ದು ನಯನವ್ಯಾಧಿಗಳಿಗೆ ಉಪಯೋಗಿಸುವುದೂ ಉಂಟು. ತಲೆಯಲ್ಲಿ ಹೇನು ಹೆಚ್ಚಿಕೊಂಡು ತೊಂದರೆ ಪಡುತ್ತಿರುವವರು ಪಟಿಕವನ್ನು ಹುಡಿಮಾಡಿ ನೀರಿನಲ್ಲಿ ಹಾಕಿ ಚೆನ್ನಾಗಿ ಕುಲುಕಿ ತಲೆಗೆ ಆ ನೀರನ್ನು ಒತ್ತಿ ಬಿಸಿಲಿನಲ್ಲಿ ಸ್ವಲ್ಪಹೊತ್ತು ನಿಂತಿದ್ದು, ಬಳಿಕ ಬಿಸಿನೀರಿನಿಂದ ಸ್ನಾನಮಾಡಿದರೆ ಆ ಹೇನುಗಳು ಸತ್ತು ಉದುರಿಹೋಗುವುವು. ದುರ್ವಾಸನೆ ಹುಟ್ಟಿರುವ ಗಾಯಗಳನ್ನಾಗಲಿ, ಹುಣ್ಣುಗಳನ್ನಾಗಲಿ ತೊಳೆಯುವುದಕ್ಕೆ ಪಟಿಕದ ನೀರನ್ನು ಮಿಂಚಿದ ಸಾಧನವು ಮತ್ತೊಂದಿಲ್ಲವೆಂದು ಹೇಳಬಹುದು. ಬೆಳಿಗ್ಗೆ ಸಾಯಂಕಾಲದಂತೆ ಪ್ರತಿದಿನವೂ ಈ ಪಟಿಕದ ನೀರಿನಿಂದ ತೊಳೆಯುತ್ತ ಬಂದರೆ ಅಸಾಧ್ಯವಾದ ನಾರುಹುಣ್ಣುಗಳ ದಾರವು ಕೂಡ ಸುಲಭವಾಗಿ ಹೊರಕ್ಕೆ ಬಂದುಬಿಡುವುದು. ಯಾವುದಾದರೊಂದು ಸ್ಥಲದಲ್ಲಿ ರಕ್ತವು ಹೊರಡುವುದಕ್ಕಾರಂಭಿಸಿದಾಗ ಅದನ್ನು ನಿಲ್ಲಿಸುವುದಕ್ಕೆ ಪಟಿಕದ ನೀರನ್ನಾಗಲಿ, ಅದರ ಪುಡಿಯನ್ನಾಗಲಿ ಉಪಯೋಗಿಸಬಹುದು. ಪಟಿಕದ ನೀರಿನಿಂದ ತೊಳೆದರೆ ಪಾದರಸವು ಶುದ್ಧವಾಗಿ ಮೃದುವಾಗುವುದು. ಈ ಪಟಿಕವನ್ನು ಮಿತವಾಗಿ ಕ್ರಮಪಡಿಸಿ ಉಪಯೋಗಿಸಿದರೆ ಅತ್ಯಂತ ಪ್ರಯೋಜನವುಂಟು. ಮಿತಿತಪ್ಪಿದರೆ ವಾಂತಿ ಮೊದಲಾದ ವಿಕಾರಗಳುಂಟಾಗುವುವು.

ಟಿಟಾನಿಕ್ ಹಡಗಿನ ವಿಪತ್ತು.

ಇದರ ಸಂಬಂಧವಾದ ಅನೇಕ ವಿಷಯಗಳು ಪಾಶ್ಚಾತ್ಯ ಪತ್ರಿಕೆಗಳಲ್ಲಿ ಈಗ ಪ್ರಕಟವಾಗುತ್ತಿವೆ. ಈ ಮಹಾವಿಪತ್ತುಂಟಾಗಲು ಕಾರಣವೇನೆಂಬುದನ್ನು ಅಮೇರಿಕಾದವರು ಪಂಚಾಯತರ ಮೂಲಕ ವಿಚಾರಮಾಡಿದರು. ಇದೇ ತಿಂಗಳು ತಾ॥ ೭ ರಲ್ಲಿ ಇಂಗ್ಲೆಂಡಿನಲ್ಲೂ ಕೂಡ ಒಂದು ಸಂಘದ ಮೂಲಕ ವಿಚಾರಿಸಲ್ಪಡುವುದು. ಇದುವರೆಗಿನ ವಿಚಾರಣೆಯಿಂದ ಗೊತ್ತಾಗಿರುವ ಸಂಗತಿಯೇನೆಂದರೆ— ದೂರದ ವಸ್ತುಗಳನ್ನು ರಾತ್ರಿಯ ಹೊತ್ತು ನೋಡಿಕೊಳ್ಳುವುದಕ್ಕಾಗಿ ಹಡಗಿನ ಮೇಲೆ ಇಡಲ್ಪಡಬೇಕಾದ ದೀಪವನ್ನು ಈ ಹಡಗಿನ ಮೇಲೆ ಇಟ್ಟಿರಲಿಲ್ಲ. ಇದೊಂದು ದೊಡ್ಡ ಲೋಪ. ಆ ದೀಪವು ಇದ್ದರೆ ಕಾವಲಿನವರು ಮಂಜಿನ ಬೆಟ್ಟವನ್ನು ದೂರದಲ್ಲೇ ಕಂಡು, ಎಚ್ಚರಿಕೆಗೊಟ್ಟು ತಪ್ಪಿಸಿಬಿಡುತ್ತಿದ್ದರು. ಇಲ್ಲದೆ ರಾತ್ರಿಯ ಹೊತ್ತು ನೋಡುವುದಕ್ಕೆ ಯೋಗ್ಯವಾದ ದೂರದರ್ಶಕ ಯಂತ್ರವನ್ನು ಕಾವಲಿನವರ ವಶಕ್ಕೆ ಕೊಟ್ಟಿರಲಿಲ್ಲ. ಅಪಾಯಕರವಾದ ಪ್ರದೇಶದಲ್ಲಿ ಹಡಗುಗಳನ್ನು ನಡೆಯಿಸಬೇಕಾದ ವೇಗಕ್ಕಿಂತಲೂ ಅತ್ಯಧಿಕವಾಗಿ ಇದನ್ನು ಗಂಟೆಗೆ ೨೧॥ ಮೈಲಿಯಂತೆ ನಡೆಯಿಸುತ್ತಿದ್ದರು. ಸೌತ್ ಹಾಂಪ್ಟನ್ನಿನಿಂದ ನ್ಯೂಯಾರ್ಕಿಗೆ ಹಡಗುಗಳು ೮ ದಿವಸದಲ್ಲಿ ಸೇರುತ್ತಿರುವಲ್ಲಿ ಈ ಹಡಗನ್ನು ಆರೇ ದಿವಸದಲ್ಲಿ ಸೇರಿಸಬೇಕೆಂದು ಅತ್ಯಂತ ವೇಗವಾಗಿ ನಡೆಯಿಸಿದರು. ಪ್ರಯಾಣಿಕರೆಷ್ಟು ಜನರಿದ್ದರೋ ಅಷ್ಟು ಜನಕ್ಕೂ ಸಾಕಾಗುವಷ್ಟು ಆಪತ್ಕಾಲಸಹಾಯದ ದೋಣಿಗಳನ್ನು ಹಡಗಿನಲ್ಲಿಟ್ಟಿರಲಿಲ್ಲ. ಈ ಟಿಟಾನಿಕ್ ಹಡಗಿಗೆ ೨೦ ಮೈಲಿ ದೂರದಲ್ಲಿ ಕಾಲಿಫೋರ್ನಿಯಾ ಎಂಬುದೊಂದು ಹಡಗು ಸಮುದ್ರದಲ್ಲಿದ್ದಿತು. ಅದರ ಅಧಿಕಾರಿಯು ಆ ದಿನದ ರಾತ್ರಿ, ಇದೇ ಮಂಜಿನ ಬೆಟ್ಟಗಳ ಭಯದಿಂದ ತನ್ನ ಹಡಗನ್ನು ನಡೆಯಿಸದೆ ಲಂಗರನ್ನು ಹಾಕಿ, ಬೆಳಗಾಗುವ ವರೆಗೂ ನಿಲ್ಲಿಸಿಕೊಂಡಿದ್ದನು. ಈ ಟಿಟಾನಿಕ್ ಹಡಗಿನ ಅಧಿಕಾರಿಯು ಒಂದನ್ನೂ ಲಕ್ಷ್ಯಮಾಡದೆ ಮನಸ್ಸಿಗೆ ತೋಚಿದಂತೆ ನಡೆದುಕೊಂಡನು. ಇದಲ್ಲದೆ ಕಾಲಿಫೋರ್ನಿಯಾ ಹಡಗಿನ ಅಧಿಕಾರಿಯು ತಾನು ಆ ದಿನದ ರಾತ್ರಿ ೧೧ ಗಂಟೆಯಲ್ಲಿ "ಇಲ್ಲಿ ಮಂಜಿನ ಬೆಟ್ಟವಿದೆ; ಎಚ್ಚರಿಕೆ." ಎಂದು ತನಗೆ ೨೦ ಮೈಲಿಯ ದೂರದಲ್ಲಿದ್ದ ಟಿಟಾನಿಕ್ ಹಡಗಿಗೆ ಆಕಾಶವಾರ್ತೆಯನ್ನು ಕೊಟ್ಟನೆಂದೂ "ಬಾಯ್ಮುಚ್ಚು; ನಿನ ಪಾಡಿಗೆ ಹೋಗು." ಎಂದು ಟಿಟಾನಿಕ್ ಹಡಗಿನ ತಂತ್ರೀವಾರ್ತೆಯ ಅಧಿಕಾರಿಯು ಉತ್ತರವನ್ನು ಕೊಟ್ಟನೆಂದೂ, ಅದರಮೇಲೆ ತಾವುಗಳು ಮಲಗಿಕೊಂಡುಬಿಟ್ಟೆವೆಂದೂ, ಬಳಿಕ ಟಿಟಾನಿಕ್ ಹಡಗಿಗೆ ಅಪಾಯವಾದ ಸಂಗತಿಯು ಬೆಳಗಿನ ೬ ಗಂಟೆಯ ವರೆಗೂ ತಮಗೆ ಗೊತ್ತೇ ಆಗಲಿಲ್ಲವೆಂದೂ ಕ್ಯಾಲಿಫೋರ್ನಿಯಾ ಹಡಗಿನವರು ವಾಜ್ಮೂಲವನ್ನು ಕೊಟ್ಟಿದ್ದಾರೆ. "ಬಾಯ್ಮುಚ್ಚು" ಎಂದು ಟಿಟಾನಿಕ್ಕಿನಿಂದ ಉತ್ತರಬರದೆಯೂ, ಕಾಲಿಫೋರ್ನಿಯಾದ ಅಧಿಕಾರಿಗಳು ಮಲಗಿಕೊಳ್ಳದೆಯೂ ಇದ್ದರೆ, ಟಿಟಾನಿಕ್ಕಿಗೆ ಅಪಾಯ ಸಂಭವಿಸಿದ ಕೂಡಲೇ ಕೊಟ್ಟ ಆಕಾಶವಾರ್ತೆಯು ತತ್‌ಕ್ಷಣದಲ್ಲೇ ಅತ್ಯಂತ ಸಮೀಪದಲ್ಲಿದ್ದ ಕಾಲಿಫೋರ್ನಿಯಾ ಹಡಗಿಗೆ ಸೇರಬಹುದಾಗಿದ್ದಿತು. ೧ ಗಂಟೆಯೊಳಗಾಗಿ ಅದು ಈ ಹಡಗಿನ ಸಹಾಯಕ್ಕೆ ಬಂದಿದ್ದರೆ ಈಗಿನಷ್ಟು ಮಹಾಪ್ರಾಣಾಪಾಯವಾಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ೨॥ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಸಮುದ್ರದ ಮೇಲಣ ರಾಜಭವನದಂತೆ ಕಟ್ಟಿದ್ದ ಇಂಥ ದೊಡ್ಡ ಹಡಗಿನ ಮೇಲೆ ಒಂದು ದೀಪಾಲಯವನ್ನು ಕಟ್ಟಿಸದೆ ಇದ್ದುದೂ, ರಾತ್ರಿಯ ಹೊತ್ತು ಕಾವಲಿನವರಿಗೆ ದೂರದರ್ಶಕ ಯಂತ್ರಗಳನ್ನು ಕೊಡದೆ ಹೋದುದೂ, ಅಪಾಯವಿದೆಯೆಂದು ಬೇರೆ ಹಡಗಿನಿಂದ ಸುದ್ದಿಬಂದರೂ ನಿರ್ಲಕ್ಷ್ಯಮಾಡಿದುದೂ ಸಹ ಟಿಟಾನಿಕ್ ಹಡಗಿನ ಮಹಾವಿಪತ್ತಿಗೆ ಕಾರಣವೆಂದು ಗೊತ್ತಾಗಿದೆ.

ಈ ಹಡಗು ಇಂಗ್ಲೆಂಡಿನ ವೈಟ್ ಸ್ಟಾರ್ ಕಂಪೆನಿಯವರಿಂದ ಕಟ್ಟಲ್ಪಟ್ಟಿದ್ದಿತು ಆ ಕಂಪೆನಿಯ ಅಧಿಕಾರಿಯಾದ ಮಿ॥ ಇಸ್ಮೆಯವರು ಕೋಟೀಶ್ವರರು. ಇವರು ಸಹ ಅದೇ ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದು ದೋಣಿಗಳ ಮುಖೇನ ಪ್ರಾಣರಕ್ಷಣೆಮಾಡಿಕೊಂಡಿದ್ದಾರೆ. ಈಗ ಅಮೇರಿಕಾ ಪಂಚಾಯತರು ಇವರಿಗೆ ನಾನಾ ಪ್ರಶ್ನೆಗಳನ್ನು ಹಾಕಿ ಎಳೆದಾಡುತ್ತಿದ್ದಾರೆ. ಅದರಿಂದ ಇಂಗ್ಲೆಂಡಿನವರಿಗೆ ಆಗ್ರಹವುಂಟಾಗಿದೆ

ಟಿಟಾನಿಕ್ ಹಡಗಿನಲ್ಲಿದ್ದ ಪ್ಲೀಟ್ ಎಂಬ ಉದ್ಯೋಗಿಯು—ತನಗೆ ಮೊಟ್ಟಮೊದಲು ಈ ಮಂಜಿನ ಗುಡ್ಡವು ಸಾಮಾನ್ಯವಾಗಿ ಕಾಣಿಸಿತೆಂದೂ, ಹತ್ತಿರಕ್ಕೆ ಬರಬರುತ್ತ ನೀರಿನ ಮೇಲೆ ೪೦-೫೦ ಅಡಿ ಎತ್ತರವಾಗಿ ಕಾಣುತ್ತಿತ್ತೆಂದೂ, ತನ್ನಲ್ಲಿ ದೂರದರ್ಶಕ ಯಂತ್ರವಿರುತ್ತಿದ್ದರೆ ಮೊದಲೇ ನೋಡಿ ತಿಳುವಳಿಕೆ ಕೊಡುತ್ತಿದ್ದೆನೆಂತಲೂ, ಅದಿಲ್ಲದೆ ಹೋದುದರಿಂದ ಇದು ಅಪಾಯಕರವಾದ ಬೆಟ್ಟಕಲ್ಲವೆಂದು ತಿಳಿದೆನೆಂದೂ ವಾಜ್ಮೂಲಕೊಟ್ಟಿದ್ದಾನೆ.

ಇನ್ನೊಬ್ಬ ಉದ್ಯೋಗಿ ಬಾಕ್ಸ್ ಎಂಬುವನು, ಮಂಜಿನ ಬೆಟ್ಟಕ್ಕೆ ಹಡಗು ಅಪ್ಪಳಿಸಿದಾಗ ಶಬ್ದ ಕೇಳಲಿಲ್ಲವೆಂದೂ, ಕೆಲವರಿಗೆ ಅಪಾಯ ಸಂಭವಿಸಿದುದೇ ಗೊತ್ತಿಲ್ಲವೆಂದೂ, ತಾನು ಕೆಳಗಿನ ಅಂತಸ್ತಿಗೆ ಇಳಿದಾಗ ಅಂಚೆಯ ಚೀಲಗಳು ನೀರಿನಲ್ಲಿ ತೇಲಾಡುತ್ತಿದ್ದುದನ್ನು ಕಂಡು ಮುಖ್ಯಾಧಿಕಾರಿಯಾದ ಕ್ಯಾಪ್ಟನ್ ಸ್ಮಿತ್ತಿಗೆ ತಿಳುಹಿದೆನೆಂದೂ, ಬಳಿಕ ಎಲ್ಲರಿಗೂ ತಿಳುವಳಿಕೆಕೊಟ್ಟೆವೆಂದೂ ವಾಜ್ಮೂಲಕೊಟ್ಟಿದ್ದಾನೆ.

ಪಂಜಾಬುದೇಶದ ನೀರಾವರಿ.

ಲಾರ್ಡ್ ಕರ್ಜನರವರು ವೈಸ್ರಾಯರಾಗಿದ್ದಾಗ್ಗೆ ಭರತಖಂಡದ ರಾಜ್ಯಭಾರದಲ್ಲಿ ನೂತನ ಪ್ರಾಮುಖ್ಯವಾದ ಸಂಸ್ಕಾರಗಳನ್ನು ಕುರಿತು ವರದಿಮಾಡುವುದಕ್ಕಾಗಿ ಅನೇಕ ಸಂಘಗಳನ್ನು ಏರ್ಪಡಿಸಿದ್ದರು. ಅವುಗಳಲ್ಲಿ ನೀರಾವರಿಯ ಅಭಿವೃದ್ಧಿಯನ್ನು ಕುರಿತು ವಿಚಾರಮಾಡಿ ವರದಿಮಾಡತಕ್ಕ ಸಂಘವೂ ಒಂದಾಗಿದ್ದಿತು. ಆ ಸಂಘದವರು ಸಾಮ್ರಾಜ್ಯಸರ್ಕಾರಕ್ಕೆ ಮಾಡಿದ ತತ್ಸಂಬಂಧವಾದ ವರದಿಯಲ್ಲಿ ಕಂಡ ದೊಡ್ಡ ನೀರಾವರಿ ಕೆಲಸಗಳೊಳಗೆ ಪಂಜಾಬು ಅಧಿಪತ್ಯದಲ್ಲಿ ಮೊನ್ನೆ ತಾನೇ ವೈಸ್ರಾಯ್ ಲಾರ್ಡ್ ಹಾರ್ಡಿಂಜ್‌ರವರಿಂದ ಆರಂಭಿಸಲ್ಪಟ್ಟ ದೊಡ್ಡ ಕಾಲುವೆಯೊಂದಾಗಿರುತ್ತದೆ. ಈ ಅಧಿಪತ್ಯದಲ್ಲಿ ಜೀಲಂ, ಚೀನಾಬ್, ಬೀಯಾಸ್, ಸಟ್ಲೆಜ್, ರಾವಿ ಎಂಬ ೫ ದೊಡ್ಡ ಹೊಳೆಗಳಿವೆ. ಇವುಗಳಲ್ಲಿ ೩ ಹೊಳೆಗೆ ದೊಡ್ಡದೊಡ್ಡ ಅಣೆಕಟ್ಟುಗಳನ್ನು ಕಟ್ಟಿ, ಮೊದಲು ಒಂದು ಕಾಲುವೆಗೆ ನೀರನ್ನು ಬಿಟ್ಟು ಅನೇಕ ಭೂಮಿಗೆ ಹಾಯಿಸಿ, ಅದು ಮುಗಿಯುತ್ತ ಬಂದಂತೆ ಮತ್ತೊಂದು ಹೊಳೆಯ ಕಾಲುವೆಯ ನೀರನ್ನು ಅದಕ್ಕೆ ಜಂಟಿಸಿ, ಅದರ ನೀರು ಮುಗಿದು ಬಂದ ಸ್ಥಳಕ್ಕೆ ಮತ್ತೊಂದು ಕಾಲುವೆಯನ್ನು ಜಂಟಿಸಿ, ಹೀಗೆ ಆ ಕಾಲುವೆಯನ್ನು ಬಹು ದೂರ ಸಾಗಿಸಿಕೊಂಡು ಹೋಗುವಂತೆ ಏರ್ಪಡಿಸಿರುತ್ತಾರೆ. ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ನೀರಾವರಿಯ ಕೆಲಸಗಳಲ್ಲಿ ಇದೂ ಒಂದಾಗಿರುತ್ತದೆಯೆಂಬ ಸಂಗತಿಯು ಈ ಕೆಳಗೆ ಕಂಡ ಅದರ ವಿವರಣದಿಂದ ಗೊತ್ತಾಗುತ್ತದೆ.

ಮೊದಲಿನ ಕಾಲುವೆಯು ಜೀಲಂ ನದಿಯ ಅಣೆಕಟ್ಟಿನಿಂದ ಆರಂಭಿಸಲ್ಪಟ್ಟು, ಕೆಲವು ೩ ಮೈಲಿಗಳ ದೂರ ಬಂದನಂತರ ಚೀನಾಬು ನದಿಯಲ್ಲಿ ಸೇರಿ, ಅಲ್ಲಿನ ಅಣೆಕಟ್ಟಿನಿಂದ ಮತ್ತೆ ಕಾಲುವೆಯು ಆರಂಭಗೊಂಡು ಕೆಲವು ಮೈಲುಗಳ ದೂರ ಹೋಗಿ ರಾವಿ ನದಿಯಲ್ಲಿ ಸೇರುವುದು. ಅಲ್ಲಿನ ಅಣೆಕಟ್ಟಿನಿಂದ ಮತ್ತೆ ಮುಂದಕ್ಕೆ ಕಾಲುವೆಯು ಪೂರ್ವಮುಖವಾಗಿ ಹೊರಡುವುದು ಈ ಮೂರು ಕಾಲುವೆಯ ಕೆಲಸವೂ ಮುಗಿದು ನೀರು ಬಿಡಲ್ಪಟ್ಟರೆ ೨೦ ಲಕ್ಷ ಎಕರೆಯ ಭೂಮಿಗಳಿಗೆ ನೀರು ಹಾಯುವುದು. ಇದರಿಂದ ಪ್ರತಿವರ್ಷವೂ ಸರ್ಕಾರಕ್ಕೆ ೩೩ ಲಕ್ಷ ರೂ ಗಳ ಕಂದಾಯವು ಉತ್ಪನ್ನವಾಗುವುದು. ಎಂದರೆ ಇದಕ್ಕಾಗಿ ಸರ್ಕಾರದವರು ವೆಚ್ಚಮಾಡುವ ಹಣಕ್ಕೆ ೧೦೦ ಕ್ಕೆ ವರ್ಷ ೧ ಕ್ಕೆ ೩॥ ರೂ ನಂತೆ ಬಡ್ಡಿ ಗಿಟ್ಟುವುದು.

ಈ ಕಾಲುವೆಗಳಲ್ಲಿ ಉತ್ತರಚೀನಾಬ್ ಕಾಲುವೆಯೆಂಬುದು ೨ ನೆಯದು, ಅದರ ಕೆಲಸವು ಈಗತಾನೇ ಮುಗಿದು ಅದರಲ್ಲಿ ಮೊದಲಾವೃತ್ತಿ ನೀರನ್ನು ಹಾಯಿಸುವ ಸಮಾರಂಭವು ನಮ್ಮ ವೈಸ್ರಾಯರಿಂದ ಕಳೆದ ತಾ॥ ೧೨ ರಲ್ಲಿ ನಡೆಯಿಸಲ್ಪಟ್ಟಿತು. ಈ ಕಾಲುವೆಯು ಸಯಾಲ್ಕೋಟ ಪಟ್ಟಣಕ್ಕೆ ೧೦ ಮೈಲಿಯ ಉತ್ತರದಲ್ಲಿ ಚೀನಾಬ್ ನದಿಯಿಂದ ತೆಗೆಯಲ್ಪಟ್ಟಿದೆ. ಈ ಕಾಲುವೆಗೆ ಸೇರಿದ ಸಣ್ಣ ಕಾಲುವೆಗಳ ಹೊರತಾಗಿ, ಮುಖ್ಯವಾದ ದೊಡ್ಡ ಕಾಲುವೆಯೇ ೯೧ ಮೈಲುಗಳ ದೂರ ಹೋಗುತ್ತದೆ. ಸಯಾಲ್ಕೋಟ-ಗುಜರಾನ್ವಾಲಾ-ಲಾಹೋರು ಮಂಟಿಗೋಮರಿ ಈ ನಾಲ್ಕು ಜಿಲ್ಲೆಗಳಿಗೆ ಸೇರಿದ ೬ ಲಕ್ಷ ಎಕರೆಯ ಭೂಮಿಗಳಿಗೆ ಈ ಕಾಲುವೆಯ ನೀರು ಒದಗಿಸಲ್ಪಡುತ್ತದೆ. ಈ ಕಾಲುವೆಯು ಆರಂಭಸ್ಥಲದಲ್ಲಿ ೨೭೦ ಅಡಿಗಳ ಅಗಲವುಳ್ಳುದಾಗಿರುವುದು. ಇದರಲ್ಲಿ ೧೧॥ ಅಡಿಯುದ್ದದ ನೀರು ಹರಿಯುತ್ತಿರುವುದು. ಇದರ ತೋಳುನಾಲೆಗಳು ೮೦ ಮೈಲಿಗಳ ದೂರ ಹರಿಯುವುವು. ಪ್ರತಿಭೂಮಿಗೂ ನೀರನ್ನು ಒಯ್ಯುವ ಸಣ್ಣ ಬಚ್ಚಲುಗಳ ದೂರವು ೧೯೭೨ ಮೈಲಿಗಳ ದೂರವಾಗುವುದು ಇದೊಂದು ಕಾಲುವೆಗಾಗಿ ವೆಚ್ಚವಾಗಿರುವ ಹಣವು ೩೩೩೪೧೦೦೦ ರೂ. ಗಳು. ಇದೊಂದು ಕಾಲುವೆಯಿಂದ ವರ್ಷ ೧ ಕ್ಕೆ ಹುಟ್ಟುವ ಭೂಗಂದಾಯವು ೨೬ ಲಕ್ಷ ರೂ. ಗಳು ಒಟ್ಟು ೩ ಕಾಲುವೆಗಳಿಗೂ ವೆಚ್ಚವಾಗುವ ಹಣವು ೧೦೭೮೦೦೦೦ ರೂಪಾಯಿಗಳು.

ಈ ಮೇಲೆ ಕಂಡ ೩ ಕಾಲುವೆಗಳಲ್ಲದೆ ಇವಕ್ಕೆ ಮುಂಚೆಯೇ ಆ ದೇಶದಲ್ಲಿ ಮಾಡಲ್ಪಟ್ಟಿರುವ ಇನ್ನೂ ಕೆಲ ಕಾಲುವೆಗಳುಂಟು ಅವುಗಳಿಂದಲೂ ೩೬೩೦೦೦೦ ಎಕರೆಯ ಭೂಮಿಗೆ ನೀರು ಒದಗಿಸಲ್ಪಡುತ್ತಿದೆ. ಆ ನೀರಾವರಿ ಭೂಮಿಗಳಿಂದ ವರ್ಷ ೧ ಕ್ಕೆ ಆ ದೇಶದಲ್ಲಿ ೨೦೩೦೦೦೦೦೦ ರೂ. ಗಳ ಬೆಲೆಬಾಳುವ ಧಾನ್ಯದ ಬೆಳೆಯಾಗುತ್ತಿದೆ. ಆ ಭೂಮಿಗಳಿಂದ ಸರ್ಕಾರಕ್ಕೆ ಪ್ರತಿವರ್ಷವೂ ೨೪೩೪೧೦೦೦ ರೂ. ಗಳ ಕಂದಾಯವು ಹುಟ್ಟುತ್ತಿದೆ. ಅದಕ್ಕಾಗಿ ಸರ್ಕಾರವು ಖರ್ಚುಮಾಡಿರುವ ಹಣವು ೨೨೨೦೦೦೦೦೦ ರೂಪಾಯಿಗಳು. ಹೀಗೆ ಕಾಲುವೆಗಳ ನೀರಿನಿಂದ ಸಾಗುವಳಿಯಾಗುವ ಭೂಮಿಯು ಪಂಜಾಬು ಅಧಿಪತ್ಯದಲ್ಲಿರುವಷ್ಟು ಮತ್ತಾವ ರಾಜ್ಯದಲ್ಲಿಯೂ ಇರುವುದಿಲ್ಲ. ಈ ಕಾಲುವೆಗಳನ್ನು ಸಾಮ್ರಾಜ್ಯಸರ್ಕಾರದವರು ಸ್ಥಾಪಿಸಿಕೊಟ್ಟಮೇಲೆ ಆ ದೇಶದ ಬೇಸಾಯಗಾರರು ಸಮೃದ್ಧವಾದ ಬೆಳೆಯನ್ನು ಮಾಡಿ, ಹಲವರು ಭಾರಿ ಶ್ರೀಮಂತರಾಗಿರುತ್ತಾರೆ. ಆ ಅಧಿಪತ್ಯದ ಭೂಮಿಗಳಲ್ಲಿ ಗೋಧಿಯ ಬೆಳೆಯು ವಿಶೇಷವಾಗಿ ಮಾಡಲ್ಪಡುತ್ತದೆ. ಭರತಖಂಡಕ್ಕೆ ಇಂಗ್ಲೀಷರುಗಳು ಬಂದು ತಮ್ಮ ಅಧಿಕಾರವನ್ನು ಸ್ಥಾಪಿ

ಕ ಬಳಿಕ ಪ್ರಜೆಗಳ ಸೌಕರ್ಯಕ್ಕಾಗಿ ಅವರು ಮಾಡಿಕೊಟ್ಟಿರುವ ಹಲವು ಏರ್ಪಾಟುಗಳಲ್ಲಿ ನೀರಾವರಿಯ ಕೆಲಸವೊಂದು ಅತ್ಯಂತ ಪ್ರಯೋಜಕವಾದುದು. ಈ ನೀರಾವರಿಯ ಕೆಲಸವು ವರ್ಷೇವರ್ಷೇ ಇನ್ನೂ ಅಭಿವೃದ್ಧಿಯಾಗುವುದರಲ್ಲೇ ಇದೆ. ಈ ಉಪಕೃತಿಗಾಗಿ ಭಾರತೀಯರು ಸಾರ್ವಭೌಮ ಸರ್ಕಾರಕ್ಕೆ ಅತ್ಯಂತ ಕೃತಜ್ಞರಾಗಿದ್ದಾರೆ.

ಮೈಸೂರ್ ಸ್ಟಾರ್

೧೯೧೨ ನೆಯ ಮೇ ತಾ॥ ೬ ನೆಯ ಸೋಮವಾರ

ಇಟಲೀ ತುರುಷ್ಕ ಯುದ್ಧ.

ಪ್ರಪಂಚದ ಮೇಲೆ ಈಗ ತುರುಷ್ಕರ ರಾಜ್ಯವಾಗಲಿ ಸೇನೆಗಾಗಲಿ ವಿಶೇಷವಾಗಿರುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಮಧ್ಯದೊಳಗೆಲ್ಲಾ ತುರ್ಕಿ ಸಂಸ್ಥಾನವೊಂದು ಸಿಕ್ಕಿಕೊಂಡಿರುತ್ತದೆ. ಇದಕ್ಕೆ ನೆಮ್ಮದಿಯಾಗಿ ಬಾಳುವ ಕಾಲವೇ ಇಲ್ಲ. ಒಬ್ಬರಮೇಲೆ ಜಗಳಕ್ಕೆ ಕಾಲು ಕೆರೆಯುತ್ತಿದ್ದ ಇಟಲಿದೇಶವು ಯುದ್ಧವನ್ನು ಹೂಡಿ ಇಲ್ಲಿಗೆ ೮ ತಿಂಗಳಾದವು. ಆದರೂ ಇದುವರೆಗಿನ ಫಲಿತಾಂಶವನ್ನು ನೋಡಿದರೆ, ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತಾಗಿದೆಯೇ ಹೊರತು, ಇಟಲಿಯವರ ಶ್ರಮ ಸಾಹಸ ಧನವ್ಯಯ ಪ್ರಾಣಹಾನಿಗಳಿಗೆ ತಕ್ಕಷ್ಟು ಫಲವೇನೂ ಆಗಿಲ್ಲ; ಸಮುದ್ರತೀರದ ಸಣ್ಣ ಸಣ್ಣ ಪ್ರದೇಶಗಳು ಕೆಲವನ್ನು ಮಾತ್ರ ಹಿಡಿದುಕೊಂಡಿರುತ್ತಾರೆ. ಇಟಲಿಯವರಲ್ಲಿ ನೌಕಾಬಲವೂ ಭೂಸೇನೆಯೂ ಅಧಿಕವಾಗಿರುವುದು ಮಾತ್ರವಲ್ಲದೆ ಈ ನಾಗರಿಕತೆಯ ಕಾಲಕ್ಕೆ ತಕ್ಕ ಆಯುಧೋಪಕರಣಗಳ ಸಹಾಯವಾದರೂ ಚೆನ್ನಾಗಿರುತ್ತಿದೆ. ಪ್ರತಿಪಕ್ಷದ ತುರ್ಕಿ ಅರಬ್ಬಿಯವರುಗಳಾದರೋ ಮತಾಭಿಮಾನ ದೇಶಾಭಿಮಾನದ ಮೂಲಕ ಉದ್ರೇಕಿಸಿದ ವೀರಾವೇಶದಿಂದ ವಿಜೃಂಭಿಸಿ ರಾಕ್ಷಸರಂತೆ ಇಟಲಿಯವರ ಮೇಲೆ ಬಿದ್ದು ಹೋರಾಡುತ್ತಿದ್ದಾರೆ. ಹಲವುಸಾರಿ ಅರಬ್ಬಿಯವರ ಧೈರ್ಯ ಶೌರ್ಯ ತೇಜಸ್ಸಿಗೆ ಇಟಲಿಯನ್ನರು ಮುಖಕೊಡಲಾರದೆ ಹಿಮ್ಮೆಟ್ಟಬೇಕಾಗಿ ಬಂದಿತು. ಈ ರೀತಿಯಿಂದ ಯುದ್ಧ ಮಾಡುತ್ತಾ ಬಂದರೆ ಪ್ರತಿಪಕ್ಷದವರನ್ನು ಹಣ್ಣಿಗೆ ತರುವುದು ಕಷ್ಟವೆಂದು ಯೋಚಿಸಿಯೋ ಏನೋ ಇಟಲಿಯವರು ತುರ್ಕಿಯವರ ಶಿಬಿರಗಳ ಕಡೆಗೆ ಸಾಗಿಹೋಗುತ್ತಿದ್ದ ಸಾಮಾನುಗಳ ಹಡಗು ಮೊದಲಾದುವುಗಳನ್ನು ತಡೆಯುವ ಕೆಲಸಕ್ಕೆ ನಡುಕಟ್ಟಿ ನಿಂತಿದ್ದಾರೆ. ತ್ರಿಪೋಲಿಯ ಮೇಲೆ [illegible] ಸಾಕಾಯಿತು. ಯೂರೋಪಿನಲ್ಲಿರುವ ತುರ್ಕಿಯ ತೀರಪಟ್ಟಣಗಳನ್ನು ಹಿಡಿದುಕೊಂಡರೆ ಅವರ ಶಕ್ತಿಯು ಅಡಗುವುದೆಂದು ಯೋಚಿಸಿ, ಅವರ ಕೆಲವು ಪಟ್ಟಣಗಳ ಮೇಲೆ ಗುಂಡುಗಳ ಮಳೆಯನ್ನು ಸುರಿಸಿದರು. ಮೊದಮೊದಲು ಇಟಲಿಯವರ ಪಟಾಟೋಪವೇ ಪ್ರಬಲವಾಗಿ ತೋರಿದರೂ ಹಿಂದಿನಿಂದ ಅರಬ್ಬಿಯವರ ಧೈರ್ಯವು ಇಟಲಿಯನ್ನರ ಎದೆಬಿರಿಯುವಂತೆ ಮಾಡಿತು. ಲೀಲಾಜಾಲದಲ್ಲಿ ತ್ರಿಪೋಲಿಯನ್ನು ನುಂಗಿ ಬರುತ್ತೇವೆಂದು ತಿಳಿದಿದ್ದ ಇಟಲಿಯವರ ಅಂಗುಳಿಗೆ ತುರ್ಕಿಯವರು ಗಾಳವಾಗಿ ಪರಿಣಮಿಸಿದ್ದಾರೆ. ಸೊಳ್ಳೆಯ ಸಮವೆಂದು ಗಣಿಸಲ್ಪಟ್ಟಿದ್ದ ತುರ್ಕಿಯವರ ಮುಂದೆ ತಮ್ಮ ಆಟವು ಸಾಗದೆಯೂ, ಕೈಹಾಕಿ ಅವಲಕ್ಷಣವೆನಿಸಿಕೊಂಡಂತಾಗಿರುವುದಕ್ಕಾಗಿಯೂ ಇಟಲಿಯು ಈಗ ಅತ್ಯಂತವಾಗಿ ಸಿಡಿಮಿಡಿಗೊಂಡಿರುತ್ತದೆ. ಇದರ ಮೇಲೆ ಕೋಟ್ಯಂತರ ದ್ರವ್ಯವನ್ನು ಹಾಳುಮಾಡಿದುದಕ್ಕೆ ಚರಿತಾರ್ಥವೇನೆಂದು ಅಲ್ಲಿಯ ಪ್ರಜೆಗಳು ಕೇಳಿ ಇಟಲಿ ಸರ್ಕಾರಕ್ಕೆ ಚುಚುಕು ಮುಳ್ಳನ್ನಾಡಿಸುತ್ತಲಿದ್ದಾರೆ.

ಈ ಮಧ್ಯೆ ಇಟಲಿಯವರು ಯುದ್ಧವನ್ನು ನಿಲ್ಲಿಸಿ ಸಮುದ್ರದ ದಾರಿಯನ್ನು ಕಟ್ಟುವ ಯುಕ್ತಿಗೆ ತೊಡಗಿದುದರಿಂದ, ಆ ಅವಕಾಶವು ತ್ರಿಪೋಲಿಯ ಅರಬ್ಬಿಯವರಿಗೆ ಮದ್ದು ಗುಂಡು ಆಹಾರ ಸಾಮಗ್ರಿ ಮೊದಲಾದುವುಗಳನ್ನು ಸಂಗ್ರಹಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಯಿತು. ಈಗ ತ್ರಿಪೋಲಿ ಬೆಂಘಾಜಿ ಮೊದಲಾದ ತುರುಷ್ಕರ ಶಿಬಿರಗಳಲ್ಲಿ ೧೦ ಸಾವಿರ ತುರ್ಕಿಸೈನ್ಯವೂ ೨ ಲಕ್ಷ ಅರಬ್ಬಿ ಸೈನ್ಯವೂ ಯುದ್ಧಕ್ಕೆ ಸನ್ನದ್ಧವಾಗಿದೆ. ಇಟಲಿಯನರು ಬರತಕ್ಕ ದಾರಿಗಳಲ್ಲಿ ಆಹಾರವಾಗಲಿ ನೀರಾಗಲಿ ದೊರೆಯದಂತೆಯೂ ಅಷ್ಟು ಇಷ್ಟು ದೊರೆಯುವ ನೀರಿನಲ್ಲಿ ವಿಷವನ್ನು ಕದಡಿಯೂ ಇರುವುದರಿಂದ ಇಟಲಿಯನ್ನರಿಗೆ ಕುಡಿಯಲಿಕ್ಕೆ ನೀರು ಕೂಡ ದೊರಕದೆ ಅದನ್ನೂ ತಮ್ಮ ದೇಶದಿಂದ ಸಾಗಿಸಿಕೊಂಡು ಹೋಗುವಹೊತ್ತು ಪ್ರಾಪ್ತವಾಗಿದೆ. ತಮ್ಮ ಜಾತಿಯ ಜನರನ್ನು ಇಟಲಿಯವರು ನಿಷ್ಕರುಣೆಯಿಂದಲೂ ಅಧರ್ಮದಿಂದಲೂ ಕೊಲ್ಲುತ್ತಿರುವರೆಂಬ ವಾರ್ತೆಯು ಆಫ್ರಿಕಾಖಂಡಕ್ಕೆ ತಿಳಿದು ಅಲ್ಲಿನ ಮಹಮ್ಮದೀಯರನೇಕರು ತಮ್ಮ ಮನೆಮಾರುಗಳನ್ನು ಬಿಟ್ಟು ಸಜಾತಿಯರಿಗೆ ಸಹಾಯಮಾಡುವುದಕ್ಕಾಗಿ ತ್ರಿಪೋಲಿಯನ್ನು ಕುರಿತು ಬರುತ್ತಿದ್ದಾರೆ. ಇತ್ತ ಇಟಲಿಯ ಸೈನಿಕರು ದೆಸೆತಪ್ಪಿಕೊಂಡಿರುವುದರಿಂದ, ಅದ್ರಿಯಾದಲ್ಲಿ ರುವ ತಮ್ಮ ನೌಕಾಸೈನ್ಯವನ್ನು ಇಟಲಿಯನ್ನರು ಯುದ್ಧಾಂಕಣಕ್ಕೆ ತರಿಸಿದರು. ಇವರಲ್ಲಿ ಹಲವರು ಮಹಮ್ಮದೀಯರಾಗಿದ್ದುದರಿಂದ ನಮ್ಮನ್ನು ಸಜಾತೀಯರ ಮೇಲೆ ಕೈಮಾಡಿಸುವುದಕ್ಕೆ ಕರೆತಂದರೇ? ಎಂದು, ಅವರು ತಮ್ಮ ಸರ್ಕಾರದ ಮೇಲೆಯೇ ಅಸಮಾಧಾನಗೊಂಡಿರುತ್ತಾರೆ. ಈ ಸಮಯದಲ್ಲಿ ಪ್ರಪಂಚದ ಮೇಲಿರುವ ಎಲ್ಲಾ ಭಾಗದ ಮಹಮ್ಮದೀಯರೂ ತೋರಿಸಿರುವ ಏಕಮತ್ಯವು ಪ್ರಪಂಚಕ್ಕೆ ಆಶ್ಚರ್ಯವನ್ನುಂಟುಮಾಡತಕ್ಕದಾಗಿರುತ್ತದೆ. ಕೈಹಾಕಿದುದಕ್ಕೆ ಏನಾದರೂ ಒಂದು ತೆರವಾಗಿ ಮಾನದಿಂದ ಹಿಂದಿರುಗಿ ಹೋಗುವಂತಾದರೆ ಸಾಕೆಂದು ಜಪಿಸುವ ಹೊತ್ತು ಇಟಲಿಯವರಿಗೆ ಪ್ರಾಪ್ತವಾಗಿದೆ. ಈಪರಿಸ್ಥಿತಿಯನ್ನೆಲ್ಲಾ ಪಾಶ್ಚಾತ್ಯರಾಷ್ಟ್ರಗಳು ನೋಡಿ, ಹೊರಕ್ಕೆ ತಲೆಯಿಕ್ಕಿ, ಯಾವುದಾದರೊಂದು ರೀತಿಯಲ್ಲಿ ಸಮಾಧಾನ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಮೊದಮೊದಲು ಈ ಭಾವವು ಯಾರಿಗೂ ಹುಟ್ಟಿರಲಿಲ್ಲ. ದುರ್ಬಲರಿಗೆ ದೈವವೇ ಬೆಂಬಲವು, ಅನ್ಯಾಯಕ್ಕೆ ಅಪಜಯವೇ ಪರಿಣಾಮವು ಎಂಬುದು ಎಂದಿಗೂ ಸಟೆಯಾಗಲಾರದು.

ಯುದ್ಧಾಂಕಣದಲ್ಲಿರುವ ಲಂಡನ್ ಟೈಮ್ಸ್ ಪತ್ರಿಕಾ ಪ್ರತಿನಿಧಿಯು ತಮ್ಮ ಪತ್ರಿಕೆಗೆ ಬರೆದಿರುವ ಒಂದು ಲೇಖನದಿಂದ ಅಲ್ಲಿನ ಪರಿಸ್ಥಿತಿಯು ಗೊತ್ತಾಗುತ್ತದೆ, ಹೇಗೆಂದರೆ:—

„ತಮ್ಮ ಮತದವರನ್ನು ರೇಗಿಸಿ, ಇಟಲಿಯವರ ಮೇಲೆ ತಿರುಗಿಬೀಳಿಸುವುದರಲ್ಲಿ ತುರುಕರನ್ನು ಮೀರಿದವರು ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಆ ಪ್ರಜೆಗಳೆಲ್ಲರೂ ಒಂದೇ ಕಟ್ಟಿನಲ್ಲಿದ್ದುಕೊಂಡು ಇಟಲಿಯವರ ಕಷ್ಟವನ್ನು ೧ ಕ್ಕೆ ನಾಲ್ಕಾಗಿ ಮಾಡಿರುತ್ತಾರೆ. ಮಧ್ಯದೇಶದಲ್ಲಿ ಅತ್ಯಂತ ಪ್ರಬಲನಾಗಿರುವ ಒಬ್ಬ ಮತದ ಗುರುವು ಇಟಲಿಯಮೇಲೆ ಯುದ್ಧಕ್ಕೆ ಸರ್ವರೂ ಬನ್ನಿರಿಯೆಂದು ಪ್ರೋತ್ಸಾಹಿಸುವ ಸಾವಿರಾರು ಅಕ್ಷರಗಳನ್ನು ಒಂದು ದೊಡ್ಡ ರೇಶಿಮೆಯ ಪತಾಕೆಯ ಮೇಲೆ ಬರೆಯಿಸಿ, ಎಲ್ಲಾ ಕಡೆಗೂ ಪ್ರಕಟಿಸುತ್ತಿದ್ದಾನೆ. ಈತನು ಕಳುಹಿಸಿಕೊಟ್ಟ ಮೊದಲನೆಯ ಸೇನೆಯು ಅಜೀಜಿಯಾಕ್ಕೆ ೨ ದಿನಗಳ ಹಿಂದೆ ಸೇರಿರುತ್ತದೆ. ಈ ಸೇನೆಯ ಮುಂದಾಳುಗಳು ಕತ್ತಿಯನ್ನು ಹಿಡಿದು ಆಕಾಶದಲ್ಲಿ ತಿರುಹುತ್ತ ಹೋಗುತ್ತಿದ್ದರೆ, ಹಿಂದಿನ ಸೇನೆಯು ನಾವು ಸಿಂಹದ ಮರಿಗಳೆಂದು ಅರ್ಭಟಿಸಿಕೊಂಡು ನಗಾರಿಯ ಧ್ವನಿಗಳನ್ನು ಮಾಡುತ್ತ, ಅತ್ಯಂತ ರೋಷಾವೇಶದಿಂದ ಯುದ್ಧಕ್ಕೆ ಹೋಗುತ್ತಿದ್ದಾರೆ. ಇವರ ಕೈಯಲ್ಲಿ ಒಂದೊಂದು ಬಲ್ಲೆಯೂ ಒಂದೊಂದು ತುಪಾಕಿಯೂ ಇರುತ್ತವೆ. ಇವರೆಲ್ಲರೂ ಯುದ್ಧದಲ್ಲಿ ಗೆಲ್ಲಬೇಕು, ಇಲ್ಲವೆ ಸಾಯಬೇಕು ಎಂದು ಬದ್ಧಸಂಕಲ್ಪರಾಗಿ ಬಂದಿದ್ದಾರೆ. ತುರ್ಕಿಯವರು ಅರಬ್ಬಿಯವರಿಗೆ ಸಮೃದ್ಧವಾದ ಆಹಾರವನ್ನೂ ಸಂಬಳವನ್ನೂ ಕೊಡುತ್ತಿರುವುದರಿಂದ ಅವರು ಸಂತೋಷದಿಂದ ಯುದ್ಧಕ್ಕೆ ಸನ್ನದ್ಧರಾಗಿದ್ದಾರೆ. ಈ ಮಧ್ಯದಲ್ಲಿ ಅರಬ್ಬೀ ಸೇನಾನಾಯಕನು ಇಟಲಿ ಸೇನಾಧಿಪತಿಗೆ ಒಂದು ಪತ್ರವನ್ನು ಬರೆದು, „ಇದೇನು ಯುದ್ಧವನ್ನು ಮಾಡದೆ ಸುಮ್ಮನೆ ಕುಳಿತಿರುವುದು ಗಂಡುತನವೇ?" ಎಂದು ಕೂಡ ಕೇಳಿದ್ದನಂತೆ. ತುರುಷ್ಕರ ಸೇನಾಬಲವು ಅಧಿಕವಾಗುತ್ತಲಿದೆ."

ಸರ್ವ ಸಾಮ್ರಾಜ್ಯದವರು ತಮ್ಮ ಇಟಲಿಗೆ ಇನ್ನೂ ಅಪಮಾನವುಂಟಾಗುವುದಕ್ಕೆ ಅವಕಾಶಕೊಡದೆ ಇದ್ದುದರಲ್ಲಿ ಗೌರವವಾಗಿ ಹಿಂದಿರುಗುವಂತೆ ಮಾಡಿದರೆ ಉಭಯರಿಗೂ ಕ್ಷೇಮವಾಗುವದು.

ಗತಿಸಿದ ಸರ್ ಟಿ. ಮಾಧವರಾಯರ ತರುವಾಯ ಕೆಲಕಾಲ ಇಂದೂರು ಸಂಸ್ಥಾನದ ದಿವಾನರಾಗಿದ್ದು ವಿತಂತುವಿವಾಹ ಪ್ರೋತ್ಸಾಹ, ಬಾಲ್ಯವಿವಾಹ ನಿರೋಧ, ಸಮುದ್ರಯಾನ ನಿಷೇಧಪರಿಹಾರ ಮೊದಲಾದ ಸಮಾಜಸುಧಾರಣ ಕಾರ್ಯಗಳಲ್ಲಿ ಮುಂದಾಳಾಗಿ ಹೋರಾಡುತ್ತ ಒಳ್ಳೆಯ ಪ್ರಸಿದ್ಧರಾಗಿದ್ದ ಮ॥ ದಿವಾನ್ ಬಹದ್ದೂರ್ ಆರ್. ರಘುನಾಥರಾವ್ ಸಿ. ಎಸ್. ಐ ಯವರು ಕಳೆದ ತಾ॥ ೩ ರಲ್ಲಿ ಕುಂಭಕೋಣದಲ್ಲಿ ವಿಧಿವಶರಾದರೆಂದು ತಿಳಿಯಲು ಖೇದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ ೮೦ ವರ್ಷಗಳ ವಯಸ್ಸಾಗಿದ್ದಿತು. ಇವರು ರಾಜಕೀಯ ಲೌಕಿಕ ವಿಚಾರಗಳಲ್ಲಿ ಅನೇಕ ಉತ್ಕೃಷ್ಟವಾದ ಲೇಖನಗಳನ್ನು ವೃತ್ತಪತ್ರಿಕೆಗಳಲ್ಲಿ ಬರೆಯುತ್ತಿದ್ದು ಜನರಿಗೆ ಸುಬೋಧಕರಾಗಿದ್ದರು. ಇಂತಹರ ವಿಯೋಗದಿಂದ ಭರತಖಂಡಕ್ಕೇ ನಷ್ಟವಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು. ಇವರ ಪ್ರಜೋಪಯುಕ್ತ ಕಾರ್ಯವನ್ನು ಇಂಡಿಯಾ ಸರ್ಕಾರದವರು ಮೆಚ್ಚಿ ೧೮೯೯ ರಲ್ಲಿ ಇವರಿಗೆ ಸಿ. ಎಸ್. ಐ., ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಮತ್ತೂ ಮದ್ರಾಸ್ ಗೌರ್ನರಾಗಿದ್ದ ಸರ್ ಆರ್ಥರ್ ಲಾಲಿಯವರು ತಮ್ಮ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರನ್ನಾಗಿ ಮಾಡಿದ್ದರು

ಒಳದೇಶದ ವೃತ್ತಾಂತಗಳು.

ಬರುವ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳು ಹೊಸದಾಗಿ ಆರಿಸಲ್ಪಡಬೇಕೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಬೆಂಗಳೂರು ಡಿ॥ ನೆಲಮಂಗಲದಲ್ಲಿ ಕಳೆದ ತಾ॥ ೨೪ ರಲ್ಲಿ ೪ ಅಂಗುಲ ಮಳೆಯಾಗಿ ಒಣಗಿಹೋಗಿದ್ದ ಕೆರೆಗೆ ಸ್ವಲ್ಪ ನೀರು ಬಂದಿರುತ್ತದೆ.

ಚೇಫ್‌ಜಡ್ಜಿಯವರ ಉದ್ಯೋಗದಿಂದ ನಿವೃತ್ತರಾಗುವ ಸರ್ ಇಜ್‌ಮೆಯವರ ಬದಲು ಮತ್ತೊಬ್ಬ ಐರೋಪ್ಯರು ನಿಯಮಿಸಲ್ಪಡುವರೆಂದು ಡೇಲಿಪೋಸ್ಟ್ ಪತ್ರಿಕೆಯು ತಿಳಿಸುತ್ತದೆ.

ಚೆನ್ನರಾಯಪಟ್ಟಣದಲ್ಲಿ ೮-೧೦ ದಿನಗಳಿಂದ ವಾಂತಿಭೇದಿರೋಗವು ಪ್ರಾಪ್ತವಾಗಿ ಆಗಲೇ ೧೮ ಜನರು ಮೃತರಾದರು. ಈ ಕಾರಣದಿಂದ ಸಂತೆಯು ನಡೆಯುತ್ತಿಲ್ಲ. ನೆರೆಯ ಹಳ್ಳಿಗಳಲ್ಲೂ ರೋಗವು ಪ್ರಾಪ್ತವಾಗಿದೆ.

ಚಿತ್ರದುರ್ಗದ ಡಿ॥ ಪೋಲೀಸು ಸೂಪರಿಂಟೆಂಡೆಂಟರಾದ ಮ॥ ವೈ. ಎ. ಕೃಷ್ಣಮೂರ್ತಿಯವರು ೧॥ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಚೀಫ್‌ಕೋರ್ಟ್ ರೆಜಿಸ್ಟ್ರಾರರಾದ ಮ॥ ಬಿ. ಬಸವಾರಾಧ್ಯರು ಆ ಡಿ॥ ನ ಆಕ್ಟಿಂಗ್ ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಈ ತಾ॥ ೨೩ ರಲ್ಲಿ ನಡೆಯುವ ತಮ್ಮ ವರ್ಧಂತ್ಯುತ್ಸವಕ್ಕಾಗಿ ತಾ॥ ೧೬ ರಲ್ಲಿ ಉದಕಮಂಡಲದಿಂದ ಚಿತ್ತೈಸುವುದಾಗಿ ಕೇಳುತ್ತೇವೆ. ಪ್ರತಿವರ್ಷವೂ ಈ ಮಹೋತ್ಸವ ಸಮಯದಲ್ಲಿ ನಡೆಯುವ ಕುದುರೆಯ ಮತ್ತೂ ಪೋಲೋ ಪಂದ್ಯಗಳು ಈ ವೇಳೆ ಜೂನ್ ತಾ॥ ೨೪ ರಿಂದ ಆರಂಭವಾಗುವುದಾಗಿ ಪ್ರಕಟವಾಗಿದೆ.

ಸಬ್‌ರೆಜಿಸ್ಟ್ರಾರುಗಳಾದ ಮ॥ ಎಸ್. ರಾಮಸ್ವಾಮಿಶಾಸ್ತ್ರಿಗಳು ಬೌರಿಂಗ್‌ಪೇಟೆಯಿಂದ ಬೆಂಗಳೂರಿಗೂ, ಮ॥ ಸಿ. ಜಯರಾಯರು ದಾವಣಗೆರೆಯಿಂದ ಬೌರಿಂಗ್‌ಪೇಟೆಗೂ, ಮ॥ ಬಿ. ಎಂ. ರಂಗನಾಯಿಡುಯವರು ದೇವನಹಳ್ಳಿಯಿಂದ ದಾವಣಗೆರೆಗೂ ಮತ್ತೂ ಮ॥ ಎಂ. ರಾಘವೇಂದ್ರರಾಯರು ಮುಳಬಾಗಲಿಂದ ದೇವನಹಳ್ಳಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರ ಸಮೀಪ ಬಂಧುಗಳಾದ ಮತ್ತೂ ರಾಜಧಾನಿಯ ಆನರರಿ ಮ್ಯಾಜಿಸ್ಟ್ರೇಟರಾದ ಮ॥ ಪುಟ್ಟಯ್ಯಾಜಿ ಅರಸಿನವರು ತಮ್ಮ ದ್ವಿತೀಯಕುವರಿ ಚಿ॥ ಸೌ॥ ಕೃಷ್ಣಾಜಮ್ಮಣ್ಣಿಯವರನ್ನು ಅಮಲ್ದಾರ್ ಮ॥ ಕೃಷ್ಣ ಅರಸಿನವರ ಜ್ಯೇಷ್ಠಕುಮಾರ ಮತಿಮ್ಮಪ್ಪರಾಜಅರಸಿನವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನಡೆಸುವುದಾಗಿ ಗೊತ್ತಾಗಿರುವುದು.

ಮೈಸೂರ ಸೀಮೆಯ ಎಲ್ಲಾ ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳಲ್ಲಿ ಕಲಕತ್ತಾದ ಕೋರ್ಟುಗಳಲ್ಲಿ ಆಚರಣೆಯಲ್ಲಿರುವಂತೆ ಜಡ್ಜ್‌ಮೆಂಟಿನ ಫಿರ್ಯಾದಿ ಅಪರಾಧಿಗಳ ಮತ್ತೂ ಸಾಕ್ಷಿಗಳ ವಾಜ್ಮೂಲಗಳ ನಕಲನ್ನು ಬರೆಯಲು ಸರ್ಕಾರಿಯ ಛಾಪಾಯಿರುವ ಕಾಗದಗಳೇ ಬರುವ ೧೯೧೩ ನೆಯ ಜನವರಿ ತಾ॥ ೧ ರಿಂದುಪಯೋಗಿಸಲ್ಪಡತಕ್ಕದೆಂದೂ ೩ ಕಾಸಿನ ಕಾಗದದಂತೆ ದಪ್ಪನಾಗಿಯೂ ಅದಕ್ಕಿಂತಲೂ ಬೆಳ್ಳಗೂ ಇರುವ ಕಾಗದಗಳ ಮೇಲೆ ಇಂಗ್ಲೀಷಿನಲ್ಲಿ ೧೦೦ ಮತ್ತೂ ಕನ್ನಡದಲ್ಲಿ ೨೦೦ ಮಾತುಗಳು ಒಂದು ಪುಟದಲ್ಲಿ ಬರೆಯಲ್ಪಡಲನುಕೂಲಿಸುವಂತೆ ೧೬ ಗೆರೆಗಳನ್ನೆಳೆದು ತಕ್ಕ ಮುದ್ರೆಯನ್ನು ನೂತನವಾಗಿ ಮಾಡಿ ಒತ್ತಿ ಪ್ರತಿಯೊಂದು ಕಾಗದಕ್ಕೂ ೨ ಆಣೆ ಬೆಲೆಯನ್ನಿಡತಕ್ಕದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ವರ್ತಮಾನ ಸಂಗ್ರಹವು.

ಪ್ರಪಂಚದಲ್ಲೆಲ್ಲಾ ೧೭೦ ಕೋಟಿ ಪ್ರಜೆಗಳಿರುವರೆಂದು ಒಬ್ಬ ಜರ್ಮ ಪಂಡಿತನು ಗಣಿಸಿರುವನಂತೆ.

ಟಿಟಾನಿಕ್ ಹಡಗಿನ ನಾಶದಿಂದ ವಿಪನ್ನರಾದವರ ಸಹಾಯಾರ್ಥವಾಗಿ ಇದುವರೆಗೆ ೪೦ ಲಕ್ಷ ರೂ. ಗಳ ವರ್ಗಣಿಯು ಕೂಡಿದೆ.

ಬರ್ಮಾದಲ್ಲಿ ಇಷ್ಟರೊಳಗೇ ಒಂದು ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವುದೆಂದು ಅಂಡರ್ ಸೆಕ್ರಟರಿಯವರು ಕಾಮನ್ಸ್ ಸಭೆಯಲ್ಲಿ ಹೇಳಿರುವರು.

ವೈಶ್ಯರ ೬ ನೆಯ ಮಹಾಸಭೆಯು ಕುಂಭಕೋಣದಲ್ಲಿ ಇದೇ ತಿಂಗಳು ತಾ॥ ೨೩-೨೪-೨೫ ರಲ್ಲಿ ಮ॥ ನಾಳಂ ಪದ್ಮನಾಭಂ ಬಿ. ಎ, ಯವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ದಿಲ್ಲಿಯಲ್ಲಿ ಹೊಸದಾಗಿ ಕಟ್ಟಿಸಲ್ಪಡಲಿಕ್ಕಿರುವ ಕಟ್ಟಡಗಳಿಗೆ ಹದಿಯು ಹಾಕಲ್ಪಡುತ್ತಿದೆ. ದಿಲ್ಲಿಗೆ ೬ ಮೈಲುಗಳ ದೂರದಲ್ಲಿ ವೈಸ್ರಾಯರ ಭವನವು ಕಟ್ಟಲ್ಪಡಬೇಕೆಂದು ನಿಶ್ಚಿತವಾಗಿದೆ.

ದಿಲ್ಲಿಯ ಕೋಟೆಯಲ್ಲಿ ಮದ್ದುಗುಂಡುಗಳನ್ನು ಇಡುವ ಉಗ್ರಾಣದಲ್ಲಿ ಕೆಲಸಮಾಡುತ್ತಿರುವಾಗ ಒಂದು ಗುಂಡು ಹಾರಿ ೮-೯ ಜನರ ದೇಹವು ತುಂಡುತುಂಡಾಗಿ ಕೋಟೆಯ ತುಂಬಾ ತುಣುಕುಗಳು ಹಾರಿ ಬಿದ್ದುವು.

ಅಹಮ್ಮದಾಬಾದಿನಲ್ಲಿರುವ ಅನಾಥಪಶುಸಂರಕ್ಷಣಾಲಯದೊಳಗೆ ಈಗ ೭೩೯ ಪಶುಗಳು ಸಾಕಲ್ಪಡುತ್ತಿವೆ. ಮೇವಿಲ್ಲದ ಈ ಕಾಲದಲ್ಲಿ ಅವುಗಳ ತಿಂಡಿಗಾಗಿ ೧೦ ಸಾವಿರ ರೂ. ಗಳು ಬೇಕಾಗಿವೆ. ಧರ್ಮಾತ್ಮರ ಸಹಾಯವನ್ನು ಆಲಯವು ನಿರೀಕ್ಷಿಸುತ್ತಿದೆ.

ಭರತಖಂಡದ ಸೇನೆಯ ವೆಚ್ಚವನ್ನು ಕಡಿಮೆಮಾಡಲು ಸಾಧ್ಯವೆ? ಎಂಬುದನ್ನು ವಿಚಾರಮಾಡುವುದಕ್ಕಾಗಿ ಇಂಗ್ಲೆಂಡಿನಿಂದ ಬಂದಿರುವ ಫೀಲ್ಡ್ ಮಾರ್ಷಲ್, ಸರ್ ವಿಲಿಯಂ ನಿಕೋಲ್ಸನ್, ಸರ್ ವಿಲಿಯಂ ಮೇಯರ್‌ರವರುಗಳು ಈಗ ಸಿಮ್ಲಾವನ್ನು ತಲುಪಿರುತ್ತಾರೆ.

೧೯೧೧ ನೆಯ ವರ್ಷದ ಏಪ್ರಿಲ್ ತಾ॥ ೧ ರಿಂದ ೧೯೧೨ ನೆಯ ಫೆಬ್ರುವರಿ ತಾ॥ ೨೯ ರ ವರೆಗೆ ಭರತಖಂಡಕ್ಕೆ ೩೪·೬೪ ಕೋಟಿ ರೂ. ಗಳ ಭಂಗಾರವೂ, ೧೧·೫೩ ಕೋಟಿ ರೂ. ಬೆಳ್ಳಿಯೂ ಅನ್ಯದೇಶಗಳಿಂದ ಬಂದಿರುತ್ತದೆ. ಇಲ್ಲಿಂದ ಹೊರಕ್ಕೆ ೩·೬೯ ಕೋಟಿ ರೂ. ಬೆಲೆಯ ಚಿನ್ನವೂ, ೬·೭೩ ಕೋಟಿ ರೂ. ಬೆಲೆಯ ಬೆಳ್ಳಿಯೂ ಸಾಗಿಸಲ್ಪಟ್ಟಿದೆ.

ಭರತಖಂಡದ ರಾಜಧಾನಿಯನ್ನು ದಿಲ್ಲಿಗೆ ವರ್ಗಮಾಡಿದುದೇ ಮೊದಲಾದ ವಿಷಯಕವಾದ ಏರ್ಪಾಟಿನ ವಿಧಿಯನ್ನು ಅಂಡರ್‌ಸೆಕ್ರೆಟರಿಯವರು ಕಾಮನ್ಸ್ ಸಭೆಯ ಮುಂದಿಟ್ಟು, ಅವರ ಅನುಮೋದನವನ್ನು ಕೇಳುವಾಗ್ಗೆ ಭರತಖಂಡದ ವಿಷಯವಾಗಿ ಎಲ್ಲಪಕ್ಷದ ಸಭಾಸ್ತರರೂ ಏಕೀಭಾವಗೊಂಡಿರುವುದು ಅವಶ್ಯಕವೆಂದು ಸಯುಕ್ತಿಕವಾಗಿ ಪ್ರತಿಪಾದಿಸಲು, ೨ ನೇಯಾವೃತ್ತಿಯ ಅಂಗೀಕಾರವು ಅದಕ್ಕೆ ದೊರೆಯಿತು.

ಪೇಷಾವರಿನಲ್ಲಿ ಮಹಮ್ಮದೀಯರು ಇಸ್ಲಾಮಿಯಾ ಕಾಲೇಜ್ ಎಂಬ ಪಾಠಶಾಲೆಯನ್ನು ಬಿ. ಎ., ವರೆಗೂ ಓದುವುದಕ್ಕೆ ಅನುಕೂಲವಾಗುವಂತೆ ಸ್ಥಾಪಿಸುವುದರಲ್ಲಿದ್ದಾರೆ. ಈ ಶಾಲೆಯು ೧೫೪ ಎಕರೆಯ ಭೂಮಿಯನ್ನು ಆಕ್ರಮಿಸಿಕೊಂಡು ಖೈಬರ್ ಕಣಿವೆಯನ್ನು ನೋಡುತ್ತಿರುತ್ತದೆ. ಯುದ್ಧರಂಗವಾದ ಈ ಪರ್ವತಪ್ರದೇಶದಲ್ಲಿ ಇಂಥ ದೊಡ್ಡ ಪಾಠಶಾಲೆಯು ಸ್ಥಾಪಿಸಲ್ಪಡುವುದಕ್ಕೆ ಆಂಗ್ಲಪ್ರಭುಗಳ ಶಾಂತಿಸ್ಥಾಪನ ಪ್ರಭಾವವೇ ಮುಖ್ಯ ಕಾರಣವಲ್ಲವೆ?

ಕಲಕತ್ತಾದಲ್ಲಿ ಬಿ. ಎ., ಬಿ. ಎಲ್., ಪರೀಕ್ಷೆಯಲ್ಲಿ ಉತ್ತೀರ್ಣರಾದ ವಕೀಲರು ಅಡ್ವೋಕೇಟರಾಗಿ ಒರ್ಜಿನಲ್ ಕೋರ್ಟುಗಳಲ್ಲಿ ವಾದಿಸುವುದಕ್ಕೆ ಅವಕಾಶವಿಲ್ಲ. ಬೊಂಬಾಯಿ, ಮದ್ರಾಸು ಅಲಹಾಬಾದ್ ಕೋರ್ಟುಗಳಲ್ಲಿ ಇಂತಹ ವಕೀಲರನ್ನು ಅಡ್ವೋಕೇಟರನ್ನಾಗಿ ಸೇರಿಸಿಕೊಳ್ಳುವಂತೆ ಇಲ್ಲಿಯೂ ಮಾಡಬೇಕೆಂದು ವಕೀಲರೆಲ್ಲರೂ ಹೈಕೋರ್ಟಿನವರನ್ನು ಕೇಳಿಕೊಂಡಿದ್ದಾರೆ. ಬರುವ ತಾ॥ ೧೪ ಕ್ಕೆ ಈ ವಿಷಯದಲ್ಲಿ ಹೈಕೋರ್ಟಿನವರು ತೀರ್ಮಾನವನ್ನು ಹೇಳುವವರಾಗಿದ್ದಾರೆ.

ಉತ್ತರದಲ್ಲಿರುವ ತಿಪ್ಪೆರಾ ಸಂಸ್ಥಾನದ ದಿವಾನರಾದ ಬಾಬು ರಾಮಮಾಣಿಕರಾಯರವರ ತಂದೆಯು ಮೃತರಾಗಲಾಗಿ, ತಾಯಿಯು ತನ್ನ ಕೈಯ ೨ ಬೆರಳುಗಳಿಗೆ ಎಣ್ಣೆಯನ್ನದ್ದಿ, ದೀಪಕ್ಕೆ ಹಿಡಿದು, ತನ್ನ ಬೆರಳು ಲೇಶಮಾತ್ರವೂ ಸುಡುವುದಿಲ್ಲವೆಂದು ಜನರೊಡನೆ ಹೇಳಿ, ಬಳಿಕ ತಾನು ಚೆನ್ನಾಗಿ ಅಲಂಕಾರಮಾಡಿಕೊಂಡು, ತನ್ನ ಗಂಡನ ಶವವನ್ನು ಮಲಗಿಸಿದ್ದ ಚಿತೆಯಮೇಲಕ್ಕೆ ತಾನೂ ಹತ್ತಿ, ಸ್ವಲ್ಪವೂ ಅಲುಗದೆ ಬೆಂಕಿಯಲ್ಲಿ ದಗ್ಧವಾಗಿ ಸಹಗಮನಗೊಂಡರೆಂದು ಪ್ರಕಟವಾಗಿದೆ.

ಸಿಂಧುದೇಶದಲ್ಲಿ ಮುಕ್ಕಾಲುಪಾಲು ಪ್ರಜೆಗಳೆಲ್ಲಾ ಮಹಮ್ಮದೀಯರಾಗಿರುತ್ತಾರೆ. ಇವರು ವಿದ್ಯೆಯಲ್ಲಿ ತೀರ ಹಿಂದುಳಿದಿರುತ್ತಾರೆ. ಅದುಕಾರಣ ಇವರು ತಮ್ಮ ಪ್ರತಿಯೊಂದು ಎಕರೆ ಭೂಮಿಗೂ ಇಷ್ಟಿಷ್ಟರಂತೆ ಕಂದಾಯವನ್ನು ಎತ್ತಿಕೊಂಡು ಅದರಿಂದ ಪಾಠಶಾಲೆಗಳನ್ನು ಸ್ಥಾಪಿಸಿ, ತಮ್ಮಲ್ಲಿ ವಿದ್ಯಾಭಿವೃದ್ಧಿ ಮಾಡಿಕೊಳ್ಳಬೇಕೆಂದು ೧೯೧೧-೧೨ ರಲ್ಲಿ ಕೂಡಿಸಿದ ಒಂದು ಸಭೆಯಲ್ಲಿ ತೀರ್ಮಾನಿಸಿಕೊಂಡಿರುವರು. ಅವರ ಪ್ರತಿನಿಧಿಯು ಈಗ ಬೊಂಬಾಯಿಯ ನಿಯಮನಿರ್ಮಾಣಸಭೆಗೆ ಈ ವಿಷಯಕವಾದ ಒಂದು ವಿಧಿಯನ್ನು ತಂದಿರುತ್ತಾರೆ. ಈ ಮಹಮ್ಮದೀಯರ ವಿದ್ಯಾಸಕ್ತಿಯು ಕೊಂಡಾಡಲ್ಪಡತಕ್ಕದ್ದಲ್ಲವೆ?

ಪರಿಶ್ರಮಿಕ ವಿದ್ಯಾಭಿವೃದ್ಧಿಗಾಗಿ ಬಂಗಾಳದಿಂದ ಕಳೆದ ೮ ವರ್ಷಗಳ ಕಾಲದಲ್ಲಿ ೮೦ ಮಂದಿ ವಿದ್ಯಾರ್ಥಿಗಳು ವಿದೇಶಗಳಿಗೆ ಕಳುಹಲ್ಪಟ್ಟರು. ಅವರಲ್ಲಿ ೩೩ ಮಂದಿಗಳು ಸರ್ಕಾರದ ಉದ್ಯೋಗದಲ್ಲಿದ್ದಾರೆ. ೨೦ ಮಂದಿಗಳು ಹೊಸ ಕೈಗಾರಿಕೆಯ ಆಲಯಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಸಮುದ್ರಯಾನ ಮಾಡಿ ಬಂದವರಿಗೆ ಬಹಿಷ್ಕಾರ ಪ್ರಾಯಶ್ಚಿತ್ತ ಎಂಬ ಕೋಲಾಹಲಗಳೊಂದೂ ಇಲ್ಲದೆ, ಅಲ್ಲಿ ಸರ್ವಜಾತಿಯವರಲ್ಲೂ ಸಮುದ್ರಯಾನವು ಸಾಮಾನ್ಯವಾಗಿ ನಡೆಯಲ್ಪಡುತ್ತಿದೆ. ಈ ವರ್ಷ ಇಂಗ್ಲೆಂಡಿಗೆ ೧೮ ಮಂದಿಗಳೂ ಜರ್ಮನಿಗೆ ಇಬ್ಬರೂ, ಜಪಾನಿಗೆ ಇಬ್ಬರೂ ಕಳುಹಲ್ಪಡುವವರಲ್ಲಿದ್ದಾರೆ ಎಂಬುದಾಗಿ ಬರ್ದ್ವಾನ ಮಹಾರಾಜರವರು ಕಲ್ಕತ್ತಾ ಪಟ್ಟಣದ ಬಂಗಾಳಿಯೊಂದು ಸಭೆಯಲ್ಲಿ ಸೂಚಿಸಿದರು.

ಪ್ಯಾರಿಸ್ ಪಟ್ಟಣದಲ್ಲಿ ನಾಯಿಗಳಿಗಾಗಿಯೇ ಒಂದು ಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಇದರಲ್ಲಿ ನಾಯಿಗಳು ಕನಿಷ್ಠಪಕ್ಷ ೪ ತಿಂಗಳಾದರೂ ಶಿಕ್ಷೆಯನ್ನು ಹೊಂದಬೇಕು. ಹೆಚ್ಚಿನ ಬಿರುದನ್ನು ಪಡೆಯಬೇಕಾಗಿದ್ದರೆ ಇನ್ನೂ ಹೆಚ್ಚು ಕಾಲವಿರಬೇಕು. ತಿಂಡಿ ಮೊದಲಾದುವುಗಳ ವೆಚ್ಚವನ್ನು ಪಾಠಶಾಲೆಗೆ ಕೊಡಬೇಕಾಗುತ್ತದೆ ಅಲ್ಲಿ ಕಲಿಸಿಕೊಡುವುದೇನಂದರೆ:—ತನ್ನ ಯಜಮಾನನನ್ನು ಯಾವ ರೀತಿಯಿಂದ ಸಂತೋಷಪಡಿಸಿಕೊಂಡಿರಬೇಕೆಂಬ ಯುಕ್ತಿಯೇ. ಶಿಕ್ಷಣವನ್ನು ಮುಗಿಸಿಕೊಂಡು ಶಾಲೆಯಿಂದ ಹೋಗುವಾಗ ಶಾಲಾಧ್ಯಾಪಕನು ನಾಯಿಗಳಿಗೆ ಯೋಗ್ಯತಾಪತ್ರವನ್ನು ಕೊಟ್ಟು ಕಳುಹಿಸುವನು. ಇದರಲ್ಲಿ ಶಿಕ್ಷಿತವಾದ ನಾಯಿಗಳು ಯೋಗ್ಯತಾ ವಿಷಯದಲ್ಲಿ ಎಷ್ಟೋ ಪ್ರಸಿದ್ಧಿಗೊಂಡಿರುತ್ತವೆ

ಅಭಿನವ ಭೀಮನೆಂದು ಪ್ರಖ್ಯಾತರಾಗಿರುವ ಪ್ರೊ॥ ಕೋಡಿ ರಾಮಮೂರ್ತಿಯವರು ತಿರುವಾಂಕೂರಿನಲ್ಲಿ ತಮ್ಮ ಅದ್ಭುತದೇಹಬಲಪರಾಕ್ರಮವನ್ನು ಪ್ರದರ್ಶನಮಾಡಿದರು. ೬ ಸಾವಿರ ಪೌಂ ತೂಕದ ದೊಡ್ಡ ಕಲ್ಲುಬಂಡೆಯನ್ನು ತಮ್ಮ ಎದೆಯಮೇಲೇರಿಸಿಕೊಂಡು ಅದರಮೇಲೆ ಸಣ್ಣ ಸಣ್ಣ ಚಪ್ಪಡಿಗಳನ್ನೂ ಹೇರಿಸಿ, ಸುತ್ತಿಗೆಗಳಿಂದ ಬಡಿಯಿಸಿ ಒಡೆಸಿದರು. ಮೈಗೆ ಸುತ್ತಿದ್ದ ದಪ್ಪನಾದ ಸರಪಣಿಯನ್ನು ಮೈಯುಬ್ಬಿಸಿ ಪುಡಿಪುಡಿಮಾಡಿದರು, ೨ ದೊಡ್ಡ ಎತ್ತಿನ ಬಂಡಿಯಲ್ಲಿ ಜನರನ್ನು ಕುಳ್ಳಿರಿಸಿ, ಅದನ್ನು ತಮ್ಮಮೇಲೆ ಹರಿಯಿಸಿಕೊಂಡರು. ಎದೆಯ ಮೇಲೆ ೧ ದೊಡ್ಡ ಆನೆಯನ್ನು ನಿಲ್ಲಿಸಿಕೊಂಡಿದ್ದರು. ಇದನ್ನೆಲ್ಲಾ ಅಲ್ಲಿನ ಮಹಾರಾಜರು ನೋಡಿ ಸಂತೋಷಪಟ್ಟು, ೫೦೦ ರೂ. ಬೆಲೆಯ ಒಂದು ವಜ್ರಕಟಕವನ್ನೂ ೪ ಸಾವಿರ ರೂ. ಗಳನ್ನೂ ೧ ಆನೆಯನ್ನೂ ೨ ಹುಲಿಯ ಮರಿಗಳನ್ನೂ ಬಹುಮಾನಮಾಡಿದರು,

ಪ್ಯಾರಿಸ್ ಪಟ್ಟಣದ ಒಂದು ದೊಡ್ಡಬ್ಯಾಂಕಿಗೆ ಕಳ್ಳರು ನುಗ್ಗಿ ಅಲ್ಲಿದ್ದವರನ್ನು ಕೊಂದು ಹಣವನ್ನು ದೋಚಿಕೊಂಡು ಮೋಟಾರು ಬಂಡಿಯಲ್ಲಿ ಕುಳಿತುಕೊಂಡು ಓಡಿಹೋಗಿ, ಆ ಪಟ್ಟಣಕ್ಕೆ ೬ ಮೈಲು ದೂರದಲ್ಲಿರುವ ಒಂದು ಮನೆಯಲ್ಲಿ ಸೇರಿಕೊಂಡು, ಹತ್ತಿರಕ್ಕೆ ಬರುವ ಪೋಲೀಸರ ಮೇಲೆ ತುಪಾಕಿಗಳನ್ನು ಹಾರಿಸುತ್ತಿದ್ದರು. ಆ ಮನೆಗೆ ಪೋಲೀಸರು ಸಿಡಿಮದ್ದನ್ನೆಸೆದು ಸುಟ್ಟುಬಿಟ್ಟರು ಒಳಗಿದ್ದವರಲ್ಲಿ ಮೂವರು ಪೋಲೀಸರ ಗುಂಡಿನೇಟಿಗೆ ಸಿಕ್ಕಿ ಸತ್ತರು. ೨೩ ಮಂದಿಗಳು ಸೆರೆಹಿಡಿಯಲ್ಪಟ್ಟಿರುವರು. ಆ ಕಳ್ಳರನ್ನು ಹಿಡಿದುದೇ ಮೊದಲಾದ ರೀತಿಯೆಲ್ಲ ಸಿನಿಮೊಟೊಗ್ರಾಫಿನಲ್ಲಿ ಗ್ರಹಿಸಲ್ಪಟ್ಟಿದೆ. ಆ ಕಳ್ಳರು ಸಿಕ್ಕಿಬಿದ್ದಾಗ ಲಕ್ಷಾಂತರ ಪ್ರಜೆಗಳು ಆನಂದಿಸಿ ಸತ್ತವರ ಹೆಣಗಳ ಮೇಲೆ ತಾಂಡವವಾಡಿದರು. ಆ ಕಳ್ಳರನ್ನು ಹಿಡಿದ ರೀತಿಯನ್ನೆಲ್ಲಾ ವಿವರಿಸಿ ಪ್ರಕಟಿಸಿದ್ದ ವೃತ್ತಪತ್ರಿಕೆಯ ಸಂಚಿಕೆಗಳ ೧೦ ಲಕ್ಷ ಪ್ರತಿಯನ್ನು ಜನಗಳು ತೆಗೆದುಕೊಂಡು ಓದಿದರು.

ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಲಕ್ಷೋಪಲಕ್ಷ ಎಕರೆಯ ಭೂಮಿಯು ಬೇಸಾಯವಿಲ್ಲದೆ ಪಾಳುಬಿದ್ದಿದೆ. ಅಮೇರಿಕಾದೇಶದಲ್ಲಿ ಬೇಸಾಯಕ್ಕೆ ಸ್ಥಲವಿಲ್ಲದೆ ಶಿಲಾಮಯವಾಗಿರುವ ಭೂಮಿಗಳನ್ನೂ ಬೇಸಾಯಕ್ಕೆ ಅನುಕೂಲಪಡಿಸಿಕೊಂಡು ಹುಟ್ಟುವಳಿ ಮಾಡಿಕೊಳ್ಳುತ್ತಾರೆ. ಹೇಗೆಂದರೆ:—ಹೆಚ್ಚಾಗಿ ಅರೆಗಳಿರತಕ್ಕ ಭೂಮಿಗೆ ಡೈನಾಮೆಂಟ್ ಎಂಬ ಹಾರುವ ಮದ್ದುಗಳನ್ನು ಗುಳಿತೋಡಿಟ್ಟು, ಬೆಂಕಿ ಹೊತ್ತಿಸಿ, ಹಾರಿಸಿ, ಕಲ್ಲುಗಳನ್ನೆಲ್ಲಾ ತೆಗೆದು, ಮಣ್ಣನ್ನು ಸುರಿದು ಬೇಸಾಯಮಾಡುವರು. ಕಳೆದ ೧೯೧೧ ನೆ ವರ್ಷದಲ್ಲಿ ಈ ಕೆಲಸಕ್ಕಾಗಿಯೇ ೪೦ ಲಕ್ಷ ಮಣ ಡೈನಾಮೆಟ್ಟು ಮದ್ದನ್ನು ಒಬ್ಬ ವರ್ತಕನು ಒಬ್ಬ ಬೇಸಾಯಗಾರನಿಗೆ ಮಾರಿರುವನು. ಮದ್ದನ್ನಿಟ್ಟು ಭೂಮಿಯನ್ನೊಡೆದು ಸಡಿಲಗೊಡಿಸಿ ಬೇಸಾಯಮಾಡುವುದರಿಂದ ೧ಕ್ಕೆ ೩-೪ರಷ್ಟು ಹೆಚ್ಚಾಗಿ ಬೆಳೆಯಾಗುವುದಂತೆ. ಬೇಸಾಯಗಾರರಿಗೆ ಈ ಮದ್ದನ್ನು ಮಾಡಿಕೊಡುವ ಕಂಪನಿಗಳೇ ಆದೇಶದಲ್ಲಿ ೬ ಇರುತ್ತವೆ.

ಟಿಟಾನಿಕ್ ಹಡಗಿನಲ್ಲಿ ಸತ್ತವರ ಉಳಿದವರ ಲೆಕ್ಕವನ್ನು ಕಾಮನ್ಸ್ ಸಭೆಯಲ್ಲಿ ಈ ಕೆಳಗೆ ಕಂಡಮೇರೆ ಹೇಳಿರುತ್ತಾರೆ. ಇದರಲ್ಲಿ ಪ್ರಯಾಣಮಾಡುತ್ತಿದ್ದ ೧ ನೆ ತರಗತಿಯ ಪುರುಷರು ೧೭೩ ಮಂದಿಯಲ್ಲಿ ೫೮ ಮಂದಿಗಳು ಉಳಿದುಕೊಂಡರು ೧ ನೆ ತರಗತಿಯ ಪ್ರಯಾಣಿಕರಾದ ಹೆಂಗುಸರು ೧೪೪ ಮಂದಿಯಲ್ಲಿ ೧೩೯ ಜನರು ಬದುಕಿಸಲ್ಪಟ್ಟರು, ಅಲ್ಲದೆ ೫ ಮಕ್ಕಳು ಕಾಪಾಡಲ್ಪಟ್ಟರು. ೨ ನೆ ತರಗತಿಯ ೧೬೦ ಮಂದಿ ಪುರುಷರಲ್ಲಿ ೧೩ ಮಂದಿ ಬದುಕಿದರು. ಆ ತರಗತಿಯ ೯೩ ಮಂದಿ ಸ್ತ್ರೀಯರಲ್ಲಿ ೭೮ ಮಂದಿ ಬದುಕಿದರು. ಆ ತರಗತಿಯ ೨೪ ಮಂದಿ ಮಕ್ಕಳಲ್ಲಿ ಎಲ್ಲರೂ ಬದುಕಿಸಲ್ಪಟ್ಟರು. ೩ ನೆ ತರಗತಿಯ ೪೫೪ ಮಂದಿ ಗಂಡುಸರಲ್ಲಿ ೫೫ ಮಂದಿಗಳು ಉಳಿದರು. ಆ ತರಗತಿಯ ೧೭೯ ಮಂದಿ ಸ್ತ್ರೀಯರಲ್ಲಿ ೯೮ ಜನರು ಬದುಕಿದರು. ಆ ತರಗತಿಯಲ್ಲಿದ್ದ ೭೯ ಮಂದಿ ಮಕ್ಕಳಲ್ಲಿ ೨೩ ಮಕ್ಕಳು ಬದುಕಿಸಲ್ಪಟ್ಟರು. ಇದಲ್ಲದೆ ಹಡಗಿನಲ್ಲಿ ಆಳುಗಳು ಅಧಿಕಾರಿಗಳು ಕೆಲಸಗಾರರು ಮೊದಲಾದವರೆಲ್ಲಾ ಸೇರಿ ೮೬೫ ಮಂದಿ ಇದ್ದುದರಲ್ಲಿ ೧೯೯ ಮಂದಿ ಬದುಕಿದರು. ಅವರಲ್ಲಿದ್ದ ಹೆಂಗುಸರು ೨೩ ಮಂದಿಗೆ ೨೦ ಜನರು ಬದುಕಿದರು.

ಪ್ರಪಂಚದಮೇಲೆ ಅತ್ಯಧಿಕವಾದ ಸಂಪತ್ತುಳ್ಳ ದೇಶವು ಅಮೇರಿಕಾ ಎಂಬುವುದು ಸುಪ್ರಸಿದ್ಧವಷ್ಟೆ. ಆ ದೇಶದಲ್ಲಿರುವ ಸಕಲೈಶ್ವರ್ಯವನ್ನೂ ಸೇರಿಸಿದರೆ ಎಷ್ಟಾಗುವುದೋ ಆದರಲ್ಲಿ ಮೂರನೆಯ ಒಂದು ಭಾಗದಷ್ಟು ಸಂಪತ್ತು ಆ ದೇಶದ ೪೧ ಮಂದಿ ಕೋಟೀಶ್ವರರಲ್ಲೇ ಇರುವುದೆಂದು ಅಮೆರಿಕಾದ ಒಂದು ಪತ್ರಿಕೆಯು ಹೇಳುತ್ತದೆ. ಆ ೪೧ ಮಂದಿಗಳಲ್ಲಿ ಮುಖ್ಯರಾದವರ ಹತ್ತಿರವಿರುವ ಸಂಪತ್ತಿಯು ಎಷ್ಟೆಷ್ಟೆಂದರೆ—ಜಾನ್. ಡಿ. ರಾಕ್‌ಫೆಲ್ಲರ್ ಬಳಿಯಲ್ಲಿ ೨೪೦ ಕೋಟಿ ರೂ. ಗಳು; ಆಂಡ್ರೂಕಾರ್ನಗಿಯಲ್ಲಿ ೧೨೦ ಕೋಟಿ ರೂ, ಡಬ್ಲ್ಯು. ಡಬ್ಲ್ಯು. ಆಸ್ಟರ್ ೮೦ ಕೋಟಿ ರೂ., ಜೆ. ಪಿಂ ಮಾರ್ಗನ್ ೬೦ ಕೋಟಿ ರೂ., ವಿಲಿಯಂ ರಾಕ್‌ಫೆಲ್ಲರ್ ೪೦ ಕೋಟಿ ರೂ., ಡಬ್ಲ್ಯು. ಕೆ. ವಾಂಡರ್‌ಬಿಲ್ಟ್ ೪೦ ಕೋಟಿ ಎಚ್. ಸಿ. ಫ್ರಿಕ್ ೩೦ ಕೋಟಿರೂ., ಡಿ. ಒ. ಮಿಲ್ಸ್ ೩೦ ಕೋಟಿ ರೂ, ಮಾರ್ಷಲ್ ಫೀಲ್ಡ್ ೩೦ ಕೋಟಿ ರೂ., ಹೆನ್ರಿ ಎಂ. ಫ್ಲೇಜರ್ ೩೦ ಕೋಟಿ ರೂ., ಜೆ. ಜೆ. ಹಿಲ್ ೨೪ ಕೋಟಿ ರೂ., ಜೆ. ಡಿ ಆರ್ಚಿಬೋಲ್ಡ್ ೨೪ ಕೋಟಿ ರೂ., ಆಲಿವರ್ ಪೇಯ್ನ್ ೨೪ ಕೋಟಿ ರೂ., ಜೆ. ಬಿ. ಹಾಗಿನ್ಸ್ ೨೦ ಕೋಟಿ ರೂ., ಹೆನ್ರಿ ಫಿಪ್ಸ್ ೨೦ ಕೋಟಿ ರೂ., ಹೆಟ್ಟಿಗ್ರೀನ್ ೧೬ ಕೋಟಿ., ಜಾರ್ಜ್ ಗ್ಯಾಲ್ಡ್ ೧೬ ಕೋಟಿ ರೂ., ಜೆ. ಒಗ್ಡನ್ ಆರ್ಮರ್ ೧೬ ಕೋಟಿ ರೂ., ಇ. ಟಿ. ಗೆರ‍್ರಿ ೧೬ ಕೋಟಿ ರೂ, ಆರ್. ಡಬ್ಲ್ಯು. ಗೋಯಿಲೆಟ್ ೧೬ ಕೋಟಿ ರೂ., ಇವರಲ್ಲದೆ ೧೨-೧೦-೮ ಕೋಟಿ ರೂ. ಗಳುಳ್ಳ ಶ್ರೀಮಂತರು ಎಷ್ಟೋ ಮಂದಿಗಳಿದ್ದಾರೆ.

ಪತ್ರವ್ಯವಹಾರವು.

ದಾವಣಗೆರೆ.

ಶ್ರೀಮನ್ ನಿರಂಜನ ಪ್ರಣವಸ್ವರೂಪಿಗಳಾದ ಇಲ್ಲಿನ ಶ್ರೀ ವಿರಕ್ತಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ॥ ೨೯ ನೆಯ ದಿವಸ ಶ್ರೀ ವಿರಕ್ತಮಠದಲ್ಲಿ „ವೀರಶೈವ ಹಿತೋಪದೇಶಕ ಸಂಘ" ದ ಪರವಾಗಿ ಸಭೆ ಸೇರಿದ್ದಿತು. ವೇ॥ ಕೆ. ಎಂ. ದಾನಪ್ಪಯ್ಯ ಶಾಸ್ತ್ರಿಗಳವರು ಶಿವೈಕ್ಯರಾದುದರಿಂದ ದುಃಖಪ್ರದರ್ಶನಾರ್ಥವಾಗಿ ಈ ಸಭೆ ಸೇರಿದ್ದಿತು. ಆರಂಭದಲ್ಲಿ ಮ॥ ಹರ್ತಿಕರ್ ಮಂಜಪ್ಪನವರು ಶಿವೈಕ್ಯರಾದ ವೇ॥ ದಾನಪ್ಪಯ್ಯಶಾಸ್ತ್ರಿಗಳವರ ಭಾಷಣಚಾತುರ್ಯವನ್ನೂ, ಪುರಾಣಗಳನ್ನು ಬಹು ರಸವತ್ತಾಗಿ ಹೇಳತಕ್ಕ ಅವರ ಪದ್ಧತಿಗಳನ್ನೂ, ಈ ಶ್ರೇಷ್ಠವಾದುಭಯಗುಣಗಳಿಂದ ಸಕಲ ಮತೀಯರಲ್ಲಿಯೂ ಇವರು ಹೊಂದಿದ ಗೌರವವನ್ನೂ, ಯಥೋಚಿತ ಸಭಿಕರಿಗೆ ತಿಳುಹಿಸಿ, ಇಂತಹ ವಿದ್ವಾಂಸರು ಅಕಾಲದಲ್ಲಿಯೇ ಕೈಲಾಸವಾಸಿಗಳಾದುದರಿಂದ ಸಕಲರಿಗೂ ಅತ್ಯಂತ ದುಃಖವಾಗುವುದಲ್ಲದೆ, ಇವರ ಚಿಕ್ಕಪ್ರಾಯದ ಧರ್ಮಪತ್ನಿಯವರಿಗುಂಟಾಗಿರುವ ಅಪಾರವಾದ ದುಃಖವು ಇವರ ವಿಯೋಗ ದುಃಖವನ್ನು ಇನ್ನಿಷ್ಟು ಹೆಚ್ಚಿಸುತ್ತಿದೆಯೆಂತಲೂ, ಮತ್ತೂ „ಮೈಸೂರ್ ಸ್ಟಾರ್" ಪತ್ರಿಕಾಕರ್ತರಾದ ಮ॥ ರಾ॥ ವೈ. ವಿರೂಪಾಕ್ಷಯ್ಯನವರ ಧರ್ಮಪತ್ನಿಯವರು ಅಕಾಲದಲ್ಲಿಯೇ ಶಿವೈಕ್ಯರಾದುದರಿಂದ ನಮ್ಮಗಳಿಗೆಲ್ಲ ಅತ್ಯಂತ ದುಃಖವಾಗುವುದು ಸ್ವಾಭಾವಿಕವಾಗಿದೆ. ಆದುದರಿಂದ ಈ ಉಭಯ ಕುಟುಂಬದವರಿಗೆ ನಮಗುಂಟಾದ ವಿಷಾದವನ್ನು ಈ ಮೂಲಕ ತಿಳುಹಿಸಲು ಈ ಸಂಘದ ಉಪಾಧ್ಯಕ್ಷರಿಗೆ ಅಧಿಕಾರ ಕೊಡಬೇಕೆಂದು ಬರೆದು ಕಳುಹಿಸುವ ಪತ್ರದ ಅಭಿಪ್ರಾಯವನ್ನು ಸಭಿಕರಿಗೆ ಓದಿ ಹೇಳಿದರು. ಅನಂತರ ಇಲ್ಲಿನ ಮ॥ ರಾ॥ ಸಾವಳಗಿ ನಾಗಪ್ಪನವರು ಈ ಸೂಚನೆಗಳಿಗೆ ಅನುಮೋದಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಸೊಲ್ಲಾಪುರ.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸನ್ನಿಧಿಯು ಸುಮಾರು ನಾಲ್ಕು ತಿಂಗಳಿಂದಲೂ ಇಲ್ಲಿಯ ಸದ್ಭಕ್ತರ ಭಕ್ತ್ಯತಿಶಯದ ಮೂಲಕ ಇಲ್ಲಿಯೇ ಇರೋಣವಾಗಿದೆ. ಮಾರ್ಚ್ ತಾ॥ ೧೩-೧೪-೧೫ ಈ ಮೂರು ದಿವಸಗಳಲ್ಲಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಈ ಗ್ರಾಮದ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿರುವ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯು ವೇ॥ ಪಂ॥ ಗುರುಮೂರ್ತಿಶಾಸ್ತ್ರಿ ಬೆನಕನಹಳ್ಳಿ ಇವರ ಕಡೆಯಿಂದ ತೆಗೆದುಕೊಳ್ಳಲ್ಪಟ್ಟಿತು. ವಿದ್ಯಾರ್ಥಿಗಳು ಪರಿಶ್ರಮಪಟ್ಟು ಅಭ್ಯಾಸಮಾಡಿರುವುದರಿಂದ ಮೂರನೆಯ ಒಂದು ಅಂಶಕ್ಕಿಂತ ಹೆಚ್ಚಾಗಿ ಉತ್ತೀರ್ಣತೆಯನ್ನು ಹೊಂದಿದರು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುರೂಪ ಪುಸ್ತಗ್ರಂಥಗಳು ಬಹುಮಾನವಾಗಿ ಸನ್ನಿಧಿಯಿಂದ ಅರ್ಪಿಸಲ್ಪಟ್ಟು ಈ ಶಾಲಾಧ್ಯಾಪಕರಾದ ನಾಲ್ವತ್ತದ ವೇ॥ ಜಗದೀಶಶಾಸ್ತ್ರಿಗಳಿಗೆ ಬಹುಮಾನವು ಕೊಡಲ್ಪಟ್ಟಿತು. ಆಗಿನ ಸಮಯದಲ್ಲಿ ಶಾಲಾಧಿಪತಿಗಳಾದ ಶ್ರೀಮಂತ ಬಂಟೆಪ್ಪಣ್ಣಾ ಕಾಡಾದಿ, ಶ್ರೀಮಂತ [illegible]

ತ ಬಳಿಕ ಪ್ರಜೆಗಳ ಸೌಕರ್ಯಕ್ಕಾಗಿ ಅವರು ಮಾಡಿಕೊಟ್ಟಿರುವ ಹಲವು ಏರ್ಪಾಟುಗಳಲ್ಲಿ ನೀರಾವರಿಯು ಕೆಲಸವೊಂದು ಅತ್ಯಂತ ಪ್ರಯೋಜಕವಾದುದು. ಈ ನೀರಾವರಿಯ ಕೆಲಸವು ವರ್ಷೇವರ್ಷೇ ಇನ್ನೂ ಅಭಿವೃದ್ಧಿಯಾಗುವುದರಲ್ಲೇ ಇದೆ. ಈ ಉಪಕೃತಿಗಾಗಿ ಭಾರತೀಯರು ಸಾರ್ವಭೌಮ ಸರ್ಕಾರಕ್ಕೆ ಅತ್ಯಂತ ಕೃತಜ್ಞರಾಗಿದ್ದಾರೆ.

ಮೈಸೂರ್ ಸ್ಟಾರ್

೧೯೧೨ ನೆಯ ಮೇ ತಾ॥ ೬ ನೆಯ ಸೋಮವಾರ

ಇಟಲೀ ತುರುಷ್ಕ ಯುದ್ಧ.

ಪ್ರಪಂಚದ ಮೇಲೆ ಈಗ ತುರುಷ್ಕರ ರಾಜ್ಯವಾಗಲಿ ಸೇನೆಗಳಾಗಲಿ ವಿಶೇಷವಾಗಿರುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಮಧ್ಯದೊಳಗೆಲ್ಲಾ ತುರ್ಕಿ ಸಂಸ್ಥಾನವೊಂದು ಸಿಕ್ಕಿಕೊಂಡಿರುತ್ತದೆ. ಇದಕ್ಕೆ ನೆಮ್ಮದಿಯಾಗಿ ಬಾಳುವ ಕಾಲವೇ ಇಲ್ಲ. ಎಲ್ಲರಮೇಲೆ ಜಗಳಕ್ಕೆ ಕಾಲು ಕೆರೆಯುತ್ತಿದ್ದ ಇಟಲಿದೇಶವು ಯುದ್ಧವನ್ನು ಹೂಡಿ ಇಲ್ಲಿಗೆ ೮ ತಿಂಗಳಾದುವು. ಆದರೂ ಇದುವರೆಗಿನ ಫಲಿತಾಂಶವನ್ನು ನೋಡಿದರೆ, ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತಾಗಿದೆಯೇ ಹೊರತು, ಇಟಲಿಯವರ ಶ್ರಮ ಸಾಹಸ ಧನವ್ಯಯ ಪ್ರಾಣಹಾನಿಗಳಿಗೆ ತಕ್ಕಷ್ಟು ಫಲವೇನೂ ಆಗಿಲ್ಲ; ಸಮುದ್ರತೀರದ ಸಣ್ಣಸಣ್ಣ ಪ್ರದೇಶಗಳು ಕೆಲವನ್ನು ಮಾತ್ರ ಹಿಡಿದುಕೊಂಡಿರುತ್ತಾರೆ. ಇಟಲಿಯವರಲ್ಲಿ ನೌಕಾಬಲವೂ ಭೂಸೇನೆಯೂ ಅಧಿಕವಾಗಿರುವುದು ಮಾತ್ರವಲ್ಲದೆ ಈ ನಾಗರಿಕತೆಯ ಕಾಲಕ್ಕೆ ತಕ್ಕ ಆಯುಧೋಪಕರಣಗಳ ಸಹಾಯವಾದರೂ ಚೆನ್ನಾಗಿರುತ್ತಿದೆ. ಪ್ರತಿಪಕ್ಷದ ತುರ್ಕಿ ಅರಬ್ಬಿಯವರುಗಳಾದರೋ ಮತಾಭಿಮಾನ ದೇಶಾಭಿಮಾನದ ಮೂಲಕ ಉಬ್ಬೇರಿದ ವೀರಾವೇಶದಿಂದ ವಿಜೃಂಭಿಸಿ ರಾಕ್ಷಸರಂತೆ ಇಟಲಿಯನರ ಮೇಲೆ ಬಿದ್ದು ಹೋರಾಡುತ್ತಿದ್ದಾರೆ. ಹಲವುಸಾರಿ ಅರಬ್ಬಿಯವರ ಧೈರ್ಯ ಶೌರ್ಯ ತೇಜಸ್ಸಿಗೆ ಇಟಲಿಯನ್ನರು ಮುಖಕೊಡಲಾರದೆ ಹಿಮ್ಮೆಟ್ಟಬೇಕಾಗಿ ಬಂದಿತು. ಈ ರೀತಿಯಿಂದ ಯುದ್ಧಮಾಡುತ್ತಾ ಬಂದರೆ ಪ್ರತಿಪಕ್ಷದವರನ್ನು ಹಣ್ಣಿಗೆ ತರುವುದು ಕಷ್ಟವೆಂದು ಯೋಚಿಸಿಯೋ ಏನೋ ಇಟಲಿಯನರು ತುರ್ಕಿಯವರ ಶಿಬಿರಗಳ ಕಡೆಗೆ ಸಾಗಿಹೋಗುತ್ತಿದ್ದ ಸಾಮಾನುಗಳ ಹಡಗು ಮೊದಲಾದುವುಗಳನ್ನು ತಡೆಯುವ ಕೆಲಸಕ್ಕೆ ನಡುಕಟ್ಟಿ ನಿಂತಿದ್ದಾರೆ. ತ್ರಿಪೋಲಿಯ ಮೇಲೆ [illegible] ಭಾಗಮಾಡಿ ಸಾಕಾಯಿತು. ಯೂರೋಪಿನಲ್ಲಿರುವ ತುರ್ಕಿಯ ತೀರಪಟ್ಟಣಗಳನ್ನು ಹಿಡಿದುಕೊಂಡರೆ ಅವರ ಶಕ್ತಿಯು ಅಡಗುವುದೆಂದು ಯೋಚಿಸಿ, ಅವರ ದೇಶದ ಪಟ್ಟಣಗಳ ಮೇಲೆ ಗುಂಡುಗಳ ಮಳೆಯನ್ನು ಸುರಿಸಿದರು. ಮೊದಮೊದಲು ಇಟಲಿಯವರ ಪಟಾಟೋಪವೇ ಪ್ರಬಲವಾಗಿ ತೋರಿದರೂ ಹಿಂದಿನಿಂದ ಅರಬ್ಬಿಯವರ ಧೈರ್ಯವು ಇಟಲಿಯನ್ನರ ಎದೆಬಿರಿಯುವಂತೆ ಮಾಡಿತು. ಶಿಲಾಹಾಲದಲ್ಲಿ ತ್ರಿಪೋಲಿಯನ್ನು ನುಂಗಿ ಬರುತ್ತೇವೆಂದು ತಿಳಿದಿದ್ದ ಇಟಲಿಯವರ ಅಂಗುಳಿಗೆ ತುರ್ಕಿಯವರು ಗಾಳವಾಗಿ ಪರಿಣಮಿಸಿದ್ದಾರೆ. ಸೊಳ್ಳೆಯ ಸಮವೆಂದು ಗಣಿಸಲ್ಪಟ್ಟಿದ್ದ ತುರ್ಕಿಯವರ ಮುಂದೆ ತಮ್ಮ ಆಟವು ಸಾಗದೆಯೂ, ಕೈಪಾಕಿ ಅವಲಕ್ಷಣವೆನಿಸಿಕೊಂಡಂತಾಗಿರುವುದಕ್ಕಾಗಿಯೂ ಇಟಲಿಯು ಈಗ ಅತ್ಯಂತವಾಗಿ ಸಿಡಿಮಿಡಿಗೊಂಡಿರುತ್ತದೆ. ಇದರ ಮೇಲೆ ಕೋಟ್ಯಂತರ ದ್ರವ್ಯವನ್ನು ಹಾಳ್ಮಾಡಿದುದಕ್ಕೆ ಚರಿತಾರ್ಥವೇನೆಂದು ಅಲ್ಲಿಯ ಪ್ರಜೆಗಳು ಕೇಳಿ ಇಟಲಿ ಸರ್ಕಾರಕ್ಕೆ ಚಿಟುಕು ಮುಳ್ಳನ್ನಾಡಿಸುತ್ತಲಿದ್ದಾರೆ.

ಈ ಮಧ್ಯೆ ಇಟಲಿಯನರು ಯುದ್ಧವನ್ನು ನಿಲ್ಲಿಸಿ ಸಮುದ್ರದ ದಾರಿಯನ್ನು ಕಟ್ಟುವ ಯುಕ್ತಿಗೆ ತೊಡಗಿದುದರಿಂದ, ಆ ಅವಕಾಶವು ತ್ರಿಪೋಲಿಯ ಅರಬ್ಬಿಯವರಿಗೆ ಮದ್ದು ಗುಂಡು ಆಹಾರ ಸಾಮಗ್ರಿ ಮೊದಲಾದುವುಗಳನ್ನು ಸಂಗ್ರಹಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಯಿತು. ಈಗ ತ್ರಿಪೋಲಿ ಬೆಂಘಾಜಿ ಮೊದಲಾದ ತುರುಷ್ಕರ ಶಿಬಿರಗಳಲ್ಲಿ ೧೦ ಸಾವಿರ ತುರ್ಕಿಸೈನ್ಯವೂ ೨ ಲಕ್ಷ ಅರಬ್ಬಿ ಸೈನ್ಯವೂ ಯುದ್ಧಕ್ಕೆ ಸನ್ನದ್ಧವಾಗಿದೆ. ಇಟಲಿಯನರು ಬರತಕ್ಕ ದಾರಿಗಳಲ್ಲಿ ಆಹಾರವಾಗಲಿ ನೀರಾಗಲಿ ದೊರೆಯದಂತೆಯೂ ಅಷ್ಟು ಇಷ್ಟು ದೊರೆಯುವ ನೀರಿನಲ್ಲಿ ವಿಷವನ್ನು ಕದಡಿಯೂ ಇರುವುದರಿಂದ ಇಟಲಿಯನ್ನರಿಗೆ ಕುಡಿಯಲಿಕ್ಕೆ ನೀರು ಕೂಡ ದೊರಕದೆ ಅದನ್ನೂ ತಮ್ಮ ದೇಶದಿಂದ ಸಾಗಿಸಿಕೊಂಡು ಹೋಗುವ ಹೊತ್ತು ಪ್ರಾಪ್ತವಾಗಿದೆ. ತಮ್ಮ ಜಾತಿಯ ಜನರನ್ನು ಇಟಲಿಯವರು ನಿಷ್ಕರುಣೆಯಿಂದಲೂ ಅಧರ್ಮದಿಂದಲೂ ಕೊಲ್ಲುತ್ತಿರುವರೆಂಬ ವಾರ್ತೆಯು ಆಫ್ರಿಕಾಖಂಡಕ್ಕೆ ತಿಳಿದು ಅಲ್ಲಿನ ಮಹಮ್ಮದೀಯರನೇಕರು ತಮ್ಮ ಮನೆಮಾರುಗಳನ್ನು ಬಿಟ್ಟು ಸಜಾತಿಯರಿಗೆ ಸಹಾಯಮಾಡುವುದಕ್ಕಾಗಿ ತ್ರಿಪೋಲಿಯನ್ನು ಕುರಿತು ಬರುತ್ತಿದ್ದಾರೆ. ಇತ್ತ ಇಟಲಿಯ ಸೈನಿಕರು ದೇಶತಪ್ಪಿಕೊಂಡಿರುವುದರಿಂದ, ಅಬ್ಸೀನಿಯಾದಲ್ಲಿರುವ ತಮ್ಮ ನೀಗ್ರೋ ಸೈನ್ಯವನ್ನು ಇಟಲಿಯನ್ನರು ಯುದ್ಧಾಂಗಣಕ್ಕೆ ತರಿಸಿದರು. ಇವರಲ್ಲಿ ಹಲವರು ಮಹಮ್ಮದೀಯರಾಗಿದ್ದುದರಿಂದ ನಮ್ಮನ್ನು ಸಜಾತೀಯರ ಮೇಲೆ ಕೈಮಾಡಿಸುವುದಕ್ಕೆ ಕರೆತಂದರೇ? ಎಂದು, ಅವರು ತಮ್ಮ ಸರ್ಕಾರದ ಮೇಲೆಯೇ ಅಸಮಾಧಾನಗೊಂಡಿರುತ್ತಾರೆ. ಈ ಸಮಯದಲ್ಲಿ ಪ್ರಪಂಚದ ಮೇಲಿರುವ ಎಲ್ಲಾಭಾಗದ ಮಹಮ್ಮದೀಯರೂ ತೋರಿಸಿರುವ ಏಕಮತ್ಯವು ಪ್ರಪಂಚಕ್ಕೆ ಆಶ್ಚರ್ಯವನ್ನುಂಟುಮಾಡತಕ್ಕದಾಗಿರುತ್ತದೆ. ಕೈಸಾಗದುದಕ್ಕೆ ಹೇಗಾದರೂ ಒಂದು ತೆರವಾಗಿ ಮಾತಿನಿಂದ ಹಿಂದಿರುಗಿ ಹೋಗುವಂತಾದರೆ ಸಾಕೆಂದು ಜಪಿಸುವ ಹೊತ್ತು ಇಟಲಿಯವರಿಗೆ ಪ್ರಾಪ್ತವಾಗಿದೆ. ಈಪರಿಸ್ಥಿತಿಯನ್ನೆಲ್ಲಾ ಪಾಶ್ಚಾತ್ಯರಾಷ್ಟ್ರಗಳು ನೋಡಿ, ಹೊರಕ್ಕೆ ತಲೆಯಿಕ್ಕಿ, ಯಾವುದಾದರೊಂದು ರೀತಿಯಲ್ಲಿ ಸಮಾಧಾನ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಮೊದಮೊದಲು ಈ ಭಾವವು ಯಾರಿಗೂ ಹುಟ್ಟಿರಲಿಲ್ಲ. ದುರ್ಬಲರಿಗೆ ದೈವವೇ ಬೆಂಬಲವು, ಅನ್ಯಾಯಕ್ಕೆ ಅಪಜಯವೇ ಪರಿಣಾಮವು ಎಂಬುದು ಎಂದಿಗೂ ಸಟೆಯಾಗಲಾರದು.

ಯುದ್ಧಾಂಗಣದಲ್ಲಿರುವ ಲಂಡನ್ ಟೈಮ್ಸ್ ಪತ್ರಿಕಾ ಪ್ರತಿನಿಧಿಯು ತಮ್ಮ ಪತ್ರಿಕೆಗೆ ಬರೆದಿರುವ ಒಂದು ಲೇಖನದಿಂದ ಅಲ್ಲಿನ ಪರಿಸ್ಥಿತಿಯು ಗೊತ್ತಾಗುತ್ತದೆ. ಹೇಗೆಂದರೆ:—

"ತಮ್ಮ ಮತದವರನ್ನು ರೇಗಿಸಿ, ಇಟಲಿಯವರ ಮೇಲೆ ತಿರುಗಿಬೀಳಿಸುವುದರಲ್ಲಿ ತುರುಕರನ್ನು ಮೀರಿದವರು ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಆ ಪ್ರಜೆಗಳೆಲ್ಲರೂ ಒಂದೇ ಕಟ್ಟಿನಲ್ಲಿದ್ದುಕೊಂಡು ಇಟಲಿಯವರ ಕಷ್ಟವನ್ನು ೧ಕ್ಕೆ ನಾಲ್ಕಾಗಿ ಮಾಡಿರುತ್ತಾರೆ. ಮಧ್ಯದೇಶದಲ್ಲಿ ಅತ್ಯಂತ ಪ್ರಬಲನಾಗಿರುವ ಒಬ್ಬ ಮತದ ಗುರುವು ಇಟಲಿಯಮೇಲೆ ಯುದ್ಧಕ್ಕೆ ಸರ್ವರೂ ಬನ್ನಿರಿಯೆಂದು ಪ್ರೋತ್ಸಾಹಿಸುವ ಸಾವಿರಾರು ಅಕ್ಷರಗಳನ್ನು ಒಂದು ದೊಡ್ಡ ರೇಸಿಮೆಯ ಪತಾಕೆಯ ಮೇಲೆ ಬರೆಯಿಸಿ, ಎಲ್ಲಾ ಕಡೆಗೂ ಪ್ರಕಟಿಸುತ್ತಿದ್ದಾನೆ. ಈತನು ಕಳುಹಿಸಿಕೊಟ್ಟ ಮೊದಲನೆಯ ಸೇನೆಯು ಅಜೀಜಿಯಾಕ್ಕೆ ೨ ದಿನಗಳ ಹಿಂದೆ ಸೇರಿರುತ್ತದೆ. ಈ ಸೇನೆಯ ಮುಂದಾಳುಗಳು ಕತ್ತಿಯನ್ನು ಹಿಡಿದು ಆಕಾಶದಲ್ಲಿ ತಿರುಹುತ್ತ ಹೋಗುತ್ತಿದ್ದರೆ, ಹಿಂದಿನ ಸೇನೆಯು ನಾವು ಸಿಂಹದ ಮರಿಗಳೆಂದು ಆರ್ಭಟಿಸಿಕೊಂಡು ನಗಾರಿಯ ಧ್ವನಿಗಳನ್ನು ಮಾಡುತ್ತ, ಅತ್ಯಂತ ರೋಷಾವೇಶದಿಂದ ಯುದ್ಧಕ್ಕೆ ಹೋಗುತ್ತಿದ್ದಾರೆ. ಇವರ ಕೈಯಲ್ಲಿ ಒಂದೊಂದು ಬಲ್ಲೆಯೂ ಒಂದೊಂದು ತುಪಾಕಿಯೂ ಇರುತ್ತವೆ. ಇವರೆಲ್ಲರೂ ಯುದ್ಧದಲ್ಲಿ ಗೆಲ್ಲಬೇಕು ಇಲ್ಲವೆ ಸಾಯಬೇಕು ಎಂದು ಬದ್ಧಸಂಕಲ್ಪರಾಗಿ ಬಂದಿದ್ದಾರೆ. ತುರ್ಕಿಯವರು ಅರಬ್ಬಿಯವರಿಗೆ ಸಮೃದ್ಧವಾದ ಆಹಾರವನ್ನೂ ಸಂಬಳವನ್ನೂ ಕೊಡುತ್ತಿರುವುದರಿಂದ ಅವರು ಸಂತೋಷದಿಂದ ಯುದ್ಧಕ್ಕೆ ಸನ್ನದ್ಧರಾಗಿದ್ದಾರೆ. ಈ ಮಧ್ಯದಲ್ಲಿ ಅರಬ್ಬೀ ಸೇನಾನಾಯಕನು ಇಟಲಿ ಸೇನಾಧಿಪತಿಗೆ ಒಂದು ಪತ್ರವನ್ನು ಬರೆದು, "ಇದೇನು ಯುದ್ಧವನ್ನು ಮಾಡದೆ ಸುಮ್ಮನೆ ಕುಳಿತಿರುವುದು ಗಂಡಸತನವೇ?" ಎಂದು ಕೂಡ ಕೇಳಿದ್ದನಂತೆ. ತುರುಷ್ಕರ ಸೇನಾಬಲವು [illegible]ತ್ತಿದೆ."

ಪಾಶ್ಚಾತ್ಯ [illegible]ದವರು ತಮ್ಮ ಇಟಲಿಗೆ ಇನ್ನೂ ಅವಮಾನವಾಗುವುದಕ್ಕೆ ಅವಕಾಶಕೊಡದೆ ಇದ್ದುದರಲ್ಲಿ ಗೌರವವಾಗಿ ಹಿಂದಿರುಗುವಂತೆ ಮಾಡಿದರೆ ಉಭಯರಿಗೂ ಕ್ಷೇಮವಾಗುತ್ತದೆ.

ಗತಿಸಿದ ಸರ್ ಟಿ. ಮಾಧವರಾಯರ ತರುವಾಯ ಕೆಲಕಾಲ ಇಂದೂರು ಸಂಸ್ಥಾನದ ದಿವಾನರಾಗಿದ್ದು ವಿತಂತುವಿವಾಹ ಪ್ರೋತ್ಸಾಹ, ಬಾಲ್ಯವಿವಾಹ ನಿರೋಧ, ಸಮುದ್ರಯಾನ ನಿಷೇಧಪರಿಹಾರ ಮೊದಲಾದ ಸಮಾಜಸುಧಾರಣ ಕಾರ್ಯಗಳಲ್ಲಿ ಮುಂದಾಳಾಗಿ ದುಡಿಯುತ್ತ ಒಳ್ಳೆಯ ಪ್ರಸಿದ್ಧರಾಗಿದ್ದ ಮ॥ ದಿವಾನ್ ಬಹದ್ದೂರ್ ಆರ್. ರಘುನಾಥರಾವ್ ಸಿ. ಎಸ್. ಐ ಯವರು ಕಳೆದ ತಾ॥ ೩ ರಲ್ಲಿ ಕುಂಭಕೋಣದಲ್ಲಿ ವಿಧಿವಶರಾದರೆಂದು ತಿಳಿಯಲು ಖೇದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ ೮೦ ವರ್ಷಗಳ ವಯಸ್ಸಾಗಿತ್ತು. ಇವರು ರಾಜಕೀಯ ಲೌಕಿಕ ವಿಚಾರಗಳಲ್ಲಿ ಅನೇಕ ಉತ್ಕೃಷ್ಟವಾದ ಲೇಖನಗಳನ್ನು ವೃತ್ತಪತ್ರಿಕೆಗಳಲ್ಲಿ ಬರೆಯುತ್ತಿದ್ದು ಜನರಿಗೆ ಸುಬೋಧಕರಾಗಿದ್ದರು. ಇಂತಹರ ವಿಯೋಗದಿಂದ ಭರತಖಂಡಕ್ಕೇ ನಷ್ಟವಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು. ಇವರ ಪ್ರಜೋಪಯುಕ್ತ ಕಾರ್ಯವನ್ನು ಇಂಡಿಯಾ ಸರ್ಕಾರದವರು ಮೆಚ್ಚಿ ೧೯೦೯ ರಲ್ಲಿ ಇವರಿಗೆ ಸಿ ಎಸ್. ಐ., ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಮತ್ತೂ ಮದ್ರಾಸ್ ಗೌರ್ನರಾಗಿದ್ದ ಸರ್ ಆರ್ಥರ್ ಲಾಲಿಯವರು ತಮ್ಮ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರನ್ನಾಗಿ ಮಾಡಿದ್ದರು

ಒಳದೇಶದ ವೃತ್ತಾಂತಗಳು.

ಬರುವ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳು ಹೊಸದಾಗಿ ಆರಿಸಲ್ಪಡಬೇಕೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಬೆಂಗಳೂರು ಡಿ॥ ನೆಲಮಂಗಲದಲ್ಲಿ ಕಳೆದ ತಾ॥ ೨೪ ರಲ್ಲಿ ೪ ಅಂಗುಲ ಮಳೆಯಾಗಿ ಒಣಗಿಹೋಗಿದ್ದ ಕೆರೆಗೆ ಸ್ವಲ್ಪ ನೀರು ಬಂದಿರುತ್ತದೆ.

ಚೇಫ್ ಜಡ್ಜಿಯರ ಉದ್ಯೋಗದಿಂದ ನಿವೃತ್ತರಾಗುವ ಸರ್ ಇಜ್‌ಮೆಯವರ ಬದಲು ಮತ್ತೊಬ್ಬ ಐರೋಪ್ಯರು ನಿಯಮಿಸಲ್ಪಡುವರೆಂದು ಡೇಲಿಪೋಸ್ಟ್ ಪತ್ರಿಕೆಯು ತಿಳಿಸುತ್ತದೆ.

ಚೆನ್ನರಾಯಪಟ್ಟಣದಲ್ಲಿ ೮-೧೦ ದಿನಗಳಿಂದ ವಾಂತಿಭೇದಿರೋಗವು ಪ್ರಾಪ್ತವಾಗಿ ಆಗಲೇ ೧೮ ಜನರು ಮೃತರಾದರು. ಈ ಕಾರಣದಿಂದ ಸಂತೆಯು ನಡೆಯುತ್ತಿಲ್ಲ. ನೆರೆಯ ಹಳ್ಳಿಗಳಲ್ಲೂ ರೋಗವು ಪ್ರಾಪ್ತವಾಗಿದೆ.

ಚಿತ್ರದುರ್ಗದ ಡಿ॥ ಪೋಲೀಸು ಸೂಪರಿಂಟೆಂಡೆಂಟರಾದ ಮ॥ ವೈ. ವಿ. ಕೃಷ್ಣಮೂರ್ತಿಯವರು ೧॥ ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಚೀಫ್ ಕೋರ್ಟ್ ರೆಜಿಸ್ಟ್ರಾರರಾದ ಮ॥ ಬಿ. ಬಸವಾರಾಧ್ಯರು ಆ ಡಿ॥ ನ ಆಕ್ಟಿಂಗ್ ಪೋಲೀಸು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಈ ತಾ॥ ೨೬ ರಲ್ಲಿ ನಡೆಯುವ ತಮ್ಮ ವರ್ಧಂತ್ಯುತ್ಸವಕ್ಕಾಗಿ ತಾ॥ ೧೬ ರಲ್ಲಿ ಉದಕಮಂಡಲದಿಂದ ಚಿತ್ತೈಸುವುದಾಗಿ ಕೇಳುತ್ತೇವೆ. ಪ್ರತಿವರ್ಷವೂ ಈ ಮಹೋತ್ಸವ ಸಮಯದಲ್ಲಿ ನಡೆಯುವ ಕುದುರೆಯ ಮತ್ತೂ ಪೋಲೊ ಪಂದ್ಯಗಳು ಈ ವೇಳೆ ಜೂನ್ ತಾ॥ ೨೪ ರಿಂದ ಆರಂಭವಾಗುವುದಾಗಿ ಪ್ರಕಟವಾಗಿದೆ.

ಸಬ್‌ರೆಜಿಸ್ಟ್ರಾರುಗಳಾದ ಮ॥ ಎಸ್. ರಾಮಸ್ವಾಮಿ ಶಾಸ್ತ್ರಿಗಳು ಬೌರಿಂಗ್‌ಪೇಟೆಯಿಂದ ಬೆಂಗಳೂರಿಗೂ, ಮ॥ ಸಿ. ಜಯರಾಯರು ದಾವಣಗೆರೆಯಿಂದ ಬೌರಿಂಗ್‌ಪೇಟೆಗೂ, ಮ॥ ಬಿ. ಎಂ. ರಂಗನಾಯಿಡುಯವರು ದೇವನಹಳ್ಳಿಯಿಂದ ದಾವಣಗೆರೆಗೂ ಮತ್ತೂ ಮ॥ ಎಂ. ರಾಘವೇಂದ್ರರಾಯರು ಮುಳಬಾಗಲಿಂದ ದೇವನಹಳ್ಳಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರ ಸಮೀಪ ಬಂಧುಗಳಾದ ಮತ್ತೂ ರಾಜಧಾನಿಯ ಆನರರಿ ಮ್ಯಾಜಿಸ್ಟ್ರೇಟರಾದ ಮ॥ ಪುಟ್ಟಯ್ಯಾಜಿ ಅರಸಿನವರು ತಮ್ಮ ದ್ವಿತೀಯಕುವರಿ ಚಿ॥ ಸೌ॥ ಕೃಷ್ಣಾಜಮ್ಮಣ್ಣಿಯವರನ್ನು ಅಮಲ್ದಾರ್ ಮ॥ ಕೃಷ್ಣ ಅರಸಿನವರ ಜ್ಯೇಷ್ಠಕುಮಾರ ಮ॥ ತಿಮ್ಮಪ್ಪರಾಜಅರಸಿನವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನಡೆಸುವುದಾಗಿ ಗೊತ್ತಾಗಿರುವುದು.

ಮೈಸೂರ ಸೀಮೆಯ ಎಲ್ಲಾ ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳಲ್ಲಿ ಕಲಕತ್ತಾದ ಕೋರ್ಟುಗಳಲ್ಲಿ ಆಚರಣೆಯಲ್ಲಿರುವಂತೆ ಜಡ್ಜ್‌ಮೆಂಟಿನ ಫಿರ್ಯಾದಿ ಅಪರಾಧಿಗಳ ಮತ್ತೂ ಸಾಕ್ಷಿಗಳ ವಾಙ್ಮೂಲಗಳ ನಕಲನ್ನು ಬರೆಯಲು ಸರ್ಕಾರಿಯ ಛಾಪಾಯಿರುವ ಕಾಗದಗಳೇ ಬರುವ ೧೯೧೩ ನೆಯ ಜನವರಿ ತಾ॥ ೧ ರಿಂದುಪಯೋಗಿಸಲ್ಪಡತಕ್ಕುದೆಂದೂ ೩ ಕಾಸಿನ ಕಾಗದದಂತೆ ದಪ್ಪನಾಗಿಯೂ ಅದಕ್ಕಿಂತಲೂ ಬೆಳ್ಳಗೂ ಇರುವ ಕಾಗದಗಳ ಮೇಲೆ ಇಂಗ್ಲೀಷಿನಲ್ಲಿ ೧೦೦ ಮತ್ತೂ ಕನ್ನಡದಲ್ಲಿ ೨೦೦ ಮಾತುಗಳು ಒಂದು ಪುಟದಲ್ಲಿ ಬರೆಯಲ್ಪಡಲನುಕೂಲಿಸುವಂತೆ ೧೬ ಗೆರೆಗಳನ್ನೆಳೆದು ತಕ್ಕ ಮುದ್ರೆಯನ್ನು ನೂತನವಾಗಿ ಮಾಡಿ ಒತ್ತಿ ಪ್ರತಿಯೊಂದು ಕಾಗದಕ್ಕೂ ೨ ಆಣೆ ಬೆಲೆಯನ್ನಿಡತಕ್ಕುದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ವರ್ತಮಾನ ಸಂಗ್ರಹವು.

ಪ್ರಪಂಚದಲ್ಲೆಲ್ಲಾ ೧೫೦ ಕೋಟಿ ಪ್ರಜೆಗಳಿರುವರೆಂದು ಒಬ್ಬ ಜರ್ಮನ್ ಪಂಡಿತನು ಗಣಿಸಿರುವನಂತೆ.

ಟಿಟಾನಿಕ್ ಹಡಗಿನ ನಾಶದಿಂದ ವಿಪನ್ನರಾದವರ ಸಹಾಯಾರ್ಥವಾಗಿ ಇದುವರೆಗೆ ೪೨ ಲಕ್ಷ ರೂ. ಗಳ ವರ್ಗಣಿಯು ಕೂಡಿದೆ.

ಬರ್ಮಾದಲ್ಲಿ ಇಷ್ಟರೊಳಗೇ ಒಂದು ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವುದೆಂದು ಅಂಡರ್ ಸೆಕ್ರಟರಿಯವರು ಕಾಮನ್ಸ್ ಸಭೆಯಲ್ಲಿ ಹೇಳಿರುವರು.

ವೈಶ್ಯರ ೩ ನೆಯ ಮಹಾಸಭೆಯು ಕುಂಭಕೋಣದಲ್ಲಿ ಇದೇ ತಿಂಗಳು ತಾ॥ ೨೩-೨೪-೨೫ ರಲ್ಲಿ ಮ॥ ನಾಳಂ ಪದ್ಮನಾಭಂ ಬಿ. ಎ, ಯವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ದಿಲ್ಲಿಯಲ್ಲಿ ಹೊಸದಾಗಿ ಕಟ್ಟಿಸಲ್ಪಡಲಿಕ್ಕಿರುವ ಕಟ್ಟಡಗಳಿಗೆ ಹದಿಯು ಹಾಕಲ್ಪಡುತ್ತಿದೆ. ದಿಲ್ಲಿಗೆ ೩ ಮೈಲುಗಳ ದೂರದಲ್ಲಿ ವೈಸ್ರಾಯರ ಭವನವು ಕಟ್ಟಲ್ಪಡಬೇಕೆಂದು ನಿಶ್ಚಿತವಾಗಿದೆ.

ದಿಲ್ಲಿಯ ಕೋಟೆಯಲ್ಲಿ ಮದ್ದುಗುಂಡುಗಳನ್ನು ಇಡುವ ಉಗ್ರಾಣದಲ್ಲಿ ಕೆಲಸಮಾಡುತ್ತಿರುವಾಗ ಒಂದು ಗುಂಡು ಹಾರಿ ೮-೯ ಜನರ ದೇಹವು ತುಂಡುತುಂಡಾಗಿ ಕೋಟೆಯ ತುಂಬಾ ತುಣುಕುಗಳು ಹಾರಿ ಬಿದ್ದುವು.

ಅಹಮ್ಮದಾಬಾದಿನಲ್ಲಿರುವ ಅನಾಥಪಶುಸಂರಕ್ಷಣಾಲಯದೊಳಗೆ ಈಗ ೮೯೮ ಪಶುಗಳು ಸಾಕಲ್ಪಡುತ್ತಿವೆ. ಮೇವಿಲ್ಲದ ಈ ಕಾಲದಲ್ಲಿ ಅವುಗಳ ತಿಂಡಿಗಾಗಿ ೧೦ ಸಾವಿರ ರೂ. ಗಳು ಬೇಕಾಗಿವೆ. ಧರ್ಮಾತ್ಮರ ಸಹಾಯವನ್ನು ಆಲಯವು ನಿರೀಕ್ಷಿಸುತ್ತಿದೆ.

ಭರತಖಂಡದ ಸೇನೆಯ ವೆಚ್ಚವನ್ನು ಕಡಿಮೆಮಾಡಲು ಸಾಧ್ಯವೆ? ಎಂಬುದನ್ನು ವಿಚಾರಮಾಡುವುದಕ್ಕಾಗಿ ಇಂಗ್ಲೆಂಡಿನಿಂದ ಬಂದಿರುವ ಫೀಲ್ಡ್ ಮಾರ್ಷಲ್, ಸರ್ ವಿಲಿಯಂ ನಿಕೋಲ್ಸನ್, ಸರ್ ವಿಲಿಯಂ ಮೇಯರ್‌ರವರುಗಳು ಈಗ ಸಿಮ್ಲಾವನ್ನು ತಲುಪಿರುತ್ತಾರೆ.

೧೯೧೧ ನೆಯ ವರ್ಷದ ಏಪ್ರಿಲ್ ತಾ॥ ೧ ರಿಂದ ೧೯೧೨ ನೆಯ ಫೆಬ್ರವರಿ ತಾ॥ ೨೯ ರ ವರೆಗೆ ಭರತಖಂಡಕ್ಕೆ ೩೪.೬೪ ಕೋಟಿ ರೂ. ಗಳ ಭಂಗಾರವೂ, ೧೧.೪೨ ಕೋಟಿ ರೂ. ಬೆಳ್ಳಿಯೂ ಅನ್ಯದೇಶಗಳಿಂದ ಬಂದಿರುತ್ತದೆ. ಇಲ್ಲಿಂದ ಹೊರಕ್ಕೆ ೩.೭೪ ಕೋಟಿ ರೂ. ಬೆಲೆಯ ಚಿನ್ನವೂ, ೬.೨೨ ಕೋಟಿ ರೂ. ಬೆಲೆಯ ಬೆಳ್ಳಿಯೂ ಸಾಗಿಸಲ್ಪಟ್ಟಿದೆ.

ಭರತಖಂಡದ ರಾಜಧಾನಿಯನ್ನು ದಿಲ್ಲಿಗೆ ವರ್ಗಮಾಡಿದುದೇ ಮೊದಲಾದ ವಿಷಯಕವಾದ ಏರ್ಪಾಟಿನ ವಿಧಿಯನ್ನು ಅಂಡರ್‌ಸೆಕ್ರೆಟರಿಯವರು ಕಾಮನ್ಸ್ ಸಭೆಗೆ ಮುಂದಿಟ್ಟು, ಅವರ ಅನುಮೋದನವನ್ನು ಕೇಳುವಾಗ್ಗೆ ಭರತಖಂಡದ ವಿಷಯವಾಗಿ ಎಲ್ಲಪಕ್ಷದ ಸಭಾಸ್ತರರೂ ಏಕೀಭಾವಗೊಂಡಿರುವುದು ಅವಶ್ಯಕವೆಂದು ಸಯುಕ್ತಿಕವಾಗಿ ಪ್ರತಿಪಾದಿಸಲು, ೨ ನೇಯಾವೃತ್ತಿಯ ಅಂಗೀಕಾರವು ಅದಕ್ಕೆ ದೊರೆಯಿತು.

ಪೆಷಾವರಿನಲ್ಲಿ ಮಹಮ್ಮದೀಯರು ಇಸ್ಲಾಮಿಯಾ ಕಾಲೇಜ್ ಎಂಬ ಪಾಠಶಾಲೆಯನ್ನು ಬಿ. ಎ., ವರೆಗೂ ಓದುವುದಕ್ಕೆ ಅನುಕೂಲವಾಗುವಂತೆ ಸ್ಥಾಪಿಸುವುದರಲ್ಲಿದ್ದಾರೆ. ಈ ಶಾಲೆಯು ೧೫೪ ಎಕರೆಯ ಭೂಮಿಯನ್ನು ಆಕ್ರಮಿಸಿಕೊಂಡು ಖೈಬರ್ ಕಣಿವೆಯನ್ನು ನೋಡುತ್ತಿರುತ್ತದೆ. ಯುದ್ಧರಂಗವಾದ ಈ ಪರ್ವತಪ್ರದೇಶದಲ್ಲಿ ಇಂಥ ದೊಡ್ಡಪಾಠಶಾಲೆಯು ಸ್ಥಾಪಿಸಲ್ಪಡುವುದಕ್ಕೆ ಆಂಗ್ಲಪ್ರಭುಗಳ ಶಾಂತಿಸ್ಥಾಪನ ಪ್ರಭಾವವೇ ಮುಖ್ಯ ಕಾರಣವಲ್ಲವೆ?

ಕಲಕತ್ತಾದಲ್ಲಿ ಬಿ. ಎ., ಬಿ. ಎಲ್., ಪರೀಕ್ಷೆಯಲ್ಲಿ ಉತ್ತೀರ್ಣರಾದ ವಕೀಲರು ಅಡ್ವೋಕೇಟರಾಗಿ ಒರ್ಜಿನಲ್ ಕೋರ್ಟುಗಳಲ್ಲಿ ವಾದಿಸುವುದಕ್ಕೆ ಅವಕಾಶವಿಲ್ಲ. ಬೊಂಬಾಯಿ, ಮದ್ರಾಸು ಅಲಹಾಬಾದ್ ಕೋರ್ಟುಗಳಲ್ಲಿ ಇಂತಹ ವಕೀಲರನ್ನು ಅಡ್ವೋಕೇಟರನ್ನಾಗಿ ಸೇರಿಸಿಕೊಳ್ಳುವಂತೆ ಇಲ್ಲೂ ಮಾಡಬೇಕೆಂದು ವಕೀಲರೆಲ್ಲರೂ ಹೈಕೋರ್ಟಿನವರನ್ನು ಕೇಳಿಕೊಂಡಿದ್ದಾರೆ. ಬರುವ ತಾ॥ ೧೪ ಕ್ಕೆ ಈ ವಿಷಯದಲ್ಲಿ ಹೈಕೋರ್ಟಿನವರು ತೀರ್ಮಾನವನ್ನು ಹೇಳುವವರಾಗಿದ್ದಾರೆ.

ಉತ್ತರದಲ್ಲಿರುವ ತಿಪ್ಪೆರಾ ಸಂಸ್ಥಾನದ ದಿವಾನರಾದ ಬಾಬು ರಾಮಮಾಣಿಕರಾಯರವರ ತಂದೆಯು ಮೃತರಾಗಲಾಗಿ, ತಾಯಿಯು ತನ್ನ ಕೈಯ ೨ ಬೆರಳುಗಳಿಗೆ ಎಣ್ಣೆಯನ್ನದ್ದಿ, ದೀಪಕ್ಕೆ ಹಿಡಿದು, ತನ್ನ ಬೆರಳು ಲೇಶಮಾತ್ರವೂ ಸುಡುವುದಿಲ್ಲವೆಂದು ಜನರೊಡನೆ ಹೇಳಿ, ಬಳಿಕ ತಾನು ಚೆನ್ನಾಗಿ ಅಲಂಕಾರಮಾಡಿಕೊಂಡು, ತನ್ನ ಗಂಡನ ಶವವನ್ನು ಮಲಗಿಸಿದ್ದ ಚಿತೆಯಮೇಲಕ್ಕೆ ತಾನೂ ಹತ್ತಿ, ಸ್ವಲ್ಪವೂ ಅಲುಗದೆ ಬೆಂಕಿಯಲ್ಲಿ ದಗ್ಧವಾಗಿ ಸಹಗಮನಗೊಂಡರೆಂದು ಪ್ರಕಟವಾಗಿದೆ.

ಸಿಂಧುದೇಶದಲ್ಲಿ ಮುಕ್ಕಾಲುಪಾಲು ಪ್ರಜೆಗಳೆಲ್ಲಾ ಮಹಮ್ಮದೀಯರಾಗಿರುತ್ತಾರೆ. ಇವರು ವಿದ್ಯೆಯಲ್ಲಿ ತೀರ ಹಿಂದುಳಿದಿರುತ್ತಾರೆ. ಅದುಕಾರಣ ಇವರು ತಮ್ಮ ಪ್ರತಿಯೊಂದು ಎಕರೆ ಭೂಮಿಗೂ ಇಷ್ಟಿಷ್ಟರಂತೆ ಕಂದಾಯವನ್ನು ಎತ್ತಿಕೊಂಡು ಅದರಿಂದ ಪಾಠಶಾಲೆಗಳನ್ನು ಸ್ಥಾಪಿಸಿ, ತಮ್ಮಲ್ಲಿ ವಿದ್ಯಾಭಿವೃದ್ಧಿ ಮಾಡಿಕೊಳ್ಳಬೇಕೆಂದು ೧೯೦೬-೦೭ ರಲ್ಲಿ ಕೂಡಿಸಿದ ಒಂದು ಸಭೆಯಲ್ಲಿ ತೀರ್ಮಾನಿಸಿಕೊಂಡಿರುವರು. ಅವರ ಪ್ರತಿನಿಧಿಯು ಈಗ ಬೊಂಬಾಯಿಯ ನಿಯಮನಿರ್ಮಾಣಸಭೆಗೆ ಈ ವಿಷಯಕವಾದ ಒಂದು ವಿಧಿಯನ್ನು ತಂದಿರುತ್ತಾರೆ. ಈ ಮಹಮ್ಮದೀಯರ ವಿದ್ಯಾಸಕ್ತಿಯು ಕೊಂಡಾಡಲ್ಪಡತಕ್ಕದಲ್ಲವೆ?

ಪರಿಶ್ರಾಮಿಕ ವಿದ್ಯಾಭಿವೃದ್ಧಿಗಾಗಿ ಬಂಗಾಳದಿಂದ ಕಳೆದ ೮ ವರ್ಷಗಳ ಕಾಲದಲ್ಲಿ ೮೦ ಮಂದಿ ವಿದ್ಯಾರ್ಥಿಗಳು ವಿದೇಶಗಳಿಗೆ ಕಳುಹಲ್ಪಟ್ಟರು. ಅವರಲ್ಲಿ ೪೩ ಮಂದಿಗಳು ಸರ್ಕಾರದ ಉದ್ಯೋಗದಲ್ಲಿದ್ದಾರೆ. ೨೦ ಮಂದಿಗಳು ಹೊಸ ಕೈಗಾರಿಕೆಯ ಆಲಯಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಸಮುದ್ರಯಾನ ಮಾಡಿ ಬಂದವರಿಗೆ ಬಹಿಷ್ಕಾರ ಪ್ರಾಯಶ್ಚಿತ್ತ ಎಂಬ ಕೋಲಾಹಲಗಳೊಂದೂ ಇಲ್ಲದೆ, ಅಲ್ಲಿ ಸರ್ವಜಾತಿಯವರಲ್ಲೂ ಸಮುದ್ರಯಾನವು ಸಾಮಾನ್ಯವಾಗಿ ನಡೆಯಿಸಲ್ಪಡುತ್ತಿದೆ. ಈ ವರ್ಷ ಇಂಗ್ಲೆಂಡಿಗೆ ೧೮ ಮಂದಿಗಳೂ ಜರ್ಮನಿಗೆ ಇಬ್ಬರೂ, ಜಪಾನಿಗೆ ಇಬ್ಬರೂ ಕಳುಹಲ್ಪಡುವುದರಲ್ಲಿದ್ದಾರೆ ಎಂಬುದಾಗಿ ಬರ್ದ್ವಾನ್ ಮಹಾರಾಜರವರು ಕಲ್ಕತ್ತಾ ಪಟ್ಟಣದ ಒಂದಾನೊಂದು ಸಭೆಯಲ್ಲಿ ಸೂಚಿಸಿದರು.

ಪ್ಯಾರಿಸ್ ಪಟ್ಟಣದಲ್ಲಿ ನಾಯಿಗಳಿಗಾಗಿಯೇ ಒಂದು ಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಇದರಲ್ಲಿ ನಾಯಿಗಳು ಕನಿಷ್ಠಪಕ್ಷ ೪ ತಿಂಗಳಾದರೂ ಶಿಕ್ಷೆಯನ್ನು ಹೊಂದಬೇಕು. ಹೆಚ್ಚಿನ ಬಿರುದನ್ನು ಪಡೆಯಬೇಕಾಗಿದ್ದರೆ ಇನ್ನೂ ಹೆಚ್ಚು ಕಾಲವಿರಬೇಕು. ತಿಂಡಿ ಮೊದಲಾದುವುಗಳ ವೆಚ್ಚವನ್ನು ಪಾಠಶಾಲೆಗೆ ಕೊಡಬೇಕಾಗುತ್ತದೆ. ಅಲ್ಲಿ ಕಲಿಸಿಕೊಡುವುದೇನೆಂದರೆ:—ತನ್ನ ಯಜಮಾನನನ್ನು ಯಾವ ರೀತಿಯಿಂದ ಸಂತೋಷಪಡಿಸಿಕೊಂಡಿರಬೇಕೆಂಬ ಯುಕ್ತಿಯೇ. ಶಿಕ್ಷಣವನ್ನು ಮುಗಿಸಿಕೊಂಡು ಶಾಲೆಯಿಂದ ಹೋಗುವಾಗ ಶಾಲಾಧ್ಯಾಪಕನು ನಾಯಿಗಳಿಗೆ ಯೋಗ್ಯತಾಪತ್ರವನ್ನು ಕೊಟ್ಟು ಕಳುಹಿಸುವನು. ಇದರಲ್ಲಿ ಶಿಕ್ಷಿತವಾದ ನಾಯಿಗಳು ಯೋಗ್ಯತಾ ವಿಷಯದಲ್ಲಿ ಎಷ್ಟೋ ಪ್ರಸಿದ್ಧಿಗೊಂಡಿರುತ್ತವೆ.

ಅಭಿನವ ಭೀಮನೆಂದು ಪ್ರಖ್ಯಾತರಾಗಿರುವ ಪ್ರೊ॥ ಕೋಡಿ ರಾಮಮೂರ್ತಿಯವರು ತಿರುವಾಂಕೂರಿನಲ್ಲಿ ತಮ್ಮ ಅದ್ಭುತದೇಹಬಲಪರಾಕ್ರಮವನ್ನು ಪ್ರದರ್ಶನಮಾಡಿದರು. ೬ ಸಾವಿರ ಪೌಂ॥ ತೂಕದ ದೊಡ್ಡ ಕಲ್ಲುಬಂಡೆಯನ್ನು ತಮ್ಮ ಎದೆಯಮೇಲೇರಿಸಿಕೊಂಡು ಅದರಮೇಲೆ ಸಣ್ಣಸಣ್ಣ ಚಪ್ಪಡಿಗಳನ್ನೂ ಹೇರಿಸಿ, ಸುತ್ತಿಗೆಗಳಿಂದ ಬಡಿಯಿಸಿ ಒಡೆಸಿದರು. ಮೈಗೆ ಸುತ್ತಿದ್ದ ದಪ್ಪನಾದ ಸರಪಣಿಯನ್ನು ಮೈಯುಬ್ಬಿಸಿ ಪುಡಿಪುಡಿಮಾಡಿದರು. ೨ ದೊಡ್ಡ ಎತ್ತಿನ ಬಂಡಿಯಲ್ಲಿ ಜನರನ್ನು ಕುಳ್ಳಿರಿಸಿ, ಅದನ್ನು ತಮ್ಮಮೇಲೆ ಹರಿಯಿಸಿಕೊಂಡರು. ಎದೆಯ ಮೇಲೆ ೧ ದೊಡ್ಡ ಆನೆಯನ್ನು ನಿಲ್ಲಿಸಿಕೊಂಡಿದ್ದರು. ಇದನ್ನೆಲ್ಲಾ ಅಲ್ಲಿನ ಮಹಾರಾಜರು ನೋಡಿ ಸಂತೋಷಪಟ್ಟು, ೪೦೦ ರೂ. ಬೆಲೆಯ ಒಂದು ವಜ್ರಕಟಕವನ್ನೂ ೪ ಸಾವಿರ ರೂ. ಗಳನ್ನೂ ೧ ಆನೆಯನ್ನೂ ೨ ಹುಲಿಯ ಮರಿಗಳನ್ನೂ ಬಹುಮಾನಮಾಡಿದರು,

ಪ್ಯಾರಿಸ್ ಪಟ್ಟಣದ ಒಂದು ದೊಡ್ಡಬ್ಯಾಂಕಿಗೆ ಕಳ್ಳರು ನುಗ್ಗಿ ಅಲ್ಲಿದ್ದವರನ್ನು ಕೊಂದು ಹಣವನ್ನು ದೋಚಿಕೊಂಡು ಮೋಟಾರು ಬಂಡಿಯಲ್ಲಿ ಕುಳಿತುಕೊಂಡು ಓಡಿಹೋಗಿ, ಆ ಪಟ್ಟಣಕ್ಕೆ ೬ ಮೈಲು ದೂರದಲ್ಲಿರುವ ಒಂದು ಮನೆಯಲ್ಲಿ ಸೇರಿಕೊಂಡು, ಹತ್ತಿರಕ್ಕೆ ಬರುವ ಪೋಲೀಸರ ಮೇಲೆ ತುಪಾಕಿಗಳನ್ನು ಹಾರಿಸುತ್ತಿದ್ದರು. ಆ ಮನೆಗೆ ಪೋಲೀಸರು ಸಿಡಿಮದ್ದನ್ನೆಸೆದು ಸುಟ್ಟುಬಿಟ್ಟರು. ಒಳಗಿದ್ದವರಲ್ಲಿ ಮೂವರು ಪೋಲೀಸರ ಗುಂಡಿನೇಟಿಗೆ ಸಿಕ್ಕಿ ಸತ್ತರು. ೨೩ ಮಂದಿಗಳು ಸೆರೆಹಿಡಿಯಲ್ಪಟ್ಟಿರುವರು. ಆ ಕಳ್ಳರನ್ನು ಹಿಡಿದುದೇ ಮೊದಲಾದ ರೀತಿಯೆಲ್ಲ ಸಿನಿಮೊಟೊಗ್ರಾಫಿನಲ್ಲಿ ಗ್ರಹಿಸಲ್ಪಟ್ಟಿದೆ. ಆ ಕಳ್ಳರು ಸಿಕ್ಕಿಬಿದ್ದಾಗ ಲಕ್ಷಾಂತರ ಪ್ರಜೆಗಳು ಆನಂದಿಸಿ ಸತ್ತವರ ಹೆಣಗಳ ಮೇಲೆ ತಾಂಡವವಾಡಿದರು. ಆ ಕಳ್ಳರನ್ನು ಹಿಡಿದ ರೀತಿಯನ್ನೆಲ್ಲಾ ವಿವರಿಸಿ ಪ್ರಕಟಿಸಿದ್ದ ವೃತ್ತಪತ್ರಿಕೆಯ ಸಂಚಿಕೆಗಳ ೧೦ ಲಕ್ಷ ಪ್ರತಿಯನ್ನು ಜನಗಳು ತೆಗೆದುಕೊಂಡು ಓದಿದರು.

ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಲಕ್ಷೋಪಲಕ್ಷ ಎಕರೆಯ ಭೂಮಿಯು ಬೇಸಾಯವಿಲ್ಲದೆ ಪಾಳುಬಿದ್ದಿದೆ. ಅಮೇರಿಕಾದೇಶದಲ್ಲಿ ಬೇಸಾಯಕ್ಕೆ ಸ್ಥಲವಿಲ್ಲದೆ ಶಿಲಾಮಯವಾಗಿರುವ ಭೂಮಿಗಳನ್ನೂ ಬೇಸಾಯಕ್ಕೆ ಅನುಕೂಲಪಡಿಸಿಕೊಂಡು ಹುಟ್ಟುವಳಿ ಮಾಡಿಕೊಳ್ಳುತ್ತಾರೆ. ಹೇಗೆಂದರೆ:—ಹೆಚ್ಚಾಗಿ ಅರೆಗಳಿರತಕ್ಕ ಭೂಮಿಗೆ ಡೈನಾಮೆಂಟ್ ಎಂಬ ಹಾರುವ ಮದ್ದುಗಳನ್ನು ಗುಳಿತೋಡಿಟ್ಟು, ಬೆಂಕಿ ಹೊತ್ತಿಸಿ, ಹಾರಿಸಿ, ಕಲ್ಲುಗಳನ್ನೆಲ್ಲಾ ತೆಗೆದು, ಮಣ್ಣನ್ನು ಸುರಿದು ಬೇಸಾಯಮಾಡುವರು. ಕಳೆದ ೧೯೧೧ ನೆ ವರ್ಷದಲ್ಲಿ ಈ ಕೆಲಸಕ್ಕಾಗಿಯೇ ೪೦ ಲಕ್ಷ ಮಣ ಡೈನಾಮೆಟ್ಟು ಮದ್ದನ್ನು ಒಬ್ಬ ವರ್ತಕನು ಒಬ್ಬ ಬೇಸಾಯಗಾರನಿಗೆ ಮಾರಿರುವನು. ಮದ್ದನ್ನಿಟ್ಟು ಭೂಮಿಯನ್ನೊಡೆದು ಸಡಿಲಗೊಳಿಸಿ ಬೇಸಾಯಮಾಡುವುದರಿಂದ ೧ಕ್ಕೆ ೩-೪ ರಷ್ಟು ಹೆಚ್ಚಾಗಿ ಬೆಳೆಯಾಗುವುದಂತೆ. ಬೇಸಾಯಗಾರರಿಗೆ ಈ ಮದ್ದನ್ನು ಮಾಡಿಕೊಡುವ ಕಂಪನಿಗಳೇ ಆದೇಶದಲ್ಲಿ ೬ ಇರುತ್ತವೆ.

ಟಿಟಾನಿಕ್ ಹಡಗಿನಲ್ಲಿ ಸತ್ತವರ ಉಳಿದವರ ಲೆಕ್ಕವನ್ನು ಕಾಮನ್ಸ್ ಸಭೆಯಲ್ಲಿ ಈ ಕೆಳಗೆ ಕಂಡಮೇರೆ ಹೇಳಿರುತ್ತಾರೆ. ಇದರಲ್ಲಿ ಪ್ರಯಾಣಮಾಡುತ್ತಿದ್ದ ೧ ನೆ ತರಗತಿಯ ಪುರುಷರು ೧೭೩ ಮಂದಿಯಲ್ಲಿ ೫೮ ಮಂದಿಗಳು ಉಳಿದುಕೊಂಡರು. ೧ ನೆ ತರಗತಿಯ ಪ್ರಯಾಣಿಕರಾದ ಹೆಂಗುಸರು ೧೪೪ ಮಂದಿಯಲ್ಲಿ ೧೩೯ ಜನರು ಬದುಕಿಸಲ್ಪಟ್ಟರು, ಅಲ್ಲದೆ ೫ ಮಕ್ಕಳು ಕಾಪಾಡಲ್ಪಟ್ಟರು. ೨ ನೆ ತರಗತಿಯ ೧೬೦ ಮಂದಿ ಪುರುಷರಲ್ಲಿ ೧೩ ಮಂದಿ ಬದುಕಿದರು. ಆ ತರಗತಿಯ ೯೩ ಮಂದಿ ಸ್ತ್ರೀಯರಲ್ಲಿ ೭೮ ಮಂದಿ ಬದುಕಿದರು. ಆ ತರಗತಿಯ ೨೪ ಮಂದಿ ಮಕ್ಕಳೆಲ್ಲರೂ ಬದುಕಿಸಲ್ಪಟ್ಟರು. ೩ ನೆ ತರಗತಿಯ ೪೫೪ ಮಂದಿ ಗಂಡುಸರಲ್ಲಿ ೫೫ ಮಂದಿಗಳು ಉಳಿದರು. ಆ ತರಗತಿಯ ೧೭೯ ಮಂದಿ ಸ್ತ್ರೀಯರಲ್ಲಿ ೯೮ ಜನರು ಬದುಕಿದರು. ಆ ತರಗತಿಯಲ್ಲಿದ್ದ ೭೬ ಮಂದಿ ಮಕ್ಕಳಲ್ಲಿ ೨೩ ಮಕ್ಕಳು ಬದುಕಿಸಲ್ಪಟ್ಟರು. ಇದಲ್ಲದೆ ಹಡಗಿನಲ್ಲಿ ಆಳುಗಳು ಅಧಿಕಾರಿಗಳು ಕೆಲಸಗಾರರು ಮೊದಲಾದವರೆಲ್ಲಾ ಸೇರಿ ೮೬೨ ಮಂದಿ ಇದ್ದುದರಲ್ಲಿ ೧೯೨ ಮಂದಿ ಬದುಕಿದರು. ಅವರಲ್ಲಿದ್ದ ಹೆಂಗುಸರು ೨೩ ಮಂದಿಗೆ ೨೦ ಜನರು ಬದುಕಿದರು.

ಪ್ರಪಂಚದಮೇಲೆ ಅತ್ಯಧಿಕವಾದ ಸಂಪತ್ತುಳ್ಳ ದೇಶವು ಅಮೇರಿಕಾ ಎಂಬುವುದು ಸುಪ್ರಸಿದ್ಧವಷ್ಟೆ. ಆ ದೇಶದಲ್ಲಿರುವ ಸಕಲೈಶ್ವರ್ಯವನ್ನೂ ಸೇರಿಸಿದರೆ ಎಷ್ಟಾಗುವುದೋ ಅದರಲ್ಲಿ ಮೂರನೆಯ ಒಂದು ಭಾಗದಷ್ಟು ಸಂಪತ್ತು ಆ ದೇಶದ ೪೧ ಮಂದಿ ಕೋಟೀಶ್ವರರಲ್ಲೇ ಇರುವುದೆಂದು ಕಾನಡಾದ ಒಂದು ಪತ್ರಿಕೆಯು ಹೇಳುತ್ತದೆ. ಆ ೪೧ ಮಂದಿಗಳಲ್ಲಿ ಮುಖ್ಯರಾದವರ ಹತ್ತಿರವಿರುವ ಸಂಪತ್ತಿಯು ಎಷ್ಟೆಷ್ಟೆಂದರೆ—ಜಾನ್. ಡಿ. ರಾಕ್‌ಫೆಲ್ಲರ್ ಬಳಿಯಲ್ಲಿ ೨೮೦ ಕೋಟಿ ರೂ. ಗಳು; ಆಂಡ್ರೂ ಕಾರ್ನಗಿಯಲ್ಲಿ ೧೨೦ ಕೋಟಿ ರೂ., ಡಬ್ಲ್ಯೂ. ಡಬ್ಲ್ಯೂ. ಆಸ್ಟರ್ ೮೦ ಕೋಟಿ ರೂ., ಜೆ. ಪಿ. ಮಾರ್ಗನ್ ೬೦ ಕೋಟಿ ರೂ., ವಿಲಿಯಂ ರಾಕ್‌ಫೆಲ್ಲರ್ ೪೦ ಕೋಟಿ ರೂ., ಡಬ್ಲ್ಯೂ. ಕೆ. ವಾಂಡರ್‌ಬಿಲ್ಟ್ ೪೦ ಕೋಟಿ ಎಚ್. ಸಿ. ಫ್ರಿಕ್ ೩೦ ಕೋಟಿರೂ., ಡಿ. ಒ. ಮಿಲ್ಸ್ ೩೦ ಕೋಟಿ ರೂ., ಮಾರ್ಷಲ್ ಫೀಲ್ಡ್ ೩೦ ಕೋಟಿ ರೂ., ಹೆನ್ರಿ ಎಂ. ಫ್ಲೇಗರ್ ೩೦ ಕೋಟಿ ರೂ., ಜೆ. ಜೆ. ಹಿಲ್ ೨೪ ಕೋಟಿ ರೂ., ಜೆ. ಡಿ ಆರ್ಚಿಬೋಲ್ಡ್ ೨೪ ಕೋಟಿ ರೂ., ಆಲಿವರ್ ಪೇಯ್ನ್ ೨೪ ಕೋಟಿ ರೂ., ಜೆ. ಬಿ. ಹಾಗಿನ್ಸ್ ೨೦ ಕೋಟಿ ರೂ., ಹೆನ್ರಿ ಫಿಪ್ಸ್ ೨೦ ಕೋಟಿ ರೂ., ಹೆಟ್ಟಿಗ್ರೀನ್ ೧೬ ಕೋಟಿ., ಜಾರ್ಜ್ ಗೌಲ್ಡ್ ೧೬ ಕೋಟಿ ರೂ., ಜೆ. ಒಗ್ಡೆನ್ ಆರ್ಮರ್ ೧೬ ಕೋಟಿ ರೂ., ಇ. ಟಿ. ಗೆರ್ರಿ ೧೬ ಕೋಟಿ ರೂ., ಆರ್. ಡಬ್ಲ್ಯೂ. ಗೋಯಿಲೆಟ್ ೧೬ ಕೋಟಿ ರೂ., ಇವರಲ್ಲದೆ ೧೧-೧೨-೮ ಕೋಟಿ ರೂ. ಗಳುಳ್ಳ ಶ್ರೀಮಂತರು ಎಷ್ಟೋ ಮಂದಿಗಳಿದ್ದಾರೆ.

ಪತ್ರವ್ಯವಹಾರವು.

ದಾವಣಗೆರೆ.

ಶ್ರೀಮನ್ ನಿರಂಜನ ಪ್ರಣವಸ್ವರೂಪಿಗಳಾದ ಇಲ್ಲಿನ ಶ್ರೀ ವಿರಕ್ತಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ॥ ೨೯ ನೆಯ ದಿವಸ ಶ್ರೀ ವಿರಕ್ತಮಠದಲ್ಲಿ "ವೀರಶೈವ ಹಿತೋಪದೇಶಕ ಸಂಘ" ದ ಪರವಾಗಿ ಸಭೆ ಸೇರಿದ್ದಿತು. ವೇ॥ ಕೆ. ಎಂ. ದಾನಪ್ಪಯ್ಯ ಶಾಸ್ತ್ರಿಗಳವರು ಶಿವೈಕ್ಯರಾದುದರಿಂದ ದುಃಖಪ್ರದರ್ಶನಾರ್ಥವಾಗಿ ಈ ಸಭೆ ಸೇರಿದ್ದಿತು. ಆರಂಭದಲ್ಲಿ ಮ॥ ಹರ್ಡೀಕರ್ ಮಂಜಪ್ಪನವರು ಶಿವೈಕ್ಯರಾದ ವೇ॥ ದಾನಪ್ಪಯ್ಯಶಾಸ್ತ್ರಿಗಳವರ ಭಾಷಣಚಾತುರ್ಯವನ್ನೂ, ಪುರಾಣಗಳನ್ನು ಬಹು ರಸವತ್ತಾಗಿ ಹೇಳತಕ್ಕ ಅವರ ಪದ್ಧತಿಗಳನ್ನೂ, ಈ ಶ್ರೇಷ್ಠವಾದುಭಯಗುಣಗಳಿಂದ ಸಕಲ ಮತೀಯರಲ್ಲಿಯೂ ಇವರು ಹೊಂದಿದ ಗೌರವವನ್ನೂ, ಯಥೋಚಿತ ಸಭಿಕರಿಗೆ ತಿಳುಹಿಸಿ, ಇಂತಹ ವಿದ್ವಾಂಸರು ಅಕಾಲದಲ್ಲಿಯೇ ಕೈಲಾಸವಾಸಿಗಳಾದುದರಿಂದ ಸಕಲರಿಗೂ ಅತ್ಯಂತ ದುಃಖವಾಗುವುದಲ್ಲದೆ, ಇವರ ಚಿಕ್ಕಪ್ರಾಯದ ಧರ್ಮಪತ್ನಿಯವರಿಗುಂಟಾಗಿರುವ ಅಪಾರವಾದ ದುಃಖವು ಇವರ ವಿಯೋಗ ದುಃಖವನ್ನು ಇನ್ನಿಷ್ಟು ಹೆಚ್ಚಿಸುತ್ತಿದೆಯೆಂತಲೂ, ಮತ್ತೂ "ಮೈಸೂರ್ ಸ್ಟಾರ್" ಪತ್ರಿಕಾಕರ್ತರಾದ ಮ॥ ರಾ॥ ವೈ. ವಿರೂಪಾಕ್ಷಯ್ಯನವರ ಧರ್ಮಪತ್ನಿಯವರು ಅಕಾಲದಲ್ಲಿಯೇ ಶಿವೈಕ್ಯರಾದುದರಿಂದ ನಮ್ಮಗಳಿಗೆಲ್ಲ ಅತ್ಯಂತ ದುಃಖವಾಗುವುದು ಸ್ವಾಭಾವಿಕವಾಗಿದೆ. ಆದುದರಿಂದ ಈ ಉಭಯ ಕುಟುಂಬದವರಿಗೆ ನಮಗುಂಟಾದ ವಿಷಾದವನ್ನು ಈ ಮೂಲಕ ತಿಳುಹಿಸಲು ಈ ಸಂಘದ ಉಪಾಧ್ಯಕ್ಷರಿಗೆ ಅಧಿಕಾರ ಕೊಡಬೇಕೆಂದು ಬರೆದು ಕಳುಹಿಸುವ ಪತ್ರದ ಅಭಿಪ್ರಾಯವನ್ನು ಸಭಿಕರಿಗೆ ಓದಿ ಹೇಳಿದರು. ಅನಂತರ ಇಲ್ಲಿನ ಮ॥ ರಾ॥ ಸಾವಳಗಿ ನಾಗಪ್ಪನವರು ಈ ಸೂಚನೆಗಳಿಗೆ ಅನುಮೋದಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಸೊಲ್ಲಾಪುರ.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸನ್ನಿಧಿಯು ಸುಮಾರು ನಾಲ್ಕು ತಿಂಗಳಿಂದಲೂ ಇಲ್ಲಿಯ ಸದ್ಭಕ್ತರ ಭಕ್ತ್ಯತಿಶಯದ ಮೂಲಕ ಇಲ್ಲಿಯೇ ಇರೋಣವಾಗಿದೆ. ಮಾರ್ಚ್ ತಾ॥ ೧೬-೧೭-೧೮ ಈ ಮೂರು ದಿವಸಗಳಲ್ಲಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಈ ಗ್ರಾಮದ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿರುವ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯು ವೇ॥ ಪಂ॥ ಗುರುಮೂರ್ತಿಶಾಸ್ತ್ರಿ ಬೆನಕನಹಳ್ಳಿ ಇವರ ಕಡೆಯಿಂದ ತೆಗೆದುಕೊಳ್ಳಲ್ಪಟ್ಟಿತು. ವಿದ್ಯಾರ್ಥಿಗಳು ಪರಿಶ್ರಮಪಟ್ಟು ಅಭ್ಯಾಸಮಾಡಿರುವುದರಿಂದ ಮೂರನೆಯ ಒಂದು ಅಂಶಕ್ಕಿಂತ ಹೆಚ್ಚಾಗಿ ಉತ್ತೀರ್ಣತೆಯನ್ನು ಹೊಂದಿದರು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುರೂಪ ಪುಸ್ತಗ್ರಂಥಗಳು ಬಹುಮಾನವಾಗಿ ಸನ್ನಿಧಿಯಿಂದ ಅರ್ಪಿಸಲ್ಪಟ್ಟವು. ಈ ಶಾಲಾಧ್ಯಾಪಕರಾದ ನಾಲ್ವಾರದ ವೇ॥ ಜಗದೀಶಶಾಸ್ತ್ರಿಗಳಿಗೆ ಬಹುಮಾನವು ಕೊಡಲ್ಪಟ್ಟಿತು. ಆಗಿನ ಸಮಯದಲ್ಲಿ [illegible] ಶ್ರೀಯುತ [illegible] ಶ್ರೀಯುತ [illegible]

ಸಿದ್ಧಸ್ವಾಮಿ ಉಮ್ಮರಜಿ, ಶ್ರೀಮಂತ ಚೆನ್ನಬಸಪ್ಪಣ್ಣ ಮಡಕಿ, ಶಾಲೆಯ ಅಂತರ್ವ್ಯವಸ್ಥಾಪಕರಾದ ಬ್ರಹ್ಮಶ್ರೀ ಹುಕ್ಕೇರಿ ವಿರಕ್ತಮಠದ ಶಿವಲಿಂಗದೇವರು—ಇವರೆಲ್ಲರವೂ ಶ್ರೀಮಂತ ರಾವಬಹಾದೂರ ಅಪ್ಪಾಸಾಹೇಬವಾರದ ಇವರ ಸ್ಮಾರಕಾರ್ಥವಾಗಿ ಈ ಶಾಲೆಯನ್ನು ಇರುವರೆಗಿನಂತೆಯೇ ನಡೆಯಿಸಿಕೊಂಡು ಹೋಗಬೇಕೆಂಬುವ ವಿಷಯದಲ್ಲಿ ಪ್ರೋತ್ಸಾಹಿಸಿದರು. ಇದೇ ತಿಂಗಳ ತಾ|| ೧೬ ನೇ ಮಂಗಳವಾರದ ದಿವಸ ಇಲ್ಲಿಯ ಶ್ರೀಮನ್ನಿರಂಜನ ಕಿರೀಟ ಮಠದ ಚರಮೂರ್ತಿಗಳಾದ ನಿಜಗುಣಸ್ವಾಮಿಗಳು ಶ್ರೀಮಜ್ಜಗದ್ಗುರುಗಳನ್ನು ಅಡ್ಡಪಾಲಕಿ ಉತ್ಸವದೊಡನೆ ತಮ್ಮ ಹೊರಗಿನ ಮಠದಿಂದ ಊರಲ್ಲಿರುವ ತಮ್ಮ ಗದ್ದಿಗೆಯ ಮಠಕ್ಕೆ ದಿನ್ನಹ ಮಾಡಿ ಕರಕೊಂಡು ಬಂದರು. ಪೂರ್ವದಿವಸ ಅಡ್ಡಪಾಲಕಿಯ ಉತ್ಸವವು ಹೊರಡಬೇಕಾದರೆ ಎಲ್ಲಾ ಬೀದಿಗಳಿಗೆ ಮುನ್ಸಿಪಾಲಿಟಿಯ ಕಮಿಟಿಯವರಿಂದ ನೀರು ಹೊಡಿಸಬೇಕೆಂಬ ಆಲೋಚನೆಯನ್ನು ಮಾಡುತ್ತಿರುವಲ್ಲಿಯೇ (ಯಥಾಭಾವಸ್ತಾಗುರು:) ಎಂಬ ಸೂಕ್ತಿಯಂತೆ ಗುರುಭಕ್ತಿಯ ಪ್ರಭಾವವೇ ಮಳೆಯನ್ನು ಕರೆಯಿತೋ ಎಂಬುವಂತೆ ಸ್ವಲ್ಪ ಮಳೆಯಾಗಿ ಬೀದಿಗಳು ತಣಿಗೊಟ್ಟಂತೆ ಆದವು. ಮಂಗಳವಾರ ಮುಂಜಾನೆ ೮ ಗಂಟೆಗೆ ಸರಿಯಾಗಿ ಮಹಾಸ್ವಾಮಿಯು ಪಂಚಕಲಶ ಶ್ವೇತಛತ್ರ ವಿಶಿಷ್ಟವಾದ ತಿರ್ಯಗಾಂದೋಲನವನ್ನು ಅಲಂಕರಿಸಿ ಹೊರಗಿನ ಮಠದಿಂದ ಹೊರಟಿತು. ಹಗಲು ದೀವಟಿಗೆ ಮಕರತೋರಣ ಮೋರ್ಛಾಲು ಸೂರ್ಯಚಂದ್ರ ವಾದ್ಯಗಳೇ ಮೊದಲಾದ ಎಲ್ಲ ಬಿರುದುಗಳೂ ನಿಬಿಡೀಕೃತವಾದ ಮಹಾಜನ ಸಂದಣಿಯಲ್ಲಿ ಸಮುದ್ರದಲ್ಲಿನ ತೆರೆಗಳಂತೆ ತೋರುತ್ತಿದ್ದವು. ಚರಮೂರ್ತಿಗಳು ಪಟ್ಟಾಧಿಕಾರಿಗಳು ಪಂಡಿತರು ಪಾಲಕಿಯ ಮುಂಭಾಗದಲ್ಲಿ ಹೋಗುತ್ತಿದ್ದರು. ಎಡಬಲಭಾಗಗಳಲ್ಲಿ ಸಾಲಾಗಿ ನಿಂತು ಉಚ್ಚಸ್ವರದಿಂದ ವೇದಘೋಷವನ್ನು ಮಾಡುವ ವೈದಿಕರು ಇವರ ಮುಂದೆ ಸಾಲುಸಾಲಾಗಿ ಶೋಭಿಸುವ ಶ್ರೀಮಂತರಾದ ಪುರಪ್ರಮುಖರೇ ಮೊದಲಾದ ನಗರವಾಸಿಗಳು ಬೇರೆಬೇರೆ ವೇಷಗಳುಳ್ಳ ಸಂಗೀತಭಜನೆಯ ವಿದ್ಯಾರ್ಥಿಗಳು ನಡೆದಿದ್ದರು ಕುದುರೆ ಒಂಟಿಗಳ ಮೇಲಿನ ವಾದ್ಯಗಳು ರಥದ ಮೇಲಿನ ವಾದ್ಯಗಳು ಕಾಲಾಳುಗಳ ವಾದ್ಯಗಳು ಸಹ ಗಗನವನ್ನು ಇಬ್ಬಗೆಯಾಗಿ ಮಾಡುವಂತೆ ಭೋರ್ಗರೆಯುತ್ತಿದ್ದವು. ಚೆನ್ನಾಗಿ ಅಲಂಕರಿಸಿದ ಕೊತ್ತಲದ ಕುದುರೆಗಳಿಂದಲೂ ಮಹಾಸನ್ನಿಧಿಯ ಅಲಂಕೃತಗಳಾದ ಆನೆಗಳೆರಡು ಮಾಡುತ್ತಿದ್ದ ಅಂಗಸಾಧನ ಚಾತುರ್ಯದಿಂದಲೂ ಉತ್ಸವಕ್ಕೆ ಹೆಚ್ಚಾದ ಶೋಭೆಯು ಬಂದಿತ್ತು. ಇನ್ನಲ್ಲದೆ ಮಜಲುಗಳಿಂದಲೂ ಬಂದಿದ್ದ ಅನೇಕ ತಮ್ಮಟಿ ಕಹಳೆಗಳಿಂದಲೂ ಓಲಗದವರಿಂದಲೂ ಮುಂದೆ ಸಾಲುಸಾಲಾಗಿ ಶೋಭಿಸುವ ನಾನಾಬಣ್ಣದ ನಿಶಾನೆಗಳಿಂದಲೂ ಸಾವಿರಾರು ಸಂಖ್ಯೆಯುಳ್ಳ ಪ್ರೇಕ್ಷಕರಿಂದಲೂ ಉತ್ಸವವು ಹೊರಗಿನ ಪೇಟೆಯಿಂದ ಹೊಸಬಜಾರದಲ್ಲಿ ಸುಳಿದು ಶ್ರೀಮಂತ ರಾವಬಹಾದ್ದೂರ ವಾರದವರ ಮನೆ ಪಸಾರೆ ಉಮ್ಮರಜಿ ಇವರ ಮನೆಗಳ ಮುಂದಿನಿಂದ ಫೌಜದಾರ ಚಾವಡಿಗೆ ಬಂದು ಅಲ್ಲಿಂದ ಕಿರಾಣಿ ಗಲ್ಲಿಯಲ್ಲಿ ಸುಳಿದು ಚಾಟಿಗಲ್ಲಿಯಿಂದ ಕಿರೀಟಮಠಕ್ಕೆ ದಯಮಾಡಿಸಿತು. ಸ್ವಾಮಿಯು ಮೊದಲೇ ಸಿದ್ಧಗೊಳಿಸಿಟ್ಟ ರಮ್ಯೋದ್ಯಾನದಲ್ಲಿ ಮೂರ್ತಿಗೊಳಿಸಿದ ಕೂಡಲೆ ಜಯಘೋಷವು ನಡೆಯಿತು. ಆ ದಿವಸ ಸಾವಿರಾರು ಮಾಹೇಶ್ವರರಿಗೂ ಭಕ್ತರಿಗೂ ಮೃಷ್ಟಾನ್ನ ಸಂತರ್ಪಣೆಯು ನಡೆಯಿತು. ಶಿವಾರ್ಚನೋತ್ತರದಲ್ಲಿ ಮಹಾಸ್ವಾಮಿಗಳ ಪಾದಕಾಣಿಕೆಯಾಗಿ ನಿಜಗುಣಸ್ವಾಮಿಗಳು ೧೦೧ ರೂ. ಗಳನ್ನು ಸಮರ್ಪಿಸಿದರು. ಈ ಉತ್ಸವಕ್ಕೆ ಆದವಾನಿಯ ಎಲೆ ಮಲ್ಲಪ್ಪನವರ ಪುತ್ರರಾದ ಎಲೆ ಮಲ್ಲೇಶಪ್ಪನವರು ಅಪ್ಪಣೆಯ ಮೇರೆಗೆ ಬಂದಿದ್ದರು. ಶ್ರೀ ಜಗದ್ಗುರುಗಳು ಇಲ್ಲಿಂದ ಮೂರು ನಾಲ್ಕು ದಿವಸಗಳಲ್ಲಿ ಬಾರಸಿಗೆ ಚಿತ್ತೈಸುವುದಾಗಿ ತಿಳಿದು ಬರುತ್ತದೆ.

ಓರ್ವಪ್ರೇಕ್ಷಕ.

ಬಸವೇಶ್ವರನ ಜನ್ಮಕಾಲ.

ತಮ್ಮ ಪತ್ರಿಕೆಯ ಏಪ್ರಿಲ್ ೨೯ ನೇ ತಾರೀಖಿನ ಸಂಚಿಕೆಯಲ್ಲಿ ದಾವಣಗೆರೆಯ 'ವೀರಶೈವ ಹಿತೋಪದೇಶ ಸಂಘದ ಸೆಕ್ರೆಟರಿಗಳು ಬಸವೇಶ್ವರನ ಜನನ ಮಾಸವು ವೈಶಾಖವೆಂತಲೂ, ನಕ್ಷತ್ರ ರೋಹಿಣಿಯೆಂತಲೂ ಕಾಣಿಸಿ, ಅವನ ಜನನ ಕುಂಡಲಿಯನ್ನು ಸಹ ಕೊಟ್ಟಿರುತ್ತಾರೆ. ಈ ಮಾಹಿತಿಯು ಯಾವ ಗ್ರಂಥದಲ್ಲಿ ಕೊಟ್ಟಿರುತ್ತದೆಂಬುವದನ್ನು ಬರೆದು ತಿಳಿಸಿದ್ದರೆ ಉಚಿತವಾಗುತ್ತಿತ್ತು; ಇರಲಿ ಆದರೆ ಈ ಮೇರೆಗೆ ಬಸವೇಶ್ವರನ ಜನನಕಾಲವನ್ನು ಕುರಿತು ಇತ್ತಿತ್ತ ಚರ್ಚೆ ನಡೆಯ ಹತ್ತಿರುತ್ತದೆಂದು ತಿಳಿದು ಸಂತೋಷವಾಗುತ್ತದೆ. ಈ ಕಾಲವನ್ನು ನಿಶ್ಚೈಸಬೇಕಾದರೆ ವೀರಶೈವ ಗ್ರಂಥಕಾರರು ಯಾವಯಾವ ಮಿತಿಗಳನ್ನು ತಮ್ಮ ಗ್ರಂಥಗಳಲ್ಲಿ ಕೊಟ್ಟಿರುವರೆಂಬದನ್ನು ಮೊದಲು ತಿಳಿದು ಅವುಗಳನ್ನು ಪರಸ್ಪರ ತುಲನೆಮಾಡತಕ್ಕದ್ದು. ಆಮೇಲೆ ವೀರಶೈವರಲ್ಲದ ಗ್ರಂಥಕಾರರು ಕೊಟ್ಟ ಮಿತಿಗಳೊಡನೆ ಅವುಗಳನ್ನು ಸರಿಹಚ್ಚಿ, ಇವೆಲ್ಲವುಗಳನ್ನು ಶಿಲಾಲೇಖಗಳಲ್ಲಿ ದೊರೆಯುವ ಮಿತಿಗಳ ಸಹಾಯದಿಂದ ಯಾವವು ನಿಜವಾದವುಗಳೆಂಬುದು ಕಂಡು ಹಿಡಿಯಬೇಕು. ಈ ಪ್ರಕಾರ ಶೋಧಿಸಿದ ವಿನಾ ಯಾರ ಮಿತಿಯನ್ನೂ ನಂಬುವದು ಯೋಗ್ಯವಲ್ಲ. ಯಾಕೆಂದರೆ ನಮ್ಮ ಗ್ರಂಥಕಾರರಲ್ಲಿಯೇ ಈ ಬಗ್ಗೆ ಒಂದು ಮತವಿಲ್ಲ. ಬೇರೆಬೇರೆ ಗ್ರಂಥಕಾರರು ಬೇರೆಬೇರೆ ಮಿತಿಗಳನ್ನು ಕೊಟ್ಟಿದ್ದಾರೆ. ಅವುಗಳು ಹೇಗೆಂದರೆ:—

ಕಾಲಜ್ಞಾನದ ವಚನದಲ್ಲಿ.

೧. ಬಸವೇಶ್ವರನ ಜನನ:—ವಿಕ್ರಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ. ಬಸವೇಶ್ವರನ ಐಕ್ಯ— ರಾಕ್ಷಸ ಸಂವತ್ಸರ ಶ್ರಾವಣ ಶುದ್ಧ ೧ ಮಂಗಳವಾರ ಉದಯವಾದ ೨೪ ಗಳಿಗೆ. ಕಾಲಜ್ಞಾನ:— ಬಸವೇಶ್ವರನ ಐಕ್ಯ—ರಾಕ್ಷಸ ಸಂವತ್ಸರದ ಆಷಾಢ ಶುದ್ಧ ಷಷ್ಠಿ ಸೋಮವಾರ ರಾತ್ರಿ. ಕುರುಹಿನಗಟ್ಟಿ:—ಬಸವೇಶ್ವರನ ಐಕ್ಯ— ರಾಕ್ಷಸ ಸಂವತ್ಸರ ಫಾಲ್ಗುಣ ಶುದ್ಧ ೧೧ ಸೋಮವಾರ ಒಂದುತಾಸು ರಾತ್ರಿ. ಚನ್ನಬಸವ ಪುರಾಣ:—ಬಸವೇಶ್ವರನ ಐಕ್ಯ— ಶಕೆ ೭೦೭ ರಕ್ತಾಕ್ಷಿ ಸಂ|| ಫಾಲ್ಗುಣ ಶುದ್ಧ ೧೧ ಮಂಗಳವಾರ ಉದಯವಾದ ೨೪ ಗಳಿಗೆ. ಲಕ್ಕಣ್ಣದಂಡೇಶ (ಶಿವತತ್ವ ಚಿಂತಾಮಣಿಯು):— ಬಸವೇಶ್ವರನ ಜನನ— ಸಿದ್ಧಾರ್ಥಿ ಸಂ|| ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರ. ಬಿಜ್ಜಳಚರಿತೆ (ಜೈನಗ್ರಂಥ):— ಬಿಜ್ಜಳನ ಮರಣ—ಕಲಿಯುಗ ೪೦೦೦ ವಿಜಯ ಸಂ|| ಕಾರ್ತಿಕ ಶುದ್ಧ ೧೦ ಆದಿತ್ಯವಾರ ಈ ಮೇರೆಗೆ ಒಂದು ಗ್ರಂಥದಲ್ಲಿಯ ಮಿತಿಯು ಮತ್ತೊಂದಕ್ಕೆ ಕೂಡುವುದಿಲ್ಲ. ಆದರೂ ಕೂಡ ಇವುಗಳಲ್ಲಿ ಯಾವ ವರ್ಷವು ಹೆಚ್ಚಿಗೆ ನಿಜವಿರುತ್ತದೆಂಬುವದನ್ನು ಕಂಡು ಹಿಡಿಯುತಕ್ಕದ್ದಾಗಿದೆ. ಇದನ್ನು ಶಿಲಾಲೇಖಗಳಲ್ಲಿ ಸಿಗುವ ಮಿತಿಗಳಿಂದಲೇ ನಿರ್ಣಯಿಸತಕ್ಕದ್ದು.

ಶಿಲಾಲೇಖಗಳಿಂದ ತಿಳಿಯಬರುವುದೇನಂದರೆ:—ಬಿಜ್ಜಳನು ಕಲಚೂರ್ಯ ವಂಶದವನು. ಅವನು ಮೊದಲು ಚಾಲುಕ್ಯರ ಮಂಡಲಿಕನಾಗಿದ್ದನು. ಆಗ ಚಾಲುಕ್ಯರ ಅರಸು ಬಹಳ ದುರ್ಬಲನಿದ್ದುದರಿಂದ ಬಿಜ್ಜಳನು ಹೆಚ್ಚುಹೆಚ್ಚು ಪ್ರಬಲನಾಗುತ್ತ, ೧೧೫೬ ರ ಸುಮಾರಕ್ಕೆ ಸ್ವತಂತ್ರನಾದನು. ೧೧೬೦ ರಲ್ಲಿ ಅವನು ಚಾಲುಕ್ಯರ ಕಡೆಯ ಅರಸನನ್ನು ತಳ್ಳಿ, ಸಾರ್ವಭೌಮ ಪದವಿಯನ್ನು ಸ್ವೀಕರಿಸಿದನು. ಆ ಮೇಲೆ ೧೧೬೭ ರ ಸುಮಾರಕ್ಕೆ ಅವನು ರಾಜ್ಯವನ್ನು ಪರಿತ್ಯಜಿಸಿ, ತನ್ನ ತರುವಾಯ ಸೋಮಿದೇವನನ್ನು ಕಲ್ಯಾಣದ ಪಟ್ಟಕ್ಕೆ ಕುಳ್ಳಿರಿಸಿದನು. ಬಿಜ್ಜಳನ ಅನೇಕ ಶಿಲಾಲೇಖಗಳು ಕಲಬುರ್ಗಿ, ಧಾರವಾಡ, ಶಿವಮೊಗ್ಗಿ ಮೊದಲಾದ ಜಿಲ್ಲೆಗಳಲ್ಲಿ ಸಿಗುತ್ತವೆ. ಅವನ ಶಿಲಾಲೇಖಗಳೆಲ್ಲ ೧೧೫೦ ಮತ್ತು ೧೧೬೦ ರ ನಡುವಿನವು ಮಾತ್ರ ಸಿಗುತ್ತವೆ. ಇವುಗಳ ಹಿಂದಿನ ಅಥವಾ ಮುಂದಿನ ಯಾವ ಶಿಲಾಲೇಖಗಳೂ ಸಿಕ್ಕಿಲ್ಲ. (ಫ್ಲೀಟನ ಗ್ರಂಥವನ್ನು ನೋಡಬೇಕು).

ಆದರೆ ಬಿಜ್ಜಳನೂ ಬಸವನೂ ಸಮಕಾಲೀನರೆಂಬುದು ನಿರ್ವಿವಾದವು. ಆದುದರಿಂದ ಬಸವೇಶ್ವರನು ಕ್ರಿ. ಶ. ೧೧೦೦ ಮತ್ತೂ ೧೨೦೦ ರ ನಡುವೆ ಇದ್ದನೆಂಬುದು ಸ್ಪಷ್ಟವು. ಆ ಕಾರಣ ಚೆನ್ನಬಸವಪುರಾಣದಲ್ಲಿಯ ಶಕೆ ೭೦೭ ಮತ್ತೂ ಬಿಜ್ಜಳಚರಿತೆಯಲ್ಲಿಯ ಕಲಿವರ್ಷ ೪೦೦೦ ಇವೆರಡೂ ತಪ್ಪು ಇರುತ್ತವೆ. ಶಿಲಾಲೇಖಗಳ ಮೇಲಿಂದ ತಿಳಿದು ಬರುವುದೇನಂದರೆ:—ಬಸವೇಶ್ವರನು ೧೨ ನೇ ಶತಮಾನದಲ್ಲಿ ಇದ್ದನು ಮತ್ತೂ ಈ ಶತಮಾನದಲ್ಲಿಯ ಒಂದು ವರ್ಷದಲ್ಲಿ ಅವನು ಹುಟ್ಟಿರಲಿಕ್ಕೆ ಬೇಕು. ಮತ್ತೂ ಒಂದು ವರ್ಷ ಅಳಿದಿರಲಿಕ್ಕೆ ಬೇಕು. ಈ ವರ್ಷಗಳು ಯಾವುವೆಂಬದನ್ನು ಈಗ ನಾವು ನಿಶ್ಚಯಿಸತಕ್ಕದ್ದಾಗಿದೆ. ಇವುಗಳನ್ನು ಶೋಧಿಸಬೇಕಾದರೆ, ನಾವು ಮೇಲೆ ಕಾಣಿಸಿದ ಬೇರೆಬೇರೆ ಗ್ರಂಥಕಾರರ ಮಿತಿಗಳನ್ನು ತೆಗೆದುಕೊಂಡು ಬಿಜ್ಜಳನ ಶಿಲಾಲೇಖಗಳ ಮಿತಿಗಳಿಗೆ ಸರಿನೋಡತಕ್ಕದ್ದು. ಅಂದರೆ ಈ ಶಿಲಾಲೇಖಗಳ ಮಿತಿಗಳಿಗೆ ಕೂಡುವಂಥವುಗಳನ್ನು ನಿಜವೆಂತಲೂ ಕೂಡದೆ ಇದ್ದವುಗಳನ್ನು ಸುಳ್ಳೆಂತಲೂ ತಿಳಿಯತಕ್ಕದ್ದು. ಆದರೆ ಈ ಪ್ರಕಾರ ಸರಿನೋಡುವ ಕಾಲಕ್ಕೆ ವಾಚಕರು ಕೆಳಗಿನ ಸಂಗತಿಗಳಿಗೆ ಲಕ್ಷ್ಯಕೊಡತಕ್ಕದ್ದು.

೧. ಬಸವೇಶ್ವರನು ತೀರಿಕೊಂಡಾಗ ೩೬ ವರ್ಷದವನಿದ್ದನು ಚೆನ್ನಬಸವೇಶನು ೨೪ ವರ್ಷದವನಿದ್ದನು ೨. ಬಸವೇಶ್ವರನು ಐಕ್ಯವಾದ ೩|| ತಿಂಗಳುಗಳ ಮೇಲೆ ಬಿಜ್ಜಳನು ಘಾತಿಸಲ್ಪಟ್ಟನು ಈ ಎರಡು ಸಂಗತಿಗಳನ್ನು ಎಲ್ಲ ವೀರಶೈವ ಗ್ರಂಥಕಾರರೂ ಒಪ್ಪಿಕೊಂಡಿರುತ್ತಾರೆ. ಕಾಲಜ್ಞಾನದ ಎರಡು ಗ್ರಂಥಗಳು ಕುರುಹಿನಗಟ್ಟಿ ಇವುಗಳು ಬಸವನ ಐಕ್ಯವು ರಾಕ್ಷಸವೆಂತಲೂ, ಜನನವು ವಿಕ್ರಮವೆಂತಲೂ ಒಪ್ಪಿಕೊಳ್ಳುತ್ತವೆ. ಆದರೆ ಚೆನ್ನಬಸವ ಪುರಾಣದಲ್ಲಿ ಐಕ್ಯವು ರಕ್ತಾಕ್ಷಿ ಸಂವತ್ಸರವೆಂದು ಬರೆದಿದೆ. ಅಂದರೆ ಇದರಲ್ಲಿ ೩೬ ವರ್ಷ ಕಳೆದರೆ ನಂದನವು ಬಸವೇಶ್ವರನ ಜನ್ಮಸಂವತ್ಸರವಾಗುತ್ತದೆ. ಲಕ್ಕಣ್ಣದಂಡೇಶನು ಜನನವು ಸಿದ್ಧಾರ್ಥಿ ಎಂದು ಬರೆದಿರುವನು. ಇದರಲ್ಲಿ ೩೬ ಕೂಡಿಸಿದರೆ, ಮನ್ಮಥವು ಬಸವೇಶ್ವರನ ಐಕ್ಯ ಸಂವತ್ಸರವಾಯಿತು. ಇವುಗಳಲ್ಲಿ ಯಾವ ವರ್ಷವು ಶಿಲಾಲೇಖಗಳ ವರ್ಷಗಳಿಗೆ ಕೂಡುವವೆಂಬುದನ್ನು ವಾಚಕರು ವಿಚಾರಮಾಡಿ ನೋಡತಕ್ಕದ್ದು. ಈ ಪ್ರಕಾರ ವಿಚಾರಮಾಡಿ ನೋಡಿದರೆ, ಲಕ್ಕಣ್ಣ ದಂಡೇಶನು ಕೊಟ್ಟ ಮಿತಿಯ ಹೊರ್ತಾಗಿ ಉಳಿದವುಗಳು ಯಾವವೂ ಕೂಡುವುದಿಲ್ಲೆಂದು ಅವರಿಗೆ ತಿಳಿದು ಬರುವುದು. ಹೇಗೆಂದರೆ:—ವಿಕ್ರಮ ಸಂವತ್ಸರ—ಕಾಲಜ್ಞಾನಗಳಲ್ಲಿ ಕೊಟ್ಟ ಈ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೦೦—೧೧೬೦ ಈ ಇಸವಿಗಳಲ್ಲಿ ಬೀಳುತ್ತದೆ ಈ ಗ್ರಂಥಗಳ ಪ್ರಕಾರ ಈ ಎರಡು ವರ್ಷಗಳೊಳಗೆ ಒಂದು ವರ್ಷದಲ್ಲಿ ಬಸವೇಶ್ವರನು ಹುಟ್ಟಿರಲಿಕ್ಕೆ ಬೇಕು. ಮತ್ತೂ ೧೧೩೬ ಅಥವಾ ೧೧೯೬ ರಲ್ಲಿ ಅವನು ಐಕ್ಯನಾಗಿರಲಿಕ್ಕೆ ಬೇಕು ಇವುಗಳಲ್ಲಿ ೧೧೩೬ ರಲ್ಲಿ ಐಕ್ಯನಾದನೆಂದು ಭಾವಿಸಿದರೆ, ಅದು ಶಿಲಾಲೇಖಗಳಿಗೆ ಕೂಡುವದಿಲ್ಲ ಏಕೆಂದರೆ ಆ ವರ್ಷದಲ್ಲಿ ಬಿಜ್ಜಳನು ಇನ್ನೂ ಕಲ್ಯಾಣದ ಅರಸನಾಗಿದ್ದಿಲ್ಲ. ಮತ್ತೂ ೧೧೯೬ ನಿಜವೆಂದು ತಿಳಿದರೆ, ಈ ವರ್ಷವು ಬಿಜ್ಜಳನು ತೀರಿದಮೇಲೆ (ಅಂದರೆ ೧೧೬೭ ರ ತರುವಾಯ) ೩|| ತಿಂಗಳ (ಅಥವಾ ೨೦ ವರ್ಷಗಳ) ಮೇಲೆ ಬಹಳ ದೂರ ಹೋಗುತ್ತದೆ ಮತ್ತೂ ೧೧೮೦—೧೧೯೦ ರಲ್ಲಿಯು ಬಿಜ್ಜಳನ ಒಂದು ಶಿಲಾಲೇಖನವಾದರೂ ಸಿಗುವುದಿಲ್ಲ. ಆದುದರಿಂದ ಕಾಲಜ್ಞಾನದ ಮತ್ತೂ ಕುರುಹಿನಗಟ್ಟಿನ ಯಾವ ವರ್ಷಗಳೂ ಶಿಲಾಲೇಖಗಳ ವರ್ಷಗಳಿಗೆ ಕೂಡುವದಿಲ್ಲ ಆದುದರಿಂದ ಅವು ತಪ್ಪು ಇರುತ್ತವೆ. ರಕ್ತಾಕ್ಷಿ ಸಂವತ್ಸರ:—ಇದು ಚೆನ್ನಬಸವ ಪುರಾಣದಲ್ಲಿ ಬಸವನ ಐಕ್ಯ ಸಂವತ್ಸರವೆಂದು ಕಾಣಿಸಿದೆ. ಈ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೦೪ ಮತ್ತೂ ೧೧೬೪ ರ ವರ್ಷಗಳಲ್ಲಿ ಬೀಳುತ್ತದೆ. ಈ ವರ್ಷಗಳನ್ನು ಮೇಲೆ ಕಾಣಿಸಿದಂತೆ ವಿಚಾರಮಾಡಿದರೆ, ರಾಕ್ಷಸ ಸಂವತ್ಸರಕ್ಕಿಂತಲೂ ಇದು ಹೆಚ್ಚು ಅಸಂಭಾವ್ಯವಾಗಿ ತೋರುತ್ತದೆ. ಈ ಸಂವತ್ಸರವಂತೂ ಶೀಘ ತಪ್ಪು ಇರುತ್ತದೆಂದು ವಾಚಕರಿಗೆ ತಿಳಿದು ಬರುವುದು. ಸಿದ್ಧಾರ್ಥಿ ಸಂವತ್ಸರ:—ಇದನ್ನು ಲಕ್ಕಣ್ಣ ದಂಡೇಶನು ಜನ್ಮಸಂವತ್ಸರವೆಂದು ಕಾಣಿಸಿದ್ದಾನೆ. ೧೨ ನೇ ಶತಮಾನದಲ್ಲಿ ಈ ಸಂವತ್ಸರವು ೧೧೩೯ ಮತ್ತೂ ೧೧೯೯ ರಲ್ಲಿ ಬೀಳುತ್ತದೆ. ಆದಕಾರಣ ಅವನ ಮರಣ ಸಂವತ್ಸರವು ಇವುಗಳಿಗೆ ಸರಿಯಾಗಿ ೧೧೭೫ ಮತ್ತೂ ೧೨೩೫ ಆಗುತ್ತದೆ ಇವುಗಳಲ್ಲಿ ಮೊದಲನೆಯ ೧೧೩೯ ಮತ್ತೂ ೧೧೭೫ ಈ ಎರಡು ವರ್ಷಗಳು ಶಿಲಾಲೇಖದ ವರ್ಷಗಳಿಗೆ ಹೆಚ್ಚು ಕೂಡುವವು. ಏಕೆಂದರೆ ಈ ಎರಡು ವರ್ಷಗಳ ಮಧ್ಯದಲ್ಲಿಯೇ ಬಿಜ್ಜಳನು ರಾಜ್ಯವನ್ನಾಳಿದ್ದಿರುತ್ತದೆ. ಮತ್ತೂ ಬಿಜ್ಜಳನ ಶಿಲಾಲೇಖಗಳು ಈ ಮಿತಿಗಳ ಒಳಹೊರಗೆ ಹೋಗುವದಿಲ್ಲ. ಆದುದರಿಂದ ೧೧೩೯ ಸಿದ್ಧಾರ್ಥಿಸಂವತ್ಸರದ ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರವು ಬಸವನ ಜನನವೆಂದು ತಿಳಿಯುವುದು ವಿಹಿತವೆಂದು ನನಗೆ ತೋರುತ್ತದೆ. ಲಕ್ಕಣ್ಣದಂಡೇಶನನ್ನು ನಂಬಲಿಕ್ಕೆ ಇನ್ನು ಕೆಲವು ವಿಶೇಷ ಕಾರಣಗಳಿವೆ. ಅವು ಯಾವುವೆಂದರೆ:—

(೧) ಇವನು ೧೪೦೮—೧೪೪೬ ರ ವರೆಗೆ ವಿಜಯ ನಗರವನ್ನು ಆಳಿದ ದೇವರಾಜನ ಸೇನಾಧಿಪತಿಯಾಗಿದ್ದನು. ಆದುದರಿಂದ ಚೆನ್ನಬಸವಪುರಾಣ (ಇ-ಸ-೧೫೮೫) ಕಾಲಜ್ಞಾನಗಳು (೧೭ ನೆಯ ಶತಮಾನ) ಇವುಗಳ ಗ್ರಂಥಕಾರರಿಗಿಂತ ಈತನು ಬಹಳ ಪೂರ್ವಿಕನು. ಆದುದರಿಂದ ಇವನು ಹೇಳುವ ಸಂಗತಿಗಳು ಹೆಚ್ಚು ವಿಶ್ವಾಸನೀಯವಾದವುಗಳು. (೨) ಇವನು ಇದ್ದ ಕಾಲಕ್ಕೆ ದೇವರಾಜನ ದರ್ಬಾರಿನಲ್ಲಿ ವೀರಶೈವ ಮಹಾಕವಿಗಳೂ, ಗ್ರಂಥಕಾರರೂ ಬಹಳಜನರಿದ್ದರು. ದೇವರಾಜನ ಮಂತ್ರಿಯಾದ ಜಕ್ಕಣಾರ್ಯನು, ಪ್ರಭುಲಿಂಗಲೀಲೆಯ ಚಾಮರಸನು, ವೀರಸೊಣ್ಣಿಗೆಯರು, ಗುರುಬಸವೇಶನು, ಬೋಳೇಶ, ಮೊಗ್ಗೆಯ ಮಾಯಿದೇವ ಮೊದಲಾದ ವೀರಶೈವ ಮಹಾಗ್ರಂಥಕಾರರು ಲಕ್ಕಣ್ಣನ ಸಮಕಾಲೀನರಾಗಿದ್ದರು ಆದುದರಿಂದ ಇವರೆಲ್ಲರಿಗೂ ಸಮ್ಮತವಾದ ಮಿತಿಯನ್ನೇ ಲಕ್ಕಣ್ಣದಂಡೇಶನು ತನ್ನ ಗ್ರಂಥದಲ್ಲಿ ಬರೆದಿರಲಿಕ್ಕೆ ಬೇಕು. (೩) ಇದಲ್ಲದೆ ಈತನು ಬರೆದ ವರ್ಷಕ್ಕೂ ಜೈನರು ಬರೆದ ವರ್ಷಕ್ಕೂ ಬಹಳ ಮೇಳಗೂಡುತ್ತದೆ. ಇದು ಹೆಚ್ಚಿಗೆ ಲಕ್ಷ್ಯಗೊಡತಕ್ಕ ಸಂಗತಿಯಾಗಿದೆ ಹೇಗೆಂದರೆ:— (ಅ) ಬಿಜ್ಜಳಚರಿತೆ:—ಇದರಲ್ಲಿ ಬಸವೇಶ್ವರನು ಬಿಜ್ಜಳನಿಗೆ ವಿಷಹಾಕಿಸಿದುದರಿಂದ, ಅವನು ವಿಜಯ ಸಂವತ್ಸರದಲ್ಲಿ ತೀರಿದನೆಂತಲೂ, ತರುವಾಯ ಅಳಿಯ ಬಿಜ್ಜಳನಿಗೂ ಬಸವೇಶ್ವರನಿಗೂ ಕಾಳಗಗಳಾಗಿ ಬಸವೇಶ್ವರನು ಕಡೆಗೆ ಉಳುವೆಗೆ ಹೋಗಿ ಬಾವಿಯಲ್ಲಿ ಹಾರಿಕೊಂಡು ಸತ್ತನೆಂತಲೂ ಬರೆದಿದೆ. ಈ ವಿಜಯ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೭೪ ರಲ್ಲಿ ಬೀಳುವುದು. ಆದುದರಿಂದ ಲಕ್ಕಣ್ಣದಂಡೇಶನ ೧೧೭೫ಕ್ಕೂ ಇದಕ್ಕೂ ಬಹಳ ಅಂತರವಿಲ್ಲ. (ಬ) ಬಿಜ್ಜಳರಾಯ ಪುರಾಣ:—ಇದು ಇನ್ನೊಂದು ಜೈನಗ್ರಂಥವಿದೆ. ಇದರಲ್ಲಿ ಬಿಜ್ಜಳನು ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡು ತನ್ನ ೩ ವರ್ಷದ ಮಗನಿಗೆ ಪಟ್ಟಗಟ್ಟಿ, ಬಸವೇಶ್ವರನಿಗೆ ರಾಜ್ಯಭಾರವೊಪ್ಪಿಸಿ ತಾನು ಅರಣ್ಯಕ್ಕೆ ಹೋದನೆಂತಲೂ, ತರುವಾಯ ಬಸವೇಶ್ವರನು ಆ ಬಿಜ್ಜಳನ ಮಗನಿಗೆ ಲಿಂಗಧಾರ

ಡಿ, ಶಿವಬಿಜ್ಜಳನೆಂದು ಹೆಸರಿಟ್ಟನೆಂತಲೂ, ಆ ಮೇಲೆ ೨ ವರ್ಷ ಬಸವೇಶ್ವರನು ರಾಜ್ಯಭಾರಮಾಡಿ ಆ ಕಾಲಕ್ಕೆ ರಶೈವ ಮತವನ್ನು ಬಹಳ ಹಬ್ಬಿಸಿದನೆಂತಲೂ, ಕಡೆಗೆ ವಬಿಜ್ಜಳನಿಗೂ ಬಸವೇಶ್ವರನಿಗೂ ಜಗಳ ಹುಟ್ಟಿ, ಶಿವಬಿಜ್ಜಳನು ಬಸವೇಶ್ವರನನ್ನು ಕೊಲೆಮಾಡಿದನೆಂತಲೂ ಉಲ್ಲೇಖದೆ. ಇದರಲ್ಲಿಯು ಕೆಲವು ಸಂಗತಿಗಳಿಗೂ ಶಿಲಾಲೇಖನಗಳಿಗೂ ಬಹಳ ಮೇಳಗೂಡುತ್ತದೆ. ಇದರಲ್ಲಿಯ ಕೆಲವು ಸಂಗತಿಗಳು ಐತಿಹಾಸಿಕ ದೃಷ್ಟಿಯಿಂದ ವಿಚಾರಮಾಡತಕ್ಕಂವಿರುತ್ತವೆ. ಆದರೆ ಅವುಗಳನ್ನು ಈ ಲೇಖನದಲ್ಲಿ ಮಾಡುವದು ಅಪ್ರಸ್ತುತವು. ಆದರೆ ಬಿಜ್ಜಳನು ರಾಜ್ಯಬಿಟ್ಟಮೇಲೆ ೨ ವರ್ಷಗಳಮೇಲೆ ಬಸವನು ತೀರಿಕೊಂಡನೆಂದು ಗ್ರಹಿಸಿದರೂ ಕೂಡ ಶಿಲಾಲೇಖಗಳಿಗೂ, ಲಕ್ಕಣ್ಣ ದಂಡೇಶನ ವರ್ಷಕ್ಕೂ ಈ ಸಂಗತಿಯು ಕೂಡುತ್ತದೆ ಹೇಗೆಂದರೆ— ಮೇಲಿನ ಶಿಲಾಲೇಖಗಳ ಮೇರೆಗೆ ೧೧೬೭ ರಲ್ಲಿ ಬಿಜ್ಜಳನು ರಾಜ್ಯಬಿಟ್ಟನೆಂದು ತಿಳಿಯುತ್ತದೆ. ಇದರಲ್ಲಿ ೨ ವರ್ಷ ಕೂಡಿಸಿದರೆ ೧೧೬೯ ಬಸವನ ಮರಣಕಾಲವಾಗುವುದು. ಇದಕ್ಕೂ ಲಕ್ಕಣ್ಣನ ೧೧೭೫ ಕ್ಕೂ ಸ್ವಲ್ಪ ಅಂತರಬೀಳುವದು. ಆದಾಗ್ಯೂ ೧೧೬೭ ಇದು ಶಿಲಾಲೇಖದ ಮಿತಿಯಾಗಿದ್ದರೂ ಬಿಜ್ಜಳನು ರಾಜ್ಯಬಿಟ್ಟ ನಿಜವಾದ ವರ್ಷವಲ್ಲ. ಬಿಜ್ಜಳನು ಅದರ ಪೂರ್ವದಲ್ಲಿಯೇ ರಾಜ್ಯಬಿಟ್ಟಿರಲಿಕ್ಕೆ ಬೇಕು. ಆದುದರಿಂದ ಈ ಮೇರೆಗೆ ಸ್ವಲ್ಪ ವರ್ಷಗಳ ಅಂತರವಾಗಿರಬಹುದು. ಒಟ್ಟಿಗೆ ೧೧೩೯ ಬಸವನ ಜನನ, ೧೧೭೫ ಬಸವನ ಐಕ್ಯ ಎಂದು ಭಾವಿಸಿದರೆ, ಶಿಲಾಲೇಖಗಳಿಗೂ ಜೈನರ ಗ್ರಂಥಗಳಿಗೂ ಬಹಳ ಕೂಡುವುದು.

ಇವೆಲ್ಲ ಕಾರಣಗಳಿಂದ ಬಸವೇಶ್ವರನ ಜನನವು ೧೧೩೯ ಸಿದ್ಧಾರ್ಥಿ ಸಂವತ್ಸರ ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರವೆಂದು ತಿಳಿಯುವುದು ವಿಹಿತವು. ಶಿವತತ್ವಚಿಂತಾಮಣಿಯಲ್ಲಿ ಈ ಬಗ್ಗೆ ಇದ್ದ ಪದ್ಯವು ಏನೆಂದರೆ:—" ಸದಮಲಶಿವಾರ್ಚಕರು ಬೇಡಿದಪ್ಪಾರ್ಥಸಂ | ಪದವ ನೋಳಿದೀವ ಮಳ ಸಿದ್ಧಾರ್ಥಿಸಂವತ್ಸ | ರದೊಳು ಕಾರ್ತಿಕಶುದ್ಧ ಪೂರ್ಣಿಮೆಯಸೋಮವಾರದ ಮಧ್ಯರಾತ್ರಿಯಲ್ಲಿ || ಒದಗಿರ್ದ ಶಿವಯೋಗವೃಷಮುಹೂರ್ತದ ಸುಲ | ಗ್ನದೊಳು ಮಾದಾಂಬಿಕೆಯ ಗರ್ಭರತ್ನಾಕರದೊ | ಳುದಯವಾದಂ ವೃಷಭನೆಂಬಿರದ ಪಶುಪತಿಯ ಚರಣಾಂಬುಜಕ್ಕೆ ಶರಣು || (೧೧-೪೬ ಸಂಧಿ) ಯಾರಿಗಾದರೂ ಬಸವೇಶ್ವರನ ಜನನದ ಅಥವಾ ಐಕ್ಯದ ಮಿತಿಗಳು ಬೇರೆ ಗ್ರಂಥಗಳಲ್ಲಿ ಸಿಕ್ಕಿದ್ದರೆ, ಅವುಗಳನ್ನು ಪ್ರಸಿದ್ಧಿಸಬೇಕು. ಆದರೆ ಹೆಚ್ಚು ವಿಶ್ವಾಸನೀಯವಾದ ಮಿತಿಗಳು ಸಿಗುವವರೆಗೆ, ಲಕ್ಕಣ್ಣದಂಡೇಶನ ಮಿತಿಯೇ ನಿಜವೆಂದು ತಿಳಿಯುವುದು ಯುಕ್ತವೆಂದು ನನಗೆ ತೋರುತ್ತದೆ. ಮತ್ತೂ ಬಸವಜಯಂತಿಯನ್ನು ಮಾಡುವವರಾದರೂ ಕಾರ್ತಿಕಶುದ್ಧ ಪೂರ್ಣಿಮೆಗೆ ಮಾಡುವುದು ಯೋಗ್ಯವು. ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ.

ಮಧುಕರ.

10

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೨-೦-೦ ೪-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೧೨ ಆಣೆ; ದಶಾಂಗ ಪೊಟ್ನ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಶಿವಪೂಜಾವಿಧಿ	೦-೧೦-೦
ಶರವಾದಿಗಜಾಂಕುಶತಾರಾವಳಿ	೦-೮-೦
ಹಾರುಕೀಲಿ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ವಿವೇಕಮಂಜರಿ.

13

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೬ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ, ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೫೦ ಪುಟಗಳು.

ಅಂಚೆಯವೆಚ್ಚವು ಬೇರೆ.

ವಿಳಾಸ:— " ಮೈಸೂರ್ ಸ್ಟಾರ್ ಆಫೀಸ್ " ಮೈಸೂರ್

ಮಧುರವಾಣಿ.

5

ವಾರ್ಷಿಕಚಂದಾ ೧—೮—೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾರ್ ಮತ್ತು ಕಂಪೆನಿ
ಮೈಸೂರು.

37

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

47

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೊ ಎಂಬ ಬಟ್ಟೆಯಿಂದ ಯಂತ್ರಗಳಿಂ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡೀ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರಿಗೂ ನೀಲಿರೂಲುಗೆರೆಗಳೂ ಹಾಕಿದೆ (೫) ವಿಷಯ—ಟಪಾಲು, ರೈಲು, ಕೋರ್ಟು ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಿಕೊಳ್ಳುವದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಿಕೊಳ್ಳುವದ್ದು ೮ ಆಣೆ. ಜೆನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜೆನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಿಕೊಳ್ಳುವದ್ದು ೬ ಆಣೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

44

ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಚಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬೊಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ಉತ್ತಮವಾದ ನಶ್ಯದಪುಡಿ.

3

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬಗುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ಟಪಾಲ್ ಖರ್ಚು ಸೇರಿ ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ, ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮಿದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ಟಪಾಲ್ ಖರ್ಚಿಲ್ಲದೆ ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜನ ಡಬ್ಬಿಗಳಿಗೆ ೧—೧೪—೦.

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತದೆ ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ, ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ ಡಬ್ಬಿಗಳಿಗೆ ೧-೧೪-೦. ಗಳು.

ವಿಳಾಸ:—ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಊರು ಹನೂರು ಪೋಸ್ಟು,
ಕೊಳ್ಳೇಗಾಲ ತಾಲೂಕು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯ ದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸಿದ್ಧಪ್ಪಣ್ಣಾ, ಉಮ್ಮರಜಿ, ಶ್ರೀಮಂತ ಚೆನ್ನಬಸಪ್ಪಣ್ಣ ಮುದಕಿ, ಶಾಲೆಯ ಅಂತರ್ವ್ಯವಸ್ಥಾಪಕರಾದ ಬ್ರಹ್ಮಶ್ರೀ ಹುಕ್ಕೇರಿ ವಿರಕ್ತಮಠದ ಶಿವಲಿಂಗದೇವರು—ಇವರೆಲ್ಲರನ್ನೂ ಶ್ರೀಮಂತ ರಾವಬಹಾದೂರ ಅಪ್ಪಾಸಾಹೇಬವಾರದ ಇವರ ಸ್ಮಾರಕಾರ್ಥವಾಗಿ ಈ ಶಾಲೆಯನ್ನು ಇದುವರೆಗೂ ನಡೆಯಿಸಿಕೊಂಡು ಹೋಗಬೇಕೆಂಬುವ ವಿಷಯದಲ್ಲಿ ಪ್ರೋತ್ಸಾಹಿಸಿದರು. ಇದೇ ತಿಂಗಳ ತಾ॥ ೧೬ ನೇ ಮಂಗಳವಾರದ ದಿವಸ ಇಲ್ಲಿಯ ಶ್ರೀಮನ್ನಿರಂಜನ ಕಿರೀಟ ಮಠದ ಚರಮೂರ್ತಿಗಳಾದ ನಿಜಗುಣಸ್ವಾಮಿಗಳು ಶ್ರೀಮಜ್ಜಗದ್ಗುರುಗಳನ್ನು ಅಡ್ಡಪಾಲಕಿ ಉತ್ಸವದೊಡನೆ ತಮ್ಮ ಹೊರಗಿನ ಮಠದಿಂದ ಊರಲ್ಲಿರುವ ತಮ್ಮ ಗದ್ದಿಗೆಯ ಮಠಕ್ಕೆ ಬಿನ್ನಹ ಮಾಡಿ ಕರಕೊಂಡು ಬಂದರು. ಪೂರ್ವದಿವಸ ಅಡ್ಡಪಾಲಕಿಯ ಉತ್ಸವವು ಹೊರಡಬೇಕಾದರೆ ಎಲ್ಲಾ ಬೀದಿಗಳಿಗೆ ಮ್ಯುನಿಸಿಪಾಲಿಟಿಯ ಕಮಿಟಿಯವರಿಂದ ನೀರು ಹೊಡಿಸಬೇಕೆಂಬ ಆಲೋಚನೆಯನ್ನು ಮಾಡುತ್ತಿರುವಲ್ಲಿಯೇ (ಯಥಾ ಭಾವಸ್ತಥಾಗುರುಃ) ಎಂಬ ಸೂಕ್ತಿಯಂತೆ ಗುರುಭಕ್ತಿಯ ಪ್ರಭಾವವೇ ಮಳೆಯನ್ನು ಕರೆಯಿತೋ ಎಂಬುವಂತೆ ಸ್ವಲ್ಪ ಮಳೆಯಾಗಿ ಬೀದಿಗಳು ಚಳೆಗೊಟ್ಟಂತೆ ಆದವು. ಮಂಗಳವಾರ ಮುಂಜಾನೆ ೮ ಗಂಟೆಗೆ ಸರಿಯಾಗಿ ಮಹಾಸ್ವಾರಿಯು ಪಂಚಕಲಶ ಶ್ವೇತಚ್ಛತ್ರ ವಿಶಿಷ್ಟವಾದ ತಿರ್ಯಗಾಂದೋಲನವನ್ನು ಅಲಂಕರಿಸಿ ಹೊರಗಿನ ಮಠದಿಂದ ಹೊರಟಿತು. ಹಗಲು ದೀವಟಿಗೆ ಮಕರತೋರಣ ಮೋರ್ಚಾಲು ಸೂರ್ಯಚಂದ್ರ ವಾದ್ಯಗಳೇ ಮೊದಲಾದ ಎಲ್ಲ ಬಿರುದುಗಳೂ ನಿಬಿಡೀಕೃತವಾದ ಮಹಾಜನ ಸಂದಣಿಯಲ್ಲಿ ಸಮುದ್ರದಲ್ಲಿನ ತೆರೆಗಳಂತೆ ತೋರುತ್ತಿದ್ದವು. ಚರಮೂರ್ತಿಗಳು ಪಟ್ಟಾಧಿಕಾರಿಗಳು ಪಂಡಿತರು ಪಾಲಕಿಯ ಮುಂಭಾಗದಲ್ಲಿ ಹೋಗುತ್ತಿದ್ದರು. ಎಡಬಲಭಾಗಗಳಲ್ಲಿ ಸಾಲಾಗಿ ನಿಂತು ಉಚ್ಚಸ್ವರದಿಂದ ವೇದಘೋಷವನ್ನು ಮಾಡುವ ವೈದಿಕರು ಇವರ ಮುಂದೆ ಸಾಲುಸಾಲಾಗಿ ಶೋಭಿಸುವ ಶ್ರೀಮಂತರಾದ ಪುರಪ್ರಮುಖರೇ ಮೊದಲಾದ ನಗರವಾಸಿಗಳು ಬೇರೆಬೇರೆ ವೇಷಗಳುಳ್ಳ ಸಂಗೀತಭಜನೆಯ ವಿದ್ಯಾರ್ಥಿಗಳು ನಡೆದಿದ್ದರು. ಕುದುರೆ ಒಂಟೆಗಳ ಮೇಲಿನ ವಾದ್ಯಗಳು ರಥದ ಮೇಲಿನ ವಾದ್ಯಗಳು ಕಾಲಾಳುಗಳ ವಾದ್ಯಗಳು ಸಹ ಗಗನವನ್ನು ಇಬ್ಬಗೆಯಾಗಿ ಮಾಡುವಂತೆ ಭೋರ್ಗರೆಯುತ್ತಿದ್ದವು. ಚೆನ್ನಾಗಿ ಅಲಂಕರಿಸಿದ ಕೊತ್ತಲದ ಕುದುರೆಗಳಿಂದಲೂ ಮಹಾಸನ್ನಿಧಿಯ ಅಲಂಕೃತಗಳಾದ ಆನೆಗಳೆರಡು ಮಾಡುತ್ತಿದ್ದ ಅಂಗಸಾಧನ ಚಾತುರ್ಯದಿಂದಲೂ ಉತ್ಸವಕ್ಕೆ ಹೆಚ್ಚಾದ ಶೋಭೆಯು ಬಂದಿತ್ತು. ಇದಲ್ಲದೆ ಮಜಲುಗಳಿಂದಲೂ ಬಂದಿದ್ದ ಅನೇಕ ತಮ್ಮಟಿ ಕಹಳೆಗಳಿಂದಲೂ ಓಲಗದವರಿಂದಲೂ ಮುಂದೆ ಸಾಲುಸಾಲಾಗಿ ಶೋಭಿಸುವ ನಾನಾಬಣ್ಣದ ನಿಶಾನೆಗಳಿಂದಲೂ ಸಾವಿರಾರು ಸಂಖ್ಯೆಯುಳ್ಳ ಪ್ರೇಕ್ಷಕರಿಂದಲೂ ಉತ್ಸವವು ಹೊರಗಿನ ಪೇಟೆಯಿಂದ ಹೊಸಬಜಾರದಲ್ಲಿ ಸುಳಿದು ಶ್ರೀಮಂತ ರಾವಬಹಾದ್ದೂರ ವಾರದವರ ಮನೆ ಪಸಾರೆ ಉಮ್ಮರಜಿ ಇವರ ಮನೆಗಳ ಮುಂದಿನಿಂದ ಫೌಜದಾರ ಚಾವಡಿಗೆ ಬಂದು ಅಲ್ಲಿಂದ ಕಿರಾಣಿ ಗಲ್ಲಿಯಲ್ಲಿ ಸುಳಿದು ಚಾಟಿಗಲ್ಲಿಯಿಂದ ಕಿರೀಟಮಠಕ್ಕೆ ದಯಮಾಡಿಸಿತು. ಸ್ವಾರಿಯು ಮೊದಲೇ ಸಿದ್ಧಗೊಳಿಸಿಟ್ಟ ರಮ್ಯಗೃಹದಲ್ಲಿ ಮೂರ್ತಿಗೊಳಿಸಿದ ಕೂಡಲೆ ಜಯಘೋಷವು ನಡೆಯಿತು. ಆ ದಿವಸ ಸಾವಿರಾರು ಮಾಹೇಶ್ವರರಿಗೂ ಭಕ್ತರಿಗೂ ಮೃಷ್ಟಾನ್ನ ಸಂತರ್ಪಣೆಯು ನಡೆಯಿತು. ಶಿವಾರ್ಚನೋತ್ತರದಲ್ಲಿ ಮಹಾಸ್ವಾಮಿಗಳ ಪಾದಗಾಣಿಕೆಯಾಗಿ ನಿಜಗುಣಸ್ವಾಮಿಗಳು ೧೧೧ ರೂ.ಗಳನ್ನು ಸಮರ್ಪಿಸಿದರು. ಈ ಉತ್ಸವಕ್ಕೆ ಆದವಾನಿಯ ಎಲಿ ಮಲ್ಲಪ್ಪನವರ ಪುತ್ರರಾದ ಎಲಿ ಮಲ್ಲೇಶಪ್ಪನವರು ಅಪ್ಪಣೆಯ ಮೇರೆಗೆ ಬಂದಿದ್ದರು. ಶ್ರೀ ಜಗದ್ಗುರುಗಳು ಇಲ್ಲಿಂದ ಮೂರು ನಾಲ್ಕು ದಿವಸಗಳಲ್ಲಿ ಬಾರಸಿಗೆ ಚಿತ್ತೈಸುತ್ತದಾಗಿ ತಿಳಿದು ಬರುತ್ತದೆ.

ಓರ್ವಪ್ರೇಕ್ಷಕ.

ಬಸವೇಶ್ವರನ ಜನ್ಮಕಾಲ.

ತಮ್ಮ ಪತ್ರಿಕೆಯ ಏಪ್ರಿಲ್ ೫ ನೇ ತಾರೀಖಿನ ಸಂಚಿಕೆಯಲ್ಲಿ ದಾವಣಗೆರೆಯ 'ವೀರಶೈವ ಹಿತೋಪದೇಶ ಸಂಘದ ಸೆಕ್ರೆಟರಿಗಳು ಬಸವೇಶ್ವರನ ಜನನ ಮಾಸವು ವೈಶಾಖವೆಂತಲೂ, ನಕ್ಷತ್ರ ರೋಹಿಣಿಯೆಂತಲೂ ಕಾಣಿಸಿ, ಅವನ ಜನನ ಕುಂಡಲಿಯನ್ನು ಸಹ ಕೊಟ್ಟಿರುತ್ತಾರೆ. ಈ ಮಾಹಿತಿಯು ಯಾವ ಗ್ರಂಥದಲ್ಲಿ ಕೊಟ್ಟಿರುತ್ತದೆಂಬುವದನ್ನು ಬರೆದು ತಿಳಿಸಿದ್ದರೆ ಉಚಿತವಾಗುತ್ತಿತ್ತು; ಇರಲಿ. ಆದರೆ ಈ ಮೇರೆಗೆ ಬಸವೇಶ್ವರನ ಜನನಕಾಲವನ್ನು ಕುರಿತು ಇತ್ತಿತ್ತ ಚರ್ಚೆ ನಡೆಯ ಹತ್ತಿರುತ್ತದೆಂದು ತಿಳಿದು ಸಂತೋಷವಾಗುತ್ತದೆ. ಈ ಕಾಲವನ್ನು ನಿಶ್ಚೈಸಬೇಕಾದರೆ ವೀರಶೈವ ಗ್ರಂಥಕಾರರು ಯಾವಯಾವ ಮಿತಿಗಳನ್ನು ತಮ್ಮ ಗ್ರಂಥಗಳಲ್ಲಿ ಕೊಟ್ಟಿರುವರೆಂಬದನ್ನು ಮೊದಲು ತಿಳಿದು ಅವುಗಳನ್ನು ಪರಸ್ಪರ ತುಲನೆಮಾಡತಕ್ಕದ್ದು. ಆಮೇಲೆ ವೀರಶೈವವಲ್ಲದ ಗ್ರಂಥಕಾರರು ಕೊಟ್ಟ ಮಿತಿಗಳೊಡನೆ ಅವುಗಳನ್ನು ಸರಿಹಚ್ಚಿ, ಇವೆಲ್ಲವುಗಳನ್ನು ಶಿಲಾಲೇಖಗಳಲ್ಲಿ ದೊರೆಯುವ ಮಿತಿಗಳ ಸಹಾಯದಿಂದ ಯಾವವು ನಿಜವಾದವುಗಳೆಂಬುದನ್ನು ಕಂಡು ಹಿಡಿಯಬೇಕು. ಈ ಪ್ರಕಾರ ಶೋಧಿಸಿದ ವಿನಾ ಯಾರ ಮಿತಿಯನ್ನೂ ನಂಬುವದು ಯೋಗ್ಯವಲ್ಲ. ಯಾಕೆಂದರೆ ನಮ್ಮ ಗ್ರಂಥಕಾರರಲ್ಲಿಯೇ ಈ ಬಗ್ಗೆ ಏಕಮತವಿಲ್ಲ. ಬೇರೆಬೇರೆ ಗ್ರಂಥಕಾರರು ಬೇರೆಬೇರೆ ಮಿತಿಗಳನ್ನು ಕೊಟ್ಟಿದ್ದಾರೆ. ಅವುಗಳು ಹೇಗೆಂದರೆ:—

ಕಾಲಜ್ಞಾನದ ವಚನದಲ್ಲಿ.

೧. ಬಸವೇಶ್ವರನ ಜನನ:—ವಿಕ್ರಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ. ಬಸವೇಶ್ವರನ ಐಕ್ಯ— ರಾಕ್ಷಸ ಸಂವತ್ಸರ ಶ್ರಾವಣ ಶುದ್ಧ ೧ ಮಂಗಳವಾರ ಉದಯವಾದ ೨೪ ಗಳಿಗೆ. ಕಾಲಜ್ಞಾನ:— ಬಸವೇಶ್ವರನ ಐಕ್ಯ—ರಾಕ್ಷಸ ಸಂವತ್ಸರದ ಆಷಾಢ ಶುದ್ಧ ಪಾಡ್ಯಮಿ ಸೋಮವಾರ ರಾತ್ರಿ. ಕುರುಹಿನಶೆಟ್ಟಿ:—ಬಸವೇಶ್ವರನ ಐಕ್ಯ— ರಾಕ್ಷಸ ಸಂವತ್ಸರ ಫಾಲ್ಗುಣ ಶುದ್ಧ ೧೧ ಸೋಮವಾರ ಒಂದುಜಾವ ರಾತ್ರಿ. ಚೆನ್ನಬಸವ ಪುರಾಣ:—ಬಸವೇಶ್ವರನ ಐಕ್ಯ— ಶಕೆ ೭೦೭ ರಕ್ತಾಕ್ಷಿ ಸಂ॥ ಫಾಲ್ಗುಣ ಶುದ್ಧ ೧೧ ಮಂಗಳವಾರ ಉದಯವಾದ ೨೪ ಗಳಿಗೆ. ಲಕ್ಕಣ್ಣದಂಡೇಶ (ಶಿವತತ್ವ ಚಿಂತಾಮಣಿಯು):— ಬಸವೇಶ್ವರನ ಜನನ— ಸಿದ್ಧಾರ್ಥಿ ಸಂ॥ ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರ. ಬಿಜ್ಜಳಚರಿತೆ (ಜೈನಗ್ರಂಥ):— ಬಿಜ್ಜಳನ ಮರಣ—ಕಲಿಯುಗ ೪೦೦೦ ವಿಜಯ ಸಂ॥ ಕಾರ್ತಿಕ ಶುದ್ಧ ೧೦ ಆದಿತ್ಯವಾರ. ಈ ಮೇರೆಗೆ ಒಂದು ಗ್ರಂಥದಲ್ಲಿಯ ಮಿತಿಯು ಮತ್ತೊಂದಕ್ಕೆ ಕೂಡುವುದಿಲ್ಲ. ಆದರೂ ಕೂಡ ಇವುಗಳಲ್ಲಿ ಯಾವ ವರ್ಷವು ಹೆಚ್ಚಿಗೆ ನಿಜವಿರುತ್ತದೆಂಬುವದನ್ನು ಕಂಡು ಹಿಡಿಯತಕ್ಕದ್ದಾಗಿದೆ. ಇದನ್ನು ಶಿಲಾಲೇಖಗಳಲ್ಲಿ ಸಿಗುವ ಮಿತಿಗಳಿಂದಲೇ ನಿರ್ಣಯಿಸತಕ್ಕದ್ದು.

ಶಿಲಾಲೇಖಗಳಿಂದ ತಿಳಿಯಬರುವುದೇನಂದರೆ:—ಬಿಜ್ಜಳನು ಕಲಚೂರ್ಯ ವಂಶದವನು. ಅವನು ಮೊದಲು ಚಾಲುಕ್ಯರ ಮಾಂಡಲಿಕನಾಗಿದ್ದನು. ಆಗ ಚಾಲುಕ್ಯರ ಅರಸು ಬಹಳ ದುರ್ಬಲನಿದ್ದುದರಿಂದ ಬಿಜ್ಜಳನು ಹೆಚ್ಚುಹೆಚ್ಚು ಪ್ರಬಲನಾಗುತ್ತ, ೧೧೫೬ ರ ಸುಮಾರಕ್ಕೆ ಸ್ವತಂತ್ರನಾದನು. ೧೧೬೨ ರಲ್ಲಿ ಅವನು ಚಾಲುಕ್ಯರ ಕಡೆಯ ಅರಸನನ್ನು ತಳ್ಳಿ, ಸಾರ್ವಭೌಮ ಪದವಿಯನ್ನು ಸ್ವೀಕರಿಸಿದನು. ಆ ಮೇಲೆ ೧೧೬೭ ರ ಸುಮಾರಕ್ಕೆ ಅವನು ರಾಜ್ಯವನ್ನು ಪರಿತ್ಯಜಿಸಿ, ತನ್ನ ತರುವಾಯ ಸೋಮೇದೇವನನ್ನು ಕಲ್ಯಾಣದ ಪಟ್ಟಕ್ಕೆ ಕುಳ್ಳಿರಿಸಿದನು. ಬಿಜ್ಜಳನ ಅನೇಕ ಶಿಲಾಲೇಖಗಳು ಕಲುಬುರ್ಗಿ, ಧಾರವಾಡ, ಶಿವಮೊಗ್ಗೆ ಮೊದಲಾದ ಜಿಲ್ಲೆಗಳಲ್ಲಿ ಸಿಗುತ್ತವೆ. ಅವನ ಶಿಲಾಲೇಖಗಳೆಲ್ಲ ೧೧೫೦ ಮತ್ತು ೧೧೭೦ ರ ನಡುವಿನವು ಮಾತ್ರ ಸಿಗುತ್ತವೆ. ಇವುಗಳ ಹಿಂದಿನ ಅಥವಾ ಮುಂದಿನ ಯಾವ ಶಿಲಾಲೇಖಗಳೂ ಸಿಕ್ಕಿಲ್ಲ. (ಫ್ಲೀಟನ ಗ್ರಂಥವನ್ನು ನೋಡಬೇಕು).

ಆದರೆ ಬಿಜ್ಜಳನೂ ಬಸವನೂ ಸಮಕಾಲೀನರೆಂಬುದು ನಿರ್ವಿವಾದವು. ಆದುದರಿಂದ ಬಸವೇಶ್ವರನು ಕ್ರಿ. ಶ. ೧೧೫೦ ಮತ್ತೂ ೧೧೭೦ ರ ನಡುವೆ ಇದ್ದನೆಂಬುದು ಸ್ಪಷ್ಟವು. ಆ ಕಾರಣ ಚೆನ್ನಬಸವಪುರಾಣದಲ್ಲಿಯ ಶಕೆ ೭೦೭ ಮತ್ತೂ ಬಿಜ್ಜಳಚರಿತೆಯಲ್ಲಿಯ ಕಲಿವರ್ಷ ೪೦೦೦ ಇವೆರಡೂ ತಪ್ಪು ಇರುತ್ತವೆ. ಶಿಲಾಲೇಖಗಳ ಮೇಲಿಂದ ತಿಳಿದು ಬರುವುದೇನಂದರೆ:—ಬಸವೇಶ್ವರನು ೧೨ ನೇ ಶತಮಾನದಲ್ಲಿ ಇದ್ದನು ಮತ್ತೂ ಈ ಶತಮಾನದಲ್ಲಿಯ ಒಂದು ವರ್ಷದಲ್ಲಿ ಅವನು ಹುಟ್ಟಿರಲಿಕ್ಕೆ ಬೇಕು. ಮತ್ತೂ ಒಂದುವರ್ಷ ಅಳಿದಿರಲಿಕ್ಕೆ ಬೇಕು. ಈ ವರ್ಷಗಳು ಯಾವುವೆಂಬದನ್ನು ಈಗ ನಾವು ನಿಶ್ಚೈಸತಕ್ಕದ್ದಾಗಿದೆ. ಇವುಗಳನ್ನು ಶೋಧಿಸಬೇಕಾದರೆ, ನಾವು ಮೇಲೆ ಕಾಣಿಸಿದ ಬೇರೆಬೇರೆ ಗ್ರಂಥಕಾರರ ಮಿತಿಗಳನ್ನು ತೆಗೆದುಕೊಂಡು ಬಿಜ್ಜಳನ ಶಿಲಾಲೇಖಗಳ ಮಿತಿಗಳಿಗೆ ಸರಿನೋಡತಕ್ಕದ್ದು. ಅಂದರೆ ಈ ಶಿಲಾಲೇಖಗಳ ಮಿತಿಗಳಿಗೆ ಕೂಡುವಂಥವುಗಳನ್ನು ನಿಜವೆಂತಲೂ ಕೂಡದೆ ಇದ್ದವುಗಳನ್ನು ಸುಳ್ಳೆಂತಲೂ ತಿಳಿಯತಕ್ಕದ್ದು. ಆದರೆ ಈ ಪ್ರಕಾರ ಸರಿನೋಡುವ ಕಾಲಕ್ಕೆ ವಾಚಕರು ಕೆಳಗಿನ ಸಂಗತಿಗಳಿಗೆ ಲಕ್ಷ್ಯಕೊಡತಕ್ಕದ್ದು.

೧. ಬಸವೇಶ್ವರನು ತೀರಿಕೊಂಡಾಗ ೩೬ ವರ್ಷದವನಿದ್ದನು ಚೆನ್ನಬಸವೇಶನು ೨೪ ವರ್ಷದವನಿದ್ದನು. ೨. ಬಸವೇಶ್ವರನು ಐಕ್ಯವಾದ ೩೬ ತಿಂಗಳುಗಳ ಮೇಲೆ ಬಿಜ್ಜಳನು ಘಾತಿಸಲ್ಪಟ್ಟನು. ಈ ಎರಡು ಸಂಗತಿಗಳನ್ನು ಎಲ್ಲ ವೀರಶೈವ ಗ್ರಂಥಕಾರರೂ ಒಪ್ಪಿಕೊಂಡಿರುತ್ತಾರೆ. ಕಾಲಜ್ಞಾನದ ಎರಡು ಗ್ರಂಥಗಳು ಕುರುಹಿನಶೆಟ್ಟಿ ಇವುಗಳು ಬಸವನ ಐಕ್ಯವು ರಾಕ್ಷಸವೆಂತಲೂ, ಜನನವು ವಿಕ್ರಮವೆಂತಲೂ ಒಪ್ಪಿಕೊಳ್ಳುತ್ತವೆ. ಆದರೆ ಚೆನ್ನಬಸವ ಪುರಾಣದಲ್ಲಿ ಐಕ್ಯವು ರಕ್ತಾಕ್ಷಿ ಸಂವತ್ಸರವೆಂದು ಬರೆದದೆ. ಅಂದರೆ ಇದರಲ್ಲಿ ೩೬ ವರ್ಷ ಕಳೆದರೆ ನಂದನವು ಬಸವೇಶ್ವರನ ಜನ್ಮಸಂವತ್ಸರವಾಗುತ್ತದೆ. ಲಕ್ಕಣ್ಣದಂಡೇಶನು ಜನನವು ಸಿದ್ಧಾರ್ಥಿ ಎಂದು ಬರೆದಿರುವನು. ಇದರಲ್ಲಿ ೩೬ ಕೂಡಿಸಿದರೆ, ಮನ್ಮಥವು ಬಸವೇಶ್ವರನ ಐಕ್ಯ ಸಂವತ್ಸರವಾಯಿತು. ಇವುಗಳಲ್ಲಿ ಯಾವ ವರ್ಷವು ಶಿಲಾಲೇಖಗಳ ವರ್ಷಗಳಿಗೆ ಕೂಡುವುವೆಂಬುದನ್ನು ವಾಚಕರು ವಿಚಾರಮಾಡಿ ನೋಡತಕ್ಕದ್ದು. ಈ ಪ್ರಕಾರ ವಿಚಾರಮಾಡಿ ನೋಡಿದರೆ, ಲಕ್ಕಣ್ಣದಂಡೇಶನು ಕೊಟ್ಟ ಮಿತಿಯು ಹೊರ್ತಾಗಿ ಉಳಿದವುಗಳು ಯಾವವೂ ಕೂಡುವುದಿಲ್ಲೆಂದು ಅವರಿಗೆ ತಿಳಿದು ಬರುವುದು. ಹೇಗೆಂದರೆ:—ವಿಕ್ರಮ ಸಂವತ್ಸರ—ಕಾಲಜ್ಞಾನಗಳಲ್ಲಿ ಕೊಟ್ಟ ಈ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೦೦–೧೧೬೦ ಈ ಇಸವಿಗಳಲ್ಲಿ ಬೀಳುತ್ತದೆ. ಈ ಗ್ರಂಥಗಳ ಪ್ರಕಾರ ಈ ಎರಡು ವರ್ಷಗಳೊಳಗೆ ಒಂದು ವರ್ಷದಲ್ಲಿ ಬಸವೇಶ್ವರನು ಹುಟ್ಟಿರಲಿಕ್ಕೆ ಬೇಕು. ಮತ್ತೂ ೧೧೩೫ ಅಥವಾ ೧೧೯೫ ರಲ್ಲಿ ಅವನು ಐಕ್ಯನಾಗಿರಲಿಕ್ಕೆ ಬೇಕು. ಇವುಗಳಲ್ಲಿ ೧೧೩೫ ರಲ್ಲಿ ಐಕ್ಯನಾದನೆಂದು ಭಾವಿಸಿದರೆ, ಅದು ಶಿಲಾಲೇಖಗಳಿಗೆ ಕೂಡುವದಿಲ್ಲ. ಏಕೆಂದರೆ ಆ ವರ್ಷದಲ್ಲಿ ಬಿಜ್ಜಳನು ಇನ್ನೂ ಕಲ್ಯಾಣದ ಅರಸನಾಗಿದ್ದಿಲ್ಲ. ಮತ್ತೂ ೧೧೯೫ ನಿಜವೆಂದು ತಿಳಿದರೆ, ಈ ವರ್ಷವು ಬಿಜ್ಜಳನು ತೀರಿದಮೇಲೆ (ಅಂದರೆ ೧೧೭೦ ರ ತರುವಾಯ) ೩೬ ತಿಂಗಳ (ಅಥವಾ ೩ ವರ್ಷಗಳ) ಮೇಲೆ ಬಹಳ ದೂರ ಹೋಗುತ್ತದೆ. ಮತ್ತೂ ೧೧೮೦–೧೧೯೦ ರಲ್ಲಿಯು ಬಿಜ್ಜಳನ ಒಂದು ಶಿಲಾಲೇಖನವಾದರೂ ಸಿಗುವುದಿಲ್ಲ. ಆದುದರಿಂದ ಕಾಲಜ್ಞಾನದ ಮತ್ತೂ ಕುರುಹಿನಶೆಟ್ಟಿಯ ಯಾವ ವರ್ಷಗಳೂ ಶಿಲಾಲೇಖಗಳ ವರ್ಷಗಳಿಗೆ ಕೂಡುವುದಿಲ್ಲ. ಆದುದರಿಂದ ಅವು ತಪ್ಪು ಇರುತ್ತವೆ. ರಕ್ತಾಕ್ಷಿ ಸಂವತ್ಸರ:—ಇದು ಚೆನ್ನಬಸವ ಪುರಾಣದಲ್ಲಿ ಬಸವನ ಐಕ್ಯ ಸಂವತ್ಸರವೆಂದು ಕಾಣಿಸಿದೆ. ಈ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೦೪ ಮತ್ತೂ ೧೧೬೪ ರ ವರ್ಷಗಳಲ್ಲಿ ಬೀಳುತ್ತದೆ. ಈ ವರ್ಷಗಳನ್ನು ಮೇಲೆ ಕಾಣಿಸಿದಂತೆ ವಿಚಾರಮಾಡಿದರೆ, ರಾಕ್ಷಸ ಸಂವತ್ಸರಕ್ಕಿಂತಲೂ ಇದು ಹೆಚ್ಚು ಅಸಂಭಾವ್ಯವಾಗಿ ತೋರುತ್ತದೆ. ಈ ಸಂವತ್ಸರವಂತೂ ತೀರ ತಪ್ಪು ಇರುತ್ತದೆಂದು ವಾಚಕರಿಗೆ ತಿಳಿದು ಬರುವುದು. ಸಿದ್ಧಾರ್ಥಿ ಸಂವತ್ಸರ:—ಇದನ್ನು ಲಕ್ಕಣ್ಣದಂಡೇಶನು ಜನ್ಮಸಂವತ್ಸರವೆಂದು ಕಾಣಿಸಿದ್ದಾನೆ. ೧೨ ನೇ ಶತಮಾನದಲ್ಲಿ ಈ ಸಂವತ್ಸರವು ೧೧೩೯ ಮತ್ತೂ ೧೧೯೯ ರಲ್ಲಿ ಬೀಳುತ್ತದೆ. ಅದಕಾರಣ ಅವನ ಮರಣ ಸಂವತ್ಸರವು ಇವುಗಳಿಗೆ ಸರಿಯಾಗಿ ೧೧೭೫ ಮತ್ತೂ ೧೨೩೫ ಆಗುತ್ತದೆ. ಇವುಗಳಲ್ಲಿ ಮೊದಲನೆಯ ೧೧೩೯ ಮತ್ತೂ ೧೧೭೫ ಈ ಎರಡು ವರ್ಷಗಳು ಶಿಲಾಲೇಖದ ವರ್ಷಗಳಿಗೆ ಹೆಚ್ಚು ಕೂಡುವುವು. ಏಕೆಂದರೆ ಈ ಎರಡು ವರ್ಷಗಳ ಮಧ್ಯದಲ್ಲಿಯೇ ಬಿಜ್ಜಳನು ರಾಜ್ಯವನ್ನಾಳಿದ್ದಿರುತ್ತದೆ. ಮತ್ತೂ ಬಿಜ್ಜಳನ ಶಿಲಾಲೇಖಗಳು ಈ ಮಿತಿಗಳ ಒಳಹೊರಗೆ ಹೋಗುವದಿಲ್ಲ. ಆದುದರಿಂದ ೧೧೩೯ ಸಿದ್ಧಾರ್ಥಿ ಸಂವತ್ಸರದ ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರವು ಬಸವನ ಜನನವೆಂದು ತಿಳಿಯುವುದು ವಿಹಿತವೆಂದು ನನಗೆ ತೋರುತ್ತದೆ. ಲಕ್ಕಣ್ಣದಂಡೇಶನನ್ನು ನಂಬಲಿಕ್ಕೆ ಇನ್ನು ಕೆಲವು ವಿಶೇಷ ಕಾರಣಗಳಿವೆ. ಅವು ಯಾವುವೆಂದರೆ:—

(೧) ಇವನು ೧೪೧೯–೧೪೪೬ ರ ವರೆಗೆ ವಿಜಯನಗರವನ್ನು ಆಳಿದ ದೇವರಾಜನ ಸೇನಾಧಿಪತಿಯಾಗಿದ್ದನು. ಆದುದರಿಂದ ಚೆನ್ನಬಸವಪುರಾಣ (ಇ-ಸ-೧೫೮೧) ಕಾಲಜ್ಞಾನಗಳು (೧೭ ನೆಯ ಶತಮಾನ) ಇವುಗಳ ಗ್ರಂಥಕಾರರಿಗಿಂತ ಈತನು ಬಹಳ ಪೂರ್ವಿಕನು. ಆದುದರಿಂದ ಇವನು ಹೇಳುವ ಸಂಗತಿಗಳು ಹೆಚ್ಚು ವಿಶ್ವಾಸನೀಯವಾದುವುಗಳು. (೨) ಇವನು ಇದ್ದ ಕಾಲಕ್ಕೆ ದೇವರಾಜನ ದರ್ಬಾರಿನಲ್ಲಿ ವೀರಶೈವ ಮಹಾಗವಿಗಳೂ, ಗ್ರಂಥಕಾರರೂ ಬಹಳಜನರಿದ್ದರು. ದೇವರಾಜನ ಮಂತ್ರಿಯಾದ ಜಕ್ಕಣಾರ್ಯನು, ಪ್ರಭುಲಿಂಗಲೀಲೆಯ ಚಾಮರಸನು, ವೀರಣ್ಣೊಡೆಯರು, ಗುರುಬಸವೇಶನು, ಬೋಳೇಶ, ಮಗ್ಗೆಯ ಮಾಯಿದೇವ ಮೊದಲಾದ ವೀರಶೈವ ಮಹಾಗ್ರಂಥಕಾರರು ಲಕ್ಕಣ್ಣನ ಸಮಕಾಲೀನರಾಗಿದ್ದರು. ಆದುದರಿಂದ ಇವರೆಲ್ಲರಿಗೂ ಸಮ್ಮತವಾದ ಮಿತಿಯನ್ನೇ ಲಕ್ಕಣ್ಣದಂಡೇಶನು ತನ್ನ ಗ್ರಂಥದಲ್ಲಿ ಬರೆದಿರಲಿಕ್ಕೆ ಬೇಕು. (೩) ಇದಲ್ಲದೆ ಈತನು ಬರೆದ ವರ್ಷಕ್ಕೂ ಜೈನರು ಬರೆದ ವರ್ಷಕ್ಕೂ ಬಹಳ ಮೇಳಗೂಡುತ್ತದೆ. ಇದು ಹೆಚ್ಚಿಗೆ ಲಕ್ಷ್ಯಗೊಡತಕ್ಕ ಸಂಗತಿಯಾಗಿದೆ. ಹೇಗೆಂದರೆ:—(ಅ) ಬಿಜ್ಜಳಚರಿತೆ:—ಇದರಲ್ಲಿ ಬಸವೇಶ್ವರನು ಬಿಜ್ಜಳನಿಗೆ ವಿಷಹಾಕಿಸಿದುದರಿಂದ, ಅವನು ವಿಜಯ ಸಂವತ್ಸರದಲ್ಲಿ ತೀರಿದನೆಂತಲೂ, ತರುವಾಯ ಅಳಿಯ ಬಿಜ್ಜಳನಿಗೂ ಬಸವೇಶ್ವರನಿಗೂ ಕಾಳಗಗಳಾಗಿ ಬಸವೇಶ್ವರನು ಕಡೆಗೆ ಉಳುವಿ ಹೋಗಿ ಬಾವಿಯಲ್ಲಿ ಹಾರಿಕೊಂಡು ಸತ್ತನೆಂತಲೂ ಬರೆದದೆ. ಈ ವಿಜಯ ಸಂವತ್ಸರವು ೧೨ ನೇ ಶತಮಾನದಲ್ಲಿ ೧೧೭೩ ರಲ್ಲಿ ಬೀಳುವುದು. ಆದುದರಿಂದ ಲಕ್ಕಣ್ಣದಂಡೇಶನ ೧೧೭೫ ಕ್ಕೂ ಇದಕ್ಕೂ ಬಹಳ ಅಂತರವಿಲ್ಲ. (ಬ) ಬಿಜ್ಜಳರಾಯ ಪುರಾಣ:—ಇದು ಇನ್ನೊಂದು ಜೈನಗ್ರಂಥವದೆ. ಇದರಲ್ಲಿ ಬಿಜ್ಜಳನು ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡು ತನ್ನ ೩ ವರ್ಷದ ಮಗನಿಗೆ ಪಟ್ಟಗಟ್ಟಿ, ಬಸವೇಶ್ವರನಿಗೆ ರಾಜ್ಯಭಾರವೊಪ್ಪಿಸಿ ತಾನು ಅರಣ್ಯಕ್ಕೆ ಹೋದನೆಂತಲೂ, ತರುವಾಯ ಬಸವೇಶ್ವರನು ಆ ಬಿಜ್ಜಳನ ಮಗನಿಗೆ ಲಿಂಗಧಾರಣೆ ಮಾಡಿ, ಶಿವಬಿಜ್ಜಳನೆಂದು ಹೆಸರಿಟ್ಟನೆಂತಲೂ, ಆ ಮೇಲೆ ೨ ವರ್ಷ ಬಸವೇಶ್ವರನು ರಾಜ್ಯಭಾರಮಾಡಿ ಆ ಕಾಲಕ್ಕೆ ವೀರಶೈವ ಮತವನ್ನು ಬಹಳ ಹಬ್ಬಿಸಿದನೆಂತಲೂ, ಕಡೆಗೆ ಶಿವಬಿಜ್ಜಳನಿಗೂ ಬಸವೇಶ್ವರನಿಗೂ ಜಗಳ ಹುಟ್ಟಿ, ಶಿವಬಿಜ್ಜಳನು ಬಸವೇಶ್ವರನನ್ನು ಕೊಲೆಮಾಡಿದನೆಂತಲೂ ಉಲ್ಲೇಖವಿದೆ. ಇದರಲ್ಲಿಯ ಕೆಲವು ಸಂಗತಿಗಳಿಗೂ ಶಿಲಾಲೇಖನಗಳಿಗೂ ಬಹಳ ಮೇಳಗೂಡುತ್ತದೆ. ಇದರಲ್ಲಿಯ ಕೆಲವು ಸಂಗತಿಗಳು ಐತಿಹಾಸಿಕ ದೃಷ್ಟಿಯಿಂದ ವಿಚಾರಮಾಡತಕ್ಕಂಥವಿರುತ್ತವೆ. ಆದರೆ ಅವುಗಳನ್ನು ಈ ಲೇಖನದಲ್ಲಿ ಮಾಡುವದು ಅಪ್ರಸ್ತುತವು. ಆದರೆ ಬಿಜ್ಜಳನು ರಾಜ್ಯಬಿಟ್ಟ ಮೇಲೆ ೩ ವರ್ಷಗಳಮೇಲೆ ಬಸವನು ತೀರಿಕೊಂಡನೆಂದು ಗ್ರಹಿಸಿದರೂ ಕೂಡ ಶಿಲಾಲೇಖಗಳಿಗೂ, ಲಕ್ಕಣ್ಣ ದಂಡೇಶನ ವರ್ಷಕ್ಕೂ ಈ ಸಂಗತಿಯು ಕೂಡುತ್ತದೆ ಹೇಗೆಂದರೆ— ಮೊದಲಿನ ಶಿಲಾಲೇಖಗಳ ಮೇರೆಗೆ ೧೧೬೭ ರಲ್ಲಿ ಬಿಜ್ಜಳನು ರಾಜ್ಯಬಿಟ್ಟನೆಂದು ತಿಳಿಯುತ್ತದೆ. ಇದರಲ್ಲಿ ೩ ವರ್ಷ ಕೂಡಿಸಿದರೆ ೧೧೭೦ ಬಸವನ ಮರಣಕಾಲವಾಗುವುದು. ಇದಕ್ಕೂ ಲಕ್ಕಣ್ಣನ ೧೧೭೫ ಕ್ಕೂ ಸ್ವಲ್ಪ ಅಂತರಬೀಳುವದು. ಆದರೆ ೧೧೬೭ ಇದು ಶಿಲಾಲೇಖದ ಮಿತಿಯಾಗಿ, ಅದು ಬಿಜ್ಜಳನು ರಾಜ್ಯಬಿಟ್ಟ ನಿಜವಾದ ವರ್ಷವಲ್ಲ. ಬಿಜ್ಜಳನು ಅದರ ಪೂರ್ವದಲ್ಲಿಯೇ ರಾಜ್ಯಬಿಟ್ಟಿರಲಿಕ್ಕೆ ಬೇಕು. ಆದರಿಂದ ಈ ಮೇರೆಗೆ ಸ್ವಲ್ಪ ವರ್ಷಗಳ ಅಂತರವಾಗಿರಬಹುದು. ಒಟ್ಟಿಗೆ ೧೧೩೯ ಬಸವನ ಜನನ, ೧೧೭೫ ಬಸವನ ಐಕ್ಯ ಎಂದು ಭಾವಿಸಿದರೆ, ಶಿಲಾಲೇಖಗಳಿಗೂ ಜೈನರ ಗ್ರಂಥಗಳಿಗೂ ಬಹಳ ಕೂಡುವುದು.

ಇವೆಲ್ಲ ಕಾರಣಗಳಿಂದ ಬಸವೇಶ್ವರನ ಜನನವು ೧೧೩೯ ಸಿದ್ಧಾರ್ಥಿ ಸಂವತ್ಸರ ಕಾರ್ತಿಕ ಶುದ್ಧ ಪೂರ್ಣಿಮಾ ಸೋಮವಾರವೆಂದು ತಿಳಿಯುವುದು ವಿಹಿತವು. ಶಿವತತ್ವಚಿಂತಾಮಣಿಯಲ್ಲಿ ಈ ಬಗ್ಗೆ ಇದ್ದ ಪದ್ಯವು ಏನೆಂದರೆ:—"ಸದಮಳಶಿವಾರ್ಚಕರು ಬೇಡಿದಪ್ಪಾರ್ಥಸಂ । ಪದವ ನೊಸೆದೀವ ಮಳ ಸಿದ್ಧಾರ್ಥಿಸಂವತ್ಸ । ರದೊಳು ಕಾರ್ತಿಕಶುದ್ಧ ಪೂರ್ಣಿಮೆಯ ಸೋಮವಾರದ ಮಧ್ಯರಾತ್ರಿಯಲ್ಲಿ ॥ ಒದಗಿರ್ದ ಶಿವಯೋಗವೃಷಮುಹೂರ್ತದ ಸುಲ । ಗ್ನದೊಳು ಮಾದಾಂಬಿಕೆಯ ಗರ್ಭರತ್ನಾಕರದೊ । ಳುದಯವಾದಂ ವೃಷಭನೆಂಬರಿದ ಪಶುಪತಿಯ ಚರಣಾಂಬುಜಕ್ಕೆ ಶರಣು ॥ (೧೧-೪೬ ಸಂಧಿ) ಯಾರಿಗಾದರೂ ಬಸವೇಶ್ವರನ ಜನನದ ಅಥವಾ ಐಕ್ಯದ ಮಿತಿಗಳು ಬೇರೆ ಗ್ರಂಥಗಳಲ್ಲಿ ಸಿಕ್ಕಿದ್ದರೆ, ಅವುಗಳನ್ನು ಪ್ರಸಿದ್ಧಿಸಬೇಕು. ಆದರೆ ಹೆಚ್ಚು ವಿಶ್ವಾಸನೀಯವಾದ ಮಿತಿಗಳು ಸಿಗುವವರೆಗೆ, ಲಕ್ಕಣ್ಣದಂಡೇಶನ ಮಿತಿಯೇ ನಿಜವೆಂದು ತಿಳಿಯುವುದು ಯುಕ್ತವೆಂದು ನನಗೆ ತೋರುತ್ತದೆ. ಮತ್ತೂ ಬಸವಜಯಂತಿಯನ್ನು ಮಾಡುವವರಾದರೂ ಕಾರ್ತಿಕಶುದ್ಧ ಪೂರ್ಣಿಮೆಗೆ ಮಾಡುವುದು ಯೋಗ್ಯವು. ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ.

ಮಧುಕರ.

10

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು೧ಕ್ಕೆ ೨-೦-೦ ; ೯-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೧೨ ಆಣೆ; ದಶಾಂಗ ಪೊಟ್ನ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಕಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ವಿವೇಕಮಂಜರಿ.

13

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯಪ್ರೌಢಿಮೆ, ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:—"ಮೈಸೂರ್ ಸ್ಟಾರ್ ಆಫೀಸ್" ಮೈಸೂರ್

ಮಧುರವಾಣಿ.

5

ವಾರ್ಷಿಕಚಂದಾ ೧—೮—೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

37

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೩ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

೧೯೧೨ ನೆ ಇಸವಿಯ ಪಾಕೆಟ್‌ಡೈರಿ.

47

(೧) ಕಾಗದ—ದಪ್ಪ, ಬಿಳಿದು, ನುಣುಪಾದ್ದು. (೨) ಬೈಂಡು—ನುಣುಪಾದ ಕ್ಯಾಲಿಕೋ ಎಂಬ ಬಟ್ಟೆಯಿಂದ ಯಂತ್ರಗಳಿಂದ ಮಾಡಿದ್ದು. (೩) ಅಕ್ಷರ—ಸ್ಫುಟವಾದ್ದು. ಯಂತ್ರಗಳಲ್ಲಿ ಮುದ್ರಣವಾದ್ದು. (೪) ರೂಲು—ಪ್ರತಿಪುಟಕ್ಕೂ ವಾರದಕೆಳಗೆ ಒಂದು ಜೋಡಿ ಕೆಂಪುರೂಲುಗೆರೆಯೂ, ಇದರ ಕೆಳಗೆ ಪುಟದ ಕೊನೆಯವರೆಗೂ ನೀಲಿರೂಲುಗೆರೆಗಳೂ ಹಾಕಿದೆ (೫) ವಿಷಯ—ಟಪಾಲು, ರೈಲು, ಕೋರ್ಟು ಪಂಚಾಂಗ, ಕಾಲ, ಹಬ್ಬ, ಅಳತೆ, ಸರ್ಕಾರಿರಜಾ ಇವೇ ಮುಂತಾದ್ದಕ್ಕೆ ಸಂಬಂಧಪಟ್ಟ ವಿಷಯಗಳು.

ಆರು ನಮೂನೆ ಡೈರಿಗಳು.

ಎ. ಚಿಕ್ಕದು ಸೀಸದಕಡ್ಡಿ ಇಡತಕ್ಕದು ೩ ಆಣೆ. ಬಿ. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೫ ಆಣೆ. ಸಿ. ದೊಡ್ಡದು ಸೀಸದಕಡ್ಡಿ ಇಡತಕ್ಕದ್ದು ೬ ಆಣೆ. ಡಿ. ದೊಡ್ಡದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೮ ಆಣೆ. ಜೆನಿವಾ ೧. ಚಿಕ್ಕದು ಸೀಸದಕಡ್ಡಿ ಇಡತಕ್ಕದ್ದು ೪ ಆಣೆ. ಜೆನಿವಾ ೨. ಚಿಕ್ಕದು ಸೀಸದಕಡ್ಡಿ ಇಟ್ಟು ಮುಚ್ಚಳವುಳ್ಳದ್ದು ೬ ಆಣೆ.

ವಿಳಾಸ—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವಹಿತ! (ಸತ್ಯಮೇವಜಯತಿ) ಸ್ವಹಿತ!

44

ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಚಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬೊಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

ಉತ್ತಮವಾದ ನಶ್ಯದಪುಡಿ.

3

ಭಾಪು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ಟಪಾಲ್ ಖರ್ಚು ಸೇರಿ ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ, ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ಟಪಾಲ್ ಖರ್ಚಿಲ್ಲದೆ ೧ ಡಬ್ಬಿಯ ಬೆಲೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧—೧೪—೦.

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತದೆ ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ, ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧-೧೪-೦. ಗಳು.

ವಿಳಾಸ:—ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಊರು ಹನೂರು ಪೋಸ್ಟು,
ಕೊಳ್ಳೇಗಾಲ ತಾಲ್ಲೂಕು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರೆಗೆ ೧—೧೦—೨.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಜೋಗಿಸಿ ಸ್ವಲ್ಪ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಸ್ವಲ್ಪ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

33

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಕಡಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ, ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೦-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪರ್ಪಟರಸ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೫ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮಟ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ವಿಜಾಪುರ (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ ಮೈಸೂರು.

88

ಗೋರೋಚನ ಮಾತ್ರೆ.— ೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತವೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦-೪-೦, ೫೦ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ ಸೇರಿನ ಡಬ್ಬಿ ೪-೦-೦. ೧೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೦ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೫೦ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಡುವವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೆಯ ಇಸವಿ ಮೇ ತಾ॥ ೬ ರಿಂದ ೧೯೧೨ನೆಯ ಮೇ ತಾ॥ ೧೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ನೆಯ ಪರೀಧಾವಿ ಸಂವತ್ಸರದ ವೈಶಾಖ ಬ॥ ಪಂಚಮಿಯಿಂದ ವೈಶಾಖ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
6	[1] ಸೋ	ಪಂ	33-43	ಪೂಷಾ	5 -17	25
7	ಮಂಗ	ಷ	38-51	ಉಷಾ	57 52	26
8	ಬುಧ	ಸ	43 56	ಶ್ರವಣ	60	27
9	[2] ಗುರು	ಅ	48-54	ಶ್ರವಣ	4-35	28
10	[3] ಶುಕ್ರ	ನ	52 49	ಧನಿ	10 38	29
11	[4] ಶನಿ	ದ	56 25	ಶತ	15-6	30
12	[5] ಭಾನು	ಏ	58-24	ಪೂಭಾ	20-11	31

(1) ಮಬ್ಬೂರು ನರಸಿಂಹಸ್ವಾಮಿ ರಥ. (2) ಗೌರಾಂಬುದೀಶ್ವರ ರಥ. (3) ದತ್ತಾತ್ರೇಯಜಯಂತಿ. (4) ದಾಮೋದರ ಯತಿರಾಜಜೀಯರ್ ತಿರುನಕ್ಷತ್ರಂ. (5) ಸ್ಮಾರ್ತೈಕಾದಶಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

14

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೇವಿಪಿಟಗೆಬೀದಿ ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

4

ಲೋಕಾಮೃತಪದ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹಸಿಳಿದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟಿನ ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. **ಪ್ಲೇಗಿನೌಷಧ.**— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ

(ಸ್ವ॥) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸ॥) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

REGISTERED NO. M 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಂದಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಸಜ್ಜನ ಹೃತ್ತೋಷಕರ[illegible]ಯಾತ್ ।
ಶ್ರೀಗಂತ್ರ್ಯೈಷ್ಣ್ಯನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾ[illegible]ಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪಾ[illegible]ಲಂ ।

ಸಂಪುಟ ೨೯] ಮೈಸೂರ ಸ್ಟಾರ ೧೯೧೨ ನೆಯ ಇಸವಿ ಮೇ ತಾರೀಖು ೧೩ ನೆಯ ಸೋಮವಾರ. [ಸಂಚಿಕೆ ೨೦

15 ಸ್ವದೇಶಬಾಂಧವರೆ! ನಾವು ಬಹುಜನಗಳಿಗುಪಯೋಗವಾಗುವಂತೆ ಈಗಿನ ಪೋಸ್ಟ್ ರೂಲ್ಸಿಗೆ ಸರಿಯಾಗಿ ದೊಡ್ಡ ಪೋಸ್ಟ್ ಕಾರ್ಡುಗಳನ್ನು

ನಂ.........
ಮಹಾರಾಜಶ್ರೀ..............................ಶೆಟ್ಟಿ
..............................ಮಾಡುವ
............ಅದಾಗ ಈವರಿಗೆ ಉಭಯಕುಶಲೋಪರಿಸಾಂ

ಎಂಬದಾಗಿ ಮೇಲು ಭಾಗದಲ್ಲಿ ಪ್ರಿಂಟುಮಾಡಿಸಿರುತ್ತೇವೆ. ೧೦೦ ಕ್ಕೆ ೦-೪-೦. ವಿ. ಪಿ. ಮೂಲಕ ೦-೬-೦. ೧೦೦೦ ಕ್ಕೆ ೨-೦-೦. ೧೦೦೦ ಗಟ್ಟಿ ತರಿಸಿಕೊಳ್ಳತಕ್ಕವರು ೧ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು. ರೈಲ್ವೆ ಪಾರ್ಸಲ್ ಮೂಲಕ ಕಳಿಸಲಾಗುತ್ತೆ. ಆಗ್ಗೆ ನಿಮಗೆ ಛಾರ್ಜು ಕಡಿಮೆಯಾಗುವುದು. ೧೦೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ಒಂದು ವಾಚ್ ಕೋರ್ಟ ಬಹುಮಾನ. ಮತ್ತು ೪೦೦೦ ಕಾರ್ಡು ಒಂದೇಸಾರಿ ತರಿಸತಕ್ಕವರಿಗೆ ೫ ರೂಪಾಯಿ ಬಾಬ್ತು ಒಂದು ಬೈಸಿಕಲ್ ಕೋರ್ಟ ಇನಾಮು ಕೊಡಲಾಗುತ್ತೆ.

ರಖಂವಾರ್ ವಾಚುಗಳ ಕ್ರಯದ ಪಟ್ಟಿ.



(1) ಜಾಟಲ್‌ವರ್ಕ್ ಡ್ರಿಸ್ ವಾಚ್.



(2) ಕ್ಯಾಲೆಂಡರ್ ವಾಚ್.



(3) ಗರ್ಟ್ಯಂ ರೈಲ್ವೆ ರೆಗ್ಯುಲೇಟರ್ ವಾಚ್.



(4) ಯೈಟ್ ಡೇಸ್ ಕೀ ವಾಚ್.



(5) ಪಿಕ್ಚರ್ಸ್ ವಾಚ್.



(6) ರಾಸ್ಕೋಪ್ ಸಿಸ್ಟಂ ವಾಚ್

ಮೇಲ್ಕಂಡ ವಾಚುಗಳ ಬೆಲೆ:— (1) ಜಾಟಲ್‌ವರ್ಕ್ ಡ್ರಿಸ್ ವಾಚೆಂಬ ಗ್ಯಾರೆಂಟಿಯಾದ ಗಡಿಯಾರವು ಗೌರ್ನಮೆಂಟ್ ಟೆಲಿಗ್ರಾಂ ರೈಲ್ವೆ ಟೈಂಗಳಿಗೆ ಸರಿಯಾದ ಕಾಲವನ್ನು ತೋರಿಸುತ್ತಾ ಬಹಳ ಬಾಳಿಕೆ ಬರುತ್ತದೆ. ನಿಕ್ಕಲ್ ಸಿಲ್ವರ್ ಕೇಸ್ ವಾಚ್ ೧ ಕ್ಕೆ ೮-೮-೦. ಡಿಟೋ ಬೆಳ್ಳಿಯ ವಾಚ್ ೧ ಕ್ಕೆ ೧೩-೮-೦. (2) ಕ್ಯಾಲೆಂಡರ್ ವಾಚ್– ಇದು ಟೈಂ ತಾರೀಖು ತೋರಿಸುತ್ತದೆ. ೫-೧೦-೦ ಮತ್ತು ವಾರ, ತಾರೀಖು, ತಿಂಗಳು, ಪೂರ್ಣಿಮ, ಅಮಾವಾಸ್ಯೆ ಮೊದಲಾದವನ್ನೆಲ್ಲಾ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸುತ್ತದೆ. ಇದೊಂದು ವಾಚ್ ಒಬ್ಬರಲ್ಲಿದ್ದದೇ ಆದರೆ ತನ್ನ ಸಂಗಡ ಒಬ್ಬ ಜೋಯಿಸನು ಇದ್ದಂತೆ ಆಗುತ್ತದೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೪-೦ ಡಿಟೋ ಬೆಳ್ಳಿ ಕೇಸ್ ವಾಚ್ ೧ ಕ್ಕೆ ೧೩-೪-೦. (3) ಗರ್ಟ್ಯಂ ಎಂಬ ರೈಲ್ವೆ ರೆಗ್ಯುಲೇಟರ್ ವಾಚ್– ಇದು ಗೌರ್ನಮೆಂಟ್ ಗುಂಡಿಗೆ ಸರಿಯಾಗಿ ಕಾಲವನ್ನು ತೋರಿಸುತ್ತದೆ. ವಾಚ್ ೧ ಕ್ಕೆ ೩-೮-೦. (4) ಯೈಟ್ ಡೇಸ್ ಕೀ ವಾಚ್– ವಾರಕ್ಕೊಂದಾವೃತ್ತಿ ಬೀಗ ಕೊಡುವ ಈ ವಾಚು ನೋಡುವುದಕ್ಕೆ ಅಂದವಾಗಿದ್ದು ಒಂದು ದಿನ ಕೀ ಕೊಟ್ಟರೆ ೮ ದಿವಸದ ವರೆಗೂ ನಡೆಯುತ್ತಾ ಇರುತ್ತೆ. ನಿಕ್ಕಲ್ ಸಿಲ್ವರ್ ವಾಚ್ ೧ ಕ್ಕೆ ೧೦-೮-೦. ಡಿಟೋ ಬೆಳ್ಳಿ ವಾಚ್ ೧ಕ್ಕೆ ೧೫-೪-೦. (5) ಪಿಕ್ಚರ್ಸ್ ವಾಚ್– ಟೈಂ ನೋಡಿದಾಗಲೆಲ್ಲಾ ದೇವರ ದರ್ಶನ. ಹೇಗೆಂದರೆ ಈ ವಾಚಿನ ಕೆಳಭಾಗದಲ್ಲಿರುವ ದೊಡ್ಡ ರಂಧ್ರದಲ್ಲಿ ನಮ್ಮ ಹಿಂದೂ ದೇವರ ಫೋಟೋಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಾ ನೋಡುವವರಿಗೆ ಮನಸ್ಸಂತೋಷಪಡಿಸುತ್ತವೆ. ಹಿಂದೂ ದೇವರ ಅಥವಾ ಯೂರೋಪಿಯನ್ ಲೇಡಿ ಪಿಕ್ಚರ್ ಯಾವುದನ್ನಾದರೂ ರವಾನಿಸುತ್ತೇವೆ. ೧ ಕ್ಕೆ ೬-೮-೦. (6) ರಾಸ್ಕೋಪ್ ಸಿಸ್ಟಂ ಪೇಟೆಂಟ್ ಸ್ವಿಸ್ ಮೇಡ್ ಎಂಬ ವಾಚು ಬಹು ಮಜಬೂತಾಗಿದ್ದು ಸರಿಯಾದ ಕಾಲವನ್ನು ತೋರಿಸುತ್ತದೆ. ವಾಚ್ ೧ಕ್ಕೆ ೨-೮-೦. ಕಾಗದ ಬರೆಯುವವರು ತಮ್ಮ ಸ್ಪಷ್ಟವಾದ ವಿಳಾಸವನ್ನು ಬರೆಯತಕ್ಕದ್ದು.

ಎಂ. ಎಸ್. ಸಿದ್ದಪ್ಪ [illegible] ಕೃಷ್ಣರಾಜಮೊಹಲ್ಲಾ ಮೈಸೂರು.

ಭರತಖಂಡದ ಅನೇಕ ಮಹಾರಾಜರಿಂದ ಬಹುಮಾನಪಡೆದ

ಎಂ. ಆರ್. ಸುಬ್ಬಾಜೆಟ್ಟಪ್ಪನವರ
ಲೋಕಪ್ರಸಿದ್ಧವಾದ ಸುಗಂಧದ್ರವ್ಯಗಳು.

8

ಕೇಸರಮಾಲತಿ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯವಾದ ಕೇಶರಾಶಿಯನ್ನು ವೃದ್ಧಿಪಡಿಸಬೇಕಾದರೆ ಈ ಎಣ್ಣೆ ವಿನಹಾ ಬೇರೆ ಇನ್ನಾವುದೂ ಇಲ್ಲ. ಅಲ್ಲದೆ ಮಿದುಳಿಗೆ ಬಹು ತಂಪಾಗಿಯೂ, ಸ್ವಲ್ಪ ಹಚ್ಚಿಕೊಂಡರೆ ಇದರ ಸುವಾಸನೆಯು ತಮ್ಮ ಸಮೀಪದ ಇತರರಿಗೂ ಕೂಡ ವ್ಯಾಪಿಸಿ ಅವರ ಮನವನ್ನೂ ಆನಂದಪಡಿಸುತ್ತದೆ. ಇದರ ಬೆಲೆ ಸೀಸೆ ೧ಕ್ಕೆ ೦-೮-೦.

ನಂ.		ರೂ.			ರೂ.
೧. ಅಂಬರ್‌ಬತ್ತಿ	ಸೇ೧ಕ್ಕೆ	೩	ಕಸ್ತೂರಿಬಿಲ್ಲೆ	ತೊ೧ಕ್ಕೆ	೨
೨. ಅಂಬರ್‌ಬತ್ತಿ	„	೪॥	ಜವಾಜಿಬಿಲ್ಲೆ	„	೧
೧. ಕಸ್ತೂರಿಬತ್ತಿ	„	೨॥	ಅಂಗಜ	„	೧
೧. ಪುನಗುಬತ್ತಿ	„	೧	ಸುರಂಗಿಸೆಂಟ್	ಸೀ೧ಕ್ಕೆ	೧
೧. ಗುಲಾಬಿಬತ್ತಿ	„	॥	ಮಾಲತಿಸೆಂಟ್	„	।॥

ಎಂ. ಆರ್. ಸುಬ್ಬಾಜಟ್ಟಪ್ಪ,
ಕೃಷ್ಣರಾಜ ಮೊಹಲ್ಲಾ ಮೈಸೂರ್.

ಉತ್ತಮ ಗ್ರಂಥಗಳು.

38

ಬಸವರಾಜವಿಜಯಂ.— ಬೆಲೆ ವಿ. ಪಿ ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೩ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೩-೦

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ]

ಕಳಿಂಗರಾಯನು ಆ ಸಮಾಚಾರವಂ ತಿಳಿದು ಇದಿರ್ಗೊಂಡು ಬಂದು ಮಂಗಳಾರ್ತಿಯಿಂದ ಕರತಂದು, ಸೌಗಂಧಿಕಾದೇವಿಯನು ಚಿತ ಸಿಂಹಾಸನದೊಳ್ ಕುಳ್ಳಿರಿಸಿ, ಪರಿಪರಿ ಉಪಚಾರಂಗಳಂ ಮಾಡುತ್ತಿರಲು, ಆಗ ರಾಜಾಜ್ಞೆಯಿಂದ ಸುಮತಿಯು ಚಿತ್ರಲೇಖೆಯಂ ಕರೆದು ನಿಮ್ಮ ದೇವಿಯು ಪೇಳಿದಂತೆ ನಮ್ಮ ರಾಜೇಂದ್ರನು ಅಶ್ವರತ್ನವಂ ತಂದಿರುವನು. ಇದು ನೀವು ಮಾಡುವ ನೋಂಪಿಗೆ ಯೋಗ್ಯವಹುದೋ ಅಲ್ಲವೋ ಪರಾಮರಿಸಬೇಕೆಂದು ಸೌಗಂಧಿಕಾದೇವಿಗೆ ಬಿನ್ನವಿಸೆಂದು ಪೇಳಲು ಚಿತ್ರಲೇಖೆಯು ಅಶ್ವರತ್ನವನೀಕ್ಷಿಸಿ ಅತ್ಯಾನಂದಭರಿತಳಾಗಿ, ರಾಜಪುತ್ರಿಯು ಸಮೀಪವನೈದಿ ಮಹಾರಾಜೇಂದ್ರನು ಸುಮತಿಯ ಮುಖದಿಂದ ಅಪ್ಪಣೆಯನಿತ್ತ ಮಾತುಗಳಂ ಬಿನ್ನವಿಸಲು, ಸೌಗಂಧಿಕಾದೇವಿಯು ಆ ಮಾತುಗಳಂ ಕೇಳಿ ತಲೆವಾಗಿ ನಾಚಿಕೆಯಿಂದು ಪರರಂ ಕೇಳುವುದಕ್ಕೆ ನಾವು ಯೋಗ್ಯರೇ ಅಶ್ವವರ್ಗ ಪರೀಕ್ಷೆಯಂ ಮಾಡುವುದಕ್ಕೆ ಸಮರ್ಥಳಲ್ಲೆನೆಂದು ವಿನಯೋಕ್ತಿಗಳಂ ಪೇಳುತ, ಅಶ್ವರತ್ನಮಂ ನೋಡಿ ಆನಂದ ಪಡುತ, ಅನೇಕಾಭರಣಂಗಳಂ ವಿಚಿತ್ರವಸ್ತ್ರಂಗಳಂ ತಾನಾಗಿ ನಚ್ಚರದ ವಿಚಿತ್ರ ಪುಷ್ಪಮಾಲಿಕೆಗಳಂ, ಕಪ್ಪುರ ವೀಳಯ ಮುಂತಾದ ಶುಭವಸ್ತುಗಳಂ ಚಿತ್ರಲೇಖೆಯ ಹಸ್ತದಿಂದ ಕೈಗಾಣಿಕೆಯಂತೆ ಸಮರ್ಪಿಸಿ, ಪ್ರಣಾಮಮಂ ಗೈದೆನು, ನನ್ನಿಂದ ಬಹು ಶ್ರಮವಾಯಿತು, ಈ ಅಪರಾಧವಂ ಕ್ಷಮಿಸಬೇಕೆನುತ ವಿಜ್ಞಾಪನೆಯಂ ಗೈದುದೆಂದು ರಾಜೇಂದ್ರನು ಕೇಳುವಂತೆ ತನ್ನ ಸಖಿಗೆ ಅಪ್ಪಣೆಯನಿತ್ತು ಕಳುಹಲು ಚಿತ್ರಲೇಖೆಯು ದೇವಿಯು ಆಜ್ಞಾನುಸಾರವಾಗಿ ರಾಜೇಂದ್ರಂಗೆ ಕೈಗಾಣಿಕೆಯಂ ಒಪ್ಪಿಸಿ, ದೇವಿಯು ಪೇಳಿದ ಮಾತುಗಳಂ ವಿನಯದಿಂ ವಿಸ್ತಾರವಾಗಿ ಬಿನ್ನವಿಸಲಾಗ ರಾಜೇಂದ್ರನು ಅಶ್ವರತ್ನವಂ ನಿಮ್ಮ ದೇವಿಯು ಸವಿಾಪಕ್ಕೆ ತೆಗೆದುಕೊಂಡು ಪೋಗೆಂದು ನಿರೂಪಿಸಿ ಕಳುಹಲು, ಬಳಿಕ ಚಿತ್ರಲೇಖೆಯು ರಾಜೇಂದ್ರನ ಆಜ್ಞಾನುಸಾರವಾಗಿ ವಿಚಿತ್ರವಾದ ಆ ಅಶ್ವರತ್ನವಂ ತನ್ನ ಒಡತಿಯಾದ ಸೌಗಂಧಿಕಾದೇವಿಯು ತಾನುಮಾಡುವ ನೋಂಪಿಗೆ ಯೋಗ್ಯವಾದ ಅಶ್ವರತ್ನವಂನೋಡಿ ಸುಗಂಧಮಹಾರಾಜೇಂದ್ರನ ಪರಾಕ್ರಮವಂ ಬಾರಿಬಾರಿಗೂ ಬಣ್ಣಿಸುತ, ಚಿತ್ರಲೇಖಾಮಾಲತೀ ಮೊದಲಾದ ಸಖಿಯರೊಡಗೂಡಿ ಅಶ್ವರತ್ನವಂ ತನ್ನ ಅಂತಃಪುರದ ಉಪವನದೊಳ್ಕಟ್ಟಿಸಿ ಅತ್ಯಂತ ಭಯಭಕ್ತಿಯುಕ್ತಳಾಗಿ ಪೂಜಿಸುತ್ತಿರಲು, ಇತ್ತಲಾ ಸುಗಂಧರಾಜೇಂದ್ರನು ಸಂತೋಷಭರಿತನಾಗಿ, ಕಳಿಂಗಪತಿಯು ಅರಮನೆಯಿಂದ ಹೊರಟು ಬರುತ ಕುಸುಮಧ್ವಜರಾಯನ ಬಿಡದಿಯನ್ನೈದಿ ತನ್ನ ಕಟಕದಿಂ ಕುಸುಮಲತೆಯಂ ಕರಸಿ, ಅವಳೊಡನೆ ಲೀಲಾವಿಲಾಸದಿಂ ಸುಖದಿಂದಿರುತ್ತಿರ್ದನೆಂಬಲ್ಲಿಗೆ, ಕುಂಡಲಿಶಯ ಖಂಡರಸ ಪುಂಡರೀಕನವಾಖಂಡಲ ಪ್ರಮುಖ ಅಖಿಲಸುರವರ ಪರಿಗತ ಪರಿಣತ ಪ್ರಚಂಡಬಲ ಚಂಡಮುಂಡಮಂಡನ ನಿಪುಣ ಕೋದಂಡಕಾಂಡ ಮಂಡಲಾಗ್ರಧರ ಭುಜಾದಂಡ ಪರಿಮಂಡಿತ ಚಾಮುಂಡಿಕಾ ಕಟಾಕ್ಷವೀಕ್ಷಣ ಪ್ರವರ್ಧಮಾನ ಭೂಮಂಡಲಾಧಿಪತ್ಯ ಸತ್ಯವ್ರತಾದಿ ಸಕಲ ಭಾಷಾಸಾಮ್ರಾಜ್ಯ ಸರ್ವಂಕಷ ಚತುರ್ವಿಧ ಸಾಸ ಕವಿತಾವಿಸ್ಸಾರ ನಿರ್ಮಾಣಧಾರೀಣ ಘಟಿಕಾಶತಗ್ರಂಥದಿವದಿವ ಪ್ರಬಂಧನಿಬಂಧನ ಧುರಂಧರ ತ್ರಿಭುವನ ಪವಿತ್ರ ಶ್ರೀಯದುಸಗೋತ್ರ ಸುಚರಿತ್ರ ಚಾಮರಾಜಮಹಾರಾಜಪುತ್ರ ನರಪತಿ ಬಿರುದ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜಪ್ರಭುವರನಿಂದ ರಸಿಕಜನಾನಂದಕರವಾಗಿ ವಿರಚಿತವಾದ ಸೌಗಂಧಿಕಾಪರಿಣಯವೆಂಬ ನವೀನಕೃತಿಯೊಳ್ ಸುಗಂಧರಾಜೇಂದ್ರನು ಅಶ್ವರತ್ನವಂ ಸಾಧಿಸಿದನೆಂಬ ಹದಿನೆಂಟನೇ ಆಶ್ವಾಸನಿರೂಪಣಕ್ಕೆ ಮಂಗಳಂ.

ಹತ್ತೊಂಭತ್ತನೆ ಆಶ್ವಾಸ.

ಚಿಂತಾಮಣಿಪಣಪ್ರಾರಂಭವು.

ಅನಂತರದಲ್ಲಿ, ಸುಗಂಧರಾಜೇಂದ್ರನು ವಿಜಾತೀಯವಾದ ಅಶ್ವರತ್ನವಂ ಸೌಗಂಧಿಕಾದೇವಿಯು ಮಾಡುವ ಪವಲಕ್ಷ್ಮೀವ್ರತಕ್ಕೋಸುಗ ಪಣವಾಗಿ ತಂದಿತ್ತು ಲೋಕದೊಳ್ ಪ್ರಖ್ಯಾತಿಯಂ ಪಡೆದು ಆರಟ್ಟದೇಶಾಧಿಪತಿಯಾದ ಕುಸುಮಧ್ವಜರಾಯನ ಬಿಡದಿಯೊಳ್ ಕುಸುಮಲತೆಯೊಡನೆ ಸುಖನಿದ್ರೆಯಂ ಗೈದು ಆ ಮಾರನೆಯ ಉದಯದೊಳೆದ್ದು, ದರ್ಪಣ ಮೊದಲಾದ ಶುಭವಸ್ತುಗಳ ದರ್ಶನವಂ ಗೈದು, ಬಳಿಕ ಮುಖಮಜ್ಜನವಂ ಗೈಯುತ, ಸುಮತಿ ವೀರಸೇನ ಮೊದಲಾದ ಸಾಮಾಜಿಕರಿಂದೊಡಗೂಡಿ, ಚಾರದರ್ಪಣರು ಬಿನ್ನವಿಸುವ ದೇಶದೇಶದ ವೃತ್ತಾಂತಂಗಳೆಲ್ಲವಂ ಲಾಲಿಸುತ, ಅಲ್ಲಲ್ಲಿಯ ಅರಸುಗಳು ಬಿನ್ನವಿಸಿರುವ ಲೇಖನಂಗಳಂ ರಾಯಸದವರಿಂದ ಓದಿಸಿ ಕೇಳುತ, ಪ್ರತ್ಯುತ್ತರಂಗಳಂ ಅವುಗಳಿಗೆ ನಿರೂಪಿಸುತ, ಅಲ್ಲಿಂದ ಚಿತ್ತೈಸಿ, ಮಜ್ಜನಮಂದಿರವಂ ಪ್ರವೇಶಿಸಿ ಪನ್ನೀರಿನಿಂದ ಜಳಕವಂ ಮಾಡಿ, ಸಾಂಗವಾಗಿ ಅಹ್ನಿಕವಂ ನೆರವೇರಿಸಿ, ಪಣೆಯೊಳ್ ಕಸ್ತೂರಿಯ ತಿಲಕವನ್ನಿಟ್ಟು ಆರಟ್ಟದೇಶಾಧಿಪತಿ ಮೊದಲಾದ ರಾಯರುಗಳೊಡಗೂಡಿ ಭೋಜನವಂ ಗೈದು, ವಿಚಿತ್ರ ವಸ್ತ್ರಾಭರಣಗಳಿಂದ ಅಲಂಕೃತನಾಗಿ, ಕಪ್ಪುರವೀಳೆಯವಂ ಸವಿಯುತ, ಬಾಗಿಲಲ್ಲಿ ತಂದು ನಿಲ್ಲಿಸಿರುವ ಗಜರಥವಂ ಕುಸುಮಧ್ವಜರಾಯನೊಡಗೂಡಿ ಏರಿ, ರಾಜಬೀದಿಯೊಳ್ ಎಂದಿನಂತೆ ಬರುವಾಗ ಇಂದ್ರನೂ ಉಪೇಂದ್ರನೂ ಕೂಡಿ ಕುಳಿತಿರುವ ರಥದ ಕೆಲಬಲದೊಳ್ ಅಶ್ವಿನೀದೇವತೆಗಳು ಬರುವಂತೆ ಸುಮತಿ ವೀರಸೇನರೀರ್ವರು ಉತ್ತಮಾಶ್ವಂಗಳನ್ನೇರಿ ರಾಜೇಂದ್ರನ ರಥದ ಎಡಬಲದೊಳ್ ಬರುತ್ತಿರಲು, ಆ ಸಮಾಚಾರವಂ ಕೇಳಿ ಕಳಿಂಗಭೂಪತಿಯು ತ್ವರೆಯಿಂದ ಇದಿರ್ಗೊಂಡು ಬಂದು ನಿಜಮಂದಿರದ ಸವಿಾಪದೊಳ್ ಗಜರಥದಿಂದಿಳಿದು ಕರ್ನಾಟ ನರಪತಿಯಂ ಕೈಪಿಡಿದು ಸ್ವಯಂವರ ಸಭಾಮಂಟಪಕ್ಕೆ ಕರೆತಂದು ಸುಧರ್ಮಸಭೆಯೊಳ್ ಇಂದ್ರನಂತೆ ಸುಗಂಧರಾಜೇಂದ್ರನಂ ಸ್ವಯಂವರ ಸಭೆಯಲ್ಲಿರುವ ಸುವರ್ಣ ಸಿಂಹಾಸನದೊಳ್ ಕುಳ್ಳಿರಿಸಿ, ತಾನು ಕುಸುಮಧ್ವಜರಾಯನೊಡಗೂಡಿ ಒಂದೇಪೀಠದಲ್ಲಿ ಕುಳಿತು, ಕುಶಲಂಗಳಂ ಕೇಳುತ, ಎಲೈ ಮಿತ್ರನೇ ನಿನ್ನ ಕುಮಾರಿಯಾದ ಕುಸುಮಲತೆಯುಂ ಈ ಸುಕುಮಾರನಾದ ಸುಗಂಧರಾಜೇಂದ್ರನು ಸೆರೆಯಂ ಬಿಡಿಸಿ ತಂದನೆಂದು ಕೇಳಿ ಎನ್ನ ಮನಸ್ಸಿಗೆ ಆನಂದವಾಯಿತು, ಈರ್ವರು ಪುತ್ರಿಯರಂ ಒಂದೇ ಕಾಲದೊಳ್ ಈ ಸುಗಂಧರಾಜೇಂದ್ರಂಗೆ ವಿವಾಹವಂ ಗೈಸಿ ನಾವೀರ್ವರೂ ನೇತ್ರಾನಂದವಂ ಪಡೆಯುವ ಎಂದು ಪೇಳಲಾ ಮಾತಂ ಕೇಳಿ ಆರಟ್ಟಭೂಪತಿಯಾದ ಕುಸುಮಧ್ವಜನು—ಎಲೈ ವಿಜಯವರ್ಮನೇ! ಕೇಳು, ನಿನ್ನ ಪುತ್ರಿಯಾದ ಸೌಗಂಧಿಕಾದೇವಿಯು ಪುಣ್ಯಪ್ರಭಾವದಿಂದಲೂ ಆ ಪುತ್ರಿಯು ಅಪೇಕ್ಷಿಸಿದ ಪಣದ ಬಲೆಯಿಂದಲೂ ಈ ಮಹಾನುಭಾವನ ಪರಾಕ್ರಮದಿಂದಲೂ ನನ್ನ ಮಗಳಂ ನಾನು ಕಾಣುವಂತಾಯಿತು. ನನ್ನ ಪುತ್ರಿಯು ನಿನಗೂ ಪುತ್ರಿಯೇ ಸರಿ. ಮತ್ತೂ ದೇಹಸಂಬಂಧದಲ್ಲಿ ನನ್ನ ಪತ್ನಿಗೆ ನಿನ್ನ ಧರ್ಮಪತ್ನಿಯಾದ ಸುಲೋಚನಾದೇವಿಯು ಒಡಹುಟ್ಟಿದವಳಾದುದರಿಂದ ಈ ಕನ್ಯಾರತ್ನಗಳಂ ನೀನೇ ಧಾರೆಯನ್ನೆರೆಯಬಹುದೆಂದು ಮಾತನಾಡುತ್ತ ತಮ್ಮೊಳ್ತಾವೇ ಸಂತೋಷವಂ ಪಡುತ್ತಿರಲು; ಆ ಸಮಯದೊಳ್ ಉತ್ತರ ಭಾಗದಲ್ಲಿ ಕಟ್ಟಿರುವ ಕಾಂಡಪಟದ ಮರೆಯೊಳ್ ವಿಚಿತ್ರವಾದ ಪೀಠದಲ್ಲಿ ಕುಳಿತಿರುವ ಸೌಗಂಧಿಕಾದೇವಿಯು ಪಣತ್ರಯವಂ ಸಾಧಿಸಿದ ಸುಗಂಧರಾಜೇಂದ್ರನಂ ಸಖಿಯ ಮುಖದಿಂದ ನಾನಾವಿಧದ ಉಪಚಾರಂಗಳಿಂದ ಪೂಜಿಸಿ, ಮತ್ತೂ ಆತನ ಶೌರ್ಯಾದಾರ್ಯ ಪರಾಕ್ರಮ ಸಾಹಸ ಸತ್ವಂಗಳಂ ಮನದಂದು ಹರ್ಷಪರವಶಳಾಗಿ, ಲಜ್ಜಾಭಯಭರಿತಳಾಗಿ ಸರ್ವಾವಯವ ಸುಂದರನನೀಕ್ಷಿಸುವೆನೆಂಬ ಕುತೂಹಲದಿಂ ಕಾಂಡಪಟದ ಜಾಲಂಧರದಲ್ಲಿ ಇದಿರಾಗಿ ಮುಕುಂದನಂತೆ ಮೆರೆವ ಸುಂದರಾಂಗನಾದ ಸುಗಂಧರಾಜೇಂದ್ರನಂ ತನ್ನ ಮನದಣಿವಂತೆ ನೋಡಿ, ಮೈಮರೆದು ಮನಕರಗಿ ಕಂಗೆಟ್ಟು, ಮತ್ತೂ [illegible] ಗುಣಂಗಳೂ ಈತನಿಂದಲೇ ಸಾರ್ಥಕಂಗಳಾಗಬೇಕೆಂದು ಇಷ್ಟದೇವತಾಪ್ರಾರ್ಥನೆಯಂ ಮಾಡುತ ನಿಂತುಕೊಂಡಿರುವ ತನ್ನಂ ಪಾರ್ಶ್ವದೊಳ್ಕಟ್ಟಿರುವ ಕನ್ನಡಿಯೊಳ್ಕಂಡು ವಿಸ್ಮಿತನಾಗಿ ಎವೆಯಿಕ್ಕದೆ ನೋಡುತ್ತಿರುವ ಸುಕುಮಾರನ ಮನೋಭಾವವಂ, ತಿಳಿದು ಸವಿಾಪದಲ್ಲಿರುವ ಸಖಿಯ ಮುಖವಂ ನೋಡಿ, ಕನ್ನಡಿಯು ಮುಸುಕಂ ಮರೆಮಾಡುವಂತೆ ಸನ್ನೆಯಂ ಮಾಡಿ, ದಿವ್ಯ ಸುಗಂಧಪುಷ್ಪ ಮಾಲಿಕೆಗಳಂ ಕಪ್ಪುರ ವೀಳೆಯವಂ ಸಹಾ ಒಪ್ಪಿಸಿ, ವ್ಯಕ್ತವಾಗಿ ಸುಗಂಧರಾಜೇಂದ್ರಂಗೆ ತಿಳಿಯುವಂತೆ ನಿಮಿತ್ತಮಾತ್ರಕ್ಕೆ ಸಖಿಯುಂ ಕುರಿತು ಅಸಾಧ್ಯವಾದ ಅಶ್ವರತ್ನವಂ ಸಾಧಿಸಿ ತಂದು ದಯಪಾಲಿಸಿದ್ದಲ್ಲದೆ, ನನ್ನ ತಂಗಿಯಾದ ಕುಸುಮಲತೆಯು ಸೆರೆಯಂ ಬಿಡಿಸಿ ಕರೆತಂದುದು ಕೋಟಿಪಣಂಗಳಂ ಸಾಧಿಸಿ ದಯೆಮಾಡಿದಂತಾಯಿತು,

ಸಶೇಷ.

ವ್ಯವಸಾಯಕ ವಿಷಯಗಳು.

ಬಿತ್ತನೆಯ ಬೀಜವನ್ನು ಉಪ್ಪಿನ ನೀರಿನಲ್ಲಿ ಹಾಕಿ ಪರೀಕ್ಷಿಸುವಿಕೆ.

ಜಪಾನ್ ದೇಶದ ರೈತರು ಬಿತ್ತನೆಯ ಬತ್ತವನ್ನು ಉಪ್ಪುನೀರಿನ ಕ್ರಮವೆಂಬ ಒಂದು ಸುಲಭವಾದ ಕ್ರಮಕ್ಕನುಸಾರವಾಗಿ ಅಜಮಾಯಿಷಿಮಾಡಿ ದಪ್ಪನಾಗಿಯೂ ಮತ್ತೂ ಪೂರ್ತಿಯಾಗಿ ಬೆಳೆದಿರತಕ್ಕದ್ದಾಗಿಯೂ ಇರುವ ಕಾಳುಗಳನ್ನೇ ಆರಿಸಿ ಬಿತ್ತನೆಗೆ ಉಪಯೋಗಿಸುತ್ತಾರೆ. ಒಂದು ಮೂರು ಕಾಸಿನ ತುಕ್ಕಡವನ್ನು ಒಂದು ಮೊಟ್ಟೆಗೆ ಕಟ್ಟಿ ನೀರಿನಲ್ಲಿ ಹಾಕಿದರೆ ಮೊಟ್ಟೆಯು ತೇಲುವಂತೆಯಾಗುವವರೆಗೂ ನೀರಿಗೆ ಉಪ್ಪನ್ನು ಬೆರಸಬೇಕು. ಎರಡುಸೇರು ನೀರಿನಲ್ಲಿ ಪಕ್ಕಾ ಒಂದುಸೇರು ಉಪ್ಪನ್ನು ಕರಗಿಸಿದರೆ ಉಪ್ಪಿನನೀರು ಮೇಲ್ಕಂಡ ಹದಕ್ಕೆ ಇಳಿಯುವುದೆಂದು ಹೇಳುತ್ತಾರೆ. ಇಂಥಾ ಉಪ್ಪಿನ ನೀರಿನಲ್ಲಿ ಬತ್ತವನ್ನು ಹಾಕಿದರೆ ಹೆಚ್ಚು ಭಾಗವು ಮೇಲೆ ತೇಲಿಬರುವುದು. ಉಳಿದುದು ಮುಳುಗುವುದು. ತೇಲಿಬಂದ ಭತ್ತವನ್ನು ತೆಗೆದುಹಾಕಿ ಮುಳುಗಿದ ಕಾಳುಗಳನ್ನು ಹೊರಕ್ಕೆ ತೆಗೆದು ಉಪ್ಪೆಲ್ಲಾ ಹೋಗುವಂತೆ ನಿರ್ಮಲವಾದ ಬೇರೆ ನೀರಿನಲ್ಲಿ ತೊಳೆದು ಬಿತ್ತನೆಗೆ ಉಪಯೋಗಿಸುತ್ತಾರೆ.

ಮೇಲ್ಕಂಡ ರೀತಿಯಲ್ಲಿ ಆರಿಸಲ್ಪಟ್ಟ ಬೀಜವನ್ನು ಬಿತ್ತನೆಗೆ ಉಪಯೋಗಿಸಿದರೆ ಉತ್ಪತ್ತಿಯು ಖಂಡಿತವಾಗಿಯೂ ಹೆಚ್ಚುವುದು. ಹೆಬ್ಬಾಳು ಪರೀಕ್ಷಾಕ್ಷೇತ್ರದಲ್ಲಿ ಕಳೆದ ಎರಡು ಸಾಲುಗಳಲ್ಲಿ ದೊಡ್ಡಬೈಲು ಬತ್ತ ಮತ್ತೂ ಚಿಂತಾಮಣಿ ಸಣ್ಣಬತ್ತಗಳನ್ನು ಮೇಲ್ಕಂಡ ರೀತಿಯಲ್ಲಿ ಆರಿಸಿ ವ್ಯವಸಾಯ ಮಾಡಿದ್ದರಲ್ಲಿ ಎಕರೆಗೆ ದೊಡ್ಡಭತ್ತದಲ್ಲಿ ೬ ರೂ. ನಂತೆಯೂ, ಚಿಂತಾಮಣಿ ಸಣ್ಣಭತ್ತದಲ್ಲಿ ೪|| ರೂ. ನಂತೆಯೂ ಹೆಚ್ಚು ವರಮಾನ ಬಂದಿರುವುದಂತೆ.

ಬೀಜವನ್ನು ಉಪ್ಪುನೀರಿನಲ್ಲಿ ಹಾಕುವುದಕ್ಕೆ ಹೆಚ್ಚು ಖರ್ಚೇನೂ ತಗಲುವುದಿಲ್ಲ. ಉಪ್ಪಿಗಾಗಿ ನಾಲ್ಕಾರು ಆಣೆಗಳನ್ನು ಖರ್ಚುಮಾಡಿದರೆ ಸಾಕಾಗುತ್ತೆ. ಮೇಲೆ ತೇಲಿಬಂದ ಭತ್ತದಿಂದ ನಷ್ಟವೇನೂ ಇಲ್ಲ. ಅದನ್ನು ಕುಟ್ಟಿ ಅಕ್ಕಿ ಮಾಡಿ ಉಪಯೋಗಿಸಬಹುದು.

ಇಂಥಾ ಉಪ್ಪಿನಲ್ಲಿ ಹಾಕಿದ ಬೀಜವನ್ನು ಹೆಚ್ಚಾಗಿ ಒಟ್ಟು ಹುಯ್ಯಬಾರದು. ಹಾಗೆ ಮಾಡಿದರೆ ಪೈರುಗಳು ಬಹಳ ಒತ್ತಾಗಿ ಬೆಳೆದು ಪೈರಿಗೆ ಸ್ವಲ್ಪ ಕೆಡುಕುಂಟಾಗುವುದು. ಈ ವಿಷಯವನ್ನು ಮಾತ್ರ ಮರೆಯಕೂಡದು.

ಈ ಕ್ರಮವನ್ನು ಮೈಸೂರು ವ್ಯವಸಾಯದ ಇಲಾಖೆಯವರು ಇನ್ನೂ ಅಜಮಾಯಿಷಿ ಮಾಡುತ್ತಿದ್ದಾರೆ. ಮತ್ತೂ ಈ ಕ್ರಮವು ಬಹಳ ಲಾಭಕರವೆಂದು ಇದುವರೆಗಿನ ಅನುಭವದಿಂದ ಧಾರಾಳವಾಗಿ ಹೇಳಬಹುದಾಗಿದೆ. ಈ ಕ್ರಮದ ಹೆಚ್ಚು ಪ್ರಯೋಜನಗಳನ್ನು ಸಂಸ್ಥಾನದ ರೈತಾಪಿ ಜನಗಳಿಗೆ ನಿದರ್ಶಿಸಿ ತೋರಿಸಲು ವ್ಯವಸಾಯದ ಇಲಾಖೆಯವರು ಮುಂದಲ ಸಾಲಿನಲ್ಲಿ ಪ್ರಯತ್ನ ಪಡುವವರಾಗಿದ್ದಾರೆ. ಈ ಕ್ರಮವನ್ನು ಅನುಸರಿಸುವುದರಿಂದ ಎಕರೆಗೆ ೬–೭ ರೂಪಾಯಿನ ಉತ್ಪತ್ತಿಯು ಜಾಸ್ತಿಯಾದರೆ ವ್ಯವಸಾಯಗಾರರು ಹೆಚ್ಚು ಏಳಿಗೆಯನ್ನು ಹೊಂದುವರೆಂದು ಹೇಳಬೇಕಾದ್ದೇ ಇಲ್ಲ.

ಬತ್ತವನ್ನೇ ಬಿತ್ತುವುದಕ್ಕೂ ಮತ್ತು ಪೈರನ್ನು ನಾಟಿ ಹಾಕುವುದಕ್ಕೂ ಇರತಕ್ಕ ವ್ಯತ್ಯಾಸ.

ಮೈಸೂರು ದೇಶದಲ್ಲಿ ಬೀಜದ ಭತ್ತವನ್ನು ಚೆಲ್ಲುವುದು ಮತ್ತೂ ಪೈರುಮಾಡಿ ಅದನ್ನು ನಾಟಿ ಹಾಕುವುದು ಇವೆರಡು ಕ್ರಮಗಳೂ ವಾಡಿಕೆಯಲ್ಲಿವೆ. ಕೆಲವು ಸ್ಥಳಗಳಲ್ಲಿ ಬೀಜವನ್ನು ಕೂರಿಗೆಗಳಲ್ಲಿ ಹಾಕಿ ಬಿತ್ತನೆ ಮಾಡುವುದೂ ಉಂಟು. ಆದರೆ ಮೈಸೂರು ಸಂಸ್ಥಾನದ ಪೂರ್ವಭಾಗದ ಪ್ರದೇಶಗಳಲ್ಲೆಲ್ಲಾ ಪೈರನ್ನು ನಾಟಿ ಹಾಕುವುದೂ ಮತ್ತೂ ಮಲನಾಡು ಮತ್ತೂ ಅರ್ಧಮಲನಾಡು ಪ್ರಾಂತ್ಯಗಳಲ್ಲೆಲ್ಲಾ ಬತ್ತವನ್ನು ಎರಚುವುದು ಅಥವಾ ಕೂರಿಗೆಗಳಿಂದ ಬಿತ್ತನೆ ಮಾಡುವುದು ಹೆಚ್ಚು ರೂಢಿಯಲ್ಲಿದೆ. ಪೈರನ್ನು ನಾಟಿ ಹಾಕುವುದರಿಂದ ಅನೇಕ ಅನುಕೂಲಗಳುಂಟು. ಹೇಗೆಂದರೆ,—ನಾಟಿ ಮಾಡಿದರೆ ಬಿತ್ತನೆಗೆ ಹೆಚ್ಚು ಭತ್ತವು ಅವಶ್ಯಕವಿರುವುದಿಲ್ಲ. ಆದರೆ ನಾಟಿಗೆ ಬದಲಾಗಿ ಭತ್ತವನ್ನೇ ಎರಚಿ ಬಿತ್ತನೆ ಮಾಡಿದರೆ ಅಥವಾ ಕೂರಿಗೆಯನ್ನು ಉಪಯೋಗಿಸಿದರೆ ಕೆಲವು ಸ್ಥಳಗಳಲ್ಲಿ ಪೈರುಗಳು ಬಹಳ ಒತ್ತಾಗಿ ಬೆಳೆಯುವುದರಿಂದ ಅವುಗಳನ್ನು ಕಿತ್ತುಹಾಕಲೇ ಬೇಕಾಗುವುದು. ಅಲ್ಲದೆ ನಾಟಿ ಮಾಡಿದರೆ ವರುಷಕ್ಕೆ ಎರಡು ಬೆಳೆಗಳನ್ನು ತೆಗೆದಾಗ್ಯೂ ಹಸುರು ಗೊಬ್ಬರಕ್ಕಾಗಿ ತಕ್ಕ ಪೈರುಗಳನ್ನು ಬೆಳೆಯಲು ಅವಕಾಶವಿರುತ್ತದೆ. ಆದರೆ ಕಾಳನ್ನು ಎರಚಿದರೆ ಅಥವಾ ಕೂರಿಗೆಯಿಂದ ಬಿತ್ತಿದರೆ ಹಸುರು ಗೊಬ್ಬರದ ಪೈರನ್ನು ಬೆಳೆಯಲು ಸಾಧ್ಯವೇ ಅಲ್ಲ. ನಾಟಿ ಹಾಕುವುದರಿಂದ ಸ್ಪಷ್ಟವಾಗಿ ತಿಳಿದು ಬರುವಂಥಾ ಮೇಲ್ಕಂಡ ಎರಡು ವಿಧವಾದ ಅನುಕೂಲಗಳಿರುವುದೇನೋ ನಿಜ. ಆದರೆ ಪೈರನ್ನು ನಾಟಿ ಹಾಕಲು ಹೆಚ್ಚು ಜನರು ಕೆಲಸಮಾಡಬೇಕಾಗುವುದು. ಇದೊಂದು ಅನಾನುಕೂಲವೇ ಸರಿ. ನಾಟಿಗೆ ಬಿತ್ತನೆಗಿಂತಲೂ ಹೆಚ್ಚು ಕಾಲ ಹಿಡಿಯುವುದು. ಭತ್ತವನ್ನು ಒಟ್ಲುಹೊಯ್ದು ಪೈರನ್ನು ಎಬ್ಬಿಸತಕ್ಕ ಹೆಚ್ಚು ಕೆಲಸವನ್ನು ಮಾಡಬೇಕಾಗಿರುತ್ತದೆ. ಇಷ್ಟು ಹೆಚ್ಚು ಕಾಲ ಹೆಚ್ಚು ಕೆಲಸವನ್ನು ಮಾಡಲು ಮಲನಾಡು ಪ್ರಾಂತ್ಯದಲ್ಲಿ ಕೂಲಿಗಾರರು ದೊರೆಯುವುದು ಕಷ್ಟ. ಆದುದರಿಂದಲೇ ಆ ಪ್ರಾಂತ್ಯ ನಾಟಿಹಾಕುವ ಕ್ರಮವು ಆಚರಣೆಯಲ್ಲಿಲ್ಲ.

ನಾಟಿಹಾಕುವ ಕ್ರಮದಲ್ಲೂ ರೈತರು ಬುದ್ಧಿವಂತಿಕೆಯಿಂದ ಕೆಲಸಮಾಡುವುದಿಲ್ಲ. ಒಂದೊಂದು ಗುಳಿಯಲ್ಲಿ ೫ ಅಥವಾ ೬ ಪೈರುಗಳನ್ನು ನೆಡುವುದಾಗಿ ರೈತರು ಹೇಳುತ್ತಾರೆ. ಇದೇ ನಿಜವಾಗಿದ್ದ ಪಕ್ಷದಲ್ಲಿ ರೈತರು ಬಿತ್ತನೆಗೆ ಅವಶ್ಯಕವಾಗಿರುವುದಕ್ಕಿಂತಲೂ ಹೆಚ್ಚು ಬೀಜವನ್ನು ಉಪಯೋಗಿಸುತ್ತಾರೆಂದು ಹೇಳಬೇಕು. ಆದರೆ ನಾವು ಸ್ವತಃ ಪರೀಕ್ಷಿಸಿ ನೋಡಿದ್ದರಲ್ಲಿ ಒಂದೊಂದು ಗುಳಿಗೆ ೧೫ ರಿಂದ ೨೦ ಸಸಿಗಳವರೆಗೂ ಇದ್ದವು. ಅಂತು ಅನೇಕ ಸ್ಥಳಗಳಲ್ಲಿ ರೈತರು ಎಕರೆಗೆ ಬಿತ್ತನೆಗೆ ಬೇಕಾಗಿರುವ ಭತ್ತಕ್ಕಿಂತಲೂ ಕೊನೆಪಕ್ಷ ಹತ್ತರಷ್ಟು ಹೆಚ್ಚಾಗಿ ಉಪಯೋಗಿಸುತ್ತಾರೆಂಬುವುದರಲ್ಲಿ ಅನುಮಾನವೇ ಇಲ್ಲ. ಮತ್ತೂ ಪೈರನ್ನು ನಾಟಿ ಮಾಡುವಾಗ ಸ್ವಲ್ಪ ಪೈರುಗಳು ಕೆಟ್ಟುಹೋಗುವುವು. ಮುಖ್ಯವಾಗಿ ನಾಟಿಹಾಕುವ ಕ್ರಮದಲ್ಲಿ ಬಿತ್ತನೆಗಾಗಿ ಹೆಚ್ಚು ಭತ್ತವು ಪೋಲುಮಾಡಲ್ಪಡುತ್ತದೆ.

ಬೆಂಗಳೂರಿನಲ್ಲಿರುವ ಹೆಬ್ಬಾಳು ಪರೀಕ್ಷಾಕ್ಷೇತ್ರದಲ್ಲಿ ಕಳೆದ ನಾಲ್ಕು ಸಾಲುಗಳಲ್ಲಿ ಬತ್ತವನ್ನು ಚೆಲ್ಲುವ ಮತ್ತೂ ಪೈರನ್ನು ನಾಟಿಹಾಕುವ ಈ ಎರಡು ಕ್ರಮಗಳಿಗನುಸಾರವಾಗಿ ವ್ಯವಸಾಯಮಾಡಿ ನೋಡಿದ್ದರಲ್ಲಿ ನಾಟಿ ಹಾಕತಕ್ಕ ಕ್ರಮವೇ ನಿಸ್ಸಂದೇಹವಾಗಿಯೂ ಬಹಳ ಲಾಭಕರವಾದದ್ದೆಂದು ತಿಳಿಯಬಂದಿರುತ್ತದೆ.—ಕೆ. ಗೆ.

ಸ್ಮರಣೀಯ ಸಂಪಾದಕ ಸಾರ್ವಭೌಮ.

ಯಾವ ಹಡಗಿನ ಹೆಸರನ್ನೆತ್ತಿದ ಮಾತ್ರದಿಂದಲೇ ಕೇಳುವ ಜನರ ಎದೆಯು ಬಿರಿಯುವಂತಾಗಿರುವುದೋ ಅಂತಹ ಟಿಟಾನಿಕ್ ಎಂಬ ಹಡಗು ತನ್ನ ಸಜಾತೀಯವಾದ ಹಡಗುಗಳಲ್ಲೆಲ್ಲಾ ತಾನು ಎಷ್ಟು ಗಣ್ಯವಾಗಿ ಅಸಾಧಾರಣವೆನಿಸಿಕೊಂಡಿದ್ದಿತೋ ಹಾಗೆಯೇ ಮಾನವಕೋಟಿಯಲ್ಲಿ ಗಣ್ಯನಾಗಿ ಅಸಾಧಾರಣನಾಗಿದ್ದಂಥ ಮಹಾನುಭಾವನೊಬ್ಬನ ವಿನಾಶಕ್ಕೆ ತಾನೇ ಕಾರಣವಾಯಿತು. ಆ ಮಹಾನುಭಾವನು ಯಾರೆಂದರೆ— "ವಿಲಿಯಂ ಥಾಮಸ್ ಸ್ಟೆಡ್" ಎಂಬಾತನೇ. ಟಿಟಾನಿಕ್ ಹಡಗಿನ ವಿಪತ್ತನ್ನು ಕುರಿತ ಹಿಂದಿನ ಲೇಖನದಲ್ಲಿ ಈ ಮಹಾಪುರುಷನ ಸ್ಮೃತಿಯು ಕೂಡ ಹೇಳಲ್ಪಟ್ಟಿರುವುದು ನಮ್ಮ ವಾಚಕರ ಸ್ಮರಣದಲ್ಲಿರಬಹುದು. ಆಂಗ್ಲಪತ್ರಿಕಾವಾಚಕರಲ್ಲಿ ಯಾವ ನರಪುಂಗವನ ಹೆಸರನ್ನು ಅರಿಯದಿದ್ದವರೇ ವಿರಳರಾಗಿರುವರೋ ಅಂಥ ಈ ಮಹಾನುಭಾವನ ಜೀವಿತಚರಿತೆಯ ಘನತೆಯನ್ನು ನಮ್ಮ ಕನ್ನಡಿಗರಿಗೂ ಸ್ವಲ್ಪಮಾತ್ರವಾಗಿಯಾದರೂ ಅರುಹಿಕೊಡುವುದು ಆವಶ್ಯಕವೆಂದೆಣಿಸುತ್ತೇವೆ. ಏಕೆಂದರೆ— ಯಾವಾತನು ಆಗರ್ಭಶ್ರೀಮಂತರ ಹೊಟ್ಟೆಯಲ್ಲಿ ಹುಟ್ಟದಿದ್ದರೂ ಜಗತ್ತಿನ ಕೋಟೀಶ್ವರರಿಂದೆಲ್ಲಾ ಸನ್ಮಾನಿಸಲ್ಪಡುತ್ತಿದ್ದನೋ, ಯಾವನು ಪ್ರಭುಸಂತತಿಯಲ್ಲಿ ಅವತರಿಸದಿದ್ದರೂ ಜಗತ್ತಿನ ಪ್ರಭುಗಳಿಗೆಲ್ಲಾ ಅತ್ಯಾಪ್ತನಾಗಿದ್ದನೋ, ಯಾವನು ಪಾಠಶಾಲೆಗಳ ಪಾಠಗಳನ್ನೋದಿ ಬಿರುದಾಂಕನಗಳನ್ನು ಪಡೆಯದಿದ್ದರೂ ಸುಜ್ಞಾನಭಾಂಡಾಗಾರಗಳಾದ ಅನೇಕ ಗ್ರಂಥಗಳನ್ನು ಜಗದ್ಧಿತಾರ್ಥವಾಗಿ ಬರೆದು ಸರ್ವ ವಿದ್ವಾಂಸರಿಗೂ ಮಾನನೀಯನಾಗಿದ್ದನೋ, ಯಾವನು ಮಂತ್ರಿಸಾಮಾಜಿಕರ ಗೋತ್ರಕ್ಕೆ ಸಂಬಂಧಿಸದವನಾಗಿ ಜನಿಸಿದ್ದರೂ ಜಗತ್ತಿನ ಮಂತ್ರಾಲೋಚಕರೊಡನೆಲ್ಲಾ ಆಪ್ತಾಲೋಚನೆಯನ್ನು ನಡೆಯಿಸುವವನಾಗಿದ್ದನೋ, ಯಾವನು ದೀನಕುಟುಂಬದಲ್ಲಿ ಜನಿಸಿದ್ದರೂ ಜಗತ್ತನ್ನೇ ತನ್ನ ಕುಟುಂಬದಂತೆ ಕಾಣುವವನಾದನೋ ಅಂತಹ ಮಹಾಪುರುಷನ ಜೀವಿತಚರಿತ್ರವು ಯಾರಿಗೆತಾನೇ ಪಠನೀಯವಲ್ಲ?

ಈ ಸ್ಟೆಡ್ ಮಹಾನುಭಾವನು ಕ್ರಿ|| ಶ|| ೧೮೪೯ ನೆಯ ವರ್ಷದಲ್ಲಿ ಒಬ್ಬ ಪಾದರಿಯ ಮಗನಾಗಿ ಜನಿಸಿ, ಸಾಧಾರಣವಾದ ವಿದ್ಯೆಯನ್ನಭ್ಯಸಿಸಿದನು. ಮೊಟ್ಟಮೊದಲು ಒಬ್ಬ ವ್ಯಾಪಾರಿಯಲ್ಲಿ ಕರಣಿಕನಾಗಿ ಸಂಬಳಕ್ಕೆ ಸೇರಿದನು. ಕೆಲದಿನಗಳಲ್ಲಿ ಅದು ರುಚಿಸದೆ ಹೋಗಲು, ತನ್ನ ೨೨ ನೆಯ ವರ್ಷದ ವಯಸ್ಸಿನಲ್ಲಿ "ಡಾರ್ಲಿಂಗ್‌ಟನ್ ನಾರ್ದರ್ನ್ ಎಕೊ" ಎಂಬ ವೃತ್ತಪತ್ರಿಕೆಯ ಸಂಪಾದಕನಾದನು. ಈ ಪತ್ರಿಕೆಯು ಈತನ ಲೇಖನಶಕ್ತಿಯಿಂದ ಚೆನ್ನಾಗಿ ವ್ಯಾಪಕಾವಸ್ಥೆಗೆ ಬಂದುದನ್ನು ನೋಡಿ, ಲಂಡನ್ನಿನ "ಪಾಲ್‌ಮಾಲ್ ಗೆಜೆಟ್" ಎಂಬ ಪತ್ರಿಕೆಯ ಅಧಿಪತಿಯು ಈತನನ್ನು ತನ್ನ ಪತ್ರಿಕೆಗೆ ಉಪಸಂಪಾದಕನನ್ನಾಗಿ ಮಾಡಿ ಲಂಡನ್ನಿಗೆ ಕರೆದುಕೊಂಡು ಹೋದನು. ಆಗ ಆ ಪತ್ರಿಕೆಗೆ ಮಾರ್ಲೆ (ಈಗ ಲಾರ್ಡ್ ಮಾರ್ಲೆ) ಯವರು ಮುಖ್ಯ ಸಂಪಾದಕರಾಗಿದ್ದರು. ಕೆಲ ದಿನಗಳನಂತರ ಮಾರ್ಲೆಯವರು ರಾಜಕೀಯ ಕಾರ್ಯದಲ್ಲಿ ಪ್ರವೇಶಗೊಳ್ಳಲು, ಈ ಸ್ಟೆಡ್ ಮಹಾಶಯನೇ ಮುಖ್ಯ ಸಂಪಾದಕನಾಗಿ, ಲಂಡನ್ ಪಟ್ಟಣದಲ್ಲಿ ಉದ್ಭವಿಸಿದ ಪತ್ರಿಕೆಗಳಲ್ಲೆಲ್ಲಾ ಆ "ಪಾಲ್‌ಮಾಲ್ ಗೆಜೆಟ್" ಎಂಬುದನ್ನೇ ಮೊದಲನೆಯ ದೈನಿಕ ಪತ್ರಿಕೆಯನ್ನಾಗಿ ಮಾಡಿದನು. ಈತನು ಮೊದಲಿನಿಂದಲೂ ಸಮಾಜ ಸಂಸ್ಕರಣ ಪ್ರಿಯವಾದ ಸ್ವಭಾವದವನಾಗಿದ್ದುದರಿಂದ, ಆ ಕಾಲದಲ್ಲಿ ಪಾಶ್ಚಾತ್ಯದೇಶದಲ್ಲಿ ವ್ಯವಹರಣೆಯಲ್ಲಿದ್ದ ೧೩ ವರ್ಷ ವಯಸ್ಸು ತುಂಬದ ಹುಡುಗಿಯರಲ್ಲೂ ಪುರುಷರು ಸಂಗಮಾಗುತ್ತಿದ್ದ ಪದ್ಧತಿಯನ್ನು ತಪ್ಪಿಸಬೇಕೆಂದು ಸಂಕಲ್ಪಿಸಿ, ಆ ವಿಷಯವಾಗಿ ಕಠಿನವಾದ ಲೇಖನಗಳನ್ನು ಬರೆದು ಇಂಗ್ಲೆಂಡು ದೇಶದಲ್ಲೆಲ್ಲಾ ಚಳವಳಿಯು ಹುಟ್ಟುವಂತೆ ಮಾಡಿದನು. ಆ ಲೇಖನಗಳಿಗಾಗಿ ಸರ್ಕಾರದವರು ಈತನಿಗೆ ೩ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು. ಆದರೂ ಈ ಮಹಾನುಭಾವನು ಧೈರ್ಯಗೆಡಲಿಲ್ಲ. ಏಕೆಂದರೆ— ಅವನು ಸ್ವಾರ್ಥಪರನಲ್ಲ; ತನ್ನೊಬ್ಬನಿಗೆ ತೊಂದರೆಯಾದರೂ ಲೋಕಕ್ಕೆ ಹಿತವಾಗಬೇಕೆಂದು ಬಯಸುತ್ತಿದ್ದನು. ಮತ್ತೂ ಸತ್ಯಕ್ಕೂ ನ್ಯಾಯಕ್ಕೂ ಎಂದಿಗಾದರೂ ಜಯವುಂಟಾಗುವುದೇ ಸಿದ್ಧವೆಂದು ದೃಢವಾಗಿ ನಂಬಿದ್ದನು. ಅದಕ್ಕೆ ಸರಿಯಾಗಿ ಅವನ ಸತ್ಸಂಕಲ್ಪಕ್ಕೆ ಜಯವುಂಟಾಗುವ ಕಾಲವೂ ಒದಗಿತು. ೧೬ ವರ್ಷದೊಳಗಿನ ಹೆಣ್ಣುಗಳಲ್ಲಿ ಯಾವ ಪುರುಷನೂ ಸಂಭೋಗವನ್ನಾಚರಿಸಕೂಡದೆಂಬ ವಿಧಿಯನ್ನು ಸರ್ಕಾರದವರೇ ಮಾಡಿದರು. ಆದರೆ ಈ ಸಂಬಂಧವಾದ ಲೇಖನಗಳನ್ನು ಮೊದಮೊದಲು ಸ್ಟೆಡ್ ಮಹಾಶಯನು ಬರೆದಾಗ ಆ ಪಾಲ್‌ಮಾಲ್ ಗೆಜೆಟ್ ಪತ್ರಿಕಾಧಿಪತಿಗೂ ಈತನಿಗೂ ಕಲಹವುಂಟಾಗಿ, ೧೮೮೯ ನೆಯ ವರ್ಷದಲ್ಲಿ ಅದರ ಸಂಪಾದಕತ್ವವನ್ನು ಈತನು ಬಿಟ್ಟುಬಿಟ್ಟನು. ಬಳಿಕ ೧೮೯೦ರಲ್ಲಿ ಈತನು ಸ್ವತಂತ್ರವಾಗಿ "ರೆವ್ಯೂ ಆಫ್ ರೆವ್ಯೂಸ್" ಎಂಬ ಪತ್ರಿಕೆಯನ್ನು ಸ್ಥಾಪಿಸಿ, ಅದರಿಂದಲೇ ತನ್ನ ಜೀವಿತ ಚರಿತಾರ್ಥವನ್ನು ಮಾಡಿಕೊಳ್ಳಲುಪಕ್ರಮಿಸಿದನು. ಅದು ಇದುವರೆಗೂ ನಡೆಯುತ್ತಲೇ ಬಂದಿತು. ಕೆಲತಿಂಗಳ ಕೆಳಗೆ ಸ್ಟೆಡ್ ಮಹಾಶಯನು ಆ ಪತ್ರಿಕೆಯ ೨೦ ನೆಯ ವರ್ಷದ ವರ್ಧಂತ್ಯುತ್ಸವವನ್ನು ಮಾಡಿದಾಗ, ಅಲೆಗ್ಸಾಂಡ್ರಾ ಮಹಾರಾಣಿಯವರು, ಲಾರ್ಡ್ ಮಾರ್ಲೆ, ಲಾರ್ಡ್ ಜಾರ್ಜ್ ಮೊದಲಾದ ಸ್ವದೇಶವಿದೇಶದ ಮಹಾಜನರನೇಕರು ಅಭಿನಂದನಪತ್ರಗಳನ್ನು ಬರೆದು ಕಳುಹಿಸಿದ್ದರು.

ಈತನ ಲೇಖನಶಕ್ತಿಯು ಅದ್ಭುತವಾಗಿದ್ದಿತು. ಎಂತಹ ಕಠಿನ ವಿಷಯವನ್ನಾದರೂ ಸರಳವಾದ ಪದರಚನೆಯಿಂದ ವಾಚಕರಿಗೆ ಕರತಲಾಮಲಕವಾಗಿ ಬೋಧೆಯಾಗುವಂತೆ ಬರೆದು ಆನಂದಪಡಿಸುತ್ತಿದ್ದನು. ಈತನು ಸಕಲವಿಧ ಶಾಸ್ತ್ರಜ್ಞಾನವನ್ನೂ ಅಪಾರವಾದ ಲೋಕಾನುಭವವನ್ನೂ ಪಡೆದುಕೊಂಡಿದ್ದನಾದಕಾರಣ, ಈತನ ಲೇಖನಗಳು ಪ್ರಭುಗಳು, ಮಂತ್ರಿಗಳು, ಸೇನಾಧಿಪತಿಗಳು, ಶಾಸ್ತ್ರಜ್ಞರು, ಗ್ರಂಥಕರ್ತರು, ಸಂಘಸಂಸ್ಕಾರಕರು, ಶ್ರೀಮಂತರು, ರಿಕ್ತರು ಮೊದಲಾದ ಎಲ್ಲ ತರದ ಜನರಿಗೂ ಮತ್ತೂ ಪ್ರಪಂಚದ ಮೇಲಿರುವ ಎಲ್ಲ ಖಂಡದ ಸ್ತ್ರೀಪುರುಷರಿಗೂ ಬೋಧಪ್ರದವಾಗಿದ್ದುವು. ಈತನ ಲೇಖನಗಳು ಆಯಾ ದೇಶಗಳಲ್ಲಿ ಎಷ್ಟೋ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟು, ಲಕ್ಷಾಂತರ ಪ್ರಜೆಗಳಿಂದ ಓದಲ್ಪಡುತ್ತಿದ್ದುವು. ಈ ಪ್ರಪಂಚದಲ್ಲಿ ಯಾವ ಯಾವ ಭಾಗದಲ್ಲಿ ಆಂಗ್ಲಭಾಷೆಯು ವ್ಯಾಪಿಸಿರುವುದೋ ಆ ಸ್ಥಳಗಳಿಗೆಲ್ಲಾ ಈತನ ಪತ್ರಿಕೆಯು ತಪ್ಪದೆ ಹೋಗುತ್ತಿದ್ದಿತು.

ಈತನಲ್ಲಿ ಸತ್ಯಪ್ರಿಯತೆಯೂ ನ್ಯಾಯಪ್ರವರ್ತನವೂ ದೇಶವಾತ್ಸಲ್ಯವೂ ಅಸಾಧಾರಣವಾಗಿದ್ದುವು. ತನ್ನ ಸರ್ವಸ್ವವೂ ಹೋದರೂ ಆ ಸದ್ಗುಣಗಳ ಭಂಗಕ್ಕೆ ಲೇಶಮಾತ್ರವೂ ಅವಕಾಶಕೊಡದಂತೆ ಪ್ರವರ್ತಿಸುವುದು ಆತನ ಕಲಿತನವಾಗಿದ್ದಿತು. ಆತನ ಆ ಸಾದ್ಗುಣ್ಯದ ಕೆಚ್ಚನ್ನು ದೃಷ್ಟಾಂತಪಡಿಸುವ ಮಹಾಕಾರ್ಯಗಳು ಆತನ ಜೀವಿತಕಾಲದಲ್ಲಿ ಎಷ್ಟೋ ನಡೆದು ಹೋದುವು. ಉದಾಹರಣಾರ್ಥವಾಗಿ ಒಂದೆರಡನ್ನಾದರೂ ಇಲ್ಲಿ ಹೇಳದಿದ್ದರೆ ಈ ಲೇಖನವೆಲ್ಲಾ ಆಕಾಶ ಪುರಾಣವಾಗುವುದು. ತನ್ನ ಮನಸ್ಸಿಗೆ ನ್ಯಾಯವೆಂದು ತೋರಿದ ವಿಷಯವನ್ನು ಕಡೆಯವರೆಗೂ ಸಾಧಿಸುವುದಕ್ಕೆ ಪ್ರಾಣವನ್ನಾದರೂ ಒಪ್ಪಿಸುವವನಾಗಿದ್ದ ಈ ಮಹಾನುಭಾವನಿಗೆ ಬೋವರರ ಮೇಲೆ ಇಂಗ್ಲೀಷರು ಆರಂಭಿಸಿದ ಯುದ್ಧವು ಅನ್ಯಾಯವೆಂದು ತೋರಿದುದರಿಂದ, ಮುಚ್ಚುಮರೆಯಿಲ್ಲದೆ ಅದನ್ನು ಖಂಡಿಸುವುದಕ್ಕೆ ಪ್ರಯತ್ನಿಸಿದನು. ಬೋವರರ ಪಕ್ಷವನ್ನು ವಹಿಸಿ, ತನ್ನ ಆಂಗ್ಲ ಜನರ ಪ್ರವರ್ತನವನ್ನು ನಿಂದ್ಯವಾದುದೆಂದು ಘಂಟಾಘೋಷವಾಗಿ ಸಾರಲುಪಕ್ರಮಿಸಿದನು. ಇದರಿಂದ ತನ್ನ ಪ್ರಾಣಸ್ನೇಹಿತರೆಲ್ಲಾ ಇವನಿಗೆ ಹಗೆಯಾದರು. ಯಾರೂ ಇವನ ಮನೆಯಕಡೆಗೆ ತಿರುಗಿ ನೋಡದವರಾದರು. ಪತ್ರಿಕೆಯ ವರ್ಗಣಿದಾರರ ಸಂಖ್ಯೆಯೂ ಕಡಿಮೆಯಾಯಿತು. ಪ್ರತಿಯೊಬ್ಬ ಆಂಗ್ಲ ಮನುಷ್ಯನೂ ಈತನನ್ನು ಸ್ವದೇಶದ್ರೋಹಿಯೆಂದು ಅಲ್ಲಗಳೆಯುವುದಕ್ಕುಪಕ್ರಮಿಸಿದನು. ಅಷ್ಟಾದರೂ ಈತನ ಮನೋಬಲವು ಸ್ವಲ್ಪವೂ ಕದಲಲಿಲ್ಲ. "ಬೋವರರ ಮೇಲಣ ಯುದ್ಧವನ್ನು ನಿಲ್ಲಿಸಬೇಕು, ನಿಲ್ಲಿಸಬೇಕು, ಅವರಮೇಲೆ ಯುದ್ಧಮಾಡುವುದು ಪರಮಾನ್ಯಾಯ" ವೆಂಬ ಸಂಗತಿಯನ್ನು ನಾನಾವಿಧವಾದ ಕಾರಣಗಳಿಂದ ಸಾಧಿಸುವ ಲೇಖನಗಳನ್ನು ಪ್ರತಿ ಸಂಚಿಕೆಯಲ್ಲೂ ಬರೆಯುತ್ತಲೇ ಬಂದನು. ಇಂಗ್ಲೆಂಡ್ ದೇಶವೇ ತನ್ನಮೇಲೆ ತಿರುಗಿಬಿದ್ದರೂ ಈತನು ಅನ್ಯಾಯಕ್ಕೆ ಕಾಲಿಕ್ಕದೆ, ಸತ್ಯದ ಉನ್ನತಿಯಿಂದ ಜಾರಿಬೀಳದೆ, ಜನ ಮೆಚ್ಚಿಗೆಗೆ ಆಸೆಪಡದೆ, ತನ್ನ ಅಚಂಚಲವಾದ ಮನೋದಾರ್ಢ್ಯವನ್ನು ಜಗತ್ತಿಗೆ ತೋರ್ಪಡಿಸಿ, ನಿಜವಾದ ಪತ್ರಸಂಪಾದಕನ ಲಕ್ಷಣವು ಹೇಗಿರಬೇಕೆಂಬುದನ್ನು ಭೂಮಂಡಲದಲ್ಲಿ ಬಿತ್ತರಿಸಿ, ಸಂಪಾದಕ ಸಾರ್ವಭೌಮನೆಂದು ಜಗತ್ತಿನವರಿಂದೆಲ್ಲಾ ಸ್ತೋತ್ರಮಾಡಿಸಿಕೊಳ್ಳುವಂತಾದನು. ಕಡೆಗಾದರೂ ಆಂಗ್ಲ ಸರಕಾರದವರು ಯುದ್ಧವನ್ನು ನಿಲ್ಲಿಸಿ, ಒಪ್ಪಂದವನ್ನು ಮಾಡಿಕೊಂಡು, ಬೋವರರು ಕೇಳುವ ಸ್ವಾತಂತ್ರ್ಯಗಳನ್ನು ಕೊಡಲೇ ಬೇಕಾಯಿತು. "ಈಗ ದಕ್ಷಿಣ ಅಫ್ರಿಕಾದಲ್ಲಿ ಶಾಂತಿಯು ನೆಲಸಿ, ಸ್ವಾರಾಜ್ಯ ಸಂಪತ್ತಿಯು ಬೋವರರಿಗೆ ದೊರೆತಿರುವುದು ಸ್ಟೆಡ್ ಮಹಾಶಯನಂತಹ ಮಹಾನುಭಾವರ ನ್ಯಾಯವಾದಿತ್ವದಿಂದಲೇ" ಎಂಬುದಾಗಿ ಜನರಲ್ ಬೋಥಾರವರು ಸಹ ನುಡಿದಿರುವರು. ಆಗ ಸ್ಟೆಡ್ ಮಹಾಶಯನ ಮಾತಿಗೆ ಸಿಡಿದು ಬೀಳುತ್ತಿದ್ದ ಆಂಗ್ಲಜನರೇ ಈಚೆಗೆ ಅವನಾಡುತ್ತಿದ್ದ ಮಾತುಗಳನ್ನೆಲ್ಲಾ ಮೆಚ್ಚಿಕೊಳ್ಳುವವರಾದರು.

ದಕ್ಷಿಣಾಫ್ರಿಕಾದ ಚಿನ್ನದ ಗಣಿಗಳಿಂದ ಅತ್ಯಂತ ಸಂಪತ್ತಿಯನ್ನಾರ್ಜಿಸಿದ ಸೆಸಿಲ್‌ರೋಡ್ಸ್ ಎಂಬಾತನು ಈ ಸ್ಟೆಡ್ ಮಹಾಶಯನ ಪ್ರಾಣಸ್ನೇಹಿತರಲ್ಲಿ ಒಬ್ಬನು. ಆತನು ತನ್ನ ಆಸ್ತಿಯಲ್ಲಿ ೧ ಕೋಟಿ ರೂ. ಗಳನ್ನು ತನ್ನ ಮಿತ್ರನಾದ ಈ ಸ್ಟೆಡ್ ಮಹಾಶಯನಿಗೆ ಕೊಡತಕ್ಕದೆಂದು ಮರಣಶಾಸನವನ್ನು ಬರೆದಿಟ್ಟಿದ್ದನು. ಆದರೆ ಭಂಗಾರದ ವಜ್ರದ ಗಣಿಗಳ ಮೇಲಣ ಆಸೆಯಿಂದಲೇ ಆಂಗ್ಲಜನರು ಬೋವರರ ದೇಶದಮೇಲೆ ದಂಡೆತ್ತಿಹೋದರೆಂಬುದು ಈ ಸ್ಟೆಡ್ ಮಹಾಶಯನಿಗೆ ತೋರಿದ್ದುದರಿಂದಲೂ, ಹಾಗೆ ಆಂಗ್ಲ ಜನರು ಪ್ರವರ್ತಿಸುವಂತೆ ಮಾಡುವುದಕ್ಕೆ ಈ ಸೆಸಿಲ್‌ರೋಡ್ಸೇ ಕಾರಣನೆಂದು ತಿಳಿದಿದ್ದುದರಿಂದಲೂ ಸಹ, ಸ್ನೇಹಿತನೆಂಬ ಅಭಿಮಾನದಿಂದಲಾಗಲಿ, ೧ ಕೋಟಿ ರೂ. ನ ಆಸೆಯಿಂದಲಾಗಲಿ, ಈ ಸ್ಟೆಡ್ ಮಹಾಶಯನು ಅದನ್ನು ಮುಚ್ಚಿಕೊಳ್ಳದೆ, "ಬೋವರರ ಮೇಲಣ ಯುದ್ಧಕ್ಕೆ ಸೆಸಿಲ್‌ರೋಡ್ಸೇ ಕಾರಣನು" ಎಂದು ಈತನು ತನ್ನ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬರೆದು, ಕಠೋರವಾಗಿ ಆತನನ್ನು ನಿಂದಿಸುತ್ತ ಬಂದನು. ಅದರಿಂದ ಸೆಸಿಲ್‌ರೋಡ್ಸಿಗೆ ಕೋಪಹುಟ್ಟಿ, ೧ ಕಾಸನ್ನೂ ಸ್ಟೆಡ್ಡಿಗೆ ಕೊಡದೆ ತಾನು ಬರೆದಿದ್ದ ಶಾಸನವನ್ನು ಹರಿದುಬಿಟ್ಟನು. ಅದನ್ನು ತಿಳಿದು ಈ ಸ್ಟೆಡ್ ಮಹಾಶಯನು "ನನಗೆ ಪ್ರಪಂಚದಲ್ಲಿ ಸತ್ಯವು ಬೇಕೇ ಹೊರತು ಹಣವು ಬೇಕಿಲ್ಲ" ವೆಂದು ಬರೆದು, ತನ್ನ ಸ್ವಾರ್ಥಪರಿತ್ಯಾಗ ಗುಣದ ಅತ್ಯಂತ ಮಹತ್ವವನ್ನು ಜಗತ್ತಿಗೆ ತೋರಿಸಿದನು.

ಈತನ ದೀನಜನಾಭಿಮಾನವು ಮೇಲಾತೀತವಾಗಿದ್ದಿತು. ಐರೋಪ್ಯದೇಶೀಯರು ತಮಗೆ ಅಂಕಿತರಾದ ಪ್ರಜೆಗಳನ್ನೆಲ್ಲಾ ಪಕ್ಷಪಾತವಿಲ್ಲದೆ ಒಂದೇ ಸಮನಾಗಿ ಕಂಡು ಆಳಬೇಕೆಂದು ಈತನು ಯಾವಾಗಲೂ ವಾದಿಸುತ್ತಿದ್ದನು. ಬೆಲ್ಜಿಯಂ ಪ್ರಭುವು ಕಾಂಗೋ ಜನರನ್ನು ಹಿಂಸೆಗೊಳಿಸಿದುದನ್ನೂ, ದಕ್ಷಿಣ ಆಫ್ರಿಕಾದವರು ಹಿಂದೂಗಳನ್ನೂ ನೀಗ್ರೋ ಜನರನ್ನೂ ಬಾಧಿಸುತ್ತಿರುವುದನ್ನೂ, ಇಟಲಿಯನ್ನರು ತುರ್ಕಿಯಮೇಲೆ ಕಾಲುಕೆರೆದು ಯುದ್ಧಕ್ಕೆ ಹೋಗಿರುವುದನ್ನೂ, ರಷ್ಯಾದವರು ಸ್ವದೇಶೀಯರ ಉನ್ನತ್ಯಾಕಾಂಕ್ಷೆಯನ್ನು ಅಣಗಿಸಲು ಯತ್ನಿಸಿದುದನ್ನೂ ಕಂಡು ಈ ಮಹಾಶಯನು ಸುಮ್ಮನಿದ್ದವನಲ್ಲ. ಆ ದೀನಜನರಿಗುಂಟಾದ ಹಿಂಸೆಯೆಲ್ಲಾ ತನಗೇ ಆಗುತ್ತಿರುವುದೋ ಎಂಬುವಂತೆ ಸಂಕಟಪಟ್ಟು, ಆ ಜನರ ಪಕ್ಷವನ್ನು ವಹಿಸಿ, ಧೈರ್ಯದಿಂದ ಹೋರಾಡುತ್ತಿದ್ದನು. ಭರತಖಂಡದ ಮೇಲೂ ಈ ಮಹಾಶಯನ ಅಭಿಮಾನವು ವಿಶೇಷವಾಗಿದ್ದಿತು. ಈ ದೇಶದ ಪರಿಪಾಲನಾ ಕ್ರಮದಲ್ಲಿ ಭಾರತೀಯರಿಗೆ ಹೆಚ್ಚಾದ ಸೌಕರ್ಯಸ್ವಾತಂತ್ರ್ಯಗಳನ್ನು ಕೊಡುವುದು ಆವಶ್ಯಕವೆಂದು ಈತನು ಒತ್ತೊತ್ತಿ ಹೇಳುತ್ತಿದ್ದನು. ಈ ದೇಶದಿಂದ ಯಾವ ಪ್ರಮುಖ ದೇಶಾಭಿಮಾನಿಯು ಲಂಡನ್ನಿಗೆ ಹೋದರೂ, ಅವರನ್ನು ತನ್ನ ಮನೆಗೆ ಬರಮಾಡಿಕೊಂಡು ಸತ್ಕರಿಸಿ, ಭರತಖಂಡದ ಸ್ಥಿತಿಗತಿಗಳನ್ನು ಕೇಳಿ ಅಪಾರವಾದ ತನ್ನ ವಾತ್ಸಲ್ಯವನ್ನು ವ್ಯಕ್ತಪಡಿಸುತ್ತಿದ್ದನು. ಭರತಖಂಡದ ಏಳ್ಗೆಯ ವಿಷಯಕವಾದ ಎಷ್ಟೋ ಲೇಖನಗಳು ಈತನ ರೆವ್ಯೂ ಆಫ್ ರೆವ್ಯೂಸ್ ಪತ್ರಿಕೆಯಲ್ಲಿ ಆಗಾಗ್ಗೆ ಬರುತ್ತಲೇ ಇದ್ದುವು. ೨ ವರ್ಷಗಳ ಹಿಂದೆ ಅಲಹಾಬಾದಿನಲ್ಲಿ ರಾಷ್ಟ್ರೀಯ ಮಹಾಸಭೆಯು ಸೇರಿದಾಗ್ಗೆ ಈ ಸ್ಟೆಡ್ ಮಹಾಶಯನು ಪ್ರತ್ಯಕ್ಷವಾಗಿ ಭರತಖಂಡಕ್ಕೆ ಬಂದು ಹೋಗಬೇಕೆಂದು ಯೋಚಿಸಿದ್ದನು. ಇತರ ಕಾರ್ಯಗಳ ಗೊಂದಲದಿಂದ ಬರಲನುಕೂಲವಾಗಲಿಲ್ಲ.

ಈತನ ಸ್ವದೇಶಾಭಿಮಾನವೂ ಬಲತ್ತರವಾದುದು. ಇಂಗ್ಲೆಂಡು ದೇಶದ ನೌಕಾ ಸೇನೆಯು ಈಗ್ಗೆ ೨೮ ವರ್ಷಗಳ ಹಿಂದೆ ಹೀನಸ್ಥಿತಿಯಲ್ಲಿರುತ್ತಿರಲು, ಅದನ್ನು ಈತನು ನೋಡಿ "ನಮ್ಮ ನೌಕಾ ಸೇನೆಯನ್ನು ಕುರಿತ ಸತ್ಯವಚನವು" ಎಂಬ ಶಿರೋಲೇಖನದಿಂದ ಹಲವು ಬರವಣಿಗೆಗಳನ್ನು ಬರೆದನು. ಆಗ ಆಂಗ್ಲ ಜನರೆಲ್ಲರೂ ಕಣ್ದೆರೆದು, ತಮ್ಮ ಸರ್ವ ಜೀವಿತಕ್ಕೂ ಆಧಾರವಾದ ನೌಕಾಸೇನೆಯ ಸ್ಥಿತಿಯು ಅಷ್ಟು ಹೀನವಾಗಿರುವುದನ್ನು ಕಂಡು ಹಾಹಾಕಾರಮಾಡಿದರು. ಅಂದಿನಿಂದ ಅಲ್ಲಿನ ಜಲಸೈನ್ಯವು ಅಭಿವೃದ್ಧಿಗೆ ಬರುವುದಕ್ಕುಪಕ್ರಮಿಸಿ, ಸಮುದ್ರದ ಮೇಲಿನ ಸೇನೆಯಲ್ಲಿ ಇಂಗ್ಲೆಂಡು ದೇಶವನ್ನು ಮೀರಿದ ರಾಜ್ಯವು ಮತ್ತೊಂದಿಲ್ಲವೆಂಬ ಪ್ರಖ್ಯಾತಿಯುಂಟಾಗುವಂತಾಯಿತು. ಈಚೆಗೆ ಜರ್ಮನಿಯವರು ನೌಕಾ ಸೇನೆಯನ್ನು ಬಲಪಡಿಸುತ್ತಿರುವುದನ್ನು ಕಂಡು, ಈತನು— "ಜರ್ಮನಿಯವರು ೧ ಹಡಗನ್ನು ಕಟ್ಟಿಸಿದರೆ ಇಂಗ್ಲೆಂಡು ಎರಡನ್ನು ಕಟ್ಟಿಸುತ್ತ ಬರಬೇಕು." ಎಂದು ಮೊನ್ನೆಮೊನ್ನೆವರೆಗೂ ಬರೆಯುತ್ತಲಿದ್ದನು.

ಅನೇಕವಿಧದ ನಷ್ಟಗಳನ್ನುಂಟುಮಾಡುವ ಯುದ್ಧಗಳೇ ಜಗತ್ತಿನಲ್ಲಿ ನಡೆಯದಂತೆ ಮಾಡಬೇಕೆಂಬ ಉದ್ದೇಶದಿಂದ ರಾಷ್ಟ್ರಕರ್ತರ ದೊರೆಗಳನ್ನು ಹಿಡಿದು ವಿಚಾರಿಸುವ ನ್ಯಾಯ

ಸ್ಥಾನವನ್ನು ಹಾಲೆಂಡ್ ದೇಶದ ಹೇಗ್ ಪಟ್ಟಣದಲ್ಲಿ ಸ್ಥಾಪಿಸುವುದಕ್ಕೆ ಈ ಸ್ಟೆಡ್ ಮಹಾಶಯನ ಸೂಚನೆಯೇ ಪ್ರಬಲಕಾರಣವಾಗಿದ್ದಿತು. ಹೀಗೆ ಜಗತ್ತಿನ ಕ್ಷೇಮಚಿಂತನೆಯನ್ನೆಲ್ಲಾ ಕಟ್ಟಿಕೊಂಡು ತನ್ನ ೨೦ ನೆಯ ವಯಸ್ಸಿನಿಂದ ಕಡೆಯ ೬೩ ನೆಯ ವಯಸ್ಸಿನವರೆಗೂ ಎಂದರೆ ೪೩ ವರ್ಷಕಾಲ ಪತ್ರಿಕಾ ಸಂಪಾದಕತ್ವವನ್ನು ಲೋಕೋತ್ತರವಾಗಿ ನಿರ್ವಹಿಸಿ, ಈತನಷ್ಟು ಜಗದ್ವಿಖ್ಯಾತಿಯನ್ನು ಪಡೆದ ಮಹಾನುಭಾವನು ಮತ್ತೊಬ್ಬನಿಲ್ಲ. ಈ ಕಾಲದಲ್ಲಿ ಲೋಕೋಪಕಾರಾರ್ಥವಾಗಿ ಈ ಮಹಾಶಯನು ಎಷ್ಟೆಷ್ಟು ಸಾಹಸಕಾರ್ಯಗಳನ್ನು ಹೇಗೆಹೇಗೆ ಮಾಡಿ ಎಷ್ಟು ಶ್ರಮಪಟ್ಟನೋ ಅದನ್ನೆಲ್ಲಾ ಬರೆಯುವುದಕ್ಕೆ ಎಷ್ಟೋ ಪುಸ್ತಕಗಳಾಗಬೇಕು. ಸತ್ಯ ನ್ಯಾಯಗಳನ್ನು ಬಿಡದೆ ಧೈರ್ಯದಿಂದ ಕೆಲಸಮಾಡತಕ್ಕ ಒಬ್ಬ ಪತ್ರಿಕಾಸಂಪಾದಕನಿಂದ ಜಗತ್ತಿಗೆ ಎಷ್ಟು ಉಪಕಾರವಾಗುವುದೆಂಬುದನ್ನು ತಿಳಿಸುವುದಕ್ಕೆ ಸ್ಟೆಡ್ ಮಹಾಶಯನ ಜೀವಿತ ಚರಿತ್ರವೇ ಸಾಕ್ಷ್ಯವಾಗಿರುತ್ತದೆ.

ಟಿಟಾನಿಕ್ ಹಡಗು ಮುಳುಗಿದುದರಿಂದ ಅದರಲ್ಲಿದ್ದವರ ಮತ್ತೂ ಆಸ್ತಿಯನ್ನು ಕಳೆದುಕೊಂಡವರ ಸಂಬಂಧಿಗಳಿಗೆ ವಿಶೇಷವಾಗಿಯೂ, ಭೂತದಯೆಯುಳ್ಳವರಿಗೆಲ್ಲಾ ಸಾಮಾನ್ಯವಾಗಿಯೂ ಸ್ವಲ್ಪಕಾಲ ದುಃಖವುಂಟಾಗುವುದು ಸಹಜ. ಆದರೆ ಅದರೊಡನೆಯೇ ಅಟ್ಲಾಂಟಿಕ್ ಮಹಾಸಾಗರದಲ್ಲಿ ಐಕ್ಯಗೊಂಡ ಈ ಸ್ಟೆಡ್ ಮಹಾಶಯನ ಅಳಿವು ಪ್ರಪಂಚದ ಸಕಲ ಭಾಗದ ಜನರಿಗೂ ಚಿರಕಾಲಿಕವಾದ ದುಃಖವನ್ನುಂಟುಮಾಡಿರುತ್ತದೆ. ಏಕೆಂದರೆ—ಈ ಜಗತ್ಕುಟುಂಬಿಯಂಥ ಮಹಾನುಭಾವನನ್ನು ಪ್ರಪಂಚದ ಜನರು ಸುಲಭವಾಗಿ ಪಡೆದುಕೊಳ್ಳಲಾರರು.

ಜನ್ಮಸಾಫಲ್ಯವನ್ನು ಪಡೆದುಕೊಂಡ ಈ ಮಹಾಶಯನ ಆತ್ಮನಿಗೆ ಜಗದೀಶ್ವರನು ಶಾಶ್ವತ ಶಾಂತಿಯನ್ನನುಗ್ರಹಿಸಲಿ.

ಕಂ॥ ಅನ್ಯೋನ್ಯರೆಳಸದೆ ಸತ್ಯದ
ಜೋನ್ನತಿಯಿಂ ಜಗದೊಳ್ ದತುಲದೀನದಯಾಸಂ॥
ಪನ್ನತೆಯಿಂ ಮೆರೆದಾಸ್ಟೆಡ್
ಸನ್ನುತನಾಮನ ಚರಿತ್ರಮಿಳೆಗೆ ಪವಿತ್ರಂ ॥

ಮೈಸೂರ್ ಸ್ಟಾರ್

೧೯೧೨ ನೆಯ ಮೇ ತಾ॥ ೬. ನೆಯ ಸೋಮವಾರ

ಪ್ರಜಾಪ್ರತಿನಿಧಿಸಭೆಗೆ ಸಭಾಸ್ತಾರರನ್ನು ಆರಿಸುವುದು.

ಈ ವರ್ಷದ ನವರಾತ್ರಿಯ ಮಹೋತ್ಸವವಾದನಂತರ ರಾಜಧಾನಿಯಲ್ಲಿ ನಡೆಯತಕ್ಕ ಪ್ರಜಾಪ್ರತಿನಿಧಿಸಭೆಯು ಅಕ್ಟೋಬರ್ ತಾ॥ ೨೩ ರಿಂದ ಆರಂಭಿಸಲ್ಪಟ್ಟು ನಡೆಯುವುದೆಂದೂ, ಹಿಂದೆ ಈ ಸಭೆಗೆ ಆರಿಸಲ್ಪಟ್ಟಿದ್ದ ಸಭಾಸದರ ಕಾಲಾವಧಿಯು ಮುಗಿದುದರಿಂದ ಹೊಸದಾಗಿ ಸಭಾಸ್ತಾರರ ಆರಿಸುವಿಕೆಯು ಸಂಸ್ಥಾನದಲ್ಲಿ ನಡೆಯಬೇಕೆಂದೂ ನಮ್ಮ ಸರ್ಕಾರದವರು ಪ್ರಕಟಪಡಿಸಿದ್ದಾರೆ. ಹೀಗೆ ೩ ವರ್ಷಕ್ಕೊಂದುಸಲ ಸಭಾಸದರು ಹೊಸದಾಗಿ ಆರಿಸಲ್ಪಡಬೇಕೆಂದು ಗೌರ್ನಮೆಂಟಿನವರು ಮಾಡಿರುವ ಏರ್ಪಾಡು ಏತಕ್ಕೆಂದರೆ—ಪ್ರಜೆಗಳಿಗಿರುವ ಕಷ್ಟ ಸುಖಗಳನ್ನು ತಿಳಿದುಕೊಂಡು, ಅದನ್ನು ಸರ್ಕಾರದವರ ಮುಂದೆ ನಿವೇದಿಸಿ, ಪ್ರಜೆಗಳ ಹಿತಾರ್ಥವಾಗಿ ಸರ್ಕಾರದವರಿಂದ ಯಾವಯಾವ ಕೆಲಸಗಳನ್ನು ಮಾಡಿಸಿಕೊಳ್ಳಬೇಕೋ ಅದನ್ನು ಶ್ರುತಪಡಿಸಿ ಸರ್ಕಾರದವರು ಪ್ರಜೆಗಳಿಗಾಗಿ ಮಾಡಿರುವ ಮತ್ತೂ ಮಾಡುತ್ತಿರುವ ಕಾರ್ಯಗಳೇನೇನೆಂಬುದನ್ನು ಈ ಸಭೆಯಲ್ಲಿ ತಿಳಿದುಕೊಂಡು ಅದನ್ನು ತಮ್ಮ ಪ್ರಾಂತದ ಪ್ರಜೆಗಳಿಗೆ ತಿಳುಹಿಸುವಂಥ ಸಮರ್ಥರುಗಳು ಪ್ರಜೆಗಳಿಂದಲೇ ಆರಿಸಲ್ಪಟ್ಟು ಬರುವವರಾಗಬೇಕು. ಹಿಂದೆ ಒಂದುಸಲ ಆರಿಸಲ್ಪಟ್ಟಿದ್ದವರಿಂದ ಕರ್ತವ್ಯವು ಸರಿಯಾಗಿ ನಡೆಯಲ್ಪಡದಿದ್ದರೆ, ಅದನ್ನು ಅರಿತು ಮುಂದೆ ಬೇರೆ ಸಮರ್ಥರಾದವರನ್ನು ಆರಿಸಿ ಕಳುಹಬೇಕು ಎಂಬುದಕ್ಕಾಗಿಯೇ. ಮತ್ತೂ ಸರ್ಕಾರದ ಬೊಕ್ಕಸದ ಎಷ್ಟೋ ಸಹಸ್ರ ರೂಪಾಯಿಗಳನ್ನೂ, ಅಮೂಲ್ಯವಾದ ಕಾಲವನ್ನೂ ಈ ಸಭೆಗಾಗಿ ಗೌರ್ನಮೆಂಟಿನವರು ವಿನಿಯೋಗಿಸುವುದು ಸಹ ಸಭೆಯನ್ನು ಪಟಾಟೋಪದಿಂದ ನಾಮಮಾತ್ರಕ್ಕೆ ನೆರವೇರಿಸುವುದಕ್ಕೋಸುಗವಾಗಿರದೆ, ಪಾಲ್ಯಪಾಲಕರ ವಿಚಾರಗಳು ಪರಸ್ಪರ ಗೊತ್ತಾಗಿ, ಉಭಯಪಕ್ಷದ ಪ್ರೀತಿವಿಶ್ವಾಸಗಳೂ ಅನ್ಯೋನ್ಯವಾಗಿ ವೃದ್ಧಿಗೊಂಡು, ನಿಜವಾದ ಪ್ರಜಾಹಿತವು ಇದರಮೂಲಕ ಸಾಧಿಸಲ್ಪಡಬೇಕೆಂಬುದಕ್ಕಾಗಿಯೇ ಆಗಿರುತ್ತದೆ. ಆದರೆ ಈ ಸಭೆಯು ಸ್ಥಾಪಿತವಾಗಿ ಇಂದಿಗೆ ೨೮ ವರ್ಷಗಳಾಗಿದ್ದರೂ, ಇದಕ್ಕೆ ಸಭಾಸ್ತಾರರಾಗಿ ಬರತಕ್ಕವರ ಸುಧಾರಣೆಯು ಇನ್ನೂ ಸಮಗ್ರವಾಗಿ ಆಗಿರುವುದಿಲ್ಲ. ಕೆಲವರಿಗೆ ತಾವು ನಿರೂಪಣ ಮಾಡತಕ್ಕ ವಿಷಯಗಳ ಪೂರ್ವೋತ್ತರವೇ ಚೆನ್ನಾಗಿ ಮುಂದಟ್ಟಾಗಿರುವುದಿಲ್ಲ. ಕೆಲವರಿಗೆ ಗೊತ್ತಾಗಿರುವ ವಿಷಯವನ್ನು ಸಮಂಜಸವಾಗಿ ಪ್ರತಿಪಾದಿಸುವ ಶಕ್ತಿಯು ಇರುವುದಿಲ್ಲ. ಇನ್ನು ಕೆಲವರಿಗೆ ಈ ಸಭೆಯಲ್ಲಿ ಇಂಥ ವಿಷಯಗಳನ್ನು ಚರ್ಚೆಗೆ ತರಬೇಕು ತರಬಾರದು ಎಂಬ ವಿಷಯಗಳು ಕೂಡ ಗೊತ್ತಾಗಿರುವುದಿಲ್ಲ. ಇದಕ್ಕೆಲ್ಲಾ ಅಪವಾದರೂಪವಾಗಿ ಸಮರ್ಥರಾದ ಸಭಾಸ್ತಾರರು ಕೆಲವುಂದಿಗಳು ಮಾತ್ರ ದೊರೆಯಬಹುದು. ಅನೇಕ ಸಂದರ್ಭಗಳಲ್ಲಿ ಇತರರು ಶ್ರುತಪಡಿಸಬೇಕಾಗಿರುವ ವಿಷಯಗಳಿಗೂ ಈ ಸಮರ್ಥರಾದ ಸಭಾಸದರೇ ಬಾಯಿಹಾಕಿ ಉಪಕರಿಸಬೇಕಾಗಿ ಬರುತ್ತಿರುವುದು. ಇದಲ್ಲದೆ ಈ ಸಭಾಕಾರ್ಯ ನಿರ್ವರ್ತನದಲ್ಲೂ ಸಭಾಸದರು ಮಾಡುತ್ತಿದ್ದ ಏರುಪೇರುಗಳು ವಿಶೇಷವಾಗಿರುತ್ತಿದ್ದುದರಿಂದ ಮೊನ್ನೆ ಮೊನ್ನೆಯವರೆಗೂ ಗೌರ್ನಮೆಂಟಿನವರು ಅದನ್ನು ತಿದ್ದುವುದಕ್ಕೆ ಸಾಹಸಪಟ್ಟು ಕ್ರಮವಾದ ವಿಧಿಗಳನ್ನು ಏರ್ಪಡಿಸಬೇಕಾಯಿತು.

ಈ ಸಭೆಗೆ ಬಾಲ್ಯವಯಸ್ಸೆಲ್ಲಾ ಕಳೆದು ಹೋಗಿ ಯೌವನ ವಯಸ್ಸು ಪ್ರಾಪ್ತವಾಗಿದೆ. ಇನ್ನಾದರೂ ಅದರ ವಯಸ್ಸಿಗೆ ತಕ್ಕ ವಿದ್ವದ್ಗುಣಗಳು ಅದರ ನಡವಳಿಕೆಯಲ್ಲಿ ಕಾಣಬೇಕಾದುದು ಆವಶ್ಯಕ. ಹಾಗಲ್ಲದೆ ಹೋದರೆ ಈ ಸಭೆಯ ನಿರ್ಮಾಣದ ಉದ್ದೇಶವು ಸಾರ್ಥಕವಾಗಲಾರದು. ಹಾಗಾಗಬೇಕಾದರೆ ಸಭೆಗೆ ಬರತಕ್ಕ ಪ್ರತಿನಿಧಿಗಳು ಸಮರ್ಥರಾಗಿರಬೇಕು. ಸಭಾಸದರ ಆರಿಸುವಿಕೆಯ ಕಾಲದಲ್ಲಿ ಸ್ಥಳೀಯಾಧಿಕಾರಿಗಳು ಕೆಲಕಡೆ ಪಕ್ಷಪಾತವನ್ನು ತೋರಿಸುವರೆಂಬ ದೂರಿಗೆ ಅವಕಾಶವನ್ನು ಕೊಡಕೂಡದು. ಪ್ರಜೆಗಳ ಹಿತದಕಡೆಗೆ ದೃಷ್ಟಿಯಿತ್ತು ಅವರ ಕಷ್ಟಸುಖಗಳನ್ನು ವಿಚಾರಿಸಿ ತಿಳಿದುಕೊಂಡು ಸಭೆಯಲ್ಲಿ ನಿರೂಪಿಸುವುದಕ್ಕೆ ಸಾಮರ್ಥ್ಯವುಳ್ಳವರನ್ನೇ ಆಯಾ ಪ್ರಾಂತದ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿ ಕಳುಹಿಸಿಕೊಡಬೇಕು. ಅಂಥ ಸಂದರ್ಭದಲ್ಲಿ ಅಧಿಕಾರಿಗಳ ದರ್ಪದಾಕ್ಷಿಣ್ಯ ಮೊದಲಾದುವುಗಳು ಅಡ್ಡಬಾರದಂತಿರಬೇಕು. ಮತ್ತೂ ಹೀಗೆ ಆರಿಸಲ್ಪಟ್ಟ ಪ್ರತಿನಿಧಿಗಳು ಈಗಿನಿಂದಲೂ ತಾವು ಮುಂದೆ ಸಭೆಯಲ್ಲಿ ನಡಸಬೇಕಾದ ಕರ್ತವ್ಯವನ್ನು ಕುರಿತು ವಿಚಾರಮಾಡುತ್ತ ಬರಬೇಕು. ತಮ್ಮ ಪ್ರಾಂತದಲ್ಲೇ ಗ್ರಾಮಕ್ಕೊಬ್ಬೊಬ್ಬರಂತೆಯಾದರೂ ಪ್ರಜೆಗಳನ್ನು ಬರಮಾಡಿಕೊಂಡು, ಅಥವಾ ಅವರೊಡನೆ ಪತ್ರವ್ಯವಹಾರವನ್ನು ನಡೆಯಿಸಿ, ಅವರ ಕಷ್ಟಸುಖಗಳನ್ನು ವಿಚಾರಿಸಿ, ತಾಲ್ಲೂಕು-ಡಿಸ್ಟ್ರಿಕ್ಟುಬೋರ್ಡುಗಳಲ್ಲೇ ಇತ್ಯರ್ಥವಾಗತಕ್ಕ ವಿಷಯಗಳಾಗಿದ್ದರೆ ಅವನ್ನು ಆ ಸಭೆಗಳಿಗೆ ಬಿಟ್ಟು, ಗೌರ್ನಮೆಂಟಿನ ಈ ಮುಖ್ಯಸಭೆಯ ಅವಗಾಹನಕ್ಕೆ ತರತಕ್ಕ ವಿಷಯಗಳಾಗಿದ್ದರೆ ಅವುಗಳನ್ನು ಗುರ್ತುಮಾಡಿಕೊಂಡು, ಅದರ ಸಂಬಂಧವಾಗಿ ಹಿಂದಿನ ಸಭೆಗಳಲ್ಲಿ ನಡೆದಿರುವ ನಡವಳಿಕೆಯೇನಾದರೂ ಇದ್ದರೆ ಅದನ್ನೂ ಓದಿ ತಿಳಿದುಕೊಂಡು, ಪೂರ್ವಾಪರ ವಿಚಾರವನ್ನೆಲ್ಲಾ ಸಮಗ್ರವಾಗಿ ಸಾಧಿಸಿಕೊಂಡು, ಸಭೆಗೆ ಬಂದರೆ, ಅಂಥವರು ವಿಷಯವನ್ನು ಸರಿಯಾಗಿ ನಿರೂಪಣಮಾಡುವುದಕ್ಕೂ ದಿವಾನರವರು ಅದರ ವಿಷಯಕವಾಗಿ ಯಾವುದಾದರೊಂದು ಪ್ರಶ್ನವನ್ನು ಮಾಡಿದರೂ ಥಟ್ಟನೆ ಉತ್ತರ ಹೇಳುವುದಕ್ಕೂ ಶಕ್ತರಾಗುವರು. ಹಾಗಲ್ಲದೆ ಅವಸರಕ್ಕೆ ಮೂರು ಮೊಳವನ್ನು ನೆಯ್ದಂತೆ ಹೆಸರಿಗೆ ಮಾತ್ರ ಯಾವುದಾದರೂ ೮ ವಿಷಯಗಳನ್ನು ಪಟ್ಟಿಯಲ್ಲಿ ಬರೆಯಿಸಿಬಿಟ್ಟು ಕಳುಹಿಸಿ, ಮೇಲೆ ಮೇಲೆ ಕೆಲಸಮಾಡುತ್ತ ಬರುವಂಥ ಸಭಾಸದರನ್ನು ಆರಿಸಿ ಕಳುಹಿಸುವುದಾದರೆ, ಪ್ರಜೆಗಳಿಗೆ ಯಾವ ಪ್ರಯೋಜನವೂ ಆಗದೆ ಹೋಗುವುದಲ್ಲದೆ, ಸಭೆಗಾಗಿ ವೆಚ್ಚವಾಗುವ ಧನವೂ ಕಾಲವೂ ಸಹ ನಿರರ್ಥಕವಾಗುವುವು. ಈ ಸಭೆಯಲ್ಲಿ ತಕ್ಕ ವಿಷಯಗಳನ್ನು ಗೌರ್ನಮೆಂಟಿನ ಅವಗಾಹನಕ್ಕೆ ತರಲು ಪ್ರಜೆಗಳಿಗೆ ಕೊಟ್ಟಿರುವ ಅಧಿಕಾರವು ಸಾರ್ಥಕವಾಗಬೇಕಾದರೆ, ಆ ಅಧಿಕಾರವನ್ನು ಸಮಗ್ರವಾಗಿ ವಿನಿಯೋಗಿಸುವಂಥ ಸಭಾಸದರ ಸಂಖ್ಯೆಯು ಹೆಚ್ಚಬೇಕಾದ ಸಾಧನವೇ ಮುಖ್ಯವಾದುದು. ಅಂಥ ಯೋಗ್ಯತೆಯುಳ್ಳ ಜನರು ನಮ್ಮ ದೇಶದ ಎಲ್ಲಾ ಜನವರ್ಗದವರಲ್ಲೂ ದೊರೆದು ಈ ಸಭೆಯ ಸಭಾಸದರಾಗಿ ಬರಬೇಕೆಂಬುದರ ಕಡೆಗೆ ಲಕ್ಷ್ಯವಿತ್ತು ಪ್ರಜೆಗಳೂ ಮತ್ತೂ ಸ್ಥಳೀಯಾಧಿಕಾರಿಗಳೂ ಕಾರ್ಯವನ್ನು ಮಾಡುತ್ತ ಬಂದರೆ ಪ್ರಜಾಪ್ರತಿನಿಧಿ ಸಭೆಯಿಂದ ಆಗತಕ್ಕ ಫಲಗಳು ವಿಶೇಷವಾಗಿ ದೃಗ್ಗೋಚರಕ್ಕೆ ಬರುವುವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಈ ತಾ॥ ೧೮ಕ್ಕೆ ರಾಜಧಾನಿಗೆ ಚಿತ್ತೈಸುವುದಾಗಿ ವರ್ತಮಾನವಿದೆ.

ಅರಮನೆಯ ಮೇಲ್ಭಾಗದಲ್ಲಿ ಹಾಕಲ್ಪಟ್ಟಿರುವ ದೊಡ್ಡ ಕಳಶದಮೇಲೆ ಮತ್ತೊಂದು ಸಣ್ಣ ಕಳಶವನ್ನಿಡಲು ಕಾಲಾವಧಿಯು ಕಟ್ಟಲ್ಪಡುತ್ತಿದೆ.

ನಮ್ಮ ಶ್ರೀಮನ್ಮಹಾರಾಜರವರ ಪ್ರೈ॥ ಸೆಕ್ರೆಟರಿಗಳಾಗಿರುವ ಮಿ॥ ಕ್ಯಾಂಬೆಲ್‌ರವರು ಮದ್ರಾಸಿನ ರೆವಿನ್ಯೂ ಬೋರ್ಡ್ ಕೆಲಸಕ್ಕೆ ಹೋಗುವರೆಂದು ಕೇಳುತ್ತೇವೆ.

ನಮ್ಮ ಚೀಫ್‌ಜಡ್ಜರಾದ ಸರ್ ಸ್ಟಾನ್ಲೆ ಇಸ್ಮೆಯವರು ಬರುವ ಜೂನ್ ತಿಂಗಳಿಂದ ವಿಶ್ರಾಂತಿಯನ್ನು ಪಡೆದು, ನೀಲಗಿರಿಯಲ್ಲಿ ತಾವು ಕೊಂಡುಕೊಂಡಿರುವ ಬಂಗಲೆಯಲ್ಲಿ ತಮ್ಮ ಜೀವಿತಕಾಲವನ್ನು ಕಳೆಯಬೇಕೆಂದು ಸಂಕಲ್ಪಿಸಿರುವರು.

ಎಳಂದೂರು ತಾಲ್ಲೋಕನ್ನು ಒಂದು ಸಬ್ ಡಿವಿಜನ್ನಾಗಿ ಮಾಡಿ ನಂಜನಗೂಡು ಸಬ್ ಡಿವಿಜನ್ ಛಾರ್ಜಿನಲ್ಲಿರುವ ೧ ನೆಯ ತಾ॥ ಮ್ಯಾಜಿಸ್ಟ್ರೇಟ್ ಅ॥ ಕಮಿಷನರ ಕೈಕೆಳಗೆ ಈ ಸಬ್ ಡಿವಿಜನ್ ಇರತಕ್ಕದೆಂದು ಸರ್ಕಾರದ ಪ್ರಣೆಯಾಗಿರುತ್ತದೆ.

ರಾಜಧಾನಿಯಲ್ಲಿ ಮತ್ತೆ ಬಿಸಿಲಿನ ತಾಪವು ಅತ್ಯಧಿಕವಾಗಿದೆ. ಕೃತ್ತಿಕಾ ಪ್ರಥಮಪಾದವು ಕಳೆದ ಶುಕ್ರವಾರದ ದಿನ ಪೂರ್ಣ ಜಲರಾಶಿಯಲ್ಲಿ ಹುಟ್ಟುವುದೆಂದು ಪಂಚಾಂಗದಲ್ಲಿ ಬರೆಯಲ್ಪಟ್ಟಿದೆ. ಆ ಯೋಗವೆಲ್ಲಾ ಬರಿಯ ಮೇಘದರ್ಶನದಲ್ಲೇ ಮುಗಿದು ಹೋಗುತ್ತಿದೆ.

ಅಫಿಷಿಯೇಟಿಂಗ್ ಜನರಲ್ ಮತ್ತೂ ರೆವಿನ್ಯೂ ಸೆಕ್ರಿಟರಿಯವರಾದ ಮಿ॥ ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ೩ ತಿಂಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದರಿಂದ ರಜದ ಮೇಲಿದ್ದ ಕಡೂರ ಡಿ॥ ಡಿ॥ ಕಮಿಷನರ್ ಮಿ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಅ॥ ಜ॥ ರೆ॥ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದ ತಾ॥ ೧೧ ರಲ್ಲಿ ಪಶ್ಚಿಮವಾಹಿನಿಯಲ್ಲಿ ಯಾವನೋ ಒಬ್ಬ ಮನುಷ್ಯನು ಸ್ನಾನಘಟ್ಟದಿಂದ ಕೊಂಚದೂರದಲ್ಲಿರುವ ಒಂದು ತೋಪದಲ್ಲಿ ನೀರಿನೊಳಗಿಳಿದಿರುವಾಗ್ಗೆ ಒಂದು ಮೊಸಳೆಯು ಗರಗಸದಂತಿರುವ ತನ್ನ ಬಾಲದಿಂದ ಅವನ ಕಾಲಿಗೆ ಹೊಡೆದು ಅವನು ಆ ಏಟನ್ನು ತಾಳಲಾರದೆ ಕೆಳಗೆ ಬೀಳುತಲೆ ಅವನ ಕಾಲನ್ನು ಹಿಡಿದು ಮಡುವಿಗೆಳೆದುಕೊಂಡು ಹೋಯಿತೆಂದು ಕೇಳುತ್ತೇವೆ.

ರಾಜಧಾನಿಯ ಆನರರಿ ಮ್ಯಾಜಿಸ್ಟ್ರೇಟರಾದ ಮಿ॥ ಪುಟ್ಟಯ್ಯಾಜೀ ಅರಸಿನವರು ನಾವು ಮೊದಲು ತಿಳುಹಿದ್ದಂತೆ ತಮ್ಮ ಕುವರಿಯವರನ್ನು ಅಮಲ್ದಾರ್ ಮಿ॥ ಕೃಷ್ಣ ಅರಸಿನವರ ಕುಮಾರರಿಗೆ ಕೊಟ್ಟು, ಕಳೆದ ತಾ॥ ೧೧ ರಲ್ಲಿ ಪಾಣಿಗ್ರಹಣಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಜರುಗಿಸಿ ತಮ್ಮ ಬಂಧುವರ್ಗದವರನ್ನೂ, ಮಿತ್ರಮಂಡಲಿಯವರನ್ನೂ ಊಟೋಪಚಾರಗಳಿಂದ ಸತ್ಕರಿಸಿದರು. ಈ ನೂತನ ದಂಪತಿಗಳಿಗೆ ಸಕಲ ಸುಖಸಂಪತ್ತುಂಟಾಗಲೆಂದು ಕೋರುತ್ತೇವೆ.

ಉದಕಮಂಡಲದಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಆವಾಸಸ್ಥಾನವಾದ ಫರ್ನಹಿಲ್ ಎಂಬ ಅರಮನೆಯ ಪಾಕಶಾಲೆಯಲ್ಲಿ ಈಗ ನಿತ್ಯದಲ್ಲೂ ನೂರಾರು ಸೇರು ಅಕ್ಕಿಯು ಬೇಯುತ್ತಿರುವುದರಿಂದ, ಅದರಿಂದಾಗಿ ಬರುವ ಗಂಜಿಯನ್ನು ಆ ಕಟ್ಟಡದಲ್ಲಿರುವ ಬಚ್ಚಲುಗಳನ್ನು ತೊಳೆಯಲುಪಯೋಗಿಸುತ್ತಿರುವರು. ಈ ಪ್ರಕಾರವಾಗುಪಯೋಗಿಸಲ್ಪಡುವ ಗಂಜಿಯು ಕಳೆದವಾರ ಬಚ್ಚಲಿನ ಯಾವಭಾಗದಲ್ಲೋ ನಿಂತು ಕೊಳೆತುದರಿಂದ ದುರ್ವಾಸನೆಯು ಹುಟ್ಟಿದ್ದಿತು. ಇದೇ ಸಮಯದಲ್ಲಿ ಸೀನಿಯರ್ ಸರ್ಜನರಾದ ಡಾ॥ ಅಚ್ಯುತರಾಯರೂ, ರಸಾಯನಶಾಸ್ತ್ರಜ್ಞರಾದ ಡಾ॥ ಶ್ರೀನಿವಾಸರಾಯರೂ ಉದಕಮಂಡಲಕ್ಕೆ ಹೋಗಿರುವಲ್ಲಿ ಅನ್ನದಲ್ಲಿ ವಿಷವು ಮಿಶ್ರಮಾಡಲ್ಪಟ್ಟಿದ್ದುದನ್ನು ಪರೀಕ್ಷಿಸಲು ಮೇಲ್ಕಂಡಧಿಕಾರಿಗಳು ಹೋಗಿದ್ದರೆಂದು ಒಂದು ಸುಳ್ಳು ಪ್ರವಾದವು ಹುಟ್ಟಿದ್ದಿತು. ಗಂಜಿಯು ಬಚ್ಚಲಿನಲ್ಲಿ ನಿಂತು ಕೊಳೆಯದಂತೆ ಮಾಡಲು ಯೋಚಿಸಲ್ಪಡುತ್ತಿದೆ.

ರಾಜಧಾನಿಯಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಉಜ್ಜಯಿನಿ ಹೆಂಚಿನಮಠದ ಶಿವಲಿಂಗಯ್ಯನೆಂಬ ದೀನ ವಿದ್ಯಾರ್ಥಿಯ ಸಹಾಯಾರ್ಥವಾಗಿ ಕಳೆದ ಏಪ್ರಿಲ್ ತಾ॥ ೧೫ ರ ಸಂಚಿಕೆಯಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಸಂತೋಷದಿಂದ ಚಂದಾ ಹಣವನ್ನು ಕೊಟ್ಟಿರುವ ಮಹನೀಯರು:—

	ರೂ. ಆ. ಪೈ
ಬಾಳೆಹೊನ್ನೂರು ಶ್ರೀ ಜಗದ್ಗುರುಗಳವರ ಸನ್ನಿಧಿ	೨—೮—
ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳು	೦—೧—
ನೆಲ್ಲೂಳು ರಾಜಣ್ಣ ಬೌರಮ್ಮಣ್ಣಿಯವರು	೧೧—೦—
ಸೇಲಂ ಡಿ॥ ಹೆಂಕಣಿಕೋಟೆಯ ವೀರಶೈವರ ಪೈಸಾಫಂಡು	೫—೦—
ನಿಜಾಂ ಇಲಾಖಾ ಕೊಪ್ಪಳ ತಾ॥ ಗೊಂಡಬಾಳಿನಲ್ಲಿರುವ ಮಿ॥ ಲಕ್ಕುಂಡಿ ಶಂಕರಪ್ಪನವರು...	೧—೦—
ಬಿಜಾಪುರ ಡಿ॥ ಹಿಪ್ಪರಗಿ ಪೋಸ್ಟ್ ಶಿವಣಗಿಯಲ್ಲಿರುವ ಮಿ॥ ಶಿವಲಿಂಗಪ್ಪ ಶಂಕರಪ್ಪ ಢಂಕರೆ ಇವರು ...	೧—೦—
ಬೆಳಗಾಂ ಡಿ॥ ಉಗರಗೋಳ ಪೋಸ್ಟ್ ಹೂಲಿಯಲ್ಲಿರುವ ಶ್ರೀ ಶಿವಬಸಯ್ಯ ಮಹಂತಯ್ಯ ಹಿರೇಮಠ ಇವರು ...	೧—೦—
ಡಿಟೋ ಹೂಲಿಯಲ್ಲಿರುವ ಮಿ॥ ಸಂಗಯ್ಯಾ ಚರಂತಯ್ಯಾ ಇವರು ...	೧—೦—
ಟೋ ಹೂಲಿಯಲ್ಲಿರುವ ಮಿ॥ ಚಂದ್ರಯ್ಯಾ ಮಠಪಾಳೆಯ್ಯಾ ಇವರು ...	೧—೦—೦
ಟೋ ಹೂಲಿಯಲ್ಲಿರುವ ಮಿ॥ ಶಿವಲಿಂಗಪ್ಪಾ ಬಸಲಿಂಗಪ್ಪಾ ಇವರು ...	೧—೦—೦
ಟೋ ಹೂಲಿಯಲ್ಲಿರುವ ಮಿ॥ ಶಿವಲಿಂಗಪ್ಪಾ ವೀರಪ್ಪಾ ಇವರು	೦—೮—೦
ಟೋ ಹೂಲಿಯಲ್ಲಿರುವ ಮಿ॥ ಬಸಲಿಂಗಯ್ಯಾ ಫಕೀರಯ್ಯಾ ಇವರು ...	೦—೮—೦
ದಾವಣಗೆರೆ ತಾ॥ ಅಣಜಿ ಪಟೇಲ್ ಮಿ॥ ಜಡಿಯಪ್ಪನವರು	೦—೮—೦
ಡಿಟೋ ಅಣಜಿಯಲ್ಲಿರುವ ಗುತಾಳು ಪಿರ್ಕಾ ಶಾನುಭೋಗ್ ಮಿ॥ ಎ. ಪಿ. ಸಿದ್ಧಲಿಂಗಪ್ಪನವರು	೦—೮—೦
ಒಟ್ಟು	೨೬—೯—೦
ಹಿಂದೆ ಬಂದಿರುವುದು ...	೭—೪—೦
ಒಟ್ಟು	೩೩—೧೩—೦

ವರ್ತಮಾನ ಸಂಗ್ರಹವು.

ಭರತಖಂಡದಲ್ಲೆಲ್ಲಾ ೪ ಸಾವಿರ ತೆರದ ನಾಯಿಗಳು ಬೆಳೆಯುತ್ತಿವೆ.

ಕಳೆದ ವರ್ಷ ಇಂಗ್ಲೆಂಡಿನಿಂದ ೪೮॥ ಕೋಟಿ ರೂ. ನ ಕಲ್ಲಿದ್ದಲು ಹೊರಕ್ಕೆ ಕಳುಹಲ್ಪಟ್ಟಿದೆ.

ಭರತಖಂಡದಲ್ಲಿ ಪ್ರತಿವರ್ಷವೂ ೧ ಕೋಟಿ ೨೦ ಲಕ್ಷ ಟನ್ನಿನ ಕಲ್ಲಿದ್ದಲು ಗಣಿಗಳಿಂದ ತೆಗೆಯಲ್ಪಡುತ್ತಿದೆ.

೧೯೧೦ ನೆಯ ವರ್ಷದಲ್ಲಿ ಬರ್ಮಾದಲ್ಲಿ ೨೧೧೪೦೬೯೦೩ ಗ್ಯಾಲನ್ನುಗಳ ಸೀಮೆಯೆಣ್ಣೆಯು ಉತ್ಪನ್ನವಾಗಿರುತ್ತದೆ.

ಟಿಟಾನಿಕ್ ಹಡಗಿನೊಡನೆ ಮುಳುಗಿ ಹೋದವರೊಳಗೆ ೬ ಮಂದಿ ಶ್ರೀಮಂತರ ಆಸ್ತಿಯೇ ೧೪೦ ಕೋಟಿ ರೂ. ಗಳಷ್ಟಿರುವುದು.

ಟಿಟಾನಿಕ್ ಹಡಗಿನ ವಿನಾಶದ ವಿಷಯವನ್ನು ವಿಚಾರಿಸುವ ಸಭೆಯು ಲಂಡನಿಗೆ ಸೇರಿದ ವೆಸ್ಟ್‌ಮಿನ್‌ಸ್ಟರಿನ ಡ್ರಿಲ್ ಹಾಲಿನಲ್ಲಿ ಕೂರುತ್ತಿದೆ.

ಸೀಮೆಯೆಣ್ಣೆಯನ್ನು ಇಟ್ಟಿಗೆಯ ರೂಪದಲ್ಲಿ ಮಾಡಿ ಮೋಟಾರು ಬಂಡಿಗಳಿಗೆ ಉಪಯೋಗಿಸಿಕೊಳ್ಳುವ ರೀತಿಯು ಈಗ ಕಂಡುಹಿಡಿಯಲ್ಪಟ್ಟಿದೆ.

ಪ್ರಸಿದ್ಧನಾದ ನೆಪೋಲಿಯನ್ ಬೊನಾಪಾರ್ಟಿಗೆ ನೆಲದ ಮೇಲೆ ಬೋರಲ್ಲಾಗಿ ಮಲಗಿಕೊಂಡ ೨ ನಿಮಿಷಗಳೊಳಗಾಗಿ ಗಾಢನಿದ್ರೆಯು ಬರುತ್ತಿದ್ದಿತಂತೆ.

೧೯೧೧ ನೆಯ ವರ್ಷದಲ್ಲಿ ಭರತಖಂಡದಿಂದ ಅನ್ಯದೇಶಗಳಿಗೆ ೮೪೮೩೪೪೩ ರೂ. ಬೆಲೆ ಬಾಳುವ ೧೩೮೯೯೮೩ ಪೌಂ ತೂಕದ ರೇಶಿಮೆಯು ಸಾಗಿಸಲ್ಪಟ್ಟಿದೆ.

ಈ ಕಾಲದಲ್ಲಿ ೧೩೦ ಅಡಿಯಾಳದಲ್ಲಿ ನೀರಿನೊಳಗೆ ಮುಳುಗಿಕೊಂಡಿರುವ ಹಡಗುಗಳಿಂದಲೂ ಸಾಮಾನುಗಳನ್ನು ಹೊರದೆಗೆಯುವುದಕ್ಕೆ ಸಾಧ್ಯವಾಗಿದೆ.

ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿ ಕಳೆದ ತಾ॥ ೧ ರಲ್ಲಿ ಒಂದು ನಾರಿನ ಕಾರ್ಖಾಲಯಕ್ಕೆ ಬೆಂಕಿಬಿದ್ದು ೯ ಲಕ್ಷ ರೂ. ಬೆಲೆಬಾಳುವ ಸಾಮಾನುಗಳು ನಷ್ಟವಾದುವು.

ತನ್ನ ಗಂಡನು ಟಿಟಾನಿಕ್ ಹಡಗಿನಲ್ಲಿ ಮೃತನಾದುದಕ್ಕಾಗಿ ರಾಬಿನ್ಸ್ ಎಂಬ ತರುಣಿಯು ಆ ಹಡಗಿನ ಯಜಮಾನರಾದ ವೈಟ್ ಸ್ಟಾರ್ ಕಂಪೆನಿಯವರ ಮೇಲೆ ನಷ್ಟಕ್ಕಾಗಿ ವ್ಯಾಜ್ಯವನ್ನು ಹೂಡಿದ್ದಾಳೆ.

ಮದರಾಸಿನವರಿಗಾಗಿ ಸೀಮೆಯಲ್ಲಿ ಮಾಡಲ್ಪಡುತ್ತಿದ್ದ ಲಾರ್ಡ್ ರಿಪ್ಪನರವರ ಪ್ರತಿಮೆಯ ಕೆಲಸವು ಮುಗಿದು, ಈ ದೇಶಕ್ಕೆ ಕಳುಹಲು ಸಿದ್ಧವಾಗಿದೆ. ಇದನ್ನು ಮದರಾಸಿನ ಮೌಂಟ್ ರೋಡಿನಲ್ಲಿ ಸ್ಥಾಪಿಸುವವರಾಗಿದ್ದಾರೆ.

ಟಿಟಾನಿಕ್ಕಿನೊಡನೆ ಸಮುದ್ರದಲ್ಲಿ ಮುಳುಗಿ ಸತ್ತವರ ೧೯೦ ಹೆಣಗಳನ್ನು ಮಾಕೆ ಬೆನೆಟ್ ಎಂಬ ಹಡಗು ಸಾಗಿಸಿಕೊಂಡು ಬಂದಿರುತ್ತದೆ. ೧೧೬ ಹೆಣಗಳು ದುರ್ವಾಸನೆ ಹುಟ್ಟಿದ್ದುದರಿಂದ ಪೆಟ್ಟಿಗೆಗಳಲ್ಲಿಟ್ಟು ಮತ್ತೆ ಸಮುದ್ರಕ್ಕೆ ಬಿಡಲ್ಪಟ್ಟುವು.

ಕಳೆದ ಮಾರ್ಚಿ ತಿಂಗಳೊಂದರಲ್ಲಿ ಅನ್ಯದೇಶಗಳಿಂದ ಭರತಖಂಡಕ್ಕೆ ೧೩೪೬೯ ಪೌಂ ತೂಕದ ಹೊಗೆಸೊಪ್ಪು ೧೧೮೯೯ ಪೌಂ ಸಿಗರೆಟ್ಟುಗಳೂ ಬಂದಿರುತ್ತವೆ. ಇದರ ಮೇಲೆ ಸರ್ಕಾರಕ್ಕೆ ಸಂದಿರುವ ಸುಂಕವು ೨೬೬೦೩೮ ರೂಪಾಯಿಗಳು.

೧೦ ವರ್ಷದವರೆಗೆ ಅವಿಚ್ಛಿನ್ನವಾಗಿ ನಡೆಯುವ ೧ ಗಡಿಯಾರದ ನಿಮಿಷವನ್ನು ತೋರಿಸುವ ಮುಳ್ಳಿನ ಸುತ್ತಾಟವೆಲ್ಲಾ ಸೇರಿದರೆ ೬ ಮೈಲಿಗಳಷ್ಟಾಗುವುದು. ಅಷ್ಟು ಕಾಲದಲ್ಲಿ ಸುತ್ತಿದ ಸೆಕೆಂಡ್ ಮುಳ್ಳಿನ ದೂರವು ೩೬ ಮೈಲಿಗಳಷ್ಟಾಗುವುದು.

ಗಂಗಾನದಿಯ ಮೇಲೆ ಹೊಸದಾಗಿ ಒಂದು ಸೇತುವೆಯು ಕಟ್ಟಲ್ಪಡುತ್ತಿದೆ. ಅದಕ್ಕೆ ಕೆಲಮಕ್ಕಳನ್ನು ಬಲಿಕೊಡುವರೆಂಬ ಶುಷ್ಕಸುದ್ದಿಯು ಹುಟ್ಟಿರುವುದರಿಂದ ರಾತ್ರಿಯಾದ ಕೂಡಲೇ ಜನರ ಸಂಚಾರವೇ ಆ ಪ್ರಾಂತದಲ್ಲಿ ಕಡಿಮೆಯಾಗಿದೆಯಂತೆ.

ಕಳೆದ ಮಾರ್ಚಿ ತಿಂಗಳೊಂದರಲ್ಲಿ ಭರತಖಂಡಕ್ಕೆ ಹೊರಗಿನಿಂದ ೪೯೨೪೯೮ ರೂ. ನ ಸಕ್ಕರೆಯು ಬಂದಿರುತ್ತದೆ. ಕಳೆದ ಮಾರ್ಚಿ ತಿಂಗಳ ಕೊನೆಯವರೆಗೆ ಅದರ ೧ ವರ್ಷದ ಕಾಲದಲ್ಲಿ ನಮ್ಮ ದೇಶಕ್ಕೆ ೧೩ ಕೋಟಿ ರೂ. ಗಳ ಸಕ್ಕರೆಯು ಬಂದಿರುವುದು.

ಕೊಲೊಂಬೊದಲ್ಲಿ ಒಂದು ಹಾರ್ಬರನ್ನು (ಸಾಮಾನುಗಳೂ ಪ್ರಯಾಣಿಕರೂ ಹಡಗುಗಳಿಗೇರುವುದಕ್ಕೆ ಅನುಕೂಲವಾಗಿಯೂ ಹಡಗುಗಳು ನಿಲ್ಲುವುದಕ್ಕೆ ಉಪಯೋಗವಾಗಿಯೂ ಕಟ್ಟುವ ಜಲಾಶಯ) ಕಟ್ಟಿ ಈಗತಾನೇ ಮುಗಿಸಿದರು. ಇದಕ್ಕೆ ೮ ಕೋಟಿ ರೂ. ಗಳು ವೆಚ್ಚವಾದುವು.

ಲಾಹೋರು ಪಟ್ಟಣದಲ್ಲಿ ಸಂಸಾರಿಕರು ವಾಸಮಾಡುವ ಬೀದಿಗಳಲ್ಲಿ ಸೂಳೆಯರು ಇರಬಾರದೆಂದು ಅಲ್ಲಿನ ಮುನಿಸಿಪಾಲಿಟಿಯವರು ಅವರನ್ನು ಆ ಬೀದಿಬಿಟ್ಟು ದೂರ ಓಡಿಸಿದರು. ಈಗ ಆ ಹೆಂಗುಸರೆಲ್ಲಾ ತಲೆಗೆ ೨೦ ರೂ. ನಂತೆ ಚಂದಾಹಾಕಿ ೨೦೦೦ ರೂ. ಗಳನ್ನು ಕೂಡಿಸಿ ಪ್ರಬಲನಾದ ವಕೀಲನ ಮುಖಾಂತರ ಮುನ್ಸಿಪಾಲಿಟಿಯವರ ಮೇಲೆ ವ್ಯಾಜ್ಯವನ್ನು ನಡೆಯಿಸುವವರಾಗಿದ್ದಾರೆ.

ಇಂಗ್ಲೆಂಡೊಂದರಲ್ಲೇ ನಮ್ಮ ಭರತಖಂಡದ ವಿದ್ಯಾರ್ಥಿಗಳು ೧೩೦೦ ಮಂದಿಗಳಿದ್ದಾರೆ. ಇವರಲ್ಲಿ ಒಬ್ಬನು ತನ್ನ ವೆಚ್ಚಕ್ಕಾಗಿ ಈ ದೇಶದಿಂದ ತೆಗೆದುಕೊಂಡು ಹೋಗಿದ್ದ ಹಣವನ್ನೆಲ್ಲಾ ದುರಾಹಾರ ದುಷ್ಪಾನ ದುರ್ವ್ಯವಹಾರಗಳಿಗಾಗಿ ವ್ಯಯಮಾಡಿ ಭಿಕ್ಷಮಾಡಿ ಜೀವಿಸುತ್ತಿದ್ದ ಕಾರಣ, ದೀನ ವಿದ್ಯಾರ್ಥಿಗಳಿಗೆ ಸಹಾಯಮಾಡುವ ಸಂಘದವರು ದಾರಿಯ ವೆಚ್ಚಕ್ಕೆ ಧನ ಸಹಾಯಮಾಡಿ, ಅವನನ್ನು ಸ್ವದೇಶಕ್ಕೆ ಕಳುಹಿಕೊಟ್ಟರು.

ಪ್ಯಾರಿಸ್ಸಿನಲ್ಲಿ ಬ್ಯಾಂಕನ್ನು ಸುಲಿದ ಪ್ರಸಿದ್ಧರಾದ ಕಳ್ಳರಲ್ಲಿ ಗಾರ್ನಿಯರ್ ಎಂಬುವನು ಇನ್ನೂ ಪೋಲೀಸರ ಕೈಗೆ ಸಿಕ್ಕಿಲ್ಲ. ತನ್ನಜತೆಯ ಬೋನೆಟ್ ಎಂಬುವನನ್ನು ಪೋಲೀಸರು ತುಪಾಕಿಯಿಂದ ಸುಟ್ಟುದಕ್ಕಾಗಿ ಪ್ಯಾರಿಸ್ ಪಟ್ಟಣದಲ್ಲಿ ಶ್ರೀಮಂತರು ವಾಸಮಾಡಿಕೊಂಡಿರುವ ಬೀದಿಯನ್ನೇ ೩ ದಿನಗಳೊಳಗಾಗಿ ತುಪಾಕಿಯಿಂದ ಸುಟ್ಟು ಬೂದಿಮಾಡುತ್ತೇನೆ ಎಂಬುದಾಗಿ ರೆಯಿಂಬಾಡ್ ಎಂಬ ಅಪರಾಧಿಯು ದಂಡಾಧಿಕಾರಿಯೆದುರಿಗೆ ಹೇಳಿದನಂತೆ.

ಮಿಸಿಸಿಪಿ ನದಿಯಲ್ಲಿ ವಿಪರೀತ ಪ್ರವಾಹವು ಬಂದು ೮೩೪ ಚದರಮೈಲಿ ಪ್ರದೇಶವು ನೀರಿನಮಯವಾಗಿದೆ. ಇದರಿಂದ ಲ್ಯೂಸಿಯಾನ ಎಂಬಲ್ಲಿಯೇ ೩೦೦೦೦೦೦ ರೂ. ಬೆಲೆಯ ಬೇಸಾಯಕ್ಕೆ ಸಂಬಂಧಪಟ್ಟ ಪದಾರ್ಥಗಳು ನಷ್ಟವಾಗಿವೆ. ಸಾವಿರಾರು ಜನರಿಗೆ ತಿನ್ನಲಿಕ್ಕೂ ವಾಸಕ್ಕೂ ಬಹು ತೊಂದರೆಯಾಗಿರುವುದರಿಂದ ಕೂಡಲೆ ಸಾಹ್ಯಕ್ಕಾಗಿ ದೋಣಿಗಳು ದೂರದಲ್ಲಿರುವ ಡಿಸ್ಟ್ರಿಕ್ಟುಗಳಿಗೆ ಕಳುಹಲ್ಪಡದಿದ್ದಲ್ಲಿ ಬಹು ಜನರು ಹತರಾಗುವ ಸ್ಥಿತಿಯಲ್ಲಿರುವರು.

ಪ್ರಪಂಚದ ಮೇಲಿರುವ ಮುಖ್ಯಮುಖ್ಯ ಪಟ್ಟಣಗಳಲ್ಲಿ ಈ ಕೆಳಗೆ ಹೇಳುವ ಮೇರೆಗೆ ಜನಸಂಖ್ಯೆಯಿರುತ್ತದೆ.—ಲಂಡನ್ನಿನಲ್ಲಿ ೬೦ ಲಕ್ಷ. ನ್ಯೂಯಾರ್ಕಿನಲ್ಲಿ ೪೭೬೬೮೮೩, ಟೋಕಿಯೋದಲ್ಲಿ ೨೧೮೬೦೭೯, ಪ್ಯಾರಿಸ್ಸಿನಲ್ಲಿ ೨೮೮೮೧೧೦, ವಿಯನ್ನಾದಲ್ಲಿ ೨೦೩೧೪೯೮, ಬರ್ಲಿನ್ನಿನಲ್ಲಿ ೨೦೭೧೨೫೭, ಸೆಂಟ್ ಪೀಟರ್ಸ್ ಬರ್ಗಿನಲ್ಲಿ ೧೯೦೭೭೦೮, ಬೊಂಬಾಯಿಯಲ್ಲಿ ೯೭೯೪೪೫, ಕಲಕತ್ತಾದಲ್ಲಿ ೮೯೬೦೬೭, ಸಿಡ್ನಿಯಲ್ಲಿ ೬೨೯೫೦೩, ಮೆಲ್‌ಬೋರನ್ನಿನಲ್ಲಿ ೫೮೮೯೭೧, ಮದರಾಸಿನಲ್ಲಿ ೫೧೮೦೦೦.

ಕಳೆದ ೪೦ ವರ್ಷಗಳ ಕಾಲದಲ್ಲಿ ೪ ಆವೃತ್ತಿ ನಡೆದಿರುವ ಜನಪರಿಗಣಿತಿಯ ಪ್ರಕಾರ ಗೊತ್ತಾಗಿರುವ ಆಂಗ್ಲಸಾಮ್ರಾಜ್ಯದ ಜನಸಂಖ್ಯೆಯ ವಿವರವು ಹೇಗೆಂದರೆ:— ೧೮೮೧ ರಲ್ಲಿ ೩೦೫೩೬೮೦೦೦, ೧೮೯೧ ರಲ್ಲಿ ೩೫೭೩೪೯೦೦೦, ೧೯೦೧ ರಲ್ಲಿ ೩೯೮೪೦೧೦೦೦, ೧೯೧೧ ರಲ್ಲಿ ೪೧೬೩೦೮೦೦೦, ಇದರಲ್ಲಿ ಭರತಖಂಡವೊಂದರೊಳಗೆ ೩೧॥ ಕೋಟಿ ಜನರಿರುವಾಗ ಆಂಗ್ಲಸಾಮ್ರಾಜ್ಯದಲ್ಲಿ ಈ ದೇಶವು ಎಷ್ಟು ಮುಖ್ಯವಾದುದೆಂಬುದನ್ನು ಹೇಳಬೇಕಾಗಿಲ್ಲ. ಪ್ರಪಂಚದ ಮೇಲಿರುವ ಆಂಗ್ಲಸಾಮ್ರಾಜ್ಯದ ವಿಸ್ತಾರವೆಲ್ಲಾ ೧೧೫೦೬೦೦೦ ಚದರಮೈಲಿಗಳಾಗಿರುವುವು.

ಇಂಗ್ಲೆಂಡಿಗೆ ಸ್ವರಾಜ್ಯವನ್ನು ಕೊಡಬೇಕೆಂಬ ವಿಷಯಕವಾದ ವಿಧಿಯು ಪಾರ್ಲಿಮೆಂಟಿನ ಮುಂದೆ ಚರ್ಚಿಸಲ್ಪಡುತ್ತಿದೆ. ಈ ಸಮಯದಲ್ಲಿ ಸರ್ ರಾಬರ್ಟ್ ಫಿನ್ಲೆ ಎಂಬುವರು ನುಡಿದುದೇನೆಂದರೆ,—„ಗೌರ್ನಮೆಂಟಿನವರು ಈ ವಿಧಿಯನ್ನು ಅಂಗೀಕರಿಸದೆ ಹೋದರೆ ಐರ್ಲೆಂಡಿನ ಪ್ರಜೆಗಳು ಯುದ್ಧಕ್ಕೆ ನಿಲ್ಲುವರು, ಈಗ ಪಾರ್ಲಿಮೆಂಟಿನಲ್ಲಿ ನಡೆಯುತ್ತಿರುವ ವಾಗ್ಯುದ್ಧವು ಆಗ ಮದ್ದುಗುಂಡಿನ ಯುದ್ಧವಾಗಿ ಪರಿಣಮಿಸುವುದು" ಎಂಬುದಾಗಿ. „ಐರ್ಲೆಂಡಿನವರಿಗೆ ಸ್ವರಾಜ್ಯವನ್ನು ಕೊಟ್ಟರೆ ಅಲ್ಲಿನ ಪ್ರಜೆಗಳು ರಾಜಭಕ್ತಿ ಸಂಪನ್ನರಾಗಿ ಇಂಗ್ಲೀಷರಲ್ಲಿ ಕೃತಜ್ಞತೆಯುಳ್ಳವರಾಗುವರು." ಎಂದು ಕರ್ನಲ್ ಸೀಲೀಯವರು ಸರ್ಕಾರದ ಪಕ್ಷವಾಗಿ ನುಡಿದರು.

ಈಗ ಪ್ರಪಂಚದಲ್ಲಿ ವೇಗವಾಗಿ ವಾರ್ತೆಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೆ ಟೆಲಿಫೋನ್—ಟೆಲಿಗ್ರಾಂ—ಮತ್ತೂ ಮಾರ್ಕೋನಿಯ ಆಕಾಶಮಾರ್ಗ ಸಂದೇಶ ಎಂಬ ೩ ಕ್ರಮಗಳಿವೆ. ಇವುಗಳಲ್ಲಿ ಟೆಲಿಫೋನಿನ ಮೂಲಕ ಬಹು ದೂರಕ್ಕೆ ಮಾತನಾಡುವುದು ಸಾಧ್ಯವಿಲ್ಲ. ಟೆಲಿಗ್ರಾಮಾದರೋ ಸರ್ಕಾರದವರ ಸೊತ್ತಾದುದರಿಂದ ಯಾರಾದರೂ ದುಡ್ಡುಕೊಟ್ಟು ಸರ್ಕಾರದ ಮೂಲಕವೇ ಮಾತುಕಥೆಗಳನ್ನು ನಡೆಯಿಸಬೇಕಾಗಿದೆ. ಮಾರ್ಕೋನಿಯ ತಂತಿಯಿಲ್ಲದೆ ವಾರ್ತೆಯನ್ನು ಸಾಗಿಸುವ ಸಾಧನವಾದರೋ ಸರ್ಕಾರಕ್ಕೆ ವಹಿಸಲ್ಪಟ್ಟಿಲ್ಲವಾದಕಾರಣ, ಆ ಸಾಧನದ ಮೂಲಕ ಸ್ವತಂತ್ರವಾಗಿ ಬೇಕಾದ ಕಡೆಗೆ ವರ್ತಮಾನಗಳನ್ನು ಕಳುಹಿಸಬಹುದಾಗಿದೆ. ಈಗ ಅಮೆರಿಕಾದಲ್ಲೂ ಫ್ರಾನ್ಸಿನಲ್ಲೂ ವರ್ತಕರು ಈ ಸಾಧನದ ಮೂಲಕವಾಗಿಯೇ ಸ್ವತಂತ್ರವಾಗಿ ವರ್ತಮಾನವನ್ನು ಕೊಟ್ಟು ತರಿಸಿಕೊಳ್ಳುತ್ತಿದ್ದಾರೆ.

ಮಿ॥ ಗೋಖಲೆಯವರು ಸೀಮೆಗೆ ಪ್ರಯಾಣಮಾಡುವುದಕ್ಕೆ ಪೂರ್ವದಲ್ಲಿ ಬೊಂಬಾಯಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಪ್ರತಿನಿಧಿಯು ಅವರನ್ನು ಕಂಡು ಸಂಭಾಷಿಸಿದಾಗ್ಗೆ „ನಾನು ದೇಹಾರೋಗ್ಯಕ್ಕಾಗಿ ಸೀಮೆಗೆ ಪ್ರಯಾಣಮಾಡುತ್ತೇನೆ; ಸರ್ ಗೈಫ್ಲೀಟ್‌ವುಡ್ಡರ ಸ್ಥಾನಕ್ಕೆ ಕೋಶಾಧ್ಯಕ್ಷನಾಗಿ ನಾನು ನಿಯಮಿಸಲ್ಪಡುವೆನೆಂದು ಹುಟ್ಟಿರುವ ಸುದ್ದಿಯು ನಿರಾಧಾರವಾದುದು. ದೇಶಸೇವೆಯನ್ನು ಮಾಡಬೇಕೆನ್ನುವವರು ಸರ್ಕಾರದ ಉದ್ಯೋಗದಲ್ಲಿ ಸೇರಿಕೊಳ್ಳುವುದಕ್ಕಿಂತಲೂ ಸ್ವತಂತ್ರರಾಗಿರುವುದೇ ಮೇಲು. ಬಾಲ್ಯವಿದ್ಯಾಭ್ಯಾಸ ವಿಷಯಕವಾದ ವಿಧಿಯ ಪರಿಶ್ರಮಕ್ಕಾಗಿಯೂ ನಾನು ಸೀಮೆಗೆ ಹೋಗುತ್ತೇನೆ. ಭರತಖಂಡದ ಆಯವ್ಯಯ ವಿಷಯಕವಾದ ಚರ್ಚೆಯು ಪಾರ್ಲಿಮೆಂಟಿನಲ್ಲಾಗುವಾಗ್ಗೆ (ಜೂನ್ ತಿಂಗಳಲ್ಲಿ) ನಾನು ಅಲ್ಲಿದ್ದು, ಅಲ್ಲಿಂದ ಜಲಚಿಕಿತ್ಸೆಗೋಸುಗ ಜರ್ಮನಿಗೆ ಹೋಗಿ, ಅಲ್ಲಿಂದ ನವಂಬರ್ ತಿಂಗಳಲ್ಲಿ ದಕ್ಷಿಣಾಫ್ರಿಕಾಕ್ಕೆ ಹೋಗಿ, ಅಲ್ಲಿನ ಭಾರತೀಯರ ಸ್ಥಿತಿಗತಿಗಳನ್ನು ನೋಡಿಕೊಂಡು, ಡಿಸೆಂಬರ್ ತಿಂಗಳಲ್ಲಿ ಭರತಖಂಡಕ್ಕೆ ಬರುತ್ತೇನೆ. ವಿದ್ಯಾಭ್ಯಾಸ ವಿಷಯಕವಾಗಿ ನಾನು ನಿಯಮನಿರ್ಮಾಣಸಭೆಯಲ್ಲಿ ಸೂಚಿಸಿದ ವಿಧಿಯು ಸದ್ಯಃ ದೂಡಲ್ಪಟ್ಟಿದ್ದರೂ. ಈಗಿನ ವೈಸ್‌ರಾಯರ ಕಾಲದಲ್ಲಿ ಆ ವಿಷಯಕವಾದ ಪುರೋವೃದ್ಧಿಯು ವಿಶೇಷವಾಗಿ ಆಗುವುದೆಂದು ನಂಬಿಕೆಯುಂಟು. ಅದಾಗ ದಾರಿಗೆ ಬರದಿದ್ದರೆ ೧೯೧೩ ನೆಯ ವರ್ಷದಲ್ಲಿ ಮತ್ತೆ ಆ ವಿಧಿಯನ್ನು ನಿಯಮನಿರ್ಮಾಣಸಭೆಗೆ ತರುವೆನು" ಎಂದು ಉತ್ತರವನ್ನು ಕೊಟ್ಟಿರುವರು.

ಪತ್ರವ್ಯವಹಾರವು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸಂಚಾರ.

ಶ್ರೀ॥ ಸ್ವಾಮಿಯು ಸೊನ್ನಲಾಪುರ ಕ್ಷೇತ್ರದಲ್ಲಿ ೩-೪ ತಿಂಗಳವರೆಗೆ ಮೊಕ್ಕಾಂ ಮಾಡಿರಲು, ಆ ಸ್ಥಳದ ಭಕ್ತಮಂಡಳಿಯವರು ತುಂಬಾ ಶ್ರದ್ಧಾವಹಿಸಿ ಸೇವಾಸತ್ಕಾರಗಳನ್ನು ನಡೆಸಿದರು. ಶ್ರೀ॥ ಸ್ವಾಮಿ ಮುಂದಕ್ಕೆ ದಯಮಾಡಿಸುವ ೮-೧೦ ದಿವಸದಲ್ಲಿ ಬೀಳೂರು ಶ್ರೀಗಳವರು ದಯಮಾಡಿಸಿದ್ದು ಭಕ್ತಮಂಡಳಿಯವರಿಗೆಲ್ಲಾ ಭಕ್ತಿ ಸಂಬಂಧವಾದ ಪ್ರೋತ್ಸಾಹವನ್ನುಂಟುಮಾಡಿದರು. ತಾ॥ ೨೯ ನೇ ಸೋಮವಾರ ಮೋಹಳಗ್ರಾಮಕ್ಕೆ ಶ್ರೀ॥ ಸ್ವಾಮಿಯು ಚಿತ್ತೈಸಿ ಪಂಚಕಲಶಯುಕ್ತವಾದ ಅಡ್ಡಪಾಲಕಿ ಮಕರತೋರಣ ಮೋರ್ಚಾಲು ಶ್ವೇತಛತ್ರ ಹಗಲುದೀವಟಿಗೆ ಪಕ್ಕಿರೆ ಸಮಸ್ತ ಬಿರುದಾವಳಿಗಳೊಡನೆ ಬಹು ವಿಜೃಂಭಣೆಯಿಂದ ಉತ್ಸವ ನಡೆಯಿತು. ಬೆಂದಕರ ಪಟ್ಟಾಧ್ಯಕ್ಷರಾದ ಪ್ರಭುಲಿಂಗದೇವರು ಆ ಗ್ರಾಮದ ಭಕ್ತಾದಿಗಳಿಗೆ ಸದ್ಬೋಧೆಯಿಂದ ಸಮರ್ಪಕ ಸೇವಾಸತ್ಕಾರ ನಡೆಯುವಂತೆ ಏರ್ಪಡಿಸಿದ್ದಲ್ಲದೆ ನರಬೇಡ ಮುಂಗ್ಸಿ ವೈರಾಗ ಈ ಗ್ರಾಮಗಳ ಭಕ್ತಾದಿಗಳಿಗೂ ಬೋಧಿಸಿ ಸಮರ್ಪಕವಾಗಿ ಸೇವಾ ನಡೆಯಲು ಏರ್ಪಡಿಸಿರುವರು. ಬಾರ್ಸಿ ಮೊಕ್ಕಾಂ ಪೂರೈಸುವವರೆಗೂ ಅವರು ಮಹಾ॥ ಸ್ವಾಮಿ ಸಂಗಡಲೇ ಇರುವವರಾಗಿದ್ದಾರೆ. ಸೊಲ್ಲಾಪುರ ಜಿಲ್ಲಾ ಬಾರ್ಸಿ ತಾಲ್ಲೂಕು ವೈರಾಗದಲ್ಲಿ ತಾ॥ ೫-೫-೧೨ ನೇ ಭಾನುವಾರ ಪ್ರಾತಃಕಾಲ ಸೊಲ್ಲಾಪುರ ಮೊಹಳದಲ್ಲಿ ನಡೆದಂತೆಯೇ ಮಹಾಸ್ವಾಮಿಯ ಉತ್ಸವವು ಅತಿ ವಿಜೃಂಭಣೆಯಿಂದ ಜರುಗಲ್ಪಟ್ಟಿತು. ಈ ಸ್ಥಳದ ಭಕ್ತಾದಿಗಳು ಸರಿಯಾದ ವ್ಯವಸ್ಥಾ ನಡೆಯಿಸಿದ್ದಾರೆ. ತಾ॥ ೧೧ ನೇ ಶನಿವಾರ ಮೊಕ್ಕಾಂನಿಂದ ಚಿತ್ತೈಸಿ ಬಾರ್ಸಿಯಲ್ಲಿ ತಾ॥ ೧೨ ನೇ ಭಾನುವಾರ ಪ್ರಾತಃಕಾಲ ಮಹಾ॥ ಸ್ವಾಮಿಯ ಪಂಚಕಲಶಯುಕ್ತವಾದ ಅಡ್ಡಪಾಲಕಿಯುತ್ಸವವು ನಡೆಯುವುದಾಗಿದೆ.

ಜಂಗಮಬಾಳ.

ಶ್ರೀ ಬಸವೇಶ್ವರನ ಜನ್ಮಕಾಲ.

ಕಳೆದ ಆರನೆಯ ತಾರೀಖಿನ "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ "ಬಸವೇಶ್ವರ ಜನ್ಮಕಾಲ" ಎಂಬ ವಿಷಯಕ್ಕೆ "ಮಧುಕರ" ಎಂಬ ಅಭಿಧಾನದಿಂದ ಒಂದು ಯುಕ್ತಿಯುಕ್ತವಾದ ಲೇಖನವು ಪ್ರಕಟವಾಗಿರುವುದಷ್ಟೆ. ಈ ಲೇಖಕರು ಏಪ್ರಿಲ್ ತಿಂಗಳ ಏಳನೆಯ ತಾರೀಖಿನ ಹಿಂದಣ ಸಂಚಿಕೆಯನ್ನು ನೋಡಿದ್ದರೆ; "ದಾವಣಗೆರೆ ವೀರಶೈವ ಹಿತೋಪದೇಶಕ ಸಂಘದವರು" ವ್ಯಾಸೋಕ್ತ ಸಂಸ್ಕೃತ ಬಸವೇಶ್ವರಪುರಾಣದಲ್ಲಿನ ಗ್ರಹಸ್ಥಿತಿಗಳ ಆಧಾರದಿಂದ ಪ್ರಕಟಿಸಿದ್ದರೆಂಬುದು ಸ್ಪಷ್ಟವಾಗುತ್ತಲಿದ್ದಿತು. ಆ ಲೇಖಕರ ಲೇಖನದಲ್ಲಿ ಪ್ರಸ್ತುತ ವಿಷಯಕ್ಕೆ ಮುಖ್ಯವಾದಂಶಗಳಾವುವೆಂದರೆ:—

(೧) "ವೀರಶೈವ ಹಿತೋಪದೇಶಕ ಸಂಘದವರು" ಪ್ರಕಟಿಸಿರುವ ಶ್ಲೋಕದಿಂದ ಕರಜಗಹಳ್ಳಿ ಮ॥ ರಾ॥ ಆರ್. ಶಾಂತಪ್ಪನವರೆಂಬ ಜ್ಯೋತಿಷಜ್ಞರು ಶಾಲಿವಾಹನ ಶಕೆ ೧೦೭೨ ನೆಯ ಮನ್ಮಥ ಸಂವತ್ಸರದ ವೈಶಾಖ ಶುದ್ಧ ಚತುರ್ಥಿಯ ದಿವಸ ಶ್ರೀ ಬಸವೇಶ್ವರನು ಜನ್ಮವೆತ್ತಿದನೆಂದು ಸಿದ್ಧಾಂತಗೊಳಿಸಿರುವರು. ಅಂದರೆ ಕ್ರಿ.ಶ. ೧೧೫೦ ನೆಯ ಸಂವತ್ಸರದಲ್ಲಿ ಶ್ರೀ ಬಸವೇಶ್ವರನು ಉದಯಿಸಿದನೆಂದು ವ್ಯಕ್ತವಾಗುತ್ತದೆ. "ಶಿವತತ್ವ ಚಿಂತಾಮಣಿ" ಎಂಬ ಅರ್ವಾಚೀನ ಗ್ರಂಥಕ್ಕಿಂತಲೂ, ವ್ಯಾಸೋಕ್ತ ಪ್ರಾಚೀನ ಗ್ರಂಥವೇ ಅಧಿಕಾಧಾರವಾದುದೆಂದು ಹೇಳಬೇಕಾದುದಿಲ್ಲ. ಎಂದಿನವರೆಗೆ ಶಿಲಾಲಿಪಿಗಳ ಅಥವಾ ಐತಿಹಾಸಿಕದ ಆಧಾರಗಳು ದೊರೆಯವೋ ಕೇವಲ ಗ್ರಂಥಾಧಾರಗಳನ್ನೇ ನಾವು ಪ್ರಮಾಣವಾಗಿಟ್ಟುಕೊಳ್ಳುತ್ತೇವೆಯೋ, ಅಲ್ಲಿಯವರೆಗೂ ಶ್ರೀ ವ್ಯಾಸಕೃತ ಗ್ರಂಥಗಳಿಗಿರುವಷ್ಟು ಪ್ರಾಧಾನ್ಯವು ಅನ್ಯ ಅರ್ವಾಚೀನ ಗ್ರಂಥಗಳಿಗಿರಲಾರದು. ಮತ್ತೂ ಹಾಗೆ ಅನ್ಯ ಗ್ರಂಥಗಳಿಗೆ ಪ್ರಾಧಾನ್ಯವುಂಟಾಗುವುದು ಉಚಿತವೂ ಅಲ್ಲ. (೨) ಶ್ರೀ ವ್ಯಾಸೋಕ್ತ ಗ್ರಂಥದಿಂದ ವ್ಯಕ್ತವಾಗಿರುವ ಕ್ರಿ. ಶ. ೧೧೫೦ ನೆಯ ಸಂವತ್ಸರವು ಶಿಲಾಲಿಪಿಗಳಿಂದ ಗೊತ್ತಾಗಿರುವ ೧೨ ನೆಯ ಶತಮಾನವೆಂಬ ಕಾಲಮಾನಕ್ಕೆ ತಿಲಪ್ರಾಯವಾದರೂ ಬಾಧಕವಾಗಿರದೆ ತುಂಬಾ ಸಾಧಕವಾಗಿಯೇ ಇದೆ. (೩) ಶ್ರೀ ಬಸವೇಶ್ವರನು ೩೬ ವರ್ಷ ಮಾತ್ರ ಇದ್ದನೆಂಬುದು ಅಷ್ಟು ಪ್ರಮಾಣವಾಗಿರುವುದಿಲ್ಲ. ಅನೇಕ ಗ್ರಂಥಕಾರರು ಅನೇಕ ವಿಧವಾಗಿ ಅಭಿಪ್ರಾಯ ಪಡುತ್ತಾರೆಂದು ಲೇಖಕರೇ ಪ್ರತಿಪಾದಿಸಿರುತ್ತಾರೆ. ಜನ್ಮಕಾಲದ ವಿಚಾರದಲ್ಲಿ ಯಾವ ಗ್ರಂಥಕಾರರ ಅಭಿಪ್ರಾಯಗಳು ಅವಿಶ್ವಾಸನೀಯವಾದವುಗಳೆಂದು ಲೇಖಕರು ಪ್ರತಿಪಾದಿಸಿರುತ್ತಾರೆಯೋ ಆ ಗ್ರಂಥಕಾರರೇ ಶ್ರೀ ಬಸವೇಶ್ವರನು ೩೬ ವರ್ಷ ಜೀವಿಸಿದ್ದನೆಂದು ಹೇಳಿರುವುದನ್ನಾದರೂ ಈ ಲೇಖಕರು ನಂಬುವುದೇಕೆ? ಅಲ್ಲದೆ "ರುದ್ರಮುನಿ ಕಾಲಜ್ಞಾನ" ಎಂಬ ಗ್ರಂಥದಲ್ಲಿ ಶ್ರೀ ಬಸವೇಶ್ವರನು ಕಲಿಶಕೆ ೪೨೬೦ ರಲ್ಲಿ ಕಲ್ಯಾಣಪಟ್ಟಣಕ್ಕೆ ಬಂದನೆಂತಲೂ, ಕಲಿಶಕೆ ೪೨೯೩ ರಲ್ಲಿ ಕಲ್ಯಾಣಪಟ್ಟಣದಿಂದ ತೆರಳಿದನೆಂತಲೂ, ಈ ಪ್ರಕಾರ ೩೩ ವರ್ಷ ಕಲ್ಯಾಣಪಟ್ಟಣದಲ್ಲಿದ್ದನೆಂದು ಹೇಳಲ್ಪಟ್ಟಿದೆ. ಶ್ರೀ ಬಸವೇಶ್ವರನು ಬಾಗೇವಾಡಿಯಲ್ಲಿ ಜನ್ಮವೆತ್ತಿದನೆಂತಲೂ, ಅಲ್ಲಿ ೮ ವರ್ಷಗಳವರೆಗಾದರೂ ಇದ್ದನೆಂತಲೂ, ನಿರ್ವಿವಾದವಾಗಿ ಹೇಳಬಹುದಾಗಿದೆ. ಇದರ ಮೇಲಿಂದ ಆತನು ೩೬ ವರ್ಷ ಮಾತ್ರ ಇದ್ದನೆಂಬುದು ಸಿದ್ಧವಾಗುವುದಿಲ್ಲ. ಅಲ್ಲದೆ "ಅನ್ಯಬಿಂದು ಸನಸದ್ಧರ್ಮ ವೃತ್ತದರ್ಪಣ" ಎಂಬ ಗ್ರಂಥದಲ್ಲಿಯೂ "ಬಿಜ್ಜಳರಾಜ್ಯದ" ೧೨-೧೩ ನೆಯ ಸರ್ಗಗಳಲ್ಲಿಯೂ ಇರತಕ್ಕ ಅನೇಕ ವಿಷಯಗಳನ್ನು ನೋಡಿದರೆ ಬಿಜ್ಜಳನು ಕಲಿಶಕೆ ೪೨೭೩ ರಲ್ಲಿ ಮೃತಪಟ್ಟನೆಂದು ವ್ಯಕ್ತವಾಗುತ್ತದೆ. ಇದು ಶಿಲಾಲಿಪಿಗೂ ಸಾಧಕವಾಗಿಯೇ ಇದೆ. ಆದರೆ ಬಸವೇಶ್ವರನು ಕೇವಲ ೩೬ ವರ್ಷ ಇದ್ದನೆಂದು ತಿಳಿದು ಶಕೆ ೧೧೫೭ ರಲ್ಲಿಯೇ ಜನ್ಮವೆತ್ತಿದನೆಂದು ಯೋಚಿಸಿದರೆ ಶ್ರೀ ಬಸವೇಶ್ವರನು ಜನ್ಮವೆತ್ತಿ ೧೬ ವರ್ಷಗಳಾದೊಡನೆ ಬಿಜ್ಜಳನು ಮೃತಪಟ್ಟನೆಂದು ತಿಳಿಯಬೇಕಾಗುತ್ತದೆ. ಆದರೆ ಇದು ಲೇಖಕರ ಅಭಿಪ್ರಾಯಕ್ಕೆ ತುಂಬಾ ವಿರೋಧವಾಗುತ್ತದೆ ಏಕೆಂದರೆ—ಶ್ರೀ ಬಸವೇಶ್ವರನು ಐಕ್ಯನಾದ ನಂತರ ೩॥ ತಿಂಗಳಿಗೆ ಬಿಜ್ಜಳನು ಘಾತಿಸಲ್ಪಟ್ಟನೆಂದು ಪ್ರಕಟಿಸಿರುತ್ತಾರೆ. ಆದುದರಿಂದ ಬಸವೇಶ್ವರನು ಇಷ್ಟೇ ವರ್ಷಗಳವರೆಗೆ ಇದ್ದನೆಂದು ಪ್ರಸ್ತುತದಲ್ಲಿರತಕ್ಕ ಆಧಾರಗಳ ಮೇಲಿಂದ ನಿರ್ಧರವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಇದು ಪ್ರಸ್ತುತದ ವಿಷಯಕ್ಕೆ ಗೌಣವಾದಂಶವಾಗಿರುತ್ತದೆ.

ಈ ಮೇಲಿನ ಕಾರಣಗಳಿಂದ ಶ್ರೀ ವ್ಯಾಸೋಕ್ತ ಗ್ರಂಥಾಧಾರವನ್ನೇ ಶಿಲಾಲಿಪಿಗಳಿಂದ ಜನ್ಮಮಿತಿ ಗೊತ್ತಾಗುವವರೆಗೂ ಆಧಾರವಾಗಿಟ್ಟುಕೊಳ್ಳುವುದು ಹಿತವಾಗಿಯೂ, ಶ್ರೇಯಸ್ಕರವಾಗಿಯೂ ಇದೆ. ಈ ಉಭಯ ಮಿತಿಗಳಲ್ಲಿ ಯಾವುದು ನಿಶ್ಚಯವಾದುದೆಂಬುದನ್ನು ನಿರ್ಧರಿಸುವುದು ವೀರಶೈವ ವಿದ್ವನ್ಮಣಿಗಳ ಕರ್ತವ್ಯವಾಗಿದೆ. "ಮಧುಕರ" ಎಂಬ ಲೇಖಕರ ಶ್ಲಾಘ್ಯವಾದ ಪ್ರಯತ್ನವನ್ನೇ ಇತರ ವೀರಶೈವರೂ ನಿಷ್ಪಕ್ಷಪಾತಬುದ್ಧಿಯನ್ನಿಟ್ಟುಕೊಂಡು ಶ್ರೀ ಬಸವೇಶ್ವರ ಜನ್ಮಕಾಲವನ್ನು ಶೋಧಿಸಬೇಕೆಂದು ಕೋರುತ್ತೇನೆ.

ಹರ್ಡೇಕರ್ ಮಂಜಪ್ಪ.

ವಿಜಾಪುರ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಜರುಗಿದ ವೀರಶೈವರ ಸುಧಾರಣೆಯು

ತಾ॥ ೨೨-೪-೨೩ ನೇ ಸ್ಟಾರ ಪತ್ರಿಕೆಯಲ್ಲಿ ಮಹಾಸಭೆಯ ಪ್ರಭಾವದ ಲೇಖನವು ಬಂದಿದ್ದನ್ನು ಸರ್ವರೂ ಓದಬಹುದು. ಕೊಲ್ಹಾಪುರದಲ್ಲಿ ನೆರೆದ ಮಹಾಸಭೆಗೆ ವಿಜಾಪುರ ಜಿಲ್ಲೆಯವರು ಅನೇಕರು ಹೋಗಿದ್ದುದರಿಂದ ಅವರಲ್ಲಿ ವಿದ್ಯಾಭಿರುಚಿಯೂ ಮತ್ತೂ ನಾಗರಿಕತೆಯ ಅಂಕುರಗಳೂ ನೆಲೆಗೊಂಡು ಈ ಜಿಲ್ಲೆಯ ವಿದ್ಯಾಭಿವೃದ್ಧಿಯ ಬಗ್ಗೆ ಅನೇಕ ಕಾರ್ಯಗಳು ನಡೆದಿರುತ್ತವೆ. ವಿಜಾಪುರ ಬಾಗಲಕೋಟೆ ಗುಳೇದಗುಡ್ಡ, ಮುದ್ದೇಬಿಹಾಳ, ಆಲಮೇಲ, ಗಲಗಲಿ, ಹುನಗುಂದ, ಇಲಕಲ್ಲ, ಕೆರೂರ ಇಷ್ಟು ಗ್ರಾಮಗಳ ವೀರಶೈವ ಮಠಸ್ಥರಲ್ಲಿ ಕೆಲವರು ಮುಂದೊರೆದು ಮಠವೇ ಕುಟುಂಬವೆಂಬ ಭಾವನೆಯಿಂದ ಪರಿಗೆಯ ಕೆಲಸಗಳನ್ನು ಮಾಡಹತ್ತಿರುವರು. ಜಿಲ್ಹಾಧಿಕಾರಿಗಳು ಮತ್ತೂ ಇತರ ಅಧಿಕಾರಸ್ಥರು ಆ ಆ ಠಿಕಾಣಿಗಳಿಗೆ ಬಂದಾಗ್ಗೆ ಲಿಂಗಾಯತ ಜನರು ಅವರಿಗೆ ಭೇಟಿ ಆಗಿ ತಮ್ಮ ಗ್ರಾಮ ಸಂಗತಿಗಳನ್ನು ತಿಳಿಸಿ, ಅವರಿಗೆ ಬೇಕಾದ ಕಾರ್ಯಕ್ಕೆ ಸಹಾಯ ಮಾಡಲಿಕ್ಕೆಯತ್ನಿಸುವರು. ಸರಕಾರದವರು ಈ ಜಿಲ್ಲೆಯಲ್ಲಿ ಕೈಕೊಂಡಿರುವ ಹರಣಿಕಾರಿ ಮೊದಲಾದವುಗಳಿಗೂ ಸಹ ಜನರ ಸ್ಥಿತಿ ಸುಧಾರಣೆಗೆ ಲಿಂಗಾಯತರಲ್ಲಿ ಕೆಲವರು ಕೈಲಾದಮಟ್ಟಿಗೆ ಸಹಾಯಮಾಡಿರುವರು. ಇದಲ್ಲದೆ "ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ" ಮತ್ತೂ ಅಗ್ರಿಕಲ್‌ಚರಲ್ ಫಾರ್ಮುಗಳ ಉಪಯುಕ್ತತೆಯನ್ನು ತಿಳಿದು ಇವುಗಳ ಬಗ್ಗೆ ಸಹಾಯವನ್ನು ಮಾಡುತ್ತಿರುವರು. ವಿಜಾಪುರದಲ್ಲಿ ಕೆಲವು ಮಹನೀಯರು ವೀರಶೈವವಿದ್ಯಾರ್ಥಿಗಳ ಸೋವಿಯ ಬಗ್ಗೆ ಬೋರ್ಡಿಂಗ್ ಮಾಡಲಿಕ್ಕೆ ಫಂಡನ್ನು ಕೂಡಿಸಿರುವರು. ಮತ್ತೂ ಒಂದು ಜಿಲ್ಹಾ ಕಮಿಟಿಯನ್ನು ಮಾಡಿರುವರು. ಮುದ್ದೇಬಿಹಾಳದಲ್ಲಿ ಲಿಂಗಾಯತ ಸಾಹುಕಾರರು ವಿಶೇಷವಾಗಿ ದ್ರವ್ಯ ಸಹಾಯಮಾಡಿ, ಇಂಗ್ಲೀಷು ಅಭ್ಯಾಸಕ್ಕೆ ಅನುಕೂಲ ಮಾಡಿರುವರು. ಬಾಗಲಕೋಟೆಯ ಲಿಂಗಾಯತ ಸದ್ಗೃಹಸ್ಥರು "ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಫಂಡು" ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪನಮಾಡಿ, ದೊಡ್ಡ ಧನರಾಶಿಯನ್ನು ಕೂಡಿಸಿದ್ದಲ್ಲದೆ, ವ್ಯಾಪಾರಸ್ಥರೆಲ್ಲರೂ ಕೂಡಿ ಧರ್ಮಾದಾಯವೆತ್ತಿ ಅದನ್ನು ಆ ಸಂಸ್ಥೆಗೆ ಪ್ರತಿ ವರ್ಷ ಕೊಡಲಿಕ್ಕೆ ಈ ಸಂಸ್ಥೆಯ ಉತ್ಪಾದಕರಾದ ಬೀಳೂರ ಶ್ರೀಗಳವರ ಸನ್ನಿಧಿಯಲ್ಲಿ ಪ್ರತಿಜ್ಞೆಯನ್ನು ಮಾಡಿರುವರು. ಈ ಸಂಸ್ಥೆಯವರು ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅದರ ಜೊತೆಗೆ ವಿದ್ಯಾರ್ಥಿಗಳಿಗೋಸುಗ ಒಂದು ಬೋರ್ಡಿಂಗನ್ನು ಮಾಡಿರುವರು. ಅಲ್ಲಿಯೇ ವಿದ್ಯಾರ್ಥಿಗಳು ಇದ್ದು ಅಭ್ಯಾಸಮಾಡಲಿಕ್ಕೆ ಅನುಕೂಲತೆಯು ಒದಗಿಸಲ್ಪಟ್ಟಿದೆ. ಇದಲ್ಲದೆ ಹತ್ತು ಹದಿನೈದು ವಿದ್ಯಾರ್ಥಿಗಳಿಗೆ ಇಂಗ್ಲೀಷು ಅಭ್ಯಾಸ ಮಾಡುವುದಕ್ಕೆ ಶಾಲೆಯ ಫೀಗಳನ್ನು ಕೊಡುವ ಅನುಕೂಲತೆಯು ಮಾಡಲ್ಪಟ್ಟಿದೆ. ವೀರಶೈವ ಲಾಯಬ್ರರಿಯು ಸ್ಥಾಪನೆಯಾಗಿದ್ದು ಇದಕ್ಕೆ ಆ ಸಂಸ್ಥೆಯವರು ಪ್ರತಿವರ್ಷ (೫೦) ರೂಪಾಯಿ ಕೊಟ್ಟು ನಿರ್ವಹಿಸುತ್ತಿರುವರು. ಇದಲ್ಲದೆ ಬಾಗಲಕೋಟೆಯಲ್ಲಿ ವಾಸಿಸುವ ಮ॥ ಬಸಪ್ಪ ಪಾಟೀಲ ಮುಧೋಳ ಮುಂತಾದವರು ಇಂಗ್ಲೀಷು ಕಲಿಯುವ ವಿದ್ಯಾರ್ಥಿಗಳಿಗೆ ಭೋಜನ ವಸತಿಗಳ ಬಗ್ಗೆ ಆಗುವ ಅಡಚಣೆಯನ್ನು ದೂರಮಾಡುವ ಯೋಚನೆಮಾಡಿ, ಒಂದು ಬೋರ್ಡಿಂಗನ್ನು ಸ್ಥಾಪನೆಮಾಡಿರುವರು. ಟೀಕಿನ ಮಠದ ಶ್ರೀಗಳವರು ತಮ್ಮ ಮಠವನ್ನೇ ಈ ಬೋರ್ಡಿಂಗದ ಉಪಯೋಗಕ್ಕೆ ಒಪ್ಪಿಸಿರುವರು (ಇದರಂತೆ ಎಲ್ಲಾ ವಿರಕ್ತ ಮಠಗಳೂ ವಿದ್ಯೆಗೆ ತವರ್ಮನೆಗಳಾಗಿ ಉಪಯೋಗವಾದರೆ ಎಷ್ಟು ಕಲ್ಯಾಣವಾಗುವುದೆಂಬುದನ್ನು ವಾಚಕರೇ ಊಹಿಸಬಹುದು) ಗಲಗಲಿಯಲ್ಲಿ ಗ್ರಾಮ ಕಮಿಟಿಯ ಸ್ಥಾಪನೆಯಾಗಿದ್ದು ವ್ಯಾಜ್ಯಗಳು ಪಂಚರ ಮುಖಾಂತರವಾಗಿ ತೀರ್ಪನ್ನು ಪಡೆಯುವವು ಆಲಮೇಲ ಮತ್ತೂ ಸಮೀಪದಲ್ಲಿ ಗ್ರಾಮಕಮಿಟಿಗಳು ಸ್ಥಾಪನೆಯಾಗಿದ್ದು ಅವುಗಳಿಂದ ಜನರಿಗೆ ಬಹಳೇ ಉಪಯೋಗವಾಗಿರುವದು. ಗುಳೇದಗುಡ್ಡ ಮತ್ತೂ ಮೇಲಿಕಾಣಿಸಿದ ಸ್ಥಳಗಳ ಜನರು ಸಮಾಜಹಿತದ ಸಹಾನುಭೂತಿಯನ್ನು ತೋರಿಸುತ್ತಿರುವರು. ಇವರು ಆದಷ್ಟು ಬೇಗನೆ ಬಾಗಲಕೋಟೆಯ ಅನುಕರಣೆಯನ್ನು ಮಾಡಿ ವಿದ್ಯಾಭ್ಯಾಸದ ಅನುಕೂಲತೆಯನ್ನು ತಮ್ಮತಮ್ಮ ಊರುಗಳಲ್ಲಿಯೂ ಮಾಡಬೇಕೆಂದು ಅವರಿಗೆ ಆಗ್ರಹದ ವಿನಂತಿ ಇದೆ. ಈ ಜಿಲ್ಹೆಯಲ್ಲಿ ಇನ್ನೂ ಅನೇಕ ದೊಡ್ಡ ಊರುಗಳು ಇದ್ದು, ಅಲ್ಲಿಯ ದೊಡ್ಡ ಸಾಹುಕಾರರು ಇರುವರು. ಇವುಗಳಲ್ಲಿ ಕೆರೂರ ಎಂಬ ಒಂದು ಗ್ರಾಮವಿದ್ದು, ಇಲ್ಲಿಯ ವೀರಶೈವರು ಎಲ್ಲರೂ ಕೂಡಿ ಮೇಹರ್ಬಾನ ಕಲೆಕ್ಟರ ಸಾಹೇಬರವರು ತಮ್ಮ ಗ್ರಾಮಕ್ಕೆ ಬಂದಾಗ್ಗೆ ಅವರ ದರ್ಶನವನ್ನು ತೆಗೆದುಕೊಂಡು ತಾಂಬೂಲ ಸಮಾರಂಭವನ್ನು ಮಾಡಿ, ತಮ್ಮ ರಾಜಭಕ್ತಿಯನ್ನು ವ್ಯಕ್ತಮಾಡಿದರು. ಕೆರೂರಿನ ಊರ ಲಿಂಗಾಯತ ಮಠಸ್ಥರು ಬಹಳೇ ಹಿಂದೆಯಿದ್ದು, ಈವೃತ್ತಿಸವರೆಗೂ ನೆಂದೂ ಸಮಾಜದ ಕಾರ್ಯವನ್ನು ಕೈಕೊಂಡಿರುವುದಿಲ್ಲ. ಆದರೆ ಇತ್ತೀಚೆಗೆ ಅಲ್ಲಿಯ ಕೆಲವು ಗೃಹಸ್ಥರು ಅಂದರೆ ಮ॥ ರಾ॥ ನಲ್ಲಪ್ಪ ಘಟ್ಟದ, ರ್‍ಯಾವಪ್ಪ ಶೆಟ್ಟರ, ಬಸವಂತಪ್ಪ ಕತ್ತಿ, ಗುರುಬಸಪ್ಪ ಜೀರದಾಳ, ಗುರುಪಾದಪ್ಪ ಘಟ್ಟದ, ಬಸವಲಿಂಗಪ್ಪ ನೀಲಗಲ್ಲ, ಗುರುಲಿಂಗಪ್ಪ ಘಟ್ಟದ, ತಮ್ಮಣ್ಣ ಎಂಡಿಗೇರಿ, ಬಸಪ್ಪ ಜಿಗಳೂರ ಇವರುಗಳು ವಿದ್ಯಾಭಿರುಚಿಯುಳ್ಳವರಾಗಿ ಮುಂದೆಬರಲಿಕ್ಕೆ ಪ್ರಯತ್ನಮಾಡಹತ್ತಿರುವರು ಮತ್ತೂ ಕೆಲವರು ಸ್ಟಾರ ಪತ್ರಿಕೆಗೆ ಹೊಸದಾಗಿ ವರ್ಗಣಿದಾರರಾಗಿರುವರು. ಇದು ಶುಭಚಿನ್ಹವೇ ಸರಿ. ಇದರಂತೆ ಬೀಳಗಿ, ಕಲಾದಗಿ, ಅಮ್ಮಿನಗಡ ತಾಳಿಕೋಟಿ ಮೊದಲಾದ ಊರುಗಳ ಪ್ರಮುಖಜನರೂ ಈಗಿನ ದಿನಗಳ ಸುಧಾರಣೆಯ ಅವಶ್ಯಕತೆಯನ್ನು ಲಕ್ಷ್ಯದಲ್ಲಿ ತಂದು ಎರಡನೆ ಸಮಾಜದವರಂತೆ ಮುಂದಕ್ಕೆ ಬರಲಿಕ್ಕೆ ಆದಷ್ಟು ಪ್ರಯತ್ನಮಾಡಬೇಕೆಂದು ಅವರಿಗೆ ಅತ್ಯಾಗ್ರಹದ ಸೂಚನೆಯಿದೆ.

ಶಿವಮೂರ್ತಯ್ಯ ದೇಸಾಯಿಮಠ.

ಜಬಲೇಶ್ವರ.

ಈ ಗ್ರಾಮದ ಹಿರಿಯ ಮಠದಲ್ಲಿ ೮ ವರ್ಷಗಳಿಂದ ಸಂಸ್ಕೃತ ಪಾಠಶಾಲೆಯು ಸ್ಥಾಪಿಸಲ್ಪಟ್ಟು ಮಠದ ವ್ಯಯದಿಂದ ಈವರೆಗೂ ನಿರಾತಂಕವಾಗಿ ಸಾಗುತ್ತ ಬಂದಿರುವುದು. ಇಲ್ಲಿ ಸಧ್ಯಃ ಕಾಲದಲ್ಲಿ ವಿದ್ಯಾರ್ಥಿಗಳು ೧೫ ಜನರಿರುವರು. ಇವರಲ್ಲಿ ಈ ಮಠದ ಪಟ್ಟಾಧಿಕಾರಿಗಳು ಕಾವ್ಯ ಚಂಪೂ ನಾಟಕಾಂತ ಸಾಹಿತ್ಯವನ್ನು ಪೂರೈಸಿ ಈಗ್ಗೆ ಅಲಂಕಾರ ಗ್ರಂಥಗಳನ್ನೋದುತ್ತಿರುವರು. ಇವರ ಸಹಾಧ್ಯಾಯಿಗಳು ಮಮದಾಪುರದ ವಿರಕ್ತಮಠದ ಮಹಾದೇವ ಮರಿದೇವರೊಬ್ಬರಿರುವರು. ಇನ್ನುಳಿದವರಲ್ಲಿ ಕೆಲವರು ನೈಷಧ ಕಾವ್ಯವನ್ನೂ ಕೆಲವರು ಕುಮಾರ ಸಂಭವವನ್ನೂ ಕೆಲವರು ಸಂಸ್ಕೃತ ೧-೨ ನೇ ಪುಸ್ತಕಗಳನ್ನೂ ಕೆಲವರು ಶಬ್ದಕೋಶಾದಿಗಳನ್ನೂ ಓದುತ್ತಿರುವರು. ಪಾಠಕ್ರಮವು ಸರಿಯಾಗಿದ್ದು ವಿದ್ಯಾರ್ಥಿಗಳ ಭೋಜನಾದಿ ವ್ಯವಸ್ಥೆಯು ಸುಗಮವಾಗಿರುವುದು. ಹೀಗಿರುವಲ್ಲಿ ಈ ವರ್ಷ ಸದರಿ ಶಾಂತವೀರಪಟ್ಟಾಧಿಕಾರಿಗಳು ತಮ್ಮ ಮರಿಗೆ ಶಿವದೀಕ್ಷೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಬೇಕೆಂದಾಲೋಚಿಸಿ, ಇದೇ ವೈಶಾಖ ಶುದ್ಧ ತ್ರಯೋದಶಿ ಸೋಮವಾರ ಹಗಲು ತಮ್ಮ ಪಾಠಶಾಲಾಧ್ಯಾಪಕರಾದ ವಿರೂಪಾಕ್ಷಶಾಸ್ತ್ರಿಗಳು ಗುಳೇದಗುಡ್ಡ, ಇವರ ಕಡೆಯಿಂದ ಯಥಾವಿಧಿ ನಾಂದೀ ಪುಣ್ಯಾಹವಾಚನ ಶಿವಲಿಂಗಸಂಸ್ಕಾರ ಮೊದಲಾದ ಕರ್ಮಾಂಗಗಳನ್ನು ಮಾಡಿಸಿ, ಆಮೇಲೆ ತಮ್ಮ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ತೊರವಿ ಹಿರೇಮಠದ ಪಟ್ಟಾಧಿಕಾರಿಗಳಿಂದ ಯಥಾವಿಧಿ ತಮ್ಮ ಮರಿ ಮೊದಲಗೊಂಡು ನಾಲ್ಕು ಜನ ವಟುಗಳಿಗೆ ಶಿವದೀಕ್ಷೆಯನ್ನು ಮಾಡಿಸಿದರು. ಈ ಸಮಾರಂಭಕಾಲದಲ್ಲಿ ಏಳೆಂಟು ನೂರು ಜನ ಮಾಹೇಶ್ವರರಿಗೆ ಇಷ್ಟಾನ್ನ ತಾಂಬೂಲ ಯೋಗ್ಯತಾನುಸಾರವಾಗಿ ದಕ್ಷಿಣೆ ಮೊದಲಾದವುಗಳಿಂದ ತೃಪ್ತಿಗೊಳಿಸಿದ ಮೇಲೆ ಗ್ರಾಮದ ಅಂತ್ಯಜಾದಿ ನೂರಾರುಜನ ಬಡಬಗ್ಗರಿಗೆ ಮೃಷ್ಟಾನ್ನವನ್ನಿಟ್ಟು ಸಂತೋಷಗೊಳಿಸಿದರು. ಸಾಯಂಕಾಲಕ್ಕೆ ಮರಿದೇವರ ಆಂದೋಲಿಕಾ ಸಮಾರಂಭಕ್ಕಾಗಿ ಶ್ರೀಗಳ ಶಿಷ್ಯಮಂಡಲಿಯೂ ಇತರ ಭಕ್ತಮಂಡಲಿಯೂ ಬಜಾರದಲ್ಲಿ ಹತ್ತೆಂಟು ನೂತನ ವಸ್ತುಗಳಿಂದಲೂ ತಳಿರುಗಳಿಂದಲೂ ಮಹಾದ್ವಾರಗಳನ್ನು ರಚಿಸಿ ಓಣಿ ಓಣಿಗಳಲ್ಲಿ ತಳಿರು ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ವೀಥಿಯ ಎಡಬಲ ಭಾಗದಲ್ಲಿ ನಾನಾತರದ ಧ್ವಜಪತಾಕೆಗಳಿಂದಲೂ ಪುರವನ್ನು ಮಂಗಲಮಯವನ್ನಾಗಿ ಮಾಡಿದ್ದರು. ಅಷ್ಟಕ್ಕೆ ಸಾಯಂಕಾಲದ ೬ ಗಂಟೆಯಾಗಲು ಮರಿದೇವರು ಆಂದೋಲಿಕಾರೋಹಣ ಮಾಡಿದ ಕೂಡಲೆ ಈ ಮಠದ ಗೌರವದ ಛತ್ರಚಾಮರಗಳನ್ನು ಅಪ್ತಾ ನಂದಿ ಧ್ವಜಗಳನ್ನು ಕಹಳೆನಪೋರಿಗಳನ್ನು ರಜತದಂಡಗಳನ್ನು ಬೆಳ್ಳಿಯಪಟ್ಟಿಗಳನ್ನು ಧರಿಸಿಕೊಂಡಿದ್ದ ಆ ಆ ಸೇವಕರು ಆಂದೋಲಿಕೆಯ ಸುತ್ತ ಆವರಿಸಿದರು. ತತ್ಪುರೋಭಾಗದಲ್ಲಿ ವಾದ್ಯವಾದಕರ ಸಂಮೇಳನವು ನಿಬಿಡವಾಗಿ ನೆರೆದಿತ್ತು. ಮತ್ತೂ ಹತ್ತೆಂಟುಜನ ಪೋಲೀಸರೂ ಹವಾಲದಾರರೂ ೪೦ ಜನ ಓಲೆಕಾರರು ತಮ್ಮತಮ್ಮ ಡ್ರೆಸ್ಸುಗಳನ್ನು ಧರಿಸಿಕೊಂಡು ಆಯುಧಪಾಣಿಗಳಾಗಿ ಪಲ್ಲಕ್ಕಿಯ ಸುತ್ತಲೂ ಸಂಚರಿಸುತ್ತಿದ್ದರು. ನೂರಗಟ್ಟಲೆ ದೀವಟಿಗೆಗಳು ರಾತ್ರಿಯನ್ನು ಹಗಲಾಗಿ ಮಾಡಿದುವು. ಅಲ್ಲಲ್ಲಿಗೆ ಬಿರ್ಸು ಕೊಂಬು ತಾರಸಳೆ ಮೊದಲಾದ ಮದ್ದಿನ ಅಬ್ಬರವಂತೂ ಹೇರಳವಾಗಿತ್ತು. ಮೆರವಣಿಗೆಯ ಕಾಲಕ್ಕೆ ಹತ್ತೆಂಟು ಸಹಸ್ರಜನರು ನೆರೆದಿದ್ದರು. ಅಲ್ಲಲ್ಲಿಗೆ ಭಕ್ತಜನರು ಲಾಜಪುಷ್ಪಾಂಜಲಿಗಳನ್ನೆರಚುತ್ತಿದ್ದರು. ಶ್ರೀಗಳ ಶಿಷ್ಯವರ್ಗದ ರೂ ಆಂದೋಲಿಕೆಯು ತಮ್ಮತಮ್ಮ ಗೃಹದ್ವಾರದ ಮುಂದೆ ಬಂದಕೂಡಲೆ ಸುವಾಸಿನಿಯರು ಫಲ ಕರ್ಪೂರದ ರ್ಪಿಸಿ ಕಳಸ ಕನ್ನಡಿಗಳನ್ನು ಬೆಳಗಿ ಯೋಗ್ಯತಾನುಸಾರ ಗಿ ಕಾಣಿಕೆಯನ್ನರ್ಪಿಸಿದರು. ಈ ಪ್ರಕಾರ ಮೆರವಣಿಯು ರಾತ್ರಿ ಹನ್ನೊಂದುಗಂಟೆಗೆ ನಿರಾತಂಕವಾಗಿ ಮಠ ಬಂದಕೂಡಲೆ ಶ್ರೀಗಳ ಶಿಷ್ಯಾಗ್ರಗಣ್ಯರಾದ ವೀರನಗೌ ಲಿಂಗನಗೌಡ ಮುಕಡದಮ್ಮ ಪಾಟೀಲ ಮಹಾಶಯರು ಠದಲ್ಲಿ ನಡೆದ ಪಾಠಶಾಲೆಯ ಖರ್ಚಿಗಾಗಿ ಹತ್ತು ಎಕರೆ ತ್ತಮ ಭೂಮಿಯನ್ನು ಕೊಡಲು ವಾಗ್ದಾನಮಾಡಿದರು. ಕಾಲಕ್ಕೆ ಸದರೀ ಪಾಠಶಾಲಾಧ್ಯಾಪಕರು ಮಾಡಿದ ಭಾಣದ ಸಾರಾಂಶ.— ಈ ಮಠದ ಪಟ್ಟಾಧಿಕಾರಿಗಳು ಚಿಕ್ಕರಿರುವುದರಿಂದ ಈ ಮಠದ ವ್ಯವಸ್ಥೆಯನ್ನು ಎಂಟುಹತ್ತು ವರ್ಷಗಳಿಂದಲೂ ಈ ಪಾಟೀಲ ಮಹಾಶಯರು ಅತಿಭಕ್ತಿಯಿಂದ ಮಾಡುತ್ತ ಬಂದಿರುವರು. ಇವರ ಪೂರ್ವಜರಾದರೂ ಮಠದಲ್ಲಿ ನಡೆಯುವ ಶ್ರಾವಣದ ಗಣಾರಾಧನೆ ಪುರಾಣಶ್ರವಣಕ್ಕಾಗಿ ೩೨ ಎಕರೆ ಭೂಮಿಯನ್ನೂ ಇವರ ಮುತ್ತಂದಿರಾದ ಬಾಬೂಗೌಡರು ಮಠದಲ್ಲಿ ನಡೆಯುವ ದಾಸೋಹಕ್ಕಾಗಿ ೧೦ ಎಕರೆ ಭೂಮಿಯನ್ನೂ ಗುರುಪಾದಕ್ಕೆ ಸಮರ್ಪಿಸಿರುವರು. ಈ ಮಹಾಶಯರಾದರೂ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೂ ಸಹಾಯಮಾಡಿರುವರು. ಮತ್ತು ವಿಜಾಪೂರ ಲಿಂಗಾಯತ ಬೋರ್ಡಿಂಗಿಗೆ ೩೦೦ ರೂ. ಗಳನ್ನೂ ಶಿವಯೋಗಮಂದಿರಕ್ಕೆ ೩೦೦ ರೂ.ಗಳನ್ನೂ ಕೊಟ್ಟಿರುವರಲ್ಲದೆ ಬಂದ ಪಂಡಿತವರ್ಗಕ್ಕೂ ಸ್ವಾಮಿಗಳಿಗೂ ಅವರವರ ಯೋಗ್ಯತಾನುಸಾರವಾಗಿ ಮರ್‍ಯಾದಿಸುತ್ತಿರುವರು. ಇವರ ಏಕಪತ್ನೀ ವ್ರತವೂ ಸತ್ಕಾರ್ಯದಲ್ಲಿ ದೀರ್ಘ ಪ್ರಯತ್ನವೂ ಬಹು ಶ್ಲಾಘನೀಯವಾಗಿರುವುವು. ಸ್ವಭಾವವು ಬಹು ಸೌಮ್ಯವಾಗಿದ್ದು ಧರ್ಮೋತ್ತೇಜನದಲ್ಲಿ ಉತ್ಕಟೇಚ್ಛೆಯುಳ್ಳವರಾದಕಾರಣ ತಾವು ಶುದ್ಧ ಪಂಚಮರಿದ್ದು ಇಷ್ಟಬಾಂಧವರಿಂದೊಡಗೂಡಿ ದೀಕ್ಷಾಸಂಪನ್ನರಾಗಬೇಕೆಂಬ ಕುತೂಹಲವು ಇವರಲ್ಲಿ ತುಂಬಿ ತುಳುಕುವುದು. ಮೇಲೆ ಕಾಣಿಸಿದ ಯಥಾರ್ಥಗುಣಭೂಷಿತರಾದ ಈ ಮಹಾಶಯರು ಪಾಠಶಾಲೆಯ ಖರ್ಚಿಗಾಗಿ ಮೇಲೆ ಕಾಣಿಸಿದ ಭೂಮಿಯನ್ನು ಗುರುಪಾದಕ್ಕೆ ಅರ್ಪಿಸಿದ್ದಕ್ಕಾಗಿ ಅಹೋರಾತ್ರಿಯಲ್ಲಿ ಪರಶಿವನು ಈ ಮಹಾನುಭಾವರಿಗೆ ಪುತ್ರಾದ್ಯಷ್ಟೈಶ್ವರ್ಯವನ್ನಿತ್ತು ಸಲಹಲೆಂದು ಕೋರಿ, ಈ ಮಹಾನುಭಾವರ ಮೇಲ್ಪಂಕ್ತಿಯನ್ನು ಅನುಸರಿಸಿ ಇನ್ನುಳಿದ ಶಿಷ್ಯವರ್ಗದವರೂ ಕೈಲಾದಮಟ್ಟಿಗೆ ಭೂ ಸಹಾಯವನ್ನು ಅಥವಾ ಧನ ಸಹಾಯವನ್ನೂ ಮಾಡಿ ಇಲ್ಲಿ ನಡೆದ ಈ ಪಾಠಶಾಲೆಯು ಆಚಂದ್ರಾರ್ಕವಾಗಿ ಸ್ಥಾಯಿಯಾಗಿ ನಿಲ್ಲುವಂತೆ ಸರ್ವರ ಮನಸ್ಸಿನಲ್ಲಿ ಸ್ವಮತಾಭಿಮಾನಿಯಾದ ಶಂಭುವು ಪ್ರಕಟಿಸಲೆಂದು ತಮ್ಮ ಭಾಷಣವನ್ನು ಮುಗಿಸಿದರು

ಓರ್ವ ಮತಾಭಿಮಾನಿ.

11 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧೨-೦-೦ ೯-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶಶತಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೯-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ವಿವೇಕಮಂಜರಿ.

14

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯತಾತ್ಪರ್ಯಪ್ರತಿಪತ್ತಿ ಮನೋಹರಶೈಲಿ, ಭಾಷಾಶುದ್ಧಿ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ನೆಯ ಭಾಗ ೨ ಆಣೆ ೧೦೦ ಪುಟಗಳು.
೨ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್

ಮಧುರವಾಣಿ.

6 ವಾರ್ಷಿಕಚಂದಾ ೧—೮—೦.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ಧಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

39 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವೀ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

48 ಪ್ರತಾಪ ಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀ ಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು; ಇವು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವುದು. ಕ್ರಯ:— ೧ ನೇ ಭಾಗ ೬ ಆಣೆ; ೨ ನೇ ಭಾಗ ೧೦ ಆಣೆ; ಒಟ್ಟು ಪ್ರತಿ ೧ ರೂ. ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

45 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಜಾತಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬೊಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ಶೀಘ್ರಗುಣವುಂಟಾಗ್ಯ. ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಟ್ಟಿಗೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿ॥ ಉತ್ತರಕನಡಾ.

ಉತ್ತಮವಾದ ನಶ್ಯದಪುಡಿ.

4

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೆಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚೆಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ, ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧—೧೪—೦.

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ ನೀವು ಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ, ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧—೧೪—೦ ಗಳು. ಟಪಾಲ್ ಖರ್ಚು ಬೇರೆ.

ವಿಳಾಸ:— ಕೆ. ಮಲ್ಲಿಕಾರ್ಜುನಶೆಟ್ಟಿ,
ಕೋಪಶೆಟ್ಟಿಊರು ಹನೂರು ಪೋಸ್ಟು,
ಕೊಳ್ಳೇಗಾಲ ತಾಲ್ಲೂಕು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಪ್ರತ್ಯೇಕವಾಗಿ ದರವು ಬೀಳುವುದು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, **ನಟೇಶ್ವರ,** ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, **ಹನುಮಂತ,** ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾ **ಕಲ್ಯಾಣ** ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು **ಜೋಗಿಸಿ** ಅಲ್ಪ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೬-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯುಕ್ಕೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೪-೦ ಆಣೆಯಂತೆ ಕಳುಹಬೇಕು. ಅಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

34

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ವೈಯೊಗ್ನಿನ ಉತ್ಪತ್ತಿಯೂ ರೋಗ ಧಾತು ಪುಷ್ಟಿಕರವಾಗುತ್ತದೆ. ಮತ್ತು ಕಾಮೋತ್ತೇಜಕವು ಹೆಚ್ಚಾಗಿ ಸಂತತಿ ಧಾರಣೆ ಯೋಗ್ಯವಾದ ದಾಸವಾಗುತ್ತದೆ. ಕಠಿಣತ್ವದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೩-೧೨-೦ ರೂ. ೬ ಬಾ, ೬-೧೩-೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೪ ರೂ. ಮೇಲೆ ೬ ಬಾಟ್ಲಿ ಇನಾಮು ಟ. ಖ. ಬೇರೆ.

ಪಚ್ಯಾಂಗಸಿರ್ಕಾರವು:— ಇದರಿಂದ ಸ್ವಚ್ಛವಾಗಿ ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೪ ರೂ. ೬ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ~~ಬಿಳ್ಜಿ, ದದ್ದು~~ ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೮ ಆಣೆ. ೬ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೪ ಆಣೆ. ಟ.ಖ. ಬೇರೆ.

ನಂ. ೧೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

15

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಭಕ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೪ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು

ಕಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

5

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಸಂಕಟ, ಸಂದುಗಳ ನೋವು ಕೈ ಕಾಲು ಜೋಡತ (ವಾತ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಶೀಘ್ರವೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬಸುರುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚೆಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೬. ಪ್ಲೇಗಿನ ಔಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ ಸಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಹೆದರಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ರೋಗಗಳಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ ಕ್ಕೆ ಅ. ೪. ಎರಡರಿಂದ ಟಪಾಲ್ ಖರ್ಚ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಹತ್ತಿರ
39
ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೬೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೪-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೪-೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭಪೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೩-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೪-೦.

ಶ್ರೀಖಂಡಲೇಹ್ಯ.— ದೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೪-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೪-೦.

ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೬-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೆಯ ಇಸವಿ ಮೇ ತಾ|| ೧೩ರಿಂದ ೧೯೧೨ನೆಯ ಮೇ ತಾ|| ೧೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ವೈಶಾಖ ಬ|| ದ್ವಾದಶಿ ಯಿಂದ ಜ್ಯೇಷ್ಠ ಶು|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
13	¹ಸೋ	ದ್ವಾ	59-8	ಉ|ಭಾ	23-20	1
14	ಮಂಗ	ತ್ರ	58-32	ರೇವತಿ	25-7	2
15	ಬುಧ	ಚ	56 40	ಅಶ್ವಿನಿ	25-44	3
16	²ಗುರು	ಅ	53-38	ಭರಣಿ	25-8	4
17	³ಶುಕ್ರ	ಪಾ	49-34	ಕೃತ್ತಿಕೆ	23-31	5
18	⁴ ಶನಿ	ಬಿ	44-39	ರೋಹಿಣಿ	21-1	6
19	⁵ಭಾನು	ತ	39 9	ಮೃಗಶಿರ	17-41	7

(1) ಕೃಷ್ಣಪ್ರದೋಷ, ವಿಷ್ಣುಪದಪುಣ್ಯಕಾಲಃ, ಸಮಾರ್ಥಃ, ಹರಿವಾಸರಃ. (2) ಸರ್ವತ್ರ ಅಮಾವಾಸ್ಯಾ (3) ಪುನ್ನಾಗಗೌರೀವ್ರತಂ. (4) ಚಮಾಡಿಬಾನಿ ಚಂದು ೧. (5) ಕದಳೀ ಗೌರೀವ್ರತಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವ ಪತ್ರಿಕೆ.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷಜ್ಞನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಾಸ್ಯಾಲವಾಲಂಪಲಂ
ಸೀಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

REGISTERED NO M 124

ಸಂಪುಟ ೨೯] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಮೇ ತಾರೀಖು ೧೩ ನೆಯ ಸೋಮವಾರ. [ಸಂಚಿಕೆ ೨೦

12 ಊದಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರುಗೆ ೧-೦-೦ ೪-೦-೦; ೩-೦-೦; ೨-೪-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೪ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೪-೦
ಚಾರುಶೀಲೆ ಚರಿತ್ರೆ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

39

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೪-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಲ್ಲೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೨-೦

ಎಸ್. ಆರ್. ಕರಿಬಸವಶಾಸ್ತ್ರಿ
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಮಧುರವಾಣೀ.

7

ವಾರ್ಷಿಕಚಂದಾ ೧-೪-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

ವಿವೇಕಮಂಜರಿ.

15

ನೆಯ ೨ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೬ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು
೨ ನೆಯ ಭಾಗ ೩ ಆಣೆ ೧೩೨ ಪುಟಗಳು.

ಅಂಚೆಯವೆಚ್ಚವು ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

39 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೀರಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ವಿರಂಚಿಪಂಗಮುಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಒಂದೇಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

49 ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ ಸ್ತ್ರೀ ಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು; ಇವು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವುದು. ಕ್ರಯ:— ೧ ನೇ ಭಾಗ ೬ ಆಣೆ; ೨ ನೇ ಭಾಗ ೧೦ ಆಣೆ; ಒಟ್ಟು ಪ್ರತಿ ೧ ರೂ. ಟಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೆ.

ವಿಳಾಸ:— ವಿಜಯಕೇಸರಿ ಕಂಪನಿ,
ಬೆಂಗಳೂರು ಪೇಟೆ.

ಉತ್ತಮವಾದ ನಶ್ಯದಪುಡಿ.

5

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೪ ಸೇರಿಗೆ ೨-೪-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ, ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚುಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜನ ಡಬ್ಬಿಗಳಿಗೆ ೧-೧೪-೦.

ಮುಖರೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ, ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ ಡಬ್ಬಿಗಳಿಗೆ ೧-೧೪-೦. ಗಳು. ಟಪಾಲ್ ಖರ್ಚು ಬೇರೆ.

ವಿಳಾಸ:— ಕೆ. ಮಲ್ಲಿಕಾರ್ಜುನಶೆಟ್ಟಿ,
ಕೋಟಶೆಟ್ಟಿಯರು ಹಸೂರು ಫೋಸ್ಟ್,
ಕೊಳ್ಳೇಗಾಲ ತಾಲ್ಲೂಕು.

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿದೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆದರೂ ನಾನು ಬಾಲ್ಯಬುದ್ಧಿಯಿಂದ ವಿಮರ್ಶೆಯಂ ಮಾಡದೆ ಕೆಲವು ಪಣಂಗಳಂ ಕುರಿತು ಅವೆಲ್ಲವಂ ತಂದವನನ್ನೇ ವರಿಸುವೆನೆಂದು ಮೊದಲು ಪ್ರತಿಜ್ಞೆಯಂ ಮಾಡಿರುವೆನಾದ ಕಾರಣ, ಈಗ ನಿತ್ಯಗೌರಿಯ ವ್ರತದೊಳ್ ಚಿನ್ನದ ಬಾಗಿನಗಳಂ ಕೊಡಬೇಕಾಗಿರುವುದರಿಂದ ದಿನದಿನದೊಳ್ ಹನ್ನೆರಡು ಭಾರ ಬಂಗಾರವಂ ಮತ್ತೂ ಬೇಡಿದ ಭೂಷಣಂಗಳಂ ಕೂಡ ಕೊಡುವ ಒಂದು ರತ್ನವಂ ತಂದು ದಯಪಾಲಿಸಬೇಕೆಂದು ನುಡಿದು, ನಮ್ಮ ತಂದೆಯಾದ ವಿಜಯವರ್ಮರಾಯನು ಈ ವ್ರತಕ್ಕೋಸುಗ ಬೇಕಾದಷ್ಟು ದ್ರವ್ಯವಂ ಕೊಡುವನು, ಆದರೂ ಪತಿ ಸಂಪಾದಿಸಿದ ದ್ರವ್ಯದಿಂದಲೇ ಈ ವ್ರತವಂ ಮಾಡಬೇಕೆಂಬ ನಿಯಮವಿರುವುದರಿಂದ ನನ್ನಲ್ಲಿ ಕರುಣೆಯನ್ನಿಟ್ಟು ಈ ಪಣವಂ ನೆರವೇರಿಸಬೇಕೆಂದು ಪ್ರಾರ್ಥಿಸುವ ನನ್ನ ಅಭಿಪ್ರಾಯವಂ ಮಹಾರಾಜೇಂದ್ರಂಗೆ ತಿಳುಹಿಸಬೇಕೆಂದು ಮೃದುಮಧುರವಾಗಿ ನುಡಿಯುತಲಿರುವ ಸೌಗಂಧಿಕಾದೇವಿಯ ಮಧುರಗಳಾದ ಮಾತುಗಳಂ ಕೇಳಿ ಸುಗಂಧರಾಜೇಂದ್ರನು ಮನದೊಳ್—ಶ್ರೋತ್ರೇಂದ್ರಿಯಂಗಳು ಸಾರ್ಥಕಗಳಾದುವು, ಮಿಗಿಲಾದ ಇಂದ್ರಿಯಂಗಳು ಸಫಲಗಳಾಗುವುದಕ್ಕೆ ಜಗನ್ಮಾತೆಯಾದ ಶ್ರೀ ಚಾಮುಂಡಿಕಾದೇವಿಯ ಕಟಾಕ್ಷ ಪೊಂದಲ್ಲದೆ ಮತ್ತೊಂದು ಸಾಧನವಿಲ್ಲವೆಂದು ನಿಶ್ಚೈಸಿ ಬಳಿಕಾ ಸೌಗಂಧಿಕಾದೇವಿಯ ಸಖಿಯಂ ಕುರಿತು—ನಿಮ್ಮ ಅರಸಿಯಿಂದ ಪ್ರಾರ್ಥಿತವಾದ ರತ್ನವು ಸ್ವರ್ಗ ಮರ್ತ್ಯ ಪಾತಾಳಂಗಳಲ್ಲಿ ಎಲ್ಲಿದ್ದೊಡೆಯೂ ಸಾಧಿಸಿ ತಂದು ಕೊಡುವೆನು, ಸಂಶಯಂಗೊಳ್ಳಬೇಡವೆಂದು ಪೇಳಿ ಪೊರಮಡಲುದ್ಯುಕ್ತನಾಗಿ, ಕನ್ನಡಿಯಲ್ಲಿ ಕಂಡ ಕನ್ನೆಯ ರೂಪಿನಂತೆ ಪರಿಣಮಿಸಿರುವ ಅಂತಃಕರಣಕ್ಕೆ ಒಂದೂ ತೋರದಿರಲು, ಬುದ್ಧಿಶಾಲಿಯಾದ ಸುಗಂಧರಾಜೇಂದ್ರನು ವಿವೇಕವೆಂಬ ಸಾಧನದಿಂದ ಮನೋವಿಕಾರವಂ ತೊಳೆದು ಮುಂದೆ ಬಹು ಕಾರ್ಯವಿರುವುದೆಂದು ಅಲ್ಲಿಂದ ಪೊರಮಟ್ಟು, ತಾನಿರುವ ಬಿಡಾರಕ್ಕೆ ಬಂದು ಮಣಿಮಂಚದೊಳ್ ಕುಳಿತು—ಮಾನಿನೀಮಣಿಯಾದ ಸೌಗಂಧಿಕಾದೇವಿಯು ಬೇಡಿದ ಮಣಿಯು, ಮೊದಲು ಸಾಧಿಸಿಕೊಂಡು ಬಂದ ಪಣದಂತೆ ಸಾಧ್ಯವಾಗುವುದು, ಅಶಕ್ಯವೆಂದು ಚಿಂತಿಸುತ, ಪಾರಗಾಣದೆ ಚಿತ್ರಾರ್ಪಿತನಂತೆ ಮೌನದಿಂದಿರುವ ರಾಜೇಂದ್ರನಂ ನೋಡಿ ಸುಮತಿಯೂ ವಿದ್ಯಾಸಾಗರನೂ ತಮ್ಮೊಳ್ ತಾವು—ರಾಜೇಂದ್ರನ ಮನಸ್ಸು ಎಂದಿನಂತೆ ಕಾಣುವುದಿಲ್ಲ, ಇಂದು ಜಗನ್ಮೋಹಿನಿಯಾದ ಸೌಗಂಧಿಕಾದೇವಿಯು ದುರ್ಲಭವಾದ ಏನೋ ಒಂದು ಪಣವಂ ಕೇಳಿರುವಂತೆ ಕಾಣುತಲಿದೆ, ಪ್ರಶ್ನೆಯಂ ಮಾಡಿ ತಿಳಿಯುವ ಎಂದು ಈರ್ವರೂ ರಾಜೇಂದ್ರನಿದ್ದೆಡೆಗೆ ಬಂದು,—ಎಲೈ ರಾಜೇಂದ್ರನೇ ನೀನು ಚಿಂತಿಸುವುದಕ್ಕೆ ಕಾರಣವೇನು? ನಿನಗೆ ಅಸಾಧ್ಯವಾದ ಕಾರ್ಯವು ಮೂರು ಲೋಕದಲ್ಲಿಯೂ ಇಲ್ಲ, ಅಥವಾ ಇದ್ದಾಗ್ಯೂ ಅದಂ ಸಾಧಿಸಿ ಕೊಡುವುದಕ್ಕೆ ಜಗದೀಶ್ವರಿಯು ಬದ್ಧಕಂಕಣಳಾಗಿರುವಳು; ಅದಂ ನೀನು ಮರೆತೆಯಾ? ಇದುವಲ್ಲದೆ ಲೋಕಪಾಲಕರೆಲ್ಲರೂ ನಿನಗೆ ಅಂಜಿ ನಡೆಯುವರು, ವಿಜಯಲಕ್ಷ್ಮಿಯು ನಿನ್ನ ಖಡ್ಗಾಗ್ರದಲ್ಲಿ ಸ್ಥಿರವಾಗಿ ನೆಲಸಿಹಳು, ಇಂತು ಸಾಧನವಿರುವಲ್ಲಿ ವೃಥಾ ಚಿಂತಿಪುದೇಕೆ? ಚಿತ್ತದಲ್ಲಿರುವ ಅರ್ಥವಂ ಎಮ್ಮೊಡನೆ ಪೇಳಬೇಕೆನಲು, ಈ ವಾಕ್ಯವಂ ಕೇಳಿ ರಾಜೇಂದ್ರನು ಸಂಭ್ರಮಯುಕ್ತನಾಗಿ, ಗುರುವಾದ ವಿದ್ಯಾಸಾಗರನಿಗಭಿವಂದಿಸಿ, ಕುಳ್ಳಿರೆಂದು ನುಡಿದು, ಪೀಠವನಿತ್ತು, ಸುಮತಿಯಂ ಕರೆದು ಕುಳ್ಳಿರಿಸಿ, ತಾನು ಸೌಗಂಧಿಕಾದೇವಿಯ ಮನೆಗೆ ಪೋಗಿದ್ದ ಪರಿಯಂ, ಅಲ್ಲಿ ನಡೆದ ವೃತ್ತಾಂತವಂ, ಮತ್ತೂ ಅವಳು ಕೇಳಿದ ಮಣಿಪ್ರಭಾವವಂ ಸಹ ವಿಸ್ತಾರವಾಗಿ ಪೇಳಿ, ಮೊದಲು ತಂದಿತ್ತ ಪಣಂಗಳು ದೈತ್ಯಸ್ವರೂಪದಿಂ ವ್ಯಕ್ತವಾಗಿದ್ದ ಕಾರಣ ನೆಲೆಯಂ ತಿಳಿದು ಸಾಹಸವಂ ಮಾಡಿ ಸಾಧಿಸಿ ತಂದಿತ್ತೆನು, ಈಗಲಾದರೋ ಮೊದಲು ಹೇಳಿದ ಗುಣಂಗಳಿಂದ ಯುಕ್ತವಾದ ಮಣಿಯು ದುರ್ಲಭವು, ಅಥವಾ ಅಂತಪ್ಪ ಮಣಿಯಿದ್ದರೂ ಪ್ರಾಣಿಗಳಿಗೆ ದೊರಕುವುದು ದುರ್ಲಭವು, ಇಂತಿರುವಲ್ಲಿ ರಾಜಕನ್ನೆಯು ಅಪೇಕ್ಷಿಸಿದ ಮಣಿಯು ಸೊತ್ತಾಗುವುದೆಂತು? ದೊರಕುವುದೆಂತು? ಎಂದು ಚಿಂತಿಸುವೆನಲ್ಲದೆ ಮತ್ತೊಂದಿಲ್ಲವೆಂದು ಪೇಳಲಾ ಮಾತಂ ಕೇಳಿ ಸುಮತಿಯು ಒಂದೂ ತೋರದೆ ಚಿಂತಿಸುತ್ತಿರಲಾಗ, ವಿದ್ಯಾಸಾಗರನು ರಾಜಕುಮಾರನಂ ಕುರಿತು—ಎಲೈ ತ್ರೈಲೋಕ್ಯವೀರನೇ ಕೇಳು, ಇಂತು ಚಿಂತಿಪುದೇಕೆ? ಪ್ರಪಂಚದಲ್ಲಿರುವ ನವರತ್ನಂಗಳ ಉತ್ಪತ್ತಿಯಂ ಅವರಲ್ಲಿರುವ ಭೇದಂಗಳಂ ತನ್ನಿಷ್ಟ ಗುಣಂಗಳೆಲ್ಲವಂ ವಿಸ್ತಾರವಾಗಿ ಪೇಳುವೆನು, ಅದಂ ಸಾವಧಾನನಾಗಿ ಕೇಳು, ನಾನು ನಿರೂಪಿಸುವ ರತ್ನಂಗಳೊಳ್ ಸೌಗಂಧಿಕಾದೇವಿಯು ಕೇಳಿದ ರತ್ನವು ಯಾವುದೋ ಅದಂ ನಿಶ್ಚೈಸಿ, ಎಲ್ಲಿರುವುದೋ ತಿಳಿದು, ಸರ್ವಸಾಹಸವಂ ಮಾಡಿ ತಂದೀಯಬೇಕೆನಲಾ ಮಾತಿಗೆ ರಾಜೇಂದ್ರನು ಒಡಂಬಟ್ಟು, ಗುರುವಂ ಕುರಿತು ರತ್ನೋತ್ಪತ್ತಿಯಂ ವಿಸ್ತಾರವಾಗಿ ಪೇಳಬೇಕೆಂದು ಪ್ರಶ್ನೆಯಂ ಮಾಡಲು, ಆಗ ಗುರುವಾದ ವಿದ್ಯಾಸಾಗರನು ಸುಗಂಧರಾಜೇಂದ್ರನಂ ಕುರಿತು—“ಎಲೈ ಅರಿಕಾಲಾರಣ್ಯದಾವಾನಲನೇ ಕೇಳು—ಪೂರ್ವದಲ್ಲಿ ಮಹಾಬಲಶಾಲಿಯಾದ ವಲಾಸುರನೆಂಬ ಖರ್ವ ದಾನವೇಂದ್ರನು ಸ್ವರ್ಗ ಮರ್ತ್ಯ ಪಾತಾಳಂಗಳೆಂಬ ಮೂರು ಲೋಕಂಗಳಂ ಜೈಸಿ, ಇಂದ್ರಾದ್ಯಷ್ಟ ದಿಕ್ಪಾಲಕರಂ ಪರಾಜಯವನ್ನೈದಿಸಿ, ಅಮರಾವತಿಯಂ ಸಾಧಿಸಿ, ಅಲ್ಲಿಯೇ ತ್ರೈಲೋಕ್ಯಾಧಿಪತ್ಯವಂ ಮಾಡುತ ಸುಖದಿಂದಿರುತ್ತಿರಲು, ಆಗಲಾ ದಾನವೇಂದ್ರನಿಂದ ಪರಾಜಿತರಾಗಿ ಮಂದರಪರ್ವತವಂ ಸೇರಿರುವ ಇಂದ್ರಾದಿ ಲೋಕಪಾಲಕರೆಲ್ಲರೂ ದಾನವೇಂದ್ರನು ತನ್ನ ಕುಲವೃದ್ಧಿಯಂ ಮಾಡುವುದಕ್ಕೆ ಉದ್ಯುಕ್ತನಾಗಿರುವ ಸಮಾಚಾರವಂ ಚಾರಮುಖದಿಂ ತಿಳಿದು ಚಿಂತಾಯುಕ್ತರಾಗಿ, ತಮ್ಮ ಕುಲಗುರುಗಳಾದ ಬೃಹಸ್ಪತ್ಯಾಚಾರ್ಯರಂ ಭಕ್ತಿಯಿಂ ಸ್ಮರಿಸಿ, ಬಳಿಕ, ಆಕ್ಷಣದಲ್ಲಿಯೇ ತೇಜಸ್ಸಮೂಹವೆಲ್ಲ ಒಂದಾಗಿ ಮೂರ್ತೀಭವಿಸಿ ಬಂದಂತೆ ಇದಿರಾಗಿ ಬಂದು ನಿಂತಿರುವ ತಮ್ಮ ಕುಲಗುರುಗಳಾದ ಬೃಹಸ್ಪತ್ಯಾಚಾರ್ಯನಂ ಕಂಡು ಪರಮಹರ್ಷ ಪರವಶರಾಗಿ, ಭಕ್ತಿಯಿಂದ ಸಾಷ್ಟಾಂಗಪ್ರಣಾಮವಂ ಮಾಡಿ, ನಾನಾವಿಧ ಸ್ತೋತ್ರಗಳಂ ಗೈಯುತ ಕೈಗಳಂ ಕಟ್ಟಿಕೊಂಡು ಇದಿರಾಗಿ ವಿನಯದಿಂದ ನಿಂತಿರಲಾಗ, ಬೃಹಸ್ಪತ್ಯಾಚಾರ್ಯನು ಪರಿವಾರ ಸಮೇತನಾದ ಶಚೀಪತಿಯಂ ಮತ್ತಂ ಮಿಕ್ಕ ಲೋಕಪಾಲಕರೆಲ್ಲರಂ ನೋಡಿ ಅತ್ಯಂತ ಕಠಿನಂಗಳಾದ ವಿಪತ್ಪರಂಪರೆಗಳಲ್ಲಿ ಸಿಲುಕಿ ಬೇಸರದಿಂ ನಿರ್ವಹಿಸಲಾರದೆ ನನ್ನಂ ಸ್ಮರಿಸಿರುವರೆಂದು ಮನದೊಳ್ ನಿಶ್ಚೈಸಿ, ವೃತ್ರಾರಿಯಾದ ದೇವೇಂದ್ರನಂ ಕುರಿತು ಕುಶಲಪ್ರಶ್ನೆಯಂ ಮಾಡಿ, ಆತನ ಮುಖದಿಂದ ವಲಾಸುರನ ವೃತ್ತಾಂತಂಗಳೆಲ್ಲವಂ ತಿಳಿದು, ಮನದೊಳ್ ಆಲೋಚನೆಯಂಗೈದು, ತಾನು ನಿಶ್ಚೈಸಿರುವ ಪರಿಯಂ ಪ್ರಿಯಶಿಷ್ಯನಾದ ಪಾಕಶಾಸನನಿಗೆ ತಿಳುಹಿಸಿ, ಸಕಲ ದೇವತಾ ಸೈನ್ಯ ಸಮೇತನಾಗಿ, ದಾನವಾಧಿಪತಿಯಾದ ವಲಾಸುರನಂ ಜಯಿಸಲೋಸುಗ ಅತ್ಯಂತ ವೇಗದಿಂ ಪೊರಮಡುವುದೆಂದು ಅಪ್ಪಣೆಯಂ ಕೊಡಲಾಗ, ಜಂಭಾರಿಯು ಹರ್ಷಪರವಶನಾಗಿ, ಕೃತಕೃತ್ಯನಾದೆನೆಂದು ಉಬ್ಬಿ, ಆಕ್ಷಣದಲ್ಲಿಯೇ ಯುದ್ಧಸನ್ನದ್ಧನಾಗಿ, ಸಕಲ ಪರಿವಾರದಿಂದೊಡಗೂಡಿ ತನ್ನ ದಿವ್ಯರಥದೊಳ್ ಉನ್ನತಸ್ಥಾನದಲ್ಲಿ ಆಚಾರ್ಯನಂ ಕುಳ್ಳಿರಿಸಿಕೊಂಡು, ಅಮರಾವತಿಗೆ ಅಭಿಮುಖನಾಗಿ ಬರುತ, ಸಮೀಪವನ್ನೈದಿ ಕೋಲಾಹಲ ಧ್ವನಿಯಂ ಮಾಡಲು,

ಸಶೇಷ.

ಉರುಳುಗೆಡ್ಡೆಯ ವ್ಯವಸಾಯ.

ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ಸೆಪ್ಟಂಬರ್ ಮತ್ತೂ ಡಿಶಂಬರ್ ತಿಂಗಳಿಗೆ ನಡುವೆ ಉರುಳು ಗೆಡ್ಡೆಯನ್ನು ನೆಡುತ್ತಾರೆ; ಆದರೆ ಸೆಪ್ಟಂಬರ್ ೧೫ ನೇ ತಾರೀಖು ಲಾಗಾಯ್ತು ನವಂಬರು ೧೫ ನೇ ತಾರೀಖಿನೊಳಗಾಗಿ ನೆಡುವುದು ಉತ್ತಮ.

ಜಮೀನು:—ಜಮೀನು ಮರಗಳಿಲ್ಲದ ಮೈದಾನವಾಗಿಯೂ, ತೀರ ಇಳಿಜಾರಾಗಿಯಾಗಲಿ ಅಥವಾ ತಟ್ಟೆಯಾಗಾಗಲಿ ಇರಕೂಡದು. ಜಮೀನಿನಲ್ಲಿ ಒಂದು ಬೆಳೆಯನ್ನು ತೆಗೆದು ಉರುಳುಗೆಡ್ಡೆಯನ್ನು ಎರಡನೇ ಬೆಳೆಯಾಗಿ ಇಡಕೂಡದು. ಜಮೀನನ್ನು ಜೂನ್ ತಿಂಗಳ ಲಾಗಾಯ್ತು ಹದಮಾಡಿದರೆ ಒಳ್ಳೆ ಹುಲುಸಾದ ಬೆಳೆಯು ಸಿಕ್ಕುವುದು.

ಗೊಬ್ಬರ:—ಕೆಲವು ಪ್ರದೇಶಗಳಲ್ಲಿ ಮೊದಲು ಜಮೀನಿನಲ್ಲಿ ಗೊಬ್ಬರವನ್ನು ಹರವಿ ನಂತರ ಉಳುಮೆ ಮಾಡುತ್ತಾರೆ. ಆದರೆ ಹೀಗೆ ಮಾಡುವುದರಿಂದ ಗೊಬ್ಬರವು ಪೋಲಾಗುವುದು. ಆದುದರಿಂದ ಜಮೀನನ್ನು ಮೊದಲು ಪೂರ್ತಿಯಾಗಿ ಉತ್ತು ನಂತರ ಸಣ್ಣ ಸಣ್ಣ ಕಾಲುವೆಗಳನ್ನು ಮಾಡಿ ಅವುಗಳೊಳಗೆ ಗೊಬ್ಬರವನ್ನು ಇಡಬೇಕು.

ಬೀಜ:—ಏನು ತಗಲಿ ಗಾಯಗಳಾಗಿಲ್ಲದ ಮತ್ತೂ ಉತ್ತಮ ಜಾತಿಯ ಗೆಡ್ಡೆಗಳನ್ನು ಬಿತ್ತನೆಗೆ ಉಪಯೋಗಿಸಬೇಕು. ಬಿತ್ತನೆಯ ಗೆಡ್ಡೆಗಳನ್ನು ಒಂದು ಕೊಠಡಿಯೊಳಗೆ ರಾಶಿಯಾಗಿ ಹಾಕಿರುವುದು ವಾಡಿಕೆಯಾಗಿದೆ. ಹೀಗೆ ರಾಶಿಹಾಕುವುದರಿಂದ ಅನೇಕ ಗೆಡ್ಡೆಗಳು ಕೊಳೆತು ಹೋಗುವುವು. ಆದುದರಿಂದ ಬಿತ್ತನೆಯ ಗೆಡ್ಡೆಗಳನ್ನು ಕೆಳಗೆ ಕಂಡ ರೀತಿಯಲ್ಲಿ ಕಾಪಾಡಿಟ್ಟಿರಬೇಕು. ಕೊಠಡಿಯ ನೆಲದ ಮೇಲೆ ಶುಭ್ರವಾದ ಮತ್ತೂ ಒಣಗಿದ ಮರಳನ್ನು ತೆಳ್ಳಗೆ ಹರವಬೇಕು. ಅದರಮೇಲೆ ಒಂದು ಒರಸೆ ಉರುಳುಗೆಡ್ಡೆಯನ್ನಿಟ್ಟು ಅದರಮೇಲೆ ಮತ್ತೊಂದು ಒರಸೆ ಒಣಗಿದ ಮರಳನ್ನು ಹರವಬೇಕು. ಇದೇ ರೀತಿಯಲ್ಲಿ ಬಿತ್ತನೆ ಗೆಡ್ಡೆಗಳನ್ನೆಲ್ಲಾ ಒರಸೆ ಒರಸೆಯಾಗಿ ಪೇರಿಸಿಡಬೇಕು. ಮರಳು ಬಹಳ ಒಣಗಿ ಇರಕೂಡದು, ಮತ್ತೂ ಅದನ್ನು ಬಹಳ ಜಾಗರೂಕತೆಯಿಂದ ನೆರಳಿನಲ್ಲಿಯೇ ಒಣಗಿಸಿ ಉಪಯೋಗಿಸಬೇಕು. ಹೀಗೆ ಮಾಡಿದರೆ ಉರುಳುಗೆಡ್ಡೆಯನ್ನು ಮುತ್ತಿ ನಾಶಮಾಡತಕ್ಕ ಒಂದು ತರಹೆಯ ಹುಳುಗಳು ಗೆಡ್ಡೆಯನ್ನು ಮುಟ್ಟುವದಿಲ್ಲ.

ಬಿತ್ತನೆ:—ಉರುಳುಗೆಡ್ಡೆಯನ್ನು ಮೂರು ವಿಧವಾಗಿ ಬಿತ್ತನೆ ಮಾಡುತ್ತಾರೆ.—(೧) ಬಿತ್ತವನ್ನ ನೆಡುವುದು. (೨) ಉರುಳುಗೆಡ್ಡೆಯ ಚೂರುಗಳನ್ನು ನೆಡುವುದು. ಮತ್ತೂ (೩) ಪೂರ್ತಿ ಗೆಡ್ಡೆಗಳನ್ನು ನೆಡುವುದು. ಹೊಸತರಹೆಯ ಗೆಡ್ಡೆಗಳನ್ನು ಬೆಳೆಯಲಪೇಕ್ಷೆಯುಳ್ಳವರು ಮಾತ್ರ ಬಿತ್ತಗಳನ್ನೇ ನೆಡುತ್ತಾರೆ. ಮಾರಾಟಕ್ಕೆ ಉರುಳುಗೆಡ್ಡೆಯನ್ನು ಬೆಳೆಯುವವರು ಚೂರುಗಳನ್ನು ನಡುವುದು ಬಹಳ ಲಾಭಕರವಾಗಿದೆ. ಒಳ್ಳೆ ಉರುಳುಗೆಡ್ಡೆಯನ್ನು ಉದ್ದುದ್ದವಾಗಿ ಚೂರುಚೂರಾಗಿ ಕತ್ತರಿಸಬೇಕು. ಪ್ರತಿ ಚೂರಿನಲ್ಲಿಯೂ ಕೊನೇಪಕ್ಷ ಎರಡು ಕಣ್ಣುಗಳಿರುವಂತೆ ಕತ್ತರಿಸಿ ಅವುಗಳನ್ನು ಗೊಬ್ಬರದಿಂದ ತುಂಬಲ್ಪಟ್ಟ ಸಣ್ಣ ಸಣ್ಣ ಕಾಲುವೆಗಳಲ್ಲಿ ನೆಡಬೇಕು. ಗೆಡ್ಡೆಗಳನ್ನು ನೆಟ್ಟು ಅವುಗಳಮೇಲೆ ೧—೨ ಅಂಗುಲ ಎತ್ತರ ಮಣ್ಣನ್ನು ಹರವಬೇಕು. ಜಾಸ್ತಿ ಮಣ್ಣನ್ನು ಹಾಸಿದರೆ ಗೆಡ್ಡೆಯು ಮೊಳೆಯದೆ ಹೋಗುವುದುಂಟು. ಗೆಡ್ಡೆಯು ಮೊಳೆತು ಪೈರು ಬೆಳೆದು ಒಳಗೆ ಗೆಡ್ಡೆಗಳಾಗಿರುವುವೆಂದು ಕಂಡುಬಂದಾಗ್ಗೆ ಕಳೆಗಳನ್ನೆಲ್ಲಾ ಕಿತ್ತು ಗಿಡಗಳ ಬೇರ ಸುತ್ತಲೂ ಮಣ್ಣನ್ನು ಗುಡ್ಡೆಮಾಡಬೇಕು. ಇದರಿಂದ ಗಿಡಗಳ ಬೇರು ಬಲವಾಗಿ ಗಿಡಕ್ಕೆ ಸಾಕಾದಷ್ಟು ಸಸ್ಯಾಹಾರವು ದೊರೆಯುವುದಲ್ಲದೆ ಹೊಯ್ಯಲ್ಪಟ್ಟ ನೀರಿನ ತನುವು ಭೂಮಿಯಲ್ಲೇ ನಿಂತು ಗೆಡ್ಡೆಗಳು ದಪ್ಪನಾಗಿ ಬೆಳೆಯಲು ಅವಕಾಶವಾಗುವುದು.

ರೋಗಗಳು:—ಉರುಳುಗೆಡ್ಡೆಯ ಪೈರಿಗೆ ಅನೇಕವಿಧವಾದ ರೋಗಗಳು ಸಂಭವಿಸುವುವು. ಇವಕ್ಕೆ ಕ್ರಿಮಿಗಳೇ ಕಾರಣ. ಕೆಲವು ಹುಳುಗಳು ಏಕಕಾಲದಲ್ಲಿ ಯಾವುದಾದರೊಂದು ಹೊಲದ ಪೈರಿನ ಮೇಲೆಲ್ಲಾ ಮೊಟ್ಟೆಯನ್ನು ಇಟ್ಟು ಇವುಗಳಿಂದ ಪೈರು ಸಂಪೂರ್ಣವಾಗಿ ನಾಶಮಾಡಲ್ಪಡುತ್ತದೆ. ಆದಕಾರಣ ಪ್ರತಿದಿನವೂ ಅಥವಾ ಮೂರು ದಿನಗಳಿಗೊಂದಾವರ್ತಿಯಾದರೂ ಜಮೀನಿನಲ್ಲಿಗುವ ಪೈರನ್ನೆಲ್ಲಾ ಪರೀಕ್ಷಿಸಿ ನೋಡಿ, ಅಲ್ಲಿ ಸಿಕ್ಕಬಹುದಾದ ಹುಳುಗಳು ಮತ್ತು ಚಿಟ್ಟೆಗಳೇ ಮೊದಲಾದವುಗಳನ್ನು ಕೈಯಿಂದ ಅಥವಾ ಬಲೆಯ ಚೀಲಗಳಲ್ಲಿ ಹಿಡಿದು ಹೊಲಕ್ಕೆ ದೂರವಾಗಿ ತೆಗೆದುಕೊಂಡು ಹೋಗಿ ಇವುಗಳನ್ನೆಲ್ಲಾ ಸುಡಬೇಕು. ಬಿತ್ತನೆಯ ಗೆಡ್ಡೆಗಳನ್ನೆಲ್ಲಾ ಗಂಧಕದ ಪುಡಿಯಲ್ಲಿ ಉಜ್ಜಿ ನೆಟ್ಟರೆ ಕ್ರಿಮಿಗಳೆಲ್ಲಾ ಪೈರಿನ ತಂಟೆಗೆ ಬಾರದೆ ದೂರವಾಗಿರುವುವಲ್ಲದೆ ಗೆಡ್ಡೆಗಳು ಬಹಳ ದಪ್ಪನಾಗುವುವು. ಗಂಧಕದ ಪುಡಿಯನ್ನು ಸವರಿ ಗೆಡ್ಡೆಗಳನ್ನು ನೆಟ್ಟಾಗ್ಯೂ ಯಾವುದಾದರೂ ಗಿಡವು ಚೆನ್ನಾಗಿ ಬೆಳೆಯದಿದ್ದರೆ ಅದರ ಬೇರನ್ನು ಪರೀಕ್ಷಿಸಿ ರೋಗ ತಗಲಿರುವುದಾಗಿ ಕಂಡುಬಂದರೆ ಗಿಡವನ್ನು ಕಿತ್ತು ಜಮೀನಿಗೆ ದೂರವಾಗಿ ಸುಡಬೇಕು. ಕೆಲವು ಸಂದರ್ಭಗಳಲ್ಲಿ ಗಿಡದ ಕುಡಿಗಳನ್ನು ಚಿಗುಟಿ ಹಾಕಿದರೆ ಗಿಡದ ಬೆಳವಣಿಗೆಯು ಕಡಿಮೆಯಾಗಿ ಗೆಡ್ಡೆಗಳು ದಪ್ಪನಾಗಿ ಆಗುವುವು. ಬೇಸಗೆಯಲ್ಲಿ ಪೈರಿಗೆ ವಾರಕ್ಕೆ ಎರಡಾವರ್ತಿ ನೀರು ಹಾಕಬೇಕು. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿದಾಗ್ಗೆ ಬೆಳೆಯು ಕಟಾವಿಗೆ ಹದವಾಗಿರುವುದೆಂದು ತಿಳಿದುಕೊಂಡು ನೀರು ಹೊಯ್ಯುವುದನ್ನು ನಿಲ್ಲಿಸಬೇಕು. ಕಟಾವಿಗೆ ಕೊನೇಪಕ್ಷ ಎರಡು ವಾರಗಳಿಗೆ ಮುಂಚೆ ನೀರನ್ನು ನಿಲ್ಲಿಸಬೇಕು.

ಕೆಲವು ಜಮೀನುಗಳಲ್ಲಿ ಪೈರಿಗೆ ಗೆಜ್ಜಲು ಹುಳುಗಳು ಮುತ್ತಿ ಫಸಲು ನಷ್ಟವಾಗುತ್ತದೆ. ಹೀಗೆ ಗೆಜ್ಜಲು ಮುತ್ತತಕ್ಕ ಜಮೀನುಗಳಲ್ಲಿ ಒಂದು ಸತ್ತ ನಾಯನ್ನು ಹೂಳಿಟ್ಟರೆ ಇವುಗಳು ಆ ಜಮೀನನ್ನು ಬಿಟ್ಟು ಹೋಗುವುವೆಂದು ಹೇಳುತ್ತಾರೆ.—ಕ್ಯ. ಕೆ.

ಕ್ಷಯರೋಗ ಮತ್ತೂ ಅದರ ನಿವಾರಣೋಪಾಯ.

ಬೊಂಬಾಯಿ ಗೌರ್ನಮೆಂಟಿನವರು ಈ ಕೆಳಗೆ ವಿವರಿಸಿರುವ ಮೇರೆಗೆ ಕ್ಷಯರೋಗದ ವಿಷಯವಾಗಿ ಪ್ರಕಟಿಸಿರುತ್ತಾರೆ:—

ಕ್ಷಯರೋಗವೆಂಬುದು ಮುಖ್ಯವಾಗಿ ಪುಪ್ಪುಸದಲ್ಲಿ ಹುಟ್ಟತಕ್ಕದ್ದಾಗಿದೆ. ಇದು ಯೌವನಸ್ಥರಾದ ಸ್ತ್ರೀಪುರುಷರಲ್ಲಿ ಬಲುಬೇಗನೆ ವೃದ್ಧಿಹೊಂದಿ ಕೆಲ ತಿಂಗಳಲ್ಲೇ ಅವರ ಕೊಲ್ಲುವುದು. ಕೆಲಕೆಲವರಲ್ಲಿ ಇದು ನಿಧಾನವಾಗಿ ವೃದ್ಧಿಹೊಂದುತ್ತ ಕೆಲ ವರ್ಷಗಳ ವರೆಗೂ ಪೀಡಿಸುತ್ತಿರುವುದೂ ಉಂಟು. ಇದು ಪುಪ್ಪುಸದಲ್ಲಿ ಮಾತ್ರವೇ ಅಲ್ಲದೆ ನರಗಳಲ್ಲೂ ಕೀಲುಗಳಲ್ಲೂ ಹೊಟ್ಟೆಯಲ್ಲೂ ಎಲುಬುಗಳ ಮಧ್ಯದಲ್ಲೂ ಹುಟ್ಟುವುದೂ ಉಂಟು. ಇದು ದೇಹದ ಯಾವಭಾಗದಲ್ಲಿ ಹುಟ್ಟಿದರೂ ಅದರುತ್ಪತ್ತಿಗೆ ಅಣುರೂಪವಾದ ಒಂದು ತರನಾದ ಕ್ರಿಮಿಗಳೇ ಕಾರಣವು. ಆ ಕ್ರಿಮಿಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರವೇ ನೋಡಲು ಸಾಧ್ಯವು. ಈ ಕ್ರಿಮಿಗಳು ಶರೀರಕ್ಕೆ ಪ್ರವೇಶಿಸಿದ ಕೂಡಲೆ ವಿಶೇಷವಾಗಿ ಅಭಿವೃದ್ಧಿಗೊಳ್ಳುವುವು. ದೇಹದ ಯಾವಭಾಗದಲ್ಲಿ ಇವು ವೃದ್ಧಿಗೊಳ್ಳುವುವೋ ಆ ಭಾಗವನ್ನು ತಿಂದುಹಾಕಿ ಬಿಡುವುವು ಅಥವಾ ಕೆಡಿಸಿ ಬಿಡುವುವು. ಯಾವ ಭಾಗದಲ್ಲಿ ಈ ರೋಗವು ವ್ಯಾಪಿಸಿರುವುದೋ ಅಲ್ಲಿ ಈ ರೋಗ ಬೀಜವಾದ ಕ್ರಿಮಿಗಳು ಇದ್ದೇ ಇರುವುವೆಂದು ತಿಳಿಯಬೇಕು. ಕ್ಷಯರೋಗಿಗಳು ಉಗುಳಿದ ಶ್ಲೇಷ್ಮ ಮೊದಲಾದುವುಗಳಲ್ಲೂ, ಅಥವಾ ಅವರ ದೇಹದ ಕುರುಕಜ್ಜಿಗಳಿಂದ ಸ್ರವಿಸುವ ಕೀವು ರಕ್ತಗಳಲ್ಲೂ ಈ ರೋಗ ಬೀಜವಾದ ಕ್ರಿಮಿಗಳು ಇರುತ್ತಿರುವುವು. ಈ ಕ್ರಿಮಿಗಳಿಲ್ಲದಿದ್ದರೆ ಕ್ಷಯರೋಗವೆಂಬುದೇ ಇರುವುದಿಲ್ಲ. ಆದುಕಾರಣ, ಈ ಕ್ರಿಮಿಗಳನ್ನು ಶರೀರದೊಳಕ್ಕೆ ಸೇರಿಸಿಕೊಳ್ಳದೆ ಇದ್ದರೆ ಈ ರೋಗದ ಬಾಧೆಯೇ ಇರುವುದಿಲ್ಲ. ಈ ಕ್ಷಯರೋಗದ ಬೀಜವಾದ ಕ್ರಿಮಿಗಳನ್ನು ಕೊಲ್ಲುವುದು ಬಹುಕಷ್ಟ. ಅವು ಬಹುಕಾಲ ಹೊರಗೆ ಜೀವಿಸಿಕೊಂಡಿರಬಲ್ಲುವು. ಅವನ್ನು ಸಾಯಿಸಬೇಕಾದರೆ ಉಷ್ಣವಾಗಿರುವುದು, ಬಿಸಿಲು ಗಾಳಿಯು ಮನೆಯೊಳಕ್ಕೆ ಧಾರಾಳವಾಗಿ ಬರುವಂತಿರುವುದು ಮತ್ತೂ ಕೆಲವೌಷಧಗಳು—ಇವಿಷ್ಟೇ ಮುಖ್ಯೋಪಾಯಗಳು. ಕೆಲಜನರು ತಮ್ಮ ದೇಹವನ್ನು ಪುಷ್ಟವಾಗಿಟ್ಟುಕೊಂಡಿರುವುದರಿಂದ ಈ ಬೀಜಗಳು ಅಂಥವರ ದೇಹಕ್ಕೆ ಪ್ರವೇಶಿಸಿದರೂ ಪ್ರಬಲಿಸಲು ಶಕ್ತಿಯಿಲ್ಲದೆ ಅವೇ ಸತ್ತು ಹೋಗುವುವು. ಜನರು ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ, ಗಾಳಿಯಲ್ಲಿ ವಿಶೇಷವಾಗಿ ಸಂಚರಿಸುವವರಾಗಿಯೂ, ತಮ್ಮ ವಾಸದ ಮನೆಗಳನ್ನು ಸೂರ್ಯನ ಬೆಳಕೂ ಗಾಳಿಯೂ ನಿರಾತಂಕವಾಗಿ ನುಗ್ಗುವಂತೆ ಮಾಡಿಕೊಂಡಿರುವವರಾಗಿಯೂ ಇರತಕ್ಕವರು ಈ ರೋಗಕ್ಕೆ ತುತ್ತಾಗುವುದಿಲ್ಲ. ಕತ್ತಲಾಗಿಯೂ, ಗಾಳಿ ಬೀಸದೆಯೂ, ತೇವವಾದ ನೆಲವುಳ್ಳುದಾಗಿಯೂ ಹೆಚ್ಚಾದ ಸಾಮಾನುಗಳಿಂದ ಇಡಿಕಿರುವುದಾಗಿಯೂ ಇರುವ ಮನೆಗಳಲ್ಲಿ ವಾಸಮಾಡತಕ್ಕ ಜನರಿಗೆ ಈ ರೋಗವು ವ್ಯಾಪಿಸಿದರೆ ಬದುಕುವುದು ಕಷ್ಟ. ಈ ಕಾರಣದಿಂದಲೇ ಪಟ್ಟಣಗಳಲ್ಲಿ ವಾಸಿಸುವ ಜನರು ಹಳ್ಳಿಗಾಡಿನ ಜನರಿಗಿಂತಲೂ ಹೆಚ್ಚಾಗಿಯೇ ಈ ರೋಗದಿಂದ ಬಾಧೆ ಪಡುತ್ತಿರುವರು. ನಮ್ಮ ದೇಶೀಯಾಚಾರ ಪ್ರಕಾರ ಮನೆಯೊಳಗೇ ವಿಶೇಷವಾಗಿ ಸೇರಿಕೊಂಡಿರುವ ಸ್ತ್ರೀಯರು ತತ್ರಾಪಿ ಹೆಂಗುಸರು ಈ ರೋಗಕ್ಕೆ ಅತಿಯಾಗಿ ಗುರಿಯಾಗುವರು. ಗಾಳಿ ಬೀಸದಿರುವ ಸಣ್ಣ ಕೋಣೆಗಳಲ್ಲಿ ಸದಾ ಸೇರಿಕೊಂಡು ಓದುತ್ತಿರುವ ವಿದ್ಯಾರ್ಥಿಗಳು ಈ ರೋಗದಿಂದ ನರಳುವರು. ಈ ರೋಗಕ್ಕೆ ಔಷಧವಿಲ್ಲ. ಔಷಧದಿಂದ ಗುಣಗೊಳ್ಳುವುದು ಕಷ್ಟ, ಅನೇಕ ಲಕ್ಷಾಂತರ ಜನರು ಈ ಭೀಕರರೋಗಕ್ಕೆ ತುತ್ತಾಗಿ ಮಡಿಯುತ್ತಿರುವರು. ಔಷಧದಿಂದ ಈ ರೋಗ ನಿರ್ಮುಕ್ತರಾಗುವುದು ಅಸಾಧ್ಯವಾದರೂ, ಈ ರೋಗ ಬಾರದಂತೆ ಮಾಡಿಕೊಳ್ಳುವುದು ಅಸಾಧ್ಯವಲ್ಲ ಅಷ್ಟು ಕಷ್ಟವೂ ಅಲ್ಲ. ಆದುಕಾರಣ. ಪ್ರಜೆಗಳು ಸ್ವಲ್ಪ ಜಾಗರೂಕರಾಗಿದ್ದರೆ ಈ ಭಯಂಕರರೋಗದ ಬಾಧೆಯಿಂದ ತಪ್ಪಿಸಿಕೊಳ್ಳಬಹುದು. ಈ ರೋಗವು ತಗುಲದಂತೆ ಮಾಡಿಕೊಳ್ಳುವುದಕ್ಕೆ ಮುಂಚಿತವಾಗಿ ಈ ರೋಗವು ಸೂಕ್ಷ್ಮವಾದ ಕ್ರಿಮಿಗಳಿಂದ ಉತ್ಪನ್ನವಾಗುವುದೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಈ ರೋಗವಿರತಕ್ಕವರು ಮುದುಕರೇ ಆಗಲಿ ಮಕ್ಕಳೇ ಆಗಲಿ ಯೌವನಸ್ಥರೇ ಆಗಲಿ ಅವರ ಶರೀರದಲ್ಲಿ ಈ ಕ್ರಿಮಿಗಳು ಲಕ್ಷೋಪಲಕ್ಷವಾಗಿರುವುವೆಂಬುದನ್ನೂ, ಪ್ರತಿಕ್ಷಣವೂ ಅವರು ಬಿಡತಕ್ಕ ಉಸಿರಿನ ಜತೆಗೆ ಈ ಕ್ರಿಮಿಗಳು ಹೊರಕ್ಕೆ ಬರುತ್ತಿರುವುವೆಂಬುದನ್ನೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಈ ಕ್ರಿಮಿಗಳೊಡನೆ ಸೇರಿರುವ ಗಾಳಿಯನ್ನು ನಾವು ಮೂಗು ಬಾಯಿಗಳ ಮೂಲಕವಾಗಿ ನಮ್ಮ ದೇಹದೊಳಕ್ಕೆ ಸೇದಿಕೊಳ್ಳುವುದರಿಂದ ನಾವೂ ಆ ರೋಗಕ್ಕೆ ಪಾತ್ರರಾಗುವೆವು. ಆದುಕಾರಣ ಕ್ಷಯರೋಗಿಗಳ ಹತ್ತಿರದಲ್ಲಿರುವವರು ಈ ಅಂಟುರೋಗಕ್ಕೆ ತಾವೂ ತುತ್ತಾಗಬೇಕಾಗುವುದು. ಆದುಕಾರಣ, ರೋಗವು ತಗುಲದಿರುವಂತೆ ಮಾಡುವುದಕ್ಕೆ ಉಪಾಯವೇನೆಂಬುದನ್ನು ಯೋಚಿಸುವ. ಈ ರೋಗಿಗಳಿಗೋಸುಗವೇ ಏರ್ಪಡಿಸಿದ ಮನೆಗಳಿಗೆ ಅವರನ್ನು ಕಳುಹಿಸಿಬಿಡುವುದಾದರೆ ನಮಗೀರೋಗವು ತಗುಲದಂತೆ ಮಾಡಿಕೊಳ್ಳಬಹುದಾದರೂ ಹಾಗೆ ಮಾಡುವುದಕ್ಕೆ ಎಲ್ಲಕಡೆಯೂ ಸಾಧ್ಯವಿಲ್ಲ. ಅವಕಾಶವಾದ್ದುಮಟ್ಟಿಗೂ ಈ ರೋಗಿಗಳನ್ನು ಮನೆಯಲ್ಲಿ ಪ್ರತ್ಯೇಕವಾಗಿರುವ ಒಂದುಭಾಗಕ್ಕೆ ಸಾಗಿಸಿಡುವುದು ಒಳ್ಳೆಯದು. ಇತರರು ನಿತ್ಯವಾಸಮಾಡುವ ಮನೆಗಳಲ್ಲಿ ಈ ರೋಗಿಗಳನ್ನು ಮಲಗಿಸಬಾರದು. ಇತರರಿಗೆ ಈ ರೋಗಿಗಳು ಮುದ್ದಿಡುವಂತೆ ಮಾಡಬಾರದು. ಇವರ ಉಗುಳಿನಲ್ಲಿ ಅನೇಕ ಕ್ರಿಮಿಗಳಿರುವುದರಿಂದ ನೆಲದಮೇಲಾಗಲಿ ಗೋಡೆಗಳ ಮೇಲಾಗಲಿ ಉಗುಳದಂತೆ ಮಾಡಬೇಕು. ಒಂದು ಬಟ್ಟೆಯ ಮೇಲೆಯೋ ಕಾಗದದ ಮೇಲೆಯೋ ಆ ರೋಗಿಗಳ ಉಗುಳನ್ನೂ ಶ್ಲೇಷ್ಮವನ್ನೂ ಉಗುಳಿಸಿ ಅದನ್ನು ಸುಟ್ಟು ಬಿಡಬೇಕು. ಅಥವಾ ಕ್ರಿಮಿಗಳನ್ನು ಕೊಲ್ಲುವ ಗಂಧಕದ್ರಾವಕದಂತಹ ಔಷಧದಿಂದ ತುಂಬಿದ ಪಾತ್ರದೊಳಕ್ಕೆ ಉಗುಳಿಸಿ ಸುರಿದು ಬಿಡಬೇಕು. ಸಾಮಾನ್ಯವಾಗಿ ಈ ರೋಗಿಗಳೇ ಆಗಲಿ ಇತರರೇ ಆಗಲಿ ಮನೆಯ ನೆಲದಮೇಲೂ ಗೋಡೆಯಮೇಲೂ ಉಗುಳುವ ಪದ್ಧತಿಯು ನೀಚವಾದುದು. ಚಿಕ್ಕಂದಿನಿಂದ ಕೆಲವರಲ್ಲಿ ಆ ಪದ್ಧತಿಯಿರುವುದುಂಟು. ಅದನ್ನು ನಿಶ್ಶೇಷವಾಗಿ ತಪ್ಪಿಸಿ ಬಿಡಬೇಕು. ಈಗ ಅನೇಕ ದೇಶಗಳಲ್ಲಿ ತಾವು ಹತ್ತಿಹೋಗುವ ಬಂಡಿಗಳಲ್ಲಾಗಲಿ ಸರ್ಕಾರದ ಕಾರ್ಯಸ್ಥಾನಗಳಲ್ಲಾಗಲಿ ಉಪವನಗಳಲ್ಲಾಗಲಿ ಜನರು ಉಗುಳಿದರೆ ಅರ್ಥದಂಡ ಮೊದಲಾದ ಶಿಕ್ಷೆಯನ್ನು ವಿಧಿಸುತ್ತಾರೆ. ಇಂಥ ಕಠಿನ ಶಾಸನವನ್ನು ಏರ್ಪಡಿಸುವುದಕ್ಕೆ ಕಾರಣವೇನೆಂದರೆ—ಉಗುಳಿನಲ್ಲಿರುವ ಕ್ರಿಮಿಗಳು ಬೀಸುವ ಗಾಳಿಯೊಡನೆ ಸೇರಿದ್ದು ಅಂಥ ಗಾಳಿಯನ್ನು ಉಚ್ಛ್ವಾಸಿಸುವವರಿಗೆಲ್ಲಾ ಅದು ವ್ಯಾಪಿಸಿ ಪೀಡಿಸುವುವೆಂಬುದೊಂದೇ ಕಾರಣವಲ್ಲದೆ ಬೇರೇನೂ ಅಲ್ಲ. ಕ್ಷಯರೋಗಿಯು ಶರೀರದಲ್ಲಿ ಮೂಡಿರುವ ಕುರುಗಳಿಂದ ಸುರಿಯುವ ರಸವನ್ನು ಅದಕ್ಕೆ ಅಂಟಿಸುವ ಮುಲಾಮಿನ ಪಟ್ಟಿಗಳ ಸಮೇತವಾಗಿ ಬೆಂಕಿಯಲ್ಲಿ ಸುಟ್ಟುಬಿಡಬೇಕು. ಅವನ್ನು ಎಷ್ಟು ಮಾತ್ರಕೂ ಹೊರಗೆ ಬಿಸುಡಬಾರದು. ರೋಗಿಯು ಉಗುಳಿದ ಶ್ಲೇಷ್ಮವು ನೆಲದಮೇಲೆ ಬಿದ್ದರೆ ಅದು ಬಿಸಿಲಿನಲ್ಲಿ ಒಣಗುವುದು. ಆದರೂ ಅದರ ಕ್ರಿಮಿಗಳು ಸಾಯದೆ ಬೀಸುವ ಗಾಳಿಯಲ್ಲಿ ಸೇರಿಕೊಳ್ಳುವುವು. ಒಣಗಿದಂತೆ ತೋರುವ ಬೀಜಕ್ಕೆ ಸ್ವಲ್ಪ ನೀರು ಸಿಕ್ಕಿದರೆ ಕೂಡಲೇ ಅದು ಹೇಗೆ ಮೊಳೆಯುವುದೋ ಅನಂತರಂತೆಯೇ ಗಾಳಿಯಲ್ಲಿ ಸೇರಿರುವ ಈ ಹುಳುಗಳು ಪ್ರಾಣಿಗಳ ದೇಹಕ್ಕೆ ಸೇರಿದ ಕೂಡಲೆ ಲಕ್ಷೋಪಲಕ್ಷವಾಗಿ ವೃದ್ಧಿಗೊಳ್ಳುವುವು. ಗಾಳಿಯಲ್ಲಿ ಸೇರಿರುವ ಈ ಕ್ರಿಮಿಗಳು ಮನುಷ್ಯರ ಬಟ್ಟೆಯಮೇಲೆ ಸೇರಿಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿ ವ್ಯಾಪಿಸುತ್ತಿರುವುವು. ಹೀಗಾಗುವುದಕ್ಕೆ ಕ್ಷಯರೋಗಿಗಳ ಶ್ಲೇಷ್ಮ ಮೊದಲಾದುವುಗಳನ್ನು ನೆಲದಮೇಲೆ ಬಿಸುಡುವುದೇ ಕಾರಣವೆಂಬುದೂ, ಜಾಗರೂಕತೆಯಿಂದ ಅದನ್ನು ಸುಟ್ಟು ಬಿಡುವುದು ಎಷ್ಟು ಆವಶ್ಯಕವೆಂಬುದೂ ಈಗ ಚೆನ್ನಾಗಿ ಗೊತ್ತಾಗುವುದು. ಆದರೆ ಜನಗಳು ಈ ಸಂಗತಿಯನ್ನು ಲಕ್ಷ್ಯಮಾಡುವುದಿಲ್ಲ. ಆದುದರಿಂದಲೇ ಕ್ಷಯರೋಗವು ಅನೇಕ ಸಂಸಾರಗಳಲ್ಲಿ ವ್ಯಾಪಿಸಿಕೊಳ್ಳುತ್ತಿದೆ. ಕ್ಷಯರೋಗ ಗ್ರಸ್ತರಾದ ಗಂಡುಸರೇ ಆಗಲಿ ಹೆಂಗುಸರೇ ಆಗಲಿ ಹಗಲೂ ರಾತ್ರಿಯೂ ಮನೆಯ ಹೊರಗೇ ಇರಬೇಕು. ಮಳೆಯು ಸುರಿಯುತ್ತಿರುವಾಗಲೂ ಬಿಸಿಲು ಕಾಯುತ್ತಿರುವಾಗಲೂ ಗಾಳಿಯು ಬಲವಾಗಿ ಬೀಸುತ್ತಿರುವಾಗಲೂ ಈ ರೋಗಿಗಳು ಹೆಚ್ಚಾಗಿ ಗಾಳಿಯಾಡುತ್ತಿರುವ ಮನೆ ಹೊರಗಣ ಪಡಸಾಲೆಯಲ್ಲಿಯೇ ವಾಸಮಾಡಬೇಕು. ಇದರಿಂದ ಆ ರೋಗಿಗಳು ಬಿಡುವ ಉಸಿರಿನಲ್ಲಿರುವ ಕ್ರಿಮಿಗಳು ಗಾಳಿಯಿಂದ ಬಡಿದುಕೊಂಡು ಚೆಲ್ಲಾಪಿಲ್ಲಿಯಾಗಿ ಹೋಗಿ ಯಾರಿಗೂ ಅಪಾಯಮಾಡದಂತೆ ಅಳಿಯುವುವು. ಈ ರೋಗಿಗಳು ಸದಾ ತೋಟಗಳಲ್ಲಿ ವಾಸಿಸುವುದೂ ಹೊರಗೆ ವಿಹರಿಸಿಕೊಂಡಿರುವುದೂ ಹಿತವು. ಚಳಿಗಾಲದಲ್ಲೂ ಹೊರಗೇ ಇದ್ದು ಮೈಗೆ ಸೇಕವಾದ ಬಟ್ಟೆಗಳನ್ನು ಧರಿಸಿಕೊಂಡಿರಬೇಕು. ಸೊಳ್ಳೆಗಳ ಕಾಟವಿದ್ದರೆ ಸೊಳ್ಳೆಯ ತೆರೆಗಳನ್ನುಪಯೋಗಿಸಿಕೊಳ್ಳಬೇಕು. ಯಾವ ಮಕ್ಕಳಿಗೂ ನಿದ್ರಿಸುವಾಗ ಮುಖದಮೇಲೆ ಬಟ್ಟೆಯನ್ನು ಹೊದ್ದುಕೊಂಡಿರುವ ಪದ್ಧತಿಯನ್ನು ಖಂಡಿತವಾಗಿ ತಪ್ಪಿಸಿಬಿಡಬೇಕು. ನಿದ್ರಿಸುವಾಗಲೂ ಕೂಡ ಅವರ ಶ್ವಾಸಕೋಶಕ್ಕೆ ಉತ್ತಮವಾದ ಗಾಳಿಯು ಹೋಗುತ್ತಿರಬೇಕಾದುದು ಅವಶ್ಯಕ. ಮುಖದಮೇಲೆ ಬಟ್ಟೆಯನ್ನು ಹೊದೆದು, ಒಳಗಿನಿಂದ ಬಿಟ್ಟ ಗಾಳಿಯನ್ನೇ ಮರಳಿ ಸೇದಿಕೊಳ್ಳುತ್ತಿರುವುದು ಆರೋಗ್ಯಕ್ಕೆ ಭಂಗಕಾರಿಯು.

ಈ ರೋಗವು ಮನುಷ್ಯರಿಗೆ ಮಾತ್ರವೇ ಅಲ್ಲದೆ ಪಶುಗಳಿಗೂ ಕೂಡ ವ್ಯಾಪಿಸುವುದುಂಟು. ಇದು ಹಸುಗಳಿಗೆ ಬೇಗನೆ ಅಂಟಿಕೊಳ್ಳುವುದು. ಈ ರೋಗವಿರುವ ಹಸುಗಳು ಬಲವಾಗಿಯೂ ದಪ್ಪನಾಗಿಯೂ ಇರುವಂತೆ ಮೇಲೆ ತೋರುತ್ತಿದ್ದರೂ ಅವುಗಳ ಹಾಲಿನಲ್ಲಿ ಕ್ಷಯದ ಕ್ರಿಮಿಗಳು ಇರುತ್ತಿರುವುವು. ಅಂಥ ಹಾಲನ್ನು ಕುಡಿಯುವುದರಿಂದ ಎಳೇ ಮಕ್ಕಳಿಗೆ ಆ ರೋಗವು ಕಾಲು ಹಾಕಿಕೊಳ್ಳುವುದು. ಆದುಕಾರಣ ಹಾಲನ್ನು ಯಾವಾಗಲೂ ಚೆನ್ನಾಗಿ ಕುದಿಯುವಂತೆ ಕಾಯಿಸಿ ಮುಚ್ಚಿಟ್ಟು ಆರಿಸಿದ ಬಳಿಕ ಕುಡಿಸಬೇಕು. ಹಾಲನ್ನು ಬೆಂಕಿಯಮೇಲಿಟ್ಟು ಬಿಚ್ಚಗೆ ಮಾಡಿದ ಮಾತ್ರದಿಂದಲೇ ಒಳಗಿರುವ ಕ್ರಿಮಿಗಳು ಸಾಯವು. ಚೆನ್ನಾಗಿ ತಳಮಳಿಸಿ ಕುದಿಸಿದರೇನೇ ಅವುಗಳು ಸಾಯುವುವೆಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಹಾಲನ್ನು ಹಾಕುವ ಪಾತ್ರೆಗಳು ಅತ್ಯಂತ ಶುಭ್ರವಾಗಿರಬೇಕು. ಜನಗಳ ಅಜಾಗರೂಕತೆಯಿಂದ ಈಗ ಕ್ಷಯರೋಗದ ಕ್ರಿಮಿಗಳು ಎತ್ತೆತ್ತಲೂ ಇರುತ್ತಿವೆ. ಅವುಗಳಿಂದ ನಾವು ಸಂಪೂರ್ಣವಾಗಿ ತಪ್ಪಿಸಿಕೊಳ್ಳುವುದಕ್ಕೆ ಆಗದಿದ್ದರೂ ಅವು ನಮ್ಮ ದೇಹಕ್ಕೆ ಪ್ರವೇಶಿಸಿದ ಕೂಡಲೇ ವೃದ್ಧಿಗೊಳ್ಳಲಾರದೆ ಅವೇ ಸತ್ತುಹೋಗುವಂತೆ ಮಾಡುವ ಮಟ್ಟಿಗೆ ನಮ್ಮ ಶರೀರವನ್ನು ಆರೋಗ್ಯಸಂಪನ್ನವನ್ನಾಗಿ ಮಾಡಿಟ್ಟುಕೊಂಡಿರಬೇಕು. ನಮ್ಮಗಳ ಮನೆಯನ್ನು ಶುಭ್ರವಾಗಿಟ್ಟುಕೊಂಡಿರಬೇಕು. ಪ್ರತಿಯೊಂದು ಕೋಣೆಯಲ್ಲೂ ವಿಶೇಷವಾಗಿ ಸಾಮಾನುಗಳನ್ನು ತುಂಬಿಕೊಂಡಿರಬಾರದು. ಪ್ರತಿಯೊಂದು ಕೋಣೆಗೂ ಕಿಟಕಿಗಳಿರುವಂತೆ ಮಾಡಿ ಅವುಗಳ ಮೂಲಕ ಗಾಳಿಯೂ ಬಿಸಿಲೂ ಧಾರಾಳವಾಗಿ ಪ್ರವೇಶಿಸುವಂತೆ ಮಾಡಿರಬೇಕು. ರಾತ್ರಿಯ ಹೊತ್ತು ಸಹಾ ಕಿಟಕಿಗಳನ್ನು ತೆರೆದಿಡಬೇಕು. ಮುಖ್ಯವಾಗಿ ಮಲಗುವ ಮನೆಯ ಕಿಟಕಿಗಳನ್ನು ಹಗಲೂ ರಾತ್ರಿಯೂ ಮುಚ್ಚದೆ ತೆಗೆದೇ ಇಟ್ಟಿರಬೇಕು. ಹೆಂಗುಸರನ್ನು ಕತ್ತಲೆಯ ಮನೆಯಲ್ಲೇ ಸೆರೆಹಾಕಿರಬಾರದು. ಬಯಲಿನಲ್ಲಿ ತಿರುಗಾಡುವುದಕ್ಕೆ ಅವಕಾಶವನ್ನು ಕಲ್ಪಿಸಿರಬೇಕು. ಮಕ್ಕಳು ಸ್ವೇಚ್ಛೆಯಿಂದ ಗಾಳಿ ಬೀಸುವ ಸ್ಥಳಗಳಲ್ಲಿ ವಿಹರಿಸುವಂತೆ ಮಾಡಬೇಕು. ಅವು ಓದುವ ಶಾಲೆಗಳು ಬೆಳಕಿನ ಪ್ರವೇಶಕ್ಕೆ ಅನುಕೂಲವಾಗಿರಬೇಕು. ಒಬ್ಬನ ಮೇಲೊಬ್ಬನು ಕುಳಿತುಕೊಳ್ಳುವಷ್ಟು ಇಕ್ಕಟ್ಟಾಗಿರಕೂಡದು. ಯೂರೋಪಿನಲ್ಲೂ ಅಮೇರಿಕಾದಲ್ಲೂ ಮಕ್ಕಳನ್ನು ಬಯಲಿನಲ್ಲಿ ಕುಳ್ಳಿರಿಸಿ ವಿದ್ಯೆಯನ್ನು ಕಲಿಸುವರು. ಈ ಪದ್ಧತಿಯು ಅತ್ಯುತ್ತಮವಾದುದು. ಇದನ್ನು ಭರತಖಂಡದಲ್ಲೂ ಅನುಸರಿಸುವುದು ಒಳ್ಳೆಯದು. ಕ್ಷಯರೋಗವನ್ನು ಹೊಂದಿರುವ ಯೌವನ ಪುರುಷರಾಗಲಿ ಹೆಂಗುಸರಾಗಲಿ ಮದುವೆ ಮಾಡಿಕೊಳ್ಳಕೂಡದು. ನೀವಾಗಲಿ ನಿಮ್ಮ ಸಂಸಾರವಾಗಲಿ ಈ ರೋಗದಿಂದ ಪೀಡಿತರಾಗದೆ ಇರಬೇಕೆಂದು ಅಪೇಕ್ಷಿಸುವಿರಾದರೆ ಈ ಕೆಳಗೆ ಹೇಳುವ ಮುಖ್ಯ ಸಂಗತಿಗಳನ್ನು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಿರಿ:—

(೧) ಕ್ಷಯರೋಗಗ್ರಸ್ತನನ್ನು ಇತರರಿಂದ ಪ್ರತ್ಯೇಕಿಸಿ ದೂರವಾಗಿ ಗಾಳಿ ಬೀಸುವ ಸ್ಥಳದಲ್ಲಿರಿಸಿರಿ. (೨) ಅವನ ದೇಹದಿಂದ ಹೊರಕ್ಕೆ ಬರುವ ಪ್ರತಿಯೊಂದು ಪದಾರ್ಥವನ್ನೂ ಸುಟ್ಟುಬಿಡಿರಿ. (೩) ನೀವು ಉಗುಳನ್ನು ನೆಲದಮೇಲೆ ಉಗುಳಬೇಡಿರಿ. ಇತರರಿಂದಲೂ ಉಗುಳಗೊಡಿಸಬೇಡಿರಿ. ಹಾಗೆ ಉಗುಳುವುದು ವಿಹಿತವಲ್ಲವೆಂದು ಬೋಧಿಸಿರಿ. ನಿಮಗಧೀನರಾಗಿರುವವರಿಗೆ ಹಾಗೆ ಉಗುಳದಿರುವಂತೆ ಕಟ್ಟುಮಾಡಿರಿ. (೪) ನೀವೂ ನಿಮ್ಮ ಸಂಸಾರದವರೂ ಸಾಧ್ಯವಾದ ಮಟ್ಟಿಗೂ ಚೆನ್ನಾಗಿ ಗಾಳಿ ಬೀಸುವ ಸ್ಥಳದಲ್ಲಿ ವಾಸಮಾಡಿರಿ. (೫) ನಿಮ್ಮ ಮನೆಯಲ್ಲಿರುವ ಪ್ರತಿಯೊಂದು ಕೋಣೆಗೂ ಗಾಳಿ ಬಿಸಿಲು ಚೆನ್ನಾಗಿ ಪ್ರವೇಶಿಸುವಂತೆ ಮಾಡಿರಿ. (೬) ನೀವು ಮುಖದ ಮೇಲೆ ಬಟ್ಟೆಯನ್ನು ಹೊದೆದು ನಿದ್ರಿಸಬೇಡಿರಿ. ನಿಮ್ಮ ಮಕ್ಕಳಿಗೂ ಹಾಗೆಯೇ ಮಾಡಿಸಿರಿ. (೭) ಕುಡಿಯುವ ಹಾಲನ್ನು ಚೆನ್ನಾಗಿ ಕುದುಕುದನೆ ಕಾಯಿಸಿ ಮುಚ್ಚಿಟ್ಟು ಆರಿಸಿ ಕುಡಿಯಿರಿ. (೮) ನಿಮ್ಮ ಮಗನು ಮದುವೆಯಾಗಬೇಕಾದ ಹೆಣ್ಣು, ನಿಮ್ಮ ಮಗಳು ಮದುವೆಯಾಗಬೇಕಾದ ಗಂಡು ಸಹ ಕ್ಷಯರೋಗಗ್ರಸ್ತರಾಗಿರುವರೋ ಇಲ್ಲವೋ ಎಂಬುದನ್ನು ವಿಚಾರಮಾಡಿ ತಿಳಿದ ಬಳಿಕವೇ ಸಂಬಂಧವನ್ನು ಬೆಳೆಯಿಸಿರಿ.

ರಾಜಧಾನಿಯಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಉಜ್ಜಯಿನಿ ಹೆಂಚಿನಮಠದ ಶಿವಲಿಂಗಯ್ಯನೆಂಬ ದೀನ ವಿದ್ಯಾರ್ಥಿಯ ಸಾಹಾಯ್ಯಾರ್ಥವಾಗಿ ಕಳೆದ ಏಪ್ರಿಲ್ ತಾ ೧೪ ರ ಸಂಚಿಕೆಯಲ್ಲಿ ಪ್ರಕಟಿತವಾಗಿದ್ದ ಪ್ರಕಾರ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಸಂತೋಷದಿಂದ ಚಂದಾ ಹಣವನ್ನು ಕೊಟ್ಟಿರುವ ಮಹನೀಯರು:—

	ರೂ. ಆ. ಪೈ.
ಮುಕ್ತಾಲ್ ಸ್ಕೂಲ್ ಮಾಸ್ಟರ್ ಶಾಲಿ ಬಸವಲಿಂಗಪ್ಪನವರು	೧—೦—೦
ಮುಕ್ತಾಲ್ ಮುನುಶಾನಿ ರಾಮಯ್ಯ ಸಾಹುಕಾರ್ ಇವರು	೨—೦—೦
ಮುಕ್ತಾಲ್ ಮಾಲಿಗೌಡ ರಾಮರೆಡ್ಡಿಯವರು	೧—೦—೦
ಮುಕ್ತಾಲ್ ಕೋಣದ ನಾಗಪ್ಪನವರು ...	೧—೦—೦
ಕೊಳ್ಳೇಗಾಲದ ಜಿ. ಪಿ. ಮಲ್ಲಪ್ಪನವರು ...	೨—೦—೦
ಒಟ್ಟು	೭—೦—೦
ಹಿಂದೆ ಬಂದುದು	೩೩—೧೫—೦
ಒಟ್ಟು	೪೦—೧೫—೦

ನನಗೆ ಪ್ರಾಪ್ತವಾಗಿರುವ ಕಳತ್ರ ವಿಯೋಗದುಃಖ ವಿಚಾರದಲ್ಲಿ ಅನುತಾಪವನ್ನೂ, ಸಾನುಭೂತಿಯನ್ನೂ ತೋರಿಸಿರುವಂತಹ ಮಿತ್ರಮಂಡಲಿಗೆಲ್ಲಾ ನನ್ನ ಮನಃಪೂರ್ವಕವಾದ ವಂದನೆಗಳನ್ನು ಈ ಪತ್ರಿಕಾ ದ್ವಾರಾ ತಿಳಿಸುತ್ತೇನೆ.

ವೈ. ವಿರೂಪಾಕ್ಷಯ್ಯ.

ಮೈಸೂರ್ ಸ್ಟಾರ್

೧೯೧೨ ನೆಯ ಮೇ ತಾ॥ ೨೦ ನೆಯ ಸೋಮವಾರ.

ಪಾಲಕರ ಕರ್ತವ್ಯ.

« ಅರಾಜಕೇ ಹಿ ಲೋಕೇಸ್ಮಿನ್ ಸರ್ವತೋ ವಿದ್ರುತೇ ಭಯಾತ್ । ರಕ್ಷಾರ್ಥಮಸ್ಯ ಸರ್ವಸ್ಯ ರಾಜಾನಮಸೃಜತ್ಪ್ರಭುಃ ॥ » ಈ ಲೋಕವು ಆಳತಕ್ಕ ಪ್ರಭುವೊಬ್ಬನಿಲ್ಲದೆ ಭಯದಿಂದ ಕರಗಿ ಹೋಗುತ್ತಿರಲಾಗಿ, ಅದರ ರಕ್ಷಣಾರ್ಥವಾಗಿ ಜಗದೀಶ್ವರನು ದೊರೆಯನ್ನು ಸೃಷ್ಟಿಸಿದನು, ಎಂದು ಮನುಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಹೀಗೆ ಲೋಕದ ಜನರ ರಕ್ಷಣಾರ್ಥವಾಗಿಯೇ ಭೂಮಿಯಲ್ಲವತರಿಸಿರುವ ರಾಜನು ಮಾಡಬೇಕಾದ ಕರ್ತವ್ಯಗಳಲ್ಲಿ ಪ್ರಜಾರಂಜನೆಯೂ, ದುಷ್ಟನಿಗ್ರಹಶಿಷ್ಟಪರಿಪಾಲನವೂ ಅತಿ ಮುಖ್ಯವಾದ ಧರ್ಮವು. ಆ ಧರ್ಮವನ್ನು ಆತನು ಸರಿಯಾಗಿ ನೆರವೇರಿಸಿದರೇನೆಯೇ « ಕರ್ತವ್ಯಮವಿರೋಧೇನ ಸ್ವಧರ್ಮಸ್ಯ ಮಹೀಭೃತಾ । ಪಾಲನೇನೈವ ಭೂತಾನಾಂ ಕೃತಕೃತ್ಯೋ ಮಹೀಪತಿಃ ॥ » ಎಂಬ ಮಾರ್ಕಂಡೇಯಪುರಾಣ ವಚನದಂತೆ ಕೃತಕೃತ್ಯನಾಗುತ್ತಾನೆ. ಮತ್ತೂ ಅಂಥ ಪ್ರಭುವಿಗೆ « ರಂಜನಾತ್ತು ಲರಾಜತ್ವಂ ಪ್ರಜಾನಾಂ ಪಾಲನಾದಪಿ । » ಎಂಬ ಮಹಾಭಾರತವಚನದಂತೆ ರಾಜನೆಂಬ ಹೆಸರು ಸಾರ್ಥಕವಾಗಿ ಒಪ್ಪುವುದು. ಯಾವ ಪ್ರಭುವು « ಅದಂಡ್ಯಾನ್ದಂಡಯನ್ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ । ಅಯಶೋ ಮಹದಾಪ್ನೋತಿ ನರಕಂ ಚಾಧಿಗಚ್ಛತಿ ॥ » ಎಂಬ ಮನುವಚನದಂತೆ ಶಿಕ್ಷೆಗೆ ಅರ್ಹರಾಗಿದ್ದವರನ್ನು ವಿಚಾರಣೆಮಾಡಿ ಶಿಕ್ಷಿಸದೆ ಬಿಟ್ಟರೂ, ಶಿಕ್ಷೆಗೆ ಅರ್ಹರಲ್ಲದವರನ್ನು ನಿರ್ವಿಚಾರದಿಂದ ಶಿಕ್ಷಿಸುತ್ತ ಬಂದರೂ ಸಹ ಇಹಲೋಕದಲ್ಲಿ ಅಪಕೀರ್ತಿಯನ್ನೂ ಪರದಲ್ಲಿ ನರಕವನ್ನೂ ಸಹ ಪಡೆಯುವನು. ಲೋಕದಲ್ಲಿ ಆಳುವವನ ಭಯದಿಂದಲೇ ಪ್ರಜೆಗಳು ಒಬ್ಬರನ್ನೊಬ್ಬರು ಪೀಡಿಸದೆ ಸರ್ವರೂ ನೆಮ್ಮದಿಯಾಗಿರುವುದಕ್ಕೆ ಅವಕಾಶವಿರುವುದು. « ಪ್ರಜಾ ರಾಜಭಯಾದೇವ ನ ಖಾದಂತೇ ಪರಸ್ಪರಂ » ಎಂಬ ಭಾರತವಚನದಲ್ಲಿ ಇದೇ ಅರ್ಥವು ಹೇಳಲ್ಪಟ್ಟಿರುವುದು.

ಷಟ್ಚಕ್ರವರ್ತಿಗಳೂ ಷೋಡಶ ಮಹಾರಾಜರುಗಳೂ ಪುರಾಣೇತಿಹಾಸ ಪ್ರಸಿದ್ಧರಾಗಿರುವುದಕ್ಕೆ ಅವರುಗಳು ಈ ಮೇಲೆಹೇಳಿದ ಧರ್ಮವನ್ನು ಪೂರ್ಣವಾಗಿ ಆಚರಣೆಯಲ್ಲಿಟ್ಟುಕೊಂಡಿದ್ದುದೇ ಮುಖ್ಯಕಾರಣವು. ಅಂಥ ಮುಖ್ಯ ಧರ್ಮಗಳಿಗೆ ಲಕ್ಷ್ಯವಿಡದೆ ಸ್ವಸುಖದಲ್ಲೂ ದುರ್ವ್ಯಸನದಲ್ಲೂ ರಾಜ್ಯತೃಷ್ಣೆಯಲ್ಲೂ ಮುಳುಗಿ ತೇಲುವ ಪ್ರಭುಗಳು ಹೆಚ್ಚಾದುದರಿಂದಲೇ ಅಂಥವರ ಆಳ್ವಿಕೆಯಲ್ಲಿ ನಮ್ಮ ಭರತಖಂಡವು ಅನಿರ್ವಚನೀಯವಾದ ನಷ್ಟಕಷ್ಟಗಳಿಗೀಡಾಗುವುದಕ್ಕೂ ಗಾಳಿಗೊಡ್ಡಿದ ದೀಪದಂತೆ ಅವರುಗಳಿಂದ ರಾಜ್ಯಲಕ್ಷ್ಮಿಯು ಕ್ಷಣಿಕವಾಗಿ ಅಳಿದುಹೋಗುವುದಕ್ಕೂ ಅವಕಾಶವಾಯಿತು.

ಸದ್ಯಃಕಾಲದಲ್ಲಿ ಆಂಗ್ಲಸಾರ್ವಭೌಮರು ಮೇಲೆ ಹೇಳಿದ ಪ್ರಶಸ್ತವಾದ ಧರ್ಮಗಳನ್ನು ಬಲುಮಟ್ಟಿಗೆ ವ್ಯವಹರಣೆಯಲ್ಲಿಟ್ಟುಕೊಂಡಿರುವುದರಿಂದಲೇ ಅವರಲ್ಲಿ ರಾಜ್ಯಲಕ್ಷ್ಮಿಯು ಚಿರಕಾಲಿಕವಾಗಿ ನೆಲಸಿರುವುದಕ್ಕೂ, ಅವರ ಕೈಕೆಳಗಿನ ರಾಜ್ಯವು ಸುಖಶಾಂತಿಗಳಿಂದ ಅಭಿವೃದ್ಧಿಗೊಳ್ಳುವುದಕ್ಕೂ ಅವಕಾಶವುಂಟಾಗಿರುತ್ತದೆ. ಯಾವ ಗ್ರಂಥಗಳಲ್ಲಿ ನೋಡಿದರೂ ಪ್ರಭುವಿಗೆ ಪ್ರಜಾರಂಜನರೂಪಧರ್ಮವೇ ಮೊದಲನೆಯ ಕರ್ತವ್ಯವೆಂದು ಹೇಳಲ್ಪಟ್ಟಿರುತ್ತದೆ. ಅಂತಹ ಮುಖ್ಯ ಧರ್ಮದ ಕಾಪಾಡುವಿಕೆಗಾಗಿ ನಮ್ಮ ಪ್ರಭುತ್ವದವರು ಎಷ್ಟು ಪಾಟುಪಡುತ್ತಿರುವರೆಂಬುದೂ, ನಮ್ಮ ಸಾರ್ವಭೌಮರ ಬಾಯಲ್ಲಿ ಪ್ರಜಾರಂಜನಪರವಾದ ವಾತ್ಸಲ್ಯೋಕ್ತಿಗಳು ಪದೇಪದೇ ಎಷ್ಟುಮಟ್ಟಿಗೆ ಹೊರಡುತ್ತಿರುವುವೆಂಬುದೂ ಸಹ ಭರತಖಂಡದ ಪ್ರಜೆಗಳಿಗೆಲ್ಲಾ ಆಗಾಗ್ಗೆ ಗೊತ್ತೇ ಆಗುತ್ತಿವೆ.

ರಾಜ್ಯವನ್ನಾಳತಕ್ಕ ಪ್ರಭುವೊಬ್ಬನಮೇಲೆಯೇ ಆ ಮುಖ್ಯ ಧರ್ಮನಿರ್ವಾಹದ ಭಾರವು ಬಿದ್ದಿರುವುದಿಲ್ಲ. ರಾಜನೊಬ್ಬನೇ ಆ ಧರ್ಮಕ್ಕೆ ಬದ್ಧನಾಗಿ ನಡೆದರೆ ಲೋಕದ ಚರಿತಾರ್ಥವಾಗುವಹಾಗಿಲ್ಲ. ರಾಜನ ಕರ್ತವ್ಯದ ನಿರ್ವಾಹಾರ್ಥವಾಗಿ ಏರ್ಪಡಿಸಲ್ಪಟ್ಟಿರುವ ೧ ಹಣದ ಸಂಬಳಗಾರ ಮೊದಲುಗೊಂಡು ಮಂತ್ರಿಪದವಿಯವರೆಗಿರುವ ಅಧಿಕಾರಿಗಳ ಮೇಲೆಲ್ಲಾ ಆ ಕರ್ತವ್ಯದ ಭಾಗವು ಬಿದ್ದಿರುತ್ತದೆ. ಇವರುಗಳೊಳಗೆಲ್ಲಾ ಯಾರೊಬ್ಬರು ಆ ಧರ್ಮದ ನಿರ್ವಾಹದಲ್ಲಿ ಉದಾಸೀನರಾದರೂ ಆ ದೋಷವು ಪರಂಪರೆಯಾ ರಾಜನಿಗೂ ರಾಜ್ಯಕ್ಕೂ ತಪ್ಪುವುದು. ಅದುಕಾರಣ, ರಾಜನು ತನ್ನ ಧರ್ಮನಿರ್ವಹಣೆಗೆ ಸಹಾಯಕರೆಂದು ಏರ್ಪಟ್ಟಿರುವ ಉದ್ಯೋಗಸ್ಥರಲ್ಲೇ ತನ್ನ ಕರ್ತವ್ಯಭಾರವನ್ನೆಲ್ಲಾ ಇಟ್ಟುಬಿಟ್ಟು ತಾನು ತಟಸ್ಥನಾಗಿರಲಾಗದು. ತನ್ನವರಿಂದ ಪ್ರಜೆಗಳಿಗೆ ಹಿತಾಹಿತಗಳು ಎಷ್ಟುಮಟ್ಟಿಗುಂಟಾಗುತ್ತಿವೆ ಯೆಂಬುವನ್ನು ತಿಳಿದುಕೊಳ್ಳುವುದರಲ್ಲಿ ಸದಾ ವ್ಯಗ್ರನಾಗಿದ್ದೇ ತೀರಬೇಕು. ಪ್ರಭುವು ಜಾಗ್ರತೆಯಿಲ್ಲದವನಾದರೆ ಕೈಕೆಳಗಿನ ಅಧಿಕಾರಿಗಳಿಗೂ ಪ್ರಜೆಗಳಿಗೂ ಸಹ ದುರ್ಮಾರ್ಗಪ್ರವರ್ತನದಲ್ಲಿ ಧೃತಿಯೂ, ಸನ್ಮಾರ್ಗಪ್ರವರ್ತನದಲ್ಲಿ ಪ್ರೋತ್ಸಾಹವೂ ಉಂಟಾಗುವುವು. ನಿಗ್ರಹಾನುಗ್ರಹಶಕ್ತಿಯು ಸಮಗ್ರವಾಗಿಲ್ಲದಿರುವ ಪ್ರಭುವು ಎಷ್ಟೇ ಶಾಂತನಾದರೂ ಅದು ಅವನ ಕರ್ತವ್ಯಕೊರತೆಯು ದೋಷವಾಗಿರುವುದೇ ಹೊರತು ಭೂಷಣವಾಗಿರುವುದಿಲ್ಲ. ಏಕೆಂದರೆ– « ಪರೋಕ್ಷಾನೇವ ತಾಸ್ಸರ್ವಾ ರಾಜಾ ಪ್ರತ್ಯಕ್ಷದೇವತಾ । ಪ್ರಸಾದಶ್ಚ ಪ್ರಕೋಪಶ್ಚ ಪ್ರತ್ಯಕ್ಷೋಯಸ್ಯ ದೃಶ್ಯತೇ ॥ » ಎಂದರೆ– ಸಕಲ ದೇವತೆಗಳೂ ಅಪ್ರತ್ಯಕ್ಷರಾದವರು. ರಾಜನಾದರೋ ಪ್ರತ್ಯಕ್ಷದೇವತೆ. ಹೇಗೆಂದರೆ– ಇವನು ಮಾಡುವ ನಿಗ್ರಹಾನುಗ್ರಹಗಳು ಪ್ರತ್ಯಕ್ಷವಾದುವುಗಳು. ಎಂದು ಮಹಾಭಾರತದಲ್ಲಿ ಹೇಳಲ್ಪಟ್ಟಿರುವ ಕಾರಣ, ಸ್ವತಂತ್ರಿಸಿ ನಿಗ್ರಹಾನುಗ್ರಹವನ್ನು ಮಾಡತಕ್ಕ ಪ್ರಭುವು 'ರಾಜಾ ಪ್ರತ್ಯಕ್ಷದೇವತಾ' ಎಂಬ ವಚನಕ್ಕೆ ವಿಷಯಭೂತನೆನಿಸಿಕೊಳ್ಳಲಾರನು.

ಆಂಗ್ಲರಾಜ್ಯತಂತ್ರದಲ್ಲಿ ಈ ವಿಶೇಷ ಗುಣಗಳೆಲ್ಲಾ ಸಮಯೋಚಿತವಾಗಿ ಅನುಸರಿಸಲ್ಪಡುತ್ತಲಿವೆಯೆಂದು ಹೇಳುವುದಕ್ಕೆ ಎಷ್ಟೋ ಸಂತೋಷವಾಗುತ್ತದೆ. ಪ್ರಭುವಿನಲ್ಲಿ ಪ್ರಜಾರಂಜನಾದಿ ಮುಖ್ಯಧರ್ಮಗಳು ಪೂರ್ಣವಾಗಿ ನೆಲಸಿರುವುದು ಮಾತ್ರವೇ ಅಲ್ಲದೆ, ಅವರ ಕೈಕೆಳಗಿನ ಅಧಿಕಾರಿಗಳನೇಕರಲ್ಲಿಯೂ ಆ ಗುಣಗಳು ಮೂರ್ತಿಮತ್ತಾಗಿರುವುವು. ಅದಕ್ಕೆ ಅಪವಾದವಾಗಿ ಕೆಲಕೆಲರಿದ್ದರೂ ಗುಣಾಧಿಕ್ಯವಿರುವುದರಿಂದಲೇ ಆಂಗ್ಲ ಸಾಮ್ರಾಜ್ಯವು ಯಶೋಭೂಯಿಷ್ಠವಾಗಿ ಬಾಳುತ್ತಿರುವುದು.

ಆಳತಕ್ಕವರಿಗೆ « ಕಿವಿಯೇ ಕಣ್ಣು » ಎಂಬ ಒಂದು ನಾಣ್ಣುಡಿಯುಂಟಷ್ಟೆ. ಕೈಕೆಳಗಿನವರ ಮಾತಿನಮೇಲೆಯೇ ನಂಬುಗೆಯಿಟ್ಟಿರುವವರ ವಿಷಯವಾಗಿ ಇದು ಹುಟ್ಟಿರಬೇಕು. ಶಾಸ್ತ್ರಕಾರರು ಪ್ರಭುವಿನಲ್ಲಿರಬೇಕಾದ ಗುಣಗಳನ್ನು ಹೇಳುವಾಗ ಮುಖ್ಯವಾದ ೩೩ ಗುಣಗಳೊಳಗೆ 'ರಹಸ್ಯವಿತ್' ಎಂದರೆ ಗುಟ್ಟನ್ನು ತಿಳಿಯತಕ್ಕವನಾಗಿರಬೇಕು. ಎಂಬುದನ್ನೂ ಸೇರಿಸಿರುತ್ತಾರೆ. ಇದರಿಂದ ಪ್ರಭುವು ವಿಷಯದ ಯಥಾರ್ಥಜ್ಞಾನವನ್ನು ಸ್ವತಃ ಮಾಡಿಕೊಳ್ಳುವುದಕ್ಕೆ ಗುಟ್ಟಾಗಿ ಪ್ರವರ್ತಿಸಬೇಕು ಎಂಬ ಅರ್ಥವು ಸಿದ್ಧವಾಗುವುದು. ವೇಷಾಂತರದಿಂದ ಹೊರಟು ತಮ್ಮ ಪ್ರಜೆಗಳ ಕಷ್ಟಸುಖಗಳ ರೀತಿಯನ್ನು ಸ್ವತಃ ತಿಳಿದುಕೊಳ್ಳುತ್ತಿದ್ದ ಪ್ರಭುಗಳು ನಮ್ಮ ದೇಶದಲ್ಲಿ ಪೂರ್ವದಲ್ಲಿರುತ್ತಿದ್ದರೆಂಬುದಕ್ಕೆ ವಿಕ್ರಮಾರ್ಕನೇ ಮೊದಲಾದ ರಾಜರ ಚರಿತ್ರಗಳು ನಿದರ್ಶನವಾಗಿವೆ. ಅದೇ ತರದ ವೃತ್ತಿಯು ಈಗಿನ ಅನೇಕ ಆಂಗ್ಲಾಧಿಕಾರಿಗಳಲ್ಲಿಯೂ ಅನುಸರಿಸಲ್ಪಡುತ್ತಿದೆ. ಕೆಲದಿನಗಳು ಮದ್ರಾಸ್ ಗೌರ್ನರಾಗಿದ್ದು ವಂಗದೇಶೀಯರ ಪುಣ್ಯಪರಿಪಾಕದಿಂದ ಬಂಗಾಳದ ಹೊಸಗೌರ್ನರ ಸ್ಥಾನಕ್ಕೆ ನಿಯುಕ್ತರಾಗಿ ಹೋಗಿರುವ ಶ್ರೀ ಕಾರ್ಮೈಕಲ್‌ರವರು ನಡೆಯಿಸಿದ ಅದೇ ತೆರದ ಸಂಗತಿಯೊಂದು ಈಗ ಹೊರಬಿದ್ದು, ಅವರ ವಿಷಯದಲ್ಲಿ ಜನರಿಗಿರುವ ಪೂಜ್ಯಬುದ್ಧಿಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಅದೇನೆಂದರೆ– ರೈಲ್ ಬಂಡಿಯಲ್ಲಿ ೩ ನೆ ತರಗತಿಯ ಪ್ರಯಾಣಿಕರನ್ನು ಕುರಿಗಳಂತೆ ತುಂಬುತ್ತಾರೆಂಬ ಸುದ್ದಿಯು ಈ ಕಾರ್ಮೈಕಲ್ ಪ್ರಭುಗಳ ಕಿವಿಗೆ ಬಿದ್ದಿರಲು, ಅದನ್ನು ಸ್ವತಃ ಪರೀಕ್ಷಿಸಬೇಕೆಂದು ಯೋಚಿಸಿ, ಒಂದು ದಿನ ಅವರು ಸಾಮಾನ್ಯಮನುಷ್ಯನಂತೆ ಉಡುಪನ್ನು ಧರಿಸಿ, ಮುಂದಣ ಸಂಗತಿಯನ್ನು ತಮ್ಮ ಅಂತರಂಗ ಕಾರ್ಯದರ್ಶಿಯೊಡನೆ ಮಾತ್ರ ಹೇಳಿ, ತಾವು ಮದ್ರಾಸಿನಲ್ಲಿರುವ ದಕ್ಷಿಣ ಇಂಡ್ಯಾ ಲೋಹಮಾರ್ಗದ ನಿಲ್ದಾಣಕ್ಕೆ ಹೋಗಿ, ಒಂದು ಜಂಕ್ಷನ್ ನಿಲ್ದಾಣಕ್ಕೆ ಹೋಗಲು ೩ ನೆ ತರಗತಿಯ ಅಪ್ಪಣೆಯ ಚೀಟಿಯನ್ನು ದುಡ್ಡುಕೊಟ್ಟು ತೆಗೆದುಕೊಂಡು ಬಂಡಿಯನ್ನೇರಿದರು. ಇವರು ಹತ್ತಿದ ಬಂಡಿಯಲ್ಲಿ ಜನರು ಒಬ್ಬರಮೇಲೊಬ್ಬರು ಕಿಕ್ಕಿರಿದು ಕುಳಿತುಕೊಂಡು ಎಲೆಯಡಿಕೆಯನ್ನು ಮೆಲ್ಲುತ್ತ, ಸಿಗರೇಟನ್ನು ಸೇದುತ್ತ, ಅಲ್ಲಲ್ಲೇ ಉಗುಳುತ್ತ ಸ್ವೇಚ್ಛೆಯಿಂದ ಕೂಗಿಕೊಂಡು ಮಾತನಾಡುತ್ತಲಿದ್ದರು. ಈ ಪ್ರಭುಗಳನ್ನು ಯಾರೂ ಗಮನಿಸಿಯೇ ಇರಲಿಲ್ಲ. ಇಳಿಯಬೇಕಾದ ನಿಲ್ದಾಣವು ಬಂದಕೂಡಲೇ ಈ ಗೌರ್ನರು ಬಂಡಿಯಿಂದಿಳಿದು ಪ್ರಯಾಣಿಕರು ವಿಶ್ರಾಂತಿಗೊಳ್ಳುವ ಮನೆಗೆ ಹೋಗಿ, ಆ ರಾತ್ರಿಯೆಲ್ಲಾ ಅಲ್ಲೇ ಇದ್ದು, ಯಾವುದೊಂದು ಬಂಡಿಬಂದರೂ, ಅದರ ಹತ್ತಿರಕ್ಕೆ ಹೋಗಿ ಅತ್ತಿತ್ತ ತಿರುಗಾಡಿ ೩ ನೆ ತರಗತಿಯ ಪ್ರಯಾಣಿಕರ ಸ್ಥಿತಿಯನ್ನು ಬಗ್ಗಿಬಗ್ಗಿ ನೋಡುತ್ತ, ಪೊಲೀಸರ ಮತ್ತೂ ಹೊಗೆಬಂಡಿಯ ಗಾರ್ಡುಗಳ ಕ್ರಿಯೆಯನ್ನು ಕಣ್ಣುಮುಚ್ಚದಂದಲೇ ನೋಡಿ ತಿಳಿದುಕೊಳ್ಳುತ್ತ ಇದ್ದು, ಬೆಳಗಾದಕೂಡಲೇ ೧ ನೆ ತರಗತಿಯ ಅಪ್ಪಣೆ ಚೀಟಿಯನ್ನು ತೆಗೆದುಕೊಂಡು ಮದ್ರಾಸಿಗೆ ಬರುತ್ತಿದ್ದ ಬಂಡಿಯನ್ನೇರಿ ಹೊರಟರು. ಆ ಬಂಡಿಯು ಕ್ಲುಪ್ತಕಾಲಕ್ಕೆ ಸರಿಯಾಗಿ ಮದ್ರಾಸಿಗೆ ಸೇರದೆ ತಡವಾದುದರಿಂದ, ನಿಲ್ದಾಣಕ್ಕೆ ಬಂದು ಕಾದಿದ್ದ ಗೌರ್ನರ ಕಾರ್ಯದರ್ಶಿಯೂ ಏಡಿಕಾಂಗರೂ ಸಹ ದಿಗಿಲುಬಿದ್ದು, ಆ ಜಂಕ್ಷನ್ ನಿಲ್ದಾಣದ ಅಧಿಕಾರಿಗೆ ತಂತಿಯನ್ನು ಕೊಟ್ಟು, ಮದ್ರಾಸ್ ಗೌರ್ನರು ಅಲ್ಲಿರುವರೆ? ಎಂದು ಕೇಳಿದರು. « ಗೌರ್ನರು ಇಲ್ಲಿಗೆ ಬರಲಿಲ್ಲ. ಆದರೆ ಯಾರೋ ಒಬ್ಬ ಐರೋಪ್ಯನೋ ಅಥವಾ ಯೂರೇಷಿಯನ್ನನೋ ರಾತ್ರಿಯೆಲ್ಲಾ ಇಲ್ಲೇ ಇದ್ದು, ಬೆಳಗಿನ ಬಂಡಿಯಲ್ಲಿ ಮದ್ರಾಸಿಗೆ ಹೊರಟಿದ್ದಾನೆ. » ಎಂದು ತಂತಿಯ ಮೂಲಕ ಉತ್ತರವನ್ನು ಕೊಟ್ಟರು. ಅಷ್ಟರಲ್ಲಿ ಬಂಡಿಯು ಮದ್ರಾಸ್ ನಿಲ್ದಾಣಕ್ಕೆ ಬಂದು ನಿಲ್ಲಲು ಕಾರ್ಯದರ್ಶಿ ಮೊದಲಾದವರು ಗೌರ್ನರನ್ನು ಇದಿರುಗೊಂಡಾಗ, ನಿಲ್ದಾಣದಲ್ಲಿದ್ದವರೆಲ್ಲರೂ ಅವರನ್ನು ಗೌರ್ನರೆಂದು ತಿಳಿದು ಭಯಾಶ್ಚರ್ಯಗೊಂಡರು.

ಮತ್ತೊಂದಾವೃತ್ತಿ ಅದೇ ಮದ್ರಾಸಿನ ಒಂದಾನೊಂದು ಮಾರ್ಕಟ್ಟಿನಲ್ಲಿ ಕೊಳೆತ ಕೆಟ್ಟಪದಾರ್ಥಗಳೂ ಹಳಸಿದ ತಿನಸುಗಳೂ ಮಾರಲ್ಪಡುತ್ತಿರುವುವೆಂದೂ, ಅದರಮೇಲೆ ಪೋಲೀಸರ ಗಮನವೇ ಇಲ್ಲವೆಂದೂ ಈ ಗೌರ್ನರ ಕಿವಿಗೆ ಸುದ್ದಿ ಬಿದ್ದಿರಲು, ತಾವೇ ಅದನ್ನು ನೋಡಬೇಕೆಂದು ಯೋಚಿಸಿ, ಸಾಮಾನ್ಯಮನುಷ್ಯನಂತೆ ಉಡುಪನ್ನು ಧರಿಸಿ, ಆ ಮಾರ್ಕಟ್ಟಿಗೆ ಹೋಗಿ, ಅಲ್ಲಿನ ವಿದ್ಯಮಾನವನ್ನೆಲ್ಲಾ ನೋಡಿಕೊಂಡು, ಸಮೀಪದಲ್ಲಿರುವ ಒಂದು ಪೊಲೀಸು ಠಾಣಕ್ಕೆ ಹೋಗಿ, ಅಲ್ಲಿದ್ದವರನ್ನು ಕುರಿತು ಆ ಮಾರ್ಕಟ್ಟಿನ ವಿಷಯವಾಗಿ ಕೆಲ ಪ್ರಶ್ನೆಗಳನ್ನು ಹಾಕಲು, ಅವರು ಇವರನ್ನು ಯಾವನೋ ಒಬ್ಬನೆಂದು ಉಪೇಕ್ಷಿಸಿ, « ನಿನ್ನ ಕೆಲಸವನ್ನು ನೋಡಿಕೊಂಡು ಸುಮ್ಮನೆ ಹೋಗು » ಎಂದು ಉತ್ತರವನ್ನು ಕೊಟ್ಟರು. ಆಗ ಗೌರ್ನರು « ನನ್ನ ಕೆಲಸವನ್ನೇ ನಾನು ನೋಡುತ್ತೇನೆ. » ಎಂದು ಪ್ರತ್ಯುತ್ತರಕೊಟ್ಟು, ಅಭಿಪ್ರಾಯವನ್ನು ಬರೆದಿಡತಕ್ಕ ಪುಸ್ತಕವನ್ನು ಈಸಿಕೊಂಡು ಅದರಲ್ಲಿ ಆ ದಿನದ ತಮ್ಮ ಅನುಭವವನ್ನೆಲ್ಲಾ ಬರೆದು, ಕೆಳಗೆ 'ಕಾರ್ಮೈಕಲ್' ಎಂದು ಹಸ್ತಾಕ್ಷರವನ್ನು ಹಾಕಿದರು. ಅದನ್ನು ನೋಡಿದಮೇಲೆ ಪೊಲೀಸರಿಗೆ ಸ್ವಲ್ಪ ಸಂಶಯವುಂಟಾಯಿತು. ಅವರ ಹಿಂದೆಯೇ ದೂರದಲ್ಲಿ ಒಬ್ಬ ಪೊಲೀಸಾಳನ್ನು ಕಳುಹಿಸಿ, ಅವರು ಸಾಮಾನ್ಯವಾದ ಬಂಡಿಯೊಂದರಲ್ಲಿ ಕುಳಿತು ಗೌರ್ನರ ಭವನಕ್ಕೆ ಹೋದುದನ್ನು ತಿಳಿದುಕೊಂಡಮೇಲೆ ಅವರು ಗೌರ್ನರೇ ಸರಿಯೆಂದು ತಿಳಿದು ತತ್ತರಿಸಿ ಹೋದರು.

ಈ ಪ್ರಭುಗಳು ಈಗ ಬಂಗಾಳಾ ಗೌರ್ನರಾಗಿರುವರು. ಕಲಕತ್ತಾದಲ್ಲಿ ಹಲವು ಬಾರಿ ಸಾಮಾನ್ಯರಂತೆ ಬೀದಿಯಲ್ಲಿ ತಿರುಗಾಡುತ್ತ, ಅನೇಕ ಸಂಗತಿಗಳನ್ನು ತಿಳಿದುಕೊಳ್ಳುತ್ತಲಿರುವರು. ಹೀಗೆ ಪ್ರಭುಗಳೂ ಅವರ ಕೈಕೆಳಗಣ ಮುಖ್ಯಾಧಿಕಾರಿಗಳೂ ಆಗಾಗ್ಗೆ ಆಚರಿಸುತ್ತಿದ್ದರೆ ಕುರಿಗಳನ್ನು ಕಾಣುವ ತೋಳಗಳಂತೆ ಪ್ರಜೆಗಳನ್ನು ಬೆದರಿಸಿ ಹಿಂಸೆಗೊಳಿಸುತ್ತಿರುವ ದುಷ್ಟೋದ್ಯೋಗಿಗಳ ಹಾವಳಿಯು ನಿಲ್ಲುವುದಕ್ಕೂ ಪ್ರಜೆಗಳ ನಿಜವಾದ ಕಷ್ಟಸುಖಗಳು ಪಾಲಕರಿಗೆ ಗೋಚರಿಸಿ, ಅವರ ವಿಷಯದಲ್ಲಿ ಮುಂದಿನ ಏರ್ಪಾಡನ್ನು ಮಾಡುವುದಕ್ಕೂ ಎಷ್ಟೋ ಅನುಕೂಲವಲ್ಲವೆ? ಅದನ್ನು ಬಿಟ್ಟು 'ಸರ್ಕೀಟು' ಎಂದು ಹೆಸರಿಟ್ಟು, ಮುಂದಾಗಿ ತಿಳುವಳಿಕೆ ಕೊಟ್ಟು ಅಧಿಕಾರಿಗಳು ಹೊರಟರೆ, ಇದ್ದ ನ್ಯೂನತೆಗಳನ್ನೆಲ್ಲಾ ಇದ್ದಿದ್ದಂತೆಯೇ ಅವರ ಕಣ್ಣುಗಳಿಗೆ ಬೀಳುವ ಹಾಗೆ ತೋರ್ಪಡಿಸಿಕೊಳ್ಳುವುದಕ್ಕೆ ಕೈಕೆಳಗಿನ ಉದ್ಯೋಗಸ್ಥರು ಅಷ್ಟೊಂದು ದಡ್ಡರೆ? ಅಂಥ ಸಂಚಾರಗಳಿಂದ ಪ್ರಜೆಗಳಿಗೆ ಅಷ್ಟೇನೂ ಫಲವಾಗುವುದಿಲ್ಲವೆಂಬುದು ಖಂಡಿತವು. ಯಾವ ಪ್ರಭುವೇ ಆಗಲಿ ತತ್ಪ್ರತಿನಿಧಿಗಳೇ ಆಗಲಿ ನಿಜವಾಗಿ ಪ್ರಜೆಗಳ ಕಷ್ಟಗಳನ್ನು ಪರಿಹರಿಸಿ ಅವರಿಗೆ ಸುಖವನ್ನುಂಟುಮಾಡಿ ತಾವು ಪ್ರಜಾರಂಜಕರೆನಿಸಿಕೊಳ್ಳಬೇಕೆಂದು ಇಷ್ಟಪಡುವವರಾಗಿದ್ದರೆ, ಅಂಥವರು ಈ ಕಾರ್ಮೈಕಲ್ ಪ್ರಭುಗಳಂಥ ಮಹಾನುಭಾವರು ಆಚರಿಸುವ ರೀತಿಯನ್ನೇ ಅನುಸರಿಸಿ ನಡೆಯಬೇಕಾದುದು ಅತ್ಯಾವಶ್ಯಕ.

ಒಳದೇಶದ ವೃತ್ತಾಂತಗಳು.

ಆನೆಯನ್ನು ಹಿಡಿಯುವ ಕೆಲಸದಲ್ಲಿ ಪ್ರಖ್ಯಾತರಾಗಿದ್ದ ಮ॥ ಕೆತ್ತ್ಯ ಶ್ಯಾಮಯ್ಯಂಗಾರರು ಬೆಂಗಳೂರಿನಲ್ಲಿರುವ ಮ॥ ವಿ. ಎನ್, ನರಸಿಂಹಯ್ಯಂಗಾರರ ಭವನದಲ್ಲಿ ವಿಧಿವಶರಾದರು. ೩–೪ ತಿಂಗಳ ಕೆಳಗೆ ಇವರು ಸಾಲಗಾರರ ಬಾಧೆಯಿಂದ ಪಾಪರ್ ಸರ್ಟಿಫಿಕೇಟನ್ನು ಪಡೆದಿದ್ದರು.

ರಾಜಧಾನಿಯ ದೇವರಾಜಮೊಹಲ್ಲಾ ನಿವಾಸಸ್ಥಳದ ಕುರುಬರ ಜಾತಿಯ ೨೦–೨೫ ವರ್ಷ ವಯಸ್ಸಿನ ಒಬ್ಬ ವಿಧವೆಯನ್ನು ಅವಳ ಮೈಮೇಲಿದ್ದ ಆಭರಣ ಸಹಿತ ೧೦–೧೫ ದಿನಗಳ ಕೆಳಗೆ ಯಾರೋ ಅಪಹರಿಸಿಕೊಂಡು ಹೋಗಿದ್ದಾರೆಂದು ಅವಳ ತಂದೆಯು ದೇವರಾಜ ಪೋಲೀಸ್ ಸ್ಟೇಷನ್ನಿಗೆ

ದೂರಿಕೊಂಡಮೇಲೆ ಪೋಲೀಸರು [illegible] ನಂಜಾಪುರಿ ಮನೆಯನ್ನು ಶೋಧಿಸಿ ಅಲ್ಲಿ ಅವಿತುಕೊಂಡಿದ್ದವಳನ್ನು ಕಂಡುಹಿಡಿದು ವಿಚಾರಣೆಗೆ ಗುರಿಮಾಡಿರುತ್ತಾರೆ.

ಆಫಿಸಿಯೇಟಿಂಗ್ ಜನರಲ್ ಮತ್ತೂ ರೆವಿನ್ಯೂ ಸೆಕ್ರಟರಿಗಳಾದ ಮ॥ ಬಾಲಸುಂದರಂಅಯ್ಯರ್ ರವರಿಗೆ ೨ ತಿಂಗಳು ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ ಕಡೂರ ಡಿ॥ ಕಮಿಷನರ್ ಮ॥ ಕೆ. ಆರ್ ಶ್ರೀನಿವಾಸಯ್ಯಂಗಾರ್, ಎಂ. ಎ, ರವರು ಆಕ್ಟಿಂಗ್ ಜ॥ ಮತ್ತೂ ರೆ॥ ಸೆಕ್ರಟರಿಯಾಗಿ ನಿಯಮಿಸಲ್ಪಟ್ಟಿರುತ್ತಾರಷ್ಟೆ. ಆದರೆ ಮ॥ ಬಾಲಸುಂದರಂಅಯ್ಯರ್ ರವರು ರಜ ಪೂರೈಸಿದಮೇಲೆ ಸಬ್ ಡಿವಿಜನ್ ಆಫೀಸರಾಗಿ ನಿಯಮಿಸಲ್ಪಡುವರೆಂದೂ ಮ॥ ಶ್ರೀನಿವಾಸಯ್ಯಂಗಾರ್ಯರು ಜ॥ ಮತ್ತೂ ರೆ॥ ಸೆಕ್ರಟರಿಯಾಗಿ ಸ್ಥಿರಗೊಳಿಸಲ್ಪಡುವರೆಂದೂ ಕೇಳುತ್ತೇವೆ.

ಚಿಪ್ಪನ ಹಳ್ಳಿಗೆ ಹೋಗುವ ದಾರಿಯಲ್ಲಿ ರಾಜಧಾನಿಯಿಂದ ೪ ಮೈಲಿ ದೂರದಲ್ಲಿರುವ ರಾಯನಕೆರೆ ಬಳಿ ಅರಮನೆಯ ಕಾವಲಿನಲ್ಲಿ ಅರಮನೆಯ ಆನೆಗಳನ್ನು ಮೇಯಿಸಲು ತೆಗೆದುಕೊಂಡು ಹೋಗಿದ್ದ ಮಾವುತರೂ, ಓಲೆಕಾರರೂ ಕಾವಲಿನ ನೆರೆಯಲ್ಲಿರುವ ಒಬ್ಬ ಅಯ್ಯರ ಭೂಮಿಗೆ ಆನೆಗಳನ್ನು ಬಿಟ್ಟು ಮರಗಳನ್ನು ನಾಶಪಡಿಸಿ ನಷ್ಟವನ್ನುಂಟುಮಾಡಿರುತ್ತಾರೆಂದು ಆ ಅಯ್ಯರ್‌ರವರ ಕಡೆಯವರು ಮೈಸೂರ ಸಬ್ ಡಿವಿಜನ್ನಿನಲ್ಲಿ ವಿವಾದವನ್ನು ಹೂಡಿರುತ್ತಾರೆ. ಅರಮನೆಯ ಕಂಟ್ರೋಲರು ತಮ್ಮ ಕಡೆಯಾಳುಗಳ ಪಕ್ಷವಾಗಿ ವಾದಿಸಲು ಅಡ್ವೋಕೇಟ್ ಮ॥ ರಂಗಯ್ಯಂಗಾರರನ್ನು ನಿಯಮಿಸಿರುವುದಾಗಿ ಕೇಳುತ್ತೇವೆ.

ಈಗ ಉದಕಮಂಡಲದಲ್ಲಿ ಸಂಸಾರಸಮೇತ ಬೇಸಗೆಯ ಕಾಲವನ್ನು ಕಳೆಯುತ್ತಿರುವ ಬರೋಡಾ ಮಹಾರಾಜರವರ ಇಬ್ಬರು ಪುತ್ರರುಗಳು ಕಳೆದ ತಾ॥ ೧೮ ರಲ್ಲಿ ಬೇಟೆಗೆ ಹೋಗಿರುವಾಗ್ಗೆ ಯುವರಾಜರು ಸ್ವಾರಿಮಾಡುತ್ತಿದ್ದ ಕುದುರೆಯು ಮುಗ್ಗರಿಸಲು, ಯುವರಾಜರು ಕುದುರೆಯಮೇಲಿಂದ ಬಿದ್ದು ಪೂರಾ ಪೆಟ್ಟನ್ನು ತಿಂದು ಮೂರ್ಛೆಹೋಗಿದ್ದರು. ಅವರ ಕೂಡ ಇದ್ದ ಅವರ ತಮ್ಮಂದಿರು ತತ್‌ಕ್ಷಣ ಅರಮನೆಗೋಡಿಹೋಗಿ ತಿಳುಹುತಲೆ ಮಹಾರಾಜರು ಮೋಟಾರಿನಲ್ಲಿ ಡಾಕ್ಟರನ್ನು ಕರೆದುಕೊಂಡು ಬಂದು ಯುವರಾಜರನ್ನುಪಚರಿಸಿ ಅರಮನೆಗೆ ಕರೆದುಕೊಂಡು ಹೋದರು. ಇಬ್ಬರು ದೊಡ್ಡ ಡಾಕ್ಟರುಗಳು ಚಿಕಿತ್ಸೆಯನ್ನು ಮಾಡುತ್ತಿರುವರು. ಈ ಯುವರಾಜರಿಗೆ ಶೀಘ್ರವಾಗಿ ಗುಣವನ್ನು ಮಾಡಲೆಂದು ಈಶನನ್ನು ಪ್ರಾರ್ಥಿಸುತ್ತೇವೆ.

ಮೈಸೂರ ತಾ॥ ವರುಣದ ಹೋಬಳಿ ಮೊಸರಿನ ಬಾಯಿಹಳ್ಳಿಯಲ್ಲಿ ಕಳೆದವರ್ಷ ಅಕ್ಕಸಾಲಿಗರ ಒಂದು ಮದುವೆಯನ್ನು ಮಾಡಿ ಗಂಡನ್ನು ಕುದುರೆಯ ಮೇಲೆ ಕುಳ್ಳಿರಿಸಿ ಬೀದಿಯಲ್ಲಿ ಉತ್ಸವವನ್ನು ಮಾಡ ಯತ್ನಿಸಿದಾಗ್ಗೆ ಅಕ್ಕಸಾಲಿಗರು ಕುದುರೆಯ ಮೇಲೆ ಕುಳಿತು ಉತ್ಸವ ಬರುವ ಪದ್ಧತಿಯಿಲ್ಲವೆಂದು ಅಲ್ಲಿಯ ಶಿವಾಚಾರದವರು ತಡೆದುಬಿಟ್ಟರು. ಅದರಮೇಲೆ ವಿವಾದವು ಹುಟ್ಟಿ ಈಗ ಚೀಫ್‌ಕೋರ್ಟಿನ ವಿಚಾರಣೆಯಲ್ಲಿರುತ್ತದೆ. ಈ ನಡುವೆ ಡೆಪ್ಯುಟಿ ಕಮಿಷನರವರು ಸರ್ಕಾರಿ ಮಾರ್ಗದಲ್ಲಿ ಒಬ್ಬರು ಉತ್ಸವದಿಂದ ಬರಲು ಮತ್ತೊಬ್ಬರು ಆತಂಕಪಡಿಸಲು ಕಾರಣವಿಲ್ಲವೆಂಬುದರ ಮೇಲೆ ಅಕ್ಕಸಾಲಿಗರು ಉತ್ಸವವನ್ನು ಮಾಡಬಹುದೆಂದೂ ಇತರರು ಆತಂಕಪಡಿಸದಂತೆ ಪೊಲೀಸರು ತಕ್ಕ ಎಚ್ಚರದಿಂದಿದ್ದು ಆ ಕಾರ್ಯವನ್ನು ನೆರವೇರಿಸಬೇಕೆಂದೂ ಅಪ್ಪಣೆ ಕೊಟ್ಟುದರಮೇಲೆ ಅಕ್ಕಸಾಲಿಗರು ಹೋದವರ್ಷ ಲಗ್ನವಾದ ಗಂಡನ್ನು ಕುದುರೆಯಮೇಲೆ ಕುಳ್ಳಿರಿಸಿ ತಾ॥ ೧೭ ರ ರಾತ್ರಿ ಉತ್ಸವವನ್ನು ಮಾಡಿದರು. ಪೊ॥ ಸೂಪರಿಂಟೆಂಡೆಂಟರವರು ರಿಜರ್ವ್ ಪೊಲೀಸರನ್ನು ಮದ್ದುಗುಂಡನ್ನು ಹಾಕಿ ಸಿದ್ಧಪಡಿಸಿದ್ದ ತುಪಾಕಿ ಕೈಕೋಲ ಮೊದಲಾದ ಆಯುಧಗಳ ಸಮೇತ ಕರೆದುಕೊಂಡು ಹೋಗಿ ಉತ್ಸವವನ್ನು ನಿರಾತಂಕವಾಗಿ ಮಾಡಿಸಿ ಬಂದರು. ಗ್ರಾಮದ ಶಿವಾಚಾರದವರೆಲ್ಲರೂ ಆ ರಾತ್ರಿ ಒಂದು ಪಿಳ್ಳೆಯನ್ನು ಸಹ ಮನೆಯ ಹೊರಗಡೆ ಇರಗೊಡಿಸದೆ ತಮ್ಮ ಮನೆಗಳ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಒಳಗಡೆಯೇ ಇದ್ದರಂತೆ. ಸರ್ಕಾರದವರು ಒಂದೊಂದು ಸಮಯದಲ್ಲಿ ಮಾಮೂಲು ಎಂಬುದಕ್ಕೆ ಗಮನಿಸುವುದೂ, ಕೆಲ ಸಮಯದಲ್ಲಿ ಅದನ್ನು ತಿರಸ್ಕರಿಸುವುದೂ ವಿಚಿತ್ರವಾಗಿದೆ.

ಕೆಲವೃತ್ತ ಪತ್ರಿಕೆಗಳಲ್ಲಿ ಪ್ರಕಟಿತವಾಗಿರುವ « ಗ್ರೇಟ್ ಜರ್ಮನ್ ಮನಿ ಲಾಟರಿ » ಎಂಬ ಹಣದ ಲಾಟರಿಯು ಮೋಸಕರವಾದುದೆಂದು ತೋರಿ ಬರುವುದರಿಂದ, ಮೈಸೂರ ಸೀಮೆಯ ವೃತ್ತಪತ್ರಿಕೆಯ ಪ್ರಕಾಶಕರು ಆ ಲಾಟರಿಯ ವಿಚಾರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬಾರದೆಂದೂ, ಒಂದು ವೇಳೆ ಅಜಾಗರೂಕತೆಯಿಂದ ಈ ಮೊದಲೇ ಪ್ರಕಟಿಸಿದ್ದರೆ ಆ ಲಾಟರಿಯು ಸುಳ್ಳೆಂಬ ಬಗೆಗೆ ಪುನಃ ಬರೆಯತಕ್ಕದೆಂದೂ ಮೈಸೂರ ಸೀಮೆಯ ಪೋಲೀಸ್ ಇ॥ ಜನರಲ್ ರವರು ತಿಳಿಸಿರುತ್ತಾರೆ. ಈ ಜರ್ಮನಿ ಲಾಟರಿಯ ಸಂಬಂಧವಾದ ಪ್ರಕಟನ ಪತ್ರಿಕೆಗಳನ್ನು ಅಂಚೆಯ ಮೂಲಕ ಕಳುಹಿಸಕೂಡದೆಂದು ತಪಾಖೆಯವರು ಅಪ್ಪಣೆಮಾಡಿರುವುದಾಗಿ ಕಂಡು ಬರುತ್ತಿದೆ.

೩–೪ ವರ್ಷಗಳ ಹಿಂದೆ ಶ್ರೀ ಚಾಮುಂಡೇಶ್ವರಿಯ ಬೆಟ್ಟದಮೇಲಿರುವ ದೊಡ್ಡ ಬಸವೇಶ್ವರನಿಗೆ ಪ್ರತಿವರ್ಷದ ಕಾರ್ತಿಕಮಾಸದಲ್ಲಿ ಕಡೆಯ ಸೋಮವಾರದ ದಿನ ಕೇಸರಿ, ಪಚ್ಚಕರ್ಪೂರ ಮೊದಲಾದ ಗಂಧದ್ರವ್ಯಗಳ ಲೇಪನದಿಂದ ಕ್ಷೀರಕುಂಭಾಭಿಷೇಕ ಪುಷ್ಪಾರ್ಚನೆಗಳನ್ನು ಮಾಡಿಸಿ ಸಮಸ್ತಜಾತಿಯ ಸಾವಿರಾರು ಜನರಿಗೆ ಮೃಷ್ಟಾನ್ನಭೋಜನವನ್ನೂ ರಾತ್ರಿ ಲಕ್ಷದೀಪೋತ್ಸವವನ್ನೂ ಮಾಡಿಸುತ್ತಿದ್ದ ಮತ್ತೂ ಈಚೆಗೆ ನಂಜನಗೂಡಿನಲ್ಲಿ ನದಿಯ ದಡದಲ್ಲಿ ಶ್ರೀಚಾಮುಂಡೇಶ್ವರಿಯ ದೇವಸ್ಥಾನವನ್ನು ಕಟ್ಟಿಸಿ ದೇವರಿಗೆ ಬೇಕಾದ ಆಭರಣಗಳನ್ನೂ, ನಿತ್ಯಪಡಿತರ ದೀಪಾರಾಧನೆಗಾಗಿ ಒಂದು ಗದ್ದೆಯನ್ನೂ ಮಾಡಿಸಿಕೊಟ್ಟು ಬಹು ಅನ್ನದಾನಿಗಳೂ, ನಿಸ್ಪೃಹರೂ, ಜಿತೇಂದ್ರಿಯರೂ ಎಂದು ಹೆಸರುಗೊಂಡು ಶ್ರೀಮನ್ಮಹಾರಾಜರು ಮಹಾಮಾತೃಶ್ರೀಯವರು ಅರಸುವರ್ಗದವರು ಮೊದಲಾಗಿ ಎಲ್ಲಮತಸ್ಥರುಗಳಿಂದಲೂ ಸನ್ಮಾನಿಸಲ್ಪಡುತ್ತಿದ್ದ ಶ್ರೀಶಿವಪಾದಸ್ವಾಮಿಗಳು ಈಚೆಗೆ ಕೊಂಚ ಅಸ್ವಸ್ಥರಾಗಿದ್ದು ಕಳೆದ ತಾ॥ ೧೮ರ ಸಾಯಂಕಾಲದಲ್ಲಿ ಶಿವೈಕ್ಯರಾದರು. ರಾಜಧಾನಿಯ ಗಜಶಾಲೆಯ ಸಮೀಪದಲ್ಲಿರುವ ಚಿಕ್ಕ ಬಸವೇಶ್ವರನ ದೇವಸ್ಥಾನದ ಆವರಣದಲ್ಲಿ ತಮ್ಮ ಸಮಾಧಿಯಾಗಬೇಕೆಂಬುದು ಶ್ರೀಗಳವರ ತಾತ್ಪರ್ಯವಾಗಿದ್ದುದರಿಂದಲೂ, ಆ ಸ್ಥಳವು ಊರೊಳಗಿರುವುದರಿಂದಲೂ ಶ್ರೀಮನ್ಮಹಾರಾಜರವರ ಅಪ್ಪಣೆಯು ಕೇಳಲ್ಪಟ್ಟಿರುವಲ್ಲಿ ಮಹಾರಾಜರು ರೆಸಿಡೆಂಟರ ಅನುಮತಿಯನ್ನು ಪಡೆದು ತಮ್ಮ ಅಪ್ಪಣೆಯನ್ನು ದಯಪಾಲಿಸಿದರು. ಈ ಕಾರಣದಿಂದ ನೆನ್ನೆಯ ಸಾಯಂಕಾಲದಲ್ಲಿ ಶ್ರೀಗಳವರ ಕಳೇಬರವು ಅತಿ ವಿಜೃಂಭಣೆಯಿಂದ ಊರಿನ ಬಹುಭಾಗದಲ್ಲಿ ರಾತ್ರಿ ೧೧–೧೨ ಗಂಟೆಯವರೆಗೂ ಉತ್ಸವಮಾಡಲ್ಪಟ್ಟು ಬೆಳಗಿನ ಝಾವದಲ್ಲಿ ವಿಧ್ಯುಕ್ತವಾಗಿ ಕ್ರಿಯಾಸಮಾಧಿಮಾಡಲ್ಪಟ್ಟಿತು. ಸಮಾಧಿಯ ವೆಚ್ಚಕ್ಕಾಗಿ ರಾಜವರ್ಗದವರಾದಿಯಾಗಿ ಅನೇಕ ಭಕ್ತಾದಿಗಳು ದ್ರವ್ಯಸಹಾಯವನ್ನು ಮಾಡಿದರು. ಈ ಬ್ರಹ್ಮಚಾರಿಗಳಿಗೆ ಮರಣಕಾಲದಲ್ಲಿ ಪ್ರಾಯಶಃ ೪೪–೪೫ ವರ್ಷವಾಗಿರಬಹುದು.

ವರ್ತಮಾನ ಸಂಗ್ರಹವು.

ಈಗ ಗುಜರಾತು ಕಾಥೆವಾಡಿಯ ಪ್ರಾಂತದಲ್ಲಿ ಸರ್ಕಾರದವರ ಪೋಷಣೆಯ ಕೆಳಗೆ ೯೯೪೧ ಜನ ಕ್ಷಾಮಪೀಡಿತರಿದ್ದಾರೆ.

ವಿದ್ಯಾಭ್ಯಾಸಾರ್ಥವಾಗಿ ಇಂಗ್ಲೆಂಡಿಗೆ ಹೋಗಿ ಬಂದ ಮ॥ ಸಿ. ವಿ. ಕೃಷ್ಣಸ್ವಾಮಿಶ್ರೇಷ್ಠಿ ಬಿ. ಎ, ಎಂಬುವರಿಗೆ ಮದ್ರಾಸಿನ ವೈಶ್ಯರು ಪ್ರಾಯಶ್ಚಿತ್ತಗಳನ್ನು ಮಾಡಿಸಿ ಜಾತಿಗೆ ಸೇರಿಸಿಕೊಂಡರು.

ಇಂಗ್ಲೆಂಡಿನಲ್ಲೂ ಫ್ರಾನ್ಸಿನಲ್ಲೂ ವ್ಯವಸಾಯ ಕ್ರಿಯೆಗಳನ್ನು ಕಲಿತುಕೊಂಡು ಬರುವುದಕ್ಕಾಗಿ ಬೊಂಬಾಯಿ ಸರ್ಕಾರದವರು ಆ ಶಾಖೆಯ ಒಬ್ಬ ಇನ್‌ಸ್ಪೆಕ್ಟರನ್ನು ಕಳುಹಿಸಬೇಕೆಂದು ನಿರ್ಧರಿಸಿದ್ದಾರೆ.

ಗಯಾ ಜಿಲ್ಲೆಗೆ ಸೇರಿದ ಒಂದು ಗ್ರಾಮಕ್ಕೆ ೪೦ ಮಂದಿ ಕಳ್ಳರು ಆಯುಧಪಾಣಿಗಳಾಗಿ ನುಗ್ಗಿ ಒಬ್ಬ ಜಮೀನ್ದಾರನ ಮನೆಯಿಂದ ೨೫ ಸಾವಿರ ರೂ. ಬೆಲೆಯ ನಗಗಳನ್ನು ದೋಚಿಕೊಂಡು ಹೋಗಿರುತ್ತಾರೆ.

ಅಮೃತಸರದಲ್ಲಿ ಇಬ್ಬರು ಪೊಲೀಸರು ಒಬ್ಬ ಪರಸ್ಥಳದವನನ್ನು ಬೆದರಿಸಿ ಸ್ವಲ್ಪ ಹಣವನ್ನೂ ನೋಟುಗಳನ್ನೂ ಕಸಿದುಕೊಂಡಿದ್ದುದರಿಂದ ಇಬ್ಬರಿಗೂ ೭ ವರ್ಷದ ಕಠಿಣ ಕಾರಾಗಾರವಾಸ ಶಿಕ್ಷೆಯಾಯಿತು.

ಲಂಡನ್ನಿನಲ್ಲಿ ಪೂರ್ವಭಾಗದಲ್ಲಿ ೩ ಸಾವಿರ, ಪಶ್ಚಿಮಭಾಗದಲ್ಲಿ ೯ ಸಾವಿರ ಮಂದಿ ದರ್ಜಿಯವರು ಕಟ್ಟುಮಾಡಿಕೊಂಡು ಕೆಲಸಮಾಡದೆ ನಿಂತುಬಿಟ್ಟಿದ್ದಾರೆ. ಇದರಿಂದ ಅಲ್ಲಿನ ಹೊಲಿಗೆಯ ಕೂಲಿಯು ೧ ಕ್ಕೆ ದ್ವಿಗುಣವಾಗಿದೆ

ಬೊಂಬಾಯಿ ಅಧಿಪತ್ಯದಲ್ಲಿ ಒಂದು ರಾಷ್ಟ್ರೀಯ ಸಭೆಯು ಕೂಡುತ್ತಿದ್ದು ಕೆಲಕಾಲದಿಂದ ನಿಂತುಹೋಗಿದ್ದಿತು ಅದನ್ನು ಮತ್ತೆ ಕೂಡುವಂತೆ ಮಾಡಬೇಕೆಂದು ಸರ್ ಫೆರೋಜ್‌ಷಹಾ ಮೇಥಾರವರು ಪ್ರಯತ್ನಿಸುತ್ತಿದ್ದಾರೆ.

ಮದ್ರಾಸಾಧಿಪತ್ಯದ ರಾಷ್ಟ್ರೀಯಸಭೆ ಸಂಘಸಂಸ್ಕರಣಸಭೆ ಪರಿಶ್ರಮಿಕ ಸಭೆಗಳ ಕೆಲಸವೆಲ್ಲಾ ಈ ವರ್ಷ ಕುಂಭಕೋಣದಲ್ಲಿ ವಿಜೃಂಭಣೆಯಿಂದ ಕೊನೆಸಾಗಿ ಕಾಲೋಚಿತವಾದ ನಿರ್ಧಾರಗಳಾದುವು. ಮುಂದಣ ವರ್ಷದಲ್ಲಿ ಈ ಸಭೆಗಳನ್ನು ತಿರುಚಿನಾಪಲ್ಲಿಯಲ್ಲಿ ನಡೆಯಿಸಲು ನಿಶ್ಚಿತವಾಗಿರುವುದು.

ಯೂರೋಪಿನಿಂದ ಭರತಖಂಡಕ್ಕೆ ಪರ್ಷಿಯದ ಮೇಲೆ ಭೂಮಿಯ ಮೂಲಕ ಲೋಹಮಾರ್ಗವನ್ನು ಸ್ಥಾಪಿಸುವುದಕ್ಕಾಗಿ ಒಂದು ಸಂಘವು ಏರ್ಪಟ್ಟಿದೆ. ಇದಕ್ಕೆ ಫ್ರಾನ್ಸು–ರಷ್ಯಾ–ಇಂಗ್ಲೆಂಡುದೇಶದ ಧನಿಕರು ಸೇರಿದ್ದಾರೆ. ಈಗ ಸರ್ವೆ ಮಾಡುವುದಕ್ಕಾಗಿ ೫೦ ಲಕ್ಷ ರೂ. ಗಳನ್ನು ವೆಚ್ಚಮಾಡಲು ನಿರ್ಧರಿಸಿದ್ದಾರೆ.

ಕಳೆದ ತಾ॥ ೧೭ ರ ರಾತ್ರಿ [illegible] ಪ್ರಾಂತದಲ್ಲಿ ದಬ್ಬಾಲ್ ಎಂಬ ಹಳ್ಳಿಗೆ ೩ ಜನ ಕಳ್ಳರು ಆಯುಧವನ್ನು ಧರಿಸಿಕೊಂಡು ನುಗ್ಗಿ ೪ ಜನ ಹೆಂಗಸರನ್ನು ಅಪಹರಿಸಿಕೊಂಡು ಹೋದರು. ಆ ರಾತ್ರಿ ಗಾಢಾಂಧಕಾರವಾಗಿದ್ದುದರಿಂದ ಹಳ್ಳಿಯ ಜನರು ಅವರನ್ನು ಹಿಂಬಾಲಿಸಿ ಹಿಡಿಯಲು ಸಾಧ್ಯವಿಲ್ಲವಾಯಿತು.

ಭರತಖಂಡದ ವೈಸ್‌ರಾಯರಿಗೆ ಕೆಲಕಾಲಪರ್ಯಂತ ಆಕ್ಟಿಂಗಾಗಿ ಮತ್ತೊಬ್ಬರನ್ನು ನಿಯಮಿಸಬೇಕಾಗಿ ಬಂದಾಗ ಮದ್ರಾಸ್ ಗೌರ್ನರನ್ನೇ ತೆಗೆದುಕೊಳ್ಳುವ ವಿಧಿಯು ಇರುತ್ತಿದೆ. ಈಗಿನ ಹೊಸ ಕೌನ್ಸಿಲ್ ವಿಧಿಯಲ್ಲೂ ಅದೇ ಪದ್ಧತಿಯು ಹೇಳಲ್ಪಟ್ಟಿದೆ. ಇಂತಹ ಏರ್ಪಾಟಿರುವುದು ಬಂಗಾಳಾ ಬೊಂಬಾಯಿ ಗೌರ್ನರುಗಳಿಗೆ ಅಗೌರವವನ್ನುಂಟುಮಾಡತಕ್ಕದಾಗಿದೆಯೆಂದು ಕೆಲರು ಆಕ್ಷೇಪಿಸುತ್ತಿದ್ದಾರೆ.

ಬೊಂಬಾಯಿಯಲ್ಲಿ ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳವರೆಗೂ, ನವಂಬರಿನಿಂದ ಫೆಬ್ರವರಿವರೆಗೂ ಕುದುರೆಯ ಜೂಜುಗಳು ಆಗುತ್ತಲೇ ಇರುತ್ತವೆ. ಇದರಲ್ಲಿ ಲಾಟರಿಯನ್ನು ಹಾಕಿ ಅನೇಕರು ಲಕ್ಷಾಂತರ ರೂ. ಗಳನ್ನು ಹಾಳುಮಾಡಿಕೊಳ್ಳುತ್ತಾರೆ. ಇದು ಒಂದು ದೊಡ್ಡ ಜೂಜಾಗಿರುತ್ತದೆ. ಈ ಜೂಜಿನ ಹಾವಳಿಯನ್ನು ಕಡಿಮೆಮಾಡುವ ವಿಷಯದಲ್ಲಿ ಮೊನ್ನೆತಾನೇ ಮಹಾಬಲೇಶ್ವರದಲ್ಲಿ ಕೂಡಿದ್ದ ನಿಯಮನಿರ್ಮಾಣ ಸಭೆಯೊಳಗೆ ಒಂದು ವಿಧಿಯೇರ್ಪಟ್ಟಿದೆ.

ಈ ತಿಂಗಳು ತಾ॥ ೧೩ ರ ರಾತ್ರಿ ದಕ್ಷಿಣ ಇಂಡಿಯಾ ಲೋಹಮಾರ್ಗದ ಕಲ್ಲಗುಡಿ–ತಿರುಮಂಗಲಂ ಎಂಬ ನಿಲ್ದಾಣಗಳೆರಡರ ಮಧ್ಯದಲ್ಲಿ ಇದಿರುಬದಿರಿಗೆ ಬಂದ ೨ ಸಾಮಾನು ಬಂಡಿಗಳು ತಾಕುಬಡಿದು ಎರಡು ಕಡೆಯ ಎಂಜಿನುಗಳೂ ಹಾಳಾದುವಲ್ಲದೆ ಅವುಗಳನ್ನು ನಡೆಯಿಸುತ್ತಿದ್ದವರಿಬ್ಬರೂ ಒಬ್ಬ ಬೆಂಕಿ ಹಾಕುವವನೂ ಸಹ ಸತ್ತರೆಂದೂ ಇನ್ನು ಕೆಲರಿಗೆ ಗಾಯವಾಗಿದೆಯೆಂದೂ ಆ ದಾರಿಯಲ್ಲಿ ೩ ದಿನಗಳವರೆಗೆ ಹೊಗೆಬಂಡಿಗಳ ತಿರುಗಾಟಕ್ಕೇ ಅಡ್ಡಿಯಾಗಿದ್ದಿತೆಂದೂ ಪ್ರಕಟವಾಗಿದೆ.

ಮದ್ರಾಸ್ ಹೈಕೋರ್ಟಿನ ನ್ಯಾಯಾಧಿಪತಿಗಳಲ್ಲಿ ಶ್ರೀಯುತರಾದ ಶಂಕರನಾಯರು, ಸುಂದರಂಅಯ್ಯರು, ಅಬ್ದುಲ್‌ರಹೀಂ, ಸದಾಶಿವಯ್ಯರು– ಈ ನಾಲ್ಕುಮಂದಿ ಸ್ವದೇಶೀಯರು ನ್ಯಾಯಾಧಿಪತಿಗಳಾಗಿದ್ದಾರೆ. ಬೊಂಬಾಯಿ ಹೈಕೋರ್ಟಿನ ನ್ಯಾಯಾಧಿಪತಿಗಳಲ್ಲಿ ಶ್ರೀಯುತರಾದ ಚಂದ್ರವಾರ್ಕರ್, ದಾವರ್ ಎಂಬ ಇಬ್ಬರೇ ಸ್ವದೇಶೀಯರಾಗಿದ್ದಾರೆ. ಅದುಕಾರಣ ಇಲ್ಲಿಯೂ ಸ್ವದೇಶದ ನ್ಯಾಯಾಧಿಪತಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಬೊಂಬಾಯಾಧಿಪತ್ಯದ ಸಭೆಯವರು ಅಲ್ಲಿನ ಗೌರ್ನರ ಮೂಲಕವಾಗಿ ಸ್ಟೇಟ್ ಸೆಕ್ರೆಟರಿಯವರಿಗೆ ಬಿನ್ನಯಿಸಿಕೊಂಡಿದ್ದಾರೆ.

ಅಮೇರಿಕಾದಲ್ಲಿ ಮದುವೆಯಾಗುವುದಕ್ಕೆ ಕಲ್ಪಿಸಿರುವ ಒಂದು ನಿರ್ಬಂಧವು ಅತ್ಯಂತ ಪ್ರಶಸ್ತವಾಗಿದೆ ಅವರ ಮದುವೆಗಳೆಲ್ಲಾ ಕ್ರೈಸ್ತ ದೇವಾಲಯದಲ್ಲೇ ಜರುಗುವುವು. ವಧೂವರರಿಬ್ಬರಿಗೂ ಯಾವ ರೋಗವೂ ಇಲ್ಲವೆಂಬುದಕ್ಕೆ ವೈದ್ಯರ ಅಭಿಪ್ರಾಯವನ್ನು ಅವರು ತಂದಿರಬೇಕು. ವರನು ವಧುವನ್ನು ಪೋಷಿಸಿಕೊಂಡು ಹೋಗುವುದಕ್ಕೆ ಸಮರ್ಥನಾಗಿರುವನೆಂಬ ವಿಷಯದಲ್ಲಿ ಒಬ್ಬ ದೊಡ್ಡಮನುಷ್ಯನ ಅಭಿಪ್ರಾಯವಿರಬೇಕು. ವಧುವು ಅಡುಗೆ ಮೊದಲಾದ ಮನೆಗೆಲಸವನ್ನು ಮಾಡಬಲ್ಲವಳಾಗಿದ್ದಾಳೆಂಬುದಕ್ಕೆ ಒಂದು ಯೋಗ್ಯತಾಪತ್ರವು ಬೇಕು. ಇವಿಷ್ಟನ್ನು ತೋರಿಸದಿದ್ದರೆ ಅಲ್ಲಿನ ಪುರೋಹಿತನು ಮದುವೆಮಾಡಿಸುವುದಿಲ್ಲ.

ಈ ತಿಂಗಳು ತಾ॥ ೯ ರಲ್ಲಿ ರಾಜಮಹೇಂದ್ರದಲ್ಲಿ ರಾ॥ ಬ॥ ವೀರೇಶಲಿಂಗಂ ಪಂತುಲುಯವರ ಆನಂದೋಪವನದಲ್ಲಿ ಒಬ್ಬ ವೈಶ್ಯನ ವಿವಾಹವಾಯಿತು. ಕುಮುದಮ್ಮ ಎಂಬಾಕೆಯೇ ೧೫ ವರ್ಷದ ಋತುಮತಿಯಾದ ವಧುವು. ಈಕೆಯ ತಂದೆಯಾದ ಸಲ್ವಾದಿ ರಾಮಯ್ಯನೆಂಬ ವೈಶ್ಯನು ಮೊಟ್ಟಮೊದಲು ಪುನರ್ವಿವಾಹ ವಿಷಯದ ಚರ್ಚೆ ಹುಟ್ಟಿದಾಗ ಒಬ್ಬ ವಿಧವೆಯನ್ನು ಮದುವೆಯಾಗಿದ್ದವನು. ಆ ಪತ್ನಿಯ ಹೊಟ್ಟೆಯಲ್ಲಿ ಹುಟ್ಟಿದಾಕೆಯೇ ಈ ಕನ್ಯೆ. ಈಕೆಯು ವೀರೇಶಲಿಂಗಂಪಂತುಲುಯವರ ಹೈಸ್ಕೂಲಿನಲ್ಲಿ ಓದಿ ೪ ನೆ ತರಗತಿಯಲ್ಲಿ ಉತ್ತೀರ್ಣರಾಗಿರುವಳು. ವರನು ಬಳ್ಳಾರಿಯಲ್ಲಿ ವರ್ತಕರಾಗಿರುವ ಮುರಾರಿಶೆಟ್ಟಿಯೆಂಬುವರ ಸಹೋದರನಾದ ೨೫ ವರ್ಷವಯಸ್ಸಿನ ದೊಡ್ಡ ವೈಶ್ಯಕುಟುಂಬಕ್ಕೆ ಸೇರಿದ ನರಸರಲ್ಲಿ ಚೆನ್ನಪ್ಪಶೆಟ್ಟಿ ಎಂಬಾತನು. ಈ ಮದುವೆಗೆ ವೈಶ್ಯಜಾತಿಯ ಬಹುಮಂದಿಗಳೂ ಇತರರೂ ಸಹ ಸೇರಿದ್ದರು. ಊರಿನಲ್ಲಿ ವಧೂವರರ ಮೆರವಣಿಗೆಯಾಯಿತು. ವರನು ಮೊದಲಿಂದಲೂ ಸಂಘಸಂಸ್ಕಾರದಲ್ಲಿ ಅಭಿರುಚಿಯುಳ್ಳಾತನು. ಅದುಕಾರಣ, ಈಗ ವೀರೇಶಲಿಂಗಂಪಂತುಲುಯವರ ಹೆಸರಿನಲ್ಲೊಂದು, ತನ್ನ ಮೊದಲ ಹೆಂಡತಿಯ ಹೆಸರಿನಲ್ಲೊಂದು–ಹೀಗೆ ೨ ಬಂಗಾರದ ಪದಕಗಳನ್ನೇರ್ಪಡಿಸಿ– ತನ್ನ ಹಿಂದೆ ಯಾವ ವೈಶ್ಯನು ಪುನರ್ವಿವಾಹವನ್ನು ಮಾಡಿಕೊಳ್ಳುವನೋ ಅತನಿಗೊಂದನ್ನೂ, ಋತುಮತಿಯಾದನಂತರ ವಿವಾಹ ಮಾಡಿಕೊಳ್ಳುವ ಸ್ತ್ರೀಗೆ ೧ ನ್ನೂ ಕೊಡುತ್ತೇನೆಂದು ಪ್ರಕಟಪಡಿಸಿರುವನು. ವೈಶ್ಯರ ಇಂಥ ಪುನರ್ವಿವಾಹ ನಡೆಯುವುದಕ್ಕೆ ಇದೇ ಮೊದಲೆಂದು ಹೇಳಬಹುದು.

ಶಿರಾ ತಾ॥ ಬುಕ್ಕಾಪಟ್ಟಣದ ಮ॥ರಾ॥ಗಳಾದ ಸಿದ್ದೇಗಯ್ಯ, ಮಲ್ಲಣ್ಣ ಮತ್ತು ದೊಡ್ಡಗುಣಿ ಚಿಕ್ಕವೀರಣ್ಣ ಇವರುಗಳ ಮಕ್ಕಳ ವಿವಾಹಮಹೋತ್ಸವದಲ್ಲಿ ಕೈ॥ ವೈ ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ತೆಗೆಯಲ್ಪಟ್ಟ ಅಗ್ರತಾಂಬೂಲದ ಬಾಬತು ೧ ರೂಪಾಯಿ ಸಂದಿರುತ್ತದೆ. ಪ. ಪ್ರ.

ಪತ್ರವ್ಯವಹಾರವು.

ವೀರಶೈವರಿಗೊಂದು ವಿಜ್ಞಾಪನೆ.

ನೋಡಿರಿ! ತ್ರಿಮೂರ್ತಿಗಳಲ್ಲಿ ಹರನು ಅಧಿಕನೆಂದೂ ಚರ್ಚಾಸ್ಪದನಾದ ಹರಿಯು ಅವನ ಕಿಂಕರನೆಂದೂ ವೈಷ್ಣವೇತರರು ಸ್ಥಿರಪಡಿಸಿರುತ್ತಾರಷ್ಟೆ. ಹರನ ಅಡಿದಾವರೆಗಳನ್ನು ಹರಿಯು ಸಹಸ್ರ ಕಮಲಗಳಿಂದ ಅರ್ಚಿಸಿ ಅವನೊಲುಮೆಯನ್ನು ಪಡೆದಿರುವುದೂ, ಜಾನಕೀವಲ್ಲಭನಾದ ರಾಮನು ಲಿಂಗಪ್ರತಿಷ್ಠೆ ಮಾಡಿರುವುದೂ. ಯಾದವರೊಡೆಯನು ಹರನನ್ನಾರಾಧಿಸಿ ಪುತ್ರನನ್ನು ಪಡೆದು ಅವನಿಗೆ ಸಾಂಬನೆಂಬ ನಾಮವಿಟ್ಟಿರುವುದೂ, ದಿಗದ್ಗುರುಗಳಾದ ಶ್ರೀಶಂಕರ ಭಗವತ್ಪಾದರು ಚಂದ್ರಮೌಳೀಶ್ವರನನ್ನು ಪ್ರಧಾನದೈವವೆಂದು ಭಾವಿಸಿ ಆ ದೇವನ ಹೆಸರನ್ನು ಪಡೆದಿರುವುದೂ ನೋಡಿದರೆ ನಿಶ್ಚಯವೆಂದು ನಂಬಬಹುದಾಗಿದೆ.

ಹರಿಯು ಸಹಸ್ರಕಮಲಗಳನ್ನು ತೆಗೆದುಕೊಂಡು ಶಿವನಲ್ಲಿಗೆ ಹೋದಾಗ ಶಂಕರನು ಇವನ ಭಕುತಿಯನ್ನು ಪರಿಕಿಸಲು ಏಕ ಪುಷ್ಪವನ್ನು ಅದೃಶ್ಯಮಾಡಿದಂತೆಯೂ ಹರಿಯು ಸಂಕಲ್ಪಭಗ್ನನಾಗಿ ಅದನ್ನು ನೆರವೇರಿಸಲು ತನ್ನ ಕಮಲನೇತ್ರವನ್ನು ಅರ್ಪಿಸಿ, ಹರನೊಲುಮೆಯನ್ನು ಪಡೆದಂತೆಯೂ ಪುರಾಣವುಂಟಷ್ಟೆ. ಹರಪ್ರೀತಿಗೆ ಪಾತ್ರನಾದ ಹರಿಯು ಪ್ರಥಮಭಕ್ತನಾದರೂ ತನ್ನ ಲಾಂಛನವನ್ನು ಧರಿಸುವಂತೆ ಹರನೇಕೆ ವಿಧಿಸಲಿಲ್ಲ? ಹಾಗೆ ಧರಿಸುವುದು ಶಂಕರನಿಗೆ ಅಭಿಮತವಿರಲಿಲ್ಲವೆಂದು ತೋರುವುದಿಲ್ಲವೆ? ಶಂಕರನಿಗಿಂತಲೂ ಆತನ ಭಕ್ತರು ಅಧಿಕರೆನ್ನುವ ತಾವುಗಳು ಹರಿಯನ್ನು ಏಕೆ ಪೂಜಿಸಬಾರದು? ಹರಿಯು ಹರನ ಪ್ರಥಮಭಕ್ತನಾಗಿದ್ದರೂ ತಮ್ಮ ಮತೀಯರು ಅವನನ್ನು ಪೂಜಿಸದೆ ಇರುವುದರಿಂದ ಅವನು ಹರನ ಭಕುತನಲ್ಲವೆಂದೂ, ಭಕ್ತನೇ ದೈವವೆನ್ನುವ ತಮ್ಮಗಳ ನಿಯಮವು ತಪ್ಪಾದುದೆಂದೂ ತೋರುವುದು. ಈ ನನ್ನ ಸಂಶಯವನ್ನು ನಿವೃತ್ತಿಗೊಳಿಸುವ ಮಹನೀಯರನ್ನು ವಂದಿಸುವೆನು.

ಎಸ್. ನಾರಣಪ್ಪ.
ಹೆಡ್ಮಾಸ್ಟರು, ಸೀತಕಲ್ಲು.

ಹಾಸನದಲ್ಲಿರುವ ಮ॥ ಸಾಹುಕಾರ್ ಸೀಳಿನ ಮಲ್ಲಶೆಟ್ಟರವರ ಪೌತ್ರರಾದ ಮ॥ ಶ್ರೀಕಂಠಪ್ಪನವರ ಸಹೋದರಿಯಾದ ನಂಜಮ್ಮನನ್ನು ಹೊಳೆನರಸೀಪುರದಲ್ಲಿರುವ ಮ॥ ಸೋಮಹಳ್ಳಿ ಮಲ್ಲಪ್ಪನವರ ಪುತ್ರರಾದ ಮ॥ ರುದ್ರಪ್ಪನವರಿಗೆ ಕೊಟ್ಟು ವಿವಾಹಮುಹೂರ್ತವು ಕಳೆದ ಏಪ್ರಿಲ್ ತಾ॥ ೨೯ ನೇ ಸೋಮವಾರ ಅತಿ ವಿಜೃಂಭಣೆಯಿಂದ ಹಾಸನದಲ್ಲಿ ನಡೆಸಲ್ಪಟ್ಟಿತು. ಈ ಮುಹೂರ್ತ ಸಮಾರಂಭಕ್ಕಾಗಿ ಇವರ ಬಂಧುಮಿತ್ರರು ಸೇರಿದ್ದರು. ಆ ದಿವಸ ಮುಹೂರ್ತವಾದೊಡನೆಯೇ ದಾವಣಗೆರೆಯಿಂದ ಬಂದಿದ್ದ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ರಿಟೈರ್ಡ್ ಹೆಡ್ಮಾಸ್ಟರ್ ಮ॥ ಗುರುಶಾಂತಯ್ಯನವರು ಸಮಸ್ತ ಸಭಿಕರನ್ನು ಕುರಿತು ವೀರಶೈವ ಮತಾಭಿವೃದ್ಧಿಯಲ್ಲಿ ತಮಗೆ ತೋಚಿದಷ್ಟು ವಿಷಯಗಳನ್ನು ಸಂಗ್ರಹಿಸಿ, ಸರ್ವರಿಗೂ ವಿದಿತವಾಗುವಂತೆ ಉಪನ್ಯಾಸಮಾಡಿ ಆನಂದಗೊಳಿಸಿದ್ದಲ್ಲದೆ, ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸರ್ವರೂ ತಂತಮ್ಮ ಶಕ್ತ್ಯನುಸಾರ ದ್ರವ್ಯಸಹಾಯಮಾಡಿ ಕೀರ್ತಿಭಾಗಗಳಾಗಬೇಕೆಂದು ತಿಳಿಸಿದರು. ಈ ವಿಷಯವನ್ನು ಸರ್ವರೂ ಅನುಮೋದಿಸಿದರಲ್ಲದೆ ಮ॥ ಸಾಹುಕಾರ್ ಶ್ರೀಕಂಠಪ್ಪನವರು ೨೫ ರೂ. ಗಳನ್ನೂ, ಮ॥ ಹೊಳೆನರಸೀಪುರದ ಸೋಮಹಳ್ಳಿ ಬಸಪ್ಪನವರು ೧೦ ರೂ. ಗಳನ್ನೂ ಅಂತು ೩೫ ರೂ. ಗಳನ್ನು ಫಂಡಿಗೆ ಸಮರ್ಪಿಸಿದರು. ಈ ಮೊಬಲಗು ಫಂಡಿನ ಸೆಕ್ರೆಟರಿಯವರಿಗೆ ರವಾನಿಸಲು, ಮ॥ ಆಲೂರು ಸೀಳಿನ ನಂಜುಂಡಪ್ಪನವರ ವಶಕ್ಕೆ ಕೊಡಲ್ಪಟ್ಟಿತು. ಈ ವಿಷಯವು ವೀರಶೈವ ಬಾಂಧವರಿಗೆ ಪೂರ್ಣ ಯಶಸ್ಸನ್ನುಂಟುಮಾಡತಕ್ಕದೆಂಬುದರಲ್ಲಿ ನಿಸ್ಸಂದೇಹವಾಗಿದೆ.

ಪ್ರತ್ಯಕ್ಷದರ್ಶಿ.

ಭಿಕ್ಷಾಟನ.

ನಮ್ಮ ದೇಶದ ಎಷ್ಟೋಮಂದಿ ಜನರು ಈ ವೃತ್ತಿಯಲ್ಲಿರುವರು. ಆದರೆ ಇದು ಎಂತಹದು? ಇದನ್ನು ಯಾರು ಮಾಡಬೇಕು? ಎಂಬುದನ್ನು ವಿಚಾರಮಾಡದೆ ಪ್ರಪಂಚದ ಪ್ರತಿಯೊಂದು ಜನಾಂಗದವರೂ ಇದನ್ನು ಕೈಕೊಂಡಿರುವರು. ಅದರಲ್ಲೂ ನಮ್ಮ ದೇಶದಲ್ಲಿ ಈವೃತ್ತಿಯ ಜನರಿರುವಷ್ಟು ಮತ್ತೆಲ್ಲಿಯೂ ಇರಲಾರರು. ಆದುದರಿಂದಲೇ ಈ ಭಾರತಭೂಮಿಯು ಇಷ್ಟು ದರಿದ್ರಾವಸ್ಥೆಗೆ ಬರಲು ಕಾರಣವಾಯಿತು. ದೃಢಕಾಯರಾಗಿದ್ದು, ಸಾಕಷ್ಟು ಶಕ್ತಿ ಸಹಾಯಗಳಿದ್ದರೂ ಯಾವ ಕೆಲಸವನ್ನೂ ಮಾಡದೆ ಈ ಯಾಚನಾವೃತ್ತಿಯನ್ನವಲಂಬಿಸಿರುವುದು ನೋಡಿದರೆ, ತುಂಬಾ ವ್ಯಸನವಾಗುತ್ತದೆ. ಅದಲ್ಲದೆ ಕೆಲಕೆಲರು “ಇದು ನಮಗೆ ಪೂರ್ವದಿಂದಲೂ ಬಂದುದು. ನಮ್ಮ ವಂಶದವರ ಕರ್ತವ್ಯವೇ ಇದಾಗಿದೆ. ಇದಕ್ಕಾಗಿಯೇ ದೇವರು ನಮ್ಮನ್ನು ಸೃಷ್ಟಿಸಿರುವನು.” ಎಂದು ಮೊದಲಾದ ಶೋಚನೀಯವಾದ ಮಾತುಗಳನ್ನಾಡುತ್ತಿರುವರು. ಅಂದಮೇಲೆ ಇವರೆಂತಹ ಹುಚ್ಚರಿರಬಹುದೋ ವಾಚಕರೇ ಊಹಿಸಿರಿ.

ಇದರಲ್ಲಿ ತಮ್ಮ ಹೊಟ್ಟೆಯ ಪಾಡಿಗಾಗಿ ಮಾಡುವುದೋ ಇಲ್ಲವೇ ಬಂದುದನ್ನೆಲ್ಲಾ ಕೆಟ್ಟ ಕೆಲಸಕ್ಕಾಗಿ ಉಪಯೋಗಿಸುವುದೋ ಅಥವಾ ಪರಹಿತಕಾರ್ಯಕ್ಕಾಗಿ ಮಾಡುವದೋ ಇದು ಮೊದಲಾಗಿ ಅನೇಕ ತೆರನಾಗಿರುವುದು. ಅದಾವುದನ್ನೂ ವಿಚಾರಮಾಡದೆ ದಾತೃಗಳು ಕೊಡುತ್ತಿರುವರು. ಮತಪ್ರೇಳ್ಗೆ ವಿದ್ಯಾಸಹಾಯ ಮೊದಲಾದ ಸತ್ಕಾರ್ಯಗಳಿಗೂ ಅಥವಾ ಮುಪ್ಪು, ಅಂಗಹೀನತೆ, ರೋಗ ಮುಂತಾದವುಗಳಿಂದ ಅಶಕ್ತರಾಗಿರುವವರಿಗೆ ಯಾವ ದುಡಿತವೂ ಇಲ್ಲದೆ ಆಹಾರದಾನವನ್ನೂ, ದ್ರವ್ಯಸಹಾಯವನ್ನೂ ಮಾಡುವುದಕ್ಕೆ ಯಾರ ಆಕ್ಷೇಪಣೆಯೂ ಇಲ್ಲ. ಮತ್ತು ಅಂಥ ದಾನವು ಭಗವಂತನಿಗೆ ಪ್ರೀತಿಯೇ ಹೊರತು ಮತ್ತಾವುದೂ ಆಗಲಾರದು. ಭಿಕ್ಷುಕರಲ್ಲಿ ಕೆಲವರು ಭಿಕ್ಷಾರ್ಥಿಗಳಾಗಿ ನಟಿಸಿ, ಮನೆವಾರ್ತೆಗಳನ್ನು ತಿಳಿದುಕೊಂಡು ರಾತ್ರಿಯಕಾಲದಲ್ಲಿ ಕನ್ನವನ್ನಿಕ್ಕಿ ಇದ್ದುದನ್ನೆಲ್ಲಾ ಅಪಹರಿಸಿಕೊಂಡು ಹೋಗುವುದೂ ಉಂಟು. ಮತ್ತೆ ಕೆಲರು ಭಿಕ್ಷೆಯಂ ಕೊಡದಿದ್ದರೆ, ಜೀವಹಿಂಸೆ ಮಾಡಿಕೊಳ್ಳುವಿಕೆ, ಅಥವಾ ಶಪಿಸುವಿಕೆ ಮುಂತಾದುದನ್ನೂ ಮಾಡುವರು. ಇಂಥವರಿಂದ ಜನಗಳಿಗೆ ತೊಂದರೆಯೇ ಹೊರತು ಮತ್ತೆ ಬೇರೆಯಿಲ್ಲ. ಇವೆಲ್ಲಕ್ಕೂ ವಿದ್ಯಾವಿಹೀನತ್ವವೂ, ನಿರುದ್ಯೋಗಿತ್ವವೂ, ಸೋಂಬೇರಿತನವೂ ಕಾರಣವಾಗಿದೆ. ಅದುಕಾರಣ ಪ್ರತಿಯೊಬ್ಬರೂ ವಿದ್ಯಾವಂತರಾಗಿ ತಮ್ಮ ಬುದ್ಧಿಶಕ್ತಿಗಳಿಗನುಗುಣವಾದ ಕೆಲಸಗಳನ್ನು ಮಾಡಿಕೊಳ್ಳುತ್ತಾ ಹೋದಲ್ಲಿ ತಾವೂ ಸುಖಪಡುವರು; ದೇಶಕ್ಕೂ ಸುಖವಾಗುವುದು.

ಪುರುಷನೇ ಆಗಲಿ, ಸ್ತ್ರೀಯೇ ಆಗಲಿ ವಿದ್ಯಾವಂತರಲ್ಲದಿದ್ದರೂ, ತಮ್ಮ ಶಕ್ತ್ಯನುಸಾರ ಕಷ್ಟಪಟ್ಟರೆ ಅದಕ್ಕೆ ತಕ್ಕ ಫಲವನ್ನು ಅವರು ಹೊಂದೇ ಹೊಂದುತ್ತಿರುವರು. ಯಾವುದೂ ಇಲ್ಲದಿದ್ದಲ್ಲಿ ಕೂಲಿಗೆಲಸವಾದರೂ ಇದ್ದೇ ಇದೆ. ಅನೇಕ ಸ್ಥಳಗಳಲ್ಲಿ ಕೂಲಿಯವರು ಸಿಕ್ಕದೆ ತೊಂದರೆಯುಂಟಾಗುವುದಕ್ಕೆ ಎಷ್ಟೋ ಜನರು ಹೇಯವಾದ ಈ ಯಾಚನಾವೃತ್ತಿಯನ್ನವಲಂಬಿಸಿರುವುದೇ ಕಾರಣವಲ್ಲವೆ? ಆದುದರಿಂದ ಈ ದೇಶದ ಜನರು ಈ ಹೀನವೃತ್ತಿಯನ್ನು ಬಿಟ್ಟು ಕಷ್ಟಪಟ್ಟು ದುಡಿಯುವವರಾಗಲೆಂದು ಕೋರುವೆವು.

ಯಾವ ದೇಶವೇ ಆಗಲಿ, ಯಾವ ಜನಾಂಗವೇ ಆಗಲಿ, ಏಳ್ಗೆಯನ್ನೈದಬೇಕಾದರೆ, ಮೊದಲು ಈ ದುಷ್ಪದ್ಧತಿಯನ್ನು ತಪ್ಪಿಸುವವರಾಗಬೇಕು. ಧರ್ಮಿಷ್ಠರು ಪಾತ್ರಾಪಾತ್ರವರಿತು ದಾನಮಾಡಬೇಕು. ಆದರೆ ಬಹು ದಿನದಿಂದಲೂ ರೂಢಿಗೆ ಬಂದಿರುವ ಈ ದುರ್ವೃತ್ತಿಯನ್ನು ತಪ್ಪಿಸಲು ಪ್ರಜಾಕೋಟಿಗೆ ಸಾಧ್ಯವಲ್ಲ. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿರುವಂತೆ ಇಲ್ಲಿಯೂ ಸರ್ಕಾರದವರು ಯಾವುದಾದರೊಂದು ವಿಧಿಯನ್ನು ಕಲ್ಪಿಸದ ಹೊರತು ಕಡಿಮೆಯಾಗಲಾರದು. ಇಲ್ಲವೆ ಹಾಗೆಯೇ ಬಿಟ್ಟಲ್ಲಿ ದಿನಕ್ರಮೇಣ ಇನ್ನೂ ಹೆಚ್ಚಾಗಿ ನಮ್ಮ ದೇಶವು ಮತ್ತಷ್ಟು ಕ್ಷೀಣಗತಿಗೆ ಬರುವಂತಾಗುವುದು.

ದೇಶಾಭಿಮಾನಿ.

ಅಬ್ಬಿಗೇರಿ.

ಈ ಗ್ರಾಮದಲ್ಲಿ ವೀರಶೈವ ಮತೋದ್ಧಾರಕರಾದ ಬಸವೇಶ್ವರರ ಜನನ ದಿವಸವಾದ ವೈಶಾಖ ಶು॥ ೩ ದಿವಸ ಶ್ರೀಮಚ್ಛಿವಯೋಗಿ ಮಲ್ಲಣಾರ್ಯ ಬಾಗಲಕೋಟೆ ಈ ಮಹಾಪ್ರಭುಗಳಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತ ಶಾಲೆಯಲ್ಲಿ ಸಭೆಯು ಕೂಡಿತ್ತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ॥ರಾ॥ ಪಂಡಿತರಾದ ರೇವಣಸಿದ್ಧಶಾಸ್ತ್ರಿಗಳು ಪಡೇಕನೂರ ಇವರು ವಹಿಸಿದ್ದರು. ಸಭೆಯಲ್ಲಿ ವೀರಶೈವ ಮತದವರೂ, ಬೇರೆ ಮತದವರೂ ಕೂಡಿದ್ದರು. ಈ ಸಭೆಯಲ್ಲಿ ಸಂಸ್ಕೃತ ಶಾಲೆಯ ವಿದ್ಯಾರ್ಥಿಗಳು ವೀರಶೈವ ಮತದ ವಿಷಯವಾಗಿ ಸಂಸ್ಕೃತಭಾಷೆಯಿಂದ ಬಹು ಸರಸವಾಗಿ ಭಾಷಣವನ್ನು ಮಾಡಿದರು. ಮ॥ರಾ॥ ರೇವಣಸಿದ್ಧ ಶಾಸ್ತ್ರಿಗಳು ಬಸವೇಶ್ವರರ ಜನನ ಮತ್ತು ಅವರು ಮಾಡಿದಂಥ ಅಮಾನುಷಕೃತ್ಯ ವೀರಶೈವ ಮತವನ್ನು ಉದ್ಧಾರಮಾಡಿದುದು ಮುಂತಾದವುಗಳನ್ನು ಹೇಳಿ ಯಾವತ್ತು ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ತದನಂತರದಲ್ಲಿ ಸಭೆಯಲ್ಲಿ ನೆರೆದಿದ್ದ ಜನರು ಈ ಶಾಲೆಯಲ್ಲಿ ವಾಚನಾಲಯವು ಇರುವುದು ಅವಶ್ಯವೆಂದು ಸೂಚಿಸಿದರು. ಮತ್ತು ವಾಚನಾಲಯಕ್ಕೆ ವರ್ಗಣಿಯನ್ನು ಕೊಡಲಿಕ್ಕೆ ಒಪ್ಪಿಕೊಂಡರು. ಆ ವೇಳೆ ರಾ॥ರಾ॥ ಅಯ್ಯನಗೌಡ ಮಾಸ್ತರ ಇವರು ವಾಚನಾಲಯವೆಂದರೇನು? ಅದರಿಂದಾಗತಕ್ಕ ಲಾಭಗಳಾವುವು? ಎಂಬುದನ್ನು ಯಾವತ್ತು ಜನರಿಗೆ ಚೆನ್ನಾಗಿ ಮನನವಾಗುವಂತೆ ಹೇಳಿದರು. ರಾ॥ರಾ॥ ಮಲ್ಲಪ್ಪಾ ಕರಿಗುದ್ದಿ ಇವರಾದರೂ ವಾಚನಾಲಯದ ವಿಷಯವಾಗಿ ಆಂಗ್ಲಭಾಷೆಯಲ್ಲಿ ಅತ್ಯುತ್ತಮವಾಗಿ ಭಾಷಣವನ್ನು ಮಾಡಿದರು. ರಾ॥ರಾ॥ ಬಸನಗೌಡ ಪಾಟೀಲ ಇವರು ಕನ್ನಡಭಾಷೆಯಿಂದಲೂ, ರಾ॥ರಾ॥ ದೊಡ್ಡಪ್ಪಾ ಹೂಲಿಗೇರಿ ಇಂಜನಿಯರ ಸಾಹೇಬ ಇವರು ಮಹಾರಾಷ್ಟ್ರಭಾಷೆಯಿಂದಲೂ ಅತ್ಯುತ್ತಮವಾಗಿ ಭಾಷಣವನ್ನು ಮಾಡಿ ಯಾವತ್ತು ಸಭಿಕರ ಮನಸ್ಸನ್ನು ವಿಕಸನಗೊಳಿಸಿದರು.

ವರ್ಗಣಿಯನ್ನು ಕೊಡಲೊಪ್ಪಿದವರ ಹೆಸರುಗಳು:— ವೇ॥ ಪಟ್ಟದದೇವರು ಅರಳೆಲಿ ಮಠ, ವೇ॥ ಪಟ್ಟದದೇವರು ಹಿರೇಮಠ, ರಾ॥ ರಾ॥ಗಳಾದ ರಾಚಯ್ಯಾ ಸಾಲಿಮಠ, ಚನ್ನಬಸಯ್ಯಾ ಬಳಗಾನೂರಮಠ, ಪಾಠಶಾಲೆಯ ವಿದ್ಯಾರ್ಥಿಗಳು;— ಪರ್ವತಗೌಡ ಪಾಟೀಲ, ಬಸನಗೌಡ ಚುಳ್ಕಿ, ಗಂಗನಗೌಡ ಬೂದಿಹಾಳ, ಬಸಲಿಂಗಪ್ಪ ಬಸವರಡ್ಡೇರ, ತಿಪ್ಪಣ್ಣ ಕಿರೋಳಿ, ಸೋಮರಡ್ಡೆಪ್ಪ ಕಿರೋಳಿ, ಮಲ್ಲಿಕಾರ್ಜುನಗೌಡ ಪಾಟೀಲ, ವೀರನಗೌಡ ಪಾಟೀಲ, ಅಡಿವಪ್ಪ ಗುಗ್ಗರಿ, ವೀರನಗೌಡ ಚೆನ್ನಪ್ಪಗೌಡರ, ದೊಡ್ಡಪ್ಪ ಇಂಜನಿಯರ, ಗವಿಯಪ್ಪ ವೀರಾಪುರ, ಅಯ್ಯನಗೌಡ ಮಾಸ್ತರ, ಕರಿಬಸಪ್ಪ ಬಾಗೂರ. ಹೊನ್ನಪ್ಪ ಮಾಸ್ತರ ಇವರೇ ಮೊದಲಾದ ಯಾವತ್ತು ಜನರು ಆ ಹೊತ್ತಿನ ದಿವಸ ೪೦೦ ರೂಪಾಯಿಗಳನ್ನು ವಾಚನಾಲಯದ ಸಹಾಯ್ಯಾರ್ಥವಾಗಿ ಕೊಡುತ್ತೇವೆಂದು ವಾಗ್ದಾನಮಾಡಿದರು. ತದನಂತರದಲ್ಲಿ ವೀರಶೈವ ಕುಲದೀಪ ಬಳ್ಳಾರಿಯ ಸಕ್ಕರೆ ಕರಡೆಪ್ಪನವರು ಕೈ॥ ವೀರಸಂಗಪ್ಪನವರು ಕೈ॥ ಶಿರಸಂಗಿ ಯಜಮಾನರು ಕೈ॥ ವಾರದ ಅಪ್ಪಾ ಸಾಹೇಬರು ಇವರ ಹೆಸರಲ್ಲಿ ಜಯಘೋಷವನ್ನು ಮಾಡಿ ಪುಷ್ಪತಾಂಬೂಲಾದಿಗಳನ್ನು ಹಂಚಿ ಸಭೆಯು ವಿಸರ್ಜಿಸಲ್ಪಟ್ಟಿತು. ಸದರಿ ಪಾಠಶಾಲೆಯಲ್ಲಿ ಇದೇ ವೈಶಾಖ ಬಹುಳ ೨ ದಿವಸ ಸಭೆಯು ಆಗಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಈ ವಾಚನಾಲಯವು ಚಿರಕಾಲ ಬಾಳಬೇಕೆಂದು ರಾ॥ರಾ॥ ಪರ್ವತಗೌಡ ಪಾಟೀಲ ರಾ॥ರಾ॥ ಬಸನಗೌಡ ಚುಳ್ಕಿ ರಾ॥ರಾ॥ ಗಂಗನಗೌಡ ಬೂದಿಹಾಳ ರಾ॥ರಾ॥ ಬಸಲಿಂಗಪ್ಪ ಬಸವರಡ್ಡೇರ ರಾ॥ರಾ॥ ತಿಪ್ಪಣ್ಣಾ ಕಿರೋಳಿ ಈ ೫ ಜನರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತದೆ. ಇವರು ೩ ತಿಂಗಳಿಗೊಂದಾವೃತ್ತಿ ವಾಚನಾಲಯದಲ್ಲಿದ್ದಂತಹ ಯಾವತ್ತು ಗ್ರಂಥಗಳ ತಪಾಸನ್ನು ಮಾಡಬೇಕು. ಮತ್ತು ವಾಚನಾಲಯಕ್ಕೆ ಬೇಕಾದ ಗ್ರಂಥಗಳನ್ನು ತರಿಸಿಕೊಡಬೇಕು. ವಾಚನಾಲಯದ ವ್ಯವಸ್ಥೆಯ ಕಡೆಗೆ ವಿಶೇಷ ಲಕ್ಷ್ಯಗೊಡಬೇಕು. ಓದಲಿಕ್ಕೆ ಬಂದಂತಹ ಯಾವತ್ತು ಜನರಿಗೆ ಪುಸ್ತಕಗಳನ್ನು ಕೊಡುವುದು ಮತ್ತು ತಿರುಗಿ ತೆಗೆದುಕೊಳ್ಳುವುದು ಈ ವ್ಯವಸ್ಥೆಯನ್ನು ಪಾಠಶಾಲೆಯ ವಿದ್ಯಾರ್ಥಿಗಳಾದ ಘಟಿವಾಳಯ್ಯಾ ಮತ್ತು ಮುದುಕಯ್ಯಾ ಇವರು ಮಾಡತಕ್ಕದ್ದೆಂದು ನಿಯಮಿಸಿರುತ್ತದೆ. ಈ ವಾಚನಾಲಯದಲ್ಲಿ ವೀರಶೈವ ಮತಾಧಾರಕ ಗ್ರಂಥಗಳು ಹೆಚ್ಚುಯಿರಬೇಕು. ಮತ್ತು ಎಲ್ಲತರದ ಭಾಷೆಯ ಗ್ರಂಥಗಳೂ ಇರಬೇಕು. ಎಂದು ಯಾವತ್ತು ಸದ್ಗೃಹಸ್ಥರು ನಿರ್ಣಯವನ್ನು ಮಾಡಿರುತ್ತಾರೆ. ಈ ಪ್ರಕಾರ ಯಾವತ್ತು ವ್ಯವಸ್ಥೆಯನ್ನು ಮಾಡಿ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಮತ್ತು ವೀರಶೈವ ಮತಸ್ಥಾಪಕರ ಹೆಸರಿನಿಂದಲೂ ಅದಕ್ಕೆ ಉತ್ತೇಜನಕೊಟ್ಟಂಥ ಮಹಾಪುರುಷರ ಹೆಸರಿನಿಂದಲೂ ಜಯಘೋಷವನ್ನು ಮಾಡಿ ಸಭೆಯು ವಿಸರ್ಜನೆಮಾಡಲ್ಪಟ್ಟಿತು.

ಒರ್ವ ವಿದ್ಯಾಭಿಮಾನಿ.

---

೭ ನೆ ಶ್ರೀಮದ್ವೀರಶೈವ ಮಹಾಸಭೆಯು, ಬೆಳಗಾಂವ.

ಈ ಸಭೆಯು ಬೆಳಗಾಂವಿಯಲ್ಲಿ ಕಳೆದ ದಿಸಂಬರ ತಿಂಗಳಿನಲ್ಲಿ ಆದಾಗ್ಯೂ ಕೆಲವು ಅನಿವಾರ್ಯ ಅಡಚಣೆಗಳ ಮೂಲಕ ಈ ಹೊತ್ತಿನವರೆಗೂ ಜಮಾಖರ್ಚಿನಪಟ್ಟಿ ಮತ್ತು ರಿಪೋರ್ಟು ತಯಾರಾಗದುದಕ್ಕೆ ಬಲು ವಿಷಾದವಾಗಿದೆ. ಆದಾಗ್ಯೂ ಕೆಲವು ಮಹನೀಯರು ಇನ್ನುವರೆಗೂ ತಮ್ಮ ಭಾಷಣಗಳನ್ನು ಕಳಿಸದೇ ಇರುವುದರಿಂದ ರಿಪೋರ್ಟು ಯಾವಾಗ್ಗೆ ಸಿದ್ಧವಾಗುವುದೋ ಎಂದು ಚಿಂತೆಯಾಗಿದೆ. ಇನ್ನಾದರೂ ದಯಮಾಡಿ ತಾವು ಸಭೆಯಲ್ಲಿ ಮಾಡಿದ ಭಾಷಣವನ್ನು ಬರೆದು ತೀವ್ರವಾಗಿ ಕಳಿಸಿದಲ್ಲಿ ನಮ್ಮಮೇಲೆ ಒಂದು ಗುದ್ದಷ್ಟು ಉಪಕಾರಮಾಡಿದಂತಾಗುವುದು.

ಸಮಗ್ರವಾದ ಜಮಾಖರ್ಚಿನ ಪಟ್ಟಿಯು ರಿಪೋರ್ಟಿನಲ್ಲಿ ಬರುವುದರಿಂದ ಒಟ್ಟು ಆದಾಯವ್ಯಯದ ಪಟ್ಟಿಯನ್ನು ಇದರಡಿಯಲ್ಲಿ ಬರೆದು ಪ್ರಸಿದ್ಧಮಾಡಿರುತ್ತದೆ. ನಮ್ಮ ಸಭೆಯ ರಿಪೋರ್ಟನ್ನು ಜನವರಿ ತಿಂಗಳಲ್ಲಿಯೇ ತಯಾರಿಸಿ ಮುದ್ರಿಸಿ ಪ್ರಸಿದ್ಧಮಾಡತಕ್ಕ ಬಗ್ಗೆ ನಮ್ಮ ಉತ್ಕಟೇಚ್ಛೆಯಿದ್ದಾಗ್ಯೂ ನಮ್ಮ ಬಾಂಧವರು ಅದಕ್ಕೆ ವಿಮುಖರಾಗಿ ತಮ್ಮ ಭಾಷಣಗಳನ್ನು ಕಳಿಸಲೊಲ್ಲರು. ಇದು ದುರ್ದೈವವೇ ಸರಿ.

ಅದರಂತೆ ಮಹಾಸಭೆಯು ನಿರಂತರ ನಡೆಯುವುದಕ್ಕಾಗಿ ಗೊತ್ತಾದ ಫಂಡಿನಬಗ್ಗೆ ಕೆಳಗೆ ಬರೆದ ಸದ್ಗೃಹಸ್ಥರ ಕಡೆಗೆ ಪಾವತಿಯ ಪುಸ್ತಕಗಳನ್ನು ಶ್ರೀಮುರ್ಘ ನಿರಂಜನ ಜಾಗನೂರು ಶ್ರೀಗಳವರ ಆಜ್ಞಾನುಸಾರವಾಗಿ ಕಳುಹಿಸಿರುತ್ತದೆ. ಆ ಜನರ ಕಡೆಗೆ ಸರ್ವರೂ ಹಣವನ್ನು ಕೊಟ್ಟು, ಪಾವತಿಯನ್ನು ತೆಗೆದುಕೊಳ್ಳಬೇಕು ಮುಂದೆ ಈ ಹಣವನ್ನು ಕೊಟ್ಟವರೇ ಸ್ಟ್ಯಾಂಡಿಂಗ್ ಮತ್ತು ಸೆಲೆಕ್ಟ್ ಕಮಿಟಿಗಳ ಸಭಾಸದರಾಗತಕ್ಕದ್ದು. ಅವರು ಹಣ ಕೊಟ್ಟಕೂಡಲೆ ಯಾವತ್ತು ರಕಮು ರಾ॥ ಬಾ॥ ಶಾಂತವೀರಪ್ಪ ಅಂಣಾ ಮೆಣಸಿನಕಾಯಿ ಚೇರ್‌ಮನ್ ಸ್ಟ್ಯಾಂಡಿಂಗ್ ಕಮಿಟಿ ಧಾರ್ವಾಡ ಇವರ ಕಡೆಗೆ ಒಟ್ಟುಗೂಡಿ ಸೆಲೆಕ್ಟ್ ಕಮಿಟಿಯವರ ಸಮ್ಮತಿಯ ಪ್ರಕಾರ ಆ ಹಣದ ವ್ಯವಸ್ಥೆಯು ಪ್ರಾಮಿಸರಿನೋಟ್ ಅಥವಾ ಡಿಬೆಂಚರ್ ಅಥವಾ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟು ಬಂದ ಬಡ್ಡಿಯಲ್ಲಿ ಅರ್ಧ ಹಣವನ್ನು ಖಾಯಿಲವಾರ ಖರ್ಚಿಗಾಗಿ ಇಟ್ಟುಕೊಂಡು, ಅರ್ಧವನ್ನು ಭಾಗಸ್ಥರಿಗೆ ಹಂಚಿಕೊಡುವ ಏರ್ಪಾಡು ಮಾಡುವುದು ಸೆಲೆಕ್ಟ್ ಕಮಿಟಿಯ ಕಡೆಗೆ ಇದೆ. ಅದರಂತೆ ಘನತೆಯನ್ನೊಂದಿದ ಚಕ್ರವರ್ತಿ ೫ ನೇ ಜಾರ್ಜರವರು ಮಹಾರಾಜ್ಞೀ ಸಮೇತರಾಗಿ ಹಿಂದೂಸ್ಥಾನಕ್ಕೆ ಬಂದು ತಮ್ಮ ರಾಜ್ಯಾರೋಹಣದ ಸುವಾರ್ತೆಯನ್ನು ನಮ್ಮೆಲ್ಲ ಪ್ರಜೆಗಳಿಗೂ ತಿಳಿಸಿದ ಗುರ್ತಿಗಾಗಿ ನಾವು ವೀರಶೈವರು ಬೆಳಗಾವಿಯಲ್ಲಿ ಅನಾಥರಿಗಾಗಿ ಒಂದು ಫಂಡನ್ನು ಏರ್ಪಡಿಸಿದ್ದು ಅದಕ್ಕೆ ಕೆಳಗೆ ಬರೆದ ಗೃಹಸ್ಥರು ವರ್ಗಣಿಯನ್ನು ಕೊಟ್ಟಿರುವರೆಂದು ತಿಳುಹಿಸಲಿಕ್ಕೆ ನನಗೆ ತುಂಬಾ ಆನಂದವಾಗುತ್ತದೆ. ಆ ಹಣವನ್ನು ಕಮಿಟಿಯವರ ಅಪ್ಪಣೆ ಮೇರೆ ನಾನು ಈಸಿಕೊಂಡು ಗೋಕಾಕ ಮಿಲ್ಸ್ ಬ್ಯಾಂಕಿನಲ್ಲಿ ಸದ್ಯಃ ಬಡ್ಡಿಗೆ ಇಟ್ಟು ಹಣವನ್ನು ಕೊಟ್ಟ ಜನರಿಗೆ ಪಾವತಿಗಳನ್ನು ಕಳುಹಿಸಿರುವೆನು. ಅದು ಸಾಕಾದಷ್ಟು ಕೂಡಿದ ಕೂಡಲೆ ಕಮಿಟಿಯವರ ಮುಖಾಂತರ ಬೆಳಗಾಂವ ಜಿಲ್ಹೆಯ ಕಲೆಕ್ಟರ ಸಾ॥ ಬಾ॥ ರವರ ಸ್ವಾಧೀನಮಾಡಲ್ಪಡುವುದು. ಉಳಿದ ವಿಷಯಗಳ ಪ್ರತಿಪಾದನೆಯು ಮಾಡಿಕೆಯಂತೆ ರಿಪೋರ್ಟಿನಲ್ಲಿ ಬಂದೇ ಬರುವುದು.

ಬೆಳಗಾಂವ. }
೧೯—೪—೧೯೧೨.

ಶಿವಮೂರ್ತಿಸ್ವಾಮಿ ಕಣಬರಗಿ ಮಠ,
ಚೀಫಸೆಕ್ರೆಟರಿ. ೭ ನೆ ಶ್ರೀಮದ್ವೀರಶೈವ ಮಹಾಸಭೆ.

೭ ನೆಯ ಶ್ರೀಮದ್ವೀರಶೈವ ಮಹಾಸಭೆಗಾಗಿ ಬೆಳಗಾಂವಿಯಲ್ಲಿ ಆದ ಜಮಾಖರ್ಚಿನ ಪಟ್ಟಿ.

ಜಮಾ	ರೂ.	ಆ.	ಪೈ.	ಖರ್ಚು	ರೂ.	ಆ.	ಪೈ.
ಪ್ರತಿನಿಧಿಗಳಿಂದ	2295	0	0	ಮಂಟಪಗಳ ಬಾಬತು	2697	0	9
ಪ್ರೇಕ್ಷಕರಿಂದ	656	0	0	ಮೈಸೂರ ಸ್ಟಾರಪ್ರಕಾಶಕರಿಗೆ ...	202	0	0
ತಂಬೂ ಮಾರಿದ ಬಾಬತು ...	520	0	0	ಗಾಡಿ, ದಮಣಿ, ರೈಲುಖರ್ಚು ...	819	15	0
ಅನ್ನಸಾಮಗ್ರಿಗಳಲ್ಲಿ ಉಳಿದುದನ್ನು ವಿಕ್ರಯಮಾಡಿದ ಬಾಬತು	1333	0	0	ಕಿರುಕುಳ ಪೋಸ್ಟು ತಾರು ಸ್ಟೇಶನರಿ	1274	3	3
ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರಿಂದ	3245	0	0	ಅನ್ನಖರ್ಚಿಗಾಗಿ	3056	7	0
ಒಟ್ಟು	8049	10	0	ಒಟ್ಟು	8049	10	0

ಸಭೆಯು ನಡೆದ ಕಾಲಕ್ಕೆ ಶ್ರೀ ಬಿಳ್ಳೂರ ಸ್ವಾಮಿಗಳವರು ಬೆಳಗಾಂವ ಶಹಾಪೂರದಲ್ಲಿ ಈ ಸಭೆಯ ವೆಚ್ಚಕ್ಕಾಗಿ ವರ್ಗಣಿಮಾಡಿ ಕೆಲವರ ಅಂಗಡಿಗಳಲ್ಲಿ ಎಣಿಕೆ ರಕಮು ಜಮಾ ಮಾಡಿಸಿರುವರೆಂದು ಕೇಳಿಕೆಯಲ್ಲಿ ಅದೆ. ಇದರ ಬಗ್ಗೆ ನಾನು ಶ್ರೀ ಸ್ವಾಮಿಗಳ ಸಹಾನುಭೂತಿಯ ಬಗ್ಗೆ ಋಣಿಯಾಗಿರುವೆನು. ಆದರೆ ಸದರೀ ರಕಮನ್ನು ಶ್ರೀಗಳವರು ಸಭೆಯ ವೆಚ್ಚಕ್ಕಾಗಿ ಲುಕ್ಸಾನ ಆದದ್ದಕ್ಕೆ ನನಗೆ ಕೊಡಿಸದೆ ಬೆಳಗಾಂವ ಶಹಾಪೂರದ ವೀರಶೈವರ ಬೋರ್ಡಿಂಗಿಗೆ ಆ ಹಣವನ್ನು ಕೊಡಿಸುವಂತೆ ಮಾಡಬೇಕಾಗಿ ಬೇಡಿಕೊಳ್ಳುವೆನು. ಅದರಿಂದ ನನಗೆ ಪರಮಾನಂದವಾಗುವುದಲ್ಲದೆ ಅಲ್ಲಿಯ ಬೋರ್ಡಿಂಗಿನ ವಿದ್ಯಾರ್ಥಿಗಳ ಕಲ್ಯಾಣವೂ ಆಗುವಂತಿದೆ.

ಆಡಿಟರ್ಸ್:— ೧. ದುಂಡಪ್ಪಾ ಮುನ್ನೋಳಿ, ೨. ಪರಮಶೆಟ್ಟಿ ಪಾಟೀಲ.

ಕೆಳಗೆ ಬರೆದ ಸದ್ಗೃಹಸ್ಥರ ಕಡೆಗೆ ಮಹಾಸಭೆಯ ಫಂಡನ್ನು ವಸೂಲಮಾಡುವ ಕುರಿತು ಪಾವತಿಯ ಪುಸ್ತಕಗಳನ್ನು ಕಳುಹಿಸಿರುತ್ತದೆ. ಅವರ ಕಡೆಗೆ ಮಹನೀಯರಾದ ಅಭಿಮಾನಿಗಳೆಲ್ಲರೂ ಹಣವನ್ನು ಕೊಟ್ಟು ಪಾವತಿ ತೆಗೆದುಕೊಂಡು ಸ್ವಾರ್ಥ ಮತ್ತು ಪಾರಮಾರ್ಥವನ್ನು ಸಾಧಿಸುವರೆಂದು ನಂಬುವೆನು.

		ನಂಬರು.		
೧.	ಕೊನೇರ್ಷ ಬುಕ್ಕು	೮೦೦—೮೯೯	ರಾ॥ ರಾ॥	ಶಾಂತವೀರಪ್ಪ ಅಂಣಾ ಮೆಣಸಿನಕಾಯಿ ಧಾರ್ವಾಡ.
೨.	ಷೇರ್ ಬುಕ್ಕು	೭೦೦—೭೯೯		〃
೧.	〃	೬೫೦—೬೯೯	〃	ಫಕೀರಪ್ಪ ಹಳಹಟ್ಟಿ ವಿಜಾಪೂರ.
೧.	〃	೬೦೧—೬೪೯	〃	ರುದ್ರಪ್ಪಾ ಅಂಣಾ ಗೂಗವಾಡ ಬಾಗಲಕೋಟ.
೧.	〃	೫೫೧—೬೦೦	〃	ತಮ್ಮಣ್ಣಪ್ಪಾ ಅಂಣಾ ಚಿಕ್ಕೋಡಿ ಬನಹಟ್ಟಿ.
೧.	〃	೫೦೦—೫೫೦	〃	ನೂರೊಂದಪ್ಪಾ ಅಂಣಾ ಶೆಟ್ಟಿ ಅಥಣಿ.
೧.	〃	೪೫೦—೪೯೯	〃	ಖಂಡೆಪ್ಪಾ ಅಂಣಾ ಕಾತಾದಿ ಸೊಲ್ಲಾಪುರ.
೧.	〃	೪೦೦—೪೪೯	〃	ರೇವಣ ಸಿದ್ದಪ್ಪಾ ಅಂಣಾ ಉಮರಜಿ ಸೊಲ್ಲಾಪುರ.
೧.	〃	೩೫೧—೩೯೯	〃	ಎಚ್. ಕೆ. ವೀರಬಸವಯ್ಯ ಬೆಂಗಳೂರ.
೧.	〃	೩೦೧—೩೫೦	〃	ವೈ. ವಿರೂಪಾಕ್ಷಯ್ಯ ಮೈಸೂರ.
೧.	〃	೨೫೧—೩೦೦	〃	ನಾಗಪ್ಪಾ ಅಂಣಾ ಮಾಹಾಳಂಕ ಸಂಕೇಶ್ವರ.
೧.	〃	೨೦೧—೨೫೦	〃	ಚೆನ್ನಪ್ಪಾ ಅಂಣಾ ಶೆಟ್ಟರ ದೇವಿಹೊಸೂರ.
೧.	〃	—	〃	ವೀರಪ್ಪಾ ಅಂಣಾ ಮಾನ್ವಿ ಗದಗ.
೧.	〃	—	〃	ಚೆನ್ನಪ್ಪಾ ಅಂಣಾ ಲಕಶೆಟ್ಟರ ಯಾದವಾಡ.
೧.	〃	—	〃	ಷಡಕ್ಷರಯ್ಯನವರು ತಿರುಕಪ್ಪನವರ ಮಠ ದಾವಣಗೆರೆ.
೧.	〃	—	〃	ಶ್ರೀಮಂತ ದೇಸಾಯರು ಚಚಡಿ.

ಒಂದೊಂದು ಷೇರಿನ ಬೆಲೆಯು ಹತ್ತು ರೂಪಾಯಿಗಳು. ಅಂತೂ ೧೦೦೦೦ ರೂಪಾಯಿಗಳನ್ನು ಶೇಖರಿಸಿ ಇಟ್ಟರೆ ನಿರಂತರ ಮಹಾಸಭೆಯು ನಡೆಯುವಂತೆ ಆಗುವುದು. ಕಾರಣ ಸರ್ವ ಮತಾಭಿಮಾನಿಗಳೂ ದಯಮಾಡಿ ಗಮನಿಸಬೇಕು. ಘನತೆಯನ್ನೈದಿದ ನಮ್ಮ ಪರಮಪೂಜ್ಯ ಸಾರ್ವಭೌಮ ಚಕ್ರವರ್ತಿ ಪಂಚಮ ಜಾರ್ಜರೂ ಮಹಾರಾಣಿ ಮೇರಿಯವರೂ ರಾಜ್ಯಾರೋಹಣ ನಿಮಿತ್ತವಾಗಿ ಹಿಂದೂಸ್ಥಾನಕ್ಕೆ ಬಂದಿದ್ದುದರ ಸ್ಮರಣಾರ್ಥವಾಗಿ ಬೆಳಗಾಂವಿಯ ೭ ನೆ ಶ್ರೀಮದ್ವೀರಶೈವ ಮಹಾಸಭೆಯ ಕಾಲದಲ್ಲಿ ಸ್ಥಾಪಿಸಿದ ಅನಾಥ ಫಂಡಿಗಾಗಿ ಕೊಡಿರುವ ಹಣವು —

ರಾ॥ ಬಾ॥ ರುದ್ರಗೌಡ ಚೆನ್ನವೀರಗೌಡ ಅಂಣಾ ಅರಟಾಳ ಬಿ. ಎಸ್. ಸಿ., ರೂ. ೫೦೦; ಶ್ರೀಮಂತರುಗಳಾದ ವೀರಭದ್ರಪ್ಪಾ ಗುಣಪ್ಪಾ ಸರನಾಯಿಕ ಬಾಹದ್ದೂರ ದೇಸಾಯಿ ಚಚಡಿ ರೂ. ೧೦೦; ಮಲ್ಲಪ್ಪಾ ಅಂಣಾ ಸಿಂತ್ರಿ ಕುರಲಿ ರೂ. ೪೦೦೦; ಶ್ರೀ ರಾ॥ ರಾ॥ ಗದಿಗಯ್ಯಾ ಹುಚ್ಚಯ್ಯಾ ಹೊನ್ನಾಪುರ ಮಠ ವಕೀಲ ಧಾರ್ವಾಡ ರೂ. ೧೦೦; ರಾ॥ ರಾ॥ ಗಳಾದ ಪಾತಪ್ಪಾ ಚೆನ್ನಬಸಪ್ಪಾ ಕತ್ತಿ ಬಾಗೇವಾಡಿ ರೂ. ೧೦೦; ಗುರುಮಲ್ಲಪ್ಪಾ ಅಂಣಾ ಕೋಟಿವಾಲೆ ನಿಪ್ಪಾಣಿ ರೂ. ೫೦; ನಾಗಪ್ಪಾ ಅಂಣಾ ಮಾಹಾಳಂಕ ಸಂಕೇಶ್ವರ ರೂ. ೧೦೦; ಚೆನ್ನಬಸಪ್ಪಾ ಮಲ್ಲಪ್ಪಾ ಅಂಣಾ ಕರಾಳೆ ಲಕಸಂಬಿ ರೂ. ೩೦೦; ರುದ್ರಪ್ಪಾ ಅಂಣಾ ಹಾಲಪ್ಪನವರ ಸದಲಗ ರೂ. ೨೦೦; ಶ್ರೀ ರಾ॥ ರಾ॥ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಗೋಕಾಕ ಫಾಲ್ಸ ರೂ. ೩೦೦. ಒಟ್ಟು ರೂ. ಗಳು ೫೭೫೦.

ಈ ಮೇಲಿನ ಸಂಗತಿಯನ್ನೆಲ್ಲಾ ಸ್ಟಾರ ಪತ್ರದ ಮುಖಾಂತರ ಪ್ರಸಿದ್ಧಮಾಡಿರುತ್ತದೆ.

ಗೋಕಾಕಫಾಲ್ಸ. }
೧೯—೪—೧೯೧೨

ಶಿವಮೂರ್ತಿಸ್ವಾಮಿ, ಕಣಬರಗಿಮಠ,
ಚೀಫ್ ಸೆಕ್ರೆಟರಿ.

ಆಶ್ಚರ್ಯ ಚಿಕಿತ್ಸೆ. **ಬಂಜು ಹಾರಿತು.**

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನಿಲ್ಲದ ರೋಗವು ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು ಬ್ಲಡ್ ಸರಕ್ಯುಲೇಟರ್ ಎಂಬ ನೂತನ ಯಂತ್ರದಲ್ಲಿ ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ ಗುಣವಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯೆಯಿರುವ ನಾಳದಲ್ಲಿ ಕಸಕಡ್ಡಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡು ಉಂಟಾಗಿರುವುದು ಇಂಥಾ ವಿಕಾರವನ್ನು ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಕಾಮಾಲೆ, ಸೋಬೆ, ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾಗಿ ಎಲ್ಲಾ ತರಹ ವಾಯು ರೋಗಗಳೂ ಮತ್ತು ಕರ್ಣ ರೋಗಗಳನ್ನು ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಮೊಕ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಮ್ಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ರೈಲ್ವೆಸ್ಟೇಷನ್.

ನೋಟೀಸು.

ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ ಇಂಗ್ಲೀಷ್ ಲೋವರ್ ಸೆಕೆಂಡರಿಗೆ ಕಡಿಮೆಯಿಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢ ವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವಾ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಚ್. ಕೆ. ವೀರಬಸವಯ್ಯ ಬಿ.ಎ.,ಬಿ.ಎಲ್.
ಆನರರಿ ಸೆಕ್ರಟರಿ.
ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ
ತೋಟದಪ್ಪನವರ ಧರ್ಮಸತ್ರ,
ಬೆಂಗಳೂರು ಸಿಟಿ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಧ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

46 ಗುಣವಾಗದಿದ್ದರೆ ಹಣಮರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೩೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವರೋಗನಿವಾರಣ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

35

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆ ಯೋಗ್ಯವಾದ ಧಾತುವಾಗುತ್ತದೆ. ಹಸ್ತಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡವಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧-೦ ರೂ. ೨ ಬಾ, ೨-೧-೦ ರೂ. ೩ ಬಾ, ೩-೧-೦ ರೂ. ಒಮ್ಮೆಗೇ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಸಜಾಂಗಖರ್ಜೂರದ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೨ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೪೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
94 ಮೈಸೂರು.

ಗೋರೋಚನ ಮಾತ್ರೆ— ೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦—೪—೦, ೨೫ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೩—೦. ತೊಲೆ ೧ಕ್ಕೆ ೧—೮—೦.

ವಜ್ರಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೫ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೫ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ— ೧೦ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦.

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦—೧೦—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ಸಿಂಗಿರಾಜಪುರಾಣವಿಜಯಂ

16

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

6

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಭಾರತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ಕ್ಕೆ ರೂ. ೧ ಗೆಡ್ಡೆ ಮೊದಲಾದವಕೆ ಸವರುವ ಡಬ್ಬಿ ೧ಕ್ಕೆ ಆ ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮವೈದ್ಯಶಾಲಾ,
ಮೈಸೂರು.

೧೯೧೨ ನೆಯ ಇಸವಿ ಮೇ ತಾ॥ ೨೦ರಿಂದ ೧೯೧೨ನೆಯ ಮೇ ತಾ॥ ೨೬ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ಜ್ಯೇಷ್ಠ ಶು॥ ಚೌತಿಯಿಂದ ಜ್ಯೇಷ್ಠ ಶು॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
20	ಸೋ	ಚೌ	32-16	ಆರಿದ್ರ	14-1	8
21	ಮಂಗ	ಪಂ	27-7	ಪುನರ್ವಸು	9-58	9
22	[1] ಬುಧ	ಷ	20-45	ಪುಷ್ಯ	5-45	10
23	[2] ಗುರು	ಸ	14-53	ಆಶ್ಲೇಷ	1-42	11
24	ಶುಕ್ರ	ಅ	9-16	ಪುಬ್ಬ	54-19	12
25	[3] ಶನಿ	ನ	4-10	ಉತ್ತರ	55-4	13
26	[4] ಭಾನು	ಏ	55-39	ಹಸ್ತ	49-55	14

(1) ಮಿಥುನಾಯನಂ, ಶ್ರೀರಂಗದಲ್ಲಿ ವಸಂತೋತ್ಸವಾರಂಭ. (2) ಅಷ್ಟಮಿ ತಿಥಿ. (3) ದಶಹರದಶಮಿ, (4) ಸ್ಮಾರ್ತನಿರ್ಜಲೈಕಾದಶಿ, ವರದರಾಜ ಜಯಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುತ್ತದೆ.

REGISTERED NO. M 124

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವಕಾರಾ ಪಶ್ಯಜ್ಞನ ಹೃತ್ತಮೋಹರಾಜೀಯಾತ್ ।
ಶ್ರೀನುತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಸಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೯] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಮೇ ತಾರೀಖು ೨೭ ನೆಯ ಸೋಮವಾರ. [ಸಂಚಿಕೆ ೨೦

13

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೦-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕೆ ೧೦ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೪-೦.
ಸಟೀಕನಂದೀವ್ರತ	೦-೩-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಉತ್ತಮ ಗ್ರಂಥಗಳು.

40

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿದೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೦ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಗಳಿವೆ. ೬ ಆಣೆ.

ರಕ್ಷಾಶತಕಂ.—೩ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಿಗೂ ೮೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಮಧುರವಾಣಿ.

8 ವಾರ್ಷಿಕಚಂದಾ ೧—೮—೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

ವಿವೇಕಮಂಜರಿ.

16

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಭಿವೃದ್ಧಿ, ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲು ಕಡಿಮೆ

೧ ನೆಯ ಭಾಗ ೨ ಆಣೆ ೧೦೦ ಪುಟಗಳು.
೨ ನೆಯ ಭಾಗ ೩ ಆಣೆ ೧೫೦ ಪುಟಗಳು.
ಅಂಚೆಯವೆಚ್ಚವು ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

ಉತ್ತಮ ಗ್ರಂಥಗಳು.

40

ಶಿವಸ್ತವಶಿರೋಮಣಿ.— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ. ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ವಿರಂಚಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಒಂದೇಕಥೆ! ಅಪೂರ್ವಗ್ರಂಥ !! ೨೧೬ ಪುಟಗಳು!!!

50

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ ಸ್ತ್ರೀ ಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು ಆರಾಮಾದಿ ವರ್ಣನೆಗಳು; (೬) ಮನುಷ್ಯಯತ್ನಕ್ಕೆ ವಿವಾರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು; ಇವು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವುದು. ಕ್ರಯ:— ೧ ನೇ ಭಾಗ ೬ ಆಣೆ; ೨ ನೇ ಭಾಗ ೧೦ ಆಣೆ; ಒಟ್ಟು ಪ್ರತಿ ೧ ರೂ. ಟಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಉತ್ತಮವಾದ ನಶ್ಯದಪುಡಿ.

6

ಧಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೆಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜ ಡಬ್ಬಿಗಳಿಗೆ ೧—೧೪—೦.

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತದೆ. ನೀವು ಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ, ಬಾಳ ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ ಡಬ್ಬಿಗಳಿಗೆ ೧-೧೪-೦. ಗಳು ಟಪಾಲ್ ಖರ್ಚು ಬೇರೆ.

ವಿಳಾಸ:—ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಶೆಟ್ಟಿಯವರು ಹಸೂರು ಪೋಸ್ಟ್,
ಕೊಳ್ಳೇಗಾಲ ತಾಲ್ಲೂಕು.

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿದೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆಗಲು ವಲಾಸುರನು ಆ ದ್ವಯಂ ಕೇಳಿ ವಿಸ್ಮಿತನಾಗಿ ವಿಮರ್ಶೆಯಂ ಮಾಡಿ ತಿಳಿದು, ಜಲಭ್ರಾಂತಿಯಿಂದ ಪತಂಗವು ದಾವಾಗ್ನಿಯೊಳ್ ಬೀಳುವಂತೆ ಶಚೀಪತಿಯು ಎಂದಿನಂತೆ ತನ್ನ ರಾಜ್ಯಶ್ರೀಯಂ ಪಡೆಯುವೆನೆಂಬ ದುರಾಶೆಯಿಂದ ತನ್ನ ಸಮ್ಮುಖಕ್ಕೆ ಬಂದಿರುವಂತೆ ಕಾಣುತಿದೆ. ಆದುದರಿಂದ ಅವನ ಅಹಂಕಾರವಂ ನೀಗೊತ್ತಿ ಮುಂದೆ ಎಂದಿಗೂ ಈ ಅಮರಾವತಿಯಂ ಕನಸಿನಲ್ಲಿಯೂ ನೆನೆಯದಂತೆ ಮಾಡುವೆನೆಂದು ಕನಲಿ ಕಾತರಿಸಿ, ಕೈದುಗಳಂ ಪಿಡಿದು, ಕರಿರಥವನ್ನೇರಿ, ಕಾಳರಾತ್ರಿಯಂತೆ ತೋರುತ, ನಿಜಪರಿವಾರದಿಂ ಕೂಡಿಗೂಡಿ, ಪುರದಿಂ ಪೊರಮಟ್ಟು ಪುರಂದರನ ಸೈನ್ಯವಂ ಕಂಡು, ಕದಳೀವನವಂ ಕಂಡ ಮದ್ದಾನೆಯಂತೆ ಘುಡುಘುಡಿಸುತ, ಕಾರ್ಮುಕವಂ ಸೆಳೆದು, ಬಾಣಂಗಳಂ ಬೀರುತ, ಕಾಲಮೃತ್ಯುವಿನಂತೆ ಬರುತ್ತಿರಲು, ಇಂದ್ರನು ಶತ್ರುವಂ ಕಂಡು ತ್ರಸ್ತಹೃದಯನಾಗಿ, ಆಚಾರ್ಯನ ಆಜ್ಞೆಯಂ ವಿಚಾರಿಸಲಾರದೆ, ಸ್ವಲ್ಪ ಯುದ್ಧವಂ ಮಾಡುತ, ಪೂರ್ವದೊಳ್ ಈ ವಲಾಸುರನ ಬಾಣಪ್ರಹಾರದಿಂದುಂಟಾದ ಗಾಯವನ್ನೇ ಅರಸುತ, ಬರುವ ಬಾಣಪರಂಪರೆಯಂ ಉಗವಣೆಯಂ ಸಹಿಸಲಾರದೆ, ಇನ್ನು ಎಂದಿಗೂ ಅಮರಾವತಿಯು ಅಧೀನವಾಗುವುದಿಲ್ಲೆಂದು ಕೂಗುತ, ಹಿಮ್ಮೆಟ್ಟುತಲಿರುವ ತನ್ನ ಸೈನ್ಯವಂ ಕಂಡು ತಾನೂ ಅವರೊಡನೆ ಓಡಿಹೋಗಬೇಕೆಂದು ಚಿಂತಿಸುತ್ತಿರಲು, ಆಗ ಸುರಾಚಾರ್ಯನು ಶಚೀಪತಿಯಂ ಕುರಿತು, ಈ ವಲಾಸುರನು ಪೂರ್ವದಲ್ಲಿ ಉಮಾರಮಣನಂ ಕುರಿತು ಘೋರತಪವಂ ಮಾಡಿ ಅಭಿಮುಖನಂ ಮಾಡಿಕೊಂಡು ಸಮಸ್ತ ಭೋಗಭಾಗ್ಯವಂ ಬಹುಕಾಲ ಅನುಭವಿಸಿ, ಯಶಸ್ಸಂ ಪಡೆಯಲೋಸುಗ ಚರಾಚರಪ್ರಾಣಿಗಳಿಂದ ಸಂಹಾರವಿಲ್ಲದಂತೆ ಒಂದು ವರವಂ, ಮತ್ತೂ ಮನದೊಳ್ ದಧೀಚಿ, ಸೂರ್ಯ, ಇಂದ್ರ ಮೊದಲಾದವರಿಂದ ಉತ್ಪನ್ನವಾದ ರತ್ನಂಗಳು ವಿರಳವಾಗಿರುವುದಂ ತಿಳಿದು, ಅದಂ ಸಮೃದ್ಧಿಯಂ ಮಾಡಿ ಲೋಕೋಪಕಾರವಂ ಮಾಡಬೇಕೆಂದು ಯೋಚಿಸಿ, ಧರ್ಮಬುದ್ಧಿಯಿಂದ ತನ್ನ ಶರೀರದಲ್ಲಿರುವ ಧಾತುಗಳೇ ನವರತ್ನವಾಗುವಂತೆ ಮತ್ತೊಂದುವರವಂ ಪಡೆದಿರುವನಾದಕಾರಣ ಯುದ್ಧದೊಳ್ ಈತನಂ ಜಯಿಸಲಶಕ್ಯವು. ಆದುದರಿಂದ ಮೊದಲು ನಾನು ಹೇಳಿದ ಉಪಾಯವೇ ಸರಿಯೆಂದೆನ್ನಲಾಗ ಸಂಕ್ರಂದನನು ಮಹಾಪ್ರಸಾದವೆಂದು ಗುರುವಾಕ್ಯವಂ ಮನದಂದು, ವ್ಯಾಜಾರ್ಥವಾಗಿ ಚಾಪವಂ ಸಜ್ಜುಗೊಳಿಸಿ, ದಿವ್ಯಾಸ್ತ್ರವಂ ಹೂಡಿ, ಆ ದೈತ್ಯನಿಗಭಿಮುಖನಾಗಿ—ಎಲೈ ದುರಾತ್ಮನೆ! ಒಂದು ಕ್ಷಣವೆನ್ನೊಡನೆ ಸೆಣಸಿ ಕೈಗುಣವನ್ನೀಕ್ಷಿಸೆನುತ ನುಡಿದು ಸೆಳೆದುಬಿಡಲು, ಆಗ ವಲಾಸುರನು ನಸುನಗುತ ಪ್ರತ್ಯಸ್ತ್ರದಿಂದದಂ ಖಂಡಿಸಿ, ಮತ್ತೂ ಎಲೋ ಸುರಾಧಮನೆ! ನೀನು ಗೌತಮಾಶ್ರಮದಲ್ಲಿ ಮಾಡಿದ ಸಾಹಸವಂ ಕೇಳಿಬಲ್ಲೆನು; ಸಮರಾಂಗಣದೊಡವೆ ನಿನಗೇಕೆ? ಮುನ್ಯಾಶ್ರಮಂಗಳು ಇನ್ನೂ ಬಹಳವಾಗಿರುವುವು; ಅಲ್ಲಿಗೆ ಪೋಗುಪೋಗೆಂದು ನುಡಿದು, ಬಳಿಕ ದಿವ್ಯಾಸ್ತ್ರಗಳಿಂದೀರ್ವರೂ ಸಮನಾಗಿ ಮೂರುಜಾವದವರೆಗೆ ಅದ್ಭುತವಾದ ಯುದ್ಧವಂ ಮಾಡುತ, ಅಸ್ತ್ರಕ್ಕೆ ಪ್ರತ್ಯಸ್ತ್ರವಂ ಪ್ರಯೋಗಿಸಿದುದರಿಂ ಬತ್ತಳಿಕೆ ಬರಿದಾಗಲು, ಆಗ ಸುರಾಚಾರ್ಯನಾದ ಬೃಹಸ್ಪತಿಯು ಅಸುರಾಂತಕನಾದ ಇಂದ್ರನಂ ಕುರಿತು ಸಂಜ್ಞೆಯಂ ಮಾಡಲಾ ದೇವೇಂದ್ರನು ಧನುವನ್ನಿಳುಹಿ, ವಲಾಸುರನಂ ಕುರಿತು—ಎಲೈ ದಾನವೇಂದ್ರನೆ! ಕೇಳು— ನಿನ್ನ ಸಾಹಸಕ್ಕೆ ಮೆಚ್ಚಿದೆನು. ನಿನಗೆ ಬೇಕಾದವರವಂ ಬೇಡು ಕೊಡುವೆನು. ಎನಲಾಮಾತಂ ಕೇಳಿ, ಗರ್ವಿತನಾದ ವಲಾಸುರನು ನಸುನಗುತ, ಎಲೈ ಇಂದ್ರನೆ! ತಿರುಕಹಾರುವರು ಕೊಡುವ ಹಳಸಿದ ಹವಿಸ್ಸಿನಿಂ ಜೀವಿಸುತ, ಶುಷ್ಕವೈದಿಕಮುಖನಿರ್ಗತ ನಿಗಮಾಗಮಸ್ತುತಿಗೆ ಉಬ್ಬುವ ದುರ್ಭಾಗ್ಯನಾದ ನೀನು ಕೊಡುವ ವರವಾವುದು? ನಾನು ಬೇಡುವುದೇನು? ಅದಂತಿರಲಿ, ನೀನು ಬೇಕಾದ ವರವಂ ಬೇಡು, ನಾನು ಕೊಡುವೆನು ಎಂದು ಹೇಳಲಾಗ ಪುರಂದರನು, ಎಲೈ ದೈತ್ಯಶ್ರೇಷ್ಠನೆ! ಕೇಳು— ನಿಮ್ಮ ಕುಲದಲ್ಲಿ ಪುಟ್ಟಿದ ದೈತ್ಯರು ಇದುವರೆಗೆ ಒಬ್ಬರಿಗೂ ವರದಾನವಂ ಮಾಡಿರುವುದು ಅಪ್ರಸಿದ್ಧವು. ಇಂತಿರುವಲ್ಲಿ ಈಗ ನೀನು ಬರಿದೆ ದುರಭಿಮಾನದಿಂದ ವರವಂ ಕೊಡುವೆನೆಂದು ಪೇಳಿ ಕಡೆಗೆ ವರವಂ ಕೊಡುವುದಕ್ಕೆ ಅಶಕ್ತನಾಗಿ ಲೋಕದೊಳ್ ಅಪಕೀರ್ತಿಯಂ ಪಡೆಯುವೆ. ಈ ದುರಹಂಕಾರವು ನಿನಗೇಕೆ? ಕ್ಷುದ್ರನದಿಯು ಸಮುದ್ರವಂ ಪೂರ್ಣವಂ ಮಾಡುವೆನೆಂದು ಓಡಿಬಂದಂತೆ ಬರಿದೆ ಸಾಹಸವಂ ಪೇಳಿ ಅಪಹಾಸ್ಯಕ್ಕೆ ಗುರಿಯಾಗಬೇಡವೆಂದು ಹೇಳುತ ಕುಹಕದ ಮಾತಂ ಕೇಳಿ ವಲಾಸುರನು ತನ್ನ ಕುಲಕ್ಕೆ ಸ್ವಭಾವಸಿದ್ಧವಾದ ದುರಹಂಕಾರದಿಂ ಮಂದಮತಿಯಾಗಿ, ತನಗೆ ಮುಂದೆ ಬರುವ ಹಾನಿವೃದ್ಧಿಗಳನ್ನರಿಯದೆ, ಮದಾಂಧನಾಗಿ, ದಾಯಾದಿಗಳಾದ ದೇವತೆಗಳಿಗೆ ದೈತ್ಯಶ್ರೇಷ್ಠನಾದ ನಾನು ಕೇಳಿದ ವರವನಿತ್ತು, ಲೋಕದೊಳ್ ಖ್ಯಾತಿಯಂ ಪಡೆಯುವುದುತ್ತಮೋತ್ತಮವೆಂದು ಮನದೊಳ್ ನಿಶ್ಚೈಸಿ, ಸುರಪತಿಯಾದ ದೇವೇಂದ್ರನಂ ಕುರಿತು—ಎಲೈ ಸಹಸ್ರಾಕ್ಷನೆ! ನೀನು ಬೇಡಿದ ವರವಂ ತ್ರಿಕರಣಕ ತ್ರಿವಾಚಕವಾಗಿ ತ್ರಿಣೇತ್ರನ ಅಡಿದಾವರೆಯಾಣೆಗೂ ಶೀಘ್ರದಿಂ ಕೊಡುವೆನು ಎನಲಾಗ ಅಮರೇಶನು ನಿಜಾಸ್ಥಾನವಾದ ಅಮರಾವತಿಯ ಭಾಗ್ಯವಂ ಪಡೆದೆನೆಂದು ಉತ್ಸಾಹದಿಂದ ತನ್ನ ರಥದಿಂದಿಳಿದು ದೈತ್ಯೇಂದ್ರನ ಅಭಿಮುಖನಾಗಿ ಬಂದು, ಅವನಂ ಕುರಿತು—ಎಲೈ ತ್ರಿಲೋಕವೀರನೆ! ಕೇಳು— ನಾನು ಒಂದು ಮಹಾಕ್ರತುವಂ ಮಾಡಲು ಉದ್ಯೋಗಿಸಿರುವೆನು. ಅದಕ್ಕೆ ನೀನು ಪಶುವಾಗುವುದೇ ನನಗೆ ನೀನು ಕೊಡುವ ವರವಲ್ಲದೆ ಮತ್ತೊಂದು ವರವು ಪ್ರಕೃತಕ್ಕೆ ಉಪಯುಕ್ತವಾಗಲರಿಯದು. ನೀನು ಮೊದಲು ಮಾಡಿದ ಪ್ರತಿಜ್ಞೆಯು ನಿಜವಾದರೆ ಪಶುವಾಗುವುದಕ್ಕೆ ಉದ್ಯುಕ್ತನಾಗು; ಇಲ್ಲದಿದ್ದರೆ ಪೂರ್ವದಲ್ಲಿ ನಾನು ಹೇಳಿದ ಮಾತಿಗೆ ಗುರಿಯಾಗಿ ಲೋಕದಲ್ಲಿ ಅಪಹಾಸ್ಯಕ್ಕೆ ಪಾತ್ರನಾಗುವೆ, ಎಂದು ಹೇಳಿದ ಮಾತಂ ಕೇಳಿ, ಸತ್ಯಸಂಧನಾದ ವಲಾಸುರನು, ಎಲೈ ಶಚೀಪತಿಯೆ! ಕೇಳು— ದೈತ್ಯಶ್ರೇಷ್ಠನಾದ ವಲಾಸುರನು ಕೊಟ್ಟ ವರವು ಎಂದಿಗೂ ತಪ್ಪಲಾರದು; ಒಂದು ಕಾಲದಲ್ಲಿ ಮಾರ್ತಾಂಡನು ಪಶ್ಚಿಮದಿಕ್ಕಿನಲ್ಲಾದರೂ ಉದಯಿಸುವನು, ಮತ್ತೂ ಮಹಾಮೇರುವಾದರೂ ಅಲ್ಲಾಡುವುದು; ಯಜ್ಞೇಶ್ವರನು ಶೈತ್ಯವಂ ತಾಳುವನು; ಶಿಲೆಗಳಲ್ಲಿ ಕಮಲಂಗಳುದ್ಭವಿಸುವುವು; ನಾನು ಕೊಟ್ಟ ವರವು ಎಂದೆಂದಿಗೂ ಚಲಿಸದೆ ಸ್ಥಿರವಾಗಿರುವುದರಲ್ಲಿ ಸಂದೇಹ ಬೇಡವೆಂದು ನುಡಿದು, ಆ ಕ್ಷಣದಲ್ಲಿಯೇ ರಥದಿಂ ಧುಮುಕಿ, ತನ್ನ ಪುತ್ರಮಿತ್ರಕಳತ್ರ ಬಂಧುಗಳಂ ತ್ಯಜಿಸಿ, ಅಮರಾವತಿಯ ಭೋಗಸಂಪತ್ತಿನಲ್ಲಾಸಕ್ತಿಯಂ ಬಿಟ್ಟು, "ಪಶುವಾದೆನು; ಶೀಘ್ರದಿಂ ಮಹಾಕ್ರತುವಂ ನೆರವೇರಿಸುವನಾಗು; ನನ್ನ ಯಶಸ್ಸು ಸೂರ್ಯಚಂದ್ರರಿರುವವರೆಗೂ ಲೋಕಪ್ರಖ್ಯಾತವಾಗಿರಲಿ" ಎಂದು ಪೇಳಿ, ಇಂದ್ರನ ಸ್ವಾಧೀನನಾಗಲು ಆಗ ದೇವೇಂದ್ರನು ವಲಾಸುರನ ಸತ್ಯಕ್ಕೆ ಮೆಚ್ಚಿ ಕಟಕಟಾ ಇಂಥ ದುರ್ಘಟವಾದ ವರವಂ ನಾನು ಕೇಳಲು ಅದಂ ಅಂಗೀಕರಿಸಿದನಲ್ಲಾ! ಎಂದು ಸಂತೋಷಪಡುತ, ಅವನಂ ಕುರಿತು, ಎಲೈ ದಾನವೇಂದ್ರನೆ! ಕೇಳು— ಜಗದೊಳ್ ನಿನ್ನಂಥ ಸತ್ಯಸಂಧನಾದ ದೈತ್ಯೇಶ್ವರನಂ ನಾನೆಲ್ಲಿಯೂ ಕಾಣಲಿಲ್ಲ, ಮತ್ತೂ ನಿನಗೆ ಯಶೋಭಿವೃದ್ಧಿಯೂ ಶ್ರೇಯಸ್ಸೂ ಉಂಟಾಯಿತು ಎಂದು ಪೇಳಿ ನಸುನಗುತ ಅವನಂ ಸಂಗ್ರಹಿಸಿಕೊಂಡು ಬಂದು, ಈ ಅಸುರನು ಅನ್ಯೋಪಾಯಗಳಿಂದ ಸಂಹರಿಸಲಶಕ್ಯನಾಗಿರುವನೆಂದು ಗುರುವಾದ ಬೃಹಸ್ಪತಿಯೊಡನೆ ಆಲೋಚಿಸಿ, ಒಂದು ಮಹಾಕ್ರತುವಂ ಪ್ರಾರಂಭಿಸಿ ತದಂಗವಾಗಿ ದೈತ್ಯೇಶ್ವರನಾದ ವಲಾಸುರನೆಂಬ ಪಶುವಂ ವಿಶಸನವಂ ಮಾಡಲು, (ಸಶೇಷ.)

ಹತ್ತಿಯ ಬೆಳೆಸು.

ನಮ್ಮ ಮೈಸೂರು ಸೀಮೆಯೊಳಗೆ ದಾವಣಗೆರೆ, ಹರಿಹರ, ಚಿತ್ರದುರ್ಗ, ಹೊಳಲಕೆರೆ, ಜಗಲೂರು, ಈ ತಾಲ್ಲೋಕುಗಳಲ್ಲಿ ಕಳೆದ ವಿರೋಧಿಕೃತು ಸಂ॥ ದಲ್ಲಿ ದೊಡ್ಡಹತ್ತಿಯ ಬೀಜವನ್ನು ವಿಶೇಷವಾಗಿ ಬಿತ್ತಿದ್ದರು. ಕಳೆದ ವರ್ಷದಲ್ಲಿ ವಿಶೇಷ ಮಳೆಯಾಗದೆ ಹೋದುದರಿಂದ ಎಂಟಾಣೆಯ ಹತ್ತಿ ಫಸಲು ಬಂದು, ದಾವಣಗೆರೆಯಲ್ಲಿರತಕ್ಕ ಎಂಟು ಹತ್ತಿ ಮಿಷನುಗಳಲ್ಲಿ ೪–೫ ತಿಂಗಳು ಕೆಲಸವು ಸಂಪೂರ್ಣವಾಗಿ ನಡೆದು, ಬಡಜನರಿಗೆ ಹೊಟ್ಟೆ ತುಂಬುವುದಕ್ಕೆ ಕಾರಣವಾಯಿತು. ಇನ್ನು ೬–೭ ತಿಂಗಳು ಬಡಜನರು ಕಾಲಕಳೆಯುವುದು ಕಷ್ಟವಿದೆ. ಆದರೆ ಹೋದವರ್ಷ ಮಳೆಗಾಲವು ನಡೆಸಿದ್ದರೆ, ಇಲ್ಲಿ ಹತ್ತಿಯ ಮಿಷನುಗಳಿಗೆ ೮ ತಿಂಗಳು ಸಂಪೂರ್ಣವಾದ ಕೆಲಸವೂ, ಬಡಜನರಿಗೆ ಅನ್ನವೂ ದೊರೆಯುತ್ತಿದ್ದಿತು. ದೈವಯತ್ನಕ್ಕೆ ಉಪಾಯವಿಲ್ಲ.

ಈ ವರ್ಷ ಮಳೆಗಾಲವು ಚೆನ್ನಾಗಿ ಆಗುತ್ತದೆಂತಲೂ, ಬೆಳೆಯು ೧೬ ಆಣೆಯ ಭಾಗ ಆಗುವುದೆಂತಲೂ ಕೆಲವರು ಹೇಳುತ್ತಾರೆ. ಆದುದರಿಂದ ರೈತಾಪಿ ಜನರಿಗೆ ಬಹಳ ಅನುಕೂಲವಾಗಿ ಹತ್ತಿ ಬೆಳೆಯಾಗುವ ವಿಷಯವನ್ನು ಈ ಮೂಲಕ ಹೇಳಿಕೊಳ್ಳುತ್ತೇನೆ.— ಈ ಹತ್ತಿಯ ಫಸಲು ಬಡ ರೈತ ಜನರಿಗೆ ಬಹಳ ಸಹಾಯಕರವಾದ ವಸ್ತುವು. ಈ ಹತ್ತಿ ಬೀಜವನ್ನು ರೋಹಿಣಿ ಮಳೆಯಿಂದ ಪುಬ್ಬೆ ಮಳೆಯವರೆಗೂ ಬಿತ್ತತಕ್ಕದು. ರೋಹಿಣಿ ಮಳೆಯಿಂದ ಪುನರ್ವಸು ಮಳೆಯ ವರೆಗೂ ಬಿತ್ತಿದ ಫಸಲು ಕಾರ್ತಿಕ ಮಾರ್ಗಶಿರ ಮಾಸದಿಂದ ಹತ್ತಿಯು ಬರುವುದಕ್ಕೆ ಆರಂಭವಾಗಿ ಮಾಘಮಾಸದ ಕೊನೆಯವರೆಗೂ ಹತ್ತಿಫಸಲು ಸಿಗುತ್ತದೆ. ಇದು ಕೆಂಪುಭೂಮಿ ಮತ್ತೂ ಮಡಿಕಟ್ಟುಭೂಮಿಗಳಲ್ಲಿ ಬೆಳೆಯತಕ್ಕದು. ಪುಬ್ಬೆ ಹುಬ್ಬೆಯ ಮಳೆಗಾಲದಲ್ಲಿ ಒಳ್ಳೇ ಯೆರೆಭೂಮಿಗೆ ಬಿತ್ತತಕ್ಕದು. ಮಾಘ ಫಾಲ್ಗುಣ ಮಾಸದಲ್ಲಿ ಹತ್ತಿಯ ಫಸಲು ಯಾವ ರೋಗಕ್ಕೂ ತಗಲದೆ, ಬಹಳ ಮೃದುವಾದ ಹತ್ತಿಯನ್ನು ಕೊಡುತ್ತದೆ. ಈ ಹತ್ತಿಗೆ ಧಾರವಾಡದ ಸೀಮೆಯವರು ಹಿಂಗಾರಿ ಹತ್ತಿಯೆಂದು ಹೇಳುತ್ತಾರೆ. ಇದು ಮುಂಗಾರಿಹತ್ತಿಗಿಂತ ೧ ಆಣೆ ೨ ಆಣೆ ಹೆಚ್ಚು ಬೆಲೆಗೆ ಮಾರಾಟವಾಗುವುದು. ಪುಷ್ಯ, ಮಾಘ, ಫಾಲ್ಗುಣಮಾಸದಲ್ಲಿ ರೈತರಿಗೆ ಬಹಳ ದುಡ್ಡಿನ ಸಹಾಯವು ಈ ಹತ್ತಿಯ ಬೆಳೆಯಿಂದ ಆಗುತ್ತದೆ. ಅದುಕಾರಣ ಭೂಮಿಗಳನ್ನು ಚೆನ್ನಾಗಿ ವ್ಯವಸಾಯಮಾಡಿ ದೊಡ್ಡ ಹತ್ತಿಯ ಬೀಜವನ್ನೂ ಕಾಂಬೋಡಿಯಾ ಹತ್ತಿಯ ಬೀಜವನ್ನೂ ಬಿತ್ತಬೇಕೆಂದು ನಾನು ಹೇಳಿಕೊಳ್ಳುತ್ತೇನೆ. ಒಳ್ಳೇ ಶ್ರೇಷ್ಠವಾದ ಭೂಮಿಗಳಲ್ಲಿ ನಾನು ಹತ್ತಿಯನ್ನು ಬೆಳೆಯುವ ವಿಷಯವನ್ನು ತಿಳಿಸಲು ಕೆಳಗೆ ವಿವರವಾಗಿ ತೋರಿಸಿದ್ದೇನೆ.

ಎಕರೆ ೧ ಕ್ಕೆ ಆಗುವುದು:— ಸಣ್ಣಹತ್ತಿ ಮಣ ೧೫; ದೊಡ್ಡಹತ್ತಿ ಮಣ ೨೦; ಕಾಂಬೋಡಿಯ ಹತ್ತಿ ಮಣ ೪೦ ಈ ಮೇರೆಗೆ ಬರುತ್ತದೆ. ಆದುದರಿಂದ ಸರ್ವರೂ ಕಾಂಬೋಡಿಯಾ ಹತ್ತಿಯ ಬೀಜವನ್ನೇ ಭೂಮಿಗೆ ಹಾಕಬೇಕೆಂದು ನಾನು ಹೇಳಿಕೊಳ್ಳುತ್ತೇನೆ. ಮುಖ್ಯವಾಗಿ ಕಾಂಬೋಡಿಯ ಹತ್ತಿಗೆ ಮಿಗಿಲಾದ ಯಾವಪದಾರ್ಥವೂ ಕಾಣುವುದಿಲ್ಲ. ಒಕ್ಕಲತನ ಮಾಡಿಸತಕ್ಕವರು ಕಾಂಬೋಡಿಯ ಹತ್ತಿಯ ಬೆಳೆಯನ್ನು ವೃದ್ಧಿಪಡಿಸಬೇಕೆಂದು ನನ್ನ ಕೋರಿಕೆ. ದೊಡ್ಡಹತ್ತಿ, ಕಾಂಬೋಡಿಯಾ ಹತ್ತಿ ಕೆಂಪುಭೂಮಿಗಳಲ್ಲಿ ಮಡಿಕಟ್ಟು ಭೂಮಿಗಳಲ್ಲಿ, ಎರೆಭೂಮಿಗಳಲ್ಲಿ ಕೂಡ ಬೆಳೆಯಾಗುತ್ತದೆ. ಚೆನ್ನಾಗಿ ಮಳೆಗಾಲವು ಆಗುವ ಪಕ್ಷದಲ್ಲಿ ಪುಷ್ಯಮಾಸದಲ್ಲಿ ಪಶ್ಚಿಮದ ಗಾಳಿಯು ತಗಲುವುದರಿಂದ ಗಿಡಗಳು ಒಳ್ಳೇ ಕೋಮಲವಾಗಿ ಬೆಳೆದು ಯಾವ ರೋಗಕ್ಕೂ ತಗಲದೆ ಹತ್ತಿಯ ಫಸಲು ಮೃದುವಾಗಿ ದೊಡ್ಡ ತೊಳೆಯಾಗಿ ಸಿಗುತ್ತದೆ. ಪುಷ್ಯಮಾಸದಿಂದ ಆಚೆಗೆ ಬರುವುದಕ್ಕೆ ಹಿಂಗಾರಿ ಹತ್ತಿಯೆಂದು ಹೇಳುವುದುಂಟು. ಕಾರ್ತಿಕ ಮಾರ್ಗಶಿರ ಮಾಸದಲ್ಲಿ ಬರುವ ಹತ್ತಿಯು ಚೆನ್ನಾಗಿ ಕಾಯಿಬೊಡೆಯದೆ ಸಣ್ಣ ತೊಳೆಯಾಗಿ ಬರುತ್ತದೆ. ಇದಕ್ಕೆ ಮುಂಗಾರಿ ಹತ್ತಿಯೆಂತಲೂ ಹೇಳುತ್ತಾರೆ. ನಮ್ಮ ಮೈಸೂರು ಸೀಮೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ದೊಡ್ಡ ಹತ್ತಿ, ಕಾಂಬೋಡಿಯಾ ಹತ್ತಿಗಳು ವಿಶೇಷವಾಗಿ ಬೆಳೆಯುತ್ತದೆಂದು ನನಗೆ ಸಂಪೂರ್ಣವಾಗಿ ತಿಳಿಯುತ್ತದೆ. ಕಾರಣವೇನೆಂದರೆ— ಈ ವರ್ಷ ಹಾಸನದ ತಾಲ್ಲೋಕು ಪೈಕಿ ದೊಡ್ಡಹತ್ತಿಯು ಬೆಳೆದು ದಾವಣಗೆರೆಗೆ ಮಾರಾಟಕ್ಕೆ ಬಂದಿತ್ತು. ಈ ಹತ್ತಿಯು ಒಳ್ಳೆಯ ಧಾರಣೆಯಿಂದ ಮಾರಾಟವಾಯಿತು. ಈ ತಾಲ್ಲೋಕುಗಳೆರಡೂ ಮಲೆನಾಡಿಗೆ ಸಂಬಂಧಪಟ್ಟವು. ಆದುದರಿಂದ ಹತ್ತಿಯು ಬಹಳ ಮೃದುವಾಗಿ ಒಳ್ಳೇ ತೊಳೆಯಾಗಿದ್ದುದರಿಂದ ಉತ್ತಮವಾದ ಬೆಲೆಯಿಂದ ಮಾರಾಟವಾಗಿದೆ. ಆದುದರಿಂದ ಮಲೆನಾಡು ಪ್ರಾಂತದವರು ಹತ್ತಿ ಬೆಳೆಯುವುದರ ಮೇಲೆ ಗಮನಕೊಡಬೇಕೆಂದು ಬೇಡುತ್ತೇನೆ.

ಚೆನ್ನಗಿರಿ ತಾಲ್ಲೋಕು ಅಮಲ್ದಾರರವರು ಚೆನ್ನಗಿರಿ ರಥೋತ್ಸವಕಾಲದಲ್ಲಿ ವಸ್ತುಪ್ರದರ್ಶನಮಾಡಿಸಿ, ಆ ಕಾಲದಲ್ಲಿ ಹತ್ತಿಯ ನಮೂನೆಯನ್ನು ತರಿಸಿ ಅಜಮಾಯಿಷಿಸಿ ನಾನು ಬೆಳೆದ ಕಾಂಬೋಡಿಯಾ ಹತ್ತಿಯನ್ನು ಪಾಸುಮಾಡಿದುದಲ್ಲದೆ, ಚೆನ್ನಗಿರಿ ತಾಲ್ಲೂಕು ರೈತರಿಗೂ ಪ್ರೋತ್ಸಾಹಪಡಿಸಿ ಇದೇ ಹತ್ತಿಯನ್ನು ಬೆಳೆಯಬೇಕೆಂದು ಹೇಳಿದರು. ಇವರು ರೈತಜನರಿಗೆ ಪ್ರೋತ್ಸಾಹಪಡಿಸಿದ್ದಕ್ಕಾಗಿ ನನಗೆ ತುಂಬಾ ಸಂತೋಷವಾಯಿತು. ೫–೬ ವರ್ಷದ ಹಿಂದೆ ದೊಡ್ಡಹತ್ತಿಯ ಬೆಳೆಯು ನಿಂತುಹೋಗಿತ್ತು. ಈಚೆಗೆ ದಾವಣಗೆರೆಯಲ್ಲಿ ಜಿನ್ನುಗಳು ತಯಾರಾದನಂತರ ದೊಡ್ಡಹತ್ತಿಯು ಸ್ವಲ್ಪಸ್ವಲ್ಪವಾಗಿ ಪೇಟೆಗೆ ಬಂದುದರವೇಳೆ ಇಲ್ಲಿ ಅರಳೆಯ ವ್ಯಾಪಾರಸ್ಥರು ದೊಡ್ಡಹತ್ತಿಯಿಂದ ಸಣ್ಣಹತ್ತಿಯ ಸಂಬಂಧವಾದ ಅರಳೆ ನಮೂನೆ ಡಬ್ಬಲ್ ಗೂಲ್ ಅರಳೆಯೆಂದು ಕಂಡು ದೊಡ್ಡಹತ್ತಿಗೆ ಉತ್ತಮವಾದ ಧಾರಣೆ ಕೊಟ್ಟುದರ ಮೇಲೆ, ವರ್ಷವರ್ಷ ಹೆಚ್ಚುತ್ತಾ ಬಂದು, ಕಳೆದವರ್ಷ ಅತಿಶಯವಾಗಿ ದೊಡ್ಡಹತ್ತಿಯನ್ನು ಬಿತ್ತಿದುದರಿಂದ ಹೀಗೆ ದೊಡ್ಡಹತ್ತಿ ಬರುತ್ತಾಯಿದೆ. ಮುಂದೆ ಇನ್ನೂ ರೈತಜನರು ದೊಡ್ಡಹತ್ತಿ ಕಾಂಬೋಡಿಯಾ ಹತ್ತಿಯನ್ನು ಬೆಳೆಯತಕ್ಕ ಪ್ರಯತ್ನಮಾಡಿಕೊಳ್ಳಬೇಕು. ಈ ದೊಡ್ಡಹತ್ತಿಗಿಂತ ಮಿಗಿಲಾದುದು ಕಾಂಬೋಡಿಯಾ ಹತ್ತಿ. ಈ ಬೀಜವನ್ನು ತರಿಸಿಕೊಂಡು ಒಂದೊಂದು ಎಕರೆ ಜಮೀನಿಗೆ ಹಾಕಿ ಇದರ ಬೆಳೆಯನ್ನು ಪರೀಕ್ಷೆಮಾಡಿಕೊಂಡು, ಮುಂದೆ ಕಾಂಬೋಡಿಯಾ ಹತ್ತಿಯ ಫಸಲನ್ನು ವೃದ್ಧಿಪಡಿಸಬೇಕೆಂದು ಹೇಳಿಕೊಳ್ಳುತ್ತೇನೆ. ಇಂಥ ಉತ್ತಮವಾದ ಹತ್ತಿಯನ್ನು ಬೆಳೆಯುತ್ತ ಬಂದ ಪಕ್ಷದಲ್ಲಿ ಒಕ್ಕಲತನಮಾಡತಕ್ಕವರು ಧನಿಕರಾಗುವುದಕ್ಕೆ ಸಂದೇಹವಿಲ್ಲ.

ದಾವಣಗೆರೆಯಲ್ಲಿ ಹತ್ತಿಯ ಧಾರಣೆಯು ಮಣ ೧ ಕ್ಕೆ ಒಂದಾಣೆ ಹೆಚ್ಚುಕಡಿಮೆಯಿಂದ ಮಾರಾಟವಾಗುತ್ತಾ ಈವರೆಗೂ ಬಂದಿದೆ. ದಾವಣಗೆರೆಯ ತೂಕ ೧೧೦ ರೂ. ತೂಕಕ್ಕೆ ಒಂದು ಮಣ. ಸಣ್ಣಹತ್ತಿ ಮಣ ೧ ಕ್ಕೆ ೨ ರೂ., ದೊಡ್ಡಹತ್ತಿ ಮಣ ೧ ಕ್ಕೆ ೨॥= ರೂ., ಕಾಂಬೋಡಿಯಾ ಹತ್ತಿ ಮಣ ೧ ಕ್ಕೆ ೩ ರೂ. ಈರೀತಿ ಮಾರಾಟವಾಗುತ್ತಾಯಿದೆ. ದೊಡ್ಡಹತ್ತಿ ಬೀಜವೂ ಕಾಂಬೋಡಿಯಾ ಹತ್ತಿಬೀಜವೂ ನಮ್ಮಲ್ಲಿ ದೊರೆಯುತ್ತವೆ. ಅವಶ್ಯಕವಿದ್ದವರು ಬರೆದು ತರಿಸಿಕೊಳ್ಳಬೇಕೆಂದು ಬೇಡುತ್ತೇನೆ. ಈ ವ್ಯವಸಾಯದ ವಿಷಯದಲ್ಲಿ ರೈ॥ ಶ್ರೀಮಂತ ರಾವ್ ಬಹದ್ದೂರ್ ಮಲ್ಲಪ್ಪ ಅಣ್ಣಾ ವಾಗರ ಸೊಲ್ಲಾಪುರ ಇವರು ತುಂಬಾ ಅನುಭವಸ್ಥರಾಗಿದ್ದು, ಈಗಿನ ಕಾಲದಲ್ಲಿ ರೈಲು ಬಂಡಿಯು ಎಲ್ಲಾ ದೇಶಕ್ಕೂ ಹರಡಿಕೊಂಡುದರಮೇಲೆ ಸಮಸ್ತ ದಿವಸಗಳಿಗೂ ಮಾರಾಟಗಳು ಹೆಚ್ಚುವುದರಿಂದ ಜಮೀನು ಭಾಗದಲ್ಲಿ ಚೆನ್ನಾಗಿ ವೃದ್ಧಿಪಡಿಸಿಕೊಂಡು ಫಾಯಿದೆ ಹೊಂದುವುದಕ್ಕೆ ಯಾವ ಕೊರತೆಯೂ ಇಲ್ಲವೆಂತಲೂ, ವ್ಯಾಪಾರಸ್ಥರಿಗೆ ಎಲ್ಲಾ ದೇಶದಲ್ಲೂ ಒಂದೇ ಧಾರಣೆಗಳು ಇರುವುದರಿಂದ ಲಾಭನಷ್ಟಗಳು ಈ ಕಾಲದಲ್ಲಿ ಬಹು ಜಾಗ್ರತೆ ತಗಲುವುದರಿಂದ ವ್ಯವಸಾಯ ಭಾಗವು ಶ್ರೇಷ್ಠವಾದುದೆಂತಲೂ, ಸನ್ ೧೮೯೯ ನೇ ಇಸವಿಯಲ್ಲಿ ನಾನು ಸೊಲ್ಲಾಪುರಕ್ಕೆ ಹೋದಕಾಲದಲ್ಲಿ ನನ್ನ ಸಂಗಡ ಸೂಚಿಸಿದ್ದರ ಮೇಲೆ ವ್ಯವಸಾಯಮಾಡತಕ್ಕವರಿಗೆ ಅಪಾಯಬರಲು ಕಾರಣವಿಲ್ಲವೆಂತಲೂ ನಾನು ದೃಢವಾಗಿ ಹೇಳುತ್ತೇನೆ.

ಸಿ. ಚೆನ್ನಬಸಪ್ಪ, ದಾವಣಗೆರೆ.

ಘಟಿಕಾ ಯಂತ್ರಗಳು

ನಮ್ಮ ದೇಶದಲ್ಲಿ ಜ್ಯೋತಿಷ್ಕರು ಸರಿಯಾಗಿ ಘಟಿಕಾ ನಿರ್ಣಯವನ್ನು ಮಾಡುವುದಕ್ಕೆ ಗಳಿಗೆಬಟ್ಟಲೆಂಬುದನ್ನೇ ಬಹುಕಾಲದಿಂದಲೂ ಉಪಯೋಗಿಸುತ್ತಲಿದ್ದರು. ಪಾಶ್ಚಾತ್ಯರಾಷ್ಟ್ರಗಳಲ್ಲಿ ಗಡಿಯಾರವೆಂಬುದು ೧೫ ನೆಯ ಶತಮಾನದಲ್ಲಿ ಮೊದಲು ಜರ್ಮನಿಯಲ್ಲಿ ಕಂಡುಹಿಡಿಯಲ್ಪಟ್ಟಿತೆಂದು ಕೆಲವರು ಹೇಳುತ್ತಾರೆ. ಆದರೆ ಕ್ರಿ. ಶ. ೧೨೬೬ ನೆ ವರ್ಷದಿಂದ ೧೨೮೯ ರ ವರೆಗೆ ರಾಜ್ಯವನ್ನಾಳಿದ ಇಂಗ್ಲೆಂಡ್ ದೇಶದ ಪ್ರಭುವಾದ ಮೊದಲನೆಯ ರಾಬರ್ಟಿನ ಬಳಿಯಲ್ಲಿ ೧ ಗಡಿಯಾರವಿದ್ದಿತಂತೆ. ೧೫೪೧ ನೆಯ ವರ್ಷದಲ್ಲಿ ಮಾಡಲ್ಪಟ್ಟುದೆಂದು ಮೇಲೆ ಕೆತ್ತಲ್ಪಟ್ಟಿರುವ ಒಂದು ಗಡಿಯಾರವು ಸರ್ ಪರ್ಸ್ಟ್ ಲಿವರ್ ಎಂಬುವರ ವಸ್ತುಪ್ರದರ್ಶನಾಲಯದಲ್ಲಿದ್ದಿತು. ೧೫೪೪ ನೆಯ ವರ್ಷಕ್ಕೆ ಮುಂಚೆಯೇ ಫ್ರಾನ್ಸಿನಲ್ಲಿ ಗಡಿಯಾರಗಳು ವ್ಯವಹಾರದಲ್ಲಿದ್ದುವಂತೆ. ೮ ನೆಯ ಹೆನ್ರಿಯ ಬಳಿಯಲ್ಲಿ ೧ ಗಡಿಯಾರವಿದ್ದಿತು. ೧೫೭೨ ನೆಯ ವರ್ಷದಲ್ಲಿ ಕೈಯ ಕಡಗಕ್ಕೆ ಸೇರಿಸಿ ರಚಿಸಲ್ಪಟ್ಟಿದ್ದ ಗಡಿಯಾರವೊಂದು ಎಲಿಜಬೆತ್ ರಾಣಿಯವರಿಗೆ ದೊರೆತಿದ್ದಿತು. ಆಕೆಯ ಆಳ್ವಿಕೆಯ ಕಡೆಯವರೆಗೂ ಗಡಿಯಾರಗಳು ಇಂಗ್ಲೆಂಡಿನಲ್ಲಿ ವ್ಯವಹರಣೆಗೆ ಬಂದಿರಲಿಲ್ಲ. ಸ್ಪ್ರಿಂಗಿನ ಗಡಿಯಾರಗಳನ್ನು ೧೬೫೮ ರಲ್ಲಿ ಡಾಕ್ಟರ್ ಹೂಕ್ ಎಂಬುವನು ಕಂಡುಹಿಡಿದನೆಂದು ಕೆಲವರು ಹೇಳುವರು. ಹ್ಯೂಗೆನ್ಸ್ ಎಂಬುವನು ಇದರ ರಚನೆಯನ್ನು ಕಂಡು ಹಿಡಿದನೆಂದು ಕೆಲವರು ಹೇಳುವರು. ಎಂಕರ್ ಎಸ್ಕೇಪ್‌ಮೆಂಟ್ ಎಂಬ ಗಡಿಯಾರವನ್ನು ೧೬೮೦ ನೆಯ ವರ್ಷದಲ್ಲಿ ಲಂಡನ್ನಿನ ಒಬ್ಬ ಗಡಿಯಾರಗಳನ್ನು ಸರಿಮಾಡುವ ಮನುಷ್ಯನು ಕಂಡುಹಿಡಿದನು. ಹಾರಿಜಂಟಲ್ ವಾಚ್ ಎಂಬುದನ್ನು ೧೭೨೪ ರಲ್ಲಿ ಗ್ರೇಹಂ ಎಂಬುವನು ಕಂಡುಹಿಡಿದನು. ರಿಪೀಟರ್ ಎಂಬುವುದು ೨ ನೆಯ ಚಾರ್ಲ್ಸ್ ಕಾಲದಲ್ಲಿ ರಚಿಸಲ್ಪಟ್ಟಿತು. ೩ ನೆಯ ಜಾರ್ಜ್ ಕಾಲದಲ್ಲಿ ಅರ್ನಾಲ್ಡ್ ಎಂಬುವನು ಕಾಲು ತೊಲೆಯ ತೂಕದ ಗಡಿಯಾರವೊಂದನ್ನು ಮಾಡಿ ೧೭೬೪ ನೆಯ ಜೂನ್ ತಾ॥ ೪ ರಲ್ಲಿ ಆ ಜಾರ್ಜ್ ಪ್ರಭುವಿಗೆ ಒಪ್ಪಿಸಿದ್ದನು. ಈಗ ಕೋಟಿಗಟ್ಟಲೆ ಗಡಿಯಾರಗಳು ಹುಟ್ಟಿ ೧–೨ ರೂ. ಗಳಿಗೂ ಮಾರಲ್ಪಡುತ್ತ ೩ ಮನೆಯ ಹಳ್ಳಿಗೂ ವ್ಯಾಪಿಸಿರುತ್ತವೆ.

ಇನಾಕ್ಯುಲೇಷನ್.

ಪ್ಲೇಗಿನ ತಡೆಗಾಗಿ ಹಾಕಲ್ಪಡುವ ಸಿಡುಬಿನಿಂದ ಅಷ್ಟೇನೂ ಪ್ರಯೋಜನವಿಲ್ಲವೆಂದೂ, ಅದನ್ನು ಹಾಕಿಸಿಕೊಂಡು ಅದರ ಬೀಜಗಳನ್ನು ದೇಹದಲ್ಲಿ ಸೇರಿಸಿಕೊಂಡವರಿಗೆ ಪ್ಲೇಗು ಅತಿ ಸುಲಭವಾಗಿ ತಗಲುವುದೆಂದೂ, ತತ್ಕಾಲದಲ್ಲಿ ಏನೋ ಪ್ರಯೋಜನಕರವಾಗಿ ತೋರಿದರೂ ಬಳಿಕ ಈ ರೋಗವು ಅಂಥವರಿಗೆ ಬೇಗನೆ ವ್ಯಾಪಿಸುವುದೆಂದೂ ಕೆಲಕೆಲರು ಭಾವಿಸಿಕೊಂಡು, ಇತರರೊಡನೆಯೂ ಹಾಗೆಯೇ ಹೇಳುತ್ತ ಜನರ ಮನಸ್ಸನ್ನು ಕೆಡಿಸುತ್ತಿರುವುದುಂಟು. ಆದರೆ ಬೊಂಬಾಯಿ ಗೌರ್ನಮೆಂಟಿನವರು ಇಂಥ ನಿರಾಧಾರವಾದ ಅಭಿಪ್ರಾಯಗಳ ನಿರ್ಮೂಲನಕ್ಕಾಗಿ ಈ ವಿಷಯವಾಗಿ ಒಂದು ಪ್ರಕಟನವನ್ನು ಮಾಡಿರುತ್ತಾರೆ. ಏನೆಂದರೆ:— ಇನಾಕ್ಯುಲೇಷನ್ ಮಾಡಿಸಿಕೊಂಡವರಿಗೆ ಮೊದಲನೇ ವರ್ಷ ಪ್ಲೇಗು ರೋಗವು ತಗಲುವುದೇ ಇಲ್ಲ. ೨ ನೆಯ ವರ್ಷದಲ್ಲೂ ಆ ರೋಗವು ಬರದಂತೆ ಮಾಡುವುದು. ಕೆಲವ ದೇಹಗಳಲ್ಲಿ ಇನಾಕ್ಯುಲೇಷನ್ನಿನ ಶಕ್ತಿಯು ೫ ವರ್ಷಗಳವರೆಗೂ ನಿಲ್ಲುವುದು. ೫ ವರ್ಷಗಳು ಕಳೆದ ಬಳಿಕ ಇನಾಕ್ಯುಲೇಷನ್ನು ಯಾವ ಪ್ರಯೋಜನವನ್ನೂ ಮಾಡಲಾರದು. ಅದುಕಾರಣ, ಪ್ರತಿ ವರ್ಷವೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವವರ ಗೋಜಿಗೇ ಪ್ಲೇಗು ಬರುವಹಾಗಿಲ್ಲ. ಇನಾಕ್ಯುಲೇಷನ್ನಿನಿಂದ ಪ್ಲೇಗು ಸುಲಭವಾಗಿ ತಗಲುವುದೆಂದು ಹೇಳುವಮಾತು ಸರ್ವಾಬದ್ಧವು. ಒಂದು ಕಾರಾಗೃಹದಲ್ಲಿ ೬೮೩೫ ಮಂದಿಗೆ ಈ ಸಿಡುಬನ್ನು ಹಾಕಲಾಗಿ ಒಬ್ಬನಿಗಾದರೂ ಪ್ಲೇಗು ಬರಲಿಲ್ಲ. ಈ ಸಿಡುಬನ್ನು ಹಾಕುವ ದ್ರಾವಕದಲ್ಲಿ ಪ್ಲೇಗನ್ನು ಹುಟ್ಟಿಸುವ ಕ್ರಿಮಿಗಳಿರುವುವೆಂದು ಹೇಳುವ ಮಾತು ನಿಜ. ಆದರೆ ಇವು ಶರೀರದೊಳಕ್ಕೆ ಸೇರಿದ ಕೂಡಲೆ ರಕ್ತದೊಡನೆ ಕಲೆತುಹೋಗಿ, ಹೊಸದಾಗಿ ಬಂದು ಸೇರುವ ಪ್ಲೇಗಿನ ಬೀಜವಾದ ಕ್ರಿಮಿಗಳನ್ನು ತತ್‌ಕ್ಷಣವೇ ಕೊಂದುಬಿಡುವುವು. ಈ ದ್ರಾವಕದಲ್ಲಿರುವ ಪ್ಲೇಗು ಕ್ರಿಮಿಗಳಿಗೂ ರೋಗದ ಮೂಲಬೀಜವಾದ ಕ್ರಿಮಿಗಳಿಗೂ ಸಂಬಂಧವು ಲೇಶಮಾತ್ರವೂ ಇರುವುದಿಲ್ಲ. ಇನಾಕ್ಯುಲೇಷನ್ ರಸದಲ್ಲಿರುವ ಕ್ರಿಮಿಗಳು ಪ್ರಾಣವನ್ನು ಕಾಪಾಡುವುವು. ಪ್ಲೇಗಿನ ಕ್ರಿಮಿಗಳು ಪ್ರಾಣವನ್ನು ತೆಗೆದುಕೊಳ್ಳುವುವು.

ಡೆನ್ಮಾರ್ಕ್‌ರಾಜರ ಮೃತಿ.

೮ ನೆಯ ಫ್ರೆಡರಿಕ್ ಎಂಬ ಹೆಸರುಳ್ಳ ಈ ಪ್ರಭುವು ತಮ್ಮ ದೇಹಾರೋಗ್ಯದ ನಿಮಿತ್ತವಾಗಿ ಸತೀಸುತರೊಡನೆ ಜರ್ಮನಿಗೆ ಹೋಗಿದ್ದು ಸ್ವದೇಶಕ್ಕೆ ಹಿಂತಿರುಗಿ ದಾರಿಯಲ್ಲಿ ಹಾಂಬರ್ಗನಲ್ಲಿರುವ ಒಂದು ಭೋಜನಾಲಯದಲ್ಲಿಳಿದುಕೊಂಡಿದ್ದರು. ಕಳೆದ ತಾ॥ ೧೪ ರ ರಾತ್ರಿ ಇವರು ಭೋಜನಾನಂತರ ಪದ್ಧತಿಯಮೇರೆಗೆ ಒಂಟಿಯಾಗಿ ಬೀದಿಯಲ್ಲಿ ವಾಯುವಿಹಾರಕ್ಕೆ ಹೋಗಿದ್ದರು. ಬರುವಾಗ ಅಕಸ್ಮಾತ್ತಾಗಿ ಮೂರ್ಛೆಗೊಂಡು ಬಿದ್ದರು. ಯಾರೋ ಸಾಮಾನ್ಯಮನುಷ್ಯನೆಂದು ತಿಳಿದು ಪೋಲೀಸರು ವೈದ್ಯಶಾಲೆಗೆ ಸಾಗಿಸಿದರು. ಈ ಪ್ರಭುವು ಆ ರಾತ್ರಿಯೇ ಒಂದು ಮಾತನ್ನೂ ಆಡದೆ ಮೂರ್ಛೆಯೂ ತಿಳಿಯದೆ ವೈದ್ಯಶಾಲೆಯಲ್ಲಿಯೇ ಭೌತಿಕದೇಹಪರಿತ್ಯಾಗಮಾಡಿದರು. ಬೆಳಿಗ್ಗೆ ಮುಂದಣ ಸಂಸ್ಕಾರಕ್ಕಾಗಿ ಶವವನ್ನು ಸ್ಮಶಾನಕ್ಕೆ ಸಾಗಿಸಿದ್ದರು. ಅಷ್ಟರಲ್ಲಿ ಪ್ರಭುವಿನ ಕಡೆಯವರು ರಾತ್ರಿಯೆಲ್ಲಾ ಹುಡುಕಿ, ಕಡೆಗೆ ಶವವಿದ್ದ ಸ್ಥಳಕ್ಕೆ ಹೋಗಿ ಗುರ್ತಿಸಿ, ಅಪರಿಮಿತವಾಗಿ ದುಃಖಿಸಿ, ತಾವಿಳಿದಿದ್ದ ಭೋಜನಾಲಯಕ್ಕೆ ಸಾಗಿಸಿತಂದು, ಅಲ್ಲಿಂದ ತಮ್ಮ ರಾಜಧಾನಿಯಾದ ಕೋಪನ್‌ಹೇಗನ್ ಪಟ್ಟಣಕ್ಕೆ ಹಡಗಿನ ಮೂಲಕ ತೆಗೆದುಕೊಂಡು ಬಂದರು. ಅಲ್ಲಿ ಮುಂದಿನ ಕಾರ್ಯಗಳೆಲ್ಲಾ ನಡೆಸಲ್ಪಟ್ಟುವು. ಇವರು ಗತಿಸಿದ ಎಡ್ವರ್ಡ್ ಚಕ್ರವರ್ತಿಯವರ ಪತ್ನಿಯರಾದ ಅಲೆಗ್ಸಾಂಡ್ರಿಯಾ ಮಹಾರಾಜ್ಞಿಯವರ ಸಹೋದರರು. ಎಂದರೆ ನಮ್ಮ ಈಗಿನ ೫ ನೆಯ ಜಾರ್ಜ್ ಚಕ್ರವರ್ತಿಯವರ ಸೋದರಮಾವಂದಿರು. ಇವರಿಗೆ ಅಂತ್ಯಕಾಲದಲ್ಲಿ ೬೯ ವರ್ಷಗಳು ಮಾತ್ರವೇ ಆಗಿದ್ದುವು. ಇವರ ತಂದೆಯವರಾದ ೯ ನೆಯ ಕ್ರಿಶ್ಚಿಯನ್ ಪ್ರಭುಗಳು ಗತಿಸಿ ೫ ವರ್ಷಗಳಾಗಿದ್ದುವು. ಫ್ರೆಡರಿಕ್ ಪ್ರಭುಗಳು ಚಿಕ್ಕವಯಸ್ಸಿನಲ್ಲೇ ವಿದೇಶದಲ್ಲಿ ತಥಾಪಿ ಯಾವುದೋ ಒಂದು ವೈದ್ಯಶಾಲೆಯಲ್ಲಿ ಸ್ವಕೀಯರೊಡನೆಯೂ ೧ ಮಾತನ್ನೂ ಆಡುವುದಕ್ಕಿಲ್ಲದೆ ವಿಧಿವಶರಾದುದನ್ನು ಕೇಳಿದರೆ ವಿಧಿವಿಲಾಸವು ಎಷ್ಟು ಬಲವತ್ತರವಾದುದೆಂಬುದು ವ್ಯಕ್ತವಾಗುತ್ತದೆ. ಈ ವಾರ್ತೆಯು ಹರಡಿದ ಕೂಡಲೇ ಯೂರೋಪಿನ ಪ್ರತಿರಾಜರೂ, ಮಂತ್ರಿಮಂಡಲದವರೂ ಸಹ ಆ ಪ್ರಭುಗಳ ಕುಟುಂಬದವರಿಗೆ ತಮ್ಮ ಅನುತಾಪವನ್ನು ತಿಳಿಯಪಡಿಸಿದರು. ಶ್ರೀ ಜಾರ್ಜ್ ಸಾರ್ವಭೌಮರು ತಮ್ಮ ಪತ್ನೀ ಸಮೇತರಾಗಿ, ತಮ್ಮ ಮಾತೃಶ್ರೀಯವರ ಬಳಿಗೆ ಹೋಗಿದ್ದು, ಅವರ ದುಃಖೋಪಶಮನವನ್ನು ಮಾಡಿಬಂದರು. ಈ ಫ್ರೆಡರಿಕ್ ಪ್ರಭುಗಳ ಕುಮಾರರಾದ ೧೦ ನೆ ಕ್ರಿಶ್ಚಿಯನ್ ರವರು ಆ ದೇಶದ ಪ್ರಭುವೆಂದು ಪ್ರಕಟಿಸಲ್ಪಟ್ಟಿದ್ದಾರೆ.

ವೀರಶೈವಾಶ್ರಮ ಬೆಂಗಳೂರು.

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಪಾಳೆಯಗಾರರು, ಅಧಿಕಾರಿಗಳು ಮೊದಲಾದವರುಗಳಿಗು ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲ್ಯವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಿಸಲ್ಪಟ್ಟಿರುವಂತೆ ಈ ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಬಹುಜನಗಳು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿವಾದಸ್ಥರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ಬರಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋಟೆಯೊಳಗೆ ಪೋಸ್ಟಾಫೀಸಿನ ಮಗ್ಗುಲಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವನ್ನು ಏರ್ಪಡಿಸಿದೆ. ಈ ಕಟ್ಟಡದಲ್ಲಿ ಶ್ರೀಮಂತರುಗಳೂ, ಪಾಳೆಯಗಾರರೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುವಲ್ಲದೆ, ಈಗಿನ ಕಾಲದ ಆರೋಗ್ಯಸೂತ್ರಕ್ಕನುಗುಣವಾಗಿವೆ. ಬುದ್ಧಿವಂತರಾದ ಪಾಚಕರನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕ ಏರ್ಪಾಟನ್ನಿಟ್ಟಿದೆ. ಮತ್ತೂ ಊಟದ ಖರ್ಚನ್ನೂ ತಕ್ಕಮಟ್ಟಿಗೆ ಸುಲಭಮಾಡಿದೆ. ಇಲ್ಲಿಯ ಏರ್ಪಾಟನ್ನು ತಿಳಿಯಲಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಾರರಿಂದ ಪ್ರತ್ಯಕ್ಷವಾಗಾಗಲೀ ಅಥವಾ ಲಿಖಿತ ಮೂಲಕವಾಗಾಗಲೀ ತಿಳಿಯಬಹುದು.

ಎಸ್. ಕಲ್ಲಪ್ಪ.
ಊದುಬತ್ತಿ ಷಾಪ್, ದೊಡ್ಡಪೇಟೆ, ಬೆಂಗಳೂರು.

ಒಬ್ಬ ದೇಶಾಧೀಶನ ದಿನಚರ್ಯ.

ಪ್ರಪಂಚದಲ್ಲೆಲ್ಲಾ ಸಂಪತ್ತಿನಲ್ಲಿಯೂ, ಬೇಸಾಯದಲ್ಲಿಯೂ, ಕೈಗಾರಿಕೆಯಲ್ಲಿಯೂ, ವ್ಯಾಪಾರದಲ್ಲಿಯೂ, ರಾಜತಂತ್ರದಲ್ಲಿಯೂ ಅಗ್ರಸ್ಥಾನವನ್ನು ಅಮೇರಿಕಾದೇಶವು ಪಡೆದುಕೊಂಡಿರುವುದು. ಇದರ ಆಳ್ವಿಕೆಯು ಒಂದು ರಾಜವಂಶದ ಅಧೀನಕ್ಕೆ ಸೇರಿರುವುದಿಲ್ಲ. ಪ್ರಜೆಗಳಿಂದಲೇ ೪ ವರ್ಷಕ್ಕೊಂದಾವೃತ್ತಿ ಆರಿಸಲ್ಪಟ್ಟ ಮಹನೀಯನೊಬ್ಬನು ಅಧ್ಯಕ್ಷನಾಗಿ ಆಳುತ್ತಿರುವನು. ಎಲ್ಲಾ ದೇಶಗಳಿಗಿಂತಲೂ ಮುಂದಾಗಿರುವ ರಾಷ್ಟ್ರವನ್ನು ಸರ್ವಸಮರ್ಪಕವಾಗಿ ಆಳುವ ಕೆಲಸವು ಸಾಧಾರಣವಲ್ಲ. ತಥಾಪಿ ಸಕಲಸದ್ಗುಣಸಂಪೂರ್ಣನಾಗಿ ದೇವಸದೃಶನೆನಿಸಿಕೊಂಡಿರುವ ಮಹನೀಯನಿಗಲ್ಲದೆ ಇತರರಿಗೆ ಇಂಥ ಪದವಿಯನ್ನು ಅಲ್ಲಿನ ಪ್ರಜೆಗಳೇ ವಹಿಸಿಕೊಡುವುದು ಅಸಂಭವ. ಅದರಮೇಲೂ ಈಗಿನ ನಾಗರಿಕಕಾಲದಲ್ಲಿ ಯಾವ ದೇಶದ ಪ್ರಭುತ್ವವೂ ಪೂರ್ವದ ನವಾಬರಕಾಲದಂತಹ ಕೇವಲ ಸುಖೋಪಭೋಗದ ಸಾಧನವಾಗಿರುವುದಿಲ್ಲ. ಹಗಲೂ ರಾತ್ರಿಯೂ ಬುದ್ಧಿಕ್ಲೇಶಮನಃಕ್ಲೇಶಗಳನ್ನುಹೊಂದಿ ಕಷ್ಟಪಡದಿದ್ದವರಿಂದ ಪ್ರಭುತ್ವ ನಿರ್ವಾಹವಾಗುವಂತಿಲ್ಲ. ಇದರಮೇಲೆ ಅಮೇರಿಕಾದ ಪ್ರಭುತ್ವದ ವಿಷಯವನ್ನು ಹೇಳುವುದೇನು? ಸದ್ಯದಲ್ಲಿ ಆ ದೇಶಕ್ಕೆ ಟಾಫ್ಟ್ ಎಂಬ ಮಹನೀಯರು ಅಧ್ಯಕ್ಷರಾಗಿದ್ದಾರೆ. ಇವರು ಪ್ರತಿದಿನವೂ ೧೬॥ ಗಂಟೆಗಳಕಾಲ ಕೆಲಸಮಾಡುತ್ತಿರುವರು. ಹೇಗೆಂದರೆ—ಬೆಳಗಿನ ೬॥ ಗಂಟೆಗೆ ಹಾಸುಗೆಯಿಂದೆದ್ದು ೭॥ ರೊಳಗೆ ಶೌಚಕರ್ಮಗಳನ್ನು ಮುಗಿಸಿಕೊಂಡು ೮॥ ರೊಳಗೆ ಸ್ನಾನವನ್ನೂ ವಸ್ತ್ರಧಾರಣಕ್ರಿಯೆಗಳನ್ನೂ ನೆರವೇರಿಸಿಕೊಳ್ಳುವರು. ಬಳಿಕ ೧ ಗಂಟೆಯಕಾಲದಲ್ಲಿ ಪುಸ್ತಕಾಲಯಕ್ಕೆ ಹೋಗಿ ಬೆಳಗಿನ ವಾರ್ತಾಪತ್ರಿಕೆಗಳನ್ನೋದುವರು, ಅಥವಾ ಅವಶ್ಯಕವಾಗಿ ಬರೆಯಬೇಕಾದ ಕಾಗದಗಳ ವಿಷಯವನ್ನು ಲಘುಲೇಖಕರಿಗೆ ಬಾಯಿಂದ ಹೇಳಿ ಬರೆಯಿಸುವರು. ಇಲ್ಲವೆ ಯಾವುದಾದರೊಂದು ಗ್ರಂಥವನ್ನು ಓದುವರು. ೮ ಗಂಟೆಯಮೇಲೆ ಹೆಂಡತಿಮಕ್ಕಳುಗಳೊಡನೆ ಕುಳಿತು ಬೆಳಗಿನ ಊಟವನ್ನು ಅರ್ಧಗಂಟೆಯೊಳಗೆ ಮಾಡುವರು. ಅಲ್ಲಿಂದ ೯ ಗಂಟೆವರೆಗೆ ಸರಸಸಲ್ಲಾಪದಲ್ಲಿರುವರು. ಅನಂತರ ಕಾರ್ಯಸ್ಥಾನಕ್ಕೆ ಹೋಗಿ ೧೦ ಗಂಟೆಯವರೆಗೂ ಕಾರ್ಯದರ್ಶಿಯು ಅಣಿಮಾಡಿಟ್ಟಿರುವ ಕಾಗದಪತ್ರಗಳನ್ನು ಪರಿಶೀಲಿಸುವರು. ೧೦ ಗಂಟೆಯಮೇಲೆ ಮಧ್ಯಾಹ್ನ ೧ ಗಂಟೆಯವರೆಗೂ ತಮ್ಮನ್ನು ನೋಡುವುದಕ್ಕಾಗಿ ಬರುವ ನಾನಾತರಗತಿಯ ಜನರಿಗೆಲ್ಲಾ ದರ್ಶನವನ್ನಿತ್ತು ಸಂಭಾಷಿಸುತ್ತಿರುವರು. ೧ ರಿಂದ ೧॥ ಗಂಟೆಯವರೆಗೆ ಮರುದಿವಸ ಯಾರುಯಾರಿಗೆ ದರ್ಶನವಿತ್ತು ಯಾವಯಾವ ವಿಷಯವಾಗಿ ಮಾತನಾಡಬೇಕೋ ಅದನ್ನು ಕುರಿತು ತಮ್ಮ ಕಾರ್ಯದರ್ಶಿಯೊಡನೆ ಹೇಳಿ ಏರ್ಪಾಟನ್ನು ಮಾಡುವರು. ಬಳಿಕ ಮಧ್ಯಾಹ್ನದ ಭೋಜನಕ್ಕೆ ತೆರಳುವರು. ೧॥ ಗಂಟೆಗೆ ಸರಿಯಾಗಿ ಊಟಕ್ಕೆ ಬರದೆಯಿದ್ದರೆ ಅವರ ಹೆಂಡತಿಯು ಥಟ್ಟನೆ ಟೆಲಿಫೋನಿನಮೂಲಕ ಪತಿಯನ್ನು ಬರಬೇಕೆಂದು ಪ್ರಾರ್ಥಿಸುವರು. ನನ್ನ ಹೆಂಡತಿಯ ಅಪ್ಪಣೆಯಾಯಿತೆಂದು ಹೇಳಿ, ಅವರು ಮಾಡುತ್ತಿದ್ದ ಕೆಲಸವನ್ನೂ ಬಿಟ್ಟು ತೆರಳುವರು. ಊಟವನ್ನೂ, ಸರಸಸಲ್ಲಾಪಗಳನ್ನೂ ಮುಗಿಸಿಕೊಂಡು ಮರಳಿ ೩ ಗಂಟೆಗೆ ಕಾರ್ಯಾಲಯಕ್ಕೆ ಬರುವರು. ಮಧ್ಯಾಹ್ನಕಾಲದ ವಾರ್ತಾಪತ್ರಿಕೆಗಳನ್ನೋದಿದಬಳಿಕ ನಿಯಮನಿರ್ಮಾಣ ವಿಷಯಕ್ಕೂ ಸರ್ಕಾರದ ಇತರಶಾಖೆಗಳಿಗೂ ಸಂಬಂಧಿಸಿದ ಕಾರ್ಯಗಳನ್ನು ಸಾಯಂಕಾಲದ ೬ ಗಂಟೆಯವರೆಗೂ ಮಾಡುತ್ತಿರುವರು. ೬ ಗಂಟೆಯೊಡೆದ ಕೂಡಲೇ ಎಂತಹ ಗಾಳಿಮಳೆಯಾಗಿದ್ದರೂ ವಾಯುವಿಹಾರಕ್ಕಾಗಿ ಹೊರಟು, ೭ ಗಂಟೆಗೆ ಸರಿಯಾಗಿ ರಾತ್ರಿಯ ಊಟಕ್ಕೋಸುಗ ಮನೆಯನ್ನುಸೇರುವರು. ಕೂಡಲೇ ಮಡಿಯುಡುಪನ್ನು ಧರಿಸಿಕೊಳ್ಳುವರು. ೮ ಗಂಟೆ

ಮೈ.ಸ್ಟಾ. 1912 ಮೆ 27. ಪು-3.

ಯಿಂದ ೯ ಗಂಟೆಯವರೆಗೂ ಅನೇಕವೇಳೆ ಸ್ನೇಹಿತರೊಡನೆಯೂ, ಅತಿಥಿಗಳೊಡನೆಯೂ, ತಮ್ಮ ಹೆಂಡತಿ ಮಕ್ಕಳೊಡನೆಯೂ ಕೂಡಿ ಭೋಜನವನ್ನು ಮಾಡುವರು. ಚಳಿಗಾಲದಲ್ಲಿ ಟಾಫ್ಟ್‌ರವರು ವಾರಕ್ಕೆರಡು ದಿನ ನಾಟಕಾವಲೋಕನಕ್ಕೆ ಹೋಗುವರು. ಅಂಥದಿವಸ ಹೊತ್ತಿಗೆ ಮುಂಚೆ ಊಟವನ್ನು ತೀರಿಸಿ ೭॥ ಗಂಟೆಗೆ ಹೋಗಿ ೯ ಗಂಟೆಯವರೆಗಿದ್ದು ಬರುವರು. ೯ ಗಂಟೆಯ ಮೇಲೆ ಅರ್ಧಗಂಟೆಯವರೆಗೆ ತಮ್ಮ ಪತ್ನಿಯೊಡನೆಯಾಗಲಿ ಇನ್ನಾವ ಸ್ನೇಹಿತರೊಡನೆಯಾಗಲಿ ಬ್ರಿಡ್ಜ್ ಎಂಬ ಆಟವನ್ನಾಡುವರು. ಅಲ್ಲಿಂದ ೧೨ ಗಂಟೆಯ ರಾತ್ರಿಯವರೆಗೆ ತಾವು ಆ ವಾರದಲ್ಲಿ ಮಾಡಬೇಕಾಗಿರುವ ಉಪನ್ಯಾಸಗಳನ್ನು ಬಾಯಿಂದ ಹೇಳಿ ಬರೆಯಿಸಿ ಮುದ್ರಣಕ್ಕಾಗಿ ಸಿದ್ಧಗೊಳಿಸುವರು. ೧೨ ರಿಂದ ೧೨॥ ವರೆಗೆ ನಾನಾದೇಶದ ಚರಿತ್ರವನ್ನಾಗಲಿ, ಕಥೆಗಳನ್ನಾಗಲಿ ಓದುತ್ತಿರುವರು. ಬಳಿಕ ನಿದ್ರಿಸುವುದಕ್ಕೆ ಹೋಗುವರು. ಹೀಗೆ ನಿಯತವಾಗಿ ಕೆಲಸ ಮಾಡತಕ್ಕ ಅಭ್ಯಾಸವು ಸರ್ವರಿಗೂ ಅವಶ್ಯಕವಾದುದು

ಮೈಸೂರ್ ಸ್ಟಾರ್

೧೯೧೨ ನೆಯ ಮೇ ತಾ॥ ೨೭ ನೆಯ ಸೋಮವಾರ

ವರ್ಷವರ್ಧಂತ್ಯುತ್ಸವವು.

ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜಒಡೆಯರವರಿಗೆ ನೆನ್ನೆಯ ದಿನಕ್ಕೆ ೨೮ ವರ್ಷಗಳು ತುಂಬಿ, ಈಗ ೨೯ ನೆಯ ವರ್ಷವು ನಡೆಯುತ್ತಿದೆ. ನೆನ್ನೆಯ ದಿನ ತತ್ಸಂಬಂಧವಾದ ವರ್ಷವರ್ಧಂತ್ಯುತ್ಸವಗಳು ಸಂಭ್ರಮಾಡಂಬರಗಳಿಂದ ಯಥಾವಿಧಿಯಾಗಿ ನೆರವೇರಿಸಲ್ಪಟ್ಟುವು. ಕಳೆದ ವೈಶಾಖ ಬಹುಳ ೧೧ ಗೆ ೨೪ ವರ್ಷಗಳು ತುಂಬಿ ೨೫ ನೆಯ ವಯಸ್ಸಿನಲ್ಲಿ ಪದಾರ್ಪಣ ಮಾಡಿರುವ ಶ್ರೀಮದ್ಯುವರಾಜರ ಸಮೇತರಾಗಿ ನಮ್ಮ ಮಹಾರಾಜರವರು ಅಶ್ವಾರೂಢರಾಗಿ ರಾಜವೀಧಿಗಳಲ್ಲಿ ಸಕಲ ಪರಿವಾರದೊಡನೆ ಉತ್ಸವಗೊಂಡು ಬಂದು ನೆರೆದಿದ್ದ ಪ್ರಜಾವರ್ಗಕ್ಕೆಲ್ಲಾ ಅಮಿತಾನಂದವನ್ನುಂಟುಮಾಡಿದರು.

ರಾಜಧಾನಿಯಲ್ಲಿ ನಡೆಯತಕ್ಕ ವಿಶೇಷೋತ್ಸವಗಳಲ್ಲಿ ಮಹಾನವಮಿಯ ಮಹೋತ್ಸವವೊಂದು, ಈ ವರ್ಧಂತ್ಯುತ್ಸವವೊಂದು—ಇವೆರಡೇ ಮುಖ್ಯವಾದುವುಗಳು. ಈ ಎರಡು ಸಮಯಗಳಲ್ಲಿಯೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ಪ್ರಜಾವರ್ಗದವರನೇಕರೂ ರಾಜಧಾನಿಗೆ ಬಂದು ಸೇರುವ ಪದ್ಧತಿಯಿರುತ್ತದೆ. ಇಂಥ ಸುಸಮಯವನ್ನು ಬರಿಯ ಕಣ್ಣಿನಹಬ್ಬದಲ್ಲೇ ಪರ್ಯವಸಾನಮಾಡುವುದಕ್ಕಿಂತಲೂ ದೇಶಹಿತಕಾರ್ಯಕ್ಕೂ ವಿನಿಯೋಗಿಸಬೇಕೆಂಬ ಮಹೋದ್ದೇಶದಿಂದಲೇ ಮಹಾನವಮಿಯ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ಕೂಡುವ ಏರ್ಪಾಡು ಶ್ರೀ ಚಾಮರಾಜೇಂದ್ರರವರ ಕಾಲದಲ್ಲಿ ಗತಿಸಿದ ರಂಗಾಚಾರ್ಲುರವರ ಮಂತ್ರಿತ್ವದಲ್ಲಿ ಸ್ಥಾಪಿತವಾಯಿತು. ಅಂತಹ ಏರ್ಪಾಡನ್ನೇ ವರ್ಧಂತ್ಯುತ್ಸವ ಸಮಯದಲ್ಲೂ ಬೇರೆ ವಿಧವಾಗಿ ಮಾಡಿದ ಕೀರ್ತಿಯು ನಮ್ಮ ಶ್ರೀಮನ್ಮಹಾರಾಜರವರಿಗೂ, ಅವರ ಮಂತ್ರಿವರ್ಯರಾದ ಮ॥ ಟಿ ಆನಂದರಾಯರವರಿಗೂ ಪ್ರಾಪ್ತವಾಗಿರುವುದು. ಕಳೆದ ವರ್ಷದಿಂದಲೂ ಈ ವರ್ಧಂತಿಯ ಸಮಯದೊಳಗೆ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಒಂದು ಸಂಘವು ಏರ್ಪಡಿಸಲ್ಪಟ್ಟು ನಡೆಯುತ್ತಾ ಬಂದಿರುವ ಸಂಗತಿಯು ನಮ್ಮ ಪತ್ರಿಕಾ ವಾಚಕರಿಗೆಲ್ಲಾ ಗೊತ್ತೇ ಇದೆ. ಈ ಸಂಘಕ್ಕೆ ಸಂಬಂಧಿಸಿದ ವ್ಯವಸಾಯ, ಕೈಗಾರಿಕೆ ಮತ್ತೂ ವಿದ್ಯಾಭ್ಯಾಸಗಳೆಂಬ ಉಪಶಾಖೆಗಳ ಕೂಟಗಳು ಈಗ ರಾಜಧಾನಿಯಲ್ಲಿ ಕೂಡಿ ಕೆಲಸಮಾಡುತ್ತಿವೆ. ಪ್ರಜಾಪ್ರತಿನಿಧಿಸಭೆಯಂತೆ ಈ ಸಭೆಗಳ ಕೆಲಸವು ಬಹಿರಂಗವಾಗಿ ನಡೆಯದೆ ಇರುವುದು ಕೊರತೆಯಾಗಿದ್ದರೂ ಈ ಸಭೆಯು ಉತ್ಪಾದನದಲ್ಲಿ ಶ್ರೀಮನ್ಮಹಾರಾಜರಿಗಿರುವ ಶ್ರೇಷ್ಠವಾದ ಉದ್ದೇಶವನ್ನು ನೆರವೇರಿಸುವಲ್ಲಿ ಈ ಸಭೆಯು ಮನಮುಟ್ಟಿ ಕೆಲಸಮಾಡುತ್ತಿರುವುದೆಂದು ಊಹಿಸಬಹುದಾಗಿದೆ. ಅದರೂ ಇಂಥ ಸಂಘವು ದೇಶಹಿತಕ್ಕಾಗಿ ಸ್ಥಾಪಿಸಲ್ಪಟ್ಟಿರುವುದೆಂಬುದನ್ನು ಕೇಳಿ ಉಲ್ಲಾಸಗೊಂಡಿರುವ ಪ್ರಜೆಗಳು ಇದರಿಂದ ಹೊರಬೀಳುವ ಫಲವಿಶೇಷವನ್ನು ಎಂದಿಗೆ ಕಣ್ಣಾರ ಕಾಣುವೆವೋ ಎಂದು ಕುತೂಹಲಪಟ್ಟುಕೊಂಡಿದ್ದಾರೆ. ಅದನ್ನು ಆದಷ್ಟು ಶೀಘ್ರವಾಗಿ ಸ್ವಲ್ಪಸ್ವಲ್ಪವಾಗಿ ಯಾದರೂ ಹೊರಬೀಳುವಂತೆ ಮಾಡುವುದು ಈ ಸಂಘದವರ ಕರ್ತವ್ಯವಾಗಿದೆ.

ಶಾಶ್ವತವಾದ ಕಾರ್ಯವೊಂದನ್ನು ಸ್ಥಾಪಿಸುವುದಕ್ಕೆ ಬಲವತ್ತರವಾದ ವಿಚಾರಗಳು ಆವಶ್ಯಕವಾಗಿರುತ್ತವೆ. ಆದರೂ ಅಂತಹ ವಿಚಾರಕ್ಕಾಗಿ ಹೆಚ್ಚು ಕಾಲಯಾಪನೆಮಾಡುವುದಕ್ಕಿಂತಲೂ, ಪ್ರಜಾವರ್ಗದ ಮನಸ್ಸಿನಲ್ಲಿ ಕುತೂಹಲದ ಬಿಸಿಯು ಆರುವುದರೊಳಗಾಗಿಯೇ ತಮ್ಮ ವಿಚಾರದ ಪರಿಣಾಮವನ್ನು ಬೆಳೆಯುವುದು ಆವಶ್ಯಕವಾಗಿರುತ್ತದೆ. ಪ್ರಸಕ್ತ ಸಂಘದ ಉದ್ದೇಶವು ನೆರವೇರಬೇಕಾದರೂ ಸರ್ಕಾರದವರ ಪ್ರಯತ್ನದ ಜತೆಗೆ ಪ್ರಜೆಗಳ ಸಾಹಸವೂ ಜತೆಗೊಳ್ಳಬೇಕಾಗಿಯೇ ಇರುತ್ತದೆಂಬುದನ್ನು ಹೇಳಬೇಕಾಗಿಲ್ಲ. ಉತ್ತರ ಹಿಂದೂಸ್ಥಾನದೇಶದ ಪ್ರಜೆಗಳಿಗಿರುವಷ್ಟು ಸ್ವೋನ್ನತಿಸಾಧಕಜ್ಞಾನವೂ, ಕರ್ತವ್ಯತತ್ಪರತೆಯೂ ದಾಕ್ಷಿಣಾತ್ಯರಾದ ನಮ್ಮ ದೇಶೀಯರಿಗೆ ಇನ್ನೂ ಉಂಟಾಗಿಲ್ಲ. ಅಲ್ಲಿನ ಲೋಕಲ್ ಬೋರ್ಡು ಮೊದಲಾದುವುಗಳಲ್ಲಿ ಪ್ರಜಾಪ್ರತಿನಿಧಿಗಳು ಹೇಗೆ ತಮ್ಮ ಕಾರ್ಯವನ್ನು ತಾವುತಾವೇ ಪರಪ್ರೇರಣೆಯಿಲ್ಲದೆ ಮಾಡಿಕೊಳ್ಳುತ್ತಿರುವರೆಂಬುದನ್ನು ನೋಡಿದರೆ ಈ ಸಂಗತಿಯು ಸ್ಪಷ್ಟವಾಗುತ್ತದೆ. ಅಂಥ ಸಾಮರ್ಥ್ಯವು ನಮ್ಮ ದೇಶೀಯರಲ್ಲಿ ಉಂಟಾಗುತ್ತ ಬಂದಲ್ಲದೆ, ಸರ್ಕಾರದವರ ಮೇಲೆ ಕಂಡಂತಹ ಉದ್ದೇಶಗಳು ಸಫಲವಾಗಲಾರವು. ಅಂಥ ಸಾಮರ್ಥ್ಯವು ಉಂಟಾಗಬೇಕಾದರೆ ಪ್ರಜಾಸಾಮಾನ್ಯದಲ್ಲಿ ಮುಖ್ಯವಾಗಿ ವಿದ್ಯಾಪ್ರಚಾರವಾಗಬೇಕು. ಮನುಷ್ಯನ ಅಂಗಾಂಗದ ಕೆಲಸಗಳೆಲ್ಲಾ ಸರಿಯಾಗಿ ನಡೆದು ದೇಹಚರಿತಾರ್ಥವು ಸಮಗ್ರವಾಗಿ ಆಗಬೇಕಾದರೆ, ಮಿದುಳು ಸಮೀಚೀನವಾದ ಸ್ಥಿತಿಯಲ್ಲಿರಬೇಕಾದುದು ಆವಶ್ಯಕವಾಗಿರುವಂತೆ ವಿದ್ಯಾವಿವೇಕಗಳ ಸಾಹಾಯ್ಯವು ಪ್ರಜೆಗಳಿಗಿಲ್ಲದಿದ್ದರೆ ಅವರಿಂದ ಮಾಡಲ್ಪಡುವ ಉದ್ಯೋಗಗಳು ಸಮಗ್ರವಾದ ಪುಷ್ಟಿಯನ್ನು ಅವರಿಗೆ ಉಂಟುಮಾಡಿಕೊಡಲಾರವು. ವಿದ್ಯೆಯೆಂದರೆ ವಕೀಲತನ ಸರ್ಕಾರದಧಿಕಾರ ಮೊದಲಾದುವುಗಳನ್ನು ಸಂಪಾದಿಸುವುದಕ್ಕಾಗೇರ್ಪಟ್ಟ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ತಮ್ಮ ನೆರೆಹೊರೆಯವರ ಹಣವನ್ನು ಸುಲಿದುಕೊಳ್ಳುವುದಕ್ಕಾಗಿಯೇ ಮಾಡಲ್ಪಡುವುದಲ್ಲ. ಅಂಥ ವಿದ್ಯೆಯು ಹೆಚ್ಚುವುದರಿಂದ ದೇಶದ ಸಂಪತ್ತು ಎಂದಿಗೂ ವೃದ್ಧಿಯಾಗುವುದಿಲ್ಲ. ದೇಶದ ಸಂಪತ್ತನ್ನು ನಿಜವಾಗಿ ಹೆಚ್ಚಿಸತಕ್ಕವು ಕೃಷಿವಾಣಿಜ್ಯಶಿಲ್ಪಗಳೇ ಆಗಿರುತ್ತವೆ. ನಮ್ಮ ದೇಶದಲ್ಲಿ ಇದುವರೆಗೆ ಪ್ರಸರಿಸಿರುವ ಪ್ರೌಢವಿದ್ಯೆಯ ಸಹಾಯವೆಲ್ಲವೂ ಮೇಲೆಹೇಳಿದ ನೆರೆಹೊರೆಯವರು ಗಳಿಸಿದ ಹಣದಲ್ಲಿ ಪಾಲು ಮಾಡಿಕೊಳ್ಳುವ ಕೆಲಸಕ್ಕೆ ವಿಶೇಷತಃ ಸಹಾಯವಾಯಿತೇ ಹೊರತು ಕೃಷಿವಾಣಿಜ್ಯಾದಿಗಳಿಗೆ ಸಹಾಯಕವಾಗಲಿಲ್ಲ. ಅದರಿಂದಲೇ ಈ ದೇಶದ ಸಂಪತ್ತಿಸ್ಥಿತಿಯು ತಲೆಕೆಳಗಾಗುವಂತಾಯಿತು. ಈ ದೋಷವನ್ನು ತಿಳಿದೇ ಲಾರ್ಡ್ ಕರ್ಜನರವರು ಈ ದೇಶದ ವಿದ್ಯಾಭ್ಯಾಸಕ್ರಮದಲ್ಲಿ ಪ್ರೌಢವಿದ್ಯೆಗಿಂತಲೂ ಬಾಲ್ಯವಿದ್ಯಾಪ್ರಚಾರಕ್ಕಾಗಿ ಹೆಚ್ಚಾದ ಪ್ರೋತ್ಸಾಹವನ್ನು ಮಾಡಬೇಕಾದುದಾವಶ್ಯಕವೆಂದು ನಿರ್ಧರಿಸಿದರು.

ಕೃಷಿವಾಣಿಜ್ಯ ಶಿಲ್ಪಗಳನ್ನು ಮಾಡುವ ಪ್ರಜೆಗಳೇ ದೇಶದ ಸಕಲ ಸಂಪತ್ತಿಗೂ ತಳಹದಿಯಾಗಿರುವಲ್ಲಿ ನಮ್ಮ ದೇಶದ ಆ ಜನರಿಗಿರುವ ಮೌಢ್ಯಸ್ಥಿತಿಯನ್ನು ನೋಡಿದರೆ ಯಾರಿಗೆ ತಾನೇ ಮರುಕವುಂಟಾಗುವುದಿಲ್ಲ? ದೇಶದಲ್ಲಿನ ನ್ಯೂನಾತಿರೇಕಗಳನ್ನು ಸರಿಪಡಿಸುವ ಭಾರವು ಮುಖ್ಯವಾಗಿ ಪಾಲಕರ ಮೇಲೆ ಬಿದ್ದಿರುವಾಗ, ಎಲ್ಲಕ್ಕಿಂತಲೂ ಮೊದಲು ಆ ತಳಹದಿಯನ್ನು ಸರಿಪಡಿಸುವ ಕಾರ್ಯವನ್ನು ಅವರು ಮಾಡಬೇಕಲ್ಲವೆ? ವಿದ್ಯೆಯಲ್ಲಿ ಮುಂದುವರಿದಿರುವ ಜನವರ್ಗದವರ ಪ್ರೌಢವಿದ್ಯೆಗೇ ಸರ್ಕಾರದವರು ಹೆಚ್ಚು ವೆಚ್ಚವನ್ನು ಮಾಡುತ್ತ ಅದಕ್ಕೇ ಗಮನವೀಯುವುದು ಮರದ ಬುಡದಲ್ಲಿ ಗೊಬ್ಬರ ಗೋಡುಗಳನ್ನು ಹಾಕಿ ಪಾತಿಗಟ್ಟಿ ನೀರು ಹಾಯಿಸುವುದನ್ನು ಬಿಟ್ಟು, ಮೇಲಿನ ಕೊಂಬೆಗಳಲ್ಲಿ ಕಸಿ ಮಾಡುವುದಕ್ಕೂ ಹೂ ಹಣ್ಣುಗಳನ್ನು ವಿಶೇಷವಾಗಿ ಬಿಡಿಸುವುದಕ್ಕೂ ಪ್ರಯತ್ನಿಸುವ ವನಪಾಲಕನ ಕೆಲಸದಂತಾಗುತ್ತದೆ. ಅದು ಕಾರಣ ನಮ್ಮ ದೇಶದ ಸಂಪದಭ್ಯುದಯ ಸಮಾಜದವರೂ ಅದನ್ನು ಸ್ಥಾಪಿಸಿದ ಪ್ರಭುತ್ವದವರೂ ಸಹ ಮೊದಲು ಬಾಲ್ಯವಿದ್ಯಾಪ್ರಚಾರರೂಪ ಪ್ರಯತ್ನವನ್ನೇ ತಮ್ಮ ವಿಚಾರದ ಪ್ರಥಮ ಫಲವನ್ನಾಗಿ ನಿರ್ಣಯಿಸದೆ ಇರಲಾರರೆಂದು ಅತ್ಯಾತುರದಿಂದ ನಿರೀಕ್ಷಿಸುತ್ತೇವೆ.

ಆ॥ ಗೋಖಲೆಯವರು ನಿಯಮನಿರ್ಮಾಣ ಸಭೆಯಲ್ಲಿ ಸೂಚಿಸಿದಂತೆ ಒಂದು ವಿಧಿಯನ್ನೇರ್ಪಡಿಸಿ, ಬಲಾತ್ಕಾರದಿಂದ ಬಾಲ ವಿದ್ಯಾಭ್ಯಾಸವನ್ನು ಮಾಡಿಸುವುದೇ ನಮ್ಮ ದೇಶಕ್ಕೆ ಅತ್ಯವಶ್ಯಕವೆಂದು ಯೋಚಿಸಬೇಕಾಗಿದೆ. ಪ್ರಜೆಗಳೇ ತಾವಾಗಿ ವಿದ್ಯಾಕಾಂಕ್ಷೆಯನ್ನು ಹೊಂದಿ ತಮ್ಮತಮ್ಮ ಮಕ್ಕಳುಗಳಿಗೆ ವಿದ್ಯೆಯನ್ನು ಹೇಳಿಸುವಂತಾಗಲಿ ಎಂದು ಸರ್ಕಾರದವರು ನಿರೀಕ್ಷಿಸತಕ್ಕದಲ್ಲ. ಸರ್ಕಾರವು ಹಾಗೆ ಉಪೇಕ್ಷಿಸಿಬಿಟ್ಟು ಪ್ರಸಕ್ತ ಸಂಘದಂತಹ ನೂರಾರು ಕೂಟಗಳನ್ನು ಕೂಡಿಸಿ ಲಕ್ಷಾಂತರ ಗಜ ಕಾಗದಗಳಲ್ಲಿ ಅವುಗಳ ನಡವಳಿಕೆಯ ಬರವಣಿಗೆಯನ್ನು ತುಂಬಿಸಿದರೂ ದೇಶಕ್ಕೆ ನಿಜವಾದ ಕಲ್ಯಾಣವಾಗುವುದಿಲ್ಲ. ಪ್ರಜೆಗಳ ಪ್ರಾಣಹಾನಿಯನ್ನು ತಪ್ಪಿಸುವುದಕ್ಕಾಗಿ ಸರ್ಕಾರದವರು ಬಲಾತ್ಕರಿಸಿ ಸಿಡುಬು ಮೊದಲಾದವುಗಳನ್ನು ಹಾಕಿಸುವುದಿಲ್ಲವೆ? ಅದಕ್ಕಿಂತಲೂ ಬಲಾತ್ಕಾರ ವಿದ್ಯಾಭ್ಯಾಸವು ಅನ್ಯಾಯವಲ್ಲ. ವಿದ್ಯೆಯಿಲ್ಲದ ನೂರು ವರ್ಷದ ಮಗನಿಗಿಂತಲೂ ವಿದ್ಯಾವಿವೇಕಸಂಪನ್ನನಾದ ೧೬ ವರ್ಷದ ಮಗನೇ ಸಾಕೆಂದು ಮೃಕಂಡುಋಷಿಯು ಶಿವನನ್ನು ಪ್ರಾರ್ಥಿಸಿದನೆಂಬ ಚರಿತ್ರವನ್ನು ನಾವು ಪುರಾಣಗಳಲ್ಲಿ ಕೇಳುವುದಿಲ್ಲವೆ? ಅನಕ್ಷರಸ್ಥರಾದ ಪ್ರಜೆಗಳ ಸಂಖ್ಯೆಯನ್ನು ವಿಶೇಷವಾಗಿ ಬೆಳೆಯಿಸುವುದಕ್ಕಿಂತಲೂ ಇದ್ದ ಪ್ರಜೆಗಳನ್ನು ವಿವೇಕಿಗಳನ್ನಾಗಿ ಮಾಡುವ ಪ್ರಯತ್ನವು ಅತ್ಯಂತ ಮುಖ್ಯವಾದುದೆಂಬುದನ್ನು ಹೇಳಬೇಕಾಗಿಲ್ಲ. ಅದು ಕಾರಣ ಬಾಲ್ಯವಿದ್ಯಾ ಪ್ರಚಾರದ ಹೆಚ್ಚು ವೆಚ್ಚಕ್ಕಾಗಿ ಇತರ ಶಾಖೆಗಳ ವೆಚ್ಚದಲ್ಲಿ ಕಡಿಮೆಯನ್ನಾದರೂ ಹಾಕಿ, ಇದಕ್ಕೆ ಉಪಯೋಗಿಸಿಕೊಂಡಾದರೂ, ಇಲ್ಲವೆ ಲೋಕಲ್ ಫಂಡಿನ ಜತೆಗೆ ಇನ್ನಷ್ಟು ಕಂದಾಯವನ್ನು ಹೆಚ್ಚಿಸಿ, ಉತ್ಪತ್ತಿ ಮಾಡಿಕೊಂಡಾದರೂ ಸರಿಯೆ ಸರ್ಕಾರದವರು ಬರೋಡಾ ಸಂಸ್ಥಾನದ ಮೇಲುಪಂಕ್ತಿಯನ್ನನುಸರಿಸಿ, ಕಾರ್ಯಮಾಡಲು ಅವಶ್ಯಕವಾಗಿ ಸಿದ್ಧರಾಗಬೇಕೆಂದೂ, ಪ್ರಸಕ್ತ ಸಂಘದವರು ಅದಕ್ಕೆ ತಕ್ಕ ಸೂಚನೆಯನ್ನು ಸರ್ಕಾರದವರಿಗೆ ಕೊಡುವವರಾಗಲೆಂದೂ ಕೋರುತ್ತೇವೆ

ಪ್ರಜಾರಂಜನಾರ್ಥವಾಗಿಯೇ ಹೊಸಹೊಸ ಏರ್ಪಾಡುಗಳನ್ನು ಮಾಡಲು ಅಹರ್ನಿಶಿಯೂ ವ್ಯಗ್ರರಾಗಿರುವ ನಮ್ಮ ಶ್ರೀಮನ್ಮಹಾರಾಜರವರು ಈ ಅವಶ್ಯಕವಾದ ಏರ್ಪಾಟನ್ನು ಸ್ಥಾಪಿಸಿಕೊಡುವ ವಿಷಯದಲ್ಲಿ ಉದಾರ ಚಿತ್ತವನ್ನು ತೋರಿಸಿ ಪ್ರಜೆಗಳ ಶಾಶ್ವತವಾದ ಕೃತಜ್ಞತೆಗೂ, ವಂದನೆಗಳಿಗೂ ಪಾತ್ರರಾಗಲೆಂದೂ, ಅಂತಹ ಸನ್ಮತಿಯನ್ನು ಶ್ರೀಮನ್ಮಹಾರಾಜರವರಿಗೂ, ಅವರ ಕೈಕೆಳಗೆ ಸುಖಶಾಂತಿ ಭೋಗವನ್ನು ಮಾಡುತ್ತ, ಈಗಿನಂತಹ ಅನೇಕ ವರ್ಷ ವರ್ಧಂತ್ಯುತ್ಸವವನ್ನು ಅನೇಕಕಾಲ ಸಂದರ್ಶಿಸುವ ಪುಣ್ಯವನ್ನು ಪ್ರಜೆಗಳಿಗೂ ಆ ಜಗದಂಬಿಕೆಯಾದ ಚಾಮುಂಡೇಶ್ವರಿಯು ಅನುಗ್ರಹಿಸಲೆಂದು ಕೋರುತ್ತೇವೆ

ಒಳದೇಶದ ವೃತ್ತಾಂತಗಳು.

ಕಳೆದ ತಾ॥ ೨೦ ರ ಸಾಯಂಕಾಲದಲ್ಲಿ ರಾಜಧಾನಿಯಲ್ಲಿ ಒಂದು ಹದ ಮಳೆಯು ಚೆನ್ನಾಗಿ ಆಯಿತು. ಆದರೂ ದಗೆಯುಮಾತ್ರ ಇನ್ನೂ ಕಡಿಮೆಯಾಗಿಲ್ಲವು.

ಮೈಸೂರ ನಿಯಮನಿರ್ಮಾಣ ಸಭೆಯು ಬರುವ ಜೂನ್ ತಾ॥ ೧ ನೆಯ ಶನಿವಾರದ ಮಧ್ಯಾಹ್ನ ೧ ಗಂಟೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರುವುದು.

ರಾಜಧಾನಿಯಲ್ಲಿ ಕಳೆದವಾರ ಒಬ್ಬ ಜಲಗಾರನು ಜೋಡೆತ್ತಿನ ಬಂಡಿಯನ್ನು ಹೊಡೆದುಕೊಂಡು ಹೋಗುತ್ತಿದ್ದಾಗ್ಗೆ ಮದ್ಯಪಾನದ ವಿಶೇಷದಿಂದಲೋ ಮತ್ತಾವ ಕಾರಣದಿಂದಲೋ ಬಂಡಿಯಿಂದ ಕೆಳಗೆ ಬಿದ್ದು ಕುತ್ತಿಗೆಯ ಮೇಲೆ ಚಕ್ರವು ಹರಿದು ಮೂರ್ಛೆ ಹೋಗಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಮಾಡಲ್ಪಟ್ಟಾಗ್ಯೂ ಗುಣವನ್ನು ಹೊಂದದೆ ಸತ್ತುಹೋದನು.

ರಾಜಧಾನಿಯಲ್ಲಿ 'ಸರ್ವಜನ ಹಿತೋಪಕಾರಿಣಿ' ಎಂಬ ಹೆಸರಿನಿಂದ ಒಂದು ದೈನಿಕ ಪತ್ರಿಕೆಯು ಕಳೆದ ೧ ತಿಂಗಳಿಂದಲೂ ಪ್ರಕಟವಾಗುತ್ತಿದೆ. ಬೆಂಗಳೂರಲ್ಲೂ ಈಚೆಗೆ ಮಧ್ಯದಲ್ಲೂ ಉದ್ಭವಿಸಿದ್ದ ದೈನಿಕ ಪತ್ರಿಕೆಗಳ ಸ್ಥಿತಿಯು ಈ ಪತ್ರಿಕೆಗೆ ಪ್ರಾಪ್ತವಾಗದೆ, ಇದು ತನ್ನ ಹೆಸರಿಗೆ ತಕ್ಕಂತೆ ಸರ್ವಜನರಿಗೂ ಹಿತವನ್ನುಂಟುಮಾಡುತ ಚಿರಕಾಲ ಬಾಳಲಿ ಎಂದು ನಾವು ಹಾರೈಸುತ್ತೇವೆ.

ಈ ವರ್ಷದ ವರ್ಧಂತಿಯುತ್ಸವಕ್ಕೆ ಯಥಾಪ್ರಕಾರ ಮಂತ್ರಿಗಳೂ, ಉಪಮಂತ್ರಿಗಳೂ, ಶಾಖಾಧಿಕಾರಿಗಳೂ, ಡೆ॥ ಕಮಿಷನರುಗಳೂ ಬಂದಿರುವರಲ್ಲದೆ, ಚೀಫ್ ಜಡ್ಜಿಯುದ್ಯೋಗದಿಂದ ನಿವೃತ್ತಿ ಸುಖವನ್ನನುಭವಿಸುತ್ತಿರುವ ಮ॥ ರಾಮಚಂದ್ರಯ್ಯರ್‌ರವರೂ ಬಂದಿರುವರು. ಇವರಿಗೆ ದರ್ಬಾರಿನಲ್ಲಿ ಕೌನ್ಸಿಲರುಗಳ ಮೇಲಿನ ಸ್ಥಾನವು ಕೊಡಲ್ಪಟ್ಟಿದ್ದಿತು. ಉದ್ಯೋಗದಿಂದ ನಿವೃತ್ತರಾಗಿರುವವರಲ್ಲಿ ಮ॥ ಮಾಧವರಾಯರ ವಿನಾ ಇತರರೆಲ್ಲರೂ ಬಂದಿರುವರು. ಈ ದಿವಸದಿಂದ ಸಂಸ್ಥಾನದ ಸಂಪದಭ್ಯುದಯಸಂಘವು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರಿ ಹಿಂದಣವರ್ಷದಲ್ಲಾದ ಕಾರ್ಯಗಳ ಸಮಾವಲೋಕವು ಮಾಡಲ್ಪಟ್ಟು, ಮುಂದೆ ಮಾಡಬೇಕಾದ ಕಾರ್ಯಗಳು ಪರ್ಯಾಲೋಚಿಸಲ್ಪಡುವುವು.

ಸರ್ಕಾರಿಯ ಮುದ್ರಣಾಲಯಗಳ ಸೂಪರಿಂಟೆಂಡೆಂಟರಾದ ಮಿ॥ ಏಟ್ಸ್‌ರವರು ೩ ತಿಂಗಳ ಪ್ರಿವಿಲೆಜ್ ರಜವನ್ನೂ ಸರ್ಕಾರಿಯ ಉದ್ಯೋಗದ ಮೇಲೆ ೧ ತಿಂಗಳ ರಜವನ್ನೂ ಪಡೆದುಕೊಂಡು ಸೀಮೆಗೆ ಪ್ರಯಾಣಮಾಡುವವರಾದುದರಿಂದ ಅವರು ಬರುವವರೆಗೆ ಅ॥ ಸೂಪರಿಂಟೆಂಡೆಂಟರಾದ ಮ॥ ಬಿ. ಬಿ. ರಾಮಚಂದ್ರಮೊದಲಿಯಾರರು ಸೂಪರಿಂಟೆಂಡೆಂಟರಾಗಿಯೂ, ಗೆಜೆಟ್ಟಿನ ಕಂಪೈಲರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಬೆಂಗಳೂರ ಸರ್ಕಾರಿಯ ಮುದ್ರಣಾಲಯದಲ್ಲಿ ಪ್ರಬೇಷನರಾಗಿರುವ ಮ॥ ಬಿ. ಪುಟ್ಟಯ್ಯ ಬಿ. ಎ., ಮತ್ತೂ ಮ॥ ಬಿ. ಶ್ರೀನಿವಾಸಯ್ಯಂಗಾರ್ ಬಿ. ಎ., ಇವರುಗಳನ್ನು ಮಿ॥ ಏಟ್ಸ್‌ರವರು ತಮ್ಮ ಕೂಡ ಸೀಮೆಗೆ ಕರೆದುಕೊಂಡು ಹೋಗಿ ಮುದ್ರಣ ಸಂಬಂಧವಾದ ಕಲಾಶಾಲೆಯಲ್ಲಿ ಬಿಟ್ಟು ಬರುವರು. ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿಯವರಾದ ಮ॥ ಕೆ. ಎಚ್. ರಾಮಯ್ಯನವರು, ಸೀಮೆಗೆ ಹೋಗಿ [illegible] ಸಂಬಂಧವಾದ ಶಾಸ್ತ್ರವನ್ನು ಕಲಿತು ಹಾಗೆಯೇ

ಬ್ಯಾರಿಸ್ಟರ್ ಪರೀಕ್ಷೆಯನ್ನು ಕೊಟ್ಟು ಬರಲು ಮಾಸಾಶನವನ್ನು ಮೈಸೂರ ಸರ್ಕಾರದಿಂದ ಪಡೆಯಲು ಕೆಲವರ್ಷಗಳಿಂದ ಯತ್ನಿಸುತ್ತಿದ್ದು ಈಗ ಸ್ವಂತ ವೆಚ್ಚದಿಂದಲೇ ಮೇಲೆ ಕಂಡ ವಿದ್ಯಾರ್ಥಿಗಳ ಕೂಡ ಹೋಗಬರಲು ಯತ್ನಿಸಿರುವುದಾಗಿ ತಿಳಿಯುತ್ತೇವೆ. ಮ॥ ರಾಮಯ್ಯನವರು ಹಿಡಿದ ಕಾರ್ಯವನ್ನು ಸಾಧಿಸದೆ ಬಿಡತಕ್ಕವರಲ್ಲವಾದುದರಿಂದ ತಮ್ಮ ಪ್ರಕೃತ ಸಂಕಲ್ಪವನ್ನು ನೆರವೇರಿಸಿಕೊಂಡು ಅಲ್ಲಿಯ ಜನರ ತತ್ರಾಪಿ ಕೃಷಿಕರ ಸ್ಥಿತಿಗತಿಯನ್ನು ಚೆನ್ನಾಗಿ ಮನದಟ್ಟುಮಾಡಿಕೊಂಡು ಬಂದು ಇಲ್ಲಿ ತಮ್ಮ ಕೃಷಿಕ ಸಹೋದರರ ಸ್ಥಿತಿಯನ್ನೂ ಉತ್ತಮಸ್ಥಿತಿಗೆ ತರಲು ಸಹಾಯಕರಾಗಲೆಂದು ನಾವು ಹಾರೈಸುತ್ತೇವೆ.

ವರ್ತಮಾನ ಸಂಗ್ರಹವು.

ಇನ್ನುಮೇಲೆ ನೋಟುಗಳನ್ನು ಒಳ್ಳೆಯ ಕಾಗದದ ಮೇಲೆ ಅಂದವಾದ ಅಕ್ಷರಗಳಿಂದ ಮುದ್ರಿಸಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದಾರೆ.

೧ ವರ್ಷದಲ್ಲಿ ಹಿಂತಿರುಗಿ ಕೊಡುವ ಒಪ್ಪಂದದ ಮೇಲೆ ಯೂರೋಪಿನ ವರ್ತಕರು ಚೀನಾಕ್ಕೆ ೨೫ ಕೋಟಿ ರೂ. ಗಳ ಸಾಲವನ್ನು ಕೊಡಲು ಸಮ್ಮತಿಸಿದ್ದಾರೆ.

ಲಂಡನ್ನಿನ ಡೇಲಿ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ತುರ್ಕಿಯವರ ಸೇನೆಯ ಮಧ್ಯದಲ್ಲಿದ್ದನು. ಎತ್ತಣಿಂದಲೋ ಇಟಲಿಯವರ ಒಂದ ಗುಂಡು ಬಿದ್ದು ಡೆನಾರ್ ಬಳಿಯಣ ಯುದ್ಧಕಾಲದಲ್ಲಿ ಮೃತನಾದನು.

ಮಹಾಬಲೇಶ್ವರದಲ್ಲಿ ಹಿಂದೂಗಳ ಕೈಗಾರಿಕೆಯ ಶಾಲೆಯೊಂದು ಸ್ಥಾಪಿಸಲ್ಪಟ್ಟಿತು. ಅದರ ಆರಂಭಮಹೋತ್ಸವವನ್ನು ಬೊಂಬಾಯಿ ಗೌರ್ನರು ಮಾಡುವಾಗ್ಗೆ ಹಿಂದೂಗಳಲ್ಲಿ ಸೇರಿರುವ ಪ್ರತಿಯೊಂದು ಜಾತಿಯವರನ್ನೂ ಭೇದಬುದ್ಧಿಯಿಲ್ಲದೆ ಇದಕ್ಕೆ ಸೇರಿಸಿಕೊಳ್ಳುವೆವೆಂದು ನುಡಿದರು.

೧೬ ವರ್ಷಕ್ಕೆ ಮೀರಿದ ಹೆಂಗುಸರನ್ನು ದೇವಾಲಯಗಳಲ್ಲಿ ದೇವದಾಸಿಯರನ್ನಾಗಿ ನಿಯಮಿಸಕೂಡದೆಂದೂ ೧೬ ವರ್ಷದೊಳಗಿನ ಬಾಲಿಕೆಯರನ್ನು ಭೋಗಿನಿಯರ ವೃತ್ತಿಗೆ ಸೇರಿಸಲಾಗದೆಂದೂ ಒಂದು ವಿಧಿಯನ್ನು ನಿಯಮನಿರ್ಮಾಣ ಸಭೆಗೆ ತರಲು ಆ॥ ದಾದಾಭಾಯಿಯವರಿಗೆ ಅಪ್ಪಣೆಯಾಗಿದೆ.

ಉದಕಮಂಡಲದಲ್ಲಿ ಮೃಗಯಾ ವಿಹಾರಕ್ಕೆ ಹೋಗಿದ್ದ ಬರೋಡಾ ಮಹಾರಾಜರ ಪುತ್ರರು ಕುದುರೆಯ ಮೇಲಿಂದ ಬಿದ್ದು ಘೋರಾ ಪೆಟ್ಟನ್ನು ತಿಂದಿದ್ದರೆಂದು ಕಳೆದವಾರ ತಿಳಿಸಿದ್ದೆವಷ್ಟೆ. ಯುವರಾಜರು ವೈದ್ಯರ ಚಿಕಿತ್ಸೆಯಿಂದ ಗುಣವನ್ನು ಹೊಂದುತ್ತಿರುವರೆಂದು ತಿಳಿಸಲು ಹರ್ಷವಾಗುತ್ತದೆ.

ಅಲಿಘರಿನಲ್ಲಿರುವ ಮಹಮ್ಮದೀಯ ಕಲಾಶಾಲೆಯನ್ನೇ ವಿಶ್ವವಿದ್ಯಾಲಯವನ್ನಾಗಿ ಮಹಮ್ಮದೀಯರು ಮಾಡಿಕೊಳ್ಳಬಹುದೇ ಹೊರತು ಇತರ ಕಲಾಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳನ್ನು ಇವರು ಪರೀಕ್ಷಿಸಿ ಯೋಗ್ಯತಾಪತ್ರಿಕೆಗಳನ್ನು ಕೊಡಲಾಗದೆಂದು ಸ್ಟೇಟ್ ಸೆಕ್ರೆಟರಿಯವರು ನುಡಿದಿರುವರಂತೆ.

ದಿಲ್ಲಿಯು ಭರತಖಂಡದ ರಾಜಧಾನಿಯಾಗಿರುವುದರಿಂದ ಅದರ ಸಮೀಪದಲ್ಲಿರುವ ಕಾಶ್ಮೀರದಲ್ಲಿ ಯೂರೋಪ್ಯರು ಶಾಶ್ವತವಾದ ವಾಸವನ್ನೇರ್ಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಬಹುದೆಂದೂ, ಆಗ್ಗೆ ದಕ್ಷಿಣ ಆಫ್ರಿಕಾದಲ್ಲಿನ ಹಿಂದೂಗಳ ಸ್ಥಿತಿಯೇ ಕಾಶ್ಮೀರದ ಜನರಿಗೂ ಸಂಭವಿಸಬಹುದೆಂದೂ, ಮಾಡರ್ನ್ ರಿವ್ಯೂ ಪತ್ರಿಕೆಯು ಹೇಳುತ್ತದೆ.

ಹಂಗೇರಿಯಾದಲ್ಲಿ ಒಬ್ಬ ದೊಡ್ಡ ಮನುಷ್ಯನು ತನ್ನ ೨ ಮಕ್ಕಳ ಮದುವೆಯನ್ನು ಏಕಕಾಲದಲ್ಲಿ ಮಾಡಿದನು. ಅದರ ಔತನವು ೩ ರಾತ್ರಿ ನಡೆದುದರಲ್ಲಿ ೧೯೮ ಸೀಸೆಗಳ ಸಾರಾಯಿ, ೧೩ ಸೀಸೆಗಳ ರಮ್ಮು, ೮೦೦ ಪೌಂ ಎತ್ತಿನಮಾಂಸ, ೨೦೦ ಪೌಂ ಹಂದಿಯಮಾಂಸ, ೧೫೦ ಕೋಳಿಗಳು, ಬಾತುಗಳು ೫೦೦ ಮೊಟ್ಟೆಗಳು ಧ್ವಂಸವಾದುವಂತೆ.

ಆಸ್ಟ್ರೇಲಿಯಾದ ಒಬ್ಬ ಶ್ರೀಮಂತ ವಿಧವೆಯು ೧ ಕೋಟಿ ೫೦ ಲಕ್ಷ ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟು ಅದರುತ್ಪತ್ತಿಯನ್ನು ಆಸ್ಟ್ರೇಲಿಯಾದಲ್ಲಿ ವಿಪನ್ನರಾದವರ ಸಹಾಯಾರ್ಥಕ್ಕಾಗಿಯೂ, ವಿದ್ಯಾಭಿವೃದ್ಧಿಗಾಗಿಯೂ, ಮತಪ್ರಚಾರಣೆಗಾಗಿಯೂ ಉಪಯೋಗಿಸಲ್ಪಡತಕ್ಕದೆಂದು ಗೊತ್ತುಮಾಡಿರುತ್ತಾಳೆ.

ನಿಯಮನಿರ್ಮಾಣ ಸಭೆಯಲ್ಲಿ ದೂಡಲ್ಪಟ್ಟ ಬಲಾತ್ಕಾರ ವಿದ್ಯಾಭ್ಯಾಸ ವಿಧಿಯನ್ನು ಆ॥ ಗೋಖಲೆಯವರಿಂದ ಸೂಚಿತವಾಗಿದ್ದುದನ್ನು ಗೌರ್ನಮೆಂಟಿನವರು ಮರಳಿ ಚರ್ಚೆಗೆ ತಂದು ಅಂಗೀಕರಿಸದೆ ಹೋದರೆ ಭರತಖಂಡದಲ್ಲಿ ಅಶಾಂತಿಯು ಹುಟ್ಟುವುದೆಂಬುದಾಗಿ ಸರ್ ವಿಲಿಯಂ ವೆಡರ್ ಬರ್ನರವರು ಲಂಡನ್ನಿನ ನೇಷನ್ ಪತ್ರಿಕೆಗೆ ಬರೆದಿರುತ್ತಾರೆ.

ಲಂಡನ್ನಿನಲ್ಲಿ ಯಾವುದೋ ಒಂದು ರೋಗದಿಂದ ಅಂಗುಳಿನಲ್ಲಿ ಆಹಾರ್ಯ ವಸ್ತುವನ್ನು ನುಂಗಲಾರದವರು ಕೆಲರಿದ್ದಾರೆ. ಅಂಥವರಿಗೆ ನಡುವಿನ [illegible] ಒಂದು ಗೊಟ್ಟವನ್ನು ಅನ್ನಕೋಶವೊಳಕ್ಕೆ ಸೇರಿಸಿಟ್ಟು, ಹೊಟ್ಟೆ ಹಸಿದಾಗ ಆ ಗೊಟ್ಟದ ಬಾಯಿಯ ಮೂಲಕ ಬೇಕಾದ ಆಹಾರಗಳನ್ನು ಒಳಕ್ಕೆ ಸಾಗಿಸುವರು. ಹೀಗೆ ಆಹಾರವನ್ನು ತಿಂದುಕೊಂಡು ಕೆಲರು ೨೦ ವರ್ಷಗಳವರೆಗೂ ಬದುಕಿರುವರಂತೆ.

ಇಂಡ್ಯಾ ಸರ್ಕಾರದವರು ಕಲಕತ್ತಾದಲ್ಲಿರುವ ಸರ್ಕಾರಿ ಕಟ್ಟಡಗಳನ್ನು ಬಂಗಾಳಾ ಗೌರ್ನಮೆಂಟಿಗೆ ಈ ಕೆಳಗಣ ಕ್ರಯಕ್ಕೆ ಮಾರುತ್ತಾರಂತೆ. ಫಾರ್ಟ್ ಆಫೀಸಿನ ಕಟ್ಟಡಕ್ಕೆ ೨೧ ಲಕ್ಷ ರೂ., ಸೆಕ್ರೆಟರಿಯಟ್ಟಿಗೆ ೧೦ ಲಕ್ಷದ ೩ ಸಾವಿರ ರೂ., ವ್ಯಾಪಾರದ ಕಾರ್ಯಾಲಯಕ್ಕೆ ೧೮ ಲಕ್ಷದ ೪೩ ಸಾವಿರ ರೂ., ತಂತಿಯ ಕಾರ್ಯಾಲಯಕ್ಕೆ ೯ ಲಕ್ಷದ ೪೩ ಸಾವಿರ ರೂ. ಫಾರ್ಟ್ ಆಫೀಸ್ ಕಟ್ಟಡವನ್ನೇ ಮುಂದೆ ಮ್ಯುನಿಸಿಪಲ್ ಆಫೀಸಿಗೆ ಉಪಯೋಗಿಸಿಕೊಳ್ಳುವರು.

ಟೈಟಾನಿಕ್ಕಿನಲ್ಲಿ ಜಲಸಮಾಧಿಗೊಂಡ ಮಿ॥ ವಿಲಿಯಂ ಟಿ. ಸ್ಟೆಡ್‌ರವರಿಗೆ ಈಗ ಒಬ್ಬ ಕುಮಾರಿಯಿರುವಳು. ಆಕೆಯು ಗ್ರಂಥಕರ್ತ್ರಿಯಾಗಿದ್ದರೂ ಒಂದು ನಾಟಕದ ಕಂಪೆನಿಯಲ್ಲಿ ನೇಪಥ್ಯಧಾರಿಣಿಯಾಗಿ ಕೆಲಸಮಾಡುತ್ತಿರುವಳು. ಒಬ್ಬನೇ ಒಬ್ಬ ಪುತ್ರರು ರೆವ್ಯೂ ಆಫ್ ರೆವ್ಯೂಸ್ ಎಂಬ ಪತ್ರಿಕೆಗೆ ಉಪಸಂಪಾದಕನಾಗಿದ್ದುಕೊಂಡು, ತಂದೆಗೆ ತುಂಬಾ ಸಹಾಯಮಾಡುತ್ತಿದ್ದು, ತನ್ನ ೩೦ ನೆಯ ವಯಸ್ಸಿನಲ್ಲೇ ಮೃತನಾಗಿ ತಂದೆಗೆ ಅಪಾರವಾದ ಶೋಕವನ್ನುಂಟುಮಾಡಿದನು.

ಹೈದರಾಬಾದಿನಲ್ಲಿ ವರ್ಷಕ್ಕೆ ೪೦ ಲಕ್ಷ ರೂ. ನ ಆದಾಯವುಳ್ಳ ಒಂದು ಜಮೀನ್ದಾರಿಗೆ ಸಂಬಂಧಿಸಿದ ಕಾರ್ಯದಲ್ಲಿ ೩ ಲಕ್ಷ ರೂ ಗಳ ಲಂಚವನ್ನು ಮಂತ್ರಿಗಳಿಗೆ ಕೊಟ್ಟು ತಮಗನುಕೂಲ ಮಾಡಿಕೊಳ್ಳಬೇಕೆಂದು ಗೌರ್ನಮೆಂಟಿನ ಒಬ್ಬ ಸೆಕ್ರೆಟರಿಯ ಮೂಲಕ ಆ ಜಮೀನ್ದಾರಿಯ ಕಡೆಯವರು ಪ್ರಯತ್ನಿಸಿದುದು ಮಂತ್ರಿಗಳ ಮುಖೇನ ನಿಜಾಮರಿಗೆ ತಿಳಿದುಬರಲು, ಅವರು ಆ ಸೆಕ್ರೆಟರಿಯನ್ನು ಆ ದಿನವೇ ಕೆಲಸದಿಂದ ತೆಗೆದುಬಿಟ್ಟರು. ಇದಕ್ಕೆ ಸಂಬಂಧಿಸಿದ್ದ ಇತರ ಜನರಿಗೂ ತಕ್ಕ ಶಿಕ್ಷೆಯನ್ನು ಮಾಡಿದರು.

ಕಲಕತ್ತಾದಲ್ಲಿ ಗಣೇಶಚಂದ್ರ ಕರ್ಮಾಕರ ಎಂಬ ಸಾಧುವೊಬ್ಬನು ಸ್ಮಶಾನದಲ್ಲಿ ಆಗತಾನೇ ಹೂತುಹೋಗಿದ್ದ ಶವವನ್ನು ಕೀಳುತ್ತಿದ್ದುದರಿಂದ ಪೋಲೀಸರಿಂದ ಹಿಡಿಯಲ್ಪಟ್ಟನು. ವಿಚಾರಣೆಯ ಕಾಲದಲ್ಲಿ ತಾನು ಅಘೋರಪರೀತ ಎಂಬ ವರ್ಗಕ್ಕೆ ಸೇರಿದವನೆಂದೂ, ನರಮಾಂಸಭಕ್ಷಣೆಯು ತಮ್ಮ ಮತಕ್ಕೆ ಬಂದ ಪದ್ಧತಿಯೆಂದೂ, ಹೀಗೆಯೇ ಇದುವರೆಗೆ ಕೆಲ ಸಮಾಧಿಗಳನ್ನಗೆದು ಹೆಣಗಳನ್ನು ತಿಂದಿರುವೆನೆಂದೂ, ೧೦ ವರ್ಷಗಳಿಂದೀಚೆಗೆ ತಾನು ಈ ಕೆಲಸಕ್ಕೆ ಬಿದ್ದೆನೆಂದೂ, ತಾನು ಕಲಕತ್ತಾ ನಿವಾಸಿಯೆಂದೂ ವಾಜ್ಮೂಲವನ್ನು ಕೊಟ್ಟಿರುವನು.

ಕಳೆದ ತಾ॥ ೧೮ ಕ್ಕೆ ಕಡೆಯಾದ ಒಂದು ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೪೦೫೩ ಜನರಿಗೆ ಪ್ಲೇಗು ತಗಲಿ ೩೪೦೫ ಜನರು ಸತ್ತರು. ಇವರಲ್ಲಿ ಬೊಂಬಾಯಿ ಆಧಿಪತ್ಯದಲ್ಲಿ ೧೯೯ ; ಮದ್ರಾಸಾಧಿಪತ್ಯದಲ್ಲಿ ೬; ಬಂಗಾಳದಲ್ಲಿ ೫೬; ಬಿಹಾರಿನಲ್ಲಿ ೫೦೨; ಸಂಯುಕ್ತ ಪ್ರಾಂತಗಳಲ್ಲಿ ೩೬೯ ; ಪಂಜಾಬಿನಲ್ಲಿ ೧೬೪೨; ಬರ್ಮಾದಲ್ಲಿ ೧೨; ಮಧ್ಯಪ್ರಾಂತಗಳಲ್ಲಿ ೫: ಮೈಸೂರ ಸೀಮೆಯಲ್ಲಿ ೫; ಹೈದರಾಬಾದ್ ಸೀಮೆಯಲ್ಲಿ ೩; ಮಧ್ಯಹಿಂದುಸ್ಥಾನದಲ್ಲಿ ೫೪; ರಾಜಪುಟಾನದಲ್ಲಿ ೯೦ ಮತ್ತೂ ಕಾಶ್ಮೀರದಲ್ಲಿ ೨೫ ಈ ಪ್ರಕಾರವಾಗಿ ಮರಣಗಳಾಗಿರುತ್ತವೆ.

ಅಮೇರಿಕಾದಲ್ಲಿ ನೂರಾರು ಹಸುಗಳನ್ನು ಕಟ್ಟಿರುವ ಒಬ್ಬ ಗೌಳಿಗನು ಹಾಲನ್ನು ಕರೆಯುವಾಗ ಹಾರ್ಮೋನಿಯಮನ್ನಾಗಲಿ ಇನ್ನಾವ ವಾದ್ಯವನ್ನಾಗಲಿ ಬಾರಿಸುವ ಏರ್ಪಾಟನ್ನಿಟ್ಟಿರುವನು. ಈ ಗೀತವನ್ನು ಕೇಳುತ್ತ ಹಸುಗಳು ಆನಂದದಿಂದ ಮೊದಲಿಗಿಂತ ಮೂರನೆಯ ಒಂದುಭಾಗದಷ್ಟು ಹೆಚ್ಚಾಗಿ ಹಾಲನ್ನು ಕೊಡುವುವು. ಮತ್ತೊಂದು ಕಡೆ ಇನ್ನೊಬ್ಬನು ಬೆಳಿಗ್ಗೆ ಹಸುಗಳ ಹಲ್ಲನ್ನು ತಿಕ್ಕಿ ಸ್ನಾನಮಾಡಿಸಿ, ಮೇಲೆ ಉಣ್ಣೆಯ ಬಟ್ಟೆಗಳನ್ನು ತೊಡಿಸಿ ಬಿಡುವನು. ಅದರಿಂದ ಅವುಗಳಿಗೆ ಸೊಳ್ಳೆ ನೊಣ ಉಣ್ಣೆ ಮೊದಲಾದುವುಗಳ ಕಾಟವಿಲ್ಲದ ಕಾರಣ, ಅವು ಆರೋಗ್ಯವಾಗಿಯೂ ತುಂಬಾ ಹಾಲನ್ನು ಕೊಡುವುವಾಗಿಯೂ ಇರುತ್ತಿರುವುವು.

ಐರ್ಲೆಂಡಿಗೆ ಸ್ವಾರಾಜ್ಯಾಧಿಕಾರವನ್ನು ಕೊಡುವಬಗೆಗೆ ಏರ್ಪಟ್ಟಿರುವ ಬಿಲ್ಲನ್ನು ಪಾರ್ಲಿಮೆಂಟ್ ಸಭಾಸ್ತರ ಅನುಮೋದನೆಗೆ ತರಲ್ಪಟ್ಟಾಗಲೆಲ್ಲಾ ಯಾವುದಾದರೊಂದು ನಾವೆಯ ಅನಾಹುತವು ಸಂಭವಿಸುತ್ತಿರುವುದು ಆಶ್ಚರ್ಯವೆಂದು ಕೆಲರಾಡುತ್ತಿದ್ದಾರೆ. ೧೮೮೬ ರಲ್ಲಿ ಈ ಬಿಲ್ಲು ಪಾರ್ಲಿಮೆಂಟ್ ಸಭೆಯ ಮುಂದಿಡಲ್ಪಟ್ಟಾಗ ಒರಿಗಾನ್ ಎಂಬ ನಾವೆಯು ಲಾಂಗ್‌ಐರ್ಲೆಂಡ್ ಹತ್ತಿರ ತಾಕಿಬಡಿದು ನೀರಿನಲ್ಲಿ ಮುಳುಗಿಹೋಯಿತು; ೧೮೯೩ ರಲ್ಲಿ ವೈಟ್‌ಸ್ಟಾರ್ ನರೋನಿಕ್ ನಾವೆಯು ಅದರೊಳಗಿದ್ದ ಜನರ ಸಮೇತ ನಾಶವಾಯಿತು, ಮತ್ತೂ ಈ ವರ್ಷದಲ್ಲಿ ಟೈಟಾನಿಕ್ ನಾವೆಯು ಒಡೆದುಹೋಗಿ ಸಾವಿರಾರು ಜನರು ಜಲಸಮಾಧಿಯನ್ನು ಹೊಂದಿದರು.

ಅಮೇರಿಕಾದಲ್ಲಿರುವ ವಿಶ್ವವಿದ್ಯಾಲಯದ ವಾರ್ಷಿಕೋತ್ಸವವು ನಡೆದಾಗ್ಗೆ ವಿದ್ಯಾರ್ಥಿಗಳೆಲ್ಲರೂ ಬ್ಲಾಕ್‌ಸ್ಟೋನ್ ಭೋಜನಾಲಯದಲ್ಲಿ ಕುಳಿತು ಊಟಮಾಡುತ್ತಿದ್ದರು. ಆಧ್ಯಕ್ಷರಾದ ಹಡ್ಲೀರವರು ಅಲ್ಲಿಗೆ ೫೦೦ ಮೈಲಿಗಳ ದೂರದ ನ್ಯೂ ಹಾವೆ ಎಂಬ ನಗರದಲ್ಲಿರುವ ತಮ್ಮ ಮನೆಯಲ್ಲಿ ಕುಳಿತುಕೊಂಡು ಆ ವಿದ್ಯಾರ್ಥಿಗಳಿಗಾಗಿ ಒಂದು ಉಪನ್ಯಾಸವನ್ನು ಮಾಡಿದರು. ಅದು ಆ ಭೋಜನಾಲಯದಲ್ಲಿದ್ದ ವಿದ್ಯಾರ್ಥಿಗಳಿಗೋಸುಗ ವಿದ್ಯುಚ್ಛಕ್ತಿಯ ಮೂಲಕ ಕೇಳಿಸುವಂತೆ ಮಾಡಲ್ಪಟ್ಟಿದ್ದಿತು. ಅದನ್ನು ಕೇಳುವಾಗ ಆನಂದದಿಂದ ಮಾಡುವ ಕರತಾಡನಾದಿ ಧ್ವನಿಗಳು ಆ ಅಧ್ಯಕ್ಷರು ಕುಳಿತಿದ್ದ ಮನೆಯಲ್ಲಿ ಕೇಳಿಸುವಂತೆ ಬೇರೊಂದು ಸಾಧನವು ಏರ್ಪಡಿಸಲ್ಪಟ್ಟಿದ್ದಿತು.

ಜರ್ಮನಿಯ ಒಂದು ಪಟ್ಟಣದಲ್ಲಿ ಒಬ್ಬ ವೈದ್ಯನು ದೂರದಲ್ಲಿರುವ ಒಂದು ಆರೋಗ್ಯಶಾಲೆಗಳಲ್ಲಿರುವ ರೋಗಿಗಳಿಗಾಗಿ ಚೂರ್ಣ ಮಾತ್ರೆ ಮೊದಲಾದ ಔಷಧಗಳನ್ನು ಪೊಟ್ಟಣ ಕಟ್ಟಿ ಪಾರಿವಾಳದ ಹಕ್ಕಿಗಳ ಮೂಲಕ ಸಾಗಿಸುವನು. ರೋಗಿಗಳು ತಮ್ಮ ದೇಹಸ್ಥಿತಿಯನ್ನು ಕುರಿತು ಬರೆದ ಕಾಗದಗಳನ್ನೂ ಅವೇ ವೈದ್ಯನಿಗೆ ತಂದು ಕೊಡುವುವು. ಪಾರಿವಾಳಗಳು ತಮಗೆ ೩ ರಷ್ಟು ತೂಕದ ವಸ್ತುಗಳನ್ನು ಹೊರಬಲ್ಲುವಂತೆ. ಆ ದೇಶದಲ್ಲಿ ಕೆಲ ಫೋಟೋಗ್ರಾಫರು ಪಾರಿವಾಳಗಳ ಕಾಲಿಗೆ ಸಣ್ಣ ಫೋಟೋಗ್ರಾಫ್ ಯಂತ್ರಗಳನ್ನು ಕಟ್ಟಿ ಅಂತರಿಕ್ಷಕ್ಕೆ ಹಾರಿಸಿ, ಅವು ಹಾರುವಾಗ ತಾನಾಗಿ ಗ್ರಹಿಸಿದ ಭಾವಚಿತ್ರಗಳನ್ನೆಲ್ಲಾ ಸಂಗ್ರಹಿಸಿ ಮಾರಿ ಧನವಂತರಾಗುತ್ತಿರುವರು. ಇವೆಲ್ಲಾ ಸಾಹಸವಂತರು ಹೊಂದುವ ಫಲಗಳಾಗಿವೆ.

ಹುಗ್ಲಿ ಜಿಲ್ಲೆಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಸನ್ಯಾಸಿಯು ೧೮ ವರ್ಷದ ಹರಿಯೆಂಬ ಬ್ರಾಹ್ಮಣ ಬಾಲಕನನ್ನು ಶಿಷ್ಯನನ್ನಾಗಿ ಮಾಡಿಕೊಂಡು ಅವನಿಗೆ ಚೆನ್ನಾಗಿ ಬಂಗಿಸೇದುವುದನ್ನು ಕಲಿಸಿ, ತನ್ನಂತೆಯೇ ಮನೆಯನ್ನು ಬಿಟ್ಟು ಬಂದುಬಿಡೆಂದು ಹೇಳಿದನು. ಆದರೆ ತಂದೆಯಿರುವವರೆಗೂ ಆ ಹುಡುಗನು ಮನೆಬಿಟ್ಟು ಬರಲಾರನೆಂಬುದು ಸನ್ಯಾಸಿಗೆ ಗೊತ್ತಾಗಲು, ತಂದೆಯನ್ನು ಕೊಂದುಬಿಡೆಂದು ಆ ಹುಡುಗನಿಗೆ ದುರ್ಬೋಧೆಮಾಡಿದನು. ಒಂದುದಿನ ರಾತ್ರಿ ಹರಿಯು ಮಂಚದಮೇಲೆ ತಂದೆಯ ಜತೆಗೆ ಮಲಗಿದ್ದು ನಿದ್ರೆಯ ಹೊತ್ತಿನಲ್ಲಿ ಕತ್ತಿಯಿಂದ ತಂದೆಯ ಕೊರಲನ್ನು ಕೊಯ್ದನು. ತಂದೆಯು ಅರಚಿಕೊಳ್ಳಲು, ಸನ್ಯಾಸಿಯು ಓಡಿಬಂದು ಬೇಗನೆ ತಂದೆಯನ್ನು ಕೊಂದುಬಿಟ್ಟ, ಗುರುಶಿಷ್ಯರಿಬ್ಬರೂ ಪಲಾಯನಗೊಂಡರು. ಈಗ ಆ ಘಾತುಕರಿಬ್ಬರೂ ಪೋಲೀಸರ ವಶದಲ್ಲಿದ್ದಾರೆ. ಬಂಗಿಕೋರರ ಸಂಗವು ಯಾವ ಅನರ್ಥವನ್ನು ತಾನೇ ಮಾಡುವುದಿಲ್ಲ?

ಗತಿಸಿದ ವಿಲಿಯಂ ಸ್ಟೆಡ್‌ರವರಿಗೆ ಒಂದು ಬಾರಿ ಕಾರಾಗೃಹ ಪ್ರಾಪ್ತಿಯಾಗಿತ್ತೆಂದು ಹಿಂದೆ ಬರೆದಿದ್ದೆವಷ್ಟೆ. ಇವರು ಆ ಕಾರಾಗೃಹದಿಂದ ಮುಕ್ತರಾಗಿ ಬರುವಾಗ್ಗೆ ಅಲ್ಲಿನ ಅಧಿಕಾರಿಯು ತನ್ನ ಉಡುಪನ್ನು ಇವರಿಗೆ ಕೊಟ್ಟಿದ್ದನು. ಇವರು ಅದನ್ನು ತಮ್ಮ ಅವಸಾನ ಕಾಲದವರೆಗೂ ಅಮೂಲ್ಯವಸ್ತುವನ್ನಾಗಿ ಕಾಪಾಡಿಟ್ಟುಕೊಂಡಿದ್ದರು. ತನ್ನ ಕಾರಾಗೃಹ ಪ್ರವೇಶದಿನದ ವರ್ಧಂತಿಯನ್ನು ಪ್ರತಿವರ್ಷವೂ ಸ್ಟೆಡ್ ಮಹಾಶಯರು ನಡೆಯಿಸುತ್ತ, ಆ ದಿನ ಆ ಉಡುಪುಗಳನ್ನು ಧರಿಸಿಕೊಂಡು ಸ್ನೇಹಿತರನ್ನು ಬರಮಾಡಿ, ಅವರಿಗೆ ಔತಣ ಮೊದಲಾದುವುಗಳನ್ನು ಆ ದಿನ ಮಾಡಿಸುತ್ತಿದ್ದರಂತೆ. ಸರ್ ಚಾರ್ಲೆಸ್ ಡಿಲ್ಕ್ ಎಂಬುವವನಿಗೆ ಇನ್ನೊಬ್ಬನ ಹೆಂಡತಿಯೊಡನೆ ಸಂಬಂಧವಿದೆಯೆಂಬುದನ್ನು ಈ ಸ್ಟೆಡ್ ಮಹಾಶಯರು ತಮ್ಮ ಪತ್ರಿಕೆಯಲ್ಲಿ ಬರೆದು, ಮಂತ್ರಿ ಸಮೂಹದ ಪ್ರಜ್ಞೆಯುಳ್ಳ ಆ ಡಿಲ್ಕನನ್ನು ರಾಜಕೀಯಕಾರ್ಯ ಪ್ರವರ್ತನದಿಂದಲೇ ದೂರಸ್ಥನಾಗಿರುವಂತೆ ಮಾಡಿಬಿಟ್ಟರು. ಐರಿಷ್ ಜನ ಪ್ರಮುಖನಾದ ಪಾರ್ನೆಲ್ ಎಂಬುವನಿಗೂ ಇದೇ ಗತಿಯನ್ನುಂಟುಮಾಡಿದರು. ಆ ಕಾಲದಲ್ಲಿ ದೊಡ್ಡದೊಡ್ಡ ಮನುಷ್ಯರೂ ವ್ಯಭಿಚಾರ ದೂಷಿತರಾಗಿದ್ದರು. ಅಂಥವರ ಗುಟ್ಟನ್ನು ಬಯಲಿಗೆ ಹಾಕಿ ಅವರು ತಲೆಯೆತ್ತದಂತೆ ಮಾಡುವುದರಲ್ಲಿ ಈ ಸ್ಟೆಡ್‌ರವರು ಹಟಮಾರಿಗಳಾಗಿದ್ದರು. ಇದಕ್ಕಾಗಿ ತಮಗೆ ಅನೇಕರು ವಿರೋಧಿಗಳಾದರೂ ಅದಕ್ಕೆ ಹೆದರದೆ ತಮ್ಮ ನ್ಯಾಯವಾದ ಕೃತ್ಯವನ್ನು ದಿಟ್ಟತನದಿಂದ ಮಾಡುತ್ತಿದ್ದರು. ಈ ಸ್ಟೆಡ್‌ರವರು ಯಾವಾಗಲೂ ಒಂದು ಬೊಟ್ಟು ಸಾರಾಯಿಯನ್ನೂ ಕುಡಿದವರಲ್ಲವಂತೆ.

ಆಂಗ್ಲ ಯುದ್ಧ ನಾವೆಗಳಲ್ಲಿ ಕೆಲವನ್ನು ವೆಯ್‌ಮೌತ್ ಎಂಬ ರೇವಿನಲ್ಲಿ ೫ ನೆಯ ಜಾರ್ಜ್ ಸಾರ್ವಭೌಮರವರು ಪರೀಕ್ಷಿಸುವುದಕ್ಕಾಗಿ ಮಂತ್ರಿಗಳೊಡನೆ ಹೋಗಿದ್ದರು. ಅಲ್ಲಿ ಕೂಡಿದ್ದ ಹಡಗುಗಳೇ ೧೦೫ ಕೋಟಿ ರೂ. ಬೆಲೆಯುಳ್ಳವಾಗಿದ್ದುವು. ಅವನ್ನು ನೋಡಿ ಬಂದ ಬಳಿಕ ಮಂತ್ರಿಗಳಾದ ಮಿ॥ ಅಸ್ಕ್ವಿತ್‌ರವರು ಲಂಡನ್ನಿನಲ್ಲಿ ಪ್ರಸ್ತಾಪಿಸುವಾಗ್ಗೆ ಈ ರಾಕ್ಷಸಗಳಿಗೋಸುಗ ವ್ಯಯವಾಗುತ್ತಿರುವ ಅಷ್ಟೊಂದು ಕೋಟ್ಯಂತರ ರೂ. ಗಳನ್ನು ಜನೋಪಯೋಗ ಕಾರ್ಯಗ

ಳಿಗಾಗಿ ವಿನಿಯೋಗಿಸಿಕೊಳ್ಳುವ ಕಾಲವು ಎಂದಿಗೆ ಬರುವುದೋ ಎಂದು ನನ್ನ ಮನಸ್ಸಿನಲ್ಲಿ ಯೋಚಿಸುತ್ತಿದ್ದೆ" ನೆಂದು ನುಡಿದರು. ಈ ನೌಕಾ ಸೇನೆಯನ್ನು ಜಾರ್ಜ್ ಪ್ರಭುಗಳು ಪರಾಮರಿಸುವಾಗ್ಗೆ ಮುಳುಗಿ ನೀರಿನೊಳಗೇ ಹೋಗತಕ್ಕ ಒಂದು ತೆರದ ದೋಣಿಯಲ್ಲಿ ಕುಳಿತು ೨ ಮೈಲಿಗಳವರೆಗೆ ಪ್ರಯಾಣಮಾಡಿ ಬಂದರು.

ಪತ್ರವ್ಯವಹಾರವು.

ಆಲೂರ ತಾ॥ ಹಾನಗಲ್ಲ.

ನಮ್ಮಲ್ಲಿಯ ವೀರಶೈವ ವಾಚನ ಮಂದಿರದ ೩ ನೆಯ ವರ್ಧಂತಿಯ ಮಹೋತ್ಸವವು ತಾ॥ ೭-೬-೧೯೧೨ ನೇ ದಿವಸ ಪ್ರಾರಂಭವಾಗುವುದು. ಆಗ ಧಾರ್ಮಿಕ ವ್ಯಾಖ್ಯಾನಗಳು, ಶಿವಕೀರ್ತನಗಳು, ಗಾಯನಗಳು ಆಗುವವು. ಕಾರಣ ಧರ್ಮಾಭಿಮಾನಿಗಳು ಅತ್ಯಗತ್ಯವಾಗಿ ಆಗಮಿಸಬೇಕೆಂದು ಹಾರೈಸುವ, ತಮ್ಮ ವಿಧೇಯ

ಸೆಕ್ರೆಟರಿ ವೀರಶೈವ ವಾಚನ ಮಂದಿರ.

ಒಬ್ಬ ಸತ್ಪುರುಷನ ಮರಣ.

ಹಿರಿಯೂರ್ ತಾಲ್ಲೂಕು ವೇಣುಕಲ್ಲು ಗುಡ್ಡದಲ್ಲಿ ದೊಡ್ಡ ಮನೆತನದವರಾಗಿಯೂ, ದೊಡ್ಡ ಜಮೀನ್ದಾರರಾಗಿಯೂ ನಿತ್ಯಾನ್ನದಾನಿಗಳಾಗಿಯೂ, ಅನಂತ ಶಿಷ್ಯಸಮುದಾಯವುಳ್ಳವರಾಗಿಯೂ, ವಿಸ್ತೃತ ಕುಟುಂಬರಾಗಿಯೂ ಇದ್ದು ಸಂಸಾರ ಯೋಗಿಗಳೆನಿಸಿ ಹೆಸರ್ಪಡೆದಿದ್ದ ಮಠದ ಬಾಳಯ್ಯನವರೆಂಬ ಸದ್ಗೃಹಸ್ಥರು ಕಾರ್ಯಾರ್ಥಿಗಳಾಗಿ ಗುಬ್ಬಿ ತಾಲ್ಲೂಕು ಹೊಸಕೆರೆಗೆ ದಯಮಾಡಿಸಿ ಏಪ್ರಿಲ್ ತಾ॥ ೧೪ ರಲ್ಲಿ ಅಸ್ವಸ್ಥರಾಗಿ ಎಷ್ಟು ಉಪಚರಿಸಿದರೂ ಗುಣ ಹೊಂದದೆ ತಾ॥ ೧೯ ನೆಯ ಶುಕ್ರವಾರ ತಮ್ಮ ಬಂಧುಗಳ ಮನೆಯಲ್ಲಿ ತಮ್ಮ ೬೬ ನೆಯ ವರ್ಷ ವಯಸ್ಸಿನಲ್ಲಿ ಧೃಢಕಾಯ ಇಂದ್ರಿಯಾಪಟುತ್ವದಿಂದಲೇ ಶಿವೈಕ್ಯರಾದರು. ತಾ॥ ೨೧ ನೆ ಭಾನುವಾರ ಇವರ ಕುಟುಂಬದವರಿಂದ ವಿಧ್ಯುಕ್ತಪ್ರಕಾರ ಸಮಾಧಿಕಾರ್ಯವು ನೆರವೇರಿಸಲ್ಪಟ್ಟಿತು. ಇವರಿಗೆ ಅವಿಭಕ್ತ ಸಹೋದರರೊಬ್ಬರೂ ಪ್ರಬಲರಾದ ೪ ಮಂದಿ ಪುತ್ರರೂ ೩ ಜನ ಪುತ್ರಿಯರೂ ಪ್ರಸಿದ್ಧ ಮನೆತನದ ಕುಟುಂಬವೂ ಸಹ ಇರುತ್ತಾರೆ. ಆಚಾರವಂತರಾಗಿಯೂ, ಮತಾಭಿಮಾನಿಗಳಾಗಿಯೂ ಇದ್ದ ಇವರ ವಿಯೋಗವು ಈ ನಾಡಿನವರಿಗೆಲ್ಲಾ ವಿಷಾದವನ್ನುಂಟುಮಾಡಿರುತ್ತದೆ. ಚಂದಾದಾರ

ಚಿಕ್ಕಮಗಳೂರು ತಾ॥ ಬಾಗರದ ನಾಗೆಣಿ ಶ್ರೀಗುರು ದತ್ತಾತ್ರೇಯ ಅಡಿಗಪ್ಪನಿಗೆ ಇನಾಂ ಶ್ರೀ ಬಿಸ್ನೀದೇವರ ಮಠದ ಪೈಪಟ್‌ದಾರ್ ಪುಟ್ಟಲ್ಯಾನಯ್ಯನವರ ತೃತೀಯಪುತ್ರ ರುದ್ರಯ್ಯನೆಂಬ ೧೩ ವರ್ಷ ವಯಸ್ಸಿನ ವಟುವಿಗೆ ಇದೇ ಸಂ॥ ವೈಶಾಖ ಶುದ್ಧ ೧೩ ರಲ್ಲಿ ಇನಾಂ ಬಿಸ್ನೀದೇವರ ಮಠಕ್ಕೂ ಮತ್ತು ಈ ಮಠಕ್ಕೆ ಸೇರಿದ ಕಡೂರ ತಾ॥ ಹೂಗರೆ ಶಾಖಾ ಮಠಕ್ಕೂ ಪಟ್ಟ ಕಟ್ಟಲ್ಪಟ್ಟಿತು. ಮಹೋತ್ಸವವು ಆಗಬೇಕಾದಾಗ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ನಾನಾಕಡೆಯ ಪಟ್ಟ ಚರಮೂರ್ತಿಗಳೂ, ಭಕ್ತಮಾಹೇಶ್ವರರುಗಳೂ ಬಂದಿದ್ದು ವಿಶೇಷವಾಗಿ ಸತ್ಕರಿಸಲ್ಪಟ್ಟರು. ಇದೇ ಶು॥ ೧೪ ರಲ್ಲಿ ನೂತನವಾಗಿ ಪಟ್ಟಾಭಿಷಿಕ್ತರಾದ ಶ್ರೀಗಳವರು ಪಾಲಕಿಯಲ್ಲಿ ಮಂಡಿಸಿ ಸಕಲ ಬಿರುದಾವಳಿಗಳೊಡನೆ ತೇರುಬೀದಿಗೆ ದಯಮಾಡಿಸಿ ಶ್ರೀ ಸಿದ್ಧೇಶ್ವರ ರಥೋತ್ಸವವನ್ನು ನೆರವೇರಿಸಿ ಸ್ವಸ್ಥಳಕ್ಕೆ ಚಿತ್ತೈಸಿದರು. ಆ ದಿನದ ಮಧ್ಯಾಹ್ನದಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಯು ಸೇರಿದ್ದಿತು. ಆಗ ನೆಲ್ಲೂರು ಮಠದ ನಂಜುಂಡಶಾಸ್ತ್ರಿಗಳೂ ಮತ್ತು ಮುಗುಳವಳ್ಳಿ ಮಠದ ಮಪ್ಪಿನಯ್ಯಶಾಸ್ತ್ರಿಗಳೂ ವೀರಶೈವರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಬಹು ಶ್ಲಾಘ್ಯವಾಗಿ ಉಪನ್ಯಾಸಗಳನ್ನು ಮಾಡಿದವೇಳೆ ಈ ಕಾರ್ಯಕ್ಕಾಗಿ ಕೊಂಚ ದ್ರವ್ಯ ಸಹಾಯ ಮಾಡಬೇಕೆಂದು ಆಲೂರುಮಠದ ವೈ. ಸಿದ್ಧಯ್ಯನವರೂ ಶುಕ್ರವಾರಪೇಟೆ ಮಠದ ನಂಜಪ್ಪಯ್ಯನವರೂ ಬಿನ್ನೈಸಲು ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವಿದ್ಯಾಭಿವೃದ್ಧಿ ಫಂಡಿಗೆ ೫ ರೂ. ಗಳನ್ನು ಸ್ಟಾರ ಪತ್ರಿಕೆಯ ಎಡಿಟರಿಗೆ ಕಳುಹಿಸುತ್ತೇವೆಂದು ಬಿಸ್ನಿಮಠದ ವೈ. ಸಿದ್ಧವೀರಯ್ಯನವರು ವಾಗ್ದಾನ ಮಾಡಿದರು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

[ನಮ್ಮಲ್ಲಿಗೆ ಬಂದ ಈ ೫ ರೂ. ಗಳನ್ನು ನಾವು ಫಂಡಿನ ಸೆಕ್ರೆಟರಿಯವರಿಗೆ ತಲುಪಿಸಿರುತ್ತೇವೆ.—ಪ. ಸ.]

ಸೊಲ್ಲಾಪುರ.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸೊಲ್ಲಾಪುರದಲ್ಲಿ ೩॥ ತಿಂಗಳಕಾಲ ಮುಕ್ಕಾಮುಮಾಡಿದರು. ಅದರೆ ಇಲ್ಲಿಯ ಸಮಸ್ತ ಶ್ರೀಮಂತ ಭಕ್ತಮಂಡಳಿಯು ಒಳ್ಳೇ ಉತ್ಸುಕತೆಯನ್ನು ಹೊಂದಿ ಅಡ್ಡಪಾಲಕಿಯುತ್ಸವವನ್ನು ೩-೪ ಸಾರೆ ಒಳ್ಳೆಯ ವಿಜೃಂಭಣೆಯಿಂದ ನಡೆಯಿಸಿದರು. ಮತ್ತೂ ವೀರಶೈವರಲ್ಲದೆ ಅನೇಕ ಮತದವರು ಅಂದರೆ ಬ್ರಾಹ್ಮಣ, ಗುಜರಾತಿ, ಮಾರವಾಡಿ ಮೊದಲಾದ ಪ್ರಭೇದದವರು ಆ ಉತ್ಸವದ ಹಿಂದುಮುಂದಾಗಿ ಭಕ್ತಿಪೂರ್ವಕ ಹೋಗುತ್ತಿದ್ದರು. ಶ್ರೀ ನಿರ್ಗುಣಸ್ವಾಮಿಯವರ ಮಠದಲ್ಲಿ ಒಳ್ಳೆಯ ಉತ್ತಮರೀತಿಯಿಂದ ತಾ॥ ೧೦-೪-೧೨ ರಲ್ಲಿ "ಆನಂದಂಬ್ರಹ್ಮ" ಎಂಬ ವಿಷಯವಾದ ಉಪನ್ಯಾಸವನ್ನು ಸಭೆಯು ಸರ್ವಭಕ್ತರೂ ಭಕ್ತಿಯಿಂದ ಕೇಳಿ ಆನಂದವನ್ನು ಹೊಂದಿದರು ಕೈ॥ ಅಪ್ಪಾಸಾಹೇಬ ವಾರದ ರಾಮಚಂದ್ರ ಇವರ ಬಂಗಲೆಯಲ್ಲಿ "ಯದಾತ್ಮಾನಂ ವಿಜಾನೀಯಾದಯಮಸ್ಮೀತಿಪೂರುಷಃ" ಈ ವಿಷಯವಾಗಿ ಉಪನ್ಯಾಸ ನಡೆಯಿತು. ಅನೇಕ ಸರ್ಕಾರಿ ದೊಡ್ಡಮನುಷ್ಯರೂ, ಶ್ರೀಮಂತರೂ ಬಂದಿದ್ದರು. ಸಭೆಯು ಒಳ್ಳೇ ಉತ್ತಮರೀತಿಯಿಂದ ಪೂರೈಸಿತು. ಕಳೆದ ರವಿವಾರದ ದಿವಸ ಶ್ರೀಮಂತ ಮಲ್ಲಿಕಾರ್ಜುನಪ್ಪಾ ಅಪ್ಪಾರಾವ ಪಾಟೀಲ ಇವರು ಬಿನ್ನಹ ಮಾಡಿದರು. ಆ ದಿವಸ ಒಳ್ಳೆಯ ಮೆರವಣಿಗೆಯಿಂದ ಊರಲ್ಲಿರುವ ಶ್ರೀಮಂತ ಬಂತೆಪ್ಪಾ ಕಾಡಾದೆ, ಶ್ರೀ ಪಂಚಪ್ಪಣ್ಣಾ ಉಂಬರಜೆ, ಶ್ರೀ ಮಲ್ಲಿಕಾರ್ಜುನಪ್ಪಾ ಪಸಾರೆ, ಚನ್ನಬಸಪ್ಪಣ್ಣಾ ಮಸಕೆ ಮುಂತಾದ ಶ್ರೀಮಂತರು ಅವರ ಬೆಂಬಲವಾಗಿ ನಡೆದು ಬರುತ್ತಿದ್ದರು. ಎಷ್ಟೋ ಬ್ಯಾಂಡಗಳ ಗಾನದಿಂದಲೂ, ಕುದುರೆಗಳಿಂದಲೂ ಅನೇಕ ವೈಭವದಿಂದಲೂ ಸ್ವಾಮಿಯವರನ್ನು ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಮಾರ್ಗದಲ್ಲಿ ವೀರಶೈವರು ಮೇಲೆ ಹೇಳಿದ ಪ್ರಮುಖರುಮಾಡಿದ ಮಹಾಜನಬೋರ್ಡಿಂಗವೆಂಬ ಸ್ಥಾನಕ್ಕೆ ಸ್ವಾಮಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಉನ್ನತಾಸನದಲ್ಲಿ ಕುಳ್ಳಿರಿಸಿದ ವೇಳೆ ಉತ್ತಮರೀತಿಯಿಂದ ಭಾಷಣಗಳಾದವು. ಮಹಾಸ್ವಾಮಿಯವರು ಆ ಸಂಸ್ಥೆಯ ಸಹಾಯಕ್ಕೆ ಕೆಲವು ಹಣ ಕೊಡುತ್ತೇವೆಂದು ಹೇಳಿದರು. ಅನಂತರ ಸಭೆಯನ್ನು ಮುಗಿಸಿ ಶ್ರೀಮಂತರ ಮನೆಗೆ ಹೋದರು. ಅಲ್ಲಿ ಅವರ ಪತ್ನಿಯವರಾದ ಸೌ॥ ಬಾಗೀರಥಿಬಾಯಿ ಪಾಟೀಲ ಇವರು ಆ ಸ್ವಾಮಿಗಳವರ ಮೇಲೆ ಉತ್ತಮವಾದ ಪದಗಳನ್ನು ಮಾಡಿ ಅವರ ಸನ್ನಿಧಿಗೆ ತೋರಿಸಿದರು ಅವನ್ನು ಕೇಳಿ ಸ್ವಾಮಿಯವರು ಬಹಳ ಆನಂದವನ್ನು ಹೊಂದಿದರು. ಇದಲ್ಲದೆ ಅವರು ಸ್ವತಃ ಎರಡು ಲೋಡುಗಳನ್ನು ಒಳ್ಳೇ ಕಲಾಕೌಶಲ್ಯದಿಂದ ಮಾಡಿ ಸ್ವಾಮಿಗಳವರ ಸನ್ನಿಧಿಗೆ ಅರ್ಪಿಸಿದರು. ಇದನ್ನೆಲ್ಲ ಅವರು ನೋಡಿ ಒಳ್ಳೇ ಆನಂದವನ್ನು ಹೊಂದಿದರು. ಅಲ್ಲಿ ಭೋಜನ ಮುಗಿಸಿಕೊಂಡು ಅದೇ ದಿವಸ ರಾತ್ರಿ ೧೦ ಗಂಟೆಗೆ ಈ ಸ್ಥಲವನ್ನು ಬಿಟ್ಟು ಮೋಹಳಗ್ರಾಮಕ್ಕೆ ದಯಮಾಡಿಸಿದರು. ಅಲ್ಲಿಂದ ವೈರಾಗಬಾರಸಿ ಕಡೆಗೆ ಸ್ವಾರಿಯು ಚಿತ್ತೈಸಿತು. ಪ್ರತ್ಯಕ್ಷದರ್ಶಿ.

ಮೈಸೂರು ದೇಶದ ಜೈನರ ವಿದ್ಯಾಕ್ಷೀಣತೆ.

ಜೈನರ ಹೊರತಾಗಿ ಸಕಲ ವರ್ಣಾಶ್ರಮದವರೂ ತಮ್ಮ ಜನಾಂಗದವರ ಪುರೋಭಿವೃದ್ಧಿಗೆ ಕಾರಣವಾದ ವಿದ್ಯಾಪ್ರಸಾರದಲ್ಲಿ ತನುಮನಧನಗಳನ್ನು ಅರ್ಪಿಸುತ್ತಾ ಇರುವಲ್ಲಿ, ಈ ನಮ್ಮ ಜೈನ ಬಾಂಧವರು ಅಂಧರಂತೆ ತಟಸ್ಥರಾಗಿರುವುದು ತುಂಬಾ ವಿಷಾದಕರವಾಗಿದೆ. ಈಗಿನ ನವನಾಗರಿಕ ಕಾಲದಲ್ಲಿಯೂ ಕೂಡ ಜನಾಂಗದ ಅಭ್ಯುದಯಕ್ಕೆ ವಿದ್ಯಾಭ್ಯಾಸವೇ ಅತಿ ಮುಖ್ಯವೆಂದು ತಿಳಿಯದೆ ವೃಥಾ ದೇವಸ್ಥಾನಗಳ ಜೀರ್ಣೋದ್ಧಾರ ಮುಂತಾದ ಕಾರ್ಯಗಳಲ್ಲಿ ಪ್ರವೇಶಿಸುತ್ತಾ ಇರುವುದು ಶೋಚನೀಯವೇ ಸರಿ. ಈ ನಮ್ಮ ಮೈಸೂರು ಸೀಮೆಯಲ್ಲಿ ಉಪಪನ್ನರಾದ ಅನೇಕ ಜೈನರಿದ್ದಾಗ್ಯೂ ಕೂಡ ದೇವಸ್ಥಾನಗಳ ಜೀರ್ಣೋದ್ಧಾರಗಳಿಗಾಗಿ ದ್ರವ್ಯ ಸಹಾಯ ಮಾಡುವವರಾಗಿರುವರೇ ಹೊರತು ವಿದ್ಯಾಭ್ಯಾಸಕ್ಕಾಗಿ ಒಂದು ಕಾಸನ್ನಾದರೂ ಸಹಾಯಮಾಡುವವರಿಲ್ಲ. ಇಹಪರಗಳೆರಡಕ್ಕೂ ಸಾಧನವಾದ ಜ್ಞಾನರತ್ನವು ಶ್ರೇಷ್ಠವಾದ ವಿದ್ಯೆಯಿಂದ ಲಭಿಸುವುದಲ್ಲದೆ ಮೂಢಭಕ್ತಿಗೆ ಆಕರವಾದ ದೇವಸ್ಥಾನಗಳಿಂದೇನೂ ಪ್ರಯೋಜನವಾಗಲಾರದು. ಈಗ್ಗೆ ಕೆಲವು ಶತಮಾನಗಳ ಹಿಂದೆ ಅಂದರೆ ಕ್ರಿ॥ಶ॥೪ ನೆ ಶತಮಾನದ ವರೆಗೂ ಅನೇಕ ಜೈನ ವಿದ್ವಾಂಸರಿಂದ ಉದ್ಗ್ರಂಥಗಳು ಹುಟ್ಟಿ ಈ ಮತವು ನಮ್ಮಾ ಭರತಖಂಡದಲ್ಲಿ ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂಬುದಕ್ಕೆ ಹಾಲಿ ಈಗಿರುವ ಅನೇಕ ಆಧಾರಗಳೇ ಉದಾಹರಣೆಯಾಗಿವೆ. ಈ ಉತ್ತಮ ಗ್ರಂಥಗಳ ಪ್ರಸಾರಕ್ಕೆ ತಕ್ಕ ಮಾರ್ಗವಿಲ್ಲದೆ ಇದ್ದ ಸ್ಥಳಗಳಲ್ಲೇ ನುಸಿಗಳ ಪಾಲಾಗುತ್ತಲಿವೆ. ಕಾರಣವೇನಂದರೆ, ಈ ನಮ್ಮ ಜೈನರಲ್ಲಿ ವಿದ್ಯಾವಂತರು ಅತಿ ವಿರಳರಾಗಿರುವುದೇ. ದಕ್ಷಿಣದೇಶದ ಜೈನರು ಈ ರೀತಿಯಲ್ಲಿರುವರೇ ಹೊರತು ಉತ್ತರದೇಶದ ನಮ್ಮ ಜೈನ ಬಾಂಧವರು ಸಂಪೂರ್ಣ ವಿದ್ವಾಂಸರಾಗಿ ಆಗಿಂದಾಗ್ಗೆ ಪರಿಷತ್ತುಗಳನ್ನು ಕೂಡಿಸುತ್ತಲೂ, ವಿದ್ಯಾ ಮತ್ತೂ ಮತಾಭಿವೃದ್ಧಿಗಾಗಿ ತಕ್ಕ ನಿರ್ಧಾರಗಳನ್ನು ಯೋಚಿಸುತ್ತಲೂ, ಅದರಂತೆ ನೆರವೇರಿಸುತ್ತಲೂ ಇದ್ದಾರೆ. ಅಲ್ಲಿಯ ಮಹಿಳೆಯರಷ್ಟು ಕೂಡ ನಾವು ವಿದ್ಯಾವಂತರಾಗಿಲ್ಲ. ಅಲ್ಲಿನ ಮಹಿಳೆಯರಲ್ಲಿ ಅನೇಕ ವಿದ್ಯಾವತಿಯರು ಆಗಾಗ್ಗೆ ಸಭೆಗಳನ್ನು ಕೂಡಿಸಿ ಸ್ತ್ರೀ ಸಮಾಜದ ಏಳಿಗೆಗೆ ತಕ್ಕ ಕಾರಣಗಳನ್ನು ಕುರಿತು ಯೋಚಿಸುತ್ತಲೂ ಇದ್ದಾರೆ. ಇದಕ್ಕೆ ಈ ವರ್ಷ ಬೆಳಗಾವಿಯಲ್ಲಿ ನಡೆದ "ಜೈನಮಹಿಳಾ ಪರಿಷತ್ತು" ದೃಷ್ಟಾಂತವಾಗಿದೆ. ಇಲ್ಲಿ ನಮ್ಮ ಸಹೋದರಿಯರಾದರೋ ವಿದ್ಯಾ ಗಂಧವನ್ನೇ ಅರಿಯದೆ ತುಂಬಾ ಶೋಚನೀಯಾವಸ್ಥೆಯಲ್ಲಿರುವರು. ನಮ್ಮಲ್ಲಿಯ ಅನೇಕ ಗಂಡಸರಲ್ಲಿ ಮತಾಭಿಮಾನವೆಂಬ ವಾಸನೆಯೇ ಹೋಗಿ ಸಭೆಗಳೆಂದರೇನೋ, ವಿದ್ಯದ ರೂಪವೆಂಥಾದ್ದೋ, ಎಂಬಂತಿರುವಲ್ಲಿ ಇನ್ನು ಮಹಿಳೆಯರ ವಿಷಯವನ್ನು ಯೋಚಿಸಬೇಕಾದ್ದೇನಿದೆ? ಈಗ್ಗೆ ಕೆಲವು ದಿನಗಳ ಹಿಂದೆ ಮಂಡ್ಯದಲ್ಲಿ ಮೆ॥ ಎಸ್. ಧರಣಪ್ಪ ಎಂಬುವರು ಒಂದು ಅಚ್ಚುಕಾರ್ಖಾನೆಯನ್ನಿಟ್ಟು ಜೈನ ಗ್ರಂಥಗಳನ್ನು ಪ್ರಚುರಪಡಿಸುತ್ತಲೂ, ಒಂದು ಮಾಸಪತ್ರಿಕೆಯನ್ನು ಸಹಾ ಹೊರಡಿಸುತ್ತಲೂ ಇದ್ದರಾದರೂ ನಮ್ಮ ಜನರು ಅವರಿಗೆ ತಕ್ಕ ಪ್ರೋತ್ಸಾಹ ಕೊಡದಿದ್ದುದರಿಂದ ಆ ಸ್ಥಳವನ್ನೇ ಬಿಟ್ಟು ಕಾರ್ಖಾನೆಯೊಂದಿಗೆ ಈಗ ಮೈಸೂರಿನಲ್ಲಿದ್ದಾರೆ. ಅಲ್ಲಿಯೂ ಅವರ ಕಷ್ಟಕ್ಕೆ ತಕ್ಕ ಫಲಸಿಕ್ಕದೆ ಎಣ್ಣೆಯಲ್ಲಿ ಬಿದ್ದ ಹುಳುವಿನಂತೆ ಪೇಚಾಡುತ್ತಿದ್ದಾರೆಂದು ಕೇಳುತ್ತೇನೆ. ಈಗಲಾದರೂ ನಮ್ಮವರು ಅವರಿಗೆ ತಕ್ಕ ದ್ರವ್ಯ ಸಹಾಯವನ್ನು ಮಾಡುವುದರ ಮೂಲಕ ಜೀರ್ಣವಾದ ಮತ ಗ್ರಂಥಗಳನ್ನು ವೃದ್ಧಿಗೆ ತಂದರೆ ಸಹಸ್ರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿದಂತಾಗುವುದಿಲ್ಲವೆ? ಇದೇ ರೀತಿ ತುಮಕೂರಿನ ಜೈನ ಸಹೋದರರು ಕೆಲವು ದಿನಗಳ ಹಿಂದೆ ಶ್ರೀ ಮಂದರಗಿರಿ ದೇವಸ್ಥಾನಗಳ ಜೀರ್ಣೋದ್ಧಾರದ ಬಗ್ಗೆ ಸಹಾಯಕೆ ದ್ರವ್ಯದ ಪಟ್ಟಿಯನ್ನು ಅದರ ಟ್ರಿಜರು ಹಲವು ಪತ್ರಿಕೆಗಳಲ್ಲಿ ಪ್ರಚುರಪಡಿಸಿದ್ದೇ ಹೊರತು ಈವರೆಗೆ ಅದರಿಂದ ಯಾವ ಪ್ರಯೋಜನವನ್ನೂ ಕಾಣಿಸಲಿಲ್ಲ. ಅಲ್ಲದೆ ತುಮಕೂರಿನಲ್ಲಿ ಒಂದು ವಾಚನಾಲಯವನ್ನು ಸಹ ಸ್ಥಾಪಿಸಿ ಕೆಲವು ದಿನಗಳಲ್ಲೇ ಅದಕ್ಕೆ ಪರಿಸಮಾಪ್ತಿಯ ಧಾರೆಯೆರೆದು "ಒಲೆಗೆಲ್ಲು ನಿದ್ರೆಗೇಡು" ಎಂಬ ಲೋಕರೂಢಿಯಂತಾಚರಿಸಿದರು. ಇದಲ್ಲವೇ ಆರಂಭಶೂರರ ಕರ್ತವ್ಯವು? ಇನ್ನಾದರೂ ನಮ್ಮ ಜೈನ ಸಹೋದರರು ನಿದ್ರಾವಸ್ಥೆಯಲ್ಲಿರದೆ ಇತರ ನಮ್ಮ ಸಹೋದರರಂತೆ ಈಗಿನ ಪದ್ಧತಿಯನ್ನನುಸರಿಸಿ ಒಗ್ಗಟ್ಟಾಗಿ ತಮ್ಮ ತಮ್ಮ ಶಕ್ತ್ಯನುಸಾರ ದ್ರವ್ಯವನ್ನು ಶೇಖರಿಸಿ ತನ್ಮೂಲಕ ವಿದ್ಯದಲ್ಲಿ ಹಿಂದುಳಿದಿರುವ ಜೈನ ತರುಣರಿಗೆ ಮುಖ್ಯ ಸ್ಥಳಗಳಲ್ಲಿ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲಪಡಿಸಿ ಅದರಿಂದುಂಟಾಗುವ ಕೀರ್ತಿಗೆ ಭಾಗಿಗಳಾಗಬೇಕಾಗಿ ಕೋರಿ ಪತ್ರವಿಸ್ತಾರಭಯದಿಂದ ಇಲ್ಲಿಗೆ ಸಾಕುಮಾಡುತ್ತೇನೆ.

ಎ. ವೆಂಕಟರಾಯಪ್ಪ

ನೋಟೀಸು.

ಸಮಸ್ತ ವೀರಶೈವ ಬಾಂಧವರಿಗೆ ಸೂಚಿಸುವುದೇನಂದರೆ— ಹಾವೇರಿಯ ವೀರಶೈವ ಸಂಸ್ಕೃತಪಾಠಶಾಲೆಯು ಪ್ಲೇಗು ರೋಗದ ದೆಸೆಯಿಂದ ಈಗ ಒಂದು ವರ್ಷದಲಾಗಾಯಿತು ಬಂದಮಾಡಲ್ಪಟ್ಟಿದ್ದು, ಈಗ ಪುನಃ ಆರಂಭವಾಗಿರುತ್ತದೆ. ಅದುಕಾರಣ ತಮ್ಮ ತಮ್ಮ ಗ್ರಾಮಗಳಲ್ಲಿರುವ ಮಠಸ್ಥ ವಿದ್ಯಾರ್ಥಿಗಳನ್ನು ದಯಮಾಡಿ ಜಂಗಮರು ಸದರಿ ಪಾಠಶಾಲೆಗೆ ಕಳುಹಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ. ಸದರಿ ಪಾಠಶಾಲೆಗೆ ಬರತಕ್ಕ ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ನಿಯಮಕ್ಕೆ ಸರಿಯಾಗಿರಬೇಕು.

ನಿಯಮಗಳು:—(೧) ಪಂಚಕಾವ್ಯಗಳನ್ನು ಓದಿರಬೇಕು. (೨) ನ್ಯಾಯವೇದಾಂತಾದಿ ಶಾಸ್ತ್ರಗಳನ್ನು ಓದಲಿಕ್ಕೆ ಯೋಗ್ಯತೆಯುಳ್ಳವರಾಗಿರಬೇಕು. (೩) ಕನ್ನಡ [illegible] ಮರಾಠಿ [illegible] ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಿದ್ದು, ಸುಮಾರಾದ ಮತಿಯುಳ್ಳವರಾಗಿರಬೇಕು. (೪) ೮-೫ ವರ್ಷಗಳ ವರೆಗೆ ಇದೇ ಪಾಠಶಾಲೆಯಲ್ಲಿ ಧೃಢವಾಗಿ ನಿಂತು ಅಭ್ಯಾಸಮಾಡುವವರಾಗಬೇಕು.

ಈ ತರದ ವಿದ್ಯಾರ್ಥಿಗಳು ಯಾರಾದರೂ ಇದ್ದರೆ ಈ ನೋಟೀಸು ನೋಡಿದ ಕೂಡಲೆ ಹೊರಟುಬರಬೇಕು. ಈ ವಿದ್ಯಾರ್ಥಿಗಳಿಗೆ ಅನ್ನೋದಕದ ವ್ಯವಸ್ಥೆಯು ಚೆನ್ನಾಗಿ ಇರಿಸಲ್ಪಡುವುದಲ್ಲದೆ ಅವರವರ ಬುದ್ಧಿ ಮತ್ತು ಮುಂತಾದುದನ್ನು ನಿರೀಕ್ಷಿಸಿ, ಮಾಸಿಕ, ತ್ರೈಮಾಸಿಕ ಪರೀಕ್ಷೆಯಲ್ಲಿ ಯೋಗ್ಯವಾದ ಪಾರಿತೋಷಕವು ಕೊಡಲ್ಪಡುವುದು. ವಿದ್ಯಾರ್ಥಿಗಳು ವಾಸಮಾಡುವುದಕ್ಕೆ ವಿಶಾಲವಾದ ಹವೆಯ ಸ್ಥಲವಿರುತ್ತದೆ. ವಿದ್ಯಾರ್ಥಿಗಳ ರೋಗನಿವಾರಣೆಗೋಸ್ಕರ ವೈದ್ಯನುಕೂಡ ನಿಯಮಿಸಲ್ಪಡುವನು. ಈಗ ಈ ಊರಲ್ಲಿ ಹವೆಯು ಚೆನ್ನಾಗಿರುತ್ತದೆ. ಬರತಕ್ಕ ವಿದ್ಯಾರ್ಥಿಗಳು ತ್ವರೆಮಾಡಬೇಕು. ಸಂಖ್ಯೆ ಭರ್ತಿಯಾದನಂತರ ತೆಗೆದುಕೊಳ್ಳಲಾಗುವದಿಲ್ಲ.

ಚನ್ನಬಸಪ್ಪ ಕುರುಬಗೊಂಡ,
ಪ್ರೆಸಿಡೆಂಟ್, ವೀರಶೈವ ಸಂ॥ ಪಾ॥ ಹಾವೇರಿ.

ಗದಗಿಗೆ ನಾನು ಅರಳೆ ವ್ಯಾಪಾರದ ಸಲುವಾಗಿ ಹೋಗಿದ್ದೆನು. ತಾ॥ ೧೧ ನೆ ರವಿವಾರದ ಸಂಜೆಯಾಗುವ ಸುಮಾರಿಗೆ ನನ್ನ ಅಣ್ಣಂದಿರೊಂದಿಗೆ ಸಣ್ಣ ಅಯ್ಯಪ್ಪ ಗೌಡರು ಇವರ ಅರಳೆಪಖಾರಕ್ಕೆ ಹೋದೆನು. ಸದಾ ಪಖಾರದಲ್ಲಿ ಹುಡುಗರ ಶಿಕ್ಷಣದ ದೆಸೆಯಿಂದ ಪ್ರತ್ಯೇಕವಾಗಿ ಒಂದು ಮಂದಿರವು ಕಟ್ಟಲ್ಪಟ್ಟಿತ್ತು. ಈ ಮಂದಿರದಲ್ಲಿ ಬಾಲಕರಿಗೆ ಯಾವ ತರದ ಶಿಕ್ಷಣವು ಕೊಡಲ್ಪಡುತ್ತದೆಂಬುದನ್ನು ನೋಡಲು ಕುತೂಹಲವುಳ್ಳವನಾದೆನು. ಇಷ್ಟರಲ್ಲೇ ಶ್ರೀ ಕರಿಬಸಯ್ಯಾ ಸ್ವಾಮಿ ಹಿಟ್ಟಿನಮಠ ಇವರು ಬಂದು ತಮ್ಮ ಉಚ್ಚಸ್ಥಾನವನ್ನಲಂಕರಿಸಿದರು. ಅವರು ತಮ್ಮ ನೇಮದ ಕೆಲಸಗಳನ್ನು ತೀರಿಸಿಕೊಂಡು ಒಬ್ಬೊಬ್ಬರನ್ನೇ ಕರೆದು ನೀವು ಬರೆದಿರುವ ನಿಬಂಧವನ್ನು ಓದಿರಿ ಎಂದು ಹೇಳಿದರು. ಅವರ ಆಜ್ಞೆಯಂತೆ ಪ್ರತಿಯೊಬ್ಬರೂ ಬರೆದು ತಂದ "ವ್ಯಾಯಾಮ" ಈ ವಿಷಯದ ನಿಬಂಧವನ್ನು ಓದಿದರು. ಎಲ್ಲರ ಭಾಷಣವನ್ನೂ ಸಾವಧಾನಚಿತ್ತದಿಂದ ಶ್ರೀಗಳು ಕೇಳಿಕೊಂಡು ಅವರಲ್ಲಿರುವ ವ್ಯಾಯಾಮದ ವಿಷಯದಲ್ಲಿ ನ್ಯೂನತೆಗಳನ್ನು ತಿದ್ದುವುದಕ್ಕೋಸುಗ ವ್ಯಾಯಾಮ ಶಬ್ದವು ಹುಟ್ಟಿದ ಧಾತು, ವ್ಯಾಯಾಮಶಬ್ದದೊಳಗೆ ಗರ್ಭಿತವಾಗಿರುವ ಸದಭಿಪ್ರಾಯ, ವ್ಯಾಯಾಮವನ್ನು ಮಾಡುವ ಕಾಲದ ಪರಿಮಿತಿ, ಅದರ ಸದುಪಯೋಗ, ಅದರ ನಿಷ್ಕಾಳಜಿಯಿಂದ ಆಗುವ ದುಷ್ಪರಿಣಾಮಗಳು ಇವೆಲ್ಲವುಗಳನ್ನು ಗರ್ಭೀಕರಿಸಿಕೊಂಡು ಲೌಕಿಕ ಪಾರಮಾರ್ಥಿಕ ಉದಾಹರಣೆಗಳೊಂದಿಗೆ ಬಹು ಸರಸವಾಗಿ ಭಾಷಣಮಾಡಿದರು. ಮುಂದಿನವಾರ ಪ್ರಯತ್ನವೆಂಬ ವಿಷಯದಲ್ಲಿ ನಿಬಂಧವನ್ನು ಬರೆದು ತರುವದಕ್ಕೆ ಹೇಳಿದರು. ಅವರ ಭಾಷಣವನ್ನು ಕೇಳಿ ಬಾಲಕರೆಲ್ಲರೂ ಆನಂದಾಬ್ಧಿಯಲ್ಲಿ ಮುಳುಗಿ ಮುಖಗಳನ್ನು ಪ್ರಫುಲ್ಲಿತಮಾಡಿದ್ದರು. ಪ್ರತಿವಾರಕ್ಕೊಮ್ಮೆ ಈ ರೀತಿಯಾಗಿ ಶಿಕ್ಷಣ ಕೊಡುವುದು ಒಳ್ಳೇ ಮೇಲ್ತರದ್ದಾಗಿದೆ. ನಮ್ಮ ವೀರಶೈವ ವಿದ್ಯಾರ್ಥಿಗಳು ವಾಕ್ಪಂಡಿತರಾಗಬೇಕೆಂಬ ಸದಿಚ್ಛೆಯಿಂದ ತಮ್ಮ ದೇಹಕೃಶದ ಕಡೆಗೆ ಲಕ್ಷ್ಯಗೊಡದೆ ಶ್ರೀಗಳು ಕೈಕೊಂಡಿರುವ ಈ ಕೆಲಸವು ಒಳ್ಳೇ ಸ್ತುತ್ಯವಾಗಿದೆ. ಹಾಗೂ ಈಗ ಬೇಸಗೆಯ ಮೂಲಕ ಇಂಗ್ಲೀಷು ಸರ್ಕಾರಿ ಶಾಲೆಗಳು ಬಂದಾಗಿರುವುದರಿಂದ ಈ ಕಟ್ಟಡದಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ನೇಮದಂತೆ ಸದರಿ ಶ್ರೀಗಳಿಂದ ಶಿಕ್ಷಣವು ಸಹ ಕೊಡಲ್ಪಡುವುದೆಂದು ನನ್ನ ಅಣ್ಣಂದಿರು ಹೇಳಿದರು.

ಸಣ್ಣವೀರಪ್ಪಾ ಚವಡಿ, ನರಗುಂದ.

ಒಂದು ಸ್ತುತ್ಯಕಾರ್ಯವು.

ಶ್ರೀಮನ್ನಿರಂಜನ ಚರವರ್ಯ ಮೃಡಗಿರಿ ಅನ್ನದಾನಿ ಮಹಾಸ್ವಾಮಿಗಳವರು ಧರ್ಮೋತ್ತೇಜನವಾಗಲಿಕ್ಕೆ ಪ್ರತಿವರ್ಷ ರಥೋತ್ಸವವನ್ನು ಜರುಗಿಸುವುದು ಸರ್ವಶ್ರುತವಿರುವುದಷ್ಟೆ. ಅದೇ ಪ್ರಕಾರ ಈ ಪರೀಧಾವಿ ಸಂ॥ದ ವೈಶಾಖ ಶು॥ ೧೦ ಗೆ ರಥೋತ್ಸವ ನಡೆದು, ಈ ಶು॥ ೧೧ ದಿವಸ ಶ್ರೀಗಳವರ ಪಂಚಕಲಶಯುಕ್ತವಾದ ಪಾಲಕಿಯುತ್ಸವವು ಅನೇಕ ಬಿರುದಾವಳಿಗಳಿಂದಲೂ, ವಾದ್ಯಘೋಷದಿಂದಲೂ ಬಹು ವಿಜೃಂಭಣೆಯಿಂದಲೂ ನೇತ್ರಾನಂದಕರವಾಗಿ ಜರುಗಿಸಲ್ಪಟ್ಟಿತು. ಈ ಶು॥೧೦-೧೧ ಈ ಎರಡು ದಿವಸಗಳಲ್ಲಿ ಸರ್ವಜನಸಮೂಹಕ್ಕೆ ಅನ್ನದಾನದಿಂದ ತೃಪ್ತಿಪಡಿಸಿದುದಲ್ಲದೆ, ಅತಿಥಿ ಸತ್ಕಾರಗಳನ್ನು ಪರಮಪ್ರೀತಿಯಿಂದ ನೆರವೇರಿಸಿದರು. ಈ ಸಂ॥ ಮಳೆಯಿಲ್ಲದೆ ನೀರಿನ ದೆಸೆಯಿಂದ ಅನೇಕ ಗ್ರಾಮಗಳಿಗೆ ಕ್ಷೋಭವುಂಟಾಗಿರುತ್ತೆ. ಅದರಂತೆ ಈ ಮೃಡಗಿರಿ ಗ್ರಾಮದಲ್ಲಿಯೂ ಭಾವಿಗಳು ವಿಶೇಷವಿದ್ದರೂ ಹಳ್ಳದಲ್ಲಿ ನೀರು ಇಲ್ಲದೆ ಇರುವುದರಿಂದಲೂ, ಜಲವು ಬಹಳ ಕಡಿಮೆಯಾದುದರಿಂದಲೂ ಉತ್ಸವಕ್ಕೆ ಬಂದ ಜನರಿಗೆ ಎಷ್ಟು ತ್ರಾಸವಾಗುವುದೋ ಎಂದು ಶ್ರೀಗಳವರು ಆಲೋಚನೆಯಲ್ಲಿರಲು, ಉತ್ಸವಕ್ಕೆ ಒಂದು ದಿನ ಮುಂದೆ ಇಲ್ಲಿ ಸುತ್ತುಮುತ್ತೂ ಯಾವ ಕಡೆಯೂ ಇಲ್ಲದೆ, ಹಳ್ಳಕ್ಕೆ ಮೇಲು ಭಾಗದಲ್ಲಿ ಬಹಳೇ ದೂರವಾಸಲೆಯಲ್ಲಿ ಮಳೆಯಾಗಿ ರಾತ್ರಿವೇಳೆಗೆ ಹಳ್ಳವು ಪೂರ್ಣಭರಿತವಾಗಿ ನೀರಿನ ತೊಂದರೆಯು ತಿಲಾಂಶವಾದರೂ ಇಲ್ಲದಂತೆ ಆಯಿತು. ಗಂಗಾಂಬಿಕೆಯು ಕೂಡ ಅತಿಥಿ ಸತ್ಕಾರವನ್ನು ಪೂರ್ಣಮಾಡುವ ಮಮತೆಯಿಂದ ಶ್ರೀಗಳವರ ಇಚ್ಛಾಪ್ರಕಾರಕ್ಕೆ ಬಿಜಯಂಗೈಸಿದಳು. ಮತ್ತೂ ಈ ಶು॥ ೧೧-೧೨ ಈ ಎರಡು ದಿವಸ ಉದಯಕ್ಕೆ ನರೇಗಲ್ಲು ಶಾಸ್ತ್ರಿಗಳವರಿಂದ ಧರ್ಮೋತ್ತೇಜಕ ವಿಷಯದಲ್ಲಿಯೂ, ದೀಕ್ಷಾವಿಧಿ—ವಿವಾಹವಿಧಿ—ಸತ್ಕಾರ್ಯವನ್ನು ನೆರವೇರಿಸುವ ಫಲ— ಈ ವಿಷಯಗಳಲ್ಲಿಯೂ ಸುಗಮವಾದ ಮಾತುಗಳಿಂದ ಸರ್ವಜನರ ಹೃದಯದಲ್ಲಿ ಬಿಂಬಿಸುವಂತೆ ಭಾಷಣವು ನಡೆಸಲ್ಪಟ್ಟಿತು. ಇದಕ್ಕೆ ಸಭಿಕರು ಕರತಾಡನದಿಂದ ಪ್ರೋತ್ಸಾಹಗೊಳಿಸೋಣವಾಯಿತು.

ಶ್ರೀ ಅನ್ನದಾನಿಯೆಂದು ನಾಮಾಂಕಿತವನ್ನು ವಹಿಸಿರುವ ಪೂಜ್ಯಪಾದರು ಸತ್ಪಾತ್ರದಾನದೊಳ್ ಅನ್ನದಾನವೇ ಮುಖ್ಯಾಂಕವೆಂದು ಅನೇಕ ಪುರಾಣ ಪುರಾತನೋಕ್ತಿಗಳಂತೆ ಸಹಸ್ರಜನರಿಗೆ ಅನ್ನದಾನದಿಂದ ತೃಪ್ತಿಪಡಿಸಿದರು. ಮತ್ತೂ ಈ ಸಮಯದಲ್ಲಿ ಒಂದು ಸಭೆಯನ್ನು ಕೂಡಿಸಬೇಕೆಂದು ಶ್ರೀಗಳವರ ಅಪ್ಪಣೆಯಪ್ರಕಾರ ಸನ್ನಿಧಿಯಲ್ಲಿ ರಾವಸಾಹೇಬ ಪೇಠಾ ಮೃಡಗಿರಿ ಮಹಾಲ್ಕರಿಯವರು, ಪೋಲೀಸು ಸಬ್ ಇನ್ಸ್ಪೆಕ್ಟರು, ನಾಡಗೌಡರ ಸರದಾರ ವೆಂಕಟರಾವು, ಶ್ರೀಮಂತ ಇಟ್ಟೂರ ರಂಗಪ್ಪಾ ಶೆಟ್ಟರ ಸಂಗಪ್ಪ, ಸಿರಿ ಪುಟ್ಟಪ್ಪ ಪತ್ತೇರ ದೊಡ್ಡಮನುಷ್ಯರನೇಕರು ಕಲೆತು ಸಭೆಯನ್ನು ಅಲಂಕರಿಸಿದರು. ಅಗ್ಗೆ ಸದರಿ ರಾವಸಾಹೇಬ ಮಹಾಲ್ಕರಿಯವರು ಶ್ರೀಗಳವರಿಗೆ ಸವಿನಯಪೂರ್ವಕವಾಗಿ ಉಪನ್ಯಾಸವನ್ನು ಹೀಗೆಮಾಡಿದರು:—ನಮ್ಮ ಹಿಂದೂ ದೇಶಾಧೀಶರಾಗಿ ಸಾರ್ವಭೌಮತ್ವವನ್ನು ವಹಿಸಿ, ಏಕಛತ್ರಾಧಿಪರೆನಿಸಿ, ದಯಾಳುಗಳಾಗಿಯೂ, ನಿಷ್ಪಕ್ಷಪಾತತೆಯುಳ್ಳವರಾಗಿಯೂ ಪ್ರಜಾಹಿತಚಿಂತಕರಾಗಿಯೂ, ಸರ್ವಮತ ಧರ್ಮಗಳನ್ನೂ ಕಾಪಾಡುವವರಾಗಿಯೂ ಇರುವ ಮಹಾರಾಜರ ಮಕುಟಧಾರಣಮಹೋತ್ಸವದ ಜ್ಞಾಪನಾರ್ಥವಾಗಿ ಈ ಮೃಡಗಿರಿ ಗ್ರಾಮದಲ್ಲಿ ಒಂದು ನವೀನವಾದ ಕಾರ್ಯವನ್ನು ಮಾಡತಕ್ಕುದು ಅವಶ್ಯಕವಿರುತ್ತೆ. ಏನೆಂದರೆ—ಈ ಮೃಡಗಿರಿ ಪೇಟೆಯು ಸರ್ವಸೌಕರ್ಯದಿಂದ ಕೂಡಿದ್ದರೂ ಒಂದು ವಿಷಯದಲ್ಲಿ ನ್ಯೂನತೆಗೊಂಡಿದೆ. ಅದೇನೆಂದರೆ—ಒಂದು ವೈದ್ಯಶಾಲೆಯಿಲ್ಲದಿರುವುದು. ಅದೊಂದರ ಏರ್ಪಾಟಾದರೆ ಶ್ರೀಮಂತರಿಗೂ ಸಹ ಪೂರ್ಣಕೃತಿಮಾಡಿದಂತೆ ಆಗುತ್ತದೆ. ಇಲ್ಲಿಂದ ಗದಗಗ್ರಾಮವು ಸಾಧಾರಣವಾಗಿ ೨೭-೨೮ ಮೈಲು ದೂರ ಫಾಸಲೆಯಿದೆ. ಅಕಸ್ಮಾತ್ತಾಗಿ ಒಬ್ಬ ರೋಗಿಯನ್ನು ಇಷ್ಟು ದೂರವಿರುವ ವೈದ್ಯಶಾಲೆಗೆ ತೆಗೆದುಗೊಂಡು ಹೋಗಿ ಚಿಕಿತ್ಸೆ ಮಾಡಿಸುವುದು ಬಹಳ ಅಸಂಭವವೆಂಬುದು ಸರ್ವಶ್ರುತವಿರುತ್ತೆ. ಪ್ರಯುಕ್ತ ಶ್ರೀಮನ್ನಿರಂಜನ ಚರವರ್ಯರಾದ ಪೂಜ್ಯಪಾದರು ಇದರ ಕಡೆಗೆ ಕರುಣಾದೃಷ್ಟಿಕೊಟ್ಟು, ಧನಸಹಾಯಮಾಡಿ ಇದನ್ನು ಸ್ಥಾಪನೆಮಾಡಿಸಿ ಸಾರ್ವಜನಿಕ ಭಕ್ತ ಸಮುದಾಯವನ್ನು ಉದ್ಧರಿಸಿ ಭಕ್ತಾಭಿಮಾನಿಗಳೆಂದೆನಿಸುವುದಲ್ಲದೆ ಬ್ರಿಟಿಷ್ ಮಹಾರಾಜರ ಮೇಲೆ ಪೂರ್ಣಾಶೀರ್ವಾದಗೈದಂತಾಗುವುದು. ಆದುದರಿಂದ ಸ್ವಲ್ಪಕಾಲದಲ್ಲಿಯೇ ನಾನು ಮುಖ್ಯಾಂಶ ವಿಷಯವನ್ನು ಸೂಕ್ಷ್ಮದಿಂದ ವಿನಂತಿಮಾಡಿಕೊಂಡು ನನ್ನ ಭಾಷಣಕ್ಕೆ ವಿರಾಮಕೊಡುತ್ತೇನೆ. ಎಂದು ತಮ್ಮ ಸ್ವಸ್ಥಾನವನ್ನಲಂಕರಿಸಿದರು. ಸಭಿಕರು ಕರತಾಡನದಿಂದ ತಮ್ಮ ಇಷ್ಟೆಯನ್ನು ಸೂಚಿಸಿದರು. ಇದಕ್ಕೆ ನಾಡಗೌಡರು ವೆಂಕಟರಾವು ಸರದಾರ ಇವರು ಅನುಮೋದಿಸಿದರು. ಆ ಭಾಷಣಕ್ಕೆ ಶ್ರೀಗಳವರು ಆ ವೈದ್ಯಶಾಲೆಯನ್ನು ಸ್ಥಾಪಿಸುವುದಕ್ಕೆ ಉದಾರಚಿತ್ತದಿಂದ ೧೦೦೦ ರೂ. ಗಳನ್ನು ಕೊಡಲು ವಾಗ್ದಾನ ಮಾಡಿದರು. ಮತ್ತೂ ಇದರ ದೆಸೆಯಿಂದ ಮುಂದೆ ಇನ್ನೂ ಸ್ವಲ್ಪ ಸಹಾಯಮಾಡಿಕೊಡುತ್ತೇವೆಂದು ಪ್ರಸಾದವಾಕ್ಯ ಆಯಿತು. ಇದರಂತೆ ಈಗ ಅದರ ಕೆಲಸ ನಡೆದಿರುತ್ತದೆ ಈ ಯಾವತ್ತು ವಿಷಯವನ್ನು ರಾವಸಾಹೇಬ ಮಹಾಲ್ಕರಿಯವರು ರಾವಬಹದ್ದೂರ್ ಧಾರವಾಡ ಜಿಲ್ಲಾ ಕಲೆಕ್ಟರಿಗೆ ರಿಪೋರ್ಟ ಮಾಡಿದರು. ಇದಕ್ಕೆ ಕಲೆಕ್ಟರ್ ಸಾಹೇಬ ಬಹದ್ದೂರ್‌ರವರು ಅಭಿನಂದನಪತ್ರಿಕೆಯನ್ನು ಶ್ರೀಗಳಿಗೆ ಒಪ್ಪಿಸಲಿಕ್ಕೆ ಮೃಡಗಿರಿ ಪೇಠದಲ್ಲಿರುವ ರಾಜಕಾರ್ಯ ಧುರಂಧರರಾಗಿಯೂ ಪ್ರಜೆಗಳ ಹಿತಚಿಂತಾಸಕ್ತರಾಗಿಯೂ ಇರುವ ಮಹಾಲ್ಕರಿಯವರ ಕಡೆಗೆ ರವಾನಿಸಿದರು. ಇದು ತಮ್ಮ ಕರಕಮಲಕ್ಕೆ ಸೇರಿದ ಕೂಡಲೆ ಮಹಾಪಾದಸನ್ನಿಧಿಗೆ ಗ್ರಾಮದ ಸದ್ಗೃಹಸ್ಥರನ್ನೂ, ಶ್ರೀಮಂತರನ್ನೂ, ನಾಡಗೌಡ ಸರದಾರ ನಾಮಾಂಕಿತ ವಹಿಸಿದವರನ್ನೂ ಬರಮಾಡಿ, ತಾವು ಸಂತೋಷವೆಂಬ ಸಮುದ್ರಲ್ಲೋಲಾಡಿ ಇದರಂತೆ ಸರ್ವರಿಗೂ ಪರಮಪ್ರೀತಿಯಾಗುವಂತೆ ಸುಗಮವಾಗಿ ಭಾಷಣಮಾಡಿ ಸದರಿ ಮಾನಪತ್ರಿಕೆಯನ್ನು ಶ್ರೀಗಳವರ ಪಾದಪದ್ಮಂಗಳಿಗೆ ಭೃಂಗೋಪಮಾನರಾಗಿ ಒಪ್ಪಿಸಿದರು. ನಂತರ ಶ್ರೀಗಳವರ ವಸತಿಯಿಂದ ಸರ್ವಜನರಿಗೂ ತಾಂಬೂಲವಗೈರೆ ಹಂಚಲ್ಪಟ್ಟು ಸಭೆಯು ವಿಸರ್ಜನೆಮಾಡಲ್ಪಟ್ಟಿತು.

ಒಬ್ಬ ಚಂದಾದಾರ.

ಕಾರೋನೇಷನ್ ಸಾಬೂನು.

"ಅಪಾಯವಿಲ್ಲದ ರೋಮಸಂಹಾರಿ"

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನೆಗೆ ಮುಂತಾದ ಬಾಧೆಗಳಿಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ
1—0—0
3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ
1—12—0
ಅಂಚೆ ಹಾಸಲು 0—4—0

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ. ಷಾ ಅಂಡ್ ಕೋ.,
177 ಚೇನಾಬಜಾರ್‌ರೋಡ್, ಮದ್ರಾಸು.

ಆಶ್ಚರ್ಯ ಚಿಕಿತ್ಸೆ. ಒಂದು ಜಾಹೀರು

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀರೂಪ ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು ಬ್ಲಡ್ ಸರ್ಕ್ಯುಲೇಟರ್ ಎಂಬ ನೂತನ ಯಂತ್ರದಲ್ಲಿ ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ

2 **ಗುಣಪಡಿಸುತ್ತೆ.**

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯೆಯಿರುವ ಲಾಳದಲ್ಲಿ ಕಸಕಟ್ಟಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡುವುಂಟಾಗಿರುವುದು ಇಂಥಾ ವಿಕಾರವನ್ನು ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಕಾಮಾಲೆ, ಶೋಭೆ, ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾಗಿ ಎಲ್ಲಾ ತರಹ ವಾಯು ರೋಗಗಳೂ ಮತ್ತು ಕರ್ಣ ರೋಗಗಳನ್ನು ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಮೊಕ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಮ್ಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ರೈಲ್ವೆಸ್ಟೇಷನ್.

ನೋಟೀಸು.

2

ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ ಇಂಗ್ಲೀಷ್ ಲೋವರ್ ಸೆಕಂಡರಿಗೆ ಕಡಿಮೆಯಿಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢ ವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವಾ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಚ್. ಕೆ. ವೀರಬಸವೈಯ್ಯ ಬಿ.ಎ.,ಬಿ.ಎಲ್.
ಆನರೆರಿ ಸೆಕ್ರೆಟರಿ.
ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ
ತೋಟದಪ್ಪನವರ ಧರ್ಮಸತ್ರ,
ಬೆಂಗಳೂರು ಸಿಟಿ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦—೧೩—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಟ್ಟಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

47 ಗುಣವಾಗದಿದ್ದರೆ ಹಣವರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭದಾಯಕ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

36

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ವೈಯೋಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಕೆ ಯೋಗ್ಯವಾದ ಧಾತುವಾಗುತ್ತದೆ. ಶರಬ್ಮೈಥುನದಿಂದ ಅಥವಾ ಯಾವುದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೦-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೨ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೪ ರೂ. ೨ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೨ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮ್ಮಿನ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೩೩ “ಅಂಜೀರಾರ್ಕಮಧು ಕಂಪನಿ”
ದಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

17

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಕೆಯಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

7

ಲೋಕಾಮಯಪರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಸೂತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦ ರೂ.

ಟಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ

95 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦.

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೧೦-೦.
ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ ನೇಯ ಇಸವಿ ಮೇ ತಾ|| ೨೭ರಿಂದ ೧೯೧೨ನೇಯ ಜೂನ್ ತಾ|| ೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೇಯ ಪರೀಧಾವಿ ಸಂವತ್ಸರದ ಜ್ಯೇಷ್ಠ ಶು|| ದ್ವಾದಶಿಯಿಂದ ಜ್ಯೇಷ್ಠ ಬ|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
27	[1]ಸೋ	ದ್ವಾ	53-15	ಚಿತ್ತ	49-10	15
28	[2]ಮಂಗ	ತ್ರ	51-53	ಸ್ವಾತಿ	49-38	16
29	[3] ಬುಧ	ಚ	51-54	ವಿಶಾಖ	51-13	17
30	[4]ಗುರು	ಪೌ	53-0	ಅನೂರಾ	54-3	18
31	[5]ಶುಕ್ರ	ಪಾ	55-32	ಜ್ಯೇಷ್ಠ	58-7	19
1	ಶನಿ	ಬಿ	59-4	ಮೂಲ	60	20
2	ಭಾನು	ತ	60	ಮೂಲ	3-55	21

(1) ವೈಷ್ಣವೇಕಾದಶಿ, ರಾಮಲಕ್ಷ್ಮಣದ್ವಾದಶಿ, ಹರಿವಾಸರಃ. (2) ಕೂರ್ಮಜಯಂತಿ, ಸಾವಿತ್ರೀವ್ರತಂ. (3) ಸೌರಶ್ರೀ ನರಸಿಂಹಜಯಂತಿ, ನಮ್ಮಾಳ್ವಾರ್ ತಿರುನಕ್ಷತ್ರ (4) ಭೂಮಿಪೂರ್ಣಿಮಾ. (5) ಅಗ್ನಿನಕ್ಷತ್ರನಿವೃತ್ತಿಃ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M 124

ಮೈಸೂರ್ ಸ್ಟಾರ್

ಪ್ರತಿ ಸೋಮುವಾರ ಪ್ರಕಟಿಸಲ್ಪಡುವ ಪತ್ರಿಕೆ.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾದೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳಿಯಂ ಸದಾಪೊರೆಗೆ ಗೌರೀಕಾನುಕಂಪೋಜ್ವಲಂ ।

ಸಂಪುಟ ೨೯] ಮೈಸೂರ್ ಸ್ಟಾರ್ ೧೯೧೨ ನೇಯ ಇಸವಿ ಜೂನ್ ತಾರೀಖು ೩ ನೇಯ ಸೋಮುವಾರ. [ಸಂಚಿಕೆ ೨೨

REGISTERED NO. M 124

14

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತೆ;	೦-೫-೦
ಸಟೀಕಕರ್ಣಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೬-೦.
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

41

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೨-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೨-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೨-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳಿಗೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೩.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಮಧುರವಾಣಿ.

9 ವಾರ್ಷಿಕಚಂದಾ ೧-೮-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

ವಿವೇಕಮಂಜರಿ.

17

ನೆಯ ೨ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೨ ನೆಯ ಭಾಗ ೩ ಆಣೆ ೧೨೦ ಪುಟಗಳು.

ಅಂಚೆಯವೆಚ್ಚವು ಬೇರೆ.

ವಿಳಾಸ:— “ಮೈಸೂರ್ ಸ್ಟಾರಾಫೀಸ್” ಮೈಸೂರ್.

41

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ—ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಆಶ್ಚರ್ಯ ಚಿಕಿತ್ಸೆ. ಬಂದು ಪರೀಕ್ಷಿಸಿ.

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀವುದು ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು

ಬ್ಲಡ್ ಸರ್ಕ್ಯೂಲೇಟರ್ ಎಂಬ ನೂತನ ಯಂತ್ರದಲ್ಲಿ ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ

3

ಗುಣಪಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯೆಯಿರುವ ಲಾಳದಲ್ಲಿ ಕಸಕಟ್ಟಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡುವುಂಟಾಗಿರುವುದು ಜ್ವರಬಂದು ನಿಂತಮೇಲೂ, ವಾಯುವಿನಿಂದಲೂ ಕಿವುಡು ಉಂಟಾಗಿರುವುದು ಇವೆ ಮೊದಲಾಗಿ ಎಲ್ಲಾ ಕರ್ಣರೋಗಗಳನ್ನೂ ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಕಾಮಾಲೆ, ಶೋಭೆ, ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾಗಿ ಎಲ್ಲಾ ತರಹ ವಾಯು ರೋಗಗಳೂ ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಮೊಕ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಮ್ಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಾಕ್ಷಂಬರ್ಸೆ, ಕಡೂರು ರೈಲ್ವೆಸ್ಟೇಷನ್.

ಉತ್ತಮವಾದ ನಶ್ಯದಪುಡಿ.

7

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦.

ಮುಖೋಲ್ಲಾಸಿನೀ ಹೊಗೇಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ, ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦. ಗಳು. ಟಪಾಲ್ ಖರ್ಚು ಬೇರೆ.

ವಿಳಾಸ:—ಕೆ. ಮಲ್ಲಿಕಾರ್ಜುನಶೆಟ್ಟಿ,
ಕೋಟಿಶೆಟ್ಟಿಯವರು ಹನೂರು ಪೋಸ್ಟು,
ಕೊಳ್ಳೇಗಾಲ ತಾಲ್ಲೂಕು.

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿದೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಶ್ರೀಮನ್ಮಗ್ಗೆಮಾಯಿದೇವಪ್ರಭುವಿರಚಿತ
ಶಿವಾಧವ ಶಿವಾವಲ್ಲಭ ಮಹದೈಪುರೀಶ್ವರ

ಶತಕತ್ರಯವು

ಕರ್ನಾಟಕ ಟೀಕೆಯೊಡನೆ ಈಗ್ಗೆ ೩ ವರ್ಷಗಳ ಕೆಳಗೆ ಮುದ್ರಿಸಲ್ಪಟ್ಟಿತ್ತು. ಈ ಟೀಕೆಯಿದ್ದರೂ, ಸಾಧಾರಣ ಜನರಿಗೆ ಪದ್ಯಾಭಿಪ್ರಾಯವು ಆಗುತ್ತಿರಲಿಲ್ಲವಾದುದರಿಂದ, ಪ್ರತಿಯೊಬ್ಬರಿಗೂ ತಿಳಿಯುವಂತೆ ಟೀಕೆಯಮೇಲೆ ಸುಲಭವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಾಂಕನಾದಿ ಭದ್ರವಾದ ಬಟ್ಟೆಯಿಂದ ಬೈಂಡನ್ನು ಕಟ್ಟಿಸಿರುತ್ತೇವೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತ ಭಕ್ತಿ, ಜ್ಞಾನ, ವೈರಾಗ್ಯಗಳ ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪಠನಮನನಾದಿಗಳಿಗೆ ಅತ್ಯಂತಸಾಧನವಾಗಿರುತ್ತದೆ.

ಇದರಬೆಲೆ ೧—೦—೦. ವಿ. ಪಿ. ಯಿಂದ ೧—೩—೦

ಮ್ಯಾನೇಜರ್,
"ಮೈಸೂರ್ ಸ್ಟಾರ್" ಆಫೀಸ್, ಮೈಸೂರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಆಕ್ಷಣದಲ್ಲಿಯೇ ಮಹಾದೇವನಾದ ಪಶುಪತೀಶ್ವರನ ವರಪ್ರಸಾದದಿಂದ ಆ ಅಸುರನ ಶರೀರದೊಳಿರುವ ಸಪ್ತಧಾತುಗಳೂ, ಅವಯವಂಗಳುಂ ಕೂಡ ರತ್ನಂಗಳ ಉತ್ಪತ್ತಿಗೆ ಬೀಜಮಾದುವು, ಎಲೈ ಸ್ವಾಮಿಯೇ ಆ ವಲಾಸುರನ ದೇಹದಿಂದ ಉತ್ಪನ್ನಂಗಳಾದ ನವರತ್ನಂಗಳೂ, ಆ ಅಸುರನ ಶರೀರವು ಕೂಡ ಯಜ್ಞಾರ್ಥಮಾಗಿ ವಿನಿಯೋಗವಾದಕಾರಣ ಲೋಕತ್ರಯದಲ್ಲಿಂ ಪವಿತ್ರತರಮಾಗಿ, ಮತ್ತೂ ಕ್ಷತ್ರಿಯೋತ್ತಮನಾದ ನಿನ್ನಿಂದ ಭೂಮಂಡಲಾಧಿಪತಿಗಳಿಗೂ ಕೂಡ ಧಾರಣಯೋಗ್ಯಮಾಗಿ ಪ್ರಸಿದ್ಧಿಯಂ ಪಡೆದುವು. ಎಲೈ ಸುಗಂಧರಾಜೇಂದ್ರನೆ ಮತ್ತೂ ಹೇಳುವೆನು ಕೇಳು, ಪೂರ್ವದೊಳ್ ದಧೀಚಿಮಹಾಮುನಿಯ ಅಸ್ಥಿಯು ದೇವತೆಗಳಿಂದ ಪ್ರಾರ್ಥಿತವಾಗಿ ಮಹಾವಜ್ರಾಯುಧೋತ್ಪತ್ತಿಗೆ ಕಾರಣಮೆಂತಾಯಿತೋ, ಅದೇ ರೀತಿಯೊಳ್ ಈ ದೈತ್ಯೇಶ್ವರನಾದ ವಲಾಸುರನ ಅಸ್ಥಿಗಳು ವಜ್ರವೆಂಬ ರತ್ನಕ್ಕೆ ಆಕರಮಾಯಿತು. ಆ ಅಸುರನ ದಂತಪಂಕ್ತಿಗಳೇ ಮುತ್ತುಗಳೆಂಬ ರತ್ನಕ್ಕೆ ಕಾರಣಮಾಗಿ ಪ್ರಸಿದ್ಧಿಯಂಪಡೆದುವು. ಆತನ ಶರೀರದೊಳಿರುವ ರಕ್ತದ ದೆಸೆಯಿಂದ ಮಾಣಿಕ್ಯವೆಂಬ ಕೆಂಪು ರತ್ನವು ಪುಟ್ಟಿತು, ಆ ದಾನವನ ರೋಮಂಗಳೇ ವೈಡೂರ್ಯವೆಂಬ ರತ್ನಕ್ಕೆ ನಿಮಿತ್ತವಾದುವು, ಆ ದೈತ್ಯನ ನೇತ್ರಂಗಳೇ ನೀಲವೆಂಬ ರತ್ನಕ್ಕೆ ನಿದಾನವಾದುವು, ಆ ರಕ್ಕಸನ ಶರೀರದೊಳ್ಪುಟ್ಟಿದ ಕೊಬ್ಬೇ ಪಚ್ಚೆಯೆಂಬ ರತ್ನಕ್ಕೆ ಆಧಾರವಾಯಿತು. ಆ ಅಸುರನ ಮಾಂಸವೇ ಹವಳವೆಂಬ ರತ್ನಕ್ಕೆ ಆದಿಕಾರಣಮಾದುದು, ಆತನ ಶ್ಲೇಷ್ಮವೇ ಪುಷ್ಯರಾಗವೆಂಬ ರತ್ನಕ್ಕೆ ಆಕರವಾಯಿತು, ಆತನ ಮೇದಸ್ಸೇ ಗೋಮೇಧಿಕವೆಂಬ ರತ್ನಕ್ಕೆ ಕಾರಣವಾಯಿತು. ಇಂತಿಪ್ಪ ಕಾರಣಂಗಳಿಂದ ಉತ್ಪನ್ನವಾದ ರತ್ನಂಗಳಲ್ಲಿ ಜಾತಿಭೇದಂಗಳಂ ವಿವರಿಸುವೆನು ಕೇಳು:—ಈ ನವರತ್ನಂಗಳಲ್ಲಿ ವಜ್ರ ಮೌಕ್ತಿಕ ಇವು ಎರಡು ರತ್ನವೂ ಬ್ರಹ್ಮಜಾತಿಯೆಂದರಿವುದು. ಕೆಂಪು, ಹವಳ, ಪುಷ್ಯರಾಗ ಈ ಮೂರು ರತ್ನಂಗಳೂ ಕ್ಷತ್ರಿಯಜಾತಿಯೆಂದರಿವುದು, ಗೋಮೇಧಿಕ ವೈಡೂರ್ಯ ಇವೆರಡೂ ವೈಶ್ಯಜಾತಿಯೆಂದರಿವುದು, ಪಚ್ಚೆ ನೀಲ ಈ ಎರಡು ರತ್ನಂಗಳೂ ಶೂದ್ರಜಾತಿಯೆಂದರಿವುದು. ಇಂತಿಪ್ಪ ರತ್ನಂಗಳಂ ಪರೀಕ್ಷೆಯಂ ಮಾಡತಕ್ಕ ಪುರುಷನು, ಮಾಣಿಕ್ಯ ಮೊದಲಾದ ರತ್ನಂಗಳಂ ವಾರಕ್ರಮದಿಂದ ಪರೀಕ್ಷೆಯಂ ಮಾಡಬೇಕು. ಅದೆಂತೆನೆ, ಭಾನುವಾರದಲ್ಲಿ ಗೋಮೇಧಿಕ ಮಾಣಿಕ್ಯವಂ ಪರೀಕ್ಷಿಸಬೇಕು, ಚಂದ್ರವಾರದಲ್ಲಿ ಮುತ್ತುಗಳಂ ವೈಡೂರ್ಯಗಳಂ ಪರೀಕ್ಷಿಸಬೇಕು, ಮಂಗಳವಾರದಲ್ಲಿ ಹವಳವಂ, ಬುಧವಾರದಲ್ಲಿ ಪಚ್ಚೆಯಂ, ಗುರುವಾರದಲ್ಲಿ ಪುಷ್ಯರಾಗವಂ, ಶುಕ್ರವಾರದಲ್ಲಿ ವಜ್ರವಂ, ಶನಿವಾರದಲ್ಲಿ ನೀಲವಂ ಸಹ ಪರೀಕ್ಷಿಸಬೇಕು. ಮತ್ತೂ ಪರೀಕ್ಷೆಯಂ ಮಾಡುವ ಪುರುಷನು ದ್ರವ್ಯದಲ್ಲಿ ಅತ್ಯಂತ ಅಪೇಕ್ಷೆಯಿಲ್ಲದವನಾಗಿ, ಶಾಪದಲ್ಲಿ ಭೀತಿಯುಳ್ಳವನಾಗಿ, ಧರ್ಮದಲ್ಲಿ ಆಸಕ್ತಿಯುಳ್ಳವನಾಗಿ, ಮಾಣಿಕ್ಯ ಮೊದಲಾದ ರತ್ನಕ್ರಮದಿಂ, ಯಾವಯಾವ ರತ್ನಂಗಳಿಗೆ ಯಾವಯಾವ ಪುಷ್ಪಂಗಳಂ ಹೇಳಿರುವುದೋ, ಆ ಪುಷ್ಪಮಾಲೆಯಂ ಕಂಠದೊಳ್ ಧರಿಸಿ ಆಯಾ ರತ್ನಂಗಳಂ ಪರೀಕ್ಷಿಸಬೇಕು. ಯಾವ ರತ್ನಕ್ಕೆ ಯಾವ ಪುಷ್ಪವೆಂದೊಡೆ,-ಮಾಣಿಕ್ಯ ರತ್ನಕ್ಕೆ ಕಮಲವೂ, ಮುತ್ತುಗಳಿಗೆ ಜಾಜಿಹುವ್ವೂ, ಹವಳಕ್ಕೆ ನೈದಿಲುಹುವ್ವೂ, ಪಚ್ಚೆಗೆ ರಸಬಾಳೆಹುವ್ವೂ, ಪುಷ್ಯರಾಗಕ್ಕೆ ಮಲ್ಲಿಗೆಹುವ್ವೂ, ವಜ್ರಕ್ಕೆ ನೂರುದಳದ ಪದ್ಮವೂ, ನೀಲಕ್ಕೆ ರಾಜಪಂಟಿನತೆನೆಯೂ, ಗೋಮೇಧಿಕಕ್ಕೆ ಕೆಂಪುನೈದಿಲು ಹುವ್ವೂ, ವೈಡೂರ್ಯರತ್ನಕ್ಕೆ ಬಿಳೀಕಂಚುವಾಳದ ಹುವ್ವೂ ಧರಿಸಲ್ಪಡತಕ್ಕವು. ಮತ್ತೂ ಮಹಾರಾಜೇಂದ್ರನೇ ಕೇಳು, ಶುದ್ಧವಾದ ಸ್ಥಳದಲ್ಲಿ ಎಸೆದುವಸ್ತ್ರವಂ ಹಾಸಿ, ಮಾಣಿಕ್ಯ ಮೊದಲಾದ ರತ್ನಂಗಳಂ ಮಂಡಲಾಕಾರವಾಗಿ ಮಡಗಿ, ಮಧ್ಯದೊಳ್ ಮಾಣಿಕ್ಯವಂ ಇರಿಸಿ, ಮುತ್ತು ಮೊದಲಾದ ಕ್ರಮದಿಂದ ಪೂರ್ವಾದಿಯಾಗಿ ದಿಕ್ಕು ವಿದಿಕ್ಕುಗಳಲ್ಲಿರಿಸಿ, ಅಲ್ಲಿಯೇ ಆಯಾ ಪುಷ್ಪಂಗಳಿಂದ ಆದಿತ್ಯ ಮೊದಲಾದ ನವಗ್ರಹಂಗಳಂ ಪೂಜಿಸಬೇಕು ಅದೆಂತೆನೆ—ಮಾಣಿಕ್ಯದಲ್ಲಿ ಸೂರ್ಯನಂ, ಮುತ್ತಿನಲ್ಲಿ ಚಂದ್ರನಂ, ಹವಳದಲ್ಲಿ ಅಂಗಾರಕನಂ, ಪಚ್ಚೆಯಲ್ಲಿ ಬುಧನಂ, ಪುಷ್ಯರಾಗದಲ್ಲಿ ಬೃಹಸ್ಪತಿಯಂ, ವಜ್ರದಲ್ಲಿ ಶುಕ್ರನಂ, ನೀಲದಲ್ಲಿ ಶನಿಯಂ, ಗೋಮೇಧಿಕದಲ್ಲಿ ರಾಹುವಂ, ವೈಡೂರ್ಯದಲ್ಲಿ ಕೇತುವಂ ಈ ಕ್ರಮದಿಂದ ರತ್ನಂಗಳಲ್ಲಿ ಧ್ಯಾನವಂ ಮಾಡಿ ಆಯಾ ಪುಷ್ಪಗಳಿಂದ ಪೂಜಿಸಿ, ರತ್ನಗಳಂ ಪರೀಕ್ಷಿಸಬೇಕು. ಮತ್ತೂ ಆ ವಲಾಸುರನ ಸತ್ವಗುಣವು ಮುತ್ತುಗಳಲ್ಲಿಯೂ, ಸ್ಫಟಿಕ ಜಾತಿಗಳಲ್ಲಿ ಅಧಿಕವಾಗಿಯೂ ಇರುವುದು. ಕೆಂಪು, ಹವಳ, ಗೋಮೇಧಿಕ ಈ ಮೂರರಲ್ಲಿ ಆ ವಲಾಸುರನ ರಜೋಗುಣವು ಅಧಿಕವಾಗಿರುವುದು. ಶುದ್ಧಕಪ್ಪಾಗಿಯೂ ಸಾಧಾರಣವಾಗಿಯೂ ಇರುವ ನೀಲದ ಜಾತಿಯಲ್ಲಿ ಆ ವಲಾಸುರನ ತಮೋಗುಣವು ಅಧಿಕವಾಗಿರುವುದು. ವಜ್ರ, ವೈಡೂರ್ಯ, ಪುಷ್ಯರಾಗಗಳಲ್ಲಿ ಅವನ ರಜೋಗುಣವೇ ಇರುವುದು. ಪಚ್ಚೆಯಲ್ಲಿ ಆತನ ಸತ್ವರಜಸ್ತಮೋ ಗುಣಂಗಳು ಮೂರೂ ಇರುವುವು ಇಂತಲ್ಲದೆ, ವಜ್ರ ಮೊದಲಾದ ರತ್ನಂಗಳ ಉತ್ಪತ್ತಿ ಸ್ಥಳಂಗಳೂ, ಆ ರತ್ನಂಗಳಲ್ಲಿರುವ ಗುಣದೋಷಂಗಳೂ ಅದರಿಂದಾಗುವ ಫಲಾಫಲಂಗಳೂ ಎಂತಿರುವುವೆಂದರೆ:—ಲೋಕದೊಳ್ ವಜ್ರವು ಸಮಸ್ತ ರತ್ನಂಗಳಂ ಭೇದಿಸುವುದು, ಮಿಕ್ಕಾದ ರತ್ನಂಗಳು ವಜ್ರವಂ ಭೇದಿಸಲಾರವು. ವಜ್ರವಂ ವಜ್ರವೇ ಭೇದಿಸುವುದು, ಆದುದರಿಂದ ಸಮಸ್ತ ರತ್ನಗಳಿಗೂ ವಜ್ರವೇ ಶ್ರೇಷ್ಠವೆಂದರಿಯಬೇಕು ಮತ್ತೂ ದಧೀಚಿಮುನಿಯ ಅಸ್ಥಿಯೂ, ವಲಾಸುರನ ಅಸ್ಥಿಯೂ ಎಲ್ಲೆಲ್ಲಿ ಬಿದ್ದಿರುವುದೋ ಆಯಾಯ ಸ್ಥಳಂಗಳಲ್ಲಿ ವಜ್ರವು ಹುಟ್ಟುವುದು. ಅದು ಯಾವಯಾವ ದೇಶದಲ್ಲಿ ಯಾವಯಾವ ವರ್ಣಂಗಳಂ ಪುಟ್ಟುವುದೆಂದರೆ, ಕೋಸಲದೇಶದಲ್ಲಿ ಪುಟ್ಟುವ ವಜ್ರವು ಬಾಗೇಹುವ್ವಿನ ವರ್ಣದಿಂದಿರುವುದು. ಕಳಿಂಗ ದೇಶದಲ್ಲಿ ಪುಟ್ಟುವ ವಜ್ರವು ಹಳದಿಯ ವರ್ಣದಿಂದಿರುವುದು, ಮತಂಗ ದೇಶದಲ್ಲಿ ಹುಟ್ಟುವ ವಜ್ರವು ಮಲ್ಲಿಗೆಯ ಹುವ್ವಿನ ವರ್ಣವಾಗಿರುವುದು. ಹಿಮವತ್ಪರ್ವತದಲ್ಲಿ ಹುಟ್ಟುವ ವಜ್ರವು ಶುದ್ಧ ಬಿಳುಪಾಗಿರುವುದು. ಮಹಾರಾಷ್ಟ್ರ ದೇಶದಲ್ಲಿ ಹುಟ್ಟುವ ವಜ್ರವು ಕೆಂಪುವರ್ಣವಾಗಿರುವುದು ಸೌವೀರದೇಶದಲ್ಲಿ ಹುಟ್ಟುವ ವಜ್ರವು ಕಪ್ಪಾಗಿರುವುದು. ಪುಂಡ್ರದೇಶದಲ್ಲಿ ಹುಟ್ಟುವ ವಜ್ರವು ಕಪಿಲವರ್ಣದಿಂದಿರುವುದು ಮತ್ತೂ ದೇವತಾಭೇದಂಗಳಿಂದ ವಜ್ರಂಗಳಿಗೆ ಭೇದವುಂಟಾದುದು; ಅದೆಂತೆನೆ,—ಬಾಗೇಹುವ್ವಿನ ವರ್ಣದಿಂ ಬಾಳೆಕೆಂಬದ ವರ್ಣದಿಂ ಕೂಡ ಒಪ್ಪಿರುವ ವಜ್ರಂಗಳಿಗೆ ವಿಷ್ಣುವು ದೇವತೆಯು, ಆರು ಮೂಲೆಯಾಗಿ ಬಿಳುಪಾಗಿರುವ ವಜ್ರಗಳಿಗೆ ಇಂದ್ರನು ದೇವತೆಯು, ಕೊಂಬಿನವರ್ಣವಾಗಿಯೂ ನೈದಿಲು ಹುವ್ವಿನ ವರ್ಣವಾಗಿಯೂ ಇರುವ ವಜ್ರಗಳಿಗೆ ಯಮನು ದೇವತೆಯೂ, ಎಲಗದಹುವ್ವಿನ ವರ್ಣದಿಂ ಮುತ್ತುಗದಹುವ್ವಿನ ವರ್ಣದಿಂ ಒಪ್ಪಿರುವ ವಜ್ರಗಳಿಗೆ ವಾಯುವು ದೇವತೆ. ಕೆಂಜಗನಹುವ್ವಿನ ವರ್ಣವಾಗಿರುವ ವಜ್ರಗಳಿಗೆ ವರುಣನು ದೇವತೆಯು, ಜಲವರ್ಣವಾಗಿರುವ ವಜ್ರಗಳಿಗೆ ಚಂದ್ರನು ದೇವತೆಯು, ಸೊರೀಪುಷದ ಹುಳುವಿನ ವರ್ಣವಾಗಿರುವ ವಜ್ರಗಳಿಗೆ ಸೂರ್ಯನು ದೇವತೆಯು. ಬೆಂಕಿಯ ಕೆಂಡದ ವರ್ಣವಾಗಿರುವ ವಜ್ರಗಳಿಗೆ ಅಗ್ನಿಯು ದೇವತೆಯು ಮತ್ತೂ ಬಿಳುಪಾಗಿರುವ ವಜ್ರಗಳು ಬ್ರಹ್ಮಜಾತಿಯು. ಮೊಲದ ಕಣ್ಣಿನ ವರ್ಣದಂತಿರುವ ವಜ್ರಗಳು ಕ್ಷತ್ರಿಯಜಾತಿಯು. ಬಾಳೆಯೆಲೆಯ ವರ್ಣದಂತಿರುವ ವಜ್ರಗಳು ವೈಶ್ಯಜಾತಿಯು, ಕತ್ತಿಯ ವರ್ಣವಾಗಿರುವ ವಜ್ರಗಳು ಶೂದ್ರಜಾತಿಯು,

---

ವ್ಯವಸಾಯಕ ವಿಷಯಗಳು.

ಹುಣಸೇಬೀಜ ಮತ್ತು ಅದರ ಉಪಯೋಗ.

ಹುಣಸೆಯ ಗಿಡವು ಸಾಧಾರಣವಾಗಿ ಎಲ್ಲಾ ಪ್ರದೇಶಗಳಲ್ಲಿಯೂ ಬೆಳೆಯುವುದುಂಟು. ಇದು ಫಲಕ್ಕೆ ಬರುವುದು ಹತ್ತು ಹನ್ನೆರಡು ವರುಷಕ್ಕೆ. ಇದರ ಹಣ್ಣಿನಿಂದಾಗುವ ಪ್ರಯೋಜನವು ಎಲ್ಲರಿಗೂ ತಿಳಿದದ್ದಾಗಿಯೇ ಇದೆ. ಹಣ್ಣನ್ನು ತೆಗೆದುಕೊಂಡು ಬೀಜಗಳನ್ನು ಬಿಸಾಡುವ ವಾಡಿಕೆ ಈಗಲೂ ಇದೆ. ಇವುಗಳ ಪ್ರಯೋಜನಗಳನ್ನು ತಿಳಿದರೆ ಜನರು ಆಹಾರ ವಸ್ತುಗಳನ್ನು ಎಷ್ಟು ಜಾಗರೂಕತೆಯಿಂದ ಭದ್ರಪಡಿಸುವರೋ ಇವುಗಳನ್ನು ಅಷ್ಟು ಭದ್ರವಾಗಿ ಕಾಪಾಡುತ್ತಾರೆನ್ನುವುದರಲ್ಲಿ ಸಂದೇಹವೇನೂ ಇಲ್ಲ. ಈ ಬೀಜಗಳನ್ನು ಕೆಲವರು ಗದ್ದೆಗಳಿಗೆ ಗೊಬ್ಬರವಾಗಿ ಹಾಕೋಣದರಿಂದ ಗದ್ದೆಗಳಲ್ಲಿರತಕ್ಕ ಉಪ್ಪು ತೇಲಿ ಬಹಳ ಉತ್ಕೃಷ್ಟವಾದ ಬೆಳೆ ಬೆಳೆಯುತ್ತೆ. ಸುಣ್ಣಕಲ್ಲನ್ನು ಸುಡುವುದರಲ್ಲಿ ಇದನ್ನು ಉಪಯೋಗಿಸುತ್ತಾರೆ. ರಂಗಾರಿಗರು ಬಣ್ಣಕ್ಕಾಗಿ ಉಪಯೋಗಿಸುವುದುಂಟು. ಇವುಗಳನ್ನು ಹುರಿದು ಹಳ್ಳಿಗಾರರು ಮಕ್ಕಳಿಗೆ ತಿನ್ನುವುದಕ್ಕೆ ಕೊಡುತ್ತಾರೆ. ಬರಗಾಲದಲ್ಲಿ ಬಡವರು ಬೇಯಿಸಿ ತಿನ್ನುತ್ತಾರೆ. ಹೀಗೆ ತಿಂದವರನ್ನು ಪರೀಕ್ಷಿಸಿದಾಗ, ಅವರ ಹೊಟ್ಟೆಯ ತುಂಬಾ ಜಂತುಗಳು ವೃದ್ಧಿಯಾಗಿರುತ್ತವೆ; ಆದರೆ ಹೊಟ್ಟೆಗಿಲ್ಲವಾಗ ಯಾವದು ವೃದ್ಧಿಯಾದರೆ ತಾನೇ ಏನು?

ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಈಗ ೬-೭ ವರುಷಗಳಿಂದ ಮಳೆ ಚೆನ್ನಾಗಿ ಸಕಾಲಕ್ಕೆ ಆಗಲಿಲ್ಲವಾದ್ದರಿಂದ ದನಗಳಿಗೆ ಮೇವು ಸಿಕ್ಕುವುದೇ ಬಹಳ ದುರ್ಲಭ; ಈಗೀಗ ದನಗಳನ್ನು ತಿಂಡಿಗಿಲ್ಲದೆ ಸಾಯಿಸುವುದಕ್ಕೆ ಬದಲಾಗಿ ಈ ಹುಣಸೆಯ ಬೀಜವನ್ನು ತಂದು ಹುರಿದು ಮೇಲಿನಪಕ್ಕೆ ಕರೀ ತಿಗಡನ್ನು ತೆಗೆದು ಹಾಕತಕ್ಕದ್ದು. ತಿಗಡು ತೆಗೆದಮೇಲೆ ಬಿಳೀ ಬೀಜಗಳು ಮಾತ್ರ ನಿಲ್ಲುವುವು. ಇವುಗಳನ್ನು ಬೇಯಿಸಿ ದನಗಳ ಮುಂದೆ ಮಡಿಕೆಯಲ್ಲಿ ಹಾಕಿರುತ್ತಾರೆ. ದನಗಳು ಈ ಬೀಜಗಳನ್ನು ಹುರಳಿಯನ್ನು ಯಾವರೀತಿಯಾಗಿ ತಿನ್ನುತ್ತವೋ ಅದೇ ರೀತಿಯಲ್ಲಿಯೇ ತಿನ್ನುತ್ತವೆ. ಇದು ಜೀರ್ಣಕ್ಕೂ ಸಹಾ ಬಹಳ ಜಾಗ್ರತೆಯಾಗಿ ಬರುತ್ತದೆ. ದನಗಳಿಗೆ ಇವುಗಳಿಂದ ಯಾವ ವಿಧವಾದ ವ್ಯಾಧಿಯೂ ನಮ್ಮ ಅನುಭವದಲ್ಲಿ ಬಂದಿಲ್ಲ ಆಕಾರದಲ್ಲಿಯೂ ಪುಷ್ಟಿಯಾಗಿಯೇ ಇರುತ್ತದೆ. ಕೆಲಸವೂ ಬಹಳ ಚಟುವಟಿಕೆಯಿಂದ ಮಾಡುತ್ತವೆ. ದನಗಳಿಗೆ ಮೇವು ಸಿಕ್ಕದ ಸ್ಥಳಗಳಲ್ಲಿ ಹುಣಸೇಬೀಜವನ್ನು ನಾವು ಮೇಲೆ ಹೇಳಿರುವ ರೀತಿಯಾಗಿ ಎಲ್ಲರೂ ಉಪಯೋಗಿಸಬಹುದೆಂಬ ಅಭಿಪ್ರಾಯದಿಂದಲೇ ನಾವು ಈ ಲೇಖನವನ್ನು ಬರೆದಿರುವೆವು ಹಂದಿಗಳಿಗೆ ತಿಂಡಿಗಾಗಿ ಉಪಯೋಗಿಸುತ್ತಿರುವ ವಾಡಿಕೆ ಅಲ್ಲಲ್ಲಿರುವುದುಂಟು ಚೇಳು ಕಡಿತದಲ್ಲಿ ಈ ಬೀಜದ ಉಪಯೋಗ ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಈ ಬೀಜದ ಕರೀತಿಗಡನ್ನು ಒಂದು ಭಾಗದಲ್ಲಿ ತೆಗೆದು ಬಿಳಿಯಭಾಗವು ಕಾಣಿಸಿದೊಡನೆ ಆ ಭಾಗವನ್ನು ನೀರಿನಲ್ಲಿ ಗಂಧವಾಗಿ ತೆಗೆದು ಆ ಗಂಧ ತೆಗೆದ ಭಾಗವನ್ನು ಹಸೀ ಇದ್ದಾಗಲೇ ಚೇಳು ಕಡಿದ ಸ್ಥಳಕ್ಕೆ ಇಟ್ಟು ೧-೨ ನಿಮಿಷಗಳು ಒತ್ತಿ ಹಿಡಿದುಕೊಂಡಿದ್ದಲ್ಲಿ ಬೀಜವು ಚೇಳು ಕಡಿತದ ಭಳಕೂ ಮತ್ತೂ ನೋವೂ ತೀರುವವರೆಗೂ ಆ ಭಾಗದಿಂದ ಏನು ಮಾಡಿದರೂ ಬೀಳುವುದಿಲ್ಲ. ಆ ನೋವು ಪೂರ್ತಿಯಾಗಿ ನಿಂತೊಡನೆ ತನ್ನಷ್ಟಕ್ಕೆ ತಾನೇ ಬಿದ್ದು ಹೋಗುತ್ತೆ. ಬಿದ್ದ ಒಡನೆ ಆ ಬೀಜದ ಬಿಳಿಯ ಭಾಗವನ್ನು ಪರೀಕ್ಷಿಸಿದರೆ ವಿಷವು ಹಸರು ವರ್ಣವಾಗಿ ಕಾಣಿಸುವುದು. ಈ ಬೀಜಗಳಿಂದ ಮೇಲೆ ಹೇಳಿದ ಪ್ರಯೋಜನಗಳಿದ್ದಾಗ್ಯೂ ಅಲಕ್ಷ್ಯದಿಂದ ಜನಗಳು ಇದನ್ನು ಬಿಸಾಡುತ್ತಿರುವುದು ತುಂಬಾ ಶೋಚನೀಯವಾಗಿದೆ.

ಹೊಸಕ್ರಮಗಳಿಗನುಸಾರವಾಗಿ ಹಿಡಮಾಡುವುದು.

ಪಶುವೈದ್ಯ ಇಲಾಖೆಯನ್ನು ಘನಹೊಂದಿದ ಮೈಸೂರು ಸರ್ಕಾರದವರು ಸ್ಥಾಪಿಸಿರುವುದರಿಂದ ಉಂಟಾಗಿರುವ ಪ್ರಯೋಜನವನ್ನು ರೆವಿನ್ಯೂ ಗೆಜೆಟ್ ಮೂಲಕ ಪ್ರಸಿದ್ಧಪಡಿಸತಕ್ಕ ಬಗ್ಗೆ ನನ್ನ ಬುದ್ಧಿ ಅನುಭವವನ್ನು ಈ ಕೆಳಗೆ ನಮೂದುಮಾಡುವ ಸಂಗತಿ ಪ್ರಚುರ ಪಡಿಸಬೇಕಾಗಿ ಪ್ರಾರ್ಥನೆ.

(೧) ದನಗಳಿಗೆ ನಮ್ಮ ಗ್ರಾಮದಲ್ಲಿ ಚಪ್ಪೆರೋಗ ವ್ಯಾಪಿಸಿ ಸುಮಾರು ೧೦-೧೨ ರಾಸುಗಳು ಮೃತಪಟ್ಟು ಇನ್ನು ಹಬ್ಬುವ ಸ್ಥಿತಿಯಲ್ಲಿರುವಾಗ್ಗೆ ನಾನು ಅಸಿಸ್ಟೆಂಟ್ ವೆಟರಿನರಿ ಇನ್ಸ್‌ಪೆಕ್ಟರ್ ಕೆ. ಎನ್. ಶ್ರೀನಿವಾಸರಾವರವರಲ್ಲಿ ಅರಿಕೆ ಮಾಡಿಕೊಂಡ ಕೂಡ್ಲೆ ಅವರು ದಯಮಾಡಿ ಇನ್ನಾಕುಲೇಷನ್ ಮಾಡಿದ್ದರಿಂದ ಆ ದಿನದಿಂದೀಚೆಗೆ ನಮ್ಮ ಗ್ರಾಮದಲ್ಲಿ ರೋಗ ಹಬ್ಬದೆ ಅಲ್ಲಿಗೆ ತಾಮಸವಾಗಿರುತ್ತೆ. (೨) ಗಂಡು ರಾಸುಗಳಿಗೆ ಪುರಾತನ ಪದ್ಧತಿಯಂತೆ ಹಿಡ ಮಾಡುತ್ತಿರುವುದರಿಂದ ದನಗಳಿಗೆ ಬಹಳ ಸಂಕಟಕರವಾದ ಯಾತನೆ ಉಂಟಾಗುತ್ತಲಿತ್ತು. ನಾನು ಅದನ್ನು ನೋಡಿ ಬಹಳ ವ್ಯಾಕುಲಪಡುತ್ತಾ ಇದ್ದೆ. ಡಾಕ್ಟರವರು ನಮ್ಮ ಗ್ರಾಮಕ್ಕೆ ದಯಮಾಡಿಸಿದ್ದಾಗ್ಗೆ ಈ ವಿಷಯವನ್ನು ಅರಿಕೆ ಮಾಡಲಾಗಿ ಹೊಸ ನಮೂನೆಮೇರೆಗೆ ಹಿಡ (Castration) ಮಾಡುವದಾಗಿ ಅಪ್ಪಣೆ ಕೊಡಿಸಿ ನಂತರ ೪-೧೦ ದಿನಗಳಮೇಲೆ ಅದಕ್ಕೆ ಬೇಕಾದ ಆಯುಧಗಳ ಸಮೇತ ದಯಮಾಡಿ ೧೧ ಹೋಂಟಿಯೊಳಿಗಾಗಿ ೧೧ ಕರು ಮೇಕೆಗಳಿಗೂ ೩ ಹೋರಿ ಕರುಗಳಿಗೂ ಹಿಡಮಾಡಿದ ಕರಲಂಬಳವನ್ನು ನೋಡಿ ಎಲ್ಲರೂ ಬಹಳ ಆಶ್ಚರ್ಯಪಟ್ಟರು ಅಲ್ಲದೆ ಹಿಡಮಾಡಿದ ರಾಸುಗಳಿಗೆ ಯಾತನೆ ಮೊದಲಾದ ಯಾವ ತೊಂದರೆಯೂ ಇಲ್ಲದೆ ಪ್ರತಿನಿತ್ಯವೂ ಇರುವಂತೆಯೇ ಇದ್ದುವು. ಆಯುಧದಿಂದ ಮಾಡಲ್ಪಟ್ಟಿದ್ದ ಛಾಯಮಾತ್ರ ೪ ದಿನಗಳವರೆಗೆ ದಿನೇದಿನೇ ವಾಸಿಯಾಗಿರುವ ಈ ಪರಮಾಶ್ಚರ್ಯವು ದನಗಳಿಗೆ ಅನೇಕ ಕ್ಷೇಮವನ್ನುಂಟುಮಾಡಿದಂತಾಗಿದೆ. ಮುಂಚಿನಿಂದ ಮಾಡುತ್ತಿದ್ದ ಕ್ರಮಪದ್ಧತಿಯಲ್ಲಿ ರಾಸುಗಳು ನರಳುವುದು ನೋಡುವುದಕ್ಕೆ ಆಗದೆ ನಾವುಗಳು ಬಹಳ ಕಷ್ಟಪಡುತ್ತಲಿದ್ದೆವು. ಈ ಮೇಲ್ಕಂಡ ಡಾಕ್ಟರು ನಮ್ಮ ಊರಲ್ಲಿ ಕ್ಯಾಸ್ಟ್ರೇಷನ್ ಮಾಡಿದ ೨ನೇ ದಿನ ಒಬ್ಬನೊಬ್ಬ ರೈತನು ಈ ಕ್ಯಾಸ್ಟ್ರೇಷನ್ ಮಾಡಿಸುವುದರಿಂದ ಏನಾಗುತ್ತೋ ಎಂಬ ಭಯದಿಂದ ಹೋರಿಯ ಮೂನೆ ಹಿಡಮಾಡಿಸದೆ ಪೂರ್ವದ ಪದ್ಧತಿಯಂತೆ ಮಾಡಿಸಿದನು ನಂತರ ೨ ತಿಂಗಳು ಆದಾಗ್ಯೂ ಆ ಯಾತನೆಯು ಗುಣವಾಗದೆ ಸಂಪೂರ್ಣವಾಗಿ ಬೀಜವು ಹೋಗದೆ ಇರುವುದು. ಮಾಲೀಕನು ಹೊಸನಮೂನೆಯಾಗಿ ತಾನೂ ಮಾಡಿಸಬೇಕಾಗಿತ್ತೆಂದೂ ಇನ್ನುಮೇಲೆ ಯಾರೂ ಹಳೇ ಪದ್ಧತಿಯಂತೆ ಮಾಡಿಸುವುದು ಶುದ್ಧ ತಪ್ಪೆಂದೂ ಮತ್ತೂ ತನ್ನ ರಾಸಿಗೆ ನಿಂತಿರುವ ಬೀಜವನ್ನು ತೆಗೆಸಿಕೊಡಬೇಕೆಂದೂ ನನ್ನಲ್ಲಿ ಹೇಳುತ್ತಾ ಇದ್ದಾನೆ. ಈಚೆಗೆ ೨ ನೇ ದಫೆ ಸುಮಾರು ೨೦ ರಾಸುಗಳಿಗೆ ಮಾಡಿದ್ದು ಬದಸ್ತೂರ್ ೩-೪ ದಿನಗಳಲ್ಲಿ ವಾಸಿಯಾಗಿರುತ್ತೆ. ಅಲ್ಲದೆ ಬೀಜವಿರುವ ರಾಸುಗಳ ಮಾಲೀಕರೆಲ್ಲರೂ ಡಾಕ್ಟರನ್ನು ಕರೆಸಿಕೊಡಬೇಕೆಂದು ಬಹಳ ತಗಾದೆ ಮಾಡುತ್ತಾ ಇದ್ದಾರೆ. ಆದುದರಿಂದ ರಾಸುಗಳಿಗೆ ಯಾತನೆ ತಪ್ಪಿರುವಂತೆ ರೈತಜನಗಳಿಗೆ ತಿಳುವಳಿಕೆ ಬರುವಂತೆ ಮೇಲ್ಕಂಡ ಸಂಗತಿಯನ್ನು ಮೈಸೂರು ರೆವಿನ್ಯೂ ಮತ್ತೂ ಅಗ್ರಿಕಲ್ಚರಲ್ ಗೆಜೆಟ್ಟಿನಲ್ಲಿ ಛಾಯಿಸ್ ಮಾಡಿಸಬೇಕಾಗಿ ಪ್ರಾರ್ಥನೆ—ವೈ. ಗ.

ಆರ್ಯವೈಶ್ಯ ಮಹಾಸಭೆ.

ಮೊದಲು ಬಳ್ಳಾರಿಯಲ್ಲಿ ಕೂಡಬೇಕೆಂದು ಯೋಚಿಸಲ್ಪಟ್ಟಿದ್ದ ಈ ಸಭೆಯು ಕಾರಣಾಂತರಗಳಿಂದ ಕುಂಭಕೋಣದಲ್ಲಿ ನಡೆಯಬೇಕಾಯಿತು. ಈ ಸಭೆಯು ಪೂರ್ವ ವರುಷಗಳ ಹಿಂದಣ ಸಭೆಗಳೆಲ್ಲಕ್ಕಿಂತಲೂ ಹೆಚ್ಚಿನ ಸಂಭ್ರಮಾಡಂಬರ ವೈಭವಗಳಿಂದ ನೆರವೇರಿಸಲ್ಪಟ್ಟಿತೆಂದು ಗೊತ್ತಾಗುವುದು. ಮೇ ತಾ॥ ೨೩-೨೪-೨೫ ರಲ್ಲಿ ಇದರ ಕಾರ್ಯಗಳೆಲ್ಲಾ ನೆರವೇರಿದುವು ತಾ॥ ೨೬ ರಲ್ಲಿ ಆರ್ಯ ವೈಶ್ಯಮಹಿಳಾಪರಿಷತ್ತು ನೆರವೇರಿತು

ಈ ಸಭೆಗೆ ಕೊಯಮತ್ತೂರು, ಕಲ್ಲಿಕೋಟೆ, ಮಲಬಾರು, ಸೇಲಂ, ಮಧುರೆ, ದಿಂಡಿಗಲ್ಲು, ಉಡುಮಲೈಪೇಟೆ, ಪೊಳ್ಳಾಚಿ, ತಿರುಚಿನಾಪಲ್ಲಿ, ವಾಣಿಯಾವರಂ, ದಕ್ಷಿಣ ಆರ್ಕಾಡು, ಮದರಾಸು, ನೆಲ್ಲೂರು, ತೆನಾಲಿ, ಗುಂಟೂರು, ಬೆಜವಾಡ, ಕಾಕಿನಾಡ, ವಿಜಯನಗರ, ಬಳ್ಳಾರಿ ಮೊದಲಾದ ಸ್ಥಳಗಳಿಂದ ಬಹುಶಃ ೨ ಸಾವಿರ ಮಂದಿಗಳವರೆಗೆ ವೈಶ್ಯರು ಬಂದಿದ್ದರು. ಕುಂಭಕೋಣದ ಮ॥ ಎಂ. ಆರ್. ಚಕ್ರಪಾಣಿಶೆಟ್ಟರೂ ಸತ್ಕಾರಕ ಸಂಘದವರೂ ಸಹ ಬಂದಿದ್ದವರಿಗೆ ಸುಖಭೋಜನ ವಸತಿಗಳ ಏರ್ಪಾಟನ್ನು ಸಮರ್ಪಕವಾಗಿ ಮಾಡಿದ್ದರು ಪಟ್ಟಣದ ಮುಖ್ಯ ಬೀದಿಗಳನ್ನು ತಳಿರ್ತೋರಣಗಳು ಗುಡಿ ಗೋಪುಂಗಳು ಮೊದಲಾದುವುಗಳಿಂದ ವಿಶೇಷವಾಗಿ ಅಲಂಕರಿಸಿದ್ದರು. ತಾ॥ ೨೩ ರ ಬೆಳಗ್ಗೆ ಸಭೆಯ ಅಧ್ಯಕ್ಷರಾದ ಕಾಕಿನಾಡದ ಮ॥ ನಾಳಂ ಪದ್ಮನಾಭಂರವರೂ ಅವರ ಪತ್ನಿಯವರೂ ಅನೇಕ ಪ್ರತಿನಿಧಿಗಳೂ ಸಹ ಹೊಗೆಬಂಡಿಗಳಲ್ಲಿ ಬಂದಾಗ ಅವರನ್ನು ಸತ್ಕರಿಸಿ ಕರೆದುಕೊಂಡು ಹೋಗುವುದಕ್ಕೆ ವಿಜೃಂಭಣೆಯ ಏರ್ಪಾಟನ್ನು ಮಾಡಿದ್ದರು. ನೂರಾರುಮಂದಿ ವಾಲಂಟಿಯರುಗಳೂ ಸಾವಿರಾರುಮಂದಿ ವೈಶ್ಯರೂ ನಿಲ್ದಾಣದಲ್ಲಿ ಕಾದಿದ್ದು ಬ್ಯಾಂಡು—ಚೆನ್ನದ ಮೋಹರಿ ಮೊದಲಾದ ವಾದ್ಯ ವೈಭವಗಳಿಂದ ಬಂದವರನ್ನಿದಿರ್ಗೊಂಡು ಪುಷ್ಪಹಾರಾದಿಗಳನ್ನಿತ್ತು ಅಣಿಯಾಗಿದ್ದ ನೂರಾರು ಕುದುರೆ ಬಂಡಿಗಳಲ್ಲಿ ಹತ್ತಿಸಿ ಬಿಡಾರಗಳಿಗೆ ಸೇರಿಸುತ್ತಿದ್ದರು. ಸಭಾಧ್ಯಕ್ಷರನ್ನು ಪುಷ್ಪಹಾರದಿಂದಲಂಕರಿಸಿ ವಾದ್ಯ ವೈಭವದೊಡನೆ ಮೆರವಣಿಗೆಯಿಂದ ಕರೆದುಕೊಂಡು ಹೋದರು. ಆ ದಾರಿಯಲ್ಲಿ ೧೬ ಕಡೆ ಕಮಾನುಗಳು ಕಟ್ಟಲ್ಪಟ್ಟಿದ್ದುವು.

ಪ್ರಿನ್ಸ್ ಆಫ್ ವೇಲ್ಸ್ ಪ್ಯಾಲೆಸ್ ಎಂಬ ಮಂದಿರವು ಸಭಾಸ್ಥಾನವಾಗೇರ್ಪಟ್ಟಿದ್ದಿತು. ಸಭಿಕರೆಲ್ಲರೂ ನೆರೆದಿದ್ದಾಗ ಮಧ್ಯಾಹ್ನ ೩ ಗಂಟೆಗೆ ಅಧ್ಯಕ್ಷರು ರಥಾರೂಢರಾಗಿ ಬರಲು, ಸತ್ಕಾರಕ ಸಂಘದವರು ಇದಿರ್ಗೊಂಡರು. ಒಳಕ್ಕೆ ಪ್ರವೇಶಿಸಿದಾಗ ಸರ್ವರೂ ಎದ್ದು ಕರತಾಡನಮಾಡಿ ಮರ್ಯಾದಿಸಿದರು. ಸಭಾರಂಭದಲ್ಲಿ ವೈಶ್ಯರಂದಿರು ಮಂಗಳ ಪದ್ಯಗಳನ್ನು ಹೇಳಿದರು. ಆಹ್ವಾನ ಸಭಾಧ್ಯಕ್ಷರಾದ ಮ॥ ಎ. ಪಿ. ವೆಂಕಟಾಚಲಶೆಟ್ಟರು ಸ್ವಾಗತೋಪನ್ಯಾಸವನ್ನು ಮಾಡಿದರು. ಸಭೆಗೆ ಬರಲು [illegible] ಸಹಾನುಭೂತಿಯನ್ನು ತೋರಿಸಿ ಪತ್ರವನ್ನು ಬರೆದಿದ್ದವರ ಹೆಸರುಗಳು ಓದಲ್ಪಟ್ಟುವು. ಬಳಿಕ ಮದರಾಸು ಹೈಕೋರ್ಟು ವಕೀಲ್ ಮ॥ ಸಲ್ಲಾ ಗುರುಸ್ವಾಮಿಶೆಟ್ಟಿ ಬಿ.ಎ. ಬಿ.ಎಲ್., ರವರು, ಮ॥ ನಾಳಂ ಪದ್ಮನಾಭಂ ಬಿ. ಎ. ರವರನ್ನು ಅಧ್ಯಕ್ಷರಾಗಬೇಕೆಂದು ಅವರ ಗುಣಕಥನವನ್ನು ಮಾಡಿ ಸೂಚಿಸಲು ಸರ್ವರೂ ಅನುಮೋದನದ ಕರತಾಡನವನ್ನು ಮಾಡಿದನಂತರ ಅಧ್ಯಕ್ಷರು ಉನ್ನತ ಪೀಠವನ್ನಲಂಕರಿಸಿದರು. ಮತ್ತೂ ತಮ್ಮ ಭಾಷಣವನ್ನೋದಿದರು. ಅನಂತರ ಆ ಸಭಾಕಾರ್ಯನಿರ್ವಾಹಕ್ಕಾಗಿ ಅತ್ಯಂತ ಶ್ರಮ ಸಾಹಸಗಳನ್ನು ವಹಿಸಿದ ಮ॥ ಎ. ಆರ್. ಚಕ್ರಪಾಣಿಶೆಟ್ಟರ ಮೇಲೆ ರಚಿಸಲ್ಪಟ್ಟಿದ್ದ ಪದ್ಯಗಳು ಓದಲ್ಪಟ್ಟುವು.

ಬಳಿಕ ಮದರಾಸಿನ ನಿವಾಸಿಗಳಾದ ಮ॥ ಚಿಲಕಲ ರಾಜಗೋಪಾಲ ಗುಪ್ತರವರು ತಮಗೆ ಯಜ್ಞವನ್ನು ಮಾಡಬಹುದೆಂದು ಕೆಲ ಬ್ರಾಹ್ಮಣರು ಶ್ರೀಮುಖವನ್ನು ಕೊಟ್ಟಿರುವರೆಂದೂ, ತಾವು ಕೂಷ್ಮಾಂಡಯಜ್ಞವನ್ನು ಮಾಡಲು ಸಿದ್ಧರಾಗಿರುವೆವೆಂದೂ, ಸಭಿಕರೆಲ್ಲರೂ ಅದಕ್ಕೆ ದಯಮಾಡಿಸಬೇಕೆಂದೂ ಪ್ರಾರ್ಥಿಸಿದರು. ಬಳಿಕ ಸಬ್ಜೆಕ್ಟ್ ಕಮಿಟಿಯು ಏರ್ಪಡಿಸಲ್ಪಟ್ಟು ಆ ದಿನದ ಕೆಲಸವು ಮುಗಿದಿತು.

ಮರುದಿನ ಬೆಳಗಿನ ೪ ಗಂಟೆಗೆ ಸಭೆಯು ಕೂಡಿ ಅವಶ್ಯಕವಾದ ವಿಷಯಗಳ ಮೇಲೆ ಭಾಷಣಗಳಾದುವು. ಎಲ್ಲವೂ ಆಂಧ್ರಭಾಷೆಯಲ್ಲೇ ನಡೆದಿತು. ಆಮೇಲೆ ಈ ಕೆಳಗೆ ಕಂಡ ನಿರ್ಧಾರಗಳಾದುವು— (೧) ಶ್ರೀಮತ್ಪಂಚಮ ಜಾರ್ಜ್ ಸಾರ್ವಭೌಮರು ಪಟ್ಟಮಹಿಷೀ ಸಮೇತರಾಗಿ ಭರತಖಂಡಕ್ಕೆ ದಯಮಾಡಿ ದಿಲ್ಲೀ ನಗರದಲ್ಲಿ ಮಕುಟಧಾರಣವನ್ನು ಮಾಡಿಕೊಂಡು, ತತ್ಸಮಯದಲ್ಲಿ ಪ್ರಜೆಗಳಿಗೆ ಹಿತಾರ್ಥವಾಗಿ ಕೆಲ ವರಗಳ ಪ್ರದಾನಮಾಡಿದುದಕ್ಕಾಗಿ ಸಭೆಯವರು ಕೃತಜ್ಞತೆಯಿಂದ ತಮ್ಮ ರಾಜಭಕ್ತಿಯನ್ನೂ ಸಂತೋಷವನ್ನೂ ಪ್ರದರ್ಶನಮಾಡುವುದು. (೨) ವೈಶ್ಯಬಾಲಕರಿಗೆ ಮುಖ್ಯವಾಗಿ ವ್ಯಾಪಾರ—ವೈದ್ಯ—ಇತರ ದೇಶದವರ ವಾಣಿಜ್ಯ ಮಾರ್ಗಗಳು—ತತ್ಸಂಬಂಧವಾದ ವಿದ್ಯೆಗಳು ಇವನ್ನು ಅಭ್ಯಾಸಮಾಡಿಸುವುದಕ್ಕೂ ತತ್ಪ್ರೋತ್ಸಾಹಾರ್ಥವಾಗಿಯೂ ತಕ್ಕ ಏರ್ಪಾಟನ್ನು ಮಾಡುವುದು. ವೈಶ್ಯ ಬಾಲಿಕೆಯರಿಗೆ ಪಾಕಶಾಸ್ತ್ರಾಭ್ಯಾಸ ಸನ್ಮಾರ್ಗಪ್ರವರ್ತನ, ಚಿತ್ರಲೇಖನ, ಸಂಗೀತ ಶಾಸ್ತ್ರಗಳಲ್ಲಿ ಜ್ಞಾನಾಭಿವೃದ್ಧಿಯನ್ನುಂಟುಮಾಡುವುದು. (೩) ೧೬ ವರ್ಷಗಳಿಗೊಳಪಟ್ಟ ಬಾಲಕರಿಗೂ ೧೦ ವರ್ಷಗಳಿಗೊಳಪಟ್ಟ ಬಾಲಿಕೆಯರಿಗೂ ಮದುವೆಯನ್ನು ಮಾಡಕೂಡದು. ಈ ವಿಧಿಯನ್ನು ಮೀರಿ ನಡೆದವರನ್ನು ಸಮಾಜದಿಂದ ಧಿಕ್ಕರಿಸುವುದು. ಕನ್ಯಾಶುಲ್ಕ ವರಶುಲ್ಕಗಳನ್ನು ತಪ್ಪಿಸುವುದು. ಮದುವೆ, ಮುಂಜಿ ಮೊದಲಾದ ಸಮಯಗಳಲ್ಲಿ ದುಂದು ವೆಚ್ಚವನ್ನು ತಪ್ಪಿಸುವುದು. (೪) ಪ್ರತಿ ವೈಶ್ಯ ಬಾಲಕರಿಗೂ ೧೨ ವರ್ಷ ವಯಸ್ಸಿನೊಳಗಾಗಿ ತಪ್ಪದೆ ಉಪನಯನವನ್ನು ಮಾಡಬೇಕು. ವೈಶ್ಯರು ಷೋಡಶಕರ್ಮಗಳನ್ನು ವೇದ ಮಂತ್ರಪುರಸ್ಸರವಾಗಿ ನಡೆಯಿಸುವುದಕ್ಕೆ ಈಗಿಂತಲೂ ಹೆಚ್ಚಾದ ಪ್ರೋತ್ಸಾಹವನ್ನು ಕಲ್ಪಿಸಬೇಕು. (ಆ ಸಮಯದಲ್ಲಿ ಕುಂಭಕೋಣದ ಮ॥ ಎ. ಆರ್. ಚಕ್ರಪಾಣಿಶೆಟ್ಟರು ಎದ್ದುನಿಂತು, ಬಡವರಾದ ವೈಶ್ಯರ ಬಾಲಕರಿಗೆ ಉಪನಯನ ಮಾಡಿಕೊಳ್ಳುವುದಕ್ಕೆ ತಗಲುವ ವೆಚ್ಚವನ್ನು ತಾವು ಕೊಡುವುದಾಗಿ ಸಭೆಗೆ ಬಿನ್ನೈಸಿಕೊಂಡರು.) (೫) ಪ್ರತಿಯೊಂದು ಮುಖ್ಯ ಪಟ್ಟಣಗಳಲ್ಲೂ ವೈಶ್ಯರು ಸ್ವಜಾತಿಯ ಪಂಚಾಯಿತಿ ಸಭೆಗಳನ್ನು ಸ್ಥಾಪಿಸಿಕೊಂಡು, ತಮ್ಮಲ್ಲಿ ಉಂಟಾಗುವ ಕಲಹಗಳನ್ನು ಆ ಸಭೆಗಳ ಮೂಲಕವಾಗಿ ತೀರ್ಮಾನಿಸಿಕೊಳ್ಳಬೇಕು. ಪ್ರತಿ ಮುಖ್ಯ ಪಟ್ಟಣಗಳಲ್ಲೂ ವ್ಯಾಪಾರ ಸಂಘಗಳನ್ನು ಸ್ಥಾಪಿಸಿ, ವಾಣಿಜ್ಯಾಭಿವೃದ್ಧಿಗೆ ಅವಶ್ಯಕವಾದ ವಿಷಯಗಳನ್ನು ವಿಶೇಷವಾಗಿ ಅರಿತುಕೊಳ್ಳಬೇಕು. ಮದರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ದಕ್ಷಿಣ ಇಂಡಿಯಾ ವಾಣಿಜ್ಯ ಸಂಘಕ್ಕೆ ಪ್ರತಿ ಮುಖ್ಯ ಪಟ್ಟಣದ ವೈಶ್ಯರೂ ಮೆಂಬರುಗಳಾಗಿ ಸೇರುವಂತೆ ಪ್ರೋತ್ಸಾಹಿಸಬೇಕು. ಇತ್ಯಾದಿ.

ಆರ್ಯವೈಶ್ಯಮಹಿಳಾಪರಿಷತ್ತು.

ಇದು ಮೇ ತಾರೀಖು ೨೬ ರಲ್ಲಿ ಕೂಡಿದ್ದಿತು. ಸಭೆಗೆ ಬಹುಶಃ ೩೦೦ ಮಂದಿ ವೈಶ್ಯಸ್ತ್ರೀಯರು ಸೇರಿದ್ದರು. ಮ॥ ನಾಳಂ ಪದ್ಮನಾಭಂರವರ ಪತ್ನಿಯವರು ಈ ಸಭೆಯ ಅಧ್ಯಕ್ಷೆಯರಾಗಿದ್ದರು. ಅವರು ತಮ್ಮ ಪ್ರಾರಂಭೋಪನ್ಯಾಸದಲ್ಲಿ ಸ್ತ್ರೀವಿದ್ಯಾವಶ್ಯಕತೆ—ಸ್ತ್ರೀಧರ್ಮ—ಮೊದಲಾದ ವಿಷಯಗಳನ್ನು ಸರಸವಾಗಿ ಪ್ರತಿಪಾದಿಸಿದರು. ಹೈಕೋರ್ಟು ವಕೀಲ್ ಮ॥ ಸಲ್ಲಾ ಗುರುಸ್ವಾಮಿ ಸೆಟ್ಟಿಯವರ ಪತ್ನಿ ಶ್ರೀ॥ ಸಲ್ಲಾ ಸೌಂದರ್ಯವಲ್ಲಿಯಮ್ಮನವರು ಸ್ತ್ರೀವಿದ್ಯೆ—ಪಾತಿವ್ರತ್ಯ—ಸತ್ಪ್ರವರ್ತನ—ಭಕ್ತಿ ಮೊದಲಾದ ವಿಷಯಗಳನ್ನು ಕುರಿತು ಭಾಷಣಮಾಡಿದರು. ಅನಂತರ ಇನ್ನೂ ಹತ್ತು ಮಂದಿ ವೈಶ್ಯಾಂಗನೆಯರು ಹೀಗೆಯೇ ಸ್ತ್ರೀಯರಿಗೆ ಬೋಧಪ್ರದವಾದ ಭಾಷಣಗಳನ್ನು ಮಾಡಿದರು. ಕೆಲಬಾಲಿಕೆಯರು ಹಾರ್ಮೋನಿಯಮನ್ನು ಬಾರಿಸುತ್ತ ಹಾಡಿ ಸಭಿಕರನ್ನು ಸಂತೋಷಪಡಿಸಿದರು. ಕಡೆಗೆ ಸರ್ವರಿಗೂ ಪುಷ್ಪಗಂಧತಾಂಬೂಲಗಳ ವಿನಿಯೋಗವಾಗಿ ಸಭೆಯು ಮುಗಿಸಲ್ಪಟ್ಟಿತು.

ಸಭಾಧ್ಯಕ್ಷರಾದ ಮ॥ ನಾಳಂ ಪದ್ಮನಾಭಂರವರ ಭಾಷಣದ ಮುಖ್ಯಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೇವೆ.

ಕರ್ಮಭೂಮಿಯಾದ ನಮ್ಮ ಭರತಖಂಡದಲ್ಲಿ ಬಹುಕಾಲದಿಂದ ವರ್ಣಭೇದಗಳಿರುತ್ತವೆ. ಅತಿ ಪ್ರಾಚೀನವಾದ ಋಗ್ವೇದದಲ್ಲೂ ಕೂಡ ವರ್ಣಭೇದವು ನಿರೂಪಿತವಾಗಿದೆ. ವರ್ಣಗಳ ವಿಭಾಗವು ಉತ್ತಮವಾದ ದೂರಾಲೋಚನೆಯಿಂದ ಮಾಡಲ್ಪಟ್ಟಿದೆ. ಆ ವಿಭಾಗವು ಲೋಕಾಭಿವೃದ್ಧಿಗೆ ಸಾಧಕವಾಗಿ ಮಾಡಲ್ಪಟ್ಟಿತೆಂದು ಕಾಣುತ್ತದೆ. ಪ್ರಜಾಸಂಘದಲ್ಲಿ ಮತರಕ್ಷಣೆಯನ್ನು ಮಾಡುವುದಕ್ಕೆ ಕೆಲರು, ಪ್ರಜಾರಕ್ಷಣೆಯನ್ನು ಮಾಡುವುದಕ್ಕೆ ಕೆಲರು, ವ್ಯಾಪಾರಾರ್ಥವಾಗಿ ಕೆಲರು, ಕೃಷಿಕಾರ್ಯಾರ್ಥವಾಗಿ ಕೆಲರು, ಹೀಗೆ ಇದ್ದೇ ತೀರಬೇಕು. ಇಂಥ ಭೇದವಿಲ್ಲದಿದ್ದರೆ ಸಂಘಗಳೇ ಉಳಿಯಲಾರವು. ಸಂಘಕಾರ್ಯನಿರ್ವರ್ತನಸೌಕರ್ಯಕ್ಕಾಗಿಯೇ ನಮ್ಮಲ್ಲಿ ವರ್ಣಭೇದವೇರ್ಪಡಿಸಲ್ಪಟ್ಟಿದೆ. ಅದುಕಾರಣವೇ ಭಾಗವತದಲ್ಲಿ 'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ' ಎಂದು ಹೇಳಲ್ಪಟ್ಟಿದೆ. ಹೀಗೆ ಪ್ರಾಚೀನರು ಸ್ಥಾಪಿಸಿದ ವರ್ಣಭಾಗಗಳ ಆದಿ ಉದ್ದೇಶವನ್ನು ನೋಡಿದರೆ ಈ ವರ್ಣದವರು ಪರಸ್ಪರ ದ್ವೇಷವನ್ನು ವಹಿಸಬೇಕಾದುದರ ಆವಶ್ಯಕತೆಯು ತೋರುವುದಿಲ್ಲ. ಪೂರ್ವಕಾಲದಲ್ಲಿ ಈ ನಾಲ್ಕು ವರ್ಣದವರೂ ತುಂಬಾ ಪರಸ್ಪರ ಸ್ನೇಹಭಾವಪೂರ್ವಕವಾಗಿ ಅನ್ಯೋನ್ಯ ಲಾಭವನ್ನು ಪಡೆಯುವುದಕ್ಕಾಗಿಯೇ ತಮ್ಮತಮ್ಮ ವೃತ್ತಿಗಳಲ್ಲಿ ತತ್ಪರರಾಗಿರುತ್ತಿದ್ದರು. ಈಗ ಈ ವರ್ಣಭೇದಗಳಿಂದ ಹಾನಿಯುಂಟಾಗುತ್ತಲಿದೆಯೆಂದು ಕೆಲರು ತಿಳಿಯುತ್ತಾರೆ. ಅದು ನಮ್ಮಗಳ ಲೋಪವೇ ಹೊರತು ವರ್ಣಭೇದದೇರ್ಪಾಟಿನ ಲೋಪವಾಗಿಲ್ಲ. ಅದರ ಲೋಪವೇ ಆಗಿದ್ದರೆ, ಮೊದಲಿನಿಂದಲೂ ಈಗಿನಂಥ ತೊಂದರೆಯುಂಟಾಗಬೇಕಾಗಿದ್ದಿತು. ಪ್ರಾಚೀನಕಾಲದಂತೆ ಈಗಲೂ ಚತುರ್ವರ್ಣದವರೂ ಪರಸ್ಪರ ಸ್ನೇಹದಿಂದಿದ್ದು ಅನ್ಯೋನ್ಯ ವೃದ್ಧಿಗಳನ್ನುಂಟುಮಾಡಿಕೊಳ್ಳುವುದಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ. ನಾವು ಈಗ ಮಾಡುತ್ತಿರುವ ಪ್ರಯತ್ನದ ಉದ್ದೇಶವು ಸ್ವಜಾತ್ಯುದ್ಧರಣವಾಗಿರುವುದು. ಪ್ರತಿವರ್ಗದವರೂ ಅವರವರ ಜಾತಿಯ ಏಳ್ಗೆಯನ್ನು ಕುರಿತು ಪ್ರಯತ್ನಿಸುತ್ತ ಬಂದರೆ ಅದರಿಂದ ದೇಶಾಭಿವೃದ್ಧಿಯು ಸುಲಭವಾಗಿ ಆಗುವುದು. ಸಮಾನಧರ್ಮಿಗಳೂ, ಸಮಾನ ವ್ಯಾಪಾರಿಗಳೂ ಒಂದುಕಡೆ ಸೇರಿ, ತಮ್ಮ ಅಭಿವೃದ್ಧಿಗೆ ಪಾಟುಪಡುತ್ತ ಬಂದರೆ ಸಾರಸ್ಯವೇ ಹೊರತು ಭಿನ್ನಧರ್ಮಿಯರುಗಳೂ, ಭಿನ್ನಾಭಿಪ್ರಾಯದವರೂ ಕೂಡಿದರೆ ಆ ಉದ್ದೇಶವು ಸುಲಭವಾಗಿ ನೆರವೇರಲಾರದು. ಕುಲಾಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ವಿದ್ಯೆಯೂ, ಸಾಂಘಿಕೌನ್ನತ್ಯವೂ ತದನುಕೂಲ ವೃತ್ತಿಗಳೂ ಆವಶ್ಯಕವಾದುವುಗಳು. ಇವುಗಳು ಮುಖ್ಯವೂ, ಶಾಶ್ವತಸೌಖ್ಯಪ್ರದವೂ ಅಂತಹವನ್ನೇ ನಾವು ಉಪೇಕ್ಷಿಸಿಬಿಟ್ಟಿದ್ದೇವೆ. ಸದ್ಯಕ್ಕೆ ನಾವು ಮತವಿಷಯದಲ್ಲಿ ಹಿಂದಾಗಿದ್ದೇವೆ. ನಮ್ಮ ಧರ್ಮವನ್ನು ನಾವು ತಿಳಿದುಕೊಂಡಿಲ್ಲ. ನಾವು ದ್ವಿಜರು. ನಮಗೆ ಬ್ರಾಹ್ಮಣಾದಿಗಳಿಗಿರುವಂತೆಯೇ ವೇದೋಕ್ತ ಕರ್ಮಾಚರಣೆಯುಂಟು ಎಂಬುದನ್ನೇ ನಾವು ಮರೆತುಬಿಟ್ಟಿದ್ದೇವೆ. ವಿವಾಹಾದಿ ಸಮಯಗಳಲ್ಲಿ ದ್ವಿಜೇತರರು ಯಾವರೀತಿಯಲ್ಲಿ ಕರ್ಮವನ್ನಾಚರಿಸುವರೋ ಹಾಗೆಯೇ ನಮ್ಮಲ್ಲನೇಕರು ಆಚರಿಸುತ್ತಾರೆ. ಇದರಿಂದ ದ್ವಿಜೇತರರ ಕರ್ಮವೇ ನಮ್ಮ ಸನಾತನ ಧರ್ಮವೆಂತಲೂ, ವೇದೋಕ್ತಕರ್ಮವನ್ನಾಚರಿಸುವುದು ನೂತನವೆಂತಲೂ ಇತರರು ತಿಳಿದುಕೊಳ್ಳುವ ಸ್ಥಿತಿಗೆ ನಾವು ಬಂದಿದ್ದೇವೆ. ಇದು ವ್ಯಸನಕರವಾದುದು. ವೇದೋಕ್ತಕರ್ಮವನ್ನಾಚರಿಸುವುದೇ ನಮ್ಮ ಪೂರ್ವಾಚಾರವೇ ಹೊರತು ಶೂದ್ರಾಚಾರವನ್ನು ನಡೆಯಿಸುವುದು ನಮ್ಮ ಕುಲಧರ್ಮವಲ್ಲ. ಕಾಲಧರ್ಮದಿಂದ ನಮ್ಮವರು ಸ್ವಧರ್ಮವನ್ನು ಮರೆತುಬಿಟ್ಟಿದ್ದಾರೆ. ಇದರಿಂದಲೇ ಕೋಮಟಿಗರು ದ್ವಿಜರೆ? ಅಲ್ಲವೆ? ಎಂದು ಸಂಶಯಪಡುವ ಹೊತ್ತು ಕೂಡ ಪ್ರಾಪ್ತವಾಗಿದೆ. ಗೋಮತಿ ಎಂಬ ಶಬ್ದದಿಂದ ಕೋಮಟಿ ಎಂಬ ರೂಢಿಯುಂಟಾಗಿದೆ. ಆ ಶಬ್ದವೇ ನಮ್ಮ ವೈಶ್ಯತ್ವವನ್ನು ನಿರೂಪಿಸುತ್ತದೆ. ನಿಸರ್ಗವಾದ ನಮ್ಮ ವೇದೋಕ್ತ ಕರ್ಮಾಚರಣೆಯನ್ನು ಪೂರ್ವದಂತೆ ಸ್ಥಾಪಿಸುವುದಕ್ಕಾಗಿ ನಮ್ಮಲ್ಲಿ ದಿವಂಗತರಾದ ಆತ್ಮೂರು ಲಕ್ಷ್ಮೀನರಸಿಂಹಸೋಮಯಾಜಿಗಳು ಅವತರಿಸಿದ್ದರು. ವೇದೋಕ್ತಕರ್ಮಗಳನ್ನೂ, ಯಾಗಾದಿಗಳನ್ನೂ ಆಚರಿಸುವುದಕ್ಕೆ ನಮಗೆ ಸ್ವಾತಂತ್ರ್ಯವಿರುವುದನ್ನು ಯಾಜ್ಞವಲ್ಕ್ಯ—ಔಶನಸ—ಬೃಹಸ್ಪತಿ ಮೊದಲಾದ ಧರ್ಮಶಾಸ್ತ್ರಗಳು ನಿರೂಪಿಸುತ್ತವೆ. ನಮ್ಮವರು ಆ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳಹತ್ತಿದುದರಿಂದ ಬ್ರಾಹ್ಮಣರಿಗೂ ನಮಗೂ ಸ್ವಲ್ಪ ಕಲಹ ಹುಟ್ಟಿದೆ. ತಮ್ಮಂತೆಯೇ ದ್ವಿಜರಾದ ವೈಶ್ಯರು ತಮ್ಮ ವೈದಿಕಕರ್ಮದ ಅಭ್ಯುದಯಕ್ಕೋಸ್ಕರವಾಗಿ ಪ್ರಯತ್ನಪಡುತ್ತಿರುವಾಗ ಅವರಿಗೆ ಬ್ರಾಹ್ಮಣರು ಸಹಾ

ಉಪಕಾರವಾದುದಕ್ಕೆ ಪ್ರತಿಯಾಗಿ ವಿಘಾತವನ್ನು ಮಾಡಿದರೆಂದು ಹೇಳಬೇಕಾಗಿ ಬಂದುದಕ್ಕಾಗಿ ವಿಷಾದಿಸಬೇಕಾಗಿದೆ. ಆದರೂ ಅದಕ್ಕಾಗಿ ಅವರನ್ನು ನಾವು ನಿಂದಿಸಬೇಕಾದುದಿಲ್ಲ. ಹೀಗಾದುದಕ್ಕೆ ನಾವು ನಮ್ಮ ಧರ್ಮಕರ್ಮಗಳನ್ನು ಕೆಲಕಾಲ ಮರೆತು ಬಿಟ್ಟು, ಶೂದ್ರಾಚಾರದಲ್ಲಿ ನಿಂತ ಸ್ವಯಂಕೃತಾಪರಾಧವೇ ಕಾರಣ. ಮರೆತುಬಿಟ್ಟಿದ್ದುದನ್ನು ಮರಳಿ ಪರಿಗ್ರಹಿಸಿದಾಗ ಇತರರಿಗೆ ಅದು ಸ್ವಲ್ಪಕಾಲ ಸೋಜಿಗವಾಗಿ ತೋರುವುದೇನೂ ಆಶ್ಚರ್ಯವಲ್ಲ. ಇಲ್ಲದೆ ನಮ್ಮ ಪೂರ್ವಿಕ ವೈದಿಕಾಚರಣವನ್ನು ನಾವು ಮರಳಿ ಪರಿಗ್ರಹಿಸಿದುದನ್ನು ಕುರಿತು ಬ್ರಾಹ್ಮಣರೇ ನಮ್ಮನ್ನು ದ್ವೇಷಿಸಿದರೆಂಬುದಿಲ್ಲ ನಮ್ಮವರೇ ಅನೇಕರು ಅರಿಯದ ದೋಷದಿಂದ ದ್ವೇಷಿಸುತ್ತಲೂ, ದೂಷಿಸುತ್ತಲೂ ಇದ್ದರು. ಎನ್ನುವಾಗ ಇನ್ನು ಇತರರ ಮಾತೇನು? ಆದರೂ ವಿವಾದವುಟ್ಟಿ ಚೆನ್ನಾಗಿ ವಿಮರ್ಶನವಾದಬಳಿಕ ಬ್ರಾಹ್ಮಣರೇ ಈಗ ನಮಗೆ ಸರ್ವವಿಧವಾದ ವೇದೋಕ್ತ ಕರ್ಮಾಚರಣೆಗೂ ಸಹಾಯಕರಿಸುತ್ತಿರುವರೆಂದು ನಿಶ್ಶಂಕೆಯಾಗಿ ಹೇಳಬಹುದು. ಆದರೆ ಈ ಪದ್ಧತಿಯು ಈ ದಕ್ಷಿಣದೇಶದಲ್ಲಿ. ನಮ್ಮ ಆಂಧ್ರದೇಶದಲ್ಲಿ ಬ್ರಾಹ್ಮಣರೇ ವೈಶ್ಯರ ಮನೆಯ ಕರ್ಮಗಳನ್ನೆಲ್ಲಾ ವೇದೋಕ್ತಮಾರ್ಗವಾಗಿಯೇ ಮಾಡಿಸುತ್ತಾರೆ. ಕೋಮಟಿಗರು ವೈಶ್ಯರಲ್ಲವೆಂದು ಕೆಲಕೆಲರು ದ್ವೇಷದಿಂದ ಹೇಳಿಕೊಳ್ಳುತ್ತಾರೆ. ಆದರೆ ನಮಗೆ ವೈಶ್ಯರೆಂಬ ಹೆಸರು ಸರ್ವತ್ರ ರೂಢಿಯಲ್ಲೇ ಇದೆ. ಅಲ್ಲದೆ ನಾವು ಯಜ್ಞೋಪವೀತಧಾರಣವಿಲ್ಲದೆ ಯಾವಾಗಲೂ ಇರಲಿಲ್ಲ. ಉಪನಯನ ಸಂಸ್ಕಾರವು ತಪ್ಪದೆ ನಡೆಯುತ್ತಲೇ ಬಂದಿದೆ. ನಮ್ಮಲ್ಲಿ ದ್ವಿಜತ್ವವಿದೆಯೆಂದು ಹೇಳುವುದಕ್ಕೆ ಈ ದೃಷ್ಟಾಂತವೇ ಸಾಕು. ಇದು ಕಾರಣ ನಮ್ಮ ಕರ್ಮಗಳನ್ನೆಲ್ಲಾ ವೇದೋಕ್ತವಾಗಿ ಮಾಡಿಕೊಳ್ಳುತ್ತ ನಮ್ಮ ದ್ವಿಜತ್ವವನ್ನು ಯಥಾಪೂರ್ವಕವಾಗಿ ಸಾಧಿಸಿಕೊಳ್ಳುವುದು ನಮ್ಮ ಪ್ರಥಮಕರ್ತವ್ಯವು.

ಮೈಸೂರ್ ಸ್ಟಾರ್

೧೯೧೨ ನೆಯ ಜೂನ್ ತಾ॥ ೩ ನೆಯ ಸೋಮವಾರ.

ತಕ್ಕ ಪ್ರಯತ್ನವಿಲ್ಲದೆ ಹಿತವಾಗಲಾರದು.

ಪ್ರತಿಯೊಂದು ಕ್ಷುದ್ರ ಜಂತುವಿಗೂ ಸಹ ಪ್ರಯತ್ನಿಸಿದಲ್ಲದೆ ಉದರ ನಿರ್ವಹವು ಕೂಡ ಆಗಲಾರದೆಂಬುದು ಪ್ರತ್ಯಕ್ಷವಾಗಿರುವಾಗ, ಮಾನವನು ತನ್ನ ಅಥವಾ ತನ್ನ ದೇಶದ ಹಿತವನ್ನು ಕುಳಿತಲ್ಲಿಯೇ ಕೋರಿದರೆ ತಾನಾಗಿ ಪ್ರಾಪ್ತವಾಗುವುದುಂಟೆ? ಸೋಂಬೇರಿಯು ತನ್ನನ್ನು ಹುಟ್ಟಿಸಿದ ದೇವರನ್ನು ದೂಷಿಸುತ್ತಿರುವಂತೆ, ತಮ್ಮ ಕರ್ತವ್ಯ ಕರ್ಮವನ್ನರಿಯದ ಜನರು ಯಾವಾಗಲೂ ಸರ್ಕಾರದಮೇಲೆ ದೋಷಾರೋಪಣೆ ಮಾಡುತ್ತಿರುವುದನ್ನೇ ಕರ್ತವ್ಯವೆಂದು ತಿಳಿದಿರುವುದುಂಟು. ಈ ದೋಷವು ಎಷ್ಟು ಆತ್ಮಘಾತಕವೆಂಬುದನ್ನು ಅಂಥವರು ಅರಿಯರು. ಸರ್ಕಾರವೆಂಬುದು ಪ್ರಜೆಗಳ ಹಿತಕ್ಕಾಗಿಯೇ ಏರ್ಪಟ್ಟಿರತಕ್ಕದು. ಅದರ ಜೀವಿತವೆಲ್ಲವೂ ಪ್ರಜೆಗಳಿಂದಲೇ ಸಾಗತಕ್ಕದು. ಅದರಿಂದ ನ್ಯಾಯವಾದ ಫಲವನ್ನು ಪಡೆದುಕೊಳ್ಳತಕ್ಕ ಭಾರವು ಪ್ರಜೆಗಳ ಮೇಲೆಯೇ ಬಿದ್ದಿರುವುದು. ಸರ್ಕಾರದ ಉದ್ದೇಶ ಪ್ರಯತ್ನಗಳ ತತ್ತ್ವವನ್ನು ಅರಿಯದ ಜನರು ಹಲವುಬಾರಿ ಪ್ರತಿಭಟಿಸಿ, ಆತ್ಮಘಾತವನ್ನು ಮಾಡಿಕೊಂಡಿರುವುದಕ್ಕೂ, ಅವರ ಉದ್ದೇಶಗಳನ್ನು ತಿಳಿದು ಆಚರಿಸಿದವರು ಸುಖಗೊಂಡಿರುವುದಕ್ಕೂ ಅನೇಕ ದೃಷ್ಟಾಂತಗಳು ನಮ್ಮ ಕಣ್ಣೆದುರಿಗೇ ಸಂಭವಿಸುತ್ತಿರುವುವು. ಆದರೂ ಅದನ್ನು ಕಂಡು ಎಚ್ಚತ್ತು ನಡೆಯುವವರು ವಿರಳ. ಹೀಗಾಗುವುದಕ್ಕೆ ಇರುವ ಮುಖ್ಯಕಾರಣಗಳಲ್ಲಿ ಪ್ರಜಾಸಾಮಾನ್ಯದಲ್ಲಿ ವಿದ್ಯಾ ವಿವೇಕಗಳು ತಕ್ಕಮಟ್ಟಿಗಾದರೂ ಪ್ರಸರಿಸದೆಯಿರುವುದೂ ಒಂದಾಗಿರುತ್ತದೆ.

ಘನತೆಯನ್ನೈದಿದ ನಮ್ಮ ಗೌರ್ನಮೆಂಟಿನವರು ತಮ್ಮ ಪ್ರಜಾಸಾಮಾನ್ಯದ ತಿಳುವಳಿಕೆ ಬರಲೆಂಬುದಕ್ಕಾಗಿಯೇ ಪ್ರಜಾಪ್ರತಿನಿಧಿ ಸಭೆಯ ನಿಯಮನಿರ್ಮಾಣ ಸಭೆಯ ನಡವಳಿಕೆಗಳನ್ನೂ, ತತ್ತತ್ಕಾಲದಲ್ಲಿ ಅವತರಿಸುವ ನೂತನವಾದ ಏರ್ಪಾಡುಗಳ ಸಂಗತಿಯನ್ನೂ ಸರ್ಕಾರದ ಗೆಜೆಟ್ಟುಗಳಲ್ಲೂ ಬೇರೆಬೇರೆ ಪುಸ್ತಕಗಳ ರೂಪವಾಗಿಯೂ ಪ್ರಕಟಿಸುತ್ತ ಬರುವುದುಂಟು. ಅವುಗಳಲ್ಲಿ ಪ್ರಜೆಗಳ ಇಷ್ಟಪೂರಣ ಅನಿಷ್ಟನಿವಾರಣದ ಸಂಗತಿಗಳೇ ಹೇರಳವಾಗಿರುವುವು. ಅವುಗಳನ್ನು ಪ್ರಜೆಗಳು ತೆಗೆದುಕೊಂಡು ಓದಿ ತಿಳಿದುಕೊಳ್ಳುತ್ತ ಬಂದರೆ ತಮಗಾಗಿ ಸರ್ಕಾರದಿಂದ ಆಗಬಹುದಾದ ಸಹಾಯಗಳನ್ನೆಲ್ಲಾ ಸುಲಭವಾಗಿ ಪಡೆದುಕೊಳ್ಳಬಹುದು. ಮತ್ತೂ ನಿಜವಾದ ತಮ್ಮ ಕೊರತೆಗಳನ್ನು ಸರ್ಕಾರಕ್ಕೆ ಅರುಹಿಕೊಂಡು ಅವುಗಳನ್ನು ನಿವಾರಿಸಿಕೊಳ್ಳಲು ಸಮರ್ಥರಾಗಬಹುದು. ಹಾಗೆ ಪ್ರಜೆಗಳು ಮಾಡುತ್ತ ಬಂದರೆ ತಮ್ಮ ಉದ್ದೇಶವು ನೆರವೇರುತ್ತಿರುವುದೆಂದು ಸರ್ಕಾರದವರೂ ಸಂತೋಷಪಡುವರು. ನಾತ್ತೂ ಅನೇಕಗಳಿಂದ ಪ್ರಜೆಗಳುಳ್ಳ ರಾಜ್ಯವನ್ನು ಆಳುವುದಕ್ಕೆ ಪ್ರಭುತ್ವದವರಿಗೂ ಲೋಕಜ್ಞತೆ ಹೆಚ್ಚುವುದು. ಇಷ್ಟೇ ಅಲ್ಲದೆ ಪ್ರಜಾಪ್ರಭುಗಳ ಮಧ್ಯದಲ್ಲಿ ಉಭಯರಿಗೂ ಹಿತವಾದ ಉದ್ಯೋಗವನ್ನು ನಿರ್ವಹಮಾಡುತ್ತಿರುವ ಅಧಿಕಾರಿಗಳೊಳಗೆ ಬಹಿಷ್ಕೃತರಾದ ಕುಜನರು ಹೊರತು ದುಷ್ಟೋದ್ಯೋಗಿಗಳಿಂದ ಪ್ರಜೆಗಳಿಗೆ ಸಂಭವಿಸುತ್ತಿರುವ ಅನ್ಯಾಯ, ಹಿಂಸೆ, ಸುಲಿಗೆ ಮೊದಲಾದ ಪೀಡೆಗಳಿಂದೆಲ್ಲಾ ಪ್ರಜೆಗಳು ಮುಕ್ತರಾಗುವುದಕ್ಕೂ ಅವಕಾಶವುಂಟಾಗುವುದು. ಆದರೆ ಸದ್ಯಃ ನಮ್ಮ ಪ್ರಜೆಗಳ ಸ್ಥಿತಿಯು ಆ ರೀತಿಯಾಗಿರುವುದಿಲ್ಲ. ಗೌರ್ನಮೆಂಟಿನವರು ಅಚ್ಚುಮಾಡಿಸುವ ಪ್ರತಿಗಳೂ ಪ್ರಜಾಹಿತಾರ್ಥವಾದ ಪುಸ್ತಕ ಗೆಜೆಟ್ ಮೊದಲಾದುವುಗಳೂ ಕನ್ನಡದಲ್ಲೇ ಇದ್ದರೂ ಅದನ್ನು ತೆಗೆದುಕೊಳ್ಳುವವರು ಅತ್ಯಂತ ವಿರಳ. ಒಂದೊಂದು ಪ್ರತಿಯ ಬೆಲೆಯು ೨-೩ ಕಾಸುಗಳಷ್ಟಿದ್ದರೂ, ಅಂಥವು ಕೂಡ ವರ್ಷಕ್ಕೆ ೧-೨ ರಂತೆಯೂ ಕೂಡ ಮಾರಲ್ಪಡುತ್ತ ಇರುವುದಿಲ್ಲವೆಂಬ ಸಂಗತಿಯನ್ನು ಕೇಳಿದರೆ ದೇಶದ ಪ್ರಜೆಗಳ ಮೌಢ್ಯಸ್ಥಿತಿಯು ಎಷ್ಟು ಮಟ್ಟಿಗೆ ಇದೆಯೆಂಬುದು ಗೊತ್ತಾಗುವುದು. ಇಂಥ ಪ್ರಜೆಗಳುಳ್ಳ ದೇಶದ ಅಭಿವೃದ್ಧಿಯು, ಒಂದು ನೊಗಕ್ಕೆ ಅರಬ್ಬಿಯ ಕುದುರೆಯನ್ನೂ ಮತ್ತೊಂದು ನೊಗಕ್ಕೆ ಶಾನುಭೋಗರ ತಟ್ಟುವಿನ ಮರಿಯನ್ನೂ ಕಟ್ಟಿರುವ ಬಂಡಿಯು ಸಾಗುವಿಕೆಗೆ ಸಮನಾಗಿರುವುದೆಂದರೆ ತಪ್ಪಲ್ಲ, ಭೀರುಗಳಾದ ಪ್ರಜೆಗಳಿಂದ ಕಾಲಕ್ಕೆ ಸರಿಯಾಗಿ ಎತ್ತಿದ ಕಂದಾಯದಿಂದ ಬೊಕ್ಕಸವು ಸಮೃದ್ಧವಾಗಿರುವುದರಿಂದಲೇ ದೇಶದ ಸಮೃದ್ಧಿಯನ್ನು ನಿರ್ಧರಿಸುವುದಕ್ಕಾಗುವುದಿಲ್ಲ. ಸರ್ಕಾರದ ಪುಷ್ಟಿಯ ಜತೆಗೆ ಪ್ರಜೆಗಳ ಪುಷ್ಟಿಯೂ ಉಂಟಾಗಿದ್ದರೇನೆಯೇ ದೇಶವು ನಿಜವಾಗಿ ಅಭಿವೃದ್ಧಿಗೊಂಡಿರುವುದೆಂದು ಹೇಳಬೇಕಾಗುವುದು. ಬಂಡಿಗೆ ಕಟ್ಟಿದ ಶಾನುಭೋಗ ತಟ್ಟು ಮೇಲಣ ಜಡಿತದಿಂದಲೂ ಬೆದರಿಕೆಯಿಂದಲೂ ಅರಬ್ಬಿಯ ಕುದುರೆಯ ಜತೆಗೆ ೪-೩ ಮಾರು ದೂರ ನಡೆದರೂ, ಮುಂದೆ ಮುಗ್ಗರಿಸಿ ಬೀಳದೆ ಹೋಗುವುದಿಲ್ಲ. ಆಗ್ಗೆ ರಥದ ಗತಿಯೇ ಕಟ್ಟಾಗುವುದು. ರಾಜ್ಯಕಾರ್ಯವೆಂಬ ರಥದ ನೊಗವನ್ನು ಒಂದುಕಡೆಗೆ ಸರ್ಕಾರವೂ ಒಂದುಕಡೆ ಪ್ರಜೆಗಳೂ ಹೊತ್ತಿರುವರು. ಅದುಕಾರಣ ಸರ್ಕಾರದ ಉದ್ಯೋಗ ನಿರ್ವಾಹಕ್ರಮದಲ್ಲಿ ಶಾಖೋಪಶಾಖೆಗಳನ್ನು ಹೆಚ್ಚಿಸಿ, ಸಮರ್ಥರಾದ ಉದ್ಯೋಗಸ್ಥರನ್ನು ಅಲ್ಲಿ ಬರಮಾಡಲು ಚಟುವಟಿಕೆಯನ್ನು ತೋರಿಸುವ ಪಾಲಕರೇ, ಪ್ರಜೆಗಳ ಏಳ್ಗೆಗೆ ಯಾವಯಾವ ಸಾಧನಗಳು ಆವಶ್ಯಕವೆಂಬುದನ್ನು ಯೋಚಿಸುವಲ್ಲಿಯೂ ಚಟುವಟಿಕೆಯನ್ನು ವಹಿಸಿಯೇ ತೀರಬೇಕು. ಅಂತಹ ಚಟುವಟಿಕೆಯು ಸಹ ಬಾಯಿಮಾತಿನಲ್ಲೇ ಇರದೆ ಕಾರ್ಯರೂಪವಾಗಿಯೂ ಪರಿಣಮಿಸಬೇಕು. ಮತ್ತೂ ಅದು ಬಲತಾಯಿಯು ಮಕ್ಕಳಿಗೆ ಮಾಡುವ ಉಪಚಾರದಂತಿರದೆ ಹೆತ್ತತಾಯಿಯ ಆದರಣೆಯಂತಿರಬೇಕು. ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರಾದರೋ ಪುತ್ರನಿರ್ವಿಶೇಷವಾದ ಪ್ರೀತಿಯಿಂದ ಪ್ರಜೆಗಳನ್ನು ಮುಂದಕ್ಕೆ ತರಬೇಕೆಂದು ಅಹರ್ನಿಶಿಯೂ ಯೋಚಿಸುತ್ತಿರಬಹುದು. ಕಾರ್ಯವನ್ನೂ ಮಾಡುತ್ತಿರಬಹುದು. ಆದರೆ ಆ ಯೋಚನೆಯೂ ಕಾರ್ಯಗಳೂ ಪೂರ್ಣವಾಗಿ ಫಲಿಸುವುದಕ್ಕೆ ಯಾವುದರ ಅಭ್ಯಂತರವಿರುವುದೆಂಬುದನ್ನು ಮೊದಲು ತಿಳಿದು ಅದನ್ನು ಪರಿಹರಿಸದೆ ಹೋದರೆ, ಅವರು ಪಡುವ ಶ್ರಮವೆಲ್ಲಾ ಅಸಾರ್ಥಕವಾಗುವುದು ನಿಜ. ಮಕ್ಕಳ ಹೊಟ್ಟೆಯಲ್ಲಿ ಸರಿಯಾದ ಪಚನಾಗ್ನಿಯಿಲ್ಲದೆಯಿದ್ದರೆ ತಾಯಿಮಾಡುವ ಪೋಷಣೆಯೆಲ್ಲವೂ ಹೊಳೆಯಲ್ಲಿ ಹುಣಿಸೆಹಣ್ಣನ್ನು ತೇಯ್ದಂತೆ ಆಗುವುದು ನಿಜವಷ್ಟೆ. ಅದರಂತೆಯೇ ನಮ್ಮ ದೇಶದ ಸಾಮಾನ್ಯ ಪ್ರಜೆಗಳೆಲ್ಲಾ ವಿದ್ಯೆಯೆಂಬ ಪಚನಾಗ್ನಿಯಿಲ್ಲದೆ ಬಹುಕಾಲದಿಂದ ಕ್ಷಯರೋಗಗ್ರಸ್ತರಂತಾಗಿರುವರು. ಮೊದಲು ಆ ಭೀಕರ ರೋಗಕ್ಕೆ ಬಲವಾದ ಚಿಕಿತ್ಸೆಯನ್ನು ಮಾಡದ ಹೊರತು ಅವರ ಪುಷ್ಟಿಗೋಸ್ಕರವೆಂದು ಸರ್ಕಾರದವರು ಮಾಡುವ ಸಾಹಸಗಳೊಂದೂ ಫಲಕಾರಿಯಾಗಲಾರವೆಂಬುದು ಖಂಡಿತವು. ಆ ಕ್ಷಯರೋಗದ ನಿವಾರಣೆಗೆ ಬಲಾತ್ಕಾರ ವಿದ್ಯಾಭ್ಯಾಸವೆಂಬ ಔಷಧದ ಪ್ರಯೋಗವೇ ಅತ್ಯಂತ ಸಮಿಚೀನವಾದುದು. ಅದನ್ನು ಸರ್ಕಾರದವರು ಮಾಡಿಸಲು ಸಿದ್ಧರಾಗುವವರೆಗೂ ದೇಶದೇಳ್ಗೆಯೆಂಬುದು ಸ್ವಪ್ನಸುಖದಂತೆಯೇ ಸರಿಯೆಂಬುದನ್ನು ಪ್ರಕೃತದ ಸಂಪದಭ್ಯುದ್ಧಿ ಸಮಾಜದವರೂ, ಸರ್ಕಾರದವರೂ ಸಹ ಪರ್ಯಾಲೋಚಿಸುವವರಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಸಂಪದಭ್ಯುದ್ಧಿಯ ಸಮಾಜದ ಮೀಟಿಂಗು ಈ ದಿವಸ ಮುಗಿಯುವುದು. ಅದಕ್ಕಾಗಿ ನಿಂತಿದ್ದ ಅಧಿಕಾರಿಗಳೂ ಮೆಂಬರುಗಳೂ ನಾಳೆಯದಿನ ಪ್ರಯಾಣಮಾಡುವರು.

ಈಗ ರಜದ ಮೇಲೆ ಹೋಗಿರುವ ಡಾಕ್ಟರ್ ಕೋಲ್ಮೆರವರು ಹಿಂದಿರುಗಿ ಬಂದ ವೇಳೆ ಮುಂದಣವರ್ಷದ ಆದಿ ಭಾಗದಲ್ಲಿ ಬೆಂಗಳೂರಲ್ಲಿ ಸ್ಥಾಪಿಸಲ್ಪಡುವುದಾಗಿರುವ ಕೃಷಿಶಾಲೆಯ ಪ್ರೌಢವಿದ್ಯಾಲಯದ (ಕಾಲೇಜಿನ) ಮುಖ್ಯೋಪಾಧ್ಯಾಯರಾಗಿ ನಿಯಮಿಸಲ್ಪಡುವರು.

ಕಳೆದವಾರದ ಈ ಪತ್ರಿಕೆಯ ಅಗ್ರಲೇಖನದಲ್ಲಿ ಶ್ರೀಮನ್ಮಹಾರಾಜರವರಿಗೆ ೨೮ ವರ್ಷಗಳು ತುಂಬಿ ೨೯ ನೆಯ ವರ್ಷವು ಆರಂಭಗೊಂಡಿದೆಯೆಂಬುದಕ್ಕೆ ಪ್ರತಿಯಾಗಿ ಪ್ರಮಾದವಶಾತ್ ೩೧ ತುಂಬಿ ೩೨ ನೆಯ ವರ್ಷವಾರಂಭಗೊಂಡಿದೆಯೆಂದು ಬಿದ್ದಿರುವುದಕ್ಕಾಗಿ ಚಿಂತಿಸುತ್ತೇವೆ.

ದಿವಾನರು ಕುದುರೆಯ ಪಂದ್ಯಗಳೆಲ್ಲವೂ ಮುಗಿಯುವವರೆಗೂ ರಾಜಧಾನಿಯಲ್ಲೇ ನಿಲ್ಲುವುದಾಗಿಯೂ ಕೌನ್ಸಿಲರುಗಳು ಇನ್ನು ೩-೪ ದಿವಸಗಳಲ್ಲಿ ಬೆಂಗಳೂರಿಗೆ ಹೊರಡುವುದಾಗಿಯೂ ಕೇಳಿರುತ್ತೇವೆ. ಇತರ ಅಧಿಕಾರಿಗಳೆಲ್ಲರೂ ಈ ಹೊತ್ತಿನಿಂದ ಹಿಂತಿರುಗಿ ಹೊರಡಲು ಉಪಕ್ರಮಿಸಿರುತ್ತಾರೆ.

ಮ॥ ಟಿ. ಆನಂದರಾಯರು ಮಂತ್ರಿ ಪದವಿಯಿಂದ ನಿವೃತ್ತರಾಗುವರೆಂಬುದು ನಿರಾಧಾರವಾದುದು. ಮತ್ತೂ ಅವರ ಸಂಬಳವು ೫೦೦ ರೂ. ಗೆ ಹೆಚ್ಚಿಸಲ್ಪಟ್ಟಿರುವುದಾಗಿ ವದಂತಿ ಯಿದೆ. ಇವರ ವಿಚಾರದಲ್ಲಿ ಪ್ರಭುಗಳಿಗಿರತಕ್ಕ ಅಪಾರವಾದ ಅಭಿಮಾನದಲ್ಲಿ ಸಂಬಳವು ಅಭಿವೃದ್ಧಿಯಾಗುವುದೇನೂ ಆಶ್ಚರ್ಯವಲ್ಲ.

ಈ ತಿಂಗಳ ಅಂತ್ಯಭಾಗದಲ್ಲಿ ಚೀಫ್ ಜಡ್ಜಿಯವರ ಸ್ಥಾನದಿಂದ ನಿವೃತ್ತರಾಗುವ ಸರ್ ಇಜ್ಮೆಯವರ ಬದಲು ಆ ಸ್ಥಾನಕ್ಕೆ ಮತ್ತೊಬ್ಬ ಐರೋಪ್ಯರು ಬರುವರೆಂಬ ಸುದ್ದಿಯು ಪ್ರಬಲವಾಗಿದ್ದಿತಲ್ಲವೆ? ಈಗಲಾದರೋ ಎರಡನೆಯ ಜಡ್ಜರಾದ ರಾ॥ ಬ॥ ಮ॥ ಕೃಷ್ಣರಾಯರು ಚೀಫ್ ಜಡ್ಜರಾಗಿಯೂ, ಮ॥ ಸ್ಲಮರ್ ರವರು ೩ನೆಯ ಜಡ್ಜರಾಗಿಯೂ ನಿಯಮಿಸಲ್ಪಡುವರೆಂಬ ವದಂತಿಯು ಪ್ರಬಲವಾಗಿದೆ.

ಮೈಸೂರ ಸೀಮೆಯ ಸಂಪದಭಿವೃದ್ಧಿ ಸಮಾಜದ ಎರಡನೆಯ ಕೂಟವು ಕಳೆದ ಬುಧವಾರದಿಂದ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸೇರುತ್ತಿದ್ದು ನೆನ್ನೆಗೆ ಕೊನೆಗಂಡಿತು. ಸೆಂಟ್ರಲ್ ಕಮಿಟಿಯ ಚೇರ್ಮನ್ನರುಗಳು ತಂತಮ್ಮ ಕಳೆದ ವರ್ಷದ ವರದಿಗಳನ್ನು ಓದಿದವೇಳೆ ಮುಂದಣಕಾರ್ಯಗಳು ಪರ್ಯಾಲೋಚಿಸಲ್ಪಟ್ಟು ಕೆಲನಿರ್ಧಾರಗಳು ಮಾಡಲ್ಪಟ್ಟುವು. ಈ ನಡವಳಿಕೆಗಳೆಲ್ಲವೂ ಮುಂದೆ ವಿಶದವಾಗಿ ಪ್ರಕಟಿಸಲ್ಪಡುವುವು.

ಪ್ರತಿವರ್ಷವೂ ವರ್ಧಂತ್ಯುತ್ಸವಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ಕುದುರೆಯ ಮತ್ತೂ ಪೋಲೋ ಪಂದ್ಯಗಳು ಈ ಜೂನ್ ತಾ॥ ೨೩–೨೨ ರಿಂದ ಆರಂಭವಾಗುವುವು. ಅಲ್ಲದೆ ವಿದ್ಯಾರ್ಥಿಗಳಿಂದಲೂ, ಇತರರಿಂದಲೂ ಓಡಿಸುವುದು ಕುಣಿಸುವುದು ಮೊದಲಾದ ವಿನೋದಗಳು ಈ ತಾ॥ ೨೪ ಕ್ಕೆ ನಡೆಯುವುವಾದುದರಿಂದ, ಇಷ್ಟರಲ್ಲೇ ಉದಕಮಂಡಲಕ್ಕೆ ಚಿತ್ತೈಸುವವರಾಗಿರುವ ಶ್ರೀಮನ್ಮಹಾರಾಜರವರು ತಾ॥ ೨೦–೨೧ರಲ್ಲಿ ರಾಜಧಾನಿಗೆ ಹಿಂದಿರುಗುವುದಾಗಿ ಕೇಳುತ್ತೇವೆ.

ಮದ್ರಾಸಿನ ಸರ್ಕಾರಿಯುದ್ಯೋಗದಲ್ಲಿರುವ ಮಿ॥ ಚಾಟರ್ಟನ್ ರವರು ಮೈಸೂರು ಸೀಮೆಯ ಕೈಗಾರಿಕೆಯ ಡೈರೆಕ್ಟರಾಗಿಯೂ, ಉತ್ತರ ಇಂಡ್ಯಾ ರೈಲ್ವೆಯುದ್ಯೋಗದಲ್ಲಿರುವ ಮಿ॥ ಬೆಲ್‍ರವರು ಈ ಸೀಮೆಯ ರೈಲ್ವೆಯ ಸೂಪರಿಂಟೆಂಡೆಂಟ್ ಇಂಜನೀಯರಾಗಿಯೂ ತಿಂಗಳೊಂದಕ್ಕೆ ೨೫೦ ರೂ. ಗಳ ಮೊತ್ತದ ಮೇಲೆ ನಿಯಮಿಸಲ್ಪಟ್ಟಿರುವುದಾಗಿ ಕೇಳುತ್ತೇವೆ. ಈ ಉಭಯಾಧಿಕಾರಿಗಳಿಗೆ ಸಲ್ಲುವ ಇಷ್ಟೊಂದು ಹೆಚ್ಚು ಸಂಬಳಕ್ಕೆ ತಕ್ಕ ಪ್ರತಿಫಲವು ಹೇಗಿರುವುದೋ ನಿರೀಕ್ಷಣೀಯವಾಗಿದೆ.

ವರ್ಧಂತ್ಯುತ್ಸವಕ್ಕಾಗಿ ಬಂದಿದ್ದ ದಿವಾನರು ಮೊದಲಾಗಿ ಸರ್ಕಾರಿಯಧಿಕಾರಿಗಳಿಗೂ, ಅತಿಥಿಗಳಿಗೂ ಅ॥ ಕಮಿಷನರ ತರಗತಿಯ ಮೇಲ್ಪಟ್ಟಿರುವ ಸ್ಥಳೀಯಾಧಿಕಾರಿಗಳಿಗೂ ಕಳೆದ ತಾ॥ ೨೮ ನೆಯ ಮಂಗಳವಾರ ರಾತ್ರಿ ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ದಿವ್ಯವಾದ ಔತಣವನ್ನು ಮಾಡಿಸಿದರು. ಈ ಮಹೋತ್ಸವಸಮಯದಲ್ಲಿ ಅಧಿಕಾರಿಗಳಿಗೂ ಇತರ ಅತಿಥಿಗಳಿಗೂ ದಿವಾನರು ಮಾಡಿಸುತ್ತಿದ್ದ ಔತಣ ಮಾತ್ರ ಈ ವೇಳೆ ಏನುಕಾರಣದಿಂದಲೋ ನಡೆಯಲಿಲ್ಲವೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಕಳೆದ ೧–೨ ವಾರಗಳಿಂದಲೂ ನಾಟಕ ಪ್ರಯೋಗಗಳನ್ನು ಮಾಡಿ ತೋರಿಸುತ್ತಿರುವ ಅಲಂದರ್ ಒರಿಜಿನಲ್ ಡ್ರಮಾಟಿಕ್ ಕಂಪೆನಿಯೆಂಬ ಮದ್ರಾಸ್ ಪ್ರಾಂತದ ತಮಿಳು ನಾಟಕ ಸಂಘದವರು ಇಲ್ಲಿಯ ಜನರ ಮೋಹವನ್ನುಂಟುಮಾಡಿ ದುಡ್ಡನ್ನು ಸೆಳೆಯುತ್ತಿರುವರು. ಆ ಸಂಘದಲ್ಲಿ ಸ್ತ್ರೀಪಾತ್ರವನ್ನು ವಹಿಸತಕ್ಕ ಒಬ್ಬ ಯುವಕನು ಹಾವಭಾವ ವಿಲಾಸಾದಿಗಳಲ್ಲೂ ಹಿಂದುಸ್ತಾನಿ ಹಾಡುಗಳನ್ನು ಹಾಡುವುದರಲ್ಲೂ ಪ್ರಸಿದ್ಧರಾದ ನರ್ತಕಿಯನ್ನು ಸಹ ಮೀರಿಸುತ್ತಿರುವುದೇ ಜನರು ಕಿಕ್ಕಿರಿದು ಸೇರುವುದಕ್ಕೆ ಮುಖ್ಯ ಕಾರಣವಾಗಿದೆ. ಪ್ರಸಿದ್ಧಳಾದ ಗೋಹರ್ಜಾನ್ ಗಾಯಕಿಯು ಬೆಂಗಳೂರಿಗೆ ಬಂದಿದ್ದಾಗ್ಗೆ ಈತನ ನಯವನ್ನು ನೋಡಿ ಮೆಚ್ಚಿ ೨ ಅಮೋಘವಾದ ಉಂಗುರಗಳನ್ನು ಬಹುಮಾನಿಸಿದಳಂತೆ. ಕಳೆದ ಶನಿವಾರ ಪಾರ್ಸಿ ಲಶಿಕಾಂಗಿ ಎಂಬ ಆಟವನ್ನು ಪ್ರಯೋಗಿಸಿದ್ದಾಗ್ಗೆ ಟರ್ಗಹಾಲಿನ ಮೇಲೂ ಮತ್ತೂ ಕೆಳಭಾಗಗಳಲ್ಲೂ ಸ್ಥಳವಿಲ್ಲದೆ ಅನೇಕ ಜನರು ನಿರಾಶರಾಗಿ ಮನೆಗಳಿಗೆ ಹಿಂದಿರುಗಿ ಹೋಗಬೇಕಾಗಿ ಬಂದಿತು.

ವರ್ತಮಾನ ಸಂಗ್ರಹವು.

ಫ್ರಾನ್ಸಿನಲ್ಲಿ ಕಳೆದ ವರ್ಷ ಜನನಕ್ಕಿಂತ ೩೪೯೩೯ ಮರಣಗಳು ಹೆಚ್ಚಾಗಿವೆ.

ಕಾಶ್ಮೀರದಲ್ಲಿ ವಿಶೇಷ ಮಳೆಯಾಗಿ ಅನೇಕ ಮಾರ್ಗಗಳು ಹಾಳಾಗಿರುವುದಲ್ಲದೆ ಸಣ್ಣ ದೊಡ್ಡ ೩೦ ಸೇತುಗಳು ಕೊಚ್ಚಿ ಹೋಗಿವೆ.

ಟಿಟಾನಿಕ್ ಹಡಗಿನ ಅಧಿಕಾರಿಗಳಾದ ವೈಟ್ ಸ್ಟಾರ್ ಕಂಪೆನಿಯವರಿಗೆ ಕಳೆದ ವರ್ಷ ೧೬೧೨೬೮೦ ರೂ. ಗಳ ಲಾಭವು ಬಂದಿದ್ದಿತು.

ಸೇಲಂ ಜಿಲ್ಲೆಯ ಸೆಷನ್ ಜಡ್ಜರಾದ ಮಿ॥ ಮೊಬರ್ಲಿಯವರು ಮೈಸೂರು ಸಂಸ್ಥಾನದ ಚೀಫ್ ಜಡ್ಜರ ಸ್ಥಾನಕ್ಕೆ ಆರಿಸಲ್ಪಟ್ಟಿರುವರೆಂದು ಸುದ್ದಿ ಹುಟ್ಟಿದೆ.

ರಂಗೂನಿನಲ್ಲಿ ಒಂದು ಬೌದ್ಧವಿಗ್ರಹವನ್ನು ಹಿತ್ತಾಳೆಯಿಂದ ಎರಕವೆರೆಯುತ್ತಿದ್ದಾರೆ. ಈಗ ಬರ್ಮಾದಲ್ಲಿರುವ ಬುದ್ಧವಿಗ್ರಹಗಳೆಲ್ಲಕ್ಕಿಂತಲೂ ಇದು ದೊಡ್ಡದು.

ಟಿಟಾನಿಕ್ ಹಡಗಿನಲ್ಲಿದ್ದ ಆಸ್ಟರ್ ಎಂಬ ಕೋಟೀಶ್ವರನು ಮೃತನಾದುದರಿಂದ ಅವನ ೨೦ ವರ್ಷದ ಮಗನು ಈಗ ೩೮ ಕೋಟಿ ರೂ. ಗಳ ಒಡೆಯನಾಗಿರುವನು.

ರಾಜದ್ರೋಹಾಪರಾಧಕ್ಕಾಗಿ ೫ ವರ್ಷ ಕಾರಾಗೃಹವಾಸವನ್ನನುಭವಿಸುತ್ತಿದ್ದ ಸುರೇಂದ್ರನಾಥಾರ್ಯರು ಕಳೆದ ತಾ॥ ೨೫ ರಲ್ಲಿ ಬಳ್ಳಾರಿಯ ಕಾರಾಗೃಹದಿಂದ ಬಿಡಲ್ಪಟ್ಟರು.

ಉತ್ತರ ಹಿಂದೂಸ್ಥಾನದಲ್ಲೂ ದಕ್ಷಿಣ ಹಿಂದೂಸ್ಥಾನದಲ್ಲೂ ಈಗ ಅಲ್ಲಲ್ಲಿಗೆ ಚೆನ್ನಾಗಿ ಮಳೆಯಾದ ಸುದ್ದಿಯು ಬರುತ್ತಿದೆ ಈ ಜೂನ್ ತಿಂಗಳಾರಂಭದಿಂದ ಸರ್ವತ್ರ ಸುವೃಷ್ಟಿಯಾಗುವಂತೆ ಕಾಣುತ್ತಿದೆ.

ರಸೆಲ್ ಹಾಲ್ ಎಂಬ ಐರೋಪ್ಯ ಶ್ರೀಮತಿಯೊಬ್ಬಳು ಆಸ್ಟ್ರೇಲಿಯಾದಲ್ಲಿ ವಿದ್ಯಾಭಿವೃದ್ಧಿ ಮಾಡುವುದಕ್ಕೂ ಮತಪ್ರಸಾರಕಾರ್ಯಕ್ಕೂ ೧॥ ಕೋಟಿ ರೂ. ಗಳನ್ನು ಕೊಟ್ಟು ಮೃತಳಾದಳು.

ಫಿಷರ್ ಎಂಬ ವೈಮಾನಿಕನು ಅಮೇರಿಕಾದ ಒಬ್ಬ ಶ್ರೀಮಂತನೊಡನೆ ಕುಳಿತು ಆಕಾಶದಲ್ಲಿ ಹೋಗುತ್ತಿರುವಾಗ ಅಮೇರಿಕಾದ ಬ್ರೂಕ್ ಲ್ಯಾಂಡ್ಸ್ ಎಂಬಲ್ಲಿ ಕೆಳಕ್ಕೆ ಬಿದ್ದು ಇಬ್ಬರೂ ಸತ್ತರು.

ಕಳೆದ ಜನವರಿ ತಿಂಗಳಿಂದ ಮೇ ತಾ॥ ೧೩ ರ ವರೆಗೆ ಬೊಂಬಾಯಿ ಪಟ್ಟಣದಲ್ಲಿ ೧೨೯೪ ಜನರು ಪ್ಲೇಗುರೋಗದಿಂದ ಕಳೆದವರ್ಷ ಸತ್ತರು. ಇದೇ ಕಾಲದಲ್ಲಿ ೧೩ ಸಾವಿರ ಜನರು ಈ ರೋಗದಿಂದ ಸತ್ತಿದ್ದರು.

ಪೋರ್ಚುಗೀಸರಿಗೆ ಸೇರಿದ ಗೋವಾದಲ್ಲಿನ ಪೂರ್ವನಿವಾಸಿಗಳನ್ನು ಅಲ್ಲಿನ ಪ್ರಭುತ್ವದವರು ಹಿಂಸಿಸಿದುದರಿಂದ ಅವರು ತಿರುಗಿ ಬಿದ್ದಿದ್ದಾರೆ. ಅವರ ಮೇಲೆ ಪ್ರಭುತ್ವದವರು ಹೊಸ ಸೈನ್ಯವನ್ನು ಕಳುಹಿಸಿದ್ದಾರೆ.

ಇದುವರೆಗೆ ಸಿಮ್ಲಾದಲ್ಲಿ, ಅಲಹಾಬಾದು, ಕಲಕತ್ತಾ ಪಟ್ಟಣಗಳಲ್ಲಿಡಲ್ಪಟ್ಟಿರುವ ಆಕಾಶ ತಂತ್ರೀವಾರ್ತೆಯ ಕೆಲಸವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಿಯಾಗಿ ತಿಳುಹುತ್ತ ಸಮರ್ಪಕವಾಗಿದೆ.

ನಮ್ಮ ಜಾರ್ಜ್ ಸಾರ್ವಭೌಮರವರು ತಮ್ಮ ಪತ್ನಿಯ ಸಮೇತರಾಗಿ ಬರುವ ವರ್ಷದ ಆರಂಭದಲ್ಲೂ, ಅವರ ಜ್ಯೇಷ್ಠ ಕುಮಾರರು ಆ ವರ್ಷದ ಬೇಸಗೆ ಕಳೆದನಂತರವೂ ಜರ್ಮನಿಗೆ ಹೋಗಿಬರುವವರಾಗಿರುವರು.

ಈ ವರ್ಷದ ಬೇಸಗೆಯನ್ನು ಕಳೆಯುವುದಕ್ಕಾಗಿ ಇಂಗ್ಲೆಂಡಿಗೆ ಭರತಖಂಡದಿಂದ ಅಲ್ವಾರು–ರುತಾಲ್ಯಾರಾ–ಧೋಲ್ಪುರ, ನವಾನಗರ–ಜಾಂಕಗರ–ಪುದುಕೋಟಿ ಈ ಸಂಸ್ಥಾನಗಳ ಪ್ರಭುಗಳು ಹೋಗಿದ್ದಾರೆ.

ಜರ್ಮನಿಯಲ್ಲಿ ಈಗ ಪ್ರಯಾಣಸ್ಥರಿಗಾಗಿ ಒಂದು ಬಲುದೊಡ್ಡ ಹಡಗನ್ನು ಕಟ್ಟುತ್ತಿದ್ದಾರೆ. ಅದು ೫೦ ಸಾವಿರ ಟನ್ನುಗಳ ಭಾರವನ್ನು ಹೊರತಕ್ಕದು. ಮತ್ತೂ ಅದು ಮುಳುಗಿಹೋದ ಟಿಟಾನಿಕ್ಕಿಗಿಂತ ದೊಡ್ಡದು.

ಟಿಬೆಟ್ಟಿನಲ್ಲಿ ಚೀನರ ಕಡೆಯವರಿಗೂ ಟಿಬೆಟ್ಟಿನ ಕಡೆಯವರಿಗೂ ಹೋರಾಟವು ಪ್ರಬಲವಾಗಿ ನಡೆಯುತ್ತಿದೆ. ಈಗ ೧೦ ಸಾವಿರ ಮಂದಿ ಸೈನಿಕರು ಲಾಸಾಪಟ್ಟಣದಲ್ಲಿದ್ದಾರೆ. ೫ ಸಾವಿರ ಮಂದಿ ಪೂರ್ವಭಾಗಕ್ಕೆ ಹೋಗಿದ್ದಾರೆ.

ಶ್ರೀ ಜಾರ್ಜ್ ಚಕ್ರವರ್ತಿಯವರು ನೇಪಾಳದೇಶದಲ್ಲಿ ಕೂಡಿಸಿದ ಜಂತುಗಳೆಲ್ಲಾ ಈಗ ಲಂಡನ್ ಪಟ್ಟಣದ ಪ್ರದರ್ಶನಾಲಯಕ್ಕೆ ಒಳ್ಳೆಯ ಆರೋಗ್ಯಸ್ಥಿತಿಯಲ್ಲಿ ಸೇರಿರುತ್ತವೆ. ಒಂದು ಜಿಂಕೆಯೂ ಇನ್ನು ಕೆಲ ಸಣ್ಣ ಜಂತುಗಳೂ ಮಾರ್ಗದಲ್ಲಿ ಸತ್ತುವು.

ಅಮೇರಿಕಾ ದೇಶದ ಅಧ್ಯಕ್ಷಪದವಿಯ ಅವಧಿಯು ಮುಗಿದು ಹೊಸಬರನ್ನು ಆರಿಸಬೇಕಾಗಿದೆ. ಇದುವರೆಗೆ ಮಿ॥ ಟಾಫ್ಟ್ ರವರು ಇದ್ದರು. ಈಸಲದ ಆರಿಸುವಿಕೆಯಲ್ಲಿ ಹಿಂದೆಯಿದ್ದ ರೂಸ್‍ವೆಲ್ಟರವರೇ ಜಯಶೀಲರಾಗಬಹುದೆಂಬ ಸೂಚನೆ ಕಾಣುತ್ತಿದೆ.

ಪೆನ್ಸಿಲ್ವೇನಿಯಾ ಸರ್ವಕಲಾಶಾಲೆಯ ಪಂಡಿತರೊಬ್ಬರು ಫಿಲಡೆಲ್ಫಿಯಾ ಕೋತಿಗಳೆರಡಕ್ಕೆ ವಿದ್ಯಾಭ್ಯಾಸಮಾಡಿಸುತ್ತಿದ್ದಾರೆ. ಅವಕ್ಕೆ ಈಗ ಅಂಗ್ಲಭಾಷೆಯ ವರ್ಣಮಾಲೆಯಲ್ಲಿ ಎಚ್ ಎಂಬ ಅಕ್ಷರದ ವರೆಗೂ ಓದುವುದಕ್ಕೂ ಬರೆಯುವುದಕ್ಕೂ ಬರುವುದಂತೆ.

ಬೊಂಬಾಯಿ ಹೈಕೋರ್ಟಿನ ಚೀಫ್ ಜಡ್ಜರಾದ ಆನರಬಲ್ ಸರ್ ಬೇಸಿಲ್ ಸ್ಕಾಟ್‍ರವರು ರಜಾದಮೇಲೆ ಹೋಗಿರುವುದರಿಂದ, ಅವರು ಬರುವವರೆಗೂ ಆನರಬಲ್ ಸರ್ ನಾರಾಯಣ ಚಂದ್ರಾವರ್ಕರ್‍ರವರು ಚೀಫ್ ಜಡ್ಜಿಗಳಾಗಿರತಕ್ಕದೆಂದು ಗೌರ್ನರ ಅಪ್ಪಣೆಯಾಗಿರುತ್ತದೆ.

ಆಕಾಶ ತಂತ್ರೀವಾರ್ತೆಯ ಆಲಯಗಳು ಆರನ್ನು ಅಂಗ್ಲಸಾಮ್ರಾಜ್ಯದಲ್ಲಿ ಅಲ್ಲಲ್ಲಿ ಕಟ್ಟುವುದಕ್ಕಾಗಿ ೯ ಲಕ್ಷ ರೂ. ಗಳನ್ನು ವ್ಯಯಮಾಡುವವರಾಗಿದ್ದಾರೆ ಅದಕ್ಕೆ ಗೊತ್ತಾಗಿರುವ ಸ್ಥಲಗಳಾವುವೆಂದರೆ– ಇಂಗ್ಲೆಂಡು, ಈಜಿಪ್ಟು, ಪೂರ್ವಾಫ್ರಿಕಾ, ಬೆಂಗಳೂರು, ಸಿಂಗಪೂರು, ದಕ್ಷಿಣ ಆಫ್ರಿಕಾ.

ಫ್ರಾನ್ಸಿನಲ್ಲಿ ಒಬ್ಬ ಮನುಷ್ಯನಿದ್ದಾನೆ. ಅವನು ಒಂದಾವೃತ್ತಿಗೆ ೧೫ ಪಂಚಪಾತ್ರೆಯ ನೀರನ್ನು ಕುಡಿಯಬಲ್ಲನು. ಜೀವ ಸಹಿತವಾಗಿರುವ ಮೀನುಗಳನ್ನೂ, ಕಪ್ಪೆಗಳನ್ನೂ ನುಂಗಿಬಿಟ್ಟು, ಒಂದು ಗಂಟೆಯ ಹೊತ್ತು ಸುಮ್ಮನಿದ್ದು ಬಳಿಕ ಬಾಯಿಂದ ಅವನ್ನು ಕಕ್ಕಿಬಿಡುವನು. ಅವು ಬದುಕಿಯೇ ಇರುವುವಂತೆ!

ನಮ್ಮ ಚಕ್ರವರ್ತಿಯವರ ಜ್ಯೇಷ್ಠ ಕುಮಾರರಾದ ಯುವರಾಜರು ಈಗ ಫ್ರಾನ್ಸ್ ದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಅಲ್ಲಿನ ನೌಕಾಸೇನೆಯ ಬೀಡಾದ ಟೂಲನ್ನಿಗೆ ಅವರು ಹೋಗಿ ಎಲ್ಲವನ್ನೂ ಪರಾಮರಿಸುವಾಗ್ಗೆ ನೀರಿನೊಳಗೆ ಮುಳುಗಿ ಹೋಗತಕ್ಕ ಹಡಗಿನಲ್ಲಿ ಕುಳಿತು ಸ್ವಲ್ಪ ದೂರ ಪ್ರಯಾಣಮಾಡಿ ಬಂದರು.

ಮದರಾಸಿನ ನಿಯಮನಿರ್ಮಾಣ ಸಭೆಯಲ್ಲಿ ಗತಿಸಿದ ದಿವಾನ್ ಬಹದ್ದೂರ್ ರಘುನಾಥರಾಯರ ಸ್ಥಾನಕ್ಕೆ ಮನವೇದರಾಜರು ಸೇರಿಸಿಕೊಳ್ಳಲ್ಪಟ್ಟಿದ್ದಾರೆ ಇವರು ಕಲ್ಲಿಕೋಟೆಯ ಜಾಮರಿ ಪ್ರಭುಗಳ ಬಂಧುಗಳು ಮತ್ತೂ ಮದ್ರಾಸಾಧಿಪತ್ಯದಲ್ಲಿ ಸೆಷನ್ ಜಡ್ಜರಾಗಿದ್ದು ವಿಶ್ರಾಂತಿವೇತನವನ್ನು ಪಡೆದುಕೊಳ್ಳುತ್ತಿದ್ದಾರೆ.

ಒಬ್ಬ ಕೂಲಿಯವನಿಗೆ ಲಾಟರಿಯಲ್ಲಿ ೧೮ ಸಾವಿರ ರೂಪಾಯಿಗಳು ದೊರೆದುವು. ಆದರೆ ಅವನು ತನ್ನ ಟಿಕೆಟ್ಟನ್ನು ತರುವುದಕ್ಕಾಗಿ ಮನೆಗೆ ಹೋಗಿ ನೋಡುವಲ್ಲಿ ಅವನ ಮಗಳು ಅದನ್ನು ಹರಿದು ಕಾಳ್ಕಾಡಿ ಬಿಟ್ಟಿದ್ದುದರಿಂದ ಲಾಟರಿಯ ದುಡ್ಡು ಸಿಕ್ಕದೆ ಹೋಯಿತು. ಕೈಗೆ ಬಂದ ತುತ್ತು ಬಾಯ್ಗೆ ಬರದೆ ಹೋಯಿತು!

ತುರ್ಕಿಗೆ ಸೇರಿದ ಏಷ್ಯಾ ಮೈನರಿನಿಂದ ಇದುವರೆಗೆ ೫೦ ಸಾವಿರ ಇಟಲಿಯನ್ನರು ಹೊರಕ್ಕೆ ಕಳುಹಲ್ಪಟ್ಟಿದ್ದಾರೆ. ಅಲ್ಲಿನ ಸುಂಕದ ಕಟ್ಟೆಯವರು ಇಟಲಿಯ ವ್ಯಾಪಾರದ ಸರಕುಗಳನ್ನೆಲ್ಲಾ ದೇಶವೊಳಕ್ಕೆ ಬಿಡದೆ ತಮ್ಮ ವಶಮಾಡಿಕೊಳ್ಳುತ್ತಿದ್ದಾರೆ. ಅಂತೂ ತುರುಷ್ಕರು ಇಟಲಿಗೆ ಹಾಕಿರುವ ಬಹಿಷ್ಕಾರವು ಅದಕ್ಕೆ ಕಂಟಕವಾಗಿದೆ.

ಪ್ಯಾರಿಸ್ ಪಟ್ಟಣದ ಹತ್ತಿರ ಒಂದು ಸ್ಥಳದಲ್ಲಿ ಒಬ್ಬ ಹೆಂಗುಸು ತನ್ನ ೨ ವರ್ಷದ ಹೆಣ್ಣುಮಗುವನ್ನು ಒಂದು ಕಂಬಕ್ಕೆ ಕಟ್ಟಿ, ಅದರ ಉಡುಪಿಗೆ ಬೆಂಕಿಯನ್ನು ಹೊತ್ತಿಸಿ ಅದು ಸುಟ್ಟು ಸಾಯುವವರೆಗೂ ತನ್ನ ಕಣ್ಣಿನಿಂದಲೇ ನೋಡುತ್ತಿದ್ದಳಂತೆ! ಕಲಿಯುಗದ ಪ್ರತ್ಯಕ್ಷ ರಾಕ್ಷಸಿಯರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಇರುವರೆಂಬುದಕ್ಕೆ ಇದಕ್ಕಿಂತಲೂ ನಿದರ್ಶನವು ಬೇಕೆ?

ಗುಜರಾತಿನಲ್ಲಿ ಕ್ಷಾಮನಿವಾರಣಾರ್ಥವಾದ ಕಾರ್ಯಗಳಲ್ಲಿ ೧೪ ಲಕ್ಷ ರೂ. ನ ನೀರಾವರಿ ಕೆಲಸಗಳನ್ನೇ ಮಾಡಿಸಿದ್ದಾರೆ. ಹಲವುಕಡೆ ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೋಡಿಸಿದ್ದಾರೆ. ಖರಗೋಡ ಎಂಬಲ್ಲಿ ತೋಡಿಸಿದ ಬಾವಿಯಲ್ಲಿ ಪಾತಾಳಗಂಗೆಯೇ ತಗುಲಿಕೊಂಡಿದೆ. ಅದರಿಂದ ಬರುವ ನೀರು ೩೦ ಅಡಿ ಎತ್ತರಕ್ಕೆ ಹಾರುವುದಲ್ಲದೆ ನಿಮಿಷಕ್ಕೆ ೫೦ ಗ್ಯಾಲನ್ ನೀರನ್ನು ಒದಗಿಸುತ್ತಿದೆ.

ದಿಲ್ಲಿಯ ಹೊಸ ಕಟ್ಟಡಗಳಿಗಾಗಿ ಪ್ರಜೆಗಳ ಸ್ಥಲಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ. ಅವಕ್ಕೆ ಪ್ರತಿಫಲವನ್ನು ಸ್ವಲ್ಪವೇ ಕೊಡುತ್ತಾರೆಂದು ಅಲ್ಲಿನ ಪ್ರಜೆಗಳಿಗೆ ಆಗ್ರಹವುಂಟಾಗಿದೆ. ಅವುಗಳಿಗೆ ಬೇಕಾದ ಸಾಮಾನುಗಳಲ್ಲಿ ಅನೇಕವನ್ನು ೨೦ ಲಕ್ಷ ರೂ. ಗೆ ಬೊಂಬಾಯಲ್ಲಿ ಕೊಂಡು ಸಾಗಿಸುತ್ತಿದ್ದಾರೆ. ೨೦ ಸಾವಿರ ಟನ್ ಉಕ್ಕಿನ ತೊಲೆಗಳನ್ನು ಟಾಟಾರವರ ಉಕ್ಕಿನ ಕಾರ್ಯಾಲಯದಿಂದ ತರಿಸಿಕೊಳ್ಳುವವರಾಗಿದ್ದಾರೆ.

ಇಟಲಿಯವರು ತುರ್ಕಿಯವರಮೇಲೆ ಕಾಲುಕೆರೆದು ಕಾದಿರುವ ಜಗಳದ ಮೂಲಕ್ಕಾಗಿ ಈಗ ತುರ್ಕಿಯ ಮಂತ್ರಿಮಂಡಲದವರು ತಮ್ಮ ರಾಜ್ಯಗಳಲ್ಲಿರುವ ಇಟಲಿಯವರೆಲ್ಲಾ (ಕೂಲಿಯವರು ಬಡವರು ವಿಕಂತುಗಳು ಹೊರತು ಇತರರು) ೧೫ ದಿವಸಗಳೊಳಗಾಗಿ ದೇಶವನ್ನು ಬಿಟ್ಟು ಹೊರಟು ಹೋಗಬೇಕೆಂದು ಆಜ್ಞೆಮಾಡಿದ್ದಾರೆ ಹೀಗೆ ದೇಶಬಿಟ್ಟು ಬಂದವರ ಪೋಷಣಾರ್ಥವಾಗಿ ಇಟಲಿ ಪ್ರಭುತ್ವದವರು ೫೦ ಸಾವಿರ ರೂ. ಗಳನ್ನು ಕೊಟ್ಟಿರುವರು.

ಗಂಟೆಗೆ ೧೦ ಆಣೆಯಂತೆ ಕೂಲಿಯನ್ನು ಕೊಡದಿದ್ದರೆ ಕೆಲಸಮಾಡುವುದಿಲ್ಲವೆಂದು ಲಂಡನ್‍ಪಟ್ಟಣದ ಮೂಟೆ ಹೊರುವ ಕೂಲಿಗಾರರೆಲ್ಲಾ ಕಟ್ಟುಮಾಡಿಕೊಂಡು ಕೆಲಸಕ್ಕೆ ಬರದೆ ನಿಂತುಬಿಟ್ಟಿರುವುದರಿಂದ, ಅಲ್ಲಿನ ಥೇಮ್ಸ್ ನದಿಯೊಳಗೆ ಆಹಾರ್ಯ ವಸ್ತುಗಳನ್ನು ತುಂಬಿದ ೨೦೦ ದೋಣಿ ಹಡಗುಗಳು ಸಾಮಾನನ್ನಿಳುಹಲು ಅವಕಾಶವಿಲ್ಲದೆ ನಿಂತುಹೋಗಿ ಹಣ್ಣುಹಂಪಲುಗಳೆಲ್ಲಾ ಕೊಳೆಯುತ್ತಿವೆ. ಕೂಲಿಗಾರರ ಕಟ್ಟುಪಾಡು ಈಗ ಸಾಂಕ್ರಾಮಿಕದಂತೆ ಪ್ರಸರಿಸುತ್ತಲಿದೆ.

ಕಲಕತ್ತದಲ್ಲಿ “ ಭಾರತ ಸ್ತ್ರೀ ಮಹಾಮಂಡಲಿ ” ಯೆಂಬುದೊಂದು ಸ್ಥಾಪಿತವಾಗಿದೆ. ಅಲ್ಲಿ ಮಹಮ್ಮದೀಯರ ಹಾಗೆಯೇ ಭಾರತ ಸ್ತ್ರೀಯರಿಗೂ ಗವಸಣಿಗೆಯ ಪದ್ಧತಿಯಿರುವುದು. ಇವರು ಬಹಿರಂಗವಾಗಿ ಪಾಠಶಾಲೆಗಳಿಗೆ ಹೋಗಿಬರುವುದಿಲ್ಲ ಇಂಥವರಿಗಾಗಿಯೇ ಆ ಮಂಡಲಿಯವರು ೨೦೦ ಸಂಸಾರದವರಿಗೆ ಅವರವರ ಮನೆಗೇ ಉಪಾಧ್ಯಾಯರನ್ನು ಕಳುಹಿಸಿ ವಿದ್ಯಾಭ್ಯಾಸ ಮಾಡಿಸುವ ಏರ್ಪಾಡನ್ನಿಟ್ಟಿರುವರು. ವಂಗದೇಶೀಯರ ದೇಶಾಭಿಮಾನವು ಹೇಗಿದೆ!

ಜರ್ಮನಿಯಲ್ಲಿ ಒಬ್ಬ ಹುಡುಗಿಯು ತನ್ನ ತರಗತಿಯಲ್ಲಿ ಓದುತ್ತಿದ್ದ ಮತ್ತೊಬ್ಬ ಹುಡುಗನನ್ನು ಪ್ರೀತಿಸಿ, ಮದುವೆಯಾಗುವುದಕ್ಕೆ ಒಪ್ಪಿಕೊಂಡಳು. ಆದರೆ ಮದುವೆಯಾದ ಮೇಲೆ ಇಬ್ಬರೂ ಸ್ನೇಹಿತರಂತೆ ಇರಬೇಕೇ ಹೊರತು, ಗಂಡಹೆಂಡಿರಂತೆ ಇರಕೂಡದೆಂದು ಒಪ್ಪಂದಮಾಡಿಕೊಂಡಿದ್ದರು. ಮದುವೆಯಾದಮೇಲೆ ಒಂದು ದಿನ ಗಂಡನು ಪ್ರೇಮವನ್ನು ತಾಳಿಕೊಳ್ಳಲಾರದೆ ಪತ್ನಿಗೆ ಮುತ್ತುಕೊಟ್ಟನು. ಆಕೆಯು ಥಟ್ಟನೆ ಎದ್ದುಹೋಗಿ ವಿವಾಹಬಂಧವಿಮೋಚನವನ್ನು ಮಾಡಿಸಿಕೊಂಡಳು!

ಇಂಡಿಯಾ ಅಂಡರ್ ಸೆಕ್ರೆಟರಿಗಳಾದ ಮಿ॥ ಮಾಂಟುಗ್‍ರವರು ಕಾಮನ್ಸ್ ಸಭೆಯಲ್ಲಿ ಮಾತನಾಡುವಾಗ್ಗೆ ಭರತಖಂಡದಲ್ಲಿರುವ ಮಹಮ್ಮದೀಯರನ್ನೆಲ್ಲಾ ಒಂದೇಜಾತಿಯವರೆಂದು ಹೇಳುವುದು ತಪ್ಪೆಂತಲೂ, ಅವರಲ್ಲಿ ಬಹುಮಂದಿ ಹಿಂದೂಗಳು ಮಹಮ್ಮದೀಯರಾಗಿರತಕ್ಕವರೆಂತಲೂ, ಪೂರ್ವ ಬಂಗಾಳದಲ್ಲಿರುವ ಮಹಮ್ಮದೀಯರಿಗೂ ಬೇರೆ ಕಡೆ ಇರುವ ಮಹಮ್ಮದೀಯರಿಗೂ ಸಂಬಂಧವೇ ಇಲ್ಲವೆಂತಲೂ ನುಡಿದರು. ಈ ಮಾತು ಭರತಖಂಡದ ಮಹಮ್ಮದೀಯರಲ್ಲಿ ಅಸಮಾಧಾನವನ್ನು ಹುಟ್ಟಿಸಿದೆ.

ಗತಿಸಿದ ಡೆನ್ಮಾರ್ಕ್ ರಾಜನ ಶವವನ್ನು ಇಟ್ಟಿದ್ದ ಪೆಟ್ಟಿಗೆಯನ್ನು ಕೋಪೆನ್‍ಹೇಗ್ ಪಟ್ಟಣದ ಕ್ಯಾಸಲ್ ದೇವಾಲಯದಲ್ಲಿಟ್ಟಿದ್ದಾಗ ಪ್ರತಿದಿನವೂ ಸಾವಿರಾರು ಮಂದಿ ಪ್ರಜೆಗಳು ಬಂದು ನೋಡಿಕೊಂಡು ಹೋಗುತ್ತಿದ್ದರು. ಶವವು ಭೂಸ್ಥಾಪಿತ ಮಾಡಲ್ಪಟ್ಟಿತು. ಶ್ರೀ ಜಾರ್ಜ್ ಚಕ್ರವರ್ತಿಯವರ ಪ್ರತಿನಿಧಿಯಾಗಿ ಡ್ಯೂಕ್ ಆಫ್ ಕನ್ನಾಟ್ ಪ್ರಭುಗಳ ಕುಮಾರರಾದ ಆರ್ಥರ್‍ರವರೂ, ಶ್ರೀ ಅಲೆಗ್ಸಾಂಡ್ರಿಯಾ ಮಹಾರಾಜ್ಞಿಯವರೂ, ರಷ್ಯಾ ಚಕ್ರವರ್ತಿಯವರ ತಾಯಿಯವರೂ ಆ ಪಟ್ಟಣಕ್ಕೆ ಹೋಗಿರುವರು.

ಈಗ್ಗೆ ೧೪ ದಿವಸಗಳ ಹಿಂದೆ ಮಾರ್ಗನ್ ರಾಬರ್ಟ್ಸನ್ ಎಂಬುವವನು “ ನಿಷ್ಪ್ರಯೋಜನ ” ಎಂಬ ಕಲ್ಪಿತ ಕಥೆಯೊಂದನ್ನು ಬರೆದಿದ್ದನು. ಅದರಲ್ಲಿ “ ಟೈಟನ್ ’ ಎಂಬ ಒಂದು ಹಡಗು ೪೫ ಸಾವಿರ ಟನ್ನುಗಳ ಭಾರವನ್ನು ಹೊರತಕ್ಕದು ಅದು ಪ್ರಪಂಚದಲ್ಲಿರುವ ಹಡಗುಗಳೆಲ್ಲಕ್ಕಿಂತಲೂ ದೊಡ್ಡದು. ಎಂದಿಗೂ ಮುಳುಗಿಹೋಗದೆಯಿರತಕ್ಕದ್ದು, ಬಹು ದೃಢವಾದುದು. ಅದು ೩ ಸಾವಿರ ಮಂದಿ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದಾಗ ಅಟ್ಲಾಂಟಿಕ್ ಮಹಾಸಾಗರದಲ್ಲಿ ಒಂದು ಮಂಜಿನಬೆಟ್ಟಕ್ಕೆ ಬಡಿದು ಮುಳುಗಿಹೋಯಿತು ” ಎಂದು ಬರೆದಿದ್ದನಂತೆ. ಆ ಕಲ್ಪಿತ ಕಥೆಯಲ್ಲಿ ಕಥಾಸಂವಿಧಾನವನ್ನನುಸರಿಸಿ ಊಹಿಸಿ ಬರೆಯಲ್ಪಟ್ಟಿದ್ದ ಸಂಗತಿಯೇ ಈಗ ನಿಜವಾಯಿತಲ್ಲಾ! ಎಂದು ವಾರ್ತಾಪತ್ರಿಕೆಗಳು ಬರೆಯುತ್ತಿವೆ.

ಮುಳುಗಿಹೋದ ಟಿಟಾನಿಕ್ ಹಡಗಿನಲ್ಲಿ ಪ್ರಯಾಣಿಕರ ಸಾಮಾನೇ ಅಲ್ಲದೆ, ಹಡಗಿನವರಿಟ್ಟಿದ್ದ ಸಾಮಾನುಗಳು ಈ ಕೆಳಗೆ ಕಂಡಷ್ಟೇ ಇದ್ದುವು. ಅಂಚೆಯ ಚೀಲಗಳು ೩೪೩೫. ೩೦೦೦ ಮಂದಿ ಪ್ರಯಾಣಿಕರ ಆಹಾರ್ಯವಸ್ತುಗಳು ಎಂದರೆ ಸೋಡಾ ಲೆಮನೇಡ್ ಮೊದಲಾದ ಪಾನೀಯವಸ್ತುಗಳ ಸೀಸೆಗಳು ೧೫ ಸಾವಿರ. ಅನ್ನವನ್ನು ತಿನ್ನುವ ಪಿಂಗಾಣಿ ಬಟ್ಟಲುಗಳು ೨೫ ಸಾವಿರ. ಗಾಜಿನ ಪಾತ್ರೆಗಳು ೨ ಸಾವಿರ. ಎಲೆಕ್ಟ್ರೋ ಚಿನ್ನದ ಗಿಲೀಟುಮಾಡಿದ ಗಿಂಡಿಗಳು ೨೨ ಸಾವಿರ. ಕಾಳಿನ ದಿನಸು ೧೦ ಸಾವಿರ ಪೌಂಡು. ಸೋಡಾ

ರು ಹಿಪ್ಪು ೩೪೦ ಹಿಡಾಯಿ ೫೦, ಸಕ್ಕರೆ ೩ ಖಂಡಿ, ಬೆಣ್ಣೆ ೩೦೦ ಗ್ಯಾಲನ್ನು, ನಾಟಂಕ ೩೩ ಸಾವಿರ ಪೌನು. ಮೊಟ್ಟೆಗಳು ೩೩ ಸಾವಿರ, ಕೋಳಿಗಳು ೨೪ ಸಾವಿರ, ಹಾಲು ೬೪೦೦ ಗ್ಯಾಲನ್ನು, ಟೀ ೧೦೦೦ ಪೌನು. ಕಾಫಿ ೩೦೦ ಪೌನು.

ರಾಮ ನಗರ ಸಂಸ್ಥಾನಕ್ಕೆ ಸೇರಿದ ರಾಂಪುರದಲ್ಲಿ ಒಬ್ಬ ಹೆಂಗಸು ವ್ಯಭಿಚಾರಿಣಿಯಾಗಿದ್ದು ತನ್ನ ಗಂಡನನ್ನು ಕೊಲ್ಲಬೇಕೆಂದು ಸಂಕಲ್ಪಿಸಿ ಕೆಲದಿನಗಳ ಕೆಳಗೆ ಆಹಾರದಲ್ಲಿ ವಿಷಪ್ರಯೋಗಮಾಡಿದ್ದಳು ಆದರೆ ಅದರಿಂದ ಅವನು ಸಾಯಲಿಲ್ಲವಾಗಿ ಕಳೆದ ವಾರ ಒಂದು ರಾತ್ರಿ ಆ ಹೆಂಗಸು ತನ್ನ ಮನೆಗೆ ಐದು ಜನ ವಿಟಗಾರರನ್ನು ಮನೆಯೊಳಗೆ ಸೇರಿಸಿಕೊಂಡು ಸಮಯನಿರೀಕ್ಷೆಯಲ್ಲಿದ್ದಳು. ಆಗ ಒಬ್ಬ ವಿಟಗಾರನು ಅವಳ ಗಂಡನ ಬಾಯನ್ನು ಭದ್ರವಾಗಿ ಮುಚ್ಚಿ ಹಿಡಿದುಕೊಂಡನು. ಮತ್ತೊಬ್ಬನು ಅವನೆದೆಯ ಮೇಲೆ ಮಂಡಿಯೂರಿ ಕುಳಿತುಕೊಂಡನು. ಮಗದೊಬ್ಬನು ಒಂದು ಕತ್ತಿಯಿಂದ ಅವನ ತಲೆಯ ಬುರುಡೆಯನ್ನೊಡೆದುಬಿಟ್ಟನು. ಈ ಘೋರ ಕೃತ್ಯಗಳು ನಡೆಯುತಿದ್ದಾಗ್ಗೆ ಆ ಕೊಟಡಿಯಲ್ಲಿ ಮಲಗಿದ್ದ ೭ ವರ್ಷ ವಯಸ್ಸಿನ ಮಗಳು ನಿದ್ರಾಭಂಗವಾಗಿದ್ದು ಸದ್ದಾದುದಕ್ಕೆ ಕಾರಣವೇನೆಂದು ತಾಯಿಯನ್ನು ಕೇಳಿದಳು. ಮಾರನೇ ದಿನ ಆ ಹುಡುಗಿಯು ತನ್ನ ತಂದೆಯನ್ನು ಆಸ್ಪತ್ರೆಗೆ ಸಾಗಿಸಿದರೆಂಬುದನ್ನು ತಿಳಿದು ಹಿಂದಣ ರಾತ್ರಿ ನಡೆದಸಂಗತಿಯೆಲ್ಲವನ್ನೂ ತನ್ನ ಬಂಧುಗಳಿಗೆ ತಿಳುಹಿದಳು. ಪೊಲೀಸಿನವರು ಈ ಸಂಗತಿಯನ್ನು ತಿಳಿದು ಆ ಹೆಂಡತಿಯನ್ನೂ ೩ ಜನ ಸಂಗಡಿಗರನ್ನೂ ಸೆರೆ ಹಿಡಿದು ವಿಚಾರಣೆಗೆ ಗುರಿಮಾಡಿರುವರು. ಸತ್ತು ಹೋದ ಮನುಷ್ಯನಿಗೆ ೫೦೦೦ ರೂ. ಬೆಲೆಯ ಆಸ್ತಿಯಿರುವುದಾಗಿ ಗೊತ್ತಾಗಿದೆ.

ಪತ್ರವ್ಯವಹಾರವು.

ಚಳ್ಳಕೆರೆ ತಾ॥ ತಳುಕು.

ಶ್ರೀಮನ್ಮೈಸೂರ್ ಮಹಾರಾಜಾ ಕೃಷ್ಣರಾಜವಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ, ಯವರ ವರ್ಷವರ್ಧಂತ್ಯುತ್ಸವವು ಈ ಸಮ್ಮತ್ ಶೇಕ್‌ದಾರರವರಾದ ಮ॥ ರಾ॥ ಕೃಷ್ಣರಾಯರವರಿಂದ ಬಹಳ ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು. ಈ ಗ್ರಾಮದ ಸ್ಕೂಲ್ ಕಮಿಟೀ ಮೆಂಬರುಗಳು ಮತ್ತೂ ಮುಖಂಡ ರೈತರುಗಳನ್ನು ಬರಮಾಡಿಕೊಂಡು ಎಲ್ಲರಿಗೂ ಪ್ರೋತ್ಸಾಹವಂ ಕೊಟ್ಟು ಎಲ್ಲಾ ದೇವಸ್ಥಾನಗಳಲ್ಲಿಯೂ ಅಭಿಷೇಕ ಧೂಪದೀಪ ನೈವೇದ್ಯ ಮಂಗಳಾರತಿ ಮತ್ತೂ ರಾಜಾಶೀರ್ವಾದಗಳನ್ನು ಸಾಂಗವಾಗಿ ಮಾಡಿಸಿದರು. ಅಲ್ಲದೆ ಈ ಗ್ರಾಮದಲ್ಲಿ ಇರುವ ಸರ್ಕಾರಿ ಸ್ಕೂಲಿನಲ್ಲಿ ತಳಿರ್ತೋರಣಗಳಿಂದ ಅಲಂಕರಿಸಿ ಅದರಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನಿಟ್ಟು ಎಲ್ಲಾ ಬಾಲಕ ಬಾಲಕಿಯರನ್ನು ಬರಮಾಡಿಸಿ ಮ॥ ರಾ॥ ಶೇಕ್‌ದಾರ್ ಕೃಷ್ಣರಾಯರೇ ಮೊದಲಾದ ಮುಖಂಡರನ್ನು ಹೆ॥ ಮಾ॥ ರು ಬರಮಾಡಿಕೊಂಡು ಸಂಗೀತ ತಾಳಮೇಳಗಳಿಂದ ಸಭೆಯನ್ನು ನಡಿಸಿ, ದೊಡ್ಡ ಮನುಷ್ಯರಿಗೆಲ್ಲಾ ಗಂಧತಾಂಬೂಲಾದಿಗಳನ್ನೂ, ಬಾಲಕ ಬಾಲಕಿಯರಿಗೆಲ್ಲಾ ತಿಂಡಿಯನ್ನೂ ಹಂಚಿ ಸಭೆಯನ್ನು ವಿಸರ್ಜಿಸಿದರು. ಮ॥ ರಾ॥ ಹೆಡ್ಮಾಸ್ಟರ್ ಸಿ ನಾರಾಯಣರಾಯರು ಒಂದು ವಿಜ್ಞಾಪನಾ ಪತ್ರಿಕೆಯನ್ನೋದಿದರು.

ಪ್ರತ್ಯಕ್ಷದರ್ಶಿ.

ಮಳವಳ್ಳಿ ತಾ॥ ಗಿಳಕವಾಡಿ ಶ್ರೀ ಜಗನ್ಮೋಹನ ರಂಗನಾಥಸ್ವಾಮಿ ಪರಸ್ಪರ ಸಹಾಯಕಸಂಘ ಅನ್ ಲಿಮಿಟೆಡ್.

ಈ ಸಂಘದವರು ಈ ತಿಂಗಳು ೨೩ ನೆಯ ತಾರೀಖಿನ ದಿವಸ ಮೈಸೂರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರರವರ ವರ್ಧಂತಿ ಮಹೋತ್ಸವವನ್ನು ಅಕ್ಕರೆಯಿಂದಲೂ, ವಿಚಕ್ಷಣೆಯಿಂದಲೂ ನೆರವೇರಿಸಿದರು.

ಈ ಸಂಘದ ಆಫೀಸು ಕಟ್ಟಡವು ತಳಿರ್ತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ತಸ್ವೀರುಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಸಾಯಂಕಾಲ ೩ ಗಂಟೆಗೆ ಈ ಸಂಘದ ಮೆಂಬರುಗಳೂ ವರ್ತಕರೂ ಮೊದಲಾದ ಪುರಪ್ರಮುಖರು ಸಭೆಯನ್ನು ಅಲಂಕರಿಸಿದರು. ಶ್ರೀಮನ್ಮಹಾರಾಜರವರ ತಸ್ವೀರು ಉನ್ನತಾಸನದಲ್ಲಿ ಪುಷ್ಪಾಲಂಕೃತವಾಗಿ ಕಂಗೊಳಿಸುತಿತ್ತು. ಈ ಊರು ರಾಮಮಂದಿರದವರು ಗಾನಮಾಡಿ ಸಭಿಕರನ್ನು ಸಂತೋಷಗೊಳಿಸಿದರು. ಈ ಸಂಘದ ಅಸಿಸ್ಟೆಂಟ್ ಸೆಕ್ರೆಟರಿ ಜಿ. ರಾಮಯ್ಯನವರು ಶ್ರೀಮನ್ಮಹಾರಾಜರವರ ಗುಣಕಥನಮಾಡಿ ಇವರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳಿ, ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರಿಗೆ ಭಗವಂತನು ಆಯುರಾರೋಗ್ಯಾದಿ ಭಾಗ್ಯಗಳನ್ನೀಯಲೆಂದು ಸರ್ವರಿಂದಲೂ ಪ್ರಾರ್ಥಿಸಲ್ಪಟ್ಟಿತು. ಅನಂತರ ಗಂಧಪುಷ್ಪತಾಂಬೂಲಗಳೂ, ಮಧುರಪದಾರ್ಥಗಳೂ ಹಂಚಲ್ಪಟ್ಟುವು. ಜಯಘೋಷದಿಂದ ಸಭೆಯು ಬರಖಾಸ್ತಾಯಿತು. ಈ ಸಂಘದ ಸೆಕ್ರೆಟರಿ ಡಿ॥ ನಾರಣಪ್ಪನವರು ಈ ಮಹೋತ್ಸವವನ್ನು ಬಹಳವಿಚಕ್ಷಣೆಯಿಂದ ನೆರವೇರಿಸಿದರು.

ಪ್ರತ್ಯಕ್ಷದರ್ಶಿ.

ಆಲದೂರು.

ಕಳೆದ ವೈಶಾಖ ಶು॥ ೧೧ ಭಾನುವಾರ ಶ್ರೀ ಬಿಸ್ಸಿದೇವರ ಮಠದ ವೈ. ಪುಟ್ಟಸೋಮಯ್ಯನವರ ಕುಮಾರರು ವೇ॥ ಸಿದ್ಧಪ್ಪಯ್ಯನವರಿಗೆ, ಕೋಟಿಪುರದ ಮಠದ ಬಸಪ್ಪದೇವರ ಕುಮಾರ್ತಿ ಚಿ॥ ಸೌ॥ ಸಿದ್ಧಮ್ಮನವರನ್ನು ಕೊಟ್ಟು ಪಾಣಿಗ್ರಹಣ ಮಹೋತ್ಸವವು ಕೋಟಿಪುರದ ಮಠದಲ್ಲಿ ನಡೆಯಿತು. ವಿವಾಹಾನಂತರ ಮ॥ ಬಿ. ಪುಟ್ಟಣ್ಣ ಸೆಟ್ಟರ ಪ್ರೇರಣೆಯಿಂದ ಒಂದು ಸಭೆಯು ಆಲೂರುಮಠದ ಚರಮೂರ್ತಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರೆಯಿಸಲ್ಪಟ್ಟಿತು. ನಂತರ ಆಲದೂರು ಎ ಪಿ. ದೇವಪ್ಪಗೌಡರಿಂದ ವಿದ್ಯಾಭಿವೃದ್ಧಿ ವಿಚಾರವಾಗಿಯೂ, ವಿವಾಹಾದಿ ಶುಭಕಾರ್ಯಗಳಲ್ಲಿ ವಿದ್ಯಾಭಿವೃದ್ಧಿ ಧನರಾಶಿಗೆ ದನ್ಯಸಹಾಯಮಾಡಬೇಕೆಂಬ ವಿಷಯದಲ್ಲಿಯೂ ಸಯುಕ್ತಿಕವಾಗಿ ಒಂದು ಭಾಷಣವು ನಡೆದಮೇಲೆ ವಧೂವರರಿಂದ ಸದರಿ ಫಂಡಿನ ಸೆಕ್ರೆಟರಿಯವರಿಗೆ ಕಳುಹಿಸುವ ಉದ್ದಿಶ್ಯ ಮೇಲ್ಕಂಡ ದೇವಪ್ಪಗೌಡರ ವಶಕ್ಕೆ ೫ ರೂ.ಗಳು ಕೊಡಲ್ಪಟ್ಟವು. ಸದರಿಯವರ ಸೂಚನೆಯಂತೆ ವೈ. ವೀರಸಂಗಪ್ಪನವರಿಗೂ ಸಿರಸಂಗಿ ದೇಸಾಯರಿಗೂ ಅಗ್ರತಾಂಬೂಲವು ಕೊಡಲ್ಪಟ್ಟು ಸರ್ವರಿಗೂ ಗಂಧಪುಷ್ಪತಾಂಬೂಲ ವಿನಿಯೋಗಾನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಹೀಗೆ ಎಲ್ಲ ಕಡೆಗಳಲ್ಲಿಯೂ ಆಚರಣೆಗೆ ಬಂದು, ಈ ಧರಾಶಿಯು ಶೀಘ್ರ ಅಭಿವೃದ್ಧಿಗೊಂಡು ನಮ್ಮವರೊಳ್ಳಗೆ ಸಹಾಯವಾಗಲೆಂದು ಶ್ರೀ ಪರಮೇಶ್ವರನನ್ನು ಸದಾ ಪ್ರಾರ್ಥಿಸುತ್ತೇನೆ.

ಓರ್ವ ಪ್ರೇಕ್ಷಕ.

ಮೈ.ಸ್ಟಾ. 3-6-1912.

ಶಿವಕಥಾ ಚೆನ್ನಯ್ಯಶಾಸ್ತ್ರಿಗಳು.

3-6

ನ್ಯಾಮತಿ ವಾಸಿಗಳಾದ ಹೊಳಲೂರು ಮಠದ ಶಿವಕಥಾ ಚೆನ್ನಯ್ಯಶಾಸ್ತ್ರಿಗಳು ಈಗ್ಗೆ ೫-೬ ದಿನಗಳ ಕೆಳಗೆ ಬೆಂಗಳೂರಿಗೆ ಬಂದು ಚಿಕ್ಕಪೇಟೆಯಲ್ಲಿರುವ ಕರಿಸಿದ್ಧದೇವರ ಮಠದಲ್ಲಿ ಬಹಳ ವಿಜೃಂಭಣೆಯಿಂದ ಶಿವಕಥೆಯನ್ನು ಮಾಡತೊಡಗಿರುವರು. ಈಗ ಸಿರಿಯಾಳಸೆಟ್ಟಿಯ ಕಥೆಯು ಎರಡು ದಿನಗಳು ನಡೆದುದು. ಪುನಃ ಮದನಸುಂದರ ಕಥೆಯು ಜರುಗುತ್ತಲಿದೆ. ಇವರ ಕಥೆಯು ಲೌಕಿಕರೀತ್ಯಾ ಶೃಂಗಾರಾದಿ ನವರಸಭರಿತವಾಗಿಯೂ ಮತ್ತೂ ನೀತಿಪ್ರಬೋಧಕವಾಗಿಯೂ ಇರುವುದಲ್ಲದೆ, ವೀರಶೈವ ಧರ್ಮರೀತ್ಯಾ ಶಿವಪ್ರಾಶಸ್ತ್ಯ, ಶಿವಭಕ್ತಪ್ರಾಶಸ್ತ್ಯ, ಅಷ್ಟಾವರಣಗಳಲ್ಲಿ ಒಂದಾದ ಜಂಗಮಪ್ರಾಶಸ್ತ್ಯ ಮುಂತಾದುವುಗಳನ್ನು ಪ್ರತಿಪಾದಿಸಿ, ವೀರಶೈವಮತಕ್ಕೆ ಮಹದುಪಕಾರವಾಡತಕ್ಕುದಾಗಿದೆ. ಇದರಕೋಸ್ಕರ ವೀರಶೈವ ಮತವಾತ್ಸಲ್ಯಶೀಲರು ಮಹದಾನಂದಹೊಂದುತ್ತಲಿದ್ದಾರೆ. ಕೆಲರು ಶಿವಕಥೆಗಳನ್ನು ಮಾಡುವುವಾಗ ಹೇಳಿ, ಅವಗಳಲ್ಲಿ ಕೆಲಕೆಲವುವೇಳೆ ಶಿವೋತ್ಕರ್ಷ, ಭಕ್ತಾಧಿಕ್ಯ, ಮಾಹೇಶ್ವರ ಪ್ರಾಶಸ್ತ್ಯ ಮುಂತಾದುವುಗಳನ್ನು ಪ್ರತಿಪಾದಿಸದೆ ಬಿಸಿಲುಬಂದಕಡೆ ಕೊಡೆ ಹಿಡಿಯುವುದೆಂಬ ಗಾದೆಗೆ ಸರಿಯಾಗಿ ಪ್ರಬಲಜನರು ಮೆಚ್ಚಿದರೆ ಸಾಕೆಂದು ಅನ್ಯಪ್ರಾಶಸ್ತ್ಯಗಳನ್ನು ಪ್ರಸ್ತಾಪಿಸಿ, ವೀರಶೈವಕ್ಕೆ ಕುಂದುಂಟಾಗುವಂತೆ ಮಾಡುವುದುಂಟು. ಕೆಲರು ಶಿವಕಥೆಯ ಉದ್ದೇಶವನ್ನೇ ಮರೆತುಬಿಡುವುದೂ ಉಂಟು. ಈ ವೇ॥ ಚೆನ್ನಯ್ಯಶಾಸ್ತ್ರಿಗಳಾದರೋ ಸಿರಿಯಾಳಸೆಟ್ಟಿಕಥೆ, ಆದಿಸೆಟ್ಟಿಕಥೆ, ಗಿರಿಜಾಕಲ್ಯಾಣ, ಮುಂತಾದ ಕಥೆಗಳನ್ನು ಮಾಡುವುದರಲ್ಲಿ ವೀರಶೈವ ಮತಕ್ಕೆ ಮುಖ್ಯ ಅಂಗಗಳಾದ ಶಿವಪ್ರಾಶಸ್ತ್ಯ, ಶಿವಭಕ್ತಪ್ರಾಶಸ್ತ್ಯ, ಜಂಗಮಪ್ರಾಶಸ್ತ್ಯ, ಲಿಂಗಧಾರಣಪ್ರಾಶಸ್ತ್ಯಗಳನ್ನು ಚೆನ್ನಾಗಿ ಪ್ರತಿಪಾದಿಸಿ ವೀರಶೈವಮತಕ್ಕೆ ಹಿತವನ್ನುಂಟುಮಾಡುತ್ತಲಿದ್ದಾರೆ. ಈ ರೀತಿ ಶಿವಕಥೆ ಮಾಡತಕ್ಕವರಿಗೆ ವೀರಶೈವಾಭಿಮಾನಿಗಳೆಲ್ಲರೂ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟು, ವೀರಶೈವಕ್ಕೆ ಉಪಕೃತಿಯನ್ನುಂಟುಮಾಡಬೇಕು. ಬೆಂಗಳೂರು ವೀರಶೈವರು ಮೇಲ್ಕಂಡ ಶಾಸ್ತ್ರಿಗಳಿಗೆ ಸರ್ವಪ್ರಯತ್ನದಿಂದಲೂ ಅವರ ಬಹುಮಾನಾರ್ಥವಾಗಿ ಒಂದು "ಮೆಡಲ್" ಎಂಬ ಚಿನ್ನದ ಗೌರವಪದಕವನ್ನು ಕೊಡುವುದು ಅತ್ಯವಶ್ಯಕವಾಗಿರುವುದಲ್ಲದೆ, ಬೆಂಗಳೂರಂತಹ ದೊಡ್ಡ ಪಟ್ಟಣಕ್ಕೆ ಅದು ಕರ್ತವ್ಯವಾಗಿರುತ್ತದೆ.

ಹಿತಚಿಂತಕ.

ಲಗ್ನ ದೀಕ್ಷಾದಿ ಸಂಸ್ಕಾರಗಳು.

ನಮ್ಮ ವೀರಶೈವ ಸಮಾಜದಲ್ಲಿ ಲಗ್ನ-ದೀಕ್ಷಾದಿ ಮಹೋತ್ಸವಗಳಲ್ಲಿಯೂ, ಪುರಾಣೋತ್ಸವ-ಹಬ್ಬ-ಹುಣ್ಣಿಮೆ ಸಂಭ್ರಮಗಳಲ್ಲಿಯೂ, ಮದ್ದು ಸುಡುವುದೂ, ನರ್ತಕಿಯರ ನರ್ತನಮಾಡಿಸುವುದೂ ಮುಖ್ಯ ಕೆಲಸಗಳಾಗಿ ಹೋಗಿವೆ. ಇಂಥ ಕೆಲಸಗಳಿಗೆ ಯಾವ ತರದಿಂದಲೂ ಹಿಂದುಮುಂದೆ ನೋಡುವುದಿಲ್ಲ. ತಮ್ಮ ದುಡ್ಡಿನ ಯೋಗ್ಯತೆಯನ್ನೂ ದೊಡ್ಡಸ್ತಿಕೆಯನ್ನೂ ತೋರಿಸುವುದು ಇಂಥ ದುಂದುಗಾರಿಕೆಯಲ್ಲಿಯೇ ಎಂಬುದನ್ನು ಪ್ರಾಧಾನ್ಯವಾಗಿಟ್ಟುಕೊಂಡವರು ತಾವಾಗಿ ತಿಳಿಯುವವರೊತ್ತಟ್ಟಿಗಿರಲಿ. ತಿಳಿದವರು "ಫಂಡು, ಶಿವಯೋಗಮಂದಿರಗಳ ಸಹಾಯವೆಂದಾಗಲಿ, ವ್ಯಾರಪತ್ರಿಕೆಯ ಪೋಷಣೆಯೆಂದಾಗಲಿ, ಯೋಗ್ಯಜಾಗೆಗಳಿಗೆ ಸಲ್ಲಿಸಿದರೆ ಸದ್ವಿನಿಯೋಗವಾಗುವುದು" ಎಂದು ಅಂದರೆ "ಆ ಪ್ಯಾಗ ಪತ್ರಕರ್ತರೇನು ಬಂದು ನಮ್ಮ ಕಾರ್ಯಗಳನ್ನು ಸಂಭ್ರಮಗೊಳಿಸಬಲ್ಲರೋ?" ಎಂದು ಹಮ್ಮಿನಿಂದ ಉತಾತ್ತಾಗಿ ಪ್ರಶ್ನೆ ಹಾಕುವವರು ಹಲವರಿದ್ದಾರೆ. ಇಂಥ ದುಂದುಗಾರಿಕೆಯ ಬಗ್ಗೆ ಮಹಾಸಭೆಯವರು ಮಾಡಿದ ನಿಯಮಗಳೆಲ್ಲಾ ಊಳಿಯ ಹತ್ತಿವೆ. ಒಂದು ಹಳ್ಳಿಯೊಳಗೆ ಏನಿಲ್ಲೆಂದರೂ ವರ್ಷ ೧ ಕ್ಕೆ ೧೦ ಲಗ್ನಗಳಾಗುವುವು. ದೊಡ್ಡ ಊರುಗಳಲ್ಲಿಯಾದರೂ ಕನಿಷ್ಠಕ್ಕೆ ೩-೪ ಲಗ್ನಗಳಾಗುವುವು. ಸರಾಸರಿ ಒಂದು ಊರಿಗೆ ೪ ಲಗ್ನಗಳೆಂದರೂ ಆಗುವುವು. ಪ್ರಸಿದ್ಧ ಜಾತ್ರೆಗಳೆಲ್ಲವೂ ಬಹುಶಃ ನಮ್ಮ ಸಮಾಜಕ್ಕೆ ಸೇರಿರುತ್ತವೆಂದರೆ ಅತಿಶಯೋಕ್ತಿಯಾಗಲಾರದು. ಲಗ್ನವೊಂದಕ್ಕೆ ಎರಡೆರಡು ರೂಪಾಯಿಗಳಂತೆಯೂ ಪ್ರತಿ ಜಾತ್ರೆಗೆ ಹತ್ತುಹತ್ತರಂತೆಯೂ, ದೀಕ್ಷಾಕಾರ್ಯಾದಿಗಳಲ್ಲಿ ಒಂದೊಂದರಂತೆಯೂ ಸಲ್ಲಿಸುವ ಚಟವಿದ್ದರೆ ನಾಲ್ಕಾರು ವರ್ಷಗಳಲ್ಲಾಗುವ ಧನರಾಶಿಯನ್ನು ದೊಡ್ಡದೊಡ್ಡ ತಕ್ಕಡಿಗಳಿಂದ ತೂಗಿದರೂ ಸಹ ಮುಗಿಯಲಾರದಷ್ಟಾಗುವುದು. 'ಹನಿಗೆ ಹನಿಕೂಡಿದರೆ ಹಳ್ಳ' 'ತೆನೆಗೆ ತೆನೆಕೂಡಿದರೆ ರಾಸಿ' ಯೆಂಬುದು ಒಂದು ಸಣ್ಣ ಹುಡುಗನಿಗೂ ಗೊತ್ತಾದ ಮಾತಾಗಿದ್ದರೂ ಪುಣ್ಯ ಕಾರ್ಯಗಳಿಗೆ ಮನಸ್ಸನ್ನು ಕೊಡದಿರುವುದು ನಮ್ಮ ಸಮಾಜದಲ್ಲಿ ಸಹಜವಾದದ್ದಾಗಿದೆ. 'ಶಿಖರದ ಮೇಲಿದ್ದ ಕಲ್ಲುಬಂಡೆಯು ಯಾರ ಒತ್ತಾಯವೂ ಇಲ್ಲದೆ ಕೆಳಗೆ ಉರುಳುವುದು. ಅದೇ ಬಂಡೆಯು ಶಿಖರದ ಉಚ್ಚಸ್ಥಾನವನ್ನು ಸೇರಬೇಕಾದರೆ ನಾಲ್ಕಾರು ಮಂದಿಯ ಹೆಣ ಬಿದ್ದುಹೋಗುವುದು.' ಮನುಷ್ಯನ ಧರ್ಮವಾದರೂ ಹೀಗೇ ಇರುವುದು. ಸತ್ಕರ್ಮಗಳಲ್ಲಿ ಮನವಿಡಲು ಈ ಮಾನವ ಜನ್ಮವು ಎಷ್ಟು ಕಷ್ಟಬಟ್ಟರೂ, ತುದಿಕಾಲಿ ಸಹ ನಿಲ್ಲಲಾರದು. ಅದೇ ದುಷ್ಕರ್ಮಗಳಲ್ಲೆಂದರೆ ಹೇಳುವವರೂ ಬೇಡ, ಕೇಳುವವರೂ ಬೇಡ, ಮುಂದೆ 'ಎಪಂಟ' ಪದವಿಯನ್ನು ಧರಿಸಿಕೊಳ್ಳುವುದು. ಒಬ್ಬ ಹುಡುಗನಿಗೆ ಒಂದು ಶ್ಲೋಕ ಕಲಿಸಬೇಕಾದರೆ ಒಬ್ಬ ಶಿಕ್ಷಕನೂ ೨-೩ ತಾಸೂ ಬೇಕಾಗುವುವು. ಅದನ್ನೇ ಮರೆಯಲಿಕ್ಕೆ ಶಿಕ್ಷಕನೂ ಬೇಡ, ಯಾರೂ ಬೇಡ; ಕಾಲಗತಿಸಿದರೆ ಸಾಕು. ಈ ಮುಂತಾದ ಲೋಕರೂಢಿಯ ತಮಸ್ಸಿನಲ್ಲಿಯೇ ನಮ್ಮ ಸಮಾಜವು ತಪಮಾಡಿದರೆ ಆಗಬೇಕೇನು? ಕಾಲ ಗತಿಸಿದಂತೆ ಸಮಾಜದಲ್ಲಿ ಸುಧಾರಣೆಯ ಬಗ್ಗೆ ಪ್ರಗತಿಯಾಗಲಿಕ್ಕೆ ಬೇಕು. ಒಂದು ವಿಷಯವನ್ನು ಒಂದಿಲ್ಲ, ಎರಡುಸಾರೆ ಬರೆದರೆ ಅದರಂತೆ ನಡೆಯಲು ಕಂಕಣಬದ್ಧರಾಗಲಿಕ್ಕೆ ಬೇಕು. ಇಂಥ ಲೇಖಗಳನ್ನು ಹತ್ತೆಂಟು ಸಾರೆ ಇದೇ ಪತ್ರದ್ವಾರಾ ಸರ್ವಜನರೂ ಓದಿರುವರು. ಆ ಓದಿದವರಿಗೆ ಓದಿದಂತೆ ಮಾಡಿದರೇನು? ಎಂದು ಪ್ರಶ್ನೆ ಹಾಕಿದರೆ ಬೆಟಕುಮುಳ್ಳಾಡಿಸಿದಂತೆ ಆಗುವುದು. ನಮ್ಮ ಸಮಾಜವು ಈ ಸ್ಥಿತಿಯಲ್ಲಿರುತ್ತಿದ್ದು ಈ ಪ್ರಕಾರದ ದುಂದುಗಾರಿಕೆಗಳು ನಮಗೆ ಎಲ್ಲ ತರದಿಂದಲೂ ಅಯೋಗ್ಯವೆಂದು ಸರ್ವರೂ ತಿಳಿದು ನಡೆಯಬೇಕು. ತಿಳಿಯದವರು ತಿಳಿದವರಿಗೆ ತಿಳಿಯಹೇಳುವುದು ಬಹು ಭೂಷಣವು.

ಹೋದ ತಿಂಗಳು ತಾರೀಖು ೨೩-೨೮-೨೯ ನೇ ತಾರೀಖುಗಳಲ್ಲಿ ಮ॥ ಫಕೀರಪ್ಪ ವೀರಪ್ಪ ಕೊಟ್ನೂರ, ಗೇಜ್ ಕ್ಲಾರ್ಕ ಹಳ್ಯಾಳ ಇವರ ವಿವಾಹ ಮಹೋತ್ಸವವು ರಾಣೇಬೆನ್ನೂರ ಮುಕ್ಕಾಮಿನಲ್ಲಿ ವಿಧ್ಯುಕ್ತ ಜರುಗಿತು. ಮರುದಿವಸ ಲಗ್ನಮಂಟಪದಲ್ಲಿ ಒಂದು ಸಣ್ಣ ಸಭೆಯು ಕೂಡಿ ಇದರ ಶಿರೋಲೇಖದ ವಿಷಯವಾಗಿಯೇ ಭಾಷಣಗಳಾದವು. ಆ ದಿವಸ ಸಭೆಯಲ್ಲಿ ಠರಾವುಮಾಡಿದ ಪ್ರಕಾರ ಮೊನ್ನೆ ತಾನೇ ೫ ರೂ. ಗಳು ಶ್ರೀ ಶಿವಯೋಗಮಂದಿರಕ್ಕೆ ಕಳುಹಲ್ಪಟ್ಟವು. ಇದರಂತೆ ಸರ್ವಕಡೆಗೂ ಪ್ರಯತ್ನ ನಡೆದದ್ದನ್ನು ಕಣ್ಣಾರೆ ನೋಡಬೇಕೆಂದು ಅಪೇಕ್ಷಿಸುವ,

ಓರ್ವ ಪ್ರತ್ಯಕ್ಷದರ್ಶಿ,

ಮಾಗಡಿ ತಾ॥ ಹುಲಿಕಲ್ಲಿನ ಎಂಪೈರ್‌ಡೆ ಮಹೋತ್ಸವ.

ಸನ್ ೧೯೧೨ ನೇ ಇಸವಿ ಮೇ ತಾರೀಖು ೨೪ ನೇ ಶುಕ್ರವಾರ ಎಂಪೈರ್‌ಡೆ ಮಹೋತ್ಸವವಾದುದರಿಂದ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಇಲ್ಲಿನ ಗ॥ ವಿ. ಇ. ಬಾಯ್ಸ್ ಸ್ಕೂಲಿನಲ್ಲಿ ಒಂದು ಸಭೆ ಸೇರಿಸಲ್ಪಟ್ಟಿತು. ಈ ಸಭಾಮಂದಿರವು ಕದಳೀ ಸ್ತಂಭಗಳಿಂದಲೂ, ಪಲ್ಲವತೋರಣಗಳಿಂದಲೂ, ಚಿತ್ರವಿಚಿತ್ರವಾದ ತೋರಣಗಳಿಂದಲೂ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತೂ ಶ್ರೀಮನ್ಮಹಾರಾಜರ ತಸ್ವೀರೇ ಮೊದಲಾದ ಚಿತ್ರಪಟಗಳಿಂದಲೂ ಅತ್ಯಂತ ಶೋಭಾಯಮಾನವಾಗಿತ್ತು. ಸಭಾಧ್ಯಕ್ಷರಿಗಾಗಿ ಅಲಂಕಾರಗೊಳಿಸಿ ಸಿದ್ಧಪಡಿಸಿದ್ದ ದಿವ್ಯತರವಾದ ಪೀಠವನ್ನು ಈ ಸ್ಕೂಲ್ ಪರೀಕ್ಷಕರಾಗಿ ದಯಮಾಡಿಸಿದ್ದ ಮ॥ ರಾ॥ ಶ್ರೀ

ಡೆ॥ ಇ॥ ಡಿ ವಿ. ಕೃಷ್ಣರಾಯರವರು ಸ್ಕೂಲ್ ಕಮಿಟಿ ಮೆಂಬರುಗಳ ಮತ್ತೂ ಸಭೆಯವರ ಕೋರಿಕೆಯಂತೆ ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ತರುವಾಯ ಸ್ಕೂಲ್ ಹೆ॥ ಮಾ॥ ಸಿ. ನರಸಿಂಹಶಾಸ್ತ್ರಿಗಳು ಬ್ರಿಟಿಷ್ ರಾಜ್ಯಭಾರದಿಂದುಂಟಾಗಿರುವ ಮಹೋಪಕಾರಗಳನ್ನು ಕುರಿತು ಎಲ್ಲರೂ ತಿಳಿಯುವಂತೆ ಉಪನ್ಯಾಸಮಾಡಿದರು. ಬಳಿಕ ಸ್ಕೂಲ್ ಅ॥ ಮಾ॥ ಕೆ. ಸೀತಾರಾಮಯ್ಯನವರು ವಿದ್ಯಾವಿಷಯಕವಾಗಿ ಸುಲಲಿತವಾದ ಪದಗಳಿಂದ ಉಪನ್ಯಾಸಮಾಡಿದರು. ಬಳಿಕ ಬಾಲಕ ಬಾಲಕಿಯರುಗಳು ಗುರುಸ್ತುತಿ, ಶಾರದಾಸ್ತುತಿ, ಮೊದಲಾದ ಹಾಡುಗಳನ್ನೂ, ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳನ್ನೂ ಕರ್ಣಾನಂದವಾಗುವಂತೆ ಹಾಡಿದರು. ಅನಂತರ ಮಂಗಳವು ಹೇಳಲ್ಪಟ್ಟಿತು.

ಅನಂತರ ಸಭಾಧ್ಯಕ್ಷರು ಎದ್ದು ನಿಂತು ಹೇಳಿದುದೇನೆಂದರೆ:—ಈ ಸಭೆಯಲ್ಲಿ ಸೇರಿರುವ ನೀವುಗಳೆಲ್ಲರೂ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತೂ ಶ್ರೀಮನ್ಮಹಾರಾಜರವರ ವಿಷಯದಲ್ಲಿ ತೋರಿಸುವ ಭಕ್ತಿ ವಿಶ್ವಾಸಗಳಿಗಾಗಿ ತುಂಬಾ ಆನಂದಪಡುತ್ತೇನೆ. ಅಲ್ಲದೆ ನೀವುಗಳೆಲ್ಲರೂ ವಿದ್ಯಾವಿಷಯದಲ್ಲಿ ಬಹಳ ಆಸಕ್ತರಾಗಿ ಸ್ಕೂಲ್ ಅಭಿವೃದ್ಧಿಗೆ ತುಂಬಾ ಪ್ರೋತ್ಸಾಹವನ್ನುಂಟುಮಾಡುತ್ತಿರುವ ವಿಷಯದಲ್ಲಿಯೂ, ಮತ್ತೂ ಎಂಪೈರ್‌ಡೆ ಮಹೋತ್ಸವವನ್ನು ಅತಿವಿಜೃಂಭಣೆಯಿಂದ ನಡೆಸಿದುದಕ್ಕಾಗಿಯೂ ನಿಮ್ಮ ವಿಷಯದಲ್ಲಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ಎಂದು ಅಪ್ಪಣೆಕೊಡಿಸಿದರು.

ಈ ಪ್ರಕಾರವಾಗಿ ಹೇಳಿದ ನಂತರ ಸಂತೋಷ ಸೂಚಕವಾದ ಹಸ್ತತಾಡನೆಯು ಘೋಷದಿಂದ ಮಾಡಲ್ಪಟ್ಟಿತು. ಅನಂತರ ಗಂಧ ಪುಷ್ಪಮಾಲಿಕೆ ಸಕ್ಕರೆ ತಾಂಬೂಲವೂ ಸಹ ಎಲ್ಲರಿಗೂ ಹಂಚಲ್ಪಟ್ಟಿತು. ಬಾಲಕಬಾಲಕಿಯರಿಗೆ ಸಕ್ಕರೆ ಬಾಳೇಹಣ್ಣು ಹಂಚಿದ್ದಲ್ಲದೆ, ಮಧ್ಯಾಹ್ನ ೨ ಘಂಟೆಯಿಂದ ೪ ಘಂಟೆವರೆಗೆ ಆಡಿಸಿದ ಆಟದಲ್ಲಿ ಜಯವನ್ನು ಹೊಂದಿದವರಿಗೆ ಧನರೂಪವಾದ ಬಹುಮಾನವು ಸಭಾಧ್ಯಕ್ಷರ ಸ್ವಹಸ್ತದಿಂದಲೇ ಕೊಡಲ್ಪಟ್ಟಿತು. ಅನಂತರ ಸರ್ವರೂ ಸಂತೋಷವನ್ನು ಸೂಚಿಸುವ ಕೋಲಾಹಲ ಧ್ವನಿಯಿಂದ ಸಭೆಯನ್ನು ಮುಗಿಸಿದರು.

ಪ್ರತ್ಯಕ್ಷದರ್ಶಿ.

ಉತ್ಸವೋತ್ಸಾಹ-ಮದ್ದಿಕೆರೆ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನದ ಗುರು ಪಟ್ಟಾಧ್ಯಕ್ಷ ಚೆನ್ನವೀರರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಸವಾರಿಯು ಕೊಂಡಕುಂಬಿಯಿಂದ ತಾ॥ ೧೬-೨-೧೨ ರಲ್ಲಿ ಮದ್ದಿಕೆರೆ ಮುಕ್ಕಾಂಮಾಡಿ ವೀರಶೈವ ಮಂಡಲಿಯವರಲ್ಲಿಯೂ ವೈನಾಚಾರಕ್ಕೆ ಸೇರಿದ ಎಲ್ಲಾ ಪಂಗಡಗಳವರಲ್ಲಿಯೂ ಸಂಸ್ಥಾನದ ಪದ್ಧತಿ ಪ್ರಕಾರ ಆಚಾರ ವಿಚಾರ ಬೋಧಾದಿಗಳನ್ನು ನಡೆಸಿ, ಸುತ್ತುಮುತ್ತಣ ಗ್ರಾಮಗಳ ಭಕ್ತವರ್ಗದವರ ಜಮಾಬಂದಿ ನಡೆದು ಪದ್ಧತಿ ಮೇರೆಗೆ ಕಪ್ಪಕಾಣಿಕೆ ಸೇವಾಸತ್ಕಾರಗಳನ್ನು ಸ್ವೀಕರಿಸಿ, ಶಿವಯೋಗಾನಂದ ವಿಭವದಲ್ಲಿರುವಾಗ್ಗೆ, ಈ ಗ್ರಾಮದ ವೀರಶೈವ ಮಂಡಲಿಯವರೂ ಕಾಲುಮಠದವರೂ ಸೇರಿ ಮಹಾಸನ್ನಿಧಿಯು ತಮ್ಮಗ್ರಾಮಕ್ಕೆ ದಿಗ್ವಿಜಯ ಮಾಡಿಸಿದ ಜ್ಞಾಪಕಾರ್ಥವಾಗಿ ಘನೋತ್ಸಾಹವನ್ನು ನಡಸಬೇಕೆಂಬ ಕುತೂಹಲಯುಕ್ತರಾಗಿ ಅದನ್ನು ತಾ॥ ೫-೪-೧೨ ರಲ್ಲಿ ನಡೆಯಿಸಬೇಕೆಂದು ನಿಶ್ಚಯಿಸಿ, ಸಮಾಜದ ಗ್ರಾಮಾಂತರಗಳಿಗೆಲ್ಲಾ ಪ್ರಕಟಿಸಿದರು. ಅದೇವೇಳೆಗೆ ಗ್ರಾಮಾಂತರಗಳಿಂದ ನೋಟಕರು ತಂಡತಂಡವಾಗಿ ಬಂದು ಸೇರಿದರು. ಪೇಟೆಗಳು ಅಲ್ಲಲ್ಲಿ ಮಂಟಪ ತಳಿರು ತೋರಣ ಚಪ್ಪರಗಳಿಂದಲಂಕರಿಸಲ್ಪಟ್ಟು ಉತ್ಸವಸಮಾರಂಭ ಸನ್ನಾಹ ಸಿದ್ಧವಾಯಿತು. ಸಾಯಂಕಾಲ ೬ ಗಂಟೆಯ ಸಮಯಕ್ಕೆ ಅಂದಣದಲ್ಲಿ ಶ್ರೀ ಸ್ವಾಮಿಯು ಬಿಜಯಂಗೈದು, ಸಕಲ ಬಿರುದಾವಳಿಗಳೊಡನೆ ಮೆರವಣಿಗೆಯು ಹೊರಟಿತು. ಸುಮಾರು ೧೮ ಸಾವಿರದವರೆಗೂ ಜನಸಂದಣಿಯು ಸೇರಿತ್ತು. ಉಭಯ ಪಾರ್ಶ್ವಗಳಲ್ಲಿಯೂ ಸ್ತೋತ್ರಪಾಠಕರು ಉದ್ಘೋಷಿಸುತ್ತಿದ್ದರು. ನಗಾರಿ ಭೇರಿ ದುಂದುಭಿ ಮೊದಲಾದ ವಾದ್ಯಗಳ ರವಂಗಳು ಮೊಳಗುತ್ತಿದ್ದವು. ಆಗಾಗ್ಗೆ ಚಿತ್ರವಿಚಿತ್ರವಾದ ಮದ್ದು ಬಿರುಸು ಬಾಣಗಳ ಹಾರಿಸುವಿಕೆಯು ನೋಟಕರಿಗೆ ಅತ್ಯಂತ ಉತ್ಸುಕತೆಯನ್ನುಂಟುಮಾಡುತ್ತಿತ್ತು. ಬೀದಿಗಳಲ್ಲಿ ಜನಸ್ತೋಮವು ಸಾಲುಸಾಲಾಗಿ ಕಿಕ್ಕಿರಿದು ನಿಂತಿತ್ತು. ಎಲ್ಲಾ ಕೋಮುವಾರಿನವರು ತಮ್ಮತಮ್ಮ ಬೀದಿಗಳಿಗೆ ಸ್ವಾಮಿಯು ಚಿತ್ತೈಸಿದಾಗ ಪೂಜಾದ್ರವ್ಯಗಳಿಂದ ಪುರಸ್ಕರಿಸಿ ಕರ್ಪೂರಾರತಿಗಳಿಂದಲೂ ದರ್ಶನ ಕಾಣಿಕೆಗಳಿಂದಲೂ ಸತ್ಕರಿಸುತ್ತಿದ್ದರು. ಈ ಮಹೋತ್ಸವದಲ್ಲಿ ಗಲಾಟೆ ವಗೈರೆ ನಡೆಯದಂತೆ ತನಿಖೆ ನೋಡಿಕೊಳ್ಳುವ ಬಗ್ಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರು ತಮ್ಮ ೧೦ ಮಂದಿ ಸಿಬ್ಬಂದಿಯೊಡನೆ ಬಂದು ಪರ್ಯವಸಾನದವರೆಗೂ ಕ್ರಮವಹಿಸಿ ನಿಂತಿದ್ದರು. ಈ ಗ್ರಾಮದ ಪ್ರಾಚೀನಪ್ರಭುವಂಶಜರಾದ ಹಾಲಿ ಸರ್ಕಾರದಿಂದ ಸನ್ಮಾನ ಹೊಂದುತ್ತಿರುವ ರಾಮಚಂದ್ರರಾಜು ಇವರು ಭಕ್ತಿ ವಿಶ್ವಾಸಪೂರ್ವಕವಾಗಿ ಮುಂದಾಳಾಗಿ ನಿಂತು ಮಾರ್ಗದರ್ಶಕರಾದುದು ಸಂತೋಷಪ್ರದವಾಗಿದೆ. ಶೆಟ್ಟಿ ಬಿ. ಬಸಯ್ಯನವರು, ಎಂ. ವೀರಭದ್ರಯ್ಯನವರು, ದಿವಾನ್ ಬಸಪ್ಪನವರು, ಈ ಗ್ರಾಮದ ಪ್ರಸಿದ್ಧ ಗೌಡರಾದ ಯಲ್ಲಾರೆಡ್ಡಿಯವರು, ಬಿ. ರಾಚಪ್ಪನವರು, ಹಾಲುಮಠದ ಯಲ್ಲಪ್ಪನು ಮುಂತಾದವರು ಮೆರವಣಿಗೆಯಲ್ಲಿ ಪಾಲಕರಾಗಿದ್ದು ಗ್ರಾಮಾಂತರದವರಿಗೆ ಮೇಲ್ಪಂಗ್ತಿ ಹಾಕಿಕೊಟ್ಟರು. ಈ ವೇರೆ ಕೋಟೆ ಪೇಟೆಗಳಲ್ಲಿ ಬಹು ವಿಜೃಂಭಣೆಯಿಂದ ರಾತ್ರಿ ೧೧ ಗಂಟೆಯವರೆಗೂ ಉತ್ಸವ ನಡೆದು ಪುನಃ ನಿರಂಜನ ಮಠಕ್ಕೆ ಸ್ವಾರಿ ಬಿಜಮಾಡಲು ಮಂಗಲಾಚರಣೆಯಾಗಿ ಸುಬೇದಾರ್ ಎ. ಎಂ. ಚಂದ್ರಶೇಖರಯ್ಯನವರು ಆ ದಿನ ನಡೆದ ಗುರುಕಾರ್ಯ ಧುರಂಧರತೆಯ ವಿಷಯದಲ್ಲಿ ಭಕ್ತಾದಿಗಳು ತೋರಿಸಿದ ಶ್ರದ್ಧೆಯನ್ನು ಕುರಿತು ಶ್ರೀ ಸನ್ನಿಧಿಗೆ ಉಂಟಾದ ಆನಂದವನ್ನು ವ್ಯಕ್ತಪಡಿಸಿದನಂತರ ಸರ್ವರಿಗೂ ಫಲಪುಷ್ಪಗಳು ಹಂಚಲ್ಪಟ್ಟು ಆಶೀರ್ವಾದವನ್ನು ಪಡೆದು ತೆರಳಿದ ನಂತರ ದೈವದವರು ಮೃಷ್ಟಾನ್ನ ಭೋಜನ ಸಂತರ್ಪಣೆ ನಡೆಸಿದರು.

ಪ್ರತ್ಯಕ್ಷದರ್ಶಿ.

ನೋಟೀಸ್.

3

ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ ಇಂಗ್ಲೀಷ್ ಲೋವರ್ ಸೆಕೆಂಡರಿಗೆ ಕಡಿಮೆಯಿಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢ ವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವಾ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಷ್ಟೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಚ್. ಕೆ. ವೀರಬಸವೈಯ್ಯ ಬಿ.ಎ.,ಬಿ.ಎಲ್.
ಆನರರಿ ಸೆಕ್ರೆಟರಿ.
ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ
ತೋಟದಪ್ಪನವರ ಧರ್ಮಸತ್ರ,
ಬೆಂಗಳೂರು ಸಿಟಿ.

2 ಕಾರೋನೇಷನ್ ಸಾಬೂನು.

"ಅಪಾಯವಿಲ್ಲದ ರೋಮಸಂಹಾರಿ"

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನವೆ ಮುಂತಾದ ಬಾಧೆಗಳಿಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0.
3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0 ಅಂಚೆ ಹಾಸಲು 0—4—0
ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.
ಬಿ. ಸಿ. ಷಾ ಅಂಡ್ ಕೋ.,
177 ಚೀನಾಬಜಾರ್‌ರೋಡ್, ಮದ್ರಾಸು

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು
೧ ಪ್ರತಿಗೆ ೧ ವರ್ಷಕ್ಕೆ ೦—೬—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲು ಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಇಗ್ಗುಣವಾಗಿ ದರವು ಬೀಳುವುದು.

ವೀರಶೈವಾಶ್ರಮ ಬೆಂಗಳೂರು.

2

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಪಾಳೆಯಗಾರರು, ಅಧಿಕಾರಿಗಳು ಮೊದಲಾದವರುಗಳಿಗೆ, ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲ್ಯವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಿಸಲ್ಪಟ್ಟಿರುವಂತೆ ಈ ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಬಹುಜನರು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿವಾದಸ್ಥರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ಬರಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋಟೆಯೊಳಗೆ ಪೋಸ್ಟಾಫೀಸಿನ ಮಗ್ಗುಲಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವನ್ನು ಏರ್ಪಡಿಸಿದೆ. ಈ ಕಟ್ಟಡದಲ್ಲಿ ಶ್ರೀಮಂತರುಗಳೂ, ಪಾಳೆಯಗಾರರೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುವಲ್ಲದೆ, ಈಗಿನ ಕಾಲದ ಆರೋಗ್ಯ ಸೂತ್ರಕ್ಕನುಗುಣವಾಗಿದೆ. ಬುದ್ಧಿವಂತರಾದ ಪಾಚಕರನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕೇರ್ಪಾಟನ್ನಿಟ್ಟಿದೆ. ಮತ್ತೂ ಊಟದ ಖರ್ಚನ್ನು ತಕ್ಕಮಟ್ಟಿಗೆ ಸುಲಭಮಾಡಿದೆ. ಇಲ್ಲಿಯ ಏರ್ಪಾಟನ್ನು ತಿಳಿಯಲಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಾರರಿಂದ ಪ್ರತ್ಯಕ್ಷವಾಗಾಗಲೀ ಅಥವಾ ಲಿಖಿತ ಮೂಲಕವಾಗಾಗಲೀ ತಿಳಿಯಬಹುದು.

ಎಲ್. ಕಲ್ಲಪ್ಪ,
ಊದಬತ್ತಿ ಷಾಪ್, ದೊಡ್ಡಪೇಟೆ, ಬೆಂಗಳೂರು.



ಕಾಶೀವಿಶ್ವೇಶ್ವರಪ್ರಸನ್ನ.

ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀ ಕ್ಷೇತ್ರಕಾಶಿಯಲ್ಲಿ ತಯಾರಾಗುವ ಬನಾರಸ್ ಜರಿ ರೇಷ್ಮೆ ಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೇಗಾಲ ಮೊಣಕಾಲ್ಮುರು ನಮೂನೆ ವಸ್ತ್ರಗಳು, ಜರಿ ರೇಷ್ಮೆ ಭದ್ದರು, ರುದ್ರಾಕ್ಷಿಸರಗಳು, (ಇದರಲ್ಲಿ ೩ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು.) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಚೌರಿಕೂದಲು ಗಂಗಾಭಾಗೀರಥಿಯೆಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಟಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಫಸ್ಟ್ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು. ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಟ, ೨ ನಮ್ಮ ಕಂಪೆನಿ ವಿಳಾಸದಕಾರ್ಡು ಇವುಗಳನ್ನು ತಾವು ಬರದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು. ಬೇರಿಂಗ್ ಪತ್ರ ತೆಗೆದುಕೊಳ್ಳಲಾರೆವು.

ವಿಳಾಸ,—ಮೇನೇಜರ್,
ಎಸ್. ಯೂ. ಎಚ್. ಅಂಡ್ ಕಂಪೆನಿ,
ಬನಾರಸ್ ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

48 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

37

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕೆ ಯೋಗ್ಯವಾದ ಧಾತುವಾಗುತ್ತದೆ. ಕರಮೈಥುನದಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೇ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ; ೧. ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೨-೦ ರೂ. ೩. ಬಾ, ೩-೧೪-೦ ರೂ. ಒಮ್ಮಿಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಪಚ್ಚಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೪ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

18

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಕ್ತವಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿಬೋಧಿಸಿ, ಯಾವರೀತಿಯಾಗಿಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇವೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ದೀವಟಿಗೆಬೀದಿ ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

8

ಲೋಕಾಮಯಾಪಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡದೇದಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦ ರೂ.

ಟಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹಾಲ
ಮೈಸೂರು.

96

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೭-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೆಯ ಇಸವಿ ಜೂನ್ ತಾ॥ ೩ ರಿಂದ ೧೯೧೨ನೆಯ ಜೂನ್ ತಾ॥ ೯ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೪ ನೆಯ ಪರೀಧಾವಿ ಸಂವತ್ಸರದ ಜ್ಯೇಷ್ಠ ಬ॥ ತದಿಗೆಯಿಂದ ಜ್ಯೇಷ್ಠ ಬ॥ ನವಮೀವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
3	[1]ಸೋ	ತ	3-7	ಪೂಷಾ	9-53	22
4	ಮಂಗ	ಚ	8-55	ಉಷಾ	16-22	23
5	[2] ಬುಧ	ಪ	12-54	ಶ್ರವಣ	22-57	24
6	[3]ಗುರು	ಷ	18-44	ಧನಿ	29-13	25
7	[4]ಶುಕ್ರ	ಸ	22-54	ಶತಭಿಷ	34-45	26
8	ಶನಿ	ಅ	26-15	ಪೂಭಾ	39-21	27
9	ಭಾನು	ನ	27-56	ಉಭಾ	42-43	28

(1) ಸಂಕಟಹರ ಚತುರ್ಥಿ, ಕಂಬದರಾಜಸ್ವಾಮಿ ರಥ, ಮಾರನಹಳ್ಳಿ ನರಸಿಹ್ಮಸ್ವಾಮಿ ರಥ. (2) ಮೇಲುಕೋಟೆಯಲ್ಲಿ ಪಲ್ಲವೋತ್ಸವಾರಂಭ. (3) ವಾಣೀವಿಲಾಸದವರ ವರ್ಧಂತಿ. (4) ಶೂನ್ಯತಿಥಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ✱ ಸ್ಟಾರ್

REGISTERED NO. M 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವ ಪತ್ರಿಕೆ.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಸಜ್ಜನ ಹೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಶ್ವರಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿರೆಯಂ ಸಪಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೧] ಮೈಸೂರ್ ಸ್ಟಾರ್ ಸೆರ್೧೯೧೨ ನೆಯ ಇಸವಿ ಜೂನ್ ತಾರೀಖು ೧೦ ನೆಯ ಸೋಮವಾರ. [ಸಂಚಿಕೆ ೨೩

15

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು೧ಕ್ಕೆ ೧೨-೦-೦ -೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ದಿಲ್ಲಿ ಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕೆ ೧೨ ಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ಆಣೆ. ಬಾಲಗ್ರಹಧೂಪ ಟಿನ್ ೧ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೪-೦
ಸಟೀಕನಂದೀವ್ರತ	೦-೩-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

42

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.—೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೧-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಕಂಪನಿ. ಮೈಸೂರು.

ಮಧುರವಾಣಿ.

10 ವಾರ್ಷಿಕಚಂದಾ ೧-೮-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

18

ವಿವೇಕಮಂಜರಿ

೨ ನೆಯ ಭಾಗ.

ಇದರಲ್ಲಿ [illegible] ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯ[illegible] ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಮೆಚ್ಚುಗೆಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ.

೨ ನೆಯ ಭಾಗ ೩ ಆಣೆ ೧೩೦ ಪುಟಗಳು

ಅಂಚೆ ವೆಚ್ಚ ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್

42

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿಧೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವಃ— ಬೆಲೆ ವಿ. ಪಿ. ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅದರ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ [illegible] ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು

2 ಕಾಶೀವಿಶ್ವೇಶ್ವರಪ್ರಸನ್ನಾ.

KASHI
VISHWESHWAR.
BENARES CITY.

ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀ ಕ್ಷೇತ್ರಕಾಶಿಯಲ್ಲಿ ತಯಾರಾಗುವ ಬನಾರಸ್ ಜರಿ ರೇಷ್ಮೆ ಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೆಗಾಲ ಮೊಣಕಾಲ್ಮೂರು ನಮೂನೆ ವಸ್ತ್ರಗಳು, ಪರೀ ರೇಷ್ಮೆ ಭದ್ರರು, ರುದ್ರಾಕ್ಷಿಸರಗಳು, (ಇದರಲ್ಲಿ ೨ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು.) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಚೌರಿಮೊದಲು ಗಂಗಾಭಾಗೀರಥಿಯೆಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಟಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಫಕ್ತ್ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು, ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರನಪಟ, ೨ ನಮ್ಮ ಕಂಪೆನಿ ವಿಳಾಸದಕಾರ್ಡು ಇವುಗಳನ್ನು ತಾವು ಬರದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು. ಬೇರಿಂಗ್ ಪತ್ರ ತೆಗೆದುಕೊಳ್ಳಲಾರೆವು.

ವಿಳಾಸ,—ಮೇನೇಜರ್,
ಎಸ್. ಯೂ. ಎಸ್. ಅಂಡ್ ಕಂಪೆನಿ,
ಬನಾರಸ್ ಸಿಟಿ.

ಪ್ರಸಿದ್ಧ ಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಶ್ರುತಪಡಿಸಿದೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಶ್ರೀಮನ್ಮಗ್ಗೆಮಾಯಿದೇವಪ್ರಭುವಿರಚಿತ
ಶಿವಾಧವ ಶಿವಾವಲ್ಲಭ ಮಹದೈಪುರೀಶ್ವರ

ಶತಕತ್ರಯವು

ಕರ್ನಾಟಕ ಟೀಕೆಯೊಡನೆ ಈಗ್ಗೆ ೨೩ ವರ್ಷಗಳ ಕೆಳಗೆ ಮುದ್ರಿಸಲ್ಪಟ್ಟಿದ್ದಿತು. ಈ ಟೀಕೆಯಿದ್ದರೂ, ಸಾಧಾರಣ ಜನರಿಗೆ ಪದ್ಯದಭಿಪ್ರಾಯವು ಆಗುತ್ತಿರಲಿಲ್ಲವಾದುದರಿಂದ, ಪ್ರತಿಯೊಬ್ಬರಿಗೂ ತಿಳಿಯುವಂತೆ ಟೀಕೆಯಮೇಲೆ ಸುಲಭವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಣಮಾಡಿ ಭದ್ರವಾದ ರಟ್ಟಿನಿಂದ ಬೈಂಡನ್ನು ಕಟ್ಟಿಸಿರುತ್ತೇವೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತರೀತ್ಯಾ ಭಕ್ತಿ, ಜ್ಞಾನ, ವೈರಾಗ್ಯಗಳ ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪಠನಮನನಾದಿಗಳಿಗೆ ಅತ್ಯಂತಸಾಧನವಾಗಿರುತ್ತದೆ.

ಇದರಬೆಲೆ ೧-೦-೦. ವಿ. ಪಿ. ಯಿಂದ ೧-೨-೦

ಮ್ಯಾನೇಜರ್,
"ಮೈಸೂರ್ ಸ್ಟಾರ್" ಆಫೀಸ್, ಮೈಸೂರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಮತ್ತೂ ಬ್ರಹ್ಮಜಾತಿಯ ವಜ್ರಗಳನ್ನೇ ಬ್ರಾಹ್ಮಣನು ಧರಿಸಬೇಕು. ಕ್ಷತ್ರಿಯಜಾತಿಯ ವಜ್ರಗಳಂ ಕ್ಷತ್ರಿಯನೇ ಧರಿಸಬೇಕು. [illegible] ಶೂದ್ರನೇ ಧರಿಸಬೇಕು. ಬ್ರಾಹ್ಮಣನು ಈ ನಾಲ್ಕು ಜಾತಿಯ ವಜ್ರಗಳನ್ನೂ ಧರಿಸಬಹುದು. ಮತ್ತೂ ಸೂರೀಪುಪದ ಹುಳುವಿನ ವರ್ಣವುಳ್ಳ ಸೂರ್ಯಪ್ರಕಾಶವಾದ ವಜ್ರಕ್ಕೆ ಬೆಲೆಯಿಲ್ಲ. ಅಂಥ ವಜ್ರವಂ ಧರಿಸಿದ ಅರಸಿಗೆ ಅತ್ಯಂತ ಐಶ್ವರ್ಯವೂ, ಆರೋಗ್ಯವೂ, ವಿಜಯವೂ ಉಂಟಾಗುವುದು. ಇಂಥ ವಜ್ರಂಗಳಂ ಕೆತ್ತಿದ ಆಭರಣವಂ ಧರಿಸಿ ರಣಾಂಗಣಕ್ಕೆ ತೆರಳುವ ಅರಸಿಗೆ ಆಯುಧಗಳಿಂದ ಗಾಯವಾಗಲಾರದು. ಶತ್ರುಗಳಂ ಜಯಿಸುವನು. ಸ್ವಪ್ರದೇಶವಂ ಆಳುವ ಅರಸು ಈ ಸೂರೀಪುಪದ ಹುಳುವಿನ ವಜ್ರವಂ ಧರಿಸಿದರೆ ಮಂಡಲಾಧಿಪತಿಯಾಗುವನು. ಈ ರತ್ನವಂ ಧರಿಸಿದ ಪುರುಷನ ಸಮೀಪಕ್ಕೆ ದಾರಿದ್ರ್ಯವೂ, ಸರ್ಪವೂ, ಅಗ್ನಿಯೂ, ಪಿಶಾಚವೂ, ರಾಕ್ಷಸರೂ, ಮೃತ್ಯುವೂ ಸಹ ಸೇರಲಾರವು. ಮತ್ತೂ ವಜ್ರಗಳ ಉತ್ಪತ್ತಿಗೆ ಯುಗಭೇದದಿಂದ ಸ್ಥಲಗಳು ಭೇದಿಸಿರುವುವು. ಕೃತಯುಗದಲ್ಲಿಯೂ ಕಲಿಯುಗದಲ್ಲಿಯೂ ಕೋಸಲದೇಶದಲ್ಲಿ ಪುಟ್ಟುವುವು. ತ್ರೇತಾಯುಗದಲ್ಲಿ ಹಿಮವತ್ಪರ್ವತದಲ್ಲಿಯೂ, ಮತಂಗಪರ್ವತದಲ್ಲಿಯೂ ಪುಟ್ಟುವುವು. ದ್ವಾಪರಯುಗದಲ್ಲಿ ಪುಂಡ್ರದೇಶದಲ್ಲಿಯೂ, ಮಹಾರಾಷ್ಟ್ರದೇಶದಲ್ಲಿಯೂ ಪುಟ್ಟುವುವು. ಮತ್ತೂ ಕಲಿಯುಗದಲ್ಲಿ ಸೌವೀರದೇಶದಲ್ಲಿ ಪುಟ್ಟುವುವು. ಎಲೈ ರಾಜೇಂದ್ರನೆ! ಕೇಳು– ವಜ್ರಂಗಳಲ್ಲಿ ಐದು ಗುಣಂಗಳೂ, ಐದು ದೋಷಂಗಳೂ ಇರುವುವು. ಇದಲ್ಲದೆ ಹೊಳಪು ನಾಲ್ಕು ಪರಿಯಾಗಿರುವುದು. ಐದು ಗುಣಂಗಳು ಯಾವುವೆಂದರೆ–ಆರುಮೂಲೆಯಾಗಿಯೂ, ಲಘುವಾಗಿಯೂ, ಮೂಲೆಗಳು ಎಸಳಾಗಿಯೂ, ಕೊನೆಗಳು ಮೊನೆಯಾಗಿಯೂ, ನಿರ್ಮಲವಾಗಿಯೂ ಇರುವುದೇ ಐದು ಗುಣಂಗಳೆನಿಸುವುವು. ಐದು ದೋಷಂಗಳಾವುವೆಂದರೆ– ಮಲವೂ, ಬಿಂದುವೂ, ರೇಖೆಯೂ, ಎವೆಯೂ, ಕಾಕಪದವೂ ಇವು ಐದೂ ದೋಷಂಗಳು. ಹೊಳಪು ನಾಲ್ಕು ಯಾವುವೆಂದರೆ– ಬಿಳುಪು, ಕೆಂಪು, ಹಳದಿ, ಕಪ್ಪು ಇವುನಾಲ್ಕೂ ಹೊಳಪುಗಳು. ಮತ್ತೂ ಮಲವು ಯಾವುದೆಂದರೆ– ವಜ್ರದಲ್ಲಿ ಹಳ್ಳಬೀಳುವುದೇ ಮಲವೆನಿಸಿಕೊಂಬುವುದು. ವಜ್ರಗಳಿಗೆ ಮಧ್ಯದಲ್ಲಿ ಹಳ್ಳಬಿದ್ದಿರಲು ಅದರಿಂ ಅಗ್ನಿಭಯವುಂಟಾಗುವುದು. ಮೂಲೆಗಳಲ್ಲಿ ಹಳ್ಳಬಿದ್ದಿರಲು ವ್ಯಾಧಿಭಯವುಂಟಾಗುವುದು. ಬಿಂದುದೋಷವಾವುದೆಂದರೆ– ವಜ್ರದಲ್ಲಿ ಬಟುವಾಗಿ ಕೆಂಪಾಗಿ ಮೊಳೆಯಂತಿರುವುದೇ ಬಿಂದುವು. ಆ ಬಿಂದುವು ಸುಳಿಯಂತಿದ್ದರೆ ಆವರ್ತವೆನಿಸಿಕೊಂಬುವುದು. ಆ ಬಿಂದುವಿನಿಂ ಪುಟ್ಟಿದ ಕೆಂಪುರೇಖೆಯು ಪ್ರದಕ್ಷಿಣವಾಗಿದ್ದರೆ ಪರಿವರ್ತವೆನಿಸಿಕೊಂಬುವುದು. ಬಿಂದುವು ಆಯುಸ್ಸಂ ಧನವಂ ಕೂಡ ನಾಶವಮಾಡುವುದು. ಆವರ್ತವು ಭಯವನ್ನುಂಟುಮಾಡುವುದು. ಪರಿವರ್ತವು ವ್ಯಾಧಿಯನ್ನುಂಟುಮಾಡುವುದು. ಎವೆಗೆ ಲಕ್ಷಣವೇನೆಂದರೆ– ರಕ್ತವರ್ಣವಾಗಿಯೂ, ಶ್ವೇತವರ್ಣವಾಗಿಯೂ, ಪೀತವರ್ಣವಾಗಿಯೂ ಇರುವುದೇ ಎವೆಯು. ಇದರಲ್ಲಿ ರಕ್ತವರ್ಣವಾಗಿರುವ ಎವೆಯು ಕುದುರೆಗಳಂ ನಾಶಗೊಳಿಸುವುದು. ಶ್ವೇತವರ್ಣವಾಗಿರುವ ಎವೆಯು ಆಯುಸ್ಸಂ ಧನವಂ ಕೂಡ ಕೆಡಿಸುವುದು. ಪೀತವರ್ಣವಾಗಿರುವ ಎವೆಯು ವಂಶವಂ ವ್ಯತ್ಯಾಸಮಾಡುವುದು. ರೇಖಾದೋಷವೆಂತಿರುವುದೆಂದರೆ--ಯಾವ ವಜ್ರಕ್ಕೆ ರೇಖೆಯು ಬಲಮುಖವಾಗಿರುವುದೋ ಆ ವಜ್ರವು ಉತ್ತಮವು, ರೇಖೆಯು ಎಡಮುಖವಾಗಿದ್ದರೆ ಭಯವನ್ನುಂಟುಮಾಡುವುದು. ಮತ್ತೂ ವಜ್ರದಲ್ಲಿ ಬಿರಿದಂತಿರುವ ರೇಖೆಯು ಭೇದವೆಂಬ ಪೆಸರಂ ಪಡೆದು ಶಸ್ತ್ರಭಯವನ್ನುಂಟುಮಾಡುವುದು. ರೇಖೆಯು ಕವಲಾಗಿದ್ದರೆ ಭೇದಕಾ ಎಂಬ ಪೆಸರಂ ಪಡೆದು ಬಂಧುಹಾನಿಯನ್ನುಂಟುಮಾಡುವುದು. ಯಾವ ವಜ್ರಕ್ಕೆ ಕಾಗೆಯ ಹಜ್ಜೆಯಂತೆ ರೇಖೆಯು ಇರುವುದೋ ಆ ರೇಖೆಯು ಕಾಕಪಾದವೆನಿಸಿಕೊಂಬುವುದು ಅದರಿಂದ ಧನಧಾನ್ಯ ನಾಶವಾಗುವುದು. ಮತ್ತೂ ಮೃತ್ಯುಭಯವುಂಟಾಗುವುದು. ಇದಲ್ಲದೆ ವಜ್ರಕ್ಕೆ ಸಾಧಾರಣ ಲಕ್ಷಣವೆಂತಿರುವುದೆಂದರೆ– ಮೊನೆ ಮುರಿದಿರುವುದು. ಅರುಗು ಸವೆದಿರುವುದು, ಮೂಲೆಗಳು ಕಿರಿದಾಗಿರುವುದು, ನಾಲ್ಕುಮೂಲೆಯಾಗಿರುವುದು, ಹೊಳಪು ಇಲ್ಲದೆಯಿರುವುದು, ಇಂತಿರ್ಪ ವಜ್ರದಿಂ ಗುಣವೂ ಇಲ್ಲ. ದೋಷವೂ ಇಲ್ಲ. ಮತ್ತೂ ವಜ್ರದಲ್ಲಿ ಒಡೆದಂತೆ ಕಾಣಿಸುವುದು ತ್ರಾಸವು. ಇಂತಿರ್ಪ ವಜ್ರವಂ ಧರಿಸಿದವಂಗೆ ಮಹಾಭಯವುಂಟಾಗುವುದು. ಮತ್ತೂ ವಜ್ರಗಳಲ್ಲಿ ಸ್ತ್ರೀಜಾತಿ, ಪುರುಷಜಾತಿ, ನಪುಂಸಕಜಾತಿಗಳೆಂದು ಮೂರುಜಾತಿಗಳಿರುವುವು. ಅದೆಂತೆನೆ– ವಜ್ರಗಳಲ್ಲಿ ದುಂಡಾಗಿಯೂ, ಸಿಲುವಾಗಿಯೂ, ಚೆನ್ನಾಗಿ ಹೊಳಪಾಗಿಯೂ, ದೊಡ್ಡದಾಗಿಯೂ ಬಿಂದುರೇಖೆ ಮೊದಲಾದ ದೋಷಗಳಿಲ್ಲದೆಯಿರುವುದೇ ಪುರುಷಜಾತಿಯು. ದುಂಡಾಗಿ ಸಿಲುವಾಗಿ, ಚೆನ್ನಾಗಿ, ಹೊಳಪಾಗಿ ದೊಡ್ಡದಾಗಿ, ಬಿಂದು ರೇಖೆ ಈ ಎರಡೂ ಇರುವ ವಜ್ರವು ಸ್ತ್ರೀಜಾತಿಯು. ನೀಳವಾಗಿ, ಮೂರು ಮೂಲೆಯಾಗಿ ಇರುವ ವಜ್ರವು ನಪುಂಸಕಜಾತಿಯು. ಈ ಮೂರುಜಾತಿಯ ವಜ್ರಗಳಲ್ಲಿ ಪುರುಷಜಾತಿಯ ವಜ್ರವು ಪುರುಷರಿಗೇ ಯೋಗ್ಯವು. ಸ್ತ್ರೀಜಾತಿಯ ವಜ್ರವು ಸ್ತ್ರೀಯರುಗಳಿಗೇ ಯೋಗ್ಯವು. ನಪುಂಸಕಜಾತಿಯ ವಜ್ರವು ನಪುಂಸಕರಿಗೇ ಯೋಗ್ಯವು. ಪುರುಷಜಾತಿಯ ವಜ್ರವಂ ಈ ಮೂವರೂ ಧರಿಸಬಹುದು. ಸ್ತ್ರೀಜಾತಿ ವಜ್ರವಂ ನಪುಂಸಕಜಾತಿ ವಜ್ರವಂ ಸ್ತ್ರೀ ನಪುಂಸಕರೇ ಧರಿಸಬೇಕು. ಮಿಕ್ಕಾದವರು ಧರಿಸಕೂಡದು. ಇನ್ನು ಮುತ್ತುಗಳು ಪುಟ್ಟುವ ಸ್ಥಳಂಗಳಂ ಅದರ ಲಕ್ಷಣಂಗಳಂ ವಿಸ್ತರಿಸುವೆನು. ಅದೆಂತೆನೆ–ಮುತ್ತುಗಳಲ್ಲಿ ಜಲಜವೆಂದೂ ಸ್ಥಲಜವೆಂದೂ ಎರಡುಪರಿಯು. ಅದರೊಳ್ ಸ್ಥಲಜವಾವುದೆಂದರೆ– ಶಂಖದಲ್ಲಿಯೂ, ಮೀನಿನ ತಲೆಯಲ್ಲಿಯೂ, ಮೇಘದಲ್ಲಿಯೂ, ಉತ್ತಮ ಸ್ತ್ರೀಯರುಗಳ ಕಿವಿಗಳಲ್ಲಿಯೂ, ಬಿದರಿನಲ್ಲಿಯೂ, ಕಾಡುಹಂದಿಯ ಕೋರೆಗಳಲ್ಲಿಯೂ, ಹಾವಿನ ತಲೆಯಲ್ಲಿಯೂ. ಆನೆಯ ಕೊಂಬಿನಲ್ಲಿಯೂ, ಕೊಕ್ಕರೆಯ ಕಿವಿಯಲ್ಲಿಯೂ, ಕಬ್ಬಿನ ಗಿಣ್ಣಿನಲ್ಲಿಯೂ, ಬತ್ತದ ದಂಟಿನಲ್ಲಿಯೂ ಕಪ್ಪೆಯ ಚಿಪ್ಪಿನಲ್ಲಿಯೂ, ಸಿಂಹದ ಭುಜದಲ್ಲಿಯೂ ಇಂತು ಹದಿಮೂರು ಕಡೆಯಲ್ಲಿ ಪುಟ್ಟುವ ಮುತ್ತುಗಳು ಸ್ಥಲಜವೆನಿಸಿಕೊಳ್ಳುವುವು. ಈ ಮುತ್ತುಗಳ ವರ್ಣಂಗಳಂ ಪೇಳುವೆನು. ಅದೆಂತೆನೆ– ಶಂಖದಲ್ಲಿ ಪುಟ್ಟಿದ ಮುತ್ತುಗಳು ಬಿಳುಪಾಗಿ ಕಪೋತಪಕ್ಷಿಯ ಮೊಟ್ಟೆಯಂತೆ ಇರುವುವು. ಇದು ಉತ್ತಮವು. ಮೀನಿನ ತಲೆಯಲ್ಲಿ ಪುಟ್ಟಿದ ಮುತ್ತುಗಳು ಪಾದರೀ ಹೂವಿನ ವರ್ಣದಂತಿರುವುವು. ಮೇಘದಲ್ಲಿ ಪುಟ್ಟುವ ಮುತ್ತುಗಳು ಸೂರ್ಯನ ಪ್ರಭೆಯಿಂದ ಒಪ್ಪಿರುವುವು. ಉತ್ತಮ ಸ್ತ್ರೀಯರುಗಳ ಕಿವಿಗಳಲ್ಲಿಯೂ, ಕೊಕ್ಕರೆಯ ಕಿವಿಗಳಲ್ಲಿಯೂ, ಸಿಂಹದ ಭುಜದಲ್ಲಿಯೂ ಪುಟ್ಟುವ ಮುತ್ತುಗಳು ದುರ್ಲಭಂಗಳು. ಬಿದರಿನಲ್ಲಿ ಪುಟ್ಟಿದ ಮುತ್ತು ಆಲಿಕಲ್ಲಿನ ವರ್ಣದಿಂದಿರುವುದು. ಇದು ಶ್ರೇಷ್ಠವು. ಹಂದಿಯ ಕೋರದಾಡೆಯೊಳ್ ಪುಟ್ಟಿದ ಮುತ್ತು ಕೆಂಪಾಗಿರುವುದು ಹಾವಿನ ತಲೆಯೊಳ್ ಪುಟ್ಟಿದ ಮುತ್ತು ನೀಲವರ್ಣವಾಗಿರುವುದು. ಆನೆಯ ಕೊಂಬಿನೊಳ್ ಪುಟ್ಟುವ ಮುತ್ತು ಹಳದೀ ವರ್ಣವಾಗಿರುವುವು. ಕಬ್ಬಿನ ಗಿಣ್ಣಿನಲ್ಲಿಯೂ, ಬತ್ತದ ದಂಟಿನಲ್ಲಿಯೂ ಇರುವ ಮುತ್ತುಗಳು ಅರಿಸಿನದ ವರ್ಣವಾಗಿರುವುವು. ಕಪ್ಪೆಯ ಚಿಪ್ಪಿನಲ್ಲಿ ಪುಟ್ಟುವ ಮುತ್ತುಗಳು ಚಂದ್ರನ ಕಾಂತಿಯಂತಿರುವುವು. ಕಪ್ಪೆಯ ಚಿಪ್ಪಿನಲ್ಲಿಯೂ, ಶಂಖದಲ್ಲಿಯೂ ಪುಟ್ಟಿದ ಮುತ್ತುಗಳು ಬಹಳವಾದುದರಿಂದಲೂ ಗುಣಗಳು ಹೆಚ್ಚಾಗಿರುವುದರಿಂದಲೂ ಉತ್ತಮಂಗಳೆನಿಸಿಕೊಳ್ಳುವುವು.

ಸಶೇಷ.

ಹೊಸಮೂನೆಯ ಕಾಂಬೋಡಿಹತ್ತಿ ಬೀಜವನ್ನು ಬಿತ್ತತಕ್ಕ ವಿಷಯ.

ಆರ್ದ್ರೆ, ಪುನರ್ವಸು, ಪುಷ್ಯ ಈ ಮಳೆಗಳಲ್ಲಿ ನಿಲ್ಲತಕ್ಕ ನೆಲದಲ್ಲೂ ಮತ್ತು ತರೀಜಮೀನುಗಳಲ್ಲೂ ಬೀಜವನ್ನು ಹಾಕತಕ್ಕದು. ೩ ಅಡಿ ದಾಯದ ಚಾ ಸಾಲು ಹೊಡೆದು, ದಾಯಕ್ಕೆ ಸ್ವಲ್ಪ ಗೊಬ್ಬರವನ್ನು ದಾಯಕ್ಕೆ ಎರಡು ಬೀಜದಂತೆ ಹಾಕಿದರೆ ಎಕರೆಗೆ ೨ ದು ಕಾಳು ಬೇಕಾಗುತ್ತದೆ ಗಿಡವು ನಾಲ್ಕು ಎಲೆಯಿಟ್ಟ ಎರಡು ಮಗ್ಗುಲನ್ನೂ ಕುಂಟೆಯಿಂದ ೧೫ ದಿವಸಕ್ಕೊಂದ ತ್ತಿ ಹರಗುತ್ತಾ ಇರಬೇಕು ಗಿಡಗಳು ೧ ಅಡಿ ಎತ್ತರ ಮೇಲೆ ಗಿಡಗಳ ಬುಡದಲ್ಲಿ ಕಳೆ ತೆಗೆಯಿಸಬೇಕು. ಅನ ಗಿಡಗಳು ಬಹಳ ಪುಷ್ಟಿಯಿಂದ ಬೆಳೆದು ಚಿತ್ತೆ ಮಳೆಯ ಹುವ್ವು ಕಾಯಿ ಕಚ್ಚುತ್ತದೆ ಪುಷ್ಯಮಾಸದಿಂದ ಹತ್ತಿ ರುವುದಕ್ಕೆ ಆರಂಭವಾಗುತ್ತದೆ.

ಮತ್ತೂ ಮಡಿಕಟ್ಟು ಭೂಮಿಯಲ್ಲಿಯೂ, ಎರೀಭೂ ಗಳಲ್ಲಿಯೂ ಸವರಿ ಬೀಜವನ್ನು ಬಿತ್ತಬೇಕಾದರೆ ಅಶ್ಲೇ ಮಖೆ ಮಳೆಗಳಲ್ಲಿ ಬಿತ್ತಬೇಕು. ಜೋಳ ಬಿತ್ತುವ ಕೂ ಗೆ ೩ ತಾಳು ಇರುತ್ತದಷ್ಟೆ. ನಡುಮಧ್ಯದಲ್ಲಿರುವ ತಾ ನ್ನು ತೆಗೆದು ಕಡೆ ತಾಳುಗಳಿಗೆ ಎರಡು ಸಣ್ಣ ತಗಲು ಕಿ, ಅವರೆಕಾಳು ಬಿತ್ತುವ ರೀತಿಯನ್ನು ಅಗಲವಾಗಿ ಹ ತ್ತಿಯ ಬೀಜವನ್ನು ಉದುರಿಸಿ ಸಾಲು ಮುಚ್ಚಬೇಕು. ರ್ಧಅಡಿ ಗಿಡವಾದನಂತರ ೧೫ ದಿವಸಕ್ಕೊಂದಾವೃತ್ತಿ ಹ ಗುತ್ತಾ ಇರಬೇಕು. ಆಗಾಗ್ಗೆ ಹರಗುವುದರಿಂದ ಭೂ ಯಿಂದ ಬಹಳ ಪ್ರಯೋಜನವುಂಟು. ಅದುಕಾರಣ ಈ ಮಳೆಗಾಲವು ಬಹಳ ಕಡಿಮೆಯಾದುದರಿಂದ ಹರಗುತ್ತಾ ದ್ದರೆ ಮೇಲೆ ಹುಡಿ ಮಣ್ಣು ಆಗಿ ಎರಡು ಇಂಚಿನೊಳಗೆ ಸಿಯೂ ಜಾಗ್ರತೆ ಆರುವುದಿಲ್ಲ. ಹರಗುವುದು ಬಿಟ್ಟರೆ ಗನೆ ನೆಲವು ಬೀಡು ಬಂದು, ಹಸಿಯು ನಿಂದಿರುವುದಿಲ್ಲ. ತ್ತುವುದಕ್ಕೆ ಈ ಬೀಜವು ಎಕರೆ ೧ ಕ್ಕೆ ೨ ಪೌಂಡು ಬೇ ಗುತ್ತದೆ. ದೊಡ್ಡಹತ್ತಿ ಬೀಜವನ್ನು ಮೇಲೆ ತಿಳಿಸಿದ ಮ ಗೆ ಹಾಕತಕ್ಕದು.

ತಾ॥ ೨೨-೫-೧೯೧೨ ನೆಯ ಮೈಸೂರು ಸ್ಟಾರಿನಲ್ಲಿ ತ್ತಿ ಧಾರಣೆಯ ವಿಷಯವನ್ನೂ, ಇನ್ನೂ ಕೆಲವು ವಿಷ ವನ್ನೂ ತಿಳಿಸಿರುತ್ತದಷ್ಟೆ. ಜವಾರಿ ಸಣ್ಣ ಹತ್ತಿ ಗು ೧೦೦ ಕ್ಕೆ ೨೫ ರಂತೆ ಅರಳೆ ಬರುತ್ತದೆ. ದೊಡ್ಡ ಹ ಮಣ ೧೦೦ ಕ್ಕೆ ೩೦-೩೧ ಅರಳೆ ಬರುತ್ತದೆ. ಕಾಂಬೋ ಹತ್ತಿ ಮಣ ೧೦೦ ಕ್ಕೆ ೩೩-೩೮ ಅರಳೆ ಬರು ದೆ. ಕಾಂಬೋಡಿ ಅರಳೆಗೆ ಇಲ್ಲಿನವರು ಖಂಡಿ ಅಂದ ೫೦೦ ಪೌಂಡುತೂಕ ಅರಳೆಗೆ ೧೦-೧೫ ರೂಪಾಯಿ ಜಾಸ್ತಿ ಕೊಡುತ್ತಾರೆ. ಈ ವರ್ಷ ಇದೇ ಕಾಂಬೋಡಿ ಹತ್ತಿಯು ಗದಗಿನ ಮಾರ್ಕೆಟ್ಟಿಗೆ ಬಂದು ಲಿಲಾವಿನಲ್ಲಿ ನಗ ೧ ಕ್ಕೆ ಅಂ ರೆ ನಮ್ಮಲ್ಲಿ ಮಣ ೫೨ ಕ್ಕೆ ರೂ. ೧೮೮ ರಿಂದ ೨೦೩ ರ ವರೆಗೂ (೧) ಮಿಸರ್ಸ್. ತಾತಾ ಅಂಡ್ ಸನ್ಸ್ ಇವರು–(೨) ಚುನೀಬಾಯಿ ಅಹಮದಾಬಾದ್ ಇವರು–ಈ ಎರಡು ದೊಡ್ಡಮಿಲ್ಲಿನವರೂ ಹೆಚ್ಚುಧಾರಣೆಯಿಂದ ಖರೀದಿ ಮಾಡಿದ್ದಾರೆ. ಈ ಹತ್ತಿಯು ಧಾರ್ವಾಡ ಜಿಲ್ಲೆಯಲ್ಲಿ ಸಾಗುವಳಿ ಹೆಚ್ಚುತ್ತ ಹೋದಹಾಗೆ ಸಾಂಪತ್ತಿಕ ಸ್ಥಿತಿಯೂ ಸುಧಾರಿಸಿದ ಹಾಗೆ ಕಾಣುತ್ತದೆ.

ನಮ್ಮ ಮೈಸೂರು ಗೌರ್ನಮೆಂಟಿನವರು ಕಾಂಬೋಡಿ ಹತ್ತಿ ಬೆಳೆಮಾಡಬೇಕೆಂದು ಎರಡುಮೂರು ವರ್ಷದಿಂದ ಎಷ್ಟು ಪ್ರೋತ್ಸಾಹ ಪಡಿಸಿದಾಗ್ಯೂ ನಾವು ಇಂಥ ಹೊಸ ನಮೂನೆಯ ಹತ್ತಿಯನ್ನು ಬೆಳೆಯದೆ ಇರುವುದರಿಂದ ನಮ್ಮ ಪೂರ್ವದ ಸ್ಥಿತಿಯನ್ನು ಬಿಡುವುದಕ್ಕೆ ಆಗದೆ ಸಾಹುಕಾರರ ಮನೆ ಬಾಗಿಲು ಕಾಯುವುದು ತಪ್ಪಲೊಲ್ಲದು. ಈ ರೀತಿಯಾಗಿಯೇ ನಾವು ಇದ್ದರೆ ನಮ್ಮ ಹೀನಸ್ಥಿತಿಯು ಯಾವಕಾಲಕ್ಕೆ ತಪ್ಪಬೇಕು? ಸಾಹುಕಾರರುಗಳಿಗೆ ಬಡ್ಡಿ ಕೊಡತಕ್ಕ ಅಂಶವು ಯಾವ ಕಾಲಕ್ಕೆ ತಪ್ಪಬೇಕು? ಇಂಥ ಮಂದಸ್ಥಿತಿಯ ಬುದ್ಧಿಯನ್ನು ಬಿಟ್ಟು ನಾವು ಒಳ್ಳೇ ಧನಿಕರಾಗಬೇಕೆಂಬ ಪ್ರಯತ್ನವನ್ನು ಮಾಡಬೇಕು. ಪ್ರಯತ್ನಕ್ಕೆ ಸರಿಯಾಗಿ ದೇವರು ಸಹಾಯವನ್ನು ಮಾಡುತ್ತಾನೆ. ಈ ಕಾಲದಲ್ಲಿ ಪ್ರಯತ್ನವೇ ಮುಖ್ಯವಾದುದು. ಈ ಕಾಂಬೋಡಿ ಹತ್ತಿ ಬೆಳೆಯನ್ನು ೨ ವರ್ಷದಿಂದಲೂ ನಾನು ತರೀ ಜಮೀನಿನಲ್ಲೂ ಖುಷ್ಕೀ ಜಮೀನಿನಲ್ಲೂ ಸಹ ಬೆಳೆದು ನೋಡಿ, ಈ ಹತ್ತಿಯ ಗುಣಾಂಶವನ್ನು ಕಂಡು ನಮ್ಮ ಮೈಸೂರು ಸೀಮೆಯಲ್ಲಿನ ಜಮೀದಾರರು ಇಂಥ ಹತ್ತಿಯನ್ನೇ ವೃದ್ಧಿಪಡಿಸಬೇಕೆಂದು ಶ್ರುತಪಡಿಸುತ್ತೇನೆ.

ಕಾಂಬೋಡಿ ಹತ್ತಿಯ ಬೀಜವು ಹೋದವರ್ಷ ನಮ್ಮಲ್ಲಿ ಎಲ್ಲಾ ಖರ್ಚ ಆದಮೇಲೆ ಬಹುಜನರು ಬೀಜವನ್ನು ಕಳುಹಿಸಬೇಕೆಂದು ಬರೆದಿದ್ದರು. ಆ ಕಾಲಕ್ಕೆ ಬೀಜವು ಸಿಗಲಿಲ್ಲ. ಈಗ ನಮ್ಮಲ್ಲಿ ದೊಡ್ಡ ಹತ್ತಿ ಬೀಜವೂ, ಕಾಂಬೋಡಿ ಹತ್ತಿ ಬೀಜವೂ ಸಹ ಇರುತ್ತವೆ. ಕೂಡಲೇ ಬರೆದು ತರಿಸಿಕೊಳ್ಳಬಹುದು.

ಸಿ. ಚೆನ್ನಬಸಪ್ಪ, ದಾವಣಗೆರೆ.

ವರ್ ಸೆಕೆಂಡರಿ ಪರೀಕ್ಷೆಯಲ್ಲಿ ೯ ಮಂದಿ ರಾಜವರ್ಗದ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಇವರಲ್ಲಿ ಒಬ್ಬರು ೧ ನೆಯ ತರಗತಿಯಲ್ಲಿ ಉತ್ತಮವಾಗಿ ತೇರ್ಗಡೆಯೊಂದಿರುವರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಒಬ್ಬರೂ, ಬಿ ಎ. ಪರೀಕ್ಷೆಯಲ್ಲಿ ಪಟ್ಟ ಸಿದ್ಧರಾಜ ಅರಸಿನವರೆಂಬ ಮತ್ತೊಬ್ಬರೂ ತೇರ್ಗಡೆಯೊಂದಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಡಾಕ್ಟರ್ ಸಿದ್ದಪ್ಪನವರು ಕನ್ನಂಬಾಡಿಯಿಂದ ಮೂಡಗೆರೆಗೂ, ಅಲ್ಲಿಯ ಡಾಕ್ಟರು ಕನ್ನಂಬಾಡಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ

ಈ ತಿಂಗಳಾರಂಭದಿಂದ ನಮ್ಮ ಶ್ರೀಮನ್ಮಹಾರಾಜರವರ ಬಳಿಯಲ್ಲಿ ದರ್ಬಾರ್ ಸರ್ಜನ್ ಕೆಲಸಕ್ಕೆ ಮೇಜರ್ ಫುಕ್ಸ್ ಎಂಬುವರು ನಿಯಮಿತರಾಗಿ, ಅವರು ಪತ್ನೀ ಸಮೇತರಾಗಿ ಬಂದು ತಮ್ಮ ಕೆಲಸವನ್ನು ವಹಿಸಿಕೊಂಡಿರುತ್ತಾರೆ ಇವರು ನಿತ್ಯವಲ್ಲೂ ೧-೨ ಗಂಟೆಯುಕಾಲ ಜನರಲ್ ಆಸ್ಪತ್ರೆಗೆ ಬಂದು ಶಸ್ತ್ರಮೊದಲಾದ ಚಿಕಿತ್ಸೆಗಳನ್ನು ಮಾಡುತ್ತಿರುವರೆಂದರಿಯುತ್ತೇವೆ.

ರಾಜಧಾನಿಯಲ್ಲಿ ಇದುವರೆಗೆ ರಾತ್ರಿ ೯ ಗಂಟೆಗೂ, ಬೆಳಗಿನ ೫ ಗಂಟೆಗೂ ಸಮಯ ಸೂಚಕವಾದ ಒಂದೊಂದು ಗುಂಡನ್ನು ಹಾರಿಸುತ್ತಿದ್ದರು. ಕಳೆದ ೩ ನೆಯ ತಾ॥ ನಿಂದ (ಚಕ್ರವರ್ತಿಯವರ ವರ್ಧಂತಿಯ ದಿನದಿಂದ) ಮಧ್ಯಾಹ್ನದ ೧೨ ಗಂಟೆಗೆ ಮತ್ತೊಂದು ಗುಂಡನ್ನು ಹಾರಿಸುವ ಏರ್ಪಾಟನ್ನು ಶ್ರೀಮನ್ಮಹಾರಾಜರವರು ಮಾಡಿಸಿರುತ್ತಾರೆ. ಆದರೆ ಹಗಲ ಹೊತ್ತಾದುದರಿಂದ ಜನರ ಕಲಕಲದಲ್ಲಿ ಒಂದು ಮೂಲೆಯಲ್ಲಿ ಹಾರಿಸುವ ಗುಂಡಿನ ಶಬ್ದವು ರಾಜಧಾನಿಯ ಎಲ್ಲಾ ಕಡೆಗೂ ಕೇಳುವುದಿಲ್ಲ

ಕಳೆದ ಮಂಗಳವಾರ ಮೂರುಜಾವದಲ್ಲಿ ರಾಜಧಾನಿಯಲ್ಲಿ ೧ ಗಂಟೆಯುಕಾಲ ಬಲವಾದ ಮಳೆಯಾಯಿತು. ವಿಪರೀತವಾಗಿ ಆಲಿಕಲ್ಲುಗಳು ಸುರಿದು ಹಾದಿಬೀದಿಯೆಲ್ಲಾ ಹರಡಿಕೊಂಡಿದ್ದುವು. ಮಾವಿನ ಫಲಕ್ಕೆ ಇದರಿಂದ ಸ್ವಲ್ಪ ಕೇಡಾಯಿತು. ಆದರೆ ಜೋಳ ಮೊದಲಾದ ಒಣಗುತ್ತಿದ್ದ ಪೈರಿಗೆ ಬಹಳ ಅನುಕೂಲವಾಯಿತು. ಅರಮನೆಯ ಶಿಖರದ ಮೇಲೆ ಇಟ್ಟಿದ್ದ ವಿದ್ಯುಚ್ಛಕ್ತಿ ದೀಪದ ಗಾಜಿನ ಬುರುಡೆಗಳಲ್ಲಿ ಕೆಲವು ಆಲಿಕಲ್ಲಿನೇಟಿನಿಂದ ಒಡೆದುಹೋಗಿರುವುವು. ಕಳೆದ ಶನಿವಾರವೂ ಹದವಾದ ಮಳೆಯಾಯಿತು.

ಬೆಂಗಳೂರಿನಲ್ಲಿ ಮುಂದಣ ಜನವರಿಯಿಂದ ಒಂದು ವ್ಯವಸಾಯದ ಶಾಲೆಯನ್ನು ನಮ್ಮ ಸರ್ಕಾರದವರು ಸ್ಥಾಪಿಸುವವರಾಗಿದ್ದಾರೆಂದು ಹಿಂದೆ ತಿಳುಹಿಸಿದ್ದೆವಷ್ಟೆ. ಇದರಲ್ಲಿ ವ್ಯವಸಾಯಶಾಸ್ತ್ರ, ರಸಾಯನಶಾಸ್ತ್ರ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ, ಪಶುವೈದ್ಯಶಾಸ್ತ್ರಗಳಲ್ಲಿ ಸಾಮಾನ್ಯವಾದ ತಿಳುವಳಿಕೆಯುಂಟಾಗುವಂತೆ ೨ ವರ್ಷಗಳವರೆಗೆ ವಿದ್ಯಾಭ್ಯಾಸ ಮಾಡಿಸುತ್ತಾರೆ ಅದಕ್ಕೆ ಸೇರುವ ವಿದ್ಯಾರ್ಥಿಗಳು ಜಮೀನ್ದಾರರ ಮಕ್ಕಳಾಗಿಯೂ, ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೂ, ಅಥವಾ ಮೆಟ್ರಿಕ್ಯುಲೇಷನ್ ತರಗತಿಯವರೆಗೆ ಓದಿ ಸ್ವಲ್ಪಮಟ್ಟಿಗೆ ಇಂಗ್ಲೀಷನ್ನು ಅರಿತವರಾಗಿಯೂ ಇರಬೇಕು. ಇವರುಗಳು ಹೆಬ್ಬಾಳಿನ ಪರೀಕ್ಷಾ ಕ್ಷೇತ್ರದಲ್ಲಿ ವಾಸಮಾಡಬೇಕು. ಇವರ ಊಟ ಉಪಚಾರಗಳಿಗೂ ವಾಸಕ್ಕೂ ತಕ್ಕ ಏರ್ಪಾಟನ್ನು ಗೌರ್ನಮೆಂಟಿನವರು ಮಾಡಿಸುವರು.

ಕಳೆದ ತಾ॥ ೧ ರಲ್ಲಿ ಮೈಸೂರಲ್ಲಿ ಕೂಡಿದ್ದ ನಿಯಮನಿರ್ಮಾಣ ಸಭೆಯಲ್ಲಿ ಚರ್ಚಿತವಾಗಿ ತೀರ್ಮಾನವಾದ ವಿಷಯಗಳಲ್ಲಿ ಇವು ಮುಖ್ಯವಾದುವು —(೧) ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಸ್ಥಳಿಕಕಾರ್ಯಗಳ ಅವಶ್ಯಕತೆಗಾಗಿ ಈಗಿರುವ ಭೂಗಂದಾಯದ ಮೇಲೆ ರೂಪಾಯಿ ೧ ಕ್ಕೆ ೩ ಕಾಸಿನಂತೆ ಹೆಚ್ಚಾಗಿ ಎತ್ತಿಕೊಂಡು ಒಂದು ಫಂಡನ್ನು ಕೂಡಿಸುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅಧಿಕಾರಕೊಡುವುದು (೨) ಮ್ಯುನಿಸಿಪಾಲಿಟಿಗಳು ತಮ್ಮ ಸ್ಥಳಿಕ ಕಾರ್ಯಗಳ ಅವಶ್ಯಕತೆಗಾಗಿ ಸರ್ಕಾರದಪ್ಪಣೆ ಪಡೆದು ಸರ್ಕಾರದಿಂದಲೋ ಅಥವಾ ಪ್ರಜೆಗಳಿಂದಲೋ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಗೆ ಅಧಿಕಾರ ಕೊಡುವುದು. (೩) ಮ್ಯುನಿಸಿಪಲ್ ಎಲ್ಲೆಯೊಳಗಿರುವ ಮನೆ ಯಜಮಾನರುಗಳು ತಮ್ಮ ಮನೆ ಮೊದಲಾದುವುಗಳನ್ನು ಇತರರಿಗೆ ಕ್ರಯಾದಿಗಳನ್ನು ಮಾಡಿದರೆ, ಅಂಥ ಪರಾಧೀನತೆಯನ್ನು ಕುರಿತು ಮ್ಯುನಿಸಿಪಾಲಿಟಿಗೆ ಲಿಖಿತ ಮೂಲಕವಾಗಿ ಒಂದು ವರ್ಷದೊಳಗಾಗಿ ತಿಳುಹಿಸಬೇಕು, ಅದಕ್ಕೆ ತಪ್ಪಿದವರಿಗೆ ೫೦ ರೂ. ಗಳ ವರೆಗೆ ಅರ್ಥದಂಡವಾಗಬೇಕು. (೪) ಇನಾಂದಾರರಿಗೆ ತಮ್ಮ ಗ್ರಾಮಗಳ ಕ್ರೈತರಿಂದ ಬಾಕಿ ನಿಂತಿರುವ ೩ ವರ್ಷಗಳ ಹಿಂದಿನ ಕಂದಾಯವನ್ನೆಲ್ಲಾ ವಸೂಲುಮಾಡಿಕೊಳ್ಳುವ ಅಧಿಕಾರವನ್ನು ಕೊಡಬೇಕು.

ವರ್ತಮಾನ ಸಂಗ್ರಹವು.

ಸೋಲಾಪುರ–ಸಿಕಂದರಾಬಾದು–ಲೋನಾವಾಲಾಗಳಲ್ಲಿ ವಾಂತಿಭೇದಿ ರೋಗವು ವ್ಯಾಪಿಸಿಕೊಂಡಿದೆ.

ಇಂಗ್ಲೆಂಡಿನಲ್ಲಿ ೫೩,೦೦೦ ಜಾಯಿಂಟ್ ಸ್ಟಾಕ್ ಕಂಪೆನಿಗಳಿವೆ. ಅದಕ್ಕೆ ಹಾಕಿರುವ ಭಾಗಸ್ಥರ ಹಣವು ೩೦೦ ಕೋಟಿ ರೂ. ಗಳು.

ಪ್ರಪಂಚದಲ್ಲಿ ಎಲ್ಲಾ ರಾಜ್ಯದವರೂ ವರ್ಷ ೧ ಕ್ಕೆ ಯುದ್ಧನಾವೆಗಳಿಗಾಗಿ ೨೦೬॥ ಕೋಟಿ ರೂ. ಗಳನ್ನು ವೆಚ್ಚ ಮಾಡುತ್ತಿರುವರು.

ಪುದುಚೇರಿಯಲ್ಲಿ ವಾಸವಾಗಿರುವ ಮಿ॥ ಅರವಿಂದಘೋಷರೇ ಮೊದಲಾದ ಕೆಲರ ಮನೆಗಳು ಈ ಮಧ್ಯೆ ಪೋಲೀಸರಿಂದ ಪರಿಶೋಧಿಸಲ್ಪಟ್ಟವು.

ಕಳೆದವರ್ಷ ಇಂಗ್ಲೆಂಡಿನಲ್ಲಿ ಲೋಹಮಾರ್ಗದ ಅನಾಹುತದಿಂದಲೇ ೧೫೮ ಮಂದಿಗಳು ಸತ್ತರು. ೩೦೫೮ ಮಂದಿಗಳಿಗೆ ಗಾಯವಾಯಿತು.

ಬಂಗಾಳಾ ದೇಶದಲ್ಲಿ ೫೦ ಸಾವಿರ ರೂ. ಗಳ ಸರ್ಕಾರದ ಸಹಾಯದಿಂದ ನಡೆಯುತ್ತಿದ್ದ "ಸುಲಭ ಸಮಾಚಾರ" ವೆಂಬ ಪತ್ರವು ನಿಂತುಹೋಯಿತು

ಟಿಟಾನಿಕ್ ಹಡಗು ಮುಳುಗಿ ಹೋಗುವಾಗಿನ ರೀತಿಯನ್ನು ಕಲ್ಕತ್ತಾ ಬೊಂಬಾಯಿ ಪಟ್ಟಣದಲ್ಲಿ ಈಗ ಸಿನೋಮೆಟೋಗ್ರಾಫುಗಳಲ್ಲಿ ತೋರಿಸುತ್ತಿದ್ದಾರೆ.

ಮಿ॥ ಗೋಖಲೆಯವರು ಸುರಕ್ಷಿತವಾಗಿ ಲಂಡನ್ನನ್ನು ಸೇರಿದರು. ಸಮುದ್ರಯಾನದಿಂದ ಅವರ ಆರೋಗ್ಯವು ಕುದಿರಿರುತ್ತದೆಂದು ಕೇಳಿ ಸಂತೋಷಿಸುತ್ತೇವೆ.

೧೬೫೮ ನೆಯ ವರ್ಷಕ್ಕೆ ಮುಂಚೆ ಇಂಗ್ಲೆಂಡಿನಲ್ಲಿ ಟೀ ಸೊಪ್ಪು ಪೌಂಡ್ ೧ ಕ್ಕೆ ೧೫೦ ರೂ. ಗೆ ಮಾರಲ್ಪಡುತ್ತಿದ್ದಿತು. ಈಗ ೧೨ ಆಣೆಗೆ ಮಾರಲ್ಪಡುತ್ತಿದೆ.

ತಿಂಗಳಿಗೆ ೧೨೦ ರೂ. ಕೂಲಿ ಕೊಡುತ್ತೇವೆಂದು ಯಜಮಾನರು ಹೇಳಿದರೂ ಲಂಡನ್ನಿನಲ್ಲಿ ಮೂಟೆಹೊರುವ ಕೂಲಿಯವರುಗಳು ಒಪ್ಪದೆ ಕೆಲಸಕ್ಕೆ ಬರದೆ ನಿಂತಿದ್ದಾರೆ.

ಬಂಗಾಳಾ ದೇಶದ ಚಿತ್ತಗಂಗಾದಲ್ಲಿ ಮೋಸದ ಬೀಮಾ ಕಂಪನಿಗಳು ೨೫ ರ ಮೇಲೆ ಸರ್ಕಾರದವರು ದ್ರವ್ಯಾಪಹಾರ ಮಾಡಿದ ಅಪರಾಧವನ್ನು ಹೊರಿಸಿ ವಿಚಾರಣೆಗೆ ಗುರಿಮಾಡಿದ್ದಾರೆ.

ಕೇಸರಿ ಪತ್ರಿಕೆಯಲ್ಲಿ ಸರ್ಕಾರಕ್ಕೆ ವಿರುದ್ಧವಾದ ಲೇಖನಗಳು ಬರುತ್ತಿದ್ದುದರಿಂದ ಅದರ ಅಧಿಕಾರಿಯು ೫ ಸಾವಿರ ರೂ. ಗಳನ್ನು ಸರ್ಕಾರದಲ್ಲಿ ಹೊಣೆಯಾಗಿಡಬೇಕೆಂದು ಅಪ್ಪಣೆಯಾಗಿದ್ದಲ್ಲು, ಅದರಂತೆ ಸಂಪಾದಕರು ಸರ್ಕಾರಕ್ಕೆ ಹಣವನ್ನು ಕಟ್ಟಿದ್ದಾರೆ.

ಬಂಗಾಳಾದ ನಿಯಮನಿರ್ಮಾಣ ಸಭೆಯ ನಿಬಂಧನೆಗಳನ್ನು ಕುರಿತು ವಿಚಾರಮಾಡುವುದಕ್ಕಾಗಿ ಅಲ್ಲಿನ ಗೌರ್ನರಾದ ಕಾರ್ಮಿಕೆಲ್ ಪ್ರಭುಗಳು ಸುರೇಂದ್ರನಾಥ ಬಾನರ್ಜಿ–ಭೂಪೇಂದ್ರನಾಥಬಾಸುರವರುಗಳನ್ನು ಡಾರ್ಜಿಲಿಂಗಿಗೆ ಬರಮಾಡಿಕೊಂಡಿರುವರು.

ದಿಲ್ಲಿಯಲ್ಲಿ ಯಾವ ಸ್ಥಳದೊಳಗೆ ಸರ್ಕಾರದ ಕಟ್ಟಡಗಳನ್ನು ಕಟ್ಟಬೇಕೆಂಬುದನ್ನು ಪರೀಕ್ಷಿಸಿ ಗೊತ್ತುಮಾಡುವುದಕ್ಕೆ ಬಂದಿರುವ ಅಧಿಕಾರಿಗಳು, ಈ ವರ್ಷದ ಮಳೆಗಾಲದಲ್ಲಿ ಅಲ್ಲಿನ ಸ್ಥಿತಿಯನ್ನು ನೋಡಿದನಂತರ ಯಾವ ಸ್ಥಳದಲ್ಲಿ ಕಟ್ಟಬೇಕೆಂಬುದನ್ನು ನಿರ್ಧರಿಸಿ ಹೇಳುವವರಾಗಿದ್ದಾರೆ.

ಬೊಂಬಾಯಿ ಗೌರ್ನರಾದ ಸರ್ ಜಾರ್ಜ್ ಕ್ಲಾರ್ಕ್ ರವರು ಇಷ್ಟರಲ್ಲೇ ಕೆಲಸವನ್ನು ಬಿಟ್ಟು ಸೀಮೆಗೆ ಪ್ರಯಾಣಮಾಡುವವರಾಗಿರುವರು ಕಳೆದ ತಾ॥ ೬ ರಲ್ಲಿ ಆ ದಂಪತಿಗಳಿಗೆ ಮಹಾಬಲೇಶ್ವರದಲ್ಲಿರುವ ಪಾರ್ಸಿ ಜಿಂಖಾನಾ ಭವನದಲ್ಲಿ ಸಾಗಗಳುಹಿಸುವ ವಿನೋದೋತ್ಸವಗಳು ಜರುಗಿದುವು.

ಯುದ್ಧವು ಬಹುಕಾಲ ಜರುಗುವುದಿಲ್ಲವೆಂತಲೂ, ತುರ್ಕಿಯು ಬೇಗನೆ ಅಧೀನವಾಗದಿದ್ದಲ್ಲಿ ಈಗಿಂತಲೂ ಹೆಚ್ಚಾಗಿ ಅದನ್ನು ದಂಡಿಸಬೇಕಾಗಿ ಬರುವುದೆಂತಲೂ, ಇಟಲಿಯ ವಿದೇಶಾಂಗ ಮಂತ್ರಿಯು ಡೇಲಿ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯೊಡನೆ ನುಡಿದಿರುವನು. ಇಂಥ ದರ್ಬಿನ ಮಾತನ್ನು ಆ ಮಂತ್ರಿಯು ಯುದ್ಧಾರಂಭದಿಂದಲೂ ಆಡುತ್ತಲೇ ಇರುವನು.

ಅಮೇರಿಕಾಕ್ಕೂ ಇಂಗ್ಲೆಂಡಿಗೂ ಅಟ್ಲಾಂಟಿಕ್ ಸಮುದ್ರದಮೇಲೆ ಮೊಟ್ಟಮೊದಲು ವಾರ್ತೆಯ ತಂತಿಗಳನ್ನು ಹಾಕಬೇಕಾದರೆ ಬಹು ಪ್ರಯಾಸವಾಯಿತು. ಹಾಕಿದ ತಂತಿಗಳು ಜಾರಿ ಸಮುದ್ರದೊಳಗೆ ಮುಳುಗಿ ಹೋಗುತಿದ್ದುವು ಪುನಃ ಅವನ್ನು ಮೇಲಕ್ಕೆತ್ತುತ್ತಿದ್ದರು. ಹೀಗೆ ಮೂವತ್ತು ಬಾರಿ ಮಾಡಿದಮೇಲೆ ಶಾಶ್ವತವಾಗಿ ತಂತಿಗಳ ಸ್ಥಾಪನೆಯು ಆಯಿತು.

ಬೊಂಬಾಯಿಯವರು ಬೇಸಗೆಯನ್ನು ಕಳೆಯುವುದಕ್ಕಾಗಿ ಮಹಾಬಲೇಶ್ವರವೆಂಬ ಪರ್ವತ ಪ್ರಾಂತಕ್ಕೆ ಹೋಗುವುದುಂಟು. ಈಗ ಅಲ್ಲಿಗೆ ಹೋಗುವುದಕ್ಕೆ ೨ ದಿನಗಳು ಹಿಡಿಯುತ್ತವೆ. ಮುಂದಣ ವರ್ಷದಿಂದ ಆಕಾಶಯಾನದ ಮೂಲಕ ೨ ಗಂಟೆಯೊಳಗೆ ಸೇರುವಂತೆ ಏರ್ಪಾಡು ಮಾಡುವುದಕ್ಕಾಗಿ ಅಲ್ಲಿನ ಕೆಲ ವರ್ತಕರಾದ ಪಾರ್ಸಿಯವರು ಯೋಚಿಸುತ್ತಿದ್ದಾರೆ.

ಟಿಟಾನಿಕ್ಕಿನಿಂದ ಹತಶೇಷರಾದವರನ್ನು ಏರಿಸಿಕೊಂಡು ಬಂದ ಕಾರ್ಪೆಥಿಯಾ ಹಡಗನ್ನು ನಡೆಯಿಸುತ್ತಿದ್ದ ರೋಸ್ಟ್ರನಿಗೆ ಅಮೇರಿಕಾದವರು ಈಗ ಎಲ್ಲೆಲ್ಲೂ ಔತಣಮಾಡುತ್ತಿದ್ದಾರೆ. ಮೃತರಾದ ಆಸ್ಟರ್—ಘೆಯರ್—ವಿಡಿನರ್ ಎಂಬ ಕೋಟೀಶ್ವರರುಗಳ ಪತ್ನಿಯರು ಈತನಿಗೆ ಔತಣವನ್ನು ಮಾಡಿಸಿದರು. ಅಲ್ಲಿ ಪ್ರಜಾಪ್ರತಿನಿಧಿ ಸಂಘದವರು ೪೦೦೦ ರೂ. ನ ಭಂಗಾರದ ಪದಕವನ್ನು ಆತನಿಗೆ ಬಹುಮಾನಿಸಬೇಕೆಂದಿದ್ದಾರೆ.

ಬೊಂಬಾಯಿ ಗೌರ್ನರಿಗೆ ಮಹಾಬಲೇಶ್ವರದಲ್ಲಿ ಔತಣ ನಡೆದಾಗ ಅವರು– ಕಳೆದ ೪೦ ವರ್ಷಗಳಿಂದ ತಾವು ನಾನಾದೇಶಗಳಲ್ಲಿ ರಾಜಕಾರ್ಯ ಮಾಡಿದೆವೆಂದೂ, ಈಗ ವಿಶ್ರಾಂತಿಯನ್ನು ಪಡೆದುಕೊಳ್ಳಬೇಕಾದ ಕಾಲವು ಬಂದಿದ್ದರೂ, ಹಿಂದೂದೇಶದಲ್ಲಿರುವುದಕ್ಕೆ ತಮಗೂ ತಮ್ಮ ಪತ್ನಿಯವರಿಗೂ ಇರುವ ಆಸಕ್ತಿಯು ಕಡಿಮೆಯಾಗಿಲ್ಲವೆಂದೂ, ಹಿಂದೂದೇಶವು ಮುಂದೆ ಉನ್ನತದಶೆಗೆ ಬರುವುದೆಂದೂ, ತಾವು ಕಳೆದ ೫ ವರ್ಷಗಳಿಂದ ಈ ದೇಶದ ಹಿತಕ್ಕಾಗಿ ಪಾಟುಪಟ್ಟುದರ ಚರಿತ್ರವನ್ನು ಬರೆಯುವ ಕಾಲವು ಇನ್ನೂ ಬಂದಿಲ್ಲವೆಂದೂ ಉತ್ತರವಿತ್ತರು.

ಬೊಂಬಾಯಿಯಲ್ಲಿ ಕಳೆದ ಮಂಗಳವಾರ ಸಾಯಂಕಾಲ ದೊಡ್ಡ ಬಿರುಗಾಳಿಯೆದ್ದು ಬೀದಿಯಲ್ಲಿ ಒಬ್ಬರ ಮುಖವೊಬ್ಬರಿಗೆ ಕಾಣದಂತಾಯಿತು. ಬೀದಿಯ ದೂಳಿಯು ಮನುಷ್ಯರ ಕಣ್ಣಿಗೂ ಮನೆಮಠಗಳಿಗೂ ವಿಪರೀತವಾಗಿ ತುಂಬಿತು. ಎಷ್ಟೋ ಮರಗಳು ಮುರಿದುಬಿದ್ದವು. ಸಮುದ್ರದ ತೀರದಲ್ಲಿ ಕೆಲದೋಣಿಗಳು ಮುಳುಗಿಹೋದುವು. ೩॥ ಗಂಟೆಯ ಮೇಲೆ ಗಾಳಿ ನಿಂತು ಮಳೆಗಾರಂಭವಾಯಿತು ೨ ತಿಂಗಳಿನಿಂದಲೂ ಮಳೆಯಿಲ್ಲದೆ ಬಿಸಲಿನಿಂದ ಬೆಯ್ಯುತ್ತಿದ್ದವರ ಶರೀರವೆಲ್ಲಾ ತಣ್ಣಗಾಯಿತು. ಅದೊಂದೇ ದಿನದ ಮಳೆಗೆ ಉಷ್ಣಮಾಪಕ ಯಂತ್ರದಲ್ಲಿ ೩ ಅಂಶವು ಕಡಿಮೆಯಾಯಿತು

ಗತಿಸಿದ ಸ್ಟೆಡ್ ರವರು ಈ ಮಧ್ಯೆ ಇಂಗ್ಲೆಂಡಿನಲ್ಲಿರುವ ದಿವ್ಯಜ್ಞಾನ ಸಮಾಜದ ಒಬ್ಬ ಸ್ತ್ರೀಯ ಸ್ವಪ್ನದಲ್ಲಿ ಬಂದು, ಒಂದು ಲೇಖನವನ್ನು ಬರೆಯೆಂದು ಹೇಳಲು, ಆಕೆಯು ಎದ್ದು ಮಸಿಕುಡಿಕೆಯನ್ನೂ, ಲೇಖನಿಯನ್ನೂ ತೆಗೆದುಕೊಂಡು ಸಿದ್ಧಳಾಗಲು, "ಟಿಟಾನಿಕ್ ಹಡಗಿನಲ್ಲಿ ಮುಳುಗಿಹೋದವರ ಆತ್ಮಗಳಿಗೆ ಶಾಂತಿಯುಂಟಾಗಿಲ್ಲ. ಈ ಲೋಕದ ಜನರ ಪ್ರಾರ್ಥನೆಯಿಂದ ಆ ಶಾಂತಿಯುಂಟಾಗುವುದಿಲ್ಲ. ನಿಮ್ಮ ಸನಾತನತತ್ತ್ವ [illegible] ನಾನೂ ಪ್ರಾರ್ಥನೆಗೆ ಸಮಯವಿಲ್ಲ" ಎಂದು ಹೇಳಿದರಂತೆ! ಈ ವಿಷಯವನ್ನು ಆಕೆಯು ಲೈಟ್ ಎಂಬ ಪತ್ರಿಕೆಗೆ ಬರೆದಿದ್ದಾಳೆ. ಇದು ನಿಜವಾಗಲಿ ಸುಳ್ಳಾಗಲಿ ಓದುವುದಕ್ಕೆ ರಂಜನೆಯಾಗಿದೆ.

ಈಗ ಕಾರಾಗೃಹ ಬಂಧನದಲ್ಲಿರುವ ಮಿ॥ ಬಾಲಗಂಗಾಧರ ತಿಲಕರವರ ಧರ್ಮಪತ್ನಿ ಸೌ॥ ಸತ್ಯಭಾಮಾಬಾಯಿ ಎಂಬುವರು ತಮ್ಮ ಪತಿಯವರಿಗೆ ೬ ವರ್ಷದ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟ ದಿನ ಅಂದರೆ ೧೯೦೮ ನೆಯ ಜುಲೈ ತಾ॥ ೨೨ ರಲ್ಲಿ ಪ್ರಾರಬ್ಧವಾದ ಮನೋವ್ಯಾಕುಲದಿಂದ ಪೀಡಿತರಾಗಿದ್ದು ಕಳೆದ ತಾ॥ ೭ ರ ರಾತ್ರಿ ಪೂನಾದಲ್ಲಿರುವ ತಮ್ಮ ಗೃಹದಲ್ಲಿ ವಿಧಿವಶರಾದರೆಂದು ತಿಳುಹಲು ವ್ಯಸನವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ ೫೦ ವರ್ಷ ವಯಸ್ಸಾಗಿದ್ದಿತು. ಮತ್ತು ಮೂರುಜನ ಹೆಣ್ಣುಮಕ್ಕಳೂ, ಇಬ್ಬರು ಗಂಡುಮಕ್ಕಳೂ ಇವರು. ಅವಸಾನಕಾಲದಲ್ಲಿ ಪತಿಯ ಮುಖದರ್ಶನಮಾಡಲಿಕ್ಕಿಲ್ಲವಾದುದಕ್ಕಾಗಿ ಆಕೆಯವರಿಗುಂಟಾಗಿದ್ದ ಸಂಕಟವನ್ನೂ ೪ ವರ್ಷಗಳ ಹಿಂದೆ ಅಗಲಿದ ಪತ್ನಿಯನ್ನು ಪುನಃ ಸೇರದಂತಾದುದಕ್ಕಾಗಿ ಮಿ॥ ತಿಲಕರವರಿಗೆ ಪ್ರಾಪ್ತವಾಗಿರುವ ವ್ಯಾಕುಲವನ್ನೂ ಎಷ್ಟೆಂದರೂ ತೀರದುದಾಗಿದೆ.

ಲಂಡನ್ ಪಟ್ಟಣದ ಪ್ಲೀಟ್ ಎಂಬ ಬೀದಿಯಲ್ಲಿ ಒಬ್ಬ ಅಮೇರಿಕಾದವನು ೧॥ ಸಾವಿರ ರೂ. ಗಳ ಚಿನ್ನದ ನಾಣ್ಯಗಳನ್ನು ಬೀದಿಯಲ್ಲಿ ಚೆಲ್ಲಿಬಿಟ್ಟನು. ಅದನ್ನು ಆರಿಸಿಕೊಳ್ಳುವುದಕ್ಕೆ ಜನರು ಗುಂಪು ಕೂಡಿಕೊಳ್ಳಲು, ಬಂಡಿ ಮೊದಲಾದುವುಗಳ ಸಂಚಾರಕ್ಕೆ ಅಡ್ಡಿಯಾಯಿತು. ಆ ಅಮೇರಿಕಾದವನನ್ನು ಪೋಲೀಸರು ಹಿಡಿದು, ದಂಡಾಧಿಕಾರಿಯಬಳಿಗೆ ನಿಲ್ಲಿಸಿದಾಗ, ತಾನು ಇಳಿಯಬೇಕಾಗಿದ್ದ ಭೋಜನಶಾಲೆಗೆ ಹೋಗಲು ಬಾಗಿಲನ್ನು ಮುಚ್ಚಿದ್ದಿತೆಂದೂ, ಎಲ್ಲೆಲ್ಲಿಗೆ ಹೋದರೂ ಸ್ಥಳವು ದೊರೆಯಲಿಲ್ಲವೆಂದೂ, ಜೇಬಿನಲ್ಲಿ ಆ ಹಣದ ಹೊರೆಯು ಹೊರಲಾರದಷ್ಟಾಗಿದ್ದಿತೆಂದೂ, ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹೀಗೆ ಬಿಸುಡಿಬಿಟ್ಟೆನೆಂದೂ ವಾಙ್ಮೂಲವನ್ನು ಕೊಟ್ಟನು. ಬಳಿಕ ದಂಡಾಧಿಕಾರಿಯು ಅವನನ್ನು ಪೂರ್ಣ ಶ್ರೀಮಂತನಾಗಿರಬೇಕೆಂದು ತಿಳಿದು, "ಎಲೆ ಬುದ್ಧಿಹೀನನೇ ನಿನಗೆ ಹಣವನ್ನು ದಾನಮಾಡುವುದಕ್ಕೆ ಅನೇಕ ಉತ್ತಮ ಮಾರ್ಗಗಳಿರುವುವು. ಇನ್ನು ಮುಂದೆ ಹೀಗೆ ಮಾಡಬೇಡ" ಎಂದು ಹೇಳಿ ಬಿಡಿಸಿಬಿಟ್ಟನು.

ವರ್ತಮಾನಸಾರವು.

ದಾವಣಗೆರೆ ತಾಲ್ಲೂಕು ಅಣಜಿ

ಇದೇ ಗ್ರಾಮದಲ್ಲಿರುವ ಕಡಬಗೆರೆ ಮ॥ ರಾ॥ ದೊಡ್ಡ ನಾಗಪ್ಪನೆಂಬುವರು ತಮ್ಮ ಪುತ್ರಿ ಚಿ॥ ಸೌ॥ ಚೆನ್ನಬಸಮ್ಮನನ್ನು, ಮೆಳ್ಳೆಕಟ್ಟೆ ಗ್ರಾಮದಲ್ಲಿರುವ ಮ॥ ಬೇತೂರು ವೀರಪ್ಪನವರ ಮಗ ರಾ॥ ವೀರಬಸಪ್ಪನಿಗೆ ಕೊಟ್ಟು ತಮ್ಮ ಗೃಹದಲ್ಲಿ ವೈಶಾಖ ಬ॥ ೭ ರಲ್ಲು ವಿವಾಹಮಹೋತ್ಸವವನ್ನು ಪೂರೈಸಿದರು. ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೋಸ್ಕರ ವಧುವಿನ ತಂದೆಯವರಾದ ಮ॥ ರಾ॥ ದೊಡ್ಡ ನಾಗಪ್ಪನವರಿಂದ ೨ ರೂ. ವರನ ಚಿಕ್ಕಪ್ಪಂದಿರಾದ ಮ॥ ರಾ॥ ಬಸವಲಿಂಗಪ್ಪನವರಿಂದ ೨ ರೂ ಮುಮ್ಮಾ ೪ ರೂ. ಕಳುಹಿಸಿಕೊಡಲು ನನ್ನ ವಶಕ್ಕೆ ಕೊಟ್ಟದ್ದನ್ನು ಎಂ. ಎಲ್. ಇ ಫಂಡಿನ ಸೆಕ್ರಿಟರಿಯವರ ಅಪ್ಪಣೆ ಕಳುಹಿಸಿಕೊಡಲು ಮ॥ ರಾ॥ ಶ್ರೀ॥ ಪಡ್ಡರ್ ಎಷಿಬರವರಲ್ಲಿಗೆ ಈ ದಿನ ರವಾನಿಸಿರುತ್ತೇನೆ.

ತಾ॥ ೩೦-೫-೧೨ ವೀರಶೈವ ಮತಾಭಿಮಾನಿ

ಚಿಕ್ಕೋಡಿ ತಾಲ್ಲೂಕು ಬೊಕ್ಕೇರಿ.

ಕಳೆದ ಮೆ ತಿಂಗಳು ೨೩ ನೇ ಬುಧವಾರದ ದಿನ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ ಎಸ್ ಐ, ಯವರ ವರ್ಧಂತ್ಯುತ್ಸವದ ನಿಮಿತ್ತವಾಗಿ ಈ ಗ್ರಾಮದ [illegible] ವಾಗಿ ತಳಿರುತೋರಣಗಳಿಂದ ಅಲಂಕರಿಸಿ ಮ॥ ರಾ॥ ಪಟೇಲ್ ವೀರಣ್ಣನವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆದು ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಶೃಂಗಾರ ಪೀಠದಲ್ಲಿ ಮುಹೂರ್ತಗೊಳಿಸಿ ದೈವಭಕ್ತಿ ಮತ್ತು ರಾಜಭಕ್ತಿಗಳ ವಿಷಯಕವಾದ ಉಪನ್ಯಾಸಗಳು ನಡೆದ ತರುವಾಯ ಜಗದೀಶನು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಯವರಿಗೂ, ಶ್ರೀಮನ್ ಯುವರಾಜರವರಿಗೂ, ರಾಜಕುಟುಂಬಕ್ಕೂ ದೀರ್ಘಾಯುರಾರೋಗ್ಯಗಳನ್ನು ಸರ್ವದಾ ಕೊಟ್ಟು ಕಾಪಾಡುತ್ತಾ ಬರಲೆಂದು ಜಗದೀಶನನ್ನು ಪ್ರಾರ್ಥಿಸಿ, ಕರತಾಡನದ ಮೂಲಕ ತಮ್ಮತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದುದಲ್ಲದೆ ಬಾಲಕರಿಂದ ಆಟಪಾಟಗಳ ವಿನೋದೋತ್ಸವವನ್ನು ನಡೆಸಿ, ಗಂಧಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ವಿದ್ಯಾ ಸುಧಾರಣೆಯ ಬಗ್ಗೆ ದ್ರವ್ಯದ ಅನುಕೂಲತೆಯೇ ಕಾರಣವಾಗಿರುವುದರಿಂದ ಧನ ಸಂಚಯವನ್ನು ಯಾವತ್ತೂ ಸುಲಭ ಮಾರ್ಗಗಳಿಂದ ಮಾಡುವುದು ಅತ್ಯವಶ್ಯವು ನಮ್ಮ ಸಮಾಜದ ಉನ್ನತಿಗೆ ವಿದ್ಯೆಯೇ ಮೂಲಕಾರಣವಾಗಿರುವುದು. ಆದಕಾರಣ ನಮ್ಮ ಸಮಾಜ ಹಿತಚಿಂತಕರು ಪರಿಶ್ರಮಪಟ್ಟು ಅಲ್ಲಲ್ಲಿಗೆ ಫಂಡುಗಳನ್ನು ಕೂಡಿಸಿದ್ದು ಸರ್ವರಿಗೂ ವಿದಿತವಷ್ಟೆ. ಕೆಳಗೆ ಕಾಣಿಸಿದ ವಿದ್ಯಾಭಿಮಾನಿ ಸದ್ಗೃಹಸ್ಥರು ತಮ್ಮ ಲಗ್ನಾದಿ ಕಾರ್ಯಗಳಲ್ಲಿ ವಿದ್ಯಾ ಸಂಸ್ಥೆಗಳಿಗೆ ಕೆಳಗೆ ಬರೆದ ಪ್ರಕಾರ ಸಹಾಯಮಾಡಿರುತ್ತಾರೆ. ಇದರಂತೆ ಯಾವತ್ತು ಮಹನೀಯರು ಸಹಾಯಮಾಡಿ ವಿದ್ಯಾದಾನ ಪುಣ್ಯಭಾಗಿಗಳಾಗಬೇಕೆಂದು ಸವಿನಯ ಪ್ರಾರ್ಥನೆಯುವೆ.

ಬಾಗಲಕೋಟೆ ಮ್ಯುನ್ಸಿಪಲ್ ಕೌನ್ಸಿಲರಾದ ಮ॥ ಅಯ್ಯಪ್ಪ ಬ್ಯಾಳಿಯವರು ತಮ್ಮ ಸಹೋದರಿಯನ್ನು ಗದಗಿನ ದುಂದೂರ ರಾಚಪ್ಪನವರ ಸುಪುತ್ರ ಹುಚ್ಚಪ್ಪನಿಗೆ ಕೊಟ್ಟು ನಿಶ್ಚಿತಾರ್ಥಮಾಡಿದ ಕಾಲದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ವ ಬಾಗಲಕೋಟೆಯ ವಾರದ ಬೋರ್ಡಿಂಗಿಗೆ ೧೦ ರೂ. ಗಳನ್ನೂ ಮತ್ತು ರಾಚಪ್ಪಾ ದುಂದೂರ ಇವರು ೫ ರೂ. ಗಳನ್ನು ಕೊಟ್ಟಿರುವರು. ಇದಲ್ಲದೆ ಇವರದೇ ಲಗ್ನವು ವೈ॥ ಶು॥ ೧೨ ರವಿವಾರ ಗದಗ ಮುಕ್ಕಾಮಿನಲ್ಲಿ ಆಯಿತು. ಆಗ್ಗೆ ದುಂದೂರ ಇವರು ೧೧ ರೂ. ಗಳನ್ನೂ, ಮ॥ ಅಯ್ಯಪ್ಪಾ ಬ್ಯಾಳಿ ಇವರು ಧಾರವಾಡ ವಿದ್ಯಾವರ್ಧಕ ಫಂಡಿಗೆ ೫ ರೂ ಗಳನ್ನೂ ಶ್ರೀ ಶಿವಯೋಗ ಮಂದಿರಕ್ಕೆ ೫ ರೂ. ಗಳನ್ನೂ ಕೊಟ್ಟಿರುತ್ತಾರೆ.

ಇದೇ ತಾಲ್ಲೂಕು ಪೈಕಿ ಮುರನಾಳೆಂಬ ಗ್ರಾಮದ ತಮ್ಮಣ್ಣಪ್ಪಾ ದೊಡ್ಡಮನಿ ಇವರು ತಮ್ಮ ಪುತ್ರರ ಲಗ್ನದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ೫ ರೂ. ಗಳನ್ನು ಕೊಟ್ಟಿರುತ್ತಾರೆ.

ಇದರಂತೆ ಶಿವಮೂರಿಯಪ್ಪಾ ಸೋಮಯ್ಯಾ ಜಂಗಿನ ಬಾಗಲಕೋಟೆ ಇವರಿಗೆ ಕೊಪ್ಪಳದಲ್ಲಿರುವ ಪದ್ದನಾಳ ಹಿರೇಮಠದ ವಿರೂಪಾಕ್ಷಯ್ಯನವರ ಸುಪುತ್ರಿ ಸಾವಿತ್ರವ್ವನನ್ನು ಕೊಟ್ಟು ನಿಶ್ಚಿತಾರ್ಥವಾದ ಕಾಲದಲ್ಲಿ ಇವರು ೨ ರೂ. ಗಳನ್ನು ಶ್ರೀ ಶಿವಯೋಗಮಂದಿರಕ್ಕೆ ಕೊಟ್ಟಿರುತ್ತಾರೆ.

ಇದನ್ನನುಸರಿಸಿ ವೀರಬಸಪ್ಪಾ ಗಾಣಿಗೇರ ಇವರು ತಮ್ಮ ಪುತ್ರನ ಲಗ್ನದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ಮತ್ತು ವಾರದ ಬೋರ್ಡಿಂಗಿಗೆ ೫ ರೂ ಗಳನ್ನು ಕೊಟ್ಟಿರುತ್ತಾರೆ.

ಇದೇ ಪ್ರಕಾರವಾಗಿ ಎಲ್ಲ ಮಹನೀಯರೂ ಸಹಾಯ ಮಾಡುತ್ತಾ ಹೋದರೆ ಯಾರಿಗೂ ಏನೂ ಭಾರವಿಲ್ಲದೆ, ಸಮಾಜದಲ್ಲಿಯ ವಿದ್ಯೋನ್ನತಿಯ ಕೆಲಸಗಳು ನಿರ್ವಿಘ್ನವಾಗಿ ನಡೆಯುವವು.

ಶ್ರೀಶಿವಯೋಗಮಂದಿರದ ವ್ಯವಸ್ಥಾಪಕ.

೧೯೧೧-೧೨ ರಲ್ಲಿ ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡಿಗೆ ವಿವಾಹ, ದೀಕ್ಷಾ, ಮರಣ ವಗೈರೆ ಧಾರ್ಮಿಕ ಕಾರ್ಯಗಳಲ್ಲಿ ಕಾಣಿಕೆ ಸಲ್ಲಿಸಿದವರ ಹೆಸರುಗಳು:—

ಯಾತ್ರೆ ಮಹೋತ್ಸವಕಾಲದಲ್ಲಿ—

೧. ಶ್ರೀ ಗುಬ್ಬಿ ಮಹಾಸ್ವಾಮಿಗಳವರು ಯೊರಿತ್ತಿ ... ... ೯೧—೦—೦

ದೀಕ್ಷಾಕಾಲದಲ್ಲಿ—

೨. ಶಿವಲಿಂಗಯ್ಯಾ ಗವಿಸೆಯ್ಯಾ ಹಿರೇಮಠ ಕತಗಾವ ಕೊಲ್ಲಾಪುರ ಇಲಾಖಾ ೧೩—೮—೦

ವಿವಾಹಕಾಲದಲ್ಲಿ—

೩. ನವಲಗುಂದದ ಹಣ್ಣುಬಸಪ್ಪಾ ಯೋಗಪ್ಪ ಬಸಲೀಶ್ವರ ಪೇಟ ಹುಬ್ಬಳ್ಳಿ ೨೫—೦—೦
೪. ವೀರಪ್ಪ ಅನ್ನದಾನಪ್ಪಾ ಮಾಳ್ವಿ ಗದಗ ೧೦೦—೦—೦
೫. ಬಸಪ್ಪಾ ಪಾಟೀಲ ಹುಬ್ಬಳ್ಳಿ ... ೧೦೦—೦—೦
೬. ಅಡಿವೆಪ್ಪಾ ಶಿವಪ್ಪಾ ತುರ್ಮರಿ ಗದಗ ೨೫—೦—೦
೭. ಚೆನ್ನಬಸಪ್ಪಾ ಸಂಗಣ್ಣನವರ ಸವದತ್ತಿ ೨೦—೦—೦
೮. ಬಸಪ್ಪಾ ಕಣ್ಣೂರ ಗಜೇಂದ್ರಗಡ ... ೧೫—೦—೦
೯. ಅಮ್ಮಣ್ಣಗೌಡಾ ಚೆನ್ನಪ್ಪಗೌಡಾ ಪಾಟೀಲ ಶಿಗ್ಗಾವ ... ... ೫—೦—೦
೧೦. ಕೆಂಚನಗೌಡಾ ದೇಸಾಯಿ ಮುಮ್ಮಿಗಟ್ಟಿ ... ... ೨೦—೦—೦
೧೧. ಅಂದಾನಪ್ಪಾ ದೇಸಾಯಿ ಅಣ್ಣಿಗೇರಿ ೫—೦—೦
೧೨. ದುಂಡಪ್ಪಾ ಮಲ್ಲೇಶಪ್ಪಾ ಲಕಮನಹಳ್ಳಿ ಧಾರವಾಡ ... ... ೫—೦—೦
೧೩. ಬಸಪ್ಪಾ ಇಚ್ಚಂಗಿ ಹುಬ್ಬಳ್ಳಿ ... ೧೫—೦—೦
೧೪. ಅಡಿವೆಪ್ಪಾ ಜಾಲೀಬತ್ತಿ ಕುಂದಗೋಳ ೫—೦—೦
೧೫. ಗುರುಸಿದ್ದಪ್ಪಾ ಚನಬಸಪ್ಪಾ ನವಲಿ ಧಾರವಾಡ ... ೧೫—೦—೦
೧೬. ಈರಪ್ಪಾ ನವಲಿ ಧಾರವಾಡ ... ೫—೦—೦
ಕಾಟೇನಹಳ್ಳಿ ... ... ೨೫—೦—೦
೧೮. ಶಿರೋಳ ಭಿಕ್ಷಯ್ಯಾಸ್ವಾಮಿ ರಣಗಟ್ಟಿಮಠ ಚಿತ್ತೂರ ... ೧೦—೦—೦

ಮರಣಕಾಲದಲ್ಲಿ—

೧೯. ಮ॥ರಾ॥ ಮಹದೇವಪ್ಪಾ ಸಿಂದಗಿ ೧೫—೦—೦
೨೦. ಶ್ರೀಮತಿ ಬಸಮ್ಮನವರು ಹಂದಿಗನೂರ ೩೦—೦—೦
೨೧. ಬಸವ್ವಾ ಎಮ್ಮಿ ಹಂದಿಗನೂರ ೧೦—೦—೦

ಒಟ್ಟು ೬೩೮—೮—೦

ಶಾಂತವೀರಪ್ಪಾ ಮೆಣಸಿನಕಾಯಿ,
ಆನರರಿ ಸೆಕ್ರೆಟರಿ,
ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್
ಧಾರವಾಡ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಕೊಟ್ಟೂರಿನ ಶ್ರೀಮದ್ವೀರಶೈವ ಜನ ಹಿತೋಪದೇಶಕ ಸಂಘ.

ಸನ್ ೧೯೧೨ ನೆ ಇಸವಿ ಮೆ ೨೩ ನೆ ತೇದಿ ಸೋಮವಾರ ಹಗಲು ೩ ಗಂಟೆಗೆ ಇದೇ ಗ್ರಾಮದಲ್ಲಿರುವ ಜಗದ್ರಕ್ಷಕ ಗುರು ಬಸವಸ್ವಾಮಿಗಳ ಹಿರೇಮಠದಲ್ಲಿ ವೀರಶೈವ ಮಹನೀಯರ ಮಂಡಳಿಯು ಕೂಡಿತ್ತು. ಅದರಲ್ಲಿ ಇದೇ ಗ್ರಾಮದ ವೇದಮೂರ್ತಿ ಪ್ರಭುಸ್ವಾಮಿಯವರ ಮಠದ ಶಿವಲಿಂಗಯ್ಯನವರು ಒಳ್ಳೇ ಸರಸದಿಂದ ಮಂಗಲಾಚರಣೆಯನ್ನು ಮಾಡಿದರು ತರುವಾಯ ಮ॥ ಕೊನ್ನದ ವೀರಪ್ಪನವರು ನಮ್ಮ ಮತದಲ್ಲಿ ಲೋಕಪೂಜ್ಯರಾದ ಷಟ್‌ಸ್ಥಲದ ಮಹನೀಯರುಗಳಲ್ಲಿ ಸಮಯ ಭೇದವಿರುವ ವಿಷಯವನ್ನು ನಿರೂಪಿಸಿ, ಅದನ್ನು ಅಗತ್ಯವಾಗಿ ತಪ್ಪಿಸಬೇಕೆಂಬುವುದಕ್ಕೆ ಸರ್ವರಿಗೂ ಮನಸ್ಸಂಟಾಗುವಂತೆ ಭಾಷಣಮಾಡಿದರು. ಮ॥ ರಾ॥ ಜಂಬೂರಶೆಟ್ಟರ ಬಸಪ್ಪನವರು ವೀರಶೈವರು ಅನ್ಯದೈವವನ್ನು ಭಜಿಸಬಾರದು, ಪೂಜಿಸಬಾರದು, ಅನ್ಯದೇವತೆಗಳ ಹೆಸರನ್ನು ಮಕ್ಕಳಿಗೆ ಕರೆಯಬಾರದು ಎಂಬುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟು ಸರ್ವರಿಗೂ ತಿಳಿಯುವಂತೆ ಭಾಷಣವನ್ನು ಮಾಡಿದರು. ಆ ತರುವಾಯ ವೇ॥ ಪ್ರಭುಸ್ವಾಮಿಯವರ ಮಠದ ಚೆನ್ನಬಸವಯ್ಯನವರು ಮತಧರ್ಮವನ್ನು ಬಿಟ್ಟು ಆಚರಿಸಬಾರದು. ಅಜ್ಞಾನದಿಂದ ಆಚರಿಸಿದವರಿಗೆ ಅನೇಕ ಬಂಧನಗಳುಂಟಾಗುತ್ತವೆ ಎಂಬುವುದಕ್ಕೆ ತಕ್ಕ ಉದಾಹರಣೆಗಳನ್ನು ಕೊಟ್ಟು ಸವಿನಯದಿಂದ ಭಾಷಣವನ್ನು ಮಾಡಿದುದಕ್ಕೆ ಸರ್ವರೂ ಕರತಾಡನವನ್ನು ಮಾಡಿ ಆನಂದಪಟ್ಟರು. ವೇ॥ ಮಿಂತಳಿಗಟ್ಟದ ಮಠದ ಜಂಗಟಿಗೇರಿ ಸಣ್ಣವೀರಪ್ಪಯ್ಯನವರು ಮೇಲೆ ಹೇಳಿರುವ ಎಲ್ಲಾ ವಿಷಯಗಳನ್ನು ಸ್ವೀಕರಿಸಿ ವೀರಶೈವ ಮತವು ಬ್ರಾಹ್ಮಣ್ಯವಿಶಿಷ್ಟವಾದುದು. ಪರಶಿವನು ದೇವತೆಗಳಲ್ಲಿ ಬ್ರಾಹ್ಮಣನು. ಅವನ ಭಕ್ತರು ಭೂಲೋಕ ಬ್ರಾಹ್ಮಣರು ಎಂಬ ವಿಷಯಕ್ಕೆ ಅನೇಕಾಗಮ ಪುರಾಣೇತಿಹಾಸಗಳ ಆಧಾರದಿಂದಲೂ ಎಂಬುಳ ಸ್ವರದಿಂದಲೂ ಬೋಧಿಸಿ, ಮನಕಾನಂದವನ್ನುಂಟುಮಾಡಿ ವೀರಶೈವ ಮತದುತ್ಪತ್ತಿಕ್ರಮವನು ಸರ್ವರಿಗೂ ತಿಳಿಯುವಂತೆ ಕನ್ನಡದಿಂದ ಹೇಳಿದುದಲ್ಲದೆ, ವೀರಶೈವರು ಪ್ರಾಣಿಹಿಂಸೆ ಮಾಡಬಾರದು ಎಂಬುವ ಅನೇಕ ಪ್ರಮಾಣೋದಾಹರಣೆಗಳಿಂದ ೨ ಗಂಟೆ ಉಪನ್ಯಾಸವನ್ನು ಮಾಡಿ ಈ ಸಭೆಯವರ ಅನುಮೋದನವನ್ನು ತೆಗೆದುಕೊಂಡು ಇದೇ ಗ್ರಾಮದಲ್ಲಿ ಬಹು ದಿನದಿಂದ ನಡೆದು ಬಂದದ್ದೆಂಬ ಮೂಢ ವಿಚಾರದಿಂದ ಊರಮ್ಮನ ವಿಗ್ರಹದ ಜಾತ್ರೆಯಲ್ಲಿ ಮತತತ್ವವನ್ನು ತಿಳಿಯದ ವೀರಶೈವ ಬಣಕಾರ ಗೌಡ ಮೊದಲಾದ ಕೆಲವರು ನಾವು ಬಾಬುದಾರರೆಂದುಕೊಂಡು ಕೋಣ ಕುರಿಗಳನ್ನು ಕಡಿಸಿ, ಇದರಲ್ಲೂ ನಮ್ಮ ಭಾಗವಿದೆಯೆಂದು ಅದರಲ್ಲಿ ಮುಖ್ಯವಾದ ಶಿರಸ್ಸೇ ನಮ್ಮ ಭಾಗದ್ದೆಂದೂ ಹೇಳಿ ತೆಗಿಸಿಕೊಂಡು ನಾವೇ ಇದನ್ನು ಉಪಯೋಗಿಸುವುದಿಲ್ಲವೆಂತಲೂ ನಮ್ಮ ಒಕ್ಕಲಿಂದ ಮಾದಿಗರಿಗೆ ಕೊಡಿಸುತ್ತೇವೆಂತಲೂ ಇದರಿಂದ ನಮಗೆ ದೋಷವು ಪ್ರಾಪ್ತವಾಗುವುದಿಲ್ಲವೆಂತಲೂ ಹೇಳುತ್ತಿದ್ದರು. ಆ ಕೆಟ್ಟಪದ್ಧತಿಗಳನ್ನು ತಪ್ಪಿಸಬೇಕೆಂದು ಈ ಸಭೆಯಲ್ಲಿ ಠರಾವಾಯಿತು. ಮರುದಿವಸ ಅಂದರೆ ೨೮ ನೆ ತೇದಿಯ ದಿನ ಇದೇ ಗ್ರಾಮದಲ್ಲಿ ಊರಮ್ಮನ ವಿಗ್ರಹದ ಉತ್ಸವದಲ್ಲಿ ಕೋಣ ಕುರಿಗಳನ್ನು ಕಡಿಸದೆ, ವೀರಶೈವ ಮತದ ಧರ್ಮಕ್ಕನುಸರಿಸಿ ಇದ್ದರು ಮುಂದಾದರೂ ಪೂರ್ವದಂತೆ ಇದರಲ್ಲಿ ನಮ್ಮ ಬಾಬು ಅದೆ ಎಂಬ ಮೂಢತನದ ದುರಭಿಮಾನವನ್ನು ಬಿಟ್ಟು ನಮ್ಮ ಮತದ ಪಾವಿತ್ರ್ಯವನ್ನು ಕಾಪಾಡಿ ತಮಗೂ ತಮ್ಮ ಮತಕ್ಕೂ ಗೌರವತಂದುಕೊಳ್ಳುವರೆಂದು ನಂಬಿದ್ದೇನೆ. ಎಲೈ ವೀರಶೈವ ಬಾಂಧವರಿರಾ ಎಲ್ಲೆಲ್ಲಿ ಮತವಿರುದ್ಧಾಚರಣೆಯಿರುವುದೋ ಅಂಥ ತಮ್ಮತಮ್ಮ ಗ್ರಾಮಗಳಲ್ಲಿ ಸಭೆಕೂಡಿಸಿ ನಮ್ಮ ಮತಕ್ಕನುಸರಿಸಿದ ದೈವವನ್ನೇ ಭಜಿಸಬೇಕೆಂದು ತಿಳುವಳಿಕೆಯನ್ನುಂಟುಮಾಡಿ ಪರಮೇಶ್ವರನ ಪ್ರೀತಿಗೆ ಪಾತ್ರರಾಗಬೇಕೆಂದು ನನ್ನ ವಿಜ್ಞಾಪನೆ. ಸೂರಿಕಾದಿ [illegible] ಮತಧರ್ಮವನ್ನು ಬಿಟ್ಟು ಆಚರಿಸಬಾರದೆಂದು ವೀರಶೈವರಿಗೆ ತಿಳುವಳಿಕೆಯನ್ನೂ ಪ್ರೋತ್ಸಾಹವನ್ನೂ ಉಂಟುಮಾಡಿದವರ ಹೆಸರುಗಳನ್ನು ಇದರ ಲಗತುಕೊಟ್ಟಿದೆ.

ಮತಾಭಿಮಾನಿ.

[ಸ್ಥಳ ಸಂಕೋಚದಿಂದ ಆ ಹೆಸರುಗಳನ್ನೆಲ್ಲಾ ಪ್ರಕಟಿಸಲಾಗಲಿಲ್ಲ.—ಪ. ಪ್ರ]

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘ.

ತಾ॥ ೨೮-೪-೧೨ ರಲ್ಲು ಸಂಘದ ಪ್ರೆಸಿಡೆಂಟರಾದ ರಾಜಸಭಾಭೂಷಣ ದಿವಾನ್ ಬಹದೂರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರಗೃಹದಲ್ಲಿ ಕೂಡಿದ್ದ ಮೇಲೆಕಂಡ ಸಂಘದ ೧೯೧೧-೧೨ ನೆ ವರ್ಷದ ಜನರಲ್ ಕಮಿಟಿಯ ಮೀಟಿಂಗಿನಲ್ಲಿ ನಡೆದ ನಡವಳಿಕೆಗಳು:—

೧. ಈ ಕೆಳಗೆ ಕಂಡ ದೊಡ್ಡ ಮನುಷ್ಯರು ಮೀಟಿಂಗಿಗೆ ದಯಮಾಡಿದ್ದರು:— (೧) ರಾಜಸಭಾಭೂಷಣ ದಿವಾನ್‌ಬಹದೂರ್ ಮ॥ ರಾ॥ ಕೆ. ಪಿ. ಪುಟ್ಟಣ್ಣಶೆಟ್ಟರು (ಅಧ್ಯಕ್ಷರು), (೨) ಮ॥ ರಾ॥ ಗಳಾದ ಎಚ್. ಕೆ. ವೀರಬಸವಯ್ಯನವರು ಬಿ. ಎ, ಬಿ. ಎಲ್., (೩) ಸಾಹುಕಾರ್ ಕಾಡಪ್ಪನವರು ಚಿತ್ರದುರ್ಗ, (೪) ಕೆ. ಸಿದ್ಧರಾಮಪ್ಪನವರು, ಬಿ. ಎ., (೫) ಯಜಮಾನ್ ಬಸಪ್ಪನವರು, (೬) ಸೆಟ್ಟರು ವೀರಭದ್ರಸೆಟ್ಟರು, (೭) ಗಂ. ಪಾಲಣ್ಣನವರು (ಟ್ರೆಜರರ್), (೮) ಶಂ. ಶಿವಪ್ಪನವರು, (೯) ಗುಬ್ಬಿ ಶಿವರಾತ್ರಪ್ಪನವರು, (೧೦) ಸಿದ್ಧಬಸವಶೆಟ್ಟರು, (೧೧) ಜಿ. ಕೆ. ರುದ್ರಾರಾಧ್ಯರು, (೧೨) ಸರಾಫ್ ಕಲ್ಲಪ್ಪನವರು, (೧೩) ವಾಣಿ ಅಪ್ಪಣ್ಣನವರು, ಗುಬ್ಬಿ, (೧೪) ಗುಬ್ಬಣ್ಣನವರು, (೧೫) ಜಿ. ಶಾಂತವೀರಪ್ಪನವರು, ಬಿ. ಎ., (ಸಕ್ರಟರಿ).

೨. ಸೆಕ್ರಿಟರಿಯವರಿಂದ ಓದಲ್ಪಟ್ಟ ೧೯೧೧-೧೨ ನೇ ವರ್ಷದ ರಿಪೋರ್ಟನ್ನು ಕಮಿಟಿಯವರು ಅನುಮೋದಿಸಿದರು.

೩. ಅಡಿಟರುಗಳ ರಿಪೋರ್ಟ್ ಓದಲ್ಪಟ್ಟಿತು. ಅದರಲ್ಲಿ ಕಂಡ ಸೂಚನೆಗಳನ್ನು ಕುರಿತು ವಿಚಾರಮಾಡಲಾಯಿತು.

೪. ಮೀಟಿಂಗಿಗೆ ಬಂದಿದ್ದ ಮೆಂಬರುಗಳೊಳಗೆ ಅನೇಕರು ಅಭಿಪ್ರಾಯಪಟ್ಟ ಮೇರೆಗೆ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ವ್ಯವಸ್ಥೆಗೋಸ್ಕರ ಏರ್ಪಟ್ಟಿರುವ ನಿಯಮಗಳಲ್ಲಿ ೧ ನೆ ನಿಯಮವನ್ನು ಕೆಳಗೆ ಕಂಡಂತೆ ಬದಲಾ

ಭಾರತೀಯರೂ ಮಾಂಸ ಭಕ್ಷಣವೂ.

ಯುರೋಪ್ ಖಂಡದಲ್ಲಿ ಹೆಚ್ಚಿನವರು ಮಾಂಸ ಭಕ್ಷಕರು. ಹಿಂದೂಸ್ಥಾನದಲ್ಲಿ ಹೆಚ್ಚಿನವರು ಶಾಕಾಹಾರಿಗಳು. ಆದರೆ ಈ ನವನಾಗರಿಕತೆಯ ಕಾಲದಲ್ಲಿ ಈ ಭರತಖಂಡದಲ್ಲಿ ಕೂಡಾ ಮಾಂಸಾಹಾರಿಗಳು ಹೆಚ್ಚುವಂತೆ ತೋರುತ್ತದೆ. ಮಾಂಸಾಹಾರವು ದೇಹವನ್ನು ಪೋಷಿಸುವಂಥ ಆಹಾರವಲ್ಲವೆಂಬದಾಗಿ ಈಗತಾನೇ ಅನೇಕ ವೈದ್ಯರು ಪರಿಶೋಧಿಸಿ ತಿಳಿದುಕೊಂಡಿರುವರು. "ಮಾಂಸಾಹಾರಿಗಳಾದ ವಿಲಾಯತಿಯವರಿಗೂ ಶಾಕಾಹಾರಿಗಳಾದ ಹಿಂದುಗಳಿಗೂ ಸಹನಶಕ್ತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ" ಎಂಬದಾಗಿ ಹಿಂದೂಸ್ಥಾನದಲ್ಲಿದ್ದು ವಿಲಾಯತಿಗೆ ಹೋಗಿರುವ ಒಬ್ಬ ವೈದ್ಯರು ಹೇಳುವರು. "ಶಸ್ತ್ರಪ್ರಯೋಗ ಮಾಡಿದಲ್ಲಿ ಮಾಂಸಾಹಾರಿಗಳಾದ ಯುರೋಪಿಯನರು ಗುಣವಾಗುವ ನಿರೀಕ್ಷೆಯು ಕಮ್ಮಿಯೆಂದೂ ಉದ್ಭಿಜಾಹಾರಿಗಳಾದ ಹಿಂದುಗಳು ನೇಕಡಾ ತೊಂಭತ್ತೊಂಭತ್ತರಂತೆ ಗುಣವಾಗುವರೆಂದೂ" ಆ ವೈದ್ಯರ ಅನುಭವ ಸಿದ್ಧಾಂತದ ಮಾತಾಗಿದೆ. ಹಿಂದೂಸ್ಥಾನದ ಒಂದು ದೊಡ್ಡ ಆಸ್ಪತ್ರೆಯಲ್ಲಿ ಇದ್ದ ಒಬ್ಬ ವೈದ್ಯ ಮಿಷನೆರಿಯು "ಶಾಕಾಹಾರಿಗಳಾದ ಹಿಂದುಗಳನ್ನು ಶಸ್ತ್ರಪ್ರಯೋಗ ಮಾಡಿದಲ್ಲಿ ಆ ಗಾಯಗಳಲ್ಲಿ ಕೀವು ಹುಟ್ಟುವುದೇ ಇಲ್ಲ" ಎಂಬದಾಗಿ ಹೇಳುವನು. ಕೆಲವು ವರುಷಗಳ ಹಿಂದೆ ಇಂಗ್ಲೀಷ್ ವೈದ್ಯರಾಗಿ ಖ್ಯಾತಿಹೊಂದಿದ ಸರ್ ಲಾಡರ್ ಬ್ರಂಟನ್ ಎಂಬವರು "ಇಂಗ್ಲೀಷರಿಗಿಂತಲೂ ಅಕ್ಕಿ ತಿನ್ನುವ ಹಿಂದುಗಳು ಹೆಚ್ಚಾಗಿ ಕ್ಲೋರಫೋರ್ಮನ್ನು ಸಹಿಸಿಕೊಳ್ಳುವರು. ಹಿಂದುಗಳು ನಿರ್ಮಲವಾದ ಅಕ್ಕಿಯನ್ನು ತಿನ್ನುವದರಿಂದ ಅವರ ನರಸಂಸ್ಥೆಗಳು ವಿಷ ಪದಾರ್ಥಗಳಿಂದ ತುಂಬದೆ ಶುಚಿಯಾಗಿವೆ" ಎಂಬದಾಗಿ ಹೇಳುವರು.

ಆನೆಯ ಬೇಟೆಯಲ್ಲಿ ಹೆಸರು ಪಡೆದ ಸಂಡರ್ಸನ್ ಎಂಬವರು '೧೩ ವರುಷಗಳ ಅಡವಿಯ ಅನುಭವ' ಎಂಬ ಹೆಸರಿನಿಂದ ಬರೆದ ಪುಸ್ತಕದಲ್ಲಿ "ಮಾಂಸಾಹಾರಿ ಪ್ರಾಣಿಯಾದ ಸಿಂಹಕ್ಕೆ ಗುಂಡಿನ ಯಾ ಈಟಿಯ ಪೆಟ್ಟು ತಗಲಿದಲ್ಲಿ ಅದರ ರಕ್ತವು ವಿಷದಿಂದ ತುಂಬಿ ಅದು ಬೇಗನೆ ಸಾಯುವುದು. ಆದರೆ ಮಾಂಸ ಭಕ್ಷಿಸದ ಇತರ ಪ್ರಾಣಿಗಳು ಗುಂಡಿನ ಪೆಟ್ಟನ್ನು ಸಹಿಸಿಕೊಳ್ಳುವುದಲ್ಲದೆ ಅದರ ರಕ್ತವು ಬೇಗನೆ ವಿಷಕರವಾಗಿ ಪರಿಣಮಿಸುವುದಿಲ್ಲ" ಎಂಬದಾಗಿ ಬರೆದಿರುವರು. ದೊಡ್ಡ ಪ್ರಾಣಿಗಳನ್ನು ಬಿಟ್ಟು ನಾವು ದಿನವಹಿ ನೋಡುತ್ತಿರುವ ಪಕ್ಷಿಜಾತಿಯಲ್ಲಿ ಕೋಳಿಯ ವಿಷಯವಾಗಿ ಆಲೋಚಿಸುವಾ. ಅಂಕದಲ್ಲಿ ಕೋಳಿಗಳಿಗೆ ಕಟ್ಟುವ ಕತ್ತಿಯ ಪೆಟ್ಟು ಮನುಷ್ಯನಿಗೆ ತಾಗಿದಲ್ಲಿ ಆತನ ರಕ್ತವು ವಿಷಕರವಾಗಿ ಪರಿಣಮಿಸಿ ಸಾಯುವನೆಂಬದು ನಿಶ್ಚಯ. ಆದರೆ ಕೋಳಿಯು ಎಂಥಾ ಪೆಟ್ಟನ್ನಾದರೂ ಸಹಿಸಿಕೊಳ್ಳುತ್ತದೆ. ಕತ್ತಿ ತಾಗಿದ ಪೆಟ್ಟಿನಿಂದ ಅದು ಬೇಗನೇ ಸಾಯುವುದಿಲ್ಲ. ಇಂಥಾ ಪೆಟ್ಟನ್ನು ಸಹಿಸಿಕೊಳ್ಳಲು ಅದು ಮಾಂಸ ತಿನ್ನದಿರುವದೇ ಕಾರಣ. ಕೋಳಿಗಳು ಶಾಕಾಹಾರಿಗಳಾಗಿರುವುದರಿಂದ ಅವುಗಳಲ್ಲಿ ಕೂಡಾ ಇಂಥಾ ಬಲವಾದ ಸಹನ ಶಕ್ತಿಯು ಇದೆ. ಅದರಂತೆ ಮನುಷ್ಯನು ಕೂಡಾ. ಮಾಂಸಾಹಾರಿಗಳಾದ ಯುರೋಪಿಯನರಲ್ಲಿ ಇಂಥಾ ಸಹನ ಶಕ್ತಿಯು ಇಲ್ಲ. ಅವರಿಗೆ ಥಟ್ಟನೆ ಸಿಟ್ಟೇರುವುದು. ಪೆಟ್ಟು ತಗುಲಿದರೆ ಅವರ ರಕ್ತವು ಬೇಗನೆ ವಿಷಕರವಾಗಿ ಪರಿಣಮಿಸುವುದು. ಯಾವ ಜನಾಂಗವು ಮಾಂಸ ತಿನ್ನುವುದಿಲ್ಲವೋ ಅದು ಬಲಾಢ್ಯವಾಗಿಯೂ, ಕಾಯಪುಷ್ಟವಾಗಿಯೂ, ಧೈರ್ಯಶಾಲಿಯಾಗಿಯೂ ಇದ್ದುಳಿಯುವುದು. ಮನುಷ್ಯರು ಭಕ್ಷಿಸುವ ಆಹಾರಗಳಲ್ಲಿ ಮಾಂಸವು ಕನಿಷ್ಠವಾದದ್ದು ಎಂಬದಾಗಿ ಇತ್ತಲಾಗಿನ ವೈದ್ಯರು ಹೇಳುತ್ತಿರುವರು. ಆದುದರಿಂದ ಮಾಂಸ ಭಕ್ಷಣೆಯನ್ನು ತ್ಯಜಿಸುವುದು ಒಳ್ಳೆಯದು.

(ಸ್ವದೇಶಾಭಿಮಾನಿ)

ಸಂಘ ಸಂಸ್ಕರಣ ಭಾಷಣ.

ಮದರಾಸು ಆಧಿಪತ್ಯಕ್ಕೆ ಸೇರಿದ ಕೃಷ್ಣಾ ಗುಂಟೂರು ಜಿಲ್ಲೆಗಳಿಗೆ ಸಂಬಂಧಿಸಿದ ರಾಜಕೀಯ ಸಭೆ-ಸಂಘ ಸಂಸ್ಕರಣಸಭೆ-ಸ್ತ್ರೀಸಭೆ-ಆಂಧ್ರಭಾಷಾ ಸಂಸ್ಕರಣ ಸಭೆಗಳು ಕಳೆದ ತಿಂಗಳ ಕೊನೆಯಲ್ಲಿ ನಿಡುದವೋಲಿನಲ್ಲಿ ನಡೆದುವು. ಸಂಘಸಂಸ್ಕರಣ ಸಭೆಗೆ ಮುನಗಾಲ ಜಮೀನ್ದಾರಿಯ ದಿವಾನರಾದ ಮ॥ ಕೆ. ವಿ ಲಕ್ಷ್ಮಣರಾವು ಪಂತುಲು ಎಂ. ಎ, ರವರು ಅಧ್ಯಕ್ಷರಾಗಿದ್ದರು. ಅವರು ಮಾಡಿದ ಭಾಷಣವು ತಮ್ಮವಾಗಿದೆ. ಅದರ ಸಾರಾಂಶವನ್ನು ಇಲ್ಲಿ ಮುದ್ರಿಸುತ್ತೇವೆ.

ಸಂಸ್ಕರಣವೆಂದರೆ ತಿದ್ದುವುದು. ಇದು ಸಂಘದ ನಾಯಕರು ಸಂಘಕ್ಕೋಸ್ಕರ ಸಲ್ಲಿಸಬೇಕಾದ ಋಣವಾಗಿರುವುದು. ಅಂಥ ಋಣವನ್ನು ತೀರಿಸಿಕೊಳ್ಳುವುದಕ್ಕೆ ಯತ್ನಿಸುವವರೇ ನಾಯಕರು. ಇಂಥ ನಾಯಕರು ಯಾವಾಗಲೂ ಸಾಮಾನ್ಯಕ್ಕಿಂತಲೂ ಹೆಚ್ಚು ವಿದ್ಯಾವಂತರೂ ನೀತಿವಂತರೂ ಆಗಿರುವುದರಿಂದ ಸಂಘದಲ್ಲಿರುವ ನ್ಯೂನತೆಗಳನ್ನೂ, ಅವುಗಳ ನಿವಾರಣೋಪಾಯಗಳನ್ನೂ ಈ ನಾಯಕರುಗಳೇ [illegible]. ಆದುಕಾರಣವೇ ಅವಶ್ಯಕವಾದ ಮಾರ್ಪುಗಳನ್ನು ಜನರಿಗೆ ಬೋಧಿಸಿ, ಅವನ್ನೇ ತಾವೂ ಆಚರಿಸಿ ದಾರಿತೋರಿಸಿ, ತಾವು ಸಂಘಕ್ಕೆ ಸಲ್ಲಿಸಬೇಕಾದ ಋಣಭಾರವನ್ನು ತೀರಿಸಿಕೊಳ್ಳಬೇಕು. ಯಾವ ಸಂಸ್ಕಾರವನ್ನೂ ತಾನೇ ಆಚರಿಸಿ ತೋರಿಸುವುದು ಉತ್ತಮವು. ಎಂದರೆ ಅದು ಬಡ್ಡಿಯ ಸಕೇತವಾಗಿ ಮೂಲಧನವನ್ನು ಸಲ್ಲಿಸಿದಂತಾಗುವುದು. ಹಾಗೆ ತಾನು ಆಚರಿಸದೆ ಹೋದರೂ ತನ್ನ ವಕ್ತೃತ್ವ ಶಕ್ತಿಯಿಂದಲೂ ಲೇಖನ ಶಕ್ತಿಯಿಂದಲೂ ಸಂಘಸಂಸ್ಕರಣೋಪಾಯಗಳನ್ನು ಜನರಿಗೆ ಬೋಧಿಸುವುದೂ ನವನಾಗರಿಕರಿಗೆ ಪರೋಕ್ಷವಾಗಿ ಸಹಾಯಮಾಡುವುದೂ ಸಹ ಮಧ್ಯಮವು. ಎಂದರೆ ಇದು ಬಡ್ಡಿಯನ್ನು ಮಾತ್ರ ಸಲ್ಲಿಸಿ ಮೂಲಧನಕ್ಕೆ ಸೊನ್ನೆ ಸುತ್ತುವ ರೀತಿಯಾದುದು. ಇನ್ನು ಸಂಸ್ಕರಣಗಳೊಂದನ್ನೂ ತಾನೂ ಆಚರಿಸದೆಯೂ ವಾಕ್ಸಹಾಯವನ್ನೂ ಮಾಡದೆಯೂ ಇರುವುದೇ ಅಧಮವು. ಎಂದರೆ ಇದು ಬಡ್ಡಿಯನ್ನೂ ಮೂಲಧನವನ್ನೂ ಸಹ ಒಟ್ಟಿಗೆ ತಾನೇ ನುಂಗಿಬಿಡುವ ರೀತಿಯಾದುದು. ಈ ಮೂರುವರ್ಗವೇ ಅಲ್ಲದೆ ನಾಲ್ಕನೆಯ ವರ್ಗವೊಂದಿರುವುದು. ಇವರು ಸಂಸ್ಕರಣ ವಿರೋಧಿಗಳು. ಈವರು ಭರ್ತೃಹರಿಯಿಂದ ವರ್ಣಿಸಲ್ಪಟ್ಟಿರುವ "ತೇಕೇನಜಾನೀಮಹೇ" ಎಂಬ ವರ್ಗಕ್ಕೆ ಸೇರಿದವರುಗಳು. ರಾಜಾರಾಮ ಮೋಹನರಾಯರೂ, ಈಶ್ವರ ಚಂದ್ರ ವಿದ್ಯಾಸಾಗರರೂ, ವೀರೇಶಲಿಂಗಂ ಪಂತುಲುಯವರೂ, ಡಾಕ್ಟರ್ ಆಚಂಟ ಲಕ್ಷ್ಮೀಪತಿಯವರೂ ಮೊದಲನೆಯ ವರ್ಗಕ್ಕೆ ಸೇರಿದವರು. ಮಹರ್ಷಿ ದೇವೇಂದ್ರನಾಥ ಠಾಗೂರ್ ರವರು, ನ್ಯಾಯಮೂರ್ತಿ ರಾನಡೆಯವರು, ಆರ್. ರಘುನಾಥರಾವ್ ರವರು ಮೊದಲಾದವರು ೨ ನೆಯ ವರ್ಗಕ್ಕೆ ಸೇರಿದವರು. ೩-೪ ನೆಯ ವರ್ಗಕ್ಕೆ ಸೇರಿದವರ ಹೆಸರುಗಳನ್ನು ಹೇಳಬೇಕಾದ ಅವಶ್ಯಕತೆಯಿರುವುದಿಲ್ಲ. ಆದುದರಿಂದ ಸಂಘಕ್ಕೆ ಶಿರಸ್ಸಿನಂತಿರುವ ನಾಯಕರು ತಾವು ಯಾವಯಾವ ವರ್ಗಕ್ಕೆ ಸೇರುವರೋ ಅದನ್ನು ನೋಡಿಕೊಳ್ಳಬೇಕು.

ಸಂಘದಲ್ಲಿನ ಅನ್ಯಾಯವು:— ಈಗ ನಮ್ಮ ಸಂಘದಲ್ಲಿ ಸ್ತ್ರೀಯರಿಗೂ ಬ್ರಾಹ್ಮಣೇತರರಿಗೂ ಮುಖ್ಯವಾಗಿ ಅಂತ್ಯಜಾತಿಯವರಿಗೂ ಯಾವವಿಧವಾದ ಹಕ್ಕೂ ಇಲ್ಲದಂತೆ ಮಾಡಿರುವುದನ್ನು ತಪ್ಪಿಸಿ, ಅವರ ಹೀನಸ್ಥಿತಿಯನ್ನು ಪರಿಹರಿಸಿ, ಇತರರಿಗೆ ಸಮಾನವಾದ ಸಾಂಘಿಕ ಯೋಗ್ಯತೆಯನ್ನು ಅವರಿಗೆ ಉಂಟುಮಾಡಿ ಕೊಡುವುದು ಸಂಸ್ಕರಣೋದ್ದೇಶಗಳಲ್ಲಿ ಒಂದಾಗಿದೆ. ದೇಶದಲ್ಲಿ ಈಗ ಚರ್ಚಿಸಲ್ಪಡುತ್ತಿರುವ ಸಂಘಸಂಸ್ಕರಣ ವಿಷಯಗಳೆಲ್ಲವೂ ಈ ೨ ವರ್ಗಗಳಲ್ಲೇ ಸಮಾವೇಶಗೊಳ್ಳುತ್ತವೆ.

ಅಂತ್ಯಜಾತ್ಯುದ್ಧರಣವು— ಅಗಸ ಹಜಾಮ ಮೊದಲಾದ ಹೀನಜಾತಿಯವರನ್ನೂ, ಹೊಲೆಯ ಮಾದಿಗ ಮೊದಲಾದ ಅಂತ್ಯಜಾತಿಯವರನ್ನೂ ನಾವು ಪಶುಗಳಿಗಿಂತಲೂ ನೀಚರನ್ನಾಗಿ ತಿಳಿಯುತ್ತೇವೆ. ಪಶ್ವಾದಿಗಳನ್ನೂ ಕೂಡ ನಾವು ಮುಟ್ಟುತ್ತೇವೆ. ಆದರೆ ಈ ಜಾತಿಯವರ ನೆಳಲೂ ಕೂಡ ನಮಗೆ ಬೀಳಲಾಗದು. ತೆಲುಗು ದೇಶದಲ್ಲಿ ಮಾದಿಗರನ್ನು 'ಹೇಳಬಾರದವರು' ಎನ್ನುವರು. ಈ ಮಾತಿನಿಂದಲೇ ನಮ್ಮವರಿಗೆ ಈ ಜಾತಿಯವರ ವಿಷಯವಾಗಿ ಇರುವ ತಿರಸ್ಕಾರಭಾವವು ಎಷ್ಟೆಂಬುದು ವಿದಿತವಾಗುವುದು. ನಮ್ಮ ದೇಶದಲ್ಲಿ ಹೇಳಬಾರದವರೂ ತಿಳಿಯಬಾರದವರೂ ಕೂಡ ಜನರಲ್ಲಿರಬಹುದೆ? ಪಿಪೀಲಿಕಾದಿ ಬ್ರಹ್ಮಪರ್ಯಂತವಾಗಿರುವ ಸಕಲ ಭೂತಗಳಲ್ಲೂ ಸಮಾನಭಾವವನ್ನೂ, ಭೂತದಯೆಯನ್ನೂ ಹೊಂದಿರಬೇಕೆಂದು ಉದ್ಘೋಷಿಸುತ್ತಿರುವ ಹಿಂದೂಮತವನ್ನು ಅವಲಂಬಿಸಿರುವವರು ಹೀಗೆ ತಮ್ಮಲ್ಲಿನ ಕೆಲರನ್ನೇ ಅವಾಚ್ಯರನ್ನಾಗಿಯೂ, ಅಸ್ಪೃಶ್ಯರನ್ನಾಗಿಯೂ ತಿಳಿದುಕೊಳ್ಳುವುದು ಅತ್ಯಂತ ಶೋಚನೀಯವಲ್ಲವೆ? ಒಂದು ವೇಳೆ ಹಾಗೆ ಹೇಳಬಾರದವರು ಸಂಘದಲ್ಲಿಯೇ ಇರುವುದಾದರೆ ಅವರು ಯುಗಾಂತರದವರೆಗೂ ಹಾಗೆಯೇ ಇರಬೇಕಾದವರೇನೆಯೊ? ಅಂಥವರಿಗೆ ವಿದ್ಯಾನೀತಿಗಳನ್ನೂ, ಗೌರವವಾದ ವೃತ್ತಿಗಳನ್ನೂ ಉಂಟುಮಾಡಿಕೊಟ್ಟು ಅವರನ್ನು ಇತರ ನಾಗರಿಕರೊಡನೆ ಸಮಾನರನ್ನಾಗಿಸುವುದು ಸಂಘನಾಯಕರ ಕರ್ತವ್ಯವಲ್ಲವೆ? ಹಾಗೆ ಮಾಡದೆ ಹೋದರೆ ಶರೀರದಲ್ಲಿ ರೋಗದಿಂದ ಬಿದ್ದುಹೋದ ಒಂದು ಭಾಗದಂತೆ ಇವರು ದೇಶಾಭಿವೃದ್ಧಿಗೆ ಬಾಧಕರಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಈ ಹೀನಜಾತಿಯವರನ್ನು ಮುಂದಕ್ಕೆ ತರಲು ವಿದ್ಯೆಯೆಂಬುದೊಂದೇ ಮುಖ್ಯಸಾಧನವಾಗಿರುವುದು. ಶ್ರೀ ಹರ್ಷ ಚಕ್ರವರ್ತಿಯ ಕಾಲದಲ್ಲಿ ದಿವಾಕರನೆಂಬುವನು (ಮಾದಿಗರವನು) ದೊಡ್ಡಕವಿಯಾಗಿದ್ದನು. ಅವನ ವಿದ್ಯಾಮಹತ್ವವನ್ನು ನೋಡಿ ಶ್ರೀ ಹರ್ಷಚಕ್ರವರ್ತಿಯು ಅವನನ್ನು ಬಾಣ ಮಯೂರಾದಿ ಕವಿಗಳ ಜತೆಗೆ ತನ್ನ ಸಭಾಸದನನ್ನಾಗಿ ಏರ್ಪಡಿಸಿಕೊಂಡಿದ್ದನು. ಈ ಸಂಗತಿಯನ್ನು ಕುರಿತು ರಾಜಶೇಖರ ಕವಿಯು ಹೀಗೆ ವರ್ಣಿಸಿದ್ದಾನೆ— "ಅಹಾ! ಸರಸ್ವತೀದೇವಿಯ ಪ್ರಭಾವವೆಂತಹುದು! ಅದರಿಂದಲೇ ಮಾದಿಗನಾದ ದಿವಾಕರನು ಕೂಡ ಬಾಣ ಮಯೂರಾದಿಗಳಿಗೆ [illegible] ಕವಿಯಾದನು." ನಿಮ್ನ ಜಾತಿಯವರ ಅಭ್ಯುದಯಕ್ಕಾಗಿ ಶ್ರಮಪಡತಕ್ಕವರು ಇದನ್ನೇ ಗುರುಮಂತ್ರವನ್ನಾಗಿ ತೆಗೆದುಕೊಳ್ಳಬೇಕು. ಇದನ್ನು ಕುರಿತು ಭರತಖಂಡದಲ್ಲಿರುವ ಎಲ್ಲಭಾಗಗಳಲ್ಲೂ ತಕ್ಕ ಪ್ರಯತ್ನಗಳು ನಡೆಯುತ್ತಲೇ ಇವೆ. ಆಂಧ್ರದೇಶದಲ್ಲೂ ನಡೆಯುತ್ತಿದೆ. ಆದರೂ ಇನ್ನೂ ಹೆಚ್ಚಾಗಿ ನಡೆಯಬೇಕು. ಈ ವಿಷಯದಲ್ಲಿ ನಮಗಿಂತಲೂ ಹೆಚ್ಚಾದ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕ್ರೈಸ್ತಮತಬೋಧಕರು ಪ್ರಯತ್ನಪಡುತ್ತಿದ್ದಾರೆ. ಹಲವು ಹಳ್ಳಿಗಳಲ್ಲಿ ಇವರು ಪಂಚಮರಿಗಾಗಿ ಶಾಲೆಗಳನ್ನು ಸ್ಥಾಪಿಸಿ ವಿದ್ಯಾದಾನಮಾಡುತ್ತಿದ್ದಾರೆ. ನಮ್ಮವರು ಅಷ್ಟನ್ನಾದರೂ ಮಾಡಕೂಡದೆ? ಅನ್ಯದೇಶದವರೂ ಅನ್ಯಮತದವರೂ ನಮ್ಮ ಹೀನಜಾತಿಯವರಿಗಾಗಿ ಇಷ್ಟು ಪಾಡುಪಡುತ್ತಿರುವಾಗ ನಾವು ತಟಸ್ಥರಾಗಿರುವುದು ನ್ಯಾಯವೆ? ಧರ್ಮವೆ? ಈ ನಮ್ಮ ತಾಟಸ್ಥ್ಯದಿಂದ ಸಾವಿರಗಟ್ಟಲೆಯಾಗಿ ಹಿಂದೂಗಳು ಕ್ರೈಸ್ತಮತಕ್ಕೆ ಸೇರಿಹೋಗುತ್ತಿದ್ದಾರೆ. ಅದನ್ನು ನೋಡಿಕೊಂಡೂ ನಾವು ಸುಮ್ಮನಿರುವುದು ಉಚಿತವೆ? ನೀಚ ಜಾತಿಯವರು ಕ್ರೈಸ್ತರಾಗಿ ಮಾರ್ಪಡಕೂಡದೆಂತಲೂ ಅಂಥ ಮಾರ್ಪಾಟಿನಿಂದ ದೇಶಕ್ಕೆ ನಷ್ಟವಾಗುವುದೆಂತಲೂ ನಾನು ಭಾವಿಸುವೆನೆಂದು ತಿಳಿಯಕೂಡದು. ಒಬ್ಬಾನೊಬ್ಬ ಮಾದಿಗನು ಹಿಂದುವಾಗಿದ್ದುಕೊಂಡು, ಇತರರಿಂದ ಪಶುಗಿಂತಲೂ ಕಡೆಯಾಗಿ ಕಾಣಲ್ಪಡುತ್ತ, ಹೊಟ್ಟೆಗಿಲ್ಲದೆ ಸಾಯುತ್ತಿರುವುದಕ್ಕಿಂತಲೂ, ಕ್ರೈಸ್ತರಲ್ಲಿ ವಿದ್ಯೆಯನ್ನು ಕಲಿತು, ಕೃತ್ಯಾಕೃತ್ಯದ ಗುರುತನ್ನರಿತು, 'ಮಿಸ್ಟರ್ ಜಾರ್ಜ್' ಎಂದು ಹೆಸರಿಟ್ಟುಕೊಂಡು, ಯಾವುದಾದರೊಂದು ಯಂತ್ರಾಲಯದಲ್ಲಿ ಇಂಜನಿಯರಾಗಿ ಬರುವುದು ದೇಶಕ್ಕೆ ಪ್ರಯೋಜನಕರವಾದ ಕಾರ್ಯವೆಂಬುದೇ ನನ್ನ ಅಭಿಪ್ರಾಯವು. ಆದರೆ ಇಂಥ ತಮ್ಮ ಹೀನಬಂಧುಗಳಿಗೆ ಹಿಂದೂಗಳು ಯಾವ ವಿಧವಾದ ಸಹಾಯವನ್ನೂ ಮಾಡದೆ, ಅವರೆಲ್ಲರಿಗೂ ಪರರ ಸಹಾಯದಿಂದಲೇ ಬದುಕುವ ಕ್ರೈಸ್ತರಾಗಿಯೇ ಮಾರ್ಪಡುವುದಕ್ಕೆ ಅವಕಾಶವನ್ನು ಕೊಟ್ಟರೆ, ನಾಗರಿಕತೆಯನ್ನು ಹೊಂದಿರುವ ದೇಶಗಳ ಮುಂದೆ ತಲೆಯೆತ್ತುವುದಕ್ಕೆ ನಮಗೆ ಅವಕಾಶವಿರುವುದೆ? ಅನ್ಯರ ಸಹಾಯದಿಂದಲೇ ಉತ್ತಮಸ್ಥಿತಿಗೆ ಬಂದ ಈ ನಿಮ್ನಜಾತಿಯವರಿಗೆ ನಮ್ಮಲ್ಲಿ ಭಾತೃಭಾವವಿರುವುದುಂಟೆ? ಹೇಗಿದ್ದೀತು? ಅಲ್ಪವಯಸ್ಕನಾದ ತಮ್ಮನಿಗೆ ಅನ್ನವನ್ನು ಹಾಕದೆ ಮನೆಯಿಂದ ಓಡಿಸಿಬಿಟ್ಟರೆ ಅವನಿಗೆ ಅಣ್ಣನಮೇಲೆ ಹೇಗೆ ಪ್ರೇಮವಿರುವುದು? ಆದುದರಿಂದ ನಾವೆಲ್ಲರೂ ನಿಮ್ನಜಾತ್ಯುದ್ಧಾರಾರ್ಥವಾಗಿ ಕ್ರೈಸ್ತರಂತೆ ಪಾಟುಪಡಬೇಕಾದುದು ಅವಶ್ಯಕವು. (ಸಶೇಷ)

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವವು

ಪದ್ಧತಿಯಂತೆ ಈ ವರ್ಷದ ಸಮಾರಂಭಕ್ಕೆ ಮೈಸೂರು ಗೌರ್ನಮೆಂಟಿನವರು ಇಬ್ಬರನ್ನು ಎಂದರೆ ರಾಜಧಾನಿಯ ಮಹಾರಾಜಾಕಾಲೇಜಿನ ಸಹಾಯೋಪಾಧ್ಯಾಯರಾದ ಮ॥ಬಾಪು ಸುಬ್ಬರಾಯರನ್ನೂ ನಂಜನಗೂಡಿನ ಆ॥ವ॥ ಶಾಲೋಪಾಧ್ಯಾಯರಾದ ಮ॥ಶೇಷಾಚಾರ್ಯರನ್ನೂ ಕಳುಹಿಸಿದ್ದರು. ಗೊತ್ತಾಗಿದ್ದ ಪರೀಕ್ಷೆಗಳು ಜೂನ್ ತಾ॥ ೧-೨ ರ ದಿವಸ ನಡೆದುವು. ೨ ನೆ ತಾರೀಖಿನ ಬೆಳಿಗ್ಗೆ ನೆರೆದ ಸಭೆಯಲ್ಲಿ ಕಳೆದ ವರ್ಷದ ಸಂಘದ ಕಾರ್ಯಕ್ರಮದ ವರದಿಯು ಓದಲ್ಪಟ್ಟಿತು. ಈ ವರ್ಷದ ಕಾರ್ಯಕಾರಿ ಮಂಡಳಿಯ ಸಭಾಸದರು ಆರಿಸಲ್ಪಟ್ಟರು. ಬಳಿಕ ಸಂಘಕ್ಕೋಸ್ಕರ ಕಟ್ಟಲ್ಪಡುತ್ತಿರುವ ಆಲಯದ ವೆಚ್ಚಕ್ಕೆ ಸಾಲದೆ ಬಂದಿರುವ ವಿಷಯವಾಗಿ ಚರ್ಚೆಯು ನಡೆದು ರಾ॥ಬ॥ ರೊದ್ದರವರು ಮೈಸೂರುದೇಶದ ಕಡೆಯಲ್ಲೂ, ಸಂಘದ ಕಾರ್ಯದರ್ಶಿಗಳಾದ ಮ॥ನಾರಾಯಣರಾವ ಕರಗುದರಿಯವರು ಬಿಜಾಪುರ ಮೊದಲಾದ ಕಡೆಯಲ್ಲೂ ಸಂಚರಿಸಿ ಧನಸಹಾಯವನ್ನು ಪಡೆಯುವುದಕ್ಕೆ ನಿಶ್ಚಯಿಸಲ್ಪಟ್ಟಿತು.

ಮಧ್ಯಾಹ್ನಾತ್ಪರ ಮರಳಿ ಸಭೆ ಕೂಡಿದಾಗ ಮ॥ಬಾಪು ಸುಬ್ಬರಾಯರ "ಕನ್ನಡಿಗರ ಭಾಷಾಸೇವೆ" ಎಂಬ ವಿಷಯಕವಾದ ಭಾಷಣವು ಆಯಿತು. ಆಗಿನ ಸಭೆಗೆ ಡಿಸ್ಟ್ರಿಕ್ಟ್ ಕಲೆಕ್ಟರಾದ ಮೆ॥ ಇ. ಸಿ. ಮೆಕಾನಕಿ ಸಾಹೇಬರು ದಯಮಾಡಿಸಿದ್ದರು. ಸಂಘದಾರಂಭದಿಂದ ಇದುವರೆಗಿನ ಅದರ ಇತಿಹಾಸವನ್ನು ರಾ॥ಬ॥ ರೊದ್ದರವರು ವಿವರಿಸಿ ಹೇಳಿದರು. ಸಂಘವು ಸ್ಥಾಪಿತವಾಗಿ ಇದುವರೆಗೆ ೨೧ ವರ್ಷಗಳಾಗಿರುವುವು. ಇದುವರೆಗೆ ೪೯ ಪುಸ್ತಕಗಳು ಇದರಮೂಲಕ ಅಚ್ಚಾಗಿರುವುವು. ೫ ಸಾವಿರ ರೂ. ಗಳ ವರೆಗೆ ಗ್ರಂಥಕರ್ತರಿಗೆ ಬಹುಮಾನವನ್ನೂ, ೨ ಸಾವಿರ ರೂ. ಗಳ ವರೆಗೆ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನವಾಗಿಯೂ ಸಂಘದಿಂದ ಕೊಟ್ಟಿರುವರು. ಎಂಬುದು ಮೊದಲಾದ ವಿಷಯವು ಅವರ ಭಾಷಣದಿಂದ ವ್ಯಕ್ತವಾಯಿತು. ಕಡೆಗೆ ಬಹುಮಾನದ್ರವ್ಯವು ಗ್ರಂಥಕರ್ತರಿಗೂ, ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೂ ಹಂಚಲ್ಪಟ್ಟಿತು. ಅನಂತರ ಮೆ॥ಮೆಕಾನಕಿ ಸಾಹೇಬರವರು ಸಂಘದವರ ಪ್ರಯತ್ನವನ್ನು ಕುರಿತು

ಪತ್ರವ್ಯವಹಾರವು.

ದಾವಣಗೆರೆ ತಾಲ್ಲೂಕು ಅಣಜಿ

ಇದೇ ಗ್ರಾಮದಲ್ಲಿರುವ ಕಡಬಗೆರೆ ಮ॥ ರಾ॥ ದೊಡ್ಡನಾಗಪ್ಪನೆಂಬುವರು ತಮ್ಮ ಪುತ್ರಿ ಚಿ॥ ಸೌ॥ ಚನ್ನಬಸಮ್ಮನನ್ನು, ಮೆಳ್ಳೆಕಟ್ಟೆ ಗ್ರಾಮದಲ್ಲಿರುವ ಮ॥ ಬೇತೂರು ವೀರಪ್ಪನವರ ಮಗ ರಾ॥ ವೀರಬಸಪ್ಪನಿಗೆ ಕೊಟ್ಟು ತಮ್ಮ ಗೃಹದಲ್ಲಿ ವೈಶಾಖ ಬ॥ ೮ ರಲ್ಲು ವಿವಾಹಮಹೋತ್ಸವವನ್ನು ಪೂರೈಸಿದರು. ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೋಸ್ಕರ ವಧುವಿನ ಕಡೆಯವರಾದ ಮ॥ ರಾ॥ ದೊಡ್ಡನಾಗಪ್ಪನವರಿಂದ ೨ ರೂ. ವರನ ಚಿಕ್ಕಪ್ಪಂದಿರಾದ ಮ॥ ರಾ॥ ಬಸವಲಿಂಗಪ್ಪನವರಿಂದ ೨ ರೂ ಹುಮ್ಮಣ್ಣ ೮ ರೂ. ಕಳುಹಿಸಿಕೊಡಲು ನನ್ನ ವಶಕ್ಕೆ ಕೊಟ್ಟದ್ದನ್ನು ಎಂ. ಎಲ್. ಇ ಫಂಡಿನ ಸೆಕ್ರೆಟರಿಯವರ ಅಪ್ಪಣೆ ಕಳುಹಿಸಿಕೊಡಲು ಮ॥ ರಾ॥ ಶ್ರೀ ಸ್ಟಾರ್ ಎಡಿಟರವರಲ್ಲಿಗೆ ಈ ವಿವರ ರವಾನಿಸಿರುತ್ತೇನೆ.

ತಾ॥ ೩೦-೫-೨೦ ವೀರಶೈವ ಮತಾಭಿಮಾನಿ

ಚಳ್ಳಕೆರೆ ತಾಲ್ಲೂಕು ದೊಡ್ಡೇರಿ.

ಕಳೆದ ಮೆ ತಿಂಗಳು ೨೪ ನೇ ಸೋಮವಾರದ ದಿನ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ ಎಸ್ ಐ, ಯವರ ವರ್ಷವರ್ಧಂತ್ಯುತ್ಸವದ ನಿಮಿತ್ತವಾಗಿ ಈ ಗ್ರಾಮದ [illegible] ವಿಶೇಷವಾಗಿ ತಳಿರುತೋರಣಗಳಿಂದ ಅಲಂಕರಿಸಿ ಮ॥ ರಾ॥ ಪಟೇಲ್ ವೀರಣ್ಣನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಶೃಂಗಾರ ಪೀಠದಲ್ಲಿ ಮುಹೂರ್ತಗೊಳಿಸಿ ದೈವಭಕ್ತಿ ಮತ್ತು ರಾಜಭಕ್ತಿಗಳ ವಿಷಯಕವಾದ ಉಪನ್ಯಾಸಗಳು ನಡೆದ ತರುವಾಯ ಜಗದೀಶನು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಯವರಿಗೂ, ಶ್ರೀಮನ್ ಯುವರಾಜರವರಿಗೂ, ರಾಜಕುಟುಂಬಕ್ಕೂ ದೀರ್ಘಾಯುರಾರೋಗ್ಯಗಳನ್ನು ಸದಾ ಕೊಟ್ಟು ಕಾಪಾಡುತ್ತಾ ಬರಲೆಂದು ಜಗದೀಶನನ್ನು ಪ್ರಾರ್ಥಿಸಿ, ಕರತಾಡನದ ಮೂಲಕ ತಮ್ಮತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದುದಲ್ಲದೆ ಬಾಲಕರಿಂದ ಆಟಪಾಟಗಳ ವಿನೋದೋತ್ಸವವನ್ನು ನಡೆಸಿ, ಗಂಧಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ವಿದ್ಯಾ ಸುಧಾರಣೆಯ ಬಗ್ಗೆ ದ್ರವ್ಯದ ಅನುಕೂಲತೆಯೇ ಕಾರಣವಾಗಿರುವುದರಿಂದ ಧನ ಸಂಚಯವನ್ನು ಯಾವತ್ತೂ ಸುಲಭ ಮಾರ್ಗಗಳಿಂದ ಮಾಡುವುದು ಅತ್ಯವಶ್ಯವು. ನಮ್ಮ ಸಮಾಜದ ಉನ್ನತಿಗೆ ವಿದ್ಯೆಯೇ ಮೂಲಕಾರಣವಾಗಿರುವುದು. ಆದಕಾರಣ ನಮ್ಮ ಸಮಾಜದ ಹಿತಚಿಂತಕರು ಪರಿಶ್ರಮಪಟ್ಟು ಅಲ್ಲಲ್ಲಿಗೆ ಫಂಡುಗಳನ್ನು ಕೂಡಿಸಿದ್ದು ಸರ್ವರಿಗೂ ವಿದಿತವಷ್ಟೆ. ಕೆಳಗೆ ಕಾಣಿಸಿದ ವಿದ್ಯಾಭಿಮಾನಿ ಸದ್ಗೃಹಸ್ಥರು ತಮ್ಮ ಲಗ್ನಾದಿ ಕಾರ್ಯಗಳಲ್ಲಿ ವಿದ್ಯಾ ಸಂಸ್ಥೆಗಳಿಗೆ ಕೆಳಗೆ ಬರೆದ ಪ್ರಕಾರ ಸಹಾಯಮಾಡಿರುತ್ತಾರೆ. ಇದರಂತೆ ಯಾವತ್ತು ಮಹನೀಯರು ಸಹಾಯಮಾಡಿ ವಿದ್ಯಾದಾನ ಪುಣ್ಯಭಾಗಿಗಳಾಗಬೇಕೆಂದು ಸವಿನಯ ಪ್ರಾರ್ಥನೆಯು.

ಬಾಗಲಕೋಟೆ ಮುನ್ಸಿಪಲ್ ಕೌನ್ಸಿಲರಾದ ಮಿ॥ ಅಯ್ಯಪ್ಪ ಬ್ಯಾಳಿಯವರು ತಮ್ಮ ಸಹೋದರಿಯನ್ನು ಗದಗಿನ ದುಂದೂರ ರಾಚಪ್ಪನವರ ಸುಪುತ್ರ ಹುಚ್ಚಪ್ಪನಿಗೆ ಕೊಟ್ಟು ನಿಶ್ಚಿತಾರ್ಥಮಾಡಿದ ಕಾಲದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ೫ ಬಾಗಲಕೋಟೆಯ ವಾರದ ಬೋರ್ಡಿಂಗಿಗೆ ೧೦ ರೂ. ಗಳನ್ನೂ ಮತ್ತೂ ರಾಚಪ್ಪ ದುಂದೂರ ಇವರು ೫ ರೂ. ಗಳನ್ನು ಕೊಟ್ಟಿರುವರು. ಇದಲ್ಲದೆ ಇವರದೇ ಲಗ್ನವು ವೈ॥ ಶು॥ ೧೨ ರವಿವಾರ ಗದಗ ಮುಕ್ಕಾಮಿನಲ್ಲಿ ಆಯಿತು. ಆಗ್ಗೆ ದುಂದೂರ ಇವರು ೧೦ ರೂ. ಗಳನ್ನೂ, ಮಿ॥ ಅಯ್ಯಪ್ಪ ಬ್ಯಾಳಿ ಇವರು ಧಾರವಾಡ ವಿದ್ಯಾವರ್ಧಕ ಫಂಡಿಗೆ ೫ ರೂ ಗಳನ್ನೂ ಶ್ರೀ ಶಿವಯೋಗ ಮಂದಿರಕ್ಕೆ ೫ ರೂ. ಗಳನ್ನೂ ಕೊಟ್ಟಿರುತ್ತಾರೆ.

ಇದೇ ತಾಲ್ಲೂಕ ಪೈಕಿ ಮುಗನೂರೆಂಬ ಗ್ರಾಮದ ತಮ್ಮಣ್ಣಪ್ಪ ದೊಡ್ಡಮನಿ ಇವರು ತಮ್ಮ ಪುತ್ರರ ಲಗ್ನದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ೫ ರೂ. ಗಳನ್ನು ಕೊಟ್ಟಿರುತ್ತಾರೆ.

ಇದರಂತೆ ಶಿವಮೂರ್ತಿಯ್ಯಾ ಸೋಮಯ್ಯಾ ಜಂಗಿನ ಬಾಗಲಕೋಟೆ ಇವರಿಗೆ ಕೊಪ್ಪಳದಲ್ಲಿರುವ ಪದ್ದನಾಳ ಹಿರೇಮಠದ ವಿರೂಪಾಕ್ಷಯ್ಯನವರ ಸುಪುತ್ರಿ ಸಾವಂತ್ರೆವ್ವನನ್ನು ಕೊಟ್ಟು ನಿಶ್ಚಿತಾರ್ಥವಾದ ಕಾಲದಲ್ಲಿ ಇವರು ೨ ರೂ. ಗಳನ್ನು ಶ್ರೀ ಶಿವಯೋಗಮಂದಿರಕ್ಕೆ ಕೊಟ್ಟಿರುತ್ತಾರೆ.

ಇದನ್ನನುಸರಿಸಿ ವೀರಬಸಪ್ಪ ಗಾಣಿಗೇರ ಇವರು ತಮ್ಮ ಪುತ್ರನ ಲಗ್ನದಲ್ಲಿ ಶ್ರೀ ಶಿವಯೋಗಮಂದಿರಕ್ಕೆ ಮತ್ತಾ ವಾರದ ಬೋರ್ಡಿಂಗಿಗೆ ೫ ರೂ ಗಳನ್ನು ಕೊಟ್ಟಿರುತ್ತಾರೆ.

ಇದೇ ಪ್ರಕಾರವಾಗಿ ಎಲ್ಲ ಮಹನೀಯರೂ ಸಹಾಯ ಮಾಡುತ್ತಾ ಹೋದರೆ ಯಾರಿಗೂ ಏನೂ ಭಾರವಿಲ್ಲದೆ, ಸಮಾಜದಲ್ಲಿಯ ವಿದ್ಯೋನ್ನತಿಯ ಕೆಲಸಗಳು ನಿರ್ವಿಘ್ನವಾಗಿ ನಡೆಯುವವು.

ಶ್ರೀಶಿವಯೋಗಮಂದಿರದ ವ್ಯವಸ್ಥಾಪಕ.

೧೯೧೯-೨೦ ರಲ್ಲಿ ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡಿಗೆ ವಿವಾಹ, ದೀಕ್ಷಾ, ಮರಣ ವಗೈರೆ ಧಾರ್ಮಿಕ ಕಾರ್ಯಗಳಲ್ಲಿ ಕಾಣಿಕೆ ಸಲ್ಲಿಸಿದವರ ಹೆಸರುಗಳು:—

ಯಾತ್ರೆ ಮಹೋತ್ಸವಕಾಲದಲ್ಲಿ—	
೧. ಶ್ರೀ ಗುದ್ದಿ ಮಹಾಲಿಂಗಸ್ವಾಮಿಗಳವರು ಯರಗತ್ತಿ	೯೧—೦—೦
ದೀಕ್ಷಾಕಾಲದಲ್ಲಿ—	
೨ ಶಿವಲಿಂಗಯ್ಯಾ ಗವಿಸಯ್ಯಾ ಹಿರೇಮಠ ಕೆಸನೂರ ಕೊಲ್ಹಾಪುರ ಇಲಾಖಾ	೧೬—೮—೦
ವಿವಾಹಕಾಲದಲ್ಲಿ—	
೩. ಮರೋಳಗಳಿಂದ ಮಣ್ಣಬಸಪ್ಪ ದೋಗನಪ್ಪ ಬಸವೇಶ್ವರ ಪೇಠ ಹುಬ್ಬಳ್ಳಿ	೨೫—೦—೦
೪. ವೀರಪ್ಪ ಅನ್ನದಾನಪ್ಪ ಮಾಸ್ತಿ ಗದಗ	೧೦೦—೦—೦
೫. ಬಸವಣ್ಣೆಪ್ಪ ಪಾಲಿ ಹುಬ್ಬಳ್ಳಿ ...	೧೦೦—೦—೦
೬. ಅಡಿವೆಪ್ಪ ಶಿವಪ್ಪ ತುರ್ಕದ ಗದಗ	೨೫—೦—೦
೭. ಚೆನ್ನಬಸಪ್ಪ ಹಂಪಣ್ಣನವರ ಸವದತ್ತಿ	೨೦—೦—೦
೮. ಬಸಪ್ಪ ಕಣಕ್ಕಿ ಗಜೇಂದ್ರಗಡ ...	೧೫—೦—೦
೯. ಅಯ್ಯಪ್ಪಗೌಡ ಚೆನ್ನಪ್ಪಗೌಡ ಪಾಟೀಲ ಶಿಗ್ಗಾವ	೫—೦—೦
೧೦. ಕೆಂಚನಗೌಡ ದೇಸಾಯಿ ಮುಮ್ಮಿಗಟ್ಟಿ ...	೨೦—೦—೦
೧೧. ಅಂದಾನಪ್ಪ ದೇಸಾಯಿ ಅಣ್ಣಿಗೇರಿ	೫—೦—೦
೧೨. ದುಂಡಪ್ಪ ಮಲ್ಲೇಶಪ್ಪ ಲಕಮನಹಳ್ಳಿ ಧಾರವಾಡ	೫—೦—೦
೧೩. ಬಸಪ್ಪ ಇಚ್ಚಂಗಿ ಹುಬ್ಬಳ್ಳಿ ...	೧೫—೦—೦
೧೪. ಅಡಿವೆಪ್ಪ ಜಾಲಿಬಟ್ಟಿ ಕುಂದಗೋಳ	೫—೦—೦
೧೫. ಗುರುಸಿದ್ದಪ್ಪ ಚನಬಸಪ್ಪ ನವಲಿ ಧಾರವಾಡ	೧೫—೦—೦
೧೬. ಈರಪ್ಪ ನವಲಿ ಧಾರವಾಡ ...	೫—೦—೦
ಕಾಟೇನಹಳ್ಳಿ	೨೫—೦—೦
೧೮. ಶ್ರೀ ಭಿಕ್ಷಯ್ಯಸ್ವಾಮಿ ರಣಗಟ್ಟಿಮಠ ಚಿತ್ತೂರ	೧೦—೦—೦
ಮರಣಕಾಲದಲ್ಲಿ—	
೧೯. ಮ॥ರಾ॥ ಮಹದೇವರಪ್ಪ ಸಿಂದಗಿ	೧೨೫—೦—೦
೨೦ ಶ್ರೀಮತಿ ಬಸಮ್ಮನವರು ಹಂದಿಗನೂರ	೩೦—೦—೦
೨೧ ಬಸವ್ವ ಎಮ್ಮಿ ಹಂದಿಗನೂರ	೧೦—೦—೦
ಒಟ್ಟು	೬೬೮—೮—೦

ಶಾಂತವೀರಪ್ಪ ಮೆಣಸಿನಕಾಯಿ,
ಆನರರಿ ಸೆಕ್ರೆಟರಿ,
ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಷನ್
ಧಾರವಾಡ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಕೊಟ್ಟೂರಿನ ಶ್ರೀಮದ್ವೀರಶೈವ ಜನ ಹಿತೋಪದೇಶಕ ಸಂಘ.

ಸನ್ ೧೯೨೦ ನೆ ಇಸವಿ ಮೆ ೨೨ ನೆ ತೇದಿ ಸೋಮವಾರ ಹಗಲು ೩ ಗಂಟೆಗೆ ಇದೇ ಗ್ರಾಮದಲ್ಲಿರುವ ಜಗದ್ರಕ್ಷಕ ಗುರು ಬಸವಸ್ವಾಮಿಗಳ ಹಿರೇಮಠದಲ್ಲಿ ವೀರಶೈವ ಮಹನೀಯರ ಮಂಡಳಿಯು ಕೂಡಿತ್ತು. ಅದರಲ್ಲಿ ಇದೇ ಗ್ರಾಮದ ವೇದಮೂರ್ತಿ ಪ್ರಭುಸ್ವಾಮಿಯರ ಮಠದ ಶಿವಲಿಂಗಯ್ಯನವರು ಒಳ್ಳೇ ಸರಸದಿಂದ ಮಂಗಲಾಚರಣೆಯನ್ನು ಮಾಡಿದರು ತರುವಾಯ ಮ॥ ಕೊಟ್ರದ ವೀರಪ್ಪನವರು ನಮ್ಮ ಮತದಲ್ಲಿ ಲೋಕಪೂಜ್ಯರಾದ ಷಟ್‌ಸ್ಥಲದ ಮಹನೀಯರುಗಳಲ್ಲಿ ಸಮಯ ಭೇದವಿರುವ ವಿಷಯವನ್ನು ನಿರೂಪಿಸಿ, ಅದನ್ನು ಅಗತ್ಯವಾಗಿ ತಪ್ಪಿಸಬೇಕೆಂಬುವುದಕ್ಕೆ ಸರ್ವರಿಗೂ ಮನಸ್ಸಂಟಾಗುವಂತೆ ಭಾಷಣಮಾಡಿದರು. ಮ॥ ರಾ॥ ಜಂಬೂರಶೆಟ್ಟರ ಬಸಪ್ಪನವರು ವೀರಶೈವರು ಅನ್ಯದೈವವನ್ನು ಭಜಿಸಬಾರದು, ಪೂಜಿಸಬಾರದು, ಅನ್ಯದೇವತೆಗಳ ಹೆಸರನ್ನು ಮಕ್ಕಳಿಗೆ ಕರೆಯಬಾರದು ಎಂಬುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟು ಸರ್ವರಿಗೂ ತಿಳಿಯುವಂತೆ ಭಾಷಣವನ್ನು ಮಾಡಿದರು. ಆ ತರುವಾಯ ವೇ॥ ಪ್ರಭುಸ್ವಾಮಿಯರ ಮಠದ ಚೆನ್ನಬಸವಯ್ಯನವರು ಮತಧರ್ಮವನ್ನು ಬಿಟ್ಟು ಆಚರಿಸಬಾರದು. ಅಜ್ಞಾನದಿಂದ ಆಚರಿಸಿದವರಿಗೆ ಅನೇಕ ಬಂಧನಗಳುಂಟಾಗುತ್ತವೆ ಎಂಬುವುದಕ್ಕೆ ತಕ್ಕ ಉದಾಹರಣೆಗಳನ್ನು ಕೊಟ್ಟು ಸವಿನಯದಿಂದ ಭಾಷಣವನ್ನು ಮಾಡಿದುದಕ್ಕೆ ಸರ್ವರೂ ಕರತಾಡನವನ್ನು ಮಾಡಿ ಆನಂದಪಟ್ಟರು. ವೇ॥ ಮಿಂತಳೆಗಟ್ಟದ ಮಠದ ಜಂಗಟಿಗೇರಿ ಸಣ್ಣವೀರಪ್ಪಯ್ಯನವರು ಮೇಲೆ ಹೇಳಿರುವ ಎಲ್ಲಾ ವಿಷಯಗಳನ್ನು ಪುಷ್ಟೀಕರಿಸಿ ವೀರಶೈವ ಮತವು ಬ್ರಾಹ್ಮಣ್ಯ ವಿಶಿಷ್ಟವಾದುದು. ಪರಶಿವನು ದೇವತೆಗಳಲ್ಲಿ ಬ್ರಾಹ್ಮಣನು, ಅವನ ಭಕ್ತರು ಭೂಲೋಕ ಬ್ರಾಹ್ಮಣರು ಎಂಬ ವಿಷಯಕ್ಕೆ ಅನೇಕಾಗಮ ಪುರಾಣೇತಿಹಾಸಗಳ ಆಧಾರದಿಂದಲೂ ಎಂದಿಗೆ ಸ್ವರದಿಂದಲೂ ಬೋಧಿಸಿ, ಜನಕಾನಂದವನ್ನುಂಟುಮಾಡಿ ವೀರಶೈವ ಮತದುತ್ಪತ್ತಿಕ್ರಮವನು ಸರ್ವರಿಗೂ ತಿಳಿಯುವಂತೆ ಕನ್ನಡದಿಂದ ಹೇಳಿದುದಲ್ಲದೆ, ವೀರಶೈವರು ಪ್ರಾಣಿಹಿಂಸೆ ಮಾಡಬಾರದು ಎಂಬುವ ಅನೇಕ ಪ್ರಮಾಣೋದಾಹರಣೆಗಳಿಂದ ೨ ಗಂಟೆ ಉಪನ್ಯಾಸವನ್ನು ಮಾಡಿ ಈ ಸಭೆಯವರ ಅನುಮೋದನವನ್ನು ತೆಗೆದುಕೊಂಡು ಇದೇ ಗ್ರಾಮದಲ್ಲಿ ಬಹು ದಿನದಿಂದ ನಡೆದು ಬಂದದ್ದೆಂಬ ಮೂಢವಿಚಾರದಿಂದ ಊರಮ್ಮನ ವಿಗ್ರಹದ ಜಾತ್ರೆಯಲ್ಲಿ ಮತತತ್ವವನ್ನು ತಿಳಿಯದ ವೀರಶೈವ ಬಣಕಾರ ಗೌಡ ಮೊದಲಾದ ಕೆಲವರು ನಾವು ಬಾಬುದಾರರೆಂದುಕೊಂಡು ಕೋಣ ಕುರಿಗಳನ್ನು ಕಡಿಸಿ, ಇದರಲ್ಲೂ ನಮ್ಮ ಭಾಗವಿದೆಯೆಂದು ಅದರಲ್ಲಿ ಮುಖ್ಯವಾದ ಶಿರಸ್ಸೇ ನಮ್ಮ ಭಾಗದ್ದೆಂದೂ ಹೇಳಿ ತೆಗಿಸಿಕೊಂಡು ನಾವೇ ಇದನ್ನು ಉಪಯೋಗಿಸುವುದಿಲ್ಲವೆಂತಲೂ ನಮ್ಮ ಒಕ್ಕಲಿಂದ ಮಾದಿಗರಿಗೆ ಕೊಡಿಸುತ್ತೇವೆಂತಲೂ ಇದರಿಂದ ನಮಗೆ ದೋಷವು ಪ್ರಾಪ್ತವಾಗುವುದಿಲ್ಲವೆಂತಲೂ ಹೇಳುತ್ತಿದ್ದರು. ಆ ಕೆಟ್ಟಪದ್ಧತಿಗಳನ್ನು ತಪ್ಪಿಸಬೇಕೆಂದು ಈ ಸಭೆಯಲ್ಲಿ ಠರಾವಾಯಿತು. ಮರುದಿವಸ ಅಂದರೆ ೨೮ ನೆ ತೇದಿಯ ದಿನ ಇದೇ ಗ್ರಾಮದಲ್ಲಿ ಊರಮ್ಮನ ವಿಗ್ರಹದ ಉತ್ಸವದಲ್ಲಿ ಕೋಣ ಕುರಿಗಳನ್ನು ಕಡಿಸದೆ, ವೀರಶೈವ ಮತದ ಧರ್ಮಕ್ಕನುಸರಿಸಿ ಇದ್ದರು. ಮುಂದಾದರೂ ಪೂರ್ವದಂತೆ ಇದರಲ್ಲಿ ನಮ್ಮ ಬಾಬು ಅದೆ ಎಂಬ ಮೂಢತನದ ದುರಭಿಮಾನವನ್ನು ಬಿಟ್ಟು ನಮ್ಮ ಮತದ ಪಾವಿತ್ರ್ಯವನ್ನು ಕಾಪಾಡಿ ತಮಗೂ ತಮ್ಮ ಮತಕ್ಕೂ ಗೌರವತಂದುಕೊಳ್ಳುವರೆಂದು ನಂಬಿದ್ದೇನೆ. ಎಲೈ ವೀರಶೈವ ಬಾಂಧವರಿರಾ ಎಲ್ಲೆಲ್ಲಿ ಮತವಿರುದ್ಧಾಚರಣೆಯಿರುವುದೋ ಅಂಥ ತಮ್ಮತಮ್ಮ ಗ್ರಾಮಗಳಲ್ಲಿ ಸಭೆಕೂಡಿಸಿ ನಮ್ಮ ಮತಕ್ಕನುಸರಿಸಿದ ದೈವವನ್ನೇ ಭಜಿಸಬೇಕೆಂದು ತಿಳುವಳಿಕೆಯನ್ನುಂಟುಮಾಡಿ ಪರಮೇಶ್ವರನ ಪ್ರೀತಿಗೆ ಪಾತ್ರರಾಗಬೇಕೆಂದು ನನ್ನ ವಿಜ್ಞಾಪನೆ. ಸುಮಾರಿಕಾದಿ [illegible] ಮತಧರ್ಮವನ್ನು ಬಿಟ್ಟು ಆಚರಿಸಬಾರದೆಂದು ವೀರಶೈವರಿಗೆ ತಿಳುವಳಿಕೆಯನ್ನೂ ಪ್ರೋತ್ಸಾಹವನ್ನೂ ಉಂಟುಮಾಡಿದವರ ಹೆಸರುಗಳನ್ನು ಇದರ ಲಗತು ಕೊಟ್ಟಿದೆ.

ಮತಾಭಿಮಾನಿ.

[ಸ್ಥಳ ಸಂಕೋಚದಿಂದ ಆ ಹೆಸರುಗಳನ್ನೆಲ್ಲಾ ಪ್ರಕಟಿಸಲಾಗಲಿಲ್ಲ.—ಸ. ಪ್ರ.]

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘ.

ತಾ॥ ೨೮-೪-೨೦ ರಲ್ಲಿ ಸಂಘದ ಪ್ರೆಸಿಡೆಂಟರಾದ ರಾಜಸಭಾಭೂಷಣ ದಿವಾನ್ ಬಹದೂರ್ ಮಿ॥ ಕೆ. ಪಿ. ಪುಟ್ಟಣ್ಣಚೆಟ್ಟರ ಗೃಹದಲ್ಲಿ ಕೂಡಿದ್ದ ಮೇಲೆಕಂಡ ಸಂಘದ ೧೯೧೯-೨೦ ನೆ ವರ್ಷದ ಜನರಲ್ ಕಮಿಟಿಯ ಮೀಟಿಂಗಿನಲ್ಲಿ ನಡೆದ ನಡವಳಿಕೆಗಳು:—

೧. ಈ ಕೆಳಗೆ ಕಂಡ ದೊಡ್ಡ ಮನುಷ್ಯರು ಮೀಟಿಂಗಿಗೆ ದಯಮಾಡಿದ್ದರು:— (೧) ರಾಜಸಭಾಭೂಷಣ ದಿವಾನ್‌ಬಹದೂರ್ ಮ॥ ರಾ॥ ಕೆ. ಪಿ. ಪುಟ್ಟಣ್ಣಚೆಟ್ಟರು (ಅಧ್ಯಕ್ಷರು), (೨) ಮ॥ ರಾ॥ ಗಳಾದ ಎಚ್. ಕೆ. ವೀರಬಸವಯ್ಯನವರು ಬಿ. ಎ, ಬಿ. ಎಲ್., (೩) ಸಾಹುಕಾರ್ ಕಾಡಪ್ಪನವರು ಚಿತ್ರದುರ್ಗ, (೪) ಕೆ. ಸಿದ್ಧರಾಮಪ್ಪನವರು, ಬಿ. ಎ., (೫) ಯಜಮಾನ್ ಬಸಪ್ಪನವರು, (೬) ಸೆಟ್ಟರು ವೀರಭದ್ರಸೆಟ್ಟರು, (೭) ಗಂ. ಪಾಲಣ್ಣನವರು (ಟ್ರೆಜರರ್), (೮) ಕಂ. ಶಿವಪ್ಪನವರು, (೯) ಗುಬ್ಬಿ ಶಿವರಾತ್ರಪ್ಪನವರು. (೧೦) ಸಿದ್ಧಬಸವಶೆಟ್ಟರು, (೧೧) ಜಿ. ಕೆ. ರುದ್ರಾರಾಧ್ಯರು. (೧೨) ಸರಾಪ್ ಕಲ್ಲಪ್ಪನವರು, (೧೩) ವಾಣಿ ಅಪ್ಪಣ್ಣನವರು, ಗುಬ್ಬಿ, (೧೪) ಗುಬ್ಬಣ್ಣನವರು, (೧೫) ಜಿ. ಶಾಂತವೀರಪ್ಪನವರು, ಬಿ. ಎ., (ಸೆಕ್ರೆಟರಿ).

೨. ಸೆಕ್ರೆಟರಿಯವರಿಂದ ಓದಲ್ಪಟ್ಟ ೧೯೧೯-೨೦ ನೇ ವರ್ಷದ ರಿಪೋರ್ಟನ್ನು ಕಮಿಟಿಯವರು ಅನುಮೋದಿಸಿದರು.

೩. ಆಡಿಟರುಗಳ ರಿಪೋರ್ಟು ಓದಲ್ಪಟ್ಟಿತು. ಅದರಲ್ಲಿ ಕಂಡ ಸೂಚನೆಗಳನ್ನು ಕುರಿತು ವಿಚಾರಮಾಡಲಾಯಿತು.

೪. ಮೀಟಿಂಗಿಗೆ ಬಂದಿದ್ದ ಮೆಂಬರುಗಳೊಳಗೆ ಅನೇಕರು ಅಭಿಪ್ರಾಯಪಟ್ಟ ಮೇರೆಗೆ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ವ್ಯವಸ್ಥೆಗೋಸ್ಕರ ಏರ್ಪಟ್ಟಿರುವ ನಿಯಮಗಳಲ್ಲಿ ೧ ನೆ ನಿಯಮವನ್ನು ಕೆಳಗೆ ಕಂಡಂತೆ ಬದಲಾ

ಭಾರತೀಯರೂ ಮಾಂಸ ಭಕ್ಷಣವೂ.

ಯೂರೋಪ್ ಖಂಡದಲ್ಲಿ ಹೆಚ್ಚಿನವರು ಮಾಂಸ ಭಕ್ಷಕರು. ಹಿಂದೂಸ್ಥಾನದಲ್ಲಿ ಹೆಚ್ಚಿನವರು ಶಾಕಾಹಾರಿಗಳು. ಆದರೆ ಈ ನವನಾಗರಿಕತನದ ಕಾಲದಲ್ಲಿ ಈ ಭರತಖಂಡದಲ್ಲಿ ಕೂಡಾ ಮಾಂಸಾಹಾರಿಗಳು ಹೆಚ್ಚುವಂತೆ ತೋರುತ್ತದೆ. ಮಾಂಸಾಹಾರವು ದೇಹವನ್ನು ಪೋಷಿಸುವಂಥಾ ಆಹಾರವಲ್ಲವೆಂಬದಾಗಿ ಈಗತಾನೇ ಅನೇಕ ವೈದ್ಯರು ಪರಿಶೋಧಿಸಿ ತಿಳಿದುಕೊಂಡಿರುವರು. "ಮಾಂಸಾಹಾರಿಗಳಾದ ವಿಲಾಯಿತಿಯವರಿಗೂ ಶಾಕಾಹಾರಿಗಳಾದ ಹಿಂದುಗಳಿಗೂ ಸಹನಶಕ್ತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ" ಎಂಬದಾಗಿ ಹಿಂದೂಸ್ಥಾನದಲ್ಲಿದ್ದು ವಿಲಾಯಿತಿಗೆ ಹೋಗಿರುವ ಒಬ್ಬ ವೈದ್ಯರು ಹೇಳುವರು. "ಶಸ್ತ್ರಪ್ರಯೋಗ ಮಾಡಿದಲ್ಲಿ ಮಾಂಸಾಹಾರಿಗಳಾದ ಯೂರೋಪಿಯನರು ಗುಣವಾಗುವ ನಿರೀಕ್ಷೆಯು ಕಮ್ಮಿಯೆಂದೂ [illegible] ಹಿಂದುಗಳು ನೇಕಡಾ ತೊಂಭತ್ತೊಂಭತ್ತರಂತೆ ಗುಣವಾಗುವರೆಂದೂ" ಆ ವೈದ್ಯರ ಅನುಭವ ಸಿದ್ಧಾಂತದ ಮತವಾಗಿದೆ. ಹಿಂದೂಸ್ಥಾನದ ಒಂದು ದೊಡ್ಡ ಆಸ್ಪತ್ರೆಯಲ್ಲಿ ಇದ್ದ ಒಬ್ಬ ವೈದಿಕ ವಿಜ್ಞಾನಿಯು "ಶಾಕಾಹಾರಿಗಳಾದ ಹಿಂದುಗಳನ್ನು ಶಸ್ತ್ರಪ್ರಯೋಗ ಮಾಡಿದಲ್ಲಿ ಆ ಗಾಯಗಳಲ್ಲಿ ಕೀವು ಹುಟ್ಟುವುದೇ ಇಲ್ಲ" ಎಂಬದಾಗಿ ಹೇಳುವನು. ಕೆಲವು ವರುಷಗಳ ಹಿಂದೆ ಇಂಗ್ಲೀಷ್ ವೈದ್ಯರಾಗಿ ಖ್ಯಾತಿಹೊಂದಿದ ಸರ್ ಲಾಡರ್ ಬ್ರುಂಟನ್ ಎಂಬುವರು "ಇಂಗ್ಲೀಷರಿಗಿಂತಲೂ ಅಕ್ಕಿ ತಿನ್ನುವ ಹಿಂದುಗಳು ಹೆಚ್ಚಾಗಿ ಕ್ಲೋರಫೋರ್ಮನ್ನು ಸಹಿಸಿಕೊಳ್ಳುವರು. ಹಿಂದುಗಳು ನಿರ್ಮಲವಾದ ಅಕ್ಕಿಯನ್ನು ತಿನ್ನುವದರಿಂದ ಅವರ ನರಸಂಸ್ಥಾನಗಳು ವಿಷ ಪದಾರ್ಥಗಳಿಂದ ತುಂಬದೆ ಶುಚಿಯಾಗಿವೆ" ಎಂಬದಾಗಿ ಹೇಳುವರು.

ಆನೆಯ ಬೇಟೆಯಲ್ಲಿ ಹೆಸರು ಪಡೆದ ಸಂಡರ್ಸನ್ ಎಂಬವರು '೫೦ ವರುಷಗಳ ಅಡವಿಯ ಅನುಭವ' ಎಂಬ ಹೆಸರಿನಿಂದ ಬರೆದ ಪುಸ್ತಕದಲ್ಲಿ "ಮಾಂಸಾಹಾರಿ ಪ್ರಾಣಿಯಾದ ಸಿಂಹಕ್ಕೆ ಗುಂಡಿನ ಯಾ ಈಟಿಯ ಪೆಟ್ಟು ತಗುಲಿದಲ್ಲಿ ಅದರ ರಕ್ತವು ವಿಷದಿಂದ ತುಂಬಿ ಅದು ಬೇಗನೆ ಸಾಯುವುದು. ಆದರೆ ಮಾಂಸ ಭಕ್ಷಿಸದ ಇತರ ಪ್ರಾಣಿಗಳು ಗುಂಡಿನ ಪೆಟ್ಟನ್ನು ಸಹಿಸಿಕೊಳ್ಳುವುದಲ್ಲದೆ ಅದರ ರಕ್ತವು ಬೇಗನೆ ವಿಷಕರವಾಗಿ ಪರಿಣಮಿಸುವುದಿಲ್ಲ" ಎಂಬದಾಗಿ ಬರೆದಿರುವರು. ದೊಡ್ಡ ಪ್ರಾಣಿಗಳನ್ನು ಬಿಟ್ಟು ನಾವು ದಿನವಹಿ ನೋಡುತ್ತಿರುವ ಪಕ್ಷಿಜಾತಿಯಲ್ಲಿ ಕೋಳಿಯ ವಿಷಯವಾಗಿ ಆಲೋಚಿಸುವಾ. ಅಂಗದಲ್ಲಿ ಕೋಳಿಗಳಿಗೆ ಕಟ್ಟುವ ಕತ್ತಿಯ ಪೆಟ್ಟು ಮನುಷ್ಯನಿಗೆ ತಾಗಿದಲ್ಲಿ ಆತನ ರಕ್ತವು ವಿಷಕರವಾಗಿ ಪರಿಣಮಿಸಿ ಸಾಯುವನೆಂಬದು ನಿಶ್ಚಯ. ಆದರೆ ಕೋಳಿಯು ಎಂಥಾ ಪೆಟ್ಟನ್ನಾದರೂ ಸಹಿಸಿಕೊಳ್ಳುತ್ತದೆ. ಕತ್ತಿ ತಾಗಿದ ಪೆಟ್ಟಿನಿಂದ ಅದು ಬೇಗನೇ ಸಾಯುವುದಿಲ್ಲ. ಇಂಥಾ ಪೆಟ್ಟನ್ನು ಸಹಿಸಿಕೊಳ್ಳಲು ಅದು ಮಾಂಸ ತಿನ್ನದಿರುವದೇ ಕಾರಣ. ಕೋಳಿಗಳು ಶಾಕಾಹಾರಿಗಳಾಗಿರುವುದರಿಂದ ಅವುಗಳಲ್ಲಿ ಕೂಡಾ ಇಂಥಾ ಬಲವಾದ ಸಹನ ಶಕ್ತಿಯು ಇದೆ. ಅದರಂತೆ ಮನುಷ್ಯನು ಕೂಡಾ. ಮಾಂಸಾಹಾರಿಗಳಾದ ಯೂರೋಪಿಯನರಲ್ಲಿ ಇಂಥಾ ಸಹನ ಶಕ್ತಿಯು ಇಲ್ಲ. ಅವರಿಗೆ ಥಕ್ಕನೆ ಸಿಟ್ಟೇರುವುದು. ಪೆಟ್ಟು ತಗುಲಿದರೆ ಅವರ ರಕ್ತವು ಬೇಗನೆ ವಿಷಕರವಾಗಿ ಪರಿಣಮಿಸುವುದು. ಯಾವ ಜನಾಂಗವು ಮಾಂಸ ತಿನ್ನುವುದಿಲ್ಲವೋ ಅದು ಬಲಾಢ್ಯವಾಗಿಯೂ, ಕಾಯಪುಷ್ಟವಾಗಿಯೂ, ಧೈರ್ಯಶಾಲಿಯಾಗಿಯೂ ಇದ್ದಿರುವುದು. ಮನುಷ್ಯರು ಭಕ್ಷಿಸುವ ಆಹಾರಗಳಲ್ಲಿ ಮಾಂಸವು ಕನಿಷ್ಠವಾದದ್ದೆಂಬದಾಗಿ ಇತ್ತಲಾಗಿನ ವೈದ್ಯರು ಹೇಳುತ್ತಿರುವರು. ಆದುದರಿಂದ ಮಾಂಸ ಭಕ್ಷಣೆಯನ್ನು ತ್ಯಜಿಸುವುದು ಒಳ್ಳೆಯದು.

(ಸ್ವದೇಶಾಭಿಮಾನಿ)

ಸಂಘ ಸಂಸ್ಕರಣ ಭಾಷಣ.

ಮದರಾಸು ಅಧಿಪತ್ಯಕ್ಕೆ ಸೇರಿದ ಕೃಷ್ಣಾ ಗುಂಟೂರು ಜಿಲ್ಲೆಗಳಿಗೆ ಸಂಬಂಧಿಸಿದ ರಾಜಕೀಯ ಸಭೆ-ಸಂಘ ಸಂಸ್ಕರಣಸಭೆ-ಸ್ತ್ರೀಸಭೆ-ಆಂಧ್ರಭಾಷಾ ಸಂಸ್ಕರಣ ಸಭೆಗಳು ಕಳೆದ ತಿಂಗಳ ಕೊನೆಯಲ್ಲಿ ನಿಡುದವೋಲಿನಲ್ಲಿ ನಡೆದುವು. ಸಂಘಸಂಸ್ಕರಣ ಸಭೆಗೆ ಮುನಗಾಲ ಜಮೀನ್ದಾರಿಯ ದಿವಾನರಾದ ಮ॥ ಕೆ. ವಿ ಲಕ್ಷ್ಮಣರಾವು ಪಂತುಲು ಎಂ. ಎ, ರವರು ಅಧ್ಯಕ್ಷರಾಗಿದ್ದರು. ಅವರು ಮಾಡಿದ ಭಾಷಣವು ಜ್ಞಾತವ್ಯವಾಗಿದೆ. ಅದರ ಸಾರಾಂಶವನ್ನು ಇಲ್ಲಿ ಮುದ್ರಿಸುತ್ತೇವೆ.

ಸಂಸ್ಕರಣವೆಂದರೆ ತಿದ್ದುವುದು. ಇದು ಸಂಘದ ನಾಯಕರು ಸಂಘಶ್ರೇಯಸ್ಕರ ಸಲ್ಲಿಸಬೇಕಾದ ಋಣವಾಗಿರುವುದು. ಅಂಥ ಋಣವನ್ನು ತೀರಿಸಿಕೊಳ್ಳುವುದಕ್ಕೆ ಯತ್ನಿಸುವವರೇ ನಾಯಕರು. ಇಂಥ ನಾಯಕರು ಯಾವಾಗಲೂ ಜನಸಾಮಾನ್ಯಕ್ಕಿಂತಲೂ ಹೆಚ್ಚು ವಿದ್ಯಾವಂತರೂ ನೀತಿವಂತರೂ ಆಗಿರುವುದರಿಂದ ಸಂಘದಲ್ಲಿರುವ ನ್ಯೂನತೆಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಈ ನಾಯಕರುಗಳೇ [illegible]. ಅದುಕಾರಣವೇ ಅವಶ್ಯಕವಾದ ಮಾರ್ಪುಗಳನ್ನು ಜನರಿಗೆ ಬೋಧಿಸಿ, ಅವನ್ನೇ ತಾವೂ ಆಚರಿಸಿ ತೋರಿಸಿ, ತಾವು ಸಂಘಕ್ಕೆ ಸಲ್ಲಿಸಬೇಕಾದ ಋಣಭಾರವನ್ನು ತೀರಿಸಿಕೊಳ್ಳಬೇಕು. ಯಾವ ಸಂಸ್ಕಾರವನ್ನೂ ತಾನೇ ಆಚರಿಸಿ ತೋರಿಸುವುದು ಉತ್ತಮವು. ಎಂದರೆ ಅದು ಬಡ್ಡಿಯ ಸಮೇತವಾಗಿ ಮೂಲಧನವನ್ನು ಸಲ್ಲಿಸಿದಂತಾಗುವುದು. ಹಾಗೆ ತಾನು ಆಚರಿಸದೆ ಹೋದರೂ ತನ್ನ ವಕ್ತೃತ್ವ ಶಕ್ತಿಯಿಂದಲೂ ಲೇಖನ ಶಕ್ತಿಯಿಂದಲೂ ಸಂಘಸಂಸ್ಕರಣೋಪಾಯಗಳನ್ನು ಜನರಿಗೆ ಬೋಧಿಸುವುದೂ ನವನಾಗರಿಕರಿಗೆ ಪರೋಕ್ಷವಾಗಿ ಸಹಾಯಮಾಡುವುದೂ ಸಹ ಮಧ್ಯಮವು. ಎಂದರೆ ಇದು ಬಡ್ಡಿಯನ್ನು ಮಾತ್ರ ಸಲ್ಲಿಸಿ ಮೂಲಧನಕ್ಕೆ ಸೊನ್ನೆ ಸುತ್ತುವ ರೀತಿಯದುದು. ಇವನ್ನು ಸಂಸ್ಕರಣಗಳೊಂದನೂ, ತಾನೂ ಆಚರಿಸದೆಯೂ, ಪ್ರೋತ್ಸಾಹವನ್ನೂ ಮಾಡದೆಯೂ ಇರುವುದೇ ಅಧಮವು. ಎಂದರೆ ಇದು ಬಡ್ಡಿಯನ್ನೂ, ಮೂಲಧನವನ್ನೂ ಸಹ ಒಟ್ಟಿಗೆ ತಾನೇ ನುಂಗಿಬಿಡುವ ರೀತಿಯದುದು. ಈ ಮೂರುವರ್ಗವೇ ಅಲ್ಲದೆ ನಾಲ್ಕನೆಯ ವರ್ಗವೊಂದಿರುವುದು. ಇವರು ಸಂಸ್ಕರಣ ವಿರೋಧಿಗಳು. ಈವರು ಭರ್ತೃಹರಿಯಿಂದ ವರ್ಣಿಸಲ್ಪಟ್ಟಿರುವ "ತೇಕೇನಜಾನೀಮಹೇ" ಎಂಬ ವರ್ಗಕ್ಕೆ ಸೇರಿದವರುಗಳು. ರಾಜಾರಾಮ ಮೋಹನರಾಯರೂ, ಈಶ್ವರಚಂದ್ರ ವಿದ್ಯಾಸಾಗರರೂ, ವೀರೇಶಲಿಂಗಂ ಪಂತುಲುಯವರೂ, ಡಾಕ್ಟರ್ ಆಚಂಟಲಕ್ಷ್ಮೀಪತಿಯವರೂ ಮೊದಲನೆಯ ವರ್ಗಕ್ಕೆ ಸೇರಿದವರು. ಮಹರ್ಷಿ ದೇವೇಂದ್ರನಾಥ ಠಾಗೂರ್‌ರವರು, ನ್ಯಾಯಮೂರ್ತಿ ರಾನಡೆಯವರು, ಆರ್. ರಘುನಾಥರಾವ್‌ರವರು ಮೊದಲಾದವರು ೨ ನೆಯ ವರ್ಗಕ್ಕೆ ಸೇರಿದವರು. ೩-೪ ನೆಯ ವರ್ಗಕ್ಕೆ ಸೇರಿದವರ ಹೆಸರುಗಳನ್ನು ಹೇಳಬೇಕಾದವಶ್ಯಕತೆಯಿರುವುದಿಲ್ಲ. ಆದುದರಿಂದ ಸಂಘಕ್ಕೆ ಶಿರಸ್ಸಿನಂತಿರುವ ನಾಯಕರು ತಾವು ಯಾವಯಾವ ವರ್ಗಕ್ಕೆ ಸೇರುವರೋ ಅದನ್ನು ನೋಡಿಕೊಳ್ಳಬೇಕು.

ಸಂಘದಲ್ಲಿನ ಅನ್ಯಾಯವು:— ಈಗ ನಮ್ಮ ಸಂಘದಲ್ಲಿ ಸ್ತ್ರೀಯರಿಗೂ ಬ್ರಾಹ್ಮಣೇತರರಿಗೂ ಮುಖ್ಯವಾಗಿ ಅಂತ್ಯಜಾತಿಯವರಿಗೂ ಯಾವವಿಧವಾದ ಹಕ್ಕೂ ಇಲ್ಲದಂತೆ ಮಾಡಿರುವುದನ್ನು ತಪ್ಪಿಸಿ, ಅವರ ಹೀನಸ್ಥಿತಿಯನ್ನು ಪರಿಹರಿಸಿ, ಇತರರಿಗೆ ಸಮಾನವಾದ ಸಾಂಘಿಕ ಯೋಗ್ಯತೆಯನ್ನು ಅವರಿಗೆ ಉಂಟುಮಾಡಿ ಕೊಡುವುದು ಸಂಸ್ಕರಣೋದ್ದೇಶಗಳಲ್ಲಿ ಒಂದಾಗಿದೆ. ದೇಶದಲ್ಲಿ ಈಗ ಚರ್ಚಿಸಲ್ಪಡುತ್ತಿರುವ ಸಂಘಸಂಸ್ಕರಣ ವಿಷಯಗಳೆಲ್ಲವೂ ಈ ೨ ವರ್ಗಗಳಲ್ಲೇ ಸಮಾವೇಶಗೊಳ್ಳುತ್ತವೆ.

ಅಂತ್ಯಜಾತ್ಯುದ್ಧರಣವು— ಅಗಸ ಹಜಾಮ ಮೊದಲಾದ ಹೀನಜಾತಿಯವರನ್ನೂ, ಹೊಲೆಯ ಮಾದಿಗ ಮೊದಲಾದ ಅಂತ್ಯಜಾತಿಯವರನ್ನೂ ನಾವು ಪಶುಗಳಿಗಿಂತಲೂ ನೀಚರನ್ನಾಗಿ ತಿಳಿಯುತ್ತೇವೆ. ಪಶ್ವಾದಿಗಳನ್ನೂ ಕೂಡ ನಾವು ಮುಟ್ಟುತ್ತೇವೆ. ಆದರೆ ಈ ಜಾತಿಯವರ ನೆಳಲೂ ಕೂಡ ನಮಗೆ ಬೀಳಲಾಗದು. ತೆಲುಗು ದೇಶದಲ್ಲಿ ಮಾದಿಗರನ್ನು 'ಹೇಳಬಾರದವರು' ಎನ್ನುವರು. ಈ ಮಾತಿನಿಂದಲೇ ನಮ್ಮವರಿಗೆ ಈ ಜಾತಿಯವರ ವಿಷಯವಾಗಿ ಇರುವ ತಿರಸ್ಕಾರಭಾವವು ಎಷ್ಟೆಂಬುದು ವಿದಿತವಾಗುವುದು. ನಮ್ಮ ದೇಶದಲ್ಲಿ ಹೇಳಬಾರದವರೂ ತಿಳಿಯಬಾರದವರೂ ಕೂಡ ಜನರಲ್ಲಿರಬಹುದೆ? ಪಿಪೀಲಿಕಾದಿ ಬ್ರಹ್ಮಪರ್ಯಂತವಾಗಿರುವ ಸಕಲ ಭೂತಗಳಲ್ಲೂ ಸಮಾನಭಾವವನ್ನೂ, ಭೂತದಯೆಯನ್ನೂ ಹೊಂದಿರಬೇಕೆಂದು ಉದ್ಘೋಷಿಸುತ್ತಿರುವ ಹಿಂದೂಮತವನ್ನು ಅವಲಂಬಿಸಿರುವವರು ಹೀಗೆ ತಮ್ಮಲ್ಲಿನ ಕೆಲರನ್ನೇ ಅವಾಚ್ಯರನ್ನಾಗಿಯೂ, ಅಸ್ಪೃಶ್ಯರನ್ನಾಗಿಯೂ ತಿಳಿದುಕೊಳ್ಳುವುದು ಅತ್ಯಂತ ಶೋಚನೀಯವಲ್ಲವೆ? ಒಂದು ವೇಳೆ ಹಾಗೆ ಹೇಳಬಾರದವರು ಸಂಘದಲ್ಲಿಯೇ ಇರುವುದಾದರೆ ಅವರು ಯುಗಾಂತರದವರೆಗೂ ಹಾಗೆಯೇ ಇರಬೇಕಾದವರೇನೆಯೋ? ಅಂಥವರಿಗೆ ವಿದ್ಯಾನೀತಿಗಳನ್ನೂ, ಗೌರವವಾದ ವೃತ್ತಿಗಳನ್ನೂ ಉಂಟುಮಾಡಿಕೊಟ್ಟು ಅವರನ್ನು ಇತರ ನಾಗರಿಕರೊಡನೆ ಸಮಾನರನ್ನಾಗಿಸುವುದು ಸಂಘನಾಯಕರ ಕರ್ತವ್ಯವಲ್ಲವೆ? ಹಾಗೆ ಮಾಡದೆ ಹೋದರೆ ಶರೀರದಲ್ಲಿ ರೋಗದಿಂದ ಬಿದ್ದುಹೋದ ಒಂದು ಭಾಗದಂತೆ ಇವರು ದೇಶಾಭಿವೃದ್ಧಿಗೆ ಬಾಧಕರಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಈ ಹೀನಜಾತಿಯವರನ್ನು ಮುಂದಕ್ಕೆ ತರಲು ವಿದ್ಯೆಯೆಂಬುದೊಂದೇ ಮುಖ್ಯಸಾಧನವಾಗಿರುವುದು. ಶ್ರೀ ಹರ್ಷ ಚಕ್ರವರ್ತಿಯ ಕಾಲದಲ್ಲಿ ದಿವಾಕರನೆಂಬುವನು (ಮಾದಿಗರವನು) ದೊಡ್ಡ ಕವಿಯಾಗಿದ್ದನು. ಅವನ ವಿದ್ಯಾಮಹತ್ವವನ್ನು ನೋಡಿ ಶ್ರೀ ಹರ್ಷಚಕ್ರವರ್ತಿಯು ಅವನನ್ನು ಬಾಣ ಮಯೂರಾದಿ ಕವಿಗಳ ಜತೆಗೆ ತನ್ನ ಸಭಾಸದನನ್ನಾಗಿ ಏರ್ಪಡಿಸಿಕೊಂಡಿದ್ದನು. ಈ ಸಂಗತಿಯನ್ನು ಕುರಿತು ರಾಜಶೇಖರ ಕವಿಯು ಹೀಗೆ ವರ್ಣಿಸಿದ್ದಾನೆ— "ಅಹಾ! ಸರಸ್ವತೀದೇವಿಯ ಪ್ರಭಾವವೆಂತಹುದು! ಅದರಿಂದಲೇ ಮಾದಿಗನಾದ ದಿವಾಕರನು ಕೂಡ ಬಾಣ ಮಯೂರಾದಿಗಳಿಗೆ ಸಮಾನ [illegible] ಕವಿಯಾದನು." ನಿಮ್ನ ಜಾತಿಯವರ ಅಭ್ಯುದಯಕ್ಕಾಗಿ ಶ್ರಮಪಡತಕ್ಕವರು ಇದನ್ನೇ ಗುರುಮಂತ್ರವನ್ನಾಗಿ ತೆಗೆದುಕೊಳ್ಳಬೇಕು. ಇದನ್ನು ಕುರಿತು ಭರತಖಂಡದಲ್ಲಿಯ ಎಲ್ಲಭಾಗಗಳಲ್ಲೂ ತಕ್ಕ ಪ್ರಯತ್ನಗಳು ನಡೆಯುತ್ತಲೇ ಇವೆ. ಆಂಧ್ರದೇಶದಲ್ಲೂ ನಡೆಯುತ್ತಿದೆ. ಆದರೂ ಇನ್ನೂ ಹೆಚ್ಚಾಗಿ ನಡೆಯಬೇಕು. ಈ ವಿಷಯದಲ್ಲಿ ನಮಗಿಂತಲೂ ಹೆಚ್ಚಾದ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕ್ರೈಸ್ತಮತಬೋಧಕರು ಪ್ರಯತ್ನಪಡುತ್ತಿದ್ದಾರೆ. ಹಲವು ಹಳ್ಳಿಗಳಲ್ಲಿ ಇವರು ಪಂಚಮರಿಗಾಗಿ ಶಾಲೆಗಳನ್ನು ಸ್ಥಾಪಿಸಿ ವಿದ್ಯಾದಾನಮಾಡುತ್ತಿದ್ದಾರೆ. ನಮ್ಮವರು ಅಷ್ಟನ್ನಾದರೂ ಮಾಡಕೂಡದೆ? ಅನ್ಯದೇಶದವರೂ ಅನ್ಯಮತದವರೂ ನಮ್ಮ ಹೀನಜಾತಿಯವರಿಗಾಗಿ ಅಷ್ಟು ಪಾಡುಪಡುತ್ತಿರುವಾಗ ನಾವು ತಟಸ್ಥರಾಗಿರುವುದು ನ್ಯಾಯವೆ? ಧರ್ಮವೆ? ಈ ನಮ್ಮ ತಾಟಸ್ಥ್ಯದಿಂದ ಸಾವಿರಗಟ್ಟಲೆಯಾಗಿ ಹಿಂದೂಗಳು ಕ್ರೈಸ್ತಮತಕ್ಕೆ ಸೇರಿಹೋಗುತ್ತಿದ್ದಾರೆ. ಅದನ್ನು ನೋಡಿಕೊಂಡೂ ನಾವು ಸುಮ್ಮನಿರುವುದು ಉಚಿತವೆ? ನೀಚ ಜಾತಿಯವರು ಕ್ರೈಸ್ತರಾಗಿ ಮಾರ್ಪಡಕೂಡದೆಂತಲೂ ಅಂಥ ಮಾರ್ಪಾಟಿನಿಂದ ದೇಶಕ್ಕೆ ನಷ್ಟವಾಗುವುದೆಂತಲೂ ನಾನು ಭಾವಿಸುವೆನೆಂದು ತಿಳಿಯಕೂಡದು. ಒಬ್ಬನೊಬ್ಬ ಮಾದಿಗನು ಹಿಂದುವಾಗಿದ್ದುಕೊಂಡು, ಇತರರಿಂದ ಪಶುಗಿಂತಲೂ ಕಡೆಯಾಗಿ ಕಾಣಲ್ಪಡುತ್ತ, ಹೊಟ್ಟೆಗಿಲ್ಲದೆ ಸಾಯುತ್ತಿರುವುದಕ್ಕಿಂತಲೂ, ಕ್ರೈಸ್ತರಲ್ಲಿ ವಿದ್ಯೆಯನ್ನು ಕಲಿತು, ಕೃತ್ಯಾಕೃತ್ಯದ ಗುರುತನ್ನರಿತು, 'ಮಿಸ್ಟರ್ ಜಾನ್' ಎಂದು ಹೆಸರಿಟ್ಟುಕೊಂಡು, ಯಾವುದಾದರೊಂದು ಯಂತ್ರಾಲಯದಲ್ಲಿ ಇಂಜನಿಯರಾಗಿ ಬರುವುದು ದೇಶಕ್ಕೆ ಪ್ರಯೋಜನಕರವಾದ ಕಾರ್ಯವೆಂಬುದೇ ನನ್ನ ಅಭಿಪ್ರಾಯವು. ಆದರೆ ಇಂಥ ತಮ್ಮ ಹೀನಬಂಧುಗಳಿಗೆ ಹಿಂದೂಗಳು ಯಾವ ವಿಧವಾದ ಸಹಾಯವನ್ನೂ ಮಾಡದೆ, ಅವರೆಲ್ಲರಿಗೂ ಪರರ ಸಹಾಯದಿಂದಲೇ ಬದುಕುವ ಕ್ರೈಸ್ತರಾಗಿಯೇ ಮಾರ್ಪಡುವುದಕ್ಕೆ ಅವಕಾಶವನ್ನು ಕೊಟ್ಟರೆ, ನಾಗರಿಕತೆಯನ್ನು ಹೊಂದಿರುವ ದೇಶಗಳ ಮುಂದೆ ತಲೆಯೆತ್ತುವುದಕ್ಕೆ ನಮಗೆ ಅವಕಾಶವಿರುವುದೆ? ಅನ್ಯರ ಸಹಾಯದಿಂದಲೇ ಉತ್ತಮಸ್ಥಿತಿಗೆ ಬಂದ ಈ ನಿಮ್ನಜಾತಿಯವರಿಗೆ ನಮ್ಮಲ್ಲಿ ಭ್ರಾತೃಭಾವವಿರುವುದುಂಟೆ? ಹೇಗಿದ್ದೀತು? ಅಲ್ಪವಯಸ್ಕನಾದ ತಮ್ಮನಿಗೆ ಅನ್ನವನ್ನು ಹಾಕದೆ ಮನೆಯಿಂದ ಓಡಿಸಿಬಿಟ್ಟರೆ ಅವನಿಗೆ ಅಣ್ಣನಮೇಲೆ ಹೇಗೆ ಪ್ರೇಮವಿರುವುದು? ಆದುದರಿಂದ ನಾವೆಲ್ಲರೂ ನಿಮ್ನಜಾತ್ಯುದ್ಧಾರಾರ್ಥವಾಗಿ ಕ್ರೈಸ್ತರಂತೆ ಪಾಟುಪಡಬೇಕಾದುದು ಆವಶ್ಯಕವು.

(ಶೇಷ)

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವವು

ಪದ್ಧತಿಯಂತೆ ಈ ವರ್ಷದ ಸಮಾರಂಭಕ್ಕೆ ಮೈಸೂರು ಗೌರ್ನಮೆಂಟಿನವರು ಇಬ್ಬರನ್ನು ಎಂದರೆ ರಾಜಧಾನಿಯ ಮಹಾರಾಜಾ ಕಾಲೇಜಿನ ಸಹಾಯೋಪಾಧ್ಯಾಯರಾದ ಮ॥ ಬಾಪು ಸುಬ್ಬರಾಯರನ್ನೂ ನಂಜನಗೂಡಿನ ಆ॥ ಕಾಲೋಪಾಧ್ಯಾಯರಾದ ಮ॥ ಶೇಷಾಚಾರ್ಯರನ್ನೂ ಕಳುಹಿಸಿದ್ದರು. ಗೊತ್ತಾಗಿದ್ದ ಪರೀಕ್ಷೆಗಳು ಜೂನ್ ತಾ॥ ೧-೨ ರ ದಿವಸ ನಡೆದುವು. ೨ ನೆ ತಾರೀಖಿನ ಬೆಳಿಗ್ಗೆ ನೆರೆದ ಸಭೆಯಲ್ಲಿ ಕಳೆದ ವರ್ಷದ ಸಂಘದ ಕಾರ್ಯಕ್ರಮದ ವರದಿಯು ಓದಲ್ಪಟ್ಟಿತು. ಈ ವರ್ಷದ ಕಾರ್ಯಕಾರಿ ಮಂಡಳಿಯ ಸಭಾಸದರು ಆರಿಸಲ್ಪಟ್ಟರು. ಬಳಿಕ ಸಂಘಕ್ಕೋಸ್ಕರ ಕಟ್ಟಲ್ಪಡುತ್ತಿರುವ ಆಲಯದ ವೆಚ್ಚಕ್ಕೆ ಸಾಲದೆ ಬಂದಿರುವ ವಿಷಯವಾಗಿ ಚರ್ಚೆಯು ನಡೆದು ರಾ॥ಬ॥ ರೊದ್ದರವರು ಮೈಸೂರುದೇಶದ ಕಡೆಯಲ್ಲೂ, ಸಂಘದ ಕಾರ್ಯದರ್ಶಿಗಳಾದ ಮ॥ನಾರಾಯಣರಾವ ಕರಗುದರಿಯವರು ಬಿಜಾಪುರ ಮೊದಲಾದ ಕಡೆಯಲ್ಲೂ ಸಂಚರಿಸಿ ಧನಸಹಾಯವನ್ನು ಪಡೆಯುವುದಕ್ಕೆ ನಿಶ್ಚಯಿಸಲ್ಪಟ್ಟಿತು.

ಮಧ್ಯಾಹ್ನಾನಂತರ ಮರಳಿ ಸಭೆ ಕೂಡಿದಾಗ ಮ॥ ಬಾಪು ಸುಬ್ಬರಾಯರ "ಕನ್ನಡಿಗರ ಭಾಷಾಸೇವೆ" ಎಂಬ ವಿಷಯಕವಾದ ಭಾಷಣವು ಆಯಿತು. ಆಗಿನ ಸಭೆಗೆ ಡಿಸ್ಟ್ರಿಕ್ಟ್ ಕಲೆಕ್ಟರರಾದ ಮೆ॥ ಇ. ಸಿ. ಮೆಕಾನಕಿ ಸಾಹೇಬರು ದಯಮಾಡಿಸಿದ್ದರು. ಸಂಘದಾರಂಭದಿಂದ ಇದುವರೆಗಿನ ಅದರ ಇತಿಹಾಸವನ್ನು ರಾ॥ ಬ॥ ರೊದ್ದರವರು ವಿವರಿಸಿ ಹೇಳಿದರು. ಸಂಘವು ಸ್ಥಾಪಿತವಾಗಿ ಇದುವರೆಗೆ ೩೧ ವರ್ಷಗಳಾಗಿರುವುವು. ಇದುವರೆಗೆ ೫೯ ಪುಸ್ತಕಗಳು ಇದರಮೂಲಕ ಅಚ್ಚಾಗಿರುವುವು. ೫ ಸಾವಿರ ರೂ. ಗಳ ವರೆಗೆ ಗ್ರಂಥಕರ್ತರಿಗೆ ಬಹುಮಾನವನ್ನೂ, ೨ ಸಾವಿರ ರೂ. ಗಳ ವರೆಗೆ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನವಾಗಿಯೂ ಸಂಘದಿಂದ ಕೊಟ್ಟಿರುವರು. ಎಂಬುದು ಮೊದಲಾದ ವಿಷಯವು ಅವರ ಭಾಷಣದಿಂದ ವ್ಯಕ್ತವಾಯಿತು. ಕಡೆಗೆ ಬಹುಮಾನದ್ರವ್ಯವು ಗ್ರಂಥಕರ್ತರಿಗೂ, ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೂ ಹಂಚಲ್ಪಟ್ಟಿತು. ಅನಂತರ ಮ॥ಮೆಕಾನಕಿ ಸಾಹೇಬರವರು ಸಂಘದವರ ಪ್ರಯತ್ನವನ್ನು ಕುರಿತು

ಶ್ಲಾಘಿಸಿ, ಪ್ರತಿಯೊಬ್ಬನಿಗೂ ಭಾಷಾಭಿಮಾನ ದೇಶಾಭಿಮಾನಗಳು ಇರಬೇಕಾದುದವಶ್ಯಕವೆಂದು ನಿರೂಪಿಸಿದರು. ಬಳಿಕ ಸಂಗೀತಶ್ರವಣವೂ, ಪುಷ್ಪಗಂಧ ತಾಂಬೂಲಗಳ ವಿನಿಯೋಗವೂ ನಡೆದು ಚಕ್ರವರ್ತಿಯವರ ಮತ್ತೂ ಕರ್ನಾಟಕ ಸಿಂಹಾಸನಾಧೀಶರಾದ ಮೈಸೂರು ಮಹಾರಾಜರ ಮತ್ತೂ ಸ್ಥಲಾಧಿಕಾರಿಗಳಾದ ಕಲೆಕ್ಟರ್ ಸಾಹೇಬರ ಹೆಸರಿನಿಂದ ಜಯಘೋಷವು ಮಾಡಲ್ಪಟ್ಟು ಸಭೆಯು ಮುಗಿದಿತು.

ಈ ಸಂಘದ ಸಾದ್ಯಂತ ವೃತ್ತವನ್ನು ಸಮಾಲೋಚಿಸಿದರೆ ಧಾರವಾಡದ ಕನ್ನಡಿಗರಾದ ನಮ್ಮ ಬಾಂಧವರು ಮಾಡುತ್ತಿರುವ ಭಾಷಾಸೇವೆಯ ಅಶ್ರಾಂತ ಶ್ರಮಕ್ಕಾಗಿ ಕೃತಜ್ಞಭಾವವೂ ಕನ್ನಡನಾಡಿಗರಲ್ಲಿ ಭಾಷಾಭಿಮಾನವಿಲ್ಲದ ಕಾರಣದಿಂದ ಅವರ ಪ್ರಯತ್ನಕ್ಕೆ ತಕ್ಕಷ್ಟು ಜಯವು ಸಿಕ್ಕದೆಯಿರುವುದಕ್ಕಾಗಿ ಘೋರ ವಿಷಾದವೂ ಉಂಟಾಗುತ್ತಿವೆ. ಕನ್ನಡಿಗರು ಪರೀಕ್ಷೆಗೆ ಬಂದು ಬಹುಮಾನವನ್ನು ಪಡೆಯಬೇಕೆಂದು ಈ ಸಂಘದವರು ೬-೭ ತರಗತಿಗಳನ್ನೇರ್ಪಡಿಸಿದ್ದರೂ ೧-೨ ತರಗತಿಗಳಲ್ಲಿ ಯಾರೂ ಬರದೆ ಉಳಿದ ತರಗತಿಗಳಿಗೆ ೫೪ ಮಂದಿಗಳು ಮಾತ್ರವೇ ಬಂದಿದ್ದರೆಂಬ ಸಂಗತಿಯನ್ನೂ, ಪ್ರತಿವರ್ಷವೂ ಸಂಘಕ್ಕೆ ತಕ್ಕಷ್ಟು ವರಮಾನವಿಲ್ಲದೆ ವೆಚ್ಚವು ಇಮ್ಮಡಿಯಾಗುತ್ತಿರುವುದನ್ನೂ, ಇದುವರೆಗೆ ಸಂಘದ ತಲೆಯಮೇಲೆ ೫೦೦೦ ರೂಪಾಯಿಗಳಷ್ಟು ಸಾಲವು ಹೊತ್ತಿರುವುದೆಂಬುದನ್ನೂ, ಸಂಘದ ಆಲಯದ ನಿರ್ಮಾಣಕ್ಕಾಗಿ ಮೈಸೂರು ಗೌರ್ನಮೆಂಟಿನಿಂದ ೩೦೦೦, ಬೊಂಬಾಯಿಗೌರ್ನಮೆಂಟಿನಿಂದ ೨೦೦೦ ರೂಪಾಯಿಗಳು ಸಂದಿದ್ದರೂ ಕಟ್ಟಡವು ಅರ್ಧಾಂತವಾಗಿ ನಿಂತಿರುವುದೆಂಬುದನ್ನೂ ಕೇಳಿದರೆ ಭಾಷಾಸೇವಾ ಪ್ರಯತ್ನದಲ್ಲಿ ಕನ್ನಡಿಗರು ಎಷ್ಟುಮಟ್ಟಿಗೆ ಕರ್ತವ್ಯಶೂನ್ಯತರಾಗಿರುತ್ತಿರುವರೆಂಬುದು ಗೊತ್ತಾಗುವುದು. ಆಂಧ್ರ, ಗುಜರಾತಿ, ಮರಾಠಿ, ವಂಗ ಮೊದಲಾದ ಭಾಷೆಗಳ ಏಳ್ಗೆಗಾಗಿ ಆಯಾ ದೇಶೀಯರು ಇದುವರೆಗೂ ಈಗಲೂ ಅನಂತ ಪ್ರಯತ್ನಗಳನ್ನು ಮಾಡಿಯೂ, ಮಾಡುತ್ತಲೂ ಇದ್ದಾರೆ. ಆ ಆ ನಾಡಿನ ಪ್ರಭುಗಳೂ, ಜಮೀನ್ದಾರರೂ, ಶ್ರೀಮಂತರೂ ತಾವೇ ಸಭೆಗಳಲ್ಲಿ ಅಗ್ರಸ್ಥಾನವನ್ನು ವಹಿಸಿ ನಿಂತು, ಭಾಷಾಭಿವೃದ್ಧಿಯ ವಿಷಯವಾಗಿ ವಿದ್ವಾಂಸರಿಗೂ ಪತ್ರಿಕಾಕರ್ತರಿಗೂ ಧನಸಹಾಯಾದಿಗಳ ಮೂಲಕ ವಿಶೇಷವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಅದಕ್ಕಾಗಿ ಅಲ್ಲಲ್ಲಿಗೆ ಅನೇಕ ಸಂಘಗಳು ಸ್ಥಾಪಿತವಾಗಿವೆ. ನಮ್ಮ ಕನ್ನಡನಾಡಿನಲ್ಲಿ ಭಾಷಾವೃದ್ಧಿಗಾಗಿ ಸ್ಥಾಪಿತವಾಗಿರುವ ಸಂಘವೆಂದರೆ ಇದೊಂದೇ ಆಗಿರುವುದು. ಕೋಟ್ಯಂತರಜನ ಕನ್ನಡಿಗರಿದ್ದರೂ ಇದೊಂದು ಸಂಘದ ಸ್ತುತ್ಯಪ್ರಯತ್ನವು ಒತ್ತಾಸೆಯಿಲ್ಲದೆ ಅಧೋಮುಖವಾಗುತ್ತಿರುವುದೆಂಬ ಸಂಗತಿಯು ನಿಜವಾಗಿಯೂ ಕನ್ನಡಿಗನೆನಿಸಿಕೊಳ್ಳುವ ಪ್ರತಿಯೊಬ್ಬನಿಗೂ ಲಾಂಛನಾಸ್ಪದವಾಗಿದೆ. ಸಂಘದಿಂದ ಮುದ್ರಿತವಾಗಿರುವ ಗ್ರಂಥಗಳೂ, "ವಾಗ್ಭೂಷಣ" ವೆಂಬ ಮಾಸಪತ್ರವೂ ಪ್ರತಿಯೊಬ್ಬರಿಗೂ ವಿವೇಕವರ್ಧಕಗಳಾಗಿವೆ. ಪಠನೀಯವಾದ ಅವುಗಳನ್ನು ಪರಿಗ್ರಹಿಸುವುದರಲ್ಲಿ ಸಾಧಾರಣ ಪ್ರಜೆಗಳು ಉತ್ಸಾಹತೋರಿಸುತ್ತ ಬಂದರೂ, ಉಪಪತ್ತಿಯಿರುವ ಜನರು ಈ ಸಂಘದ ಸಭಾಸದರಾಗಿಯೋ ಕಟ್ಟಡದ ಫಂಡಿಗೆ ಧನಸಹಾಯಗೊಳಿಸಿಯೋ ತಮ್ಮ ಒತ್ತಾಸೆಯನ್ನು ಕೊಡುತ್ತ ಬಂದರೆ, ಈ ಸಂಘವು ಇನ್ನಷ್ಟು ಕಾಲ ಬಾಳಿ ಭಾಷಾಸೇವೆಯ ಮೂಲಕ ದೇಶಕ್ಕೆ ಉಪಕಾರವಮಾಡ ಸಮರ್ಥವಾಗುವುದು.

ಮೈಸೂರ್ ಸ್ಟಾರ್

೧೯೧೨ ನೆಯ ಜೂನ್ ತಾ|| ೧೦ ನೆಯ ಸೋಮವಾರ

ಮೈಸೂರು ಸಂಪದಭ್ಯುದಯ ಸಮಾಜವು.

ಈ ಸಭೆಯ ಕೆಲಸಗಳು ನಮ್ಮ ಸಂಸ್ಥಾನದ ಮಂತ್ರಿವರ್ಯರ ಅಧ್ಯಕ್ಷತೆಯಲ್ಲಿ ಒಂದು ವಾರದವರೆಗೂ ರಾಜಧಾನಿಯಲ್ಲಿ ನಡೆದುವು. ಚರ್ಚೆಯಿಂದ ನಿಶ್ಚಿತವಾದ ವಿಷಯಗಳೆಲ್ಲಾ ರಹಸ್ಯವಾಗಿರುವುದರಿಂದ ಮುಂದೆ ಅವುಗಳನ್ನೆಲ್ಲಾ ಗೌರ್ನಮೆಂಟಿನವರೇ ಪ್ರಕಾಶಪಡಿಸುವರು. ಕಳೆದ ವರ್ಷದಲ್ಲಿ ಈ ಸಮಾಜದ ಉಪಶಾಖೆಗಳವರು ವಿದ್ಯಾಭ್ಯಾಸ, ಕೃಷಿ, ವಾಣಿಜ್ಯ, ಶಿಲ್ಪಗಳ ಅಭಿವೃದ್ಧಿಗಾಗಿ ತಮ್ಮ ಪರಿಶೀಲನೆಯಿಂದ ನಿಷ್ಕರ್ಷಿಸಿ, ಸರ್ಕಾರಕ್ಕೆ ವರದಿಮಾಡಿರುವ ಕೆಲ ಸಂಗತಿಗಳು ಮಾತ್ರ ಹೊರಬಿದ್ದಿರುವುವು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ– "ಬಾಲವಿದ್ಯಾಭ್ಯಾಸವನ್ನು ಉಚಿತವಾಗಿ (ಫೀ ತೆಗೆದುಕೊಳ್ಳದೆ) ಯೂ, ಬಲಾತ್ಕಾರವಾಗಿಯೂ ಮಾಡಿಸುವುದಕ್ಕಾಗಿ ಸಂಸ್ಥಾನಕ್ಕೆಲ್ಲಾ ಅನ್ವಯಿಸುವಂತೆ ಒಂದು ವಿಧಿಯನ್ನೇರ್ಪಡಿಸಬೇಕು. ಅವಶ್ಯಕವಾದರೆ ಇದರ ವೆಚ್ಚಕ್ಕಾಗಿ ಒಂದು ಹೊಸ ಕಂದಾಯವನ್ನಾದರೂ ಪ್ರಜೆಗಳಮೇಲೆ ಹಾಕಬೇಕು. ಈಗಿರತಕ್ಕ ಪಾಠಶಾಲೆಗಳ ಜತೆಗೆ ಇನ್ನೂ ಒಂದು ಸಾವಿರ ಶಾಲೆಗಳನ್ನು ೬ ಲಕ್ಷ ರೂ. ವೆಚ್ಚದಿಂದ ಸ್ಥಾಪಿಸಬೇಕು. ಈ ಸೂಚನೆಯು ಅತ್ಯಂತ ಸಮಂಜಸವಾದುದೆಂಬುದನ್ನು ಬಿತ್ತಿ ಹೇಳಬೇಕಾಗಿಲ್ಲ. ಎಲ್ಲಕ್ಕಿಂತಲೂ ಮೊದಲು ಗೌರ್ನಮೆಂಟಿನವರು ಇತ್ತ ಕಡೆಗೆ ಗಮನಿಸಿ, ಕಾರ್ಯಾರಂಭಮಾಡಿದರೆ, ಅವರು ತಮ್ಮ ಪ್ರಜೆಗಳನ್ನು ಸಂಪನ್ನರನ್ನಾಗಿ ಮಾಡುವುದಕ್ಕಾಗಿ ಎಸಗುವ ಪ್ರಯತ್ನಗಳೆಲ್ಲಾ ಸುಲಭವಾಗಿ ಕೈಗೂಡುವುದಕ್ಕೆ ಅವಕಾಶವಾಗುವುದು. ಬಲಾತ್ಕಾರ ವಿದ್ಯಾಭ್ಯಾಸಕ್ಕೆ ಆರಂಭಿಸಿದರೆ ಅನೇಕ ಗ್ರಾಮಾಂತರಗಳಲ್ಲಿ ಹೊಸದಾಗಿ ಶಾಲೆಗಳ ಸ್ಥಾಪನೆಯನ್ನು ಮಾಡಬೇಕಾಗುವುದರಿಂದ ಅದಕ್ಕಾಗಿ ೩-೪ ವರ್ಷಗಳ ವರೆಗೂ ೧-೨ ಲಕ್ಷದಂತೆ ವೆಚ್ಚ ಮಾಡುತ್ತ ಬರಬಹುದು. ಮತ್ತೂ ಸಂಸ್ಥಾನದಲ್ಲಿ ಅಂಥ ಶಾಲೆಗಳು ಸಿದ್ಧವಾಗುತ್ತ ಬಂದಹಾಗೆಲ್ಲ ಮೊದಮೊದಲು ಬಲಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ವ್ಯವಹಾರಕ್ಕೆ ತಂದು ದಿನಕ್ರಮೇಣ ಸರ್ವತ್ರ ವ್ಯಾಪಿಸುವಂತೆ ಮಾಡಬಹುದು

ಮತ್ತೂ ಉಪಾಧ್ಯಾಯರನ್ನು ಅಣಿಮಾಡುವ ಶಾಲೆಗಳನ್ನು ಹೆಚ್ಚಿಸಬೇಕು. ಸ್ತ್ರೀ ವಿದ್ಯಾಪ್ರಚಾರಕ್ಕೆ ಸೌಕರ್ಯವನ್ನು ಹೆಚ್ಚಿಸಬೇಕು. ಪಂಚಮರ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹವನ್ನು ಕಲ್ಪಿಸಬೇಕು ಎಂಬ ವಿಷಯಗಳಿಗೆ ಉಚಿತವಾದ ಉಪಾಯಗಳನ್ನೂ ಈ ಶಾಖೆಯವರು ಸೂಚಿಸಿರುತ್ತಾರೆ. ಅವೆಲ್ಲಾ ಸಮರ್ಪಕವಾಗಿವೆ. ಮತ್ತೂ, ಪಂಚಮರಲ್ಲಿ ದೊಡ್ಡ ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾದವರಿಗೆ ಸರ್ಕಾರದಲ್ಲಿ ತಕ್ಕ ಅಧಿಕಾರವನ್ನು ಕೊಡುತ್ತ ಬರಬೇಕೆಂಬ ವಿಷಯವು ಕೂಡ ಈ ಸಭೆಯಲ್ಲಿ ಚರ್ಚೆಗೆ ಬಂದಿದ್ದು ಅನುಮೋದಿತವಾಯಿತೆಂದು ಕೇಳುತ್ತೇವೆ. ಅಂಥ ಪ್ರೋತ್ಸಾಹವಿರಬೇಕಾದುದು ಅವರಿಗೆ ಆವಶ್ಯಕವೂ ನ್ಯಾಯವೂ ಆಗಿರುತ್ತದೆ. ಮದ್ರಾಸಿಗೆ ಸಂಬಂಧವಿಲ್ಲದಂತೆ ಮೈಸೂರು ಸಂಸ್ಥಾನಕ್ಕೇ ಕೇವಲ ಪರೀಕ್ಷಕವಾಗಿರದೆ ಬೋಧಕವೂ ಆಗಿರುವ ಒಂದು ವಿದ್ಯಾಪೀಠವು (ಯೂನಿವರ್ಸಿಟಿ) ಸ್ವತಂತ್ರವಾಗಿರಬೇಕೆಂದು ಈ ಶಾಖೆಯವರು ಸೂಚಿಸಿದ್ದಾರೆ. ದಿನಕ್ರಮೇಣ ಧನಾನುಕೂಲ್ಯವಾದಂತೆ ಉತ್ತರೋತ್ತರ ಇದನ್ನೂ ಗೌರ್ನಮೆಂಟಿನವರು ನೆರವೇರಿಸಬಹುದಾಗಿದೆ.

ಕೈಗಾರಿಕೆಯ ಮತ್ತೂ ವ್ಯಾಪಾರದಭಿವೃದ್ಧಿಯ ವಿಷಯವಾಗಿ ಕೊಟ್ಟಿರುವ ಸೂಚನೆಗಳಲ್ಲಿ– "ಈ ದೇಶದ ಕಾಡಿನಲ್ಲಿ ದೀಪದಕಡ್ಡಿಗೆ ಉಪಯೋಗವಾಗತಕ್ಕ ಮರಗಳು ಬಹುಶಃ ೨೦ ಜಾತಿಯವುಗಳು ಇರುವುದರಿಂದ ದೀಪದ ಕಡ್ಡಿಯನ್ನು ಮಾಡುವ ಕಾರ್ಯಾಲಯವೊಂದನ್ನು ಸ್ಥಾಪಿಸಬೇಕು. ಹರಿಹರದ ಸುತ್ತಿನಲ್ಲಿ ವಿಶೇಷವಾಗಿ ಅರಳೆಯು ಹುಟ್ಟುವಳಿಯಾಗುವುದರಿಂದ ಅಲ್ಲಿ ನೇಯುವ ಯಂತ್ರಾಲಯವೊಂದನ್ನು ಸ್ಥಾಪಿಸಬೇಕು. ಮೈಸೂರು ದೇಶದಲ್ಲಿ ವರ್ಷ ೧ ಕ್ಕೆ ೧ ಕೋಟಿ ರೂ. ನ ರೇಶಿಮೆಯು ಸಿದ್ಧವಾಗುತ್ತದೆ. ಅದರಲ್ಲಿ ಕೆಲಸಕ್ಕೆ ಬಾರದೆಂದು ಬಹುಭಾಗವು ವ್ಯರ್ಥವಾಗಿ ಹೋಗುತ್ತದೆ. ಅದನ್ನೂ ಯಂತ್ರಗಳಿಂದ ನೂಲುಮಾಡಿದರೆ ೫ ಲಕ್ಷ ರೂ. ನಷ್ಟು ಆದಾಯವಾಗುತ್ತದೆ. ಈ ಕಾರ್ಯಕ್ಕಾಗಿಯೂ ಒಂದು ಸಂಘವನ್ನು ಸ್ಥಾಪಿಸಬೇಕು. ಮತ್ತೂ ಅನುಕೂಲವಾದ ಕೆಲವೆಡೆಗಳಲ್ಲಿ ಕಾಳಿನಿಂದ ಎಣ್ಣೆ ತೆಗೆಯುವ ಯಂತ್ರಾಲಯಗಳನ್ನು ಸ್ಥಾಪಿಸಬೇಕು. ಕಾಗದವನ್ನು ಮಾಡುವ ಯಂತ್ರಾಲಯವನ್ನು ಸ್ಥಾಪಿಸಬೇಕು. ಅರಗು ಗಂಧದೆಣ್ಣೆಗಳನ್ನು ಮಾಡುವ ಕಾರ್ಯಾಲಯಗಳನ್ನು ಸ್ಥಾಪಿಸಿದರೆ ಲಾಭಕರವಾಗುವುದು. ಮೈಸೂರು ಬೆಂಗಳೂರುಗಳಲ್ಲಿ ಕೊಬ್ಬರಿಯೆಣ್ಣೆ ತೆಗೆವುದು, ಬತ್ತವನ್ನು ಕುಟ್ಟಿ ಅಕ್ಕಿ ಮಾಡುವುದು, ನೀರನ್ನು ಭಾವಿಗಳಿಂದೆತ್ತಿ ವ್ಯವಸಾಯಕ್ಕುಪಯೋಗಿಸುವುದು ಇತ್ಯಾದಿಯಾದ ಸಣ್ಣ ಸಣ್ಣ ಕೆಲಸಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಮಾಡಿಸಬಹುದು. ದೇಶದ ಪ್ರಜೆಗಳೆಲ್ಲರಿಗೂ ಉಪಯೋಗಿಸುವಂಥ ಒಂದು ಜೀವವಿಮೆಯ ಧನಾಗಾರವನ್ನು ಸ್ಥಾಪಿಸಬಹುದು. ಕೆಲಕಡೆ ಹೊಸದಾಗಿ ಲೋಹಮಾರ್ಗವನ್ನು ಸ್ಥಾಪಿಸಬೇಕು. ಕೈಗಾರಿಕೆಯ ಅಭಿವೃದ್ಧಿಯ ಕೆಲಸಗಳಿಗೋಸ್ಕರ ಬೇಕಾಗುವ ಹೆಚ್ಚು ವೆಚ್ಚಕ್ಕಾಗಿಯೂ ಸಹ ಪ್ರಜೆಗಳ ಮೇಲೆ ಒಂದು ಹೊಸ ಕಂದಾಯವನ್ನು ಹಾಕಿದರೂ ಹಾಕಬಹುದು, ಇತ್ಯಾದಿಯಾಗಿ ಅವರ ವರದಿಯಲ್ಲಿ ಕಾಣಿಸಿದ್ದಾರೆ.

ಈ ಸೂಚನೆಗಳೆಲ್ಲಾ ದೀರ್ಘವಾದ ಪರ್ಯಾಲೋಚನೆಯಿಂದಲೂ, ಪರಿಶೋಧನದಿಂದಲೂ, ಅನೇಕ ಸ್ಥಲಗಳ ಸಂಚಾರದ ಮೂಲಕ ಲಬ್ಧವಾದ ಅನುಭವದಿಂದಲೂ ಸಹ ಮಾಡಲ್ಪಟ್ಟಿವೆಯೆಂದು ಗೊತ್ತಾಗುತ್ತದೆ. ಈ ಸಮಾಜವು ಸ್ಥಾಪಿತವಾಗಿ ಸ್ವಲ್ಪಕಾಲವಾಗಿದ್ದರೂ ಇದರ ವಿಚಾರಗಳು ಬಹುದೂರದವರೆಗೂ ನಡೆದಿರುವವೆಂಬುದನ್ನು ಕೇಳಿದರೆ ದೇಶೀಯರಾದ ಪ್ರಜೆಗಳೆಲ್ಲರೂ ಸಂತೋಷಪಡುವರು. ಆರಂಭದಲ್ಲೇ ಇಷ್ಟು ಸುಮುಖವಾಗಿರುವ ಈ ಸಮಾಜದ ಕೆಲಸಗಳು ಉತ್ತರೋತ್ತರ ಹೀಗೆಯೇ ಉತ್ಸಾಹದಿಂದ ನಡೆಯುತ್ತ ಬಂದರೆ ದೇಶಕ್ಕೆ ವಿಶೇಷವಾಗಿ ಉಪಕಾರವನ್ನುಂಟುಮಾಡುವುದೆಂಬುದರಲ್ಲಿ ಸಂಶಯವಿಲ್ಲ. ಈ ಸೂಚನೆಗಳೊಳಗೆ ಯಾವಯಾವ ವಿಷಯಗಳ ಮೇಲೆ ಸಭೆಯಲ್ಲಿ ಚರ್ಚೆನಡೆದು ಹಾಗೆಯೇ ತೀರ್ಮಾನವಾಗಿರುವುವೆಂಬುದನ್ನು ಮುಂದೆ ತಿಳಿಯಬೇಕಾಗಿದೆ.

ಅಂತೂ ಈ ಸಭೆಯಲ್ಲಿನ ತೀರ್ಮಾನಗಳಲ್ಲಿ ಬಹುಭಾಗವುಗಳನ್ನೆಲ್ಲಾ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಈಡೇರಿಸಿ ಕೊಡದೆ ಹೋದರೆ, ಈ ಸಮಾಜಸ್ಥಾಪನೆಯ ಉದ್ದೇಶವು ಸಾರ್ಥಕವಾಗುವುದಿಲ್ಲ. ಅದನ್ನು ಈಡೇರಿಸಬೇಕಾದರೆ, ಬಹುಳ ಧನಸಹಾಯವು ಬೇಕಾಗುವುದು. ಅದಕ್ಕಾಗಿ ಹೆಚ್ಚು ಕಂದಾಯವನ್ನು ಪ್ರಜೆಗಳ ಮೇಲೆ ಹೊರಿಸುವ ಉಪಾಯವೊಂದನ್ನೇ ಬಲವಾಗಿ ಹಿಡಿಯುವುದಕ್ಕಿಂತಲೂ, ಮಿತಿಮೀರಿ ಕಲ್ಪಿಸಲ್ಪಡುತ್ತಿರುವ ರಾಜ್ಯಕಾರ್ಯನಿರ್ವಾಹಾಧಿಕಾರಸ್ಥಾನಗಳನ್ನು ಕಡಿಮೆಮಾಡಿ, ಈಗಿರುವ ಸರ್ಕಾರದ ವೆಚ್ಚದ ಭಾಗದಲ್ಲಿ ಕಡಿಮೆಮಾಡಿಕೊಂಡೂ ಸಹ ಅದರಿಂದಲೂ ಸ್ವಲ್ಪ ಧನವನ್ನು ಈ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದು ಅತ್ಯಾವಶ್ಯಕ. ಸದ್ಯಃ ಕನ್ನಂಬಾಡಿಯ ಕಟ್ಟೆಯ ಕೆಲಸದ ವೆಚ್ಚದ ಭಾರವು ದೊಡ್ಡದಾಗಿ ಬಿದ್ದಿದೆ. ಅದು ಮುಗಿಯುವ ವರೆಗೂ ಈ ನೂತನ ವಿಷಯಗಳಿಗೆ ಧನವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಪ್ರಯಾಸವಾಗಬಹುದು. ಆದರೂ ಅವಶ್ಯ ಕರ್ತವ್ಯವಾದ ಈ ಭಾಗವನ್ನು ಸರ್ಕಾರವು ಉಪೇಕ್ಷಿಸಲಾಗುವುದಿಲ್ಲ. ಈ ಸಮಯದಲ್ಲಿ ಯಾವುದಾದರೊಂದು ತೆರದಲ್ಲಿ ಹೆಚ್ಚು ಕಂದಾಯವನ್ನು ಪ್ರಜೆಗಳ ಮೇಲೆ ಹಾಕುವುದಕ್ಕೆ ಸರ್ಕಾರದವರು ಯತ್ನಿಸಿದರೂ ಅದು ಪ್ರಜೆಗಳ ಕ್ಷೇಮಾರ್ಥವಾದ ಕೆಲಸಕ್ಕೋಸ್ಕರಲೇ ಆಗಿರುವುದರಿಂದ ಅದನ್ನು ಪ್ರಜೆಗಳು ಶಿರಸಾ ಮಾನ್ಯಮಾಡಲಾರದೆಯಿರಲಾರರೆಂದು ನಿರೀಕ್ಷಿಸುತ್ತೇವೆ. ಮತ್ತೂ ಪ್ರಕೃತದ ಸಮಾಜದ ಉಪಶಾಖೆಯವರು ಎಷ್ಟುಬೇಗನೆ ಚಟುವಟಿಕೆಯಿಂದ ಕೆಲಸಮಾಡಿ ಸೂಚನೆಗಳನ್ನು ತಂದರೋ ಸರ್ಕಾರದವರೂ ಹಾಗೆಯೇ ಚಟುವಟಿಕೆಯಿಂದ ಸ್ವಲ್ಪಸ್ವಲ್ಪವಾಗಿ ಅವನ್ನು ಕಾರ್ಯರೂಪವಾಗಿ ತರುವುದಾದರೆ ಮೈಸೂರು ಸಂಪದಭ್ಯುದಯಕ್ಕೆ ನಿಜವಾಗಿಯೂ ಮಾರ್ಗವಾಗುವುದು

ಸರ್ವಾಧಿಕಾರಿ ಮ|| ಎಂ. ಎಚ್. ಬಾಳರಾಜ ಅರಸಿನವರು.

ಈ ಯೌವನಸ್ಥರು ಶ್ರೀ ವಾಣೀವಿಲಾಸದ ಮಹಾಮಾತೃಶ್ರೀಯವರ ಸಹೋದರಿಯರ ಜ್ಯೇಷ್ಠಪುತ್ರರು. ಇವರ ತಂದೆಯವರಾದ ಮ|| ಎಂ. ನಂಜರಾಜ ಅರಸಿನವರು ನಮ್ಮ ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದು ಚಿಕ್ಕವಯಸ್ಸಿನಲ್ಲೇ ಮೃತಪಟ್ಟರು. ಮ|| ಬಾಳರಾಜ ಅರಸಿನವರಿಗೆ ಚಿಕ್ಕವಯಸ್ಸಿನಲ್ಲೇ ಮಾತಾಪಿತೃವಿಯೋಗವು ಸಂಭವಿಸಿತು. ಆದುದರಿಂದ ಇವರ ಸೋದರಮಾವಂದಿರಾದ ಸರ್ದಾರ್ ಮ|| ಎಂ. ಕಾಂತರಾಜ ಅರಸಿನವರೇ ಇವರಿಗೂ, ಇವರ ಸಹೋದರ-ಸಹೋದರಿಯರಿಗೂ ಪೋಷಕರಾಗಿದ್ದರು. ಶ್ರೀಮಂತ ಕಾಂತರಾಜ ಅರಸಿನವರು ವಿದ್ಯಾವಂತರಾದುದರಿಂದ ವಿದ್ಯೆಯ ಪ್ರಯೋಜನವನ್ನರಿತು ಈ ತಮ್ಮ ಸೋದರಳಿಯಂದಿರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಶ್ರದ್ಧೆಯನ್ನು ವಹಿಸಿದರು. ಶ್ರೀಮಂತರ ಪುತ್ರರು ವಿದ್ಯಾವಂತರಾಗುವುದು ವಿರಳವೆಂಬುದು ಸರ್ವಶ್ರುತವಾಗಿದೆ. ಆದರೆ ಕೀರ್ತಿಶೇಷರಾದ ಶ್ರೀ|| ಚಾಮರಾಜೇಂದ್ರವೊಡೆಯರ್ ಬಹದ್ದೂರ್‌ರವರ ಕೃಪಾಪೋಷಣೆಯಲ್ಲಿ ಮ|| ಕಾಂತರಾಜ ಅರಸಿನವರು ಹೇಗೆ ವಿದ್ಯಾವಂತರಾದರೋ ಹಾಗೆಯೇ ಅವರ ಪೋಷಣೆಯಲ್ಲಿ ಮ|| ಬಾಳರಾಜ ಅರಸಿನವರು ವಿದ್ಯಾವಂತರಾದುದಕ್ಕಾಗಿ ನಾವು ಸಂತೋಷಪಡುತ್ತೇವೆ. ಇವರು ಕಳೆದ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆಯೊಂದಿರುತ್ತಾರೆ. ಇವರಿಗೆ ಬಹುಶಃ ೨೧-೨೨ ವರ್ಷ ವಯಸ್ಸುಮಾತ್ರವೇ ಆಗಿರಬಹುದು. ಇವರು ತುಂಬಾ ನಿಗರ್ವಿಗಳೂ, ಸರಸಿಗಳೂ ಮತ್ತೂ ದಯಾಪರರೂ ಆಗಿರುತ್ತಾರೆ. ಲೋಕಮಾತೆಯಾದ ಶ್ರೀ ಚಾಮುಂಡಾಂಬಿಯು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವುದಲ್ಲದೆ ಈ ನಮ್ಮ ಬಾಳರಾಜಅರಸಿನವರು ಉತ್ತರೋತ್ತರ ನಮ್ಮ ಸಂಸ್ಥಾನದಲ್ಲಿ ದೊಡ್ಡದೊಡ್ಡ ಅಧಿಕಾರಿಗಳನ್ನು ಪಡೆದು ದೇಶಕ್ಕೆ ಹಿತವನ್ನುಂಟುಮಾಡತಕ್ಕವರಾಗಲೆಂದೂ ಕೋರುತ್ತೇವೆ. ನಮ್ಮ ರಾಜಬಂಧುಗಳು ಈ ರೀತಿಯಾಗಿ ಕ್ರಮೇಣ ವಿದ್ಯಾವಂತರಾಗುತ್ತ ಬಂದಲ್ಲಿ ನಮ್ಮ ಸಂಸ್ಥಾನದ ರಾಜ್ಯಭಾರವು ಇತೋಪ್ಯತಿಶಯವಾಗಿ ಉತ್ತಮಸ್ಥಿತಿಯನ್ನು ಹೊಂದುವುದಲ್ಲದೆ, ಪ್ರಜಾರಂಜಕವಾಗುವುದರಲ್ಲಿ ಸಂದೇಹವಿಲ್ಲವು. ಹೈದರಾಬಾದು, ಬರೋಡಾ ಮೊದಲಾದ ಸಂಸ್ಥಾನಗಳಲ್ಲಿ ರಾಜವರ್ಗದವರು ಸರ್ಕಾರದಧಿಕಾರ ಸ್ಥಾನಗಳಲ್ಲಿ ವಿಶೇಷವಾಗಿರುತ್ತಾರೆ. ನಮ್ಮ ಸಂಸ್ಥಾನದಲ್ಲಿ ಅಂಥ ಸ್ಥಿತಿಯು ಇರುವುದಿಲ್ಲ. ಈ ಲೋಪವನ್ನು ಪರಿಹರಿಸಬೇಕೆಂಬ ಉದ್ದೇಶದಿಂದಲೇ ಅಳಿದ ಮಹಾಸ್ವಾಮಿಯವರಾದ ಚಾಮರಾಜೇಂದ್ರವೊಡೆಯರವರು ತಮ್ಮ ಕ್ಷತ್ರಿಯ ಬಾಲಕರ ವಿದ್ಯಾಭ್ಯಾಸಕ್ಕಾಗಿ ಅರಸು ಬೋರ್ಡಿಂಗ್ ಸ್ಕೂಲನ್ನು ಸ್ಥಾಪಿಸಿದರು. ಆ ಮಹಾಸ್ವಾಮಿಯವರ ದೂರಾಲೋಚನೆಯು ಈಗ ಫಲಪ್ರದವಾಗುತ್ತಿದೆ. ಕಳೆದ

ಯಿಸಲಾಯಿತು:— ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘದ ಉದ್ದೇಶವೇನೆಂದರೆ— (೧) ಫಂಡಿಗೆ ಬರುವ ಬಡ್ಡಿಯಿಂದ ಮೈಸೂರು ಸೀಮೆಯ ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ವಿದ್ಯಾಭಿವೃದ್ಧಿಯನ್ನುಂಟುಮಾಡುವುದು, ಮತ್ತೂ (೨) ವೀರಶೈವ ಗ್ರಂಥಗಳ ಪ್ರಚಾರವನ್ನು ಪ್ರೋತ್ಸಾಹಿಸುವುದು.

೫. ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡುವ ವೀರಶೈವ ವಿದ್ಯಾರ್ಥಿಗಳ ವೇತನಕ್ಕಾಗಿ ಪ್ರತಿವರ್ಷವೂ ೧೨೦ ರೂ. ಕೊಡತಕ್ಕದು.

೬. ಸಂಸ್ಕೃತ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಫಂಡಿನಿಂದ ಕೊಡಲ್ಪಡುವ ಮೇಲ್ಕಂಡ ೧೨೦ ರೂ. ಗಳಲ್ಲದೆ ಮ|| ರಾ|| ಗಂಡಿಗೆ ಅಂಗಡಿ ರಾಮಣ್ಣನವರೂ, ಮ|| ರಾ|| ಗೌತರ ವೀರಭದ್ರಪ್ಪನವರೂ ಪ್ರತಿಮಾಸವೂ ೧೦ ರೂ ಕೊಡುವುದಾಗಿ ಉದಾರ ಮನಸ್ಸಿನಿಂದ ವಾಗ್ದಾನಮಾಡಿರುತ್ತಾರೆ. ಈ ಔದಾರ್ಯಕ್ಕಾಗಿ ಮೇಲ್ಕಂಡ ದೊಡ್ಡ ಮನುಷ್ಯರನ್ನು ಕಮಿಟಿಯವರು ಬಹಳ ಸಂತೋಷಪಡುತ್ತಾರೆ

೭. ಮ|| ರಾ|| ಅತ್ತಿಬೆಲೆ ಸಿದ್ದಬಸಪ್ಪನವರು ಬೆಂಗಳೂರಿನಲ್ಲಿ ವೀರಶೈವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕಟ್ಟುವದಾಗಿ ವಾಗ್ದಾನ ಮಾಡಿರುವ ಛತ್ರಕ್ಕೆ ಅನುಕೂಲವಾದ ಸ್ಥಳವನ್ನು ಕೊಡಬೇಕೆಂದು ಮೈಸೂರು ಸರ್ಕಾರದವರಿಗೆ ಪುನಃ ಅರಿಕೆ ಮಾಡಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

೮ ಈ ಕೆಳಗೆ ಕಂಡಂತೆ ಮ್ಯಾನೇಜಿಂಗ್ ಕಮಿಟಿಯು ಏರ್ಪಡಿಸಲ್ಪಟ್ಟಿತು — (೧) ರಾಜಸಭಾಭೂಷಣ ದಿವಾನ್ ಬಹದೂರ್ ಮ|| ಕೆ. ಪಿ. ಪುಟ್ಟಣ್ಣಶೆಟ್ಟರು (ಪ್ರೆಸಿಡೆಂಟರು) (೨) ಟಿ. ಎಸ್. ನಂಜಪ್ಪನವರು (ವೈಸ್ ಪ್ರೆಸಿಡೆಂಟರು) (೩) ಜಿ. ಶಾಂತವೀರಪ್ಪ, ಬಿ. ಎ., (ಸೆಕ್ರೆಟರಿ) (೪) ಜಿ ಸಾಂಪಣ್ಣನವರು (ಟ್ರೆಜರರ್) (೫) ಪುಟ್ಟಣ್ಣನವರು ಬಿ. ಎ, ಬಿ ಎಲ್., (೬) ಬಿ. ಬಸವಾರಾಧ್ಯರು, ಬಿ ಎ, ಬಿ ಎಲ್., (೭) ಎ. ಸಂಗಪ್ಪನವರು ಬಿ. ಎ, ಬಿ. ಎಲ್., (೮) ಎಚ್. ಕೆ ವೀರಬಸವಯ್ಯನವರು ಬಿ. ಎ, ಬಿ. ಎಲ್, (೯) ಜಿ. ಮಲ್ಲಿಕಾರ್ಜುನಯ್ಯನವರು ಬಿ. ಎ., (೧೦) ಕೆ. ಸಿದ್ಧರಾಮಪ್ಪನವರು ಬಿ. ಎ, (೧೧) ಯಜಮಾನ್ ಬಸಪ್ಪನವರು, (೧೨) ವೈ. ವಿರೂಪಾಕ್ಷಯ್ಯನವರು, (೧೩) ಸಿಗರಹಳ್ಳಿ ಶಿವಪ್ಪನವರು, (೧೪) ಗುಬ್ಬಿ ಶಿವರಾತ್ರಪ್ಪನವರು.

೯. ೧೯೧೦-೧೧ ನೇ ಸಾಲಿನ ಲೆಕ್ಕವನ್ನು ಆಡಿಟ್ ಮಾಡಲು ಮ|| ರಾ|| ವೀರಭದ್ರಶೆಟ್ಟರೂ ವೇ|| ಜಿ. ಕೆ. ರುದ್ರಾರಾಧ್ಯರೂ ಪುನಃ ನಿಯಮಿಸಲ್ಪಟ್ಟರು.

೧೦ ಫಂಡಿನ ಆದಾಯ ಮತ್ತೂ ವ್ಯಯದ ವಿವರ:—

ಜಮಾ.

ತಾ|| ೧೬-೪-೧೯೧೧ ರಲ್ಲು,

ಗವರ್ನಮೆಂಟ್ ಟ್ರೆಜರಿಯಲ್ಲಿದ್ದ ಡಿಪಾಜಿಟ್	೧೮೦೦೦-೦-೦
ಡಿಬೆಂಚರ್ ಬಾಂಡ್	೨೦೦-೦-೦
೧೯೧೧ ನೆ ಜನ ಆಪ್ರೈಲ್ ವರೆಗೆ ಬಡ್ಡಿ ...	೧೦೩೩-೧೪-೩
೨೩-೩-೦೮ ರಿಂದ ೧೬-೪-೧೧ ರ ವರೆಗೆ ವಸೂಲಾದುದು	೫೦೩೬-೮-೧೦
೧೭-೪-೧೧ ರಿಂದ ೨೮-೪-೧೨ ರ ವರೆಗೆ ವಾಗ್ದಾನಮಾಡಿದವರಿಂದ ...	೫೦-೦-೦
ವಿವಾಹ ಮೊದಲಾದ ಕಾರ್ಯಗಳಲ್ಲಿ ವಸೂಲಾದುದು	೨೨೮-೦-೦
ಜುಮ್ಲಾ ರೂ.	೨೪೦೨೩-೭-೧

ಖರ್ಚು.

ತಾ|| ೧೮-೪-೧೨ ರಲ್ಲು ಟ್ರೆಜರಿಯಲ್ಲಿ ಡಿಪಾಜಿಟ್	೧೮೦೦೦-೦-೦
ಡಿಬೆಂಚರ್ ಬಾಂಡ್	೨೦೦-೦-೦
೨೩-೩-೦೮ ರಿಂದ ೧೬-೪-೧೧ ರವರೆಗೆ ವಿದ್ಯಾರ್ಥಿ ವೇತನಕ್ಕೂ ಸಾದಿಲ್ವಾರ್ ಮೊದಲಾದ ಖರ್ಚಿಗೂ	೪೯೪೯-೪-೩
೧೭-೩-೧೧ ರಿಂದ ೨೮-೪-೧೨ ವರೆಗೆ ವಿದ್ಯಾರ್ಥಿಗಳ ವೇತನಕ್ಕೆ	೪೩೯-೮-೦
ಶ್ರೀಶೈಲಭಾಷ್ಯದ ಛಾಪಿಗೆ	೫೦-೦-೦
ಸಾದಿಲ್ವಾರ್	೧೦-೨-೬
ಸೆಕ್ರೆಟರಿಯವರಲ್ಲಿ	೨೮೪-೮-೦
ಟ್ರೆಜರರ್‌ರವರಲ್ಲಿ	೫೦-೦-೦
ಜುಮ್ಲಾ ರೂ.	೨೪೦೨೩-೭-೧

ಮೇಲೆ ಕಂಡ ಆಯವ್ಯಯದಪಟ್ಟಿಯಿಂದ ತಿಳಿಯಬರುವುದೇನೆಂದರೆ:—ಮಹಾಸಭಾ ಕಾಲದಲ್ಲಿ ವಾಗ್ದಾನಮಾಡಿದವರಿಂದ ಕಳೆದ ವರ್ಷದಲ್ಲಿ ೫೦ ರೂ. ಮಾತ್ರ ವಸೂಲಾಗಿರುವುದು. ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ೨೨೮ ರೂ. ಮಾತ್ರ ವಸೂಲಾಗಿದೆ. ನಮ್ಮ ಸಂಸ್ಥಾನದ ವೀರಶೈವರಲ್ಲಿ ನಡೆದ ಲಗ್ನಗಳೊಳಗೆ ೫೪ ಲಗ್ನಗಳಲ್ಲಿ ಮಾತ್ರ ಫಂಡಿಗೆ ಪ್ರತ್ಯೇಕ ಸಹಾಯವು ಮಾಡಲ್ಪಟ್ಟಿರುವುದು. ಅದರ ತುಮಕೂರು ಡಿಸ್ಟ್ರಿಕ್ಟಿನಲ್ಲಿ ನಡೆದ ೨೮ ಲಗ್ನಗಳಲ್ಲಿ ೯೯ ರೂ ವಸೂಲಾಗಿದೆ. ಹಾಸನ ಡಿ|| ನಲ್ಲಿ ನಡೆದ ೭ ಲಗ್ನಗಳಲ್ಲಿ ೬೦ ರೂ. ವಸೂಲಾಗಿದೆ. ಬೆಂಗಳೂರು ಡಿ|| ನಲ್ಲಿ ನಡೆದ ೫ ಲಗ್ನಗಳಲ್ಲಿ ೩೦ ರೂ. ವಸೂಲಾಗಿದೆ. ಕೊಡಗಿನಲ್ಲಿ ನಡೆದ ೧೦ ಲಗ್ನಗಳಲ್ಲಿ ೨೦ ರೂ. ವಸೂಲಾಗಿದೆ. ಮೈಸೂರು, ಕೋಲಾರ ಮತ್ತೂ ಕಡೂರು ಡಿ|| ಗಳಲ್ಲಿ ರೂ. ೬, ೫, ೪ ರಂತೆ ಮಾತ್ರ ವಸೂಲಾಗಿರುವುದು. ಶಿವಮೊಗ್ಗ ಮತ್ತೂ ಕಡೂರು ಡಿ|| ಗಳಲ್ಲಿ ಏನೂ ವಸೂಲಾಗಿಲ್ಲ.

ಕೆಲವು ಸ್ಥಳಗಳಲ್ಲಿ ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ಆಯಾ ಸ್ಥಳದ ಪ್ರಮುಖರಿಂದ ಫಂಡಿಗೋಸ್ಕರ ವಸೂಲಾದ ಹಣವು ಏನು ಕಾರಣದಿಂದಲೋ ಫಂಡಿಗೆ ರವಾನಿಸಲ್ಪಟ್ಟಿಲ್ಲವೆಂಬಂಶವು ಅಧ್ಯಕ್ಷರ ಗಮನಕ್ಕೆ ಬಂದಿರುವುದು. ಇದಕ್ಕಾಗಿ ಅಧ್ಯಕ್ಷರು ತುಂಬಾ ವಿಷಾದಪಡುತ್ತಾರೆ. ಈಗಲೂ ಹಾಗೆ ವಸೂಲಾದ ಹಣವು ಯಾವ ದೊಡ್ಡ ಮನುಷ್ಯರಲ್ಲಾದರೂ ನಿಂತಿದ್ದರೆ ಅದನ್ನು ಆದಷ್ಟು ಶೀಘ್ರವಾಗಿ ಫಂಡಿನ ಸೆಕ್ರೆಟರಿಯವರಿಗೆ ರವಾನಿಸಬೇಕೆಂದು ಪ್ರಾರ್ಥಿಸುತ್ತಾರೆ.

ಜಿ. ಶಾಂತವೀರಪ್ಪ,
ಆನರೆರಿ ಸೆಕ್ರೆಟರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ೧೯೧೨ ನೆಯ ಸಂವತ್ಸರದಲ್ಲಿ ಬಂದಿರುವ ವಿವಾಹ ಸಂಬಂಧವಾದ ಕಾಣಿಕೆಯು:—

ಮ|| ರಾ|| ಗಳಾದ	ರೂ. ಆ. ಪೈ.
ಸಿರಾದ ಪುಟ್ಟರುದ್ರದೇವರಿಂದ ೨ ಲಗ್ನಗಳ ಬಾಬತು...	೫-೦-೦
ಗುಬ್ಬಿ ತಾ|| ಬಿದರೆಯ ವೇ|| ಉಮಾಪತಿಶಾಸ್ತ್ರಿಗಳಿಂದ	೧೦-೦-೦
ಗುಬ್ಬಿ ತಾ|| ಸಂಕಿಗೆಯ ಸೆಟ್ಟಿ ಯಜಮಾನರಿಂದ	೨-೦-೦
ಸಿರಾ ತಾ|| ಬುಕ್ಕಾಪಟ್ಟಣದ ಸ್ವಾಮಿರಯ್ಯನವರ ಮಲ್ಲಣ್ಣನವರಿಂದ	೧೦-೦-೦
ಬೆಂಗಳೂರ ಎಲೆ ಸಿದ್ದಲಿಂಗಪ್ಪಶೆಟ್ಟರಿಂದ	೧೦-೦-೦
ಬೆಂಗಳೂರ ದಿಗಂಬರಸೆಟ್ಟರ ದೊಡ್ಡವೀರಶೆಟ್ಟರಿಂದ	೧೦-೦-೦
ದೊಡ್ಡಬಳ್ಳಾಪುರ ತಾ|| ಮೇಳೆಕೋಟೆ ಅಂಗಡಿ ಬಸಣ್ಣನವರಿಂದ	೨-೦-೦
ಒಟ್ಟು ರೂ.	೪೯-೦-೦

ಜಿ. ಶಾಂತವೀರಪ್ಪ,
ಆನರೆರಿ ಸೆಕ್ರೆಟರಿ.

CORONATION SOAP
TRADE MARK

3 ಕಾರೋನೇಷನ್ ಸಾಬೂನು.

"ಅಪಾಯವಿಲ್ಲದ ರೋಮಸಂಹಾರಿ"

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನೆಗೆ ಮುಂತಾದ ಬಾಧೆಗಳಿಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0.
3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0 ಅಂಚೆ ಹಾಸಲು 0—4—0
ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.
ಬಿ. ಸಿ. ಷಾ ಅಂಡ್ ಕೋ.,
177 ಜೇನಾಬಜಾರ್‌ಕೋಡಾ, ಮದ್ರಾಸು

ವೀರಶೈವಾಶ್ರಮ ಬೆಂಗಳೂರು.

3

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಪಾಳೆಯಗಾರರು, ಅಧಿಕಾರಿಗಳು ಮೊದಲಾದವರುಗಳಿಗು ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲ್ಯವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಲ್ಪಟ್ಟಿರುವಂತೆ ಈ ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಬಹುಜನರು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿವಾದಕರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿಬರಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋಟೆಯೊಳಗೆ ಪೋಸ್ಟಾಫೀಸಿನ ಪಕ್ಕದಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವನ್ನು ಏರ್ಪಡಿಸಿದೆ. ಈ ಕಟ್ಟಡದಲ್ಲಿ ಶ್ರೀಮಂತರುಗಳೂ, ಪಾಳೆಯಗಾರರೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುದಲ್ಲದೆ, ಈಗಿನ ಕಾಲದ ಆರೋಗ್ಯ ಸೂತ್ರಕ್ಕನುಗುಣವಾಗಿದೆ. ಬುದ್ಧಿವಂತರಾದ ಪಾಚಕರನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕೇರ್ಪಾಟನ್ನಿಟ್ಟಿದೆ. ಮತ್ತೂ ಊಟದ ಖರ್ಚನ್ನೂ ತಕ್ಕಮಟ್ಟಿಗೆ ಸುಲಭಮಾಡಿದೆ. ಇಲ್ಲಿಯ ಏರ್ಪಾಟನ್ನು ತಿಳಿಯಲಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಾರರಿಂದ ಪ್ರತ್ಯಕ್ಷವಾಗಾಗಲೀ ಅಥವಾ ಲಿಖಿತ ಮೂಲಕವಾಗಾಗಲೀ ತಿಳಿಯಬಹುದು.

ಎಸ್. ಕರಿಪ್ಪ,
ಊದಬತ್ತಿ ಷಾಪ್, ದೊಡ್ಡಪೇಟೆ, ಬೆಂಗಳೂರು.

ಆಶ್ಚರ್ಯ ಚಿಕಿತ್ಸೆ. ಒಂದು ಪರೀಕಿಸಿ.

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀವುದು ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು
ಬ್ಲಡ್ ಸರ್ಕ್ಯೂಲೇಟರ್ ಎಂಬ ನೂತನ ಯಂತ್ರದಲ್ಲಿ
ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ
5 ಗುಣಪಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯೆಯಿರುವ ನಾಳದಲ್ಲಿ ಕಸಕಟ್ಟಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡುವುಂಟಾಗಿರುವುದು ಜ್ವರಬಂದು ನಿಂತಮೇಲೂ, ವಾಯುವಿನಿಂದಲೂ ಕಿವುಡು ಉಂಟಾಗಿರುವುದು ಇವೆ ಮೊದಲಾಗಿ ಎಲ್ಲಾ ಕರ್ಣರೋಗಗಳನ್ನೂ ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಕಾಮಾಲೆ, ಶೋಭೆ, ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾದ ಎಲ್ಲಾ ತರಹ ವಾಯು ರೋಗಗಳೂ ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಮೊಕ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಂಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ರೈಲ್ವೇಸ್ಟೇಷನ್.

ಉತ್ತಮವಾದ ನಶ್ಯದಪುಡಿ.

9

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ. ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೇಡಿಲ್ಲ. ಒಂದು ಚುಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮುಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೨—೧೪—೦.

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ ನೀವು ಉಪಯೋಗಿಸುವ ಖರೀ ಹೊಗೇಸೊಪ್ಪಿಗೆ ಬದಲಾಗಿ, ಏಲಕ್ಕಿ, ಲವಂಗ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೨—೧೪—೦. ಗಳಿಗೆ ಟಪಾಲ್ ಖರ್ಚು ಬೇರೆ.

ವಿಳಾಸ:—ಕೆ. ಮಲ್ಲಿಕಾರ್ಜುನಶೆಟ್ಟಿ,
ಸೋಮಶೆಟ್ಟಿಹಳ್ಳಿ ಮಡೂರು ಪೋಸ್ಟು,
ಕೊಳ್ಳೇಗಾಲ ತಾಲ್ಲೂಕು.

ಸ್ವದೇಶಿ ! (ಸತ್ಯಮೇವಜಯತೇ) ಸ್ವದೇಶಿ !

49 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ, ಜೆ. ಎರ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

38

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. [illegible] ದ ಅಥವಾ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯು; ೧ ಬಾಟ್ಲಿಗೆ, ೧-೧೨-೦ ರೂ. ೨ ಬಾ, ೨-೧೨-೦ ರೂ. ೩ ಬಾ, ೩-೧೪-೦ ರೂ. ಒಮ್ಮಿಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೪ ರೂ. ಮೇಲೆ ೨ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪಹೂರ್ಕರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯು ೧ ಡಬ್ಬಿಗೆ ೧॥ ರೂ. ೨ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೪೪ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

97

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೨೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೬-೦. ತೊಲೆ ೧ಕ್ಕೆ ೧-೮-೦.

ಪಚ್ಚಕರ್ಪೂರವಮಾತ್ರೆ— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦.

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ— ೪೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೨-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಡುವವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೦೭ ನೆಯ ಇಸವಿ ಜೂನ್ ತಾ॥ ೧೦ರಿಂದ ೧೯೦೭ನೆಯ ಜೂನ್ ತಾ॥ ೧೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೨೯ ನೆಯ ಪರೀಧಾವಿ ಸಂವತ್ಸರದ ಜ್ಯೇಷ್ಠ ಬ॥ ದಶಮಿಯಿಂದ ಅಧಿಕಾಷಾಢ ಶು॥ ಪಾಡ್ಯದವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
10	1 ಸೋ	ದ	28-35	ರೇವತಿ	44-50	29
11	2 ಮಂಗ	ಏ	28-1	ಅಶ್ವಿನಿ	45-45	30
12	3 ಬುಧ	ದ್ವಾ	26-10	ಭರಣಿ	45-21	31
13	4 ಗುರು	ತ್ರ	23-11	ಕೃತ್ತಿಕ	43-57	32
14	5 ಶುಕ್ರ	ಚ	19-11	ರೋಹಿಣಿ	41-34	1
15	ಶನಿ	ಅ	14-22	ಮೃಗಶಿರ	38-2[illegible]	2
16	6 ಭಾನು	ಪಾ	9-0	ಆರ್ದ್ರ	42-43	3

(1) ಅಗಸ್ತ್ಯಾಸ್ತಮಯಃ. (2) ಸರ್ವತ್ರಸಾರ್ವೈಕ ದಶಿ, (3) ದ್ವಾದಶೀ ತಿಥಿ, ಪ್ರದೋಷಃ. (4) ಮಾಸಶಿ ರಾತ್ರಿಃ, ನಂಜನಗೂಡು ವಿಜಯೇಂದ್ರಸ್ವಾಮಿಗಳ ಪುಣ್ಯ (5) ಸರ್ವತ್ರ ಅಮಾವಾಸ್ಯಾ ಮಡಕೇರಿಪುಣ್ಯಕಾಲಃ ಮಾರ್ಘಃ, (6) ರಜಬ್ ಚಂದ್ರ ೧.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ
ಕೃಷ್ಣಶಕ್ತಿ ಮುದ್ರಾ ಪ್ರಕಟಿಸಲ್ಪಟ್ಟಿತು.

ಸಿಂಗಿರಾಜಪುರಾಣವಿಜಯಂ

19

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯೂ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ಜೀವಿಟಗೆಬೀದಿ ಮೈಸೂರು.

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

9

ಲೋಕಾಮಯಾಪಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೇಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ಧಿಯ ಬೆಲೆ ೧-೦-೦ ರೂ.

ಟಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

REGISTERED No M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಮಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾರ್ದ್ರಸ್ಯಾಲಪಾಲಂಪಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ಸರ್ ೧೯೦೭ ನೆಯ ಇಸವಿ ಜೂನ್ ತಾರೀಖು ೧೭ ನೆಯ ಸೋಮವಾರ. [ಸಂಚಿಕೆ ೨೪

16 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೪-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕೆ ೧೨ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೩-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

43

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೨-೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ—೧-೨-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೨-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವು, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೦-೦

ಎಸ್. ಆರ್. ಕರಿಬಸವಶಾಸ್ತ್ರಿ
ಗ್ರಂಥಪ್ರಕಾಶಕರ ಮಂಡಲಿ. ಮೈಸೂರು.

ಮಧುರವಾಣಿ.

11 ವಾರ್ಷಿಕಚಂದಾ ೧-೮-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ಧಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

19

ವಿವೇಕಮಂಜರಿ.

೨ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೬ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲು ಕಡಿಮೆ

೨ನೆಯ ಭಾಗ ೨ ಆಣೆ ೧೪೦ ಪುಟಗಳು

ಅಂಚೆ ವೆಚ್ಚ ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

43

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿಃ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ [illegible] ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

೧ ಪ್ರತಿಗೆ ೧ ವರ್ಷಕ್ಕೆ ೦-೫-೦.
೨ ರಿಂದ ೪ ರವರಿಗೆ ೧-೧೦-೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

3 ಕಾಶೀವಿಶ್ವೇಶ್ವರಪ್ರಸನ್ನಾ.

S.U.N.& Co
BENARES CITY.
KASHI
VISHWESHWAR.

ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀ ಕ್ಷೇತ್ರಕಾಶಿಯಲ್ಲಿ ತಯಾರಾಗುವ ಬನಾರಸ್ ಜರೀ ರೇಷ್ಮೆ ಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೇಗಾಲ ಮೊಣಕಾಲ್ಮುರು ನಮೂನೆ ವಸ್ತ್ರಗಳು, ಜರೀ ರೇಷ್ಮೆ ಭದ್ರರು, ರುದ್ರಾಕ್ಷಿಸರಗಳು, (ಇದರಲ್ಲಿ ೨ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು.) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಪೌಳಿಕೊಡಲು ಗಂಗಾಭಾಗೀರಥಿಯಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಟಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ಹೊರ ವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟ್ಯಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು ೪ ಸಾದಾ [illegible] ೨ ಕಾಶೀವಿಶ್ವೇಶ್ವರಪಟ, ೨ ನಮ್ಮ ಕಂಪನಿ ವಿಳಾಸ [illegible] ನ್ನು ಹಾಪು ಬರದು ಕಳುಹಿಸುವ [illegible] ವು. ಬೇರಿಂಗ್ ಪತ್ರ ತೆಗೆದುಕೊಳ್ಳ [illegible]

ವಿಳಾಸ,—[illegible]

ಎಸ್. ಯು. [illegible]

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿದೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಶ್ರೀಮನ್ಮಗ್ಗೆ ಮಾಯಿದೇವಪ್ರಭುವಿರಚಿತ
ಶಿವಾಧವ ಶಿವಾಪಳ್ಳಿಧ ಮಹದೈಪುರೀಶ್ವರ

ಶತಕತ್ರಯವು

ಕರ್ನಾಟಕ ಟೀಕೆಯೊಡನೆ ಈಗ್ಗೆ ೬೬ ವರ್ಷಗಳ ಕೆಳಗೆ ಮುದ್ರಿಸಲ್ಪಟ್ಟಿದ್ದಿತು. ಈ ಟೀಕೆಯಿದ್ದರೂ, ಸಾಧಾರಣ ಜನರಿಗೆ ಪದ್ಯಾಭಿಪ್ರಾಯವು ಆಗುತ್ತಿರಲಿಲ್ಲವಾದುದರಿಂದ, ಪ್ರತಿಯೊಬ್ಬರಿಗೂ ತಿಳಿಯುವಂತೆ ಟೀಕೆಯಮೇಲೆ ಸುಲಭವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಣಮಾಡಿ ಭದ್ರವಾದ ರಟ್ಟಿನಿಂದ ಬೈಂಡನ್ನು ಕಟ್ಟಿಸಿರುತ್ತೇವೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತರೀತ್ಯಾ ಭಕ್ತಿ, ಜ್ಞಾನ, ವೈರಾಗ್ಯಗಳ ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪಠನಮನನಾದಿಗಳಿಗೆ ಅತ್ಯಂತಸಾಧನವಾಗಿರುತ್ತದೆ.

ಇದರಬೆಲೆ ೧—೦—೦. ವಿ. ಪಿ. ಯಿಂದ ೧—೩—೦

ಮ್ಯಾನೇಜರ್,
"ಮೈಸೂರ್ ಸ್ಟಾರ್" ಆಫೀಸ್, ಮೈಸೂರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ]

ಇಂತುಮಲ್ಲದೆ ಈ ಮುತ್ತುಗಳಿಗೆ ದೇವತೆಗಳಂ ಪೇಳುವೆನು. ನೀಲವರ್ಣವಾಗಿರುವ ಮುತ್ತುಗಳಿಗೆ ವಿಷ್ಣುವು ಅಧಿದೇವತೆಯು, ಹಳದಿಯ ವರ್ಣವಾಗಿರುವ ಮುತ್ತುಗಳಿಗೆ ಇಂದ್ರನು ಅಧಿದೇವತೆಯು, ಮೇಘವರ್ಣವಾಗಿರುವ ಮುತ್ತುಗಳಿಗೆ ಯಮನು ಅಧಿದೇವತೆಯು, ಕೆಂಪುವರ್ಣವಾಗಿರುವ ಮುತ್ತುಗಳಿಗೆ ವಾಯುವು ಅಧಿದೇವತೆಯು, ಬಿಳುಪಾಗಿರುವ ಮುತ್ತುಗಳಿಗೆ ವರುಣನು ಅಧಿದೇವತೆಯು, ಪಾದರಿ ಹುವ್ವಿನ ವರ್ಣದಿಂದಿರುವ ಮುತ್ತುಗಳಿಗೆ ಅಗ್ನಿಯು ಅಧಿದೇವತೆಯು ಈ ರೀತಿಯಲ್ಲಿ ವರ್ಣಭೇದಗಳಿಂದ ದೇವತೆಗಳು ಭಿನ್ನಂಗಳಾಗಿರುವರು. ಆರು ಲಕ್ಷಣಂಗಳಿಂದ ಕೂಡಿರುವ ಮುತ್ತುಗಳು ಉತ್ತಮಂಗಳು. ಆರು ಲಕ್ಷಣಗಳಾವುವೆಂದರೆ,— ಶುಭ್ರವರ್ಣವು, ಬಟುವು, ನಿರಾಳವು, ಭಾರವು, ನುಣುಪು, ಹೊರಪುಯಿಲ್ಲದೆಯಿರುವುದು ಈ ಆರು ಲಕ್ಷಣಗಳಿಂ ಯುಕ್ತವಾಗಿರುವ ಮುತ್ತುಗಳಂ ಯಾರು ಧರಿಸುವರೋ ಅವರಿಗೆ ಆಯುಸ್ಸೂ, ಐಶ್ವರ್ಯವೂ ಅಧಿಕವಾಗಿ ಉಂಟಾಗುವುವು. ದಾರಿದ್ರ್ಯವು ತೊಲಗುವುದು, ಮೇಘದೊಳ್ ಪುಟ್ಟಿದ ಮುತ್ತುಗಳು ಸರ್ವೋತ್ತಮವು, ಇದು ದೇವತೆಗಳಿಗೂ ಕೂಡ ದೊರಕಲಸಾಧ್ಯವು. ಆನೆಯ ಕೊಂಬಿನಲ್ಲಿಯೂ, ಪರ್ವತದಲ್ಲಿಯೂ ಉಂಟಾಗುವ ಮುತ್ತು ತಪಸ್ಸಿನಿಂದಲೂ ದೊರಕದು. ಕಲಿಯುಗದೊಳ್ ಕಪ್ಪೆಯ ಚಿಪ್ಪಿನಲ್ಲಿ ಉಂಟಾಗುವ ಮುತ್ತುಗಳು ಬಹಳವಾಗಿ ದೊರೆಯುವವು. ಮೇಘದಲ್ಲಿ ಉಂಟಾಗುವ ಮುತ್ತುಗಳು ಕೋಳಿಯ ಮೊಟ್ಟೆಯಷ್ಟು ದಪ್ಪವಾಗಿ, ಅದರಂತೆ ಆಕೃತಿಯುಳ್ಳುವಾಗಿ, ಭಾರವಾಗಿ, ಹೆಚ್ಚು ಕಡಿಮೆಯಿಲ್ಲದೆ ಸೂರ್ಯಪ್ರಭೆಯಂತೆ ಹೊಳೆಯುತ್ತಿರುವವು. ಇವು ದೇವತಾಯೋಗ್ಯವು ಮನುಷ್ಯರು ಧರಿಸಕೂಡದು. ಹಾವಿನ ತಲೆಯಲ್ಲಿ ಹುಟ್ಟುವ ಮುತ್ತುಗಳು ಬಟುವಾಗಿರುವವು, ಪುಣ್ಯಹೀನರಿಗೆ ದೊರೆಯತಕ್ಕದಲ್ಲ. ಕಾಡುಹಂದಿಯ ಕೋರೆದಾಡೆಗಳಲ್ಲಿ ಪುಟ್ಟುವ ಮುತ್ತುಗಳು ಅಂಕೋಲೆ ಬಿತ್ತದಷ್ಟು ದಪ್ಪವಾಗಿರುವುದು, ತಪಸ್ಸಿನಿಂದಲ್ಲದೆ ಸುಮ್ಮನೆ ದೊರೆಯದು. ಮೀನಿನಲ್ಲಿ ಹುಟ್ಟುವ ಮುತ್ತುಗಳು ಗುಲಗಂಜಿಯ ದಪ್ಪವಾಗಿಯೂ, ಹೆಚ್ಚು ಕಡಿಮೆಯಿಲ್ಲದೆ ಲಘುವಾಗಿ, ಪಾದರಿಯಹುವ್ವಿನ ವರ್ಣವಾಗಿ ಬಟುವಾಗಿರುವುದು. ಬಿದಿರಿನಲ್ಲಿ ಪುಟ್ಟುವ ಮುತ್ತುಗಳು ಮುತ್ತಿಸಚಿಪ್ಪಿನ ವರ್ಣವಾಗಿಯೂ, ಮಂಜಾಣೀ ಮಣಿಯಷ್ಟು ದಪ್ಪವಾಗಿಯೂ ಇರುವುದು. ಆ ಮುತ್ತುಗಳು ಅನೇಕ ಪುಣ್ಯವಂತರಿಗಲ್ಲದೆ ಪಾಪಾತ್ಮರಿಗೆ ದೊರೆಯದು, ಅಥವಾ ತಪಸ್ಸಿನಿಂ ದೊರೆತರೂ ದಕ್ಕುವುದಿಲ್ಲ, ದಕ್ಕಬೇಕಾದರೆ ವೇದಮಂತ್ರಗಳಿಂದ ರಕ್ಷಿಸಬೇಕು. ಶಂಖದಿಂ ಹುಟ್ಟಿದ ಮುತ್ತುಗಳು ವಿಷ್ಣುವಿನ ವರ್ಣವಾಗಿರುವುದು. ಪಾರಿವಾಳದ ಹಕ್ಕಿಯ ಮೊಟ್ಟೆಯಷ್ಟು ದಪ್ಪವಾಗಿರುವುದು, ಇದು ಸಮಸ್ತ ದೋಷಮಂ ಪರಿಹರಿಸಿ ಕ್ಷೇಮವನ್ನುಂಟುಮಾಡುವುದು. ಇನ್ನು ಜಲಜವಾದ ಮುತ್ತುಗಳ ಲಕ್ಷಣವಂ ಪೇಳುವೆನು. ಅದೆಂತೆನೆ— ಸಮುದ್ರದಲ್ಲಿ ಎಂಟು ಕಡೆಗಳ್ [illegible] ಆ ಸ್ಥಳಗಳು ಆವಾವ ದೇಶಕ್ಕೆ ಸೇರಿರುವುವೆಂದರೆ, ಸಿಂಹಳ, ಪರಲೋಕ, ಸೌರಾಷ್ಟ್ರ, ತಾಮ್ರಪರ್ಣಿ, ಪಾರಸೀಕ, ಕೌಬೇರ, ಪಾಂಡ್ಯವಾಟಕವೆಂಬ ಈ ಎಂಟು ದೇಶಗಳ [illegible] ಸಮುದ್ರದಲ್ಲಿ ಹುಟ್ಟುವುವು. ಆ ಮುತ್ತುಗಳು ಪುಟ್ಟುವ ಪರಿ ಹೇಗೆಂದರೆ,— ಸೂರ್ಯನು ಸ್ವಾತೀನಕ್ಷತ್ರಕ್ಕೆ ಬಂದು ಇರುತ್ತಿರಲಾಗ ಮೇಘಗಳು ಕರೆಯುವ ಮಳೆಯ ಹನಿಗಳು ಮುತ್ತಿನ ಚಿಪ್ಪಿನಲ್ಲಿ ಬೀಳಲು ಅವೇ ನಿರ್ಮಲವಾದ ಮುತ್ತುಗಳಾಗುವುವು. ಆ ಹನಿಗಳು ಎಷ್ಟು ಗಾತ್ರವಾಗಿ ಬೀಳುವುವೋ ಅದೇ ಪರಿಯಲ್ಲಿ ಮುತ್ತುಗಳಾಗುವುವು. ದಪ್ಪವಿದ್ದಂತೆ ಮುತ್ತುಗಳಿಗೆ ಕ್ರಯ ಹೆಚ್ಚುವುದು. ರುಕ್ಮಿಣೀದೇವಿಯ ಮುಖದಿಂದ ಮುಕ್ತಂಗಳಾದಕಾರಣ ಮುಕ್ತಾಮಣಿಗಳೆಂಬ ಹೆಸರುಂಟಾಯಿತು. ಇಂಥ ಮುತ್ತುಗಳಿಗೆ ಪ್ರಬಲವಾದ ದೋಷಂಗಳು ನಾಲ್ಕು, ಮಧ್ಯಮವಾದ ದೋಷಂಗಳು ಐದು, ಅವು ಯಾವುವೆಂದರೆ,— ಚಿಪ್ಪಿನ ಮೊರಪಾಗಿಯೂ, ಕರಡಾಗಿಯೂ, ಮೀನಿನಹೊಟ್ಟೆಯ ವರ್ಣವಾಗಿಯೂ, ಬಹುಕೆಂಪಾಗಿಯೂ ಇರುವುದು. ಈ ನಾಲ್ಕು ಪ್ರಬಲದೋಷಂಗಳು. ಮೂರು ಅಂತರವಾಗಿಯೂ, ಚಪ್ಪಟೆಯಾಗಿಯೂ, ಬಾಯಿ ನೀಳವಾಗಿಯೂ, ಅಳ್ಳೆ ಹತ್ತನಾಗಿಯೂ, ನೀಟವಾಗಿಯೂ ಈ ಇರುವ ಐದು ದೋಷಂಗಳು ಮಧ್ಯಮವು. ಈ ಒಂಭತ್ತು ದೋಷಂಗಳೂ ಬಿಡತಕ್ಕವು. ಇದಲ್ಲದೆ ಮುತ್ತುಗಳಲ್ಲಿ ಒಂಭತ್ತು ಗುಣಂಗಳಿರುವುವು. ಅವುಯಾವುವೆಂದರೆ,— ಮಧುವರ್ಣ, ಹಳದಿಯವರ್ಣ, ಬಿಳುಪುವರ್ಣ. ಈ ಮೂರುವರ್ಣದ ಮುತ್ತುಗಳೂ, ಮತ್ತೂ ಮನೋಹರವಾಗಿ, ಬಿಳುಪಾಗಿ, ಭಾರವಾಗಿ, ನುಣುಪಾಗಿ, ಕಳೆಯಾಗಿ, ನಿರಾಳವಾಗಿ, ಗಾತ್ರವಾಗಿ, ಜಲವರ್ಣವಾಗಿ, ಬಟುವಾಗಿ ಈ ಒಂಭತ್ತು ಗುಣಂಗಳಿಂದ ಯುಕ್ತವಾದ ಮುತ್ತುಗಳು ಉತ್ತಮಂಗಳು. ಇಂತುಮಲ್ಲದೆ ಬಿಳುಪಾಗಿ, ನಿರಾಳವಾಗಿ ಬೆವರುವಂತೆ ಕಾಣಿಸುವುವಾಗಿ, ಶೀತಳವಾಗಿ ಇರುವ ಮುತ್ತುಗಳಂ ಧರಿಸಿದವರಿಗೆ ಸಂತೋಷವುಂಟಾಗುವುದು. ನೀರಸವಾಗಿ, ಕಾಡಿಗೆಯಂತೆ ಕಪ್ಪಾಗಿ, ತಾಮ್ರವರ್ಣವಾಗಿ, ಕಲ್ಲುಪ್ಪಿನ ವರ್ಣವಾಗಿ, ಭಿನ್ನವಾಗಿ, ವಿಕಾರವಾಗಿ, ಗಂಟುಗಂಟಾಗಿರುವ ಮುತ್ತುಗಳಂ ಸರ್ವದಾ ಮುಟ್ಟಕೂಡದು. ಶಂಖದಲ್ಲಿ, ಮೀನಿನಲ್ಲಿ, ಬಿದಿರಿನಲ್ಲಿ, ಆನೆಯಲ್ಲಿ, ಹಂದಿಯಲ್ಲಿ, ಹಾವಿನಲ್ಲಿ, ಮೇಘದಲ್ಲಿ ಸಹ ಹುಟ್ಟಿದ ಮುತ್ತುಗಳಿಗೆ ಎಜ್ಜಗಳಂ ಹಾಕಬಾರದು. ಇಂತು ಪೇಳಿದ ಮುತ್ತುಗಳಲ್ಲಿರುವ ಗುಣದೋಷಂಗಳಂ ತಿಳಿದು, ದೋಷವುಳ್ಳಮುತ್ತುಗಳಂ ಬಿಟ್ಟು, ಗುಣವುಳ್ಳ ಮುತ್ತುಗಳಂ ಧರಿಸಿದವರಿಗೆ, ಪುತ್ರ, ಪೌತ್ರ, ಸಂಪತ್ತು, ವಿದ್ಯೆ, ಆಯುಸ್ಸು, ಕೀರ್ತಿ, ಐಶ್ವರ್ಯ ಮೊದಲಾದುವು ಉಂಟಾಗುವುವು. ಶುದ್ಧವಾದ ಸ್ಥಳದಲ್ಲಿ ಬೆಳ್ಳಿಯ ಬಟ್ಟಲಿನೊಳ್ ಮುತ್ತುಗಳಂ ಇಡಿಸಿ ಮಾಳಿಗೆ ಮೇಲೆ ಬಿಡಗಲು ಆಗಲೇ ಮಳೆಬಂದರೆ ಆ ಮುತ್ತನ್ನು ನಾಗರತ್ನವೆಂದು ತಿಳಿಯುವುದು.

ಇನ್ನು ರತ್ನದ ಉತ್ಪತ್ತಿ ಸ್ಥಳವಂ, ಅದರ ಗುಣಗಳಂ, ದೋಷಂಗಳಂ ಸಹ ಪೇಳುವೆನು. ಕೆಂಪು ರತ್ನಂಗಳು ನಾಲ್ಕು ಸ್ಥಳಂಗಳಲ್ಲಿ ಪುಟ್ಟುವುವು. ಅವು ಯಾವುವೆಂದರೆ,— ಸಿಂಹಳ ದೇಶದಲ್ಲಿರುವ ಅರ್ಕಪುರದಲ್ಲಿಯೂ, ಕಾಲಪುರದಲ್ಲಿಯೂ, ತುಂಬುರುಪುರದಲ್ಲೂ, ಕಿಷ್ವಲದಲ್ಲಿಯೂ ಪುಟ್ಟುವುದು. ಈ ಸ್ಥಳಗಳಲ್ಲಿ ಯಾವ ಕಾಲದಲ್ಲಿ ಯಾವ ಸ್ಥಳದಲ್ಲಿ ಪುಟ್ಟುವುದೆಂದರೆ, ಕೃತಯುಗದಲ್ಲಿ ಅರ್ಕಪುರದಲ್ಲಿಯೂ, ತ್ರೇತಾಯುಗದಲ್ಲಿ ಕಾಲಪುರದಲ್ಲಿಯೂ, ದ್ವಾಪರಯುಗದಲ್ಲಿ ತುಂಬುರುಪುರದಲ್ಲಿಯೂ, ಕಲಿಯುಗದಲ್ಲಿ ಕಿಷ್ವಲದಲ್ಲಿಯೂ ಸಹ ಅಧಿಕವಾಗಿ ಪುಟ್ಟುವುದು. ಇವುಗಳ ವರ್ಣವೆಂತಿರುವುದೆಂದರೆ, ಕೃತಯುಗದಲ್ಲಿ ಪುಟ್ಟಿದ ರತ್ನವು ಪದ್ಮವರ್ಣವಾಗಿರುವುದು, ತ್ರೇತಾಯುಗದಲ್ಲಿ ಪುಟ್ಟಿದ ರತ್ನವು ಅವಲದ ಹುವ್ವಿನ ವರ್ಣವಾಗಿರುವುದು, ದ್ವಾಪರಯುಗದಲ್ಲಿ ಪುಟ್ಟಿದ ರತ್ನವು ಮಿಂಚಿನ ಹುಳುವಿನ ಕಾಂತಿಯಂತಿರುವುದು, ಕಲಿಯುಗದಲ್ಲಿ ಪುಟ್ಟಿದ ರತ್ನವು ನಕ್ಷತ್ರದಂತೆ ಹೊಳೆಯುತಲಿರುವುದು. ಇವುಗಳೊಳ್ ಉತ್ತಮವಾವುದೆಂದರೆ,—ಉರಿಯುವ ದೀಪದಂತೆಯೂ, ದಾಳಿಂಬದ ಬೀಜದಂತೆಯೂ, ಸೂರ್ಯನಂತೆಯೂ, ದಾಳಿಂಬದ ಹುವ್ವಿನಂತೆಯೂ, ಸೂರಿಪುಟದ ಹುಳುವಿನಂತೆಯೂ ಇಂತು ಕಾಂತಿಯಾಗಿರುವ ರತ್ನವು ಉತ್ತಮವು. ಮತ್ತೂ ರತ್ನಗಳಲ್ಲಿ ನಾಲ್ಕು ಜಾತಿಯಿರುವುದು. ಅದೆಂತೆನೆ,—ಜಾತರಂಗವೆಂಬ ರತ್ನವು ಬ್ರಾಹ್ಮಣಜಾತಿಯು, ಕುರುವಿಂದವೆಂಬ ರತ್ನವು ಕ್ಷತ್ರಿಯ ಜಾತಿಯು, ಸೌಗಂಧಿಕವೆಂಬ ರತ್ನವು ವೈಶ್ಯಜಾತಿಯು, ಗವಾಂಗವೆಂಬ ರತ್ನವೂ, ಅನಿಲಗಂಧಿಯೆಂಬ ರತ್ನವೂ ಶೂದ್ರಜಾತಿಯು. ಇದರಲ್ಲಿ ಜಾತರಂಗವೆಂಬ ಬ್ರಹ್ಮಜಾತಿಯ ರತ್ನಕ್ಕೆ ಹೊಳಪು ಹತ್ತು ಪರಿಯಾಗಿರುವುದು. ಕುರುವಿಂದವೆಂಬ ಕ್ಷತ್ರಿಯಜಾತಿ ರತ್ನಕ್ಕೆ ಹೊಳಪು ಎಂಟು ಪರಿಯಾಗಿರುವುದು. ಸೌಗಂಧಿಕವೆಂಬ ವೈಶ್ಯಜಾತಿ ರತ್ನಕ್ಕೆ ಹೊಳಪು ಆರು ಪರಿಯಾಗಿರುವುದು. ಗವಾಂಗವೆಂಬ ಅನಿಲಗಂಧಿಯೆಂಬ ಶೂದ್ರಜಾತಿಯ ರತ್ನಗಳಿಗೆ ಹೊಳಪು ನಾಲ್ಕು ಪರಿಯಾಗಿರುವುದು. (ಶೇಷ)

ಬತ್ತದ ವ್ಯವಸಾಯದಲ್ಲಿ ಅಭಿವೃದ್ಧಿಗಳು.

ಕಳೆದ ಕೆಲವು ವರುಷಗಳಿಂದ ಮದರಾಸು ಅಧಿಪತ್ಯದ ವ್ಯವಸಾಯ ಶಾಲೆಗಳಲ್ಲೆಲ್ಲಾ ಬತ್ತದ ವ್ಯವಸಾಯದ ವಿಷಯದಲ್ಲಿ ಕೆಲವು ಅಜಮಾಯಿಷಿಗಳನ್ನು ನಡಿಸಿ ಅವುಗಳಲ್ಲಿ ಸದರಿ ವ್ಯವಸಾಯದ ಏಳಿಗೆಗೆ ಸಹಕಾರಿಗಳಾದವುಗಳೆಂದು ಕಂಡುಬಂದವುಗಳನ್ನು ಸರ್ಕಾರದವರು ರೈತರಿಗೆಲ್ಲಾ ಬೋಧನೆಮಾಡಿದರು. ಅನೇಕ ರೈತರು ಮೇಲ್ಕಂಡ ಹೊಸಕ್ರಮಗಳಿಗೆ ಅನುಸಾರವಾಗಿ ವ್ಯವಸಾಯಮಾಡಿ ಅವುಗಳಿಂದ ಬಹಳ ಲಾಭವುಂಟೆಂದು ತಿಳಿದು ಬಂದದ್ದರಿಂದ ಈಚೆಗೆ ಅವುಗಳನ್ನು ರೂಢಿಯಲ್ಲಿ ತಂದಿರುತ್ತಾರೆ. ಅವುಗಳನ್ನೆಲ್ಲಾ ನಮ್ಮ ರೈತರುಗಳ ತಿಳುವಳಿಕೆ ಬಗ್ಗೆ ಇಲ್ಲಿ ಪ್ರಚುರ ಪಡಿಸುತ್ತೇವೆ.

ಬತ್ತದ ವ್ಯವಸಾಯದಲ್ಲಿ ನಾಟಿಗೆ ರೋಗವಿಲ್ಲದ ಪೈರನ್ನು ಬೆಳಸತಕ್ಕದ್ದು ಮೊದಲನೆ ಕೆಲಸವಾಗಿದೆ. ನಾಟಿಗಾಗಿ ಪೈರನ್ನು ಬೆಳಸತಕ್ಕ ಜಮೀನನ್ನು ಚೆನ್ನಾಗಿ ಉತ್ತು ಮಟ್ಟ ಹೊಡೆಯುವುದಲ್ಲದೆ ಒಳ್ಳೇ ಹಸನಾದ ಹಳುಗದ ಗೊಬ್ಬರವನ್ನು, ಪೈರನ್ನು ನಾಟಿ ಮಾಡುವ ಜಮೀನಿಗೆ ಹಾಕಬಹುದಾದ ಎರಡರಷ್ಟನ್ನು ಹಾಕಬೇಕು. ಜಮೀನಿಗೆ ಸುಲಭವಾಗಿ ನೀರು ಹಾಯಿಸಲು ತಕ್ಕ ಅನುಕೂಲ ವಿರಬೇಕಲ್ಲದೆ ನೀರು ಬಸಿದು ಹೋಗಲು ಅವಕಾಶವಿರಬೇಕು. ಈಗ ರೂಢಿಯಲ್ಲಿರುವಂತೆ ಹಿಡಿಹಿಡಿ ಪೈರನ್ನು ನಾಟಿ ಹಾಕಿದರೆ ಬಿತ್ತನೆಗೆ ಹೆಚ್ಚು ಧಾನ್ಯವು ಬೇಕಾಗುವುದು. ಆದರೆ ಒಂದೊಂದೇ ಪೈರನ್ನು ನಾಟಿ ಮಾಡುವುದಾದರೆ, ಸಾಧಾರಣವಾಗಿ ೩ ಗುಂಟೆ ಜಮೀನಿನಲ್ಲಿ ೧೦ ಸೇರು ಬೀಜವನ್ನು ಒಟ್ಲು ಹಾಕಿದರೆ ಒಂದು ಎಕರೆ ಜಮೀನಿನ ನಾಟಿಗೆ ಸಾಕಾದಷ್ಟು ಪೈರಾಗುವುದು. ನಾಟಿಯಾದನಂತರ ಬೆಳೆಯು ಕಟಾವಿಗೆ ಬರಬೇಕಾದರೆ ಎಷ್ಟು ತಿಂಗಳಾಗುವುದೋ ಅಷ್ಟು ವಾರಗಳ ಕಾಲ ಸಸಿ ಪೈರುಗಳು ನಾಟಿಗೆ ಮುಂಚೆ ಒಟ್ಲು ಹೊಯ್ಯಲ್ಪಟ್ಟ ಮಡಿಗಳಲ್ಲಿರಬೇಕು. ಹೇಗೆಂದರೆ, ಬತ್ತವು ಐದುತಿಂಗಳ ಬೆಳೆಯಾದರೆ ಸಸಿಗಳನ್ನು ಐದು ವಾರಗಳ ನಂತರ ನಾಟಿ ಹಾಕಬೇಕು. ಒಂದೊಂದೇ ಪೈರನ್ನು ನಾಟಿಹಾಕಿದರೆ ನಾಟಿಯಾದ ತರುಣದಲ್ಲಿ ಪೈರುಗಳು ಬಹಳ ವಿರಳವಾಗಿರುವುದರಿಂದ ಕಳೆಗಳು ಬಹಳವಾಗಿ ಬೆಳೆಯುವ ಸಂಭವವುಂಟು. ಆದರೆ ಹೀಗೆ ಕಳೆಗಳು ಹೆಚ್ಚಲು ಆಸ್ಪದಕೊಡದಂತೆ ನೋಡಿಕೊಳ್ಳಬೇಕು.

ಗೊಬ್ಬರವನ್ನು ಹಾಕತಕ್ಕ ವಿಷಯವು ಮುಂದಲ ವಿಚಾರವಾಗಿದೆ. ಒಂದೊಂದೇ ಪೈರನ್ನು ನಾಟಿಹಾಕಿದರೆ ಉತ್ಪತ್ತಿ ಬಹಳ ಜಾಸ್ತಿಯಾಗುವುದು. ಅಂದರೆ ಪೈರುಗಳು ಭೂಮಿಯಿಂದ ಸಸ್ಯಾಹಾರಗಳನ್ನು ಬಹಳವಾಗಿ ತೆಗೆದುಕೊಳ್ಳುವುವು. ಆದುದರಿಂದ ಉತ್ತಮವಾದ ಗೊಬ್ಬರವನ್ನು ಹಾಕಬೇಕಾದುದು ಅತ್ಯವಶ್ಯಕ. ಇಲ್ಲವಾದರೆ ಎರಡು ಮೂರು ವರುಷಗಳಲ್ಲಿ ಜಮೀನು ನಿಸ್ಸಾರವಾಗುವುದು.

ಈ ದೇಶದಲ್ಲಿ ಸಾಮಾನ್ಯವಾಗಿ ಹಸುರು ಸೊಪ್ಪನ್ನೂ ಮತ್ತು ತರಗೆಲೆಗಳನ್ನೂ ಗೊಬ್ಬರವಾಗಿ ಹಾಕುವುದು ವಾಡಿಕೆಯಾಗಿದೆ. ಆದರೆ ತರಗೆಲೆಗಳಿಗಿಂತಲೂ ಹಸುರು ಸೊಪ್ಪುಗಳು ಉತ್ತಮವಾದ ಗೊಬ್ಬರವಾಗುತ್ತವೆ. ಅದರಲ್ಲೂ ಸೊಪ್ಪಿಗಾಗಿ ಕೆಲವು ಪೈರುಗಳನ್ನು, ಯಾವ ಜಮೀನಿಗೆ ಗೊಬ್ಬರವು ಬೇಕಾಗುತ್ತದೂ ಅದೇ ಜಮೀನುಗಳಲ್ಲೇ ಬೆಳೆದು ಅವುಗಳ ಸೊಪ್ಪನ್ನು ಗೊಬ್ಬರವಾಗಿ ಹಾಕುವುದು ಮತ್ತೂ ಉತ್ತಮವಾದದ್ದಾಗಿದೆ. ಸೊಪ್ಪಿಗಾಗಿ ಕಾಡುನೀಲಿ, ಅವರೆ, ಹೆಸರು, ಉದ್ದು, ಸೆಣಬು ಮೊದಲಾದವುಗಳನ್ನು ಬೆಳೆಯುತ್ತಾರೆ. ಈ ಗಿಡಗಳಿಗೆ ವಾಯುಮಂಡಲದಲ್ಲಿರುವ ವಾಯುವಿನಿಂದ ಸಸ್ಯಾಹಾರವಾದ ನೈಟ್ರೋಜನ್ ವಾಯುವನ್ನೇ ಜಮೀನಿಗೆ ಸೇರಿಸತಕ್ಕ ಅದ್ಭುತವಾದ ಶಕ್ತಿಯಿದೆ.

ಹಸುರು ಗೊಬ್ಬರವು ಪೈರಿಗೆ ಬೇಕಾದ ಆಹಾರವೆಲ್ಲವನ್ನೂ ಒದಗಿಸಿ ಕೊಡಲಾರದು. ಆದುದರಿಂದ ಇದರ ಜತೆಗೆ ಮೀನಿನ ಗೊಬ್ಬರವೇ ಮೊದಲಾದ ಇತರ ಗೊಬ್ಬರಗಳನ್ನು ಹಾಕಬೇಕು. ಮೀನಿನ ಗೊಬ್ಬರವನ್ನು ಒಂದು ಸಾಲಿನಲ್ಲಿ ಹಾಕಿದರೆ ಮುಂದಲ ಸಾಲಿನಲ್ಲಿ ಗೊಬ್ಬರವನ್ನು ಹಾಕದಿದ್ದಾಗ್ಯೂ ಉತ್ತಮವಾದ ಬತ್ತದ ಫಲಸನ್ನು ತೆಗೆಯಬಹುದೆಂದು ತಿಳಿಯಬರುತ್ತದೆ. ಸೊಪ್ಪಿಲ್ಲದೆ ಮೀನಿನ ಗೊಬ್ಬರವನ್ನು ಮಾತ್ರವೇ ಹಾಕಿದರೆ ಎಕರೆಗೆ ಸುಮಾರು ೬೩ ಮಣದಷ್ಟು ಹಾಕಬೇಕಾಗುವುದು.

ನಾಟಿ:— ಮೇಲೆ ಹೇಳಿದಂತೆ ನಾಟಿಯ ಪೈರನ್ನು ಎಬ್ಬಿಸಿದರೆ ಸಸಿಗಳು ಆರೋಗ್ಯವಾಗಿರುವುವಲ್ಲದೆ ಅವುಗಳನ್ನು ಒಂಟೊಂಟಿಯಾಗಿ ನಾಟಿಹಾಕುವುದಕ್ಕಾಗಿ ಬೇರೆಬೇರೆಯಾಗಿ ಬಿಡಿಸುವ ಕೆಲಸವೂ ಬಹಳ ಸುಲಭವಾಗುತ್ತದೆ. ಸುಮಾರಾಗಿ ಫಲವತ್ತಾಗಿರುವ ಜಮೀನಿನಲ್ಲಿ ಆರು ಆರು ಅಂಗುಲಗಳ ದೂರಕ್ಕೆ ಒಂದೊಂದು ಪೈರನ್ನು ನಾಟಿಹಾಕಬೇಕು. ಅದಕ್ಕಿಂತಲೂ ಕಡಿಮೆ ಫಲವತ್ತಾದ ಜಮೀನುಗಳಲ್ಲಿ ಇನ್ನೂ ಹತ್ತಿರತ್ತಿರವಾಗಿ ನಾಟಿಹಾಕಬೇಕು. ಉತ್ತಮ ಜಮೀನುಗಳಲ್ಲಿ ಪೈರುಗಳ ಮಧ್ಯೆ ೯ ಅಂಗುಲದಷ್ಟು ಜಾಗ ಬಿಡಬೇಕು. ಪೈರುಗಳ ಮಧ್ಯೆ ಜಾಗವಿದ್ದು ಒಂಟೊಂಟಿಯಾಗಿ ನೆಡುವುದರಿಂದ ಅನೇಕ ಪ್ರಯೋಜನಗಳುಂಟು. ಬಿತ್ತನೆಯ ಬೀಜವನ್ನು ಹೆಚ್ಚು ಖರ್ಚುಮಾಡಬೇಕಾಗಿಲ್ಲ. ಪೈರನ್ನು ಕಿತ್ತು ನಾಟಿಹಾಕುವುದಕ್ಕೆ ಹೆಚ್ಚು ಕೆಲಸವೂ ಬೇಕಾದುದಿಲ್ಲ. ಪೈರುಗಳು ರೋಗವಿಲ್ಲದವುಗಳಾಗಿರುವುವಲ್ಲದೆ, ಸ್ವಲ್ಪ ನೀರು ಕಡಿಮೆಯಾದಾಗ್ಗ್ಯೂ ಒಣಗಿ ನಷ್ಟವಾಗುವುದಿಲ್ಲ. ಮತ್ತು ಬತ್ತದ ಕಾಳುಗಳು ಚೆನ್ನಾಗಿ ಪಕ್ವವಾಗಿ ಉತ್ಪತ್ತಿಯು ಹೆಚ್ಚಾಗುವುದು. ಇದಕ್ಕೆ ಕಾರಣವೇನೆಂದರೆ, ಪ್ರತಿಪೈರಿಗೂ ಬೆಳೆಯುವುದಕ್ಕೆ ಸಾಕಷ್ಟು ಜಾಗವಿರುವುದರಿಂದ ಅದು ದಪ್ಪನಾಗಿ ಅನೇಕ ಕವಲುಗಳೊಡೆದುಕೊಂಡು ಬೆಳೆಯುವುದೇ. ಕೆಲವು ಪೈರುಗಳಲ್ಲಿ ೨೦ ಅಥವಾ ೩೦ ಕವಲುಗಳೊಡೆಯುವುದೂ ಉಂಟು.

ಪ್ರತಿ ರೈತನೂ ಬಿತ್ತನೆಯ ಬೀಜಕ್ಕೆ ಹೆಚ್ಚು ಗಮನಕೊಡುವುದರಿಂದ ಬಹಳ ಲಾಭವುಂಟು ಫಸಲು ಕಟಾವಿಗೆ ಬಂದ ಕಾಲದಲ್ಲಿ ಜಮೀನಿನಲ್ಲೆಲ್ಲಾ ಹುಡುಕಿ ರೋಗವಿಲ್ಲದೆ ಹೊರುವಾಗಿಯೂ ಮತ್ತೂ ಅನೇಕ ಕವಲುಗಳೊಡನೆಯೂ ಬೆಳೆದಿರತಕ್ಕ ಪೈರಿನ ತೆನೆಗಳನ್ನೇ ಕಿತ್ತುಕೊಂಡು ಬೇರೆಯಾಗಿ ಬಡಿದು ಆ ಬತ್ತವನ್ನು ಬಿತ್ತನೆಗಾಗಿ ತೆಗೆದಿಟ್ಟುಕೊಳ್ಳಬೇಕು. ಅಲ್ಲದೆ ಬಿತ್ತನೆಯ ಬತ್ತವನ್ನು ಚೆನ್ನಾಗಿ ಒಣಗಿಸಿ ಗುಡಾಣಗಳಲ್ಲಿ ತುಂಬಿಡಬೇಕಲ್ಲದೆ ಆಗಾಗ್ಗೆ ಈಚೆಗೆ ತೆಗೆದು ಬಿಸಿಲಿಗೆ ಹಾಕುತ್ತಿರಬೇಕು. ವ್ಯ. ಗೆ.

ಕೃಷ್ಣಾಗುಂಟೂರು ಜಿಲ್ಲಾ ಸಂಘಸಂಸ್ಕರಣ ಸಭೆಯ ಅಧ್ಯಕ್ಷರ ಭಾಷಣವು.

(ಹಿಂದಣ ಶೇಷ)

ಜಾತಿಸಭೆಗಳು—ಪ್ರತಿಯೊಂದುಜಾತಿಯವರೂ, ಅದರ ಶಾಖೆಯವರೂ ಬೇರೆಬೇರೆ ಸಭೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಆಯಾ ಜಾತಿಯವರು ತಮ್ಮತಮ್ಮವರ ಅಭಿವೃದ್ಧಿಯನ್ನು ಕೋರಿ ಪಾಟುಪಡುತ್ತಿರುವುದು ದೋಷವಲ್ಲದೆ ಹೋದರೂ, ಇದರ ಮೂಲಕವಾಗಿ ಅನ್ಯಜಾತಿಯವರನ್ನಾಗಲಿ ಅನ್ಯಮತದವರನ್ನಾಗಲಿ ದ್ವೇಷಿಸುವಿಕೆಯು ಸಂಭವಿಸುವುದಾಗಿದ್ದರೆ, ಇಂಥ ಸಭೆಗಳನ್ನು ನೆರವೇರಿಸುವುದಕ್ಕಿಂತಲೂ ನಿಲ್ಲಿಸಿಬಿಡುವುದೇ ಉತ್ತಮವು. ನಮ್ಮ ದೇಶದ ಸಕಲ ಜನರೂ ಪರಸ್ಪರ ಪ್ರೇಮದಿಂದ ಐಕ್ಯವನ್ನಭಿವೃದ್ಧಿಗೊಳಿಸಿಕೊಂಡು, ದೇಶಾಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಆಚರಿಸಬೇಕಾಗಿರುವ ಈ ಕಾಲದಲ್ಲಿ ಇಂಥ ಜಾತಿಮತದ್ವೇಷವನ್ನು ಬೆಳಸುವುದು ತಮ್ಮ ಮನೆಗೆ ತಾವೇ ಬೆಂಕಿಯನ್ನಿಟ್ಟುಕೊಂಡಂತೆಯೇ ಎಂದು ಹೇಳಬೇಕಾಗುವುದು. ಲೌಕಿಕರೂ ವೈದಿಕರೂ ಸೇರಿ ಈ ಕಾಲದಲ್ಲಿ ದೇಶಾಭಿವೃದ್ಧಿ ಕಾರ್ಯಗಳನ್ನು ಸಾಗಿಸುತ್ತ ಬರಬೇಕು.

ಸಮುದ್ರಯಾನವು— ಆಂಧ್ರದೇಶದಲ್ಲಿ ಈ ವಿಷಯಕವಾದ ಸಂಸ್ಕರಣವು ಹೇಗೆ ಪರಿಣಮಿಸುವುದೋ ಎಂದು ಒಂದಾನೊಂದು ಕಾಲದಲ್ಲಿ ಭೀತಿಯುಂಟಾಗಿದ್ದಿತು. ಈಗ ಅಂಥ ಭೀತಿಯು ತಪ್ಪಿಹೋಗಿ, ಆ ಸಂಸ್ಕರಣವು ಚೆನ್ನಾಗಿ ನಾಟಿಕೊಂಡಿದೆಯೆಂದು ಹೇಳಬಹುದು. ಅನೇಕ ವಿದ್ಯಾರ್ಥಿಗಳು ಈಗ ಇಂಗ್ಲೆಂಡು ಮೊದಲಾದ ದೇಶಗಳಿಗೆ ಹೋಗಿ ಬಂದಿರುವುದರಿಂದ ಈ ಸಮಸ್ಯೆಯು ಮಬ್ಬುಹರಿದುಹೋದಂತೆ ಕಳೆದುಹೋಗಿರುತ್ತದೆ. ಈಗ ಸೀಮೆಗೆ ಹೋಗಿ ಬರುವವರಿಗೆ ಯಾವ ವಿಧವಾದ ತೊಡಕುಗಳೂ ಇಲ್ಲವೆಂದು ಹೇಳಬಹುದಾಗಿದೆ. ಅತಿಶಯವಾಗಿ ಪುರಾಣಪ್ರಿಯರಾಗಿದ್ದ ವೈಶ್ಯರು ಕೂಡ ಇಂಥ ಸಂಸ್ಕರಣಕ್ಕೆ ಸಮ್ಮತಿಸಿರುತ್ತಾರೆ. ಆದುದರಿಂದ ಬ್ರಾಹ್ಮಣ ವೈಶ್ಯಜಾತಿಯವರಾರೂ ಇನ್ನುಮೇಲೆ ಅನ್ಯದ್ವೀಪಗಳಿಗೆ ಹೋಗುವುದಕ್ಕೆ ಸಂಶಯಪಡಬೇಕಾದುದಿಲ್ಲ.

ಸ್ತ್ರೀ ವಿದ್ಯೆ— "ಸ್ತ್ರೀಯರಿಗೆ ವಿದ್ಯಾಭ್ಯಾಸವು ತಕ್ಕುದಲ್ಲ. ವಿದ್ಯೆಯನ್ನು ಕಲಿತ ಸ್ತ್ರೀಯರು ಕೆಡುವರು" ಎಂದು ಹೇಳುತ್ತಿದ್ದ ಕಾಲವು ಕಳೆದುಹೋಗಿ ಬಹು ದಿನವಾಯಿತು. ಬಾಲವಿದ್ಯಾಭ್ಯಾಸಕ್ಕಾಗಿ ತಕ್ಕಷ್ಟು ಉಪಾಧ್ಯಾಯಿನಿಯರು ಸಿಕ್ಕುವುದೇ ಕಷ್ಟವಾಗಿದೆ. ಈ ಅನನುಕೂಲತೆಯಿಂದಲೇ ಹೆಚ್ಚಾಗಿ ಸ್ತ್ರೀ ವಿದ್ಯಾಶಾಲೆಗಳನ್ನು ಸ್ಥಾಪಿಸುವುದಕ್ಕೆ ಯತ್ನವಿಲ್ಲವಾಗಿದೆ. ಪುಣೆಯಲ್ಲಿ ಸ್ಥಾಪಿಸಲ್ಪಟ್ಟಿರುವಂತೆ ಅನಾಥ ಬಾಲಿಕಾಶ್ರಮಗಳನ್ನು ನಾವೂ ಸ್ಥಾಪಿಸಬೇಕು. ಜೀವನಾಧಾರವೇನನ್ನೂ ಕಲ್ಪಿಸದೆ ಅಡುಗೆ ಮಾಡುವುದು, ನೀರು ಹೊರುವುದು ಮೊದಲಾದ ಕಠಿನವೃತ್ತಿಗಳನ್ನು ಮಾಡುತ್ತ ದುಃಖಸಾಗರದಲ್ಲಿ ಮುಳುಗಿರುವ ವಿತಂತುಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಿದರೆ ಅವರು ಬಾಲ ವಿದ್ಯಾಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿ ಕೆಲಸಮಾಡುವುದಕ್ಕೆ ಅರ್ಹರಾಗುವರು. ಆಂಧ್ರದೇಶದಲ್ಲಿ ಈಗ ಸ್ತ್ರೀ ವಿದ್ಯಾಭಿವೃದ್ಧಿಯ ಪ್ರಯತ್ನಮಾತ್ರವೇ ಅಲ್ಲದೆ. ೨ ವರ್ಷಗಳಿಂದ ಸ್ತ್ರೀ ಪರಿಷತ್ತುಗಳೂ ಕೂಡ ಕೂಡುತ್ತಿವೆ. ಸ್ತ್ರೀಯರಿಗೋಸ್ಕರ ಸ್ತ್ರೀಯರಿಂದಲೇ ನಡೆಯಿಸಲ್ಪಡುತ್ತಿರುವ ವೃತ್ತಪತ್ರಿಕೆಗಳೂ ಹುಟ್ಟಿರುತ್ತವೆ. ಕಾಕಿನಾಡದಲ್ಲಿ ಶ್ರೀಮತಿ ಪುಲುಗುರ್ತ ಲಕ್ಷ್ಮೀನರಸಮ್ಮನವರು 'ಸಾವಿತ್ರಿ' ಎಂಬ ಪತ್ರಿಕೆಯನ್ನೂ, ಕಂಚೇರುವಿನಲ್ಲಿ ಶ್ರೀಮತಿ ಕೊಶರಾಜು ರಾಮಾಬಾಯಮ್ಮನವರು 'ಹಿಂದೂಸುಂದರಿ' ಎಂಬ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದಾರೆ. ಇವೆರಡೇ ಅಲ್ಲದೆ 'ವಿವೇಕವತಿ' ಎಂಬ ಪತ್ರಿಕೆಯನ್ನು ಕ್ರೈಸ್ತಸಂಘದವರು ಪ್ರಕಟಿಸುತ್ತಿದ್ದಾರೆ. ಇದರಮೇಲೆ ಇಂಗ್ಲೀಷನ್ನು ಚೆನ್ನಾಗಿ ಬಲ್ಲವರು ಸ್ತ್ರೀಯರಿಗೋಸ್ಕರ ಅವಶ್ಯಕವಾದ ವಿಷಯಗಳನ್ನು ಬರೆಯುವಂಥ ಪತ್ರಿಕೆಯೊಂದನ್ನು ಸ್ಥಾಪಿಸಬೇಕು.

ಇದಲ್ಲದೆ ಅಲ್ಲಲ್ಲಿ ಸಂಚರಿಸಿ ಉಪನ್ಯಾಸಗಳನ್ನು ಮಾಡಿ ಸ್ತ್ರೀ ವಿದ್ಯಾಪ್ರೋತ್ಸಾಹವನ್ನು ಮಾಡತಕ್ಕ ನಾರೀಮಣಿಯರು ಕೂಡ ನಮ್ಮ ದೇಶದಲ್ಲಿ ಹೊರಬಿದ್ದು ಸ್ತ್ರೀವರ್ಗಕ್ಕೆ ಮಹೋಪಕಾರವನ್ನು ಮಾಡುತ್ತಿದ್ದಾರೆ.

ವೈವಾಹಿಕ ನಿರ್ಬಂಧ— ನಮ್ಮ ಸಂಘದಲ್ಲಿ ಸ್ತ್ರೀಯರಿಗೆ ೨ ವಿಧವಾದ ವಿವಾಹನಿರ್ಬಂಧಗಳಿವೆ. ಅವರಿಗೆ ವಿವಾಹವೆಂಬುದು ಐಚ್ಛಿಕವಾಗಿಲ್ಲ. ಎಂದರೆ ಬಾಲಿಕೆಯರೆಲ್ಲರೂ ಪ್ರೌಢೆಯರಾಗುವುದಕ್ಕೆ ಮುಂಚೆಯೇ ಮದುವೆಯಾಗದೆಯಿರಕೂಡದಾಗಿದೆ. ಜೀವಿತಕಾಲದಲ್ಲೆಲ್ಲಾ ಬ್ರಹ್ಮಚಾರಿಣಿಯರಾಗಿಯೇ ಇರುತ್ತೇವೆಂದು ಅವರು ಸಂಕಲ್ಪಿಸುವರಾದರೆ ಅದಕ್ಕೆ ಸಂಘದವರು ಒಪ್ಪುವುದಿಲ್ಲ. ಆದರೆ ಸಂಘದವರು ಹೇಳುವಂತೆಯೇ ಕನ್ಯೆಯು ವಿವಾಹವನ್ನು ಮಾಡಿಕೊಂಡು ದುರದೃಷ್ಟವಶಾತ್ ಮರುದಿನವೇ ವಿತಂತುವಾದರೆ, ಮರಳಿ ಆ ಸಂಘದವರೇ ಬಂದು 'ಮತ್ತೆ ನೀನು ವಿವಾಹವನ್ನು ಮಾಡಿಕೊಳ್ಳಕೂಡದು. ಮರಣಾಂತವಾಗಿ ಬ್ರಹ್ಮಚಾರಿಣಿಯಾಗಿಯೇ ಇದ್ದು ಜೀವಿತಕಾಲವನ್ನು ಕಳೆಯಬೇಕು.' ಎಂದು ನಿರ್ಬಂಧಿಸುತ್ತಾರೆ. ಇವೆರಡು ನಿರ್ಬಂಧಗಳನ್ನೂ ತೊಲಗಿಸುವುದು ನ್ಯಾಯವೂ ಧರ್ಮವೂ ಆಗಿರುತ್ತದೆ. ಒಂದು ನಿರ್ಬಂಧವನ್ನಾದರೂ ತೊಲಗಿಸದೆಯಿರುವುದು ಕೇವಲ ಅಕ್ರಮವೂ ಅನ್ಯಾಯವೂ ಆಗಿರುವುದೆಂದು ಹೇಳಬೇಕಾಗಿದೆ. ಮೊದಲನೆಯ ನಿರ್ಬಂಧವನ್ನು ತೆಗೆದುಬಿಟ್ಟರೆ ಪ್ರೌಢಾವಿವಾಹವು ಸಿದ್ಧಿಸುವುದು. ೨ ನೆಯ ನಿರ್ಬಂಧವನ್ನು ತಪ್ಪಿಸಿಬಿಟ್ಟರೆ ವಿತಂತುವಿವಾಹಕ್ಕೆ ಅವಕಾಶವಾಗುವುದು.

ಪ್ರೌಢಾವಿವಾಹವು.— ಈ ವಿಷಯವನ್ನು ಕುರಿತು ನಮ್ಮ ದೇಶದಲ್ಲಿ ಸ್ವಲ್ಪಮಟ್ಟಿಗೆ ಸಮಾಧಾನವಾದ ಪ್ರಯತ್ನಗಳು ಮಾಡಲ್ಪಟ್ಟಿವೆ. ಅಂಥ ಪ್ರಯತ್ನಗಳಲ್ಲಿ ಮೊದಲನೆಯದು ಮದ್ರಾಸಿನ 'ಹಿಂದೂವಿವಾಹಸಂಸ್ಕರಣ ಸಮಾಜ'ದ ಸ್ಥಾಪನೆಯಾಗಿರುವುದು. ನಮ್ಮ ದೇಶದ ಎಲ್ಲ ಕಡೆಯೂ ಇದರ ಶಾಖೆಗಳು ಏರ್ಪಟ್ಟಿವೆ. ಮುಂದೇನು ಜರುಗುವುದೋ ನೋಡಬೇಕಾಗಿದೆ. ೨ ನೆಯ ಪ್ರಯತ್ನವೆಂದರೆ- ಕಂಚಿಯಲ್ಲಿ ನಡೆದ ಪಂಡಿತಪರಿಷತ್ತಾಗಿರುತ್ತದೆ. ಆ ಪರಿಷತ್ತಿನ ಸಂಗತಿಯನ್ನು ಕುರಿತು ಹಲವರು ಹಲವು ತೆರನಾಗಿ ಹೇಳುತ್ತಿದ್ದಾರೆ. ಪಂಡಿತರು ಯಾವಾಗಲೂ ನೂತನ ಸಂಸ್ಕಾರಗಳಿಗೆ ಸಂಪೂರ್ಣವಾಗಿ ಒಪ್ಪುವರೆಂಬುದು ಸುಳ್ಳು. ಪಂಡಿತರ ಸಭೆಯ ತೀರ್ಮಾನವನ್ನನುಸರಿಸಿ ಸಂಘಸಂಸ್ಕರಣವನ್ನು ಮಾಡುವುದಾಗಲಿ ಬಿಡುವುದಾಗಲಿ ಜರುಗಬೇಕೆಂದು ಹೇಳುವ ಮಾತು ಒಪ್ಪತಕ್ಕದ್ದಲ್ಲ. ಹಾಗೆ ಹೇಳುವುದು 'ತೆರೆಗಳೆಲ್ಲಾ ನಿಂತಮೇಲೆ ಸಮುದ್ರದಲ್ಲಿ ಸ್ನಾನಮಾಡುವುದು' ಎಂಬಂತೆಯೇ ಇರುವುದು. ಆದರೂ ಅವಕಾಶವಾದಮಟ್ಟಿಗೆ ಪಂಡಿತರ ಅಭಿಪ್ರಾಯವನ್ನು ಕೂಡ ನಮ್ಮ ಪಕ್ಷಕ್ಕೆ ತಿರುಗಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕು. ಅಂಥ ಯತ್ನದ ಸ್ವರೂಪವೇ ಆದ ಕಾಂಚೀ ಪರಿಷತ್ತಿನಲ್ಲಿ ಸೇರಿದ್ದ ೬೦ ಮಂದಿ ಪಂಡಿತರಲ್ಲಿ ೪೯ ಮಂದಿಗಳು ಪ್ರೌಢಾವಿವಾಹವನ್ನು ಕುರಿತು ತಮ್ಮಭಿಪ್ರಾಯವನ್ನು ತಿಳುಹಿಸಿದರು. ಅವರಲ್ಲಿ ೩೯ ಮಂದಿಗಳು ಪ್ರೌಢಾವಿವಾಹವನ್ನು ಮಾಡಬಹುದೆಂದು ಹೇಳಿದರು. ಅವರಲ್ಲೂ ೮ ಮಂದಿಗಳು ಪ್ರೌಢಾವಿವಾಹವನ್ನು ಮಾಡುವುದೇ ವೇದವಿಹಿತವೆಂದು ಹೇಳಿದರು. ೧೦ ಮಂದಿಗಳು ಮಾತ್ರ ಕೂಡದೆಂದು ನುಡಿದರು. ಪಂಡಿತರೆಲ್ಲರೂ ಇಂಗ್ಲೀಷು ಭಾಷೆಯನ್ನು ತಿಳಿಯದೆ ಪೂರ್ವಾಚಾರಪರಾಯಣರಾಗಿರತಕ್ಕವರು. ಇಂಥವರಲ್ಲಿ ೩೯ ಮಂದಿಗಳು ಪ್ರೌಢಾವಿವಾಹಕ್ಕೆ ಶಾಸ್ತ್ರಸಮ್ಮತಿಯುಂಟೆಂದು [illegible] ತರ್ಕಪೂರ್ವಕವಾಗಿ ಒಪ್ಪಿಕೊಳ್ಳುವುದು ನವನಾಗರಿಕರಿಗೆ ಒಂದು ಲಕ್ಷ ಸೈನ್ಯದ ಬೆಂಬಲವುಂಟಾದಂತೆಯೇ ಅಲ್ಲವೆ?

ಒಂದು ಆಚರಣೆಯು ಲಕ್ಷ ರೂ. ಗಳನ್ನು ಬಾಳುವುದು. ಶತಗ್ರಂಥಗಳೂ, ಸಹಸ್ರಸಭೆಗಳೂ ಮಾಡಲಾರದ ಕೆಲಸಗಳನ್ನು ಒಂದು ಆಚರಣೆಯು ಮಾಡಬಲ್ಲುದು. ಸಂಘಸಂಸ್ಕರಣ ವಿಷಯದಲ್ಲಿ ಬಾಯಲ್ಲಿ ನುಡಿದಂತೆ ಆಚರಿಸಿ ತೋರಿಸತಕ್ಕವರೇ ಸಕಲ ಜನರಿಗೂ ವಂದ್ಯರು. ಆಪತ್ತಿಗೆ ಹಿಂದೆಗೆಯದೆ ತಾನು ಉತ್ತಮವಾದ ಕಾರ್ಯವೆಂದು ತಿಳಿದುದನ್ನು ಅವಲಂಬಿಸಿ ನಡೆಯತಕ್ಕವರೇ ಸಂಘಕ್ಕೆ ನಾಯಕರಾಗುವುದಕ್ಕೆ ತಕ್ಕವರು. ಏಲೂರಿನ ಮಾಧವರಾವ್ ಪಂತುಲು ಬಿ. ಎ, ಬಿ. ಎಲ್., ರವರು ೨ ವರ್ಷಗಳ ಹಿಂದೆ ಬರ್ಮಾದಲ್ಲಿ ಪ್ರೌಢಾವಿವಾಹವನ್ನು ಮಾಡಿಕೊಂಡರು. ಡಾಕ್ಟರ್ ಲಕ್ಷ್ಮೀಪತಿಯವರು ೫ ತಿಂಗಳ ಹಿಂದೆ ಮದ್ರಾಸಿನಲ್ಲಿ ೧೯ ವರ್ಷದ ವಿದುಷೀಮಣಿಯನ್ನು ವಿವಾಹಮಾಡಿಕೊಂಡರು. ಈ ಕಾರ್ಯಗಳಿಗೆ ಅವರವರ ತಂದೆಗಳೂ ಸಹೋದರರೂ ಇತರ ಬಂಧುಗಳೂ ಅನೇಕರು ಕೂಡ ಅನುಕೂಲರಾಗಿಯೇ ಇದ್ದುದನ್ನು ನೋಡಿದರೆ ನಮ್ಮ ಸಂಘಸಂಸ್ಕರಣಗಳಿಗೆ ಪ್ರತಿಕೂಲಗಳಿಲ್ಲವೆಂದು ಕಾಣುತ್ತದೆ.

ವಿತಂತೂದ್ವಾಹವು— ಇದನ್ನು ಕುರಿತು ನಮ್ಮ ದೇಶದಲ್ಲಿ ೧೨ ವಿವಾಹಗಳಾದುದು ಹೊರತು ಮುಂದೇನೂ ಜರುಗಿದಂತೆ ಕಾಣುವುದಿಲ್ಲ. ನಮ್ಮ ದೇಶದಲ್ಲಿ ಸಂಘಸಂಸ್ಕರಣ ಕಾರ್ಯದಲ್ಲಿ ಕುಲವೃದ್ಧರಾದ ರಾ॥ ಬ॥ ಕಂದುಕೂರಿ ವೀರೇಶಲಿಂಗಂಪಂತುಲುಯವರು ತುಂಬಾ ವೃದ್ಧರಾದುದರಿಂದ ಅವರು ಇಷ್ಟುವರೆಗೂ ಇದನ್ನು ಕುರಿತು ಮಾಡುತ್ತ ಬಂದ ಕಾರ್ಯಭಾರವನ್ನು ಮತ್ತೆ ಯಾರಾದರೊಬ್ಬ ಯೌವನಸ್ಥರು ತಮ್ಮ ಮೇಲೆ ಹೊತ್ತುಕೊಳ್ಳಬೇಕಾಗಿದೆ.

ಕನ್ಯಾವಿಕ್ರಯವು— ನಮ್ಮ ವಿವಾಹಪದ್ಧತಿಗಳಲ್ಲಿ ಕನ್ಯಾವಿಕ್ರಯವೆಂಬುದೂ, ಪುತ್ರವಿಕ್ರಯವೆಂಬುದೂ ಘೋರ ಕಳಂಕಗಳು. ಮತ್ತೂ ಅತ್ಯಂತ ತಿರಸ್ಕಾರಪಾತ್ರಗಳು. ಪುತ್ರವಿಕ್ರಯವೆಂಬ ಶಬ್ದವು ನಿಮಗೆ ಆಶ್ಚರ್ಯಕರವಾಗಿ ತೋರಬಹುದು. ಇದಕ್ಕೆ ಇದುವರೆಗೂ ವರಶುಲ್ಕವೆಂಬ ಹೆಸರುಂಟು. ಬಡವರು ತಮ್ಮ ಕನ್ಯೆಯರುಗಳನ್ನು ಮಾರುತ್ತಾರೆ ಧನಿಕರು ತಮ್ಮ ಗಂಡುಮಕ್ಕಳನ್ನೇ ಮಾರುತ್ತಾರೆ. ಇವುಗಳಲ್ಲಿ ಕನ್ಯಾವಿಕ್ರಯವು ಎಷ್ಟು ದೋಷಪ್ರದವೋ, ಸ್ವಲ್ಪ ಆಲೋಚಿಸಿದರೆ ಪುತ್ರವಿಕ್ರಯವೂ ಅಷ್ಟೇ ದೋಷಪ್ರದವಾಗಿ ಕಾಣ್ಬರುವುದು. ಗಂಡುಮಕ್ಕಳ ದರವು ಧಾನ್ಯದ ಬೆಲೆಯಂತೆ ಹೆಚ್ಚುತ್ತಿರುವುದಕ್ಕೆ ಕಾರಣಭೂತರಾದವರನ್ನು ನಮ್ಮ ಸಂಘಕ್ಕೆ ಮಹಾ ಅನೀತಿಯನ್ನು ಕಲಿಸಿಕೊಟ್ಟ ಮಹಾಶತ್ರುಗಳನ್ನಾಗಿ ತಿಳಿಯಬೇಕು. ಈ ದುರಾಚಾರಗಳನ್ನಣಗಿಸುವುದಕ್ಕೆ ತಕ್ಕ ಉಪಾಯಗಳನ್ನು ಯೋಚಿಸಬೇಕು.

ಇವಲ್ಲದೆ ಇದೇ ತೆರದಲ್ಲಿ ವಿಚಾರಾರ್ಹವಾದ ಸಂಸ್ಕರಣಗಳು ಅನೇಕವಾಗಿವೆ. ಅವನ್ನೆಲ್ಲಾ ಇಲ್ಲಿ ವಿಸ್ತರಿಸುವುದು ಅನಾವಶ್ಯಕ.

ಸರ್ಕಾರದಪ್ಪಣೆ.

೧೯೦೮ ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯ ಸಭಾಸ್ತಾರರು ವ್ಯವಸಾಯದ ಉದ್ದೇಶಗಳಿಗಾಗಿ ಅತ್ಯವಶ್ಯಕವಾಗಿರುವ ಕಣಗಳ ಮೇಲೆ ವಿಧಿಸಿರುವ ಕಂದಾಯವನ್ನು ತೆಗೆದುಹಾಕಬೇಕೆಂದು ಗೌರ್ನಮೆಂಟಿನವರನ್ನು ಕೇಳಿಕೊಂಡಿದ್ದರು. ಅದರ ಮೇಲೆ ಸರ್ಕಾರದವರು ಡಿ॥ ಕಮಿಷನರುಗಳ ಮತ್ತೂ ರೆ॥ ಕಮಿಷನರ ಅಭಿಪ್ರಾಯವನ್ನು ಬರಮಾಡಿಕೊಂಡು, ಕಳೆದ ಮಾರ್ಚಿ ತಾ॥ ೨೩ ರಲ್ಲಿ ತಮ್ಮ ತೀರ್ಮಾನವನ್ನು ಹೇಳಿರುತ್ತಾರೆ. ಏನೆಂದರೆ— ಪ್ರಜಾಪ್ರತಿಸಭೆಯಲ್ಲಿ ನಡೆದ ಚರ್ಚಾಂಶದಿಂದ ಯಾವ ತೆರದ ಕಣಗಳ ವಿಷಯವನ್ನು ಕುರಿತು ಮಾತನಾಡಲ್ಪಟ್ಟಿತು ಎಂಬುದು ಗೊತ್ತಾಗುವುದಿಲ್ಲ. ಬಹುಶಃ ಅವು ಕಾಳು ಕಡ್ಡಿಯನ್ನು ತುಳಿಸುವುದು ಮೊದಲಾದ ಕೆಲಸಗಳಿಗೆ ಕೆಲದಿನಗಳ ಮಟ್ಟಿಗೆ ಮಾಡಿಕೊಳ್ಳುವ ಕಣಗಳ ವಿಷಯಕವಾಗಿದ್ದರೂ ಇರಬಹುದು. ಅಂಥ ಕೆಲಸಕ್ಕೆ ಭೂಮಿಯನ್ನು ಉಪಯೋಗಿಸಕೂಡದೆಂದು ಸರ್ಕಾರದವರು ನಿರೋಧಿಸುವುದೂ ಇಲ್ಲ. ಕಂದಾಯವನ್ನೂ ಹಾಕುವುದಿಲ್ಲ. ಧಾನ್ಯ—ಮೇವು ಮೊದಲಾದುವುಗಳನ್ನು ಹಾಕಿಕೊಳ್ಳುವುದಕ್ಕಾಗಲಿ ದನಗಳನ್ನು ಕಟ್ಟಿಕೊಳ್ಳುವುದಕ್ಕಾಗಲಿ ಇನ್ನಾವ ವ್ಯವಸಾಯ ಕಾರ್ಯಗಳಿಗಾಗಲಿ ಉಪಯೋಗಿಸಲ್ಪಡುವ ಸ್ಥಿರವಾದ ಕಣಗಳ ವಿಷಯದಲ್ಲಿ ಮಾತ್ರ, ಅದು ಯಾವತರದ ಭೂಮಿ? ಹಿಡುವಳಿಯ ಸ್ವಭಾವವೆಂತಹುದು? ಯಾವ ಹಕ್ಕಿಗೆ ಒಳಪಟ್ಟುದು? ಎಂಬುದನ್ನೆಲ್ಲಾ ವಿಚಾರಮಾಡಿ ತೀರ್ಮಾನಿಸುವರು. ಅಂಥವುಗಳಿಗೆ ಸಾಧಾರಣವಾಗಿ ವ್ಯವಸಾಯಕ್ಕರ್ಹವಾದ ಭೂಮಿಗಳಿಗೆ ಹೇಗೋ ಹಾಗೆ ಕಂದಾಯವನ್ನು ಹಾಕಬೇಕು. ಸಾಗುವಳಿಗೆ ಕಂದಾಯ ಬಿದ್ದೇ ಇರುವ ಭೂಮಿಯಲ್ಲಿ ಇಂಥ ಸ್ಥಿರವಾದ ಕಣವನ್ನು ಮಾಡಿಕೊಳ್ಳಲು ಅವಕಾಶಕೊಡಲ್ಪಟ್ಟಿದ್ದು, ಮರಳಿ ಆ ಭೂಮಿಯು ಸಾಗುವಳಿಗೆ ಬೇಕಾದಾಗ ಅಂಥ ಹಿಡುವಳಿಯ ಹಕ್ಕಿನ ವಿಷಯವು ವಿಚಾರಣೆಯಿಂದ ನಿರ್ಧರಿಸಲ್ಪಡಬೇಕು.

ಸಂಸ್ಥಾನದಲ್ಲಿ ಅಳತೆ ತೂಕಗಳ ಪ್ರಮಾಣದ ವಿಷಯದಲ್ಲಿ ನಿಗದಿಮಾಡಿರುವ ವಿಧಿಯು ಈ ವರ್ಷದ ಜುಲೈ ತಿಂಗಳಾರಂಭದಿಂದ ವ್ಯವಹಾರಕ್ಕೆ ಬರಬೇಕೆಂದು ಹಿಂದೆ ಪ್ರಕಟಮಾಡಲ್ಪಟ್ಟಿದ್ದಿತು. ಈಗ ಆ ವಿಧಿಯು ಬರುವ ಅಕ್ಟೋಬರ್ ತಾ॥ ೧ ರಿಂದ ವ್ಯವಹರಣೆಗೆ ಬರುವುದೆಂದು ಪ್ರಕಟಗೊಂಡಿದೆ.

ಅದ್ಭುತವಾದ ನದಿ.

ಭೂಲೋಕದಲ್ಲೆಲ್ಲಾ ವಿಚಿತ್ರವಾದ ಒಂದು ನದಿಯು ಮೆಕ್ಸಿಕೋ ರಾಜ್ಯಕ್ಕೆ ಉತ್ತರದಲ್ಲಿದೆಯೆಂದು ಅಮೇರಿಕಾ ದೇಶದ ಒಂದು ಪತ್ರಿಕೆಯು ತಿಳಿಸುತ್ತದೆ. ಇದು ಮೆಕ್ಸಿಕೋ ರಾಜ್ಯದ ಸುತ್ತಲೂ ಇರುವ ಬೆಟ್ಟಗಳಲ್ಲಿ ಹುಟ್ಟಿ ಬಹು ಸಾಧುವಾಗಿ ದಕ್ಷಿಣದಿಕ್ಕಿಗೆ ೫೦ ಮೈಲಿಗಳವರೆಗೆ ಪ್ರವಹಿಸು

ತ್ತದೆ. ಅಲ್ಲಿಂದ ಇದ್ದಕ್ಕಿದ್ದಹಾಗೆ ಪ್ರಬಲವಾದ ಸುಳಿಗಳಿಂದ ಕೂಡಿಕೊಂಡು ವಿಪರೀತ ವೇಗವಾಗಿ ಪ್ರವಹಿಸುತ್ತದೆ. ೨ ಮೈಲಿಗಳಾಚೆಗೆ ಕಣ್ಣಿಗೆ ಕಾಣಿಸುವುದೇ ಇಲ್ಲ. ಇದ್ದದು ಇದ್ದಹಾಗೆಯೇ ಮಾಯವಾಗುತ್ತದೆ. ಅದರಿಂದ ಇದನ್ನು ಮಾಯಾನದಿ (ವ್ಯಾನಿಷಿಂಗ್‌ರಿವರ್) ಎಂದು ಕರೆಯುತ್ತಾರೆ.

ಮೈಸೂರ್ ಸ್ಟಾರ್

೧೯೧೧ ನೆಯ ಜೂನ್ ತಾ|| ೧೨ ನೆಯ ಸೋಮವಾರ.

ಮೈಸೂರು ಸಂಸ್ಥಾನದಲ್ಲಿ ವಾಂತಿಭೇದಿಯ ರೋಗ.

ನಮ್ಮ ದೇಶದಲ್ಲಿ ಈಗ ಪ್ಲೇಗುರೋಗದ ಉಪಟಲವು ತೀರ ಕಡಿಮೆಯಾಗಿದ್ದರೂ, (ಈಗ ವಾರ ೧ ಕ್ಕೆ ೮-೧೦ ಪ್ಲೇಗಿನ ಮರಣಗಳಾಗುತ್ತಿವೆ. ಕಳೆದವರ್ಷ ಇದೇಕಾಲದಲ್ಲಿ ೫೦-೬೦ ರಷ್ಟು ಆಗುತ್ತಿದ್ದುವು) ವಾಂತಿಭೇದಿ ರೋಗದ ಹಾವಳಿಯು ಮಾತ್ರ ವಿಶೇಷವಾಗಿದೆ. ಕಳೆದವರ್ಷ ಈ ಕಾಲದಲ್ಲಿ ಸಂಸ್ಥಾನದೊಳಗೆ ವಾಂತಿಭೇದಿ ರೋಗದ ಹೆಸರೇ ಇರಲಿಲ್ಲ. ಈ ವರ್ಷವಾದರೋ ಕಳೆದ ಮಾರ್ಚಿ ತಿಂಗಳಿಂದಲೂ ಸ್ವಲ್ಪಸ್ವಲ್ಪವಾಗಿ ಏರುತ್ತ ಈಗ ವಾರ ೧ ಕ್ಕೆ ೫-೬ ನೂರು ಜನರಷ್ಟು ಅದರಿಂದ ಸಾಯುತ್ತಿದ್ದಾರೆ. ಮಾರ್ಚಿ ತಿಂಗಳ ಆದಿಯಲ್ಲಿ ಸಂಸ್ಥಾನದೊಳಗೆಲ್ಲಾ ೮ ಗ್ರಾಮಗಳಲ್ಲಿ ಈ ರೋಗವು ತಲೆದೋರಿ ವಾರ ೧ ಕ್ಕೆ ೫೦ ಜನಕ್ಕೆ ತಗುಲಿ ೩೩ ಜನರಷ್ಟು ಸತ್ತಿದ್ದರು. ಏಪ್ರಿಲ್ ತಿಂಗಳ ಮಧ್ಯದಲ್ಲಿ ವಾರ ೧ ಕ್ಕೆ ೩೫ ಜನರಷ್ಟು ಸಾಯುವಂತಾಯಿತು. ಆ ತಿಂಗಳ ಕೊನೆಯಲ್ಲಿ ವಾಂತಿಭೇದಿಯ ರೋಗವು ೫೫ ಗ್ರಾಮಗಳಿಗೆ ವ್ಯಾಪಿಸಿ, ಅದರ ಮರಣಗಳು ೭೦೦ ಕ್ಕೆ ಮೇಲ್ಪಟ್ಟವು. ಮೇ ತಿಂಗಳ ಕೊನೆಯಲ್ಲಿ ೭೩ ಗ್ರಾಮಗಳಿಗೆ ಈ ರೋಗವು ವ್ಯಾಪಿಸಿ, ವಾರ ೧ ಕ್ಕೆ ೧೧೭ ಜನರಿಗೆ ತಗುಲಿ ೬೬ ಜನರು ಸಾಯುವಂತಾಯಿತು. ಕಳೆದ ಜೂನ್ ತಾ|| ೨ ಕ್ಕೆ ಕಡೆಯಾದ ವಾರದಲ್ಲಿ ಈ ರೋಗವು ೮೫೯ ಜನರಿಗೆ ತಗುಲಿ ೪೮೦ ಮಂದಿ ಸತ್ತರು. ಇದರಿಂದ ಈ ತಿಂಗಳಾರಂಭದಿಂದ ರೋಗದ ಉಲ್ಬಣವು ಸ್ವಲ್ಪ ಇಳಿತರವಾದಂತೆ ಕಾಣುತ್ತದೆ. ಈ ದೇಶದಲ್ಲೆಲ್ಲಾ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲೇ ಇದರ ಹಾವಳಿಯು ಹೆಚ್ಚು. ಆ ಡಿಸ್ಟ್ರಿಕ್ಟಿನ ೧೫ ಗ್ರಾಮಗಳಲ್ಲಿ ಈಗಲೂ ರೋಗವು ವ್ಯಾಪಿಸಿದೆ. ಕಳೆದೊಂದುವಾರದಲ್ಲಿ ೭೦೮ ಜನರು ಸತ್ತಿರುವರು. ಅದರ ಹಿಂದಣವಾರದಲ್ಲಿ ೩೮೭ ಜನರು ಸತ್ತಿದ್ದರು ಅದಕ್ಕೆ ಸ್ವಲ್ಪ ಕಡಿಮೆಯಾಗಿ ಶಿವಮೊಗ್ಗಾ ಡಿ|| ನಲ್ಲಿ ಈ ರೋಗವು ಹಾವಳಿಮಾಡುತ್ತಿದೆ ಅಲ್ಲಿ ನೆನ್ನೆ ವಾರದೊಳಗೆ ೨೭ ಗ್ರಾಮಗಳಲ್ಲಿ ರೋಗವು ಹರಡಿ ೧೬೧ ಜನರು ಸತ್ತಿರುವರು. ಹಾಸನ ಡಿ|| ನಲ್ಲಿ ೧೮ ಗ್ರಾಮಗಳಲ್ಲಿ ರೋಗವು ತಗುಲಿ ೫೭ ಜನರು ಸತ್ತಿದ್ದಾರೆ. ತುಮಕೂರು ಡಿ|| ನಲ್ಲಿ ಆ ವಾರದಲ್ಲಿ ೧೬ ಗ್ರಾಮಗಳಲ್ಲಿ ರೋಗವು ಹರಡಿ ೭೭ ಜನರು ಸತ್ತಿದ್ದಾರೆ. ಮೈಸೂರ ಡಿ|| ನಲ್ಲಿ ೮ ಗ್ರಾಮಗಳಲ್ಲಿ ರೋಗವು ಹರಡಿ ೭೦ ಮಂದಿ ಸತ್ತಿದ್ದಾರೆ. ಕೋಲಾರ ಡಿ|| ನಲ್ಲಿ ೧ ಗ್ರಾಮದಲ್ಲಿ ರೋಗವಿದ್ದು ೧೫ ಮಂದಿ ಸತ್ತಿದ್ದಾರೆ. ಕಡೂರಿನಲ್ಲಿ ನೆನ್ನೆವಾರದಲ್ಲಿ ಏನೂ ಇಲ್ಲ. ಬೆಂಗಳೂರು ಡಿ|| ನಲ್ಲಿ ಈ ರೋಗದ ಗಂಧವೇ ಇಲ್ಲ.

ಹೀಗೆ ಈ ಭೀಕರವಾದ ರೋಗದಿಂದ ಈ ವರ್ಷ ನಮ್ಮ ದೇಶದಲ್ಲಿ ಅನೇಕ ಪ್ರಜಾನಷ್ಟವಾಗುತ್ತಿರುವುದನ್ನು ಕೇಳಿದರೆ ವ್ಯಸನವಾಗುತ್ತದೆ. ಈ ವರ್ಷದಲ್ಲಿ ಬೇಸಗೆಯು ಹೆಚ್ಚಾಗಿ, ಮುಂಗಾರು ಮಳೆಯು ಕಡಿಮೆಯಾದುದರಿಂದ ಈ ರೋಗವು ಉಲ್ಬಣವಾದಂತೆ ಕಾಣುತ್ತದೆ. ಇದು ಕುಡಿಯುವ ನೀರಿನ ಮೂಲಕವಾಗಿಯೇ ವ್ಯಾಪಿಸಿಕೊಳ್ಳುವುದೆಂದು ಸಿದ್ಧಾಂತವಾಗಿರುವ ಕಾರಣ, ಆ ರೋಗದ ಸುದ್ದಿ ಹುಟ್ಟಿದ ಕಾಲದಲ್ಲಿ ಜನರೆಲ್ಲಾ ನೀರನ್ನು ಚೆನ್ನಾಗಿ ಕುದಿಯುವಂತೆ ಕಾಯಿಸಿ ಆರಿಸಿದ ನೀರನ್ನು ಉಪಯೋಗಿಸಿಕೊಳ್ಳುವುದು ಅತ್ಯವಶ್ಯಕ. ಅಲ್ಲದೆ ಬೆಂಗಳೂರು ಡಿಸ್ಟ್ರಿಕ್ಟಿನ ಆರೋಗ್ಯರಕ್ಷಕ ಶಾಖೆಯ ಅಧಿಕಾರಿಗಳಾದ ಮುತ್ತುಸ್ವಾಮಿ ದಾಸರವರು ಕಾಲೋಚಿತವಾಗಿ ಪ್ರಜೆಗಳ ಹಿತಾರ್ಥವಾಗಿ ಅಲ್ಲಲ್ಲಿ ಮಾಡುತ್ತಿರುವ ಉಪನ್ಯಾಸ-ಮತ್ತೂ ಚಿಕಿತ್ಸಾಕ್ರಮಗಳ ರೀತಿಯನ್ನು ಕುರಿತ ಲೇಖನವೊಂದು ಬರೆಯಲ್ಪಟ್ಟು ಈ ವಾರ ನಮ್ಮಲ್ಲಿಗೆ ಬಂದಿರುವುದರಿಂದ, ಈ ಪತ್ರಿಕೆಯಲ್ಲಿಯೇ ಪ್ರಕಟಿಸಲ್ಪಟ್ಟಿರುವ ಅತ್ಯುಪಯುಕ್ತವಾದ ಆ ಲೇಖನವನ್ನು ಪ್ರತಿಯೊಬ್ಬರೂ ಚೆನ್ನಾಗಿ ಓದಿ ಮನನಮಾಡಿಕೊಂಡಿದ್ದು, ಸಮಯದಲ್ಲಿ ಅದರಂತೆ ನಡೆದುಕೊಂಡು, ತಮ್ಮ ನೆರೆಹೊರೆಯವರಿಗೂ ಅದರಂತೆಯೇ ನಡೆದುಕೊಳ್ಳಲು ಪ್ರೇರಿಸಿದರೆ, ಬಲುಮಟ್ಟಿಗೆ ಪ್ರಾಣಾಪಾಯಗಳನ್ನು ತಪ್ಪಿಸಿಕೊಳ್ಳಬಹುದು

ಮುಖ್ಯವಾಗಿ ಈ ರೋಗದಿಂದ ಗ್ರಾಮಾಂತರಗಳಲ್ಲಿ ಮರಣಗಳಾಗುವುದೇ ಹೆಚ್ಚಾಗಿದೆ. ಹಾಗಾಗುವುದಕ್ಕೆ ಗ್ರಾಮಾಂತರಗಳಲ್ಲಿ ನಿರ್ಮಲವಾದ ಕುಡಿಯುವ ನೀರಿಗೆ ಕೊರತೆಯಾಗಿರುವುದೇ ಕಾರಣವು. ಬೇಸಗೆಯ ಕಾಲದಲ್ಲಿ ನಮ್ಮ ದೇಶದ ಅನೇಕ ಗ್ರಾಮಗಳೊಳಗೆ ದನಗಳು ಕುಡಿಯುವುದಕ್ಕೂ ಸಹ ಅನುಕೂಲವಾದಷ್ಟು ನೀರೂ ದೊರೆಯುವುದಿಲ್ಲ ನೀರಿಗಾಗಿ ಕೆಲಗ್ರಾಮದವರು ಪಡುವ ಶ್ರಮವು ಅತ್ಯಂತ ಪರಿತಾಪಕರವಾಗಿರುವುದು. ಹಲವುಕಡೆ ದನಗಳು ಮುಳುಗಿ ತೇಲುವ ಕಟ್ಟೆಗಳ ನೀರೇ ಬಟ್ಟೆಯೊಗೆಯುವುದಕ್ಕೂ ಅಡುಗೆಮಾಡುವುದಕ್ಕೂ ಕುಡಿಯುವುದಕ್ಕೂ ಸಹ ಉಪಯೋಗಿಸಲ್ಪಡಬೇಕಾಗುವುದು ಅದನ್ನು ಬಿಟ್ಟರೆ ಬೇರೆಗತಿಯಿಲ್ಲ. ದೇಶದಲ್ಲಿ ಆರೋಗ್ಯವರ್ಧನಕ್ಕಾಗಿ ಆ ಶಾಖೆಯಲ್ಲಿ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದು, ಮೇಲ್ವಿಚಾರಣೆಯವರನ್ನು ಬಲಪಡಿಸುವುದು, ಪ್ರದರ್ಶನಗಳನ್ನೇರ್ಪಡಿಸುವುದು,—ಇವುಗಳೆಲ್ಲಕ್ಕಿಂತಲೂ ಪ್ರಾಣಿಗಳಿಗೆ ಮುಖ್ಯ ಜೀವನವಾಗಿರುವ ಜೀವನ (ನೀರು) ವನ್ನು ಕುಡಿಯಲಿಕ್ಕಾಗಿ ಪ್ರತಿಗ್ರಾಮದಲ್ಲೂ ಎಂಥ ಬೇಸಗೆಯಲ್ಲೂ ಕೊರತೆಯಿಲ್ಲದೆ ದೊರೆಯುವಂತೆ ಸರ್ಕಾರದವರು ಮಾಡಿಕೊಡುವುದು ಅತ್ಯಾವಶ್ಯಕವಾಗಿದೆ. ಹಾಲು ಮೊಸರಿಗೆ ಕೊರತೆಯಿಲ್ಲದೆಯೂ, ನಿರ್ಮಲವಾದ ನೀರಿಗೆ ಅಭಾವವಿಲ್ಲದೆಯೂ ಇದ್ದರೆ ಈ ರೋಗದ ಹಾವಳಿಯು ಹೆಚ್ಚುವುದಕ್ಕೆ ಅವಕಾಶವಿರಲಾರದು. ಬೇಸಗೆಯಲ್ಲಿ ದನಗಳಿಗೆ ಮೇವು ಕಡಿಮೆ. ಅದರಮೇಲೆ ರೋಗದ ಹಾವಳಿಯಿಂದ ಪಶುನಷ್ಟವೇರೆ. ಅನ್ನೂ ಅಲ್ಲದೆ ಗ್ರಾಮ್ಯಜನರು ಬಡತನದಿಂದ ಹಾಲು ಮೊಸರನ್ನು ಮಾರಿಕೊಂಡು ಉದರನಿರ್ವಾಹ ಮಾಡಬೇಕಾಗುವುದು. ಇದರಿಂದ ಅವರಿಗೆ ಊಟಕ್ಕೆ ಹಾಲು ಮೊಸರೂ ಇಲ್ಲ. ಕುಡಿಯುವುದಕ್ಕೆ ಒಳ್ಳೆಯ ನೀರೂ ಇಲ್ಲ. ಗ್ರಾಮಸ್ಥರ ಇವೆಲ್ಲ ತಾಪತ್ರಯಗಳ ಕಡೆಗೆ ಸ್ಥಲಾಧಿಕಾರಿಗಳೂ ಮೇಲಿನ ಉದ್ಯೋಗಸ್ಥರೂ ಕಟಾಕ್ಷವಿತ್ತು ಗಮನಿಸಿ, ದಯಾರ್ದ್ರಭಾವದಿಂದ ಕಾಲೋಚಿತವಾದ ಸಹಾಯಗಳನ್ನು ಮಾಡಿ ಕೊಡುತ್ತ ಬರದಿದ್ದರೆ, ಅವರ ಬಾಳಾಟವು ಅತ್ಯಂತ ಶೋಚನೀಯವಾಗುವುದು.

ಬಾಲಪಾಠಶಾಲೆಗಳಿಗೆ ಸಹಾಯದ್ರವ್ಯ.

ರಾಜಧಾನಿಯಲ್ಲಿ ಉಪಾಧ್ಯಾಯರುಗಳು ಸ್ವತಂತ್ರವಾಗಿಟ್ಟುಕೊಂಡು ನಡೆಯಿಸುತ್ತಿದ್ದ ಬಾಲಪಾಠಶಾಲೆಗಳಿಗೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ೪-೫-೬ ರೂ. ಗಳಷ್ಟು ಸಹಾಯದ್ರವ್ಯವನ್ನು ಕೊಡುವ ಏರ್ಪಾಟು ಈಗ್ಗೆ ೧೦-೧೫ ವರ್ಷಗಳಿಂದಲೂ ನಡೆದು ಬರುತ್ತಿದೆ. ಆ ಸಹಾಯವು ಸಾಲದೆಂಬ ದೂರು ಬಹು ದಿನದಿಂದಲೂ ಇದ್ದುದರಿಂದ ೨-೩ ವರ್ಷಗಳಾರಭ್ಯ ಇದು ಚರ್ಚೆಗೆ ಬಂದು ಆ ಸಹಾಯದ್ರವ್ಯವನ್ನು ೧೦ ರೂ. ಗೆ ಹೆಚ್ಚಿಸಬೇಕೆಂದು ನಿರ್ಧಾರವು ಮಾಡಲ್ಪಟ್ಟಿರುವುದನ್ನೂ, ಅದು ಜುಲೈ ತಿಂಗಳಿಂದ ವ್ಯವಹಾರಕ್ಕೆ ಬರುವುದೆಂಬುದನ್ನೂ ಕೇಳಿ, ಪಶುಪಾಲಕರಿಗಿಂತಲೂ ಕಡಿಮೆಯಾದ ಆಯತಿಯನ್ನು ಹೊಂದಿ ಪರಿತಪಿಸುತ್ತಿದ್ದ ಆ ಪಾಠಶಾಲೋಪಾಧ್ಯಾಯರಿಗೆ ಇದರಿಂದ ಎಷ್ಟೋ ಸಹಾಯವಾಗುವಂತಾಯಿತೆಂದು ಯೋಚಿಸಿ ಸಮಾಧಾನ ಪಡುವಂತಾಗಿದ್ದಿತು. ಆದರೆ ಈ ಮಧ್ಯೆ, ಮತ್ತೊಂದು ಸುದ್ದಿ ಹುಟ್ಟಿರುವುದನ್ನು ಕೇಳಿದರೆ, ಜೀವಸಹಿತ ಬಾವಿಯಿಂದೆದ್ದು ಬಂದವನ ಮೇಲೆ ದಡನೇ ಕುಸಿದು ಬಿದ್ದಂತೆ ಆಯಿತೆಂದು ಯೋಚಿಸಬೇಕಾಗುತ್ತದೆ. ಅದೇನೆಂದರೆ,— ಆ ಉಪಾಧ್ಯಾಯರುಗಳಿಗೆ ಸಲ್ಲಿಸುವ ಸಹಾಯ ದ್ರವ್ಯವನ್ನು ವರ್ಷಕ್ಕೊಂದು ಸಲ ಕೊಡುವಂತೆ ಮಾಡಬೇಕೆಂದು ಯೋಚಿಸಲ್ಪಟ್ಟಿರುವುದಂತೆ. ಈ ಏರ್ಪಾಟು ಅಸಮಂಜಸವಾದುದು. ಈಗ ಕ್ಷಾಮಕಾಲದ ಬೆಲೆಯು ದವಸಗಳಿಗಿರುತ್ತದೆ. ಇಂಥ ಕಾಲದೊಳಗೆ ಅವರಿಗೆ ಕೊಡುವ ಸಹಾಯದ್ರವ್ಯವು ತೀರ ಕಡಿಮೆಯೆಂಬ ಕಾರಣದಿಂದಲೇ ೧೧ ರೂ. ನಂತೆ ಕೊಡಬೇಕೆಂದು ಏರ್ಪಡಿಸಿದವರ ದಯಾರ್ದ್ರಭಾವವು ಸ್ತುತ್ಯವಾಗಿರುತ್ತದೆ. ಹೀಗಿರುವಲ್ಲಿ ವರ್ಷಕ್ಕೊಂದು ಸಲ ಆ ಸಹಾಯವನ್ನು ಅವರಿಗೆ ಮಾಡುವುದಾದರೆ ಈ ವರದಾನದ ಉದ್ದೇಶವೇ ವಿಫಲವಾಗುವುದಲ್ಲವೆ? ಆ ಬಡಜನರು ತಿಂಗಳಿಗೆ ಬರುತ್ತಿದ್ದ ೪-೫ ರೂ. ಗಳನ್ನೂ ಕಳೆದುಕೊಂಡು ೧೨ ತಿಂಗಳೂ ಯಾವ ಅಕ್ಷಯಪಾತ್ರೆಯ ಆಧಾರದಿಂದ ಬದುಕಿರಬಹುದು? ಸಾವಿರಾರು ರೂ. ಗಳ ವೇತನವನ್ನು ಪಡೆಯುತ್ತಿರುವ ಉಪದನ್ನರಾದ ಅಧಿಕಾರಿಗಳಿಗೆಲ್ಲಾ ತಿಂಗಳು ತುಂಬಿದ ಮರುದಿನವೇ ವೇತನವು ಸಂದು ಹೋಗುತ್ತಿದ್ದರೂ ಈ ಬಡಪಾಯಿಗಳಿಗೆ ಕೊಡುವ ಸಹಾಯದ್ರವ್ಯಕ್ಕೆ ಇಷ್ಟೊಂದು ಬಿಗಿಯಾಕೆ? ಈ ಹಣವನ್ನು ಬೊಕ್ಕಸದಲ್ಲಿ ೧ ವರ್ಷದವರೆಗೆ ಉಳಿಸಿಕೊಂಡರೆ ಬರುವ ಭಾಗ್ಯವೇನು? ವರ್ಷಕ್ಕೊಂದು ಸಲ ಆ ಶಾಲೆಗಳ ಸ್ಥಿತಿಯನ್ನು ಪರೀಕ್ಷಿಸಿಯೇ ಸಹಾಯದ್ರವ್ಯವನ್ನು ಕೊಡಬೇಕೆಂದು ಯೋಚಿಸಲ್ಪಟ್ಟಿರುವುದಾದರೆ, ಅಂಥ ಪರೀಕ್ಷೆಗಳನ್ನು ಲಕ್ಷಾಂತರ ರೂ. ಗಳ ವೆಚ್ಚವುಳ್ಳ ಮತ್ತಾವ ಶಾಖೆಯಲ್ಲಿ ನಡೆಯಿಸಿ ಈ ರೀತಿಯಲ್ಲಿ ವೇತನವನ್ನು ಕೊಡುತ್ತಿದ್ದಾರೆ? ಯಾವುದರಲ್ಲೂ ಇಲ್ಲದಿರುವಾಗ, "ಮೇಡಿಯು ಸೂರೆ ಹೋಗುತ್ತಿದ್ದರೂ ಕೈ ಕಂತೆಗೆ ಗುದ್ದಾಡಿದ" ನೆಂಬ ಗಾದೆಯಂತೆ ಈ ಅಲ್ಪವಾದ ಸಹಾಯದ್ರವ್ಯದ ವಿನಿಯೋಗಕ್ಕಾಗಿ ಇಷ್ಟೊಂದು ಹಿಡಿತವನ್ನು ಪಡೆಯುವುದು ಯಾವ ಕೌಶಲ್ಯವೊ? ಉಚಿತಜ್ಞರೂ ಉದಾರಿಗಳೂ ದಯಾಳುಗಳೂ ಆದ ಸ್ಥಳಿಕಾಧಿಕಾರಿಗಳು ಈ ವಿಷಯವನ್ನು ಗಮನಕ್ಕೆ ತಂದುಕೊಂಡು, ಪ್ರತಿ ತಿಂಗಳೂ ಅವರುಗಳ ಸಹಾಯವನ್ನು ಸಲ್ಲಿಸಲು ಅಪ್ಪಣೆಮಾಡಿದರೆ, ಆ ಬಡವರಾದ ಶಾಲೋಪಾಧ್ಯಾಯರಿಗೆ ಮಾಡಿಕೊಟ್ಟ ಉಪಕಾರವಾದ ವರವು ಸಫಲವಾಗುವುದು. ವರ್ಷಕ್ಕೊಂದು ಸಲ ಸಲ ಪರೀಕ್ಷೆಮಾಡುವ ಏರ್ಪಾಟು ಪ್ರತ್ಯೇಕವಾಗಿದ್ದೇ ಇದ್ದು ಅಂಥ ಪರೀಕ್ಷೆಗಳ ಫಲ್ಯವಸಾನವನ್ನು ನೋಡಿ, ಉಪಾಧ್ಯಾಯರುಗಳಿಗೆ ಬಹುಮಾನವನ್ನೋ ಅಥವಾ ದಂಡವನ್ನೋ ವಿಧಿಸುವ ಏರ್ಪಾಟನ್ನು ಸಹ ಇಡಬಹುದು.

ವಾಂತಿಭೇದಿ (ಕಾಲರಾ).

(ಬರೆದು ಬಂದುದು.)

ಮೈಸೂರು ಸಂಸ್ಥಾನದಲ್ಲಿ ತುಮಕೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಅನೇಕ ಗ್ರಾಮಗಳಲ್ಲಿ ಈ ರೋಗವು ವ್ಯಾಪಿಸಿರುತ್ತ, ದಿನಂಪ್ರತಿ ನೂರಾರು ಜನಗಳು ಇದಕ್ಕೆ ತುತ್ತಾಗುತ್ತ ಇದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತೂ ಸ್ಯಾನಿಟರಿ ಆಫೀಸರಾದ ಡಾಕ್ಟರ್ ಮುತ್ತುಸ್ವಾಮಿದಾಸರವರು ಈ ಡಿಸ್ಟ್ರಿಕ್ಟಿನಲ್ಲಿ ಹೊಸಕೋಟೆ ತಾಲ್ಲೂಕು ಮೊಗಬಾಳ ಎಂಬ ಗ್ರಾಮದಲ್ಲಿ ಈ ರೋಗವು ತಲೆದೋರಲು, ಇವರು ಆ ಸ್ಥಳಕ್ಕೆ ದಯಮಾಡಿಸಿ, ಇದರ ನಿವಾರಣೆಗಾಗಿ ನಡೆಸಿದಂಥ ಏರ್ಪಾಡುಗಳನ್ನೂ ಮತ್ತೂ ಉಳಿದ ಕಡೆಗಳಲ್ಲಿಯೂ ಈ ರೋಗವು ವ್ಯಾಪಿಸೀತೆಂಬ ನಿರೀಕ್ಷಣೆಯ ಮೇಲೆ ಡಿಸ್ಟ್ರಿಕ್ಟಿನ ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕಂಥ ಹೋಬಳಿಗಳಲ್ಲಿ ಇವರು ಮಾಡಿರುವ ಉಪನ್ಯಾಸದ ಸಾರಾಂಶಗಳನ್ನೂ ಈ ಕೆಳಗೆ ತಿಳಿಸಿರುವೆನು.

ಈ ವ್ಯಾಧಿಯು ವ್ಯಾಪಿಸಿರತಕ್ಕಂಥ ಸ್ಥಳದವರು ಇದರಂತೆ ಆಚರಿಸಿದ್ದೇ ಆದರೆ ಈ ರೋಗದ ಹಾವಳಿಯು ಬಹುಮಟ್ಟಿಗೆ ಕಡಿಮೆಯಾಗುವುದು. ಈ ರೋಗವು ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿರುವುದು. ಇದು ಒಂದು ಕ್ರಿಮಿಯಿಂದ ಹುಟ್ಟುವುದು ಈ ಕ್ರಿಮಿಯು ಕುಡಿಯುವ ನೀರಿನಲ್ಲಿ ಯಾವ ತೆರದಿಂದಲಾದರೂ ಸೇರಿಕೊಂಡು, ಅಂಥ ನೀರನ್ನು ಕುಡಿದವರಿಗೆಲ್ಲಾ ಈ ರೋಗವು ವ್ಯಾಪಿಸುವುದು. ಈ ಕ್ರಿಮಿಯು ಅರ್ಧ ವಿರಾಮಚಿಹ್ನೆ (,) ಯಂತೆ ಸೂಕ್ಷ್ಮವಾದ ಭೂತಕನ್ನಡಿಯಲ್ಲಿ ಕಾಣುವುದು. ಹರಿಯುವ ನೀರಿನಲ್ಲಿ ಈ ಕ್ರಿಮಿಯು ಸೇರಿಕೊಂಡದ್ದೇ ಆದರೆ ಆ ನೀರಿನ ದಡದ ಮೇಲಿರತಕ್ಕಂಥ ಸ್ಥಳದ ಜನಗಳಿಗೆ ಹದಿನೆಂಟು ಇಪ್ಪತ್ತು ಮೈಲಿ ಪಾಸಲೆಯವರೆಗೂ ವ್ಯಾಪಿಸುವುದು.

ಈ ರೋಗದ ಚಿಹ್ನೆಗಳು:— ಈ ಸೋಂಕು ತಗಲಿದ ನೀರು ಕುಡಿದ ೭೨ ಗಂಟೆಗಳೊಳಗಾಗಿ ಭೇದಿಯಾಗುವುದು. ಮೊದಲು ಸಾಧಾರಣ ಗಟ್ಟಿಯಾಗಿ ಮಲಹೋಗುವುದು. ೨ ನೆಯ ಸಾರಿ ಸ್ವಲ್ಪ ತೆಳ್ಳಗೆ ಹೋಗುವುದು. ನಂತರ ನೀರಿನೋಪಾದಿಯಲ್ಲಿ ಹೋಗುವುದು ಯಾವಾಗ್ಗೆ ಈರೀತಿ ನೀರಿನಂತೆ ಭೇದಿಯಾಗುವುದೋ ಆಗ ವಾಂತಿಯಾರಂಭವಾಗುವುದು. ಮೊದಲು ಹೊಟ್ಟೆಯಲ್ಲಿರತಕ್ಕಂಥ ಅನ್ನಾಹಾರಾದಿಗಳು ವಾಂತಿಯಾಗುವುವು. ನಂತರ ಪಿತ್ತ ಕಾಣಿಸಿಕೊಳ್ಳುವುದು. ತರುವಾಯ ಬರೀ ನೀರು ವಾಂತಿಯಾಗುವುದು. ಭೇದಿಯೂ ವಾಂತಿಯೂ ಈರೀತಿಯಲ್ಲಿ ಕಾಣಿಸಿಕೊಂಡ ಕೂಡಲೇ ವ್ಯಾಧಿಗ್ರಸ್ತನು ತಟ್ಟಾಗಿ, ಕೈಕಾಲುಗಳೆಲ್ಲ ತಣ್ಣಗಾಗಿ ಹೊಟ್ಟೆಯಲ್ಲಿ ಸಂಕಟವಾಗುವುದು; ಕೈಕಾಲುಗಳು ಸೇದುವುದು; ಕಣ್ಣುಗುಡ್ಡೆಯು ಗುಂಡಿ ಬೀಳುವುದು; ಮತ್ತೂ ಮಾತು ಕುಗ್ಗಿ, ಕಿವಿ ಮುಚ್ಚಿಕೊಂಡು, ನಾಡಿಯು ಬಿದ್ದು ಹೋಗುವುದು; ಬಾಯಾರಿಕೆ ವಿಪರೀತವಾಗಿ ಆಗುವುದು; ಮೂತ್ರವು ಕಟ್ಟಿಹೋಗುವುದು. ಈರೀತಿಯಾದಂಥವರು ೧ ಗಂಟೆಯಿಂದ ೭೨ ಗಂಟೆಯೊಳಗಾಗಿ ಮೃತಪಡುವರು. ಇವರ ಮಲವೂ ವಾಂತಿಯೂ ಬಹಳ ಅಪಾಯಕರವಾದುವು. ಇವುಗಳ ದೆಸೆಯಿಂದಲೇ ನೀರು ಕೆಟ್ಟುಹೋಗಿ ಅಪಾಯಕ್ಕೆ ಕಾರಣವಾಗುವುದು. ಆದುದರಿಂದ ಇವುಗಳನ್ನು ನೆಲದ ಮೇಲೆ ಬೀಳದಂತೆ ರೋಗಗ್ರಸ್ತನ ಸಮೀಪದಲ್ಲಿ ಒಂದು ಮೊರದಲ್ಲಿಯಾಗಲಿ ಅಥವಾ ಒಂದು ಕುಕ್ಕೆಯಲ್ಲಿ ಅಗಲಿ, ರಾಗಿಯ ಅಥವಾ ಬತ್ತದ ಹೊಟ್ಟನ್ನಾಗಲಿ ಇಲ್ಲವೇ ಗರಗಸದ ಪೂಳನ್ನಾಗಲಿ ತುಂಬಿಟ್ಟು, ಇದರಲ್ಲಿಯೇ ವಾಂತಿಯನ್ನೂ ಭೇದಿಯನ್ನೂ ಮಾಡಿಸಬೇಕು. ನಂತರ ಇದನ್ನು ದೂರವಾಗಿ ತೆಗೆದುಕೊಂಡು ಹೋಗಿ, ಒಂದು ಗುಳಿಮಾಡಿ, ಅದರಲ್ಲಿ ಹಾಕಿ ಸುಡಬೇಕು. ಈ ವ್ಯಾಧಿಯು ಮನೆಯಲ್ಲಿ ಒಬ್ಬನಿಗೆ ವ್ಯಾಪಿಸಿದ್ದೇ ಆದರೆ ಅಂಥವನನ್ನು ಪ್ರತ್ಯೇಕ ಪಡಿಸಿ, ಅತನ ಉಪಯೋಗಕ್ಕೋಸ್ಕರ ಪ್ರತ್ಯೇಕವಾಗಿ ಚೆಂಬು ಮೊದಲಾದ ಪಾತ್ರೆಯ ಸಾಮಾನುಗಳನ್ನು ಕೊಡಬೇಕು. ಇದಕ್ಕೆ ಬೇರೆ ಪಾತ್ರೆಗಳಿಂದ ತಂದಂಥ ಗಂಜಿ ನೀರು ಮೊದಲಾದುವುಗಳನ್ನು ಹುಯ್ಯಬೇಕು. ರೋಗಿಯನ್ನು ಉಪಚರಿಸುವುದಕ್ಕೆ ಎಲ್ಲರೂ ಹೋಗಬಾರದು. ಯಾರನ್ನಾದರೂ ಒಬ್ಬರನ್ನು ನಿಯಮಿಸಬೇಕು. ಇವನು ರೋಗಿಯನ್ನು ಎತ್ತಿ ಹಿಡಿದು ಆಹಾರಾದಿಗಳನ್ನು ಕೊಟ್ಟನಂತರ ತನ್ನ ಕೈಯನ್ನು ಸಾಬೂನಿನಿಂದಲಾಗಲಿ ಸೀಗೆಯ ಕಾಯಿಯಿಂದಲಾಗಲಿ ಸಹಿಸಬಹುದಾದಷ್ಟು ಬಿಸಿನೀರಿನಲ್ಲಿ ಕೈಗಳನ್ನು ತೊಳೆದುಕೊಳ್ಳಬೇಕು. ವಾಂತಿ ಭೇದಿಗಳನ್ನು ನೊಣವು ಮುತ್ತಿಕೊಳ್ಳುವುದರಿಂದ ಅವುಗಳ ಕಾಲುಗಳ ಮೂಲಕ ಈ ವ್ಯಾಧಿಗೆ ಸಂಬಂಧಪಟ್ಟ ವಿಷ ಕ್ರಿಮಿಗಳು ಸೇರಿ, ಅವು ಕುಳಿತ ಕಡೆಯಲ್ಲೆಲ್ಲ ಆ ಕ್ರಿಮಿಗಳು ಹರಡಿಕೊಳ್ಳುವಂತೆ ಮಾಡುವುವು. ಆದುದರಿಂದ ರೋಗಿಯು ಸಮೀಪದಲ್ಲಿದ್ದ ಅನ್ನಾಹಾರಾದಿಗಳನ್ನು ತಿನ್ನಕೂಡದು.

ಈ ರೋಗವು ನೀರಿನಿಂದ ವ್ಯಾಪಿಸೋಣದರಿಂದ, ಯಾವ ನೀರನ್ನು ಕುಡಿದ ಮಾತ್ರದಿಂದ ರೋಗವು ವ್ಯಾಪಿಸಿತೋ ಅಂಥ ನೀರನ್ನು ಚೆನ್ನಾಗಿ ಕಾಯಿಸಿದ ಹೊರತು ಹಾಗೆಯೇ ಕುಡಿಯಕೂಡದು. ಒಂದು ಗ್ರಾಮದಲ್ಲಿ ಒಂದೇ ಕುಡಿಯುವ ನೀರಿನ ಬಾವಿಯಿದ್ದರೆ ಸೋಂಕು ತಗಲಿದ ಮನೆಯವರನ್ನು ಆ ಬಾವಿಯ ನೀರನ್ನು ಬಳಸುವುದಕ್ಕೆ ಬಿಡಬಾರದು. ಇಂಥ ಬಾವಿಗಳಿಗೆ ಸರ್ಕಾರದವರು ಪರ್‌ಮ್ಯಾಂಗನೇಟ್ ಆಫ್ ಪೊಟಾಸಿಯಂ ಎಂಬ ಉಪ್ಪನ್ನು ಹಾಕುವರು. ಹಾಗೆ ಮಾಡಿದರೆ ಈ ವಾಂತಿ ಭೇದಿಯ ಕ್ರಿಮಿಗಳು ನಾಶವಾಗುವುವು ನೀರು ಒಂದು ತರದ ನೀಲಿಯ ರಂಗಾಗುವುದು. ಅದನ್ನು ಕುಡಿಯುವುದರಿಂದ ಜನಗಳಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲ. ಪಾತ್ರೆಯಲ್ಲಿ ಸ್ವಲ್ಪಹೊತ್ತು ಇಟ್ಟಿದ್ದರೂ ಅಥವಾ ಕಾಯಿಸಿದರೂ ಈ ಬಣ್ಣವು ಹಾರಿಹೋಗುವುದು. ಈ ಉಪ್ಪನ್ನು ಹಾಕಿದ್ದರೂ ಕೂಡ ನೀರನ್ನು ಕಾಯಿಸಿ ಕುಡಿಯುವುದು ಬಹಳ ಉತ್ತಮ. ನೀರಿನಲ್ಲಿ ಉಪ್ಪನ್ನು ಹಾಕುವ ವಿಷಯದಲ್ಲಿ ಯಾವ ಸಂಶಯವನ್ನೂ ಪಡೆದು ಸಂತೋಷದಿಂದಲೂ ನಿರ್ಭಯದಿಂದಲೂ ನಂಬಿಕೆಯಿಂದಲೂ ಪ್ರೋತ್ಸಾಹ ಪಡಿಸಬೇಕು.

ಒಂದು ಗ್ರಾಮಕ್ಕೆ ಕೆರೆಯಿದ್ದು ಅದಕ್ಕೆ ಸೋಂಕು ತಗಲಿದ್ದೇ ಆದರೆ ಆ ಕೆರೆಯ ನೀರನ್ನು ಬಿಟ್ಟು ಕೆರೆಯಂಗಳದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಭಾವಿಗಳನ್ನು ತೋಡಿಸಿ, ಅದರಲ್ಲಿ ದ್ರವಿಸುವಂತಹ ನೀರನ್ನು ಉಪಯೋಗಿಸಬೇಕು. ಮತ್ತೂ ಸೋಂಕು ತಗಲಿದ ಮನೆಯವರಿಗೆಲ್ಲಾ ಪ್ರತ್ಯೇಕವಾದ ಒಂದು ಭಾವಿಯಿರಬೇಕು. ಈ ನೀರನ್ನು ಕಾಯಿಸಿಯೇ ಕುಡಿಯಬೇಕು. ಹರಿಯುವ ಕಾಲ್ವೆಯಾಗಿದ್ದಲ್ಲಿ, ಆ ಕಾಲ್ವೆಯ ಪಕ್ಕದಲ್ಲಿ ಅಲ್ಲಲ್ಲಿ ಸಣ್ಣಬಾವಿಗಳನ್ನು ತೋಡಬೇಕು. ಹೊಳೆಯಾಗಿದ್ದು ದಡದ ಹತ್ತಿರದಲ್ಲಿ ಮಾತ್ರ ಸ್ವಲ್ಪ ನೀರು ಹರಿಯುತ್ತಿದ್ದಲ್ಲಿ ಆ ನೀರನ್ನು ಉಪಯೋಗಿಸದೆ ಬಿಟ್ಟು, ಮರಳಿನ ಅಂಗಳದಲ್ಲಿ ಚಿಲುಮೆಗಳನ್ನು ತೆಗೆದು ಅದರಲ್ಲಿ ದ್ರವಿಸುವಂಥ ನೀರನ್ನು ಉಪಯೋಗಿಸಬೇಕು. ಇದನ್ನು ಸಹ ಕಾಯಿಸಿಯೇ ಕುಡಿಯಬೇಕು.

ವೈದ್ಯೋಪಚಾರ:— ಯಾವ ಸ್ಥಳದಲ್ಲಿಯಾಗಲಿ ನಿಷ್ಕಾರಣವಾಗಿ ವಾಂತಿಭೇದಿಯು ಆಗಿ ಮೇಲಿನ ಚಿಹ್ನೆಗಳು ತೋರಗೊಡಿದ್ದಲ್ಲಿ, ಈ ವ್ಯಾಧಿಯು ವ್ಯಾಪಿಸಿತೆಂಬದಾಗಿ ಊಹಿಸಬೇಕು. ಆ ಕೂಡಲೆ ತಕ್ಕ ಚಿಕಿತ್ಸೆಮಾಡಲು ಉಪಕ್ರಮಿಸಬೇಕು. ಆಸ್ಪತ್ರೆಯ ಡಾಕ್ಟರುಗಳು ಬಂದು ನೋಡಿ ಔಷಧಕೊಡುವುದಕ್ಕೆ ಮೊದಲೇ ಕೆಳಗೆ ಹೇಳುವಂಥ ಸುಲಭಸಾಧ್ಯವಾದ ಔಷಧವನ್ನು ಕೊಡಬೇಕು. ಅದೇನೆಂದರೆ– ಒಂದು ದೊಡ್ಡ ಈರುಳ್ಳಿಯ ಗೆಡ್ಡೆಯನ್ನು ಎರಡಾಗಿ ಸೀಳಿ ಮಧ್ಯದಲ್ಲಿನ ಮೊಳಕೆಯ ದಂಟನ್ನು ತೆಗೆದು, ಅದರ ಸ್ಥಳದಲ್ಲಿ ಒಂದು ಕಡಲೆಕಾಳಿನಗಾತ್ರ ಹಸನಾದ ಇಂಗನ್ನೂ ಮತ್ತೂ ಒಂದು ಹೆಸರುಬೇಳೆಯಷ್ಟು ಅಫೀಮನ್ನೂ ಇಟ್ಟು, ಆ ಎರಡು ಹೋಳನ್ನೂ ಒಂದಾಗಿ ಸೇರಿಸಿ, ಕಡ್ಡಿಗೆ ಪೋಣಿಸಿ, ಅದನ್ನು ಬೆಂಬೂದಿಯಲ್ಲಿ ಸುಟ್ಟು, ಮೇಲಿನ ಸಿಪ್ಪೆಯನ್ನೂ ಕಡ್ಡಿಗಳನ್ನೂ ತೆಗೆದು ಕಲ್ವತ್ತಿನಲ್ಲಿ ಅರೆದು ಮೂರು ಉಂಡೆಗಳನ್ನು ಮಾಡಿ ಇವನ್ನು ಬೆಳಿಗ್ಗೆ ಮಧ್ಯಾಹ್ನ ಮತ್ತೂ ಸಾಯಂಕಾಲಕ್ಕೆ ಒಂದೊಂದಂದರಂತೆ ತೆಗೆದುಕೊಳ್ಳಬೇಕು. ಇದರಲ್ಲಿ ವಾಂತಿಯೂ ಭೇದಿಯೂ ಎರಡೂ ನಿಲ್ಲುವುವು. ಒಂದೇ ದಿವಸದಲ್ಲಿ ವಾಂತಿಭೇದಿಯು ನಿಲ್ಲದಿದ್ದರೆ, ಮತ್ತೊಂದು ದಿವಸವೂ ಇದೇ ರೀತಿ ಮಾಡಬೇಕು. ಹೆಚ್ಚು ಬಾಯಾರಿಕೆಯಿದ್ದಲ್ಲಿ ಬೆಂಬೂದಿಯಲ್ಲಿ ಸುಟ್ಟಂಥ ಈರುಳ್ಳಿ ಗೆಡ್ಡೆಯನ್ನು ಬಾಯಲ್ಲಿಟ್ಟುಕೊಂಡು ಅಗಿಯುತ್ತಿರಬೇಕು. ಮೂತ್ರವು ಕಟ್ಟಿಹೋದರೆ ಹಸಿ ಈರುಳ್ಳಿ ಗೆಡ್ಡೆಯ ರಸವನ್ನು ಒಂದು ಒಳಲೆಯಷ್ಟು ಕುಡಿಸಬೇಕು ಇದರಮೇಲೆ ಬಟ್ಟೆಯಲ್ಲಿ ಶೋಧಿಸಿದಂಥ ಅಕ್ಕಿಯ ಗಂಜಿಗೆ ಸ್ವಲ್ಪ ಉಪ್ಪುಹಾಕಿ ಕುಡಿಸಬೇಕು ಮತ್ತೂ ಸೊಂಟಕ್ಕೆ ಬಿಳಿಯದಾಗಲಿ ಕರಿಯದಾಗಲಿ ಕಡ್ಡಿ ಬಿಡಿಸಿದ ಲಕ್ಕಿಯ ಸೊಪ್ಪನ್ನು ನೀರಿನಲ್ಲಿ ಹಾಕಿ ಬೇಯಿಸಿ ಆ ಎಲೆಯನ್ನು ಬಿಸಿಬಿಸಿಯಾಗಿ ಸೊಂಟಕ್ಕೆ ಕಟ್ಟಬೇಕು. ಇದನ್ನು ಮೂರುಗಂಟೆಗೊಂದಾವೃತ್ತಿ ಬದಲಾಯಿಸಬೇಕು.

ಪಥ್ಯ— ಗಟ್ಟಿಯ ಪದಾರ್ಥಗಳಾವುವನ್ನೂ (ರೊಟ್ಟಿ–ಅನ್ನ–ಹಿಟ್ಟು ಮೊದಲಾದುವುಗಳು) ಕೊಡಕೂಡದು. ಅಕ್ಕಿಯ ನುಚ್ಚನ್ನು ಗಂಜೀಮಾಡಿ ಆ ಗಂಜಿಯನ್ನು ಬಟ್ಟೆಯಲ್ಲಿ ಶೋಧಿಸಿ, ಆ ಶೋಧಿಸಿದ ಗಂಜಿಗೆ ಸಮಭಾಗ ಹಾಲನ್ನು ಹಾಕಿ, ಸ್ವಲ್ಪ ಸಕ್ಕರೆಯನ್ನು ಸೇರಿಸಿ ಕುಡಿಸಬೇಕು. ಮತ್ತೊಂದುವೇಳೆ ಹಾಲಿಲ್ಲದ ಬರಿಯ ಗಂಜಿಗೆ ಉಪ್ಪನ್ನು ಹಾಕಿ ಕುಡಿಸಬೇಕು. ಎಂದರೆ ಒಂದು ಸಾರಿ ಹಾಲುಗಂಜಿಯನ್ನೂ ಎರಡನೆಯಸಾರಿ ಉಪ್ಪುಹಾಕಿದ ಗಂಜಿಯನ್ನೂ ೩ ಗಂಟೆಗೊಂದಾವೃತ್ತಿ ಕುಡಿಸಬೇಕು. ರೋಗಿಗೆ ಒಂದುವಾರದ ವರೆಗೂ ಗಂಜಿಯವಿನಾ ಬೇರೆ ಆಹಾರಗಳನ್ನು ಕೊಡಕೂಡದು. ರೋಗವು ವ್ಯಾಪಿಸುತ್ತಿರುವಂಥ ಕಾಲದಲ್ಲಿ ಯಾರಿಗಾದರೂ ಒಂದಕ್ಕಿಂತಲೂ ಹೆಚ್ಚಾಗಿ ಭೇದಿಯಾದರೆ, ಈ ರೋಗವು ಆರಂಭಿಸಿತೆಂಬದಾಗಿ ತಿಳಿದು, ಕೂಡಲೇ ಚಿಕಿತ್ಸೆಯನ್ನು ನಡಿಸಬೇಕು. ಆರಂಭದಲ್ಲಿಯೇ ಹೊಟ್ಟೆಗೆ ಔಷಧವು ಬಿದ್ದುದೇ ಆದರೆ ಅಂಥವನಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲ. ಭೇದಿ ವಾಂತಿಗಳಿಗೆ ಆರಂಭವಾಗಿ ಕೈಕಾಲುಗಳು ತಣ್ಣಗಾದನಂತರ ಚಿಕಿತ್ಸೆ ನಡಿಸಿದ್ದೇ ಆದರೆ ಅಂಥವರು ಬದುಕುವುದು ದುರ್ಲಭವು.

ರೋಗವು ಊರೊಳಗೆ ತಲೆದೋರಿದ ಕೂಡಲೇ ಸೋಂಕು ತಗಲಿದ ಮನೆಯವರು ಮತ್ತೂ ಗ್ರಾಮಸ್ಥರೆಲ್ಲರೂ ಹಸಿ ಈರುಳ್ಳಿ ಗೆಡ್ಡೆಯನ್ನು ಊಟದ ಕಾಲದಲ್ಲಿ, ಆಹಾರದೊಂದಿಗೆ ಸೇವನೆಮಾಡಬೇಕು. ಮಕ್ಕಳು ಮೊದಲುಗೊಂಡು ವೃದ್ಧರು ಸಹ ಇದನ್ನು ಸೇವಿಸಬೇಕು. ಬರಿಯ ಹಸಿ ಗೆಡ್ಡೆಯನ್ನು ತಿನ್ನುವ ವಿಷಯದಲ್ಲಿ ಅಸಹ್ಯಪಡುವವರು ಗಟ್ಟಿಮೊಸರಿಗೆ (ಅಂದರೆ ಮೊಸರನ್ನು ಬಟ್ಟೆಯಲ್ಲಿ ಕಟ್ಟಿ ನೇತುಹಾಕಿದರೆ ಅದರಲ್ಲಿರುವ ನೀರೆಲ್ಲಾ ಇಳಿದುಹೋಗಿ ಬಟ್ಟೆಯಲ್ಲಿ ನಿಲ್ಲುವುದೇ ಗಟ್ಟಿ) ಇದಕ್ಕೆ ಈರುಳ್ಳಿಯನ್ನು ಸಣ್ಣದಾಗಿ ಕತ್ತರಿಸಿ, ತಕ್ಕಷ್ಟು ಉಪ್ಪನ್ನೂ ಹಸಿ ಮೆಣಸಿನಕಾಯಿಯನ್ನೂ ಕಲಸಿ ತಿಂದರೆ ರುಚಿಯಾಗಿರುವುದಲ್ಲದೆ ವಾಸನೆಯೂ ಸಹ ಕಾಣದೆ ಇರುವುದು

ಮೇಲೆಹೇಳಿದ ಮುಗುಬಾಳು ಗ್ರಾಮದಲ್ಲಿ ಹತ್ತು ಜನಕ್ಕೆ ಈ ರೋಗವು ತಗುಲಿ ಐದು ಜನರು ಮೃತಪಟ್ಟರು. ಮೇಲಿನ ಚಿಕಿತ್ಸೆಯನ್ನು ಆಚರಿಸಿದನಂತರ ತಗುಲಿದ ಎಂಟು ಜನಗಳಲ್ಲಿ ಯಾರೂ ಮೃತಪಡಲಿಲ್ಲ. ಗ್ರಾಮಸ್ಥರೆಲ್ಲರೂ ಅತಿ ಶ್ರದ್ಧೆಯಿಂದ ನೀರನ್ನು ಕಾಯಿಸಿಕೊಂಡು ಕುಡಿದುದಲ್ಲದೆ ಈರುಳ್ಳಿಯ ಗೆಡ್ಡೆಯನ್ನು ಎಲ್ಲರೂ ಸೇವನೆಮಾಡಿದುದರಿಂದ ರೋಗವು ನಿಂತುಹೋಯಿತು. ಇದನ್ನೆಲ್ಲಾ ಪ್ರತ್ಯಕ್ಷವಾಗಿ ಕಂಡವನಾದುದರಿಂದ ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಈ ರೋಗದ ದೆಸೆಯಿಂದ ವ್ಯಥೆಪಡುವಂಥವರು ಮೇಲೆ ಹೇಳಿದಂಥ ಕ್ರಮಗಳನ್ನು ಆಚರಿಸಿ ಸೌಖ್ಯವನ್ನು ಪಡೆಯಲೆಂದು ಹಾರೈಸಿ ಬರೆದಿರುತ್ತೇನೆ.

ಮುಖ್ಯವಾಗಿ ಈ ರೋಗವು ನೀರಿನ ದೆಸೆಯಿಂದ ಹರಡುವುದಾದುದರಿಂದ ರೋಗಿಯ ಬಟ್ಟೆಬರೆಗಳನ್ನು ಕುಡಿಯುವ ನೀರಿನ ಕೆರೆಯಲ್ಲಿಯಾಗಲಿ ಅಥವಾ ಹರಿಯುವ ಹೊಳೆಯಲ್ಲಿಯಾಗಲಿ ತೊಳೆಯದಂತೆ ತಂತಮ್ಮ ಮನೆಗಳಲ್ಲೇ ಒಂದು ಪಾತ್ರೆಯಲ್ಲಿ ನೀರನ್ನಿಟ್ಟು ಅದರಲ್ಲಿ ರೋಗಿಯ ಬಟ್ಟೆಯನ್ನು ಬೇಯಿಸಿ ಒಗೆದು ಒಣಗಿಸಿಕೊಳ್ಳಬೇಕು. ಇದೇ ಆ ಸ್ಥಳದವರು ಮಾಡುವ ದೊಡ್ಡ ಉಪಕಾರವಾಗುವುದು.

ಒಳದೇಶದ ವೃತ್ತಾಂತಗಳು.

ನಮ್ಮ ದಿವಾನರವರು ಕಳೆದ ಬುಧವಾರ ಮೇಲ್ ಬಂಡಿಯಲ್ಲಿ ಸಪರಿವಾರರಾಗಿ ಬೆಂಗಳೂರಿಗೆ ದಯಮಾಡಿದರು. ಈ ವಾರದಲ್ಲಿ ಮರಳಿ ಬರುವವರಾಗಿರುವರು.

ಶ್ರೀಮನ್ಮಹಾರಾಜರವರು ಯುವರಾಜರೊಡನೆ ಕಳೆದ ಸೋಮವಾರದ ದಿವಸ ನೀಲಗಿರಿಗೆ ಪ್ರಯಾಣಮಾಡಿದರು. ಅಲ್ಲಿಂದ ಬರುವ ೨೦ ನೆಯ ತಾರೀಖಿನ ದಿನ ರಾಜಧಾನಿಗೆ ದಯಮಾಡಿಸುವರೆಂದು ಕೇಳುತ್ತೇವೆ

ಕಳೆದವಾರವೆಲ್ಲಾ ರಾಜಧಾನಿಯಲ್ಲಿ ಆಗಾಗ್ಗೆ ಮೋಡ ಮುಸುಕಿರುವುದರ ಹೊರತು ಮಳೆಯಿಲ್ಲ. ಶೀತವೂ, ಬಿರುಗಾಳಿಯೂ ಹುಟ್ಟಿದೆ. ಜನರಲ್ಲಿ ಭೇದಿಗಳು, ಆಮಶಂಕೆ, ವಿಷಮಿಸುವ ಜ್ವರಗಳು ಹುಟ್ಟಿ ಪೀಡಿಸುತ್ತಿವೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರಿಟರಿಯವರಾದ ಮಿ|| ಆರ್. ಎಚ್. ಕೇಂಬಲ್ ಐ. ಸಿ. ಎಸ್. ರವರಿಗೂ, ಬೆಂಗಳೂರಿನ ರಾ|| ಬ|| ಅಣ್ಣಾಸ್ವಾಮಿಮೊದಲಿಯಾರರಿಗೂ ಸಹ ಸಿ.ಐ.ಇ, ಎಂಬ ಪ್ರಶಸ್ತಿಗಳು ದೊರೆತಿರುತ್ತವೆ

ಅಂಟುರೋಗದಿಂದ ಸತ್ತ ಪ್ರಾಣಿಗಳ ಶವವನ್ನು ಸರ್ಕಾರದ ಮಾರ್ಗದ ಪಕ್ಕಗಳಲ್ಲಿ ಬಿಸುಡದೆಯೂ ಹೂಳದೆಯೂ ಸುಟ್ಟುಬಿಡಬೇಕು. ಮಾರ್ಗಗಳ ಪಕ್ಕದಲ್ಲಿ ಅಂಥ ಪ್ರಾಣಿಗಳನ್ನು ಬಿಸುಡುವ ಅವುಗಳ ಯಜಮಾನನು ಕ್ರಿಮಿನಲ್ ಶಿಕ್ಷೆಗೆ ಗುರಿಯಾಗುವನು. ಅಂಥ ಶವವನ್ನು ಸರ್ಕಾರದವರು ಸುಡಿಸಿದರೆ ಅದರ ವೆಚ್ಚವನ್ನು ಅವುಗಳ ಯಜಮಾನರ ಮೇಲೆ ಹೊರಿಸುವರು.

ತುಮಕೂರಿನ ಡಿ|| ಕಮಿಷನರಾಗಿರುವ ಮ||ಎಂ. ಶ್ಯಾಮರಾವ್ ಎಂ. ಎ. ಯವರು ವಿದ್ಯಾಭ್ಯಾಸಶಾಖೆಯ ಅಕ್ಟಿಂಗ್ ಇನ್ಸ್‌ಪೆಕ್ಟರ್ ಜನರಲ್ಲಾಗಿ ನಿಯಮಿಸಲ್ಪಟ್ಟಿರುವರು. ಗೌರ್ನಮೆಂಟಿನ ಜನರಲ್ ಮತ್ತೂ ರೆವಿನ್ಯೂ ಸೆಕ್ರಿಟರಿಯಾಗಿದ್ದು ಸದ್ಯಃ ರಜದಮೇಲಿರುವ ಮ|| ಸಿ. ಎಸ್. ಬಾಲಸುಂದರಂ ಅಯ್ಯರ್ ಬಿ. ಎ., ಯವರು ಮತ್ತೊಂದು ಅಪ್ಪಣೆ ಕೊಡುವವರೆಗೂ ತುಮಕೂರು ಡಿಸ್ಟ್ರಿಕ್ಟಿನ ಡಿ|| ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಅಕಸ್ಮಾತ್ತು ಬೆಂಕಿಬಿದ್ದು ಮನೆಯನ್ನು ಸುಟ್ಟುಕೊಂಡವರು ಮರಳಿ ಕಟ್ಟುವುದಾದರೆ, ಅಂಥವರಿಗೆ ಬೇಕಾದ ಸಾಮಾನುಗಳು ೫೫ ರೂ. ನೊಳಗಿದ್ದರೆ, ಅದನ್ನು ಡಿಸ್ಟ್ರಿಕ್ಟ್ ಫಾರೆಸ್ಟಿನಿಂದ ಕೊಡುವ ಅಧಿಕಾರವು ಡಿ|| ಕಮಿಷನರಿಗೆ ಕೊಡಲ್ಪಟ್ಟಿದೆ. ಅಂಥ ಸಾಮಾನು ಡಿ|| ಫಾರೆಸ್ಟಿನಲ್ಲಿ ದೊರೆಯದಿರುವುದೇ ಮೊದಲಾದ ಕಾರಣದಿಂದ ಸ್ಟೇಟ್ ಫಾರೆಸ್ಟಿನಿಂದ ಕೊಡಬೇಕಾಗಿ ಬಂದರೆ, ಡಿ|| ಕಮಿಷನರು ಕನ್ಸರ್ವೇಟರ ಒಪ್ಪಿಗೆಯಿಂದ ಕೊಡಿಸಬಹುದು. ಅವರು ಒಪ್ಪದಿದ್ದರೆ ಗೌರ್ನಮೆಂಟಿಗೆ ತಿಳಿಸಬೇಕು. ಆ ಸಾಮಾನಿನ ಬೆಲೆ ೫೫ ರೂ. ಗೆ ಮೀರಿದ್ದರೂ, ಡಿ|| ಕಮಿಷನರ ಸೂಚನೆಯನ್ನು ಕನ್ಸರ್ವೇಟರು ಒಪ್ಪದೆಯಿದ್ದರೂ ಅಂಥ ಸಮಯದಲ್ಲಿ ಗೌರ್ನಮೆಂಟಿಗೆ ತಿಳುಹಿಸಿ ಪಡೆದುಕೊಳ್ಳಬೇಕು ಎಂದು ಸರ್ಕಾರದವರು ವಿಧಿಸಿರುತ್ತಾರೆ.

ವರ್ತಮಾನ ಸಂಗ್ರಹವು.

ಭರತಖಂಡದ ಹಣವು ಇಂಗ್ಲೆಂಡಿನಲ್ಲಿ ಕಳೆದ ಮಾರ್ಚಿ ತಾ|| ೩೧ ರಲ್ಲಿ ೩೦ ಕೋಟಿಯಷ್ಟಿದ್ದಿತು.

ಕಳೆದ ತಾ|| ೧೦ ರಲ್ಲಿ ಕಲಕತ್ತಾದಲ್ಲಿ ಬಿರುಗಾಳಿ ಬೀಸಿ ಬಹುಮಂದಿ ಸತ್ತರೆಂದೂ, ಕೆಲ ಸೊತ್ತುಗಳು ನಷ್ಟವಾದುವೆಂದೂ ಪ್ರಕಟವಾಗಿದೆ.

ಶ್ರೀರಂಗದಲ್ಲಿ ಬಹುಕಾಲದಿಂದ ನಡೆಯುತ್ತಿದ್ದ ತೆಂಗಲೆ ವಡಗಲೆಯವರ ಕಲಹವು ಮುಕ್ತಾಯವಾಗಿ ವಡಗಲೆಯವರು ಅಲ್ಲಿನ ಉತ್ತರ ಚಿತ್ರವೀಧಿಯಲ್ಲಿ ಪ್ರಬಂಧ ವೇದಪಾರಾಯಣಗಳೊಡನೆ ಅವರ ವೇದಾಂತದೇಶಿಕರ ಉತ್ಸವವನ್ನು ಮಾಡಿಕೊಂಡರು.

ನಮ್ಮ ಚಕ್ರವರ್ತಿಗಳ ಮುಖಭಾವವುಳ್ಳ ೩ ಕಾಸಿನ ಪೋಸ್ಟು ಸ್ಟಾಂಪುಗಳೂ, ೨|| ಆಣೆ ಬೆಲೆಯ ರಿಜಿಸ್ಟ್ರೇಷನ್ ಕವರುಗಳೂ ಸಹ ಜುಲೈತಿಂಗಳಾರಂಭದಿಂದ ವ್ಯವಹಾರಕ್ಕೆ ಬರುವುವು. ಈ ಕವರುಗಳ ಮೇಲೆ ಪ್ರತ್ಯೇಕವಾಗಿ ೩ ಕಾಸಿನ ತಲೆ ಚೀಟಿಯನ್ನಂಟಿಸಬೇಕಾದುದಿಲ್ಲ.

ಬರುವ ಸೆಪ್ಟೆಂಬರ್ ತಿಂಗಳಲ್ಲಿ ಲಂಡನ್ನಿನಿಂದ ಭರತಖಂಡಕ್ಕೆ ಆಕಾಶವಿಮಾನದಲ್ಲಿ ಕುಳಿತು ಬರುವುದಕ್ಕೆ ಮೂವರು ಆಂಗ್ಲರು ಪ್ರಯತ್ನಿಸುತ್ತಿದ್ದಾರೆ. ಅಲ್ಲಿಂದಿಲ್ಲಿಗೆ ೬೦೦೦ ಮೈಲಿಗಳಾಗುವುವು. ಮಧ್ಯಮಧ್ಯೆ ಪಟ್ಟಣಗಳಲ್ಲಿಳಿದು ಬೇಕಾದ ಎಣ್ಣೆಯನ್ನೂ ಆಹಾರ್ಯವಸ್ತುಗಳನ್ನೂ ತುಂಬಿಕೊಳ್ಳುವರು

ಚಕ್ರವರ್ತಿಯವರನ್ನಾಗಲಿ, ಅವರ ಪ್ರತಿನಿಧಿಗಳಾದ ವೈಸ್ರಾಯರು ಮೊದಲಾದವರನ್ನಾಗಲಿ ಭರತಖಂಡದ ಪ್ರಭುಗಳು ದರ್ಶನಮಾಡುವಾಗ, ಯಾರು ಮುಂದು? ಯಾರು ಹಿಂದು? ಎಂಬುದನ್ನು ನಿರ್ಧರವಾಗಿ ತಿಳಿಯುವುದಕ್ಕಾಗಿ ಇಂಡ್ಯಾ ಗೌರ್ನಮೆಂಟಿನವರು ಚಕ್ರವರ್ತಿಯವರ ಬಳಿಗೆ ಒಂದು ಪಟ್ಟಿಯನ್ನು ಕಳುಹಿಸಿದ್ದಾರೆ.

ಲಂಡನ್ ಪಟ್ಟಣದ ಸುತ್ತಲೂ ಆಕಾಶವಿಮಾನಗಳನ್ನು ಜೂಜಿನಿಂದ ಓಡಿಸುವ ಏರ್ಪಾಟನ್ನು ಅಲ್ಲಿನ ಡೇಲಿಮೇಲ್ ಎಂಬ ಪತ್ರಿಕೆಯ ಕರ್ತರು ಏರ್ಪಡಿಸಿದ್ದರು. ಹಾಮೆಲ್ ಎಂಬುವನು ತನ್ನ ವಿಮಾನದಲ್ಲಿ ಕುಳಿತು ಲಂಡನ್ನಿನ ಸುತ್ತಲೂ ಆಗುವ ೮೧ ಮೈಲಿಗಳ ದೂರವನ್ನು ೧೧೦ ನಿಮಿಷಗಳಲ್ಲಿ ಸುತ್ತಿಕೊಂಡು ಬಂದು ಪಂಥವನ್ನು ಗೆದ್ದನು.

ಇಟಲಿಯವರು ಬಹುಕಾಲದಿಂದಿದ್ದು ಈಗ ತ್ರಿಪೋಲಿಯಲ್ಲಿ ಮತ್ತೆ ಯುದ್ಧಕ್ಕಾರಂಭಿಸಿದ್ದಾರೆ. ೧೮ ಪಟಾಲಂ ಕಾಲ್ಬಲವೂ, ೧ ಪಟಾಲಂ ಕುದುರೆಯ ಸೇನೆಯೂ ಜಂಜಾರು ಎಂಬ ನೀರಾವರಿ ತೋಟದ ಭೂಮಿಗಳನ್ನು ಆಕ್ರಮಿಸಿಕೊಂಡಿವೆ. ಅಲ್ಲಿದ್ದ ತುರುಕರೆಲ್ಲಾ ಓಡಿಹೋದರು. ತುಷ್ಕರ ಕಡೆ ಸಾವಿರಾರುಮಂದಿಗಳು ಸತ್ತರೆಂದೂ, ಇಟಲಿಯವರಿಗಾದ ನಷ್ಟವು ಸ್ವಲ್ಪವೇ ಎಂದೂ ಪ್ರಕಟವಾಗಿದೆ.

ವಿಶಾಖಪಟ್ಟಣದಿಂದ ಬೆಂಗಳೂರಿಗೆ ಬರುತ್ತಿದ್ದ ಒಬ್ಬ ಹೆಂಗುಸು ಕಳೆದ ತಾ|| ೪ ರಲ್ಲಿ ಹಿಂದೂಪುರಂ ನಿಲ್ದಾಣದಲ್ಲಿ ಹೊಟ್ಟೆನೋವು ಹುಟ್ಟಿ ಒಂದು ಹೆಣ್ಣು ಮಗುವನ್ನು ಹೆತ್ತಳು ಕೂಡಲೆ ವೈದ್ಯಶಾಲೆಗೆ ಸಾಗಿಸಲು, ೨ ಗಂಟೆಗಳನಂತರ ಇನ್ನೊಂದು ಶಿಶುವನ್ನು ಹೆತ್ತಳು. ಇನ್ನು ಕಾಲುಗಂಟೆಯೊಳಗೆ ಇನ್ನಿಬ್ಬರು ಮಕ್ಕಳನ್ನು ಹೆತ್ತಳು. ಎಲ್ಲಮಕ್ಕಳೂ ಹೆಣ್ಣೇ. ಈಗ ಮೊದಲಮಗುವು ಮಾತ್ರ ಬದುಕಿದೆ. ಉಳಿದುವು ಸತ್ತುವು ಬಾಣಂತಿಯು ಆರೋಗ್ಯವಾಗಿದ್ದಾಳೆ.

ನಾರ್ವೆ ದೇಶಸ್ಥನೊಬ್ಬನಿಗೆ ೧೧|| ಅಡಿಗಳುದ್ದದ ಗಡ್ಡವಿರುವುದಂತೆ, ಅವನು ಅದನ್ನು ೩೩ ವರ್ಷಗಳಿಂದ ಬೆಳೆಸಿಕೊಂಡಿರುವನು. ಅದು ತನ್ನ ಎದೆಯಮೇಲೆ ಕವಚದಂತೆ ಇದ್ದು ಚಳಿಗಾಲದಲ್ಲಿ ತುಂಬಾ ಸಹಾಯಮಾಡುವುದೆಂದು ಹೇಳುತ್ತಿರುವನಂತೆ. ಮತ್ತೊಬ್ಬ ಎಚ್. ಜಿ. ಬ್ರಿಲ್ಲೆ ಯೆಂಬವನಿಗೆ ೫ ಅಡಿ ೪ ಅಂಗುಲದುದ್ದದ ಗಡ್ಡವಿರುವುದು. ಅದನ್ನು ಅತನು ಪ್ರದರ್ಶನಮಾಡುತ್ತ ಸುಲಭವಾಗಿ ದುಡ್ಡನ್ನು ಸಂಪಾದಿಸಿ ಜೀವಿಸುತ್ತಿರುವನು.

ಪತ್ರವ್ಯವಹಾರವು.

ಅಣ್ಣಿಗೇರಿ

ತಾ॥ ೩-೬-೧೦ ನೆಯ ದಿನ ಸಾಯಂಕಾಲ ೪ ಗಂಟೆಗೆ ಅಣ್ಣಿಗೇರಿ ನಿವಾಸಿಗಳೊಂದು ಮಹಾಸಭೆಯು ಈ ಗ್ರಾಮದ ಕನ್ನಡ ಶಾಲೆಯಲ್ಲಿ ನಮ್ಮ ಪರಮಧರ್ಮಿಷ್ಠರೂ ಪರಮಪ್ರಿಯರೂ ಆದ ಚಕ್ರವರ್ತಿ ಪಂಚಮ ಜಾರ್ಜ್ ಸಾರ್ವಭೌಮರವರ ಜನ್ಮ ದಿವಸದ ಸಂತೋಷವಾಗಿ ತಮಗುಂಟಾದ ಆನಂದವನ್ನೂ ಪ್ರೀತಿಯನ್ನೂ ವ್ಯಕ್ತಪಡಿಸಲು, ಮ॥ ರಾ॥ ಶೇಷಗಿರಿ ರಾವ ಮುತಾಲಿಕ ದೇಸಾಯಿ ವಿಲೇಜ ಮುನಸಿಫ ತಾ॥ ಲೋ॥ ಬೋ॥ ಮೆಂಬರ ಇವರ ಅಧ್ಯಕ್ಷತೆಯ ಕೆಳಗೆ ನೆರೆದಿತ್ತು. ಮ॥ ರಾ॥ ರಾ॥ ರಾಘವೇಂದ್ರರಾವ ಇನಾಮತಿ ಕಸ್ಬಿಲಕೋಟರ ಇವರು ಈ ಕೆಳಗಣ ಅರ್ಥದ ಠರಾವನ್ನು ಸಭೆಯ ಮುಂದಿರಿಸಿದರು. ಪರಮಧರ್ಮಿಷ್ಠರೂ ಪರಮಪ್ರಿಯರೂ ಆದ ಚಕ್ರವರ್ತಿ ಪಂಚಮ ಜಾರ್ಜ್ ರವರ ೪೫ ನೆಯ ವರ್ಧಂತಿಯು ಅತ್ಯಂತ ಶುಭಪ್ರಸಂಗಕ್ಕಾಗಿ ಈ ಸಭೆಯವರಿಗೆ ಉಂಟಾಗಿರುವ ಅಂತಃಕರಣ ಪೂರ್ವಕವಾದ ಪ್ರೀತಿಯನ್ನೂ ವಿಶ್ವಾಸವನ್ನೂ ಆನಂದವನ್ನೂ ಮಹಾಭಕ್ತಿ ಪೂರ್ವಕವಾಗಿ ವ್ಯಕ್ತಪಡಿಸುವರು. ಮತ್ತೂ ಪರಮಧರ್ಮಿಷ್ಠರೂ ಪರಮಪ್ರಿಯರೂ ಆದ ಚಕ್ರವರ್ತಿ ಪಂಚಮ ಜಾರ್ಜ್ ರವರಿಗೂ ಚಕ್ರವರ್ತಿನಿ ಮೇರಿ ಮಾತೆಯರಿಗೂ ಸಮಸ್ತ ರಾಜಕುಟುಂಬದವರಿಗೂ ಜಗನ್ನಿಯಾಮಕನು ಆಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂತಲೂ ಅವನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. ಇದಕ್ಕೆ ರಾ॥ ರಾ॥ ಮುದಿಯಪ್ಪ ಮುಂಡಾರ ಹೆಡ್ ಮಾಸ್ತರ ಇವರು ಅನುಮೋದನವನ್ನು ಕೊಟ್ಟರು. ಸರ್ವಾನುಮತಿಯಿಂದ ಈ ಠರಾವು ಪಾಸಾಯಿತು. ಈ ಸಭೆಯನ್ನು ನೆರೆಯಿಸುವುದಕ್ಕಾಗಿ ಮ॥ ರಾ॥ ರಾ॥ ರಾಘವೇಂದ್ರರಾವ ಇನಾಮತಿ ಜಮೀನ್ದಾರ ಇವರು ಪರಿಶ್ರಮಪಟ್ಟರು.

ಎ. ಆರ್. ಗಲಗಲಿ.

ಶಿರಾಳಕೊಪ್ಪದ ತಾ॥ ಬ್ರಾಂಚ್ ಸ್ಕೂಲು.

(ಎಂಪೈರ್ ಡೆ ಉತ್ಸವ)

ಪ್ರಾತಃಕಾಲದಲ್ಲಿ ಸ್ಕೂಲಿನ ಬಾಲಕರೂ ಬಾಲಕಿಯರೂ ಸ್ಕೂಲಿನ ಪಾರ್ಶ್ವದಲ್ಲಿರುವ ಮೈದಾನದಲ್ಲಿ ಸೇರಿದರು. ನಂತರ ಇಲ್ಲಿನ ಸಬ್ ಅ॥ ಸರ್ಜನರವರು ಶ್ರೀನಿವಾಸರಾಯರು ಜಮಾದಾರರು ಪುರಪ್ರಮುಖರು ಇವರುಗಳೆಲ್ಲ ಸೇರಿದರು. ಓಲಗವು ನಡೆಯುತ್ತಿರಲು ಮೇಲಿನ ತರಗತಿಯ ಬಾಲಕರಿಂದ 'ಯೂನಿಯನ್ ಜಾಕ್' ಏರಿಸಲ್ಪಟ್ಟಿತು. ನಂತರ ಬಾಲಕ ಬಾಲಕಿಯರೂ ಪೊಲೀಸಿನವರೂ ನೆರೆದ ಜನರೂ ಅದಕ್ಕೆ ಸೆಲ್ಯೂಟ್ ಮಾಡಿದರು. ಚಕ್ರವರ್ತಿಗಳ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳು ಬಾಲಕ ಬಾಲಕಿಯರಿಂದ ಹೇಳಲ್ಪಟ್ಟವು. ಇಷ್ಟೆಲ್ಲಾ ನಡೆಯುವಾಗ ೧೦ ಗಂಟೆಯಾಗಲು ಸ್ಕೂಲ್ ಕಟ್ಟಡದೊಳಕ್ಕೆ ಬಾಲಕ ಬಾಲಕಿಯರೂ ಜನರೂ ಸೇರಿಸಲ್ಪಟ್ಟರು. ಆಗ ಹೊತ್ತು ಬಹಳವಾದುದರಿಂದ ಬಾಲಕ ಬಾಲಿಕೆಯರಿಂದ ಮೈಸೂರು ಶ್ರೀಮನ್ ಮಹಾರಾಜರವರ ಮತ್ತೂ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಯ ಹಾಡು ಹೇಳಿಸಲ್ಪಟ್ಟು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯವಾಗಿಯೂ ಭಗವದ್ಭಕ್ತಿಯ ವಿಷಯವಾಗಿಯೂ ಮಧ್ಯಾಹ್ನದಲ್ಲಿ ಉಪನ್ಯಾಸಗಳು ನಡೆಯುವವೆಂತಲೂ ಮಧ್ಯಾಹ್ನದ ಸಭೆಗೆ ಸಬ್ ಅ॥ ಸರ್ಜನರವರು ಶ್ರೀನಿವಾಸರಾಯರು ಅಧ್ಯಕ್ಷರಾಗಬೇಕೆಂತಲೂ ಹೆಡ್ಮಾಸ್ಟರರು ಕೋರಿಕೊಂಡ ಪ್ರಕಾರ ಸರ್ವ ಸಭಿಕರೂ ಕರತಾಡನಗಳಿಂದ ಸಮ್ಮತಿಯನ್ನು ಕೊಟ್ಟರು.

ಮಧ್ಯಾಹ್ನ ೪ ಗಂಟೆಯಿಂದ ಸ್ಕೂಲ್ ಬಾಲಕರಿಗೆ ವಿನೋದಕರಗಳಾದ ಆಟಗಳನ್ನಾಡಿಸಿ ಇನಾಮುಗಳು ಅಧ್ಯಕ್ಷರವರಿಂದ ಹಂಚಲ್ಪಟ್ಟವು. ಆಮೇಲೆ ತೋರಣಾದಿಗಳಿಂದಲೂ ಕದಳೀ ವೃಕ್ಷಗಳಿಂದಲೂ ಸಹಜವಾಗಿ ಮುಂಭಾಗದಲ್ಲಿರುವ ಚಿಕ್ಕ ಉಪವನದಿಂದಲೂ ಅಲಂಕೃತವಾಗಿದ್ದ ಸ್ಕೂಲ್ ಕಟ್ಟಡದೊಳಕ್ಕೆ ಬಾಲಕ ಬಾಲಕಿಯರೂ ಪುರಪ್ರಮುಖರೂ ಸೇರಿದರು. ಆಗ ಸ್ಕೂಲ್ ಮಾಸ್ಟರಾದ ಸಂಗೀತದ ಶಿವಮೂರ್ತಿ ಗದ್ದಿಗೆಯ್ಯನವರು ಈ ದಿನ ಸಭೆಗೆ ಸಬ್ ಅ॥ ಸರ್ಜನರವರು ಅಧ್ಯಕ್ಷರಾಗಬೇಕೆಂದು ಕೋರಿದುದನ್ನು ಅ॥ ಮಾಸ್ಟರ್ ಶೇಷಗಿರಿರಾಯರು ಅನುಮೋದಿಸಿದ ಪ್ರಕಾರ ಸರ್ವರೂ ಒಪ್ಪಲು, ಸ॥ ಅ॥ ಸ॥ ಮ॥ ರಾ॥ ಶ್ರೀನಿವಾಸರಾಯರು ಅಧ್ಯಕ್ಷರಾದರು. ನಂತರ ಅ॥ ಮಾ॥ ಶೇಷಗಿರಿರಾಯರು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯವಾಗಿಯೂ ಅದರಿಂದುಂಟಾದ ಫಲಗಳ ವಿಷಯವಾಗಿಯೂ ಪ್ರತಿಯೊಬ್ಬ ಪ್ರಜೆಯೂ ತೋರಿಸಬೇಕಾದ ರಾಜನಿಷ್ಠೆಯ ವಿಷಯವಾಗಿಯೂ ಉಪನ್ಯಾಸಮಾಡಿದರು. ಡಿಪ್ಪೋ ಕಮಿಷನ್ ಏಜಂಟರು ಮ॥ ರಾ॥ ಚಕ್ರಪಾಣಿರಾಯರು ಚಿತ್ತಸ್ಥೈರ್ಯ—ಮನೋವಿಕಾರದಿಂದಾಗುವ ಕೇಡು—ಚಿತ್ತಸ್ಥೈರ್ಯದಿಂದುಂಟಾಗುವ ಭಕ್ತಿ—ಆ ಭಕ್ತಿಯ ದಶವಿಧಗಳು—ಮನುಷ್ಯನಿಗೆ ಕೋಪ ಮೊದಲಾದವುಗಳಿಂದ ಮನಸ್ಸಿನಲ್ಲಿ ಆಗುವ ಬಣ್ಣಗಳ ಬದಲಾವಣೆ—ಇವುಗಳನ್ನು ವಿಶದೀಕರಿಸಿ, ಒಂದು ಸರಸವಾದ ಉಪನ್ಯಾಸಮಾಡಿದರು ನಂತರ ಹೆಡ್ಮಾಸ್ಟರು ಇಂಗ್ಲೀಷರ ರಾಜ್ಯಭಾರದಿಂದುಂಟಾದ ಶಾಂತತೆ ಎಂಬ ಒಂದು ದೊಡ್ಡ ಗುಣದಿಂದ ಆಗಿರುವ ಅಪಾರವಾದ ಫಲಗಳನ್ನು ವಿವರಿಸಿ, ಈ ರಾಜ್ಯಭಾರವೇ ಶಾಶ್ವತವಾಗಿರಲೆಂದು ಜನಗಳ ಮನಸ್ಸಿನಲ್ಲಿ ಬಿಂಬಿಸುವಂತೆ ಉಪನ್ಯಾಸ ಮಾಡಿದುದಲ್ಲದೆ, ಭಕ್ತಿಯನ್ನು ಹೃದಯದಲ್ಲಿ ಇರಿಸುವ ಆವಶ್ಯಕತೆಯನ್ನೂ ಭಕ್ತಿಯಿಂದುಂಟಾಗುವ ಫಲಗಳನ್ನೂ ವಿವರಿಸಿದರು. ನಂತರ ಅಧ್ಯಕ್ಷರವರು ಈಗಿನ ರಾಜ್ಯಭಾರದಿಂದ ವಿಶೇಷವಾದ ಅನುಕೂಲಗಳು ಪ್ರಜೆಗಳಿಗೆ ಉಂಟಾಗಿರುವುದರಿಂದ ಇಲ್ಲಿ ಎತ್ತರವಾದ ಪೀಠದಲ್ಲಿ ಅಲಂಕರಿಸಲ್ಪಟ್ಟಿರುವ ಚಕ್ರವರ್ತಿ ಸಾರ್ವಭೌಮರವರ ಮತ್ತೂ ಶ್ರೀಮನ್ ಮಹಾರಾಜರವರ ಛಾಯಾಚಿತ್ರಗಳನ್ನು ಸರ್ವರೂ ನೋಡಿ ಆನಂದಿಸುವುದಲ್ಲದೆ ವರ್ಷದಲ್ಲಿ ಬರುವ ಈ ದಿನ ರಾಜನಿಷ್ಠೆಯನ್ನು ತೋರಿಸುವುದಕ್ಕಾಗಿ ಈರೀತಿ ಒಂದುಕಡೆ ಸೇರಿ ಶ್ರೇಯಃಪ್ರಾರ್ಥನೆಮಾಡುವುದು ಯುಕ್ತವಾದುದೆಂದು ಬೋಧಿಸಿದರು. ನಂತರ ಜಗಲೂರು ಸ್ಕೂಲಿನ ಒಬ್ಬ ವಿದ್ಯಾರ್ಥಿಯಿಂದ "ಗಾಡ್ ಸೇವ್ ದಿ ಕಿಂಗ್" ಎಂಬ ಇಂಗ್ಲಿಷ್ ಶ್ರೇಯಃಪ್ರಾರ್ಥನೆಯು ಹೇಳಲ್ಪಟ್ಟಿತು. ನಂತರ ಬಾಲಕಿಯರು ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯ ಹಾಡುಗಳನ್ನು ಹೇಳಿದಮೇಲೆ ಸರ್ವಜನರೂ ಎದ್ದುನಿಂತು ಚಕ್ರವರ್ತಿ ಸಾರ್ವಭೌಮರವರಿಗೆ ಆರೋಗ್ಯವೂ ವಿಜಯವೂ ಉಂಟಾಗಿ, ಚಿರಕಾಲ ಬಾಳಲಿ ಎಂದು ತ್ರಿವಾರ ಜಯಘೋಷವನ್ನು ಮಾಡಿದರು. ಕೊನೆಯಲ್ಲಿ ಬಹು ಸಂತೋಷದ ಚಪ್ಪಾಳೆಗಳು ಬಡಿಯಲ್ಪಟ್ಟವು. ನಂತರ ನೆರೆದಿದ್ದ ಸಭಿಕರಿಗೆ ಗಂಧ ತಾಂಬೂಲ ಸಕ್ಕರೆಯೂ ಬಾಲಕ ಬಾಲಿಕೆಯರುಗಳಿಗೆ ಸಕ್ಕರೆಯ ಪೊಟ್ಟಣಗಳೂ ಹಂಚಲ್ಪಟ್ಟು ಮುಂಗಡೆ ವಾದ್ಯವಾಗುತ್ತಿರಲು ಉತ್ಸವವು ಕೊನೆಯನ್ನು ಹೊಂದಿತು.

ಪ್ರೇಕ್ಷಕ.

ಶಿವಕೀರ್ತನೆ.

ಬೆಂಗಳೂರು ವೀರಶೈವ ಮಹಾಜನರು ಇದೇ ಮೇ ತಿಂಗಳು ೨೬ ನೆ ತಾ॥ ಗುರುವಾರ ರಾತ್ರಿ ೭ ಗಂಟೆಯಿಂದ ೧೧॥ ಗಂಟೆವರೆಗೆ ಶ್ರೀ ಕರಿಸಿದ್ದೇಶ್ವರ ಮಠದಲ್ಲಿ "ಗಿರಿಜಾಕಲ್ಯಾಣ" ವೆಂಬ ಶಿವಕೀರ್ತನೆಯನ್ನು ವೇ॥ ಹೊಳಲೂರು ಮಠದ ಚನ್ನಯ್ಯಶಾಸ್ತ್ರಿಗಳಿಂದ ನಡೆಯಿಸಿದರು. ಸದರಿ ಶಾಸ್ತ್ರಿಗಳು ಈ ಕೀರ್ತನೆಯನ್ನು ಅತಿ ವಿನೋದವಾಗಿಯೂ ಅತಿ ರಸಿಕವಾಗಿಯೂ, ಅತಿ ಗಂಭೀರವಾಗಿಯೂ ಮಾಡಿದರು. ಇವರ ಕಥೆಯಲ್ಲಿ ವಿಶೇಷವಾಗಿ ಭಕ್ತಿರಸವೆಂಬುದೇ ತುಂಬಿ ಮುಕ್ತಿಮಾರ್ಗವನ್ನು ತೋರಿಸುವುದಾಗಿದ್ದಿತು. ಶ್ರೀ ಹಾನಗಲ್ ಶ್ರೀ॥ ಶ್ರೀ॥ ಕುಮಾರ ಮಹಾಸ್ವಾಮಿಗಳವರಿಂದ ಸದರಿ ಶಾಸ್ತ್ರಿಗಳ ವಿಷಯವಾಗಿ ಬಂದ ಆಶೀರ್ವಾದ ಪತ್ರದ ಸಾರಾಂಶವನ್ನು ಮ॥ ಎಚ್. ಕೆ. ವೀರಬಸವಯ್ಯನವರು ಹೇಳಿದುದಲ್ಲದೆ ಸಭಿಕರಿಗೆ ಶಿವಕೀರ್ತನೆಯಿಂದ ಲಭಿಸುವ ಫಲಗಳನ್ನು ಅತಿ ವಿಜೃಂಭಣೆಯಿಂದ ಉಪನ್ಯಾಸಿಸಿದರು. ಸತ್ಕಥಾಶ್ರವಣಕ್ಕೆ ಆಗಮಿಸಿದ್ದ ಮಹಾಜನರು ಸದರಿ ಚನ್ನಯ್ಯಶಾಸ್ತ್ರಿಗಳವರಿಗೆ ಶಿವಕೀರ್ತನೆಯಿಂದ ಅತ್ಯಾನಂದಭರಿತರಾಗಿ ಬಹುಮಾನವನ್ನು ಅತ್ಯಾದರದಿಂದ ದಯಪಾಲಿಸಿದರು. ಇವರ ಶಿವಕೀರ್ತನೆಯ ವಿಷಯದಲ್ಲಿ ಉಳಿದ ಸ್ಥಳಗಳವರೂ ಪ್ರೋತ್ಸಾಹಕೊಟ್ಟು, ಶ್ರವಣಾನಂದಭರಿತರಾಗದೆ ಇರಲಾರರೆಂದು ನಂಬಿಗೆಯಿದೆ.

ಅಭಿಮಾನಿ.

ಹೆಗ್ಗಡದೇವನಕೋಟೆ ತಾ॥ ಚಿನ್ನಹಳ್ಳಿ.

ಇಲ್ಲಿನ ಮಠದ ವೇ॥ ಆರ್. ಕುಮಾರಾರಾಧ್ಯರು ತಾ॥ ೨೮-೪-೯೧೦ ನೆ ದಿವಸ ಈ ಗ್ರಾಮದ ಪಟೇಲ್ ಬಸಪ್ಪನವರು ಮುಂತಾದ ವೀರಶೈವರೆಲ್ಲರನ್ನೂ ಬರಮಾಡಿ ಸಭೆಸೇರಿಸಿಕೊಂಡು ನಮ್ಮ ವೀರಶೈವ ಮತದ ತತ್ವವನ್ನು ಸರ್ವರಿಗೂ ತಿಳಿಯುವಹಾಗೆ ಬೋಧಿಸಿದುದಲ್ಲದೆ, ಮೈಸೂರು ಸಂಸ್ಥಾನದ ವೀರಶೈವರಿಂದ ಹೊರಡುತ್ತ ಕರ್ನಾಟಕ ದೇಶದ ಎಲ್ಲ ಭಾಗದಲ್ಲೂ ಹಬ್ಬಿ ವೀರಶೈವರಲ್ಲಿರುವ ನ್ಯೂನಾತಿರೇಕಗಳನ್ನು ಸರಿಪಡಿಸಿ ತಾನೂ ಪ್ರಸಿದ್ಧಿ ಹೊಂದುತ್ತಿರುವ ಸ್ಟಾರ್ ಪತ್ರಿಕೆಯ ವಿಷಯವನ್ನು ಸಹ ತಿಳಿಯಿಸಿ, ಈ ಸ್ಟಾರ್ ಪತ್ರಿಕೆಯು ಸ್ಥಿರಜೀವಿತೆಗೆ ಕೈಲಾದಮಟ್ಟಿಗೂ ಸರ್ವರೂ ದ್ರವ್ಯಸಹಾಯಮಾಡಬೇಕೆಂದು ಹೇಳಿದುದಲ್ಲದೆ, ನಮ್ಮ ಗ್ರಾಮದಲ್ಲಿ ವರ್ಷಂಪ್ರತಿವರ್ಷವೂ "ಶಿವೋತ್ಸವವನ್ನೂ, ಶಿವಕೀರ್ತನೆಯನ್ನೂ ವೀರಶೈವರು ತಪ್ಪದೆ ನಡೆಸುತ್ತಿರಬೇಕೆಂದು ಕಟ್ಟಪ್ಪಣೆಮಾಡಲು, ಅದಕ್ಕೆ ಸರ್ವರೂ ಒಪ್ಪಿ ತಾ॥ ೨೦-೫-೧೦ ನೆ ಶುಕ್ರವಾರವೇ ಪ್ರಥಮತಃ ಶಿವಸಂಬಂಧವಾದ ಭಾವಚಿತ್ರಪಟಗಳನ್ನಿಟ್ಟು ಅಲಂಕರಿಸಿ, (ಪಿಟೀಲ್, ತಬಲ, ತಂಬೂರಿ, ಹಾರ್ಮೋನಿಯಂ ಸಹಿತ) ಸಂಗೀತವನ್ನೂ, ಶಿವಕೀರ್ತನೆ ಶ್ರವಣವನ್ನೂ ನಡೆಯಿಸಿಕೊಂಡು ಗ್ರಾಮದಲ್ಲೆಲ್ಲಾ ಅತಿ ವಿಜೃಂಭಣೆಯಿಂದ ಉತ್ಸವಮಾಡಿಸಿಕೊಂಡು ಮಂಗಳಾರತಿಯಾಗುವುದಕ್ಕೆ ೫ ಗಂಟೆಯಾಯಿತು. ನಂತರ ಸುತ್ತಮುತ್ತಣ ಗ್ರಾಮಾಂತರಗಳಿಂದ ನೆರೆದಿದ್ದ ಸಭೆಯವರೂ ಗ್ರಾಮಸ್ಥರಾದ ಬ್ರಾಹ್ಮಣರೂ ಇತರ ವರ್ಣಾಶ್ರಮದ ಸರ್ವರೂ ಸಹ "ಜಯ ನಮಃ ಪಾರ್ವತೀಪತೇ ಹರಹರಮಹಾದೇವ" ಎಂಬ ಜಯಘೋಷವನ್ನು ಮಾಡಿ, ಕೊಬ್ಬರಿ ಸಕ್ಕರೆ ಗಂಧಪುಷ್ಪತಾಂಬೂಲಗಳು ಹಂಚಲ್ಪಟ್ಟು ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಜಿ. ಸಣ್ಣಪ್ಪ.

ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯ.

ಕಿರಿಕೊಡಲಿ ಮಠದ ಬೆಳಾರಹಳ್ಳಿ ಪಟೇಲ್ ಬಸವಣ್ಣಯ್ಯನವರಿಗೆ, ಆಲೂರು ಸಬ್ ತಾ॥ ಕೆಡಗಾಲದ ಮಠದ ನಂಜಯ್ಯನವರ ಪುತ್ರಿ ಪ॥ ಕು॥ ಶೋಭಿತೆಯಾದ ಸಿದ್ದಮ್ಮನನ್ನು ತಂದು ಪಾಣಿಗ್ರಹಣ ಮಹೋತ್ಸವವನ್ನು ಕಳೆದ ಏಪ್ರೀಲ್ ತಾ॥ ೨೦ ರಲ್ಲು ಸದರಿ ಬಸವಣ್ಣಯ್ಯನವರು ಸ್ವಗೃಹದಲ್ಲಿ ನಡೆಯಿಸಿದುದರಿಂದ ಆ ಮಹೋತ್ಸವಕ್ಕೆ ದಯಮಾಡಿದ್ದ ಕೊಡಲಿ ಕಲ್ಲುಮಠದ ವಿರಕ್ತರು ಸೋಮಶೇಖರಸ್ವಾಮಿಗಳು ಶಿಡಿಗಳಲೆ ಮಠದ ಪಟ್ಟದ ಚನ್ನಬಸಪ್ಪಸ್ವಾಮಿಗಳು, ಕಡುವಿನ ಹೊಸಳ್ಳಿ ಮಠದ ಮ॥ ರಾ॥ ಚನ್ನಬಸಪ್ಪನವರು, ನಾಗವರದ ಮಠದ ಪ॥ ಶಾಂತಮಲ್ಲಯ್ಯನವರು, ಕೆರೆಹಳ್ಳಿ ಮಾಜಿ ಶ್ಯಾನುಭೋಗರು ವೀರಪ್ಪನವರು ಮೊದಲಾದವರು ವಿವಾಹಮಂಟಪದ ಚಪ್ಪರದಲ್ಲಿ ಸಭೆಯನ್ನು ಅಲಂಕರಿಸಿರಲು ಅಲ್ಲಿ ವರರಾದ ಪ॥ ಬಸವಣ್ಣಯ್ಯನವರು ವಿದ್ಯಾಭಿವೃದ್ಧಿ ಫಂಡಿಗೆ ಧನಸಹಾಯ ಮಾಡಬೇಕೆಂದು ಸೂಚಿಸಿದುದಕ್ಕೆ ಸರ್ವರೂ ಸಮ್ಮತಿಪಟ್ಟು ಸದರಿ ಫಂಡಿನ ಸೆಕ್ರಟರಿಯವರಿಗೆ ಕಳುಹಿಸುವುದಕ್ಕಾಗಿ ವಧೂವರರಿಂದ ೩ ರೂ॥ ವಸೂಲ್ಮಾಡಿ ಬಸವಣ್ಣಯ್ಯನವರಿಗೆ ಕೊಟ್ಟು ಗಂಧತಾಂಬೂಲ ಪನ್ನೀರು ಫಲಪುಷ್ಪ ಹಾರಗಳಿಂದ ಸಂತೈಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಕೊಡಲಿ ಊರು ಶಾಂತಮಲ್ಲೇಗೌಡರ ಪುತ್ರರು ಪ॥ ಬಸಪ್ಪಗೌಡರಿಗೆ ಮಂಜರಾಬಾದ್ ತಾ॥ ಹೊಸಕೊಪ್ಪೆ ಹೋಬಳಿ ಅಬ್ಬದ ಮಲ್ಲೇಗೌಡರ ಪುತ್ರಿ ಪ॥ ಕು॥ ಶೋ॥ ಯಾದ ಸಿದ್ದಮ್ಮನನ್ನು ಕೊಟ್ಟು ಹಂಚಿಗೋಡನಹಳ್ಳಿಯಲ್ಲಿ ನಡೆದ ಪಾಣಿಗ್ರಹಣ ಮಹೋತ್ಸವದಲ್ಲಿ ಆಲೂರು ಜವಳಿಅಂಗಡಿ ಚವುಳೀಗೇರಿ ಮ॥ ರಾಮಣ್ಣನವರು ಬೆಳಾರಹಳ್ಳಿ ಪ॥ ಮ॥ ಬಸವಣ್ಣಯ್ಯನವರು ಸಹ ವಿದ್ಯಾಭಿವೃದ್ಧಿ ವಿಷಯದಲ್ಲಿ ವೀರಶೈವಮತವು ಬಹು ಹಿಂದುಳಿದು ಇರುವುದರಿಂದ ಉಚ್ಛ್ರಾಯಸ್ಥಿತಿಗೆ ತರುವುದಕ್ಕಾಗಿ ಬೆಂಗಳೂರು ವಿದ್ಯಾಭಿವೃದ್ಧಿ ಫಂಡು ಸ್ಥಾಪಿಸಲ್ಪಟ್ಟಿದೆಯೆಂದೂ ಅದಕ್ಕೆ ಧನ ಸಹಾಯವನ್ನು ಎಲ್ಲ ಲಗ್ನಗಳಲ್ಲೂ ಶಕ್ತ್ಯನುಸಾರ ಮಾಡಬೇಕೆಂದೂ ಸೂಚಿಸಿದ್ದಕ್ಕೆ ಸರ್ವರೂ ಒಪ್ಪಿ ವಧೂವರರಿಗೆ ಮುಯ್ಯಿಬಂದ ಹಣದಲ್ಲಿ ೩ ರೂ. ಗಳನ್ನು, ಮತ್ತೂ ಇದೇ ಲಗ್ನಗಳಲ್ಲಿ ದಯಮಾಡಿಸಿದ್ದ ಮಠಸ್ಥರು ಜಂಗಮಯ್ಯಗಳಿಗೆ ತೆಗೆದ ಹಣದಲ್ಲಿ ೧೦ ಆಣೆ ಅಂದರೆ ೩ ಹಣವನ್ನೂ ತೆಗೆದು ವಿದ್ಯಾಭಿವೃದ್ಧಿ ಫಂಡಿಗೆ ಕಳುಹಿಸುವುದಕ್ಕಾಗಿ ಒಟ್ಟು ೩॥। ರೂ. ಯನ್ನು ಬೆಳಾರಹಳ್ಳಿ ಪ॥ ಬಸವಣ್ಣಯ್ಯನವರ ವಶಕ್ಕೆ ಕೊಟ್ಟು ಅನಂತರ ವಧೂವರರಿಗೆ ಆಶೀರ್ವದಿಸಿ ಗಂಧಪುಷ್ಪ ವೀಳಯ ಸಹ ತೆಗೆದುಕೊಂಡು ಸಭೆಯು ವಿಸರ್ಜಿಸಲ್ಪಟ್ಟಿತು.

ನಂಜರಾಯಪಟ್ಟಣದ ತಾ॥ ನಿಡದ ಹೋಬಳಿ ಚವುಡೇನಹಳ್ಳಿ ಮಠದ ಬಸಪ್ಪನವರ ೩ ನೆ ಪುತ್ರರು ಚಿ॥ ನಂಜಪ್ಪಯ್ಯನೆಂಬ ವರನಿಗೆ ಸದರಿ ಬಿಳಿಹದ ಹೋಬಳಿ ಬೆಳಾರಹಳ್ಳಿಯಲ್ಲಿರುವ ಕಿತ್ತೂರು ಮಠದ ಬಸವಯ್ಯನವರ ಪುತ್ರಿ ಚಿ॥ ಪ॥ ಕು॥ ಶೋ॥ ನೀಲಮ್ಮನನ್ನು ಕೊಟ್ಟು ಪಾಣಿಗ್ರಹಣ ಮಹೋತ್ಸವವು ಶಿಡಿಗಳಲೆ ಮಠದ ಶ್ರೀ ಪಟ್ಟದ ಚನ್ನಬಸಪ್ಪನವರು ನಡಿಸಿದ ಮಹೋತ್ಸವಕ್ಕೆ ದಯಮಾಡಿಸಿದ ಸಭೆಯವರ ಮುಂದೆ ಕಿರಿಕೊಡಲಿ ಮಠದ ಬೆಳಾರಹಳ್ಳಿ ಪ॥ ಮ॥ ಬಸವಣ್ಣಯ್ಯನವರು ವಿದ್ಯಾಭಿವೃದ್ಧಿ ಫಂಡಿಗೆ ಧನ ಸಹಾಯಮಾಡಬೇಕಾಗಿ ಸೂಚಿಸಿದ್ದಕ್ಕೆ ಸರ್ವರೂ ಒಪ್ಪಿ ವಧೂವರರಿಂದ ಮುಯ್ಯಿಬಂದ ಹಣದಲ್ಲಿ ೩ ರೂ॥ ಗಳನ್ನು ಮೇಲ್ಕಂಡ ಬಸವಣ್ಣಯ್ಯನವರ ವಶಕ್ಕೆ ಫಂಡಿನ ಸೆಕ್ರಿಟರಿಯವರಿಗೆ ಕಳುಹಿಸುವುದಕ್ಕೆ ಕೊಟ್ಟು, ಗಂಧ ಪನ್ನೀರು ವೀಳಯ ಸಹ ಹೊಂದಿಕೊಂಡು ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮೇಲ್ಕಂಡ ೩ ಲಗ್ನಗಳಿಂದ ಬಂದ ಒಟ್ಟು ೯॥। ರೂ. ಯನ್ನು ಒಡನೆ ಸೆಕ್ರಿಟರಿಯವರಿಗೆ ರವಾನಿಸಲ್ಪಡುವುದು.

ಬಸವಣ್ಣಯ್ಯ.

ರಬಕವಿ (ವಿದ್ಯಾರ್ಥಿಗಳ ಔತಣ).

ರಬಕವಿ ಮತ್ತೂ ಬನಹಟ್ಟಿ ಗ್ರಾಮಗಳಿಂದ ಕಾಲೇಜ ಮತ್ತೂ ಹಾಯಸ್ಕೂಲಗಳ ಶಿಕ್ಷಣವನ್ನು ಪಡೆಯಲೋಸುಗ ಪುಣೆ, ಬೆಳಗಾಂವ, ಧಾರವಾಡ, ವಿಜಾಪೂರ ಮುಂತಾದ ಪಟ್ಟಣಗಳಿಗೆ ಹೋಗಿದ್ದ ವಿದ್ಯಾರ್ಥಿಗಳು, ಬೇಸಗೆಯ ಕಾಲದ ವಿಶ್ರಾಂತಿಯ ನಿಮಿತ್ತವಾಗಿ ಈಗ ಬಂದಿದ್ದುದರಿಂದ ಈ ವಿದ್ಯಾರ್ಥಿಗಳಿಗೆ ಮ॥ ರಾ॥ ರಾ॥ ಬಾಗೋಜಿ ಮುರಗೇಂದ್ರ ಸ್ವಾಮಿಗಳವರು ಮೇ ತಿಂಗಳ ೨೨ ನೇ ತಾರೀಖಿನ ರವಿವಾರ ದಿವಸ ಒಂದು ಔತಣವನ್ನು ಮಾಡಿಸಿದರು. ಪರಸ್ಪರ [illegible] ಗೆಳೆಯರು ಒಂದೇ ಕಡೆಗೆ ಕೂಡಿ ತಮ್ಮ ತಮ್ಮ ವಿದ್ಯಾಭ್ಯಾಸದ ವಿಷಯಕ್ಕೂ ಬೋರ್ಡಿಂಗುಗಳ ವಿಷಯಕ್ಕೂ ಹೆಚ್ಚು ಕಡಿಮೆಯಾದ್ದ ಸುದ್ದಿಯನ್ನು ಚರ್ಚಿಸುತ್ತ ಆನಂದದಿಂದ ಭೋಜನ ಸಮಾರಂಭದಲ್ಲಿ ಕಾಲ ಕಳೆದರು. ಈ ಸಮಯಕ್ಕೆ ಮ॥ ರಾ॥ ಬೆಕ್ಕೋಡಿ ತಮ್ಮಣ್ಣಪ್ಪನವರಿಗೂ ಆಮಂತ್ರಣ ಮಾಡಲ್ಪಟ್ಟಿತ್ತು. ಇವರು ವಿದ್ಯಾರ್ಥಿಗಳ ಕೂಡ ಭೋಜನ ಸಮಾರಂಭವನ್ನು ಮುಗಿಸಿಕೊಂಡು ಸಂಜೆಯ ೬ ಗಂಟೆಗೆ ಶ್ರೀ ಶಂಕರಲಿಂಗನ ದೇವಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೋಧಪರವಾದ ಉಪನ್ಯಾಸಮಾಡಿದರು. ಅದರ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೇವೆ.

ಪದ್ಧತಿಯ ಪ್ರಕಾರ ಸಭೆಯ ಕೆಲಸ ನಡೆಸುವುದಕ್ಕಾಗಿ ಇಲ್ಲಿಯ ಪ್ರಸಿದ್ಧ ಸಾವಕಾರ ಮನೆತನಸ್ಥರಾದ ಮ॥ ರಾ॥ ಆನಿಖಿಂಡಿ ವೆಂಕಟರಾಯರು ಅಗ್ರಾಸನವನ್ನು ಕೈಕೊಂಡನಂತರ ಮ॥ ರಾ॥ ಬೆಕ್ಕೋಡಿ ತಮ್ಮಣ್ಣಪ್ಪನವರು ಮಾಡಿದ ಭಾಷಣದ ಸಾರಾಂಶಗಳು,—

ವಿದ್ಯಾರ್ಥಿಗಳೇ, ಮತ್ತೂ ಸಭ್ಯಗೃಹಸ್ಥರೇ, ಈ ಹೊತ್ತು ತಾವೆಲ್ಲರೂ ಈ ದೇವಾಲಯದಲ್ಲಿ ನೆರೆದಿರುವುದನ್ನು ನೋಡಿ ನನಗೆ ಬಹಳ ಆನಂದವಾಗುತ್ತದೆ. ಏಕೆಂದರೆ,—ಈ ನಮ್ಮ ಗ್ರಾಮವು ೫೦೦೦ ಜನರ ವಸ್ತಿಯುಳ್ಳದ್ದಾದುದರಿಂದ ಚಿಕ್ಕದಾಗಿದೆ. ಇಂಗ್ಲೀಷ್ ಕಲಿಯುತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಒಂದು ನೂರಕ್ಕಿಂತಲೂ ಹೆಚ್ಚಾಗಿರುತ್ತದೆ. ಇವರಲ್ಲಿ ಬಿ. ಎ. ಕ್ಲಾಸಿನಿಂದ ಹಿಡಿದು ಕ್ರಮೇಣ ೧ ನೆ ಕ್ಲಾಸಿನವರೆಗೂ ಕಲಿಯುತಕ್ಕ ವಿದ್ಯಾರ್ಥಿಗಳು ಇದ್ದಾರೆ. ಈ ಮಾತು ಈ ಪುಟ್ಟಗ್ರಾಮಕ್ಕೆ ಭೂಷಣವಾದುದಾಗಿರುವುದರಿಂದ ನನಗೆ ಸಂತೋಷವುಂಟಾಗಿದೆ. ಇಷ್ಟು ವಿದ್ಯಾಭಿರುಚಿಯುಕ್ತ ಗ್ರಾಮವು ದೊರಕುವುದು ಅಪರೂಪವು. ಈ ಮಾತು ನಮ್ಮಿಂದ ನಾವೇ ಹೊಗಳಿಕೊಂಡಂತೆ ಆಗಬಹುದು. ಅದು ಹಾಗಲ್ಲ. ಆದಿ ತೋರಿಸದೆ ತಿಳಿಯುವುದಿಲ್ಲವೆಂಬ ಮಾತಿಗಾಗಿ ಆದಿ ತೋರಿಸಬೇಕಾಗಿದೆ. ಇರಲಿ. ಇನ್ನು ನಾನು ತಮಗೆ ನಾನು ಬೋಧಪರವಾದ ಮಾತುಗಳನ್ನು ಹೇಳಬೇಕೆಂಬುವುದು ನನ್ನ ಶಕ್ತಿಯನ್ನು ಮೀರಿದ್ದಾಗಿದೆ. ಏಕೆಂದರೆ—ತಾವು ನನಗಿಂತಲೂ ಹೆಚ್ಚಿಗೆ ಕಲಿತವರೂ, ಬುದ್ಧಿವಂತರೂ ವಿಚಾರವಂತರೂ ಇರುವುದರಿಂದ ನನಗೆ ಅಸಾಧ್ಯವಾಗಿದೆ. ಆದಾಗ್ಗ್ಯೂ ಮಗನು ಎಷ್ಟೋ ಬುದ್ಧಿವಂತನಿದ್ದಾಗ್ಗೂ ತಂದೆಯು ಅವನ ಹಿತವನ್ನು ಬಯಿಸುತ್ತಿರುವಲ್ಲಿ ಮುಗ್ಧ ಸ್ವಭಾವದಿಂದ ಹೇಳುವುದನ್ನು ಬಿಡುವುದಿಲ್ಲ. ಅದೇ ಪ್ರಕಾರವಾಗಿ ನಾನು ನಿಮ್ಮ ಹಿತಚಿಂತನೆ ಮಾಡುವವನಾದುದರಿಂದ ಹೇಳಬೇಕಾಗಿದೆ.

ಮನುಷ್ಯಪ್ರಾಣಿಯ ಇಡೀ ಜೀವಮಾನ ಕಾಲದಲ್ಲಿಯ ಅತಿ ಮಹತ್ವವಾದ ಕಾಲವು ಆವುದೆಂದರೆ— ವಿದ್ಯಾರ್ಥಿ ದಶೆಯ ಕಾಲವು ಬಳ್ಳೇ ಮಹತ್ವದ್ದಾಗಿದೆ. ಮನುಷ್ಯಪ್ರಾಣಿಯು ತನ್ನ ಇಡೀ ಬಾಳ್ವೆಯನ್ನು ಸಾರ್ಥಕಗೊಳಿಸಲೋಸುಗ ಕಟ್ಟಬೇಕಾದ ತಳವನ್ನು ಈ ವಿದ್ಯಾರ್ಥಿದಶೆಯ ಕಾಲದಲ್ಲಿಯೇ ತುಂಬಬೇಕಾಗಿರುತ್ತದೆ. ಈಗ ತುಂಬಿದ ತಳದಮೇಲಿಂದಲೇ ಅವನ ಇಡೀ ಜೀವಿತದ ಕಟ್ಟಡವು ಅವಲಂಬನವಾಗಿರಬೇಕಾಗಿದೆ. ಅಂದಮೇಲೆ ಈ ವಿದ್ಯಾರ್ಥಿದಶೆಯ ಕಾಲವನ್ನು ನಾವು (ಮನುಷ್ಯಪ್ರಾಣಿಗಳು) ಎಷ್ಟು ಎಚ್ಚರದಿಂದ ಕಂಡುಹಿಡಿಯಬೇಕಾಗಿದೆ ಇದನ್ನು ವಿಚಾರಮಾಡಿ ನೋಡಿರಿ.

ಮನುಸ್ಮೃತಿಶಾಸ್ತ್ರದ ಪ್ರಕಾರ ಬ್ರಹ್ಮಚರ್ಯ ವ್ರತವನ್ನು ಪಾಲನಮಾಡಿ ಗುರುಗಳ ಸಾನ್ನಿಧ್ಯದಲ್ಲಿ ವಿದ್ಯಾರ್ಜನೆ ಮಾಡಿಕೊಂಡು ಸುಶೀಲನಾಗಿ ಮುಂದಿನ ಗೃಹಸ್ಥಾಶ್ರಮಕ್ಕೆ ತಕ್ಕವನಾಗುವವರೆಗೂ ಗುರುಗಳ ಆಶ್ರಮದಲ್ಲಿಯೇ ಇರತಕ್ಕ ಪದ್ಧತಿಯು ಪ್ರಾಚೀನ ಋಷಿಗಳ ಕಾಲದಲ್ಲಿತ್ತು. ಬರಬರುತ್ತ ಈ ಪರಂಪರೆಯು ತಪ್ಪಿಹೋದುದರಿಂದ ನಮ್ಮ ಸಮಾಜದ ಸ್ಥಿತಿಯು ಕೆಟ್ಟುಹೋಗಿ ನಾವು ಅಧೋಗತಿಗೆ ಹೋಗಿರುವೆವು.

ಈಗ ಇಂಗ್ಲೀಷ್ ಪ್ರಭುಗಳ ಕಾಲದಲ್ಲಿ ಪ್ರಾಚೀನ ಪದ್ಧತಿಯನ್ನು ಹೋಲದಿದ್ದರೂ ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣದಿಂದ ಈಗ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲವಾಗಿದೆ. ಇಂಥ ಕಾಲದಲ್ಲಿ, ನೀವು ವಿದ್ಯಾರ್ಥಿಗಳು ಚೆನ್ನಾಗಿ ಬ್ರಹ್ಮಚರ್ಯವ್ರತವನ್ನು ಪಾಲನಮಾಡಿ ಹೊನ್ನು ಹೆಣ್ಣು ಮಣ್ಣು ಇವುಗಳ ಮೋಹಜಾಲಕ್ಕೆ ಸಿಕ್ಕದೆ ಸದಾಚಾರಿಗಳಾಗಿ ವಿದ್ಯಾಸಂಪಾದನೆ ಮಾಡತಕ್ಕದ್ದು. ಇದು ಬಹಳ ನೆನಪಿನಲ್ಲಿಡತಕ್ಕ ಮಾತಾಗಿದೆ. ಮತ್ತೂ ನಿಮ್ಮ ತಿಳುವಳಿಕೆಯಲ್ಲಿ ನಾವು ಬಡವರು; ನಮ್ಮಿಂದ ಆಗುವುದೇನು? ಎಂಬ ಗ್ರಹಿಕೆಯನ್ನು ಕನಸಿನಲ್ಲಿಯೂ ಕೂಡ ತರಬೇಡಿರಿ. ಏಕೆಂದರೆ— ಜಗತ್ತಿನಲ್ಲಿಯ ಮಹತ್ತರವಾದ ಕಾರ್ಯಗಳು ಬಡವರಿಂದಲೇ ಜರುಗಿದ ಉದಾಹರಣಗಳು ಹೇರಳವಾಗಿವೆ. ದೇವರು ಬಡವರಲ್ಲಿಯೇ ಸಾಹಸಮಾಡುವ ಶಕ್ತಿಯನ್ನೂ, ಧೈರ್ಯವನ್ನೂ, ಸಂಕಟಗಳಿಗೆ ಎದೆಗೊಡುವುದನ್ನೂ ಕೊಟ್ಟಿರುತ್ತಾನೆ. ಈ ಗುಣಗಳು ಧನವಂತರಲ್ಲಿರುವುದಿಲ್ಲ. ಒಬ್ಬ ಮಹಾಪುರುಷನು ಎಂದು ಹೇಳಿದನೆಂದರೆ— "ಬಡತನವನ್ನು ಕೊಟ್ಟುದಕ್ಕಾಗಿ ದೇವರ ಉಪಕಾರವನ್ನು ಎಣಿಸುತ್ತೇನೆ." ಹೀಗೆ ಎಂದಿರುವನು. ಮತ್ತೂ ನೀವು ಹಳ್ಳಿಗಳಲ್ಲಿ ಹುಟ್ಟಿದವರೆಂದು [illegible]ಬೇಡಿರಿ. ಪ್ರಾಚೀನ ಕಾಲದಲ್ಲಿಯೂ ಅರ್ವಾಚೀನಕಾಲದಲ್ಲಿಯೂ ಪ್ರಸಿದ್ಧಿಯನ್ನು ಪಡೆದ ಮಹಾಪುರುಷರು ಹಳ್ಳಿಗಳಲ್ಲಿ ಹುಟ್ಟಿದವರ ಪ್ರಮಾಣಗಳೇ ಹೆಚ್ಚಾಗಿ ಸಿಗುವವು. ಇರಲಿ, ನೀವು ಯಾವ ಮಾತಿಗೂ ಏನೂ ಶಂಕೆ ತೆಗೆದುಕೊಳ್ಳದೆ ಬ್ರಹ್ಮಚರ್ಯವ್ರತದಿಂದಲೂ ಏಕನಿಷ್ಠೆಯಿಂದಲೂ, ಅಭ್ಯಾಸದ ತಪಸ್ಸನ್ನು ಮಾಡಿದರೆ ನಿಮಗೆ ಅದರಿಂದ ಯೋಗ್ಯಫಲವು ಸಿಗದೆ ಇರಲಾರದು.

ಈ ಇಂಗ್ಲೀಷು ವಿದ್ಯೆಯನ್ನು ಕಲಿಯುವುದೆಂದರೆ ಸರಕಾರಿ ನೌಕರಿ ಮಾಡುವುದಕ್ಕಾಗಿಯೇ ಕಲಿಯಬೇಕೆಂಬುವಾಗಿ ಜನರು ತಪ್ಪು ತಿಳುವಳಿಕೆಯುಳ್ಳವರಾಗಿದ್ದಾರೆ. ಹಾಗೆ ತಿಳಿಯುತಕ್ಕದ್ದಲ್ಲ. ಈಗಿನ ಕಾಲವು ಬಹಳ ಸೋಜಿಗವಾದುದಾಗಿದೆ. ಇಂಥ ಕಾಲದ ಅರಿಕೆಯನ್ನು ಮಾಡಿಕೊಂಡ ಜನರು ಬಹಳ ಕಡಿಮೆಯಾಗಿದ್ದಾರೆ. ನಮಗೆ ಇಂಗ್ಲೀಷು ಬಾರದಿದ್ದರೆ ಹಜ್ಜೆ ಹಜ್ಜೆಗೆ ಎಡರುಗಳು ತಪ್ಪದೆಯೇ ಬರುತ್ತವೆ. ವ್ಯಾಪಾರವಾಗಲಿ ಕಲಾಕೌಶಲ್ಯವಾಗಲಿ ಉದ್ಯೋಗವಾಗಲಿ ಆವುದಾದರೂ ಕೂಡ ಇಂಗ್ಲೀಷನ್ನು ಕಲಿಯದೆಯೇ ಸಾಗುವಂತಿಲ್ಲ. ಇದರ ವಿಷಯಕ್ಕೆ ಎಷ್ಟು ಹೇಳಿದರೂ ತೀರದು. ಸಾರಾಂಶ—ಇಂಗ್ಲೀಷು ಕಲಿಯದ ಮನುಷ್ಯನು ವ್ಯರ್ಥಪ್ರಾಯನು. ಇದು ನಿಶ್ಚಯವು. ಆದುದರಿಂದ ನೀವು ಎಲ್ಲ ವಿದ್ಯಾರ್ಥಿಗಳೂ ಮನಮುಟ್ಟಿ ಕಲಿತು ಕೀರ್ತಿವಂತರಾಗಿ ಸಮಾಜ ಸೇವೆಯನ್ನೂ ದೇಶಸೇವೆಯನ್ನೂ ಮಾಡಿರೆಂದು ಹೇಳಿ ಕುಳಿತುಕೊಳ್ಳುವೆನು.

ಆಮೇಲೆ ಅಧ್ಯಕ್ಷರಾದ ವೆಂಕಟರಾಯರು ಸ್ವಲ್ಪದರಲ್ಲಿಯೇ ಹೇಳಿದ್ದೇನೆಂದರೆ— ಮ॥ ರಾ॥ ಬೆಕ್ಕೋಡಿ ತಮ್ಮಣ್ಣಪ್ಪನವರು ತಮ್ಮ ಸಮಾಜ ಸುಧಾರಣೆಯ ದೆಸೆಯಿಂದ ಅಂತಃಕರಣಪೂರ್ವಕವಾಗಿ ಸತತ ೨೦ ವರ್ಷಗಳ ವರೆಗೆ ಮಾಡಿದ ಪ್ರಯತ್ನಕ್ಕಾಗಿ ನಮ್ಮ ರಬಕವಿ ಪೇಟೆಯಲ್ಲಿಯ ವ್ಯಾಪಾರಸ್ಥರ ಅಂಗಡಿಗಳಲ್ಲೆಲ್ಲ ಗ್ರಾಜುಯೇಟ ಜನರನ್ನೇ ಕಾಣಬೇಕಾಗಿತ್ತು. ಆದರೆ ನಮ್ಮ ದುರ್ದೈವದಿಂದ ಕಾಣಲಿಲ್ಲ. ಆದಾಗ್ಗ್ಯೂ ಈಗ ಕಲಿಯುತಕ್ಕ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣದಿಂದ ನೋಡಲಾಗಿ ಆ ಕಾಲವು ಮುಂದೆ ತೀವ್ರವೇ ಬರಬಹುದೆಂಬ ಆಶೆಯಿಂದ ಈಗ ಸಂತೋಷಪಡಬೇಕಾಗಿದೆ. ಇರಲಿ, ಇದುವರೆಗೂ ತಮ್ಮಣ್ಣಪ್ಪನವರು ಹೇಳಿದ ಅಮೃತಮಯವಾದ ವಾಣಿಯನ್ನು ನೀವೆಲ್ಲರೂ ಕೇಳಿದ್ದೀರಿ. ಅದರಂತೆ ನಡೆದರೆ ದೇವರು ನಿಮಗೆ ಕಲ್ಯಾಣಮಾಡದೆ ಇರಲಾರನು. ವೇಳೆಯು ಬಹಳವಾದುದರಿಂದ ಸಭೆಯ ಕೆಲಸವನ್ನು ತೀವ್ರವೇ ಮುಗಿಸಬೇಕಾಗಿದೆಯೆಂದು ಹೇಳಿ ಕುಳಿತರು. ಆಮೇಲೆ ಯಾವತ್ತರ ಆಭಾರವನ್ನು ಮನ್ನಿಸಿ ಸಭೆಯು ವಿಸರ್ಜನವಾಯಿತು.

ಓರ್ವ ಪ್ರೇಕ್ಷಕ.

CORONATION SOAP
TRADE MARK

4 ಕಾರೋನೇಷನ್ ಸಾಬೂನು.

"ಅಪಾಯವಿಲ್ಲದ ರೋಮಸಂಹಾರಿ"!

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನೋವು ಮುಂತಾದ ಬಾಧೆಗಳಿಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0.

3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0. ಅಂಚೆ ಹಾಸಲು 0—4—0

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ. ಷಾ ಅಂಡ್ ಕೋ.,
177 ಚೈನಾಬಜಾರ್ ರೋಡ್, ಮದ್ರಾಸು.

ವೀರಶೈವಾಶ್ರಮ ಬೆಂಗಳೂರು.

4

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಪಾಳೆಯಗಾರರು, ಅಧಿಕಾರಿಗಳು ಮೊದಲಾದವರುಗಳಿಗು ಇಳಿದುಕೊಳ್ಳುವುದಕ್ಕೂ, ಭೋಜನಕ್ಕೂ ತಕ್ಕ ಅನುಕೂಲ್ಯವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಿಸಲ್ಪಟ್ಟಿರುವಂತೆ ಈ ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಮಹಾಜನರು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿಚಾರಕರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ಬರಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋಟೆಯೊಳಗೆ ಪ್ರೊಪ್ರೈಟರಿ ಸ್ಕೂಲಿನ ಪಕ್ಕದಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವನ್ನು ಏರ್ಪಡಿಸಿದೆ. ಈ ಕಟ್ಟಡದಲ್ಲಿ ಶ್ರೀಮಂತರುಗಳೂ, ಪಾಳೆಯಗಾರರೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುದಲ್ಲದೆ, ಈಗಿನ ಕಾಲದ ಆರೋಗ್ಯ ಸೂತ್ರಕ್ಕೆ ಸುಗುಣವಾಗಿದೆ. ಬುದ್ಧಿವಂತರಾದ ಪಾಚಕರನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕ ಏರ್ಪಾಡನ್ನಿಟ್ಟಿದೆ. ಮತ್ತೂ ಊಟದ ಖರ್ಚನ್ನೂ ತಕ್ಕ ಮಟ್ಟಿಗೆ ಸುಲಭಮಾಡಿದೆ. ಇಲ್ಲಿಯ ಏರ್ಪಾಟನ್ನು ತಿಳಿಯಲಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಾರರಿಂದ ಪ್ರತ್ಯಕ್ಷವಾಗಾಗಲೀ ಅಥವಾ ಲಿಖಿತ ಮೂಲಕವಾಗಾಗಲೀ ತಿಳಿಯಬಹುದು.

ಎಸ್. ಕರೆಪ್ಪ,
ಊದಬತ್ತಿ ಷಾಪ್, ದೊಡ್ಡಪೇಟೆ, ಬೆಂಗಳೂರು.

ಆಶ್ಚರ್ಯ ಚಿಕಿತ್ಸೆ.   ಬಂದು ಪರಿಕಿಸಿ.

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀವುದು ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು

ಬ್ಲಡ್ ಸರ್ಕ್ಯೂಲೇಟರ್ ಎಂಬ ನೂತನ ಯಂತ್ರದಲ್ಲಿ
ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ
6 ಗುಣವಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳು, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು, ಗಂಟಲಿಗೂ ಕಿವಿಗೂ ಮಧ್ಯೆಯಿರುವ ಲಾಳದಲ್ಲಿ ಕಸಕಟ್ಟಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡುವುಂಟಾಗಿರುವುದು ಜ್ವರಬಂದು ನಿಂತಮೇಲೂ, ವಾಯುವಿನಿಂದಲೂ ಕಿವುಡು ಉಂಟಾಗಿರುವುದು ಇವೆ ಮೊದಲಾಗಿ ಎಲ್ಲಾ ಕರ್ಣರೋಗಗಳನ್ನೂ ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಕಾಮಾಲೆ, ಶೋಭೆ, ಪಾರ್ಶ್ವವಾಯು ಅಂದರೆ ಒಂದು ಭಾಗವಿಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾದ ಎಲ್ಲಾ ತರಹ ವಾಯು ರೋಗಗಳೂ ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು [illegible] ಖುದ್ದು ರೋಗದ ಸ್ಥಿತಿಯನ್ನು ತಿಳಿಸಿ ನಂಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ರೈಲ್ವೆಸ್ಟೇಷನ್.

ಉತ್ತಮವಾದ ನಶ್ಯದಪುಡಿ.

9

ಘಾಟು ಸಹಜವಾದ ವಾಸನೆಗಳಿರುವ ಒಳ್ಳೆ ಹೊಗೇಸೊಪ್ಪಿನಿಂದ ಈ ಪುಡಿಯನ್ನು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ, ಮೂಗು ಕಟ್ಟಿಕೊಳ್ಳುವ, ದುರ್ಗುಣಗಳಿಲ್ಲ. ಒಂದೇಒಂದು ಸರ್ತಿ ಪರೀಕ್ಷಿಸಿ ನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆ ಬರುವುದು, ಶೀತ, ನೆಗಡಿ. ಉಸಿರು ಕಟ್ಟಿಕೊಳ್ಳುವುದು, (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರು ತುಂಬಿ ದಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲೀ ಮೆದುಳಿಗಾಗಲೀ ಕೆಡುಕಿಲ್ಲ. ಒಂದು ಚಿಟುಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧—೪—೦.

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವು ಉಪಯೋಗಿಸುವ ಖರೀ ಹೊಗೆಸೊಪ್ಪಿಗೆ ಬದಲಾಗಿ, ಖಾರ, ರುಚಿ ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧—೫—೦. ಗಳು. ಟಪಾಲ್ ಖರ್ಚ ಬೇರೆ.

ವಿಳಾಸ:—ಕೆ. ಮಲ್ಲಿಕಾರ್ಜುನಶೆಟ್ಟಿ,
ಕೋಟೆಶೆಟ್ಟಿಯವರ ಹನೂರು ಪೇಟೆ,
ಕೊಳ್ಳೇಗಾಲ ತಾಲ್ಲೂಕು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

50 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೩೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ.

39

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಗರ್ಭಧಾರಣೆಯಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧-೧೦-೦ ರೂ. ೨. ಬಾ, ೨-೧೦-೦ ರೂ. ೩. ಬಾ, ೩-೪-೦ ರೂ. ಒಮ್ಮೆಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ವಜ್ರಾಂಗಪರ್ಪಟರಸ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೨ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ “ಅಂಜೀರಾರ್ಕಮಧು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

20

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೬೧೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಗೆಬೀದಿ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

10

ಲೋಕಾಮಯಾಪಹ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೩೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡದಿರಿ. ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧-೦-೦ ರೂ.

ಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಹತ್ತಿರ
ಮೈಸೂರು.

98

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೬೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೩೦ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೩೦ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪-೦-೦. ೩೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದು. ೨೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೧-೦.

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.

ದಂತಶುದ್ಧಿ ಚೂರ್ಣ.— ಡಬ್ಬ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ ನೆಯ ಇಸವಿ ಜೂನ್ ತಾ|| ೧೭ರಿಂದ ೧೯೧೨ನೆಯ ಜೂನ್ ತಾ|| ೨೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರಿಧಾವಿ ಸಂವತ್ಸರದ ಅಧಿಕಾಷಾಢ ಶು|| ಬಿದಿಗೆಯಿಂದ ಅಧಿಕಾಷಾಢ ಶು|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ಕೇದಿ
17	ಸೋ	ಬಿ	8-7	ಪುನ	53-59	4
18	ಮಂಗ	ಚ	50-48	ಪುಷ್ಯ	26-29	5
19	ಬುಧ	ಪಂ	44-36	ಆಶ್ಲೇಷ	21-21	6
20	ಗುರು	ಷ	38-51	ಮಖ	18-28	7
21	ಶುಕ್ರ	ಸ	33-38	ಪುಬ್ಬ	15-6	8
22	ಶನಿ	ಅ	29-11	ಉತ್ತರ	12-18	9
23	ಭಾನು	ನ	25-38	ಹಸ್ತ	10-22	10

ಮೈಸೂರ್: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REGISTERED NO. M 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುದಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ವಿಶ್ವಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಗ್ರ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೫] ಮೈಸೂರ್ ಸ್ಟಾರ್ ೧೯೧೨ ನೆಯ ಇಸವಿ ಜುಲೈ ತಾರೀಖು ೨೨ ನೆಯ ಸೋಮವಾರ. [ಸಂಚಿಕೆ ೨೮

21 ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರಿಗೆ, ೩-೦-೦ -೦-೦; ೨-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕೆ ೩ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ಆಣೆ. ಬಾಲಗ್ರಹಧೂಪ ಟಿ ೧ ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

48

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ—೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೩ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೦-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಳಿ, ಮೈಸೂರು.

ಮಧುರವಾಣಿ.

16 ವಾರ್ಷಿಕಚಂದಾ ೧-೮-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ಧಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

24

ವಿವೇಕಮಂಜರಿ

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಚಾತುರ್ಯದಪ್ರೌಢಿಮೆ ಮನೋಹರಶೈಲಿ, ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚಿಗೆಗೊಳಗಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೨ ನೆಯ ಭಾಗ ೩ ಆಣೆ ೧೩೦ ಪುಟಗಳು

ಅಂಚೆ ವೆಚ್ಚ ಬೇರೆ

ವಿಳಾಸ— “ಮೈಸೂರ್ ಸ್ಟಾರಾಫೀಸ್” ಮೈಸೂರ್.

---

48 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ನೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ವಿರಂಜಸ ಜಂಗಮಪುರವಾಡ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

---

9 ಕಾರೋನೇಷನ್ ಸಾಬೂನು.

“ಅಪಾಯವಿಲ್ಲದ ರೋಮಸಂಹಾರಿ”

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನವೆ ಮುಂತಾದ ಬಾಧೆಗಳಿಲ್ಲವು. ಒಂದು ಸಲಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0.
3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0. ಅಂಚೆ ಹಾಸಲು 0—4—

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ. ಷಾ ಅಂಡ್ ಕೋ.,
177 ಚೇನಾಬಜಾರ್‌ರೋಡ್, ಮದ್ರಾಸು.

---

6 ಕಾಶೀ ವಿಶ್ವೇಶ್ವರ ಪ್ರಸನ್ನಾ.



ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ (ಕ್ಷೇತ್ರ) ಕಾಶಿಯಲ್ಲಿ ತಯಾರಾಗುವ ಬನಾರಸ್ ಜರೀ ರೇಷ್ಮೆಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೆಗಾಲ ಮೊಳಕಾಲ್ಮೂರು ನಮೂನೆ ವಸ್ತ್ರಗಳು, ಜರೀ ರೇಷ್ಮೆ ಛದ್ದರು, ರುದ್ರಾಕ್ಷಿ ಸರಗಳು, (ಇದರಲ್ಲಿ ೩ ಮುಖದಿಂದ ೧೮ ಮುಖದವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಚೌರಿಕೊಡಲು, ಗಂಗಾಭಾಗೀರಥಿಯೆಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಠೆಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶ ವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಫಕ್ತ್ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು, ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರನ ಪಠ, ೨ ನಮ್ಮ ಕಂಪೆನಿ ವಿಳಾಸದ ಕಾರ್ಡು ಇವುಗಳನ್ನು ತಾವು ಬರದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು. ಬೇರಿಂಗ್ ಪತ್ರ ತೆಗೆದುಕೊಳ್ಳಲಾರೆವು.

ವಿಳಾಸ,—ಮೇನೇಜರ್,
ಎಸ್. ಯು. ಎಗ್. ಅಂಡ್ ಕಂಪೆನಿ,
ಬನಾರಸ್ ಸಿಟಿ.

ಪ್ರಸಿದ್ಧಪತ್ರಿಕೆ.

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲವು ಕಳುವಾಗಿರುವುವೆಂಬ ಶಂಕೆಯು ಹುಟ್ಟಿರುವುದರಿಂದ, ನಮ್ಮ ಹಸ್ತಾಕ್ಷರವು (ಸೈನು) ಇಲ್ಲದಿರುವ ಪುಸ್ತಕಗಳನ್ನು ಯಾರೂ ಸ್ವೀಕರಿಸಬಾರದೆಂದು ಈ ಮೂಲಕ ಪ್ರಕಟಪಡಿಸಿವೆ.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಶ್ರೀಮನ್ಮಗ್ಗೆಮಾಯಿದೇವಪ್ರಭುವಿರಚಿತ
ಶಿವಾಧವ ಶಿವಾವಲ್ಲಭ ಮಹದೈಪುರೀಶ್ವರ

ಶತಕತ್ರಯ

ವೆಂಬ ಈ ಪುಸ್ತಕವು

ಕರ್ನಾಟಕ ಟೀಕೆಸಹಿತ ಈಗ್ಗೆ ೨೫ ವರ್ಷಗಳ ಕೆಳಗೆ ಮುದ್ರಿಸಲ್ಪಟ್ಟಿದ್ದಿತು. ಈ ಟೀಕೆಯಿದ್ದರೂ, ಸಾಧಾರಣ ಜನರಿಗೆ ಪದ್ಯದಭಿಪ್ರಾಯವು ಆಗುತ್ತಿರಲಿಲ್ಲವಾದುದರಿಂದ, ಪ್ರತಿಯೊಬ್ಬರಿಗೂ ತಿಳಿಯುವಂತೆ ಟೀಕೆಯಮೇಲೆ ಸುಲಭವಾದ ಟಿಪ್ಪಣಿಯನ್ನು ಬರೆಯಿಸಿ, ಗ್ರಂಥವನ್ನು ಚೆನ್ನಾಗಿ ಪರಿಶೋಧಿಸಿ ಮುದ್ರಣಮಾಡಿ ಭದ್ರವಾದ ರಟ್ಟಿನಿಂದ ಬೈಂಡನ್ನು ಕಟ್ಟಿಸಿರುತ್ತೇವೆ. ಈ ಗ್ರಂಥದಲ್ಲಿ ವೀರಶೈವಾಗಮೋಕ್ತರೀತ್ಯಾ ಭಕ್ತಿ, ಜ್ಞಾನ, ವೈರಾಗ್ಯಗಳ ಲಕ್ಷಣವು ಕರತಲಾಮಲಕವಾಗಿ ನಿರೂಪಿಸಲ್ಪಟ್ಟಿರುವುದರಿಂದ ಇದು ಮುಮುಕ್ಷುಜನರ ಪಠನಮನನಾದಿಗಳಿಗೆ ಅತ್ಯಂತಸಾಧನವಾಗಿರುತ್ತದೆ.

ಇದರಬೆಲೆ ೧—೦—೦. ವಿ. ಪಿ ಯಿಂದ ೧—೨—೦

ಮ್ಯಾನೇಜರ್,
"ಮೈಸೂರ್ ಸ್ಟಾರ್" ಆಫೀಸ್, ಮೈಸೂರ್.

ಸೌಗಂಧಿಕಾಪರಿಣಯವು.

[ಕಳೆದ ವಾರದ ಶೇಷ.]

ಮತ್ತೂ ಈ ಮಣಿಯು ಸ್ವರ್ಗಲೋಕದಲ್ಲಿಯೂ, ಭೂಲೋಕದಲ್ಲಿಯೂ ಕೂಡ ಇರುವಂತೆ ಕಾಣುವುದಿಲ್ಲ, ಪಾತಾಳಲೋಕದಲ್ಲಿರುವಂತೆ ನನಗೆ ತೋರುತಲಿದೆ. ಆದುದರಿಂ ನಿನಗೆ ಅಸಾಧ್ಯವಾದ ಕಾರ್ಯಂಗಳು ಲೋಕತ್ರಯಂಗಳಲ್ಲಿಯೂ ಇಲ್ಲ. ತಡಮಾಡದೆ ತೆರಳಬಹುದೆಂದು ವಿಜ್ಞಾಪನೆಯಂ ಮಾಡಲಾಮಾತಿಗೆ ರಾಜೇಂದ್ರನು ಸಂತೋಷಭರಿತನಾಗಿ ಯಕ್ಷನಂ ಕುರಿತು ನಾಳೆ ಉದಯದೊಳ್ ರತ್ನವಂ ಸಾಧಿಸಲೋಸುಗ ತೆರಳುವೆನೆಂದು ಅಪ್ಪಣೆಯನ್ನಿತ್ತು ಸುಮತಿಯಂ ನೋಡಿ, ಎಲೈ ಮಿತ್ರನೇ ನೀನು ನನ್ನೊಡನೆ ಎರಡು ಪಟ್ಟಣಗಳಲ್ಲಿಯೂ ಅಧಿಕವಾಗಿ ಆಯಾಸಪಟ್ಟಿರುವೆ ಆದುದರಿಂ ಇಲ್ಲಿಯೇ ಕವಚವಂ ರಕ್ಷಿಸಿಕೊಂಡು ಇರುವವನಾಗು, ನಾನು ಪಾತಾಳವಂ ಪೊಕ್ಕು ರತ್ನವಂ ಹುಡಿಕಿ ನೋಡಿ ಇದ್ದರೆ ಸಾಧಿಸಿಕೊಂಡು ಬರುವೆನೆಂದು ನುಡಿಯಲಾ ಮಾತಂ ಕೇಳಿ, ಎಲೈ ಪ್ರಾಣವಲ್ಲಭನೇ ಬಾಲ್ಯ ಮೊದಲುಗೊಂಡು ಒಂದು ನಿಮಿಷವಾದರೂ ನಿನ್ನ ಸನ್ನಿಧಿಯಂ ಬಿಟ್ಟು ಇದ್ದವನಲ್ಲ, ಮತ್ತೂ ಇಲ್ಲಿ ನಾನು ಪರಮಸೌಖ್ಯದಿಂದಿರುವುದು ನಿನ್ನೊಡನೆ ಶ್ರಮಪಡುತಲಿರುವುದಕ್ಕೆ ಸಮನಾಗಲಾರದು ಆದುದರಿಂ ನಿನ್ನ ಚರಣಸನ್ನಿಧಿಯಲ್ಲೇ ಇರುವಂತೆ ಅಪ್ಪಣೆಯಂ ದಯಪಾಲಿಸಬೇಕೆಂದು ನುಡಿಯಲಾ ಮಂತ್ರಿಯ ಮಾತಂಕೇಳಿ ರಾಜೇಂದ್ರನು ಎಲೈ ಸುಮತಿಯೆ! ನಾನು ನಿನ್ನಂ ಬಿಟ್ಟು ತೆರಳುವುದು ಯುಕ್ತವಾಗಿ ತೋರುವುದಿಲ್ಲ ಆದುದರಿಂ ನಾವಿರ್ವರೂ ಕೂಡ ಪ್ರಯಾಣವಂ ಮಾಡುವ ಎಂದು ನಿಶ್ಚೈಸಿ ಆ ರಾತ್ರಿಯೊಳ್ ಮೃಷ್ಟಾನ್ನಭೋಜನವಂ ಗೈದು ಸಂತೋಷದಿಂ ಸುಖನಿದ್ರೆಯಂ ಮಾಡಿ, ಮಾರನೆಯದಿನ ಸೂರ್ಯೋದಯವಾಗಲು ರಾಜೇಂದ್ರನು ಮಂತ್ರಿಯೊಡಗೂಡಿ ಸ್ನಾನಭೋಜನಾದಿಗಳನ್ನು ನೆರವೇರಿಸಿ, ಅನರ್ಘ್ಯರತ್ನಾಭರಣ ದುಕೂಲಂಗಳಿಂದಲಂಕೃತನಾಗಿ ಧನುರ್ಬಾಣಂಗಳಂಕೊಂಡು ಶೂರಪದ್ಮಾದಿಗಳಂ ಸಂಹರಿಸಲೋಸುಗ ಷಣ್ಮುಖನು ತೆರಳಿದಂತೆ ಸುಮತಿಯೊಡಗೂಡಿ ಹೊರಟು ಯಕ್ಷನನ್ನೇರಲಾ ಛಾಯಾಗುಪ್ತನು ಪಕ್ಷಿರಾಜನಂತೆ ಗಗನದೊಳ್ ನಡೆಯುತ, ನದೀನದಂಗಳಂ ವನಪರ್ವತಗಳಂ ತೋರಿಸುತ, ಮತ್ತೂ ಅಲ್ಲಲ್ಲಿ ಕಾಣುತಲಿರುವ ಪಟ್ಟಣಗಳ ವಿವರಗಳಂ ರಾಜ ಮಂತ್ರಿಗಳಿಗೆ ಅಲ್ಲಲ್ಲಿಯೇ ತಿಳುಹಿಸುತ ಬಹುದೂರ ಬಂದು ಗಂಗಾನದಿಯಂ ಕಂಡು ಇದೇ ಭಾಗೀರಥಿ ನದಿಯೆಂದು ಬಿನ್ನೈಸಲು, ಅದಂ ಕೇಳಿ ರಾಜೇಂದ್ರನು ಜಗತ್ಪಾವನೆಯಾದ ಭಾಗೀರಥಿಯಲ್ಲಿ ಸ್ನಾನವಂ ಮಾಡದೆ ಅತಿಕ್ರಮಿಸಿ ಪೋಗುವುದು ಉಚಿತವಲ್ಲವೆಂದು ಸುಮತಿಯೊಡಗೂಡಿ ಆ ನದೀ ತೀರದಲ್ಲಿ ಯಕ್ಷನಿಂದಿಳಿದು ಸ್ನಾನಾಹ್ನೀಕಗಳಂ ನೆರವೇರಿಸಿ, ಮೊದಲಿನಂತೆ ಇರ್ವರೂ ಯಕ್ಷನನ್ನೇರಿ ಉತ್ತರಾಭಿಮುಖವಾಗಿ ಹೊರಟು ಹಿಮವಂತನಂ ದಾಂಟಿ ಪೋಗುತ್ತ ಸ್ವಲ್ಪ ದೂರದೊಳ್ ಬ್ರಹ್ಮಾಂಡವೇ ಒಡೆದು ಪೋಗುವಂತೆ ಮಾಡುತ್ತಿರುವ ರಾಕ್ಷಸಸೇನೆಯ ಕೋಲಾಹಲ ಧ್ವನಿಯಂ ಕೇಳಿ ಇಲ್ಲಿ ಏನೋ ಒಂದು ವಿಶೇಷವಿರುವುದು. ವಿಚಾರಿಸದಲ್ಲದೆ ಮುಂದಕ್ಕೆ ಪೋಗಬಾರದೆಂದು ಮನದೊಳ್ ನಿಶ್ಚೈಸಿ ಯಕ್ಷನಂ ಕುರಿತು ಗಗನದೊಳ್ ಅದ [illegible] ರು ಎನಲಾ [illegible] ರಾಜೇಂದ್ರನ ಅಪ್ಪಣೆಯಂತೆ ಗಗನದೊಳ್ ನಿಲ್ಲಲು, ಆಗ ರಾಜೇಂದ್ರನು ಬಿಕ್ಕಿ ಬಿಕ್ಕಿ [illegible] ನೋಡುತ ಉತ್ತ [illegible] ರಾಕ್ಷಸರು [illegible] ಆಯುಧಗಳಂ ಧರಿಸಿ ಅತ್ಯುಗ್ರರಾಗಿ [illegible] ತಿ ಸುತ್ತುವರಿದು ಮುಂದಕ್ಕೆ ಒತ್ತಿ ಒತ್ತಿ ಪೋಗಿ, ಅಗ್ನಿಜ್ವಾಲೆಯಂ ಕಂಡು ಹಿಮ್ಮೆಟ್ಟಿ ಬರುವ [illegible] ನಿಂತಲ್ಲಿಯೇ ನಿಂತು ಏನೋ ಕೂಗುತಲಿರುವುದಂ ಮತ್ತೂ ರಾಕ್ಷಸರ ಮಧ್ಯದಲ್ಲಿ ಜ್ವಾಲೆಗಳೆಲ್ಲ ಬಿಟ್ಟು ಗೂಡಿ ಮಹೋಗ್ರವಾಗಿ ಬೆಳೆಯುತ್ತಿರುವುದಂ ಕಂಡು ಅದರ ನಿಧಾನವಂ ತಿಳಿಯದೆ ಒಂದುಕ್ಷಣ ಆಲೋಚನೆಯಂ ಮಾಡಿ ಯಾವನೋ ಒಬ್ಬ ಮಹಾಪುರುಷನು ಇಲ್ಲಿ ತಪವಂ ಗೈಯುತ್ತಿರುವನು, ಅವನ ವಿಘ್ನವಮಾಡುವುದು ರಾಕ್ಷಸರ ಸ್ವಭಾವವಾದುದರಿಂದ ಹೀಗೆ ಕಾಣುತಲಿದೆ, ದುಷ್ಟರಂ ನಿಗ್ರಹಿಸಿ, ಶಿಷ್ಟರಾದವರಂ ರಕ್ಷಿಸಿ, ಧರ್ಮವಂ ಸ್ಥಾಪಿಸುವುದು ಕ್ಷತ್ರಿಯರ ಧರ್ಮವಾದಕಾರಣ, ಈಗ ಈ ರಾಕ್ಷಸರನ್ನಿಗ್ರಹಿಸುವುದೇ ಯುಕ್ತವೆಂದು ನಿಶ್ಚೈಸಿ ಮಂತ್ರಿಯೊಡನೆ ತನ್ನ ಅಭಿಪ್ರಾಯವಂ ತಿಳಿಸಲು ಮಂತ್ರಿಯು, ಎಲೈ ರಾಜೇಂದ್ರನೆ! ದುಷ್ಟರಂ ನಿಗ್ರಹಿಸಿ ಶಿಷ್ಟರ ಪರಿಪಾಲನೆಯನ್ನೀನು ಮಾಡಿದರೆ ಈಗ ನಾವು ಪ್ರವೃತ್ತಿಸಿರುವ ಕಾರ್ಯವು ಅನಾಯಾಸದಿಂದಲೇ ಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ದುರಾತ್ಮರಂ ಶೀಘ್ರದಿಂ ಸಂಹರಿಸುವುದೇ ಯುಕ್ತವೆಂದು ವಿಜ್ಞಾಪನೆಯಂ ಮಾಡಲು, ಅದಂಕೇಳಿ ರಾಜೇಂದ್ರನು ಯಕ್ಷನಂ ಕುರಿತು ಎಲೈ ಛಾಯಾಗುಪ್ತನೆ! ಭೂಮಿಯೊಳ್ ಈ ದೈತ್ಯರು ಇರುವ ಬಳಿಗೆ ಸ್ವಲ್ಪ ದೂರದೊಳ್ ಉನ್ನತವಾಗಿರುವ ಒಂದು ಸ್ಥಳದಲ್ಲಿ ಈ ದೈತ್ಯರಿಗೆ ಅಭಿಮುಖವಾಗಿ ಇಳಿಯುವುದೆಂದೆನಲು, ಅದೇಪರಿಯಾಗಿ ಯಕ್ಷನು ಆಕ್ಷಣದಲ್ಲಿಯೇ ಭೂಮಿಗೆ ಇಳಿದು ರಾಜಮಂತ್ರಿಗಳಂ ಉನ್ನತವಾದ ಪ್ರದೇಶದೊಳ್ ನಿಲ್ಲಿಸಿ ಅವರ ಅಪ್ಪಣೆಯಿಂದ ತಾನು ಅವರ ಹಿಂಭಾಗದೊಳ್ ನಿಲ್ಲಲು, ಆಗ ಸುಗಂಧರಾಜೇಂದ್ರನು ಧನುವಂ ಪಿಡಿದು ಟೇಂಕಾರವಂ ಮಾಡುತ ಗಿರಿಗಳೊಡೆಯುವಂತೆ ಸಿಂಹನಾದ ಮಾಡಲು, ಆ ಧ್ವನಿಯಂ ಕೇಳಿ ಎದೆ ಒಡೆದು ಗಡಗಡನೆ ನಡುಗಿ ಕಂಗೆಟ್ಟು ಆಯುಧಗಳಂ ಬಿಸುಟು ದಿಕ್ಕುದಿಕ್ಕುಗಳಂ ನೋಡಿ ಸಮೀಪದೊಳ್ ನಿಂತಿರುವ ಸುಂದರಾಕಾರನಾದ ಸುಗಂಧರಾಜೇಂದ್ರನಂ ನೋಡಿ ದೈತ್ಯರೆಲ್ಲರೂ ಒಂದಾಗಿ ಇದೇನು ಆಶ್ಚರ್ಯ, ನರಿಯು ಬಂದು ಭೇರುಂಡಗಳ ತಂಡಗಳಂ ಬೆದರಿಸುವಂತೆ ಈ ಮನುಷ್ಯಮಾತ್ರದವನು ನಮಗೆ ಎದುರಾಗಿ ಸಿಂಹನಾದವಂ ಮಾಡುವುದು ವಿಪರೀತಕಾಲವಾಗಿ ಕಾಣುವುದು. ಆದರೂ ಸುಮ್ಮನೆ ಇರಬಾರದೆಂದು ಎಲ್ಲರೂ ಆಲೋಚಿಸಿ ನಾಲ್ಕು ಜನ ರಾಕ್ಷಸರಂ ಪರೀಕ್ಷೆಗೋಸುಗ ಸುಗಂಧರಾಜನಿದ್ದೆಡೆಗೆ ಕಳುಹಲು, ಆಗ ರಾಜೇಂದ್ರನು ಆಯುಧಗಳಂ ಪಿಡಿದು ಎದುರಾಗಿ ಬರುವ ರಾಕ್ಷಸರಂ ಕಂಡು ನಾಲ್ಕು ಬಾಣಗಳಿಂದ ಅವರಂ ಸಂಹರಿಸಲು, ಅದಂ ಕಂಡು ವಿಕ್ರಾಂತ ರಾಕ್ಷಸರು ಈ ಮಾನವನು ಸಾಮಾನ್ಯನೆಂದೆಣಿಸಕೂಡದು, ಏತಕ್ಕೆ ಬಂದಿರುವನೊ, ಆದರೇನಾಯಿತು ನೋಡೋಣ ಎಂದು ಇವನಂ ಸಂಹರಿಸುವೆವೆನುತ ಬಾಣವರ್ಷಂಗಳಂ ಕರೆಯುತ್ತ, ಸುತ್ತಲೂ ಒತ್ತೊತ್ತಿ ಬರುತ್ತಿರಲು, ರಾಜೇಂದ್ರನು ಅವರಂ ಬಾಣಂಗಳಿಂದ ಕತ್ತರಿಸಿಬಿಡಲು ಅದಂಕಂಡು ದೈತ್ಯಸೇನಾಧಿಪರಾದ ಮಹಾರಥಿಕರೆಲ್ಲರೂ ಕೋಪಗೊಂಡು ಬಿಲ್ಲುಗಳಂ ಪಿಡಿದು ಬಾಣಂಗಳಂ ಮಳೆಗರೆದಂತೆ ಕರೆಯುತ ಮಿತಿಮೀರಿ ಬರುತ್ತಿರಲು ಆಗ ಮಹಾಶೂರನಾದ ಸುಗಂಧರಾಜೇಂದ್ರನು ಅವರ ಸಾರಥಿಗಳಂ ಸಂಹರಿಸಿ ನಿರಾಯುಧರಂ ಮಾಡಿ ನಿಲ್ಲಿಸಲು, ಅವರೆಲ್ಲರೂ ಬೆಂಕಿಯಂತಾಗಿ ಉರವಣಿಸಿ ಮೇಲೆ ಬೀಳುತ್ತಿರಲು, ಆಗ ರಾಜೇಂದ್ರನು ಶರಗಳಿಂದ ತರಿದು ನರಿನಾಯಿಗಳಿಗೆ ಆಹಾರವನ್ನಾಗಿ ಮಾಡಲು, ಆಗ ದೂರದೊಳ್ ತನ್ನ ಸೇನೆಯೊಂದೊಡಗೂಡಿ ನೋಡುತ ನಿಂತಿರ್ದ ಕಪಾಲಕೇತುವೆಂಬ ರಾಕ್ಷಸ ಸೇನಾಧಿಪನು ಇವರೆಲ್ಲರೂ ಮಡಿದು ಬಿದ್ದುದಂ ಕಂಡು ಕೋಪಗೊಂಡು ರಾಜೇಂದ್ರನ ಎದುರಾಗಿ ಬಂದು ನಿಂದು ಎಲೋ ನರಾಧಮನೇ! ಈ ಹುಡುಗರಂ ಹೊಡೆದು ಗೆದ್ದೆನೆಂದು ಗರ್ವವಂ ಮಾಡಬೇಡ, ನಮ್ಮೊಡನೆ ಕಾಳಗವಂ ಕಾದಿ ಬದುಕುವವರು ಮೂರುಲೋಕದಲ್ಲಿಯೂ ಇಲ್ಲ. ನಿನ್ನ ಆಕಾರವನ್ನೀಕ್ಷಿಸಿದರೆ ಹೊಡೆಯುವುದಕ್ಕೆ ಕೈ ಬಾರದು ಈವರೆಗೆ ನೀನು ಮಾಡಿದ ದುರ್ನಡತೆಗಳಂ ಸಹಿಸಿ ನಿನ್ನ ಪ್ರಾಣದೊರಕೆ ಬಿಡುವೆನು, ಬೇಗಪೋಗಿ ಎಲ್ಲಾದರೂ ಬದುಕು ಎಂದು ನುಡಿಯಲಾ ಮಾತಂಕೇಳಿ ರಾಜೇಂದ್ರನು ಕೋಪವಂ ತಾಳಿ, ಎಲೋ ಖೂಳರಾಕ್ಷಸನೇ! ಬಾಯಿಗೆ ಬಂದಂತೆ ಬೊಗಳದಿರು ಎನುತ ಮೂರು ಬಾಣಂಗಳಿಂದವನ ಸಾರಥಿಯ ಸಿರವಂ ಕತ್ತರಿಸಿ ಮತ್ತೆರಡು ಬಾಣಂಗಳಿಂದ ರಥವಂ ರೇಣುಗಳಂತೆ ಮಾಡಿ ಮತ್ತೊಂದು ಬಾಣವಂ ಬಿಡುವಾಗ ಬೀರಲು,

ಸಶೇಷ.

ಬೆಲ್ಲವನ್ನು ತಯಾರಿಸುವ ವಿಷಯ.

ನಂತರ ಹಿಂಡಿ (Megass) ದರಗೆಲೆಯನ್ನು (Trash) ತಂದು ಒಲೆಯಲ್ಲಿ ಉರಿಸುತ್ತಾರೆ. ಪ್ರತಿದಿನವೂ ಸಿಕ್ಕಿದ ಹಿಂಡಿಯನ್ನು ಆಯಾದಿನ ಒಣಹಾಕಿ ಮಾರನೆಯದಿನ ಉರಿಸುವುದಕ್ಕೆ ಉಪಯೋಗಿಸುತ್ತಾರೆ. ರಸವನ್ನು ಕುದಿಸುವುದಕ್ಕೆ ಮುಖ್ಯವಾಗಿ ರಸವು ದಪ್ಪವಾದನಂತರ ನಿಧಾನವಾದ ಬೆಂಕಿಯು ಇರಬೇಕು. ದೊಡ್ಡಮರದ ತುಂಡುಗಳನ್ನು ಉರಿಸಿದರೆ ಅದು ಹೆಚ್ಚು ಕಾವನ್ನು ಕೊಡುವುದರಿಂದ ಬೆಲ್ಲವು ಏಕರೀತಿಯಲ್ಲಿ ಗಟ್ಟಿಯಾಗುವುದಿಲ್ಲ ಆದುದರಿಂದ ಅಂಥಾ ದೊಡ್ಡ ತುಂಡುಗಳನ್ನು ಉರಿಸುವುದು ತಪ್ಪು. ಕೊಪ್ಪರಿಗೆಯಲ್ಲಿ ಹಿಡಿಯುವಷ್ಟು ರಸವನ್ನು ತುಂಬಿಸಿದ ಮೇಲೆ ಅದನ್ನು ಕುದಿಸಬೇಕು. ರಸವು ತುಂಬಾ ಇಲ್ಲದಿದ್ದರೆ ನೊರೆಯು ಸರಿಯಾಗಿ ಮೇಲಕ್ಕೆ ಉಕ್ಕಿ ಬರುವುದಿಲ್ಲ, ಮತ್ತೂ ನೊರೆಯನ್ನು ತೆಗೆದು ಬಿಸಾಡುವುದಕ್ಕೆ ಸಹಾ ಕಷ್ಟವಾಗುತ್ತದೆ. ರಸವು ಕುದಿಯುವುದಕ್ಕೆ ಸಮೀಪಿಸಿದ ಕೂಡಲೆ ನೊರೆಯು ಮೇಲಕ್ಕೆ ತೇಲುತ್ತದೆ. ನೊರೆಯ ಸಂಗಡಲೇ ರಸದಲ್ಲಿರುವ ಕಶ್ಮಲವು ಕೂಡ ಮೇಲಕ್ಕೆ ಬರುತ್ತದೆ. ಈ ಮೊದಲನೇ ನೊರೆಯನ್ನು ಕೆಳಗಿರುವ ರಸವನ್ನು ಕಲಕಿಬಿಡದೇನೆ ಜಾಗ್ರತೆಯಿಂದ ತೆಗೆದು ಬಿಸಾಡಬೇಕು. ಇದಕ್ಕೆ ಒಂದು ಕಬ್ಬಿಣದ ಜಲ್ಲಡಿಯನ್ನು ಒಂದು ತೆಳುವಾದ ಬಿದುರಿನ ತುದಿಗೆ ಕಟ್ಟಿ ಅದರಿಂದ ನೊರೆಯನ್ನು ತೆಗೆಯುವುದು ಉತ್ತಮವಾದ ಉಪಾಯವು. ಈ ಜಲ್ಲಡಿಯಲ್ಲಿ ಸೇರಬಹುದಾದ ರಸವು ಅದರ ರಂಧ್ರಗಳಿಂದ ಇಳಿದು ಹೋಗಿ ನೊರೆಯು ಮಾತ್ರ ಅದರ ಮೇಲ್ಭಾಗಕ್ಕೆ ಅಂಟಿಕೊಂಡು ಬರುವುದು. ಹೀಗೆ ತೆಗೆಯಲ್ಪಡುವ ನೊರೆಯಲ್ಲಿ ಸಹಾ ಸ್ವಲ್ಪ ರಸದ ಅಂಶವು ಸೇರಿ ನಷ್ಟವಾಗುವುದುಂಟು. ಹೀಗೆ ನಷ್ಟವಾಗುವ ರಸವನ್ನು ತಿರಿಗಿ ಪಡೆಯುವುದಕ್ಕೆ ಈ ಕೆಳಗಿನ ಸುಲಭವಾದ ಉಪಾಯವನ್ನು ಮಾಡಬಹುದು. ಒಂದು ದೊಡ್ಡದಾದ ಮಣ್ಣಿನ ಗಡಿಗೆಯ ಕೆಳಭಾಗದಲ್ಲಿ ಒಂದು ತೂತುಮಾಡಿ ಆ ತೂತನ್ನು ಬಟ್ಟೆಯ ತುಂಡಿನಿಂದ ಮುಚ್ಚಿ ಆ ಗಡಿಗೆಯಲ್ಲಿ ಬಿಸಾಡಲ್ಪಡುವ ನೊರೆಯನ್ನು ಹಾಕುವುದು ಎಲ್ಲಾ ನೊರೆಯನ್ನು ಅದರಲ್ಲಿ ಹಾಕಿದ ಸ್ವಲ್ಪ ಹೊತ್ತಿನ ಮೇಲೆ ನೊರೆಯಲ್ಲಿರುವ ರಸವು ಭಾರವಾಗಿರುವುದರಿಂದ ಕೆಳಕ್ಕೆ ಇಳಿಯುತ್ತದೆ. ಇದನ್ನು ಗಡಿಗೆ ತೂತಿನಿಂದ ಇಳಿಸಿ ಎರಡನೇ ಅಡಿಗೆಗೆ (Boiling) ಕೊಡಿಸಬಹುದು. ಮೊದಲು ಬರುವ ನೊರೆಯನ್ನು ತೆಗೆದನಂತರ ರಸವು ಜೋರಾಗಿ ಕುದಿಯುತ್ತದೆ. ಮತ್ತೆ ಎರಡನೇಸಾರಿ ನೊರೆಯು ಕಾಣುತ್ತದೆ. ಈ ನೊರೆಯು ಸ್ವಲ್ಪ ತೆಳುವಾಗಿರುವುದು. ಇದನ್ನು ತೆಗೆದು ಹಾಕಬೇಕು. ನಂತರ ಅಲ್ಪಸ್ವಲ್ಪ ನೊರೆಯು ಕಾಣುವುದು. ಇದನ್ನು ಆಗಾಗ್ಗೆ ತೆಗೆಯುವುದು ಕಷ್ಟವಲ್ಲ. ರಸವನ್ನು ಇನ್ನೂ ಹೆಚ್ಚಾಗಿ ಶುದ್ಧಿಪಡಿಸುವ ಬಗ್ಗೆಯೂ ಬೆಲ್ಲದ ವರ್ಣವನ್ನು ವೃದ್ಧಿಸುವುದಕ್ಕಾಗಿಯೂ ಕೆಲವರು ತೆಳ್ಳಗಾದ ಹಾಲನ್ನು ಅಥವಾ ಬೆಂಡೆಯ ರಸವನ್ನು ಇದಕ್ಕೆ ಕೊಡಿಸುವುದುಂಟು. ಸಾಧಾರಣ ಎರಡುವರೆ ಘಂಟೆಗಳ ನಂತರ ರಸವು ಕುದಿದು ಕೊಪ್ಪರಿಗೆಯ ಕುತ್ತಿಗೆವರೆಗೆ ಏಳುತ್ತದೆ, ನಂತರ ರಸವು ದಪ್ಪವಾಗಿ ದೊಡ್ಡದೊಡ್ಡ ಗುಳ್ಳೆಗಳು ಏಳುತ್ತವೆ. ಈ ಸ್ಥಿತಿಯಲ್ಲಿರುವಾಗ ಬೆಲ್ಲಕ್ಕೆ ಒಂದುತರದ ಸುವಾಸನೆ ಬರುವಹಾಗೆ ಕೆಲವು ಕಡೆಗಳಲ್ಲಿ ತುಪ್ಪ, ಬೆಣ್ಣೆ, ಎಳ್ಳೆಣ್ಣೆ, ತೆಂಗಿನೆಣ್ಣೆ ಅಥವಾ ತೆಂಗಿನಹಾಲನ್ನು ಕೊಡಿಸುವ ಪದ್ಧತಿಯಿದೆ. ಎಣ್ಣೆ ಕೊಡಿಸುವುದರಿಂದ ರಸವು ಉಕ್ಕಿ ಹೋಗುವುದನ್ನು ನಿಲ್ಲಿಸುತ್ತದೆ. ಈ ಸ್ಥಿತಿಯಲ್ಲಿ ಬೆಂಕಿಯನ್ನು ಸ್ವಲ್ಪಸ್ವಲ್ಪವಾಗಿ ನಿಧಾನಮಾಡುತ್ತಲೇ ಬರಬೇಕು. ರಸದಲ್ಲಿರುವ ನೀರಿನ ಅಂಶವು ಸಂಪೂರ್ತಿಯಾಗಿ ಹಬೆಯಾಗಿ ಹೋದನಂತರ ರಸವು ಹಳದಿವರ್ಣವನ್ನು ಧರಿಸುತ್ತದೆ. ಆಗ್ಗೆ ಅದನ್ನು ಒಂದು ಉದ್ದವಾದ ಬಿದುರಿನ ತುದಿಗೆ ಒಡ್ಡಿಸಲ್ಪಟ್ಟ ಅರ್ಧ ಚಂದ್ರಾಕಾರದ ಮರದ ಸಲಿಕೆಯಿಂದ (Wooden hoe) ಯಾವಾಗಲೂ ತೊಳೆಸುತ್ತಲೇ ಇರಬೇಕು. ಬೆಲ್ಲವನ್ನು ಮಾಡುವುದಕ್ಕೆ ಆರಿದಾಗ ಗಟ್ಟಿಯಾಗುವಷ್ಟು ರಸವನ್ನು ಕುದಿಸುತ್ತಾರೆ. ಈ ಹದವನ್ನು ತಿಳಿಯುವುದಕ್ಕೆ ಕುದಿಸಲ್ಪಟ್ಟ ರಸದ ಕೆಲವು ಬೊಟ್ಟುಗಳನ್ನು ತೆಗೆದು ಒಂದು ಪಾತ್ರೆಯಲ್ಲಿರುವ ತಣ್ಣೀರಿನಲ್ಲಿ ಮಂಡಲಾಕಾರವಾಗಿ ಬಿಡುತ್ತಾರೆ. ನೀರಿನಿಂದ ಅದನ್ನು ತೆಗೆದಾಗ ಗಟ್ಟಿಯಾದ ಗುಂಡುಗಳಾದರೆ ಕೊಪ್ಪರಿಗೆಯನ್ನು ಒಲೆಯಿಂದ ತೆಗೆಯುವುದಕ್ಕೆ ಸಿದ್ಧವಾಗಿದೆಯೆಂದು ತಿಳಿಯಬೇಕು. ತಕ್ಕ ಕಾಲದಲ್ಲಿ ಕೊಪ್ಪರಿಗೆಯನ್ನು ಒಲೆಯಿಂದ ತೆಗೆದು ಅದರಲ್ಲಿರುವ ಪದಾರ್ಥವನ್ನು ಮರದ ಸಲಿಕೆಗಳಿಂದ ಬಿಡದೆ ಕದಡಿಸಿ ಆರಿಸುತ್ತಾರೆ. ಮೆಲ್ಲಗೆ ಘಟ್ಟಿಯಾಗುವ ಈ ಪದಾರ್ಥವನ್ನು ಸ್ಥಳೀಕ ಪದ್ಧತಿ ಪ್ರಕಾರ ಬಾಳೆ ಮೇಲಾಗಲಿ ಮಣ್ಣಿನ ಗಡಿಗೆಗಳಲ್ಲಿ ಆಗಲೀ ಅಥವಾ ಅಚ್ಚುಗಳಲ್ಲಾಗಲಿ ಹೊಯ್ಯುತ್ತಾರೆ.

ಅತ್ಯುತ್ತಮವಾದ ಬೆಲ್ಲದ ಲಕ್ಷಣಗಳು ಯಾವುವೆಂದರೆ— ಬೆಲ್ಲಕ್ಕೆ ಹಳದಿ ಕೆಂಪುಬಣ್ಣವು ಇರಬೇಕು. ಮತ್ತೂ ಸ್ಫಟಿಕದ ಹಾಗೆ ಕಣಗಳುಳ್ಳದ್ದಾಗಿರಬೇಕು. ಇಂಥಾ ಬೆಲ್ಲಕ್ಕೆ ಹೆಚ್ಚು ಧಾರಣೆ ಬರುವುದು. ಕಾರಣಂಗಳು:—(೧) ಕೊಯ್ಯುವಾಗ ಕಬ್ಬು ನೆಟ್ಟಗೆ ಪಕ್ವಕ್ಕೆ ಬಂದಿರಬೇಕು. ಅದು ಎಳೆದಾಗಿಯೂ ಅಥವಾ ಮಿತಿಮೀರಿ ಬಲಿತದ್ದಾಗಿಯೂ ಇರಕೂಡದು. (೨) ಕಬ್ಬಿಗೆಯ ಖರ್ಚನ್ನು ತಗ್ಗಿಸುವುದಕ್ಕಾಗಿ ಯೋಗ್ಯವಾದ ಒಲೆಯನ್ನು ಕಟ್ಟಬೇಕು. (೩) ಕಬ್ಬಿನಿಂದ ಸಾಧ್ಯವಾದಷ್ಟು ಅಧಿಕ ರಸವನ್ನು ಹಿಂಡುವುದಕ್ಕಾಗಿ ಯೋಗ್ಯವಾದ ಗಾಣವನ್ನು ಉಪಯೋಗಿಸಬೇಕು. (೪) ಕಮ್ಮಿ ಕಾಲದೊಳಗೆ ಯಾ ಕಮ್ಮಿ ಕಬ್ಬಿಗೆಯ ಖರ್ಚಿನೊಳಗೆ ರಸವನ್ನು ಕುದಿಸಕೊಡುವ ಹಾಗೆ ಒಂದು ಯುಕ್ತವಾದ ಕೊಪ್ಪರಿಗೆ (ಕಡಾಯಿ) ಯನ್ನು ಉಪಯೋಗಿಸಬೇಕು. (೫) ಕೊಯ್ಯಲ್ಪಟ್ಟ ಕಬ್ಬುಗಳನ್ನು ಗಾಣಕ್ಕೆ ಕೊಡುವ ಮೊದಲು ಹೆಚ್ಚುಕಾಲ ಬಾಕಿ ಇಡಕೂಡದು (೬) ಕಬ್ಬಿನ ರಸವನ್ನು ಹಿಂಡಿದನಂತರ ಕೂಡಲೇ ಕುದಿಸಬೇಕು (೭) ರಸದಲ್ಲಿರುವ ಹುಳಿ ಪದಾರ್ಥವನ್ನು ಕಮ್ಮಿ ಮಾಡುವುದಕ್ಕಾಗಿ ಕುದಿಸುವುದಕ್ಕೆ ಮುಂಚೆ ತಕ್ಕಷ್ಟು ಸುಣ್ಣವನ್ನು ಬೆರಸಬೇಕು. (೮) ಮೇಲಕ್ಕೆ ತೇಲುವ ಎಲ್ಲಾ ನೊರೆಯನ್ನು ಜಾಗ್ರತೆಯಿಂದ ತೆಗೆಯಬೇಕು. (೯) ರಸವನ್ನು ಕುದಿಸುವುದಕ್ಕೆ ಬಹಳ ಜೋರಾದ ಬೆಂಕಿಯನ್ನು ಹಾಕದೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. (೧೦) ಕೊಪ್ಪರಿಗೆಯನ್ನು ಒಲೆಯಿಂದ ತಕ್ಕಕಾಲದಲ್ಲಿ ತೆಗೆಯಬೇಕು. (೧೧) ಬೆಲ್ಲವನ್ನು ಬಹಳ ವಾಯುಶೀತ ಮೇರೆಗೆ ಅಚ್ಚುಮಾಡಬೇಕು. (೧೨) ಬೆಲ್ಲವನ್ನು ಕೂಡಲೇ ಮಾರಲಿಕ್ಕೆ ಅನುಕೂಲವಿಲ್ಲದ ಪಕ್ಷದಲ್ಲಿ ಅದನ್ನು ಕಬ್ಬಿನ ಒಣಎಲೆಗಳಲ್ಲಿ ನೆಟ್ಟಗೆ ಕಟ್ಟಿ ಜೋಪಾನ ಮಾಡಿಡಬೇಕು.

ನಿಂಬೆಗಿಡದ ವ್ಯವಸಾಯ.

ಭೂಮಿ— ನೀರು ಚೆನ್ನಾಗಿ ಬಸಿದುಹೋಗತಕ್ಕ ಮತ್ತೂ ಸ್ವಲ್ಪಮಟ್ಟಿಗೆ ಗೋಡುಪ್ರದೇಶವಾಗಿರತಕ್ಕ ಜಮೀನು ನಿಂಬೆ ಗಿಡಗಳನ್ನು ಬೆಳೆಯಲು ಬಹಳ ಉತ್ಕೃಷ್ಟವಾಗಿರುತ್ತದೆ.

ಜಮೀನನ್ನು ೨ ಅಡಿ ಆಳವಾಗಿ ಅಗೆದು ಮಣ್ಣನ್ನು ಚೆನ್ನಾಗಿ ಸಡಲಿಸಬೇಕು. ಚೆನ್ನಾಗಿ ಮಾಗಿದ ಕೊಟ್ಟಿಗೆಗೊಬ್ಬರವನ್ನು ಮಣ್ಣಿನ ಜತೆಯಲ್ಲಿ ಬೆರಸಬೇಕು. ಮಾಘಮಾಸದಲ್ಲಿ ಮಡಿಗಳಲ್ಲಿ ನಿಂಬೆಗಿಡಗಳ ಕೆಳಗೆ ಒಣಗಿ ಚೆನ್ನಾಗಿ ಮಾಗಿ ತಾವೇ ಉದುರತಕ್ಕ ನಿಂಬೆ ಹಣ್ಣುಗಳನ್ನು ಆರಿಸಿ ತೆಗೆದುಕೊಂಡು ಅವುಗಳಲ್ಲಿ ಸ್ವಲ್ಪವಾದರೂ ಹುಳುಬಿದ್ದ ಗಾಯವಾಗಿಲ್ಲದ ಬೀಜಗಳನ್ನು ಆರಿಸಿ ತೆಗೆದು ಅವುಗಳನ್ನು ಬೂದಿಯಲ್ಲಿ ಹೊರಳಿಸಿ ಒಣಗುವುದಕ್ಕೆ ಮೊದಲೇ ನಾಲ್ಕು ಅಂಗುಲಗಳ ದೂರಕ್ಕೆ ಒಂದೊಂದರಂತೆ ಬಿತ್ತಗಳನ್ನು ಮೇಲ್ಕಂಡ ರೀತಿಯಲ್ಲಿ ಹದಮಾಡಲ್ಪಟ್ಟ ಪಾತಿಯಲ್ಲಿ ನೆಡಬೇಕು. ನೆಟ್ಟನಂತರ ಪಾತಿಯಮೇಲೆ ಬಾಳೆತರಗನ್ನು ಮುಚ್ಚಿ ಹಸಿಯು ಆರದಂತೆ ನೀರು ಹೊಯ್ಯುತ್ತಿರಬೇಕು. ಮುಂದಲ ಕಾರ್ತೀಕಮಾಸದ ಹೊತ್ತಿಗೆ ಸಸಿಗಳು ೧ ಅಥವಾ ೨ ಅಡಿ ಎತ್ತರವಾಗಿ ಬೆಳೆಯುತ್ತವೆ ಆಗ್ಗೆ ಎರಡು ಅಡಿಗಳ ದೂರಕ್ಕೆ ಒಂದೊಂದು ಸಸಿಯನ್ನು ಬಿಟ್ಟು ಮಧ್ಯೆ ಇರುವ ಸಸಿಗಳನ್ನೆಲ್ಲಾ ಬಹಳ ಎಚ್ಚರಿಕೆಯಿಂದ ಕಿತ್ತು ಅವುಗಳನ್ನು ಇದಕ್ಕಾಗಿ ಅಗೆದು ಗೊಬ್ಬರಹಾಕಿ ಹದಮಾಡಲ್ಪಟ್ಟಿರುವ ಜಮೀನಿನಲ್ಲಿ ೨ ಅಡಿಗಳ ದೂರಕ್ಕೆ ಒಂದೊಂದರಂತೆ ನೆಡಬೇಕು. ಬೇಸಿಗೆಯಲ್ಲಿ ಗಿಡಗಳು ಒಣಗದಂತೆ ನೀರನ್ನು ಹಾಕುತ್ತಿರಬೇಕು. ಈ ರೀತಿಯಾಗಿ ಬೆಳೆಸಿ ಮೂರು ವರುಷಗಳ ನಂತರ ಸಸಿಗಳನ್ನು ಆಳವಾಗಿ ಗುಂಡಿಗಳನ್ನು ಮಾಡಿ ಪಳಗಿದ ಗೊಬ್ಬರವನ್ನು ಹಾಕಿ ಹದಿನೈದು ಅಡಿಗಳ ದೂರಕ್ಕೆ ಒಂದೊಂದರಂತೆ ಕಾರ್ತೀಕಮಾಸದಲ್ಲಿ ನೆಡಬೇಕು. ಗಿಡಗಳು ದೊಡ್ಡವುಗಳಾಗುವವರಿವಿಗೂ ಗಿಡಗಳ ಮಧ್ಯೆ ಇರತಕ್ಕ ಪ್ರದೇಶದಲ್ಲಿ ಬಾಳೇ ಗಿಡಗಳನ್ನು ಬೆಳೆಸಬಹುದು. ಹೀಗೆ ದೊಡ್ಡದೊಡ್ಡ ಗುಂಡಿಗಳಲ್ಲಿ ನೆಟ್ಟ ಮೂರು ವರ್ಷಗಳನಂತರ ಗಿಡಗಳಲ್ಲಿ ಫಲಬಿಡಲು ಆರಂಭವಾಗುವುದು.

ಪ್ರತಿವರ್ಷವೂ ತೋಟವನ್ನು ಚೆನ್ನಾಗಿ ಅಗತೆಮಾಡಿ ಮಾಗಿದ ಕೊಟ್ಟಿಗೆ ಗೊಬ್ಬರವನ್ನು ಹಾಕುತ್ತಿರಬೇಕು. ಆಷಾಢಮಾಸದಲ್ಲಿ ಅಗತೆಮಾಡಿ ಗೊಬ್ಬರವನ್ನು ಹಾಕಿದರೆ ಉತ್ಕೃಷ್ಟವಾದ ಫಲದೊರೆಯುತ್ತದೆ. ಮಾರ್ಗಶಿರ ಮಾಸದಲ್ಲಿ ಒಂದಾವರ್ತಿ ಅಗತೆಮಾಡಿದರೆ ಕಳೆಗಳೆಲ್ಲವೂ ನಾಶವಾಗುವುವಲ್ಲದೆ ಮಣ್ಣು ಸಡಿಲವಾಗುವುದರಿಂದ ಭೂಮಿಯಲ್ಲಿ ತೇವವು ಬಹಳಕಾಲ ನಿಲ್ಲುವುದು. "ಕೊಟ್ಟಿಗೆ ಗೊಬ್ಬರವೇ ಉತ್ತಮವಾದ ಗೊಬ್ಬರ. ಮೂಳೆ ಗೊಬ್ಬರವು ಫಲವನ್ನು ಹೆಚ್ಚು ಮಾಡುತ್ತದೆ.

ಗಿಡಗಳಲ್ಲಿ ಒಣಗಿಹೋದ ರೆಂಬೆಗಳನ್ನು ಆಗಾಗ್ಗೆ ಕಿತ್ತುಹಾಕುತ್ತಿರಬೇಕು. ಗಿಡಗಳ ಒಂದು ಅಥವಾ ಎರಡು ದೊಡ್ಡಕಾಲುಗಳನ್ನು ಬಿಟ್ಟು ಸಣ್ಣಸಣ್ಣ ರೆಂಬೆಗಳನ್ನು ಕತ್ತರಿಸಿ ಗಿಡವು ಉದ್ದವಾಗಿ ಬೆಳೆಯುವಂತೆ ಮಾಡಬೇಕು. ಈ ರೀತಿಯಲ್ಲಿ ವ್ಯವಸಾಯಮಾಡಿದರೆ ವರ್ಷಕ್ಕೆ ಗಿಡವೊಂದಕ್ಕೆ ಸರಾಸರಿ ಸಾವಿರ ಮೊದಲುಗೊಂಡು ಮೂರು ಸಾವಿರ ಹಣ್ಣುಗಳ ವರೆಗೂ ಬಿಡುವುವು.

ಹಣ್ಣುಗಳನ್ನು ಸ್ಥಳದಿಂದ ಸ್ಥಳಕ್ಕೆ ಕಳುಹಿಸುವಾಗಲೂ ಮತ್ತು ಹೆಚ್ಚು ಕಾಲ ಇಟ್ಟಿರಬೇಕಾದಾಗಲೂ ಹಣ್ಣುಗಳು ಒಂದಕೊಂದು ತಗಲದಂತೆ ದಪ್ಪನಾದ ಕಾಗದಗಳಲ್ಲಿ ಸುತ್ತಿ ಒಂದು ಪೆಟ್ಟಿಗೆಯಲ್ಲಿ ಇಡಬೇಕು ಹೀಗೆ ಮಾಡಿದರೆ ಹಣ್ಣು ಕೊಳೆತುಹೋಗದೆ ಬಹಳ ದಿನಗಳವರಿವಿಗೂ ತಡೆಯುವುವು.

ಬಾಳೆನಾರು.

ನಮ್ಮ ರೈತರು ಸಾಮಾನ್ಯವಾಗಿ ಬಾಳೆ ಗಿಡಗಳ ಎಲೆ ಮತ್ತು ಕಾಯಿಗಳನ್ನು ಉಪಯೋಗಿಸಿಕೊಂಡು ಬಾಳೆ ಕಂಬಗಳನ್ನು ಬಿಸಾಡಿಬಿಡುವರು. ಬಾಳೆ ಪಟ್ಟೆಗಳಿಂದ ನಾರನ್ನು ತೆಗೆದು ಬಟ್ಟೆಗಳನ್ನು ಮತ್ತು ಹಗ್ಗಗಳನ್ನು ಮಾಡಬಹುದೆಂಬ ಅಂಶವು ಅವರುಗಳಿಗೆ ತಿಳಿಯದಿರುವುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಇದುವರಿವಿಗೆ ಪರೀಕ್ಷಿಸಿ ನೋಡಿದ್ದರಲ್ಲಿ ಬಾಳೆಯನಾರಿನಿಂದ ಬಹಳ ಶ್ರೇಷ್ಠವಾದ ಹಗ್ಗವನ್ನು ತಯಾರುಮಾಡಬಹುದೆಂದು ಕಂಡುಬಂದಿದೆ. ಹಡಗುಗಳಲ್ಲಿ ಉಪಯೋಗಿಸಲ್ಪಡುವ ಮ್ಯಾನಿಲಾ ಹಗ್ಗಗಳು (Manila Rope) ಮಲಯಾ ದ್ವೀಪಗಳಲ್ಲಿ ಬೆಳೆಯುವ ಮ್ಯಾನಿಲಾ ಬಾಳೇಗಿಡಗಳ ನಾರಿನಿಂದ ತಯಾರಿಸಲ್ಪಟ್ಟವುಗಳಾಗಿರುತ್ತವೆ ಅನಂತಶಯನದ ಕುಶಲವಿದ್ಯವನ್ನು ಕಲಿಸತಕ್ಕ ಪಾಠಶಾಲೆಯಲ್ಲಿ (School of Arts) ಬಾಳೆನಾರಿನಿಂದ ಬಟ್ಟೆಗನ್ನು ತಯಾರುಮಾಡುತ್ತಾರೆ. ಇವುಗಳಲ್ಲಿ ಕೆಲವು ರೇಷ್ಮೆ ಬಟ್ಟೆಗಳಿಗಿಂತಲೂ ಉತ್ತಮವಾಗಿರುವಂತೆ ಕಾಣುತ್ತವೆ.

ಬಾಳೆ ನಾರನ್ನು ತೆಗೆಯುವುದು ಬಹಳ ಸುಲಭ ಮತ್ತು ನಾರನ್ನು ತೆಗೆಯುವುದಕ್ಕೆ ಉಪಯೋಗಿಸಲ್ಪಡುವ ಯಂತ್ರವು ಸಹ ಬಹಳ ಸಾಧಾರಣವಾದದ್ದಾಗಿದೆ. ದಕ್ಷಿಣ ಇಂಡಿಯಾದಲ್ಲಿ ಬಾಳೆ ನಾರನ್ನು ತೆಗೆಯುವ ಕೈಗಾರಿಕೆಯನ್ನು ಮೊದಲು ಸ್ಥಾಪಿಸಿದ ಉದಕಮಂಡಲದ ಮಿ॥ ಪ್ರೌಡ್ ಲಾಕ್ (Mr. Proudlock) ಎಂಬುವರು ಈ ಯಂತ್ರವನ್ನು ತಯಾರಿಸಿದರು. ಇದರ ಖರೀದಿ ೨ ರೂಪಾಯಿಮಾತ್ರ. ಅನಂತಶಯನದ ಕುಶಲವಿದ್ಯೆಯ ಪಾಠಶಾಲೆಯಲ್ಲಿ ಈಚೆಗೆ ಮೇಲ್ಕಂಡ ಯಂತ್ರಕ್ಕಿಂತಲೂ ಸುಲಭವಾದ ಮತ್ತು ಹಗುರವಾದ ಮತ್ತೊಂದು ಯಂತ್ರವನ್ನು ತಯಾರುಮಾಡಿರುತ್ತಾರೆ. ಒಬ್ಬ ಮನುಷ್ಯನು ಸ್ವಲ್ಪ ದಿನಗಳ ಮಟ್ಟಿಗೆ ಈ ಯಂತ್ರಗಳಿಂದ ಕೆಲಸಮಾಡಿದರೆ ದಿನಕ್ಕೆ ಹತ್ತು ಬಾಳೆಕಂಬಗಳಿಂದ ನಾರನ್ನು ತೆಗೆಯುವಷ್ಟು ಅನುಭವವನ್ನು ಹೊಂದಬಹುದು.

ಒಂದು ಸಾಧಾರಣವಾದ ಬಾಳೆ ಕಂಬದಿಂದ ಸುಮಾರು ೨ ಸೇರು ನಾರನ್ನು ತೆಗೆಯಬಹುದು. ಒಂದು ಟನ್ ಅಥವಾ ೯೦ ಮಣ ನಾರನ್ನು ತೆಗೆಯಬೇಕಾದರೆ ಒಬ್ಬ ಮನುಷ್ಯನಿಗೆ ೩೪ ರೂ. ಕೂಲಿಯನ್ನು ಕೊಡಬೇಕಾಗುವುದು ಮೇಲ್ಕಂಡ ೯೦ ಮಣ ನಾರನ್ನು ಇಂಗ್ಲೆಂಡಿಗೆ ಸಾಗಿಸಬೇಕಾದರೆ ೬೬ ರೂಪಾಯಿ ಖರ್ಚಾಗುವುದು. ಅಂತು ೧ ಟನ್ ನಾರಿಗೆ ೧೦೦ ರೂಪಾಯಿ ಖರ್ಚಾಗುವುದು. ಆದರೆ ಲಂಡನ್ನಿನಲ್ಲಿ ೧ ಟನ್ ನಾರಿಗೆ ೩೫೦ ರೂಪಾಯಿ ಬೆಲೆ ಸಿಕ್ಕುವುದು. ಅಂದರೆ ೧ ಟನ್ ನಾರನ್ನು ತಯಾರುಮಾಡಿದರೆ ೨೫೦ ರೂಪಾಯಿ ಆದಾಯವನ್ನು ಸಂಪಾದಿಸಬಹುದೆಂದಾಯಿತು. ಆದರೆ ೧ ಟನ್ ನಾರನ್ನು ತಯಾರಿಸಬೇಕಾದರೆ ೧೫೦೦ ಬಾಳೆ ಕಂಬಗಳು ಬೇಕಾಗುವುವು. ಈ ಕಂಬಗಳಿಗೆ ಸುಮಾರು ೩೦ ರೂಪಾಯಿ ಬೆಲೆಯಾಗಬಹುದು. ಅಂತೂ ೧ ಟನ್ ನಾರಿಗೆ ೨೨೦ ರೂಪಾಯಿಗಳ ನಿವ್ವಳ ಆದಾಯಸಿಕ್ಕಿದಂತಾಯಿತು. ಒಂದು ಎಕರೆ ವಿಸ್ತೀರ್ಣದಲ್ಲಿ ೧೫೦೦ ಬಾಳೆಗಿಡಗಳನ್ನು ಹಾಕಬಹುದು. ಮತ್ತು ಗಿಡಗಳಲ್ಲಿ ಫಲವಾಗಬೇಕಾದರೆ ೧॥ ವರುಷಕಾಲವಾಗುವುದು. ಗೊನೆಗಳನ್ನು ಮಾರುವುದರಿಂದ ಸುಮಾರು ೩೦೦ ರೂಪಾಯಿ ಸಿಕ್ಕುವುದು. ವ್ಯವಸಾಯದ ಖರ್ಚಿಗಾಗಿ ೭೫ ರೂಪಾಯಿಗಳನ್ನು ಕಳೆದುಹಾಕಿದರೆ ಬಾಳೆ ಫಲದಿಂದ ೨೨೫ ರೂಪಾಯಿಗಳು ಆದಾಯವಾದಂತಾಯಿತು. ಮೇಲೆ ಹೇಳಿದಂತೆ ನಾರಿನಿಂದ ಸಿಕ್ಕುವ ೨೨೦ ರೂಪಾಯಿಗಳನ್ನು ಸೇರಿಸಿದರೆ ಒಟ್ಟು ಒಂದು ಎಕರೆ ಜಮೀನಿನಲ್ಲಿ ಬಾಳೆಯನ್ನು ಬೆಳೆಯುವುದರಿಂದ ೪೪೫ ರೂಪಾಯಿ ಆದಾಯ ದೊರೆತಂತಾಗುವುದು.

ಬಾಳೆಯ ವ್ಯವಸಾಯದಿಂದ ತುಂಬಾ ಆದಾಯವಿದೆಯೆಂಬುವುದು ಮೇಲಿನ ಲೆಕ್ಕಾಚಾರದಿಂದ ವ್ಯಕ್ತವಾಗುತ್ತದೆ ಆದರೆ ಬಾಳೆಯ ಫಲದಿಂದ ಮಾತ್ರ ಸಿಕ್ಕುವ ಲಾಭದಿಂದಲೇ ತೃಪ್ತಿಪಡದೆ ಇನ್ನುಮುಂದೆಯಾದರೂ ನಮ್ಮ ಜನಗಳು ಬಾಳೆ ಕಂಬಗಳನ್ನು ವ್ಯರ್ಥವಾಗಿ ಬಿಸಾಡದೆ ಬಾಳೆ ನಾರನ್ನು ತೆಗೆದು ಮಾರಿ ಹೆಚ್ಚು ಲಾಭವನ್ನು ಹೊಂದಲು ಪ್ರಯತ್ನಪಡುವುದು ಉತ್ತಮವೆಂದು ತೋರುತ್ತದೆ.—ವ್ಯ. ಗೆ

ಇಲಿಗಳು ಮತ್ತೂ ಪ್ಲೇಗು.

ಬೊಂಬಾಯಿಯಲ್ಲಿರುವ ಕ್ರಿಮಿಶಾಸ್ತ್ರ ಶೋಧನಾಲಯದ ೧೯೦೯ ನೆಯ ವರ್ಷದ ವರದಿಯಲ್ಲಿ ಇಲಿಗಳು ಹೆಚ್ಚುವುದರ ವಿಚಾರವಾಗಿ ಬರೆಯಲ್ಪಟ್ಟಿರುವುದೇನೆಂದರೆ,- ಒಂದು ಜತೆ ಗಂಡು ಹೆಣ್ಣು ಇಲಿಗಳು ಪ್ರತಿ ೨ ತಿಂಗಳಲ್ಲಿ ಸರಾಸರಿಯಾಗಿ ೬ ಮರಿಗಳನ್ನು ಹಾಕುತ್ತವೆ. ಈ ಹೆಣ್ಣುಗಳು ಸಾಮಾನ್ಯವಾಗಿ ೪ ತಿಂಗಳಲ್ಲಿ ಮರಿಗಳನ್ನು ಹಾಕುತ್ತವೆ. ಈ ಮರಿಗಳಲ್ಲಿ ಹೆಣ್ಣು ಗಂಡುಗಳ ಸಂಖ್ಯೆಯು ಸಮಾನವಾಗಿರುತ್ತದೆ. ಮತ್ತೂ ಈ ರೀತಿಯಾಗುತ್ಪತ್ತಿಯಾಗುವ ೨ ಮರಿಗಳು ಬಲಿಯುವುದರೊಳಗಾಗಿ ಅವುಗಳಲ್ಲೊಂದನ್ನು ತಂದೆತಾಯಿಗಳು ನಾಶಪಡಿಸುವುವು. ಈಪರಿಯಲ್ಲಿ ಒಂದು ಜತೆ ಗಂಡುಹೆಣ್ಣು ಇಲಿಗಳಿಂದ ವರ್ಷದಲ್ಲಿ ೩೦ ಜತೆಗಳು ಅಭಿವೃದ್ಧಿಯಾಗುವುವು. ಆಗತಾನೆ ಜನಿಸಿದ ಇಲಿಮರಿಯು ೬೦ ಧಾನ್ಯಗಳ ತೂಕವಿರುವುದು. ೨ ಮರಿಗಳನ್ನು ತೂಕಮಾಡಿದುದರಲ್ಲಿ ಒಂದೊಂದು ಸರಾಸರಿ ೬೦ ಚಿಲ್ಲರೆ ಧಾನ್ಯಗಳ ತೂಕವಿರುವುದಾಗಿ ಗೊತ್ತಾಯಿತು. ಇಲಿಯು ಮೊದಲ ೨ ತಿಂಗಳಲ್ಲಿ ದಿನ ೧ ಕ್ಕೆ ಸರಾಸರಿ ೧೪ ಧಾನ್ಯದ ತೂಕ ಬೆಳೆಯುವುದು. ಇಲಿಗಳಿಗೆ ರೋಗಕನ್ನು ತಗಲಿಸಿ ಪರೀಕ್ಷಿಸಿದುದರಲ್ಲಿ ಕೆಲವುಗಳಿಗೆ ಸ್ವಭಾವವಾಗಿ ಯಾವ ಬಾಧೆಯೂ ಆಗಲಿಲ್ಲವು. ಹಿಂದಣ ಶತಮಾನಗಳಲ್ಲಿ ಪ್ಲೇಗುರೋಗವು ಅದೃಶ್ಯವಾದಂತೆ ಈಗಲೂ ಕೆಲಕಾಲಾನಂತರ ಬರತಕ್ಕುದನ್ನು ಬಿಟ್ಟು ಅದೃಶ್ಯವಾಗುವುದೆಂದು ಮೇಲಿನ ಪರೀಕ್ಷೆಯಿಂದ ದೃಢಪಡುವುದು. ರೋಗಕ್ಕೆ ತಗಲಿದ ಒಂದು ಇಲಿಯ ಪ್ಲೀಹದ ಸಾವಿರದೊಂದನೆಯ ಭಾಗದ ಧಾನ್ಯಕ್ಕೆ ಸಮಾನವಾದ ೨೦-೨೫ ಸಾವಿರದ ಪ್ಲೇಗು ಕ್ರಿಮಿಗಳಿಂದ ಮಾಡಲ್ಪಟ್ಟ ಬಹುಸ್ವಲ್ಪವಾದ ಪ್ಲೇಗು ರಸವನ್ನು ಮದ್ರಾಸುಪಟ್ಟಣ, ಬೊಂಬಾಯಿಪಟ್ಟಣಗಳಿಂದ ತರಿಸಲ್ಪಟ್ಟ ಇಲಿಗಳಿಗೆ ಪ್ರಯೋಗಿಸುವಲ್ಲಿ ಮದ್ರಾಸಿನ ಪ್ರತಿ ೧೦೦ ಇಲಿಗಳಲ್ಲಿ ೯೭ ರಂತೆಯೂ ಬೊಂಬಾಯಿ ಇಲಿಗಳಲ್ಲಿ ೧೦೦ ರಲ್ಲಿ ೭೭ ರಂತೆಯೂ ಸತ್ತವು. ಇದಲ್ಲದೆ ಪ್ಲೇಗು ರೋಗಕ್ಕೆ ತಗಲಿದ ಖಾನ್ಪೂರ್, ಲಕ್ನೊ, ಪೂನಾ, ಭಾಗಲ್ಪೂರ ಈ ಸ್ಥಳಗಳಿಂದ ತರಿಸಲ್ಪಟ್ಟ ಇಲಿಗಳಿಗೆ ರಸವನ್ನು ಹಾಕುವಲ್ಲಿ ೧೦೦ ರಲ್ಲಿ ೨ ರಿಂದ ೪೦ ರವರೆಗೆ ಮಾತ್ರ ಸತ್ತವು. ಈ ಪಟ್ಟಣಗಳಲ್ಲೂ ಯಾವುದರಲ್ಲಿ ಪ್ಲೇಗು ಅತ್ಯಲ್ಪಬಣವಾಗಿದ್ದಿತೋ ಅದರಲ್ಲಿಯ ಇಲಿಗಳು ಸತ್ತಿರುವುದು ಅತ್ಯಂತ ಕಡಿಮೆ. ಖಾನ್ಪೂರದ ಇಲಿಗಳಲ್ಲಿ ೧೦೦ ಕ್ಕೆ ೧೨ ರಿಂದ ೨೦ ರವರೆಗೆ ಮಾತ್ರ ಸತ್ತಿರುತ್ತವೆ. ಪೂನಾ ಮತ್ತೂ ಬೊಂಬಾಯಿ ಇಲಿಗಳಲ್ಲಿ ೧೦೦ ಕ್ಕೆ ೧೩ ರಿಂದ ೨೫ ರವರೆಗೆ ಮರಣವಾಗಿರುತ್ತದೆ; ಲಕ್ನೋ ಮತ್ತೂ ಭಾಗಲ್ಪೂರದಲ್ಲಿ ೩೦ ರಿಂದ ೪೦ ರವರೆಗೆ ಮರಣವಾಗಿರುತ್ತದೆ. ಹೀಗೆ ಪ್ಲೇಗು ರೋಗಕಿನಿಂದ ಮರಣವನ್ನು ಹೊಂದದಿರುವ ಶಕ್ತಿಯು ದೊಡ್ಡ ಇಲಿಗಳಿಂದ ಅವುಗಳ ಮರಿಗಳಿಗೆ ಬರುತ್ತದೆ.

ಮೈಸೂರ್ ಗೆಜೆಟ್ ಸಂಗ್ರಹವು.

—:o:—

ಎಕ್ಸೈಸ್ ಕಮಿಷನರ ಅಸಿಸ್ಟೆಂಟರಾದ ಮಿ॥ ಬಿ ಶಾಮಣ್ಣನವರಿಗೆ ಕೊಡಲ್ಪಟ್ಟಿದ್ದ ೧ ತಿಂಗಳ ಪ್ರಿವಿಲೆಜ್ ರಜವು ತಪ್ಪಿಸಲ್ಪಟ್ಟಿರುತ್ತದೆ.

ಮಿ॥ ಬಿ ಎಲ್. ರಾಘೋಜಿರಾವ್, ಬಿ. ಎ, ಯವರು ಕೆಲಸದಿಂದ ನಿವೃತ್ತರಾದ ಮಿ॥ ನಂದಿಗ ಸುಬ್ಬರಾಯರ ಬದಲು ಬೆಂಗಳೂರ ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಕೌನ್ಸಿಲರಾಗಿಯೂ ಮತ್ತೂ ವೈಸ್ ಪ್ರೆಸಿಡೆಂಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮಿ॥ ಎ. ಎಲ್. ಸಾಂಬಶಿವಯ್ಯರ್ ರವರು ಬೇರೆ ಉದ್ಯೋಗದ ಮೇಲಿರುವುದರಿಂದ ಅವರ ಬದಲು ಮಿ॥ ಸಿ. ರಂಗನಾಥರಾವ್ ಸಾಹೇಬ್, ಬಿ. ಎ, ಬಿ. ಎಲ್., ರವರು ಮೈಸೂರ್ ಸಂಪದಭಿವೃದ್ಧಿ ಸಮಾಜದ ಶಾಖೆಯಾದ ಕೈಗಾರಿಕೆ ಮತ್ತೂ ವ್ಯಾಪಾರಗಳ ಸಮಾಜದ ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ತಮ್ಮ ಪ್ರಕೃತ ಉದ್ಯೋಗದಿಂದ ಬಿಡುಗಡೆಯನ್ನು ಹೊಂದಿದ ಕೂಡಲೆ ಹೊಸ ಉದ್ಯೋಗದಮೇಲೆ ಹೋಗತಕ್ಕದ್ದು.

ಮಿ॥ ರಂಗನಾಥರಾವ್ ಸಾಹೇಬರು ಬೇರೆಯ ಕೆಲಸದ ಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮಿ॥ ಬಿ. ವೆಂಕೋಬರಾವ್, ಬಿ. ಎ, ಯವರು ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಇವರು ಕೂಡಲೆ ಕೆಲಸದ ಮೇಲೆ ಹೋಗತಕ್ಕದ್ದು.

ಮಿ॥ ಎಂ. ಹಸೇನಲಿಯವರು ಬೆಂಗಳೂರ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿರತಕ್ಕದ್ದು.

ಎಕ್ಸಿಕ್ಯುಟಿವ್ ಇಂಜನಿಯರುಗಳಾದ ಮೆಸರ್ಸ್ ಜಿ. ಇ. ಎ. ಡಿಕ್ರೂಜ್ ಬಿ. ಸಿ. ಇ., ಯವರು ಮೈಸೂರ ಸಿಟಿ ಇಂಪ್ರೂವ್ಮೆಂಟ್ ಡಿವಿಜನ್ನಿನಿಂದ ಬೆಂಗಳೂರಿಗೂ; ಎಫ್. ಎ. ಸ್ಮೀಲ್ ರವರು ಶಿವಮೊಗ್ಗೆಯಿಂದ ಕಡೂರಿಗೂ; ಆರ್. ಎಲ್. ನವರತ್ನ ಎಲ್. ಸಿ. ಇ., ಯವರು ಕಡೂರಿಂದ ಚಿತ್ರಕಲ್ ದುರ್ಗಕ್ಕೂ; ಸಿ. ಕೃಷ್ಣಯ್ಯಂಗಾರ್, ಎಲ್. ಸಿ. ಇ. ಯವರು ಚಿತ್ರಕಲ್ ದುರ್ಗದಿಂದ ಹಾಸನಕ್ಕೂ; ವಿ. ಆರ್. ನಿಜಗಲ್, ಎಲ್. ಸಿ. ಇ., ಯವರು ಹಾಸನದಿಂದ ಶಿವಮೊಗ್ಗೆಗೂ; ಅಸಿ ಇಂಜನೀರ್ ಮಿ॥ ವೈ ಅಶ್ವತ್ಥನಾರಾಯಣರಾವ್, ಬಿ. ಎ., ಬಿ. ಸಿ. ಇ., ಯವರು ಬೆಂಗಳೂರಿಂದ ಮೈಸೂರ ಸಿಟಿ ಇಂಪ್ರೂವ್ಮೆಂಟ್ ಡಿವಿಜನ್ನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೨ ನೆಯ ಜುಲೈ ತಾ|| ೨೨ ನೆಯ ಸೋಮವಾರ

ನಿಜವಾದ ಪ್ರಜಾಭಿಮಾನವು.

ಈಗ ಬಂಗಾಳದ ಗೌರ್ನರಾಗಿರುವ ಲಾರ್ಡ್ ಕಾರ್ಮಿಕೆಲ್ ಪ್ರಭುಗಳು ಇದಕ್ಕೆ ಮೊದಲು ಕೆಲಕಾಲ ಮದ್ರಾಸು ಗೌರ್ನರಾಗಿದ್ದಾಗ್ಯೂ ಪ್ರಜೆಗಳ ತೊಂದರೆಯ ಭಾಗಗಳನ್ನು ಸ್ವತಃ ಪರೀಕ್ಷಿಸಿ ತಿಳಿದುಕೊಳ್ಳಲು ಮಾಡಿದ ಪ್ರಯತ್ನಗಳಲ್ಲಿ ವೇಷಾಂತರದಿಂದ ಹೋಗಿಬಂದಿಯೂ ಮೂರನೆಯ ತರಗತಿಯಲ್ಲಿ ಸಾಮಾನ್ಯನಂತೆ ಪ್ರಯಾಣಮಾಡಿ ನಿಲ್ದಾಣಗಳಲ್ಲಿ ಪ್ರಯಾಣಿಕರನ್ನು ಕುರಿಗಳಂತೆ ಬಂಡಿಗಳಿಗೆ ತುಂಬುವುದನ್ನೂ, ಬಂಡಿಯೊಳಗೆ ಕುಳಿತಿರುವವರು ಸ್ಥಳ ಸಂಕೋಚದಿಂದ ಹೊರಗಿನಿಂದ ಹತ್ತುವವರನ್ನು ಬಾಗಿಲು ತೆಗೆಯದೆ ಪರಸ್ಪರ ಕಲಹಮಾಡುವುದು ಮೊದಲಾದ ತೊಂದರೆಯ ಭಾಗಗಳನ್ನೂ ಪೊಲೀಸರ ಮತ್ತೂ ಬಂಡಿಯ ಗಾರ್ಡುಗಳ ಚರ್ಯವನ್ನೂ ಪರಾಮರ್ಶಿಸಿದ ಮತ್ತೂ ಬೇರೊಂದು ಸಂದರ್ಭದಲ್ಲಿ ಸಾಮಾನ್ಯನು ತೊಡುವಂತೆ ಉಡುಪನ್ನು ಧರಿಸಿಕೊಂಡು ಮಾರ್ಕೆಟ್ಟಿಗೆ ಹೋಗಿ ಅಲ್ಲಿ ಕೊಳೆತ ಪದಾರ್ಥಗಳು ವಿಕ್ರಯಿಸಲ್ಪಡುವುದನ್ನು ಪರಾಮರ್ಶಿಸಿಕೊಂಡು ಸಮೀಪದಲ್ಲಿರುವ ಪೊಲೀಸು ಠಾಣಕ್ಕೆ ಹೋಗಿ ಮಾರ್ಕೆಟ್ಟಿನ ವಿಚಾರವಾಗಿ ಕೆಲಪ್ರಶ್ನೆಗಳನ್ನು ಹಾಕಿಬಂದ ಸಂದರ್ಭಗಳನ್ನು ಈ ಪತ್ರಿಕೆಯ ಹಿಂದಣಸಂಚಿಕೆಯೊಂದರಲ್ಲಿ ತಿಳಿಸಿರುವೆವಷ್ಟೆ. ಪ್ರಜೆಗಳ ಕಷ್ಟವನ್ನು ಪರಿಹರಿಸಿ ಸಾಧ್ಯವಾದ ಮಟ್ಟಿಗೂ ಅವರಿಗೆ ಉಪಕಾರವನ್ನು ಮಾಡುವುದೇ ತಮ್ಮ ಕರ್ತವ್ಯಕರ್ಮವೆಂದು ತ್ರಿಕರಣಪೂರ್ವಕವಾಗಿ ತಿಳಿದು ನಡೆಯುತ ಭಾರತೀಯರ ಪುಣ್ಯಮೂರ್ತಿಯೇ ಆವಿರ್ಭವಿಸಿರುವುದೆಂದು ಭಾವಿಸಲ್ಪಟ್ಟಿರುವ ಕಾರ್ಮಿಕೆಲ್ ಪ್ರಭುಗಳು ಅರಾಜಕಪ್ರವರ್ತನೆಗೆ ಮಾತೃಭೂಮಿಯೆಂದೂ, ಅಲ್ಲಿಯ ಪ್ರಜೆಗಳನ್ನು ದಂಡಹಸ್ತದಿಂದ ನಿಗ್ರಹಿಸಬೇಕೆಂದೂ ತಮ್ಮ ಹಿಂದಣ ಅಧಿಕಾರಿಗಳಿಂದ ಭಾವಿಸಲ್ಪಟ್ಟಿದ್ದ ಬಂಗಾಳಾದೇಶದಲ್ಲೇ ಬೆಂಗಾವಲಿನವರಿಲ್ಲದೆ ನಿರ್ಭೀತರಾಗಿಯೂ, ಏಕಾಂಗಿಯಾಗಿಯೂ ಎಲ್ಲಕಡೆಯಲ್ಲೂ ಸಂಚರಿಸಿ ಪ್ರಜೆಗಳ ಕೂಡ ಮಿಳಿತರಾಗಿ ಅವರ ತೊಂದರೆಯ ಭಾಗಗಳನ್ನೆಲ್ಲಾ ಸ್ವತಃ ಪರೀಕ್ಷಿಸಿ ತಿಳಿದುಕೊಂಡು ಅವರ ಅಪಾರವಾದ ಪ್ರೀತಿಗೌರವಕ್ಕೆ ಪಾತ್ರರಾಗುತ್ತಿರುವರು

ಈ ಪ್ರಭುಗಳು ಕಳೆದ ತಾ|| ೧೭ ರಲ್ಲಿ ಬಾರಿಸಾಲಿಗೆ ದಯಮಾಡಿಸಿರುವಾಗ್ಗೆ, ಒಬ್ಬ ರೈತನು—"ನನ್ನ ಮನೆಯ ಸಮೀಪದಲ್ಲಿ ಒಂದು ಶವಪರೀಕ್ಷಕಾಲಯವು ಕಟ್ಟಲ್ಪಡತಕ್ಕದಾಗಿದೆ ಇದರಿಂದ ನನಗೆ ತೊಂದರೆಯಾಗುತ್ತಾದ ಪ್ರಯುಕ್ತ ಅದನ್ನು ತಪ್ಪಿಸಿಕೊಡಬೇಕು." ಎಂದು ಅರ್ಜಿಯನ್ನು ಬರೆದು ಪ್ರಭುಗಳಿಗೊಪ್ಪಿಸಲು, ಅವರು ಅದನ್ನು ನೋಡಿಕೊಂಡು ಆ ರೈತನನ್ನು ತಮ್ಮ ಬಂಡಿಯಲ್ಲೇ ಕುಳ್ಳಿರಿಸಿಕೊಂಡು ಅವನ ಮನೆಯ ಸಮೀಪಕ್ಕೆ ಹೋಗಿ ಅಲ್ಲಿಯ ವಿದ್ಯಮಾನಗಳನ್ನೆಲ್ಲಾ ವಿಚಾರಿಸಿಕೊಂಡು ಬಂದರು ಮತ್ತೂ ಡಾಕಾಕ್ಕೆ ದಯಮಾಡಿಸಿದ್ದ ವೇಳೆಯಲ್ಲಿ ಅಲ್ಲಿಯ ಜನರೊಪ್ಪಿಸಿದ ವಿಜ್ಞಾಪನಪತ್ರಿಕೆಗೆ ಉತ್ತರವನ್ನು ದಯಪಾಲಿಸುವ ಸಂದರ್ಭದಲ್ಲಿ, ಹಿಂದೂ ಮಹಮ್ಮದೀಯರುಗಳಲ್ಲಿ ಭಿನ್ನಭಾವವಿಲ್ಲದೆ ಅವರುಭಯರನ್ನೂ ಸಮದೃಷ್ಟಿಯಿಂದ ಕಂಡು ಅವರುಗಳ ಪುರೋಭಿವೃದ್ಧಿಗಾಗಿ ಸಾಧ್ಯವಿದ್ದಷ್ಟೂ ಸಹಾಯಮಾಡುತ್ತೇವೆಂದಭಯವನ್ನು ಕೊಡಿಸಿದರು. ಪಾಲಕರು ಪ್ರಜೆಗಳಿಗೆ ತಮ್ಮ ದರ್ಪವನ್ನು ತೋರಿಸಿ ಅವರನ್ನು ಬೆದರಿಸಿ ತೃಣಭಾವದಿಂದ ಕಾಣದೆ, ಅವರ ಕೂಡ ಮಿಳಿತರಾಗಿ ಅವರನ್ನು ಪುತ್ರನಿರ್ವಿಶೇಷದಿಂದ ಕಾಣುವುದೇ ಪ್ರಜಾರಂಜಕರಾಗಲು ಕಾರಣವೆಂಬುದು ಕಾರ್ಮಿಕೆಲ್ ಪ್ರಭುಗಳ ಮೇಲ್ಕಂಡ ವರ್ತನದಿಂದ ವ್ಯಕ್ತವಾಗುತ್ತದೆ. ಆದರೆ ಈ ಬಂಗಾಳಾ ದೇಶವನ್ನಾಳಲು ಹಿಂದೆಬಂದಿದ್ದಂತಹ ಲೆ|| ಗೌರ್ನರುಗಳು ಈ ರಹಸ್ಯವನ್ನರಿತೆ ಯಾವಕಾರಣದಿಂದಲೋ ಕ್ಷುಬ್ಧರಾದ ಪ್ರಜೆಗಳನ್ನು ಶತ್ರುಗಳಂತೆ ಭಾವಿಸಿ ದೂರಮಾಡಿ ಅವರ ನಿಗ್ರಹಕ್ಕಾಗಿ ಕಠಿನಶಾಸನಗಳನ್ನು ನಿರ್ಮಿಸಿ ಉರಿಯುವ ಜ್ವಾಲೆಗೆ ತುಪ್ಪವನ್ನೆರೆದ ರೀತಿಯಲ್ಲಿ ಅವರ ಕೋಪೋದ್ರೇಕವಾಗುವಂತೆ ಮಾಡಿ ಆ ದೇಶದ ಶಾಂತತೆಗೆ ಭಂಗವುಂಟಾಗಲು ಅವಕಾಶವನ್ನು ಕೊಟ್ಟರು. ಪ್ರಭುಗಳ ಅವಿಶ್ವಾಸಕ್ಕೆ ಗುರಿಯಾದಂತಹ ಆ ದೇಶೀಯರು ತಮ್ಮ ಪುಣ್ಯಪರಿಪಾಕದಿಂದ ಈಗ ಶ್ರೀ ಕಾರ್ಮಿಕೆಲ್‌ರವರನ್ನು ತಮ್ಮ ಪಾಲಕರನ್ನಾಗಿ ಪಡೆದುಕೊಂಡಿರುವರೆನ್ನುವುದರಲ್ಲಿ ಸಂದೇಹವಿಲ್ಲವು ಈ ಮಹಾಶಯರ ಉದಾರಮನಸ್ಸಿನಿಂದಲೂ, ನಿಷ್ಕಪಟವಾದ ಅಭಿಮಾನಾತಿಶಯದಿಂದಲೂ ಬಂಗಾಳಾದೇಶೀಯರಿಗೆ ಪ್ರಾಪ್ತವಾಗಿದ್ದ ಅಪಪ್ರಥೆಯು ಶೀಘ್ರದಲ್ಲೇ ಪರಿಹಾರವಾಗಿ ಮೊದಲಿಗಿಂತಲೂ ಅಧಿಕವಾದ ಕೀರ್ತಿಯೂ ಸುಖಶಾಂತಿಯೂ ಉಂಟಾಗುವುದೆಂದು ಕಾಣುತ್ತದೆ.

ಒಂದು ಆಧಿಪತ್ಯದ ಗೌರ್ನರು ಒಬ್ಬ ಸಾಮಾನ್ಯನಾದ ರೈತನನ್ನು ತಮ್ಮ ಬಂಡಿಯಲ್ಲಿ ಸಂಗಡ ಕುಳ್ಳಿರಿಸಿಕೊಂಡು ಹೋದರೆಂದು ಮೇಲೆ ಹೇಳಿರುವೆವಷ್ಟೆ. ಆ ಆಧಿಪತ್ಯದ ಪ್ರಜಾಸಂಖ್ಯೆಯಲ್ಲಿ ಹತ್ತನೆಯ ಒಂದುಭಾಗದ ಜನಸಂಖ್ಯೆಯನ್ನುಳ್ಳ ಈ ಮೈಸೂರ ಸೀಮೆಯ ಅಧಿಕಾರಿಗಳು ಇಲ್ಲಿಯ ಪ್ರಜೆಗಳನ್ನು ಯಾವ ರೀತಿಯಲ್ಲಿ ಪರಿಗಣಿಸುವರೆಂಬುವನ್ನು ಕೊಂಚ ವಿಚಾರಮಾಡುವ.

ಸರ್ಕಾರಿಯುದ್ಯೋಗಸ್ಥರಲ್ಲದವರಲ್ಲಿ ಯಾರಾದರೂ ಗೌರವಸ್ಥರು ದೊಡ್ಡ ಅಧಿಕಾರಿಗಳನ್ನು ಕಾಣಲು ಹೋದರೆ, ಆ ಅಧಿಕಾರಿಗಳಲ್ಲಿ ಕೆಲರು ತಮ್ಮನ್ನು ಕಾಣಲು ಬಂದವರನ್ನು ತಮ್ಮ ಸಮನಾಗಿ ಆಸನಾಸೀನರಾಗುವಂತೆ ಮಾಡುವುದಕ್ಕೂ ಇಷ್ಟವಿಲ್ಲದೆ ಅವರು ಒಳಗೆ ಬರುವುದಕ್ಕೆ ಮೊದಲೇ ತಾವು ಆಸನದಿಂದೆದ್ದು ಸುಳಿದಾಡುತ್ತಿದ್ದು ಬಂದವರ ಕೂಡ ನಾಲ್ಕು ಮಾತನಾಡಿ ಕಳುಹಿಸಿಬಿಡುವರು. ಮತ್ತೆ ಕೆಲರು ತಮ್ಮನ್ನು ನೋಡಲು ಬಂದವರಿಗೆ ಆಸನವನ್ನು ಕೊಟ್ಟಾಗ್ಯೂ ವಿಶ್ವಾಸದಿಂದಲೂ, ವಿನಯದಿಂದಲೂ ಮಾತನಾಡದೆ ಮುಖವನ್ನು ಗಂಟುಹಾಕಿಕೊಂಡು ಎಷ್ಟೋ ಕಷ್ಟದಿಂದ ಒಂದೆರಡು ಮಾತನಾಡಿ ಕಳಿಸಿಬಿಡುವರು. ಬೇರೆ ಕೆಲರು ತಮ್ಮ ದರ್ಶನಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಹೀಗೆಯೇ ಪ್ರಜೆಗಳ ಸಮ್ಮರ್ದವನ್ನು ತಪ್ಪಿಸಿಕೊಳ್ಳುವುದಕ್ಕೇ ಅವರ ಮನಸ್ಸು ಹಾತೊರೆಯುತ್ತಿರುವುದು. ಇಲ್ಲಿಯ ಅಧಿಕಾರಿಗಳು ಪ್ರಜೆಗಳನ್ನು ಇಷ್ಟು ನಿಕೃಷ್ಟವಾಗಿ ಕಾಣುವಾಗ್ಗೆ ಇನ್ನು ಬಡರೈತರನ್ನು ತಮ್ಮ ರಥದಲ್ಲಿ ಕುಳ್ಳಿರಿಸಿಕೊಂಡು ಅವರು ಹೇಳುವುದನ್ನೆಲ್ಲಾ ಲಾಲಿಸುವುದುಂಟೆ? ಅಧಿಕಾರಿಗಳಿಗೂ, ಪ್ರಜೆಗಳಿಗೂ ಪರಸ್ಪರ ಸಂಬಂಧವು ಇಷ್ಟರಮಟ್ಟಿಗಿರುವಾಗ್ಗೆ ಇನ್ನು ಅವರ ಕೈಕೆಳಗಣ ಕೆಲಸಗಾರರ ವರ್ತನವನ್ನಂತೂ ಹೇಳಬೇಕಾದುದಿಲ್ಲವು. ೪-೫ ರೂ. ಸಂಬಳದವರು ಕೂಡ ರೈತಜನರನ್ನು ಬಹು ನಿಕೃಷ್ಟವಾಗಿ ಕಾಣುವರು. ಸರ್ಕಾರಿಯುದ್ಯೋಗದಲ್ಲಿರುವವರು ಪ್ರಜೆಗಳನ್ನು ಬಿಟ್ಟು ತಾವು ಬೇರೆಯಾಗಿಲ್ಲ ಮತ್ತೂ ಅಧಿಕಾರಿಗಳು ದೇವತೆಗಳಾಗಿಯೂ ಪ್ರಜೆಗಳು ಮಾತ್ರ ಮನುಷ್ಯರಾಗಿಯೂ ಸಹ ಇರುವುದಿಲ್ಲ. ಪ್ರಜೆಗಳು ಮೈಮುರಿದು ಸಂಪಾದಿಸಿದ ಹಣದಿಂದ ಸರ್ಕಾರದುದ್ಯೋಗಿಗಳ ಉದರಂಭರಣವಾಗುತ್ತಿರುವುದೆಂಬ ತತ್ವವು ಯಾವರಾಜ್ಯದ ಕಾರ್ಯನಿರ್ವಾಹಕೋದ್ಯೋಗಿಗಳಲ್ಲಿರುವುದೋ ಅಂಥ ರಾಜ್ಯವು ರಾಮರಾಜ್ಯವಾಗುವುದರಲ್ಲಿ ಸಂಶಯವಿಲ್ಲ ಲಾರ್ಡ್ ಕಾರ್ಮಿಕೆಲ್‌ರವರಂತಹ ಮಹಾನುಭಾವರ ನಡತೆಗೆ ಅಂಥ ಅಭಿಪ್ರಾಯವು ಅವರಲ್ಲಿ ನೆಲಸಿರುವುದೇ ಮುಖ್ಯ ಕಾರಣವು.

THE MYSORE DASARA INDUSTRIAL AND AGRICULTURAL EXHIBITION, 1912.

The Exhibition opens on the 14th of October and closes on the 20th.

Copetitions in Weaving, Ploughing, Wood Carving, Metal work and Pottery making have been arranged.

Women's section where articles manufactured by women on more refined and improved lines has also been organised

Opening of a combined Post and Telegraph office in the Exhibition premises will be arranged.

For further particulars, apply to the Secretary, Exhibition, Mysore.

G. SUBBUSWAMI AIYAR,
Secretary.

ಒಳದೇಶದ ವೃತ್ತಾಂತಗಳು.

ಬೆಂಗಳೂರಲ್ಲಿ ವಿದ್ಯುಲ್ಲತೆಯ ತಂತಿಗಳ ಕಾವಲುಗಾರನಾದ ಮುನಿಸ್ವಾಮಿ ಎಂಬುವನು ಕಳೆದ ತಾ|| ೧೮ ರಲ್ಲಿ ತಂತಿಗೆ ಸಿಕ್ಕಿಕೊಂಡಿದ್ದ ಪಟವನ್ನು ಬಿಡಿಸಲು ಕಂಬದಮೇಲೆ ಹತ್ತಿ ತಂತಿಯನ್ನು ಹಿಡಿದು ಕೊಳ್ಳುತ್ತಲೇ ವಿದ್ಯುಲ್ಲತೆಯು ಅವನ ಶರೀರದಲ್ಲಿ ವ್ಯಾಪಿಸಿ ಅದರ ವೇಗದಿಂದ ಕೂಡಲೇ ಸತ್ತುಹೋದನು.

ಶ್ರೀಮನ್ಮಹಾರಾಜರವರು ಬೆಂಗಳೂರಲ್ಲಿ ಈಗ ನಡೆಯುತ್ತಿರುವ ಕುದುರೆ ಮತ್ತೂ ಪೋಲೋ ಪಂದ್ಯಗಳನ್ನು ಪರಾಮರ್ಶಿಸಲು ಕಳೆದ ತಾ|| ೨೦ ನೆಯ ಶನಿವಾರ ಮಧ್ಯಾಹ್ನ ೩ ಗಂಟೆಯಲ್ಲಿ ಮೋಟಾರು ಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿ ಸಾಯಂಕಾಲ ೭ ಗಂಟೆಗೆ ಬೆಂಗಳೂರನ್ನು ಸೇರಿದರು. ಶ್ರೀಮದ್ಯುವರಾಜರು ಸಂಪೂರ್ಣ ಆರೋಗ್ಯವನ್ನು ಹೊಂದಿ ಕಳೆದ ೪-೫ ದಿನಗಳಿಂದಲೂ ಮೋಟಾರು ಬಂಡಿಯಲ್ಲಿ ಹೊರಗಡೆ ಸಂಚರಿಸುತ್ತಿರುವರು.

ಈ ದೇಶದ ವ್ಯಾಪಾರ ಮತ್ತೂ ಕೈಗಾರಿಕೆಗಳ ಅಭಿವೃದ್ಧಿಯ ವಿಚಾರದಲ್ಲಿ ತಕ್ಕ ಸೂಚನೆಯನ್ನು ಕೊಡಲು ಹೊಸದಾಗಿ ನಿಯಮಿಸಲ್ಪಟ್ಟಿರುವ ಮಿ|| ಚಾಟರ್ಟನರವರಿಗೆ ಸಹಾಯಕರಾಗಿ ರಾಜಧಾನಿಯ ಕೈಗಾರಿಕೆಯ ಪಾಠಶಾಲೆಯ ಸೂಪರಿಂಟೆಂಡೆಂಟರಾದ ಮಿ|| ಸುಬ್ಬರಾಯುಡ್ಯುರ್ ರವರು ಮತ್ತೂ ರಾಜಧಾನಿಯ ವಾಣೀವಿಲಾಸ ವಾಟರ್ ವರ್ಕ್ಸ್ ಇಂಜನಿಯರಾದ ಮಿ|| ಸೀತಾರಾಮಾಚಾರರು ಸಹ ನಿಯಮಿಸಲ್ಪಡುವುದಾಗಿ ತಿಳಿಯುತ್ತೇವೆ.

ರಾಜಧಾನಿಯಲ್ಲಿ ವಿಪರೀತವಾಗಿ ಗಾಳಿ ಬೀಸುತ ಆಗಾಗ್ಗೆ ಮೋಡವು ಮುಸುಕಿಕೊಂಡು ನಾಲ್ಕಾರು ಹನಿ ಉದುರುತ್ತದೆಯೇ ವಿನಾ ಗಟ್ಟಿಯಾಗಿ ಮಳೆಯಾಗುತ್ತಿಲ್ಲವು ಹೊಡೆ ಕಡೆದು ಹಾಲುತುಂಬುತ್ತಿರುವ ಜೋಳವು ಮಳೆಯಿಲ್ಲದೆ ಒಣಗುತ್ತಿದೆ. ಚೆನ್ನಪಟ್ಟಣದಲ್ಲಿ ವಿಶೇಷವಾಗಿ ಮಳೆಯಾಗುತ್ತಿದೆ. ಮತ್ತೂ ಬೆಂಗಳೂರು ಮೊದಲಾಗಿ ಕೆಲಸ್ಥಳಗಳಲ್ಲಿ ಮಳೆಯು ಅನುಕೂಲವಾಗಿ ಆಗುತ್ತಿದೆ ಹಿಂದೆ ಇದೇ ಕಾಲದಲ್ಲಿ ಕಾವೇರೀನದಿಯಲ್ಲಿ ವಿಶೇಷಪ್ರವಾಹವು ಬರುತ್ತಿದ್ದುದು ಈ ವೇಳೆ ಮುಕ್ಕಾಲು ಪ್ರವಾಹದಮೇಲೆ ಬರಲಿಲ್ಲವು ಇದಕ್ಕೆ ಕೊಡಗಿನ ಕಡೆ ಮಳೆಯು ಕಡಿಮೆಯಾಗಿರುವುದೇ ಕಾರಣವಾಗಿದೆ. ಆಹಾರ್ಯಪದಾರ್ಥಗಳ ಬೆಲೆಯಂತೂ ಕ್ಷಾಮಕಾಲದಲ್ಲಿದ್ದಂತೆ ಇರುವುದರಿಂದ ಬಡವರು ಕೊಂಡು ಜೀವಿಸುವುದು ಬಹು ಕಷ್ಟವಾಗಿದೆ.

ಕೈಗಾರಿಕೆ ಮತ್ತೂ ವ್ಯಾಪಾರ ಕಸಬುಗಳ ಅಭಿವೃದ್ಧಿಯ ವಿಚಾರದಲ್ಲಿ ತಕ್ಕ ಸೂಚನೆಯನ್ನು ಕೊಡಲು ನಿಯಮಿತರಾಗಿರುವ ಮಿ|| ಚಾಟರ್ಟನರವರು ತಮ್ಮ ಅಸಿಸ್ಟೆಂಟರಾದ ಮಿ|| ಸಾಂಬಶಿವಯ್ಯರ್‌ರವರ ಕೂಡ ಮಿ|| ಕರಣಿಕ ಕೃಷ್ಣಮೂರ್ತಿಯವರ ಪ್ರಾರ್ಥನೆಯ ಮೇರೆಗೆ ಕಳೆದ ತಾ|| ೧೭ ರ ಬೆಳಿಗ್ಗೆ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ಮಾಗಡಿಗೆ ಬಂದು ಅಲ್ಲಿಯ ಅಮಲ್ದಾರರಿಂದಿದಿರ್ಗೊಳ್ಳಲ್ಪಟ್ಟು ಅಲ್ಲಿಂದ ಊರೊಳಗೆ ಪ್ರವೇಶಮಾಡಿ ವೀರಸೆಟ್ಟಿ ಪುಟ್ಟಯ್ಯನವರ ಅಂಗಡಿಗೆ ಹೋಗಿ ಸ್ವದೇಶದಲ್ಲಾದ ಗುದ್ದಲಿ ಮೊಳೆ ಮೊದಲಾದ ಕಬ್ಬಿಣದ ಪದಾರ್ಥಗಳನ್ನೂ, ಗುಂಡಿಗಳನ್ನೂ ನೋಡಿಕೊಂಡು ಅಲ್ಲಿಂದ ನಂಜುಂಡಪ್ಪನ ಮನೆಗೆ ಹೋಗಿ ಹಿತ್ತಾಳೆಯ ದೀಪಸ್ತಂಭ ಸೇವಿಗೆಯೊರಳು ಮೊದಲಾದುವುಗಳನ್ನು ನೋಡಿಕೊಂಡು ಅಲ್ಲಿಂದ ನೇಯ್ಗೆಯವರ ಮನೆಗೆ ಹೋಗಿ ಬಟ್ಟೆಯನೆಯ್ಯುವುದನ್ನು ನೋಡಿ ಅಲ್ಲಿಂದ ಲಿಂಗಸೆಟ್ಟಿ ಮನೆಗೆ ಬಂದು ಅಲ್ಲಿ ದೀಪಸ್ತಂಭಗಳನ್ನು ಮಾಡುವುದನ್ನು ನೋಡಿ ಆತನ ಕೂಡ ಮಾತನಾಡುತ ಕೆಲ ಸ್ತಂಭಗಳ ಹಿಡಿಗೆ ತಾವೇ ಜಲ್ಲ ಕೊಟ್ಟು, ಅಲ್ಲಿಂದ ತಿರುಮಲೆಗೆ ಮೋಟಾರಿನಲ್ಲಿ ಕುಳಿತು ಹೋಗಿ, ಅಲ್ಲಿ ಚಿಕ್ಕರಂಗಸ್ವಾಮಿ ಮನೆಯಲ್ಲಿ ತಂಬೂರಿಯನ್ನು ಮಾಡುತ್ತಿದ್ದುದನ್ನು ಪರಾಮರ್ಶಿಸಿ, ತಮಗೆ ೨೦೦ ರೂ. ಬೆಲೆಯಲ್ಲಿ ೨ ತಂಬೂರಿ ಮತ್ತೂ ೪ ವೀಣೆಗಳನ್ನು ಮಾಡಿ ಕಳುಹಿಸಬೇಕೆಂದು ಹೇಳಿ, ಪುನಃ ಮಾಗಡಿಗೆ ಬಂದು ಅಲ್ಲಿ ಅಲ್ಪಾಹಾರವನ್ನು ಮಾಡಿ ೧ ಗಂಟೆಯಲ್ಲಿ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು.

ವರ್ತಮಾನ ಸಂಗ್ರಹವು.

ಬೊಂಬಾಯಿನಲ್ಲಿ ೬ ವರ್ಷ ವಯಸ್ಸಿನ ಒಬ್ಬ ಹುಡುಗಿಯೊಡನೆ ಸಂಭೋಗ ಮಾಡಯತ್ನಿಸಿದ ಒಬ್ಬನಿಗೆ ಮ್ಯಾಜಿಸ್ಟ್ರೇಟರು ೬೦ ರೂ. ದಂಡವನ್ನು ವಿಧಿಸಿದರು

ಕುಡ್ತಾರ ಮಾರ್ಗದಲ್ಲಿರುವ ಸಬಗೋಪಾಲ ಎಂಬ ನಿಲ್ದಾಣದ ಹತ್ತಿರ ಎರಡು ಪ್ರಯಾಣಿಕರ ರೈಲು ಬಂಡಿಗಳು ತಾಕಿಬಡಿದು ಕೆಲ ಪ್ರಯಾಣಿಕರಿಗೆ ಕೊಂಚ ಪೆಟ್ಟು ಬಿದ್ದಿರುವುದು.

ಕಲಕತ್ತಾದ ಒಂದು ನಾರಿನ ಕಾರ್ಯಾಲಯದಲ್ಲಿ ಕೆಲಸಮಾಡುವ ಪ್ರಾಯಶಃ ೫೧೦೦ ಜನರು ನೂತನಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದು ಮುಷ್ಕರ ಹಿಡಿದು ಕೆಲಸಕ್ಕೆ ಬಾರದೆ ನಿಂತುಬಿಟ್ಟಿರುತ್ತಾರೆ.

ಸರ್ಕಾರಿಯುದ್ಯೋಗಗಳನ್ನು ಪರಿಶೀಲಿಸುವುದಕ್ಕಾಗಿ ಏರ್ಪಟ್ಟಿರುವ ಕಮಿಷನಿಗೆ ಆನರಬಲ್ ಮಿ|| ಗೋಖಲೆಯವರು ಮತ್ತೂ ಸರ್ ಕೆ. ಜಿ ಗುಪ್ತರವರು ಮೆಂಬರುಗಳಾಗಿ ನಿಯಮಿಸಲ್ಪಡುವ ಸಂಭವವಿರುವುದು.

ಕಳೆದ ೬ ತಿಂಗಳಲ್ಲಿ ಬಂಗಾಳಾ, ಮದರಾಸು, ಬೊಂಬಾಯಿ, ಬರ್ಮಾ ಈ ಸ್ಥಳಗಳಲ್ಲಿ ೧೪೭೩೭೦೦೦ ಮಣ ಉಪ್ಪು ಮಾರಾಟವಾಗಿರುತ್ತದೆ. ಮತ್ತೂ ಉಪ್ಪಿನಿಂದ ೧೬೩೧೧೦೦೦ ರೂ. ಸುಂಕವು ಬಂದಿರುತ್ತದೆ.

ನಾಭಾ ಸಂಸ್ಥಾನದ ಮಹಾರಾಜರವರು ತಮ್ಮ ಗತಿಸಿದ ತಂದೆಯವರ ಹೆಸರಿನ ಮೇಲೆ ೧೫೦೦೦೦ ರೂ. ಗಳನ್ನು ವಿದ್ಯಾಭಿವೃದ್ಧಿಗಾಗಿ ಧರ್ಮಮಾಡಿ, ಆ ಹಣದಿಂದುತ್ಪನ್ನವಾಗುವ ಬಡ್ಡಿಯನ್ನು ಸೀಮೆಗೆ ಹೋಗಿ ವಿದ್ಯಾಭ್ಯಾಸಮಾಡುವ ತಮ್ಮ ಸಂಸ್ಥಾನದ ಪ್ರಜೆಗಳ ಮಕ್ಕಳಿಗೆ ಜಾತಿ ತಾರತಮ್ಯವನ್ನಿಡದೆ ವೇತನವನ್ನಾಗಿ ವಿನಿಯೋಗಿಸಲು ಸಂಕಲ್ಪಿಸಿರುತ್ತಾರೆ.

ಪೂನಾದ ಸುತ್ತಲಿನ ಡಿಸ್ಟ್ರಿಕ್ಟುಗಳಲ್ಲಿ ಶಾಂತಿಭೇದಿ ರೋಗ ಪ್ರಾಪ್ತವಾಗಿರುವುದರಿಂದ ಗೋಲ್ಲಾಪುರ ಡಿಸ್ಟ್ರಿಕ್ಟಿಗೆ ಸೇರಿದ ಪಂಡರಾಪುರದಲ್ಲಿ ಈ ಆಷಾಢ ಶು|| ಏಕಾದಶಿಗಾಗಿ ನಡೆಯುವ ಜಾತ್ರೆಗೆ ರೋಗವಿರತಕ್ಕ ಸ್ಥಳದ ಜನರು ಹೋಗಕೂಡದೆಂದು ಬೊಂಬಾಯಿ ಸರ್ಕಾರದವರು ನಿರ್ಬಂಧಪಡಿಸಿರುವುದರಿಂದ ತುಕಾರಾಮನ ಉತ್ಸವಕ್ಕಾಗಿ ಪೂನಾದಿಂದ ತರಲ್ಪಟ್ಟ ಪಾಲಕಿಯು ಹಿಂದಿರುಗಬೇಕಾಗಿದೆ.

ಸಾಗರ ದ್ವೀಪದಲ್ಲಿ ೭ ಜನ ಐರೋಪ್ಯ ಇಂಜನಿಯರುಗಳು ಹಂದಿಯನ್ನು ಬೇಟೆಯಾಡಲು ಕಾಡಿಗೆ ಹೋಗಿರುವಾಗ್ಗೆ ಇಬ್ಬರು ಒಂದು ಕಡೆಯಲ್ಲೂ ಮತ್ತಿಬ್ಬರು ಬೇರೊಂದು ಕಡೆಯಲ್ಲೂ ಮೃಗವನ್ನು ಹುಡುಕುತ್ತಿರುವಲ್ಲಿ ಇಬ್ಬರು ಇಂಜನಿಯರು ಮೂರನೆಯವನನ್ನು ಹಂದಿಯೆಂದು ಭ್ರಮಿಸಿ ಗುರಿಯಿಟ್ಟು ಗುಂಡುಗಳನ್ನು ಹಾರಿಸಿದರು ಆ ಗುಂಡುಗಳು ಮೂರನೆಯ ಇಂಜನಿಯರ ದೇಹವನ್ನು ಹಾದುಹೋಗಲು ಆತನು ಕೂಡಲೇ ಸತ್ತುಬಿದ್ದನು

ಲಾಸಾದಲ್ಲಿಯ ಸದ್ಯಸ್ಥಿತಿಯನ್ನು ಕುರಿತು ಯಾವ ವರ್ತಮಾನವನ್ನು ಯಾವ ವಿಧದಲ್ಲಿಯಾಗಲಿ ಮತ್ತೊಬ್ಬರಿಗೆ ಖಂಡಿತವಾಗಿ ತಿಳಿಸಕೂಡದು ಒಂದುವೇಳೆ ತಿಳಿಸಿದಲ್ಲಿ ಅವರು ಯಾವ ಜನಾಂಗದವರಾಗಿದ್ದರೂ ಅವರ ನಾಲಿಗೆಯು ಛೇದಿಸಲ್ಪಡುವುದು, ಅಥವಾ ೧೫ ಔನ್ಸ್ ಭಂಗಾರವನ್ನು ಅಪರಾಧವನ್ನಾಗಿ ಕೊಡುವ ಶಿಕ್ಷೆ ವಿಧಿಸಲ್ಪಡುವುದು" ಎಂದು ದಲಾಯಿಲಾಮಾನು ಟಿಬೆಟ್ಟಿನ ಅಧಿಕಾರಿಗಳಿಗೂ ಇತರರಿಗೂ ಕಟ್ಟಪ್ಪಣೆಮಾಡಿರುವನಂತೆ.

ಸರ್ ಹರ್ಬರ್ಟ್ ರಾಬರ್ಟ್ಸ್, ಲಾರ್ಡ್ ಕಿನಾರಿಡ್, ಸರ್ ವಿಲಿಯಂ ವೆಡ್ಡರ್ ಬರ್ನ್ ಮೊದಲಾದ ಪಾರ್ಲಿಮೆಂಟ್ ಮೆಂಬರುಗಳೂ, ಆನರಬಲ್ ಗೋಖಲೆ ಮತ್ತೆ ಕೆಲ ಭರತಖಂಡದ ಪ್ರತಿನಿಧಿಗಳೂ ಕಳೆದ ತಾ|| ೧೮ ರಲ್ಲಿ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರೂಯವರನ್ನು ಕಂಡು ಭರತಖಂಡದಲ್ಲಿ ಮಾದಕ ಪದಾರ್ಥ ಸೇವನೆಯ ಪ್ರಾಬಲ್ಯವನ್ನು ಕಡಿಮೆಮಾಡುವ ಬಗೆಗೆ ಭರತಖಂಡದ ಎಕ್ಸೈಸ್ ಶಾಖೆಯಲ್ಲಿ ಕೆಲ ಸುಧಾರಣೆಗಳನ್ನು ಮಾಡಬೇಕೆಂದು ಬಿನ್ನೈಸಿಕೊಂಡರು.

ಭರತಖಂಡದಲ್ಲೆಲ್ಲಾ ಈಗ ಪ್ಲೇಗು ಮರಣವು ಅತ್ಯಂತವಾಗಿ ಕಡಿಮೆಯಾಗುತ್ತಿದೆ. ಕಳೆದ ತಾ|| ೧೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೨೩೭ ಜನರಿಗೆ ಪ್ಲೇಗು ತಗಲಿ ೨೮೪ ಜನರು ಸತ್ತರು. ಇವರಲ್ಲಿ ಬೊಂಬಾಯಾಧಿಪತ್ಯದಲ್ಲಿ ೭೦; ಮದ್ರಾಸಾಧಿಪತ್ಯದಲ್ಲಿ ೨೩; ಬಂಗಾಳಾದಲ್ಲಿ ೭; ಬಿಹಾರ ಮತ್ತೂ ಒರಿಸ್ಸಾದಲ್ಲಿ ೩; ಸಂಯುಕ್ತ ಪ್ರಾಂತಗಳಲ್ಲಿ ೩; ಪಂಜಾಬಿನಲ್ಲಿ ೧೮; ಬರ್ಮಾದಲ್ಲಿ ೫೧; ಮತ್ತೂ ಮೈಸೂರ ಸೀಮೆಯಲ್ಲಿ ೩೧ ಈ ಪ್ರಕಾರವಾಗಿ ಆಗಿರುತ್ತದೆ.

ಆಲ್ಬರ್ಟ್ ಸ್ಪೇ ಎಂಬ ಒಬ್ಬ ಮೇಯರು ಹುಚ್ಚರ ಆಸ್ಪತ್ರೆಯಲ್ಲಿದ್ದು ಸಾಯುವಾಗ್ಗೆ ತನ್ನ ೧೫೦೦೦೦ ರೂ. ಬೆಲೆಬಾಳುವ ಆಸ್ತಿಯು ಸ್ಪೇನ್ ರಾಜ್ಯದ ದೊರೆಗೆ ಸೇರಬೇಕೆಂದು ಮೃತ್ಯುಪತ್ರವನ್ನು ಬರೆದಿದ್ದನು. ಅದರಮೇಲೆ ಆ ಮೇಯರನ ತಂಗಿಯು ತನ್ನ ಅಣ್ಣನ ಆಸ್ತಿಗೆ ತಾನು ಬಾಧ್ಯಳಾದುದರಿಂದ ಅದು ತನಗೆ ಸಲ್ಲಬೇಕೆಂದು ತಕ್ಕ ನ್ಯಾಯಸ್ಥಾನದಲ್ಲಿ ವಿವಾದವನ್ನು ಹೂಡಿರುತ್ತಾಳಾದುದರಿಂದ ಅದರ ವಿಚಾರಣೆಯ ಬಗೆಗೆ ದೊರೆಯು ಈ ತಾ|| ೨೯ ರಲ್ಲಿ ಕೋರ್ಟಿಗೆ ಬರಲು ಅಪೇಕ್ಷಿಸಲ್ಪಟ್ಟಿರುತ್ತಾನೆ

ಪಂಜಾಬಿನ ಲೆ|| ಗೌರ್ನರು ಆರೋಗ್ಯಶಾಖೆಯ ವರದಿಯನ್ನು ಸಮಾವಲೋಕನ ಮಾಡುವಾಗ್ಗೆ, ೧೯೧೧ ರಲ್ಲಿ ಪ್ಲೇಗು ಮರಣವು ವಿಶೇಷವಾಗಿ ಆದುದಕ್ಕಾಗಿ ತಮ್ಮ ಪರಿತಾಪವನ್ನು ಸೂಚಿಸಿ ಐಯೋಡಿನ್ ಎಂಬ ಔಷಧವನ್ನು ಪ್ಲೇಗುರೋಗಿಗಳ ಹೊಟ್ಟೆಗೆ ಕೊಟ್ಟು ದೇಹದ ಮೇಲುಗಡೆ ಲೇಪಿಸುವುದರಿಂದ ಬಹು ಪ್ರಯೋಜನಕಾರಿ ಎಂದು ಕಂಡು ಬಂದಿರುವುದೆಂದೂ ಇಲಿಗಳ ಬಿಲಗಳಿಗೆ ತಾರನ್ನು ಹಾಕಿ ಹೊಗೆ ಕೊಡುವುದರಿಂದ ಇಲಿಗಳು ನಾಶವಾಗುವುವೆಂದೂ ತಿಳಿಸಿರುತ್ತಾರೆ.

ಜರ್ಮನಿಯ ಪೋಸ್ಟಾಫೀಸಿನವರು ಸಣ್ಣ ಉದ್ಯೋಗಗಳಿಗೆಲ್ಲಾ ಗಂಡುಸರ ಬದಲು ೪೬೦೦ ಹೆಂಗುಸರನ್ನು ಕಡಿಮೆಯ ಸಂಬಳದಮೇಲೆ ನಿಯಮಿಸಿಕೊಳ್ಳುವುದರಿಂದ ಒಂದು ವರ್ಷದಲ್ಲಿ ೪೫೦೦೦೦೦ ರೂ. ಗಳು ಮಿಗುತ್ತವೆಂದು ಗೊತ್ತುಮಾಡಿಕೊಂಡಿರುವರು. ಹೆಂಗುಸರು ತಮ್ಮ ಮೇಲೆ ಸ್ಪರ್ಧಿಸಿ ಬರುತ್ತಾರೆಂದು ಗಂಡುಸರು ಕೋಪಿಸಿಕೊಂಡಿರುವಂತೆಯೇ. ಹೆಂಗುಸರು ಇಂತಹ ಸಣ್ಣ ಉದ್ಯೋಗಗಳಲ್ಲೂ ಗಂಡುಸರಷ್ಟು ಕೆಲಸ ಮಾಡಲಾರರೆಂದು ಅಂಚೆಯ ಅಧಿಕಾರಿಗಳು ತಿಳಿದಿರುತ್ತಾರೆಂದು ಹೆಂಗುಸರೆಲ್ಲರೂ ಆಗ್ರಹಯುಕ್ತರಾಗಿರುತ್ತಾರೆ.

ಗ್ರೇಟ್ ಇಂಡಿಯನ್ ಪೆನಿನ್ಸುಲಾ ಲೋಹಮಾರ್ಗದಲ್ಲಿ ಬೊಂಬಾಯಿಗೆ ಹೋಗುತ್ತಿದ್ದ ಒಂದು ಸಾಮಾನಿನ ಬಂಡಿಯು ಇಗತಪುರಿಗೂ, ಕಲ್ಯಾಣಕ್ಕೂ ಮಧ್ಯೆ ವಾಸಿಂದ ನಿಲ್ದಾಣದ ಕೈ ಕಂಭದಿಂದ ಕೊಂಚದೂರದಲ್ಲಿ ನಿಲ್ಲಿಸಲ್ಪಟ್ಟು ಗಾರ್ಡ್ ಕೈ ದೀಪವನ್ನು ನಿರೀಕ್ಷಿಸಿಕೊಂಡಿರುವಷ್ಟರಲ್ಲಿ ೭ ಜನ ಬಂಡಕೋರರು ಗಾರ್ಡಿದ್ದ ಬಂಡಿಯನ್ನು ಹತ್ತಿ ಚೂರಿಯಿಂದ ತಿವಿದು ಬಿಡುತ್ತೇವೆಂದು ಹೆದರಿಸಿ ಅವನನ್ನು ಹಿಡಿದುಕೊಂಡು ಅವನು ತನ್ನ ಜೊತೆಯಲ್ಲಿಟ್ಟುಕೊಂಡಿದ್ದ ಸಂಬಳದ ಬಾಬತು ೧೬೫ ರೂ. ಗಳನ್ನು ಕಸುಕೊಂಡು ಹೊರಟುಹೋದರು ಗಾರ್ಡು ಆ ಕಳ್ಳರನ್ನು ಪ್ರತಿಭಟಿಸಲು ಅವನ ಹತ್ತಿರ ಯಾವ ಆಯುಧವೂ ಇರಲಿಲ್ಲ. ಮತ್ತೂ ತನ್ನ ಬಂಡಿಗೂ ಇಂಜನ್ನಿಗೂ ಮಧ್ಯೆ ೪೦ ಸಾಮಾನಿನ ಬಂಡಿಗಳಿದ್ದುದರಿಂದ ಬಂಡಿಯನ್ನು ನಡೆಸುವವನಿಗೆ ವರ್ತಮಾನವನ್ನು ಕೊಡಲಾಗಲಿಲ್ಲ.

೧೯೦೯—೧೦ ನೆಯ ವರ್ಷದಲ್ಲಿ ಭರತಖಂಡಕ್ಕೆ ೪೭ ಲಕ್ಷದ ೩೫ ಸಾವಿರ ರೂ. ಬೆಲೆಯ ಮೋಟಾರು ಬಂಡಿಗಳು ಬಂದುವು ಅದರ ಮುಂದಣ ವರ್ಷದಲ್ಲಿ ೭೭ ಲಕ್ಷದ ೨ ಸಾವಿರ ರೂ. ಬೆಲೆಯ ಬಂಡಿಗಳೂ, ೧೯೧೧—೧೨ ರಲ್ಲಿ ೧ ಕೋಟಿಯ ೫೫ ಸಾವಿರ ರೂ. ಬೆಲೆಯ ಬಂಡಿಗಳೂ ಬಂದಿರುತ್ತವೆ. ೧೯೧೧—೧೨ ನೆಯ ವರ್ಷದಲ್ಲಿ ಹೆಚ್ಚಿದುದಕ್ಕೆ ದಿಲ್ಲಿಯ ದರ್ಬಾರು ಕೊಂಚಮಟ್ಟಿಗೆ ಕಾರಣವಾಗಿದೆ. ಕಳೆದ ವರ್ಷ ಬಂದಂತಹ ಬಂಡಿಗಳಲ್ಲಿ ೭೭ ಲಕ್ಷದ ೪೦ ಸಾವಿರ ರೂ. ಗಳ ಬೆಲೆಯ ಬಂಡಿಗಳು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತೂ ವೇಲ್ಸ್ ಈ ಮೂರು ರಾಜ್ಯಗಳಿಂದಲೇ ಬಂದಿರುತ್ತವಾದುದರಿಂದ ಬ್ರಿಟಿಷ್ ಕಾರ್ಯಾಲಯದವರಿಗೆ ವಿಶೇಷ ಆದಾಯವು ಬಂದಿರುತ್ತದೆ. ರಾಜರುಗಳು ನೂರಾರು ಮೋಟಾರು ಬಂಡಿಗಳನ್ನಿಟ್ಟುಕೊಂಡಿದ್ದರೂ ಅತೃಪ್ತರಾಗಿರುವುದರಿಂದಲೂ, ಸಾಧಾರಣ ಜನರು ಸಹ ಈ ಬಂಡಿಯನ್ನಪೇಕ್ಷಿಸುತ್ತಿರುವುದರಿಂದಲೂ ಅವುಗಳ ಸಂಖ್ಯೆಯು ದಿನೇದಿನೇ ಅಭಿವೃದ್ಧಿಯಾಗಿ ಈ ದೇಶದ ಲಕ್ಷಾಂತರ ರೂಪಾಯಿಗಳು ಪರದೇಶದ ವರ್ತಕರ ಬೊಕ್ಕಸಕ್ಕೆ ಹೋಗಿ ಬೀಳುತ್ತಿರುವುವು.

ಶ್ರೀ ಕಾಶೀ ಮಹಾಕ್ಷೇತ್ರದ ಸಮೀಪದಲ್ಲಿರುವ ಭುವನೇಶ್ವರ ಎಂಬ ಕ್ಷೇತ್ರದ ವಾಸಿಗಳಾದ ಪರಮಹಂಸ ಸೋಮನಾಥ ಯೋಗೀಶ್ವರ ಸ್ವಾಮಿಯವರು ಈಗ ಮದರಾಸಿಗೆ ಬಂದು ಕನ್ಯಕಾಪರಮೇಶ್ವರಿ ಸತ್ರದಲ್ಲಿ ಇಳಿದುಕೊಂಡಿರುವರು. ಈ ಪರಮಹಂಸರವರು ತಮ್ಮ ೧೬ ನೆಯ ವರ್ಷಾರಭ್ಯ ಯೋಗಾಭ್ಯಾಸವನ್ನು ಮಾಡಿ ರೇಚಕ ಪೂರಕ ಕುಂಭಕ ಪ್ರಾಣಾಯಾಮ ಯೋಗವನ್ನು ಮಾಡುವುದರಲ್ಲೂ, ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳುವ ರಹಸ್ಯ ವಿಚಾರದಲ್ಲೂ, ದೂರದೃಷ್ಟಿ ಆತ್ಮ ಸ್ನೇಹಾದಿ ವಿಷಯದಲ್ಲೂ, ೮೪ ಆಸನಗಳನ್ನು ಹಾಕುವುದರಲ್ಲೂ, ಯೋಗಬಲದಿಂದ ಪ್ರಬಲರೋಗಗಳನ್ನು ಗುಣಪಡಿಸುವುದರಲ್ಲೂ, ಜೀವಬ್ರಹ್ಮೈಕ್ಯ ಸಾಧನ ವಿಷಯದಲ್ಲೂ, ಮಣಿಮಂತ್ರಾದ್ಯೌಷಧಗಳಿಂದ ಸಂತಾನ ರಹಿತರಿಗೆ ಸಂತಾನವಾಗುವಂತೆ ಮತ್ತೂ ದೀರ್ಘರೋಗಗಳು ಗುಣವಾಗುವಂತೆ ಮಾಡುವುದರಲ್ಲೂ ಬಹಳ ಸಮರ್ಥರಾಗಿರುವುದನ್ನು ಪ್ರತ್ಯಕ್ಷವಾಗಿ ನೋಡಿರುತ್ತೇವೆಂದು ಕೆಲರು ಮದ್ರಾಸು ಪತ್ರಿಕೆಯೊಂದರಲ್ಲಿ ಬರೆದಿರುತ್ತಾರೆ. ನಿಜವಾಗಿಯೂ ಜಿತೇಂದ್ರಿಯರಾಗಿದ್ದು ಯೋಗಾಭ್ಯಾಸವನ್ನು ಮಾಡಿ ಸಿದ್ಧರಾಗಿರುವವರಿಗೆ ಮೇಲ್ಕಂಡ ಸಾಮರ್ಥ್ಯವಿರುವುದೇನೂ ಆಶ್ಚರ್ಯವಲ್ಲವು ಆದರೆ ಅಂತಹ ಜಿತೇಂದ್ರಿಯರೂ ಸಿದ್ಧರೂ ಆಗಿರುವವರು ಮಾತ್ರ ದೊರೆಯುವುದು ಕಷ್ಟವು

೩೪ ವರ್ಷಗಳ ಕಾಲ ಪೊಲೀಸು ಶಾಖೆಯಲ್ಲಿ ಕೆಲಸಮಾಡಿ ಬಹು ಧೈರ್ಯ ಸಾಹಸ ಮತ್ತೂ ಚಾತುರ್ಯಗಳಿಂದ ರಾಜದ್ರೋಹಕಾರಕ ಕೃತ್ಯಗಳನ್ನು ಕಂಡು ಹಿಡಿದು ಅವನ್ನು ಅಣಗಿಸಲು ಯತ್ನಿಸಿದುದರ ಪ್ರತಿಫಲವಾಗಿ ಡೆಪ್ಯುಟಿ ಸೂಪರಿಂಟೆಂಡೆಂಟ್ ಸ್ಥಾನವನ್ನು ಹೊಂದಿ ಖಾನಬಹದ್ದೂರ್ ಪ್ರಶಸ್ತಿಯನ್ನು ಪಡೆದಿದ್ದ ಷಾಂಷುಸ್-ಉಲ್-ಆಲಂ ಎಂಬುವರು ೧೯೧೦ ನೆಯ ಜನವರಿ ತಾ|| ೨೪ ರಲ್ಲಿ ಕಲಕತ್ತಾ ಹೈಕೋರ್ಟಿನ ಕಟ್ಟಡದ ಆವರಣದಲ್ಲಿ ಒಬ್ಬ ಅರಾಜಕಪ್ರವರ್ತಕನಿಂದ ಕೊಲ್ಲಲ್ಪಟ್ಟರಷ್ಟೆ. ಆಗ್ಗೆ ಸರ್ಕಾರದವರು ಮೃತರ ಕುಟುಂಬಕ್ಕೆ ಯೋಗ್ಯವಾದ ಜಹಗೀರಿಯನ್ನು ಕೊಡಲು ತಕ್ಕೇರ್ಪಾಟು ಮಾಡಲ್ಪಡುವುದು ಎಂದು ವಾಗ್ದಾನಮಾಡಿ ಅದುವರೆಗೆ ಕುಟುಂಬದ ಜೀವನಕ್ಕಾಗಿ ಕೆಲ ಹಣವನ್ನು ಕೊಟ್ಟರು. ಸರ್ಕಾರದವರು ತಾವು ಮಾಡಿದ್ದ ವಾಗ್ದಾನದ ಪ್ರಕಾರ ಈಗ ಮುರುಷಿದಾಬಾದ್ ಡಿಸ್ಟ್ರಿಕ್ಟಿನಲ್ಲಿ ಪ್ರತಿವರ್ಷವೂ ೫೩೩೩ ರೂ. ಗಳ ಕಂದಾಯ ಬರತಕ್ಕ ಕೆಲ ಗ್ರಾಮಗಳನ್ನು ಜಹಗೀರಿಯನ್ನಾಗಿ ಮಾಡಿಕೊಟ್ಟು ಖಾನಬಹದ್ದೂರ್‌ರವರ ಹೆಂಡತಿಯೂ, ಹಿರೀಮಗನೂ ತಮ್ಮ ಜೀವಿತಕಾಲದವರೆಗೂ ಸರ್ಕಾರಕ್ಕೆ ಯಾವ ಕಂದಾಯವನ್ನು ಕೊಡದೆಯೂ, ಅನಂತರ ಅವರ ಮುಂದಣ ವಾರಸದಾರನು ಅರ್ಧ ಕಂದಾಯವನ್ನೂ, ಅವನ ಅನಂತರದವರು ಪೂರ್ಣ ಕಂದಾಯವನ್ನೂ ಕೊಟ್ಟುಕೊಂಡು ಅನುಭವಿಸಿಕೊಂಡು ಬರುವುದೆಂದೂ ಸನ್ನದನ್ನು ಬರೆದುಕೊಟ್ಟಿರುವರು.

ಬೆಲೂಚಿಸ್ಥಾನದ ವಿನಾ ಭರತಖಂಡದ ಇತರ ಎಲ್ಲಾ ಭಾಗದಲ್ಲೂ ಮುಂಗಾರು ಮಳೆಯ ಸ್ಥಿತಿಯು ಅನುಕೂಲವಾಗಿರುತ್ತದೆ. ಮಳೆಯು ಈ ದೇಶದಲ್ಲಿಯ ಪಶ್ಚಿಮ ತೀರದಲ್ಲೂ, ಮೈಸೂರ ಸೀಮೆಯಲ್ಲೂ, ಮದ್ರಾಸ್ ದಕ್ಷಿಣದಲ್ಲೂ ಪ್ರಾಯಶಃ ಅಖಂಡವಾಗಿ ಆಗಿರುತ್ತದೆ. ಆದರೆ ಮದ್ರಾಸಿನ ಆಗ್ನೇಯ ದಿಕ್ಕಿನಲ್ಲೂ ಮದ್ರಾಸಿನ ಉತ್ತರ ತೀರದಲ್ಲೂ ಬೊಂಬಾಯಿಯ ಡೆಕ್ಕನ್ನಿನಲ್ಲೂ ಖಂಡವಾಗಿ ಆಗಿರುತ್ತದೆ. ಹೈದರಾಬಾದು ರಾಜಧಾನಿಯಲ್ಲಿ ಮಾತ್ರ ಮಳೆಯಾಗಿದೆ, ಸಂಯುಕ್ತ ಪ್ರಾಂತಗಳ ನೈಋತಿಭಾಗ, ಬಿಹಾರು, ಒರಿಸ್ಸಾ ಮತ್ತೂ ಬಂಗಾಳಾವಿನ ಮಧ್ಯ ಪ್ರಾಂತಗಳು, ಮಧ್ಯ ಹಿಂದೂಸ್ಥಾನ, ಗುಜರಾತು, ರಾಜಪುಟಾನದ ಆಗ್ನೇಯಭಾಗ ಕಾಶ್ಮೀರ ಮತ್ತೂ ಪಂಜಾಬು ಈ ಸ್ಥಳಗಳಲ್ಲಿ ಚೆನ್ನಾಗಿ ಹಿಡಿಸಿರುತ್ತದೆ; ಅಸ್ಸಾಂ ಮತ್ತೂ ಬರ್ಮಾ ಈ ಸ್ಥಳಗಳಲ್ಲಿ ಸ್ವಲ್ಪ ಚೆನ್ನಾಗಿ ಆಗಿರುವುದು. ಬೊಂಬಾಯಿಯಲ್ಲಿ ೧|| ಅಂಗುಲ; ನಿಜಾಮಾಬಾದ್ ಮತ್ತೂ ಕಲ್ಲಿಕೋಟೆ ಪ್ರತಿಯೊಂದರಲ್ಲಿ ೧|| ಅಂಗುಲ; ಮಡಕೆರೆ, ಚಂದ್ರನಾಗೋರು ಮತ್ತೂ ಅಮರಾವತಿ ಇವು ಪ್ರತಿಯೊಂದರಲ್ಲೂ ೨ ಅಂಗುಲ; ಸುತ್ನಾದಲ್ಲಿ ೧ ಅಂಗುಲ; ಸೂರತು ಮತ್ತೂ ಕೆನಿವಾ ಇವು ಪ್ರತಿಯೊಂದರಲ್ಲೂ ೨ ಅಂಗುಲ; ಜಯಪುರದಲ್ಲಿ ೪ ಅಂಗುಲ; ಮರಿ, ರಾವಲ್ಪಿಂಡಿ ಮತ್ತೂ ಸಿರ್ಸಾ ಇವು ಪ್ರತಿಯೊಂದರಲ್ಲೂ ೧ ಅಂಗುಲ; ದಿಲ್ಲಿ ಮತ್ತೂ ಹೇವರ್ಡ್ ಇವು ಪ್ರತಿಯೊಂದರಲ್ಲಿ ೨ ಅಂಗುಲ; ರೂರ್ಕಿಯಲ್ಲಿ ೩ ಅಂಗುಲ; ಬೈಬಾಸಾದಲ್ಲಿ ೧ ಅಂಗುಲ; ಬಲಾಸೂರ ಮತ್ತೂ ಜಲ್ಪೈಗುರಿ ಇವು ಪ್ರತಿಯೊಂದರಲ್ಲಿ ೧|| ಅಂಗುಲ; ಡಾರ್ಜಲಿಂಗ್ ಮತ್ತೂ ಸಿಲ್ಚಾರ್ ಪ್ರತಿಯೊಂದರಲ್ಲಿ ೨ ಅಂಗುಲ; ಚಿರಪುಂಜಿಯಲ್ಲಿ ೩ ಅಂಗುಲ; ಮೇರ್ಪೂರದಲ್ಲಿ ೧|| ಅಂಗುಲ; ಗೌಹತಿ, ಕಯಾವು, ಡಯಮಂಡ್ ದ್ವೀಪ ಮತ್ತೂ ತೆವಾಯಿ ಇವು ಪ್ರತಿಯೊಂದರಲ್ಲಿ ೧ ಅಂಗುಲ; ಅಕಯಾಬಿನಲ್ಲಿ ೨ ಅಂಗುಲ; ಮೌಲ್ಮೀನ್ ಮತ್ತೂ ಸ್ಲಿಪ್ಪರ್ ದ್ವೀಪ ಇವು ಪ್ರತಿಯೊಂದರಲ್ಲಿ ೧|| ಅಂಗುಲ ಈ ಪ್ರಕಾರ ಮಳೆಯಾಗಿರುತ್ತದೆ.

ಮೌಲ್ವಿ ಬಜಾರ್ ಎಂಬಲ್ಲಿಗೆ ಸಮೀಪದಲ್ಲಿ ಸ್ಥಾಪಿತವಾಗಿರುವ ಅರುಣಾಚಲ ಆಶ್ರಮದ ಯಜಮಾನನಾದ ಸ್ವಾಮಿ ದಯಾನಂದ ಸರಸ್ವತಿಯ ಸೆರೆಯಲ್ಲಿರುವ ಒಬ್ಬ ಹುಡುಗನನ್ನು ಬಿಡಿಸಿಕೊಳ್ಳುವುದಕ್ಕಾಗಿ ಪೊಲೀಸರು ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಪಡೆದು ಅ|| ಸೂಪರಿಂಟೆಂಡೆಂಟರ ಕೂಡ ಆಯುಧಪಾಣಿಗಳಾಗಿ ಆಶ್ರಮಕ್ಕೆ ಹೋಗಿ, ಆಶ್ರಮದೊಳಗೆ ಪ್ರವೇಶಿಸ ಯತ್ನಿಸಿದಾಗ್ಗೆ ಒಳಗಿದ್ದವರು ತುಪಾಕಿಯನ್ನು ಹಾರಿಸುತ್ತ ಪೊಲೀಸರನ್ನು ಒಳಗೆ ಬರಗೊಡದೆ ಹೋದರು. ಇತ್ತಲಾಗಿ ಪೊಲೀಸರು ಪುಸಮದ್ದನ್ನು ಹಾಕಿ ಪಿಸ್ತೂಲನ್ನು ಹಾರಿಸಿದುದೆಲ್ಲವೂ ನಿಷ್ಫಲವಾಗಿ ಪೋ|| ಸೂಪರಿಂಟೆಂಡೆಂಟರಿಗೆ ಗುಂಡೇಟು ತಗಲಿತು. ಈ ಸಮಾಚಾರವನ್ನು ಡಿ|| ಕಮಿಷನರು ತಿಳಿದು ಆಯುಧಪಾಣಿಗಳಾದ ಪೊಲೀಸು ಸೇನೆಯನ್ನು ತೆಗೆದುಕೊಂಡು ಬಂದು ಆಶ್ರಮದ ಸುತ್ತಲೂ ಕಾವಲನ್ನಿಟ್ಟು ಒಳಗಿರುವ ಜನರು ಶರಣಾಗತರಾಗಲು ಎರಡುವೇಳೆ ಅವಕಾಶವನ್ನು ಕೊಟ್ಟಾಗ್ಯೂ ಅವರು ವಶವಾಗದಿದ್ದುದರ ಮೇಲೆ ಸರಿಯಾದ ಗುಂಡುಗಳನ್ನು ಹಾಕಿ ತುಪಾಕಿಯನ್ನು ಹಾರಿಸುತ ಆಶ್ರಮದೊಳಗೆ ನುಗ್ಗಿ ಪ್ರತಿಯೊಬ್ಬರನ್ನೂ ಸೆರೆಹಿಡಿದು ತಂದರು. ಈ ಹೋರಾಟದಲ್ಲಿ ಯಾರಿಗೂ ಪ್ರಾಣಾಪಾಯವೇನೂ ಆಗಲಿಲ್ಲವು ಹೆಂಗುಸರೆಲ್ಲರೂ, ಆಶ್ರಮಕ್ಕೆ ದರ್ಶನಕ್ಕಾಗಿ ಬಂದಿದ್ದ ಪುರುಷರೂ ಸೆರೆಯಿಂದ ಬಿಡಲ್ಪಟ್ಟರು. ಈ ಹೋರಾಟದಲ್ಲಿ ಒಬ್ಬ ಬಂಗಾಳಿ ಯುವಕನಿಗೆ ಪೆಟ್ಟುಬಿದ್ದಿರುತ್ತದೆ. ಈತನು ಎಂ. ಎ, ಪರೀಕ್ಷೆಯನ್ನು ಕೊಟ್ಟು ಸಾರ್ವಜನಿಕ ಪಾಠಶಾಲೆಯಲ್ಲಿ ಒಬ್ಬ ಬೋಧಕನಾಗಿ ಕೆಲದಿನವಿದ್ದನು. ಆತನಿಗೆ ಬಿದ್ದಿದ್ದ ಪೆಟ್ಟು ಅಪಾಯಕರವಾಗಿದ್ದುದರಿಂದ ಬೇರೆ ಕಡೆಯಿಂದ ವೈದ್ಯರು ಬಂದು ಚಿಕಿತ್ಸೆಯನ್ನು ಮಾಡಿದಾಗ್ಯೂ ಗುಣಹೊಂದದೆ ಕಾಲಾಧೀನನಾದನು. ಸೆರೆ ಹಿಡಿಯಲ್ಪಟ್ಟಿದ್ದ ಹೆಂಗುಸರುಗಳಲ್ಲಿ ಅನೇಕರು ಕಲಕತ್ತಾ, ಡಾಕಾ, ಅಸ್ಸಾಂ ಮೊದಲಾದ ಸ್ಥಳಗಳಲ್ಲಿಯ ಪ್ರಸಿದ್ಧ ಕುಟುಂಬಗಳಿಗೆ ಸೇರಿದವರಾದುದರಿಂದ ಅವರುಗಳು ಆ ಊರಿನ ಗೌರವ ಕಾಯಸ್ಥರ ಮನೆಯಲ್ಲಿರಿಸಲ್ಪಟ್ಟು ಅವರ ಬಂಧುಗಳು ಬಂದು ಅವರನ್ನು ಕರೆದುಕೊಂಡು ಹೋಗುವಂತೆ ತಂತಿಯ ಮೂಲಕ ವರ್ತಮಾನಗಳು ಕೊಡಲ್ಪಟ್ಟಿರುತ್ತವೆ.

ಪತ್ರವ್ಯವಹಾರವು.

ಮೈಸೂರ ವೀರಶೈವರ ವಿದ್ಯಾವರ್ಧಕಫಂಡು.

ಈ ಫಂಡಿನ ಕಾರ್ಯಕಾರಿ ಸಂಘದವರು ಕಳೆದ ತಾ|| ೧೮ ನೆಯ ಭಾನುವಾರ ಸಾಯಂಕಾಲದಲ್ಲಿ ಸಂಘಾಧ್ಯಕ್ಷರಾದ ರಾ|| ಬ|| ಶ್ರೀಯುತ ಕೆ. ಪಿ. ಪುಟ್ಟಣ್ಣಸೆಟ್ಟರ ಬಂಗಲೆಯಲ್ಲಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಈ ಸಭೆಗೆ ಮಿ|| ರಾ|| ಗಳಾದ ಚೀಫ್ ಕೋರ್ಟ್ ಡೆಪ್ಯುಟಿ ರಿಜಿಸ್ಟ್ರಾರ್ ಬಿ. ಬಸವಾರಾಧ್ಯ ಬಿ. ಎ., ಬಿ. ಎಲ್., ರವರು, ಅಡ್ವೊಕೇಟ್ ಎಚ್. ಕೆ. ವೀರಬಸವಯ್ಯ ಬಿ. ಎ., ಬಿ. ಎಲ್., ರವರು,

ಫೋಲೀಸ್ ಇನ್ಸ್‌ಪೆಕ್ಟರ್ ಕೆ. ಸಿದ್ಧರಾಮಪ್ಪ ಬಿ. ಎ., ಯುವರತ್ನ ಯಾಜಪೂರ್ವ ಬಸಪ್ಪನವರು, ಜಿ ಶಾಂತಣ್ಣನವರು ಮತ್ತು ರುದ್ರಾರ್ಯರು ದಯಮಾಡಿಸಿದ್ದರು. ೧೯೧೦ ನೆಯ ಏಪ್ರಿಲ್ ತಾ॥ ೨೬ ರಿಂದ ಆ ದಿವಸದ ವರೆಗೆ ೧೭೪ ರೂಪಾಯಿಗಳುತ್ಪತ್ತಿಯಾಗಿ ವಿದ್ಯಾರ್ಥಿ ವಿಶ್ವನಾಥಶ್ಯಾನವರಿಗೆ ಮೊತ್ತು ೫೫ ತಿಂಗಳ ವೇತನಕ್ಕಾಗಿ ೩೦ ರೂ. ಖರ್ಚಾಗಿರುವುದರ ಲೆಖ್ಖವು ಓದಲ್ಪಟ್ಟು ಮೆಂಬರುಗಳಿಂದ ಸಮ್ಮತಿಸಲ್ಪಟ್ಟಿತು. ಅನಂತರ (೧) ವೈದ್ಯ ಪರೀಕ್ಷೆಗೋದುವ ವಿಶ್ವನಾಥಸ್ವಾಮಿ, (೨) ಇಂಟರಮೀಜಿಯೆಟ್ ತರಗತಿಯಲ್ಲೋದುವ ಗುರಿಯಪ್ಪ. (೩) ಸ್ಕೂಲ್ ಫೈನಲಿಗೋದುವ ಎಚ್. ಬಸಪ್ಪ. (೪) ೬ ನೆಯ ಫಾರಮಿನಲ್ಲೋದುವ ಎಚ್. ಲಿಂಗಪ್ಪ, (೫) ೬ ನೆಯ ಫಾರಮಿನಲ್ಲೋದುವ ಬಿ. ಬಸಪ್ಪ, (೬) ಅದೇ ತರಗತಿಯ ಎಂ. ಸಿದ್ಧಲಿಂಗಯ್ಯ, (೭) ೫ ನೆಯ ತರಗತಿಯ ಎಂ. ಶಂಕರಪ್ಪ. (೮) ಅದೇ ತರಗತಿಯ ಗುರುಬಸವರಾಧ್ಯ, (೯) ಅದೇ ತಾ॥ ಪುಟ್ಟನಂಜಪ್ಪ, (೧೦) ಅದೇ ತಾ॥ ಜಿ ಅಡಿವೆಪ್ಪ ಇವರುಗಳಿಗೆ ಎಂದಿನಂತೆ ವೇತನಗಳು ಕೊಡಲ್ಪಡತಕ್ಕದ್ದೆಂದೂ, ೬ ನೆಯ ತರಗತಿಯಲ್ಲೋದುವ (೧) ಟಿ. ಎಸ್. ಮಲ್ಲಪ್ಪ, ಎಲ್. ಬಸಪ್ಪ, ೫ ನೆಯ ತರಗತಿಯಲ್ಲೋದುವ (೩) ಜಿ. ಚನ್ನಬಸಪ್ಪ, (೪) ಎಸ್. ವೀರಭದ್ರಯ್ಯ, ೪ ನೆಯ ತರಗತಿಯಲ್ಲೋದುವ (೫) ಜಿ. ಎಚ್. ಶಂಕರಪ್ಪ. (೬) ಟಿ. ಗುರಪ್ಪ, (೭) ಚಿಕ್ಕರುದ್ರಯ್ಯ, (೮) ಬಿ. ಸದಾಶಿವಪ್ಪ, (೯) ಪ್ರಭುವಾರಾಧ್ಯ, (೧೦) ಬಿ. ಶಿವಪ್ಪ, (೧೧) ಎಚ್. ಎ. ಶಿವಲಿಂಗಪ್ಪ, (೧೨) ಶಾಂತಪ್ಪ ಈ ವಿದ್ಯಾರ್ಥಿಗಳಿಗೆ ಹೊಸದಾಗಿ ವೇತನಗಳು ಕೊಡಲ್ಪಡತಕ್ಕದ್ದೆಂದೂ ಬೆಂಗಳೂರ ಶ್ರೀ ಕರಿಸಿದ್ದೇಶ್ವರ ಮಠದಲ್ಲಿ ನಡಿಸಲ್ಪಡುತ್ತಿರುವ ಸಂಸ್ಕೃತ ಪಾಠಶಾಲೆಯ ಪೋಷಣೆಗಾಗಿ ಮ॥ ರಾ॥ ಗಳಾದ ಜಿ. ಶಾಂತಣ್ಣನವರು ಮತ್ತು ಜಿ. ವೀರಭದ್ರಪ್ಪನವರು ಉದಾರ ಮನಸ್ಸಿನಿಂದ ಪ್ರತಿ ತಿಂಗಳಲ್ಲೂ ಕೊಡುತ್ತಿರುವ ೧೦ ರೂ. ಗಳ ಜತೆಗೆ ಫಂಡಿನಿಂದ ೧೦ ರೂ. ಗಳ ಮಾಸಾಶನವು ಕೊಡಲ್ಪಡತಕ್ಕದ್ದೆಂದೂ ನಿರ್ಧರಿಸಲ್ಪಟ್ಟಿತು. ಮೇಲ್ಕಂಡಂತೆ ವಿದ್ಯಾರ್ಥಿಗಳ ವೇತನ ಸಂಸ್ಕೃತ ಪಾಠಶಾಲೆಯ ಪೋಷಣೆ ಮೊದಲಾದವುಗಳಿಗಾಗಿ ಈ ಸಂವತ್ಸರದಲ್ಲಿ ಒಟ್ಟು ೭೦೦ ರೂ. ಗಳು ವಿನಿಯೋಗಿಸಲ್ಪಡತಕ್ಕದ್ದಾಗಿದೆ.

ಗುಬ್ಬಿಯ ಮ॥ ರಾ॥ ಕಲ್ಲಣ್ಣನವರಿಂದ

ಲಗ್ನಗಳ ಬಾಬತು ಬಂದಿರುವುದು	೧೯-೦-೦
ಹಿಂದೆ ಪ್ರಕಟಿಸಿರುವುದು	೧೭೭-೯-೦
ಈವರೆಗೆ ಒಟ್ಟು ಬಂದಿರುವುದು	ರೂ. ೧೯೬-೯-೦

ಬೆಂಗಳೂರು } ಜಿ ಶಾಂತವೀರಪ್ಪ,
೧೬-೭-೧೯೧೨ } ಸೆಕ್ರೆಟರಿ.

ಮೂರನೆಯ ವಿಜಾಪೂರ ಜಿಲ್ಲಾ ಸಭೆಯು.

ವಿಜಾಪೂರ ಜಿಲ್ಲೆಯಲ್ಲಿಯ ಎಲ್ಲ ವೀರಶೈವರಿಗೆ ವಿನಂತಿ ಮಾಡಿಕೊಳ್ಳುವುದೇನಂದರೆ,— ೧ ನೇ ಮತ್ತು ೨ ನೇ ಜಿಲ್ಲಾ ಸಭೆಗಳು ವಿಜಾಪುರದಲ್ಲಿ ೧೯೦೮ ಮತ್ತು ೧೯೧೧ ನೇ ವರುಷದಲ್ಲಿ ನೆರೆದದ್ದು ತಮ್ಮೆಲ್ಲರಿಗೆ ಗೊತ್ತೇ ಇರುತ್ತದೆ. ಆ ಕಾಲಕ್ಕೆ ಸಮಾಜಕ್ಕೆ ಹಿತಕಾರಿಗಳಾದ ಅನೇಕ ಉಪಯುಕ್ತ ವಿಷಯಗಳ ಬಗ್ಗೆ ಆಲೋಚನೆಗಳು ನಡಿಸಲ್ಪಟ್ಟು, ಆ ವೇಳೆಗೆ ಪ್ರಯತ್ನಗಳೂ ಅದಷ್ಟು ಮಟ್ಟಿಗೆ ವಿಜಾಪುರ ಜಿಲ್ಲಾ ಕಮಿಟಿಯ ಅನೇಕ ಮೆಂಬರರಿಂದ ಮಾಡಲ್ಪಟ್ಟವು ಈ ಸಭೆಯಲ್ಲಿ ನಾವು ಮುಂದೆ ಮಾಡತಕ್ಕ ಕಾರ್ಯಗಳನ್ನು ನಿರ್ಧರಿಸಿ, ಆ ವೇಳೆಗೆ ಎಲ್ಲರೂ ಒಮ್ಮನಸಿನಿಂದ ಪ್ರಯತ್ನಿಸತಕ್ಕದ್ದಾಗಿರುವುದು. ಈಗ ಈ ಕಾರ್ಯವನ್ನು ಬಾಗಲಕೋಟೆಯಲ್ಲಿಯ ನಮ್ಮ ವೀರಶೈವ ಬಂಧುಗಳು ಕೈಕೊಂಡಿರುವರೆಂಬದನ್ನು ತಮಗೆ ತಿಳುಹಿಸಲು ನಮಗೆ ಅತ್ಯಾನಂದವಾಗುತ್ತದೆ. ಈ ಸಭೆಯು ತಾ॥ ೧೧ ನೇ ಆಗಸ್ಟ ೧೯೧೨ ನೇ ದಿವಸ ನೆರೆಯುವುದು ಗೊತ್ತಾಗಿದೆ. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ವೀರಭದ್ರಪ್ಪ ಗುಣಪ್ಪ ನಾಯಕ ಬಹದ್ದೂರ ದೇಸಾಯಿ ಜಹಗೀರ ಇವರು ಸ್ವೀಕರಿಸಲು ಅನುಮೋದಿಸಿರುತ್ತಾರೆ. ಸಭೆಯಲ್ಲಿ ನಡೆಯತಕ್ಕ ವಿಷಯಗಳ ಪಟ್ಟಿಯನ್ನು ಕೆಳಗೆ ಕಾಣಿಸಿರುತ್ತದೆ. ಸಭೆಯಲ್ಲಿ ಇವುಗಳಲ್ಲದೆ ಮತ್ತೆ ಬೇರೆ ವಿಷಯಗಳನ್ನು ಚರ್ಚಿಸಬೇಕೆಂದು ಯಾರಾದರೂ ಇಚ್ಛಿಸಿದರೆ, ಅವರು ತಮ್ಮ ಸೂಚನೆಗಳನ್ನು ಸೆಕ್ರೆಟರಿಯವರ ಕಡೆಗೆ ಸಭೆಯು ಕೂಡುವ ೨ ದಿವಸ ಮುಂಚಿತವಾಗಿಯೇ ಬರೆದು ತಿಳಿಸಬೇಕು. ಸಭೆಯಲ್ಲಿ ಯಾವತ್ತು ವಿಷಯಗಳು ಸಂಭಾಷಣ ಪದ್ಧತಿಯಿಂದ ವಿವೇಚಿಸಲ್ಪಡುವವು ಚರ್ಚಿಸತಕ್ಕ ವಿಷಯಗಳು ಯಾವುವೆಂದರೆ:—

(೧) ಈಗ ಕೂಡಿದ ಬೋರ್ಡಿಂಗ ಫಂಡಿನ ಬಗ್ಗೆ ವಿಚಾರ. (೨) ಹಾಯಸ್ಕೂಲಿನ ಬಗ್ಗೆ ವಿಚಾರ. (೩) ಶಿಕ್ಷಣ ಫಂಡುಗಳ ಅವಶ್ಯಕತೆ. (೪) ವಿದ್ಯಾರ್ಥಿ ನಿಲಯಗಳ ಉಪಯುಕ್ತತೆ. (೫) ವ್ಯಾಪಾರೀ ಶಾಲೆಗಳ ಏರ್ಪಾಡು ಮತ್ತು ಅವುಗಳಲ್ಲಿಯ ಅಭ್ಯಾಸ ಕ್ರಮ. (೬) ಸಂಸ್ಕೃತ ಪಾಠಶಾಲೆಗಳ ಉಪಯುಕ್ತತೆ ಮತ್ತು ಅವುಗಳಲ್ಲಿಯ ಅಭ್ಯಾಸ ಕ್ರಮ. (೭) ಧಾರ್ಮಿಕ ಮತ್ತು ನೈತಿಕ ಕ್ರಮಿಕ ಪುಸ್ತಕಗಳನ್ನು ಬರೆಯುವದು. (೮) ಸಂಸ್ಕೃತ ಸಹಾಯಕ ಸಂಘಗಳನ್ನು ಬೆಳೆಯಿಸುವ ಉಪಾಯಗಳು ಮತ್ತು ಬ್ಯಾಂಕುಗಳು. (೯) ಹಸ್ತಲಿಖಿತ ಸಂಘಗಳು ಮತ್ತು ಅವುಗಳ ದ್ವಾರದಿಂದ ಹಸ್ತಲಿಖಿತ ಸಂಗ್ರಹಣೆ (೧೦) ಸೈನ್ಯದ ಬಗ್ಗೆ ವಿಚಾರ (೧೧) ಮಠಾಧಿಕಾರಿಗಳ ಬಗ್ಗೆ ಕಾಯಿದೆಯ ಅವಶ್ಯಕತೆ. (೧೨) ವರ್ತಮಾನ ಪತ್ರಿಕೆಗಳ ಸಂಗ್ರಹಣೆ. (೧೩) ಉಪದೇಶಕರನ್ನು ನೇಮಿಸುವದು. (೧೪) ವಿಜಾಪೂರ ಜಿಲ್ಲಾ ಸಭೆಯ ರಚನೆ (೧೫) ಮುಂದಿನ ವರ್ಷದ ಕಾರ್ಯ ಕ್ರಮವನ್ನು ಗೊತ್ತುಪಡಿಸಿ ಕಾರ್ಯಕಾರಿ ಕಮಿಟಿಗಳನ್ನು ನೇಮಿಸುವುದು. ಈ ಸಭೆಯ ಮಹತ್ವವನ್ನು ನಮ್ಮ ಎಲ್ಲ ವೀರಶೈವ ಬಂಧುಗಳು ತಿಳಿದುಕೊಂಡು ಈ ಸಭೆಗೆ ಅತ್ಯವಶ್ಯವಾಗಿ ಬರುವರೆಂದು ಪ್ರಾರ್ಥಿಸುತ್ತೇವೆ.

ವಿಜಾಪುರ } (೧) ಶಿ. ಬ ದೇಸಾಯಿ, } ಸೆಕ್ರೆಟರಿಗಳು
೮-೭-೧೨ } (೨) ಬಿ. ಗು ಹಳಕಟ್ಟಿ,
(೩) ಶಿವಸಿದ್ಧಪ್ಪ ಸರನಾಯಿಕ.
(೪) ಗುರುಲಿಂಗಪ್ಪ.

ಶ್ರೀ ಮುರುಘರಾಜೇಂದ್ರ ಪ್ರಸೀದ

ದಾವಣಗೆರೆ "ವೀರಶೈವ ಹಿತೋಪದೇಶಕ ಸಂಘದ" ಪರವಾಗಿ ನಡಿಯತಕ್ಕ;

ವೀರಶೈವ ವಾರ್ಷಿಕೋಪನ್ಯಾಸ ಮಾಲಾ.

ಇಲ್ಲಿನ ಶ್ರೀ ವಿರಕ್ತಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಜಯ ಸ್ವಾಮಿಗಳವರು ಬರುವ ಶ್ರಾವಣ ಮಾಸದಲ್ಲಿ (ತಾ॥ ೧೩-೮-೧೯೧೨ ರಿಂದ ೧೩-೯-೧೯೧೨ ಗೆ) ಪ್ರತಿನಿತ್ಯವು ಸಾಯಂಕಾಲ ೫ ಘಂಟೆಯಿಂದ ವಿರಕ್ತಮಠದಲ್ಲಿ ಸಭೆಯನ್ನು ಸೇರಿಸುತ್ತಾರೆ. ಆ ಕಾಲದಲ್ಲಿ ರಾಜಕೀಯ ಮತ್ತು ಮತಾಂತರದ ವಿಷಯಗಳನ್ನು ಬಿಟ್ಟು ವೀರಶೈವ ಜನಾಂಗದ ಏಳ್ಗೆಗೆ ಅನುಗುಣವಾದ ಸಂಗತಿಗಳನ್ನು ಕುರಿತು ವೀರಶೈವರಲ್ಲಿ ಯಾರಾದರೂ ಬಂದು ಉಪನ್ಯಾಸ ಮಾಡಬಹುದು. ಅಂತಹ ಉಪನ್ಯಾಸಕರು ತಾವು ಬರುವ ಕಾಲವನ್ನು ಮುಂಚಿತವಾಗಿಯೇ ತಿಳಿಸತಕ್ಕದ್ದು. ಬರಲಿಕ್ಕೆ ಅವಕಾಶವಿಲ್ಲದವರು ತಮ್ಮ ಉಪನ್ಯಾಸವನ್ನು ವಿರಳವಾದ ಅಕ್ಷರಗಳಿಂದ ಬರಸಿ ತಾ॥ ೧೩-೮-೧೯೧೨ ರ ಒಳಗಾಗಿ "ಸಹಾಯಕ ಕಾರ್ಯದರ್ಶಿಗಳ" ಕಡೆಗೆ ಕಳುಹಿಸಬೇಕು.

ಆ ತಿಂಗಳಲ್ಲಿ ನಡೆದ ಉಪನ್ಯಾಸಗಳ ಮತ್ತು ಬಂದ ಲೇಖನಗಳ ಸಾರಾಂಶವನ್ನು "ಮೈಸೂರ್ ಸ್ಟಾರ್" ಪತ್ರಿಕೆಗೆ ಕಳುಹಿಸುವುದಲ್ಲದೆ ಎಲ್ಲವನ್ನು ಸೇರಿಸಿ ಪುಸ್ತಕ ರೂಪವಾಗಿ ಮುದ್ರಿಸಲ್ಪಡುತ್ತೆ.

ಉಪಾಧ್ಯಕ್ಷರು—ತಿರಕಪ್ಪನವರ ಮಠದ ಮಹಾಂತಪ್ಪನವರು, ಕಾರ್ಯದರ್ಶಿಗಳು—ಮಾಗಾನಹಳ್ಳಿ ಸಂಗಪ್ಪನವರು, ಸಹಾಯಕ ಕಾರ್ಯದರ್ಶಿಗಳು—ಹರ್ಡೇಕರ್ ಮಂಜಪ್ಪನವರು.

ರಾ॥ ಬ॥ ರುದ್ರಗೌಡರಿಗೂ, ಫಾರೆಸ್ಟ್ ಆಫೀಸರು ಮಿ॥ ಹಡ್ಗ್‌ಸನವರಿಗೂ ಪ್ರಶಸ್ತಿಸೂಚಕವಾದ ಪದಕಗಳು ಕೊಡಲ್ಪಡುವಾಗ್ಗೆ ಕಮಿಷನರು ಮಾಡಿದ ಭಾಷಣದ ತಾತ್ಪರ್ಯವು ಕಳೆದವಾರದ ಪತ್ರಿಕೆಯಲ್ಲಿ ಕೊಡಲ್ಪಟ್ಟಿರುವುದಷ್ಟೆ ಆದರೆ ಆ ಭಾಷಣಗಳನ್ನು ಪೂರ್ತಿಯಾಗಿ ಪ್ರಕಟಿಸಬೇಕೆಂದು ಅನೇಕರು ಅಪೇಕ್ಷಿಸಿರುವುದರಮೇಲೆ ಅವನ್ನು ಇಲ್ಲಿ ಉದ್ಧರಿಸಿರುತ್ತೇವೆ.

The Hon'ble Mr. W D. Sheppard, C I E, I. C S, Commissioner, S D, held a special Darbar in the Commissioner's Office at Belgaum at 4–30 p m. on Wednesday July 3rd at the instance of His Excellency the Governor of Bombay for the purpose of presenting on His Excellency's behalf the Badge of the Imperial Service Order to Rao Bahadur Rudragowda Chenvirgowda Artal and the Kaiser-i-Hind Meadal of the First Class to Mr E M Hodgson, I. F S

The Darbar was largely attended. Among those present were Brigadiar General and Mrs Fry, Col Headley, Col. Knatchbull, Major & Mrs Bell, Mr. & Mrs. R.C. Brown, I.C.S., Mr & Mrs. L C Crump, I.C.S., the Hon'ble the Sar Desai of Wantmuri, The Hon'ble Mr Rodda, the Hon'ble Mr Belvi, Col. and Mrs. Campbell, the Rev Mr. Cortlogon, Mrs. Beatty, Mr and Mrs. Aitcheson, Mr and Mrs. Mclaren. Miss Walter, Mrs and Miss Hodgson, Messrs. Miller, Wiles, Mackie, Kyte, Butter-worth Hiley and Copleston, Capt. Lunham, I M S. Mr. Driver, Manager, Gokak Falls Mills, Dr. and Mrs Dalal, Dr. and Mrs. Fisher and many others. In the absence of Mr Priestley Mr. Haslehurst was in charge of the police arrangements and Messrs. Borkar and Mobedji Assistants to the Commissioner were also in attendance.

The company were all seated in their places when the Commissioner arrived punctually at 4–30 and declared the Darbar open.

The Commissioner said that it was not necessary for him to introduce Rao Bahadur Artal to the company assembled there as he was well-known and his name was a household word throughout the Karnatik and dilated on the long and meritorious services of Rao Bahadur Artal who being in his sixtieth year had spent nearly 40 years in the service of Government After serving for a year or two as Patil of his village of Artal he was enlisted on the staff of the Collector of Dharwar in the year 1875 and gradually worked his way up through the various grades of clerks until he became the Collector's Chitnis After that he was Daftardar to the Collector of Kanara, Native Assistant to the Commissioner, S D, and then for six years District Deputy Collector in the Bijapur District during which time he helped in 1896–97 to combat a famine of unusual severity. Since then for the lengthy period of 14 years Rao Bahadur Artal had been District Deputy Collector in the Belgaum district. During the hole of this period Rao Bahadur Artal's work had been marked by thoroughness and ability. He had no easy task. From the day of his first appointment up till now his life has been one long struggle. When he was appointed first by the Collector of Dharwar he found himself called upon to compete with members of a close corporation mainly Brahmins who had hitherto monopolised the bulk of the Government appointments. It was therefore not easy for him an almost solitary Lingayet to push his way through his clever competitors and reach to the very top. That he had done so was much to the credit of the Rao Bahadur and was a testimony of his great strength of character.

The Commissioner alluded also to the great fight Rao Bahadur Artal had made throughout his service to suppress corruption both among village officers and his own subordinates It is hard to break through the customs of centuries but what was practicable had been achieved and the stand which Rao Bahadur Artal had made against these evil customs of the country was greatly to his credit. Not only however had Rao Bahadur Artal been a shining example of determind honesty but he had also been remarkable for his loyalty. In the waverings of the last few years he had had no share nor had he had any sympathy for those who would deny their King His loyalty had been conspicuous and the whole example of his official career was one to which the attention of the younger generation of Lingayats might well be directed if they could produce even a few young men fitted to take Rao Bahadur's place they would deserve well of their community.

The Commissioner accordingly expressed the pleasure it gave him to be the officer from whose hands Rao Bahadur Artal would receive the badge of the Imperial Service Order.

The Commissioner then referred to Mr. Hodgson and congratulated him on being the recipient of a Kaiser-i-Hind Medal of the First Class. Mr. Hodgson both as Forest Officer and Political Agent in the Dangs had materially improved the condition of the Bhils and had enlisted them in the work of protecting the forest from fires. The results had been eminently satisfrctory and these satisfactory results were mainly due to Mr. Hodgson's capacity and devotion to his duty and the people.

The Commissioner then handed the badge of the Imperial Service Order to Rao Bahadur Rudragowda Chenveergowda Artal and the Kaiser-i-Hind Medal of the First Class to Mr. E M. Hodgson These gentlemen having briefly expressed their thanks to Government and pan-supari and garlands having been distributed the Commissioner rose to express his thanks to those present for having accepted his invitation to attend the Durbar Several of them had come from so far as Bijapur, Bagalkot and Gadag and he was glad to see the interest they felt in the chief recipient of the honours awarded by Government. He desired to express his appreciation of the presence at the Durbar of General Fry Commanding the Belgaum Brigade and his staff, of Col. Headley and Col. Knatchbull and of the Subhedar Majors and Subhedars of the Regiments stationed in Belgaum.

The Darbar was then declared closed

In the evening the Commissioner entertained the company at his bungalow. The band of the 110th Mahratta Light Infantry played selections at intervals and native music was also provided The party dispersed about midnight after a very enjoyable evening.

Reply by

RAO BAHADUR R. C. ARTAL, I. S. O.

The Hon'ble Mr. Sheppard,
ladies and gentlemen,

It is a great pleasure to me to receive the badge of honour today at the hands of my old friend and well-wisher So deeply moved and touched am I by the extremely kind and touching words in which the Honourable Mr Sheppard referred to me just now that I can hardly find words adequate enough to express all that I feel on this occasion The present occasion will always be remembered by me in my afterlife with feelings of pride and honour While I greatfully accept this honour graciously conferred upon me by His Majesty, the King Emperor of India in appreciation of my humble services I never thought during the whole of my official career extending over nearly 38 years that I would ever be the receipient of so high an honour Great as is the day on which His Imperial Majesty wished and desired Himself to make known to all His loving Subjects within His Indian Dominions the solemnity of His Coronation in this land of ours, still greater is that day to me since I feel personally that it is no small honour that His Imperial Majesty should have set his seal of approval in appreciation of my humble but loyal and faithful services by conferring upon me the high distinction of I S O on that unique occasion.

Although it is a matter of great satisfaction to me to find that my humble services are appreciated by high European Officials and on a former occasion, namely in 1909 when the personal distinction of Rao Bahadur was conferred upon me by no less a personage than His Excellency Sir George Clarke, Governor of Bombay I take this opportunity to state with the Honouroble Mr. Sheppard's permission that what litlle I have been able to do could scarcely have been done but for the kind co-operation and opportune encouragement often held out to me by my Superiors who were almost invariably Europeans. While always obeying the calls of duty, the one guiding principle of mine throughout my official career, it has been my study aim to guard the interests of the ignorant ryots and secure their welfare.

Lastly I must not forget to say that it is a strange coincidence that I should have to receive the badge of honour along with an officer of the Forest Department to which I owe a deep debt of gratitude because it was on the recommendation of Mr. Oliphant, the then Divisional Forest Officer of Dharwar that I got a footing in the Revenue Department.

In conclusion I beg to say that it gives me very great pleasure and pride to accept this mark of Royal recognition and I am sure that I shall always look upon it as the memento of the unique Delhi Durbar of December 1911. Let me also avail myself of this opportunity to thank all the ladies and gentlemen who have been pleased to honour me on this occasion by their presence.

ಅಮರೇಶ್ವರ ಚರಿತ್ರೆ.

ನೈಜಾಂ ಇಲಾಖಾ ರಾಯಚೂರು ಜಿಲ್ಲ ಗುಡುಗುಂಟಿ ಸಂಸ್ಥಾನದ ಪೈಕಿ ಸೇರಿದ ಯರಕೋಣೆ ಎಂಬ ಗ್ರಾಮದಲ್ಲಿ ಈಗಲೂ ರಥೋತ್ಸವವಾಗುತ್ತಲಿರುವ ಅಮರೇಶ್ವರನ ಚರಿತ್ರೆಯು ಸುಲಭವಾದ ಕನ್ನಡ ರೂಪಕವಾಗಿ ರಚಿಸಲ್ಪಟ್ಟಿದೆ. ಇದರಲ್ಲಿ ವೀರಶೈವರು ಓದತಕ್ಕ ಅನೇಕ ವಿಷಯಗಳು ಅಡಕವಾಗಿವೆ. ಪ್ರತಿಯೊಬ್ಬರು ಅವಶ್ಯಕವಾಗಿ ನೋಡತಕ್ಕದ್ದಾಗಿದೆ. ಭಕ್ತರ ಭಕ್ತಿ ವಿಶೇಷವು, ದಂಪತಿಗಳ ಅನ್ಯೋನ್ಯ ಪ್ರೀತಿಯು, ನೀತಿ ಭಕ್ತಿ ಜ್ಞಾನ ವೈರಾಗ್ಯಾದಿಗಳು ಸರಸವಾಗಿ ವರ್ಣಿಸಲ್ಪಟ್ಟಿವೆ. ಅಂಚೆ ವೆಚ್ಚ ಸೇರಿ ೦-೧೦-೦ ಆಣೆ. ಒಂದೇಸಲ ಮೂರು ಪ್ರತಿಗಳನ್ನು ತರಿಸಿಕೊಂಡವರಿಗೆ ಪಠನ ಮಾಡಲಿಕ್ಕೆ ಮುಖ್ಯವಾದ ದಶಾಷ್ಟಕ ರತ್ನಾವಳಿಯನ್ನು ಉಚಿತವಾಗಿ ಕಳುಹುತ್ತೇವೆ ಜನನ ಜಾತಕ, ಪ್ರಶ್ನೆಜಾತಕ, ಜನನಕುಂಡಲಿ ಭವಿಷ್ಯತ್ಫಲ ಬರಿಸತಕ್ಕವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ನಮ್ಮ ವಿಳಾಸ:—
ಮಲ್ಲಿಕಾರ್ಜುನ ಸಿದ್ಧಾಂತಿಗಳು,
ಕೊಟ್ಟೂರು ಸ್ವಾಮಿಗಳ ಮಠ, ಬಳ್ಳಾರಿ.

---

2 ರಾಸ್ಕೋಪ್ ಸಿಸ್ಟಂ ಲಿವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ ರೂ. 2—4—0 ಮಾತ್ರ. 5 ವರ್ಷಗಳ ಗ್ಯಾರಂಟಿ.

SUPERIOR WATCH Co.
Rs 2/4.
Rs 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು. ನೋಡುವುದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟುಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿರಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನಸಹಿತ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿವಾಚ್ ಕೀಲಿಲೆಸ್ ಲಿವರ್ ಜೆಕ್ಕೆಸ್ಟ್ರ ಕಂಪೆನ್ಸೇಟೆಡ್ ಬ್ಯಾಲೆನ್ಸ್. ಬಹು ಬಲಿಷ್ಠವಾದ 5 ವರ್ಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ. 5-12-0. ಇದನ್ನು ಆಗಸ್ಟ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವೃತ್ತಿ ಬೀಗಕೊಡತಕ್ಕ ಮೇಲಾದ ಟೈಂಪೀಸ್ ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು.

"ಇಂಗ್ಲೀಷ ಶಿಕ್ಷಕ"

ಅಥವಾ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕರ ಸಹಾಯವಿಲ್ಲದೆ ಇಂಗ್ಲೀಷ ಮಾತು ಕಲಿಸುವ ಪುಸ್ತಕವು. ಬೆಲೆ ೧೦ ಆಣೆ, ಟಪಾಲು ಖರ್ಚು ಬೇರೆ.

ನ. ಸು. ಬಾಗಲ,
ಬನ್ನಿಕೊಪ್ಪ, ಮುಂಡರಗಿ ಪೋಸ್ಟ್,
ಧಾರವಾಡ ಜಿಲ್ಲಾ.

ವೀರಶೈವಾಶ್ರಮ ಬೆಂಗಳೂರು.

9

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವ್ಯಾಪಾರಕ್ಕಾಗಿಯೂ, ಕೋರ್ಟು ಮೊದಲಾದ ಕೆಲಸಗಳಿಗಾಗಿಯೂ, ಪಟ್ಟಣವನ್ನು ನೋಡುವುದಕ್ಕಾಗಿಯೂ ಬೆಂಗಳೂರಿಗೆ ಬರತಕ್ಕ ವೀರಶೈವ ವರ್ತಕರು, ಶ್ರೀಮಂತರು, ಪಾಳೆಯಗಾರರು, ಅಧಿಕಾರಿಗಳು ಮೊದಲಾದವರುಗಳಿಗೂ ಇಳಿದುಕೊಳ್ಳುವುದಕ್ಕೂ ಭೋಜನಕ್ಕೂ ತಕ್ಕ ಅನುಕೂಲ್ಯವು ಇಲ್ಲದೆ ಬಹು ತೊಂದರೆಯಾಗಿರುವುದರಿಂದ ಬೊಂಬಾಯಿನಲ್ಲಿ ವೀರಶೈವರಿಗಾಗಿ ಒಂದು ಆಶ್ರಮವು ಕಟ್ಟಿಸಲ್ಪಟ್ಟಿರುವಂತೆ ಈ ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಬಹುಜನರು ಅಪೇಕ್ಷಿಸಿ ಪ್ರೋತ್ಸಾಹಿಸಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲುಗಳಿಗೂ, ವರ್ತಕರು ಪೇಟೆಗಳಿಗೂ, ವಿವಾದಸ್ಥರು ಲಾಯರ ಮನೆಗಳಿಗೂ, ಕೋರ್ಟುಗಳಿಗೂ ಹೋಗಿ ಬರಲು ಸಮೀಪವಾಗಿಯೂ, ಮಾರ್ಕೆಟ್ಟಿಗೂ ವಿಕ್ಟೋರಿಯಾ ಆಸ್ಪತ್ರೆಗೂ ಬಹು ಸಮೀಪವಾಗಿಯೂ ಇರುವಂತೆ ಕೋಟೆಯೊಳಗೆ ಪೋಸ್ಟಾಫೀಸಿನ ಮಗ್ಗುಲಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವನ್ನು ಏರ್ಪಡಿಸಿದೆ. ಈ ಕಟ್ಟಡದಲ್ಲಿ ಶ್ರೀಮಂತರುಗಳೂ, ಪಾಳೆಯಗಾರರೂ, ಅಧಿಕಾರಿಗಳೂ ವಾಸಿಸಲು ಅನುಕೂಲವಾದ ಕೊಠಡಿಗಳಿರುವುವಲ್ಲದೆ, ಈಗಿನ ಕಾಲದ ಆರೋಗ್ಯ ಸೂತ್ರಕ್ಕನುಗುಣವಾಗಿದೆ. ಬುದ್ಧಿವಂತರಾದ ಪಾಚಕರನ್ನು ನಿಯಮಿಸಿ ಪ್ರತಿಯೊಬ್ಬರ ಆಚಾರ ವ್ಯವಹಾರಕ್ಕೆ ತಕ್ಕೇರ್ಪಾಟನ್ನಿಟ್ಟಿದೆ ಮತ್ತು ಊಟದ ಖರ್ಚನ್ನೂ ತಕ್ಕಮಟ್ಟಿಗೆ ಸುಲಭಮಾಡಿದೆ. ಇಲ್ಲಿಯ ಏರ್ಪಾಟನ್ನು ತಿಳಿಯಲಪೇಕ್ಷಿಸುವ ವಿದ್ಯಾರ್ಥಿಗಳೂ ಇತರರೂ ಈ ಕೆಳಗಿನ ವಿಳಾಸದಾರರಿಂದ ಪ್ರತ್ಯಕ್ಷವಾಗಾಗಲೀ ಅಥವಾ ಲಿಖಿತ ಮೂಲಕವಾಗಾಗಲೀ ತಿಳಿಯಬಹುದು.

ಎಸ್. ಕಳ್ಳೆಪ್ಪ,
೧೧೦ ನಂಬರ ಷಾಪ್. ದೊಡ್ಡಪೇಟೆ, ಬೆಂಗಳೂರು.

ಮದನಮಂಜರೀ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವುದು ಮುಂತಾದ ಸಕಲ ಮೂತ್ರ ಪಿಂಡರೋಗಗಳನ್ನು ನಿರ್ಮೂಲ ಮಾಡುವುದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವುವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನು ದೀರ್ಘಾಯುಸ್ಸನ್ನು ಮುಖಕ್ಕೆ ಒಳ್ಳೇ ಕಾಂತಿಯನ್ನೂ ಉಂಟುಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳೂ ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧-೦-೦.

ಬಿಚ್ಚು! ವೈದ್ಯ ವಿದ್ಯ. ಪುಗಸಟ್ಟೆ!!

ಸಂಪೂರ್ಣಾರೋಗ್ಯವನ್ನು, ದೀರ್ಘಾಯುಷ್ಯವನ್ನು, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವುದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವುದು. ಕೋರಿದವರಿಗೆ ಕ್ರಯವು ಅಂಚೆ ಹಾಸಲು ಸಹ ಇಲ್ಲದೆ, ಮುಫತ್ತಾಗಿ ರವಾನಿಸಲ್ಪಡುವುದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈವರೆಗೂ ೨೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡ ಬರೆಯಿರಿ.

ರಾಜವೈದ್ಯ ನಾರಾಯಣಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ,
೧೬೩ ಬೇನಾಬಜಾರ್ ರೋಡ್,
ಮದರಾಸು.

ಆಶ್ಚರ್ಯ ಚಿಕಿತ್ಸೆ. ಬಂದು ಪರೀಕ್ಷಿಸಿ.

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀವುದು ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು

ಬ್ಲಡ್ ಸರ್ಕ್ಯೂಲೇಟರ್ ಎಂಬ ನೂತನ ಯಂತ್ರದಲ್ಲಿ ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ

11 ಗುಣಪಡಿಸುತ್ತೆ.

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು ಗಂಟಲಿಗೂ ಕಿವಿಗೂ ಮಧ್ಯೆಯಿರುವ ಲಾಳದಲ್ಲಿ ಕಸಕಡ್ಡಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡು ಉಂಟಾಗುವುದು ಜ್ವರಬಂದು ನಿಂತಮೇಲೂ, ವಾಯುವಿನಿಂದಲೂ ಕಿವುಡು ಉಂಟಾಗಿರುವುದು ಇದೇ ಮೊದಲಾದ ಎಲ್ಲಾ ಕರ್ಣರೋಗಗಳನ್ನೂ ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ನೆತ್ತೆ, ಕಾಮಾಲೆ, ಶೋಭೆ, ಪಾರ್ಶ್ವವಾಯು ಅಂದರೆ ಒಂದು ಭಾಗದಲ್ಲಿ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾದ ಎಲ್ಲಾ ತರಹ ವಾಯು ರೋಗಗಳೂ ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಮೊಕ್ತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಂಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ರೈಲ್ವೆಸ್ಟೇಷನ್.

44 ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕಮಧು:— ಇದರ ಸೇವನದಿಂದ ವ್ಯಾಯೋಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಶಾರೀರಶಕ್ತಿಯು ವೃದ್ಧಿ ಸಂತತಿ ಧಾರಣೆಗೆ ಯೋಗ್ಯವಾದ ಧಾತುವಾಗುತ್ತದೆ. ಅಗಮೈಥುನದಿಂದ ಅಥವಾ ಯೌವನಾರಂಭದಲ್ಲಿ ಕಾರಣದಿಂದ ನಪುಂಸಕತ್ವವುಂಟಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಅಜೀರ್ಣವಾಗುವುದರಿಂದ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವುದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಶಕ್ತಿ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ: ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೧-೦ ರೂ. ೩ ಬಾ, ೩-೭-೦ ರೂ. ಒಮ್ಮಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಪಚ್ಚಾಂಗಪರ್ಪಟರಸ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಕೆಡ್ಡವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೨ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಮಾಡುವ ಔಷಧವು.")

ಇದರ ಸೇವನೆಯಿಂದ ಪಚನಶಕ್ತಿಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ಟ.ಖ. ಬೇರೆ.

ನಂ. ೫೫ "ಅಂಜೀರಾರ್ಕಮಧು ಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

25

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಬರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸೇಕೆಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:— ಎಂ. ಬಸವಲಿಂಗಶಾಸ್ತ್ರಿ, ಹಳೆಅಗ್ರಹಾರ, ದೀವಿಟಿಗೆಬೀದಿ ಮೈಸೂರು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

15

ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆನೋವು ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೨೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧-೦-೦ ರೂ.

ಟಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
103 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೨೦ ಮಾತ್ರೆ ಸೀಸೆ ೦-೪-೦, ೫೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೮೪ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸಹಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರತವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಘ್ನರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೨೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೫೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦.

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೨ ನೆಯ ಇಸವಿ ಜುಲೈ ತಾ॥ ೨೨ ರಿಂದ ೧೯೧೨ನೆಯ ಜುಲೈ ತಾ॥ ೨೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ನಿಜಾಷಾಢ ಶು॥ ನವಮಿಯಿಂದ ನಿಜಾಷಾಢ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ತೇದಿ
22	[1] ಸೋ	ನವ	49-55	ಸ್ವಾತಿ	28-48	8
23	[2] ಮಂಗ	ದಶ	49-39	ವಿಶಾ	29-47	9
24	[3] ಬುಧ	ಏ	50-38	ಅನೂ	32-8	10
25	[4] ಗುರು	ದ್ವಾ	53-0	ಜ್ಯೇಷ್ಠ	35-39	11
26	[5] ಶುಕ್ರ	ತ್ರ	56-24	ಮೂಲ	40-20	12
27	ಶನಿ	ಚ	60	ಪೂಷಾ	45-58	13
28	[6] ಭಾನು	ಚ	1-4	ಉಷಾ	52-18	14

(1) ಜೀಯರ್ ಸನ್ನಿಧಿ ತಿರುಮಲಾರ್ಯ ಯತಿರಾಜಜೀಯರ್ ತಿ॥ (2) ವೈವಸ್ವತಮನ್ವಾದಿ, (3) ಸರ್ವತ್ರ ಪ್ರಥಮೈಕಾದಶಿ, ಗೋಪದ್ಮವ್ರತಂ, (4) ಶಯನದ್ವಾದಶಿ, (5) ಆಡಿಶುಕ್ರವಾರ, (6) ಬ್ರಹ್ಮಸಾವರ್ಣಿಮನ್ವಾದಿ, ಆಳವಂದಾರ್ ತಿರುನಕ್ಷತ್ರಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

REGISTERED NO M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುತ್ತದೆ.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಞನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಕಾನುಕಂಪೋಜ್ವಲಂ ।

REGISTRED NO. M 124

ಸಂಪುಟ ೨೫] ಮೈಸೂರ್ ಸ್ಟಾರ್ ಸರ್ ೧೯೧೨ ನೆಯ ಇಸವಿ ಜುಲೈ ತಾರೀಖು ೨೨ ನೆಯ ಸೋಮವಾರ. [ಸಂಚಿಕೆ ೩೦

22 ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರಿಗೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೨ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಲಿ. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೧-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೧-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

49

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ—ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೩ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೩ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳೂ ೬೦ ಪುಟಗಳು ಬರುವವು. ವರ್ಷದ ಚಂದಾ ೨-೦-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ. ಮೈಸೂರು.

ಮಧುರವಾಣಿ.

17 ವಾರ್ಷಿಕಚಂದಾ ೧-೮-೦

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ಧಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

25 ವಿವೇಕ ಮಂಜರಿ

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೧೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯಚಾತುರ್ಯದ ಪ್ರೌಢಿಮೆ ಮನೋಹರಶೈಲಿ. ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚಿಗೆಗೊಳಗಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೨ ನೆಯ ಭಾಗ ೩ ಆಣೆ ೧೨೦ ಪುಟಗಳು

ಅಂಚೆ ವೆಚ್ಚ ಬೇರೆ.

ವಿಳಾಸ:— "ಮೈಸೂರ್ ಸ್ಟಾರಾಫೀಸ್" ಮೈಸೂರ್.

49 ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ— ಬೆಲೆ ವಿ.ಪಿ. ೪ ಆಣೆ. ಇದು ಸ್ತೋತ್ರವು. ಉತ್ತಮವಾದ ಕನ್ನಡಟಿಪ್ಪಣದಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ.ಪಿ. ೩ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡಟಿಪ್ಪಣದಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತವೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

10 ಕಾರೋನೇಷನ್ ಸಾಬೂನು.

"ಅಪಾಯವಿಲ್ಲದ ರೋಮಸಂಹಾರಿ"

CORONATION SOAP
TRADEMARK

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನೋವು ಮುಂತಾದ ಬಾಧೆಗಳಿಲ್ಲ ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0.
3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0. ಅಂಚೆ ಹಾಸಲು 0—4—0

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ. ಷಾ ಅಂಡ್ ಕೋ.,
177 ಚೈನಾಬಜಾರ್‌ರೋಡ್, ಮದ್ರಾಸು.

7 ಕಾಶೀ ವಿಶ್ವೇಶ್ವರ ಪ್ರಸನ್ನಾ.


S.U.M. & Co.
BENARES CITY.
KASHI
VISHWESHWAR.

ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀಕ್ಷೇತ್ರ ಕಾಶಿಯಲ್ಲಿ ತಯಾರಾಗುವ ಬನಾರಸ್ ಜರೀ ರೇಷ್ಮೆಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೆಗಾಲ ಮೊಳಕಾಲ್ಮೂರು ನಮೂನೆ ವಸ್ತ್ರಗಳು, ಜರೀ ರೇಷ್ಮೆ ಭದ್ದರು, ರುದ್ರಾಕ್ಷಿ ಸರಗಳು, (ಇದರಲ್ಲಿ ೨ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಚೌರಿಕೂದಲು, ಗಂಗಾಭಾಗೀರಥಿಯೆಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಟಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಫಸ್ಟ್ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು, ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರನ ಪಟ, ೨ ನಮ್ಮ ಕಂಪೆನಿ ವಿಳಾಸದ ಕಾರ್ಡು ಇವುಗಳನ್ನು ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು. ಬೇರಿಂಗ್ ಪತ್ರ ತೆಗೆದುಕೊಳ್ಳಲಾರೆವು.

ವಿಳಾಸ,—ಮೇನೇಜರ್,
ಎಸ್. ಯು. ಎಮ್. ಅಂಡ್ ಕಂಪೆನಿ,
ಬನಾರಸ್ ಸಿಟಿ.

ಪ್ರಸಿದ್ಧ ಪತ್ರಿಕೆ.

ಬರುವ ತಿಂಗಳಲ್ಲಿ ಇಲ್ಲಿನ ಮ್ಯುನಿಸಿಪಾಲಿಟಿಗೆ ಹೊಸದಾಗಿ ಸಭಿಕರನ್ನು ಆರಿಸುವ ಕೆಲಸವು ನಡೆಯುವುದು. ಸಭಿಕರಾಗಲು ಮತ್ತೂ ಅಭಿಮತವನ್ನು ಕೊಡಲು ಅರ್ಹರಾದವರ ಪಟ್ಟಿಯು ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿರುವುದು. ಹಿಂದಿನಬಾರಿ ಸಭಿಕರಾಗಿದ್ದವರೇ ಅಲ್ಲದೆ ಹೊಸಬರೂ ಕೆಲರು ಈ ಬಾರಿಯಲ್ಲಿ ಸಭಿಕರಾಗ ಸೇರಬೇಕೆಂದು ಪ್ರಯತ್ನಿಸಿರುವರು. ಈ ಮೇಲಾಟದಲ್ಲಿ ತೊಡಗಿರುವ ಜನರು ಈಗಿನಿಂದಲೂ ಜನರ ಅಭಿಮತವನ್ನು ತಮ್ಮ ತಮ್ಮ ಕಡೆಗೆ ಹೆಚ್ಚಿಸಿಕೊಳ್ಳುವುದಕ್ಕಾಗಿ ತಿರುಗುತ್ತ ದಾಕ್ಷಿಣ್ಯಪ್ರಾರ್ಥನವನ್ನು ಮಾಡುತ್ತಿರುವರು.

ಮ್ಯುನಿಸಿಪಾಲಿಟಿಯೆಂಬುವುದು ಆಯಾ ಸ್ಥಳಗಳ ಆರೋಗ್ಯರಕ್ಷಣ ಶುಚೀಕರಣ ಮೊದಲಾದ ಕಾರ್ಯಗಳ ನಿರ್ವಾಹಕ್ಕಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ. ಆ ಆ ಸ್ಥಳದ ಪ್ರಜೆಗಳೆಲ್ಲರೂ ಸೇರಿ ಈ ಕಾರ್ಯವನ್ನು ಮಾಡುವುದು ಸಾಧ್ಯವಲ್ಲವಾದುದರಿಂದಲೇ ಆ ಪ್ರಜೆಗಳ ಪ್ರತಿನಿಧಿಗಳಾದ ಕೆಲವರನ್ನು ಅವರೇ ಆರಿಸಿ, ಇಂಥ ಸಂಘವನ್ನು ಏರ್ಪಡಿಸಿ, ಅವರ ಮೂಲಕ ತಮ್ಮ ಸ್ಥಳಗಳ ಕಾರ್ಯವನ್ನು ನಿರ್ವಾಹ ಮಾಡಿಸುವ ಪದ್ಧತಿಯು ಸ್ಥಾಪಿಸಲ್ಪಟ್ಟಿದೆ. ಈ ಸಂಘಗಳು ಪೌರಕಾರ್ಯನಿರ್ವಾಹಾರ್ಥವಾದುದರಿಂದಲೇ ಇವುಗಳ ಸಭಾಸದರು ಯಾವುದೊಂದು ಸಂಬಳವೂ ಇಲ್ಲದೆ, ಪ್ರಜಾಹಿತಚಿಂತನೆಯಿಂದ ಸನ್ಮಾನನೀಯರುಗಳಾಗಿ ಕೆಲಸಮಾಡುವವರಾಗಿರುತ್ತಾರೆ. ಸರ್ಕಾರದುದ್ಯೋಗಿಗಳ ಅಧ್ಯಕ್ಷತೆಯಿಲ್ಲದೆ ಪುರಜನರು ತಾವುತಾವೇ ಇದರ ಕಾರ್ಯವನ್ನು ನಿರ್ವಾಹ ಮಾಡಿಕೊಳ್ಳತಕ್ಕ ಅರ್ಹತೆಯನ್ನು ಇನ್ನೂ ಪಡೆದುಕೊಂಡಿಲ್ಲದಿರುವ ಕಾರಣದಿಂದಲೇ ಸಂಬಳವುಳ್ಳ ಸರ್ಕಾರದಧಿಕಾರಿಗಳನ್ನು ಇಂಥ ಸಂಘಗಳ ಅಧ್ಯಕ್ಷತೆಗಾಗಿ ಗೌರ್ನಮೆಂಟಿನವರು ನಿಯಮಿಸುತ್ತಿದ್ದಾರೆ. ನಮ್ಮ ಭರತಖಂಡದಲ್ಲಿ ಇಂಥ ಪೌರಕಾರ್ಯನಿರ್ವಾಹಕ ಸಂಘದ ಏರ್ಪಾಟು ಲಾರ್ಡ್ ರಿಪ್ಪನ್ನರವರ ವೈಸ್ರಾಯಿಗಿರಿಯಲ್ಲಿ ಆರಂಭಿಸಲ್ಪಟ್ಟುದಾದ ಕಾರಣ, ಆ ಪದ್ಧತಿಯು ಸ್ಥಾಪಿತವಾಗಿ ಇಂದಿಗೆ ೩೦ ವರ್ಷಗಳಾಗಿದ್ದರೂ, ಸರ್ಕಾರದ ಅಧ್ಯಕ್ಷತೆಯಿಂದಲ್ಲದೆ ಸ್ವತಃ ಕಾರ್ಯನಿರ್ವಾಹಮಾಡಿಕೊಳ್ಳುವ ಸ್ಥಿತಿಗೆ ನಮ್ಮ ದೇಶದ ಮ್ಯುನಿಸಿಪಾಲಿಟಿಗಳು ಇನ್ನೂ ಬಂದಿರುವುದಿಲ್ಲ. ಸ್ವಾರ್ಥಪರತೆ-ಮುಖದಾಕ್ಷಿಣ್ಯ-ನ್ಯಾಯೈಕಪರತೆಯ ನ್ಯೂನತೆ-ಮೊದಲಾದುವುಗಳೊಡನೆ ಕೂಡಿ ಈ ಸಂಘಗಳಲ್ಲಿ ಕಾರ್ಯನಿರ್ವಾಹವಾಗುವುದನ್ನು ಯಾಚಿಸುವ ಜನರಿಂದ ಪ್ರಜೆಗಳಿಗೆ ಯಾವ ಹಿತವೂ ಆಗುವುದಿಲ್ಲ. ಸ್ವಾರ್ಥ ಸ್ವಗೌರವದಾಸೆಗಳಿಂದ ಯಾರು ಈ ಸಭಾಸದರಾಗಬೇಕೆಂದು ಯಾಚಿಸುವರೋ ಅಂಥವರಿಗೆ ಪ್ರಜೆಗಳು ತಮ್ಮ ಪ್ರತಿನಿಧಿತ್ವವನ್ನು ವಹಿಸಿಕೊಡುವುದಾದರೆ ತಮ್ಮ ಕೈ ಹಗ್ಗದಿಂದ ತಾವೇ ಕಟ್ಟಿಸಿಕೊಂಡಂತಾಗುವುದು. ತಮ್ಮ ಕರ್ತವ್ಯವನ್ನು ಮೂಲೆಗೊತ್ತಿ ನಾಮಮಾತ್ರಕ್ಕೆ ಸಭಾಸದರಾಗಿರತಕ್ಕವರು ನಮ್ಮ ದೇಶದ ಮ್ಯುನಿಸಿಪಾಲಿಟಿಗಳಲ್ಲಿ ಹೆಚ್ಚಿರುವುದರಿಂದಲೇ ಇವುಗಳ ಅವಸ್ಥೆಯ ವಿಷಯಕವಾದ ದೂರುಗಳು ಪದೇಪದೇ ಪತ್ರಿಕೆಗಳಲ್ಲಿ ಹೊರಬೀಳುತ್ತಲೇ ಇರುವುವು. ಇಂಥ ದೂರು ಸಣ್ಣಸಣ್ಣ ನಗರಗಳಲ್ಲಿ ಮಾತ್ರವೇ ಇರುವುದಿಲ್ಲ. ಕರಾಚಿಯಂಥ ದೊಡ್ಡದೊಡ್ಡ ನಗರಗಳಲ್ಲೂ ಕೂಡ ಸಂಭವಿಸುತ್ತಿರುವುದನ್ನು ಕೇಳಿದರೆ ವಿಷಾದವಾಗುವುದು.

ಸದ್ಯಃ ಮೈಸೂರು ರಾಜಧಾನಿಯ ಮ್ಯುನಿಸಿಪಾಲಿಟಿಯ ವಿಷಯವನ್ನು ವಿಚಾರಮಾಡಿದರೆ ಇಲ್ಲಿನ ಸಭಾಸದರಿಗೆ ಈಗ ಮೊದಲಿದ್ದಷ್ಟು ಕಾರ್ಯಭಾರಗಳಿರುವುದಿಲ್ಲ. ಆರೋಗ್ಯರಕ್ಷಣ ಶಾಖೆಯು ಪ್ರತ್ಯೇಕವಾಗೇರ್ಪಟ್ಟಂದಿನಿಂದ ಈ ಸಭಾಸದರಿಗೆ ಆ ಭಾಗದ ಪ್ರತ್ಯಕ್ಷವಿಚಾರಣದ ಹೊರೆಯು ಸಂಪೂರ್ಣವಾಗಿ ತಪ್ಪಿರುವುದು. ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಏರ್ಪಟ್ಟಾದುದರಿಂದ ಹೊಸಮನೆಯನ್ನು ಕಟ್ಟುವುದರ ಹಳೆ ಮನೆಗಳನ್ನು ಕೀಳಿಸುವುದರ ಸಂಬಂಧದ ವಿಚಾರಗಳ ಹೊರೆಯೂ ಇವರಿಗೆ ತಪ್ಪಿಹೋಗಿರುವುದು. ಕುಡಿಯುವ ನೀರಿನ ಮತ್ತೂ ದೀಪ ಏರ್ಪಾಟುಗಳಿಗೆ ಪ್ರತ್ಯೇಕಶಾಖೆಗಳಾದುದರಿಂದ ಅದರ ಚಿಂತೆಯೂ ಇವರಿಗಿರುವುದಿಲ್ಲ. ಮುಖ್ಯವಾಗಿ ತಿಂಗಳುಗಟ್ಟಲೆಯಲ್ಲಿ ನಡೆಯುವ ಕೂಟಗಳಿಗೆ ಹೋಗಿ ಅವಶ್ಯಕರ್ತವ್ಯಗಳನ್ನು ಕುರಿತು ಚರ್ಚಿಸುವ ಮತ್ತೂ ಆದಾಯವ್ಯಯಗಳ ವಿಷಯವಾಗಿ ಆಲೋಚಿಸಿ ನಿರ್ಧರಿಸುವ ಕಾರ್ಯದ ವಿಷಯದಲ್ಲಿ ಮಾತ್ರವೇ ಇವರ ಅಗತ್ಯವು ಅವಶ್ಯಕವಾಗಿರುತ್ತದೆ. ಅದೊಂದು ವಿಷಯದಲ್ಲಾದರೂ ಇವರು ಮುಖದಾಕ್ಷಿಣ್ಯಾದಿಗಳನ್ನು [illegible] ನಿಜವಾದ ಪ್ರಜಾಹಿತದ ಭಾವನದಿಂದ ಕೆಲಸಮಾಡುವವರಾದರೆ, ಇವರಿಗೆ ಸಭಾಸದರಾಗಬೇಕೆಂಬ ಹಂಬಲವೇಕೆ? ಮನೆಮನೆಗೆ ಹೋಗಿ ಪ್ರಜೆಗಳನ್ನು ಅನುವರ್ತಿಸುವ ತಾರತಮ್ಯವೇತಕ್ಕೆ? ಏಕೆ?

ರಾಜಧಾನಿಯು ವಿಸ್ತಾರದಲ್ಲಿ ದಿನದಿನಕ್ಕೆ ಹೆಚ್ಚುತ್ತಿದೆ. ಅಲಂಕಾರಸಾಧನಗಳು ಮಿತಿಮೀರುತ್ತಿವೆ. ಸದ್ಯಃ ಇಂಪ್ರೂವ್‌ಮೆಂಟ್ ಟ್ರಸ್ಟ್ ಇರುವುದರಿಂದ ಸರ್ಕಾರದ ಬೊಕ್ಕಸವು ಲಕ್ಷೋಪಲಕ್ಷ ರೂ. ಗಳನ್ನು ಇದಕ್ಕೆ ವೆಚ್ಚಮಾಡಲು ಸಹಾಯಮಾಡುತ್ತಿದೆ. ಇದರ ಕೆಲಸವು ಮುಗಿದಮೇಲೆ ಈಗ ಸ್ಥಾಪಿತವಾಗಿರುವ ಹೊಸಹೊಸ ಬೀದಿಗಳು ನೂತನವಾದ ಬಡಾವಣೆಗಳು ಮೊದಲಾದುವುಗಳ ಶುಚೀಕರಣಾದಿ ಭಾರವನ್ನೆಲ್ಲಾ ಉತ್ತರೋತ್ತರ ಮ್ಯುನಿಸಿಪಾಲಿಟಿಯೇ ವಹಿಸಿಕೊಳ್ಳಬೇಕಾಗುತ್ತದೆ. ಅದರ ವೆಚ್ಚಕ್ಕೆ ತಕ್ಕಷ್ಟು ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಮ್ಯುನಿಸಿಪಾಲಿಟಿಯು ಪ್ರಜೆಗಳ ಮೇಲೆ ಹೊಸತೆರಿಗೆಗಳನ್ನು ಹಾಕಲು ಹವಣಿಸುತ್ತದೆ. ಪಟ್ಟಣದಲ್ಲಾದರೂ ಪ್ರಜೆಗಳ ಸಂಪತ್ತಿಯು ಬೆಳೆಯುವುದಕ್ಕೆ ತಕ್ಕ ಸಾಧನಗಳು ಹೆಚ್ಚುತ್ತಿರುವುದಿಲ್ಲ. ಇಲ್ಲಿ ಹೊರಗೆ ಪುರಾಲಂಕಾರವು ಬೆಳೆಯುತ್ತಿರುವಂತೆ ವ್ಯಾಪಾರೋದ್ಯೋಗಾದಿಗಳು ವೃದ್ಧಿಹೊಂದುತ್ತ ಇಲ್ಲ. “ಗುಡುಗಿದ್ದರೆ ಮಿಡುಕು” ಎಂಬ ತತ್ವದಮೇಲಣ ಗಮನವು ಮೇಲ್ಪಟ್ಟವರಿಗೆ ಸಂಪೂರ್ಣವಾಗಿರುವುದಿಲ್ಲ. ಹಳೆಯ ಮನೆಗಳನ್ನು ವಿಶೇಷವಾಗಿ ಒಡೆದುದರಿಂದ ಹೊಸಮನೆಗಳನ್ನು ಕಟ್ಟಿಸುವ ಕೆಲಸವು ಊರಿನಲ್ಲೆಲ್ಲಾ ನಡೆಯುತ್ತಿರುವುದರಿಂದ ಸದ್ಯಃ ಬಡಜನರಿಗೆ ಕೂಲಿ ಸಿಕ್ಕಿ ಉದರನಿರ್ವಾಹವೇನೋ ಸಾಗುತ್ತಿದೆ. ಹೀಗೆಯೇ ಕೂಲಿಕೆಲಸವು ಬಡಜನರಿಗೆ ನಿರಂತರಾಧಿಕವಾಗಿ ಸಾಗುವಂಥ ವಿಸ್ತಾರಗಳಾದರೂ ಸ್ಥಿರವಾಗಿ ಆಗದಿದ್ದರೆ ಕೆಲಕಾಲಾನಂತರ ರಾಜಧಾನಿಯ ಸ್ಥಿತಿಯು ಪರಿತಾಪಕರವಾಗದೆ ಹೋಗುವುದಿಲ್ಲ. ಈಗಲೂ ಹಾಕಿರುವ ಕಂದಾಯದಲ್ಲಿ ಕೆಲಭಾಗವು ವಸೂಲುವುದಕ್ಕಿಲ್ಲದೆ ಆಗಾಗ್ಗೆ ನಾಲ್ಕೈದು ಸಾವಿರ ರೂ. ಗಳಂತೆ ಮ್ಯುನಿಸಿಪಾಲಿಟಿಯವರು ಮನ್ನಿಸಬೇಕಾಗಿಯೇ ಬರುತ್ತಿದೆ. ಕಳೆದ ೨-೩ ವರ್ಷಗಳಿಂದ ರಾಜಧಾನಿಯ ಪ್ರಜೆಗಳಮೇಲೆ ೨-೩ ತೆಂದ ತೆರಿಗೆಗಳು ಹೊಸದಾಗಿ ಹೊರಿಸಲ್ಪಟ್ಟವು. ಕೊರತೆಯಿಲ್ಲದಂತೆ ಸರ್ವತ್ರವಾದ ಮತ್ತೂ ಶುಚಿಯಾದ ನೀರು ಸರ್ವದಾ ದೊರೆಯುವಂತೆ ಮಾಡಿರುವ ಏರ್ಪಾಟಿಗಾಗಿ ಮ್ಯುನಿಸಿಪಾಲಿಟಿಯಮೇಲೆ ಬಿದ್ದಿರುವ ಹೆಚ್ಚುವೆಚ್ಚವನ್ನು ಪ್ರಜೆಗಳು ನೀರಿನ ತೆರಿಗೆಯ ರೂಪದಲ್ಲಿ ಕೊಡಬೇಕಾದುದು ನ್ಯಾಯವೇ. ಅದರೂ, ದೀಪಗಳಿಗಾಗಿ ಪೂರ್ವದಲ್ಲಿದ್ದ ವೆಚ್ಚವೇ ಈಗಲೂ ಮಾಡಲ್ಪಡುತ್ತಿದ್ದರೂ, ಹಲವುಕಡೆ ಅವಶ್ಯಕವಾದಷ್ಟು ಬೆಳಕು ಮಾಡಲ್ಪಡದಿದ್ದರೂ ಈಗ ಬೆಳಕಿನ ತೆರಿಗೆಯನ್ನು ಪ್ರಜೆಗಳಮೇಲೆ ಹೊರಿಸಿರುತ್ತಾರೆ. ಮತ್ತೂ ವಾಸದ ಮನೆಗಳಿಗೆ ಮಾತ್ರವೇ ಅಲ್ಲದೆ ವ್ಯಾಪಾರದಂಗಡಿಗಳಮೇಲೂ ನೀರಿನ ತೆರಿಗೆಯನ್ನು ಹೊರಿಸಿರುತ್ತಾರೆ. “ಕಕ್ಕಸು” ತೆರಿಗೆಯೂ ಇನ್ನುಮೇಲೆ ಏರ್ಪಡುವಂತೆ ತೋರುತ್ತದೆ. ಇನ್ನಾನಾವಿಧದ ಉತ್ಪತ್ತಿ ಸಾಧನೋಪಾಯಗಳು ಕಲ್ಪಿಸಲ್ಪಡುವುದಕ್ಕಿರುವುವೋ ತಿಳಿಯದು. ಇಷ್ಟೇ ಅಲ್ಲದೆ ಪ್ರಜೆಗಳಿಂದೆತ್ತುವ ತೆರಿಗೆಯು ಕಂತುಗಳಾಗಿ ತೆಗೆದುಕೊಳ್ಳಲ್ಪಡುತ್ತಿದ್ದ ಪದ್ಧತಿಯು ಇದುವರೆಗೂ ಇರುತ್ತಿರುವಲ್ಲಿ, ರೆವಿನ್ಯೂ ಶಾಖೆಯಲ್ಲೂ ಆ ಪದ್ಧತಿಯು ಪ್ರಜೆಗಳ ಸೌಕರ್ಯಕ್ಕಾಗಿ ಕಲ್ಪಿಸಲ್ಪಟ್ಟಿರುವಲ್ಲಿ, ಇಲ್ಲಿನ ಮ್ಯುನಿಸಿಪಾಲಿಟಿಯಲ್ಲಿ ಮಾತ್ರ ಒಂದೇ ಕಂತಿನಲ್ಲಿ ಒಟ್ಟುತೆರಿಗೆಯನ್ನು ಸರ್ವರೂ ಕೊಟ್ಟೇ ತೀರಬೇಕೆಂಬ ಬಲಾತ್ಕಾರದ ವಿಧಿಯನ್ನು ಕಳೆದವರ್ಷ ರಾಜಧಾನಿಯಲ್ಲಿ ಉಪಕ್ರಮಿಸಿರುತ್ತಾರೆ. ಇದು ಬಡಜನರಿಗೆ ಎಷ್ಟು ಹಿಂಸಾಕರವಾಗಿದೆಯೆಂಬುದು ಉಪಪನ್ನರಾದ ಮ್ಯುನಿಸಿಪಲ್ ಸಭಾಸದರಿಗೆ ವಿದಿತವಾಗಿದ್ದರೆ ಇದು ವ್ಯವಹಾರಕ್ಕೆ ಬರುತ್ತಿದ್ದಿತೆ? ಇಂಥಿಂಥ ವಿಷಯಗಳು ಆ ಆ ಸಲದ ಸಭೆಗಳಲ್ಲಿ ಚರ್ಚಿಸಲ್ಪಡುವುವೆಂದು ಸ್ಥಳದ ವರ್ತಮಾನಪತ್ರಿಕೆಗಳ ಮುಖೇನ ಪ್ರಜೆಗಳಿಗೆಲ್ಲಾ ಗೊತ್ತಾಗುವಂತೆ ಮುಂದಾಗಿ ಪ್ರಕಟಿಸುವ ಪದ್ಧತಿಯು ಪೂರ್ವದಲ್ಲಿದ್ದುದರಿಂದ ತಮಗೆ ಸಾಧಕಬಾಧಕವಾದ ವಿಷಯಗಳು ಜನರಿಗೆ ಗೊತ್ತಾಗಿ, ಆ ವಿಷಯದಲ್ಲಿ ತಮ್ಮ ಆಶಯಗಳನ್ನು ತಮ್ಮ ಪ್ರತಿನಿಧಿಗಳ ಮುಖೇನ ಬಿನ್ನೈಸಿಕೊಳ್ಳುವುದಕ್ಕಾದರೂ ಮಾರ್ಗವಿರುತ್ತಿದ್ದಿತು. ಈಗ ಅದೂ ತಪ್ಪಿಹೋಗಿರುವುದು. ಕಚೇರಿಯಲ್ಲಿ ಕುಳಿತು ತಾವುಗಳು ಮಾತನಾಡಿ ಏರ್ಪಡಿಸಿದ ಏರ್ಪಾಟುಗಳಿಗೆ ಯಾವ ಪ್ರಜೆಗಳೂ ಅಡ್ಡಿ ಹೇಳಲಿಲ್ಲವೆಂದು ತಾವೇ ಸಮಾಧಾನವನ್ನು ಮಾಡಿಕೊಂಡು, ಯಾವುದೊಂದನ್ನೂ ವ್ಯವಹಾರಕ್ಕೆ ತಂದುಬಿಡುತ್ತಿದ್ದಾರೆ. ಸಭೆಯಲ್ಲಿ ಒಬ್ಬಿಬ್ಬ ಸಭಾಸದರು ನಿಜವಾದ ಪ್ರಜಾಹಿತಚಿಂತನೆಯಿಂದ ನ್ಯಾಯವಾದ ವಾದವನ್ನು ಮಾಡಿದರೆ, ದಾಕ್ಷಿಣ್ಯಪರರೂ ಬಡತನದ ಗರ್ತಸ್ಥರಿಯದವರೂ ಪ್ರಮತ್ತರೂ ಆದ ಇತರರು ತಮ್ಮ ಪಾಂಡಿತ್ಯಪ್ರಭಾವವನ್ನೆಲ್ಲಾ ಉಪಯೋಗಿಸಿ ಇತರರ ಬಾಯ್ಮುಚ್ಚಿಬಿಡುತ್ತಾರೆ. ಮುಖ್ಯವಾಗಿ ಆದಾಯವನ್ನು ನೋಡಿಕೊಂಡು ವೆಚ್ಚವನ್ನು ಹೆಚ್ಚಿಸಿಕೊಳ್ಳುವ ಸ್ವಭಾವವಿಲ್ಲದೆ, ವೆಚ್ಚವನ್ನು ಮೊದಲು ಹೆಚ್ಚಿಸಿ, ತಕ್ಕ ಆದಾಯಕ್ಕಾಗಿ ಪ್ರಜೆಗಳ ಮೇಲೆ ಹೊರೆಹೊರಿಸುವ ಕೌಶಲವು ಮ್ಯುನಿಸಿಪಾಲಿಟಿಯಲ್ಲಿ ಕಡಿಮೆಯಾದರೆ ಪ್ರಜೆಗಳು ಬದುಕಿಕೊಳ್ಳುವರು. ಅಂಥ ದೂರಾಲೋಚನೆಯುಳ್ಳ ಮತ್ತೂ ರಾಜಧಾನಿಯ ಸ್ಥಿತಿಗತಿಗಳನ್ನು ಒಳಗೂ ಹೊರಗೂ ಚೆನ್ನಾಗಿ ತಿಳಿದು ದಯೆಯಿಂದಲೂ ನ್ಯಾಯದಿಂದಲೂ ಕೆಲಸಮಾಡತಕ್ಕ ಮಹನೀಯರುಗಳು ಸಭಾಸದರಾಗಿ ಬರುವಂತಾಗಬೇಕು. ಹೀಗೆ ಕೆಲಸಮಾಡಲು ಸರ್ವಪ್ರಕಾರದಿಂದಲೂ ಅರ್ಹರಾದವರು ಔದಾಸೀನ್ಯದಿಂದ ಮುಂದಾಗಿ ಬರುವುದಿಲ್ಲ. ಅಂಥವರ ಉಪೇಕ್ಷೆಯು ಸ್ವಪ್ರತಿಷ್ಠಾಕಾಮಿಗಳಿಗೆ ಹಬ್ಬವಾಗುತ್ತದೆ. ಇಂಥ ದೋಷವು ನಿವಾರಿತವಾದಲ್ಲದೆ ಮ್ಯುನಿಸಿಪಾಲಿಟಿಯಿಂದ ನಿಜವಾದ ಹಿತವು ಪ್ರಜೆಗಳಿಗೆ ಆಗಲಾರದು. ಅದುಕಾರಣ ನಿಜವಾದ ಅರ್ಹತೆಯುಳ್ಳ ಜನರು ಪ್ರಜಾಹಿತರೂಪ ಧರ್ಮಾಚರಣೆಯ ಕಡೆಗೆ ಗಮನವಿತ್ತು ತಾವುಗಳು ಮ್ಯುನಿಸಿಪಲ್ ಕೌನ್ಸಿಲರಾಗುವುದಕ್ಕೆ ಮುಂದಾಗುತ್ತಲೂ, ಅಂಥವರಿಗೇ ಪ್ರಜೆಗಳು ಅಭಿಮತವನ್ನೀಯುತ್ತಲೂ ಬರುವವರಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು, ಮಹಾಮಾತೃಶ್ರೀಯವರು, ಮಹಾರಾಣಿಯವರು, ರಾಜಕುಮರಿಯರುಗಳು ಬರುವ ಬುಧವಾರ ಬೆಂಗಳೂರಿಗೆ ದಯಮಾಡಿಸುವವರಾಗಿರುವರು.

ಬನವಾಸಿಯ ಜಿ ಎಲ್ ಜೋಶಿ ಮತ್ತೂ ಕಂಪೆನಿಯವರಲ್ಲಿ ದೊರೆಯುವ ಔಷಧದ ಮತ್ತೂ ಗಡಿಯಾರಗಳ ಪ್ರಕಟನ ಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ.

ಎಕ್ಸೈಸ್ ಕಮಿಷನರಾದ ಸರದಾರ್ ಎಂ. ಕಾಂತರಾಜಅರಸಿನವರು ಕಳೆದ ಗುರುವಾರ ಸಾಯಂಕಾಲ ೬ ಗಂಟೆಯ ಸಮಯದಲ್ಲಿ ಮೋಟಾರು ಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು.

ಶ್ರೀಮದ್ಯುವರಾಜರು ಮೈಸೂರ ಸೀಮೆಯ ಮಿಲಿಟರಿ ಅಡ್ವೈಸರ್ ಮತ್ತೂ ಸೆಕ್ರಿಟರಿಯವರಾಗಿ ನಿಯಮಿಸಲ್ಪಟ್ಟಿರುವುದಾಗಿಯೂ, ಕರ್ನಲ್ ಜೋನ್ಸ್ ರವರು ಇನ್ನು ಕೆಲತಿಂಗಳವರೆಗೆ ಶ್ರೀಮನ್ ಮಹಾರಾಜರ ಸನ್ನಿಧಿಯಲ್ಲಿ ಸ್ಪೆಷಲ್ ಡ್ಯೂಟಿಯ ಮೇಲಿರುವುದಾಗಿಯೂ ಅರಿಯುತ್ತೇವೆ.

ವ್ಯಾಪಾರ ಕೈಗಾರಿಕೆಯ ಕಸಬುಗಳ ಅಭಿವೃದ್ಧಿ ವಿಚಾರದಲ್ಲಿ ತಕ್ಕ ಸೂಚನೆಯನ್ನು ಕೊಡಲು ನಿಯಮಿತರಾಗಿರುವ ಮಿ॥ ಚಾಟರ್ಟನ್‌ರವರು ಬೆಂಗಳೂರ ಡಿ॥ ಕಮಿಷನರ ಕೂಡ ಕಳೆದ ತಾ॥ ೨೬ ರಲ್ಲಿ ಚೆನ್ನಪಟ್ಟಣಕ್ಕೆ ಬಂದಿದ್ದು ಅಲ್ಲಿ ರೇಷ್ಮೆ ತೆಗೆಯುವುದನ್ನೂ, ಬಣ್ಣದ ಪದಾರ್ಥಗಳನ್ನೂ ತಂತಿಯನ್ನು ಮಾಡುವುದನ್ನೂ ಪರಾಮರ್ಶಿಸಿಕೊಂಡು ಈ ಕಸಬುಗಳ ಅಭಿವೃದ್ಧಿಗಾಗಿ ತಕ್ಕ ಆಲೋಚನೆಯನ್ನು ಮಾಡುತ್ತೇವೆಂದು ಅಪ್ಪಣೆಯನ್ನು ಕೊಡಿಸಿ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು.

ರಾಜಧಾನಿಯಲ್ಲಿ ಕಳೆದವಾರ ೩-೪ ದಿನಗಳವರೆಗೆ ಸೂರ್ಯನ ರಶ್ಮಿಯು ಸಹ ಕಾಣದಂತೆ ಮೋಡ ಮುಸುಕಿಕೊಂಡಿದ್ದು ತಾ॥ ೨೪ ರಲ್ಲಿ ಬೆಳಗಿನಿಂದ ಸಾಯಂಕಾಲದವರೆಗೂ ॥ ಅಂಗುಲ ಮಳೆಯಾಯಿತು. ಶ್ರೀರಂಗಪಟ್ಟಣದಲ್ಲಿ ಕಾವೇರೀನದಿಯ ಪ್ರವಾಹವು ೧೨-೧೫ ಅಡಿಯವರೆಗೆ ಬಂದಿದ್ದಿತು. ಅನೇಕ ಜನರು ಹೋಗಿ ನೋಡಿಕೊಂಡು ಬಂದರು. ಕಳೆದವರ್ಷ ೨೩ ಅಡಿಯವರೆಗೂ ಪ್ರವಾಹವು ಬಂದಿದ್ದುದರಿಂದ ಕಿರಂಗೂರ ವೆಲಸ್ಲೀ ಸೇತುವಿನ ಕೈಪಿಡಿಯಮೇಲೆ ನೀರು ಹರಿದು ಕೈಪಿಡಿಯ ಕೆಲಭಾಗವು ಮುರಿದು ಹೋಗಿ ೮-೬ ದಿನಗಳವರೆಗೆ ಬಂಡಿಗಳೂ ಜನರೂ ತಿರುಗಾಡಲಿಕ್ಕವಕಾಶವಿಲ್ಲದಿದ್ದಿತು.

ವರ್ತಮಾನ ಸಂಗ್ರಹವು.

ಅಮೇರಿಕಾ ದೇಶದಲ್ಲಿ ಗೋದುಮೆಯ ಬೆಳಸು ಚೆನ್ನಾಗಿರುವುದರಿಂದ ಗೋದುಮೆಯ ಬೆಲೆಯು ಇಳಿದಿದೆ.

ಧಾರವಾಡದಲ್ಲೂ ಅದರ ಸುತ್ತಮುತ್ತಲೂ ಮಳೆಯು ಚೆನ್ನಾಗಿ ಆಗುತ್ತಿದೆಯೆಂದು ವರ್ತಮಾನ ಕೇಳುತ್ತೇವೆ.

ಹಾಂಬರ್ಗ್‌ನಲ್ಲಿ ಒಂದು ಆಕಾಶವಿಮಾನವು ಸಮುದ್ರದಮೇಲೆ ಯಾವ ಅಪಾಯವೂ ಇಲ್ಲದೆ ೬೦೦ ಮೈಲಿಗಳ ದೂರ ಪ್ರಯಾಣಮಾಡಿದೆ.

ಜರ್ಮನಿಯ ಯುವರಾಜರು ತಮ್ಮ ಸಾಮ್ರಾಜ್ಯದ ಸೈನ್ಯ ಅಧಿನಿವೇಶಗಳನ್ನು ನೋಡಿಕೊಂಡು ಬರುವುದಕ್ಕೆ ಪ್ರಯಾಣಮಾಡುವವರಾಗಿರುವರು.

ಜಪಾನ್ ಚಕ್ರವರ್ತಿಯವರು ತುಂಬಾ ಅಸ್ವಸ್ಥರಾಗಿರುವುದರಿಂದ ಆ ದೇಶದ ಪ್ರಜೆಗಳು ಚಿಂತಾಮಗ್ನರಾಗಿರುತ್ತಾರೆ. ನಾಟಕಾದಿ ವಿನೋದಗಳೊಂದೂ ನಡೆಯದಂತೆ ಕಟ್ಟುಮಾಡಲ್ಪಟ್ಟಿದೆ.

ಜಪಾನ್ ಚಕ್ರವರ್ತಿಯವರು ಮೂತ್ರವ್ಯಾಧಿಯಿಂದ ತುಂಬಾ ಅಸ್ವಸ್ಥರಾಗಿರುವುದಲ್ಲದೆ ಯುವರಾಜರು ಕೂಡ ಅಸ್ವಸ್ಥರಾಗಿರುವರು. ತಂದೆಯ ಅವಸ್ಥೆಯು ಯುವರಾಜರಿಗೆ ತಿಳಿದಮೇಲೆ ಅವರು ಮತ್ತಷ್ಟು ದುರ್ಬಲಸ್ಥಿತಿಯಲ್ಲಿರುತ್ತಾರಂತೆ.

ರಷ್ಯಾ ಜಪಾನ್ ದೇಶಗಳಿಗೆ ನೂತನವಾದ ಮೈತ್ರಿಯನ್ನುಂಟುಮಾಡುವುದಕ್ಕಾಗಿ ಜಪಾನಿನ ಸುಪ್ರಸಿದ್ಧ ಕಟ್ಸೂರಾ ರಾಜಕುಮಾರರು ರಷ್ಯಾಕ್ಕೆ ಹೋಗಿರುತ್ತಾರೆ. ಉಭಯದೇಶದವರೂ ಸೇರಿ ಮಂಚೂರಿಯ ಮಂಗೋಲಿಯಾಗಳನ್ನು ಪರಿಪಾಲಿಸಿಕೊಂಡಿರುವಂತೆ ಸಂಧಿಯಾಗಿದೆ.

ಬೊಂಬಾಯಿನಲ್ಲಿ ೮-೬ ದಿವಸಗಳವರೆಗೆ ಒಂದೇ ಸಮನಾಗಿ ವಿರಾಮವಿಲ್ಲದೆ ಮಳೆಯು ಸುರಿಯುತ್ತಿದ್ದು, ತಾ॥ ೨೦ ರಿಂದ ನಿಂತಿರುತ್ತದೆ. ಇದರಿಂದ ಲೋಹಮಾರ್ಗವು ಕೆಟ್ಟುಹೋಗಿ ಬಂಡಿಗಳ ತಿರುಗಾಟಕ್ಕೆ ವಿಘ್ನವುಂಟಾಗಿದೆ. ಅಲ್ಲಿನ ಬಂಡಿಗಳು ೩-೪ ಗಂಟೆಗಳ ಹೊತ್ತು ಮೀರಿ ಮದ್ರಾಸಿಗೆ ಬರುತ್ತಿವೆ.

ಒಬ್ಬ ಹೆಂಗುಸಿನಮೇಲೆ ಅತ್ಯಾಚಾರವನ್ನು ನಡಿಸಿ ಪೊಲೀಸು ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಒಬ್ಬ ಯುವಕನಿಗೂ ಅವನ ತಂದೆಗೂ ಕೋರ್ಟಿನಲ್ಲೇ ಕಲಹವು ನಡೆದು ಮಗನು ತಂದೆಯ ಕಾಲನ್ನು ಮುರಿದು ಬಿಟ್ಟುದಕ್ಕಾಗಿ ಸೆರೆಯಲ್ಲಿಡಲ್ಪಟ್ಟ. ತಂದೆಯು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಲ್ಪಟ್ಟನು.

ಗತಿಸಿದ ಸರ್ ಎಡ್ವರ್ಡ್ ಸಾಸೂನರವರ ಆಸ್ತಿಯು ೧,೫೯,೯೬,೫೦೦ ರೂಪಾಯಿಗಳವರೆಗಾಗುತ್ತದೆಂದು ಅವರ ಮೃತ್ಯುಪತ್ರದಿಂದ ವ್ಯಕ್ತವಾಗುತ್ತದೆ. ಬೊಂಬಾಯಿ ಪಟ್ಟಣದಲ್ಲಿ ಈ ಶ್ರೀಮಂತರ ಬಹು ದೊಡ್ಡದಾದ ರೇಷ್ಮೆಯ ಕಾರ್ಯಾಲಯವಿರುತ್ತದೆ. ಇವರು ಅನೇಕ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ.

ಸೀಮೆಯಲ್ಲಿ ಒಂದು ಕಾರ್ಯಾಲಯಕ್ಕೆ ಬೆಂಕಿಯು ಬಿದ್ದು ಕೆಲಸಗಾರರಲ್ಲಿ ೧೫ ಹುಡುಗಿಯರು ಐದನೆಯ ಮಾಳದಮೇಲೆ ಸಿಕ್ಕಿಕೊಂಡರು. ೮ ಹುಡುಗಿಯರು ಬೆಂಕಿಯಜ್ವಾಲೆಗೆ ಸಿಕ್ಕಿ ಸುಟ್ಟುಹೋದರು. ಮೂವರು ೬೦ ಅಡಿ ಎತ್ತರದಿಂದ ಕೆಳಗೆ ದುಮಿಕಿ ಸತ್ತರು. ಮತ್ತೊಬ್ಬಳು ಮೇಲಿನ ಬೆಳಕು ಕಿಂಡಿಯಲ್ಲಿ ಸಿಕ್ಕಿ ಹತಳಾದಳು.

ಲಕ್ನೋ ಪಟ್ಟಣದಲ್ಲಿ ಕಳೆದ ತಾ॥ ೧೮ ರಲ್ಲಿ ಮಿ॥ ಓವರ್ಟನ್ ಎಂಬುವರ ಮೋಟಾರು ಬಂಡಿಯು ಇದಿರಿಗೆ ಬರುತ್ತಿದ್ದ ಮತ್ತೊಂದು ಬಾಡಿಗೆಯ ಕುದುರೆಬಂಡಿಗೆ ತಾಕುಬಡಿಯಲು ಅದು ನುಚ್ಚುನೂರಾಗಿ ಕುದುರೆಯು ಸತ್ತಿತು. ಮೋಟಾರು ತಲೆಕೆಳಗಾಯಿತು. ನಡೆಯಿಸುತ್ತಿದ್ದವನಿಗೆ ಅಪಾಯಕರವಾದ ಪೆಟ್ಟುಬಿದ್ದಿತು. ಒಳಗೆ ಕುಳಿತಿದ್ದವರಿಗೆ ಗಾಯಗಳಾಗಿ ವೈದ್ಯಶಾಲೆಯಲ್ಲಿದ್ದಾರೆ.

ಕಳೆದ ತಾ॥ ೨೩ ರ ಬೆಳಿಗ್ಗೆ ಮುಂಡಾಸ ಕೆಯಾವು ಎಂಬಲ್ಲಿ ಪ್ರಚಂಡಮಾರುತವೆದ್ದು ಪೆರುಮಂತಾಣಂ ಎಂಬ ತೋಟದ ಸೂಪರಿಂಟೆಂಡೆಂಟರಾದ ಫ್ರೆಡರಿಕ್ ಹಾಲ್ ಎಂಬ ಐರೋಪ್ಯನು ಕುದುರೆಯ ಸವಾರಿ ಮಾಡಿಕೊಂಡು ತೋಟಕ್ಕೆ ಹೋಗುತ್ತಿರುವಾಗ್ಗೆ ಒಂದು ದೊಡ್ಡಮರವು ಆತನಮೇಲೆ ಬಿದ್ದುಬಿಟ್ಟಿತು. ಇದರಿಂದ ಆ ಐರೋಪ್ಯ ಸವಾರನೂ ಕುದುರೆಯೂ ಮರದ ಕೆಳಗೆ ಸಿಕ್ಕಿ ಸತ್ತುಹೋದರು.

ಜಿ. ಐ. ಪಿ ರೈಲ್ವೆ ಕಂಪೆನಿಯ ಕಾರ್ಯಾಲಯದಲ್ಲಿ ಉದ್ಯೋಗಸ್ಥನಾಗಿದ್ದ ಜೇಮ್ಸ್ ಎಂಬ ಐರೋಪ್ಯನು ಕರಿರೋಡು ಎಂಬ ನಿಲ್ದಾಣದಲ್ಲಿ ಬಂಡಿಯು ಬರುವುದನ್ನು ನಿರೀಕ್ಷಿಸಿಕೊಂಡು ಜಗತಿಯ ಮೇಲೆ ನಿಂತಿರುವಾಗ್ಗೆ ವಿಶೇಷವಾಗಿ ಕೆಮ್ಮಲು ಬಂದು ಉಸಿರು ಕಟ್ಟಿಕೊಂಡು ಹಾಗೆಯೇ ಕಂಬಿಗಳ ಮೇಲೆ ಬಿದ್ದುಬಿಟ್ಟನು. ಅಷ್ಟರಲ್ಲಿ ಬಂಡಿಯು ಬಂದು ಅವನ ಮೇಲೆ ಹರಿದು ಅವನ ಶಿರವೊಂದು ಕಡೆಯೂ ಮುಂಡವು ಮತ್ತೊಂದು ಕಡೆಯೂ ಕತ್ತರಿಸಿ ಬಿದ್ದುವು.

ಭರತಖಂಡದ ಅಂಡರ್ ಸೆಕ್ರೆಟರಿಗಳಾದ ಮಿ॥ ಮಾಂಟಗ್‌ರವರು ಅಕ್ಟೋಬರ್ ತಿಂಗಳ ಕೊನೆಯಲ್ಲಿ ಭರತಖಂಡದ ಸಂಸ್ಥಾನಗಳನ್ನು ಸಂದರ್ಶಿಸಿಕೊಂಡು ಹೋಗುವುದಕ್ಕಾಗಿ ದಯಮಾಡಿಸುವರೆಂದು ಪ್ರಕಟವಾಗಿದೆ. ದಿಲ್ಲಿ ನಗರದಲ್ಲಿ ಮೊದಲಾವೃತ್ತಿ ಕೂಡುವ ಸಾಮ್ರಾಜ್ಯನಿಯಮನಿರ್ಮಾಣ ಸಭೆಯ ಕಾರ್ಯಕ್ರಮಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುವವರಾಗಿದ್ದಾರೆ. ಈ ಮಹಾಶಯರಿಗೆ ಈ ದೇಶದಮೇಲೆ ಅಕುಟಿಲವಾದ ಅಭಿಮಾನವಿರುತ್ತದೆ.

ಈಸ್ಟ್ ಇಂಡಿಯಾ ಲೋಹಮಾರ್ಗದಲ್ಲಿ ವೈದ್ಯನಾಥ ಮತ್ತು ಸೀವಾಲತಲಗಳ ಮಧ್ಯೆ ಕಿಲ್ವಾನದಿಯ ಸೇತುವೆಯ ಮೇಲೆ ೪-೫ ಜನ ಯಾತ್ರಾರ್ಥಿಗಳು ಕಳೆದ ತಾ॥ ೨೧ ರಲ್ಲಿ ನಡೆದು ಹೋಗುತ್ತಿರುವಾಗ್ಗೆ ಅಕಸ್ಮಾತ್ತಾಗಿ ರೈಲುಬಂಡಿಯು ಬಂದುಬಿಟ್ಟಿತು. ಅವರುಗಳು ತಪ್ಪಿಸಿಕೊಂಡು ಹೋಗಲು ಅವಕಾಶವಿಲ್ಲದೆ ಇಂಜನ್ನಿಗೆ ಸಿಕ್ಕಿಬಿಟ್ಟು ಅವರಲ್ಲಿ ೩ ಜನರು ಎರಡು ಭಾಗವಾಗಿ ಕತ್ತರಿಸಲ್ಪಟ್ಟು ಮೃತರಾದರು. ಮತ್ತೊಬ್ಬನು ಎಡದ ತೋಳನ್ನು ಮುರಿದುಕೊಂಡು ಬಹು ಅಪಾಯ ಸ್ಥಿತಿಯಲ್ಲಿದ್ದನು. ಮೃತರ ಶವಗಳು ಕಂಬಿಗಳ ಮಧ್ಯದಿಂದ ೫೦ ಅಡಿ ಕೆಳಗೆ ಉರುಳಿ ಬಿದ್ದಿದ್ದುವು.

ಭರತಖಂಡವನ್ನು ಒಬ್ಬ ವೈಸ್ರಾಯಿಯು ಅಧಿಕಾರದ ಕೆಳಗಿಟ್ಟು ಇಂಗ್ಲೆಂಡಿನಲ್ಲಿ ಸ್ಟೇಟ್ ಸೆಕ್ರೆಟರಿಯು ಇವರ ಮೇಲ್ವಿಚಾರಣೆಯನ್ನು ಮಾಡಿಕೊಳ್ಳುತ್ತಿರುವಂತೆ ಇರುವ ಈಗಿನ ಏರ್ಪಾಟನ್ನು ತಪ್ಪಿಸಿ. ಸಾರ್ವಭೌಮರ ದೇಹಸಂಬಂಧಿಗಳೊಬ್ಬರನ್ನು ರಾಜಪ್ರತಿನಿಧಿಗಳಾಗಿ ಇಲ್ಲಿನ ಅಧಿಕಾರವನ್ನು ವಹಿಸಿಕೊಂಡಿರುವಂತೆ ಮಾಡಿ, ಅವರಿಗೆ ಸಹಾಯಕ್ಕೆ ಒಬ್ಬ ದೊಡ್ಡ ಉದ್ಯೋಗಸ್ಥರನ್ನು ಮಂತ್ರಿಯನ್ನಾಗಿ ನಿಯಮಿಸಿದರೆ ಉತ್ತಮವಾಗುವುದೆಂಬ ಸೂಚನೆಯು ಇದಕ್ಕೆ ಹಿಂದೆಯೇ ಮಾಡಲ್ಪಡುತ್ತಿದ್ದಿತು. ಅದು ಪ್ರಯೋಜನಕರವಲ್ಲವೆಂದು ಗಣಿಸಲ್ಪಟ್ಟಿರುವಾಗ ಅದರ ಪ್ರಸ್ತಾಪವು ಪುನಃ ಈಗ ವರ್ತಮಾನಪತ್ರಿಕೆಗಳಲ್ಲಿ ಬರುತ್ತಿದೆ.

ಕಲಕತ್ತಾದ ಮುನಿರುದ್ದೀನ್ ಎಂಬುವನು ಮಲಗಿ ನಿದ್ರಿಸುತ್ತಿದ್ದಾಗ ಅವನ ತಾಯಿಯು “ಕಳ್ಳರು ಕಳ್ಳರು!” ಎಂದು ಕೂಗಿಕೊಳ್ಳಲು, ಅವನು ಎದ್ದು ನೋಡುವಲ್ಲಿ ಯಾರನ್ನೂ ಕಾಣಲಿಲ್ಲ. ಬಳಿಕ ಒಂದು ದೊಣ್ಣೆಯನ್ನು ಮಗ್ಗುಲಲ್ಲಿಟ್ಟುಕೊಂಡು ಮಲಗಿದನು. ಸ್ವಲ್ಪಹೊತ್ತಿಗೆ ಯಾರೋ ಕಳ್ಳರು ತನ್ನನ್ನು ಹೊಡೆಯಲು ಬಂದಂತೆ ಸ್ವಪ್ನದಲ್ಲಿ ಕಂಡು, ಯಾರೆಂದು ಕೂಗಿಕೊಂಡು, ಉತ್ತರ ಬರದಿರಲು, ಕಳ್ಳ ಕಳ್ಳ! ಎಂದು ಕೂಗಿಕೊಳ್ಳುತ್ತ ಮಗ್ಗುಲಲ್ಲಿದ್ದ ದೊಣ್ಣೆಯಿಂದ ೨ ಏಟುಗಳನ್ನು ಹಾಕಿದನು. ಸಮೀಪದಲ್ಲಿ ಮಲಗಿದ್ದ ತಾಯಿಗೆ ಆ ಏಟುಗಳು ಬಿದ್ದು, ಅವಳು ಸ್ಮೃತಿ ತಪ್ಪಿ ಸತ್ತಳು. ಬಳಿಕ ಅದನ್ನು ಈತನು ನೋಡಿ ನಾನೆಂತಹ ಕೆಲಸವನ್ನು ಮಾಡಿದೆನೆಂದು ಪ್ರಲಾಪಿಸುತ್ತ ತಾನೂ ಸ್ಮೃತಿ ತಪ್ಪಿಬಿದ್ದನು. ಪೋಲೀಸರು ಇವನನ್ನು ವಧೆಮಾಡಿದ ತಪ್ಪಿತಕ್ಕೆ ಗುರಿಮಾಡಲು, ೬ ತಿಂಗಳು ಕಾರಾಗೃಹವಾಸದ ಶಿಕ್ಷೆಯಾಯಿತು.

ಇಂಗ್ಲೆಂಡಿನ ಮುಖ್ಯ ಮಂತ್ರಿಯಾದ ಆಸ್ಕ್ವಿತ್ ರವರು ಐರ್ಲ್ಯಾಂಡಿನ ರಾಜಧಾನಿಯಾದ ಡಬ್ಲಿನ್ ಪಟ್ಟಣಕ್ಕೆ ಕಳೆದ ತಾ॥ ೧೯ ರಲ್ಲಿ ಹೋಗಿದ್ದರು. ಆಗ ಸಾವಿರಾರು ಪ್ರಜೆಗಳು ಉತ್ಸಾಹದಿಂದ ಮಂತ್ರಿಯವರನ್ನು ಇದಿರ್ಗೊಂಡು ಜಯಧ್ವನಿಯಿಂದ ಗೌರವಿಸಿದರು. ನೂರು ವರ್ಷಗಳಿಂದೀಚೆಗೆ ಯಾವ ಮಂತ್ರಿಯೂ ಈ ದೇಶವನ್ನು ನೋಡಿಕೊಂಡು ಬಂದಿರಲಿಲ್ಲ. ಮಂತ್ರಿಯವರು ಅಲ್ಲಿ ಹೀಗೆ ಭಾಷಣಮಾಡಿದರು— “ಐರ್ಲೆಂಡಿಗೆ ಕೊಡಬೇಕೆಂದಿರುವ ಸ್ವರಾಜ್ಯ ಶಾಸನವನ್ನು ವ್ಯಾಕುಲಿತರಾಗಿರುವ ಪ್ರತಿಪಕ್ಷದವರು ವಿಧ್ವಂಸಮಾಡಲಾರರು. ಈ ನೂತನಶಾಸನವು ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಲಾರ್ಡುಗಳ ಸಭೆಗೆ ಹೋಗುವುದು. ಅವರು ಪ್ರಜಾಭಿಪ್ರಾಯಗಳಿಗೆ ವಿರುದ್ಧವಾಗಿ ಆಚರಿಸುವುದಕ್ಕೆ ಅವಕಾಶವಿಲ್ಲ. ಸಾಮ್ರಾಜ್ಯದ ಪುನರ್ನಿರ್ಮಾಣದಲ್ಲಿ ಸ್ವರಾಜ್ಯಶಾಸನವು ಮೊದಲನೆಯ ಸೋಪಾನವು. ಒಳಗೊಳಗಿನ ಗದರಿರುವಿಕೆಯಿಂದ ನಾನು ಭಯಭ್ರಾಂತಿಗಳನ್ನೈದಲಿಲ್ಲ”

ಕಲಕತ್ತಾ ಪ್ರಾಂತದಲ್ಲಿ ಸುಬೋಧಿನೀ ದೇವಿಯೆಂಬ ಹೆಣ್ಣುಮಗಳೊಬ್ಬಳು ಚಿಕ್ಕಪ್ರಾಯದಲ್ಲೇ ಗಂಡನನ್ನು ಕಳೆದುಕೊಂಡಳು. ದ್ವಿತೀಯ ವಿವಾಹವನ್ನು ಮಾಡಿಕೊಳ್ಳೆಂದು ತಂದೆ ಮೊದಲಾದವರು ಆಕೆಗೆ ತುಂಬಾ ತೊಂದರೆ ಪಡಿಸಲಾಗಿ, ಅವಳು ಅದಕ್ಕೊಪ್ಪದೆ ತನ್ನ ಗುರುವಿನ ಮನೆಗೆ ಹೋಗಿ ಸೇರಿಕೊಂಡಳು. ತಂದೆಯು ಒಬ್ಬ ವರನನ್ನು ಗೊತ್ತುಮಾಡಿ, ಅವನನ್ನೂ ತನ್ನ ಗಂಡುಮಕ್ಕಳನ್ನೂ ಜತೆಯಲ್ಲಿ ಕರೆದುಕೊಂಡು ಮಗಳಿದ್ದ ಗುರುವಿನ ಮನೆಗೆ ಹೋಗಿ ಮತ್ತೆ ದ್ವಿತೀಯ ವಿವಾಹವನ್ನು ಮಾಡಿಕೊಳ್ಳೆಂದು ಮಗಳನ್ನು ಬಲಾತ್ಕರಿಸಿದನು. ಅದಕ್ಕೂ ಅವಳು ಒಪ್ಪದೆ, ದಂಡಾಧಿಕಾರಿಗೆ ವರದಿಯನ್ನು ಮಾಡಿ, ತನಗೆ ಪುನರ್ವಿವಾಹ ಮಾಡಿಕೊಳ್ಳಲು ಇಷ್ಟವಿಲ್ಲವೆಂತಲೂ, ಈ ವಿಷಯವಾಗಿ ತನಗೆ ಬಲಾತ್ಕರಿಸದಿರುವಂತೆ ತಂದೆ ಮೊದಲಾದವರಿಗೆ ಅಪ್ಪಣೆಮಾಡಬೇಕೆಂತಲೂ ಪ್ರಾರ್ಥಿಸಿ, ಹಾಗೆಯೇ ಮಾಡಿಸಿದಳು. ಇಂಥವರಿಗೆ ಪುನರ್ವಿವಾಹ ಮಾಡಬೇಕೆಂದು ಪ್ರಯತ್ನಿಸುವುದು ಹುಚ್ಚುತನವಲ್ಲವೆ?

ತುರ್ಕಿ ಇಟಲಿ ರಾಜ್ಯಗಳಿಗೆ ಇಷ್ಟರಲ್ಲೇ ಪರಸ್ಪರ ಸಮಾಧಾನದ ಕೌಲುಗಳು ನಡೆದು ಯುದ್ಧವು ಪರಿಸಮಾಪ್ತಿಯನ್ನೈದಿ ಅರ್ಥಹಾನಿ ಪ್ರಾಣಹಾನಿಗಳು ನಿಲ್ಲುವುವೆಂಬುದಾಗೂಹಿಸಲ್ಪಟ್ಟಿದ್ದುವು. ಆದರೆ ಏನುಕಾರಣದಿಂದಲೋ ಆ ಪ್ರಕಾರವಾಗಿ ಈವರೆಗೂ ನಡೆಯದೆ ಯುದ್ಧವು ನಡೆದು ಪ್ರಾಣನಷ್ಟವಾಗುತ್ತಿರುವುದೆಂದು ಈಚಿನ ವರ್ತಮಾನದಿಂದ ತಿಳಿಯಬರುತ್ತದೆ. ಸಿದಿಸೇಟ್ ಎಂಬಲ್ಲಿ ಆದ ಯುದ್ಧದಲ್ಲಿ ಇಟಲಿಯವರು ಅನೇಕ ತುರ್ಕಿಯವರನ್ನು ಹಿಡಿದು ಬಂದಿಗಳನ್ನಾಗಿ ಮಾಡಿರುವರು. ಅವರಲ್ಲಿ ಬಾಲ್ಯವಯಸ್ಸಿನ ಒಬ್ಬ ಅರಬ್ಬಿಯವನಿರುತ್ತಾನೆ. ಇವನು ಯುದ್ಧಕಾಲದಲ್ಲಿ ಬಹು ಧೈರ್ಯದಿಂದಲೂ, ದಿಟ್ಟತನದಿಂದಲೂ ಎಲ್ಲರ ಮುಂಗಡೆ ನಿಂತು ತನ್ನ ಎದೆಗೆ ಗುಂಡಿನೇಟು ಬೀಳುವವರೆಗೂ ಶತ್ರುಗಳ ಮೇಲೆ ಗುಂಡನ್ನು ಹೊಡೆಯುತ್ತಿದ್ದುದು ಶತ್ರುಗಳ ದೃಷ್ಟಿಗೆ ಬಿದ್ದು ಅವರೆಲ್ಲರೂ ವಿಸ್ಮಯಪಡುತ್ತಿದ್ದರು. ಆ ಬಾಲಕನು ಗುಂಡಿನೇಟನ್ನು ತಿಂದು ಕೆಳಗೆ ಬೀಳುತಲೆ ಇಟಲಿಯ ಸೈನಿಕನೊಬ್ಬನು ಅವನನ್ನು ತನ್ನ ಹೆಗಲಿನ ಮೇಲೆ ಎತ್ತಿಕೊಂಡು ತಮ್ಮ ಪಾಳೆಯಕ್ಕೆ ತೆಗೆದುಕೊಂಡು ಬಂದನು. ಅಲ್ಲಿ ಅವನ ಗಾಯಕ್ಕೆ ಔಷಧವನ್ನು ಹಾಕಿ ಅವನನ್ನುಪಚರಿಸಿ ಅವನ ಪೂರ್ವೋತ್ತರವನ್ನು ಕೇಳುವಲ್ಲಿ ಆ ಬಾಲಕನು ತನಗೆ ೧೦ ವರ್ಷ ವಯಸ್ಸೆಂದೂ, ಅದರ ಹಿಂದಣ ದಿವಸದಲ್ಲಿ ತನ್ನ ತಂದೆಯು ಯುದ್ಧದಲ್ಲಿ ಮಡಿದುದರಿಂದ ತಾನು ತನ್ನ ತಾಯಿಯ ಕೂಡ ಯುದ್ಧಭೂಮಿಗೆ ಹೋಗಿದ್ದೆನೆಂದೂ ಹೇಳಿದನು. ಈ ಬಾಲಶೂರನ ಅತಿಶಯವಾದ ಧೈರ್ಯ ಚಾತುರ್ಯಕ್ಕೆಲ್ಲರೂ ಮೆಚ್ಚಿದರು. ಇವನು ಗುಣವನ್ನು ಹೊಂದಿದರೆ ಇಟಲಿಗೆ ಕಳುಹಲ್ಪಡತಕ್ಕದೆಂದು ಆಲೋಚಿಸಲ್ಪಟ್ಟಿದೆ. ಅಭಿಮನ್ಯು ಲವಕುಶರೇ ಮೊದಲಾದ ಬಾಲಶೂರರ ಸಾಹಸಿಕೆಯನ್ನು ಇತಿಹಾಸಗಳಲ್ಲಿ ಕೇಳಿದ್ದೇವು. ಅವರ ಭುಜಬಲ ಪರಾಕ್ರಮವು ಈಗ ಆ ತುರುಷ್ಕಬಾಲಯುದ್ಧಭಟನಿಂದ ದೃಢೀಕರಿಸಲ್ಪಟ್ಟಿತಲ್ಲವೆ? ಭಾಪುರೆ ಬಾಲಶೂರ!

ನಮ್ಮ ದೇಶದಲ್ಲಿ ಜನರು ರತ್ನಚಿನ್ನದಾಭರಣಗಳಿಗೆ ದುಡ್ಡನ್ನು ಹೆಚ್ಚಾಗಿ ವ್ಯಯಮಾಡುತ್ತಿದ್ದರೆ, ಪಾಶ್ಚಾತ್ಯರು ಉಡುಪುಗಳಿಗಾಗಿ ಹೆಚ್ಚು ವೆಚ್ಚವನ್ನು ಮಾಡುತ್ತಾರೆ. ಅಲ್ಲಿನ ಕೆಲಪ್ರಭುಗಳು ಬಟ್ಟೆಬರೆಗಳಿಗೆ ಎಷ್ಟು ದುಡ್ಡನ್ನು ವೆಚ್ಚ ಮಾಡುತ್ತಿರುವರೆಂಬ ಸಂಗತಿಯು ಈ ಕೆಳಗಿನ ವಿವರಣೆಯಿಂದ ಗೊತ್ತಾಗುತ್ತದೆ. ರಷ್ಯಾ ಚಕ್ರವರ್ತಿಯವರು ಇತರ ಪ್ರಭುಗಳೆಲ್ಲರಿಗಿಂತಲೂ ಈ ಭಾಗದಲ್ಲಿ ಹೆಚ್ಚು ವೆಚ್ಚವನ್ನು ಮಾಡತಕ್ಕವರು. ಅವರು ಹೊಲಿಸಿದ ಯಾವುದೊಂದು ಬಟ್ಟೆಯನ್ನೂ ಮೂರಾವೃತ್ತಿಗಿಂತ ಹೆಚ್ಚಾಗಿ ಧರಿಸುವುದಿಲ್ಲ. ಇವರು ತೊಟ್ಟುಕೊಳ್ಳುವ ಸಾಮಾನ್ಯವಾದ ಪಿಸ್ತ್ ಕೋಟು ಕೂಡ ೧೫೦ ರೂ. ಬೆಲೆಬಾಳುವುದು. ಟೋಪಿಗೆ ೩೫ ರೂ. ಬೆಲೆಯಾಗುವುದು. ಕೈ ಚೀಲಕ್ಕೆ ೩೫ ರೂ. ಆಗುವುದಂತೆ. ಮೇಲೆ ತೊಟ್ಟುಕೊಳ್ಳುವ ದಗಲೆಗೆ ೩॥ ಸಾವಿರ ರೂ. ಕೊಡುವರು. ಪ್ರತಿ ವರ್ಷದಲ್ಲೂ ಇವರು ಬಟ್ಟೆಗಳಿಗಾಗಿಯೇ ೧೫೦೦೦ ರೂ. ಗಳನ್ನು ವೆಚ್ಚಮಾಡುವರು. ಇದರಮೇಲೆ ಹೊಲೆಯುವವರ ಕೂಲಿ ಬೇರೆ. ಇವರ ಮೆಚ್ಚಿನ ಹೊಲಿಗೆಗಾರರಿಬ್ಬರು ವರ್ಷ ೧ ಕ್ಕೆ ವೆಚ್ಚ ಕಳೆದು ೩೫ ಸಾವಿರ ರೂ. ಗಳ ಲಾಭವನ್ನು ಪಡೆಯುವರು. ನಮ್ಮ ಜಾರ್ಜ್ ಚಕ್ರವರ್ತಿಯವರಾದರೋ ಯಾವುದೊಂದು ಹೊಸಬಟ್ಟೆಯನ್ನೂ ೨೦ ಆವೃತ್ತಿಗಿಂತ ಹೆಚ್ಚಾಗಿ ಧರಿಸಿಕೊಳ್ಳುವುದಿಲ್ಲ. ಒಂದು ಸೂಟಿಗೆ ೯೦ ರೂ ಮೊದಲು ೧೨೦ ರೂ. ಗಳವರೆಗೂ ಕೊಡುವರು. ರೇಶಿಮೆಯ ೧ ಟೋಪಿಗೆ ೩೦॥ ರೂ. ಗಳವರೆಗೆ, ಕಾಲು ಜೋಡುಗಳು ಜತೆ ೧ ಕ್ಕೆ ೬೨ ರೂ. ಗಳವರೆಗೆ ಕೊಡುವರು. ಇವರು ಹಗಲು ತಾವು ಧರಿಸಿದ ಬಟ್ಟೆಯನ್ನು ರಾತ್ರಿಗೆ ಸೇವಕರ ಹಸ್ತಕ್ಕೆ ಕೊಡದೆ, ತಾವೇ ಮಡಿಸಿ ಪೆಟ್ಟಿಗೆಯಲ್ಲಿಡುವರಂತೆ. ಇವರು ತಮ್ಮ ದಿನಗಟ್ಟಲೆಯ ಉಡುಪುಗಳಿಗಾಗಿಯೇ ವರ್ಷ ೧ ಕ್ಕೆ ೧೦ ಸಾವಿರ ರೂ. ಗಳನ್ನು ವೆಚ್ಚ ಮಾಡುವರು. ಜರ್ಮನ್ ಚಕ್ರವರ್ತಿಯವರು ನೌಕಾ ಸೇನಾಧಿಪತಿ ಧರಿಸುವಂತಹ ತಮ್ಮ ಉಡುಪಿಗಾಗಿ ವರ್ಷ ೧ ಕ್ಕೆ ೬೦ ಸಾವಿರ ರೂ. ಗಳನ್ನು ವೆಚ್ಚ ಮಾಡುವರು. ೧ ಜತೆಯ ಬಟ್ಟೆಯು ೨೦-೩೦ ಆವೃತ್ತಿ ಧರಿಸಲ್ಪಟ್ಟ ನಂತರ ತೆಗೆದು ಹಾಕಲ್ಪಡುವುದು. ೧ ಜತೆಯ ಬಟ್ಟೆಗೆ ೧೨೬ ರೂ. ಗಳ ವರೆಗೆ ವೆಚ್ಚ ಮಾಡುವರು. ಕತ್ತಿನ ಪಟ್ಟಿ ೧ ಕ್ಕೆ ೧೫ ರೂ. ಗಳ ವರೆಗೂ ಕೊಡುವರು. ದಿನಗಟ್ಟಲೆಯ ಬಟ್ಟೆಗಳಿಗಾಗಿಯೇ ಇವರು ವರ್ಷ ೧ ಕ್ಕೆ ೧೫ ಸಾವಿರ ರೂ. ಗಳಿಗಿಂತ ಹೆಚ್ಚಾಗಿಯೇ ವೆಚ್ಚ ಮಾಡುವರು. ನಾರ್ವೆ ರಾಜನು ವರ್ಷಕ್ಕೆ ೩॥ ಸಾವಿರ ರೂ. ಗಳನ್ನು ಮಾತ್ರವೇ ವೆಚ್ಚ ಮಾಡುವನು.

ಪತ್ರವ್ಯವಹಾರವು.

ಅಯ್ಯಾ ಪತ್ರಕರ್ತರೇ,

ಕಾನರಾ ಡಿಸ್ಟ್ರಿಕ್ಟ್ ಎಕ್ಸೈಸ್ ಇನ್ಸ್ಪೆಕ್ಟರಾಗಿದ್ದ ಮತ್ತೂ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರಾದ ಮಿ॥ ಶಂಕರಪ್ಪ ಕಡೋಳಿಯವರು ತಿಂಗಳೊಂದಕ್ಕೆ ೨೦೦ ರೂಪಾಯಿ ಸಂಬಳದ ಮೇಲೆ ಧಾರವಾಡ ಡಿ॥ ಜಾಗೀರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆಂದು ತಿಳಿಸಲು ಪರಮಾನಂದವಾಗು

ತ್ತಿವೆ. ಈ ಸದ್ಗೃಹಸ್ಥರು ಬಹು ಸ್ನೇಹಪರರೂ, ನಿಧಾನಿಗಳೂ ಮತ್ತು ಪೂರ್ಣ ಮತಾಭಿಮಾನಿಗಳೂ ಆಗಿರುವರು. ಇವರು ಕಾನರಾ ಡಿ॥ ನಲ್ಲಿರುವಾಗ್ಗೆ ಮತಸಂಬಂಧವಾದ ಅನೇಕ ಕಾರ್ಯಗಳಲ್ಲಿ ಮುಂದಾಳುಗಳಾಗಿ ನಿಂತು ವೀರಶೈವರ ಮನ್ನಣೆಗೆ ಪಾತ್ರರಾಗಿರುವರು. ಇಂತಹ ಮಹಾನುಭಾವರು ಇಲ್ಲಿಗೆ ಅಧಿಕಾರಿಗಳಾಗಿ ದಯಮಾಡಿಸಿರುವುದು ಈ ಹಾವೇರಿಯ ಮತ್ತು ಈ ಧಾರವಾಡ ಡಿಸ್ಟ್ರಿಕ್ಟಿನ ವೀರಶೈವರ ಪುಣ್ಯವೆಂತಲೇ ಹೇಳಬಹುದಾಗಿದೆ. ಇವರು ಈ ಪ್ರಾಂತದ ವೀರಶೈವರ ವಿದ್ಯಾಬುದ್ಧಿಯ ಅಭಿವೃದ್ಧಿ ಕಾರ್ಯಗಳಲ್ಲಿ ವಿಶೇಷವಾದ ಶ್ರದ್ಧಾಭಿಮಾನವನ್ನು ವಹಿಸಿ ಇತರೋದ್ಯೋಗಿಗಳಿಗುವಾದ ಕೀರ್ತಿಯನ್ನು ಪಡೆಯುವರೆಂದು ಅಪೇಕ್ಷಿಸುತ್ತೇನೆ. ಈ ಮಹನೀಯರು ಇದುವರೆಗಾದ ಎಲ್ಲಾ ಮಹಾಸಭೆಗಳಿಗೂ ದಯಮಾಡಿಸಿ ಸಭಾಕಾರ್ಯದಲ್ಲಿ ನೆರವಾಗಿರುವರಾದುದರಿಂದ ಇವರ ಪರಿಚಯವು ಅನೇಕರಿಗಿರುವುದೆಂದು ತಿಳಿಯುತ್ತೇನೆ. ಈ ದೊಡ್ಡ ಮನುಷ್ಯರಿಗೆ ಉನ್ನತ ಪದವಿಯನ್ನೂ ದೀರ್ಘಾಯುರಾರೋಗ್ಯೈಶ್ವರ್ಯವನ್ನೂ ದಯಪಾಲಿಸಲೆಂದು ಆ ಪರಶಿವಮೂರ್ತಿಯನ್ನು ಪ್ರಾರ್ಥಿಸಿ ಈ ಲೇಖನವನ್ನು ಮುಗಿಸುವ,

ಗಣ್ಯೇಶಪಕ್ಷರಾತಿ, ಹಾವೇರಿ.

ಗುಂಡಲಪೇಟೆ ತಾಲ್ಲೂಕು ಬೊಮ್ಮನಹಳ್ಳಿ.

ಇಲ್ಲಿನ ಸ್ಕೂಲ್ಮಾಸ್ಟರ್ ಮೆ॥ ಪಿ ಸಿ ಹುಚ್ಚಪ್ಪಶಾಸ್ತ್ರಿಗಳವರು ಕೆಲದಿನಗಳ ಕೆಳಗೆ ಈ ಗ್ರಾಮದ ಮುಖಂಡರಾದ ಮ॥ ರಾ॥ ಚಿಕ್ಕನಂಜಪ್ಪನವರ ಮಕ್ಕಳು ದೇವಪ್ಪನವರ ಮನೆಗೆ ಔತಣಕ್ಕಾಗಿ ದಯಮಾಡಿಸಿದ್ದ ಬಲಚವಾಡಿ ಸಾಹುಕಾರ ಶೆಟ್ಟಪ್ಪನವರು, ಮ॥ ರಾ॥ ಕಟಕಹಳ್ಳಿ ಬಸವಪ್ಪನವರು ಬಾಚಹಳ್ಳಿ ಮ॥ ರಾ॥ ಯಜಮಾನಿಕೆ ವೀರಪ್ಪನವರು ಮತ್ತು ಈ ಗ್ರಾಮ ಮುಖಂಡರಾದ ಚಿಕ್ಕ ಬಸವಪ್ಪನವರು, ದೊಡ್ಡ ಚಿಕ್ಕಪ್ಪನವರ ಮಕ್ಕಳು ದೇವಪ್ಪನವರು ಮುಂತಾದ ವೀರಶೈವರೆಲ್ಲರನ್ನೂ ತಮ್ಮ ಸ್ಕೂಲ್ ಮನೆಗೆ ಬರಮಾಡಿ ಸಭೆ ಸೇರಿಸಿ ನಮ್ಮ ವೀರಶೈವ ಮತವು ಸನಾತನವಾದುದೆಂತಲೂ ಶಕ್ತಿ ವಿಶಿಷ್ಟಾದ್ವೈತವೆಂಬುದಕ್ಕೆ ಅನೇಕ ವೇದಾಗಮ ಉಪನಿಷದ್ವಾಕ್ಯಗಳನ್ನು ಹೇಳಿ ಅಷ್ಟಾವರಣ ಲಿಂಗಾಂಗ ಸಾಮರಸ್ಯ ಮೊದಲಾದ ಮತ ತತ್ವಗಳು ಸರ್ವರಿಗೂ ತಿಳಿಯುವಂತೆ ಉಪನ್ಯಾಸಮಾಡಿ, ನಂತರ ಶ್ರೀ ಷಡಕ್ಷರ ಶಿವಯೋಗೀಂದ್ರ ವಿರಚಿತವಾದ ರಾಜಶೇಖರವಿಲಾಸದ ಮೂರನೆಯಾಶ್ವಾಸದಲ್ಲಿ ಸತ್ಯೇಂದ್ರ ಚೋಳರಾಜನಿಗೆ ಚೆನ್ನನ ಶಿವಾಚಾರ್ಯರವರು ಬೋಧಿಸಿರುವ ಶಿವನ ಪಂಚವಿಂಶತಿ ಲೀಲೆಗಳನ್ನು ಓದಿ ಸರ್ವರಿಗೂ ನುಡಿಗನ್ನಡದಿಂದ ಮೃದುವಾಗಿ ಅಪ್ಪಣೆಕೊಡಿಸಿದುದಲ್ಲದೆ, ಮೈಸೂರು ಸಂಸ್ಥಾನದಿಂದ ಹೊರಡುತ್ತ ಕರ್ನಾಟಕ ದೇಶವಲ್ಲೆಲ್ಲಾ ಹಬ್ಬಿ ವೀರಶೈವರಲ್ಲಿರತಕ್ಕ ನ್ಯೂನಾತಿರೇಕಗಳನ್ನು ಸರಿಪಡಿಸಿ ಪ್ರಸಿದ್ಧಿ ಹೊಂದಿರುವ ಸ್ಟಾರ್ ಪತ್ರಿಕೆಯನ್ನು ಓದಿ ಹಾಲಿ ಸ್ಕೂಲ್ ವಿದ್ಯಾರ್ಥಿಗಳು ಭಾಷಾಶುದ್ಧತೆ ವಿವೇಕ ಮೊದಲಾದುವನ್ನು ಹೊಂದುವುದಕ್ಕೆ ಈ ಶ್ಲಾಘ್ಯವಾದ ಸ್ಟಾರ್ ಪತ್ರಿಕೆಯೇ ಕಾರಣವಾಗಿರುವುದರಿಂದ ಈ ಸಭಿಕರು ಎರಡು ಪತ್ರಿಕೆಗೆ ಚಂದಾ ಸಹಾಯ ಮಾಡಿಕೊಡಬೇಕೆಂಬುದಾಗಿ ತಿಳಿಸಿದ್ದಕ್ಕಾಗಿ ಸಭಾಧ್ಯಕ್ಷರು ವರ್ಗಣಿ ಕೂಡಿಸಿ ಕೊಡಲು ಒಪ್ಪಿರುತ್ತಾರಲ್ಲದೆ ಹಾಲಿ ಸ್ಕೂಲ್ ವಿರಾಮಕಾಲದಲ್ಲಿ ವಿದ್ಯಾರ್ಥಿಗಳಿಗೆ ಮುಹೂರ್ತಭಾಗ ಜಾತಕಭಾಗ ಮೊದಲಾದ ಜ್ಯೋತಿಷ ಗ್ರಂಥಗಳನ್ನೂ ದಶಕರ್ಮ ವಿಧಿ, ಸಂಕ್ಷಿಪ್ತ ಲಿಂಗಾರ್ಚನ ವಿಧಿ, ನವಗ್ರಹವಿಧಿ ಮೊದಲಾದುವನ್ನು ಬೋಧಿಸಬೇಕೆಂಬುದಾಗಿಯೂ ಸ್ಕೂಲ್ಮಾಸ್ಟರ್ ಮೆ॥ ಗಳವರನ್ನು ಕೇಳಿಕೊಂಡದ್ದಕ್ಕೆ ಅವರು ಅನುಮೋದಿಸಿದರು. ನಂತರ ಸ್ಕೂಲ್ ವಿದ್ಯಾರ್ಥಿಗಳು ಶಿವಪಂಚಸ್ತವ, ಶಿವಾನಂದಲಹರಿ ಮೈಸೂರು ಶ್ರೀ ಶಿವಕಥಾ ಶಿವಪ್ಪಶಾಸ್ತ್ರಿ ಕೃತ ಶಿವನಾಮ ಸುಧಾರಸ, ಶಿವನೀತಿ ಮೊದಲಾದುವನ್ನು ಹೇಳಿ ಸಭಾಸದರನ್ನು ಸಂತೋಷಪಡಿಸಿ ಜಯನಮಃಪಾರ್ವತೀಪತೇ ಹರಹರಮಹಾದೇವ ಎಂಬ ಜಯಘೋಷವನ್ನು ಮಾಡಿ ಸರ್ವರೂ ಕರತಾಡನ ಮಾಡಿದ ನಂತರ ಸಭಾಧ್ಯಕ್ಷರಾದ ಮ॥ ರಾ॥ ಚಿಕ್ಕನಂಜಪ್ಪನವರ ಸುಪುತ್ರರಾದ ದೇವಪ್ಪನವರಿಂದ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಚಂದಾದಾರ.

ಪ್ರೇಕ್ಷಣೀಯವಾದ ನಾಟಕ.

ಕೊನ್ನೂರ ಕರ್ನಾಟಕ ಸಂಗೀತ ನಾಟಕ ಕಂಪೆನಿಯವರು ಬೆಂಗಳೂರಿಗೆ ಈಗ್ಗೆ ಒಂದು ತಿಂಗಳ ಕೆಳಗೆ ಬಂದು ಜನೋಪಕಾರಿ ದೊಡ್ಡಣ್ಣನವರ ಹಾಲಿನಲ್ಲಿ ಮನೋವಿಜಯ, ಸುಭದ್ರಾಪರಿಣಯ, ತುಕ್ಕಾರಾಮ್, ಸೈರಂಧ್ರಿ ಇತ್ಯಾದಿ ಅನೇಕ ನಾಟಕಗಳನ್ನು ಅತಿ ವಿಚಿತ್ರವಾಗಿಯೂ, ಮನೋಹರವಾಗಿಯೂ, ಉತ್ಕೃಷ್ಟಗಳಾದ ಸೀನರಿಗಳಿಂದಲೂ, ಉಡುಪುಗಳಿಂದಲೂ ಆಡುತ್ತಿದ್ದಾರೆ. ಈ ನಾಟಕ ಸಂಘದವರು ಬೆಂಗಳೂರಿಗೆ ಬಂದವೇಳೆ ಮೆ॥ ಚಿಟ್ಟಿ ರ್ಗ್ ಸೀನಿಯರ್ ಕೌನ್ಸಿಲರ್ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣಶೆಟ್ಟರವರೂ, ಮೆ॥ ಸರ್ದಾರ್ ಎಂ. ಕಾಂತರಾಜಅರಸಿನವರೂ ಪ್ರೋತ್ಸಾಹ ಕೊಟ್ಟಿರುತ್ತಾರೆ. ಈ ನಾಟಕದ ಪ್ರೊಪ್ರೈಟರವರ ಜ್ಯೇಷ್ಠ ಭ್ರಾತೃಗಳಾದ ವೇ॥ ಕಣಬುರಗಿ ಶಿವಮೂರ್ತಯ್ಯಸ್ವಾಮಿ ಇವರು ಸಹ ಇಲ್ಲಿಗೆ ದಯಮಾಡಿಸಿರುತ್ತಾರೆ. ಸದರಿ ಶಿವಮೂರ್ತಯ್ಯಸ್ವಾಮಿಯವರ ಹೆಸರನ್ನು ಪ್ರಖ್ಯಾತಿಯನ್ನೂ ಪ್ರತಿಯೊಬ್ಬ ವೀರಶೈವರೂ ತಿಳಿದವರಾಗಿಯೇ ಇರುತ್ತಾರೆ. ಇವರು ಬೆಳಗಾಂವಲ್ಲಿ ನಡೆದ ೩ ನೆಯ ಶ್ರೀಮದ್ವೀರಶೈವ ಮಹಾಸಭೆಯ ಖರ್ಚಿಗಾಗಿ ೩೦೦೦ ರೂ. ಗಳನ್ನು ಧರ್ಮಾರ್ಥವಾಗಿ ದಯಪಾಲಿಸಿದವರಾಗಿರುತ್ತಾರೆ. ಮತ್ತು ಅಲ್ಲಿನ ಸಭೆಯು ಇವರ ಪ್ರೇರಣೆಯಿಂದಲೇ ನಡೆದದ್ದಾಗಿದೆ. ಆ ಮಹಾಸಭೆಗೆ ಇವರು ಜನರಲ್ ಸೆಕ್ರಟರಿಯವರಾಗಿದ್ದರು. ಇವರು ವ್ಯಾಪಾರದಲ್ಲಿ ಬಹಳ ಚತುರರು. ಮತ್ತು ಮಹಾಸಭೆಯ ಮೂಲಕ ಒಂದು ಬಟ್ಟೆಯ ಗಿರಣಿಯನ್ನು ಸ್ಥಾಪಿಸಿ ಅನೇಕರು ಅದರಿಂದ ಲಾಭ ಹೊಂದುವಂತೆಯೂ, ಅದರ ಸಹಾಯದಿಂದ ಮಹಾಸಭೆಯು ಶಾಶ್ವತವಾಗಿ ನಡೆಯುವಂತೆಯೂ ಮಾಡಬೇಕೆಂದು ಯೋಚಿಸಿ, ಕಳೆದ ಸಭೆಗಳಲ್ಲಿ ಏರ್ಪಾಡು ಇಟ್ಟವರಾಗಿರುತ್ತಾರೆ. ಇವರಿಗೂ ನಾಟಕದ ಪ್ರೊಪ್ರೈಟರ್ ಮೊದಲಾದವರಿಗೂ ಮೆ॥ ಪುಟ್ಟಣ್ಣಶೆಟ್ಟರವರು ತಮ್ಮ ಬಂಗಲೆಯಲ್ಲಿ ಒಂದುದಿನ ದಿವ್ಯವಾದ ಔತಣವನ್ನು ನಡೆಸಿದರು. ಮೆ॥ ಎಕ್ಸೈಜ್ ಕಮಿಷನರ್ ರವರಾದ ಸರ್ದಾರ್ ಎಂ. ಕಾಂತರಾಜ ಅರಸಿನವರು ಮುಂದಿನ ಶನಿವಾರ ನಾಟಕಕ್ಕೆ ದಯಮಾಡಿರುವರಾಗಿ ಅರಿಯುತ್ತೇನೆ. ಮೆ॥ ಸಬ್ ಜಡ್ಜ್ ಬ್ಯಾರಿಸ್ಟರ್ ನಾಗಪ್ಪನವರು, ಮೆ॥ ಅಡ್ವೋಕೇಟ್ ಎಚ್. ಕೆ. ವೀರಬಸವಯ್ಯನವರು ಮುಂತಾದ ಅನೇಕ ದೊಡ್ಡಮನುಷ್ಯರು ನಾಟಕಕ್ಕೆ ದಯಮಾಡಿಸಿ ಪ್ರೋತ್ಸಾಹಕೊಡುತ್ತಿದ್ದಾರೆ. ಸದರಿ ನಾಟಕದವರ ಭಾಷೆಯು ಮೈಸೂರು ದೇಶದ ಭಾಷೆಯಂತಲ್ಲದೆ ಉತ್ತರ ಮತ್ತು ಮೈಸೂರುದೇಶದ ಭಾಷೆಗಳು ಮಿಶ್ರವಾಗಿರುವುದರಿಂದ ಒಂದು ವಿಲಕ್ಷಣವಾದ ಅಭಿರುಚಿಯನ್ನೇ ತೋರಿಸುತ್ತಿದೆ. ಬೆಂಗಳೂರಿಗೆ ಬಂದ ಪ್ರಸಿದ್ಧ ನಾಟಕಗಳ ಪೈಕಿ ಇದೊಂದಾಗಿರುತ್ತದೆ. ಇವರ ನಾಟಕದಲ್ಲಿನ ಮನೋವಿಜಯವೆಂಬುದು ನವನಾಗರಿಕತೆಯ ಶೃಂಗಾರಾದಿ ರಸಗಳನ್ನು ತೋರಿಸುವುದಲ್ಲದೆ ಪಾರಮಾರ್ಥಿಕವಾದ ವಿವೇಕವನ್ನು ಬೋಧಿಸತಕ್ಕದ್ದಾಗಿದೆ. ಇವರು ಮುಂದೆ ಒಂದು ತಿಂಗಳು ಇಲ್ಲಿ ನಾಟಕಗಳನ್ನು ಆಡಿ ನಂತರ ಮೈಸೂರಿಗೆ ಹೋಗುವವರಾಗಿರುತ್ತಾರೆ. ಇವರ ನಾಟಕದ ಸೀನರಿ ಮೊದಲಾದವುಗಳು ಪಾರ್ಸಿ ನಾಟಕಕ್ಕೆ ಸಮಾನವಾದದ್ದಾಗಿಯೂ ಮತ್ತು ಒಂದಾನೊಂದು ಸಂದರ್ಭದಲ್ಲಿ ವಿಚಾರಿಸತಕ್ಕದ್ದಾಗಿಯೂ ಇದೆ. ಒಂದುಬಾರಿ ಇವರ ನಾಟಕವನ್ನು ನೋಡಿದ ಕೂಡಲೆ ಮತ್ತೂ ಪುನಃ ನೋಡಬೇಕೆಂಬ ಅಭಿಲಾಷೆ ಹುಟ್ಟುವಂತೆ ಬಹಳ ಶ್ಲಾಘ್ಯವಾಗಿ ಆಡುತ್ತಾರೆ. ಸದರಿ ನಾಟಕದ ಪ್ರೊಪ್ರೈಟರವರು ಒಂದು ದಿವಸ ನಾಟಕದಲ್ಲಿನ ಆದಾಯವನ್ನು ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ಕೊಡುವುದಾಗಿ ವಾಗ್ದಾನಮಾಡಿರುತ್ತಾರೆ. ಇವರು ಈ ರೀತಿ ಸಹಾಯಮಾಡಿರುವುದು ಇವರಧರ್ಮಗುಣಕ್ಕೆ ನಿದರ್ಶನವಾಗಿದೆ. ಇದು ಬಹಳ ಸ್ತುತ್ಯವಾದದ್ದಾಗಿದೆ. ನಮ್ಮ ವೀರಶೈವ ವಿದ್ಯಾವರ್ಧಕ ಫಂಡಿಗೆ ಸಹಾಯಮಾಡುವ ಈ ನಾಟಕದವರಿಗೆ ಪ್ರತಿಯೊಬ್ಬ ವೀರಶೈವರೂ ಪ್ರೋತ್ಸಾಹ ಕೊಡದೆ ಇರಲಾರರೆಂದು ನಂಬಿರುವ,

ಪ್ರೇಕ್ಷಕ, ಮತ್ತು ಅಭಿಮಾನಿ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸಂಚಾರ.

ಶ್ರೀ॥ ಸ್ವಾಮಿಯು ಮೊಕ್ಕಾಂ ಬಾರ್ಸಿಯಲ್ಲಿ ೨ ತಿಂಗಳವರೆಗೆ ಇದ್ದುದರಲ್ಲಿ ಅಲ್ಲಿನ ಭಕ್ತಾದಿಗಳಿಂದ ಸೇವಾಸತ್ಕಾರವು ಬಹು ಸಮರ್ಪಕವಾಗಿ ನಡೆಸಲ್ಪಟ್ಟುದಲ್ಲದೆ ಆ ಪ್ರಾಂತದ ಗ್ರಾಮಾಂತರಗಳಲ್ಲಿರುವ ಭಕ್ತಾದಿಗಳಿಂದಲೂ ನಡೆಸಲ್ಪಟ್ಟಿತು. ಉಸ್ಮಾನಬಾದ್ ಪಟ್ಟಣದ ಪ್ರಮುಖರಾದ ಮೈರಾನ್ ಮಹಾರುದ್ರಪ್ಪನವರೇ ಮೊದಲಾದವರ ಪ್ರಾರ್ಥನೆ ಮೇರೆ ತಾ॥ ೧೫ ನೆ ಸೋಮವಾರ ಮಧ್ಯಾಹ್ನ ೧ ಕ್ಕೆ ಶ್ರೀ॥ ಸ್ವಾಮಿಯು ಬಾರ್ಸಿಯಿಂದ ದಯಮಾಡಲ್ಪಟ್ಟಿತು. ಉಸ್ಮಾನಬಾದ್ ಪಟ್ಟಣವು ಹೈದರಾಬಾದ್ ಸೀಮೆಯೊಳಗಿನ ಒಂದು ಜಿಲ್ಲೆಯಾಗಿದೆ. ಈ ಪಟ್ಟಣವು ಪ್ರಜಾ ಸಂಖ್ಯೆಯಲ್ಲಿ ಹೆಚ್ಚಿನದಾದಾಗ್ಯೂ ಇಲ್ಲಿ ಮಹಮ್ಮದೀಯರೇ ವಿಶೇಷ. ೩೦೦ ಮನೆಗಳವರಿಗೂ ಬ್ರಾಹ್ಮಣರ ಸಂಖ್ಯೆಯಿದೆ. ಇತರ ಪಂಗಡಗಳ ಜನಸಂಖ್ಯೆ ಬಹುಮಟ್ಟಿಗೆ ಕಡಿಮೆ. ಅದರಲ್ಲೂ ವೀರಶೈವರು ೩೦-೪೦ ಮನೆಗಳವರಿದ್ದಾರೆ. ಈ ಊರಲ್ಲಿ ಹಿಂದೂಗಳು ಕಡಿಮೆಯಾಗಿದ್ದಾಗ್ಯೂ ನೈಜಾಂ ಬಾದಶಹಾರವರು ನಿಷ್ಪಕ್ಷಪಾತಿಗಳಾಗಿ ಸರ್ವರನ್ನೂ ಸಮವಾಗಿಣಿಸಿ ನ್ಯಾಯಶೀಲರಾಗಿ ಪ್ರಜಾಪಕ್ಷಪಾತಿಗಳೆಂದು ಕೀರ್ತಿವೆತ್ತು ಪರಿಪಾಲಿಸುವರೆಂಬುದು ಈ ಕೆಳಗಣ ಉದಾಹರಣೆಯಿಂದೆಲ್ಲರಿಗೂ ವೇದ್ಯವಾಗಬಹುದಾಗಿದೆ. ಶ್ರೀ॥ ಸ್ವಾಮಿಯು ತಾ॥ ೧೮ ನೇ ಗುರುವಾರ ಪ್ರಾತಃಕಾಲ (೯) ಘಂಟೆಗೆ ಉಸ್ಮಾನಬಾದ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರವರ ಶೃಂಗಾರವನದ ಬಳಿಗೆ ಚಿತ್ತೈಸಿತು. ಡಿ॥ ಜಿಲ್ಲಾ ಕಲೆಕ್ಟರ್ ಸಾಹೆಬ್ ಬಹದ್ದೂರ್ ಯಾ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಾದ ಮಿ॥ ಜನಾಬ್ ಸಾಹೇಬ್ ಬಹದ್ದೂರರವರಿಂದ ರಿಜಮೆಂಟಿನಲ್ಲಿ ಚಮತ್ಕಾರವಾಗಿ ಬಂದೂಕುಗಳನ್ನು ಆಡಿಸುತ್ತಾಯಿಸತಕ್ಕ ೩೦ ಜನ ಅರಬ್ಬಿಯವರು, ಬಿಚ್ಚುಕತ್ತಿಯವರು, ಪೋಲೀಸು ಫಾರ್ಸಿಯವರು, ಗ್ರಾಮಗಸ್ತಿನವರು ಹೀಗೆ ೫೦-೬೦ ಪಾರ್ಟಿ ಸಿಬ್ಬಂದಿಯು ಉಸ್ತುವಾರಿಯ ಬಗ್ಗೆ ನೇಮಿಸಲ್ಪಟ್ಟಿತ್ತು. ಮಂಗಳ ವಾದ್ಯದೊಡನೆ ಪಂಚ ಕಲಶಯುಕ್ತ ಅಷ್ಟಶಾಲಕಿ, ಶ್ವೇತಛತ್ರ, ಮಕರತೋರಣ, ಮೋಹಚಾಮರ, ಹರಗುನಿಶಾನಿ, ಕಾವಿನಿಶಾನಿ, ಪಟಾಪಟಿ ರುಮಾಲೆ, ಹಗಲು ದೀವಟಿಗೆ, ನಗಾರಿ ನೌಬತ್ತು ಮುಂತಾದ ಸಮಸ್ತ ಬಿರುದಾವಳಿಗಳೊಡನೆ ಉತ್ಸವವು ಹೊರಟಿತು. ನೋಟಕರ ಸಂಖ್ಯೆಯು ಅನಂತವಾಗಿತ್ತು. ಈ ಪಟ್ಟಣದ ಬ್ರಾಹ್ಮಣ ಮಂಡಲಿಗಳು ಪ್ರಮುಖರು ದರ್ಶನಕ್ಕೆ ಆಗಮಿಸಿದ್ದರು. ಇತರ ಪಂಗಡಗಳವರೂ ಹಾಜರಾಗಿದ್ದರು. ಅಲ್ಲಿಂದ ಆನಂದದೊಡನವಲೋಕಿಸುತ್ತಿದ್ದ ಮೆ॥ ಕ॥ ಕಾ॥ ಬರವರ ಬಂಗಲೆಯು ಮುಂದಿನಿಂದ ಅಲಂಕರಿಸಲ್ಪಟ್ಟ ಪುರದೊಳಗೆ ಸ್ವಾಮಿಯು ಪ್ರವೇಶಿಸಿತು. ದೊಡ್ಡದೊಡ್ಡ ಆಫೀಸರುಗಳೆಲ್ಲರೂ ಪರಮಾನಂದತುಂದಿಲರಾಗಿ ಈಕ್ಷಿಸುತ್ತಿದ್ದರು. ಮಹಮ್ಮದೀಯರು ಆದರಪೂರ್ವಕ ತಮ್ಮ ದರಗಾ ಮಸೀದಿ ಮೊದಲಾದ ಕಡೆಗಳಲ್ಲೆಲ್ಲಾ ಉತ್ಸವವನ್ನು ಬಳಿಯಿಸಲು ವಿಜ್ಞಾಪಿಸುತ್ತಿದ್ದರು. ಯಾವಾಗಲೂ ಹಿಂದೂಗಳ ಯಾರ ಉತ್ಸವವೂ ನಡೆಯದಿರುವ ಕಡೆಗಳಲ್ಲಿ ತಾವಾಗಿ ಉತ್ಸವ ಜರುಗಿಸಿದ್ದರಲ್ಲಿ ಮಹಮ್ಮದೀಯರ ಶ್ರದ್ಧಾಭಕ್ತಿಯು ಈ ಪುರದಲ್ಲಿ ತುಂಬಾ ಇರುವುದಾಗಿದೆ. ಈ ಜನರ ವಿಶ್ವಾಸವು ಪೂರ್ವಕಾಲದಿಂದಲೂ ನಡೆದುಬಂದ ಪ್ರಕಾರ ಈಗಲೂ ಕೂಡ ದಿಲ್ಲಿ ಬಾದಶಹಾರವರ ಮೇಲುಪಂಕ್ತಿಯನ್ನೇ ಅನುಸರಿಸಿ ಆಚರಿಸುತ್ತಿರುವುದು ಸರ್ವರಿಗೂ ಆನಂದವನ್ನೀಯುವುದಾಗಿದೆ. ೩ ಘಂಟೆಗಳ ಕಾಲದವರೆಗೂ ಪಟ್ಟಣದ ಎಲ್ಲಾ ಭಾಗದಲ್ಲೂ ಉತ್ಸವವು ಅತಿ ವಿಜೃಂಭಣೆಯಿಂದಲೂ ಶಾಂತತೆಯಿಂದಲೂ ಜರುಗಿಸಲ್ಪಟ್ಟಿತು. ಇಲ್ಲಿನ ವಿರಕ್ತಮಠದಲ್ಲಿ ಅಂದವಾಗಿ ಏರ್ಪಡಿಸಿದ್ದ ಸಿಂಹಾಸನದಲ್ಲಿ ಶ್ರೀಗಳವರು ಬಿಜಯಂಗೈದು ಸರ್ವರ ವಿಜ್ಞಾಪನೆಗಳನ್ನೂ ಆಲಿಸಿ ಸಂತೋಷ ಸೂಚಕಗಳಾದ ಅವರವರ ಶ್ರದ್ಧಾನ್ವಿತ ಭಕ್ತಿಭಾವನೆಗೆ ಸರಸವಾದ ಸದುತ್ತರಗಳಿಂದಾಶೀರ್ವದಿಸಿ ಭೆಟ್ಟಿಗೋಸ್ಕರ ಬಂದಿದ್ದ ನೂರಾರು ಜನಗಳಿಗೆ ಫಲಾಶೀರ್ವಾದಗಳನ್ನಿತ್ತು ಬಳಿಕ ಜಯಮಂಗಲರವದೊಡನೆ ಸಭೆಯು ಮುಕ್ತಾಯವಾಯಿತು. ಶ್ರೀಗಳವರ ಸೇವಾಸತ್ಕಾರ ವಿಷಯದಲ್ಲಿ ಬಹುಮಟ್ಟಿಗೂ ಸಮರ್ಪಕವಾಗಿ ಏರ್ಪಡಿಸಿದ್ದಾರೆ. ವೀರಶೈವರ ಸಂಖ್ಯೆಯು ಕಡಿಮೆಯೆನಿಸಿದ್ದಾಗ್ಯೂ ಇವರ ಕರ್ತವ್ಯಗಳು ಸ್ತುತ್ಯವಾದವುಗಳಾಗಿವೆ. ಇಲ್ಲಿನ ಮೈರಾನ್ ಮಹಾರುದ್ರಪ್ಪನವರು ಪ್ರಖ್ಯಾತರಾಗಿದ್ದಾರೆ.

ಬಾರ್ಸಿ ಮೊಕ್ಕಾಂನಲ್ಲಿ ತಾ॥ ೧೫ ನೇ ಸೋಮವಾರ ಬೆಳಗ್ಗೆ ಶ್ರೀ॥ ಸ್ವಾಮಿಯು ಹೊರಡುವದಿದ್ದ. ಆ ರಾತ್ರಿಯಲ್ಲಿ ಲಿಖಿತಪತ್ರಗಳು ಚಿಲ್ಲರೆ ಖರ್ಚು ಮೊಬಲಗು ಇದ್ದ ಒಂದು ಪೆಟ್ಟಿಗೆಯನ್ನು ಕಳವುಮಾಡಿದವನು ಬೆಳಗ್ಗೆ ಗುಮಾನಿಯಿಂದ ಪೋಲೀಸು ಮೂಲಕ ಹಿಡಿಯಲ್ಪಡಲು ಒಂದೂ ಕಸರ್ ಆಗದಂತೆ ಸಾಮಾನು ಸಿಕ್ಕಿತು. ಮರುದಿವಸವೇ ಅಪರಾಧಿಗೆ ಮ್ಯಾಜಿಸ್ಟ್ರೇಟರವರಿಂದ ೩ ತಿಂಗಳು ಕಠಿಣಸಜಾ ಶಿಕ್ಷೆಯು ವಿಧಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಸ್ಟಾ. ಸ್ಟ. 29-7-1912 ಪು ೬-೭

ವೀರಶೈವಾಶ್ರಮ.

ಸರ್ ೧೯೧೨ ನೆಯ ಜುಲೈ ತಾ। ೧೨ ನೆಯ ಶುಕ್ರವಾರ ಬೆಂಗಳೂರು ಕೋಟೆ ಪೋಸ್ಟ್ ಆಫೀಸ್ ಪಕ್ಕದಲ್ಲಿರುವ ಮೆ॥ ಅಪ್ಪಾವು ಮೊದಲಿಯಾರ್‌ರವರ ಬಂಗಲೆಯಲ್ಲಿ ಸ್ಥಾಪಿತವಾಗಿರುವ "ವೀರಶೈವಾಶ್ರಮ" ದಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಜನರಲ್ ಕಮಿಟಿಯ ಸ್ಪೆಷಿಯಲ್ ಮೀಟಿಂಗು ಮೆ॥ ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಕೆ ಪಿ. ಪುಟ್ಟಣ್ಣಸೆಟ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕೆಳಗೆ ಕಂಡ ದೊಡ್ಡಮನುಷ್ಯರು ಹಾಜರಿದ್ದರು.

ಮ॥ರಾ॥ ಗಳಾದ ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರವರು (ಪ್ರೆಸಿಡೆಂಟ್); ಜಿ. ಶಾಂತವೀರಪ್ಪನವರು, ಬಿ. ಎ, (ಸೆಕ್ರೆಟರಿ); ಯಜಮಾನ್ ಬಸಪ್ಪನವರು; ಸೆಟ್ಟರ ವೀರಭದ್ರಸೆಟ್ಟರು; ಗ್ರಂದಿಗೆ ಅಂಗಡಿ ಪಾಪಣ್ಣನವರು; ಗ್ರಂದಿಗೆ ಅಂಗಡಿ ವೀರಭದ್ರಪ್ಪನವರು; ಬೆಟ್ಟಹಲಸೂರು ಬಸವಣ್ಣನವರು; ವೈ. ವಿರೂಪಾಕ್ಷಯ್ಯನವರು; ಅಡ್ವೋಕೇಟ್ ಎಚ್. ಕೆ. ವೀರಬಸವಯ್ಯನವರು, ಬಿ. ಎ., ಬಿ. ಎಲ್.,; ಅಡ್ವೋಕೇಟ್ ಎ. ಸಂಗಪ್ಪನವರು, ಬಿ. ಎ., ಬಿ. ಎಲ್.,; ಕೆ ಸಿದ್ಧರಾಮಪ್ಪನವರು ಬಿ. ಎ.,; ಜಿ. ಮಲ್ಲಿಕಾರ್ಜುನಯ್ಯನವರು ಬಿ. ಎ.,; ಊದಬತ್ತಿ ಷಾಪ್ ಕಲ್ಲಪ್ಪನವರು; ಚಿತ್ರದುರ್ಗದ ಪ್ಲೀಡರ್ ಸಿ. ನಂಜಪ್ಪನವರು; ಜಿ. ಕೆ. ರುದ್ರಾರಾಧ್ಯರು; ಬಿ. ಜಿ. ಬಸವಪ್ಪನವರು; ಹಲಸೂರು ಯಜಮಾನ್ ಕಾಳಪ್ಪನವರು; ಪ್ರಾಕ್ಟರ್ ಯಂ. ನಾಗಪ್ಪನವರು; ಗುಬ್ಬಿ ಶಿವಯೋಗಪ್ಪನವರು; ಶ್ರೀರಂಗಪಟ್ಟಣದ ಎ. ಸಿದ್ಧಲಿಂಗಮ್ಮದೇವರು; ಮುಗೊಂಡ್ಲು ಹುಚ್ಚಪ್ಪನವರು; ಸಬ್ ಓವರ್ಸೀಯರ್ ಪ್ಪನವರು; ಚೆನ್ನಪಟ್ಟಣದ ಎ. ಆರ್. ಬಸವರಾಜಪ್ಪನವರು; ಮುತ್ತಗದೂರು ಪರ್ವತಪ್ಪನವರು; ಗರಡಿ ಸಿ ರಪ್ಪನವರು; ಉಸ್ಕೂರು ಚೆನ್ನಬಸಪ್ಪನವರು; ಸಾಹುಕಾರ್ ಮಲ್ಲೇಶಣ್ಣನವರು; ಗುಬ್ಬಣ್ಣನವರ ಚೆನ್ನಬಸಪ್ಪನವರು ಮುಂತಾದ ಅನೇಕ ಮಹನೀಯರು ಸೇರಿದ್ದರು.

ಈ ವೇಳೆಯಲ್ಲಿನ ಸ್ಪೆಷಿಯಲ್ ಮೀಟಿಂಗು ನಮ್ಮ ವೀರ ವ ವಿದ್ಯಾರ್ಥಿಗಳಿಗೆ ಸ್ಟೂಡೆಂಟ್ಸ್ ಹೋಮನ್ನು ಏರ್ಪಾಡುಮಾಡುವ ಉದ್ದೇಶ್ಯವಾಗಿ ಸೇರಲ್ಪಟ್ಟಿತ್ತು. ಸದರಿ ಕ ಟಿಯಲ್ಲಿ ಈ ಕೆಳಗೆ ಕಂಡಮೇರೆ ನಿರ್ಧಾರಗಳು ಮಾ ದುವು

(೧) ಶ್ರೀಮಾನ್ ಅತ್ತಿಬೆಲೆ ಸಿದ್ದಬಸಪ್ಪನವರು ದಾ ವಮಾಡಿರುವ ಸ್ಟೂಡೆಂಟ್ಸ್ ಹೋಂ ಕಟ್ಟಡವು ತಯಾ ಗುವ ಪರ್ಯಂತ ವೀರಶೈವ ವಿದ್ಯಾರ್ಥಿಗಳ ಉಪಯೋಗ ಸ್ಕರವಾಗಿ ಮ॥ ರಾ॥ ಕಲ್ಲಪ್ಪನವರು ಕೋಟೆಯಲ್ಲಿ ಲಿರುವ ಬಾಡಿಗೆಗೆ ತೆಗೆದುಕೊಂಡು ವೀರಶೈವಾಶ್ರ ವನ್ನು ಹಂಗಾಮಿ ತರೀಖಾಗಿ ನಮ್ಮ ವೀರಶೈವ ಸ್ಟೂಡೆಂ ಸ್ ಹೋಮ್ ಆಗಿ ಏರ್ಪಡಿಸಿಕೊಳ್ಳತಕ್ಕದು.

(೨) ತತ್ಕಾಲಕ್ಕೆ ಪ್ರತಿಯೊಬ್ಬ ವೀರಶೈವ ವಿದ್ಯಾರ್ಥಿಗೆ ಗಳೊಂದಕ್ಕೆ ೨-೮-೦ ರೂ. ದರದಮೇರೆಗೆ ಹಂಗಾಮಿ ಾಗಿ ಮೊಕರೂರು ಮಾಡಿರುತ್ತೆ.

(೩) ಈಗ ವೀರಶೈವಾಶ್ರಮದಲ್ಲಿ ವಿದ್ಯಾರ್ಥಿಗಳ ಸಂ ಯು ಕಡಿಮೆಯಾಗಿರುವುದರ ದೆಸೆಯಿಂದ ಸದರಿ ಆಶ್ರಮ ಲ್ಲಿ ನಷ್ಟವಾಗಬಹುದಾದುದರಿಂದ ಇದಕ್ಕಾಗಿ ಫಂಡಿನಿಂದ ವರ್ಷದ ಮಟ್ಟಿಗೆ ೧೦೦ ರೂ. ಗಳನ್ನು ಸಹಾಯಾರ್ಥ ಾಗಿ ಕೊಡಬೇಕೆಂದು ನಿರ್ಧರಿಸಲ್ಪಟ್ಟಿತು.

(೪) ಸ್ಟೂಡೆಂಟ್ಸ್ ಹೋಮನ್ನು ಕಟ್ಟಿಕೊಡುತ್ತೇವೆಂ ು ಉದಾರಾಶ್ರಯವನ್ನು ಕೊಟ್ಟಿರುವ ಶ್ರೀಮಾನ್ ಅತ್ತಿಬೆ ಸಿದ್ದಬಸಪ್ಪನವರನ್ನು ಹಂಗಾಮಿಯಾಗಿ ಏರ್ಪಾಟಾಗಿ ುವ ಈ ಕಟ್ಟಡದ ಬಾಡಿಗೆಯನ್ನಾಗಲಿ, ಅಥವಾ ಸದರಿ ಕ ಡವನ್ನು ೪೦೦೦ ರೂ ಗೆ ಭೋಗ್ಯಮಾಡಿಕೊಂಡು ಬೇರೆ ಡೆಂಟ್ಸ್ ಹೋಂ ತಯಾರಾಗುವವರೆಗೆ ಇದನ್ನು ಬಾಡಿ ಯಲ್ಲದೆ ಕಮಿಟಿಯವರ ಸುಪರ್ದಿಗಾಗಲಿ ಕೊಡಬೇಕೆಂ ು ಅವರ ಸಹಾಯವನ್ನು ಕೇಳಬೇಕೆಂದು ನಿರ್ಧರಿಸಲ್ಪ ಟ್ಟಿತು.

(೫) ಈ ವೀರಶೈವಾಶ್ರಮದ ಮೇಲ್ವಿಚಾರಣೆಬಗ್ಗೆ ಒಂ ು ಕಮಿಟಿ ಏರ್ಪಾಟಾಗಿ ಸದರಿ ಕಮಿಟಿಗೆ ವೀರಶೈವಾಶ್ರ ಮದ ರೂಲ್ಸ್ ವಗೈರೆ ಮಾಡತಕ್ಕ ಬಗೆಗೂ, ಕಮಿಟಿಯಲ್ಲಿ ಖಾಲಿಯಾದ ಮೆಂಬರುಗಳಿಗೆ ಬದಲಾಗಿ ಹೊಸದಾಗಿ ಮೆಂ ಬರುಗಳನ್ನು ಚುನಾಯಿಸುವುದಕ್ಕೂ ಜೆಟ್ಟಿಸುವುದಕ್ಕೂ ಸ ಈ ಕೆಳಗೆ ಕಂಡ ಕಮಿಟಿಗೆ ಅಧಿಕಾರಕೊಟ್ಟು ಈ ಕೆಳ ಕಂಡಂತೆ ಮೆಂಬರುಗಳು ಚುನಾಯಿಸಲ್ಪಟ್ಟರು.

ಪ್ರೆಸಿಡೆಂಟ್.— ಮೆ॥ ದಿವಾನ್ ಬಹದ್ದೂರ್ ರಾಜಸಭಾ ಷಣ ಕೆ. ಪಿ. ಪುಟ್ಟಣ್ಣಸೆಟ್ಟರು. ವೈಸ್ ಪ್ರೆಸಿಡೆಂಟ್— ॥ ಯಜಮಾನ್ ಬಸಪ್ಪನವರು ಸೆಕ್ರಿಟರಿ— ಮೆ॥ ಅಡ್ವೋ ಟ್ ಎಚ್. ಕೆ. ವೀರಬಸವಯ್ಯನವರು ಬಿ.ಎ. ಬಿ.ಎಲ್., ಮ್ಯಾನೇಜರ್— ಮ॥ ಊದಬತ್ತಿ ಷಾಪ್ ಕಲ್ಲಪ್ಪನವರು ಮೆಂಬರುಗಳು— ಮ॥ರಾ॥ ಗಳಾದ ಅತ್ತಿಬೆಲೆ ಸಿದ್ದಬಸಪ್ಪನವರು, ಸೆಟ್ಟರ ವೀರಭದ್ರಸೆಟ್ಟರು, ಗ್ರಂದಿಗೆ ಅಂಗಡಿ ಪಾಪಣ್ಣನವರು, ಗ್ರಂದಿಗೆ ಅಂಗಡಿ ವೀರಭದ್ರಪ್ಪನವರು, ಶೀರಗತ್ತಿ ಶಿ॥ ಶಿವಪ್ಪನವರು, ಬೆಟ್ಟಹಲಸೂರು ಬಸವಣ್ಣನವರು, ಜಿ. ಶಾಂತವೀರಪ್ಪನವರು, ಬಿ. ಎ, ಡಾಕ್ಟರ್ ಬಿ. ನಂಜಪ್ಪನವರು ಎಂ. ಬಿ. ಸಿ. ಎಂ., ಕೆ. ಸಿದ್ರಾಮಯ್ಯನವರು ಜಿ. ಕೆ ರುದ್ರಾರಾಧ್ಯರು.

(೬) ಮ॥ ರಾ॥ ಎಚ್. ಕಲ್ಲಪ್ಪನವರು ಈ ವೀರಶೈವಾಶ್ರಮ ಸ್ಥಾಪಿಸುವುದಕ್ಕಾಗಿ ಮುಂದಾಳುಗಳಾಗಿ ನಿಂತು ಬಹಳ ಶ್ರಮವಹಿಸಿದ್ದಕ್ಕಾಗಿ ಜನರಲ್ ಕಮಿಟಿಯವರು ತಮ್ಮ ಆಭಾರವನ್ನು ಅವರಿಗೆ ತಿಳಿಸಿದರು. ನಂತರ ಮೀಟಿಂಗು ಭರಕಾಸ್ತಾಯಿತು.

ಎಚ್. ಕೆ. ವೀರಬಸವಯ್ಯ,
ಆನರರಿ ಸೆಕ್ರಿಟರಿ, ವೀರಶೈವಾಶ್ರಮ ಬೆಂಗಳೂರು.

---

2 "ಇಂಗ್ಲೀಷ ಶಿಕ್ಷಕ"
ಅಥವಾ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಇಂಗ್ಲೀಷು ಮಾತು ಕಲಿಸುವ ಪುಸ್ತಕವು. ಬೆಲೆ ೧೦ ಆಣೆ, ಅಂಚೆ ಖರ್ಚು ಬೇರೆ.
ನ. ಸು. ಬಾಗಲ,
ಬನ್ನಿಕೊಪ್ಪ, ಮುಂಡರಗಿ ಪೋಸ್ಟ್.
ಧಾರವಾಡ ಜಿಲ್ಲಾ.

ಮೈಸೂರ ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಹಿಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರೆಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಅವೃತ್ತಿ ಪಟ್ಟಿ ೧ ಕ್ಕೆ ೩ ಆಣೆ; ಎರಡನೇ ಅವೃತ್ತಿಯಿಂದ ಪಟ್ಟಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

---

2 ಅಮರೇಶ್ವರ ಚರಿತ್ರೆ.

ನೈಜಾಂ ಇಲಾಖಾ ರಾಯಚೂರು ಜಿಲ್ಲ ಗುರುಗುಂಟಿ ಸಂಸ್ಥಾನದ ಪೈಕಿ ಸೇರಿದ ಯರಡೋಣಿ ಎಂಬ ಗ್ರಾಮದಲ್ಲಿ ಈಗಲೂ ರಥೋತ್ಸವವಾಗುತ್ತಿರುವ ಅಮರೇಶ್ವರನ ಚರಿತ್ರೆಯು ಸುಲಭವಾದ ಕನ್ನಡ ರೂಪಕವಾಗಿ ರಚಿಸಲ್ಪಟ್ಟಿದೆ. ಇದರಲ್ಲಿ ವೀರಶೈವರು ಓದತಕ್ಕ ಅನೇಕ ವಿಷಯಗಳು ಅಡಕವಾಗಿವೆ. ಪ್ರತಿಯೊಬ್ಬರು ಅವಶ್ಯಕವಾಗಿ ನೋಡತಕ್ಕದ್ದಾಗಿದೆ. ಭಕ್ತರ ಭಕ್ತಿ ವಿಶೇಷವು, ದಂಪತಿಗಳ ಅನ್ಯೋನ್ಯ ಪ್ರೀತಿಯು, ನೀತಿ ಭಕ್ತಿ ಜ್ಞಾನ ವೈರಾಗ್ಯಾದಿಗಳು ಸರಸವಾಗಿ ವರ್ಣಿಸಲ್ಪಟ್ಟಿವೆ. ಅಂಚೆ ವೆಚ್ಚ ಸೇರಿ ೦-೧೦-೦ ಆಣೆ. ಒಂದೇಸಲ ಮೂರು ಪ್ರತಿಗಳನ್ನು ತರಿಸಿಕೊಂಡವರಿಗೆ ಪಠನ ಮಾಡಲಿಕ್ಕೆ ಮುಖ್ಯವಾದ ದಶಾಷ್ಟಕ ರತ್ನಾವಳಿಯನ್ನು ಉಚಿತವಾಗಿ ಕಳಿಸುತ್ತೇವೆ ಜನನ ಜಾತಕ, ಪ್ರಶ್ನೆಜಾತಕ, ಜನನಕುಂಡಲಿ ಭವಿಷ್ಯತ್ಫಲ ಬರಿಸತಕ್ಕವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ನಮ್ಮ ವಿಳಾಸ:—
ಮಲ್ಲಿಕಾರ್ಜುನ ಸಿದ್ಧಾಂತಿಗಳು,
ಕೊಟ್ಟೂರು ಸ್ವಾಮಿಗಳ ಮಠ, ಬಳ್ಳಾರಿ.

---

3 ರಾಸ್ಕೋಪ್ ಸಿಸ್ಟಂ ಲಿವರ್ ಗಡಿಯಾರ.
ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ ರೂ. 2—4—0 ಮಾತ್ರ 5 ವರ್ಷಗಳ ಗ್ಯಾರಂಟಿ.

SUPERIOR WATCH Co.
Rs 2/4.
Rs 2/4.
POST BOX No.167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು. ನೋಡುವುದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟುಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿರಿ.

ಮುಖ್ಯವಾಗಿ ಗಮನಿಸಿ ಓದಿರಿ.
೧ ಬಹುಮಾನಸಹಿತ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿವಾಚ್ ಕೀಲೆಸ್ ಲಿವರ್ ಬೆಸ್ಟ್ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಠವಾದ 5 ವರ್ಷಗಳ ಗ್ಯಾರಂಟಿ.ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ. 5-12-0 ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವೃತ್ತಿ ಬೀಗಕೊಡತಕ್ಕ ಮೇಲಾದ ಟೈಂಪೀಸ್ ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.
ವಿಳಾಸ— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಶೀತಕಾಲ.
ಪ್ರಭಾಕರ ಚೂರ್ಣ.— ಇದರ ಸೇವನೆಯಿಂದ ಗೂರಲು, ಉಬ್ಬಸ, ಶ್ವಾಸಕಾಸ, ಕಫಕ್ಷಯ, ನೆಗಡಿ, ಕೆಮ್ಮು, ಅಸ್ತಿಜ್ವರ, ಮಾತನಾಡುವಾಗ ಉಗ್ಗುವಿಕೆ, ನಾಲಿಗೆ ಒಣಗುವಿಕೆ, ಮತ್ತು ದೋಷ ಕಂಡುಬಂದರೆ, ನಿರಸ ದೋಷಗಳು, ಶ್ವಾಸಕೋಶದ ಎಲ್ಲಾ ಉಪಹತಿಗಳನ್ನು ಖಂಡಿತವಾಗಿ ತಕ್ಷಣದಲ್ಲಿ ಪರಿಹರಿಸಿ ಹಿತವನ್ನುಂಟು ಮಾಡುತ್ತೆ. ೨೪ ತೊಲ ಡಬ್ಬಿ ೧ ಕ್ಕೆ ಬೆಲೆ ರೂ. ೨-೦-೦, ವಿ. ಪಿ. ಬೇರೆ.
ಪಂಡಿತ ಶ್ರೀಕಂಠಯ್ಯ,
ಯಳ್ಳಂಬಳಸೆ, ಕಡೂರು ಪೋಸ್ಟ್.

ಶ್ರೀ ಮುರುಘರಾಜೇಂದ್ರ ಪ್ರಸಾದ.
ದಾವಣಗೆರೆ "ವೀರಶೈವ ಹಿತೋಪದೇಶಕ ಸಂಘದ"
ಪರವಾಗಿ ನಡೆಯತಕ್ಕ;

ವೀರಶೈವ ವಾರ್ಷಿಕೋಪನ್ಯಾಸ ಮಾಲಾ.

ಇಲ್ಲಿನ ಶ್ರೀ ವಿರಕ್ತಮಠದ ಶ್ರೀಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳವರು ಬರುವ ಶ್ರಾವಣ ಮಾಸದಲ್ಲಿ (ತಾ॥ ೧೩-೮-೧೯೧೨ ರಿಂದ ೧೨-೯-೧೯೧೨ ಗೆ) ಪ್ರತಿನಿತ್ಯವು ಸಾಯಂಕಾಲ ೫ ಘಂಟೆಯಿಂದ ವಿರಕ್ತಮಠದಲ್ಲಿ ಸಭೆಯನ್ನು ಸೇರಿಸುತ್ತಾರೆ. ಆ ಕಾಲದಲ್ಲಿ ರಾಜಕೀಯ ಮತ್ತು ಮತಾಂತರದ ವಿಷಯಗಳನ್ನು ಬಿಟ್ಟು ವೀರಶೈವ ಜನಾಂಗದ ಏಳ್ಗೆಗೆ ಅನುಗುಣವಾದ ಸಂಗತಿಗಳನ್ನು ಕುರಿತು ವೀರಶೈವರಲ್ಲಿ ಯಾರಾದರೂ ಬಂದು ಉಪನ್ಯಾಸ ಮಾಡಬಹುದು. ಅಂತಹ ಉಪನ್ಯಾಸಕರು ತಾವು ಬರುವ ಕಾಲವನ್ನು ಮುಂಚಿತವಾಗಿಯೇ ತಿಳಿಸತಕ್ಕದ್ದು. ಬರಲಿಕ್ಕೆ ಅವಕಾಶವಿಲ್ಲದವರು ತಮ್ಮ ಉಪನ್ಯಾಸವನ್ನು ವಿರಳವಾದ ಅಕ್ಷರಗಳಿಂದ ಬರಸಿ ತಾ॥ ೧೩-೮-೧೯೧೨ ರ ಒಳಗಾಗಿ "ಸಹಾಯಕ ಕಾರ್ಯದರ್ಶಿಗಳ" ಕಡೆಗೆ ಕಳುಹಿಸ ಬೇಕು

ಆ ತಿಂಗಳಲ್ಲಿ ನಡೆದ ಉಪನ್ಯಾಸಗಳ ಮತ್ತು ಬಂದ ಲೇಖನಗಳ ಸಾರಾಂಶವನ್ನು "ಮೈಸೂರ್ ಸ್ಟಾರ್" ಪತ್ರಿಕೆಗೆ ಕಳುಹಿಸುವುದಲ್ಲದೆ ಎಲ್ಲವನ್ನು ಸೇರಿಸಿ ಪುಸ್ತಕ ರೂಪವಾಗಿ ಮುದ್ರಿಸಲ್ಪಡುತ್ತೆ.

ಉಪಾಧ್ಯಕ್ಷರು—ತಿರುಕಪ್ಪನವರ ಮಠದ ಷಡಾಕ್ಷರಪ್ಪಯ್ಯನವರು, ಕಾರ್ಯದರ್ಶಿಗಳು—ನೂಗಾನಹಳ್ಳಿ ಸಂಗಪ್ಪನವರು, ಸಹಾಯಕ ಕಾರ್ಯದರ್ಶಿಗಳು—ಹರ್ಡೇಕರ್ ಮಂಜಪ್ಪನವರು.

---

2 ಮದನಮಂಜರೀ ಮಾತ್ರೆಗಳು.
ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವುದು ಮುಂತಾದ ಸಕಲ ಮೂತ್ರ ಪಿಂಡರೋಗಗಳನ್ನು ನಿರ್ಮೂಲಮಾಡುವುದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವುವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನು ದೀರ್ಘಾಯುಸ್ಸನ್ನು ಮುಖಕ್ಕೆ ಒಳ್ಳೇ ಕಾಂತಿಯನ್ನೂ ಉಂಟುಮಾಡುತ್ತವೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳೂ ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧-೦-೦.

ಬಿಟ್ಟಿ! ವೈದ್ಯ ವಿದ್ಯ. ಪುಗಸಟ್ಟೆ!!

ಸಂಪೂರ್ಣಾರೋಗ್ಯವನ್ನು, ದೀರ್ಘಾಯುವನ್ನು, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವುದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲುಗು, ಕನ್ನಡ, ಇಂಗ್ಲೀಷು ಮುಂತಾದ ೪ ಭಾಷೆಗಳಲ್ಲಿ ದೊರೆಯುವುದು. ಕೋರಿದವರಿಗೆ ಕ್ರಯವು ಅಂಚೆ ಹಾಸಲು ಸಹ ಇಲ್ಲದೆ, ಮುಫತ್ತಾಗಿ ರವಾನಿಸಲ್ಪಡುವುದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈವರೆಗೂ ೩,೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.
ರಾಜವೈದ್ಯ ನಾರಾಯಣಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ,
೧೫೫ ಜೆನಾಬಜಾರ್ ರೋಡ್,
ಮದರಾಸು.

ಆಶ್ಚರ್ಯ ಚಿಕಿತ್ಸೆ. ಒಂದು ಪರಿಕಿಸಿ.

ಔಷಧಿ ಮತ್ತು ಕೈಯಲ್ಲಿ ತೈಲಗಳಿಂದ ನೀವುದು ಮುಂತಾಗಿ ಹತ್ತು ದಿನಗಳಲ್ಲಿ ಮಾಡಿದ ಚಿಕಿತ್ಸೆಯಿಂದ ಆದ ಗುಣವು

ಬ್ಲಡ್ ಸರ್ಕ್ಯೂಲೇಟರ್ ಎಂಬ ನೂತನ ಯಂತ್ರದಲ್ಲಿ ಮಾಡುವ ಚಿಕಿತ್ಸೆಯಿಂದ ಒಂದು ಘಂಟೆಯಲ್ಲಿ ಗುಣಪಡಿಸುತ್ತೆ.

12

ವಿದ್ಯುಚ್ಛಕ್ತಿಯಿಂದ (Electricity) ಔಷಧಿ (Medicine) ನೀರಿನ ಹಬೆಯ ಸ್ನಾನ (Steam bath) ಮತ್ತು ಶಸ್ತ್ರ ಪ್ರಯೋಗದಿಂದ (Operation) ಗುಣವಾಗದೆ ಇರುವ ರೋಗಗಳೂ, ಅಂದರೆ ಕರ್ಣರೋಗಗಳು ಕಿವಿಯಲ್ಲಿ ಸೋರುವುದು, ಅನೇಕ ಶಬ್ದಗಳು ಕಿವಿಯಲ್ಲಿ ಆಗುವುದು ಗಂಟಲಿಗೂ ಕಿವಿಗೂ ಮಧ್ಯೆಯಿರುವ ಲಾಳದಲ್ಲಿ ಕಸಕಟ್ಟಿ ಗಾಳಿಸಂಚಾರಕ್ಕೆ ಅವಕಾಶವಿಲ್ಲದೆ ಇರುವುದರಿಂದ ಕಿವುಡುಂಟಾಗಿರುವುದು ಜ್ವರಬಂದು ನಿಂತಮೇಲೂ, ವಾಯುವಿನಿಂದಲೂ ಕಿವುಡು ಉಂಟಾಗಿರುವುದು ಇವೆ ಮೊದಲಾಗಿ ಎಲ್ಲಾ ಕರ್ಣರೋಗಗಳನ್ನೂ ಖಂಡಿತವಾಗಿ ಹೋಗಲಾಡಿಸಿ ಕಿವಿ ಕೇಳಿಸುವಂತೆ ಮಾಡುತ್ತೆ. ಹೊಟ್ಟೆಯಲ್ಲಿ ಗೆಡ್ಡೆ, ಶಾಮಾಲೆ, ಶೋಫೆ, ಪಾರ್ಶ್ವವಾಯು ಅಂದರೆ ಒಂದು ಭಾಗವೆಲ್ಲ ಸ್ವಾಧೀನ ತಪ್ಪಿ ಹೋಗಿರುವುದು, ಕೀಲುಕೀಲುಗಳು ಹಿಡಿದು ಇರುವುದು, ಊದಿಯಿರುವುದು ಇವೇ ಮುಂತಾದ ಎಲ್ಲಾ ತರಹ ವಾಯು ರೋಗಗಳೂ ಖಂಡಿತವಾಗಿ ಪರಿಹರಿಸುತ್ತೆ. ಇಷ್ಟವುಳ್ಳವರು ಸ್ವತಾ ಬಂದು ರೋಗದ ಸ್ಥಿತಿಯನ್ನು ತಿಳಿಸಿ ನಮ್ಮಿಂದ ಚಿಕಿತ್ಸೆಯನ್ನು ಹೊಂದಬಹುದು.

ಪಂಡಿತ ಶ್ರೀಕಂಠಯ್ಯ,
ಮಾರ್ಕೆಟ್ ಬಳಿ, ಕಡೂರು ಸ್ಪೆಷಲಿಸ್ಟ್.

45

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾರ್ಕವುದು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಧಾರಣೆಗೆ ಯೋಗ್ಯವಾದ ದಾತುವಾಗುತ್ತದೆ. ಶಕ್ತಿಹೀನತೆಯಿಂದ ಅಥವಾ ಯಾವದಾದರೊಂದು ಕಾರಣದಿಂದ ನಡುವೆ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ: ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೦ ರೂ. ೩ ಬಾ. ೩-೧೪-೦ ರೂ. ಒಮ್ಮಿಗೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೫ ರೂ. ಮೇಲೆ ೩ ಬಾಟ್ಲಿ ಇನಾಮು ವ. ಖ. ಬೇರೆ.

ಮೂತ್ರಾಂಗವಿಕಾರರೋಗ:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ವ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಹಜ್ಜಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ವ. ಖ. ಬೇರೆ.

“ಪಾಚಕ.”

(“ಪಚನಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರ ತೇಗುಗಳು ಬರುವದಿಲ್ಲ. ೧ ಬಾ, ೮ ಆಣೆ. ವ.ಖ. ಬೇರೆ.

ನಂ. ೫೫ “ಅಂಜೀರಾರ್ಕವುದು ಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ಸಿಂಗಿರಾಜಪುರಾಣವಿಜಯಂ

26

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಬಿಡುಗನ್ನಡನುಡಿಗಳಿಂದ ಬರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂಶಯವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೮ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೪ ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ ಹಳೆಅಗ್ರಹಾರ, ಶಿವಾಚಿಗೆಬೀದಿ ಮೈಸೂರು.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16

ಲೋಕಾಮಯಾಪಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಚ್ಚ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦ ರೂ.

ಪಾಲ್ ಖರ್ಚು ಬೇರೆ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
104 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦, ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ಕ್ಕೆ ೧—೮—೦.

ವಜ್ರಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯು ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತ್ರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦.

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೨ ನೆಯ ಇಸವಿ ಜುಲೈ ತಾ॥ ೨೯ ರಿಂದ ೧೯೧೨ನೆಯ ಆಗಸ್ಟ್ ತಾ॥ ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೪ ನೆಯ ಪರೀಧಾವಿ ಸಂವತ್ಸರದ ನಿಜಾಷಾಢ ಶು॥ ಪೌರ್ಣಮಿಯಿಂದ ನಿಜಾಷಾಢ ಬ॥ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಟಕ ತೇದಿ
29	[1]ಸೋ	ಪೌ	5-55	ಶ್ರವಣ	59-9	15
30	ಮಂಗ	ಪಾ	10-59	ಧನಿ	60	16
31	[2]ಬುಧ	ಬಿ	15-94	ಧನಿ	5-24	17
1	[3]ಗುರು	ತದಿಗೆ	19-58	ಶತಭಿಷ	11-17	18
2	[4]ಶುಕ್ರ	ಚೌ	23-19	ಪೂಭಾ	16-17	19
3	[5]ಶನಿ	ಪಂ	25-14	ಉಭಾ	20-8	20
4	[6]ಭಾನು	ಷ	26-19	ರೇವತಿ	22-52	21

(1) ವ್ಯಾಸಪೂರ್ಣಿಮಾ, (2) ಮೇಲುಕೋಟೆಯಲ್ಲಿ ಮಹಾಭಿಷೇಕ ಮತ್ತು ಕಲ್ಯಾಣೋತ್ಸವ, (3) ಸಂಕಟಹರಚತುರ್ಥಿ, ಪದಿನೆಟ್ಟಾಂಪೆರಕ್, (4) ಆಡಿಶುಕ್ರವಾರ, ಅಳಂಗಾರ್ಯಯತಿರಾಜಜೀಯರ್ ತಿರುನ॥ (5) ಟೀಕಾಚಾರ್ಯರ ಪು॥ ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿಉತ್ಸವ. (6) ಚಾಮುಂಡೇಶ್ವರೀ ಜನ್ಮೋತ್ಸವ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ [illegible] ಮುದ್ರಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REGESTRED NO. M 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾಂ ಪರಮಧಿಗತರಾಜಮಂಡಲಪಿಠೈಷಾ ಘನಪಥಕೃತಾವತಾರಾ ಪಶ್ಯತ್ವನ ಕೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕವಿತರಣಾದ್ಯಗ್ನ್ಯಾಲವಾಲಂ ವರಂ
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿರೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೫ | ಮೈಸೂರ್ ಸ್ಟಾರ ಸನ್ ೧೯೧೨ ನೆಯ ಇಸವಿ ಆಗಸ್ಟ ತಾರೀಖು ೫ ನೆಯ ಸೋಮವಾರ. [ಸಂಚಿಕೆ ೩೧

23 **ಊದುಬತ್ತಿಗಳು.**

ವಿಧವಿಧವಾದ ಊದುಬತ್ತಿಗಳು ಸೇರೊಂದಕ್ಕೆ ೧೦-೦-೦ ೬-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಸ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಸಟೀಕಕರ್ಣಾಟಕಶಬ್ದಮಂಜರಿ	೦-೪-೦
ಕನ್ನಡ ಭರ್ತೃಹರಿ (ಆಸ್ಥಾನಕವಿ ಬಸವಪ್ಪಶಾಸ್ತ್ರಿ ಕೃತ)	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

50

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೩-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.—೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೧. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ.— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.—೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-[illegible]

ಎಸ್. ಆರ್. ಕರಿಬಸವಶಾಸ್ತ್ರಿ,
[illegible] ಮೈಸೂರು.

---

3 **“ಇಂಗ್ಲೀಷ ಶಿಕ್ಷಕ”**

ಅಥವಾ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಇಂಗ್ಲೀಷ ಮಾತು ಕಲಿಸುವ ಪುಸ್ತಕವು. ಬೆಲೆ ೧೦ ಆಣೆ, ಟಪಾಲು ಖರ್ಚು ಬೇರೆ.

ನ. ಸು. ಬಾಗಲ,
ಬನ್ನಿಕೊಪ್ಪ, ಮುಂಡರಗಿ ಪೋಸ್ಟ್,
ಧಾರವಾಡ ಜಿಲ್ಲಾ.

ಮಧುರವಾಣೀ.

18 ವಾರ್ಷಿಕಚಂದಾ ೧—೮—೦

ಇದರಲ್ಲಿ ಕಾಲಕ್ಕೆ ತಕ್ಕ, ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಉತ್ತಮಗ್ರಂಥಗಳೂ, ಸಾಮಾಜಿಕ, ನೀತಿ, ಮತ, ವಿದ್ಯಾವಿಷಯಗಳ ಉತ್ತಮೋತ್ತಮ ಉಪನ್ಯಾಸಗಳೂ, ವಿಮರ್ಶೆಯೇ ಮೊದಲಾದ ಬಗೆಬಗೆಯ ಉಪಯುಕ್ತವಿಷಯಗಳೂ, ಬೇರೆಬೇರೆ ಪುಟಗಳೊಡನೆ ಪ್ರತಿಮಾಸವು ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಗ್ರಾಹಕರಿಗೆ ಅನೇಕ ಪುಸ್ತಕಗಳು ಅರ್ಧಬೆಲೆ. ಏಜಂಟರಿಗೆ ದಾರಾಳವಾದ ಕಮಿಷನ್ ದೊರೆಯುವುದು. ಅನೇಕ ಪದವೀಧರರೂ, ಪಂಡಿತರೂ ನಮ್ಮ ಲೇಖಕರಾಗಿರುವುದರಿಂದ ಅನೇಕರ ಸದಭಿಪ್ರಾಯಕ್ಕೆ ಪಾತ್ರವಾಗಿದೆ.

ವಿಳಾಸ— ಹನುಮಾನ್ ಮತ್ತು ಕಂಪೆನಿ
ಮೈಸೂರು.

---

26 **ವಿವೇಕ ಮಂಜರಿ**

೨ ನೆಯ ಭಾಗ.

ಇದರಲ್ಲಿ ವಿವೇಕಕ್ಕೆ ತಕ್ಕ ಉತ್ತಮವಾದ ೩೩ ಉಪನ್ಯಾಸಗಳಿರುವುವು. ವಿಷಯವಿವೇಚನೆ, ವಾಕ್ಯ ತಾತ್ಪರ್ಯ [illegible] ಮನೋಹರಶೈಲಿ. ಭಾಷಾಶುದ್ಧತೆ ಮುಂತಾದ ವಿಷಯಗಳಲ್ಲಿ ಅನೇಕ ಪಂಡಿತರ ಮೆಚ್ಚುಗೆಗೊಳಗಾಗಿರುವುದರಿಂದ ಹೆಚ್ಚುಗೆ ಹೇಳಬೇಕಾದುದಿಲ್ಲ. ಮೊದಲನೆಯ ಭಾಗದಂತೆಯೇ ಇದನ್ನೂ ಉಪಾಧ್ಯಾಯರೂ, ಮೇಲ್ತರದ ವಿದ್ಯಾರ್ಥಿಗಳೂ, ಇತರರೂ ಸಂಗ್ರಹಿಸುವುದುತ್ತಮವು. ಬೆಲೆ ಬಲುಕಡಿಮೆ

೨ ನೆಯ ಭಾಗ ೩ ಆಣೆ ೧೩೦ ಪುಟಗಳು
ಅಂಚೆ ವೆಚ್ಚ ಬೇರೆ.

ವಿಳಾಸ:— “ಮೈಸೂರ್ ಸ್ಟಾರಾಫೀಸ್” ಮೈಸೂರ್.

ಮೈಸೂರ ಸ್ಟಾರ್ ಚಂದಾನಿರ್ಣಯ

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ. ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಕೊಳ್ಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರೆಗೆ ೧—೧೦—೦.

ಇವರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯದರ

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

---

11 **ಕಾರೋನೇಷನ್ ಸಾಬೂನು.**

“ಅಪಾಯವಿಲ್ಲದ ರೋಮಸಂಹಾರಿ”

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಉರಿ, ನೋವು ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವುದು.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 1—0—0. 3 ಸಾಬೂನುಗಳಿರುವ 2 ಪೆಟ್ಟಿಗೆ ಕ್ರಯ 1—12—0. ಅಂಚೆ ಹಾಸಲು 0—4—

ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವುದು.

ಬಿ. ಸಿ. ಷಾ ಅಂಡ್ ಕೋ.,
177 ಚೈನಾಬಜಾರ್‌ರೋಡ್, ಮದ್ರಾಸು.

---

8 **ಕಾಶೀ ವಿಶ್ವೇಶ್ವರ ಪ್ರಸನ್ನಾ.**



ಅಗ್ಗವಾದ ಸಾಮಾನುಗಳು.

ನಮ್ಮಲ್ಲಿ ಶ್ರೀಕ್ಷೇತ್ರ ಕಾಶಿಯಲ್ಲಿ ತಯಾರಾಗುವ ಬನಾರಸ್ ಜರೀ ರೇಷ್ಮೆಸೀರೆ, ಮೊಗಟ, ಪೇಟ, ಕಾಶ್ಮೀರಶಾಲು ಕೊಳ್ಳೆಗಾಲ ಮೊಳಕಾಲ್ಮೂರು ನಮೂನೆ ವಸ್ತ್ರಗಳು, ಜರೀ ರೇಷ್ಮೆ ಛತ್ರಗಳು, ರುದ್ರಾಕ್ಷಿ ಸರಗಳು, (ಇದರಲ್ಲಿ ೩ ಮುಖದಿಂದ ೧೪ ಮುಖದ ವರೆಗೂ ಉತ್ತಮವಾಗಿ ಶಾಸ್ತ್ರೋಕ್ತವಾಗಿರುವುವು.) ಮತ್ತೂ ಪೂಜಾ ಸಾಮಗ್ರಿಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಚೌರಿಕೂದಲು, ಗಂಗಾಭಾಗೀರಥಿಯೆಂಬ ತೈಲ, ಅನೇಕ ವಿಧವಾದ ಅತ್ತರುಗಳು, ವಿಧವಿಧವಾದ ಪಠಗಳು ವಗೈರೆ ಸಾಮಾನುಗಳನ್ನು ಬನಾರಸ್ಸಿನಲ್ಲಿ ಎಲ್ಲರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನು ತಯಾರಿಸಿ ದೇಶವಿದೇಶಗಳಿಗೆ ಕಳುಹಿಸುತ್ತಾ ಬರುತ್ತೇವೆ.

ಈ ಸಾಮಾನುಗಳ ಕ್ರಯ ವಿವರ ತಿಳಿಯಬೇಕಾದರೆ ಫಕ್ತ್ ಪೋಸ್ಟೇಜ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ ೧ ಕ್ಯಾಟಲಾಗು, ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರನ ಪಟ, ೨ ನಮ್ಮ ಕಂಪೆನಿ ವಿಳಾಸದ ಕಾರ್ಡು ಇವುಗಳನ್ನು ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು. ಬೇರಿಂಗ್ ಪತ್ರ ತೆಗೆದುಕೊಳ್ಳಲಾರೆವು.

ವಿಳಾಸ,—ಮೇನೇಜರ್,
ಎಸ್. ಯೂ. ಎಗ್. ಅಂಡ್ ಕಂಪೆನಿ,
ಬನಾರಸ್ ಸಿಟಿ.